Just Arrived Fresh Consignment OF

Best English Cycles.



REDUCTION IN PRICES.

Ranger Cycles Model M. Made in Birmingham.
WITH DUNLOP OR BATES TYRES & TUBES ... @ Rs. 90—0—0
Barton Humber on Advance
WITH DUNLOP OR BATES TYRES & TUBES ... @ „ 100—0—0
Senior Royal with B. S. A. Fitting.
WITH DUNLOP OR BATES TYRES & TUBES .. ...@ Rs. 145—0—0
Royal Saxon with B. S. A. Fitting.
WITH DUNLOP OR BATES TYRES & TUBES ... ... @ Rs. 175—0—0

All the above Cycles include pump and tools.

BROOKES PATEERN 90/2 GERMAN SADDLE ... ...@ „ 9—8—0
„ SADDLE 90/2 „ ... ...@ „ 21—0—0
„ „ B/30 „ ... ...@ „ 26—0—0

For further particulars please write to us or call on us:—

All kinds of Cycle Accessories, Dunlop and German Tyres and Tubes
ARE AVAILABLE AT VERY CHEAP RATES.

Special Discount to Traders. *Easy Terms Arranged*

APPLY TO:—**The Mangalore Trading Association,**
Wholesale Dealers in Cycles and Cycle Accessories,
Car-Street, MANGALORE

—ಗೋಡೆಗೆ ತಗಲಿಸುವ
ಹೊಸ ನಮೂನೆಯ—

ಟಿಕ್—ಟಾಕ್

ಎಂಬ ಈ ಗಡಿಯಾರಗಳು ಜರ್ಮನೀ ದೇಶದಲ್ಲಿ ತಯಾರಿಸಿದ್ದು. ಇವು ಕರಾರು ಘಂಟೆಯನ್ನು ತೋರಿಸುವವು. ಇವಕ್ಕೆ ಬೀಗ ಕೊಡಬೇಕಾದಿಲ್ಲ. ಇದರಲ್ಲಿ ಕಾಣುತ್ತಿರುವ ಗುಂಡನ್ನು ಮೇಲಕ್ಕೆ ಎಳೆದರೆ ಸಾಕು. ತನ್ನ ಷ್ಟಕ್ಕೆ ತಾನೇ ಟಿಕ್—ಟಾಕ್ ಎಂಬ ಶಬ್ದವನ್ನು ಮಾಡುತ್ತಾ ಸರಿಯಾದ ಕಾಲವನ್ನು ತೋರಿಸುವದು. ಇದು ನೋಡುವುದಕೆ ಬಹು ಲಕ್ಷಣವಾಗಿರುವುದು.

ಕ್ರಯ 1ಕ್ಕೆ ರೂ. 3—0—0

ಪೀಟರ್ ವಾಚ್ ಕಂಪೆನಿ
ಪೋಸ್ಟ್ ಬಾಕ್ಸ್ ನಂ. 27, ಮದ್ರಾಸ್.

ADVERTISE IN

The Business Directory
OF INDIA, BURMA & CEYLON

A Comprehensive Directory of the various Business-men, Exporters and Importers, Firms, Factories, Mills, Manufacturers, Merchants and Industries of the principal Cities, Ports and Towns of India, Burma and Ceylon.

PUBLISHED ANNUALLY

Rates for Advertisements

¼ Page	Rs.	50.
2 in. Single Column	„	20.
1 in. Single Column	„	15.
Name in Bold Types	„	5.

Price per Copy Rs. 10.

PRINTERS & PUBLISHERS.
Business Directory Co.,
Kanara Press Buildings, MADRAS. E.
Telegrams: "KETHAKI" Phone 540

ದಕ್ಷಿಣ ಕನ್ನಡ ಜಿಲ್ಲೆಯ

ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

JUST ARRIVED

Goodrich Belts.

OF VARIOUS SIZES
Price Re. 1—12—0 each

Mangalore Trading Association,
Car Street, MANGALORE

ಸಾರಸ್ವತ.

ಕನ್ನಡ ಮತ್ತು ಕೊಂಕಣಿ ಭಾಷೆಗಳಲ್ಲಿ ಕಳೆದ ವಿಜಯದಶಮೀ ದಿನದಿಂದ ಪ್ರತಿ ದಶಮಿಗೆ ಹೊರಡುವ ಪತ್ರಿಕೆ.

ವಿ. ಎಸ್. ಕಾಮತ್,
ಮೂಲ್ಕಿ ವಾಮನ ಕುಡುವ } ಸಂಪಾದಕರು.

ಮಠಸಂಸ್ಥೆ ಮತ್ತು ಸಮಾಜಕ್ಕೆ ಸಂಬಂಧಪಟ್ಟ ಇತರ ಸಂಸ್ಥೆಗಳ ಸುಸಂಘಟನೆ.
ಸಮಾಜದೊಳಗೆ ಅನ್ಯೋನ್ಯ ಸಾಧನೆ.
ಸ್ತ್ರೀಸಮಾಜಕ್ಕೆ ಉಪಯುಕ್ತವಾದ ವಿಷಯಗಳ ನಿರೂಪಣ.
ಮತಭಾವನೆಗಳ ಉಜ್ಜೀವನ ಇತ್ಯಾದಿ ಉದ್ದೇಶಗಳಿಂದ ಈ ಪತ್ರಿಕೆಯು ಹೊರಡಿಸಲ್ಪಡುವುದು. ಸಾರಸ್ವತ ಸಮಾಜವು ಇದಕ್ಕೆ ಪ್ರೋತ್ಸಾಹವನ್ನೀಯಬೇಕಾಗಿ ಪ್ರಾರ್ಥನೆ.

ಚಂದಾಹಣ ಅಂಚೆವೆಚ್ಚ ಕೂಡಾ ರೂ. ೧—೪—೦.
ಪೋಷಕರು ರೂ. ೧೦—೦—೦. ಸಹಾಯಕರು ರೂ. ೫—೦—೦. ಮಾದರಿ ಸಂಚಿಕೆಯನ್ನು ಟಪ್ಪಾಲು ಖರ್ಚಿಗಾಗಿ ಅರ್ಧಾಣೆ ಸ್ಟಾಂಪು ಕಳುಹಿಸುವವರಿಗೆ ಉಚಿತವಾಗಿ ಕಳುಹಿಸುವೆವು.

ಕನ್ನಡ ನಾಡಿನಲ್ಲಿ ಪ್ರತಿ ಕಡೆಯಲ್ಲಿಯೂ
ಬಾತಮೀದಾರರು ಬೇಕು.

ಎಲ್ಲಾ ಪತ್ರವ್ಯವಹಾರಗಳನ್ನು ಕೆಳಗಿನ ವಿಳಾಸಕ್ಕೆ ನಡೆಸಬೇಕು.

ಯು. ನಾರಾಯಣನಾಯ್ಕ, ಕಾರ್ಯದರ್ಶಿ,
ಸಾರಸ್ವತ, ಉಡುಪಿ.

ಆರ್. ಮಾರ್ಟಿನ್ನರ ಲಪ್ತಾ ಎಣ್ಣೆ

ಇದರ ಸುವಾಸನೆಯು, (ಪರಿಮಳವು) ಬಹಳ ಅಂದವಾಗಿಯೂ ಇರುವುದಲ್ಲದೆ, ಬಹಳ ಹೊತ್ತಿನ ವರೆಗೂ ಇರುತ್ತದೆ. ಈ ಎಣ್ಣೆಯನ್ನು ತಲೆಗೆ ಹಾಕಿಕೊಳ್ಳುವುದರಿಂದ ಕಣ್ಣುಗಳು ತಂಪಾಗಿಯೂ, ಶುಭ್ರವಾಗಿಯೂ, ಆಗವುದಲದೆ, ಮೆದುಳು ಚೆನ್ನಾಗಿ ಬೆಳೆಯುತ್ತದೆ. ಇದನ್ನು ಪ್ರತಿದಿವಸವೂ ಉಪಯೋಗಿಸುವುದರಿಂದ ಕೂದಲುಗಳು ಕಪ್ಪಾಗಿ ಹೊಳೆಯುವಂತೆ ಮಾಡುತ್ತದೆ. ಕೂದಲುಗಳಲ್ಲಿರುವ ಹೇನುಗಳು ಮುಂತಾದುವು ನಾಶವಾಗಿ ತಲೆಬುರುಡೆಯನ್ನು ಚೆನ್ನಾಗಿ ಬೆಳೆಯುವಂತೆ ಮಾಡುತ್ತದೆ. ಗಡ್ಡ ಮತ್ತು ಮೀಸೆಗಳು ಸಹ ಬೆಳೆಯುತ್ತವೆ. ಇದನ್ನು ಉಪಯೋಗಿಸಿದ್ದ ಜನರು ಇದಕ್ಕಿಂತ ಉತ್ತಮವಾದ ಎಣ್ಣೆಯು ಬೇರೆ ಇಲ್ಲವೆಂದು ಹೇಳಿರುತ್ತಾರೆ.

ಕ್ರಯ ಬಾಟಿ 1ಕ್ಕೆ ರೂ. 1-4-0.

ಆರ್ ಮಾರ್ಟಿನ್ನರ ಗಿಟೋಡಯಿನ್.

ಗಂಡಸರಿಗೂ ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ, ಅಥವಾ ಹೊಸತಾಗಿದ್ದರೂ ಸರಿ. ಬಿಳುಪು ಹೋಗುವುದು ಉರಿಯುವುದು, ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೆ ಉರಿ ಮೂತ್ರವನ್ನು ನಿಲ್ಲಿಸಿ, ಮೂತ್ರವು ಬಿಳುಪಾಗಿ ನಿರ್ಮಲವಾಗುವದಲ್ಲದೆ ರೋಗದ ಪಟ್ಟನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ.

ಬೆಲೆ ಸೀಸೆ 1ಕ್ಕೆ ರೂ. 2—0—0.

ಆರ್. ಮಾರ್ಟಿನ್ನರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮು, ಗೂರಲು ಶ್ವಾಸ, ಸೀತ, ನೆಗಡಿ, ಗಂಟಲುನೋವು, ಎದೆ ನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇನ್ನೊಂದು ಜನರು ನರಳುತ್ತಿರಬೇಕು ? ಒಂದೇ ಒಂದು ಸೀಸೆಯನ್ನು ಕೊಂಡು ಸೇವನಮಾಡಿ ಪರೀಕ್ಷಿಸಿ ನೋಡಿರಿ. ಅನಂತರ ಬೇರೆ ಯಾವ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮುಗಳೂ ರಾಣೆಯಾಗಿಯೂ, ಎದೆಗೆ ಬಲಕೊಟ್ಟು ಮೇಲ್ಪಂದೆ ರೋಗಗಳು ತಲೆಯಿಕ್ಕದಂತೆ ಮಾಡುತ್ತದೆ.

60 ಮಾತ್ರೆಗಳ ಸೀಸೆ 1ಕ್ಕೆ ರೂ. 1—4—0.

ವಿಳಾಸ:—ಆರ್. ಡಿ. ಕಟ್ಲಿ ಮತ್ತು ಕಂಪೆನಿ,
ನಂಬ್ರ ಬಿ. ಫ್ರಿಯರ್ ರೋಡ್,
ಸಾಂಜ ವರ್ತಮಾನ ಪ್ರೆಸ್,
ಟೋಡಿವಾಲಾ ಬಿಲ್ಡಿಂಗ ಎದುರುಗಡೆ, ಪೋರ್ಟ ಮುಂಬಯಿ.

R. D. Kately & Co.
No. B. Frere Road,
Opposit Sanjvertaman Press,
Todivala Building, FORT BOMBAY.

ಸುವರ್ಣಸಂಧಿ.

ಕೈ ಮಗ್ಗಗಳಲ್ಲಿ ನೂಲನ್ನು ಹೆಣೆಯುವ ಮಗ್ಗಗಳಿಗೆ ಬೇಕಾಗುವ ಯಾವತ್ತೂ ಸಾಮಾನುಗಳು, ನೂಲಿಗೆ ಹಾಕುವ ನಾನಾ ತರದ ರಂಗುಗಳು ಅಗತ್ಯವಿರುವ ನಾನಾ ಬಗೆಯ ರಸಾಯನಗಳು ಇವನ್ನು ನಮ್ಮಲ್ಲಿಂದ ನ್ಯಾಯವಾದ ಬೆಲೆಗೆ ಹೊಂದಬಹುದು. ನಮ್ಮಲ್ಲಿ ದೊರಕುವ ಯಾವತ್ತೂ ಸಾಮಾನುಗಳನ್ನು ಸೇಕಡಾ [illegible] ಕಮಿಶನ್ [illegible] ನಾರಾಟಕ್ಕೆ ಪಡೆಯಬಹುದು.

ಪಿ. ಪಿ. ತ್ರಿವೇದಿ ಎಂಡ್ ಕೋ,
ನಂಬ್ರ 66 ಟಿಮರಿಂಡ್ ಲೇನ್,
ಫೋರ್ಟ ಮುಂಬಯಿ.

Edited, Printed & Published by V. S. Kamath at the M. T. A. SHARADA PRESS, MANGALORE.

Registered: No. M. 498.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಶ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೯. ಮಂಗಳೂರು, ತಾರೀಕು ೧೬ನೇ ಶುಕ್ರವಾರ ಜನವರಿ ೧೯೨೫. ಸಂಚಿಕೆ ೩.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಉಡುಪಿ, ಲಿಮಿಟೆಡ್.

ಹೆಡ್ ಆಫೀಸು: — ಉಡುಪಿ. ಬ್ರಾಂಚ್: — ಕುಂದಾಪುರ.

ಅಧಿಕಾರಗೊಳಿಸಲ್ಪಟ್ಟ ಮೂಲಧನ	ರೂ. 3,50,000 — 0 — 0
ಚಂದಾ ಹಾಕಲಿಕ್ಕೆ ಅರ್ಪಿಸಿದ ವ ಚಂದಾ ಹಾಕಿ ಎತ್ತಿದ ಮೂಲಧನ	2,25,000 — 0 — 0
ವಸೂಲು ತೆತ್ತ ಮೂಲಧನ	1,37,607 — 9-11
ಠೇವಣಾತಿಗಳು	5,37,825-10 — 2
ಇನ್ವೆಸ್ಟುಮೆಂಟು (1927ನೇ ಇಸವಿಯ) ಸೇಕಡಾ	
6ರ ಗವರ್ನಮೆಂಟು ಪೇಪರಿನ ಮೇಲೆ ಹಾಕಿದ	ರೂ. 25,700-0-0
ಇತರ ಇನ್ವೆಸ್ಟುಮೆಂಟು	6,96,621-10-3
ರಿಜರ್ವ ಮತ್ತು ಇತರ ಫಂಡುಗಳು	56,5 0 — 0 — 0

ಕಳೆದ 2 ವರುಷಗಳಲ್ಲಿ ಪಾಲು ವಸ್ಥಾಲಿಕರಿಗೆ ಸುಲಿಯಾನ್ ಸೇಕಡಾ 11ರಂತೆ ಲಾಭಾಂಶ ಹಂಚಿಯದೆ.

3 ತಿಂಗಳಿಗೊಮ್ಮೆ ಬಡ್ಡಿ ತೆರುವ ಶರ್ತದ ಮೇಲೆ ಸೇಕಡಾ 6½ ರಿಂದ 7½ಯಲ್ಲಿ ನಿರಖು ಠೇವಣಾತಿಗಳನ್ನೂ 15 ದಿನಗಳ ನೋಟೀಸು ಮೂಲಕ ಸೇಕಡಾ 6ರ ಬಡ್ಡಿ ಸಮೇತ ವಾಪಾಸು ಪಡಿಯುವ ಚಿಕ್ಕ ವ್ಯಾದೆ ಠೇವಣಾತಿಗಳನ್ನೂ ಬೇಕೆಂದಾಗ್ಗೆ ವಾಪಾಸು ಸಿಕ್ಕುವಂಥಾ ಸೇಕಡಾ 3½ರಂತೆ ಬಡ್ಡಿ ನಡಿಯುವ ಚಾಲ್ತಿ ಠೇವಣಾತಿಗಳನ್ನೂ ಸೇಕಡಾ 4½ ಬಡ್ಡಿ ನಡಿಯುವ ಸೇವಿಂಗ್ಸ್ ಬ್ಯಾಂಕು ಠೇವಣಾತಿಗಳನ್ನೂ ತಿಂಗಳು ಗಟ್ಲೆಯಂಥ ತೆರುವ ಕಂತು ಠೇವಣಾತಿಗಳನ್ನೂ ಡಿಪೋಜಿಟ್ಟಾಗಿ ಪಡೆಯುವುದಲ್ಲದೆ ಬ್ಯಾಂಕಿಗೆ ಸಮ್ಮತವಾದ ಜವಾಬ್ದಾರಿಯಿಂದ ಹಣವನ್ನು ಸಾಲವಾಗಿಯೂ ಕೊಡಲಾಗುವುದು.

ಈ ಬ್ಯಾಂಕಿಗೆ ತೆರತಕ್ಕ ಹಣವನ್ನು ಈ ಬ್ಯಾಂಕಿನ ಲೆಕ್ಕಕ್ಕೆ ಮಂಗಳೂರಲ್ಲಿರುವ ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾ ಲಿಮಿಟೆಡ್, ಯಾ ಕೆನರಾ ಬ್ಯಾಂಕ್ ಲಿಮಿಟೆಡ್‌ನಲ್ಲಿಯೂ ಮುಂಬಯಿಯಲ್ಲಿ ಮರ್ಕೆಂಟೈಲ್ ಬ್ಯಾಂಕ್ ಆಫ್ ಇಂಡಿಯಾ ಲಿಮಿಟೆಡ್‌ನಲ್ಲಿಯೂ ತೆರಬಹುದು.

ಹೆಚ್ಚಿನ ಮಾಹಿತಿ ಸೆಕ್ರೆಟರಿಯವರಿಗೆ ಬರದಲ್ಲಿ ಸಿಕ್ಕುವುವು.

ಬ್ಯಾಂಕಿನ ಆಫೀಸು ಉಡುಪಿ, } ನಯಂಪಳ್ಳಿ ಆನಂದರಾವ್,
ತಾ. 1—8—1924. } ಸೆಕ್ರೆಟರಿ

Wanted Agents
FOR
Every District in South India

For Pushing Sales of Our Calenders, Xmas and New Year Cards, Blotters, Pictures and Picture Post Cards, at wholesale rates. Deposit of Rs. 100—0—0 Essential.

Apply to:—

The South Indian Advertising Agency,
13, Kilary Road,
BANGALORE CITY.

ಶುದ್ಧ ರೋಮದ ಧಾವಳಿಗಳು.

1 ಮೊಳ ಉದ್ದ 1¼ ಮೊಳ ಅಗಲ ರೂ. 1¼ರಿಂದ 2 ವರೆಗೆ, 5 ಮೊಳ ಉದ್ದ 1½ ಮೊಳ ಅಗಲ ರೂ. 1½ ರಿಂದ 5 ವರೆಗೆ, 6 ಮೊಳ ಉದ್ದ 1½ ಮೊಳ ಅಗಲ ರೂ. 2½ರಿಂದ 6 ವರೆಗೆ, 8 ಮೊಳ ಉದ್ದ 2 ಮೊಳ ಅಗಲ ರೂ. 3½ರಿಂದ 10 ವರೆಗೆ, 12 ಮೊಳ ಉದ್ದ 2¼ ಮೊಳ ಅಗಲ ರೂ. 6ರಿಂದ 12 ವರೆಗೆ, 16 ಮೊಳ ಉದ್ದ 2½ ಮೊಳ ಅಗಲ ರೂ. 9 ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಜಪ್ಪರ್ ರೇಷ್ಮೆ ಮಡಿಗಳು, ಸಾಮಗ್ರಿಗಳು, ಕಾಶೀ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, [illegible] [illegible] ಮುಂತಾದ [illegible] ಅನೇಕ ಸಾಮಾನುಗಳು ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುವು. ಕ್ಯಾಟಲಾಗ್ ಇನಾಮ.

ವಿಳಾಸ—
ಶಿರೋಮಣಿ ಯು. ನಾರಾಯಣಾಚಾರ್ಯ
ಮತ್ತು ಕಂಪೆನಿ, ಚೌಕಂಬಾ, ಕಾಶೀ ಕ್ಷೇತ್ರ.

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ.

450 ಪುಟಗಳು ಎಮ್. ಗಣಪತಿರಾವ್ ಐಗಳ್ ಇವರಿಂದ ರಚಿತವಾದದ್ದು. ಕ್ರಯ ರೂ 2-4-0

ಮಾರಾಟಕ್ಕೆ ಸಿದ್ಧವಾಗಿವೆ — ತುಳು ಪಾಡ್ದನಗಳು — ಮಾರಾಟಕ್ಕೆ ಸಿದ್ಧವಾಗಿವೆ.

ದೈಯೊಂಗುಳು, ಕಲ್ಲುರ್ಟಿ—ಕಲ್ಕುಡ, ಕಣಂದೂರು ದೈಯೊಂಗುಳು, ಮುಂಡತ್ತಾಯ, ದೊಬ್ಬಯರ್.

ಸುಲಭ ದರಗಳು — ಶಾಲಾ ಪುಸ್ತಕಗಳು — ರಖಂ ಕೊಂಡುಕೊಳ್ಳುವವರಿಗೆ ಯೋಗ್ಯ ಡಿಸ್ಕೌಂಟ್.

ಅಜ್ಜಿ ಕಥೆಗಳು:—ಮೂರು ಕರಡಿಗಳು; ಹೇನುಸತ್ತು ಕಾಗೆ ಬಡವಾಯಿತು; ಅರ್ಗಣೆ ಮುದ್ದೆ; ಇಲಿಗಳ ಥಕ್ಕ ಥೈ; ಅಂಗಳ ದುಗ್ಗು; ಸಿಗಡಿ ಯಾಕೆ ಒಣಗಲಿಲ್ಲ; ಗುಡುಗುಡು ಗುಮ್ಮಟ ದೇವರು; ಮೊಸಳೆ ಕಾಳಪ್ಪ; ಒಡ್ಡನ ಓಟ; ಹೊಸ ಕನ್ನಡ ಪುಸ್ತಕ ಭಾಗ ೧; ಹೊಸ ಕನ್ನಡ ಪುಸ್ತಕ ಭಾಗ ೨; ಕನ್ನಡ ಪದ್ಯಗಳು; ಮಗ್ಗಿ ಪುಸ್ತಕ; ಅಂಕಗಣಿತ; ಪದ್ಯ ರತ್ನಾವಳಿ. ಎಕ್ಸರ್‌ಸೈಜ್ ಮತ್ತು ನೋಟು ಪುಸ್ತಕಗಳು, ಕಾಪಿ ಪುಸ್ತಕಗಳು, ಡ್ರಾಯಿಂಗ್ ಪುಸ್ತಕಗಳು

ಇತರ ಪುಸ್ತಕಗಳು:—ಸಂಕ್ಷೇಪಗೀತೆ, ಸೇತುಭಂಗ, ಹಿಂದೂ ವ್ರತವಿವೇಕ, ಚಂದ್ರಗುಪ್ತ ಚಕ್ರವರ್ತಿ, ಶ್ರೀ ಕೃಷ್ಣಸಂಧಾನ, ಪದ್ಯಪಾಠಗಳು, ಹರಿಕಥಾ ಮೃತಸಾರ ಹರಿನಾಮಸಂಕೀರ್ತನೆ ಸುಧಾಂಮೃತ ಪದ್ಯಗಳು. ಬೆಂಕಿಪೆಟ್ಟಿಗೆ ತಯಾರಿಸುವ ವಿಧಾನ, ಸಾಬೂನು ತಯಾರಿಸುವ ವಿಧಾನ, ಸ್ವರಾಜ್ಯ, ಭಕ್ತೋಲ್ಲಾಸ, ಚರಕಗೀತೆ, ಕೊಂಕಣಿ ಭಾಷೆಯಲ್ಲಿ ಚಂದ್ರಹಾಸ ನಾಟಕ, ಪ್ರಹಲ್ಲಾದ ಚರಿತ್ರೆ ನಾಟಕ, ಕನ್ನಡ ಮೃಚ್ಛಕಟಿಕ ನಾಟಕ, ಚಂದ್ರಹಾಸಾಭ್ಯುದಯ ನಾಟಕ, ಕೋವಿಲನ್ ಚರಿತ್ರೆ ನಾಟಕ, ಮಾದರಿ ಉಪನ್ಯಾಸ ಭಾಗ ೧, ೨, ಮತ್ತು ೩.

AMRUTANJAN B
AMRUTANJAN
Best Indian Pain Balm
Amrutanjan D
BOMBAY

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಹಿಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ, ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ, ರಕ್ತ ಬರುವುದು ನಿಲ್ಲುತ್ತದೆ, ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 2 ಆಣೆ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

109 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

— ವಿವಾಹ ಉಪನಯನಗಳ ಸಮಯ —

ಸರ್ವರಿಗೂ ಉಡಿಗೆ ತೊಡಿಗೆಗಳು ಬೇಕಾಗುವ ಸಂದರ್ಭ.

ಯಾರು, ಯಾವುದನ್ನು ಎಲ್ಲಿ ಪಡೆಯಬೇಕೆಂಬ ಶಂಕೆಯಿಂದ ವಿಳಂಬ ಮಾಡಬೇಡಿರಿ. ಉಡಿಗೆತೊಡಿಗೆಗಳನ್ನು ಚುನಾಯಿಸಿ ನಿಮಗೆ ಬೇಕಾದ ಯಥಾರ್ಥ ಮಾಹಿತಿಯನ್ನು ಕಳೆದ ಹತ್ತಿಪ್ಪತ್ತು ವರುಷಗಳಿಂದ ನಡೆದು ನಮ್ಮಲ್ಲಿಯ ವ್ಯಾಪಾರವು ಗಿರಾಕಿಗಳಿಗೆ ಸರ್ವ ತೃಪ್ತಿಯಿಂದಲೂ ಲಾಭಕರವಾಗಿ ಪರಿಣಮಿಸುವಂತೆ ನಮ್ಮ ಇವಳಿ ಸಂಗ್ರಹವನ್ನು ಮಾಡಿರುತ್ತೇವೆ.

ಗುರ್ಪುರ್‌ಕಾರ್ ಬ್ರದರ್ಸ್, ರಥಬೀದಿ, ಮಂಗಳೂರು.

ಹೆಡ್ ಆಫೀಸು:—ರಥಬೀದಿ—(ಮೊದಲು ಸುಬೇರ ನಾಗಪ್ಪನಾಯಕ್, ಎಂಡ್ ಕೊ, ಇದ್ದಲ್ಲಿ; ಅಜೆಜುದ್ದೀನ್ ರಸ್ತೆಗೆ ತಿರುಗುವಲ್ಲಿ) ಮಂಗಳೂರು.

ಬ್ರೆಂಚ್ ಆಫೀಸು:—ರಥಬೀದಿ—(ಹಳೇ ತಾಲೂಕು ಕಚೇರಿಯ ಪಟಾರಕ್ಕೆ ಸಮೀಪವಿರುವ ಮನೆಗೆ) ಮಂಗಳೂರು.

ಈ ದೇಶದ ಪ್ರಖ್ಯಾತಪಟ್ಟ ನೇಯಿಗೆಯ ಕೇಂದ್ರಸ್ಥಳಗಳಾದ—ಬನಾರಿಸ್, ಪೂನಾ, ಅಹಮ್ಮದಾಬಾದ್, ಸುರತ್, ಬೆಂಗಳೂರು, ಧರ್ಮಾವರಮ್, ಕಂಜೀವರಮ್, ಕೊಯಮುತ್ತೂರು, ಮಧುರೆ, ತಂಜಾವೂರು, ಕುಂಭಕೋಣ, ಆರ್ನಿ, [illegible], ಹುಬ್ಬಳ್ಳಿ, ಇಳಕಲ್, [illegible], ಮದ್ರಾಸು ಈ ಪ್ರಾಂತ್ಯಗಳಲ್ಲಿ ತಯ್ಯಾರಾದ

[illegible], ಮುಕ್ತಟಾ, ಜರಿಕಾ, ಪೇಟ್ಸಿ, ರೇಷ್ಮೆ ಸೀರೆಗಳು, ಅರೆರೇಷ್ಮೆ ಸೀರೆಗಳು, ಜೋರ್ಜೆಟ್ ರೇಷ್ಮೆ ಸೀರೆಗಳು, [illegible] ಸೀರೆಗಳು, ರೇಷ್ಮೆ ಮಡಿಗಳು, ನಿತ್ಯ ಉಪಯೋಗದ ಸೀರೆಗಳು [illegible] ಇತರ [illegible] ಶರ್ಟಿಂಗ್.

ಕೈರಾಟೆಯಲ್ಲಿ ತಯಾರಿಸಿದ ನೂಲಿನಿಂದ ಮಾಡಿದ—

ಖದ್ದರ್ ಶರ್ಟಿಂಗ್, ಖದ್ದರ್ ಕೋಟಿಂಗ್, ಖದ್ದರ್ ಟೋಪಿ, ಖದ್ದರ್ ಪೇಟ್ಸಿ, ಅಂಗವಸ್ತ್ರ, ಇತ್ಯಾದಿ—
ಮುಸಲ್ಮಾನರಿಗೆ ಬೇಕಾದ ನಮೂನೆಯ [illegible] ವಗೈರೆ—

ಎಲ್ಲ ಸಂಗ್ರಹವನ್ನೂ ನಮ್ಮ ಪ್ರೊಪ್ರೈಟರರಾದ [illegible] ಸ್ವತಃ [illegible] ಸಂಗ್ರಹಿಸಿ ತಂದಿರುತ್ತಾರೆ.

ಶರ್ತ:—ನಗದಿ, ರೂಪಾಯಿ 5ಕ್ಕೆ ಮೀರಿದ ಖರೀದಿಯನ್ನು ಪಡೆಯುವವರಿಗೆ ಸೇಕಡಾ 6¼ರ, ರೂ. 50ರಿಂದ 250ವರೆಗೆ ಸೇಕಡಾ 10ರ, ರೂ. 250 ರಿಂದ 1000ಕ್ಕೆ 12½ರ [illegible] ಕೊಡಲಾಗುವುದು.

ವೈದ್ಯರುಗಳ ತೀರ್ಮಾನವು ವೈದ್ಯರುಗಳ ಬೆಲೆಯು, ವೈದ್ಯರುಗಳ ಹೊಗಳುವಿಕೆಯು.

(ಯಾವದೆಂದರೆ)

ಈ ಆತಂಕನಿಗ್ರಹ ಮಾತ್ರೆಗಳೇ ಎಲ್ಲಾ ವಿಧವಾದ ಹವೆಗೂ, ಕಾಲಕ್ಕೂ ಚಿಕ್ಕ ಪ್ರಾಯದಿಂದ ಮುಪ್ಪಿನಪ್ರಾಯದವರಿವಿಗೂ ಇರತಕ್ಕ, ಗಂಡಸರು ಹೆಂಗಸರು ಮತ್ತು ಎಲ್ಲಾ ಕುಲಸಂಬಂಧವಾದ ವಂಶಸ್ಥರಿಗೂ ಬಹಳ ಉತ್ತಮವಾದ ಹಿಂದೂದೇಶದ ಒಂದು ದೊಡ್ಡ ರಸಾಯನ ಸೇವನೆಯಾಗಿರುವುದು. ಇವರ ವಿಚಾರವನ್ನು ಪ್ರಯತ್ನದಿಂದ ಪರಿಶೋಧನೆ ಮಾಡಿ ನೋಡಿರಿ. ಮೂವತ್ತೆರಡು (32) ಮಾತ್ರೆಗಳುಳ್ಳ ಡಬ್ಬಿ ೧ಕ್ಕೆ ಬೆಲೆ ಒಂದು ರೂಪಾಯಿ ಮಾತ್ರವೆ. ಹದಿನಾರು ದಿನಗಳಿಗೆ ಪೂರ್ತಿಯಾಗಿ ಸಾಕಾಗುವುದು. ಒಡನೇ ಒಂದು ಡಬ್ಬಿಗಾಗಿ ಬರೆಯಿರಿ. ಅಲ್ಲದೆ ಐದು ಡಬ್ಬಿಗಳು ತರಿಸಿದರೆ, ನಾಲ್ಕು ರೂಪಾಯಿಗಳಿಗೆ ದೊರಕುವುದು.

ಆತಂಕನಿಗ್ರಹ ಔಷಧಾಲಯ,
ನಂಬರು 26, ಬ್ರಾಡ್ವೇ ಮದರಾಸು.

ಹೊಸಗ್ರಂಥಗಳು !! ಬೇಗನೇ ತರಿಸಿಕೊಳ್ಳಿರಿ !!!

ಕೋಕಶಾಸ್ತ್ರವು.

ರಸಿಕ ವಾಚಕ ಮಹಾಶಯರೇ,

ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ, ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನಷ್ಟೇ ಶೋಧ ಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ಲೀಷ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿಣಿ, ಸ್ತ್ರೀಯ ಇದರಂತೆ ಪುರುಷರಲ್ಲಿಯ ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ, ಜನನೇಂದ್ರಿಯಾದಿಗಳ ವರ್ಣನೆಯನ್ನೂ, ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ, ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ, ನಪುಂಸಕತ್ವ ಎಂಥಾ ದೋಷಗಳ ಚಿಕಿತ್ಸೆಯನ್ನೂ, ಸ್ತ್ರೀಯರ ಗೂಢ ರಹಸ್ಯವನ್ನೂ, ದಂಪತಿ ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನೂ ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನು ಒಮ್ಮೆ ಪರೀಕ್ಷಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ.

ಇದರ ಬೆಲೆ ೧—೮—೦, ಟಪ್ಪಾಲು ಹಾಸಲು ೦—೪—೦.

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ

ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗೆನುಸಾರವಾಗಿ ಎಲಿಮೆಂಟರಿ ಶಾಲೆಗಳ ಮೂರನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್. ಗಣಪತಿರಾವ್ ಐಗಳ್—ಗ್ರಂಥಕರ್ತರು.

ಮನೋರಂಜಕ ಚಿತ್ರಗಳೂ ಇವೆ.

ಇದರಲ್ಲಿ ಸಾವಿತ್ರಿ, ಶಕುಂತಲಾ, ಕೃಷ್ಣಾಕುಮಾರಿ, ಪದ್ಮಿನಿ, ಜೋನ್ ಒಫ್ ಆರ್ಕ, ಫ್ಲೋರೆನ್ಸನಾಯಿಟಿಂಗೇಲ ಪರಶುರಾಮ, ಭೂತಾಳಪಾಂಡ್ಯ, ಕಾರ್ಕಳ ಗೋಮಟೇಶ್ವರ ಮತ್ತು ಭೈರವರಾಜ, ಮೂಡಬಿದ್ರೆಯ ಚೌಟರು, ನಂದಾವರ ಬಂಗರು, ಕಾರ್ಕಳ ರಾಮಸಮುದ್ರ ಮತ್ತು ರಾಮನಾಥ ಒಡೆಯರ ಅಜೆಕಟ್ಟು, ಗುರುಪುರ ಜಂಗಮ ಮಠ, ಕಲ್ಯಾಣಪ್ಪನ ಕಾಟಕಾಯಿ, ಗುರುವಾಯನಕೆರೆ, ಜಮಾಲಾಬಾದುಕೋಟೆ, ಸುಲ್ತಾನಬತ್ತೇರಿ, ಉಡಗಾಪ್ರಾರ್ಥನಾಮಂದಿರ, ಸೇಂಟಮೇರಿ ದ್ವೀಪಗಳು ಮತ್ತು ದರಿಯಾಬಾದರಗಡ, ಕೊರಗರು, ಕೊಡಗರು, ತೋಡರು, ರಜಪೂತರು, ಕಂದಾರಿಗಳು ಘೂರ್ಖಾಜನರು, ಅರಬಿಯರು. ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ತಪ್ಪು ತಪ್ಪುಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ಮೂರನೇ ದರ್ಜೆಯ ಮಕ್ಕಳಿಗೆ ಉಪಯುಕ್ತವಾಗಿದೆ. ಕ್ರಯ 6 ಆಣೆ.

ಪುಸ್ತಕ ದೊರಕುವ ವಿಳಾಸ:—

ಶಾರದಾ ಛಾಪಖಾನೆ, ಮಂಗಳೂರು. | ಗಣಪತಿರಾವ್ ಐಗಳ್, ಮಂಜೇಶ್ವರ.

ಡಾಕ್ಟರುಗಳು ಭಿನ್ನಾಭಿಪ್ರಾಯಪಡುವಾಗ್ಯೆ ತೀರ್ಮಾನಿಸುವದು ಯಾರು?

ಅಂಥಾ ಸಂದರ್ಭಗಳಲ್ಲಿ ಡೆಂಗ್ಯು ಮುಂತಾದ ಜ್ವರಗಳನ್ನು ನಿವಾರಿಸುವಂಥಾ "ಬಾಟ್ಲೀವಾಲರ ಏಗ್ಯೂಮಿಕ್ಸ್ಚರ್"ನ್ನು ಸರಾಗವಾಗಿಯೂ, ಮತ್ತು ಜ್ವರಗಳನ್ನು ಖಂಡಿತವಾಗಿ ಇಳಿಸುವಂಥಾದ್ದೂ, ಎಲ್ಲಾ ತರದ ತಲೆನೋವುಗಳನ್ನು ಹೋಗಲಾಡಿಸುವಂಥಾದ್ದೂ ಆದ "ಬಾಟ್ಲೀವಾಲರ ಏಗ್ಯೂಪಿಲ್ಸ್" ಇದನ್ನು ಉಪಯೋಗಿಸಿರಿ.

ಬಿ. ಎಮ್. ಎಸ್. ಡಾಕ್ಟರುಗಳಿಂದ ಶಿಫಾರಸು ಮಾಡಲ್ಪಟ್ಟಿದ್ದು. ಇದರ ಉಪಯೋಗದಿಂದ ಹೃದಯದ ಮೇಲೆ ಯಾವದೊಂದೂ ಬಾಧಕವಿಲ್ಲ. ಅರ್ಧ ಶತಮಾನದಿಂದ ಹಿಂದೂಸ್ಥಾನ, ಬರ್ಮ, ಸಿಲೋನ್, ಆಫ್ರಿಕಾ ಇವುಗಳಲ್ಲಿ ಪ್ರಖ್ಯಾತಪಟ್ಟದ್ದಾಗಿರುತ್ತದೆ.

ಅನೇಕ ಹಿಂದೀ ಪ್ರದರ್ಶನಗಳಲ್ಲಿ ಬೆಳ್ಳಿ ಮತ್ತು ಬಂಗಾರದ ಪದಕಗಳನ್ನು ಪಡೆದಿರುತ್ತೆ. ಚಾಲ್ತಿ ಸಾಧ್ಯವೆಂತಿದ್ದು ಮಾರ್ವಾಡಿಗಳೂ ಕೂಡ ಅದರ ಮೇಲೆ ಹಣವನ್ನು ಮುಂಗಡವಾಗಿ ಕೊಡುತ್ತಾರೆ. ಬಡ ಮತ್ತು ಮಧ್ಯದ ತರಗತಿಯ ಜನರಿಗೆ ವರಪ್ರದಾನವಾಗಿದ್ದು ಸಂಚಾರ, ಪ್ರಯಾಣ, ದೇಶಾಟನೆಗಳ ಸಮಯದಲ್ಲಿ ಹತ್ತಿರದಲ್ಲಿ ಇರಿಸಿಕೊಳ್ಳಬಹುದಾಗಿರುತ್ತದೆ.

ಬಾಟ್ಲೀವಾಲರ ಬಾಲಾಮೃತ ಅಥವಾ ಟೋನಿಕ್ ಸಿರಪ್.

ಕೆಮ್ಮನ್ನು ಹೋಗಲಾಡಿಸಿ, ಎದೆನೋವನ್ನು ಶಾಂತಗೊಳಿಸಿ, ಜ್ವರವನ್ನು ಉಪಶಮನಿಸಿ, ನಿದ್ರಾಭಂಗವನ್ನು ಕಡಿಮೆ ಮಾಡಿ ಧಾತುವರ್ಧನವನ್ನು ಮಾಡುವದರಲ್ಲಿ ಅತ್ಯುತ್ತಮವಾಗಿರುತ್ತದೆ. ಕಫವನ್ನು ಒಣಗಿಸಿ ವಾಸಿಯಾಗುವಂತೆ ಮಾಡುವುದಲ್ಲದೆ ಅದೇ ಸಮಯದಲ್ಲಿ ಒಳ್ಳೇ ಜೀರ್ಣವನ್ನು ಉಂಟುಮಾಡುವುದು. ದರ ಮೊದಲಾದ ಮಾಹಿತಿಯನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಕಾರಖಾನೆ:-CAWASHAPUR, BOMBAY.

ಎಲ್ಲಾ ಅಂಗಡಿಗಳಲ್ಲಿ ಏಜಂಟರು ಬೇಕಾಗಿದ್ದಾರೆ. | ಡಾ. ಯಚ್. ಎಲ್. ಬಾಟ್ಲೀವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.,
ಪಿ. ವಾರ್ಡ, ಮುಂಬಯಿ, ನಂಬ್ರ 18.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ

[illegible] ಅವರ [illegible]

ಬಾಲಾಮೃತ.

ಈ ಔಷಧವನ್ನು ಸೇವನೆ ಮಾಡುವುದರಿಂದ ಮಕ್ಕಳು ರೋಗರಹಿತರೂ ಸಶಕ್ತರೂ ಆಗುವರು. ಇದು ಮಧುರವಾಗಿದೆ; ಮಕ್ಕಳು ಸಂತೋಷದಿಂದ ಸೇವಿಸುತ್ತಾರೆ.

ನಮ್ಮ ವಿಳಾಸ:—
ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಏಜಂಟರು:— ಡಿ. ಊಲನ್ ಮಾರ್ಟ್, ಮಂಗಳೂರು.

OUR RECENT IMPORT IN WRIST WATCHES | Have you used anyone of these Watches? | SEND YOUR ORDER NOW ALL GUARANTEED.

Fashionable wrist wrist Lady's size. Reliable movement Guaranteed.

No. 368.

Handy to wear and looks beautiful. Gives punctual time and with strong movement.

Nickel case Rs. 8—0

High-class Radium dial watch watch with Roman figures.

No. 367.

Can be seen in dark nights, Well fitted with best movement and strong to use. Used by one and all

Silver case Rs. 9—0.

Radio light wrist watch.

No. 372.

Fitted with the best mechanism and guaranteed to work and keep perfect time for a long time!

Nickel case Rs. 7—8
Electro rolled-gold ,, 9—0

(N. B. In addition to the above, we have good number of varieties of fancy wrist watches, pocket watches. Please write for a descriptive catalogue, which will be sent free)

WHOLESALE IMPORTERS

PETER WATCH COY.,
POST BOX 27, MADRAS

ಶಾಲಿವಾಹನಶಕೆ ೧೮೪೬ನೆಯ ರಕ್ತಾಕ್ಷಿ ಸಂ|ರದ ಪುಷ್ಯ ಬ|೭ ಶನಿವಾರದಿಂದ ರಕ್ತಾಕ್ಷಿ ಸಂ|ರದ ಪುಷ್ಯ ಬ|೧೪ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೫ನೆಯ ಮಕರ ಪುಯಿಂತೆಲ್.)

ತಾರೀಕು	ವಾರ	ತಿ.	ಘಳಿಗೆ	ನಕ್ಷತ್ರ	ಘಳಿಗೆ	[illegible]	ಸೂರ್ಯ ಉ.	ಸೂರ್ಯ ಅಸ್ತ
17	ಶನಿ	೭	೧೬.೧೬	ಚಿತ್ರಾ	೫೫.೩೨	೨೬	6.59	6.22
18	ರವಿ	೮	೧೪. ೦	ಸ್ವಾತಿ	೫೩.೧೬	೨೭	7. 0	6.23
19	ಸೋಮ	೯	೧೦. ೩	ವಿಶಾಖಾ	೫೦.೩೨	೨೮	7. 0	6.23
20	ಕುಜ	೧೦	೫.೨೮	ಅನುರಾಧಾ	೪೬.೪೬	೨೯	7. 0	6.24
21	ಬುಧ	೧೨	೫೩.೫೮	ಜ್ಯೇಷ್ಠಾ	೪೨.೪೪	೧	7. 0	6.24
22	ಗುರು	೧೩	೪೮.೧೬	ಮೂಲಾ	೩೮.೪೬	೨	7. 0	6.25
23	ಶುಕ್ರ	೧೪	೪೨.೧೮	ಪೂ. ಷಾ.	೩೪.೪೫	೩	7. 0	6.25

ಮಂಗಳೂರಿನ ವಾಯುಸ್ಥಿತಿ.

(೧೯೨೫ನೆಯ ಮಕರ ಪುಯಿಂತೆಲ್.)

ತಾರೀಕು Date	Temperature. ಉಷ್ಣ (ಕಾವು) Maximum ಹೆಚ್ಚಾದುದು	Minimum ಕಡಿಮೆ	Rainfall. ಮಳೆ ದಿನದ ಮಳೆ	ಜುಮಲಾ ಮಳೆ.
9	88—2	71—3	—	—
10	89—2	70—7	—	—
11	87—7	69—2	—	—
12	93—4	68—9	—	—
13	91—4	73—2	—	—
14	94—8	74—8	—	—
15	91—2	73—0	—	140-89

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ. ಅ.	ವರೆಗೆ ರೂ. ಅ.
ಹೊಸ ಮುಸ್ಕತಿ	8—8	8—14
ಹೊಸ ಗುಡ್ಡು	7- 8	7—12
ಹೊಸ ರಾಶಿ	6- 12	7— 4
ಅನ್ವಲ್ ಬೆಳ್ತಿಗೆ	8- 12	9— 0
ಗುಡ್ಡು ಬೆಳ್ತಿಗೆ	7- 8	7 - 12
ರಂಗೂನು ಬೆಳ್ತಿಗೆ ಗೋಣಿ ೧	15- 0	15 - 8
ಗೋಧಿ ಗೋಣಿ ೧ಕ್ಕೆ	17- 0	18 8
ಹುರುಳಿಗೋಣಿ ೧ಕ್ಕೆ	10- 0	11—8
ಅವರೆಗೋಣಿ ೧ಕ್ಕೆ	11- 0	11 - 12
ತೊಗರಿಗೋಣಿ ೧ಕ್ಕೆ	12- 0	12 - 8
ತೊಗರಿಬೇಳೆ ಗೋಣಿ ೧ಕ್ಕೆ	13- 8	21 - 0
ಉದ್ದುಗೋಣಿ ೧ಕ್ಕೆ	13- 0	13 8
ಹೆಸರುಗೋಣಿ ೧ಕ್ಕೆ	14 - 0	15—0
ಊರು ಬೆಲ್ಲ ಖಂಡಿ ೧ಕ್ಕೆ	70- 0	75 - 0
ಉಪ್ಪು ಗೋಣಿ ೧ಕ್ಕೆ	4- 0	4 - 2
ಕೊಬ್ರಿ ಖಂಡಿ ೧ಕ್ಕೆ	130-0	135 —0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	46- 0	47 — 0
ಎಳ್ಳಿಂಡಿ ಖಂಡಿ ೧ಕ್ಕೆ	40-0	45—0
ಕೊಬ್ರಿ ಎಣ್ಣೆ ಮುಡಿ ೧ಕ್ಕೆ	8—12	10—0
ಎಳ್ಳೆಣ್ಣೆ ಮುಡಿ ೧ಕ್ಕೆ	7- 0	11—0
ಚಿಮಿಣಿ ಎಣ್ಣೆ ಪೆಟ್ಟಿಗೆ ೧ಕ್ಕೆ	8-15-6	—
[illegible] ಸಕ್ಕರೆ ಮುಡಿ ೧ಕ್ಕೆ	4 - 14	5 - 0
ಊರ ಮೆಣಸಿನಕಾಯಿ ಮುಡಿ ೧ಕ್ಕೆ	10- 8	—
ಸಾಸಿವೆ ಮುಡಿ ೧ಕ್ಕೆ	9- 0	9— 2
ಕೊತ್ತಂಬರಿ ಮುಡಿ ೧ಕ್ಕೆ	3- 6	3—14
ಕಾಫಿ ಖಂಡಿ ೧ಕ್ಕೆ	430- 0	500—0
[illegible] ಅಡಿಕೆ ಖಂಡಿ ೧ಕ್ಕೆ ಹಳತು	235- 0	238—0
ಕಾಳುಮೆಣಸು ಖಂಡಿ ೧ಕ್ಕೆ	155-0	160—0
ಯಾಲಕ್ಕಿ ಮುಡಿ ೧ಕ್ಕೆ	80- 0	85—0
ಗೇರುಬೀಜ ಮುಡಿ ೧ಕ್ಕೆ	5—6	5—8
[illegible] ಖಂಡಿ ೧ಕ್ಕೆ	45- 0	65—0
[illegible] ಮುಡಿ ೧ಕ್ಕೆ	17-12	23—0
[illegible] ಮುಡಿ ೧ಕ್ಕೆ	26- 0	—
[illegible] ಸೇರು ೧ಕ್ಕೆ	22- 0	
[illegible] ಮುಡಿ ೧ಕ್ಕೆ	18- 8	
[illegible]	14—5	

Pandit B. Ramakrishna Baliga's Siddha Ayurvedic medicines of 50 years' reputation.

ಮಹಾ ಮದನಕಾಮೇಶ್ವರಿ ಲೇಹ—ಇದನ್ನು ಬಂಗಾರ, ಅಭ್ರಕಭಸ್ಮ, ರಸಸಿಂಧೂರ, ಕಸ್ತೂರಿ, ಕುಂಕುಮಕೇಸರ ವಗೈರೆ ಅಮೂಲ್ಯವಾದ ರಸಾಯನ ದ್ರವ್ಯಗಳಿಂದ ತಯಾರಿಸಲ್ಪಟ್ಟಿರುತ್ತದೆ. ಇದು ಎಲ್ಲಾ ತರದ ನಪುಂಸಕ ರೋಗಗಳನ್ನೂ ವೃದ್ಧಾಪ್ಯದಲ್ಲಿ ಧಾತುಪುಷ್ಟಿಯನ್ನೂ, ದೇಹಕ್ಕೆ ದಿವ್ಯಕಾಂತಿಯನ್ನೂ, ಪುಷ್ಟಿಯನ್ನೂ, ಪುರುಷತ್ವವನ್ನೂ, ವೀರ್ಯಸ್ತಂಭನವನ್ನೂ ಉಂಟುಮಾಡಿ ಅತ್ಯಾನಂದವನ್ನು ಕೊಡುವುದಲ್ಲದೆ, ಅಜೀರ್ಣ, ಅತಿಸಾರ, ಗ್ರಹಣಿ, ಅಮ್ಲ, ಪಿತ್ತ, ಉದರಶೂಲೆ, ಪ್ರಮೇಹ ವಗೈರೆ ರೋಗಗಳನ್ನು ಗುಣಪಡಿಸುವಲ್ಲಿ ಕೇವಲ ಅಮೃತಸಮಾನವಾಗಿರುವುದು. ಇದನ್ನು ಅಬಾಲವೃದ್ಧರೂ ಸೇವಿಸಬಹುದು.

ಸ್ವರ್ಣ ಮಿಶ್ರಿತ ಲೇಹಕ್ಕೆ (48 ದಿನಗಳ ವರೆಗೆ ಸಾಕಾಗುವ) ಸೇರು ೧ರ ರೂ. 4—0—0.
ಸ್ವರ್ಣ ಇಲ್ಲದ ,, ,, ,, ,, 3—0—0.

ಬೃಹತ್ ಶಾರಿವಾದಿ ರಸಾಯನ—ಇದು ಶಾಸ್ತ್ರಿಯಂದ ರಕ್ತವನ್ನು ಶೋಧಿಸುವ ದಿವ್ಯೌಷಧವಾಗಿರುತ್ತದೆ. ಇದರ ಸೇವನೆಯಿಂದ 20 ತರದ ಪ್ರಮೇಹ ರೋಗಗಳೂ ಎಲ್ಲಾ ತರದ ಫರಂಗಿ ರೋಗಗಳೂ ಅಲ್ಪ ಸಮಯದಲ್ಲಿ ಗುಣಹೊಂದುವವು. ಅದಲ್ಲದೆ ಇದು ಎಲ್ಲಾ ತರದ ಕುಷ್ಠವ್ಯಾಧಿಗಳನ್ನೂ, ಖಜ್ಜಿ, ಕುರು ಮೊದಲಾದ ಸಕಲ ಚರ್ಮವ್ಯಾಧಿಗಳನ್ನೂ ಪಾದರಸ ಸೇವನೆಯಿಂದ ಉಂಟಾದ ರೋಗಗಳನ್ನೂ ಮತ್ತು ಹೆಂಗಸರ ಪ್ರದರ ರೋಗಗಳನ್ನೂ ಶಾಸ್ತ್ರಿಯಂದ ಗುಣಪಡಿಸುವುದು.

8 ಔನ್ಸಿನ ಬಾಟ್ಲಿ ಒಂದರ ಕ್ರಯ ಬರೀ ರೂ. 1—9—0.

ಧಾತ್ರಿ ಪರ್ಪಟಕಾದಿ ತೈಲ—(ಸಿದ್ಧ ಇಲ್ಲದವರಿಗೆ ಸಿದ್ಧೌಷಧ.) ಇದನ್ನು ತಲೆಗೆ ಇಟ್ಟಲ್ಲಿ ಸಕಲ ಶಿರೋರೋಗಗಳೂ, ಕಫ, ಪಿತ್ತ, ದಂತ, ಚಕ್ಷುರೋಗಗಳೂ, ತಲೆ ತಿರುಗುವುದು, ಕಾಲವಾದ ತಲೆ ಹಿಡಿತವು ಮೊದಲಾದ ರೋಗಗಳು ನಾಶವಾಗಿ, ಸ್ಮರಣಶಕ್ತಿಯನ್ನೂ, ಜ್ಞಾನಶಕ್ತಿಯನ್ನೂ ವೃದ್ಧಿಗೊಳಿಸುವುದು. ಇದು ವಿದ್ಯಾರ್ಥಿಗಳಿಗೂ ವಕೀಲರಿಗೂ ಒಂದು ಸಿದ್ಧೌಷಧ.

4 ಔನ್ಸಿನ ಬಾಟ್ಲಿ ೧ರ ರೂಪಾಯಿ 1—0—0.

ಕಸ್ತೂರಿ ಮಿಶ್ರಿತ ದಶಮೂಲಾಸವ—ಬಾಣಂತಿಯರಿಗೆ 8 ಔನ್ಸು ಬಾಟ್ಲಿಗೆ ರೂ. 1—0—0. ಅಮೃತಾರಿಷ್ಟ—ಸಕಲ ಜ್ವರಗಳ ಮೇಲೆ ಬಾಟ್ಲಿಗೆ ರೂ. 0—12—0. ಚ್ಯವನ ಪ್ರಾಶಲೇಹ—(ದೇಹಪುಷ್ಟಿಗೆ) ಸೇರು ೧ರ ರೂ. 2—0—0. ಅಶೋಕಾರಿಷ್ಟ—(ಹೆಂಗಸರ ರೋಗಗಳ ಮೇಲೆ) 8 ಔನ್ಸಿನ ಬಾಟ್ಲಿ ೧ರ ರೂ. 1—0—0. ಮಹಾ ಚಂದನಾದಿ ತೈಲ—(ಅಭ್ಯಂಗಕ್ಕೆ ದಿವ್ಯೌಷಧ) 4 ಔನ್ಸಿನ ಬಾಟ್ಲಿ ೧ರ ರೂ. 1—0—0. ಗೋರೋಚನಾದಿ ವಟಾಕ್ರಿ—(ಮಕ್ಕಳ [illegible]) ಡಜನು ೧ರ ಕ್ರಯ ರೂ. 1—0—0.

ಸೂಚನೆ:—ಟಪ್ಪಾಲ ಹಾಸಲು ಪ್ರತ್ಯೇಕ. ಸ್ಥಳೀಕ ಬಡ ಜನರಿಗೆ ಔಷಧವು ಧರ್ಮಾರ್ಥವಾಗಿ ಕೊಡಲ್ಪಡುವುದು.

ವಿಳಾಸ:— ಪಂಡಿತ, ಬಿ. ರಾಮಕೃಷ್ಣ ಬಾಳಿಗ, ಬಂಟವಾಳ ದ. ಕ.

The Canara Public Conveyance Co., Ltd, Mangalore.

(ESTABLISHED 1914).

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು
- ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು
- ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
- ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
- ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.
- ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ—ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd, Mangalore. S. K.

CHEAPEST HOUSE FOR
NEW YEAR PRESENTS
Pocket
Electric Lamps
In different varieties, Mother of pearl lamps. Cycle lamps.
NICKEL PLATED,
Hammered Brand, with Powerful Bulls-eye lance.
Use with it
Bull's-eye Dry Batteries.

Can be obtained at—
The Mangalore Trading Association,
Car Street, MANGALORE

ಮಾರಾಟಕ್ಕೆ ಸಿದ್ಧವಿದೆ! ಮಾರಾಟಕ್ಕೆ ಸಿದ್ಧವಿದೆ!

1925ನೇ ವರುಷದ

ಪೋಕೆಟ್ ಡೈರಿ.

ಮುಚ್ಚಳವೂ ಪಾಕೇಟೂ ಇರುವ ದೊಡ್ಡ ಸೈಜಿನ ಡೈರಿ ೧೪ ಆಣೆ.
ದೊಡ್ಡ ಸೈಜಿನ ಸಾದಾ ಡೈರಿ . . . ೧೦ ಆಣೆ.
ಸಣ್ಣ ಸೈಜಿನ ಮುಚ್ಚಳ ಮತ್ತು ಪಾಕೇಟು ಇರುವ ಡೈರಿ ೧೦ ಆಣೆ.
ಸಣ್ಣ ಸೈಜಿನ ಸಾದಾ ಡೈರಿ . . . ೭ ಆಣೆ.

ವಿಳಾಸ— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಕನ್ನಡಿಗರೇ! **ವಸಂತ.** ಕನ್ನಡತಿಯರೇ!

ಈಗಾಗಲೇ ಎರಡನೇ ಸಂಪುಟವು ಆರಂಭಿಸಲಿದೆ.

ಇತಿಹಾಸನಿಧಿ ಎಂದರೆ . . . . ವಸಂತ
ಸಮಾಜಸುಧಾರಕನೆಂದರೆ . . . . ವಸಂತ
ಕೈಗಾರಿಕೆಯ ಸಾಮ್ರಾಜ್ಯವೆಂದರೆ . . . . ವಸಂತ
ಕರ್ಣಾಟಕ ಭಾಷಾಸೇವಕನೆಂದರೆ . . . . ವಸಂತ
ದೇಶವಿದೇಶ ಬಂಧುವೆಂದರೆ . . . . . . ವಸಂತ
ಕಾದಂಬರಿಗಳ ಭಂಡಾರವೆಂದರೆ . . . . . ವಸಂತ
ಚಿತ್ರಾಕರ್ಷ ಚಿತ್ರಶಾಲೆಯೆಂದರೆ . . . . . ವಸಂತ
ದೇಶಭಕ್ತನೆಂದರೆ . . . . ವಸಂತ

ಇಂತಹ ವಸಂತನು ಯಾರಿಗೆ ಬೇಕು,
ಯಾರಿಗೆ ಬೇಡ?

48 (ಕ್ರೌನ್ ⅛ ಪುಟ ಸ್ಯಾಇಜಿನ) ಪುಟಗಳನ್ನುಳ್ಳ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3—4—0 ಮಾತ್ರ.

ವ್ಯವಸ್ಥಾಪಕ,
ವಸಂತ ಕಾರ್ಯಾಲಯ,
ಕುಂದಾಪುರ, ದಕ್ಷಿಣ ಕನ್ನಡ.

ಬಂದು ನೋಡಿರಿ! ತಿಂದು ನೋಡಿರಿ!
ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ
ಪದಕವನ್ನು
ಬಹುಮಾನವಾಗಿ ಪಡೆದಿರುವ
ಎಸ್. ಪಿ. ಆಚಾರ್ಯ
ಇವರಿಂದ ತಯಾರಿಸಲ್ಪಟ್ಟ
ಉಪ್ಪಿನಕಾಯಿಗಳನ್ನು
ಬಂದು ನೋಡಿರಿ! ತಿಂದು ನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ, ಕುಂತಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನ್ನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ
ಬಂದು ನೋಡಿರಿ! ತಿಂದು ನೋಡಿರಿ!

ಇಂಡಿಯನ್ ಸ್ವೀಟ್‌ಮೀಟ್ ಮಾರ್ಟ್.

ಮಸೋರ್ಲಾಸಿಸಿ ಕಾಫಿ ಕ್ಲಬ್, ಮಾರ್ಕೆಟು ರೋಡು, ಮಂಗಳೂರು. } ಅಥವಾ { ಸದಾನಂದ ಕಾಫಿ ಕ್ಲಬ್, ರಥಬೀದಿ, ಮಂಗಳೂರು.

ನೋಟೀಸು.

ದಕ್ಷಿಣ ಕನ್ನಡ ಒಫಿಶಿಯಲ್ ರಿಸೀವರ್ ಕೋರ್ಟಿನಲ್ಲಿ

ದಿವಾಳಿ ಅರ್ಜಿ ನಂಬ್ರ 97/1924.

ಕೇಶವ ಭಟ್ಟ — ದಿವಾಳಿ ಅರ್ಜಿದಾರ.
ಮತ್ತು
ಬಿ. ಈಶ್ವರ ಭಟ್ಟ ಕೂಡ — ಕ್ರೆಡಿಟರರು.

ಮೇಲ್ಕಂಡ ವ್ಯವಹರಣೆಯಲ್ಲಿ ಸದರಿ ಅರ್ಜಿದಾರನು ತನ್ನನ್ನು ದಿವಾಳಿಯಾಗಿ ಸ್ಥಾಪಿಸಲ್ಪಡಬೇಕಾಗಿ ಅಪೇಕ್ಷಿಸಿ ಕೊಟ್ಟ ಅರ್ಜಿಯು ತಾ. 28—1—1925ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಹೇರಿಂಗಿನ ಬಗ್ಗೆ ಇಟ್ಟಿರುತ್ತದೆ. ಸದರಿ ಅರ್ಜಿಗೆ ಆಕ್ಷೇಪಿಸುವವರು ತಮ್ಮ ಆಕ್ಷೇಪಗಳನ್ನು ಮೇಲ್ಕಂಡ ತಾರೀಕಿಗೆ ಸದರಿ ಕೋರ್ಟಿನಲ್ಲಿ ಹೇಳಿಕೊಳ್ಳತಕ್ಕದ್ದು.

ಮಂಗಳೂರು, ತಾ. 9—1—1925. } G. Somasheker Rao, *Vakil for Petitioner.*

ನೋಟೀಸು.

ದಕ್ಷಿಣ ಕನ್ನಡಾ ಒಫಿಶಿಯಲ್ ರಿಸೀವರ್ ಕೋರ್ಟಿನಲ್ಲಿ.

1924ನೇ ಇಸವಿಯ ದಿವಾಳಿ ಅರ್ಜಿ ನಂಬ್ರ 95.
1924ನೇ ಇಸವಿಯ ಮಂಗಳೂರು ಡಿಸ್ಟ್ರಿಕ್ಟ ಮುನ್ಸಿಫ ಕೋರ್ಟು ದಿವಾಳಿ ಅರ್ಜಿ ನಂಬ್ರ 32.

ಎಮ್. ನಾರಾಯಣಾಚಾರಿ ಲಿಂಗಪ್ಪಾಚಾರಿ ಮಗ ಮಂಗಳೂರು ಶಹರು ಚುಕ್ಕಿಗಲ್ಲಿ } ಅರ್ಜಿದಾರ.
ಎದ್ರಿರು
ಐತಪ್ಪಗಟ್ಟಿ ಮುಂ. ೧೦ ಜನರು — ಕ್ರೆಡಿಟರ್ಸ್.

1920ನೇ ಇಸವಿಯ ನಂಬ್ರ 5ನೇ ಆಕ್ಟಿನ ಸೆಕ್ಷನ್ 19(2)ನೇ ಮೇರೆಗೆ ನೋಟೀಸು.—ಮೇಲ್ಕಂಡ ಅರ್ಜಿದಾರನು ತನ್ನನ್ನು ದಿವಾಳಿಯೆಂತ ಸ್ಥಾಪಿಸಬೇಕಾಗಿ ಕೊಟ್ಟ ಅರ್ಜಿಯು ಇದೇ ಇಸವಿಯ ಜನವರಿ ತಾರೀಕು 28ಕ್ಕೆ ತನ್ಖಿಗೆ ಇಟ್ಟಿದೆ. ಎದ್ರಾಡಲಪೇಕ್ಷಿಸುವ ಕ್ರೆಡಿಟರರು ಖುದ್ದಾಗಲಿ ಅಥವಾ ವಕೀಲ್‌ದ್ವಾರವಾಗಲಿ ಸದರಿ ತಾರೀಕಿನ ಪೂರ್ವಾಹ್ನ 11 ಘಂಟೆಗೆ ಈ ಕೋರ್ಟು ಮುಂದೆ ಹಾಜರಾಗಿ ವ್ಯವಹರಿಸಬಹುದೆಂತ ಈ ಮೂಲಕ ಪ್ರಕಟಿಸೋಣಾಗಿಯದೆ.

ಒಫಿಶಿಯಲ್ ರಿಸೀವರ್ ಕೋರ್ಟು ಮಂಗಳೂರು, ತಾ. 10-1-'25. } M. M. HEGDE, ಒಫಿಶಿಯಲ್ ರಿಸೀವರ್.

ನೋಟೀಸು.

ದಕ್ಷಿಣ ಕನ್ನಡಾ ಒಫಿಶಿಯಲ್ ರಿಸೀವರ್ ಕೋರ್ಟಿನಲ್ಲಿ.

1924ನೇ ಇಸವಿಯ ದಿವಾಳಿ ಅರ್ಜಿ ನಂಬ್ರ 111.
1924ನೇ ಇಸವಿಯ ಮಂಗಳೂರು ಡಿಸ್ಟ್ರಿಕ್ಟ ಮುನ್ಸಿಫ್ ಕೋರ್ಟು ದಿವಾಳಿ ಅರ್ಜಿ ನಂಬ್ರ 37.

ಮಾಳಪ್ಪ ಕಮ್ತಿ ಅನಂತ ಕಮ್ತಿ ಮಗ ಮಂಗಳೂರು ಶಹರು } ಅರ್ಜಿದಾರ.
ಎದ್ರಿರು
ಶ್ರೀ ಕೃಷ್ಣಾ ಮಿಲ್ಸ್ ಮತ್ತು ಕಂಪೆನಿ ಕೂಡ — ಕ್ರೆಡಿಟರ್ಸ್.

1920ನೇ ಇಸವಿಯ ನಂಬ್ರ 5ನೇ ಆಕ್ಟಿನ ಸೆಕ್ಷನ್ 19(2)ನೇ ಮೇರೆಗೆ ನೋಟೀಸು. ಮೇಲ್ಕಂಡ ಅರ್ಜಿದಾರನು ತನ್ನನ್ನು ದಿವಾಳಿ ಎಂತ ಸ್ಥಾಪಿಸಬೇಕಾಗಿ ಕೊಟ್ಟ ಅರ್ಜಿಯು ಇದೇ ಇಸವಿ ಜನವರಿ ತಾರೀಕು 28ಕ್ಕೆ ತನ್ಖಿಗೆ ಇಟ್ಟಿದೆ. ಎದುರಾಡಲಪೇಕ್ಷಿಸುವ ಕ್ರೆಡಿಟರರು ಖುದ್ದಾಗಲೀ ಅಥವಾ ವಕೀಲ್‌ದ್ವಾರವಾಗಲಿ ಸದರಿ ತಾರೀಕಿನ ಪೂರ್ವಾಹ್ನ 11 ಘಂಟೆಗೆ ಈ ಕೋರ್ಟು ಮುಂದೆ ಹಾಜರಾಗಿ ವ್ಯವಹರಿಸಬಹುದೆಂತ ಈ ಮೂಲಕ ಪ್ರಕಟಿಸೋಣಾಗಿಯದೆ.

ಒ. ರಿ. ಕೋರ್ಟು, ತಾ. 14-1-'25. } M. M. HEGDE, ಒಫಿಶಿಯಲ್ ರಿಸೀವರ್.

ಡಿಸ್ಟ್ರಿಕ್ಟ ಎಡ್ವಾನ್ಸಮೆಂಟ ಎಸೋಸಿಯೇಶನಿನ ವರದಿ

ಡಿಸ್ಟ್ರಿಕ್ಟ ಎಡ್ವಾನ್ಸಮೆಂಟ ಎಸೋಸಿಯೇಶನಿನ ಕಳೆದ ಜೂನ್ ತಾ. ೩೦ಕ್ಕೆ ಅಂತ್ಯವಾಗುವ ಒಂದು ವರುಷದ ವರದಿಯು ಪ್ರಕಟವಾಗಿದೆ. ಆ ವರದಿಯ ಸಾರಾಂಶ ಕೆಳಗೆ ಕೊಟ್ಟಿದೆ. ಎಸೋಸಿಯೇಶನಿಗೆ ವರದಿಯ ವರುಷದ ಅಂತ್ಯದಲ್ಲಿ ೧೧೪ ಒಂದನೇ ಕ್ಲಾಸ್ ಮೆಂಬರರೂ, ೨೭ ಮಂದಿ ೨ನೇ ಕ್ಲಾಸ್ ಮೆಂಬರರೂ ಇದ್ದರು. ಎಸೋಸಿಯೇಶನಿಗೆ ರೂ. ೪೧೮—೧೨—೦ ಮೆಂಬರರಿಂದ ಇನ್ನೂ ಬರತಕ್ಕದಿದೆ. ಇದರಲ್ಲಿ ರೂ. ೨೭—೮—೦ ಪಟ್ಟಣದ ಹೊರಗಿನ ಮೆಂಬರರಿಂದ ಮತ್ತು ರೂ. ೧೪೨—೪—೦ ಪಟ್ಟಣದೊಳಗಿನ ಮೆಂಬರರಿಂದ ಬರಬೇಕಾದುದು. ವರದಿಯ ವರುಷದಲ್ಲಿ ಕಾರ್ಯಕಾರಿ ಕಮ್ಮಿಟಿಯ ೬ ಮೀಟಿಂಗುಗಳೂ ಒಂದು ವರ್ಷಾವಧಿ ಮಹಾಸಭೆಯೂ ಜರಗಿದವು. ಎಸೋಸಿಯೇಶನು ೨ ಬೀಜದ ಹೋರಿಗಳನ್ನೂ ಒಂದು ಕೋಣವನ್ನೂ ಇಟ್ಟಿರುವದು. ಇವನ್ನು ಸಾಕುವ ಖರ್ಚು ರೂ. ೧೪೯—೧೦—೧೦ ತಗಲಿತು. ಇವುಗಳಿಂದ ದೊರಕಿದ ಐವಜು ರೂ. ೩೨೦—೮—೦. ಈ ಪ್ರಾಣಿಗಳನ್ನು ಸಾಕಲು ಸರಕಾರದಿಂದ ದೊರೆತ ರೂ. ೩೭೫—೦—೦. ನೂಲುವ ಕೈಗಾರಿಕೆಯನ್ನು ವೃದ್ಧಿಪಡಿಸುವ ಉದ್ದೇಶದಿಂದ ಎಸೋಸಿಯೇಶನ ಕಾರ್ಯಕಾರಿ ಕಮ್ಮಿಟಿಯು ತಿಂಗಳಿಗೆ ರೂ. ೫ರಂತೆ ೩ ಮಂದಿಗಳಿಗೆ ಮೂರು ತಿಂಗಳ ಪರಿಯಂತರ ವೇತನಕೊಟ್ಟು ನೇಯಿಗೆಯನ್ನು ಕಲಿಸಿದೆ. ಗೆರಟೆಯ ಮೇಲೆ ಕೆತ್ತನೆ ಕೆಲಸಮಾಡುವ ಕುಂಬಳೆ ಮಂಗೇಶರಾವ್ ಎಂಬ ಹುಡುಗನಿಗೆ ಎಸೋಸಿಯೇಶನು ಬಡ್ಡಿ ವಿರಹಿತವಾಗಿ ಸಣ್ಣ ಸಣ್ಣ ಕಂತುಗಳಿಂದ ವಾಪಸುಕೊಡುವ ಕರಾರಿನ ಮೇಲೆ ರೂ. ೧೦೦ ಸಾಲಕೊಟ್ಟಿದೆ. ಎಲ್ಲಾ ಮೂಲಗಳಿಂದ ಎಸೋಸಿಯೇಶನಿಗೆ ಈ ವರುಷ ಉಂಟಾದ ಉತ್ಪನ್ನವು (ಪ್ರದರ್ಶನದ ಉತ್ಪನ್ನ ಬಿಟ್ಟು) ರೂ. ೧೨೫೫—೮—೬. ಖರ್ಚು ರೂ. ೧೬೧೬—೩—೬. ಹೀಗೆ ಒಟ್ಟು ನಷ್ಟ ರೂ. ೪೨೦—೧೧—೦. ಮೆಂಬರರು ತಮ್ಮ ಮೆಂಬರಿಕೆಯ ಹಣವನ್ನು ಕೊಡದೆ ಇದ್ದುದರಿಂದ ಈ ನಷ್ಟಸಂಭವಿಸಲು ಒಂದು ಮುಖ್ಯ ಕಾರಣ.

ಜಿಲ್ಲೆಯ ಮೂರನೇ ಪ್ರದರ್ಶನವನ್ನು ಜರಗಿಸಬೇಕೆಂದು ಒಕ್ಟೋಬರದಲ್ಲಿ ನಿಶ್ಚಯಿಸಿ ಕೂಡಲೇ ದಶಂಬರದಲ್ಲಿ ತಾ. ೨೭ರಿಂದ ೩೧ರ ವರೆಗೆ ಪ್ರದರ್ಶನ ನಡಿಸಲಾಯಿತು. ಎಲ್ಲಾ ಕಡೆಗಳಿಂದ ಪ್ರದರ್ಶನಕ್ಕೆ ವಸ್ತುಗಳು ಬಂದಿದ್ದವು. ಸರಕಾರದ ಕಸೂತಿ ಕೆಲಸದ ಪ್ರದರ್ಶನವಲ್ಲದೆ ಕಬ್ಬಿನ ರಸ ತೆಗೆದು ಬೆಲ್ಲಮಾಡುವ ವಿಧಾನವೂ ಪ್ರದರ್ಶಿಸಲ್ಪಟ್ಟಿತ್ತು. ಸರಕಾರದ ಕೃಷಿ, ಫೋರೆಸ್ಟ್ ಫಿಶರಿಸ್ ಮುಂತಾದ ಖಾತೆಗಳೂ ಪ್ರದರ್ಶನದಲ್ಲಿ ಭಾಗಿಗಳಾಗಿದ್ದವು. ಗೋವುಗಳ ಹಾಗು ಕೋಳಿಗಳ ಪ್ರದರ್ಶನವೂ ನಡಿಸಿ ಬಹುಮಾನಗಳು ಹಂಚಲಾಗಿತ್ತು. ವಿವಿಧ ವಿನೋದಗಳೂ ನಡಿಸೋಣಾಗಿತ್ತು. ಲೋಕಲ್ ಬೋರ್ಡುಗಳಿಂದಲೂ ಇತರ ಗೃಹಸ್ಥರಿಂದಲೂ ದೊರಕಿದ ಸಹಾಯ ಧನ ರೂ. ೨೦೫೫—೮—೦ ಕೂಡಿಸಿ ಪ್ರದರ್ಶನದಿಂದ ಒಟ್ಟು ರೂ. ೨೫೭೭—೭—೨ ಉತ್ಪನ್ನವಾಗಿತ್ತು. ಖರ್ಚು ರೂ. ೨೦೧೪-೧೨-೦. ಕಳೆದು ಬಾಕಿ ಮುನಾಫ ರೂ. ೫೬೨—೧೧—೮. ಪ್ರದರ್ಶನದಲ್ಲಿ ೧೮ ಬಂಗಾರದ ಪದಕಗಳೂ ೨೧ ಬೆಳ್ಳಿಯ ಪದಕಗಳೂ ೫೭ ಸರ್ಟಿಫಿಕೇಟುಗಳೂ ಹಂಚಲಾಗಿದೆ.

ವರದಿಯ ವರುಷದ ಅಂತ್ಯದಲ್ಲಿ ಎಸೋಸಿಯೇಶನಿನ ಕೈಯಲ್ಲಿ ರೂ. ೬೩೭೩-೭-೫ ಇತ್ತು. ಇದರಲ್ಲಿ ರೂ. ೪೮೦೦ ಕೆನರಾ ಬ್ಯಾಂಕಿನಲ್ಲಿಯೂ ರೂ. ೭೨೦ ಪುತ್ತೂರು ಸೆಂಟ್ರಲ್ ಬೇಂಕಿನಲ್ಲಿಯೂ ಠೇವಣಾತಿಯನ್ನಿಟ್ಟಿದೆ. ರೂ. ೪೬೪—೨—೮ ಇಂಪೀರಿಯಲ್ ಬೇಂಕಿನಲ್ಲಿ ಕರೆಂಟ್ ಎಕೌಂಟಿನಲ್ಲಿಟ್ಟಿದೆ.

ಎಸೋಸಿಯೇಶನಿನ ಆಫೀಸು ಹಜೂರು ಆಫೀಸಿನ ಬಳಿಯಲ್ಲಿತ್ತು. ಆ ಕಟ್ಟೋಣವನ್ನು ಇನ್‌ಕಮ್‌ಟೇಕ್ಸ್ ಆಫೀಸರರ ಆಫೀಸಾಗಿ ಮಾರ್ಪಡಿಸಿದ್ದರಿಂದ ಎಸೋಸಿಯೇಶನಿನ ಆಫೀಸು ಡಿ. ಬೋರ್ಡ ಇಂಜೀನಿಯರರ ಆಫೀಸಿನ ಸಮೀಪದ ಮಿ। ಬೋಳಾರ ಶಾಬು ಸಾಹೇಬರಿಂದ ಬಾಡಿಗೆ ವಿರಹಿತವಾಗಿ ಕೊಡೋಣಾದ ಕಟ್ಟಡದಲ್ಲಿ ನಡೆಯುತ್ತಿತ್ತು. ಮಿ। ಸಾಹೇಬರು ಸದರಿ ಕಟ್ಟಡವನ್ನು ಕಳೆದ ಒಕ್ಟೋಬರದಲ್ಲಿ ಅದರ ಮಾಲಿಕರಿಗೆ ಒಪ್ಪಿಸಿದ್ದರಿಂದ ಸಂಘದ ಆಫೀಸನ್ನು ಈಗ ಮೈದಾನಿನ ಎದುರಿನಲ್ಲಿರುವ ಮೆಸ್ಸರ್ಸ್ ಪಾಯಸ್ ಎಂಡ್‌ಸನ್ಸ್ ಇವರ ಕಟ್ಟಡದ ಮಾಳಿಗೆಗೆ ಒಯ್ದಿದೆ. ಇದಕ್ಕೆ ತಿಂಗಳಿಗೆ ರೂ. ೧೨ ಬಾಡಿಗೆ. ಕಳೆದ ಜುಲಾಯಿ ತಿಂಗಳಲ್ಲಿ ಜರುಗಿದ ಸಾಮಾನ್ಯ ಸಭೆಯಲ್ಲಿ ನಿರ್ಧಾರಮಾಡಿದಂತೆ ಎಸೋಸಿಯೇಶನಿನ ಬಗ್ಗೆ ಕಟ್ಟಡ ಕಟ್ಟಲು ಬಾವುಟಗುಡ್ಡೆಯಲ್ಲಿ ಸ್ಥಳಕೊಡಬೇಕೆಂದು ಕಲೆಕ್ಟರರಿಗೆ ಬಿನ್ನವಿಸಿಕೊಂಡಿದೆ. ಸ್ಥಳ ಸಿಗುತ್ತಲೇ ಕಟ್ಟಡ ಕಟ್ಟುವ ವಿಲೇವಾರಿಮಾಡಲಾಗುವುದು.

ದಕ್ಷಿಣ ಕನ್ನಡ ಗೌಡವಿದ್ಯಾವರ್ಧಕ ಸಂಘದ ನಾಲ್ಕನೇ ವರ್ಷದ ಮಹಾಸಭೆ.

ದಕ್ಷಿಣ ಕನ್ನಡ ಗೌಡವಿದ್ಯಾವರ್ಧಕ ಸಂಘದ ನಾಲ್ಕನೇ ವರ್ಷದ ಮಹಾಸಭೆಯು ಕಳೆದ ತಾರೀಕು ೨೭ನೇ ಶನಿವಾರ ಅಪರಾಹ್ನ ಗಂಟೆ ೩ಕ್ಕೆ ಸಂಪಾಜೆ ಪಟೇಲ್ ರಾ। ಎನ್. ಸಣ್ಣಯ್ಯನವರ ಮನೆ ಮುಂದೆ ರಚಿಸಿದ ಭವ್ಯವಾದ ಚಪ್ಪರದಲ್ಲಿ ವಿಜೃಂಭಣೆಯಿಂದ ಜರಗಿತು. ಸಭೆಗೆ ಪುತ್ತೂರಿಂದ ವಕೀಲ ಶ್ರೀಯುತ ಮೊಳಹಳ್ಳಿ ಶಿವರಾಯರೂ, ಪುತ್ತೂರು ಹೈಸ್ಕೂಲ್ ಹೆಡ್ಮಾಸ್ಟರ್ ಶ್ರೀಯುತ ಎಮ್. ರಾಮನ್ ನಂಬಿಯಾರರೂ, ತಾಲೂಕು ಬೋರ್ಡು ಮೆಂಬರ ರಾ। ಎಮ್. ಸೋಮಪ್ಪ ರೈಗಳೂ, ಸುಳ್ಯ ಯೂನಿಯನ್ ಡೈರೆಕ್ಟರ ರಾ। ಎಮ್. ಐತಪ್ಪ ರೈಗಳೂ ಚಿತ್ತಯಿಸಿದ್ದರಲ್ಲದೆ ಕೊಡಗು ಜಿಲ್ಲೆಯಿಂದ ಸ್ವಜಾತಿಬಂಧುಗಳಾದ ಶ್ರೀಮಾನ್ ಎನ್. ಮುದ್ದಪ್ಪನವರೂ, (B. A. B. L.) ಕೊಡಗಿನ ಗೌಡ ವಿದ್ಯಾಸಂಘದ ಪ್ರೆಸಿಡೆಂಟ ರಾ। ಎಮ್. ಅಣ್ಣಯ್ಯನವರೂ, ರಾ। ತಳ್ಳಡೆ ಪೂವಯ್ಯನವರೂ ವಗೈರೆ ಸುಮಾರು ೨೦ ಮಂದಿ ಮಹನೀಯರು ದಯಮಾಡಿಸಿದ್ದರು. ನಮ್ಮ ಜಿಲ್ಲೆಯ ಸ್ವಜಾತಿ ಮುಂದಾಳುಗಳ ಪೈಕಿ ರಾ। ಕೂಜಗೋಡು ಕಟ್ಟೆಮನೆ ತಿಮ್ಮಪ್ಪ ಗೌಡರೂ, ರಾ। ಪೆರ್ಲಂಪಾಡಿ ಸುಬ್ರಾಯ ಗೌಡರೂ, ರಾ। ಪಾಲ್ತಾಡು ಚೆನ್ನಪ್ಪ ಗೌಡರೂ, ರಾ। ಮಡ್ತಿಲ ರಾಮಣ್ಣನವರೂ ರಾ। ಟಿ. ಕರ್ಯಪ್ಪನವರೂ, ರಾ। ಉಳುವಾರು ರಾಮಪ್ಪನವರೂ, ರಾ। ಮುರುಳ್ಯ ಪೆರ್ಗಡೆ ಗೌಡರೂ ರಾ। ಎಸ್ ಎನ್. ಐತಪ್ಪನವರೂ, ರಾ। ಮುಂಡೋಡಿ ತಿಮ್ಮಪ್ಪನವರೂ ವಗೈರೆ ೨೦೦ ಜನ ಮೆಂಬರರೂ ಸ್ವಜಾತಿಬಂಧುಗಳಾದ ಸುಮಾರು ೧೫೦ ಜನ ಪ್ರೇಕ್ಷಕರೂ ನೆರೆದಿದ್ದರು.

ರಾ। ಕೂಜಗೋಡು ತಿಮ್ಮಪ್ಪ ಗೌಡರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದೊಡನೆಯೇ ಸಭೆಯ ಕಾರ್ಯಕ್ರಮಗಳು ಪ್ರಾರಂಭವಾದವು. ಕಾರ್ಯದರ್ಶಿ ರಾ। ಎನ್. ಸಣ್ಣಯ್ಯನವರು ಸಭಿಕರಿಗೆ ಸ್ವಾಗತವನ್ನಿತ್ತು ಗತವರ್ಷದ ವರದಿಯನ್ನು ಓದಿದರು. ವರದಿಯಲ್ಲಿ ಕಳೆದ ಮಹಾಸಭೆಯ ಲಾಗಾಯತು ಸಂಘದ ಪ್ರಗತಿಯು ಸಾಕಷ್ಟು ಸಮಾಧಾನಕರವಾಗಿ ಇರುವುದೆಂದೂ ಸಂಘಕ್ಕೆ ಇಷ್ಟರ ವರೆಗೆ ೩೯೭ ಜನ ಮೆಂಬರರಾಗಿ ರೂಪಾಯಿ ೧೬,೪೨೪ ವಾಗ್ದಾನ ಮಾಡಿ ರೂ. ೨೨೫೫ ವಸೂಲುಕೊಟ್ಟಿರುವರೆಂದೂ ವಿವರಿಸೋಣಾಗಿತ್ತು. ಲೆಕ್ಕಪರಿಶೋಧಕರಾದ ಸುಪರ್‌ವೈಸರ್ ರಾ। ಸಿ. ಕೆ. ಪದ್ಮಯ್ಯನವರೂ, ಲೆಕ್ಕ ಪರಿಶೋಧಿಸಿ ಬರೆದ ರಿಪೋರ್ಟು ಸಹ ಓದಲಾಯಿತು. ವರದಿಯಲ್ಲಿ ಹೇಳಿದ ಸಂಗತಿಯು ಮುಂದಟ್ಟಾಗಿ ಎಲ್ಲರಿಗೂ ತಿಳಿಯುವಂತೆ ರಾ। ಎಮ್. ಶಿವರಾಯರು ವಿವರಿಸಿ ಹೇಳಿದುದಲ್ಲದೆ, ಬಾಕಿಯಾದ ಕಂತಿನ ಹಣವನ್ನು ಆದಷ್ಟು ತ್ವರ್ಯ ವಸೂಲುಕೊಡುವಂತೆಯೂ ಕೂಡ ಸರ್ವರಿಗೂ ಮನಸ್ಸಿಗೆ ನಾಟುವಂತೆ ಸರಸವಾಗಿ ಮಾತಾಡಿದರು. ರಾ। ರಾಮನ್ ನಂಬ್ಯಾರರು ವಿದ್ಯಾರ್ಥಿಭವನದ ಆವಶ್ಯಕತೆಯ ವಿಷಯವಾಗಿಯೂ ಹುಡುಗರು ಮಂಗಳೂರು ವಗೈರೆ ದೂರ ಪ್ರಾಂತ್ಯಕ್ಕೆ ಹೋಗಿ ಸಣ್ಣ ತರಗತಿಯಲ್ಲಿಯೇ ಕಲಿಯುವುದರಿಂದ ಅನಾವ್ರಯಕ್ಕೆ ಗುರಿಯಾಗುವ ವಿಷಯವಾಗಿಯೂ ಕೂಡ ರಸಗರ್ಭಿತವಾದ ಒಂದು ಭಾಷಣವನ್ನು ಮಾಡಿದರು. ರಾ। ಎನ್. ಮುದ್ದಪ್ಪನವರು ಸಂಘದಿಂದಿರತಕ್ಕ ಪ್ರಯೋಜನವನ್ನೂ ಆ ಬಗ್ಗೆ ನಮ್ಮಲ್ಲಿ ಇರತಕ್ಕ ಒಕ್ಕಟ್ಟಿನ ವಿಷಯವಾಗಿಯೂ ಮಾತನಾಡಿದರು. ರಾ। ದೊಡ್ಡಡ್ಕ ಮಣಿಯಪ್ಪನವರು ಈ ಸಂಘದಿಂದ ವಿದ್ಯಾರ್ಥಿವೇತನವನ್ನು ಕೊಡಗಿನ ವಿದ್ಯಾರ್ಥಿಗಳಿಗೂ ಸಹ ಕೊಡುವಂತೆ ನಿರ್ಣಯವಿರಬೇಕೆಂತ ಸೂಚಿಸಿದ್ದನ್ನು ರಾ। ಮಡ್ತಿಲ ರಾಮಣ್ಣನವರು ಅನುಮೋದಿಸಿ ಸರ್ವಾನುಮತದಿಂದ ಮಂಜೂರಾಯಿತು. ಆಡಳಿತೆ ಮೆಂಬರರ ಪೈಕಿ ರಾಜಿನಾಮೆ ಕೊಟ್ಟ ಒಬ್ಬರ ಸ್ಥಾನಕ್ಕೆ ರಾ। ಪಾಲ್ತಾಡು ಚೆನ್ನಪ್ಪನವರನ್ನೂ, ಹೆಚ್ಚಿಸಿದ ಎರಡು ಸ್ಥಾನಗಳಿಗೆ ರಾ। ಕೂಜಗೋಡು ಕುಶಲಪ್ಪನವರನ್ನೂ, ರಾ। ಮೇರ್ಕಜೆ ಚೆನ್ನಪ್ಪನವರನ್ನೂ ಆಡಳಿತೆ ಮೆಂಬರನ್ನಾಗಿ ಆರಿಸಿದುದಾಯಿತು. ಸಭೆಯಲ್ಲಿ ಮೆಂಬರರಿಂದ ರೂಪಾಯಿ ೫೩೭ ವಸೂಲು ಬಂತು. ಇದನ್ನು ಪುತ್ತೂರು ವರ್ತಕರ ಸಂಘದಲ್ಲಿ ಠೇವಣಾತಿ ಇಡುವಂತೆ ಕಾರ್ಯದರ್ಶಿಯವರ ಸ್ವಾಧೀನ ಕೊಡೋಣಾಯಿತು. ಪುತ್ತೂರು ಗೌಡ ಬಡವಿದ್ಯಾರ್ಥಿ ಫಂಡಿಗೆ ಸಭಿಕರ ಮುಂದಿಟ್ಟ ಹರಿವಾಣದಲ್ಲಿ ರೂ ೪೫-೯-೦ ಜಮೆಯಾಯಿತು. ಈ ರೂಪಾಯಿ ಪೈಕಿ ಪುತ್ತೂರಲ್ಲಿ IIIನೇ ಫೋರ್ಮಿನಲ್ಲಿ ಕಲಿಯುವ ಮುತ್ತಣ್ಣ ಗೌಡನೆಂಬ ವಿದ್ಯಾರ್ಥಿಗೆ ೧೫ ರೂಪಾಯಿ ಉಚಿತ ಕೊಟ್ಟು ಬಾಕಿ ಉಳಿದ ಐವಜನ್ನು ಸದರಿ ಸಂಘದ ಕಾರ್ಯದರ್ಶಿಯವರಿಗೆ ಕಳುಹಿಸಿ ಕೊಡೋಣಾಯಿತು.

ಪುತ್ತೂರಲ್ಲಿ ಕಟ್ಟತಕ್ಕ ವಿದ್ಯಾರ್ಥಿಭವನಕ್ಕೆ ೧೦೦೦ ಒಂದು ಸಾವಿರ ಹಂಚು ಉಚಿತವಾಗಿ ಕೊಡುತ್ತೇನೆಂತ ಮ। ರಾ। ಅಂಬೆ ಹೊಸ ಮನೆ ಚೆನ್ನಪ್ಪ ಗೌಡರು ವಾಗ್ದಾನಮಾಡಿದಲ್ಲದೆ, ಬಾವಿಯ ಕೆಲಸಕ್ಕಾಗಿ ಸಂಪಾಜೆ ಗ್ರಾಮದ ೫ ಜನ ಮಹನೀಯರು ಕೂಡ ರೂಪಾಯಿ ೧೦೦ ಒಂದು ನೂರು ರೂಪಾಯಿ ಕೊಡುವುದಾಗಿ ವಾಗ್ದಾನಮಾಡಿದ್ದಲ್ಲದೆ ಹೊಸ ಮೆಂಬರರಾಗಿ ೧೪ ಜನರು ಸುಮಾರು ೪೦೦ ರೂಪಾಯಿ ವಾಗ್ದಾನಮಾಡಿರುವರು. ಇಲ್ಲಿಗೆ ದೇವರ ಪ್ರಾರ್ಥನೆಯೊಂದಿಗೆ ಸಭೆಯು ಕೊನೆಗೊಂಡಿತು.

ವಿದೇಶ ವರ್ತಮಾನ.

ನಿದ್ರಾರೋಗ:—ಜಪಾನಿನಲ್ಲಿ ನಿದ್ರಾರೋಗವು ಹೊಸ ರೀತಿಯಾಗಿ ಹರಡುತ್ತಿರುವುದು. ಈ ರೋಗ ತಗಲಿದ ಪ್ರತಿ ೧೦೦ ಮಂದಿಗೆ ೬೦ಕ್ಕೆ ಕಡಿಮೆಯಿಲ್ಲದೆ ೫ರಿಂದ ೧೦ ದಿನಗಳೊಳಗಾಗಿ ಮೃತಪಡುತ್ತಿರುವರಂತೆ.

ತುರ್ಕಿಯ ಸುಲ್ತಾನರು:—ತುರ್ಕಿಸ್ಥಾನದ ಸುಲ್ತಾನರು ರಾಜ್ಯಭ್ರಷ್ಟರಾಗುವ ಮೊದಲು ತನ್ನ ಅರಮನೆ ತೋಟಗಾರನಾದ ಸೇವಕನೊಬ್ಬನ ಮಗಳ ಸೌಂದರ್ಯಕ್ಕೆ ಮೋಹಿಸಿ, ತನ್ನ ೬೦ನೇ ವಯಸ್ಸಿನಲ್ಲಿ ಮದುವೆಯಾದರು. ಆಗ್ಗೆ ಆಕೆಗೆ ೧೫ ವರುಷ ಪ್ರಾಯಮಾತ್ರ. ಸುಲ್ತಾನರು ಪದಚ್ಯುತರಾಗಿ ಪರದೇಶಕ್ಕೆ ತೆರಳುವಾಗ್ಗೆ ಮೊದಲನೇ ತನ್ನ ಇಬ್ಬರು ಪತ್ನಿಯರನ್ನು ಮಾತ್ರ ಜೊತೆಗೆ ಕಂಕೊಂಡಿದ್ದು ಕನಿಷ್ಠ ಪತ್ನಿಯನ್ನು ಅಗಲಿದ್ದುದರಿಂದ ವಿರಹತಾಪದಿಂದ ಬಳಲಿ ಅವರು ಈಗ ಆಕೆಯನ್ನು ಕರಸಿಕೊಂಡಿರುವರಂತೆ.

ಈಜಿಪ್ಟದಲ್ಲಿನ ವಿದ್ಯಾರ್ಥಿಗಳ ಮುಷ್ಕರ:- ಕೈರೋ ಮೊದಲಾದ ಕಡೆಗಳಲ್ಲಿ ಮುಷ್ಕರ ಹಿಡಿದ ವಿದ್ಯಾರ್ಥಿಗಳಲ್ಲಿ ಅನೇಕರು ಪುನಃ ಶಾಲೆಗೆ ಸೇರುತ್ತಿದ್ದಾರೆ.

ಲೋರ್ಡ ಪೆಂಟಲೆಂಡರ ನಿಧನ:—ಮದ್ರಾಸಿನ ಮಾಜಿ ಗವರ್ನರರಾದ ಲೋರ್ಡ ಪೆಂಟಲೆಂಡರು ಕಾಲವಾದರೆಂದು ತಿಳಿಯುತ್ತೇವೆ.

ಒಳದೇಶ ವರ್ತಮಾನ

ಮುಂಬಯಿ ಮುನ್ಸಿಪಾಲಿಟಿ:—ಮುಂಬಯಿ ಮುನ್ಸಿಪಲ್ ಕೊರ್ಪೊರೇಶನು ತನ್ನದೊಂದು ಸ್ವಂತ ಬೇಂಕನ್ನು ಸ್ಥಾಪಿಸುವ ಆಲೋಚನೆಯಲ್ಲಿರುವುದು.

ಕೋಹಾಟ್ ಸಂಕಷ್ಟ ನಿವಾರಣಾ ಫಂಡು:—ಕೋಹಾಟಿನಲ್ಲಿ ಕಷ್ಟಪಡುವ ಹಿಂದುಗಳ ಸಂಕಷ್ಟ ನಿವಾರಣಾ ಫಂಡಿಗೆ ಕಾಮಕೋಟಿ ಪೀಠದ ಶಂಕರಾಚಾರ್ಯರು ರೂ. ೫೦೦ ವಂತಿಗೆ ಕೊಟ್ಟಿರುವರು.

ಮುಂಬಯಿಯ ಧನಿಕನ ದಾನ:—ಮುಂಬಯಿಯ ಶ್ರೀಮಂತ ಸರ್ ವಿಕ್ಟರ್ ಸೆಸೂನ್‌ರವರು ವೈಸರಾಯರ ವಶಕ್ಕೆ ೫ ಲಕ್ಷ ರೂಪಾಯಿ ಒಪ್ಪಿಸಿ ಅದನ್ನೆಲ್ಲಾ ಧರ್ಮಕಾರ್ಯಗಳಿಗೆ ವಿನಿಯೋಗಿಸಲು ಅಂಕೆ ಮಾಡಿದ್ದಾರೆ.

ಪೂನಾ ಮುನ್ಸಿಪಾಲಿಟಿ:—ಪೂನಾ ಮುನ್ಸಿಪಾಲಿಟಿಯ ಅಧ್ಯಕ್ಷರಾದ ಶ್ರೀಯುತ ಎನ್. ಸಿ. ಕೇಳಕರರು ತಮ್ಮ ಅಧ್ಯಕ್ಷಪದವಿಗೆ ರಾಜಿನಾಮೆಯನ್ನು ಕೊಟ್ಟಿರುವರು.

ವಾರದಾ ಮುನ್ಸಿಪಾಲಿಟಿ:—ಈ ಮುನ್ಸಿಪಾಲಿಟಿಯ ಮೀಟಿಂಗಿನಲ್ಲಿ ಪಂಡಿತ ಮೋತಿಲಾಲ ನೇಹರು ಮತ್ತು ಮಿ। ಅಬ್ದುಲ್ ಕಲಂ ಅಜದರಿಗೆ ಸನ್ಮಾನಪತ್ರವನ್ನು ಕೊಡತಕ್ಕದೆಂಬ ಠರಾವು ಮಂಜೂರಾಗಿದೆ.

ಕೌನ್ಸಿಲ್ ಒಫ್ ಸ್ಟೇಟ್:—ವೈದ್ಯ ಉದ್ಯೋಗಸ್ಥರ ಸೂಚನೆಯ ಮೇರೆಗೆ ನಾಮದಾರ ಶ್ರೀನಿವಾಸ ಶಾಸ್ತ್ರಿಯವರು ಕೌನ್ಸಿಲ್ ಒಫ್ ಸ್ಟೇಟಿನ ಮೆಂಬರಿಕೆಗೆ ರಾಜಿನಾಮೆಕೊಟ್ಟಿರುವರು. ಈ ಸ್ಥಾನಕ್ಕೆ ಶ್ರೀಯುತ ಟಿ. ಎಸ್. ರಾಮಸ್ವಾಮಿಯವರು ಉಮೇದ್ವಾರರಾಗಿರುವರು.

ಬೆಂಗಳೂರ ಮುನ್ಸಿಪಾಲಿಟಿ:—ಮಿ। ಮಹಮ್ಮದ ಅಬ್ಬಾಸ ಖಾನರು ಬೆಂಗಳೂರ ಮುನ್ಸಿಪಾಲಿಟಿಯ ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವರು.

ಓಲ್-ಇಂಡಿಯಾ ಕೊಂಗ್ರೆಸ್ ಕಮ್ಮಿಟಿಯ ಮೀಟಿಂಗು:- ಓಲ್ ಇಂಡಿಯಾ ಕೊಂಗ್ರೆಸ್ ಕಮ್ಮಿಟಿಯ ಕಾರ್ಯಕಾರಿ ಕಮ್ಮಿಟಿಯ ಮೀಟಿಂಗು ಬರುವ ತಾ. ೨೫ನೇ ಅಪರಾಹ್ನ ೩ ಗಂಟೆಗೆ ಡಿಲ್ಲಿಯಲ್ಲಿ ಡಾಕ್ಟರ್ ಅನ್ಸಾರಿಯವರ ಮನೆಯಲ್ಲಿ ಜರಗುವುದು.

ಆರ್ಥಿಕ ಸ್ಥಿತಿಯ ಉನ್ನತಿ:—ಹಿಂದುಸ್ಥಾನದ ಜನರು ಖಾದಿಯ ಬೆಳವಣಿಗೆಯನ್ನು ಹೆಚ್ಚಿಸಿದರೆ ಈ ದೇಶದ ಆರ್ಥಿಕ ಸಂಪತ್ತು ಅಭಿವೃದ್ಧಿಯಾಗುವುದೆಂದು ಶ್ರೀಯುತ ಎಮ್. ಎಸ್. ರೋಯಿಯವರು ವ್ಯಕ್ತಪಡಿಸಿದ್ದಾರೆ. ಅಲ್ಲದೆ ವೃದ್ಧಿಯಾಗುವ ಸಂಪತ್ತು ಸರಿಸಮಾನವಾಗಿ ಹಂಚಲ್ಪಡುವುದೆಂದೂ ವಿಷದಪಡಿಸಿದ್ದಾರೆ. ಹಿಂದುಸ್ಥಾನದ ಬರೇ ನಾಲ್ಕನೇ ಒಂದಂಶದಷ್ಟು ಜನರು ದಿನಂಪ್ರತಿ ನೂಲಿತರೆ ವರುಷಕ್ಕೆ ೯೦ ಕೋಟಿ ರೂಪಾಯಿ ಉಳಿಯುವುದೆಂದು ಇವರ ನಂಬಿಕೆ. ಎಂದರೆ ಈ ದೇಶದ ಪ್ರತಿಯೊಂದು ವ್ಯಕ್ತಿಯ ದಿನ ನಿತ್ಯದ ಉತ್ಪನ್ನವು ದಿನಂಪ್ರತಿ ಅರ್ಧ ಆಣೆಯಂತೆ ಹೆಚ್ಚಿಸಿದಂತಾಗುವುದು. ಈ ದೇಶದವರ ಉತ್ಪನ್ನವು ದಿನಕ್ಕೆ ಬರೇ ಒಂದು ಕಾಲಾಣೆ ಇರುತ್ತ ಖಾದಿಯನ್ನು ವೃದ್ಧಿಪಡಿಸಲು ಅವರು ಮೇಲೆ ಹೇಳಿದ ವಿಧಾನವನ್ನು ಅನುಸರಿಸಿದರೆ ಪ್ರತಿಯೊಂದು ವ್ಯಕ್ತಿಯ ಉತ್ಪನ್ನವನ್ನು ಸೇಕಡಾ ೪೦ರಂತೆ ಹೆಚ್ಚಿಸಿದಂತಾಗುವುದು.

ಖಿಲಾಫತ್ ಕೊನ್ಫರೆನ್ಸ್:—ಕುಂಭಕೋಣದಲ್ಲಿ ಪ್ರಾಂತಿಕ ಖಿಲಾಫತ್ ಕೊನ್ಫರೆನ್ಸು ಮೌಲಾನಾ ಶೌಕತಾಲಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಮೌಲಾನರು ತಮ್ಮ ಭಾಷಣದಲ್ಲಿ ಹಿಂದೂ-ಮುಸಲ್ಮಾನರು ಐಕ್ಯರಾಗಬೇಕು; ಅವರಲ್ಲಿ ಪರಸ್ಪರ ಪ್ರೀತಿ ಮತ್ತು ಸಮಾಧಾನವಿರಬೇಕು; ಅವರು ಸ್ನೇಹಿತರಂತೆ ಹಾಗು ಭ್ರಾತೃಗಳಂತೆ ಇರತಕ್ಕದ್ದು. ವೈಮನಸ್ಸನ್ನು ಬಿಟ್ಟುಬಿಡಬೇಕು ಎಂದು ಭಾಷಣಮಾಡಿದರು. ಪರಿಷತ್ತಿನಲ್ಲಿ ಪಾಸಾದ ಠರಾವುಗಳೆಂದರೆ, ಹಿಂದುಸ್ಥಾನದ ಸ್ವರಾಜ್ಯ ವಿನಾ ಮುಸಲ್ಮಾನ ರಾಜ್ಯಗಳಿಗೆ ಸ್ವಾತಂತ್ರ್ಯ ದೊರೆಯದೆಂತಲೂ ಹಿಂದೂ-ಮುಸಲ್ಮಾನರ ಐಕ್ಯವಿನಹಾ ಸ್ವರಾಜ್ಯವು ದುರ್ಲಭವೆಂತಲೂ ಹಿಂದು-ಮುಸಲ್ಮಾನರು ಧಾರ್ಮಿಕ ಹಾಗು ರಾಜಕೀಯ ವಿಷಯಗಳಲ್ಲಿ ಪ್ರತಿಯೊಬ್ಬರೂ ಪರಸ್ಪರ ಸ್ನೇಹಿಸೋಣಿಸಬೇಕಾಗಿಯೂ ಐಕ್ಯರಾಗಬೇಕಾಗಿಯೂ ಪ್ರತಿಯೊಬ್ಬರು ಖಾದಿಯನ್ನು ಧರಿಸಿ ಚರಕವನ್ನು ತಿರುಗಿಸಿ ನೂಲನ್ನು ತಯಾರಿಸಿ ವಸ್ತ್ರ ನೇಯಬೇಕಾಗಿಯೂ ಠರಾವು ಪಾಸುಮಾಡಿದೆ.

ಹಿಂದುಸ್ಥಾನದ ವೈಸರಾಯರು:—ಲಾರ್ಡ ರೆಡಿಂಗರನಂತರ ಹಿಂದುಸ್ಥಾನದ ವೈಸರಾಯರಾಗಿ ಲೋರ್ಡ ರೋನಾಲ್ಡಶೇಯವರು ಬರುವರೆಂದು ವದಂತಿ ಹುಟ್ಟಿದೆ.

ಮೈಸೂರಿನ ದಿವಾನರು:—ಮೈಸೂರಿನ ದಿವಾನರಾದ ಮಿ। ಎ. ಆರ್. ಬ್ಯಾನರ್ಜಿ ಸಿ. ಎಸ್. ಐ., ಸಿ. ಐ. ಇ.ಯವರು ಎರಡು ತಿಂಗಳ ರಜೆ ಪಡೆಯುವುದರಿಂದ ಅವರ ಚಾರ್ಜನ್ನು ಮಿ। [illegible] ನೋಡುವರು.

ದಕ್ಷಿಣ ಕನ್ನಡ

ಬ್ರಹ್ಮಾವರ:—ಇದೇ ತಾ. ೭ನೇ ಬುಧವಾರ ಬೆಳಿಗ್ಗೆ ೧೦ ಗಂಟೆಗೆ ಇಲ್ಲಿಯ ಬೋರ್ಡು ಬಾಲಕರ ಶಾಲೆಯಲ್ಲಿ ಒಂದು ಸಭೆಯು ಮ। ರಾ। ರಾ। ಎಮ್. ರಾಮಪ್ಪ ಆವರ್ಗಳ್ ಬಿ. ಎ. (ಸಬ್ ರಿಜಿಸ್ಟ್ರಾರ್) ರವರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಭೆಗೆ ಗ್ರಾಮದ ಪಟೇಲರೂ, ಶ್ಯಾನಭಾಗರೂ ರೈತರೂ ಸಾಹುಕಾರರೂ ಮತ್ತು ತಾಲೂಕು ಬೋರ್ಡು ಮೆಂಬರ ತಿಮ್ಮಣ್ಣಾಚಾರ್ಯರೂ ನೆರೆದಿದ್ದರು. ಈ ಶಾಲೆಯಲ್ಲಿ ಹೆಡ್ಮಾಸ್ತರರಾಗಿ ಕೆಲಸಮಾಡಿ ಈ ಶಾಲೆಯನ್ನು ಮೇಲಾದ ಸ್ಥಿತಿಗೆ ತಂದು ವರ್ಗವಾಗಿ ಹೋದ ಮ। ರಾ। ಎಮ್. ಗೋವಿಂದರಾಯರಿಗೆ ಈ ಊರವರು ಒಂದು ಚಿನ್ನದ ಪದಕವನ್ನು ಇನಾಮಾಗಿ ಅಧ್ಯಕ್ಷರಿಂದ ಕೊಡಿಸಿದರು. ಈ ಮಾಸ್ತರರು ಈ ಊರಲ್ಲಿ ಎಲ್ಲರೊಡನೆ ಹೆಚ್ಚಿನ ಪ್ರೀತಿಗಳಿಸಿ, ಶಾಲೆಯಲ್ಲಿ ಉತ್ತಮ ರೀತಿಯಲ್ಲಿ ಕೆಲಸಮಾಡಿ ಪ್ರಾಥಮಿಕ ವಿದ್ಯಾಭ್ಯಾಸದ ಅಭಿರುಚಿಯನ್ನು ಊರಲ್ಲಿ ಪಸರಿಸಿ, ಶಾಲೆಯ ಮಕ್ಕಳ ಮನಸ್ಸನ್ನು ತನ್ನ ಕಡೆಗೆ ಹೀರಿಕೊಂಡವರಾಗಿ ತನ್ನ ಹೆಸರನ್ನು ಇಲ್ಲಿ ಸ್ಥಾಪಿಸಿದವರಾಗಿರುತ್ತಾರೆಂಬುದು ನಿರ್ವಾದ. ಆದುದರಿಂದಲೇ ಈ ಊರವರು ಇವರಿಗೆ ಒಂದು ಚಿನ್ನದ ಪದಕವನ್ನು ಇನಾಮಾಗಿ ಕೊಡಲು ಪೂರ್ಣ ಸಂತೋಷಯುಕ್ತರಾಗಿರುತ್ತಾರೆ. ಬಹುಮಾನಹೊಂದಿದ ಗೋವಿಂದರಾಯರು ಈ ಶಾಲಾ ಬಾಲಕರಿಗೂ ಬಾಲಕಿಯರಿಗೂ ಮಿಠಾಯಿ ಹಂಚಿದರು.

ಮುಲ್ಕಿ:—ನಮ್ಮ ಊರಿನವರಾಗಿದ್ದು, ಪ್ರಕೃತ ಮುಂಬಯಿಯಲ್ಲಿರುವ, ಮ। ರಾ। ರಾ। ವಿಠಲದಾಸ್ ದಯಾಳರವರು, ಇಲ್ಲಿಯ ಸರ್ವಜನಹಿತೋಪಕಾರಿಯಾದ ಯೂನಿಯನ್ ಕ್ಲಬ್ಬಿನ ಉಪಯೋಗಾರ್ಥವಾಗಿ ಉಚಿತ ಕೊಟ್ಟ ಒಂದು ಚಲೋ ಗೋಡೆ, ಗಡಿಯಾರವನ್ನು ವಂದನಾಪೂರ್ವಕ ಸ್ವೀಕರಿಸೋಣಾಗಿದೆ. ಅಂತೆಯೇ, ಈ ಕೆಳಗೆ ಹೆಸರು ಕಾಣಿಸಿದ ಮಹಾಶಯರು ಆತ್ಮಸಂತೋಷದಿಂದ ದ್ರವ್ಯಸಹಾಯಮಾಡಿದುದಕ್ಕಾಗಿ ಕೂಡಾ ಚಿರಕೃತಜ್ಞರಾಗಿರುತ್ತೇವೆ. ಮ। ರಾ। ರಾ। ಸಾವುಕಾರ್ ಮೆಂಜೇಶ್ವರ ನರ್ಸಯ್ಯ ಶ್ಯಾನುಭಾಗರು ರೂ ೧೫, ಡಾಕ್ಟರ್ ವಿ. ಪಿ. ಕಾಮತ್ ಡಿಸ್ಟ್ರಿಕ್ಟ ಸರ್ಜನ್ ರೂ. ೧೦, ಮಹಾರಾಜೇಶ್ರಿಗಳಾದ ಎ. ಬಿ. ಶೆಟ್ಟಿ ರೂ. ೫ ಬಿ. ಮಂಜಪ್ಪ ಭಂಡಾರಿ ರೂ. ೫, ಬಿ. ವಾಮನರಾವ್ ರೂ. ೫ ಮುಲ್ಕಿ ಸುಬ್ಬಣ್ಣನವರು ರೂ. ೫. ಇದೇ ರೀತಿ ಉದಾರ ಮಹಾಶಯರು ಮುಂದಕ್ಕೂ ಸಹಾಯಮಾಡಿ, ಇದರ ಏಳಿಗೆಯಲ್ಲಿ ಬಾಗಿಗಳಾಗಬೇಕಾಗಿ ಸದರಿ ಕ್ಲಬ್ಬಿನ ಗೌರವ ಕಾರ್ಯದರ್ಶಿ ರಾ। ಬಿ. ಭೋಜರಾಯರ ವಿನಂತಿ.

ಫರಂಗಿಪೇಟೆ:—ಮೊನ್ನೆ ಇಲ್ಲಿ ಹೊಸ ವರುಷದ ಸಂತೋಷವನ್ನು ತೋರ್ಪಡಿಸುವುದಕ್ಕೋಸ್ಕರ ''ಬೆಡ್ಮಿಂಟನ್'' ಆಟದ ಪಂದ್ಯಾಟವನ್ನು ಇಲ್ಲಿಯ ಶ್ರೀ ರಾಮಾ ಶಾಲೆಯ ಬಳಿಯಲ್ಲಿ ಆಡಿದರು.

ಶಾಲೆಯಲ್ಲಿ ರಾತ್ರೆ ಯುವಕರು ಒಟ್ಟುಗೂಡಿ ಗಾಯನ, ಭಾಷಣ ಮುಂತಾದವುಗಳನ್ನು ನಡಿಸಿದರು. ಸಹಕಾರಿ ಸಂಘಗಳ ಇನ್ಸಪೆಕ್ಟರರಾದ ರಾ। ರಾಮರಾಯರು "ಸಹಕಾರ"ದ ಕುರಿತು ಒಂದು ಸಣ್ಣ ಭಾಷಣವನ್ನು ಮಾಡಿದರು.

ಮರುದಿವಸ ಸಾಯಂಕಾಲ ಇಲ್ಲಿಯ ಪಟೇಲರಾದ ರಾ। ಗೋವಿಂದರಾಯರ ಅಧ್ಯಕ್ಷತೆಯಲ್ಲಿ ಒಂದು ಸಭೆಯು ಆಟವಾಡಿದ ಗದ್ದೆಯಲ್ಲಿಯೇ ಸೇರಿತು; ಅನೇಕ ವ್ಯಾಪಾರಸ್ಥರೂ, ಬಂದಿದ್ದರು.

ಮೊದಲು ಇಲ್ಲಿಯ ಶ್ರೀ ರಾಮಾ ಹಾಯರ್ ಎಲಿಮೆಂಟರಿ ಶಾಲೆಯ ಮುಖ್ಯೋಪಾಧ್ಯಾಯರಾದ ರಾ। ರಾಮಚಂದ್ರ ಹೆಗ್ಗಡೆಯವರು "ಆಟಪಾಠ"ಗಳ ವಿಷಯ ಹಲವು ಮಾತುಗಳನ್ನು ನುಡಿದರು. ತರುವಾಯ ಮೇಲೆ ಹೇಳಿದ ಪಂದ್ಯಾಟದಲ್ಲಿ ಗೆದ್ದವರಾದ ರಾ। ಎಮ್. ಎನ್. ಕಾಳಪ್ಪ ಭಂಡಾರಿಗಳಿಗೂ ರಾ। ಎ. ರಾಘವೇಂದ್ರ ಹೆಗ್ಗಡೆಯವರಿಗೂ ಅಧ್ಯಕ್ಷರು ಬಹುಮಾನಗಳನ್ನು ಕೊಟ್ಟು, ಸ್ವಲ್ಪ ಬುದ್ಧಿವಾದವನ್ನು ಪಂದ್ಯಾಟದಲ್ಲಿ ಆಡಿದ ಯುವಕರಿಗೆಲ್ಲರಿಗೂ ಹೇಳಿ ಈ ಆಟದ ಮುಖ್ಯಸ್ಥ (Captain) ರಾದ ರಾ। ಎಫ್. ಎಚ್. ಪಡೆಯರ್‌ರವರನ್ನೂ ವಂದಿಸಿ ಸಭೆಯನ್ನು ಮುಕ್ತಾಯಪಡಿಸಿದರು.

ಇದೇ ದಿವಸ ರಾತ್ರಿ ಶ್ರೀ ರಾಮಾ ಶಾಲೆಯ ಹೋಲಿನಲ್ಲಿ ಉಪಾಧ್ಯಾಯರಾದ ರಾ। ಎಸ್. ಎನ್. ಸುಜೀರರವರು "ಕಬೀರದಾಸ ಹರಿಕೀರ್ತನೆ"ಯನ್ನು ಮಾಡಿ ಸಭಾಸದರನ್ನು ಸಂತೋಷಪಡಿಸಿದರು.

ಕಾಸರಗೋಡು:—ಮುಳಿಯಾರು ಗ್ರಾಮದಲ್ಲಿ ಕಾಡ ಭತ್ತದ ಪೈರು ನಾಶವಾಡಲಿಕ್ಕೆ ಹುಳುಗಳ ಕಾಟವೂ ಸ್ವಲ್ಪ ಶುರುವಾಗಿಯದೆ. ಎಂತ ಕೇಳುತ್ತೇವೆ. ಇದು ಅತಿ ಶೋಚನೀಯವಾದುದು. ಒಂದನೇ ಬೆಳೆಯು ನೆರೆಯಿಂದಲೂ, ೨ನೇ ಬೆಳೆಯು ಹುಳಗಳಿಂದಲೂ ನಾಶವಾದರೆ, ಮತ್ತೆ ಹೇಳತಕ್ಕದ್ದೇನಿದೆ ಬರುವ ವರ್ಷದಲ್ಲಿ ಅಕ್ಕಿಗೆ ಒಂದು ಪವನು ಬೆಲೆ ಆಗುವುದೂ ಏನೋ?

ಪುತ್ತೂರು:—ತಾಲೂಕು ಬೋರ್ಡಿನ ಬಾವಿಗಳ ದಂಡೆಗಳಲ್ಲಿ ವಸ್ತ್ರ ಒಗೆಯುವುದು ಮಿಂಯುವುದು ಯಾ ಇತರ ಉಪಕರಣಗಳನ್ನು ತೊಳೆದು ಗಲೀಜುಮಾಡಕೂಡದೆಂತ ಕಳೆದ ೧೯೨೪ನೇ ಇಸವಿಯಲ್ಲಿ ತಾಲೂಕು ಬೋರ್ಡಿನವರು ಒಂದು ನೊಟೀಸು ಹೊರಡಿಸಿದ್ದರು. ಅದಕ್ಕೆ ಒಂದು ವರ್ಷ ದಾಟಲಿಕ್ಕಾಯಿತು. ಬಾವಿಗಳ ನೀರು ಈಗಲೆ ಬತ್ತಿಹೋಗಲಿಕ್ಕೆ ಆರಂಭವಾಯಿತು. ಬಾವಿಯ ನೀರನ್ನು ಕುಡಿಯಲಿಕ್ಕೆ ಉಪಯೋಗಿಸುವುದರ ವಿನಹಾ ಮಿಂಯಲಿಕ್ಕೆ ಇತರ ಕೆಲಸಗಳಿಗೂ ಉಪಯೋಗಿಸಿ ಬಾವಿಯ ಸುತ್ತಮುತ್ತಲೂ ಗಲೀಜುಮಾಡುವವರಷ್ಟೆ. ಬಾವಿಗಳ ದಂಡೆಯಲ್ಲಿಯೆ ವಸ್ತ್ರ ಒಗೆಯುವುದು ಮಿಂಯುವುದು ಪಾತ್ರ ತೊಳೆಯುವುದು ಇನ್ನೂ ಬಿಟ್ಟುಬಿಡಲಿಲ್ಲ. ತಾಲೂಕು ಬೋರ್ಡಿನವರು ಇನ್ನಾದರೂ ಗಮನಕೊಡಬಾರದೆ? ನಮ್ಮ ಪೇಟೆಯಲ್ಲಿ ಅಡಿಕೆ, ಅಕ್ಕಿ, ಮುಂತಾದವುಗಳ ಖರೀದಿಮಾಡುವ ಕಂಪೆನಿ ಅಂಗಡಿಗಳು ಇವೆಯಷ್ಟೆ. ಅದರ ಸರಕಿನ ಗಾಡಿಗಳು ರಸ್ತೆಗಳ ಅಜುಬಾಜುಗಳಲ್ಲಿ ಬೆಳಿಗ್ಗಿನಿಂದ ಮಧ್ಯಾಹ್ನದವರೆಗೆ ಹೊರಳಿಕೊಂಡ ಇರುತ್ತವೆ. ತನ್ನದ್ದ ಮೋಟರುಬಸ್ಸುಗಳು ಕಾರುಗಳು, ಟೆಕ್ಸಿಗಳು, ಬ್ಯಾಸಿಕಲುಗಳೂ ಗಾಡಿಗಳು ಆಮದರಪ್ತಾಗುತ್ತಲೆ ಇವೆ. ಅವರ ಮಧ್ಯ ಶಾಲಾ ಮಕ್ಕಳು ವೃದ್ಧರು, ಕಾಯಿಲೆಯಿಂದ ಪೀಡಿತರಾದವರು ಇಂಥಾ ಗಲಾಟೆಯ ಮಧ್ಯ ಬರುವುದು ಹೋಗುವುದೆಂದರೆ ಜೀವದ ಆಸೆ ಬಿಟ್ಟುಬಿಡಲೇಬೇಕು. ಇಂಥಾ ಅತ್ಯಂತವಶದ ಸಂಗತಿ ನಮ್ಮ ತಾಲೂಕು ಬೋರ್ಡಿನ ಮೆಂಬರರು, ಪೋಲೀಸಿನವರು [illegible] ಕಾಣಬಾರದೇನೆಂದು ತಿಳಿಯದು!

ಬಂಗಾಳ ನ್ಯಾಯವಿಧಾಯಕ ಸಭೆಯ ಅಧಿವೇಶನ.

ಕಳೆದ ತಾ. ೭ನೆಯ ಅಪರಾಹ್ನ ಸೇರಿದ ಬಂಗಾಳ ನ್ಯಾಯವಿಧಾಯಕ ಸಭೆಯ ಅಧಿವೇಶನದಲ್ಲಿ ಕ್ರಿಮಿನಲ್ ಲೋ ಎಮೆಂಡಮೆಂಟ್ ಅಥವಾ ಬಂಗಾಳ ಓರ್ಡಿನೆನ್ಸ್ ಎಂದು ಕರೆಯಲ್ಪಡುವ ಬೀಲು ಚರ್ಚೆಗೆ ಬಂತು. ಕೌನ್ಸಿಲಿಗೆ ಪ್ರೇಕ್ಷಕರ ಪ್ರವೇಶಕ್ಕೆ ತಡೆ ಇತ್ತು. ಸರಕಾರದ ಕಡೆಗೆ ಮತವನ್ನು ಕೊಡುವ ಮೆಂಬರರ ಬೆಂಬಲಕ್ಕಾಗಿ ಪೋಲೀಸ್ ಪೌಜು ಇಡೋಣಾಗಿತ್ತು. ದೇಶಬಂಧು ದಾಸರು ಬೆಳಗಾಂ ಕೊಂಗ್ರೆಸಿನಿಂದ ಹಿಂತಿರುಗಿದವರು ಎಪೆಂಡಿಸಿಟಿಸ್ ರೋಗದಿಂದ ಬೇನೆ ಬಿದ್ದಿರುವುದಾದರೂ ಕೌನ್ಸಿಲ್ ಅಧಿವೇಶಕ್ಕೆ ಹಾಜರಾಗುವ ಆತುರದಿಂದಿದ್ದುದರಿಂದ ಅವರನ್ನು ಕುರ್ಚಿಯ ಮೇಲೆ ಕುಳ್ಳಿರಿಸಿ ವೋಟಿಂಗಿಗೆ ಬರಮಾಡಿದ್ದರು. ವಿಶೇಷವಾಗಿ ಅಸೌಖ್ಯದಲ್ಲಿದ್ದುದರಿಂದ ಅವರ ಎಚ್ಚರಿಕೆಗಾಗಿ ಅವರ ಸಹಧರ್ಮಿಣಿಗೂ ಅವರೊಡನಿರಲು ಬಿಡಬೇಕಾಗಿ ಬಯಸಿದರೂ ಕೌನ್ಸಿಲ್ ಪ್ರೆಸಿಡೆಂಟರಿಂದ ಒಪ್ಪಿಗೆಯು ಕೊಡೋಣಾಗಲಿಲ್ಲ. ಅವರನ್ನು ಕುರ್ಚಿಯಲ್ಲಿ ಕುಳ್ಳಿರಿಸಿ ಕೌನ್ಸಿಲ್ ಸಭಾಸದನಕ್ಕೆ ಬರಮಾಡುವ ಭಾರವನ್ನು ಕೂಡ ಕೌನ್ಸಿಲ್ ಮೆಂಬರರ ಮೇಲೆಯೇ ಹೊರಿಸೋಣಾಗಿತ್ತು.

ಕೌನ್ಸಿಲ್ ಕಾರ್ಯಾರಂಭದಲ್ಲಿ ಸರ್ ಹ್ಯೂಜನ್ ಕೋಟನ್ ಸಾಹೇಬರಿಗೆ ನೈಟ್ ಹುಡ್ ಎಂಬ ಬಿರುದು ಮಂಜೂರಾದ ಬಗ್ಗೆ ಅವರ ಆಭಾರವನ್ನು ಮನ್ನಿಸಿದ ತರುವಾಯ ಗವರ್ನರ ದೊರೆಗಳವರು ಸಭೆಗೆ ಹಾಜರಾಗಿ ತಮ್ಮ ಭಾಷಣವನ್ನು ಮಾಡಿದರು. ಖಾವಂದರು ತಮ್ಮ ಭಾಷಣದಲ್ಲಿ ಇಂದಿನ ಅಧಿವೇಶನವು ಕ್ರಿಮಿನಲ್ ಲೋ ಎಮೆಂಡಮೆಂಟ್ ಬೀಲನ್ನು ಪರ್ಯಾಲೋಚಿಸುವ ಒಂದು ಮುಖ್ಯ ಉದ್ದೇಶದಿಂದಲೇ ಕೂಡಿಸಿದುದಾಗಿದೆ. ಬೀಲಿನ ರೂಪರೇಖೆಗಳನ್ನು ಕುರಿತು ತಾನು ಹೆಚ್ಚಾಗಿ ವಿವರಿಸಲು ಇಚ್ಛೆಸುವುದಿಲ್ಲ. ಪರಂತು ತನ್ನ ಸಂಸ್ಥಾನವು ಹೆಚ್ಚಿನ ಗಂಡಾಂತರಗಳಿಗೊಳಗಾದುದರಿಂದ ಸಂಸ್ಥಾನದ ಕ್ಷೇಮಕ್ಕಾಗಿಯೇ ಈ ಬೀಲನ್ನು ಮಂಜೂರು ಮಾಡಬೇಕಾಗಿ ಬಯಸುತ್ತೇನೆ. ಗುಪ್ತಕಟಗಳ ಗುಟ್ಟನ್ನು ಅಡಗಿಸುವುದೇ ಈ ಬೀಲಿನ ಧ್ಯೇಯ. ಪ್ರಜಾಸ್ವಾತಂತ್ರ್ಯಕ್ಕಾಗಿಯೇ ಈ ಬೀಲನ್ನು ಮಂಜೂರುಮಾಡುವ ಪ್ರಯತ್ನ. ಸರಕಾರದವರು ತಮ್ಮ ಅಸಾಧಾರಣ ಅಧಿಕಾರವನ್ನು ವಿಶೇಷವಾದ ಸಂದರ್ಭಗಳಲ್ಲಿ ಮಾತ್ರ ಉಪಯೋಗಿಸುವುದು. ಈ ಬೀಲಿನ ರೂಪರೇಖೆಗಳನ್ನು ಪರ್ಯಾಲೋಚಿಸಿದರೆ ಅದು ಸಂಸ್ಥಾನದ ಗಂಡಾಂತರವನ್ನು ತಪ್ಪಿಸಲು ಮಾತ್ರ ಹೇಗೆ ತಯಾರಿಸಿದೆಂಬುದು ತಮಗೆ ಖಚಿತವಾಗುವುದು ಎಂದು ಮುಂತಾಗಿ ಭಾಷಣಮಾಡಿದರು.

ಗವರ್ನರ ದೊರೆಗಳವರು ತಮ್ಮ ಭಾಷಣವನ್ನು ಮುಕ್ತಾಯಪಡಿಸಿ ಕೌನ್ಸಿಲ್ ಸಭಾಸದನವನ್ನು ಬಿಟ್ಟುಹೋದ ಬಳಿಕ ಈ ಅಧಿವೇಶನಕ್ಕೆ ಹಾಜರಾಗಲು ಆಮಂತ್ರಣ ಕಳುಹಿಸಲ್ಪಟ್ಟ ಮೆಂಬರುಗಳ ಪೈಕಿ ಇಬ್ಬರನ್ನು ಬಂಧಿಯಲ್ಲಿಟ್ಟಿರುವುದರಿಂದ ಅವರಿಗೆ ಈ ವೋಟಿಂಗಿಗೆ ಚಿತ್ತಯಿಸಲು ಅಭ್ಯಂತರ ಉಂಟಾದುದರಿಂದಲೂ ಬಿನ್ ಸರಕಾರಿ ಕಾರ್ಯಗಳಿಗೆ ಅವಕಾಶ ವಿಟ್ಟಿಲ್ಲವಾದ್ದರಿಂದಲೂ ಈಗ ಸೇರುವ ಕೌನ್ಸಿಲು ಯಾವ ಕಾರ್ಯವನ್ನೂ ನಡಿಸುವುದು ನ್ಯಾಯ ಸಮ್ಮತವಾದುದಲ್ಲವೆಂದು ಒಬ್ಬರು ಸಭಾಸದರು ಪ್ರಶ್ನೆ ಎತ್ತಿದ್ದರು. ಕೂಡಲೇ ಅಧ್ಯಕ್ಷ ಸಾಹೇಬರು — ಯಾವನೊಬ್ಬ ಮೆಂಬರನನ್ನು ಕೌನ್ಸಿಲಿಗೆ ಬರುವಂತೆ ಮಾಡಿಸುವುದು ಅಥವಾ ಬಾರದಂತೆ ತಡಿಸುವುದು ತನ್ನ ಸತ್ತೆಗೆ ಒಳಪಟ್ಟದ್ದಲ್ಲ ಹಾಗು ಯಾವದೊಂದು ವಿಷಯದ ಚರ್ಚೆಗೆ ಅವಕಾಶಕೊಡುವುದು ತನ್ನ ಅಧಿಕಾರದಲ್ಲಿ ಸೇರಿದುದಲ್ಲ. ಇದರ ಅಧಿಕಾರ ಪ್ರಾಂತಾಧಿಪತಿಗಳಾದ ಗವರ್ನರ ಸಾಹೇಬರಿಗೆ ಇರುವುದು ಎಂದು ಉತ್ತರವಿತ್ತರು. ಬಳಿಕ ಹೊನರೇಬಲ್ ಸರ್ ಎಚ್ ಸ್ಟಿವನ್‌ಸನರು ಬೀಲನ್ನು ಸಭೆಯ ಮುಂದೆ ಮಂಡಿಸಿದರು.

ಈ ಮೊದಲು ರೌಲೆಟ್ ಎಕ್ಟನ್ನು ಸಮರ್ಥಿಸಿದ ಗೃಹಸ್ಥರೂ ಮಾಜಿ ಮಂತ್ರಿಗಳೂ ಆದ ಶ್ರೀಯುತ ಸರ್ ಪಿ. ಸಿ. ಮಿತ್ರರು ಈ ಕ್ರಿಮಿನಲ್ ಲೋ ಎಮೆಂಡಮೆಂಟ ಬೀಲನ್ನು ಪಾಸುಮಾಡಿದರೆ ಭಯಂಕರವಾದ ವ್ಯಾಧಿಯನ್ನು ಪ್ರಾಜ್ಞ ವೈದ್ಯನಿಗೆ ತೋರಿಸಿ ಅವನ ಚಿಕಿತ್ಸೆಯಂತೆ ಗುಣಪಡಿಸುವುದನ್ನು ಬಿಟ್ಟು ಬಿಟ್ಟು ಆ ಭಯಂಕರ ವ್ಯಾಧಿಯನ್ನು ಸಿಕ್ಕಿಬಿಟ್ಟ ಕೈಕಂಡಪ್ರಯೋಗದ ಮೂಲಕ ಗುಣಪಡಿಸಲು ಪ್ರಯತ್ನಿಸುವುದರಿಂದ ಯಾವ ಪರಿಣಾಮವಾಗುವುದೋ ಹಾಗೆಯೇ ಈ ಬೀಲು ನಿರುಪಯೋಗಿಯಾಗುವುದೆಂದು ರುಜುಪಡಿಸುವ ಭಾಷಣಮಾಡಿ ಇದನ್ನು ಬಲವಾಗಿ ಉಪರೋಧಿಸಿದರು. ಆಗ ಇದನ್ನು ಮತಕ್ಕೆ ಇಟ್ಟಾಗ ಇದು ಪಾಸಾಗಬೇಕೆಂದು ೫೭ ಮತಗಳೂ ಆಗಕೂಡದೆಂದು ೬೬ ಮತಗಳೂ ದೊರಕಿದವು. ಅನಂತರ ಮೀಟಿಂಗು ಮುಂದರಿಸಲ್ಪಟ್ಟಿತು.

ನೋಟೀಸು.

ದಕ್ಷಿಣ ಕನ್ನಡಾ ಒಫಿಶಿಯಲ್ ರಿಸೀವರ್ ಕೋರ್ಟಿನಲ್ಲಿ.

1924ನೇ ಇಸವಿಯ ದಿವಾಳಿ ಅರ್ಜಿ ನಂಬ್ರ 98.
1924ನೇ ಇಸವಿಯ ಕುಂದಾಪುರ ಡಿಸ್ಟ್ರಿಕ್ಟ ಮುನ್ಸಿಫ್ ಕೋರ್ಟು ದಿವಾಳಿ ಅರ್ಜಿ ನಂಬ್ರ 7

ಮೊಗೇರಕಂದ- ಕಾಳಿನ ಮನೆ ಮೊಗೇರ ಉಗ್ರಾಪ್ಪ ಶೇಷನ ಅಳಿಯ-ವ ದ್ದಾಬು ಹೆಂಗಸಿನ ಮಗ ಕುಂದಾಪುರ ತಾಲೂಕು ಗುಲುವಾಡಿ ಗ್ರಾಮದಲ್ಲಿರುವವ } ಅರ್ಜಿದಾರ
ಮತ್ತು
ಸದಿಯಣ್ಣ ಶೆಟ್ಟಿ ಕೂಡ 8 ಜನರು — ಕ್ರೆಡಿಟರರು.

ಸಂ 1920ನೇ ಇಸವಿಯ ನಂಬ್ರ 5ನೇ ಆಕ್ಟಿನ ಸೆಕ್ಷನ್ 19(2)ನೇ ಮೇರೆಗೆ ಮೇಲ್ಕಂಡ ಅರ್ಜಿದಾರನು ತನ್ನನ್ನು ದಿವಾಳಿ ಎಂತ ಸ್ಥಾಪಿಸಬೇಕಾಗಿ ಕೊಟ್ಟ ಅರ್ಜಿಯು ಇದೇ ತಿಂಗಳ ತಾರೀಕು 28ಕ್ಕೆ ತನ್ಖಿಗೆ ಇಟ್ಟಿದೆ. ಎದುರಾಡಲಪೇಕ್ಷಿಸುವ ಕ್ರೆಡಿಟರರು ಖುದ್ದಾಗಲಿ ಅಥವಾ ವಕೀಲ್‌ದ್ವಾರವಾಗಲಿ ಸದರಿ ತಾರೀಕಿನ ಪೂರ್ವಾಹ್ನ 11 ಘಂಟೆಗೆ ಈ ಕೋರ್ಟು ಮುಂದೆ ಹಾಜರಾಗಿ ವ್ಯವಹರಿಸಬಹುದೆಂತ ಈ ಮೂಲಕ ಪ್ರಕಟಿಸೋಣಾಗಿಯದೆ.

ಮಂಗಳೂರು, 15-1-1925. } P. Sanjiva, M. A. B. L. *Vakil for Petitioner.*

ಅನುಕ್ರಮಣಿಕೆ.

ಅಗ್ರಲೇಖ— ಪುಟಗಳು.
ಬಂಗಾಲದ ವಿಜಯ ೬
ಸ್ಫುಟವಿಚಾರಗಳು—
೧ ಸರ್. ಫ್ರೆಂಕ್ ಸ್ಲೈಯವರು, ೨. ಸ್ವರಾಜ್ಯ ಪಾರ್ಟಿಯ ನಿರ್ಧಾರ, ೩. ಕೌನ್ಸಿಲ್ ಉಮೇದ್ವಾರಿಕೆಗೆ ಹಕ್ಕು, ೪. ಗುಲಬರ್ಗದ ದೇವಾಲಯ, ೫ ಕೋಹಟದಲ್ಲಿ ನಡೆದ ದಂಗೆ, ೬. ಮುಲ್ಕಿಯ ಗೌಡಸಾರಸ್ವತ ದೇವಸ್ಥಾನದ ವರದಿ ೬
ಮಂಗಳೂರು
ವರ್ತಮಾನಸಂಗ್ರಹಗಳು—
ವಿದೇಶ, ಒಳದೇಶ ೫
ದಕ್ಷಿಣ ಕನ್ನಡ—ಬ್ರಹ್ಮಾವರ, ಮುಲ್ಕಿ, ಫರಂಗಿಪೇಟೆ, ಕಾಸರಗೋಡು, ಪುತ್ತೂರು ,,
ಬಂಗಾಳ ನ್ಯಾಯವಿಧಾಯಕ ಸಭೆಯ ಅಧಿವೇಶನ ,,
ಕೊಂಗ್ರೆಸ್ಸಿನಲ್ಲಿ ಮಹಾತ್ಮರ ಭಾಷಣ ೮

ಸ್ವದೇಶಾಭಿಮಾನಿ.

ಶಕ ೧೮೪೬ ಪುಷ್ಯ ಬ|| ೬ಯು ಶುಕ್ರವಾರ.

ಬಂಗಾಲದ ವಿಜಯ.

ಮೇಲಿನ ಶಿರೋಲೇಖವನ್ನು ನೋಡಿದೊಡನೆಯೆ, ಬಂಗಾಲ ಒರ್ಡಿನನ್ಸ್ ಬೀಲು ಕೌನ್ಸಿಲಿನಲ್ಲಿ ಬಂದಾಗ ಬಿದ್ದು ಹೋಯಿತು ಮತ್ತು ಲೋಕಪಕ್ಷಕ್ಕೆ ವಿಜಯವು ಪ್ರಾಪ್ತವಾಯಿತೆಂಬೀ ಸಂಗತಿಯನ್ನು ಜಾಣಾಕ್ಷರಾದ ವಾಚಕರು ಊಹಿಸ ಇರಲಿಕ್ಕಿಲ್ಲ. ಒಂದೂ ತರದ ವಿಚಾರಣೆ—ಸಾಚಾರಣೆ ಇಲ್ಲದೆ, ಮುಂಚಿನ ಹಾಗಲವಾಡಿ ಸಂಸ್ಥಾನದಂತೆ ಅಥವಾ ಈ ಹೊತ್ತಿನ ಗೋವಾದರಬಾದದಂತೆ ಹಲವು ಜನರನ್ನು ಕೈದುಮಾಡಿ ತುರಂಗದಲ್ಲಿ ಹಾಕಿಟ್ಟು ಎಷ್ಟೊ ಸಮಯವಾಯಿತಷ್ಟೆ. ಇವರನ್ನು ಯಾಕೆ ಕೈದುಮಾಡಿರುವರು, ಅವರ ಬಹಿರಂಗ ವಿಚಾರಣೆಯನ್ನು ನಡಿಸಿರಿ ಎಂದು ಜನತೆಯು ಇಂದು ಪತ್ರಿಕೆಗಳಲ್ಲಾದರೆ, ನಾಳೆ ಕೌನ್ಸಿಲಿನಲ್ಲಿ ಪ್ರಶ್ನೆಯನ್ನು ಕೇಳುವುದು; ಆದ್ದರಿಂದ ಮುಂಚಿತವಾಗಿಯೆ ಆ ಬೀಲನ್ನು ತಂದು ಕಾನೂನಾಗಿ ಪಾಸುಮಾಡಿದರೆ ಜನತೆಯ ಆಕ್ಷೇಪಕ್ಕೆ ಎಡೆ ಇರಲಿಕ್ಕಿಲ್ಲ. ಇದೊಂದು ಕಾರಣ. ಇನ್ನೊಂದು ಕಾರಣವು ಯಾವುದೆಂದರೆ, ಇನ್ನುಮುಂದೆಯೂ ಈ ಒತ್ತಾಳಿಕೆಯ ನವೀನ ನವೀನ ವ್ಯಕ್ತಿಗಳನ್ನು ಸ್ವೇಚ್ಛಾನುಸಾರವಾರವಾಗಿ ಈ ಕಾನೂನಿನ ಬಲದಿಂದ ಹೊರಡಿಸುತ್ತಲೆ ಇರಬಹುದು. ಈ ಎರಡು ಕಾರಣಗಳಿಂದ ಬಂಗಾಲ ಸರಕಾರವು ಈ ತಾತ್ಕಾಲಿಕ ಒರ್ಡಿನನ್ಸಿಗೆ ಕಾಯಮಾದ ಕಾನೂನಿನ ಸ್ವರೂಪವನ್ನು ಕೊಡಲು ಅಪೇಕ್ಷೆ ಪಟ್ಟು ಕಾಯಿದೆ ಕೌನ್ಸಿಲಿನ ಜಾದಾ ಅಧಿವೇಶನವನ್ನು ಈ ಕಾರ್ಯಕ್ಕಾಗಿಯೆ ಕರೆಯಿಸಿತ್ತು. ಈ ಬೀಲನ್ನು ಪಾಸುಮಾಡಿಕೊಳ್ಳಲು ಬೇಕಾದ ಯಾವ ಯಾವ ಮಾರ್ಗಗಳಿವೆಯೊ—ಕಡೆಗೆ ಅವು ವಾಮವಾಗಿಯೂ ಇರಬಹುದು.—ಅವುಗಳೆಲ್ಲ ಅವಲಂಬಿಸಲ್ಪಟ್ಟಿದ್ದವು. ಮುಸಲ್ಮಾನರೊಳಗಿನ ದೊಡ್ಡ ಹುದ್ದೆದಾರರನ್ನು ಹಿಡಿದು ಅವನ ಮುಖಾಂತರ ಪ್ರವರ್ತಿಸೋಣ, ಇಲಾಖಾಧಿಪತಿಗಳಾದಂಥವರು ಅಲ್ಲಲ್ಲಿ ಸಂದರ್ಭಗಳನ್ನು ಸಾಧಿಸಿ, ಅರಾಜಕತೆಯ ಮತ್ತು ಅತ್ಯಾಚಾರದ ಒಂದು ದೊಡ್ಡ ಭಯಂಕರ ಚಿತ್ರವನ್ನು ರೂಪಿಸಿ ತೋರಿಸೋಣ, ಸ್ವರಾಜ್ಯಪಕ್ಷವನ್ನು ದೈಯ್ಯೋಣ ಇತ್ಯಾದಿ ಬಾಹ್ಯಉಪಾಯಗಳು ಒಂದು ಕಡೆಯಲ್ಲಿ ನಡಕೊಂಡಿರುವಾಗಲೆ, ಇನ್ನೊಂದು ಕಡೆಯಲ್ಲಿ ಲೋಕಪಕ್ಷದ ಬಹುಮತವನ್ನು ವಿಘಟಿಸುವಂತೆ ಕೌನ್ಸಿಲ್ ಸಭಾಸದರನ್ನು ಜೈಲಿನಲ್ಲಿಟ್ಟು, ಆ ಸಮಯದಲ್ಲೆ ಈ ಬೀಲನ್ನು ಕೌನ್ಸಿಲಿನಲ್ಲಿ ತರೋಣ ಮುಂತಾದ ಮುಖ್ಯೋಪಾಯಗಳು ಕೂಡ ಆಚರಿಸಲ್ಪಡುತ್ತಿದ್ದವು. ಇದರಲ್ಲಿ ಇನ್ನೊಂದು ದುರ್ದೈವವು ಕೂಡ ಲೋಕಪಕ್ಷದ ಬೆನ್ನು ಹತ್ತಿಕೊಂಡಿತ್ತೆನ್ನಬಹುದು! ಲೋಕಪ್ರಿಯ ಮುಖಂಡರೂ, ಸ್ವರಾಜ್ಯಪಕ್ಷದ ಆತ್ಮಸ್ವರೂಪಿಯೂ ಆದ ಚಿತ್ತರಂಜನ ದಾಸರು ಇದೆ ಸಮಯದಲ್ಲಿ ಎಂದರೆ, ಬೆಳಗಾಂವ ಕೊಂಗ್ರೆಸಿನಿಂದ ತಿರುಗಿಹೋದ ಕೂಡಲೆ ರಾಯಿಲೆ ಬಿದ್ದಿರುವರು! ಇದೆಲ್ಲ ಸರಕಾರಕ್ಕೆ ಉತ್ತಮವಾದ ಸಂಧಿ ದೊರಕಿದಂತಾಯಿತು. ಇನ್ನೊಂದು ವಿಧವಾಗಿ ಈ ನಾಜೂಕು ಪರಿಸ್ಥಿತಿಯನ್ನು ಚಿತ್ರಿಸುವದೆಂದರೆ, ಇದು ಬರೆ ಸ್ವರಾಜ್ಯಪಕ್ಷಕ್ಕೆ ಅಲ್ಲ, ಲೋಕಪಕ್ಷದ ಸತ್ವಪರೀಕ್ಷೆಯ ಸಮಯವಾಗಿತ್ತು. ಈ ಪರೀಕ್ಷೆಯಲ್ಲಿ ಲೋಕಪಕ್ಷವು ಹತವಾಗುತ್ತದೊ, ಜಿತವಾಗುತ್ತದೊ ಎಂಬುದರ ಕಡೆಗೆ ಜನರ ದೃಷ್ಟಿಯು ವಿದ್ಧವಾಗಿತ್ತು. ಮೇಲೆ ಸೂಚಿಸಿದಂತೆ ಸರಕಾರವಂತೂ ಎಲ್ಲ ತರದ ಉಪಾಯಗಳನ್ನು ಹೂಡಿ ಸ್ವಕಾರ್ಯಸಿದ್ಧಿಯ ಕೊನೆಯ ಮೆಟ್ಟಲಿಗೆ ಬಂದು ತಲಪಿತ್ತು. ಮತ್ತು ಈ ಆಸೆಯಿಂದಲೆ ಎನ್ನಬಹುದು—ಕೌನ್ಸಿಲ್ ಅಧಿವೇಶನದ ದಿವಸ ಅದು ಬಹು ಬಂದೋಬಸ್ತನ್ನು ಇಟ್ಟಿತ್ತು. ಅದು ಕೌನ್ಸಿಲಿನಲ್ಲಿ ಪ್ರೇಕ್ಷಕರನ್ನು ಪ್ರವೇಶಿಸಲು ಅವಕಾಶವನ್ನು ಕೊಟ್ಟಿರಲಿಲ್ಲ. ಸುತ್ತುಮುತ್ತಲೂ ಆಯುಧಪಾಣಿಗಳಾದ ಪೋಲೀಸರು ನಿಂತಿದ್ದರು! ಇದರ ಅರ್ಥವೇನೆಂದರೆ, ಒಳಗೆ ಒರ್ಡಿನನ್ಸು ಬೀಲು ಮತಾಧಿಕ್ಯದಿಂದ ಪಾಸಾಗುತ್ತದೆ; ಹೀಗಾದ್ದಲ್ಲಿ ಹೊರಗಿನವರು ಕ್ಷುಬ್ಧರಾಗಿ ಒಂದು ವೇಳೆ ದಾಳಿಮಾಡಲು ಪ್ರವೃತ್ತರಾಗಬಹುದು. ಅದಕ್ಕಾಗಿ ಮುಂಚಿತವಾಗಿಯೆ ಈ ಎಲ್ಲ ವ್ಯವಸ್ಥೆ!! ಪರಂತು ದುರ್ದೈವದ ಮಾತೇನೆಂದರೆ ಬಂಗಾಲ ಸರಕಾರವು ಈ ತರದ ಎಲ್ಲ ಅಟ್ಟಹಾಸವನ್ನು ಮಾಡಿದಾಗ್ಯೂ ಬಂಗಾಲ ಒರ್ಡಿನನ್ಸ ಬೀಲು ಆ ವಿಶಿಷ್ಟ ಅಧಿವೇಶನದಲ್ಲಿ ಪಾಸಾಗಲಿಲ್ಲ; ೫೭ ಅನುಕೂಲ, ೬೬ ಪ್ರತಿಕೂಲ ಮತದಿಂದ ಬಂಗಾಲ ಬೀಲು ಬಿದ್ದುಹೋಯಿತು!

ದೇಶಬಂಧು ದಾಸರವರು ಜ್ವರಗ್ರಸ್ತರಾಗಿದ್ದರು. ಗಾಂಧಿಜಿಯವರಿಗೆ ಯಾವ ವ್ಯಾಧಿಯುಂಟಾಗಿತ್ತೊ, ಅದೆ ದಾಸರಿಗೂ ಉಂಟಾಗಿದೆ ಎಂದು ತಿಳಿದುಬರುತ್ತದೆ. ಇದು ಅಷ್ಟೊಂದು ಪ್ರಬಲಸ್ಥಿತಿಗೆ ಬಂದಿಲ್ಲ. ಆದರೂ ಜ್ವರವು ೧೦೨-೩ ಡಿಗ್ರಿ ತನಕ ಬರುತ್ತಿತ್ತು. ಡೊಕ್ಟರುಗಳ ಉಪಚಾರವು ನಡೆಯುತಿತ್ತಾದರೂ, ಅವರು ದಾಸರನ್ನು ಕೌನ್ಸಿಲಿಗೆ ಹೋಗಲು ಸಮ್ಮತಿಸಿರಲಿಲ್ಲ. ಆದರೂ ದಾಸ ಮಹಾಶಯರು ತಮ್ಮ ಪ್ರಕೃತಿಯನ್ನು ಲೆಕ್ಕಿಸದೆ ತನ್ನನ್ನು ಹೊರಿಸಿಕೊಂಡು ಕೌನ್ಸಿಲಿಗೆ ಬಂದರು; ಮಾತಾಡಲು ಶಕ್ತಿ ಇರಲಿಲ್ಲ; ಬರೆ ಮತಕೊಡಲು ಬಂದಿದ್ದರು. ಇಲ್ಲಿ ಕೊಂಚ ವಿಷಯಾಂತರವನ್ನು ಮಾಡಬೇಕಾಗಿದೆ. ಕೌನ್ಸಿಲಿನಿಂದ ಸ್ವರಾಜ್ಯವು ಸಿಗಲಿ, ಸಿಗದೆ ಇರಲಿ, ದಾಸರಂಥ ಮುತ್ಸದಿಗಳು ಕಠಿಣವಾದ ಕಾಯಿಲೆಯನ್ನು ಕೂಡ ತೃಣೀಕರಿಸಿ, ಸ್ವಂತ ಕಾರ್ಯಕ್ಕಿಂತಲೂ ಹೆಚ್ಚಿನ ತತ್ಪರತೆಯಿಂದ ಕೌನ್ಸಿಲಿಗೆ ಬರುತ್ತಾರೆ ಎಂಬುದರ ಮೇಲಿಂದ ಅವರ ಮಟ್ಟಿಗಾದರೂ ಅವರ ಕಾರ್ಯದಲ್ಲಿ ಸಂಪೂರ್ಣ ಶ್ರದ್ಧೆ ಇದೆ, ಈ ಕಾರ್ಯದಲ್ಲೆ ದೇಹಪತನವಾದರೂ ಅಡ್ಡಿ ಇಲ್ಲ, ಅಂತೂ ಅನ್ಯಾಯದ ಮತ್ತು ಕಲಂಕಾಸ್ಪದವಾದ ಕಾನೂನನ್ನು ಪಾಸುಮಾಡಲು ತಾನು ಬಿಡಲಿಕ್ಕಿಲ್ಲ, ಅದನ್ನು ವಿರೋಧಿಸಿಯೆ ಬಿಟ್ಟೇನು ಎಂದು ಅವರು ಇಷ್ಟು ಕಷ್ಟದ ಸಮಯದಲ್ಲಿ ಕೂಡ ಆಚರಿಸಿ ತೋರಿಸಿದರು. ತತ್ವಾಚರಣೆ ಎಂಬುದು ಇದೆ ಸರಿ. ದಾಸರು ಇದುವರೆಗೆ ಮಾಡಿದ ಸ್ವಾರ್ಥತ್ಯಾಗದ ಮಂದಿರಕ್ಕೆ ಅವರ ಈಗಿನ ಈ ಕೃತ್ಯವು ಕಲಶಪ್ರಾಯವಾಗಿದೆ. ಸರಕಾರವನ್ನು ಪ್ರತಿಕರಿಸಲು ಅವರು ಕೌನ್ಸಿಲ್ ಪ್ರವೇಶವನ್ನು ಆಚರಿಸುತ್ತಿದ್ದುದರಿಂದ ಶ್ರೀಮದ್ ಭಗವದ್‌ಗೀತೆಯಲ್ಲಿ "ಯೋಯಚ್ಛ್ರದ್ಧಃ ಸ ಏವಸಃ" ಎಂದು ಹೇಳಿದಂತೆ ಅವರ ಶ್ರದ್ಧೆಗನುಸಾರವಾಗಿ ಅವರ ಪಕ್ಷವೆ ಈ ಸಾರೆ ಯಶಸ್ವೀಯಾಗಿದೆ. ಸರಕಾರದ ಮುಂಚಿನ ಯುಕ್ತಿಗಳು ಮತ್ತು ಅಂದಿನ ಬಂದೋಬಸ್ತಿಗಳು ವ್ಯರ್ಥವಾದವು. ಒರ್ಡಿನನ್ಸು ಬೀಲು ಪಾಸಾಗಲಿಲ್ಲ; ಬಿದ್ದುಹೋಯಿತು.

ದಾಸರವರು ಯಾವ ಭಾಷಣವನ್ನೂ ಕೊಟ್ಟಿರಲಿಲ್ಲ. ಅವರನ್ನು ದೊಡ್ಡ ದೊಡ್ಡ ಗೃಹಸ್ಥರು ಎತ್ತಿಕೊಂಡು ಕೌನ್ಸಿಲಿಗೆ ಹೋಗಿದ್ದಾರೆಂದ ಮೇಲೆ ಅವರು ಮಾತಾಡಲಿಲ್ಲವೆಂದು ಪ್ರತ್ಯೇಕವಾಗಿ ಹೇಳಬೇಕಾದ ಅಗತ್ಯವಿಲ್ಲ. ಆದರೆ ಅವರ ಮೌನವೆ ದೊಡ್ಡದೊಂದು ವಕ್ತೃತ್ವವಾಯಿತು. ಸರ್. ಪಿ. ಸಿ. ಮಿತ್ರರು—ನೆಶನಲ್‌ಪಕ್ಷದ ಧುರೀಣರು—ಒರ್ಡಿನನ್ಸ ಬೀಲನ್ನು ಸಕಾರಣವಾಗಿ ದೂಷಿಸಿದರು. ಮುಂಚಿನ ಡಿಫೆನ್ಸ ಒಫ್ ಇಂಡಿಯಾ ಎಕ್ಟಿನ ಯಾವ ಸಂಗತಿಗಳಿವೆಯೊ ಅವುಗಳನ್ನೆ ಪ್ರಮಾಣವಾಗಿಟ್ಟುಕೊಂಡು, ಯಾಕೆ ಆ ಸಂಗತಿಗಳೆ ರೂಪಾಂತರದಿಂದ ಈ ಬೀಲಿನಲ್ಲಿ ಬಂದಿರುವುದರಿಂದ ಅವುಗಳನ್ನು ಎಂದೂ ಸಮ್ಮತಿಸಲು ಆಗುವುದಿಲ್ಲ. ಇಂಡಿಯಾ ಡಿಫೆನ್ಸಎಕ್ಟ ಅನಂತರದ ರೌಲಟ್‌ಎಕ್ಟ, ಇವು ಅನವಶ್ಯಕವೆಂದು ತಮ್ಮ ಆಯುಸ್ಸನ್ನು ಮುಗಿಸಿಕೊಂಡಿದ್ದಾವೆ ಇಂಥ ಸಮಯದಲ್ಲಿ ಪುನಶ್ಚ ಕಾಲ್ಪನಿಕ ಭೀತಿಯಿಂದ ಈ ಬೇತಾಳನನ್ನು ಅಂಗರಕ್ಷಕನನ್ನಾಗಿ ಮಾಡಿಕೊಳ್ಳುವುದು ಅಶ್ಲಾಘ್ಯವಾಗಿದೆ. ಮಿತ್ರರ ಈ ಭಾಷಣದ ಪರಿಣಾಮವು ಕೌನ್ಸಿಲರುಗಳ ಮೇಲೆ ಹೇಗುಂಟಾಯಿತೊ ಹಾಗೆಯೆ ದಾಸರ ಕರ್ತವ್ಯತತ್ಪರತೆಯ ಪರಿಣಾಮವು ಕೂಡ ಉಂಟಾಗಿ ಸರಕಾರಕ್ಕೆ ಅಪಜಯವು ಸಂಭವಿಸಿತು. ಈ ಎರಡು ಕಾರಣಗಳು ಸರಕಾರದ ಅಪಜಯವನ್ನು ಸೂಚಿಸುತ್ತಿವೆಂಬುದು ಹೌದಾದರೂ ಆ ಅನ್ಯಾಯದ ಬೀಲೆ ಮುಖ್ಯವಾಗಿ ಸರಕಾರದ ಪರಾಭವಕ್ಕೆ ಹೇತುವಾಗಿದೆಂಬುದನ್ನು ಯಾರೂ ಮರೆಯಕೂಡದು. ಹೇಗೂ ಇರಲಿ, ಸರಕಾರದ ಅಪಜಯವು ಯಾವುದರಿಂದಲೆ ಉಂಟಾದ್ದಿರಲಿ, ಅಂತು ಮೊದಲನೆಯ ತುತ್ತಿನಲ್ಲಿ ನೊಣವು ಸಿಕ್ಕಿ ಮುಂದಿನ ಊಟಕ್ಕೆ ಅಪಶಕುನವು ಬರುವಂತೆ ಈ ಬೀಲಿನ ಮುಂದಿನ ವಾಚನಗಳಿಗೆ ವಿಘ್ನವು ಬಾರದೆ ಇರಲಿಕ್ಕಿಲ್ಲವೆಂದು ಎಲ್ಲರೂ ಸಮಾಧಾನಪಡುತ್ತಿದ್ದಾರೆ. ಬಂಗಾಲವು ಈ ರೀತಿಯಿಂದ ವಿಜಯವನ್ನು ಸಂಪಾದಿಸಿದಕಾರಣ ನಾವು ಅದನ್ನು ಅಭಿನಂದಿಸದೆ ಇರಲಾರೆವು.

ಸ್ಫುಟವಿಚಾರಗಳು.

೧. ಮಧ್ಯಪ್ರಾಂತದ ಗವರ್ನರರಾದ ಸರ್ ಫ್ರೆಂಕ್ ಸ್ಲಾಯರು ತಮ್ಮ ಕೆಲಸದ ಅವಧಿಯನ್ನು ಮುಗಿಸಿ ಸ್ವದೇಶಕ್ಕೆ ತೆರಳುವವರಿದ್ದಾರೆ. ಅದ್ದರಿಂದ ತನ್ನ ಆಳಿಕೆಯಲ್ಲಿ ನಡೆದ ಮಹತ್ವದ ಸಂಗತಿಗಳನ್ನು ಜನತೆಯ ಮುಂದೆ ಇಡುವದಕ್ಕಾಗಿ ಒಂದು ದರಬಾರನ್ನು ಜರುಗಿಸಿ ತನ್ನ ಮನೋಗತವನ್ನು ಸಂಪೂರ್ಣ ತಿಳಿಸಿರುವರು. ತನ್ನ ಆಳಿಕೆಯಲ್ಲಿ ಅಸಹಕಾರಿತೆಯು ಹುಟ್ಟಿ ಬೆಳೆದು ಅಸ್ತಹೊಂದಿತು, ಸರಕಾರಕ್ಕೆ ತರತರದ ಸಂಕಟಗಳು ಬಂದೊದಗಿದರೂ ತಾನು ಬುದ್ಧಿಚಾತುರ್ಯದಿಂದ ಅವುಗಳನ್ನು ದೂರಮಾಡುತ್ತಿದ್ದೆನು ಮುಂತಾದ ಸ್ವಪೌರುಷವನ್ನು ಕ್ರಮದಂತೆ ತೋರಿಸಿದರು. ಅನಂತರ ಅವರು ಹೇಳತೊಡಗಿದರು, "೧೯೨೧ನೆ ಇಸವಿಯಲ್ಲಿ ಬಹಿಷ್ಕಾರದ ಚಳವಳವು ಜೋರಿನಿಂದ ನಡೆಯುತ್ತಿತ್ತಾದರೂ ರಿಫೋರ್ಮ್ಸನ್ನು ಯಶಸ್ವಿರೀತಿಯಿಂದ ನಾನು ನಡಿಸಿಕೊಂಡು ಬಂದೆನು. ಆದರೆ ಮೂರು ವರ್ಷದ ನಂತರ ಅಂದರೆ, ೧೯೨೪ನೆ ಇಸವಿಯಲ್ಲಿ ಹೊಸ ತಂಡದವರು ರಾಜಕಾರಣದಲ್ಲಿ ಪ್ರವೇಶಿಸಿ ದೇಶಹಿತದ ಕಾರ್ಯಕ್ಕೆ ವಿಘ್ನ ತಂದು ಇಟ್ಟಿರುವರು. ಬಜೇಟನ್ನು ಸಂಪೂರ್ಣವಾಗಿ ಸೆಂಕ್ಶನ್ ಮಾಡದೆ ಇದ್ದದರಿಂದ ದೇಶಹಿತದ ಕಾರ್ಯಗಳು—ಮುಖ್ಯವಾಗಿ ಬಡವರಿಗೋಸ್ಕರ ಕಟ್ಟಿಸತಕ್ಕ ಆಸ್ಪತ್ರಿ, ರಾಜರಸೆ ಮುಂತಾದ ಸರ್ವಜನೋಪಯೋಗಕಾರ್ಯಗಳು ಮುಂದರಿಸದೆ ಹಾಗೆಯೆ ಇದ್ದಾವೆ. ಸಾಮರ್ಥ್ಯವಿದ್ದಷ್ಟು ನಾನು ಸರ್ಟಿಫಿಕೇಶನಿನ ಸಹಾಯದಿಂದ ಎಕ್ಸಿಕ್ಯುಟಿವ್ ಡಿಪಾರ್ಟಮೆಂಟಿನಲ್ಲಿ ಹಣವನ್ನು ಒದಗಿಸಿ ಕೊಟ್ಟೆನು. ಮಂತ್ರಿವರ್ಗದ ವಶವಾಗಿ ಕೊಟ್ಟ ಖಾತೆಗಳಲ್ಲಿ ಮಾತ್ರ ಹಣವನ್ನು ಒದಗಿಸಿ ಕೊಡಲು ನನ್ನಿಂದ ಸಾಧ್ಯವಾಗಲಿಲ್ಲ" ಈ ಪ್ರಕಾರವಾಗಿ ಗವರ್ನರು ತನ್ನ ಆಳಿಕೆಯ ವೃತ್ತಾಂತವನ್ನು ಓದಿ ಹೇಳಿದರು. ಮಿಲಿಟೆರಿ ಮುಂತಾದ ಬಿಳಿಜನರ ಉಪಯುಕ್ತ ಖಾತೆಗೆ ಸಂಬಂಧಪಟ್ಟಲ್ಲಿ ಹಣ ಒದಗಿಸಿಕೊಡಲು ಗವರ್ನರ ಸಾಹೇಬರಿಂದ ಸಾಧ್ಯವಾಯಿತು. ಆದರೆ ಲೋಕಹಿತದ ಪುರಾಣವನ್ನು ಓದುವ ಈ ಸ್ಲಾಯಸಾಹೇಬರಿಗೆ ಬಡಜನರ ಉಪಯುಕ್ತದ ಕಾರ್ಯಗಳಲ್ಲಿ ಹಣವನ್ನು ಉಪಯೋಗಿಸುವುದು ಕಾಯಿದೆಗೆ ವಿರುದ್ಧವಾಗಿ ಕಂಡುಬಂತಲ್ಲವೆ?

೨. ಇರಲಿ. ತಮ್ಮ ಆಳಿಕೆಯ ಅಂತ್ಯದ ದಿವಸಗಳಲ್ಲಿ ಈ ರೀತಿಯಾಗಿ ಮನೋಗತವನ್ನು ತಿಳಿಸಿ ಇವರು ಮುಂದಿನ ಕಾರ್ಯಕ್ರಮವನ್ನು ಸಹ ಈಗಲೆ ಹೇಳಿರುವರು. ಸ್ವರಾಜ್ಯಪಾರ್ಟಿಯು ತನ್ನ ಕಾರ್ಯಕ್ರಮದಲ್ಲಿ ಏನಾದರೂ ಬದಲಾವಣೆಯನ್ನು ಮಾಡೀತೆಂದು ಸಾಹೇಬರು ಪೂರ್ವದಿಂದ ಭಾವಿಸಿದ್ದರು. ಆದರೆ ಅವರ ಭಾವನೆಯು ಮಾತ್ರ ನಿಜವಾಗಲಿಲ್ಲ, ಇನ್ನಾದರೂ ಸ್ವರಾಜ್ಯಪಾರ್ಟಿಯು ಮಂತ್ರಿತ್ವವನ್ನು ಸ್ವೀಕರಿಸಬೇಕೆಂಬುದಕ್ಕಾಗಿಯೆ ಅವರನಕ ಆಮಂತ್ರಣವನ್ನು ಕೊಟ್ಟಿರುವರು. ಮುಂದಿನ ಜಮಾಖರ್ಚಿನ ಪಟ್ಟಿಯಲ್ಲಿ ಮಂತ್ರಿಗಳ ಹುದ್ದೆಗೆ ಸಲ್ಲತಕ್ಕ ಹಣವನ್ನು ಸಹ ಕೂಡಿಸುವಂತೆ ಮಾಡುತ್ತೇನಾಗಿ ತಿಳಿಸಿ ಸ್ವರಾಜ್ಯಿಸ್ಟರು ಇಂಥ ಸಂದರ್ಭದಲ್ಲಿ ಮಂತ್ರಿತ್ವವನ್ನು ಸ್ವೀಕರಿಸಿಯಾರೆಂದು ಭಾವಿಸಿರುವರು. ಸ್ವರಾಜ್ಯಿಸ್ಟರು ಮಂತ್ರಿತ್ವವನ್ನು ಸ್ವೀಕರಿಸಿ ಸರಕಾರಕ್ಕೆ ಸಹಾಯವನ್ನು ಕೊಟ್ಟಾರೆಂಬ ಸಾಹೇಬರ ಮನೋರಥವು ಸಂಪೂರ್ಣ ವ್ಯರ್ಥವಾಗಿದೆ. ಈಗಿನ ಸುಧಾರಣೆಯು ವ್ಯರ್ಥವೆಂದು ತೋರಿಸುವುದಕ್ಕಾಗಿ ಮತ್ತು ಕೌನ್ಸಿಲಿನ ದುರುಪ್ರಯೋಗವಾಗಬಾರದೆಂಬುದರಿಂದಲೆ ಸ್ವರಾಜ್ಯಿಸ್ಟರು ಕೌನ್ಸಿಲನ್ನು ಪ್ರವೇಶಿಸಿರುವರು. ಆದ್ದರಿಂದ ಅವರು ಸರಕಾರಕ್ಕೆ ಸಹಾಯಕೊಟ್ಟಾರೆಂಬುದು ತಪ್ಪು ಗ್ರಹಿಕೆಯೆ ಸರಿ. ಮಧ್ಯಪ್ರಾಂತದಲ್ಲಿ ಸಂಪೂರ್ಣ ಬಹುಮತವಿದ್ದದರಿಂದ ಮಂತ್ರಿತ್ವವನ್ನು ಸ್ವೀಕರಿಸಿ ಸರಕಾರದ ಸುಲಭ ಮಾರ್ಗವನ್ನು ಇನ್ನೂ ಉಪರೋಧಿಸಬೇಕೆಂಬ ಆಲೋಚನೆಯು ಅನೇಕ ಮುಖಂಡರ ಮನಸ್ಸಿನಲ್ಲಿದೆ. ಆದ್ದರಿಂದ ಅಲ್ಲಿಯ ಪರಿಸ್ಥಿತಿಯನ್ನು ಕಂಡು ಅಲ್ಲಿಯ ಸ್ವರಾಜ್ಯಿಸ್ಟರು ಯಾವ ರೀತಿಯಿಂದ ನಡೆಯಬೇಕೆಂದು ತಿಳಿಸುವದಕ್ಕಾಗಿ ಒಂದು ಕಮ್ಮಿಟಿಯನ್ನು ನೇಮಿಸಿರುವರು. ಈ ಕಮ್ಮಿಟಿಯು ತನ್ನ ರಿಪೋರ್ಟನ್ನು ಫೆಬ್ರವರಿ ೧೫ನೆ ತಾರೀಕಿನೊಳಗಾಗಿ ಸ್ವರಾಜ್ಯಪಾರ್ಟಿಯ ಮುಂದೆ ಇಡುವದು. ಮತ್ತು ಅದರ ಹೇಳಿಕೆಯ ಮೇರೆಗೆ ಅಲ್ಲಿಯ ಸ್ವರಾಜ್ಯಪಾರ್ಟಿಯು ತನ್ನ ಮುಂದಿನ ಕಾರ್ಯಕ್ರಮವನ್ನು ಮಾಡಿತೆಂದು ಧಂವಣಿ ಇದೆ.

೩. ಹಿಂದೂಸ್ಥಾನದೊಳಗಿನ ಸುಧಾರಣೆಗಳಲ್ಲಿರುವ ಚಿಲ್ಲರೆ ಕೊರತೆಗಳನ್ನು ವಿಚಾರಿಸುವುದಕ್ಕೋಸ್ಕರ ಇಂಗ್ಲಂಡಿನಲ್ಲಿ ಒಂದು ಕಮ್ಮಿಟಿಯು ಈ ಮೊದಲೆ ಸ್ಥಾಪಿಸಲ್ಪಟ್ಟಿತ್ತು. ಈ ಕಮ್ಮಿಟಿಯು ಇಷ್ಟರ ವರೆಗೆ ಯಾವ ಮಹತ್ವದ ಉದ್ಯೋಗವನ್ನು ಮಾಡದಿದ್ದರೂ ಈಗಲೆ ಒಂದು ಠರಾವನ್ನು ಪಾಸು

ಮಾಡಿಯದೆ. ಕ್ರಿಮಿನಲ್ ಕಾಯಿದೆಯ ಮೇರೆಗೆ ಆರು ತಿಂಗಳಿಗಿಂತ ಹೆಚ್ಚಿನ ಅವಧಿಯ ಶಿಕ್ಷೆಯನ್ನು ಅನುಭವಿಸಿದರೆ ಅಥವಾ ಜನ್ಮಟಾಪುವನ್ನು ಹೊಂದಿದರೆ ಕೌನ್ಸಿಲ ಉಮ್ಮೇದುವಾರರಾಗಿ ನಿಲ್ಲಲು ಸಾಧ್ಯವಿಲ್ಲವೆಂದು ರಿಫೋರ್ಮ್ಸ ಎಕ್ಟಿನಲ್ಲಿ ಸೂಚಿಸಲ್ಪಟ್ಟದೆ. ಈ ಕಟ್ಟನ್ನು ತೆಗೆದುಹಾಕಬೇಕೆಂದು ಹಿಂದಿಗಳೆ ಮಾತ್ರವಲ್ಲ ಹಿಂದೂಸ್ಥಾನ ಸರಕಾರವು ಸಹ ಇಂಗ್ಲಂಡಿನ ಜೊಯಿಂಟ ಕಮ್ಮಿಟಿಗೆ ಸೂಚಿಸಿತ್ತು. ಅದು ಈಗ ಮಾನ್ಯವಾಗಿದೆ. ಸರಕಾರದ ಸೂಚನೆಯನ್ನು ಮಾನ್ಯಮಾಡಬೇಕಾದರೆ ನಾಲ್ಕು ವರ್ಷಗಳ ಮುದತು ಬೇಕಾದವು! ಅಂದ ಮೇಲೆ ಹಿಂದುಸ್ಥಾನದ ಪ್ರಶ್ನೆಗಳು ಬ್ರಿಟಿಷ್‌ಸಾಮ್ರಾಜ್ಯದಲ್ಲಿ ಎಷ್ಟು ಮೇಲಿಂದ ಮೇಲೆ ವಿಚಾರಿಸಲ್ಪಡುತ್ತಿವೆ ಎಂಬುದು ಇದರಿಂದಲೆ ಜನರಿಗೆ ಗೊತ್ತಾದೀತು. ಇರಲಿ, ಮೇಲಿನ ಅನ್ಯಾಯದ ನಿಬಂಧನೆಯು ತೆಗೆದುಹಾಕುವುದರಿಂದ ಎಷ್ಟೊ ದೇಶಭಕ್ತರಿಗೆ ಕೌನ್ಸಿಲಿನ ಉಮೇದುವಾರರಾಗಿ ನಿಲ್ಲಬಹುದಾಗಿದೆ.

೪. ಮುಸಲ್ಮಾನೀ ರಾಜ್ಯದಲ್ಲಿ ಹಿಂದುಗಳ ವಿಷಯವಾಗಿ ಎಷ್ಟು ಪ್ರೇಮವು ತೋರಿಸಲ್ಪಡುತ್ತದೆ ಎಂಬುದಾಗಿ ಕೆಳಗಿನ ಸಂಗತಿಯಿಂದ ಗೊತ್ತಾದೀತು. ಗುಲಬುರ್ಗಾ ದಂಗೆಯಲ್ಲಿ ಅನಾಹುತಪಟ್ಟ ಹಿಂದೂ ದೇವಾಲಯದ ಗೋಪುರಕ್ಕೆ ಕಲಶವನ್ನು ಇಡುತ್ತೇವೆಂದು ಅಲ್ಲಿಯ ಹಿಂದುಗಳು ನಿಝಾಮರಿಗೆ ಅರ್ಜಿಮಾಡಿಕೊಂಡರು. ನಿಝಾಮರು ತಮ್ಮ ಫರ್ಮಾನ್‌ನಲ್ಲಿ ಕಲಶವನ್ನು ಸ್ಥಾಪಿಸಲಿಕ್ಕೆ ಅಪ್ಪಣೆಯನ್ನು ಕೊಡಲಾಗುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಯಾಕೆಂದರೆ ದಂಗೆಯು ಮೊದಲು ಆ ದೇವಾಲಯಕ್ಕೆ ಕಲಶವು ಇದ್ದಿರಲಿಲ್ಲ ಅಲ್ಲದೆ, ಅಲ್ಲಿಯ ಮುಸಲ್ಮಾನರ ಒಂದು ಮಸೀದಿಗೆ ಕಲಶವು ಇದೆ. ಮಸೀದಿಗೆ ಕಲಶವು ಇರುವಾಗ ಇತರ ಧರ್ಮೀಯ ದೇವಾಲಯಗಳಿಗೆ ಕಲಶ ಸ್ಥಾಪನೆಮಾಡಕೂಡದೆಂದು ಇಸ್ಲಾಮ ಧರ್ಮವು ಹೇಳುತ್ತದೆ. ಈ ತರದ್ದು ಮೂರು ಕಾರಣಗಳನ್ನು ನಿಝಾಮರು ಕೊಟ್ಟಿರುವರು. ಇವುಗಳಿಂದ ಹಿಂದುಗಳನ್ನು ಕುರಿತು ಯಾವ ಭಾವನೆಯು ನಿಝಾಮರ ಕಾಯಿದೆಯಲ್ಲಿದೆ ಎಂಬುದು ಯಾವ ವಿವೇಕಿಗೂ ಗೊತ್ತಾಗದಿರದು. ಇಂಥ ರಾಜ್ಯದಲ್ಲಿ ಈ ತರದ ಮತದ್ವೇಷಿಗಳು ಇರುವಾಗ ಹಿಂದು ಮುಸಲ್ಮಾನರ ಐಕ್ಯವು ಸುಸಾಧ್ಯವೆಂದು ನಂಬುವುದು ಬಹು ಕಷ್ಟವೆ ಸರಿ. ಇಂಥ ಅನ್ಯಾಯವು ಹಿಂದುಗಳ ಸಂಸ್ಥಾನದಲ್ಲಿ ನಡೆದಿದ್ದಾದರೆ ಇದೆ ಮುಸಲ್ಮಾನರು ದೊಡ್ಡ ಕೋಲಾಹಲವನ್ನು ಎಬ್ಬಿಸದೆ ಬಿಡುತ್ತಿದ್ದಿಲ್ಲ!

೫. ಕೋಹತದಲ್ಲಿ ನಡೆದ ದಂಗೆಯನ್ನು ಕುರಿತು ಸಮಗ್ರವಾಗಿ ಆಲೋಚಿಸುವುದಕ್ಕೋಸ್ಕರ ಒಂದು ಕಮ್ಮಿಟಿಯನ್ನು ಸ್ಥಾಪಿಸಬೇಕೆಂಬ ಠರಾವನ್ನು ಶ್ರೀ. ಲಾಲಾ ಮುನಿಚಂದರು ಬರುವ ಎಸೆಂಬ್ಲಿಯಲ್ಲಿ ತರಲಿಕ್ಕಿರುವರು. ಈ ಕಮ್ಮಿಟಿಯಲ್ಲಿ ಕೆಲವರು ಸರಕಾರ ನಿಯುಕ್ತರು, ಕೆಲವರು ಎಸೆಂಬ್ಲಿಯೊಳಗಿನ ಬಿನ್‌ಸರಕಾರಿ ಮೆಂಬರರು ಇರಬೇಕೆಂದು ಠರಾವಿನಲ್ಲಿ ಸೂಚಿಸಲ್ಪಟ್ಟಿದೆ. ಕೊಹತದಲ್ಲಿ ನಡೆದ ಅನಾಹುತದಿಂದ ಬಳಲುತ್ತಿರುವವರಿಗೆ ಯಾವ ತರದ ಸಾಹಾಯ್ಯವನ್ನು ಒದಗಿಸಿಕೊಡಬೇಕೆಂಬುದನ್ನು ಕೂಡ ಈ ಕಮ್ಮಿಟಿಯು ಆಲೋಚಿಸಬೇಕು. ಕೋಹತದಲ್ಲಿ ನಡೆದ ದಂಗೆಯನ್ನು ಸ್ವತಃ ಸಂಪೂರ್ಣ ತಿಳಕೊಂಡು ಹಿಂದು ಸಂಘಟನದ ಅತ್ಯಾವಶ್ಯಕತೆಯನ್ನು ಸನ್ಮಾನ್ಯ ಲಾಲಾಜಿಯವರು ಹಲವು ಕಡೆಗಳಲ್ಲಿ ಹೇಳುತ್ತಿರುವರು. ಆದರೆ ಕೆಲವರು ಎಲ್ಲ ದೋಷಗಳನ್ನು ಹಿಂದಿಗಳ ತಲೆಯ ಮೇಲೆ ಹೊರಿಸಿರುತ್ತಾರೆ. ಇಂಥ ಪ್ರಸಂಗದಲ್ಲಿ ಎಸೆಂಬ್ಲಿಯಿಂದ ನಿಯಮಿಸಲ್ಪಡುವ ಮೇಲಿನ ಕಮ್ಮಿಟಿಯು ನ್ಯಾಯವಾಗಿ ಆಲೋಚಿಸೀತೆಂದು ತಿಳಿಯಬೇಕಾಗಿದೆ.

೬. ಮುಲ್ಕಿಯಲ್ಲಿರುವ ಗೌಡಸಾರಸ್ವತ ಬ್ರಾಹ್ಮಣವೃಂದಕ್ಕೆ ಸಂಬಂಧಪಟ್ಟ ಶ್ರೀ ವೆಂಕಟರಮಣ ದೇವಸ್ಥಾನದ ಕಳೆದ ಕಾರ್ತಿಕ ಶು|| ೧೫ಕ್ಕೆ ಅಂತ್ಯವಾಗುವ ಒಂದು ವರುಷದ ವರದಿಯ ಪ್ರತಿಗಳು ನಮ್ಮ ಪತ್ರದ ಈ ಸಂಚಿಕೆಯ ಸಪ್ಲಿಮೆಂಟಾಗಿ ಕಳುಹಿಸೋಣಾಗಿರುವದು. ಸಬ್‌ಕೋರ್ಟ ಸ್ಕೀಮು ಪ್ರಕಾರ ಏರ್ಪಡಿಸಿದ ಆಡಳಿತೆಯ ಎರಡನೇ ವರುಷದ ರಿಪೋರ್ಟ ಇದಾಗಿರುವುದು. ಮುಲ್ಕಿಯಲ್ಲಿರುವ ಈ ದೇವಸ್ಥಾನದ ಭಜಕವರ್ಗವು ಶ್ರೀ ದೇವಸ್ಥಾನದ ಆಡಳಿತೆಯನ್ನು ವ್ಯವಸ್ಥೆಗೊಳಿಸಿ ಆ ವ್ಯವಸ್ಥಾಕ್ರಮಗಳಿಗೆ ಅನುಕೂಲವಾಗಿ ನಡೆದುಬರುವಂಥಾದ್ದು ಸಂತೋಷಕರ ಸಂಗತಿಯಾಗಿದೆ. ತಮ್ಮ ಪ್ರಥಮ ವರುಷದ ರಿಪೋರ್ಟಿನಲ್ಲಿ ಕಾಣಿಸಿದಂತೆಯೆ ಆಡಳಿತೆದಾರರು ಈ ರಿಪೋರ್ಟಿನಲ್ಲಿ ಸಹ ಶ್ರೀ ದೇವಸ್ಥಾನದ ಜಮಾ-ಖರ್ಚುಗಳ ವಿವರವನ್ನು ಸೂಚಿಸಿರುತ್ತಾರೆ. ಪ್ರಥಮ ವರುಷದ ಜಮಾ-ಖರ್ಚುಗಳಿಗೂ ಈ ಎರಡನೇ ವರುಷದ ಜಮಾ-ಖರ್ಚುಗಳಿಗೂ ವಿಶೇಷ ವ್ಯತ್ಯಾಸವು ಉಂಟೆಂಬಂತೆ ಕಂಡುಬರುವುದಿಲ್ಲ. ಕಳೆದ ವರುಷದಂತೆಯೇ ವರದಿಯ ವರುಷದಲ್ಲಿಯೂ ಸಹ ಶೃಂಗಾರಿಕೆ, ಮತಸಂಬಂಧವಾದ ಧರ್ಮಕಾರ್ಯಗಳಿಗೂ ರಿಜರ್ವಫಂಡು ಇತ್ಯಾದಿಗಳಿಗೂ ಪ್ರತ್ಯಪ್ರತ್ಯೇಕವಾಗಿ ಇಂತಿಷ್ಟೆ ಮೊಬಲಗುಗಳನ್ನು ವಿನಿಯೋಗಿಸಬಹುದೆಂಬ ಸೂಚನೆಯು ಈ ವರದಿಯಲ್ಲಿಯೂ ಕಂಡುಬರುವುದು. ಆದರೆ ಇಂಥಾ ಮೊಬಲಗುಗಳು ಗತವರುಷದಲ್ಲಿ ಯಾವ ರೀತಿಯಲ್ಲಿ ವಿನಿಯೋಗಿಸಲ್ಪಟ್ಟಿವೆ ಎಂಬ ಪ್ರಸ್ತಾಪವು ಆಡಳಿತೆಯ ವರದಿಯಲ್ಲಿ ಕಂಡುಬರುವುದಿಲ್ಲ. ನಮ್ಮ ಪೂರ್ವಜರು ಯಾವ ಉದ್ದೇಶಗಳಿಂದ ದೇವಸ್ಥಾನಗಳನ್ನು ಸ್ಥಾಪಿಸಿದರು, ಅಂಥಾ ಉದ್ದೇಶಗಳ ನೆರವೇರುವಿಕೆಯು ನಮ್ಮಿಂದ ಯಾವ ರೀತಿ ಕೈಗೂಡುತ್ತಿದೆ ಮತ್ತು ಇಂಥಾ ಉದ್ದೇಶಗಳು ಭಜಕರ ದೃಷ್ಟಿಯಲ್ಲಿ ಸದಾ ಇರಗೊಳಿಸುವಂತೆ ಯಾವ ಪ್ರಯತ್ನಗಳು ಬೇಕಾಗಿವೆ ಎಂಬುದನ್ನು ಆಲೋಚಿಸಿಕೊಂಡು ದೇವಸ್ಥಾನಗಳಂಥ ಸಂಸ್ಥೆಗಳಿಗೆ ಸಂಬಂಧಪಟ್ಟ ದ್ರವ್ಯವನ್ನು ವಿನಿಯೋಗಿಸಬೇಕೆಂಬ ಸೂಚನೆಯನ್ನು ಭಜಕವೃಂದಕ್ಕೆ ನಾವು ಇಲ್ಲಿ ಪ್ರತ್ಯೇಕವಾಗಿ ಸೂಚಿಸಬೇಕೆಂಬ ಅಗತ್ಯವಿಲ್ಲ. ಏಕಂದರೆ ಈ ಬಗ್ಗೆ ಮಹಾಸಭೆಯವರು ಒಂದು ಕಮ್ಮಿಟಿಯನ್ನು ಏರ್ಪಡಿಸಿರುವರೆಂತ ತಿಳಿಯುತ್ತೇವೆ. ಮತಶಿಕ್ಷಣಕ್ಕೂ ಹಿಂದೂಧರ್ಮಜ್ಞಾನದ ಪರಿಚಯವನ್ನು ಸರಿಯಾಗಿ ಮಾಡಿಕೊಳ್ಳಲಿಕ್ಕೂ ಸಂಸ್ಕೃತ ವಿದಾಭ್ಯಾಸವು ಅಗತ್ಯವಾಗಿದೆ. ಇಂಥಾ ವಿದ್ಯಾಭ್ಯಾಸಕ್ಕೆ ಅನುಕೂಲವಾದ ಸಂಸ್ಕೃತ ಪಾಠಶಾಲೆಯನ್ನು ಸಾಧ್ಯವಿದ್ದಷ್ಟು ತ್ವರ್ಯದಲ್ಲಿ ಸ್ಥಾಪಿಸಿ ಪ್ರಾರಂಭಿಸುವುದು ದೇವಸ್ಥಾನದ ಭಜಕರ ಮತ್ತು ಆಡಳಿತೆದಾರರ ಕರ್ತವ್ಯವಾಗಿರುವುದು. ಮಹಾಸಭೆಯಲ್ಲಿ ನೇಮಕವಾದ ಕಮ್ಮಿಟಿಯವರು ಈ ವಿಚಾರವನ್ನು ಶೀಘ್ರದಲ್ಲಿಯೇ ಮಾಡಿ ತಮಗೆ ವಹಿಸಿಕೊಟ್ಟ ಕಾರ್ಯಭಾಗವನು ಕಾರ್ಯರೂಪುಗೊಳಿಸುವರಾಗಿ ಕೋರುತ್ತೇವೆ.

ಮಂಗಳೂರು.

ಕೆನರಾ ಬೇಂಕಿನ ಪಾಲುಮಾಲಿಕರ ವರುಷಾವಧಿ ಮಹಾಸಭೆಯು ಇದೇ ಬರುವ ಫೆಬ್ರವರಿ ತಾ. ೮ನೆಯ ಆದಿತ್ಯವಾರ ಅಪರಾಹ್ನ ೨-೩೦ ಗಂಟೆಗೆ ಬ್ಯಾಂಕಿನ ಆಫೀಸಿನಲ್ಲಿ ಜರಗುವುದು.

ಪುತ್ತೂರಿನ ತಹಸೀಲದಾರರಾದ ಮ|| ರಾ|| ರವಿವರ್ಮರಾಜರು ಉಡ್ಪಿಯ ಸ್ಟೇಶನರಿ ಸಬ್ ಮೆಜಿಸ್ಟ್ರೇಟರಾಗಿಯೂ ಉಡ್ಪಿಯ ಸ್ಟೇಶನರಿ ಸಬ್ ಮೆಜಿಸ್ಟ್ರೇಟ ಮ|| ರಾ|| ಪಿ. ಆನಂದರಾಯರು ಕುಂದಾಪುರ ಸ್ಟೇಶನರಿ ಸಬ್ ಮೆಜಿಸ್ಟ್ರೇಟರಾಗಿಯೂ ಮ|| ರಾ|| ಬಿ|| ಸೋಮಪ್ಪನವರು ಕಾಸರಗೋಡು ತಾಲೂಕು ಹೆಡ್ ಎಕೌಂಟೆಂಟರಾಗಿಯೂ ವರ್ಗಾಯಿಸಲ್ಪಟ್ಟಿರುವರು.

ಬರುವ ಸೋಮವಾರ ಅಪರಾಹ್ನ ೫ ಗಂಟೆಗೆ ಉಪ್ಪಿನಂಗಡಿ ತಾಲೂಕು ಬೋರ್ಡ ಮೀಟಿಂಗು ಪುತ್ತೂರಿನಲ್ಲಿರುವ ಸದರಿ ತಾಲೂಕು ಬೋರ್ಡ ಆಫೀಸಿನಲ್ಲಿ ಸೇರುವುದು. ಈ ಮೀಟಿಂಗಿನ ಮುಂದೆ ೧೯೨೫-೨೬ನೇ ವರುಷದ ಬಗ್ಗೆ ಈ ತಾಲೂಕು ಬೋರ್ಡಿನ ಜಮಾ ಖರ್ಚಿನ ಅಂದಾಜು ಪಟ್ಟಿಯು ಇಡಲಾಗುವುದು.

ಸೇಲಮಿನ ಅಸಿಸ್ಟಾಂಟ ಇಂಜೀನಿಯರ್ ಮ|| ರಾ|| ಬಿ. ನರಸಿಂಹ ಶೆಣಯಿಯವರು ಸೇಲಮಿನ ಹಂಗಾಮಿ ಇಂಜೀನಿಯರರಾಗಿ ನೇಮಕಪಟ್ಟಿದ್ದಾರೆ.

ಬಂಟವಾಳದಲ್ಲಿ ಒಂದು ಮಾರ್ಕೇಟನ್ನು ಏರ್ಪಡಿಸಬೇಕೆಂದು ಮಂಗಳೂರು ತಾಲೂಕು ಬೋರ್ಡಿನ ಕಳೆದ ಮೀಟಿಂಗಿನಲ್ಲಿ ಮಂಜೂರಾಗಿದೆ.

ಬರುವ ಮೇ ತಿಂಗಳ ಮೊದಲುಗೊಂಡು ಜಿಲ್ಲಾ ಕಲೆಕ್ಟರರು ಆರು ತಿಂಗಳ ರಜೆಯನ್ನು ಹೊಂದುವರು.

ಇಲ್ಲಿಯ ವ್ಯಾ. ಎಮ್. ಸಿ. ಯವರು ಫೆಬ್ರವರಿ ತಿಂಗಳ ಮೊದಲನೇ ವಾರದಲ್ಲಿ ಪಂದ್ಯಾಟಗಳನ್ನು ಜರಗಿಸುವರು.

ಕರ್ನಾಟಕ ಪ್ರಾಂತಿಕ ಕೊಂಗ್ರೆಸ್ ಕಮ್ಮಿಟಿಯ ಮೀಟಿಂಗು ಫೆಬ್ರವರಿ ತಿಂಗಳ ಮೊದಲನೆ ದಿನ ಮಂಗಳೂರ ಡಿಸ್ಟ್ರಿಕ್ಟ ಕೊಂಗ್ರೆಸ್ ಆಫೀಸಿನಲ್ಲಿ ಜರಗಿಸುವ ವಿಲೆವಾರಿ ಮಾಡಬೇಕಾಗಿಯೂ ಈ ಮೀಟಿಂಗಿನ ಮುಂದೆ ಪ್ರಾಂತಿಕ ಕೊಂಗ್ರೆಸ್ ಕಮ್ಮಿಟಿ ಆಫೀಸನ್ನು ಬದಲಾಯಿಸುವುದು, ಆರ್ಥಿಕ ಸ್ಥಿತಿಯ ಪರ್ಯಾಲೋಚನೆ, ಮುಂದಿನ ಕಾರ್ಯಕ್ರಮದ ಆಲೋಚನೆ ಹಾಗು ನೂಲುವ ಮತದಾನ ಈ ವಿಷಯಗಳನ್ನು ಇಡುವ ವ್ಯವಸ್ಥೆಮಾಡಬೇಕಾಗಿಯೂ ಪ್ರೊವಿನ್ಸಿಯಲ್ ಕೊಂಗ್ರೆಸ್ ಕಮ್ಮಿಟಿಯ ಸೆಕ್ರೆಟರಿಗಳ ತಂತಿಯು ಪ್ರಾಂತಿಕ ಕೊಂಗ್ರೆಸ್ ಕಮಿಟಿಯ ಅಧ್ಯಕ್ಷ ಮ. ರಾ. ಕಾರ್ನಾಡ ಸದಾಶಿವರಾಯರಿಗೆ ಬಂದಿರುವುದು.

ಬೆಳಗಾಂ ಕೊಂಗ್ರೆಸಿನಲ್ಲಿ ಪಾಸಾದ ಠರಾವುಗಳಿಗನುಸಾರವಾಗಿ ಕೊಂಗ್ರೆಸ್ ಕಾರ್ಯಗಳನ್ನು ನಡಿಸುವುದಕ್ಕಾಗಿ ಶ್ರೀಯುತ ಕಾರ್ನಾಡ ಸದಾಶಿವರಾಯರು ಬರುವ ತಾ. ೨೭ರಿಂದ ಫೆಬ್ರವರಿ ೩ರ ವರೆಗೆ ಜಿಲ್ಲೆಯ ಆಯಾ ಭಾಗಗಳನ್ನು ಸಂದರ್ಶಿಸುವರು. ಇದೇ ತಾ ೨೭ರಿಂದ ೨೯ರ ವರೆಗೆ ಇವರು ಕಾಸರಗೋಡು ತಾಲೂಕಿನ ಕಾಸರಗೋಡು, ಬದಿಯಡ್ಕ, ಕಲ್ಲಡ್ಕ, ನೀಲೇಶ್ವರ, ಬಾಯಾರು ಈ ಊರುಗಳನ್ನು ಸಂದರ್ಶಿಸುವರು.

ಸರಕಾರಿ ನೌಕರರ ಸಹಕಾರಿ ಸಂಘದ ಮೀಟಿಂಗು ಕಳೆದ ವಾರ ಜರುಗಿ ಈ ವರುಷ ಸೇಕಡಾ ೬||ಯಂತೆ ಡಿವಿಡೆಂಡ್ ಹಂಚಬೇಕಾಗಿಯೂ ಸಂಘದ ಮುನಾಫೆ ಹಣದಿಂದ ರೂ. ೨೫ನ್ನು ಇಲ್ಲಿಯ ಹೆಂಗಸರ ಮತ್ತು ಮಕ್ಕಳ ಆಸ್ಪತ್ರೆಯನ್ನು ವಿಸ್ತರಿಸಿ ಕಟ್ಟುವ ಫಂಡಿಗೆ ಕೊಡಬೇಕೆಂದೂ ಸದ್ಯದಲ್ಲೇ ಜರಗುವ ಎಡ್ಯುಕೇಶನಲ್ ಫಂಡಿಗೆ ರೂ. ೫ ಸಹಾಯವಾಗಿ ಕೊಡಬೇಕೆಂದೂ ನಿರ್ಧಾರವಾಗಿದೆ.

The Calicut Bank, Ltd.,
ದಿ ಕೆಲಿಕಟ್ ಬೇಂಕ್, ಲಿಮಿಟೆಡ್,

ಹೆಡ್ ಆಫೀಸು—ಕಲ್ಲಿಕೋಟೆ.
ಬ್ರಾಂಚುಗಳು:— ಮುಲ್ಲಸ್‌ಜೇರಿ, ತಲಚೇರಿ, ಕೊಚ್ಚಿ, ಮತ್ತು ಪಾಲ್ಘಾಟು.
ರಿಜಿಸ್ಟರ್ಡ್ ಮತ್ತು ಅಧಿಕಾರಗೊಳಿಸಲ್ಪಟ್ಟ ಮೂಲಧನ ರೂ. 5,00,000—0—0.
ರೂಪಾಯಿ 10ರ 50,000 ಪಾಲುಗಳು.
(30—8—1924)ರ ವರೆಗೆ ಮೌಲ್ಯ ಮೂಲಧನ ರೂಪಾಯಿ 1,81,850—0—0.
ಒಂದು ವರುಷದ ಕಾಯಂ ಠೇವಣಾತಿಗೆ ಬಡ್ಡಿ ದರ ಸೇಕಡಾ ರೂ. 7—8—0.
ಕಳೆದ 4 ವರುಷಗಳಲ್ಲಿ ಪಾಲುಗಾರರಿಗೆ ಸೇಕಡಾ 12ರಂತೆ ಬಡ್ಡಿ ಹಂಚಿದೆ.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.
ಸಿ. ಕೃಷ್ಣನ್, ಬಿ. ಎ., ಬಿ. ಎಲ್.,
ಮೆನೇಜಿಂಗ್ ಡ್ಯಾರೆಕ್ಟರ್.
ಡ್ಯಾರೆಕ್ಟರರಲ್ಲಿ ಒಬ್ಬರು—
ಎಮ್. ನಾರಾಯಣ ಕಾಮತ್, ಬಿ. ಎ.,
ಪ್ಲೀಡರ್, ಕುಂದಾಪುರ.

ಬಂಟರ ಯಾನೆ ನಾಡವರ ಸಂಘದ ವಾರ್ಷಿಕ ಮಹಾಸಭೆಯು ಇದೇ ಬರುವ ಫೆಬ್ರವರಿ ತಾ. ೧ನೇ ಆದಿತ್ಯವಾರ ಇಲ್ಲಿನ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಜರಗುವುದು. ಮತ್ತು ಅದೇ ದಿನ ಭವನದ ವಾರ್ಷಿಕೋತ್ಸವವೂ ಆಚರಿಸಲ್ಪಡುವುದು ಎಂದು ತಿಳಿಯುತ್ತೇವೆ.

ಇಲ್ಲಿಯ ತಿಲಕವಿದ್ಯಾಲಯದ ವರ್ಧಂತಿ ಉತ್ಸವವು ಕಳೆದ ಸೋಮವಾರ ಸಾಯಂಕಾಲ ಮ|| ರಾ|| ರಾ|| ಅತ್ತಾವರ ಬಾಲಕೃಷ್ಣ ಶೆಟ್ಟಿ ಇವರ ಅಧ್ಯಕ್ಷತೆಯಲ್ಲಿ ಜರಗಿತು.

ಆಯುರ್ವೇದ ವಿದ್ಯಾಭೂಷಣ ಪಂಡಿತ ಎಮ್. ವಿ. ಶಾಸ್ತ್ರಿಯವರು ಆಯುರ್ವೇದ ವಿದ್ಯಾಪೀಠದ ಉಪಾಧ್ಯಕ್ಷರಾಗಿ ನೇಮಿಸಲ್ಪಟ್ಟಿರುವರಂತೆ.

ಮಂಗಳೂರು ಪಟ್ಟಣದೊಳಗಿನ ಜನರಿಗೆ ಮನೆಗಳನ್ನು ಕಟ್ಟಲು ಅನುಕೂಲವಾಗುವಂತೆ ಒಂದು ಕೊ-ಒಪರೆಟಿವ್ ಬಿಲ್ಡಿಂಗ್ ಸೊಸ್ಯಾಟಿಸ್ಥಾಪನೆಯಾಗಿದೆ. ಇದರಿಂದ ಹಣವನ್ನು ಪಡಕೊಳ್ಳುವವರು ೨೦ ವರುಷಗಳ ವಾಯಿದೆಯಲ್ಲಿ ಹಣ ಮರುಪಾವತಿಮಾಡಬಹುದು. ಬಡ್ಡಿಯ ದರ ರೂ. ೬-೧೪-೦. ವಿಶೇಷ ಮಾಹಿತಿಯನ್ನು ಸೆಕ್ರೆಟರಿ, ಬಿಲ್ಡಿಂಗ್ ಸೊಸ್ಯಾಟಿ, ಕೋ-ಒಪರೇಟಿವ್ ಬಿಲ್ಡಿಂಗ್ ಮಂಗಳೂರು ಇವರಿಂದ ಹೊಂದಬಹುದು.

ಬರುವ ಆದಿತ್ಯವಾರ ಬೆಳಗ್ಗೆ ಇಲ್ಲಿಯ ಬ್ರಹ್ಮಮಂದಿರದಲ್ಲಿ ಶ್ರೀಯುತ ಕಾರ್ನಾಡು ಸದಾಶಿವರಾಯರು ದೇವರ ಪ್ರಾರ್ಥನೆಯನ್ನು ಮಾಡಿ 'ಜೀವನದ ಅತ್ಯುತ್ಕೃಷ್ಟವಾದ ಉದ್ದೇಶ' ಎಂಬುದನ್ನು ಕುರಿತು ಭಾಷಣಮಾಡುವರು.

ಇದೇ ತಿಂಗಳ ತಾ. ೨೬ನೇ ಸೋಮವಾರ ಪ್ರಾತಃಕಾಲ ಗಂಟೆ ೮-೩೦ಕ್ಕೆ ಇಲ್ಲಿಯ ಕೊ-ಒಪರೇಟಿವ್ ಟೌನ್‌ಬೇಂಕಿನ ಬಗ್ಗೆ ರಥಬೀದಿಯಲ್ಲಿರುವ ಹಳೆ ತಾಲೂಕು ಕಚೇರಿಯ ಕಂಪಾಂಡಿನಲ್ಲಿ ಕಟ್ಟಸೋಣಾಗುವ ಬೇಂಕು ಕಟ್ಟಡದ ಅಸ್ತಿವಾರದ ಕಲ್ಲು ಸ್ಥಾಪನೆಯ ಮುಹೂರ್ತವು ನಡೆಯುವುದು. ಜಿಲ್ಲಾ ಕಲೆಕ್ಟರರಾದ ಮೆ|| ಸಿ. ಎ. ಸೂಟರ್ ದೊರೆಗಳವರು ಈ ಸ್ಥಾಪನೆಯನ್ನು ಮಾಡುವರು.

ಕಳೆದ ನವಂಬರ ತಿಂಗಳಲ್ಲಿ ಬೋಳಾರದಲ್ಲಿ ಉಸ್ಮಾನ್ ಯಾನೆ ಸೈಯದ್ ಎಂಬ ಮುಸಲ್ಮಾನನನ್ನು ಕಡುಕತ್ತಿಯಿಂದ ಹೊಡೆದು ಕೊಂದ ಆರೋಪದ ಮೊಕದ್ದಮೆಯು ಕಳೆದ ವಾರ ಇಲ್ಲಿಯ ಸೆಶ್ಶನ್ಸ್ ಕೋರ್ಟಿನಲ್ಲಿ ವಿಚಾರಣೆಯಾಗಿ ಆರೋಪಿಯಾದ ಕಮಲಾಕ್ಷಿ ಎಂಬ ಪ್ರೊಟೆಸ್ಟಾಂಟ ಹೆಂಗಸಿಗೆ ೩ ವರುಷಗಳ ಜಾಮೀನು ಭಿಕ್ಷೆಯ ಶಿಕ್ಷೆಯು ವಿಧಿಸಿದೆ.

ಸ್ವರ್ಗಸ್ಥ ರಾವ್ ಬಹದೂರ್ ಸುಜೀರ ರಘುನಾಥಯ್ಯನವರ ದುಃಖಪ್ರದರ್ಶಕ ಸಭೆಯು ಕಳೆದ ಆದಿತ್ಯವಾರ ಇಲ್ಲಿಯ ಗಣಪತಿ ಹೈ ಸ್ಕೂಲಿನಲ್ಲಿ ಜರಗಿ ಅವರ ನಿಧನದ ಸಂತಾಪ ಸೂಚಕ ಠರಾವು ಪಾಸಾಯಿತು ಮತ್ತು ಅವರ ಭಾವಚಿತ್ರವನ್ನು ಶಾಲೆಯ ಸಭಾಸದನದಲ್ಲಿ ಇರಗೊಡಿಸಬೇಕೆಂದೂ ಅವರ ಜ್ಞಾಪಕಾರ್ಥವಾಗಿ ಒಂದು ವಿದ್ಯಾರ್ಥಿ ವೇತನವನ್ನು ಏರ್ಪಡಿಸಬೇಕಾಗಿಯೂ ಠರಾವಾಗಿ ವಿದ್ಯಾರ್ಥಿವೇತನದ ಬಗ್ಗೆ ಫಂಡನ್ನು ಕೂಡಿಸುವ ವ್ಯವಸ್ಥೆಯಾಗಿದೆ ಎಂದು ತಿಳಿಯುತ್ತೇವೆ.

ಡಿಸ್ಟ್ರಿಕ್ಟ್ ಎಡ್ಯುಕೇಶನಲ್ ಕೌನ್ಸಿಲಿನ ಮೀಟಿಂಗು ಬರುವ ತಾ. ೩೦ನೆಯ ದಿನ ಅಪರಾಹ್ನ ೩ ಗಂಟೆಗೆ ಜರಗುವುದು.

ಹೊಕ್ಕಿ ಪಂದ್ಯಾಟವು ಬರುವ ತಾ. ೧೯ರಿಂದ ಪ್ರಾರಂಭವಾಗುವುದು. ಪ್ರಥಮ ದಿನ ಯುರೋಪಿಯನ್ ಕ್ಲಬ್ ಮತ್ತು ಕೊಸ್ಮೊಪೋಲಿಟನ್ ಕ್ಲಬ್, ತಾ. ೨೦ನೇ ದಿನ ಮೊದಲಿನ ದಿನ ಗೆಲ್ಲುವವರು ಮತ್ತು ಪೋಲೀಸ್ ಟೀಮ್, ತಾ. ೨೧ನೇ ದಿನ ಸೆಂಟ್ ಎಲ್ಲೋಸಿಯಸ್ ಕೋಲೇಜ್ ಮತ್ತು ಗವರ್ನಮೆಂಟ ಕೊಲೇಜ್ ಈ ರೀತಿ ಆಡುವರು. ಮತ್ತು ತಾ. ೨೪ರಲ್ಲಿ ಕೊನೆಯ ಆಟ ನಡೆಯುವುದು.

ಇನ್‌ಕಮ್ ಟೇಕ್ಸ್ ಆಫೀಸರರ ಸರ್ಕೀಟು:— ತಾ ೧೯ರಿಂದ ೨೨ರ ವರೆಗೆ ಉಡ್ಪಿ, ತಾ. ೨೩ ಉಡ್ಪಿಯಿಂದ ಕುಂದಾಪುರ, ತಾ. ೨೪ರಿಂದ ೩೦ರ ವರೆಗೆ ಕುಂದಾಪುರ. ತಾ. ೩೧ ಕುಂದಾಪುರದಿಂದ ಮಂಗಳೂರು ಈ ರೀತಿ ಸರ್ಕೀಟು ಬೆಳೆಸುವರು.

ದಕ್ಷಿಣಕನ್ನಡಾ ಸೆಂಟ್ರಲ್ ಕೋ-ಒಪರೇಟಿವ್ ಬೇಂಕ್ ಲಿಮಿಟೆಡ್ ಇದರ ಮೆಂಬರರ ಸಭೆಯು ಬರುವ ತಾ. ೩೧ನೇ ಶನಿವಾರ ಹಗಲು ಗಂಟೆ ೧-೩೦ಕ್ಕೆ ಇಲ್ಲಿಯ ಕೊಡಿಯಾಲಬೈಲಲ್ಲಿರುವ ಬೇಂಕಿನ ಕಟ್ಟಡದಲ್ಲಿ ಉಪನಿಬಂಧನೆಗಳ ಬದಲಾವಣೆಯ ಸೂಚನೆಗಳನ್ನು ಆಲೋಚಿಸುವದಕ್ಕಾಗಿ ಸೇರುವುದು.

ಬೆಳಗಾಂ ಕೊಂಗ್ರೆಸ್ಸಿನಲ್ಲಿ ಮಹಾತ್ಮರ ಭಾಷಣ.

(ಕಳೆದ ಸಂಚಿಕೆಯಿಂದ ಮುಂದುವರಿಸಿದುದು)

ಕೆಲಸವಿಲ್ಲದೆ ಕುಳಿತ ಅಸಹಯೋಗಿಗಳು.

ರಾಷ್ಟ್ರದ ಆಜ್ಞೆಯನ್ನು ಮನ್ನಿಸಿ, ತಮ್ಮ ವಕೀಲಿಯನ್ನು ಬಿಟ್ಟುಕೊಟ್ಟ ವಕೀಲರ ವಿಷಯಕ್ಕೂ, ಸರಕಾರಿ ಶಾಲೆಗಳನ್ನು ಬಿಟ್ಟ ಶಿಕ್ಷಕರ ವಿಷಯಕ್ಕೂ, ಸರಕಾರಿ ನೌಕರಿಯನ್ನು ಬಿಟ್ಟ ನೌಕರದಾರರ ವಿಷಯಕ್ಕೂ ಇಲ್ಲಿ ಸ್ವಾಪವನ್ನೆತ್ತುವುದು ಉಚಿತವಾಗಿದೆ. ಎಷ್ಟೊ ಜನರಿಗೆ ತಮ್ಮ ಜೀವಿತಾರ್ಥವನ್ನು ಸಾಗಿಸಲು ಕಠಿಣ ಪ್ರಯಾಸವಾಗುತ್ತಿದೆಂಬುದನ್ನು ನಾನು ಬಲ್ಲೆನು. ರಾಷ್ಟ್ರದಿಂದ ಸಹಾಯಹೊಂದಲು ಅವರು ಅರ್ಹರಾಗಿದ್ದಾರೆ. ಪ್ರಮಾಣಿಕರೂ, ಉದ್ಯೋಗಶೀಲರೂ ಆಗಿದ್ದು, ಅಲ್ಪವೇತನದಿಂದ ಸಂತುಷ್ಟರಾಗಿ, ದುಡಿದು ಸೇವೆಯನ್ನು ಮಾಡಲು ಸಿದ್ಧರಿದ್ದ ಅಸಂಖ್ಯ ಜನರನ್ನು ಖಾದೀಮಂಡಲದಲ್ಲಿಯೂ ಶಿಕ್ಷಣಸಂಸ್ಥೆಗಳಲ್ಲಿಯೂ ಉದ್ಯೋಗಕ್ಕೆ ಹಚ್ಚಲು ಅಸ್ಪದವಿದೆ. ರಾಷ್ಟ್ರಸೇವೆಯನ್ನು ಮಾಡಿ ಅದಕ್ಕೆ ಪ್ರತಿಯಾಗಿ ಏನೂ ವೇತನವನ್ನು ಸ್ವೀಕರಿಸಬಾರದೆಂಬ ಪ್ರವೃತ್ತಿಯು ಎಷ್ಟೊ ಜನರಲ್ಲಿ ಕಂಡುಬರುತ್ತದೆ. ವೇತನವಿಲ್ಲದೆ ಸೇವೆಮಾಡುವ ಇಚ್ಛೆಯೇನೋ ಸ್ತುತ್ಯವಿದೆ. ಎಲ್ಲರಿಗೂ ಈ ಇಚ್ಛೆಯಂತೆ ನಡೆಯುವುದು ಶಕ್ಯವಿಲ್ಲ. ಪ್ರತಿಯೊಬ್ಬ ಕೆಲಸಗಾರನು ತನ್ನ ವೇತನಕ್ಕೆ ಬಾಧ್ಯಸ್ಥನಾಗಿರುವನು. ವೇತನವಿಲ್ಲದ ಸರ್ವಕಾಲವನ್ನೂ ಸೇವೆಯಲ್ಲಿ ಕಳೆಯುವಂಥ ಸಾವಿರಗಟ್ಲೆ ಕೆಲಸಗಾರರನ್ನು ಯಾವ ದೇಶವೂ ಹುಟ್ಟಿಸಲಾರದು. ಆದ್ದರಿಂದ ದೇಶಭಕ್ತರು ದೇಶಸೇವೆಯನ್ನು ಮಾಡಿ, ಅದಕ್ಕೆ ಪ್ರತಿಯಾಗಿ ವೇತನವನ್ನು ಪಡೆಯುವುದು ಗೌರವವೆಂದು ತಿಳಿಯಲು ಅನುಕೂಲವಾದ ವಾತಾವರಣವನ್ನು ನಾವು ಹುಟ್ಟಿಸಬೇಕು.

— ಮಾದಕ ದ್ರವ್ಯಗಳು. —

ಅಫೀಮು ಮದ್ಯದ ವ್ಯಾಪಾರ ಇದು ರಾಷ್ಟ್ರದ ದೃಷ್ಟಿಯಿಂದ ಮಹತ್ವದ ಮತ್ತೊಂದು ವಿಷಯವು. ೧೯೨೧ನೇ ಇಸವಿಯಲ್ಲಿ ಮದ್ಯಪಾನವನ್ನು ನಿಲ್ಲಿಸುವುದಕ್ಕಾಗಿ ದೇಶದೊಳಗೆ ಎಲ್ಲೆಲ್ಲಿಯೂ ಹಬ್ಬಿದ ಉತ್ಸಾಹವು ಅಹಿಂಸಾತ್ಮಕವಾಗಿ ಉಳಿದಿದ್ದರೆ, ಹೆಚ್ಚಿನ ಪ್ರಗತಿಯಾಗುತ್ತಿರುವದು ನಮಗೆ ಕಂಡುಬರುತ್ತಿದ್ದಿತು. ಆದರೆ ದುರ್ದೈವದಿಂದ ಪ್ರತಿಬಂಧದ ಚಳವಳಿಯು ಕೆಡುತ್ತ ಹೋಗಿ ಹಿಂಸೆಯಲ್ಲಿ ಪರಿಣಮಿಸಿತು. ಒಮ್ಮೊಮ್ಮೆ ಹಿಂಸೆಯು ಪ್ರಕಟವಾಗಿಯೂ ಒಮ್ಮೊಮ್ಮೆ ಗುಪ್ತವಾಗಿಯೂ ಇರುತ್ತಿದ್ದಿತು. ಆದ್ದರಿಂದ ಪ್ರತಿಬಂಧದ ಚಳವಳಿಯನ್ನು ಬಿಟ್ಟುಕೊಡಬೇಕಾಯಿತು. ಮೊದಲಿನಂತೆ ಗಡಂಗಿಗಳೂ ಅಫೀಮಿನ ಆಶ್ರಯಗಳೂ ಪುನಃ ಭರದಿಂದ ಸಾಗಹತ್ತಿದವು. ಆದರೆ ಪ್ರತಿಬಂಧದ ಕಾರ್ಯವು ಪೂರ್ಣ ನಿಂತುಹೋಗಿಲ್ಲವೆಂಬುದನ್ನು ಕೇಳಿ ನಿಮಗೆ ಸಂತೋಷವಾಗಬಹುದು. ಎಷ್ಟೋ ಜನ ಕೆಲಸಗಾರರು ಪ್ರತಿಬಂಧದ ಕೆಲಸವನ್ನು ಶಾಂತರೀತಿಯಿಂದಲೂ ನಿಸ್ವಾರ್ಥಬುದ್ಧಿಯಿಂದಲೂ ಇಂದಿಗೂ ಸಾಗಿಸುತ್ತ ಬಂದಿರುವರು. ಸ್ವರಾಜ್ಯವು ನಮಗೆ ಪ್ರಾಪ್ತವಾಗುವ ವರೆಗೆ ಈ ಅನಿಷ್ಟವನ್ನು ನಿರ್ಮೂಲ ಮಾಡುವುದು ನಮಗೆ ಶಕ್ಯವಿಲ್ಲೆಂಬುದನ್ನು ನಾವು ಅರಿತಿರಬೇಕು. ಈ ಅನೀತಿಮಯವಾದ ಮಾದಕ ದ್ರವ್ಯಗಳ ಉತ್ಪನ್ನದಿಂದ ನಮ್ಮ ಮಕ್ಕಳ ಶಿಕ್ಷಣವು ಸಾಗುತ್ತಿರುವದೆಂಬುದು ನಮಗೇನೂ ಅಭಿಮಾನದ ಮಾತಲ್ಲ. ಶಿಕ್ಷಣಕಾರ್ಯವು ನಿಲ್ಲುವ ಪ್ರಸಂಗ ಬಂದರೂ ಅದನ್ನು ಲಕ್ಷಿಸದೆ, ಈ ಆಂದಾಯವನ್ನು ಮಹಾಸಭೆಯ ಭಕ್ತರು ಧೈರ್ಯದಿಂದ ಕಿತ್ತುಹಾಕುವಂತಿದ್ದರೆ, ಅವರ ಕೌನ್ಸಿಲ ಪ್ರವೇಶವನ್ನು ನಾನು ಕ್ಷಮಿಸಿದರೂ ಕ್ಷಮಿಸಬಹುದು. ಅಷ್ಟರ ಶಾಲೆಯ ವೆಚ್ಚವನ್ನು ಆ ಪ್ರಮಾಣದಿಂದ ಕಡಿಮೆ ಮಾಡಲು ಅವರು ಆಗ್ರಹ ತೊಟ್ಟರೆ ಅಂಥ ಯಾವ ಕಾರ್ಯವು ಆಗಲರಿಯದು.

ಬಂಗಾಲದಲ್ಲಿಯ ದಬ್ಬಾಳಿಕೆಯು.

ಇದು ವರೆಗೆ ಅಂತರಂಗಿಕ ಪರಿಸ್ಥಿತಿಯನ್ನು ಕುರಿತು ವಿವೇಚಿಸಿದೆನೆಂಬುದು ನಿಮಗೆ ಗೊತ್ತಾಗುವದು. ಒಳಗಿನ ಪರಿಸ್ಥಿತಿಗಳು ನಮ್ಮ ಭವಿತವ್ಯತೆಯ ಮೇಲೆ ಪರಿಣಾಮವನ್ನುಂಟುಮಾಡುವಂತೆ, ಹೊರಗಿನ ಪರಿಸ್ಥಿತಿಗಳೂ, ಅವುಗಳಲ್ಲಿ ಮುಖ್ಯತಃ ನಮ್ಮನ್ನಾಳುವವರ ಕೃತಿಗಳೂ (ಪ್ರತಿಕೂಲವಾಗಿ ಆದಾಗ್ಯೂ) ಹೆಚ್ಚಾಗಿ ಅದರ ಮೇಲೆ ಪರಿಣಾಮವನ್ನುಂಟುಮಾಡುತ್ತಿರುವವು. ಬೇಕಾದರೆ ಅವುಗಳಿಂದ ನಾವು ಪ್ರಯೋಜನವನ್ನು ಹೊಂದಬಹುದು; ಅಥವಾ ಅವುಗಳಿಗೆ ಅಧೀನರಾಗಿ ನಾವು ಹಾನಿಗಾದರೂ ಒಳಗಾಗಬಹುದು. ನಮ್ಮ ರಾಜ್ಯಕರ್ತರ ಹೊಸ್ತ ದೊಡ್ಡ ಕೃತಿಯೆಂದರೆ ಬಂಗಾಲದಲ್ಲಿ ಪ್ರಾರಂಭಿಸಿದ ದಬ್ಬಾಳಿಕೆಯು. ಇಂಥ ಪಕ್ಷಗಳ ಪರಿಷತ್ತು ಅದನ್ನು ಸ್ಪಷ್ಟವಾಗಿ ನಿಷೇಧಿಸಿರುವದು. ಈ ಅಸ್ತ್ರವು ಬಂಗಾಲದ ಸ್ವರಾಜ್ಯ ಪಕ್ಷದ ಮೇಲೆಯೆ ಪ್ರಯೋಗಿಸಲ್ಪಟ್ಟಿದೆ ಎಂದು ಹೇಳಲು ಆ ಪರಿಷತ್ತಿಗೆ ಅನುಮಾನವಿದ್ದಿತು. ಆದರೆ ನನಗೆ ಆ ಅನುಮಾನವೇನೂ ಇಲ್ಲ. ನಾನು ಕಲಕತ್ತೆಗೆ ಹೋಗಿದ್ದೆನು. ಅಲ್ಲಿ ಭಿನ್ನ ಭಿನ್ನ ಮತದ ಜನರನ್ನು ಕಾಣುವ ಪ್ರಸಂಗವು ನನಗೆ ದೊರೆಯಿತು. ಈ ಅಸ್ತ್ರವು ಬಂಗಾಲದ ಸ್ವರಾಜ್ಯ ಪಕ್ಷದ ಮೇಲೆಯೇ ಪ್ರಯೋಗಿಸಲ್ಪಟ್ಟಿರುವದೆಂಬುದನ್ನು ನಾನು ಕೊನೆಗೆ ಮನಗಂಡೆನು. ಅಂದಿನಿಂದ ಲಾರ್ಡ ಲಿಟನ್ ರೀಡಿಂಗರವರು ಮಾಡಿದ ಭಾಷಣಗಳಿಂದ ನನ್ನ ಈ ಅಭಿಪ್ರಾಯವು ದೃಢವಾಯಿತು. ಅವರು ಮಾಡಿದ ಸಮರ್ಥನವು ಮನಸ್ಸಿಗೆ ಸ್ವಲ್ಪವೂ ಒಪ್ಪಿಗೆಯಾಗುವಂಥಹದಿರುವದಿಲ್ಲ. ಲೋಕಮತಕ್ಕೆ ಏನೂ ಬೆಲೆಯಿಲ್ಲದ ಹಿಂದುಸ್ಥಾನದಲ್ಲಿಯೇ ಇಂಥ ಸಮರ್ಥನವು ಶಕ್ಯವಿದೆ. ಲಾರ್ಡ ಲಿಟನರು ಹಾಕುವ ಬಂಧವಿಮೋಚನೆಯ ಕರಾರುಗಳು ನಮ್ಮ ಬುದ್ಧಿಗೆ ಅಪಮಾನಕರವಾದವುಗಳು. ಹೊಸ ನಿಬಂಧನೆಯ ಮತ್ತು ೧೮೧೮ನೇ ಇಸವಿಯ ರೆಗ್ಯುಲೇಶನದ ಪ್ರಕಾರ ಕೆಲಸ ನಡೆಯಿಸಲು ಅಂಥ ಪರಿಸ್ಥಿತಿಯೇ ಇದ್ದಿತೆಂದು ಲಾರ್ಡ ರೀಡಿಂಗ, ಲಿಟನ್ನರು ಹೇಳುವುದು ಅವರ ಕಲ್ಪನೆಯ ಮಾತುಗಳಾಗಿವೆ. ರಾಷ್ಟ್ರದ ಹಂಬೋಣವೇನೆಂದರೆ:—

(೧) ಅವರು ಹೇಳುತ್ತಿರುವ ಪರಿಸ್ಥಿತಿಯು ಇರುವದೆಂದು ಸಿದ್ಧಮಾಡಲ್ಪಟ್ಟಿಲ್ಲ.

(೨) ಒಂದು ವೇಳೆ ಅಂಥ ಪರಿಸ್ಥಿತಿಯು ಇರುತ್ತದೆಂದು ಕಲ್ಪಿಸಿದರೂ, ರೋಗಕ್ಕಿಂತಲೂ ಪ್ರತೀಕಾರ (ಉಪಾಯ)ವೇ ಹೆಚ್ಚು ಅಹಿತಕರವಾದದ್ದಾಗಿದೆ.

(೩) ಈ ಪರಿಸ್ಥಿತಿಯನ್ನು ಸರಿಪಡಿಸಲು, ಸಾಮಾನ್ಯ ಶಾಸನವು ತಕ್ಕಷ್ಟು ಸಾಮರ್ಥ್ಯವುಳ್ಳದ್ದಾಗಿರುವದು. ಮತ್ತು ಕೊನೆಯ ಮಾತೆಂದರೆ,

(೪) ವಿಶೇಷ ಅಧಿಕಾರವು ಅವಶ್ಯವಿದ್ದ ಪಕ್ಷದಲ್ಲಿ ತಾವೇ ನಿರ್ಮಿಸಿದ ಕಾನೂನು ಸಭೆಗಳಿಂದ ಅದನ್ನು ಪಡೆಯಬಹುದಾಗಿತ್ತು.

ಸಾಹೇಬರವರು ತಮ್ಮ ಭಾಷಣಗಳಲ್ಲಿ ಈ ವಿಷಯಗಳ ಬಗ್ಗೆ ಏನೂ ಹೇಳಿರುವದಿಲ್ಲ. ಸರಕಾರದ ನಿರಾಧಾರವಾದ ವಿಧಾನಗಳ ಅನುಭವವನ್ನು ಬಹಳ ಸಾರೆ ಕಂಡುಂಡಂಥ ಈ ರಾಷ್ಟ್ರವು ಅವುಗಳನ್ನು ವೇದವಾಕ್ಯವೆಂದು ನಂಬಲಾರದು. ಅವರ ವಿಧಾನಗಳನ್ನು ನಾವು ನಂಬಲಾರೆವು: ಮತ್ತು ನಂಬಲೊಲ್ಲೆವೆಂಬ ಮಾತನ್ನು ಅವರು ಬಲ್ಲರು. ನಾವು ಅವುಗಳನ್ನು ನಂಬದಿರುವದಕ್ಕೆ ಕಾರಣವೇನೆಂದರೆ; ಅವುಗಳು ಬುದ್ಧಿಪೂರ್ವಕವಾಗಿ ಮಾಡಿದ ಸುಳ್ಳು ವಿಧಾನಗಳೆಂತಲ್ಲ; ಆದರೆ ಅವುಗಳ ಮೂಲವು ಸದೋಷವಾಗಿರುತ್ತದೆಂದು ಕಂಡುಬಂದ ಸಂಗತಿಯು. ಅದಕಾರಣ ಅವರ ಆಶ್ವಾಸನಗಳೆಂದರೆ ಜನತೆಯ ಉಪಹಾಸವೇ ಸರಿ. 'ನಿವೇನು ಮಾಡುವದಿರುವದೊ ಅದನ್ನು ಮಾಡಿಕೊಳ್ಳಿರಿ'ಯೆಂಬುದೇ ಅವರ ಭಾಷಣಗಳ ಆಶಯವಿದ್ದಂತೆ ತೋರುತ್ತದೆ. ಆದುದರಿಂದ ನಾವು ಕ್ಲೇಶಗೊಂಡು ನಮ್ಮ ತಾಳ್ಮೆಯನ್ನು ಕಳಕೊಳ್ಳಕೂಡದು. ದಬ್ಬಾಳಿಕೆಯಿಂದ ನಾವು ಭಯಭೀತರಾಗಿ ನಮ್ಮ ಧ್ಯೇಯದಿಂದ ಚ್ಯುತರಾಗದಿದ್ದರೆ, ಸ್ವರಾಜ್ಯಪ್ರಾಪ್ತಿಯು ನಮಗೆ ಸುಗಮವಾಗುವದು. ಏಕೆಂದರೆ ಅದರಿಂದ ನಮ್ಮ ಸಾಮರ್ಥ್ಯಪರೀಕ್ಷೆಯಾಗುತ್ತದೆ. ಮತ್ತು ಅದು ಸಂಕಟ ಸಮಯದಲ್ಲಿ ನಮ್ಮೊಳಗೆ ಸ್ವಾರ್ಥತ್ಯಾಗವನ್ನೂ ಧೈರ್ಯವನ್ನೂ ಉಂಟುಮಾಡುತ್ತದೆ. ಏಕೆಂದರೆ ಬೆಂಕಿಯು ಬಂಗಾರದ ಕಳೆಯನ್ನು ಹೆಚ್ಚಿಸುವಂತೆ, ದಬ್ಬಾಳಿಕೆಯು ಸತ್ವಶೀಲ ಮನುಷ್ಯನ ಅಥವಾ ರಾಷ್ಟ್ರದ ತೇಜವನ್ನು ಹೆಚ್ಚಿಸುತ್ತದೆ. ೧೯೨೧ನೇ ಇಸವಿಯಲ್ಲಿಯ ದಬ್ಬಾಳಿಕೆಯನ್ನು ನಾವು ಸವಿನಯ ಶಾಸನೋಲ್ಲಂಘನೆಯಿಂದ ಎದುರಿಸಿ, ಸರಕಾರಕ್ಕೆ ತನ್ನ ಸ್ವೈರವೃತ್ತಿಯನ್ನು ನಡೆಯಿಸಲು ಅವಕಾಶವನ್ನು ಕೊಟ್ಟೆವು. ಆದರೆ ಈಗ ಮಾತ್ರ ನಮ್ಮಲ್ಲಿ ಪ್ರತೀಕಾರದ ಯಾವ ಸಾಮರ್ಥ್ಯವೂ ಇಲ್ಲದೆ, ಸುಮ್ಮನೆ ಕೂಡ್ರಬೇಕಾಗಿದೆ. ನಾವು ಸವಿನಯ ಶಾಸನೋಲ್ಲಂಘನವನ್ನು ಕೈಕೊಳ್ಳಲು ಸಿದ್ಧರಿರುವದಿಲ್ಲ. ಅದಕ್ಕಾಗಿ ನಾವು ಸಿದ್ಧತೆಯನ್ನು ಮಾತ್ರ ಮಾಡಬಹುದು. ನಿಯಮಬದ್ಧತೆ, ಆತ್ಮಸಂಯಮನ, ಅಹಿಂಸಾತ್ಮಕಪ್ರತೀಕಾರ ಪ್ರವೃತ್ತಿ, ಸಂಘಶಕ್ತಿ ಮತ್ತು, ಇವೆಲ್ಲಕ್ಕಿಂತ ಹೆಚ್ಚಿನದಾದ ಪ್ರಚಲಿತ ದೈವೀ ಶಾಸನಗಳನ್ನೂ ಅವುಗಳಿಗೆ ಪೋಷಕವಾದ ಮನುಷ್ಯಕೃತ ಶಾಸನಗಳನ್ನೂ ನಿಷ್ಠೆಯಿಂದಲೂ ಅಂತಃಕರಣದಿಂದಲೂ ಪಾಲಿಸುವುದು — ಇವೆಲ್ಲವುಗಳು ಶಾಸನಭಂಗದ ಸಿದ್ಧತೆಗಳಾಗಿವೆ. ಆದರೆ ದುರ್ದೈವದಿಂದ ನಮ್ಮಲ್ಲಿ ಸಾಕಷ್ಟು ನಿಯಮಬದ್ಧತೆಯೂ ಆತ್ಮಸಂಯಮನವೂ ಇಲ್ಲ. ನಾವು ಹಿಂಸಾಪ್ರವೃತ್ತಿಯುಳ್ಳವರಿರುವೆವು; ಇಲ್ಲವೆ ನಮ್ಮ ಅಹಿಂಸೆಯು ಪ್ರತೀಕಾರಶಕ್ತಿಯಿಲ್ಲದಾಗಿರುವದು. ನಮ್ಮಲ್ಲಿ ಸಾಕಷ್ಟು ಸಂಘಶಕ್ತಿಯಿಲ್ಲ. ದೇವರ ಇಲ್ಲವೆ ಮನುಷ್ಯಕೃತವಾದ ಶಾಸನಗಳನ್ನು ನಾವು ಗತ್ಯಂತರವಿಲ್ಲವೆಂದು ಪಾಲಿಸುತ್ತೇವೆ. ಹಿಂದು-ಮುಸಲ್ಮಾನರು ತಮ್ಮ ಪರಸ್ಪರ ವ್ಯವಹಾರದಲ್ಲಿ ದೇವರ ಮತ್ತು ಮನುಷ್ಯಕೃತ ನಿಯಮಗಳನ್ನು ಸ್ವೈರವೃತ್ತಿಯಿಂದ ದಿನಾಲು ಉಲ್ಲಂಘಿಸುವದನ್ನು ನಾವು ನೋಡುತ್ತಿದ್ದೇವೆ. ಹೀಗಿರಲು ದುಃಖಿತ ಜನರು ತಮ್ಮ ಮೇಲಾಗುವ ಅನ್ಯಾಯದ ನಿವಾರಣೆಗಾಗಿ ಉಪಯೋಗಿಸಬಹುದಾದ ಒಂದೇ ಒಂದು ಅಸದೃಶ ಮತ್ತು ಅಮೋಘವಾದ ಶಸ್ತ್ರವಾಗಿರುವ ಶಾಸನಭಂಗಕ್ಕೆ ಅನುಕೂಲವಾಗಿರುವ ವಾತಾವರಣವು ಈಗಿಲ್ಲೆಂಬುದು ಸ್ಪಷ್ಟವಿದೆ. ಇಂಥ ಪರಿಸ್ಥಿತಿಯಲ್ಲಿ ಕೈಕೊಳ್ಳಬಹುದಾದ ಎರಡನೆಯ ಉಪಾಯವೆಂದರೆ ನಿಸಂಶಯವಾಗಿ ಹಿಂಸಾವೃತ್ತಿಯೇ ಸರಿ. ಹಿಂಸಾಪ್ರವೃತ್ತಿಗೆ ಅನುಕೂಲವಾದ ವಾತಾವರಣವು ಸದ್ಯಕ್ಕಿದೆಯೆಂದು ನಮಗೆ ಭಾಸವಾಗುತ್ತದೆ. ನಮಗೆ ಅದಕ್ಕಾಗಿ ಶಿಕ್ಷಣವು ಹಿಂದು ಮುಸಲ್ಮಾನರ ಕಲಹಗಳಿಂದ ದೊರೆಯುತ್ತದೆ. ಹಿಂದುಸ್ಥಾನದ ಬಂಧಮೋಚನವು ಹಿಂಸಾಪ್ರವೃತ್ತಿಯಿಂದಲೇ ಶಕ್ಯವಿದೆಂದು ನಂಬುವವರು, ನಮ್ಮೊಳಗೆ ನಿರಾತಂಕವಾಗಿ ನಡೆದಿರುವ ಅಂತಃಕಲಹಗಳನ್ನು ನೋಡಿ ಬೇಕಾದಷ್ಟು ಆನಂದಪಡಬಹುದು. ಆದರೆ ಹಿಂಸಾತತ್ವದಲ್ಲಿ ವಿಶ್ವಾಸವುಳ್ಳವರಿಗೆ ನಾನು ಹೇಳುವುದೇನೆಂದರೆ—"ನೀವು ಹಿಂದುಸ್ಥಾನದ ಪ್ರಗತಿಗೆ ಅಡ್ಡಬರುತ್ತಿರುವಿರಿ. ಅನ್ನವಿಲ್ಲದೆ ಬಳಲುತ್ತಿರುವ ಲಕ್ಷಾವಧಿ ಜನರ ಬಗ್ಗೆ ನಿಮ್ಮಲ್ಲೇನಾದರೂ ಕನಿಕರವೂ ಪ್ರೇಮವೂ ಇದ್ದದ್ದಾದರೆ, ನಿಮ್ಮ ಹಿಂಸಾಪ್ರವೃತ್ತಿಯಿಂದ ಅವರಿಗೆ ಯಾವ ಹಿತವೂ ಆಗಲಾರದೆಂದು ಅರಿಯಿರಿ. ಯಾವ ಸರಕಾರವನ್ನು ನೀವು ಕಳ್ಳಬೇಕೆನ್ನುವಿರೋ, ಅದರ ಬಳಿಯಲ್ಲಿ ನಿಮಗಿಂತಲೂ ಹೆಚ್ಚಿನ ಶಸ್ತ್ರಬಲವು ಇರುವದಲ್ಲದೆ, ಅದು ನಿಮಗಿಂತಲೂ ಎಷ್ಟೊ ಪಟ್ಟು ಹೆಚ್ಚು ಸುಸಂಘಟಿತವಾಗಿರುತ್ತದೆ. ನಿಮಗೆ ನಿಮ್ಮ ಜೀವದ ಪರವೆಯ ಇರಲಿಕ್ಕಿಲ್ಲ; ಆದರೆ ದೇಶದ ಸಲುವಾಗಿ ಆತ್ಮಯಜ್ಞವನ್ನು ಮಾಡಬಲ್ಲವರು ನಿಮ್ಮ ದೇಶಬಾಂಧವರ ಜೀವಿತವನ್ನು ನೀವು ಉಪೇಕ್ಷಿಸಲಾರಿರಿ. ಜಾಲಿಯನ್‌ವಾಲಾ ಬಾಗದಲ್ಲಿ ಆದಂಥ ಕೊಲೆಗಳು ಆತ್ಮಸಂರಕ್ಷಣೆಗೆ ಯೋಗ್ಯ ಸಾಧನಗಳಾಗಿರುವವೆಂದು ಈ ಸರಕಾರವು ನಂಬುತ್ತದೆಂಬುವನ್ನು ನೀವು ಬಲ್ಲಿರಿ. ಎರಡನೆಯ ದೃಷ್ಟಿಗಳ ಮಾತು ಹೇಗೆಯೇ ಇರಲಿ. ಈ ದೇಶದಲ್ಲಿ ಹಿಂಸಾಪಂಥವು ಬೆಳೆಯುವ ಸಂಭವವೇ ಇಲ್ಲ. ಹಿಂದುಸ್ಥಾನವು ಅಹಿಂಸಾತತ್ವದ ಸೊಗಸಾದ ನೆಲೆಯೂ, ಅಹಿಂಸೆಯ ಮರ್ಮವನ್ನು ಅತ್ಯುತ್ತಮವಾಗಿ ತಿಳಿಹೇಳುವ ನಾಡೂ ಆಗಿರುವದು. ಅಹಿಂಸೆಯ ಸಲುವಾಗಿ ನೀವು ಆತ್ಮಯಜ್ಞವನ್ನು ಮಾಡಿದರೆ, ನಿಮ್ಮ ಜೀವಿತವನ್ನು ನೀವು ಹೆಚ್ಚು ಒಳಿತಾಗಿ ಉಪಯೋಗಿಸಿದಂತಾಗುವುದಿಲ್ಲವೇ!''

ಹಿಂಸಾತ್ಮಕ ಮತ್ತು ಅರಾಜಕವಾದ ಸರಕಾರಕ್ಕೆ ಇಂಥ ಯಾವದೊಂದು ಬಿನ್ನಹವನ್ನು ನಾನು ಮಾಡಿದರೆ, ಅದು ಹೇಗೆ ನಿಷ್ಫಲವಾಗುವ ಸಂಭವವಿದೆಯೋ, ಹಾಗೆಯೇ ಕ್ರಾಂತಿಕಾರಕರಿಗೆ ನಾನು ಮಾಡಿದ ಈ ಬಿನ್ನಹವಾದರೂ ನಿಷ್ಫಲವಾಗುವದೆಂಬುದು ನನಗೆ ಗೊತ್ತಿದೆ. ಆದ್ದರಿಂದ ನಾವು ಯೋಗ್ಯವಾದ ಉಪಾಯವನ್ನು ಹುಡುಕಿತೆಗೆದು, ಹಿಂಸಾತ್ಮಕ ಸರಕಾರಕ್ಕೂ ಹಿಂಸಾತ್ಮಕ ಕ್ರಾಂತಿಕಾರಕರಿಗೂ, ಅವರು ಯೋಜಿಸುವ ಹಿಂಸೆಗಿಂತ ಹೆಚ್ಚು ಪರಿಣಾಮಕರವಾದ ಶಕ್ತಿಯೊಂದಿರುವದೆಂಬುದನ್ನು ಅವರಿಗೆ ಪ್ರಯೋಗದಿಂದ ಸಿದ್ಧಮಾಡಿ ತೋರಿಸಬೇಕು.

ದಬ್ಬಾಳಿಕೆಯು ಒಂದು ಲಕ್ಷಣವು.

ದಬ್ಬಾಳಿಕೆಯು ಎಲ್ಲೆಲ್ಲಿಯೂ ಹರಡಿಕೊಂಡಿದ್ದ ಹಳೇ ಬೇನೆಯ ಒಂದು ಲಕ್ಷಣವಾಗಿದೆ. "ಯುರೋಪದ ಪ್ರಭುತ್ವ, ಮತ್ತು ಏಶಿಯಾದ ಅಧೀನತೆ" ಎಂಬುದು ಎಲ್ಲೆಲ್ಲಿಯೂ ಸೂತ್ರವಾಗಿದೆ. ಇದನ್ನೇ ಹೆಚ್ಚು ಸಂಕ್ಷಿಪ್ತವಾಗಿ ಹೇಳುವದಾದರೆ, ಇದಕ್ಕೆ "ಬಿಳಿ ಮತ್ತು ಕರಿಬಣ್ಣದವರ ಜಗಳ"ವೆಂದೆನ್ನಬಹುದು; 'ಬಿಳಿಬಣ್ಣದವರ ಮೇಲಿನ ಭಾರ'ವೆಂದು ಕಿಪ್ಲಿಂಗನು ತನ್ನ ಹೆಸರು ಕೊಟ್ಟಿರುವನು. ಮಲಾಯಾದ್ವೀಪಕಲ್ಪದಲ್ಲಿ ಅಲ್ಪಕಾಲಿಕವೆಂದೆನಿಸುತ್ತಿದ್ದ ವರ್ಣಬಂಧವು ಬಹುತರವಾಗಿ ಶಾಶ್ವತವಾದಂತಾಗಿದೆ. ಮೊಂಬಸದ ತೋಟಗಳಿಗೆ ಅಗ್ಗ ಅಥವಾ ಆಯಾಸವಿಲ್ಲದೆ ಹಿಂದುಸ್ಥಾನದ ಕೂಲಿಕಾರರು ದೊರೆಯಬೇಕು. ಕೇನಿಯಾದಲ್ಲಿರಲು, ತಮ್ಮಕಿಂತಲೂ ಹೆಚ್ಚಿಗೆ ಅಧಿಕಾರವಿರುವ ಹಿಂದೀ ಜನರ ಮೇಲೆ ಅಲ್ಲಿಯ ಯುರೋಪಿಯನರು ನಿರಾತಂಕವಾಗಿ ಪ್ರಭುತ್ವವನ್ನು ನಡಿಸುವರು. ದಕ್ಷಿಣ ಅಫ್ರಿಕೆಯ ಯೂನಿಯನ್ ಸರಕಾರವು ಹಿಂದೀ ಜನರ ಹಿಂದಿನ ಉಪಕಾರಗಳನ್ನು ಸ್ಮರಿಸದೆ, ಅವರೆಲ್ಲರನ್ನೂ ತನಗೆ ಹಾನಿಯಾಗುವದಿಲ್ಲೆಂದು ತೋರಿದರೆ ಹೊರಗೆ ಹಾಕಲು ಇಚ್ಛಿಸುವದು. ಈ ಎಲ್ಲ ಸಂದರ್ಭಗಳಲ್ಲಿ ಹಿಂದುಸ್ಥಾನ ಸಂಸ್ಥಾನದವರಿಗಾಗಲಿ ಸಾಮ್ರಾಜ್ಯ ಸರಕಾರದವರಿಗಾಗಲಿ ಏನೂ ಮಾಡಲು ಬರುವದಿಲ್ಲೆಂತಿಲ್ಲ. ಅವರು ಹಿಂದೀ ವಸಾಹತುಗಾರರ ರಕ್ಷಣೆ ಮಾಡಲು ಮನಸ್ಸಿಲ್ಲದವರಾಗಿರುವರು; ಇಲ್ಲವೆ ಅದಕ್ಕಾಗಿ ಹಿಡಿಯಬೇಕಾದಷ್ಟು ಆಗ್ರಹವನ್ನು ಹಿಡಿಯಲೊಲ್ಲರು. ಫಿಜಿ ನಡುಗುಡ್ಡೆಯ ಬಗ್ಗೆ ತಾವೇ ನಿಯಮಿಸಿದ ವಿಚಾರಣಾಮಂಡಲವು ಸಾದರಪಡಿಸಿದ ವರದಿಯನ್ನು ಪ್ರಕಟಿಸುವಷ್ಟು ಸೌಜನ್ಯವನ್ನು ಸಹ ಹಿಂದುಸ್ಥಾನ ಸರಕಾರವು ತೋರಿಸಿಲ್ಲ. ಯಾತಕ್ಕೂ ಜಾಣೆಯದ ಅಕಾಲಿಗಳನ್ನು ಬಗ್ಗುಬಡಿಯಲು ನಡೆದಿರುವ ಪ್ರಯತ್ನವಾದರೂ ಇದೇ ಬೇನೆಯ ಒಂದು ಬಹಿರ್ಲಕ್ಷಣವಾಗಿದೆ. ಅವರು ತಮಗೆ ಪ್ರಾಣದಷ್ಟೇ ಪ್ರಿಯವಾಗಿರುವ ತಮ್ಮ ಧರ್ಮದ ರಕ್ಷಣೆಗಾಗಿ ನೀರಿನಂತೆ ರಕ್ತವನ್ನು ಸುರಿಸಿರುವರು. ಅವರದು ತಪ್ಪಾಗಿರಬಹುದು. ಹಾಗಿದ್ದರೆ ಅದಕ್ಕಾಗಿ ಹಾನಿಯನ್ನು ಹೊಂದಿದವರು ಅವರೇ ಆಗಿರುವರು. ಎರಡನೇ ಯಾವ ಜನಾಂಗದವರೂ ಅವರಿಂದ ಹಾನಿಯಾಗಿಲ್ಲ. ನಾನಕಾನಾ ಸಾಹೇಬ, ಗುರುಕಾಬಾಗ, ಮತ್ತು ಜೈತೂ ಈ ಸ್ಥಳಗಳಲ್ಲಿಯ ಸಂಗತಿಗಳು ಅವರ ಧೈರ್ಯ, ಸಹನಶೀಲತೆ, ಮತ್ತು ಆತ್ಮಯಜ್ಞಗಳ ಸಾಕ್ಷಿಯಾಗಿದೆ. ಆದರೆ ಪಂಜಾಬದ ಗವರ್ನರ ಸಾಹೇಬರು ಅಕಾಲಿಗಳನ್ನು ಮುರಿಯದೊಗೆಯಲು ಸಂಕಲ್ಪವನ್ನು ಮಾಡಿರುವರೆಂಬ ವಾರ್ತೆಯಿದೆ. (ಸಶೇಷ)

ನೋಟೀಸು.

ದಕ್ಷಿಣ ಕನ್ನಡ ಒಫಿಶಿಯಲ್ ರಿಸೀವರ್ ಕೋರ್ಟಿನಲ್ಲಿ

ದಿವಾಳಿ ಅರ್ಜಿ ನಂಬ್ರ 101/1924.

ಮಹಾಬಲ ಅಲ್ವೆ — ದಿವಾಳಿ ಅರ್ಜಿದಾರ,
ಮತ್ತು
ಬಾಬ ಯಾನೆ ವೆಂಕಟರಮಣ ಶ್ಯಾನುಭಾಗ ಕೂಡ } ಕ್ರೆಡಿಟರರು.

ಮೇಲ್ಕಂಡ ವ್ಯವಹಾರದಲ್ಲಿ ಸದರಿ ಅರ್ಜಿದಾರನು ತನ್ನನ್ನು ದಿವಾಳಿಯಾಗಿ ಸ್ಥಾಪಿಸಲ್ಪಡಬೇಕಾಗಿ ಅಪೇಕ್ಷಿಸಿ ಕೊಟ್ಟ ಅರ್ಜಿಯು ತಾ. 28—1—1925ಕ್ಕೆ ಮೇಲ್ಕಂಡ ಕೋರ್ಟನಲ್ಲಿ ಹೇರಿಂಗಿನ ಬಗ್ಗೆ ಇಟ್ಟಿರುತ್ತದೆ. ಸದರಿ ಅರ್ಜಿಗೆ ಆಕ್ಷೇಪಿಸುವವರು ತಮ್ಮ ಆಕ್ಷೇಪಗಳನ್ನು ಮೇಲ್ಕಂಡ ತಾರೀಕಿಗೆ ಸದರಿ ಕೋರ್ಟನಲ್ಲ ಹೇಳಿಕೊಳ್ಳತಕ್ಕದ್ದು.

ಮಂಗಳೂರು,
ತಾ. 9-1-'25.

G. Somasheker Rao,
Vakil for Petitioner.

ನೋಟೀಸು.

ಮಂಗಳೂರು ಪಂಚಾಯಿತ ಕೋರ್ಟಿನಲ್ಲಿ.

ಸಿವಿಲ್ ವ್ಯಾಜ್ಯ ನಂಬ್ರ 119/1924.

ಅಪ್ಪುಗೌಡ, ವೆಂಕುಗೌಡನ ಮಗ ಬಡಗುಳಿಪಾಡಿ ಗ್ರಾಮಸ್ಥ } ವಾದಿ.
ಎದುರು
ಶೇಕ್ ಇಸ್ಮಾಯಿಲ್ ಸಾಹಿಬ್, ಶೇಕ್ ಹೈದರ್ ಸಾಹಿಬ್ | ಕುದ್ರೋಳಿ ಶೇಕ್ ಆದಂ ಸಾಹಿಬರ ಮಕ್ಕಳು ಬಡಗುಳಿಪಾಡಿ } ಪ್ರತಿವಾದಿ.

ಪ್ರತಿವಾದಿರು ನಮುನ್ನಿಗೆ ತಪ್ಪಿಸಿಕೊಳ್ಳುತ್ತಿದ್ದಾರೆ:— ಈ ವ್ಯಾಜ್ಯದ ತನ್ನಿಖೆಯನ್ನು 1925ನೇ ಇಸವಿ ಫೆಬ್ರವರಿ ತಾರೀಕು 7ಕ್ಕೆ ಇಟ್ಟಿದೆ. ಆ ದಿನ ಪ್ರತಿವಾದಿರು ಹಾಜರಾಗಿ ವ್ಯವಹರಿಸದಿದ್ದರೆ ದಾವೆಯು ಏಕಪಕ್ಷವಾಗಿ ತೀರ್ಮಾನಿಸಲಾಗುವದು, ತಿಳಿಬರುವುದು.

R. S. Baglodi,
ಪ್ರೆಸಿಡೆಂಟ್.

ಆರೋಗ್ಯ ಚಂದ್ರಿಕೆ.

ಮದ್ರಾಸ್.

ಸಂಪಾದಕರು: ಡಾಕ್ಟರ್ ಯು. ರಾಮರಾವ್, ಎಲ್. ಎಮ್. ಸಿ. ಎಫ್. ಎಮ್. ಯು. ಯವರು.

'ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಚಿಕಿತ್ಸೆಯ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವುದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ.

ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ.

ಆರೋಗ್ಯಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವುವು.

'ಹೆಲ್ತ್' ಎಂಬ ನಮ್ಮ ಇಂಗ್ಲಿಷ್ ಮಾಸಪತ್ರಿಕೆಯನ್ನೀಗ ಸಂಕಲಿಸಿದ ಅನೇಕ ದೊಡ್ಡ ಮನುಷ್ಯರ ಪ್ರೋತ್ಸಾಹದ ಮೇಲೆ ಈ ಕನ್ನಡ ಪತ್ರಿಕೆಯನ್ನು ಹೊರಡಿಸಿದೆ.

ಅದರ ಸಂಪುಟ ೨ ಮತ್ತು ೧೦ನೇಯ ನವಂಬರ ೧೯೨೪ ಸಂಚಿಕೆಯಲ್ಲಿ ಕಾಣಿಸಿರುವ ವಿಷಯಗಳು.

ಮುಖಚಿತ್ರ:—ಪರ್ಣಕಸಾಸಿಯವರ ಒಬ್ಬ ರೂಪವತಿ.
ಶ್ವಾಸಕ್ರಮ ಅಥವಾ ಪ್ರಾಣಾಯಾಮ.
ಹುಣಿಸೇಹಣ್ಣಿನ ಆಹಾರಗುಣಗಳು ಮತ್ತು ಔಷಧಗುಣಗಳು.
ಕಾಲುನಡಿಗೆಯೇ ಉತ್ತಮವಾದ ವ್ಯಾಯಾಮವು
ಜೇನಿನಲ್ಲಿರುವ ಗುಣಗಳು.
ಹಲ್ಲುಗಳ ರಚನೆ, ಪ್ರಯೋಜನ, ಕೆಲಸ ಮುಂತಾದವು.
ಮದಪ್ರಾವಕಗಳಿಂದ ಆರೋಗ್ಯಕ್ಕೆ ಉಂಟಾಗತಕ್ಕ ಹಾನಿ.
ಅಂಗಸಾಧನೆ ಮತ್ತು ಬುದ್ಧಿವ್ಯವಸಾಯ (ವಿದ್ಯಾಭ್ಯಾಸ)
ಗಾಯಗಳು, ಮತ್ತು ಉಳುಕು ಮುಂತಾದವು, ಅವುಗಳ ಚಿಕಿತ್ಸೆ.
ನವನಾಗರಿಕ ಪ್ರಪಂಚಕ್ಕೆ ಸಹಜವಾದ ಮೂರು ಕೆಡುಕುಗಳು.
ಒಬ್ಬ ಉಪವಾಸಿಯ ಅನುಭವ

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವುವು. ಆರೋಗ್ಯಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಬೆಲೆಯು ವರ್ಷಕ್ಕೆ ರೂ. ೧—೮—೦; ಬಿಡುಪತ್ರಿಕೆ ಒಂದಕ್ಕೆ ರೂ. ೦—೩—೦. ಹಿಂದಿನ ಸಂಚಿಕೆಗಳು ಕೂಡ ದೊರೆಯುವುವು.

ಚಂದಾದಾರರಾಗುವವರು ವಿ. ಪಿ. ಮೂಲಕವಾಗಿ ತರಿಸಿಕೊಳ್ಳುವದಕ್ಕಿಂತಲೂ ಹಣವನ್ನು ಮುಂಗಡವಾಗಿ ಕಳುಹಿಸುವುದು ಲಾಭಕರ. ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು "ಆರೋಗ್ಯ ಚಂದ್ರಿಕೆ"ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು.

ಪತ್ರವ್ಯವಹಾರಕ್ಕೆ: 'ಆರೋಗ್ಯ ಚಂದ್ರಿಕೆ'
೩೨೩ ತಂಬುಚೆಟ್ಟಿ ಬೀದಿ, ಮದ್ರಾಸ್

ತುಳು ಪಾಡ್ದನಗಳು.

ಬೊಟ್ಟಿಯರ್, ಕಲ್ಲುರ್ಟಿ-ಕಲ್ಕುಡ, ದೈಯ್ಯೊಂಗುಳು—ಕೋಡಕಿನಾರ್, ಮುಂಡತ್ತಾಯ ಪ್ರತಿ ಒಂದಕ್ಕೆ 2 ಆಣೆ. 1¼ ಆಣೆ ಟಪ್ಪಾಲು ಚೀಟು ಕಳಹಿಸಿದರೆ ೩ ಪುಸ್ತಕಗಳು ಕೂಡಲೇ ಕಳುಹಿಸಲ್ಪಡುವವು.

ವಿಳಾಸ: ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

The Canara Bank, Limited, Magalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.
Authorised and fully paid up Capital Rs. 300,000—0—0
Reserve and other sinking Funds „ 233,000—0—0

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ತೆತ್ತ ಮೂಲಧನವು ರೂ. 300,000—0—0
ಕ್ಷೇಮನಿಧಿ ಮತ್ತು ಇತರ ಫಂಡುಗಳು „ 233,000—0—0

THE BANK RECEIVES FIXED, CURRENT ACCOUNT, & SAVINGS BANK DEPOSITS
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡೆಕೊಳ್ಳಲಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರೆಕೊಳ್ಳುವದು.

Canara Bank Ltd.,
Mangalore, 12th Feb. 1924.

K. Venkat Rao,
Secretary

ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಿಗಳಲ್ಲಿ ಒಂದಾದ,
ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಇಂದೇ ತಾವು ತರಿಸಿಕೊಳ್ಳಿರಿ! ಏಕೆಂದರೆ,

ಲೋಕಾಮಯಹರ ಕಸ್ತೂರಿ ಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ ಅದು ಹೇಗೆಂದರೆ! ಈ ಮಾತ್ರೆಗಳಲ್ಲಿ ಒಂದೆರಡನ್ನು ಕಾಂಟೂಲವರ್ತನಗಳ ಹಾಗೆಯೇ ಆಗಲಿ ಉಪಯೋಗಿಸುತ್ತಾ ಬಂದಲ್ಲಿ ಯಾವ ಕಾಹಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರ ವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟ ಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ರಾಂಪ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮೊರೆತ, ಜ್ವರ, ಚಳಿಜ್ವರ ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲ್ಯುಯನ್‌ಜಾ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ. ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿ ಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯ ಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ 250ರಿಂದ 300 ಮಾತ್ರೆಗಳ ವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1—4—0, 12 ಸೀಸೆಗಳಿಗೆ 2—7—0, 25 ಸೀಸೆಗಳಿಗೆ 4—10—0 ಪೋಸ್ಟೇಜು ಬೇರೆ. ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತವೆ.

ಏಜಂಟ್
ಮಂಗಳೂರು ಟವನಿಗೆ ಮಾತ್ರ.
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ.

ವಿಳಾಸ:— ಪಾಳ್ಯದ ವೆಂಕಟಾಚಲ ಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ವಿದ್ಯಾವಾಚಸ್ಪತಿ
ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ

"ಸಂಕ್ಷೇಪಗೀತೆ"

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ್ಳ ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದೆ ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೦. ಟಪ್ಪಾಲು ಖರ್ಚು ಕೂಡಿ ಆಣೆ ೧೧ನ್ನು ಮನಿಯಾರ್ಡರ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ೨ರಕ್ಕಿಂತ ಜಾಸ್ತಿ ಖರ್ಚು ತಗಲುವುದು. ರಖಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.

ಪುಸ್ತಕ ದೊರೆಯುವ ವಿಳಾಸ:—
ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು. ಮತ್ತು
ಕೆನರಾ ಮಿಶ್ಯನ್ ಬುಕ್ ಎಂಡ್ ಟ್ರೆಕ್ಟ ಡಿಪೋಜಿಟರಿ,
ಮಂಗಳೂರು.

ಉಚಿತ! ಬಿಟ್ಟಿ!! ಪುಗಸಟ್ಟೆ!!!

ವೈದ್ಯವಿದ್ಯ
PROPRIETOR RAJVAIDYA NARAYANJI KESHAVJI
NO PRICE NO POSTAGE

ಎಂಬ ಈ ಪುಸ್ತಕದಲ್ಲಿ ಆಯುರ್ವೇದ ಶಾಸ್ತ್ರದಲ್ಲಿ ಸ್ತ್ರೀಪುರುಷರು ಆರೋಗ್ಯದೃಢಕಾಯರಾಗಿ ಆರೋಗ್ಯದಿಂದ ಕೂಡಿದ ಸಂತಾನಗಳನ್ನು ಪಡೆದು ಸತಿಪತಿಯರು ಅನ್ಯೋನ್ಯವಾಗಿ ಅನುರಾಗವುಳ್ಳವರಾಗಿ ಸುಖದಿಂದಲೂ ಸಂತೋಷದಿಂದಲೂ ಸಂಸಾರಯಾತ್ರೆಯನ್ನು ಮಾಡಲು ಅತ್ಯಂತ ಉಪಯುಕ್ತವಾದ ವಿಷಯಗಳು ಅಲ್ಲಲ್ಲಿ ಹೇಳಲ್ಪಟ್ಟಿರುವುದನ್ನು ಒಂದಾಗಿ ಕ್ರೋಢೀಕರಿಸಿ ಅಜ್ಞಾನದಿಂದಲೂ ಸಂಕಷ್ಟದಿಂದಲೂ ನರಳುತ್ತಿರುವ ಸಂಸಾರಿಗಳನ್ನುದ್ಧಾರಮಾಡುವ ಸಲುವಾಗಿ ಈ ಪುಸ್ತಕವನ್ನು ಕ್ರಯವೂ ಅಂಚೆ ಹಾಸಲೂ ಇಲ್ಲದೆ ಬೇಡಿದವರಿಗೆ ಸರ್ವತ್ರ ಉಚಿತವಾಗಿ ಕಳುಹಿಸುತ್ತೇವೆ. ಹೆಚ್ಚು ಮಾಹಿತಿಗೆ ಪತ್ರ ಬರೆಯಿರಿ.

ರಾಜವೈದ್ಯ ನಾರಾಯಣಜಿ ಕೇಶವಜಿ,
49, ಬಂದರ್ ಸ್ಟ್ರೀಟ್, ಜಿ. ಟಿ. ಮದ್ರಾಸ್

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಕಾಶೀ, ಗಯಾ, ಪ್ರಯಾಗ, ಹರಿದ್ವಾರ ಬದರಿನಾರಾಯಣ ದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರ ಕಡೆಯಿಂದ ಅನುಭವ ತೆಗೆದು ಪ್ರತಿಯೊಂದು ಸಿದ್ಧಮಾಡಿಕೊಂಡು ಬರೆದಿರುವರು. ೧ನೇದು ಮಂತ್ರಪ್ರಕರಣದಲ್ಲಿ ಮಂತ್ರ ಜಪದಿಂದಲೂ, ಮಂತ್ರಪ್ರಯೋಗದಿಂದಲೂ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವೂ ಇದೆ. ೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳು ಹೊರಡುವಿಕೆ, ಚಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ. ೩ನೇದು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನು ಅನುಭವ ತೆಗೆದುಕೊಂಡು ತಿಳಿಸಿರುವರು. ೪ನೇದು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಧಾತುಗಳ ಭಸ್ಮ, ಸತ್ವ, ಇದರಲ್ಲಿ ಉಂಟು. ಇದು ಪ್ರತಿಯೊಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷಧ ಮಾಡುವ ಕ್ರಮವನು ಚೆನ್ನಾಗಿ ಬರೆದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅದರ ವಿಶಾಸವು ತಿಳಿಸಿರುವರು. ೫ನೇದು ಯಂತ್ರ ಪ್ರಕರಣದಲ್ಲಿ ವಶೀಕರಣ ಗ್ರಹಪೀಡಾ ನಿವಾರಣ ಭೂತಪ್ರೇತ ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣವಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು, ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ ಇದ್ದ ಬಳಿಕ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷ ವೈದ್ಯರೂ ಜೋತಿಷ್ಯರು, ಮಾಂತ್ರಿಕರು ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥ ಗ್ರಂಥವು ಯಾರು ಇದಕ್ಕಿಂತ ನೋಡಿರಲಿಕ್ಕಿಲ್ಲ. ಪ್ರತಿಯವರು ತರಿಸಿ ನೋಡಬೇಕೆಂದು ಇದರ ಬೆಲೆ ಈಗ ಕಡಿಮೆಮಾಡಿ ಇರುವದು. ೨—೮—೦ ಟಪ್ಪಾಲು ಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ ನಾಟಕ ಕಾವ್ಯ, ಕಥೆಗಳು, ಯಕ್ಷಗಾನ, ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ:—
ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ

Just Arrived OF **Fresh Consignment**

Best English Cycles.



REDUCTION IN PRICES.

Ranger Cycles Model M. Made in Birmingham.	
WITH DUNLOP OR BATES TYRES & TUBES	... @ Rs. 90—0—0
Barton Humber on Advance	
WITH DUNLOP OR BATES TYRES & TUBES	... @ „ 100—0—0
Senior Royal with B. S. A. Fitting.	
WITH DUNLOP OR BATES TYRES & TUBES ...	...@ Rs. 145—0—0
Royal Saxon with B. S. A. Fitting.	
WITH DUNLOP OR BATES TYRES & TUBES ...	... @ Rs. 175—0—0

All the above Cycles include pump and tools.

BROOKES PATEERN 90/2 GERMAN SADDLE ...	...@ „ 9—8—0
„ SADDLE 90/2 „ ...	..@ „ 21—0—0
„ „ B/30 „ ...	...@ „ 26—0—0

For further particulars please write to us or call on us:—

All kinds of Cycle Accessories, Dunlop and German Tyres and Tubes
ARE AVAILABLE AT VERY CHEAP RATES.

Special Discount to Traders. *Easy Terms Arranged*

APPLY TO:—**The Mangalore Trading Association,**
Wholesale Dealers in Cycles and Cycle Accessories,
Car-Street, MANGALORE

—ಗೋಡೆಗೆ ತಗಲಿಸುವ
ಹೊಸ ನಮೂನೆಯ—



ಟಿಕ್—ಟಾಕ್

ಎಂಬ ಈ ಗಡಿಯಾರಗಳು ಜರ್ಮನೀ ದೇಶದಲ್ಲಿ ತಯಾರಿಸಿದ್ದು. ಇವು ಕರಾರು ಘಂಟೆಯನ್ನು ತೋರಿಸುವವು. ಇವಕ್ಕೆ ಬೀಗ ಕೊಡಬೇಕಾದಿಲ್ಲ. ಇದರಲ್ಲಿ ಕಾಣುತ್ತಿರುವ ಗುಂಡನ್ನು ಮೇಲಕ್ಕೆ ಎಳೆದರೆ ಸಾಕು. ತನ್ನಷ್ಟಕ್ಕೆ ತಾನೇ ಟಿಕ್—ಟಾಕ್ ಎಂಬ ಶಬ್ದವನ್ನು ಮಾಡುತ್ತಾ ಸರಿಯಾದ ಕಾಲವನ್ನು ತೋರಿಸುವದು. ಇದು ನೋಡುವುದಕೆ ಬಹು ಲಕ್ಷಣವಾಗಿರುವುದು.

ಕ್ರಯ 1ಕ್ಕೆ ರೂ. 3—0—0

ಪೀಟರ್ ವಾಚ್ ಕಂಪೆನಿ
ಪೋಸ್ಟ್ ಬಾಕ್ಸ್ ನಂ. 27, ಮದ್ರಾಸ್.

ADVERTISE IN

The Business Directory
OF INDIA, BURMA & CEYLON

A Comprehensive Directory of the various Business-men, Exporters and Importers, Firms, Factories, Mills, Manufacturers, Merchants and Industries of the principal Cities, Ports and Towns of India, Burma and Ceylon.

PUBLISHED ANNUALLY

Rates for Advertisements

¼ Page	Rs.	50.
2 in. Single Column	„	20.
1 in. Single Column	„	15.
Name in Bold Types	„	5.

Price per Copy Rs. 10.

PRINTERS & PUBLISHERS.
Business Directory Co.,
Kanara Press Buildings, MADRAS. E.
Telegrams: "KETHAKI" Phone 540

ದಕ್ಷಿಣ ಕನ್ನಡ ಜಿಲ್ಲೆಯ

ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ಠಿಕಾಣ:—
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

JUST ARRIVED

Goodrich Belts.

OF VARIOUS SIZES
Price Re. 1—12—0 each

Mangalore Trading Association,
Car Street, MANGALORE.

ಸಾರಸ್ವತ.

ಕನ್ನಡ ಮತ್ತು ಕೊಂಕಣಿ ಭಾಷೆಗಳಲ್ಲಿ ಕಳೆದ ವಿಜಯ ದಶಮಿ ದಿನದಿಂದ ಪ್ರತಿ ದಶಮಿಗೆ ಹೊರಡುವ ಪತ್ರಿಕೆ.

ವಿ. ಎಸ್. ಕಾಮತ್,
ಮೂಲ್ಕಿ ವಾಮನ ಕುಡುವ } ಸಂಪಾದಕರು.

ಮತಸಂಸ್ಥೆ ಮತ್ತು ಸಮಾಜಕ್ಕೆ ಸಂಬಂಧಪಟ್ಟ ಇತರ ಸಂಸ್ಥೆಗಳ ಸುಸಂಘಟನ.

ಸಮಾಜದೊಳಗೆ ಅನ್ಯೋನ್ಯ ಸಾಧನೆ.

ಸ್ತ್ರೀಸಮಾಜಕ್ಕೆ ಉಪಯುಕ್ತವಾದ ವಿಷಯಗಳ ನಿರೂಪಣೆ.

ಮತಭಾವನೆಗಳ ಉಜ್ಜೀವನ ಇತ್ಯಾದಿ ಉದ್ದೇಶಗಳಿಂದ ಈ ಪತ್ರಿಕೆಯು ಹೊರಡಿಸಲ್ಪಡುವುದು. ಸಾರಸ್ವತ ಸಮಾಜವು ಇದಕ್ಕೆ ಪ್ರೋತ್ಸಾಹವನ್ನೀಯಬೇಕಾಗಿ ಪ್ರಾರ್ಥನೆ.

ಚಂದಾಹಣ ಅಂಚೆವೆಚ್ಚ ಕೂಡಾ ರೂ. ೧—೪—೦. ಪೋಷಕರು ರೂ. ೧೦-೦-೦. ಸಹಾಯಕರು ರೂ. ೫-೦-೦. ಮಾದರಿ ಸಂಚಿಕೆಯನ್ನು ಟಪ್ಪಾಲು ಖರ್ಚಿಗಾಗಿ ಅರ್ಧಾಣೆ ಸ್ಟಾಂಪು ಕಳುಹಿಸುವವರಿಗೆ ಉಚಿತವಾಗಿ ಕಳುಹಿಸುವೆವು.

ಕನ್ನಡ ನಾಡಿನಲ್ಲಿ ಪ್ರತಿ ಕಡೆಯಲ್ಲಿಯೂ
ಖಾತವಿದಾರರು ಬೇಕು.

ಎಲ್ಲಾ ಪತ್ರವ್ಯವಹಾರಗಳನ್ನು ಕೆಳಗಿನ ವಿಳಾಸಕ್ಕೆ ನಡೆಸಬೇಕು.

ಯು. ನಾರಾಯಣನಾಯ್ಕ, ಕಾರ್ಯದರ್ಶಿ,
ಸಾರಸ್ವತ, ಉಡುಪಿ.

ಆರ್. ಮಾರ್ಟಿನ್ಸರ

ಜ್ವರದ ಗುಳಿಗೆಗಳು.

ಸುಲಭ ಸ್ವೇದನಕಾರಿಯಾದ ಈ ಘುಟಿಕೆಗಳು ಚಳಿಜ್ವರದ ವಿಷ ದ್ರವ್ಯಗಳನ್ನು ತಟ್ಟನೆ ನಿರ್ಮೂಲಪಡಿಸಿ, ವ್ರಣಗಳನ್ನು ಸಂಪೂರ್ಣ ನಾಶಪಡಿಸಿ, ಮಲೇರಿಯಾ ಜ್ವರ, ಚಳಿಜ್ವರ, ಬಾರಿಜ್ವರ, ಮತ್ತು ಆಗಾಗ್ಗೆ ಬಿಟ್ಟುಕೊಂಡು ಬರುವ ಇತರ ಜ್ವರಗಳ ಬಾಧೆಯಿಂದ ಗುಣಪಡಿಸುವವು.

ತಟ್ಟನೆ ವಾಸಿಪಡಿಸುವುದಕ್ಕೆ ಹತ್ತೂರುಗಳಲ್ಲಿ ಪ್ರಸಿದ್ಧತೆಯನ್ನು ಹೊಂದಿದ್ದು, ಆಕ ಬಿಟ್ಟುಬಿಟ್ಟ ಅನೇಕ ಸಂದರ್ಭಗಳಲ್ಲಿ ಗುಣಪಡಿಸಿದವುಗಳಾಗಿರುತ್ತವೆ.

ಇವುಗಳು ಗಿರಣಿಗಳಲ್ಲಿಯೂ ಕಾರ್ಖಾನೆಗಳಲಿಯೂ ವಿಶೇಷವಾಗಿ ಉಪಯೋಗಿಸಲ್ಪಡುವುವು. ಸಾಮಾನ್ಯವಾಗಿ ಹಿಂದೂಸ್ಥಾನದಲ್ಲಿ ಎಲ್ಲಾ ತೋಟಗಾರರಿಂದ ಉಪಯೋಗಿಸಲ್ಪಡುತ್ತದೆ. ಅಲ್ಲದೆ ದಿಂಗತ ವಿಶ್ರಾಂತವಾದ ಕೀರ್ತಿಯನ್ನು ಕೂಡ ಸಂಪಾದಿಸಿರುವುದು. ಕಠಿಣ ಜ್ವರವು ತಟ್ಟನೆ ಇಳಿಯಬೇಕಾದರೆ ಆರ್ ಮಾರ್ಟಿನರ ಎಗ್ಯೂ ಮಿಕ್ಚರ್ ಒಡನೆ ಇದನು ಸೇವಿಸಬೇಕು. ಈ ಇವೆರಡು ಅದ್ಭುತ ಶಕ್ತಿಯುಳ್ಳ ಔಷಧಿಗಳು ಪ್ರತಿಯೊಂದು ಕುಟುಂಬದ ಮನೆಯಲಿಟ್ಟುಕೊಳ್ಳಲು ಯೋಗ್ಯ ವಸ್ತುಗಳಾಗಿವೆ. ಪ್ರತಿಯೊಂದು ಬಾಟ್ಲಿಯಲ್ಲಿ 40 ಮಾತ್ರೆಗಳು ಇರುವುವು.

ಬಾಟ್ಲಿ 1ಕ್ಕೆ ರೂ. 1—8—0.

ಆರ್. ಮಾರ್ಟಿನ್ಸರ ಎಗ್ಯೂವಿಕರ್.

ಇದು ಜ್ವರ, ಸೀತಜ್ವರ ಮಲೇರಿಯಾ, ಬಾರಿಜ್ವರ, ಸನ್ನಿಪಾತ ಪಟ್ಟೆ ವಾಯುವಿನಿಂದುಂಟಾದ ರೋಗ ಇವೇ ಮೊದಲಾದ ಎಲ್ಲಾ ತರದ ಜ್ವರಗಳನ್ನೂ ಕೂಡಲೇ ನಾಶಮಾಡುತ್ತದೆ. ಎಲುಬುಗಳಲ್ಲಿ ಹರಡಿಕೊಂಡಿರುವ ಜ್ವರವನ್ನೂ ಸಹ ನಾಶಮಾಡುವುದಲ್ಲದೆ, ಇದು ಸಿಹಿಯಾಗಿರುವುದರಿಂದ ಸಣ್ಣ ಕೂಸುಗಳು ಸಹ ಕುಡಿಯಲಿಕ್ಕೆ ಇಷ್ಟಪಡುತ್ತವೆ. ಅನೇಕ ನಿಜ ವಿದ್ವಾಂಸ ವೈದ್ಯರಿಂದ ಗುಣಮಾಡುವುದಕ್ಕಾಗದ ಜ್ವರವನ್ನು ಈ ಎರಡೇ ಎರಡು ಬಾಟ್ಲಿಗಳ ಸೇವನೆಯಿಂದ ಹುಷಾರಾಗಿದೆ

ಬಾಟ್ಲಿ 1ಕ್ಕೆ ರೂ. 0—13—0.

ಆರ್. ಮಾರ್ಟಿನ್ಸರ ಮೂಲವ್ಯಾಧಿ ಮಲಾಮು.

ಮನುಷ್ಯನಿಗೆ ಮೂಲವ್ಯಾಧಿ ಆದಾಗ, ಬಹಳ ಸಲ ಮೂತ್ರಕಂಕಳಿಯಾಗುವಿಕೆ, ಮರ್ಮಸ್ಥಾನದಲ್ಲಿ ಉರಿಯುವುದು, ಮಲಬದ್ಧತೆ ಇವೇ ಮುಂತಾದದ್ದರಿಂದ ವಹೆಪಡುತ್ತಾನೆ. ಈ ಔಷಧದ ಒಂದೇ ಒಂದು ಬಾಟ್ಲಿಯ ಉಪಯೋಗದಿಂದ, ರಕ್ತ ಸುರಿಯುವ ಮೂಲವ್ಯಾಧಿ, ಕಂಕುಳಲ್ಲಿ ನೋಯುವ ಮೂಲವ್ಯಾಧಿ ಮತ್ತು ಎಂಥ ತರಹದ ಕಠಿಣವಾದ ಮೂಲವ್ಯಾಧಿಯಾದರೂ ಕೂಡಲೇ ವಾಸಿಯಾಗುತ್ತದೆ. ಇದು ಒಳ್ಳೇ ಔಷಧಗಳಿಂದ ತಯಾರಿಸಲ್ಪಟ್ಟು ತೆಗೆದುಕೊಳ್ಳುವವರಿಗೆ ಏನೊಂದೂ ನೋವನ್ನೂ ಕೊಡದೆ ತಂಪಾಗಿ ಮಾಡುತ್ತದೆ. ಬಾಟ್ಲಿ 1ರ ದರ ರೂ. 1-8—0 ಮಾತ್ರ.

ವಿಳಾಸ:—ಆರ್. ಡಿ. ಕಟ್ಲೆ ಮತ್ತು ಕಂಪೆನಿ,
ನಂಬ್ರ ಬಿ. ಫ್ರೆಯರ್ ರೋಡ್,
ಸಾಂಜ ವರ್ತಮಾನ ಪ್ರೆಸ್,
ಟೋಡಿವಾಲಾ ಬಿಲ್ಡಿಂಗ ಎದುರುಗಡೆ, ಫೋರ್ಟ ಮುಂಬಯಿ.

R. D. Kately & Co.
No. B. Frere Road,
Opposit Sanjvertaman Press,
Todivala Building, FORT BOMBAY.

ಸುವರ್ಣಸಂಧಿ.

ಕೈ ಮಗ್ಗಗಳಲ್ಲಿ ನೂಲನ್ನು ನೆಯುವ ಮಗ್ಗಗಳಿಗೆ ಬೇಕಾಗುವ ಯಾವತ್ತು ಸಾಮಾನುಗಳು, ನೂಲಿಗೆ ಹಾಕುವ ನಾನಾ ತರದ ರಂಗುಗಳು ಅಗತ್ಯವಿರುವ ನಾನಾ ಬಗೆಯ ಸಾಮಾನುಗಳು ಇವನ್ನು ನಮ್ಮಲ್ಲಿಂದ ನ್ಯಾಯವಾದ ಬೆಲೆಗೆ ಹೊಂದಬಹುದು. ನಮ್ಮಲ್ಲಿ ದೊರಕುವ ಯಾವತ್ತೂ ಸಾಮಾನುಗಳನ್ನು [illegible] ಮಾರಾಟಕ್ಕೆ ಪಡೆಯಬಹುದು.

ಪಿ. ಪಿ. ತ್ರಿವೇದಿ ಎಂಡ್ ಕೋ.,
ನಂಬ್ರ 66 [illegible] ಲೇನ್,
ಫೋರ್ಟ ಮುಂಬಯಿ.

Edited, Printed & Published by V. S. Kamath at the M. T. A. SHARADA PRESS, MANGALORE.

Registered: No. M. 498.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಶ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ ? ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೯. ಮಂಗಳೂರು, ತಾರೀಕು ೨೩ನೇ ಶುಕ್ರವಾರ ಜನವರಿ ೧೯೨೫. ಸಂಚಿಕೆ ೪.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರ್ರೇಶನ್ ಉಡುಪಿ, ಲಿಮಿಟೆಡ್.

ಹೆಡ್ ಆಫೀಸು:—ಉಡುಪಿ. ಬ್ರಾಂಚ್:—ಕುಂದಾಪುರ.

ಅಧಿಕಾರಗೊಳಿಸಲ್ಪಟ್ಟ ಮೂಲಧನ	ರೂ. 3,50,000—0—0
ಚಂದಾ ಹಾಕಲಿಕ್ಕೆ ಅರ್ಪಿಸಿದ ವ ಚಂದಾ ಹಾಕಿ ಎತ್ತಿದ ಮೂಲಧನ	2,25,000—0—0
ವಸೂಲು ತೆತ್ತ ಮೂಲಧನ	1,47,607—9-11
ಠೇವಣಾತಿಗಳು	5,37,825-10—2
ಇನ್ವೆಸ್ಟುಮೆಂಟು (1927ನೇ ಇಸವಿಯ) ಶೇಕಡಾ 6ರ ಗವರ್ನಮೆಂಟು ಪೇಪರಿನ ಮೇಲೆ ಹಾಕಿದ	ರೂ. 25,700-0-0
ಇತರ ಇನ್ವೆಸ್ಟುಮೆಂಟು	6,96,621-10-3
ರಿಜರ್ವ ಮತ್ತು ಇತರ ಫಂಡುಗಳು	56,5 0—0—0

ಕಳೆದ 2 ವರುಷಗಳಲ್ಲಿ ಪಾಲು ಮಾಲಿಕರಿಗೆ ಸಾಲಿಯಾನ್ ಸೇಕಡಾ 11ರಂತೆ ಲಾಭಾಂಶ ಹಂಚಿಯದೆ.

3 ತಿಂಗಳಿಗೊಮ್ಮೆ ಬಡ್ಡಿ ತೆರುವ ಕರಾರಿನ ಮೇಲೆ ಶೇಕಡಾ 6½ರಿಂದ 7½ಯಲ್ಲಿ ಇರಖು ಠೇವಣಾತಿಗಳನ್ನೂ, 15 ದಿನಗಳ ನೋಟೀಸು ಮೂಲಕ ಶೇಕಡಾ 5ರ ಬಡ್ಡಿ ಸಮೇತ ವಾಪಾಸು ಪಡಿಯುವ ಚಿಕ್ಕ ವ್ಯಾದೆ ಠೇವಣಾತಿಗಳನ್ನೂ, ಬೇಕೆಂದಾಗ್ಗೆ ವಾಪಾಸು ಸಿಕ್ಕುವಂಥಾ ಸೇಕಡಾ 3½ರಂತೆ ಬಡ್ಡಿ ನಡಿಯುವ ಚಾಲ್ತಿ ಠೇವಣಾತಿಗಳನ್ನೂ, ಶೇಕಡಾ 4½ ಬಡ್ಡಿ ನಡಿಯುವ ಸೇವಿಂಗ್ಸ್ ಬ್ಯಾಂಕು ಠೇವಣಾತಿಗಳನ್ನೂ, ತಿಂಗಳು ಗಟ್ಟಿಯಿಂದ ತೆರುವ ಕಂತು ಠೇವಣಾತಿಗಳನ್ನೂ ಡಿಪೋಜಿಟ್ಟಾಗಿ ಪಡೆಯುವುದಲ್ಲದೆ ಬ್ಯಾಂಕಿಗೆ ಸಮ್ಮತವಾದ ಜವಾಬ್ದಾರಿಯಿಂದ ಹಣವನ್ನು ಸಾಲವಾಗಿಯೂ ಕೊಡಲಾಗುವುದು.

ಈ ಬ್ಯಾಂಕಿಗೆ ಕೆರಕಕ್ಕೆ ಹಣವನ್ನು ಈ ಬ್ಯಾಂಕಿನ ಲೆಕ್ಕಕ್ಕೆ ಮಂಗಳೂರಲ್ಲಿರುವ ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾ ಲಿಮಿಟೆಡ್, ಯಾ ಕೆನರಾ ಬ್ಯಾಂಕ್ ಲಿಮಿಟೆಡ್‌ನಲ್ಲಿಯೂ ಮುಂಬಯಿಯಲ್ಲಿ ಮರ್ಕೆಂಟೈಲ್ ಬ್ಯಾಂಕ್ ಆಫ್ ಇಂಡಿಯಾ ಲಿಮಿಟೆಡ್‌ನಲ್ಲಿಯೂ ತರಬಹುದು

ಹೆಚ್ಚಿನ ಮಾಹಿತಿ ಸೆಕ್ರೆಟರಿಯವರಿಗೆ ಬರದಲ್ಲಿ ಸಿಕ್ಕುವದು.

ಬ್ಯಾಂಕಿನ ಆಫೀಸು ಉಡುಪಿ,
ತಾ. 1—8—1924. } ನಯಂಪಳ್ಳಿ ಆನಂದರಾವ್,
ಸೆಕ್ರೆಟರಿ

Wanted Agents
FOR
Every District in South India

For Pushing Sales of Our Calenders, Xmas and New Year Cards, Blotters, Pictures and Picture Post Cards, at wholesale rates. Deposit of Rs. 100—0—0 Essential.

Apply to:—

The South Indian Advertising Agency,
13, Kilary Road,
BANGALORE CITY.

ಶುದ್ಧ ರೋಮದ ಶಾವಳಿಗಳು.

1 ಮಳ ಉದ್ದ 1¼ ಮಳ ಅಗಲ ರೂ. 1½ರಿಂದ 2 ವರೆಗೆ, 5 ಮಳ ಉದ್ದ 1½ ಮಳ ಅಗಲ ರೂ. 1½ ರಿಂದ 5 ವರೆಗೆ, 6 ಮಳ ಉದ್ದ 1½ ಮಳ ಅಗಲ ರೂ. 2½ರಿಂದ 6 ವರೆಗೆ, 8 ಮಳ ಉದ್ದ 2 ಮಳ ಅಗಲ ರೂ. 3½ರಿಂದ 10 ವರೆಗೆ, 12 ಮಳ ಉದ್ದ 2¼ ಮಳ ಅಗಲ ರೂ. 6ರಿಂದ 12 ವರೆಗೆ, 16 ಮಳ ಉದ್ದ 2¼ ಮಳ ಅಗಲ ರೂ. 8ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಜರ್ದಾರ್ ರೇಷ್ಮೆ ಮುಂಡಾಸುಗಳು, [illegible] ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುದು. ಕ್ಯಾಟಲಾಗ್ ಧರ್ಮಾರ್ಥ.

ವಿಳಾಸ—
ಶಿರೋಮಣಿ ಯು. ನಾರಾಯಣಾಚಾರ್ಯ
ಮತ್ತು ಕಂಪೆನಿ, [illegible], ಕಾಶೀ ಕ್ಷೇತ್ರ.

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ.

450 ಪುಟಗಳು ಎಮ್. ಗಣಪತಿರಾವ್ ಐಗಳ್ ಇವರಿಂದ ರಚಿತವಾದದ್ದು. ಕ್ರಯ ರೂ 2-4-0

ಮಾರಾಟಕ್ಕೆ ಸಿದ್ಧವಾಗಿವೆ

— ತುಳು ಪಾಡ್ದನಗಳು —

ಮಾರಾಟಕ್ಕೆ ಸಿದ್ಧವಾಗಿವೆ.

ದೈಯ್ಯೊಂಗುಳು, ಕಲ್ಲುರ್ಟಿ—ಕಲ್ಕುಡ, ಕಣಂದೂರು ದೈಯ್ಯೊಂಗುಳು, ಮುಂಡತ್ತಾಯ, ಬೊಬ್ಬರ್ಯ.

ಸುಲಭ ದರಗಳು

— ಶಾಲಾ ಪುಸ್ತಕಗಳು —

ರಖಂ ಕೊಂಡುಕೊಳ್ಳುವವರಿಗೆ ಯೋಗ್ಯ ಡಿಸ್ಕೌಂಟ್.

ಅಜ್ಜಿಕಥೆಗಳು:—ಮೂರು ಕರಡಿಗಳು; ಜೇನುಸತ್ತು ಕಾಗೆ ಬಡವಾಯಿತು; ಅಗಸನ ಮುದ್ದೆ; ಇಲಿಗಳ ಥಕ್ಕ ಥೈ; ಅಂಗಳ ದುಗ್ಗು; ಸಿಗಡಿ ಯಾಕೆ ಒಣಗಲಿಲ್ಲ; ಗುಡುಗುಡು ಗುಮ್ಮಟ ದೇವರು; ಮೆಣಸಿನ ಕಾಳಪ್ಪ; ಒಡ್ಡನ ಓಟ; ಹೊಸ ಕನ್ನಡ ಪುಸ್ತಕ ಭಾಗ ೧, ಹೊಸ ಕನ್ನಡ ಪುಸ್ತಕ ಭಾಗ ೨; ಕನ್ನಡ ಪದ್ಯಗಳು; ಮಗ್ಗಿ ಪುಸ್ತಕ; ಅಜಿತಕುಮಾರ; ಪದ್ಯ ರತ್ನಾವಳಿ, ಎಕ್ಸರ್‌ಸೈಜ್ ಮತ್ತು ನೋಟು ಪುಸ್ತಕಗಳು, ಕಾಪಿ ಪುಸ್ತಕಗಳು, ಡ್ರಾಯಿಂಗ್ ಪುಸ್ತಕಗಳು

ಇತರ ಪುಸ್ತಕಗಳು:—ಸಂಕ್ಷೇಪಗೀತೆ, ಕೇತುಭಂಗ, ಹಿಂದೂ ವ್ರತವಿವೇಕ, ಚಂದ್ರಗುಪ್ತ ಚಕ್ರವರ್ತಿ, ಶ್ರೀ ಕೃಷ್ಣಸಂಧಾನ ಪದ್ಯಪಾಠಗಳು, ಹರಿಕಥಾ ಮೃತಸಾರ ಹರಿನಾಮಸಂಕೀರ್ತನೆ ಸುಧಾಂಮೃತ ಪದ್ಯಗಳು. ಬೆಂಕಿಪೆಟ್ಟಿಗೆ ತಯಾರಿಸುವ ವಿಧಾನ, ಸಾಬೂನು ತಯಾರಿಸುವ ವಿಧಾನ, ಸ್ವರಾಜ್ಯ ಭಕ್ತ್ಯೋಲ್ಲಾಸ, ಚರಕಗೀತೆ, ಕೊಂಕಣಿ ಭಾಷೆಯಲ್ಲಿ ಚಂದ್ರಹಾಸ ನಾಟಕ, ಪ್ರಹಲ್ಲಾದ ಚರಿತ್ರ ನಾಟಕ, ಕನ್ನಡ ಮೃಚ್ಛಕಟಿಕ ನಾಟಕ, ಚಂದ್ರಹಾಸಾಭ್ಯುದಯ ನಾಟಕ, ಕೋವಿಲನ್ ಚರಿತ್ರ ನಾಟಕ, ಮಾದರಿ ಉಪನ್ಯಾಸ ಭಾಗ ೧, ೨, ಮತ್ತು ೩.

AMRUTANJAN B
AMRUTAN
Best Indian Pain Balm
Amrutanjan D
BOMBAY

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು

❖ ಅಮೃತಾಂಜನ ❖

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಸಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ, ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 2 ಆಣೆ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ ಟೌನ್, ಮದ್ರಾಸು.

109 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

— ವಿವಾಹ ಉಪನಯನಗಳ ಸಮಯ —
ಸರ್ವರಿಗೂ ಉಡಿಗೆ ತೊಡಿಗೆಗಳು ಬೇಕಾಗುವ ಸಂದರ್ಭ.

ಯಾರು, ಯಾವುದನ್ನು ಎಲ್ಲಿ ಪಡೆಯಬೇಕೆಂಬ ಶಂಕೆಯಿಂದ ವಿಳಂಬ ಮಾಡಬೇಡಿರಿ. ಉಡಿಗೆತೊಡಿಗೆಗಳನ್ನು [illegible] ನಿಮಗೆ ಬೇಕಾದ ಯಥಾರ್ಥ ಮಾಹಿತಿಯನ್ನು ಕಳೆದ ಹತ್ತುಹತ್ತು ವರುಷಗಳಿಂದ ನಡೆದು ನಮ್ಮಲ್ಲಿಯ ವ್ಯಾಪಾರವು ಗಿರಾಕಿಗಳಿಗೆ ಸರ್ವ ತೃಪ್ತಿಯಿಂದಲೂ ಲಾಭಕರವಾಗಿ ಪರಿಣಮಿಸುವಂತೆ ನಮ್ಮ ಹವಣ ಸಂಗ್ರಹವನ್ನು ಮಾಡಿರುತ್ತೇವೆ.

ಗುರ್ಪುರ್ಕಾರ್ ಬ್ರದರ್ಸ್, ರಥಬೀದಿ, ಮಂಗಳೂರು.

ಹೆಡ್ ಆಫೀಸು:—ರಥಬೀದಿ—(ಮೊದಲು ಕುಬೇರ ನಾಗಪ್ಪನಾಯಕ್, ಎಂಡ್ ಕೋ, ಇದ್ದಲ್ಲಿ; ಅಜೀಜುದ್ದೀನ್ ರಸ್ತೆಗೆ ತಿರುಗುವಲ್ಲಿ) ಮಂಗಳೂರು.

ಬ್ರೇಂಚ್ ಆಫೀಸು:—ರಥಬೀದಿ—(ಹಳೇ ತಾಲೂಕು ಕಚೇರಿಯ ಪಟಾರಕ್ಕೆ ಸಮೀಪವಿರುವ ಮಳಿಗೆ) ಮಂಗಳೂರು.

ಈ ದೇಶದ ಪ್ರಖ್ಯಾತಪಟ್ಟ ನೇಯಿಗೆಯ ಕೇಂದ್ರಸ್ಥಳಗಳಾದ—ಬನಾರಸ್, ಪೂನಾ, ಅಹಮ್ಮದಾಬಾದ್, ಸೂರತ್, ಬೆಂಗಳೂರು, ಧರ್ಮಾವರಮ್, ಕಂಜೀವರಮ್, ಕೊಯಮುತ್ತೂರು, ಮಧುರೆ, ತಂಜಾವೂರು, ಕುಂಭಕೋಣ, ಆರ್ಣಿ, [illegible], ಹುಬ್ಬಳ್ಳಿ, ಇಳಕಲ್, ಗದಗ, ಮದ್ರಾಸು ಈ ಪ್ರಾಂತ್ಯಗಳಲ್ಲಿ ತಯ್ಯಾರಾದ

[illegible], ರೇಷ್ಮೆ ಸೀರೆಗಳು, [illegible] ಸೀರೆಗಳು, [illegible] ಸೀರೆಗಳು, ರೇಷ್ಮೆ ಮುಂಡಗಳು, [illegible] ತಯಾರಿಸಿದ ನೂಲಿನಿಂದ ಮಾಡಿದ—

[illegible]

[illegible] ಸಂಗ್ರಹವನ್ನು ನಮ್ಮ [illegible]

ಪ್ರತಿಯೊಂದು ಕುಟುಂಬಿಗಳ ಮನೆಗಳಲ್ಲಿ ಸೌಖ್ಯವನ್ನು ತೋರಿಸುವುದಕ್ಕೂ ಮತ್ತು ಅವರವರ ಉಪಯೋಗಾರ್ಥವನ್ನು ತಿಳುವಳಿಕೆ ಬಗ್ಗೆ ನಡಿಸುವುದಕ್ಕೂ ಒಂದು ಮರ್ಮವಾದ ನಿಘಂಟು ಪುಸ್ತಕವು ಈ ನಮ್ಮ ಹಿಂದೂದೇಶದ ಸಮೂಹದಲ್ಲಿರುವುದು. ಅಂಥಾ ಪುಸ್ತಕವು ಯಾವದೆಂಬುದು

ನೀವುಗಳು ಬಲ್ಲಿರಾ?

(ಅದೇ)

“ಕಾಮಶಾಸ್ತ್ರವೆಂಬುವುದು.”

ತಾವುಗಳು ಇನ್ನೂ ಈ ಪುಸ್ತಕದಲ್ಲಿ ಬರೆದಿರುವ ಸಾರಾಂಶವನ್ನು ಓದಿಲ್ಲದಿದ್ದರೆ, ಒಡನೇ ಒಂದು ಪುಸ್ತಕವನ್ನು ಕಳುಹಿಸುವಂತೆ ಒಂದು ಪೋಸ್ಟುಕಾರ್ಡು ಬರೆಯಿರಿ.

ಪುಸ್ತಕವನ್ನು ಇನಾಮಾಗಿ ಕಳುಹಿಸುವೆವು.

ಮುಖ್ಯವಾದ ತಿಳುವಳಿಕೆ.

ತಾವುಗಳು ಧೃಢಚಿತ್ತರಾಗಿಯೂ, ನಿಧಾನಸ್ಥರಾಗಿಯೂ, ಸೌಖ್ಯವಾಗಿಯೂ, ಕಷ್ಟವಿಲ್ಲದೇ ವಿಷಯಗಳನ್ನು ಭರಿಸುವ ಮನಸ್ಸನ್ನು ಹೊಂದಬೇಕಾದರೆ ನಮ್ಮ ಅಮೂಲ್ಯವಾದ “ಕಾಮಶಾಸ್ತ್ರವೆಂಬುವ ಪುಸ್ತಕದಲ್ಲಿ ಕಾಣಿಸಿರುವ ಆತಂಕನಿಗ್ರಹ ಮಾತ್ರೆಗಳನ್ನು ಸೇವಿಸಬೇಕು.”

ಒಂದು ರೂಪಾಯಿ ಖರ್ಚುಮಾಡಿದರೆ 32 ಮಾತ್ರೆಗಳುಳ್ಳ ಒಂದು ಡಬ್ಬಿಯನ್ನು ತರಿಸಿ ಪ್ರಯತ್ನಿಸಬಹುದು.

ವಿವರವಾಗಿ ಬರೆದಿರುವ ಒಂದು ಕ್ಯಾಟಲಾಗು ಕಳುಹಿಸುವಂತೆ ಈ ದಿನವೇ ಒಂದು ಪೋಸ್ಟುಕಾರ್ಡು ಬರೆಯಿರಿ.

ಆತಂಕನಿಗ್ರಹ ಔಷದಾಲಯ,
ನಂಬ್ರ 26, ಬ್ರಾಡ್ವೆ, ಮದರಾಸು.

ಹೊಸಗ್ರಂಥಗಳು!! ಬೇಗನೇ ತರಿಸಿಕೊಳ್ಳಿರಿ!!!

ಕೋಕಶಾಸ್ತ್ರವು.

ರಸಿಕ ವಾಚಕ ಮಹಾಶಯರೇ,

ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ, ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನೇ ಶೋಧಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿಣಿ, ಸ್ತ್ರೀಯರಂತೆ ಪುರುಷರಲ್ಲಿಯ ಭೇದ ಯಾವಜಾತಿ ಸ್ತ್ರೀಯರಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನೂ ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ, ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ, ನಪುಂಸಕತ್ವ ವಂಧ್ಯಾದೋಷಗಳ ಚಿಕಿತ್ಸೆಯನ್ನೂ, ಸ್ತ್ರೀಯರ ಗೂಢ ರಹಸ್ಯವನ್ನೂ ದಂಪತಿ ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನೂ, ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನು [illegible] ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ

ಇದರ ಬೆಲೆ ೧—೮—೦, ಟಪ್ಪಾಲು ಹಾಸಲು ೦—೪—೦.

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಟ್ರೇಡ್ವಿಫೋ ಪ್ರೆಸ್, ಬಳ್ಳಾರಿ.

ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ಮೂರನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್. ಗಣಪತಿರಾವ್ ಐಗಳ್—ಗ್ರಂಥಕರ್ತರು.

ಮನೋರಂಜಕ ಚಿತ್ರಗಳೂ ಇವೆ.

ಇದರಲ್ಲಿ ಸಾವಿತ್ರಿ, ಶಕುಂತಳಾ, ಕೃಷ್ಣಾಕುಮಾರಿ, ಪದ್ಮಿನಿ, ಜೋನ್ ಒಫ್ ಆರ್ಕ, ಫ್ಲೋರೆನ್ಸನಾಯಿಟಿಂಗೇಲ ಪರಶುರಾಮ, ಭೂತಾಳಪಾಂಡ್ಯ, ಕಾರ್ಕಳ ಗೋಮಟೇಶ್ವರ ಮತ್ತು ಭೈರವರಾಜ, ಮೂಡಬಿದ್ರೆಯ ಚೌಟರು, ನಂದಾವರ ಬಂಗರು, ಕಾರ್ಕಳ ರಾಮಸಮುದ್ರ ಮತ್ತು ರಾಮನಾಥ ಒಡೆಯರ ಅಣೆಕಟ್ಟು, ಗುರುಪುರ ಜಂಗಮ ಮಠ, ಕಲ್ಯಾಣಪ್ಪನ ಕಾಟಕಾಯಿ, ಗುರುವಾಯನಕೆರೆ, ಜಮಾಲಾಬಾದುಕೋಟೆ, ಸುಲ್ತಾನಬತ್ತೇರಿ, ಉದಗಾಪ್ರಾರ್ಥನಾಮಂದಿರ, ಸೇಂಟಮೇರಿ ದ್ವೀಪಗಳು ಮತ್ತು ದರಿಯಾಬಹಾದರಗಡ, ಕೊರಗರು, ಕೊಡಗರು, ತೋಡರು, ರಜಪೂತರು, ಕಂದಾರಿಗಳು ಭುಖಾರ ಜನರು, ಅರಬಿಯರು. ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ಮೂರನೇ ದರ್ಜೆಯ ಮಕ್ಕಳಿಗೆ ಉಪಯುಕ್ತವಾಗಿದೆ. ಕ್ರಯ 6 ಆಣೆ.

ಪುಸ್ತಕ ದೊರಕುವ ವಿಳಾಸ:—

ಶಾರದಾ ಛಾಪಖಾನೆ,
ಮಂಗಳೂರು.

ಗಣಪತಿರಾವ್ ಐಗಳ್.
ಮಂಜೇಶ್ವರು.

ಡಾಕ್ಟರುಗಳು ಭಿನ್ನಾಭಿಪ್ರಾಯಪಡುವಾಗ್ಯೆ ತೀರ್ಮಾನಿಸುವದು ಯಾರು?

ಅಂಥಾ ಸಂದರ್ಭಗಳಲ್ಲಿ ಡೆಂಗ್ಯೂ ಮುಂತಾದ ಜ್ವರಗಳನ್ನು ನಿವಾರಿಸುವಂಥಾ “ಬಾಟ್ಲಿವಾಲರ ಏಗ್ಯುಮಿಕ್ಸ್ಚರ್”ನ್ನು ಸರಾಗವಾಗಿಯೂ, ಮತ್ತು ಜ್ವರಗಳನ್ನು ಖಂಡಿತವಾಗಿ ನಿಲ್ಲಿಸುವಂಥಾದ್ದೂ, ಎಲ್ಲಾ ತರದ ತಲೆನೋವುಗಳನ್ನು ಹೋಗಲಾಡಿಸುವಂಥಾದ್ದೂ ಆದ “ಬಾಟ್ಲಿವಾಲರ ಏಗ್ಯುಪಿಲ್ಸ್” ಇದನ್ನು ಉಪಯೋಗಿಸಿರಿ.

ಐ. ಎಮ್. ಎಸ್. ಡಾಕ್ಟರುಗಳಿಂದ ಶಿಫಾರಸು ಮಾಡಲ್ಪಟ್ಟಿದ್ದು. ಇದರ ಉಪಯೋಗದಿಂದ ಹೃದಯದ ಮೇಲೆ ಯಾವ ದು[illegible] ಬಾಧಕವಿಲ್ಲ. ಅರ್ಧ ಶತಮಾನದಿಂದ ಹಿಂದೂಸ್ಥಾನ, ಬರ್ಮಾ, ಸಿಲೋನ್, ಆಫ್ರಿಕಾ ಇವುಗಳಲ್ಲಿ ಪ್ರಖ್ಯಾತಪಟ್ಟಿದ್ದಾಗಿರುತ್ತದೆ.

ಅನೇಕ ಹಿಂದೀ ಪ್ರದರ್ಶನಗಳಲ್ಲಿ ಬೆಳ್ಳಿ ಮತ್ತು ಬಂಗಾರದ ಪದಕಗಳನ್ನು ಪಡೆದಿರುತ್ತೆ. ಜಾಲ್ತಿ ಸಾಕ್ಷ್ಯದಂತಿದ್ದು ಮಾರ್ವಾರಿಗಳೂ ಕೂಡ ಅದರ ಮೇಲೆ ಹಣವನ್ನು ಮುಂಗಡವಾಗಿ ಕೊಡುತ್ತಾರೆ. ಬಡ ಮತ್ತು ಮಧ್ಯಮ ತರಗತಿಯ ಜನರಿಗೆ ವರಪ್ರದಾನವಾಗಿದ್ದು ಸಂಚಾರ, ಪ್ರಯಾಣ, ದೇಶಾಟನೆಗಳ ಸಮಯದಲ್ಲಿ ಹತ್ತಿರದಲ್ಲಿರಿಸಿಕೊಳ್ಳದಾಗಿರುತ್ತದೆ.

ಬಾಟ್ಲಿವಾಲರ ಬಾಲಾಮೃತ ಅಥವಾ ಟೊನಿಕ್ ಸಿರಪ್.

ಕೆಮ್ಮನ್ನು ಹೋಗಲಾಡಿಸಿ, ಎದೆನೋವನ್ನು ಶಾಂತಗೊಳಿಸಿ, ಜ್ವರವನ್ನು ಉಪಶಮನಿಸಿ, ನಿದ್ರಾಭಂಗವನ್ನು ಕಡಿಮೆ ಮಾಡಿ ಧಾತುವರ್ಧನವನ್ನು ಮಾಡುವದರಲ್ಲಿ ಅತ್ಯುತ್ತಮವಾಗಿರುತ್ತದೆ. ಕಫವನ್ನು ಒಣಗಿಸಿ ಮಾಯವಾಗುವಂತೆ ಮಾಡುವುದಲ್ಲದೆ ಅದೇ ಸಮಯದಲ್ಲಿ ಒಳ್ಳೇ ಜೀರ್ಣವನ್ನೂ ಉಂಟುಮಾಡುವುದು. ದರ ವೊದಲಾದ ಮಾಹಿತಿಯನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ತಾರಿನಪತ್ತೆ:-CAWASHAPUR, BOMBAY.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.,
ಪಿ. ವಾರ್ಲಿ, ಮುಂಬಯಿ, ನಂಬ್ರ 18.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ

ಇವರ

ಬಾಲಾಮೃತ.

ಈ ಔಷಧವನ್ನು ಸೇವನೆಮಾಡುವುದರಿಂದ ಮಕ್ಕಳು ರೋಗರಹಿತರೂ ಸಶಕ್ತರೂ ಆಗುವರು. ಇದು ಮಧುರವಾಗಿದೆ; ಮಕ್ಕಳು ಸಂತೋಷದಿಂದ ಸೇವಿಸುತ್ತಾರೆ.

ನಮ್ಮ ವಿಳಾಸ:—

ಕೇ. ಟಿ. ಡೋಂಗರೆ ಕಂಪೆನಿ, ಗಿರ್ಗಾಂವ, ಮುಂಬಯಿ.

ಏಜಂಟರು:— ದಿ[illegible]ಊಲನ್ ಮಾರ್ಟ್, ಮಂಗಳೂರು.

OUR RECENT IMPORT IN WRIST WATCHES

Have you used anyone of these Watches?

SEND YOUR ORDER NOW ALL GUARANTEED.

Fashionable wrist wrist Lady's size. Reliable movement Guaranteed.



No. 368.

Handy to wear and looks beautiful. Gives punctual time and with strong movement.

Nickel case Rs. 8—0

High-class Radium dial watch watch with Roman figures.



No. 367.

Can be seen in dark nights. Well fitted with best movement and strong to use. Used by one and all.

Silver case Rs. 9—0.

Radio light wrist watch.



No. 372.

Fitted with the best mechanism and guaranteed to work and keep perfect time for a long time.

Nickel case Rs. 7—8
Electro rolled-gold „ 9—0

(N. B. In addition to the above, we have good number of varieties of fancy wrist watches, pocket watches. Please write for a descriptive catalogue, which will be sent free)

WHOLESALE IMPORTERS

PETER WATCH COY.,
POST BOX 27, MADRAS

ಕನ್ನಡಿಗರೇ! **ವಸಂತ** ಕನ್ನಡಿಯರೇ!

ಈಗಾಗಲೇ ಎರಡನೇ ಸಂಪುಟವು ಆರಂಭವಾಗಿದೆ.

ಸಚಿತ್ರಮಾಸಪತ್ರಿಕೆ ಎಂದರೆ	ವಸಂತ
ಸಮಾಜಸುಧಾರಕನೆಂದರೆ	ವಸಂತ
ಸ್ತ್ರೀಯರ ಸಾಮ್ರಾಜ್ಯವೆಂದರೆ	ವಸಂತ
ಕರ್ನಾಟಕ ಭಾಷಾಸೇವಕನೆಂದರೆ	ವಸಂತ
ದೀನದಲಿತ ಬಂಧುವೆಂದರೆ	ವಸಂತ
ಕಾದಂಬರಿಗಳ ಭಂಡಾರವೆಂದರೆ	ವಸಂತ
ಚಿತ್ರಾಕರ್ಷ ಚಿತ್ರಶಾಲೆಯೆಂದರೆ	ವಸಂತ
ದೇಶಭಕ್ತನೆಂದರೆ	ವಸಂತ

ಇಂತಹ ವಸಂತನು ಯಾರಿಗೆ ಬೇಕು, ಯಾರಿಗೆ ಬೇಡ?

48 (ಕ್ರೌನ್ ⅛ ಪುಟ ಸ್ಯಾಜಿನ) ಪುಟಗಳನ್ನು ವಿಸ್ತರಿಸಿದ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3—4—0 ಮಾತ್ರ.

ವ್ಯವಸ್ಥಾಪಕ,
ವಸಂತ ಕಾರ್ಯಾಲಯ,
ಕುಂದಾಪುರ, ದಕ್ಷಿಣ ಕನ್ನಡ.

ಬಂದು ನೋಡಿರಿ! ತಿಂದು ನೋಡಿರಿ!

ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ

ಪದಕವನ್ನು

ಬಹುಮಾನವಾಗಿ ಪಡೆದಿರುವ

ಎಸ್. ಬಿ. ಆಚಾರ್ಯ

ಇವರಿಂದ ತಯಾರಿಸಲ್ಪಟ್ಟ

ಉಪ್ಪಿನಕಾಯಿಗಳನ್ನು

ಬಂದು ನೋಡಿರಿ! ತಿಂದು ನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಕಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ, ಮಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಾಗಿ [illegible] ನವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ [illegible] ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನ್ನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ

ಬಂದು ನೋಡಿರಿ! ತಿಂದು ನೋಡಿರಿ!

ಇಂಡಿಯನ್ ಸ್ವೀಟ್‌ಮೀಟ್ ಮಾರ್ಟ್.

ಮನೋಲ್ಲಾಸಿನಿ ಕಾಫಿ ಕ್ಲಬ್,
ಮಾರ್ಕೆಟು ರೋಡು,
ಮಂಗಳೂರು.

ಅಥವಾ

ಸದಾನಂದ ಕಾಫಿ ಕ್ಲಬ್,
ರಥಬೀದಿ, ಮಂಗಳೂರು.

ನೋಟೀಸು.

ಮೂಳೂರು ಪಂಚಾಯಿತ ಕೋರ್ಟಿನಲ್ಲಿ.

ಸಿವಿಲ್ ನ್ಯಾಯ ನಂಬ್ರ $\frac{119}{1924}$

ಅಪ್ಪುಗೌಡ, ವೆಂಕುಗೌಡನ ಮಗ ಬಡಗುಳಿಪಾಡಿ ಗ್ರಾಮಸ್ಥ — ವಾದಿ.

ವಿರುದ್ಧ

ಶೇಕ್ ಇಸ್ಮಾಯಿಲ್ ಸಾಹಿಬ್
ಶೇಕ್ ಹೈದರ್ ಸಾಹಿಬ್

ಕುದ್ರೋಳಿ ಶೇಕ್ ಅದಂ ಸಾಹಿಬರ ಮಕ್ಕಳು ಬಡಗುಳಿಪಾಡಿ. — ಪ್ರತಿವಾದಿಗಳು.

ಪ್ರತಿವಾದಿರು ಸಮನ್ಸಿಗೆ ತಪ್ಪಿಸಿಕೊಳ್ಳುತ್ತಿದ್ದಾರೆ:— ಈ ವ್ಯಾಜ್ಯದ ತನ್ನಿಯನ್ನು 1925ನೇ ಇಸವಿ ಫೆಬ್ರುವರಿ ತಾರೀಕು 7ಕ್ಕೆ ಇಟ್ಟಿದೆ. ಆ ದಿನ ಪ್ರತಿವಾದಿರು ಹಾಜರಾಗಿ ಪ್ರತಿವಾದಿಸದಿದ್ದರೆ ದಾವೆಯು ಏಕಪಕ್ಷವಾಗಿ ತೀರ್ಮಾನಿಸಲ್ಪಡುತ್ತದೆ, [illegible]

R. S. Baglodi,
ಪ್ರೆಸಿಡೆಂಟ್.

ನೋಟೀಸು.

ಮುಂಬಯಿ ಸ್ಟೀಮ್ ನೇವಿಗೇಶನ್ ಕಂಪೆನಿ ಲಿಮಿಟೆಡ್.

ಗೋಕರ್ಣ ಮಹಾಶಿವರಾತ್ರಿಗೆ ಹೋಗುವ ಪ್ರಯಾಣಿಕರಿಗೆ ಸೌಕರ್ಯ.

ಇದೇ ಬರುವ ಫೆಬ್ರುವರಿ ತಿಂಗಳಲ್ಲಿ ಗೋಕರ್ಣದಲ್ಲಿ ನಡಿಯುವ ಶಿವರಾತ್ರಿ ಮಹೋತ್ಸವಕ್ಕೆ ಯಾತ್ರಿಕರಾಗಿ ಹೋಗುವ ಮೈಸೂರು, ಮಲಬಾರ, ಕೆನರಾ ಮೊದಲಾದ ಕಡೆಗಳ ಜನರಿಗೆ ಅನುಕೂಲವಾದ ಪ್ರಯಾಣ ಸೌಕರ್ಯವನ್ನು ಈ ಕಂಪೆನಿಯು ಮಾಡಿದೆ.

ಫೆಬ್ರುವರಿ ತಾ. 21ರಲ್ಲಿ ಜರಗುವ ಶಿವರಾತ್ರಿ ಮಹೋತ್ಸವಕ್ಕೆ ಯಾತ್ರಿಕರಿಗೆ ಹೋಗಲು ಅನುಕೂಲವಾಗುವಂತೆ ಫೆಬ್ರುವರಿ ತಾ. 16ನೇ ಸೋಮವಾರ ಬೆಳಿಗ್ಗೆ 10 ಗಂಟೆಗೆ ಸಾಮಾನುಗಳನ್ನು ಒಯ್ಯುವ (Cargo steamer) ಸ್ಟೀಮರೂ ಫೆಬ್ರುವರಿ ತಾ. 18ನೇ ಬುಧವಾರ ಪ್ರಾತಃ 10 ಗಂಟೆಗೆ ಬಹು ವೇಗದಿಂದ ಓಡುವ ಪೆಸೆಂಜರ್ ಸ್ಟೀಮರೂ ಮಂಗಳೂರಿನಿಂದ ಬಿಡಲ್ಪಡುವುವು. ಈ ಎರಡೂ ಸ್ಟೀಮರುಗಳು ಪ್ರಯಾಣಿಕರನ್ನು ತದ್ರಿ (ಗೋಕರ್ಣ) ವರೆಗೆ ಮುಟ್ಟಿಸುವುವು.

ತಾ. 18ರಲ್ಲಿ ಬಿಡುವ ಬಹುವೇಗದಿಂದ ಓಡುವ (ಡಬ್ಬಲ್ ಸ್ಕ್ರೂ ಸ್ಟೀಮರ್) ಸ್ಟೀಮರು ಬರೇ 10 ತಾಸಿನೊಳಗೆ ಪ್ರಯಾಣಿಕರನ್ನು ಮುಟ್ಟಿಸುವುದು.

ತದ್ರಿಯಿಂದ ತಾ. 22ನೇ ಆದಿತ್ಯವಾರ ಬಿಡಲ್ಪಡುವ ಕಾರ್ಗೊ ಸ್ಟೀಮರೂ ತಾ. 24ನೇ ಮಂಗಳವಾರ ಬಿಡಲ್ಪಡುವ ವೇಗದಿಂದ ಓಡುವ ಪೆಸೆಂಜರ್ ಸ್ಟೀಮರೂ ಗೋಕರ್ಣದಿಂದ ಹಿಂದಕ್ಕೆ ಬರುವ ಯಾತ್ರಿಕರಿಗೆ ಬಹಳ ಅನುಕೂಲಗಳಾಗಿವೆ.

ಮಂಗಳೂರಿನಿಂದ ತದ್ರಿಗೆ ಹೋಗಿ ಬರುವ ಪ್ರಯಾಣಿಕರಿಗೆ ಒಂದುವರೆ ಪಾಲು (fare and half) ದರದಲ್ಲಿ ಟಿಕೇಟು ಕೊಡಲಾಗುವುದು.

ಸಾಧಾರಣವಾಗಿ ಇರುವ ಸಿಂಗಲ್ ದರ.

	ಕಾರ್ಗೊ ಸ್ಟೀಮರ್.	ಫಾಸ್ಟ್ ಸ್ಟೀಮರ್.
ಲೋವರ್ ಕ್ಲಾಸ್	ರೂ. 5—8—0	ರೂ 5—12—0.
ಅಪ್ಪರ್ ಕ್ಲಾಸ್	ರೂ. 8—2—0.	ರೂ. 8—10—0.

ದಕ್ಷಿಣಕಾಶಿಯೆಂದು ಖ್ಯಾತಿಗೊಂಡ ಗೋಕರ್ಣ ಮಹಾಕ್ಷೇತ್ರಕ್ಕೆ ಕುಟುಂಬಯಾತ್ರೆ ಮಾಡಲು ಅನುಕೂಲ ಸಂದರ್ಭ.

ನೋಟೀಸು.

ದಕ್ಷಿಣಕನ್ನಡಾ ಒಫಿಶಿಯಲ್ ರಿಸೀವರರ ಕೋರ್ಟಿನಲ್ಲಿ

ದಿವಾಳಿ ಅರ್ಜಿ ನಂಬ್ರ $\frac{100}{1924}$

ಶ್ರೀ ಅಬ್ದುಲ್‌ಖಾದರ ಬಿನ್ ಹಸನ್‌ಬಾವು ಯಾನೆ ಹಸನಸ್ಯಾಬರ ಮಗ ಮಂಗಳೂರು ಶಹಾರ ಗೋಳಿಕಟ್ಟೆಬಜಾರಿನಲ್ಲಿರುವವ — ಅರ್ಜಿದಾರ.

ಬೊಳಂತೂರು ಸರ್ವೋತ್ತಮ ಪ್ರಭು ಕೂಡ ದೇಣೆದಾರರು.

ಮೇಲ್ಕಂಡ ಅರ್ಜಿದಾರರು ತನ್ನನ್ನು ದಿವಾಳಿಯೆಂತ ಸ್ಥಾಪನೆ ಮಾಡಬೇಕಾಗಿ ಮೇಲ್ಕಂಡ ಕೋರ್ಟಿನಲ್ಲಿ ಅರ್ಜಿ ಕೊಟ್ಟಿರುವುದರಿಂದ ಸದರಿ ಅರ್ಜಿಯು ತಾ. 28-1-1925ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ತನಿಕೆಗೆ ಇಟ್ಟಿರುವುದರಿಂದ ಸದರಿ ಅರ್ಜಿಗೆ ಆಕ್ಷೇಪಣೆ ಕೊಡುವವರು ಆ ದಿವಸ ಮಧ್ಯಾಹ್ನ 11 ಗಂಟೆ ಒಳಗೆ ಸದರಿ ಕೋರ್ಟಿನಲ್ಲಿ ಹ್ಯಾಜೀರು ಮಾಡತಕ್ಕದ್ದು ಎಂತ ಈ ಮೂಲಕ ಪ್ರಕಟಿಸೋಣಾಗಿಯದೆ.

ಮಂಗಳೂರು,
ತಾ. 9-1-1925.

Bola Nagesh Rau
Vakil for Petitioner,

ಇದೇ ಜನವರಿ ೩೦ನೆಯ ತಾರೀಕಿನಿಂದ ಕಡಿಮೆ ಬೆಲೆಗೆ ವಿಕ್ರಯ!

ಅತ್ಯಮೌಲ್ಯ ಸಂಧಿ! ಕಾಂಗ್ರೆಸ ವಿಜಯನಗರದಲ್ಲಿ ಉಳಿದ ಎಲ್ಲ ಸಾಮಾನುಗಳ ನಾಮಮಾತ್ರ ಬೆಲೆಗೆ ವಿಕ್ರಯ!

ಇದೇ [illegible] ಜನವರಿ ೩೦ನೆಯ ತಾರೀಕಿನಿಂದ ಕಾಂಗ್ರೆಸ [illegible] ಉಪಯೋಗಿಸಲ್ಪಟ್ಟ [illegible], ಗೋಡೆ ಬಟ್ಟೆ (ಪ್ಯಾಕಿಂಗ್ ಕ್ಲಾಥ್) ಮನೆಯಲ್ಲಿ [illegible] ಕಲ್ಲು ಹಲಿಗೆಗಳು (Slabs), [illegible] ಮನೆಗೆ ಅವಶ್ಯವುಳ್ಳದಾದ ಇತರ ವಸ್ತುಗಳು ಕಾಂಗ್ರೆಸ ವಿಜಯನಗರದಲ್ಲಿ (ಬೆಳಗಾಂವಿಯಲ್ಲಿ) [illegible] ಬಹು ಕಡಿಮೆ ಬೆಲೆಗೆ ವಿಕ್ರಯ

ಬೆಳಗಾಂವಿ ಕೊಂಗ್ರೆಸ್ಸಿನಲ್ಲಿ ಮಹಾತ್ಮರ ಭಾಷಣ.

(ಕಳೆದ ಸಂಚಿಕೆಯಿಂದ ಮುಂದುವರಿಸುದುದು.)

ದಬ್ಬಾಳಿಕೆಯು ಬರ್ಮಿಜನರ ಸತ್ವವನ್ನು ನಷ್ಟಗೊಳಿಸುತ್ತಲಿದೆಂದು ನಾವೀಗ ಕೇಳುತ್ತೇವೆ.

ಇಜಿಪ್ಟದ ಸ್ಥಿತಿಯಾದರೂ ನಮ್ಮಿಂತೇನೂ ಒಳಿತಾಗಿರುವುದಿಲ್ಲ. ಒಬ್ಬ ತಲೆಬಿರುಕನಾದ ಇಜಿಪ್ಸಿಯನನು ಒಬ್ಬ ಯುರೋಪಿಯನ್ ಅಧಿಕಾರಿಯ ಕೊಲೆ ಮಾಡಿದನು. ಇದು ಅತಿ ನಿಂದ್ಯವಾದ ಕೃತ್ಯವೆಂಬುದೇನೂ ನಿಜ. ಆದರೆ ಶಿಕ್ಷೆಯು ಕೂಡ ಅತಿ ನಿಂದ್ಯವಾದ ಕೃತ್ಯವಾಗಿರುವುದಲ್ಲದೆ, ಅದರಿಂದ ಮಾನವಜಾತಿಯ ಮಾನಭಂಗವು ಮಾಡಲ್ಪಟ್ಟಿದೆ. ಇಜಿಪ್ತವು ತನಗೆ ದೊರೆತ ಬಹುಶಃ ಎಲ್ಲ ಹಕ್ಕುಗಳನ್ನೇ [illegible] ಒಬ್ಬ ಮನುಷ್ಯನ ತಪ್ಪಿಗಾಗಿ ಇಡೀ ರಾಷ್ಟ್ರವೆ ಶಿಕ್ಷೆಗೆ ಗುರಿಮಾಡಲ್ಪಟ್ಟಿದೆ. ಈ ಕೊಲೆಗೆ ಇಜಿಪ್ಸಿಯನರ ಸಹಾನುಭೂತಿಯಿತ್ತು, ಬಹುದು. ದಬ್ಬಾಳಿಕೆಯನ್ನು ಅವಲಂಬಿಸದೆ, ತನ್ನ ಸೇರಿ ಮಾಡಿಕೊಳ್ಳಲು ಸಮರ್ಥವಾದ ಸರಕಾರವು ಪ್ರಜೆಗಳನ್ನು ಶಿಕ್ಷಿಸಿ ಅವರನ್ನು ಭಯಗ್ರಸ್ತರನ್ನಾಗಿ ಮಾಡಲೆಸಗುವದು ನ್ಯಾಯವಲ್ಲ.

ಆದ್ದರಿಂದ ಬಂಗಾಳದಲ್ಲಿಯ ದಬ್ಬಾಳಿಕೆಯು ವಿನಾಶವಾಗುವ ಯೋಗವಿಲ್ಲ. ನಮಗೆ ಸ್ವರಾಜ್ಯವು ದೊರೆಯುವ ವರೆಗೂ ಭಿನ್ನ ಭಿನ್ನ ಪ್ರಾಂತಗಳಲ್ಲಿ ಭಿನ್ನಭಿನ್ನ ರೂಪದಿಂದ ಆಗಾಗ್ಗೆ ತಲೆಯೆತ್ತುವ ದಬ್ಬಾಳಿಕೆಯು ವಾಡಿಕೆಯದೆಂದಾಗಿ ಎಣಿಸಲಿಕ್ಕೆ ಬೇಕು.

ಅಧಿಕಾರದ ಅವಶ್ಯಕತೆಯು.

ಮಹಾಸಭೆಯು ತನಗೆ ಒಪ್ಪಿಸಲ್ಪಟ್ಟ ಕಾರ್ಯಭಾಗದ ವಿಷಯದಲ್ಲಿ ತನ್ನ ಪಾತ್ರತೆಯನ್ನು ಸಿದ್ಧಗೊಳಿಸುವದಿದ್ದರೆ, ತನ್ನ ಬೇಡಿಕೆಗಳಿಗೆ ಪುಷ್ಟಿ ದೊರೆಯಲು ಅಧಿಕಾರವನ್ನು ಪಡೆಯುವದಗತ್ಯವು. ಆ ಅಧಿಕಾರವು ಬರುವ ಮೊದಲು ಹಿಂದು—ಮುಸಲ್ಮಾನ, ಕ್ರೈಸ್ತ, ಶೀಖ, ಪಾರ್ಶಿ ಮೊದಲಾದ ನಾವೆಲ್ಲರು ಒಂದಾಗಲಿಕ್ಕೆ ಬೇಕು. ಅದರಂತೆಯೇ ಸ್ವರಾಜ್ಯಪಕ್ಷದವರೂ, ಅಸಹಯೋಗಿಗಳೂ, ಲಿಬರಲ್‌ರೂ, ಹೋಮರೂಲರರೂ, ಮುಸ್ಲಿಮ್ ಲೀಗದವರೂ ಒಂದಾಗಲಿಕ್ಕೆ ಬೇಕು. ನಮ್ಮಲ್ಲಿ ಒಕ್ಕಟ್ಟಾಗಿ ನಮಗೆ ಬೇಕಾದುದು ಏನೆಂಬುದನ್ನು ಸ್ಪಷ್ಟವಾಗಿ ನಾವು ಅರಿತುಕೊಂಡರೆ ನಮಗೆ ಅದರಿಂದ ಹಿತವಾಗುವುದು. ನಮ್ಮ ದೇಶದೊಳಗೆ ವಿದೇಶೀ ವಸ್ತ್ರಗಳನ್ನು ಬಾರದಂತೆ ಮಾಡಲು ನಾವು ಶಕ್ತಿಯುಳ್ಳವರಾದರೆ ಹೆಚ್ಚಿಗೆ ಒಳಿತಾಗುವುದು. ಇಷ್ಟಾದ ಬಳಿಕ ನಾವು ಅಧಿಕಾರಕ್ಕೆ ಪಾತ್ರರಾಗುವೆವು.

— ನನ್ನ ಶ್ರದ್ಧೆ. —

ನನ್ನ ಶ್ರದ್ಧೆಯನ್ನು ಕುರಿತು ಹೇಳುವಾ. ಮಹಾಸಭೆಯನ್ನು ಅಖಂಡವಾಗಿ ಇಡಲಿಚ್ಛಿಸುವ ಮಹಾಸಭಾಭಕ್ತನು ನಾನಾಗಿರುವುದರಿಂದ, ರಾಷ್ಟ್ರವು ಅಸಹಯೋಗಕ್ಕೆ ಸಿದ್ಧವಿಲ್ಲವಾದ್ದರಿಂದ, ಅದನ್ನು (ಅಸಹಯೋಗವನ್ನು) ನಿಲ್ಲಿಸಬೇಕಾಗಿ ನಾನು ಹೇಳುವೆನು. ಆದರೆ ನನ್ನ ವ್ಯಕ್ತಿಯ ಮಟ್ಟಿಗೆ ಹೇಳುವುದಾದರೆ ಸರಕಾರವು ಈಗಿದ್ದಂತೆ ಎಲ್ಲಿಯ ವರೆಗೆ ಉಳಿಯುವುದೋ ಅಲ್ಲಿಯ ವರೆಗೆ ನಾನು ಅಸಹಯೋಗವನ್ನು ನಿಲ್ಲಿಸಲಾರೆನು; ಮತ್ತು ನಿಲ್ಲಿಸುವುದಿಲ್ಲ. ನನ್ನ ವಿಷಯದಲ್ಲಿ ಅದು ಧೋರಣವಾಗಿರದೆ ನನ್ನ ಶ್ರದ್ಧೆಯ ಒಂದು ಅಂಗವಾಗಿರುವುದು. ಅಸಹಯೋಗವೂ ಸವಿನಯ ಶಾಸನೋಲ್ಲಂಘನವೂ ಸತ್ಯಾಗ್ರಹವೆಂಬ ವೃಕ್ಷದ ಭಿನ್ನ ಶಾಖೆಗಳಾಗಿವೆ. ಅದು ನನ್ನ ಕಲ್ಪದ್ರುಮ್ಮ—ನನ್ನ ಜಾಮ-ಇ-ಜಾಮ್—ನನ್ನ ಚಿಂತಾಮಣಿಯು ಆಗಿರುವದು. ಸತ್ಯಾಗ್ರಹವು ಸತ್ಯಾನ್ವೇಷಣೆಯು; ಮತ್ತು ದೇವರು ಸತ್ಯ. ಅಹಿಂಸೆಯು ಆ ಸತ್ಯವನ್ನು ನನಗೆ ದೃಗ್ಗೋಚರ ಮಾಡಿಸುವ ಪ್ರಕಾಶವು. ನನ್ನ ಮಟ್ಟಿಗೆ ಸ್ವರಾಜ್ಯವು ಆ ಸತ್ಯದ ಒಂದು ಭಾಗವಾಗಿದೆ. ದಕ್ಷಿಣ ಆಫ್ರಿಕಾ, ಖೇಡಾ, ಚಂಪಾರಣ್ಯಗಳಲ್ಲಿಯೂ ಬೇರೆ ಅನೇಕ ಪ್ರಸಂಗಗಳಲ್ಲಿಯೂ ಈ ಸತ್ಯಾಗ್ರಹದಿಂದ ನನಗೆ ಯಶಸ್ಸು ದೊರೆಯದಿರಲಿಲ್ಲ. ಅದರಲ್ಲಿ ಹಿಂಸೆಗೂ ದ್ವೇಷಕ್ಕೂ ಆಸ್ಪದವಿಲ್ಲ. ಆದ್ದರಿಂದ ಇಂಗ್ಲೀಷರನ್ನು ನಾನು ದ್ವೇಷಿಸಲಾರೆನು. ಅಥವಾ ಅವರ ಅಧೀನನಾಗಿಯೂ ಇರಲಾರೆನು. ಬ್ರಿಟಿಷರು ಹಿಂದುಸ್ಥಾನದಲ್ಲಿ ತಮ್ಮ ಪದ್ಧತಿಗಳನ್ನೂ ತಮ್ಮ ಸಂಸ್ಥೆಗಳನ್ನೂ ಒತ್ತಾಯದಿಂದ ನೆಲೆಗೊಳಿಸಲು ಮಾಡುವ ಅಪವಿತ್ರ ಪ್ರಯತ್ನಗಳನ್ನು ಜೀವವಿರುವ ವರೆಗೆ ವಿರೋಧಿಸದಿರಲಾರೆನು. ಆದರೆ ಅಹಿಂಸಾವೃತ್ತಿಯನ್ನವಲಂಬಿಸಿಯೇ ನಾನು ಪ್ರಯತ್ನಗಳನ್ನು ವಿರೋಧಿಸುವೆನು. ಯುದ್ಧದಲ್ಲಿ ಇಂಗ್ಲಿಷ ರಾಜ್ಯಕರ್ತರನ್ನು ಅಹಿಂಸಾಶಸ್ತ್ರದಿಂದ ಎದುರಿಸುವ ಸಾಮರ್ಥ್ಯವು ಹಿಂದುಸ್ಥಾನಕ್ಕೆ ಉಂಟೆಂದು ನಾನು ನಂಬುತ್ತೇನೆ. ಸತ್ಯಾಗ್ರಹದ ಪ್ರಯೋಗವು ಅಯಶಸ್ವಿಯಾಗಿಲ್ಲ. ಅದು ಕೆಲಮಟ್ಟಿಗೆ ಯಶಸ್ವಿಯಾಗಿದೆ; ಆದರೆ ನಾವು ಇಚ್ಛಿಸಿದ ಫಲವು ಮಾತ್ರ ಅದರಿಂದ ದೊರೆತಿಲ್ಲ. ನಾನು ನಿರಾಶೆಹೊಂದಿಲ್ಲ. ಇಷ್ಟೇ ಅಲ್ಲ, ಹಿಂದುಸ್ಥಾನಕ್ಕೆ ಅಲ್ಪಾವಕಾಶದಲ್ಲಿಯೇ ಇಚ್ಛಿತ ಫಲವು ಪ್ರಾಪ್ತವಾಗುವದೆಂದೂ ಮತ್ತು ಅದು ಕೂಡಾ ಸತ್ಯಾಗ್ರಹದಿಂದಲೇ ಎಂದೂ ನಾನು ನಂಬಿದ್ದೇನೆ. ನಾವು ಅಸಹಯೋಗವನ್ನು ನಿಲ್ಲಿಸುವುದು ಈ ಪ್ರಯೋಗದ ಒಂದು ಭಾಗವಾಗಿದೆ. ನಾನು ಸೂಚಿಸಿರುವ ಕಾರ್ಯಕ್ರಮವು ಪೂರ್ತಿಗೊಂಡರೆ, ಅದನ್ನು ತಿರಿಗಿ ಕೈಕೊಳ್ಳುವ ಪ್ರಸಂಗವು ಎಂದೂ ಬರಲಾರದು. ಈ ಕಾರ್ಯಕ್ರಮವು ನೆರವೇರದಿದ್ದರೆ ಅಹಿಂಸಾತ್ಮಕವಾದ ಅಸಹಯೋಗವನ್ನು ಮಹಾಸಭೆಯ ಒಳಗಾಗಲಿ ಅಥವಾ ಹೊರಗಾಗಲಿ ಒಂದಿಲ್ಲೊಂದು ರೂಪದಿಂದ ಅಂಗೀಕರಿಸಬೇಕಾಗುವುದು. ಸತ್ಯಾಗ್ರಹವು ಎಂದೂ ನಿಷ್ಫಲವಾಗದೆಂದು, ಮತ್ತು ಒಬ್ಬ ಸಂಪೂರ್ಣ ಸತ್ಯಾಗ್ರಹಿಯೇ ಸತ್ಯದ ಮಹಿಮೆಯನ್ನು ತೋರಿಸಲು ಸಾಕೆಂದು ನಾನು ಆಗಾಗ್ಗೆ ಹೇಳುತ್ತ ಬಂದಿರುತ್ತೇನೆ. ನಾವೆಲ್ಲರೂ ಸಂಪೂರ್ಣ ಸತ್ಯಾಗ್ರಹಿಗಳಾಗಲು ಸಾಹಸಪಡುವ. ಈ ಸಾಹಸವನ್ನು ಅತಿ ಕ್ಷುದ್ರನು ಕೂಡ ಮಾಡಬಹುದು. ಏಕೆಂದರೆ, ಆತನಿಗೆ ತಿಳುವಳಿಕೆ ಯಾವ ಯೋಗ್ಯತೆಯೂ ಅದಕ್ಕೆ ಬೇಕಾಗುವದಿಲ್ಲ. ಸತ್ಯಾಗ್ರಹವು ಅಂತರಾತ್ಮನ ಧರ್ಮವಾಗಿದೆ. ಅದು ಪ್ರತಿಯೊಬ್ಬನಲ್ಲಿಯೂ ಗೂಢವಾಗಿರುತ್ತದೆ. ಸ್ವರಾಜ್ಯದಂತೆ ಇದಾದರೂ ನಮ್ಮ ಜನ್ಮಸಿದ್ಧ ಅಧಿಕಾರವಾಗಿದೆ. ನಾವದನ್ನು ತಿಳಿಯುವ.

“ವಂದೇ ಮಾತರಮ್”

ಸ್ವಾಗತ[illegible] ಇಂತಹ ಅಮೂಲ್ಯ ಸಂಧಿಯನ್ನು ಯಾರೂ ಕಳೆಯಬಾರದು. ಈ ಸಂಬಂಧಿಯು ಮುಂದೆ ದೊರೆಯಬೇಕಾದವರು ವಿಜಯನಗರ (ಬೆಳಗಾಂವಿ) ಕಾಂಗ್ರೆಸ ಕ್ಯಾಂಪದಲ್ಲಿ ಬಂದು ಸಾಮಾನುಗಳನ್ನು ಪರೀಕ್ಷಿಸಬಹುದು.

ಮ. ರಾ. [illegible]
ಜನರಲ್ ಸೆಕ್ರೆಟರಿ, ಕಾಂಗ್ರೆಸ ಸ್ವಾಗತ ಮಂಡಳ.

ಶಾಲಿವಾಹನಶಕ ೧೮೪೬ನೆಯ ರಕ್ತಾಕ್ಷಿ ಸಂವತ್ಸರದ ಪುಷ್ಯ ಬ೩೦ ಶನಿವಾರದಿಂದ ರಕ್ತಾಕ್ಷಿ ಸಂವತ್ಸರದ ಮಾಘ ಶು೬ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೫ನೆಯ ಮಕರ ಪುಯಿಂತೆಲ್.)

ತಾರೀಕು	ವಾರ	ತಿ.	ಘಳಿ.	ನಕ್ಷತ್ರ	ಘಳಿ.	[illegible]	ಸೂರ್ಯ ಉ.	ಸೂರ್ಯ ಅಸ್ತ.
	ಶನಿ	●	೩೬.೫೮	ಉ. ಷಾ.	೩೦.೪೬	೧೧	7. 0	6.26
	ರವಿ	೧	೩೨. ೨	ಶ್ರವಣ	೨೬.೩೨	೧೨	7. 0	6 26
	ಸೋಮ	೨	೨೬.೩೧	ಧನಿಷ್ಠಾ	೨೪.೩೦	೧೩	7. 0	6.27
	ಮಂ	೩	೨೩.೪೬	ಶತಭಿಷಾ	೨೩ ೨೮	೧೪	7. 0	6.27
	ಬುಧ	೪	೨೦.೫೯	ಪೂ. ಭಾ.	೨೧.೩೦	೧೫	6.59	6.28
	ಗುರು	೫	೧೯.೩೧	ಉ. ಭಾ.	೨೧.೨೮	೧೬	6.59	6.28
30	ಶುಕ್ರ	೬	೧೯.೧೬	ರೇವತಿ	೨೨.೪೨	೧೭	6.59	6.29

ಮಂಗಳೂರಿನ ವಾಯುಸ್ಥಿತಿ.

(೧೯೨೫ನೆಯ ಮಕರ ಪುಯಿಂತೆಲ್.)

Date ತಾರೀಕು	Temperature. ಉಷ್ಣ (ಕಾವು) Maximum ಹೆಚ್ಚಾದದ್ದು	Minimum ಕಡಿಮೆ	Rainfall. ಮಳೆ ದಿನದ ಮಳೆ	ಜುಮಲಾ ಮಳೆ.
16	91—6	73—2	—	—
17	89—4	72—0	—	—
18	86—1	67—7	—	—
19	87—1	67—8	—	—
20	86—3	68—3	—	—
21	84—8	68—3	—	—
22	85—0	69—4	—	140-89

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ	ವರೆಗೆ
	ರೂ. ಆ.	ರೂ. ಆ.
ಹೊಸ ಮಸ್ಸೂರಿ	8—0	8—12
ಹೊಸ ಗುಡ್ಡ ...	7- 8	7—14
ಹೊಸ ರಾಶಿ ...	6- 14	7— 4
ಅನ್ನಲ್ ಬೆಳ್ತಿಗೆ ...	9- 4	9— 8
ಗುಡ್ಡ ಬೆಳ್ತಿಗೆ ...	8- 4	8—12
ರಂಗೂನು ಬೆಳ್ತಿಗೆ ಗೋಣಿ ೧ ...	15- 0	—
ಗೋಧಿ ಗೋಣಿ ೧ಕ್ಕೆ ...	17- 8	19—8
ಹುರುಳಿಗೋಣಿ ೧ಕ್ಕೆ ...	9- 12	11—8
ಕಡಲೆಗೋಣಿ ೧ಕ್ಕೆ ...	11- 0	11—12
ತೊಗರಿಗೋಣಿ ೧ಕ್ಕೆ ...	12- 0	12—8
ತೊಗರಿಬೇಳೆ ಗೋಣಿ ೧ಕ್ಕೆ ...	13- 8	21—0
ಉದ್ದುಗೋಣಿ ೧ಕ್ಕೆ ...	13- 0	13 8
ಹೆಸರುಗೋಣಿ ೧ಕ್ಕೆ ...	14—0	15—0
ಊರು ಬೆಲ್ಲ ಖಂಡಿ ೧ಕ್ಕೆ ...	60- 0	70—0
ಉಪ್ಪು ಗೋಣಿ ೧ಕ್ಕೆ ...	4—0	4—2
ಕೊಬ್ರಿ ಖಂಡಿ ೧ಕ್ಕೆ ...	130-0	135—0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	46- 0	47—0
ಎಳ್ಳಿಂಡಿ ಖಂಡಿ ೧ಕ್ಕೆ ...	40-0	45—0
ಕೊಬ್ರಿ ಎಣ್ಣೆ ಮಣ ೧ಕ್ಕೆ ...	8—10	9—8
ಎಳ್ಳೆಣ್ಣೆ ಮಣ ೧ಕ್ಕೆ ...	7- 0	11 - 0
ಚಿಮಣಿ ಎಣ್ಣೆ ಪೆಟ್ಟಿಗೆ ೧ಕ್ಕೆ ...	8-15-6	—
ಮೋರಿಸ ಸಕ್ಕರೆ ಮಣ ೧ಕ್ಕೆ ...	—	5—0
ಊರ ಮೆಣಸಿನಕಾಯಿ ಮಣ ೧ಕ್ಕೆ ...	10- 8	—
ಸಾಸಿವೆ ಮುಡಿ ೧ಕ್ಕೆ ...	9- 0	9—2
ಕೊತ್ತುಂಬರಿ ಮುಡಿ ೧ಕ್ಕೆ ...	3- 10	3—14
ಕಾಫಿ ಖಂಡಿ ೧ಕ್ಕೆ ...	410- 0	480—0
ಬಿಳಿಗೋಟು ಅಡಿಕೆ ಖಂಡಿ ೧ಕ್ಕೆ ಹಳತು ...	245- 0	250—0
ಕಾಳುಮೆಣಸು ಖಂಡಿ ೧ಕ್ಕೆ ...	155-0	160—0
ಯಾಲಕ್ಕಿ ಮಣ ೧ಕ್ಕೆ ...	80- 0	85—0
ಗೇರುಬೀಜ ಮುಡಿ ೧ಕ್ಕೆ ...	4—10	5—2
ಕಬ್ಬಿಣ ಖಂಡಿ ೧ಕ್ಕೆ ...	45- 0	65—0
ತಾಂಬ್ರ ತಗಡು ಮಣ ೧ಕ್ಕೆ ...	17-12	23—0
ತಾಮ್ರ ಪಾತ್ರೆಗಳು ಮಣ ೧ಕ್ಕೆ ...	26- 0	—
[illegible] ಸೇರು ೧ಕ್ಕೆ ...	22 — 0	
ಹಿತ್ತಾಳೆ ತಗಡು ಮಣ ೧ಕ್ಕೆ ...	18- 8	
[illegible] ...	14—5	

Pandit B. Ramakrishna Baliga's Siddha Ayurvedic medicines of 50 years' reputation.

ಮಹಾ ಮದನಕಾಮೇಶ್ವರಿ ಲೇಹ—ಇದನ್ನು ಸ್ವರ್ಣ ಭಂಗಾರ, ಅಭ್ರಕಭಸ್ಮ, ರಸಸಿಂಧೂರ, ಕಸ್ತೂರಿ, ಕುಂಕುಮಕೇಸರ ವಗೈರೆ ಅಮೂಲ್ಯವಾದ ರಸಾಯನ ದ್ರವ್ಯಗಳಿಂದ ತಯಾರಿಸಲ್ಪಟ್ಟಿರುತ್ತದೆ. ಇದು ಎಲ್ಲಾ ತರದ ನಪುಂಸಕ ರೋಗಗಳನ್ನು, ಸ್ವಪ್ನಾವಸ್ಥೆಯಲ್ಲಿ ಧಾತುಪತನೆಯನ್ನು ಗುಣಪಡಿಸಿ, ದೇಹಕ್ಕೆ ದಿವ್ಯಕಾಂತಿಯನ್ನೂ, ಶಕ್ತಿಯನ್ನೂ, ಪುರುಷತ್ವವನ್ನೂ, ವೀರ್ಯಸ್ತಂಭನವನ್ನೂ ಉಂಟುಮಾಡಿ ಅತ್ಯಾನಂದವನ್ನು ಕೊಡುವುದಲ್ಲದೆ, ಅಜೀರ್ಣ, ಅತಿಸಾರ, ಗ್ರಹಣಿ, ಅಮ್ಲ, ಪಿತ್ಥ, ಉದರಶೂಲೆ, ಪ್ರಮೇಹ ವಗೈರೆ ರೋಗಗಳನ್ನು ಗುಣಪಡಿಸುವದಲ್ಲಿ ಕೇವಲ ಅಮೃತಸಮಾನವಾಗಿರುವುದು. ಇದನ್ನು ಆಬಾಲವೃದ್ಧರೂ ಸೇವಿಸಬಹುದು.

ಸ್ವರ್ಣ ಮಿಶ್ರಿತ ಲೇಹಕ್ಕೆ (42 ದಿನಗಳ ವರೆಗೆ ಸಾಕಾಗುವ) ಸೇರು ೧ರ ರೂ. 4—0—0.
ಸ್ವರ್ಣ ಇಲ್ಲದ „ „ „ „ 3—0—0.

ಬ್ರಹತ್ ಶಾರಿವ್ಯಾದಿ ರಸಾಯನ—ಇದು ಖಾತ್ರಿಯಿಂದ ರಕ್ತವನ್ನು ಶೋಧಿಸುವ ದಿವ್ಯೌಷಧವಾಗಿರುತ್ತದೆ. ಇದರ ಸೇವನೆಯಿಂದ 20 ತರದ ಪ್ರಮೇಹ ರೋಗಗಳೂ ಎಲ್ಲಾ ತರದ ಫರಂಗಿ ರೋಗಗಳೂ ಅಲ್ಪ ಸಮಯದಲ್ಲಿ ಗುಣಹೊಂದುವವು. ಅದಲ್ಲದೆ ಇದು ಎಲ್ಲಾ ತರದ ಕುಷ್ಠವ್ಯಾಧಿಗಳನ್ನೂ, ಖಜ್ಜಿ, ಉರು ಮೊದಲಾದ ಸಕಲ ಚರ್ಮವ್ಯಾಧಿಗಳನ್ನೂ, ಪಾದರಸ ಸೇವನೆಯಿಂದ ಉಂಟಾದ ರೋಗಗಳನ್ನೂ ಮತ್ತು ಹೆಂಗಸರ ಪ್ರದರ ರೋಗಗಳನ್ನೂ ಖಾತ್ರಿಯಿಂದ ಗುಣಪಡಿಸುವುದು.

8 ಟಿನ್ನಿನ ಬಾಟ್ಲಿ ಒಂದರ ಕ್ರಯ ಬರೇ ರೂ. 1—0—0.

ಧಾರ್ಲಿ ಪರ್ಪಟಕಾದಿ ತೈಲ—(ಸಿದ್ಧ ಇಲ್ಲದವಂಗೆ ಸಿದ್ಧೌಷಧ.) ಇದನ್ನು ತಲೆಗೆ ಹಚ್ಚಿದರೆ ಸಕಲ ಶಿರೋರೋಗಗಳೂ, ಕರ್ಣ, ನೇತ್ರ, ದಂತ, ಜಿಹ್ವಾರೋಗಗಳೂ, ತಲೆ ತಿರುಗುವುದು, ಕಠಿಣವಾದ ತಲೆ ಶೂಲವು ಮೊದಲಾದ ರೋಗಗಳು ನಾಶವಾಗಿ, ಸ್ಮರಣಶಕ್ತಿಯನ್ನೂ, ಜ್ಞಾನಶಕ್ತಿಯನ್ನೂ ವೃದ್ಧಿಗೊಳಿಸುವುದು. ಇದು ವಿದ್ಯಾರ್ಥಿಗಳಿಗೂ ವಕೀಲರಿಗೂ ಒಂದು ಸಿದ್ಧೌಷಧ.

4 ಟಿನ್ನಿನ ಬಾಟ್ಲಿ ೧ರ ರೂಪಾ 1—0—0.

ಕಸ್ತೂರಿ ಮಿಶ್ರಿತ ದಶಮೂಲಾಸವ—ಬಾಣಂತಿಯರಿಗೆ 8 ಟಿನ್ನು ಬಾಟ್ಲಿಗೆ ರೂ. 1—0—0. ಅಮೃತಾರಿಷ್ಟ—ಸಕಲ ಜ್ವರಗಳ ಮೇಲೆ ಬಾಟ್ಲಿಗೆ ರೂ. 0 - 12 - 0. ಚವ್ಯನ ಪ್ರಾಶಲೇಹ—(ದೇಹಪುಷ್ಟಿಗೆ) ಸೇರು ೧ರ ರೂ. 2—0—0. ಅಶೋಕಾರಿಷ್ಟ—(ಹೆಂಗಸರ ರೋಗಗಳ ಮೇಲೆ) 8 ಟಿನ್ನಿನ ಬಾಟ್ಲಿ ೧ರ ರೂ. 1—0—0. ಮಹಾ ಚಂದನಾದಿ ತೈಲ—(ಅಭ್ಯಂಗಕ್ಕೆ ದಿವ್ಯೌಷಧ) 4 ಟಿನ್ನಿನ ಬಾಟ್ಲಿ ೧ರ ರೂ. 1—0—0. ಗೋರೋಚನಾದಿ ಮಾತ್ರೆ—(ಮಕ್ಕಳ ಜೀರ್ಣಕ್ಕೆ) ಡಜನು ೧ರ ಕ್ರಯ ರೂ. 1—0—0.

ಸೂಚನೆ:—ಟಪ್ಪಾಲ ಹಾಸಲು ಪ್ರತ್ಯೇಕ. ಸ್ಥಳೀಕ ಬಡ ಜನರಿಗೆ ಔಷಧವು ಧರ್ಮಾರ್ಥವಾಗಿ ಕೊಡಲ್ಪಡುವುದು.

ವಿಳಾಸ:— ಪಂಡಿತ, ಬಿ. ರಾಮಕೃಷ್ಣ ಬಾಳಿಗ, ಬಂಟವಾಳ ದ. ಕ.

The Canara Public Conveyance Co., Ltd, Mangalore.
(Established 1914).
ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು
- ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು
- ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
- ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
- ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.
- ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂ... ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ—ಈ ಪ್ರಾಂತ್ಯ ಈ ಕಂಪೆನಿಯ ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd, Mangalore.

CHEAPEST HOUSE FOR
NEW YEAR PRESENTS
Pocket
Electric Lamps
In different varieties, Mother of pearl lamps. Cycle lamps.
NICKEL PLATED.
Hammered Brand, with Powerful Bulls-eye lance,
Use with it
Bull's-eye Dry Batteries.
Can be obtained at—
The Mangalore Trading Association,
Car Street, MANGALORE.

ಮಾರಾಟಕ್ಕೆ ಸಿದ್ಧವಿದೆ! ಮಾರಾಟಕ್ಕೆ ಸಿದ್ಧ...

1925ನೇ ವರುಷದ

ಪೋಕೆಟ್ ಡೈರಿ.

ಮುಖ್ಯ ಕವ್ಹೂ ಸಾಕೇಟೂ ಇರುವ ದೊಡ್ಡ ಸೈಜಿನ ಡೈರಿ ೧೪ ಆಣೆ.

ದೊಡ್ಡ ಸೈಜಿನ ಸಾದಾ ಡೈರಿ . ೧೨ ಆಣೆ.

ವಿಳಾಸ— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ವಿದೇಶ ವರ್ತಮಾನ.

ಎಂಬತ್ತೆಂಟು ಅಂತಸ್ತಿನ ಕಟ್ಟಡ:—ಅಮೇರಿಕೆಯ ರಾಜಧಾನಿಯಾದ ನ್ಯೂಯಾರ್ಕಪಟ್ಟಣದಲ್ಲಿ ೫೧ ಅಂತಸ್ತಿನ ಕಟ್ಟಡವೊಂದಿದೆ. ಈಗ ಅದಕ್ಕಿಂತ ಉನ್ನತವಾಗಿ ೮೮ ಅಂತಸ್ತುಗಳ ಬೇರೊಂದು ಕಟ್ಟಡವನ್ನು ಕಟ್ಟಿಸಬೇಕೆಂದು ಅಲ್ಲಿಯ ಪ್ರಸಿದ್ಧ ಇಂಜಿನಿಯರುಗಳು ಪ್ರಯತ್ನಿಸುವರು.

ಒಳದೇಶ ವರ್ತಮಾನ

ಪ್ರಿನ್ಸಿ ಆರ್ಥರ್ ಒಫ್ ಕೊನ್ನಟ್:—ಚಕ್ರವರ್ತಿಯವರ ದ್ವಿತೀಯ ಪುತ್ರ ಪ್ರಿನ್ಸ್ ಆರ್ಥರ್ ಕೊನ್ನಟರು ಮಾರ್ಚ್ ತಾ. ೨ರಲ್ಲಿ ಮದ್ರಾಸಿಗೆ ಬಂದು ತಾ. ೫ರಲ್ಲಿ ಮೈಸೂರಿಗೆ ತೆರಳುವರು.

ಅಪೂರ್ವ ಮಹಾಯೋಗ:—ಬರುವ ಫಾಲ್ಗುಣ ಶುದ್ಧ ದ್ವಾದಶಿ ಶನಿವಾರ ಪುಷ್ಯ ನಕ್ಷತ್ರ ಶೋಭನನಾಮಯೋಗ ಮತ್ತು ಕುಂಭಾರ್ಕ ಧನುರ್ಗುರು ಸಮಾಗಮದಿಂದ ಗೋವಿಂದ ದ್ವಾದಶೀ ಎಂಬ ಅಪೂರ್ವವಾದ ಮಹಾಯೋಗ ಉಂಟಾಗುವುದೆಂದು ಕಾಪು ಕೃಷ್ಣಾಚಾರ್ಯ ಜ್ಯೋತಿಷಿ ಎಂಬವರು ತಿಳಿಯಪಡಿಸುತ್ತಾರೆ.

ಕೇರಳ ಖಿಲಾಫತ್ ಕೊನ್ಫರೆನ್ಸ್:—ಕೇರಳ ಖಿಲಾಫತ್ ಕೊನ್ಫರೆನ್ಸು ಸಧ್ಯದಲ್ಲೆ ಕಲ್ಲಿಕೋಟೆಯಲ್ಲಿ ಮೌಲಾನಾ ಮಹಮ್ಮದಾಲಿಯವರ ಅಧ್ಯಕ್ಷತೆಯಲ್ಲಿ ಸೇರುವುದೆಂದು ವಾರ್ತೆ ಇದೆ.

ಮಹಾತ್ಮರ ಪಾದಮುಟ್ಟಿ ಪ್ರಮಾಣ:—ಮಹಾತ್ಮಾ ಗಾಂಧಿಯವರು ದೋಹಾದಕ್ಕೆ ಹೋಗಿದ್ದ ವೇಳೆಯಲ್ಲಿ ಅಲ್ಲಿಯ ಅಸ್ಪೃಶ್ಯಜನರು ಇನ್ನುಮುಂದೆ ಮದ್ಯಪಾನಮಾಡುವುದಿಲ್ಲವೆಂದು ಮಹಾತ್ಮರ ಪಾದಮುಟ್ಟಿ ಪ್ರಮಾಣಮಾಡಿರುವರಂತೆ.

ಕೋಹಾತದ ಅನಾಥ ಹಿಂದುಗಳಿಗೆ ಸಹಾಯ:—ಕೋಹಾತಿನಲ್ಲಿರುವ ಅನಾಥ ಹಿಂದುಗಳ ಸಹಾಯಾರ್ಥವಾಗಿ ಲಾಲಾ ಲಜಪತರಾಯರು ಏರ್ಪಡಿಸಿದ ಫಂಡಿಗೆ ಅವರು ಮದ್ರಾಸಿನಿಂದ ಕಲ್ಕತ್ತೆಗೆ ಹೋಗಿರುವಾಗ್ಗೆ ರೂ. ೧೫,೦೦೦ಕ್ಕೆ ಮೇಲ್ಪಟ್ಟು ಸಹಾಯ ದೊರೆಕಿತು.

ಚರಕ ಪ್ರಚಾರ:—ಮದ್ರಾಸ್ ಸಂಸ್ಥಾನದ ಯಾವತ್ತೂ ಪ್ರಾಥಮಿಕ ಶಾಲೆಗಳಲ್ಲಿ ಬೇಗನೇ ಚರಕದ ಮೂಲಕ ನೂಲನ್ನು ತೆಗಿಯುವ ಅಭ್ಯಾಸಕ್ರಮವನ್ನು ಜಾರಿಗೆ ತರುವ ಏರ್ಪಾಡು ಮಾಡತಕ್ಕದೆಂಬ ಠರಾವನ್ನು ಮದ್ರಾಸ್ ನ್ಯಾಯವಿಧಾಯಕ ಸಭೆಯ ಮೆಂಬರ ಶ್ರೀಯುತ ಪಂತುಲು ಐಯ್ಯರರು ನ್ಯಾಯವಿಧಾಯಕ ಸಭೆಯ ಅಧಿವೇಶನದ ಮುಂದಿಡುವರು.

ಬಂಗಾಳ ಓರ್ಡಿನೆನ್ಸ ಬಿಲ್ಲು:—ಬಂಗಾಳದ ಗವರ್ನರರಾದ ಲೋರ್ಡ ಲಿಟನರು ಬಂಗಾಳ ಓರ್ಡಿನೆನ್ಸ್ ಬಿಲಿನ ಮೇಲೆ ತಮ್ಮ ಸರ್ಟಿಫಿಕೇಶನ್ ಅಧಿಕಾರವನ್ನು ತೋರಿಸಿದ್ದಾರೆ.

ಸ್ವರಾಜ್ಯ ವಾರದ ಜಮೆ:—ಬಂಗಾಳದಲ್ಲಿ ನಡಿಸಿದ ಸ್ವರಾಜ್ಯ ವಾರದ ನಿಧಿಗೆ ಇನ್ನೂ ಮೂರು ಲಕ್ಷ ರೂಪಾಯಿ ಜಮೆಯಾಗಲಿಲ್ಲ. ಇಷ್ಟು ರಕಮನ್ನು ಈ ತಿಂಗಳ ಅಂತ್ಯದೊಳಗಾಗಿಯೇ ಕೂಡಿಸಬೇಕೆಂಬ ಪ್ರಯತ್ನವು ನಡೆಯುತ್ತಿದೆ.

ಜೈನ ಜಡ್ಜ:—ಧಾರವಾಡದ ಸುಪ್ರಸಿದ್ಧ ವಕೀಲ ಮಿ। ಪಿ. ಎಚ್. ಗುಂಜಾಳರು ಸಬ್ ಜಡ್ಜರಾಗಿ ನೇಮಕಪಟ್ಟಿರುವರು. ಜೈನರಲ್ಲಿ ಈ ಪದವಿಗೆ ಬಂದವರು ಇವರೇ ಮೊದಲನೆಯವರೆಂದು ಕೇಳುತ್ತೇವೆ.

ಮದ್ರಾಸ್ ಕ್ವೀನ್ ಕೊಲೇಜ್:—ಮದ್ರಾಸಿನ ಕ್ವೀನ್ ಮೇರಿ ಕೊಲೇಜಿನ ನೋಟಿಸ್ ಬೋರ್ಡಿನಲ್ಲಿ ವಿವಾಹ ಸಂಬಂಧವಾದ ಒಂದು ಪ್ರಕಟನೆಯು ಪ್ರಕಟವಾದ್ದು ಈ ಮೊದಲು ತಿಳಿಸಿದೆಯಷ್ಟೆ. ಈ ವಿಷಯವಾಗಿ ಡಾಕ್ಟರ್ ಯು. ರಾಮರಾಯರು ಮದ್ರಾಸ್ ನ್ಯಾಯವಿಧಾಯಕ ಸಭೆಯಲ್ಲಿ ಕೆಲವು ಸವಾಲುಗಳನ್ನು ಕೇಳಲಿಕ್ಕಿದ್ದರು. ಆದರೆ ಇಂಥಾ ಸಮಸ್ಯೆಗಳು ಸ್ಥಳೀಕ ರಾಜ್ಯಭಾರದ ಕಾರಭಾರಕ್ಕೆ ಸಂಬಂಧಪಟ್ಟವುಗಳಲ್ಲವೆಂಬ ಸಬಬನ್ನು ತೋರಿಸಿ ಸರಕಾರದವರು ಈ ಪ್ರಶ್ನೆಗಳನ್ನು ಕೇಳಲು ಎಡೆಕೊಡಲಿಲ್ಲವೆಂದು ತಿಳಿಯುತ್ತೇವೆ.

ಮುಂಬಯಿ ಮುನ್ಸಿಪಾಲಿಟಿ:—ಕಳೆದ ತಾ. ೧೯ರಲ್ಲಿ ಮುಂಬಯಿ ಮುನ್ಸಿಪಲ್ ಕೊರ್ಪೊರೇಶನಿನ ಮೀಟಿಂಗು ಸೇರಿ ಮುನ್ಸಿಪಾಲಿಟಿಯಲ್ಲಿರುವ ಮಹಮ್ಮದೀಯ ಬಾಲಿಕೆಯರಿಗೆ ಧರ್ಮಾರ್ಥವಾಗಿ ಕಡ್ಡಾಯದ ಶಿಕ್ಷಣ ಕೊಡಬೇಕೆಂಬ ವಿಷಯವು ಚರ್ಚೆಗೆ ಬಂದು ಯಾವುದಾದರೊಂದು ವಾರ್ಡಿನಲ್ಲಿ ಇದನ್ನು ಈಗ ತಕ್ಕಾಲಕ್ಕೆ ಒಂದು ವರುಷದ ಮಟ್ಟಿಗೆ ಜಾರಿಗೆ ತಂದು ಅನಂತರ ಕ್ರಮೇಣ ಇತರ ವಾರ್ಡುಗಳಲ್ಲೂ ೧೧ ವರುಷಪ್ರಾಯದ ವರೆಗಿನ ಬಾಲಿಕೆಯರಿಗೆ ಕಡ್ಡಾಯದ ಮುಫ್ತಿ ಶಿಕ್ಷಣಕೊಡಬೇಕೆಂಬ ಠರಾವು ಪಾಸಾಗಿದೆ.

ಪ್ಲೇಗ್:—ಕಲ್ಲಿಕೋಟೆಯಲ್ಲಿ ಪ್ಲೇಗು ರೋಗವು ತಲೆ ಎತ್ತಿದೆ. ಸೆಲಮಿನಲ್ಲಿ ಪ್ಲೇಗು ಬಹಳ ಹಾವಳಿಯನ್ನು ನಡಿಸುತ್ತಿರುವುದರಿಂದ ಅಲ್ಲಿಯ ಯಾವತ್ತೂ ಶಾಲೆಗಳೂ ಕೊಲೇಜೂ ಬಂದು ಮಾಡಲ್ಪಟ್ಟಿವೆ. ಕಳೆದ ತಾ. ೧೯ರಲ್ಲಿ ಶಾಲೆಗಳನ್ನು ಪುನಃ ಪ್ರಾರಂಭಿಸಬೇಕೆಂದು ಯೋಚಿಸಿದ್ದರೂ ಪ್ಲೇಗಿನ ಉಪಟಳವು ಇನ್ನೂ ಶಾಂತವಾಗಲಿಲ್ಲವಾದ್ದರಿಂದ ಶಾಲೆಗಳಿಗೆ ಇನ್ನೆರಡು ವಾರಗಳ ರಜೆಯು ಕೊಡೋಣಾಗಿದೆ.

ಕೌನ್ಸಿಲ್ ಒಫ್ ಸ್ಟೇಟ್ ಮೆಂಬರಿಕೆಗೆ ಉಮೇದ್ವಾರರು:—ನಾಮದಾರ ಶ್ರೀನಿವಾಸ ಶಾಸ್ತ್ರಿಯವರು ರಾಜಿನಾಮೆಕೊಟ್ಟ ಕೌನ್ಸಿಲ್ ಒಫ್ ಸ್ಟೇಟ್ ಮೆಂಬರಿಕೆಗೆ ಮಲಬಾರದ ಲೆಪ್ಟನೆಂಟ ಕರ್ನಲ್ ಅವಲಪಾಟಾ ಮೂಪಿಲ್‌ನಾಯರರೂ ಒಬ್ಬ ಉಮೇದ್ವಾರರಾಗಿ ನಿಂತಿದ್ದಾರೆಂದು ತಿಳಿಯುತ್ತೇವೆ.

ದಕ್ಷಿಣ ಕನ್ನಡ

ಮೊಗ್ರಾಲ್:—ಮೌಲಾನಾ ಮಹಮ್ಮದಲ್ಲಿಯವರು ಕೇರಳ ಖಿಲಾಫತ್ ಕೊನ್ಫರೆನ್ಸಿಗೆ ಅಧ್ಯಕ್ಷರಾಗಿ ಕಲ್ಲಿಕೋಟೆಗೆ ಬರುವರಾಗಿ ತಿಳಿದಿದ್ದರಿಂದ ಆ ಸಮಯ ಮೊಗ್ರಾಲ್ ಜಮಾತ್ ಶಾಲೆಯ ವಿದ್ಯಾರ್ಥಿಗಳ ಮಹಾಸಭೆಯನ್ನು ಮೌಲಾನರವರ ಅಧ್ಯಕ್ಷತೆಯಲ್ಲಿ ಜರಗಿಸಬೇಕೆಂಬ ಮೊಗ್ರಾಲ್ ನಿವಾಸಿಗಳ ಅಪೇಕ್ಷೆ ಕುರಿತು ಆಲೋಚಿಸುವದಕ್ಕೆ ೧೯೨೫ನೇ ಫೆಬ್ರವರಿ ತಿಂಗಳ ತಾ. ೧ನೇ ಆದಿತ್ಯವಾರ ಹಗಲು ೨ ಗಂಟೆಗೆ ಕುಂಬಳೆ ಪೈಕ್ಸೆ ಆಫೀಸಿನ ಬ್ರಿ। ರಾ। ಇಬ್ರಾಹಿಂರವರ ಬಂಗ್ಲೆಯಲ್ಲಿ ಸಭೆಕೂಡುವುದು.

ಉಡುಪಿ:—ಮಹಿಸೂರು ಜಹಗೀರ್‌ದಾರ್ ಪೂರ್ಣಯ್ಯನವರ ಧರ್ಮಪತ್ನಿಯವರು ಸಪರಿವಾರರಾಗಿ ಚಿತ್ತಯಿಸಿ ದೇವತಾ ದರ್ಶನಾದಿಗಳನ್ನು ಮಾಡಿ ಶ್ರೀ ಕೃಷ್ಣದೇವರಿಗೆ ಸುವರ್ಣ ಮಾಲಾ ರತ್ನಖಚಿತ ಪದಕವೂ ಜರತಾರಿ ಪೀತಾಂಬರ ಮೊದಲಾದದ್ದನ್ನು ಅರ್ಪಿಸಿದ್ದಲ್ಲದೆ ವರ್ಷಾವಧಿಯ ಮಕರ ಸಂಕ್ರಾಂತಿ ಉತ್ಸವದಂತೆಯೇ ಇದೇ ತಾ. ೨೦ನೇ ಮಂಗಳವಾರ ಆರಂಭಿಸಿ ಅತಿ ವಿಜೃಂಭಣೆಯಿಂದ ಸಪ್ತದಿವಸೋತ್ಸವವನ್ನು ಮಾಡಿಸಿ ಅವಭೃತ ಕೂಡ ಮಾಡಿಸುವವರಿದ್ದಾರಾಗಿ ವದಂತಿ ಇದೆ. ಸುಮಾರು ೫೦ ವರ್ಷಗಳ ಹಿಂದೆ ಕುಂಜಿತ್ತಾಯ ಲಕ್ಷ್ಮೀನಾರಾಯಣಾಚಾರ್ಯರೆಂಬವರು ಇದರಂತೆ ಸಪ್ತದಿನೋತ್ಸವ, ಚೂರ್ಣೋತ್ಸವ ಅವಭೃತಾದಿಗಳನ್ನು ಮಾಡಿಸಿರುವರಂತೆ. ಇಂಥಾ ಉತ್ಸವಾದಿಗಳನ್ನು ಮಾಡಿಸಿ ಕೃತಾರ್ಥರಾಗಬೇಕಾದರೆ ಮಹಾ ಪುಣ್ಯಶಾಲಿಗಳಾಗಿರಬೇಕೆಂಬುವದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಇಂಥಾ ಉತ್ಸವಾದಿಗಳನ್ನು ನೋಡುವವರಿಗೂ ಪುಣ್ಯಬೇಕು.

ಬಂಟ್ವಾಳ:—ಇಲ್ಲಿ 'ಬೇಬಿ ಹೆಲ್ತ ವೀಕ್' ಸಪ್ತಾಹವು ಇದೇ ತಿಂಗಳ ತಾ. ೧೫ರಿಂದ ೧೮ರ ವರೆಗೆ ಬಹಳ ಸಂಭ್ರಮದಿಂದ ಜರಗಿತು. ತಾ. ೧೫ರಲ್ಲಿ ಬೋರ್ಡು ಗರ್ಲ್‌ಸ್ಕೂಲಿನಲ್ಲಿ ಇಲ್ಲಿಯ ಮೆಡಿಕಲ್ ಅಫೀಸರರ ಅಧ್ಯಕ್ಷತೆಯಲ್ಲಿ ಮಾನ್ಯ ಸ್ತ್ರೀಪುರುಷರು ಸಭೆ ಸೇರಿ ಹೆಲ್ತ ಇನ್ಸಪೆಕ್ಟರ್ ಶ್ರೀಯುತ ಸುಬ್ರಮಣ್ಯ ಅಯ್ಯರವರು ಆರೋಗ್ಯದ ಸಂಬಂಧ ಮುಖ್ಯ ಮುಖ್ಯ ಸಂಗತಿಗಳನ್ನು ಅನುಸರಿಸಿ ಭಾಷಣಮಿತ್ತರು. ತಾರೀಕು ೧೬ರಲ್ಲು ಅದೇ ಶಾಲೆಯಲ್ಲಿ ಶಿಶುಪ್ರದರ್ಶನವಾಯಿತು. ಇದರಲ್ಲಿ ಪ್ರತಿ ಬ್ರಾಹ್ಮಣ ಶೂದ್ರ ಕ್ರೈಸ್ತ ಆದಿದ್ರಾವಿಡರ ಸುಲಕ್ಷಣವಿದ್ದು ಆರೋಗ್ಯದಲ್ಲಿದ್ದ ನಾಲ್ಕೈದು ಮಕ್ಕಳಿಗೆ ಬೆಳ್ಳಿಯ ಒಡವೆ ಸಿಲ್ಕಿನ ಮತ್ತು ನೂಲಿನ ಒಳ್ಳೆ ಬಟ್ಟೆಗಳು ಕಮಿಟಿಯವರ ಶಿಫಾರಸಿನ ಮೇರೆಗೆ ಹಂಚೋಣಾಯಿತು. ಅನಂತರ ರಾ। ಖಂಡಿತ ಸರ್ವೋತ್ತಮ ಬಾಳಿಗರ ಮಗ ರಾ। ಬಿ. ವಿ. ಬಾಳಿಗರವರ ಹರಿಕಥೆಯು ನಡೆಯಿತು. ಹರಿಕಥೆಯ ಮುಖ್ಯ ಸಾರಾಂಶವು ಪೂರಾ ಆರೋಗ್ಯಸಂಬಂಧವಾಗಿತ್ತು. ಇದರಲ್ಲಿ ಹೆತ್ತ ತಂದೆತಾಯಿಗಳು ದಿನವಹಿ ಮಾಡಬೇಕಾದ ಕರ್ಮಾನುಷ್ಠಾನುಗಳೂ ಅವರ ಪೋಷಣೆಗಳೂ ಆಯುರ್ವೇದಕ್ಕನುಸಾರವಾಗಿ ವಿವರಿಸಿದರು. ಇದಕ್ಕಾಗಿ ಇವರು ತಾವೇ ತಯಾರಿಸಿ ಹಾಡಿದ ಕೆಲವು ಪದ್ಯಗಳು ಬಹಳ ಕರ್ಣಾನಂದವಾಗಿತ್ತು. ಮಧ್ಯಮಧ್ಯದಲ್ಲಿ ಗದಗಿನ ಗಾಯನಪ್ರವೀಣ ವೀರಸೆಟ್ಟಿ ಹಾಡುಗಳೂ ಇತ್ತು. ಅನಂತರ ಮಕ್ಕಳಿಗೆ ಪೆಪ್ಪರ್‌ಮಿಠಾಯಿ ಹಂಚಿ ಸಭೆ ಅಗಲಿತು. ತಾ. ೧೭ಕ್ಕೆ ಆಸ್ಪತ್ರೆ ಕಂಪೌಂಡಿನಲ್ಲಿ ಇಲ್ಲಿಯ ಟೆಂಪಲ್ ಎಲಿಮೆಂಟರಿ ಮತ್ತು ಸೆಕೆಂಡರಿ ಶಾಲೆಯ ಮತ್ತು ಬೋರ್ಡು ಗರ್ಲ್ಸ್‌ಸ್ಕೂಲಿನ ಬಾಲಬಾಲಿಕೆಯರಿಂದ ತರತರದ ಪಂದ್ಯಾಟಗಳನ್ನು ಆಡಿಸಿ ಯೋಗ್ಯ ಇನಾಮುಗಳನ್ನು ಹಂಚೋಣಾಯಿತು. ತಾ. ೧೮ಕ್ಕೆ ಆಸ್ಪತ್ರೆ ಕಂಪೌಂಡಿನಲ್ಲಿ ತುಂಬಾ ಮಹಿಳೆಯರೂ, ಬಾಲಕರೂ, ಮಾನ್ಯ ಗೃಹಸ್ಥರೂ ಕೂಡಿದ್ದರು. ಆಗ್ಗೆ ರಾ। ಕೊಡಿಯಾಲ ಶ್ರೀಯುತ ಅನಂತರಾಯರು, ಸ್ತ್ರೀಪುರುಷರು ತಾವು ದಿನವಹಿಯಲ್ಲಿ ನಡೆಯತಕ್ಕ ಚರ್ಯೆಯನ್ನು ಆರೋಗ್ಯಸೂತ್ರವನ್ನನುಸರಿಸಿ ನಡಿಸಬೇಕಾಗಿ ಭಾಷಣವನ್ನು ಕೊಟ್ಟಬಳಿಕ ಸರ್ವಾಧ್ಯದಿಂದ ಪೇಟೆಗೆ ಮಕ್ಕಳ ಮೆರವಣಿಗೆ ಆದನಂತರ ಬಂದ ಸಭಿಕರಿಗೆ ಮಿಠಾಯಿ ತಾಂಬೂಲಗಳನ್ನು ಹಂಚಿದ ಬಳಿಕ ಇಲ್ಲಿಯ ಡಾಕ್ಟರ್ ಹಬ್ಬಲಿಸಿನ ಕಟ್ಟೆ ಕೃಷ್ಣಪೈಗಳು ಒಂದು ರಿಪೋರ್ಟು ಓದಿದನಂತರ ಸಭೆ ಅಗಲಿತು.

ಕುಂಬಳೆ:—ಇಲ್ಲಿಯ ಬೋರ್ಡು ಬಾಲಿಕಾ ಪಾಠಶಾಲೆಯ ವರ್ಷವರ್ಧಂತಿಯು ಕಳೆದ ೧೮ರಲ್ಲಿ ತಾಲೂಕು ಬೋರ್ಡು ವೈಸಪ್ರೆಸಿಡೆಂಟರಾದ ಮ. ರಾ. ಕೆ. ನರಸಿಂಗ ಶ್ಯಾನುಭೋಗರವರ ಅಧ್ಯಕ್ಷತೆಯಿಂದ ಸದರಿ ಶಾಲಾ ಕಟ್ಟೋಣದಲ್ಲಿ ಜರಗಿತು. ಕೆನರಾ ಗರ್ಲ್ಸ್ ರೇಂಜಿನ ಸಬ್ ಅಸಿಸ್ಟಂಟ ಇನ್ಸಪೆಕ್ಟರವರು ಈ ಸಮಾರಂಭಕ್ಕೆ ದಯಮಾಡಿಸಿದ್ದು ಸಭೆಯಲ್ಲಿ ವಿದ್ಯಾರ್ಥಿಗಳಿಂದ ವಿವಿಧ ಆಟಗಳನ್ನಾಡಿಸಿ ಬೇರೆ ಬೇರೆ ತರದ ಇನಾಮುಗಳನ್ನು ಹಂಚಿದನಂತರ ಸಭೆಯು ಕೊನೆಗಂಡಿತು.

ಇಲ್ಲಿಯ ವರ್ಷಾವಧಿ ಜಾತ್ರೆಯು ಇದೇ ತಾ. ೧೩ರಿಂದ ತಾ. ೧೭ರ ತನಕ ಸಾಂಗ್ಯವಾಗಿ ನೆರವೇರಿತು. ಈ ವರ್ಷದ ಜಾತ್ರೆ ಸಮಯ ಪೋಲೀಸಿನವರು ಯಾವತರದ ಸುಲಿಗೆಯ ಆಟಗಳಿಗೂ ಎಡೆಕೊಡದೆ ಸರಿಯಾದ ಬಂದೋಬಸ್ತು ಮಾಡಿ ಇಟ್ಟದ್ದು ತುಂಬಾ ಶ್ಲಾಘನೀಯವಾಗಿದೆ.

ಇಲ್ಲಿಗೆ ಸಮೀಪ ಅನಂತಪುರದಲ್ಲಿ ಕೆಲವು ದಿವಸಗಳ ಹಿಂದೆ ದತ್ತಾವತಾರದ ರಾಮಾಯಣಮಾಡುವ ಸಮಯ ಪೋಲಿಸಿನವರು ಹೆಚ್ಚಿನ ಪ್ರಯತ್ನದಿಂದ ಗುಂಡುಕಟ್ಟಳೆಯಾಟವಾಡುತ್ತಿದ್ದ ಕೆಲವರನ್ನು ಹಿಡಿದು ನಂಬ್ರ ಮಾಡಿರುವರು.

ಅಲತ ತೂಕ ಸಾಧನೆಗಳಿಗೆ ಮೊಹರು ಹಾಕುವವರು ಈ ಮೊದಲೆ ಕಾಸರಗೋಡಿನಲ್ಲಿ ಮೊಕ್ಕಾಂ ಮಾಡಿದ್ದಾಗ್ಯೂ ಇನ್ನೂ ಇಲ್ಲಿಯ ಕೆಲವರು ಮೊಹರು ಮಾಡಿಸದಿರುವುದು ಆಶ್ಚರ್ಯ!

— ಬಾವ್ಲಾ ಇವರ ಕೊಲೆ. —

ಕಳೆದ ತಾ. ೧೨ನೆಯ ಸಾಯಂಕಾಲ ಮುಂಬಯಿ ಪಟ್ಟಣದ ಚೌಪಾಟಿ ಮಾರ್ಗವಾಗಿ ಮಲಬಾರ್ ಹಿಲ್ಲಿನ ಕಡೆಗೆ ಮೋಟಾರ್ ಬಂಡಿಯಲ್ಲಿ ಕಾಳಿಕಟು ಮುಂಬಯಿ ಕೊರ್ಪೊರೇಶನಿನ ಮೆಂಬರರಾದ ಮಿ। ಬಾವ್ಲಾ ಎಂಬವರು ಹೋಗುತ್ತಿರುವಾಗ ಇವರ ಮೋಟಾರಿಗೆ ಥಟ್ಟನೆ ಇನ್ನೊಂದು ಮೋಟಾರು ಇದಿರಾಗಿ ಬಂದು ಅದರೊಳಗಿಂದ ಐವರು ದುಷ್ಟರು ಕೆಳಗಿಳಿದು ಮಿ। ಬಾವ್ಲರನ್ನು ಬಹಳವಾಗಿ ಜಖಂಪಡಿಸಿದ್ದಲ್ಲದೆ ಅವರೊಡನೆ ಗಾಡಿಯಲ್ಲಿದ್ದ ಮುಮ್ತಾಜ್ ಬೇಗಮ್ಮ ಎಂಬ ಮಹಿಳೆಯನ್ನೂ ಮೋಟಾರಿನವನನ್ನೂ ಗಾಯಪಡಿಸಿದರಂತೆ. ಏತನ್ಮಧ್ಯೆ ಅಲ್ಲಿಗೆ ನಾಲ್ವರು ಯುರೋಪಿಯನರು ಬಂದು ಘಾತಕಕಾರ್ಯವನ್ನು ನಡಿಸಿದವರಲ್ಲಿ ಒಬ್ಬನನ್ನು ಸೆರೆಹಿಡಿದು ಗಾಯಹೊಂದಿದವರೆಲ್ಲರನ್ನೂ ಆಸ್ಪತ್ರೆಗೆ ಒಯ್ದಾಗ ಮಿ। ಬಾವ್ಲಾರವರು ಕೂಡಲೆ ಆಸ್ಪತ್ರೆಯಲ್ಲಿ ಮೃತ್ಯುವಶರಾದರಂತೆ. ಮಿ। ಬಾವ್ಲಾರವರು ಮುಮ್ತಾಜ್ ಬೇಗಮ್ಮಳಿಗೆ ಒಂದು ಲಕ್ಷರೂಪಾಯಿಯನ್ನೂ ಕೊಂದ ತನ್ನ ಆಸ್ತಿಯನ್ನು ತನ್ನ ತಾಯಿಗೂ ಬಿಟ್ಟಿರುವರಾಗಿ ವರ್ತಮಾನವಿದೆ. ಈ ಘೋರ ಕೃತ್ಯವನ್ನು ನಡಿಸಿದವರ ಪತ್ತೆಮಾಡಿದವರಿಗೆ ಸರಕಾರದವರು ರೂ. ೧೦,೦೦೦ ವನ್ನು ಬಹುಮಾನವಾಗಿ ಕೊಡಲಿಕ್ಕಿದ್ದಾರೆ. ಮುಮ್ತಾಜಳು ಮೊದಲು ಇಂದೋರ್ ಸಂಸ್ಥಾನದಲ್ಲಿದ್ದ ವೇಶ್ಯೆಯಾಗಿದ್ದಳಂತೆ. ಈ ಘೋರ ಕಾರ್ಯದಲ್ಲಿ ಅನೇಕ ಶ್ರೀಮಂತರೂ ಭಾಗಿಗಳಾಗಿದ್ದಾರೆಂಬ ವದಂತಿ ಇದೆ. ಈ ವರೆಗೆ ಹಲವರನ್ನು ಕೈದುಮಾಡಿದೆ. ಮುಂದಿನ ಚೌಕಸಿಯು ನಡೆಯುತ್ತಲೇ ಇದೆ.

ವಿವಿಧ ವಿಷಯ.

ಪಿರಾನೀಸ್ ಪರ್ವತ ಗುಹಾಂತರ್ಭಾಗದಲ್ಲಿ ಅಗಾಧವಾದ ಪ್ರವಾಹವಿರುವುದು. ಟೊಲೂಸ ವಿಶ್ವವಿದ್ಯಾಲಯದ ನಾರ್ಬರ್ಟ ಕ್ಯಾಸ್ಟರೆಟ್ ಎಂಬ ಫ್ರೆಂಚ್ ಯುವಕನೊಬ್ಬನು ಈ ಪ್ರವಾಹದಲ್ಲಿ ಒಂದೂವರೆ ಮೈಲು ಸಮುದ್ರದ ಈಜಾಡಿ ಜಲಾಂತರ್ಭಾಗಕ್ಕಿಂತಲೂ ಕೆಳಭಾಗದಲ್ಲಿರುವ ಪರ್ವತ ಗುಹಪ್ರದೇಶವನ್ನು ಸೇರಿದನಂತೆ. ಆ ಪ್ರದೇಶವು ಸುಮಾರು ೨೫೦ ಅಡಿ ಉದ್ದವಾಗಿರುವುದು. ಆ ಪ್ರದೇಶದಲ್ಲಿ ವಿಧವಿಧವಾದ ಶಿಲ್ಪಿಯ ವಿಚಿತ್ರ ಪ್ರತಿಮೆಗಳಿರುವವಂತೆ. ಶಾಸ್ತ್ರಜ್ಞರು ೨೫,೦೦೦ ಸಹಸ್ರ ಸಂವತ್ಸರಗಳ ಹಿಂದಿನ ಕಾಲದಲ್ಲಿ ಕೆತ್ತಲ್ಪಟ್ಟವೆಂಬದಾಗಿ ಅಂದಾಜುಮಾಡಿರುತ್ತಾರೆ. ಈ ಕ್ಯಾಸ್ಟರೆಟ್ ಎಂಬವನು ಫ್ರಾನ್ಸ್‌ದೇಶದಲ್ಲಿ ಈಜಾಡಬಲ್ಲವರಲ್ಲೆಲ್ಲಾ ಬಹು ನಿಪುಣನು.

ಚಂದ್ರಮಂಡಲಕ್ಕೆ ಒಂದು ವಿಶೇಷ ತರದ ಬಾಣವನ್ನು ಬಿಟ್ಟು, ಅದು ಅಲ್ಲಿ ತಲುಪಿದುದನ್ನು ಖಂಡಿತಪಡಿಸಲು ತಕ್ಕ ತರದೊಂದನ್ನು ಅಮೇರಿಕೆಯ ಒಬ್ಬ ಶಾಸ್ತ್ರಜ್ಞನು ಕಂಡುಹಿಡಿದಿದ್ದರೂ, ಇದುವರೆಗೂ ಅದು ಪರೀಕ್ಷಿಸಲ್ಪಡಲಿಲ್ಲ. ಈಗ ಒಬ್ಬ ಜರ್ಮನ್ ಶಾಸ್ತ್ರಜ್ಞನು, ಬಾಣದ ಒಳಗಿಯಲ್ಲಿ ಇಬ್ಬರು ಮನುಷ್ಯರನ್ನು ಕಳುಹಿಸುವುದು ಸಾಧ್ಯವೆಂತಲೂ, ಆದರೆ ಬಾಣವು ೩ ಟನ್ ತೂಕವಿರುವುದಕ್ಕೆ ಬದಲಾಗಿ ೪೦೦ ಟನ್‌ಗಳ ತೂಕವಿರುವುದೆಂದೂ, ಚಂದ್ರಮಂಡಲವನ್ನು ತಲುಪಿದ ಮೇಲೆ, ಅದರಲ್ಲಿರುವವರು ಅಲ್ಲಿನ ವಿಷಯಗಳನ್ನು ತಿಳಿದುಕೊಂಡು, ಅದೇ ಬಾಣದಲ್ಲಿ ಕುಳಿತು ವಾಪಸು ಭೂಮಂಡಲವನ್ನು ಸೇರಲು ಸಾಧ್ಯವೆಂದೂ, ಈ ಜರ್ಮನ್ ಶಾಸ್ತ್ರಜ್ಞನು ಹೇಳುತ್ತಾನೆ.

ಪಾಶ್ಚಾತ್ಯ ದೇಶಗಳಲ್ಲಿ ಯಾರ ವಶವಾದರೂ ಅವರಿಗೆ ಅನೇಕ ಕಷ್ಟಗಳನ್ನುಂಟುಮಾಡುತ್ತಿರುವುದಾಗಿ ತಿಳಿಯಬಂದಿರುವ ವಜ್ರವು ಪೂರ್ವದಲ್ಲಿ ಭರತಖಂಡದ ಒಂದಾನೊಂದು ಸುಪ್ರಸಿದ್ಧ ದೇವಸ್ಥಾನದಲ್ಲಿ ದೇವರ ಸ್ವತ್ತಾಗಿದ್ದು ಕಳವು ಮಾಡಲ್ಪಟ್ಟು ಫ್ರಾನ್ಸ್‌ದೇಶಕ್ಕೆ ಒಯ್ಯಲ್ಪಟ್ಟುದಾಗಿರುತ್ತದೆ. ಈ ವಜ್ರವು ಲೋಕೋತ್ತರವಾದ ಕಾಂತಿಯುಳ್ಳದ್ದಾಗಿರುವುದರಿಂದ ಫ್ರಾನ್ಸ್‌ದೇಶದ ರಾಣಿಯಾಗಿದ್ದ ಮೇರಿಅಂಟೋಯನೈಟ್ ಎಂಬಾಕೆಯು ಮೋಹಿಸಿ ತನ್ನ ಕಂಠಾಭರಣದಲ್ಲಿ ಸೇರಿಸಿ ಧರಿಸುತ್ತಿದ್ದುದರಿಂದ ಆಕೆಯು ರಾಜದ್ರೋಹ ಶಿಕ್ಷೆಗೆ ಗುರಿಯಾಗಿ ಶಿರಚ್ಛೇದಿಸಲ್ಪಟ್ಟಳು. ಅಲ್ಲಿಂದ ಆ ವಜ್ರವು ರಷ್ಯಾದೇಶದ ರಾಜಪುತ್ರನಾದ ಕಾನಿಟೋಸಿ ಎಂಬುವನ ವಶವಾಗಿ ಆತನನ್ನು ರಾಜದ್ರೋಹಿಗಳಿಂದ ಕೊಲ್ಲಿಸಿತು. ತರುವಾಯ ಗ್ರೀಕ್‌ದೇಶದ ವರ್ತಕನ ಕೈಸೇರಲು ಅವನು ತನ್ನ ಪತ್ನಿಪುತ್ರಾದಿಗಳೊಡನೆ ಅಪಾಯಕ್ಕೆ ಗುರಿಯಾಗಿ ಸತ್ತನು. ತುರ್ಕಿರಾಜ್ಯದ ಸುಲ್ತಾನರಾಗಿದ್ದ ಅಬ್ದುಲ್ ಮಜೀದ್‌ರವರು ಆ ವಜ್ರವನ್ನು ಮೋಹಿಸಿ ತಮ್ಮ ಕಂಠಾಭರಣದಲ್ಲಿ ಧರಿಸಲು ಪದಚ್ಯುತರಾಗಿ ದೇಶಾಂತರವನ್ನು ಹೊಂದಿದರು. ಅಲ್ಲಿಂದ ಒಬ್ಬ ಫಾರ್ಸಿ ವರ್ತಕನ ಕೈಸೇರಿದುದರಿಂದ ಅವನು ಹಡಗಿನಲ್ಲಿ ಪ್ರಯಾಣ ಮಾಡುತ್ತಿರುವಾಗ್ಗೆ ನೀರಿನಲ್ಲಿ ಮುಳುಗಿಹೋದನು. ಅನಂತರ ಅಮೇರಿಕೆಯ ಒಬ್ಬ ಕೋಟ್ಯಾಧೀಶ್ವರನ ವಶವಾಗಲು ಅವನ ಹೆಂಡತಿಯೂ ಮಗನೂ ಮೋಟಾರುಬಂಡಿಯಪಾಯಕ್ಕೆ ಸಿಲುಕಿ ಸತ್ತರು. ಕಡೆಯಲ್ಲಿ ನಾಟಕಾಭಿನಯದಲ್ಲಿ ಸುಪ್ರಸಿದ್ಧೆಯಾದ ಮೇಯೋಪ್ ಎಂಬಾಕೆಯ ವಶವಾಗಿರುವುದರಿಂದ ಆಕೆಯ ಗಂಡನಾದ ಕ್ಯಾಪ್ಟನ್ ಸ್ಮಿತ್ ಎಂಬಾತನು ಕೆಲದಿನಗಳಲ್ಲಿ ಗುಂಡಿನೇಟನ್ನು ತಿಂದು ಮೃತನಾದುದಾಗಿ ತಿಳಿಯಬಂದಿತು.

ಕೋತಿಗಳ ಶರೀರದಲ್ಲಿರುವ ಒಂದು ವಿಧವಾದ ಗ್ರಂಥಿಯನ್ನು ತೆಗೆದು ಮನುಷ್ಯರ ಶರೀರದೊಳಗೆ ಸೇರಿಸುವುದರಿಂದ ವೃದ್ಧರೂ ತರುಣರಾಗುತ್ತಾರೆಂದು ಕೆಲ ಪಾಶ್ಚಾತ್ಯ ವೈದ್ಯರು ಕಂಡುಹಿಡಿದು ಅದರಂತೆ ಅನೇಕ ಪ್ರಯೋಗಗಳನ್ನು ಮಾಡುತ್ತಿದ್ದಾರಾದುದರಿಂದ, ಈ ಗ್ರಂಥಿಗಳನ್ನು ಕೋತಿಗಳ ಶರೀರದಿಂದ ತೆಗೆಯುವುದಕ್ಕಾಗಿ ಸಾವಿರಾರು ಕೋತಿಗಳು ಭರತಖಂಡದಿಂದ ಹಡಗಿನಲ್ಲಿ ಸಾಗಿಸಲ್ಪಡುತ್ತಿರುವುವು.

ಬೆಳಗಾಂವಿ ರಾಷ್ಟ್ರೀಯ ಮಹಾಸಭೆಯ ಆದಾಯ—ವ್ಯಯ.

ಆದಾಯ—೧,೯೭,೦೦೦ ರೂಪಾಯಿ; ವ್ಯಯ ೧,೬೦,೦೦೦ ರೂಪಾಯಿ.

ಸಭಾಶಾಲೆಗೆ ರೂ. ೧೩,೦೦೦ ಶಿಬಿರಗಳಿಗೆ ೫೦,೦೦೦ ರೂ. ನೀರಿನ ಕೊಳಾಯಿಗಳಿಗೆ ರೂ. ೨೦,೦೦೦ ವಿದ್ಯುದ್ದೀಪಗಳಿಗೆ ೧೧,೦೦೦ ಕುರ್ಚಿಕರಡಕ್ಕೆ ೬,೦೦೦ ರೂ. ಊಟದೇರ್ಪಾಡಿಗೂ ಆಹಾರ ಸಾಮಗ್ರಿಗಳಿಗೂ ರೂ. ೩೦,೦೦೦ ಮುದ್ರಣಕ್ಕೆ ೫೦೦೦ ರೂ. ಸ್ವಯಂಸೇವಕ ದಳಕ್ಕಾ ಗೋಪುರ ಮತ್ತು ಇತರ ಅಲಂಕಾರಗಳಿಗೂ ೧೫,೦೦೦ರೂ. ಇತರ ಸಾಮಾನ್ಯ ವೆಚ್ಚಕ್ಕೆ ೧೦,೦೦೦ ಒಟ್ಟು ೧,೬೦,೦೦೦ ರೂ. ವ್ಯಯವಾಗಿರುತ್ತದೆ.

ಆದಾಯ.

ಸ್ವಾಗತಸಂಘಸದಸ್ಯರುಗಳ ಫೀಯಿಂದ ೧,೧೫,೦೦೦ ರೂ. (ಇವರಲ್ಲಿ ೧೫ ಮಂದಿ ಕರ್ನಾಟಕಸ್ಥರು ಸೇರಿ ೧೦೦೦೦ ರೂ. ಕೊಟ್ಟಿರುತ್ತಾರೆ). ಪ್ರತಿನಿಧಿಗಳ ಫೀ ಬಾಬತು ಸಹ್ಯಾನ ಸಂಘದವರಲ್ಲದವರು ೯೦೦೦ ರೂ. ಅಲ್ಲದೆ ಭೋಜನದ ಚೀಟಿಗಳಿಂದ ೬,೦೦೦, ಪ್ರೇಕ್ಷಕರ ಫೀಯಿಂದ ೩೦,೦೦೦, ಪ್ರದರ್ಶನ ಫೀಯಿಂದ ೮,೦೦೦, ಪದಾರ್ಥಗಳ ವಿಕ್ರಯದಿಂದ ೨೦,೦೦೦ ರೂ. ಒಟ್ಟು ೧,೯೭,೦೦೦ ರೂ.

ಪ್ರತಿನಿಧಿಗಳೂ ಪ್ರೇಕ್ಷಕರೂ.

ಮಹಾಸಭೆಗೆ ಬಂದಿದ್ದವರ ಸಂಖ್ಯೆ ೧೧,೦೦೦ ಇದರಲ್ಲಿ ಪ್ರೇಕ್ಷಕರು ೩,೮೦೦ ಜನ, ಇವರಲ್ಲಿ ಸ್ವಾಗತ ಸಂಘಸಭ್ಯರು ೪,೬೦೦, ಆಹ್ವಾನಿಸಲ್ಪಟ್ಟವರು ಮತ್ತು ಪತ್ರಿಕಾಪ್ರತಿನಿಧಿಗಳು ೧,೩೦೦, ಡೆಲಿಗೇಟುಗಳು ೧,೮೧೦.

ಪ್ರತಿನಿಧಿಗಳ ವಿವರ.

ಪಂಜಾಬಿನಿಂದ ೧೯೨, ಸಂಯುಕ್ತ ರಾಜ್ಯದಿಂದ ೧೮೩, ಮಧ್ಯ ರಾಷ್ಟ್ರದಿಂದ (ಹಿಂದಿ) ೩೯, ಬೀಹಾರದಿಂದ ೩೩, ಗುಜರಾತಿನಿಂದ ೨೩೬, ಆಂಧ್ರದೇಶದಿಂದ ೩೧೭, ಬಂಗಾಳ ಪ್ರಾಂತದಿಂದ ೪೭, ಮಹಾರಾಷ್ಟ್ರದೇಶದಿಂದ ೨೫೦, ದ್ರಾವಿಡದೇಶದಿಂದ ೩೮೨, ಮಧ್ಯಪ್ರಾಂತ್ಯದಿಂದ (ಮರಾಠಿ) ೮೧, ಕರ್ನಾಟಕ ಪ್ರಾಂತದಿಂದ ೨೯೬, ಈ ಪ್ರಕಾರ ಪ್ರತಿನಿಧಿಗಳು ಬಂದಿದ್ದರು. ಇತರ ಕಡೆಯಿಂದ ಬಂದವರ ಸಂಖ್ಯೆಯು ಇನ್ನೂ ತಿಳಿದುಬಂದಿಲ್ಲ.

ಬರುವ ಆದಿತ್ಯವಾರ ಸಾಯಂಕಾಲ 4-30 ಗಂಟೆಗೆ ಇಲ್ಲಿಯ ಮಹಿಳಾ ಸಭೆಯು ಸಭಾಸದನದಲ್ಲಿ ಬ್ರಹ್ಮಶ್ರೀ ಒಡ್ಲಮನೆ ಆತ್ಮಾರಾಮ ಶಾಸ್ತ್ರಿಯವರು "ಆತ್ಮತತ್ವ" ಎಂಬುದನ್ನು ಕುರಿತು ಭಾಷಣಮಾಡುವರೆಂದು ಮಹಿಳಾ ಸಭೆಯ ಕಡೆಯಿಂದ ಶ್ರೀಮತಿ ಎಸ್. ಲಲಿತಾಬಾಯಿಯವರು ತಿಳಿಸುತ್ತಾರೆ. ಅಲ್ಲದೆ ಈ ಉಪನ್ಯಾಸವನ್ನು ಕೇಳಲು ಮಹಳೆಯರೆಲ್ಲರೂ ಬರಬೇಕಾಗಿ ಅವರ ವಿನಂತಿ ಇದೆ.

ಇದೇ ತಿಂಗಳ ತಾರೀಕು 25ನೇ ಆದಿತ್ಯವಾರ ಇಲ್ಲಿಯ ಬ್ರಹ್ಮಸಮಾಜದ ಮಂದಿರದಲ್ಲಿ ಶ್ರೀಯುತ ಎಮ್. ವೆಂಕಪ್ಪ ಬಿ. ಎ. ಯವರು ಬೆಳಿಗ್ಯೆ ೭||ಘಂಟೆಗೆ ದೇವರ ಆರಾಧನೆಯನ್ನು ತೀರಿಸಿ "ಅಭಿವೃದ್ಧಿ ಹೊಂದುವ ಧರ್ಮ" "The progressive religion" ಎಂಬದರ ಕುರಿತು ಒಂದು ಭಾಷಣವನ್ನು ಮಾಡುವರು.

ಕರ್ನಾಟಕ ತಿಲಕ ವಿದ್ಯಾಲಯದಲ್ಲಿ ಆದಿತ್ಯವಾರ ಮತ್ತು ಇನ್ನು ಮುಂದೆ ಪ್ರಕಟಿಸಬಹುದಾದ ಇತರ ರಜಾ ದಿವಸಗಳಲ್ಲಿ ಹೊರತು ಪೂರ್ವಾಹ್ನ ೮||—೧೨ ಗಂಟೆ ವರೆಗೆ ಅಪರಾಹ್ನ ೩||—೬ ಗಂಟೆಯವರೆಗೆ ಚರಕದ ನೂಲನ್ನು ಕ್ರಯಕ್ಕೆ ತೆಗೆದುಕೊಳ್ಳುವ ಏರ್ಪಾಡು ಮಾಡಿಯದೆ.

ಮಂಗಳೂರ ಕೊಸ್ಮೊಪೊಲೀಟನ್ ಕ್ಲಬ್ಬಿನ ವರ್ಧಂತಿ ಉತ್ಸವವು ಬರುವ ಫೆಬ್ರುವರಿ ತಾ. 8ರಲ್ಲಿ ಜರಗುವುದು.

ಡಿಸ್ಟ್ರಿಕ್ಟ ಬೋರ್ಡು ಮೆಂಬರರ ಮಿಾಟಿಂಗು ಬರುವ ತಾ. 31ನೇ ಅಪರಾಹ್ನ 2-30 ಗಂಟೆಗೆ ಜಿಲ್ಲಾ ಕಲೆಕ್ಟರರ ಆಫೀಸಿನಲ್ಲಿ ಜರಗುವುದು.

ಮ. ರಾ. ಎ. ಎಸ್. ಕೃಷ್ಣಅಯ್ಯರರು ಇಲ್ಲಿಯ ಅಸಿಸ್ಟೆಂಟ ಇಂಜೀನಿಯರರಾಗಿ ಬಂದಿರುವರು.

ನಮ್ಮ ಜಿಲ್ಲೆಯಲ್ಲಿರುವ ಮ. ರಾ. ರಾ. ಬಿ. ಎಲ್. ಎನ್. ರೈ ಬಿ. ಎ., ಎಮ್. ಎಲ್. ಎಡ್ವೋಕೇಟ್ ಮದ್ರಾಸ್ ಹ್ಯಾಕೋರ್ಟು ಇವರೂ ಮದ್ರಾಸ್ ಲೊಕೊಲೇಜಿನ ಲೆಕ್ಚರರಾಗಿ ನೇಮಕಪಟ್ಟಿದ್ದಾರೆ.

ಇಲ್ಲಿಯ ಮಿಶನ್ ಶಾಲೆಯಲ್ಲಿ ಪ್ಲೇಗ್ ಇಲಿ ಬಿದ್ದಿರುವುದರಿಂದ ಶಾಲೆಗೆ ರಜೆ ಕೊಡೋಣಾಗಿಯದೆ.

ಡಿಸ್ಟ್ರಿಕ್ಟ ಎಡ್ವಾನ್ಸ್‌ಮೆಂಟ ಎಸೋಸಿಯೇಶನಿನ ಕಾರ್ಯಕಾರಿ ಕಮಿಟಿಯ ಕಳೆದ ಮಿಾಟಿಂಗಿನಲ್ಲಿ ಈ ಕಮಿಟಿಯ ಮೆಂಬರರಲ್ಲೊಬ್ಬರಾದ ಸ್ವರ್ಗಸ್ಥ ಶ್ರೀಯುತ ರಾವ್‌ಬಹದೂರ್ ಸೂಜೀರ ರಘುನಾಥಯ್ಯನವರ ದುಃಖಸೂಚಕ ಠರಾವು ಮಂಜೂರಾಯಿತು. ಕೃಷಿ ಕೈಗಾರಿಕೆ, ವ್ಯಾಪಾರ ಮೊದಲಾದ ವಿಷಯಗಳ ಮಾಹಿತಿಯನ್ನು ತಿಳಿಯಪಡಿಸುವ ವಹಿಯನ್ನು (Periodical) ಪ್ರಕಟಿಸಬೇಕಾಗಿಯೂ ನಿರ್ಧರಿಸಲಾಗಿದೆ. ಬತ್ತಿದ ದನ, ಎಮ್ಮೆ ಮೊದಲಾದ ಜಾನುವಾರುಗಳನ್ನು ಸಾಕಲು 'ಡ್ರ್ಯಾಯ್ ಕೆಟಲ್ ಫಾರ್ಮ' ಸಂಸ್ಥೆಯನ್ನು ಬಂಟವಾಳದಲ್ಲಿ ಸ್ಥಾಪಿಸುವುದೆಂದೂ ನಿರ್ಣಯವಾಗಿದೆ. ಈ ಫಾರ್ಮಿನ ವ್ಯವಸ್ಥೆಯು ಮ. ರಾ. ಕೆ. ಪದ್ಮನಾಭಯ್ಯ ರಿಟಾಯರ್ಡ ವೆಟರ್ನರಿ ಅಸಿಸ್ಟಾಂಟ ಇವರ ಸುಪರ್ದೆಯಲ್ಲಿ ನಡಿಸಲಾಗುವುದಂತೆ.

ಮದರಾಸು ನ್ಯಾಯವಿಧಾಯಕ ಸಭೆ.

ಶ್ರೀಯುತ ಕೆ. ರಘುಚಂದ್ರ ಬಲ್ಲಾಳ್ ಎಮ್. ಎಲ್. ಸಿ. ಇವರು ಮೇಲ್ಕಂಡ ಸಭೆಯ ಅಧಿವೇಶನದಲ್ಲಿ ಕೆಳಗಣ ಪ್ರಶ್ನೆಗಳನ್ನು ಕೇಳುವರಾಗಿ ಸದರಿ ಸಭೆಯ ಸೆಕ್ರೆಟರಿಯವರಿಗೆ ಸೂಚಿಸಿರುತ್ತಾರೆ.

ಪ್ರಶ್ನೆಗಳು.

೧ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲೂಕು ಬೋರ್ಡು ಪ್ರೆಸಿಡೆಂಟರು ೧೯೨೪ನೇ ದಶಂಬರ ತಿಂಗಳಲ್ಲಿ ಫಕ್ಕನೆ ಕಾಯಿಲೆಬಿದ್ದು ಸ್ಮೃತಿ ತಪ್ಪಿದವರಾಗಿದ್ದು ಅಂಥಾ ಪ್ರೆಸಿಡೆಂಟ ಉದ್ಯೋಗದ ಕರ್ತವ್ಯಗಳನ್ನು ನಡಿಸಲಿಕ್ಕೆ ಅಸಮರ್ಥರಾದ ಸಂಗತಿ ಸರಕಾರದವರ ಚಿತ್ತಕ್ಕೆ ಬಂದಿದೆಯೋ?

೨ ಸದರಿ ಪ್ರೆಸಿಡೆಂಟರು ಹೀಗೆ ಅಸಮರ್ಥರಾದಾಗ ಪ್ರೆಸಿಡೆಂಟರ ಕರ್ತವ್ಯಗಳನ್ನು ವ್ಯಾಸ್‌ಪ್ರೆಸಿಡೆಂಟರು ಮುಂಬಯಿಗೆ ಹೋಗುವುದಕ್ಕೆ ಮಂಗಳೂರಿಂದ ಹೊರಡುವ ವರೆಗೆ ಜರಗಿಸಿ ಬಂದಿದ್ದರೆಂಬ ಸಂಗತಿಯು ನಿಜವೇ?

೩ ಸದರಿ ವ್ಯಾಸ್‌ಪ್ರೆಸಿಡೆಂಟರ ಅಂಥ ಗೈರುಹಾಜರಿ ಸಮಯ ಪ್ರೆಸಿಡೆಂಟರ ದಿನವಹಿ ಕರ್ತವ್ಯಗಳನ್ನು ನಡಿಸಲಿಕ್ಕೆ ಮಂಗಳೂರು ಶಹರ ನಿವಾಸಿಕರಾದ ಮೆಂಬರರಿಗೆ ಅಧಿಕಾರಗೊಳಿಸಿ ಪ್ರೆಸಿಡೆಂಟರಿಂದ ಬರಿಯಬೇಕಾದ್ದಾಗಿ ಅರ್ಹವಾಗುವ ಮತ್ತು ಅವರ ದಸ್ತಕತ ಮುದ್ರೆ ಇರುವ ಒಂದು ಕಾಗದ ಬರದದ್ದೆಂಬುದು ನಿಜವೇ?

೪ ಅಂಥ ಅಧಿಕಾರಗೊಳಿಸುವಿಕೆಯನ್ನು ದಕ್ಷಿಣ ಕನ್ನಡ ಖಜಾನಾ ಡಿಪ್ಯುಟಿ ಕಲೆಕ್ಟರರು ಮಂಜೂರುಮಾಡಲಿಲ್ಲವೆಂಬುದು ಮತ್ತು ಅದರ ಪರಿಣಾಮವಾಗಿ ಸದರಿ ಬೋರ್ಡಿನ ಕೈಕೆಳಗೆ ಇರುವ ಅನೇಕ ಸಿಬಂಧಿಗಳಿಗೆ ಸಲ್ಲತಕ್ಕ ಸಂಬಳ ವಗೈರೆ ಈ ವರೆಗೂ ಸಲ್ಲದೆ ಇದರಿಂದ ಅವರಿಗೆಲ್ಲಾ ಬಹಳ ಸಂಕಷ್ಟಕ್ಕೆ ಕಾರಣವಾಗಿಯದೆ ಎಂಬುದು ಕೂಡಾ ನಿಜವೇ?

೫ ಸದರಿ ಪ್ರೆಸಿಡೆಂಟರು ತಾ. ೭—೧—೨೫ರಲ್ಲಿ ಮೃತಪಟ್ಟು ಅವರ ಉದ್ಯೋಗವನ್ನು [illegible] ಎಂಬದೂ ಮತ್ತು ಆ ಸಮಯ ವ್ಯಾಸ್‌ಪ್ರೆಸಿಡೆಂಟರು ಗೈರು ಹಾಜರು ಆಗಿದ್ದರು ಎಂಬದೂ ಸಹ ಸರಕಾರದವರ ತಿಳುವಳಿಕೆಗೆ ಬಂದಿದೆಯೋ?

೬ ಮಂಗಳೂರು ತಾಲೂಕು ಬೋರ್ಡು ಪ್ರೆಸಿಡೆಂಟರಿಗೆ [illegible] ಪತ್ರವ್ಯವಹಾರವು ಮೇಲ್ಕಂಡಂತೆ ಅಧಿಕಾರಗೊಳಿಸಿದ ಮೆಂಬರರ ವಶ ರಾಶಿಯಾಗಿ ಬಿದ್ದಿರುತ್ತದೆ ಎಂಬುದು ನಿಜವೇ?

೭ ಮಂಗಳೂರು ತಾಲೂಕು ಬೋರ್ಡು ಪ್ರೆಸಿಡೆಂಟರ ಕರ್ತವ್ಯಗಳನ್ನು ನಿರ್ವಹಿಸಲಿಕ್ಕೆ ಕ್ರಮದಂತೆ ಮತ್ತು ಕಾನೂನು ಪ್ರಕಾರ ಅಧಿಕಾರ ಕೊಟ್ಟ ಒಬ್ಬ ಉದ್ಯೋಗಸ್ಥರನ್ನು ನೇಮಕಮಾಡುವ ವಗೈರೆ ವಿಲೆವಾರಿಗಳನ್ನು ಸಂಬಂಧಪಟ್ಟ ಡಿಸ್ಟ್ರಿಕ್ಟ ಬೋರ್ಡಿನ ಪ್ರೆಸಿಡೆಂಟರು ಈ ವರೆಗೆ ಮಾಡಲಿಲ್ಲವೆಂಬ ಸಂಗತಿ ಸರಕಾರದವರ ಚಿತ್ತಕ್ಕೆ ವಿದಿತವಾಗಿದೆಯೋ?

೮ ಈ ವಿದ್ಯಮಾನಗಳಲ್ಲಿ ಡಿಸ್ಟ್ರಿಕ್ಟ ಬೋರ್ಡು ಪ್ರೆಸಿಡೆಂಟರು ಪ್ರವೇಶಿಸದೆ ಇರಲಿಕ್ಕೆ ಕಾರಣಗಳು ಏನೆಂಬುದು ಸರಕಾರದವರು ದಯವಿಟ್ಟು ಈ ಸಭೆಗೆ ತಿಳಿಸಬಹುದೇ?

೯ ಸದರಿ ಡಿಸ್ಟ್ರಿಕ್ಟ ಬೋರ್ಡು ಪ್ರೆಸಿಡೆಂಟರು ಆ ಬಾಬಿನಲ್ಲಿ ಈ ವರೆಗೂ ಪ್ರವೇಶವಾಗಲಿಲ್ಲ. ಮತ್ತು ಇನ್ನು ಮುಂದೆ ಸಹ ಪ್ರವೇಶವಾಗುವ ಇರಾದೆಯುಳ್ಳವರಾಗಿ ಇಲ್ಲವೆಂತವಾದರೆ ಸರಕಾರದವರು ಆ ಸಂಗತಿಯಲ್ಲಿ ಪ್ರವೇಶಿಸಿ ಮಂಗಳೂರು ತಾಲೂಕು ಬೋರ್ಡಿನವರು ಕ್ರಮದಂತೆ ಒಬ್ಬ ಪ್ರೆಸಿಡೆಂಟರನ್ನು ಚುನಾಯಿಸುವ ವರೆಗೆ ಆ ಉದ್ಯೋಗಕ್ಕೆ ಒಬ್ಬ ಯೋಗ್ಯ ಗೃಹಸ್ಥರನ್ನು ಮುಕರ್ರರು ಮಾಡಲಿಕ್ಕೆ ಸರಕಾರದವರಿಗೆ ಏನಾದರೂ ಆಕ್ಷೇಪ ಇದೆಯೋ?

ಕರ್ನಾಟಕ ಮಹಿಳಾ ವಿದ್ಯಾಲಯದ ವರದಿ.

ಕರ್ನಾಟಕ ಮಹಿಳಾ ವಿದ್ಯಾಲಯದ ನಾಲ್ಕನೇ ವರುಷದ ವರದಿಯು ನಮ್ಮ ಬಳಿಗೆ ಈ ಮೊದಲೇ ಬಂದಿರುವುದಾದರೂ ಇದನ್ನು ಸಕಾಲದಲ್ಲಿ ಪ್ರಕಟಿಸಲು ಅವಕಾಶ ದೊರಕದೆ ಇದ್ದ ಬಗ್ಗೆ ವಿಷಾದಿಸುತ್ತೇವೆ. ವರದಿಯ ಸಾರಾಂಶವನ್ನು ಕೆಳಗೆ ಕೊಟ್ಟಿದೆ. ಈ ಸಂಸ್ಥೆಗೆ ಕಳೆದ ವಿಜಯ ದಶಮಿಗೆ ನಾಲ್ಕು ವರುಷ ತುಂಬಿ, ಐದನೆಯ ವರುಷ ಪ್ರಾರಂಭವಾಯಿತು. ಸದ್ಯಕ್ಕೆ ಈ ವಿದ್ಯಾಲಯವು ಪ್ರಾಥಮಿಕ ಹಾಗು ಮಾಧ್ಯಮಿಕ ಶಿಕ್ಷಣವನ್ನು ಕೊಡುತ್ತಿದೆ. ವರದಿಯ ವರುಷ ಈ ವಿದ್ಯಾಲಯದ ೭ ವರ್ಗಗಳಲ್ಲಿ ೧೨೧ ವಿದ್ಯಾರ್ಥಿನಿಯರು ಅಧ್ಯಯನ ಮಾಡಿದರು. ೮ ಮಂದಿ ಅಧ್ಯಾಪಕರೂ ೭ ಮಂದಿ ಅಧ್ಯಾಪಿಕೆಯರೂ ಅಧ್ಯಾಪನ ಕಾರ್ಯವನ್ನು ನಡಿಸಿದರು.

ವರದಿಯ ವರುಷದಲ್ಲಿ ವಿದ್ಯಾಲಯದ ೭ ವರ್ಗಗಳಲ್ಲಿ ಒಟ್ಟು ೧೨೧ ಜನ ವಿದ್ಯಾರ್ಥಿನಿಯರು ಹಾಜರಿದ್ದರು. ಬಾಲಿಕೆಯರ ವರ್ಗದಲ್ಲಿ ೪೦, ೧ನೇ ವರ್ಗದಲ್ಲಿ ೨೦, ೨ನೇ ವರ್ಗದಲ್ಲಿ ೧೯, ೩ನೆಯ ವರ್ಗದಲ್ಲಿ ೧೫, ೪ನೆಯ ವರ್ಗದಲ್ಲಿ ೧೨, ೫ನೆಯ ವರ್ಗದಲ್ಲಿ ೯, ೬ನೆಯ ವರ್ಗದಲ್ಲಿ ೫ ಮತ್ತು ೭ನೆಯ ವರ್ಗದಲ್ಲಿ ೧ ಈ ರೀತಿ ಒಟ್ಟು ೧೨೧. ಈ ೧೨೧ರಲ್ಲಿ ವಿವಾಹಿತರು ಇಬ್ಬರು, ಅವಿವಾಹಿತರು ೧೧೨ ಮತ್ತು ವಿಧವೆಯರು ೭, ಜಾತಿವಾರ ಹೇಳುವುದಾದರೆ, ಲಿಂಗಾಯತರು ೮, ಬ್ರಾಹ್ಮಣರು ೧೦೭ ಇತರರು ೬. ಶಾಲೆಯ ೬ ಜನ ಅಧ್ಯಾಪಿಕೆಯರಲ್ಲಿ ೫ ಜನರೂ ೭ ಮಂದಿ ಉಪಾಧ್ಯಾಯರಲ್ಲಿ ಇಬ್ಬರೂ ಗೌರವಾರ್ಥವಾಗಿಯೇ ಕೆಲಸಮಾಡುವುದು ಮನನೀಯವೇ. ವರದಿಯ ವರುಷ ವಿದ್ಯಾರ್ಥಿನಿಯರಿಂದ ಪ್ರವೇಶ ಫಿ ಅಥವಾ ಶಿಕ್ಷಣ ಫಿಯನ್ನು ತೆಗೆದುಕೊಳ್ಳದೇ ಇದ್ದುದು ಸಂತೋಷಾಸ್ಪದವೇ ಆಗಿದೆ.

ಈ ವಿದ್ಯಾಲಯದಿಂದ ಕರ್ನಾಟಕದೊಳಗಿನ ಎಲ್ಲ ಮಹಿಳೆಯರಿಗೂ ಶಿಕ್ಷಣದ ಪ್ರಯೋಜನವು ಉಂಟಾಗುವಂತೆ ಪರಸ್ಥಳದಿಂದ ಬಂದು ಧಾರವಾಡದಲ್ಲಿ ಉಳಕೊಂಡು ಈ ವಿದ್ಯಾಲಯದಲ್ಲಿ ವ್ಯಾಸಂಗಮಾಡುವವರಿಗೆ ಸ್ನಾನ, ಭೋಜನ ಮೊದಲಾದವುಗಳ ಅನುಕೂಲತೆಗಾಗಿ ವಸತಿಗೃಹದ ಏರ್ಪಾಡೂ ಮಾಡಿದೆ. ಈ ವಿದ್ಯಾಲಯದ ಆಜೀವ ಸದಸ್ಯರೂ ಅಧ್ಯಾಪಿಕೆಯರೂ ಆದ ಶ್ರೀಮತಿ ರಂಗೂಬಾಯಿ ಅಪ್ಪಪುತ್ರಿಯವರು ವಸತಿಗೃಹದ ಮೇಲ್ವಿಚಾರಕರಾಗಿದ್ದಾರೆ. ಇಲ್ಲಿ ವಾಸಿಸಿ ಕಲಿಯುವ ವಿದ್ಯಾರ್ಥಿನಿಯರಿಗೆ ಸ್ನಾನ, ಎರಡು ಹೊತ್ತು ಊಟ, ಮನೆಯ ಬಾಡಿಗೆ, ದೇಖರೇಖಿ ಖರ್ಚು, ದೀಪ, ಟಪ್ಪಾಲ ಇವುಗಳಷ್ಟೆ ಕೂಡಿ ರೂ. ೧೧ ತಿಂಗಳಿಗೆ ಖರ್ಚು ಬೀಳುವುದು. ಹಾಲು ಇಲ್ಲವೆ ಫಲಾಹಾರ ಮುಂತಾದವುಗಳನ್ನು ತೆಗೆದುಕೊಳ್ಳುವುದಾದರೆ ಅದರ ಖರ್ಚು ಬೇರೆ ಬೀಳುವುದು. ಹೆಚ್ಚಿನ ಮಾಹಿತಿಯನ್ನು ಈ ವಸತಿಗೃಹದ ಸುಪರಿಂಟೆಂಡೆಂಟರಿಗೆ ಬರೆದು ಅವರಿಂದ ತಿಳಿಯಬಹುದು. ಮೇಲಿನ ವಿದ್ಯಾಲಯದಲ್ಲಿ ಸ್ತ್ರೀಯರಿಗೋಸ್ಕರವಾಗಿಯೇ ಒಂದು ಪುಸ್ತಕಾಲಯ ಇಟ್ಟುದುದು ಬಹಳ ಉಪಕಾರಯಾಗಿದೆಂದು ತಿಳಿಯುತ್ತೇವೆ.

ಭರತಖಂಡದ ಭವಿಷ್ಯತ್ಕಾಲವನ್ನು ಉಜ್ವಲವಾಗಿ ಮಾಡಲು ಸಮರ್ಥರಾದ ತೇಜಸ್ವಿಗಳೂ ಸುಶೀಲಸಂಪನ್ನರೂ ಸುಸ್ವಭಾವದವರೂ, ಆರ್ಯ ಸಂಸ್ಕೃತಿಯಿಂದ ಶೋಭಿಸುವವರೂ ಉದಾರ ಚರಿತರೂ ಆದಂಥ ಸದ್ಗೃಹಿಣಿಯರೂ ಉತ್ತಮ ತಾಯಂದಿರೂ ನಿರ್ಮಾಣವಾಗುವಂತೆ ಸರ್ವಥೈವ ಆರ್ಯ ಸಂಸ್ಕೃತಿಗನುರೂಪವಾದ ಸ್ತ್ರೀಶಿಕ್ಷಣ ಕೊಡುವುದೇ ಈ ಸಂಸ್ಥೆಯ ಮುಖ್ಯ ಉದ್ದೇಶವಾಗಿದೆ. ಧಾರವಾಡದಲ್ಲಿ ಮುಖ್ಯ ವಿದ್ಯಾಲಯವಿದ್ದು ಇದರ ಶಾಖೋಪಶಾಖೆಗಳನ್ನು ಕರ್ನಾಟಕದ ಇತರ ಯಾವತ್ತೂ ಭಾಗಗಳಲ್ಲಿ ಸ್ಥಾಪಿಸಿ ಕರ್ನಾಟಕದ ಸ್ತ್ರೀ ಸಮಾಜದ ಒಗ್ಗಟ್ಟು ಹಾಗು ಅವರ ಅಭ್ಯುದಯವನ್ನು ಸಾಧಿಸಬೇಕೆಂಬ ಇಚ್ಛೆಯೂ ಉದ್ದೇಶವೂ ಈ ಸಂಸ್ಥೆಗೆ ಇದೆ. ಸರ್ವ ದೃಷ್ಟಿಯಿಂದಲೂ ಸ್ತ್ರೀ ಸಮಾಜದ ಉನ್ನತಿಯನ್ನು ಮಾಡುವ ಉದ್ದೇಶಗಳನ್ನು ಇಟ್ಟುಕೊಂಡು ಈ ಸಂಸ್ಥೆಯು ಕಾರ್ಯಕ್ಕೆ ಇಳಿದಿದೆ. ಇಂಥಾ ಸಂಸ್ಥೆಗೆ ಹೆಚ್ಚಿನ ದ್ರವ್ಯ ಸಹಾಯವೂ ಅತಿ ಅಗತ್ಯವೆಂಬುದು ನಿರ್ವಿವಾದ. ಮತ್ತು ಅಂಥಾ ನಿಧಿಯು ಒಬ್ಬಿಬ್ಬರಿಂದ ಕೂಡಿಸುವುದೂ ತೀರ ಕಷ್ಟವೇ. ಹೀಗಿರುವುದರಿಂದ ಈ ಸಂಸ್ಥೆಗೆ ವಿಶೇಷವಾಗಿ ಸಮಗ್ರ ಕರ್ನಾಟಕರು ಹಾಗು ಭರತಖಂಡದ ಶ್ರೀಮಂತರೂ ಬಡವರೂ ಸಹಾಯಮಾಡದೆ ಈ ಸಂಸ್ಥೆಯು ಮುಂದುವರಿಯುವುದು ತೀರ ಕಷ್ಟವಾಗಿದೆ.

ಈ ವಿದ್ಯಾಲಯಕ್ಕೆ ಆಶ್ರಯದಾತರಾಗುವವರು ರೂ. ೫೦೦ ಅಥವಾ ಹೆಚ್ಚು ರಕಮನ್ನು ಒಮ್ಮೆಲೆ ಇಲ್ಲವೆ ೧೦೦ ರೂಪಾಯಿ ಕಂತಿನಿಂದ ೫ ವರುಷಗಳಲ್ಲಿ ಕೊಡಬೇಕಾಗಿದೆ. ಸಹಾಯಕರಲ್ಲಿ ೩ ತರಗತಿಗಳಿವೆ. ೧ನೇ ತರಗತಿ—೨೫೦ ಅಥವಾ ಹೆಚ್ಚು ಹಣವನ್ನು ಒಮ್ಮೆಲೇ ಅಥವಾ ೫೦ ರೂ. ಕಂತಿನಿಂದ ೫ ವರುಷಗಳಲ್ಲಿ ಕೊಡುವುದು. ೨ನೇ ತರಗತಿ—೧೦೦ ರೂಪಾಯಿ ಅಥವಾ ಹೆಚ್ಚು ಹಣವನ್ನು ಒಮ್ಮೆಲೆ ಅಥವಾ ಒಂದು ವರುಷದಲ್ಲಿ ಕೊಡುವುದು. ೩ನೇ ತರಗತಿ—೫ ರೂಪಾಯಿ ಅಥವಾ ಹೆಚ್ಚು ಹಣವನ್ನು ಪ್ರತಿ ವರುಷ ಕೊಡುವುದು. ಈ ಸಂಸ್ಥೆಗೆ ಎಲ್ಲಾ ತರದ ಪ್ರೋತ್ಸಾಹವೂ ಸಹಾಯವೂ ದೊರಕಿ ಉತ್ತರೋತ್ತರ ಅಭಿವೃದ್ಧಿಯಾಗಲೆಂದು ಬಯಸುತ್ತೇವೆ.

ಹಿಂದೂ ಮತಸಂಬಂಧ ಉಂಬಳಿಗಳ ಕಾನೂನು

— ನಿಷೇಧ —

ಗವರ್ನರ ಜನರಲರು ಹಿಂದೂ ಮತಸಂಬಂಧ ಉಂಬಳಿಗಳ ಕಾನೂನಿಗೆ ತಮ್ಮ ಸಮ್ಮತಿಯನ್ನು ಕೊಟ್ಟುದುದನ್ನು ನಿಷೇಧಿಸಲು ಹಾಗು ಈ ಬಿಲನ್ನು ಪ್ರಚಾರಲೋಪಪಡಿಸುವ ಮಸೂದೆಯನ್ನು ಮದ್ರಾಸು ನ್ಯಾಯವಿಧಾಯಕ ಸಭೆಯ ಮುಂದೆ ಇಡುವುದಕ್ಕೆ ಮದ್ರಾಸ್ ನ್ಯಾಯವಿಧಾಯಕ ಸಭೆಯ ಹಿಂದೂ ಮೆಂಬರರಿಗೆ ಹೇಳಿಕೊಳ್ಳಲು ಮದ್ರಾಸ್ ಮಹಾಜನಸಭೆ ಮತ್ತು ಹಿಂದೂ-ಮಹಾಸಭೆಯ ಮದ್ರಾಸ್ ಶಾಖೆಯ ಆಶ್ರಯದಲ್ಲಿ ಮದ್ರಾಸ್ ಪಟ್ಟಣದ ನಿವಾಸಿಗಳ ಒಂದು ಸಭೆಯು ಕಳೆದ ಆದಿತ್ಯವಾರ ಸಾಯಂಕಾಲ ಮದ್ರಾಸಿನ ಬೀಚಿನಲ್ಲಿ ಕೂಡಿತು. ಈ ಸಭೆಗೆ ಮಠಗಳ ಮತ್ತು ದೇವಸ್ಥಾನಗಳ ಪ್ರತಿನಿಧಿಗಳು ಹಾಗು ಇತರ ಧಾರ್ಮಿಕ ಸಂಸ್ಥೆಗಳ ಪ್ರತಿನಿಧಿಗಳೂ ಇತರರೂ ಕೂಡಿ ದೊಡ್ಡ ಜನಸ್ತೋಮವು ನೆರೆದಿತ್ತು. ದಿವಾನಬಹದ್ದೂರ್ ಎಸ್ ಸುಬ್ರಮಣ್ಯ ಅಯ್ಯರರು ಈ ಸಭೆಯ ಅಧ್ಯಕ್ಷರಾಗಿ ಆರಿಸಲ್ಪಟ್ಟರು.

ಅಧ್ಯಕ್ಷರು ಹಿಂದೂ ಧರ್ಮಾಭಿಮಾನಿಗಳೆಲ್ಲರ ಲಕ್ಷ್ಯವನ್ನು ವಿಶೇಷವಾಗಿ ಸೆಳೆಯುವ ಈ ಮಿಾಟಿಂಗಿನ ಅಧ್ಯಕ್ಷಪದವಿಯನ್ನು ತನಗೆ ಕೊಟ್ಟ ಆಭಾರವನ್ನು ಮನ್ನಿಸಿದ ಬಳಿಕ ಹೀಗೆಂದರು:—"ಈ ಸಮಸ್ಯೆಯ ಕುರಿತು ತಿಳಿಸಬೇಕಾದ ಎಲ್ಲ ವಿಷಯಗಳು ಈ ಮೊದಲು ಪತ್ರಿಕೆಗಳ ಹಾಗು ಭಾಷಣಗಳ ಮೂಲಕ ತಿಳಿಸಿಯಾಗಿದೆ. ಆದುದರಿಂದ ಹೆಚ್ಚಿಗೆ ಹೇಳಬೇಕಾದ ಅಗತ್ಯವಿಲ್ಲ. ವೈಸರಾಯರು ಈ ಬಿಲಿಗೆ ಸಮ್ಮತಿ ಕೊಡಲಿಕ್ಕಿಲ್ಲವೆಂದು ಎಲ್ಲರೂ ನಿರೀಕ್ಷಿಸಿದರೂ ಅವಚಿತವಾಗಿ ಅವರು ಸಮ್ಮತಿಕೊಟ್ಟರು. ಈ ರೀತಿ ಅಘಟಿತ ಘಟನೆಯು ಘಟಿಸಿದೆ. ಈ ಸಮಸ್ಯೆಯ ಕುರಿತು ವಿಶೇಷವಾಗಿ ಈ ಸಭೆಯಲ್ಲಿ ಇತರರು ಮಾತನಾಡುವರು. ಹಿಂದೂಮತದ ಮೇಲೆ ಬಂದಿರುವ ಆಘಾತವನ್ನು ತಪ್ಪಿಸಲು ಈಗ ಹಿಂದುಗಳೆಲ್ಲರೂ ಐಕ್ಯರಾಗಿ ವ್ಯವಸ್ಥಿತ ರೀತಿಯಿಂದ ಕಾರ್ಯನಡಿಸಬೇಕೆಂದು ನನ್ನ ವಿನಂತಿ."

ಅನಂತರ ಡಾಕ್ಟರ್ ಯು. ರಾಮರಾಯರು ವೈಸರಾಯರು ಈ ಬಿಲಿಗೆ ತಮ್ಮ ಸಹಿಹಾಕಿದುದನ್ನು ನಿಷೇಧಿಸಬೇಕಾಗಿಯೂ ಮದ್ರಾಸ್ ನ್ಯಾಯವಿಧಾಯಕ ಸಭೆಯ ಮೆಂಬರರು—ವಿಶೇಷವಾಗಿ ಹಿಂದು ಮೆಂಬರರು ಈ ಬಿಲು ಪ್ರಚಾರಲೋಪಪಡಿಸುವ ಠರಾವನ್ನು ಕೌನ್ಸಿಲಿನ ಮುಂದೆ ಇಡಬೇಕಾಗಿಯೂ, ಪೂರ್ವದಲ್ಲಿ ಸರಕಾರವು ಹಿಂದುಗಳ ಮತಸಂಬಂಧದ ವಿಷಯಗಳಲ್ಲಿ ತಾವು ತಟಸ್ಥರಾಗಿರುವೆವೆಂದು ಜಾಹೀರಪಡಿಸಿದ ಮೇರೆಗೆ ಸಾಮ್ರಾಟರು ಈ ಬಿಲಿಗೆ ತಮ್ಮ ಸಮ್ಮತಿಯನ್ನು ಕೊಡದಂತೆ ಇಂಡಿಯಾ ಸ್ಟೇಟಸೆಕ್ರೆಟರಿಯವರು ಅವರಿಗೆ ಸಲಹೆ ಕೊಡಬೇಕಾಗಿಯೂ ಈಗ ಕೂಡಿದ ಸಭೆಯು ಹಿಂದೂ ರಿಲಿಜಸ್ ಎನ್‌ಡೌಮೆಂಟ ಪ್ರೊಟೆಕ್ಷನ್‌ಲೀಗ್ ಸ್ಥಾಪನೆಯನ್ನು ಮಂಜೂರು ಮಾಡುವುದೆಂದೂ ಇದಕ್ಕೆ ಯಾವತ್ತೂ ಹಿಂದುಗಳು ಸಹಾಯಮಾಡಬೇಕಾಗಿಯೂ ಸೂಚಿಸುವ ಠರಾವನ್ನು ಡಾಕ್ಟರ್ ಯು. ರಾಮರಾಯರು ಸಭೆಯ ಮುಂದಿಟ್ಟರು. ಈ ಠರಾವನ್ನು ಸಭೆಯ ಮುಂದಿಡುವಾಗ ಡಾ| ರಾಮರಾಯರು ಒಂದು ಭಾಷಣವನ್ನು ಮಾಡಿದರು. ಈ ಭಾಷಣದಲ್ಲಿ ಇವರು ವೈಸರಾಯರು ಇದಕ್ಕೆ ಸಮ್ಮತಿ ಕೊಟ್ಟುದುದರಿಂದ ರಾಜಕೀಯ ವಿಷಯದಲ್ಲಿ ಇವರು ಒಂದು ದೊಡ್ಡ ಪ್ರಮಾದ ಮಾಡಿದಂತಾಗಿದೆ. ಬ್ರಾಹ್ಮಣರ ಮೇಲಿನ ದ್ವೇಷದಿಂದಲೇ ಈ ಬಿಲು ಕೌನ್ಸಿಲಿನಲ್ಲಿ ತಂದುದಾಗಿದೆ. ಇಂಥಾ ಬಿಲು ಕ್ರೈಸ್ತ ಮತ್ತು ಮುಸಲ್ಮಾನ ಮತಸಂಸ್ಥೆಗಳಿಗೆ ತಟ್ಟುವಂತೆ ಮಾಡಿಲ್ಲ. ಮತವಿಚಾರಗಳಲ್ಲಿ ಕೈಹಾಕಲಿಕ್ಕಿಲ್ಲವೆಂಬ ಬ್ರಿಟಿಷ ಸರಕಾರದ ಪೂರ್ವವಚನಕ್ಕೆ ಇದು ಕಳಂಕಪ್ರಾಯವಾಗಿದೆ. ಆಯಾ ಉದ್ದೇಶಗಳ ಕಾರ್ಯಕ್ಕಾಗಿ ಪೂರ್ವದಲ್ಲಿ ಬಿಡಲ್ಪಟ್ಟ ಆಸ್ತಿಗಳೂ ಈ ಬಿಲಿನ ನಿಯಂತ್ರಣೆಗೆ ಒಳಪಡಿಸಿವೆ. ಮಠಗಳ ಆಸ್ತಿಗಳು ಆಯಾ ಮಠಗಳ ಸ್ವಾಮಿಗಳದ್ದಾಗಿದ್ದರೂ ಇಂಥಾ ಆಸ್ತಿಗಳ ಮೇಲೂ ಈ ಬಿಲು ಲಾಗುಮಾಡಲಾಗುವುದು. ದೊಡ್ಡ ದೊಡ್ಡ ಆಸ್ತಿಗಳನ್ನು ಬಿಟ್ಟ ಶಿಷ್ಯವರ್ಗಕ್ಕೂ ಇವುಗಳನ್ನು ಆಳಿಯಲ್ಲಿಡಲು ಅಧಿಕಾರವಿಲ್ಲವಾದರೂ ಈ ಎಕ್ಟ ಇದರ ಸೆಂಟ್ರಲ್‌ಬೋರ್ಡಿಗೆ ಇವುಗಳ ನಿಯಂತ್ರಣೆಯ ಅಧಿಕಾರ ಕೊಟ್ಟಿದೆ. ಕಾನೂನು ಬಲ್ಲವರೂ ಕೂಡ ಬಿಲಿಗೆ ಈ ತರದ (ನಿಯಂತ್ರಣ) ಅಧಿಕಾರ ಸಲ್ಲದೆಂದರೂ ವ್ಯಾಸರಾಯರು ಬಿಲಿಗೆ ತಮ್ಮ ಸಹಿ ಕೊಟ್ಟಿದ್ದಾರೆ. ಅಲ್ಲದೆ ಈ ಬಿಲು ಅನೇಕ ವಿವಾದಗಳಿಗೂ ಆಸ್ಪದಕಾರಿಯಾಗಿದೆ ಎಂದು ಮುಂತಾಗಿ ತಿಳಿಸಿ, ಇನ್ನು ಮುಂದೆ ಸರಕಾರಕ್ಕೆ ಹೋಗುವ ವಿನಂತಿಗಳು ನಿಷ್ಪಯೋಜನ. ಈಗ ಈ ಬಿಲಿನ ರೂಪರೇಷೆಗಳು ಜನಸಾಮಾನ್ಯರೆಲ್ಲರಿಗೂ ಸರಿಯಾಗಿ ಮುಂದಟ್ಟಾಗುವ ಪರ್ಯಂತರ ಚಳವಳ ನಡಿಸಬೇಕು. ಆಗ ಈ ಬಿಲನ್ನು ಅತಂತ್ರಪಡಿಸಲು ಸಹಾಯವಾಗುವುದು. ಈಗ ಜನರಿಗೆ ಈ ಬಿಲಿನ ಯಾವತ್ತೂ ವಿದ್ಯಮಾನಗಳನ್ನು ತಿಳಿಸಲು ಒಂದು ಲೀಗು ಸ್ಥಾಪನೆಯಾದುದು ಸಂತೋಷದ ಸಂಗತಿಯಾಗಿದೆ. ಎಂದು ತಿಳಿಸಿ ತಮ್ಮ ಭಾಷಣವನ್ನು ಸಮಾಪ್ತಿಗೊಳಿಸಿದರು. ಅನಂತರ ಶ್ರೀಯುತ ಸತ್ಯಮೂರ್ತಿಯವರು ಡಾಕ್ಟರ್ ರಾಮರಾಯರ ಠರಾವನ್ನು ಸಮರ್ಥಿಸಿ ಮಾತನಾಡಿದರು. ಬಳಿಕ ಠರಾವು ಮಂಜೂರಾಯಿತು.

ಅಂತ್ಯದಲ್ಲಿ ಸಭಾಧ್ಯಕ್ಷರು ಈ ಠರಾವನ್ನು ತಂತೀ ಮೂಲಕ ಸೆಕ್ರೆಟರಿ ಒಫ್ ಸ್ಟೇಟರಿಗೂ ಮದ್ರಾಸ್ ಲೆಜಿಸ್ಲೇಟಿವ್ ಕೌನ್ಸಿಲಿನ ಮೆಂಬರರಿಗೂ ಕಳುಹಿಸಬೇಕೆಂದು ಒಂದು ಠರಾವನ್ನು ಸಭೆಯ ಮುಂದಿಟ್ಟರು. ಆ ಠರಾವೂ ಮಂಜೂರಾದ ನಂತರ ಅಧ್ಯಕ್ಷರಿಗೂ ಸಭೆಗೂ ವಂದನೆಗಳನ್ನು ಅರ್ಪಿಸಿದ ಬಳಿಕ ಸಭೆಯು ಮುಕ್ತಾಯವಾಯಿತು.

ಉಡುಪಿಯ ನಿಷೇಧ ಪ್ರದರ್ಶನ.

ರಿಲಿಜಸ್ ಎಂಡೌಮೆಂಟ ಬಿಲಿಗೆ ವೈಸರಾಯರು ತಮ್ಮ ಸಮ್ಮತಿಯನ್ನು ಕೊಟ್ಟುದುದನ್ನು ನಿಷೇಧಿಸಲು ಉಡುಪಿಯ ಅನಂತೇಶ್ವರ ದೇವಸ್ಥಾನದಲ್ಲಿ ಕಳೆದ ತಾ. ೧೪ನೆಯ ಸಾಯಂಕಾಲ ೫ ಗಂಟೆಗೆ ಉಡುಪಿ ಮತ್ತು ಅಲ್ಲಿಯ ನೆರೆಕರೆಯ ಜನರ ಒಂದು ಸಭೆಯು ಜರಗಿತು. ಶ್ರೀಯುತ ಹೊಸಕೊಪ್ಪ ಕೃಷ್ಣರಾಯರು ಸಭಾಧ್ಯಕ್ಷರಾಗಿ ಚುನಾಯಿಸಲ್ಪಟ್ಟರು. ಸಭಾಪ್ರಾರಂಭದಲ್ಲಿ ಅಧ್ಯಕ್ಷರು ಈ ಬಿಲು ಹೇಗೆ ಆಕ್ಷೇಪಾರ್ಹವಾಗಿದೆ, ಇದರಿಂದ ಹಿಂದೂಮತದ ಮೇಲೆ ಯಾವ ಪರಿಣಾಮ ಉಂಟಾಗುವುದು ಎಂಬುದನ್ನು ವಿವರಿಸಿದರು. ವೈಸರಾಯರು ಈ ಬಿಲಿಗೆ ತಮ್ಮ ಸಮ್ಮತಿಯನ್ನು ಕೊಟ್ಟುದುದನ್ನು ಈ ಸಭೆಯು ನಿಷೇಧಿಸುತ್ತದೆ; ಹಿಂದುಸ್ಥಾನದ ಸ್ಟೇಟ್ ಸೆಕ್ರೆಟರಿಯವರು ಸಾಮ್ರಾಟರು ಈ ಬಿಲಿಗೆ ತಮ್ಮ ಸಹಿ ಹಾಕದಂತೆ ಅವರಿಗೆ ತಿಳಿಸಬೇಕು ಎಂಬ ಠರಾವನ್ನು ಪಾಸುಮಾಡಿ ಎಲ್ಲರೂ ಈ ಬಿಲನ್ನು ನಿಷೇಧಿಸಿದರು. ಅಲ್ಲದೆ ಸೆಕ್ರೆಟರಿ ಒಫ್ ಸ್ಟೇಟರಿಗೆ ಒಂದು ಮಹಜರನ್ನು ಮಾಡಲು ಒಂದು ಕಮಿಟಿ ನೇಮಿಸುವ ಠರಾವು ಈ ಸಭೆಯಲ್ಲಿ ಮಂಜೂರಾಗಿದೆ. ಈ ಕಮಿಟಿಗೆ ಮ| ರಾ| ಯು. ವೆಂಕಟರಾವ್, ಮ| ರಾ| ಪಿ. ಎನ್. ರಾಮರಾವ್, ಮ| ರಾ| ಕೆ. ಎಲ್. ನಾರಾಯಣರಾವ್ ಡಾಕ್ಟರ್ ಯು. ರಾಮಚಂದ್ರರಾವ್ ಮತ್ತು ಹೊಸಕೊಪ್ಪ ಕೃಷ್ಣರಾವ್ ಇವರು ಮೆಂಬರರಾಗಿ ಆರಿಸಲ್ಪಟ್ಟಿದ್ದಾರೆ.

ಆರೋಗ್ಯ ಚಂದ್ರಿಕೆ.
ಮದ್ರಾಸ್.
ಸಂಪಾದಕರು: ಡಾಕ್ಟರ್ ಯು. ರಾಮರಾವ್, ಎಲ್. ಎಮ್. ಸಿ. ಎಫ್. ಎಮ್. ಯು. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಚಿಕಿತ್ಸೆಯ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವುದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ.

ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ.

ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಯೆ ಪ್ರಕಟವಾಗುವುದು.

'ಹೆಲ್ತ್' ಎಂಬ ನಮ್ಮ ಇಂಗ್ಲಿಷ್ ಮಾಸಪತ್ರಿಕೆಯನ್ನೋದಿ ಸಂತೋಷಿಸಿದ ಅನೇಕ ದೊಡ್ಡ ಮನುಷ್ಯರ ಪ್ರೋತ್ಸಾಹದ ಮೇಲೆ ಈ ಕನ್ನಡ ಪತ್ರಿಕೆಯನ್ನು ಹೊರಪಡಿಸಿದೆ.

ಅದರ ಸಂಪುಟ ೨ ಮತ್ತು ೧೦ನೇಯ ನವಂಬರ ೧೯೨೪ ಸಂಚಿಕೆಯಲ್ಲಿ ಕಾಣಿಸಿರುವ ವಿಷಯಗಳು.

ಮುಖಚಿತ್ರ:—ಪರ್ಣಕುಟೀರವಾಸಿನಿಯಾದ ಒಬ್ಬ ರೂಪವತಿ.
ಕ್ಷಾಮಕ್ರಮ ಅಥವಾ ಉಪವಾಸಾಯಾಮ.
ಹುಣಿಸೇಹಣ್ಣಿನ ಆಹಾರಗುಣಗಳು ಮತ್ತು ಔಷಧಗುಣಗಳು.
ಕಾಲುನಡೆಯೇ ಉತ್ತಮವಾದ ವ್ಯಾಯಾಮವು.
ಜೇನಿನಲ್ಲಿರುವ ಗುಣಗಳು.
ಹಲ್ಲುಗಳ ರಚನೆ, ಪ್ರಯೋಜನ, ಕೆಲಸ ಮುಂತಾದವು.
ಮದದ್ರಾವಕಗಳಿಂದ ಆರೋಗ್ಯಕ್ಕೆ ಉಂಟಾಗತಕ್ಕ ಹಾನಿ.
ಅಂಗಸಾಧನೆ ಮತ್ತು ಬುದ್ಧಿವ್ಯವಸಾಯ (ವಿದ್ಯಾಭ್ಯಾಸ).
ಗಾಯಗಳು, ಮತ್ತು ಉಳುಕು ಮುಂತಾದವು, ಅವುಗಳ ಚಿಕಿತ್ಸೆ.
ನವನಾಗರಿಕ ಪ್ರಪಂಚಕ್ಕೆ ಸಹಜವಾದ ಮೂರು ಕೆಡುಕುಗಳು.
ಒಬ್ಬ ಉಪವಾಸಿಯ ಅನುಭವ.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವುವು. ಆರೋಗ್ಯಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ ರೂ. ೧—೮—೦; ಬಿಡುಪತ್ರಿಕೆ ಒಂದಕ್ಕೆ ರೂ. ೦—೨—೦. ಹಿಂದಿನ ಸಂಚಿಕೆಗಳು ಕೂಡ ದೊರಿಯುವವು.

ಚಂದಾದಾರರಾಗುವವರು ವಿ. ಪಿ. ಮೂಲಕವಾಗಿ ತರಿಸಿಕೊಳ್ಳುವುದಕ್ಕಿಂತಲೂ ಹಣವನ್ನು ಮುಂಗಡವಾಗಿ ಕಳುಹಿಸುವುದು ಲಾಭಕರ. ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು 'ಆರೋಗ್ಯ ಚಂದ್ರಿಕೆ'ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು.

ಪತ್ರವ್ಯವಹಾರಕ್ಕೆ: 'ಆರೋಗ್ಯ ಚಂದ್ರಿಕೆ'
೩೨೩ ತಂಬುಚೆಟ್ಟಿ ಬೀದಿ, ಮದ್ರಾಸ್

ತುಳು ಪಾಡ್ದನಗಳು.

ಬೊಬ್ಬರ್ಯ, ಕಲ್ಲುಟ್ಟಿ—ಕಲ್ಕುಡ, ದೈಯ್ಯೊಂಗುಳು—ಕೋಡದಬ್ಬು(?) ತೋಡಕಿನಾರ್, ಮುಂಡತ್ತಾಯ ಪ್ರತಿ ಒಂದಕ್ಕೆ 2 ಆಣೆ. 1½ ಆಣೆ ಟಪ್ಪಾಲು ಚೀಟು ಕಳಿಹಿಸಿದರೆ 5 ಪುಸ್ತಕಗಳು ಕೂಡಲೇ ಕಳುಹಿಸಲ್ಪಡುವವು.

ವಿಳಾಸ: ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

The Canara Bank, Limited, Magalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.
Authorised and fully paid
up Capital Rs. 300,000—0—0
Reserve and other sinking
Funds „ 233,000—0—0

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ
ಕೊಟ್ಟ ಮೂಲಧನವು ರೂ. 300,000—0—0
ಕ್ಷೇಮನಿಧಿ ಮತ್ತು ಇತರ ಫಂಡುಗಳು
„ 233,000—0—0

THE BANK RECEIVES FIXED, CURRENT ACCOUNT, & SAVINGS BANK DEPOSITS
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳೂ, ಪಡಕೊಳ್ಳೋಣಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 12th Feb. 1924.
K. Venkat Rao,
Secretary



ಪಾಳ್ಯದ ವೆಂಕಟಾಚಲ ಪಂಡಿತರ
ಆಯುರ್ವೇದೀಯ ಸಿದ್ಧೌಷಧಿಗಳಲ್ಲಿ ಒಂದಾದ,
ಲೋಕಾಮಯಹರ ಕಸ್ತೂರಿ ಮಾತ್ರೆಯನ್ನು ಇಂದೇ ತಾವು ತರಿಸಿಕೊಳ್ಳಿರಿ! ಏಕೆಂದರೆ,

ಲೋಕಾಮಯಹರ ಕಸ್ತೂರಿ ಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಬಾರದು ಅದು ಹೇಗೆಂದರೆ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ [illegible] ಬಂದಲ್ಲಿ ಯಾವ ಕಾಹಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಸಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರ ವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟ ಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮು, ಶೀತ, ಶೀತವಾತ, ಶ್ಲೇಷ್ಮಭಾರ, ಆಹಾರವು ಜೀರ್ಣವಾಗದೆ ಬರುವ ತಲೆ ನೋವು, ಕರುಳಿನ ನೋವು, ಜ್ವರ, ಚಳಿಜ್ವರ ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಅಕ್ಷೋಭ್ಯರಾಗಿ ಇನ್‌ಫ್ಲುಯೆನ್ಜಾ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ನಡವಳಿಕೆಯಲ್ಲಿಟ್ಟವರಿಗೂ ವ್ಯಾಪಾರಿಗಳಿಗೂ ಗೋಷ್ಠಿಪ್ರಿಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿ ಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯು ಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ 250ರಿಂದ 300 ಮಾತ್ರೆಗಳ ವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1—4—0, 12 ಸೀಸೆಗಳಿಗೆ 2—7—0, 25 ಸೀಸೆಗಳಿಗೆ 4—10—0

ಪೋಸ್ಟೇಜು ಚಾರ್ಜು. ಎಲ್ಲಾ ಅಂಗಡಿಗಳಲ್ಲಿಯೂ ದೊರಿಯುತ್ತವೆ.

ಏಜಂಟ್
ಮಂಗಳೂರು ಟವನಿಗೆ ಮಾತ್ರ.
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ.

ವಿಳಾಸ:— ಪಾಳ್ಯದ ವೆಂಕಟಾಚಲ ಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ವಿದ್ಯಾವಾಚಸ್ಪತಿ
ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ
"ಸಂಕ್ಷೇಪಗೀತೆ"

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ್ಳ ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದೆ ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೦. ಟಪ್ಪಾಲು ಖರ್ಚು ಕೂಡಿ ಆಣೆ ೧೧ನ್ನು ಮನಿಯಾರ್ಡರ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ೨ರಕ್ಕಿಂತ ಜಾಸಿ ಖರ್ಚು ತಗಲುವುದು. ರಖಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.

ಪುಸ್ತಕ ದೊರಿಯುವ ವಿಳಾಸ:—
ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು. ಮತ್ತು
ಕೆನರಿಸ್ ಮಿಶ್ಯನ್ ಬುಕ್ ಎಂಡ್ ಟ್ರಾಕ್ಟ ಡಿಪೋಜಿಟರಿ,
ಮಂಗಳೂರು.

ಉಚಿತ! ಬಿಟ್ಟಿ!! ಪುಗಸಟ್ಟೆ!!!

ವೈದ್ಯವಿದ್ಯ

ಎಂಬ ಈ ಪುಸ್ತಕದಲ್ಲಿ ಆಯುರ್ವೇದ ಶಾಸ್ತ್ರದಲ್ಲಿ ಸ್ತ್ರೀಪುರುಷರು ಆರೋಗ್ಯದೃಢಕಾಯರಾಗಿ ಆರೋಗ್ಯದಿಂದ ಕೂಡಿದ ಸಂತಾನಗಳನ್ನು ಪಡೆದು ಸತಿಪತಿಯರು ಅನ್ಯೋನ್ಯವಾಗಿ ಅನುರಾಗವುಳ್ಳವರಾಗಿ ಸುಖದಿಂದಲೂ ಸಂತೋಷದಿಂದಲೂ ಸಂಸಾರಯಾತ್ರೆಯನ್ನು ಮಾಡಲು ಅತ್ಯಂತ ಉಪಯುಕ್ತವಾದ ವಿಷಯಗಳು ಅಲ್ಲಲ್ಲಿ ಹೇಳಲ್ಪಟ್ಟಿರುವುದನ್ನು ಒಂದಾಗಿ ಕ್ರೋಢೀಕರಿಸಿ ಅಜ್ಞಾನದಿಂದಲೂ ಸಂಕಷ್ಟದಿಂದಲೂ ನರಳುತ್ತಿರುವ ಸಂಸಾರಿಗಳನ್ನುದ್ಧಾರಮಾಡುವ ಸಲುವಾಗಿ ಈ ಪುಸ್ತಕವನ್ನು ಕ್ರಯವೂ ಅಂಚೇ ಹಾಸಲೂ ಇಲ್ಲದೆ ಬೇಡಿದವರಿಗೆ ಸರ್ವತ್ರ ಉಚಿತವಾಗಿ ಕಳುಹಿಸುತ್ತೇವೆ. ಹೆಚ್ಚು ಮಾಹಿತಿಗೆ ಪತ್ರ ಬರೆಯಿರಿ.

ರಾಜವೈದ್ಯ, ನಾರಾಯಣಜಿ ಕೇಶವಜಿ,
49, ಬಂದರ್ ಸ್ಟ್ರೀಟ್, ಜಿ. ಟಿ. ಮದ್ರಾಸ್

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀಕಾಶೀ, ಗಯಾ, ಪ್ರಯಾಗ, ಹರಿದ್ವಾರ ಬದ್ರಿನಾರಾಯಣ ದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೆಟ್ಟಿಯಾಗಿ ಅವರ ಕಡೆಯಿಂದನುಭವ ತೆಗೆದು ಪ್ರತಿಯೊಂದು ಸಿದ್ಧಮಾಡಿಕೊಂಡು ಬರೆದಿರುವರು. ೧ನೇದು ಮಂತ್ರಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರಪ್ರಯೋಗದಿಂದಲೂ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವೂ ಇದೆ. ೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳು ಹೊರಡುವಿಕೆ, ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ. ೩ನೇದು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು. ೪ನೇದು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಧಾತುಗಳ ಭಸ್ಮ ಸಹ, ಇದರಲ್ಲಿ ಉಂಟು, ಇದು ಪ್ರತಿಯೊಂದು ಕುಟುಂಬದಲ್ಲಿ ಆಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷಧ ಮಾಡುವ ಕ್ರಮವನ್ನು ಚೆನ್ನಾಗಿ ಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಳಾಸವು ತಿಳಿಸಿರುವರು. ೫ನೇದು ಯಂತ್ರ ಪ್ರಕರಣದಲ್ಲಿ ವಶೀಕರಣ ಗೃಹಪೀಡಾ ನಿವಾರಣ ಭೂತಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು, ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರದಿರುವರು. ಈ ಗ್ರಂಥವು ಹತ್ತರ ಇದ್ದ ಬಳಿಕ ಎಲ್ಲಾ ದೇವಾನು ದೇವತೆಗಳು ದ್ರವ್ಯಗಳೂ ವೈದ್ಯರೂ ಜೋತಿಷ್ಯರು, ಮಾಂತ್ರಿಕರು ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥ ಗ್ರಂಥವು ಯಾರು ಕಣ್ಣಿಂದ ನೋಡಿರಲಿಕ್ಕಿಲ್ಲಾ. ಪ್ರತಿಯೊಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆ ತೀರ ಕಡಿಮೆಮಾಡಿ ಇರುವವು. ೨—೮—೦ ಟಪ್ಪಾಲು ಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ ನಾಟಕ ಕಾವ್ಯ, ಕಥೆಗಳು, ಯಕ್ಷಗಾನ, ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ:—
ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ

Just Arrived **Fresh Consignment**

OF

Best English Cycles.



REDUCTION IN PRICES.

Ranger Cycles Model M. Made in Birmingham.
WITH DUNLOP OR BATES TYRES & TUBES .. @ Rs. 90—0—0

Barton Humber on Advance
WITH DUNLOP OR BATES TYRES & TUBES ... @ „ 100—0—0

Senior Royal with B. S. A. Fitting.
WITH DUNLOP OR BATES TYRES & TUBES .. ...@ Rs. 145—0—0

Royal Saxon with B. S. A. Fitting.
WITH DUNLOP OR BATES TYRES & TUBES ... ... @ Rs. 175—0—0

All the above Cycles include pump and tools.

BROOKES PATEERN 90/2 GERMAN SADDLE ... ...@ „ 9—8—0
„ SADDLE 90/2 „ ... ..@ „ 21—0—0
„ „ B/30 „ ... ...@ „ 26—0—0

For further particulars please write to us or call on us:—

All kinds of Cycle Accessories, Dunlop and German Tyres and Tubes
ARE AVAILABLE AT VERY CHEAP RATES.

Special Discount to Traders. *Easy Terms Arranged.*

APPLY TO:—**The Mangalore Trading Association,**
Wholesale Dealers in Cycles and Cycle Accessories,
Car-Street, MANGALORE

ಗೋಡೆಗೆ ತಗಲಿಸುವ
ಹೊಸ ನಮೂನೆಯ—
ಟಿಕ್—ಟಾಕ್

ಎಂಬ ಈ ಗಡಿಯಾರಗಳು ಜರ್ಮನೀ ದೇಶದಲ್ಲಿ ತಯಾರಿಸಿದ್ದು. ಇವು ಕರಾರು ಘಂಟೆಯನ್ನು ತೋರಿಸುವವು. ಇವಕ್ಕೆ ಬೀಗ ಕೊಡಬೇಕಾದಿಲ್ಲ. ಇದರಲ್ಲಿ ಕಾಣುತ್ತಿರುವ ಗುಂಡನ್ನು ಮೇಲಕ್ಕೆ ಎಳೆದರೆ ಸಾಕು. ತನ್ನಷ್ಟಕ್ಕೆ ತಾನೇ ಟಿಕ್—ಟಾಕ್ ಎಂಬ ಶಬ್ದವನ್ನು ಮಾಡುತ್ತಾ ಸರಿಯಾದ ಕಾಲವನ್ನು ತೋರಿಸುವದು. ಇದು ನೋಡುವುದಕೆ ಬಹು ಲಕ್ಷಣವಾಗಿರುವುದು.

ಕ್ರಯ 1ಕ್ಕೆ ರೂ. 3—0—0

ಪೀಟರ್ ವಾಚ್ ಕಂಪೆನಿ
ಪೋಸ್ಟ್ ಬಾಕ್ಸ್ ನಂ. 27, ಮದ್ರಾಸ್.

ADVERTISE IN

The Business Directory
OF INDIA, BURMA & CEYLON

A Comprehensive Directory of the various Business-men, Exporters and Importers, Firms, Factories, Mills, Manufacturers, Merchants and Industries of the principal Cities, Ports and Towns of India, Burma and Ceylon.

PUBLISHED ANNUALLY

Rates for Advertisements

¼ Page	Rs.	50.
2 in. Single Column	„	20.
1 in. Single Column	„	15.
Name in Bold Types	„	5.

Price per Copy Rs. 10.

PRINTERS & PUBLISHERS.
Business Directory Co.,
Kanara Press Buildings, MADRAS. E.
Telegrams: "KETHAKI" Phone 540

ದಕ್ಷಿಣ ಕನ್ನಡ ಜಿಲ್ಲೆಯ
ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

JUST ARRIVED
Goodrich Belts.
OF VARIOUS SIZES
Price Re. 1—12—0 each
Mangalore Trading Association,
Car Street, MANGALORE.

ಸಾರಸ್ವತ.

ಕನ್ನಡ ಮತ್ತು ಕೊಂಕಣಿ ಭಾಷೆಗಳಲ್ಲಿ ಕಳೆದ ವಿಜಯ ದಶಮೀ ದಿನದಿಂದ ಪ್ರತಿ ದಶಮಿಗೆ ಹೊರಡುವ ಪತ್ರಿಕೆ.

ವಿ. ಎಸ್. ಕಾಮತ್,
ಮುಲ್ಕಿ ವಾಮನ ಉಡುವ } ಸಂಪಾದಕರು.

ಮತಸಂಸ್ಥೆ ಮತ್ತು ಸಮಾಜಕ್ಕೆ ಸಂಬಂಧಪಟ್ಟ ಇತರ ಸಂಸ್ಥೆಗಳ ಸುಸಂಘಟನ.

ಸಮಾಜದೊಳಗೆ ಅನ್ಯೋನ್ಯ ಸಾಧನೆ.

ಸ್ತ್ರೀಸಮಾಜಕ್ಕೆ ಉಪಯುಕ್ತವಾದ ವಿಷಯಗಳ ನಿರೂಪಣ, ಮತಭಾವನೆಗಳ ಉಜ್ಜೀವನ ಇತ್ಯಾದಿ ಉದ್ದೇಶಗಳಿಂದ ಈ ಪತ್ರಿಕೆಯು ಹೊರಡಿಸಲ್ಪಡುವುದು. ಸಾರಸ್ವತ ಸಮಾಜವು ಇದಕ್ಕೆ ಪ್ರೋತ್ಸಾಹವನ್ನೀಯಬೇಕಾಗಿ ಪ್ರಾರ್ಥನೆ.

ಚಂದಾಹಣ ಅಂಚೆವೆಚ್ಚ ಕೂಡಾ ರೂ. ೧—೪—೦. ಪೋಷಕರು ರೂ. ೧೦—೦—೦. ಸಹಾಯಕರು ರೂ. ೫—೦—೦. ಮಾದರಿ ಸಂಚಿಕೆಯನ್ನು ಟಪ್ಪಾಲು ಖರ್ಚಿಗಾಗಿ ಅರ್ಧಾಣೆ ಸ್ಟಾಂಪು ಕಳುಹಿಸುವವರಿಗೆ ಉಚಿತವಾಗಿ ಕಳುಹಿಸುವೆವು.

ಕನ್ನಡ ನಾಡಿನಲ್ಲಿ ಪ್ರತಿ ಕಡೆಯಲ್ಲಿಯೂ ಬಾತಮೀದಾರರು ಬೇಕು.

ಎಲ್ಲಾ ಪತ್ರವ್ಯವಹಾರಗಳನ್ನು ಕೆಳಗಿನ ವಿಳಾಸಕ್ಕೆ ನಡೆಸಬೇಕು.

ಯು. ನಾರಾಯಣನಾಯ್ಕ, ಕಾರ್ಯದರ್ಶಿ,
ಸಾರಸ್ವತ, ಉಡುಪಿ.

ಆರ್. ಮಾರ್ಟಿನ್ನರ ಲಪ್ಪಾ ಎಣ್ಣೆ

ಇದರ ಸುವಾಸನೆಯು, (ಪರಿಮಳವು) ಬಹಳ ಅಂದವಾಗಿಯೂ ಇರುವುದಲ್ಲದೆ, ಬಹಳ ಹೊತ್ತಿನ ವರೆಗೂ ಇರುತ್ತದೆ. ಈ ಎಣ್ಣೆಯನ್ನು ತಲೆಗೆ ಹಾಕಿಕೊಳ್ಳುವುದರಿಂದ ಕಣ್ಣುಗಳು ತಂಪಾಗಿಯೂ, ಶುಭ್ರವಾಗಿಯೂ, ಆಗುವುದಲ್ಲದೆ, ತಲೆಕೂದಲು ಚೆನ್ನಾಗಿ ಬೆಳೆಯುತ್ತದೆ. ಇದನ್ನು ಪ್ರತಿದಿವಸವೂ ಉಪಯೋಗಿಸುವುದರಿಂದ ಕೂದಲುಗಳು ಕಪ್ಪಾಗಿ ಹೊಳೆಯುವಂತೆ ಮಾಡುತ್ತದೆ. ಕೂದಲುಗಳಲ್ಲಿರುವ ಹೇನುಗಳು ಮುಂತಾದುವು ನಾಶವಾಗಿ ತಲೆಬುರುಡೆಯನ್ನು ಚೆನ್ನಾಗಿ ಬೆಳೆಯುವಂತೆ ಮಾಡುತ್ತದೆ. ಗಡ್ಡ ಮತ್ತು ಮೀಸೆಗಳು ಸಹ ಬೆಳೆಯುತ್ತವೆ. ಇದನ್ನು ಉಪಯೋಗಿಸಿದ ಜನರು ಇದಕ್ಕಿಂತ ಉತ್ತಮವಾದ ಎಣ್ಣೆಯು ಬೇರೆ ಇಲ್ಲವೆಂದು ಹೇಳಿರುತ್ತಾರೆ.

ಕ್ರಯ ಬಾಟ್ಲಿ 1ಕ್ಕೆ ರೂ. 1-4-0.

ಆರ್ ಮಾರ್ಟಿನ್ನರ ಗಿಟೋಡೆಯಿನ್.

ಗಂಡಸರಿಗೂ ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ, ಅಥವಾ ಹೊಸತಾಗಿದ್ದರೂ ಸರಿ. ಬಿಳುಪು ಹೋಗುತ್ತಿರುವುದು ಉರಿಯುವುದು, ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೆ ಉರಿ ಮೂತ್ರವನ್ನು ನಿಲ್ಲಿಸಿ, ಮೂತ್ರವು ಬಿಳುಪಾಗಿ ನಿರ್ಮಲವಾಗುವುದಲ್ಲದೆ ರೋಗದ ಪತ್ತೆಯೇ ಅಡಗಿಬಿಡುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ.

ಬೆಲೆ ಸೀಸೆ 1ಕ್ಕೆ ರೂ. 2—0—0.

ಆರ್. ಮಾರ್ಟಿನ್ನರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮು, ಗೂರಲು ಶ್ವಾಸ, ಶೀತ, ನೆಗಡಿ, ಗಂಟಲುನೋವು, ಎದೆ ನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನಮಾಡಿ ಪರೀಕ್ಷಿಸಿ ನೋಡಿರಿ. ಅನಂತರ ಬೇರೆ ಯಾವ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮುಗಳೂ ರಾಜಿಯಾಗಿಯೂ, ಎದೆಗೆ ಬಲಕೊಟ್ಟು ಮೇಲ್ಪಂದ ರೋಗಗಳು ತಲೆಯಿಕ್ಕದಂತೆ ಮಾಡುತ್ತದೆ.

60 ಮಾತ್ರೆಗಳ ಸೀಸೆ 1ಕ್ಕೆ ರೂ. 1—4—0.

ವಿಳಾಸ:—ಆರ್. ಡಿ. ಕಟ್ಲೆ ಮತ್ತು ಕಂಪೆನಿ,
ನಂಬ್ರ ಬಿ. ಫ್ರಿಯರ್ ರೋಡ್,
ಸಾಂಜ ವರ್ತಮಾನ ಪ್ರೆಸ್,
ಟೋಡಿವಾಲಾ ಬಿಲ್ಡಿಂಗ ಎದುರುಗಡೆ, ಫೋರ್ಟ ಮುಂಬಯಿ.

R. D. Kately & Co.
No. B. Frere Road,
Opposit Sanjvertaman Press,
Todiwala Building, FORT BOMBAY.

ಸುವರ್ಣಸಂಧಿ.

ಕೈ ಮಗ್ಗಗಳಲ್ಲಿ ನೂಲನ್ನು ನೇಯುವ ಮಗ್ಗಗಳಿಗೆ ಬೇಕಾಗುವ ಯಾವತ್ತು ಸಾಮಾನುಗಳು, ನೂಲಿಗೆ ಹಾಕುವ ನಾನಾ ತರದ ರಂಗುಗಳು ಅಗತ್ಯವಿರುವ ನಾನಾ ಬಗೆಯ ರಸಾಯನಗಳು ಇವನ್ನು ನಮ್ಮಲ್ಲಿಂದ ನ್ಯಾಯವಾದ ಬೆಲೆಗೆ ಹೊಂದಬಹುದು. ನಮ್ಮಲ್ಲಿ ದೊರಕುವ ಯಾವತ್ತು ಸಾಮಾನುಗಳನ್ನು [illegible] ಪಡೆಯಬಹುದು.

ಪಿ. ಪಿ. ತ್ರಿವೇದಿ ಎಂಡ್ ಕೋ.,
ನಂಬ್ರ 66 [illegible] ಲೇನ್,
ಫೋರ್ಟ ಮುಂಬಯಿ.

Edited, Printed & Published by V. S. Kamath at the M. T. A. Sharada Press, Mangalore.

Registered: No. M. 498.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ | ನ ಭೇಜಿರೇ ಭೀಮವಿಷೇಣ ಭೀತಿಮ್ || ಸುಧಾಂ ವಿನಾ ನ ಪ್ರಯಯುರ್ವಿರಾಮಂ | ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ || ೧ ||
ದೊರೆಯಲನುಪಮರತ್ನಗಳು ಸಾ | ಗರವ ಮಥಿಸಲು ಸುರರಿಗದರಿಂ | ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರಲವ ||
ಗರಲಕವರಂಜಿದರೆ | ಸುಧೆಯನು | ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು || ೧ ||

ಪುಸ್ತಕ ೧೯. ಮಂಗಳೂರು, ತಾರೀಕು ೩೦ನೇ ಶುಕ್ರವಾರ ಜನವರಿ ೧೯೨೫. ಸಂಚಿಕೆ ೫.

The Canara Banking Corporation Udipi, Ltd.

Head Office:— **Udipi** Branch:— **Coondapoor**

Season Deposits

Carrying Special rate of 7% up to 15th June 1925 only.

Further Particulars on Application.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಉಡುಪಿ. ಲಿಮಿಟೆಡ್.

ಹೆಡ್ ಆಫೀಸು:—ಉಡುಪಿ. ಶಾಖೆ:—ಕುಂದಾಪುರ.

ತಾ. 15—6—1925ರವರೆಗೆ ಮಾತ್ರ ಸಾಲಿಯಾನ್ ಸೇಕಡಾ 7ರ ದರದ ಬಡ್ಡಿಯ ಮೇಲೆ ಮುಸುಂ ಠೇವಣಾತಿಗಳನ್ನು ಅಂಗೀಕರಿಸೋಣಾಗುತ್ತದೆ.

ಹೆಚ್ಚಿನ ಮಾಹಿತಿಗೆ ಬರಕೊಳ್ಳಿರಿ.

Office of the Corporation, Udipi, 10-11-'25 } **N. Ananda Rao,**
Secretary.

Wanted Agents
FOR
Every District in South India

For Pushing Sales of Our Calenders, Xmas and New Year Cards, Blotters, Pictures and Picture Post Cards, at wholesale rates. Deposit of Rs. 100—0—0 Essential.

Apply to:—
The South Indian Advertising Agency,
13, Kilary Road,
BANGALORE CITY.

ಶುದ್ಧ ರೋಮದ ಧಾವಳಿಗಳು.

1 ಮೊಳ ಉದ್ದ 1½ ಮೊಳ ಅಗಲ ರೂ. 1½ರಿಂದ 2 ವರೆಗೆ, 5 ಮೊಳ ಉದ್ದ 1½ ಮೊಳ ಅಗಲ ರೂ. 1½ ರಿಂದ 5 ವರೆಗೆ, 6 ಮೊಳ ಉದ್ದ 1½ ಮೊಳ ಅಗಲ ರೂ. 2½ರಿಂದ 6 ವರೆಗೆ, 8 ಮೊಳ ಉದ್ದ 2 ಮೊಳ ಅಗಲ ರೂ. 3½ರಿಂದ 10 ವರೆಗೆ, 12 ಮೊಳ ಉದ್ದ 2½ ಮೊಳ ಅಗಲ ರೂ. 6ರಿಂದ 12 ವರೆಗೆ, 16 ಮೊಳ ಉದ್ದ 2½ ಮೊಳ ಅಗಲ ರೂ. 8ರಿಂದ 16 ವರೆಗೆ. ಇವುಗಳಲ್ಲದೆ [illegible] ಮುಂತಾದ [illegible] ಸಾಮಾನುಗಳು [illegible] ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುವು. ಕ್ಯಾಟಲಾಗ್ ಉಚಿತ.

ವಿಳಾಸ—
ಶಿರೋಮಣಿ ಯು. ನಾರಾಯಣಾಚಾರ್ಯ
ಮತ್ತು ಕಂಪೆನಿ, [illegible]

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ.

450 ಪುಟಗಳು ಎಮ್. ಗಣಪತಿರಾವ್ ಐಗಳ್ ಇವರಿಂದ ರಚಿತವಾದದ್ದು. ಕ್ರಯ ರೂ 1-4-0

ಮಾರಾಟಕ್ಕೆ ಸಿದ್ಧವಾಗಿವೆ **— ತುಳು ಪಾಡ್ದನಗಳು —** ಮಾರಾಟಕ್ಕೆ ಸಿದ್ಧವಾಗಿವೆ.

ದೈಯ್ಯೊಂಗುಳು, ಕಲ್ಲುರ್ಟಿ—ಕಲ್ಕುಡ, ಕಣಂದೂರು ದೈಯ್ಯೊಂಗುಳು, ಮುಂಡತ್ತಾಯ, ಬೊಬ್ಬರ್ಯ.

ಸುಲಭ ದರಗಳು **— ಶಾಲಾ ಪುಸ್ತಕಗಳು —** ರಖಂ ಕೊಂಡುಕೊಳ್ಳುವವರಿಗೆ ಯೋಗ್ಯ ಡಿಸ್ಕೌಂಟ್.

ಅಜ್ಜಿ ಕಥೆಗಳು:—ಮೂರು ಕರಡಿಗಳು; ಜೇನುಸಕ್ಕರೆ ಹಾಗೆ ಬಡವಾಯಿತು; ಅಗಸನ ಮುದ್ದೆ; ಇಲಿಗಳ ಪಕ್ಕ ಕೈ; ಅಂಗಳ ಮುಗ್ಗು; ಸಿಗಡಿ ಯಾಕೆ ಒಣಗಲಿಲ್ಲ; ಗುಡುಗುಡು ಗುಮ್ಮಟ ದೇವರು; ಮೆಣಸಿನ ಕಾಳಿನ್ನ; ಒಡ್ಡನ ಓಟ; ಹೊಸ ಕನ್ನಡ ಪುಸ್ತಕ ಭಾಗ ೧; ಹೊಸ ಕನ್ನಡ ಪುಸ್ತಕ ಭಾಗ ೨; ಕನ್ನಡ ಪದ್ಯಗಳು; ಮಗ್ಗಿ ಪುಸ್ತಕ; ಅಜಿತಕುಮಾರ; ಪದ್ಯ ರತ್ನಾವಳಿ. ಎಕ್ಸರ್‌ಸೈಜ್ ಮತ್ತು ನೋಟು ಪುಸ್ತಕಗಳು, ಕಾಪಿ ಪುಸ್ತಕಗಳು, ಡ್ರಾಯಿಂಗ್ ಪುಸ್ತಕಗಳು

ಇತರ ಪುಸ್ತಕಗಳು:—ಸಂಕ್ಷೇಪಗೀತೆ, ಕೇತುಭಂಗ, ಹಿಂದೂ ವ್ರತವಿವೇಕ, ಚಂದ್ರಗುಪ್ತ ಚಕ್ರವರ್ತಿ, ಶ್ರೀ ಕೃಷ್ಣಸಂಧಾನ ಪದ್ಯಪಾಠಗಳು, ಹರಿಕಥಾ ಮೃತಸಾರ ಹರಿನಾಮಸಂಕೀರ್ತನೆ ಸುಧಾಂಮೃತ ಪದ್ಯಗಳು. ಬೆಂಕಿಪೆಟ್ಟಿಗೆ ತಯಾರಿಸುವ ವಿಧಾನ, ಸಾಬೂನು ತಯಾರಿಸುವ ವಿಧಾನ, ಸ್ವರಾಜ್ಯ, ಭಕ್ತಿೋಲ್ಲಾಸ, ಚರಕಗೀತೆ, ಕೊಂಕಣ ಭಾಷೆಯಲ್ಲಿ ಚಂದ್ರಹಾಸ ನಾಟಕ, ಪ್ರಹಲ್ಲಾದ ಚರಿತ್ರ ನಾಟಕ, ಕನ್ನಡ ಮೃಚ್ಛಕಟಿಕ ನಾಟಕ, ಚಂದ್ರಹಾಸಾಭ್ಯುದಯ ನಾಟಕ, ಕೋವಿಲನ್ ಚರಿತ್ರ ನಾಟಕ, ನಾದರಿ ಉಪನ್ಯಾಸ ಭಾಗ ೧, ೨, ಮತ್ತು ೩.

AMRUTANJAN BOMBAY
AMRUTANJAN
Best Indian Pain Balm
Amrutanjan
BOMBAY

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಶತ್ರುವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು.

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿರಃಶೂಲವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:— ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:— ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ, ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 2 ಆಣೆ.

ಅಮೃತಾಂಜನ ಡಿಪೋ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

109 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

— ರಥೋತ್ಸವ, ವಿವಾಹ ಉಪನಯನಗಳ ಸಮಯ— ಸರ್ವರಿಗೂ ಉಡಿಗೆ ತೊಡಿಗೆಗಳು ಬೇಕಾಗುವ ಸಂದರ್ಭ.

ಯಾರು, ಯಾವುದನ್ನು ಎಲ್ಲಿ ಪಡೆಯಬೇಕೆಂಬ ತಂಕೆಯಿಂದ ವಿಳಂಬ ಮಾಡಬೇಡಿರಿ. ಉಡಿಗೆತೊಡಿಗೆಗಳನ್ನು ಕೊಡುವಲ್ಲಿ ಬೇಕಾದ ಯಥಾರ್ಥ ಮಾಹಿತಿಯನ್ನು ಕಳೆದ ಹಲ್ಲಿತ್ತಕ್ಕೂ ವರುಷಗಳಿಂದ ಪಡೆದು ನಮ್ಮಲ್ಲಿಯ ವ್ಯಾಪಾರವು ಗಿರಾಕಿಗಳಿಗೆ ಸರ್ವ ತೃಪ್ತಿಯುಂಟಾಗುವ ರಾಭಕರವಾಗಿ ಪರಿಣಮಿಸುವಂತೆ ನಮ್ಮ ಜವಳಿ ಸಂಗ್ರಹವನ್ನು ಮಾಡಿರುತ್ತೇವೆ.

ಗುರ್ಪುರ್ಕರ್ ಬ್ರದರ್ಸ್, ರಥಬೀದಿ, ಮಂಗಳೂರು.

ಹೆಡ್ ಆಫೀಸು:—ರಥಬೀದಿ—(ಮೊದಲು ಸುಜೀರ ನಾಗಪ್ಪನಾಯಕ್, ಎಂಡ್ ಕೊ. ಇದ್ದಲ್ಲಿ; [illegible] ರಸ್ತೆಗೆ ತಿರುಗುವಲ್ಲಿ) ಮಂಗಳೂರು.

ಬ್ರಾಂಚ್ ಆಫೀಸು:—ರಥಬೀದಿ—(ಹಳೇ ತಾಲೂಕು ಕಚೇರಿಯ ಪಟಾರಕ್ಕೆ ಸಮೀಪವಿರುವ ಮಳಿಗೆ) ಮಂಗಳೂರು.

ಈ ದೇಶದ ಪ್ರಖ್ಯಾತಪಟ್ಟ ನೇಯಿಗೆಯ ಕೇಂದ್ರಸ್ಥಳಗಳಾದ—ಬನಾರಸ್, ಪೂನಾ, ಅಹಮ್ಮದಾಬಾದ್, ಸೂರತ್, ಬೆಂಗಳೂರು, ಧರ್ಮಾವರಮ್, ಕಂಜೀವರಮ್, ಕೊಯಿಮುತ್ತೂರು, ಮಧುರೆ, ತಂಜಾವೂರು, ಕುಂಭಕೋಣ, [illegible] ಮದ್ರಾಸು ಈ ಪ್ರಾಂತ್ಯಗಳಲ್ಲಿ ತಯ್ಯಾರಾದ [illegible] ಸೀರೆಗಳು, ರೇಷ್ಮೆ ಮುಣಿಗಳು, [illegible] ಸೀರೆಗಳು [illegible] ತಯಾರಿಸಿದ ನೂಲಿನಿಂದ ಮಾಡಿದ—

[illegible] ಅಂಗವಸ್ತ್ರ, [illegible]—
[illegible]
ಎಲ್ಲಾ ಸಂಗ್ರಹವನ್ನು ನಮ್ಮ [illegible]
ಸಂಗ್ರಹಿಸಿ [illegible]

[illegible] 10%, ರೂ. 250 ರಿಂದ 1000ಕ್ಕೆ 12½% [illegible] ರೂ. 50ರಿಂದ 250ರವರೆಗೆ [illegible]

ಪ್ರತಿಯೊಂದು ಸ್ತ್ರೀ ಕುಟುಂಬಿಗಳ ಮನೆಗಳಲ್ಲಿ ಸೌಖ್ಯವನ್ನು ತೋರಿಸುವುದಕ್ಕೂ ಮತ್ತು ಅವರವರ ಉಪಯೋಗಾರ್ಥವನ್ನು ತಿಳುವಳಿಕೆ ಬಗ್ಗೆ ನಡಿಸುವುದಕ್ಕೂ ಒಂದು ಮರ್ಮವಾದ ನಿಘಂಟು ಪುಸ್ತಕವು ಈ ನಮ್ಮ ಹಿಂದೂದೇಶದ ಸಮೂಹದಲ್ಲಿರುವುದು. ಅಂಥಾ ಪುಸ್ತಕವು ಯಾವದೆಂಬುದು

ನೀವುಗಳು ಬಲ್ಲಿರಾ?
(ಅದೇ)
"ಕಾಮಶಾಸ್ತ್ರವೆಂಬುವುದು."

ತಾವುಗಳು ಇನ್ನೂ ಈ ಪುಸ್ತಕದಲ್ಲಿ ಬರೆದಿರುವ ಸಾರಾಂಶವನ್ನು ಓದಿಲ್ಲದಿದ್ದರೆ, ಒಡನೇ ಒಂದು ಪುಸ್ತಕವನ್ನು ಕಳುಹಿಸುವಂತೆ ಒಂದು ಪೋಸ್ಟುಕಾರ್ಡು ಬರಿಯಿರಿ.

ಪುಸ್ತಕವನ್ನು ಇನಾಮಾಗಿ ಕಳುಹಿಸುವೆವು.

ಮುಖ್ಯವಾದ ತಿಳುವಳಿಕೆ.

ತಾವುಗಳು ಧೃಡಚಿತ್ತರಾಗಿಯೂ, ನಿಧಾನಸ್ಥರಾಗಿಯೂ, ಸೌಖ್ಯವಾಗಿಯೂ, ಕಷ್ಟವಿಲ್ಲದೇ ವಿಷಯಗಳನ್ನು ಧರಿಸುವ ಮನಸ್ಸನ್ನು ಹೊಂದಬೇಕಾದರೆ ನಮ್ಮ ಅಮೂಲ್ಯವಾದ "ಕಾಮಶಾಸ್ತ್ರವೆಂಬುವ ಪುಸ್ತಕದಲ್ಲಿ ಕಾಣಿಸಿರುವ ಆತಂಕನಿಗ್ರಹ ಮಾತ್ರೆಗಳನ್ನು ಸೇವಿಸಬೇಕು."

ಒಂದು ರೂಪಾಯಿ ಖರ್ಚುಮಾಡಿದರೆ 32 ಮಾತ್ರೆಗಳುಳ್ಳ ಒಂದು ಡಬ್ಬಿಯನ್ನು ತರಿಸಿ ಪ್ರಯತ್ನಿಸಬಹುದು.

ವಿವರವಾಗಿ ಬರೆದಿರುವ ಒಂದು ಕ್ಯಾಟಲಾಗು ಕಳುಹಿಸುವಂತೆ ಈ ದಿನವೇ ಒಂದು ಪೋಸ್ಟುಕಾರ್ಡು ಬರಿಯಿರಿ.

ಆತಂಕನಿಗ್ರಹ ಔಷದಾಲಯ,
ನಂಬ್ರ 26, ಬ್ರಾಡ್ವೆ, ಮದರಾಸು.

ಹೊಸಗ್ರಂಥಗಳು !! ಬೇಗನೇ ತರಿಸಿಕೊಳ್ಳಿರಿ !!!

ಕೋಕ ಶಾಸ್ತ್ರವು.

ರಸಿಕ ವಾಚಕ ಮಹಾಶಯರೇ,

ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ, ಸಂಪಾದಿಸಿ, ಅದರಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನಷ್ಟೇ ಶೋಧ ಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿಣಿ, ಸ್ತ್ರೀಯ ಇದರಂತೆ ಪುರುಷರಲ್ಲಿಯ ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ, ಜನನೇಂದ್ರಿಯಾದಿಗಳ ವರ್ಣನೆಯನ್ನೂ, ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ, ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ, ನಪುಂಸಕತ್ವ, ವಂಧ್ಯಾ ದೋಷಗಳ ಚಿಕಿತ್ಸೆಯನ್ನೂ, ಸ್ತ್ರೀಯರ ಗೂಢ ರಹಸ್ಯವನ್ನೂ, ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನೂ, ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನು ಒಮ್ಮೆ ವಾಚಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ

ಇದರ ಬೆಲೆ ೧–೮–೦, ಟಪ್ಪಾಲು ಹಾಸಲು ೦–೪–೦

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ

ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ಮೂರನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್. ಗಣಪತಿರಾವ್ ಐಗಳ್—ಗ್ರಂಥಕರ್ತರು.

ಮನೋರಂಜಕ ಚಿತ್ರಗಳೂ ಇವೆ.

ಇದರಲ್ಲಿ ಸಾವಿತ್ರಿ, ಶಕುಂತಳಾ, ಕೃಷ್ಣಾಕುಮಾರಿ, ಪದ್ಮಿನಿ, ಜೋನ್ ಒಫ್ ಆರ್ಕ, ಫ್ಲೋರೆನ್ಸನಾಯಿಟಿಂಗೇಲ ಪರಶುರಾಮ, ಭೂತಾಳಪಾಂಡ್ಯ, ಕಾರ್ಕಳ ಗೋಮಟೇಶ್ವರ ಮತ್ತು ಭೈರವರಾಜ, ಮೂಡಬಿದ್ರೆಯ ಚೌಟರು, ನಂದಾವರ ಬಂಗರು, ಕಾರ್ಕಳ ರಾಮಸಮುದ್ರ ಮತ್ತು ರಾಮನಾಥ ಒಡೆಯರ ಅಣೆಕಟ್ಟು, ಗುರುಪುರ ಜಂಗಮ ಮಠ, ಕಲ್ಯಾಣಪ್ಪನ ಕಾಟಕಾಯಿ, ಗುರುವಾಯನಕೆರೆ, ಜಮಾಲಾಬಾದುಕೋಟೆ, ಸುಲ್ತಾನಬತ್ತೇರಿ, ಈದಗಾಪ್ರಾರ್ಥನಾಮಂದಿರ, ಸೇಂಟಮೇರಿ ದ್ವೀಪಗಳು ಮತ್ತು ದರಿಯಾಬಾದರಗಡ, ಕೊರಗರು, ಕೊಡಗರು, ತೋಡರು, ರಜಪೂತರು, ಕಂದಾರಿಗಳು ಘುರ್ಖಾಜನರು, ಅರಬಿಯರು, ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ಮೂರನೇ ದರ್ಜೆಯ ಮಕ್ಕಳಿಗೆ ಉಪಯುಕ್ತವಾಗಿದೆ. ಕ್ರಯ 6 ಆಣೆ.

ಪುಸ್ತಕ ದೊರಕುವ ವಿಳಾಸ:—

ಶಾರದಾ ಛಾಪಖಾನೆ,
ಮಂಗಳೂರು.

ಗಣಪತಿರಾವ್ ಐಗಳ್.
ಮಂಗಳೂರು.

ಡಾಕ್ಟರುಗಳು ಭಿನ್ನಾಭಿಪ್ರಾಯಪಡುವಾಗ್ಯೆ ತೀರ್ಮಾನಿಸುವದು ಯಾರು?

ಅಂಥಾ ಸಂದರ್ಭಗಳಲ್ಲಿ ಡೆಂಗ್ಯು ಮುಂತಾದ ಜ್ವರಗಳನ್ನು ನಿವಾರಿಸುವಂಥಾ "ಬಾಟ್ಲಿವಾಲರ ಏಗ್ಯುಮಿಕ್ಸ್ಚರ್"ನ್ನು ಸರಾಗವಾಗಿಯೂ, ಮತ್ತು ಜ್ವರಗಳನ್ನು ಖಂಡಿತವಾಗಿ ನಿಲ್ಲಿಸುವಂಥಾದ್ದು, ಎಲ್ಲಾ ತರದ ಚಳಿಜ್ವರಗಳನ್ನು ಹೋಗಲಾಡಿಸುವಂಥಾದ್ದು ಆದ "ಬಾಟ್ಲಿವಾಲರ ಏಗ್ಯುಪಿಲ್ಸ್" ಇದನ್ನು ಉಪಯೋಗಿಸಿರಿ.

ಐ. ಎಮ್. ಎಸ್. ಡಾಕ್ಟರುಗಳಿಂದ ಶಿಫಾರಸು ಮಾಡಲ್ಪಟ್ಟಿದ್ದು. ಇದರ ಉಪಯೋಗದಿಂದ ಹೃದಯದ ಮೇಲೆ ಯಾವದೊಂದೂ ಬಾಧಕವಿಲ್ಲ. ಅರ್ಧ ಶತಮಾನದಿಂದ ಹಿಂದೂಸ್ಥಾನ, ಬರ್ಮಾ, ಸಿಲೋನ್, ಆಫ್ರಿಕಾ ಇವುಗಳಲ್ಲಿ ಪ್ರಖ್ಯಾತಪಟ್ಟದ್ದಾಗಿರುತ್ತದೆ.

ಅನೇಕ ಹಿಂದೀ ಪ್ರದರ್ಶನಗಳಲ್ಲಿ ಬೆಳ್ಳಿ ಮತ್ತು ಬಂಗಾರದ ಪದಕಗಳನ್ನು ಪಡೆದಿರುತ್ತೆ. ಚಾಲ್ತಿ ಸಾಧ್ಯವಂತಿದ್ದು ಮಾರ್ವಾಡಿಗಳೂ ಕೂಡ ಅದರ ಮೇಲೆ ಹಣವನ್ನು ಮುಂಗಡವಾಗಿ ಕೊಡುತ್ತಾರೆ. ಬಡ ಮತ್ತು ಮಧ್ಯಮ ತರಗತಿಯ ಜನರಿಗೆ ವರಪ್ರದಾನವಾಗಿದ್ದು ಸಂಚಾರ, ಪ್ರಯಾಣ, ದೇಶಾಟನೆಗಳ ಸಮಯದಲ್ಲಿ ಹತ್ತಿರದಲ್ಲಿರಿಸಿಕೊಳ್ಳತಕ್ಕದ್ದಾಗಿರುತ್ತದೆ.

ಬಾಟ್ಲಿವಾಲರ ಬಾಲಾಮೃತ ಅಥವಾ ಟೊನಿಕ್ ಸಿರಪ್.

ಕೆಮ್ಮನ್ನು ಹೋಗಲಾಡಿಸಿ, ಎದೆನೋವನ್ನು ಶಾಂತಗೊಳಿಸಿ, ಜ್ವರವನ್ನು ಉಪಶಮನಿಸಿ, ನಿದ್ರಾಭಂಗವನ್ನು ಕಡಿಮೆ ಮಾಡಿ ಧಾತುವರ್ಧನವನ್ನು ಮಾಡುವವರಲ್ಲಿ ಅತ್ಯುತ್ತಮವಾಗಿರುತ್ತದೆ. ಕಫವನ್ನು ಒಣಗಿಸಿ ಮಾಯವಾಗುವಂತೆ ಮಾಡುವುದಲ್ಲದೆ ಅದೇ ಸಮಯದಲ್ಲಿ ಒಳ್ಳೇ ಜೀರ್ಣವನ್ನೂ ಉಂಟುಮಾಡುವುದು. ದರ ಮೊದಲಾದ ಮಾಹಿತಿಯನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ತಾರಿನಪತ್ತೆ:-CAWASHAPUR, BOMBAY.

ಎಲ್ಲಾ ಕಡೆಗಳಲ್ಲಿ
ಏಜಂಟರು ಬೇಕಾಗಿದ್ದಾರೆ.

ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.,
ಪಿ. ವಾರ್ಲಿ, ಮುಂಬಯಿ, ನಂಬ್ರ 18.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ

ಇವರ

ಬಾಲಾಮೃತ.

ಈ ಔಷಧವನ್ನು ಸೇವನೆಕ್ರಿಮಾಡುವುದರಿಂದ ಮಕ್ಕಳು ರೋಗರಹಿತರೂ ಸಶಕ್ತರೂ ಆಗುವರು. ಇದು ಮಧುರವಾಗಿದೆ; ಮಕ್ಕಳು ಸಂತೋಷದಿಂದ ಸೇವಿಸುತ್ತಾರೆ.

ನಮ್ಮ ವಿಳಾಸ:—

ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.

ಏಜಂಟರು:— ದಿ. ಜುಊಲನ್ ಮಾರ್ಟ್, ಮಂಗಳೂರು.

OUR RECENT IMPORT IN WRIST WATCHES

Have you used anyone of these Watches?

SEND YOUR ORDER NOW ALL GUARANTEED.

Fashionable wrist wrist Lady's size. Reliable movement Guaranteed.

No. 368

Handy to wear and looks beautiful. Gives punctual time and with strong movement.

Nickel case Rs. 8—0

High-class Radium dial watch watch with Roman figures.

No. 367.

Can be seen in dark nights. Well fitted with best movement and strong to use. Used by one and all.

Silver case Rs. 9—0.

Radio light wrist watch.

No. 372.

Fitted with the best mechanism and guaranteed to work and keep perfect time for a long time.

Nickel case Rs. 7—8
Electro rolled-gold ,, 9—0

(N. B. In addition to the above, we have good number of varieties of fancy wrist watches, pocket watches. Please write for a descriptive catalogue, which will be sent free)

WHOLESALE IMPORTERS

PETER WATCH COY.,
POST BOX 27, MADRAS

ಶಾಲಿವಾಹನಶಕ ೧೮೪೬ನೆಯ ರಕ್ತಾಕ್ಷಿ ಸಂ॥ರದ ಮಾಘ ಶು೭ ಶನಿವಾರದಿಂದ ರಕ್ತಾಕ್ಷಿ ಸಂ॥ರದ ಮಾಘ ಶು॥೧೩ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೫ನೆಯ ಮಕರ ಪುಯಿಂತೆಲ್.)

ತಾರೀಕು	ವಾರ.	ತಿ.	ಘಳಿಗೆ.	ನಕ್ಷತ್ರ.	ಘಳಿಗೆ.	ಸೌರಮಾನ.	ಸೂರ್ಯ	
							ಉ.	ಅಸ್ತ.
31	ಶನಿ	೭	೫೦.೧೮	ಅಶ್ವಿನೀ	೨೫.೦೫	೧೮	6.59	6.29
1	ರವಿ	೮	೨೩.೩೩	ಭರಣೀ	೨೯. ೧	೧೯	6.59	6.30
2	ಸೋಮ	೯	೩೩. ೨	ಕೃತ್ತಿಕಾ	೩೩.೪೬	೨೦	6.59	6.30
3	ಕುಜ	೧೦	೩೦.೧೮	ರೋಹಿಣಿ	೩೯.೧೬	೨೧	6.59	6.31
4	ಬುಧ	೧೧	೩೫.೧೫	ಮೃಗಶಿರಾ	೪೫.೨೮	೨೨	6.59	6.31
5	ಗುರು	೧೨	೪೦.೪೪	ಆರ್ದ್ರಾ	೫೩. ೦	೨೩	6.58	6.31
6	ಶುಕ್ರ	೧೩	೪೫.೪೬	ಪುನರ್ವಸು	೫೮.೧೬	೨೪	6.58	6.32

ಮಂಗಳೂರಿನ ವಾಯುಸ್ಥಿತಿ.

(೧೯೨೫ನೆಯ ಮಕರ ಪುಯಿಂತೆಲ್.)

Date ತಾರೀಕು	Temperature. ಉಷ್ಣ (ಕಾವು)		Rainfall. ಮಳೆ	
	Maximum ಹೆಚ್ಚಾದದ್ದು	Minimum ಅಲ್ಪವಾದದ್ದು	ದಿನದ ಮಳೆ	ಜುಮಲಾ ಮಳೆ.
23	85—0	67—7	—	—
24	88—2	68—9	—	—
25	90—8	67—7	—	—
26	92—0	65—9	—	—
27	90—3	67—2	—	—
28	88—2	69—5	—	—
29	88—2	68—9	—	140–89

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ	ವರೆಗೆ
	ರೂ. ಆ.	ರೂ ಆ
ಹೊಸ ಮಸ್ಕತಿ	8–0	8–10
ಹೊಸ ಗುಡ್ಡು	7- 4	7–10
ಹೊಸ ರಾಶಿ	6- 14	7– 4
ಅವ್ವಲ್ ಬೆಳ್ತಿಗೆ	8- 8	8–14
ಗುಡ್ಡು ಬೆಳ್ತಿಗೆ	8- 0	8–4
ರಂಗೂನು ಬೆಳ್ತಿಗೆ ಗೋಣಿ ೧	15- 0	–
ಗೋಧಿ ಗೋಣಿ ೧ಕ್ಕೆ	17- 8	20 8
ಹುರುಳಿಗೋಣಿ ೧ಕ್ಕೆ	9- 4	10–10
ಕಡಲೆಗೋಣಿ ೧ಕ್ಕೆ	11- 8	11 12
ತೊಗರಿಗೋಣಿ ೧ಕ್ಕೆ	12- 8	13- 0
ತೊಗರಿಬೇಳೆ ಗೋಣಿ ೧ಕ್ಕೆ	17- 8	21 - 0
ಉದ್ದು ಗೋಣಿ ೧ಕ್ಕೆ	13- 0	13 8
ಹೆಸರುಗೋಣಿ ೧ಕ್ಕೆ	14–0	15–0
ಊರು ಬೆಲ್ಲ ಖಂಡಿ ೧ಕ್ಕೆ	70- 0	80–0
ಉಪ್ಪು ಗೋಣಿ ೧ಕ್ಕೆ	4- 0	4–2
ಕೊಬ್ರಿ ಖಂಡಿ ೧ಕ್ಕೆ	125–0	135–0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	46- 0	47–0
ಎಳ್ಳಿಂಡಿ ಖಂಡಿ ೧ಕ್ಕೆ	40–0	45–0
ಕೊಬ್ರಿ ಎಣ್ಣೆ ಮಣ ೧ಕ್ಕೆ	8–10	9–8
ಎಳ್ಳೆಣ್ಣೆ ಮಣ ೧ಕ್ಕೆ	7- 0	11–0
ಚಿಮಣಿ ಎಣ್ಣೆ ಪೆಟ್ಟಿಗೆ ೧ಕ್ಕೆ	8-15-6	–
ಮೋರಿಸ ಸಕ್ಕರೆ ಮಣ ೧ಕ್ಕೆ	4–11	4 14
ಊರ ಮೆಣಸಿನಕಾಯಿ ಮಣ ೧ಕ್ಕೆ	10- 8	–
ಸಾಸಿವೆ ಮುಡಿ ೧ಕ್ಕೆ	9- 0	9–2
ಕೊತ್ತಂಬರಿ ಮುಡಿ ೧ಕ್ಕೆ	3- 10	3–14
ಕಾಫಿ ಖಂಡಿ ೧ಕ್ಕೆ	410- 0	480–0
ಬೆಳಗೋಡು ಅಡಿಕೆ ಖಂಡಿ ೧ಕ್ಕೆ ಹಳತು	245- 0	250–0
,, ಹೊಸ ಅಡಿಕೆ	190–0	205–0
ಕಾಳುಮೆಣಸು ಖಂಡಿ ೧ಕ್ಕೆ	155–0	160–0
ಯಾಲಕ್ಕಿ ಮಣ ೧ಕ್ಕೆ	80- 0	85–0
ಗೇರುಬೀಜ ಮುಡಿ ೧ಕ್ಕೆ	4–10	5–2
ಕಬ್ಬಿಣ ಖಂಡಿ ೧ಕ್ಕೆ	45- 0	65–0
ತಾಂಮ್ರ ತಗಡು ಮಣ ೧ಕ್ಕೆ	17-12	23 - 0
ತಾಮ್ರ ಪಾತ್ರೆಗಳು ಮಣ ೧ಕ್ಕೆ	26- 0	–
ಚೀನಿ ಬೆಳ್ಳಿ ಸೇರು ೧ಕ್ಕೆ	22 - 0	
ಹಿತ್ತಾಳೆ ತಗಡು ಮಣ ೧ಕ್ಕೆ	18- 8	
ಪವನು	14–5	

Pandit B. Ramakrishna Baliga's Siddha Ayurvedic medicines of 50 years' reputation.

ಮಹಾ ಮದನಕಾಮೇಶ್ವರಿ ಲೇಹ—ಇದನ್ನು ಬಂಗಾರ, ಅಭ್ರಕಭಸ್ಮ, ರಸಸಿಂಧೂರ, ಕಸ್ತೂರಿ, ಕುಂಕುಮಕೇಸರ ವಗೈರೆ ಅಮೂಲ್ಯವಾದ ರಸಾಯನ ದ್ರವ್ಯಗಳಿಂದ ತಯಾರಿಸಲ್ಪಟ್ಟಿರುತ್ತದೆ. ಇದು ಎಲ್ಲಾ ತರದ ನಪುಂಸಕ ರೋಗಗಳನ್ನೂ, ಸ್ವಪ್ನಾವಸ್ಥೆಯಲ್ಲಿ ಧಾತುಪತನೆಯನ್ನೂ ಗುಣಪಡಿಸಿ, ದೇಹಕ್ಕೆ ದಿವ್ಯಕಾಂತಿಯನ್ನೂ, ಪುಷ್ಟಿಯನ್ನೂ, ಪುರುಷತ್ವವನ್ನೂ, ವೀರ್ಯಸ್ತಂಭನವನ್ನೂ ಉಂಟುಮಾಡಿ ಅತ್ಯಾನಂದವನ್ನು ಕೊಡುವುದಲ್ಲದೆ, ಅಜೀರ್ಣ, ಅತಿಸಾರ, ಗ್ರಹಣಿ, ಅಮ್ಲ, ಪಿತ್ತ, ಉದರಶೂಲೆ, ಪ್ರಮೇಹ ವಗೈರೆ ರೋಗಗಳನ್ನು ಗುಣಪಡಿಸುವಲ್ಲಿ ಕೇವಲ ಅಮೃತಸಮಾನವಾಗಿರುವುದು. ಇದನ್ನು ಅಬಾಲವೃದ್ಧರೂ ಸೇವಿಸಬಹುದು.

ಸ್ವರ್ಣ ಮಿಶ್ರಿತ ಲೇಹಕ್ಕೆ (48 ದಿನಗಳ ವರೆಗೆ ಸಾಕಾಗುವ) ಸೇರು ೧ರ ರೂ. 4–0–0.
ಸ್ವರ್ಣ ಇಲ್ಲದ ,, ,, ,, ,, 3–0–0.

ಬ್ರಿಹತ್ ಶಾರಿವ್ಯಾದಿ ರಸಾಯನ—ಇದು ಶಾಸ್ತ್ರಿಯಿಂದ ರಕ್ತವನ್ನು ಶೋಧಿಸುವ ದಿವ್ಯೌಷಧವಾಗಿರುತ್ತದೆ. ಇದರ ಸೇವನೆಯಿಂದ 20 ತರದ ಪ್ರಮೇಹ ರೋಗಗಳೂ ಎಲ್ಲಾ ತರದ ಫರಂಗಿ ರೋಗಗಳೂ ಅಲ್ಪ ಸಮಯದಲ್ಲಿ ಗುಣಹೊಂದುವವು. ಅದಲ್ಲದೆ ಇದು ಎಲ್ಲಾ ತರದ ಕುಷ್ಠವ್ಯಾಧಿಗಳನ್ನೂ, ಖಜ್ಜಿ, ಕುರು ಮೊದಲಾದ ಸಕಲ ಚರ್ಮವ್ಯಾಧಿಗಳನ್ನೂ ಪಾದರಸ ಸೇವನೆಯಿಂದ ಉಂಟಾದ ರೋಗಗಳನ್ನೂ ಮತ್ತು ಹೆಂಗಸರ ಪ್ರದರ ರೋಗಗಳನ್ನೂ ಶಾಸ್ತ್ರಿಯಿಂದ ಗುಣಪಡಿಸುವುದು.

8 ಔನ್ಸಿನ ಬಾಟ್ಲಿ ಒಂದರ ಕ್ರಯ ಬರೀ ರೂ. 1–9–0.

ಧಾರ್ಲಿ ಪರ್ಪಟಕಾದಿ ತೈಲ—(ನಿದ್ರೆ ಇಲ್ಲದವರಿಗೆ ಸಿದ್ಧೌಷಧ.) ಇದನ್ನು ತಲೆಗೆ ಇಟ್ಟಲ್ಲಿ ಸಕಲ ಶಿರೋರೋಗಗಳೂ, ಕರ್ಣ, ನೇತ್ರ, ದಂತ, ಜಿಹ್ವಾರೋಗಗಳೂ, ತಲೆ ತಿರುಗುವುದು, ಕಠಿಣವಾದ ತಲೆ ಶಿಡಿತವು ಮೊದಲಾದ ರೋಗಗಳು ನಾಶವಾಗಿ, ಸ್ಮರಣಶಕ್ತಿಯನ್ನೂ, ಜ್ಞಾನಶಕ್ತಿಯನ್ನೂ ವೃದ್ಧಿಗೊಳಿಸುವುದು. ಇದು ವಿದ್ಯಾರ್ಥಿಗಳಿಗೂ ವಕೀಲರಿಗೂ ಒಂದು ಸಿದ್ಧೌಷಧ.

4 ಔನ್ಸಿನ ಬಾಟ್ಲಿ ೧ರ ರೂಪಾಯಿ 1–0–0.

ಕಸ್ತೂರಿ ಮಿಶ್ರಿತ ದಶಮೂಲಾಸವ—ಬಾಣಂತಿಯರಿಗೆ 8 ಔನ್ಸು ಬಾಟ್ಲಿಗೆ ರೂ. 1–0–0. ಅಮೃತಾರಿಷ್ಟ—ಸಕಲ ಜ್ವರಗಳ ಮೇಲೆ ಬಾಟ್ಲಿಗೆ ರೂ. 0–12–0. ಚವ್ಯನ ಪ್ರಾಶಲೇಹ—(ದೇಹಪುಷ್ಟಿಗೆ) ಸೇರು ೧ರ ರೂ. 2–0–0. ಅಶೋಕಾರಿಷ್ಟ—(ಹೆಂಗಸರ ರೋಗಗಳ ಮೇಲೆ) 8 ಔನ್ಸಿನ ಬಾಟ್ಲಿ ೧ರ ರೂ. 1–0–0. ಮಹಾ ಚಂದನಾದಿ ತೈಲ—(ಅಭ್ಯಂಗಕ್ಕೆ ದಿವ್ಯೌಷಧ) 4 ಔನ್ಸಿನ ಬಾಟ್ಲಿ ೧ರ ರೂ. 1–0–0. ಗೋರೋಚನಾದಿ ಮಾತ್ರೆ—(ಮಕ್ಕಳ ಜ್ವರಕ್ಕೆ) ಡಜನು ೧ರ ಕ್ರಯ ರೂ. 1–0–0.

ಸೂಚನೆ:—ಟಪ್ಪಾಲ ಹಾಸಲು ಪ್ರತ್ಯೇಕ. ಸ್ಥಳೀಕ ಬಡ ಜನರಿಗೆ ಔಷಧವು ಧರ್ಮಾರ್ಥವಾಗಿ ಕೊಡಲ್ಪಡುವುದು.

ವಿಳಾಸ:— ಪಂಡಿತ, ಬಿ. ರಾಮಕೃಷ್ಣ ಬಾಳಿಗ, ಬಂಟವಾಳ ದ. ಕ.

The Canara Public Conveyance Co., Ltd, Mangalore.
(ESTABLISHED 1914).
ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು
- ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು
- ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
- ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
- ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.
- ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯು ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ—ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd., Mangalore. S. K.

CAR FESTIVAL
HAS APPROACHED!
MAKE HASTE AND BUY A
Pocket Electric Lamp
AVAILABLE
In different varieties, Mother of pearl lamps. Cycle lamps.
NICKEL PLATED.
Hammered Brand, with Powerful Bulls-eye lance,
Use with it
Bull's-eye Dry Batteries.
The Mangalore Trading Association,
Car Street, MANGALORE.

ಮಾರಾಟಕ್ಕೆ ಸಿದ್ಧವಿದೆ! ಮಾರಾಟಕ್ಕೆ ಸಿದ್ಧವಿದೆ!

1925ನೇ ವರುಷದ

ಪೋಕೆಟ್ ಡೈರಿ.

ಮುಖ್ಯಕವೂ ಸಾಕೇಟೂ ಇರುವ ದೊಡ್ಡ ಸೈಜಿನ ಡೈರಿ ೧೪ ಆಣೆ.

ದೊಡ್ಡ ಸೈಜಿನ ಸಾದಾ ಡೈರಿ . ೧೦ ಆಣೆ.

ವಿಳಾಸ— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಅನುಕ್ರಮಣಿಕೆ.

ಅಗ್ರಲೇಖ— ಪುಟಗಳು.
ದಿಲ್ಲಿಯ ಪರಿಷತ್ತು ಸಬ್ ಕಮ್ಮಿಟಿಯನ್ನು ನೇಮಿಸಿತು. ೨
ಸ್ಫುಟವಿಚಾರಗಳು—
೧. ಲೆಜಿಸ್ಲೇಟಿವ್ ಎಸೆಂಬ್ಲಿಯ ಅಧಿವೇಶನ ೨
೨. ಮಿ| ಎಸ್ಕ್ವಿತರು ,,
೩. ಅರವಿಂದಘೋಷರು ,,
ಮಂಗಳೂರು
ವರ್ತಮಾನಸಂಗ್ರಹಗಳು—
ವಿದೇಶ, ಒಳದೇಶ ೪
ದಕ್ಷಿಣಕನ್ನಡ:— ಉಡುಪಿ, ಕುಂಬಳೆ ಕಾಸರಗೋಡು ,,
ಸಿಗರೇಟ್ ದುರಾಭ್ಯಾಸವನ್ನು ಬಿಡಿಸುವುದು ಹೇಗೆ? ,,
ಪಾಂಗಾಳ ನಾಯಕ ಬೇಂಕ್, ಉಡುಪಿ ,,
ಇಂದೂರ್ ಸಂಸ್ಥಾನದ ಪ್ರಜೆಗಳ ಪರಿಸ್ಥಿತಿ ೫
ಮುಂಬಯಿ ಮಲಬಾರ ಹಿಲ್ಲ ಧಕಾಯತಿ ,,
ಕಾಶೀವಾಡ ರಾಜಕೀಯ ಪರಿಷತ್ತು ,,
ಬೆಳಗಾಂ ಕೊಂಗ್ರೆಸ್ಸಿನ ಸಂದೇಶ ೬

ಸ್ವದೇಶಾಭಿಮಾನಿ.

ಶಕ ೧೮೪೬ ಮಾಘ ಶು| ೭ಯು ಶುಕ್ರವಾರ.

ದಿಲ್ಲಿ ಪರಿಷತ್ತು ಸಬ್ ಕಮಿಟಿಯನ್ನು ನೇಮಿಸಿತು?

ದಿಲ್ಲಿಯಲ್ಲಿ ಕೂಡಿದ ಸರ್ವಪಕ್ಷೀಯರ ಪರಿಷತ್ತು ಹಿಂದು-ಮುಸಲ್ಮಾನರ ಐಕ್ಯದ ಪ್ರಶ್ನೆಯನ್ನು ನಿರ್ಣಯಿಸುವದಕ್ಕಾಗಿಯೂ, ಸ್ವರಾಜ್ಯದ ಘಟನೆಯನ್ನು ಬೀಲಿನ ರೂಪದಿಂದ ತಯಾರಿಸುವದಕ್ಕಾಗಿಯೂ, ಒಂದು ಸಬ್ ಕಮಿಟಿಯನ್ನು ನೇಮಿಸಿತು. ಕೆಲವು ಸಮಯದ ಮುಂಚೆ ಸರ್ವ ಪಕ್ಷೀಯರ ಒಂದು ಸಭೆಗೂಡಿತ್ತು ಆ ಸಭೆಯಲ್ಲಿ ಇದೇ ಮೇರೆಗೆ ಒಂದು ಸಬ್ ಕಮಿಟಿಯು ನೇಮಕಪಟ್ಟಿತ್ತು, ಮತ್ತು ಯಾವ ತತ್ವಾನುಸಾರವಾಗಿ ಕೊಂಗ್ರೆಸಿನಲ್ಲಿ ಸರ್ವಪಕ್ಷದವರ ಸಮಾವೇಶವುಂಟಾದೀತು, ಹಿಂದು ಮಹಮ್ಮದೀಯರ ಐಕ್ಯವುಂಟಾದೀತು ಎಂಬಿತ್ಯಾದಿ ಪ್ರಶ್ನೆಗಳನ್ನು ಇತ್ಯರ್ಥಿಸಿ ಆ ಸಬ್ ಕಮಿಟಿಯು ಸರ್ವಪಕ್ಷೀಯ ಮಹಾಸಭೆಯವರ ಮುಂದೆ ಆ ಇತ್ಯರ್ಥವನ್ನಿಡಬೇಕೆಂದು ನಿಶ್ಚಿತವಾಗಿತ್ತು. ಅದರಂತೆ ಅದು ಪುನ: ಮಾರ್ಚಿನಲ್ಲಿ ಸೇರುವುದು. ಈ ಮಧ್ಯದಲ್ಲಿ ಬೆಝೆಂಟಬಾಯಿಯವರು ಪಾರ್ಲಿಮೆಂಟಿನಲ್ಲಿ ಇಡುವದಕ್ಕಾಗಿ ತಮ್ಮ ಹಸ್ತಕರ ಸಹಾಯದಿಂದ ಹಿಂದುಸ್ಥಾನದ ಸ್ವರಾಜ್ಯದ ಬೀಲನ್ನು ತಯಾರಿಸಿದ್ದರು. ಅದು ಈ ಸಭೆಯ ಅವಗಾಹನಕ್ಕೆ ಬರುವದಿತ್ತು. ಈ ಕಾರಣದಿಂದ ದಿಲ್ಲಿಯಲ್ಲಿ ಸರ್ವಪಕ್ಷೀಯರ ಮಹಾಸಭೆಯು ನೆರೆದು ಅದರ ಎರಡು ದಿವಸಗಳ ಅಧಿವೇಶದವು ಜರಗಿ ಕೊನೆಗೆ ಮೇಲೆ ಹೇಳಿದ ರೀತಿಯಲ್ಲಿ ಪುನಃ ಸಬ್ ಕಮಿಟಿಯ ನೇಮಕದ ಮಹತ್ಕಾರ್ಯವನ್ನು ಮಾಡಿ ಸಭೆಯು ಮುಕ್ತಾಯವಾಗಿದೆ.

ಸಭೆಯ ಬಾಹ್ಯಾಂಗದ ವೃತ್ತಾಂತವನ್ನು ಸ್ವಲ್ಪ ಮಟ್ಟಿಗೆ ಪರಿಶೀಲಿಸಿದರೆ ಅದರ ಅಂತರಂಗದ ಕಲ್ಪನೆಯು ಸಾಧಾರಣ ಮಟ್ಟಿಗಾದರೂ ಬರುವದಾದ ಕಾರಣ ಅದನ್ನು ಕೊಂಚ ಅವಗಾಹಿಸೋಣ. ಸಭೆಯ ಅಧ್ಯಕ್ಷಸ್ಥಾನವನ್ನು ಮಹಾತ್ಮಾಗಾಂಧಿಯವರು ಅಂಗೀಕರಿಸಿದ್ದರು. ಸರ್ವಪಕ್ಷದವರ ಸಭೆ ಎಂಬುದಾಗಿ ನೆರೆದದ್ದರಿಂದ ಸಾಮಾನ್ಯವಾಗಿ ಎಲ್ಲ ಪಕ್ಷದ ಮುಖಂಡರು ಹಾಜರಿದ್ದರು. ಪಂಡಿತನೇಹರು, ಕೇಳಕರ, ಸತ್ಯಮೂರ್ತಿ, ಮುಂತಾದ ಸ್ವರಾಜಿಸ್ಟರೂ, ಲಾಲಾಲಜಪತರಾಯ, ಪಂಡಿತಮಾಲವೀಯ, ಸ್ವಾಮಿಶ್ರದ್ಧಾನಂದ ಮುಂತಾದ ನೇಶನಲಿಸ್ಟರೂ, ರೆಡ್ಡಿ ಮುಂತಾದ ಬ್ರಾಹ್ಮಣೇತರರೂ, ಜೀನಾ ಅಲ್ಲಿ-ಬಂಧು ಮುಂತಾದ ಮಹಮ್ಮದೀಯರೂ, ಸಿ. ವಾಯ್ ಚಿಂತಾಮಣಿ, ಬಿಝೆಂಟ್ ಮುಂತಾದ ಲಿಬರಲ್ ಮತ್ತು ನೇಶನಲ್ ಹೋಮ್‌ರೂಲಿನವರೂ ಹಾಜರಿದ್ದರು. ಸಭೆಗೆ ಈ ಮೇರೆಗೆ ಬಂದಿರುವ ಪ್ರತಿನಿಧಿಗಳನ್ನು ವಿಂಗಡಿಸಿದರೆ ಸ್ವರಾಜ್ಯ ಪಕ್ಷದ ಮತ್ತು ನೇಶನಲಿಸ್ಟ ಪಕ್ಷದ ಪ್ರತಿನಿಧಿಗಳೆ ಹೆಚ್ಚೆಂದು ಕಂಡುಬರುತ್ತದೆ. ಶ್ರೀಯುತ ಚಿಂತಾಮಣಿಗಳ ಹೊರತು ಶಾಂತಪಕ್ಷದ ಕಡೆಯಿಂದ ಬೇರೆ ಯಾರೂ ಬಂದಂತೆ ತೋರಲಿಲ್ಲ. ಶ್ರೀನಿವಾಸಶಾಸ್ತ್ರಿ, ಡೊ. ಪರಾಂಜಪೇ ಮುಂತಾದ ಮುಖಂಡರು ಶಾಂತಪಕ್ಷದಲ್ಲಿ ಇದ್ದಾರೆ. ಆದರೆ ಅವರು ಈ ಸಭೆಗೆ ಚಿತ್ತಯಿಸಲಿಲ್ಲ. ಮುಂಬಯಿಯ ಸಭೆಯಲ್ಲಿ ಶ್ರೀನಿವಾಸ ಶಾಸ್ತ್ರಿಗಳು ಇದ್ದರು. ಆದರೂ ಆ ಐಕ್ಯಪರಿಷತ್ತಿನ ಕಾರ್ಯವು ಅವರಿಗೆ ಎಷ್ಟರ ಮಟ್ಟಿಗೆ ಮನಸ್ಸಿಗೆ ಒಪ್ಪಿದೆ ಎಂಬುದು ಅನಂತರದ ಅವರ ವರ್ತನದ ಮೇಲಿಂದಲೆ ತಿಳಿದು ಬಂದಿದೆ ಎನ್ನಬಹುದು. 'ಬೆಳಗಾಂವಿನ ರಾಷ್ಟ್ರೀಯ ಸಭೆಗೆ ಈ ಶಾಂತಪಕ್ಷದವರಲ್ಲಿ ಯಾರೂ ಬಂದಿಲ್ಲ. ಈ ಐಕ್ಯ ಪರಿಷತ್ತಿಗೂ ಯಾರೂ ಬಂದಿಲ್ಲ, ಅಪವಾದಕ್ಕೆ ಮಾತ್ರ ಚಿಂತಾಮಣಿಗಳನ್ನು ಕಳುಹಿಸಿಕೊಟ್ಟಿರುವರು. ಆದರೆ ಶ್ರೀಯುತ ಚಿಂತಾಮಣಿಗಳ ಮುಖಾಂತರವಾಗಿ ಲಿಬರಲ್ ಸಂಘದವರು ತಮ್ಮ ಅಂಬೋಣವೆಂಬಂತೆ ಕಳುಹಿಸಿಕೊಟ್ಟ ಯಾವ ಮಾತುಗಳಿದ್ದಾವೊ ಅವು ನಿಜವಾಗಿ ಚಿಂತಾಜನಕವಾಗಿಯೆ ಇವೆ ಎಂದು ಹೇಳುವದು. ಅಲಂಕಾರಿಕ ಭಾಷೆಯಿಂದ ಅಲ್ಲ; ತತ್ವಾರ್ಥದಿಂದಲೆ ಸರಿ! "ರಾಷ್ಟ್ರೀಯ ಸಭೆಯು ಅಸಹಕಾರವನ್ನೂ, ಖಾಯಿದೆಭಂಗವನ್ನೂ ಸಂಪೂರ್ಣವಾಗಿ ತ್ಯಜಿಸದಹೊರತು, ಸಾಮ್ರಾಜ್ಯಾಂತರ್ಗತಸ್ವರಾಜ್ಯವೆಂದು ಸ್ವರಾಜ್ಯಶಬ್ದವನ್ನು ನಿರ್ಣಯಿಸದ ಹೊರತು, ಸ್ವರಾಜ್ಯಪಕ್ಷದವರು ಉಪರೋಧಾತ್ಮಕ ಪದ್ಧತಿಯನ್ನು ಸನದುಶೀರಾಗಿ ನಡೆಯದ ಹೊರತು ಲಿಬರಲ್ ಪಕ್ಷದವರಿಗೆ ರಾಷ್ಟ್ರೀಯ ಸಭೆಯಲ್ಲಿ ಸೇರಲು ಸಾಧ್ಯವಿಲ್ಲ" ವೆಂಬುದಾಗಿ ರಾಯಸವು ಐಕ್ಯಪರಿಷತ್ತಿಗೆ ಬಂದು ತಲಪಿತ್ತು! ಒಂದೆರಡು ಮಾತಿನಿಂದಲೆ ಇದರ ಅರ್ಥವನ್ನು ಹೇಳುವದೆಂದರೆ, ರಾಷ್ಟ್ರೀಯ ಸಭೆಯ ಕಾಲನ್ನು ಈ ಶರ್ತಗಳಿಂದ ಹಿಂದಕ್ಕೆ ಎಳೆಯುವದಾಗಿದೆ. ರಾಷ್ಟ್ರೀಯ ಸಭೆಯು ತತ್ಕಾಲದ ಮಟ್ಟಿಗೆ ಅಸಹಕಾರವನ್ನು ನಿಲ್ಲಿಸಿರುವಾಗ ಸಂಪೂರ್ಣತ್ಯಾಗದ ಬಗ್ಗೆ ಹಟಹಿಡಿಯುವದು ಮತ್ತು ಐಕ್ಯಕ್ಕಾಗಿ ಕೈಚಾಚಿದವನ ಸೌಜನ್ಯವನ್ನು ಈ ರೀತಿಯಿಂದ ದುರುಪಯೋಗಿಸಿಕೊಳ್ಳುವದು ದರ್ಪದಲಕ್ಷಣವಲ್ಲವಾದರೆ ಭೀರುತ್ವದ ಪ್ರದರ್ಶನವಾಗಿದೆ! ಇವೆರಡೂ ಅಲ್ಲವೆಂದಿದ್ದರೆ ಅಕಂಠರಾಜನಿಷ್ಠೆಯ ಪ್ರಕಾಶನವಾಗಿದೆ. ರಾಜಕಾರಣದ ಆಕಾಶವು ಯಾವ ದೇಶದಲ್ಲಿಯೆ ಒಂದೆ ವಿಧವಾಗಿ ಇರುವದಿಲ್ಲ. ಅದು ಆಗಾಗ್ಯೆ ಬದಲಾಯಿಸುತ್ತಿರುತ್ತದೆ ಸಿವಿಲ್ ಡಿಸ್‌ಒಬ್ಬೀಡಿಯನ್ಸನ್ನು ಸಂಪೂರ್ಣವಾಗಿ ಬಿಟ್ಟುಬಿಡಬೇಕು, ಅಸಹಕಾರಕ್ಕೆ ತಿಲಾಂಜಲಿಯನ್ನು ಕೊಡಬೇಕು ಎಂದು ಮುಂತಾದ ಶರ್ತಗಳನ್ನು ಹಾಕಿ ರಾಷ್ಟ್ರೀಯ ಸಭೆಯ ಕೋಟೆಯನ್ನು ಭದ್ರಪಡಿಸಿ ಮತ್ತೆ ತಾವು ಅದರಲ್ಲಿ ಆರಾಮಕುರ್ಚಿಗಳನ್ನು ಹಾಕಿಕೊಂಡು ವಿನಂತಿ ಅರ್ಜಿಗಳನ್ನು ಬರೆಯುತ್ತ ಸುಖವಾಗಿ ಕುಳಿತು ಕೊಳ್ಳೋಣವೆಂದು ಈ ಪಕ್ಷದವರ ಹೃದ್ಗತವಿದ್ದಾದರೆ ಅಂಥ ರಾಷ್ಟ್ರೀಯ ಸಭೆಯು ಯಾವ ಪುರುಷಾರ್ಥವನ್ನು ಸಾಧಿಸೀತೆಂಬುದು, ಈ ಮೊದಲಿನ ಅನುಭವದಿಂದ ಎಲ್ಲರಿಗೆ ತಿಳಿದ ವಿಷಯವೆ. ತಥಾಪಿ, ನಮ್ಮೊಳಗಿನವರೆ ದೂರಕ್ಕಿರುವ ಬಂಧುಗಳು ಬಂದು ಸೇರುತ್ತಾರಾದರೆ ಈ ಸಂಗತಿಯನ್ನು ಕೂಡ ಆಲೋಚಿಸೋಣವೆಂದು ಅಧ್ಯಕ್ಷರು ಆಶ್ವಾಸನವನ್ನು ಕೊಟ್ಟಿದ್ದಾರೆ.

ಸರ್ವಪಕ್ಷೀಯರ ಪರಿಷತ್ತಿನಲ್ಲಿ ಶಾಂತಪಕ್ಷದವರು ಹೆಚ್ಚಿನ ಮನಸ್ಸನ್ನು ಹೇಗೆ ಕೊಡಲಿಲ್ಲವೊ ಹಾಗೆಯೆ ಬೇಡಬದಲಾವಣೆಯವರು ಸಹ ತಮ್ಮ ಶ್ರದ್ಧೆಯನ್ನಿಟ್ಟಿಲ್ಲವೆಂದು ತೋರುತ್ತದೆ. ಗಾಂಧಿಗಳು ಮತ್ತು ಅಲ್ಲಿ-ಬಂಧುಗಳು ಇವರಲ್ಲದೆ ಬೇರೆ ಯಾರೂ ಇವರ ಪೈಕಿ ಬಂದಂತೆ ಕಾಣಲಿಲ್ಲ. ಮಹಾತ್ಮಜಿಯವರನ್ನು ಬೇಡಬದಲಾವಣೆಯ ತಂಡದಲ್ಲಿ ಈಗಿನ ಮಟ್ಟಿಗಾದರೂ ಸೇರಿಸುವದು ಯೋಗ್ಯವೆಂದು ಕಂಡುಬರುವದಿಲ್ಲ; ಬೇಡ ಬದಲಾವಣೆಯವರು ಮೆಲ್ಲಮೆಲ್ಲನೆ ರಾಜಕಾರಣದ ಸನ್ಯಾಸವನ್ನು ವಹಿಸಿದ್ದಾರೆಂದು ಹೇಳಿದರೆ ಅದು ತಪ್ಪಾಗಲಿಕ್ಕಿಲ್ಲ. ನಿಜವಾಗಿ ಹೇಳುವದಾದರೆ, ಶಾಂತಪಕ್ಷದವರು ರಾಷ್ಟ್ರೀಯ ಸಭೆಯೊಡನೆ ಸಹಕರಿಸದೆ ಇದ್ದಲ್ಲಿ ಅದರಿಂದ ಇಡೀ ದೇಶದ ರಾಜಕಾರಣದ ಮೇಲೆ ಅಷ್ಟೊಂದು ಅನಿಷ್ಟಪರಿಣಾಮ ವುಂಟಾಗುವ ಸಂಭವವಿಲ್ಲ. ಕಾರಣ, ಅವರಿಗೆ ದೇಶದಲ್ಲಿ ಅನುಯಾಯಿವರ್ಗವು ಎಷ್ಟರ ಮಟ್ಟಿಗೆ ಇದೆ ಎಂಬುದು ಸ್ವತಃ ಅವರಿಗೂ ಗೊತ್ತಿದೆ, ದೇಶಕ್ಕೂ ತಿಳಿದಿದೆ! "ಒಂದು ಪೊಂದಲಿ ಒಂದು" ಎಂಬತೆ ಮುಖಂಡರೂ ಅವರೆ, ಅನುಯಾಯಿಗಳೂ ಅವರೆ! ಆದರೆ ಬೇಡಬದಲಾವಣೆಯ ಬಂಧುಗಳು ಸಾಕಷ್ಟು ಸಮುದಾಯವುಳ್ಳವರು; ಅವರು ವಿಮನಸ್ಕರಾಗಿ ದೂರದಲ್ಲಿ ನಿಲ್ಲುವದು ಪ್ರಶಸ್ತವಲ್ಲ. ಆದರೂ ಅವರು ಕೂಡ ಈಗ ದೂರದಲ್ಲಿ ನಿಲ್ಲಹತ್ತಿದ್ದಾರೆ. ಈ ರೀತಿಯಿಂದ ತಾನಾಗಿಯೆ ದೂರದೂರಕ್ಕೆ ಹೋಗುವವರ ನಾಯಕತ್ವವನ್ನು ದೇಶವು ಕೊನೆಗೆ ಬಿಟ್ಟೀತು. ಅಂಥ ಪರಿಸ್ಥಿತಿಯು ಬಂದ ಬಳಿಕ, ಸತ್ಯಹೇಳುವದಾದರೆ ಅಂಥ ಪರಿಸ್ಥಿತಿಯನ್ನು ತಂದುಕೊಂಡ ಬಳಿಕ ಅವರಾದರೂ ಬಂದರೂ ಒಂದೆ, ಬಾರದೆ ಇದ್ದರೂ ಒಂದೆ!

ಇರಲಿ. ನಡೆದ ಸಭಾಕಾರ್ಯವು ಮಹತ್ವದ್ದಾಗಿತ್ತು. ಹಿಂದೂಮಹಮ್ಮದೀಯರ ಐಕ್ಯದ ಇಕ್ಕಟ್ಟಿನ ಪ್ರಶ್ನೆಯು ಸಭೆಯಲ್ಲಿ ಬಂದಿತ್ತು. ಸ್ವಾರ್ಥಕ್ಕೆ ವಿವೇಕದ ದೃಷ್ಟಿಯನ್ನು ಕೊಟ್ಟು ಈ ಪ್ರಶ್ನೆಯನ್ನು ಬಿಡಿಸಹತ್ತಿದರೆ ಸುಲಭವಾಗುತ್ತದೆ. ಪರಂತು ಅಂಥ ಸಂದರ್ಭವು ಕಠಿಣ. ಅದ್ದರಿಂದ ಈ ಪ್ರಶ್ನೆಗೆ ಶುಷ್ಕ ಶಾಸ್ತ್ರದ ಸ್ವರೂಪವು ಬಂದಿದೆ. ಈ ಮೊದಲು ಲಖ್ನೌದಲ್ಲಿ ಹಿಂದೂಮಹಮ್ಮದೀಯರ ಪ್ರಾತಿನಿಧ್ಯವನ್ನು ನಿರ್ಣಯಿಸಿದ್ದರು. ಮುಂಬಯಿ, ಮದ್ರಾಸ ಇತ್ಯಾದಿ ಪ್ರಾಂತಗಳಲ್ಲಿ ಮಹಮ್ಮದೀಯರ ಜನಸಂಖ್ಯೆಯು ಕಡಿಮೆ. ಆದರೂ ಅಲ್ಪ ಸಂಖ್ಯಾಕರ ಸಂರಕ್ಷಣದ ನೆವದಿಂದ ಆ ಪ್ರಾಂತಗಳಲ್ಲಿ ಅವರಿಗೆ ಹೆಚ್ಚು ಪ್ರಾತಿನಿಧ್ಯವು ಕೊಡಲ್ಪಟ್ಟಿದೆ. ಪಂಜಾಬು, ಬಂಗಾಲ ಈ ಪ್ರಾಂತಗಳಲ್ಲಿ ಮುಸಲ್ಮಾನರ ಜನಸಂಖ್ಯೆ ಹೆಚ್ಚು. ಅಲ್ಲಿ ಹಿಂದುಗಳ ಸಂಖ್ಯೆ ಕಡಿಮೆ. ಹೀಗೆ ಕಡಿಮೆ ಇರುವ ಹಿಂದುಗಳ ಅಲ್ಪಸಂಖ್ಯಾಕರ ಹಿತ ಸಂರಕ್ಷಣಕ್ಕಾಗಿ ಹಿಂದುಗಳಿಗೆ ಪ್ರಾತಿನಿಧ್ಯವು ಹೆಚ್ಚು ಕೊಡಬೇಕಿತ್ತು. ಆದರೆ ಲಖನೌ ಒಪ್ಪಂದವು ಈ ಎರಡು ಪ್ರಾಂತಗಳ ಮಟ್ಟಿಗೆ ಬೇರೇ ತಕ್ಕಡಿಯನ್ನು ತೆಕ್ಕೊಂಡು ಅಲ್ಲಿಯೂ ಮಹಮ್ಮದೀಯರಿಗೆನೆ ಹೆಚ್ಚಿನ ಪ್ರಾತಿನಿಧ್ಯವನ್ನು ಕೊಟ್ಟದೆ! ಯಾಕೆ? ಮಹಮ್ಮದೀಯರು ಸಂತುಷ್ಟರಾಗಲಿ, ರಾಷ್ಟ್ರೀಯ ಸಭೆಯ ಕಾರ್ಯಕ್ಕೆ ಮನಃಪೂರ್ವಕವಾದ ಬೆಂಬಲವನ್ನು ಕೊಡಲಿ ಎಂಬುದರಿಂದ ಆಗಿದೆ. ಇಂಥ ಈ ಒಪ್ಪಂದವು ಕೂಡ ಈಗ ಮಹಮ್ಮದೀಯರಿಗೆ ಅತೃಪ್ತಿಗೆ ಕಾರಣವಾಗಿದೆ. ಇನ್ನು ಹೆಚ್ಚಿನ ಆಶ್ಚರ್ಯದ ಸಂಗತಿಯೆನೆಂದರೆ, ಲಖನೌ ಒಪ್ಪಂದವನ್ನು ಸಾಧಿಸುವದರಲ್ಲಿ ಪ್ರಮುಖರಾಗಿದ್ದ ಮಿ. ಜಿನ್ನಾಸಾಹೇಬರೆ ಆ ಒಪ್ಪಂದದ ಬಗ್ಗೆ ಅಸಮಾಧಾನವನ್ನು ವ್ಯಕ್ತಗೊಳಿಸುತ್ತಿದ್ದಾರೆ! ಇಲ್ಲಿ ಮತ್ತಷ್ಟು ಆಶ್ಚರ್ಯಕರವಾದ ಇನ್ನೊಂದು ಸಂಗತಿಯನ್ನು ಹೇಳಿದರೆ ಅದು ಅಪ್ರಾಸಂಗಿಕವಾಗಲಾರದು. ಮಹಾತ್ಮಾಗಾಂಧಿಗಳ ಕಡು ಅನುಯಾಯಿಗಳೂ, ಹಿಂದು ಮಹಮ್ಮದೀಯರ ಐಕ್ಯದ ಪ್ರಧಾನಸ್ತಂಭರೂ ಆಗಿದ್ದ ಡೊ. ಕಿಶ್ಲುಗಳು ಬೆಳಗಾಂವಿನ ಖಿಲಾಫತ್ ಪರಿಷತ್ತಿನ ಅಧ್ಯಕ್ಷಸ್ಥಾನದಿಂದ ಭಾಷಣ ಮಾಡುವಾಗ "ಲಖನೌ ಒಪ್ಪಂದವನ್ನು ಈಗ ಸುಟ್ಟುಹಾಕಿರಿ" ಎಂಬ ಮಾತುಗಳನ್ನೆ ಆಡಿದ್ದರು! ಸಾರಾಂಶ, ಸುಶಿಕ್ಷಿತರೂ ಜವಾಬದಾರರೂ ಆದ ಮುಖಂಡರೆ ಈ ರೀತಿಯ ಭಾಷೆಯನ್ನು ಪ್ರಯೋಗಿಸುವಾಗ ಅನುಯಾಯಿವರ್ಗದ ವಿಚಾರಸರಣಿಯು ಹೇಗಿದ್ದೀತು. ಮತ್ತು ಅಂಥ ಪರಿಸ್ಥಿತಿಯು ಐಕ್ಯದ ಸುಯೋಗವನ್ನು ಎಷ್ಟು ಹತ್ತಿರಕ್ಕೆ ತಂದೀತೆಂಬುದನ್ನು ವಾಚಕರೆ ಊಹಿಸುವದು ಒಳ್ಳೆಯದು.

ಮಹಮ್ಮದೀಯ ಮುಖಂಡರು ಈ ತರದ ಪ್ರಸ್ತಾಪಗಳ ನೈತ್ತಿ ಸ್ವಪಕ್ಷದ ಅಭಿಪ್ರಾಯವನ್ನು ಮುಂದಿಟ್ಟ ಬಳಿಕ ಲಾಲಾ ಲಜಪತರಾಯರು ಮತ್ತು ಪಂಡಿತ ಮದನಮೋಹನ ಮಾಲವೀಯರು ಹಿಂದು ಪಕ್ಷವನ್ನು ಸಭೆಗೆ ಶ್ರುತಪಡಿಸಿದರು. ಎಲ್ಲರೂ ಏಕರಾಷ್ಟ್ರೀಯತೆಯ ಭಾವನೆಯಿಂದ ಪ್ರೇರಿತರಾಗಿ ಸ್ವರಾಜ್ಯವನ್ನು ಸಂಪಾದಿಸುವದಾದರೆ ಜಾತಿಪ್ರಾತಿನಿಧ್ಯವನ್ನು ಕೇಳುವದು ಕೇವಲ ವಿಸಂಗತವಾಗಿದೆ ಎಂದು ಇವರು ಒತ್ತಿಹೇಳಿದ್ದಾರೆ. ಮತ್ತು ಹಿಂದುಗಳ ಹಕ್ಕನ್ನು ಸಮರ್ಥಿಸಿದ್ದಾರೆ.

ಈ ಮೇರೆಗೆ ನಡೆದ ಸಭಾಕಾರ್ಯದಲ್ಲಿ ಈ ಪ್ರಶ್ನೆಯು ಇತ್ಯರ್ಥಿಸಲ್ಪಡುವಂತಿರಲಿಲ್ಲ. ಇದು ಹೇಗೆ ಇಕ್ಕಟ್ಟಿನ ಸಂಗತಿಯೋ ಹಾಗೆಯೆ ಬ್ರಾಹ್ಮಣ-ಬ್ರಾಹ್ಮಣೇತರ ವಿಷಯವೂ ಕೂಡಾ ವಿವಾದಾಸ್ಪದವಾಗಿದೆ ಎಂದು ಬ್ರಾಹ್ಮಣೇತರರ ಅಂಬೋಣ ಬಿಝೆಂಟಬಾಯಿಯವರು ಸ್ವರಾಜ್ಯ ಯೋಜನೆಯ ವಿಷಯವನ್ನು ಚರ್ಚಿಸಿದರು., ಅದು ಕೂಡ ಅಷ್ಟು ಸುಲಭವಾಗಿ ನಿರ್ಣಯಾಸ್ಪದವಾಗಿರಲಿಲ್ಲ. ಆದ್ದರಿಂದ ಈ ಎಲ್ಲ ವಿಷಯಗಳನ್ನು, ಕೂಲಂಕಷವಾಗಿ ಚರ್ಚಿಸಿ ತೃಪ್ತಿಕರವಾದ ನಿರ್ಣಯಕ್ಕೆ ಬಂದು ತಲಪುವಂತೆ ನಾಲ್ವತ್ತು ಗೃಹಸ್ಥರ ಒಂದು ಕಮಿಟಿಯನ್ನು ನೇಮಿಸಿ ದಿಲ್ಲಿಯ ಸರ್ವಪಕ್ಷೀಯರ ಸಭೆಯು ವಿಸರ್ಜಿತವಾಗಿದೆ. ಈಗ ಆ ಕಮಿಟಿಯು ತನ್ನ ಅಧಿವೇಶನವನ್ನು ಮಾಡಿ ನಿರ್ಣಯವನ್ನು ತಯಾರಿಸುವುದು. ಆ ನಿರ್ಣಯವನ್ನು ಪರಿಶೀಲಿಸಲು ಮುಂದೆ ಪುನಃ ಮಹಾಸಭೆಯು ಸೇರುವುದು. ಆಗಲಾದರೂ ಈ ಪ್ರಶ್ನೆಗಳು ಕೊನೆಗಾಣಲಿ. ಹೊರತು ಆ ನಿರ್ಣಯದ ಅವಗಾಹನಕ್ಕೆ ಇನ್ನೊಂದು ಸಬ್ ಕಮಿಟಿಯ ನೇಮಕದ ಪ್ರಸಂಗವು ಬಾರದೆ ಇರಲಿ ಎಂದು ನಾವು ಹಾರೈಸುತ್ತೇವೆ.

ಸ್ಫುಟವಿಚಾರಗಳು.

೧ ದಿಲ್ಲಿಪಟ್ಟಣದಲ್ಲಿ ಸರ್ವಪಕ್ಷೀಯರ ಪರಿಷತ್ತು ಸೇರಿ ಯಾವ ನಿರ್ಣಯವನ್ನು ಕೊಟ್ಟಿದೆ ಎಂಬುದನ್ನು ಈ ಹೊತ್ತಿನ ಅಗ್ರಲೇಖದಲ್ಲಿ ಪ್ರಸ್ತಾಪಿಸಿದ್ದೇವಷ್ಟೆ. ಅದೆ ದಿಲ್ಲಿಯಲ್ಲಿ ಎಸೆಂಬ್ಲಿಯ ಅಧಿವೇಶನವು ಜರಗುತ್ತಿದೆ. ಅದರಲ್ಲಿ ನಡೆಯುತ್ತಿರುವ ವಿಷಯಗಳನ್ನು ಪರಿಶೀಲಿಸುವುದು ಕೂಡ ಅಗತ್ಯವಾದ್ದು. ಬಂಗಾಲ ಓರ್ಡಿನನ್ಸನ್ನು ರದ್ದುಪಡಿಸಬೇಕೆಂದು ಪಂಡಿತ ಮೋತಿಲಾಲನೇಹರುಗಳು ಯಾವ ಬೀಲನ್ನು ತರಲಿಕ್ಕಿದ್ದರೊ ಅದಕ್ಕೆ ಅವಕಾಶವನ್ನು ಕೊಡಲಾಗದೆಂದು ಸರಕಾರದವರು ಕೊನೆಗೆ ನಿರ್ಧರಿಸಿದರು. ಸರಕಾರದವರ ಈ ನಿರ್ಧಾರವು ಕುಟಿಲತನದ್ದಾಗಿದೆ. ಬಂಗಾಲ ಓರ್ಡಿನನ್ಸಿನ ವಿಷಯದಲ್ಲಿ ವಾದವಿವಾದಕ್ಕೆ ಅದು ಆಸ್ಪದವನ್ನು ಕೊಟ್ಟಿದೆಯಾದರೂ ಮತ್ತು ಈ ವಾದವಿವಾದವು ನಡೆಯುವಾಗ ಸರಕಾರದ ಅನ್ಯಾಯಗಳ ಸಹಸ್ರನಾಮ ಪಾಠವು ಸಭಾಸದರಿಂದ ಉಚ್ಚರಿಸಲ್ಪಟ್ಟೀತಾದರೂ ಪಂಡಿತಜೀಯವರ ಬೀಲು ಪಾಸಾಗಿ ಕಾನೂನಿನ ಸ್ವರೂಪವನ್ನು ಹೊಂದಿದ್ದಲ್ಲಿ ಸರಕಾರಕ್ಕೆ ಯಾವ ಇಕ್ಕಟ್ಟಿನ ಪ್ರಸಂಗವು ಬರುತಿತ್ತೊ ಅದು ಬರಿ ಚರ್ಚೆಯ ಶುಷ್ಕವಾದ ವಿವಾದದಿಂದ ಬರಲಿಕ್ಕಿಲ್ಲವಾದ್ದರಿಂದ ಬಂಗಾಲದಲ್ಲಿ ಇಂಥ ಅನ್ಯಾಯಗಳನ್ನು ಪುನಃ ನಡಿಸುವದಕ್ಕಾಗಲಿ ಅಥವಾ ನಡಿಸಿರುವ ಅನ್ಯಾಯಗಳನ್ನು ಅದೆ ರೀತಿಯಿಂದ ಮುಂದರಿಸುವುದಕ್ಕಾಗಲಿ ಸರಕಾರಕ್ಕೆ ಯಾವ ಅಡ್ಡಿಯೂ ಇಲ್ಲದಂತಾಗಿದೆ. ಬಂಗಾಲ ಓರ್ಡಿನನ್ಸಿನ ಈ ವಿಷಯವನ್ನು ಬದಿಗಿಟ್ಟಲ್ಲಿ ಎಸೆಂಬ್ಲಿಯೊಳಗೆ ನಡೆದಿರುವ ಬೇರೆ ಮಹತ್ವದ ಸಂಗತಿಗಳಲ್ಲಿ ಟಾಟಾ ಕಂಪೆನಿಗೆ ಹಿಂದುಸ್ಥಾನ ಸರಕಾರದ ಕಡೆಯಿಂದ ೫೦ ಲಕ್ಷ ರೂಪಾಯಿಯನ್ನು ಸಾಲವಾಗಿ ಕೊಡಬೇಕೆಂದು ಬಂದ ಠರಾವು ಒಂದಾಗಿತ್ತು. ಈ ಠರಾವನ್ನು ಲೋಕಪಕ್ಷದ ಸಭಾಸದರು ಉಪರೋಧಿಸದೆ ಇದ್ದ ಕಾರಣ ಅದು ಪಾಸಾಗಿದೆ. ಇದನ್ನು ಲೋಕಪಕ್ಷದವರು ಉಪರೋಧಿಸದೆ ಇದ್ದದರಿಂದ ಎಂದು ಹೇಳಲು ಕಾರಣವೇನೆಂದರೆ ಟಾಟಾ ಕಂಪೆನಿಯು ಹೆಸರಿನಿಂದ ಹಿಂದಿಯಾಗಿದ್ದರೂ, ಆ ಕಂಪೆನಿಯ ಲಾಭದ ಹೆಚ್ಚಿನ ಅಂಶವು ವಿದೇಶೀಯರ ಸರಗಿನಲ್ಲಿ ಬೀಳುತ್ತದಾದ್ದರಿಂದಲೂ ಮುಳಶಿಯಂಥ ಕಡೆಯಲ್ಲಿ ಈಗ ಮೂರು-ನಾಲ್ಕು ವರುಷಗಳಿಂದ ಈ ಕಂಪನಿಯು ಜನತೆಯ ಹಿತವನ್ನಾಗಲಿ, ಅಭಿಪ್ರಾಯವನ್ನಾಗಲಿ, ಲೆಕ್ಕಿಸದೆ ಕೆಲವು ಮಟ್ಟಿನ ಅತ್ಯಾಚಾರ ನಡಿಸದಕಾರಣ ಅಲ್ಲಿಯವರಿಗೆ ಸತ್ಯಾಗ್ರಹವನ್ನು ಕೂಡ ಮಾಡಬೇಕಾಗಿ ಬಂದದ್ದರಿಂದಲೂ ಟಾಟಾ ಕಂಪೆನಿಯ ಲೌಕಿಕವು ಕಟ್ಟುಹೋಗಿ ಆ ಮೂಲಕವಾಗಿ ಅದು ಜನತೆಯ ಸಹಾನುಭೂತಿಯನ್ನು ಕಳೆದುಕೊಂಡಿದೆ; ಇಂಥ ಕಂಪೆನಿಗೆ ಹಿಂದುಸ್ಥಾನವು ಸಹಾಯ ಮಾಡುವದು ಹಿಂದಿಗಳಿಗೆ ಇಷ್ಟವಿರಲಿಕ್ಕಿಲ್ಲವೆಂಬುದು ಸಹಜವೆ. ಆದರೂ ಈ ಕಂಪೆನಿಯು ಪಡಕೊಂಡ ಈ ಸಾಲದಿಂದ ಇನ್ನು ಮುಂದೆಯಾದರೂ ಈ ದೇಶದ ಉದ್ಯೋಗಾಭಿವೃದ್ಧಿಗೆ ಪ್ರೋತ್ಸಾಹಕರವಾದ ಕಾರ್ಯಗಳನ್ನೇ ಮಾಡೀತೆಂದು ಲೋಕಪಕ್ಷದವರು ಭಾವಿಸಿ ಸರಕಾರದ ಈ ಬೀಲಿಗೆ ಅಡ್ಡಬರಲಿಲ್ಲ. ಕಂಪೆನಿಯು ಅವರ ಈ ಭಾವನೆಯನ್ನು ಸಾರ್ಥಕಗೊಳಿಸುವದೆಂದು ನಾವು ನಂಬಿದ್ದೇವೆ.

೨ ವಿಲಾಯತಿಯೊಳಗಿನ ಲಿಬರಲ್ ಪಕ್ಷದ ನಾಯಕರಾದ ಎಸಕ್ವಿಥ ಸಾಹೇಬರು ವರ್ತಮಾನ ಪತ್ರಿಕೆಗಳ ವಾಚಕರಿಗೆ ಅಪರಿಚಿತರಲ್ಲ. ಇವರು ಮಹಾಯುದ್ಧದ ಸಮಯದಲ್ಲಿ ಮುಖ್ಯ ಮಂತ್ರಿಗಳಾಗಿದ್ದರು. ಇವರನ್ನು ಈಗ ಸರಕಾರವು "ಅರ್ಲ" ಮಾಡಿದೆ. ಮತ್ತು ಅವರು ಅದನ್ನು ಈಗ ಸ್ವೀಕರಿಸಿದ್ದಾರೆಂದು ಪ್ರಕಟವಾಗಿದೆ. ಕೆಲವು ವರ್ಷಗಳ ಹಿಂದೆ ಸರಕಾರವು ಇವರಿಗೆ ಇದೆ ಪದವಿಯನ್ನು ಕೊಡಲುದ್ಯುಕ್ತವಾಗಿತ್ತು, ಆಗ ಅವರು ಅದನ್ನು ಸ್ವೀಕರಿಸಿರಲಿಲ್ಲ. ಉದಾರಪಕ್ಷದ ನೇತೃತ್ವದಲ್ಲಿಯೇ ಅವರು ಕೇವಲ ಸಂತುಷ್ಟರೆ ಅಲ್ಲ, ತನ್ನನ್ನು ಕೃತಾರ್ಥರೆಂದೆನ್ನಿಸಿಕೊಳ್ಳುತ್ತಿದ್ದರು. ಕನ್ಸರವೇಟಿವ್ ಪಕ್ಷವನ್ನು ಅವರು ಸರಿಯಾಗಿ ಎದುರಿಸುತ್ತಿದ್ದರು. ಎಂದರೆ ತಂತ್ರೋಪಾಯವಿಶಾರದರಾದ ಲೊಯ್ಡ ಜೋರ್ಜರು ಇವರಿಗೆ ಪ್ರತಿಪಕ್ಷಿಗಳಾಗಿದ್ದರೂ ಇವರು ಕನ್ಸರವೇಟಿವ್ ಪಕ್ಷಕ್ಕೆ ಸರಿ ವಿರೋಧಿಗಳಾಗಿದ್ದರು. ಉದಾರಮತವೆ ತನ್ನ ಜೀವನ ಸರ್ವಸ್ವವೆಂದು ಇವರು ತಿಳಿಯುತ್ತಿದ್ದರು. ಮತ್ತು ಆದ್ದರಿಂದಲೆ ಸರಕಾರಿ ಪದವಿಯ ಮೋಹಕ್ಕೆ ವಶರಾಗದೆ ಇದುವರೆಗೆ ಆಲಿಬರಲ್ ಪಕ್ಷದ ಕೀರ್ತಿಯನ್ನು ಕಾದುಕೊಂಡಿದ್ದರು. ಆದರೆ ಕಾಲವಶಾತ್ ಮನುಷ್ಯನ ಬುದ್ಧಿಯು ಪಲ್ಲಟಿಸುತ್ತದೆಂದು ಹೇಳುವಂತೆ ಈ ಎಸ್‌ಕ್ವೀಥರ ಬುದ್ಧಿಯು ಇಂದು ಪಲ್ಲಟಿಸಿದ್ದು ಸ್ಪಷ್ಟವಾಗಿ ಕಾಣುತ್ತದೆ. ಇವರು ಈ ಪದವಿಯನ್ನು ಸ್ವೀಕರಿಸಿದ ಬಳಿಕ ದಿನೇ ದಿನೇ ಅವನತಿಯನ್ನು ಹೊಂದುತ್ತಿದ್ದ ಲಿಬರಲ್ ಪಕ್ಷವನ್ನು ತ್ಯಜಿಸಿ ಇವರು ಲೊರ್ಡ್ಸರ ಸಭೆಯಲ್ಲಿ ವಿರಾಜಮಾನರಾಗಿ ಕನ್ಸರವೇಟಿವ್ ಮತಗಳ ಮರಗಳಿಗೆ ನೀರುಹಾಕುವವರಿದ್ದಾರೆಂದು ಹೇಳುತ್ತಾರೆ. ಇದು ಒಂದು ತರದ ಆತ್ಮವಧೆಯ ಸರಿ! ಮೋರ್ಲೆಯವರು ಲೋರ್ಡ್ಸರಲ್ಲಿ ಸೇರಿದಾಗ್ಯೂ ಸ್ವಮತವನ್ನು ಬಿಟ್ಟಿರಲಿಲ್ಲ. ಆದರೆ ಎಲ್ಲರಿಂದಲೂ ಈ ಸದ್ಗುಣವನ್ನು ಅಪೇಕ್ಷಿಸುವದು ಹೇಗೆ?

೩. ತಪಸ್ವಿ ಅರವಿಂದ ಘೋಷರು ನಮ್ಮ ಮದ್ರಾಸ ಸಂಸ್ಥಾನಕ್ಕೆ ಹೊಂದಿರುವ ಪೊಂಡಿಚೇರಿಯೆಂಬ ಫ್ರೆಂಚ ರಾಜ್ಯದಲ್ಲಿ ಬಂದು ನಿಂತಿದ್ದಾರೆಂಬುದು ನಮ್ಮ ವಾಚಕರಲ್ಲನೇಕರು ತಿಳಿದಿರಬಹುದು. ವಂಗವಿಭಾಗದ ಸಮಯದಲ್ಲಿ ಅಭೂತಪೂರ್ವವಾದ ಚಳವಳವು ನಡೆಯುತ್ತಿದ್ದಾಗ ಇವರೊಬ್ಬರು ಧುರೀಣರಾಗಿದ್ದರು. ಅವರ ಮೇಲೆ ಗುಪ್ತಕಾರಸ್ಥಾನದ ಆರೋಪವನ್ನು ಅಲ್ಲಿಯ ಪೋಲೀಸ ಇಲಾಖೆಯು ಇಟ್ಟಿತ್ತು. ತಥಾಪಿ ನ್ಯಾಯಸ್ಥಾನದಲ್ಲಿ ಅವರು ನಿರ್ದೋಷಿಗಳಾದರು. ಅನಂತರ ವಿಚಾರಾದಿ ಸ್ವಾತಂತ್ರ್ಯಕ್ಕೆ ಪ್ರತಿಬಂಧಕವಾದ ಇಂಥ ಕಡೆಯಲ್ಲಿ ನಿಲ್ಲುವುದಕ್ಕಿಂತ ಸ್ವತಂತ್ರವಾಗಿ ವರ್ತಿಸಲು ಅಡ್ಡಂತರವನ್ನುಂಟುಮಾಡದ ಫ್ರೆಂಚರ ರಾಜ್ಯವಾದ ಪೊಂಡಿಚೇರಿಯಲ್ಲಿ ಬಂದು ಯೋಗಾಭ್ಯಾಸವನ್ನು ಮಾಡುತ್ತ ಮತ್ತು ತತ್ವಾರ್ಥವನ್ನು ಚಿಂತಿಸುತ್ತ ಇದ್ದಾರೆ. ಇವರು ಹಿಂದುಸ್ಥಾನದ ರಾಜಕಾರಣದಿಂದ ವ್ಯಕ್ತಿರೂಪದಿಂದ ಮಾತ್ರ ದೂರ ಇದ್ದಾರೆಂದಲ್ಲ, ವಿಚಾರ ರೂಪದಿಂದಲೂ ದೂರದಲ್ಲಿ ಇದ್ದಾರೆ ಎನ್ನಬಹುದು. ಆದರೂ ಇಲ್ಲಿಯ ರಾಜಕಾರಣದಲ್ಲಿ ಆಗಾಗ್ಗೆ ಉತ್ಪನ್ನವಾಗುವ ಮಹತ್ವದ ಸಂಗತಿಗಳನ್ನು ಅವರ ತಿಳುವಳಿಕೆಗೆ ಬರುವದಿಲ್ಲೆಂದು ಮಾತ್ರವಲ್ಲ, ಅಂಥ ಸ್ನೇಹಿತರು ಅವರನ್ನು ಕಂಡು ಇಲ್ಲಿಯ ಪರಿಸ್ಥಿತಿಯನ್ನು ಕುರಿತು ಅವರ ಅಭಿಪ್ರಾಯವನ್ನು ಕೇಳಿದ್ದಾದರೆ ಅವರು ಒಮ್ಮೊಮ್ಮೆ ತಮ್ಮ ವಿಚಾರಗಳನ್ನು ತಿಳಿಸುವರು. ಇದೆ ಕ್ರಮಕ್ಕನುಸಾರವಾಗಿ ಲಾಲಾಲಜಪತರಾಯರು ಮದ್ರಾಸಿಗೆ ಬಂದವರು ಪೊಂಡಿಚೇರಿಗೆ ಹೋಗಿ ಅವರನ್ನು ಕಂಡಾಗ ಇಲ್ಲಿಯವರಿಗೆ ಒಂದು ಸಂದೇಶವನ್ನು ಕೊಡಬೇಕೆಂದು ಕೇಳಿದ್ದಕ್ಕೆ ಲಾಲಾಜಿಯವರಿಗೆ ತಪಸ್ವಿ ಅರವಿಂದಘೋಷರು ಒಂದು ಪ್ರತ್ಯೇಕವಾದ ಸಂದೇಶವನ್ನು ಕೊಡಲು ಅಲ್ಲಗೆಳೆದರು. ಕಾರಣ, ಕೊಟ್ಟ ಸಂದೇಶವು ಆಚಾರದಲ್ಲಿ ಬರುವಂತೆ ಯತ್ನಿಸುವವನಿಲ್ಲದೆ ಅದು ಫಲಕಾರಿಯಾಗುವದಿಲ್ಲ ಎಂದು ಅವರು ಅಭಿಪ್ರಾಯ ಪಟ್ಟರು. ಆದರೂ ಹಿಂದು ಸಂಘಟನವಾಗುವದು ಅಗತ್ಯವೆಂದೂ, ಅಧಿಕಾರಸ್ಥಾನಗಳನ್ನೆಲ್ಲ ಹಸ್ತಗತಪಡಿಸಿಕೊಳ್ಳುವದು ಹಿತಾವಹವೆಂದೂ ಸ್ಪಷ್ಟವಾಗಿ ಹೇಳಿದರು. ಇವರ ಅಭಿಪ್ರಾಯಕ್ಕೂ ಒಹಿಷ್ಕಾರೋಪಾಯಕ್ಕೂ ಎಷ್ಟರ ಮಟ್ಟಿಗೆ ಅಂತರವಿದೆ ಎಂಬುದನ್ನು ಪ್ರತ್ಯೇಕವಾಗಿ ಪ್ರಸ್ತಾಪಿಸಬೇಕಾದ ಅಗತ್ಯವಿಲ್ಲ.

ಮಂಗಳೂರು.

ಕಳೆದ ಆದಿತ್ಯವಾರ ಇಲ್ಲಿಯ ಕೆಥೋಲಿಕ್ ಯೂನಿಯನ್ನ ಕ್ಲಬ್ಬಿನಲ್ಲಿ ಡಾಕ್ಟರ್ ಎಲ್. ಪಿ. ಫರ್ನಾಂಡಿಸರ ಅಧ್ಯಕ್ಷತೆಯಲ್ಲಿ ದೇಶೀಯ ಕ್ರೈಸ್ತರ ಸಭೆಯೊಂದು ಜರಗಿ ಸರಕಾರಿ ಹುದ್ದೆಗಳಲ್ಲಿಯೂ ಲೆಜಿಸ್ಲೇಟಿವ್ ಕೌನ್ಸಿಲು ಮತ್ತು ಲೋಕಲ್ ಬೋರ್ಡುಗಳಲ್ಲಿಯೂ ಕ್ರೈಸ್ತರಿಗೆ ಸರಿಯಾದ ಪ್ರಾತಿನಿಧ್ಯವಿಲ್ಲವೆಂದು ನಿರ್ಣಯಿಸಿ ಮದ್ರಾಸ್ ಕೆಬಿನೆಟ್ಟಿನಲ್ಲಿ ಒಬ್ಬದೇಶೀಯ ಕ್ರೈಸ್ತನನ್ನೂ ಸೇರಿಸಿಕೊಳ್ಳಬೇಕೆಂದೂ, ಇಂಡಿಯನ್ ಕ್ರಿಶ್ಚನ್ ಲೀಗ್ ಸ್ಥಾಪಿಸಬೇಕೆಂದೂ ಠರಾವು ಪಾಸುಮಾಡಿದೆ ಎಂದು ಕೇಳುತ್ತೇವೆ

ಇಲ್ಲಿಯ ಈಗಿನ ಜಿಲ್ಲಾ ಕಲೆಕ್ಟರರಾದ ಮಿ. ಸಿ. ಏ. ಸೂಟರರು ಬರುವ ಮೇ ತಾ. ೧ರಲ್ಲಿ ರಜೆಯಲ್ಲಿ ಹೋಗುವ ಕಾಲದಲ್ಲಿ ಇಲ್ಲಿ ಈ ಮೊದಲು ಕಲೆಕ್ಟರರಾಗಿದ್ದ ಮಿ. ಜಿ. ಡಬ್ಲ್ಯು. ವೆಲ್ಸರವರು ಕಲೆಕ್ಟರರಾಗಿ ಬರುವರೆಂದು ಕೇಳುತ್ತೇವೆ.

The Calicut Bank, Ltd.,

ದಿ ಕೆಲಿಕಟ್ ಬೇಂಕ್, ಲಿಮಿಟೆಡ್,

ಹೆಡ್ ಆಫೀಸು — ಕಲ್ಲಿಕೋಟೆ.

ಬ್ರಾಂಚುಗಳು:— ಮುಲ್ಲಸ್‌ಜೇರಿ, ತಲಚೇರಿ, ಕೊಚ್ಚಿ, ಮತ್ತು ಪಾಲ್ಘಾಟು.

ರಜಿಸ್ಟರ್ಡ್ ಮತ್ತು ಅಧಿಕಾರಗೊಳಿಸಲ್ಪಟ್ಟ ಮೂಲಧನ ರೂ. 5,00,000—0—0.

ರೂಪಾಯಿ 10ರ 50,000 ಪಾಲುಗಳು.

(30—8—1924)ರ ವರೆಗೆ ಮೌಲ್ಯ ಮೂಲಧನ ರೂಪಾಯಿ 1,81,850—0—0.

ಒಂದು ವರುಷದ ಕಾಯಂ ಠೇವಣಾತಿಗೆ ಬಡ್ಡಿ ದರ ಸೇಕಡಾ ರೂ. 7—8—0.

ಕಳೆದ 4 ವರುಷಗಳಲ್ಲಿ ಪಾಲುಗಾರರಿಗೆ ಸೇಕಡಾ 12ರಂತೆ ಬಡ್ಡಿ ಹಂಚಿದೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಸಿ. ಕೃಷ್ಣನ್, ಬಿ. ಎ., ಬಿ. ಎಲ್.,
ಮೆನೇಜಿಂಗ್ ಡ್ಯಾರೆಕ್ಟರ್.

ಡ್ಯಾರೆಕ್ಟರರಲ್ಲಿ ಒಬ್ಬರು—
ಎಮ್. ನಾರಾಯಣ ಕಾಮತ್, ಬಿ. ಎ.,
ಪ್ಲೀಡರ್, ಕುಂದಾಪುರ.

ಕಳೆದಾಜೆಯ ಸಂಚಿಕೆಯಲ್ಲಿ ಪ್ರಕಟಿಸಿದಂತೆ ಸೆಂಟ್ರಲ್ ವಾರ್ಡಿನಲ್ಲಿರುವ ಹಳೇ ತಾಲೂಕು ಕಚೇರಿಯ ವಠಾರದಲ್ಲಿ ಮಂಗಳೂರ ಕೊ-ಒಪರೇಟಿವ್ ಟೌನ್ ಬೇಂಕಿನ ಬಗ್ಗೆ ಕಟ್ಟಲ್ಪಡುವ ಕಟ್ಟೋಣದ ಬುನಾದಿಕಲ್ಲು ಹಾಕುವ ಸಮಾರಂಭವು ಕಳೆದ ಸೋಮವಾರ ಬೆಳಿಗ್ಗೆ ೯-೧೫ಕ್ಕೆ ಜರಗಿತು, ಈ ಕಾಲದಲ್ಲಿ ಪಟ್ಟಣದ ಕೆಲವು ಪ್ರತಿಷ್ಠಿತ ಗೃಹಸ್ಥರೂ ಸಹಕಾರಚಳವಳದ ಮುಂದಾಳುಗಳೂ ಬೇಂಕಿನ ಮೆಂಬರರೂ ನೆರೆದಿದ್ದರು. ಪ್ರಥಮತಃ ಬೇಂಕಿನ ಅಧ್ಯಕ್ಷರಾದ ಸಹಕಾರ ಸಂಘಗಳ ರಿಟಾಯಾರ್ಡ ಅಸಿಸ್ಟಾಂಟ ರಿಜಿಸ್ಟ್ರಾರ ಡಿ. ಆನಂದರಾಯರು ಕಲೆಕ್ಟರಿಗೆ ಸಭಾಧ್ಯಕ್ಷಸ್ಥಾನವನ್ನು ಅಲಂಕರಿಸಲು ಅರಿಕೆಮಾಡಿ,ಅವರು ಕೊಡಗಿನಲ್ಲೂ ಈ ಜಿಲ್ಲೆಯಲ್ಲೂ ಸಹಕಾರಿ ಚಳವಳದಲ್ಲಿ ತೋರಿಸಿದ ಉತ್ಸಾಹವನ್ನು ತಿಳಿಸಿ, ಬೇಂಕಿಗೆ ಶಾಶ್ವತ ಕಟ್ಟಡ ಕಟ್ಟಲು ಪಟ್ಟಣದ ಮಧ್ಯಭಾಗದಲ್ಲಿ ಈ ಸ್ಥಳ ಕೊಟ್ಟ ಬಗ್ಗೆ ಅವರನ್ನು ವಂದಿಸಿದರು. ಅನಂತರ ಅಧ್ಯಕ್ಷರು ನಮ್ಮ ಜಿಲ್ಲೆಯು ಸಹಕಾರ ಚಳವಳದಲ್ಲಿ ಮದ್ರಾಸ್ ಸಂಸ್ಥಾನದ ಎಲ್ಲಾ ಜಿಲ್ಲೆಗಳಿಗಿಂತಲೂ ಮುಂದೆ ಬಂದಿರುವ ವಿಷಯವನ್ನು ತಿಳಿಯಪಡಿಸಿ, ಬೇಂಕಿನ ಕಟ್ಟಡವು ಶೀಘ್ರವಾಗಿ ಕಟ್ಟಲ್ಪಟ್ಟು ತಾನು ರಜೆಯ ಮೇಲೆ ಹೋಗುವ ಮೊದಲೇ ಇದರ ಪ್ರವೇಶ ಸಮಾರಂಭವು ನಡೆಯಲೆಂದು ಬಯಸಿದರು. ಬಳಿಕ ಬೇಂಕಿನ ಸೆಕ್ರೆಟರಿಗಳಾದ ಮ. ರಾ ಉದ್ಯಾವರ. ಶ್ರೀನಿವಾಸರಾಯರು ಈ ಬೇಂಕು ಕಳೆದ ೧೯೧೮ನೇ ಇಸವಿಯ ಫೆಬ್ರವರಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟು ದಿನೇ ದಿನೇ ಅಭಿವೃದ್ಧಿಯಾಗಿ ಬರುತ್ತಿರುವ ಇದರ ಕಳೆದ ವರುಷದ ವರೆಗಿನ ಸಾಮಾನ್ಯ ವರದಿಯನ್ನು ಓದಿ, ಬೇಂಕಿಗೆ ಸ್ವಂತ ಶಾಶ್ವತ ಕಟ್ಟದ ಅವಶ್ಯಕತೆಯು ಉಂಟಾದ ಈ ಕಾಲದಲ್ಲಿ ಅದನ್ನು ಕಟ್ಟಿಸಲು ದಯಾಳು ಕಲೆಕ್ಟರರು ಸ್ಥಳಕೊಟ್ಟ ಬಗ್ಯೆ ಅವರ ಅಭಾರವನ್ನು ಮನ್ನಿಸಿದರು. ವರದಿಯು ಓದಿಯಾದನಂತರ ಸಹಕಾರ ಸಂಘಗಳ ಅಸಿಸ್ಟಾಂಟ ರಿಜಿಸ್ಟ್ರಾರರಾದ ಮ. ರಾ. ಗಿರಿಯಪ್ಪನವರು ಈ ಬೇಂಕು ಸ್ಥಾಪನೆಯಾದಂದಿನಿಂದ ಇಂದಿನ ವರೆಗೆ ಅದು ಪಡೆದ ಅಭಿವೃದ್ಧಿಯನ್ನು ತಿಳಿಸಿ, ಬೇಂಕಿಗೆ ಡಿ. ಆನಂದರಾಯರಂಥ ಸಮರ್ಥ ಡೈರೆಕ್ಟರರಿರುವುದರಿಂದ ಈ ಸಂಸ್ಥೆಯು ಇನ್ನೂ ಅಭಿವೃದ್ಧಿಸುವುದೆಂದು ತಮ್ಮ ಭರವಸೆ ಹೇಳಿದರು.

ತರುವಾಯ ವಾದ್ಯಘೋಷದೊಡನೆ ಸುಮೂರ್ತದಲ್ಲಿ ಜಿಲ್ಲಾ ಕಲೆಕ್ಟರರು ಬೇಂಕಿನ ಕಟ್ಟಡದ ಬುನಾದಿಕಲ್ಲನ್ನಿಟ್ಟು ಬೇಂಕು ಅಭಿವೃದ್ಧಿಯಾಗಿ ಚಿರಸ್ಥಾಯಿಯಾಗಿ ಬಾಳಲೆಂದು ಕೋರಿದರು. ಅನಂತರ ನೆರೆದವರೆಲ್ಲರೂ ಪುನಃ ಸಭಾಮಂಟಪದಲ್ಲಿ ಸೇರಿದಾಗ ಇಂಪೀರಿಯಲ್ ಬೇಂಕಿನ ಏಜಂಟರಾದ ಮ. ರಾ. ಯು. ಆನಂದರಾಯರು ಇಂಥಾ ಸಹಕಾರಿ ಬೇಂಕು ಹೇಗೆ ಉಪಯುಕ್ತವಾಗಿದೆ, ಇದು ತನ್ನ ಕಾರ್ಯವನ್ನು ಹೇಗೆ ವಿಸ್ತರಿಸಬಹುದೆಂದು ಅನುಭವಿಕ ಭಾಷಣಮಾಡಿ ಕಾಲಾನುಭಾಗದಲ್ಲಿ ಈ ಸಂಸ್ಥೆಗೆ ಇಂಪೀರಿಯಲ್ ಬೇಂಕಿನ ಸಹಾಯವೂ ದೊರೆಯುವುದೆಂದು ತಿಳಿಸಿದರು. ಸಭೆಯ ಕಾರ್ಯಾರಂಭದಲ್ಲಿ ಬೇಂಕಿನ ವೈದೀಕ ಮೆಂಬರರಿಂದ ಪ್ರಾರ್ಥನೆಯೂ ಮಧ್ಯಮಧ್ಯದಲ್ಲಿ ಸಂಗೀತ ಬಲ್ಲ ಮೆಂಬರರ ಸಂಗೀತವೂ ಕೊಳಲು, ಪಿಡಿಲು ಗಾಯನವೂ ನಡೆದಿತ್ತು. ಕೊನೆಗೆ ಸಭಾಧ್ಯಕ್ಷರಿಗೂ ನೆರೆದವರಿಗೂ ವಂದನೆಗಳನ್ನು ಅರ್ಪಿಸಿದ ಬಳಿಕ ಸಭಾಕಾರ್ಯವು ಕೊನೆಗಂಡಿತು.

ಮಂಜೇಶ್ವರ, ಉಡ್ಪಿ, ಪುತ್ತೂರು ಮೊದಲಾದ ಕಡೆಗಳಲ್ಲಿ 'ದಿ ನೇಶನಲ್ ಹೆಲ್ತ ಎಂಡ್ ಬೇಬಿವೀಕ್' ಆಚರಿಸಲ್ಪಟ್ಟ ಬಾತಮಿಗಳು ಬಂದು ತಲ್ಪಿವೆ. ಸ್ಥಳಸಂಕೋಚವಾದ್ದರಿಂದ ವಿವರವೆಲ್ಲಾ ಪ್ರಕಟಿಸಲು ಆಗಲಿಲ್ಲ.

ಬೆಂದೂರಿನಲ್ಲಿರುವ ಸೈಂಟ್ ಆಗ್ನೆಸ್ ಬಾಲಿಕಾ ಕೊಲೇಜಿನವರು ತಮ್ಮ ವಾರ್ಷಿಕೋತ್ಸವವನ್ನು ಪ್ರಥಮ ಸಲ ಕಳೆದ ತಾ. ೨೨ನೇ ಗುರುವಾರ ದಿನ ಆಚರಿಸಿದರು. ನಮ್ಮ ಕಲೆಕ್ಟರ ದೊರೆಗಳ ಪತ್ನಿಯವರು ಅಂದಿನ ಸಭಾಧ್ಯಕ್ಷರಾಗಿದ್ದರು.

ಮೈಸೂರು ಇಂಡಿಯನ್ ಕಾಫಿಪ್ಲೆಂಟರರ ಸಭೆಯು ಬರುವ ತಾ| ೨ರಲ್ಲಿ ಮ| ರಾ| ಬಿ. ಕೆ. ಗರುಡಾಚಾರ್ಯರ ಅಧ್ಯಕ್ಷತೆಯಲ್ಲಿ ಚಿಕ್ಕಮಗಳೂರಿನಲ್ಲಿ ಜರಗುವುದು. ಈ ಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳು:—೧. ಕಾಫೀ ಪರೀಕ್ಷಾಕ್ಷೇತ್ರ, ೨. ಕಾಫೀ ಶೆಸ್, ೩. ಇಂಡಿಯನ್ ಪ್ಲಾಂಟರುಗಳಿಗೆ ಬ್ಯಾಂಕನ್ನು ಏರ್ಪಡಿಸುವ ವಿಚಾರ, ೪. ಕಡೂರಿನಿಂದ ಮಲ್ನಾಡಿಗೆ ರೈಲ್ ಹಾಕತಕ್ಕ ವಿಚಾರ, ೫. ರೂ. ೩೦೦ಗೆ ಮೇಲ್ಪಟ್ಟು ಕೂಲಿಗಳ ಕಂಟ್ರಾಕ್ಟರಿಗೆ ಅಡ್ವಾನ್ಸ್ ಕೊಟ್ಟದ್ದು ಬ್ರೀಚ್ ಆಫ್ ಕಂಟ್ರಾಕ್ಟು ಆಕ್ಟು ಮೇರೆ ವಾರಂಟು ಜಾರಿಗೆ ಬರುವ ವಿಚಾರ-ಇತ್ಯಾದಿ ವಿಚಾರಗಳು.

ಇಲ್ಲಿಯ ಹೆಂಗಸರ ಮತ್ತು ಮಕ್ಕಳ ಆಸ್ಪತ್ರೆ ಕಟ್ಟಡ ವಿಸ್ತೀರ್ಣಮಾಡುವುದಕ್ಕೆ ಪೋಲೀಸ್ ಆಸ್ಪತ್ರೆ ಸ್ಥಳವನ್ನು ಎಕ್ವಾಯರ್ ಮಾಡುವ ಆಲೋಚನೆ ನಡೆಯುತ್ತದೆ. ಈ ಆಸ್ಪತ್ರೆ ವಿಸ್ತೀರ್ಣಫಂಡಿಗೆ ಈ ವರೆಗೆ ರೂ 18,000 ವಂತಿಗೆಯಾಗಿದೆ. ಮತ್ತು ಇದರಲ್ಲಿ ಸುಮಾರು ರೂ. 8000 ವಸೂಲಾಗಿದೆಂದು ತಿಳಿದುಬರುತ್ತದೆ.

ಬರುವ ಫೆಬ್ರವರಿ ತಿಂಗಳ ೩ನೇ ತಾರೀಕಿನ ಆದಿತ್ಯವಾರ ಬೆಳಗ್ಗೆ ೭॥ ಘಂಟೆಗೆ ಇಲ್ಲಿಯ ಬ್ರಹ್ಮಸಮಾಜದ ಮಂದಿರದಲ್ಲಿ ಶ್ರೀಯುತ ಕೆ. ಲಕ್ಷ್ಮಣ ಎ. ಎಂಬವರು ದೇವರ ಉಪಾಸನೆಯನ್ನು ತೀರಿಸಿ ಪಸಿದ್ಧನಾದ ಬೆನರ್ಜೀಯವರ ಜೀವನದ ವಿಷಯ ಒಂದು ಭಾಷಣವನ್ನು ಕೊಡುವರು.

ಬಂಟರ ಯಾನೆ ನಾಡವರ ಸಂಘದ ಮಹಾಸಭೆ, ಸಹಕಾರಿ ಭಂಡಸಾಲೆ ಸಂಘದ ಸಭೆ, ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ವಾರ್ಷಿಕೋತ್ಸವ ಇವುಗಳೆಲ್ಲಾ ಬರುವ ಫೆಬ್ರವರಿ ತಾ. ೧೦ರಲ್ಲಿ ಮಂಗಳೂರಲ್ಲಿ ಜರಗುವುವು.

ಹಿಂದೂ ರಿಲಿಜಸ್ ಎನ್‌ಡೌಮೆಂಟ್ ಬಿಲ್ಲನ್ನು ಪ್ರಚಾರ ಕಾಲೋಚಿತಪಡಿಸಬೇಕೆಂದು ಶ್ರೀಯುತ ಸತ್ಯಮೂರ್ತಿಯವರು ಮದ್ರಾಸ್ ನ್ಯಾಯವಿಧಾಯಕ ಸಭೆಯ ಮುಂದೆ ಇಡಲಿಕ್ಕಿರುವ ಠರಾವಿಗೆ ತಮ್ಮ ಅನುಮೋದನೆಯನ್ನು ಕೊಡುವುದಕ್ಕೆ ಇಲ್ಲಿಯ ಗೌಡಸಾರಸ್ವತ ಬ್ರಾಹ್ಮಣ ಮಹಾಸಭೆಯ ಆಶ್ರಯದಲ್ಲಿ ಸದರಿ ಸಮಾಜದವರ ಸಭೆಯೊಂದು ಬರುವ ತಾ. ೮ನೇ ಆದಿತ್ಯವಾರ ಬೆಳಗ್ಗೆ ೯ ಗಂಟೆಗೆ ಗೌಡಸಾರಸ್ವತ ಬ್ರಾಹ್ಮಣರ ಕ್ಲಬ್ಬಿನಲ್ಲಿ ಜರಗಲಿಕ್ಕಿದೆ. ಈ ಸಭೆಗೆ ಸಮಾಜದ ಮೆಂಬರರೆಲ್ಲರೂ ಬರಬೇಕಾಗಿ ಗೌಡಸಾರಸ್ವತ ಬ್ರಾಹ್ಮಣ ಮಹಾಸಭೆಯ ಅಧ್ಯಕ್ಷ ರಾ। ಮಣೇಲ ವೆಂಕಟರಾಯನಾಯ್ಕರ ವಿನಂತಿ ಇದೆ.

ಮಂಗಳೂರ ತಾಲೂಕು ಬೋರ್ಡಿಗೆ ಒಬ್ಬ ಅಧ್ಯಕ್ಷರನ್ನು ಚುನಾಯಿಸಲು ಹಾಗು ಸದರಿ ತಾಲೂಕು ಬೋರ್ಡಿನಿಂದ ಜಿಲ್ಲಾ ಬೋರ್ಡಿಗೂ ಎಡ್ಯುಕೇಶನಲ್ ಕೌನ್ಸಿಲಿಗೂ ಮೆಂಬರರನ್ನು ಆರಿಸಲು ಬೋರ್ಡಿನ ಸ್ಪೆಶ್ಯಲ್ ಮೀಟಿಂಗು ಬರುವ ಫೆಬ್ರವರಿ ತಾ. ೫ನೇ ಅಪರಾಹ್ಣ ೩। ಗಂಟೆಗೆ ಸೇರುವುದು.

ಚರಕದಲ್ಲಿ ನೂಲುಮಾಡುವ ಹಾಗು ಕೈ ಮಗ್ಗಗಳಲ್ಲಿ ನೇಯುವ ಕೈಗಾರಿಕೆಯನ್ನು ಉದ್ಧರಿಸುವ ಉದ್ದೇಶದಿಂದ ಮಂಗಳೂರ ತಾಲೂಕು ಬೋರ್ಡಿನ ಆಡಳಿತಕ್ಕೊಳಪಟ್ಟ ಎಲ್ಲಾ ಎಲಿಮೆಂಟರಿ ಶಾಲೆಗಳಲ್ಲಿ ನೂಲುವ ಮತ್ತು ನೇಯುವ ಕೈಗಾರಿಕೆಯನ್ನು ಐಚ್ಛಿಕವಿಷಯವಾಗಿ (ಸಾಧ್ಯವಿದ್ದಲ್ಲಿ) ಕಲಿಸತಕ್ಕದ್ದು ಎಂಬ ಠರಾವನ್ನು ಸದರಿ ತಾಲೂಕು ಬೋರ್ಡ ಮೆಂಬರರಾದ ಮ. ರಾ ಬಿ. ವೆಂಕಟರಾಯ ಪ್ರಭುಗಳವರು ಕೌನ್ಸಿಲಿನ ಮುಂದಿನ ಮೀಟಿಂಗಿನ ಮುಂದಿಡುವರು.

ಇಂಗ್ಲೇಂಡಿನ ಸಿಂಡರ್‌ಫ್ಲೋರ್ಡ ಜಿಲ್ಲೆಯಲ್ಲಿ ಒಬ್ಬ ಮುಖ್ಯ ಮೆಡಿಕಲ್ ಆಫೀಸರರಾಗಿ ಕಳೆದ ೧೫ ವರುಷಗಳಿಂದ ಅಲ್ಲಿ ಕೆಲಸಮಾಡಿದ್ದು ಅಲ್ಲಿನ ನಿವಾಸಿಗಳ ಪ್ರೀತಿಗೂ ಮನ್ನಣೆಗೂ ಪಾತ್ರರಾಗಿದ್ದ ದಿವಾನ್ ಬಹದ್ದೂರ್ ಮುಂಡಪ್ಪ ಬಂಗೇರರ ಹಿರೇ ಮಗ ಡಾಕ್ಟರ್ ಎಮ್. ಎಲ್. ಬಂಗೇರ ಎಮ್. ಬಿ. ಸಿ. ಎಚ್. ಬಿ. ಡಿ. ಪಿ. ಎಚ್. (ಎಡಿನ್‌ಬರೋ)ರವರು ಇಂಗ್ಲೇಂಡಿನಿಂದ ಇಲ್ಲಿಗೆ ಬಂದು ತಲ್ಪಿರುವರು.

ಇಂದೂರ್ ಸಂಸ್ಥಾನದ ಪ್ರಜೆಗಳ ಪರಿಸ್ಥಿತಿ.

ಶ್ರೀಯುತ ಆರ್. ಪಿ. ಪರ್‌ಸಾಯ್ ಎಂಬವರು ಇಂದೂರ ಸಂಸ್ಥಾನದ ಸ್ಥಿತಿಯನ್ನು ಕುರಿತು "ಹಿಂದುಸ್ಥಾನ ಟೈಮ್ಸ್" ಪತ್ರದಲ್ಲಿ ಒಂದು ಲೇಖನವನ್ನು ಪ್ರಕಟಿಸಿದ್ದಾರೆ. ಅದರ ಸಾರಾಂಶ ಕೆಳಗೆ ಕೊಟ್ಟಿದೆ.

ಮಹಾರಾಜರಾದ ಶ್ರೀಮಂತ ತುಕೋಜಿರಾವ್ ಹೋಲ್‌ಕರರು ೧೯೧೧ನೇ ಇಸವಿಯ ನವಂಬರ ೧೧ರಲ್ಲಿ ಗದ್ದಿಗೆಯನ್ನೇರಿದರು. ಆ ಕಾಲದಲ್ಲಿ ಇವರು ಪ್ರಜೆಗಳನ್ನು ಸುಖವಾಗಿ ಪರಿಪಾಲಿಸುವುದಾಗಿ ಆಶ್ವಾಸನವಿತ್ತರು. ಅಲ್ಲದೆ ಒಡನೆಯೇ ೧೯೧೪ನೇ ಇಸವಿಯಲ್ಲಿ ಸರ್ ನಾರಾಯಣ ಚಂದಾವರಕರರನ್ನು ತಮ್ಮ ಮುಖ್ಯ ಅಮಾತ್ಯರಾಗಿ ನೇಮಿಸಿದರು. ಅನಂತರ ಸಂಸ್ಥಾನದ ಪುರೋವೃದ್ಧಿಯನ್ನು ಸಾಧಿಸಲು ಹಲವು ಕಮ್ಮಿಶನುಗಳು, ಕಮ್ಮಿಟಿಗಳು ನೇಮಕಪಟ್ಟು ಕೆಲವು ಯೋಜನೆಗಳೂ ಸಿದ್ಧವಾದವು. ಸಂಸ್ಥಾನದಲ್ಲಿ ನಿರಕ್ಷರರ ಕುಕ್ಷಿಗಳೇ ಇಲ್ಲದಂತೆ ಮಾಡಬೇಕೆಂಬ ಸಂಕಲ್ಪದಿಂದ ಇವರು ೧೯೧೬ರಲ್ಲಿ ಕಡ್ಡಾಯ ಶಿಕ್ಷಣ ಬಿಲ್ಲನ್ನು ಮಂಜೂರು ಮಾಡಿದರು. [illegible] ಶಾಲೆಯನ್ನು ತೆರೆಯುತ್ತಿದ್ದರು. ಮಾಲವ ಮಾರ್ತಾಂಡ ಎಂಬ ಸಾಪ್ತಾಹಿಕಪತ್ರವೂ ಹೊರಡುವಂತೆ ಮಾಡಿದರು. ಇಂದೂರ್ ಇಕೋನೊಮಿಸ್ಟ ಹಾಗು ಒಂದು ಸಂಸ್ಕೃತ ವಹಿಯನ್ನು ಪ್ರಕಟಿಸುವದರಲ್ಲಿದ್ದರು. ಮಿ। ಕಪೆಂಟ್ರಿ ಮತ್ತು [illegible] ಬರಮಾಡಿದ್ದರು. ಸಂಸ್ಥಾನದಲ್ಲಿ ಪರೀಕ್ಷೆಯ ಬಗ್ಗೆ ವ್ಯವಸಾಯ ಕ್ಷೇತ್ರವನ್ನು ತೆರೆಯಲಾಯಿತು. ಮತ್ತು ರೆವೆನ್ಯು ಕಾನೂನುಗಳನ್ನು ತಯಾರಿಸಲಾಯಿತು. ವ್ಯವಸಾಯಿಕ ಹಾಗೂ ಉದ್ಯಾನ ಪ್ರದರ್ಶನಕ್ಕೆ ಪ್ರಾರಂಭವಾಯಿತು. ಇಂದೂರು ಪಟ್ಟಣವನ್ನು ಉಚ್ಛ್ರಾಯ ಸ್ಥಿತಿಗೆ ತರಲು ಯೋಜನೆ ತಯಾರಿಸುವುದಕ್ಕೆ ಪಟ್ಟಣ ರಚನೆಯಲ್ಲಿ ವಿಚಕ್ಷಣರಾದ ಪ್ರೊಫೆಸರ ಗೆಡ್ಡಸರನ್ನು ನೇಮಿಸಿದರು. ಪ್ರೊಫೆಸರ್ ಜೋವೆನ್ಸರು ಲ್ಯಾಟ್ ರೈಲ್ವೆಗಳನ್ನು ತೆರೆಯುವ ಸ್ಕೀಮನ್ನು ಸಿದ್ಧಗೊಳಿಸಿದರು. ವ್ಯಾಪಾರಕ್ಕೆ ಹಾಗು ಕೈಗಾರಿಕೆಯ ಡಿಪಾರ್ಟಮೆಂಟಿನ ವ್ಯವಸ್ಥೆಯೂ ಮಾಡಲಾಯಿತು. ಧ್ಯಾಮಲ ಫೆಕ್ಟರಿ, [illegible] ಮತ್ತು [illegible] ಬಂದವು. ಕಮ್ಮರ್ಶಿಯಲ್ ಕ್ಲಾಸ್ [illegible] ಸಾಮಾನ್ಯ ತರಗತಿಯವರಿಗೆ ಮಾದರಿ ಮನೆಗಳನ್ನು ಕಟ್ಟಲು ರೂ. ೫೦,೦೦೦ ಸಂಕಲ್ಪವಾಯಿತು. [illegible] ಮಾಡಲಾಯಿತು. ಹೀಗೆ ಪ್ರಜೆಗಳ [illegible] ಮತ್ತು [illegible] ಮುಂದಿನ ಅಭಿವೃದ್ಧಿ [illegible] ತೋರುತ್ತಿತ್ತು.

೧೯೧೯ರ [illegible] ಪರಿವರ್ತನೆ.

ಆದರೆ ದುರ್ದೈವವಶಾತ್ ೧೯೧೯ರಲ್ಲಿ ಎಲ್ಲವೂ ಬದಲಾಯಿತು. ಮಹಾರಾಜರು ಪ್ರಜೆಗಳ ಸೌಖ್ಯದ [illegible] ಬಿಟ್ಟರು. ಅವರು ಪಟ್ಟವನ್ನೇರುವ ಕಾಲದಲ್ಲಿ ಸಂಸ್ಥಾನದಲ್ಲಿ ೧೪೪ ಶಾಲೆಗಳೂ ೫೭ ಮಾದರಿ ಪರೀಕ್ಷೆಗಳ ಅಂಗಡಿಗಳೂ ಇದ್ದವು. ಈಗ ಶಾಲೆಗಳ ಸಂಖ್ಯೆಯು ೧೬೩ಕ್ಕೆ ಬಂತು; ಗಡಂಗುಗಳ ಸಂಖ್ಯೆಯು ೬೦ಕ್ಕೆ ಏರಿತು. ಇಂದೂರ್ ಇಕೋನೋಮಿಸ್ಟ ವಹಿಯು ಜನ್ಮತಾಳಿದ ಅಲ್ಪಕಾಲದಲ್ಲಿ ಅಸ್ತಹೊಂದಿತು. ಸಂಸ್ಕೃತ ಭಂಡಾರವು ಅಸ್ತಿತ್ವಕ್ಕೆ ಬರಲೇ ಇಲ್ಲ. ಮಾಲವ ಮಾರ್ತಾಂಡ ಪತ್ರವು ಅದೃಶವಾಯಿತು. ವ್ಯಾವಸಾಯಿಕ ಪ್ರದರ್ಶನವು ಜರಗುವುದೇ ಇಲ್ಲ. ಪರೀಕ್ಷೆಗಾಗಿ ಇಟ್ಟ ವ್ಯವಸಾಯಕ್ಷೇತ್ರವು ಗೋಚರವಾಗುವುದೇ ಇಲ್ಲ. ರೆವೆನ್ಯು ಕಾನೂನಿನ ವಿಷಯ ಹೇಳುವುದಾದರೆ ಸುಧಾರಿಸಲ್ಪಟ್ಟ ಯಾವ ಕಾನೂನೂ ಆಗಲಿಲ್ಲ. ಪರಸ್ಪರ ಸಂಬಂಧವಿಲ್ಲದ ಕೆಲವು ಸರ್ಕ್ಯುಲರುಗಳೂ ಹೊರಟವೆ. ಪ್ರೊಫೆಸರ ಗೆಡ್ಡಸರ ಪಟ್ಟಣ ಪುರೋವೃದ್ಧಿಯ ಯೋಜನೆಯು ಸಿಕ್ಕಾಬಟ್ಟೆ ಜಾರಿಗೆ ತಂದುದರಿಂದ ಜನರಿಗೆ ಹೆಚ್ಚಿನ ತೊಂದರೆಗಳೇ ಉಂಟಾಗಿವೆ. ಲೈಟ್ ರೈಲ್ವೆ ಮೊದಲಾದ ಸ್ಕೀಮುಗಳ ಹೆಸರೇ ಇಲ್ಲ. ಕೊಮ್ಮರ್ಶಿಯಲ್ ಕ್ಲಾಸೂ ಮುಚ್ಚಲ್ಪಟ್ಟಿದೆ. ಧ್ಯಾಮಲ ಫೆಕ್ಟರಿ ಮೊದಲಾದ ಕಾರಖಾನೆಗಳು ಜೀರ್ಣಾವಸ್ಥೆಯಲ್ಲಿಲ್ಲವಾದರೂ ಅವುಗಳ ಸಿಬಂಧಿಯು ಇದೆ. ಈ ಸಿಬಂದಿಯ ಖರ್ಚು ವರುಷಕ್ಕೆ ಸುಮಾರು ರೂಪಾಯಿ ೫೦,೦೦೦ದಷ್ಟಿದೆ. ಮಾದರಿ ಮನೆಗಳೂ ದೃಷ್ಟಿಪಥಕ್ಕೆ ಬೀಳುವುದಿಲ್ಲ. ಜನರ ಆರೋಗ್ಯರಕ್ಷಣೆಯು ಕುರಿತಾಗಿ ಹೇಳುವುದಾದರೆ ಕಳೆದ ಹತ್ತು ವರುಷಗಳಲ್ಲಿ ಯಾವ ಹೆಚ್ಚಿನ ಅಭಿವೃದ್ಧಿಯೂ ಕಾಣುವುದಿಲ್ಲ. ಮೊದಲಿದ್ದಷ್ಟೆ ಔಷಧಾಲಯಗಳಿವೆ. ಕಳೆದ ಎಂಟು ವರುಷಗಳಲ್ಲಿ ಯಾವ ಹೊಸ ಮಾರ್ಗವನ್ನೂ ತೆರೆದಿಲ್ಲ. ಅಥವಾ ಯಾವ ಸಾರ್ವಜನಿಕ ಕಟ್ಟಡವೂ ಅಸ್ತಿತ್ವಕ್ಕೆ ಬರಲಿಲ್ಲ. ಅನೇಕ ರಸ್ತೆಗಳು ಹಾಳಾಗಿವೆ. ಉಳಿದವುಗಳನ್ನು ಒಳ್ಳೆ ಸ್ಥಿತಿಯಲ್ಲಿಡಲಾಗುವುದಿಲ್ಲವೆಂಬ ದೂರು ಇದೆ.

ಪ್ರಜೆಗಳ ಮೇಲೆ ತೆರಿಗೆಯ ಭಾರ.

ಈಗ ಅನೇಕ ತೆರಿಗೆಗಳು ಹೊರಿಸಲ್ಪಟ್ಟಿವೆ. ಕಳೆದ ೧೯೧೩-೧೪ರಲ್ಲಿ ಸರಕಾರಿನ ಉತ್ಪನ್ನ ೫೫ ಲಕ್ಷವಿದ್ದದ್ದು ೧೯೨೧-೨೨ರಲ್ಲಿ ೭೦ ಲಕ್ಷಕ್ಕೆ ಏರಿಸಿದೆ. ಇಷ್ಟಿದ್ದರೂ ೧೯೨೪ರಲ್ಲಿ ತೆರಿಗೆಯನ್ನು ಇಮ್ಮಡಿ ಮಾಡಿದೆ. ಕೆಲವು ಕಡೆಗಳಲ್ಲಿ ನಾಲ್ಕು ಪಾಲು ಏರಿಸಿದ್ದೂ ಇದೆ. ಮಿ। ರೋಹಲ್‌ಕರರು ತಮ್ಮ ವರದಿಯಲ್ಲಿ ಹೀಗೆ ಬರೆಯುವರು. ಸಂಸ್ಥಾನದ ೧೯೨೧ರ ಜನಸಂಖ್ಯೆಯ ಮಾನದಿಂದ ಹೇಳುವುದಾದರೆ ಪ್ರತಿಯೊಬ್ಬನಿಗೆ ತೆರಿಗೆಯು ರೂ ೮॥ ಬೀಳುತ್ತದೆ. ಬರೋಡಾ ಸಂಸ್ಥಾನದಲ್ಲಿ ಅಲ್ಲಿನ ಪ್ರಜೆಗಳಿಗೆ ೧೯೧೮-೧೯ರಲ್ಲಿ ಪ್ರತಿಯೊಬ್ಬನಿಗೆ ರೂ. ೬-೧-೧೦ರಂತೆ ತೆರಿಗೆ ಬಿದ್ದಿದೆ. ಅದ್ದರಿಂದ ಅಲ್ಲಿಗಿಂತ ಸಾಧಾರಣ ರೂ. ೨-೬ರಂತೆ ಹೆಚ್ಚಾದಂತಾಯಿತು. ಬರೋಡಾ ಸಂಸ್ಥಾನದಲ್ಲಿ ವರುಷಕ್ಕೆ ರೂ. ೩೦ ಲಕ್ಷ ವಿದ್ಯಾಭ್ಯಾಸಕ್ಕೂ, ರೂ. ೨೦ ಲಕ್ಷ ಅರಮನೆಯ ಖರ್ಚಿಗೂ ತಗಲುತ್ತದೆ. ಆದರೆ ಹೋಲ್‌ಕರ್ ಸಂಸ್ಥಾನದಲ್ಲಿ ತೆರಿಗೆಯ ದಾಮಾಶಯವು ಹೆಚ್ಚಿದ್ದರೂ ವಿದ್ಯಾಭ್ಯಾಸಕ್ಕೆ ಬರೆ ರೂ. ೩.೨೨ಲಕ್ಷ ಖರ್ಚಾಗುತ್ತಿದೆ. ಮತ್ತು ಅರಮನೆಯ ಖರ್ಚು ಇದರ ಐದು ಪಾಲಿನಷ್ಟಿರುವುದು. ಕಳೆದ ೧೯೨೧ರಲ್ಲಿ ಮಹಾರಾಜರು ಇಂಗ್ಲೇಂಡಿನಲ್ಲಿರುವಾಗ ಮಾಲವ ಮಾರ್ತಾಂಡ ಪತ್ರವು ಮಹೇಶ್ವರ, ನರಯಂಗ್ರಾ, ಮಲಹಾರ ಪೇಟಾ ಮೊದಲಾದ ಕಡೆಗಳಲ್ಲಿ ಪ್ರಜೆಗಳು ಕ್ಷಾಮಪೀಡಿತರಾಗಿ ಬಳಲುತ್ತಿದ್ದಾರೆಂದು ಪ್ರಕಟಿಸಿತು. ಅಲ್ಲದೆ ಇಂಥಾ ರಿಪೋರ್ಟುಗಳು ಆಯಾ ಕಡೆಗಳಿಂದ ಬರುತ್ತಿದ್ದಾವೆಂದೂ ಪ್ರಕಟಿಸಿತು. ಮತ್ತು ಸಂಸ್ಥಾನದ ಅಸಡ್ಡೆಯನ್ನು ಖಂಡಿಸಿತು. ಆದರೆ ಮಹಾರಾಜರು ಇಂಗ್ಲೇಂಡಿನಿಂದ ಹಿಂತಿರುಗಿ ಬರುತ್ತಲೇ ಪ್ರಜಾಜನರೆಲ್ಲ ಕ್ಷಾಮ ಮತ್ತು ರೋಗಪೀಡಿತರಾಗದೆ ನೆಮ್ಮದಿಯಿಂದಿದ್ದಾರೆಂಬ ಮಾನಪತ್ರವು ಅವರಿಗೆ ಕೊಡೋಣಾಯಿತು. ಆಗ ಉತ್ತರವನ್ನು ಕೊಡುವಾಗ ರಾಜರು ತನ್ನ ಪ್ರಜೆಗಳು ಸುಖದಿಂದಲೂ ಆನಂದದಿಂದಲೂ ಇರುವುದನ್ನು ಕಣ್ಣಾರೆ ಕಂಡು ತನಗೆ ಸಮಾಧಾನವಾಗಿದೆಂದು ಹೇಳಿದರು. ಇಂಥಾ ಉದಾಹರಣೆಗಳೂ ಸಂಸ್ಥಾನದ ವರುಷಾವಧಿಯ ವರದಿಗಳೂ, ಬಜೆಟು ಎಸ್ಟಿಮೇಟೂ ಪ್ರಕಟವಾಗದೆ ಇರುವುದು ಸಂಸ್ಥಾನದ ಆಡಳಿತವು ಸರಿಯಾಗಿ ನಡಿಯುತ್ತಿಲ್ಲವೆಂದು ಊಹಿಸಲು ಆಸ್ಪದಕೊಡುತ್ತದೆ.

ಮುಂಬಯಿ ಮಲಬಾರ್ ಹಿಲ್ಲ ಢಕಾಯತಿ.

ಈಗ ವಾಚಕರ ಲಕ್ಷ್ಯವನ್ನು ವಿಶೇಷವಾಗಿ ಸೆಳೆಯುವ ಮುಂಬಯಿಯ ಮಲಬಾರ್ ಹಿಲ್ಲ ಢಕಾಯತಿ ಕಥೆಯ ನಾಯಕಿಯಾದ ಮಮ್ತಾಜ್ ಬೇಗಮ್ಮಳ ತಾಯಿ ವಜೀರ ಬೇಗಮ್ಮಳು ಪೋಲಿಸ್ ಕಮಿಶನರಿಗೆ ಒಂದು ಅರ್ಜಿಯನ್ನು ಬರೆದಿದ್ದಳು. ಇದರಲ್ಲಿ ವಜೀರ ಬೇಗಮ್ಮಳು ತಾನೂ ತನ್ನ ಮಗಳೂ ಇಂದೂರ್ ಮಹಾರಾಜರ ಆಸ್ಥಾನದಲ್ಲಿ ಗಾಯನವೃತ್ತಿಯಲ್ಲಿದ್ದೇವೆಂದೂ ತನ್ನ ಮಗಳು ಪ್ರಾಯಕ್ಕೆ ಬರುವ ಮೊದಲೇ ಮಹಾರಾಜರು ಆಕೆಯನ್ನು ಉಪಪತ್ನಿಯಾಗಿ ಮಾಡಿಕೊಂಡಿದ್ದರೆಂದೂ ೧೯೨೧ರಲ್ಲಿ ಮಹಾರಾಜರು ತನ್ನ ಮಗಳನ್ನು ಕಮಲಾಬಾಯಿ ಎಂಬ ಹೆಸರನಿಟ್ಟುಕೊಂಡು ವಿಲಾಯತಿ ವರೆಗೆ ಕರಕೊಂಡು ಹೋಗಿದ್ದರೆಂದೂ ಮುಂತಾದ ಕಥೆಯನ್ನು ತಿಳಿಸಿ, ಕೊನೆಗೆ ತನ್ನ ಮಗಳು ಇಂದೂರಿಂದ ದೂರ ಹೋದುದಕ್ಕಾಗಿ ಇಷ್ಟೆಲ್ಲ ಅವಘಡಗಳು ಸಂಭವಿಸಿದವೆಂದು ತಿಳಿಸಿದ್ದಾಳೆ. ಮಿ। ಬಾವಲಾ ಇವರ ಕೊಲೆಯ ಸಂಬಂಧದ ಆರೋಪದ ಮೇಲೆ ಅನೇಕರನ್ನು ಕೈದುಮಾಡಿದೆ. ಕಳೆದ ತಾ. ೩ರಲ್ಲಿ ನಾಲ್ವರನ್ನು ಮುಂಬಯಿ ಪೋಲೀಸಿನವರು ಪ್ರೆಸಿಡೆನ್ಸಿ ಮೆಜಿಸ್ಟ್ರೇಟರ ಮುಂದೆ ನಿಲ್ಲಿಸಿದರು. ವಜೀರ ಬೇಗಮ್ಮಳ ಎರಡನೇ ಗಂಡ ಮಹಮದಾಲಿ ಮಹಮ್ಮದ್ ಯುಸೂಫ್ ಅವನ ಸಹೋದರರಾದ ಅಬ್ದುಲ್ಲ ವಜೀರನನ್ನೂ, ಅಲಾವುದ್ದೀನ ವಜೀರನನ್ನೂ, ಅವರ ಸಹೋದರಿ ನಹಾನುಜಾಳನ್ನೂ, ಪಿಪಿ ಅಹಮ್ಮದ್ ಎಂಬವನನ್ನೂ ಪೋಲೀಸಿನವರು ಮುಂಬಯಿಯಲ್ಲಿ ಕೈದುಮಾಡಿ ರಿಮಾಂಡು ತೆಗೆದುಕೊಂಡರು. ಕಳೆದ ತಾ. ೨ರಲ್ಲಿ ಪೋಲೀಸಿನವರು ಅವ್ಯಕ್ತ ಸ್ಥಳದಿಂದ ವಜೀರ್ ಬೇಗಮ್ಮಳ ತಾಯಿಯನ್ನೂ ಮುಂಬಯಿಗೆ ಕರಕೊಂಡು ಬಂದು ಇವರ ಮೇಲೆ ಕಾವಲನ್ನಿಟ್ಟಿರುವರು. ಈಗ ಇಂದೂರ್ ಸಂಸ್ಥಾನದ ಕೆಳಗೆ ಹೆಸರು ಕಾಣಿಸಿದ ೬ ಜನರನ್ನು ಕೈದುಮಾಡಿರುತ್ತದೆ. ಶಾಂತಿಜೀ-ಮಹಾರಾಜರ ಗೃಹದ ಮುಖ್ಯ ಕೆಲಸಗಾರ, ಕ್ಯಾಪ್ಟನ್ ದೀಘು ಇಂದೂರು ವಿಮಾನದಳದ ಉದ್ಯೋಗಿ, (ಮಹಾರಾಜರ ಹತ್ತಿರದ ಸಂಬಂಧಿಕರು ಮತ್ತು ಇತ್ತೀಚೆಗೆ ಇಂಗ್ಲೆಂಡಿನಿಂದ ಹಿಂತಿರುಗಿದವರಿರುವರು) ಅಕಬರ್-ಇಂದೂರ್ ಪೋಲೀಸ್ ಅಶ್ವದಳದ್ಯೋಗಿಯಾಗಿದ್ದು ಈಗ ಅರಮನೆಯಲ್ಲಿ ಮುಖ್ಯ ಎಂಬ ದೊಡ್ಡ ಕೆಲಸಗಾರರಾಗಿರುವರು. ಮುಸ್ತಫಾ ಇಂದೂರ್ ಸಿ. ಐ. ಡಿ. ಪೋಲೀಸ್ ಸಬ್ ಇನ್ಸ್‌ಪೆಕ್ಟರ್, ಕರಮತ್ ಇಂದೂರ್ ಸೇನಾಭಟ, ಶಫೀ ಸಂಸ್ಥಾನದ ಮೋಟರ್ ಡ್ರ್ಯಾವರ್, ಬಹದೂರ್ (ಅಕ್ಬರನ ಸಹೋದರ) ಸಂಸ್ಥಾನದ [illegible] ಡ್ರ್ಯಾವರ್. [illegible] ಮುಂಬಯಿಯಲ್ಲಿ [illegible] ಸಭೆಗಳು [illegible] ಅಪರಾಧಿಗಳನ್ನು ವಿಚಾರಣೆಯಿಂದ ತಕ್ಕ ಶಿಕ್ಷೆ ಕೊಡಬೇಕೆಂಬ ತೀರ್ಮಾನಗಳು ಆಗಿರುವವು. ಕಳೆದ ತಾ. ೨೦ರಲ್ಲಿ ಬಾವಲಾ ಇವರ ಮಿತ್ರರಾದ ಕಬ್‌ದಾಸ್ ಎಂಬ ಮಹಮ್ಮದೀಯ ಗೃಹಸ್ಥರ ಅಧ್ಯಕ್ಷತೆಯಲ್ಲಿ ಸಭೆ ಸೇರಿ, ಬಾವಲಾ ಇವರ ಮರಣದ ಸಂತಾಪವನ್ನು ಸೂಚಿಸಬೇಕೆಂದೂ ಹೆಚ್ಚಿನ ಅವಘಡವನ್ನು ತಪ್ಪಿಸಿದ ಲೆಪ್ಟಿನೆಂಟ ಸಿಗರೇಟ್‌ರವರ ಧೈರ್ಯಸಾಹಸಕ್ಕಾಗಿ ಕೃತಜ್ಞತೆಯನ್ನು ತಿಳಿಸಬೇಕೆಂದೂ ಅಪರಾಧಿಗಳು ಯಾವ ದರ್ಜೆಯವರಿದ್ದರೂ ಯಾವ ರಾಜ್ಯ ಅಥವಾ ಸಂಸ್ಥಾನವಾಸಿಗಳಾಗಿದ್ದರೂ ಅವರೆಲ್ಲರನ್ನೂ ಅವರಿಗೆ ಸಹಾಯ ಮಾಡಿದವರನ್ನೂ ತಕ್ಕ ರೀತಿಯಲ್ಲಿ ಶಿಕ್ಷಿಸಬೇಕೆಂದು ಈ ಸಭೆಯು ಗವರ್ನರರನ್ನೂ ವೈಸರಾಯರನ್ನೂ ಪ್ರಾರ್ಥಿಸಿಕೊಳ್ಳಬೇಕೆಂದೂ ತೀರ್ಮಾನ ಮಾಡಿದರು.

ಮುಂಬಯಿಯ ಮಲಬಾರ ಹಿಲ್ಲಿನಲ್ಲಿ ಢಕಾಯತಿಯನ್ನು ನಡಿಸಿದ ಕಾಲದಲ್ಲಿ ಹೆಚ್ಚಿನ ಅವಘಡವನ್ನು ತಪ್ಪಿಸಿ ಢಕಾಯತಿಯವರಲ್ಲಿ ಒಬ್ಬನನ್ನು ಹಿಡಿದ ಲೆಪ್ಟಿನೆಂಟ ಸಿಗರೇಟರವರು ಈಗ ಇಂದೂರ್ ಸಂಸ್ಥಾನಕ್ಕೆ ಹೋಗಿರುವರು. ಇಂದೂರಿನಲ್ಲಿ ಹಿಡಿಯಲ್ಪಟ್ಟ ಮೇಲೆ ಹೆಸರುಕಾಣಿಸಿದ ೬ ಜನರಲ್ಲಿ ಇಬ್ಬರ ಗುರುತನ್ನು ಮಿ। ಸಿಗರೇಟರು ಹಿಡಿದಿರುವರು. ಹೀಗೆ ಗುರುತು ಹಿಡಿಯಲ್ಪಟ್ಟ ಇಬ್ಬರಲ್ಲಿ ಒಬ್ಬರು ಲೆಪ್ಟಿನೆಂಟ ಸಿಗರೇಟರ ಕಡೆಗೆ ಗುಂಡು ಹೊಡೆದವರೆಂದು ಆರೋಪಿಸಲಾಗಿದೆ. ಪೂನಾಪಟ್ಟಣದಲ್ಲಿ ಈ ಢಕಾಯತಿಯ ಪೂರ್ವಯೋಜನೆಯು ನಡೆದಿತ್ತೆಂದು ದಾಖೆ. ಅದ್ದರಿಂದ ಈ ವಿಷಯದಲ್ಲಿ ಪೂನಾಪಟ್ಟಣದಲ್ಲಿ ಯಾವ ಮಾಹಿತಿಯನ್ನು ತಿಳಕೊಳ್ಳಬಹುದೆಂದು ಪೋಲೀಸರು ಅಲ್ಲಿಗೆ ಹೋಗಲಿಕ್ಕಿದ್ದಾರೆ.

ಕಾಠೇವಾಡ ರಾಜಕೀಯ ಪರಿಷತ್ತು.

ಕಾಠೇವಾಡ ರಾಜಕೀಯ ಪರಿಷತ್ತು ಮಹಾತ್ಮಾ ಗಾಂಧಿಯವರ ಅಧ್ಯಕ್ಷತೆಯ ಕೆಳಗೆ ಭಾವಾನಗರದಲ್ಲಿ ಜರುಗಿತು. ಕಾಠೇವಾಡದೊಳಗಿನ ಸುದಾಮಾಪುರಿಯು ಮಹಾತ್ಮಜಿಯವರ ಜನ್ಮಸ್ಥಳ. ಈ ಪರಿಷತ್ತು ರಾಜಕೀಯವಾದುದರಿಂದ ಸಂಸ್ಥಾನದ ರಾಜಧಾನಿಯ ಸ್ಥಳದಲ್ಲಿ ನಡೆದುದು ಇದೇ ಮೊದಲನೆಯದು. ಭಾವನಗರದ ಅಧಿಪತಿಗಳು ಅಪ್ರಾಪ್ತವಯಸ್ಕರಿರುವದರಿಂದ ಸಂಸ್ಥಾನದ ಆಡಳಿತವು ಕೌನ್ಸಿಲ್ ಆಫ್ ಅಡ್‌ಮಿನಿಸ್ಟ್ರೇಶನ್‌ದ ಮುಖಾಂತರ ನಡೆಯುತ್ತಿರುವುದು. ಸರ್ ಪ್ರಭಾಶಂಕರ ಪಟ್ಟಣಿಯವರು ಇದರ ಪ್ರಮುಖರು. ಇವರು ಸ್ವತಃ ಪರಿಷತ್ತಿಗೆ ಬಂದಿದ್ದರು.

ಮಹಾತ್ಮಾ ಗಾಂಧಿಯವರು ತಮ್ಮ ಅಧ್ಯಕ್ಷತನದ ಭಾಷಣದಲ್ಲಿ ಹೇಳಿದುದೇನೆಂದರೆ – "ನನಗೆ ಸಂಸ್ಥಾನಿಕರ ವಿಷಯದಲ್ಲಿ ಆದರಬುದ್ಧಿ ಇದೆ. ಆದರೆ ಅವರು ಪ್ರಜೆಗಳನ್ನು ಪೀಡಿಸುವುದು ಮತ್ತು ಹಿಂಡಿ ಹೀರುವುದು ಅವರಲ್ಲಿ ಹೆಚ್ಚಾಗುತ್ತಿದೆ. ತಮ್ಮ ರಾಜ್ಯವನ್ನು ಬಿಟ್ಟು ಯುರೋಪದಲ್ಲಿ ವಾಸಿಸುವುದು ಸಂಸ್ಥಾನಿಕರಲ್ಲಿ ಒಂದು ಪರಿಪಾಠವುಂಟಾಗಿದೆ. ಇಂಥ ಪ್ರವಾಸಗಳಿಂದ ಕ್ಷುಲ್ಲಕತ್ವವು ಹೆಚ್ಚಾಗುವುದರಿಂದ ಸಂಸ್ಥಾನಿಕರು ವ್ಯಸನಾಧೀನರಾಗಿ ಅವನತಿಯನ್ನು ಹೊಂದುತ್ತಾರೆ. ಈಗ ವೃತ್ತಪತ್ರಿಕೆಗಳಲ್ಲಿ ಚರ್ಚೆಯ ವಿಷಯವಾಗಿರುವ ಕಾಶ್ಮೀರದ ರಾಜಪುತ್ರರ ಉದಾಹರಣೆಯು ಸಂಸ್ಥಾನಿಕರಿಗೆ ಲಜ್ಜಾಸ್ಪದವಾದ ಸಂಗತಿಯಾಗಿದೆ. ಸಂಸ್ಥಾನಿಕರು ಪರಕೀಯ ಸಂಸಾರದ ಅನುಕರಣವನ್ನು ಮಾಡಿ ಅಬಕಾರಿಯಂಥ ಪಾಪ ಮೂಲಕ ಉತ್ಪನ್ನದಿಂದ ತಮ್ಮ ಕೋಶವನ್ನು ತುಂಬುತ್ತಾರೆ. ಅಧಿಕಾರಿಗಳನ್ನು ನಿಯಮಿಸುವುದು, ಕಂದಾಯವನ್ನೆತ್ತುವುದು ಮತ್ತು ಹಣವನ್ನು ಖರ್ಚುಮಾಡುವುದು ಈ ಮೂರೂ ವಿಷಯಗಳಲ್ಲಿಯೂ ಸಂಸ್ಥಾನಿಕರು ಅನಿಯಂತ್ರಿತರಾಗಿ ನಡೆಯುತ್ತಾರೆ. ಸಂಸ್ಥಾನಿಕರು ತಮ್ಮ ಪ್ರಜೆಗಳ ಟ್ರಸ್ಟಿಗಳು ಇರುತ್ತಾರೆ. ಮತ್ತು ಅವರು ಸಂಸ್ಥಾನದ ಉತ್ಪನ್ನಕ್ಕೆ ಒಡೆಯರಾಗಿರುವುದಿಲ್ಲ. ಸ್ನೇಹವನ್ನೂ, ದಯೆಯನ್ನೂ, ಸೌಖ್ಯವನ್ನೂ, ಭಾರ್ಯೆಯನ್ನೂ ಕೂಡಾ ಪ್ರಜೆಗಳ ಆರಾಧನ (ಸಂತೋಷ)ಕ್ಕಾಗಿ ಬಿಡುವಂಥ ರಾಮಚಂದ್ರನ ಉದಾತ್ತ ಧ್ಯೇಯವನ್ನು ಸಂಸ್ಥಾನಿಕರೆಲ್ಲರೂ ತಮ್ಮ ಮುಂದಿಟ್ಟುಕೊಂಡು ನಡೆಯಬೇಕು".

ಬೆಳಗಾಂ ಕೊಂಗ್ರೆಸ್ಸಿನ ಸಂದೇಶ.

ಬೆಳಗಾಂ ಸಂದೇಶದ ಕುರಿತು ಶ್ರೀಮತಿ ಸರೋಜಿನಿ ನಾಯುಡುರವರು ಮುಂಬಯಿಯಲ್ಲಿ ಕೂಡಿದ ಒಂದು ದೊಡ್ಡ ಸಭೆಯಲ್ಲಿ ಮಾತನಾಡುವಾಗ ಹೀಗೆಂದರು. "ದೇಶದ ಸಾವಿರಗಟ್ಟಲೆ ಬಡವರು ಹೊಟ್ಟೆಗೆ ಹಿಟ್ಟಿಲ್ಲದೆ ಉಡಲಿಕ್ಕೆ ಬಟ್ಟೆ ಇಲ್ಲದೆ ಕಂಗೆಡುತ್ತಿರುವಾಗ ಸುಧಾರಣೆ, ಸ್ವರಾಜ್ಯ, ಸ್ವಾತಂತ್ರ್ಯ ಇವರ ಮಾತೇಕೆ? ಅದುಕಾರಣ ಮಹಾತ್ಮರು ಈ ವರೆಗೆ ಕಂಗೆಡುತ್ತಿರುವ ಬಡವರಿಗೆ ಹೊಟ್ಟೆಗೆ ಅನ್ನವನ್ನೂ, ಉಡಲಿಕ್ಕೆ ವಸ್ತ್ರವನ್ನೂ ಕೊಡುವ ಕಾರ್ಯಕ್ರಮವನ್ನೇ ಈ ವರುಷ ಕೊಂಗ್ರೆಸ್ಸಿನ ಮುಖ್ಯ ವಿಧಾಯಕ ಕಾರ್ಯವಾಗಿ ಇಟ್ಟುಕೊಂಡಿದ್ದಾರೆ. ಮಹಾತ್ಮರು ಮುಂದಿಟ್ಟ ಈ ಕಾರ್ಯವನ್ನು ಮನಃಪೂರ್ವಕ ಅದನ್ನು ಕೃತಿಯಲ್ಲಿ ನಡಿಸಿದರೆ ಆಗ ದೇಶಕ್ಕೆ ಸ್ವರಾಜ್ಯದ ಸಂಪಾದನೆಯು ಕುರಿತಾದ ಭಾರವನ್ನು ವಹಿಸಿಕೊಳ್ಳಲು ಸಾಧ್ಯವಾಗುವುದು. ಹೀಗಿರುವುದರಿಂದ ಎಲ್ಲರೂ ಮಹಾತ್ಮರ ಈ ಘನ ಕಾರ್ಯದಲ್ಲಿ ಭಾಗಿಗಳಾಗಬೇಕಾಗಿ ನನ್ನ ವಿಜ್ಞಾಪನೆ.

ಬಡವರ ಮೇಲಿನ ಪ್ರೇಮವನ್ನು ವ್ಯಕ್ತಪಡಿಸುವ ಸಲುವಾಗಿ ಎಲ್ಲರೂ ಕೈಯಿಂದಲೇ ತಯಾರಿಸಿದ ನೂಲಿನ ಕೈಮಗ್ಗದ ಬಟ್ಟೆಗಳನ್ನು ಧರಿಸಬೇಕಾಗಿದೆ. ದೇಶದ ಮಹಿಳೆಯರು ದಿನನಿತ್ಯ ಅರ್ಧ ತಾಸಾದರೂ ನೂಲಬೇಕೆಂದು ಮಹಾತ್ಮರ ವಿನಂತಿ ಇದೆ. ಚರಕವು ಈಗ ಮುಂಬಯಿಯೊಳಗಿನ ಅತಿ ಸಂಪನ್ನರ ಗೃಹಗಳಲ್ಲೂ ಆಶ್ರಯಹೊಂದಿರುವುದು ಸಂತೋಷಕರವಾಗಿದೆ. ಭೋಪಾಲದ ಬೇಗಮ್ಮರು ತಮ್ಮ ಧಾರ್ಮಿಕ ಕಾರ್ಯವೆಂದು ಅನುದಿನ ಚರಕವನ್ನು ತಿರುಗಿಸುವುದು ತುಂಬಾ ಆನಂದದಾಯಕವಾಗಿದೆ. ಐಶ್ವರ್ಯವಂತರೇ! ಯಾವಾಗಲೂ ನಾನಾ ನಮೂನೆಯ (fashion) ಬಟ್ಟೆಯನ್ನು ಧರಿಸುವುದರಿಂದ ಸಂಪನ್ನ ಸ್ತ್ರೀಯರು ಕೂಡಿ ಎಲ್ಲರೂ ಕೈಯಿಂದ ತಯಾರಿಸಿದ ಖಾದಿಯನ್ನು ತೊಟ್ಟುಕೊಳ್ಳಬೇಕಾಗಿದೆ. ಮಹಾತ್ಮರ ಇನ್ನೊಂದು ಅಂಶ ವಿಶೇಷವಾಗಿ ಹಿಂದುಗಳಲ್ಲಿ ಅಸ್ಪೃಶ್ಯ ಎಂಬ ಅರಿಷ್ಟವನ್ನು ನಿವಾರಿಸಬೇಕೆಂಬುದೇ ಆಗಿದೆ. ಯೂರೋಪ್ಯನು ತಾನು ಅನುಸರಿಸುವ ಉದ್ಯೋಗದ ಕಾರಣದಿಂದ ಅಸ್ಪೃಶ್ಯನಾಗುವುದಿಲ್ಲ. ಪರಂತು ನೀಚ ಆಚಾರದಿಂದಲೇ ಒಬ್ಬನು ಅಸ್ಪೃಶ್ಯನಾಗುವನೆಂದು ಮಕ್ಕಳ ತಾಯಂದಿರು ತಮ್ಮ ಬಾಲಮಕ್ಕಳಿಗೆ ಮನದಟ್ಟಿಸಬೇಕು. ಜಾತಿ ಜಾತಿಗಳಲ್ಲಿ ಐಕ್ಯವನ್ನು ಸಾಧಿಸಬೇಕೆಂದು ತಿಳಿಸುವುದೇ ಮಹಾತ್ಮರ ಇನ್ನೊಂದು ಉದ್ದೇಶ."

ಆರೋಗ್ಯ ಚಂದ್ರಿಕೆ.
ಮದ್ರಾಸ್.
ಸಂಪಾದಕರು: ಡಾಕ್ಟರ್ ಯು. ರಾಮರಾವ್, ಎಲ್. ಎಮ್.
ಸಿ. ಎಫ್. ಎಮ್. ಯು. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಚಿಕಿತ್ಸದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವುದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ.

ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ.

ಆರೋಗ್ಯಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವುವು.

'ಹೆಲ್ತ್' ಎಂಬ ನಮ್ಮ ಇಂಗ್ಲಿಷ್ ಮಾಸಪತ್ರಿಕೆಯನ್ನೋದಿ ಸಂತೋಷಿಸಿದ ಅನೇಕ ದೊಡ್ಡ ಮನುಷ್ಯರ ಪ್ರೋತ್ಸಾಹದ ಮೇಲೆ ಈ ಕನ್ನಡ ಪ್ರತಿಯನ್ನು ಹೊರಪಡಿಸಿದೆ.

ಅದರ ಸಂಪುಟ ೨ ಮತ್ತು ೧೧ನೇಯ ನವಂಬರ ೧೯೨೩ ಸಂಚಿಕೆಯಲ್ಲಿ ಕಾಣಿಸಿರುವ ವಿಷಯಗಳು:

ಮುಂಬಚಿತ್ರ:—ಪರ್ವತವಾಸಿಯಾದ ಒಬ್ಬ ರೂಪವತಿ.
ಶ್ವಾಸಕೃಮ ಅಥವಾ ಪ್ರಾಣಾಯಾಮ.
ಹುಣಿಸೇಹಣ್ಣಿನ ಆಹಾರಗುಣಗಳು ಮತ್ತು ಔಷಧಗುಣಗಳು.
ಕಾಲುನಡೆಯೇ ಉತ್ತಮವಾದ ವ್ಯಾಯಾಮವು.
ಜೇನಿನಲ್ಲಿರುವ ಗುಣಗಳು.
ಹಲ್ಲುಗಳ ರಚನೆ, ಪ್ರಯೋಜನ, ಕೆಲಸ ಮುಂತಾದವು.
ಮದದ್ರಾವಕಗಳಿಂದ ಆರೋಗ್ಯಕ್ಕೆ ಉಂಟಾಗತಕ್ಕ ಹಾನಿ.
ಅಂಗಸಾಧನೆ ಮತ್ತು ಬುದ್ಧಿವ್ಯವಸಾಯ (ವಿದ್ಯಾಭ್ಯಾಸ).
ಗಾಯಗಳು, ಮತ್ತು ಉಳುಕು ಮುಂತಾದವು, ಅವುಗಳ ಚಿಕಿತ್ಸೆ.
ನವನಾಗರಿಕ ಪ್ರಪಂಚಕ್ಕೆ ಸಹಜವಾದ ಮೂರು ಕೇಡುಕಗಳು.
ಒಬ್ಬ ಉಪವಾಸಿಯ ಅನುಭವ.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವುವು. ಆರೋಗ್ಯಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ ರೂ. ೧—೮—೦; ಬಿಡಿಪತ್ರಿಕೆ ಒಂದಕ್ಕೆ ರೂ. ೦—೩—೦. ಹಿಂದಿನ ಸಂಚಿಕೆಗಳು ಕೂಡ ದೊರಿಯುವವು.

ಚಂದಾದಾರರಾಗುವವರು ವಿ. ಪಿ. ಮೂಲಕವಾಗಿ ತರಿಸಿಕೊಳ್ಳುವುದಕ್ಕಿಂತಲೂ ಹಣವನ್ನು ಮುಂಗಡವಾಗಿ ಕಳುಹಿಸುವುದು ಲಾಭಕರ. ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು 'ಆರೋಗ್ಯ ಚಂದ್ರಿಕೆ'ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು.

ಪತ್ರವ್ಯವಹಾರಕ್ಕೆ: 'ಆರೋಗ್ಯ ಚಂದ್ರಿಕೆ'
೨೨೩ ತಂಬುಚೆಟ್ಟಿ ಬೀದಿ, ಮದ್ರಾಸ್

ತುಳು ಪಾಡ್ದನಗಳು.

ಬೊಬ್ಬರ್ಯ, ಕಲ್ಲುರ್ಟಿ-ಕಲ್ಕುಡ, ದೈಯ್ಯೊಂಗುಳು—ಕೋಡಕಿನಾರ್, ಮುಂಡತ್ತಾಯ ಪ್ರತಿ ಒಂದಕ್ಕೆ 2 ಆಣೆ. 1½ ಆಣೆ ಟಪ್ಪಾಲು ಚೀಟು ಕಳುಹಿಸಿದರೆ 5 ಪುಸ್ತಕಗಳು ಕೂಡಲೇ ಕಳುಹಿಸಲ್ಪಡುವವು.

ವಿಳಾಸ: ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

The Canara Bank, Limited, Magalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.
Authorised and fully paid up Capital Rs. 300,000—0—0
Reserve and other sinking Funds „ 233,000—0—0

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ಕೆತ್ತ ಮೂಲಧನವು ರೂ. 300,000—0—0
ಕ್ಷೇಮನಿಧಿ ಮತ್ತು ಇತರ ಫಂಡುಗಳು „ 233,000—0—0

THE BANK RECEIVES FIXED, CURRENT ACCOUNT, & SAVINGS BANK DEPOSITS
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 12th Feb. 1924.

K. Venkat Rao,
Secretary.

ಪಾಳ್ಯದ ವೆಂಕಟಾಚಲ ಪಂಡಿತರ.
ಆಯುರ್ವೇದೀಯ ಸಿದ್ಧೌಷಧಿಗಳಲ್ಲಿ ಒಂದಾದ,
ಲೋಕಾಮಯಹರ ಕಸ್ತೂರಿ ಮಾತ್ರೆಯನ್ನು ಇಂದೇ ತಾವು ತರಿಸಿಕೊಳ್ಳಿರಿ! ಏಕೆಂದರೆ,

ಲೋಕಾಮಯಹರ ಕಸ್ತೂರಿ ಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಬಾರದು ಅದು ಹೇಗೆಂದರೆ? ಈ ಮಾತ್ರೆಗಳಲ್ಲಿ ಒಂದರದನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಕಾಹಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಸಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರ ವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟ ಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ವೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಬೇನೆ, ಜ್ವರ, ಚಳಿಜ್ವರ ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲುಯನ್‌ಜಾ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ. ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು

ವ್ಯಾಯಾಮವನ್ನು [illegible] ವ್ಯಾಪಾರಗಳಿಗೂ ಗೋಪಾಸ್ಥೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವುಗಳು. ಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯ ಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ 250ರಿಂದ 300 ಮಾತ್ರೆಗಳ ವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1—4—0, 12 ಸೀಸೆಗಳಿಗೆ 2—7—0, 25 ಸೀಸೆಗಳಿಗೆ 4—10—0 ಪೋಸ್ಟೇಜು ಚೇರಿ. ಎಲ್ಲಾ ಅಂಗಡಿಗಳಲ್ಲಿಯೂ ದೊರಿಯುತ್ತದೆ.

ಏಜಂಟ್
ಮಂಗಳೂರು ಟವನಿಗೆ ಮಾತ್ರ.
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ.

ವಿಳಾಸ:— ಪಾಳ್ಯದ ವೆಂಕಟಾಚಲ ಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ವಿದ್ಯಾವಾಚಸ್ಪತಿ
ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ
"ಸಂಕ್ಷೇಪಗೀತೆ"

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ, ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದೆ ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೦. ಟಪ್ಪಾಲು ಖರ್ಚು ಕೂಡಿ ಆಣೆ ೧೧ನ್ನು ಮನಿಯಾರ್ಡರ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ೨ರಕ್ಕಿಂತ ಜಾಸ್ತಿ ಖರ್ಚು ತಗಲುವುದು. ರಖಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.

ಪುಸ್ತಕ ದೊರಿಯುವ ವಿಳಾಸ:—
ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು. ಮತ್ತು
ಕೆನರಿಸ್ ಮಿಶ್ಯನ್ ಬುಕ್ ಎಂಡ್ ಟ್ರೇಕ್ಟ ಡಿಪೋಜಿಟರಿ,
ಮಂಗಳೂರು.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು, ಶ್ರೀಕಾಶೀ, ಗಯಾ, ಪ್ರಯಾಗ, ಹರಿದ್ವಾರ ಬದ್ರಿನಾರಾಯಣ ದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನು ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟಿಯಾಗಿ ಅವರ ಕಡೆಯಿಂದ ಅನುಭವ ತೆಗೆದು ಪ್ರತಿವಂದು ಸಿದ್ಧಮಾಡಿಕೊಂಡು ಬರೆದಿರುವರು. ೧ನೇದು ಮಂತ್ರಪ್ರಕರಣದಲ್ಲಿ ಮಂತ್ರ ಜಪದಿಂದಲೂ, ಮಂತ್ರಪ್ರಯೋಗದಿಂದಲೂ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವವಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವೂ ಇದೆ. ೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳು ದೊರಡುವಿಕೆ, ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ. ೩ನೇದು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಜ ಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು. ೪ನೇದು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಧಾತುಗಳ ಭಸ್ಮ ಸಹ, ಇವರಲ್ಲಿ ಉಂಟು, ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷದ ಮಾಡುವ ಕ್ರಮವನು ಚೆನ್ನಾಗಿ ಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಳಾಸವು ತಿಳಿಸಿರುವರು. ೫ನೇದು ಯಂತ್ರ ಪ್ರಕರಣದಲ್ಲಿ ವಶೀಕರಣ ಗೃಹಪೀಡಾ ನಿವಾರಣ ಭೂತಪ್ರೇತ, ಪಿಶಾಚಿ, ಬ್ರಹ್ಮರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇವರಲ್ಲಿ ತಿಳಿಸಿರುವರು, ಇವಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು, ಈ ಗ್ರಂಥವು ಹತ್ತರ ಇದ್ದ ಬಳಿಕ ಎಲ್ಲಾ ದೇವಾನು ದೇವತೆಗಳು ದ್ರವ್ಯಗಳೂ ವೈದ್ಯರೂ ಜೋತಿಷ್ಯರು, ಮಾಂತ್ರಿಕರು ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥ ಗ್ರಂಥವು ಯಾರು ಕಣ್ಣಿನಿಂದ ನೋಡಿರಲಿಕ್ಕಿಲ್ಲ. ಪ್ರತಿಯೊಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆ ಸೀರ ಕಡಿಮೆಮಾಡಿ ಇರುವದು. ೨—೮—೦ ಟಪ್ಪಾಲು ಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ ನಾಟಕ ಕಾವ್ಯ, ಕಥೆಗಳು, ಯಕ್ಷಗಾನ, ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ:—
ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

ಉಚಿತ! ಬಿಟ್ಟಿ!! ಪುಗಸಟ್ಟೆ!!!

ವೈದ್ಯವಿದ್ಯ
PROPRIETOR RAJVAIDYA NARAYANJI KESHAVJI
NO PRICE NO POSTAGE.

'ಎಂಬ ಈ ಪುಸ್ತಕದಲ್ಲಿ ಆಯುರ್ವೇದ ಶಾಸ್ತ್ರದಲ್ಲಿ ಸ್ತ್ರೀಪುರುಷರು ಆರೋಗ್ಯದೃಢಕಾಯರಾಗಿ ಆರೋಗ್ಯದಿಂದ ಕೂಡಿದ ಸಂತಾನಗಳನ್ನು ಪಡೆದು ಪತಿಪತಿಯರು ಅನ್ಯೋನ್ಯವಾಗಿ ಅನುರಾಗವುಳ್ಳವರಾಗಿ ಸುಖದಿಂದಲೂ ಸಂತೋಷದಿಂದಲೂ ಸಂಸಾರಯಾತ್ರೆಯನ್ನು ಮಾಡಲು ಲಕ್ಷ್ಯಂತ ಉಪಯುಕ್ತವಾದ ವಿಷಯಗಳು ಅಲ್ಲಲ್ಲಿ ಹೇಳಲ್ಪಟ್ಟಿರುವುದನ್ನು ಒಂದಾಗಿ ಕ್ರೋಢೀಕರಿಸಿ ಅಜ್ಞಾನದಿಂದಲೂ ಸಂಕಷ್ಟದಿಂದಲೂ ನರಳುತ್ತಿರುವ ಸಂಸಾರಿಗಳನ್ನುದ್ಧಾರಮಾಡುವ ಸಲುವಾಗಿ ಈ ಪುಸ್ತಕವನ್ನು ಕ್ರಯವೂ ಅಂಚೇ ಹಾಸಲೂ ಇಲ್ಲದೆ ಬೇಡಿದವರಿಗೆ ಸರ್ವತ್ರ ಉಚಿತವಾಗಿ ಕಳುಹಿಸುತ್ತೇವೆ. ಹೆಚ್ಚು ಮಾಹಿತಿಗೆ ಪತ್ರ ಬರೆಯಿರಿ.

ರಾಜವೈದ್ಯ ನಾರಾಯಣಜಿ ಕೇಶವಜಿ,
49, ಬಂದರ್ ಸ್ಟ್ರೀಟ್, ಜಿ. ಟಿ. ಮದ್ರಾಸ್

Just Arrived **Fresh Consignment**

OF

Best English Cycles.



REDUCTION IN PRICES.

Ranger Cycles Model M. Made in Birmingham.		
WITH DUNLOP OR BATES TYRES & TUBES	... @ Rs.	90—0—0
Barton Humber on Advance		
WITH DUNLOP OR BATES TYRES & TUBES	... @ „	100—0—0
Senior Royal with B. S. A. Fitting.		
WITH DUNLOP OR BATES TYRES & TUBES ...	...@ Rs.	145—0—0
Royal Saxon with B. S. A. Fitting.		
WITH DUNLOP OR BATES TYRES & TUBES ...	... @ Rs.	175—0—0

All the above Cycles include pump and tools.

BROOKES PATEERN 90/2 GERMAN SADDLE ...	...@ „	9—8—0
„ SADDLE 90/2 „ ...	...@ „	21—0—0
„ „ B/30 „ ...	...@ „	26—0—0

For further particulars please write to us or call on us:—

All kinds of Cycle Accessories, Dunlop and German Tyres and Tubes
ARE AVAILABLE AT VERY CHEAP RATES.

Special Discount to Traders. *Easy Terms Arranged.*

APPLY TO:—**The Mangalore Trading Association,**
Wholesale Dealers in Cycles and Cycle Accessories,
Car-Street, MANGALORE

—ಗೋಡೆಗೆ ತಗಲಿಸುವ
ಹೊಸ ನಮೂನೆಯ—

ಟಿಕ್—ಟಾಕ್

ಎಂಬ ಈ ಗಡಿಯಾರಗಳು ಜರ್ಮನೀ ದೇಶದಲ್ಲಿ ತಯಾರಿಸಿದ್ದು. ಇವು ಕಂಠಾರು ಘಂಟೆಯನ್ನು ತೋರಿಸುವವು. ಇವಕ್ಕೆ ಬೀಗ ಕೊಡಬೇಕಾದಿಲ್ಲ. ಇದರಲ್ಲಿ ಕಾಣುತ್ತಿರುವ ಗುಂಡನ್ನು ಮೇಲಕ್ಕೆ ಎಳೆದರೆ ಸಾಕು. ತನ್ನ ಷ್ಟಕ್ಕೆ ತಾನೇ ಟಿಕ್—ಟಾಕ್ ಎಂಬ ಶಬ್ದವನ್ನು ಮಾಡುತ್ತಾ ಸರಿಯಾದ ಕಾಲವನ್ನು ತೋರಿಸುವದು. ಇದು ನೋಡುವುದಕೆ ಬಹು ಲಕ್ಷಣವಾಗಿರುವುದು.

ಕ್ರಯ 1ಕ್ಕೆ ರೂ. 8—0—0

ಪೀಟರ್ ವಾಚ್ ಕಂಪೆನಿ
ಪೋಸ್ಟ್ ಬಾಕ್ಸ್ ನಂ. 27, ಮದ್ರಾಸ್.

ADVERTISE IN

The Business Directory

OF INDIA, BURMA & CEYLON

A Comprehensive Directory of the various Business-men, Exporters and Importers, Firms, Factories, Mills, Manufacturers, Merchants and Industries of the principal Cities, Ports and Towns of India, Burma and Ceylon.

PUBLISHED ANNUALLY

Rates for Advertisements

¼ Page	Rs.	50.
2 in. Single Column	„	20.
1 in. Single Column	„	15.
Name in Bold Types	„	5.

Price per Copy Rs. 10.

PRINTERS & PUBLISHERS.
Business Directory Co.,
Kanara Press Buildings, MADRAS. E.
Telegrams: "KETHAKI" Phone 540

ದಕ್ಷಿಣ ಕನ್ನಡ ಜಿಲ್ಲೆಯ

ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

JUST ARRIVED

Goodrich Belts.

OF VARIOUS SIZES
Price Re. 1—12—0 each

Mangalore Trading Association,
Car Street, MANGALORE.

ಸಾರಸ್ವತ.

ಕನ್ನಡ ಮತ್ತು ಕೊಂಕಣಿ ಭಾಷೆಗಳಲ್ಲಿ ಕಳೆದ ವಿಜಯ ದಶಮಿಯ ದಿವಸದಿಂದ ಪ್ರತಿ ದಶಮಿಗೆ ಹೊರಡುವ ಪತ್ರಿಕೆ.

ವಿ. ಎಸ್. ಕಾಮತ್,
ಮುಲ್ಕಿ ವಾಮನ ಕುಡುವ } ಸಂಪಾದಕರು.

ಮತಸಂಸ್ಥೆ ಮತ್ತು ಸಮಾಜಕ್ಕೆ ಸಂಬಂಧಪಟ್ಟ ಇತರ ಸಂಸ್ಥೆಗಳ ಸುಸಂಘಟನ.

ಸಮಾಜದೊಳಗೆ ಅನ್ಯೋನ್ಯ ಸಾಧನೆ.

ಸ್ತ್ರೀಸಮಾಜಕ್ಕೆ ಉಪಯುಕ್ತವಾದ ವಿಷಯಗಳ ನಿರೂಪಣ.

ಮತಭಾವನೆಗಳ ಉಜ್ಜೀವನ ಇತ್ಯಾದಿ ಉದ್ದೇಶಗಳಿಂದ ಈ ಪತ್ರಿಕೆಯು ಹೊರಡಿಸಲ್ಪಡುವುದು. ಸಾರಸ್ವತ ಸಮಾಜವು ಇದಕ್ಕೆ ಪ್ರೋತ್ಸಾಹವನ್ನೀಯಬೇಕಾಗಿ ಪ್ರಾರ್ಥನೆ.

ಚಂದಾಹಣ ಅಂಚೆವೆಚ್ಚ ಕೂಡಾ ರೂ. ೧—೪—೦. ಪೋಷಕರು ರೂ. ೧೦-೦-೦. ಸಹಾಯಕರು ರೂ. ೫-೦-೦. ಮಾದರಿ ಸಂಚಿಕೆಯನ್ನು ಟಪ್ಪಾಲು ಖರ್ಚಿಗಾಗಿ ಅರ್ಧಾಣೆ ಸ್ಟಾಂಪು ಕಳುಹಿಸುವವರಿಗೆ ಉಚಿತವಾಗಿ ಕಳುಹಿಸುವೆವು.

ಕನ್ನಡ ನಾಡಿನಲ್ಲಿ ಪ್ರತಿ ಕಡೆಯಲ್ಲಿಯೂ ಬಾತಮಿದಾರರು ಬೇಕು.

ಎಲ್ಲಾ ಪತ್ರವ್ಯವಹಾರಗಳನ್ನು ಕೆಳಗಿನ ವಿಳಾಸಕ್ಕೆ ನಡೆಸಬೇಕು.

ಯು. ನಾರಾಯಣನಾಯ್ಕ, ಕಾರ್ಯದರ್ಶಿ,
ಸಾರಸ್ವತ, ಉಡುಪಿ.

ಆರ್. ಮಾರ್ಟಿನ್ನರ

ಜ್ವರದ ಗುಳಿಗೆಗಳು.

ಸುಲಭ ಸ್ವೇದನಕಾರಿಯಾದ ಈ ಘುಟಿಕೆಗಳು ಚಳಿಜ್ವರದ ವಿಷದಾರ್ಥಗಳನ್ನು ಚಟ್ಟನೆ ನಿರ್ಮೂಲಪಡಿಸಿ, ವ್ರಣಗಳನ್ನು ಸಂಪೂರ್ಣ ನಾಶಪಡಿಸಿ, ಮಲೇರಿಯಾ ಜ್ವರ, ಚಳಿಜ್ವರ, ಬಾರಿಜ್ವರ, ಮತ್ತು ಆಗಾಗ್ಗೆ ಬಿಟ್ಟುಕೊಂಡು ಬರುವ ಇತರ ಜ್ವರಗಳ ಬಾಧೆಯಿಂದ ಗುಣಪಡಿಸುವವು.

ಚಟ್ಟನೆ ವಾಸಿಪಡಿಸುವುದಕ್ಕೆ ಹತ್ತೂರುಗಳಲ್ಲಿ ಪ್ರಸಿದ್ಧತೆಯನ್ನು ಹೊಂದಿದ್ದು, ಅತಿ ಬಿಟ್ಟುಬಿಟ್ಟ ಅನೇಕ ಸಂದರ್ಭಗಳಲ್ಲಿ ಗುಣಪಡಿಸಿದವುಗಳಾಗಿರುತ್ತವೆ.

ಇವುಗಳು ಗಿರಣಿಗಳಲ್ಲಿಯೂ ಕಾರ್ಖಾನೆಗಳಲ್ಲಿಯೂ ವಿಶೇಷವಾಗಿ ಉಪಯೋಗಿಸಲ್ಪಡುವುವು. ಸಾಮಾನ್ಯವಾಗಿ ಹಿಂದೂಸ್ಥಾನದಲ್ಲಿ ಎಲ್ಲಾ ತೋಟಗಾರರಿಂದ ಉಪಯೋಗಿಸಲ್ಪಡುವುವು. ಅಲ್ಲದೆ ದಿಂಗತ ವಿಶ್ರಾಂತವಾದ ಕೀರ್ತಿಯನ್ನು ಕೂಡ ಸಂಪಾದಿಸಿರುವುವು. ಕಠಿಣ ಜ್ವರವು ಚಟ್ಟನೆ ಇಳಿಯಬೇಕಾದರೆ ಆರ್ ಮಾರ್ಟಿನರ ಎಗ್ಯೂ ಮಿಕ್ಸರ್ ಒಡನೆ ಇದನು ಸೇವಿಸಬೇಕು. ಈ ಇವೆರಡು ಅದ್ಭುತ ಶಕ್ತಿಯುಳ್ಳ ಔಷಧಿಗಳು ಪ್ರತಿಯೊಂದು ಕುಟುಂಬದ ಮನೆಯಲಿಟ್ಟುಕೊಳ್ಳಲು ಯೋಗ್ಯ ವಸ್ತುಗಳಾಗಿವೆ. ಪ್ರತಿಯೊಂದು ಬಾಟ್ಲಿಯಲ್ಲಿ 40 ಮಾತ್ರೆಗಳು ಇರುವುವು.

ಬಾಟ್ಲಿ 1ಕ್ಕೆ ರೂ. 1—8—0.

ಆರ್. ಮಾರ್ಟಿನ್ನರ ಎಗ್ಯೂಮಿಕ್ಸರ್.

ಇದು ಜ್ವರ, ಶೀತಜ್ವರ ಮಲೇರಿಯಾ, ಬಾರಿಜ್ವರ, ಸನ್ನಿಪಾತ ಪಟ್ಟ ವಾಯುವಿನಿಂದುಂಟಾದ ರೋಗ ಇವೇ ಮೊದಲಾದ ಎಲ್ಲಾ ತರದ ಜ್ವರಗಳನ್ನೂ ಕೂಡಲೇ ನಾಶಮಾಡುತ್ತದೆ. ಎಲುಬುಗಳಲ್ಲಿ ಹರಡಿಕೊಂಡಿರುವ ಜ್ವರವನ್ನೂ ಸಹ ನಾಶಮಾಡುವುದಲ್ಲದೆ, ಇದು ಸಿಹಿಯಾಗಿರುವುದರಿಂದ ಸಣ್ಣ ಕೂಸುಗಳು ಸಹ ಕುಡಿಯಲಿಕ್ಕೆ ಇಷ್ಟಪಡುತ್ತವೆ. ಅನೇಕ ನಿಜ ವಿದ್ವಾಂಸ ವೈದ್ಯರಿಂದ ಗುಣಮಾಡುವುದಕ್ಕಾಗದ ಜ್ವರವನ್ನು ಈ ಎರಡೇ ಎರಡು ಬಾಟ್ಲಿಗಳ ಸೇವನೆಯಿಂದ ಹುಷಾರಾಗಿದೆ

ಬಾಟ್ಲಿ 1ಕ್ಕೆ ರೂ. 0—13—0.

ಆರ್. ಮಾರ್ಟಿನ್ನರ ಮೂಲವ್ಯಾಧಿ ಮಲಾಮು.

ಮನುಷ್ಯನಿಗೆ ಮೂಲವ್ಯಾಧಿ ಆದಾಗ, ಬಹಳ ಸಲ ಮೊಕ್ರಕಂಳೆಯಾಗುವಿಕೆ, ಮರ್ಮಸ್ಥಾನದಲ್ಲಿ ಉರಿಯುವುದು, ಮಲಬದ್ಧತೆ ಇವೇ ಮುಂತಾದರಿಂದ ವಹಿಸಡುತ್ತಾನೆ. ಈ ಔಷಧದ ಒಂದೇ ಒಂದು ಬಾಟ್ಲಿಯ ಉಪಯೋಗದಿಂದ, ರಕ್ತ ಸುರಿಯುವ ಮೂಲವ್ಯಾಧಿ, ಕಂಕುಳಲ್ಲಿ ನೋಯುವ ಮೂಲವ್ಯಾಧಿ ಮತ್ತು ಎಂತ ತರಹದ ಕಠಿಣವಾದ ಮೂಲವ್ಯಾಧಿಯ್ಯಾದರೂ ಕೂಡಲೇ ವಾಸಿಯಾಗುತ್ತದೆ. ಇದು ಒಳ್ಳೇ ಔಷಧಗಳಿಂದ ತಯಾರಿಸಲ್ಪಟ್ಟು ತೆಗೆದುಕೊಳ್ಳುವವರಿಗೆ ಏನೊಂದೂ ನೋವನ್ನು ಕೊಡದೆ ತಂಪಾಗಿ ಮಾಡುತ್ತದೆ. ಬಾಟ್ಲಿ 1ರ ದರ ರೂ. 1—8—0 ಮಾತ್ರ.

ವಿಳಾಸ—ಆರ್. ಡಿ. ಕಟೆ ಮತ್ತು ಕಂಪೆನಿ,
ನಂಬ್ರ ಬಿ. ಫ್ರಿಯರ್ ರೋಡ್,
ಸಾಂಜ ವರ್ತಮಾನ ಪ್ರೆಸ್,
ಟೋಡಿವಾಲಾ ಬಿಲ್ಡಿಂಗ ಎದುರುಗಡೆ, ಫೋರ್ಟ ಮುಂಬಯಿ.

R. D. Kately & Co.
No. B. Frere Road,
Opposit Sanjvertaman Press,
Todivala Building, FORT BOMBAY.

ಸುವರ್ಣಸಂಧಿ.

ಕೈ ಮಗ್ಗಗಳಲ್ಲಿ ನೂಲನ್ನು ನೇಯುವ ಮಗ್ಗಗಳಿಗೆ ಬೇಕಾಗುವ ಯಾವತ್ತು ಸಾಮಾನುಗಳು, ನೂಲಿಗೆ ಹಾಕುವ ನಾನಾ ತರದ ರಂಗುಗಳು ಅಗತ್ಯವಿರುವ ನಾನಾ ಬಗೆಯ ರಸಾಯನಗಳು ಇವನ್ನು ನಮ್ಮಲ್ಲಿಂದ ನ್ಯಾಯವಾದ ಬೆಲೆಗೆ ಹೊಂದಬಹುದು. ನಮ್ಮಲ್ಲಿ ದೊರಕುವ ಯಾವತ್ತು ಸಾಮಾನುಗಳನ್ನು [illegible] ನಮೂನೆಗೆ ಬರೆಯಬಹುದು.

ಪಿ. ಪಿ. ತ್ರಿವೇದಿ ಎಂಡ್ ಕೋ,
ನಂಬ್ರ 66 ಬೆಮಿಂಡ್ ಲೇನ್,
ಫೋರ್ಟ ಮುಂಬಯಿ.

Edited, Printed & Published by V. S. Kamath at the M. T. A. SHARADA PRESS, MANGALORE.

Registered: No. M. 498.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ | ನ ಭೇಜಿರೇ ಭೀಮವಿಷೇಣ ಭೀತಿಮ್ || ಸುಧಾಂ ವಿನಾ ನ ಪ್ರಯಯುರ್ವಿರಾಮಂ | ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ || ೧ ||
ದೊರೆಯಲನುಪಮರತ್ನಗಳು ನಾ | ಗರವ ಮಥಿಸಲು ಸುರರಿಗದರಿಂ | ಹರುಷವಾಯಿತೆ! ಮತ್ತೆ ವಿಶ್ವವ ಸುಡುತ ಬರುತಿರುವ ||
ಗರಲಕವರಂಜಿದರೆ ! ಸುಧೆಯನು | ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು || ೧ ||

ಪುಸ್ತಕ ೧೯. ಮಂಗಳೂರು, ತಾರೀಕು ೬ನೇ ಶುಕ್ರವಾರ ಫೆಬ್ರವರಿ ೧೯೨೫. ಸಂಚಿಕೆ ೬.

The Canara Banking Corporation Udipi, Ltd.

Head Office:— Udipi
Branch:— Coondapoor

Season Deposits

Carrying Special rate of 7% up to 15th June 1925 only.

Further Particulars on Application.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಉಡುಪಿ, ಲಿಮಿಟೆಡ್.

ಹೆಡ್ ಆಫೀಸು:— ಉಡುಪಿ. ಶಾಖೆ:— ಕುಂದಾಪುರ.

ತಾ. 15—6—1925ರವರೆಗೆ ಮಾತ್ರ
ಸಾಲಿಯಾನ ಸೇಕಡಾ 7ರ ದರದ ಬಡ್ಡಿಯ ಮೇಲೆ
ಮುಸುಂ ಠೇವಣಾತಿಗಳನ್ನು
ಅಂಗೀಕರಿಸೋಣಾಗುತ್ತದೆ.
ಹೆಚ್ಚಿನ ಮಾಹಿತಿಗೆ ಬರಕೊಳ್ಳಿರಿ.

Office of the Corporation, Udipi, 10-11-'25 } **N. Ananda Rao,** *Secretary.*

Wanted Agents

FOR

Every District in South India

For Pushing Sales of Our Calenders, Xmas and New Year Cards, Blotters, Pictures and Picture Post Cards, at wholesale rates. Deposit of Rs. 100—0—0 Essential.

Apply to:—
The South Indian Advertising Agency,
13, Kilary Road,
BANGALORR CITY.

ಶುದ್ಧ ರೋಮದ ಧಾವಳಿಗಳು.

1 ಮಳ ಉದ್ದ 1¼ ಮಳ ಅಗಲ ರೂ. 1½ರಿಂದ 2 ವರೆಗೆ, 5 ಮಳ ಉದ್ದ 1½ ಮಳ ಅಗಲ ರೂ. 1½ರಿಂದ 5 ವರೆಗೆ, 6 ಮಳ ಉದ್ದ 1½ ಮಳ ಅಗಲ ರೂ. 2½ರಿಂದ 6 ವರೆಗೆ, 8 ಮಳ ಉದ್ದ 2 ಮಳ ಅಗಲ ರೂ. 3½ರಿಂದ 10 ವರೆಗೆ, 12 ಮಳ ಉದ್ದ 2¼ ಮಳ ಅಗಲ ರೂ. 6ರಿಂದ 12 ವರೆಗೆ, 16 ಮಳ ಉದ್ದ 2¼ ಮಳ ಅಗಲ ರೂ. 9ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಜರ್ಮರ್ ರೇಷ್ಮೆ ಮಡಿಗಳು, ಸಾಮಗ್ರಿಗಳು, ಕಾಶೀ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, ಬಾಣಲಿಂಗ, ಜಾಘಂಟೆ, ತಾಳ, ಪನ್ನೀರ್ ಧಾಣಿ, ಹಿತ್ತಾಳೆಯ ಅಚ್ಚಿದ ಸಾಮಾನುಗಳು, ಫೋಟೋ ಉಂಗುರಗಳು ಮತ್ತು ಇನ್ನೂ ಅನೇಕ ಸಾಮಾನುಗಳು ವಿ. ಪಿ. ಪಿ ಮೂಲಕ ಕಳುಹಿಸಲ್ಪಡುವುವು. ಕ್ಯಾಟಲಾಗ್ ಇನಾಂ.

ವಿಳಾಸ—
ಶಿರೋಮಣಿ ಯು. ನಾರಾಯಣಾಚಾರ್ಯ
ಮತ್ತು ಕಂಪೆನಿ, ಚೌಕಂಬಾ, ಕಾಶೀ ಕ್ಷೇತ್ರ.

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ.

450 ಪುಟಗಳು ಎಮ್. ಗಣಪತಿರಾವ್ ಐಗಳ್ ಇವರಿಂದ ರಚಿತವಾದದ್ದು. ಕ್ರಯ ರೂ 1-4-0

ಮಾರಾಟಕ್ಕೆ ಸಿದ್ಧವಾಗಿವೆ — ತುಳು ಪಾಡ್ದನಗಳು — ಮಾರಾಟಕ್ಕೆ ಸಿದ್ಧವಾಗಿವೆ.

ದೈಯ್ಯೊಂಗುಳು, ಕಲ್ಲುರ್ಟಿ—ಕಲ್ಕುಡ, ಕಣಂತೂರು ದೈಯ್ಯೊಂಗುಳು, ಮುಂಡತ್ತಾಯ, ಬೊಬ್ಬರ್ಯ.

ಸುಲಭ ದರಗಳು — ಶಾಲಾ ಪುಸ್ತಕಗಳು — ರಖಂ ಕೊಂಡುಕೊಳ್ಳುವವರಿಗೆ ಯೋಗ್ಯ ಡಿಸ್ಕೌಂಟ್.

ಅಜ್ಜಿ ಕಥೆಗಳು:—ಮೂರು ಕರಡಿಗಳು; ಜೇನುಸಕ್ಕು ಕಾಗೆ ಬಡವಾಯಿತು; ಅರ್ಗಣೆ ಮುದ್ದೆ; ಇಲಿಗಳ ಥಕ್ಕ ಥೈ; ಅಂಗಳ ದುಗ್ಗು; ಸಿಗಡಿ ಯಾಕೆ ಬಾಗಲಿಲ್ಲ, ಗುಡುಗುಡು ಗುಮ್ಮಟ ದೇವರು; ಮೊಣಸಿನ ಕಾಳಪ್ಪ; ಒಡ್ಡನ ಓಟ; ಹೊಸ ಕನ್ನಡ ಪುಸ್ತಕ ಭಾಗ ೧; ಹೊಸ ಕನ್ನಡ ಪುಸ್ತಕ ಭಾಗ ೨; ಕನ್ನಡ ಪದ್ಯಗಳು; ಮಗ್ಗಿ ಪುಸ್ತಕ; ಅಚಿತಕಸುವಾರ; ಪದ್ಯ ರತ್ನಾವಳಿ. ಎಕ್ಸರ್‌ಸೈಜ್ ಮತ್ತು ನೋಟು ಪುಸ್ತಕಗಳು, ಕಾಪಿ ಪುಸ್ತಕಗಳು, ಡ್ರಾಯಿಂಗ್ ಪುಸ್ತಕಗಳು

ಇತರ ಪುಸ್ತಕಗಳು:—ಸಂಕ್ಷೇಪಗೀತೆ, ಕೇತುಭಂಗ, ಹಿಂದೂ ವ್ರತವಿವೇಕ, ಚಂದ್ರಗುಪ್ತ ಚಕ್ರವರ್ತಿ, ಶ್ರೀ ಕೃಷ್ಣಸಂಧಾನ, ಪದ್ಯಪಾಠಗಳು, ಹರಿಕಥಾ ಮೃತಸಾರ ಹರಿನಾಮಸಂಕೀರ್ತನೆ ಸುಧಾಂಮೃತ ಪದ್ಯಗಳು. ಬೆಂಕಿಪೆಟ್ಟಿಗೆ ತಯಾರಿಸುವ ವಿಧಾನ, ಸಾಬೂನು ತಯಾರಿಸುವ ವಿಧಾನ, ಸ್ವರಾಜ್ಯ ಭಕ್ತಿ[illegible], ಚರಕಗೀತೆ, ಕೊಂಕಣಿ ಭಾಷೆಯಲ್ಲಿ ಚಂದ್ರಹಾಸ ನಾಟಕ, ಪ್ರಹಲ್ಲಾದ ಚರಿತ್ರ ನಾಟಕ, ಕನ್ನಡ ಮೃಚ್ಛಕಟಿಕ ನಾಟಕ, ಚಂದ್ರಹಾಸಾಭ್ಯುದಯ ನಾಟಕ, ಕೋವಿಲನ್ ಚರಿತ್ರ ನಾಟಕ, ಮಾದರಿ ಉಪನ್ಯಾಸ ಭಾಗ ೧, ೨, ಮತ್ತು ೩.

AMRUTANJAN
Best Indian Pain Balm
Amrutanjan
BOMBAY

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು.

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ಶತತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣಾದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ ೩ ಆಣೆ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ ಟೌನ್, ಮದ್ರಾಸು.

109 ಫ್ರೀಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

— ರಥೋತ್ಸವ, ವಿವಾಹ ಉಪನಯನಗಳ ಸಮಯ — ಸರ್ವರಿಗೂ ಉಡಿಗೆ ತೊಡಿಗೆಗಳು ಬೇಕಾಗುವ ಸಂದರ್ಭ.

ಯಾರು, ಯಾವುದನ್ನು ಎಲ್ಲಿ ಪಡೆಯಬೇಕೆಂಬ ಶಂಕೆಯಿಂದ ವಿಳಂಬ ಮಾಡಬೇಡಿರಿ. ಉಡಿಗೆತೊಡಿಗೆಗಳನ್ನು ಚುನಾಯಿಸಿ ಹಿನ್ನಿಗೆ ಬೇಕಾದ ಯಥಾರ್ಥ ಮಾಹಿತಿಯನ್ನು ಕಳೆದ ಹತ್ತಿಪ್ಪತ್ತು ವರುಷಗಳಿಂದ ಪಡೆದು ನಮ್ಮಲ್ಲಿಯ ವ್ಯಾಪಾರವು ಗಿರಾಕಿಗಳಿಗೆ ಸರ್ವ ದೃಷ್ಟಿಯಿಂದಲೂ ಲಾಭಕರವಾಗಿ ಪರಿಣಮಿಸುವಂತೆ ನಮ್ಮ ಜವಳಿ ಸಂಗ್ರಹವನ್ನು ಮಾಡಿರುತ್ತೇವೆ.

ಗುರ್ಪುರ್‌ಕಾರ್ ಬ್ರದರ್ಸ್, ರಥಬೀದಿ, ಮಂಗಳೂರು.

ಹೆಡ್ ಆಫೀಸು:—ರಥಬೀದಿ—(ಮೊದಲು ಸುಜೀರ ನಾಗಪ್ಪನಾಯಕ್, ಎಂಡ್ ಕೊ, ಇದ್ದಲ್ಲಿ; ಅಜಿಜುದ್ದೀನ್ ರಸ್ತೆಗೆ ತಿರುಗುವಲ್ಲಿ) ಮಂಗಳೂರು.

ಬ್ರೇಂಚ್ ಆಫೀಸು:—ರಥಬೀದಿ—(ಹಳೇ ತಾಲೂಕು ಕಚೇರಿಯ ವಠಾರಕ್ಕೆ ಸಮೀಪವಿರುವ ಮಳಿಗೆ) ಮಂಗಳೂರು.

ಈ ದೇಶದ ಪ್ರಖ್ಯಾತಪಟ್ಟ ನೇಯಿಗೆಯ ಕೇಂದ್ರಸ್ಥಳಗಳಾದ—ಬನಾರಿಸ್, ಪೂನಾ, ಅಹಮ್ಮದಾಬಾದ್, ಸುರತ್, ಬೆಂಗಳೂರು, ಧರ್ಮಾವರಮ್, ಕಂಜೀವರಮ್, ಕೊಯಮುತ್ತೂರು, ಮಧುರೆ, ತಂಜಾವೂರು, ಕುಂಭಕೋಣ, ಅರ್ನಿ, ಜಾಡಿಗೇರಿ, ಹುಬ್ಬಳ್ಳಿ, ಇಳಕಲ್, ಗದಗ, ಮದ್ರಾಸು ಈ ಪ್ರಾಂತ್ಯಗಳಲ್ಲಿ ತಯ್ಯಾರಾದ

ಜರಿಸೀರೆಗಳು, ದುಪ್ಪಟಾ, ಜರಿಶಾಲು, ವೇಷ್ಟಿ, ರೇಷ್ಮೆ ಸೀರೆಗಳು, ಅರಳಿಪೇಟೆ ಸೀರೆಗಳು, [illegible] ರೇಷ್ಮೆ ಸೀರೆಗಳು, ಜರಿ ಅಂಚಿನ ಸೀರೆಗಳು, ರೇಷ್ಮೆ ಮಡಿಗಳು, ನಿತ್ಯ ಉಪಯೋಗದ ಸೀರೆಗಳು ಬಾಯಿಸ್ಸ್, ಕರ್ನಾಟಕ ಮಿಲ್ಸ್‌ನ ಇ ಇತರ ಮಿಲ್ಸ್‌ಗಳ ಕೋಟಿಂಗ್ ಶರ್ಟಿಂಗ್. ಕೈರಾಟೆಯಲ್ಲಿ ತಯಾರಿಸಿದ ನೂಲಿನಿಂದ ಮಾಡಿದ—

ಖದ್ದರ್ ಶರ್ಟಿಂಗ್, ಖದ್ದರ್ ಕೋಟಿಂಗ್, ಖದ್ದರ್ ಟೋಪಿ, ಖದ್ದರ್ ವೇಷ್ಟಿ, ಅಂಗವಸ್ತ್ರ, ಇತ್ಯಾದಿ—
ಮುಸಲ್ಮಾನರಿಗೆ ಬೇಕಾದ ನಮೂನೆಯ ಲುಂಗಿ ಸೀರೆಗಳು ವಗೈರೆ—
ಎಲ್ಲ ಸಂಗ್ರಹವನ್ನೂ ನಮ್ಮ ಪ್ರೊಪ್ರೈಟರರಾದ ರಾ! ನಾರಾಯಣ ಪ್ರಭುಗಳು ತಾವೇ ಸ್ವತಃ ಆಯಾ ಊರುಗಳಿಗೆ ಹೋಗಿ ಸಂಗ್ರಹಿಸಿ ತಂದಿರುತ್ತಾರೆ.

ಶರ್ತ:—ನಗದಿ, ರೂಪಾಯಿ 5ಗಕ್ಕೆ ಮಿಕ್ಕಿದ ಖರೀದಿಯನ್ನು ಮಾಡುವವರಿಗೆ ಸೇಕಡಾ 6¼ರ, ರೂ. 50ರಿಂದ 250ರವರೆಗೆ ಸೇಕಡಾ 10%, ರೂ. 250 ರಿಂದ 1000ಕ್ಕೆ 12½% [illegible]

ಪ್ರತಿಯೊಂದು ಕುಟುಂಬಿಗಳ ಮನೆಗಳಲ್ಲಿ ಸೌಖ್ಯವನ್ನು ತೋರಿಸುವುದಕ್ಕೂ ಮತ್ತು ಅವರವರ ಉಪಯೋಗಾರ್ಥವನ್ನು ತಿಳುವಳಿಕೆ ಬಗ್ಗೆ ನಡಿಸುವುದಕ್ಕೂ ಒಂದು ಮರ್ಯಾದಾ ನಿಘಂಟು ಪುಸ್ತಕವು ಈ ನಮ್ಮ ಹಿಂದೂದೇಶದ ಸಮೂಹದಲ್ಲಿರುವುದು. ಅಂಥಾ ಪುಸ್ತಕವು ಯಾವದೆಂಬುದು -

ನೀವುಗಳು ಬಲ್ಲಿರಾ?

(ಅದೇ)

"ಕಾಮಶಾಸ್ತ್ರವೆಂಬುವುದು."

ತಾವುಗಳು ಇನ್ನೂ ಈ ಪುಸ್ತಕದಲ್ಲಿ ಬರೆದಿರುವ ಸಾರಾಂಶವನ್ನು ಓದಿಲ್ಲದಿದ್ದರೆ, ಒಡನೇ ಒಂದು ಪುಸ್ತಕವನ್ನು ಕಳುಹಿಸುವಂತೆ ಒಂದು ಪೋಸ್ಟುಕಾರ್ಡು ಬರಿಯಿರಿ.

ಪುಸ್ತಕವನ್ನು ಇನಾಮಾಗಿ ಕಳುಹಿಸುವೆವು.

ಮುಖ್ಯವಾದ ತಿಳುವಳಿಕೆ.

ತಾವುಗಳು ಧೃಡಚಿತ್ತರಾಗಿಯೂ, ನಿಧಾನಸ್ಥರಾಗಿಯೂ, ಸೌಖ್ಯವಾಗಿಯೂ, ಕಷ್ಟವಿಲ್ಲದೇ ವಿಷಯಗಳನ್ನು ಭರಿಸುವ ಮನಸ್ಸನ್ನು ಹೊಂದಬೇಕಾದರೆ ನಮ್ಮ ಅಮೂಲ್ಯವಾದ "ಕಾಮಶಾಸ್ತ್ರವೆಂಬುವ ಪುಸ್ತಕದಲ್ಲಿ ಕಾಣಿಸಿರುವ ಆತಂಕನಿಗ್ರಹ ಮಾತ್ರೆಗಳನ್ನು ಸೇವಿಸಬೇಕು."

ಒಂದು ರೂಪಾಯಿ ಖರ್ಚುಮಾಡಿದರೆ 32 ಮಾತ್ರೆಗಳುಳ್ಳ ಒಂದು ಡಬ್ಬಿಯನ್ನು ತರಿಸಿ ಪ್ರಯತ್ನಿಸಬಹುದು.

ವಿವರವಾಗಿ ಬರೆದಿರುವ ಒಂದು ಕ್ಯಾಟಲಾಗು ಕಳುಹಿಸುವಂತೆ ಈ ದಿನವೇ ಒಂದು ಪೋಸ್ಟುಕಾರ್ಡು ಬರಿಯಿರಿ.

ಆತಂಕನಿಗ್ರಹ ಔಷದಾಲಯ,
ನಂಬ್ರ 26, ಬ್ರಾಡ್ವೆ, ಮದರಾಸು.

ಹೊಸಗ್ರಂಥಗಳು!! ಬೇಗನೇ ತರಿಸಿಕೊಳ್ಳಿರಿ!!!

ಕೋಕ ಶಾಸ್ತ್ರವು.

ರಸಿಕ ವಾಚಕ ಮಹಾಶಯರೇ,

ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ, ಸಂಪಾದಿಸಿ, ಅದರಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನಷ್ಟೇ ಶೋಧಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿನಿ, ಸ್ತ್ರೀಯ ಇದರಂತೆ ಪುರುಷರಲ್ಲಿಯ ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ, ಜನನೇಂದ್ರಿಯಾದಿಗಳ ವರ್ಣನೆಯನ್ನೂ, ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ, ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ, ನಪುಂಸಕತ್ವ ವಂಧ್ಯಾದೋಷಗಳ ಚಿಕಿತ್ಸೆಯನ್ನೂ, ಸ್ತ್ರೀಯರ ಗೂಢ ರಹಸ್ಯವನ್ನೂ ದಂಪತಿ ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನೂ, ಇಂಥ ಎಷ್ಟೋ ವಿಧವಾದ ವಿಷಯಗಳನ್ನು ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನು [illegible] ತರಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ.

ಇದರ ಬೆಲೆ ೧—೮—೦, ಟಪ್ಪಾಲು ಹಾಸಲು ೦—೪—೦

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ಮೂರನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್. ಗಣಪತಿರಾವ್ ಐಗಳ್—ಗ್ರಂಥಕರ್ತರು.

ಮನೋರಂಜಕ ಚಿತ್ರಗಳೂ ಇವೆ.

ಇದರಲ್ಲಿ ಸಾವಿತ್ರಿ, ಶಕುಂತಲಾ, ಕೃಷ್ಣಾಕುಮಾರಿ, ಪದ್ಮಿನಿ, ಜೋನ್ ಒಫ್ ಆರ್ಕ, ಫ್ಲೊರೆನ್ಸನಾಯಿಟಿಂಗೇಲ ಪರಶುರಾಮ, ಭೂತಾಳಪಾಂಡ್ಯ, ಕಾರ್ಕಳ ಗೋಮಟೇಶ್ವರ ಮತ್ತು ಭೈರವರಾಜ, ಮೂಡಬಿದ್ರೆಯ ಚೌಟರು, ನಂದಾವರ ಬಂಗರು, ಕಾರ್ಕಳ ರಾಮಸಮುದ್ರ ಮತ್ತು ರಾಮನಾಥ ಒಡೆಯರ ಅಣೆಕಟ್ಟು, ಗುರುಪುರ ಜಂಗಮ ಮಠ, ಕಲ್ಯಾಣಪ್ಪನ ಕಾಟಕಾಯಿ, ಗುರುವಾಯನಕೆರೆ, ಜಮಾಲಾಬಾದುಕೋಟೆ, ಸುಲ್ತಾನಬತ್ತೇರಿ, ಈದಗಾಪ್ರಾರ್ಥನಾಮಂದಿರ, ಸೇಂಟಮೇರಿ ದ್ವೀಪಗಳು ಮತ್ತು ದರಿಯಾಬಾದರಗಡ, ಕೊರಗರು, ಕೊಡಗರು, ತೋಡರು, ರಜಪೂತರು, ಕಂದಾರಿಗಳು ಘುರ್ಖಾಜನರು, ಅರಬಿಯರು. ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ಮೂರನೇ ದರ್ಜೆಯ ಮಕ್ಕಳಿಗೆ ಉಪಯುಕ್ತವಾಗಿದೆ. ಕ್ರಯ 6 ಆಣೆ.

ಪುಸ್ತಕ ದೊರಕುವ ವಿಳಾಸ:—

ಶಾರದಾ ಛಾಪಖಾನೆ,
ಮಂಗಳೂರು.

ಗಣಪತಿರಾವ್, ಐಗಳ್,
ಮಂಜೇಶ್ವರ.

ಡಾಕ್ಟರುಗಳು ಭಿನ್ನಾಭಿಪ್ರಾಯಪಡುವಾಗ್ಯೆ ತೀರ್ಮಾನಿಸುವದು ಯಾರು?

ಅಂಥಾ ಸಂದರ್ಭಗಳಲ್ಲಿ ಡೆಂಗ್ಯೂ ಮುಂತಾದ ಜ್ವರಗಳನ್ನು ನಿವಾರಿಸುವಂಥಾ "ಬಾಟ್ಲಿವಾಲರ ಏಗ್ಯುಮಿಕ್ಸ್ಚರ್"ನ್ನು ಸರಾಗವಾಗ್ಯಿಯೂ, ಮತ್ತು ಜ್ವರಗಳನ್ನು ಖಂಡಿತವಾಗಿ ನಿಲ್ಲಿಸುವಂಥಾದ್ದೂ, ಎಲ್ಲಾ ತರದ ತಲೆನೋವುಗಳನ್ನು ಹೋಗಲಾಡಿಸುವಂಥಾದ್ದೂ ಆದ "ಬಾಟ್ಲಿವಾಲರ ಏಗ್ಯುಪಿಲ್ಸ್" ಇದನ್ನು ಉಪಯೋಗಿಸಿರಿ.

ಐ. ಎಮ್. ಎಸ್. ಡಾಕ್ಟರುಗಳಿಂದ ಶಿಫಾರಸು ಮಾಡಲ್ಪಟ್ಟದ್ದು. ಇದರ ಉಪಯೋಗದಿಂದ ಹೃದಯದ ಮೇಲೆ ಯಾವದೊಂದೂ ಬಾಧಕವಿಲ್ಲ. ಅರ್ಧ ಶತಮಾನದಿಂದ ಹಿಂದೂಸ್ಥಾನ, ಬರ್ಮಾ, ಸಿಲೋನ್, ಆಫ್ರಿಕಾ ಇವುಗಳಲ್ಲಿ ಪ್ರಖ್ಯಾತಪಟ್ಟದ್ದಾಗಿರುತ್ತದೆ.

ಅನೇಕ ಹಿಂದೀ ಪ್ರದರ್ಶನಗಳಲ್ಲಿ ಬೆಳ್ಳಿ ಮತ್ತು ಬಂಗಾರದ ಪದಕಗಳನ್ನು ಪಡೆದಿರುತ್ತೆ. ಚಾಲ್ತಿ ನಾಣ್ಯದಂತಿದ್ದು ಮಾರ್ವಾಡಿಗಳೂ ಕೂಡ ಅದರ ಮೇಲೆ ಹಣವನ್ನು ಮುಂಗಡವಾಗಿ ಕೊಡುತ್ತಾರೆ. ಬಡ ಮತ್ತು ಮಧ್ಯಮ ತರಗತಿಯ ಜನರಿಗೆ ವರಪ್ರದಾನವಾಗಿದ್ದು ಸಂಚಾರ, ಪ್ರಯಾಣ, ದೇಶಾಟನೆಗಳ ಸಮಯದಲ್ಲಿ ಹತ್ತಿರದಲ್ಲಿರಿಸಿಕೊಳ್ಳದಾಗಿರುತ್ತದೆ.

ಬಾಟ್ಲಿವಾಲರ ಬಾಲಾಮೃತ ಅಥವಾ ಟೊನಿಕ್ ಸಿರಪ್.

ಕೆಮ್ಮನ್ನು ಹೋಗಲಾಡಿಸಿ, ಎದೆನೋವನ್ನು ಶಾಂತಗೊಳಿಸಿ, ಜ್ವರವನ್ನು ಉಪಶಮನಿಸಿ, ನಿದ್ರಾಭಂಗವನ್ನು ಕಡಿಮೆ ಮಾಡಿ ಧಾತುವರ್ಧನವನ್ನು ಮಾಡುವದರಲ್ಲಿ ಅತ್ಯುತ್ತಮವಾಗಿರುತ್ತದೆ. ಕಫವನ್ನು ಒಣಗಿಸಿ ಮಾಯವಾಗುವಂತೆ ಮಾಡುವುದಲ್ಲದೆ ಅದೇ ಸಮಯದಲ್ಲಿ ಒಳ್ಳೇ ಜೀರ್ಣವನ್ನೂ ಉಂಟುಮಾಡುವುದು. ದರ ಮೊದಲಾದ ಮಾಹಿತಿಯನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಕಾರಖಾನೆ:—CAWASHAPUR, BOMBAY.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.,
ಪಿ. ವಾರ್ಲಿ, ಮುಂಬಯಿ, ನಂಬ್ರ 18.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ

ಇವರ

ಬಾಲಾಮೃತ.

ಈ ಔಷಧವನ್ನು ಸೇವನೆ ಮಾಡುವುದರಿಂದ ಮಕ್ಕಳು ರೋಗರಹಿತರೂ ಸಶಕ್ತರೂ ಆಗುವರು. ಇದು ಮಧುರವಾಗಿದೆ; ಮಕ್ಕಳು ಸಂತೋಷದಿಂದ ಸೇವಿಸುತ್ತಾರೆ.

ನಮ್ಮ ವಿಳಾಸ:—

ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.

ಏಜಂಟರು:— ಡಿ. ಊಲನ್ ಮಾರ್ಟ, ಮಂಗಳೂರು.

OUR RECENT IMPORT IN WRIST WATCHES

Have you used anyone of these Watches?

SEND YOUR ORDER NOW ALL GUARANTEED.

Fashionable wrist wrist Lady's size. Reliable movement Guaranteed.

No. 368

Handy to wear and looks beautiful. Gives punctual time and with strong movement.

Nickel case Rs. 8—0

High-class Radium dial watch watch with Roman figures.

No. 367.

Can be seen in dark nights. Well fitted with best movement and strong to use. Used by one and all.

Silver case Rs. 9—0.

Radio light wrist watch.

No. 372.

Fitted with the best mechanism and guaranteed to work and keep perfect time for a long time.

Nickel case Rs. 7—8
Electro rolled-gold „ 9—0

(N. B. In addition to the above, we have good number of varieties of fancy wrist watches, pocket watches. Please write for a descriptive catalogue, which will be sent free)

WHOLESALE IMPORTERS

PETER WATCH COY.,
POST BOX 27, MADRAS

ಶಾಲಿವಾಹನಶಕೆ ೧೮೪೬ನೆಯ ರಕ್ತಾಕ್ಷಿ ಸಂವತ್ಸರದ ಮಾಘ ಶು|೧೪ ಶನಿವಾರದಿಂದ ರಕ್ತಾಕ್ಷಿ ಸಂ|ರದ ಮಾಘ ಬ|೫ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೫ನೆಯ ಮಕರ ಪುಯಿಂತೆಲ್.)

ತಾರೀಖು	ವಾರ.	ತಿ.	ಘಳಿಗೆ.	ನಕ್ಷತ್ರ.	ಘಳಿಗೆ.	[illegible]	ಸೂರ್ಯ ಉ.	ಸೂರ್ಯ ಅಸ್ತ.
7	ಶನಿ	೧೪	[illegible]	ಪುಷ್ಯಾ	೬೦.೦	೨೫	6.58	6.32
8	ರವಿ	○	[illegible]	ಪುಷ್ಯಾ	[illegible]	೨೬	6.58	6.32
9	ಸೋಮ	೧	[illegible]	ಆಶ್ಲೇಷಾ	[illegible]	೨೭	6.57	6.33
10	ಕುಜ	೨	[illegible]	ಮಘಾ	[illegible]	೨೮	6.57	6.33
11	ಬುಧ	೩	[illegible]	ಹುಬ್ಬಾ	[illegible]	೨೯	6.57	6.33
12	ಗುರು	೪	[illegible]	ಉತ್ತರಾ	[illegible]	೧	6.56	6.34
13	ಶುಕ್ರ	೫	[illegible]	ಹಸ್ತಾ	[illegible]	೨	6.56	6.34

ಮಂಗಳೂರಿನ ವಾಯುಸ್ಥಿತಿ.

(೧೯೨೫ನೆಯ ಮಕರ ಪುಯಿಂತೆಲ್.)

ತಾರೀಖು Date	Temperature. ಉಷ್ಣ (ಕಾವು) Maximum ಹೆಚ್ಚಾದದ್ದು	Minimum ಕಡಿಮೆ	Rainfall. ಮಳೆ ದಿನದ ಮಳೆ	ಜುಮಲಾ ಮಳೆ.
30	87—8	69—9	—	—
31	88—2	72—9	—	—
1	89—0	69—3	—	—
2	96—3	69—1	—	—
3	96—0	69—4	—	—
4	92—3	69—5	—	—
5	89—6	71—5	—	140-89

ಮಂಗಳೂರಿನ ಪೇಟೆ ಧಾರಣೆ.

ಜಿನಸು	ಇಂದ ರೂ. ಆ.	ವರೆಗೆ ರೂ. ಆ.
ಹೊಸ ಮುಸ್ಕಿ	8—0	8—10
ಹೊಸ ಗುಡ್ಡು ...	7-4	7—10
ಹೊಸ ರಾಶಿ ...	6-14	7—4
ಅನ್ನಲ್ ಬೆಳ್ತಿಗೆ ...	8-8	8—14
ಗುಡ್ಡು ಬೆಳ್ತಿಗೆ ...	8-0	8—4
ರಂಗೂನು ಬೆಳ್ತಿಗೆ ಗೋಣಿ ೧ ...	14-8	15—
ಗೋಟಿ ಗೋಣಿ ೧ಕ್ಕೆ ...	19-0	21 8
ಹುರುಳಿಗೋಣಿ ೧ಕ್ಕೆ ...	9-8	10—0
ಕಡಲೆಗೋಣಿ ೧ಕ್ಕೆ ...	12-0	12—8
ತೊಗರಿಗೋಣಿ ೧ಕ್ಕೆ ...	12-8	13—0
ತೊಗರಿಬೇಳೆ ಗೋಣಿ ೧ಕ್ಕೆ ...	17-8	21-8
ಉದ್ದು ಗೋಣಿ ೧ಕ್ಕೆ ...	13-0	13 8
ಹೆಸರುಗೋಣಿ ೧ಕ್ಕೆ ...	14—0	15—0
ಊರು ಬೆಲ್ಲ ಖಂಡಿ ೧ಕ್ಕೆ ...	70-0	80—0
ಉಪ್ಪು ಗೋಣಿ ೧ಕ್ಕೆ ...	4-4	4-6
ಕೊಬ್ರಿ ಖಂಡಿ ೧ಕ್ಕೆ ...	125-0	135—0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	46-0	47-8
ಎಳ್ಳಿಂಡಿ ಖಂಡಿ ೧ಕ್ಕೆ ...	40-0	45—0
ಕೊಬ್ರಿ ಎಣ್ಣೆ ಮುಡಿ ೧ಕ್ಕೆ ...	8—10	9—8
ಎಳ್ಳೆಣ್ಣೆ ಮುಡಿ ೧ಕ್ಕೆ ...	7-0	11—0
[illegible] ಎಣ್ಣೆ ಪೆಟ್ಟಿಗೆ ೧ಕ್ಕೆ ...	8-15-6	—
[illegible] ಸಕ್ಕರೆ ಮುಡಿ ೧ಕ್ಕೆ ...	4-11	4-14
[illegible] ಮೆಣಸಿನಕಾಯಿ ಮುಡಿ ೧ಕ್ಕೆ ...	10-8	—
ಸಾಸಿವೆ ಮುಡಿ ೧ಕ್ಕೆ ...	9-0	9—[illegible]
ಕೊತ್ತಂಬರಿ ಮುಡಿ ೧ಕ್ಕೆ ...	3-10	3—14
[illegible] ಖಂಡಿ ೧ಕ್ಕೆ ...	410-0	480—0
[illegible] ಅಡಿಕೆ ಖಂಡಿ ೧ಕ್ಕೆ ಹಳೆ ...	245-	250—0
ಹೊಸ ಅಡಿಕೆ	190—0	210—0
ಕಾಳುಮೆಣಸು ಖಂಡಿ ೧ಕ್ಕೆ ...	155-0	160—0
[illegible] ಮುಡಿ ೧ಕ್ಕೆ ...	80-0	85—0
ಗೇರುಬೀಜ ಮುಡಿ ೧ಕ್ಕೆ ...	4—10	—
[illegible] ಖಂಡಿ ೧ಕ್ಕೆ ...	45-0	65—0
[illegible] ಮುಡಿ ೧ಕ್ಕೆ ...	17-12	23—0
[illegible] ಮುಡಿ ೧ಕ್ಕೆ ...	26-0	—
[illegible] ಬೆಲ್ಲ ಸೇರು ೧ಕ್ಕೆ ...	22-0	
[illegible] ಮುಡಿ ೧ಕ್ಕೆ ...	18-8	
ಪವನು ...	14—5	

Pandit B. Ramakrishna Baliga's Siddha Ayurvedic medicines of 50 years' reputation.

ಮಹಾ ಮದನಕಾಮೇಶ್ವರಿ ಲೇಹ—ಇದನ್ನುಭಂಗಾರ, ಅಭ್ರಕಭಸ್ಮ, ರಸಸಿಂಧೂರ, ಕಸ್ತೂರಿ, ಕುಂಕುಮಕೇಸರ ವಗ್ಯೆರೆ ಅಮೂಲ್ಯವಾದ ರಸಾಯನ ದ್ರವ್ಯಗಳಿಂದ ತಯಾರಿಸಲ್ಪಟ್ಟಿರುತ್ತದೆ. ಇದು ಎಲ್ಲಾ ತರದ ನಪುಂಸಕ ರೋಗಗಳನ್ನೂ, ಸ್ವಪ್ನಾವಸ್ಥೆಯಲ್ಲಿ ಧಾತುಃಪತನೆಯನ್ನೂ ಗುಣಪಡಿಸಿ, ದೇಹಕ್ಕೆ ದಿವ್ಯಕಾಂತಿಯನ್ನೂ, ಪುಷ್ಟಿಯನ್ನೂ, ಪುರುಷತ್ವವನ್ನೂ, ವೀರ್ಯಸ್ತಂಭನವನ್ನೂ ಉಂಟುಮಾಡಿ ಅತ್ಯಾನಂದವನ್ನು ಕೊಡುವುದಲ್ಲದೆ, ಅಜೀರ್ಣ, ಅತಿಸಾರ, ಗ್ರಹಣಿ, ಅಮ್ಲ, ಪಿತ್ತ, ಉದರಶೂಲೆ, ಪ್ರಮೇಹ ವಗ್ಯೆರೆ ರೋಗಗಳನ್ನು ಗುಣಪಡಿಸುವಲ್ಲಿ ಕೇವಲ ಅಮೃತಸಮಾನವಾಗಿರುವುದು. ಇದನ್ನು ಆಬಾಲವೃದ್ಧರೂ ಸೇವಿಸಬಹುದು.

ಸ್ವರ್ಣ ಮಿಶ್ರಿತ ಲೇಹಕ್ಕೆ (43 ದಿನಗಳ ವರೆಗೆ ಸಾಕಾಗುವ) ಸೇರು ೧ರ ರೂ. 4—0—0.
ಸ್ವರ್ಣ ಇಲ್ಲದ „ „ „ „ 3—0—0.

ಬ್ರಹತ್ ಶಾರಿವಾದಿ ರಸಾಯನ—ಇದು ಖಾತ್ರಿಯಿಂದ ರಕ್ತವನ್ನು ಶೋಧಿಸುವ ದಿವ್ಯೌಷಧವಾಗಿರುತ್ತದೆ. ಇದರ ಸೇವನೆಯಿಂದ 20 ತರದ ಪ್ರಮೇಹ ರೋಗಗಳೂ ಎಲ್ಲಾ ತರದ ಫರಂಗಿ ರೋಗಗಳೂ ಅಲ್ಪ ಸಮಯದಲ್ಲಿ ಗುಣಹೊಂದುವವು. ಅದಲ್ಲದೆ ಇದು ಎಲ್ಲಾ ತರದ ಕುಷ್ಠವ್ಯಾಧಿಗಳನ್ನೂ, ಖಜ್ಜಿ, ಕುರು ಮೊದಲಾದ ಸಕಲ ಚರ್ಮವ್ಯಾಧಿಗಳನ್ನೂ ಪಾದರಸ ಸೇವನೆಯಿಂದ ಉಂಟಾದ ರೋಗಗಳನ್ನೂ ಮತ್ತು ಹೆಂಗಸರ ಪ್ರದರ ರೋಗಗಳನ್ನೂ ಖಾತ್ರಿಯಿಂದ ಗುಣಪಡಿಸುವುದು.

8 ಔನ್ಸಿನ ಬಾಟ್ಲಿ ಒಂದರ ಕ್ರಯ ಬರೀ ರೂ. 1—0—0.

ಧಾತ್ರಿ ಪರ್ಪಟಕಾದಿ ತೈಲ—(ಸಿದ್ಧ ಇಲ್ಲದವರಿಗೆ ಸಿದ್ಧೌಷದ.) ಇದನ್ನು ತಲೆಗೆ ಇಟ್ಟಲ್ಲಿ ಸಕಲ ಶಿರೋರೋಗಗಳೂ, ಕರ್ಣ, ನೇತ್ರ, ದಂತ, ಜಿಹ್ವಾರೋಗಗಳೂ, ತಲೆ ತಿರುಗುವುದು, [illegible] ತಲೆ ಸಿಡಿತವು ಮೊದಲಾದ ರೋಗಗಳು ಶಾಂತವಾಗಿ, ಸ್ಮರಣಶಕ್ತಿಯನ್ನೂ, ಜ್ಞಾನಶಕ್ತಿಯನ್ನೂ ವೃದ್ಧಿಗೊಳಿಸುವುದು. ಇದು ವಿದ್ಯಾರ್ಥಿಗಳಿಗೂ ವಕೀಲರಿಗೂ ಒಂದು ಸಿದ್ಧೌಷದ.

4 ಔನ್ಸಿನ ಬಾಟ್ಲಿ ೧ರ ರೂಪಾಯಿ 1—0—0.

ಕಸ್ತೂರಿ ಮಿಶ್ರಿತ ದಶಮೂಲಾಸವ—ಬಾಣಂತಿಯರಿಗೆ 8 ಔನ್ಸು ಬಾಟ್ಲಿಗೆ ರೂ. 1—0—0. ಅಮೃತಾರಿಷ್ಟ—ಸಕಲ ಜ್ವರಗಳ ಮೇಲೆ ಬಾಟ್ಲಿಗೆ ರೂ. 0—12—0. ಚವ್ಯನ ಪ್ರಾಶಲೇಹ—(ದೇಹಪುಷ್ಟಿಗೆ) ಸೇರು ೧ರ ರೂ. 2—0—0. ಅಶೋಕಾರಿಷ್ಟ—(ಹೆಂಗಸರ ರೋಗಗಳ ಮೇಲೆ) 8 ಔನ್ಸಿನ ಬಾಟ್ಲಿ ೧ರ ರೂ. 1—0—0. ಮಹಾ ಚಂದನಾದಿ ತೈಲ—(ಅಭ್ಯಂಗಕ್ಕೆ ದಿವ್ಯೌಷಧ) 4 ಔನ್ಸಿನ ಬಾಟ್ಲಿ ೧ರ ರೂ. 1—0—0. ಗೋರೋಚನಾದಿ ಮಾತ್ರೆ—(ಮಕ್ಕಳ ಕೆಮ್ಮಿಗೆ) ಡಜನು ೧ರ ಕ್ರಯ ರೂ. 1—0—0.

ಸೂಚನೆ:—ಟಪ್ಪಾಲ ಹಾಸಲು ಪ್ರತ್ಯೇಕ. ಸ್ಥಳೀಕ ಬಡ ಜನರಿಗೆ ಔಷಧವು ಧರ್ಮಾರ್ಥವಾಗಿ ಕೊಡಲ್ಪಡುವುದು.

ವಿಳಾಸ:— ಪಂಡಿತ, ಬಿ. ರಾಮಕೃಷ್ಣ ಬಾಳಿಗ, ಬಂಟವಾಳ ದ. ಕ.

The Canara Public Conveyance Co., Ltd, Mangalore.

(Established 1914).

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು
- ಕರಾವಳಿ ಮಾರ್ಗವಾಗಿ — ಮುಲ್ಕಿ — ಉಡ್ಪಿ — ಕುಂದಾಪುರ — ಗಂಗೊಳ್ಳಿ — ಬೈಂದೂರು
- ಬಂಟವಾಳ — ಬೆಳ್ತಂಗಡಿ — ಚಾರ್ಮಾಡಿ.
- ಪಾಣೆಮಂಗಳೂರು — ಪುತ್ತೂರು — ಸುಳ್ಯ — ಮಡಿಕೇರಿ.
- ಪುತ್ತೂರು — ಉಪ್ಪಿನಂಗಡಿ — ಬೆಳ್ತಂಗಡಿ.
- ಮಡಿಕೇರಿ — ಪುತ್ತೂರು — ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ — ಮದ್ರಾಸು — ಕಡೂರು — ಚಿಕ್ಕಮಗಳೂರು — ಚಾರ್ಮಾಡಿ — ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು — ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd., Mangalore. S. K.

CAR FESTIVAL
CONCESSION
MAKE HASTE AND BUY A
Pocket Electric Lamp
AVAILABLE
In different varieties, Mother of pearl lamps. Cycle lamps.
NICKEL PLATED.
Hammered Brand, with Powerful Bulls-eye lence.
Use with it
Bull's-eye Dry Batteries.
The Mangalore Trading Association,
Car Street, MANGALORE.

ಮಾರಾಟಕ್ಕೆ ಸಿದ್ಧವಿದೆ! ಮಾರಾಟಕ್ಕೆ ಸಿದ್ಧವಿದೆ!

1925ನೇ ವರುಷದ

ಪೋಕೆಟ್ ಡೈರಿ.

ಮುಚ್ಚಳವೂ ಪಾಕೇಟೂ ಇರುವ ದೊಡ್ಡ ಸೈಜಿನ ಡೈರಿ [illegible] ಆಣೆ.

ದೊಡ್ಡ ಸೈಜಿನ ಸಾದಾ ಡೈರಿ . . . ೧೦ ಆಣೆ.

ವಿಳಾಸ— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಕನ್ನಡಿಗರೆ! **ವಸಂತ.** ಕಣ್ತೆರೆಯಿರಿ!

ಈಗಾಗಲೇ ಎರಡನೇ ಸಂಪುಟವು ಆರಂಭಿಸಲಿದೆ.

ಇತಿಹಾಸನಿಧಿ ಎಂದರೆ	ವಸಂತ
ಸಮಾಜಸುಧಾರಕನೆಂದರೆ	ವಸಂತ
ಕೈಗಾರಿಕೆಯ ಸಾಮ್ರಾಜ್ಯವೆಂದರೆ	ವಸಂತ
ಕರ್ಣಾಟಕ ಭಾಷಾಸೇವಕನೆಂದರೆ	ವಸಂತ
ದೇಶವಿದೇಶ ಬಂಧುವೆಂದರೆ	ವಸಂತ
ಕಾದಂಬರಿಗಳ ಭಂಡಾರವೆಂದರೆ	ವಸಂತ
ಚಿತ್ರಾಕರ್ಷ ಚಿತ್ರಶಾಲೆಯೆಂದರೆ	ವಸಂತ
ದೇಶಭಕ್ತನೆಂದರೆ	ವಸಂತ

ಇಂತಹ ವಸಂತನು ಯಾರಿಗೆ ಬೇಕು,
ಯಾರಿಗೆ ಬೇಡ?

48 (ಕ್ರೌನ್ ⅛ ಪುಟ ಸ್ಯಾಜಿನ) ಪುಟಗಳನ್ನು ಮೀರಿದ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3—4—0 ಮಾತ್ರ.

ವ್ಯವಸ್ಥಾಪಕ,
ವಸಂತ ಕಾರ್ಯಾಲಯ,
ಕುಂದಾಪುರ, ದಕ್ಷಿಣ ಕನ್ನಡ.

ಬಂದು ನೋಡಿರಿ! ತಿಂದು ನೋಡಿರಿ!

ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ
ಪದಕವನ್ನು
ಬಹುಮಾನವಾಗಿ ಪಡೆದಿರುವ
ಎಸ್. ಪಿ. ಆಚಾರ್ಯ
ಇವರಿಂದ ತಯಾರಿಸಲ್ಪಟ್ಟ
ಉಪ್ಪಿನಕಾಯಿಗಳನ್ನು
ಬಂದು ನೋಡಿರಿ! ತಿಂದು ನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ, ಕುಂಠಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನ್ನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ
ಬಂದು ನೋಡಿರಿ! ತಿಂದು ನೋಡಿರಿ!

ಇಂಡಿಯನ್ ಸ್ವೀಟ್‌ಮೀಟ್ ಮಾರ್ಟ್.

ಮನೋಲ್ಲಾಸಿನಿ ಕಾಫಿ ಕ್ಲಬ್.
ಮಾರ್ಕೇಟು ರೋಡು,
ಮಂಗಳೂರು.
ಅಥವಾ
ಸದಾನಂದ ಕಾಫಿ ಕ್ಲಬ್.
ರಥಬೀದಿ, ಮಂಗಳೂರು.

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ ಕೋರ್ಟಿನಲ್ಲಿ

O. P. ನಂಬ್ರ 18/1925

ತಲಚೇರಿ ಅಂಬಾ ಬಾಯಿ— ಅರ್ಜಿದಾರ

ಮೇಲ್ಕಂಡ ಅರ್ಜಿದಾರಳು ತನ್ನ ಗಂಡ ಮೃತಪಟ್ಟ ವಕೀಲ ತಲಚೇರಿ ಭವಾನಿರಾಯರು ತಾ. 4-11-1923ರಲ್ಲಿ ಬರೆದಿಟ್ಟ ರಜಿಸ್ತ್ರ ವೀಲುನಾಮೆ ಪ್ರಕಾರ ಪೂರ್ಣ ಹಕ್ಕುದಾರಳಾಗಿರುವುದರಿಂದ ಅವರ ಬಾಬ್ತು ಹೊರಗಿನಿಂದ ಬರತಕ್ಕ ಸಾಲಗಳನ್ನು ವಸೂಲು ಮಾಡುವ ಬಗ್ಗೆ ತನಗೆ ಸರ್ಟಿಫಿಕೇಟು ಕೊಡಬೇಕಾಗಿ ಮೇಲ್ಕಂಡ ಅರ್ಜಿ ದಾಖಲು ಮಾಡಿರುತ್ತಾಳೆ. ಸದರಿ ಅರ್ಜಿಯು ತಾ. 28—2—1925ಕ್ಕೆ ತನ್ಖಿಗೆ ಇಟ್ಟಿದೆ. ಈ ಸಂಬಂಧ ಯಾರಾದರೂ ಆಕ್ಷೇಪಿಸುವವರಿದ್ದರೆ, ತಮ್ಮ ಆಕ್ಷೇಪಗಳನ್ನು ಮೇಲ್ಕಂಡ ತಾರೀಕಿನ ಒಳಗೆ ಸದರಿ ಮೇಲ್ಕಂಡ ಕೋರ್ಟಿನಲ್ಲಿ ಜ್ಯಾಹೀರು ಮಾಡತಕ್ಕದೆಂತ ಈ ಮೂಲಕ ಸರ್ವರಿಗೂ ತಿಳಿಸೋಣಾಗಿಯದೆ.

Mangalore } G. Krishna Rao,
4—2—1925. } *Pleader for Petitioner.*

ನೋಟೀಸು.

ಮುಂಬಯಿ ಸ್ಟೀಮ್ ನೇವಿಗೇಶನ್ ಕಂಪೆನಿ ಲಿಮಿಟೆಡ್.



ಗೋಕರ್ಣ ಮಹಾಶಿವರಾತ್ರಿಗೆ ಹೋಗುವ ಪ್ರಯಾಣಿಕರಿಗೆ ಸೌಕರ್ಯ.

ಇದೇ ಬರುವ ಫೆಬ್ರವರಿ ತಿಂಗಳಲ್ಲಿ ಗೋಕರ್ಣದಲ್ಲಿ ನಡಿಯುವ ಶಿವರಾತ್ರಿ ಮಹೋತ್ಸವಕ್ಕೆ ಯಾತ್ರಿಕರಾಗಿ ಹೋಗುವ ಮೈಸೂರು, ಮಲಬಾರ, ಕೆನರಾ ಮೊದಲಾದ ಕಡೆಗಳ ಜನರಿಗೆ ಅನುಕೂಲವಾದ ಪ್ರಯಾಣ ಸೌಕರ್ಯವನ್ನು ಈ ಕಂಪೆನಿಯು ಮಾಡಿದೆ.

ಫೆಬ್ರವರಿ ತಾ. 21ರಲ್ಲಿ ಜರಗುವ ಶಿವರಾತ್ರಿ ಮಹೋತ್ಸವಕ್ಕೆ ಯಾತ್ರಿಕರಿಗೆ ಹೋಗಲು ಅನುಕೂಲವಾಗುವಂತೆ ಫೆಬ್ರವರಿ ತಾ 16ನೇ ಸೋಮವಾರ ಬೆಳಿಗ್ಗೆ 10 ಗಂಟೆಗೆ ಸಾಮಾನುಗಳನ್ನು ಒಯ್ಯುವ (Cargo steamer) ಸ್ಟೀಮರೂ ಫೆಬ್ರವರಿ ತಾ. 18ನೇ ಬುಧವಾರ ಪ್ರಾತಃ 10 ಗಂಟೆಗೆ ಬಹು ವೇಗದಿಂದ ಓಡುವ ಪೆಸೆಂಜರ್ ಸ್ಟೀಮರೂ ಮಂಗಳೂರಿನಿಂದ ಬಿಡಲ್ಪಡುವುವು. ಈ ಎರಡೂ ಸ್ಟೀಮರುಗಳು ಪ್ರಯಾಣಿಕರನ್ನು ತದ್ರಿ (ಗೋಕರ್ಣ) ವರೆಗೆ ಮುಟ್ಟಿಸುವುವು.

ತಾ. 18ರಲ್ಲಿ ಬಿಡುವ ಬಹುವೇಗದಿಂದ ಓಡುವ (ಡಬ್ಬಲ್ ಸ್ಕ್ರ್ಯೂ ಸ್ಟೀಮರ್) ಸ್ಟೀಮರು ಬರೇ 10 ತಾಸಿನೊಳಗೆ ಪ್ರಯಾಣಿಕರನ್ನು ಮುಟ್ಟಿಸುವುದು.

ತದ್ರಿಯಿಂದ ತಾ. 22ನೇ ಆದಿತ್ಯವಾರ ಬಿಡಲ್ಪಡುವ ಕಾರ್ಗೊ ಸ್ಟೀಮರೂ ತಾ. 24ನೇ ಮಂಗವಾರ ಬಿಡಲ್ಪಡುವ ವೇಗದಿಂದ ಓಡುವ ಪೆಸೆಂಜರ್ ಸ್ಟೀಮರೂ ಗೋಕರ್ಣದಿಂದ ಹಿಂದಕ್ಕೆ ಬರುವ ಯಾತ್ರಿಕರಿಗೆ ಬಹು ಅನುಕೂಲಗಳಾಗಿವೆ.

ಮಂಗಳೂರಿನಿಂದ ತದ್ರಿಗೆ ಹೋಗಿ ಬರುವ ಪ್ರಯಾಣಿಕರಿಗೆ ಒಂದುವರೆ ಪಾಲು (fare and half) ದರದಲ್ಲಿ ಟಿಕೇಟು ಕೊಡಲಾಗುವುದು.

ಸಾಧಾರಣವಾಗಿ ಇರುವ ಸಿಂಗಲ್ ದರ

	ಕಾರ್ಗೊ ಸ್ಟೀಮರ್.	ಫಾಸ್ಟ್ ಸ್ಟೀಮರ್.
ಲೋವರ್ ಕ್ಲಾಸ್	ರೂ. 5—8—0	ರೂ 5—12—0.
ಅಪ್ಪರ್ ಕ್ಲಾಸ್	ರೂ. 8—2—0	ರೂ. 8—10—0.

ದಕ್ಷಿಣಕಾಶಿಯೆಂದು ಖ್ಯಾತಿಗೊಂಡ ಗೋಕರ್ಣ ಮಹಾಕ್ಷೇತ್ರಕ್ಕೆ ಕುಟುಂಬಯಾತ್ರೆ ಮಾಡಲು ಅನುಕೂಲ ಸಂದರ್ಭ.

ದಕ್ಷಿಣ ಕನ್ನಡ ಗೌಡ ವಿದ್ಯಾವರ್ಧಕ ಸಂಘ.

ಈ ಸಂಘದ ೭ನೇ ಆಡಳ್ತೆ ಸಭೆಯು ಕಳೆದ ತಾರೀಕು ೨೫—೧—೨೫ನೇ ಆದಿತ್ಯವಾರ ಗಂಟೆ ೨ಕ್ಕೆ ಅಮರ ಮುಡ್ನೂರು ಗ್ರಾಮದ ರಾ. ಕೋಡ್ತುಗುಳಿ ತಮ್ಮಣ್ಣ ಗೌಡರಲ್ಲಿ ಜರಗಿತು. ಸಭೆಗೆ ಆಡಳ್ತೆ ಮಂಡಳಿಯ ಪೈಕಿ ೭ ಮಂದಿ ಮಹನೀಯರು ಮತ್ತು ಸುಮಾರು ೨೫ ಮಂದಿ ಮೆಂಬರರು ದಯಮಾಡಿಸಿದ್ದರು. ರೂಪಾಯಿ ೨೫೦೦—೦—೦ ಮನವಿ ಪತ್ರಗಳನ್ನು ಪಡಕೊಂಡದಲ್ಲದೆ ಕಂತಿನ ಬಾಬತು ರೂಪಾಯಿ ೭೯—೦—೦ ಎಪ್ಪತ್ತೊಂಬತ್ತು ಕೂಡ ವಸೂಲು ಬಂತು. ಈ ಐವಜನ್ನು ಪುತ್ತೂರು ವರ್ತಕರ ಸಹಕಾರ ಸಂಘದಲ್ಲಿ ನಿರಖು ಠೇವಣಾತಿಯಾಗಿ ಇಡುವರೆ ನಿರ್ಣಯಿಸಿ ಕಾರ್ಯದರ್ಶಿಯವರ ಹಸ್ತಕೊಟ್ಟದಲ್ಲದೆ ಮುಂದಿನ ಆಡಳ್ತೆ ಸಭೆಯು ಪುತ್ತೂರು ಬಲ್ನಾಡು ಕಟ್ಟೆಮನೆ ಸಂಕಪ್ಪ ಗೌಡರಲ್ಲಿ ತಾ. ೨೮—೨—೨೫ನೇ ಶನಿವಾರ ಹಗಲು ೩ ಗಂಟೆಗೆ ಜರಗಿಸುವುದಾಗಿ ನಿರ್ಣಯಿಸಿದೆ. ಸಂಘದ ಮೆಂಬರರೂ ಹಿತಚಿಂತಕರೂ ದಯಮಾಡಿ ಬರಬೇಕಾಗಿ ವಿನಂತಿ ಇದೆ.

ಶ್ರೀಯುತ ಕಾರ್ನಾಡ ಸದಾಶಿವರಾಯರ ವಿನಂತಿ.

ಅನಿರೀಕ್ಷಿತವಾದ ಮತ್ತು ಬಹಳ ಜರೂರಿನ ಕೆಲಸದ ಸಂಬಂಧ ನನಗೆ ಕೂಡಲೇ ಮದ್ರಾಸಿಗೆ ಹೋಗಬೇಕಾಗಿ ಬಂದಿದೆ. ಇದರಿಂದ ಜಿಲ್ಲೆಯಲ್ಲಿ ಸರ್ಕೀಟು ಬೆಳೆಸುವ ಕೆಲಸವನ್ನು ಪ್ರಕೃತಕ್ಕೆ ನಿಲ್ಲಿಸಬೇಕಾದುದಕ್ಕಾಗಿ ನಾನು ಬಹಳ ವ್ಯಸನಪಡುತ್ತೇನೆ. ಒಂದು ವಾರದಲ್ಲಿ ಅಥವಾ ಹತ್ತು ದಿನದೊಳಗೆ ನಾನು ಹಿಂತಿರುಗಿ ಬರಲಿಕ್ಕಿರುವೆನು. ಈ ತನ್ಮಧ್ಯೆ ಆಯಾ ಕಡೆಗಳಲ್ಲಿ ನೂಲುವ ಕೆಲಸ ಪ್ರಾರಂಭಿಸಲಿಕ್ಕಾಗಿ ಬೇಕಾಗುವ ಚರ್ಕ, ಹತ್ತಿ ಹಿಂಜುವ "ಬಿಲ್ಲು ಸ್ಪಿಂಡಲ್"ಗಳು ಇವೇ ಮೊದಲಾದುವನ್ನು ತಯಾರಿಸಿ ಇಡಲಾಗುವುದು. ನೂಲುವ ಸಮಿತಿಗಳನ್ನು ಸ್ಥಾಪಿಸುವಲ್ಲಿ ಇಂಥಾ ಸಾಮಾನುಗಳ ಆಗತ್ಯವಿದೆ. ನನ್ನ ಸರ್ಕೀಟನ್ನು ನಿಲ್ಲಿಸಿದುದಕ್ಕಾಗಿ ನನ್ನ ಸಹಾಯಕರೂ, ಪ್ರೋತ್ಸಾಹಿಗಳೂ ನನ್ನನ್ನು ಕ್ಷಮಿಸಬೇಕೆಂದು ಪ್ರಾರ್ಥಿಸುತ್ತೇನೆ. ಮಾತ್ರವಲ್ಲ, ಅವರು ತಮ್ಮ ಆಸುಪಾಸುಗಳಲ್ಲಿ ಬಡಬಗ್ಗರ ಉದ್ಧಾರಕ್ಕಾಗಿ ಮಾಡುವ ಈ ನಮ್ಮ ಕಾರ್ಯದಲ್ಲಿ ಯಾರು ಯಾರು ನಮ್ಮ ಜತೆಯಲ್ಲಿ ಸೇರುವರೆಂಬುದನ್ನು ನಿಶ್ಚಯಿಸಬೇಕಾಗಿ ವಿನಂತಿ.

ಸಿವಿಲ್ ವಿವಾಹಗಳು.

ಮುಖ್ಯವಾಗಿ ಅಳಿಯಸಂತಾನ ಅಥವಾ ಮರುಮಕ್ಕಳ್ತಾಯ ಕಟ್ಟನ್ನು ಆಚರಿಸುವವರೇ ಮೊದಲಾದ ಸರ್ವಜನರು ೧೮೭೨ನೆ ಇಸವಿ IIIನೇ ಆಕ್ಟು (೧೯೨೩ರಲ್ಲಿ ತಿದ್ದಿದಂತೆ) ಅವರ ವಿವಾಹಗಳನ್ನು ರಿಜಿಸ್ಟರು ಮಾಡಿಸಿದಲ್ಲಿ ಅವರಿಗೆ ವಾರಿಸಿಹಕ್ಕನ್ನು ಕುರಿತಾಗಿ ಎಂಥ ಯೋಗ್ಯ ಸಲಕರಣೆಗಳನ್ನು ಕೊಟ್ಟಿರುವುದೆಂಬುದನ್ನು ಈ ಮೂಲಕ ತಿಳಿಸಲಾಗಿದೆ. ಮೇಲಣ ಆಕ್ಟು ಪ್ರಕಾರ ತಮ್ಮ ವಿವಾಹಗಳನ್ನು ರಿಜಿಸ್ಟರು ಮಾಡುವ ಹಿಂದೂ, ಬೌದ್ಧ, ಜೈನ, ಸಿಖ್ಖಮತದವರು ತಮ್ಮ ತಮ್ಮ ಮತದಲ್ಲೇ ಇರುವೆವೆಂದು ಅವರವರು ನಿರ್ಧಾರಮಾಡಿಯೇ ಹಾಗೆ ರಿಜಿಸ್ಟರು ಮಾಡಿಕೊಳ್ಳಬಹುದು. ಹಿಂದಣ ೧೮೭೨ನೆಯ ಆಕ್ಟಿನಲ್ಲಿ ಇಂಥ ವಿವಾಹಗಳನ್ನು ರಿಜಿಸ್ಟರು ಮಾಡುವವರು ಮೇಲಣ ಒಂದೂ ಮತವನ್ನು ತಾವು ಸೇರಿಲ್ಲವೆಂದು ಹೇಳಬೇಕಾಗಿದ್ದ ಸೂತ್ರವನ್ನು ಈಗ ರದ್ದುಮಾಡಲಾಗಿದೆ. ಹಾಗೆ ವಿವಾಹವಾದವರ ಆಸ್ತಿಗಳ ವಾರಿಸಿ ಹಕ್ಕು ಮತ್ತು ಅವರ ಪರಂಪರೆಯವರ ಹಕ್ಕುಗಳನ್ನು ೧೮೬೫ನೆ ಇಸವಿಯ ಇಂಡಿಯನ್ ಸಕ್ಸೆಶನ್ ಆಕ್ಟು ಪ್ರಕಾರವೇ ನಿರ್ಣಯಿಸಲಾಗುವುದು. ಹೀಗಾಗಿ ಅಳಿಯಸಂತಾನ ಅಥವಾ ಮರುಮಕ್ಕಳ್ತಾಯ ಕಟ್ಟುಗಳಿಗೆ ಒಳಪಟ್ಟಿರುವವರು ತಮ್ಮ ವಿವಾಹಗಳನ್ನು ಈ ತಿದ್ದಿದ ಆಕ್ಟಿನಂತೆ ರಿಜಿಸ್ಟರು ಮಾಡಿಸಿಕೊಂಡಲ್ಲಿ ಅವರು ಹಿಂದುಗಳೇ ಎಂದು ನಿರ್ಧಾರಮಾಡಿಕೊಂಡು, ತಮ್ಮ ಆಸ್ತಿಯನ್ನು ತಮ್ಮ ಹೆಂಡಿರುಮಕ್ಕಳಿಗೂ, ತಮ್ಮ ಗಂಡು ಮತ್ತು ಹೆಣ್ಣು ಮಕ್ಕಳಿಗೂ ಮಾತ್ರ ಸಿಗುವ ಹಾಗೆ ಮಾಡಿಕೊಡುವಂತಾಗುವುದು—ಎಂದು ಈ ಜಿಲ್ಲೆಯ ವಿವಾಹಗಳ ರಿಜಿಸ್ಟ್ರಾರರೂ, ಜನನ ಮರಣಗಳ ರಿಜಿಸ್ಟ್ರಾರರೂ ಆಗಿರುವ ರಾಯ್‌ಸಾಹೇಬ್ ಕೆ. ರಂಗರಾಯರು ತಿಳಿಸುತ್ತಾರೆ.

ಮಲಬಾರ ಹಿಲ್ಲ ಢಕಾಯತಿ.

ಮಲಬಾರ ಹಿಲ್ಲಿನಲ್ಲಿ ಢಕಾಯತಿ ನಡಿಯುತ್ತಿದ್ದ ಕಾಲದಲ್ಲಿ ಮಿ। ಬವಲಾ ಇವರೊಡನಿದ್ದ ಇವರ ಮೆನೇಜರರೂ ಗಾಯಪಟ್ಟಿದ್ದರಷ್ಟೆ. ಇವರು ಆಸ್ಪತ್ರೆಯಿಂದ ಚಿಕಿತ್ಸೆ ಹೊಂದಿ ಈಗ ಮಿ। ಬಾವಲಾ ಇವರ ತಾಯಿಯವರಿದ್ದಲ್ಲಿಗೆ ಹೋಗಿರುವರು. ಢಕಾಯತಿಯವರ ಗುರುತನ್ನು ಹಚ್ಚಲು ಇವರು ಈಗಾಗಲೇ ಇಂದೋರಿಗೆ ಹೋಗಿರುತ್ತಾರೆ. ಮಿ। ಬಾವಲಾರವರ ಪ್ರಾಣರಕ್ಷಣೆಗಾಗಿ ಸಾಹಸಪಟ್ಟ ಲೆಫ್ಟನೆಂಟ ಸಿಗರೇಟರವರಿಗೆ ಬಾವಲಾರವರ ತಾಯಿಯವರು ರೂ. ೫೦೦೦ದ ಚೆಕ್ಕನ್ನು ಕಳುಹಿಸಿದರು. ಆದರೆ ಮಿ। ಸಿಗರೇಟರು ಇದು ತಮ್ಮ ಕರ್ತವ್ಯವಾದ್ದರಿಂದ ತಾನು ಮಾಡಿದ್ದೇನೆ, ಅಲ್ಲದೆ ಈ ಕಾರ್ಯದಲ್ಲಿ ತನಗೆ ಇತರರ ಬೆಂಬಲವೂ ದೊರಕಿದೆಯಾದ್ದರಿಂದ ತಾನು ಚೆಕ್ಕನ್ನು ಸ್ವೀಕರಿಸುವುದಿಲ್ಲವೆಂದು ಅದನ್ನು ನಿರಾಕರಿಸಿದ್ದಾರೆ. ಮಮ್‌ತಾಜಳು ಇನ್ನೂ ಪೋಲೀಸ್ ಕಾವಲಿನಲ್ಲಿ ಇದ್ದಾಳೆ. ಇಂದೋರಿಗೆ ಮಹಾರಾಜರ ಮುಂಬಯಿ ಆಸ್ತಿಗಳ ಮೆನೇಜರರಾಗಿರುವ ಮಿ। ನಾಯಕ್ ಮುಲಗೋಣ್‌ಕರ ಎಂಬವರನ್ನೂ ಕೈದುಮಾಡಿದೆ.

ಹಿಂದುಸ್ಥಾನದಲ್ಲಿ ಕುಷ್ಠರೋಗ ನಿವಾರಣೆ.

ಬ್ರಿಟಿಷ್ ಸಾಮ್ರಾಜ್ಯದೊಳಗಣ ಕುಷ್ಠರೋಗ ನಿವಾರಣಾಸಂಘದ ಹಿಂದುಸ್ಥಾನ ಶಾಖೆಗೆ ಹಣ ಸಹಾಯಮಾಡಬೇಕೆಂದು ವೈಸರಾಯರು ಅಖಿಲ ಭಾರತಕ್ಕೆ ಒಂದು ವಿನಂತಿ ಮಾಡಿಕೊಂಡಿದ್ದಾರೆ. ಆ ವಿನಂತಿಯು ಸದರಿ ಸಂಘದ ಆಶ್ರಯದಾತರಾದ ಪ್ರಿನ್ಸ್ ಒಫ್ ವೇಲ್ಸರಿಂದ ಸಮರ್ಥಿಸಲ್ಪಟ್ಟಿದೆ. ವಿನಂತಿಯ ಸಾರಾಂಶ ಕೆಳಗೆ ಕೊಟ್ಟಿದೆ—"ನನ್ನ ಈ ವಿನಂತಿಗೆ ದೇಶದ ಯಾವತ್ತೂ ವರ್ಗದ ಧನಿಕ ಹಾಗು ಬಡ ಜನರ ಆದರವು ದೊರಕದೆ ಇರದೆಂದು ನನಗೆ ವಿಶ್ವಾಸವಿದೆ. ಕುಷ್ಠರೋಗ ಪೀಡಿತರಾದವರ ಕಷ್ಟಗಳು ಎಷ್ಟು ತೀವ್ರವಾಗಿವೆ ಎಂಬುದನ್ನು ತಿಳಿಯದವರಿಲ್ಲ. ಹಿಂದುಸ್ಥಾನದ ಹೆಚ್ಚಿನ ಭಾಗಗಳಲ್ಲಿ ಹರಡಿರುವ ಈ ರೋಗದ ಹಾನಿಯು ಎಷ್ಟೆಂಬುದು ತಿಳಿಯದಿದ್ದವರಿಲ್ಲ. ಕುಷ್ಠರೋಗ ಪೀಡಿತರಾದವರನ್ನು ಗುಣಪಡಿಸಲು ಹಾಗು ಈ ರೋಗ ನಿವಾರಣೆಗೆ ಹೆಚ್ಚಿನ ಸಾಹಸಗಳು ಹಿಂದುಸ್ಥಾನದಲ್ಲಿ ಮಾಡಲ್ಪಟ್ಟಿವೆ ಎಂಬುದು ನಾನು ಸ್ವತಃ ಬಲ್ಲೆನು. ಈ ರೋಗದ ಉಪಶಮನಕ್ಕೂ ನಿವಾರಣೆಗೂ ನೂತನವಾಗಿ ಕಂಡುಹಿಡಿದ ವಿಧಾನಗಳು ಹೆಚ್ಚು ಪರಿಣಾಮಕಾರಿಗಳಾಗಿವೆ. ಆದರೆ ಈ ಕಾರ್ಯವು ಕುಂಠಿತವಾಗಿದೆ. ಹಣದ ಅಭಾವವೇ ಇದಕ್ಕೆ ಕಾರಣ. ಕುಷ್ಠರೋಗ ನಿವಾರಣಾ ಸಂಸ್ಥೆಗಳಿಗೆ ಸಹಾಯ ಮಾಡಲು ಮತ್ತು ಈ ವಿಷಯದಲ್ಲಿ ಹೊಸ ಶೋಧಗಳನ್ನು ಮಾಡಲು ಹಣ ಸಹಾಯವು ಬೇಗನೇ ವಿಶೇಷವಾಗಿ ಬೇಕಾಗಿದೆ. ಈ ಭಯಂಕರ ವ್ಯಾಧಿಯನ್ನು ನದೆಬಡಿಯಲು ಯಾವತ್ತೂ ಪಂಗಡದವರು ನನಗೆ ಸಹಕಾರಿಗಳಾಗಬೇಕಾಗಿ ನನ್ನ ವಿಜ್ಞಾಪನೆ. ಉದ್ದಾತ್ತ ಉದ್ದೇಶದಿಂದ ಕೈಕೊಂಡ ಈ ಕಾರ್ಯದಲ್ಲಿ ದಯಾಳು ಹಾಗು ವಿಚಾರವಂತರಾದ ಯಾವತ್ತು ಸ್ತ್ರೀಯರೂ ಪುರುಷರೂ ಉದಾರಹಸ್ತದಿಂದ ಸಹಾಯಮಾಡಬೇಕಾಗಿ ನಾನು ವಿಜ್ಞಾಪಿಸಿಕೊಳ್ಳುತ್ತೇನೆ".

ನೋಟೀಸು.

ದಕ್ಷಿಣ ಕನ್ನಡ ಜಿಲ್ಲಾ ಕೋರ್ಟಿನಲ್ಲಿ.

O. P. 3/1925.

ವೆಂಕಟೇಶ್ವರ ಭಟ್ಟ— ಅರ್ಜಿದಾರ,
ಮತ್ತು
ಪರಮೇಶ್ವರಿ ಕೂಡಾ— ರೆಸ್ಪಾಂಡೆಂಟರು,

ಕಾಸರಗೋಡು ತಾಲೂಕು ಕುಂಬಡಾಜೆ ಗ್ರಾಮದ ಯೇತಡ್ಕ ವೆಂಕಟೇಶ್ವರ ಭಟ್ಟರ ಮೈನರ ಮಗ ಸೀತಾರಾಮ ಭಟ್ಟನ ಆಸ್ತಿ ವಗೈರೆಗೆ ತನ್ನನ್ನಾಗಲಿ ವ ಬೇರೆ ಯೋಗ್ಯ ಮನುಷ್ಯನನ್ನಾಗಲಿ ಗಾರ್ಡಿಯನನಾಗಿ ನೇಮಿಸಬೇಕಾಗಿ ವಗೈರೆ ಅಪೇಕ್ಷಿಸಿ ಕೊಟ್ಟ ಮೇಲಿನ ಅರ್ಜಿಯು ತಾ. 11—2—1925ಕ್ಕೆ ತನ್ಖಿಗೆ ಇಡಲ್ಪಟ್ಟಿದೆ. ಆಕ್ಷೇಪವುಳ್ಳವರು ಮೇಲಿನ ತಾರೀಕಿನ ಒಳಗೆ ತಮ್ಮ ಆಕ್ಷೇಪಣೆಗಳನ್ನು ಜಾಹೀರು ಮಾಡತಕ್ಕದ್ದು.

P. VASUDEVA RAO,
Vakil for Petitionre.

ಒಳದೇಶ ವರ್ತಮಾನ

ಹಿಂದೂ ಮಹಾಸಭೆ:—ಹಿಂದೂ ಮಹಾಸಭೆಯ ವಾರ್ಷಿಕ ಅಧಿವೇಶನವು ಬರುವ ಮಾರ್ಚಿ ತಿಂಗಳಲ್ಲಿ ಲಾಲಾ ಲಜಪತರಾಯರ ಅಧ್ಯಕ್ಷತೆಯಲ್ಲಿ ಕಲ್ಕತ್ತದಲ್ಲಿ ಸೇರುವುದು.

ಇಂಪೀರಿಯಲ್ ಬ್ಯಾಂಕಿನ ಗವರ್ನರರು:—ಸರ್ ದಿನ್‌ಶಾ ವಾಚ್ಛಾ, ಸರ್ ಎನ್. ಬಿ. ದಾದಾಭಾಯಿ, ಸರ್ ಆರ್. ಎನ್. ಮುಕರ್ಜಿ ಮತ್ತು ಸರ್ ಗಂಗಾರಾಮ್. ಇವರು ಇಂಪೀರಿಯಲ್ ಬ್ಯಾಂಕಿನ ಗವರ್ನರರಾಗಿ ನೇಮಕಪಟ್ಟಿದ್ದಾರೆ.

ಶ್ರೀಯುತ ಸುಭಾಸ ಚಂದ್ರಬೋಸರು:—ಬಂಗಾಳ ಓರ್ಡಿನೆನ್ಸಿನ ಮೇರೆಗೆ ಕೈದುಮಾಡಲ್ಪಟ್ಟ ಸುಭಾಸ ಚಂದ್ರಬೋಸ, ಸತ್ಯೇಂದ್ರ ಚಂದ್ರಮಿತ್ರ ಮೊದಲಾದ ೮ ಮಂದಿಗಳನ್ನು ರಂಗೂನಿಗೆ ಒಯ್ದಿರುವರೆಂದು ತಿಳಿಯುತ್ತೆ.

ಖಾದಿಗೆ ಸ್ಥಾನಿಕ ಸಂಸ್ಥೆಗಳ ಪ್ರೋತ್ಸಾಹ:—ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ಮುನ್ಸಿಪಾಲಿಟಿಯವರು ತಮ್ಮ ಕೈಕೆಳಗಿರುವ ಶಾಲೆಗಳಲ್ಲಿ ೩-೪ನೇ ವರ್ಗಗಳಿಂದ ನೂಲುವುದನ್ನು ಅವಶ್ಯವಾಗಿ ಕಲಿಸಬೇಕೆಂದು ನಿರ್ಣಯ ಮಾಡಿದ್ದಾರೆ.

ಕುಷ್ಠರೋಗ ನಿವಾರಣಾ ಫಂಡು:—ಕುಷ್ಠರೋಗ ನಿವಾರಣೆ ಮಾಡಲು ಫಂಡನ್ನು ಕೂಡಿಸಲು ಮೈಸೂರು ದಿವಾನರ ಅಧ್ಯಕ್ಷತೆಯಲ್ಲಿ ಸಭೆಕೂಡಿದ ಕಾಲದಲ್ಲಿ ಮಹಾರಾಜರು ಈ ಫಂಡಿಗೆ ರೂ. ೩೦೦೦ ವಂತಿಗೆ ಹಾಕಿರುವರು.

ಕುಷ್ಠರೋಗಿಗಳ ಚಿಕಿತ್ಸಾಲಯ:—ಕಳೆದ ತಾ. ೩ರಲ್ಲಿ ಜರುಗಿದ ಕಲ್ಲಿಕೋಟೆಯ ಮುನ್ಸಿಪಲ್ ಮೀಟಿಂಗಿನಲ್ಲಿ ಅಲ್ಲೊಂದು ಕುಷ್ಠರೋಗಿಗಳ ಚಿಕಿತ್ಸಾಲಯವನ್ನು ತೆರೆಯಬೇಕಾಗಿ ನಿರ್ಣಯಿಸಲಾಯಿತು. ಮತ್ತು ಕುಷ್ಠರೋಗದ ಚಿಕಿತ್ಸೆ ಕಲಿಯುವ ಬಗ್ಗೆ ಡಾಕ್ಟರ್ ಡಿ. ಆರ್. ಶೆಣಾಯಿಯವರನ್ನು ಸ್ಪೆಶಲ್ ಟ್ರೈನಿಂಗಿನ ಬಗ್ಗೆ ಕಲ್ಕತ್ತಾದಲ್ಲಿರುವ ಟ್ರೊಪಿಕಲ್ ಸ್ಕೂಲ್ ಆಫ್ ಮೆಡಿಸನ್ ಅಲ್ಲಿಗೆ ಕಳುಹಿಸತಕ್ಕದೆಂದೂ ನಿರ್ಣಯವಾಗಿದೆ.

ಬಲಾತ್ಕಾರದ ಮತಾಂತರ:—ಸುಮಾರು ಹದಿನಾರು ವರುಷ ಪ್ರಾಯದ ಬಂಗಾಳಿ ಹಿಂದೂ ಯುವಕನನ್ನು ಕದ್ದೊಯ್ದು ಮಹಮ್ಮದೀಯ ಮತಕ್ಕೆ ಮತಾಂತರಗೊಳಿಸಿದ ಆರೋಪದ ಮೇಲೆ ಮೂವರನ್ನು ಕಲ್ಕತ್ತೆಯಲ್ಲಿ ಕೈದುಮಾಡಿದೆ.

ಮದ್ರಾಸ್ ನ್ಯಾಯವಿಧಾಯಕ ಸಭೆ:—ಮದ್ರಾಸ್ ನ್ಯಾಯವಿಧಾಯಕ ಸಭೆಯ ೩ನೇ ಅಧಿವೇಶನವು ಕಳೆದ ತಾ. ೩ರಲ್ಲಿ ಪ್ರಾರಂಭವಾಗಿದೆ. ಕೆಲಸದಿಂದ ನಿವೃತ್ತರಾಗುವ ಹೊನರೇಬಲ್ ದಿವಾನ ಬಹದ್ದೂರ ಎಲ್. ಡಿ. ಸ್ವಾಮಿ ಕಣ್ಣುಪಿಳ್ಳೆಯವರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದ್ದರು. ಸುಮಾರು ೧೦೫ ಮಂದಿ ಮೆಂಬರರು ಹಾಜರಿದ್ದರು. ಹೊಸ ಪ್ರೆಸಿಡೆಂಟರ ಚುನಾವಣೆಯಾಗಿ ಮಿ। ಸ್ವಾಮಿ ಕಣ್ಣುಪಿಳ್ಳೆಯವರಿಗೆ ೬೮ ವೋಟುಗಳೂ, ಮ। ರಾ। ಎ. ಎಸ್. ಕೃಷ್ಣರಾಯರಿಗೆ ೪೨ ವೋಟುಗಳೂ ದೊರಕಿ ಮಿ। ಸ್ವಾಮಿ ಕಣ್ಣುಪಿಳ್ಳೆಯವರೇ ಪುನಃ ಅಧ್ಯಕ್ಷರಾಗಿ ಆರಿಸಲ್ಪಟ್ಟರು.

ವರ್ತಮಾನ್:—ಕೋನ್‌ಪುರದ "ವರ್ತಮಾನ್" ಎಂಬ ದೈನಿಕ ಪತ್ರಿಕೆಯ ಕಳೆದ ತಾ. ೧೪, ೧೬ ಮತ್ತು ೨೫ರ ಮುಖ್ಯ ಲೇಖಗಳು ರಾಜದ್ರೋಹಾತ್ಮಕವಾಗಿವೆಂದು ಆಕ್ಷೇಪಿಸಿ ಅದರ ಸಂಪಾದಕರನ್ನು ಸೆರೆಹಿಡಿಯಲು ಸೆಕ್ಷನ್ ೧೨೪ ಎ. ಮೇರೆಗೆ ವಾರಂಟು ಹೊರಟಿದೆ.

ಇಂಡಿಯನ್ ಕಾಫಿ ಪ್ಲೇಂಟರರ ಸಭೆ:—ಕಳೆದ ಸಂಚಿಕೆಯಲ್ಲಿ ಸೂಚಿಸಿದಂತೆ ಮೈಸೂರ್ ಇಂಡಿಯನ್ ಕಾಫಿ ಪ್ಲೇಂಟರರ ಸಭೆಯು ಕಾಫಿಯ ಕೇಂದ್ರಸ್ಥಳವಾದ ಚಿಕ್ಕಮಗಳೂರಿನ ಟೌನ್ ಹೋಲಿನಲ್ಲಿ ಮೈಸೂರು ನ್ಯಾಯವಿಧಾಯಕ ಸಭೆಯ ಮೆಂಬರರಾದ ಶ್ರೀಯುತ ಬಿ. ಕೆ. ಗರುಡಾಚಾರ್ಯರ ಅಧ್ಯಕ್ಷತೆಯಲ್ಲಿ ಸೇರಿತು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಕಾಫೀಯ ಪರೀಕ್ಷಾಕ್ಷೇತ್ರದ ಅವಶ್ಯಕತೆ, ಮಿ। ಹಜ್‌ರತ್ ಹುಸೇನ್ ಇವರನ್ನು ಮೈಸೂರು ದಿವಾನರಾಗಿ ನೇಮಕಪಟ್ಟ ಬಗ್ಗೆ ಅವರ ಅಭಿನಂದನ, ಕಾಫೀಸೆಸ್ಸಿನ ನಿಷೇಧ, ಮಲನಾಡಿಗೆ ರೈಲನ್ನು ಸಾಗಿಸುವ ಅವಶ್ಯಕತೆ, ಕೂಲಿಗಳನ್ನು ಸರಿಯಾಗಿ ಒದಗಿಸುವ ವಿಷಯ ಮೊದಲಾದವುಗಳ ಕುರಿತು ಭಾಷಣಮಾಡಿದರು. ಈ ಕೊನ್ಫರೆನ್ಸಿಗೆ ಬಾಳೂರು, ಕೊಪ್ಪ, ಸಕಲೇಶಪುರ ಮೂಡಗೆರೆ ಮೊದಲಾದ ಕಡೆಗಳಿಂದ ಪ್ರತಿನಿಧಿಗಳು ಬಂದಿದ್ದರು.

ಮುಂಬಯಿ ಕ್ರೊನಿಕಲ್ ಪತ್ರಿಕೆ:—ವೋಯಿಸ್ ಒಫ್ ಇಂಡಿಯಾ" ಪತ್ರಿಕೆಯ ಮ್ಹಾಲಿಕರಾದ ಶ್ರೀಯುತ ಎನ್. ಎಚ್. ಬೆಳಗಾಂವಾಲಾರವರು ಮುಂದಕ್ಕೆ ಮುಂಬಯಿ ಕ್ರೊನಿಕಲ್ ಪತ್ರಿಕೆಯ ಆಡಳಿತವನ್ನೂ ವಹಿಸಿಕೊಳ್ಳುವರಾದ್ದರಿಂದ ವೋಯಿಸ್ ಒಫ್ ಇಂಡಿಯಾ ಪತ್ರಿಕೆ ಪ್ರತ್ಯೇಕ ಪ್ರಕಟವಾಗುವುದು ನಿಲ್ಲಿಸಲ್ಪಟ್ಟು, ಕ್ರೊನಿಕಲೂ ವೋಯಿಸ್ ಒಫ್ ಇಂಡಿಯಾ ಪತ್ರಿಕೆಯೂ ಐಕ್ಯವಾಗಿ ಪ್ರಕಟವಾಗುವವು.

ಕೋನ್‌ಪುರ್ ಕೊಂಗ್ರೆಸ್:—ಮುಂದಿನ ಕೊಂಗ್ರೆಸ್ ಸಿದ್ಧತೆಯು ಈಗಲೇ ನಡೆಯುತ್ತಿದೆ. ಕೊಂಗ್ರೆಸ್ ಡೇರೆಯನ್ನು ಬೆಳಗಾಮಿನಿಂದ ಕೋನ್‌ಪುರಕ್ಕೆ ತರಿಸಿದೆ.

ದಕ್ಷಿಣ ಕನ್ನಡ.

ರಾಮಕುಂಜ:—ಶ್ರೀ ಹರಿಹರಪುರ ಮಠದ ಶ್ರೀರಾಮಾನಂದ ಸರಸ್ವತೀ ಶ್ರೀಪಾದಂಗಳವರು ಜನವರಿ ತಾರೀಕು ೧೫ ಗುರುವಾರ ಅಪರಾಹ್ನ ೩ ಘಂಟೆಗೆ ಇಲ್ಲಿಯ ರಾಮಕುಂಜ ಸಾಮ್ರಾಜ್ಯ ಸಂಸ್ಕೃತ ಪಾಠಶಾಲೆಗೆ ಚಿತ್ತಯಿಸಿದರು. ಮರುದಿನ ತಾ. ೧೬ ಶುಕ್ರವಾರ ಸದರಿಯವರಿಂದ ಪೂಜಿಸುತ್ತಾ ಬಂದಿದ್ದ ಶಾರದಾಮ್ಮನವರ ಸನ್ನಿಧಿಯಲ್ಲಿ ಈ ಶಾಲೆಗೆ ಸಂಬಂಧಪಟ್ಟ ಒಂದು ಬ್ರಹ್ಮಚರ್ಯಾಶ್ರಮ ಎಂಬ ವಿದ್ಯಾರ್ಥಿಭವನದ ಪ್ರವೇಶ ಮಹೋತ್ಸವವು ಅತಿ ವಿಜೃಂಭಣೆಯಿಂದ ಜರಗಿದುದು ತುಂಬಾ ಸಂತೋಷಕರ. ಇನ್ನು ಮುಂದೆ ಪರಊರುಗಳಿಂದ ಬರತಕ್ಕ ಸಂಸ್ಕೃತ ವಿದ್ಯಾಭ್ಯಾಸಿಗಳಿಗೆ ಭೋಜನಾದಿ ಸಕಲ ಕಾರ್ಯಗಳೂ ಬಹಳ ಸುಲಭ ಖರ್ಚಿನಿಂದಲೇ ನೆರವೇರುವುದು. ಸದರಿ ಶಾಲಾ ಸ್ಥಾಪಕರಾದ ಬ್ರಹ್ಮಶ್ರೀ ಪೆರ್ಲ ವೆಂಕಟ್ರಮಣಯ್ಯನವರು ಸದರಿ ಬ್ರಹ್ಮಚರ್ಯಾಶ್ರಮದಲ್ಲಿದ್ದ ವ್ಯಾಸಂಗ ಮಾಡತಕ್ಕ ವಿದ್ಯಾರ್ಥಿಗಳಿಗೆ ಪ್ರತಿ ಬುಧವಾರ ಮತ್ತು ಶನಿವಾರಗಳಲ್ಲಿ ಎಣ್ಣೆ ಹಚ್ಚಿ ಸ್ನಾನಮಾಡುವ ಬಗ್ಗೆ ಎಳ್ಳೆಣ್ಣೆ ಮಣ ಒಂದನ್ನು ಪ್ರತಿವರುಷವೂ ಕೊಡುತ್ತಾ ಬರುವುದಾಗಿ ವಾಗ್ದಾನ ಮಾಡಿದ ಸಂಗತಿ ತಿಳಿಸಲು ಅತ್ಯಾನಂದಪಡುತ್ತೇವೆ.

ಪುಂಜಾಲಕಟ್ಟೆ:—ಮಂಗಳೂರು ತಾಲೂಕು ಬೋರ್ಡಿನವರ ನಿರ್ಣಯದಂತೆ, ಡಾಕ್ಟರ್ ರಾ। ಹೆಬ್ಬಲಸಿನಕಟ್ಟೆ ವಾಸುದೇವ ಶೈಣೆಯವರು ಕಳೆದ ತಾ. ೧—೨—೧೯೨೫ರಲ್ಲಿ ತಮ್ಮ ರೂರಲ್ ಡಿಸ್ಪೆನ್ಸರಿಯನ್ನು ತೆರೆದಿರುವರು. ಈ ಸುದಿನ ರಾ। ಪತ್ತಮುಡಿ ವಾಸ್ತೇವರಾಯರೂ, ರಾ। ಗೆರಸಪ್ಪೆ ರಾಮಪೈಗಳವರೂ ಹಿತವಾದಗಳ ಮೂಲಕ ಅಲ್ಲಿ ನೆರೆದ ಸಭಿಕರಿಗೆ ಡಿಸ್ಪೆನ್ಸರಿಯ ಉದ್ದೇಶಗಳನ್ನು ತಿಳಿಯಪಡಿಸಿದರು. ಬಡಬಂದ ಊರಿನ ಜನರಿಗೆ ಬಿರುಮಳೆ ಗರೆದಂತೆ ಚಿಕಿತ್ಸೆಗಾಗಿ ಹಲ್ಲುಣಿಸುವ ಈ ಪ್ರಾಂತದ ಜನರಿಗೆ ಪರಮಸಹಾಯವಾಗದಿರದು. ಹಳ್ಳಿ ಪ್ರಾಂತ್ಯಗಳಲ್ಲಿ ಯೋಗ್ಯವಾದ ಕಟ್ಟೋಣಗಳೇ ದುರ್ಲಭ. ಪ್ರಸ್ತುತ ಅಲ್ಲಿಯ ಪಟೇಲರ ಚಿಕ್ಕದೊಂದು ಕಟ್ಟೋಣದಲ್ಲಿ ಈ ಡಿಸ್ಪೆನ್ಸರಿಯು ತೆರೆಯಲ್ಪಟ್ಟಿದೆ. ಆದರೆ ಇದು ಆರೋಗ್ಯಪ್ರದವಲ್ಲದುದರಿಂದಲೂ, ಇತರ ಕಟ್ಟೋಣಗಳ ಅಭಾವದಿಂದಲೂ, ದಯಾಳು ಡಿಸ್ಟ್ರಿಕ್ಟ ಬೋರ್ಡಿನವರು ಈ ಮೊದಲು ಹಣ್ಣೆಗೊಮ್ಮೆ ಬೆಳ್ತಂಗಡಿ ಡಾಕ್ಟರರು ಆಸ್ಪತ್ರೆ ನಡಿಸುತ್ತಿದ್ದ ಓವರ್‌ಸಿಯರ್ ಸೆಡ್ಡನ್ನು ಈ ಡಿಸ್ಪೆನ್ಸರಿ ಬಗ್ಗೆ ಕೊಟ್ಟರೆ ಉಚಿತವಿತ್ತು.

ಬೆಳ್ಳೆ:—ಮದ್ರಾಸ್ ಹಿಂದೂ ರಿಲಿಜಸ್ ಎನ್‌ಡೌಮೆಂಟ್ಸ್ ಪ್ರೊಟೆಕ್ಷನ್ ಲೀಗಿನ ಆಶ್ರಯದಲ್ಲಿ ಈ ಹಳ್ಳಿಯಲ್ಲಿ ಕಳೆದ ತಾ. ೩೦ಕ್ಕೆ ಮ। ರಾ। ಮಲ್ಲಾರ ಹೊನ್ನಯ್ಯ ಶೆಟ್ಟರ ಅಧ್ಯಕ್ಷತೆಯಲ್ಲಿ ಒಂದು ಸಭೆಯು ಸೇರಿತು. ಈ ಸಭೆಗೆ ಮ। ರಾ। ಎಚ್. ಸುಬ್ಬಯ್ಯ ಶೆಟ್ಟಿ, ಡಿ ಚೆಂದಯ್ಯ ಶೆಟ್ಟಿ, ಆರ್. ಚೆಂದು ಶೆಟ್ಟಿ, ಸಿ. ಕೋಚ ಶೆಟ್ಟಿ, ವಾಸಪ್ಪಯ್ಯ, ಹಿರಿಯಣ್ಣಯ್ಯ, ಪಿ. ರಂಗಪ್ಪ ನಾಯಕ್ ಮೊದಲಾದ ಗೃಹಸ್ಥರು ಹಾಜರಿದ್ದರು. ಹಿಂದು ರಿಲಿಜಸ್ ಎನ್‌ಡೌಮೆಂಟಿನ ಪರಿಣಾಮವನ್ನು ನೆರೆದ ಜನರಿಗೆ ವಿವರಿಸಿ ತಿಳಿಸಲಾಯಿತು. ಈ ಎಕ್ಟ ಪ್ರಚಾರಕ್ಕಾಲೋಪಪಡಿಸಬೇಕೆಂದು ನೆರೆದವರೆಲ್ಲರೂ ಅಭಿಪ್ರಾಯಪಟ್ಟರು. ಮತ್ತು ಚಕ್ರವರ್ತಿಯವರು ಈ ಲೀಗಿಗೆ ತಮ್ಮ ಸಮ್ಮತಿಯನ್ನು ಹಾಕಕೂಡದೆಂದು ಅವರಿಗೆ ವಿನಂತಿ ಮಾಡಿಕೊಳ್ಳುವ ತಂತಿಯು ಕಳುಹಿಸಬೇಕಾಗಿ ನಿರ್ಣಯವಾಗಿದೆ.

ಅಡ್ಯನಡ್ಕ:—ಕಳೆದ ತಾ. ೧೭ರಲ್ಲಿ ಇಲ್ಲಿಯ ಎಲಿಮೆಂಟರಿ ಶಾಲೆಯ ವಾರ್ಷಿಕ ವರ್ಧಂತಿ ಉತ್ಸವವು ಜರಗಿತು. ಅಧ್ಯಕ್ಷರು ಮುಂತಾದ ದೂರದಿಂದ ಬಂದ ಮಹನೀಯರನ್ನು ಎದುರುಗೊಂಡು ಸಭಾಕಾರ್ಯಾರಂಭವಾಯಿತು. ದೇವರ ಪ್ರಾರ್ಥನೆ, ಶಾಲಾ ವರದಿ ಓದೋಣ, ಮಕ್ಕಳಿಗೆ ಇನಾಮು ಹಂಚೋಣ ಇವಿಷ್ಟು ಆದ ಮೇಲೆ ಶ್ರೀಯುತ ಬಲಿಪ ನಾರಾಯಣ ಭಾಗವತರ 'ವಾಮನಚರಿತ್ರೆ' ಎಂಬ ಹರಿಕೀರ್ತನೆಯಾಯಿತು.

ಕೊನೆಗೆ 'ಕಡೆಕಂಜಿ' ಎಂಬ ಕಥೆಯನ್ನು ಶಾಲಾ ಮಕ್ಕಳು ನಾಟಕರೂಪವಾಗಿ ಅಭಿನಯಿಸಿದರು. ಅಧ್ಯಕ್ಷರು ಪ್ರಾಥಮಿಕ ಶಿಕ್ಷಣ ಸುಧಾರಣೆ ಎಂಬ ಸಣ್ಣದೊಂದು ಭಾಷಣವನ್ನು ಮಾಡಿದರು. ಅಧ್ಯಕ್ಷರೂ ಕೆಲವು ಜನ ಸಭ್ಯರೂ ಮಕ್ಕಳ ಇನಾಮಿಗೆ ಸಹಾಯ ತೋರಿಸಿದ ಮೇಲೆ ರಾಜಗೀತವನ್ನು ಹಾಡಿ ಸಭೆಯು ಸಂಪೂರ್ಣವಾಯಿತು. ರಾತ್ರಿಯಲ್ಲಿ ತಿರಿಗಿ ನಾರಾಯಣ ಭಾಗವತರ ಯಕ್ಷಗಾನವೂ ಇತ್ತು.

ಮಂಜೇಶ್ವರ:—ಕಾಸರಗೋಡು ತಾಲೂಕು ಬೋರ್ಡಿನ ಪ್ರೆಸಿಡೆಂಟರಾಗಿದ್ದ ಮ। ರಾ। ಗಳಾದ ವೈಕುಂಠ ಭಕ್ತರವರು ತಮ್ಮ ಚಾರ್ಜನ್ನು ಇದೇ ತಾ. ೨ರಲ್ಲಿ ಪುತ್ತೂರು ರೆವೆನ್ಯೂ ಡಿವಿಜನಲ್ ಆಫೀಸರವರಿಗೆ ವಹಿಸಿಕೊಟ್ಟಿರುವುದಾಗಿಯೂ ಹೊಸ ಇಲೆಕ್ಷನ್ ಮಾರ್ಚಿ ತಾರೀಕು ೨೨ಕ್ಕೆ ಜರಗುವುದಾಗಿಯೂ ಕೇಳುತ್ತೇವೆ.

ಇಲ್ಲಿಯ ಹೊಸಬೆಟ್ಟು ಪಂಚಾಯತ ಕೋರ್ಟಿನ ಮಾಜಿ ಪ್ರೆಸಿಡೆಂಟರೂ, ಈಗಿನ ಮೆಂಬರರೂ ಆಗಿದ್ದ ಉದ್ಯಾವರ ಮೊಯಿದಿನ್‌ಕುಂಞ ಬ್ಯಾರಿ ಸಾಹೇಬರವರು ಕೋರ್ಟು ಮೀಟಿಂಗುಗಳಿಗೆ ಬಾರದೆ ತಮ್ಮ ಮೆಂಬರಿಕೆಯನ್ನು ಕಳಕೊಂಡಿರುವುದರಿಂದ ಇವರ ಬದಲಿಗೆ ಹೊಸ ಮೆಂಬರರಾಗಿ ಮಲಯಾಳಿ ಬಿಲ್ಲವರಾದ ಮ। ರಾ। ಕುಂಞಪ್ಪರನ್ನು ಆರಿಸಿದೆ.

ಈಗಣ ಪ್ರೆಸಿಡೆಂಟರಾದ ಮ। ರಾ। ರಾ। ನಾರಾಯಣ ಪೈಗಳವರ ಅಧ್ಯಕ್ಷತೆಯಲ್ಲಿ ಈ ಕೋರ್ಟು ಚಲೋದಾಗಿ ನಡೆದು ಬರುವುದು ತುಂಬಾ ಸಂತೋಷಕರವಾದ ವಾರ್ತೆ. ೧೯೨೩ರಕ್ಕಿಂತ ೧೯೨೪ರಲ್ಲಿ ವ್ಯಾಜ್ಯಗಳು ಅಧಿಕವಾಗಿ ದಾಖಲಾಗಿ ಮುಗಿದಿವೆ. ಈ ವರ್ಷ ಕಳೆದ ಜನವರಿ ತಿಂಗಳೊಂದರಲ್ಲೇ ನೂರು ವ್ಯಾಜ್ಯಗಳು ದಾಖಲಾಗಿ ಇವುಗಳಲ್ಲಿ ಕೆಲವು ತೀರ್ಮಾನವಾಗಿವೆಯಾಗಿ ತಿಳಿಸಲು ತುಂಬಾ ಸಂತೋಷಪಡುತ್ತೇವೆ.

ಈ ತಿಂಗಳ ತಾ. ೬ನೇ ಶುಕ್ರವಾರ ದಿನ ಇಲ್ಲಿ ಭಾರಿ ಕಂಬಳವು ನಡೆಯುವುದಾಗಿ ಕೇಳುತ್ತೇವೆ. ಈ ಕಂಬಳಕ್ಕೆ ಅನೇಕ ಕಡೆಗಳಿಂದ ಓಟದ ಕೋಣಗಳು ಬರುವವಂತೆ.

ಇಲ್ಲಿಯ ಶ್ರೀಮದನಂತೇಶ್ವರ ದೇವಸ್ಥಾನದ ಭಂಡಾರದಿಂದ ೧ನೇ ದರ್ಜೆಯಿಂದ ೮ನೇ ದರ್ಜೆಯ ವರೆಗೆ ಇರುವ ಒಂದು ಸಂಪೂರ್ಣ ಹಾಯರ್ ಎಲಿಮೆಂಟರಿ ಶಾಲೆಯನ್ನೂ, ಬಂಗ್ರ ಮಂಜೇಶ್ವರದಲ್ಲಿ ಒಂದು ಲೋವರ ಎಲಿಮೆಂಟರಿ ಶಾಲೆಯನ್ನೂ, ಒಂದು ಧರ್ಮಾಸ್ಪತ್ರೆಯನ್ನೂ ತೆರೆಯುವದೆಂತ ನಿಶ್ಚಯಿಸಲಾಗಿದೆ.

ಈಗ ಸರಕಾರದಿಂದ, ಕಾಸರಗೋಡು ಮತ್ತು ಪುತ್ತೂರು ತಾಲೂಕು ಬೋರ್ಡುಗಳನ್ನು ಒಂದಾಗಿ ಯಾಕೆ ಮಾಡಬಾರದು? ಎಂದು ಕಾಸರಗೋಡು ತಾಲೂಕು ಬೋರ್ಡಿಗೂ, ಉಪ್ಪಿನಂಗಡಿ ತಾಲೂಕು ಬೋರ್ಡಿಗೂ, ಡಿಸ್ಟ್ರಿಕ್ಟ ಬೋರ್ಡಿಗೂ, ಜಿಲ್ಲಾ ಕಲೆಕ್ಟರ ದೊರೆಗಳವರಿಗೂ ಪ್ರತ್ಯೇಕಪ್ರತ್ಯೇಕ ಹುಕುಮುಗಳು ಬಂದಿವೆ. ಆದುದರಿಂದ ಈ ತರವಲ್ಲಿ ಕಾಸರಗೋಡು ತಾಲೂಕು ಬೋರ್ಡನ್ನು ಪುತ್ತೂರು ತಾಲೂಕು ಬೋರ್ಡಿಗೆ ಕೂಡಿಸಿದರೆ ಕಾಸರಗೋಡು ತಾಲೂಕಿನ ನಿವಾಸಿಗಳಿಗೆ ಸರಕಾರದವರು ಅನ್ಯಾಯ ಮಾಡಿದಂತಾಗುವದೆಂದೂ ಮೊದಲಿನಿಮ್ಮ ಈ ತಾಲೂಕು ಉಪ್ಪಿನಂಗಡಿ ತಾಲೂಕು ಬೋರ್ಡಿಗೆ ಕೂಡಿದ್ದಾಗ ಈ ತಾಲೂಕಿನಲ್ಲಿ ಯಾವ ತರದ ಅಭಿವೃದ್ಧಿಯೂ ಇಲ್ಲದೆ, ಈ ತಾಲೂಕಿನ ಹಣವೆಲ್ಲವೂ ಪುತ್ತೂರು ತಾಲೂಕಿನ ಅಭಿವೃದ್ಧಿಗೆ ಖರ್ಚಾಗುತ್ತಿತ್ತೆಂದೂ ಕಾಸರಗೋಡು ತಾಲೂಕು ಬೋರ್ಡನ್ನು ಪ್ರತ್ಯೇಕ ತಾಲೂಕು ಬೋರ್ಡಾಗಿ ಇರಿಸಬೇಕೆಂದೂ ಇಲ್ಲಿ ಒಂದು ಸಭೆಕೂಡಿಸಿ ಸರಕಾರಕ್ಕೆ ಟೆಲಿಗ್ರಾಮು ಬಿಡಬೇಕೆಂದೂ ನಿಶ್ಚಯಿಸಿಯದೆ. ಈ ಮನವಿಗೆ ಬೆಂಬಲವಾಗಿ ಕುಂಬಳೆ, ಕಾಸರಗೋಡು, ಹೊಸದುರ್ಗ, ಚೇಕಲ, ನೀಲೇಶ್ವರ, ತ್ರಿಕರಪುರ, ಬಾಯಾರು, ಆದೂರು ಮುಂತಾದ ಸರ್ಕಲುಗಳ ಓಟರುಗಳು ಅಲ್ಲಲ್ಲಿ ಸಭೆ ಕೂಡಿಸಿ ಕಾಸರಗೋಡು ತಾಲೂಕು ಬೋರ್ಡನ್ನು ಉಪ್ಪಿನಂಗಡಿ ತಾಲೂಕು ಬೋರ್ಡಿಗೆ ಕೂಡಿಸದೆ ಪ್ರತ್ಯೇಕ ತಾಲೂಕು ಬೋರ್ಡಾಗಿ ಇರಿಸಬೇಕೆಂದು ಟೆಲಿಗ್ರಾಮು ಬಿಟ್ಟರೆ ಒಳ್ಳೇದಾಗುವುದರಲ್ಲಿ ಸಂಶಯವಿರಲಿಕ್ಕಿಲ್ಲ. ಮುಂದಾಳುಗಳೇ ಕಣ್ಣು ತೆರೆಯಿರಿ.

ಉದ್ಯಾವರ:—ಇಲ್ಲಿಯ ಎಲಿಮೆಂಟರಿ ಶಾಲೆಯಲ್ಲಿ ಬರೇ ೩೦ ಹುಡುಗರು ಮಾತ್ರವೆ ಹಾಜರಾಗುವುದರಿಂದ ಈ ಶಾಲೆಯಲ್ಲಿ ಅನಾವಶ್ಯಕ ಮೂವರು ಉಪಾಧ್ಯಾಯರನ್ನು ಇಡುವುದರ ಬದಲಾಗಿ ಇಲ್ಲಿಯ ಉಪಾಧ್ಯಾಯರಲ್ಲಿ ಒಬ್ಬರನ್ನು ಸುಮಾರು ೧೨೦ ಮಂದಿ ಮಕ್ಕಳಿರುವ ಕುಂಜತ್ತೂರು ಶಾಲೆಗೆ ಕೊಟ್ಟರೆ ಒಳ್ಳೆದಿತ್ತು.

ಬಂಟವಾಳ:—ಇಲ್ಲಿಯ ಶ್ರೀ ವೆಂಕಟ್ರಮಣ ಸ್ವಾಮಿ ಟೆಂಪಲ ಸೆಕೆಂಡರಿ ಶಾಲೆಯನ್ನು ಈಗ ಬಂಟವಾಳಕ್ಕೆ ಬಂದಿರುವ ಕಷ್ಟದ ದೆಸೆಯಿಂದ ಇದೇ ಶಾಲೆಯನ್ನು ಸಂಪೂರ್ಣ ಹಾಯರ ಎಲಿಮೆಂಟರಿ ಶಾಲೆಯಾಗಿ ಏರ್ಪಡಿಸಿ ಬಂಟವಾಳವು ತಿರಿಗಿ ಉನ್ನತ ಸ್ಥಿತಿಗೆ ಬಂದ ಮೇಲೆ ಇದನ್ನು ತಿರಿಗಿ ಸೆಕೆಂಡರಿ ಶಾಲೆಯಾಗಿ ಮಾರ್ಪಡಿಸಬಹುದೆಂದೂ ಆಲೋಚನೆಯಾಗಿದೆ. ಇದರಿಂದ ಬಡಸ್ಥಿತಿಗೆ ಬಂದ ಬಂಟವಾಳದ ನಿವಾಸಿಗಳಿಗೆ ಎಲಿಮೆಂಟರಿ ಶಾಲೆಗಿರುವ ಅಲ್ಪ ಸಂಬಳವನ್ನು ಕೊಡಲಿಕ್ಕೆ ಸಾಧ್ಯವಾಗುವುದು. ಹುಡುಗರ ಸಂಖ್ಯೆಯೂ ಹೆಚ್ಚಾಗುವುದು, ಶಾಲೆಯ ಖರ್ಚೂ ಕಡಿಮೆಯಾಗುವುದು. ಸರಕಾರಿ ಗ್ರೇಂಟೂ ಹೆಚ್ಚಿಗೆ ಸಿಕ್ಕುವುದು. ಕಲಿಸುವ ಪಾಠಗಳು ಈಗಿನ ಕ್ರಮಗಳ ಪ್ರಕಾರ III ಫೋರ್ಮಿನ ವರೆಗೆ ಕಲಿಸುವ ಪಾಠಗಳಲ್ಲಿ ಸೆಕೆಂಡರಿ ಶಾಲೆಗೂ, ಎಲಿಮೆಂಟರಿ ಶಾಲೆಗೂ ಎಳ್ಳಷ್ಟು ವ್ಯತ್ಯಾಸವಿರುವುದಿಲ್ಲ. ಬಿ. ಎ. ಪಾಸಾದ ಉಪಾಧ್ಯಾಯರೂ ಅಗತ್ಯವಿಲ್ಲ. ಸುಮರ ವಿಜಾನಿಗೋಸ್ಕರ ಅನಾವಶ್ಯಕ ಹಣ ವೆಚ್ಚವೂ ಆಗತ್ಯವಿಲ್ಲ.

ಬಾಯಾರು:—ಮಂಜೇಶ್ವರ ತಾಲೂಕು ಬೋರ್ಡ ಆಸ್ಪತ್ರೆಗೆ ತಿಂಗಳಿಗೆ ರೂ ೧೨೦ ಸಂಬಳದ ಡಾಕ್ಟರರನ್ನು ಇಡುವುದರ ಬದಲಾಗಿ ಹೊಸ ಸ್ಕೀಮಿನ ಪ್ರಕಾರ ರೂ ೪೫ ಸಂಬಳದ ಡಾಕ್ಟರರನ್ನು ಇಟ್ಟು ಉಳಿಯುವ ಹಣದಿಂದ ಇಲ್ಲಿ ಒಂದು ಆಸ್ಪತ್ರೆಯನ್ನು ತೆರೆದರೆ, ಹಳ್ಳಿ ಮೂಲೆಯಾದ ಈ ಬಾಯಾರು ಸೀಮೆಯ ಪ್ರಜೆಗಳನ್ನು ರೋಗರುಜಿನಗಳ ಪೀಡೆಯಿಂದ ಪಾರುಮಾಡಿದ ಪುಣ್ಯ ತಾಲೂಕು ಬೋರ್ಡಿಗೆ ಸಿಕ್ಕುತ್ತಿತ್ತು.

ವಿಟ್ಲ:—ಉಪ್ಪಿನಂಗಡಿ ತಾಲೂಕು ಬೋರ್ಡಿನವರು ಹೊಸ ಸ್ಕೀಮಿನ ಪ್ರಕಾರ ಒಂದು ಹಳ್ಳಿ ಆಸ್ಪತ್ರೆಯನ್ನು ತೆರೆದಿರುವರು. ಇದನ್ನು ಸರ್ಜಿಕಲ್ ಒಪರೇಶನ್ ಹಳ್ಳಿ ಆಸ್ಪತ್ರೆಯಾಗಿ ತೆರೆದಿದ್ದರೆ ಉತ್ತಮವಿತ್ತು. ವಿಟ್ಲ ಸೀಮೆಯು ಬಹಳ ಜನಭರಿತವಾದ ಸೀಮೆಯಾಗಿದೆ. ಉಪ್ಪಿನಂಗಡಿ ತಾಲೂಕು ಬೋರ್ಡಿಗೆ ಈ ಸೀಮೆಯಿಂದಲೆ ಸಾಲು ಸಾಲು ತೀರ್ವೆಯ ಹಣ ದೊರಕುತ್ತದೆ. ಇದ್ದ ಹಣವನ್ನೆಲ್ಲಾ ಪುತ್ತೂರು ಆಸ್ಪತ್ರೆಗೇ ಖರ್ಚು ಮಾಡಿದರೆ ಸಾಲದು.

ಕಡಬ:—ಇಲ್ಲಿಯೂ ಒಂದು ಹಳ್ಳಿ ಆಸ್ಪತ್ರೆಯನ್ನು ತೆರೆದಿರುತ್ತಾರೆ.

ಧರ್ಮಸ್ಥಳ:—ಇಲ್ಲಿಯ ದೇವಸ್ಥಾನದ ಭಂಡಾರದ ಹಣದಿಂದ ಒಂದು ಧರ್ಮಾಸ್ಪತ್ರೆಯನ್ನು ತೆರೆದರೆ ಮಲೆಜ್ವರಪೀಡಿತರಾದ ಈ ಪ್ರದೇಶದ ನಿವಾಸಿಗಳಿಗೆ ಮದ್ದಿನ ಧರ್ಮ ಮಾಡಿದಂತಾಗುವುದು. ಈಗ ಎಲ್. ಎಮ್. ಪಿ. ಪಾಸಾದ ಅನೇಕ ಮಂದಿ ಡಾಕ್ಟರರು ಸಿಕ್ಕುತ್ತಾರೆ.

ಶೀರೆ:—ಇಲ್ಲಿ ತಾಲೂಕು ಬೋರ್ಡಿನವರು ಒಂದು ಎಲಿಮೆಂಟರಿ ಶಾಲೆಯನ್ನು ತೆರೆದಿರುತ್ತಾರೆ.

ಕಾಸರಗೋಡು:—ಇಲ್ಲಿಯ ತಾಲೂಕು ಬೋರ್ಡಿನಿಂದ ದಶಂಬರ ತಿಂಗಳ ೧ನೇ ತಾರೀಕಿನಿಂದ ಇಷ್ಟರ ವರೆಗೆ ೨೪ ಶಾಲೆಗಳಿಲ್ಲದ ಹಳ್ಳಿಗಳಲ್ಲಿ ೨೪ ಶಾಲೆಗಳನ್ನು ತೆರೆದಿರುತ್ತಾರೆ.

ಈ ತಾಲೂಕು ಬೋರ್ಡಿನ ಪ್ರೆಸಿಡೆಂಟರಾದ ಮ. ರಾ. ರಾ. ಬಿ. ಎಲ್. ಭಕ್ತರವರು ಕಳೆದ ಸೋಮವಾರ ೨ನೇ ತಾರೀಕಿನ ಅಪರಾಹ್ನ ೩ ಗಂಟೆಗೆ ಪುತ್ತೂರು ಡಿವಿಜನಿನ ಡಿಪ್ಯುಟಿ ಕಲೆಕ್ಟರರ ಕೈಯಲ್ಲಿ ತಾಲೂಕು ಬೋರ್ಡಿನ ಚಾರ್ಜನ್ನು ಕೊಟ್ಟಿರುತ್ತಾರೆ.

ಕುಂಬಳೆ:—ಇಲ್ಲಿ ತಾ. ೧—೨—೨೫ರಲ್ಲು ೨ ಗಂಟೆಗೆ ಕಾಸರಗೋಡು ತಾಲೂಕು ಮುಸ್ಲಿಂ ಎಯಿಡೆಡ್ ಶಾಲೆಗಳ ಮೆನೇಜರರ ವ ಪ್ರತಿನಿಧಿಗಳ ಒಂದು ಸಭೆ ಜರಗಿತು. ಡಿಸ್ಟ್ರಿಕ್ಟ್ ಎಡ್ಯುಕೇಶನಲ್ ಕೌನ್ಸಿಲ್ ಮೆಂಬರರೂ ನಮ್ಮ ಜಿಲ್ಲೆಯ ಒಬ್ಬ ಪ್ರಮುಖರೂ ಆದ ಮಿ। ಮುಹಮ್ಮದ್ ಪುತ್ತೂರು ಸಾಹೇಬ್ ಬಹದೂರರವರು ಅಧ್ಯಕ್ಷ ಪೀಠವನ್ನಲಂಕರಿಸಿದರು. ಪ್ರಾರ್ಥನೆಯೂ ಮೊಗ್ರಲ್ ಜಮಾತ್ ಶಾಲಾ ವಿದ್ಯಾರ್ಥಿಗಳ ಅಂದಗಾದ ಹಾಡೂ ಆದ ನಂತರ ರಾ. ಎಮ್. ಸೀ. ಮಯ್ಯಿಯವರು ಸಭೆ ಕೂಡಿಸಿದ ಉದ್ದೇಶ, ಮತ್ತು ಮುಂದಿನ ಕೆಲಸವೇನೆಂಬದರ ಕುರಿತು ಮಾತಾಡಿದ ನಂತರ ರಾ. ಮುಹಮ್ಮದ್ ಶಿರೂಲ್‌ರವರು ಸೂಚಿಸಿ ರಾ. ಮುಹಮ್ಮದ್ ತನ್ನಾಡರವರು ಅನುಮೋದಿಸಿದ ಮೇರೆಗೆ ಕಾಸರಗೋಡು ತಾಲೂಕಿನ ಮುಸ್ಲಿಂ ಸಹಾಯಕ ಶಾಲೆಗಳ ಪ್ರತಿನಿಧಿಗಳ ಸಂಘ"ಎಂಬದೊಂದು ಸಂಘವನ್ನೇರ್ಪಡಿಸಿ ಸಂಘದ ನಿಬಂಧನೆಯನ್ನು ತಯಾರಿಸುವುದಕ್ಕಾಗಿಯೂ ಬೇರೊಂದು ಸಭೆಯನ್ನು ಬರುವ ತಿಂಗಳಲ್ಲಿಯೇ ಆದಷ್ಟು ಬೇಗನೇ ಕೂಡಿಸಿ ನಿಬಂಧನೆಗಳನ್ನು ಪಾಸುಮಾಡಿಸುವುದಕ್ಕಾಗಿಯೂ ಜಿಲ್ಲಾ ಮುಸ್ಲಿಂ ಶಾಲೆಗಳ ಇನ್ಸ್‌ಪೆಕ್ಟರರಾದ ಮಿ। ಅಬ್ದುಲ್ ರಹಿಮಾನ್ ಸಾಹೇಬ್ ಕೂಡಾ ೯ ಜನ ಗೃಹಸ್ಥರ ಒಂದು ಕಮಿಟಿ ನೇಮಕವಾಯಿತು. ವಿದ್ಯಾಭ್ಯಾಸದ ಕುರಿತು ಅಧ್ಯಕ್ಷರವರು ಹಿಂದುಸ್ಥಾನಿಯಲ್ಲಿ ಭಾಷಣಮಾಡಿದರು. ಅದನ್ನು ಮಲೆಯಾಳಿಯಲ್ಲಿ ತರ್ಜುಮೆಮಾಡಿ ಹೇಳಲಾಯಿತು. ಈ ಸಭೆ ೪ ಗಂಟೆಗೆ ಮುಕ್ತಾಯವಾಯಿತು.

೨ನೇ ಸಭೆ ೪ ಗಂಟೆಗೆ ಮೆ। ಮುಹಮ್ಮದ್ ಪುತ್ತೂರು ಸಾಹೇಬರವರ ಅಧ್ಯಕ್ಷತೆಯಲ್ಲಿ ನಮ್ಮ ಜಿಲ್ಲೆಗೆ ಮುಸ್ಲಿಮರ ವಿದ್ಯಾಭ್ಯಾಸ ಸಭೆಗೆ ಅಧ್ಯಕ್ಷರಾಗಿ ಬರಲು ಮೌಲಾನಾ ಮಹಮ್ಮದಾಲಿಯವರಿಗೆ ಆಮಂತ್ರಣ ಕಳುಹಿಸುವ ಆಲೋಚನೆ ಬಗ್ಗೆ ಮೊದಲು ಕೊಟ್ಟಿದ್ದ ನೋಟೀಸು ಪ್ರಕಾರ ಒಂದು ಸಭೆ ಜರಗಿತು. ಸಭೆಗೆ ಮುಸ್ಲಿಂ ಗೃಹಸ್ಥರಲ್ಲದೆ ಹಲವು ಹಿಂದೂ ಗೃಹಸ್ಥರೂ ಹಾಜರಿದ್ದರು. ಮಿ। ಸಾಹುಕಾರ್ ಕುಂಞಪಕ್ಕಿಯವರು ಸಭೆಯ ಉದ್ದೇಶದ ಕುರಿತು ಮಾತನಾಡಿದನಂತರ ಹಲವು ತರದ ಚರ್ಚೆ ನಡೆದು ಹನ್ನೆರಡನೆ ಬೇರೆ ಮೆಂಬರರನ್ನು ಸೇರಿಸಿ ಜಿಲ್ಲೆಯ ಮುಸ್ಲಿಮ್ ಇತರ ಮುಖಂಡರನ್ನು ಕರೆದು ಆಲೋಚಿಸಿ ಜಿಲ್ಲೆಯಲ್ಲಿ ಒಂದು "ವಿದ್ಯಾಭ್ಯಾಸ ಪರಿಷತ್ತನ್ನು ಮೌಲಾನಾ ಮಹಮ್ಮದಲಿಯವರ ಅಧ್ಯಕ್ಷತೆಯಲ್ಲಿ ಜರಗಿಸುವ ಏರ್ಪಾಡು ಮಾಡಲಿಕ್ಕೆ ಮಿ. ಮುಹಮ್ಮದ್ ಶಿಮ್ನಾಡ್ M. L. A. ವಗೈರೆ ೫ ಜನ ಗೃಹಸ್ಥರ ಒಂದು ಕಮಿಟಿ ನೇಮಕಮಾಡಿದೆ. ಸಭೆ ಕರೆಯಲಿಕ್ಕೆ ಮಿ। ಎಮ್. ಸಿ. ಮಯ್ಯಿಯವರನ್ನು ನೇಮಿಸಿ ೫॥ ಗಂಟೆಗೆ ಸಭೆ ಮುಗಿಸಲಾಯಿತು.

ಅನಂತರ ಅದೇ ದಿನ ಸಾಯಂಕಾಲ ಸುಮಾರು ೫॥ ಘಂಟೆಗೆ ಮೆ। ಸಿ ಅಹಮ್ಮದ್ ಕುಟ್ಟಿ ಮೌಲಾಯಿಯವರ ಅಧ್ಯಕ್ಷತೆಯಲ್ಲಿ ಮೊಗ್ರಾಲ್ ಜಮಾತ್ ಶಾಲಾ ವಿದ್ಯಾರ್ಥಿಗಳ ಒಂದು ಸಭೆ ಜರಗಿತು. ಸಭೆಗೆ ಸಿ. ಕೆ. ಹಬೀಬ್ ತಂಗಳ್ ಪಿ. ಮುಹ್ಯುದ್ದೀನ್ ಎಮ್। ಅಬ್ದುಲ್ಲ. ಮಿ। ಅಬ್ಬಾಸ್ ಇವರನ್ನು ಪ್ರೆಸಿಡೆಂಟ್ ಸೆಕ್ರೆಟರಿ ಜೋಯಿಂಟ್ ಸೆಕ್ರೆಟರಿ ಟ್ರೆಜರರಾಗಿ ನೇಮಕಮಾಡಿ ಬಾಕಿ ಕೆಲಸಗಳನ್ನು ಮಾಡುವ ಬಗ್ಗೆ ಸಭೆಯನ್ನು ಬರುವ ಗುರುವಾರಕ್ಕೆ ಮುಂದರಿಸಿ ೬॥ ಗಂಟೆಗೆ ಸಭೆ ಮುಕ್ತಾಯವಾಯಿತು. ೩ನೇ ಸಭೆಯು ರಾತ್ರಿ ಶಾಲೆ (Night School) ಒಂದನ್ನು ಸ್ಥಾಪಿಸುವ ಆಲೋಚನೆ ಮಾಡಲಿಕ್ಕೆ ಎಂ. ಸಿ. ಕೆ. ಕುಂಞಮ್ಮದೆಯವರು ಏರ್ಪಾಡು ಮಾಡಿದ್ದ ಸಭೆ ಕೂಡಲಿಕ್ಕೆ ಕತ್ತಲೆಯಾಗಿ ಅನಾನುಕೂಲವಾದ್ದರಿಂದ ಆ ಸಭೆಯನ್ನು ಮರುದಿನಕ್ಕೆ ಮುಂದರಿಸಲಾಯಿತು.

ಕಳೆದವಾರ ಜರುಗಿದ ಮಂಗಳೂರ ತಾಲೂಕು ಬೋರ್ಡು ಮೀಟಿಂಗಿನಲ್ಲಿ ಮ. ರಾ. ಬಿ. ಎಲ್. ಅಹಮದರವರು ಮಂಗಳೂರ ತಾಲೂಕು ಬೋರ್ಡಿನಿಂದ ಜಿಲ್ಲಾ ಎಡ್ಯುಕೇಶನಲ್ ಕೌನ್ಸಿಲು ಮೆಂಬರರಾಗಿಯೂ ಮ॥ ರಾ॥ ಬೋಳ ಮಾಧವ ರಾಯರು ಪುನಃ ಡಿಸ್ಟ್ರಿಕ್ಟ ಬೋರ್ಡು ಮೆಂಬರರಾಗಿಯೂ ಆರಿಸಲ್ಪಟ್ಟಿರುವರು.

ಕವಿರಾಜ ಎನ್. ಮಹಾಬಲ ಶೆಟ್ಟರ ಆಯುರ್ವೇದ ಧರ್ಮ ಚಿಕಿತ್ಸಾಲಯದ ಪ್ರವೇಶ ಸಮಾರಂಭವು ಕಳೆದ ಸೋಮವಾರ ಬೆಳಿಗ್ಗೆ ೯॥ ಗಂಟೆಗೆ ನಡೆಯಿತು.

ಕಾರ್ಕಳ ತಾಲೂಕು ಬೋರ್ಡಿಗೆ ಕಾರ್ಕಳ ಸರ್ಕಲಿನಿಂದ ೪, ಅಜೆಕಾರ ಸರ್ಕಲಿನಿಂದ ೪, ಮೂಡಬಿದ್ರೆ ಸರ್ಕಲಿನಿಂದ ೪ ಹೀಗೆ ೧೨ ಮಂದಿ ಮೆಂಬರರ ಚುನಾವಣೆಯು ನಡೆಯುವುದು. ಉಮೇದ್ವಾರರು ಬರುವ ೨೫ನೇ ತಾರೀಕಿನ ಬೆಳಿಗ್ಗೆ ೧೧ ಗಂಟೆಯಿಂದ ಶ್ಯಾಮ ೫ ಗಂಟೆ ವರೆಗೆ ಚುನಾವಣೆ ಪ್ರೆಸಿಡೆಂಟರಾದ ರಾ॥ ಜಿ. ದತ್ತಾತ್ರೇಯರಾಯರ ಮುಂದೆ ತಮ್ಮ ನೋಮಿನೇಶನ್‌ಗಳನ್ನು ಹಾಜರುಪಡಿಸಬೇಕಾಗಿದೆ. ಚುನಾವಣೆಯು ಮಾರ್ಚಿ ತಾ. ೨೧ರಲ್ಲಿ ನಡಿಯುವುದು.

ಬರುವ ಮಾರ್ಚಿ ತಾ. ೧ರಿಂದ ಮಂಗಳೂರಿನಿಂದ ಮೈಲು ಟ್ರೈನು ಬಂಡಿಯು ಬೆಳಿಗ್ಗೆ ೮-೩೦ ಗಂಟೆಗೆ ಬಿಡುವ ಏರ್ಪಾಡು ಮಾಡಲಾಗುವುದೆಂದು ವದಂತಿ ಇದೆ.

ಗೌಡಸಾರಸ್ವತ ಬ್ರಾಹ್ಮಣರ ಮಹಾ ಸಭೆಯ ವರುಷಾವಧಿ ಅಧಿವೇಶನವು ಈ ದಿನ ಸಾಯಂಕಾಲ ೫-೩೦ ಗಂಟೆಗೆ ಸೇರುವುದು.

ವ್ಯಾ. ಎಮ್. ಸಿ. ಎ. ಇವರಿಂದ ನಡಿಸಲ್ಪಡುವ ಪಂದ್ಯಾಟಗಳು ಬರುವ ಶನಿವಾರ ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಜರಗುವುದು.

ಸೌತ್ ಕೆನರಾ ಬೇಡ್‌ಮೆಂಟನ್ ಟೂರ್ನಮೆಂಟು ಬರುವ ತಾ. ೧೬ರಿಂದ ಪ್ರಾರಂಭವಾಗುವುದು. ಪ್ರವೇಶ ಫೀಸು ರೂ. ೩ ಇಟ್ಟಿರುತ್ತದೆ.

ಧಾರೇಶ್ವರ ಗಾರ್ಡನಿನಲ್ಲಿ ಶ್ರೀಯುತ ಹರೇಂದ್ರನಾಥ ಚಟ್ಟೋಪಾಧ್ಯಾಯರು ಸ್ಪಿನ್ನಿಂಗ್ ಕ್ಲಬ್ಬನ್ನು ತೆರೆದಿರುತ್ತಾರೆ.

ಇಲ್ಲಿಯ ಗವರ್ನಮೆಂಟ ಸೆಕೆಂಡರಿ ಟ್ರೈನಿಂಗ್ ಕಾಲೆಯ ವರ್ಧಂತಿಯು ಇದೇ ಬರುವ ತಾ. ೨೧ರಲ್ಲಿ ಜರಗುವುದು.

ಮುಲ್ಕಿ:—ಮಂಗಳೂರಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ರಾಮಕೃಷ್ಣಧರ್ಮವೈದ್ಯಾಶ್ರಮದ ಒಂದು ಶಾಖೆಯು ಕಳೆದ ತಾ. ೪ನೇ ಬುಧವಾರ ಇಲ್ಲಿಯೂ ಸಹ ಸ್ಥಾಪಿಸಲ್ಪಟ್ಟಿತು. ಈ ಶಾಖೆಯ ಮುಹೂರ್ತ ಸಮಾರಂಭಕ್ಕೆ ಮಂಗಳೂರಿನಿಂದ ಧರ್ಮವೈದ್ಯಾಶ್ರಮದ ಖಜಾನಜಿಯರಾದ ಮ॥ ರಾ॥ ರಾ॥ ನರಸಿಂಹ ಮತ್ತು ಭಂಡಾರಿಗಳು, ಕಾರ್ಯದರ್ಶಿಗಳಾದ ರಾ॥ ವಿ. ಶ್ರೀನಿವಾಸ ಕಾಮತರವರು, ಮ॥ ರಾ॥ ರಾ॥ ರಿಟಾಯರ್ಡ್ ಡಿಪ್ಯುಟಿ ಕಲೆಕ್ಟರ ಮತ್ತು ಕೊ-ಒಪರೇಟಿವ್ ಸೊಸೈಟಿ ರಿಜಿಸ್ಟ್ರಾರರಾದ ಡಿ. ಆನಂದರಾಯರು ಮೊದಲಾದವರು ಬಂದಿದ್ದರು. ಈ ಸಮಾರಂಭದಲ್ಲಿ ಕೂಡಿದ ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿಕೊಂಡ ರಾ॥ ಡಿ ಆನಂದ ರಾಯರನ್ನು ಬೇಂಡ ವಾದ್ಯ ಇತ್ಯಾದಿಗಳೊಡನೆ ವೈದ್ಯಾಶ್ರಮದ ಚಿಕಿತ್ಸಾಲಯವು ತೆರೆಯಲ್ಪಡುವ ಪಂಚಮಾಲಿನ ಧರ್ಮಸಾಲೆಗೆ ಕರತಂದನಂತರ ಕ್ರಮಪ್ರಕಾರವಾಗಿ ದೇವರ ಪ್ರಾರ್ಥನೆ ಪೂಜಾದಿಗಳು ನಡೆದವು ಅನಂತರ ಮುಲ್ಕಿ ಶ್ರೀ ವೆಂಕಟರಮಣ ದೇವಸ್ಥಾನದ ಆಡಳ್ತೆದಾರರ ಕಡೆಯಿಂದ ಶ್ರೇಷ್ಠ ಮೊಕ್ತೇಸರರಾದ ರಾ. ಉಡಿಯಾವರ ಲಕ್ಷ್ಮಣ ಶ್ಯಾನುಭಾಗರು ಮ॥ ರಾ॥ ಡಿ. ಆನಂದರಾಯರು ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿಕೊಳ್ಳಬೇಕೆಂತ ವಿಜ್ಞಾಪಿಸಿಕೊಂಡರು. ಅಧ್ಯಕ್ಷರು ಅಗ್ರಾಸೀನರಾದೊಡನೆ ತಾನು ಮುಲ್ಕಿ ಫಿರ್ಕಾ ರೆವಿನ್ಯು ಇನ್ಸ್‌ಪೆಕ್ಟರಾಗಿದ್ದ ಕಾಲದಿಂದ ಈ ಊರಿಗೂ ತನಗೂ ಇದ್ದ ಆಫೀಸು ಸಂಬಂಧದ ವಿಷಯವಾಗಿಯೂ ಅನಂತರ ಈ ಫಿರ್ಕಾ ಜನರ ತನ್ನ ಪರಿಚಯದ ಕುರಿತೂ ಶ್ರೀ ವೆಂಕಟರಮಣ ದೇವಸ್ಥಾನದ ಆಡಳಿತೆಯ ಕುರಿತೂ ಮಾತಾಡಿ ತನಗೆ ಈ ಅಧ್ಯಕ್ಷಸ್ಥಾನದ ಬಹುಮಾನವನ್ನು ಕೊಟ್ಟದ್ದಕ್ಕೆ ಅಭಿನಂದನವನ್ನು ಸೂಚಿಸಿದರು. ಬಳಿಕ ಶ್ರೀ ದೇವಸ್ಥಾನದ ಕೌನ್ಸಿಲರರೂ ವ ಡಿಸ್ಟ್ರಿಕ್ಟ ಬೋರ್ಡ ಮೆಂಬರರೂ ಆದ ಮ॥ ರಾ॥ ರಾ॥ ಬೋಳ ಮಾಧವರಾಯರು ಮುಲ್ಕಿಯಲ್ಲಿ ಸ್ಥಾಪಿತವಾಗುವ ಧರ್ಮವೈದ್ಯಾಶ್ರಮದ ಚಿಕಿತ್ಸಾಲಯಕ್ಕೆ ಶ್ರೀ ದೇವಸ್ಥಾನದ ಕಡೆಯಿಂದ ತಿಂಗಳು ಒಂದರ ರೂ. ೬ರ ಪ್ರಕಾರ ಪೋಷಕ ದ್ರವ್ಯವು ಕೊಡೋಣಾಗುವ ವಿಷಯ ಮಾತಾಡಿ ಚಿಕಿತ್ಸಾಲಯವನ್ನು ಈ ಮುಹೂರ್ತದಲ್ಲಿ ತೆರಿಯಬೇಕೆಂತ ಅಧ್ಯಕ್ಷರನ್ನು ವಿಜ್ಞಾಪಿಸಿಕೊಂಡರು. ಅನಂತರ ವಾದ್ಯಘೋಷದೊಡನೆ ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮದ ಚಿಕಿತ್ಸಾಲಯವು ಅಧ್ಯಕ್ಷರಿಂದ ತೆರಿಯಲ್ಪಟ್ಟಿತು. ಇದಾದ ನಂತರ ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮದ ಕಾರ್ಯದರ್ಶಿಗಳಾದ ವಿ. ಶ್ರೀನಿವಾಸ ಕಾಮತರವರು ಧರ್ಮವೈದ್ಯಾಶ್ರಮದ ಉದ್ದೇಶ, ಅದರ ಮುಂಬರಿಕೆ ಕುರಿತು ಪ್ರಸ್ತಾಪಿಸಿ ಈ ಸಂಸ್ಥೆಯ ಪೋಷಣೆಗೆ ಇನ್ನೂ ಧಾರಾಳವಾದ ದ್ರವ್ಯಸಹಾಯವು ಬೇಕೆಂಬ ವಿಜ್ಞಾಪನೆಯನ್ನು ಸಭೆಯಲ್ಲಿ ಮಾಡಿದರು. ಮುಲ್ಕಿ ಈ ಚಿಕಿತ್ಸಾಲಯದ ವೈದ್ಯರಾದ ಪಂಡಿತ ಶ್ರೀ ಬಾದರಾಯಣ ಆಚಾರ್ಯರವರ ಭಾಷಣವು ಇತ್ತು. ಸಭಿಕರ ಕಡೆಯಿಂದ ಮಂಗಳೂರು ತಾಲೂಕು ಬೋರ್ಡು ಪ್ರೆಸಿಡೆಂಟರಾದ ಮ॥ ರಾ॥ ರಾ॥ ರಾಮಕೃಷ್ಣಪೂಂಜರು ಮಾತಾಡಿ ನಂತರ ಅಧ್ಯಕ್ಷರು ತಮ್ಮ ಕೊನೆ ಮಾತುಗಳಿಂದ ಸಭೆಯನ್ನು ಮುಕ್ತಾಯಗೊಳಿಸಿದರು. ಶ್ರೀ ದೇವಸ್ಥಾನದ ಪರವಾಗಿ ಕಜ್ಜಾಯವನ್ನು ಕೂಡಿದವರೆಲ್ಲರಿಗೂ ಹಂಚೋಣಾಯಿತು.

ದಕ್ಷಿಣಕನ್ನಡಾ ಸೆಂಟ್ರಲ್ ಕೋ-ಒಪರೇಟಿವ್ ಬೇಂಕಿನ ಮಹಾಸಭೆ.

ದಕ್ಷಿಣಕನ್ನಡಾ ಸೆಂಟ್ರಲ್ ಕೋ-ಒಪರೇಟಿವ್ ಬೇಂಕಿನ ಪಾಲುದ್ದಾರಿಕರ ಮಹಾ ಸಭೆಯು ಕಳೆದ ತಾ. ೩ನೇ ಶನಿವಾರ ರಥ ಸಪ್ತಮಿ ದಿನ ಅಪರಾಹ್ನ ೧-೩೦ ಗಂಟೆಗೆ ಕೊಡಿಯಾಲ ಬೈಲಿನಲ್ಲಿರುವ ಸಹಕಾರಿ ಕಟ್ಟಡದಲ್ಲಿ ಜರಗಿತು. ಈ ಮೀಟಿಂಗಿಗೆ ಸೆಂಟ್ರಲ್ ಬೇಂಕಿನ ಅಧಿಕಾರಿಗಳೂ ಆಯಾ ಸಂಘಗಳ ಪ್ರತಿನಿಧಿಗಳೂ ಇತರ ಪಾಲುದ್ದಾರಿಕರೂ ಸಹಕಾರ ಸಂಘಗಳ ಅಸಿಸ್ಟಾಂಟರ ರಿಜಿಸ್ಟ್ರಾರರೂ ಚೀಫ್ ಇನ್ಸ್‌ಪೆಕ್ಟರರೂ ಕೂಡಿ ಸುಮಾರು ೧೫೦ ಮಂದಿಗಳು ನೆರೆದಿದ್ದರು. ಸಭೆಯ ಕಾರ್ಯಾರಂಭದಲ್ಲಿ ಬೇಂಕಿನ ವೈಸ ಪ್ರೆಸಿಡೆಂಟರಾದ ಮ॥ ರಾ॥ ಎಮ್. ಶಿವರಾಯರು ಮಂಗಳೂರ ಕೋ-ಒಪರೇಟಿವ್ ಟೌನ್ ಬೇಂಕಿನ ಪ್ರತಿನಿಧಿಗಳಾದ ಮ॥ ರಾ॥ ಕೆಂಬಳೆ ಸುಬ್ರಾಯ ನಾಯಕರು ಕಳುಹಿಸಿದ ಪ್ರಶ್ನೆಗಳ ಉತ್ತರವನ್ನು ಸಭೆಯ ಮುಂದೆ ಓದಿದರು. ಅನಂತರ ಬೇಂಕಿನ ವ್ಯಕ್ತಿ ಮೆಂಬರ (Individual members)ರನ್ನು ಬೇಂಕಿನಿಂದ ಹೊರಪಡಿಸುವ ವಿಷಯವನ್ನು ಕುರಿತು ಸೆಂಟ್ರಲ್ ಬೇಂಕಿನ ಕಾರ್ಯಕಾರಿ ಕಮಿಟಿಯವರು ರಿಜಿಸ್ಟ್ರಾರರಿಗೆ ಬರಕೊಂಡುದಕ್ಕೆ ಸದರಿ ಮೆಂಬರರನ್ನು ಹೊರಪಡಿಸುವುದು ಉಚಿತವಲ್ಲವೆಂದು ಅವರು ಬರೆದ ಉತ್ತರವನ್ನು ಬೇಂಕಿನ ವೈಸ್ ಪ್ರೆಸಿಡೆಂಟರು ಸಭೆಯ ಮುಂದಿಟ್ಟರು. ಅದ್ದರಿಂದ ಈ ಸಂಬಂಧವಾಗಿ ರಾ॥ ಆನಂದರಾಯರು ತಾವು ಈ ಸಭೆಯ ಮುಂದಿಡಲು ನಿಶ್ಚಯಿಸಿದ ತಮ್ಮ ಸೂಚನೆಯನ್ನು ಹಿಂತೆಗೆದರು.

ಇದಾದನಂತರ ಪುತ್ತೂರು ಸೆಂಟ್ರಲ್ ಬೇಂಕನ್ನು ಮಂಗಳೂರಿಗೆ ತರಬೇಕೆಂಬ ನಿರ್ಣಯವನ್ನು ರಾ॥ ಸುಬ್ರಾಯನಾಯಕರು ಸಭೆಯ ಮುಂದಿಟ್ಟು ಬೇಂಕು ಸ್ಥಾಪನೆಕಾಲದಲ್ಲೆ ಮಾಡಿದ ನಿಬಂಧನೆಗಳಲ್ಲಿ—ಮೊದಲನೇ ನಿಬಂಧನೆಯಲ್ಲಿ ಅದರ ವಿಳಾಸವು ತತ್ಕಾಲಕ್ಕೆ ಪುತ್ತೂರು ಪೋಸ್ಟ ಉಪ್ಪಿನಂಗಡಿ ತಾಲೂಕು ಎಂತ ಮೊದಲೇ ಇರುವ ಸಂಗತಿಯನ್ನು ಆಲೋಚಿಸುವಾಗ ಅದು ಪುತ್ತೂರಿನಲ್ಲಿ ಸ್ಥಿರವಾಗಿ ಇರಗೊಡಿಸುವ ಆಲೋಚನೆ ಇದ್ದಿಲ್ಲವೆಂಬುದು ಸ್ಪಷ್ಟ, ಜಿಲ್ಲೆಯ ಕೇಂದ್ರಸ್ಥಾನವಾದ ಮಂಗಳೂರಿಗೆ ತಂದರೆ ಬೇಂಕಿಗೆ ಠೇವಣಾತಿಗಳು ಹೆಚ್ಚಾಗುವುದೆಂದು ಬೇಂಕಿನ ಮಂಗಳೂರ ಶಾಖೆಯು ಈಗ ಪಡಿಯುತ್ತಿರುವ ಅಭಿವೃದ್ಧಿಯಿಂದಲೇ ಸ್ಪಷ್ಟವಾಗುತ್ತದೆ ಮಾತ್ರವಲ್ಲ, ಈ ರೀತಿ ಬೇಂಕು ಮಂಗಳೂರಿಗೆ ಬಂದು ಹೆಚ್ಚಿನ ಠೇವಣಾತಿಗಳನ್ನು ಪಡೆದರೆ ಜಿಲ್ಲೆಯ ಚಿಕ್ಕಪುಟ್ಟ ಸಂಘಗಳಿಗೆ ಸಹಾಯಮಾಡಲು ಹೆಚ್ಚಿನ ಅಸ್ಪದವಿದೆ ಮತ್ತು ಇಂಪೀರಿಯಲ್ ಬೇಂಕಿಗೂ ಸೆಂಟ್ರಲ್ ಬೇಂಕಿಗೂ ದಿನನಿತ್ಯ ನಡಿಯುವ ವಹಿವಾಟುಗಳಿಗೂ ಅನುಕೂಲವಾಗುವುದು. ಬೇಂಕಿಗೆ ಆಗಾಗ್ಗೆ ಸಹಕಾರ ಸಂಘಗಳ ರಿಜಿಸ್ಟ್ರಾರರ ಸಹಾಯ ಕೂಡಲೇ ಪಡಿಯಲು ಆಸ್ಪದವಿದೆ ಎಂದು ಮುಂತಾಗಿ ವಾದಿಸಿದರು. ಇವರ ಈ ನಿರ್ಣಯವನ್ನು ಮಂಗಳೂರ ಯೂನಿಯನ್ ಸೆಕ್ರೆಟರಿ ಮ॥ ರಾ॥ ಉ. ಮಂಗೇಶರಾಯರೂ, ಬಂಟವಾಳ ಯೂನಿಯನ್ನ ಪ್ರೆಸಿಡೆಂಟ ಯು. ಸಂಜೀವರಾಯರೂ, ಮಂಜೇಶ್ವರದ ರಾ. ಪಾಂಡುರಂಗ ಕಮ್ತಿಯವರೂ ಅನುಮೋದಿಸಿದರು. ಆದರೆ ಬೇಂಕಿನ ಅಧಿಕಾರಿಗಳಲ್ಲೊಬ್ಬರಾದ ಮ॥ ರಾ॥ ಬೆಳ್ಳೆ ವೆಂಕಟಕೃಷ್ಣರಾಯರು ಈ ಬೇಂಕನ್ನು ಸಹಕಾರ ಚಳವಳದ ಮಾತೃಸ್ಥಾನವಾದ ಪುತ್ತೂರಿನಿಂದ ಅಗಲಿಸುವುದು ಎಷ್ಟಕ್ಕೂ ನ್ಯಾಯವಲ್ಲ ಮತ್ತು ಅಲ್ಲಿಂದ ಅಗಲಿಸಿದರೆ ಸುಸೂತ್ರವಾಗಿ ಕಾರ್ಯ ನಡಿಸಲು ಅಭ್ಯಂತರ ಬರಬಹುದೆಂದು ಮುಂತಾಗಿ ಹೇಳಿ ಈ ನಿರ್ಣಯವನ್ನು ವಿರೋಧಿಸಿದರು. ಸಹಕಾರಿ ಸಂಘಗಳ ಅಸಿಸ್ಟಾಂಟ ರಿಜಿಸ್ಟ್ರಾರರೂ ಬೇಂಕನ್ನು ಇಲ್ಲಿಗೆ ತರುವದು ಯುಕ್ತವಾಗಿದೆ, ಪರಂತು ಒಡನೆಯೇ ತರುವುದಕ್ಕಿಂತ ತಕ್ಕ ಸಿದ್ಧತೆಗಳನ್ನು ಮಾಡಿ ಇಲ್ಲಿಗೆ ತರುವುದು ಯುಕ್ತವೆಂದು ಅಭಿಪ್ರಾಯ ಕೊಟ್ಟರು. ಕೊನೆಗೆ ರಾ॥ ಎಮ್. ಶಿವರಾಯರು ಬೇಂಕಿನ ಈಗಿನ ಸೆಕ್ರೆಟರಿಗೆ ಮಂಗಳೂರಿಗೆ ಬಂದು ನಿಲ್ಲಲು ಸಾಧ್ಯವಿಲ್ಲ. ಮಂಗಳೂರಿನಲ್ಲಿ ಅವರ ಈಗಿನ ಸೆಕ್ರೆಟರಿಗಳಷ್ಟು ಸಮರ್ಥರಾದವರು ಅದನ್ನು ನಡಿಸಲು ಸಿಗುವದು ದುರ್ಲಭವಾದ್ದರಿಂದ ಯೋಗ್ಯ ಕಾರ್ಯದರ್ಶಿಯನ್ನು ತರಬೇತು ಮಾಡಿ ಅನಂತರ ಬೇಂಕನ್ನು ಇಲ್ಲಿಗೆ ವರ್ಗಾಯಿಸಬೇಕು. ಇಂಥಾ ಸೆಕ್ರೆಟರಿಗಳನ್ನು ತರಬೇತುಮಾಡಲು ೨-೩ ವರುಷಗಳ ಸಮಯವಾದರೂ ಬೇಕಾದ್ದರಿಂದ ಮೂರು ವರುಷಗಳನಂತರ ಐದು ವರುಷಗಳ ಒಳಗೆ ಬೇಂಕನ್ನು ಇಲ್ಲಿಗೆ ವರ್ಗಾಯಿಸಬೇಕೆಂಬ ಉಪಸೂಚನೆಯನ್ನು ಮುಂದಿಟ್ಟರು. ಆಗ ಸಭೆಯಲ್ಲಿ ಅಧಿಕ ಸಂಖ್ಯಾಕರಾಗಿ ಹಾಜರಿದ್ದ ಪುತ್ತೂರು ತಾಲೂಕಿನ ಸಂಘಗಳ ಪ್ರತಿನಿಧಿಗಳ ಬೆಂಬಲದಿಂದ ಈ ನಿರ್ಣಯವು ಬಹುಮತದಿಂದ ಮಂಜೂರಾತಿಹೊಂದಿತು. ಈ ಒಂದೇ ನಿರ್ಣಯದ ಚರ್ಚೆಯು ಮುಗಿಯುವಾಗ ಸಾಯಂಕಾಲವಾದುದರಿಂದ ಈ ಮೀಟಿಂಗಿನಲ್ಲಿ ಇನ್ನಾವ ಕಾರ್ಯಗಳೂ ನಡೆಯದೆ ಸಭೆಯು ಎಪ್ರಿಲ್ ತಿಂಗಳಿಗೆ ಮುಂದರಿಸಲ್ಪಟ್ಟಿತು.

ವಿವಿಧ ಸಮಾಚಾರ.

ಇಂಗ್ಲೆಂಡಿನಲ್ಲಿ ಶೀಲಿ ಎಂಬ ಗ್ರಾಮದಲ್ಲಿರುವ ಒಂದು ಯಂತ್ರಾಲಯದಲ್ಲಿ ಒಬ್ಬ ಕೂಲಿ ಹುಡುಗಿ ಇರುವಳು. ಈಕೆಯು ನೂಲು ತೆಗಿಯುವ ಯಂತ್ರದ ಬಳಿ ಹೋಗುತ್ತಲೆ ಯಂತ್ರದ ಚಲನೆಯು ವ್ಯತ್ಯಾಸವಾಗಿ ದಾರವು ಕಿತ್ತು ಹೋಗುತ್ತಿದ್ದಿತು. ಅವರ ಮೇಲೆ ಈಕೆಯನ್ನು ಡಾಕ್ಟರುಗಳು ಪರೀಕ್ಷಿಸಿ ನೋಡಿ, ಈಕೆಯ ಶರೀರದಲ್ಲಿ ವಿದ್ಯುಚ್ಛಕ್ತಿಯು ಉತ್ಪನ್ನವಾಗಿ ಸೂಜಿಗಳಿನ ಪ್ರಾಣವನ್ನು ಉಂಟುಮಾಡುತ್ತದೆಂದೂ ಅದರಿಂದ ಯಂತ್ರ ಚಲನೆಯಲ್ಲಿ ತೊಂದರೆಯುಂಟಾಗುತ್ತದೆಂದೂ ನಿರ್ಧರಿಸಿರುವರು.

ಇನ್ನು ೫೦ ವರುಷಗಳೊಳಗಾಗಿ ವಿಜ್ಞಾನಶಾಸ್ತ್ರವು ಬಹು ಮಟ್ಟಿಗೆ ಮುಂದುವರಿಯುವುದೆಂದೂ, ಆಗಿನ ಸ್ತ್ರೀ ಪುರುಷರು ಇಷ್ಟಪಟ್ಟರೆ ಯಾವಾಗ ಬೇಕಾದರೂ ಸಂತಾನಪಡೆಯಬಹುದಲ್ಲದೆ ಮಗುವು ಗಂಡಾಗಿ ಆಗಲಿ ಹೆಣ್ಣಾಗಿ ಆಗಲಿ ಅವರಿಷ್ಟವಂತೆಯೇ ಜನಿಸುವ ಹಾಗೆ ಮಾಡಲು ಸಾಧ್ಯವಿದೆಂದೂ ಪ್ರೊಫೆಸರ್ ಜ್ಯೂಲಿಯಸ್ ಹಕ್ಸ್ಲೀಲ ಎಂಬವರು ಹೇಳಿರುತ್ತಾರೆ.

ಲಂಡನ್ ಪಟ್ಟಣದಲ್ಲಿರುವ ಸೆಂಟ ಪಾಲ್ಸ ಕಾಂತಿದೇವಾಲಯವು ಈಗ್ಗೆ ಸುಮಾರು ೨೦೦ ವರುಷಗಳ ಹಿಂದೆ ಕಟ್ಟಲ್ಪಟ್ಟ ಅತಿ ಪ್ರಸಿದ್ಧ ಕಟ್ಟಡವಾಗಿದೆ. ಇದರ ಮಹಾ ಮಂದಿರವು (Dome) ಪಕ್ಕನೆ ಬೀಳುವ ಗಂಡಾಂತರಕ್ಕೆ ಒಳಗಾಗುವ ಸಂಭವ ಉಂಟೆಂದು ಲಂಡನಿನ ಸರ್ವೇಯರರು ತಿಳಿಸಿದ್ದರಿಂದ ಈ ದೇವಾಲಯವನ್ನು ಪ್ರಕೃತಕ್ಕೆ ಮುಚ್ಚಿದೆ. ಇದನ್ನು ಜೀರ್ಣೋದ್ಧಾರ ಮಾಡಿ ಕಟ್ಟುವುದಕ್ಕೆ ೩೦ ವರುಷಗಳ ಕಾಲವಾದರೂ ತಗಲುವುದಂತೆ.

NOTICE.

Sealed tenders in duplicate will be received up to 10 A. M. on Tuesday the 17th February 1925 by the District Medical officer South Kanara Mangalore for the articles of diet and other hospital accessaries for the Govt. Head Quarter and women and Children's Hospitals Mangalore, for one year from 1st April '25 to 31st March 1926.

For full particulars apply to—

The District Medical officer, S. K.

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ ಕೋರ್ಟಿನಲ್ಲಿ.

O. P. ನಂಬ್ರ 14/1925

ರಾಮದಾಸ ಕೂಡಾ ಮ್ಯಾನರರು.
ಹಿತಚಿಂತಕಳು, ತಾಯಿ ಪದ್ಮಾವತಿ. } ಅರ್ಜಿದಾರರು

1924ನೇ ಇಸವಿ ನವಂಬರ ತಾ. 20ರಲ್ಲು ಮೃತಪಟ್ಟ ಮೂಲ್ಕಿ ಲಕ್ಷ್ಮಣ ಕಮ್ತಿಯರಿಗೆ ಮುಂಬಯಿ ಲೈಫ್ ಎಶ್ಯೂರೆನ್ಸ ಕಂಪೆನಿಯಿಂದ ಕೊಡೋಣಾದ ನಂಬ್ರ 8246 ಪೊಲಿಸಿ ಪ್ರಕಾರ ಬರಾ ವಿಮೆ ಹಣವನ್ನು ವಸೂಲು ಮಾಡುವರೆ 1ನೆ ಅರ್ಜಿದಾರನ ಹೆಸರಲ್ಲಿ ವಾರಿಸ ಸರ್ಟಿಫಿಕೇಟು ಅಪೇಕ್ಷಿಸಿ ಅರ್ಜಿದಾರರು ದಾಖಲು ಮಾಡಿದ ಮೇಲಿನ ಅರ್ಜಿಯು ಸದರಿ ಕೋರ್ಟಿನಲ್ಲಿ ತಾ. 20—2—'25ಕ್ಕೆ ತನ್ನಿಗೆ ಇಟ್ಟಿರುತ್ತದೆ. ಆಕ್ಷೇಪವುಳ್ಳವರು ಆ ದಿವಸ ಪೂರ್ವಾಹ್ನ ೧೧ ಗಂಟೆಗೆ ತಮ್ಮ ಆಕ್ಷೇಪಗಳನ್ನು ಸದರಿ ಕೋರ್ಟಿಗೆ ಜಾಹೀರಮಾಡಿಕೊಳ್ಳಬಹುದು.

MANGALORE.
3-2-25. }

B. V. BALIGA.
Pleader for Petitioners

ನೋಟೀಸು.

ಮಂಗಳೂರು ಡಿಸ್ಟ್ರಿಕ್ಟ ಮುನಸೀಫ ಕೋರ್ಟಿನಲ್ಲಿ

I. A. No. 9/1925 In I. P. No. 12/1924

ಕುಂಞಾಮ್ಮದೆ ಬ್ಯಾರಿ-ಕುಂಞಾಲಿ ಬ್ಯಾರಿ ಮಗ
ಮಂಗಳೂರ ಬಂದರ ಕಂದಕದಲ್ಲಿರುವವ } ದಿವಾಳಿ ಅರ್ಜಿದಾರ.

ಮತ್ತು

ನಂದಾವರ ಅಮದಬ್ಯಾರಿ ಕೂಡಾ—ಕ್ರೆಡಿಟರ್ಸ—ರೆಸ್ಪೊಂಡೆಂಟರು

ಮೇಲ್ಕಂಡ ಅರ್ಜಿದಾರನು ತನ್ನನ್ನು ಡಿಸ್‌ಚಾರ್ಜ ಮಾಡಬೇಕಾಗಿ ಅರ್ಜಿ ದಾಖಲು ಮಾಡಿರುತ್ತಾನೆ. ಸದರಿ ಅರ್ಜಿಯು 1925ನೇ ಇಸವಿ ಫೆಬ್ರುವರಿ ತಾರೀಕು 24ನೇ ದಿವಸ ತನಕಿಗೆ ಇಟ್ಟಿರುತ್ತದೆ. ಯಾರಾದರೂ ಆಕ್ಷೇಪವುಳ್ಳವರು ಮೇಲ್ಕಂಡ ತಾರೀಕಿಗೆ ಅಪರಾಹ್ನ ಗಂಟೆ 11ಕ್ಕೆ ಮೇಲ್ಕಂಡ ಕೋರ್ಟ ಮುಂದೆ ಹಾಜರಾಗಿ ತಮ್ಮ ಆಕ್ಷೇಪಗಳನ್ನು ಜ್ಯಾಹಿರು ಮಾಡತಕ್ಕದ್ದು.

ಮಂಗಳೂರು
ತಾ. 31-1-25. }

K. P. Gopalkrishna Rao
Vakil for Petitioner.

ನೋಟೀಸು.

ದಕ್ಷಿಣ ಕನ್ನಡಾ ಆಫಿಶಿಯಲ್ ರಿಸೀವರರ ಕೋರ್ಟಿನಲ್ಲಿ.

ದಿವಾಳಿ ಅರ್ಜಿ ನಂಬ್ರ 2/1925.
(ಮಂಗ್ಲೂರು ಡಿಸ್ಟ್ರಿಕ್ಟ ಮುನ್ಸೀಫ ಕೋರ್ಟ ದಿವಾಳಿ
ಅರ್ಜಿ ನಂಬ್ರ 5/1925.)

ತಿಮ್ಮಪ್ಪ ಬೆಲ್ಚಡ—ಅರ್ಜಿದಾರ—ಇನ್‌ಸೋಲ್‌ವೆಂಟ್
ಮತ್ತು
ಭಿಕ್ಕಯಾನೆ ಜರ್ದಪ್ಪ ಕಮ್ತಿ ಕೂಡಾ—ಎದ್ರಿರು—ಕ್ರೆಡಿಟರರು.

ಮೇಲ್ಕಂಡ ಅರ್ಜಿಯಲ್ಲಿ ನಮೂದಿಸಿದ ಸಾಲಗಳನ್ನು ಸಂದಾಯ ಮಾಡುವರೆ ಸದರಿ ಅರ್ಜಿದಾರನು ಅಸಮರ್ಥನಾದ ಕಾರಣ ಆತನನ್ನು ದಿವಾಳಿ ಎಂತ ಕಾಯಂ ಮಾಡಬೇಕಾಗಿ ವಗೈರೆ ಕಾಣಿಸಿ ದಾಖಲು ಮಾಡಿದ ಸದರಿ ಅರ್ಜಿಯು ಇದೇ ತಿಂಗಳ ತಾ. (14—2—1925) ಕ್ಕೆ ತನಿಕೆಗೆ ಇಟ್ಟಿರುವದರಿಂದ ಆ ಕುರಿತು ಆಕ್ಷೇಪ ಉಳ್ಳವರು ತಮ್ಮ ಆಕ್ಷೇಪಣೆಗಳನ್ನು ಮೇಲ್ಕಂಡ ಕೋರ್ಟಿನಲ್ಲಿ ಸದರಿ ವಾಯಿದೆಯೊಳಗೆ ಜ್ಯಾಹೀರುಮಾಡಿಕೊಳ್ಳಬೇಕಾಗಿ ಈ ಮೂಲಕ ಸರ್ವಜನರಿಗೆ ತಿಳಿಸೋಣಾಗಿಯದೆ.

ಮಂಗಳೂರು
ತಾ. 4-2-1925. }

L. C. PAIS.
ಅರ್ಜಿದಾರನ ಪರ ವಕೀಲ್.

ಆರೋಗ್ಯ ಚಂದ್ರಿಕೆ.

ಮದ್ರಾಸ್.

ಸಂಪಾದಕರು: ಡಾಕ್ಟರ್ ಯು. ರಾಮರಾವ್, ಎಲ್. ಎಮ್. ಸಿ. ಎಫ್. ಎಮ್. ಯು. ಇವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವುದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ.

ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ.

ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವುವು.

'ಹೆಲ್ತ್' ಎಂಬ ನಮ್ಮ ಇಂಗ್ಲಿಷ್ ಮಾಸಪತ್ರಿಕೆಯನ್ನೋದಿ ಸಂತೋಷಿಸಿದ ಅನೇಕ ದೊಡ್ಡ ಮನುಷ್ಯರ ಪ್ರೋತ್ಸಾಹದ ಮೇಲೆ ಈ ಕನ್ನಡ ಪತ್ರಿಕೆಯನ್ನು ಹೊರಡಿಸಿದೆ.

ಅದರ ಸಂಪುಟ ೨ ಮತ್ತು ೧೧ನೇಯ ನವಂಬರ ೧೯೨೪ ಸಂಚಿಕೆಯಲ್ಲಿ ಕಾಣಿಸಿರುವ ವಿಷಯಗಳು.

ಮುಖಚಿತ್ರ:—ಪರ್ವತವಾಸಿಯಾದ ಒಬ್ಬ ರೂಪವತಿ.
ಶ್ವಾಸಕ್ರಮ ಅಥವಾ ಪ್ರಾಣಾಯಾಮ.
ಹುಣಿಸೇಹಣ್ಣಿನ ಆಹಾರಗುಣಗಳು ಮತ್ತು ಔಷಧಗುಣಗಳು.
ಕಾಲುನಡೆಯೇ ಉತ್ತಮವಾದ ವ್ಯಾಯಾಮವು
ಜೇನಿನಲ್ಲಿರುವ ಗುಣಗಳು.
ಹಲ್ಲುಗಳ ರಚನೆ, ಪ್ರಯೋಜನ, ಕೆಲಸ ಮುಂತಾದವು.
ಮದದ್ರಾವಕಗಳಿಂದ ಆರೋಗ್ಯಕ್ಕೆ ಉಂಟಾಗತಕ್ಕ ಹಾನಿ.
ಅಂಗಸಾಧನೆ ಮತ್ತು ಬುದ್ಧಿವ್ಯವಸಾಯ (ವಿದ್ಯಾಭ್ಯಾಸ).
ಗಾಯಗಳು, ಮತ್ತು ಉಳುಕು ಮುಂತಾದವು, ಅವುಗಳ ಚಿಕಿತ್ಸೆ.
ನವನಾಗರಿಕ ಪ್ರಪಂಚಕ್ಕೆ ಸಹಜವಾದ ಮೂರು ಕೆಡುಕುಗಳು.
ಒಬ್ಬ ಉಪವಾಸಿಯ ಅನುಭವ.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವವು. ಆರೋಗ್ಯಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ ರೂ. ೧—೮—೦; ಬಿಡಿಪತ್ರಿಕೆ ಒಂದಕ್ಕೆ ರೂ. ೦—೩—೦. ಹಿಂದಿನ ಸಂಚಿಕೆಗಳು ಕೂಡ ದೊರೆಯುವವು.

ಚಂದಾದಾರರಾಗುವವರು ವಿ. ಪಿ. ಮೂಲಕವಾಗಿ ತರಿಸಿಕೊಳ್ಳುವುದಕ್ಕಿಂತಲೂ ಹಣವನ್ನು ಮುಂಗಡವಾಗಿ ಕಳುಹಿಸುವುದು [illegible]. ವಾಚಕರ. ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು 'ಆರೋಗ್ಯ ಚಂದ್ರಿಕೆ'ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು.

ಪತ್ರವ್ಯವಹಾರಕ್ಕೆ: 'ಆರೋಗ್ಯ ಚಂದ್ರಿಕೆ'
೩೨೩ ತಂಬುಚೆಟ್ಟಿ ಬೀದಿ, ಮದ್ರಾಸ್

ತುಳು ಪಾಡ್ದನಗಳು.

ಬೊಬ್ಬರ್ಯ, ಕಲ್ಲುರ್ಟಿ—ಕಲ್ಕುಡ, ದೈಯ್ಯೊಂಗುಳು—ತೋಡಕಿನಾರ್, ಮುಂಡತ್ತಾಯ ಪ್ರತಿ ಒಂದಕ್ಕೆ 2 ಆಣೆ. 11½ ಆಣೆ ಟಪ್ಪಾಲು ಚೀಟು ಕಳುಹಿಸಿದರೆ 5 ಪುಸ್ತಕಗಳು ಕೂಡಲೇ ಕಳುಹಿಸಲ್ಪಡುವವು.

ವಿಳಾಸ: ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

The Canara Bank, Limited, Magalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised and fully paid up Capital Rs. 300,000—0—0
ಅಧಿಕಾರಗೊಳಿಸಲ್ಪಟ್ಟ, ಪೂರ್ಣವಾಗಿ ಕೆತ್ತ ಮೂಲಧನವು ರೂ. 300,000—0—0

Reserve and other sinking Funds ,, 233,000—0—0
ಕ್ಷೇಮನಿಧಿ ಮತ್ತು ಇತರ ಫಂಡುಗಳು ,, 233,000—0—0

THE BANK RECEIVES FIXED, CURRENT ACCOUNT, & SAVINGS BANK DEPOSITS
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳೋಣಾಗುತ್ತವೆ.

For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 12th Feb. 1924.

K. Venkat Rao,
Secretary.

ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಿಗಳಲ್ಲಿ ಒಂದಾದ,
ಲೋಕಾಮಯಹರ ಕಸ್ತೂರಿ ಮಾತ್ರೆಯನ್ನು ಇಂದೇ ತಾವು ತರಿಸಿಕೊಳ್ಳಿರಿ! ಏಕೆಂದರೆ,

ಲೋಕಾಮಯಹರ ಕಸ್ತೂರಿ ಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ ಅದು ಹೇಗೆಂದರೆ! ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಕಾಹಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ವ್ಯಾಧಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರ ವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂಥಾ ಕಠಿಣವಾದ ಆಹಾರವನ್ನಾದರೂ ಜೀರ್ಣಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟ ಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.



ಮಂದ, ಬೇಗಡ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದ ಬರುವ ತಲೆನೋವು, ಕರುಳಿನ ನೋವು, ಜ್ವರ, ಚಳಿಜ್ವರ ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಅನೇಕ ಇನ್‌ಫ್ಲುಯೆನ್ಜಾ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ. ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು

ವ್ಯಾಯಾಮವನ್ನು [illegible] ವ್ಯಾಪಾರಗಳಿಗೂ ಗೋಪಾತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು ಪ್ರತಿ ಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯ ಮೇಲೂ ಇರುವ ರಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ 250ರಿಂದ 300 ಮಾತ್ರೆಗಳ ವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ. ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1—4—0, 12 ಸೀಸೆಗಳಿಗೆ 2—7—0, 25 ಸೀಸೆಗಳಿಗೆ 4—10—0 ಪೋಸ್ಟೇಜು ಬೇರೆ. ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತವೆ.

ಏಜಂಟ್
ಮಂಗಳೂರು ಟವನಿಗೆ ಮಾತ್ರ.
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ.

ವಿಳಾಸ:— ಪಾಳ್ಯದ ವೆಂಕಟಾಚಲ ಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ವಿದ್ಯಾವಾಚಸ್ಪತಿ
ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ

"ಸಂಕ್ಷೇಪಗೀತೆ"

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ್ಳ, ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದೆ ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೦. ಟಪ್ಪಾಲು ಖರ್ಚು ಕೂಡಿ ಆಣೆ ೧೧ನ್ನು ಮನಿಯಾರ್ಡರ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ೩ರಕ್ಕಿಂತ ಜಾಸ್ತಿ ಖರ್ಚು ತಗಲುವುದು. ರಖಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.

ಪುಸ್ತಕ ದೊರಿಯುವ ವಿಳಾಸ:—
ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು. ಮತ್ತು
ಕೆನರಿಸ್ ಮಿಶ್ಯನ್ ಬುಕ್ ಎಂಡ್ ಟ್ರೆಕ್ಟ ಡಿಪೋಜಿಟರಿ,
ಮಂಗಳೂರು.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀಕಾಶೀ, ಗಯಾ, ಪ್ರಯಾಗ, ಹರಿದ್ವಾರ ಬದ್ರಿನಾರಾಯಣ ದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಜಟಿಗಳೊಡನೆ ಭೇಟಿಯಾಗಿ ಅವರ ಕಡೆಯಿಂದ ಅನುಭವ ತೆಗೆದು ಪ್ರತಿವಂದು ಸಿದ್ಧಮಾಡಿಕೊಂಡು ಬರೆದಿರುವರು. ೧ನೇದು ಮಂತ್ರಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರಪ್ರಯೋಗದಿಂದಲೂ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವೂ ಇದೆ. ೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನಪಡಿಯಲ್ಲಿ ರೂಪಾಯಿಗಳು ಹೊರಡುವಿಕೆ, ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅದನ್ನು ಸಿದ್ಧಮಾಡಿಕೊಳ್ಳುವ ವಿವರವೂ ಇದೆ. ೩ನೇದು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು. ೪ನೇದು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ, ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಛಾಯಾಚಿತ್ರಗಳ ಸಹ ಇದರಲ್ಲಿ ಉಂಟು, ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷದ ಮಾಡುವ ಕ್ರಮವನು ಚೆನ್ನಾಗಿ ಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಳಾಸವು ತಿಳಿಸಿರುವರು. ೫ನೇದು ಯಂತ್ರ ಪ್ರಕರಣದಲ್ಲಿ ವಶೀಕರಣ ಗ್ರಹಪೀಡಾ ನಿವಾರಣ ಭೂತಪ್ರೇತ, ಪಿಶಾಚಿ, ಬ್ರಹ್ಮರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು, ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರದಿರುವರು. ಈ ಗ್ರಂಥವು ಹತ್ತಿರ ಇದ್ದ ಬಳಿಕ ಎಲ್ಲಾ ದೇವಾನು ದೇವತೆಗಳು ದ್ರವ್ಯಗಳೂ ವೈದ್ಯರೂ ಜೋತಿಷ್ಯರು, ಮಾಂತ್ರಿಕರು ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥ ಗ್ರಂಥವು ಯಾರು ಅಕ್ಷಿಯಿಂದ ನೋಡಿರಲಿಕ್ಕಿಲ್ಲಾ. ಪ್ರತಿವಬರು ತರಿಸಿ ನೋಡಬೇಕೆಂದು ಇದರ ಬೆಲೆ ಶೀರ ಕಡಿಮೆಮಾಡಿ ಇರುವವು. ೨—೮—೦ ಟಪ್ಪಾಲು ಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ ನಾಟಕ ಶಾಸ್ತ್ರ, ಕಥೆಗಳು, ಯಕ್ಷಗಾನ, ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ:—
ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ

ಉಚಿತ! ಬಿಟ್ಟಿ!! ಪುಗಸಟ್ಟೆ!!!



ಎಂಬ ಈ ಪುಸ್ತಕದಲ್ಲಿ ಆಯುರ್ವೇದ ಶಾಸ್ತ್ರದಲ್ಲಿ ಸ್ತ್ರೀಪುರುಷರು ಆರೋಗ್ಯದೃಢಕಾಯರಾಗಿ ಆರೋಗ್ಯದಿಂದ ಕೂಡಿದ ಸಂತಾನಗಳನ್ನು ಪಡೆದು ಸತಿಪತಿಯರು ಅನ್ಯೋನ್ಯವಾಗಿ ಅನುರಾಗವುಳ್ಳವರಾಗಿ ಸುಖದಿಂದಲೂ ಸಂತೋಷದಿಂದಲೂ ಸಂಸಾರಯಾತ್ರೆಯನ್ನು ಮಾಡಲು ಅತ್ಯಂತ ಉಪಯುಕ್ತವಾದ ವಿಷಯಗಳು ಅಲ್ಲಲ್ಲಿ ಹೇಳಲ್ಪಟ್ಟಿರುವುದನ್ನು ಒಂದಾಗಿ ಕ್ರೋಡೀಕರಿಸಿ ಅಜ್ಞಾನದಿಂದಲೂ ಸಂಕಷ್ಟದಿಂದಲೂ ನರಳುತ್ತಿರುವ ಸಂಸಾರಿಗಳನ್ನುದ್ಧಾರಮಾಡುವ ಸಲುವಾಗಿ ಈ ಪುಸ್ತಕವನ್ನು ಕ್ರಯವೂ ಅಂಚೇ ಹಾಸಲೂ ಇಲ್ಲದೆ ಬೇಡಿದವರಿಗೆ ಸರ್ವತ್ರ ಉಚಿತವಾಗಿ ಕಳುಹಿಸುತ್ತೇವೆ. ಹೆಚ್ಚು ಮಾಹಿತಿಗೆ ಪತ್ರ ಬರೆಯಿರಿ,

ರಾಜವೈದ್ಯ ನಾರಾಯಣಜಿ ಕೇಶವಜಿ,
49, ಬಂದರ್ ಸ್ಟ್ರೀಟ್, ಜಿ. ಟಿ. ಮದ್ರಾಸ್

Just Arrived OF **Fresh Consignment**

Best English Cycles.



REDUCTION IN PRICES.

Ranger Cycles Model M. Made in Birmingham.

WITH DUNLOP OR BATES TYRES & TUBES	... @ Rs.	90—0—0

Barton Humber on Advance

WITH DUNLOP OR BATES TYRES & TUBES	... @ „	100—0—0

Senior Royal with B. S. A. Fitting.

WITH DUNLOP OR BATES TYRES & TUBES ...	...@ Rs.	145—0—0

Royal Saxon with B. S. A. Fitting.

WITH DUNLOP OR BATES TYRES & TUBES ...	... @ Rs.	175—0—0

All the above Cycles include pump and tools.

BROOKES PATEERN 90/2 GERMAN SADDLE ...	...@ „	9—8—0
„ SADDLE 90/2 „ ...	..@ „	21—0—0
„ „ B/30 „ ...	...@ „	26—0—0

For further particulars please write to us or call on us:—

All kinds of Cycle Accessories, Dunlop and German Tyres and Tubes
ARE AVAILABLE AT VERY CHEAP RATES.

Special Discount to Traders *Easy Terms Arranged*

APPLY TO:—**The Mangalore Trading Association,**
Wholesale Dealers in Cycles and Cycle Accessories,
Car-Street, MANGALORE

—ಗೋಡೆಗೆ ತಗಲಿಸುವ
ಹೊಸ ನಮೂನೆಯ—

ಟಿಕ್—ಟಾಕ್

ಎಂಬ ಈ ಗಡಿಯಾರಗಳು ಜರ್ಮನೀ ದೇಶದಲ್ಲಿ ತಯಾರಿಸಿದ್ದು. ಇವು ಕಂಠಾರು ಘಂಟೆಯನ್ನು ತೋರಿಸುವವು. ಇವಕ್ಕೆ ಬೀಗ ಕೊಡಬೇಕಾದಿಲ್ಲ. ಇವದಲ್ಲಿ ಕಾಣುತ್ತಿರುವ ಗುಂಡನ್ನು ಮೇಲಕ್ಕೆ ಎಳೆದರೆ ಸಾಕು. ತನ್ನ ಷ್ಟಕ್ಕೆ ತಾನೇ ಟಿಕ್—ಟಾಕ್ ಎಂಬ ಶಬ್ದವನ್ನು ಮಾಡುತ್ತಾ ಸರಿಯಾದ ಕಾಲವನ್ನು ತೋರಿಸುವದು. ಇದು ನೋಡುವುದಕೆ ಬಹು ಲಕ್ಷಣವಾಗಿರುವುದು.

ಕ್ರಯ 1ಕ್ಕೆ ರೂ. 8—0—0

ಪೀಟರ್ ವಾಚ್ ಕಂಪೆನಿ
ಪೋಸ್ಟ್ ಬಾಕ್ಸ್ ನಂ. 27, ಮದ್ರಾಸ್.

ADVERTISE IN

The Business Directory

OF INDIA, BURMA & CEYLON

A Comprehensive Directory of the various Business-men, Exporters and Importers, Firms, Factories, Mills, Manufacturers, Merchants and Industries of the principal Cities, Ports and Towns of india, Burma and Ceylon.

PUBLISHED ANNUALLY

Rates for Advertisements

¼ Page	Rs.	50.
2 in. Single Column	"	20.
1 in. Single Column	"	15.
Name in Bold Types	"	5.

Price per Copy Rs. 10.

PRINTERS & PUBLISHERS.
Business Directory Co.,
Kanara Press Buildings, MADRAS. E.
Telegrams: "KETHAKI" Phone 540

ದಕ್ಷಿಣ ಕನ್ನಡ ಜಿಲ್ಲೆಯ

ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

JUST ARRIVED

Goodrich Belts.

OF VARIOUS SIZES

Price Re. 1—12—0 each

Mangalore Trading Association,
Car Street, MANGALORE

ಸಾರಸ್ವತ.

ಕನ್ನಡ ಮತ್ತು ಕೊಂಕಣಿ ಭಾಷೆಗಳಲ್ಲಿ ಕಳೆದ ವಿಜಯ ದಶಮಿಯ ದಿನದಿಂದ ಪ್ರತಿ ದಶಮಿಗೆ ಹೊರಡುವ ಪತ್ರಿಕೆ.

ವಿ. ಎಸ್. ಕಾಮತ್,
ಮೂಲ್ಕಿ, ವಾಮನ ಕುಡುವ } ಸಂಪಾದಕರು.

ಮಠಸಂಸ್ಥೆ ಮತ್ತು ಸಮಾಜಕ್ಕೆ ಸಂಬಂಧಪಟ್ಟ ಇತರ ಸಂಸ್ಥೆಗಳ ಸುಸಂಘಟನ.

ಸಮಾಜದೊಳಗೆ ಅನ್ಯೋನ್ಯ ಸಾಧನೆ.

ಸ್ತ್ರೀಸಮಾಜಕ್ಕೆ ಉಪಯುಕ್ತವಾದ ವಿಷಯಗಳ ನಿರೂಪಣ.

ಮತಭಾವನೆಗಳ ಉಜ್ಜೀವನ ಇತ್ಯಾದಿ ಉದ್ದೇಶಗಳಿಂದ ಈ ಪತ್ರಿಕೆಯು ಹೊರಡಿಸಲ್ಪಡುವುದು. ಸಾರಸ್ವತ ಸಮಾಜವು ಇದಕ್ಕೆ ಪ್ರೋತ್ಸಾಹವನ್ನೀಯಬೇಕಾಗಿ ಪ್ರಾರ್ಥನೆ.

ಚಂದಾಹಣ ಅಂಚೆವೆಚ್ಚ ಕೂಡಾ ರೂ. ೧—೪—೦. ಪೋಷಕರು ರೂ. ೧೦—೦—೦. ಸಹಾಯಕರು ರೂ. ೫—೦—೦. ಮಾದರಿ ಸಂಚಿಕೆಯನ್ನು ಟಪ್ಪಾಲು ಖರ್ಚಿಗಾಗಿ ಅರ್ಧಾಣೆ ಸ್ಟಾಂಪು ಕಳುಹಿಸುವವರಿಗೆ ಉಚಿತವಾಗಿ ಕಳುಹಿಸುವೆವು.

ಕನ್ನಡ ನಾಡಿನಲ್ಲಿ ಪ್ರತಿ ಕಡೆಯಲ್ಲಿಯೂ
ಬಾತಮಿದಾರರು ಬೇಕು.

ಎಲ್ಲಾ ಪತ್ರವ್ಯವಹಾರಗಳನ್ನು ಕೆಳಗಿನ ವಿಳಾಸಕ್ಕೆ ನಡೆಸಬೇಕು.

ಯು. ನಾರಾಯಣನಾಯ್ಕ, ಕಾರ್ಯದರ್ಶಿ,
ಸಾರಸ್ವತ, ಉಡುಪಿ.

ಆರ್. ಮಾರ್ಟಿನ್ನರ ಉಪ್ಪಾ ಎಣ್ಣೆ

ಇದರ ಸುವಾಸನೆಯು, (ಪರಿಮಳವು) ಬಹಳ ಅಂದವಾಗಿಯೂ ಇರುವುದಲ್ಲದೆ, ಬಹಳ ಹೊತ್ತಿನ ವರೆಗೂ ಇರುತ್ತದೆ. ಈ ಎಣ್ಣೆಯನ್ನು ತಲೆಗೆ ಹಾಕಿಕೊಳ್ಳುವುದರಿಂದ ಕಣ್ಣುಗಳು ತಂಪಾಗಿಯೂ, ಶುಭ್ರವಾಗಿಯೂ, ಆಗವುದಲದೆ, ಮೆದುಳು ಚೆನ್ನಾಗಿ ಬೆಳೆಯುತ್ತದೆ. ಇದನ್ನು ಪ್ರತಿದಿವಸವೂ ಉಪಯೋಗಿಸುವುದರಿಂದ ಕೂದಲುಗಳು ಕಪ್ಪಾಗಿ ಹೊಳೆಯುವಂತೆ ಮಾಡುತ್ತದೆ. ಕೂದಲುಗಳಲ್ಲಿರುವ ಹೇನುಗಳು ಮುಂತಾದುವು ನಾಶವಾಗಿ ತಲೆಬುರುಡೆಯನ್ನು ಚೆನ್ನಾಗಿ ಬೆಳೆಯುವಂತೆ ಮಾಡುತ್ತದೆ. ಗಡ್ಡ ಮತ್ತು ಮೀಸೆಗಳು ಸಹ ಬೆಳೆಯುತ್ತವೆ. ಇದನ್ನು ಉಪಯೋಗಿಸಿದ ಜನರು ಇದಕ್ಕಿಂತ ಉತ್ತಮವಾದ ಎಣ್ಣೆಯು ಬೇರೆ ಇಲ್ಲವೆಂದು ಹೇಳಿರುತ್ತಾರೆ.

ಕ್ರಯ ಬಾಟಿ 1ಕ್ಕೆ ರೂ. 1-4-0.

ಆರ್. ಮಾರ್ಟಿನ್ನರ ಗಿಟೋಡಯಿನ್.

ಗಂಡಸರಿಗೂ ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ, ಅಥವಾ ಹೊಸತಾಗಿದ್ದರೂ ಸರಿ. ಬಿಳುಪು ಹೋಗುವುದು ಉರಿಯುವುದು, ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೆ ಉರಿ ಮೂತ್ರವನ್ನು ನಿಲ್ಲಿಸಿ, ಮೂತ್ರವು ಬಿಳುವಾಗಿ ನಿರ್ಮಲವಾಗುವುದಲ್ಲದೆ ರೋಗದ ಪಟ್ಟನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ.

ಬೆಲೆ ಸೀಸೆ 1ಕ್ಕೆ ರೂ. 2—0—0.

ಆರ್. ಮಾರ್ಟಿನ್ನರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮುಗಳು ಶ್ವಾಸ, ಸೀತ, ನೆಗಡಿ, ಗಂಟಲುನೋವು, ಎದೆ ನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನಮಾಡಿ ಪರೀಕ್ಷಿಸಿ ನೋಡಿರಿ. ಅನಂತರ ಬೇರೆ ಯಾವ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮುಗಳಿಗೂ ರಾಣಿಯಾಗಿಯೂ, ಎದೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತಲೆಯೆತ್ತದಂತೆ ಮಾಡುತ್ತದೆ.

60 ಮಾತ್ರೆಗಳ ಸೀಸೆ 1ಕ್ಕೆ ರೂ. 1—4—0.

ವಿಳಾಸ:—ಆರ್. ಡಿ. ಕಟೆ ಮತ್ತು ಕಂಪೆನಿ,
ನಂಬ್ರ ಬಿ. ಫ್ರಿಯರ್ ರೋಡ್,
ಸಾಂಜ ವರ್ತಮಾನ ಪ್ರೆಸ್,
ಟೋಡಿವಾಲಾ ಬಿಲ್ಡಿಂಗ ಎದುರುಗಡೆ, ಫೋರ್ಟ ಮುಂಬಯಿ.
R. D. Kately & Co.
No. B. Frere Road,
Opposit Sanjvertaman Press,
Todivala Building, FORT BOMBAY.

ಸುವರ್ಣಸಂಧಿ.

ಕೈ ಮಗ್ಗಗಳಲ್ಲಿ ನೂಲನ್ನು ನೇಯುವ ಮಗ್ಗಗಳಿಗೆ ಬೇಕಾಗುವ ಯಾವತ್ತು ಸಾಮಾನುಗಳು, ನೂಲಿಗೆ ಹಾಕುವ ನಾನಾ ತರದ ರಂಗುಗಳು ಅಗತ್ಯವಿರುವ [illegible] ರಸಾಯನಗಳು ಇವನ್ನು ನಮ್ಮಲ್ಲಿಂದ ನ್ಯಾಯವಾದ ಬೆಲೆಗೆ [illegible]ಬಹುದು. ನಮ್ಮಲ್ಲಿ ದೊರಕುವ ಯಾವತ್ತು ಸಾಮಾನುಗಳನ್ನು [illegible] ಕ್ಯಾಟಲಾಗ್ [illegible] ಮಾರಾಟಕ್ಕೆ [illegible].

ಪಿ. ಟಿ. ತ್ರಿವೇದಿ ಎಂಡ್ ಕೋ,
ನಂಬ್ರ 66 [illegible] ಲೇನ್,
ಫೋರ್ಟ ಮುಂಬಯಿ.

Edited, Printed & Published by V. S. Kamath at the M. T. A. Sharada Press, Mangalore.

Registered: No. M. 498.

ಚಂದಾನಿರ್ಣಯ:— ವರ್ಷ ಒಂದಕ್ಕೆ ರೂಪಾಯಿ 2-0-0. ಟಪ್ಪಾಲು ಹಾಸಲು ಸೇರಿ ರೂಪಾಯಿ 2-13-0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪ್ಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ | ನ ಭೇಜಿರೇ ಭೀಮವಿಷೇಣ ಭೀತಿಮ್ ‖ ಸುಧಾಂ ವಿನಾ ನ ಪ್ರಯಯುರ್ವಿರಾಮಂ | ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ‖ ೧ ‖
ದೊರೆಯುಲನುಪಮರತ್ನಗಳು ಸಾ | ಗರವ ಮಥಿಸಲು ಸುರರಿಗದರಿಂ | ಹರುಷವಾಯಿತೆ! ಮತ್ತೆ ವಿಶ್ವವ ಸುಡುತ ಬರುತಿರುವ ‖
ಗರಲಕವರಂಜಿದರೆ | ಸುಧೆಯನು | ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ‖ ೧ ‖

ಪುಸ್ತಕ ೧೯. ಮಂಗಳೂರು, ತಾರೀಕು ೧೩ನೇ ಶುಕ್ರವಾರ ಫೆಬ್ರವರಿ ೧೯೨೫. ಸಂಚಿಕೆ ೭.

The Canara Banking Corporation Udipi, Ltd.

Head Office:— **Udipi** Branch:— **Coondapoor**

Season Deposits

Carrying Special rate of 7% up to 15th June 1925 only.

Further Particulars on Application.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಉಡುಪಿ, ಲಿಮಿಟೆಡ್.

ಹೆಡ್ ಆಫೀಸು:— ಉಡುಪಿ. ಶಾಖೆ:— ಕುಂದಾಪುರ.

ತಾ. 15—6—1925ರವರೆಗೆ ಮಾತ್ರ ಸಾಲಿಯಾನ್ ಸೇಕಡಾ 7ರ ದರದ ಬಡ್ಡಿಯ ಮೇಲೆ ಮುಸುಂ ಠೇವಣಾತಿಗಳನ್ನು ಅಂಗೀಕರಿಸೋಣಾಗುತ್ತದೆ.

ಹೆಚ್ಚಿನ ಮಾಹಿತಿಗೆ ಬರಕೊಳ್ಳಿರಿ.

Office of the Corporation, Udipi, 10-11-'25 } **N. Ananda Rao,**
Secretary.

Wanted Agents

FOR

Every District in South India

For Pushing Sales of Our Calenders, Xmas and New Year Cards, Blotters, Pictures and Picture Post Cards, at wholesale rates. Deposit of Rs. 100—0—0 Essential.

Apply to:—
The South Indian Advertising Agency,
13, Kilary Road,
BANGALORE CITY.

ಶುದ್ಧ ರೋಮದ ಧಾವಳಿಗಳು.

1 ಮೊಳ ಉದ್ದ 1¼ ಮೊಳ ಅಗಲ ರೂ. 1¼ರಿಂದ 2 ವರೆಗೆ, 5 ಮೊಳ ಉದ್ದ 1½ ಮೊಳ ಅಗಲ ರೂ. 1½ ರಿಂದ 5 ವರೆಗೆ, 6 ಮೊಳ ಉದ್ದ 1½ ಮೊಳ ಅಗಲ ರೂ. 2¼ರಿಂದ 6 ವರೆಗೆ, 8 ಮೊಳ ಉದ್ದ 2 ಮೊಳ ಅಗಲ ರೂ. 3½ರಿಂದ 10 ವರೆಗೆ, 12 ಮೊಳ ಉದ್ದ 2¼ ಮೊಳ ಅಗಲ ರೂ. 6ರಿಂದ 12 ವರೆಗೆ, 16 ಮೊಳ ಉದ್ದ 2¼ ಮೊಳ ಅಗಲ ರೂ. 9 ರಿಂದ 16 ವರೆಗೆ. ಇವುಗಳಲ್ಲದೆ [illegible] ರೇಶ್ಮೆ ಮಡಿಗಳು, [illegible], [illegible] ಪೀತಾಂಬರಗಳು, [illegible], ರುದ್ರಾಕ್ಷಿ [illegible], [illegible] ಸಾಮಾನುಗಳು, ಫೋಟೋ [illegible] ಮತ್ತು ಇನ್ನೂ ಅನೇಕ ಸಾಮಾನುಗಳು ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುವು. [illegible] ಇನಾಂ.

ವಿಳಾಸ—
ಶಿರೋಮಣಿ ಯು. ನಾರಾಯಣಾಚಾರ್ಯ
ಮತ್ತು ಕಂಪೆನಿ, [illegible], [illegible].

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ.

450 ಪುಟಗಳು ಎಮ್. ಗಣಪತಿರಾವ್ ಐಗಳ್ ಇವರಿಂದ ರಚಿತವಾದದ್ದು. ಕ್ರಯ ರೂ 1-4-0

ಮಾರಾಟಕ್ಕೆ ಸಿದ್ಧವಾಗಿವೆ — ತುಳು ಪಾಡ್ದನಗಳು — ಮಾರಾಟಕ್ಕೆ ಸಿದ್ಧವಾಗಿವೆ.

ದೈಯ್ಯೊಂಗುಳು, ಕಲ್ಲುರ್ಟಿ—ಕಲ್ಕುಡ, ಕಣಂದೂರು ದೈಯ್ಯೊಂಗುಳು, ಮುಂಡತ್ತಾಯ, ಬೊಬ್ಬರ್ಯ.

ಸುಲಭ ದರಗಳು — ಶಾಲಾ ಪುಸ್ತಕಗಳು — ರಖಂ ಕೊಂಡುಕೊಳ್ಳುವವರಿಗೆ ಯೋಗ್ಯ ಡಿಸ್ಕೌಂಟ್.

ಚಿಕ್ಕ ಕಥೆಗಳು:—ಮೂರು ಕರಡಿಗಳು; ಜೇನುಸತ್ತು ಕಾಗೆ ಬಡವಾಯಿತು; ಅರಗಿಣಿ ಮುದ್ದು; ಇಲಿಗಳ ಹಬ್ಬ; ಅಂಗಳ ದುಗ್ಗು; ಸಿಗಡಿ ಯಾಕೆ ಒಣಗಲಿಲ್ಲ; ಗುಡುಗುಡು ಗುಮ್ಮಟ ದೇವರು; ದುಣಸಿನ ಕಾಳಪ್ಪ; ಒಬ್ಬನ ಓಟ; ಹೊಸ ಕನ್ನಡ ಪುಸ್ತಕ ಭಾಗ ೧; ಹೊಸ ಕನ್ನಡ ಪುಸ್ತಕ ಭಾಗ ೨; ಕನ್ನಡ ಪದ್ಯಗಳು; ಮಗ್ಗಿ ಪುಸ್ತಕ; ಅಚಿತಕುಮಾರ; ಪದ್ಯ ರತ್ನಾವಳಿ, ಎಕ್ಸರ್ಸೈಜ್ ಮತ್ತು ನೋಟು ಪುಸ್ತಕಗಳು, ಕಾಪಿ ಪುಸ್ತಕಗಳು, ಡ್ರೊಯಿಂಗ್ ಪುಸ್ತಕಗಳು

ಇತರ ಪುಸ್ತಕಗಳು:—ಸಂಕ್ಷೇಪಗೀತೆ, ಕೌತುಭಂಗ, ಹಿಂದೂ ವ್ರತವಿವೇಕ, ಚಂದ್ರಗುಪ್ತ ಚಕ್ರವರ್ತಿ, ಶ್ರೀ ಕೃಷ್ಣಸಂಧಾನ ಪದ್ಯಪಾಠಗಳು, ಹರಿಕಥಾ ಮೃತಸಾರ ಹರಿನಾಮಸಂಕೀರ್ತನೆ ಸುದಾಂಮೃತ ಪದ್ಯಗಳು. ಬೆಂಕಿಪೆಟ್ಟಿಗೆ ತಯಾರಿಸುವ ವಿಧಾನ, ಸಾಬೂನು ತಯಾರಿಸುವ ವಿಧಾನ, ಸ್ವರಾಜ್ಯ ಭಜನೋಲ್ಲಾಸ, ಚರಕಗೀತೆ, ಕೊಂಕಣಿ ಭಾಷೆಯಲ್ಲಿ ಚಂದ್ರಹಾಸ ನಾಟಕ, ಪ್ರಹಲ್ಲಾದ ಚರಿತ್ರ ನಾಟಕ, ಕನ್ನಡ ಮೃಚ್ಛಕಟಿಕ ನಾಟಕ, ಚಂದ್ರಹಾಸಾಭ್ಯುದಯ ನಾಟಕ, ಕೋವಿಲನ್ ಚರಿತ್ರ ನಾಟಕ, ಮಾದರಿ ಉಪನ್ಯಾಸ ಭಾಗ ೧, ೨, ಮತ್ತು ೩.

AMRUTANJAN BO
AMRUTANJ
Best Indian Pain Balm
Amrutanjan
BOMBAY

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಸಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣಾದಿ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ, ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ, ಡಬ್ಬಿ 1ರ ಕ್ರಯ 3 ಆಣೆ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

109 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

— ರಥೋತ್ಸವ, ವಿವಾಹ ಉಪನಯನಗಳ ಸಮಯ —
ಸರ್ವರಿಗೂ ಉಡಿಗೆ ತೊಡಿಗೆಗಳು ಬೇಕಾಗುವ ಸಂದರ್ಭ.

ಯಾರು, ಯಾವುದನ್ನು ಎಲ್ಲಿ ಪಡೆಯಬೇಕೆಂಬ ಶಂಕೆಯಿಂದ ವಿಳಂಬ ಮಾಡಬೇಡಿರಿ. ಉಡಿಗೆತೊಡಿಗೆಗಳನ್ನು ಆರಿಸಾಯಿಸಿ ನಿಮಗೆ ಬೇಕಾದ ಯಥಾರ್ಥ ಮಾಹಿತಿಯನ್ನು ಕಳೆದ ಇಪ್ಪತ್ತು ವರುಷಗಳಿಂದ ಪಡದು ನಮ್ಮಲ್ಲಿಯ ವ್ಯಾಪಾರವು ಗಿರಾಕಿಗಳಿಗೆ ಸರ್ವ ತೃಪ್ತಿಯಿಂದಲೂ ಲಾಭಕರವಾಗಿ ಪರಿಣಮಿಸುವಂತೆ ನಮ್ಮ ಜವಳಿ ಸಂಗ್ರಹವನ್ನು ಮಾಡಿರುತ್ತೇವೆ.

ಗುರ್ಪುರ್ಕಾರ್ ಬ್ರದರ್ಸ್, ರಥಬೀದಿ, ಮಂಗಳೂರು.

ಹೆಡ್ ಆಫೀಸು:—ರಥಬೀದಿ—(ಮೊದಲು ಸುಜೀರ ನಾಗಪ್ಪನಾಯಕ್, ಎಂಡ್ ಕೊ, ಇದ್ದಲ್ಲಿ; ಅಜಿಜುದ್ದೀನ್ ರಸ್ತೆಗೆ ತಿರುಗುವಲ್ಲಿ) ಮಂಗಳೂರು.

ಬ್ರೆಂಚ್ ಆಫೀಸು:—ರಥಬೀದಿ—(ಹಳೇ ತಾಲೂಕು ಕಚೇರಿಯ ಪಟಾರಕ್ಕೆ ಸಮೀಪವಿರುವ ಮಳಿಗೆ) ಮಂಗಳೂರು.

ಈ ದೇಶದ ಪ್ರಖ್ಯಾತವಟ್ಟ ನೇಯಿಗೆಯ ಕೇಂದ್ರಸ್ಥಳಗಳಾದ—ಬನಾರಿಸ್, ಪೂನಾ, ಅಹಮ್ಮದಾಬಾದ್, ಸೂರತ್, ಬೆಂಗಳೂರು, ಧರ್ಮವರಮ್, ಕಂಜೀವರಮ್, ಕೊಯಮುತ್ತೂರು, ಮಧುರೆ, ತಂಜಾವೂರು, ಕುಂಭಕೋಣ, [illegible], [illegible], ಹುಬ್ಬಳ್ಳಿ, [illegible], ಗದಗ, ಮದ್ರಾಸು ಈ ಪ್ರಾಂತ್ಯಗಳಲ್ಲಿ ತಯ್ಯಾರಾದ

ಜರಿಸೀರೆಗಳು, ಮಸ್ಲಿನು, ಜರಿಶಾಲು, ಪಂಚೆ, ರೇಶ್ಮೆ ಸೀರೆಗಳು, ಅರಕೋಟೆ ಸೀರೆಗಳು, [illegible] ರೇಶ್ಮೆ ಸೀರೆಗಳು, [illegible] ಸೀರೆಗಳು, ರೇಶ್ಮೆ ಮಡಿಗಳು, ನಿತ್ಯ ಉಪಯೋಗದ ಸೀರೆಗಳು [illegible], [illegible] ಮಿಲ್ಸ್‌ಗಳ ವ ಇತರ ಮಿಲ್ಸ್‌ಗಳ [illegible].

ಕೈರಾಟೆಯಲ್ಲೆ ತಯಾರಿಸಿದ ನೂಲಿನಿಂದ ಮಾಡಿದ—

ಖದ್ದರ್ [illegible], ಖದ್ದರ್ [illegible], ಖದ್ದರ್ ಟೋಪಿ, ಖದ್ದರ್ [illegible], ಅಂಗವಸ್ತ್ರ, ಇತ್ಯಾದಿ—
[illegible] ಬೇಕಾದ ನಮೂನೆಯ [illegible] ವಗೈರೆ—

ಎಲ್ಲ ಸಂಗ್ರಹವನ್ನು ನಮ್ಮ ಪ್ರೊಪ್ರೈಟರರಾದ [illegible] ಸ್ವತಃ [illegible] ಹೋಗಿ ಸಂಗ್ರಹಿಸಿ ತಂದಿರುತ್ತಾರೆ.

[illegible]—[illegible], ರೂಪಾಯಿ 50ಕ್ಕೆ [illegible] 6¼ರ, ರೂ. 50ರಿಂದ 250ರವರೆಗೆ [illegible] 10%, ರೂ. 250 ರಿಂದ 1000ಕ್ಕೆ 12½% [illegible] ಡಿಸ್ಕೌಂಟ್ [illegible].

ಪ್ರತಿಯೊಂದು ಕುಟುಂಬಿಗಳ ಮನೆಗಳಲ್ಲಿ ಸೌಖ್ಯವನ್ನು ತೋರಿಸುವುದಕ್ಕೂ ಮತ್ತು ಅವರವರ ಉಪಯೋಗಾರ್ಥವನ್ನು ತಿಳುವಳಿಕೆ ಬಗ್ಗೆ ನಡೆಸುವುದಕ್ಕೂ ಒಂದು ಮುಖ್ಯವಾದ ನಿಘಂಟು ಪುಸ್ತಕವು ಈ ನಮ್ಮ ಹಿಂದೂದೇಶದ ಸಮೂಹದಲ್ಲಿರುವುದು. ಅಂಥಾ ಪುಸ್ತಕವು ಯಾವದೆಂಬುದು

ನೀವುಗಳು ಬಲ್ಲಿರಾ?

(ಅದೇ)

"ಕಾಮಶಾಸ್ತ್ರವೆಂಬುವುದು."

ತಾವುಗಳು ಇನ್ನೂ ಈ ಪುಸ್ತಕದಲ್ಲಿ ಬರೆದಿರುವ ಸಾರಾಂಶವನ್ನು ಓದಿಲ್ಲದಿದ್ದರೆ, ಒಡನೇ ಒಂದು ಪುಸ್ತಕವನ್ನು ಕಳುಹಿಸುವಂತೆ ಒಂದು ಪೋಸ್ಟುಕಾರ್ಡು ಬ[illegible] ಪುಸ್ತಕವನ್ನು ಇನಾಮಾಗಿ ಕಳುಹಿಸುವೆವು.

ಮುಖ್ಯವಾದ ತಿಳುವಳಿಕೆ.

ತಾವುಗಳು ದೃಢಚಿತ್ತರಾಗಿಯೂ, ನಿಧಾನಸ್ಥರಾಗಿಯೂ, ಸೌಖ್ಯವಾಗಿಯೂ, ಕಷ್ಟವಿಲ್ಲದೇ ವಿಷಯಗಳನ್ನು ಭರಿಸುವ ಮನಸ್ಸನ್ನು ಹೊಂದಬೇಕಾದರೆ ನಮ್ಮ ಅಮೂಲ್ಯವಾದ "ಕಾಮಶಾಸ್ತ್ರವೆಂಬುವ ಪುಸ್ತಕದಲ್ಲಿ ಕಾಣಿಸಿರುವ ಆತಂಕನಿಗ್ರಹ ಮಾತ್ರೆಗಳನ್ನು ಸೇವಿಸಬೇಕು."

ಒಂದು ರೂಪಾಯಿ ಖರ್ಚುಮಾಡಿದರೆ 32 ಮಾತ್ರೆಗಳುಳ್ಳ ಒಂದು ಡಬ್ಬಿಯನ್ನು ತರಿಸಿ ಪ್ರಯತ್ನಿಸಬಹುದು.

ವಿವರವಾಗಿ ಬರೆದಿರುವ ಒಂದು ಕ್ಯಾಟಲಾಗು ಕಳುಹಿಸುವಂತೆ ಈ ದಿನವೇ ಒಂದು ಪೋಸ್ಟುಕಾರ್ಡು ಬರೆಯಿರಿ.

ಆತಂಕನಿಗ್ರಹ ಔಷದಾಲಯ,
ನಂಬ್ರ 26, ಬ್ರಾಡ್ವೆ, ಮದರಾಸು.

ಹೊಸಗ್ರಂಥಗಳು !! ಬೇಗನೇ ತರಿಸಿಕೊಳ್ಳಿರಿ !!!

ಕೋಕ ಶಾಸ್ತ್ರವು.

ರಸಿಕ ವಾಚಕ ಮಹಾಶಯರೇ,

ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ, ಸಂಪಾದಿಸಿ, ಅದರಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನಷ್ಟೇ ಶೋಧಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ತಿನಿ, ಸ್ತ್ರೀಯ ಇವರಂತೆ ಪುರುಷರಲ್ಲಿಯ ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬುದನ್ನೂ, ಜನನೇಂದ್ರಿಯಾದಿಗಳ ವರ್ಣನೆಯನ್ನೂ, ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ, ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ, ನಪುಂಸಕತ್ವ, ವಂಧ್ಯಾದೋಷಗಳ ಚಿಕಿತ್ಸೆಯನ್ನೂ, ಸ್ತ್ರೀಯರ ಗೂಢ ರಹಸ್ಯವನ್ನೂ, ದಂಪತಿ ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನೂ, ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಅದ್ದರಿಂದ ಈ ಗ್ರಂಥವನ್ನು [illegible] ರಸಿಕರೂ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ.

ಇದರ ಬೆಲೆ ೧—೮—೦, ಟಪ್ಪಾಲು ಹಾಸಲು ೦—೪—೦

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ

ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ಮೂರನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್. ಗಣಪತಿರಾವ್ ಐಗಳ್—ಗ್ರಂಥಕರ್ತರು.

ಮನೋರಂಜಕ ಚಿತ್ರಗಳೂ ಇವೆ.

ಇದರಲ್ಲಿ ಸಾವಿತ್ರಿ, ಶಕುಂತಳಾ, ಕೃಷ್ಣಾಕುಮಾರಿ, ಪದ್ಮಿನಿ, ಜೋನ್ ಒಫ್ ಆರ್ಕ, ಫ್ಲೊರೆನ್ಸ್‌ನಾಯಿಟಂಗೇಲ, ಪರಶುರಾಮ, ಭೂತಾಳಪಾಂಡ್ಯ, ಕಾರ್ಕಳ ಗೋಮಟೇಶ್ವರ ಮತ್ತು ಭೈರವರಾಜ, ಮೂಡಬಿದ್ರೆಯ ಚೌಟರು, ನಂದಾವರ ಬಂಗರು, ಕಾರ್ಕಳ ರಾಮಸಮುದ್ರ ಮತ್ತು ರಾಮನಾಥ ಒಡೆಯರ ಅಣೆಕಟ್ಟು, ಗುರುಪುರ ಜಂಗಮ ಮಠ, ಕಲ್ಯಾಣಪ್ಪನ ಕಾಟಕಾಯಿ, ಗುರುವಾಯನಕೆರೆ, ಜಮಾಲಾಬಾದುಕೋಟೆ, ಸುಲ್ತಾನಬತ್ತೇರಿ, ಈದಗಾಪ್ರಾರ್ಥನಾಮಂದಿರ, ಸೇಂಟಮೇರಿ ದ್ವೀಪಗಳು ಮತ್ತು ದರಿಯಾಬಹಾದರಗಡ, ಕೊರಗರು, ಕೊಡಗರು, ತೋಡರು, ರಜಪೂತರು, ಕಂದಾರಿಗಳು ಘುರ್ಖಾ ಜನರು, ಅರಬಿಯರು, ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ಮೂರನೇ ದರ್ಜೆಯ ಮಕ್ಕಳಿಗೆ ಉಪಯುಕ್ತವಾಗಿದೆ. ಕ್ರಯ 6 ಅಣೆ.

ಪುಸ್ತಕ ದೊರೆಯುವ ವಿಳಾಸ—

ಶಾರದಾ ಛಾಪಖಾನೆ,
ಮಂಗಳೂರು.

ಗಣಪತಿರಾವ್, ಐಗಳ್.
ಮಂಜೇಶ್ವರ.

ಡಾಕ್ಟರುಗಳು ಭಿನ್ನಾಭಿಪ್ರಾಯಪಡುವಾಗ್ಯೆ ತೀರ್ಮಾನಿಸುವದು ಯಾರು?

ಅಂಥಾ ಸಂದರ್ಭಗಳಲ್ಲಿ ಡೆಂಗ್ಯೂ ಮುಂತಾದ ಜ್ವರಗಳನ್ನು ನಿವಾರಿಸುವಂಥಾ "ಬಾಟ್ಲಿವಾಲರ ಏಗ್ಯುಮಿಕ್ಸ್ಚರ್"ನ್ನು ಸರಾಗವಾಗಿಯೂ, ಮತ್ತು ಜ್ವರಗಳನ್ನು ಖಂಡಿತವಾಗಿ ನಿಲ್ಲಿಸುವಂಥಾದ್ದೂ, ಎಲ್ಲಾ ತರದ ತಲೆನೋವುಗಳನ್ನು ಹೋಗಲಾಡಿಸುವಂಥಾದ್ದೂ ಆದ "ಬಾಟ್ಲಿವಾಲರ ಏಗ್ಯುಪಿಲ್ಸ್" ಇದನ್ನು ಉಪಯೋಗಿಸಿರಿ.

ಐ. ಎಮ್. ಎಸ್. ಡಾಕ್ಟರುಗಳಿಂದ ಶಿಫಾರಸು ಮಾಡಲ್ಪಟ್ಟದ್ದು. ಇದರ ಉಪಯೋಗದಿಂದ ಹೃದಯದ ಮೇಲೆ ಯಾವದೊಂದೂ ಬಾಧಕವಿಲ್ಲ. ಅರ್ಧ ಶತಮಾನದಿಂದ ಹಿಂದೂಸ್ಥಾನ, ಬರ್ಮಾ, ಸಿಲೋನ್, ಆಫ್ರಿಕಾ ಇವುಗಳಲ್ಲಿ ಪ್ರಖ್ಯಾತಪಟ್ಟದ್ದಾಗಿರುತ್ತದೆ.

ಅನೇಕ ಹಿಂದೀ ಪ್ರದರ್ಶನಗಳಲ್ಲಿ ಬೆಳ್ಳಿ ಮತ್ತು ಬಂಗಾರದ ಪದಕಗಳನ್ನು ಪಡೆದಿರುತ್ತೆ. ಚಾಲ್ತಿ ಸಾಧ್ಯವಂತಿದ್ದು ಮಾರ್ವಾರಿಗಳೂ ಕೂಡ ಅದರ ಮೇಲೆ ಹಣವನ್ನು ಮುಂಗಡವಾಗಿ ಕೊಡುತ್ತಾರೆ. ಬಡ ಮತ್ತು ಮಧ್ಯಮ ತರಗತಿಯ ಜನರಿಗೆ ವರಪ್ರದಾನವಾಗಿದ್ದು ಸಂಚಾರ, ಪ್ರಯಾಣ, ದೇಶಾಟನೆಗಳ ಸಮಯದಲ್ಲಿ ಹತ್ತಿರದಲ್ಲಿರಿಸಿಕೊಳ್ಳದಾಗಿರುತ್ತದೆ.

ಬಾಟ್ಲಿವಾಲರ ಬಾಲಾಮೃತ ಅಥವಾ ಟೊನಿಕ್ ಸಿರಪ್.

ಕೆಮ್ಮನ್ನು ಹೋಗಲಾಡಿಸಿ, ಎದೆನೋವನ್ನು ಶಾಂತಗೊಳಿಸಿ, ಜ್ವರವನ್ನು ಉಪಶಮನಿಸಿ, ನಿದ್ರಾಭಂಗವನ್ನು ಕಡಿಮೆ ಮಾಡಿ ಧಾತುವರ್ಧನವನ್ನು ಮಾಡುವದರಲ್ಲಿ ಅತ್ಯುತ್ತಮವಾಗಿರುತ್ತದೆ. ಕಫವನ್ನು ಒಣಗಿಸಿ ಮಾಯವಾಗುವಂತೆ ಮಾಡುವುದಲ್ಲದೆ ಅದೇ ಸಮಯದಲ್ಲಿ ಒಳ್ಳೇ ಜೀರ್ಣವನ್ನೂ ಉಂಟುಮಾಡುವುದು. ದರ ಮೊದಲಾದ ಮಾಹಿತಿಯನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಕಾರಖಾನೆ:-CAWASHAPUR, BOMBAY.

ಎಲ್ಲಾ ಕಡೆಗಳಲ್ಲಿ
ಏಜಂಟರು ಬೇಕಾಗಿದ್ದಾರೆ.

ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.,
ಪಿ. ವಾರ್ಲಿ, ಮುಂಬಯಿ, ನಂಬ್ರ 18.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ

ಇವರ

ಬಾಲಾಮೃತ.

ಈ ಔಷಧವನ್ನು ಸೇವನೆ ಮಾಡುವುದರಿಂದ ಮಕ್ಕಳು ರೋಗರಹಿತರೂ ಸಶಕ್ತರೂ ಆಗುವರು. ಇದು ಮಧುರವಾಗಿದೆ; ಮಕ್ಕಳು ಸಂತೋಷದಿಂದ ಸೇವಿಸುತ್ತಾರೆ.

ನಮ್ಮ ವಿಳಾಸ:—

ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.

ಏಜಂಟರು:— ದಿ. ಊಲನ್ ಮಾರ್ಟ್, ಮಂಗಳೂರು.

OUR RECENT IMPORT IN WRIST WATCHES

Have you used anyone of these Watches?

SEND YOUR ORDER NOW ALL GUARANTEED.

Fashionable wrist wrist Lady's size. Reliable movement Guaranteed.

No. 368

Handy to wear and looks beautiful. Gives punctual time and with strong movement.

Nickel case Rs. 8—0

High-class Radium dial watch watch with Roman figures.

No. 367.

Can be seen in dark nights. Well fitted with best movement and strong to use. Used by one and all.

Silver case Rs. 9—0.

Radio light wrist watch.

No. 372.

Fitted with the best mechanism and guaranteed to work and keep perfect time for a long time.

Nickel case Rs. 7—8
Electro rolled-gold „ 9—0

(N. B. In addition to the above, we have good number of varieties of fancy wrist watches, pocket watches. Please write for a descriptive catalogue, which will be sent free)

WHOLESALE IMPORTERS

PETER WATCH COY.,
POST BOX 27, MADRAS

ಶಾಲಿವಾಹನಶಕ ೧೮೪೬ನೆಯ ರಕ್ತಾಕ್ಷಿ ಸಂವತ್ಸರದ ಮಾಘ ಬ೬ ಶನಿವಾರದಿಂದ ರಕ್ತಾಕ್ಷಿ ಸಂವತ್ಸರದ ಮಾಘ ಬ೧೨ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೫ನೆಯ ಕುಂಭ ಮಾಸ.)

ತಾರೀಕು	ವಾರ.	ತಿ.	ಘಳಿಗೆ.	ನಕ್ಷತ್ರ.	ಘಳಿಗೆ.	[illegible]	ಸೂರ್ಯ ಉ.	ಸೂರ್ಯ ಅಸ್ತ.
14	ಶನಿ	೬	೫೨ ೧	ಚಿತ್ರಾ	೧೫.೧೬	೩	6 56	6.38
15	ರವಿ.	೭	೪೭.೪೭	ಸ್ವಾತಿ	೧೩.೧೮	೪	6.55	6 35
16	ಸೋಮ	೮	೪೨.೪೪	ವಿಶಾಖಾ	೧೦.೩೧	೫	6.55	6 35
17	ಕುಜ	೯	೩೭.೧೬	ಅನುರಾಧಾ	೭.೧೬	೬	6.55	6.35
18	ಬುಧ	೧೦	೩೧.೩೨	ಜ್ಯೇಷ್ಠಾ	೩.೧೮	೭	6.54	6.36
19	ಗುರು	೧೧	೨೫.೪೪	ಪೂ. ಷಾ.	೫೫.೧೫	೮	6.54	6.36
20	ಶುಕ್ರ	೧೨	೨೦. ೦	ಉ. ಷಾ.	೫೧.೧೬	೯	6 54	6.36

ಮಂಗಳೂರಿನ ವಾಯುಸ್ಥಿತಿ.

(೧೯೨೫ನೆಯ ಮಕರ ಪುಯಿಂತೆಲ್.)

ತಾರೀಕು Date	Temperature. ಉಷ್ಣ (ಕಾವು) Maximum [illegible]	Minimum [illegible]	Rainfall. ಮಳೆ ದಿನದ ಮಳೆ	ಜುಮಲಾ ಮಳೆ.
6	89—7	69—3	—	—
7	89—3	68—9	—	—
8	86—5	68—2	—	—
9	87—0	71—1	—	—
10	88—8	72—8	—	—
11	98—7	73—1	—	—
12	90—1	73—4	—	140-89

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ	ವರೆಗೆ
	ರೂ. ಆ.	ರೂ. ಆ.
ಹೊಸ ಮಸ್ಕತಿ	8—0	8—10
ಹೊಸ ಗುಡ್ಡು	7-4	7—10
ಹೊಸ ರಾಶಿ	6-14	7—4
ಅವ್ವಲ್ ಬೆಳ್ತಿಗೆ	8-8	8—14
ಗುಡ್ಡು ಬೆಳ್ತಿಗೆ	8-0	8—4
ರಂಗೂನು ಬೆಳ್ತಿಗೆ ಗೋಣಿ ೧	14-8	15—
ಗೋಧಿ ಗೋಣಿ ೧ಕ್ಕೆ	19-0	21-8
ಹುರುಳಿಗೋಣಿ ೧ಕ್ಕೆ	9-8	10—8
ಕಡಲೆಗೋಣಿ ೧ಕ್ಕೆ	12-0	12—8
ತೊಗರಿಗೋಣಿ ೧ಕ್ಕೆ	12-8	13—0
ತೊಗರಿಬೇಳೆ ಗೋಣಿ ೧ಕ್ಕೆ	17-8	21-8
ಉದ್ದು ಗೋಣಿ ೧ಕ್ಕೆ	13-0	13-8
ಹೆಸರುಗೋಣಿ ೧ಕ್ಕೆ	14—0	15—0
ಊರು ಬೆಲ್ಲ ಖಂಡಿ ೧ಕ್ಕೆ	70-0	80-0
ಉಪ್ಪು ಗೋಣಿ ೧ಕ್ಕೆ	4-4	4-6
ಕೊಬ್ರಿ ಖಂಡಿ ೧ಕ್ಕೆ	125-0	135—0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	46-0	47—8
ಎಳ್ಳಿಂಡಿ ಖಂಡಿ ೧ಕ್ಕೆ	40-0	45—6
ಕೊಬ್ರಿ ಎಣ್ಣೆ ಮಣ ೧ಕ್ಕೆ	8—10	9—8
ಎಳ್ಳೆಣ್ಣೆ ಮಣ ೧ಕ್ಕೆ	7-0	11—0
ಜಾವಿನ ಎಣ್ಣೆ ಪೆಟ್ಟಿಗೆ ೧ಕ್ಕೆ	8-15-6	—
ಮೋರಿಸ ಸಕ್ಕರೆ ಮಣ ೧ಕ್ಕೆ	4—14	5 0
ಊರ ಮೆಣಸಿನಕಾಯಿ ಮಣ ೧ಕ್ಕೆ	10-8	11—0
ಸಾಸಿವೆ ಮುಡಿ ೧ಕ್ಕೆ	9-0	9—4
ಕೊತ್ತಂಬರಿ ಮುಡಿ ೧ಕ್ಕೆ	3-12	4—0
ಶುಂಠಿ ಖಂಡಿ ೧ಕ್ಕೆ	410-0	480—0
ಅಡಿಕೆಗೋಟು ಅಡಿಕೆ ಖಂಡಿ ೧ಕ್ಕೆ ಹಳತು	245-	250—0
„ ಹೊಸ ಅಡಿಕೆ	190—0	217—0
ಕಾಳುಮೆಣಸು ಖಂಡಿ ೧ಕ್ಕೆ	155—0	160—0
ಯಾಲಕ್ಕಿ ಮಣ ೧ಕ್ಕೆ	80-0	85—0
ಗೇರುಬೀಜ ಮುಡಿ ೧ಕ್ಕೆ	4—10	—
ಅರಶಿನ ಖಂಡಿ ೧ಕ್ಕೆ	45-0	55—0
ಹುಣಸು ಹಣ್ಣು ಮಣ ೧ಕ್ಕೆ	17-12	23—0
ತಾಮ್ರ ಪಾತ್ರೆಗಳು ಮಣ ೧ಕ್ಕೆ	26-0	—
ಜೇನ ಬೆಲ್ಲ ಸೇರು ೧ಕ್ಕೆ	22—0	
ಹಿತ್ತಾಳೆ ತಗಡು ಮಣ ೧ಕ್ಕೆ	18—8	
ಸೀಸವು	14—5	

Pandit B. Ramakrishna Baliga's Siddha Ayurvedic medicines of 50 years' reputation.

ಮಹಾ ಮದನಕಾಮೇಶ್ವರಿ ಲೇಹ—ಇದನ್ನು ಭಂಗಾರ, ಅಭ್ರಕಭಸ್ಮ, ರಸಸಿಂಧೂರ, ಕಸ್ತೂರಿ, ಕುಂಕುಮಕೇಸರ ವಗೈರೆ ಅಮೂಲ್ಯವಾದ ರಸಾಯನ ದ್ರವ್ಯಗಳಿಂದ ತಯಾರಿಸಲ್ಪಟ್ಟಿರುತ್ತದೆ. ಇದು ಎಲ್ಲಾ ತರದ ನಪುಂಸಕ ರೋಗಗಳನ್ನೂ ಸ್ವಲ್ಪಾವಸ್ಥೆಯಲ್ಲಿ ಧಾತುಪತನೆಯನ್ನೂ ಗುಣಪಡಿಸಿ, ದೇಹಕ್ಕೆ ದಿವ್ಯಕಾಂತಿಯನ್ನೂ, ಪುಷ್ಟಿಯನ್ನೂ, ಪುರುಷತ್ವವನ್ನೂ, ವೀರ್ಯಸ್ತಂಭನವನ್ನೂ ಉಂಟುಮಾಡಿ ಅತ್ಯಾನಂದವನ್ನು ಕೊಡುವುದಲ್ಲದೆ, ಅಜೀರ್ಣ, ಅತಿಸಾರ, ಗ್ರಹಣಿ, ಅಮ್ಲ, ಪಿತ್ತ, ಉದರಶೂಲೆ, ಪ್ರಮೇಹ ವಗೈರೆ ರೋಗಗಳನ್ನು ಗುಣಪಡಿಸುವಲ್ಲಿ ಕೇವಲ ಅಮೃತಸಮಾನವಾಗಿರುವುದು. ಇದನ್ನು ಅಬಾಲವೃದ್ಧರೂ ಸೇವಿಸಬಹುದು.

ಸ್ವರ್ಣ ಮಿಶ್ರಿತ ಲೇಹಕ್ಕೆ (43 ದಿವಸಗಳ ವರೆಗೆ ಸಾಕಾಗುವ) ಸೇರು ೧ರ ರೂ. 4—0—0.
ಸ್ವರ್ಣ ಇಲ್ಲದ „ „ „ „ 3—0—0.

ಪ್ರಮೇಹ ಶಾರಿವಾದ್ಯಾದಿ ರಸಾಯನ—ಇದು ಖಾತ್ರಿಯಿಂದ ರಕ್ತವನ್ನು ಶೋಧಿಸುವ ದಿವ್ಯೌಷಧವಾಗಿರುತ್ತದೆ. ಇದರ ಸೇವನೆಯಿಂದ 20 ತರದ ಪ್ರಮೇಹ ರೋಗಗಳೂ ಎಲ್ಲಾ ತರದ ಫರಂಗಿ ರೋಗಗಳೂ ಅಲ್ಪ ಸಮಯದಲ್ಲಿ ಗುಣಹೊಂದುವವು. ಅದಲ್ಲದೆ ಇದು ಎಲ್ಲಾ ತರದ ಕುಷ್ಠವ್ಯಾಧಿಗಳನ್ನೂ, ಖಜ್ಜಿ, ಕುರು ಮೊದಲಾದ ಸಕಲ ಚರ್ಮವ್ಯಾಧಿಗಳನ್ನೂ, ಪಾದರಸ ಸೇವನೆಯಿಂದ ಉಂಟಾದ ರೋಗಗಳನ್ನೂ ಮತ್ತು ಹೆಂಗಸರ ಪ್ರದರ ರೋಗಗಳನ್ನೂ ಖಾತ್ರಿಯಿಂದ ಗುಣಪಡಿಸುವುದು.

8 ಔನ್ಸಿನ ಬಾಟ್ಲಿ ಒಂದರ ಕ್ರಯ ಖರ್ಚ ರೂ. 1—9—0.

ಧಾತ್ರಿ ಪರ್ಪಟಕಾದಿ ತೈಲ—(ವಿದ್ಯೆ ಇಲ್ಲದವರಿಗೆ ಸಿದ್ಧೌಷಧ.) ಇದನ್ನು ತಲೆಗೆ ಇಟ್ಟಲ್ಲಿ ಸಕಲ ಶಿರೋರೋಗಗಳೂ, ಕರ್ಣ, ನೇತ್ರ, ದಂತ, ಜಿಹ್ವಾರೋಗಗಳೂ, ತಲೆ ತಿರುಗುವುದು, ಕಿರಿಯಾದ ತಲೆ ಕೂದಲು ಮೊದಲಾದ ರೋಗಗಳು ನಾಶವಾಗಿ, ಸ್ಮರಣಶಕ್ತಿಯನ್ನೂ, ಜ್ಞಾನಶಕ್ತಿಯನ್ನೂ ವೃದ್ಧಿಗೊಳಿಸುವುದು. ಇದು ವಿದ್ಯಾರ್ಥಿಗಳಿಗೂ ವಕೀಲರಿಗೂ ಒಂದು ಸಿದ್ಧೌಷಧ.

4 ಔನ್ಸಿನ ಬಾಟ್ಲಿ ೧ರ ರೂಪಾಯಿ 1—0—0.

ಕಸ್ತೂರಿ ಮಿಶ್ರಿತ ದಶಮೂಲಾಸವ—ಬಾಣಂತಿಯರಿಗೆ 8 ಔನ್ಸು ಬಾಟ್ಲಿಗೆ ರೂ. 1—0—0. ಅಮೃತಾರಿಷ್ಟ—ಸಕಲ ಜ್ವರಗಳ ಮೇಲೆ ಬಾಟ್ಲಿಗೆ ರೂ. 0—12—0. ಚವ್ವನ ಪ್ರಾಶಲೇಹ—(ದೇಹಪುಷ್ಟಿಗೆ) ಸೇರು ೧ರ ರೂ. 2—0—0. ಅಶೋಕಾರಿಷ್ಟ—(ಹೆಂಗಸರ ರೋಗಗಳ ಮೇಲೆ) 8 ಔನ್ಸಿನ ಬಾಟ್ಲಿ ೧ರ ರೂ. 1—0—0. ಮಹಾ ಚಂದನಾದಿ ತೈಲ—(ಅಭ್ಯಂಗಕ್ಕೆ ದಿವ್ಯೌಷಧ) 4 ಔನ್ಸಿನ ಬಾಟ್ಲಿ ೧ರ ರೂ. 1—0—0. ಗೋರೋಚನಾದಿ ಮಾತ್ರೆ—(ಮಕ್ಕಳ ಚಿಕಿತ್ಸೆಗೆ) ಡಜನು ೧ರ ಕ್ರಯ ರೂ. 1—0—0.

ಸೂಚನೆ:—ಟಪ್ಪಾಲ ಹಾಸಲು ಪ್ರತ್ಯೇಕ. ಸ್ಥಳೀಕ ಬಡ ಜನರಿಗೆ ಔಷಧವು ಧರ್ಮಾರ್ಥವಾಗಿ ಕೊಡಲ್ಪಡುವುದು.

ವಿಳಾಸ:— ಪಂಡಿತ, ಬಿ. ರಾಮಕೃಷ್ಣ ಬಾಳಿಗ, ಬಂಟವಾಳ ದ. ಕ.

The Canara Public Conveyance Co., Ltd, Mangalore.
(ESTABLISHED 1914).
ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು
- ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು
- ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
- ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
- ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.
- ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯು ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ—ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd, Mangalore. S. K.

ನೋಟೀಸು.

ದಕ್ಷಿಣ ಕನ್ನಡ ಡಿಸ್ಟ್ರಿಕ್ಟ ಕೋರ್ಟಿನಲ್ಲಿ,

O. P. No. $\frac{19}{1925}$

ಅಣ್ಣೆ ಯಾನೆ ಬ್ರಹ್ಮಯ್ಯ ಶೆಟ್ಟಿ—ಮ್ಯಾನರ್.

1. ಜ್ಯಾಲಿನಿ
2. ನೇಮಣ್ಣ ಶೆಟ್ಟಿ

} ಅರ್ಜಿದಾರರು.

ಮೇಲ್ಕಂಡ ಅರ್ಜಿಯಲ್ಲಿ ಮ್ಯಾನರನ ಆಸ್ತಿ ವಗೈರೆಗೆ 1ನೇ ಅರ್ಜಿದಾರರನ್ನು ಗಾರ್ಡಿಯನರಾಗಿ ನೇಮಿಸ ಬೇಕೆಂತ ವಗೈರೆ [illegible] ಅರ್ಜಿದಾರರು ಕೊಟ್ಟ ಅರ್ಜಿಯನ್ನು ಮೇಲ್ಕಂಡ ಕೋರ್ಟಿನಲ್ಲಿ ತಾ. 27—2—'25ಕ್ಕೆ ಅಪರಾಹ್ನ 11 ಘಂಟೆಗೆ ತನಿಖೆಗೆ ಇಟ್ಟಿದೆ. ಆಕ್ಷೇಪ ಇದ್ದವರು ಅವರವರ ಆಕ್ಷೇಪಗಳನ್ನು ಸದರಿ ತಾರೀಕಿಗೆ ಸದರಿ ಕೋರ್ಟಿನಲ್ಲಿ ಹ್ಯಾಜರು ಮಾಡಿಕೊಳ್ಳತಕ್ಕದ್ದು.

Mangalore,
10-2-1925.

K. SADASHIVA RAO,
Counsel for Petrs.

CAR FESTIVAL
CONCESSION
MAKE HASTE AND BUY A
Pocket Electric Lamp
AVAILABLE
In different varieties, Mother of pearl lamps. Cycle lamps.
NICKEL PLATED.
Hammered Brand, with Powerful Bulls-eye lanes,
Use with it
Bull's-eye Dry Batteries.
The Mangalore Trading Association,
Car Street, MANGALORE.

ಕನ್ನಡಿಗರೇ! **ವಸಂತ.** ಕನ್ನಡಿಗರಿರಾ!

ಈಗಾಗಲೇ ಎರಡನೇ ಸಂಪುಟವು ಆರಂಭಿಸಲಿದೆ.

ಇತಿಹಾಸನಿಧಿ ಎಂದರೆ . . . . ವಸಂತ
ಸಮಾಜಸುಧಾರಕನೆಂದರೆ . . . . ವಸಂತ
ಕೈಗಾರಿಕೆಯ ಸ್ವಾತಂತ್ರ್ಯವೆಂದರೆ . . . . . ವಸಂತ
ಕರ್ನಾಟಕದ ಭಾಷಾಸೇವಕನೆಂದರೆ . . . . . ವಸಂತ
ದೇಶವಿದೇಶ ಬಂಧುವೆಂದರೆ . . . . . . ವಸಂತ
ಕಾದಂಬರಿಗಳ ಭಂಡಾರವೆಂದರೆ . . . . . ವಸಂತ
ಚಿತ್ರಾಕರ್ಷ ಚಿತ್ರಶಾಲೆಯೆಂದರೆ . . . . . ವಸಂತ
ದೇಶಭಕ್ತನೆಂದರೆ . . . . ವಸಂತ

ಇಂತಹ ವಸಂತನು ಯಾರಿಗೆ ಬೇಕು,
ಯಾರಿಗೆ ಬೇಡ?

48 (ಕ್ರೌನ್ ⅛ ಪುಟ ಸೈಜಿನ) ಪುಟಗಳನ್ನು ಮುಕ್ಕಿದ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3—4—0 ಮಾತ್ರ.

ವ್ಯವಸ್ಥಾಪಕ,
ವಸಂತ ಕಾರ್ಯಾಲಯ,
ಕುಂದಾಪುರ, ದಕ್ಷಿಣ ಕನ್ನಡ.

ಬಂದು ನೋಡಿರಿ! ತಿಂದು ನೋಡಿರಿ!
ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ
ಪದಕವನ್ನು
ಬಹುಮಾನವಾಗಿ ಪಡೆದಿರುವ
ಎಸ್. ಪಿ. ಆಚಾರ್ಯ
ಇವರಿಂದ ತಯಾರಿಸಲ್ಪಟ್ಟ
ಉಪ್ಪಿನಕಾಯಿಗಳನ್ನು
ಬಂದು ನೋಡಿರಿ! ತಿಂದು ನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ, ಶುಂಠಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನ್ನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ
ಬಂದು ನೋಡಿರಿ! ತಿಂದು ನೋಡಿರಿ!

ಇಂಡಿಯನ್ ಸ್ವೀಟ್‌ಮೀಟ್ ಮಾರ್ಟ್.

ಮನೋರಮಾ ಕಾಫಿ ಕ್ಲಬ್, ಮಾರ್ಕೆಟು ರೋಡು, ಮಂಗಳೂರು. ಅಥವಾ ಸದಾನಂದ ಕಾಫಿ ಕ್ಲಬ್, ರಥಬೀದಿ, ಮಂಗಳೂರು.

ಶ್ರೀ ಧನ್ವಂತರಿ:—ಈ ಪಾಕ್ಷಿಕ ಪತ್ರಿಕೆಯ ಮಾದರಿ ಸಂಚಿಕೆಯೊಂದು ನಮಗೆ ಈಗಲೇ ತಲ್ಪಿರುತ್ತದೆ. ಮದ್ರಾಸ್ ಆಯುರ್ವೇದ ಕೋಲೇಜಿನ ಪರವಾಗಿ ಈ ಪತ್ರಿಕೆಯು ಪ್ರತಿ ತ್ರಯೋದಶೀ ದಿನ ಪ್ರಕಟವಾಗುವುದು. ದೇಶೀಯ ವೈದ್ಯಪ್ರಚಾರವು ಅತಿ ಅಗತ್ಯವಾಗಿ ಕಂಡಬಂದು ಅದರ ಪ್ರಚಾರಕ್ಕಾಗಿ ಹಲ ತುಂಬಾ ಪ್ರಯತ್ನಗಳು ನಡೆಯುತ್ತಿರುವಾಗ ನಮ್ಮ ಕರ್ನಾಟಕದಲ್ಲೂ ಈ ಚಳವಳದ ಜಾಗ್ರತಿಯನ್ನುಂಟುಮಾಡಿ ದೇಶೀಯ ವೈದ್ಯಪ್ರಚಾರ ಕಾರ್ಯಕ್ಕಾಗಿ ಜನ್ಮವೆತ್ತಿದ ಪತ್ರಿಕೆಯು ಚಿರಕಾಲ ಬಾಳಲೆಂದು ಬಯಸುವೆವು. ಈಗ ವರ್ತಮಾನ ಪತ್ರಿಕೆಗಳಿಗೆ ಒಂದೊಂದೇ ವಿಷಯದ ಕುರಿತು ಹೆಚ್ಚು ಹೆಚ್ಚಾಗಿ ಪ್ರಸ್ತಾಪಿಸಲು [illegible] ಅನುಕೂಲವಾದ ಕಾಲದಲ್ಲಿ ಆಯುರ್ವೇದದ ಮಹತ್ವಿಕೆ, ಅದರ ಕುರಿತಾಗಿ ನಡೆಯುವ ಚಳವಳ ಮೊದಲಾದ ವಿಷಯಗಳನ್ನು ಸಾಂಗೋಪಾಂಗವಾಗಿ ಪ್ರಕಟಿಸಲು ಈ ಪತ್ರಿಕೆಗೆ ತುಂಬಾ ಅನುಕೂಲವಿದೆ. ಅದುಕಾರಣ ಕರ್ನಾಟಕದ ಆಯಾ ಭಾಗಗಳಲ್ಲಿರುವ ಆಯುರ್ವೇದ ವೈದ್ಯರು ಈ ಪತ್ರಿಕೆಗೆ ಪ್ರೋತ್ಸಾಹ ಕೊಡಲೇ ಬೇಕು. ಅಲ್ಲದೆ ದೇಶೀಯ ವೈದ್ಯಪ್ರಚಾರಾಭಿಮಾನಿಗಳು ಆಯುರ್ವೇದಪ್ರಚಾರ ಕಾರ್ಯಕ್ಕೆ ಈ ಪತ್ರಿಕೆಯು ಒಂದು ಮುಖ್ಯ ಸಾಧನವಾಗಬೇಕೆಂದು ತಿಳಿದು ತಮ್ಮ ಕೈಲಾದ ಸಹಾಯ ಮಾಡುವರಾಗಿಯೂ ನಂಬಿದ್ದೇವೆ. ಪತ್ರಿಕೆಯ ವಾರ್ಷಿಕ ಚಂದಾ ರೂ. ೩. ವಿದ್ವಾನ್ ಕೆ. ಶೇಷ ಶಾಸ್ತ್ರಿ ಶೃಂಗೇರಿ ಇವರು ಸಂಪಾದಕರು.

ನೋಟೀಸು.

ಮುಂಬಯಿ ಸ್ಟೀಮ್ ನೇವಿಗೇಶನ್ ಕಂಪನಿ ಲಿಮಿಟೆಡ್.

ಗೋಕರ್ಣ ಮಹಾಶಿವರಾತ್ರಿಗೆ ಹೋಗುವ ಪ್ರಯಾಣಿಕರಿಗೆ ಸೌಕರ್ಯ.

ಇದೇ ಬರುವ ಫೆಬ್ರವರಿ ತಿಂಗಳಲ್ಲಿ ಗೋಕರ್ಣದಲ್ಲಿ ನಡಿಯುವ ಶಿವರಾತ್ರಿ ಮಹೋತ್ಸವಕ್ಕೆ ಯಾತ್ರಿಕರಾಗಿ ಹೋಗುವ ಮೈಸೂರು, ಮಲಬಾರ, ಕೆನರಾ ಮೊದಲಾದ ಕಡೆಗಳ ಜನರಿಗೆ ಅನುಕೂಲವಾದ ಪ್ರಯಾಣ ಸೌಕರ್ಯವನ್ನು ಈ ಕಂಪೆನಿಯು ಮಾಡಿದೆ.

ಫೆಬ್ರವರಿ ತಾ. 21ರಲ್ಲಿ ಜರಗುವ ಶಿವರಾತ್ರಿ ಮಹೋತ್ಸವಕ್ಕೆ ಯಾತ್ರಿಕರಿಗೆ ಹೋಗಲು ಅನುಕೂಲವಾಗುವಂತೆ ಫೆಬ್ರವರಿ ತಾ. 16ನೇ ಸೋಮವಾರ ಬೆಳಿಗ್ಗೆ 10 ಗಂಟೆಗೆ ಸಾಮಾನುಗಳನ್ನು ಒಯ್ಯುವ (Cargo steamer) ಸ್ಟೀಮರೂ ಫೆಬ್ರವರಿ ತಾ. 18ನೇ ಬುಧವಾರ ಪ್ರಾತಃ 10 ಗಂಟೆಗೆ ಬಹು ವೇಗದಿಂದ ಓಡುವ ಪೆಸೆಂಜರ್ ಸ್ಟೀಮರೂ ಮಂಗಳೂರಿನಿಂದ ಬಿಡಲ್ಪಡುವುವು. ಈ ಎರಡೂ ಸ್ಟೀಮರುಗಳು ಪ್ರಯಾಣಿಕರನ್ನು ತದ್ರಿ (ಗೋಕರ್ಣ) ವರೆಗೆ ಮುಟ್ಟಿಸುವುವು.

ತಾ. 18ರಲ್ಲಿ ಬಿಡುವ ಬಹುವೇಗದಿಂದ ಓಡುವ (ಡಬ್ಬಲ್ ಸ್ಕ್ರೂ ಸ್ಟೀಮರ್) ಸ್ಟೀಮರು ಬರೇ 10 ತಾಸಿನೊಳಗೆ ಪ್ರಯಾಣಿಕರನ್ನು ಮುಟ್ಟಿಸುವುದು.

ತದ್ರಿಯಿಂದ ತಾ. 22ನೇ ಆದಿತ್ಯವಾರ ಬಿಡಲ್ಪಡುವ ಕಾರ್ಗೊ ಸ್ಟೀಮರೂ ತಾ. 24ನೇ ಮಂಗವಾರ ಬಿಡಲ್ಪಡುವ ವೇಗದಿಂದ ಓಡುವ ಪೆಸೆಂಜರ್ ಸ್ಟೀಮರೂ ಗೋಕರ್ಣದಿಂದ ಹಿಂದಕ್ಕೆ ಬರುವ ಯಾತ್ರಿಕರಿಗೆ ಬಹಳ ಅನುಕೂಲಗಳಾಗಿವೆ.

ಮಂಗಳೂರಿನಿಂದ ತದ್ರಿಗೆ ಹೋಗಿ ಬರುವ ಪ್ರಯಾಣಿಕರಿಗೆ ಒಂದುವರೆ ಪಾಲು (fare and half) ದರದಲ್ಲಿ ಟಿಕೇಟು ಕೊಡಲಾಗುವುದು.

ಸಾಧಾರಣವಾಗಿ ಇರುವ ಸಿಂಗಲ್ ದರ

	ಕಾರ್ಗೊ ಸ್ಟೀಮರ್.	ಫಾಸ್ಟ್ ಸ್ಟೀಮರ್.
ಲೋವರ್ ಕ್ಲಾಸ್	ರೂ. 5—8—0	ರೂ 5—12—0
ಅಪ್ಪರ್ ಕ್ಲಾಸ್	ರೂ. 8—2—0.	ರೂ. 8—10—0.

ದಕ್ಷಿಣಕಾಶಿಯೆಂದು ಖ್ಯಾತಿಗೊಂಡ ಗೋಕರ್ಣ ಮಹಾಕ್ಷೇತ್ರಕ್ಕೆ ಕುಟುಂಬಯಾತ್ರೆ ಮಾಡಲು ಅನುಕೂಲ ಸಂದರ್ಭ.

ತಾರೀಕು ೩-೨-'೨೫ನೇಗೆ ಮುಂದಿರಿಸಲ್ಪಟ್ಟ ದ. ಕ. ಜಿಲ್ಲಾ ಕಾ. ಕಮಿಟಿಯ ಕಾರ್ಯಕಾರೀ ಮಂಡಳಿಯ ಸಭೆಯ ವರದಿ.

ಜಿಲ್ಲೆಯಲ್ಲಿ ಬೇಕಾದ ಹಣವನ್ನು ಸೇಖರಿಸುವುದಕ್ಕೆ ಉಪಾಯ ಮತ್ತು ಕ್ರಮವನ್ನು ಸೂಚಿಸುವರೆ ಮತ್ತು ಚಾಲ್ತಿ ವರುಷದ ಅಂದಾಜು ಜಮಾಖರ್ಚಿನ ಪಟ್ಟಿಯನ್ನು (ಖಾದೀ ಬೋರ್ಡಿನ ಸಂಬಂಧ ಕೂಡಾ) ತಯಾರಿಸುವರೆ ಒಂದು ಉಪಕಮಿಟಿಯನ್ನು ನೇಮಕಮಾಡಲಾಯಿತು.

ಈ ಕಮಿಟಿಯ ಆರ್ಥಿಕ ಸ್ಥಿತಿಯು ಬಹಳ ಸಂದೇಹಾಸ್ಪದವಾಗಿರುವುದರಿಂದ ಈ ಕಮಿಟಿಯು ಕೆಳಗೆ ಕಾಣುವ ಸೂಚನೆಗಳನ್ನು ಅನುಮೋದಿಸುತ್ತದೆ.

೧. ಕಮಿಟಿಯ ಮಾಹೆಯಾನಾ ಸಭೆಗಳನ್ನು ಸದ್ಯಕ್ಕೆ ನಿಲ್ಲಿಸಿ ಅಗತ್ಯವಿದ್ದರೆ ಅವನ್ನು ತ್ರೈಮಾಸಿಕವಾಗಿ ಬದಲಾಯಿಸುವುದು.

೨. ಸಭೆಯಲ್ಲಿ ಪಾಸಾದ ನಿರ್ಣಯಗಳನ್ನು ಸ್ಥಳೀಕ ವರ್ತಮಾನ ಪತ್ರಗಳಲ್ಲಿ ಪ್ರಕಟಿಸುವುದು ಸಾಕಲ್ಲದೆ ಪ್ರತಿ ಸದಸ್ಯನಿಗೆ ಕಳುಹಿಸಿ ಕೊಡುವ ಪದ್ಧತಿಯನ್ನು ತತ್ಕಾಲಕ್ಕೆ ನಿಲ್ಲಿಸತಕ್ಕದ್ದು.

ಜಿಲ್ಲಾ ಕಮಿಟಿಗೆ ಸಲುವ ಯಾವತ್ತೂ ಹಣವನ್ನು ಆಡಳಿತೇ ಕಾರ್ಯದರ್ಶಿಯವರೇ ವಸೂಲು ಮಾಡಬೇಕಲ್ಲದೆ ಅವರ ಅನುಮತಿ ಇಲ್ಲದೆ ಜೊತೆ ಕಾರ್ಯದರ್ಶಿಯವರು ಕೂಡಾ ಖರ್ಚುಮಾಡಬಾರದಾಗಿಯೂ, ನಿಶ್ಚಯಿಸಲಾಯಿತು.

ಮ. ರಾ. ರಾಮರಾಯಮಲ್ಯರು ಪ್ರಾಂತಿಕ ಕಮಿಟಿಯ ಸದಸ್ಯತನಕ್ಕೆ ಕೊಟ್ಟ ರಾಜಿನಾಮೆಯು ಅಂಗೀಕರಿಸಲಾಯಿತು. ಸದರಿಯವರ ಸ್ಥಳದಲ್ಲಿ ಶ್ರೀಯುತ ಉ. ಶಾಂತಾರಾಮರಾಯರನ್ನು ನೇಮಕಮಾಡಲಾಯಿತು.

K. Panduranga Pai.
ಕಾರ್ಯದರ್ಶಿ,
ದ. ಕ. ಜಿ. ಕಾ. ಕ.

— ನಿರ್ಣಯಗಳು. —

ತಾ. ೨-೨-'೨೫ರಲ್ಲಿ ಜರುಗಿದ ಪ್ರಾಂತಿಕ ಕೊಂಗ್ರೆಸ್ ಕಮಿಟಿಯ ಸಭೆಯಲ್ಲಿ ಪಾಸಾದ ನಿರ್ಣಯಗಳು—

(೧) ಸನ್ ೧೯೨೫ನೇ ವರ್ಷದ ಮಟ್ಟಿಗೆ ಕಾಂಗ್ರೆಸ್ ಸದಸ್ಯತ್ವವು ಮಾರ್ಚಿ ತಿಂಗಳ ೧ನೇ ತಾರೀಕಿನಿಂದ ಪ್ರಾರಂಭವಾಗತಕ್ಕದ್ದು.

(೨) ಸದಸ್ಯರಾಗತಕ್ಕವರೂ ಸದಸ್ಯರನ್ನು ಮಾಡತಕ್ಕವರೂ ಅ. ಭಾ. ರಾಷ್ಟ್ರೀಯ ಮಹಾಸಭೆಯ ಬೆಳಗಾಂವಿಯಲ್ಲಿ ಹೊಸದಾಗಿ ಬದಲಿಸಿದ ಘಟನೆಯ ೧, ೪ ಮತ್ತು ೭ನೆಯ ನಿಯಮಗಳನ್ನು ಲಕ್ಷ್ಯದಲ್ಲಿಡತಕ್ಕದ್ದು.

(೩) ನೂಲಿನ ಕರದ ನಿಯಮಗಳನ್ನು ಯಶಸ್ವಿಯಾಗಿ ನೆರವೇರಿಸುವ ಕುರಿತು ಈ ಕಾರ್ಯಕಾರೀ ಮಂಡಲವು ಮಾಡಿದ ಕೆಳಗಿನ ಸೂಚನೆಗಳನ್ನು ಎಲ್ಲ ಕಮಿಟಿಗಳೂ ಮತ್ತು ಕೆಲಸಗಾರರೂ ಅಮಲಿನಲ್ಲಿ ತರತಕ್ಕದ್ದು.

(೪) ಕರ್ನಾಟಕದ ಪ್ರತಿಯೊಂದು ಜಿಲ್ಲೆಯವರು ೧೯೨೫ನೆಯ ಜೂನ್ ತಿಂಗಳ ಅಂತ್ಯದೊಳಗಾಗಿ ಕನಿಷ್ಠ ಪಕ್ಷಕ್ಕೆ ಒಂದು ಸಾವಿರ ಸದಸ್ಯರನ್ನಾದರೂ ಸೇರಿಸಲಿಕ್ಕೆ ಪ್ರಯತ್ನಮಾಡತಕ್ಕದ್ದು.

(೫) ಪ್ರತಿಯೊಂದು ಜಿಲ್ಲೆಯವರು ಮೇಲಿನ ಕಾರ್ಯಗಳನ್ನು ಪೂರೈಸುವ ಕುರಿತು ಜೂನ್ ತಿಂಗಳ ಅಂತ್ಯದ ವರೆಗೆ ಕೆಳಗಿನ ಯೋಗ್ಯತೆಯುಳ್ಳ ಪ್ರಚಾರಕರನ್ನು ನಿಯಮಿಸಬೇಕು:—

(i) ಪ್ರಚಾರಕರು ಪ್ರತಿನಿತ್ಯವೂ ಕನಿಷ್ಠಪಕ್ಷಕ್ಕೆ ೬ ತೊಲೆ ಅರಳೆ (ಬೀಜ ತೆಗೆದ ಹತ್ತಿ)ಯನ್ನು ಹಿಂಜಿ ೧೨ ನಂಬರದ ನೂಲನ್ನಾದರೂ ತೆಗೆಯುವವನಾಗಿರತಕ್ಕದ್ದು.

(ii) ಸಾಮಾನ್ಯವಾಗಿ ದಿನಚರ್ಯ ವರದಿಯನ್ನು ಕೊಡುವುದಕ್ಕಾಗಲಿ ಪಾವತಿಗಳನ್ನು ಕೊಡುವುದಕ್ಕಾಗಲಿ ತಕ್ಕಷ್ಟು ಕನ್ನಡ ಓದುಬರೆಯಲಿಕ್ಕೆ ಅರಿತಿರಬೇಕು.

(೬) ಇಂಥ ಪ್ರಚಾರಕರಿಗೆ ತಗಲುವ ಖರ್ಚನ್ನು ನೂರು ರೂಪಾಯಿಗೆ ಮಿಕ್ಕದಷ್ಟು ಪ್ರತಿಯೊಂದು ಜಿಲ್ಲಾ ಕಮಿಟಿಗೆ ಪ್ರಾಂತಿಕ ಕಮಿಟಿಯು ಕೊಡತಕ್ಕದ್ದು. ಪ್ರವಾಸ ಖರ್ಚಿನ ಪಟ್ಟಿಯು ಆಯಾ ಜಿಲ್ಲಾ ಕಮಿಟಿಯ ಕಾರ್ಯದರ್ಶಿಯ ಸಹಿಯಿಂದ ಬರತಕ್ಕದ್ದು. ಮತ್ತು ಹಣ ಪಟ್ಟಿಯು ಬಂದ ಮೇಲೆಯೇ ಕೊಡಲ್ಪಡತಕ್ಕದ್ದು.

(೭) (i) ಪ್ರತಿಯೊಂದು ತಾಲೂಕು ಕಮಿಟಿಯು ತನ್ನಲ್ಲಿ ಒಟ್ಟುಗೂಡುತ ಕರದ ನೂಲಿನಲ್ಲಿ ನೂರಕ್ಕೆ ೩೦ ಭಾಗವನ್ನು ಪ್ರತಿ ತಿಂಗಳ ೧೦ನೆಯ ತಾರೀಕಿನೊಳಗೆ ತಮ್ಮ ಜಿಲ್ಲಾ ಕಮಿಟಿಗಳಿಗೆ ಕಳಿಸಿಕೊಡತಕ್ಕದ್ದು. ಪ್ರತಿಯೊಂದು ಜಿಲ್ಲಾ ಕಮಿಟಿಯು ಇದರಲ್ಲಿ ೨೦ ಭಾಗವನ್ನು ಪ್ರಾಂತಿಕ ಕಮಿಟಿಗೆ ೧೫ನೆಯ ತಾರೀಕಿಗೆ ಮುಟ್ಟುವಂತೆ ಕಳಿಸಬೇಕು.

(ii) ಯಾವುದಾದರೊಂದು ಕಮಿಟಿಗೆ ತನ್ನಲ್ಲಿ ಉಳಿಯುವ ಕರದ ನೂಲನ್ನು ನೇಯಿಸಲು ಸಾಧ್ಯವಾಗದಿದ್ದಲ್ಲಿ ವರಿಷ್ಠ ಕಮಿಟಿಗಳು ಇಂಥ ವ್ಯವಸ್ಥೆಯನ್ನು ಮಾಡತಕ್ಕದು.

(೮) ಸ್ವತಃ ನೂಲಲಿಕ್ಕೆ ಒಪ್ಪದ ಅಥವಾ ಶಕ್ತರಲ್ಲದ ಜನರು ಸದಸ್ಯರಾಗಲಿಚ್ಛಿಸಿದರೆ ಅವರಿಗೆ ಕರದ ಸಲುವಾಗಿ ಬೇಕಾದ ನೂಲನ್ನು ಅಥವಾ ಹತ್ತಿಯನ್ನು ಒದಗಿಸಿಕೊಡಲು ತಕ್ಕ ವ್ಯವಸ್ಥೆಯನ್ನು ಪ್ರತಿ ಒಂದು ಕಮಿಟಿಯು ಇಡತಕ್ಕದ್ದು.

(೯) ಈ ವರ್ಷದ ಕಾಂಗ್ರೆಸ್ ಸದಸ್ಯತನವು ಇದೇ ಮಾರ್ಚಿ ತಿಂಗಳ ೧ನೆಯ ತಾರೀಖಿನಿಂದ ಪ್ರಾರಂಭವಾಗುವುದರಿಂದ ಈ ತಿಂಗಳ (ಫೆಬ್ರವರಿ) ಅಂತ್ಯದೊಳಗಾಗಿ ಎಲ್ಲ ಕಮಿಟಿಗಳು ಹೆಚ್ಚು ಜನ ಸದಸ್ಯರನ್ನು ಸೇರಿಸಲಿಕ್ಕೆ ಮನಮುಟ್ಟಿ ಪ್ರಯತ್ನಮಾಡಿ ತಮ್ಮ ತಮ್ಮ ಸಾಧಾರಣ ಸಭೆಗಳ ಅಸ್ತಿತ್ವವನ್ನು ಕಾಯ್ದುಕೊಳ್ಳಬೇಕೆಂದು ಈ ಮಂಡಲವು ಆಗ್ರಹಪೂರ್ವಕವಾಗಿ ಸೂಚಿಸುತ್ತದೆ.

(೧೦) ಈ ವರ್ಷದ ನೂಲಿನ ಕರದ ನಿರ್ಣಯವು ಅಮಲಿನಲ್ಲಿ ಬಂದು ನೂಲಿನ ಪ್ರಚಾರ ಹೆಚ್ಚಾಗುತ್ತ ಹೋದಂತೆ ಪ್ರಾಂತದಲ್ಲಿ ನೂಲಿನ ಸಂಚಯವು ಹೆಚ್ಚಾಗುವ ಸಂಭವವಿರುವುದರಿಂದಲೂ ಅದರಿಂದ ಖಾದಿಯನ್ನು ನೇಯಿಸಿ ಅದರ ಪ್ರಸಾರದ ಬಗ್ಗೆಯೂ ಮತ್ತು ಈಗ ಕಮಿಟಿಗಳಲ್ಲಿ ಶಿಲ್ಕು ಬಿದ್ದ ಖಾದಿಯ ಮಾರಾಟದ ಸಲುವಾಗಿ ಯೋಗ್ಯವಾದ ವ್ಯವಸ್ಥೆಯನ್ನು ಮಾಡಬೇಕಾಗಿರುವುದರಿಂದಲೂ ಮತ್ತು ಕಮಿಟಿಗಳಿಗೆ ಈ ಮುಂದೆ ಬೇಕಾಗಬಹುದಾದ ಅರಳೆಯನ್ನು ಪೂರೈಸುವುದಕ್ಕಾಗಿ ಯಾವುದಾದರೊಂದು ವ್ಯವಸ್ಥೆಯನ್ನು ಮಾಡುವದು ಅತ್ಯಾವಶ್ಯಕವಾಗಿರುವುದರಿಂದಲೂ ಕರ್ನಾಟಕ ಪ್ರಾಂತಿಕ ಖಾದಿಬೋರ್ಡಿನವರು ತೀವ್ರದಲ್ಲಿಯೇ ಸೇರಿ ಈ ವಿಷಯಗಳನ್ನು ವಿಚಾರಿಸಿ ಕಾರ್ಯವನ್ನು ಕೈಕೊಳ್ಳಬೇಕೆಂದು ಈ ಮಂಡಲವು ಕ. ಪ್ರಾ. ಖಾದೀಬೋರ್ಡಿಗೆ ವಿನಂತಿಮಾಡಿಕೊಳ್ಳುತ್ತದೆ.

— ಮೈಸೂರು ಖಾದಿ ವಸ್ತ್ರಾಲಯ. —

ನಮ್ಮ ಮೈಸೂರು ಲಾಯರುಗಳಲ್ಲಿ ಮಹಾತ್ಮಾ ಗಾಂಧಿಯವರಂತೆ ದೇಶಬಂಧುಗಳಾದವರು ಕೆಲವರಿರುತ್ತಾರೆ. ಈ ಮಹನೀಯರುಗಳೆಲ್ಲಾ ಸೇರಿ ಒಂದು ಪರಸ್ಪರ ಸಹಾಯಕ ಸಂಘವನ್ನು ಮಾಡಿ, ಅಲ್ಲಿ ದಿನಕ್ಕೆ ಒಂದು ಘಂಟೆಯಾದರೂ, ಖುದ್ದಾಗಿ ನೇಯುವುದನ್ನು ಅಭ್ಯಾಸ ಮಾಡಬೇಕೆಂದು ನಿಶ್ಚಯ ಮಾಡಿರುವರು. ಇವರ ಜತೆಗೆ ದೇಶಬಂಧುಗಳಾದ ಇತರರೂ ಸೇರಿರುವರು. ಇವರ ಮೇಲ್ಪಂಕ್ತಿಯು ಕೊಂಚಕಾಲದಲ್ಲಿಯೇ ಬಹು ಜನಗಳಿಂದ ಅನುಸರಿಸಲ್ಪಡುವಂತೆ ತೋರುತ್ತದೆ. ಈ ಮಹನೀಯರು ತಾವು ಮಾಡುವ ಕೆಲಸದ ಜತೆಗೆ ತಮ್ಮ ನೆರೆಹೊರೆಯವರಿಗೂ ಚರಕಗಳನ್ನೂ, ಮಗ್ಗಗಳನ್ನೂ, "ಹೈರ್ ಪರ್ಚೇಸ್" (ಕಂತುಗಟ್ಟಿ) ಸಿಸ್ಟಿನ ಪ್ರಕಾರ ಒದಗಿಸಿ ಅವರಿಂದ ತಯಾರಾದ್ದಲ್ಪಟ್ಟ ನೂಲಿಗೂ, ಬಟ್ಟೆಗಳಿಗೂ ಗಿರಾಕಿಯನ್ನು ಒದಗಿಸಿದರೆ ಅಥವಾ ತಾವೇ ಅದನ್ನು ಖರೀದಿಗೆ ತೆಗೆದುಕೊಂಡು ಅವರಿಗೆ ಪ್ರತಿಫಲವನ್ನು ಕೊಟ್ಟರೆ, ಅನೇಕ ಬಡ ಕುಟುಂಬಗಳವರು ತಮ್ಮ ಮನೆಗಳಲ್ಲಿಯೆ ಕೆಲಸ ಮಾಡಿ, ಆತ್ಮಾವಲಂಬಿಗಳಾಗುವುದಕ್ಕೆ ಅವಕಾಶವಾಗುವುದು. ಸ್ವದೇಶೀ ನೂಲು, ಮತ್ತು ಬಟ್ಟೆಗಳು ಇವುಗಳು ಮಾತ್ರವೇ ಆತ್ಮಾವಲಂಬನೆಗೆ ಸಾಧಕವಾದವುಗಳಲ್ಲ. ಸಕಲ ಭೋಗ್ಯ ವಸ್ತುಗಳನ್ನೂ ಕೂಡ ಜನಗಳು ತಯಾರ್ಮಾಡಿ, ಆತ್ಮಾವಲಂಬಿಗಳಾಗಬಹುದು. ಪ್ಯಾರಿಸ್ ಪಟ್ಟಣದಲ್ಲಿ, ತರಕಾರಿ, ಹಣ್ಣು, ಹಂಪಲು ಮೊದಲಾದವುಗಳನ್ನು ಬೆಳೆದು ಜನಗಳು ವರುಷಕ್ಕೆ ಒಂದು ಎಕರೆಯಲ್ಲಿ ೧೫,೦೦೦ ರೂಪಾಯಿ ವರೆಗಿನ ಆಯತಿಯನ್ನು ಪಡೆಯುತ್ತಾರೆ. ಇದರಲ್ಲಿ ಇವರಿಗೆ ೩,೦೦೦ ರೂಪಾಯಿಗಳು ಅಷ್ಟಟ ಲಾಭವಾಗಿರುವುದು. ಬೆಂಗಳೂರಿನಲ್ಲಿ ಬಚ್ಚಲ ನೀರನ್ನುಪಯೋಗಿಸಿ, ಅಲ್ಲಿನ ತೋಟಗರು ಎಕರೆಯೊಂದಕ್ಕೆ ಸುಮಾರು ೧,೦೦೦ ರೂಪಾಯಿಗಳ ವರೆಗೂ, ಸಂಪಾದಿಸುತ್ತಾರೆ. ಉದ್ಯೋಗಿಗಳು ಪುರುಷ ಸಿಂಹಗಳೆಂದು ಮಹಾತ್ಮರಿಂದ ಹೊಗಳಿಸಲ್ಪಟ್ಟವರು. ದೇಶದಲ್ಲಿ ಅನೇಕ ಉದ್ಯೋಗಗಳಿರುವುವು. ಯಾವ ಪದಾರ್ಥಗಳಿಗೆ ಗಿರಾಕಿಯು ಹೆಚ್ಚಾಗಿರುವುದೋ ಅದನ್ನು ಪತ್ತೆ ಹಚ್ಚಿ, ಉದ್ಯೋಗವನ್ನು ಮಾಡುತ್ತಾ ಬಂದರೆ, ನಮ್ಮ ದೇಶದಿಂದ ದಾರಿದ್ರ್ಯಕ್ಕೆ ಗಡೀಪಾರಾಗುವುದು.

(ಸಾಧ್ವೀ)

ವಿದೇಶ ವರ್ತಮಾನ.

ಗೋದಿ:—ಗೋದಿಯ ಕ್ರಯವು ದಿನೇ ದಿನೇ ಏರುತ್ತಲೇ ಇದೆ. ಗೋದಿಯ ಕ್ರಯವು ಏರಿದುದರಿಂದ ಇಂಗ್ಲೆಂಡಿನಲ್ಲಿ ಆಹಾರದ ಕ್ರಯವು ವಿಪರೀತವಾಗಿ ಏರಿದೆ. ಫ್ರಾನ್ಸಿನಲ್ಲಿ ಆಹಾರ ತುಟ್ಟಿಯು ವಿಶೇಷವಾದದ್ದರಿಂದ ಸರಕಾರದವರು ಗೋದಿಯನ್ನು ಸಂಗ್ರಹಿಸಿ ಇಡಲಿಕ್ಕಿದ್ದಾರೆ.

ರಾಜಪಟ್ಟ:—ಅಲ್ಬೇನಿಯಾದೇಶದ ರಾಜಪಟ್ಟ ಸರ್ ಚಾರ್ಲ್ಸ್ ಎಡ್ವರ್ಡ್ ಆರ್ಚಿಬಾಲ್ಡರಿಗೆ ಒಪ್ಪಿಸಲ್ಪಟ್ಟಿತು. ಅವರು ಅದನ್ನು ಸ್ವೀಕರಿಸಲು ಒಪ್ಪಲಿಲ್ಲ. ಲಾರ್ಡ್ ಹೆಡ್ಲೀಯವರಿಗೆ ಈ ಪಟ್ಟವು ಮೂರು ಸಾರಿ ಒಪ್ಪಿಸಲ್ಪಟ್ಟಿತಂತೆ. ಅವರೂ ಸ್ವೀಕರಿಸಲಿಲ್ಲ. ಪಟ್ಟವೆಂದರೆ ಸಂಬಳವಿಲ್ಲವೆಂದೂ ಅದಷ್ಟು ಬೇಗನೇ ಯಾರಕ್ಕೆಯಲ್ಲಾದರೂ ಮರಣವೆಂದೂ ಅವರು ಸ್ಪಷ್ಟಪಡಿಸಿದ್ದಾರೆ.

ಇತ್ತೀಚೆಗೆ ಹಿಡಿದಿರುವ ಎರಡು ದೊಡ್ಡ ಏಡಿಗಳನ್ನು ನ್ಯೂಯಾರ್ಕ ಪಟ್ಟಣದ ಪ್ರಾಣಿಶಾಸ್ತ್ರ ವಸ್ತುಸಂಗ್ರಹಾಲಯದಲ್ಲಿ ಇರಿಸಿರುವರು. ಅವುಗಳಲ್ಲೊಂದು ೩೪ ರಾತ್ತಲ ಭಾರವಾಗಿಯೂ ೧೦೦ ಅಡಿ ಉದ್ದವಾಗಿಯೂ ಇತ್ತು. ಅದರ ಪ್ರಾಯ ೫೦ ವರುಷ ಇರಬಹುದೆಂದು ನಿಶ್ಚಯಿಸಿದರು. ಬೇಟೆಗಾರರಿಂದ ಏಟು ತಿಂದು ತಪ್ಪಿಸಿಕೊಂಡ ಗುರುತುಗಳು ಅದರ ಬೆನ್ನ ಮೇಲೆ ಕಾಣಿಸುತ್ತಿವೆ. ಇನ್ನೊಂದು ಏಡಿಯು ಒಂದು ಮಣ ಭಾರವಿತ್ತು. ಈ ಪ್ರಾಣಿಗಳು ನ್ಯೂಜರ್ಸಿ ಪ್ರಾಂತದಲ್ಲಿ ಸಿಕ್ಕಿದುವು.

ಎಮ್‌ಡನ್:—ಯುದ್ಧಕಾಲದಲ್ಲಿ ಹಿಂದುಸಾಗರದಲ್ಲಿ ಅನೇಕ ಹಡಗುಗಳನ್ನು ಸಮುದ್ರಕ್ಕೆ ಆಹುತಿಗೊಳಿಸಿದ ಜರ್ಮನರ ಎಮ್‌ಡನ್ ಎಂಬ ಕ್ರೂಜರು ಕೊನೆಗೆ ಸಿಡ್ನಿ ಎಂಬ ಕ್ರೂಜರಿನಿಂದ ಮುಳುಗಿಸಲ್ಪಟ್ಟಿತಷ್ಟೆ. ಇದೇ ಹೆಸರಿನಲ್ಲಿ ಈಗ ಜರ್ಮನರು ಇನ್ನೊಂದು ಹೊಸ ಕ್ರೂಜರನ್ನು ನಿರ್ಮಿಸಿ ಇದಕ್ಕೆ ಮೊದಲಿನ ಎಮ್‌ಡನ್ ಹಡಗದ ಕಪ್ತಾನರ ಪತ್ನಿಯಿಂದ 'ಎಮ್‌ಡನ್' ಎಂದು ನಾಮಕರಣಮಾಡಿಸಿ ನೀರಿಗೆ ಇಳಿಸಿದರು.

ಒಳದೇಶ ವರ್ತಮಾನ

ಬಂಗಾಳ ಪ್ರಾಂತಿಕ ಪರಿಷತ್ತು:—ಸದ್ಯದಲ್ಲೆ ಜರಗಲಿಕ್ಕಿರುವ ಬಂಗಾಳ ಪ್ರಾಂತಿಕ ಪರಿಷತ್ತಿನ ಅಧ್ಯಕ್ಷ ಪದವಿಗೆ ದೇಶಬಂಧು ದಾಸರನ್ನು ಆರಿಸೋಣಾಗಿದೆ.

ಡಾಕ್ಟರ್ ರವೀಂದ್ರನಾಥ ಠಾಕೂರ:—ಇವರು ಕಳೆದ ತಾ. ೭ರಲ್ಲಿ ಪೋರ್ಟಸೆಡ್ಡಿಗೆ ಬಂದು ತಲ್ಪಿದ್ದಾರೆ. ಇದೇ ಬರುವ ತಾ. ೧೮ರಲ್ಲಿ ಹಿಂದುಸ್ಥಾನಕ್ಕೆ ತಲ್ಪುವರೆಂದು ತಿಳಿಯುತ್ತೆ.

ಗ್ರೇಟ್ ಇಂಡಿಯನ್ ಸರ್ಕಸಿನ ಮ್ಯಾಲಕರು:—ಗ್ರೇಟ ಇಂಡಿಯನ್ ಸರ್ಕಸಿನ ಮ್ಯಾಲಕರಾದ ಪ್ರೊಫೆಸರ ಲಕ್ಷ್ಮಣರಾವ್ ಪಾಟಿಲರು ತಮ್ಮ ಸರ್ಕಸಿನ ಸಿಂಹದ ಬಾಯಿಗೆ ತುತ್ತಾದರು.

ಹಕೀಮ್ ಅಜಮಲ್‌ಖಾನ್:—ಇದೇ ಬರುವ ಮಾರ್ಚಿ ತಿಂಗಳಲ್ಲಿ ಹಕೀಮ ಅಜಮಲಖಾನ ಸಾಹೇಬರು ಅಂಗೋರಕ್ಕೆ ಹೋಗಿ ಅನಂತರ ಅಲ್ಲಿಂದ ಯುರೋಪಿನ ವರೆಗೆ ಪ್ರಯಾಣ ಬೆಳಸುವರು.

ಮುಂಬಯಿ ಕ್ರೊನಿಕಲ್ ಪತ್ರಿಕೆ:—ಮುಂಬಯಿ ಕ್ರೊನಿಕಲ್ ಪತ್ರಿಕೆಯ ಬಿಡಿಸಂಚಿಕೆಯ ಕ್ರಯ ಒಂದಾಣೆ ಇಡಲಾಗಿದೆ.

ಕೋಹಾತ್ ಗಲಾಟೆ:—ಕೊಹಾತಿನಲ್ಲಿಯ ಹಿಂದೂ ಮುಸಲ್ಮಾನರ ಸ್ನೇಹವನ್ನು ಸಂಗೋಳಿಸಲು ಮಹಾತ್ಮಾ ಗಾಂಧಿಯವರು ಮೌಲಾನಾ ಶೌಕತಾಲಿ, ಮಹಾದೇವ ದೇಸಾಯಿ, ಡಾಕ್ಟರ್ ಚರಸ್‌ರಾವ್, ಶ್ರೀಯುತ ಜಯರಾವ್‌ದಾಸ ಇವರನ್ನು ಕೂಡಿಕೊಂಡು ಕೋಹಾತಿಗೆ ತಲ್ಪಿರುವರು. ಅನಂತರ ಲಾಲಾಲಜಪತರಾಯರೂ ಅಲ್ಲಿಗೆ ಮುಟ್ಟಿದರು. ಆದರೆ ಅವರಿಗೆ ಸ್ವಲ್ಪ ಅಸ್ವಸ್ಥ ಉಂಟಾಗಿದೆ. ಮಹಾತ್ಮಾ ಗಾಂಧಿಗಳವರು ಅನೇಕ ಮಹಮ್ಮದೀಯ ಮುಖಂಡರೊಡನೆ ಚರ್ಚೆ ನಡಿಸುತ್ತಲೇ ಇದ್ದಾರೆ

ವಾಯಕಮ್ ಸತ್ಯಾಗ್ರಹ:—ತಿರುವಾಂಕೂರು ನ್ಯಾಯವಿಧಾಯಕ ಸಭೆಯಲ್ಲಿ ವಾಯಕಮ್ ಮಾರ್ಗದಲ್ಲಿ ಅಸ್ಪೃಶ್ಯರು ಹಾದು ಹೋಗಲು ಅಡ್ಡಿ ಇರಬಾರದು ಎಂಬ ಠರಾವು ಇಡಲ್ಪಟ್ಟಿತು. ಈ ಠರಾವಿಗೆ ಬಹುಮತದ ಬೆಂಬಲವು ದೊರಕದೆ ಠರಾವು ಬಿದ್ದುಹೋಯಿತು.

ದಕ್ಷಿಣ ಕನ್ನಡ.

ಎರ್ಮಾಳ:—ಇಲ್ಲಿ ಇದೇ ಫೆಬ್ರವರಿ ತಾ. ೧ರಿಂದ ಒಂದು ಟಪ್ಪಾಲಕಟ್ಟೆಯು ತೆರೆಯಲ್ಪಟ್ಟಿರುತ್ತದೆಂಬ ಸಂಗತಿಯನ್ನು ತಿಳಿಸುವರೆ ಸಂತೋಷಪಡುತ್ತೇವೆ. ಇಲ್ಲಿ ಇರುತ್ತಿದ್ದ ಶಾಖೆಯು ಮುಚ್ಚಲ್ಪಟ್ಟಂದಿನಿಂದ ಪಡುಬಿದ್ರಿ ಅಥವಾ ಕಾಪಿಗೆ ನಡದು ಟಪ್ಪಾಲ ಯಜಮಾನರ ಸಮಯ ಕಾಯುತ್ತಾ ಕಷ್ಟ ನಷ್ಟಕ್ಕೆ ಗುರಿಯಾಗುತ್ತಿದ್ದ ಬಡ ನಿವಾಸಿಕರ ಮೇಲೆ ದಯಮಾಡಿ ಟಪ್ಪಾಲ ಇಲಾಖೆಯವರು ತೆರೆದ ಈ ಶಾಖೆಯನ್ನು ಕಾಯಂಗೊಳಿಸುವರಾಗಿ ಬರವಸೆ ಪಡುತ್ತೇವೆ. ಅಲ್ಲದೆ ಕಾಯಂ ಆಗುವಂತೆ ಎರ್ಮಾಳ ನಿವಾಸಿಕರು ಪ್ರಯತ್ನಿಸಬೇಕಾಗಿದೆ.

ಚಿಪ್ಪಾರು:—ಇಲ್ಲಿಯ ಮೈಡೆಡ್ ಶಾಲೆಯಲ್ಲಿ ಬಿಲ್ಲವರಮಕ್ಕಳನ್ನು ತೆಗೆದುಕೊಳ್ಳದೆ ಇರುವುದರಿಂದ ಅವರು ವಿದ್ಯಾಹೀನರಾಗಿ ಹೋಗುತ್ತಾರಾದುದರಿಂದ ಈ ಕುರಿತು ಜಿಲ್ಲಾ ಎಜ್ಯುಕೇಶನಲ್ ಆಫೀಸರರಿಗೂ, ಮತ್ತು ಕಾಸರಗೋಡು ತಾಲೂಕು ಬೋರ್ಡ ಮಾನ್ಯ ಪ್ರೆಸಿಡೆಂಟರಿಗೂ ಅರ್ಜಿ ಬರಕೊಂಡಿರುತ್ತೇವೆ. ಅದ್ದರಿಂದ ಸರಕಾರದವರು ಇಲ್ಲಿ ಒಂದು ಬೋರ್ಡು ಶಾಲೆಯನ್ನು ತೆರೆಯುವಂತೆ [illegible] ದಯಪಾಲಿಸಿ, ಬಿಲ್ಲವಜಾಂಗದ ಮಕ್ಕಳಿಗೂ ವಿದ್ಯಾದಾನ ಕೊಡುವಂತೆ ಮಾಡ್ಯಾರೆಂದು ನಂಬಿದ್ದೇವೆ.

ಪುತ್ತೂರು:—ಇಲ್ಲಿ ಇದೇ ಫೆಬ್ರವರಿ ತಾ. ೬ರಲ್ಲಿ ಶರಾಬು, ಅಫೀಮು, ಗಾಂಜಾ ಗುತ್ತಿಗಳು ಇಲ್ಲಿಯ ರೆವೆನ್ಯೂ ಡಿವಿಜನಲ್ ಆಫೀಸರದಿಂದ ಏಲಂ ಮಾಡಲ್ಪಟ್ಟವು.

ಇದೇ ತಿಂಗಳ ತಾ. ೮ರಲ್ಲಿ ಇಲ್ಲಿಯ ರೋಮನ ಕಥೋಲಿಕ ಶ್ರೀ ಮ್ಯಾದ ದೇವುಸ್ ಅಮ್ಮನವರ ಇಗರ್ಜಿಯ ವರುಷಾವಧಿ ತಿರುನಾಳ ಹಬ್ಬವು ಬಹುವಿಜೃಂಭಣೆಯಿಂದ ಜರಗಿತು.

ಉಪ್ಪಿನಂಗಡಿ ತಾಲೂಕುಬೋರ್ಡಿಗೆ ಪುತ್ತೂರು ಸರ್ಕಲಿನಿಂದ ೨, ಉಪ್ಪಿನಂಗಡಿ ಸರ್ಕಲಿನಿಂದ ೩, ಬೆಳತಂಗಡಿ ಸರ್ಕಲಿನಿಂದ ೩, ಸುಳ್ಯ ಸರ್ಕಲಿನಿಂದ ೩, ಹೀಗೆ ಒಟ್ಟು ೧೧ ಮೆಂಬರರ ಚುನಾವಣೆಯಾಗತಕ್ಕದಿದೆ. ಈ ಮೆಂಬರಿಕೆಗಳಿಗೆ ನೊಮಿನೇಶನುಗಳನ್ನು ದಾಖಲುಮಾಡತಕ್ಕವರು ಇದೇ ಬರುವ ತಾ. ೨೫ರಲ್ಲಿ ಪೂರ್ವಾಹ್ನ ಗಂಟೆ ೧೧-೩೦ರಿಂದ ಅಪರಾಹ್ನ ಗಂಟೆ ೫-೩೦ರ ವರೆಗೆ ದಾಖಲುಮಾಡತಕ್ಕದ್ದು. ಶಿಫಾರಸು ಪಟ್ಟಿಗಳು ಮಾರ್ಚಿ ತಾ. ೩ರಲ್ಲಿ ಪರಿಶೋಧಿಸಲ್ಪಡುವವು. ಮತ್ತು ಚುನಾವಣೆಯು ಮಾರ್ಚಿ ತಾ. ೧೮ರಲ್ಲಿ ನಡಿಯುವುದು.

ಮುಲ್ಕಿ:—ಇಲ್ಲಿಯ ಸದ್ಗೃಹಸ್ಥರಲ್ಲೊಬ್ಬರೂ ಶ್ರೀಮಂತರೂ ಆದ ಮ| ರಾ| ಮುಲ್ಕಿ ರಾಮಕೃಷ್ಣ ಪೂಂಜರು ಇದೇ ತಿಂಗಳ ಮೊದಲನೆಯ ಮಂಗಳೂರ ತಾಲೂಕುಬೋರ್ಡ ಮೀಟಿಂಗಿನಲ್ಲಿ ಸದರಿ ತಾಲೂಕುಬೋರ್ಡಿನ ಪ್ರೆಸಿಡೆಂಟರಾಗಿ ಚುನಾಯಿಸಲ್ಪಟ್ಟರೆಂಬ ಸಂತೋಷದ ಬಗ್ಗೆ ಮುಲ್ಕಿ ಬೋರ್ಡ ಹಾಯರ್ ಎಲಿಮೆಂಟರಿ ಶಾಲಾ ಉಪಾಧ್ಯಾಯರೂ ಊರಿನ ಹಲವು ಪ್ರಮುಖರೂ ಸದರಿ ಶಾಲೆಯಲ್ಲಿ ತಾ. ೫—೨—'೨೫ರಲ್ಲಿ ಮಹಾರಾಜಶ್ರೀ ಮುಡ್ಕರು ಭವಾನಿರಾಯರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಪೂಂಜರವರಿಗೆ ಒಂದು ಟೀಪಾರ್ಟಿ ಕೊಟ್ಟರು. ಸದರಿ ಶಾಲಾ ಹೆಡ್ ಮಾಸ್ತರ್ ಕೆ. ಸಂಜೀವರಾಯರೂ, ಡಾಕ್ಟರ್ ರಾಯಪ್ಪ ಕಾಮತರೂ, ರಾ. ಬೋಳ ಮಾಧವರಾಯರೂ, ಟಿ. ನಾರಾಯಣ ಶೆಣೈರವರೂ ಅಂದಿನ ಸಭಾಧ್ಯಕ್ಷರಾದ ಭವಾನಿರಾಯರೂ ಪೂಂಜರ ಪ್ರೆಸಿಡೆಂಟ ಪದವಿಯ ಯೋಗ್ಯತೆಯ ಕುರಿತು ಭಾಷಣಗಳನ್ನು ಮಾಡಿ ಹೊಸ ಇಲೆಕ್ಷನ್ ಸಮೀಪಿಸಿರುವುದರಿಂದ ಈ ಪ್ರೆಸಿಡೆಂಟ ಪದವಿಯು ತತ್ಕಾಲಕ್ಕೆ ಸುಮಾರು ಒಂದು ತಿಂಗಳಿಗೆ ಸಿಕ್ಕಿದೆಯಾದರೂ ಮುಂದಿನ ಚುನಾವಣೆಯಲ್ಲಿ ಇವರೇ ಪ್ರೆಸಿಡೆಂಟರಾಗಿ ಆರಿಸಲ್ಪಡಲೆಂದೂ ಆ ಘನವಾದ ಪದವಿಯಲ್ಲಿ ಸಮಸ್ತ ಕಾರ್ಯಗಳನ್ನು ಇವರು ನಿಷ್ಪಕ್ಷಪಾತವಾಗಿ ಮಾಡಿಯೂ, ಜನತೆಯ ಹಾಗೂ ಬೋರ್ಡ ನೌಕರರ ಮುಂದಿನ ಒಳ್ಳಿತವನ್ನು ಚಿಂತಿಸಿ ಅವರೆಲ್ಲರನ್ನೂ ಸದಯಾಂತಃಕರಣಗಳಿಂದ ನಡಿಸಿಯೂ ಸದರಿ ತಾಲೂಕು ಬೋರ್ಡಿಗೂ ತನ್ನ ಊರಿಗೂ, ತನ್ನ ಸಮಾಜಕ್ಕೂ ತನ್ನ ಘನವಾದ ಕುಟುಂಬಕ್ಕೂ ಕೀರ್ತಿತರಲೆಂದು ನೆರೆದ ಸಭಿಕರು ತಮ್ಮ ಮನೋಗತವನ್ನು ವ್ಯಕ್ತಪಡಿಸಿದರು. ಸಭೆಯ ಪರವಾಗಿ ರಾ| ಭವಾನಿರಾಯರು ಪೂಂಜರಿಗೆ ಹೂಮಾಲೆ ಹಾಕಿದನಂತರ ಊರ ಪ್ರಮುಖರೂ ಉಪಾಧ್ಯಾಯರೂ ತನಗೆ ಇಂದು ಮಾಡಿದ ಈ ಗೌರವದ ಸಮಾರಂಭಕ್ಕಾಗಿ ತನ್ನ ಕೃತಜ್ಞತೆಯನ್ನು ಸೂಚಿಸಿ ಪೂಂಜರವರು ಒಂದು ಮನೋಹರವಾದ ಭಾಷಣದಿಂದ ಸಭಿಕರನ್ನು ಸಂತೋಷಗೊಳಿಸಿದರು. ಸಭಿಕರಿಗೆ ಫಲಾಹಾರ ತಾಂಬೂಲಾದಿಗಳನ್ನು ಹಂಚಿದ ಬಳಿಕ ಸಭೆಯು ಮುಕ್ತಾಯವಾಯಿತು.

ಮೂಡುತೋನ್ಸೆ:—ನಂಬ್ರ ೨೩೪೦ನೇ ಮೂಡುತೋನ್ಸೆ ಸಹಕಾರ ಸಂಘದ ಮಹಾಸಭೆಯು ಇದೇ ಫೆಬ್ರವರಿ ತಾರೀಕು ೨೦ನೇ ಶುಕ್ರವಾರ ಮಧ್ಯಾಹ್ನ ಎರಡು ಗಂಟೆಗೆ ಸಂಘದ ಆಫೀಸಿನಲ್ಲಿ ಜರಗಿಸುವದೆಂತ ನಿಶ್ಚಯಿಸಿರುವುದರಿಂದ ಆ ಸಭೆಗೆ ಎಲ್ಲಾ ಮೆಂಬರರು ಬರಬೇಕಾಗಿ ಸಂಘದ ಸೆಕ್ರೆಟರಿಗಳ ವಿನಂತಿ.

ಕುಂಬಳೆ:—ಇಲ್ಲಿಯ ಸಮೀಪದ ನ್ಯಾಕಾಪಿನಲ್ಲಿರುತ್ತಿದ್ದ ಚಪಟಿಗಾರ ಬಾಬು ಎಂಬವನು ಇದೇ ತಾ. ೬ರಲ್ಲಿ ರಾತ್ರಿ ರಸ್ತೆ ಕಿನಾರೆಯ ಮರಕ್ಕೆ ನೇಣುಹಾಕಿಕೊಂಡು ಮೃತಪಟ್ಟನು.

ಇದೇ ತಾ. ೯ನೆ ರಾತ್ರಿ ಇಲ್ಲಿಯ ಮಾರ್ಕೆಟು ಬಳಿ ಜಾಜಿ ಮಲ್ಯಾರರ ಕಾಂಟ್ರದ ಅಂಗಡಿಯ ಅಟ್ಟದಲ್ಲಿರುತ್ತಿದ್ದ ಸುಮಾರು ೩೦೦ ಮುಡಿ ಮರದ ಇದ್ದಲ್ಲಿಗೆ ಬೆಂಕಿ ಹಿಡಿದು ಉರಿಯುತ್ತಿರುವ ಸಮಯ ಜನಸ್ತೋಮವು ಕೂಡಿ ಪ್ರಯತ್ನಪೂರ್ವಕ ಆರಿಸಿದುದರಿಂದ ಮಾರ್ಕೆಟ ವಾರ್ಡಿನ ಅನೇಕ ಅಂಗಡಿಗಳು ಹೇರಳ ಸೊತ್ತುಗಳ ಸಮೇತ ಉಳಿಯಿತು.

ಮಂಜೇಶ್ವರ:—ಇಲ್ಲಿ ಕಳದ ಶುಕ್ರವಾರ ಆದ ಕಂಬಳಕ್ಕೆ ದೊಡ್ಡ ದೊಡ್ಡ ಗುತ್ತುಗಳಿಂದ ೨೪ ಜೋಡು ಭಾರಿ, ಭಾರಿ ಕೋಣಗಳು ಬಂದಿದ್ದವು. ಇನ್ನು ಚಿಲ್ಲರೆ ತರದ ಕೋಣಗಳು ಅನೇಕ ಇದ್ದವು. ಪ್ರೇಕ್ಷಕರಾಗಿ ಅನೇಕ ಊರಿನ ದೊಡ್ಡ ದೊಡ್ಡ ಗುತ್ತುಗಳ ನಾಡವರೂ, ಅವರ ಸಂಬಂಧಿಕರೂ, ಅವರ ಪರಿವಾರದವರೂ ಒಂದು ದಿವಸ ಮೊದಲೇ ಬಂದಿದ್ದರು. ಕಂಬಳದ ಸ್ಥಳದಲ್ಲಿ ಸುಮಾರು ಮೂರು ಸಾವಿರ ಜನರು ಕೂಡಿ ಬಂದಿದ್ದರು. ಅನೇಕ ಸಂತೆಗಳೂ ಬಂದಿದ್ದವು. ಕೋಣಗಳ ಓಡ್ಯಾಟವು ಸುಮಾರು ೩ ಗಂಟೆಯಿಂದ ೬ ಗಂಟೆಯ ವರೆಗೂ ನಡಿಯಿತು. ಗುಂಡಿಲ ಗುತ್ತಿನ ಕೋಣಗಳಿಗೆ ಮೊದಲನೆಯ ಇನಾಮು ವ ಬಂಗಾರದ ಪದಕವು ಸಿಕ್ಕಿತು. ಎರಡನೇ ಮರ್ಯಾದೆಯು ಕೋಟೆಕಾರಗುತ್ತಿನವರಿಗೆ ಸಿಕ್ಕಿತು. ಈ ತರದ ಕಂಬಳವು ಈ ಊರಿನಲ್ಲಿ ನಡೆಯಲಿಲ್ಲ. ವೃದ್ಧಕಾಯರಾದ ಜನರನ್ನೂ ಅವರ ಗಂಡಸುತನವನ್ನೂ ಇಲ್ಲಿ ನೋಡಬಹುದು. ಈಗಿನ ಡಂಬಿಲ್ಲ ಆಟವನ್ನು ಹೊಗಳುವವರು ವೃದ್ಧಕಾಯರಾದ ಈ ಹಳ್ಳಿ ಜನರನ್ನು ನೋಡಿ ನಾಚಿಕೆಪಡಬೇಕಾಗಿದೆ. ಅವರಿಗೆ ನಾನಾ ನಮೂನೆಯ ವಿಲಾಯತಿ ಪೋಶಾಕುಗಳಿಲ್ಲ. ಊರಿನ ಸಾಲಿಯರ ಬೈರಾಸುಗಳೇ ಅವರ ಪೋಶಾಕುಗಳಾಗಿವೆ.

ಇಲ್ಲಿಯ ಲೋಕಲ್ ಫಂಡ ಆಸ್ಪತ್ರೆಗೆ ರಾ| ಬಿ. ಎಲ್. ಭಟ್ಟರು ತಾಲೂಕುಬೋರ್ಡ ಪ್ರೆಸಿಡೆಂಟರಾಗಿರುವಾಗ ಖರ್ಚು ಕಡಿಮೆಮಾಡುವುದಕ್ಕಾಗಿ ರೂ ೪೫ ಸಂಬಳಕ್ಕೆ ನೇಮಿಸಿದ ಹೊಸತಾಗಿ ಪಾಸಾಗಿ ಬಂದ ಬಹಳ ಬುದ್ಧಿವಂತರಾದ ರಾ| ಮೂಲ್ಕಿ ರಂಗಪ್ಪ ಕಾಮತರನ್ನು ರಾ| ಬಿ. ಎಲ್. ಭಟ್ಟರು ಪ್ರೆಸಿಡೆಂಟ ಚಾರ್ಜನ್ನು ಡಿವಿಜನಲ್ ಆಫೀಸರರಿಗೆ ವಹಿಸಿಕೊಟ್ಟ ಮರುದಿವಸವೇ ಡಿಸ್ಟ್ರಿಕ್ಟ ಬೋರ್ಡ ಪ್ರೆಸಿಡೆಂಟರು ಅವರನ್ನು ಕೆಲಸದಿಂದ ತೆಗೆದು ಸಾರಸ್ವತ ಬ್ರಾಹ್ಮಣರೂ ತಿಂಗಳಿಗೆ ೧೨೦ ರೂ ಸಂಬಳವಿರುವವರೂ ಆದ ರಾ| ವೊ. ಸುಂದರರಾಯರನ್ನು ನೇಮಿಸಿರುತ್ತಾರೆ. ರಾ| ರಂಗಪ್ಪ ಕಮ್ತಿಯವರು ಚಾರ್ಜನ್ನು ವಹಿಸಿಕೊಟ್ಟರು. ಇವರಿಗೆ ಊರಿನ ಗೌಡಸಾರಸ್ವತರು ಒಂದು ಸಭೆಕೂಡಿಸಿ ಧನ್ಯವಾದವನ್ನಿತ್ತು ಫಲಾಹಾರ ಮುಂತಾದವುಗಳಿಂದ ಸತ್ಕರಿಸಿದರು. ಅನಂತರ ಕೂಡಿಬಂದವರ ಛಾಯಚಿತ್ರವನ್ನು ಇಲ್ಲಿಯ ಪ್ರಫುಲ್ಲ ಆರ್ಟಿಸ್ಟ ರಾ| ಏಟ್ಟಿ ಭಟ್ಟರು ತೆಗೆದರು.

ಇಲ್ಲಿಯ ಬೋರ್ಡ ಶಾಲೆಯು ಹೋಗಿ ದೇವಸ್ಥಾನದ ಶಾಲೆಯಾದರೆ ಎಲ್ಲಾ ಜಾತಿಯ ಮಕ್ಕಳನ್ನು, ಅವರು ಶಾಲೆಗೆ ತೆಗೆದುಕೊಳ್ಳುವದಿಲ್ಲವಂತೆ. ಆದ್ದರಿಂದ ಬೋರ್ಡಿನವರು ಕೃಪೆಮಾಡಿ ಇಲ್ಲಿಯ ಶಾಲೆಯನ್ನು ಮುಚ್ಚಿಬಿಟ್ಟರೆ ಗೌಡಸಾರಸ್ವತರಲ್ಲದ ಇತರ ಎಲ್ಲಾ ಜಾತಿಯ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಕೊರತೆ ಬರುವ ಸಂಭವವಿದೆ. ಇಲ್ಲಿ ಗೌಡಸಾರಸ್ವತರ ಮಕ್ಕಳು ವಿಶೇಷವಾಗಿಲ್ಲ. ಇಲ್ಲಿಯ ಮಹನೀಯರುಗಳ ಹಲಕೆಲವು ಮಕ್ಕಳು ಮಂಗಳೂರಿನಲ್ಲಿ ಕಲಿಯುತ್ತಿದ್ದಾರೆ. ಅದ್ದರಿಂದ ಬಡ ಇತರ ಜಾತಿಯ ಮಕ್ಕಳಿಗೆ ವಿದ್ಯೆಯು ಸಿಕ್ಕುವಂತೆ ಎಲ್ಲಾ ಜಾತಿಯವರ ಮಕ್ಕಳನ್ನು ಶಾಲೆಯಲ್ಲಿ ತೆಗೆದುಕೊಳ್ಳುವದು ಒಳ್ಳೇಯದು. ರಥದ ಕೆಲಸ ಮಾಡಲಿಕ್ಕೆ ಜನರಿಕಾದರು ಬೇಕಂತೆ, ಸೃಷ್ಟಿಯ ಸಮಯ ದೇವಸ್ಥಾನದ ಸುತ್ತು, ಸರಿಪಡಿಸಿ ನೆಗಣೆ ಚಳ್ಳಿ ಕಡಿ ಹಾಗಿಸಲಿಕ್ಕೆ ಮೊಗೇರರ ಹೆಂಗಸರು ಬೇಕಂತೆ. ದೊಡ್ಡ ರಥವನ್ನು ಹೊರಗೆ ಎಳೆಯಲಿಕ್ಕೂ ತಿರಿಗಿ ಅದನ್ನು ಕೊಟ್ಟಿಗೆಗೆ ಹಾಕಲಿಕ್ಕೂ ಮೊಗೇರರ ಗಂಡಸರು ಬೇಕಂತೆ ಚಕ್ಕೆ ಪಕ್ಕೆ ಮುಂತಾದ ಬಿರುದು ಬಾವಲಿಗಳನ್ನು ಹಿಡಿಯಲಿಕ್ಕೆ ಮರಾಟಿಯವರು ಬೇಕಂತೆ. ಇವರ ಮನೆಕೆಲಸ ಮಾಡಲಿಕ್ಕೆ ಕುಂಬಾರ, ಗಾಣಿಗರ ಹೆಂಗಸರು ಬೇಕಂತೆ. ಶಾಲೆಗೆ ಮಾತ್ರವೇ ಅವರ ಮಕ್ಕಳ ಪ್ರವೇಶಕ್ಕೆ ಅಡ್ಡಿ ಮಾಡಬಹುದೇ?

ಕೊಡೋತು:—ಬರುವ ವರುಷವಾದರೂ ಇಲ್ಲಿ ಒಂದು ಹಳ್ಳಿ ಆಸ್ಪತ್ರೆಯನ್ನು ಸೆಂಕ್ಷನ್ ಮಾಡಿದರೆ ಆಗುತ್ತಿತ್ತು. ಎಲ್ಲಾ ಸೌಕರ್ಯಗಳನ್ನು ಪಟ್ಟಣಗಳಿಗೆ ಮಾತ್ರವೇ ಕೊಡುವುದು ಏತರ ನ್ಯಾಯ?

ಬೇಕಲ:—ಮಂಜೇಶ್ವರ ಹಾಯರ ಎಲಿಮೆಂಟರಿ ಶಾಲೆಯನು ಮುಚ್ಚುವುದರಿಂದ ಆ ಶಾಲೆಯನ್ನು ಇಲ್ಲಿಗೆ ಟ್ರೆನ್ಸ್‌ಫರ್ ಮಾಡಿದರೆ ಒಳ್ಳೆಯದಿತ್ತು. ಇಲ್ಲಿಯ ಮಕ್ಕಳು ವಿದ್ಯೆಯಲ್ಲಿ ಬಹಳ ಹಿಂದುಳಿದಿದ್ದಾರೆ. ಕಾಸರಗೋಡಿನ ರಾಮರಾಜ ಕ್ಷತ್ರಿಯ ಯುವಕಸಂಘದವರು ಮನಸ್ಸು ಕೊಟ್ಟು ಪ್ರಯತ್ನಿಸಿದರೆ ಈ ಕೆಲಸಕ್ಕೆಗಾಡುವುದರಲ್ಲಿ ಸಂದೇಹವಿರಲಿಕ್ಕಿಲ್ಲ. ಇಲ್ಲಿ ವಾಸವಾಗಿರುವವರು ಹೆಚ್ಚಾಗಿ ರಾಮರಾಜ ಕ್ಷತ್ರಿಯರೇ ಆಗಿರುತ್ತಾರೆ. ಸುಮಾರು ೩೦೦ ಹುಡುಗರು ಹುಡುಗಿಯರು ಸಿಕ್ಕುವುದರಲ್ಲಿ ಸಂದೇಹವಿರಲಿಕ್ಕಿಲ್ಲ.

ಆದೂರು:—ರಾ| ಏ. ಎಲ್. ಭಟ್ಟರವರು ತನ್ನ ಚಾರ್ಜ ಕೊಡಬೇಕಾದರೆ ಇಲ್ಲಿ ಹೊಸ ಸ್ಕೀಮಿನ ಪ್ರಕಾರ ಒಂದು ಆಸ್ಪತ್ರೆಯನ್ನು ತೆರೆದಿರುತ್ತಾರೆ. ದೇವರು ಇವರಿಗೂ ಇವರ ಮಕ್ಕಳುಮರಿಗಳಿಗೂ ಚಿರಾಯುಸ್ಸನ್ನು ಕೊಡಲಿ.

ಬಾಯಾರು:—ಮಂಜೇಶ್ವರದಲ್ಲಿ ಅಲ್ಲಿಯ ದೇವಸ್ಥಾನದ ಕಡೆಯಿಂದ ಒಂದು ಸಂಪೂರ್ಣ ಹಾಯರ್ ಎಲಿಮೆಂಟರಿ ಶಾಲೆಯನ್ನು ತೆರಿಯುವುದರಿಂದ ಅಲ್ಲಿ ಬೋರ್ಡ ಶಾಲೆಗೆ ಹುಡುಗರು ಸಿಕ್ಕಲಿಕ್ಕಿಲ್ಲ. ಅದ್ದರಿಂದ ಮಂಜೇಶ್ವರ ಬೋರ್ಡ ಹಾಯರ್ ಎಲಿಮೆಂಟರಿ ಶಾಲೆಯನ್ನು ಇಲ್ಲಿ ತೆರೆದರೆ ಒಳ್ಳೇದಿತ್ತು. ಬೋರ್ಡಿಗೆ ಹೊಸ ಖರ್ಚು ತಗಲಲಿಕ್ಕಿಲ್ಲ. ಉಪಾಧ್ಯಾಯರೂ, ಸಾಹಿತ್ಯಗಳೂ ಎಲ್ಲವೂ ಇವೆ. ಇಲ್ಲಿಗೆ ಅವುಗಳನು ತರುವ ಖರ್ಚು ಮಾತ್ರವೇ ತಗಲುವದು. ಅಧ್ಯಕ್ಷರೆ ನಮ್ಮ ಕಡೆಗೆ ದೃಷ್ಟಿ ಇಡಿರಿ. ಎಷ್ಟೊ ಸಮಯದಿಂದ ನಾವು ಕೇಳುತ್ತಲಿದ್ದೇವೆ.

ವಿವಿಧ ಸಮಾಚಾರ.

ಮಲಬಾರು ಡಿಸ್ಟ್ರಿಕ್ಟಿಗೆ ಸೇರಿದ ತಿರಿಕ್ಕಿಯೂರು ಎಂಬ ಗ್ರಾಮದಲ್ಲಿ ಒಬ್ಬ ಎಜವಾ ಯುವತಿಯನ್ನು ಒಂದು ಸರ್ಪವು ಪ್ರೀತಿಸಿ ಅವಳ ತಲೆಯ ಮೇಲೂ ಮೈಮೇಲೂ ಕುಳಿತುಕೊಂಡು ಪದೇ ಪದೇ ಮುತ್ತಿಡುತ್ತಿರುವುದಂತೆ! ಇದನ್ನು ನೋಡಿ ಜನರಿಗೆ ಪರಮಾಶ್ಚರ್ಯವುಂಟಾಗಿದೆ. ಆಕೆಯ ಮನೆಯವರು ಹೆದರಿ ಮಂತ್ರವಾದಿಯನ್ನು ಕರೆಯಿಸಿ ಆ ಸ್ತ್ರೀಯನ್ನು ಸರ್ಪವು ಬಿಟ್ಟುಹೋಗುವಂತೆ ಬೇಕಾದ ಮಂತ್ರತಂತ್ರಗಳನ್ನು ಮಾಡಿಸಿದರೂ ಏನೂ ಫಲವಾಗಲಿಲ್ಲವಂತೆ.

• • • • •

ಜರ್ಮನಿನಲ್ಲಿ ಗಿಡ್ಡ ಮನುಷ್ಯರ ಒಂದು ತಂಡವನ್ನು ತಯಾರಿಸಿ ಅಂಗಡಿ ಪೋಸ್ಟ ಆಫೀಸು ಮೊದಲಾದವುಗಳಲ್ಲಿ ಇಟ್ಟಿರುವರು. ಅವರಲ್ಲಿ ಮೆಕ್ಸಿಕೋ ದೇಶದ ಒಬ್ಬ ಹೆಂಗಸಿರುವಳು. ಆಕೆಯ ಎತ್ತರ ಫೂಟ ೧೬ ಇಂಚು ಅಂದರೆ ಮೊಳಕ್ಕೆ ೨ ಇಂಚು ಕಡಿಮೆ. ಆಕೆಯಿಂದ ಹುಟ್ಟುವ ಸಂತತಿಯು ಎಂಥದ್ದಾಗಬಹುದು? ಕಲಿಯುಗದಲ್ಲಿ ಹುಂಬೆಯ ಗಿಡಕ್ಕೆ ನಿಚ್ಚಣಿಕೆ ಹಾಕುವವರು ಹುಟ್ಟುವುದು ನಿಜವೆಂಬುದಕ್ಕೆ ಇದೇ ಸೂಚನೆಯಾಗಿರಬೇಕಲ್ಲವೇ?

• • • • •

ಪೋರ ಬಂದರದಲ್ಲಿ ಒಬ್ಬ ಗೃಹಸ್ಥನಿಗೆ ಎರಡು ಕೋಡಿನ ಹುಡುಗಿಯು ಹುಟ್ಟಿರುವಳಾಗಿ ತಿಳಿಯುತ್ತದೆ.

• • • • •

ಡಾ. ಜೆಮ್ಸ ಬ್ಯಾರಿ ಎಂಬವಳು ಚಿಕ್ಕಂದಿನಿಂದ ಪುರುಷವೇಷದಿಂದಿದ್ದಳು. ಇದೇ ವೇಷದಿಂದ ಶಿಕ್ಷಣ ಮುಗಿಸಿದಳು. ಕ್ರಿಮಿಯಾ ಯುದ್ಧದಲ್ಲಿ ಸೈನ್ಯದ ಆಸ್ಪತ್ರೆಯ ಇನ್ಸ್‌ಪೆಕ್ಟರ ಜನರಲಳಾದಳು. ಆಕೆಯು ಹೆಂಗಸೆಂದು ಕಂಡುಹಿಡಿಯಲು ಯಾರಿಗೂ ಸಾಧ್ಯವಿದ್ದಿಲ್ಲ. ಮರಣಹೊಂದಿದ ಬಳಿಕ ಡಾಕ್ಟರೀ ಪರೀಕ್ಷೆಯಾಗಲು ಆಕೆಯು ಸ್ತ್ರೀಯೆಂದು ಗೊತ್ತಾಯಿತು.

• • • • •

ಇಟಾಲಿಯ ಪೋಪನು ಕುಳಿತುಕೊಳ್ಳುವ ಸಿಂಹಾಸನದ ಬೆಲೆಯು ೨೭ ಲಕ್ಷ ರೂಪಾಯಿ.

• • • • •

ಅಮೇರಿಕೆಯ ಒಂದು ವಾಸಪತ್ರಿಕೆಯ ವರ್ಗಣೀದಾರರ ಸಂಖ್ಯೆಯು ೧ ಕೋಟಿ ಇದ್ದು ೪೦೦ ಪುಟಗಳುಳ್ಳದ್ದಾಗಿದೆ. ವರ್ಗಣಿ ಒಂದು ರೂಪಾಯಿಗಿಂತ ಕಡಿಮೆ.

• • • • •

ವಿಲಾಯತಿಯಲ್ಲಿ ಒಬ್ಬ ಹುಡುಗಿಯು ಗಡುತರವಾಗಿ ಬೆಳೆಯುತ್ತಿದ್ದಾಳಂತೆ. ಅವಳು ಒಳಹೊರಗೆ ತಿರುಗಾಡುವುದಕ್ಕಾಗಿ ಬಾಗಿಲನ್ನು ಅಗಲವಾಗಿ ಮಾಡಿಸಬೇಕಾಯಿತು. ಈಗ ಅವಳ ತೂಕ ೩ ಮಣ.

• • • • •

ಬ್ರಿಟಿಷ ಸಾಮ್ರಾಜ್ಯ ಪ್ರದರ್ಶನಕ್ಕೆ ಬಂದ ಒಂದು ಎತ್ತು ಮನುಷ್ಯನಿಗಿಂತ ಎತ್ತರವಾಗಿದ್ದು ಇದುಜಗತಿನಲ್ಲೆಲ್ಲ ದೊಡ್ಡದಾಗಿರುವದಂತೆ. ಇದು ಅಮೇರಿಕೆಯ ಕಾನಡಾ ದೇಶದಿಂದ ತರಲ್ಪಟ್ಟಿತು. ಇದರ ಎತ್ತರ ೬ ಫೂಟು. ಅದರ ಬೊಂಕದ ಸುತ್ತಳತೆಯು ೧೧ ಫೂಟು. ತೂಕವು ೨೮೩೭ ರಾತ್ತಲ ಅಥವಾ ಸುಮಾರು ೩ ಖಂಡಿ.

• • • • •

ಲಂಡನದ ಕ್ರಿಸ್ಟಲ್ ಅರಮನೆಯಲ್ಲಿ ಒಬ್ಬ ಮನುಷ್ಯ ಮತ್ತು ಒಂದು ಕುದುರೆ ಇವುಗಳ ನಡುವೆ ಓಡುವ ಪಂದ್ಯವು ನಡೆಯಿತು. ಮನುಷ್ಯನು ೪೫ ವರ್ಷದವನು. ಈ ಪಂದ್ಯದಲ್ಲಿ ಕುದುರೆಗಿಂತ ಮನುಷ್ಯನೇ ಹೆಚ್ಚು ವೇಗದಿಂದ ಓಡಬಹುದೆಂದು ಕಂಡುಬಂತು. ಪ್ರತಿ ದಿವಸ ಕುದುರೆಯೂ ಮನುಷ್ಯನೂ ೧೦ ತಾಸುಗಳಂತೆ ೬ ದಿವಸಗಳ ವರೆಗೆ ಓಡಿದರು. ಆ ಅವಧಿಯಲ್ಲಿ ಕುದುರೆಯು ೩೩೩ ಮೈಲು ಮತ್ತು ಮನುಷ್ಯನು ೩೪೦ ಮೈಲು ಓಡಿದನು.

• • • • •

ಅನುಕ್ರಮಣಿಕೆ.

ಅಗ್ರಲೇಖ ಪುಟಗಳು.
ದೇಶಭಾಷೆಯ ಪ್ರಶ್ನೆ ೬
ಸ್ಫುಟವಿಚಾರಗಳು—
೧-೫ ಎಸೆಂಬ್ಲಿಯಲ್ಲಿ ಸರಕಾರದ ಪರಾಜಯ, ಮದ್ರಾಸ್ ಕೊಲೇಜಿನ ಫೀಸು, ೪. ತ್ರಾವಣಕೋರ ನ್ಯಾಯವಿಧಾಯಕ ಸಭೆ, ೫ ಬಂಗಾಳದ ಗವರ್ನರರ ಕುತಂತ್ರ ,,
ಮಂಗಳೂರು
ವರ್ತಮಾನಸಂಗ್ರಹಗಳು—
ವಿದೇಶ, ಒಳದೇಶ ೫
ದಕ್ಷಿಣ ಕನ್ನಡ – ಎಮಾಳ, ಚಿಪ್ಪಾರು, ಪುತ್ತೂರು, ಮುಲ್ಕಿ, ಮೂಡುತೋನ್ಸೆ, ಕಾಂಬಳೆ, ಮಂಜೇಶ್ವರ, ಕೊಡೋಳು, ಬೇಕಲ, ಆದೂರು, ಬಾಯಾರು ,,
ವಿವಿಧ ಸಮಾಚಾರ, ಪತ್ರವ್ಯವಹಾರ ೧, ೨, ೩, ೮
ನಿರ್ಣಯಗಳು; ಮೈಸೂರು ಖಾದಿ ವಸ್ತ್ರಾಲಯ, ತಾ. ೩–೨–'೨೫ಗೆ ಮುಂದರಿಸಲ್ಪಟ್ಟ ದ. ಕ. ಜಿಲ್ಲಾ ಕಾ. ಕಮಿಟಿಯ ಕಾರ್ಯಕಾರಿ ಮಂಡಳಿಯ ಸಭೆಯ ವರದಿ ೮

ಸ್ವದೇಶಾಭಿಮಾನಿ.

ಶಕ ೧೮೪೬ ಮಾಘ ಬ। ೫ಯು ಶುಕ್ರವಾರ.

ದೇಶಭಾಷೆಯ ಪ್ರಶ್ನೆ

ನಮ್ಮ ಹಿಂದುಸ್ಥಾನಕ್ಕೆ ಸ್ವರಾಜ್ಯವು ಯಾವಾಗ ಸಿಕ್ಕುವದೊ ಆಗ ಸಿಕ್ಕಲಿ; ಆದರೆ ಅದರ ಪೂರ್ವಾಂಗಕೃತ್ಯವೆಂಬಂತೆ ಅಥವಾ ಅದು ಪ್ರಾಪ್ತವಾದ ಬಳಿಕ ಅದನ್ನು ಕ್ರಮವಾಗಿ ಊರ್ಜಿತಪಡಿಸಿಕೊಂಡಿರುವಂತೆ ಸಕಲ ಹಿಂದುಸ್ಥಾನದ ವಿಚಾರೈಕ್ಯ ಏಕಪ್ರಯತ್ನ ಇತ್ಯಾದಿ ಸಾಧನಗಳು ಹೇಗೆ ಅವಶ್ಯಕವೊ ಹಾಗೆಯೆ ಭಾಷಾನುಗುಣ್ಯದಿಂದ ಆಯಾ ವಿಶಿಷ್ಟ ಪ್ರಾಂತಗಳಲ್ಲಿ ಆಯಾ ಭಾಷೆಗಳ ವ್ಯವಹಾರವು ಅತಿ ಅವಶ್ಯಕವಾಗಿದೆ. ಉದಾಹರಣಾರ್ಥವಾಗಿ ಕರ್ನಾಟಕದ ವ್ಯವಹಾರಗಳು ಕನ್ನಡದಲ್ಲಿಯೆ ನಡೆಯುವದು ಯುಕ್ತವು. ಮಲಯಾಳದ ವ್ಯವಹಾರಗಳು ಮಲಯಾಳದಲ್ಲಿ. ಈ ಮೇರೆಗೆ ಪ್ರಾಥಮಿಕ ಶಾಲೆಯಿಂದ ಮೊದಲು ಮಾಡಿ ಡಿ. ಬೋರ್ಡಿನ ಕಾರ್ಯಕ್ರಮದ ವರೆಗಿನ ಶಿಕ್ಷಣ, ರಾಜಕಾರಣ, ಉದ್ಯೋಗ, ಆರೋಗ್ಯ ಇತ್ಯಾದಿ ವಿಷಯಗಳ ವ್ಯವಹಾರಗಳು ಅಲ್ಲಲ್ಲಿಯ ದೇಶಭಾಷೆಗಳಲ್ಲಿ ನಡೆಯುವದೆ ಹಿತಾವಹ. ಇಂಗ್ಲಿಷು ಅರಸರಭಾಷೆ ಮತ್ತು ಭಾಷೆಗಳ ಅರಸು ಎಂಬುದು ನಿಜ. ಆದರೆ ಇಲ್ಲಿಯ ಎಲ ಜನತೆಯಲ್ಲಿ ಅದು ಸಂಪೂರ್ಣವಾಗಿ ಹಬ್ಬಲು ಎಷ್ಟೊ ದೀರ್ಘ ಕಾಲ ಬೇಕು. ಮತ್ತು ಆ ರೀತಿಯಿಂದ ಅದು ಹಬ್ಬುವದು ನಮ್ಮ ಜನಾಂಗದ ವೈಶಿಷ್ಟ್ಯದ ಮಟ್ಟಿಗೆ ಅಷ್ಟೊಂದು ಉಚಿತವೂ ಅಲ್ಲ. ಇದು ಹೇಗೂ ಇರಲಿ, ನಮಗೆ ಇಲ್ಲಿ ಪ್ರಕೃತ ಪ್ರತಿಪಾದಿಸಬೇಕಾದ ಸಂಗತಿಯೇನೆಂದರೆ, ಇಂಗ್ಲಿಷ್ ಭಾಷೆಯು ಸಾಮಾನ್ಯರಿಗೆ ತಿಳಿದಿರುವ ಭಾಷೆಯಲ್ಲ. ಅಂಥ ಭಾಷೆಯಲಿ ಸಾಮಾನ್ಯರ ಸುಖದುಃಖಗಳಿಗೆ ಸಂಬಂಧಪಟ್ಟಿರುವ ಮೇಲಿನ ವಿಷಯಗಳ ವ್ಯವಹಾರವು ನಡೆಯುವದು ಬರಿ ಅಯುಕ್ತವು. ಆದ್ದರಿಂದ ದೇಶಭಾಷೆಗಳಲ್ಲಿ ವ್ಯವಹಾರ ನಡೆಯುವದು ಅಗತ್ಯವು.

ಈ ಕಾರಣದಿಂದಲೆ ನಮ್ಮ ಶ್ರೀ ರಘುಚಂದ್ರ ಬಲ್ಲಾಳರು ಮದ್ರಾಸ್ ಕೌನ್ಸಿಲಿನಲ್ಲಿ ತಾಲೂಕು ಮತ್ತು ಜಿಲ್ಲಾ ಬೋರ್ಡುಗಳ ಕಾರ್ಯಕ್ರಮವು ದೇಶಭಾಷೆಗಳಲ್ಲಿ ನಡೆಯಬೇಕೆಂಬ ಒಂದು ಠರಾವನ್ನು ತಂದಿದ್ದರು. ಬರೆ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ವ್ಯವಹಾರಗಳ ಮಟ್ಟಿಗೆ ಅಲ್ಲ, ಕೌನ್ಸಿಲಿನಲ್ಲಿ ಕೂಡ ದೇಶಭಾಷೆಯ ಪ್ರವೇಶಕ್ಕೆ ಅಭ್ಯಂತರವಿರಬಾರದೆಂದು ಶ್ರೀ. ನರಸಿಂಹ ಅಯ್ಯರರು ಮೆಂಟಲೆಂಡ್ ದೊರೆಗಳ ಆ ಮುಂಚಿನ ಕೌನ್ಸಿಲಿನಲ್ಲಿ ಠರಾವನ್ನು ತಂದಿದ್ದರು. ಅದು ಆಗಲೆ ಪಾಸಾಗಿದೆ. ಅನಂತರವು ಈ ವಿಷಯವು ಇದೆ ರೀತಿಯಿಂದ ಚರ್ಚಿಸಲ್ಪಟ್ಟು ಅನುಕೂಲವಾದ ತೀರ್ಮಾನವನ್ನು ಹೊಂದಿದೆ. ಈ ಪ್ರಕಾರವಾಗಿ ಎಷ್ಟು ಸಾರೆ ದೇಶಭಾಷೆಯ ಪ್ರಶ್ನೆಯು ಕೌನ್ಸಿಲಿನಲ್ಲಿ ಬಂದುಹೋಗಿದೆಯಾದರೂ ಪುನಃಪುನಃ ಅದು ಬರುತ್ತಿರುವದರ ಮೇಲಿಂದ ಆ ಠರಾವು ಪುಸ್ತಕದಲ್ಲಿಯೆ ಅಲ್ಲದೆ, ಪ್ರತ್ಯಕ್ಷ ವ್ಯವಹಾರದಲ್ಲಿ ಇನ್ನೂ ಬಂದಿಲ್ಲವೆಂದು ಹೇಳಬೇಕಾಗುತ್ತದೆ. ಆದ್ದರಿಂದ ಈ ಸಂದರ್ಭದಲ್ಲಿ ತಾಲೂಕು—ಜಿಲ್ಲಾ—ಬೋರ್ಡು ಮತ್ತು ಮುನ್ಸಿಪಾಲಿಟಿಗಳ ಹೆಚ್ಚಿನ ಕೆಲಸವಿರುವದಲ್ಲದೆ ಕೌನ್ಸಿಲಿಗೆ ಕೆಲಸವಿಲ್ಲ.

ತಾಲೂಕು ಬೋರ್ಡುಗಳಿಗೆ ಮತ್ತು ಜಿಲ್ಲಾ ಬೋರ್ಡುಗಳಿಗೆ ಸಭಾಸದರಾಗಿ ಬರುವ ಮತ್ತು ಬರತಕ್ಕ ಪ್ರತಿನಿಧಿಗಳು ಇಂಗ್ಲಿಷ್ ಭಾಷಾಭಿಜ್ಞರಾಗಿಯೆ ಇರಬೇಕೆಂದಿಲ್ಲ ಮತ್ತು ಹಾಗೆ ಇರುವದೂ ಇಲ್ಲ. ಬೋರ್ಡುಗಳಿಗೆ ಯಾವ ಈ ನಿಯಮವೊ ಅದೆ ನಿಯಮವು ಮುನ್ಸಿಪಾಲಿಟಿಗೆ ಅನ್ವಯಿಸುತ್ತದೆ. ಇಲ್ಲಿ ನಿಯಮವೆಂದೆನ್ನುವದಕ್ಕಿಂತ ತಾಲೂಕ-ಜಿಲ್ಲಾ ಬೋರ್ಡುಗಳ ಮತ್ತು ಮುನ್ಸಿಪಾಲಿಟಿಯ ಅವಸ್ಥೆಯೆ ಹಾಗಿದೆ, ಎಂದರೆ ಇಂಗ್ಲಿಷ್ ಭಾಷಾನಭಿಜ್ಞರು ಕೂಡ ಪ್ರತಿನಿಧಿಗಳಾಗಿ ಬರುವದುಂಟು ಎಂದು ಹೇಳುವದು ಸಮಂಜಸವು. ಎಂದಮೇಲೆ ಪ್ರತಿನಿಧಿಗಳಿಗೆ ಅಪರಿಚಿತವಾದ ಭಾಷೆಯಲ್ಲಿ ವ್ಯವಹಾರವನ್ನು ನಡಿಸುವದು ಯಾರ ಪಾಂಡಿತ್ಯವನ್ನು ತೋರಿಸುವದಕ್ಕಾಗಿ?

ದೇಶಭಾಷೆಗಳಿಗೆ ರಾಜಾಶ್ರಯವಿಲ್ಲವೆಂಬ ಮಾತು ಜನಜನಿತವಾದ್ದು. ಈ ಮಾತನ್ನು ಈಗ ಶಂಖಧ್ವನಿಯಿಂದ ಯಾರೂ ಹೇಳಬೇಕಾದ ಅಗತ್ಯವಿಲ್ಲ. ರಾಜಾಶ್ರಯವಿಲ್ಲದ ದೇಶಭಾಷೆಯನ್ನು ಉದ್ಧರಿಸಲು ಇಂಥ ಸ್ಥಳಿಕ ಸಂಸ್ಥೆಗಳು ಉದ್ಯುಕ್ತವಾದರೆ ಎಷ್ಟೊ ಕಾರ್ಯವುಂಟಾದೀತು. ಇದನ್ನು ಸರಿಯಾಗಿ ಪರ್ಯಾಲೋಚಿಸದೆ ದೇಶಭಾಷೆಯ ಪ್ರಗತಿಗಾಗಿ ಯತ್ನಿಸುವದು ಅಷ್ಟೊಂದು ಯಶಸ್ವಿಯಾಗಲಿಕ್ಕಿಲ್ಲ. ಸ್ಥಾನಿಕ ಸಂಸ್ಥೆಗಳಲ್ಲಿ ದೇಶಭಾಷೆಗಳ ವ್ಯವಹಾರವು ಪ್ರಚುರಪಡಬೇಕೆಂಬೀ ವಿಷಯವು ವಸ್ತುತಃ ದೇಶಭಾಷೆಯ ಉನ್ನತಿಯ ದೃಷ್ಟಿಯಿಂದಾಗಲಿ, ಅಭಿಮಾನದ ದೃಷ್ಟಿಯಿಂದಾಗಲಿ ಪ್ರತಿಪಾದಿಸಲ್ಪಡತಕ್ಕದ್ದಲ್ಲ. ತಾಲೂಕ ಬೋರ್ಡುಗಳು ಅಥವಾ ಡಿ. ಬೋರ್ಡುಗಳು ಇಲ್ಲವೆ ಮುನ್ಸಿಪಾಲಿಟಿಗಳು ತಮ್ಮತಮ್ಮ ವ್ಯವಹಾರವನ್ನು ಆಯಾ ದೇಶಭಾಷೆಗಳಲ್ಲಿ ಆರಂಭಿಸಿದರೆ ಅದರಿಂದ ದೇಶಭಾಷೆಗಳ ಅಭಿವೃದ್ಧಿಯು ಯಾವ ಬಗೆಯಿಂದ ಉಂಟಾದೀತು? ಅಂಗಡಿಗಾರನು ತನ್ನ ಲೆಕ್ಕವನ್ನು ಕನ್ನಡದಿಂದ ಇಡುವದು ಕನ್ನಡಕ್ಕೆ ಅದೊಂದು ಪ್ರಗತಿಕಾರಕವೆ ಅಥವಾ ದೊಡ್ಡದೊಂದು ಅಭಿಮಾನಾಸ್ಪದವೆ? ಅಲ್ಲ. ಒಂದು ವೇಳೆ ಈ ಎರಡೂ ಸಂಗತಿಗಳು ಅಲ್ಪ ಪ್ರಮಾಣದಿಂದ ಅದರಿಂದ ಸಾಧ್ಯವಾಗಬಹುದು. ತಥಾಪಿ ಸ್ಥಳಿಕ ಸಂಸ್ಥೆಗಳಾದರೇನು, ಅಂಗಡಿಗಾರನಾದರೇನು, ತಮ್ಮ ವ್ಯವಹಾರಗಳನ್ನು ದೇಶಭಾಷೆಯಲ್ಲಿಡುವದರಿಂದ ಎಲ್ಲರಿಗೆ ಅವು ವೇದ್ಯವಾಗುತ್ತವೆ. ಈ ಸಂಸ್ಥೆಯ ಜನತೆಯು. ಆ ಜನತೆಯು ಇಂಗ್ಲಿಷನ್ನು ಸಾಕಲ್ಯದಿಂದ ಅರಿಯದು. ದೇಶೀಯ ಭಾಷೆಯು ಮಾತ್ರ ಅದಕ್ಕೆ ಗೊತ್ತು. ಆದ್ದರಿಂದ ಅದಕ್ಕೆ ಗೊತ್ತಿರುವ ಭಾಷೆಯಲ್ಲಿ ಅದರ ವ್ಯವಹಾರ ನಡೆಯುವದು ಬರೆ ಸುಸಂಗತವೆ ಅಲ್ಲ, ಹಿತಾವಹವೂ, ಆವಶ್ಯಕವೂ ಆಗಿದೆ.

ಈ ಎಲ್ಲ ಕಾರಣಗಳು ಇಷ್ಟು ಬಲವಾಗಿರುವಾಗ ದೇಶಭಾಷೆಯ ಈ ಪ್ರಶ್ನೆಗೆ ಬೇಕೆಂದು ಪರಾವಲಂಬಿತೆಯ ಸ್ವರೂಪವನ್ನು ಕೊಡುವುದಕ್ಕಿಂತ ಅದು ಸ್ವತಂತ್ರವಿರುವುದರಿಂದ ಅದರಂತೆ ಪ್ರವರ್ತಿಸಲು ಆಯಾ ಸಂಸ್ಥೆಗೆ ಸಂಬಂಧಪಟ್ಟವರು ಆ ರೀತಿಯಿಂದ ಉಪಕ್ರಮಿಸುವುದೆ ಇದಕ್ಕೆ ಪ್ರಧಾನವಾದ ಉಪಾಯವಾಗಿದೆ.

ಸ್ಫುಟ ವಿಚಾರಗಳು.

೧. "ಶೇಷಂ ಕೋಪೇನ ಪೂರಯೇತ್" ಎಂಬೀ ಸುಭಾಷಿತಕ್ಕೆ ಹೋಮ್ ಮೆಂಬರರು ಒಂದು ಹೊಸ ಉದಾಹರಣೆಯಾಗಿದ್ದಾರೆ ಎನ್ನಬಹುದು! ಎಸೆಂಬ್ಲಿಯಲ್ಲಿ ಶ್ರೀ. ವಿ. ಜೆ. ಪಟೇಲರು ಮುಂಬಯಿ, ಮದ್ರಾಸ ಮತ್ತು ಪಂಜಾಬ ಸಂಸ್ಥಾನಗಳಲ್ಲಿರುವ ಒತ್ತಾಳಿಕೆಯ ಕಾಯಿದೆಗಳನ್ನು ರದ್ದುಪಡಿಸಬೇಕೆಂಬುದಾಗಿ ಯಾವ ಬಿಲನ್ನು ತಂದರೊ ಆ ಸಮಯದಲ್ಲಿ ಹೋಮ್ ಮೆಂಬರರು ಮಾಡಿದ ವರ್ತನವು ಬಹು ಹಾಸ್ಯಾಸ್ಪದವಾಗಿತ್ತು. ಮುಂಬಯಿ, ಮದ್ರಾಸ ಮತ್ತು ಪಂಜಾಬಗಳಲ್ಲಿ, ಯಾಕೆ ಇದಿ ಹಿಂದೂಸ್ಥಾನದಲ್ಲಿ ಇಷ್ಟು ಶಾಂತತೆಯು ನೆಲೆಗೊಂಡಿರುವಾಗ ಕಾನೂನಿನ ಪುಸ್ತಕದಲ್ಲಿ ಒತ್ತಾಳಿಕೆಯ ಸಂತತಿಯನ್ನು ಹಬ್ಬಿಸುವ ಕಾನೂನುಗಳು ಇರುವುದು ಲಜ್ಜಾಸ್ಪದವಾದ ಸಂಗತಿ. ಆದ್ದರಿಂದ ಇಂಥ ಕಾನೂನುಗಳಿಗೆ ಮಣ್ಣು ಕೊಡುವುದು ಉಚಿತವೆಂದಿರುವ ಲೋಕಮತದಂತೆ ಶ್ರೀ. ಪಟೇಲರು ಎಸೆಂಬ್ಲಿಯಲ್ಲಿ ಮೇಲಿನ ಬಿಲನ್ನು ತಂದರು. ಸರಕಾರವು ಒಂದು ಬಿಲನ್ನು ಸಭೆಯಲ್ಲಿ ತಂದರೆ ಅದರ ಪ್ರಥಮ ವಾಚನದಲ್ಲಿ ಪ್ರಜಾಪಕ್ಷದ ಕಡೆಯಿಂದ ಉಪರೋಧವು ಇರುವುದಿಲ್ಲ. ಎರಡನೆಯ ಮೂರನೆಯ ಓದುವಿಕೆಗಳಲ್ಲಿ ವಿರೋಧವು ಬರುತ್ತದೆ. ಇದು ಸಂಪ್ರದಾಯ. ಆದರೆ ಸರಕಾರಕ್ಕೆ ಮಾತ್ರ ಈ ಸಂಪ್ರದಾಯವು ಲಗಾವಾಗುವುದಿಲ್ಲವೆಂದು ತೋರುತ್ತದೆ! ಕಾರಣ, ಹೋಮ್ ಮೆಂಬರರು ಪಟೇಲರ ಬಿಲಿನ ಪ್ರಥಮ ವಾಚನಾವಸರದಲ್ಲಿಯೆ ವಿರೋಧಿಸಲು ಟೊಂಕ ಕಟ್ಟಿ ನಿಂತರು! ವಿರೋಧಿಸುವಾಗ ಪ್ರಮಾಣ, ದೃಷ್ಟಾಂತ, ಯುಕ್ತಿ ಮುಂತಾದ ಮಾನ್ಯ ಸಾಧನಗಳನ್ನೆಯಷ್ಟೆ. ಪರಂತು ಗೃಹಮಂತ್ರಿಗಳಾದ ಮಡಿಮನ್ನರಿಗೆ ಆ ತೈಕೆ ಒಂದೆ ಒಂದರ ಅವಶ್ಯಕತೆಯು ಇದ್ದಂತೆ ತೋರಲಿಲ್ಲ. ಒತ್ತಾಳಿಕೆಯ ಕಾನೂನುಗಳಿಲ್ಲದೆಹೋದರೆ ಅನೇಕ ಅನರ್ಥಗಳಾದಾವು. ಕೊಲೆಯ ಹೆದರಿಕೆಯನ್ನು ಹುಟ್ಟಿಸುವ ಎಷ್ಟೊ ಪತ್ರಗಳು ಬರುತ್ತಿರುವುದು ನಿಮಗೆ ಅವೇದ್ಯವಲ್ಲ ಎಂದು ಮುಂತಾದ ರೀತಿಯಿಂದ ಮಡಿಮನ್ನರು ತಮ್ಮ ವಿರೋಧವನ್ನು ಸಮರ್ಥಿಸಿದರು. ಶ್ರೀಯುತ ಬಿಪಿನ ಚಂದ್ರಪಾಲರು—ಇಂಥ ಹೆದರಿಕೆಯ ಕಾಗದಗಳನ್ನು ಬೇರೆ ಬೇರೆಯವರ ಹೆಸರಿನಿಂದ ಬರೆಯುವುದು ಪೋಲಿಸರೆ ಸರಿ ಎಂಬುದಾಗಿ ಹೇಳಿ ಮಡಿಮನ್ನರ ವಿರೋಧದ ಟೊಳ್ಳುತನವನ್ನು ಹೊರಪಡಿಸಿದರು. ಆದರೂ ಮಡಿಮನ್ನ ಸಾಹೇಬರು "ಪೋಲಿಸ ಇಲಾಖೆಯವರು ಈ ತರದ ಪತ್ರಿಕೆಗಳನ್ನು ಹೊರಡಿಸುತ್ತಾರೆಂಬುದಕ್ಕೆ ಆಧಾರವೇನು?" ಎಂದು ಗದರಿಸಿ ಪ್ರಶ್ನಿಸಿದರು. ಪಾಲರವರು ಅಲ್ಲಿಯೆ ಸಭಾಮಂದಿರದಲ್ಲಿ ಕುಳಿತಿದ್ದ ಪೋಲಿಸ್ ಇನ್ಸ್‌ಪೆಕ್ಟರರನ್ನು ತೋರಿಸಿ ಇವರೆ ಇದಕ್ಕೆ ಸಾಕ್ಷಿ' ಎಂದು ನುಡಿದರು! ಈ ರೀತಿಯಿಂದ ಪ್ರತ್ಯಕ್ಷವಾದ ದೃಷ್ಟಾಂತವನ್ನ ಕೈಎತ್ತಿ ತೋರಿಸಿದ ಬಳಿಕ ಮಡಿಮನ್ನರಿಗೆ "ಸಿಟ್ಟಿನ ಹೊರತು ಬೇರೆ ಆಶ್ರಯವು ಉಳಿಯಲಿಲ್ಲ. ಸಿಟ್ಟಿನಿಂದ ನರಸಿಂಹಾವತಾರವನ್ನು ತಾಳಿ, ಮುಖ ಕೆಂಪುಮಾಡಿಕೊಂಡು, ಕಣ್ಣು ಕೆರಳಿಸಿಕೊಂಡು ಹಲ್ಲು ಕಡಿದು, ಕೈಕಾಲು ಅಪ್ಪಳಿಸಿ ಗರ್ಜಿಸಿ ಮಾತಾಡಿದರು. ಇದು ಬರೆ ಮಾತೆ ಅಲ್ಲದೆ ಇದರಲ್ಲಿ ಯಾವ ಸಮರ್ಥನೆಯೂ ಇದ್ದಿಲ್ಲ. ಸಿಟ್ಟಿನಿಂದ ಬೈಯುವುದು ಸಮರ್ಥನವಲ್ಲ, ಅದು ಶೇಷಂ ಕೋಪೇನ ಪೂರಯೇತ್" ಎಂಬುದಾಗಿದೆ. ಇಂಥ ಪ್ರಸಂಗವನ್ನು ತಂದುಕೊಳ್ಳುವುದು ನಿಷ್ಪಕ್ಷಪಾತಿಯೆನ್ನಿಸಿಕೊಳ್ಳುವ ಸರಕಾರಕ್ಕೆ ಏನೂ ಉಚಿತವಲ್ಲ. ಮಡಿಮನ್ನ ಸಾಹೇಬರು ಈ ರೀತಿಯ ಆವಿರ್ಭಾವವನ್ನು ತೋರಿಸಿದ್ದಾಗ್ಯೂ ಪಟೇಲರ ಬಿಲು ಈ ಪ್ರಥಮ ವಾಚನದಲ್ಲಿ ಪಾಸಾಯಿತು. ಮತ್ತು ಸರಕಾರಕ್ಕೆ ಅಪಜಯವು ಬಂತು.

೨. ಸರಕಾರಕ್ಕೆ ಇನ್ನೊಂದು ಸಂದರ್ಭದಲ್ಲೂ ಅಪಜಯವು ಬಂದೊದಗಿತು. ಬಂಗಾಲ ಒರ್ಡಿನನ್ಸಿನ ಚರ್ಚೆಯು ಎಸೆಂಬ್ಲಿಯಲ್ಲಿ ನಡೆಯಿತು. ಈ ಸಮಯದಲ್ಲಿ ಲೋಕಪಕ್ಷದ ಸಭಾಸದರು ಕೈದುಮಾಡಿದವರ ಮೇಲೆ ಯಾವ ಯಾವ ಆರೋಪಗಳಿವೆ ಎಂಬುದನ್ನು ಸ್ಪಷ್ಟವಾಗಿ ತಿಳಿಸಿ ಅವರ ತನಿಖೆಯನ್ನು ನ್ಯಾಯಾಸನದ ಮುಂದೆ ನಡಿಸಬಹುದಲ್ಲವೆ ಎಂದು ಕೇಳಿ ಸರಕಾರಕ್ಕೆ ಆಹ್ವಾನವನ್ನು ಕೊಟ್ಟರು. ಈ ಆಹ್ವಾನವನ್ನು ಸ್ವೀಕರಿಸಿ ಸರಕಾರವು ಮುಂದೆ ಬರಬೇಕಿತ್ತು. ಆದರೆ ಅದಕ್ಕೆ ಬದಲಾಗಿ "ಅಂಥ ಆರೋಪಣೆಗಳನ್ನು ಬಹಿರಂಗಪಡಿಸಲಾಗುವುದಿಲ್ಲ. ಅದರಿಂದ ಹೆಚ್ಚು ಅಪಾಯವುಂಟಾದೀತೆಂದು ಮುಂತಾದ ಧೋರಣದ ಜವಾಬನ್ನು ಕೊಟ್ಟು ಮಡಿಮನ್ ಸಾಹೇಬರು ನೈತಪ್ಪಿಸಿಕೊಂಡರು. ಒರ್ಡಿನನ್ಸಿನ ವಿವಾದದಲ್ಲಿ ಸರಕಾರವು ಈ ರೀತಿಯ ಅಶ್ಲಾಘ್ಯ ವರ್ತನವನ್ನು ಮಾಡಿದ್ದು ಯಾರಿಗೂ ಸಮ್ಮತವಿರಲಾರದು. ಒರ್ಡಿನನ್ಸು ಲೋಕಮತಕ್ಕೆ ಎಷ್ಟರ ಮಟ್ಟಿಗೆ ವಿರುದ್ಧವಾಗಿದೆ ಎಂಬುದು ಈ ತನಕ ಜನಜನಿತವಾದ ವಿಷಯವೆ ಸರಿ. ದಕ್ಷಿಣ ಆಫ್ರಿಕದಲ್ಲಿಯ ಹಿಂದಿಗಳಿಗೆ ಅಲ್ಲಿಯ ಕಾಯಿದೆಗಳಿಂದ ತೊಂದರೆಗಳು ಬರುತ್ತಿರುವ ಕಾರಣ ಅವುಗಳನ್ನು ರದ್ದುಪಡಿಸಲು ಅಲ್ಲಿಯ ಸರಕಾರಕ್ಕೆ ತಿಳಿಸಬೇಕೆಂದು ಶಾಂತಪಕ್ಷದವರ ಒಂದು ಡೆಪ್ಯುಟೇಶನು ವೈಸರಾಯರ ಭೇಟಿಪಡಕೊಂಡಿತ್ತು. ಆ ಸಮಯದಲ್ಲಿ ವೈಸರಾಯರು "ದಕ್ಷಿಣ ಆಫ್ರಿಕದ ಲೋಕಮತವು ವಿರುದ್ಧವಾಗಿರುವುದರಿಂದ ಅದನ್ನು ಉಲ್ಲಂಘಿಸಿ ವರ್ತಿಸಲು ಅಲ್ಲಿಯ ಸರಕಾರಕ್ಕೆ ಸಾಧ್ಯವಿಲ್ಲ"ವೆಂದು ಶಾಂತಪಕ್ಷದ ಮಂಡಲಕ್ಕೆ ಉತ್ತರವನ್ನು ಕೊಟ್ಟಿದ್ದಾರೆ. ದಕ್ಷಿಣ ಆಫ್ರಿಕದ ಸರಕಾರವು ಅಲ್ಲಿಯ ಲೋಕಮತವನ್ನು ಉಲ್ಲಂಘಿಸುವುದು ಉಚಿತವಲ್ಲವೆಂದು ಯಾವ ರೆಡಿಂಗ್ ಸಾಹೇಬರಿಗೆ ತೋರುತ್ತದೊ ಅದೆ ರೆಡಿಂಗರಿಗೆ ಇಲ್ಲಿಯ ಲೋಕಮತಕ್ಕೆ ವಿರುದ್ಧವಾಗಿ ಒರ್ಡಿನನ್ಸಿನ ರಾಕ್ಷಸನನ್ನು ಸ್ವೈರವಾಗಿ ಸಂಚರಿಸಲು ಬಿಡುವುದು ಮಾತ್ರ ಹೇಗೆ ಯುಕ್ತವಾಗಿ ಕಂಡಿತು? ಇದು ಲಾಂಛನಾಸ್ಪದವಾದ ಸಂಗತಿ ಎಂದು ಈ ನ್ಯಾಯಪ್ರಿಯ ವೈಸರಾಯರಿಗೆ ಹೇಗೆ ತೋರಲಿಲ್ಲ! ವಿಲಾಯತಿಯ ಸ್ವತಂತ್ರವಾದ ನ್ಯಾಯದಾನದಂಥ ಪವಿತ್ರ ಕಾರ್ಯವನ್ನು ಮಾಡಿ ಹಣ್ಣಾದ ಈ ವೈಸರಾಯರು ಈ ಮುದಿಕಾಲದಲ್ಲಿ ಪಲ್ಲಿಗೆ ಬಂದು ಒತ್ತಾಳಿಕೆಯ ಗದೆಯನ್ನು ಬೀಸಲು ಕಲಿಯುತಿದ್ದಾರೆ ಮತ್ತು ಈ ಕಲೆಯಲ್ಲಿ ಕೂಡಲೆ ಉತ್ತೀರ್ಣರು ಕೂಡ ಆಗಿದ್ದಾರೆ. ಇದು ದೈವದ ಆಟವೆ ಸರಿ!

೩. ಎಸೆಂಬ್ಲಿಯಂಥ ಕಡೆಗಳಲ್ಲಿ ಸರಕಾರಕ್ಕೆ ಪರಾಜಯವು ಬರುತ್ತದೆ ಎಂಬುದರ ಮೇಲಿಂದಲೆ ನಾವು ಸಂತೋಷಪಡತಕ್ಕದ್ದಲ್ಲ. ಕಾರಣ, ಸರಕಾರದ ಪ್ರಾಬಲ್ಯವುಳ್ಳ ಕೌನ್ಸಿಲುಗಳು ಇನ್ನು ಎಷ್ಟೊ ಇವೆ. ಅಲ್ಲಿ ಅರ್ಥಾತ್ ಸರಕಾರದ ಪ್ರಧಾನವೆ ಯಶಸ್ವಿಯಾಗುತ್ತದೆ. ಇದಕ್ಕೆ ನಮ್ಮ ಮದ್ರಾಸ

ಸಂಸ್ಥಾನದ ಕೌನ್ಸಿಲೆ ಸಾಕ್ಷಿಯಾಗಿದೆ. ಮದ್ರಾಸ ಕೌನ್ಸಿಲಿನಲ್ಲಿ ಮೆಡಿಕಲ್ ಕೊಲೇಜಿನ ಸಂಬಳವನ್ನೇರಿಸಿದ್ದು ಯೋಗ್ಯವಲ್ಲವಾದ್ದರಿಂದ ರದ್ದುಪಡಿಸಬೇಕೆಂಬ ಅರ್ಥದ ಠರಾವು ಬಂದಿತ್ತು. ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳ ಚಾಲ್ತಿಯ ಸಂಬಳವನ್ನು ಥಟ್ಟನೆ ಏರಿಸುವುದು ಬಡ ವಿದ್ಯಾರ್ಥಿಗಳಿಗೆ ತೊಂದರೆ, ಪ್ರಕೃತ ವಿದ್ಯಾರ್ಥಿಗಳಿಗಂತೂ ಹೆಚ್ಚು ತೊಂದರೆ. ಶಿಕ್ಷಕವರ್ಗದ ಸಂಬಳವನ್ನು ಈಗಿನ ದಿವಸಗಳಲ್ಲಿ ಹೆಚ್ಚಿಸಿದ್ದಿರಬಹುದು. ಆದರೆ ಆ ಸಂಬಳವನ್ನು ವಿದ್ಯಾರ್ಥಿಗಳಿಂದ ತೆಕ್ಕೊಂಡು ಪರಸ್ಪರ ಉಪಾಧ್ಯಾಯರಿಗೆ ಕೊಡುವುದು ಔದಾರ್ಯವಲ್ಲ. ಔದಾರ್ಯವಲ್ಲದೆ ಹೋಗಲಿ, ಪರಂತು ವೈದ್ಯಕಶಿಕ್ಷಣವು ಪೂರ್ವವತ್ ಇರುವಾಗ ಅದರಲ್ಲಿ ಹೆಚ್ಚಿನ ಯಾವ ಸುಧಾರಣೆಯುಂಟಾಗದೆ ಇರುವಾಗ ವಿದ್ಯಾರ್ಥಿವರ್ಗದ ಮೇಲೆ ಹೆಚ್ಚಿನ ಸಂಬಳದ ಭಾರವನ್ನು ಹಾಕುವುದು ಅನ್ಯಾಯವಲ್ಲವೆ? ಆದ್ದರಿಂದ ಹೆಚ್ಚಿಸಿದ ಈ ಸಂಬಳವನ್ನು ಕಡಿಮೆ ಮಾಡಬೇಕೆಂದು ಠರಾವು ಮದ್ರಾಸ್ ಕೌನ್ಸಿಲಿನಲ್ಲಿ ಬಂದಿತು. ದುರ್ದೈವದ ಮಾತೇನೆಂದರೆ, ಈ ಠರಾವಿಗೆ ಲೋಕಪಕ್ಷದ ಬಹುಮತವು ಸಿಕ್ಕದೆ ಇದ್ದ ಕಾರಣ ಅದು ಬಿದ್ದುಹೋಯಿತು. ಮದ್ರಾಸಿನ ಕೌನ್ಸಿಲಿನಲ್ಲಿ "ಹೌದು ಬಸವಣ್ಣ"ರ ಸಂಖ್ಯೆಯೆ ಅಧಿಕವಾಗಿರುವುದರಿಂದ ಇಂಥ ಲೋಕಪಕ್ಷದ ಠರಾವುಗಳು ಪಾಸಾಗುವುದಿಲ್ಲ; ಇದು ದೊಡ್ಡ ದುರ್ದೈವವೆ ಸರಿ. ಮೆಡಿಕಲ್ ಕೊಲೇಜಿನ ವಿಷಯವಾದ್ದರಿಂದ ನಮಗೆ ಇಲ್ಲಿ ಇನ್ನೆರಡು ಮಾತುಗಳನ್ನು ಹೇಳಬೇಕಾಗಿದೆ. ಮೆಡಿಕಲ್ ಕೊಲೆಜಿನಲ್ಲಿ ಮುಂಚಿನಂತೆ ಪ್ರವೇಶವು ದೊರೆಯಲಾರದು. ವಿವಕ್ಷಿತ ಉದ್ದೇಶದಿಂದ ವಿವಕ್ಷಿತ ಜನರಿಗೆ ಮಾತ್ರ ಪ್ರವೇಶ ಕೊಡಲ್ಪಡುತ್ತದೆ. ಪ್ರವೇಶದ ಮಟ್ಟಿಗೆ ಈ ರೀತಿ. ಸಂಬಳದ ಸಂಗತಿ ಮೇಲೆ ಹೇಳಿದ ಹಾಗೆ. ಸಾರಾಂಶ, ಸರಕಾರವು ಒಂದು ಕಡೆಯಲ್ಲಿ ಶಿಕ್ಷಣ ಸಂಸ್ಥೆಗಳ ಬಾಗಿಲುಗಳನ್ನು ಆದಷ್ಟು ಗಟ್ಟಿಯಾಗಿ ಮುಚ್ಚಿ ಇನ್ನೊಂದು ಕಡೆಯಲ್ಲಿ ಅದರ ಕ್ರಯವನ್ನು ಹೆಚ್ಚಿಸಿಯದೆ. ಇದು ವಿದ್ಯಾದಾನವಲ್ಲ, ವ್ಯಾಪಾರ ಕ್ರಮವು. ಈ ಕ್ರಮವನ್ನು ಸರಕಾರವು ಬಿಟ್ಟುಕೊಟ್ಟು ಮೆಡಿಕಲ್ ಕೊಲೇಜಿನ ಫೀಸು (ಸಂಬಳ) ಮುಂಚಿನಂತೆ ಇಟ್ಟು ಜನತೆಯ ಸೌಕರ್ಯವನ್ನು ಹಾಗೆಯೆ ಇಡಕೊಟ್ಟೀತೆಂದು ನಾವು ನಂಬಿದ್ದೇವೆ. ನಮ್ಮ ಈ ನಂಬಿಕೆಯು ಕೌನ್ಸಿಲಿನೊಳಗಿನ ಪರಿಸ್ಥಿತಿಯನ್ನು ಲಕ್ಷ್ಯಕ್ಕೆ ತಂದಲ್ಲಿ ಅನುಚಿತವೆಂದು ತೋರುವುದು ಹೌದಾದರೂ ಮನಸ್ಸು ಮಾಡಿದರೆ ಸರಕಾರಕ್ಕೆ ಅದು ಅಸಾಧ್ಯವಲ್ಲವೆಂಬುದು ಮಾತ್ರ ನಿಜ.

೪. ವೈಕಮಿನಲ್ಲಿ ಅಸ್ಪೃಶ್ಯರ ಪಕ್ಷದಿಂದ ಈಗ ಎಷ್ಟೆ ಸಮಯದಿಂದ ಸತ್ಯಾಗ್ರಹವು ನಡೆಯುತ್ತಿತ್ತೆಂಬುದು ನಮ್ಮ ವಾಚಕರಿಗೆ ಗೊತ್ತೆ ಇದೆ. ವೈಕಮದೇವಸ್ಥಾನದ ಬಳಿಯ ಮಾರ್ಗವು ಸಾರ್ವಜನಿಕ ಚಲಾವಣೆಗೆ—ವರ್ಣಭೇದ, ಜಾತಿಭೇದ ಮುಂತಾದ ಸವಗಳನ್ನು ಹೂಡದೆ ಎಲ್ಲರ ಚಲಾವಣೆಗೆ ಪ್ರತಿಬಂಧವಿಲ್ಲದ್ದಾಗಿರಬೇಕೆಂಬ ಅರ್ಥದ ಒಂದು ಠರಾವನ್ನು ತ್ರಾವಣಕೋರ ಕೌನ್ಸಿಲಿನಲ್ಲಿ ಒಬ್ಬ ಸಭಾಸದರು ತಂದಿದ್ದರೂ ಈ ಠರಾವು ಪಾಸಾಗಲಿಲ್ಲ. ಬಹು ಮತದಿಂದ ಬಿದ್ದು ಹೋಯಿತು. ಬಹುಮತವು ಪುರಾಣಮತವಾದಿಗಳ ಕಡೆಗಿದೆ ಇದೆ ಎಂಬುದು ಸ್ಪಷ್ಟವಾಗುತ್ತದ. ಅಸ್ಪೃಶ್ಯತೆಯು ಇರಬಾರದು, ಅದನ್ನು ತೆಗೆದು ಹಾಕಬೇಕು ಎಂಬೀ ಮಾತು ನಿಜ. ಅದನ್ನು ಯಾರೂ ಆಕ್ಷೇಪಿಸಕೂಡದು. ಆದರೆ ಸಮಾಜ ಸುಧಾರಣೆಯು—ಅದು ಯಾವ ನಮೂನೆಯದೆ ಇರಲಿ—ಮೆಲ್ಲ ಮೆಲ್ಲನೆ ಆಗಬೇಕಲ್ಲದೆ ಥಟ್ಟನೆ ಆಗುವಂತಿಲ್ಲ. ಜನತೆಯು ಅನುಭವದಿಂದ ಮತ್ತು ಶಿಕ್ಷಣದಿಂದ ಸುಧಾರಣೆಗಳನ್ನು ಸಾಧಿಸಿಕೊಳ್ಳಬೇಕಲ್ಲದೆ, ಕಾಯಿದೆಯ ಆಧಾರದಿಂದ ಸುಧಾರಣೆಗಳನ್ನು ಸಾಧಿಸುವದು ಪ್ರಶಸ್ತವಲ್ಲ. ಮತ್ತು ಅವು ಚಿರಸ್ಥಾಯಿಯಾಗುವದೂ ಇಲ್ಲ. ಜನಗಳಿಗೆ ಒಗ್ಗದೆ ಇದ್ದ ಸುಧಾರಣೆಗಳನ್ನು ಕಾಯಿದೆಯ ಬಲದಿಂದ ಒತ್ತಾಯಿಸುವದು ಎಷ್ಟು ಹಾಸ್ಯಾಸ್ಪದವೊ ಅಷ್ಟೆ ಮೂರ್ಖತನವೂ ಆಗಿದೆ. ಆದ್ದರಿಂದ ತ್ರಾವಣಕೋರ ಸಂಸ್ಥಾನದ ಕೌನ್ಸಿಲಿನಲ್ಲಿ ಈ ಠರಾವು ಬರುತ್ತದೆ ಎಂದ ಕೂಡಲೆ ನಮಗೆ ಆಶ್ಚರ್ಯ ತೋರಿತ್ತು. ಕಾರಣ, ಈ ಅಸ್ಪೃಶ್ಯತೆಯ ದಂಭಾಚಾರಕ್ಕೆ ಮಲಬಾರವು ತವರು ಮನೆ! ಅಂಥ ಕಡೆಯಲ್ಲಿ ಈ ಠರಾವು ಹೇಗೆ ಪಾಸಾದೀತು ಎಂದು ನಮಗೆ ತೋರಿತ್ತು. ಅಲ್ಲಿ ನಡೆದ ವೃತ್ತಾಂತದ ಮೇಲಿಂದ ಕೊನೆಗೆ ನಮ್ಮ ಊಹೆಯಂತೆ ಠರಾವು ಪಾಸಾಗದೆ ಪುರಾಣಮತವಾದಿಗಳ ಪ್ರಾಬಲ್ಯವು ಸ್ಪಷ್ಟವಾಗಿ ತೋರಿಬಂತು. ಇಂತು, ಮಲಬಾರದ ಸುಧಾರಕರು ಇದರ ಮೇಲಿಂದ ಯೋಗ್ಯವಾದ ಬೋಧೆಯನ್ನು ತೆಕ್ಕೊಂಡು ಇಂಥ ಸಂಗತಿಗಳಿಗೆ ಕಾಯಿದೆಯ ಆಶ್ರಯವನ್ನು ಪಡಕೊಳ್ಳುವ ಹವ್ಯಾಸವನ್ನು ಬಿಟ್ಟುಬಿಟ್ಟಾರೆಂದು ಬಯಸುತ್ತೇವೆ.

೫. ಬಂಗಾಲದ ಗವರ್ನರರಾದ ಲೋರ್ಡ ಲಿಟನ ಸಾಹೇಬರು ರಾಜತಂತ್ರದಲ್ಲಿ ಬಹು ಪ್ರಾವೀಣ್ಯ ತೋರಿಸುತ್ತಿದ್ದಾರೆ. ಅಂತರಂಗವಾಗಿಯೂ ಬಹಿರಂಗವಾಗಿಯೂ ಅವರ ಪ್ರಯತ್ನಗಳು ನಡಕೊಂಡಿವೆ. ಹೌದುಬಸವಣ್ಣನವರಾದ ಕೆಲವು ಶಾಂತ ಪಕ್ಷದವರನ್ನೂ, ಲಾಂಗೂಲಚಾಲನೆಯನ್ನು ಮಾಡುತ್ತಿರುವ ಇನ್ನು ಹಲವರನ್ನೂ, ಮಹಮ್ಮದೀಯರನ್ನೂ ಕರೆದು ತರಿಸಿ ಒಳಗಿನಿಂದ ಅವರೊಡನೆ ಮಸಲತ್ತುಗಳು ನಡೆಯುತ್ತಿವೆ ಎಂಬುದಾಗಿ ಕೇಳಿಬರುತ್ತದೆ. ಅಂತರಂಗದಲ್ಲಿ ನಡೆಯುವ ಈ ಸಂಗತಿಗಳು ಎಷ್ಟರ ಮಟ್ಟಿಗೆ ಪ್ರಾಮಾಣಿಕವಾದುವುಗಳೆಂಬುದನ್ನು ಹೇಳಲು ಸಾಧ್ಯವಿಲ್ಲವಾದರೂ ಇದೆ ದೊರೆಗಳು ನಡಿಸಿರುವ ಹಿಂದಿನ ಸಂಗತಿಗಳ 'ರಿಕಾರ್ಡ'ನ್ನು ನೋಡಿದರೆ ಈಗಿನದು ಕೇವಲ ಕಾಲ್ಪನಿಕ ಅಥವಾ ಅಸಂಭವನೀಯವಾದ್ದೆಂದು ಹೇಳಲು ಮಾತ್ರ ಸಾಧ್ಯವಿಲ್ಲ. ಅಂತರಂಗ ಪ್ರಯತ್ನದ ಸಂಗತಿಯನ್ನು ಬಿಟ್ಟು ಬಿಡೋಣ. ಬಹಿರಂಗವಾಗಿ ಇವರು ಯಾವ ಪ್ರಯತ್ನಗಳನ್ನು ಮಾಡುತ್ತಿದ್ದಾರೊ ಅವಾದರೂ ಏನನ್ನು ಸೂಚಿಸುತ್ತವೆ? ಲಿಟನ್ ಸಾಹೇಬರು ಎಲ್ಲಾ ಪಕ್ಷದ ಪ್ರಮುಖರನ್ನು ಕರೆದು ಮಂತ್ರಿತ್ವದ ಸವಾಲನ್ನು ಹಾಕಿದರು. ಆಗ ಬಂಗಾಲ ಒರ್ಡಿನನ್ಸನ್ನು ಸರಕಾರವು ರದ್ದುಪಡಿಸದೆ ಇದ್ದರೆ ಸ್ವರಾಜ್ಯಪಕ್ಷವು ಪೂರ್ವವತ್ ಉಪರೋಧವನ್ನು ಮಾಡೀತೆಂದು ಸ್ವರಾಜ್ಯಪಕ್ಷದ ಮುಖಂಡರು ಹೇಳಿದರು. ಇತರರು ಯಥಾ ಪ್ರಕಾರ ಮುಗ್ಧರಾಗಿದ್ದಾರೆ. ಎಂದರೆ ಇದರ ಅರ್ಥವು ಸರಕಾರಕ್ಕೆ ಬೆಂಬಲವನ್ನು ಕೊಡುವದಾಗಿರಬಹುದು. ಸರಕಾರವು ಈ ರೀತಿಯಿಂದ ಕೌನ್ಸಿಲಿನಲ್ಲಿ ಒಡಕನ್ನು ತಂದು ಆ ಮೂಲಕ ತನ್ನ ಕಡೆಗೆ ಬಹು ಪಕ್ಷವನ್ನು ಮಾಡಿಕೊಳ್ಳುವದಿದೆ ಎಂಬುದಾಗಿ ಗಾಳಿ ವರ್ತಮಾನವುಂಟು. ಈ ರಾಜಕಾರಣವು ಎಷ್ಟರ ಮಟ್ಟಿಗೆ ಫಲಿತವಾಗುತ್ತದೆ ಎಂಬುದನ್ನು ನೋಡೋಣ.

ಮಂಗಳೂರು.

ಕಳೆದ ಹತ್ತೊಂಬತ್ತು ವರುಷಗಳಿಂದ ಗವರ್ನಮೆಂಟ ಪ್ಲೀಡರ ಮತ್ತು ಪಬ್ಲಿಕ್ ಪ್ರೊಸಿಕ್ಯುಟರರಾದ ಮೆ. ಎ. ಜೆ. ಲೋಬರ ಬದಲಿಗೆ ರಾವ್‌ಸಾಹೇಬ ಬಿ. ಮಹಾಬಲ ಹೆಗ್ಡೆ ಬಿ. ಎ. ಬಿ. ಎಲ್. ಎಮ್. ಎಲ್. ಸಿ. ಇವರು ಗವರ್ನಮೆಂಟ ಪ್ಲೀಡರ ಮತ್ತು ಪಬ್ಲಿಕ ಪ್ರೊಸಿಕ್ಯೂಟರರಾಗಿ ನೇಮಕ ಪಟ್ಟಿದ್ದಾರೆ.

ಜಿಲ್ಲಾ ಪೋಲೀಸ ಸುಪರಿಂಟೆಂಡೆಂಟರಾದ ಮೆ. ಆರ್. ಜೆ. ಪಿ. ಡೊಸನ್‌ರವರು ೯ ತಿಂಗಳ ರಜೆಯ ಮೇಲೆ ಹೋಗುವುದರಿಂದ ಮ। ರಾ। ಕೆ. ವಿ. ರಾಜಗೋಪಾಲ ತಂಬಿರ್‌ರವರು ಇಲ್ಲಿಯ ಪೋಲಿಸ್ ಸುಪರಿಂಟೆಂಡೆಂಟರಾಗಿ ಬರುವರು.

The Calicut Bank, Ltd.,
ದಿ ಕೆಲಿಕಟ್ ಬೇಂಕ್, ಲಿಮಿಟೆಡ್,
ಹೆಡ್ ಆಫೀಸು—ಕಲ್ಲಿಕೋಟೆ.
ಬ್ರಾಂಚುಗಳು:—ಮುಲ್ಲಸ್‌ಚೇರಿ, ತಲಚೇರಿ, ಕೊಚ್ಚಿ ಮತ್ತು ಪಾಲ್ಘಾಟು.
ರಜಿಸ್ಟರ್ಡ್ ಮತ್ತು ಅಧಿಕಾರಗೊಳಿಸಲ್ಪಟ್ಟ ಮೂಲಧನ ರೂ, 5,00,000—0—0.
ರೂಪಾಯಿ 10ರ 50,000 ಪಾಲುಗಳು.
(30—8—1924)ರ ವರೆಗೆ ಮೌಲ್ಯ ಮೂಲಧನ ರೂಪಾಯಿ 1,81,850—0—0.
ಒಂದು ವರುಷದ ಕಾಯಂ ಠೇವಣಾತಿಗೆ ಬಡ್ಡಿ ದರ ಸೇಕಡಾ ರೂ. 7—8—0.
ಕಳೆದ 4 ವರುಷಗಳಲ್ಲಿ ಪಾಲುಗಾರರಿಗೆ ಸೇಕಡಾ 12ರಂತೆ ಬಡ್ಡಿ ಹಂಚಿದೆ.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.
ಸಿ. ಕೃಷ್ಣನ್, ಬಿ. ಎ. ಬಿ. ಎಲ್.,
ಮೆನೇಜಿಂಗ್ ಡ್ಯಾರೆಕ್ಟರ್.
ಡ್ಯಾರೆಕ್ಟರರಲ್ಲಿ ಒಬ್ಬರು—
ಎಸ್. ನಾರಾಯಣ ಕಾಮತ್, ಬಿ. ಎ.,
ಪ್ಲೀಡರ್, ಕುಂದಾಪುರ.

ಆರ್. ಎಮ್. ಸಬ್ಬೂರ್ ಇವರು ತಲಚೇರಿಯ ಬ್ರೆನೆನ್ ಕೊಲೇಜಿನ ಪ್ರಿನ್ಸಿಪಾಲರಾಗಿ ನೇಮಕಪಟ್ಟಿದ್ದಾರೆ.

ಮ। ರಾ। ಎಮ್. ನರಸಿಂಗರಾವ್ ಸಬ್ ಜಡ್ಜ ಇವರು ಸದ್ಯದಲ್ಲಿ ಕಲ್ಲಿಕೋಟೆಯ ಅಸಿಸ್ಟಾಂಟ ಸೆಶನ್ ಜಡ್ಜರಾಗಿ ನೇಮಕಪಡುವರೆಂದು ವಾರ್ತೆ ಇದೆ.

ಬರುವ ಮೇ ತಿಂಗಳ ಶುರುವಿನಿಂದ ಇಲ್ಲಿಯ ಕೊಂಕಣಿ ದಿರ್ವೆಂ ಎಂಬ ಕೆಥೋಲಿಕರ ಪಾಕ್ಷಿಕ ಪತ್ರಿಕೆಯು ವಾರ ಪತ್ರಿಕೆಯಾಗಿ ಹೊರಡುವುದು.

ಡಿಸ್ಟ್ರಿಕ್ಟ ಎಡ್ವಾನ್ಸ್‌ಮೆಂಟ ಎಸೋಸಿಯೇಶನಿನ ಕಾರ್ಯಕಾರಿ ಕಮ್ಮಿಟಿಯ ಮೀಟಿಂಗು ಇದೇ ಬರುವ ತಾ. ೧೭ನೇ ಸಾಯಂಕಾಲ ಸೇರುವುದು. ಈ ಮೀಟಿಂಗಿನಲ್ಲಿ ಎಸೋಸಿಯೇಶನಿನ ಜನರಲ್ ಮೀಟಿಂಗನ್ನು ಜರುಗಿಸುವ ತಾರೀಕನ್ನು ನಿರ್ಣಯಿಸುವುದು, ಮಂಗಳೂರು ತಾಲೂಕುಬೋರ್ಡ ಪ್ರೆಸಿಡೆಂಟರನ್ನು ಎಸೋಸಿಯೇಶನಿನ ಎಕ್ಸ್ ಒಫೀಸೋ ಮೆಂಬರರಾಗಿ ನೇಮಿಸುವುದು ಇವೇ ಮೊದಲಾದ ಕಾರ್ಯಗಳು ನಡೆಯುವುವು.

ಡಿಸ್ಟ್ರಿಕ್ಟ್ ಎಡ್ವಾನ್ಸ್‌ಮೆಂಟ್ ಎಸೋಸಿಯೇಶನಿನಿಂದ ಒಂದು ಪತ್ರ ಹೊರಡಿಸುವುದಕ್ಕಾಗಿ ನೇಮಕಪಟ್ಟ ಕಮ್ಮಿಟಿಯ ಮೀಟಿಂಗು ಬರುವ ತಾ. ೧೭ರಲ್ಲಿ ಜರಗುವುದು.

ಇಲ್ಲಿಯ ಕೊಸ್ಮೊಪೊಲಿಟನ್ ಕ್ಲಬ್ಬಿನ ವರ್ಧಂತಿಯು ಎಂದಿನಂತೆ ಹೆಚ್ಚಿನ ಸಂಭ್ರಮದಿಂದ ಜರಗಿತು. ಚಾಲ್ತಿ ವರುಷಕ್ಕೆ ಮ. ರಾ. ಎ. ಶ್ರೀನಿವಾಸಯ್ಯೆಯವರು ಪ್ರೆಸಿಡೆಂಟರಾಗಿಯೂ, ಎ. ರಾಮರಾಯರು ವ್ಯಾಸ್-ಪ್ರೆಸಿಡೆಂಟರಾಗಿಯೂ ಮ. ರಾ. ಕುಡ್ವಿ ವೆಂಕಟರಾಯರು ಸೆಕ್ರೆಟರಿಗಳಾಗಿಯೂ ಮಿ. ಎಮ್. ಅಲ್ವರಿಸರು ಅಸಿಸ್ಟಾಂಟ ಸೆಕ್ರೆಟರಿಗಳಾಗಿಯೂ ಆರಿಸಲ್ಪಟ್ಟಿರುತ್ತಾರೆ.

ಇನ್‌ಕಮ್ ಟೇಕ್ಸ ಆಫೀಸರರು ತಾ. ೧೮, ೧೯ ಮತ್ತು ೨೦ರಲ್ಲಿ ಕಾರ್ಕಳದಲ್ಲಿ ಸರ್ಕೀಟು ಬೆಳಸುವರು.

ಬರುವ ಮಾರ್ಚಿ ತಿಂಗಳ ತಾ. ೩೧ಕ್ಕೆ ಮಂಗಳೂರು ತಾಲೂಕುಬೋರ್ಡು ಮೆಂಬರರ ಪೈಕಿ ಹಲವರ ಮೆಂಬರಿಕೆಯ ವಾಯಿದೆಯು ಗುಜರಾಗುವುದರಿಂದ ಈ ಸ್ಥಾನಗಳಿಗೆ ಹೊಸ ಚುನಾವಣೆಯು ಆಗುವುದು. ಮಂಗಳೂರು ಸರ್ಕಲಿನಿಂದ ೨, ಬಂಟವಾಳ ಸರ್ಕಲಿನಿಂದ ೧, ಮುಲ್ಕಿ ಸರ್ಕಲಿನಿಂದ ೨, ಗುರ್ಪುರ ಸರ್ಕಲಿನಿಂದ ೨, ಪಾಣೆಮಂಗಳೂರ ಸರ್ಕಲಿನಿಂದ ೨ ಹೀಗೆ ೯ ಮೆಂಬರರ ಚುನಾವಣೆಯಾಗುವುದು. ಈ ಮೆಂಬರಿಕೆಗಳಿಗೆ ಉಮೇದ್ವಾರರಾಗತಕ್ಕವರು ತಮ್ಮ ನೊಮಿನೇಶನ್‌ಗಳನ್ನು ಇದೇ ಬರುವ ತಾ. ೧೭ನೆಯ ದಿನ ಅಪರಾಹ್ನ ೧ ಗಂಟೆಯಿಂದ ೪ ಗಂಟೆಯೊಳಗೆ ಹಾಜರುಪಡಿಸತಕ್ಕದ್ದು. ಮಂಗಳೂರು ತಾಲೂಕುಬೋರ್ಡಿನ ಚುನಾವಣೆಯು ತಾ. ೯ರಲ್ಲೂ ಬಂಟವಾಳ ಸರ್ಕಲಿನ ಚುನಾವಣೆಯು ಮಾರ್ಚಿ ತಾ ೧೩ರಲ್ಲೂ ಪಾಣೆಮಂಗಳೂರ ಸರ್ಕಲಿನ ಚುನಾವಣೆಯು ಮಾರ್ಚಿ ತಾ. ೧೩ರಲ್ಲೂ ಮುಲ್ಕಿ ಸರ್ಕಲಿನ ಚುನಾವಣೆಯು ಮಾರ್ಚಿ ತಾ. ೧೭ರಲ್ಲೂ ಗುರ್ಪುರ ಸರ್ಕಲಿನ ಚುನಾವಣೆಯು ಮಾರ್ಚಿ ತಾ. ೧೮ರಲ್ಲೂ ಜರಗುವುದು.

ಮ. ರಾ. ಹುಂಡಿ ಜನಾರ್ಧನ ಕಮ್ತಿ, ಮ. ರಾ. ಪೇಜಾವರ ನರಸಿಂಗರಾವ್, ಮ. ರಾ. ಬೊಕ್ಕಪಟ್ಣ ಕೃಷ್ಣಪ್ಪ, ಮ. ರಾ. ಕುಡ್ವ ಪದ್ಮನಾಭ ಭಟ್ಟ, ಮ. ರಾ. ಹಂಪನಕಟ್ಟೆ ಕೃಷ್ಣಪ್ಪ ಮೊದಲಾದವರ ಮನೆಯಲ್ಲಿ ಕಳವನ್ನು ನಡಿಸಿದ ಆರೋಪದ ಮೇಲೆ ಕೃಷ್ಣಪ್ಪನೆಂದು ಹೆಸರು ಹೇಳಿಕೊಂಡಿದ್ದವರನ್ನು ಕೈದು ಮಾಡಿ ವಿಚಾರಣೆಯು ಇಲ್ಲಿಯ ಡಿಪ್ಯುಟಿ ಕಲೆಕ್ಟರರಲ್ಲಿ ನಡಿಯುತ್ತಿದೆ. ತನಿಖೆಯಲ್ಲಿ ಈತನು ಬ್ರಹ್ಮಾವರ ಹಾರಾಡಿ ಗ್ರಾಮದ ಬೊಕ್ಕಪಟ್ಣ ಇಸ್ಮಾಲಿ ಯಾನೆ ಅಬ್ದುರಹಿಮಾನ ಎಂದು ತಿಳಿಯುತ್ತೆ. ಕಳವು ಮಾಡಿದ ಹೆಚ್ಚಿನ ಸೊತ್ತುಗಳು ತಲಾಸಿಯಾಗಿವೆ. ಈತನು ಇನ್ನೂ ಜಿಲ್ಲೆಯ ಹಲವು ಭಾಗಗಳಲ್ಲೂ ಮಲಬಾರುಮೊದಲಾದ ಕಡೆಗಳಲ್ಲೂ ಕಳವನ್ನು ನಡಿಸಿರುವನೆಂಬ ಆರೋಪವಿದೆ.

ಗೌಡ ಸಾರಸ್ವತ ಬ್ರಾಹ್ಮಣರ ಕ್ಲಬ್ಬಿನಲ್ಲಿ ಗೌಡಸಾರಸ್ವತ ಬ್ರಾಹ್ಮಣ ವರ್ಗದ ಸಭೆಯು ಕಳೆದ ತಾ. ೮ರಲ್ಲಿ ಜರುಗಿ, ಹಿಂದು ರಿಲಿಜಸ್ ಎನ್‌ಡೌಮೆಂಟ ಬಿಲು ಹಿಂದೂ ಧಾರ್ಮಿಕ ಸಂಸ್ಥೆಗಳ ಅಧಿಕಾರವನ್ನು ನಾಶಗೊಳಿಸುವ ಸ್ವಭಾವದ್ದು ಮತ್ತು ಅಂಥಾ ಸಂಸ್ಥೆಗಳನ್ನು ಸರಕಾರದ ನಿಯಂತ್ರಣೆಗೆ ಒಳಪಡಿಸುವ ಸ್ವಭಾವದ್ದೆಂದು ಈ ಸಭೆಯು ದೃಢ ನಂಬಿ ಇದನ್ನು ಪ್ರಜಾರಂಜಾ ಲೋಪಪಡಿಸಬೇಕೆಂದು ಮಿ। ಸತ್ಯಮೂರ್ತಿಯವರು ನ್ಯಾಯವಿಧಾಯಕ ಸಭೆಯಲ್ಲಿ ತರುವ ಠರಾವನ್ನು ಅನುಮೋದಿಸುತ್ತದೆ. ಗೌಡಸಾರಸ್ವತ ಬ್ರಾಹ್ಮಣರ ದೇವಾಲಯಗಳು ಸದರಿ ಸಮಾಜದ ಮೆಂಬರರ ಸಹಾಯದಿಂದಲೇ ಸಮಾಜದ ಒಳ್ಳಿತಿಗಾಗಿಯೇ ಸ್ಥಾಪಿಸಿದ್ದರಿಂದ ಈ ಬಿಲು ಸದರಿ ದೇವಸ್ಥಾನಗಳಿಗೆ ಲಾಗು ಮಾಡಲಾಗದು. ಈ ಜಿಲ್ಲೆಯಲ್ಲಿರುವ ಈ ಸಮಾಜದ ಯಾವತ್ತು ದೇವಾಲಯಗಳು ಸ್ವಸಮಾಜದ ಸಹಾಯದಿಂದಲೆ ಸ್ಥಾಪಿಸಲ್ಪಟ್ಟು, ಅವುಗಳ ಯಾವತ್ತು ಹಕ್ಕುಗಳು ಅವರಿಗೆನೇ ಸಂಬಂಧಪಟ್ಟದ್ದರಿಂದ ಗೌಡಸಾರಸ್ವತರಲ್ಲದ ಮೆಂಬರರಿಂದ ಕೂಡಿದ ಕಮ್ಮಿಟಿಯ ನಿಯಂತ್ರಣೆಗೆ ಯಾವ ರೀತಿಯಲ್ಲೂ ಇವನ್ನು ಒಳಪಡಿಸಲಾಗದು ಎಂಬ ಠರಾವು ಮಂಜೂರಾಗಿದೆ.

ಪತ್ರವ್ಯವಹಾರ

ಕಾಸರಗೋಡು ಮತ್ತು ಉಪ್ಪಿನಂಗಡಿ ತಾಲೂಕು ಬೋರ್ಡುಗಳ ಸಂಯೋಜನೆ.

ಕುಂದಾಪುರ, ಉಡುಪಿ, ಕಾರ್ಕಳ ಈ ಮೂರು ತಾಲೂಕು ಬೋರ್ಡುಗಳನ್ನು ಒಟ್ಟುಗೂಡಿಸಿ ಒಂದೇ ತಾಲೂಕು ಬೋರ್ಡಾಗಿ ಮಾಡಬೇಕೆಂಬದಾಗಿಯೂ ಉಡುಪಿ ಪಟ್ಟಣವನ್ನು ಮುನ್ಸಿಪಲ್ ಆಡಳಿತಕ್ಕೆ ಒಳಪಡಿಸಬೇಕಾಗಿಯೂ ಕಾಸರಗೋಡು ಮತ್ತು ಉಪ್ಪಿನಂಗಡಿ ತಾಲೂಕು ಬೋರ್ಡುಗಳನ್ನು ಒಟ್ಟುಗೂಡಿಸಿ ಒಂದು ತಾಲೂಕು ಬೋರ್ಡಾಗಿ ಮಾಡಬೇಕಾಗಿಯೂ ಸರಕಾರದಿಂದ ಎಲ್ಲಾ ತಾಲೂಕು ಬೋರ್ಡುಗಳಿಗೂ ಡಿಸ್ಟ್ರಿಕ್ಟ ಬೋರ್ಡಿಗೂ ಜಿಲ್ಲಾ ಕಲೆಕ್ಟರ ದೊರೆಗಳವರಿಗೂ ಇತ್ತಲಾಗೆ ಒಂದು ಹುಕುಂ ಬಂದಿರುತ್ತದೆಂದು ತಿಳಿದೆ.

ಯಾವ ತಾಲೂಕು ಬೋರ್ಡುಗಳನ್ನು ಒಟ್ಟು ಕೂಡಿಸುವುದಾದರೂ ಮೊದಲು ಅವುಗಳ ವಿಸ್ತೀರ್ಣ ಜನಸಂಖ್ಯೆ, ಗ್ರಾಮಗಳು, ಸಿಕ್ಕುವ ಕಂದಾಯ ಇವುಗಳನ್ನು ಗಣನೆಗೆ ತರಬೇಕಾಗಿದೆ.

ಕುಂದಾಪುರ, ಉಡುಪಿ, ಕಾರ್ಕಳ ಇವುಗಳನ್ನು ಒಟ್ಟುಗೂಡಿಸಿದರೆ ಇವುಗಳ ವಿಸ್ತೀರ್ಣವು ೧೪೯೨ ಚದರ ಮೈಲುಗಳಾಗುತ್ತದೆ. ಜನಸಂಖ್ಯೆಯು ೪೮೦,೨೩೧ ಆಗುತ್ತದೆ. ಗ್ರಾಮಗಳು ೩೨೫ ಆಗುತ್ತವೆ. ಕಂದಾಯವು ೧೦೬೧೨೦೭ ಆಗುತ್ತದೆ. ವಿಸ್ತೀರ್ಣವು ಬಹಳ ಹೆಚ್ಚಾಗುವುದರಿಂದಲೂ ಒಂದೊಂದು ತಾಲೂಕು ಬೋರ್ಡು ಪ್ರತ್ಯೇಕವಿದ್ದ ಸಮಯದಲ್ಲೆ ಯಾವ ತರದ ಹೆಚ್ಚಿನ ಅಭಿವೃದ್ಧಿಯೂ ಆಗದೆ ಇದ್ದುದರಿಂದಲೂ ಶಾಲೆಗಳೂ, ಆಸ್ಪತ್ರೆಗಳೂ ಹೆಚ್ಚಾಗದೆ ಇರುವುದರಿಂದಲೂ, ಪ್ರತಿ ತಾಲೂಕು ಬೋರ್ಡು ಪ್ರೆಸಿಡೆಂಟರು ಮಾಡಬೇಕಾದ ೬೦ ದಿವಸಗಳ ಸರ್ಕೀಟನ್ನು ಮಾಡದೆ ಇದ್ದುದರಿಂದಲೂ ಇವುಗಳನ್ನು ಒಟ್ಟು ಕೂಡಿಸಿದರೆ ಇನ್ನು ಯಾವ ಅಭಿವೃದ್ಧಿಯು ಉಂಟಾದೀತು?

ಮಂಗಳೂರು ತಾಲೂಕಿನ ವಿಸ್ತೀರ್ಣವು ೪೧೨ ಚದರ ಮೈಲುಗಳು. ಜನಸಂಖ್ಯೆಯು ಮಂಗಳೂರು ಮುನ್ಸಿಪಾಲಿಟಿಯನ್ನು ಬಿಟ್ಟುಬಿಟ್ಟರೆ ೨೪೦,೪೭೪ ಆಗುತ್ತದೆ. ಗ್ರಾಮಗಳು ೧೭೪, ಕಂದಾಯವು ಮಂಗಳೂರು ಮುನ್ಸಿಪಾಲಿಟಿಯನ್ನು ಬಿಟ್ಟರೆ ರೂ. ೪೦,೦೩೩೫ ಆಗುತ್ತದೆ. ಇದನ್ನು ಮಾತ್ರವೆ ಇಷ್ಟು ಸಣ್ಣ ತಾಲೂಕು ಬೋರ್ಡಾದಾಗ್ಯೂ ಇದ್ದ ಹಾಗೆ ಇರಗೊಡಿಸಿ ಇತರ ತಾಲೂಕು ಬೋರ್ಡುಗಳ ವಿಷಯ ಮಾತ್ರ ಹೊಸ ಏರ್ಪಾಡು ಏಕೆ?

ಕಾಸರಗೋಡು ತಾಲೂಕು ಬೋರ್ಡು ಮತ್ತು ಪುತ್ತೂರು ತಾಲೂಕು ಬೋರ್ಡಿನ ವಿಸ್ತೀರ್ಣವು ೨೦೦೧ ಚದರ ಮೈಲುಗಳಾಗುತ್ತದೆ. ಜನಸಂಖ್ಯೆ ೪೩೦,೫೭೭ ಆಗುತ್ತದೆ ಗ್ರಾಮಗಳು ೨೯೬, ಕಂದಾಯವು ೭೭೮, ೧೬೪ ಆಗುತ್ತದೆ. ಈಗ ಕಾಸರಗೋಡು ತಾಲೂಕು ಬೋರ್ಡಿನಲ್ಲಿ ಸ್ಪೆಶಲ್ ಮೀಟಿಂಗ ಮಾಡಿ ಈ ತಾಲೂಕು ಬೋರ್ಡನ್ನೂ ಉಪ್ಪಿನಂಗಡಿ ತಾಲೂಕು ಬೋರ್ಡನ್ನೂ ಒಟ್ಟುಗೂಡಿಸಬಾರದೆಂದು ಹೇಳುವುದಕ್ಕೆ ಈಗ ಕಾಸರಗೋಡು ತಾಲೂಕು ಬೋರ್ಡು ವಿಸರ್ಜಿತವಾಗಿದೆ. ಈಗ ಪುತ್ತೂರು ಡಿವಿಜನಲ್ ಆಫೀಸರರು ಪ್ರೆಸಿಡೆಂಟರಾಗಿರುತ್ತಾರೆ ಇವರು ಎಲ್ಲಿಯಾದರೂ ಇವರನ್ನು ಒಟ್ಟು ಕೂಡಿಸಬಹುದೆಂದು ಬರದರೆ ಎಲ್ಲವೂ ಕಷ್ಟಕರವಾಗುವುದು.

ಕಾಸರಗೋಡು ತಾಲೂಕು ಬೋರ್ಡು ಪುತ್ತೂರು ತಾಲೂಕು ಬೋರ್ಡಿನ ಒಟ್ಟಿಗೆ ಇರುವಾಗ ಈ ತಾಲೂಕಿನಲ್ಲಿ ಯಾವ ತರದ ಅಭಿವೃದ್ಧಿಯೂ ಇರಲಿಲ್ಲ. ಪ್ರತ್ಯೇಕವಾದ ಮೇಲೆ ೧೧೪ ಗ್ರಾಮಗಳಿಗೆ ೯೬ ಲೋವರ ಎಲಿಮೆಂಟರಿ ಶಾಲೆಗಳೂ, ತ್ರಿಕರಪುರ, ನೀಲೇಶ್ವರ, ಹೊಸದುರ್ಗ, ಕುಂಬಳೆ, ಮಂಜೇಶ್ವರ ಊರುಗಳಲ್ಲಿ ೮ನೇ ದರ್ಜೆ ವರೆಗಿನ ೫ ಹಾಯರ್ ಎಲಿಮೆಂಟರಿ ಶಾಲೆಗಳೂ, ೫ ಆಸ್ಪತ್ರೆಗಳೂ ಆದವು ತಾಲೂಕು ಬೋರ್ಡಿನ ಸರಹದ್ದಿನೊಳಗಿರುವ ಎಲ್ಲಾ ಶಾಲೆಗಳಲ್ಲಿ ೧ನೇ ದರ್ಜೆಯಿಂದ ೮ನೇ ದರ್ಜೆ ವರೆಗೆ ಶಾಲಾ ಫೀಸು ಮಾಫಿಯಾಯಿತು. ಎಲಿಮೆಂಟರಿ ಶಾಲೆಗಳ ಉಪಾಧ್ಯಾಯರಿಗೆ ಒಳ್ಳೇ ಸ್ಕೇಲಿನಲ್ಲಿ ಸಂಬಳವು ಕೊಡಲ್ಪಟ್ಟಿತು. ಈ ರೀತಿಯಲ್ಲಿ ಬೇರೆ ಎಲ್ಲಾ ತಾಲೂಕು ಬೋರ್ಡುಗಳಿಗಿಂತಲೂ ಹೆಚ್ಚು ಅಭಿವೃದ್ಧಿಯನ್ನು ಹೊಂದಿತು.

ಈಗ ಇದನ್ನ ಒಟ್ಟುಗೂಡಿಸಿದರೆ ಈ ತಾಲೂಕು ಬೋರ್ಡಿಗಾಗಿ ಖರ್ಚಾಗುವ ಹಣದಲ್ಲಿ ಇನ್ನು ಮುಂದೆ ಹೆಚ್ಚಿನ ಹಣವು ಪುತ್ತೂರು ತಾಲೂಕಿಗೆ ವ್ಯಯಮಾಡಲ್ಪಡುವುದು. ಪುತ್ತೂರು ಹೆಡ್‌ಕ್ವಾರ್ಟರಾಗುವದು, ಕಾಸರಗೋಡು ತಾಲೂಕು ಸರಕಾರಕ್ಕೆ ಹೆಚ್ಚು ಕಂದಾಯ ಕೊಟ್ಟು ಏನೂ ಪ್ರಯೋಜನ ಪಡಿಯದೆ ಮೂಲೆಗೆ ಬಿದ್ದಂತಾಗುವುದು. ಈ ಎರಡು ತಾಲೂಕು ಬೋರ್ಡಿನ ವಿಸ್ತೀರ್ಣವನ್ನು ನೋಡಿದರೆ ಪ್ರೆಸಿಡೆಂಟರ ಸರ್ಕೀಟು ಬೆಳಸುವುದು ಅಸಾಧ್ಯವೆ ಆಗಿದೆ. ಯಾಕಂದರೆ ಪುತ್ತೂರು ತಾಲೂಕಿನ ವಿಸ್ತೀರ್ಣವು ೧೨೪೯ ಚದರ ಮೈಲು ಆಗುತ್ತದೆ. ಅಂದರೆ ಸಾಧಾರಣ ಉಡುಪಿ, ಕುಂದಾಪುರ, ಕಾರ್ಕಳ ತಾಲೂಕು ಬೋರ್ಡುಗಳ ವಿಸ್ತೀರ್ಣದಕ್ಕಿಂತ ಸ್ವಲ್ಪ ಮಾತ್ರವೆ ಕಡಿಮೆ ಇದೆ. ಕಾಸರಗೋಡು ತಾಲೂಕಿನ ವಿಸ್ತೀರ್ಣವು ೭೩೨ ಚದರ ಮೈಲುಗಳು ಅಂದರೆ ಮಂಗಳೂರು ತಾಲೂಕು ಬೋರ್ಡು ವಿಸ್ತೀರ್ಣದ ಸಾಧಾರಣ ಎರಡು ಪಾಲಷ್ಟು ಇದೆ. ಜನ ಸಂಖ್ಯೆಯನ್ನು ನೋಡಿದರೆ ಕಾಸರಗೋಡು ತಾಲೂಕಿನ ಜನಸಂಖ್ಯೆಯು ಮಂಗಳೂರು ತಾಲೂಕಿನ ಜನಸಂಖ್ಯೆಯಷ್ಟೆ ಇದೆ. ಕಂದಾಯವನ್ನು ನೋಡಿದರೂ ರೂ. ೪೦೩,೦೭೭ ಇದೆ. ಆದುದರಿಂದ ಬೋರ್ಡುಗಳ ವಿಭಜನೆಯು ಅನಗತ್ಯವಾಗಿದೆ.

ಕಾಸರಗೋಡು ಗ್ರಾಮಸ್ಥ.

ಮೀನು ಮಾರಾಟಕ್ಕೆ ಸ್ಥಳದ ಆವಶ್ಯಕತೆ.

ಅಯ್ಯಾ,

ಪುತ್ತೂರಲ್ಲಿರುವ ಲೋಕಲ್ ಫಂಡ್ ಮಾರ್ಕೇಟಿನಲ್ಲಿ ಮೀನು ಮಾರಾಟ ಮಾಡುವುದರಿಂದ ಅಸಹ್ಯತರದ ದುರ್ವಾಸನೆ ಉಂಟಾಗಿ ಅದರಿಂದ ಜನರ ಆರೋಗ್ಯವು ಕೆಟ್ಟುಹೋಗುವದರಿಂದ ಅಂಥಾ ಮಾರಾಟವನ್ನು ನಿಲ್ಲಿಸಬೇಕಾಗಿ ತಾಲೂಕು ಬೋರ್ಡಿನವರು ನಂ. ೧೯೧೬೨-೩-'೨೩ ನೇ ನಿರ್ಣಯದಲ್ಲಿ ನಿಶ್ಚಯಿಸುವುದರಿಂದ ಮೀನು ಮಾರಾಟವನ್ನು ಸದರಿ ಮಾರ್ಕೇಟಿನಲ್ಲಿಯಾಗಲಿ, ಪುತ್ತೂರು ಕಸಬಾದ ರಸ್ತೆಬದಿಗಳಲ್ಲ್ಯಾಗಲಿ ಮಾಡಕೂಡದೆಂತಲೂ ತಪ್ಪಿನಡೆದವರು ಕ್ರಿಮಿನಲ್ ವ್ಯವಹಾರಕ್ಕೆ ಗುರಿಯಾಗಬೇಕೆಂತಲೂ ತಾಲೂಕು ಬೋರ್ಡಿನವರು ೨೪-೧೨-'೨೪ರ ನೋಟೀಸನ್ನು ಟೌನಿನ ಎಲ್ಲಾ ಭಾಗಗಳಲ್ಲಿ ಅಂಟಿಸಿದನ್ನು ನಾನು ಓದಿನೋಡಿದೆ. ಉಡುಪಿ, ಕುಂದಾಪುರ, ಕಾಸರಗೋಡು ಸಹರುಗಳಲ್ಲಿ ಮೀನು ಮಾರಾಟದ ಬಗ್ಗೆ ತಾಲೂಕು ಬೋರ್ಡಿನವರು ಸ್ಥಳ ನಿಂಗಡಿಸಿ ಕಟ್ಟೋಣವನ್ನು ಕಟ್ಟಿಸಿರುವರು. ಮಂಗಳೂರು ಬಜಾರಿನಲ್ಲಿಯಾದರೂ ಎಲ್ಲಾ ಬಗೆಯ ವ್ಯಾಪಾರಕ್ಕೆ ಒಂದೆ ಮಾರ್ಕೇಟು ಇದ್ದು ಅದರಲ್ಲಿ ಆಯಾಯ ವ್ಯಾಪಾರಕ್ಕಾಗಿ ಪ್ರತ್ಯೇಕಪ್ರತ್ಯೇಕ ಸ್ಥಳ ನಿಂಗಡಿಸಿ ಕೊಟ್ಟಂತೆ ಹಸಿ ಮೀನು ಒಣಮೀನು ಮಾರಾಟಕ್ಕಾಗಿ ಪ್ರತ್ಯೇಕ ಒಂದು ಸ್ಥಳ ನಿಂಗಡಿಸಿ ಕೊಟ್ಟಿರುವರು. ಪುತ್ತೂರಲ್ಲಿ ಬೋರ್ಡಿನವರ ಸರ್ಕೀಲಾರಿನಿಂದ ಹಸಿಮೀನು ಒಣಮೀನು ಮಾರಾಟಕ್ಕೆ ಅನುಕೂಲ ಇಲ್ಲದೆ ಬಡ ಮೀನು ಮಾರಾಟಗಾರರು ಸಂಕಷ್ಟಪಡಿಯಬೇಕಾಗಿದೆ. ಪುತ್ತೂರಲ್ಲಿ ಒಣ ಮೀನು ಅಂಗಡಿಗಳಲ್ಲಿ ಮಾರಾಟ ಮಾಡುವದಾಗ್ಯೂ ಅಪರೂಪವಾಗಿ ಉಪ್ಪು ಹಾಕಿ ತರುವ ಹಸಿ ಮೀನು ಮಾರಾಟಕ್ಕೆ ಉಪಾಯವಿಲ್ಲ! ಅಂಗಡಿಗಳನ್ನು ಬಾಡಿಗೆಗೆ ಪಡೆದು ಮಾರಾಟ ಮಾಡಬಹುದೆಂದರೆ ಉಪ್ಪು ಹಾಕಿದ ಹಸಿಮೀನು ಕಾಯಂ ಆಗಿ ಸಿಕ್ಕುವಂತಿಲ್ಲ. ಅಂಥಾ ಮೀನು ಮಂಜೇಶ್ವರದಿಂದ ತಲೆ ಹೊರೆಗಳಾಗಿಯೆ ತಂದು ಮಾರುವರು. ಇಂಥ ಮೀನಿಗಾಗಿ ಅನೇಕ ಹಳ್ಳಿ ಜನರು ದೂರದಿಂದ ಬರುವರು. ಒಣ ಮೀನು ರಖಂ ವ್ಯಾಪಾರಿಗಳು ಅಂಗಡಿಗಳಲ್ಲಿ ಮಾರುವದರಿಂದ ಅದರ ಬೆಲೆಯು ಒಂದಕ್ಕೆ ಇಮ್ಮಡಿ. ಬಡ ಮಾಪಿಳೆಯು ತಲೆಹೊರೆಯಾಗಿ ಬರುವುದರಿಂದ ಕಮ್ಮಿ ಬೆಲೆಗೂ ಸಿಕ್ಕುತ್ತಿತ್ತು. ತಾಲೂಕು ಬೋರ್ಡಿನವರಿಂದ ಕೊಟ್ಟ ಸರ್ಕೀಲಾರಿನಿಂದ ಇದಕ್ಕೂ ಅನನುಕೂಲ ತಾಲೂಕು ಬೋರ್ಡಿನವರು ಹಸಿಮೀನು ಒಣಮೀನು ಮಾರಾಟಕ್ಕಾಗಿ ತಕ್ಕ ಏರ್ಪಾಡು ಮಾಡಿ ಕೊಡಬೇಕಾಗಿ ವಿನಂತಿ.

ಕ್ರೈಸ್ತ.

ಗ್ರಾಮಕೋರ್ಟು ಆಕ್ಟು ಜಾರಿಗೆ ಗ್ರಾಮಕೋರ್ಟುಗಳಲ್ಲಿ ಆಗಲಿ ಪಂಚಾಯತ ಕೋರ್ಟುಗಳಲ್ಲಿ ಆಗಲಿ ಕಕ್ಷಿಗಾರರು ಸ್ವತಃ ಹಾಜರಾಗದ ಸಂಗತಿಯಲ್ಲಿ ಅವರ ಗುಮಾಸ್ತರನ್ನೊ ಸೇವಕರನ್ನೊ ದಲಾಲರನ್ನೊ ಯಾ ಮುಖ್ತಾಲಿಕರನ್ನೊ ನೇಮಿಸಬಹುದೆಂದು ನಿಬಂಧನೆ. ಅಂಥವರನ್ನು ಕಕ್ಷಿಗಾರರು ಕಳುಹಿಸಿದಾಗ್ಗೆ ಅವರಿಗೆ ಭತ್ತೆಯೊ ಸಂಬಳವೊ ತೆರಲೆ ಬೇಕು. ಯಾವನಾದರೂ ಒಬ್ಬನು ಒಬ್ಬನಿಂದ ಒಂದು ಕೆಲಸ ಮಾಡಿದರೆ ಆತನ ದಿನದ ಸಂಬಳ ತೆರದೆ ನಾಡಲಾರನು. ಆಕ್ಟಿನಲ್ಲಿ ಅಂತವರಿಗೆ ಎಷ್ಟನ್ನು ಕೊಡಬೇಕು ಎಂಬದು ಇದರಲಿಲ್ಲ. ಆಗ್ಗೆ ಕಕ್ಷಿಗಾರರು ಕೊಟ್ಟ ಹಣವೆಂತು ದಂಡವೆ ಸರಿ. ಡಿಸ್ಟ್ರಿಕ್ಟ ಮುನ್ಸಿಫ ಕೋರ್ಟುಗಳಲ್ಲಿ ವ್ಯವಹರಿಸುವ ವಕೀಲರಿಗೆ ಕೊಡತಕ್ಕ ಗುಮಾಸ್ತನ ದರದ ನಿಬಂಧನೆ ಮೊದಲಾದ್ದು ಇರುವದು, ಗ್ರಾಮಕೋರ್ಟು ಮತ್ತು ಪಂಚಾಯತ ಕೋರ್ಟುಗಳಲ್ಲಿ ಕಕ್ಷಿಗಾರರ ಕಡೆಯಿಂದ ವ್ಯವಹರಿಸುವ ಮುಖ್ತಾಲಿಕರಿಗೆ, ಗುಮಾಸ್ತರಿಗೆ, ಸೇವಕರಿಗೆ ಕೊಡುವ ಫೀಸಿನ ದರವನ್ನು ಮಿತಪಡಿಸಿ ಅದನ್ನು ಡಿಕ್ರಿಯಲ್ಲಿ ಸೇರಿಸುವ ಹಾಗೆ ನ್ಯಾಯವಿಧಾಯಕ ಸಭೆಯ ಮೆಂಬರರು ಸಭೆಯಲ್ಲಿ ಚರ್ಚಿಸಿ ಗ್ರಾಮಕೋರ್ಟು ಆಕ್ಟಿನಲ್ಲಿ ತಕ್ಕ ದುರುಸ್ತು ಪಡಿಸುವ ಹಾಗೆ ಏರ್ಪಾಡು ಮಾಡಬಾರದೆ?

ಪುತ್ತೂರು,
ತಾ. ೭-೨-'೨೫ ಕಕ್ಷಿಗಾರ.

— ಪ್ರಕಟಣೆ ಪಟ್ಟಿ. —

ಮಂಗಳೂರು ಡಿವಿಜನಿನಲ್ಲಿ ನೆರೆ ಹಾವಳಿಯಿಂದ ನಷ್ಟ ಸಂಭವಿಸಿದ ಪ್ರಾಂತ್ಯಗಳಲ್ಲಿ ಮುಬಾದಲೆ ಮಾಡುವ ವಿಷಯದಲ್ಲಿ ಈ ಕೆಳಗಿನ ಅನುಜ್ಞೆಗಳು ರೈತರ ಅನುಭವದ ಬಗ್ಗೆ ಪ್ರಕಟಿಸೋಣಾಗುತ್ತವೆ.

ನೆರೆಹಾವಳಿಯಿಂದ ಕಷ್ಟಪಟ್ಟ ರೈತರಲ್ಲಿ ಆದಷ್ಟು ಹೆಚ್ಚಿನ ಜನರಿಗೆ ಶೀಘ್ರವಾದ ಸಹಾಯವು ಸಿಕ್ಕುವ ಉದ್ದೇಶದಿಂದ ಸರಕಾರವು ಮುಬಾದಿಲೆಗಳಿಗೆ ಲಗಾವಾಗುವ ಶರ್ತಗಳನ್ನು ಕೆಳಗೆ ವಿವರಿಸಿದ ಮಟ್ಟಿಗೆ ಸಡಿಲಪಡಿಸಿರುತ್ತಾರೆ.

(೧) ಕಳೆದ ನೆರೆಯಲ್ಲಿ ಸೊತ್ತು ನಷ್ಟಹೊಂದಿದ ಯಾವನೊಬ್ಬ ರೈತಗೆ ಜೀವನೋಪಾಯದ ಉದ್ದಿಶ್ಯಕ್ಕೆ ಆಗಲಿ ಸಾಗುವಳಿ ಉಪಯೋಗದ ಬಗ್ಗೆ ಜಾನುವಾರುಗಳನ್ನು ಯಾ ಬೀಜದ ಧಾನ್ಯಗಳನ್ನು ಕ್ರಯಕ್ಕೆ ಪಡಕೊಳ್ಳುವ ಉದ್ದಿಶ್ಯಕ್ಕೆ ಆಗಲಿ ನೆರೆಯಿಂದ ಹಾಳಾದ ವ ನಾಶವಾದ ಮನೆಯನ್ನು ದುರುಸ್ತಿ ಮಾಡುವ ಯಾ ಹೊಸತಾಗಿ ಕಟ್ಟಿಸುವ ಉದ್ದಿಶ್ಯವಾಗಲೀ ಮೊದಲಿನ ೫ ವರುಷಗಳ ಪರಿಯಂತರ ಪ್ರತಿ ವರ್ಷಕ್ಕೆ ಶೇಕಡಾ ೪ರ ರಿಯಾಯ್ತಿ ಬಡ್ಡಿಯಲ್ಲಿ ತದನಂತರದ ಪ್ರತಿ ವರುಷಗಳಲ್ಲಿ ಶೇಕಡಾ ೬½ ದರದ ಬಡ್ಡಿಯಲ್ಲಿಯೂ ವ್ಯವಸಾಯಗಾರರ ಮುಬಾದಿಲೆಗಳ ಆಕ್ಟಿನ ಮೇರೆಗೆ ಮುಬಾದಿಲೆಗಳು ಕೊಡೋಣಾಗುವವು. ಮೇಲೆ ಕಾಣಿಸಿದ ಉದ್ದಿಶ್ಯಗಳಿಗೆ ಕೊಡೋಣಾಗುವ ಮುಬಾದಿಲೆಯ ಮೊಬಲಗಿನ ಅತ್ಯಧಿಕ ಸಂಖ್ಯೆಯು ಸಾಧಾರಣವಾಗಿ ರೂಪಾಯಿ ೨೫೦ಕ್ಕೆ ಮೀರದಷ್ಟು ಆಗಿರುತ್ತದೆ. ಆದರೆ ವಿಶೇಷವಾದ ಸಂಗತಿಗಳಲ್ಲಿ ಅಂಥಾ ಅತ್ಯಧಿಕ ಸಂಖ್ಯೆಯು ರೂಪಾಯಿ ೫೦೦ರ ವರೆಗೆ ಏರಿಸಲಾಗುವುದು.

(೨) ಕಳೆದ ನೆರೆಯಲ್ಲಿ ಯಾವನೊಬ್ಬ ರೈತನ ಸ್ಥಳಗಳು ಬರೆದುಹೋದ ಸಂಗತಿಯಲ್ಲಿಯೂ ಹೊಗೆ ಮತ್ತು ಕೆಸರಿನಿಂದ ಮುಚ್ಚಲ್ಪಟ್ಟು ಹಾಳಾದ ಸಂಗತಿಯಲ್ಲಿಯೂ ಅಂಥಾ ಸ್ಥಳಗಳನ್ನು ಪುನಃ ಕೊಡಿಸಿಕೊಳ್ಳುವ ಉದ್ದಿಶ್ಯ ಅಥವಾ ಅಂಥ ಹೊಗೆ ಯಾ ಕೆಸರು ತೆಗೆದು ಸ್ಥಳವನ್ನು ಸಾಗ್ವಳಿಗೆ ಯೋಗ್ಯ ಮಾಡುವ ಉದ್ದಿಶ್ಯ ಅಂಥ ರೈತರಿಗೆ ಶುರುವಿನ ಎರಡು ವರುಷಗಳ ಪರಿಯಂತರ ವರುಷ ಒಂದಕ್ಕೆ ಸೇಕಡಾ ೪ರ ದರದ ರಿಯಾಯತಿ ಬಡ್ಡಿಯಲ್ಲಿಯೂ ತದನಂತರದ ಪ್ರತಿ ವರುಷಕ್ಕೆ ಸೇಕಡಾ ೬ರ ರಿಯಾಯತಿ ದರದ ಬಡ್ಡಿಯಲ್ಲಿಯೂ ಜಮೀನು ಅಬಾದಿನ ಮುಬಾದಿಲೆಗಳ ಆಕ್ಟಿನ ಮೇರೆಗೆ ಮುಬಾದಿಲೆಗಳು ಕೊಡೋಣಾಗುವವು. ಈ ಉದ್ದಿಶ್ಯಕ್ಕೆ ಕೊಡೋಣಾಗುವ ಮೊಬಲಗು ಪ್ರತಿಯೊಬ್ಬನ ಸಂಗತಿಗೆ ನಿಜವಾಗಿ ಅವಶ್ಯವೆಂದು ಕಂಡುಬರುವಷ್ಟು ಆಗಿರುವುದು.

(೩) ಮೇಲೆ ನಮೂದಿಸಿದ ರಿಯಾಯತಿ ದರದ ಬಡ್ಡಿಯಲ್ಲಿ ಮುಬಾದಿಲೆ ಅಪೇಕ್ಷಿಸುವ ರೈತರು ತಮ್ಮ ಮುಬಾದಿಲೆ ಅರ್ಜಿಗಳನ್ನು ಮಂಗಳೂರು ಡಿವಿಜನ್ ರೆವೆನ್ಯು ಡಿವಿಜನಲ್ ಆಫೀಸರರ ಮುಂದೆಯಾಗಲಿ ಮಂಗಳೂರು ತಹಸೀಲುದಾರರವರ ಮುಂದೆಯಾಗಲಿ ಬಂಟ್ವಾಳ ಡೆಪ್ಯುಟಿ ತಹಸೀಲುದಾರರವರ ಮುಂದೆಯಾಗಲಿ ತಮ್ಮ ಫಿರ್ಕೆಯ ರೆವೆನ್ಯು ಇನ್ಸ್‌ಪೆಕ್ಟರವರ ಮುಂದೆಯಾಗಲಿ ಇದೇ ತಿಂಗಳ ತಾರೀಕು ೨೮ರ ಒಳಗೆ ದಾಖಲು ಮಾಡತಕ್ಕದೆಂತ ಈ ಮೂಲಕ ಎಲ್ಲಾ ರೈತರಿಗೆ ಆಲೋಚನೆ ಕೊಡೋಣಾಗುತ್ತದೆ. ಸದರಿ ತಾರೀಕಿನನಂತರ ತಲಪಬಹುದಾದ ಅರ್ಜಿಗಳು ಆಲೋಚಿಸೋಣಾಗಲಿಕ್ಕಿಲ್ಲ.

ರಿಯಾಯತಿ ದರದ ಬಡ್ಡಿಯಲ್ಲಿ ಮುಬಾದಿಲೆಗಳನ್ನು ಪಡೆಯುವರೆ ಅರ್ಹರಲ್ಲದ ರೈತರು ವರ್ಷ ೧ರ ಸೇಕಡಾ ೬½ಯ ವಾಡಿಕೆಯ ದರದ ಬಡಿಯಲ್ಲಿ ಮುಬಾದಿಲೆಗಳನ್ನು ಅಪೇಕ್ಷಿಸಿ ಅರ್ಜಿಗಳನ್ನು ಮಾಡಬಹುದೆಂತ ಈ ಮೂಲಕ ಪ್ರಕಟಿಸೋಣಾಗುತ್ತದೆ.

Sd/ L. E. HURTIS,
Rev. Divl Officer.

ಪ್ರಕಟಣೆ.

ಮಂಗಳೂರು ತಾಲೂಕು ಕೊಂಗ್ರೆಸ್ ಕಮಿಟಿಯ ೧೯೨೫ನೇ ಇಸವಿಯ ಪ್ರಥಮ ಮಹಾಸಭೆಯು ತಾ. ೨೮ನೇ ಫೆಬ್ರವರಿ ಶನಿವಾರ ಅಪರಾಹ್ನ ಘಂಟೆ ೪ಕ್ಕೆ ಮಂಗಳೂರಲ್ಲಿ ಕರ್ನಾಟಕ ತಿಲಕ ಮಹಾವಿದ್ಯಾಲಯದಲ್ಲಿ ಜರಗುವದು. ವಿಶೇಷ ಸಂಗತಿಗಳು ಆಲೋಚಿಸಲಿಕ್ಕೆ ಇರುವುದರಿಂದ ಸದಸ್ಯರೆಲ್ಲರೂ (ಕಳೆದ ವರ್ಷ ೪ ಆಣೆ ವರ್ಗಣಿ ಕೊಟ್ಟು ಸದಸ್ಯರಾದವರು ವ ಈ ವರ್ಷ ವಾರ್ಷಿಕ ವರ್ಗಣಿ ೨೦,೦೦೦ ಗಜ ಯಾ ಅದರ ಪ್ರಥಮ ಕಂತು ೨೦೦೦ ಗಜಕ್ಕೆ ಕಮ್ಮಿಯಾಗದಷ್ಟು ಕೈನೂಲನ್ನು ಕೊಟ್ಟು ಸದಸ್ಯರಾದವರು) ತಪ್ಪದೆ ಬರಬೇಕಾಗಿ ವಿನಂತಿ.

ಬರುವಾಗ ತಮ್ಮ ರಶೀದಿಗಳನ್ನು ತರತಕ್ಕದ್ದು. ನಮ್ಮ ರಿಜಿಸ್ಟ್ರಿಯಲ್ಲಿ ಹೆಸರು ಇಲ್ಲದೆ ಇದ್ದು ರಶೀದಿಯನ್ನು ಕೂಡಾ ತೋರಿಸದೆ ಇರುವವರಿಗೆ ಪ್ರವೇಶ ಸಿಕ್ಕಲಾರದು.

ಏನಾದರೂ ಪ್ರಶ್ನೆಗಳನ್ನು ಕೇಳಲಿಕ್ಕೆ ಇರುವವರು ಸಭೆಯ ಇತ್ಯರ್ಥದ ಬಗ್ಗೆ ತಮ್ಮ ಸೂಚನೆಗಳನ್ನು ತರಲಿಕ್ಕೆ ಇರುವ ಸದಸ್ಯರು ತಮ್ಮ ಪ್ರಶ್ನೆಗಳ ಯಾ ಸೂಚನೆಗಳ ಯಥಾಪ್ರತಿಗಳನ್ನು ಇದೇ ತಿಂಗಳ ತಾ. ೧೯ನೇ ಅಪರಾಹ್ನ ಗಂಟೆ ೫ರ ಒಳಗೆ ಈ ಕಚೇರಿಗೆ ತಲ್ಪುವ ಹಾಗೆ ಮಾಡತಕ್ಕದ್ದು. ಹಾಗೆ ಸಮಯಕ್ಕೆ ತಲ್ಪದ ಪ್ರಶ್ನೆಗಳಿಗೆ ಯಾ ಸೂಚನೆಗಳಿಗೆ ಯೋಗ್ಯವಾದ ಗಮನ ಕೊಡಲಾಗದು.

ಪ್ರಸ್ತುತ ಕಚೇರಿ ಸ್ಥಳ ಮಂಗಳೂರು ಕರ್ನಾಟಕ ತಿಲಕ ವಿದ್ಯಾಲಯದಲ್ಲಿ; ಸಮಯ: ಆದಿತ್ಯವಾರ ಮತ್ತು ಇತರ ರಜಾ ದಿನಗಳು ಹೊರತು ಪೂರ್ವಾಹ್ನ ಗಂಟೆ ೧೦ರಿಂದ ೧೨ರ ವರೆಗೆ, ಅಪರಾಹ್ನ ಗಂಟೆ ೩ರಿಂದ ೫ರ ವರೆಗೆ.

ವಿಷಯ ಸೂಚಿ.

೧. ೧೯೨೪ನೇ ಇಸವಿಯ ಜಮಾ ಖರ್ಚಿನ ಪಟ್ಟಿ ಮತ್ತು ಆ ವರುಷದ ಅಖೈರಿನ ಸಾಲ ಮೂಲದ ಪಟ್ಟಿ ವ ಕಳೆದ ವರುಷದ ಬಗ್ಗೆ ಮಂಜೂರಾದ ಜಮಾ ಖರ್ಚಿನ ಪಟ್ಟಿಯಲ್ಲಿ ಅಡಗದೆ ಇರುವ ಖರ್ಚಿನ ಮಂಜೂರಾತಿ, ವ ಕಳೆದ ವರ್ಷದ ಕೆಲಸದ ವರದಿ.

೨ ೧೯೨೫ನೇ ಇಸವಿಯ ಅಂದಾಜು ಜಮಾ ಖರ್ಚಿನ ಪಟ್ಟಿಯ ಮಂಜೂರಾತಿ.

೩ ನಿಯಮಗಳ ಬದಲಾವಣೆ ವ ತಕ್ಕ ಕಾಲದಲ್ಲಿ ಬಂದ ಸೂಚನೆಗಳ ಮಂಜೂರಾತಿ ವ ಪ್ರಶ್ನೆಗಳಿಗೆ ಉತ್ತರ.

೪ ಈ ವರ್ಷದ ತಾ. ೨೫-೨-೨೫ರ ವರೆಗಿನ ಕೆಲಸದ ವರದಿ ವ ಇನ್ನು ಮುಂದೆ ಈ ವರ್ಷ ನಾವು ಮಾಡಲಿಕ್ಕಿರುವ ಕೆಲಸ.

೫ ಜಿಲ್ಲಾ ಕಮಿಟಿಗೆ ಪ್ರತಿನಿಧಿಗಳ ವ ತಾಲೂಕು ಕಮಿಟಿಯ ಕಾರ್ಯಕಾರಿ ಮಂಡಲಿಯ ಸದಸ್ಯರ ವ ಇತರ ಉದ್ಯೋಗಸ್ಥರ ವಾರ್ಷಿಕ ಚುನಾವಣೆ.

೬ ಅಧ್ಯಕ್ಷರ ಅನುಮತಿಯಿಂದ ಸಭೆಯ ಮುಂದೆ ಬರಬಹುದಾದ ಇತರ ಜರೂರು ವಿಷಯಗಳು.

ವಿ. ಸೂ.—ವಿಷಯ ಸೂಚಿಯ ೩ನೇ ಸಂಖ್ಯೆಯಲ್ಲಿ ಕಾಣುವ ನಿಯಮಗಳ ಬದಲಾವಣೆಯನ್ನು ವ ಸೂಚನೆಗಳನ್ನು ವ ಪ್ರಶ್ನೆಗಳನ್ನು ಕಚೇರಿಯ ಪ್ರಕಟಣೆಯ ಹಲಗೆಯ ಮೇಲೆ ತಾರೀಕು ೨೦-೨-'೨೫ನೇ ಪೂರ್ವಾಹ್ನ ಗಂಟೆ ೧೦ಕ್ಕೆ ಪ್ರಕಟಿಸಲಾದೀತು, ವ ಸಾಧ್ಯವಿದ್ದಷ್ಟು ಮಟ್ಟಿಗೆ ಸ್ಥಳೀಕ ಪತ್ರಗಳಲ್ಲಿಯೂ ಕಾಣಿಸಲಾದೀತು. ಪ್ರಶ್ನೆಗಳಿಗೆ ಉತ್ತರಗಳಿರುವ ಪ್ರತ್ಯೇಕ ಪುಸ್ತಕವು ತಾ. ೨೪ನೇ ದಿವಸದಿಂದ ಸಭೆಯ ವರೆಗೆ ಕಚೇರಿಯ ಮೇಜಿಯ ಮೇಲೆ ಸದಸ್ಯರಿಗೋಸ್ಕರ ಇಡಲ್ಪಡುವುದು.

ಉಪಪ್ರಶ್ನೆಗಳು ಇದ್ದರೆ ತಾ. ೨೫ನೇ ಸಾಯಂಕಾಲ ೫ ಘಂಟೆಯ ಒಳಗೆ ಕಚೇರಿಗೆ ತಲ್ಪಿಸಿದರೆ ತಾ. ೨೭ನೇ ಪೂರ್ವಾಹ್ನ ೧೦ ಘಂಟೆಯಿಂದ ಅವುಗಳಿಗೆ ಉತ್ತರಗಳು ಸದರಿ ಪುಸ್ತಕದಲ್ಲಿ ಬರೆದಿಡಲ್ಪಡುವವು.

ಮ. ತಾ. ಕಾ. ಕ. ಕಚೇರಿ,
ತಾ. ೧೨-೨-'೨೫.

ಅ. ಭೋಜರಾಯ,
ಕಾರ್ಯದರ್ಶಿಯರ ಚಾರ್ಜಿನಲ್ಲಿ ಕೂಡಾ ಇರುವವ, ಅಧ್ಯಕ್ಷ.

ಶಾರದೆ.

(ಸದಾ। ಇದುವೇ। ಆನಂದ) ಎಂಬಂತೆ.

ಕಲಾ। ಲಲಿತೆ। ವಾಗ್ವನಿತೆ। ನಮಸ್ತೆ। ನಮಂತು
ಸೌಖ್ಯದಾತೆ। ಸರಸ್ವತೀ ವಿಧಾತೆ॥ ಪ॥
ಕವಿಜನಾಶ್ರಿತೆ। ಭುವನ ನಂದಿತೆ। ಜಯ। ಭವನ ವಾಸಿತೆ।
ದಯಾ। ಕವಚ ರಂಜಿತೆ। ನಿತ್ಯ ಖ್ಯಾತೆ॥ ೧॥
ಶ್ರೀ ಶುಭಂಕರಿ। ದಾಸ ಶ್ರೀಕರೆ। ವಿಧು। ಹಾಸೆ, ಭಾಸುರೆ।
ವಿಧಿ। ತೋಷ ಮಂದಿರೆ। ಗುಣಾಧಾರೆ॥ ೨॥
ವೀಣಾಧಾರಿಣಿ। ಗಾನವಿನೋದಿನಿ। ಸುರ। ಮಾನಿನೀ ಮಣಿ।
ಸರ। ಸಾನುರಾಗಿಣಿ। ಮಧುರವಾಣಿ॥ ೩॥
ಮತಿವಿಕಾಸಿತೆ। ಪ್ರತಿಭಾಸಂಯುತೆ। ಸದಾ। ಶ್ರುತಿವಿಲಾಸಿತೆ।
ಜಿದ। ಪೀತನುತೆ, ಧೃತೆ। ಪುಣ್ಯಮಾತೆ॥ ೪॥

NOTICE.

Sealed tenders in duplicate will be received up to 10 A. M. on Tuesday the 17th February 1925 by the District Medical officer South Kanara Mangalore for the articles of diet and other hospital accessaries for the Govt. Head Quarter and women and Children's Hospitals Mangalore for one year from 1st April '25 to 31st March 1926.

For full particulars apply to—
The District Medical officer, S. K.

ಆರೋಗ್ಯ ಚಂದ್ರಿಕೆ.

ಮದ್ರಾಸ್.

ಸಂಪಾದಕರು: ಡಾಕ್ಟರ್ ಯು. ರಾಮರಾವ್, ಎಲ್. ಎಮ್. ಸಿ. ಎಫ್. ಎಮ್. ಯು. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವುದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ.

ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ

ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವುವು.

'ಹೆಲ್ತ್' ಎಂಬ ನಮ್ಮ ಇಂಗ್ಲಿಷ್ ಮಾಸಪತ್ರಿಕೆಯನ್ನೋದಿ ಸಂತೋಷಿಸಿದ ಅನೇಕ ದೊಡ್ಡ ಮನುಷ್ಯರ ಪ್ರೋತ್ಸಾಹದ ಮೇಲೆ ಈ ಕನ್ನಡ ಪತ್ರಿಕೆಯನ್ನು ಹೊರಡಿಸಿದೆ.

ಅದರ ಸಂಪುಟ ೨ ಮತ್ತು ೧೦ನೇಯ ನವಂಬರ ೧೯೨೪ ಸಂಚಿಕೆಯಲ್ಲಿ ಕಾಣಿಸಿರುವ ವಿಷಯಗಳು.

ಮುಖಚಿತ್ರ:—ವರ್ತಕದಾಸಿಯಾದ ಒಬ್ಬ ರೂಪವತಿ.
ಶ್ವಾಸಕ್ರಮ ಅಥವಾ ಪ್ರಾಣಾಯಾಮ.
ಹುಣಿಸೇಹಣ್ಣಿನ ಆಹಾರಗುಣಗಳು ಮತ್ತು ಔಷಧಗುಣಗಳು.
ಕಾಲುನಡೆಯೇ ಉತ್ತಮವಾದ ವ್ಯಾಯಾಮವು
ಜೇನಿನಲ್ಲಿರುವ ಗುಣಗಳು.
ಹಲ್ಲುಗಳ ರಚನೆ, ಪ್ರಯೋಜನ, ಕೆಲಸ ಮುಂತಾದವು.
ಮದದ್ರವ್ಯಗಳಿಂದ ಆರೋಗ್ಯಕ್ಕೆ ಉಂಟಾಗತಕ್ಕ ಹಾನಿ.
ಅಂಗಸಾಧನೆ ಮತ್ತು ಬುದ್ಧಿವ್ಯವಸಾಯ (ವಿದ್ಯಾಭ್ಯಾಸ)
ಗಾಯಗಳು, ಮತ್ತು ಉಳುಕು ಮುಂತಾದವು, ಅವುಗಳ ಚಿಕಿತ್ಸೆ
ನವನಾಗರಿಕ ಪ್ರಪಂಚಕ್ಕೆ ಸಹಜವಾದ ಮೂರು ಕೆಡುಕುಗಳು.
ಒಬ್ಬ ಉಪವಾಸಿಯ ಅನುಭವ.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವುವು. ಆರೋಗ್ಯಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ ರೂ. ೧—೮—೦; ಬಿಡುಪತ್ರಿಕೆ ಒಂದಕ್ಕೆ ರೂ. ೦—೨—೦ ಹಿಂದಿನ ಸಂಚಿಕೆಗಳು ಕೂಡ ದೊರಿಯುವವು.

ಚಂದಾದಾರರಾಗುವವರು ವಿ. ಪಿ. ಮೂಲಕವಾಗಿ ತರಿಸಿಕೊಳ್ಳುವುದಕ್ಕಿಂತಲೂ ಹಣವನ್ನು ಮುಂಗಡವಾಗಿ ಕಳುಹಿಸುವುದು ಲಾಭಕರ. ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು 'ಆರೋಗ್ಯ ಚಂದ್ರಿಕೆ'ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು.

ಪತ್ರವ್ಯವಹಾರಕ್ಕೆ: 'ಆರೋಗ್ಯ ಚಂದ್ರಿಕೆ'
೩೭೩ ತಂಬುಚೆಟ್ಟಿ ಬೀದಿ, ಮದ್ರಾಸ್

ತುಳು ಪಾಡ್ದನಗಳು.

ಬೊಬ್ಬರ್ಯ, ಕಲ್ಲುರ್ಟಿ-ಕಲ್ಕುಡ, ದೈಯ್ಯೊಂಗುಳು—ತೋಡಕಿನಾರ್, ಮುಂಡತ್ತಾಯ ಪ್ರತಿ ಒಂದಕ್ಕೆ 2 ಆಣೆ. 11½ ಆಣೆ ಟಪ್ಪಾಲು ಚೀಟು ಕಳಹಿಸಿದರೆ 5 ಪುಸ್ತಕಗಳು ಕೂಡಲೇ ಕಳುಹಿಸಲ್ಪಡುವವು.

ವಿಳಾಸ: ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

The Canara Bank, Limited, Magalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.	1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟ, ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
Reserve and other sinking Funds „ 259,000—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು „ 259,000—0—0

THE BANK RECEIVES FIXED, CURRENT ACCOUNT, & SAVINGS BANK DEPOSITS
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳೂ, ಪಡಕೊಳ್ಳೋಣಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಯವರಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1925.

K. Venkat Rao,
Secretary.

ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಿಗಳಲ್ಲಿ ಒಂದಾದ,
ಲೋಕಾಮಯ ಹರ ಕಸ್ತೂರಿ ಮಾತ್ರೆಯನು, ಇಂದೇ ತಾವು ತರಿಸಿಕೊಳ್ಳಿರಿ! ಏಕೆಂದರೆ,

ಲೋಕಾಮಯಹರ ಕಸ್ತೂರಿ ಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ ಅದು ಹೇಗೆಂದರೆ? ಈ ಮಾತ್ರೆಗಳಲ್ಲಿ ಒಂದೆರಡನ್ನು ಕಾಲೋಚಿತವಾಗಿ ಹಾಗೆಯೇ ಅಥವಾ [illegible] ಯಾವ ಕಾಲದಲ್ಲಿಯೂ ರುಜೆಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಅತ್ಯೇಷಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲ ಕೂಸುಗಳು ಮೊದಲುಗೊಂಡು ಮುದುಕರ ವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣಗೊಳಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟ ಹವಾ, ಕೊಳಕಾದ ನೀರುಗಳಿಂದ ಯಾವ ತೆರದ ಉಪದ್ರವೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ಬೇದಿ, ಕೆಮ್ಮಲು, ಶೀತ, ಶೀತವಾತ, ಮೂತ್ರಕೃಚ್ಛ್ರ, ಆಹಾರವು ಜೀರ್ಣವಾಗದೆ ಬರುವ ತಲೆನೋವು. ಕರುಳಿನ ಬೇನೆ, ಜ್ವರ, ಚಳಿಜ್ವರ ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಅನೇಕ [illegible] ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ ಎಕ್ಕಿ, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು

ವ್ಯಾಧಿಗಳನ್ನು [illegible] ವ್ಯಾಧಿಗಳಿಗೂ [illegible] ಈ ಮಾತ್ರೆಗಳು ಸಂಜೀವ [illegible] ಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯ ಮೇಲೂ ಇರುವ ರಜಿಸ್ಟ್ರರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ 250ರಿಂದ 300 ಮಾತ್ರೆಗಳ ವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.
ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1—4—0, 12 ಸೀಸೆಗಳಿಗೆ 2—7—0, 25 ಸೀಸೆಗಳಿಗೆ 4—10—0
ಪೋಸ್ಟೇಜು ಬೇರೆ. ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತದೆ.

ಏಜಂಟ್
ಮಂಗಳೂರು ಟವನಿಗೆ ಮಾತ್ರ.
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ.

ವಿಳಾಸ:— ಪಾಳ್ಯದ ವೆಂಕಟಾಚಲ ಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ವಿದ್ಯಾವಾಚಸ್ಪತಿ
ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ

"ಸಂಕ್ಷೇಪಗೀತೆ"

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ, ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದೆ ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೦. ಟಪ್ಪಾಲು ಖರ್ಚು ಕೂಡಿ ಆಣೆ ೧೧ನ್ನು ಮನಿಯಾರ್ಡರು ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ೨ರಕ್ಕಿಂತ ಜಾಸಿ ಖರ್ಚು ತಗಲುವುದು. ರಖಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು

ಪುಸ್ತಕ ದೊರಿಯುವ ವಿಳಾಸ:—
ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು. ಮತ್ತು
ಕೆನರಿಸ್ ಮಿಶನ್ ಬುಕ್ ಎಂಡ್ ಟ್ರೆಕ್ಟ ಡಿಪೋಜಿಟರಿ,
ಮಂಗಳೂರು.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು, ಶ್ರೀಕಾಶೀ, ಗಯಾ, ಪ್ರಯಾಗ, ಹರಿದ್ವಾರ ಬದರಿನಾರಾಯಣ ದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರ ಕಡೆಯಿಂದ ಅನುಭವ ತೆಗೆದು ಪ್ರತಿವಂದು ಸಿದ್ಧಮಾಡಿಕೊಂಡು ಬರೆದಿರುವರು. ೧ನೇದು ಮಂತ್ರಪ್ರಕರಣದಲ್ಲಿ ಮಂತ್ರ ಜಪದಿಂದಲೂ, ಮಂತ್ರಪ್ರಯೋಗದಿಂದಲೂ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವೂ ಇದೆ. ೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ, ಆಸನದಡಿಯಲ್ಲಿ ರೂಪಾಯಿಗಳು ತೋರುವಿಕೆ, ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ. ೩ನೇದು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನು ಅನುಭವ ತೆಗೆದುಕೊಂಡು ತಿಳಿಸಿರುವರು ೪ನೇದು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು ಮತ್ತು ಧಾತುಗಳ ಭಸ್ಮ ಸಹ, ಇದರಲ್ಲಿ ಉಂಟು. ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷದ ಮಾಡುವ ಕ್ರಮವನು ಚೆನ್ನಾಗಿ ಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಳಾಸವು ತಿಳಿಸಿರುವರು. ೫ನೇದು ಯಂತ್ರ ಪ್ರಕರಣದಲ್ಲಿ ವಶೀಕರಣ ಗೃಹಪೀಡಾ ನಿವಾರಣ ಭೂತಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು, ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರದಿರುವರು. ಈ ಗ್ರಂಥವು ಹತ್ತರ ಇದ್ದ ಬಳಿಕ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವೂ ವೈದ್ಯರೂ ಜೋತಿಷ್ಯರು, ಮಾಂತ್ರಿಕರು ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥ ಗ್ರಂಥವು ಯಾರು ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿಯವರು ತರಿಸಿ ನೋಡಬೇಕೆಂದು ಇದರ ಬೆಲೆ ಬಹಳ ಕಡಿಮೆಮಾಡಿ ಇರುವದು. ೨—೮—೦ ಟಪ್ಪಾಲು ಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ ನಾಟಕ ಕಾವ್ಯ, ಕಥೆಗಳು, ಯಕ್ಷಗಾನ, ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ:—
ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ

ಉಚಿತ! ಬಿಟ್ಟಿ!! ಪುಗಸಟ್ಟೆ!!!

ವೈದ್ಯವಿದ್ಯ
PROPRIETOR RAJVAIDYA NARAYANJI KESHAVJI
NO PRICE NO POSTAGE.

ಎಂಬ ಈ ಪುಸ್ತಕದಲ್ಲಿ ಆಯುರ್ವೇದ ಶಾಸ್ತ್ರದಲ್ಲಿ ಸ್ತ್ರೀಪುರುಷರು ಆರೋಗ್ಯದೃಢಕಾಯರಾಗಿ ಆರೋಗ್ಯದಿಂದ ಕೂಡಿದ ಸಂತಾನಗಳನ್ನು ಪಡೆದು ಸತಿಪತಿಯರು ಅನ್ಯೋನ್ಯವಾಗಿ ಅನುರಾಗವುಳ್ಳವರಾಗಿ ಸುಖದಿಂದಲೂ ಸಂತೋಷದಿಂದಲೂ ಸಂಸಾರಯಾತ್ರೆಯನ್ನು ಮಾಡಲು ಅತ್ಯಂತ ಉಪಯುಕ್ತವಾದ ವಿಷಯಗಳು ಅಲ್ಲಲ್ಲಿ ಹೇಳಲ್ಪಟ್ಟಿರುವುದನ್ನು ಒಂದಾಗಿ ಕ್ರೋಡೀಕರಿಸಿ ಅಜ್ಞಾನದಿಂದಲೂ ಸಂಕಷ್ಟದಿಂದಲೂ ನರಳುತ್ತಿರುವ ಸಂಸಾರಿಗಳನ್ನುದ್ಧಾರಮಾಡುವ ಸಲುವಾಗಿ ಈ ಪುಸ್ತಕವನ್ನು ಕ್ರಯವೂ ಅಂಚೆ ಹಾಸಲೂ ಇಲ್ಲದೆ ಬೇಡಿದವರಿಗೆ ಸರ್ವತ್ರ ಉಚಿತವಾಗಿ ಕಳುಹಿಸುತ್ತೇವೆ. ಹೆಚ್ಚು ಮಾಹಿತಿಗೆ ಪತ್ರ ಬರೆಯಿರಿ.

ರಾಜವೈದ್ಯ ನಾರಾಯಣಜಿ ಕೇಶವಜಿ,
49, ಬಂದರ್ ಸ್ಟ್ರೀಟ್, ಜಿ. ಟಿ. ಮದ್ರಾಸ್

—Just Arrived **Fresh Consignment**

OF

Best English Cycles.



REDUCTION IN PRICES.

Ranger Cycles Model M. Made in Birmingham.

WITH DUNLOP OR BATES TYRES & TUBES ... @ Rs. 90—0—0

Barton Humber on Advance

WITH DUNLOP OR BATES TYRES & TUBES ... @ „ 100—0—0

Senior Royal with B. S. A. Fitting.

WITH DUNLOP OR BATES TYRES & TUBES ... ...@ Rs. 145—0—0

Royal Saxon with B. S. A. Fitting.

WITH DUNLOP OR BATES TYRES & TUBES ... ... @ Rs. 175—0—0

All the above Cycles include pump and tools.

BROOKES PATEERN 90/2 GERMAN SADDLE ... ...@ „ 9—8—0
„ SADDLE 90/2 „ ... ..@ „ 21—0—0
„ „ B/30 „ ... ...@ „ 26—0—0

For further particulars please write to us or call on us:—

All kinds of Cycle Accessories, Dunlop and German Tyres and Tubes
ARE AVAILABLE AT VERY CHEAP RATES.

Special Discount to Traders. *Easy Terms Arranged.*

APPLY TO:—**The Mangalore Trading Association,**
Wholesale Dealers in Cycles and Cycle Accessories,
Car-Street, MANGALORE

—ಗೋಡೆಗೆ ತಗಲಿಸುವ
ಹೊಸ ನಮೂನೆಯ—

ಟಿಕ್—ಟಾಕ್

ಎಂಬ ಈ ಗಡಿಯಾರಗಳು ಜರ್ಮನೀ ದೇಶದಲ್ಲಿ ತಯಾರಿಸಿದ್ದು. ಇವು ಕರಾರು ಘಂಟೆಯನ್ನು ತೋರಿಸುವವು. ಇವಕ್ಕೆ ಬೀಗ ಕೊಡಬೇಕಾದಿಲ್ಲ. ಇದರಲ್ಲಿ ಲಾಂಬುತ್ತಿರುವ ಗುಂಡನ್ನು ಮೇಲಕ್ಕೆ ಎಳೆದರೆ ಸಾಕು. ತನ್ನಷ್ಟಕ್ಕೆ ತಾನೇ ಟಿಕ್—ಟಾಕ್ ಎಂಬ ಶಬ್ದವನ್ನು ಮಾಡುತ್ತಾ ಸರಿಯಾದ ಕಾಲವನ್ನು ತೋರಿಸುವದು. ಇದು ನೋಡುವುದಕೆ ಬಹು ಲಕ್ಷಣವಾಗಿರುವುದು.

ಕ್ರಯ 1ಕ್ಕೆ ರೂ. 3—0—0

ಪೀಟರ್ ವಾಚ್ ಕಂಪೆನಿ
ಪೋಸ್ಟ್ ಬಾಕ್ಸ್ ನಂ. 27, ಮದ್ರಾಸ್.

ADVERTISE IN

The Business Directory
OF INDIA, BURMA & CEYLON

A Comprehensive Directory of the various Business-men, Exporters and Importers, Firms, Factories, Mills, Manufacturers, Merchants and Industries of the principal Cities, Ports and Towns of India, Burma and Ceylon.

PUBLISHED ANNUALLY
Rates for Advertisements

¼ Page	Rs.	50.
2 in. Single Column	„	20.
1 in. Single Column	„	15.
Name in Bold Types	„	5.

Price per Copy Rs. 10.

PRINTERS & PUBLISHERS.
Business Directory Co.,
Kanara Press Buildings, MADRAS. E.
Telegrams: "KETHAKI" Phone 540

ದಕ್ಷಿಣ ಕನ್ನಡ ಜಿಲ್ಲೆಯ

ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

JUST ARRIVED

Goodrich Belts.

OF VARIOUS SIZES
Price Re. 1—12—0 each

Mangalore Trading Association,
Car Street, MANGALORE.

ಸಾರಸ್ವತ.

ಕನ್ನಡ ಮತ್ತು ಕೊಂಕಣಿ ಭಾಷೆಗಳಲ್ಲಿ ಕಳೆದ ವಿಜಯ ದಶಮಿಯ ದಿನದಿಂದ ಪ್ರತಿ ದಶಮಿಗೆ ಹೊರಡುವ ಪತ್ರಿಕೆ.

ವಿ. ಎಸ್. ಕಾಮತ್,
ಮುಲ್ಕಿ, ವಾಮನ ಕುಡುವ } ಸಂಪಾದಕರು.

ಮಠಸಂಸ್ಥೆ ಮತ್ತು ಸಮಾಜಕ್ಕೆ ಸಂಬಂಧಪಟ್ಟ ಇತರ ಸಂಸ್ಥೆಗಳ ಸುಸಂಘಟನ.

ಸಮಾಜದೊಳಗೆ ಅನ್ಯೋನ್ಯ ಸಾಧನೆ.

ಸ್ತ್ರೀಸಮಾಜಕ್ಕೆ ಉಪಯುಕ್ತವಾದ ವಿಷಯಗಳ ನಿರೂಪಣ.

ಮತಭಾವನೆಗಳ ಉಜ್ಜೀವನ ಇತ್ಯಾದಿ ಉದ್ದೇಶಗಳಿಂದ ಈ ಪತ್ರಿಕೆಯು ಹೊರಡಿಸಲ್ಪಡುವುದು. ಸಾರಸ್ವತ ಸಮಾಜವು ಇದಕ್ಕೆ ಪ್ರೋತ್ಸಾಹವನ್ನೀಯಬೇಕಾಗಿ ಪ್ರಾರ್ಥನೆ.

ಚಂದಾಹಣ ಅಂಚೆವೆಚ್ಚ ಕೂಡಾ ರೂ. ೧—೪—೦. ಪೋಷಕರು ರೂ. ೧೦—೦—೦. ಸಹಾಯಕರು ರೂ. ೫—೦—೦. ಮಾದರಿ ಸಂಚಿಕೆಯನ್ನು ಟಪ್ಪಾಲು ಖರ್ಚಿಗಾಗಿ ಅರ್ಧಾಣೆ ಸ್ಟಾಂಪು ಕಳುಹಿಸುವವರಿಗೆ ಉಚಿತವಾಗಿ ಕಳುಹಿಸುವೆವು.

ಕನ್ನಡ ನಾಡಿನಲ್ಲಿ ಪ್ರತಿ ಕಡೆಯಲ್ಲಿಯೂ
ಬಾತಮಿದಾರರು ಬೇಕು.

ಎಲ್ಲಾ ಪತ್ರವ್ಯವಹಾರಗಳನ್ನು ಕೆಳಗಿನ ವಿಳಾಸಕ್ಕೆ ನಡೆಸಬೇಕು.

ಯು. ನಾರಾಯಣನಾಯ್ಕ, ಕಾರ್ಯದರ್ಶಿ,
ಸಾರಸ್ವತ, ಉಡುಪಿ.

ಆರ್. ಮಾರ್ಟಿನ್ನರ

ಜ್ವರದ ಗುಳಿಗೆಗಳು.

ಸುಲಭ ಸ್ವೇದನಕಾರಿಯಾದ ಈ ಘುಟಿಕೆಗಳು ಚಳಿಜ್ವರದ ವಿಷದಾರ್ಥಗಳನ್ನು ತಟ್ಟನೆ ನಿರ್ಮೂಲಪಡಿಸಿ, ವ್ರಣಗಳನ್ನು ಸಂಪೂರ್ಣ ನಾಶಪಡಿಸಿ, ಮಲೇರಿಯಾ ಜ್ವರ, ಚಳಿಜ್ವರ, ಛಾರಿಜ್ವರ, ಮತ್ತು ಆಗಾಗ್ಗೆ ಬಿಟ್ಟುಕೊಂಡು ಬರುವ ಇತರ ಜ್ವರಗಳ ಬಾಧೆಯಿಂದ ಗುಣಪಡಿಸುವವು.

ತಟ್ಟನೆ ವಾಸಿಪಡಿಸುವುದಕ್ಕೆ ಹತ್ತಾರುಗಳಲ್ಲಿ ಪ್ರಸಿದ್ಧತೆಯನ್ನು ಹೊಂದಿದ್ದು, ಅತಿ ಬಿಟ್ಟುಬಿಟ್ಟ ಅನೇಕ ಸಂದರ್ಭಗಳಲ್ಲಿ ಗುಣಪಡಿಸಿದವುಗಳಾಗಿರುತ್ತವೆ.

ಇವುಗಳು ಗಿರಣಿಗಳಲ್ಲಿಯೂ ಕಾರ್ಖಾನೆಗಳಲ್ಲಿಯೂ ವಿಶೇಷವಾಗಿ ಉಪಯೋಗಿಸಲ್ಪಡುವುದು. ಸಾಮಾನ್ಯವಾಗಿ ಹಿಂದುಸ್ಥಾನದಲ್ಲಿ ಎಲ್ಲಾ ತೋಟಗಾರರಿಂದ ಉಪಯೋಗಿಸಲ್ಪಡುವುದು. ಅಲ್ಲದೆ ದಿಂಗತ ವಿಶ್ರಾಂತವಾದ ಕೀರ್ತಿಯನ್ನು ಕೂಡ ಸಂಪಾದಿಸಿರುವುದು. ಕಠಿಣ ಜ್ವರವು ತಟ್ಟನೆ ಇಳಿಯಬೇಕಾದರೆ ಆರ್ ಮಾರ್ಟಿನರ ಎಗ್ಯೂ ಮಿಕ್ಶರ್ ಒಡನೆ ಇದನು ಸೇವಿಸಬೇಕು. ಈ ಇವೆರಡು ಅದ್ಭುತ ಶಕ್ತಿಯುಳ್ಳ ಔಷಧಿಗಳು ಪ್ರತಿಯೊಂದು ಕುಟುಂಬದ ಮನೆಯಲಿಟ್ಟುಕೊಳ್ಳಲು ಯೋಗ್ಯ ವಸ್ತುಗಳಾಗಿವೆ. ಪ್ರತಿಯೊಂದು ಬಾಟ್ಲಿಯಲ್ಲಿ 40 ಮಾತ್ರೆಗಳು ಇರುವುವು.

ಬಾಟ್ಲಿ 1ಕ್ಕೆ ರೂ. 1—8—0.

ಆರ್. ಮಾರ್ಟಿನ್ನರ ಎಗ್ಯೂಮಿಕ್ಶರ್.

ಇದು ಜ್ವರ, ಶೀತಜ್ವರ ಮಲೇರಿಯಾ, ಛಾರಿಜ್ವರ, ಸನ್ನಿಪಾತ ಪಟ್ಟಿ ವಾಯುವಿನಿಂದುಂಟಾದ ರೋಗ ಇವೇ ಮೊದಲಾದ ಎಲ್ಲಾ ತರದ ಜ್ವರಗಳನ್ನೂ ಕೂಡಲೇ ನಾಶಮಾಡುತ್ತದೆ. ಎಲುಬುಗಳಲ್ಲಿ ಹರಡಿಕೊಂಡಿರುವ ಜ್ವರವನ್ನೂ ಸಹ ನಾಶಮಾಡುವುದಲ್ಲದೆ, ಇದು ಸಿಹಿಯಾಗಿರುವುದರಿಂದ ಸಣ್ಣ ಕೂಸುಗಳು ಸಹ ಕುಡಿಯಲಿಕ್ಕೆ ಇಷ್ಟಪಡುತ್ತವೆ. ಅನೇಕ ನಿಜ ವಿದ್ವಾಂಸ ವೈದ್ಯರಿಂದ ಗುಣಮಾಡುವುದಕ್ಕಾಗದ ಜ್ವರವನ್ನು ಈ ಎರಡೇ ಎರಡು ಬಾಟ್ಲಿಗಳ ಸೇವನೆಯಿಂದ ಹುಷಾರಾಗಿದೆ

ಬಾಟ್ಲಿ 1ಕ್ಕೆ ರೂ. 0—13—0.

ಆರ್. ಮಾರ್ಟಿನ್ನರ ಮೂಲವ್ಯಾಧಿ ಮಲಾಮು.

ಮನುಷ್ಯನಿಗೆ ಮೂಲವ್ಯಾಧಿ ಆದಾಗ, ಬಹಳ ಸಲ ಮೂತ್ರಶಂಕೆಯಾಗುವಿಕೆ, ಮಲವಿಸರ್ಜನದಲ್ಲಿ ಉರಿಯುವುದು, ಮಲಬದ್ಧತೆ ಇವೇ ಮುಂತಾದದರಿಂದ ಪಡೆಪಡುತ್ತಾನೆ. ಈ ಔಷಧದ ಒಂದೇ ಒಂದು ಬಾಟ್ಲಿಯ ಉಪಯೋಗದಿಂದ, ರಕ್ತ ಸುರಿಯುವ ಮೂಲವ್ಯಾಧಿ, ಕಂಕುಳಲ್ಲಿ ಹೋಯುವ ಮೂಲವ್ಯಾಧಿ ಮತ್ತು ಎಂಥ ತರಹದ ಕಠಿಣವಾದ ಮೂಲವ್ಯಾಧಿಯ್ಯಾದರೂ ಕೂಡಲೇ ವಾಸಿಯಾಗುತ್ತದೆ. ಇದು ಒಳ್ಳೇ ಔಷಧಿಗಳಿಂದ ತಯಾರಿಸಲ್ಪಟ್ಟು ಹಚ್ಚಿಕೊಳ್ಳುವವರಿಗೆ ಏನೊಂದೂ ನೋವನ್ನು ಕೊಡದೆ ತಂಪಾಗಿ ಮಾಡುತ್ತದೆ. ಬಾಟ್ಲಿ 1ರ ದರ ರೂ. 1—8—0 ಮಾತ್ರ.

ವಿಳಾಸ:—ಆರ್. ಡಿ. ಕಟೆ ಮತ್ತು ಕಂಪೆನಿ,
ನಂಬ್ರ ಬಿ. ಫ್ರೆಯರ್ ರೋಡ್,
ಸಾಂಜ ವರ್ತಮಾನ ಪ್ರೆಸ್,
ತೋಡಿವಾಲಾ ಬಿಲ್ಡಿಂಗ್ ಎದುರುಗಡೆ, ಫೋರ್ಟ ಮುಂಬಯಿ.

R. D. Kately & Co.
No. B. Frere Road,
Opposit Sanjvertaman Press,
Todivala Building, FORT BOMBAY.

ಸುವರ್ಣಸಂಧಿ.

ಕೈ ಮಗ್ಗಗಳಲ್ಲಿ ನೂಲನ್ನು ನೆಯುವ ಮಗ್ಗಗಳಿಗೆ ಬೇಕಾಗುವ ಯಾವತ್ತೂ ಸಾಮಾನುಗಳು, ನೂಲಿಗೆ ಹಾಕುವ ನಾನಾ ತರದ ರಂಗುಗಳು ಅಗತ್ಯವಿರುವ ನಾನಾ ಬಗೆಯ ರಸಾಯನಗಳು ಇವನ್ನು ನಮ್ಮಲ್ಲಿಂದ ನ್ಯಾಯವಾದ ಬೆಲೆಗೆ ಹೊಂದಬಹುದು. ನಮ್ಮಲ್ಲಿ ದೊರಕುವ ಯಾವತ್ತೂ ಸಾಮಾನುಗಳನ್ನು ಸೇಕಡಾ ೩ರಂತೆ ಕಮ್ಮಿಶನ್ ಪಡೆದು ಏಜಂಟರು ಮಾರಾಟಕ್ಕೆ ಪಡೆಯಬಹುದು.

ಪಿ. ಪಿ. ತ್ರಿವೇದಿ ಎಂಡ್ ಕೋ,
ನಂಬ್ರ 66 ಬಿಮರಿಂಡ್ ಲೇನ್,
ಫೋರ್ಟ ಮುಂಬಯಿ.

Edited, Printed & Published by V. S. Kamath at the M. T. A. SHARADA PRESS, MANGALORE.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ? ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೯. ಮಂಗಳೂರು, ತಾರೀಕು ೨೦ನೇ ಶುಕ್ರವಾರ ಫೆಬ್ರವರಿ ೧೯೨೫. ಸಂಚಿಕೆ ೮.

The Canara Banking Corporation Udipi, Ltd.

Head Office:— Udipi   Branch:— Coondapoor

Season Deposits

Carrying Special rate of 7% up to 15th June 1925 only.

Further Particulars on Application.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಉಡುಪಿ, ಲಿಮಿಟೆಡ್.

ಹೆಡ್ ಆಫೀಸು:—ಉಡುಪಿ. ಶಾಖೆ:—ಕುಂದಾಪುರ.

ತಾ. 15- —1925ರವರೆಗೆ ಮಾತ್ರ ಸಾಲಿಯಾನ್ ಸೇಕಡಾ 7ರ ದರದ ಬಡ್ಡಿಯ ಮೇಲೆ ಮುಸುಂ ಠೇವಣಾತಿಗಳನ್ನು ಅಂಗೀಕರಿಸೋಣಾಗುತ್ತದೆ.

ಹೆಚ್ಚಿನ ಮಾಹಿತಿಗೆ ಬರಕೊಳ್ಳಿರಿ.

Office of the Corporation, Udipi, 10-11-'25 } N. Ananda Rao, *Secretary.*

Wanted Agents
FOR
Every District in South India.

For Pushing Sales of Our Calendars, Xmas and New Year Cards, Blotters, Pictures and Picture Post Cards, at wholesale rates. Deposit of Rs. 100—0—0 Essential.

Apply to:—

The South Indian Advertising Agency,
13, Kilary Road,
BANGALORE CITY.

ಶುದ್ಧ ರೋಮದ ಛಾವಳಿಗಳು.

1 ಮಳ ಉದ್ದ 1¼ ಮಳ ಅಗಲ ರೂ. 1½ರಿಂದ 2 ವರೆಗೆ, 6 ಮಳ ಉದ್ದ 1¼ ಮಳ ಅಗಲ ರೂ. 1½ ರಿಂದ 5 ವರೆಗೆ, 6 ಮಳ ಉದ್ದ 1½ ಮಳ ಅಗಲ ರೂ. 2½ರಿಂದ 6 ವರೆಗೆ, 8 ಮಳ ಉದ್ದ 2 ಮಳ ಅಗಲ ರೂ. 3½ರಿಂದ 10 ವರೆಗೆ, 12 ಮಳ ಉದ್ದ 2¼ ಮಳ ಅಗಲ ರೂ. 6ರಿಂದ 12 ವರೆಗೆ, 16 ಮಳ ಉದ್ದ 2¼ ಮಳ ಅಗಲ ರೂ. 9 ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಖದ್ದರ್ ರೇಶ್ಮೆ ಮಡಿಗಳು, ಸಾಮಗ್ರಿಗಳು, ಕಾಶೀ ಪೀತಾಂಬರಗಳು, ಕಾಶ್ಮೀರ ಶಾಲುಗಳು, ರುದ್ರಾಕ್ಷಿ, ಬಾಣಲಿಂಗ, ಜಾಘಂಟೆ, ತಾಳ, ಪನ್ನೀರ್‌ದಾನಿ, ಹಿತ್ತಾಳೆಯ ಆಟದ ಸಾಮಾನುಗಳು, ಫೋಟೋ ಉಂಗುರಗಳು ಮತ್ತು ಇನ್ನೂ ಅನೇಕ ಸಾಮಾನುಗಳು ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುವು. ಕ್ಯಾಟಲಾಗ್ ಇನಾಂ.

ವಿಳಾಸ—
ಶಿರೋಮಣಿ ಯು. ನಾರಾಯಣಾಚಾರ್ಯ
ಮತ್ತು ಕಂಪೆನಿ, ಚೌಕಂಬ, ಕಾಶೀ ಕ್ಷೇತ್ರ.

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ.

450 ಪುಟಗಳು ಎಮ್. ಗಣಪತಿರಾವ್ ಐಗಳ್ ಇವರಿಂದ ರಚಿತವಾದದ್ದು. ಕ್ರಯ ರೂ 1-4-0

ಮಾರಾಟಕ್ಕೆ ಸಿದ್ಧವಾಗಿವೆ. — ತುಳು ಪಾಡ್ದನಗಳು — ಮಾರಾಟಕ್ಕೆ ಸಿದ್ಧವಾಗಿವೆ.

ದೈಯ್ಯೊಂಗುಳು, ಕಲ್ಲುರ್ಟಿ—ಕಲ್ಕುಡ, ಕಣಂದೂರು ದೈಯ್ಯೊಂಗುಳು, ಮುಂಡತ್ತಾಯ, ಬೊಬ್ಬರ್ಯ.

ಸುಲಭ ದರಗಳು — ಶಾಲಾ ಪುಸ್ತಕಗಳು — ರಖಂ ಕೊಂಡುಕೊಳ್ಳುವವರಿಗೆ ಯೋಗ್ಯ ಡಿಸ್ಕೌಂಟ್.

ಚಿಕ್ಕ ಕಥೆಗಳು:—ಮೂರು ಕರಡಿಗಳು; ಜೇನುಹುಳು ಹೀಗೆ ಬಡವಾಯಿತು; ಆಗಾಣೆ ಮುದ್ದೆ; ಇಲಿಗಳ ಕಳ್ಳ ಸ್ನೇ; ಅಂಗಳ ಮಗ್ಗು; ಸಿಡಿ ಯಾಕೆ ಒಡೆಗಲಿಲ್ಲ; ಗುಡುಗುಡು ಗುಮ್ಮಟ ದೇವರು; ಮುದುಕಿನ ಕಾಳಪ್ಪ ಒಡ್ಡನ ಓಟ; ಹೊಸ ಕನ್ನಡ ಪುಸ್ತಕ ಭಾಗ ೧; ಹೊಸ ಕನ್ನಡ ಪುಸ್ತಕ ಭಾಗ ೨; ಕನ್ನಡ ಪದ್ಯಗಳು; ಮಗ್ಗಿ ಪುಸ್ತಕ; ಅಜಿತಕುಮಾರ; ಪದ್ಯ ರತ್ನಾವಳಿ, ಎಕ್ಸರ್‌ಸೈಜ್ ಮತ್ತು ನೋಟು ಪುಸ್ತಕಗಳು, ಕಾಪಿ ಪುಸ್ತಕಗಳು, ಡ್ರಾಯಿಂಗ್ ಪುಸ್ತಕಗಳು

ಇತರ ಪುಸ್ತಕಗಳು:—ಸಂಕ್ಷೇಪಗೀತೆ, ಕೇಶುಷ್ಪಂಗ, ಹಿಂದೂ ವ್ರತವಿವೇಕ, ಚಂದ್ರಗುಪ್ತ ಚಕ್ರವರ್ತಿ, ಶ್ರೀ ಕೃಷ್ಣಸಂಧಾನ, ಪದ್ಯಹಾರಗಳು, ಹರಿಕಥಾ ವ್ಯವಸಾಯ ಹರಿನಾಮಸಂಕೀರ್ತನೆ ಸುಬ್ರಹ್ಮಣ್ಯ ಪದ್ಯಗಳು. ಬೆಂಕಿಪೆಟ್ಟಿಗೆ ತಯಾರಿಸುವ ವಿಧಾನ, ಸಾಬೂನು ತಯಾರಿಸುವ ವಿಧಾನ, ಸ್ವರಾಜ್ಯ ಭಕ್ತಿಯೋಲ್ಲಾಸ, ಚರಕಗೀತೆ, ಕೊಂಕಣಿ ಭಾಷೆಯಲ್ಲಿ ಚಂದ್ರಹಾಸ ನಾಟಕ, ಪ್ರಹಲ್ಲಾದ ಚರಿತ್ರ ನಾಟಕ, ಕನ್ನಡ ಮೃಚ್ಛಕಟಿಕ ನಾಟಕ, ಚಂದ್ರಹಾಸಾಭ್ಯುದಯ ನಾಟಕ, ಕೋವಿಲನ್ ಚರಿತ್ರ ನಾಟಕ, ಮಾದರಿ ಉಪನ್ಯಾಸ ಭಾಗ ೧, ೨, ಮತ್ತು ೩.

ತಲೆನೋವು ಕಂಡಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದ್ದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಶ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧ

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೇ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 2 ಆಣೆ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

109 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

— ರಥೋತ್ಸವ, ವಿವಾಹ ಉಪನಯನಗಳ ಸಮಯ — ಸರ್ವರಿಗೂ ಉಡಿಗೆ ತೊಡಿಗೆಗಳು ಬೇಕಾಗುವ ಸಂದರ್ಭ.

ಯಾರು, ಯಾವುದನ್ನು ಎಲ್ಲಿ ಪಡೆಯಬೇಕೆಂಬ ಶಂಕೆಯಿಂದ ವಿಳಂಬ ಮಾಡಬೇಡಿರಿ. ಉಡಿಗೆತೊಡಿಗೆಗಳನ್ನು ಚುನಾಯಿಸಿ ಖರೀದಿ ಬೇಕಾದ ಯಥಾರ್ಥ ಮಾಹಿತಿಯನ್ನು ಕಳೆದ ಹತ್ತಿಪ್ಪತ್ತು ವರುಷಗಳಿಂದ ಪಡೆದು ನಮ್ಮಲ್ಲಿಯ ವ್ಯಾಪಾರವು ಗಿರಾಕಿಗಳಿಗೆ ಸರ್ವ ತೃಪ್ತಿಯುಂಟೂ ಲಾಭಕರವಾಗಿ ಪರಿಣಮಿಸುವಂತೆ ನಮ್ಮ ಜವಳಿ ಸಂಗ್ರಹವನ್ನು ಮಾಡಿರುತ್ತೇವೆ.

ಗುರ್ಪುರ್ಕಾರ್ ಬ್ರದರ್ಸ್, ರಥಬೀದಿ, ಮಂಗಳೂರು.

ಹೆಡ್ ಆಫೀಸು:—ರಥಬೀದಿ—(ಮೊದಲು ಸುಜೀರ ನಾಗಪ್ಪನಾಯಕ್, ಎಂಡ್ ಕೊ, ಇದ್ದಲ್ಲಿ; ಅಜಿಜುದ್ದೀನ್ ರಸ್ತೆಗೆ ತಿರುಗುವಲ್ಲಿ) ಮಂಗಳೂರು.

ಬ್ರೇಂಚ್ ಆಫೀಸು:—ರಥಬೀದಿ—(ಹಳೇ ತಾಲೂಕು ಕಚೇರಿಯ ಮಹಾರಕ್ಕ ಸಮೀಪವಿರುವ ಮಳಿಗೆ) ಮಂಗಳೂರು.

ಈ ದೇಶದ ಪ್ರಖ್ಯಾತಪಟ್ಟ ನೇಯಿಗೆಯ ಕೇಂದ್ರಸ್ಥಳಗಳಾದ—ಬನಾರಿಸ್, ಪೂನಾ, ಅಹಮ್ಮದಾಬಾದ್, ಸುರತ್, ಬೆಂಗಳೂರು, ಧರ್ಮಾವರಮ್, ಕಂಜೀವರಮ್, ಕೊಯಮುತ್ತೂರು, ಮಧುರೆ, ತಂಜಾವೂರು, ಕುಂಭಕೋಣ, ಆರ್ನಿ, ಪಾಂಡಿಚೇರಿ, ಹುಬ್ಬಳ್ಳಿ, ಇಳಕಲ್, ಗದಗ, ಮದ್ರಾಸು ಈ ಪ್ರಾಂತ್ಯಗಳಲ್ಲಿ ತಯ್ಯಾರಾದ

ಜರಿಸೀರೆಗಳು, ದುಪ್ಪಟ್ಟಾ, ಜರಿಕಣ, ಪೇಟ್ಟಾ, ರೇಶ್ಮೆ ಸೀರೆಗಳು, ಅರಂಪೇಟೆ ಸೀರೆಗಳು, ಕೊಳ್ಳೇಗಾಲ ರೇಶ್ಮೆ ಸೀರೆಗಳು, ಜರಿ [illegible] ಸೀರೆಗಳು, ರೇಶ್ಮೆ ಮಡಿಗಳು, ನಿತ್ಯ ಉಪಯೋಗದ ಸೀರೆಗಳು ಬನಿಯನ್ಸ್, ಕರ್ನಾಟಕ ಮಿಲ್ಸ್‌ಗಳ ವ ಇತರ ಮಿಲ್ಸ್‌ಗಳ ಶೋಟಿಂಗ್ ಶರ್ಟಿಂಗ್ ಕೈರಾಟೆಯಲ್ಲಿ ತಯಾರಿಸಿದ ನೂಲಿನಿಂದ ಮಾಡಿದ—

ಖದ್ದರ್ ಶರ್ಟಿಂಗ್, ಖದ್ದರ್ ಕೋಟಿಂಗ್, ಖದ್ದರ್ ಟೋಪಿ, ಖದ್ದರ್ ಧೋತ್ರ, ಅಂಗವಸ್ತ್ರ, ಇತ್ಯಾದಿ—
ಮುಸಲ್ಮಾನರಿಗೆ ಬೇಕಾದ ನಮೂನೆಯ ಉಂಗಿ ಸೊಸಿಗಳು ವಗೈರೆ—

ಎಲ್ಲ ಸಂಗ್ರಹವನ್ನೂ ನಮ್ಮ ಪ್ರೊಪ್ರೈಟರರಾದ ರಾ॥ ನಾರಾಯಣ ಪ್ರಭುಗಳು ಖಾಸ ಸ್ವತಃ ಆಯಾ ಊರುಗಳಿಗೆ ಹೋಗಿ ಸಂಗ್ರಹಿಸಿ ತಂದಿರುತ್ತಾರೆ.

ಶರ್ತು:—ನಗದಿ, ರೂಪಾಯಿ 50ಕ್ಕೆ ಮಿಕ್ಕಿದ ಆವಕಿಯನ್ನು ಪಡೆಯುವವರಿಗೆ ಸೇಕಡಾ 6¼ರ, ರೂ. 50ರಿಂದ 350ರವರೆಗೆ ಸೇಕಡಾ 10%, ರೂ. 350 ರಿಂದ 1000ಕ್ಕೆ 12½% ಈ ದರ ಡಿಸ್ಕೌಂಟು ಕೊಡೋಣಾಗುತ್ತದೆ.

ಪ್ರತಿಯೊಂದು ಕುಟುಂಬಿಗಳ ಮನೆಗಳಲ್ಲಿ ಸೌಖ್ಯವನ್ನು ತೋರಿಸುವುದಕ್ಕೆ ಮತ್ತು ಅವರವರ ಉಪಯೋಗಾರ್ಥವನ್ನು ತಿಳುವಳಿಕೆ ಬಗ್ಗೆ ನಡಿಸುವುದಕ್ಕೆ ಒಂದು ಮರ್ಯಾದಿದ ನಿಘಂಟು ಪುಸ್ತಕವು ಈ ನಮ್ಮ ಹಿಂದೂದೇಶದ ಸಮೂಹದಲ್ಲಿರುವುದು. ಅಂಥಾ ಪುಸ್ತಕವು ಯಾವದೆಂಬುದು

ನೀವುಗಳು ಬಲ್ಲಿರಾ?

(ಅದೇ)

"ಕಾಮಶಾಸ್ತ್ರವೆಂಬುವುದು."

ತಾವುಗಳು ಇನ್ನೂ ಈ ಪುಸ್ತಕದಲ್ಲಿ ಬರೆದಿರುವ ಸಾರಾಂಶವನ್ನು ಓದಿಲ್ಲದಿದ್ದರೆ, ಒಡನೇ ಒಂದು ಪುಸ್ತಕವನ್ನು ಕಳುಹಿಸುವಂತೆ ಒಂದು ಪೋಸ್ಟುಕಾರ್ಡು ಬರೆಯಿರಿ.

ಪುಸ್ತಕವನ್ನು ಇನಾಮಾಗಿ ಕಳುಹಿಸುವೆವು.

ಮುಖ್ಯವಾದ ತಿಳುವಳಿಕೆ.

"ತಾವುಗಳು ಧೃಢಚಿತ್ತರಾಗಿಯೂ, ನಿಧಾನಸ್ಥರಾಗಿಯೂ, ಸೌಖ್ಯವಾಗಿಯೂ, ಕಷ್ಟವಿಲ್ಲದೇ ವಿಷಯಗಳನ್ನು ಭರಿಸುವ ಮನಸ್ಸನ್ನು ಹೊಂದಬೇಕಾದರೆ ನಮ್ಮ ಅಮೂಲ್ಯವಾದ "ಕಾಮಶಾಸ್ತ್ರವೆಂಬುವ ಪುಸ್ತಕದಲ್ಲಿ ಕಾಣಿಸಿರುವ ಆತಂಕನಿಗ್ರಹ ಮಾತ್ರೆಗಳನ್ನು ಸೇವಿಸಬೇಕು."

ಒಂದು ರೂಪಾಯಿ ಖರ್ಚುಮಾಡಿದರೆ 32 ಮಾತ್ರೆಗಳುಳ್ಳ ಒಂದು ಡಬ್ಬಿಯನ್ನು ತರಿಸಿ ಪ್ರಯತ್ನಿಸಬಹುದು.

ವಿವರವಾಗಿ ಬರೆದಿರುವ ಒಂದು ಕ್ಯಾಟಲಾಗು ಕಳುಹಿಸುವಂತೆ ಈ ದಿನವೇ ಒಂದು ಪೋಸ್ಟುಕಾರ್ಡು ಬರೆಯಿರಿ.

ಆತಂಕನಿಗ್ರಹ ಔಷದಾಲಯಮು,
ನಂಬ್ರ 26, ಬ್ರಾಡ್ವೆ, ಮದರಾಸು.

ಹೊಸಗ್ರಂಥಗಳು !! ಬೇಗನೇ ತರಿಸಿಕೊಳ್ಳಿರಿ !!!

ಕೋಕ ಶಾಸ್ತ್ರವು.

ರಸಿಕ ವಾಚಕ ಮಹಾಶಯರೇ,

ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ, ಸಂಪಾದಿಸಿ, ಅದರಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನಷ್ಟೇ ಶೋಧ ಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿಣಿ, ಸ್ತ್ರೀಯ ಇದರಂತೆ ಪುರುಷರಲ್ಲಿಯ ಭೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ, ಜನನೇಂದ್ರಿಯಾದಿಗಳ ವರ್ಣನೆಯನ್ನೂ, ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ, ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ, ನಪುಂಸಕತ್ವ ವಂಧ್ಯಾದೋಷಗಳ ಚಿಕಿತ್ಸೆಯನ್ನೂ, ಸ್ತ್ರೀಯರ ಗೂಢ ರಹಸ್ಯವನ್ನೂ, ದಂಪತಿ ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನೂ ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನು ಒಮ್ಮೆ ಅವಲೋಕಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ

ಇದರ ಬೆಲೆ ೧—೮—೦, ಟಪ್ಪಾಲು ಹಾಸಲು ೦—೪—೦.

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ಮೂರನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟದೆ.

ಎಮ್. ಗಣಪತಿರಾವ್ ಐಗಳ್—ಗ್ರಂಥಕರ್ತರು.

ಮನೋರಂಜಕ ಚಿತ್ರಗಳೂ ಇವೆ.

ಇದರಲ್ಲಿ ಸಾವಿತ್ರಿ, ಶಕುಂತಲಾ, ಕೃಷ್ಣಾಕುಮಾರಿ, ಪದ್ಮಿನಿ, ಜೋನ್ ಒಫ್ ಆರ್ಕ, ಫ್ಲೋರೆನ್ಸನಾಯಿಟಿಂಗೇಲ ಪರಶುರಾಮ, ಭೂತಾಳಪಾಂಡ್ಯ, ಕಾರ್ಕಳ ಗೋಮಟೇಶ್ವರ ಮತ್ತು ಭೈರವರಾಜ, ಮೂಡಬಿದ್ರೆಯ ಚೌಟರು, ನಂದಾವರ ಬಂಗರು, ಕಾರ್ಕಳ ರಾಮಸಮುದ್ರ ಮತ್ತು ರಾಮನಾಥ ಒಡೆಯರ ಅಣೆಕಟ್ಟು, ಗುರುಪುರ ಜಂಗಮ ಮಠ, ಕಲ್ಯಾಣಪ್ಪನ ಕಾಟಕಾಯಿ, ಗುರುವಾಯನಕೆರೆ, ಜಮಾಲಾಬಾದುಕೋಟೆ, ಸುಲ್ತಾನಬತ್ತೇರಿ, ಈದಗಾಪ್ರಾರ್ಥನಾಮಂದಿರ, ಸೇಂಟಮೇರಿ ದ್ವೀಪಗಳು ಮತ್ತು ದರಿಯಾಬಾದರಗಡ, ಕೊರಗರು, ಕೊಡಗರು, ತೋಡರು, ರಜಪೂತರು, ಕಂದಾರಿಗಳು ಘುರ್ಖಾ ಜನರು, ಅರಬಿಯರು. ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟದೆ. ಮೂರನೇ ದರ್ಜೆಯ ಮಕ್ಕಳಿಗೆ ಉಪಯುಕ್ತವಾಗಿದೆ. ಕ್ರಯ 6 ಆಣೆ.

ಪುಸ್ತಕ ದೊರಕುವ ವಿಳಾಸ:—

ಶಾರದಾ ಛಾಪಖಾನೆ,
ಮಂಗಳೂರು.

ಗಣಪತಿರಾವ್, ಐಗಳ್.
ಮಂಜೇಶ್ವರ.

ಡಾಕ್ಟರುಗಳು ಭಿನ್ನಾಭಿಪ್ರಾಯಪಡುವಾಗ್ಯೆ ತೀರ್ಮಾನಿಸುವದು ಯಾರು?

ಅಂಥಾ ಸಮಯಗಳಲ್ಲಿ ಡೆಂಗ್ಯು ಮುಂತಾದ ಜ್ವರಗಳನ್ನು ನಿವಾರಿಸುವಂಥಾ "ಬಾಟ್ಲಿವಾಲರ ಎಗ್ಯುಮಿಕ್ಸ್ಚರ್"ನ್ನು ಸರಾಗವಾಗಿಯೂ, ಮಲೇರಿಯಾ ಜ್ವರಗಳನ್ನು ಖಂಡಿತವಾಗಿ ನಿಲ್ಲಿಸುವಂಥಾದ್ದೂ, ಎಲ್ಲಾ ತರದ ತಲೆನೋವುಗಳನ್ನು ಹೋಗಲಾಡಿಸುವಂಥಾದ್ದೂ ಆದ "ಬಾಟ್ಲಿವಾಲರ ಎಗ್ಯುಪಿಲ್ಸ್"ಗಳನ್ನು ಉಪಯೋಗಿಸಿರಿ.

ಐ. ಎಮ್. ಎಸ್. ಡಾಕ್ಟರುಗಳಿಂದ ಶಿಫಾರಸು ಮಾಡಲ್ಪಟ್ಟಿದ್ದು. ಇದರ ಉಪಯೋಗದಿಂದ ಹೃದಯದ ಮೇಲೆ ಯಾವದೊಂದೂ ಬಾಧಕವಿಲ್ಲ. ಅರ್ಧ ಶತಮಾನದಿಂದ ಹಿಂದೂಸ್ಥಾನ, ಬರ್ಮ, ಸಿಲೋನ್, ಆಫ್ರಿಕಾ ಇವುಗಳಲ್ಲಿ ಪ್ರಖ್ಯಾತಪಟ್ಟದ್ದಾಗಿರುತ್ತದೆ.

ಅನೇಕ ಹಿಂದೀ ಪ್ರದರ್ಶನಗಳಲ್ಲಿ ಬೆಳ್ಳಿ ಮತ್ತು ಬಂಗಾರದ ಪದಕಗಳನ್ನು ಪಡೆದಿರುತ್ತೆ. ಚಾಲ್ತಿ ಸಾಧ್ಯದಂತಿದ್ದ ಪದಾರ್ಥರಿಗಳೂ ಕೂಡ ಅದರ ಮೇಲೆ ಹಣವನ್ನು ಮುಂಗಡವಾಗಿ ಕೊಡುತ್ತಾರೆ. ಬಡ ಮತ್ತು ಮಧ್ಯಮ ತರಗತಿಯ ಜನರಿಗೆ ವರಪ್ರದಾನವಾಗಿದ್ದು ಸಂಚಾರ, ಪ್ರಯಾಣ, ದೇಶಾಟನೆಗಳ ಸಮಯದಲ್ಲಿ ಹತ್ತಿರದಲ್ಲಿ ರಿಸಿಕೊಳ್ಳದಾಗಿರುತ್ತದೆ.

ಬಾಟ್ಲಿವಾಲರ ಬಾಲಾಮೃತ ಅಥವಾ ಟೋನಿಕ್ ಸಿರಪ್.

ಕೆಮ್ಮನ್ನು ಹೋಗಲಾಡಿಸಿ, ಎದೆನೋವನ್ನು ಶಾಂತಗೊಳಿಸಿ, ಜ್ವರವನ್ನು ಉಪಶಮನಿಸಿ, ನಿದ್ರಾಭಂಗವನ್ನು ಕಡಿಮೆ ಮಾಡಿ ಧಾತುವರ್ಧನವನ್ನು ಮಾಡುವದರಲ್ಲಿ ಅತ್ಯುತ್ತಮವಾಗಿರುತ್ತದೆ. ಕಫವನ್ನು ಒಣಗಿಸಿ ಮಾಯವಾಗುವಂತೆ ಮಾಡುವುದಲ್ಲದೆ ಅದೇ ಸಮಯದಲ್ಲಿ ಒಳ್ಳೇ ಜೀರ್ಣವನ್ನೂ ಉಂಟುಮಾಡುವುದು. ದರ ಮೊದಲಾದ ಮಾಹಿತಿಯನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಕಾರಖಾನೆ:-CAWASHAPUR, BOMBAY.

ಎಲ್ಲಾ ಕಡೆಗಳಲ್ಲಿ
ಏಜಂಟರು ಬೇಕಾಗಿದ್ದಾರೆ.

ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್,
ಪಿ. ವಾರ್ಲಿ, ಮುಂಬಯಿ, ನಂಬ್ರ 18.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ

ಇವರ

ಬಾಲಾಮೃತ.

ಈ ಔಷಧವನ್ನು ಸೇವನೆ ಮಾಡುವುದರಿಂದ ಮಕ್ಕಳು ರೋಗರಹಿತರೂ ಸಶಕ್ತರೂ ಆಗುವರು. ಇದು ಮಧುರವಾಗಿದೆ; ಮಕ್ಕಳು ಸಂತೋಷದಿಂದ ಸೇವಿಸುತ್ತಾರೆ.

ನಮ್ಮ ವಿಳಾಸ:—

ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.

ಏಜಂಟರು:— ಡಿ. ಊಲನ್ ಮಾರ್ಟ್, ಮಂಗಳೂರು.

OUR RECENT
IMPORT IN
WRIST WATCHES

Have you used anyone
of these Watches?

SEND YOUR ORDER NOW
ALL GUARANTEED.

Fashionable wrist wrist
Lady's size. Reliable movement
Guaranteed.



No. 368

Handy to wear and looks beautiful. Gives punctual time and with strong movement.

Nickel case Rs 8—0

High-class Radium dial watch
watch with Roman figures.



No. 367.

Can be seen in dark nights Well fitted with best movement and strong to use. Used by one and all

Silver case Rs. 9—0.

Radio light wrist watch.



No. 372.

Fitted with the best mechanism and guaranteed to work and keep perfect time for a long time.

Nickel case Rs. 7—8
Electro rolled-gold ,, 9—0

(N. B. In addition to the above, we have good number of varieties of fancy wrist watches, pocket watches. Please write for a descriptive catalogue, which will be sent free)

WHOLESALE IMPORTERS

PETER WATCH COY.,
POST BOX 27, MADRAS

ಶಾಲಿವಾಹನಶಕೆ ೧೮೪೭ನೆಯ ರಕ್ತಾಕ್ಷಿ ಸಂವದ
ಮಾಘ ಬ. ೧೩ ಶನಿವಾರದಿಂದ ರಕ್ತಾಕ್ಷಿ ಸಂವದ
ಫಾಲ್ಗುಣ ಶು| ೪ ಶುಕ್ರವಾರದ ವರೆಗಿನ ಪಂಚಾಂಗ.
(ಗ್ರಾಣಿಗನೆಯ ಕುಂಭ ಮಾಸ.)

ತಾರೀಕು	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ	ಸೌರಮಾನ	ಸೂರ್ಯ ಉ.	ಸೂರ್ಯ ಅಸ್ತ.
21	ಶನಿ	೧೩	೧೪.೫೮	ಶ್ರವಣಾ	೪೭.೪೪	೧೦	6.53	6.37
22	ರವಿ	೧೪	೯.೧೭	ಧನಿಷ್ಠಾ	೪೪.೪೭	೧೧	6.53	6.37
23	ಸೋಮ	೩೦	೪.೪೬	ಶತಭಿಷಾ	೪೨.೫೮	೧೨	6.52	6.37
24	ಮಂಗಳ	೧	೧. ೫	ಪೂ. ಭಾ.	೪೧ ೦	೧೩	6.52	6.38
25	ಬುಧ	೨	೫೭. ೨	ಉ. ಭಾ.	೪೧. ೨	೧೪	6.51	6.38
26	ಗುರು	೩	೫೪.೩೧	ರೇವತಿ	೪೧.೫೮	೧೫	6.51	6.38
27	ಶುಕ್ರ	೪	೫೭.೪೭	ಅಶ್ವಿನಿ	೪೪. ೨	೧೬	6.50	6.38

ಮಂಗಳೂರಿನ ವಾಯುಸ್ಥಿತಿ.

(ಗ್ರಾಣಿಗನೆಯ ಮಕರ ಪುಯಿಂತೆಲ್.)

Date ತಾರೀಕು	Temperature. ಉಷ್ಣ (ಕಾವು) Maximum ಹೆಚ್ಚಾದ	Minimum ಕಡಿಮೆ	Rainfall. ಮಳೆ ದಿನದ ಮಳೆ	ಜುಮಲಾ ಮಳೆ.
13	89—2	72—8	—	—
14	91—2	72—8	—	—
15	90—7	73—3	—	—
16	90—8	75—2	—	—
17	89—7	72—9	—	—
18	90—4	71—6	—	—
19	89—6	71—8	—	140-89

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ. ಆ.	ವರೆಗೆ ರೂ. ಆ
ಹೊಸ ಮಸ್ಕತಿ	8—0	8—10
ಹೊಸ ಗುಡ್ಡು	7-6	7—14
ಹೊಸ ರಾಶಿ	6-14	7—10
ಅನ್ನಲ್ ಬೆಳ್ತಿಗೆ	8-8	8—14
ಗುಡ್ಡು ಬೆಳ್ತಿಗೆ	7-12	8—0
ರಂಗಾಶಿನ ಬೆಳ್ತಿಗೆ ಗೋಣೀ೧ಕ್ಕೆ	14-8	16—
ಗೋಧಿ ಗೋಣಿ ೧ಕ್ಕೆ	19-0	21-8
ಹುರುಳಿಗೋಣಿ ೧ಕ್ಕೆ	9-4	10-8
ಕಡಲೆಗೋಣಿ ೧ಕ್ಕೆ	11-8	12—8
ತೊಗರಿಗೋಣಿ ೧ಕ್ಕೆ	12-8	13-0
ತೊಗರಿಬೇಳೆ ಗೋಣಿ ೧ಕ್ಕೆ	17-8	21-8
ಉದ್ದು ಗೋಣಿ ೧ಕ್ಕೆ	13-0	13 8
ಹೆಸರುಗೋಣಿ ೧ಕ್ಕೆ	14—0	16—0
ಊರು ಬೆಲ್ಲ ಖಂಡಿ ೧ಕ್ಕೆ	70-0	80—0
ಉಪ್ಪು ಗೋಣಿ ೧ಕ್ಕೆ	4-4	4-6
ಕೊಬ್ರಿ ಖಂಡಿ ೧ಕ್ಕೆ	125-0	135—0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	45-0	—
ಎಳ್ಳಿಂಡಿ ಖಂಡಿ ೧ಕ್ಕೆ	40-0	45—6
ಕೊಬ್ರಿ ಎಣ್ಣೆ ಮಣ ೧ಕ್ಕೆ	8-4	9-4
ಎಳ್ಳೆಣ್ಣೆ ಮಣ ೧ಕ್ಕೆ	7-0	11—0
ಹರಳೆ ಎಣ್ಣೆ ಪೆಟ್ಟಿಗೆ ೧ಕ್ಕೆ	8-15-6	—
ಮೋರಿಸ ಸಕ್ಕರೆ ಮಣ ೧ಕ್ಕೆ	4-14	5-0
ಊರ ಮೆಣಸಿನಕಾಯಿ ಮಣ ೧ಕೆ	10-8	11-0
ಸಾಸಿವೆ ಮುಡಿ ೧ಕ್ಕೆ	9-0	9-2
ಕೊತ್ತಂಬರಿ ಮುಡಿ ೧ಕ್ಕೆ	3-10	4—0
ಕಾಫಿ ಖಂಡಿ ೧ಕ್ಕೆ	410-0	480-0
ಬೀಳೆಗೋಟು ಅಡಿಕೆ ಖಂಡಿ ೧ಕ್ಕೆ ಹಳತು	245-0	250—0
,, ಹೊಸ ಅಡಿಕೆ	170—0	205—0
ಕಾಳುಮೆಣಸು ಖಂಡಿ ೧ಕ್ಕೆ	155-0	160—0
ಯಾಲಕ್ಕಿ ಮಣ ೧ಕ್ಕೆ	80-0	85—0
ಗೇರುಬೀಜ ಮುಡಿ ೧ಕ್ಕೆ	4—10	—
ಕಲ್ಲುಪ್ಪು ಖಂಡಿ ೧ಕ್ಕೆ	45-0	65—0
ಹಿಂಚು ಹಗಡು ಮಣ ೧ಕ್ಕೆ	17-12	23—0
ತಾಮ್ರ ಪಾತ್ರಗಳು ಮಣ ೧ಕ್ಕೆ	26-0	—
ಜೇನಿ ಬೆಳ್ಳ ಸೀಸ ೧ಕ್ಕೆ	22-0	
ಹಿತ್ತಾಳೆ ಹಗಡು ಮಣ ೧ಕ್ಕೆ	18-8	
ಪವನು	14-5	

Pandit B. Ramakrishna Baliga's Siddha Ayurvedic medicines of 50 years' reputation.

ಮಹಾ ಮದನಕಾಮೇಶ್ವರಿ ಲೇಹ—ಸುವರ್ಣಭಸ್ಮ, ಅಭ್ರಕಭಸ್ಮ, ರಸಸಿಂಧೂರ, ಕಸ್ತೂರಿ, ಕುಂಕುಮಕೇಸರ ವಗೈರೆ ಅಮೂಲ್ಯವಾದ ರಸಾಯನ ದ್ರವ್ಯಗಳಿಂದ ತಯಾರಿಸಲ್ಪಟ್ಟಿರುತ್ತದೆ. ಇದು ಎಲ್ಲಾ ತರದ ನಪುಂಸಕ ರೋಗಗಳನ್ನೂ ಸ್ವಪ್ನಾವಸ್ಥೆಯಲ್ಲಿ ಧಾತುಪತನೆಯನ್ನೂ ಗುಣಪಡಿಸಿ, ದೇಹಕ್ಕೆ ದಿವ್ಯಕಾಂತಿಯನ್ನೂ, ಪುಷ್ಟಿಯನ್ನೂ, ಪುರುಷತ್ವವನ್ನೂ, ವೀರ್ಯಸ್ತಂಭನವನ್ನೂ ಉಂಟುಮಾಡಿ ಅತ್ಯಾನಂದವನ್ನು ಕೊಡುವುದಲ್ಲದೆ, ಅಜೀರ್ಣ, ಅತಿಸಾರ, ಗ್ರಹಣಿ, ಆಮ್ಲ, ಪಿತ್ತ, ಉದರಶೂಲೆ, ಪ್ರಮೇಹ ವಗೈರೆ ರೋಗಗಳನ್ನು ಗುಣಪಡಿಸುವಲ್ಲಿ ಕೇವಲ ಅಮೃತಸಮಾನವಾಗಿರುವುದು. ಇದನ್ನು ಅಬಾಲವೃದ್ಧರೂ ಸೇವಿಸಬಹುದು.

ಸ್ವರ್ಣ ಮಿಶ್ರಿತ ಲೇಹಕ್ಕೆ (48 ದಿವಸಗಳ ವರೆಗೆ ಸಾಕಾಗುವ) ಸೇರು ೧ರ ರೂ. 4—0—0.
ಸ್ವರ್ಣ ಇಲ್ಲದ ,, ,, ,, ,, 3—0—0.

ಬೃಹತ್ ಶಾರಿವಾದ್ಯಾದಿ ರಸಾಯನ— ಇದು ಶಾಸ್ತ್ರಯುಕ್ತ ರಕ್ತವನ್ನು ಶೋಧಿಸುವ ದಿವ್ಯೌಷಧವಾಗಿರುತ್ತದೆ. ಇದರ ಸೇವನೆಯಿಂದ 20 ತರದ ಪ್ರಮೇಹ ರೋಗಗಳೂ ಎಲ್ಲಾ ತರದ ಫರಂಗಿ ರೋಗಗಳೂ ಅಲ್ಪ ಸಮಯದಲ್ಲಿ ಗುಣಹೊಂದುವವು. ಅದಲ್ಲದೆ ಇದು ಎಲ್ಲಾ ತರದ ಕುಷ್ಠವ್ಯಾಧಿಗಳನ್ನೂ, ಖಜ್ಜಿ, ತುರಿ ಮೊದಲಾದ ಸಕಲ ಚರ್ಮವ್ಯಾಧಿಗಳನ್ನೂ, ಪಾದರಸ ಸೇವನೆಯಿಂದ ಉಂಟಾದ ರೋಗಗಳನ್ನೂ ಮತ್ತು ಹೆಂಗಸರ ಪ್ರದರ ರೋಗಗಳನ್ನೂ ಶಾಸ್ತ್ರಯುಕ್ತ ಗುಣಪಡಿಸುವುದು.

8 ಔನ್ಸಿನ ಬಾಟ್ಲಿ ಒಂದರ ಕ್ರಯ ಬರೇ ರೂ. 1—9—0.

ಬ್ರಾಹ್ಮಿ ಪರ್ಪಟಕಾದಿ ತೈಲ—(ಸಿದ್ಧ ಇಲ್ಲದವರಿಗೆ ಸಿದ್ಧೌಷಧ.) ಇದನ್ನು ತಲೆಗೆ ಇಟ್ಟಲ್ಲಿ ಸಕಲ ಶಿರೋರೋಗಗಳೂ, ಕರ್ಣ, ನೇತ್ರ, ದಂತ, ಜಿಹ್ವಾರೋಗಗಳೂ, ತಲೆ ತಿರುಗುವುದು, ಕಠಿಣವಾದ ತಲೆ ಶೂಲೆ ಮೊದಲಾದ ರೋಗಗಳು ನಾಶವಾಗಿ, ಸ್ಮರಣಶಕ್ತಿಯನ್ನೂ, ಜ್ಞಾನಶಕ್ತಿಯನ್ನೂ ವೃದ್ಧಿಗೊಳಿಸುವುದು. ಇದು ವಿದ್ಯಾರ್ಥಿಗಳಿಗೂ ವಕೀಲರಿಗೂ ಒಂದು ಸಿದ್ಧೌಷಧ.

4 ಔನ್ಸಿನ ಬಾಟ್ಲಿ ೧ರ ರೂಪಾಯಿ 1—0—0.

ಸೂಚನೆ:—ಟಪ್ಪಾಲ ಹಾಸಲು ಪ್ರತ್ಯೇಕ. ಸ್ಥಳೀಕ ಬಡ ಜನರಿಗೆ ಔಷಧವು ಧರ್ಮಾರ್ಥವಾಗಿ ಕೊಡಲ್ಪಡುವುದು.

ವಿಳಾಸ:— ಪಂಡಿತ, ಬಿ. ರಾಮಕೃಷ್ಣ ಬಾಳಿಗ, ಬಂಟವಾಳ ದ. ಕ.

The Canara Public Conveyance Co., Ltd, Mangalore.

(ESTABLISHED 1914).

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು
- ಕರಾವಳಿ ಮಾರ್ಗವಾಗಿ — ಮುಲ್ಕಿ — ಉಡ್ಪಿ — ಕುಂದಾಪುರ — ಗಂಗೊಳ್ಳಿ — ಬೈಂದೂರು
- ಬಂಟವಾಳ — ಬೆಳ್ತಂಗಡಿ — ಚಾರ್ಮಾಡಿ.
- ಪಾಣೆಮಂಗಳೂರು — ಪುತ್ತೂರು — ಸುಳ್ಯ — ಮಡಿಕೇರಿ.
- ಪುತ್ತೂರು — ಉಪ್ಪಿನಂಗಡಿ — ಬೆಳ್ತಂಗಡಿ.
- ಮಡಿಕೇರಿ — ಪುತ್ತೂರು — ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ — ಮದ್ರಾಸು — ಕಡೂರು — ಚಿಕ್ಕಮಗಳೂರು — ಚಾರ್ಮಾಡಿ — ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದು ಆಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd, Mangalore. S K.

NOTICE.

ದಕ್ಷಿಣ ಕನ್ನಡಾ ಕಾರ್ಕಳ ಡಿಸ್ಟ್ರಿಕ್ಟ ಮುನ್ಸಿಫ
ಕೋರ್ಟಿನಲ್ಲಿ.

O. P. No. $\frac{8}{1925}$

ಭವಾನಿಬಾಯಿ — ಅರ್ಜಿದಾರಳು

ಹಟ್ಟಿಕುದುರು ರಾಮರಾಯರ ವಿಧವೆ ಕಾರ್ಕಳದಲ್ಲಿ ಮೃತಪಟ್ಟ ಸೀತಮ್ಮ ಯಾನೆ ರಾಧಾಬಾಯಿಯು ತಾರೀಕು 20-7-1924ರಲ್ಲು ಬರೆದಿಟ್ಟ ವೀಲುನಾಮೆಯ ಆಧಾರದ ಮೇಲೆ ಸದರಿಯವಳಿಗೆ ಜಗನ್ನಾಥರಾಯನು ತಾ. 23-6-1914ರಲ್ಲು ಬರಕೊಟ್ಟ ಅಡವು ದಸ್ತೇವೇಜಿನ ಬಾಬ್ತು ಕಾರ್ಕಳ ಪುಲ್ಕೇರಿ ಶೇಷಗಿರಿ ಪ್ರಭುಗಳಿಂದ ಬರತಕ್ಕ ಅಸಲು ಬಡ್ಡಿ ಕೂಡಾ ರೂಪಾಯಿ 1575ನ್ನು ವಸೂಲುಮಾಡುವರೆ ತನ್ನ ಹೆಸರಲ್ಲಿ ವಾರಿಸು ಸರ್ಟಿಫಿಕೇಟು ಅಪೇಕ್ಷಿಸಿ ಅರ್ಜಿದಾರಳು ದಾಖಲು ಮಾಡಿದ ಸದರಿ ಅರ್ಜಿಯು ತಾರೀಕು 6-3-1925ಕ್ಕೆ ಮೇಲ್ಕಾಣಿಸಿದ ಕೋರ್ಟಿನಲ್ಲಿ ತನ್ಖೆಗೆ ಇಟ್ಟಿರುತ್ತದೆ. ಆಕ್ಷೇಪ ಇದ್ದವರು ತಮ್ಮ ಆಕ್ಷೇಪಗಳನ್ನು ಆ ದಿವಸ ಪೂರ್ವಾಹ್ನ ಗಂಟೆ 11ಕ್ಕೆ ಜಾಹೀರು ಮಾಡಿಕೊಳ್ಳತಕ್ಕದ್ದು.

K. L. KUDVA
Pleader for Petitioner.

CAR FESTIVAL

CONCESSION

MAKE HASTE AND BUY A

Pocket Electric Lamp

AVAILABLE

In different varieties. Mother of pearl lamps. Cycle lamps.

NICKEL PLATED.

Hammered Brand, with Powerful Bulls-eye lance.

Use with it

Bull's-eye Dry Batteries.

The Mangalore Trading Association,
Car Street, MANGALORE.

ಕನ್ನಡಿಗರೇ! **ವಸಂತ.** ಕನ್ನಡಿಗರೇ!

ಈಗಾಗಲೇ ಎರಡನೇ ಸಂಪುಟವು ಆರಂಭಿಸಲಿದೆ.

ಇತಿಹಾಸನಿಧಿ ಎಂದರೆ	ವಸಂತ
ಸಮಾಜಸುಧಾರಕನೆಂದರೆ	ವಸಂತ
ಶೃಂಗಾರಿಕೆಯ ಸಾಮ್ರಾಜ್ಯವೆಂದರೆ	ವಸಂತ
ಕರ್ನಾಟಕ ಭಾಷಾಸೇವಕನೆಂದರೆ	ವಸಂತ
ದೇಶವಿದೇಶ ಬಂಧುವೆಂದರೆ	ವಸಂತ
ಕಾದಂಬರಿಗಳ ಭಂಡಾರವೆಂದರೆ	ವಸಂತ
ಚಿತ್ತಾಕರ್ಷಕ ಚಿತ್ರಶಾಲೆಯೆಂದರೆ	ವಸಂತ
ದೇಶಭಕ್ತನೆಂದರೆ	ವಸಂತ

ಇಂತಹ ವಸಂತನು ಯಾರಿಗೆ ಬೇಕು,
ಯಾರಿಗೆ ಬೇಡ?

48 (ಕ್ರೌನ್ ⅛ ಪುಟ ಸೈಜಿನ) ಪುಟಗಳನ್ನು ಒಳಗೊಂಡ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3—4—0 ಮಾತ್ರ.

ವ್ಯವಸ್ಥಾಪಕ,
ವಸಂತ ಕಾರ್ಯಾಲಯ,
ಕುಂದಾಪುರ, ದಕ್ಷಿಣ ಕನ್ನಡ.

ಬಂದು ನೋಡಿರಿ! ತಿಂದು ನೋಡಿರಿ!
ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ
ಪದಕವನ್ನು
ಬಹುಮಾನವಾಗಿ ಪಡೆದಿರುವ
ಎಸ್. ಪಿ. ಆಚಾರ್ಯ
ಇವರಿಂದ ತಯಾರಿಸಲ್ಪಟ್ಟ
ಉಪ್ಪಿನ ಕಾಯಿಗಳನ್ನು
ಬಂದು ನೋಡಿರಿ! ತಿಂದು ನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸಲ್ಪಟ್ಟ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ, ತುಂಬಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನ್ನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ
ಬಂದು ನೋಡಿರಿ! ತಿಂದು ನೋಡಿರಿ!

ಇಂಡಿಯನ್ ಸ್ವೀಟ್‌ಮೀಟ್ ಮಾರ್ಟ್.

ಮನೋಲ್ಲಾಸಿನಿ ಕಾಫಿ ಕ್ಲಬ್, ಮಾರ್ಕೇಟು ರೋಡು, ಮಂಗಳೂರು. ಅಥವಾ ಸದಾನಂದ ಕಾಫಿ ಕ್ಲಬ್, ರಥಬೀದಿ, ಮಂಗಳೂರು.

ವಿಶೇಷ ಪ್ರಕಟಣೆ.

ಮಂಗಳೂರು ತಾಲೂಕು ಕಾಂಗ್ರೆಸು ಕಮ್ಮಿಟಿಯ ತಾ. ೨೮-೨-'೨೫ಕ್ಕೆ ಜರಗಲಿಕ್ಕಿರುವ ಮಹಾ ಸಭೆ ಬಗ್ಗೆ ಈ ಕಚೇರಿಯಿಂದ ತಾ. ೧೨-೨-'೨೫ಕ್ಕೆ ಹೊರಡಿಸಿದ ವ (ಸ್ವದೇಶಾಭಿಮಾನಿಯಲ್ಲಿ ತಾ. ೧೩-೨-'೨೫ಕ್ಕೆ ಪ್ರಕಟಿಸಿದ ವ ಇತರ ಸ್ಥಳೀಕ ಪತ್ರಗಳಲ್ಲಿ ಪ್ರಕಟಿಸಬಹುದಾದ) ಪ್ರಕಟನೆಯಲ್ಲಿ ಕಾಣುವ ತಾರೀಕುಗಳು ೧೮, ೨೦, ಮತ್ತು ೨೪ ಎಂದು ಇರುವಲ್ಲಿ ಯಥಾಕ್ರಮವಾಗಿ ೨೩, ೨೪ ಮತ್ತು ೨೫ ಎಂದು ಬದಲಾವಣೆ ಮಾಡತಕ್ಕದ್ದು. ಮತ್ತು ಸದರಿ ಪ್ರಕಟನೆಯ ವಿಷಯ ಸೂಚಿಯ ೭ ಮತ್ತು ೮ನೇ ಸಂಖ್ಯೆಗಳನ್ನು ಆಲೋಚನೆ ಮಾಡುವಾಗ ನಮ್ಮ ಕೈಕೆಳಗೆ ಇರುವ ೩ ರಾಷ್ಟ್ರೀಯ ಶಾಲೆಗಳ ಪೈಕಿ ಕದ್ರಿ ರಾಷ್ಟ್ರೀಯ ಶಾಲೆ ಮತ್ತು ಬೋಳಾರ ರಾಷ್ಟ್ರೀಯ ಶಾಲೆಗಳನ್ನು ಇದೇ ಬರುವ ಏಪ್ರಿಲಿನಿಂದ ಮುಚ್ಚಿ ೩ನೆಯದಾದ ಕರ್ನಾಟಕ ತಿಲಕ ವಿದ್ಯಾಲಯವನ್ನು ಮಾತ್ರ ಮಾದರಿ ಶಾಲೆಯಾಗಿ ನಡಿಸಬೇಕೆಂಬ ಸೂಚನೆ ಇದೆ ಎಂಬದನ್ನು ಮನಸ್ಸಿನಲ್ಲಿಟ್ಟುಕೊಳ್ಳತಕ್ಕದ್ದು. ಸದರಿ ವಿಷಯ ಸೂಚಿಯ ೧ ಮತ್ತು ೨ನೇ ಸಂಖ್ಯೆಗಳಲ್ಲಿ ಅಡಗಿರುವ ಪಟ್ಟಿಗಳನ್ನು ಇದೇ ತಾ. ೨೬ಕ್ಕೆ ಕಚೇರಿಯ ಪ್ರಕಟನೆಯ ಹಲಗೆಯ ಮೇಲೆ ವ ಸ್ಥಳೀಕ ಪತ್ರಗಳಲ್ಲಿ ಪ್ರಕಟಿಸುವ ಪ್ರಯತ್ನ ಮಾಡಲಾದೀತು.

ಮಂಗಳೂರು ತಾಲೂಕು ಕಾಂಗ್ರೆಸ್ ಕಮ್ಮಿಟಿ ಕಚೇರಿ,
ಮಂಗಳೂರು ೧೮-೨-'೨೫

ಬಿ. ಭೋಜರಾಯ, ಕಾರ್ಯದರ್ಶಿಯರ ಚಾರ್ಜಿನಲ್ಲಿ ಕೂಡಾ ಇರುವ
ಅಧ್ಯಕ್ಷ.

ನೋಟೀಸು.

ಮುಂಬಯಿ ಸ್ಟೀಮ್ ನೇವಿಗೇಶನ್ ಕಂಪೆನಿ ಲಿಮಿಟೆಡ್.

ಗೋಕರ್ಣ ಮಹಾಶಿವರಾತ್ರಿಗೆ ಹೋಗುವ ಪ್ರಯಾಣಿಕರಿಗೆ ಸೌಕರ್ಯ.

ಇದೇ ಬರುವ ಫೆಬ್ರವರಿ ತಿಂಗಳಲ್ಲಿ ಗೋಕರ್ಣದಲ್ಲಿ ನಡಿಯುವ ಶಿವರಾತ್ರಿ ಮಹೋತ್ಸವಕ್ಕೆ ಯಾತ್ರಿಕರಾಗಿ ಹೋಗುವ ಮೈಸೂರು, ಮಲಬಾರ, ಕೆನರಾ ಮೊದಲಾದ ಕಡೆಗಳ ಜನರಿಗೆ ಅನುಕೂಲವಾದ ಪ್ರಯಾಣ ಸೌಕರ್ಯವನ್ನು ಈ ಕಂಪೆನಿಯು ಮಾಡಿದೆ.

ಫೆಬ್ರವರಿ ತಾ. 21ರಲ್ಲಿ ಜರಗುವ ಶಿವರಾತ್ರಿ ಮಹೋತ್ಸವಕ್ಕೆ ಯಾತ್ರಿಕರಿಗೆ ಹೋಗಲು ಅನುಕೂಲವಾಗುವಂತೆ ಫೆಬ್ರವರಿ ತಾ 16ನೇ ಸೋಮವಾರ ಬೆಳಿಗ್ಗೆ 10 ಗಂಟೆಗೆ ಸಾಮಾನುಗಳನ್ನು ಒಯ್ಯುವ (Cargo steamer) ಸ್ಟೀಮರೂ ಫೆಬ್ರವರಿ ತಾ. 18ನೇ ಬುಧವಾರ ಪ್ರಾತಃ 10 ಗಂಟೆಗೆ ಬಹು ವೇಗದಿಂದ ಓಡುವ ಪೆಸೆಂಜರ್ ಸ್ಟೀಮರೂ ಮಂಗಳೂರಿನಿಂದ ಬಿಡಲ್ಪಡುವುವು. ಈ ಎರಡೂ ಸ್ಟೀಮರುಗಳು ಪ್ರಯಾಣಿಕರನ್ನು ತದ್ರಿ (ಗೋಕರ್ಣ) ವರೆಗೆ ಮುಟ್ಟಿಸುವುವು.

ತಾ. 18ರಲ್ಲಿ ಬಿಡುವ ಬಹುವೇಗದಿಂದ ಓಡುವ (ಡಬ್ಬಲ್ ಸ್ಕ್ರ್ಯೂ ಸ್ಟೀಮರ್) ಸ್ಟೀಮರು ಬರೇ 10 ತಾಸಿನೊಳಗೆ ಪ್ರಯಾಣಿಕರನ್ನು ಮುಟ್ಟಿಸುವುದು.

ತದ್ರಿಯಿಂದ ತಾ. 22ನೇ ಆದಿತ್ಯವಾರ ಬಿಡಲ್ಪಡುವ ಕಾರ್ಗೊ ಸ್ಟೀಮರೂ ತಾ. 24ನೇ ಮಂಗಳವಾರ ಬಿಡಲ್ಪಡುವ ವೇಗದಿಂದ ಓಡುವ ಪೆಸೆಂಜರ್ ಸ್ಟೀಮರೂ ಗೋಕರ್ಣದಿಂದ ಹಿಂದಕ್ಕೆ ಬರುವ ಯಾತ್ರಿಕರಿಗೆ ಬಹಳ ಅನುಕೂಲಗಳಾಗಿವೆ.

ಮಂಗಳೂರಿನಿಂದ ತದ್ರಿಗೆ ಹೋಗಿ ಬರುವ ಪ್ರಯಾಣಿಕರಿಗೆ ಒಂದೂವರೆ ಪಾಲು (fare and half) ದರದಲ್ಲಿ ಟಿಕೇಟು ಕೊಡಲಾಗುವುದು.

ಸಾಧಾರಣವಾಗಿ ಇರುವ ಸಿಂಗಲ್ ದರ.

	ಕಾರ್ಗೊ ಸ್ಟೀಮರ್.	ಫಾಸ್ಟ್ ಸ್ಟೀಮರ್.
ಲೋವರ್ ಕ್ಲಾಸ್	ರೂ. 5—8—0	ರೂ. 5—12—0
ಅಪ್ಪರ್ ಕ್ಲಾಸ್	ರೂ. 8—2—0	ರೂ. 8—10—0

ದಕ್ಷಿಣಕಾಶಿಯೆಂದು ಖ್ಯಾತಿಗೊಂಡ ಗೋಕರ್ಣ ಮಹಾಕ್ಷೇತ್ರಕ್ಕೆ ಕುಟುಂಬಯಾತ್ರೆ ಮಾಡಲು ಅನುಕೂಲ ಸಂದರ್ಭ.

ತಾಲೂಕು ಕಾಂಗ್ರೆಸ್ ಕಮಿಟಿಗಳ ಅನುಭವದ ಬಗ್ಗೆ

೧. ಈಗಿನ ನೂಲುವ ಮತಾಧಿಕಾರಕ್ಕನುಸಾರವಾಗಿ ಗ್ರಾಮ ಕಮಿಟಿಗಳಲ್ಲಿ ಮೆಂಬರರಾಗುವವರು ತಮ್ಮ ನೂಲನ್ನು ೧ನೇ ತಾರೀಕಿಗೆ ಆಯಾ ಕಮಿಟಿಗೆ ಕಳುಹಿಸತಕ್ಕದ್ದು. ಕಮ್ಮಿ ಎಂದರೆ ೫ ಮಂದಿ ಸದಸ್ಯರಿಂದ ಒಂದು ಕಮಿಟಿಯನ್ನು ಸ್ಥಾಪಿಸಬಹುದು. ಕಮ್ಮಿ ಸದಸ್ಯರಿದ್ದಲ್ಲಿ ಹೆಚ್ಚು ಸದಸ್ಯರನ್ನು ಸೇರಿಸುವರೆ ಪ್ರಯತ್ನಿಸತಕ್ಕದ್ದು.

೨. ಎಲ್ಲೆಲ್ಲಿ ಗ್ರಾಮಕಮಿಟಿಗಳಿಲ್ಲವೋ ಅಲ್ಲಿ ನೂಲುವವರಿದ್ದರೆ ಅವರು ತಮ್ಮ ನೂಲನ್ನು ತಾರೀಕು ೧ಕ್ಕೆ ತಾಲೂಕು ಕಮಿಟಿಗೆ ತಲ್ಪುವಂತೆ ಕಳುಹಿಸತಕ್ಕದ್ದು.

೩. ಗ್ರಾಮ ಕಮಿಟಿಗಳು ತಮ್ಮ ಪಟ್ಟಿ ಸಮೇತ ಜಮೆಯಾದ ನೂಲನ್ನೆಲ್ಲಾ ತಾಲೂಕು ಕಮಿಟಿಗೆ ಕಳುಹಿಸತಕ್ಕದ್ದು.

೪. ತಾಲೂಕು ಕಮಿಟಿಗಳು ತಮ್ಮ ತಾಲೂಕಿನ ಸದಸ್ಯರ ಹೆಸರಿನ ಮತ್ತು ನೂಲಿನ ವಿವರದ ಪಟ್ಟಿಯೊಂದಿಗೆ ತಮ್ಮಿಂದ ವರಿಷ್ಠ ಕಮಿಟಿಗಳಿಗೆ ಸಲತಕ್ಕ ನೂಲಿನ ಅಂಶವನ್ನೂ ತಾರೀಕು ೧೦ಕ್ಕೆ ಜಿಲ್ಲಾ ಕಮಿಟಿಗೆ ತಲ್ಪುವಂತೆ ಕಳುಹಿಸತಕ್ಕದ್ದು. ನೂಲು ಕೊಟ್ಟ ಸದಸ್ಯರ ಹೆಸರಿನ ಪಟ್ಟಿಯೊಂದನ್ನು ಪ್ರಾಂತಿಕ ಕಮಿಟಿಗೂ ಕಳುಹಿಸಿಕೊಡತಕ್ಕದ್ದು.

೫. ಒಂದು ಸರ್ತಿ ಜಮಾ ಬಂದ ನೂಲನ್ನು ಮೆಂಬರರ ಕರಕ್ಕಾಗಿ ಮಾರಬಾರದು.

೬. ನೇಯುವ ವ್ಯವಸ್ಥೆ ಇಲ್ಲದಿದ್ದರೆ ಜಿಲ್ಲಾ ಕಮಿಟಿಗೆ ಬರಕೊಂಡಲ್ಲಿ ತಕ್ಕ ವ್ಯವಸ್ಥೆ ಮಾಡಬೇಕು.

೭. ಪ್ರಾಂತಿಕ ಕಮಿಟಿಯವರಿಂದ ಬಂದ ಕೂಡಲೇ ಇದಕ್ಕೆ ಸಂಬಂಧ ಪಟ್ಟ ಎಲ್ಲಾ ಫೋರ್ಮುಗಳನ್ನೂ ಪುಸ್ತಕಗಳನ್ನೂ ಕಳುಹಿಸಲಾದೀತು.

೮. ನೂಲುವ ಮತಾಧಿಕಾರಕ್ಕನುಸಾರವಾಗಿ ವರಿಷ್ಠ ಕಮಿಟಿಗಳಿಗೆ ಆರಿಸಲ್ಪಟ್ಟ ಮೆಂಬರರಾಗಲಿ ಕಾರ್ಯಕಾರಿ ಮಂಡಳಿಯ ಸದಸ್ಯರಾಗಲಿ ಮಾಹೇಯಾನಾ ನೂಲು ಕೊಡುವುದನ್ನು ಕ್ರಮವಾಗಿ ಕೊಡತಪ್ಪಿದ್ದಲ್ಲಿ ಅವರ ಬದಲಿಗೆ ಬೇರೆಯವರನ್ನೇ ಚುನಾಯಿಸಿ ಅವರ ಹೆಸರನ್ನು ಆ ಪಟ್ಟಿಯಲ್ಲಿ ಸೇರಿಸಿ ಮೇಲಿನ ಕಮಿಟಿಯವರಿಗೆ ಕಳುಹಿಸಿಕೊಡತಕ್ಕದ್ದು.

೯. ಸದಸ್ಯರಾಗಲಿಚ್ಛಿಸುವವರಿಗೆ ಬೇಕಾದ ಹತ್ತಿ ಮತ್ತು ನೂಲುವರೆ ಬೇಕಾದ ಇತರ ಸಾಮಾನುಗಳನ್ನು ತಾಲೂಕು ಕಮಿಟಿಗಳು ಒದಗಿಸಿಕೊಡತಕ್ಕದ್ದು.

ಸೆಕ್ರೆಟರಿ, ಜಿ. ಕಾ. ಕಮಿಟಿ.

ದಕ್ಷಿಣ ಕನ್ನಡ ಜಿಲ್ಲಾ ತೃತೀಯ ಪರಿಷತ್ತು ಕಾರ್ಕಳ.

೧೯೨೫.

ಪ್ರಕಟನಾ ಪತ್ರ, ನಂಬ್ರ ೧.

ಶ್ರೀಯುತ ಕಾಕಾ ಕಾಲೆಲಕರ್, ಅಧ್ಯಕ್ಷರು.

೧. ಸ್ಥಳ 'ಶ್ರೀ ಶ್ರೀನಿವಾಸ ಆಶ್ರಮ' ಕಾರ್ಕಳ.
೨. ಸಮಯ ೧೯೨೫ನೇ ಎಪ್ರಿಲ ತಿಂಗಳ ೨ನೇ ವಾರದಲ್ಲಿ.
೩. ಟಿಕೇಟುಗಳ ದರ.

i	ಸ್ವಾಗತಮಂಡಳಿ ಸದಸ್ಯರಿಗೆ-ಟಿಕೇಟು ೧ರ	ರೂ.	೧೦.	(೧ನೇ ತರಗತಿ)
	" "	ರೂ.	೫.	(೨ನೇ ತರಗತಿ)
	" "	ರೂ.	೩.	(೩ನೇ ತರಗತಿ)
	" "	ರೂ.	೨.	(೪ನೇ ತರಗತಿ)
ii	ಪ್ರತಿನಿಧಿಯರಿಗೆ "	ರೂ.	೧.	
iii	ಪ್ರೇಕ್ಷಕರಿಗೆ "	ರೂ.	೫.	(೧ನೇ ತರಗತಿ)
	" "	ರೂ.	೩.	(೨ನೇ ತರಗತಿ)
	" "	ರೂ.	೧.	(೩ನೇ ತರಗತಿ)

೪. ಪ್ರತಿನಿಧಿಯಾಗುವವರು ಭಾರತ ರಾಷ್ಟ್ರೀಯ ಸಭೆಯ ಯಾವದಾದರೂ ಒಂದು ಶಾಖೆಯ ಚಾಲ್ತಿ ವರ್ಷದ ಸದಸ್ಯರಾಗಿದ್ದು ಆಯಾಯ ಶಾಖೆಯ ಕಾರ್ಯದರ್ಶಿಯರಿಂದ ಪಡೆದ ತಮ್ಮ ಸದಸ್ಯತನದ ಪತ್ರವನ್ನು ಟಿಕೇಟಿನೊಡನೆ ಹಾಜರು ಪಡಿಸಿದ್ದಲ್ಲಿ ಪ್ರತಿನಿಧಿಯ ಟಿಕೇಟು ಕೊಡಲಾಗುವುದು.

೫. ದೇಶಭಕ್ತ ಸೇಟ ಜಮನಲಾಲ ಬಜಾಜ್, ಶಂಕರಲಾಲ್ ಬೇಂಕರ್, ಗಂಗಾಧರರಾವ್ ದೇಶಪಾಂಡೆ ವ ಇತರ ಕೆಲವು ಪ್ರಮುಖ ಮುಖಂಡರು ಈ ಪರಿಷತ್ತಿಗೆ ಬರಲಿಕ್ಕಿರುವದರಿಂದ ಈ ಪರಿಷತ್ತಿನ ಸರಿಯಾದ ತಾರೀಕನ್ನು ಹಿಂದಿನಿಂದ ಪ್ರಕಟಿಸಲ್ಪಡುವದು.

೬. ಪರಿಷತ್ತಿಗೆ ಚುನಾಯಿಸಲ್ಪಟ್ಟ ಎಲ್ಲಾ ಪ್ರತಿನಿಧಿಯರ ಹೆಸರು ವ ವಿಳಾಸದ ಪಟ್ಟಿಯನ್ನು ಆಯಾಯ ಕಾರ್ಯದರ್ಶಿಯರು ಮಾರ್ಚಿ ತಾ. ೧೫ರ ಒಳಗೆನೇ ಸ್ವಾಗತ ಮಂಡಳಿಯ ಕಾರ್ಯದರ್ಶಿಯರಿಗೆ ತಲ್ಪುವಂತೆ ಕಳುಹಿಸತಕ್ಕದ್ದು.

೭. ಪರಿಷತ್ತಿಗೆ ಬರುವ ಪ್ರತಿನಿಧಿಯರಿಗೂ ಪ್ರೇಕ್ಷಕರಿಗೂ ಊಟ ಮತ್ತು ಬಿಡಾರದ ವ್ಯವಸ್ಥೆ ಮಾಡಲ್ಪಡುವದು. ಊಟ ೧ಕ್ಕೆ ೪ ಆಣೆ ಕೊಡಬೇಕಾಗುವುದು. ಬಿಡಾರದ ವ ಊಟದ ವ್ಯವಸ್ಥೆ ಬೇಕಾದವರು ಸ್ವಾಗತ ಮಂಡಳದ ಕಾರ್ಯದರ್ಶಿಯರಿಗೆ ತಪ್ಪದೆ ಮಾರ್ಚಿ ತಾ. ೩೦ರ ಒಳಗೆ ತಿಳಿಸತಕ್ಕದು

೮. ಪರಿಷತ್ತಿನ ಸಂಬಂಧವಾಗಿ ಒಂದು ಸ್ವದೇಶಿ ವಸ್ತುಪ್ರದರ್ಶನವು ಅದೇ ಸಮಯದಲ್ಲಿಯೇ ಏರ್ಪಡಿಸಲ್ಪಡುವದು. ಅದರಲ್ಲಿ ದಕ್ಷಿಣ ಕನ್ನಡಾ ಜಿಲ್ಲೆಯಲ್ಲಿ ತಯಾರಿಸಲ್ಪಡುವ ಎಲ್ಲಾ ತರದ ಪ್ರದರ್ಶನಕ್ಕೆ ಯೋಗ್ಯವಾದ ವಸ್ತುಗಳು ಮುಖ್ಯವಾಗಿ ಕೈನೂಲು ಮತ್ತು ಕೈ ಮಗ್ಗಕ್ಕೆ ಉತ್ತೇಜನ ಕೊಡುವಂಥಾ ಎಲ್ಲಾ ತರದ ಪ್ರದರ್ಶನಗಳು ಕೂಡಾ ಇಡುವರೆ ಏಲಿವಾರಿ ಮಾಡಲ್ಪಡುವುದು. ಹಾಗೆ ಪ್ರದರ್ಶನಕ್ಕೆ ಇಚ್ಛಿಸುವಂತವರು ಸ್ವಾಗತ ಮಂಡಳದ ಕಾರ್ಯದರ್ಶಿಯರಿಗೆ ಎಪ್ರಿಲು ತಾ. ೧ರ ಒಳಗೆ ಸೂಚಿಸುವದಲ್ಲದೆ ತಾ. ೭ರ ಒಳಗೆ ವಸ್ತುಗಳನ್ನು ಖುದ್ದು ತರತಕ್ಕದ್ದು. ಅವರು ಉಪಯೋಗಿಸುವ ಸ್ಥಳಕ್ಕೆ ಬಾಡಿಗೆ ವಸೂಲು ಮಾಡೋಣಾಗಲಿಕ್ಕಿಲ್ಲ.

೯. ಪರಿಷತ್ತಿನ ಸಮಯದಲ್ಲಿ ಒಂದು ನೂಲಿನ ಪಂದ್ಯಾಟವನ್ನು ಜರಗಿಸಬೇಕಾಗಿ ಇಚ್ಛಿಸಿರುವದರಿಂದ ಉಮೇದ್ವಾರರು ತಮ್ಮ ಹೆಸರುಗಳನ್ನು ಆಯಾಯ ತಾಲೂಕಿನ ಕಾರ್ಯದರ್ಶಿಗಳ ಮುಖಾಂತರ ಮಾರ್ಚಿ ತಾ. ೩೧ರ ಒಳಗೆ ಸ್ವಾಗತ ಮಂಡಳದ ಕಾರ್ಯದರ್ಶಿಯರಿಗೆ ತಿಳಿಸತಕ್ಕದ್ದು.

೧೦. ಇನ್ನು ಹೆಚ್ಚಿನ ವಿಷಯಗಳನ್ನು ಹಿಂದಿನ ಪ್ರಕಟನೆಗಳಲ್ಲಿ ಸೂಚಿಸುವೆವು. ಹೆಚ್ಚಿನ ಅನುಭವ ಬೇಕಾದವರು ಈ ಕೆಳಗೆ ಸಹಿ ಮಾಡಿದವರಿಗೆ ಬರೆದು ತರಿಸಿಕೊಳ್ಳಬಹುದು.

ಸ್ವಾಗತಮಂಡಳಿ ಕಚೇರಿ
ದಕ್ಷಿಣ ಕನ್ನಡ ಜಿಲ್ಲಾ
ತೃತೀಯ ಪರಿಷತ್ತು
ತಾ ೬—೨—೧೯೨೫.

ಕಾರ್ಕಳ ಶ್ರೀನಿವಾಸ ಹೆಗಡೆ,
ಪೆರ್ಡೂರು ಸರ್ವೋತ್ತಮನಾಯ್ಕ,
ಜತೆ ಕಾರ್ಯದರ್ಶಿಯರು.

— ವಿನಂತಿ. —

ನಮ್ಮ ಜಿಲ್ಲೆಯ ಬೇರೆ ಬೇರೆ ತಾಲೂಕುಗಳಲ್ಲಿ ಸದ್ಯದಲ್ಲಿಯೆ ಸ್ಥಳೀಕ ಬೋರ್ಡುಗಳ ಚುನಾವಣೆಯಾಗಲಿಕ್ಕಿದೆ. ಈ ಸಂದರ್ಭದಲ್ಲಿ ಉಮೇದ್ವಾರರೂ ಮತದಾರರೂ ಒಂದೆರಡು ವಿಷಯಗಳನ್ನು ಚೆನ್ನಾಗಿ ಲಕ್ಷ್ಯದಲ್ಲಿಡತಕ್ಕದ್ದೆಂದು ಅವರಿಗೆ ವಿನಂತಿ ಮಾಡಲಿಚ್ಛಿಸುತ್ತೇನೆ. ದೇಶದ ಅನೇಕ ಭಾಗಗಳಲ್ಲಿ ಸ್ಥಳೀಕ ಸಂಸ್ಥೆಗಳು ರಾಷ್ಟ್ರೀಯ ಸಭೆಯು ಸೂಚಿಸಿರುವ ವಿಧಾಯಕ ಕಾರ್ಯಕ್ರಮದ ಬೇರೆ ಬೇರೆ ಭಾಗಗಳನ್ನು ಜಾರಿಗೆ ತರಲು ಪ್ರಯತ್ನಗಳನ್ನು ಮಾಡಿ ದೇಶಹಿತವನ್ನು ಸಾಧಿಸುತ್ತಿವೆಯೆಂಬುದು ಇತ್ತಲಾಗಿನ ವರ್ತಮಾನಗಳನ್ನು ತಿಳಿದವರಿಗೆಲ್ಲ ಗೊತ್ತೆ ಇದೆ. ಇಂತಹ ರಚನಾತ್ಮಕ ಕಾರ್ಯದ ಮಟ್ಟಿಗೆ ರಾಷ್ಟ್ರದ ಅಭ್ಯುದಯವನ್ನು ಬಯಸುವುದರಲ್ಲಿ ಯಾವ ಮತಭೇದವೂ ಇರಲು ಕಾರಣವಿಲ್ಲ. ರಾಟೆಯ ಸರ್ವತ್ರಪ್ರಚಾರ, ಅಸ್ಪೃಶ್ಯತಾ ನಿವಾರಣೆ ಮತ್ತು ಭಿನ್ನ ಭಿನ್ನ ಜಾತಿಮತಗಳಲ್ಲಿ ಐಕ್ಯವನ್ನು ಸಾಧಿಸುವುದು ಇವೇ ಈ ಕಾರ್ಯಕ್ರಮದ ಮುಖ್ಯ ಅಂಗಗಳು, ಈ ಮೂರು ವಿಷಯಗಳಲ್ಲಿಯೂ ಕೆಲಸ ಮಾಡಲು ತಾಲೂಕು ಬೋರ್ಡುಗಳಂತಹ ಸಂಸ್ಥೆಗಳಿಗೆ ಒಳ್ಳೇ ಅವಕಾಶವಿದೆ. ಈ ಕಾರ್ಯಗಳನ್ನು ಮಾಡಿಯೇ ಬೋರ್ಡುಗಳಲ್ಲಿರುವ ಪ್ರತಿನಿಧಿಗಳು ಜನತೆಯ ಪ್ರೀತಿಯನ್ನೂ ಕೃತಜ್ಞತೆಯನ್ನೂ ಪಡೆದಂತಾಗುವುದು. ಮತ್ತು ಸ್ವರಾಜ್ಯ ಸಾಧನೆಯ ಮಹಾಕಾರ್ಯದಲ್ಲಿ ಸಹಕರಿಸಿದಂತಾಗುವುದು.

ಮೇಲೆ ಸೂಚಿಸಿದ ಕಾರ್ಯಕ್ರಮವನ್ನು ಪೂರೈಸಿಗೊಳಿಸಲು ನಮ್ಮ ಜಿಲ್ಲೆಯ ಬೋರ್ಡುಗಳಿಗೆ ಉಮೇದ್ವಾರರಾಗಲಿಚ್ಛಿಸುವವರೆಲ್ಲರೂ ನಿಶ್ಚಯ ಮಾಡಿಯೇ ಮತದಾರರಲ್ಲಿ ಪ್ರಚಾರಕಾರ್ಯವನ್ನು ಕೈಕೊಳ್ಳಬೇಕಾಗಿಯೂ, ಮತದಾರರಾದರೂ ತಮ್ಮ ಕರ್ತವ್ಯವನ್ನು ಸರಿಯಾಗಿ ತಿಳಕೊಳ್ಳಬೇಕಾಗಿಯೂ ಸಂಬಂಧಪಟ್ಟವರಿಗೆಲ್ಲ ನನ್ನ ನಮ್ರ ಪ್ರಾರ್ಥನೆ ಇದೆ.

ಮಂಗಳೂರು,
೧೯—೨—೧೯೨೫.

ಇಂತೀ, ತಮ್ಮ ವಿಧೇಯ ಸೇವಕ,
ಕಾರ್ನಾಡ ಸದಾಶಿವ ರಾವ್.

ವಿದೇಶ ವರ್ತಮಾನ.

ಇಂಗ್ಲೆಂಡಿನ ಅವಾಂತರ:—ಭಯಂಕರ ಗಾಳಿಯೂ ಮಳೆಯೂ ಬ್ರಿಟನ ಆಯಾ ಭಾಗಗಳಲ್ಲಿ ಕಳೆದವಾರ ಬಂದು ಹೆಚ್ಚಿನ ಹಾನಿಯುಂಟಾಗಿದೆ. ಕೆಲಕಡೆಗಳಲ್ಲಿ ಮಂಜು ರಾಶಿ ರಾಶಿಯಾಗಿ ಬಿತ್ತು. ಲಂಕಶೈರು ನಲಕ್ಕಿ ನೋರ್ತವೇಲ್ಸಿನಲ್ಲೂ ನೆರೆಯ ಹಾವಳಿಯೂ ಉಂಟಾಗಿದೆ. ಕೆಲವು ಕಡೆಗಳಲ್ಲಿ ಗುಡ್ಡಗಳು ಜಂಡು ಬಿದ್ದಿವೆ.

ಒಳದೇಶ ವರ್ತಮಾನ.

ಮಕ್ಕಳ ದುರಾಭ್ಯಾಸಕ್ಕೆ ತಡೆ:—ಕಲ್ಲಿಕೋಟೆಯ ಮಹಮ್ಮದೀಯರು ತಮ್ಮ ಮಕ್ಕಳಲ್ಲಿ ಬೀಡಿ ಸಿಗರೇಟುಗಳನ್ನು ಸೇದುವ ದುರಭ್ಯಾಸವು ಹರಡುತ್ತಿರುವುದನ್ನು ನೋಡಿ, ಮದ್ರಾಸು ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿರುವ ತಮ್ಮ ಪ್ರತಿನಿಧಿಗಳಿಗೆ ಬರೆದು, ಬೀಡಿ ಸಿಗರೇಟುಗಳನ್ನು ಮಕ್ಕಳು ಸೇದದಂತೆ ಒಂದು ಕಾನೂನನ್ನು ಜಾರಿಯಲ್ಲಿ ಬರುವಂತೆ ಮಾಡಬೇಕೆಂದು ತೀರ್ಮಾನಿಸಿಕೊಂಡಿರುತ್ತಾರೆ.

ಬಂಗಾಳ ಓರ್ಡಿನೆನ್ಸ್:—ಬಂಗಾಳ ಓರ್ಡಿನೆನ್ಸನ್ನು ರದ್ದುಪಡಿಸಬೇಕೆಂದು ಮಿ| ದೊರೆ ಸ್ವಾಮಿ ಅಯ್ಯಂಗಾರರು ತಂದ ಸೂಚನೆಯು ಎಸೆಂಬ್ಲಿಯಲ್ಲಿ ಮಂಜೂರಾಯಿತು.

ಕೇರಳ ಖಿಲಾಫತ್ ಕೊನ್ಫರೆನ್ಸ್:—ಕೇರಳ ಖಿಲಾಫತ್ ಕೊನ್ಫರೆನ್ಸು ಏಪ್ರಿಲ್ ತಿಂಗಳ ತಾ. ೩೦ರಲ್ಲಿ ಕಲ್ಲಿಕೋಟೆಯಲ್ಲಿ ಸೇರುವುದು.

ಹಿಂದು ರಿಲಿಜಿಯಸ್ ಎನ್‌ಡೌಮೆಂಟ ಎಕ್ಟ್:—ಮದ್ರಾಸ್ ಹಿಂದು ರಿಲಿಜಿಯಸ್ ಎನ್‌ಡೌಮೆಂಟ ಎಕ್ಟಿನ ಮೇರೆಗೆ ನಿಬಂಧನೆಗಳನ್ನು ತಯಾರಿಸಿ (Settle) ಇತ್ಯರ್ಥಪಡಿಸಲು ಸರಕಾರದವರು ಒಂದ ಕಮ್ಮಿಟಿಯನ್ನು ನೇಮಿಸಿರುವರು. ಈ ಕಮ್ಮಿಟಿಗಳಿಗೆ ದಿವಾನ್ ಬಹದೂರ್ ಸರ್. ಟಿ. ಸದಾಶಿವ ಅಯ್ಯರ್, ಶ್ರೀ. ಟಿ. ಆರ್. ವೆಂಕಟರಾಮ ಶಾಸ್ತ್ರಿ, ರಾವ್ ಬಹದೂರ್ ಎನ್. ಗೋಪಾಲ ಸ್ವಾಮಿ ಐಯಂಗಾರ್, ಶ್ರೀ ಎ. ರಾಮಸ್ವಾಮಿ ಮುದಲಿಯರ್, ಶ್ರೀ. ಪಿ. ಎನ್ ಮಾರ್ತಾಂಡಂ ಪಿಳ್ಳೆ, ದಿವಾನ್ ಬಹದೂರ್ ಎಲ್. ಎ. ಗೋವಿಂದ ರಾಘವ ಐಯರ್, ಶ್ರೀ ಬಿ. ಟಿ. ರಾಮಚಂದ್ರ ಮುದಲಿಯರ್ ಲೋಕಲ್ ಸೆಲ್ಫ. ಗವರ್ನಮೆಂಟಿನ ಅಸಿಸ್ಟಾಂಟ ಸೆಕ್ರೆಟರಿಗಳವರು ಈ ಕಮ್ಮಿಟಿಯ ಸೆಕ್ರೆಟರಿಗಳಾಗಿ ನೇಮಕ ಪಟ್ಟಿದ್ದಾರೆ. ಈ ಕಮ್ಮಿಟಿಯು ನಿಬಂಧನೆಗಳನ್ನು ತಯಾರಿಸಿ ತಮ್ಮ ರಿಪೋರ್ಟನ್ನು ಆದಷ್ಟು ಬೇಗನೇ ಸರಕಾರದ ಮುಂದಿಡಬೇಕೆಂದು ಸೂಚಿಸೋಣಾಗಿಯದೆ.

ಕುಷ್ಠರೋಗ ನಿವಾರಣಾ ಫಂಡು:—ವೈಸರಾಯರ ಹಾಗು ಪಂಜಾಬ ಗವರ್ನರರ ವಿನಂತಿಯನ್ನು ಮನ್ನಿಸಿ ಅಮೃತಸರದಲ್ಲಿ ಕುಷ್ಠರೋಗ ನಿವಾರಣಾ ಫಂಡಿಗೆ ಧನ ಸಂಗ್ರಹವಾಗುತ್ತದೆ. ಡಿಸ್ಟ್ರಿಕ್ಟ ಕಮಿಶನರ ಅಧ್ಯಕ್ಷತೆಯಲ್ಲಿ ಈ ಕುರಿತಾಗಿ ಒಂದು ಸಭೆಯು ಜರುಗಿದಾಗ ರೂ. ೪,೦೦೦ ವಂತಿಗೆಯಾಯಿತು. ಇಲ್ಲಿಯ ಮುನಿಸಿಪಾಲಿಟಿಯು ಈ ಫಂಡಿಗೆ ರೂ. ೧೫೦೦ ವಾಗ್ದಾನಮಾಡಿರುವುದು. ಹಿಂದು ಸಭಾ ಕೊಲೇಜಿನ ವಿದ್ಯಾರ್ಥಿಗಳೂ ಉಪಾಧ್ಯಾಯರೂ ರೂ. ೫೦೦ ವಂತಿಗೆ ಹಾಕಿರುವರು.

ಹಿಂದೂ-ಮುಸಲ್ಮಾನರ ಕಾದಾಟ:—ಕಳೆದ ತಾ. ೧೧ನೆಯ ದಿನ ಶಿಕಾರಪುರದಲ್ಲಿ ಮಹಮ್ಮದೀಯರು ಆರ್ಯಸಮಾಜದ ಸ್ವಯಂಸೇವಕರ ಮೇಲೆ ದಾಳಿಯನ್ನು ನಡಿಸಿ ಅವರನ್ನು ಬಲವಾಗಿ ಗಾಯಪಡಿಸಿರುವರು.

ಬಿಹಾರ ಮತ್ತು ಒರಿಸ್ಸದ ನ್ಯಾಯವಿಧಾಯಕ ಸಭೆ:—ಈ ಪ್ರಾಂತದ ನ್ಯಾಯವಿಧಾಯಕ ಸಭೆಯು ತಮ್ಮ ಕೌನ್ಸಿಲಿನ ಅಧ್ಯಕ್ಷರಿಗೆ ತಿಂಗಳಿಗೆ ರೂ. ೨೦೦೦ ಸಂಬಳ ಕೊಡಲು ಒಪ್ಪಿರುವುದು.

ಸ್ವರಾಜ್ಯ ಪಾರ್ಟಿಯ ಮೆಂಬರರ ಮೀಟಿಂಗು:—ಲೆಜಿಸ್ಲೇಟಿವ್ ಎಸೆಂಬ್ಲಿಯ ಸ್ವರಾಜ್ಯಪಾರ್ಟಿಯ ಮೆಂಬರರ ಮೀಟಿಂಗಿನಲ್ಲಿ ಕೆಳಗಿನ ಚುನಾವಣೆಯಾಯಿತು. ಪಂಡಿತ ಮೋತಿಲಾಲ ನೇಹರು ನಾಯಕರು, ಶ್ರೀಯುತ ವಿ. ಜೆ ಪಟೇಲರು ಉಪನಾಯಕರು, ಶ್ರೀ ಎ. ರಂಗಸ್ವಾಮಿ ಅಯ್ಯಂಗಾರ್, ಮತ್ತು ನೀಲಕಂಠದಾಸ ಕಾರ್ಯದರ್ಶಿಗಳು, ಮಿ| ಹರಕರ ಮಿಸ್ರ ಇವರು ಕೋಶಾಧೀಶರು.

ಠಕ್ಕು ನೋಟುಗಳು:—ರೂಪಾಯಿ ನೂರರ ಕೆಲವು ಠಕ್ಕು ನೋಟುಗಳು ಈಗ ಚಲಾವಣೆಗೆ ಬಿದ್ದಿವೆ ಎಂದು ಕಂಡುಬಂದಿದೆ. ಈ ವರೆಗೆ ಈ ನೋಟುಗಳು ಕಾನ್‌ಪುರ ಮತ್ತು ಡಿಲ್ಲಿ ಜಿಲ್ಲೆಗಳಲ್ಲಿ ಮಾತ್ರ ಕೆಲವು ಕಾಣಸಿಕ್ಕಿವೆ. ಈ ವರೆಗೆ ದೊರಕಿದ ನೋಟುಗಳಲ್ಲಿ ಎಲ್ಲವೂ ಲಾಹೋರ್ ಎಫ್. ಸಿ. ಅಥವಾ ಕಾನ್‌ಪುರ್ ಡಿ. ಸಿ. ನೋಟುಗಳಾಗಿರುವವು. ಅವು ಕಾರಣ ಯಾವಾತನೂ ರೂಪಾಯಿ ೧೦೦ರ ನೋಟನ್ನು ತೆಗೆದುಕೊಳ್ಳುವಾಗ ಠಕ್ಕಿನದೋ ಅಲ್ಲವೋ ಎಂಬುದನ್ನು ಅವುಗಳ ಕಾಗದ ಮೊದಲಾದುದನ್ನು ಪರೀಕ್ಷಿಸಿ ತಿಳಕೊಳ್ಳಬೇಕಾಗಿದೆ.

ಕೋಹಾಟ್ ಸಂಕಷ್ಟ ನಿವಾರಣಾ ಫಂಡು:—ಪಂಡಿತ ಮದನಮೋಹನ ಮಾಲವೀಯರು ತಾನು ನಾರವಾಡಿಗಳಿಂದ ಕೋಹಾಟ್ ಸಂಕಷ್ಟ ನಿವಾರಣ ಫಂಡಿಗಾಗಿ ಕೂಡಿಸಿದ ರೂ ೪೦೦೦ನ್ನು ಲಾಹೋರ್ ಹಿಂದೂ ಮಹಾ ಸಭೆಯ ವಶಕೊಪ್ಪಿಸಿರುವರು.

ಉದಾರದಾನ:—ಖಿಮಿಬಾಯಿ ಎಂಬ ಬೋಹಾಜಾತಿಯ ವಿಧವೆಯೊಬ್ಬಳು ತನ್ನ ಮರಣಕಾಲದಲ್ಲಿ ೧೬,೪೮,೭೨೨ ರೂಪಾಯಿ ಮೌಲ್ಯದ ಆಸ್ತಿಯನ್ನು ಆಗಾಖಾನರವರ ವಶದಲ್ಲಿ ಇಟ್ಟು, ಅದರಿಂದ ತನ್ನ ಪತಿಯ ಹೆಸರಲ್ಲಿ, ಹೆಣ್ಣು ಮಕ್ಕಳ ಅಥವಾ ಬಾಲಂತಿಯರ ಆಸ್ಪತ್ರೆಯನ್ನಾಗಲಿ, ಅನಾಥಾಶ್ರಮಗಳನ್ನಾಗಲಿ, ತನ್ನ ಜಾತಿಯವರಲ್ಲಿ ವಿವಾಹಗಳಾಗುವಂತೆ ಯೋಗ್ಯ ವಿವಾಹಮಂಟಪವನ್ನಾಗಲಿ ಕಟ್ಟಿಸಲು ಇಚ್ಛೆ ತಿಳಿಸಿರುವಳು. ಇವೊಂದೂ ಅಲ್ಲದಿದ್ದಲ್ಲಿ ದಾನಧರ್ಮಗಳ ಬಗ್ಗೆ ಯಾವುದೊಂದು ವ್ಯವಸ್ಥೆ ಮಾಡಲು ಆಗಾಖಾನರಿಗೇ ತಿಳಿಸಿರುವಳು.

ದಕ್ಷಿಣ ಕನ್ನಡ.

ಬೆಳ್ಳೆ:—ಇಲ್ಲಿಯ ಬೋರ್ಡ ಎಲಿಮೆಂಟರಿ ಶಾಲೆಯ ಮೂರನೇ ವಾರ್ಷಿಕ ವರ್ಧಂತಿಯು ಇದೇ ಫೆಬ್ರವರಿ ತಾ. ೬ನೇ ಶನಿವಾರ ಅಪರಾಹ್ನ ಘಂಟೆ ೬ಕ್ಕೆ ಉಡ್ಪಿ ರೇಂಜ್ ಶಾಲೆಗಳ ಡಿಸ್ಟ್ರಿಕ್ಟ ಇನ್ಸ್‌ಪೆಕ್ಟರ್ ಮಿ| ರಾ| ಬಿ. ವೆಂಕಟರಾಯ ಮಲ್ಯರವರ ಅಧ್ಯಕ್ಷತೆಯಲ್ಲಿ ಜರಗಿತು. ಈ ಊರಿನ ವ ಪರಊರಿನ ಗೃಹಸ್ಥರೂ ಹಲವು ಶಾಲೆಗಳ ಉಪಾಧ್ಯಾಯರೂ ಇತರ ಸರಕಾರಿ ಉದ್ಯೋಗಸ್ಥರೂ ಪ್ರೇಕ್ಷಕರಾಗಿ ನೆರೆದಿದ್ದರು. ಶಾಲೆಯ ಬಡ ವಿದ್ಯಾರ್ಥಿಗಳ ಸಹಾಯಕ ಸಂಘದ ವರದಿ ಮುಗಿದೊಡನೆ ಶಾಲಾ ವಿದ್ಯಾರ್ಥಿಗಳ 'ಮರಾಟರ ಪರಾಭವ' (ಈ ಶಾಲಾ ಹೆಡ್ ಮಾಸ್ಟರ್ ಬಿ. ದಾಸಪ್ಪಯ್ಯ ರಚಿತ)ವೆಂಬ ಯಕ್ಷಗಾನ ತಾಳಮದ್ದಳೆಯೂ, ಈ ಶಾಲಾ ಉಪಾಧ್ಯಾಯ ಶಿವರಾಮ ಅಣ್ಣಯ್ಯ ರಚಿತ 'ಸಂಗೀತ ಅತ್ತೆಯ ಕಾಟ'ವೆಂಬ ಸಾಮಾಜಿಕ ನಾಟಕ'ವೂ ಅಭಿನಯಿಸಿದ್ದಾಯಿತು. ನೆರೆದವರೆಲ್ಲರೂ ಆನಂದ ಸಾಗರದಲ್ಲಿ ಮುಳುಗಿದರು. ಹಲವರು ತಮ್ಮಗಳ ಅಭಿಪ್ರಾಯವನ್ನು ಸೂಚಿಸಿದ ನಂತರ ಅಧ್ಯಕ್ಷರ ಭಾಷಣವೂ ಆಯಿತು. ತನ್ನ ರೇಂಜಿನಲ್ಲಿ ಅತ್ಯುತ್ತಮ ರೀತಿಯಲ್ಲಿ ನಡಿಯುವ ಬೋರ್ಡ ಶಾಲೆಗಳ ಪೈಕಿ ಇದು ಒಂದು, ಬಡವಿದ್ಯಾರ್ಥಿಗಳ ಸಹಾಯಕ ಸಂಘವನ್ನು ಸ್ಥಾಪಿಸಿ, ಪ್ರತ್ಯೇಕ ಆಡಳಿತೆಯ ಕಮಿಟಿಯ ಮೂಲಕ ನಡಿಸುತ್ತಾ ಬರುತ್ತಿರುವುದು ಇತರ ಬೋರ್ಡ ಶಾಲೆಯವರಿಗೆ ಮೇಲ್ಪಂಕ್ತಿಯಾಗಿದೆ,-ಎಂಬೀ ವಿಷಯಗಳು ಅಧ್ಯಕ್ಷರ ಭಾಷಣದಲ್ಲಿ ಅಡಕವಾಗಿದ್ದವು. ವಕ್ಕೀಲಿನ ಶೇಟರ್ ರಾ| ಇ. ಕೃಷ್ಣಯ್ಯ ಶೆಟ್ರವರು ನಾಟಕದಲ್ಲಿ ತಾವು ತಿಳಿದ-ಅತ್ತೆಯು ಸೊಸೆಯನ್ನು ಈ ರೀತಿ ಕಾಡಬಾರದೆಂಬ ಹಿತೋಕ್ತಿಯನ್ನು ತುಳು ಭಾಷೆಯಲ್ಲಿ ವಿವರಿಸಿ ಹೇಳಿದ್ದರು. ಆ ಮೇಲೆ ಇನಾಮುಗಳನ್ನು ಹಂಚಿ, ಧನ್ಯವಾದಗಳನ್ನರ್ಪಿಸಿ, ಪನ್ನೀರು ತಾಂಬೂಲಾದಿಗಳಿಂದ ಉಪಚರಿಸಿ, ರಾಜಗೀತದೊಡನೆ ರಾತ್ರಿ ಘಂಟೆ ೧೧ಕ್ಕೆ ಸಭೆಯು ಮುಕ್ತಾಯವಾಯಿತು.

ಕಾಸರಗೋಡು:—ಮದ್ರಾಸ್ ಲೋಕಲ್ ಬೋರ್ಡ ಆಕ್ಟಿನ ನಂಬ್ರ ೪೫ (೧)ನೆ ಸೆಕ್ಷನಿನನುಗುಣವಾಗಿ ಹೊಸತಾಗಿ ಸ್ಥಾಪಿಸೋಣಾಗಬೇಕಾಗಿ ಗವರ್ನಮೆಂಟಿನವರು ಕೊಡೋಣಾದ ಹುಕುಂ ಪ್ರಕಾರ ಹೊಸತಾಗಿ ಸ್ಥಾಪಿಸೋಣಾಗುವ ಕಾಸರಗೋಡು ತಾಲೂಕು ಬೋರ್ಡಿನ ಬಗ್ಗೆ ತಾಲೂಕು ಬೋರ್ಡ ಮೆಂಬರರ ಚುನಾವಣೆಯ ಕುರಿತು ೧೯೨೫ನೇ ಇಸವಿ ಜನವರಿ ತಾರೀಕು ೬ನೆ ಫೋರ್ಟ ಸೈಂಟ್ ಜೋರ್ಜ ಗಜೇಟಿನ ನಂಬ್ರ ೩ನೆ ಪಾರ್ಟಿನಲ್ಲಿ ಪ್ರಕಟಿಸೋಣಾದ ನಂಬ್ರ ೧೩ನೆ ಪ್ರಕಟಣೆ ಮತ್ತು ನಂಬ್ರ ೩೬೭ ತಾ. ೨೨-೧೨-'೨೪ ಎಲ್. ಎಂಡ್. ಎಮ್. ನೇ ಗವರ್ನಮೆಂಟ್ ಹುಕುಮಿನ ನಂಬ್ರ ೧ನೆ ಕ್ರಮದ ಪ್ರಕಾರ ಕಾಸರಗೋಡು ತಾಲೂಕು ಬೋರ್ಡಿನ ಮೆಂಬರರ ಸ್ಥಾನಗಳಿಗೆ ಮೆಂಬರರನ್ನು ಚುನಾಯಿಸುವ ವಿಷಯ ಕಾಸರಗೋಡು ತಾಲೂಕು ಬೋರ್ಡಿನ ಪ್ರೆಸಿಡೆಂಟರು ಒಂದು ಪ್ರಕಟಣೆಯನ್ನು ಪ್ರಕಟಿಸುತ್ತಾರೆ. ಅದರಂತೆ ಈ ತಾಲೂಕು ಬೋರ್ಡಿಗೆ ಕಾಸರಗೋಡು ಸರ್ಕಲಿನಿಂದ ೨, ಮಂಜೇಶ್ವರ ಸರ್ಕಲಿನಿಂದ ೨, ಬಾಯಾರು ಸರ್ಕಲಿನಿಂದ ೧, ಆದೂರ ಸರ್ಕಲಿನಿಂದ ೧, ಪೆರ್ಡಾಲು ಸರ್ಕಲಿನಿಂದ ೧, ಕುಂಬಳೆ ಸರ್ಕಲಿನಿಂದ ೧, ಪಳ್ಳಿಕೆರೆ ಸರ್ಕಲಿನಿಂದ ೧, ಹೊಸದುರ್ಗ ಸರ್ಕಲಿನಿಂದ ೧, ನೀಲೇಶ್ವರ ಸರ್ಕಲಿನಿಂದ ೧, ತ್ರಿಕರಿಪುರ ಸರ್ಕಲಿನಿಂದ ೧, ಹೀಗೆ ಒಟ್ಟು ೧೨ ಮೆಂಬರರ ಚುನಾವಣೆಯಾಗುವುದು. ಮೆಂಬರಿಕೆಗೆ ಉಮೇದ್ವಾರರಾಗತಕ್ಕವರು ತಮ್ಮ ನೋಮಿನೇಶನುಗಳನ್ನು ಕಾಸರಗೋಡಿನಲ್ಲಿ ೧೯೨೫ನೇ ಇಸವಿ ಫೆಬ್ರವರಿ ತಿಂಗಳ ತಾ. ೨೭ನೇ ಶುಕ್ರವಾರ ಮಧ್ಯಾಹ್ನ ಘಂಟೆ ೧೨ರಿಂದ ಅಪರಾಹ್ನ ಗಂಟೆ ೪ರ ವರೆಗೆ ಕಾಸರಗೋಡು ತಾಲೂಕು ಬೋರ್ಡ ಆಫೀಸಿನಲ್ಲಿ ತಲಪಿಸಬೇಕು. ಮೆಂಬರರ ಚುನಾವಣೆಯು ಮಾರ್ಚಿ ತಿಂಗಳ ತಾ. ೩೩ರಲ್ಲಿ ಜರಗುವುದು.

ಇಲ್ಲಿಯ ಆರ್ಯಸಮಾಜದವರ ಕಡೆಯಿಂದ ಪ್ರತಿ ವಾರದಲ್ಲೂ ಧರ್ಮ, ನೀತಿ, ವಗೈರೆ ಎಲ್ಲಾ ವಿಷಯಗಳಲ್ಲಿಯೂ ಭಾಷಣಗಳೂ, ಉಪನ್ಯಾಸಗಳೂ ಇಲ್ಲಿಯ ಮುನ್ಸೀಫ್ ಕೋರ್ಟಿನ ಟೆನ್ನಿಸ್ ಕೋರ್ಟಿನಲ್ಲಿ ನಡಿಯುತ್ತಿವೆ. ಎಡಿಶನಲ್ ಮುನ್ಸೀಫ ಕೋರ್ಟ ಹೆಡ್ ಕ್ಲಾರ್ಕರಾದ ರಾ| ಗೋಪಾಲ ನಾಯ್ಕರವರೇ ಮೇಲಿನ ಶ್ಲಾಘನೀಯವಾದ ಕಾರ್ಯಗಳಿಗೆ ಕಾರಣಭೂತರಾಗಿರುತ್ತಾರೆ. ಇತ್ತರಲ್ಲಿಯೇ ರಾ| ವಕೀಲ್ ದಂಡಿಲ್ಲಾಯರವರ ಮತ್ತು ರಾ| ಕೆ. ಪಿ. ಪದ್ಮನಾಭಯ್ಯನವರ ೩ ಚಲೋ ಭಾಷಣಗಳು ಆಗಿ ಹೋದವು. ಈ ಸುಸಂದರ್ಭಗಳಿಗೆ ಎಲ್ಲರಿಗೂ ಸುಸ್ವಾಗತವಿದೆ. ವಿನಾ ಇಲ್ಲದೆ, ನಿದ್ರಾವಸ್ಥೆಯಲ್ಲಿರುವ ಈ ಊರಿನಲ್ಲಾದರೂ ಧರ್ಮನಿಷ್ಠರಾದ ರಾ| ಗೋಪಾಲ ನಾಯ್ಕರವರು ಮತ್ತು ಇತರ ಮಹನೀಯರು ಹೆಚ್ಚು ಶ್ರಮಪಟ್ಟು ಕೈಗೂಡಿಸುವ ಈ ಕಾರ್ಯಗಳು ಜನತೆಯ ಹೆಚ್ಚಿನ ಉಪಯೋಗಕ್ಕಾಗಿಯೆ ನಡೆಯುತ್ತಿವೆ ಅಂದಮೇಲೆ, ಇಂಥ ಕಾರ್ಯಗಳು ಇನ್ನೂ ವೃದ್ಧಿಯಾಗಿ ಒಳ್ಳೇ ಫಲಕಾರಿಗಳಾಗಲೆಂದು ಶ್ರೀ ಭಗವಂತನಲ್ಲಿ ಬೇಡುತ್ತೇವೆ.

ಈ ತಾಲೂಕಿನ ಆದೂರು ಸೆಂಟರಿನ ಜಮಾಬಂದಿಯು ನಿನ್ನೆಗೆ ಮುಗಿದು ನಾಳೆಯ ದಿನದಿಂದ ಹೊಸದುರ್ಗ ಸೆಂಟರಿನ ಜಮಾಬಂದಿಯು ಪ್ರಾರಂಭವಾಗುತ್ತಿದೆ.

ಶಂಕರ್ ವಿಠ್ಠಲ್ ಮೋಟರ್ ಬಸ್ ಸರ್ವಿಸಿನವರು ಮೊನ್ನೆ ತಾನೆ ಇಲ್ಲಿಂದ ಜಾಲಸೂರು ಲೈನ್ ತೆರೆದಿರುತ್ತಾರೆ. ಈ ಲೈನಿಗೂ ಕೂಡ ಹೆಚ್ಚಿನ ಪ್ರಯಾಣಿಕರು ಇವರಿಗೆ ಸಿಕ್ಕುತ್ತಾರೆ.

ಸುಗ್ಗಿಯ ಬೆಳೆಯೂ ಆಯಿತು. ಆದರೂ ಅಕ್ಕಿಯ ಬೆಲೆಯು ಕಡಿಮೆಯಾಗಿಲ್ಲ. ಒಟ್ಟಾರೆ ಬಡವರ ಗೋಳು ಹೇಳಲಸಾಧ್ಯವಾಗಿರುತ್ತದೆ. ಸೆಕೆಯು ಕೆಲದಿನಗಳಿಂದ ಅತಿರೇಕವಾಗಿದೆ. ಆದೂರು ವಗೈರೆ ಪ್ರಾಂತದಲ್ಲಿ ಜಾನುವಾರುಗಳ ಕಠಿಣ ಕಾಹಿಲೆಯು ಪ್ರಾರಂಭವಾಗಿ ಹೆಚ್ಚಿನ ಜಾನುವಾರುಗಳಿಗೆ ಪ್ರಾಣಹಾನಿಯಾಗುತ್ತಿದೆಯಂತೆ. ಕೆರೆ, ಬಾವಿಗಳಲ್ಲಿಯ ನೀರು ಈಗಲೇ ಕಡಿಮೆಯಾಗುತ್ತಿದೆ.

ಪೆಡಾರ್ಗಾಲ:—ರಾ| ವಿ. ಎಲ್. ಭಳ್ಳರು ಪ್ರೆಸಿಡೆಂಟರಾಗಿದ್ದಾಗ ಇಟ್ಟ ಆಯುರ್ವೇದಿಕ ಆಸ್ಪತ್ರೆಯನ್ನು ಮುಚ್ಚಿದೆ. ಜನರಿಗೆ ಬಹಳ ತೊಂದರೆಯಾಗಿದೆ.

ಕೊಲ್ಲೂರು:—ಇಲ್ಲಿ ಒಂದು ರೂರಲ್ ಆಸ್ಪತ್ರೆಯನ್ನು ತೆರೆಯುವ ಏರ್ಪಾಡು ನಡಿಯುತ್ತದೆ.

ಮಂಜೇಶ್ವರ:—ಇಲ್ಲಿಯ ಹೊಳೆಗೆ ಸೇತುವೆಯನ್ನು ಕಟ್ಟಲಿಕ್ಕೆ ಪ್ಲೇನ್ ಎಸ್ಟಿಮೇಟು ಮುಂತಾದ್ದು ಆಗಿಯದಂತೆ. ಆದರೆ ಡಿಸ್ಟ್ರಿಕ್ಟ ಬೋರ್ಡಿನಲ್ಲಿ ಹಣವಿಲ್ಲದೆ ಬಾಕಿ ಉಳಿದದಂತೆ.

ಇಲ್ಲಿದ್ದ ೧೨ ಲಾಟಾನು ಕಂಬಗಳಲ್ಲಿ ದೊಡ್ಡ ದೊಡ್ಡವರ ಮನೆಯ ಬಾಗಲಲ್ಲಿರುವವುಗಳು ಮಾತ್ರವೇ ಉರಿಯುತ್ತಿವೆ. ಉಳಿದವುಗಳೆಲ್ಲ ಹಾಳಾಗಿವೆ. ಕೆಲವಕ್ಕೆ ಕಂಬಗಳು ಸಹ ಇಲ್ಲ. ಇನ್ನು ದುರುಸ್ತಿಗೆ ಎಷ್ಟು ವರುಷಗಳು ಬೇಕಾಗಿವೆಯೋ ತಿಳಿಯದು.

ಇಲ್ಲಿಯ ಬೋರ್ಡ ಹಾಯರ ಎಲಿಮೆಂಟರಿ ಶಾಲೆಯ ೫, ೬, ೭ನೇ ಕ್ಲಾಸುಗಳಲ್ಲಿ ೭೯ ಮಂದಿ ಹುಡುಗ ಹುಡುಗಿಯರೂ, ಮಾಪಿಳ್ಳಾ ಬೋರ್ಡ ಶಾಲೆಯ ಹಿಂದೂ ಸೆಕ್ಷನಿನಲ್ಲಿ ೧೫೦ ಮಂದಿ ಹುಡುಗ ಹುಡುಗಿಯರೂ ಇರುತ್ತಾರೆ. ಹೀಗೆ ೨೨೯ ಹುಡುಗರಲ್ಲಿ ಬರೆ ೫೦-೬೦ ಮಂದಿ ಮಾತ್ರವೇ ಗೌಡಸಾರಸ್ವತರ ಮಕ್ಕಳು. ಇತರರೆಲ್ಲರೂ ಕುಂಬಾರ, ಗಾಣಿಗ, ಬಿಲ್ಲವ, ಮೊಗೇರ ಶಂಖ, ಮರಾಟಿ, ಚಪ್ಪೆಕಾರ, ಜಾಡೋಡಿ, ಬಂಟ ಜಾತಿಯವರಾಗಿರುತ್ತಾರೆ. ಇಷ್ಟು ಹುಡುಗರಿರುವ ಶಾಲೆಯನ್ನು ಬೋರ್ಡಿನವರು ಮುಚ್ಚಿದರೆ ಇತರ ಜಾತಿಯ ಮಕ್ಕಳಿಗೆ ವಿದ್ಯೆ ಇಲ್ಲದಂತಾಗುವುದು. ಆದುದರಿಂದ ದೇವಸ್ಥಾನದವರು ಶಾಲೆಯನ್ನು ತೆರೆದರೂ ಇದನ್ನು ಮುಚ್ಚಬಾರದಾಗಿ ಡಿಸ್ಟ್ರಿಕ್ಟ ಬೋರ್ಡ ಪ್ರೆಸಿಡೆಂಟರಿಗೂ ಡಿಸ್ಟ್ರಿಕ್ಟ ಎಜ್ಯುಕೇಶನಲ್ ಆಫೀಸರರಿಗೂ ತಾಲೂಕು ಬೋರ್ಡಿನವರಿಗೂ ಗೌಡಸಾರಸ್ವತರಲ್ಲದ ಇತರ ಜಾತಿಯವರ ವಿನಂತಿ. ಇತರ ಜಾತಿಯವರು ಇರುವ ಮಧ್ಯ ಸ್ಥಳವು ಉದ್ಯಾವರ ಗ್ರಾಮ 11ನೇ ಮೈಲು ಕಲ್ಲಿನ ಹತ್ತಿರ; ಇಲ್ಲಿಗೆ ಟ್ರೆನ್ಸಫರ ಮಾಡಿದರೂ ಆದೀತು ಇಲ್ಲಿ ಶಾಲೆ ಇದೆ. ಇದನ್ನೆ ಹಾಯರ ಎಲಿಮೆಂಟರಿ ಮಾಡಬಹುದು ಇಲ್ಲಿ ಮಾಡಿದರೆ ೩೦೦ ಹುಡುಗರು ಸಿಕ್ಕಬಹುದು.

ವಿವಿಧ ಸಮಾಚಾರ.

ಆಕಳು ಎಮ್ಮೆಗಳಿಗೆ ಹಾಲು ಹೆಚ್ಚಿಸುವ ಉಪಾಯ:—ಅಕ್ಕಿ ಗಂಜಿ ಅರ್ಧ ರತ್ತಲು, ಬೇಯಿಸಿದ ಉದ್ದು ಕಾಲು ರತ್ತಲು, ಒಳ್ಳೇ ಬೆಲ್ಲ ಕಾಲು ರತ್ತಲು, ಚೆನ್ನಾಗಿ ಅರೆದ ಹಿಪ್ಪಲಿ ತೊಲೆ ೧, ಉಪ್ಪು ೨ ತೊಲೆಯಿಂದ ೪ ತೊಲೆಯ ವರೆಗೆ ಈ ಎಲ್ಲ ಜೀನಸುಗಳನ್ನು ಒಟ್ಟಿಗೆ ಕೂಡಿಸಿ ಮಿಶ್ರಣಮಾಡತಕ್ಕದ್ದು. ಬಳಿಕ ಸಾಯಂಕಾಲ ಹಿಂಡಿಯ ಬಳಿಕ ಆಕಳಿಗೆ ಇಲ್ಲವೆ ಎಮ್ಮೆಗೆ ತಿನ್ನಲಿಕ್ಕೆ ಕೊಡತಕ್ಕದ್ದು. ಈ ಪ್ರಕಾರ ಒಂದು ವಾರ ಮಾಡಿದ ಬಳಿಕ ಹಾಲು ದಪ್ಪವಾಗಿಯೂ ಕೈನುಣ್ಣದ್ದಾಗಿಯೂ ಆದ ಬಳಿಕ ಅರೆದ ಹಿಪ್ಪಲಿಯನ್ನು ಅದರಲ್ಲಿ ಕೂಡಿಸತಕ್ಕ ಅವಶ್ಯಕತೆಯಿಲ್ಲ. ಆದರೆ ಉಳಿದ ಮಿಶ್ರಣವನ್ನು ಚಾಲು ಇಡತಕ್ಕದ್ದು. ಇದರಿಂದ ದನಗಳ ಶರೀರದ ದುರ್ಬಲತೆಯು ಕಡಿಮೆಯಾಗಿ ಅವು ಪುಷ್ಟವಾಗುವವು. ಮತ್ತು ಹಾಲೂ ಹೆಚ್ಚಾಗ ಹತ್ತುವದು. ಹಿಂದುಸ್ಥಾನದ ಎಮ್ಮೆ ಆಕಳುಗಳನ್ನು ಅಮೇರಿಕೆಗೆ ಒಯ್ದು ಮೇಲಿನ ತರಹದ ಮದ್ದುಕೊಟ್ಟು ಹೆಚ್ಚಿಗೆ ಹಾಲು ಹಿಂಡಿ ಹೆಚ್ಚು ದುಡ್ಡು ಸಂಪಾದನೆ ಮಾಡುವರು. —ಲೋಕಮಿತ್ರ

• • • • •

ಚೀನಾ ದೇಶದ ದಕ್ಷಿಣ ಭಾಗದಲ್ಲಿ ವಿಶೇಷ ತರದ ಪ್ರಾಣಿಗಳಿರುವುವೆಂದು ಇತ್ತೀಚೆಗೆ ತಿಳಿದು ಬಂದಿರುತ್ತದೆ; ಅವುಗಳಲ್ಲಿ, ನಾಯಿಯ ಮೋರೆಯ ಮನುಷ್ಯರೆಂಬವರು ಅತಿ ಹೆಚ್ಚಿನ ಆಶ್ಚರ್ಯವನ್ನುಂಟುಮಾಡಿರುವರು ಅವರ ನಿವಾಸವು ತೀರಾ ಒಳಭಾಗದಲ್ಲಿದ್ದು ಅವರ ಮೈಯಲ್ಲಿ ತುಂಬಾ ಕೂದಲು ಇದೆ. ಅವರ ವಾಸವು ಮರದ ಮೇಲೆ, ಸ್ವಭಾವವು ಸಂಪೂರ್ಣ ಅನಾಗರಿಕವಾಗಿರುತ್ತದೆ.

• • • • •

ಹತ್ತು ಸಾವಿರ ವರುಷದಲ್ಲಿ ಹಗಲು ರಾತ್ರಿಗಿಂತಲೂ ಒಂದು ನಿಮಿಷದಲ್ಲಿ ಹತ್ತನೆಯ ಒಂದು ಭಾಗ ಹೆಚ್ಚುವುದೆಂದು ಪ್ರೊಫೆಸರ್ ಅರ್ನೆಸ್ಟ ಬ್ರೌನ್ ಎಂಬವರು ಗೊತ್ತುಮಾಡಿದ್ದಾರೆ.

• • • • •

ಸೀಯಾಳದೊಳಗಿನ ಸಿಹಿ ನೀರನ್ನೂ ತಿರುಳನ್ನೂ ಎಳೇ ಕೂಸುಗಳಿಗೆ ಹಾಲಿನ ಬದಲಿಗೆ ಆಹಾರವಾಗಿ ಉಪಯೋಗಿಸಬಹುದು. ಅಲ್ಲದೆ ತೆಂಗಿನ ಕಾಯಿಯ ಹಾಲನ್ನು ಎಮ್ಮೆ ಹಾಲಿನಲ್ಲಿ ಮಿಶ್ರಮಾಡಿ ಮಕ್ಕಳಿಗೆ ಕುಡಿಸಬಹುದೆಂದು ಡಾ| ಎಸ್ ಪಿ. ಲಾರೆನ್ಸ್ ಎಂಬವರ ಅಭಿಪ್ರಾಯ.

• • • • •

ತುರ್ಕಿಸ್ಥಾನದಲ್ಲಿ ೧೫೦ ವರುಷ ಪ್ರಾಯದ ಒಬ್ಬ ಪುರುಷನಿರುವನಂತೆ. ಈತನಿಗೆ ೬ ಮದುವೆಗಳಾಗಿ ೫ ಹೆಂಡಿರು ಇಹಲೋಕವನ್ನು ಬಿಟ್ಟು ಬಿಟ್ಟರು. ಅಲ್ಲದೆ ಕೊನೆಯ ಹೆಂಡತಿಯೂ ಮುದುಕಿಯಾಗಿರುವಳಂತೆ. ಈ ಮುದುಕನು ಇನ್ನೂ ಯೌವನಪ್ರಾಯದವನ ಹಾಗಿದ್ದು ಪುನಃ ಮದುವೆಯಾಗುವ ಇಚ್ಛೆಯಿಂದಿದ್ದಾನೆ.

ಕೋತಿಯ ಮಾಂಸಗ್ರಂಥಿಯಿಂದ ಒಂದು ವಿಧವಾದ ರಸವನ್ನು ತೆಗೆದು ಮನುಷ್ಯನ ಶರೀರಕ್ಕೆ ರಕ್ತನಾಳಗಳ ಮೂಲಕ ಪ್ರಯೋಗಿಸಿ ಮುದುಕರನ್ನು ಹರೆಯದವರನ್ನಾಗಿ ಮಾಡಲು ಪಾಶ್ಚಾತ್ಯದೇಶದ ವೈದ್ಯರುಗಳು ಪ್ರಯತ್ನಿಸಿರುವುದಾಗಿ ತಿಳಿಸಿದೆಯಷ್ಟೆ. ಇಂತಹ ರಸಪ್ರಯೋಗದಿಂದ ವೃದ್ಧರಾದ ಕೈಸರರು ನವಯೌವನಸ್ಥರಾಗಿರುವರೆಂದು ಹಾಲೆಂಡಿನ ಒಬ್ಬ ಸ್ತ್ರೀಯು ತಿಳಿಸಿರುವುದಾಗಿ ಪ್ರಕಟವಾಗಿದೆ. ಕೈಸರರು ರಾಜ್ಯಭ್ರಷ್ಟರಾದ ನಂತರ ಪತ್ನೀಪುತ್ರಾದಿಗಳ ಸಮೇತ ಅಜ್ಞಾತವಾಸಕ್ಕಾಗಿ ಹಾಲೆಂಡಿಗೆ ಹೋದ ಮೇಲೆ ಪತ್ನಿಯು ಸತ್ತುಹೋಗಲು ಮತ್ತೊಬ್ಬ ಯೌವನಸ್ಥಳನ್ನು ಈಚೆಗೆ ವಿವಾಹ ಮಾಡಿಕೊಂಡರು. ಹೀಗೆ ವೃದ್ಧಾಪ್ಯದಲ್ಲಿ ಮದುವೆಯಾದುದಕ್ಕಾಗಿ ಅವರನ್ನು ಜನರು ಆಕ್ಷೇಪಿಸುತ್ತಿದ್ದಲ್ಲದೆ, ದಂಪತಿಗಳಿಗೆ ಪರಸ್ಪರ ವಿಶ್ವಾಸವಿಲ್ಲದಿದ್ದಿತು. ಆದರೆ ಈ ಕೋತಿಯ ಮಾಂಸಗ್ರಂಥಿ ರಸಪ್ರಯೋಗದಿಂದ ಉದುರಿ ಹೋಗಿದ್ದ ತಲೆ ಮತ್ತು ಮೀಸೆಯ ಕೂದಲುಗಳು ಬೆಳೆದು ನವಯೌವನಸ್ಥರ ಹಾಗೂ, ತಮ್ಮ ಜ್ಯೇಷ್ಠ ಪುತ್ರನಾದ ಯುವರಾಜನಿಗಿಂತ ಚಿಕ್ಕವರ ಹಾಗೂ ಕಾಣಿಸುತ್ತಾರಂತೆ ಮತ್ತು ಪರಸ್ಪರ ವಿಶ್ವಾಸವಿಲ್ಲದಿದ್ದ ದಂಪತಿಗಳು ಬಹಳ ಅನ್ಯೋನ್ಯದಿಂದಿರುವರಂತೆ.

• • • • •

ಅಂಟನ್ ಫ್ಲೆಟ್ನರ್ ಎಂಬೊಬ್ಬ ಡಚ್ ಶಾಸ್ತ್ರಜ್ಞನು ಒಂದು ಯಂತ್ರವನ್ನು ಕಂಡುಹಿಡಿದಿರುವನು. ಇದರಿಂದ ದೊಡ್ಡ ಹಡಗುಗಳು ಈಗಿರುವ ಕಲ್ಲಿದ್ದಲ್ಲಿನ ಸಹಾಯವಿಲ್ಲದೆಯೂ ಧ್ವಜಗಳೂ ಇಲ್ಲದೆಯೂ ಸಮುದ್ರದ ಗಾಳಿಯ ಶಕ್ತಿಯಿಂದಲೇ ನಡೆಯುತ್ತವೆ. ಇನ್ನು ಮುಂದೆ ಭೂಮಿಯ ಮೇಲೆ ನಡೆಯುವ ಎಲ್ಲಾ ಯಂತ್ರಗಳೂ ಕೂಡ ಗಾಳಿಯ ಸಹಾಯದಿಂದಲೇ, ನಡೆಯಬಹುದೆಂದೂ ಕಲ್ಲಿದ್ದಲ್ಲಿನ ಸಹಾಯವು ಅನವಶ್ಯಕವಾಗಿ ಖರ್ಚು ಕಡಿಮೆಯಾಗುವುದೆಂದೂ ಹೇಳಿದ್ದಾರೆ.

• • • • •

ಸೆಸಿಲ್ ಪಿಟೆನ್ಸ್ ಎಂಬ ೨೪ ವರುಷ ಪ್ರಾಯದ ಒಬ್ಬ ಆಂಗ್ಲೇಯನು ಕಾರಾಗೃಹದಲ್ಲಿ ಬಂಧಿಯಾಗಿದ್ದನು. ಆತನು ಆತ್ಮಹತ್ಯ ಮಾಡಿಕೊಳ್ಳುವದಕ್ಕಾಗಿ ೯ ಅಂಗುಲ ಉದ್ದದ ಎರಡು ಚಮಚಗಳನ್ನು ನುಂಗಿದನು. ಚಮಚಗಳನ್ನು ನುಂಗಿದರೂ ಕೂಡ ಆತನು ಸಾಯಲಿಲ್ಲ. ಅವು ಎದೆಯ ಮೂಳೆಗಳ ಮಧ್ಯೆ ಸಿಕ್ಕಿಕೊಂಡಿದ್ದುದರಿಂದ ಮಲಗುವ ವೇಳೆಯಲ್ಲಿ ಅವನಿಗೆ ಬಾಧೆಯಾಗುತ್ತಿತ್ತು. ಅನಂತರ ಅವನ ಪೋಲೀಸ ಆಸ್ಪತ್ರೆಯಲ್ಲಿ ಎಕ್ಸ್‌ರೇ ಮೂಲಕ ಪರೀಕ್ಷಿಸಿ ನೋಡಿದಲ್ಲಿ ಚಮಚಗಳು ಕಂಡುಬಂದು ಶಸ್ತ್ರಚಿಕಿತ್ಸೆಯಿಂದ ತೆಗೆಯಲ್ಪಟ್ಟವು. ಇಂಥಾ ಪದಾರ್ಥಗಳು ಹೊಟ್ಟೆಯೊಳಗೆ ಇಷ್ಟು ದೀರ್ಘಕಾಲವಿದ್ದುದನ್ನು ನೋಡಿದುದು ಇದೇ ಮೊದಲೆಂದು ಡಾಕ್ಟರರ ಅನುಭವ.

ಅನುಕ್ರಮಣಿಕೆ

ಅಗ್ರಲೇಖ — ಪುಟಗಳು.
ಮುಂಬಯಿ ವಿಶ್ವವಿದ್ಯಾಲಯವೂ ದೇಶಭಾಷೆಗಳೂ ೬
ಸ್ಫುಟವಿಚಾರಗಳು—
೧ ಬಂಗಾಳದ ಆರ್ಡಿನೆನ್ಸ್, ೨ ಅತ್ಯಾಚಾರವು ಪ್ರಯೋಜನಕಾರಿಯಲ್ಲ, ೩ ಬಂಗಾಳದ ಆಡಳಿತ, ೪ ಲೇಬರ ಪಕ್ಷದ ಬುದ್ಧಿವಾದ, ೫ ಸರದಾರ ಗುಲಾಬ ಸಿಂಗರ ಠರಾವು ,,
ಮಂಗಳೂರು
ವರ್ತಮಾನಸಂಗ್ರಹಗಳು—
ವಿದೇಶ, ಒಳದೇಶ ೫
ದಕ್ಷಿಣ ಕನ್ನಡ—ಬೆಳ್ಳೆ, ಕಾಸರಗೋಡು, ಪೆರ್ಡಾಲ, ಕೊಲ್ಲೂರು, ಮಂಜೇಶ್ವರ ,,
ವಿವಿಧ ಸಮಾಚಾರ, ,,
ಮೈಸೂರು ಮಹಾರಾಜರ ಅಭಿನಂದನ ೮
ದ. ಕನ್ನಡ ಜಿಲ್ಲೆಯಲ್ಲಿ ಆಹಾರ ಜೀನಸುಗಳ ಪುರವಣೆ ,,
ಕೊಂಗ್ರೆಸ್ ಕಾಲದಲ್ಲಿ ಸ್ವಯಂಸೇವಕರ ಸೇವೆ ,,
ಮದ್ರಾಸ್ ನ್ಯಾಯವಿಧಾಯಕ ಸಭೆಯಲ್ಲಿ ಡಾಕ್ಟರ ಯು. ರಾಮರಾಯರ ಪ್ರಶ್ನೆಗಳು ಮತ್ತು ಠರಾವುಗಳು ,,
ದಕ್ಷಿಣ ಕನ್ನಡ ಜಿಲ್ಲಾ ತೃತೀಯ ಪರಿಷತ್ತು ಕಾರ್ಕಳ ೭

ಸ್ವದೇಶಾಭಿಮಾನಿ

ಶಕ ೧೮೪೬ ಮಾಘ ಬ|| ೧೨ಯು ಶುಕ್ರವಾರ.

ಮುಂಬಯಿ ವಿಶ್ವವಿದ್ಯಾಲಯವೂ ದೇಶಭಾಷೆಗಳೂ

ದೇಶಭಾಷೆಗಳನ್ನು ಊರ್ಜಿತಸ್ಥಿತಿಗೆ ತರಲು ತಾಲೂಕು ಬೋರ್ಡುಗಳ ಮತ್ತು ಜಿಲ್ಲಾ ಬೋರ್ಡುಗಳ ವ್ಯವಹಾರಗಳು ಕಾರಣವಾಗಲಾರವೆಂದು ನಾವು ಬರೆದು ಒಂದು ವಾರವಾಗುವಷ್ಟರೊಳಗೆ ಇದೆ ವಿಷಯವನ್ನು ಕುರಿತು ಮುಂಬಯಿಯ ವಿಶ್ವವಿದ್ಯಾಲಯವು ತೋರಿಸಿದ ಅನುದಾರತೆಯ ವಿಷಯವಾಗಿ ಪುನಃ ಎರಡು ಮಾತುಗಳನ್ನು ಈ ಹೊತ್ತು ಬರೆಯಬೇಕಾಗಿ ಬಂದಿದೆ. ಮುಂಬಯಿಯ ವಿಶ್ವವಿದ್ಯಾಲಯದ ಸಿನೆಟಿನ ಸಭೆಯಲ್ಲಿ ದೇಶಭಾಷೆಗಳ ಕುರಿತು ಹಲವು ಠರಾವುಗಳು ಬಂದಿದ್ದವು. ದೇಶಭಾಷೆಗಳಿಗೆ ನಿಜವಾದ ಉನ್ನತಿಯು ಪ್ರಾಪ್ತವಾಗಬೇಕಾದರೆ ಯುನಿವರ್ಸಿಟಿಯಲ್ಲಿ ಅವುಗಳಿಗೆ ಪ್ರವೇಶವು ಸಿಗಬೇಕು. ವಾಙ್ಮಯ, ಇತಿಹಾಸ, ತತ್ವಜ್ಞಾನ ಶಾಸ್ತ್ರ ಇವು ಯುನಿವರ್ಸಿಟಿಯ ಶಿಕ್ಷಣದೊಳಗಿನ ವಿಷಯಗಳು. ಈ ವಿಷಯಗಳ ಶಿಕ್ಷಣವು ನಮ್ಮಲ್ಲಿಯ ಯುನಿವರ್ಸಿಟಿಗಳಲ್ಲಿ ಈಗ ಎಷ್ಟೊ ಸಮಯದಿಂದ ಸಿಗುತ್ತವಾದರೂ ಆ ಶಿಕ್ಷಣವು ಪರಕೀಯ ಭಾಷೆಯಿಂದ ನಡೆಯುತ್ತದಾದಕಾರಣ ಇಲ್ಲಿಯ ಭಾಷೆಗಳ ಅಭಿವೃದ್ಧಿಯ ಮಟ್ಟಿಗೆ ಇಂಥ ಶಿಕ್ಷಣದಿಂದ ಹೆಚ್ಚಿನ ಪ್ರಯೋಜನವುಂಟಾಗಲಿಲ್ಲ. ಇದೊಂದು ತೊಡಕು. ಇನ್ನೊಂದು ತೊಡಕು ಯಾವುದೆಂದರೆ, ವಿದ್ಯಾರ್ಥಿಗಳಿಗೆ ಅನ್ಯಭಾಷೆಯಿಂದ ಶಿಕ್ಷಣವನ್ನು ಪಡಕೊಳ್ಳುವಪರಿಶ್ರಮವು ಬೀಳುವುದರಿಂದವಿಷಯ ಜ್ಞಾನವೂ ಸರಿಯಾಗಿ ಉಂಟಾಗುವುದಿಲ್ಲ. ವಿದ್ಯಾರ್ಥಿಗಳು ಉತ್ತರಿಸುವ ಭಾಷೆಯು ಪರಕೀಯವಾದ್ದರಿಂದ ಕೊಟ್ಟ ಉತ್ತರವಾದರೂ ಅಷ್ಟೊಂದು ಸಮಂಜಸವಾಗುವುದಿಲ್ಲ. ಇಂಥಾ ತೊಡಕುಗಳಿರುವುದರಿಂದ ಪರಕೀಯ ಭಾಷೆಯ ಸರ್ವಗಾಮಿತ್ವವನ್ನು ಕಡಿಮೆಮಾಡುವುದಕ್ಕಾಗಿ ಯುನಿವರ್ಸಿಟಿಗಳಲ್ಲಿ ದೇಶಭಾಷೆಗಳ ಪ್ರವೇಶವನ್ನು ಎಲ್ಲರೂ ಬಯಸುತ್ತಿದ್ದಾರೆ. ಈ ಬಯಕೆಯ ಮೇರೆಗೆ ಮುಂಬಯಿಯ ಸಿನೆಟಿನ ಸಭೆಯಲ್ಲಿ ಇಂಗ್ಲಿಷ್ ವಾಙ್ಮಯವೊಂದನ್ನು ಬಿಟ್ಟು ಇತರ ವಿಷಯಗಳನ್ನು ಉತ್ತರಿಸುವಾಗ ವಿದ್ಯಾರ್ಥಿಗಳು ದೇಶಭಾಷೆಗಳನ್ನು ಉಪಯೋಗಿಸಬಹುದೆಂಬ ಅರ್ಥದ ಠರಾವು ಬಂದಿತ್ತು. ಎಂದರೆ ಕಲಿಸುವಾಗ ಪ್ರೊಫೆಸರರು ದೇಶಭಾಷೆಗಳಿಂದ ಕಲಿಸಬೇಕು ಎಂದಲ್ಲ, ವಿದ್ಯಾರ್ಥಿಗಳು ಉತ್ತರಗಳನ್ನು ದೇಶಭಾಷೆಗಳಿಂದ ಕೊಡಬಹುದೆಂದು ಮೇಲಿನ ಠರಾವಿನ ಇತ್ಯರ್ಥವು.

ಈ ಠರಾವನ್ನು ಮುಂಬಯಿ ಯುನಿವರ್ಸಿಟಿಯು ಸರ್ವಾತ್ಮಕವಾಗಿ ಅಂಗೀಕರಿಸಬಹುದಿತ್ತು. ಇದನ್ನು ಸ್ವೀಕರಿಸುವುದರಿಂದ ಅದಕ್ಕೆ ಯಾವ ಪ್ರತ್ಯವಾಯವೂ ಇದ್ದಿಲ್ಲ. ಆದರೆ ಸಿನೇಟು ಈ ಠರಾವಿನೊಳಗಿನ ಅನೇಕ ಸಂಗತಿಗಳನ್ನು ಅಲ್ಲಗಳೆದು ದೇಶಭಾಷೆಗಳ ಪ್ರಶ್ನೆ ಪತ್ರಿಕೆಗಳನ್ನು ಸಂಸ್ಕೃತ ಪಾರ್ಸಿ ಮುಂತಾದ ಕ್ಲೆಸಿಕಲ್ ಭಾಷೆಗಳ ಪ್ರಶ್ನೆ ಪತ್ರಿಕೆಗಳನ್ನು ದೇಶಭಾಷೆಗಳಲ್ಲಿ ಉತ್ತರಿಸಬಹುದೆಂಬುದಾಗಿ ಹೇಳಿದೆ. ಇದರೊಟ್ಟಿಗೆ ಇನ್ನೊಂದು ಕೊಂಚ ಸಮಾಧಾನದ ಸಂಗತಿ ಏನೆಂದರೆ ಇತಿಹಾಸಕ್ಕೆ ದೇಶಭಾಷೆಯ ಅನುಕೂಲತೆಯನ್ನು ಕೊಟ್ಟಿದೆ. ಆದರೆ ತತ್ವಜ್ಞಾನ, ಗಣಿತ, ಇತರ ಶಾಸ್ತ್ರ ಇವುಗಳ ವಿಷಯವಾಗಿ ದೇಶಭಾಷೆಯ ಸಂಪರ್ಕವನ್ನು ಯುನಿವರ್ಸಿಟಿಯು ಸಹಿಸುವುದಿಲ್ಲ. ಆ ಮಟ್ಟಿಗೆ ದೇಶಭಾಷೆಗಳು ಅದಕ್ಕೆ ಅಸ್ಪೃಶ್ಯವಾಗಿವೆ! ಇತಿಹಾಸಕ್ಕೆ ದೇಶಭಾಷೆಯು ಆಗಬಹುದಾದರೆ ಇತರ ವಿಷಯಗಳಿಗೆ ಮಾತ್ರ ಯಾಕೆ ಆಗಕೂಡದು? ದೇಶಭಾಷೆಗಳಲ್ಲಿ ಶಬ್ದ ಸಮುಚ್ಚಯ, ವಾಕ್‌ಪ್ರಚಾರ ಇ. ಇ. ಇಲ್ಲವೆಂದಾದರೆ ಅಥವಾ ಇವುಗಳ ದಾರಿದ್ರ್ಯವುಂಟು ಎಂದಾದರೆ ಆ ನ್ಯೂನತೆಯನ್ನು ಹೋಗಲಾಡಿಸುವುದಕ್ಕಾಗಿಯೆ ದೇಶಭಾಷೆಗಳನ್ನು ವಿಶ್ವವಿದ್ಯಾಲಯಗಳು ಅಂಗೀಕರಿಸಬೇಕೆಂದು ಹೇಳಿಕೆ ಇದೆ. ಇಂಗ್ಲಿಷ್ ಭಾಷೆಯಲ್ಲಿಯಾದರೂ ಪ್ರಥಮತಃವೆ ಪರ್ವತಪ್ರಾಯವಾದ ಗ್ರಂಥರಚನೆಯಾಗಿರಲಿಲ್ಲ. ಗ್ರಂಥರಚನೆ ಇಲ್ಲದ ಆ ದರಿದ್ರಸ್ಥಿತಿಯಲ್ಲಿ ವಿಶ್ವವಿದ್ಯಾಲಯದೊಳಗೆ ಇಂಗ್ಲಿಷ ಬೇಡವೆನ್ನಬಹುದಿತ್ತೆ? ಮತ್ತು ಆ ಮೇರೆಗೆ ಯಾರಾದರೂ ಹೇಳಿದ್ದರೆ? ಇಲ್ಲ. ಎಂದ ಮೇಲೆ ಈ ಕಾರಣವು ಟೊಳ್ಳೆಂಬುದು ಸ್ಪಷ್ಟವಾಗುತ್ತದೆ.

ಮುಂಬಯಿ ಯುನಿವರ್ಸಿಟಿ ಅಥವಾ ಇತರ ಯುನಿವರ್ಸಿಟಿಗಳು ದೇಶಭಾಷೆಗಳ ಪ್ರವೇಶ ಪ್ರತಿಬಂಧಕ್ಕೆ ತೋರಿಸುವ ಕಾರಣಗಳು ಟೊಳ್ಳಿರಲಿ, ಇಲ್ಲದಿರಲಿ, ವಿದ್ಯಾರ್ಥಿಗಳು ಉತ್ತರಗಳನ್ನು ಬರೆಯುವಾಗ ದೇಶಭಾಷೆಗಳನ್ನು ಪ್ರಯೋಗಿಸಲು ಇನ್ನೂ ಅಪ್ಪಣೆಯನ್ನು ಕೊಡದೆ ಇರುವುದು ಕೇವಲ ಅನುದಾರತನದ ಲಕ್ಷಣವಾಗಿದೆ. ಇಂಥ ಅನುದಾರತೆಯನ್ನು ಮುಂಬಯಿಯ ವಿಶ್ವವಿದ್ಯಾಲಯವು ಪ್ರಕಟಿಸಿದ್ದಕ್ಕಾಗಿ ಯಾರೂ ವ್ಯಸನಪಡದೆ ಇರರು. ಇನ್ನುಮುಂದೆಯಾದರೂ ಈ ವಿಷಯಕ್ಕೆ ಅನುಕೂಲ ರೀತಿಯಿಂದ ತೀರ್ಮಾನವು ಸಿಗುವಂತೆ ಅಲ್ಲಿಯ ದೇಶಭಾಷಾವತ್ಸಲರಾದ ಸಭಾಸದರು ಪುನಃ ಯತ್ನಿಸ್ಯಾರೆಂದು ಭಾವಿಸಿದ್ದೇವೆ.

ಸ್ಫುಟ ವಿಚಾರಗಳು.

೧. ಬಂಗಾಲ ಪ್ರಾಂತ್ಯದ ಕ್ಷೇತ್ರಪರಾದ ಲಿಟನ್ ಸಾಹೇಬರ ಆಳಿಕೆಯು ಬಂಗಾಲದ ಆರ್ಡಿನೆನ್ಸಿನ ಮೂಲಕವಾಗಿ ತೀರಾ ಹಾಸ್ಯಾಸ್ಪದವೂ, ಲಜ್ಜಾಸ್ಪದವೂ ಆಗುತ್ತ ಬಂದಿದೆ ಎನ್ನಬೇಕಾಗುತ್ತದೆ. ಒಬ್ಬ ಸಬ್ ಇನ್ಸಪೆಕ್ಟರರ ಖೂನಿಯ ಆರೋಪದ ಮೇರೆಗೆ ಪ್ರೇಮಾನಂದದತ್ತರೆಂಬವರ ಮೇಲೆ ಪೊಲೀಸರು ಖಟ್ಲೆಯನ್ನು ಪ್ರಾರಂಭಿಸಿದ್ದರು. ಈ ಖಟ್ಲೆಯು ಸೆಶನ್ಸ ಕೋರ್ಟಿನಲ್ಲಿ ನಡಿಯುವಾಗ ಜ್ಯೂರಿಗಳು ಪ್ರೇಮಾನಂದರು ನಿರ್ದೋಷಿಗಳೆಂದು ತಮ್ಮ ಅಭಿಪ್ರಾಯಗಳನ್ನು ಕೊಟ್ಟರು. ಆದರೆ ಜಡ್ಜರಿಗೆ ಜ್ಯೂರಿಗಳ ಈ ಅಭಿಪ್ರಾಯವು ಮೆಚ್ಚಲಿಲ್ಲ. ಜ್ಯೂರಿಗಳಿಗೂ ಜಡ್ಜರಿಗೂ ಮತಭೇದವು ಒಂದಲ್ಲಿ ಆ ಖಟ್ಲೆಯನ್ನು ಹೈ ಕೋರ್ಟಿಗೆ ಕಳುಹಿಸಬೇಕೆಂದು ನಿಯಮವಿರುವುದು. ಈ ನಿಯಮಕ್ಕನುಸಾರವಾಗಿ ಸೆ. ಜಡ್ಜರು ಹೈ ಕೋರ್ಟಿಗೆ ಅದನ್ನು ಕಳುಹಿಸಿದರು. ಆದರೆ ಜಡ್ಜರ ದುರ್ದೈವದಿಂದಲೊ, ಪ್ರೇಮಾನಂದರ ಸುದೈವದಿಂದಲೊ ಹೈ ಕೋರ್ಟು ಕೂಡ ಜೂರಿಗಳಂತೆಯೆ ಪ್ರೇಮಾನಂದರನ್ನು ನಿರ್ದೋಷಿಗಳನ್ನಾಗಿ ಮಾಡಿತು. ಇದು ತುಂಬಾ ಆನಂದದ ಮಾತು. ಪರಂತು ಪ್ರೇಮಾನಂದರಿಗೆ ಈ ಆನಂದವನ್ನು ಅನುಭವಿಸಲು ಸರಕಾರಕಾರವು ಬಿಡಲಿಲ್ಲ. ಸೆಶನ್ಸಕೋರ್ಟಿನಲ್ಲಿ ಮತ್ತು ಹೈಕೋರ್ಟಿನಲ್ಲಿ ಈ ಮೊಕದ್ದಮೆಯು ನಡೆಯುತ್ತಿರುವಾಗ ಪ್ರೇಮಾನಂದರನ್ನು ಸರಕಾರವು ಯಥಾಪ್ರಕಾರ ಜೈಲಿನಲ್ಲಿ ಇಟ್ಟಿತ್ತು. ನಿರ್ದೋಷತೆಯ ಹೈ ಕೋರ್ಟಿನ ನಿರ್ಣಯವನ್ನು ಪ್ರೇಮಾನಂದರಿಗೆ ಶ್ರುತಪಡಿಸಿ ಜೈಲಿನ ಗೇಟಿನ ಹೊರಗೆ ಕಳುಹಿಸಿದ ಕೂಡಲೆನೆ—ಒಂದು ಮಾರು ಕೂಡ ಮುಂದರಿಸಲಿಲ್ಲ. ಅಷ್ಟರೊಳಗೆ—ಆರ್ಡಿನೆನ್ಸಿನ ಆಧಾರದ ಮೇಲಿಂದ ಅವರನ್ನು ಸರಕಾರವು ಪುನಃ ಪ್ರತಿಬಂಧಿಸಿದೆ! ಲಿಟನ್ ಸಾಹೇಬರ ಸರಕಾರಕ್ಕೆ ನ್ಯಾಯನೀತಿಗಳ ಬೆಂಬಲವಿಲ್ಲವೆಂಬುದು ಇದರ ಮೇಲಿಂದ ಅತಿ ಸ್ಪಷ್ಟವಾಗುವುದು. ಇದು ಬಂಗಾಲ ಸರಕಾರದ ಅಪಜಯವೆ ಸರಿ. ನ್ಯಾಯಾಸನದ ಮುಂದೆ ಈ ರೀತಿಯಿಂದ ಪರಾಭವವು ಬಂದ ಬಳಿಕ ಆರ್ಡಿನೆನ್ಸಿನ ಅಡ್ಡದಾರಿಯಿಂದ ಪ್ರವರ್ತಿಸುವುದು ಅನ್ಯಾಯವಲ್ಲದೆ ಇನ್ನೇನು? ಸುಭಾಸಚಂದ್ರರಂಥವರ ಮೇಲೆ ಇದೆ ಆರ್ಡಿನೆನ್ಸಿನ ಪ್ರಯೋಗವನ್ನು ಮಾಡಿ ಬಂಗಾಲದ ಜೈಲಿನಲ್ಲಿ ಹಲವು ಸಮಯ ಇಟ್ಟು ಅವರನ್ನು ಬ್ರಹ್ಮದೇಶಕ್ಕೆ ಕಳುಹಿಸಲಾಗಿದೆ. ಸರಕಾರವು ಈ ಪ್ರಕಾರವಾಗಿ ನಿರಂಕುಶ ಪ್ರವೃತ್ತಿಯನ್ನು ನಡಿಸುತ್ತಿರುವುದು ಅದರ ಮನಸ್ಸಿಗೆ ಹಿತವೆಂದು ತೋರಿದರೂ, ಮತ್ತು ದಬ್ಬಾಳಿಕೆಯಿಂದ ಸ್ವರಾಜ್ಯದ ಆಕಾಂಕ್ಷೆಯನ್ನು ನಿಲ್ಲಿಸಿಬಿಡಬಹುದೆಂದು ಸರಕಾರವು ನೆನಸಿದರೂ, ತತ್ಕಾಲದ ಮಟ್ಟಿಗೆ ಹೇಗಿದ್ದರೂ, ಮುಂದೆ ಒಟ್ಟಿನ ಮೇಲೆ ಇಂಥ ದಬ್ಬಾಳಿಕೆಯು ಎಂದೂ ಹಿತಪರಿಣಾಮಿಯಾಗುವುದಿಲ್ಲ. ಎಷ್ಟೆಷ್ಟು ದಬ್ಬಾಳಿಕೆಯು ಅಧಿಕವಾಗುವುದೊ ಅಷ್ಟಷ್ಟು ಅದು ಲೋಕಪ್ರೀತಿಯನ್ನು ಕಳೆದುಕೊಳ್ಳುವುದು. ಈ ಸಂಗತಿಯನ್ನು ಲೋಕದ ಇತಿಹಾಸವು ಸಿನೆಮದೊಳಗಿನ ಚಿತ್ರಗಳಷ್ಟು ಸ್ಪಷ್ಟವಾಗಿ ತೋರಿಸಿಕೊಡುತ್ತದೆ. ಆದ್ದರಿಂದ ಬಂಗಾಲದ ಗವರ್ನರರು ಈ ಅಯೋಗ್ಯ ಪದ್ಧತಿಯನ್ನು ನಿಲ್ಲಿಸುವುದು ಹಿತಾವಹವು.

೨. ಆದರೆ ಅತ್ಯಾಚಾರದ ಮಾರ್ಗವನ್ನು ಯಾರೂ ಸಮ್ಮತಿಸಲಿಕ್ಕಿಲ್ಲವೆಂಬುದನ್ನು ಮರೆಯಬಾರದು. ಜನತೆಯ ಅತ್ಯಾಚಾರಕ್ಕೆ ಸರಕಾರದ ದಬ್ಬಾಳಿಕೆಯು ಔಷಧವಲ್ಲ. ಸರಕಾರದ ಅತ್ಯಾಚಾರಕ್ಕೆ ಜನತೆಯ ಅತ್ಯಾಚಾರವು ಪ್ರತಿಕಾರವಲ್ಲ. ಈ ಎರಡು ಸಂಗತಿಗಳು ನಿರ್ವಿವಾದವಾದವುಗಳು. ತಥಾಪಿ ನಮ್ಮ ದೇಶದ ದುರ್ದೈವದಿಂದ ಮತ್ತು ಸಹಾನುಭೂತಿಯ ಲೇಶವು ಕೂಡ ಇಲ್ಲದ ಅಧಿಕಾರಿಗಳ ಅವಿವೇಕದ ಆಳಿಕೆಯಿಂದ ಹಿಂದುಸ್ಥಾನದಲ್ಲಿ ಕ್ರಾಂತಿಕಾರಕರ ಚಳವಳವು ಅಸ್ತಿತ್ವದಲ್ಲಿ ಬಂತು. ಮಧ್ಯದಲ್ಲಿ ಮಹಾತ್ಮಾಗಾಂಧಿಯವರು ಅನತ್ಯಾಚಾರದ ಚಳವಳವನ್ನು ಪ್ರಾರಂಭಿಸಿದ ಬಳಿಕ ಇದು ಲೋಪಹೊಂದಿತ್ತು. ಈಗ ಕ್ರಾಂತಿಕಾರಕರಲ್ಲಿ ಯಾರೊ ಒಬ್ಬರು ಗಾಂಧಿಜಿಗಳಿಗೆ ಒಂದು ಪತ್ರವನ್ನು ಬರೆದು ಅದರಲ್ಲಿ ಮುಂದಿನಂತೆ ಕೆಲವು ಮಾತುಗಳನ್ನು ಬರೆದಿರುತ್ತಾನೆ. "ರಾಜಕಾರಣದಲ್ಲಿ ಅತ್ಯಾಚಾರಕ್ಕೆ ಸ್ಥಾನವಿಲ್ಲ, ಅದು ನಿರರ್ಥಕವಾದ್ದು. ನೀವು ತನ್ನ ಅನತ್ಯಾಚಾರದಿಂದ ಒಂದು ವರ್ಷದೊಳಗೆ ಹಿಂದುಸ್ಥಾನಕ್ಕೆ ಸ್ವರಾಜ್ಯವು ಬಂದೀತೆಂದು ಹೇಳಿ ನಿಮ್ಮ ತತ್ವಜ್ಞಾನವನ್ನು ಉಪದೇಶಿಸಲು ಮತ್ತು ಅದರ ಮೇರೆಗೆ ಕಾರ್ಯಮಾಡಲು ಉಪಕ್ರಮಿಸಿದ್ದರಿಂದ ನಾವು—ಕ್ರಾಂತಿಕಾರಕರು ನಿಮಗೆ ಅಸ್ಪದವನ್ನು ಕೊಟ್ಟೆವು. ನಮಗೆ ಮೊದಲೆ ಗೊತ್ತು—ನಿಮ್ಮ ತತ್ವವು ಕಾರ್ಯಕಾರಿಯಾಗಲಿಕ್ಕಿಲ್ಲ; ತಥಾಪಿ ಪರೀಕ್ಷಾರ್ಥವಾಗಿ ನಿಮಗೆ ಸಂದರ್ಭವನ್ನು ಕೊಟ್ಟದ್ದಾಯಿತು. ನೀವು ಸಂಕಲ್ಪಿಸಿದ ಮೇಲೆ ಒಂದೆ ಅಲ್ಲ, ಮೂರು ನಾಲ್ಕು ವರ್ಷಗಳು ಗತಿಸಿದ್ದಾವೆ. ಆದರೂ ನಿಮ್ಮ ತತ್ವವು ಫಲಿತವಾಗುವದಿಲ್ಲ. ಮಾತ್ರವಲ್ಲ, ಅದು ರಾಜಕಾರಣದಲ್ಲಿ ಕೇವಲ ಅಪ್ರಯೋಜಕವಾದ್ದೆಂಬುದು ಈಗ ಎಲ್ಲ ಜಗತ್ತಿಗೆನೆ ಗೊತ್ತಾಗಿದೆ. ನೀವು ಮುಂಚೆ ಹೇಳಿದ ಮೇರೆಗೆ ರಾಜಕಾರಣವನ್ನು ಬಿಟ್ಟು ತಪಸ್ಸಿಗಾಗಿ ತೆರಳುವದು ಲೇಸು!" ಎಂಬಿತ್ಯಾದಿ ಮಾತುಗಳನ್ನು ಬರೆದು ಕೊನೆಗೆ ಈ ಕ್ರಾಂತಿಕಾರಕನು ಕ್ರಾಂತಿಧರ್ಮವೆ ಪ್ರಬಲವಾದ್ದೆಂಬುದಾಗಿ ಬರೆದಿರುವನು. ಈ ವಾದಕ್ಕೆ ಕೊನೆ ಇಲ್ಲ. ಇದೆ ಎಂದಲ್ಲ, ಲೋಕದಲ್ಲಿ ಯಾವ ತಾತ್ವಿಕವಾದವಾದರೂ ಒಂದು ಸಾರಿ ಮುಗಿಯಿತೆಂಬುದಾಗಿ ಇಲ್ಲ. ಪೂರ್ವಪಕ್ಷ, ಉತ್ತರಪಕ್ಷಗಳು, ಉತ್ತರಪ್ರತ್ಯುತ್ತರಗಳು ಇದ್ದೆ ಇರುತ್ತವೆ. ಈ ಕ್ರಮಕ್ಕನುಸಾರವಾಗಿ ಗಾಂಧಿಜಿಯವರಾದರೂ ಈ ಕ್ರಾಂತಿಕಾರರ ಬರವಣಿಗೆಗೆ ಉತ್ತರವನ್ನು ಕೊಟ್ಟಿದ್ದಾರೆ. ಆ ಲೇಖಕರಾದರೂ ಪುನಃ ಪ್ರತ್ಯುತ್ತರವನ್ನು ಕೊಡಬಹುದು. ಒಂದು ವೇಳೆ ಪ್ರತ್ಯುತ್ತರವನ್ನು ಕೊಡದೆ ಇದ್ದ ಮಾತ್ರಕ್ಕೆ ಅವರು ಅಷ್ಟರಿಂದಲೆ ನಿರುತ್ತರರಾದರೆಂದು ತಿಳಿಯಬಾರದು. ಇರಲಿ. ಆದರೆ ಈ ಸಂದರ್ಭದಲ್ಲಿ ಮುಖ್ಯವಾಗಿ ಕಲಿಯತಕ್ಕ ಪಾಠವು ಒಂದಿದೆ. ರಕ್ತಪಾತಕಾರಕವಾದ ಅತ್ಯಾಚಾರವು ಹಿಂದೂಸ್ಥಾನಕ್ಕೆ ಸಾಧ್ಯವಿಲ್ಲ. ಆದ್ದರಿಂದ ಸನದುಶೀರಾದ ಹಾದಿಯೆ ಅದಕ್ಕೆ ಬೇಕು. ಎಂದರೆ ಗಾಂಧಿಜಿಯವರ ದಾರಿಯು—ಅನತ್ಯಾಚಾರ, ಅಸಹಕಾರ ಇತ್ಯಾದಿ ಹೆಸರುಗಳನ್ನು ಕೊಟ್ಟು ಯಾವ ಪ್ರತಿಕಾರವನ್ನೂ ಮಾಡದೆ ಸುಮ್ಮಗೆ ಕುಳಿತುಕೊಳ್ಳುವ ದಾರಿಯು ಇದು ಮಾತ್ರ-ದೇಶಕ್ಕೆ ಪ್ರಯೋಜನಕಾರಿಯಾಗಲಿಕ್ಕಿಲ್ಲ. ಸನದುಶೀರಾದ ಮಾರ್ಗದಿಂದ ಸರಿಯಾಗಿ ಹೋರಾಡುವದೆ ಪೌರುಷವು.

೩. ಬಂಗಾಲದಲ್ಲಿ ಪ್ರಚಾರಕ್ಕೆ ತಂದ ರಾಕ್ಷಸೀಕಾಯಿದೆಯಾದ ಆರ್ಡಿನೆನ್ಸನ್ನು ರದ್ದುಮಾಡಲು ಅಥವಾ ನಿಷೇಧಿಸಲು ಎಷ್ಟರಮಟ್ಟಿಗೆ ಈ ಬ್ಯುರೋಕ್ರಸಿಯ ರಾಜ್ಯಾಡಳಿತೆಯಲ್ಲಿ ಸಾಧ್ಯವಿದೆಯೋ ಅಷ್ಟರಮಟ್ಟಿಗೆ ಅದನ್ನು ಹಿಂದಿಗಳು ವ್ಯಕ್ತಮಾಡಿರುವರು. ಹಿಂದುಸ್ಥಾನದ ಎಲ್ಲ ಭಾಗಗಳಲ್ಲಿ ಸಭೆಗಳನ್ನು ಕೂಡಿಸಿ ಸಾಮಾನ್ಯ ಜನರು ತಮ್ಮ ನಿಷೇಧವನ್ನು ವ್ಯಕ್ತಪಡಿಸಿರುವರು. ಹಲವು ರಾಜಕೀಯ ಪಂಗಡಗಳ ಮುಖಂಡರು ತಮ್ಮ ಲೇಖಗಳ ಮೂಲಕ ಈ ಕಾಯಿದೆಯಿಂದ ಆಗುವ ಅನಾಹುತಗಳನ್ನು ಸ್ಪಷ್ಟವಾಗಿ ತಿಳಿಸಿರುವರು. ಹಾಗೆಯೆ ವೃತ್ತಪತ್ರಿಕೆಗಳು ಇನ್ನೂ ಅನೇಕ ಎಸೋಶಿಯೇಶನಂಥ ಕೆಲವು ಸಂಘಗಳು ಒಂದೆ ಸಮನೆ ಸದ್ಯದ ಎರಡು ಮೂರು ತಿಂಗಳುಗಳಿಂದ ಈ ಕಾಯಿದೆಯಲ್ಲಿ ಅಡಕವಾಗಿರುವ ಅನ್ಯಾಯದ ಅಂಶವನ್ನು ಲೋಕಕ್ಕೆ ತಿಳಿಸಿದರು. ಅಷ್ಟೆ ಅಲ್ಲ, ಯಾವ ಊರಿಗೆಂದು ಅದು ನಿರ್ಧರಿಸಲ್ಪಟ್ಟಿತೊ, ಅಂಥ ಬಂಗಾಲ ಕೌನ್ಸಿಲಿನಲ್ಲಿಯೆ, ಸರಕಾರದ ಕಣ್ಣೆದುರು ದೇಶಬಂಧು ದಾಸ ಮುಂತಾದ ಅತುಲ ದೇಶಭಕ್ತರು ಆ ಹೊಸ ಬಿಲನ್ನು ಪ್ರಚಂಡ ಬಹುಮತದಿಂದ ನಿರಾಕರಿಸಿದರು. ಕಟ್ಟಕಡೆಗೆ ಹಿಂದುಸ್ಥಾನದ "ಪಾರ್ಲಿಮೆಂಟ"ೆಂದು ವೈಸರಾಯರಿಂದ ನಾಮಕರಣಮಾಡಲ್ಪಟ್ಟ ಎಸೆಂಬ್ಲಿಯಲ್ಲೂ ಕೂಡ ಪಂಡಿತ ಮೋತಿಲಾಲರು ಸರಕಾರದ ಕಣ್ಣುಗಳಲ್ಲಿ ತೀಕ್ಷ್ಣ ಅಂಜನವನ್ನು ಹಾಕಿ ಎಸೆಂಬ್ಲಿಯ ಬಹುಮತವನ್ನು ತನ್ನ ಕಡೆಗೆ ಒಲಿಸಿಕೊಂಡರು. ಈ ರೀತಿಯಾಗಿ ಹಿಂದಿಗಳ ಕೈಯಲ್ಲಿ ಸರಕಾರದ ನಿಷೇಧದ ಎಷ್ಟು ಮಾರ್ಗಗಳಿವೆಯೊ ಅವೆಲ್ಲವೂ ಆಕ್ರಮಿಸಲ್ಪಟ್ಟವೆ. ಮತ್ತು ಇನ್ನುಮುಂದಾದರೂ ಹಿಂದುಗಳು ಸುಮ್ಮನಿರಲಿಕ್ಕಿಲ್ಲ. ಇರಲಿ. ಮೇಲೆ ಹೇಳಿದ ಅಖಂಡ ಅಪಯಶ[illegible]ನ ರುಂಡಮಾಲೆಯನ್ನು ಹಾಕಿಕೊಂಡು ಲಿಟನ ಸರಕಾರವು ಕುಣಿಯಹತ್ತಿದರೆ ಇತರ ಸ್ವತಂತ್ರ ರಾಷ್ಟ್ರಗಳಾದರು ಏನು ಹೇಳಕ್ಕೆವೆಂಬುದನ್ನಾದರು ರಾಜ್ಯಕರ್ತರು ನೋಡಬೇಕಲ್ಲವೆ. ನಾಳೆಯ ಪಾರ್ಲಿಮೆಂಟಿನಲ್ಲಿ ಲೇಬರಪಕ್ಷದ ಮೆಂಬರರಾದ ಮಿ| ಲಿನ್ಸಬರಿಯವರು "ಕಾಯಿದೆ ಕೋರ್ಟುಗಳಲ್ಲಿ ವಿಚಾರಮಾಡದೆ ಇದ್ದ ಕೈದಿಗಳು ಬಂಗಾಲದಲ್ಲಿ ಎಷ್ಟುಮಂದಿಗಳಿದ್ದಾರೆ"ೆಂದು ಕೇಳಲಿಕ್ಕಿರುವರು. ಅಲ್ಲದೆ ಈ ತರದ ಕೈದಿಗಳ ಪೈಕಿ ಎಷ್ಟು ಜನರ ಮೇಲೆ ಆರೋಪವನ್ನು ಹೊರಿಸಲು ಸಾಧ್ಯವಾಗಿಲ್ಲ ಎಂದು ಮುಂತಾಗಿಯೂ ಇವರು ಪ್ರಶ್ನಿಸಲಿಕ್ಕಿರುವರು. ಸಾರಾಂಶ ಬಂಗಾಲದಲ್ಲಿ ಪ್ರಕೃತದಲ್ಲಿರುವ ಚಳವಳದ ವಿಮರ್ಶೆಯು ಬ್ರಿಟಿಷ ಪಾರ್ಲಿಮೆಂಟಿನಲ್ಲಿಯೆ ಆಗಲಿಕ್ಕಿರುವುದು. ಆದರೆ ಕನ್ಸರವೇಟಿವ್ ಪಕ್ಷವು ಈ ಬಿರುಗಾಳಿಯನ್ನು ಯಾವ ರೀತಿಯಿಂದ ತಪ್ಪಿಸಿಕೊಳ್ಳುವುದೆಂದು ನಾವು ಕುತೂಹಲದಿಂದ ನೋಡಬೇಕಾಗಿದೆ. ಹಿಂದುಸ್ಥಾನದ ಪರಿಸ್ಥಿತಿಯನ್ನು ಚರ್ಚಿಸಲಿಕ್ಕೆ ಪಾರ್ಲಿಮೆಂಟಿಗೆ ಸಮಯವನ್ನು ಕೊಡಬೇಕೆಂದು ಒಬ್ಬ ಮೆಂಬರರು ಸೂಚಿಸಿದಕ್ಕೆ "ಸದ್ಯದ ಪರಿಸ್ಥಿತಿಯಲ್ಲಿ ಸಾಧ್ಯವಿಲ್ಲ" ವೆಂಬ ಉತ್ತರವು ಮುಖ್ಯ ಮಂತ್ರಿಯಿಂದ ಹೇಳಲ್ಪಟ್ಟಿದೆ. ಕನ್ಸರವೇಟಿವ್ ರಾಜ್ಯದಲ್ಲಿ ನ್ಯಾಯಾನ್ಯಾಯದ ವಿಷಯವಾಗಿ ಹೆಚ್ಚಿನ ಭೇದವೇನಿದೆ? ಮಿ| ಲಿನ್ಸಬರಿಯವರ ಪ್ರಶ್ನೆಗಳು ಕೂಡ ಯಾವ ಗತಿಯನ್ನು ಹೊಂದುವವೆಂಬುದು ಸದ್ಯದಲ್ಲಿ ವ್ಯಕ್ತವಾಗುವುದು.

೪. ಒಬ್ಬನು ಕಷ್ಟದಲ್ಲಿ ಸಿಕ್ಕಿಬಿದ್ದಾಗ ಅವನಿಗೆ ಬುದ್ಧಿವಾದವನ್ನು ಹೇಳುವವರು ಹಲವರು. ಆದರೆ ತಮ್ಮಿಂದ ಆ ಕಷ್ಟವನ್ನು ದೂರಮಾಡಲು ಸಾಧ್ಯವಿರುವಾಗ ಈ ಉಪದೇಶಕರು ಯಾವದಾದರು ನೆವವನ್ನು ಮುಂದೆಮಾಡಿ ತಮ್ಮ ಮೇಲಿನ ಭಾರವನ್ನು ತಪ್ಪಿಸಿಕೊಳ್ಳುವರು. ಇದಕ್ಕೆ ಬ್ರಿಟನಿನ ಲೇಬರ ಪಕ್ಷವೆ ಉದಾಹರಣೆಯಾಗಿದೆ. ಅಧಿಕಾರವನ್ನು ಹೊಂದಿದಾಗ ಈ ಪಕ್ಷದವರು ಹಿಂದುಸ್ಥಾನದ ವಿಷಯವಾಗಿ ಮುಗ್ಧತೆಯನ್ನು ತೆಕ್ಕೊಂಡರು. ಈಗ ಹಿಂದಿಗಳಿಗೆ ನಾನಾತರದ ಉಪದೇಶವನ್ನು ಮಾಡತೊಡಗಿದ್ದಾರೆ. ಒಬ್ಬರು ನಿಮ್ಮಲ್ಲಿಯ ಕ್ರಾಂತಿಕಾರಕ ಚಳವಳವನ್ನು ನಿಲ್ಲಿಸಬೇಕೆನ್ನುವರು. ಇನ್ನೊಬ್ಬರು ನಿಮ್ಮ ಉಪರೋಧದ ಕ್ರಮವು ನಮಗೆ ಸಮ್ಮತಿಯಿಲ್ಲವೆಂದೆನ್ನುವರು. ಇನ್ನೂ ಅನೇಕರು ಸ್ವರಾಜ್ಯ ಸ್ಥಾಪಿಸಬೇಕಾದರೆ ಸ್ವಲ್ಪ ಸಮಯವು ಬೇಕಾಗುವುದೆಂದು ಅನ್ನುವರು. ಇಂಥವರ ಪೈಕಿ ಒಬ್ಬರಾದ ಮತ್ತು ಹಿಂದುಸ್ಥಾನದಲ್ಲಿ ಸಂಚರಿಸಲಿಕ್ಕೆಂದು ಬಂದ ಮಿ| ಒಸ್ವಲ್ಡ ಮೊಸಲೆ ಎಂಬ ಲೇಬರಪಕ್ಷದ ಗೃಹಸ್ಥರು ಇಂಗ್ಲಂಡಿಗೆ ತೆರಳುವಾಗ ತಮ್ಮ ಆಲೋಚನೆಯನ್ನು ವ್ಯಕ್ತಮಾಡಿರುವರು. ಅವರು ಅನ್ನುತ್ತಾರೆ "ಹಿಂದುಸ್ಥಾನದ ಪರಿಸ್ಥಿತಿಯನ್ನು ಪರೀಕ್ಷಿಸುತ್ತ ಕೂಡ್ರುವ ದಿವಸಗಳು ಇವಲ್ಲ. ಇಲ್ಲಿಯ ಆಳಿಕೆಯಲ್ಲಿ ಬ್ರಿಟಿಷರು ಎಷ್ಟೋ ತಪ್ಪುಗಳನ್ನು ಮಾಡಿರುವರು. ಆದರೆ ತಪ್ಪುಗಳನ್ನು ಸರಿಪಡಿಸಬೇಕಾದರೆ ಒಂದೆ ದಾರಿ ಇದೆ. ಹಿಂದುಸ್ಥಾನದೊಳಗಿನ ಪ್ರಮುಖ ಪಂಗಡದವರ ಒಂದು ಕೊನ್ಫರೆನ್ಸನ್ನು ಸೇರಿಸಿ ಅದರಲ್ಲಿ ಮುಂದಿನ ಇತ್ಯರ್ಥವನ್ನು ನಿಶ್ಚಯಿಸುವುದೆ ಉತ್ತಮವಾದ ದಾರಿಯೆಂದು ನಾನು ಭಾವಿಸಿರುವೆನು. ಈ ಕೊನ್ಫರೆನ್ಸಿನಲ್ಲಿ ಬ್ರಿಟಿಷ ಸರಕಾರವು ತನ್ನ ಅಧಿಕಾರವನ್ನು ತೋರಿಸಿ ಹಿಂದಿಗಳಿಂದಲೂ ಮೇಲಿನ ಸ್ಥಾನವನ್ನು ಸರ್ವಥಾ ತೆಕ್ಕೊಳ್ಳಕೂಡದು. ಹಿಂದಿಗಳೆ ತಮಗೆ ಬೇಕಾಗಿರುವ ಸ್ವರಾಜ್ಯ ಯೋಜನೆಯನ್ನು ನಿಶ್ಚಯಿಸಿ ಆ ಯೋಜನೆಯನ್ನು ಪಾರ್ಲಿಮೆಂಟಿನ ಮುಖಾಂತರ ಕಾಯಿದೆಯನ್ನಾಗಿ ಮಾಡಿಸಿಕೊಳ್ಳಬೇಕು. ಹೊರತು ಬ್ರಿಟಿಷ ಪಾರ್ಲಿಮೆಂಟು ಹಿಂದುಸ್ಥಾನಕ್ಕೆ ಸುಧಾರಣೆಯನ್ನು ಕೊಡುವುದು ಸರ್ವಥಾ ಯೋಗ್ಯವಲ್ಲ." ಇವರ ಆಲೋಚನಾಸರಣಿಯು ಉತ್ತಮವಾಗಿದ್ದರೂ ನಾವು ಮೇಲೆ ಹೇಳಿದಂತೆ ಲೇಬರಪಕ್ಷದ ಈಗಿನ ಸ್ಥಿತಿಯಲ್ಲಿ ಅದರ ಬೆಲೆಯು ಕಡಿಮೆಯೆಂದೆ ಹೇಳಬೇಕಾಗಿದೆ. ಒಂದು ವೇಳೆ ಅಧಿಕಾರಾರೂಢರಾಗಿದ್ದಾಗ ಲೇಬರಪಕ್ಷವು ಇಂಥ ಪ್ರಯತ್ನವನ್ನು ಮಾಡಿದ್ದಾದರೆ ಶ್ಲಾಘನೀಯವಾಗುತಿತ್ತು.

೫. ಈಗಿನ ಎಸೆಂಬ್ಲಿಯ ಬೈಠಕಿನಲ್ಲಿ ಸರದಾರ ಗುಲಾಬಸಿಂಗರು ಒಂದು ಮಹತ್ವದ ಠರಾವನ್ನು ತರಲಿಕ್ಕಿದ್ದಾರೆ. ಮಾರ್ಶಲ್ ಲಾ, ಬೇಕಾಯದೆಸೀರಸಭೆ, ರಾಜದ್ರೋಹ ಮುಂತಾದ ಕಠಿಣ ಕಾಯಿದೆಯ ಮೇರೆಗೆ ಕೈದುಮಾಡಲ್ಪಟ್ಟ ಹಿಂದಿಗಳನ್ನು ಸರಕಾರವು ಕೂಡಲೆ ಬಿಡಬೇಕೆಂದು ಈ ಠರಾವು ಹೇಳುತ್ತದೆ. ಈ ಠರಾವು ಮಹತ್ವವಾದ್ದಾಗಿದೆಂಬುದರಲ್ಲಿ ಸಂಶಯವಿಲ್ಲ. ಮತ್ತು ಎಸೆಂಬ್ಲಿಯು ಕೂಡ ಇದನ್ನು ಪಾಸುಮಾಡೀತೆಂದು ಹೇಳಿದರೆ ಆಶ್ಚರ್ಯವಾಗಲಿಕ್ಕಿಲ್ಲ. ಸರಕಾರಕ್ಕೆ ತನ್ನ ಸರಳಬುದ್ಧಿಯನ್ನು ವ್ಯಕ್ತಮಾಡಬೇಕೆಂದಿದ್ದರೆ ಇದನ್ನು ಅಮಲಿನಲ್ಲಿ ತಂದು ಆರೋಪಿಗಳೆಂದು ವೃಥಾ ಕರೆಯಲ್ಪಟ್ಟವರನ್ನು ಮುಕ್ತಮಾಡಬಹುದು. ಅಲ್ಲದೆ ಕೈದಿಗಳಲ್ಲಿ ಎಷ್ಟೋ ಜನರನ್ನು ಏಕ ತರ್ಫಿ ನ್ಯಾಯದಿಂದ ಜೈಲಿಗೆ ಕಳುಹಿಸಿರುವರು. ಅಪರಾಧಿ ಕಡೆಯಿಂದ ಸಾಕ್ಷಿಗಳನ್ನು ಕೂಡ ನಿರಾಕರಿಸಿದ ಸಂದರ್ಭಗಳು ಕಡಿಮೆಯೆ? ಲೋಕದಲ್ಲಿ ಅಪ್ರೀತಿಯನ್ನು ಹೊಂದಬಾರದೆಂದು ಸರಕಾರದ ಮನಸ್ಸಿನಲ್ಲಿದ್ದರೆ ಅದು ಅವರನ್ನು ಮುಕ್ತಮಾಡಲೆ ಬೇಕು. ಆದರೆ ಬ್ಯುರೋಕ್ರಸಿಯ ಮನಸ್ಸು ಬಹು ಕಠಿಣವಾಗಿದೆ. ಅದು ಎಷ್ಟೊ ಸಂದರ್ಭದಲ್ಲಿ ಜನತೆಯ ಹೇಳಿಕೆಯನ್ನು ಗಣಿಸುವುದಿಲ್ಲ! ಆದ್ದರಿಂದ ಈ ಸಂದರ್ಭದಲ್ಲಿಯೂ ಕೂಡ ಅದು ಯಾವ ರೀತಿಯಿಂದ ವರ್ತಿಸೀತೆಂದು ನೋಡಬೇಕಾಗಿದೆ.

ಮಂಗಳೂರು.

ಬರುವ ತಿಂಗಳಲ್ಲಿ ಚುನಾವಣೆಯಾಗತಕ್ಕ ಮಂಗಳೂರ ತಾಲೂಕು ಬೋರ್ಡ ಮೆಂಬರಿಕೆಗೆ ಮಂಗಳೂರ ಸರ್ಕಲಿನಿಂದ ಮ| ರಾ| ಸಾಂತಪ್ಪ ಅಂಧ್ಯತ್ತಾಯ, ಮ| ರಾ| ಎ. ಬಿ. ಶೆಟ್ಟಿ, ಮಿ| ಜೋನ್ ಪಿ. ಸಿಕೇರ, ಮಿ| ಯು. ಕೆ. ಹುಸೇನ್ ಕುಂಞಿ ಸಾಹೇಬ ಬಹದೂರ, ಎನ್. ವೆಂಕಟರಾವ್, ಬಂಟವಾಳ ಸರ್ಕಲಿನಿಂದ ಅಹಮದ್ ಬ್ಯಾರಿ ಸಾಹೇಬ ಬಹದೂರ್, ಮುಲ್ಕಿ ಸರ್ಕಲಿನಿಂದ ಮ| ರಾ| ಬೋಳ ಮಾಧವರಾವ್, ಮ| ರಾ| ಎಮ್. ರಾಮಕೃಷ್ಣ ಪೂಂಜ, ಮ| ರಾ| ಮಂಜಪ್ಪ ಶೆಟ್ಟಿ, ಮ| ರಾ| ಕಕ್ಕೆಗುತ್ತು ಚಂದಯ್ಯಶೆಟ್ಟಿ, ಪಾಣೆಮಂಗಳೂರ ಸರ್ಕಲಿನಿಂದ ಮ| ರಾ| ನರಿಕೊಂಬು ರಾಮರಾವ್, ಮ| ರಾ| ತಿಮ್ಮಣ್ಣ ಶೆಟ್ಟಿ, ಮ| ರಾ| ಶಿವಪ್ಪ ಐತಾಳ, ಗುರುಪುರ ಸರ್ಕಲಿನಿಂದ ಮ| ರಾ| ಕೆ. ಮುತ್ತಯ್ಯ ಶೆಟ್ಟಿ, ಮ| ರಾ| ಕೆ. ರಘುಚಂದ್ರ ಬಲ್ಲಾಳ ಇವರು ಉಮೇದ್ವಾರರಾಗಿದ್ದಾರೆ.

ಕೆನರಾ ಬ್ಯಾಂಕಿನ ಪಾಲುಮಾಲಿಕರ ಕಳೆದ ಮೀಟಿಂಗಿನಲ್ಲಿ ಪಾಲುಮಾಲ್ಕಿಕರಿಗೆ ಸೇಕಡಾ ೧೫ರಂತೆ ಡಿವಿಡೆಂಡ್ ಮತ್ತು ಸೇಕಡಾ ೪ರಂತೆ ಬೋನಸ್ ಕೊಡತಕ್ಕದ್ದೆಂದು ಮಂಜೂರಾಯಿತು. ಬೇಂಕಿನ ಸಿಬಂದಿಗೆ ಎರಡು ತಿಂಗಳ ಸಂಬಳ ಬೋನಸಾಗಿ ಕೊಡಬೇಕಾಗಿಯೂ ನಿರ್ಣಯವಾಗಿದೆ. ಅಲ್ಲದೆ ಇತ್ತಲಾಗೆ ಗತಿಸಿದ ಬೇಂಕಿನ ಕ್ಲಾರ್ಕ ಎಮ್. ಅಪ್ಪರಾವ್ ಅವರ ಕುಟುಂಬಕ್ಕೆ ರೂ. ೪೫೦ ಕೊಡಬೇಕೆಂದೂ ನಿರ್ಧರಿಸಿದೆ.

The Calicut Bank, Ltd.,
ದಿ ಕೆಲಿಕಟ್ ಬೇಂಕ್, ಲಿಮಿಟೆಡ್,

ಹೆಡ್ ಆಫೀಸು — ಕಲ್ಲಿಕೋಟೆ.
ಬ್ರಾಂಚುಗಳು:— ಮುಲ್ಲಸ್‌ಚೇರಿ, ತಲಚೇರಿ, ಕೊಚ್ಚಿ ಮತ್ತು ಪಾಲ್ಘಾಟು.
ರಿಜಿಸ್ಟರ್ಡ್ ಮತ್ತು ಅಧಿಕಾರಗೊಳಿಸಲ್ಪಟ್ಟ ಮೂಲಧನ ರೂ. 5,00,000—0—0.
ರೂಪಾಯಿ 10ರ 50,000 ಪಾಲುಗಳು.
(30—8—1924)ರ ವರೆಗೆ ಮೌಲ್ಯ ಮೂಲಧನ ರೂಪಾಯಿ 1,81,850—0—0.
ಒಂದು ವರುಷದ ಕಾಯಂ ಠೇವಣಾತಿಗೆ ಬಡ್ಡಿ ದರ ಸೇಕಡಾ ರೂ. 7—8—0.
ಕಳೆದ 4 ವರುಷಗಳಲ್ಲಿ ಪಾಲುಗಾರರಿಗೆ ಸೇಕಡಾ 12ರಂತೆ ಬಡ್ಡಿ ಹಂಚಿದೆ.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಸಿ. ಕೃಷ್ಣನ್, ಬಿ. ಎ. ಬಿ. ಎಲ್,
ಮೆನೇಜಿಂಗ್ ಡ್ಯಾರೆಕ್ಟರ್.

ಡ್ಯಾರೆಕ್ಟರರಲ್ಲಿ ಒಬ್ಬರು—
ಎಮ್. ನಾರಾಯಣ ಕಾಮತ್, ಬಿ. ಎ.,
ಪ್ಲೀಡರ್, ಕುಂದಾಪುರ.

ಥಿಯೋಸೋಫಿಕಲ್ ಸೊಸೈಟಿಯ ಉಪಾಧ್ಯಕ್ಷ ಶ್ರೀಯುತ ಜಿನರಾಜದಾಸ್ ಎಮ್. ಎ. (ಕೆನ್‌ಟಬ್) ಇವರು ತಾ ೨೩ನೇ ಸಾಯಂಕಾಲ ಇಲ್ಲಿಗೆ ಬರುವರು. ತಾ. ೨೩ ಮತ್ತು ೨೪ರಲ್ಲಿ ಇಲ್ಲಿಯ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯಲ್ಲಿ ಇವರ ಭಾಷಣಗಳಾಗುವುವು.

ದಕ್ಷಿಣ ಕನ್ನಡ ಜಿಲ್ಲಾ ಶಿಕ್ಷಣ ಪ್ರದರ್ಶನವು ಬರುವ ತಾ. ೨೮ನೇ ಬೆಳಿಗ್ಗೆ ೯ ಗಂಟೆಗೆ ಜಿಲ್ಲಾ ಕಲೆಕ್ಟರ್ ಮಿ| ಸಿ. ಎ. ಸೌಟರ್ ಐ. ಸಿ. ಎಸ್. ಇವರಿಂದ ತೆರಿಯಲ್ಪಟ್ಟು ತಾ. ೨ರ ವರೆಗೆ ನಡಿಯುವುದು. ಪ್ರಥಮ ದಿನ ಮಧ್ಯಾಹ್ನ ೨-೩೦ರಿಂದ ೩-೩೦ ವರೆಗೆ ಮಿ| ಜಿ. ಎ. ಸಾಲ್ಡಾನ ಬಿ. ಎ., ಎಲ್. ಎಲ್. ಬಿ. ಇವರು ದಕ್ಷಿಣ ಕನ್ನಡದ ಹಳ್ಳಿ ನಾಡಿನ ನುಡಿಗಳು ಎಂಬುದರ ಕುರಿತೂ ೩-೪೫ರಿಂದ ೪-೪೫ರ ವರೆಗೆ ಕೆನರಾ ಹೈ ಸ್ಕೂಲಿನ ಉಪಾಧ್ಯಾಯ ಮ. ರಾ. ಎಮ್. ಎನ್. ಕಾಮತರು ಕನ್ನಡ ಪದ್ಯಗಳನ್ನು ಕಲಿಸುವ ವಿಧಾನದ ಕುರಿತೂ ಉಪನ್ಯಾಸ ಕೊಡುವರು. ಅನಂತರ ಗವರ್ನಮೆಂಟ ಹಾಯರ್ ಎಲಿಮೆಂಟರಿ ಶಾಲೆಯ ಉಮೇದ್ವಾರ ವಿದ್ಯಾರ್ಥಿಗಳ ಡ್ರಿಲ್ ಮತ್ತು ಆಟಗಳ ಪ್ರದರ್ಶನ, ಕೊನೆಗೆ ರಾತ್ರಿ ೯ರಿಂದ ೧೦ರವರೆಗೆ ಗವರ್ನಮೆಂಟ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯ ಉಮೇದ್ವಾರ ವಿದ್ಯಾರ್ಥಿಗಳ ನಾಟಕ ನಡಿಯುವುದು. ಮರುದಿನ ಬೆಳಿಗ್ಗೆ ೮-೩೦ರಿಂದ ೧೧-೩೦ರ ವರೆಗೆ ಪ್ರದರ್ಶನವು ಸ್ತ್ರೀಯರ ಬಗ್ಗೆ ಮಾತ್ರ. ಮಧ್ಯಾಹ್ನ ೩ರಿಂದ ೪-೪೦ರ ವರೆಗೆ ಮಕ್ಕಳ ಆರೈಕೆ ಮತ್ತು ಗೃಹಕೃತ್ಯದ ವಿಚಾರ ಈ ಸಮಸ್ಯೆಯ ಕುರಿತು (ಉಪಾಧ್ಯಾಯಸಿಯರಿಗೋಸ್ಕರ) ನೆಶನಲ್ ಗರ್ಲ್ಸ ಸ್ಕೂಲಿನ ಪ್ರಿನ್ಸಿಪಾಲ ಶ್ರೀಮತಿ ಮನೋರಮಾಬಾಯಿ ಮತ್ತು ಹೆಂಗಸರ ಆಸ್ಪತ್ರಿಯ ಲೇಡಿ ಡಾಕ್ಟರ್ ಜಾನಕಿಬಾಯಿ ಇವರ ಉಪನ್ಯಾಸ, ಬಳಿಕ ೪-೪೫ರಿಂದ ೫-೪೫ರ ವರೆಗೆ ಗಣಪತಿ ಹೈಸ್ಕೂಲಿನ ಹೆಡ್ ಮಾಸ್ತರ್ ಮ| ರಾ| ಎಮ್. ಎಸ್. ಏಕಾಂಬರ್ ರಾವ್ ಬಿ. ಎ., ಎಲ್. ಟಿ. ಇವರ ಶಿಕ್ಷಣ ಮತ್ತು ಸಮಾಜಸೇವೆಯ ಕುರಿತು ಭಾಷಣ. ಸಾಯಂಕಾಲ ೬ರಿಂದ ೭ರ ವರೆಗೆ ಆರೋಗ್ಯರಕ್ಷಣೆಯ ಕುರಿತು (ಮಾಯಾಲಾಂದ್ರಯುಕ್ತವಾಗಿ) ಜಿಲ್ಲಾ ಹೆಲ್ತ ಆಫೀಸರ ಡಾಕ್ಟರ ಬಿ. ಜಿ. ಪ್ರಭುಗಳವರ ಭಾಷಣ ಇವೆಲ್ಲಾ ನಡೆದನಂತರ ಇಡ್ಯ ವಿದ್ಯಾದಾಯಿನಿ ಶಾಲಾ ಮಕ್ಕಳ ಯಕ್ಷಗಾನವು ರಾತ್ರಿ ೯ರಿಂದ ೧೧ರ ವರೆಗೆ ಜರಗುವುದು. ಕೊನೆಯ ದಿನ ಬೆಳಿಗ್ಗೆ ೮ಕ್ಕೆ ದ. ಕನ್ನಡದ ಇತಿಹಾಸದ ಕುರಿತು ಮ| ರಾ| ಎಮ್. ಬಾಬು ಬಿ. ಎ., ಎಲ್. ಟಿ. ಯವರ ಭಾಷಣ ೯-೧೫ರಿಂದ ೧೧-೧೫ ಶಿಕ್ಷಣವೂ ಸಮಾಜೋನ್ನತಿಯೂ ಈ ಕುರಿತು ಚರ್ಚೆ (ಮ| ರಾ| ಆ. ಬಾಲಕೃಷ್ಣ ಶೆಟ್ಟರು ಚರ್ಚೆ ಎತ್ತುವರು. ಉಪಾಧ್ಯಾಯರು ತಮ್ಮ ಅಭಿಪ್ರಾಯಗಳನ್ನು ಸೂಚಿಸಬಹುದು) ಮಧ್ಯಾಹ್ನ ೨-೩೦ರಿಂದ ೩-೩೦ರ ವರೆಗೆ ಶಿಕ್ಷಣ ಮತ್ತು ಸಹಕಾರ ಸಂಬಂಧವಾಗಿ ಮ| ರಾ| ಮೊಳಹಳ್ಳಿ ಶಿವರಾಯರ ಭಾಷಣ, ೪-೩೦ ಗಂಟೆಗೆ ಪ್ರದರ್ಶನದ ಉಮೇದ್ವಾರರಿಗೆ ಇನಾಮು ಹಂಚುವಿಕೆ, ೬ರಿಂದ ೭ರ ವರೆಗೆ ಬೆಳೆಗಳಿಗೆ ಹಿಡಿಯುವ ಹುಳಹುಪ್ಪಟೆಗಳು ಮತ್ತು ಕುಷ್ಠಿ ಪೈರುಗಳು ಈ ಕುರಿತು ಎಗ್ರಿಕಲ್ಚರಲ್ ಡಿಮೋನ್‌ಸ್ಟ್ರೇಟರರಾದ ಮ| ರಾ| ಎನ್. ಮಂಗೇಶರಾಯರ ಮಾಯಾಲಾಂದ್ರ ಪ್ರದರ್ಶನ, ರಾತ್ರಿ ೯ರಿಂದ ೧೦ರ ವರೆಗೆ ವಿಟ್ಲ ಬೋರ್ಡು ಶಾಲಾ ಮಕ್ಕಳಿಂದ ಭ್ರಾತೃಪ್ರೇಮ ಎಂಬ ನಾಟಕ ಇವೆಲ್ಲ ನಡಿಯುವುದು. ಹಿಂದೆ ಪ್ರಕಟಿಸಿದ ದರಗಳಿಗಿಂತ ಕಡಿಮೆ ದರಗಳಲ್ಲಿ ಮಧ್ಯಾಹ್ನ ಮತ್ತು ರಾತ್ರಿ ಊಟದ ಬಗ್ಗೆ ಉಪಾಧ್ಯಾಯರಿಗೋಸ್ಕರ ಏಲೆವಾರಿಯನ್ನು ಗವರ್ನಮೆಂಟ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯ ಬೋರ್ಡಿಂಗುಗಳಲ್ಲಿ ಮಾಡಲು ಯತ್ನಿಸಿದೆ. ಇಂಥ ಅನುಕೂಲತೆ ಬೇಕಾದವರು ಬರುವ ತಾ. ೨೬ರೊಳಗೆ ಸದರಿ ಶಾಲಾ ಹೆಡ್‌ಮಾಸ್ತರರಿಗೆ ಬರಕೊಳ್ಳಬೇಕಾಗಿದೆ. ಬ್ರಾಹ್ಮಣ ಬ್ರಾಹ್ಮಣೇತರ ಕ್ರೈಸ್ತ ಇವರಿಗೆ ಊಟಕ್ಕೆ ಪ್ರತ್ಯೇಕಪ್ರತ್ಯೇಕ ಏರ್ಪಾಡು ಇದೆ.

ಇಲ್ಲಿಯ ಹೆಂಗಸರ ಮತ್ತು ಮಕ್ಕಳ ಆಸ್ಪತ್ರಿಯ ಸಹಾಯಾರ್ಥವಾಗಿ ಕಳೆದ ಆದಿತ್ಯವಾರ ಇಲ್ಲಿಯ ಹಿಂದುಸ್ಥಾನ ಸಿನೇಮಾ ಕಂಪೆನಿಯವರು ಒಂದು ಪ್ರದರ್ಶನವನ್ನು ತೋರಿಸಿದರು.

ಇಲ್ಲಿಯ ಬಂಟರ ಯಾನೆ ನಾಡವರ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಸ್ಪಿನಿಂಗ್ ಕ್ಲಬ್ಬು ತೆರಿಯಲ್ಪಟ್ಟಿದೆ.

ದಕ್ಷಿಣಕನ್ನಡ ಜಿಲ್ಲಾ ತೃತೀಯ ರಾಜಕೀಯ ಪರಿಷತ್ತು ಎಪ್ರಿಲ್ ತಿಂಗಳ ಎರಡನೇ ವಾರದಲ್ಲಿ ಕಾರ್ಕಳದಲ್ಲಿ ಜರಗುವುದು.

ದ್ರಾವಿಡ ಬ್ರಾಹ್ಮಣ ವಿದ್ಯಾರ್ಥಿಸಭೆಯ ವಾರ್ಷಿಕ ವರ್ಧಂತಿಯು ವಿದ್ಯಾರ್ಥಿ ಭವನದಲ್ಲಿ ಕಳೆದ ಆದಿತ್ಯವಾರ ವಕೀಲ ಮ| ರಾ| ಬಾಳೆಬೈಲ್ ವ್ಯಾಸರಾಯಾಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಥಮದಲ್ಲಿ ಪ್ರಾರ್ಥನೆಯಾದ ನಂತರ ಶ್ರೀಯುತ ವಕೀಲ್ ರಾಮಕೃಷ್ಣಕಾರಂತರು ಸಂಸ್ಥೆಯ ಸ್ವಾಸ್ಥ್ಯಚಿಂತನವನ್ನು ಮಾಡಿದರು. ಬಳಿಕ ಉಪಹಾರವಾಗಿ ಪುನಃ ಸಭೆ ಕೂಡಿತು. ಬ್ರಹ್ಮಶ್ರೀ. ಓ. ಆತ್ಮರಾಮ ಶಾಸ್ತ್ರಿಯವರು ವಿದ್ಯಾರ್ಥಿಗಳಿಗೆ ಉಪದೇಶಪರವಾದ ಚಿಕ್ಕ ಭಾಷಣ ಕೊಟ್ಟ ನಂತರ ಅಧ್ಯಕ್ಷರು ವಿದ್ಯಾರ್ಥಿಸಭೆಗೆ ಅನೇಕ ಸಲಹೆಗಳನ್ನು ಕೊಟ್ಟು ತಮ್ಮ ಭಾಷಣವನ್ನು ಮುಕ್ತಾಯಗೊಳಿಸಿದರು. ಈ ಸಂದರ್ಭದಲ್ಲಿ ಶ್ರೀಯುತ ಕೃಷ್ಣರಾಯರ ವೀಣಾವಾದನವೂ ಬಹು ಶ್ರಾವ್ಯವಾಗಿ ನಡೆದಿತ್ತು.

ಮೈಸೂರು ಮಹಾರಾಜರ ಅಭಿನಂದನ.

ಬೆಳಗಾಂ ಕಾಂಗ್ರೆಸನ್ನು ಮುಗಿಸಿಕೊಂಡು ಲಾಲಾ ಲಜಪತರಾಯರವರು ಮೈಸೂರು ದೇಶದಲ್ಲಿ ಕೆಲವುಕಾಲ ಪ್ರಯಾಣಮಾಡಿ ಅಲ್ಲಿನ ಸ್ಥಿತಿಗತಿಗಳನ್ನು ಕುರಿತು ಬರೆಯುತ್ತಾ, ಶ್ರೀಮನ್ಮಹಾರಾಜರವರನ್ನು ಕುರಿತು ಹೀಗೆ ಹೇಳಿರುವರು:—

“ಪುರಾತನ ರಾಜವಂಶದ ಗಾಂಭೀರ್ಯದ ಕಳೆಯು, ಉತ್ತಮ ಗುಣಗಳ ಮತ್ತು ಪ್ರತಿಭೆಯ ಚಿಹ್ನೆಗಳ ವ್ಯಕ್ತಿತ್ವವೂ ಸೇರಿ ಶೋಭಿಸುವವರನ್ನು ಕಂಡರೆ ಯಾರಿಗೆ ತಾನೆ ಆನಂದವೂ ಹೆಮ್ಮೆಯೂ ಉಂಟಾಗಲಾರದು. ಮೈಸೂರು ಮಹಾರಾಜರು ಈ ಸದ್ಗುಣ ಚಿಹ್ನೆಗಳಿಂದ ಶೋಭಿಸುತ್ತಿರುವರು. ನೋಡುವುದಕ್ಕೆ ಸುಂದರಪುರುಷರು; ಉದಾತ್ತ ಧಾರ್ಮಿಕ ಬುದ್ಧಿಯುಳ್ಳವರು; ನಡೆನುಡಿ, ಉಡಿಗೆತೊಡಿಗೆ, ಊಟೋಪಚಾರಗಳಲ್ಲಿ ಬಹು ಸಾತ್ವಿಕರು. ಈಗಿನ ಕಾಲಗಳಲ್ಲಿ ಹಲವು ರಾಜಮನೆತನದವರಲ್ಲಿ ಸೇರಿ ಅವರಿಗೆ ಕುಂದನ್ನುಂಟುಮಾಡಿರುವ ದುರ್ನಡತೆ, ದುರಾಚಾರಗಳು ಯಾವವೂ ಈ ಮಹಾರಾಜರವರಲ್ಲಿಲ್ಲ. ಇವರ ಭಕ್ತಿ, ಸದಾಚಾರ, ಶೀಲವರ್ತನೆ, ಅನ್ಯಮತ ಗೌರವ, ವಿದ್ಯಾ ಪಕ್ಷಪಾತಿತ್ವ ಪ್ರಜಾಸುಖ ಸೌಕರ್ಯಗಳನ್ನು ಹೆಚ್ಚಿಸುವುದರಲ್ಲಿ ಅವರಿಗಿರುವ ಆಸಕ್ತಿ ಈ ಗುಣಗಳಿಂದ ಪ್ರಜೆಗಳೆಲ್ಲರಿಂದಲೂ ಇವರು ಗೌರವಿಸಲ್ಪಡುವರು. ಹೆಚ್ಚೇಕೆ ಹಿಂದುಸ್ಥಾನದ ರಾಜವರ್ಗಕ್ಕೆ ಸೇರಿದವರಲೆಲ್ಲಾ ಇವರೇ ಜ್ಯೇಷ್ಠರೂ ಶ್ರೇಷ್ಠರೂ ಎಂದು ಹೇಳಬೇಕಾಗುತ್ತದೆ. ಜಾತಿವಾರು ಕಿತ್ತಾಟದ ಈ ಕಾಲದಲ್ಲಿ ಮಹಮ್ಮದೀಯರೊಬ್ಬನನ್ನು ತಮ್ಮ ಪ್ರೈವೇಟ್ ಸೆಕ್ರೆಟರಿಯಾಗಿಟ್ಟುಕೊಂಡು ಅವನಲ್ಲಿ ನಂಬುಗೆಯಿಟ್ಟಿರುವುದೆಂದರೆ ಯಾರಿಗೆ ತಾನೇ ಆಶ್ಚರ್ಯವನ್ನುಂಟುಮಾಡದು. ಈ ಸಂದರ್ಭದಲ್ಲಿ ಒಂದು ವಿಚಾರವನ್ನು ತಿಳಿಸುತ್ತೇನೆ. ಮೈಸೂರು ದೇಶದ ಪ್ರಜೆಗಳಲ್ಲಿ ಮಹಮ್ಮದೀಯರು ಶೇಕಡಾ ೧೦ಕ್ಕಿಂತಲೂ ಕಡಿಮೆಯಾಗಿದ್ದರೂ ಸರಕಾರದ ಅಧಿಕಾರಸ್ಥಾನದಲ್ಲಿ ಶೇಕಡಾ೧೦ರಂತೆ ಮಹಮ್ಮದೀಯರೇ ಇರುವರು”.

ದ. ಕನ್ನಡ ಜಿಲ್ಲೆಯಲ್ಲಿ ಆಹಾರ ಜೀನಸುಗಳ ಪುರವಠೆ.

(ಡಾ॥ ಯು॥ ರಾಮರಾಯರಿಂದ)

ಅಕ್ಕಿಯು ದ. ಕನ್ನಡ ಜಿಲ್ಲೆಯ ಬಡ ಹಾಗು ಶ್ರೀಮಂತರ ಮುಖ್ಯ ಆಹಾರ. ಒಂದು ಕಾಲದಲ್ಲಿ ಬಡವರು ರಾಗಿಯನ್ನೂ ತಮ್ಮ ಆಹಾರವಾಗಿಟ್ಟುಕೊಂಡಿದ್ದರು. ಈಗ ವಿಶೇಷವಾಗಿ ಇದನ್ನು ತ್ಯಾಜ್ಯ ಮಾಡುವರು. ಸಕಾಲದಲ್ಲಿ ಒಳ್ಳೇ ಮಳೆಯು ಬಿದ್ದ ಕಾಲಗಳಲ್ಲಿ ಅಕ್ಕಿಯ ಬೆಳೆಯು ಈ ಜಿಲ್ಲೆಯ ನಿವಾಸಿಗಳಿಗೆ ಸಾಕಾಗುವಷ್ಟಕ್ಕಿಂತಲೂ ಹೆಚ್ಚಾಗುತ್ತದೆ. ಆದರೆ ಉತ್ಕಟ ಕಾಲದಲ್ಲಿ, ಎಂದರೆ ಕಳೆದ ವರುಷದಂತೆ ನೆರೆಯ ವರುಷಗಳಲ್ಲಿ ಹುಲುಸು ಬೆಳೆಯು ನಾಶವಾದ ಕಾಲದಲ್ಲಿ ಕಷ್ಟ ಸ್ಥಿತಿಯು ಪ್ರಾಪ್ತವಾಗುತ್ತದೆ. ಆ ಕಾಲದಲ್ಲಿ ಅಕ್ಕಿಯ ಧಾರಣೆಯು ಏರಿ ಬಡವರು ಬಹಳವಾಗಿ ಬಳಲುವರು. ಅಂತೂ ಅಕ್ಕಿಯ ಬದಲು ಬೇರೆ ದವಸವು ಇಲ್ಲವಾದರೆ ಬಡವರ ಗೋಳು ಹೇಳಿ ತೀರದು.

ನೀಲಗಿರಿಯನಂತರ ದ. ಕನ್ನಡವೇ ಕೊರಕಲು (craggy) ಪ್ರದೇಶವಿರುವ ಜಿಲ್ಲೆ. ಈ ಜಿಲ್ಲೆಯ ಗುಡ್ಡ ಪ್ರದೇಶದ ಬುಡದಲ್ಲಿ ಸಾವಿರಾರು ಎಕರೆ ಖಾಲಿ ಸ್ಥಳವು ಅಕ್ಕಿಯ ಬೆಳೆಗೆ ಸಾಧಕವಲ್ಲದೆ ಇದೆ. ಆದರೆ ಈ ಸ್ಥಳಗಳಲ್ಲಿ ಸುಲಭ ತರದ ಜೋಳ, ಕಂಬು ಮೊದಲಾದ ಧಾನ್ಯಗಳನ್ನು ಬೆಳೆಸಬಹುದು. ಕೆಲ ಕಾಲದ ಹಿಂದೆ ಗುಡ್ಡ ಪ್ರದೇಶದ ಇಳಿಜಾರಿನಲ್ಲಿರುವ ಸ್ಥಳಗಳನ್ನು ಜೋಳ, ಕಂಬು ಮೊದಲಾದುವನ್ನು ಬೆಳೆಸುವ ಸ್ಥಳಗಳಿಗಾಗಿ ಮಾರ್ಪಡಿಸಬಹುದೆಂದು ಸರಕಾರಕ್ಕೆ ಸೂಚಿಸೋಣಾಗಿತ್ತು, ಮತ್ತು ಪರೀಕ್ಷೆಗಾಗಿ ಸ್ಥಳ ವಿಂಗಡಿಸಿ ಕೊಡಬೇಕಾಗಿಯೂ ಸೂಚಿಸಿತ್ತು. ಉಡ್ಪಿಯಲ್ಲಿ ಒಬ್ಬ ಗೃಹಸ್ಥರು ಖಾಸಗಿಯಾಗಿ ಈ ಪರೀಕ್ಷೆಯನ್ನು ನಡಿಸಿ ಕಂಬು ಮೊದಲಾದ್ದು ಬೆಳೆಸುವುದು ಸಾಧ್ಯವೆಂದು ಕಂಡು ಹಿಡಿದ್ದಾರೆ. ಸರಕಾರವೂ ಈ ತರದ ಪರೀಕ್ಷೆಯನ್ನು ನಡಿಸಿ ಯೋಗ್ಯ ಫಲ ಹೊಂದಬಹುದು.

ಕಳೆದ ೧೯೧೯ನೆಯ ಇಸವಿಯಲ್ಲಿ ಗವರ್ನರ ದೊರೆಗಳವರು ಈ ಜಿಲ್ಲೆಯನ್ನು ಸಂದರ್ಶಿಸಿದ ಸಮಯದಲ್ಲಿ ಅವರಿಗೆ ಡಿಸ್ಟ್ರಿಕ್ಟ ಎಸೋಸಿಯೇಶನಿನಿಂದ ಒಪ್ಪಿಸೋಣಾದ ಮಾನಪತ್ರದಲ್ಲಿ ಈ ಜಿಲ್ಲೆಯ ಜನರ ಅಕ್ಕಿಯ ಬದಲಾಗಿ ಎರಡನೇ ಆಹಾರವಾಗಿ ಒಣ ಭೂಮಿಗಳಲ್ಲಿ ಕಂಬು ಮೊದಲಾದ್ದನ್ನು ಬೆಳೆಸುವುದು ಹೇಗೆ ಆವಶ್ಯಕ ಮತ್ತು ಅಪೇಕ್ಷಿತವಾಗಿದೆ ಎಂಬುದು ತಿಳಿಸೋಣಾಗಿತ್ತು. ಅನಂತರ ಎಗ್ರಿಕಲ್ಚರಲ್ ಡೈರೆಕ್ಟರರೊಡನೆ ಈ ಕುರಿತು ಸಮಾಲೋಚಿಸಿದಾಗ ಅವರು ಈ ಜಿಲ್ಲೆಯಲ್ಲಿ ಜೋಳ ಅಥವಾ ಕಂಬನ್ನು ಬೆಳೆಸಿದರೆ ಅದು ತೃಪ್ತಿಯಾಗಿ ಬೆಳೆಯಲು ಸಾಧ್ಯವಿಲ್ಲ. ಆದರೆ Tapioca ಗೆಣಸನ್ನು ಮಾತ್ರ ಒಳ್ಳೇದಾಗಿ ಬೆಳೆಸುವಂತೆ ಸಾಧ್ಯವಿದೆಂದು ಅಭಿಪ್ರಾಯಪಟ್ಟರು. ಅದರಂತೆ ಸರಕಾರದವರು ಈ ವಿಷಯವಾಗಿ ಹಸ್ತಪತ್ರಿಕೆಗಳನ್ನು ತಯಾರಿಸಿ ಜಿಲ್ಲೆಯ ಎಲ್ಲಾ ಭಾಗಗಳಲ್ಲಿ ಪ್ರಕಟಗೊಳಿಸಿದರು. ಅಲ್ಲದೆ ಪರೀಕ್ಷಾರ್ಥವಾಗಿ ‘ಟೋಪಿಯೋಕಾ’ವನ್ನು ಬೆಳೆಸಲು ಸರಕಾರದವರು ಸ್ವಲ್ಪ ಹಣವನ್ನೂ ವ್ಯಯಮಾಡಿದರು. ಆದರೆ ಈ ಪರೀಕ್ಷೆಯು ಪರಿಣಾಮಕಾರಿಯಾಗಿ ಕಂಡುಬರಲಿಲ್ಲ. ಇಲ್ಲಿ ಇದರ ಪ್ರಸಂಗವು ಮುಗಿಯಿತು. ಅನಂತರ ಈ ವಿಷಯದಲ್ಲಿ ಏನೂ ಪ್ರಯತ್ನಗಳು ನಡಿಯಲಿಲ್ಲ. ಅಲ್ಲದೆ ಕಂಬು ಅಥವಾ ಜೋಳವನ್ನು ಬೆಳೆಸಲು ಪ್ರಯತ್ನಗಳೂ ನಡಿಸಲಿಲ್ಲ. ಟೋಪಿಯೋಕಾವನ್ನು ರೋಗಿಗಳಿಗೆ ಮಾತ್ರ ಆಹಾರವಾಗಿ ಉಪಯೋಗಿಸುವರಲ್ಲದೆ ಆರೋಗ್ಯದಲ್ಲಿರುವವರಿಗೆ ಇದು ಎಂದೂ ಪ್ರಯೋಜನಕಾರಿಯಲ್ಲ. ಟೋಪಿಯೋಕವು ಮಲಬಾರದಲ್ಲಿ ವಿಶೇಷವಾಗಿ ಬೆಳೆಸಲಾಗುತ್ತದೆ. ಪರಂತು ಇದನ್ನು ಅಲ್ಲಿ ಅಕ್ಕಿಯ ಬದಲಾಗಿ ಉಪಯೋಗಿಸುವುದಿಲ್ಲ. ಹೀಗಿರುತ್ತ ದಕ್ಷಿಣಕನ್ನಡ ಜಿಲ್ಲೆಯ ಜನರು ಇದನ್ನು ಆಹಾರವಾಗಿ ಮಾಡಿಕೊಳ್ಳುವುದು ಹೇಗೆ? ಪ್ರಸ್ತುತಮಾನವು ಈ ಜಿಲ್ಲೆಯಲ್ಲಿ ಜನಸಂಖ್ಯೆ, ಆಗಾಗ್ಗೆ ನೆರೆ ಏರಿ ಬರುವುದು ಮತ್ತು ಬೆಳೆ ಬೇಯದಿರುವುದು ಮೊದಲಾದ ಅಭ್ಯಂತರಗಳಿಂದ ಬಡವರಿಗೆ ಆಹಾರ ತುಟ್ಟಿಯು ವಿಶೇಷವಾಗಿರುತ್ತದೆ. ಇಂಥ ಸಂದರ್ಭದಲ್ಲಿ ಖಾಲಿ ಸ್ಥಳಗಳಲ್ಲಿ ಜೋಳ, ಕಂಬು ಮೊದಲಾದ ಬೆಳೆಗಳನ್ನು ಬೆಳೆಸುವಂತೆ ಮಾಡಿ ಜನರ ಕಷ್ಟವನ್ನು ಪರಿಹರಿಸಬೇಕಾಗಿದೆ. ಸರಕಾರವು ಪರೀಕ್ಷೆಯನ್ನು ನಡಿಸಿ ಜನರಿಗೆ ಇಂಥಾ ಬೆಳೆಗಳನ್ನು ಬೆಳೆಸಲು ಉತ್ಸಾಹಗೊಳಿಸಬೇಕು. ಈ ತರದ ಕೆಲಸವನ್ನು ಒಡನೆಯೇ ಪ್ರಾರಂಭಿಸದ ಹೊರತು ಅಕ್ಕಿಯ ಬೆಳೆಯ ತುಟ್ಟಿಯುಂಟಾದಾಗ ಬಡವರ ಕಷ್ಟವನ್ನು ನಿವಾರಿಸಲು ಅಸಾಧ್ಯ. ಸರಕಾರವು ತನ್ನ ಸುಸ್ವಭಾವಸ್ಥೆಯನ್ನು ತೊರೆದು ಜನರ ಪ್ರಾಣರಕ್ಷಣೆಯ ಈ ಮುಖ್ಯ ಕಾರ್ಯವನ್ನು ಉದಾತ್ತ ಮನಸ್ಸಿನಿಂದಲೂ ಜಾಗ್ರತೆಯಿಂದಲೂ ದಕ್ಷತೆಯಿಂದಲೂ ನಡಿಸುವರಾಗಿ ನಂಬಿದ್ದೇನೆ.

ಕೊಂಗ್ರೆಸ್ ಕಾಲದಲ್ಲಿ ಸ್ವಯಂಸೇವಕರ ಸೇವೆ.

ಕಳೆದ ಫೆಬ್ರವರಿ ತಾ. ೫ರ ಯಂಗಇಂಡಿಯಾ ಪತ್ರಿಕೆಯಲ್ಲಿ ಮಹಾತ್ಮಾ ಗಾಂಧಿಯವರು ಒಂದು ಲೇಖವನ್ನು ಬರೆದಿದ್ದಾರೆ. ಅದರ ಸಾರಾಂಶ ಕೆಳಗೆ ಕೊಟ್ಟಿದೆ.

‘ಕೊಂಗ್ರೆಸ್ ವಾರದಲ್ಲಿ ಸ್ವಯಂಸೇವಕರು ಮಾಡಿದ ಸೇವೆಯ ಕುರಿತು ನನ್ನ ಅಭಿಪ್ರಾಯ ಕೊಡಬೇಕಾಗಿ ನನ್ನನ್ನು ಕೇಳೋಣಾಗಿದೆ. ನನ್ನ ಕೊಂಗ್ರೆಸ್ ಹೃದ್ಗತದಲ್ಲಿ (Impression) ನಾನು ಈ ವಿಷಯದ ಪ್ರಸ್ತಾಪವನ್ನು ಮೊದಲೇ ಎತ್ತಿರುವೆನೆಂದು ನೆನಸಿದ್ದೆನು. ಈಗ ಆನಂದದಿಂದ ಉತ್ತರಕೊಡುತ್ತೇನೆ. ಸ್ವಯಂಸೇವಕರ ಕಾರ್ಯವು ಪ್ರತ್ಯೇಕ ಮತ್ತು ಸಂಪೂರ್ಣವಾಗಿ ಪ್ರಸ್ತಾಪಿಸತಕ್ಕದ್ದೆ. ಕಳೆದ ನಾಲ್ಕು ವರುಷಗಳ ಕೊಂಗ್ರೆಸ್ ಕಾಲದ ಸ್ವಯಂಸೇವಕರ ಕಾರ್ಯವನ್ನು ತುಲನೆಮಾಡಿ ಹೇಳುವುದಾದರೆ ಈ ವರುಷ ಸ್ವಯಂಸೇವಕರು ತಮ್ಮ ಕಾರ್ಯದಕ್ಷತೆಯಲ್ಲಿ ಪರಮಾವಧಿಗೆ ಮುಟ್ಟಿದರೆಂದು ನನ್ನ ಅನುಭವ. ಅವರು ಮನಮುಟ್ಟಿ ಅವಿರತವಾಗಿ ಸಾಧಕ ರೀತಿಯಲ್ಲಿ ಕಾರ್ಯವನ್ನು ನಡಿಸಿದ್ದಾರೆ. ಸ್ವಯಂಸೇವಕರ ವಿಷಯವಾಗಿ ಪ್ರತಿನಿಧಿಗಳಿಂದ ಯಾವ ತರದ ದೂರೂ ಬಂದುದು ನಾನು ಕೇಳಿಲ್ಲ. ಕಾಯಕಶ್ಚಿಯಲ್ಲೂ ಅವರು ಸಮರ್ಥರಾಗಿಯೇ ಕಂಡಿದ್ದರು. ಡಾಕ್ಟರ್ ಹರ್ಡೀಕರರು ಸ್ವಯಂಸೇವಕರ ಠಾಣ್ಯಗಳಿಗೆ ನನ್ನನ್ನು ಕರಕೊಂಡು ಹೋಗಿ ಎಲ್ಲವನ್ನು ತೋರಿಸಿದ್ದರು. ಅಲ್ಲಿ ಎಲ್ಲವೂ ಕಾರ್ಯ ವ್ಯವಸ್ಥೆಯ ರೂಪದಲ್ಲಿರುವುದು ಕಾಣಬರುತ್ತಿತ್ತು. ಅಲ್ಲದೆ ಸಾಮಾನ್ಯ ಎಲ್ಲವೂ ಚೊಕ್ಕವಾಗಿತ್ತು. ಸಾಮಾನ್ಯ ಚೊಕ್ಕವಾಗಿತ್ತು ಎಂದು ಹೇಳಲು ಕಾರಣವೇನೆಂದರೆ, ಸ್ವಯಂಸೇವಕರ ಶಿಬಿರವು ಚೊಕ್ಕತನದಲ್ಲಿ ಆದರ್ಶಪ್ರಾಯವಾಗಿರಬೇಕು. ಯಾವುದಾದರೊಂದು ವಸ್ತುವು ಅದರ ಸ್ಥಳವನ್ನು ಬಿಟ್ಟು ಇರತಕ್ಕದ್ದಲ್ಲ. ಅವುಗಳ ಸ್ಥಳದಲ್ಲೆ ಇದ್ದು ಚೊಕ್ಕವಾಗಿ ಇಡಬೇಕಾಗಿದೆ, ಎಂಬುದು ನನ್ನ ಅಭಿಪ್ರಾಯ. ಉದಾಹರಣೆಯಾಗಿ ಹೇಳುವುದಾದರೆ, ಒಬ್ಬ ಸ್ವಯಂಸೇವಕನು ತನ್ನ ಬಿಛಾನೆಯನ್ನು ತಿದರ ಠಾಣ್ಯದಲ್ಲಿರಿಸಿರಬಹುದು, ಪರಂತು ಅದನ್ನು ಸರಿಯಾಗಿ ಮಡಚದೆ ರಾಶಿಯಾಗಿ ಇಡುವುದು ಸರಿಯಲ್ಲ. ಅದನ್ನು ಸರಿಯಾಗಿಯೂ ಚೊಕ್ಕವಾಗಿಯೂ ಮಡಚಿ ಸ್ವಸ್ಥಾನದಲ್ಲಿಡಬೇಕು. ಆರೋಗ್ಯ ಕ್ರಮದಲ್ಲೂ ಸ್ವಯಂಸೇವಕರ ಶಿಬಿರಗಳು ನಿರ್ಮಲವಾಗಿರಬೇಕು. ಒಂದೇಯೊಂದು ಕಾಗದದ ಚೂರು ಅಥವಾ ಕಸಕಡ್ಡಿ ಕಾಣಲು ಸಿಗಬಾರದು. ಡಾಕ್ಟರ ಹರ್ಡೀಕರರು ಮುಂದ್ದಾಮಾಗಿ ಸ್ವಯಂಸೇವಕರ ಸಂಖ್ಯೆಯನ್ನು ಮಿತಪಡಿಸಿದ್ದರೆಂದು ನಾನು ತಿಳಿಯುತ್ತೇನೆ. ಅಮಕಾರಣ ಸ್ವಯಂಸೇವಕರಿಗೆ ತಾವು ಸಾಮಾನ್ಯವಾಗಿ ಮಾಡಬೇಕಾದುದಕ್ಕಿಂತಲೂ ಹೆಚ್ಚು ಕೆಲಸ ನಿರ್ವಹಿಸಬೇಕಾಯಿತು. ಕೊಂಗ್ರೆಸ್ ಅಧಿವೇಶನ ಕಾಲದಲ್ಲಿ ಅವರಿಗೆ ಕುಳಿತುಕೊಳ್ಳಲು ಅವಕಾಶವಿಲ್ಲದೆ ಇಡೀ ದಿನ ೧೬ ತಾಸು ಎಡೆಬಿಡದೆ ಕೆಲಸವಿತ್ತು. ಈ ಕಾಲದಲ್ಲಿ ಸ್ತ್ರೀ ಸ್ವಯಂಸೇವಕಿಯರ ಪ್ರಸ್ತಾಪವೆತ್ತದೆ ಇರಲು ಆಗುವುದಿಲ್ಲ. ಅವರು ವಿಶೇಷ ಸಹಾಯಕಾರಿಗಳೂ ಸಾವಧಾನ ಚಿತ್ತವುಳ್ಳವರಾಗಿಯೂ ಇದ್ದರು. ಅವರೂ ಮುಂದಾಗಿ ತರಬೇತಿಯನ್ನು ಹೊಂದಿದ್ದರು. ಒಂದು ಕೊಂಗ್ರೆಸ್ ಅಧಿವೇಶನವನ್ನು ಸ್ವಯಂಸೇವಕರ ಸರಿಯಾದ ಸಹಾಯವಿಲ್ಲದೆ ನಡಿಸುವುದು ಅಸಾಧ್ಯವಾದರೂ ಈ ಕಾರ್ಯವೂ ಸ್ವಯಂಸೇವಕರ ತರಬೇತಿನ ಒಂದು ಚಿಕ್ಕ ಅಂಗವಾಗಿದೆ. ಸ್ವರಾಜ್ಯ ಸಂಪಾದನೆಗೆ ಸ್ವಯಂಸೇವಕರೂ ಒಂದು ಮುಖ್ಯ ಮೂಲ. ಯೋಗ್ಯ ನಡತೆ, ಡ್ರಿಲ್ಲಿನ ತಕ್ಕ ತರಬೇತು, ಆರೋಗ್ಯ ಜ್ಞಾನ, ಜಖಂ ಹೊಂದಿದವರಿಗೆ ಮಾಡಬೇಕಾದ ಪ್ರಥಮ ಚಿಕಿತ್ಸೆ ಇವುಗಳ ಒಟ್ಟಿಗೆ ಇವರಿಗೆ ಜನರಿಗೆ ಸ್ವರಾಜ್ಯ ಸಂಪಾದನೆಯ ಕಾರ್ಯದಲ್ಲಿ ತರಬೇತುಮಾಡುವ ಶಕ್ತಿಯೂ ಇರಬೇಕು. ಅದು ಕಾರಣ ಈ ಕಾರ್ಯಕ್ಕಾಗಿ ಪ್ರತಿಯೊಬ್ಬ ಸ್ವಯಂಸೇವಕನು ಸಮರ್ಥನಾದ ಹತ್ತಿ ಹಿಂಜುವವನೂ, ನೂಲುವವನೂ ಆಗಿರಬೇಕು. ಮತದಾನಕ್ಕೆ ಅಗತ್ಯವಿರುವಷ್ಟು ನೂಲನ್ನು ತಯಾರಿಸುವವನಿರಬೇಕು. ತನ್ನ ಸ್ವಗ್ರಾಮದಲ್ಲಿ ಹತ್ತಿ ಹಿಂಜುವುದು ಮತ್ತು ನೂಲುವುದನ್ನು ವ್ಯವಸ್ಥೆಗೊಳಿಸುವ ಸಾಮರ್ಥ್ಯವುಳ್ಳವನಿರಬೇಕು. ಕೈಯಿಂದ ನೂಲನ್ನು ತಯಾರಿಸುವುದು ಕಳೆದ ೧೯೨೧ನೇ ಇಸವಿಯಿಂದ ಸ್ವಯಂಸೇವಕರ ಒಂದು ಆದ್ಯ ಕರ್ತವ್ಯವಾಗಿದೆ ಎಂದು ಪ್ರತಿಯೊಬ್ಬ ಸ್ವಯಂಸೇವಕನೂ ಜ್ಞಾಪಕದಲ್ಲಿಟ್ಟುಕೊಳ್ಳಬೇಕು”.

Closure of Panemangalore bridge to traffic.

The public are hereby informed that the temporary deck of the Panemangalore bridge in mile 16 of Mangalore-Mercara road has been dismantled and the said bridge is closed to all traffic.

MANGALORE.
17th Feb. 1925.
N. Subba Rao
President District Board S K.

ಮದ್ರಾಸ್ ನ್ಯಾಯವಿಧಾಯಕ ಸಭೆಯಲ್ಲಿ ಡಾಕ್ಟರ್ ಯು. ರಾಮರಾಯರ ಪ್ರಶ್ನೆಗಳು ಮತ್ತು ಠರಾವುಗಳು.

ಕಳೆದ ೧೯೨೧ನೇ ಇಸವಿಯ ಜಾನೇಸುಮಾರಿಯ ಮೇರೆಗೆ ಮದ್ರಾಸ್ ಸಂಸ್ಥಾನದೊಳಗಿರುವ ಕುರುಡರ, ಮೂಕರ ಮತ್ತು ಕಿವುಡರ ಸಂಖ್ಯೆ ಎಷ್ಟು?

ಇವರ ಶಿಕ್ಷಣಕ್ಕಾಗಿ ಸರಕಾರದವರು ಸಂಸ್ಥಾನದಲ್ಲಿ ನಡಿಸುವ ಸಂಸ್ಥೆಗಳು ಎಷ್ಟು?

ಪಲಯಕೋಟ್ಟೆದಲ್ಲಿರುವ ಕಿವುಡರ ಮತ್ತು ಕುರುಡರ ಶಾಲೆಗೆ ಸರಕಾರದವರು ಏನಾದರೊಂದು ಸಹಾಯಮಾಡಿದಿದೆಯೋ ಮಾಡಿದ್ದಿದ್ದರೆ ವರುಷಕ್ಕೆ ಎಷ್ಟು?

ಪಶ್ಚಿಮ ಕರಾವಳಿಯಲ್ಲಿ ಇಂಥ ಶಾಲೆಯು ಇಲ್ಲ, ಅಲ್ಲದೆ ಈ ತರದ ಶಾಲೆಯ ಆವಶ್ಯಕತೆಯು ಇಲ್ಲಿ ಅವಶ್ಯವಾಗಿ ಕಂಡಿದೆಯಾದುದರಿಂದ ಇಲ್ಲಿ ಶಾಲೆಯನ್ನು ತೆರೆಯುವ ಕುರಿತು ಸರಕಾರವು ಆಲೋಚಿಸಿಮಾಡುವುದೆ?

— ಠರಾವು —

“ಕುರುಡರು, ಕಿವುಡರು ಮತ್ತು ಮೂಕರ ಶಿಕ್ಷಣದ ಆವಶ್ಯಕತೆಯು ಮದ್ರಾಸ್ ಪ್ರಾಂತ್ಯದಲ್ಲಿ ಅಗತ್ಯವಾಗಿ ಕಂಡು ಬಂದುದರಿಂದ ಸಂಸ್ಥಾನದ ಪಶ್ಚಿಮ ಕರಾವಳಿಯಲ್ಲಿ, ಅಂಧ್ರ ಪ್ರಾಂತದಲ್ಲಿ ಹಾಗು ಸೆಂಟ್ರಲ್ ಡಿಸ್ಟ್ರಿಕ್ಟುಗಳಲ್ಲಿ ಹೀಗೆ ಮೂರು ಕಡೆಗಳಲ್ಲಿ ಶಿಕ್ಷಣಾಲಯಗಳನ್ನು (ವಿದ್ಯಾರ್ಥಿಗಳಿಗೆ ಉಳಕೊಳ್ಳಲು ವಸತಿಗೃಹಗಳ ಸಹಿತ) ಬರುವ ವರುಷದೊಳಗಾಗಿಯೇ ತೆರಿಯಬೇಕು. ಮತ್ತು ಬರುವ ಬಜೇಟಿನಲ್ಲಿ ಇದಕ್ಕೆ ಹಣವನ್ನು ವಿಂಗಡಿಸಬೇಕು, ಎಂದು ಈ ಕೌನ್ಸಿಲು ಸೂಚಿಸುತ್ತದೆ”

ನೋಟೀಸು.

ಮಂಗಳೂರು ಡಿಸ್ಟ್ರಿಕ್ಟ ಮುನ್ಸಿಫ್ ಕೋರ್ಟಿನಲ್ಲಿ.

ವ್ಯಾ. ಎ. ನಂಬ್ರ $\frac{-71}{1925}$ in I. P. No. $\frac{40}{23}$

ವಗ್ಗ ವಾಸ್ತೇವ ಪೈ—ಸ್ಯೊರ ಪೈರ ಮಗ—ಹಾಲಿ ಮಂಗಳೂರು ಶಹಾರಿನಲ್ಲಿರುವವ } ಅರ್ಜಿದಾರ.

ಮತ್ತು

ಉಡ್ಪಿ ವಾಮನ ಕ್ಯಾನುಭೋಗ ಎಂಡ್ ಕೊ. ಕೂಡ 10 ಜನರು } ಕ್ರೆಡಿಟರ್ಸ್.

ಮೇಲ್ಕಂಡ ಅರ್ಜಿದಾರನು ತನ್ನನ್ನು ಡಿಸ್‌ಚಾರ್ಜ ಮಾಡಬೇಕಾಗಿ ಅರ್ಜಿ ದಾಖಲುಮಾಡಿರುತ್ತಾನೆ. ಸದರಿ ಅರ್ಜಿಯು 1925ನೇ ಇಸವಿ ಮಾರ್ಚಿ ತಾ. 18ನೇ ದಿವಸ ತನಕಿಗೆ ಇಟ್ಟಿರುತ್ತದೆ. ಯಾರಾದರೂ ಆಕ್ಷೇಪವುಳ್ಳವರು ಮೇಲ್ಕಂಡ ತಾರೀಕು ಪೂರ್ವಾಹ್ನ ಗಂಟೆ 11ಕ್ಕೆ ಮೇಲ್ಕಂಡ ಕೋರ್ಟ ಮುಂದೆ ಹಾಜರಾಗಿ ತಮ್ಮ ಆಕ್ಷೇಪಗಳನ್ನು ಜ್ಯಾಹೀರುಮಾಡತಕ್ಕದ್ದು.

ಮಂಗಳೂರು
ತಾ. 16-2-'25.
K. P. GOPALKRISHNA RAO,
Vakil for Petitioner.

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ ಮುನ್ಸಿಫ್ ಕೋರ್ಟಿನಲ್ಲಿ.

O. P. $\frac{8}{25}$

ಉಡ್ಪಿ ಸುಬ್ಬರಾವ್—ವೆಂಕಟ್ರಮಣಯ್ಯನ ಮಗ ಕಂಕನಾಡಿ ಮಂಗಳೂರು } ಅರ್ಜಿದಾರ.

ಪಿ. ಪದ್ಮನಾಭ—ಮಿಲಿಟರಿ ಎಕೌಂಟ್ಸ್ ಕ್ಲಾರ್ಕ ನಜೀರಾಬಾದ ರಾಜಪುತಾನ } ಎದ್ರಿ—

ಕುಂದಾಪುರ ಬೋರ್ಡ ಹ್ಯಾಸ್ಕೂಲ ಮಾಸ್ತರ ವ ಅರ್ಜಿದಾರನ ಅವಿಭಕ್ತ ಚಿಕ್ಕತಂದೆಯಾಗಿದ್ದ ಇತ್ತಲಾಗೆ ಕುಂದಾಪುರ ಕಸಬೆಯಲ್ಲಿ ಮೃತಪಟ್ಟ ಉಡ್ಪಿ ನಾರಾಯಣರಾವ ಬಿ. ಎ. ಯವರಿಗೆ ಹೊರಗಿನಿಂದ ಬಹಾ ಹಣಗಳನ್ನು ವಸೂಲು ಮಾಡುವರೆ ತನಗೆ ವಾರಿಸಿ ಸರ್ಟಿಫಿಕೇಟನ್ನು ಕೊಡಬೇಕಾಗಿ ಅರ್ಜಿದಾರನು ಮೇಲ್ಕಂಡ ಕೋರ್ಟಿನಲ್ಲಿ ಮನವಿ ಮಾಡಿದ್ದಾನೆ. ಆಕ್ಷೇಪ ಇದ್ದವರು ತಾ. 4-3-25ರಲ್ಲು ಸದರಿ ಕೋರ್ಟಿನಲ್ಲಿ ಸ್ವತಃ ಯಾ ವಕೀಲರ ಮುಖಾಂತರ ತಮ್ಮ ಆಕ್ಷೇಪಗಳನ್ನು ಜ್ಯಾಹೀರುಮಾಡಿಕೊಳ್ಳಬಹುದು.

ಕುಂದಾಪುರ,
ತಾ. 7-2-'25.
ಕೆ. ಎಲ್. ಭಂಡಾರಿ,
ಅರ್ಜಿದಾರನ ಕಡೆ ವಕೀಲ.

ವೊಲೆಂಟಿಯರ್ಸ್ ಯೂನಿಯನ್ ಹ್ಯಾಸ್ಕೂಲ್ ಪ್ರೈಜ್ ಫಂಡ್.

[ಗೊಂಡಾಲ ಸಂಸ್ಥಾನ ದೋರಾಜ್ (ಕಾಥಿಯಾವಾಡ್)ದಿಂದ ಮಂಜೂರುಮಾಡಲ್ಪಟ್ಟಿದ್ದು].

1925ನೇ ಇಸವಿಯ ಏಪ್ರಿಲ್ ತಾ. 12ರಲ್ಲಿ ತೆಗೆಯಲ್ಪಡುವುದು.

ಒಟ್ಟು ಜಮೆಯಾಗುವ ರೂ. 2,00000ದಿಂದ ರೂ. 80,100 ಬಹುಮಾನಗಳು ಹಂಚಲ್ಪಡುವವು.

ಜಾತಿಮತಗಳ ಭೇದವಿಲ್ಲದೆ ರಾಷ್ಟ್ರೀಯ ಸೂತ್ರಗಳನ್ನು ಅನುಸರಿಸಿ ನಡಿಸಲ್ಪಡುವ ವೊಲೆಂಟಿಯರ್ಸ್ ಯೂನಿಯನ್ ಹ್ಯಾಸ್ಕೂಲ್ ದೋರಾಜ್ ಇದರ ಸಹಾಯಕ್ಕಾಗಿ ಸ್ಥಾಪಿಸಲ್ಪಟ್ಟ ಲೋಟ್ಟಿ. ತಕ್ಕುದಾದ ಶಿಕ್ಷಣವಲ್ಲದೆ, ಈ ಶಾಲೆಯಲ್ಲಿ ಕಲಿಯುವ ವಿದ್ಯಾರ್ಥಿಗಳಿಗೆ, ಲೆಕ್ಕಪತ್ರಗಳನ್ನಿಡುವ ಮಾಹಿತಿ, ಬುಕ್‌ಕೀಪಿಂಗ್, ನೂಲನ್ನು ಮಾಡುವುದು, ನೇಯುವುದು, ಮಲ್ಲಯುದ್ಧ ಮೊದಲಾದವನ್ನು ಕಲಿಸಲಾಗುತ್ತೆ. ಇಲ್ಲಿನ ವಿದ್ಯಾರ್ಥಿಗಳ ಹಾಗು ಹಿಂದು-ಮುಸಲ್ಮಾನ ತರುಣರ ಶಾರೀರಿಕ ವ್ಯಾಯಾಮ ತರಬೇತಿಗೆ ಒಂದು ಮುದ್ದಾಂ ಗರಡಿ ಮನೆಯು ಸ್ಥಾಪಿಸಿದೆ. ಆದುದರಿಂದ ಯಾವತ್ತೂ ಉದಾರ ಆಶ್ರಯದಾತರು ಸಹಾಯಮಾಡಲು ಅರ್ಹರಾದ್ದು, ಮೌಲಾನಾ ಶೌಕತಾಲಿಯವರು ತಮ್ಮ ಸಂಗಾತಿಗಳೊಡನೆ ನಮ್ಮ ಈ ಸಂಸ್ಥೆಯನ್ನು ಸಂದರ್ಶಿಸಿ, ಈ ಶಾಲೆಯ ಉಪಾಧ್ಯಾಯರಲ್ಲಿನ ರಾಷ್ಟ್ರೀಯ ಸ್ಫೂರ್ತಿ ಮತ್ತು ಕಲಿಸುವ ವಿಧಾನಗಳನ್ನು ತಿಳಿದು ಸಂಪೂರ್ಣ ಆನಂದ ಪಟ್ಟಿರುವರು. ಹೆಚ್ಚಿನ ಮಾಹಿತಿಯ ಬಗ್ಗೆ ಬಹುಮಾನಗಳ ಪ್ರತಿಯ ಹಿಂದೆ ನೋಡಿರಿ ಅಥವಾ ಕೆಳಗಿನ ವಿಳಾಸಕ್ಕೆ ಇಂಗ್ಲಿಷಿನಿಂದ ಬರಿಯಿರಿ.

ದಿ ಹೊನರರಿ ಸೆಕ್ರೆಟರಿ,
ವೊಲೆಂಟಿಯರ್ಸ್ ಯೂನಿಯನ್ ಹ್ಯಾಸ್ಕೂಲ್,
ದೋರಾಜ್, ಕಾಥಿಯವಾಡ್, ಇ. ಂ. ರಿ ಯಾ.

ಆರೋಗ್ಯ ಚಂದ್ರಿಕೆ.

ಮದ್ರಾಸ್.

ಸಂಪಾದಕರು: ಡಾಕ್ಟರ್ ಯು. ರಾಮರಾವ್, ಎಲ್. ಎಮ್. ಸಿ. ಎಫ್. ಎಮ್. ಯು. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವುದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ.

ಈ ಮಾಸಪತ್ರಿಕೆಯು ‘ಹೆಲ್ತ್’ ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ.

ಆರೋಗ್ಯಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವುವು.

‘ಹೆಲ್ತ್’ ಎಂಬ ನಮ್ಮ ಇಂಗ್ಲಿಷ್ ಮಾಸಪತ್ರಿಕೆಯನ್ನೋದಿ ಸಂತೋಷಿಸಿದ ಅನೇಕ ದೇಶ ಮಹನೀಯರ ಪ್ರೋತ್ಸಾಹದ ಮೇರೆ ಈ ಕನ್ನಡ ಪತ್ರಿಕೆಯನ್ನು ಹೊರಡಿಸಿದೆ.

ಅದರ ಸಂಪುಟ ೨ ಮತ್ತು ೧ನೇಯ ನವಂಬರ ೧೯೨೪ ಸಂಚಿಕೆಯಲ್ಲಿ ಕಾಣಿಸಿರುವ ವಿಷಯಗಳು.

ಮುಖಚಿತ್ರ:—ಪರ್ವತವಾಸಿಯಾದ ಒಬ್ಬ ರೂಪವತಿ.
ಕ್ಷಾಸಕ್ರಮ ಅಥವಾ ಪ್ರಾಣಾಯಾಮ.
ಹುಣಿಸೇಹಣ್ಣಿನ ಆಹಾರಗುಣಗಳು ಮತ್ತು ಔಷಧಗುಣಗಳು.
ಕಾಲುನಡೆಯೇ ಉತ್ತಮವಾದ ವ್ಯಾಯಾಮವು
ಜೇನಿನಲ್ಲಿರುವ ಗುಣಗಳು.
ಹಲ್ಲುಗಳ ರಚನೆ, ಪ್ರಯೋಜನ, ಕೆಲಸ ಮುಂತಾದವು.
ಮದಪ್ರಾಶಕಗಳಿಂದ ಆರೋಗ್ಯಕ್ಕೆ ಉಂಟಾಗತಕ್ಕ ಹಾನಿ.
ಅಂಗಸಾಧನೆ ಮತ್ತು ಬುದ್ಧಿವ್ಯವಸಾಯ (ವಿದ್ಯಾಭ್ಯಾಸ).
ಗಾಯಗಳು, ಮತ್ತು ಉಳುಕು ಮುಂತಾದವು, ಅವುಗಳ ಚಿಕಿತ್ಸೆ.
ನವನಾಗರಿಕ ಪ್ರಪಂಚಕ್ಕೆ ಸಹಜವಾದ ಮೂರು ಕೇಡುಗಳು.
ಒಬ್ಬ ಉಪವಾಸಿಯ ಅನುಭವ.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವುವು. ಆರೋಗ್ಯಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ ರೂ. ೧—೮—೦; ಬಿಡುಪತ್ರಿಕೆ ಒಂದಕ್ಕೆ ರೂ. ೦—೩—೦ ಹಿಂದಿನ ಸಂಚಿಕೆಗಳು ಕೂಡ ದೊರೆಯುವವು.

ಚಂದಾದಾರರಾಗುವವರು ವಿ. ಪಿ. ಮೂಲಕವಾಗಿ ತರಿಸಿಕೊಳ್ಳುವುದಕ್ಕಿಂತಲೂ ಹಣವನ್ನು ಮುಂಗಡವಾಗಿ ಕಳುಹಿಸುವುದು ಲಾಭಕರ. ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು ‘ಆರೋಗ್ಯ ಚಂದ್ರಿಕೆ’ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು.

ಪತ್ರವ್ಯವಹಾರಕ: ‘ಆರೋಗ್ಯ ಚಂದ್ರಿಕೆ’
೩೩೩ ತಂಬುಚೆಟ್ಟಿ ಬೀದಿ, ಮದ್ರಾಸ್

ತುಳು ಪಾಡ್ದನಗಳು.

ಬೊಬ್ಬರ್ಯ, ಕಲ್ಕುರ್ಟಿ—ಕಲ್ಲುಡ, ದೈಯ್ಯೊಂಗುಳು—ತೋಡಕಿನಾರ್, ಮುಂಡತ್ತಾಯ ಪ್ರತಿ ಒಂದಕ್ಕೆ 2 ಆಣೆ. 1½ ಆಣೆ ಟಪ್ಪಾಲು ಚೀಟು ಕಳುಹಿಸಿದರೆ 5 ಪುಸ್ತಕಗಳು ಕೂಡಲೇ ಕಳುಹಿಸಲ್ಪಡುವವು.

ವಿಳಾಸ: ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

The Canara Bank, Limited, Magalore.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.
Authorised and fully paid up Capital Rs. 300,000—0—0
Reserve and other sinking Funds „ 259,000—0—0

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ಕೆತ್ತ ಮೂಲಧನವು ರೂ. 300,000—0—0
ಕ್ಷೇಮನಿಧಿ ಮತ್ತು ಇತರ ಫಂಡುಗಳು „ 259,000—0—0

THE BANK RECEIVES FIXED, CURRENT ACCOUNT, & SAVINGS BANK DEPOSITS
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳೋಣಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1925.
K. Venkat Rao,
Secretary

ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಿಗಳಲ್ಲಿ ಒಂದಾದ,
ಲೋಕಾಮಯಹರ ಕಸ್ತೂರಿ ಮಾತ್ರೆಯನ್ನು ಇಂದೇ ತಾವು ತರಿಸಿಕೊಳ್ಳಿರಿ! ಏಕೆಂದರೆ,

ಲೋಕಾಮಯಹರ ಕಸ್ತೂರಿ ಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಷ್ಟೋ ಅಪೇಕ್ಷಿಸಲಾರಿರಿ ಅದು ಹೇಗೆಂದರೆ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಕಾಹಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೇ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಅಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಸಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರ ವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣಿಸುವ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟ ಹವಾ, ಕೊಳಕಾದ ನೀರುಗಳಿಂದ ಯಾವ ಕೇಡೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ಸೆಗಣಿ, ಕೆಮ್ಮಲು, ಶೀತ, ಶೀತವಾತ, ವೈಶ್ಚಘಾತ, ಆಹಾರವು ಜೀರ್ಣವಾಗದ ಬರುವ ಶಲೆ ನೋವು, ಕರುಳಿನ ಬೇನೆ, ಜ್ವರ, ಕಾಲರ ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಪ್ಲೇಗ್ ಫ್ಲೂ ಇನ್‌ಫ್ಲ್ಯುಯನ್‌ಜಾ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು

ಈ ಮಹಿಮೆಯನ್ನು ದಿವಾನ ಬಹದೂರ ವ್ಯಾಪಾರಿಗಳಿಗೂ ಗೋಪಾಲ್ಯರಿಗೂ ಈ ಮಾತ್ರೆಗಳು ಸಂಜೀವಿನಿಯಂತೆ ಇರುವ ಸಂಬಂಧವೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯ ಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ 250ರಿಂದ 300 ಮಾತ್ರೆಗಳ ವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1—4—0, 12 ಸೀಸೆಗಳಿಗೆ 2—7—0, 25 ಸೀಸೆಗಳಿಗೆ 4—10—0 ಪೋಸ್ಟೇಜು ಬೇರೆ. ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತದೆ.

ಏಜಂಟ್
ಮಂಗಳೂರು ಟವನಿಗೆ ಮಾತ್ರ.
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ.

ವಿಳಾಸ:— ಪಾಳ್ಯದ ವೆಂಕಟಾಚಲ ಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ವಿದ್ಯಾವಾಚಸ್ಪತಿ
ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ

“ಸಂಕ್ಷೇಪಗೀತೆ”

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ್ಳ, ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದೆ ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೧, ಟಪ್ಪಾಲು ಖರ್ಚು ಕೂಡಿ ಆಣೆ ೧೩ನ್ನು ಮನಿಯಾರ್ಡರ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ೩ರಕ್ಕಿಂತ ಜಾಸ್ತಿ ಖರ್ಚು ತಗಲುವುದು. ೧೦ಕ್ಕೆ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.

ಪುಸ್ತಕ ದೊರಿಯುವ ವಿಳಾಸ:—
ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು, ಮತ್ತು ಕೆನರಿಸ್ ಮಿಶ್ಯನ್ಸ್ ಬುಕ್ ಎಂಡ್ ಟ್ರೆಕ್ಟ ಡಿಪೋಜಿಟರಿ,
ಮಂಗಳೂರು.

ಉಚಿತ! ಬಿಟ್ಟಿ!! ಪುಗಸಟ್ಟೆ!!!

ವೈದ್ಯವಿದ್ಯ
PROPRIETOR RAJVAIDYA NARAYANJI KESHAVJI
NO PRICE NO POSTAGE

ಎಂಬ ಈ ಪುಸ್ತಕದಲ್ಲಿ ಆಯುರ್ವೇದ ಶಾಸ್ತ್ರದಲ್ಲಿ ಸ್ತ್ರೀಪುರುಷರು ಆರೋಗ್ಯದೃಢಕಾಯರಾಗಿ ಆರೋಗ್ಯದಿಂದ ಕೂಡಿದ ಸಂತಾನಗಳನ್ನು ಪಡೆದು ಸತಿಪತಿಯರು ಅನ್ಯೋನ್ಯವಾಗಿ ಅನುರಾಗವುಳ್ಳವರಾಗಿ ಸುಖದಿಂದಲೂ ಸಂತೋಷದಿಂದಲೂ ಸಂಸಾರಯಾತ್ರೆಯನ್ನು ಮಾಡಲು ಅತ್ಯಂತ ಉಪಯುಕ್ತವಾದ ವಿಷಯಗಳು ಅಲ್ಲಲ್ಲಿ ಹೇಳಲ್ಪಟ್ಟಿರುವುದನ್ನು ಒಂದಾಗಿ ಕ್ರೋಢೀಕರಿಸಿ ಅಜ್ಞಾನದಿಂದಲೂ ಸಂಕಷ್ಟದಿಂದಲೂ ನರಳುತ್ತಿರುವ ಸಂಸಾರಿಗಳನ್ನುದ್ಧಾರಮಾಡುವ ಸಲುವಾಗಿ ಈ ಪುಸ್ತಕವನ್ನು ಕ್ರಯವೂ ಅಂಚೇ ಹಾಸಲೂ ಇಲ್ಲದೆ ಬೇಡಿದವರಿಗೆ ಸರ್ವತ್ರ ಉಚಿತವಾಗಿ ಕಳುಹಿಸುತ್ತೇವೆ. ಹೆಚ್ಚು ಮಾಹಿತಿಗೆ ಪತ್ರ ಬರೆಯಿರಿ.

ರಾಜವೈದ್ಯ ನಾರಾಯಣಜಿ ಕೇಶವಜಿ,
49, ಬಂದರ್ ಸ್ಟ್ರೀಟ್, ಬಿ. ಟಿ. ಮದ್ರಾಸ್

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀಕಾಶಿ, ಗಯಾ, ಪ್ರಯಾಗ, ಹರಿದ್ವಾರ ಬದ್ರಿನಾರಾಯಣ ದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಮುನಿಗಳೊಡನೆ ಭಕ್ತಿಯಾಗಿ ಅವರ ಕಡೆಯಿಂದನುಭವ ತೆಗೆದು ಪ್ರತಿವಂದು ಸಿದ್ಧಮಾಡಿಕೊಂಡು ಬರೆದಿರುವರು. ೧ನೇದು ಮಂತ್ರಪ್ರಕರಣದಲ್ಲಿ ಮಂತ್ರ ಜಪದಿಂದಲೂ, ಮಂತ್ರಪ್ರಯೋಗದಿಂದಲೂ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವವಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವೂ ಇದೆ. ೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳು ಹೊರಡುವಿಕೆ, ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅದನ್ನು ಸಿದ್ಧಮಾಡಿಕೊಳ್ಳುವ ವಿವರವೂ ಇದೆ. ೩ನೇದು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು. ೪ನೇದು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾ ಸಹ, ಇದರಲ್ಲಿ ಉಂಟು. ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತೂ ರೋಗಗಳಿಗೂ ಸುಲಭವಾಗಿ ಔಷಧ ಮಾಡುವ ಕ್ರಮವನು ಚೆನ್ನಾಗಿ ಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಳಾಸವು ತಿಳಿಸಿರುವರು. ೫ನೇದು ಯಂತ್ರ ಪ್ರಕರಣದಲ್ಲಿ ವಶೀಕರಣ ಗೃಹಪೀಡಾ ನಿವಾರಣ ಭೂತಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು, ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರದಿರುವರು. ಈ ಗ್ರಂಥವು ಹತ್ತರ ಇದ್ದ ಬಳಿಕ ಎಲ್ಲಾ ದೇವಾನು ದೇವತೆಗಳು ದ್ರವ್ಯಗಳೂ ವೈದ್ಯರೂ ಜೋತಿಷ್ಯರು, ಮಾಂತ್ರಿಕರು ತಾಂತ್ರಿಕರೂ ಮನೆಯೊಳಗೆ ಇದ್ದ ಹಾಗೆ ಆಗುತ್ತದೆ. ಇಂಥ ಗ್ರಂಥವು ಯಾರು ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿಯುರು ತರಿಸಿ ನೋಡಬೇಕೆಂದು ಇದರ ಬೆಲೆ ಶೀರ ಕಡಿಮೆಮಾಡಿ ಇರುವವು. ೨—೮—೦ ಟಪ್ಪಾಲು ಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ ನಾಟಕ ಕಾವ್ಯ, ಕಥೆಗಳು, ಯಕ್ಷಗಾನ, ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ:—

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ

Just Arrived **Fresh Consignment**

OF

Best English Cycles.



REDUCTION IN PRICES.

Ranger Cycles Model M. Made in Birmingham.

WITH DUNLOP OR BATES TYRES & TUBES	... @ Rs.	90—0—0
Barton Humber on Advance		
WITH DUNLOP OR BATES TYRES & TUBES	... @ „	100—0—0
Senior Royal with B. S. A. Fitting.		
WITH DUNLOP OR BATES TYRES & TUBES ...	...@ Rs.	145—0—0
[illegible] Saxon with B. S A. Fitting.		
WITH DUNLOP OR BATES TYRES & TUBES ...	... @ Rs.	175—0—0

All the above Cycles include pump and tools.

BROOKES PATEERN 90/2 GERMAN SADDLE ...	...@ „	9—8—0
„ SADDLE 90/2 „ ...	...@ „	21—0—0
„ „ B/30 „ ...	...@ „	26—0—0

For further particulars please write to us or call on us:—

All kinds of Cycle Accessories, Dunlop and German Tyres and Tubes
ARE AVAILABLE AT VERY CHEAP RATES.

Special Discount to Traders. *Easy Terms Arranged.*

APPLY TO:—**The Mangalore Trading Association,**
Wholesale Dealers in Cycles and Cycle Accessories,
Car-Street, MANGALORE



—ಗೋಡೆಗೆ ತಗಲಿಸುವ
ಹೊಸ ನಮೂನೆಯ—

ಟಿಕ್—ಟಾಕ್

ಎಂಬ ಈ ಗಡಿಯಾರಗಳು ಜರ್ಮನೀ ದೇಶದಲ್ಲಿ ತಯಾರಿಸಿದ್ದು. ಇವು ಕಂಠಾರು ಘಂಟೆಯನ್ನು ತೋರಿಸುವವು. ಇವಕ್ಕೆ ಬೀಗ ಕೊಡಬೇಕಾದಿಲ್ಲ. ಇದರಲ್ಲಿ ಕಾಣುತ್ತಿರುವ ಗುಂಡನ್ನು ಮೇಲಕ್ಕೆ ಎಳೆದರೆ ಸಾಕು. ತನ್ನಷ್ಟಕ್ಕೆ ತಾನೇ ಟಿಕ್—ಟಾಕ್ ಎಂಬ ಶಬ್ದವನ್ನು ಮಾಡುತ್ತಾ ಸರಿಯಾದ ಕಾಲವನ್ನು ತೋರಿಸುವದು. ಇದು ನೋಡುವುದಕೆ ಬಹು ಲಕ್ಷಣವಾಗಿರುವುದು.

ಕ್ರಯ 1ಕ್ಕೆ ರೂ. 8—0—0

ಪೀಟರ್ ವಾಚ್ ಕಂಪೆನಿ
ಪೋಸ್ಟ್ ಬಾಕ್ಸ್ ನಂ. 27, ಮದ್ರಾಸ್.



ADVERTISE IN

The Business Directory
OF INDIA, BURMA & CEYLON

A Comprehensive Directory of the various Business-men, Exporters and Importers, Firms, Factories, Mills, Manufacturers, Merchants and Industries of the principal Cities, Ports and Towns of India, Burma and Ceylon.

PUBLISHED ANNUALLY
Rates for Advertisements

¼ Page	Rs.	50.
2 in. Single Column	"	20.
1 in. Single Column	"	15.
Name in Bold Types	"	5.

Price per Copy Rs. 10.
PRINTERS & PUBLISHERS.
Business Directory Co.,
Kanara Press Buildings, MADRAS. E.
Telegrams: "KETHAKI" Phone 540

ದಕ್ಷಿಣ ಕನ್ನಡ ಜಿಲ್ಲೆಯ

ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

JUST ARRIVED

Goodrich Belts.

OF VARIOUS SIZES
Price Re. 1—12—0 each

Mangalore Trading Association,
Car Street, MANGALORE.

ಸಾರಸ್ವತ.

ಕನ್ನಡ ಮತ್ತು ಕೊಂಕಣಿ ಭಾಷೆಗಳಲ್ಲಿ ಕಳೆದ ವಿಜಯ ದಶಮಿಯಾ ದಿನದಿಂದ ಪ್ರತಿ ದಶಮಿಗೆ ಹೊರಡುವ ಪತ್ರಿಕೆ.

ವಿ. ಎಸ್. ಕಾಮತ್,
ಮೂಲ್ಕಿ, ವಾಮನ ಕುಡುವ } ಸಂಪಾದಕರು.

ಮತಸಂಸ್ಥೆ ಮತ್ತು ಸಮಾಜಕ್ಕೆ ಸಂಬಂಧಪಟ್ಟ ಇತರ ಸಂಸ್ಥೆಗಳ ಸುಸಂಘಟನ.

ಸಮಾಜದೊಳಗೆ ಅನ್ಯೋನ್ಯ ಸಾಧನೆ.

ಸ್ತ್ರೀಸಮಾಜಕ್ಕೆ ಉಪಯುಕ್ತವಾದ ವಿಷಯಗಳ ನಿರೂಪಣ.

ಮತಭಾವನೆಗಳ ಉಜ್ಜೀವನ ಇತ್ಯಾದಿ ಉದ್ದೇಶಗಳಿಂದ ಈ ಪತ್ರಿಕೆಯು ಹೊರಡಿಸಲ್ಪಡುವುದು. ಸಾರಸ್ವತ ಸಮಾಜವು ಇದಕ್ಕೆ ಪ್ರೋತ್ಸಾಹವನ್ನೀಯಬೇಕಾಗಿ ಪ್ರಾರ್ಥನೆ.

ಚಂದಾಹಣ ಅಂಚೆವೆಚ್ಚ ಕೂಡಾ ರೂ. ೧—೪—೦. ಪೋಷಕರು ರೂ. ೧೦—೦—೦. ಸಹಾಯಕರು ರೂ. ೫—೦—೦. ಮಾದರಿ ಸಂಚಿಕೆಯನ್ನು ಟಪ್ಪಾಲು ಖರ್ಚಿಗಾಗಿ ಅರ್ಧಾಣೆ ಸ್ಟಾಂಪು ಕಳುಹಿಸುವವರಿಗೆ ಉಚಿತವಾಗಿ ಕಳುಹಿಸುವೆವು.

ಕನ್ನಡ ನಾಡಿನಲ್ಲಿ ಪ್ರತಿ ಕಡೆಯಲ್ಲಿಯೂ
ಚಾತವಿದಾರರು ಬೇಕು.

ಎಲ್ಲಾ ಪತ್ರವ್ಯವಹಾರಗಳನ್ನು ಕೆಳಗಿನ ವಿಳಾಸಕ್ಕೆ ನಡೆಸಬೇಕು.

ಯು. ನಾರಾಯಣನಾಯ್ಕ, ಕಾರ್ಯದರ್ಶಿ,
ಸಾರಸ್ವತ, ಉಡುಪಿ.

ಆರ್. ಮಾರ್ಟಿನ್ಸರ ಲಪ್ತಾ ಎಣ್ಣೆ

ಇದರ ಸುವಾಸನೆಯು, (ಪರಿಮಳವು) ಬಹಳ ಅಂದವಾಗಿಯೂ ಇರುವುದಲ್ಲದೆ, ಬಹಳ ಹೊತ್ತಿನ ವರೆಗೂ ಇರುತ್ತದೆ. ಈ ಎಣ್ಣೆಯನ್ನು ತಲೆಗೆ ಹಾಕಿಕೊಳ್ಳುವುದರಿಂದ ಕಣ್ಣುಗಳು ತಂಪಾಗಿಯೂ, ಶುಭ್ರವಾಗಿಯೂ, ಆಗವುವಲದೆ, ಮೆದುಳು ಚೆನ್ನಾಗಿ ಬೆಳೆಯುತ್ತದೆ. ಇದನ್ನು ಪ್ರತಿದಿವಸವೂ ಉಪಯೋಗಿಸುವುದರಿಂದ ಕೂದಲುಗಳು ಕಪ್ಪಾಗಿ ಹೊಳೆಯುವಂತೆ ಮಾಡುತ್ತದೆ. ಕೂದಲುಗಳಲ್ಲಿರುವ ಹೇನುಗಳು ಮುಂತಾದುವು ನಾಶವಾಗಿ ತಲೆಬುರುಡೆಯನ್ನು ಚೆನ್ನಾಗಿ ಬೆಳೆಯುವಂತೆ ಮಾಡುತ್ತದೆ. ಗದ್ದ ಮತ್ತು ಮೀಸೆಗಳು ಸಹ ಬೆಳೆಯುತ್ತವೆ. ಇದನ್ನು ಉಪಯೋಗಿಸಿದ ಜನರು ಇದಕ್ಕಿಂತ ಉತ್ತಮವಾದ ಎಣ್ಣೆಯು ಬೇರೆ ಇಲ್ಲವೆಂದು ಹೇಳಿರುತ್ತಾರೆ.

ಕ್ರಯ ಬಾಟಿ 1ಕ್ಕೆ ರೂ. 1-4-0.

ಆರ್ ಮಾರ್ಟಿನ್ಸರ ಗಿಟೋಡಯಿನ್.

ಗಂಡಸರಿಗೂ ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ, ಅಥವಾ ಹೊಸತಾಗಿದ್ದರೂ ಸರಿ. ಬಿಳುಪು ಹೋಗುವುದು ಉರಿಯುವುದು, ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೆ ಉರಿ ಮೂತ್ರವನ್ನು ನಿಲ್ಲಿಸಿ, ಮೂತ್ರವು ಬಿಳುಪಾಗಿ ನಿರ್ಮಲವಾಗುವುದಲ್ಲದೆ ರೋಗದ ಪಟ್ಟೆನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ.

ಬೆಲೆ ಸೀಸೆ 1ಕ್ಕೆ ರೂ. 2—0—0.

ಆರ್. ಮಾರ್ಟಿನ್ಸರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮುಗೂರಲು ಶ್ವಾಸ, ಸೀತ, ನೆಗಡಿ, ಗಂಟಲುನೋವು, ಎದೆ ನೋವುಗಳನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನಮಾಡಿ ಪರೀಕ್ಷಿಸಿ ನೋಡಿರಿ. ಅನಂತರ ಬೇರೆ ಯಾವ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮಲಿಗೂ ರಾಜೆಯಾಗಿಯೂ, ಎದೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತಲೆಯುಳ್ಳದಂತೆ ಮಾಡುತ್ತದೆ.

60 ಮಾತ್ರೆಗಳ ಸೀಸೆ 1ಕ್ಕೆ ರೂ. 1—4—0.

ವಿಳಾಸ:—ಆರ್. ಡಿ. ಕಟೆ ಮತ್ತು ಕಂಪೆನಿ,
ನಂಬ್ರ ಬಿ. ಫ್ರಿಯರ್ ರೋಡ್,
ಸಾಂಜ ವರ್ತಮಾನ ಪ್ರೆಸ್,
ಟೋಡಿವಾಲಾ ಬಿಲ್ಡಿಂಗ ಎದುರುಗಡೆ, ಫೋರ್ಟ ಮುಂಬಯಿ.

R. D. Kately & Co.
No. B. Frere Road,
Opposit Sanjvertaman Press,
Todiwala Building, FORT BOMBAY.

ಸುವರ್ಣಸಂಧಿ.

ಕೈ ಮಗ್ಗಗಳಲ್ಲಿ ನೂಲನ್ನು ನೇಯುವ ಮಗ್ಗಗಳಿಗೆ ಬೇಕಾಗುವ ಯಾವತ್ತು ಸಾಮಾನುಗಳು, ನೂಲಿಗೆ ಹಾಕುವ ನಾನಾ ತರದ ರಂಗುಗಳು ಅಗತ್ಯವಿರುವ ನಾನಾ ಬಗೆಯ ರಸಾಯನಗಳು ಇವನ್ನು ನಮ್ಮಲ್ಲಿಂದ ನ್ಯಾಯವಾದ ಬೆಲೆಗೆ ಹೊಂದಬಹುದು. ನಮ್ಮಲ್ಲಿ ದೊರಕುವ ಯಾವತ್ತು ಸಾಮಾನುಗಳನ್ನು ಸೇಕಡಾ ೩ರಂತೆ ಕಮ್ಮಿಶನ್ ಪಡೆದು ಏಜಂಟರು ಮಾರಾಟಕ್ಕೆ ಪಡೆಯಬಹುದು.

ಪಿ. ಪಿ. ತ್ರಿವೇದಿ ಎಂಡ್ ಕೋ,
ನಂಬ್ರ 66 [illegible],
ಫೋರ್ಟ ಮುಂಬಯಿ.

Edited, Printed & Published by V. S. Kamath at the M. T. A. SHARADA PRESS, MANGALORE.

Registered: No. M. 498.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ತಾ । ಗರವ ಮಥಿಸಲು ಸುರಂಗೆದರಿಂ । ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ । ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೯. ಮಂಗಳೂರು, ತಾರೀಕು ೨೭ನೇ ಶುಕ್ರವಾರ ಫೆಬ್ರುವರ ೧೯೨೫. ಸಂಚಿಕೆ ೯.

The Canara Banking Corporation Udipi, Ltd.

Head Office:— Udipi • Branch:— Coondapoor

Season Deposits

Carrying Special rate of 7% up to 15th June 1925 only.

Further Particulars on Application.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಉಡುಪಿ, ಲಿಮಿಟೆಡ್.

ಹೆಡ್ ಆಫೀಸು:—ಉಡುಪಿ. ಶಾಖೆ:—ಕುಂದಾಪುರ.

ತಾ. 15—6—1925ರವರೆಗೆ ಮಾತ್ರ ಸಾಲಿಯಾನ್ ಸೇಕಡಾ 7ರ ದರದ ಬಡ್ಡಿಯ ಮೇಲೆ ಮುಸುಂ ಠೇವಣಾತಿಗಳನ್ನು ಅಂಗೀಕರಿಸೋಣಾಗುತ್ತದೆ.

ಹೆಚ್ಚಿನ ಮಾಹಿತಿಗೆ ಬರಕೊಳ್ಳಿರಿ.

Office of the Corporation, Udipi, 10-11-'25 } **N. Ananda Rao,** *Secretary.*

Wanted Agents
FOR
Every District in South India

For Pushing Sales of Our Calenders, Xmas and New Year Cards, Blotters, Pictures and Picture Post Cards, at wholesale rates. Deposit of Rs. 100—0—0 Essential.

Apply to:—
The South Indian Adve[illegible]
[illegible]
[illegible] BANGALORE CITY.

[illegible] ರಬ್ಬರ್ ಸ್ಟಾಂಪ ಮುದ್ರೆ ಧಾವಳಿಗಳು.

1 ಮೂಳ ಉದ್ದ 1¼ ಮೂಳ ಅಗಲ ರೂ. 1¼ರಿಂದ 2 ವರೆಗೆ, 5 ಮೂಳ ಉದ್ದ 1¼ ಮೂಳ ಅಗಲ ರೂ. 1¼ ರಿಂದ 5 ವರೆಗೆ, 6 ಮೂಳ ಉದ್ದ 1¼ ಮೂಳ ಅಗಲ ರೂ. 2¼ರಿಂದ 6 ವರೆಗೆ, 8 ಮೂಳ ಉದ್ದ 2 ಮೂಳ ಅಗಲ ರೂ. 3¼ರಿಂದ 10 ವರೆಗೆ, 12 ಮೂಳ ಉದ್ದ 2¼ ಮೂಳ ಅಗಲ ರೂ. 6ರಿಂದ 12 ವರೆಗೆ, 16 ಮೂಳ ಉದ್ದ 2¼ ಮೂಳ ಅಗಲ ರೂ. 9ರಿಂದ 16 ವರೆಗೆ. [illegible]

ವಿಳಾಸ—
[illegible]

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ.

450 ಪುಟಗಳು ಎಮ್. ಗಣಪತಿರಾವ್ ಐಗಳ್ ಇವರಿಂದ ರಚಿತವಾದದ್ದು. ಕ್ರಯ ರೂ. 1-4-0

ಮಾರಾಟಕ್ಕೆ ಸಿದ್ಧವಾಗಿವೆ **– ತುಳು ಪಾಡ್ದನಗಳು –** ಮಾರಾಟಕ್ಕೆ ಸಿದ್ಧವಾಗಿವೆ.

ದೈಯ್ಯೊಂಗುಳು, ಕಲ್ಲುರ್ಟಿ—ಕಲ್ಕುಡ, ಕಣಂದೂರು ದೈಯ್ಯೊಂಗುಳು, ಮುಂಡತ್ತಾಯ, ಬೊಬ್ಬರ್ಯ.

ಸುಲಭ ದರಗಳು **– ಶಾಲಾ ಪುಸ್ತಕಗಳು –** ರೊಖ ಕೊಂಡುಕೊಳ್ಳುವವರಿಗೆ ಯೋಗ್ಯ ಡಿಸ್ಕೌಂಟ್.

ಚಿಕ್ಕ ಕಥೆಗಳು:—ಮೂರು ಕರಡಿಗಳು; ಜೇನುಹುಳು ಕಾಗೆ ಬಡವಾಯಿತು; ಅರ್ಗಣೆ ಮುದ್ದೆ; ಇಲಿಗಳ ಪಕ್ಷ ಕೈ; ಅಂಗೇ ದುಗ್ಗು; ಸಿಗಡಿ ಯಾಕೆ ಒಣಗಲಿಲ್ಲ; ಗುಡುಗುಡು ಗುಮ್ಮಟ ದೇವರು; ಮೊಲನ ಕಾಳಜ್ಜ ಒಡ್ಡನ ಓಟ; ಹೊಸ ಕನ್ನಡ ಪುಸ್ತಕ ಭಾಗ ೧; ಹೊಸ ಕನ್ನಡ ಪುಸ್ತಕ ಭಾಗ ೨; ಕನ್ನಡ ಪದ್ಯಗಳು; ಮಗ್ಗಿ ಪುಸ್ತಕ; ಅಚಿತಕುವರ; ಪದ್ಯ ರತ್ನಾವಳಿ, ಎಕ್ಸರ್‌ಸೈಜ್ ಮತ್ತು ನೋಟು ಪುಸ್ತಕಗಳು, ಕಾಪಿ ಪುಸ್ತಕಗಳು, ಡ್ರಾಯಿಂಗ್ ಪುಸ್ತಕಗಳು

ಇತರ ಪುಸ್ತಕಗಳು:—ಸಂಕ್ಷೇಪಗೀತೆ, ಕೇತುಭಂಗ, ಹಿಂದೂ ವ್ರತವಿವೇಕ, ಚಂದ್ರಗುಪ್ತ ಚಕ್ರವರ್ತಿ, ಶ್ರೀ ಕೃಷ್ಣಸಂಧಾನ, ಪದ್ಯಪಾಠಗಳು, ಹರಿಕಥಾ ವ್ರತಸಾರ ಹರಿನಾಮಸಂಕೀರ್ತನೆ ಸುಧಾಂಮೃತ ಪದ್ಯಗಳು. ಬೆಂಕಿಪೆಟ್ಟಿಗೆ ತಯಾರಿಸುವ ವಿಧಾನ, ಸಾಬೂನು ತಯಾರಿಸುವ ವಿಧಾನ, ಸ್ವರಾಜ್ಯ [illegible], ಚರಕಗೀತೆ, ಕೊಂಕಣಿ ಭಾಷೆಯಲ್ಲಿ ಚಂದ್ರಹಾಸ ನಾಟಕ, ಪ್ರಹಲ್ಲಾದ ಚರಿತ್ರ ನಾಟಕ, ಕನ್ನಡ ಮೃಚ್ಛಕಟಿಕ ನಾಟಕ, ಚಂದ್ರ[illegible]ಭ್ಯುದಯ ನಾಟಕ, ಕೋವಿಲನ್ ಚರಿತ್ರ ನಾಟಕ, ಮಾದರಿ ಉಪನ್ಯಾಸ ಭಾಗ ೧, ೨, ಮತ್ತು ೩.

AMRUTANJAN
Best Indian
Pain Balm
Amrutanjan
BOMBAY.

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಸಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ, ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ, ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ [illegible]ವಾಗಿರುತ್ತದೆ. ಡಬ್ಬಿ 1ರ ಕ್ರಯ 2 ಆಣೆ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ ಟೌನ್, ಮದ್ರಾಸು.

109 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

—ರಥೋತ್ಸವ, ವಿವಾಹ ಉಪನಯನಗಳ ಸಮಯ—
ಸರ್ವರಿಗೂ ಉಡಿಗೆ ತೊಡಿಗೆಗಳು ಬೇಕಾಗುವ ಸಂದರ್ಭ.

ಯಾರು, ಯಾವುದನ್ನು, ಎಲ್ಲಿ ಪಡೆಯಬೇಕೆಂಬ ಶಂಕೆಯಿಂದ ಚಿಂತಿಸಬೇಡಿರಿ. [illegible] ಬೇಕಾದ ಯಥಾರ್ಥ ಮಾಹಿತಿಯನ್ನು ಕಳೆದ ಹತ್ತುಹನ್ನೆರಡು ವರುಷಗಳಿಂದ ಪಡೆದು ನಮ್ಮಲ್ಲಿಯು ವ್ಯಾಪಾರವು ಗಿರಾಕಿಗಳಿಗೆ ಸರ್ವ ದೃಷ್ಟಿಯಿಂದಲೂ ಲಾಭಕರವಾಗಿ ಪರಿಣಮಿಸುವಂತೆ ನಮ್ಮ ಜವಳಿ ಸಂಗ್ರಹವನ್ನು ಮಾಡಿರುತ್ತೇವೆ.

ಗುರ್ಪುರ್ ಕರ್ಕೇರ್ ಬ್ರದರ್ಸ್, ರಥಬೀದಿ, ಮಂಗಳೂರು.

ಹೆಡ್ ಆಫೀಸು:—ರಥಬೀದಿ—(ದೊಡಲು ಸುಜೀರ ನಾಗಪ್ಪನಾಯಕ್, ಎಂಡ್ ಕೊ, ಇವರಲ್ಲಿ; ಅಜೆಬುದ್ದೀನ್ ರಸ್ತೆಗೆ ತಿರುಗುವಲ್ಲಿ) ಮಂಗಳೂರು.

ಬ್ರೆಂಚ್ ಆಫೀಸು:—ರಥಬೀದಿ—(ಹಳೇ ತಾಲೂಕು ಕಚೇರಿಯ ವಠಾರಕ್ಕೆ ಸಮೀಪವಿರುವ ಮನೆಗೆ) ಮಂಗಳೂರು.

ಈ ದೇಶದ ಪ್ರಖ್ಯಾತಪಟ್ಟ ನೇಯಿಗೆಯ ಕೇಂದ್ರಸ್ಥಳಗಳಾದ—ಬನಾರಿಸ್, [illegible], ಅಹಮ್ಮದಾಬಾದ್, ಸೂರತ್, ಬೆಂಗಳೂರು, ಧರ್ಮಾವರಮ್, ಕಂಜೀವರಮ್, ಕೊಯಿಮುತ್ತೂರು, ಮಧುರೆ, ತಂಜಾವೂರು, [illegible], [illegible], [illegible], [illegible], ಮದ್ರಾಸು ಈ ಪ್ರಾಂತ್ಯಗಳಲ್ಲಿ ತಯ್ಯಾರಾದ [illegible], ದುಪ್ಪಟಾ, ಜರಿಕಾ, ಪೇಟ್ಟ, ರೇಶ್ಮೆ ಸೀರೆಗಳು, [illegible] ಸೀರೆಗಳು, [illegible] ರೇಶ್ಮೆ ಸೀರೆಗಳು, [illegible] ಸೀರೆಗಳು, ರೇಶ್ಮೆ ಮಡಿಗಳು, ಪಕ್ಕ ಉಪಯೋಗದ ಸೀರೆಗಳು [illegible] ಕೈರಾಟೆಯಲ್ಲಿ ತಯಾರಿಸಿದ ನೂಲಿನಿಂದ ಮಾಡಿದ—

[illegible]

ಪ್ರತಿಯೊಂದು ಕುಟುಂಬಿಗಳ ಮನೆಗಳಲ್ಲಿ ಸೌಖ್ಯವನ್ನು ತೋರಿಸುವುದಕ್ಕೂ ಮತ್ತು ಅವರವರ ಉಪಯೋಗಾರ್ಥವನ್ನು ತಿಳುವಳಿಕೆ ಬಗ್ಗೆ ನಡಿಸುವುದಕ್ಕೂ ಒಂದು ಮರ್ಮವಾದ ನಿಘಂಟು ಪುಸ್ತಕವು ಈ ನಮ್ಮ ಹಿಂದೂದೇಶದ ಸಮೂಹದಲ್ಲಿರುವುದು. ಅಂಥಾ ಪುಸ್ತಕವು ಯಾವದೆಂಬುದು

ನೀವುಗಳು ಬಲ್ಲಿರಾ?
(ಅದೇ)
"ಕಾಮಶಾಸ್ತ್ರವೆಂಬುವುದು."

ತಾವುಗಳು ಇನ್ನೂ ಈ ಪುಸ್ತಕದಲ್ಲಿ ಬರೆದಿರುವ ಸಾರಾಂಶವನ್ನು ಓದಿಲ್ಲದಿದ್ದರೆ, ಒಡನೇ ಒಂದು ಪುಸ್ತಕವನ್ನು ಕಳುಹಿಸುವಂತೆ ಒಂದು ಪೋಸ್ಟುಕಾರ್ಡು ಬರಿಯಿರಿ.

ಪುಸ್ತಕವನ್ನು ಇನಾಮಾಗಿ ಕಳುಹಿಸುವೆವು.

ಮುಖ್ಯವಾದ ತಿಳುವಳಿಕೆ.

ತಾವುಗಳು ದೃಢಚಿತ್ತರಾಗಿಯೂ, ನಿಧಾನಸ್ಥರಾಗಿಯೂ, ಸೌಖ್ಯವಾಗಿಯೂ, ಕಷ್ಟವಿಲ್ಲದೇನೇ ವಿಷಯಗಳನ್ನು ಧರಿಸುವ ಮನಸ್ಸನ್ನು ಹೊಂದಬೇಕಾದರೆ ನಮ್ಮ ಅಮೂಲ್ಯವಾದ "ಕಾಮಶಾಸ್ತ್ರವೆಂಬ ಪುಸ್ತಕದಲ್ಲಿ ಕಾಣಿಸಿರುವ ಆತಂಕನಿಗ್ರಹ ಮಾತ್ರೆಗಳನ್ನು ಸೇವಿಸಬೇಕು."

ಒಂದು ರೂಪಾಯಿ ಖರ್ಚುಮಾಡಿದರೆ 32 ಮಾತ್ರೆಗಳುಳ್ಳ ಒಂದು ಡಬ್ಬಿಯನ್ನು ತರಿಸಿ ಪ್ರಯತ್ನಿಸಬಹುದು.

ವಿವರವಾಗಿ ಬರೆದಿರುವ ಒಂದು ಕ್ಯಾಟಲಾಗು ಕಳುಹಿಸುವಂತೆ ಈ ದಿನವೇ ಒಂದು ಪೋಸ್ಟುಕಾರ್ಡು ಬರಿಯಿರಿ.

ಆತಂಕನಿಗ್ರಹ ಔಷಧಾಲಯ,
ನಂಬ್ರ 26, ಬ್ರಾಡ್ವೆ, ಮದರಾಸು.

ಕಾಮಗ್ರಂಥಗಳು!! ಬೇಗನೇ ತರಿಸಿಕೊಳ್ಳಿರಿ!!!

ಕೋಕಶಾಸ್ತ್ರವು.

ರಸಿಕ ವಾಚಕ ಮಹಾಶಯರೇ,

ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ, ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನು ಶೋಧಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿಣಿ, ಸ್ತ್ರೀಯು ಇದರಂತೆ ಪುರುಷರಲ್ಲಿಯೂ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ, ಜನನೇಂದ್ರಿಯಾದಿಗಳ ವರ್ಣನೆಯನ್ನೂ, ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ, ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ, ನಪುಂಸಕತ್ವ, ವಂಧ್ಯಾದೋಷಗಳ ಚಿಕಿತ್ಸೆಯನ್ನೂ, ಸ್ತ್ರೀಯರ ಗೂಢ ರಹಸ್ಯವನ್ನೂ, ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನೂ ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನು ಒಮ್ಮೆ ರಸಿಕರು ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ.

ಇದರ ಬೆಲೆ ೧—೮—೦, ಟಪ್ಪಾಲು ಹಾಸಲು ೦—೪—೦.

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ಮೂರನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್. ಗಣಪತಿರಾವ್ ಐಗಳ್—ಗ್ರಂಥಕರ್ತರು.
ಮನೋರಂಜಕ ಚಿತ್ರಗಳೂ ಇವೆ.

ಇದರಲ್ಲಿ ಸಾವಿತ್ರಿ, ಶಕುಂತಳಾ, ಕೃಷ್ಣಾಕುಮಾರಿ, ಪದ್ಮಿನಿ, ಜೋನ್ ಒಫ್ ಆರ್ಕ್, ಫ್ಲೋರೆನ್ಸನಾಯಿಟಿಂಗೇಲ, ಪರಶುರಾಮ, ಭೂತಾಳಪಾಂಡ್ಯ, ಕಾರ್ಕಳ ಗೋಮಟೇಶ್ವರ ಮತ್ತು ಭೈರವರಾಜ, ಮೂಡಬಿದ್ರೆಯ ಚೌಟರು, ನಂದಾವರ ಬಂಗರು, ಕಾರ್ಕಳ ರಾಮಸಮುದ್ರ ಮತ್ತು ರಾಮನಾಥ ಒಡೆಯರ ಆಳೆಕಟ್ಟು, ಗುರುಪುರ ಜಂಗಮ ಮಠ, ಕಲ್ಯಾಣಪ್ಪನ ಕಾಟಕಾಯಿ, ಗುರುವಾಯನಕೆರೆ, ಜಮಾಲಾಬಾದುಕೋಟೆ, ಸುಲ್ತಾನಬತ್ತೇರಿ, ವೇದಗಾಪ್ರಾರ್ಥನಾಮಂದಿರ, ಸೇಂಟಮೇರಿದ್ವೀಪಗಳು ಮತ್ತು ದರಿಯಾಬಾದರಗಡ, ಕೊರಗರು, ಕೊಡಗರು, ತೋಡರು, ರಜಪೂತರು, ಕಂದಾರಿಗಳು ಭೂರ್ಖಾಜನರು, ಅರಬ್ಬಿಯರು. ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ಮೂರನೇ ದರ್ಜೆಯ [illegible]ಗೆ ಉಪಯುಕ್ತವಾಗಿದೆ. ಕ್ರಯ 6 ಆಣೆ.

ಪುಸ್ತಕ ದೊರೆಯುವ ವಿಳಾಸ:—
ಛಾಪಖಾನೆ, [illegible]ರು. | ಗಣಪತಿರಾವ್, ಐಗಳ್. ಮಂಜೇಶ್ವರ.

ಡಾಕ್ಟರುಗಳು ಭಿನ್ನಾಭಿಪ್ರಾಯಪಡುವಾಗ್ಯೆ ತೀರ್ಮಾನಿಸುವದು ಯಾರು?

ಅಂಥಾ ಸಂದರ್ಭಗಳಲ್ಲಿ ಡೆಂಗ್ಯೂ ಮುಂತಾದ ಜ್ವರಗಳನ್ನು ನಿವಾರಿಸುವಂಥಾ "ಬಾಟ್ಲಿವಾಲರ ಏಗ್ಯೂಮಿಕ್ಸ್ಚರ್"ನ್ನು ಸರಾಗವಾಗಿಯೂ, ಮತ್ತು ಜ್ವರಗಳನ್ನು ಖಂಡಿತವಾಗಿ ನಿಲ್ಲಿಸುವಂಥಾದ್ದೂ, ಎಲ್ಲಾ ತರದ ಆಲೆಸೋಪುಗಳನ್ನು ಹೋಗಲಾಡಿಸುವಂಥಾದ್ದೂ ಆದ "ಬಾಟ್ಲಿವಾಲರ ಏಗ್ಯೂಪಿಲ್ಸ್" ಇದನ್ನು ಉಪಯೋಗಿಸಿರಿ.

ಐ. ಎಮ್. ಎಸ್. ಡಾಕ್ಟರುಗಳಿಂದ ಶಿಫಾರಸು ಮಾಡಲ್ಪಟ್ಟಿದ್ದು. ಇದರ ಉಪಯೋಗದಿಂದ ಹೃದಯದ ಮೇಲೆ ಯಾವದೊಂದೂ ಬಾಧಕವಿಲ್ಲ. ಅರ್ಧ ಶತಮಾನದಿಂದ ಹಿಂದೂಸ್ಥಾನ, ಬರ್ಮಾ, ಸಿಲೋನ್, ಆಫ್ರಿಕಾ ಇವುಗಳಲ್ಲಿ ಪ್ರಖ್ಯಾತಪಟ್ಟದ್ದಾಗಿರುತ್ತದೆ.

ಅನೇಕ ಹಿಂದೀ ಪ್ರದರ್ಶನಗಳಲ್ಲಿ ಬೆಳ್ಳಿ ಮತ್ತು ಬಂಗಾರದ ಪದಕಗಳನ್ನು ಪಡೆದಿರುತ್ತೆ. ಚಾಲ್ತಿ ನಾಣ್ಯದಂತಿದ್ದು ವ್ಯಾಪಾರಿಗಳೂ ಕೂಡ ಅದರ ಮೇಲೆ ಹಣವನ್ನು ಮುಂಗಡವಾಗಿ ಕೊಡುತ್ತಾರೆ. ಬಡ ಮತ್ತು ಮಧ್ಯಮ ತರಗತಿಯ ಜನರಿಗೆ ವರಪ್ರದಾನವಾಗಿದ್ದು ಸಂಚಾರ, ಪ್ರಯಾಣ, ದೇಶಾಟನೆಗಳ ಸಮಯದಲ್ಲಿ ಹತ್ತಿರದಲ್ಲಿರಿಸಿಕೊಳ್ಳತಕ್ಕದ್ದಾಗಿರುತ್ತದೆ.

ಬಾಟ್ಲಿವಾಲರ ಬಾಲಾಮೃತ ಅಥವಾ ಟೋನಿಕ್ ಸಿರಪ್.

ಕೆಮ್ಮನ್ನು ಹೋಗಲಾಡಿಸಿ, ಎದೆನೋವನ್ನು ಶಾಂತಗೊಳಿಸಿ, ಜ್ವರವನ್ನು ಉಪಶಮನಿಸಿ, ನಿದ್ರಾಭಂಗವನ್ನು ಕಡಿಮೆ ಮಾಡಿ ಧಾತುವರ್ಧನವನ್ನು ಮಾಡುವದರಲ್ಲಿ ಅತ್ಯುತ್ತಮವಾಗಿರುತ್ತದೆ. ಕಫವನ್ನು ಒಡಗಿಸಿ ಮಾಯವಾಗುವಂತೆ ಮಾಡುವುದಲ್ಲದೆ ಅದೇ ಸಮಯದಲ್ಲಿ ಒಳ್ಳೇ ಜೀರ್ಣವನ್ನು ಉಂಟುಮಾಡುವುದು. ದರ ಮೊದಲಾದ ಮಾಹಿತಿಯನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಕಾರಖಾನೆ:—CAWASHAPUR, BOMBAY.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ. | ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್., ಪಿ. ವಾರ್ಲಿ, ಮುಂಬಯಿ, ನಂಬ್ರ 18.

ಸಣ್ಣ ಹುಡುಗರ ಸಲುವಾಗಿ
ಡೋಂಗರೆ
ಇವರ
ಬಾಲಾಮೃತ.

ಈ ಔಷಧವನ್ನು ಸೇವನೆ ಮಾಡುವುದರಿಂದ ಮಕ್ಕಳು ರೋಗರಹಿತರೂ ಸಶಕ್ತರೂ ಆಗುತ್ತಾರೆ. ಇದು ಮಧುರವಾಗಿದೆ; ಮಕ್ಕಳು ಸಂತೋಷದಿಂದ ಸೇವಿಸುತ್ತಾರೆ.

ನಮ್ಮ ವಿಳಾಸ:—
ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಏಜಂಟರು:— ಡಿ. ಊಲನ್ ಮಾರ್ಟ್, ಮಂಗಳೂರು.

OUR RECENT IMPORT IN WRIST WATCHES | Have you used anyone of these Watches? | SEND YOUR ORDER NOW ALL GUARANTEED.

Fashionable wrist wrist Lady's size. Reliable movement Guaranteed.

No. 368

Handy to wear and looks beautiful. Gives punctual time and with strong movement.

Nickel case Rs. 8—0

High-class Radium dial watch watch with Roman figures.

No. 367.

Can be seen in dark [illegible]. Well fitted with [illegible] movement and strong to [illegible] by one and all

Silver case Rs. 9—0.

Radio light wrist watch.

No. 372.

Fitted with the best mechanism and guaranteed to work and keep perfect time for a long time.

Nickel case Rs. 7—8
[illegible]tro rolled-go[illegible]—0

(N. B. In addition to the above, we have good number of varieties of fancy wrist watches, pocket watches. Please write for a descriptive catalogue, which will be sent free)

WHOLESALE IMPORTERS

PETER WATCH COY.,
POST BOX 27, MADRAS

ಶಾಲಿವಾಹನಶಕ ೧೮೪೭ನೆಯ ರಕ್ತಾಕ್ಷಿ ಸಂವತ್ಸರದ ಫಾಲ್ಗುಣ ಶು॥ ಶನಿವಾರದಿಂದ ರಕ್ತಾಕ್ಷಿ ಸಂವತ್ಸರದ ಫಾಲ್ಗುಣ ಶು॥ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೫ನೆಯ ಕುಂಭ ಮಾಸ.)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೌರಮಾನ	ಸೂರ್ಯ ಉ.	ಸೂರ್ಯ ಅಸ್ತ.
28	ಶನಿ	೬	೫೯ ೪೮	ಭರಣೀ	೪೭.೩೩	೧೬	6.50	6.38
1	ರವಿ	೭	೬೦. ೦	ಕೃತ್ತಿಕಾ	೫೩.೧೬	೧೮	6.49	6.38
2	ಸೋಮ	೭	೩.೩೩	ರೋಹಿಣೀ	೫೭.೪೬	೧೯	6.48	6.39
3	ಕುಜ	೮	೮. ೩	ಮೃಗಶಿರಾ	೬೦. ೦	೨೦	6.48	6.39
4	ಬುಧ	೯	೧೩.೪೬	ಮೃಗಶಿರಾ	೩.೪೬	೨೧	6.47	6.39
5	ಗುರು	೧೦	೧೮. ೩	ಆರ್ದ್ರಾ	೧೦. ೩	೨೨	6.46	6.39
6	ಶುಕ್ರ	೧೧	೨೩.೧೬	ಪುನರ್ವಸು	೧೬.೨೮	೨೩	6.46	6.39

ಮಂಗಳೂರಿನ ವಾಯುಸ್ಥಿತಿ.

(೧೯೨೫ನೆಯ . ಮಕರ ಫೆಬ್ರುವರಿ.)

Date ತಾರೀಖು	Temperature. ಉಷ್ಣ (ಕಾವು) Maximum ಹೆಚ್ಚಿನದು	Temperature. ಉಷ್ಣ (ಕಾವು) Minimum ಕಡಿಮೆ	Rainfall. ಮಳೆ ದಿನದ ಮಳೆ	Rainfall. ಮಳೆ ಜುಮಲಾ ಮಳೆ.
20	90—5	71—3	—	—
21	90—2	72—1	—	—
22	92—3	70—0	—	—
23	95—3	69—1	—	—
24	96—3	68—2	—	—
25	96—0	68—5	—	—
26	92—3	70—3	—	140-89

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ. ಆ.	ವರೆಗೆ ರೂ. ಆ
ಹೊಸ ಮಸ್ಕತಿ ...	8—0	8—10
ಹೊಸ ಗುಡ್ಡು ...	7- 6	7—12
ಹೊಸ ರಾಶಿ ...	6- 10	7—14
ಅವ್ವಲ್ ಬೆಳ್ತಿಗೆ ...	8- 4	8—12
ಗುಡ್ಡು ಬೆಳ್ತಿಗೆ ...	7- 12	8—0
ರಂಗೂನು ಬೆಳ್ತಿಗೆ ಗೋಣಿ ೧ ...	14- 0	15—
ಗೋಧಿ ಗೋಣಿ ೧ಕ್ಕೆ ...	19- 0	21 8
ಹುರುಳಿಗೋಣಿ ೧ಕ್ಕೆ ...	9- 4	10—8
ಕಡಲೆಗೋಣಿ ೧ಕ್ಕೆ ...	12- 0	12—8
ತೊಗರಿಗೋಣಿ ೧ಕ್ಕೆ ...	12- 8	13—0
ತೊಗರಿಬೇಳೆ ಗೋಣಿ ೧ಕ್ಕೆ ...	17- 8	21—8
ಉದ್ದುಗೋಣಿ ೧ಕ್ಕೆ ...	13- 0	13 8
ಹೆಸರುಗೋಣಿ ೧ಕ್ಕೆ ...	14—0	15—0
ಊರು ಬೆಲ್ಲ ಖಂಡಿ ೧ಕ್ಕೆ ...	75- 0	85—0
ಉಪ್ಪು ಗೋಣಿ ೧ಕ್ಕೆ ...	4- 6	4—10
ಕೊಬ್ರಿ ಖಂಡಿ ೧ಕ್ಕೆ ...	110-0	120—0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	45- 0	—
ಎಳ್ಳಿಂಡಿ ಖಂಡಿ ೧ಕ್ಕೆ ...	40-0	45—0
ಕೊಬ್ರಿ ಎಣ್ಣೆ ಮಣ ೧ಕ್ಕೆ ...	8— 4	9 4
ಎಳ್ಳೆಣ್ಣೆ ಮಣ ೧ಕ್ಕೆ ...	7- 0	11—0
ಅಡಿವಣ ಎಣ್ಣೆ ಪೆಟ್ಟಿಗೆ ೧ಕ್ಕೆ ...	8-15-6	—
ಕೋರಿನ ಸಕ್ಕರೆ ಮಣ ೧ಕ್ಕೆ ...	4—14	5—0
ಊರ ಮೆಣಸಿನಕಾಯಿ ಮಣ ೧ಕ್ಕೆ ...	10- 8	—
ಸಾಸಿವೆ ಮುಡಿ ೧ಕ್ಕೆ ...	9- 0	—
ಕೊತ್ತಂಬರಿ ಮುಡಿ ೧ಕ್ಕೆ ...	3- 10	4—0
ಕಾಫಿ ಖಂಡಿ ೧ಕ್ಕೆ ...	395- 0	480—0
ಬೆಳಗೋಟು ಅಡಿಕೆ ಖಂಡಿ ೧ಕ್ಕೆ ಹಳತು ...	240- 0	245—0
" ಹೊಸ ಅಡಿಕೆ	185—0	210—0
ಕಾಳುಮೆಣಸು ಖಂಡಿ ೧ಕ್ಕೆ ...	155-0	160—0
ಯಾಲಕ್ಕಿ ಮಣ ೧ಕ್ಕೆ ...	80- 0	85—0
ಗೇರುಬೀಜ ಮುಡಿ ೧ಕ್ಕೆ ...	4—8	
ಕಬ್ಬಿಣ ಖಂಡಿ ೧ಕ್ಕೆ ...	45- 0	65—0
ತಾಮ್ರ ತಗಡು ಮಣ ೧ಕ್ಕೆ ...	17-12	23—0
ತಾಮ್ರ ಪಾತ್ರೆಗಳು ಮಣ ೧ಕ್ಕೆ ...	26- 0	—
ಬೀಡಿ ಬೆಳ್ಳಿ ಸೇರು ೧ಕ್ಕೆ ...	22 - 0	
ಹಿತ್ತಾಳೆ ತಗಡು ಮಣ ೧ಕ್ಕೆ ...	18- 8	
ಪವನು	14—2	

Pandit B. Ramakrishna Baliga's Siddha Ayurvedic medicines of 50 years' reputation.

ಮಹಾ ಮದನಕಾಮೇಶ್ವರಿ ಲೇಹ—ಇದನ್ನು ಸುವರ್ಣ, ಅಭ್ರಕಭಸ್ಮ, ರಸಸಿಂಧೂರ, ಕಸ್ತೂರಿ, ಕುಂಕುಮಕೇಸರ ವಗೈರೆ ಅಮೂಲ್ಯವಾದ ರಸಾಯನ ದ್ರವ್ಯಗಳಿಂದ ತಯಾರಿಸಲ್ಪಟ್ಟಿರುತ್ತದೆ. ಇದು ಎಲ್ಲಾ ತರದ ನಪುಂಸಕ ರೋಗಗಳನ್ನೂ, ಸ್ವಪ್ನಾವಸ್ಥೆಯಲ್ಲಿ ಧಾತುಪತನೆಯನ್ನೂ ಗುಣಪಡಿಸಿ, ದೇಹಕ್ಕೆ ದಿವ್ಯಕಾಂತಿಯನ್ನೂ, ಪುಷ್ಟಿಯನ್ನೂ, ಪುರುಷತ್ವವನ್ನೂ, ವೀರ್ಯಸ್ತಂಭನವನ್ನೂ ಉಂಟುಮಾಡಿ ಅತ್ಯಾನಂದವನ್ನು ಕೊಡುವುದಲ್ಲದೆ, ಅಜೀರ್ಣ, ಅತಿಸಾರ, ಗ್ರಹಣಿ, ಆಮ್ಲ, ಪಿತ್ತ, ಉದರಶೂಲೆ, ಪ್ರಮೇಹ ವಗೈರೆ ರೋಗಗಳನ್ನು ಗುಣಪಡಿಸುವಲ್ಲಿ ಕೇವಲ ಅದ್ವಿತೀಯವಾದವಾಗಿರುವುದು. ಇದನ್ನು ಆಬಾಲವೃದ್ಧರೂ ಸೇವಿಸಬಹುದು

ಸ್ವರ್ಣ ಮಿಶ್ರಿತ ಲೇಹಕ್ಕೆ (43 ದಿನಗಳ ವರೆಗೆ ಸಾಕಾಗುವ) ಸೇರು ೧ರ ರೂ. 4—0—0.
ಸ್ವರ್ಣ ಇಲ್ಲದ " " " 3—0—0.

ಬೃಹತ್ ಶಾರಿವ್ಯಾದಿ ರಸಾಯನ—ಇದು ಖಾತ್ರಿಯಿಂದ ರಕ್ತವನ್ನು ಶೋಧಿಸುವ ದಿವ್ಯೌಷಧವಾಗಿರುತ್ತದೆ. ಇದರ ಸೇವನೆಯಿಂದ 20 ತರದ ಪ್ರಮೇಹ ರೋಗಗಳೂ ಎಲ್ಲಾ ತರದ ಫರಂಗಿ ರೋಗಗಳೂ ಅಲ್ಪ ಸಮಯದಲ್ಲಿ ಗುಣಹೊಂದುವವು. ಅದಲ್ಲದೆ ಇದು ಎಲ್ಲಾ ತರದ ಕುಷ್ಠವ್ಯಾಧಿಗಳನ್ನೂ, ತುಚ್ಛ, ಕುರು ಮೊದಲಾದ ಸಕಲ ಚರ್ಮವ್ಯಾಧಿಗಳನ್ನೂ, ಪಾದರಸ ಸೇವನೆಯಿಂದ ಉಂಟಾದ ರೋಗಗಳನ್ನೂ ಮತ್ತು ಹೆಂಗಸರ ಪ್ರದರ ರೋಗಗಳನ್ನೂ ಖಾತ್ರಿಯಿಂದ ಗುಣಪಡಿಸುವುದು.

8 ಔನ್ಸಿನ ಬಾಟ್ಲಿ ಒಂದರ ಕ್ರಯ ಬರೇ ರೂ. 1—0—0.

ಬ್ರಾಹ್ಮಿ ಪರ್ಪಟಕಾದಿ ತೈಲ—(ನಿದ್ರೆ ಇಲ್ಲದವರಿಗೆ ಸಿದ್ಧೌಷಧ.) ಇದನ್ನು ತಲೆಗೆ ಹಚ್ಚಿದಲ್ಲಿ ಸಕಲ ಶಿರೋರೋಗಗಳೂ, ಕರ್ಣ, ನೇತ್ರ, ದಂತ, ಜಿಹ್ವಾರೋಗಗಳೂ, ತಲೆ ತಿರುಗುವುದು, ಕಠಿಣವಾದ ತಲೆ ಶಿಡಿತವು ಮೊದಲಾದ ರೋಗಗಳು ಶಾಶ್ವತವಾಗಿ, [illegible] ಇದು ವಿದ್ಯಾರ್ಥಿಗಳಿಗೂ ವಕೀಲರಿಗೂ ಒಂದು ಸಿದ್ಧೌಷಧ. ಸ್ಮರಣಶಕ್ತಿಯನ್ನೂ, ಜ್ಞಾನಶಕ್ತಿಯನ್ನೂ ವೃದ್ಧಿಗೊಳಿಸುವುದು.

4 ಔನ್ಸಿನ ಬಾಟ್ಲಿ ೧ರ ರೂಪಾಯಿ 1—0—0.

ಸೂಚನೆ:—ಟಪ್ಪಾಲ ಹಾಸಲು ಪ್ರತ್ಯೇಕ. ಸ್ಥಳೀಕ ಬಡ ಜನರಿಗೆ ಔಷಧವು ಧರ್ಮಾರ್ಥವಾಗಿ ಕೊಡಲ್ಪಡುವುದು.

ವಿಳಾಸ:— ಪಂಡಿತ, ಬಿ. ರಾಮಕೃಷ್ಣ ಬಾಳಿಗ, ಬಂಟವಾಳ ದ. ಕ.

The Canara Public Conveyance Co., Ltd, Mangalore.
(ESTABLISHED 1914).
ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು
- ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು
- ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
- ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
- ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.
- ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ಮ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ—ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd, Mangalore. S. K.

ಕನ್ನಡಿಗರೇ! | ವಸಂತ | ಕಣ್ದೆರೆಯಿರಿ!

ಈಗಾಗಲೇ ಎರಡನೇ ಸಂಪುಟವು ಆರಂಭಿಸಲಿದೆ.

ಇತಿಹಾಸನಿಧಿ ಎಂದರೆ . . . . . ವಸಂತ
ಸಮಾಜಸುಧಾರಕನೆಂದರೆ . . . . . ವಸಂತ
ಕೈಗಾರಿಕೆಯ ಸಾಮ್ರಾಜ್ಯವೆಂದರೆ . . . . . ವಸಂತ
ಕರ್ನಾಟಕ ಭಾಷಾಸೇವಕನೆಂದರೆ . . . . . ವಸಂತ
ದೇಶದೇಶ ಬಂಧುವೆಂದರೆ . . . . . ವಸಂತ
ಕಾದಂಬರಿಗಳ ಭಂಡಾರವೆಂದರೆ . . . . . ವಸಂತ
ಚಿತ್ರಾಕರ್ಷ ಚಿತ್ರಶಾಲೆಯೆಂದರೆ . . . . . ವಸಂತ
ದೇಶಭಕ್ತನೆಂದರೆ . . . . . ವಸಂತ

ಇಂತಹ ವಸಂತನು ಯಾರಿಗೆ ಬೇಕು, ಯಾರಿಗೆ ಬೇಡ?

48 (ಕ್ರೌನ್ ¼ ಘಟ ಸೈಜಿನ) ಪುಟಗಳನ್ನು ಮಿಕ್ಕಿದ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3—4—0 ಮಾತ್ರ.

ವ್ಯವಸ್ಥಾಪಕ,
ವಸಂತ ಕಾರ್ಯಾಲಯ,
ಕುಂದಾಪುರ, ದಕ್ಷಿಣ ಕನ್ನಡ.

CAR FESTIVAL
CONCESSION
MAKE HASTE AND BUY A
Pocket Electric Lamp
AVAILABLE
In different varieties, Mother of pearl lamps. Cycle lamps.
NICKEL PLATED.
Hammered Brand, with Powerful Bulls-eye lance,
Use with it
Bull's-eye Dry Batteries.
The Mangalore
Trading Associa
Car S

ಬಂದು ನೋಡಿರಿ! ತಿಂದು ನೋಡಿರಿ!

ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ
ಪದಕವನ್ನು
ಬಹುಮಾನವಾಗಿ ಪಡೆದಿರುವ
ಎಸ್. ಪಿ. ಆಚಾರ್ಯ
ಇವರಿಂದ ತಯಾರಿಸಲ್ಪಟ್ಟ

ಉಪ್ಪಿನಕಾಯಿಗಳನ್ನು

ಬಂದು ನೋಡಿರಿ! ತಿಂದು ನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ, ಶುಂಠಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನ್ನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ
ಬಂದು ನೋಡಿರಿ! ತಿಂದು ನೋಡಿರಿ!

ಇಂಡಿಯನ್ ಸ್ವೀಟ್‌ಮೀಟ್ ಮಾರ್ಟ್.

ಮನೋಲ್ಲಾಸಿನಿ ಕಾಫಿ ಕ್ಲಬ್,
ಮಾರ್ಕೇಟು ರೋಡು,
ಮಂಗಳೂರು.
ಅಥವಾ
'ಸದಾನಂದ ಕಾಫಿ ಕ್ಲಬ್',
ರಥಬೀದಿ, ಮಂಗಳೂರು.

ದಕ್ಷಿಣ ಕನ್ನಡಾ ಸೆಂಟ್ರಲ್ ಕೋಓಪರೇಟಿವ್ ಬೇಂಕ್, ಲಿಮಿಟೆಡ್.

ನೋಟೀಸು.

ತಾ. 31—1—'25ರಿಂದ ಮುಂದರಿಸಿದ ಮಹಾ ಸಭೆ— ಎಲ್ಲಾ ಮೆಂಬರ ಸಂಘಗಳಿಗೂ ಮೆಂಬರ ಜನರಿಗೂ ಈ ಮೂಲಕ ತಿಳಿಯಪಡಿಸುವುದೇನಂದರೆ:—

ತಾ. 3—1—1925ರಲ್ಲಿ ಜರುಗಿದ ಮಹಾ ಸಭೆಯ ಮುಂದಿದ್ದ ಕೆಲಸವೆಲ್ಲವು ಅಂದೇ ತೀರದುದರಿಂದ, ಉಳಿದ ಕೆಲಸದ ಬಗ್ಗೆ ಸದರಿ ಸಭೆಯನ್ನು ಇದೇ ಬರುವ ಎಪ್ರಿಲ್ ತಾ. 10ನೇ ಶುಕ್ರವಾರ ಅಪರಾಹ್ನ ಗಂಟೆ 2ಕ್ಕೆ ಮುಂದರಿಸಿಯದೆ. ಸಭೆಯು ಮೊದಲಿನಂತೆ ಮಂಗಳೂರು ಕೊಡಿಯಾಲಬೈಲಿನಲ್ಲಿರುವ ಬೇಂಕಿನ ಕಟ್ಟಡದಲ್ಲೇ ಕೂಡುವುದು. ಈ ಬಾಬಿನಲ್ಲಿ ನೋಟೀಸನ್ನು ಪತ್ರಿಕೆಗಳಲ್ಲಿ ಮಾತ್ರ ಪ್ರಕಟಿಸಿದರೆ ಸಾಕೆಂದೂ ಪಾಲುಗಾರರಿಗೆ ಪ್ರತ್ಯೇಕ ಕಳುಹಿಸುವುದು ಬೇಡವೆಂದೂ ಆಗಿರುವುದರಿಂದ ಇಲ್ಲಿ ಪ್ರಕಟಿಸಿಯದೆ. ಸಂಘಗಳ ಪ್ರತಿನಿಧಿಗಳಾಗಿ ಬರುವವರ ಬಾಬತು ನಿರ್ಣಯಗಳನ್ನು ಕಳುಹಿಸಲಿಕ್ಕೆ ನೆನಪಿರಲಿ.

ಪುತ್ತೂರು,
ತಾ. 24—2—'25.

ಮಂಜೇಶ್ವರ ಅನಂತ ರಾವ್,
ಕಾರ್ಯದರ್ಶಿ.

ದಕ್ಷಿಣ ಕನ್ನಡ ಜಿಲ್ಲಾ ಶಿಕ್ಷಣ ಪ್ರದರ್ಶನ.

ಫೆಬ್ರುವರಿ ೨ನೇ ತಾರೀಕಿನಿಂದ ಮಾರ್ಚಿ ೨ನೇ ತಾರೀಕು ವರೆಗೆ
ಗವರ್ನಮೆಂಟ್ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯಲ್ಲಿ
ಜರಗುವುದು.

ಬೆಳಿಗ್ಗೆ ೮ರಿಂದ ೧೧ ಗಂಟೆ ವರೆಗೆ; ಮಧ್ಯಾಹ್ನ ೩ ಗಂಟೆಯಿಂದ ೫ ಗಂಟೆ ವರೆಗೆ [illegible] ಎಲ್ಲರೂ ಬಂದು ನೋಡಬಹುದು. ಆದಿತ್ಯವಾರ ಬೆಳಿಗ್ಗೆ [illegible] ಗೆ ಸ್ತ್ರೀಯರು ಮಾತ್ರ ಬಂದು ನೋಡಬಹುದು. [illegible] ಯುನಿಯರೂ, ವಿದ್ಯಾರ್ಥಿಗಳೂ ತಯಾರಿಸಿದ [illegible] ವಸ್ತ್ರ, ಕಾಗದ, ಮುಂತಾದವುಗಳ [illegible] ಗಾರಿಕೆ ಸಾಮಾನುಗಳನ್ನೂ, [illegible] ವ ಸುಸಂದರ್ಭವನ್ನು [illegible]

[illegible] ಕಾರ್ಯದರ್ಶಿ.

— ಮಳೆಗಾಗಿ ಉಪವಾಸ ವ್ರತ. —

ತನ್ನ ಪ್ರಾಂತದಲ್ಲಿ ಮಳೆ ಬರಬೇಕೆಂದು ವರಕುಟ್ಟಿಪಾಳಯಂದಲ್ಲಿನ ಜಯರಾಮಸ್ವಾಮಿ ನಾಯಕರ್ ಇವರು ೧೪ ದಿನಗಳ ಉಪವಾಸವನ್ನು ಅವಲಂಬಿಸಿದ್ದರು. ಇವರ ಉಪವಾಸ ದೀಕ್ಷೆಯು ಕಳೆದ ಶನಿವಾರ ಮಧ್ಯಾಹ್ನ ೧೨ ಗಂಟೆಗೆ ಪೂರ್ಣವಾಯಿತು. ಉಪವಾಸದ ಕೊನೆಯ ದಿನ ಕೂಡ ಇವರ ಮಾನಸಿಕ ಹಾಗು ದೇಹಶಕ್ತಿಯು ಯಥಾಪ್ರಕಾರವಾಗಿತ್ತು. ಇವರು ಯಾರ ಸಹಾಯವೂ ಇಲ್ಲದೆ ಕೊನೆ ವರೆಗೆ ಅತ್ತಿತ್ತ ನಡೆಯುತ್ತಿದ್ದರು. ಇವರ ದೀಕ್ಷೆಯ ಕೊನೆಯ ದಿನ ಆಯಾ ಭಾಗಗಳ ಹಳ್ಳಿ ಜನರು ಭಜನೆಯಿಂದ ಇವರು ಉಳಕೊಂಡಿರುವ ದೇವಸ್ಥಾನದಲ್ಲಿ ಸೇರಿದರು. ದೇವರ ಪೂಜೆಯಾದನಂತರ ಶ್ರೀಯುತ ನಾಯಕರು ತಮ್ಮ ಉಪವಾಸವನ್ನು ಮುಗಿಸಿ ಕಿತ್ತಳೇ ಹಣ್ಣಿನ ರಸವನ್ನು ಸ್ವಲ್ಪ ಕುಡಿದರು. ಅನಂತರ ಇವರನ್ನು ಕಾಣಬಂದವರಿಗೆಲ್ಲಾ ಶ್ರೀ ದೇವರ ಪ್ರಸಾದವು ಹಂಚಲಾಯಿತು. ಈ ಕಾಲದಲ್ಲಿ ಹಾಜರಿದ್ದ ಶ್ರೀಯುತ ಕೆ. ಆರ್. ಈಶ್ವರಮೂರ್ತಿ ಗೌಂಡರ ಮತ್ತು ಶ್ರೀಯುತ ಎಮ್. ವಿ. ಕುರುಪಣ್ಣ ಚೆಟ್ಟಿಯಾರರು ಖಾದಿಯ ಮಹತ್ವಿಕೆ ಮತ್ತು ಮದ್ಯಪಾನ ನಿಷೇಧದ ಕುರಿತು ಭಾಷಣ ಮಾಡಿದರು. ನೆರೆದವರಲ್ಲನೇಕರು ತಾವು ಚರಕದ ಮೇಲೆ ನೂಲನ್ನು ತಯಾರಿಸಿ ಖಾದಿಯನ್ನು ಧರಿಸುವೆವೆಂದು ಶ್ರೀಯುತ ನಾಯಕರರಿಗೆ ಆಶ್ವಾಸನವಿತ್ತರು.

ಶ್ರೀಯುತ ಜಯರಾಮಸ್ವಾಮಿ ನಾಯಕರಿಗೆ ಶ್ರೀಯುತ ಕುರುಪಣ್ಣ ಚೆಟ್ಟಿಯಾರರು ಒಂದು ಖಾದಿ ವಸ್ತ್ರವನ್ನು ಉಚಿತವಾಗಿ ಕೊಟ್ಟರು. ಫೆಬ್ರವರಿ ತಿಂಗಳಲ್ಲಿ ಈ ಭಾಗದಲ್ಲಿ ಮಳೆಯು ದುರ್ಲಭವಾದರೂ ಶ್ರೀಯುತ ನಾಯಕರ ಉಪವಾಸಕಾಲದಲ್ಲಿ ಆಸುಪಾಸಿನ ಹಳ್ಳಿಗಳಲ್ಲಿ ಮಳೆ ಸುರಿದಿತ್ತು.

— ಮುಮತಾಜು ಬೇಗಂ. —

ಅಮೃತಸರ ಡಿಸ್ಟ್ರಿಕ್ಟಿಗೆ ಸೇರಿದ ಚಾಂಡಿಯಾ ಎಂಬ ಊರಿನಲ್ಲಿ ಒಬ್ಬ ಪೋಲೀಸು ಸಾರ್ಜೆಂಟು ವಜೀರುಬೇಗವ್ವನನ್ನು ಇಟ್ಟುಕೊಂಡಿದ್ದನು. ಇವನಿಗೇ ಮುಮತಾಜಬೇಗಂ ಹುಟ್ಟಿದಳು. ವಜೀರುಬೇಗಂ ಅಮೃತಸರ ನಿವಾಸಿನಿ. ಕೆಲ ಕಾಲಾನಂತರ ವಜೀರುಬೇಗಮ್ಮನಿಗೂ ಅವಳ ನಾಯಕನಾದ ಸಾರ್ಜೆಂಟಿಗೂ ಮನಸ್ತಾಪಹುಟ್ಟಿತು. • • •

ಕಡೆಯಲ್ಲಿ ಕೋರ್ಟ ಮೂಲಕ ರದ್ದಾಯಿತು. ಆಗಮ ಮುತಾಜಬೇಗಂ ಸಣ್ಣ ಮಗುವಾಗಿದ್ದುದರಿಂದ ತಂದೆ ಇಷ್ಟಪಡದಿದ್ದಾಗ್ಯೂ ಕೋರ್ಟಿನವರು ಮಗುವನ್ನು ತಾಯಿವಶಕ್ಕೆ ಕೊಡಿಸಿದರು. ವಜೀರುಬೇಗಮ್ಮಳು ದೊಡ್ಡ ಸಂಗೀತ ವಿದ್ವಾಂಸರುಗಳಿಂದ ತನ್ನ ಮಗಳಿಗೆ ವಿದ್ಯೆಯನ್ನು ಕಲಿಸಿ ಪೂರ್ಣ ಸಂಗೀತ ವಿದ್ಯಾವಂತಳನ್ನಾಗಿ ಮಾಡಿದಳು. ಮುಮತಾಜಬೇಗಮ್ಮಳು ಅತ್ಯಂತ ಸುಂದರವತಿಯಾಗಿರುವಳಲ್ಲದೆ, ಪೂರ್ಣ ಸಂಗೀತ ವಿದ್ಯಾವಂತಳಾಗಿರುವುದರಿಂದ ಅನೇಕ ಸಂಸ್ಥಾನದ ರಾಜರುಗಳು ಆಕೆಯನ್ನು ಕಂಡು ಆಕೆಯ ಸಂಗೀತವನ್ನು ಕೇಳಿ ಸಂತೋಷಪಟ್ಟು ಬೇಕಾದಷ್ಟು ದ್ರವ್ಯವನ್ನು ಕೊಟ್ಟಿರುವರು. ಹಿಂದೂ ರಾಜರುಗಳು ಮೊದಲಾದವರನ್ನು ಪ್ರೀತಿಸುವುದಕ್ಕಾಗಿಯೋ ಏನೋ ಆಕೆಗೆ ಕಮಲಾಬಾಯಿಯೆಂದು ನಾಮಕರಣಮಾಡಲ್ಪಟ್ಟಿದ್ದಿತು. ಈ ಹೆಸರನ್ನು ಅವಳ ತಾಯಿಯೇ ಇಟ್ಟಿರಬಹುದು. ಆಗಲೇ ಇಂದೂರು ಸಂಸ್ಥಾನದವರು ಕೂಡ ಆಕೆಯನ್ನು ಕರೆಯಿಸಿ ಆದರಿಸಿದರು. ಹೈದರಾಬಾದು ಸಂಸ್ಥಾನದಲ್ಲೂ ಆಕೆಗೆ ಬಹಳ ಗೌರವವು ಪ್ರಾಪ್ತವಾಯಿತು. ದೊಡ್ಡವರೆಲ್ಲರೂ ಆಕೆಯನ್ನು ಬಹಳವಾಗಿ ಪುರಸ್ಕರಿಸುತ್ತಿದ್ದರೆಂದು ಪ್ರೊಫೆಸರ್ ಎಸ್. ಎಸ್. ಭೋಪ್ರಾಯವರು ಬರೆದಿದ್ದಾರೆ.

ಸ್ವಾಮಿ ದಯಾನಂದ ಸರಸ್ವತಿಯವರ ಜನ್ಮ ದಿನಾಚರಣೆ.

ಸ್ವಾಮಿ ದಯಾನಂದ ಸರಸ್ವತಿಯವರ ಶತವರ್ಷ ವರ್ಧಂತಿಯು ದೇಶದ ಎಲ್ಲಾ ಮುಖ್ಯ ಪಟ್ಟಣಗಳಲ್ಲಿ ಆಚರಿಸಲ್ಪಟ್ಟಿತು. ಈ ಜನ್ಮ ದಿನಾಚರಣೆಯು ಮುಂಬಯಿಯಲ್ಲಿ ಶ್ರೀಮತಿ ಸರೋಜಿನಿ ನಾಯಡುರವರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಭೆಗೆ ಯಾವತ್ತೂ ಜಾತಿಮತದ ಜನರು ನೆರೆದಿದ್ದರು. ಸಭೆಯಕಾಲದಲ್ಲಿ ಭಾಷಣ ಮಾಡಿದ ವ್ಯಕ್ತಿಗಳೆಲ್ಲರೂ ಶ್ರೀ ಸ್ವಾಮಿಯವರ ಮಹತ್ತ್ವ, ಅವರ ವಿದ್ವತ್ತೆ, ದೇಶಾಭಿಮಾನ ಮೊದಲಾದವುಗಳನ್ನು ಕುರಿತು ಪ್ರಶಂಸಿಸಿದರು.

ಅನಂತರ ಮೌಲಾನಾ ಶೌಕತಾಲಿಯವರು ಹಿಂದೂ-ಮುಸಲ್ಮಾನರ ಐಕ್ಯವು ಹೇಗೆ ಅಗತ್ಯವಿದೆಂದು ವ್ಯಾವಹಾರಿಕರೀತಿಯಲ್ಲಿ ಭಾಷಣ ಮಾಡಿದರು. ಮೌಲಾನಾರು ತಮ್ಮ ಮಾತೆಯು ನಿಧನಕಾಲದಲ್ಲಿ "ಯಾವ ಪ್ರಸಂಗವೇ ಬರಲಿ, ನಾನು ಹಿಂದುಗಳೊಡನೆ ಜಗಳವಾಡಲಿಕ್ಕಿಲ್ಲ"ವೆಂದು ಕೊಟ್ಟುಕೊಂಡ ಆಣೆಯನ್ನು ಪ್ರಕಟಪಡಿಸಿದರು. ಇವರ ಸ್ಫೂರ್ತಿದಾಯಕ ವಾಣಿಯನ್ನು ಕೇಳುತ್ತಲೆ ಎಲ್ಲರೂ ಕೈಚಪ್ಪಾಳೆ ಹಾಕಿ ಸಂತೋಷವನ್ನು ತಿಳಿಸಿದರು. ಅನಂತರ ಮೌಲಾನರು ಹೀಗೆಂದರು. "ನಾನು ಮುಸಲ್ಮಾನನು; ದಯಾನಂದರು ಹಿಂದುಗಳು, ಇಷ್ಟರಿಂದಲೆ ನಮ್ಮ ಅನ್ನ ಭೂಮಿಯ ಅಭಿಮಾನ ಮತ್ತು ಹಕ್ಕಿನ ವಿಷಯದಲ್ಲಿ ನಮ್ಮಿಬ್ಬರೊಳಗೆ ತಾರತಮ್ಯವಿಲ್ಲ. ಮತ ವಿಷಯಗಳಲ್ಲಿ 'ಜಗಳ' ಮಾಡುವವರಿಗೆ ತಮ್ಮ ಮತದ ಸರಿಯಾದ ತತ್ವವು ಗೊತ್ತಿಲ್ಲದೆ ಇರುವುದೇ (ಹಿಂದು ಮುಸಲ್ಮಾನರೊಳಗಿನ) ಕಲಹಕ್ಕೆ ಎಡೆಯಾಗಿದೆ. ತಮ್ಮ ಮತದ ನಿಜತತ್ವವು ತಿಳಿದಿದ್ದರೆ ಅವರು ಎಂದೂ ಅಡಿಯಾಳುತನಕ್ಕೆ ಒಳಗಾಗುತ್ತಿರಲಿಲ್ಲ. ಯಾವ ಮತದವರಾದರೂ ದಾಸ್ಯತ್ವವನ್ನು ಮಾನ್ಯಮಾಡುವುದಿಲ್ಲ. ನನ್ನ ಮಾತೆಯು ಆಮರಣ ಪರಿಯಂತರ ಕಡು ಮುಸಲ್ಮಾನ ಧರ್ಮಾನುಯಾಯಿಯಾಗಿಯೇ ಇದ್ದಳು. ನಾನು ಈ ಕಾಯವನ್ನು ತ್ಯಜಿಸುವ ವರೆಗೆ ಆ ತರದಲ್ಲಿ ನನ್ನ ಧರ್ಮದಲ್ಲಿರಬೇಕಾಗಿ ನನ್ನ ಆಕಾಂಕ್ಷೆ. ಇದಲ್ಲದೆ ನಾನು ಪ್ರತಿಯೊಂದು ವ್ಯಕ್ತಿಗೂ ಆಮರಣ ಪರಿಯಂತರ ತಮ್ಮ ಸ್ವಧರ್ಮದಲ್ಲೆ ಇರಬೇಕಾಗಿ ಸಾರುವೆನು. ನಾನು ಅನೇಕ ಮಂದಿ ಹಿಂದುಗಳು, ಪಾರ್ಸಿಗಳು ಮಹಮ್ಮದೀಯರು, ಕ್ರೈಸ್ತರು ಮತ್ತು ಇತರ ಮತದವರು ತಮ್ಮ ಮತಕ್ಕೆ ಸರಿಯಾಗಿ ವರ್ತಿಸದೇ ಇರುವುದನ್ನು ಕಂಡಿದ್ದೇನೆ. ಏಕೆಂದರೆ ಸ್ವಮತದ ಭ್ರಾತೃಗಳ ಮೇಲೆ ತೋರಿಸುವಷ್ಟೆ ಪ್ರೀತಿಯನ್ನು ಅವರು ಇತರ ಧರ್ಮಿಯರ ಕಡೆಗೆ ತೋರಿಸುವುದಿಲ್ಲ. ಹಿಂದುಸ್ಥಾನದ ಅನೇಕ ಭಾಗಗಳಲ್ಲಿ ವಿಶೇಷವಾಗಿ ಪಂಜಾಬದಲ್ಲಿ ಹಿಂದೂ ಮುಸಲ್ಮಾನರು ವೈಷಮ್ಯದಿಂದಿರುವುದನ್ನು ಕಂಡು ನನಗೆ ಖೇದವಾಗುತ್ತದೆ. ಅವರೆ ಮತವಿಷಯಗಳಲ್ಲಿ ಅವರೇಕೆ ಕಲಹವಾಡುವುದೆಂದು ತಿಳಿಯುವುದಿಲ್ಲ. ಆರ್ಯ ಸಮಾಜದ ಮುಖ್ಯ ಸೂತ್ರಗಳೂ ಮುಸಲ್ಮಾನ ಧರ್ಮದ ಅನೇಕ ಸೂತ್ರಗಳೂ ಒಂದಕ್ಕೊಂದು ಕೂಡಿ ಬರುತ್ತವೆ. ಆರ್ಯ ಸಮಾಜದವರು ವಿಗ್ರಹಾರಾಧನೆಯಲ್ಲಿ ನಂಬಿಕೆಯಿಲ್ಲದವರಾಗಿರುವಂತೆಯೇ ಮುಸಲ್ಮಾನರೂ ಮೂರ್ತಿಪೂಜೆಯಲ್ಲಿ ವಿಶ್ವಾಸವಿಲ್ಲದವರಾಗಿರುವರು. ಆರ್ಯಸಮಾಜದವರೂ ಮುಸಲ್ಮಾನರೂ ದೇವರು ಒಬ್ಬನೇ ಎಂಬ ತತ್ವವನ್ನವಲಂಬಿಸಿಕೊಂಡಿದ್ದಾರೆ. ಮುಕ್ತಿಪ್ರಸಾರಣೆಯಲ್ಲಿ ಆರ್ಯ ಸಮಾಜದವರು ವಿಶ್ವಾಸಪಡುವಂತೆ ಮಹಮ್ಮದೀಯರೂ ವಿಶ್ವಾಸವಿಟ್ಟುಕೊಂಡಿದ್ದಾರೆ. ಹೀಗಿರುತ್ತ ಈ ಎರಡು ಪಂಗಡದವರೂ ಕಲಹಕ್ಕೆ ಎಡೆ ಕೊಡಬೇಕಾದುದೇಕೆಂದು ತಿಳಿಯುವುದಿಲ್ಲ. ಪ್ರತಿಯೊಬ್ಬನು ತನ್ನ ಸ್ವಧರ್ಮದಲ್ಲೂ ಮತದಲ್ಲೂ ವಿಶ್ವಾಸವಿಟ್ಟು ಇನ್ನೊಬ್ಬನು ತನ್ನ ತತ್ವಗಳನ್ನು ಮಾನ್ಯಮಾಡುವುದಿಲ್ಲವಾದರೆ ಅಂಥವನನ್ನು ಜರೆಯುವುದು ಅಥವಾ ಬೈಯುವುದು ಸಲ್ಲದು. ಕಳೆದ ಜುಲಾಯಿ ತಿಂಗಳಲ್ಲಿ ನಾನು ರಾವಲ್ ಪಿಂಡಿಯಲ್ಲಿರುವಾಗ ಪವಿತ್ರ ಖುರಾನಿನ ಯಥಾರ್ಥ ತತ್ವವನ್ನು ವಿಶದಪಡಿಸುವುದಕ್ಕಾಗಿ ಆಹ್ವಾನಿಸಲ್ಪಟ್ಟ ಒಂದು ಸಭೆಗೆ ನನಗೆ ಆಮಂತ್ರಣ ಬಂತು. ಆಗ ಹಿಂದೂಮತದ ಯಥಾರ್ಥತತ್ವವನ್ನು ತಿಳಿಯಪಡಿಸುವುದಕ್ಕಾಗಿ ಈ ಸಭೆಯು ಜರಗುವುದಿದ್ದರೆ ನನಗೆ ಮತ್ತಷ್ಟು ಆನಂದವಾಗುತ್ತಿತ್ತೆಂದು ನಾನು ತಿಳಿಸಿದೆನು. ಏಕೆಂದರೆ ಹಿಂದುಗಳ ಧರ್ಮ ತತ್ವವನ್ನು ಮುಸಲ್ಮಾನರು ತಿಳಿಯುವುದು ಅತಿ ಅಗತ್ಯ. ಅಲ್ಲದೆ ಹಿಂದುಗಳೂ ಮುಸಲ್ಮಾನರ ಧರ್ಮ ತತ್ವಗಳನ್ನು ತಿಳಿಯುವುದು ಅವಶ್ಯ. ಹೀಗೆ ಭಿನ್ನ ಭಿನ್ನ ಮತಗಳ ಯಥಾರ್ಥತತ್ವಗಳನ್ನು ತಿಳಿದರೇನೇ ಪರಸ್ಪರ ಐಕ್ಯದಿಂದಿರಲು ಸುಸಾಧ್ಯ. ಪ್ರತಿಯೊಬ್ಬನು ತನ್ನ ಸ್ವಧರ್ಮದಲ್ಲೆ ಇದ್ದು ಅವರಲ್ಲಿ ಕಂಕಣಬದ್ಧರಾಗಬೇಕು. ಹಿಂದುಸ್ಥಾನವು ಪಾರತಂತ್ರ್ಯ ಶೃಂಖಲೆಗೊಳಗಾಗಬೇಕೆಂದು ಯಾವ ಮತವೂ ಸಾರುವುದಿಲ್ಲ. ಹಿಂದುಸ್ಥಾನದಲ್ಲಿ ಹಿಂದುಗಳಾಗಲಿ, ಮಹಮ್ಮದೀಯರಾಗಲಿ, ಕ್ರೈಸ್ತರಾಗಲಿ, ಪಾರ್ಸಿಗಳಾಗಲಿ, ಯಹೂದಿಯರಾಗಲಿ ಯಾರೂ ಸ್ವಾತಂತ್ರ್ಯದಿಂದಿಲ್ಲ. ಎಲ್ಲರೂ ಪರಸ್ಪರ ಕಲಹವಾಡಿದರೆ ಪಾರತಂತ್ರ್ಯದಿಂದ ಮುಕ್ತರಾಗುವ ದಿನವು ಬರಲಿಕ್ಕಿಲ್ಲ. ಪ್ರತಿಯೊಬ್ಬ ಆರ್ಯಸಮಾಜದ ಮೆಂಬರನು ತನ್ನ ಶತ್ರುವು ಮುಸಲ್ಮಾನನಾಗಲಿ, ಪಾರ್ಸಿಯಾಗಲಿ, ಕ್ರೈಸ್ತನಾಗಲಿ ಆಗಿರುವುದಿಲ್ಲ; ಪರಂತು ಹಿಂದುಸ್ಥಾನವನ್ನು ದಾಸ್ಯತ್ವಕ್ಕೆ ಯಾರು ಒಳಪಡಿಸಿರುವನೋ ಅವನೇ (ವಿರೋಧಿ) ಆಗಿದ್ದಾನೆಂದು ತಿಳಿಯಬೇಕು. ಭರತ ಖಂಡದಲ್ಲಿ ಸ್ವರಾಜ್ಯ ಪಕ್ಷದವರು, ಇಂಡಿಪೆಂಡೆಂಟರು, ಮತ್ತು ನೇಶನಲಿಸ್ಟ ಪಕ್ಷದವರು ಹೀಗೆ ವಿವಿಧ ಪಕ್ಷಗಳಿದ್ದರೂ ಅವರೆಲ್ಲರ ಉದ್ದೇಶವೂ ಸ್ವದೇಶವನ್ನು ಸ್ವತಂತ್ರವನ್ನಾಗಿ ಮಾಡಬೇಕೆಂಬುದಾಗಿದೆ. ತಂತಮ್ಮೊಳಗೆ ಯಾರು ಯಾವಾಗ ಕಲಹವನ್ನು ಮಾಡುತ್ತಿರುವರೋ ಅವರು ಸ್ವನಾಶವನ್ನೆ ತಂದುಕೊಳ್ಳುವರು. ಹಿಂದು-ಮುಸಲ್ಮಾನರು ಪರಸ್ಪರ ಕಲಹ ಮಾಡಿಕೊಂಡಿರುವರೆಂಬ ಸಂಗತಿಯು ಲಾಂಛನಾಸ್ಪದವಾದುದು. ಹಿಂದುಸ್ಥಾನದ ನಿವಾಸಿಗಳು ಐಕ್ಯರಾಗಿಲ್ಲವೆಂಬುದನ್ನು ತಿಳಿದು ಅಫಘಾನಿಸ್ಥಾನ, ಅರೇಬಿಯಾ ಮತ್ತು ಈಜಿಪ್ಟದ ಜನರು ಆಶ್ಚರ್ಯಪಡುತ್ತಿದ್ದಾರೆ. ಹಿಂದುಸ್ಥಾನವು ಸ್ವತಂತ್ರವಾದರೆ ಈಜಿಪ್ಟ ಮತ್ತು ಅರೇಬಿಯವು ಸ್ವಾತಂತ್ರ್ಯವನ್ನು ಹೊಂದುವವೆಂದು ಅವರ ಅಭಿಮತ. ಹಿಂದುಸ್ಥಾನದ ಜನರು ಒಂದಾಗಬೇಕೆಂದು ಅವರು ಇಚ್ಛಾಪಿಸಿಕೊಂಡಿದ್ದಾರೆ. ಒಂದು ವೇಳೆ ಅಫಘಾನಿಸ್ಥಾನವು ಹಿಂದುಸ್ಥಾನದ ಮೇಲೆ ಅಭಿಯೋಗವನ್ನು ಮಾಡುವುದೆಂದು ಯಾರಾದರೂ ಶಂಕಿಸುವುದಾದರೆ ಅಂಥ ಸಂದರ್ಭ ಸಂಭವಿಸಿದರೆ ನಾನು ಹಿಂದುದೇಶದ ಅಭಿಮಾನದಿಂದ ಸ್ವದೇಶದ ರಕ್ಷಣೆಗಾಗಿ ಕಾದಾಡಿ ಅದನ್ನು ಅಫಘಾನಿಸ್ಥಾನಕ್ಕೆ ಒಳಗಾಗದಂತೆ ಸ್ವತಃ ಕಾದಾಡುವೆನು. ಹೇಗೂ ಇರಲಿ. ನನಗೆ ನನ್ನ ದೇಶಭ್ರಾತೃಗಳಲ್ಲಿ ನಂಬಿಕೆಯೂ ವಿಶ್ವಾಸವೂ ಇದೆ. ಕಳೆದ ೧೫೦ ವರುಷಗಳಿಂದ ಬ್ರಿಟಿಷರ ಅಧೀನಕ್ಕೊಳಪಟ್ಟಿರುವ ಹಿಂದುಸ್ಥಾನವನ್ನು ಜಾಗ್ರತಾವಸ್ಥೆಗೆ ಎಬ್ಬಿಸಲು ಮಹಾತ್ಮರಿಗೆ ಎರಡು ವರುಷಗಳು ಹಿಡಿದವು. ಹಿಂದಿಗಳೆಲ್ಲರೂ ಐಕ್ಯರಾದರೆ ಆಗ ಭೇದಬುದ್ಧಿಯ ಶೃಂಖಲೆಯನ್ನು ಒಡನೆಯೇ ಕಳಚಬಹುದು. ಈಗ ಹಿಂದಿಗಳು ಮತಿ ಇಲ್ಲದವರಾಗಿದ್ದಾರೆ. ಇದೇ ಅವಸ್ಥೆಯಲ್ಲಿ ನಿರಂತರವಿರಲಿಕ್ಕಿಲ್ಲ."

ವೊಲೆಂಟಿಯರ್ಸ್ ಯೂನಿಯನ್ ಹೈಸ್ಕೂಲ್ ಪ್ರೈಜ್ ಫಂಡ್.

[ಗೊಂಡಾಲ ಸಂಸ್ಥಾನ ಧೋರಾಜ್ (ಕಾಥಿಯಾವಾಡ್)ದಿಂದ ಮಂಜೂರುಮಾಡಲ್ಪಟ್ಟಿದ್ದು].

1925ನೇ ಇಸವಿಯ ಏಪ್ರಿಲ್ ತಾ. 12ರಲ್ಲಿ ತೆಗೆಯಲ್ಪಡುವುದು.

ಒಟ್ಟು ಜಮೆಯಾಗುವ ರೂ. 2,00000ದಿಂದ ರೂ. 80,100 ಬಹುಮಾನಗಳು ಹಂಚಲ್ಪಡುವವು.

ಜಾತಿಮತಗಳ ಭೇದವಿಲ್ಲದೆ ರಾಷ್ಟ್ರೀಯ ಸೂತ್ರಗಳನ್ನು ಅನುಸರಿಸಿ ನಡಿಸಲ್ಪಡುವ ವೊಲೆಂಟಿಯರ್ಸ್ ಯೂನಿಯನ್ ಹೈಸ್ಕೂಲ್ ಧೋರಾಜ್ ಇದರ ಸಹಾಯಕ್ಕಾಗಿ ಸ್ಥಾಪಿಸಲ್ಪಟ್ಟ ಸೋಡ್ತಿ. ತಕ್ಕುದಾದ ಶಿಕ್ಷಣವಲ್ಲದೆ, ಈ ಶಾಲೆಯಲ್ಲಿ ಕಲಿಯುವ ವಿದ್ಯಾರ್ಥಿಗಳಿಗೆ, ಲೆಕ್ಕಪತ್ರಗಳನ್ನಿಡುವ ಮಾಹಿತಿ, ಬುಕ್‌ಕೀಪಿಂಗ್, ನೂಲನ್ನು ಮಾಡುವುದು, ನೇಯುವುದು, ಮಲ್ಲಯುದ್ಧ ಮೊದಲಾದವನ್ನು ಕಲಿಸಲಾಗುತ್ತೆ. ಇಲ್ಲಿನ ವಿದ್ಯಾರ್ಥಿಗಳ ಹಾಗು ಹಿಂದು-ಮುಸಲ್ಮಾನ ತರುಣರ ಶಾರೀರಿಕ ವ್ಯಾಯಾಮ ತರಬೇತಿಗೆ ಒಂದು ಮುದ್ದಾಂ ಗರಡಿ ಮನೆಯು ಸ್ಥಾಪಿಸಿದೆ. ಆದುದರಿಂದ ಯಾವತ್ತೂ ಉದಾರ ಆಶ್ರಯದಾತರು ಸಹಾಯಮಾಡಲು ಅರ್ಹವಾದ್ದು. ಮೌಲಾನಾ ಶೌಕತಾಲಿಯವರು ತಮ್ಮ ಸಂಗಾತಿಗಳೊಡನೆ ನಮ್ಮ ಈ ಸಂಸ್ಥೆಯನ್ನು ಸಂದರ್ಶಿಸಿ, ಈ ಶಾಲೆಯ ಉಪಾಧ್ಯಾಯರಲ್ಲಿನ ರಾಷ್ಟ್ರೀಯ ಸ್ಫೂರ್ತಿ ಮತ್ತು ಕಲಿಸುವ ವಿಧಾನಗಳನ್ನು ತಿಳಿದು ಸಂಪೂರ್ಣ ಆನಂದ ಪಟ್ಟಿರುವರು. ಹೆಚ್ಚಿನ ಮಾಹಿತಿಯ ಬಗ್ಗೆ ಬಹುಮಾನಗಳ ಪ್ರತಿಯ ಹಿಂದೆ ನೋಡಿರಿ ಅಥವಾ ಕೆಳಗಿನ ವಿಳಾಸಕ್ಕೆ ಇಂಗ್ಲಿಷಿನಿಂದ ಬರೆಯಿರಿ.

ದಿ ಹೊನರೆರಿ ಸೆಕ್ರೆಟರಿ,
ವೊಲೆಂಟಿಯರ್ಸ್ ಯೂನಿಯನ್ ಹೈಸ್ಕೂಲ್,
ಧೋರಾಜ್, ಕಾಥಿಯಾವಾಡ, ಇಂಡಿಯಾ.

ವಿದೇಶ ವರ್ತಮಾನ.

ಶಂಗಾಯಿಯಲ್ಲಿ ಮುಷ್ಕರ:—ಅಲ್ಲಿಯ ಒಂದು ಜಪಾನೀ ಮಿಲ್ಲಿನಲ್ಲಿ ಕಳೆದವಾರದ ಆರಂಭದ ಮುಷ್ಕರದ ಪರಿಣಾಮವಾಗಿ ಈಗ ೧೩ ಇತರ ಗಿರಣಿಗಳಲ್ಲೂ ಕೆಲಸದವರು ಮುಷ್ಕರ ಹಿಡಿದಿದ್ದಾರೆ. ಸುಮಾರು ೩೦,೦೦೦ ಮಂದಿಗಳು ಮುಷ್ಕರದಲ್ಲಿ ಸೇರಿರುವರು.

ಚಕ್ರವರ್ತಿ ಸಾರ್ವಭೌಮರ ಕಾಯಿಲೆ:—ಚಕ್ರವರ್ತಿಯವರು ಕಾಹಿಲೆ ಬಿದ್ದಿರುವರು. ಅವರ ಕಾಹಿಲೆಯು ಮೆಲ್ಲನೆ ಗುಣವಾಗುತ್ತ ಬರುತ್ತಿರುವುದರಿಂದ ಹೆಚ್ಚಿನ ಯೋಚನೆಗೆ ಕಾರಣವಿಲ್ಲವೆಂದು ವಿಲಾಯತಿ ತಂತಿಗಳಿಂದ ತಿಳಿಯುತ್ತೆ.

ಒಳದೇಶ ವರ್ತಮಾನ.

ಟೆಲಿಫೋನ್:—ಮುಂಬಯಿಂದ ಡಿಲ್ಲಿಯ ವರೆಗೆ ಟೆಲಿಫೋನನ್ನು ಇಟ್ಟಿರುತ್ತದೆ. ಮುಂಬಯಿಯಿಂದ ಡಿಲ್ಲಿಗೆ ೯೦೦ ಮೈಲುಗಳ ಅಂತರವಿದೆ. ಮಧ್ಯದಲ್ಲಿ ಮೂರೇ ಸ್ಟೇಶನುಗಳಿರುವವು.

ಕರ್ನಾಟಕ:—ಕರ್ನಾಟಕವನ್ನು ಆಫೀಸಿಯಲ್ ವ್ಯವಹಾರದ ಭಾಷೆಯಾಗಿ ಮಾಡಬೇಕೆಂಬ ಸಂಕಲ್ಪದಿಂದ ಮೈಸೂರಿನಲ್ಲಿ ಈಗ ವಿದ್ಯಾ ಇಲಾಖೆಯ ಕೆಲ ಆಫೀಸುಗಳ ವ್ಯವಹಾರವು ಕರ್ನಾಟಕದಿಂದಲೇ ಆಗುವ ಏರ್ಪಾಡು ಆಗುತ್ತಿದೆಯಂತೆ.

ಪರಸ್ಪರ ಸಹಾಯ:— ಕಳೆದ ನೆರೆಯಕಾಲದಲ್ಲಿ ತಿರುಚಿನಾಪ್ಪಳ್ಳಿಯ ಮುಸಂಗಪೇಟೆಯಲ್ಲಿ ಸುಮಾರು ೧೫೦೦ ಎಕ್ರೆ ತರೀಜಮೀನುಗಳಲ್ಲಿ ಬಂದು ಬಿದ್ದಿರುವ ಮರಳನ್ನು ತೆಗೆದು ಹಾಕಿ, ಅವಿಗಳನ್ನು ಪುನಃ ಅಗತೆಗೆ ತರಬೇಕೆಂದು ರೈತರು ತಮ್ಮಲ್ಲಿಯೇ ಒಂದು ಪರಸ್ಪರ ಸಹಾಯಕ ಸಂಘವನ್ನು ಸ್ಥಾಪಿಸಿಕೊಂಡಿರುವರು. ಇವರು ಆಗತ್ಯವಾದ ಯಂತ್ರ ಸಾಧನೆಗಳನ್ನಿಟ್ಟುಕೊಂಡು ಮರಳಿನಿಂದ ಮುಚ್ಚಿರುವ ೧,೧೩೦ ಎಕ್ರೆಯ ಮೇಲೆ ಕೆಲಸವನ್ನು ಪ್ರಾರಂಭಿಸುವವರಾಗಿದ್ದಾರೆ.

ಹಿಂದುಸ್ಥಾನಕ್ಕೆ ವಿಮಾನ:—ಚೆಟ್ಟಿನಾಡಿನಲ್ಲಿ ವರ್ತಕರೂ ಬ್ಯಾಂಕರೂ ಆಗಿರುವ ಮೆ| ಅನಾಮಲೆ ಚೆಟ್ಟಿಯಾರರೂ ಬ್ರಿಟಿಷ್ ಚಕ್ರಾಧಿಪತ್ಯದ ಪ್ರದರ್ಶನಕ್ಕೆ ಹೋಗಿದ್ದು ಜರ್ಮನಿಯಲ್ಲಿಯೂ ಸಂಚಾರಮಾಡಿಕೊಂಡು ಬರುತ್ತ ಏರೋಪ್ಲೇನ್ ಎಂಬ ಅಂತರಿಕ್ಷವಾಹನದಲ್ಲಿ ಸವಾರಿ ಮಾಡುವುದನ್ನು ಕಲಿತರು. ಇವರು ಜರ್ಮನಿಯಿಂದ ರೂ. ೮೦೦೦ದ ಒಂದು ವಿಮಾನವನ್ನು ತಂದಿರುವರು.

ತಿರುವಾಂಕೂರು:—ತಿರುವಾಂಕೂರು ಸಂಸ್ಥಾನದಲ್ಲೂ ವೃತ್ತಪತ್ರಿಕೆಗಳ ಒಂದು ಸಂಘವು ಸ್ಥಾಪನೆಯಾಗಿದೆ.

ಮೋಟಾರ ಅವಘಡ:—ಗ್ವಾಲಿಯರ್ ಸಂಸ್ಥಾನದ ಡಿವಾಸ್ ಸ್ಟೇಟಿನ ಮೂವತ್ತು ಮೈಲು ಉತ್ತರದಲ್ಲಿ ಒಂದು ಮೋಟಾರ ಅವಘಡವು ಸಂಭವಿಸಿತು. ಡಿವಾಸ್‌ಸ್ಟೇಟ್ ಮತ್ತು ಸರಂಗಪುರದ ಮಧ್ಯದೊಳಗಿನ ಪ್ರದೇಶವನ್ನು ಒಂದು ಮದುವೆಯ ದಿಬ್ಬಣವು ಮೋಟಾರಿನ ಮೂಲಕ ದಾಟುತ್ತಿತ್ತು. ಆದರೆ ಈ ಮೋಟಾರ ಲೋರಿಯಲ್ಲಿ ಮಿತಿಗಿಂತ ಹೆಚ್ಚು ಜನರು ಕುಳಿತಿದ್ದರು; ಅಲ್ಲದೆ ಈ ವಾಹನಕ್ಕೆ ಸರಿಯಾದ ದೀಪಗಳೂ ಇರಲಿಲ್ಲವಂತೆ. ಹಗಲು ಹೊತ್ತಿನಲ್ಲಿ ಮೋಟಾರ ಲೋರಿಯು ಯಾವ ಅಪಾಯವೂ ಇಲ್ಲದೆ ಮುಂದೆ ನಡೆಯಿತು. ಆದರೆ ಕತ್ತಲು ಕವಿಯುತ್ತಲೇ ಈ ಮೋಟಾರ ಲೋರಿಯು ಒಂದು ಇಳಿಜಾರನ್ನು ಇಳಿಯುತ್ತಿರುವಾಗ ಹಠಾತ್ತಾಗಿ ತಲೆಕೆಳಗಾಗಿ ಉರುಳಿ ಬಿತ್ತು; ೩೬ ಜನರು ವಿಧಿವಶರಾದರು. ಉಳಿದ ೧೫ ಮಂದಿಗಳಿಗೆ ಜಖಂ ಆಗಿರುತ್ತದೆ.

ಮುಂಬಯಿಯಲ್ಲಿ ಕರವೇರುವಿಕೆ:—ಮುಂಬಯಿ ಸಂಸ್ಥಾನದ ಬರುವ ವರುಷದ ಖರ್ಚಿನ ಬಜೇಟು ರೂ. ೧,೫೮೮ ಲಕ್ಷ; ಉತ್ಪನ್ನವು ರೂ. ೧,೫೪೭ ಲಕ್ಷ. ಆದುದರಿಂದ ರೂ. ೪೧ ಲಕ್ಷ ಕಡಿಮೆ ಬೀಳುವುದರಿಂದ ಪ್ರಜೆಗಳ ಮೇಲೆ ತೆರಿಗೆಯ ಭಾರ ಹೊರಿಸಲಾಗುವುದು.

ಸರ್ ಗೋಕುಲದಾಸ ಪರೇಖ:—ಮುಂಬಯಿ ಹಾಯ್ ಕೋರ್ಟಿನ ವಕೀಲರಲ್ಲೊಬ್ಬರಾದ ಸರ್ ಗೋಕುಲದಾಸ ಪರೇಖರು ತಮ್ಮ ೭೮ನೇ ವಯಸ್ಸಿನಲ್ಲಿ ಕಳೆದ ತಾ. ೧೧ನೆಯ ದಿನ ವಿಧಿವಶರಾದರು. ಇವರು ಒಬ್ಬ ಪ್ರತಿಷ್ಠಿತ ಸಮಾಜಸುಧಾರಕರೂ, ವಿಧವಾ ವಿವಾಹದ ಪೋಷಕರೂ ಆಗಿದ್ದರು.

ಅಖಿಲಭಾರತ ಆಯುರ್ವೇದಿಕ್ ಕೊನ್ಫರೆನ್ಸ:—ಅಖಿಲ ಭಾರತ ಆಯುರ್ವೇದಿಕ್ ಕೊನ್ಫರೆನ್ಸಿನ ಹದಿನೈದನೆಯ ಅಧಿವೇಶನವು ಎಪ್ರಿಲ್ ತಿಂಗಳ ತಾ. ೭, ೮ ಮತ್ತು ೯ರಲ್ಲಿ ಹರಿದ್ವಾರದಲ್ಲಿ ಜರಗುವುದು. ಈ ಕಾಲದಲ್ಲಿ ಆಯುರ್ವೇದಿಕ್ ಪ್ರದರ್ಶನವನ್ನೂ ಜರಗಿಸಲು ನಿಶ್ಚಯಿಸಿದೆ.

ಅರವಿಂದಘೋಷರ ಭೇಟಿ:—ಶ್ರೀಯುತ ಪುರುಷೋತ್ತಮದಾಸ ಟಂಡನರು ಪೊಂಡಿಚೇರಿಯಲ್ಲಿ ಅರವಿಂದಘೋಷರ ಭೇಟಿಯನ್ನು ಪಡೆದರು. ಅವರು ಕೆಳಗಿನ ಸಂಗತಿಯನ್ನು ತಿಳಿಸಿದ್ದಾರೆ. ಶ್ರೀಯುತ ಅರವಿಂದಘೋಷರು ಮೊದಲಿನಂತೆ ದೇಹಪ್ರಕೃತಿಯಲ್ಲಿ ಕ್ಷೀಣರಾಗಿಲ್ಲ. ವರ್ತಮಾನ ಪತ್ರಿಕೆಗಳು ಅವರಿಗೆ ಈಗಿನ ವಿದ್ಯಮಾನಗಳನ್ನೂ ದೇಶದ ಅಭಿಪ್ರಾಯವನ್ನೂ ತಿಳಿಸುತ್ತವೆ. ಚರಕ ಮತ್ತು ಖಾದಿಯಲ್ಲಿ ಅವರು ಹೆಚ್ಚಿನ ವಿಶ್ವಾಸವನ್ನಿಟ್ಟಿಲ್ಲ. ರಾಜಕಾರಣದಲ್ಲಿ ಅವರು ಸ್ವರಾಜ್ಯ ಪಕ್ಷದವರ ಅಭಿಪ್ರಾಯದಲ್ಲಿ ಭಾಗಿಗಳಾಗುವರು. ಯಾವತ್ತು ಸರಕಾರಿ ಸಂಸ್ಥೆಗಳನ್ನು ಪ್ರಜಾಪಕ್ಷದವರು ಹಿಡಿದು ಅವನ್ನು ತಮ್ಮ ನಿಯಂತ್ರಣಕ್ಕೆ ಒಳಪಡಿಸತಕ್ಕದೆಂಬುದು ಇವರ ಅಭಿಪ್ರಾಯವಾಗಿದೆ.

ಪಂಡಿತ ಜವಾಹಿರಲಾಲ ನೇಹರು:—ಅಲಹಾಬಾದ ಮ್ಯುನ್ಸಿಪಲ್ ಚೆಯರ್ಮೇನ ಪದವಿಗೆ ಇವರು ಕೊಟ್ಟ ರಾಜಿನಾಮೆಯನ್ನು ಹಿಂದಕ್ಕೆ ತೆಗೆದುಕೊಳ್ಳಬೇಕಾಗಿ ಅವರಿಗೆ ಅರಿಕೆಮಾಡಿಕೊಂಡಾಗ ಅವರು ತನಗೆ ಸಾಧ್ಯವಿಲ್ಲವೆಂದು ಉತ್ತರಕೊಟ್ಟಿರುವರು.

ಅಖಿಲ ಭಾರತ ಹಿಂದೂ ಮಹಾ ಸಭೆ:—ಅಖಿಲ ಭಾರತ ಹಿಂದೂ ಮಹಾ ಸಭೆಯ ಎಂಟನೆಯ ಅಧಿವೇಶನವು ಬರುವ ಏಪ್ರಿಲ್ ತಿಂಗಳ ತಾರೀಕು ೧೧, ಮತ್ತು ೧೨ರಲ್ಲಿ ಕಲ್ಕತ್ತದಲ್ಲಿ ಸೇರುವುದು. ಶ್ರೀ. ಲಾಲಾ ಲಜಪತರಾಯರು ಈ ಅಧಿವೇಶನದ ಅಧ್ಯಕ್ಷ ಸ್ಥಾನವನ್ನು ವಹಿಸಿಕೊಳ್ಳುವರು. ಸರ್ ಪಿ. ಸಿ. ರಾಯರು ಸ್ವಾಗತ ಕಮಿಟಿಯ ಅಧ್ಯಕ್ಷರಾಗಿದ್ದಾರೆ.

ಕವಿಸಾರ್ವಭೌಮ ರವೀಂದ್ರನಾಥ ಠಾಕೂರರು:—ಇವರು ತಮ್ಮ ಪ್ರಯಾಣವನ್ನು ಮುಗಿಸಿಕೊಂಡು ಮುಂಬಯಿಗೆ ಬಂದು ತಲ್ಪಿದ್ದಾರೆ. ಇವರಿಗೆ ಎರಡು ಸಲ ಇನ್‌ಫ್ಲುಯೆಂಜಾ ಬೇನೆಯು ತಗಲಿದ್ದರಿಂದ ಈಗ ಮಾನಸಿಕ ಹಾಗು ಶಾರೀರಿಕ ಶ್ರಮ ವಹಿಯಿಸಲು ಕಷ್ಟವಾಗಿದೆ. ಕೊಂಚ ಮಾತಾಡುವುದು ಕೂಡ ಈಗ ಕಷ್ಟಕರವಾಗಿದೆ. ಆದು ಕಾರಣ ಇವರಿಗೆ ಮುಂದಿನ ಮೂರು ತಿಂಗಳ ವರೆಗೆ ಸಾರ್ವಜನಿಕ ಕಾರ್ಯಗಳಲ್ಲಿ ಭಾಗವಹಿಸಲು ಅಥವಾ ಜನರೊಡನೆ ವಿಚಾರವಿನಿಮಯಗಳನ್ನು ನಡಿಸಲು ಅಸಾಧ್ಯವಾಗಿದೆ.

ಇಂಡಿಯನ್ ಫಿನೆನ್ಸ್ ಮೆಂಬರ:—ಸರ್ ಬೇಸಿಲ್ ಬ್ಲೇಕೆಟರು ಸಧ್ಯದಲ್ಲಿ ರಜೆಯ ಮೇಲೆ ಹೋದನಂತರ ಇಂಡಿಯನ್ ಫಿನೆನ್ಸಿಯಲ್ ಮೆಂಬರ ಪದವಿಗೆ ಸರ್ ಭೂಪೇಂದ್ರ ಮಿತ್ರ ಇವರು ಹಂಗಾಮಿಯಾಗಿ ನೇಮಕವಾಗುವರೆಂದು ಟಾಯಿಮ್ಸ್ ಆಫ್ ಇಂಡಿಯಾ ಪತ್ರಿಕೆಯು ಹೇಳುತ್ತಿದೆ.

ಮುಂಬಯಿ ಕೊರ್ಪೊರೇಶನ್:—ಸ್ವರ್ಗಸ್ಥ ಬಾಟಲೀವಾಲರವರ ಕೊರ್ಪೊರೇಶನ್ ಮೆಂಬರ ಪದವಿಗೆ ಮಿ| ಹಾಜಿ ಇಸಾಹಾಕ ಉಸ್ಮಾನ್ ಪೂನಾವಾಲಾ ಇವರು ಆರಿಸಲ್ಪಟ್ಟಿರುವರು.

ಖಿಲಾಫತ್ ಡೆಪ್ಯುಟೇಶನ್:—ಖಿಲಾಫತ್ ಡೆಪ್ಯುಟೇಶನಿನ ಮೆಂಬರರಾದ ಮೌಲವಿಸ್ ಸುಲೇಮಾನ ನದವಿ, ಅಬ್ದುಲ್ ಮಜೀದ್ ಬದಾಯುನಿ ಮತ್ತು ಅಬ್ದುಲ್ ಖಾದರ್ ಕಸೂರಿ ಇವರೆಲ್ಲಾ ಜೆಡ್ಡಾದ ವರೆಗೆ ಹೋಗಿ ಹಿಂತಿರುಗಿದರು. ಅಮೀರ ಅಲಿಯವರು ಹೆಜ್ಜಾಜದ ನ್ಯಾಯವಾದ ಅರಸರೆಂದು ಈ ಡೆಪ್ಯುಟೇಶನು ನೆಜ್‌ಜಿದದ ಸುಲ್ತಾನರೂ ಮಂಜೂರು ಮಾಡುವ ವರೆಗೆ ಡೆಪ್ಯುಟೇಶನು ಮುಂದಕ್ಕೆ ಹೋಗತಕ್ಕದೆಂದು ಹೆಜ್ಜಾಜದ ಅಲಿ ಸರಕಾರದವರು ಹುಕುಂ ಕೊಟ್ಟದ್ದೆ ಇವರು ಹಿಂತಿರುಗಲು ಕಾರಣವಾಗಿದೆ.

ಗುಲ್‌ಬರ್ಗಾ ದಕಾಯಿತಿಯ ವರದಿ:—ಗುಲಬರ್ಗಾದ ದಕಾಯಿತಿಯ ಚೌಕಸಿಯ ವರದಿಯು ಹೊರಬಿದ್ದ ಕೂಡಲೇ ಈ ದಕಾಯಿತಿಯ ಆರೋಪಿಗಳನ್ನು ನಿಜಾಮರು ಬಂಧಮುಕ್ತರನ್ನಾಗಿ ಮಾಡಿದರು ಎಂದು ತಿಳಿಯುತ್ತೆ.

ದಕ್ಷಿಣ ಕನ್ನಡ.

ಬಳಂಜ:— ಮದ್ರಾಸು ಸಂಸ್ಥಾನದ ಕೊ-ಒಪರೇಟಿವ್ ಸೊಸೈಟಿ ರಿಜಿಸ್ಟರ ನಂಬ್ರ ೧೦೬೪೩ನೇ ನಾಲ್ಕೂರು, ಪರಸ್ಪರ ಸಹಾಯಕ ಸಂಘವು ಇದೇ ತಾರೀಕು ೧೭—೨—೧೯೨೫ನೇ ಮಂಗಳವಾರ ದಿನ ಅಪರಾಹ್ನ ಘಂಟೆ ೪||ಗೆ ಬಳಂಜ ಬೋರ್ಡ ಶಾಲಾ ಕಟ್ಟಡದಲ್ಲಿ ಬೆಳ್ತಂಗಡಿ ಸರ್ಕಲ್ ಸೊಸೈಟಿ ಇನ್ಸಪೆಕ್ಟರವರಿಂದ ಸ್ಥಾಪಿಸಲ್ಪಟ್ಟಿತು. ಈ ಸಭೆಗೆ ಸದರಿ ಸಂಘಕ್ಕೆ ಸೇರಿದ ನಾಲ್ಕೂರು ಬಳಂಜ, ಪಿಲ್ಯಕುದ್ಯಾಡಿ ಈ ನಾಲ್ಕು ಗ್ರಾಮಗಳಿಂದ ವರ್ಗದಾರರು ಗ್ರಾಮ ಉದ್ಯೋಗಸ್ಥರು ವ್ಯವಸಾಯಗಾರರು, ವ್ಯಾಪಾರಸ್ಥರು, ಬಡ ಜನರು ಕೂಡಾ ೧೦೦ ಮಂದಿಗೆ ಮಿಕ್ಕಿ ನೆರೆದಿದ್ದರು. ಸಭೆಯಲ್ಲಿ ಮ. ರಾ. ರಾ. ಇನ್ಸಪೆಕ್ಟರವರು ಈ ಸಂಘದ ಉದ್ದೇಶ, ನಿಯಮ, ಕಾರ್ಯಕ್ರಮಗಳನ್ನೆಲ್ಲಾ ದೇಶಭಾಷೆಯಲ್ಲಿ ವಿಶದವಾಗಿ ವಿವರಿಸಿದ ಮೇಲೆ, ನಾಲ್ಕೂರ ಶಿರ್ಕಾಕ್ಯಾನಭಾಗ ಎ. ನಾರ್ಣಪ್ಪಯ್ಯನವರಿಂದ ಸಹಕಾರ ಸಂಘದ ಸಾರಾಸಾರ ವಿಚಾರಗಳನ್ನೊಳಗೊಂಡು ಸರಸವಾಗಿ ರಚಿಸಿದ "ಸಹಕಾರ ಪಂಚಸಾರ" ಎಂಬ ವಾರ್ಧಿಕ್ಯ ಷಟ್ಪದಿ ಮನೋಹರವಾಗಿ ಹಾಡಲಾಯಿತು. ಅನಂತರ ಮಹಾಸಭೆ ಸ್ಥಾಪನೆಯಾಯಿತು. ಸಭಿಕರ ಸರ್ವಾನುಮತದಿಂದ ಸಭಾಧ್ಯಕ್ಷರಾಗಿ ನಾಲ್ಕೂರು ಶಿರ್ಕಾಕ್ಯಾನುಭಾಗ ಎ. ನಾರ್ಣಪ್ಪಯ್ಯನವರನ್ನು ಆರಿಸಿ ಬಹುಮತದಂತೆ ಐದು ಜನ ಪಂಚಾಯತ ಮೆಂಬರರನ್ನು ಚುನಾಯಿಸಿ ಅವರೊಳಗಿನ ಓಟಿನ ಮೂಲಕ ಸದರಿ ಎ. ನಾರ್ಣಪ್ಪಯ್ಯನವರನ್ನೇ ಸಂಘದ ಅಧ್ಯಕ್ಷರಾಗಿಯೂ, ಪಿಲ್ಯಶ್ಯಾನಭಾಗ ಎಚ್. ಕೃಷ್ಣಯ್ಯನವರನ್ನು ಕಾರ್ಯದರ್ಶಿಯಾಗಿಯೂ, ಬಳಂಜ ರಾಮ[illegible] ಬಳಂಜ ಶಾಲಾ ಹೆಡ್ ಮಾಸ್ತರ್ ಮುತ್ತಯ ಹೆಗ್ಗಡೆ, ನಾಲ್ಕೂರು ಗ್ರಾಮದ ಅನಂತರಾಮಭಟ್ಟರು ಈ ಮೂವರನ್ನು ಪಂಚಾಯತರಾಗಿಯೂ ಆರಿಸಿ ಮಂಜೂರ್ವಾದಿ ಪ್ರೊಸಿಡಿಂಗ್ಸ್ ನಿರ್ಣಯಗಳಾಗಿ ಕೂಡಲೇ ೨೭ ಜನ ಮೆಂಬರರು ದಾಖಲಾಗಿ ಸೇರು ಧನ ಸಂಗ್ರಹಿಸಲ್ಪಟ್ಟು ರಿಕಾರ್ಡು ಪೂರ್ಣಪಡಿಸಲಾಯಿತು.

೭ ಘಂಟೆಗೆ ಅಧ್ಯಕ್ಷರ ಮನೆಯಲ್ಲಿ ಸಂಘದ ೧ನೇ ಪಂಚಾಯತಿ ಸಭೆ ಜರುಗಿ ೫ ಜನರ ಹಾಜರಾತಿಯಿಂದ ಮುಂದಿನ ಕಾರ್ಯಕ್ರಮ ನಿರ್ಣಯಗಳನ್ನು ರಿಕಾರ್ಡುಮಾಡಿ ಸಭೆ ಬರಖಾಸ್ತು ಮಾಡಲಾಯಿತು.

ಬಾರೆ:— ಬಾರೆ ಆದಿ ದ್ರಾವಿಡ ಶಾಲೆಯ ಮಕ್ಕಳಿಗೆ ಅಂಗಿಯ ವಸ್ತ್ರವನ್ನು ಬಾರೆಗ್ರಾಮದ ಪಟೇಲರೂ, ಕಾಸರಗೋಡು ತಾಲೂಕು ಬೋರ್ಡ ಮೆಂಬರರೂ ಆದ ಮಹಮ್ಮದ್ ಸಾಹೇಬ್ ಬಹದ್ದೂರರು ಉಚಿತವಾಗಿ ಕೊಟ್ಟದನ್ನು ನಿನ್ನೆ ತಾ. ೧೯ನೇ ಶನಿವಾರ ಬೆಳಿಗ್ಗೆ ೧೧ ಗಂಟೆಯ ಸಮಯಕ್ಕೆ ಡಿಸ್ಟ್ರಿಕ್ಟ್ ಲೇಬರ್ ಆಫೀಸರವರಾದ ಮ| ರಾ| ರಾ| ಎ. ತಿಮ್ಮಪ್ಪಕೂಂಜ ಬಿ. ಎ. ಅವರ್ಗಳವರು ಸದರಿ ಶಾಲೆಗೆ ಚಿತ್ತಯಿಸಿ ಶಾಲೆಯ ಮಕ್ಕಳಿಗೆ ಹಂಚಿರುತ್ತಾರೆ.

ಆ ಸಮಯ ಕಾಸರಗೋಡು ಸ್ಕೂಲ್ ಇನ್ಸಪೆಕ್ಟರರಾದ ಮ| ರಾ| ರಾ| ಯು. ಪಳ್ಳಿಕ್ಕಾರ್ ಸಾಹೇಬ್ ಬಹದ್ದೂರರವರೂ, ಬೇರೆ ಕೆಲವು ಜನರೂ ಹಾಜರಿದ್ದರು. ಮಕ್ಕಳಿಗೆ ಮಿಠಾಯಿ ಸಹಾ ಹಂಚಲ್ಪಟ್ಟಿತ್ತು.

ಡಿಸ್ಟ್ರಿಕ್ಟ್ ಲೇಬರ್ ಆಫೀಸರವರು ಶಾಲಾ ಮಕ್ಕಳಿಗೂ ಅಲ್ಲಿ ಕೂಡಿ ಬಂದ ಅವರ ಹೆತ್ತವರಿಗೂ ಸರಕಾರದವರು ಆದಿ ದ್ರಾವಿಡರಿಗೆ ಮಾಡುವಂಥಾ ಸಹಾಯವನ್ನು ವಿವರಿಸಿ ಅವರು ನಡೆಕೊಳ್ಳಬೇಕಾದ ರೀತಿಯ ವಿಷಯ ಬುದ್ಧಿವಾದವನ್ನು ಹೇಳಿ ಪ್ರೋತ್ಸಾಹಗೊಳಿಸಿದರು.

ವಿವಿಧ ಸಮಾಚಾರ.

ದಕ್ಷಿಣ ಕನ್ನಡ ಜಿಲ್ಲೆಯ ಕುಂಬಳೆಯಲ್ಲಿ ಅಬ್ಕಾರಿ ಗುತ್ತೇದಾರ ಶೇಂಕುಂಬಳೆಯಲ್ಲಿರುವ ಮಲೆಯಾಳಿ ಬಿಲ್ಲ, ಕಣ್ಣನೆಂಬವರ ಸೊಸೆಯು ಕೆಲವು ದಿನಗಳ ಹಿಂದೆ ಪ್ರಸೂತಳಾಗಿ ಕಿರುಬೆರಳಿನ ಗಾತ್ರವೂ ಸುಮಾರು ೧೩ಇಂಚ್ ಉದ್ದ ಉರುಟಾದ ಸುಮಾರು ೧೧೦ಕ್ಕಿಂತ ಮಿಕ್ಕಿದ ಮೊಟ್ಟೆಗಳೂ ತೊಗರಿಕಾಳಿನಂತಿರುವ ಅನೇಕ ಸಣ್ಣ ಮೊಟ್ಟೆಗಳೂ ಆಗಿದ್ದವು.

ಇದಲ್ಲದೆ ಆ ಗ್ರಾಮದ ಪಂಚಮ ಜಾತಿಯವಳು ಜೋಡು ಮುಖಗಳಿರುವ ಗಂಡು ಮಗುವನ್ನು ಹೆತ್ತಿದ್ದಳು. ಆದರೆ ಮಗುವು ತಕ್ಷಣ ಮರಣಹೊಂದಿತು, ಎಂದು ನಮ್ಮ ಅಲ್ಲಿನ ವಾತಮಿದಾರರೊಬ್ಬರು ತಿಳಿಸುತ್ತಾರೆ.

• • • • •

ಚಿತ್ತಾಗೊಂಗ್ ವರ್ತಮಾನ ಪತ್ರಿಕೆಯಲ್ಲಿ ಪ್ರಕಟವಾಗಿರುವುದೇನಂದರೆ, "ಬಾಬು ಅನ್ನ ಚರಣಸೇನ ಇವರ ಪತ್ನಿಯು ಪ್ರಸೂತಳಾಗಿ, ಒಂದು ವಿಲಕ್ಷಣವಾದ ಹೆಣ್ಣು ಕೂಸು ಜನಿಸಿತು. ಈ ಕೂಸಿಗೆ ಒಂದು ದೊಡ್ಡ ಕಣ್ಣು ಐದು ತಲೆಗಳೂ ಇದ್ದವು. ಉಳಿದೆಲ್ಲ ಅವಯವಗಳು ಸರಿಯಾಗಿದ್ದವು. ಈ ಕೂಸು ನಾಲ್ಕು ತಾಸು ಮಾತ್ರ ಜೀವಂತವಾಗಿದ್ದು ಅನಂತರ ಸತ್ತಿತು.

• • • • •

ಮಹಾತ್ಮಾ ಗಾಂಧಿಯವರ ಅನುಯಾಯಿ:—ಇಂಗ್ಲೆಂಡಿನ ಸಸೆಕ್ಸಿನಲ್ಲಿ ಸ್ವಲ್ಪ ವಿಶಾಲ ಸ್ಥಳವಿರುವ ಮಿಸ್ ವೇರಾ ಪ್ರೆಗ್‌ಸಲ್ ಎಂಬ ೨೯ ವರುಷ ಪ್ರಾಯದ ಮಹಿಳೆಯು ಸುಮಾರು ೧|| ಎಕ್ರೆ ಸ್ಥಳವನ್ನು ತನ್ನೊಡನೆ ಕೇಳಿದವರಿಗೆಲ್ಲಾ ಹಂಚಿಕೊಟ್ಟಳು. ಅಲ್ಲಿ ಅವರು ಸಾಧಾ ಜೀವನವನ್ನು ನಡಿಸಿ ಸುಖದಿಂದಿದ್ದಾರೆ. ಈಗ ಮಿಸ್ ವೇರಾ ಪ್ರೆಗ್‌ಸಳು ಚರಕವನ್ನು ತಿರುಗಿಸಿ ನೂಲನ್ನು ತೆಗೆಯುತ್ತಾ ಸದಾಜೀವನವನ್ನು ನಡಿಸಿಕೊಂಡಿದ್ದಾಳೆ. ಎಂದು ಟಾಯಿಮ್ಸ್ ಆಫ್ ಇಂಡಿಯಾ ಪತ್ರಿಕೆಯಿಂದ ತಿಳಿಯುತ್ತೆ. ಮಹಾತ್ಮರ ಉಪದೇಶ ತತ್ವವು ಎಲ್ಲಿ ವರೆಗೆ ಹಬ್ಬಿತು ನೋಡಿರಿ. ದೇಶ ಪ್ರಿಯರೇ ಇನ್ನಾದರೂ ಕಣ್ಣು ತೆರೆಯಿರಿ.

• • • • •

ಟಪ್ಪಾಲ ದಸ್ತೂರಿಯನ್ನು ಹೆಚ್ಚಿಸುವ ಮೊದಲು ಎಂದರೆ [illegible]ರಲ್ಲಿ [illegible] ಕಾಗದಗಳು ಟಪ್ಪಾಲಿನ ಮೂಲಕ ಕಳುಹಿಸಲ್ಪಟ್ಟಿದ್ದವು. ದಸ್ತೂರಿ ಹೆಚ್ಚಿಸಿದನಂತರ ಕಳುಹಲ್ಪಟ್ಟ ಕಾಗದಗಳು [illegible].

• • • • •

ಜಪಾನಿನಲ್ಲಿ ಹಾವುಗಳನ್ನು ತಿಂದರೆ ಶರೀರ ಪುಷ್ಟಿಯಾಗುತ್ತದೆಂಬ ಹಳೇಯ ಅಜ್ಞಾನವಿದೆ. ಇದರಿಂದ ಜಪಾನಿನ ಮುಖ್ಯ ಪಟ್ಟಣವಾದ ಟೋಕಿಯೋದಲ್ಲಿ ಅಲ್ಲಿಯ ಜನರಿಗೆ ಹಾವುಗಳನ್ನು ಮಾರುವುದಕ್ಕೆ ಹಾವುಗಳ ವ್ಯಾಪಾರಿಗಳು ಇನ್ನೂರರ ಮೇಲ್ಪಟ್ಟಿರುತ್ತಾರೆ. ಅಲ್ಲಿನ ಜನರು ಅವನ್ನು ಆಹಾರಕ್ಕಾಗಿಯೂ ಔಷಧಿಯಂತೆ ನಾನಾಯ ಪದಾರ್ಥಗಳನ್ನಾಗಿಯೂ ಮಾಡುವುದಕ್ಕೆ ಉಪಯೋಗಿಸುತ್ತಾರೆ. ಕೇರೆಹಾವಿನ ಜಾತಿಯ ಹಾವುಗಳನ್ನು ಕಾಹಿಲೆಯಲ್ಲಿರುವವರಿಗೂ ಆರೋಗ್ಯದಲ್ಲಿರುವವರಿಗೂ ಆಹಾರವಾಗಿ ಉಪಯೋಗಿಸುತ್ತಾರೆ. ಹಾವನ್ನು ಸುಟ್ಟು ಅದರ ಬೂದಿಯನ್ನು ಸರಾಯದಲ್ಲಿ ಬೆರಸಿ ಕುಡಿಯುತ್ತಾರೆ ಎಂದು ಜಿಜಿಸಿಂಪೋ ಎಂಬ ಟೋಕಿಯೋ ಪಟ್ಟಣದ ಪತ್ರಿಕೆಯು ಹೇಳುತ್ತದೆ.

• • • • •

ಜರ್ಮನಿಯಲ್ಲಿ ಕೈಗಾರಿಕೆಯು ಎಷ್ಟುಮಟ್ಟಿಗೆ ಅಭಿವೃದ್ಧಿಯಾಗಿದೆ ನೋಡಿರಿ. ಮ್ಯೂನಿಕ್ ಪಟ್ಟಣದಲ್ಲಿ ಹುಲ್ಲಿನಿಂದಲೇ ತಯಾರಿಸಿದ ಒಂದು ಗಡಿಯಾರವಿದೆ. ಇದು ಕಳೆದ ೧೬ ವರುಷದಿಂದ ಒಂದೇ ಸಮನೆ ನಡೆಯುತ್ತಿದೆ.

• • • • •

ಟೋನ್ ಬ್ರಿಜ್ ಎಂಬಲ್ಲಿಯ ಒಬ್ಬ ಗಾವಡಿಯು ಒಂದು ಸಾಧಾ ಯಂತ್ರ ತಯಾರಿಸಿದ್ದು ಅದರಿಂದ ಪ್ರತಿದಿನ ೩೦೦೦ ಇಟ್ಟಿಗೆಗಳನ್ನು ತಯಾರಿಸುವನು. ಹಂಚು ಇಟ್ಟಿಗೆ ಮೊದಲಾದ ಮಣ್ಣಿನ ಕೈಗಾರಿಕೆಗೆ ಹೆಸರು ಪಡೆದ ನಮ್ಮ ಮಂಗಳೂರು ಈ ಕಡೆಗೆ ಲಕ್ಷ್ಯವಿಡಬಾರದೆ?

• • • • •

ಇಂಗ್ಲೆಂಡದಲ್ಲಿ ವರುಷಕ್ಕೆ ೧೫ಲಕ್ಷ ಪವನು ಉತ್ಪನ್ನವುಳ್ಳ ಜನರು [illegible] ಲಕ್ಷ, [illegible] ಲಕ್ಷ, [illegible] ಲಕ್ಷ ಉತ್ಪನ್ನವುಳ್ಳ ಜನರ ಸಂಖ್ಯೆಯು [illegible] ಇರುವುದು.

• • • • •

ಅಮೇರಿಕದಲ್ಲಿ ಸಿಗರೇಟು ತಯಾರಿಸುವ ೧೦ ಸಾವಿರ ಕಾರಖಾನೆಗಳಿವೆ. ಸುಮಾರು ೬೦ ಕೋಟಿ ರೂಪಾಯಿ ಭಂಡವಾಲವು ಈ ಉದ್ಯೋಗಕ್ಕೆ ಬಿದ್ದಿದೆ. ಇದರಿಂದ ೧೩೬,೦೦೦ ಜನರಿಗೆ ಉದ್ಯೋಗ ದೊರತಿದೆ.

• • • • •

ಚೀನದಲ್ಲಿ ಒಂದು ವಿಶ್ವಕೋಶವಿತ್ತು. ಇದರಲ್ಲಿ ೧೧೧೦೦ ಭಾಗಗಳಿದ್ದವು. ಒಂದೊಂದು ಭಾಗವು ೧೧ ಇಂಚ್ ದಪ್ಪ, ೨೦ ಇಂಚು ಉದ್ದ ೧೩ ಇಂಚ್ ಅಗಲ. ಒಟ್ಟು [illegible] ಪರಿಚ್ಛೇದಗಳಿದ್ದವು. ಪ್ರತಿ ಪರಿಚ್ಛೇದಕ್ಕೆ ೨೦ ಪುಟಗಳು. ಒಟ್ಟಿಗೆ [illegible] ಪುಟಗಳ ಕೋಶ. ಒಂದರ ಮೇಲೊಂದಿಟ್ಟರೆ ಈ ಕೋಶದ ಎತ್ತರ ೪೫೦ ಫುಟ. ಈ ಮಹಾ ವಿಶ್ವಕೋಶವು ೨೧೬೯ ಜನ ಪಂಡಿತರಿಂದ ತಯಾರಿಸಲ್ಪಟ್ಟಿತ್ತು. ಈ ಪುಸ್ತಕವನ್ನು ಛಾಪಿಸಿರಲಿಲ್ಲ. ಇದರ ನಕಲು ತೆಗೆಯುವುದಕ್ಕೆ ೧೦೦ ಜನರಿಗೆ ೫ ವರುಷ ಹಿಡಿದವು. ಈ ಕೋಶದ ಪ್ರತಿಗಳು ನಷ್ಟವಾಗಿವೆ. ಬರೇ ೬ ಭಾಗಗಳು ಮಾತ್ರ ಉಳಿದಿವೆ.

• • • • •

ಸರ್ಪದಂಶದ ಮೇಲೆ ಉಪಾಯ:—[illegible] ಗ್ರಾಮದಲ್ಲಿ ಒಬ್ಬನಿಗೆ ಆತನ ಮನೆಯಲ್ಲಿ ರಾತ್ರಿ ಸಮಯ ಸರ್ಪ ಕಚ್ಚಿತು. [illegible] ಆತನಿಗೆ ಮೈಮರೆಯಿತು. ಕೂಡಲೆ, ಅಲ್ಲಿದ್ದವರು ಆತನನ್ನು ಸಮತಲದ ಕಂಬಕ್ಕೆ ನೆಟ್ಟಗೆ ಬಿಗಿದು ಹಾಕಿದರು. [illegible] ಕೈ-ಗೋಣು ಆಗಲಾರದಂತೆ ಹುರಿಯಿಂದ ಬಿಗಿಯಾಗಿ ಕಟ್ಟಿದರು. ೬-೫ ಜನರು ಆತನ ಕುತ್ತಿಗೆ-ಗೋಣು ಆಗಲಾರದಂತೆ ಸ್ಥಿರವಾಗಿ ಹಿಡಿದರು. ಈ ಉಪಾಯದಿಂದ ಆತನು ದಿನ ಬೆಳಗಾಗುವದರೊಳಗಾಗಿ ಸ್ವಸ್ಥನಾಗಿ ಮರುದಿನ ತನ್ನ ಕೆಲಸಕ್ಕೆ ಹೋದನು. ಈ ಉಪಾಯವು ಬಹಳ ಅವಶ್ಯಕತೆಯುಳ್ಳದ್ದು. ವೈದ್ಯರು ಸಿಗುವುದು ದುರ್ಲಭವಾದ ಗ್ರಾಮಗಳಲ್ಲಿ ಈ ಉಪಾಯವನ್ನು ಅನುಸರಿಸುವುದು ಶ್ರೇಯಸ್ಕರವು.

• • • • •

ಅನುಕ್ರಮಣಿಕೆ.

ಅಗ್ರಲೇಖ ಪುಟಗಳು.
ಸ್ವರಾಜ್ಯ ಸಬ್ ಕಮಿಟಿಯ ರಿಪೋರ್ಟು ೬
ಸ್ಫುಟವಿಚಾರಗಳು—
೧, ೨ ಕೋಹತಿನ ಪರಿಸ್ಥಿತಿ, ೩ ಬಂಗಾಲ ಪರಿಸ್ಥಿತಿ, ೪ ಲೆಜಿಸ್ಲೇಟಿವ್ ಎಸೆಂಬ್ಲಿ, ೫ ಮುಂಬಾಯಿ ಸಂಸ್ಥಾನದ ಖರ್ಚು, ೬ ಮೈಸೂರಿನಲ್ಲಿ ಕನ್ನಡವು ದರಬಾರ ಭಾಷೆಯಾಗುವುದ, ೭ ಲೆಜಿಸ್ಲೇಟಿವ್ ಎಸೆಂಬ್ಲಿ. ೭ ಮಂಗಳೂರು
ವರ್ತಮಾನಸಂಗ್ರಹಗಳು—
ವಿದೇಶ, ಒಳದೇಶ ೫
ದಕ್ಷಿಣ ಕನ್ನಡ – ಬೆಳಂಜ, ಬಾರೆ ,,
ವಿವಿಧ ಸಮಾಚಾರ, ,,
ಮೈಸೂರು ಸಂಸ್ಥಾನದಲ್ಲಿ ವಿದ್ಯಾಭ್ಯಾಸ ಪ್ರಚಾರ ೮
ಸಮುದ್ರತಲವನ್ನು ಸೇರಿರುವ ಒಂದು ಭೂಭಾಗ ,,

ಸ್ವದೇಶಾಭಿಮಾನಿ.

ಶಕ ೧೮೪೬ ಫಾಲ್ಗುಣ ಶು| ೫ಯು ಶುಕ್ರವಾರ.

ಸ್ವರಾಜ್ಯಸಬ್ ಕಮಿಟಿಯ ರಿಪೋರ್ಟು.

ಮುಂಬಯಿಯಲ್ಲಿ ಕಳೆದ ನವಂಬರದಲ್ಲಿ ಜರಗಿದ ಸರ್ವ ಪಕ್ಷೀಯರ ಪರಿಷತ್ತು ಹಿಂದು ಮಹಮದೀಯರ ಐಕ್ಯದ ವಿಷಯವನ್ನೂ, ಸ್ವರಾಜ್ಯದ ಯೋಜನೆಯನ್ನೂ ತಯಾರಿಸಲು ಒಂದು ಸಬ್ ಕಮಿಟಿಯನ್ನು ನೇಮಿಸಿತ್ತು. ಈ ಕಮಿಟಿಯು ತನ್ನ ಅಧಿವೇಶನವನ್ನು ಕೂಡಿಸಿ ಈಗ ರಿಪೋರ್ಟನ್ನು ತಯಾರಿಸಿದೆ. ಈ ರಿಪೋರ್ಟು ಜನತೆಯ ಅವಗಾಹನೆಗೆ ಈಗ ಬಂದಿದೆ.

ಈ ರಿಪೋರ್ಟು ಸ್ವರಾಜ್ಯದ ಕಲ್ಪನೆಯನ್ನು ತಕ್ಕ ಮಟ್ಟಿಗೆ ಕೊಡುತ್ತಿದೆ. ಮದ್ರಾಸಿನಲ್ಲಿ ೧೯೧೪ರಲ್ಲಿ ರಾಷ್ಟ್ರೀಯ ಸಭೆಯು ಜರಗಿತು; ಅದರಲ್ಲಿ ಹಿಂದೂಸ್ಥಾನಕ್ಕೆ ವಸಾಹತುಗಳ ತರಗತಿಯನ್ನು ಕೊಡಬೇಕೆಂದೂ ನಾಗರಿಕ ಹಕ್ಕುಗಳು ಹಿಂದುಗಳಿಗಿರಬೇಕೆಂದೂ ಠರಾವು ಪಾಸಾಗಿತ್ತು. ಈ ಠರಾವಿಗನುಗುಣವಾಗಿ ಹಿಂದುಸ್ಥಾನಕ್ಕೆ ಸ್ವರಾಜ್ಯವು ಸಿಗಬೇಕೆಂದೂ ರಿಪೋರ್ಟಿನಲ್ಲಿ ಸೂಚಿತವಾಗಿದೆ. ಈ ಮುಖ್ಯ ಸೂತ್ರಕ್ಕನುಗುಣವಾಗಿ ಬೇರೆ ಎಲ್ಲ ನಿಯಮಗಳು ನಿರೂಪಿಸಲ್ಪಟ್ಟಿದ್ದಾವೆ. ಈ ವಿಷಯಗಳನ್ನು ಚರ್ಚಿಸುವುದಕ್ಕಿಂತ ಮುಂಚೆ ಸಬ್ ಕಮಿಟಿಯು ಸ್ವರಾಜ್ಯದ ಸ್ವರೂಪವನ್ನು ರೂಪಿಸಲು ಏನು ಯತ್ನಿಸಿದೆಯೊ ಆ ಬಗ್ಗೆ ಮಾತ್ರ ಈ ಹೊತ್ತಿನ ಲೇಖದಲ್ಲಿ ನಮ್ಮ ಅಭಿಪ್ರಾಯದ ಎರಡು ಮಾತುಗಳನ್ನು ವಾಚಕರ ಮುಂದಿಡಲು ನಿಶ್ಚಯಿಸಿದ್ದೇವೆ.

ಸ್ವರಾಜ್ಯವು ಹಿಂದೂಸ್ಥಾನಕ್ಕೆ ಯಾವಾಗ ಸಿಕ್ಕೀತೆಂಬ ಪ್ರಶ್ನೆಯು ಪ್ರತ್ಯೇಕ. ಅದು ಯಾವಾಗಬೇಕಾದರೆ ಸಿಗಲಿ. ಆದರೆ ಹಿಂದಿಗಳು ಕೇಳುತ್ತಿರುವ ಅಥವಾ ಕೋರುತ್ತಿರುವ ಸ್ವರಾಜ್ಯವು ಯಾವ ವಿಧದ್ದು ಎಂಬುದನ್ನು ಅವರು ನಿರ್ಣಯಿಸಬೇಕಾದ್ದು ಅಗತ್ಯ. ಕಾರಣ, ಇದು ವಿವಾದಾಸ್ಪದವಾದ ವಿಷಯವು. ಒಬ್ಬೊಬ್ಬರು ಒಂದೊಂದು ವಿಧವಾಗಿ ಸ್ವರಾಜ್ಯದ ಸ್ವರೂಪವನ್ನು ರೂಪಿಸಿರುವರು. ದ್ವಿದಲ ರಾಜ್ಯಪದ್ಧತಿ ಮೊದಲು ಮಾಡಿಕೊಂಡು ಸಂಪೂರ್ಣ ಸ್ವಾತಂತ್ರ್ಯದ ವರೆಗೆ ವಾದಿಸುವ ವಾದಿಗಳು ಹಿಂದಿಗಳಲ್ಲಿದ್ದಾರೆ. ನಿಜವಾಗಿ ಹೇಳುವದಾದರೆ ಈಗಲಾದರೂ ದ್ವಿದಲ ರಾಜ್ಯಪದ್ಧತಿಯನ್ನು ಎತ್ತಿ ಹಿಡಿಯುವವರು ಹಿಂದಿಗಳಲ್ಲಿ ಯಾರೂ ಇಲ್ಲವೆನ್ನಬೇಕು. ಸುಧಾರಣಾ ಕಮಿಟಿಯ ಮುಂದೆ ಆದ ಲಿಬರಲ್, ಶಾಂತ ಮುಂತಾದ ಪಕ್ಷದ ಮುಖಂಡರ ಸಾಕ್ಷಿಗಳ ಮೇಲಿಂದ ಅವರಿಗೂ ಕೂಡ ದ್ವಿದಲಪದ್ಧತಿಯು ಇಷ್ಟವಿಲ್ಲವೆಂಬುದು ಸ್ಪಷ್ಟವಾಗುತ್ತದೆ. ೧೯೧೯ನೆಯ ಇಸವಿಯಲ್ಲಿ ಸುಧಾರಣೆಗಳನ್ನು ಕೊಡುವಾಗ ಆ ದ್ವಿದಲಪದ್ಧತಿಯ ಸುಧಾರಣೆಗಳನ್ನು ಯಾರು ಅಹಮಹಮಿಕೆಯಿಂದ ಎತ್ತಿ ಹಿಡಿದಿದ್ದರೊ ಅವರೆ ಮೊನ್ನೆಯ ಸಾಕ್ಷಿಯಲ್ಲಿ ಆ ದ್ವಿದಲ ಪದ್ಧತಿಯನ್ನು ದೂಷಿಸುತ್ತಿದ್ದಾರೆ. ಎಂದ ಮೇಲೆ ದ್ವಿದಲಪದ್ಧತಿಗೆ ಈಗ ಹಿಂದುಸ್ಥಾನದಲ್ಲಿ ಹೆಚ್ಚಿನ ಆಧಾರವಿರಲಿಕ್ಕಿಲ್ಲ. ಒಂದುವೇಳೆ ನೋಕರಶಾಹಿಯು ಅದಕ್ಕೆ ಆಧಾರವಾಗಿರಬಹುದು. ಹೊರತು ಹಿಂದುಗಳಲ್ಲಿ ಅದನ್ನು ಪುಷ್ಟೀಕರಿಸುವವರು ಇಲ್ಲ. ಎಂದ ಮೇಲೆ ಸ್ವರಾಜ್ಯ ಸ್ವರೂಪದೊಳಗಿಂದ ದ್ವಿದಲಪದ್ಧತಿಯನ್ನು ಬದಿಗಿಡುವದೆ ಸರ್ವಸಮ್ಮತವು.

ಇದನ್ನು ಬಿಟ್ಟ ಮೇಲೆ ಸ್ವರಾಜ್ಯಸ್ವರೂಪದ ಇತರ ಪ್ರಭೇದಗಳ ವಿಷಯಗಳನ್ನು ಚರ್ಚಿಸಬೇಕಾದ್ದು. ಅದರಲ್ಲಿ ಹಿಂದುಸ್ಥಾನಕ್ಕೆ ಸ್ವಯಂಶಾಸಿತವಸಾಹತುಗಳ ಪದ್ಧತಿಯ ರಾಜ್ಯಭಾರವು ಬೇಕೆಂದು ಹಲವರು, ಸಂಪೂರ್ಣ ಸ್ವಾತಂತ್ರ್ಯದ ಸ್ವರಾಜ್ಯವೆ ಬೇಕೆಂದು ಇನ್ನು ಹಲವರು ಈ ವಿಧವಾಗಿ ಪುನಃ ಎರಡು ಪಕ್ಷಗಳಿವೆ. ಈ ಎರಡು ಪಕ್ಷಗಳ ಪೈಕಿ ಈ ರಿಪೋರ್ಟನ್ನು ತಯಾರಿಸಿದವರು ಸ್ವಯಂಶಾಸಿತ ವಸಾಹತುಗಳ ಕ್ರಮವನ್ನು ಅನುಮೋದಿಸಿದ್ದಾರೆ. ವಸಾಹತುಗಳು ಸಾಮ್ರಾಜ್ಯದ ದೃಷ್ಟಿಯಿಂದ ಪರಾವಲಂಬಿಯಾಗಿವೆ. ಆದರೆ ಅವು ವೈಯಕ್ತಿಕ ದೃಷ್ಟಿಯಿಂದ ಸ್ವತಂತ್ರವಾಗಿವೆ. ಸೈನ್ಯ, ಪರರಾಷ್ಟ್ರಗಳೊಡನೆ ರಾಜಕೀಯಾದಿ ವ್ಯವಹಾರ ಇಂಥ ಸಂಗತಿಗಳು ಸಮ್ರಾಜ್ಯ ಸರಕಾರದ ಇಚ್ಛಾನುಸಾರವಾಗಿಯೆ ನಡೆಯಬೇಕಲ್ಲದೆ ವಸಾಹತುಗಳಿಗೆ ಆ ವಿಷಯವಾಗಿ ಸ್ವಾತಂತ್ರ್ಯವಿಲ್ಲ. ಆದರೆ ಅಂತರ್ಗತ ಕಾರಭಾರದ ಪಟ್ಟಿಗೆ ಹೇಳುವದಾದರೆ, ಉದಾಹರಣಾರ್ಥವಾಗಿ, ದೇಶದ ಕಂದಾಯದ ಇಂತಿಂತಿಷ್ಟು ಭಾಗವನ್ನು ಇಂತಿಂಥ ಕಾರ್ಯಗಳಲ್ಲಿ ವಿನಿಯೋಗಿಸಬೇಕು, ಸ್ವದೇಶದಲ್ಲಿ ಇಂತಿಂಥ ಜನಾಂಗದವರನ್ನು ಬರಲು ಬಿಡಬಹುದು, ಇಂತಿಂಥವರನ್ನು ಕೂಡದು ಇತ್ಯಾದಿ ಆಯಾ ದೇಶದ ಯೋಗಕ್ಷೇಮಕ್ಕೆ ಸಂಬಂಧಪಟ್ಟ ವ್ಯವಹಾರಗಳಲ್ಲಿ, ಬೇಕಾದ ಕಾನೂನುಗಳನ್ನು ಪಾಸುಮಾಡಿ ಜಾರಿಯಲ್ಲಿ ತರುವ ವಿಷಯದಲ್ಲಿ ಅಷ್ಟರ ಎಂದರೆ ಸಾಮ್ರಾಜ್ಯ ಸರಕಾರದ ಆತಂಕ ವಿರುವುದಿಲ್ಲ. ಈ ಭಾಗಗಳಲ್ಲಿ ವಸಾಹತುಗಳ ಕೈಯನ್ನು ಕಟ್ಟಲು ಯಾರಿಂದಲೂ ಸಾಧ್ಯವಿಲ್ಲ. ಒಂದೆ ಮಾತಿನಿಂದ ಸಾಮ್ರಾಜ್ಯದಮಟ್ಟಿಗಲ್ಲವಾದರೂ ವ್ಯಕ್ತಿಪರವಾಗಿ ವಸಾಹತುಗಳು ಸ್ವತಂತ್ರವಾಗಿವೆ.

ಈ ಎಲ್ಲ ವಿವರಣದ ಮೇಲಿಂದ ವಸಾಹತುಗಳ ಕಾರಭಾರದ ಸ್ವರೂಪವು ವಾಚಕರಿಗೆ ಸ್ಥೂಲಮಾನದಿಂದಲಾದರೂ ಗೋಚರವಾಗದೆ ಇರಲಿಕ್ಕಿಲ್ಲ. ಸ್ವರಾಜ್ಯ ಸಬ್ ಕಮಿಟಿಯ ರಿಪೋರ್ಟನ್ನು ತಯಾರಿಸಿದವರು ಈ ಪದ್ಧತಿಯನ್ನು ಸೂಚಿಸಿರುವರು. ಆಕಾಶವು ಅನಂತವಾಗಿರುವುದರಿಂದ ಪಕ್ಷಿಗಳು ತಮ್ಮ ತಮ್ಮ ಶಕ್ತಿಯ ಮಟ್ಟಿಗೆ ಹಾರುತ್ತವೆ. ಹಾಗೆಯೆ ಸ್ವಾತಂತ್ರ್ಯದ ಕಲ್ಪನೆಗೆ ಮೇರೆ ಇಲ್ಲದ ಕಾರಣ ಒಬ್ಬ ಧ್ಯೇಯವಾದಿಯು ಎಷ್ಟೊ ಮುಂದಕ್ಕೆ ಹೋಗಿ ಬೇಕಾದಷ್ಟು ಮೇಲಿನ ಕಲ್ಪನೆಯನ್ನು ಚಿತ್ರಿಸಿಕೊಳ್ಳಬಹುದು. ನ್ಯಾಯದೃಷ್ಟಿಯಿಂದ ಅದನ್ನು ತಡೆಗಟ್ಟಲು ಯಾರಿಗೂ ಸಾಧ್ಯವಿಲ್ಲ. ಆದ್ದರಿಂದ ಈ ವಿಷಯವಾಗಿ ಮತಮತಾಂತರಗಳು ಲೋಕದಲ್ಲಿ ಉಂಟಾಗಲು ಕಾರಣವಾಗಿದೆ. ಇರಲಿ. ರಿಪೋರ್ಟಿನ ಲೇಖಕರು ತಯಾರಿಸಿದ ಈ ಮತಗಳು ರಾಷ್ಟ್ರೀಯ ಸಭೆಗೆ ಇನ್ನು ಮುಂದೆ ಮಾನ್ಯವಾಗಬೇಕು. ಆ ಬಳಿಕ ಅವು ಅಧಿಕೃತವಾದ ಮತಗಳೆಂದು ಹೇಳಬಹುದು. ಅಲ್ಲಿಯವರೆಗೆ ಅವುಗಳ ಏಕದೇಶೀಯತ್ವವು ಹಾಗೆಯೆ ಉಳಿಯುವುದು. ತಥಾಪಿ ಈ ರಿಪೋರ್ಟಿನವರ ಮಟ್ಟಿಗಾದರೂ ಅನಿಶ್ಚಿತವಾಗಿರುವ ಸ್ವರಾಜ್ಯ ಸ್ವರೂಪವನ್ನು ಒಂದು ದೃಷ್ಟಿಯಿಂದ ನಿರ್ಣಯಿಸಲು ಯತ್ನಿಸಿದ್ದು ಸಮಾಧಾನಕರವೆ ಸರಿ. ಈ ರಿಪೋರ್ಟಿನೊಳಗಿನ ಇವರ ಸೂತ್ರಗಳ ವಿಚಾರವನ್ನು ಯಥಾವಕಾಶವಾಗಿ ಚರ್ಚಿಸಬಹುದು.

ಸ್ಫುಟವಿಚಾರಗಳು.

೧. ಮಹಾತ್ಮಾ ಗಾಂಧಿಗಳು ಮೌಲಾನಾ ಶೌಕತ ಅಲ್ಲಿಗಳನ್ನು ಸಂಗಡ ಕರಕೊಂಡು ಕೋಹತಿನ ರಾಜಿ ಪ್ರಸ್ತಾಪಕ್ಕೆ ಹೋಗಿದ್ದರೆಂಬುದು ಎಲ್ಲರಿಗೆ ಗೊತ್ತಿದ್ದ ಸಂಗತಿಯೆ ಸರಿ. ಲಾಲಾ ಲಜಪತರಾಯರು ಅಲ್ಲಿ ಹೋಗಿ ಅಲ್ಲಿಯ ಅನುಭವವನ್ನು ದೇಶಕ್ಕೆ ತಿಳಿಪಡಿಸಿದನಂತರ ಗಾಂಧಿಜಿಯವರ ಮತ್ತು ಶೌಕತ ಅಲ್ಲಿಯವರ ಸಂಯುಕ್ತ ಪ್ರಯತ್ನವು ಎಷ್ಟರ ಮಟ್ಟಿಗೆ ಯಶಸ್ವಿಯಾದೀತೆಂಬುದನ್ನು ಸಾಧಾರಣವಾಗಿ ಮುಂಚೆಯೆ ಎಲ್ಲರೂ ಮನಗಂಡಿದ್ದರು. ಈಗಲಂತೂ 'ಯಂಗ್ ಇಂಡಿಯ'ದಲ್ಲಿ ಗಾಂಧಿಯವರು ತಮ್ಮ ಪ್ರಯತ್ನದ ಫಲಶ್ರುತಿಯನ್ನು ಸ್ಪಷ್ಟವಾದ ಶಬ್ದಗಳಿಂದ ತಿಳಿಪಡಿಸಿದ ಬಳಿಕಂತೂ ಯಾರಲ್ಲೂ ಯತ್ಕಿಂಚಿತ್ತಾದರೂ ಸಂದೇಹವಿರಲಿಕ್ಕಿಲ್ಲವೆಂದು ತಿಳಿಯುತ್ತೇವೆ. ಯಾಕೆಂದರೆ, ಗಾಂಧಿಜಿಯವರು ಮತ್ತು ಅವರ ಸಹಕಾರಿಗಳು ರಾವಲಪಿಂಡಿಗೆ ಹೋಗಿ ಯಾವ ಅಭಿಪ್ರಾಯವನ್ನು ಸಂಗ್ರಹಿಸಿರುವರೊ ಅದನ್ನು ಕುರಿತು ಅವರೆ ನಿವೇದಿಸಿರುವ ಕೆಲವು ಸಂಗತಿಗಳ ಮೇಲಿಂದ ಕೋಹತಿನಲ್ಲಿಯ ಮಹಮ್ಮದೀಯರ ಮನೋವೃತ್ತಿಯು ಬಹು ಕಠಿಣವಾಗಿದೆ ಎಂದು ಕಂಡುಬರುತ್ತದೆ. ಗಾಂಧಿಜಿಯವರು ತಮ್ಮ ಸಮಗ್ರ ಅನುಭವವನ್ನು ಇನ್ನೂ ಪ್ರಕಟಿಸಲಿಲ್ಲ. ಅವರು ಅದನ್ನು ಬರೆದು ತಮ್ಮ "ಬಡಾ ಭಾಯಿ"ಯಾದ ಶೌಕತ ಅಲ್ಲಿಸಾಹೇಬರ ಅವಲೋಕನಾರ್ಥವಾಗಿ ಕಳುಹಿಸಿಕೊಟ್ಟಿದ್ದಾರೆ. ಈ "ಬಡಾ ಭಾಯಿ"ಯವರು ಅದನ್ನು ಅವಲೋಕಿಸಿದ ಬಳಿಕ ಅವರ ಸಮ್ಮತಿಯಿಂದ ಗಾಂಧಿಯವರ ಕೋಹತಿನ ಅನುಭವದ ವೃತ್ತಾಂತವು ಮುದ್ರಣದ ಬೆಳಕಿಗೆ ಬರುವದಂತೆ! ಆದರೂ ಅದಕ್ಕಿಂತ ಮುಂಚೆ ಸಾಮಾನ್ಯ ರೂಪವಾದ ಅನುಭವವನ್ನೂ, ಜನತೆಯು ಇನ್ನು ಮುಂದೆ ಮಾಡಬಹುದಾದ ಕರ್ತವ್ಯವನ್ನೂ ಸೂಚಿಸುವ ಒಂದು ಲೇಖನವನ್ನು ಗಾಂಧಿಯವರು ಯಂಗ್ ಇಂಡಿಯದಲ್ಲಿ ಪ್ರಕಟಿಸಿದ್ದಾರೆ. ಕೋಹತಿನ ಮುಸಲ್ಮಾನರು ಗಾಂಧಿ ಮತ್ತು ಶೌಕತ ಅಲ್ಲಿ ಇವರೊಡನೆ ಈ ವಿಷಯವಾಗಿ ಯಾವ ಮಾತು ಕಥೆಯನ್ನೂ ನಡಿಸಲು ಸಿದ್ಧರಿಲ್ಲ! ಎಂದರೆ ಇವರೊಡನೆ ಒಪ್ಪಂದದ ಬರೆ ಪ್ರಸ್ತಾಪವನ್ನೆತ್ತಲು ಕೂಡ ಅಲ್ಲಿಯ ಮಹಮ್ಮದೀಯ ಮುಖಂಡರಿಗೆ ಅಪೇಕ್ಷೆ ಇಲ್ಲ. ಈ ಕಟು ಅನುಭವವು ಬಂದದ್ದರಿಂದ ತನ್ನಿಂದಾಗಲಿ ಶೌಕತ ಅಲ್ಲಿಯವರಿಂದಾಗಲಿ ಈ ಒಪ್ಪಂದವನ್ನು ಸಾಧಿಸಲು ಸಾಧ್ಯವಿಲ್ಲವೆಂದು ಗಾಂಧಿಗಳು ಈಗ ಸ್ಪಷ್ಟವಾಗಿ ಬರೆಯತೊಡಗಿದ್ದಾರೆ! ಕೋಹತಿನ ಮುಸಲ್ಮಾನರು ಹಿಂದುಗಳನ್ನು ಆದರದಿಂದ ಕರೆಯಿಸಿಕೊಳ್ಳದ ಹೊರತು ಹಿಂದುಗಳು ಅಲ್ಲಿಗೆ ಹೋಗಕೂಡದೆಂದು ಮೊದಲು ಯಾವ ಮಹಾತ್ಮರು ಹೇಳುತ್ತಿದ್ದರೊ ಅವರೆ ಈ ಹೊತ್ತು ಕೊಂಚ ಬದಲಾಯಿಸಿ ಹೇಳುತ್ತಿದ್ದಾರೇನೆಂದರೆ, ಹಿಂದುಗಳನ್ನು ಅಲ್ಲಿಯ ಮಹಮ್ಮದೀಯರು ಕರೆದುಕೊಳ್ಳುವಷ್ಟು ಸೌಜನ್ಯವನ್ನು ವ್ಯಕ್ತಮಾಡುವಂತಿಲ್ಲ. ಎಂದ ಮೇಲೆ ಹಿಂದುಗಳು ತಮ್ಮ ಆಸ್ತಿಪಾಸ್ತಿಯನ್ನೆಲ್ಲ ಕಳೆದುಕೊಂಡು ಕುಳಿತುಕೊಳ್ಳಬೇಕಾಯಿತು. ಈ ಪ್ರಕಾರವಾದ ಪರಿಸ್ಥಿತಿಯನ್ನು ವಾಚಕವೃಂದದ ಮುಂದಿಟ್ಟು ಗಾಂಧಿಯವರು, ಈ ಕೋಹತಿನ ಪ್ರಶ್ನೆಯ ವಿಷಯವಾಗಿ ಹಿಂದು ಮುಖಂಡರು ತಮತಮಗೆ ಯುಕ್ತವಾದ ಮಾರ್ಗವನ್ನು ಕೈಕೊಳ್ಳಬಹುದು. ತನ್ನಿಂದ ಯಾವದೂ ಸಾಧ್ಯವಿಲ್ಲ. ಆದ್ದರಿಂದ ತನ್ನನ್ನು ನಂಬಿಕೊಂಡಿರಬಾರದೆಂದು ಬರೆದು ಸೂಚಿಸಿದ್ದಾರೆ! ಈಗಲಾದರೂ ಮಹಾತ್ಮರ ಅನುಭವವು ಹಿಂದು ಮಹಮ್ಮದೀಯರ ಐಕ್ಯದ ವಿಷಯವಾಗಿ ಏನನ್ನುತ್ತದೆ?

೨. ಮಹಾತ್ಮಾ ಗಾಂಧಿಗಳ ಒಟ್ಟಿಗೆ ರಾವಲಪಿಂಡಿಗೆ ಹೋದ ಶ್ರೀ ಜಯರಾಮದಾಸರು ಮುಂದೆ ಕೋಹತಿಗೆ ಹೋಗಿ ಬಂದಿರುವರು. ಇವರು ತಮ್ಮ ಅನುಭವವನ್ನು ಒಂದು ಭೇಟಿಯಲ್ಲಿ ಹೇಳಿರುವರು. ಇವರು ಅಲ್ಲಿಯ ಪರಿಸ್ಥಿತಿಯನ್ನು ವರ್ಣಿಸುವಾಗ ಹೇಳಿದ್ದೇನೆಂದರೆ, ಕೋಹತಿನಲ್ಲಿ ಹಿಂದು ದೇವಸ್ಥಾನಗಳನ್ನು ಸುಟ್ಟು ಹಾಳುಮಾಡಿದ ದೇಖಾವೆಯು ಬಹು ಹೃದಯದ್ರಾವಕವಾಗಿದ್ದು ಮಹಮ್ಮದೀಯರು ಹಿಂದುಗಳ ಮನೆಗಳನ್ನು ಸುಟ್ಟು ಯಾವ ಲೂಟಿಯನ್ನು ಮಾಡಿರುವರೊ ಅದನ್ನು ವರ್ಣಿಸಲು ಅಸದಳವಾಗಿದೆ! ಲೂಟಾಯಿಸಿದ ಹೆಚ್ಚು ಬೆಲೆಯುಳ್ಳ ವಸ್ತುಗಳು ಅಲ್ಲಿಯ ಪೇಟೆಯಲ್ಲಿ ಅಲ್ಪಸ್ವಲ್ಪ ಕ್ರಯಕ್ಕೆ ಮಾರಲ್ಪಡುತ್ತಿವೆ! ಇದುವರೆಗೆ ಕೋಹತಿನಲ್ಲಿ ೫೦ ಜನ ಹಿಂದುಗಳು ಬಂದಿದ್ದು ಅವರೊಡನೆ ಮಹಮ್ಮದೀಯರ ವರ್ತನವು ಏನೂ ಸಮಾಧಾನಕರವಿಲ್ಲ. ಸಾರಾಂಶ, ಹಿಂದುಗಳು ತಿರುಗಿ ಕೋಹತಿಗೆ ಬರಕೂಡದಂತೆಯೆ ಅಲ್ಲಿಯ ವಾತಾವರಣವಿದೆ. ಜಯರಾಮದಾಸರು ಪ್ರಕಟಿಸಿರುವ ಈ ಪರಿಸ್ಥಿತಿಯನ್ನು ಆಲೋಚಿಸಿದ್ದಲ್ಲಿ ಯಾವಾತನಿಗೆ ವ್ಯಸನನಾಗದೆ ಇದ್ದೀತು!

೩. ಬಂಗಾಲದಲ್ಲಿ ಈಚೆಗೆ ರಾಜಕೀಯ ಪರಿಸ್ಥಿತಿಯು ವಾರ ವಾರಕ್ಕೆ ಬದಲಾಗುತಿದ್ದಂತೆ ಕಂಡಬರುತ್ತದೆ. ಲಿಟನ್ ಸಾಹೇಬರ ತಂತ್ರವು ಪ್ರಭಾವಶಾಲಿಯಾಗಿ ಕೌನ್ಸಿಲರುಗಳಲ್ಲಿ ಒಡಕು ಬಂದಿತು, ಮಂತ್ರಿಗಳ ಸಂಬಳ ಮತ್ತು ಕೌನ್ಸಿಲ್ ಅಧ್ಯಕ್ಷರ ಸಂಬಳವನ್ನು ತಗ್ಗಿಸುವುದು ಈ ಎರಡು ವಿಷಯಗಳಲ್ಲಿ ಮತಭೇದವುಂಟಾಯಿತು. ಈ ಮತಭೇದದ ಹೆಂಚಿನ ಮೇಲೆ ಸರಕಾರವು ಮಂತ್ರಿಗಳ ಮತ್ತು ಅಧ್ಯಕ್ಷರ ಸಂಬಳದ ಎರಡು ಧೋರಣೆಗಳನ್ನು ತಯಾರಿಸಿಕೊಂಡಿತ್ತು. ಮುಂಚಿನ ವಾರ ಕಲಕತ್ತೆಯಲ್ಲಿ ಈ ಸ್ಥಿತಿ ಇತ್ತು. ಆದರೆ ಈ ವಾರ ಅಲ್ಲಿಯ ಪರಿಸ್ಥಿತಿಯಲ್ಲಿ ಬದಲಾವಣೆಯಾಗಿದೆ ಎಂದು ವರ್ತಮಾನಗಳು ಬರುತ್ತಿವೆ. ಮುಂಚಿನ ವಾರ ಲೋಕಪಕ್ಷಕ್ಕೆ ಅಪಜಯವು ಬರಲು ಸ್ವತಂತ್ರರು ರಾಷ್ಟ್ರೀಯ ಪಕ್ಷವನ್ನು ಬಿಟ್ಟು ಸ್ವತಂತ್ರರೆ ಆಗಿದ್ದರು. ಮಹಮ್ಮದೀಯರಂತೂ ಸ್ವಜಾತಿಯ ಹೊರಗೆ ದೃಷ್ಟಿಯನ್ನು ಚಾಚಿರಲಿಲ್ಲ! ಹೀಗಾಗಿ ಸ್ವರಾಜ್ಯಪಕ್ಷೀಯರ ಕೈಕಟ್ಟಿದಂತಾಗಿ ಅವರ ಪಕ್ಷದ ಉಪಸೂಚನೆಯು ಬಿದ್ದುಹೋಗಿತ್ತು. ಈಗ ಸ್ವತಂತ್ರರು ಪುನಃ ಸ್ವರಾಜ್ಯದವರೊಡನೆ ಒಟ್ಟಿಗೆ ಸೇರಿರುವರು. ಸರಕಾರವು ಮಂತ್ರಿಗಳನ್ನು ನೇಮಿಸಲಿ, ಆದರೆ ದ್ವಿದಲರಾಜ್ಯಪದ್ಧತಿಯನ್ನು ತೆಗೆದುಹಾಕಿ ಪ್ರಾಂತಿಕ ಸ್ವಾಯತ್ತತೆಯನ್ನು ಕೊಡದಿದ್ದರೆ ಮತ್ತು ರಾಜಕೀಯ ಕೈದಿಗಳನ್ನು ಬಿಡದಿದ್ದರೆ ಸ್ವತಂತ್ರರೊಳಗೆ ಮಂತ್ರಿತ್ವವನ್ನು ಯಾರೂ ಸ್ವೀಕರಿಸಕೂಡದು. ಮಹಮ್ಮದೀಯರು—ಹಕ್ ಪ್ರಭೃತಿಯವರು ಸ್ವೀಕರಿಸಿದ್ದಾದರೆ ಅಂಥ ಮಂತ್ರಿಮಂಡಲದ ಮೇಲೆ ನಿಂದಾವ್ಯಂಜಕ ಠರಾವನ್ನು ತರಬೇಕು ಎಂಬುದಾಗಿ ಸ್ವತಂತ್ರರು ಈಗ ನಿರ್ಣಯಿಸಿದ್ದಾರೆ. ಸ್ವತಂತ್ರರು ಮತ್ತು ಸ್ವರಾಜಿಷ್ಟರು ಒಟ್ಟಿಗೆ ಸೇರಿದ್ದಲ್ಲಿ ಅದೆ ಕಡೆಗೆ ಬಹುಮತವಾಗುತ್ತದೆ. ಆದ್ದರಿಂದ ಸರಕಾರಕ್ಕೆ ಇದು ಒಂದು ದೊಡ್ಡ ಇಕ್ಕಟ್ಟು ಬಂದು ನಿಂತಿದೆ. ಲಿಟನ್ ಸಾಹೇಬರು ಇನ್ನು ಯಾವ ಉಪಾಯವನ್ನು ಕಂಡುಹಿಡಿಯುತ್ತಾರೆ ನೋಡಬೇಕು.

೪. ಬಂಗಾಲ ಕೌನ್ಸಿಲಿನಲ್ಲಿ ಹೇಗೆ ಒಡಕುಂಟಾಗಿ ಒಂದು ವಾರ ಲಿಟನರ ಚಂಚುಪ್ರವೇಶಕ್ಕೆ ಆಸ್ಪದವು ದೊರತಿತ್ತೊ ಅದೆ ಮೇರೆಗೆ ಎಸೆಂಬ್ಲಿಯಲ್ಲಿ ಸಹ ಒಂದು ವಾರ ರಾಷ್ಟ್ರೀಯ ಪಕ್ಷದಲ್ಲಿ ಏಕಮತ್ಯವು ಭಂಗವಾಗಿ ಸರಕಾರಕ್ಕೆ ಒಂದೆರಡು ಸಂಗತಿಗಳಲ್ಲಿ ವಿಜಯವು ಪ್ರಾಪ್ತವಾಗಿತ್ತು. ಅಲ್ಲಿಯೂ ಈಗ ಸ್ವತಂತ್ರರ ಮತ್ತು ಸ್ವರಾಜಿಷ್ಟರ ಪಕ್ಷಗಳಲ್ಲಿ ಪರಸ್ಪರ ವಿಚಾರ ವಿನಿಮಯದಿಂದ ಐಕ್ಯವಾಗಿ ಲೀ ಕಮಿಶನಿನ ಶಿಫಾರಸುಗಳನ್ನು ಈ ಸಂಯುಕ್ತ ಪಕ್ಷದವರು ನಿರಾಕರಿಸುವವರಿದ್ದಾರೆ. ಈ ಮೇರೆಗೆ ಅವರಲ್ಲಿ ಐಕ್ಯ ಉಂಟಾಗಿ ಅದು ಅಭೇದ್ಯವಾಗಿ ಉಳಿದುದ್ದಾದರೆ ಎಸೆಂಬ್ಲಿಯಲ್ಲಿ ಈ ವರ್ಷವೂ ಕೂಡ ಉಪರೋಧಾತ್ಮಕ ಕಾರ್ಯಕ್ರಮವನ್ನು ಮುಂದರಿಸಬಹುದು. ಅಲ್ಲದೆ ಉಪಯುಕ್ತವಾದ ವಿಧಾಯಕ ಕಾನೂನುಗಳನ್ನು ಜಾರಿಯಲ್ಲಿ ತಂದು ಲೋಕಹಿತದ ಕಾರ್ಯಗಳನ್ನು ಸಂಪಾದಿಸಿದ ಶ್ರೇಯಸ್ಸನ್ನು ಹೊಂದಬಹುದು. ಸಾರಾಂಶ ಪಕ್ಷಗಳಲ್ಲಿ ಐಕ್ಯವು ಪ್ರಧಾನವಾಗಿದೆ ಎಂಬುದನ್ನು ಯಾರೂ ಮರೆಯಕೂಡದು.

೫. ಮುಂಬಯಿಯ ಕೌನ್ಸಿಲಿನಲ್ಲಿ ತೆರಿಗೆಯನ್ನು ಹೆಚ್ಚಿಸುವ ಬಿಲನ್ನು ಸರಕಾರವು ತರುವದಿದೆ ಎಂದು ಗೊತ್ತಾಗುತ್ತದೆ. ಉತ್ಪನ್ನಕ್ಕಿಂತ ಖರ್ಚು ಹೆಚ್ಚಾದ ಕಾರಣ ತೆರಿಗೆಯನ್ನು ಹೆಚ್ಚಿಸುವ ವಿಧಾನದ ಈ ಬಿಲು ಬರುವದೆಂದು ಇದರ ತಾತ್ಪರ್ಯವು. ಮುಂಬಯಿ ಸರಕಾರಕ್ಕೆ ರೂ. ೪೨ ಲಕ್ಷ ಖರ್ಚಿನ ರಕಮಿನಲ್ಲಿ ಕಡಿಮೆ ಬೀಳುತ್ತದೆ. ಈ ರಕಮನ್ನು ಕೋರ್ಟು ಫೀಸು ಹೆಚ್ಚಿಸುವವರಿಂದ ೧೮ ಲಕ್ಷ, ಆಸ್ತಿ ಬದಲಾವಣೆಯ ಫೀಸಿನಿಂದ ೧೮ ಲಕ್ಷ, ಟರ್ಫ್ ಕ್ಲಬುಗಳ ಮೇಲೆ ೬ ಲಕ್ಷ ಈ ರೀತಿಯಿಂದ ಭರತಿಮಾಡಿಕೊಳ್ಳಲು ಅಲ್ಲಿಯ ಕೋಶ ಮಂತ್ರಿಗಳು ಯೋಜಿಸಿರುವರು. ಸರಕಾರಕ್ಕೆ ಬೇಕಾಗಿರುವ ಹಣವನ್ನು ಸರಕಾರವು ಕಾದಿಟ್ಟ ಖಾತೆಗಳ ಖರ್ಚನ್ನು ಕಡಿಮೆ ಮಾಡಿ ಆ ಮೂಲಕವಾಗಿ ಭರತಿಮಾಡಿಕೊಳ್ಳಬಹುದು. ಸರಳವಾದ ಇಂಥ ಉಪಾಯಗಳಿರುವಾಗ ಬಡ ಪ್ರಜೆಗಳ ಮೇಲೆ ಹೊಸ ತೆರಿಗೆಯನ್ನು ಹೊರಿಸುವದು ಬರಿ ಅನ್ಯಾಯವೆ ಅಲ್ಲ, ನಿರ್ದಯತೆಯ ಲಕ್ಷಣವಾಗಿದೆ. ಮುಂಬಯಿ ಕೌನ್ಸಿಲಿನಲ್ಲಿಯ ಲೋಕ ಪಕ್ಷದ ಸಭಾಸದರು ಏಕಮತ್ಯದಿಂದ ಸರಕಾರದ ಈ ಘಾತಕ ಪ್ರಯತ್ನವನ್ನು ತೀವ್ರವಾಗಿ ನಿಷೇಧಿಸಿ ಉಪರೋಧಿಸದೆ ಇರಲಿಕ್ಕಿಲ್ಲ. ಮುಂಬಯಿ ಸಂಸ್ಥಾನದೊಳಗಿನ ಇತರ ಸಂಸ್ಥೆಗಳು ಕೂಡ ಈ ಅಶ್ಲಾಘ್ಯವಾದ ಸರಕಾರಿ ಪ್ರಯತ್ನವನ್ನು ನಿಷೇಧಿಸುವವರಿದ್ದಾರೆ.

೬. ಮೈಸೂರ ರಾಜ್ಯದಲ್ಲಿ ಕನ್ನಡವು ಇನ್ನೂ "ದರಬಾರಿ ಭಾಷೆ"ಯಾಗದೆ ಇರುವದು ಶೋಚನೀಯವೆ ಸರಿ. ಹೈದರಾಬಾದಿನಂಥ ಕಡೆಯಲ್ಲಿ ಊರ್ದುಭಾಷೆಯು ಸತ್ತಾಧಾರಿಯಾಗಿ ಎಷ್ಟೊ ಸಮಯವಾಯಿತು. ಮೈಸೂರಿನಲ್ಲಿ ಸ್ವಭಾಷೆಯ ಸೂರ್ಯೋದಯವು ರಾಜಕೀಯ ಕಚೇರಿಗಳ ಕ್ಷಿತಿಜದಲ್ಲಿ ಇನ್ನೂ ಆಗದಿರುವುದು ಕನ್ನಡಿಗರ ದುರ್ದೈವವೆ ಸರಿ. ಆದರೂ ಮೈಸೂರಿನಿಂದ ಬಂದಿರುವ ಇತ್ತಲಾಗಿನ ಒಂದು ವಾರ್ತೆಯಿಂದ ಈ ವಿಷಯವಾಗಿ ಮನಸ್ಸಿಗೆ ಕೊಂಚ ಸಮಾಧಾನವಾಗುತ್ತಿದೆ ಎನ್ನಬೇಕು. ಶಿಕ್ಷಣ ಇಲಾಖೆಯಲ್ಲಿ ಜಿಲ್ಲಾಧಿಕಾರಿಗಳೂ ಇನ್ನು ಕೆಳತರಗತಿಯ ಅಧಿಕಾರಿಗಳೂ ಕನ್ನಡದಿಂದ ವ್ಯವಹಾರವನ್ನು ನಡಿಸಬೇಕು, ಮೇಲಿನವರು ಕನ್ನಡದಿಂದ ನಡಿಸಿದರೆ ಅಡ್ಡಿ ಇಲ್ಲವೆಂಬುದಾಗಿ ಅಲ್ಲಿಯ ಶಿಕ್ಷಣದ ಮುಖ್ಯಾಧಿಕಾರಿಗಳು ಹುಕುಮು ಹೊರಡಿಸಿದ್ದಾರೆ. ಹೈದರಾಬಾದಿನಲ್ಲಿ ಊರ್ದುವಿನ ಅಭಿಮಾನಾತಿಶಯದಿಂದ ಇತರ ಭಾಷೆಗಳೆಲ್ಲ ಹೇಗೆ ಪಾದಾಕ್ರಾಂತವಾಗಿ ಮಾಡಲ್ಪಟ್ಟಿದ್ದಾವೊ ಹಾಗೇನಾದರೂ ಮೈಸೂರಿನಲ್ಲಿ ಮಾಡದೆ ಊರ್ದುಭಾಷೆಗೆ ಅವಕಾಶವು ದೊರೆತಿದೆ. ಇದು ಶ್ಲಾಘನೀಯವಾದ ಸಂಗತಿಯು.

೭. ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲಿ ನೋಕರಶಾಹಿಯ ಬೇಳೆಯು ಬೇಯುವಂತಿಲ್ಲವಾದರೂ ಕೌನ್ಸಿಲ್ ಆಫ್ ಸ್ಟೇಟು ಈ ಅಧಿಕಾರಿವರ್ಗದ ಭೃತ್ಯಾಂಗಣವಾಗಿದೆಂಬುದಕ್ಕೆ ಸಂದೇಹವಿಲ್ಲ. ಕಳೆದ ಸಪ್ಟಂಬರಿನಲ್ಲಿ ಎಸೆಂಬ್ಲಿಯು ಕ್ರಿಮಿನಲ್ ಲೊ ಎಮೆಂಡ್‌ಮೆಂಟ್ ಎಕ್ಟಿನ ೨ನೆಯ ಭಾಗವನ್ನು ರದ್ದುಪಡಿಸುವ ಬಿಲನ್ನು ಪಾಸುಮಾಡಿತು. ಆದರೆ ಅದನ್ನು ಈ ಕೌನ್ಸಿಲ್ ಒಫ್ ಸ್ಟೇಟು ಬಹುಮತದಿಂದ ನಿರಾಕರಿಸಿದೆ. ಈ ದೊಡ್ಡವರು ಕೌನ್ಸಿಲು ಅಧಿಕಾರಿಗಳ ಸೂತ್ರಗೊಂಬೆಯಾಗಿರುವುದರಿಂದ ಲೋಕಮತಕ್ಕೆ ವಿರುದ್ಧವಾಗುವ ಎಷ್ಟೆಷ್ಟು ಸಂಗತಿಗಳಿರುವವೊ ಅವೆಲ್ಲ ಅಲ್ಲಿ ಚರಿತಾರ್ಥವಾಗುವವು. ಮತ್ತು ಇದೆ ಕಾರಣದಿಂದ ಒತ್ತಾಳಿಕೆಯ ಕಾನೂನುಗಳನ್ನು ರದ್ದುಗೊಳಿಸುವ ಪಟೇಲರ ಬಿಲು ಈ ಕೌನ್ಸಿಲಿನಲ್ಲಿ ಪಾಸಾಗಲಿಕ್ಕಿಲ್ಲವೆಂದು ಈ ಹೊತ್ತೆ ಭವಿಷ್ಯವನ್ನು 'ಹಿಂದು' ಪತ್ರಿಕೆಯಂತೆ ಯಾರಾದರೂ ಬರೆದಿಟ್ಟರೆ ಅದು ಸುಳ್ಳಾಗುವ ಸಂಭವವಿಲ್ಲವೆಂಬುದು ನಿಜ.

ಮಂಗಳೂರು.

ಪಾಣೆಮಂಗಳೂರ ಸಂಕದ ಹಂಗಾಮಿಯಾಗಿ ಕಟ್ಟಿಸಿದ ಭಾಗವು (ಮಡಿಕೇರಿ ರಸ್ತೆಯಲ್ಲಿ ೧೬ನೇ ಮೈಲಿನ ಸಮೀಪ) ಹಾಳಾಗಿರುವುದರಿಂದ ಈ ಸಂಕದಲ್ಲಿ ಯಾವ ತರದ ಚಲಾವಣೆಯೂ ನಡೆಯದಂತೆ ಡಿಸ್ಟ್ರಿಕ್ಟಬೋರ್ಡು ಪ್ರೆಸಿಡೆಂಟರ ಹುಕುಂ ಆಗಿರುತ್ತದೆ.

ಬರುವ ತಾ. ೬ರಲ್ಲಿ ಲೆಪ್ಟನೆಂಟ ಕರ್ನಲ್ ಕರ್ಕವುಡರು ತಮ್ಮ ರಜೆಯನ್ನು ಮುಗಿಸಿ ಇಲ್ಲಿಯ ಡಿಸ್ಟ್ರಿಕ್ಟ ಸರ್ಜನ್ ಹುದ್ದೆಯ ಚಾರ್ಜನ್ನು ವಹಿಸಿಕೊಳ್ಳುತ್ತಲೇ ಈಗಿನ ಡಿಸ್ಟ್ರಿಕ್ಟ ಮೆಡಿಕಲ್ ಆಫೀಸರರಾದ ಮೆಜರ್ ಲೆಸ್ಲಿ ಐ ಎಮ್. ಎಸ್. ಇವರು ರಜೆಯನ್ನು ಪಡೆಯಲಿಕ್ಕಿದ್ದಾರೆ.

The Calicut Bank, Ltd.,
ದಿ ಕೆಲಿಕಟ್ ಬೇಂಕ್, ಲಿಮಿಟೆಡ್,

ಹೆಡ್ ಆಫೀಸ – ಕಲ್ಲಿಕೋಟೆ.
ಬ್ರಾಂಚುಗಳು:— ಮಂಜೇರಿ, ತಲಚೇರಿ, ಕೊಚ್ಚಿ ಮತ್ತು ಪಾಲ್ಘಾಟು.
ರಿಜಿಸ್ಟರ್ಡ್ ಮತ್ತು ಅಧಿಕಾರಗೊಳಿಸಲ್ಪಟ್ಟ ಮೂಲಧನ ರೂ. 5,00,000—0—0.
ರೂಪಾಯಿ 10ರ 50,000 ಪಾಲುಗಳು.
(30—8—1924)ರ ವರೆಗೆ ಮೌಲ್ಯ ಮೂಲಧನ ರೂಪಾಯಿ 1,81,850—0—0.
ಒಂದು ವರುಷದ ಕಾಯಂ ಠೇವಣಾತಿಗೆ ಬಡ್ಡಿ ದರ ಸೇಕಡಾ ರೂ. 7—8—0.
ಕಳೆದ 4 ವರುಷಗಳಲ್ಲಿ ಪಾಲುಗಾರರಿಗೆ ಸೇಕಡಾ 12ರಂತೆ ಬಡ್ಡಿ ಹಂಚಿದೆ.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.
ಸಿ. ಕೃಷ್ಣನ್, ಬಿ. ಎ. ಬಿ. ಎಲ್.,
ಮೆನೇಜಿಂಗ್ ಡ್ಯಾರೆಕ್ಟರ್
ಡ್ಯಾರೆಕ್ಟರರಲ್ಲಿ ಒಬ್ಬರು—
ಎಮ್. ನಾರಾಯಣ ಕಾಮತ್, ಬಿ. ಎ.,
ಪ್ಲೀಡರ್, ಕುಂದಾಪುರ.

ಕುಳೂರು ಮತ್ತು ಮೂಲ್ಕಿ ಬಾರಿಗಳಲ್ಲಿ ೧೯೨೫-೨೬ನೇ ವರ್ಷದ ಬಾಬ್ತು ವರಿ ವಸೂಲು ಮಾಡುವ ಸ್ವತಂತ್ರವನ್ನು ತಿರಿಗಿ ಏಲಂಮಾಡಬೇಕಾಗಿ ಡಿಸ್ಟ್ರಿಕ್ಟಬೋರ್ಡು ಪ್ರೆಸಿಡೆಂಟರವರು ಮಂಗಳೂರು ತಾಲೂಕುಬೋರ್ಡಿಗೆ ಬರೆದಿರುವುದರಿಂದ ಇದೆ ಬರುವ ೧೯೨೫ನೇ ಇಸವಿ ಮಾರ್ಚಿ ೫ನೇ ಗುರುವಾರ ಅಪರಾಹ್ನ ಗಂಟೆ ೨ಕ್ಕೆ ಸದರಿ ಕುಳೂರು ಮತ್ತು ಮೂಲ್ಕಿ ಬಾರಿಗಳನ್ನು ಮೂಲ್ಕಿ ಮೊಕ್ಕಾಮಿನಲ್ಲಿ ತಿರಿಗಿ ಏಲಂಮಾಡಲಾಗುವುದು.

ಮಂಗಳೂರು ತಾಲೂಕುಬೋರ್ಡು ಪ್ರೆಸಿಡೆಂಟರಾದ ಮ| ರಾ| ಎನ್. ರಾಮಕೃಷ್ಣ ಪೂಂಜರು ಕಳೆದ ತಾ. ೨೦ರಲ್ಲಿ ಚಾರ್ಜನ್ನು ವಹಿಸಿಕೊಂಡರು.

ಮಂಗಳೂರು ತಾಲೂಕುಬೋರ್ಡಿಗೆ ಗುರ್ಪುರ ಸರ್ಕಲಿನಿಂದ ಮ| ರಾ| ಕೆ. ಮುತ್ತಯ ಶೆಟ್ಟರು ಮತ್ತು ಕೆ. ರಘುಚಂದ್ರ ಬಲ್ಲಾಳರು ಮಾತ್ರ ಉಮೇದ್ವಾರರಾಗಿದ್ದದರಿಂದ ಆ ಸರ್ಕಲಿನ ಎರಡು ಸ್ಥಾನಗಳಿಗೆ ಅವರೆ ಮೆಂಬರರಾಗುವರು. ಬಂಟವಾಳ ಸರ್ಕಲಿನ ಒಂದು ಸ್ಥಾನಕ್ಕೆ ಮಿ| ಬಿ. ಎಲ್. ಅಹಮ್ಮದರೊಬ್ಬರೇ ಉಮೇದ್ವಾರರಾಗಿದ್ದದರಿಂದ ಆ ಸರ್ಕಲಿಗೆ ಅವರೆ ಮೆಂಬರರಾಗುವರು. ಮೂಲ್ಕಿ ಸರ್ಕಲಿಗೆ ಉಮೇದ್ವಾರರಾಗಿದ್ದ ನಾಲ್ವರಲ್ಲಿ ಮ| ರಾ| ಮಂಜಯ್ಯ ಶೆಟ್ಟಿ ಮತ್ತು ಮ| ರಾ| ಕಕ್ಕಗುತ್ತು ಚಂದಯ್ಯ ಶೆಟ್ಟಿ ಇವರಿಬ್ಬರು ತಮ್ಮ ಉಮೇದ್ವಾರಿಕೆಗಳನ್ನು ಹಿಂತೆಗೆದುಕೊಂಡದ್ದರಿಂದ ಆ ಸರ್ಕಲಿಗೆ ಮ| ರಾ| ಮೂಲ್ಕಿ ರಾಮಕೃಷ್ಣ ಪೂಂಜ ಮತ್ತು ಮ| ರಾ| ಬೋಳ ಮಾಧವ ರಾಯರು ಮೆಂಬರರಾಗುವರು. ಇವರೆಲ್ಲ ಎಪ್ರಿಲ್ ತಾ. ೧ರಿಂದ ಚಾರ್ಜು ವಹಿಸಿಕೊಳ್ಳುವರು. ಇನ್ನು ಮಂಗಳೂರು ಸರ್ಕಲಿನ ಬಗ್ಗೆ ಮಾತ್ರ ಚುನಾವಣೆಯು ನಡೆಯಲಿಕ್ಕಿದೆ.

ಮಂಗಳೂರು ಮುನ್ಸಿಪಲ್ ಕೌನ್ಸಿಲ್ ಮೀಟಿಂಗು ನಾಳೆ ಸಾಯಂಕಾಲ ಜರಗಲಿಕ್ಕಿದೆ. ಈ ಮೀಟಿಂಗಿನಲ್ಲಿ ಮುನ್ಸಿಪಾಲಿಟಿಗೆ ಹೆಲ್ತ ಆಫೀಸರರನ್ನು ನೇಮಕಮಾಡುವ ವಿಷಯ ಇಲ್ಲಿಯ ಹೆಂಗಸರ ಮತ್ತು ಮಕ್ಕಳ ಆಸ್ಪತ್ರೆಯ ಸಮೀಪವಿರುವ ಮಿಲಿಟರಿ ಕೆರೆಯನ್ನು ಮುಚ್ಚುವ ವಿಷಯ ಚರ್ಚೆಗೆ ಬರುವುದು.

ಫೂಟ್‌ಬೋಲ್ ಪಂದ್ಯಾಟದಲ್ಲಿ ಇಲ್ಲಿಯ ಎಂಗ್ ಮೆನ್ಸ್ ಎ. ಟೀಮಿನವರು ಗೆದ್ದಿರುವರು.

ಮದ್ರಾಸ ನ್ಯಾಯವಿಧಾಯಕ ಸಭೆಯ ಮೆಂಬರರಾದ ರಾವ್‌ಸಾಹೇಬ ಬಿ ಮಹಾಬಲ ಹೆಗ್ಡೆಯವರು ಗವರ್ನಮೆಂಟ ಪ್ಲೀಡರ್ ಮತ್ತು ಪಬ್ಲಿಕ್ ಪ್ರೊಸಿಕ್ಯೂಟರಾಗಿ ನೇಮಕಪಟ್ಟದ್ದರಿಂದ ಈ ಕೌನ್ಸಿಲ್ ಮೆಂಬರಿಕೆಗೆ ರಾಜಿನಾಮೆ ಕೊಟ್ಟಿರುವರೆಂದು ಕೇಳುತ್ತೇವೆ. ಇವರ ರಾಜಿನಾಮೆಯ ಮೂಲಕ ಖಾಲಿಯಾದ ಮೆಂಬರಿಕೆಗೆ ಮ| ರಾ| ಅತ್ತಾವರ ಬಾಲಕೃಷ್ಣ ಶೆಟ್ಟರಿಗೆ ಸ್ವರಾಜ್ಯ ಪಕ್ಷದವರೂ ನೆಶನಲಿಸ್ಟರೂ ಇಂಡಿಪೆಂಡೆಂಟರೂ ತಮ್ಮ ಓಟುಗಳನ್ನು ಕೊಡಬಹುದೆಂದು ಶ್ರೀಯುತ ಸಿ. ಆರ್. ರಡ್ಡಿಯವರ ಶಿಫಾರಸು ಆಗಿದೆ.

ರಾವ್‌ಸಾಹೇಬ ಬಿ. ಮಹಾಬಲ ಹೆಗ್ಡೆಯವರು ಪಬ್ಲಿಕ್ ಪ್ರೊಸಿಕ್ಯೂಟರರಾಗಿ ನೇಮಕಪಟ್ಟದ್ದರಿಂದ ಖಾಲಿಯಾದ ಮೆಂಬರಿಕೆಗೆ ನೊನ್ ಬ್ರಾಹ್ಮಿನ್ ಕೊನ್ಸ್‌ಟಿಟ್ಯುಯನ್ಸಿಯಿಂದ ಒಬ್ಬ ಮೆಂಬರರ ಚುನಾವಣೆಯಾಗತಕ್ಕದಿದೆ. ಈ ಮೆಂಬರಿಕೆಗೆ ಉಮೇದ್ವಾರರಾಗತಕ್ಕವರು ತಮ್ಮ ನೊಮಿನೇಶನ್‌ಗಳನ್ನು ಮಾರ್ಚಿ ತಾ. ೧೬ರೊಳಗೆ ದಾಖಲುಮಾಡಬೇಕಾಗಿದೆ.

ನಾಮದಾರ ಶ್ರೀನಿವಾಸ ಶಾಸ್ತ್ರಿಯವರು ರಾಜಿನಾಮೆ ಕೊಟ್ಟದ್ದರಿಂದ ಖಾಲಿಯಾದ ಕೌನ್ಸಿಲ್ ಒಫ್ ಸ್ಟೇಟ್ ಮೆಂಬರಿಕೆಯ ಚುನಾವಣೆಯು ನಡೆದು ಸ್ವರಾಜ್ಯ ಪಕ್ಷದ ಶ್ರೀಯುತ ವಿ. ರಾಮದಾಸ ಇವರು ಆರಿಸಲ್ಪಟ್ಟಿರುವರು.

ಡಿಸ್ಟ್ರಿಕ್ಟ ಎಡ್ವಾನ್ಸಮೆಂಟ ಎಸೋಸಿಯೇಶನಿನ ಆಶ್ರಯದಲ್ಲಿ ಕೆಲವು ಮಂದಿ ಕೊರಗರು ಈಗ ಬೆತ್ತದ ಮತ್ತು ಬಿದಿರಿನ ಸಾಮಾನುಗಳನ್ನು ತಯಾರಿಸುತ್ತಿದ್ದಾರೆ. ಇವರಿಂದ ತಯಾರಿಸಿದ ಸಾಮಾನುಗಳನ್ನು ಕೊಂಡುಕೊಳ್ಳುವುದು, ಬಿದಿರಿನ ಹಾಗು ಬೆತ್ತದ ಸಾಮಾನುಗಳನ್ನು ಮಾದರಿಗಾಗಿ ಕಳುಹಿಸುವುದು, ಈ ಕೈಗಾರಿಕೆಗೆ ಬೇಕಾದ ಮಾಹಿತಿ ಮತ್ತು ಸಾಮಾನನ್ನು ಒದಗಿಸುವುದು ಹಾಗು ತರಬೇತು ಹೊಂದಿದ ಕೆಲವು ಮಂದಿ ಕೊರಗರನ್ನು ಇಲ್ಲಿ ಕೆಲಸಕ್ಕೆ ಕಳುಹಿಸುವುದು ಮೊದಲಾದ ವಿಧಾನಗಳಲ್ಲಿ ಸಹಾಯಮಾಡಬೇಕಾಗಿ ಡಿಸ್ಟ್ರಿಕ್ಟ ಎಡ್ವಾನ್ಸಮೆಂಟ ಎಸೋಸಿಯೇಶನಿನ ಸೆಕ್ರೆಟರಿ ಮ| ರಾ| ಪಿ. ಆರ್. ಪೂಂಜ ಇವರ ವಿನಂತಿ ಇದೆ.

ಮ| ಎಚ್. ಶಂಕರರಾವ್ ಇವರು ಡಿಪ್ಯುಟಿ ಕಲೆಕ್ಟರರಾಗಿ ಮಂಜೂರಾದ್ದರಿಂದ ಇವರ ಸ್ಥಳದಲ್ಲಿ ಡಿಪ್ಯುಟಿ ತಹಸಿಲ್‌ದಾರ ಮತ್ತು ಆಕ್ಟಿಂಗ್ ಡಿಪ್ಯುಟಿ ಕಲೆಕ್ಟರರಾದ ಸುಲ್ತಾನ ಮೊಹಿದಿನ್ ಸಾಹೇಬ್ ಬಹದ್ದೂರ್ ತಹಸಿಲ್‌ದಾರರಾಗಿಯೂ ಇವರ ಹುದ್ದೆಯಲ್ಲಿ ಹೆಡ್ ಎಕೌಂಟಾಂಟ ಮತ್ತು ಟ್ರೆಜರರಾದ ಮ| ರಾ| ಬಿ ಅನಂತ ಬಾಳಿಗರು ಡಿಪ್ಯುಟಿ ತಹಸಿಲ್‌ದಾರರಾಗಿಯೂ ಇವರ ಕೆಲಸದಲ್ಲಿ ಕಲೆಕ್ಟರ ಆಫೀಸಿನ 1ನೇ ಕರೆಸ್‌ಪೊಂಡೆಂಟ ಕ್ಲಾರ್ಕರಾದ ಮ| ರಾ| ಜಿ. ದತ್ತಾತ್ರೇಯ ರಾಯರು ಹೆಡ್ ಎಕೌಂಟಾಂಟ ಮತ್ತು ಟ್ರೆಜರರಾಗಿಯೂ ಇವರ ಸ್ಥಳದಲ್ಲಿ ಮಂಗಳೂರ ಡಿವಿಜನಲ್ ಆಫೀಸಿನ ಹೆಡ್ ಕ್ಲಾರ್ಕ ಮಿ ವಿಕ್ಟರ್ ಸಲ್ಡಾಂಞರು 1ನೇ ಕರೆಸ್‌ಪೊಂಡೆಂಟ್ ಕ್ಲಾರ್ಕರಾಗಿಯೂ ಮತ್ತು ಇವರ ಕೆಲಸದಲ್ಲಿ ಮಂಗಳೂರ ಡಿವಿಜನಲ್ ಆಫೀಸಿನ ಆಕ್ಟಿಂಗ್ ಹೆಡ್‌ಕ್ಲಾರ್ಕರಾದ ಮ| ರಾ| ಎಮ್ ರಾಮಪ್ಪನವರು ಮಂಗಳೂರ ಡಿವಿಜನಲ್ ಆಫೀಸಿನ ಹೆಡ್‌ಕ್ಲಾರ್ಕರಾಗಿಯೂ ನೇಮಕಪಟ್ಟಿದ್ದಾರೆ.

ಮ| ರಾ| ಬಿ. ಕೃಷ್ಣಾಚಾರ್ಯರು ಮೃತಪಟ್ಟದ್ದರಿಂದ ಅವರ ಹುದ್ದೆಯಲ್ಲಿ ಸ್ಪೇಶನರಿ ಸಬ್‌ಮೆಜಿಸ್ಟ್ರೇಟರಾದ ಮ| ರಾ| ರಗಡೆ ಶಿವರಾಯರು ತಹಶಿಲ್‌ದಾರರಾಗಿ ನೇಮಕಪಟ್ಟಿದ್ದಾರೆ. ಮತ್ತು ಶಿಲ್ ಶಿಲೆ ಪ್ರಕಾರ ಹೆಡ್ ಎಕೌಂಟಾಂಟ ಮತ್ತು ಟ್ರೆಜರರಾದ ಮ| ರಾ| ಜಿ. ದತ್ತಾತ್ರೇಯ ರಾಯರು ಸ್ಪೇಶನರಿ ಸಬ್ ಮೆಜಿಸ್ಟ್ರೇಟರಾಗಿಯೂ 1ನೇ ಕರೆಸ್‌ಪೊಂಡೆಂಟ ಕ್ಲಾರ್ಕ ಮತ್ತು ಆಕ್ಟಿಂಗ ಸಬ್ ಮೆಜಿಸ್ಟ್ರೇಟರಾದ ವಿಕ್ಟರಸಲ್ಡಾಂಞರು ಹೆಡ್ ಎಕೌಂಟಾಂಟ ಮತ್ತು ಟ್ರೆಜರರಾಗಿಯೂ ಕುಂದಾಪುರ ಡಿವಿಜನಲ್ ಆಫೀಸಿನ ಕ್ಲಾರ್ಕ ಮತ್ತು ಕಲೆಕ್ಟರ ಆಫೀಸಿನ ಆಕ್ಟಿಂಗ್ 1ನೇ ಕರೆಸ್‌ಪೊಂಡೆಂಟ ಕ್ಲಾರ್ಕರಾದ ಮ| ರಾ| ಜಿ. ಎಮ್. ರೇಗೊರವರು ಕಲೆಕ್ಟರ ಆಫೀಸಿನ 1ನೇ ಕ್ಲಾರ್ಕರಾಗಿಯೂ 2ನೇ ಗ್ರೇಡ್ ಕರೆಸ್‌ಪೊಂಡೆಂಟ ರೆವೆನ್ಯು ಇನ್‌ಸ್ಪೆಕ್ಟರ್ ಮತ್ತು ಪೆಸ್ಟ್ ಕಂಟ್ರೋಲ್ ಡ್ಯೂಟಿಯ ಹಂಗಾಮಿ ರೆವೆನ್ಯು ಇನ್ಸ್‌ಪೆಕ್ಟರ್ ಮ| ರಾ| ಜಿ. ಶೇಷಗಿರಿ ಪ್ರಭುಗಳವರು ಕುಂದಾಪುರ ರೆವೆನ್ಯು ಡಿವಿಜನಲ್ ಆಫೀಸಿನ ಕ್ಲಾರ್ಕರಾಗಿಯೂ ನೇಮಕಪಟ್ಟಿದ್ದಾರೆ.

ರಹಸ್ಯಬೋಧಿನೀವೃತವೆಂಬ ವಿದ್ಯಾಗುರು ಈ ಗ್ರಂಥದ ಪುರವಣಿಯನ್ನು ಈ ಸಂಚಿಕೆಯೊಡನಿಟ್ಟಿದೆ.

ಬರುವ ಮಾರ್ಚಿ ತಿಂಗಳ ಮೂರನೇ ವಾರದಲ್ಲಿ ಇಲ್ಲಿಯ ಗೌಡಸಾರಸ್ವತ ಕ್ಲಬ್ಬಿನಲ್ಲಿ ಟೆನ್ನಿಸ್‌ಟೋರ್ನಮೆಂಟ (ಡಬ್ಬಲ್ಸ್ ಹಾಗು ಸಿಂಗಲ್ಸ್) ಪಂದ್ಯಾಟವು ಜರಗುವುದು. ಈ ಪಂದ್ಯಾಟಗಳಿಗೆ ಗೌಡಸಾರಸ್ವತ ಬ್ರಾಹ್ಮಣ ಕಮ್ಮಿಟಿಯ ಮೆಂಬರರು ಮಾತ್ರ ಸ್ಪರ್ಧಿಸಬಹುದು. ಸ್ಪರ್ಧಿಸತಕ್ಕವರು ಮಾರ್ಚಿ ತಾ. ೧೦ರೊಳಗೆ ಪ್ರವೇಶ ಫಿ—ಸಿಂಗಲ್ಸಿಗೆ ರೂ. ೩ ಡಬ್ಬಲ್ಸಿಗೆ ರೂ ೪ ಈ ರೀತಿ ಟೋರ್ನಮೆಂಟಿನ ಸೆಕ್ರೆಟರಿಗಳ ವಶಕೊಪ್ಪಿಸಿ ತಮ್ಮ ಹೆಸರುಗಳನ್ನು ದಾಖಲು ಮಾಡಿ ಕೊಳ್ಳಬೇಕಾಗಿದೆ.

ಸಮುದ್ರತಲವನ್ನು ಸೇರಿರುವ ಒಂದು ಭೂಭಾಗ.

ನ್ಯೂಯಾರ್ಕ್ ನಗರದಲ್ಲಿರುವ ಜೆಮ್ಸ್ ಚರ್ಚವಾರ್ಡ ಎಂಬವರಿಗೆ ಇಂಡಿಯಾದಲ್ಲಿ ದೊರೆತ ೧೨೫ ಓಲೆಗರಿಗಳಿಂದ ಅತ್ಯಾಶ್ಚರ್ಯಕರವಾದ ಸಂಗತಿಗಳು ಹೊರಪಟ್ಟಿವೆ. ಇವು ಪಾಲಿ ಭಾಷೆಯಲ್ಲಿದ್ದು ಇವರಿಂದಲೂ ಕೆಲವು ಮಂದಿ ಬೌದ್ಧ ಸನ್ಯಾಸಿಗಳಿಂದಲೂ ಭಾಷಾಂತರಿಸಲ್ಪಟ್ಟಿರುವವು. ಈ ಓಲೆಗರಿಗಳಿಂದ ತಿಳಿಯಬರುವ ಸಂಗತಿಗಳೇನಂದರೆ:—

ಉತ್ತರ ಅಮೇರಿಕಾ ಖಂಡಕ್ಕಿಂತಲೂ ಅತಿ ವಿಸ್ತಾರವಾಗಿದ್ದ 'ಮೂ' ಎಂಬ ಭೂಪ್ರದೇಶವು ಮನುಷ್ಯನು ಮೊದಲು ಜನ್ಮವೆತ್ತಿದ ಸ್ಥಳವು. ಕ್ರೈಸ್ತರು ಹೇಳುವ ಏದನ್ ತೋಟವು ಈಗಿನ ಏಶಿಯಾ ಖಂಡದಲ್ಲಿಲ್ಲದೆ, ಈಗ ಕಾಣದೆ ಹೋಗಿರುವ ಮೂ ಎಂಬ ಖಂಡದಲ್ಲಿತ್ತು. ಮೂ ಪ್ರಾಂತದಲ್ಲಿ ಸೂರ್ಯವಂಶವೆಂಬುವದು ಅತಿ ಪ್ರಖ್ಯಾತವಾದ ರಾಜವಂಶವಾಗಿತ್ತು.

ಮೂ ಖಂಡದಲ್ಲಿ ದೊಡ್ಡದೊಡ್ಡ ನಗರಗಳು ಅನೇಕವಾಗಿದ್ದವು. ನಾಗರಿಕತೆಯು ಬಹು ಉನ್ನತಿಯಲ್ಲಿದ್ದಿತ್ತು. ಈಗ ನಾವು ನೋಡಿ ಆಶ್ಚರ್ಯಪಡುವ ವಿಮಾನಗಳಿಗಿಂತಲೂ ಬಲವಾದ ವಿಮಾನಗಳು ಅಗಿನ ಜನರಿಗೆ ತಿಳಿದಿದ್ದವು. ಇಂಥವುಗಳ ಒಂದರಲ್ಲಿಯೇ ಶ್ರೀ ರಾಮಚಂದ್ರನು ಲಂಕಾಪಟ್ಟಣದಿಂದ ಅಯೋಧ್ಯೆಗೆ ಪರಿವಾರ ಸಹಿತ ಹಾರಿಹೋದನು. ಈ ಖಂಡವು ಮುಳುಗಿ ಹೋದಾಗ್ಗೆ, ಹಾವೈ ಎಂಬ ದ್ವೀಪವೂ ಇನ್ನೂ ಕೆಲವು ದ್ವೀಪಗಳೂ ಮಾತ್ರ ಉಳಿದುಕೊಂಡವು. ಭೂಗರ್ಭದಲ್ಲಿರುವ ಹವೆಯು ರಂಧ್ರಗಳ ಮುಖಾಂತರ ಹೊರಬಿದ್ದುದರಿಂದ ಉನ್ನತವಾಗಿದ್ದ ಭೂಭಾಗಗಳು ಕುಸಿದು ಅಲ್ಲಿ ಜಲವು ತುಂಬಿಕೊಂಡು ಪೆಸಿಫಿಕ್ ಸಾಗರವಾಯಿತು.

ಭೂಕಂಪವು ಆಗಿಂದಾಗ್ಗೆ ಬಂದ ಹಾಗೆಲ್ಲಾ ಜನರು ದಿಣ್ಣೆ ಸ್ಥಳಗಳನ್ನು ಸೇರಿ, ಅಲ್ಲಿ ಆಹಾರ ಸಾಮಗ್ರಿಗಳು ದೊರೆಯದೆ ಹೋದುದರಿಂದ ಒಬ್ಬರನ್ನೊಬ್ಬರು ತಿನ್ನಲು ಪ್ರಾರಂಭಿಸಿದರು. ಆದುದರಿಂದಲೆ ಪೆಸಿಫಿಕ್ ಸಾಗರದ ಕೆಲವು ದ್ವೀಪಗಳಲ್ಲಿ ಕಾಣಬರುವ ನರಮಾಂಸ ಭಕ್ಷಕರು ಈ ರೀತಿ ಉತ್ಪನ್ನರಾದವರು ಎಂದು ಹೇಳಲ್ಪಟ್ಟಿದೆ.

ಮೂ ಖಂಡವು ೧೮೦೦೦ ವರ್ಷಗಳ ಹಿಂದೆ ತುಂಬಾ ಅಭಿವೃದ್ಧಿ ಸ್ಥಿತಿಯಲ್ಲಿದ್ದಿತೆಂದೂ ಸಮುದ್ರತಲವನ್ನು ಸೇರಿ ೧೨೦೦೦ ವರ್ಷಗಳಾಯಿತೆಂದೂ ಮೇಲೆ ಹೇಳಿದ ಓಲೆಗರಿಗಳಿಂದ ಕಂಡುಬರುತ್ತದೆ. (ಬ. ಪತ್ರಿಕೆ)

— ವೈಕಮ್ ಸತ್ಯಾಗ್ರಹ. —

ವಾಯಿಕಮ್ ಸತ್ಯಾಗ್ರಹದ ಸತ್ಯಾಗ್ರಹಿಯು ಕಳುಹಿಸಿದ ಕೆಳಗಿನ ಲೇಖನವನ್ನು ಮಹಾತ್ಮಾ ಗಾಂಧಿಯವರು ತಮ್ಮ 'ಯಂಗ ಇಂಡಿಯಾ' ಪತ್ರಿಕೆಯಲ್ಲಿ ಪ್ರಕಟಿಸಿರುತ್ತಾರೆ. ಶಾಂತರೀತಿಯಿಂದ ಸತ್ಯಾಗ್ರಹವನ್ನು ಮುಂದೊತ್ತಲು ಈಗ ಉತ್ಸಾಹವು ಬಹಳ ಕಡಿಮೆಯಾಗಿದೆ. ಕೆಲವರು ಒಂದೇ ಸವನೆ ಭರದಿಂದ ಸೀದಾ ಕಾರ್ಯವನ್ನು ನಡಿಸಬೇಕು; ಬಲಾತ್ಕಾರದಿಂದಲಾದರೂ ದೇವಸ್ಥಾನಗಳನ್ನು ಪ್ರವೇಶಿಸಬೇಕೆಂದು ಸೂಚಿಸುವರು. ಸತ್ಯಾಗ್ರಹ ಶಿಬಿರದಲ್ಲೂ ಕೂಡ ಸಿಡುಬು ರೋಗವು ತಲೆದೋರಿದೆ. ಸೆಕೆಯೂ ಉಷ್ಣವೂ ಪ್ರಬಲಿಸುತ್ತಿರುವುದರಿಂದಲೂ ಬೇಸಿಗೆ ಕಾಲವು ಬರುವುದರಿಂದಲೂ ಈ ರೋಗವು ಇನ್ನೂ ಉಲ್ಬಣಸ್ಥಿತಿಯಲ್ಲೆ ಇರುವುದಾಗಿ ತೋರುತ್ತದೆ. ನಾವು ತಮ್ಮ ಅಧೀನಯುಕ್ತರೆಲ್ಲ ಸತ್ಯಾಗ್ರಹ ತತ್ವದಲ್ಲೂ ವಿಶ್ವಾಸವಿಟ್ಟು ಈ ಸತ್ಯಾಗ್ರಹ ಸಮರವನ್ನು ಇನ್ನೂ ನಡಿಸಿಕೊಂಡಿದ್ದೇವೆ. ಆದರೆ ಕೇರಳ ಪ್ರಾಂತಿಕ ಕಾಂಗ್ರೆಸ್ ಕಮಿಟಿಯು ತನ್ನ ಉತ್ಸಾಹವನ್ನು ಕುಂದಿಸುತ್ತಲೆ ಇದೆ ಎಂಬ ಬಗ್ಗೆ ಮಾತ್ರ ನನಗೆ ಭಯವಾಗುತ್ತಿದೆ. ಸ್ವಪ್ರಯತ್ನದಿಂದ ಅವರು ಕಳೆದ ಕೆಲವು ತಿಂಗಳಲ್ಲಿ ಕೂಡಿಸಿದ ಹಣವು ಕೊಂಚವಾಗಿಯೇ ಇದೆ. ಪ್ರತಿಯೊಂದು ವಿಷಯಕ್ಕೂ ನಾವು ತಮ್ಮ ಸಲಹೆಯನ್ನೂ ಸಹಾಯವನ್ನೂ ಹಾರೈಸಿ ಕೊಂಡಿದ್ದೇವೆ. ಹಣದ ಕೊರತೆಯು ನಮಗೆ ಅತಿಯಾಗಿದೆ. ನಮ್ಮ ಉದ್ದೇಶಕ್ಕೆ ಸಹಾಯ ದೊರಕಲು ತಾವು ಇಲ್ಲಿಗೆ ಚಿತ್ತಯಿಸಬೇಕಾಗಿ ಪ್ರತಿಯೊಬ್ಬ ಸತ್ಯಾಗ್ರಹಿಯು ನಂಬಿದ್ದಾನೆ ಮತ್ತು ತಮ್ಮ ಆಗಮನವನ್ನು ಹಾರೈಸಿಕೊಂಡಿರುವನು.”

— ಮಹಾತ್ಮರ ಉತ್ತರ. —

“ಸಿಡುಬಿನಿಂದಾಗಿ ಬೇಗನೆ ನಾನು ವಾಯಿಕಮನ್ನು ಸಂದರ್ಶಿಸುವ ಆತುರದಿಂದಿದ್ದೇನೆ. ಇನ್ನು ಹೆಚ್ಚು ವಿಳಂಬವಾಗಲಾರದೆಂದು ನಾನು ನಂಬುತ್ತೇನೆ. ಏತನ್ಮಧ್ಯೆ ಸತ್ಯಾಗ್ರಹಿಗಳು ಮಾತ್ರ ಕುಗ್ಗಬಾರದು. ಅವರು ನಿರಾಶರಾಗಲೇ ಕೂಡದು. ಸತ್ಯಾಗ್ರಹವನ್ನು ಪರೀಕ್ಷಾರ್ಥವಾಗಿ ಉದ್ದಿಷ್ಟ ಸಮಯದ ವರೆಗೆ ಅಥವಾ ಒಂದು ನಿರ್ದಿಷ್ಟ ಸಮಯದ ವರೆಗೆ ನಡಿಸಿ ಯಾತನೆಗಳನ್ನು ಅನುಭವಿಸಿ ಅನಂತರ ಅದನ್ನು ಬಿಟ್ಟುಬಿಡುವುದಲ್ಲವೆಂಬ ತತ್ವವನ್ನು ವಾಯಿಕಮ್ ಸತ್ಯಾಗ್ರಹಿಗಳೆಲ್ಲರೂ ಮನಸ್ಸಿನಲ್ಲಿಟ್ಟುಕೊಳ್ಳಬೇಕು.”

ಮೈಸೂರ ಸಂಸ್ಥಾನದಲ್ಲಿ ವಿದ್ಯಾಭ್ಯಾಸ ಪ್ರಚಾರ.

ಕಳೆದ ಜೂನ್ ತಿಂಗಳಿಗೆ ಅಂತ್ಯವಾಗುವ ಒಂದು ವರುಷದ ವರದಿಯು ಪ್ರಕಟವಾಗಿದೆ. ಈ ವರದಿಯನ್ನು ಪರಿಶೀಲಿಸುವಾಗ ವರದಿಯ ವರುಷ ಸಂಸ್ಥಾನದಲ್ಲಿ ವಿದ್ಯಾಸಂಸ್ಥೆಗಳ ಸಂಖ್ಯೆಯು ೮,೯೭೩ರಿಂದ ೯,೦೮೮ಕ್ಕೆ ಏರಿತು. ಅವುಗಳಲ್ಲಿನ ವಿದ್ಯಾರ್ಥಿಗಳ ಸಂಖ್ಯೆಯು ೨೮೭,೯೭೮ರಿಂದ ೩೦೩,೯೧೭ಕ್ಕೆ ಏರಿತು ಎಂದು ತಿಳಿಯುತ್ತದೆ. ಪ್ರತಿ ೩.೨೯ ಜನರ ಮೈಲಿಗೆ ಒಂದು ಶಾಲೆಯಂತಿತ್ತು. ಎಂದರೆ ಪ್ರತಿ ೩,೬೫೫ ಜನರಿಗೆ ಒಂದೊಂದು ಶಾಲೆ. ಶಾಲೆಗೆ ಹೋಗುವ ಪ್ರಾಯಕ್ಕೆ ಬಂದ ಹುಡುಗರು ಹುಡುಗಿಯರಲ್ಲಿ ಶೇ.೩೩.೩ ಹುಡುಗರೂ ೧೩.೮ ಹುಡುಗಿಯರೂ ಶಾಲೆಗೆ ಹೋಗುತ್ತಿದ್ದಾರೆ. ಎಂದರೆ ಸಂಸ್ಥಾನದ ಪ್ರಜಾ ಸಂಖ್ಯೆಯ ಗಣನೆಯಿಂದ ಹೇಳುವುದಾದರೆ ಪ್ರತಿ ೧೯ಕ್ಕೆ ೧ರಂತೆ ವಿದ್ಯಾಭ್ಯಾಸ ಹೊಂದುತ್ತಿದ್ದಾರೆ. ವಿಶ್ವವಿದ್ಯಾಲಯಕ್ಕಾಗಿ ವ್ಯಯಮಾಡುವ ಖರ್ಚನ್ನು ಬಿಟ್ಟು ಮೈಸೂರು ಸಂಸ್ಥಾನವು ವಿದ್ಯಾಪ್ರಚಾರಕ್ಕೆ ೪೪,೯೭೪ ಲಕ್ಷ ರೂಪಾಯಿ ವ್ಯಯಮಾಡುತ್ತದೆ. ೧ ಪ್ರತಿಯೊಬ್ಬ ವಿದ್ಯಾರ್ಥಿಗೆ ೧೩ರಂತೆ ಖರ್ಚ ತಗಲುವುದು.

ಮಧುರೆಯಲ್ಲಿ ಸ್ವಾಮಿದಯಾನಂದ ಸರಸ್ವತಿಯವರ
— ವರ್ಧಂತಿ. —

ಸ್ವಾಮಿ ದಯಾನಂದ ಸರಸ್ವತಿಯವರ ಜನ್ಮ ದಿನಾಚರಣೆಯ ಸಲುವಾಗಿ ಇಲ್ಲಿ ಸುಮಾರು ಒಂದು ಲಕ್ಷಕ್ಕಿಂತ ಹೆಚ್ಚು ಜನರು ನೆರೆದರು. ಮದುವೆಯ ಬೀಳ್ಕು, ವಿಧವಾ ವಿವಾಹ, ಅಂತ್ಯಜರ ಉದ್ಧಾರ ಮೊದಲಾದ ವಿಷಯಗಳ ಕುರಿತು ಪ್ರವಚನಗಳು ನೆರೆಯಲಿಕ್ಕಿದ್ದವು. ಬೃಂದಾವನದಲ್ಲಿ ಆರ್ಯಸಮಾಜದವರು ಒಳಪ್ರವೇಶಿಸಿದ್ದರಿಂದ ಕೆಲವು ದೇವಸ್ಥಾನಗಳಲ್ಲಿ ಕಲಹಕ್ಕಾರಂಭವಾಯಿತು. ಅನಂತರ ಇನ್ನು ಇತರ ಕಡೆಗಳಲ್ಲೂ ಕಲಹವು ನಡಿಯಿತು. ಕಳೆದ ತಾ. ೨೧ರಲ್ಲಿ ಜನ್ಮಾಷ್ಟಮಿಯಲ್ಲಿ ಆರ್ಯಸಮಾಜದ ಜನರೊಳಗೂ ಪಾಂಡರೊಳಗೂ ಗಲಾಟೆಯು ನಡೆಯಿತು. ಸುಮಾರು ಹತ್ತು ಮಂದಿಗಳಿಗೆ ಜಖಂ ಆಗಿದೆ.

— ಸ್ವೀಕಾರ. —

ವಾಲೆಂಟಿಯರ್:—ಸ್ವಯಂಸೇವಕರ ದಳಾಧಿಪತಿಯಾದ ಡಾ. ಹರ್ಡೀಕರರ ಸಂಪಾದಕರಲ್ಲಿ ಈ ಇಂಗ್ಲಿಷ್ ಮಾಸಪತ್ರಿಕೆಯು ಹೊರಟಿರುತ್ತದೆ. ಇದರ ಎರಡೂ ಸಂಚಿಕೆಗಳು ನಮ್ಮ ಕೈ ಸೇರಿವೆ. ಕಳೆದ ಕಾಂಗ್ರೆಸ್ ಅಧಿವೇಶನದ ಕಾಲದಲ್ಲಿ ಸ್ವಯಂಸೇವಕರು ಯಾವ ರೀತಿಯಲ್ಲಿ ಕೆಲಸವನ್ನು ನಿರ್ವಹಿಸಿರುವರೆಂಬುದು ಕಾಂಗ್ರೆಸ್ಸಿನಲ್ಲಿ ಹಾಜರಿದ್ದವರಿಗೂ ಪತ್ರಿಕೆಯ ವಾಚಕರಿಗೂ ತಿಳಿದ ವಿಷಯವೇ ಆಗಿದೆ. ಸ್ವಯಂಸೇವಕರು ಸ್ವರಾಜ್ಯಗಳಿಸುವುದರಲ್ಲಿ ಒಂದು ಮುಖ್ಯ ಮೂಲವಾಗಿದ್ದಾರೆ. ಮತ್ತು ಅವರ ಕರ್ತವ್ಯವೇನೆಂದು ಮಹಾತ್ಮರು ತಮ್ಮ ಯಂಗ ಇಂಡಿಯಾದಲ್ಲಿ ಪ್ರಕಟಿಸಿದ್ದಾರೆ. ಈ ಲೇಖದ ಸಾರಾಂಶವನ್ನು ನಾವು ಕಳೆದ ಸಂಚಿಕೆಯಲ್ಲಿ ಪ್ರಕಟಿಸಿದ್ದೇವೆ. ರಾಷ್ಟ್ರ ಸಂಘಟನೆಯ ಕಾರ್ಯವನ್ನು ಸ್ವಯಂ ಸೇವಕರ ಮೂಲಕವೂ ನಡಿಸಲು ಅವರಿಗೆ ತಕ್ಕ ಮಾರ್ಗವನ್ನು ತೋರಿಸಲು ಒಂದು ಪತ್ರಿಕೆಯು ಅವಶ್ಯಕವೆಂದರೆ ಅತಿಶಯೋಕ್ತಿಯಾಗಲಾರದು. ಪತ್ರಿಕೆಯ ಉದ್ದೇಶವು ನೆರವೇರುವಂತೆ ಈ ಪತ್ರಿಕೆಗೆ ತುಂಬಾ ಸಹಾಯವೂ ಸಹಾನುಭೂತಿಯೂ ದೊರೆಯಲೆಂದು ಕೋರುತ್ತೇವೆ.

ಮಂಗಳೂರ ಗವರ್ನಮೆಂಟ ಸೆಕೆಂಡರಿ ಟ್ರೈನಿಂಗ
— ಶಾಲೆಯ ವರ್ಧಂತಿ. —

ಈ ಮೊದಲು ಪ್ರಕಟಿಸಿದಂತೆ ಇಲ್ಲಿಯ ಗವರ್ನಮೆಂಟ ಸೆಕೆಂಡರಿ ಟ್ರೈನಿಂಗ ಶಾಲೆಯ ವರ್ಧಂತಿಯು ಕಳೆದ ಶನಿವಾರ ಜರಗಿತು. ಈ ದಿನ ಬೆಳಗ್ಗೆ ಶಾಲೆಯ ಈಗಿನ ವಿದ್ಯಾರ್ಥಿಗಳಿಗೂ ಇತರ ಗೃಹಸ್ಥರಿಗೂ ಫಲಾಹಾರ ಸತ್ಕಾರವು ನಡೆಯಿತು. ಅನಂತರ ಈ ವರುಷವೇ ಪ್ರಥಮ ತರಬೇತನ್ನು ಮುಗಿಸಿಕೊಂಡು ಸ್ಕೌಟ ಸಂಸ್ಥೆಗೆ ಸೇರಲು ಅಪೇಕ್ಷಿಸಿದ ವಿದ್ಯಾರ್ಥಿಗಳನ್ನು ಜಿಲ್ಲಾ ಸ್ಕೌಟ್ ಕಮಿಶನರಾದ ಮ. ರಾ. ರಾ. ಎ. ಬಿ. ಶೆಟ್ಟರು ಸ್ಕೌಟ್ ಸಂಸ್ಥೆಗೆ ಸೇರಿಸಿಕೊಂಡು ಕೆಲವು ಬುದ್ಧಿವಾದಗಳನ್ನು ಹೇಳಿದರು. ಇಲ್ಲಿಂದ ಒಟ್ಟು ೧೦ ಮಂದಿಗಳು ಸ್ಕೌಟ ದಳಕ್ಕೆ ಸೇರಿರುವರು.

ಸಾಯಂಕಾಲ ಸಭೆಯು ಕೆನರಾ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ ಮ. ರಾ. ಅಡಿಗೆ ಪದ್ಮನಾಭಯ್ಯ ಬಿ. ಎ., ಎಲ್. ಟಿ. ಇವರ ಅಧ್ಯಕ್ಷತೆಯಲ್ಲಿ ಸೇರಿತು. ಪ್ರಥಮದಲ್ಲಿ ವಿದ್ಯಾರ್ಥಿಗಳ ಪ್ರಾರ್ಥನೆ ನಡೆಯಿತು. ಅನಂತರ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀಯುತ ಟಿ. ಮಂಗೇಶರಾಯರು ಶಾಲಾ ವರದಿಯನ್ನು ಓದಿದರು. ಶಾಲೆಯು ಸರ್ವವಿಧದಲ್ಲೂ ಅಭಿವೃದ್ಧಿಯನ್ನು ಹೊಂದುತ್ತಿದೆಂದು ವರದಿಯಿಂದ ತಿಳಿಯುತ್ತದೆ. ಬಳಿಕ ಶಾಲೆಯ ಡಿಬೇಟಿಂಗ್ ಸೊಸೈಟಿಯ ಸೆಕ್ರೆಟರಿಯವರು ಡಿಬೇಟಿಂಗ್ ಸೊಸೈಟಿಯ ಹಾಗು ಸ್ಕೌಟ ದಳದ ವರದಿಯನ್ನೋದಿದರು. ಇದಾದ ನಂತರ ಶಾಲೆಯ ಮಾಜಿ ವಿದ್ಯಾರ್ಥಿಗಳಲ್ಲೊಬ್ಬರಾದ ಮಿ| ಸಿ. ಬಿ. ಎ. ಯವರು ಈ ಸಂಸ್ಥೆಯ ಸ್ವಾಸ್ಥ್ಯಚಿಂತನಪರವಾದ ಭಾಷಣವನ್ನು ಮಾಡಿದರು. ಶಾಲಾ ವಿದ್ಯಾರ್ಥಿಗಳಿಗೆ ಇನಾಮುಗಳನ್ನು ಹಂಚಿದ ನಂತರ ಅಧ್ಯಕ್ಷರ ಭಾಷಣವಾಯಿತು. ಈ ದಿನದ ಸಭಾಧ್ಯಕ್ಷರು ಶಾಲೆಯ ಆಡಳಿತ, ಕಲಿಸುವ ವಿಧಾನ ಮೊದಲಾದ ಶಿಕ್ಷಣ ವಿಷಯದ ಯಾವತ್ತೂ ಮಾಹಿತಿಯುಳ್ಳವರಾದ್ದರಿಂದ ಅನುಭವಿಕವಾದ ದೀರ್ಘಭಾಷಣವನ್ನು ಸಂಸವಾಗಿ ಮಾಡಿ ತರಬೇತನ್ನು ಹೊಂದಿಕೊಂಡುಹೋಗುವ ವಿದ್ಯಾರ್ಥಿಗಳಿಗೆ ಉಪಾಧ್ಯಾಯ ವೃತ್ತಿಯ ಜವಾಬದಾರಿಯನ್ನು ವಿವರಿಸಿ, ಮಹತ್ವದ ಈ ಉದ್ಯೋಗದಲ್ಲಿ ಉಪಾಧ್ಯಾಯರು ಬರೇ ಸಂಬಳದ ಕಡೆಗೆ ಲಕ್ಷ್ಯವಿಡತಕ್ಕದ್ದಲ್ಲ. ಅವರ ಸತ್ಕಾರ್ಯಕ್ಕೆ ತಕ್ಕ ಪ್ರತಿಫಲವು ಇದ್ದೇ ಇದೆ. ಎಂದು ಮನಂತಾಗಿ ಹಿತೋಪದೇಶಮಾಡಿದರು. ಅಧ್ಯಕ್ಷರ ಭಾಷಣವು ಮುಗಿದ ಬಳಿಕ ಶಾಲಾ ವಿದ್ಯಾರ್ಥಿಗಳೂ ತರಬೇತುಹೊಂದುವ ಉಪಾಧ್ಯಾಯರೂ ಕೂಡಿ 'ಪ್ರತಾಪನ ವನವಾಸವೆಂ'ಬ ನಾಟಕವನ್ನು ಹೃದಯಂಗಮವಾಗಿ ಅಭಿನಯಿಸಿದರು, ಸಭಿಕರೆಲ್ಲರೂ ಆನಂದಪಟ್ಟಿದ್ದರು. ಸಭೆಯಲ್ಲಿ ಹಾಜರಿದ್ದ ಶ್ರೀಯುತ ಪಿ. ಪಿ. ಎಸ್. ಶಾಸ್ತ್ರಿ, ಮತ್ತು ಶ್ರೀಯುತ ಕುಡ್ವ ವೆಂಕಟರಾವ್ ಇವರು ಮುಖ್ಯ ನಟರಿಗೆ ಇನಾಮುಗಳನ್ನು ಕೊಟ್ಟು ಪ್ರೋತ್ಸಾಹಿಸಿದರು.

ಈ ನಾಟಕದಲ್ಲಿ ಅಭಿನಯಿಸಿದ ಪ್ರತಾಪನ ಮಂತ್ರಿ ಹಾಗು ಅಕ್ಬರನ ಮಂತ್ರಿ ಈ ಇಬ್ಬರು ನಟರು ನಾಟಕ ವೃತ್ತಿಯಲ್ಲೆ ಇದ್ದು ಅಭಿನಯಿಸುವವರಿಗಿಂತ ಚೆನ್ನಾಗಿ ನಟಿಸಿ ಸಭಿಕರನ್ನು ಬೆರಗುಗೊಳಿಸಿದರು. ಅಕ್ಬರನ ಮಕ್ಕಳ ಪಾರ್ಟಿಮಾಡಿದ ಚಿಕ್ಕ ಮಕ್ಕಳ ಕರುಣಾರಸದಿಂದ ತುಂಬಿದ ಗಾನವು ನೆರೆದವರ ಹೃದಯವನ್ನು ಕರಗಿಸಿತು. ಈ ನಾಟಕವನ್ನು ಕಲಿಸುವುದರಲ್ಲಿ ಮುಖ್ಯ ಭಾಗವನ್ನೆತ್ತ ಶ್ರೀಯುತ ಉಳ್ಳಾಲ ಕೃಷ್ಣರಾಯರಿಗೆ ಶಾಲೆಯು ತುಂಬಾ ಆಭಾರಿಯಾಗಿದೆ. ಸಭೆಯು ಶಾಲೆಯ ಹಿಂಬದಿಯಲ್ಲಿರುವ ತೋಟದಲ್ಲಿ ಕೂಡಿದುದರಿಂದ ನೆರೆದವರಿಗೆ ಸ್ಥಳ ಅಭಾವದ ಅಯಾಸವೇನೂ ಎನಿಸಲಿಲ್ಲ. ಈ ಉದ್ಯಾನದಲ್ಲಿ ಶಾಲೆಯ ವಿದ್ಯಾರ್ಥಿಗಳು ಉಪಾಧ್ಯಾಯರ ಸುಪರ್ದಿಯಲ್ಲಿ ಬೆಳೆಸಿದ ನಾನಾ ತರದ ದೇಶೀಯ ಹಾಗು ವಿದೇಶೀಯ ಕಾಯಿ ಗಿಡ ಮೊದಲಾದ್ದು ಪ್ರೇಕ್ಷಣೀಯವಿದೆ. ಶಾಲೆಯ ಅಧಿಕಾರಿಗಳು ಇಲ್ಲಿನ ವಿದ್ಯಾರ್ಥಿಗಳಿಗೆ ಉದ್ಯಾನಪಾಲನೆಯ ಕಳೆ ಶಿಕ್ಷಣ ಅನುಭವದಿಂದ ಕೊಡುವುದು ಮನನೀಯವಾಗಿದೆ. ಇಲ್ಲಿ ಅಸ್ಪೃಶ್ಯ ವಿದ್ಯಾರ್ಥಿಗಳಿದ್ದರೂ ಇತರ ವಿದ್ಯಾರ್ಥಿಗಳು ಅವರನ್ನು ತಿರಸ್ಕಾರ ದೃಷ್ಟಿಯಿಂದ ನೋಡದೆ ಅವರೊಡನೆ ಆಟಪಾಠಗಳಲ್ಲಿ ಕೂಡಿ ನಡಿಯುತ್ತಿದ್ದಾರೆ.

ಮುಂಬಯಿ ಮುನ್ಸಿಪಾಲಿಟಿ:—ಮುಂಬಯಿ ಪಟ್ಟಣದಲ್ಲಿ ಈಗ ಅನೇಕ ಜನರು ಭಿಕ್ಷಾವೃತ್ತಿಯನ್ನ ಅವಲಂಬಿಸಿ ಹೊಟ್ಟೆ ಹೊರಕೊಳ್ಳುವುದರಿಂದ ಸಶಕ್ತರಾದ ಭಿಕ್ಷುಕರಿಗೆ ಸಾಕಷ್ಟು ಕೆಲಸವನ್ನು ಕೊಟ್ಟು ಭಿಕ್ಷಾವೃತ್ತಿಯನ್ನು ತಡಿಸುವ ಉಪಾಯವನ್ನು ಕೈಕೊಳ್ಳಲು ಅಲ್ಲಿಯ ಸರಕಾರವು ತಜವೀಜನ್ನು ನಡಿಸುತ್ತಿದೆ.

ವರ್ಷಾವಧಿ ಮಾರಾಟದ ನೋಟೀಸ್.

೧೯೨೫ನೇ ಇಸವಿ ಎಪ್ರಿಲ್ ತಾ. ೧ರಲ್ಲು ಶುರು ಆಗಿ ಬರುವ ೧೯೨೬ ಇಸವಿ ಮಾರ್ಚಿ ತಾ. ೩೧ರಲ್ಲು ಕೈದಾಗುವ ಒಂದು ವರ್ಷದ ಪರಿಯಂತರ ಮಂಗಳೂರು ಪಟ್ಟಣದ ಕಂಕನಾಡಿ, ಉರ್ವ ಮತ್ತು ಬಿಜೈ ವಂಟಿಗಾಲುಗಳಲ್ಲಿ ಮುನಿಸಿಪಾಲ್ ದರಗಳನ್ನು ವಸೂಲ್ ಮಾಡುವ ಸ್ವತಂತ್ರವನ್ನು ಬಹಿರಂಗವಾದ ಏಲಮಿನ ಮೂಲಕ ೧೯೨೫ನೇ ಇಸವಿ ಮಾರ್ಚಿ ತಾ. ೧೬ನೇ ಸೋಮವಾರ ಮಧ್ಯಾಹ್ನ ೩ ಗಂಟೆಗೂ, ೧೯೨೫ನೇ ಇಸವಿ ಎಪ್ರಿಲ್ ತಾ. ೧ರಲ್ಲು ಶುರು ಆಗಿ ಬರುವ ೧೯೨೬ನೇ ಇಸವಿ ಮಾರ್ಚಿ ತಾ. ೩೧ರಲ್ಲು ಕೈದಾಗುವ ಒಂದು ವರ್ಷದ ಪರಿಯಂತರ ಮುನಿಸಿಪಾಲ್ ವೆಬ್‌ಸ್ಟರ್ ಮಾರ್ಕೆಟಿನ ಅಂಗಡಿಗಳ (ಉತ್ತರ ಪಾರ್ಶ್ವದಲ್ಲಿರುವ ಕಂಚಗಾರರ ಅಂಗಡಿಗಳ ವಿನಹಾ) ಬಾಡಿಗೆಯನ್ನು ವ ಟಿಕೇಟು ಫೀಸನ್ನು ಕೂಡ ವಸೂಲು ಮಾಡುವ ಸ್ವತಂತ್ರವು ಅದೇ ೧೯೨೫ನೇ ಇಸವಿ ಬರುವ ಮಾರ್ಚಿ ತಾ. ೧೬ನೇ ಸೋಮವಾರ ಮಧ್ಯಾಹ್ನ ೩-೩೦ ಗಂಟೆ ಸಮಯಕ್ಕೂ, ೧೯೨೫ನೇ ಇಸವಿ ಎಪ್ರಿಲ್ ತಾರೀಕು ೧ರಲ್ಲು ಶುರು ಆಗಿ ಬರುವ ೧೯೨೬ನೇ ಇಸವಿ ಮಾರ್ಚಿ ತಾರೀಕು ೩೧ರಲ್ಲು ಕೈದಾಗುವ ಒಂದು ವರ್ಷದ ಪರಿಯಂತರ ನಂದಿಗುಡ್ಡೆಯಲ್ಲಿರುವ ಮುನಿಸಿಪಾಲ್ ಜಾನುವಾರು ಸ್ಲಾಟರ್ ಹೌಸ್ ಮತ್ತು ವೆಬ್‌ಸ್ಟರ್ ಮಾರ್ಕೆಟಿನ ಕೌಂಪೌಂಡಿನಲ್ಲಿರುವ ಕುರಿ ಸ್ಲಾಟರ್ ಹೌಸ್ ಯಾನೆ ವಧಾಗೃಹಗಳಲ್ಲಿ ಜಾನುವಾರು ಕುರಿ ವಧಾ ಮಾಡುವ ಬಗ್ಗೆ ಫೀಸು ವಸೂಲು ಮಾಡುವ ಸ್ವತಂತ್ರವೂ ಇದೇ ೧೯೨೫ನೇ ಇಸವಿ ಮಾರ್ಚ ತಾ. ೧೬ನೇ ಸೋಮವಾರ ಸಾಯಂಕಾಲ ೪ ಘಂಟೆ ಸಮಯಕ್ಕೂ, ೧೯೨೫ನೇ ಇಸವಿ ಎಪ್ರಿಲ್ ತಾರೀಕು ೧ರಲ್ಲು ಶುರು ಆಗಿ ೧೯೨೬ನೇ ಇಸವಿ ಮಾರ್ಚಿ ತಾ. ೩೧ರಲ್ಲು ಕೈದಾಗುವ ಒಂದು ವರುಷದ ಬಗ್ಗೆ ಹೂವು ಕಾಯಿಪಲ್ಯ ಮಾರ್ಕೆಟಿನ ಟಿಕೇಟ್ ಫೀಸನ್ನು ವಸೂಲು ಮಾಡುವ ಸ್ವತಂತ್ರವನ್ನು ೧೯೨೫ನೇ ಇಸವಿ ಮಾರ್ಚಿ ತಿಂಗಳ ತಾ. ೧೭ನೇ ಮಂಗಳವಾರ ಮಧ್ಯಾಹ್ನ ೩ ಗಂಟೆ ಸಮಯಕ್ಕೂ, ಕೊಡಿಯಾಲ್‌ಬೈಲ್ ವಾರ್ಡ, ಟೌನ್ ಸರ್ವೆ ನಂಬ್ರ ೧೩೪ನೇ ಕರಂಗಲ್ಪಾಡಿಯಲ್ಲಿರುವ ಕಾಯಿಪಲ್ಯದ ಮಾರ್ಕೆಟಿನಲ್ಲಿ ಕಾಯಿಪಲ್ಯಗಳನ್ನು ಮಾರುವರೆ ೧೯೨೫ನೇ ಇಸವಿ ಎಪ್ರಿಲ್ ತಾ. ೧ರಲ್ಲು ಶುರುವಾಗಿ ೧೯೨೬ನೇ ಇಸವಿ ಮಾರ್ಚಿ ೩೧ರಲ್ಲು ಕೈದಾಗುವ ೧ ವರುಷದ ಬಗ್ಗೆ ಟಿಕೇಟು ಫೀಸನ್ನು ವಸೂಲು ಮಾಡುವ ಸ್ವತಂತ್ರವನ್ನು ೧೯೨೫ನೇ ಇಸವಿ ಮಾರ್ಚಿ ತಾ. ೧೭ನೇ ಮಂಗಳವಾರ ಮಧ್ಯಾಹ್ನ ೩ ಗಂಟೆ ಸಮಯಕ್ಕೂ ಮಂಗಳೂರು ಮುನಿಸಿಪಲ್ ಆಫೀಸಿನಲ್ಲಿ ಬಹಿರಂಗವಾದ ಏಲಂ ಮೂಲಕ ಮಾರಲಾದೀತು.

ಬಂಡಿಗಳು ತಂಗುವ ಸ್ಥಳಗಳು.

೧೯೨೫ನೇ ಇಸವಿ ಎಪ್ರಿಲ್ ತಾರೀಕು ೧ನೆಯಿಂದ ೧೯೨೬ನೇ ಇಸವಿ ಮಾರ್ಚಿ ೩೧ನೇ ವರೆಗೆ ಒಂದು ವರ್ಷದ ಮಾಯಿದೆಗೆ ಮುನಿಸಿಪಾಲಿಟಿಯವರ ಬೋಳಾರ, ಹಂಪನಕಟ್ಟೆ, ಕಂಕನಾಡಿ, ಬಂದರ, ಕದ್ರಿ, ಮತ್ತು ಕೊಡಿಯಾಲ್‌ಬೈಲ್ ಈ ಸ್ಥಳಗಳಲ್ಲಿ ಇರುವ ಸರ್ವಜನೋಪಯೋಗಾರ್ಥದ ಬಂಡಿ ತಂಗುವ ಸ್ಥಳಗಳು ಗೇಣಿಗೆ ಪಡಕೊಳ್ಳುವ ಹಕ್ಕನ್ನು ೧೯೨೫ನೇ ಮಾರ್ಚಿ ತಿಂಗಳ ತಾರೀಕು ೧೭ನೇ ಮಂಗಳವಾರ ಸಾಯಂಕಾಲ ೩-೩೦ ಘಂಟೆ ಸಮಯಕ್ಕೆ ಮುನಿಸಿಪಾಲ್ ಕಚೇರಿಯಲ್ಲಿ ಬಹಿರಂಗವಾದ ಏಲಮಿನ ಮೂಲಕ ಮಾರಲಾದೀತು.

ಜಪ್ಪಿನಲ್ಲಿರುವ ಬಾರೂದಖಾನೆ.

೧೯೨೫ನೇ ಇಸವಿ ಎಪ್ರಿಲ್ ಗುರ್ರೆಯಿಂದ ೧೯೨೬ನೇ ಇಸವಿ ತಿಂಗಳ ಅಖೈರ ವರೆಗೆ ಒಂದು ವರ್ಷದ ಮಾಯಿದೆಗೆ ಜಪ್ಪಿನಲ್ಲಿರುವ ಮುನಿಸಿಪಾಲ್ ಬಾರೂದಖಾನೆಯು ಈ ಶಹರಿಗೆ ತಂದ ಬಾರೂದ ಯಾನೆ ಗನ್ ಪೌಡರ್, ಡೈನಮೈಟ್ ವಗೈರೆ ದಾಸ್ತಾನ ಮಾಡುವ ಬಗ್ಗೆ ೧೯೨೫ನೇ ಇಸವಿ ಮಾರ್ಚಿ ತಿಂಗಳ ೧೭ನೇ ಮಂಗಳವಾರ ಮಧ್ಯಾಹ್ನ ೪ ಘಂಟೆ ಸಮಯಕ್ಕೆ ಮುನಿಸಿಪಾಲ್ ಕಚೇರಿಯಲ್ಲಿ ಬಹಿರಂಗವಾದ ಏಲಮಿನ ಮೂಲಕ ಬಾಡಿಗೆಗೆ ಕೊಡಲಾದೀತು.

ಪ್ರತಿ ಮಧ್ಯಾಹ್ನ ಹೊಡೆಯಲ್ಪಡುವ ತೋಫು.

ಮಂಗಳೂರು ಶಹರಿನಲ್ಲಿರುವ ಮುನಿಸಿಪಲ್ ತೋಫು ಯಾನೆ ಪ್ರತಿ ಮಧ್ಯಾಹ್ನ ಹೊಡೆಯಲ್ಪಡುವ ಕೋವಿ ಬಗ್ಗೆ ಬಾರೂದು ಮತ್ತು ಸರಬರಾಯಿ ಮದ್ದು ತಯ್ಯಾರಮಾಡಿ ಒದಗಿಸುವ ಕಂಟ್ರಾಕ್ಟಿನ ಬಗ್ಗೆ ೧೯೨೫ನೇ ಇಸವಿ ಬರುವ ಮಾರ್ಚಿ ತಾರೀಕು ೧೭ನೇ ಮಂಗಳವಾರ ಮಧ್ಯಾಹ್ನ ೪-೩೦ ಘಂಟೆ ಸಮಯದಲ್ಲಿ ಮುನಿಸಿಪಾಲ್ ಕಚೇರಿಯಲ್ಲಿ ದರಖಾಸ್ತು ಅರ್ಜಿಗಳು ಅಪೇಕ್ಷಿಸಲಾಗಿದೆ. ೧೦ ರೂಪಾಯಿ ಠೇವಣಿ ಕಟ್ಟದ ವಿನಹಾ ಯಾವನೊಬ್ಬನಿಗಾದರೂ ದರಖಾಸ್ತು ಕೊಡಲಿಕ್ಕೆ ಬರೋದಿಲ್ಲ. ಸದರಿ ಠೇವಣಿಯು ಆಯಾ ಮಾರಾಟ ಕೈದಾದ ಕೂಡಲೆ ವಾಪಾಸು ಕೊಡಲಾದೀತು.

Closure of Panemangalore bridge to traffic.

The public are hereby informed that the temporary deck of the Panemangalore bridge in mile 16 of Mangalore-Mercara road has been dismantled and the said bridge is closed to all traffic.

MANGALORE, } N. Subba Rao
17th Feb. 1925. } *President District Board S. K.*

ಆರೋಗ್ಯ ಚಂದ್ರಿಕೆ.

ಮದ್ರಾಸ್.

ಸಂಪಾದಕರು: ಡಾಕ್ಟರ್ ಯು. ರಾಮರಾವ್, ಎಲ್. ಎಮ್. ಸಿ. ಎಫ್. ಎಮ್. ಯು. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವುದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ.

ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ.

ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವುವು.

'ಹೆಲ್ತ್' ಎಂಬ ನಮ್ಮ ಇಂಗ್ಲಿಷ್ ಮಾಸಪತ್ರಿಕೆಯನ್ನೋದಿ ಸಂತೋಷಿಸಿದ ಅನೇಕ ದೊಡ್ಡ ಮನುಷ್ಯರ ಪ್ರೋತ್ಸಾಹದ ಮೇಲೆ ಈ ಕನ್ನಡ ಪತ್ರಿಕೆಯನ್ನು ಹೊರಡಿಸಿದೆ.

ಅದರ ಸಂಪುಟ ೨ ಮತ್ತು ೧೦ನೇಯ ನವಂಬರ ೧೯೨೪ ಸಂಚಿಕೆಯಲ್ಲಿ ಕಾಣಿಸಿರುವ ವಿಷಯಗಳು.

ಮುಖಚಿತ್ರ:—ಪರ್ವತವಾಸಿನಿಯಾದ ಒಬ್ಬ ರೂಪವತಿ.
ಶ್ವಾಸಕ್ರಮ ಅಥವಾ ಪ್ರಾಣಾಯಾಮ.
ಹುಣಿಸೇಹಣ್ಣಿನ ಆಹಾರಗುಣಗಳು ಮತ್ತು ಔಷಧಗುಣಗಳು.
ಕಾಲುನಡೆಯೇ ಉತ್ತಮವಾದ ವ್ಯಾಯಾಮವು
ಜೇನಿನಲ್ಲಿರುವ ಗುಣಗಳು.
ಹಲ್ಲುಗಳ ರಚನೆ, ಪ್ರಯೋಜನ, ಕೆಲಸ ಮುಂತಾದವು.
ಮದದ್ರಾವಕಗಳಿಂದ ಆರೋಗ್ಯಕ್ಕೆ ಉಂಟಾಗತಕ್ಕ ಹಾನಿ.
ಅಂಗಸಾಧನೆ ಮತ್ತು ಬುದ್ಧಿವ್ಯವಸಾಯ (ವಿದ್ಯಾಭ್ಯಾಸ).
ಗಾಯಗಳು, ಮತ್ತು ಉಳುಕು ಮುಂತಾದವು, ಅವುಗಳ ಚಿಕಿತ್ಸೆ.
ನವನಾಗರಿಕ ಪ್ರಪಂಚಕ್ಕೆ ಸಹಜವಾದ ಮೂರು ಕೆಡುಕುಗಳು.
ಒಬ್ಬ ಉಪವಾಸಿಯ ಅನುಭವ.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವುವು. ಆರೋಗ್ಯಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ ರೂ. ೧—೮—೦; ಬಿಡಿಪತ್ರಿಕೆ ಒಂದಕ್ಕೆ ರೂ. ೦—೨—೦. ಹಿಂದಿನ ಸಂಚಿಕೆಗಳು ಕೂಡ ದೊರೆಯುವವು.

ಚಂದಾದಾರರಾಗುವವರು ವಿ. ಪಿ. ಮೂಲಕವಾಗಿ ತರಿಸಿಕೊಳ್ಳುವುದಕ್ಕಿಂತಲೂ ಹಣವನ್ನು ಮುಂಗಡವಾಗಿ ಕಳುಹಿಸುವುದು ಲಾಭಕರ. ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು 'ಆರೋಗ್ಯ ಚಂದ್ರಿಕೆ'ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು.

ಪತ್ರವ್ಯವಹಾರಕ್ಕೆ: 'ಆರೋಗ್ಯ ಚಂದ್ರಿಕೆ'
೩೨೩ ತಂಬುಚೆಟ್ಟಿ ಬೀದಿ, ಮದ್ರಾಸ್

ತುಳು ಪಾಡ್ದನಗಳು.

ಬೊಬ್ಬರ್ಯ, ಕಲ್ಲುರ್ಟಿ–ಕಲ್ಕುಡ, ದೈಯ್ಯೊಂಗುಳು—ತೋಡಕಿನಾರ್, ಮುಂಡತ್ತಾಯ ಪ್ರತಿ ಒಂದಕ್ಕೆ 2 ಆಣೆ. 1½ ಆಣೆ ಟಪ್ಪಾಲು ಚೀಟು ಕಳಹಿಸಿದರೆ 5 ಪುಸ್ತಕಗಳು ಕೂಡಲೇ ಕಳುಹಿಸಲ್ಪಡುವವು.

ವಿಳಾಸ: ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

The Canara Bank, Limited, Magalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.	1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟ, ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
Reserve and other sinking Funds „ 259,000—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು „ 259,000—0—0

THE BANK RECEIVES FIXED, CURRENT ACCOUNT, & SAVINGS BANK DEPOSITS
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1925.

K. Venkat Rao,
Secretary.

ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಿಗಳಲ್ಲಿ ಒಂದಾದ,
ಲೋಕಾಮಯಹರ ಕಸ್ತೂರಿ ಮಾತ್ರೆಯನ್ನು ಇಂದೇ ನೀವು ತರಿಸಿಕೊಳ್ಳಿರಿ! ಏಕೆಂದರೆ,

ಲೋಕಾಮಯಹರ ಕಸ್ತೂರಿ ಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ ಅದು ಹೇಗೆಂದರೆ? ಈ ಮಾತ್ರೆಗಳಲ್ಲಿ ಒಂದೆರಡನ್ನು ಕಾಲಕಾಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಕಾಹಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಅಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರ ವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಗಟ್ಟಿಯಾದ ಆಹಾರವನ್ನಾದರೂ ಜೀರ್ಣಗೊಳಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟ ಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ತೇಗು, ಕೆಮ್ಮಲು, ಶೀತ, ಶೀತವಾತ, ತೃಷ್ಣಾಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮರೆತ, ಜ್ವರ, ಚಳಿಜ್ವರ ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲುಯೆನ್‌ಜಾ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು

ವ್ಯಾಯಾಮವನ್ನು ಬಲವಕಾಶವಿಲ್ಲದ ವ್ಯಾಪಾರಗಳಿಗೂ ಗೋಷ್ಠಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು ಪ್ರತಿ ಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯ ಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರುತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ 250ರಿಂದ 300 ಮಾತ್ರೆಗಳ ವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.
ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1—4—0, 12 ಸೀಸೆಗಳಿಗೆ 2—7—0, 25 ಸೀಸೆಗಳಿಗೆ 4—10—0 ಪೋಸ್ಟೇಜು ಚೇರಿ. ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತದೆ.

ಏಜಂಟ್
ಮಂಗಳೂರು ಟವನಿಗೆ ಮಾತ್ರ.
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ.

ವಿಳಾಸ:— ಪಾಳ್ಯದ ವೆಂಕಟಾಚಲ ಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ವಿದ್ಯಾವಾಚಸ್ಪತಿ
ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ

“ಸಂಕ್ಷೇಪಗೀತೆ”

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ್ಳ, ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದೆ ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೦. ಟಪ್ಪಾಲು ಖರ್ಚು ಕೂಡಿ ಆಣೆ ೧೧ನ್ನು ಮನಿಯಾರ್ಡರ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ೩ರಕ್ಕಿಂತ ಜಾಸ್ತಿ ಖರ್ಚು ತಗಲುವುದು. ರಖಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.

ಪುಸ್ತಕ ದೊರಿಯುವ ವಿಳಾಸ:—
ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು. ಮತ್ತು ಕೆನರಿಸ್ ಮಿತ್ರನ್ಸ್ ಬುಕ್ ಎಂಡ್ ಟ್ರ್ಯಾಕ್ಟ್ ಡಿಪೋಜಿಟರಿ,
ಮಂಗಳೂರು.

ಉಚಿತ! ಬಿಟ್ಟಿ!! ಪುಗಸಟ್ಟೆ!!!

ವೈದ್ಯವಿದ್ಯ
NOPRICE NOPOSTAGE.

ಎಂಬ ಈ ಪುಸ್ತಕದಲ್ಲಿ ಆಯುರ್ವೇದ ಶಾಸ್ತ್ರದಲ್ಲಿ ಸ್ತ್ರೀಪುರುಷರು ಆರೋಗ್ಯದೃಢಕಾಯರಾಗಿ ಆರೋಗ್ಯದಿಂದ ಕೂಡಿದ ಸಂತಾನಗಳನ್ನು ಪಡೆದು ಸತಿಪತಿಯರು ಅನ್ಯೋನ್ಯವಾದ ಅನುರಾಗವುಳ್ಳವರಾಗಿ ಸುಖದಿಂದಲೂ ಸಂತೋಷದಿಂದಲೂ ಸಂಸಾರಯಾತ್ರೆಯನ್ನು ಮಾಡಲು ಅತ್ಯಂತ ಉಪಯುಕ್ತವಾದ ವಿಷಯಗಳು ಅಲ್ಲಲ್ಲಿ ಹೇಳಲ್ಪಟ್ಟಿರುವುದನ್ನು ಒಂದಾಗಿ ಕ್ರೋಢೀಕರಿಸಿ ಅಜ್ಞಾನದಿಂದಲೂ ಸಂಕಷ್ಟದಿಂದಲೂ ನರಳುತ್ತಿರುವ ಸಂಸಾರಿಗಳನ್ನುದ್ಧಾರಮಾಡುವ ಸಲುವಾಗಿ ಈ ಪುಸ್ತಕವನ್ನು ಕ್ರಯವೂ ಅಂಚೇ ಹಾಸಲೂ ಇಲ್ಲದೆ ಬೇಡಿದವರಿಗೆ ಸರ್ವತ್ರ ಉಚಿತವಾಗಿ ಕಳುಹಿಸುತ್ತೇವೆ. ಹೆಚ್ಚು ಮಾಹಿತಿಗೆ ಪತ್ರ ಬರೆಯಿರಿ.

ರಾಜವೈದ್ಯ, ನಾರಾಯಣಜಿ ಕೇಶವಜಿ,
49, ಬಂದರ್ ಸ್ಟ್ರೀಟ್, ಜಿ. ಟಿ. ಮದ್ರಾಸ್

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀಕಾಶೀ, ಗಯಾ, ಪ್ರಯಾಗ, ಹರಿದ್ವಾರ ಬದ್ರಿನಾರಾಯಣ ದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರ ಕಡೆಯಿಂದ ಅನುಭವ ತೆಗೆದು ಪ್ರತಿಯೊಂದು ಸಿದ್ಧಮಾಡಿಕೊಂಡು ಬರೆದಿರುವರು. ೧ನೇದು ಮಂತ್ರಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರಪ್ರಯೋಗದಿಂದಲೂ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವೂ ಇದೆ. ೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ, ಆಸನದಡಿಯಲ್ಲಿ ರೂಪಾಯಿಗಳು ಹೊರಡುವಿಕೆ, ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ. ೩ನೇದು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು. ೪ನೇದು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಧಾತುಗಳ ಚೂರ್ಣ ಸಹ, ಇದರಲ್ಲಿ ಉಂಟು, ಇದು ಪ್ರತಿಯೊಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷದ ಮಾಡುವ ಕ್ರಮವನು ಚೆನ್ನಾಗಿ ಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಳಾಸವು ತಿಳಿಸಿರುವರು. ೫ನೇದು ಯಂತ್ರ ಪ್ರಕರಣದಲ್ಲಿ ವಶೀಕರಣ ಗ್ರಹಪೀಡಾ ನಿವಾರಣ ಭೂತಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣವಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು, ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತಿರ ಇದ್ದ ಬಳಿಕ ಎಲ್ಲಾ ದೇವಾನು ದೇವತೆಗಳು ದ್ರವ್ಯಗಳೂ ವೈದ್ಯರೂ ಜೋತಿಷ್ಯರು, ಮಾಂತ್ರಿಕರು ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥ ಗ್ರಂಥವು ಯಾರು ಕಣ್ಣಿಂದ ನೋಡಿರಲಿಕ್ಕಿಲ್ಲಾ. ಪ್ರತಿ ಮಬರು ತರಿಸಿ ನೋಡಬೇಕೆಂದು ಇದರ ಬೆಲೆ ಸಹ ಕಡಿಮೆಮಾಡಿ ಇರುವದು. ೨—೮—೦ ಟಪ್ಪಾಲು ಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ ನಾಟಕ ಕಾವ್ಯ, ಕಥೆಗಳು, ಯಕ್ಷಗಾನ, ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ:—
ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ

Just Arrived OF **Fresh Consignment**

Best English Cycles.

REDUCTION IN PRICES.

Ranger Cycles Model M. Made in Birmingham.

WITH DUNLOP OR BATES TYRES & TUBES	... @ Rs.	90—0—0
Barton Humber on Advance WITH DUNLOP OR BATES TYRES & TUBES	... @ "	100—0—0
Senior Royal with B. S. A. Fitting. WITH DUNLOP OR BATES TYRES & TUBES ..	...@ Rs.	145—0—0
Royal Saxon with B. S A. Fitting. WITH DUNLOP OR BATES TYRES & TUBES ...	... @ Rs.	175—0—0

All the above Cycles include pump and tools.

BROOKES PATEERN 90/2 GERMAN SADDLE ...	...@ "	9—8—0
" SADDLE 90/2 " ...	..@ "	21—0—0
" " B/30 " ...	...@ "	26—0—0

For further particulars please write to us or call on us:—

All kinds of Cycle Assessories, Dunlop and German Tyres and Tubes
ARE AVAILABLE AT VERY CHEAP RATES.

Special Discount to Traders. *Easy Terms Arranged.*

APPLY TO:—**The Mangalore Trading Association,**
Wholesale Dealers in Cycles and Cycle Accessories,
Car-Street, MANGALORE

—ಗೋಡೆಗೆ ತಗಲಿಸುವ
ಹೊಸ ನಮೂನೆಯ—

ಟಿಕ್—ಟಾಕ್

ಎಂಬ ಈ ಗಡಿಯಾರಗಳು ಜರ್ಮನೀ ದೇಶದಲ್ಲಿ ತಯಾರಿಸಿದ್ದು. ಇವು ಕರಾರು ಘಂಟೆಯನ್ನು ತೋರಿಸುವವು. ಇವಕ್ಕೆ ಬೀಗ ಕೊಡಬೇಕಾದಿಲ್ಲ. ಇದರಲ್ಲಿ ಕಾಣುತ್ತಿರುವ ಗುಂಡನ್ನು ಮೇಲಕ್ಕೆ ಎಳೆದರೆ ಸಾಕು. ತನ್ನ ಷ್ಟಕ್ಕೆ ತಾನೇ ಟಿಕ್—ಟಾಕ್ ಎಂಬ ಶಬ್ದವನ್ನು ಮಾಡುತ್ತಾ ಸರಿಯಾದ ಕಾಲವನ್ನು ತೋರಿಸುವದು. ಇದು ನೋಡುವುದಕೆ ಬಹು ಲಕ್ಷಣವಾಗಿರುವುದು.

ಕ್ರಯ 1ಕ್ಕೆ ರೂ. 3—0—0

ಪೀಟರ್ ವಾಚ್ ಕಂಪನಿ
ಪೋಸ್ಟ್ ಬಾಕ್ಸ್ ನಂ. 27, ಮದ್ರಾಸ್.

ADVERTISE IN

The Business Directory
OF INDIA, BURMA & CEYLON

A Comprehensive Directory of the various Business-men, Exporters and Importers, Firms, Factories, Mills, Manufacturers, Merchants and Industries of the principal Cities, Ports and Towns of India, Burma and Ceylon.

PUBLISHED ANNUALLY

Rates for Advertisements

¼ Page	Rs.	50.
2 in. Single Column	"	20.
1 in. Single Column	"	15.
Name in Bold Types	"	5.

Price per Copy Rs. 10.

PRINTERS & PUBLISHERS.
Business Directory Co.,
Kanara Press Buildings, MADRAS. E.
Telegrams: "KETHAKI" Phone 540

ದಕ್ಷಿಣ ಕನ್ನಡ ಜಿಲ್ಲೆಯ

ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

JUST ARRIVED

Goodrich Belts.

OF VARIOUS SIZES

Price Re. 1—12—0 each

Mangalore Trading Association,
Car Street, MANGALORE.

ಸಾರಸ್ವತ.

ಕನ್ನಡ ಮತ್ತು ಕೊಂಕಣಿ ಭಾಷೆಗಳಲ್ಲಿ ಕಳೆದ ವಿಜಯ ದಶಮಿಯ ದಿನದಿಂದ ಪ್ರತಿ ದಶಮಿಗೆ ಹೊರಡುವ ಪತ್ರಿಕೆ.

ವಿ. ಎಸ್. ಕಾಮತ್,
ಮೂಳ್ಕಿ ವಾಮನ ಕುಡುವ } ಸಂಪಾದಕರು.

ಮತಸಂಸ್ಥೆ ಮತ್ತು ಸಮಾಜಕ್ಕೆ ಸಂಬಂಧಪಟ್ಟ ಇತರ ಸಂಸ್ಥೆಗಳ ಸುಸಂಘಟನ.

ಸಮಾಜದೊಳಗೆ ಅನ್ಯೋನ್ಯ ಸಾಧನೆ.

ಸ್ತ್ರೀಸಮಾಜಕ್ಕೆ ಉಪಯುಕ್ತವಾದ ವಿಷಯಗಳ ನಿರೂಪಣ.

ಮತಭಾವನೆಗಳ ಉಜ್ಜೀವನ ಇತ್ಯಾದಿ ಉದ್ದೇಶಗಳಿಂದ ಈ ಪತ್ರಿಕೆಯು ಹೊರಡಿಸಲ್ಪಡುವುದು. ಸಾರಸ್ವತ ಸಮಾಜವು ಇದಕ್ಕೆ ಪ್ರೋತ್ಸಾಹವನ್ನೀಯಬೇಕಾಗಿ ಪ್ರಾರ್ಥನೆ.

ಚಂದಾಹಣ ಅಂಚೆವೆಚ್ಚ ಕೂಡಾ ರೂ. ೧—೪—೦. ಪೋಷಕರು ರೂ. ೧೦—೦—೦. ಸಹಾಯಕರು ರೂ. ೫—೦—೦. ಮಾದರಿ ಸಂಚಿಕೆಯನ್ನು ಟಪ್ಪಾಲು ಖರ್ಚಿಗಾಗಿ ಅರ್ಧಾಣೆ ಸ್ಟಾಂಪು ಕಳುಹಿಸುವವರಿಗೆ ಉಚಿತವಾಗಿ ಕಳುಹಿಸುವೆವು.

ಕನ್ನಡ ನಾಡಿನಲ್ಲಿ ಪ್ರತಿ ಕಡೆಯಲ್ಲಿಯೂ ಬಾತ್ಮೀದಾರರು ಬೇಕು.

ಎಲ್ಲಾ ಪತ್ರವ್ಯವಹಾರಗಳನ್ನು ಕೆಳಗಿನ ವಿಳಾಸಕ್ಕೆ ನಡೆಸಬೇಕು.

ಯು. ನಾರಾಯಣನಾಯ್ಕ, ಕಾರ್ಯದರ್ಶಿ,
ಸಾರಸ್ವತ, ಉಡುಪಿ.

ಆರ್. ಮಾರ್ಟಿನ್ನರ

ಜ್ವರದ ಗುಳಿಗೆಗಳು.

ಸುಲಭ ಸ್ವೇದನಕಾರಿಯಾದ ಈ ಘುಟಿಕೆಗಳು ಚಳಿಜ್ವರದ ವಿಷದಾರ್ಥಗಳನ್ನು ತಟ್ಟನೆ ನಿರ್ಮೂಲಪಡಿಸಿ, ವ್ಯಾಧಿಗಳನ್ನು ಸಂಪೂರ್ಣ ನಾಶಪಡಿಸಿ, ಮಲೇರಿಯಾ ಜ್ವರ, ಚಳಿಜ್ವರ, ಚಾರಿಜ್ವರ, ಮತ್ತು ಆಗಾಗ್ಗೆ ಬಿಟ್ಟುಕೊಂಡು ಬರುವ ಇತರ ಜ್ವರಗಳ ಬಾಧೆಯಿಂದ ಗುಣಪಡಿಸುವವು.

ತಟ್ಟನೆ ವಾಸಿಪಡಿಸುವುದಕ್ಕೆ ಹತ್ತೂರುಗಳಲ್ಲಿ ಪ್ರಸಿದ್ಧತೆಯನ್ನು ಹೊಂದಿದ್ದು, ಆಶೆ ಬಿಟ್ಟುಬಿಟ್ಟ ಅನೇಕ ಸಂದರ್ಭಗಳಲ್ಲಿ ಗುಣಪಡಿಸಿದವುಗಳಾಗಿರುತ್ತವೆ.

ಇವುಗಳು ಗಿರಣಿಗಳಲ್ಲಿಯೂ ಕಾರ್ಖಾನೆಗಳಲ್ಲಿಯೂ ವಿಶೇಷವಾಗಿ ಉಪಯೋಗಿಸಲ್ಪಡುತ್ತವೆ. ಸಾಮಾನ್ಯವಾಗಿ ಹಿಂದೂಸ್ಥಾನದಲ್ಲಿ ಎಲ್ಲಾ ತೋಟಗಾರರಿಂದ ಉಪಯೋಗಿಸಲ್ಪಡುವವು. ಅಲ್ಲದೆ ದಿಂಗತ ವಿಶ್ರಾಂತವಾದ ಕೀರ್ತಿಯನ್ನು ಕೂಡ ಸಂಪಾದಿಸಿರುವುದು. ಕಠಿಣ ಜ್ವರವು ತಟ್ಟನೆ ಇಳಿಯಬೇಕಾದರೆ ಆರ್ ಮಾರ್ಟಿನರ ಎಗ್ಯೂ ಮಿಕ್ಚರ್ ಒಡನೆ ಇದನು ಸೇವಿಸಬೇಕು. ಈ ಇವೆರಡು ಅದ್ಭುತ ಶಕ್ತಿಯುಳ್ಳ ಔಷಧಿಗಳು ಪ್ರತಿಯೊಂದು ಕುಟುಂಬದ ಮನೆಯಲಿಟ್ಟುಕೊಳ್ಳಲು ಯೋಗ್ಯ ವಸ್ತುಗಳಾಗಿವೆ. ಪ್ರತಿಯೊಂದು ಬಾಟ್ಲಿಯಲ್ಲಿ 40 ಮಾತ್ರೆಗಳು ಇರುವುವು.

ಬಾಟ್ಲಿ 1ಕ್ಕೆ ರೂ. 1—8—0.

ಆರ್. ಮಾರ್ಟಿನ್ನರ ಎಗ್ಯೂಮಿಕ್ಚರ್.

ಇದು ಜ್ವರ, ಶೀತಜ್ವರ ಮಲೇರಿಯಾ, ಚಾರಿಜ್ವರ, ಸನ್ನಿಪಾತ ಪಟ್ಟ ವಾಯುವಿನಿಂದುಂಟಾದ ರೋಗ ಇವೇ ಮೊದಲಾದ ಎಲ್ಲಾ ತರದ ಜ್ವರಗಳನ್ನೂ ಕೂಡಲೇ ನಾಶಮಾಡುತ್ತದೆ. ಎಲುಬುಗಳಲ್ಲಿ ಹರಡಿಕೊಂಡಿರುವ ಜ್ವರವನ್ನೂ ಸಹ ನಾಶಮಾಡುವುದಲ್ಲದೆ, ಇದು ಸಿಹಿಯಾಗಿರುವುದರಿಂದ ಸಣ್ಣ ಕೂಸುಗಳು ಸಹ ಕುಡಿಯಲಿಕ್ಕೆ ಇಷ್ಟಪಡುತ್ತವೆ. ಅನೇಕ ನಿಜ ವಿದ್ವಾಂಸ ವೈದ್ಯರಿಂದ ಗುಣಮಾಡುವುದಕ್ಕಾಗದ ಜ್ವರವನ್ನು ಈ ಎರಡೇ ಎರಡು ಬಾಟ್ಲಿಗಳ ಸೇವನೆಯಿಂದ ಹುಷಾರಾಗಿದೆ

ಬಾಟ್ಲಿ 1ಕ್ಕೆ ರೂ. 0—13—0.

ಆರ್. ಮಾರ್ಟಿನ್ನರ ಮೂಲವ್ಯಾಧಿ ಮಲಾಮು.

ಮನುಷ್ಯನಿಗೆ ಮೂಲವ್ಯಾಧಿ ಆದಾಗ, ಬಹಳ ಸಲ ಮೂತ್ರಶಂಕೆಯಾಗುವಿಕೆ, ಮರ್ಮಸ್ಥಾನದಲ್ಲಿ ಉರಿಯುವುದು, ಮಲಬದ್ಧತೆ ಇವೇ ಮುಂತಾದರಿಂದ ವಹೆಪಡುತ್ತಾನೆ. ಈ ಔಷಧದ ಒಂದೇ ಒಂದು ಬಾಟ್ಲಿಯ ಉಪಯೋಗದಿಂದ, ರಕ್ತ ಸುರಿಯುವ ಮೂಲವ್ಯಾಧಿ, ಕಂಕುಳಲ್ಲಿ ನೋಯುವ ಮೂಲವ್ಯಾಧಿ ಮತ್ತು ಎಂಥ ತರಹದ ಕಠಿಣವಾದ ಮೂಲವ್ಯಾಧಿಯಾದರೂ ಕೂಡಲೇ ವಾಸಿಯಾಗುತ್ತದೆ. ಇದು ಒಳ್ಳೇ ಔಷಧಗಳಿಂದ ತಯಾರಿಸಲ್ಪಟ್ಟು ಹಚ್ಚಿಕೊಳ್ಳುವವರಿಗೆ ಏನೊಂದೂ ನೋವನ್ನು ಕೊಡದೆ ತಂಪಾಗಿ ಮಾಡುತ್ತದೆ. ಬಾಟ್ಲಿ 1ರ ದರ ರೂ. 1—8—0 ಮಾತ್ರ.

ವಿಳಾಸ:—ಆರ್. ಡಿ. ಕಟೇ ಮತ್ತು ಕಂಪೆನಿ,
ನಂ. [illegible] ಫ್ರೆಯರ್ ರೋಡ್,
ಸಾಂಜ ವರ್ತಮಾನ ಪ್ರೆಸ್,
ಟೋಡಿವಾಲಾ ಬಿಲ್ಡಿಂಗ ಎದುರುಗಡೆ, ಫೋರ್ಟ ಮುಂಬಯಿ.

R. D. Kately & Co.
No. B. Frere Road,
Opposit Sanjvertaman Press,
Todivala Building, FORT BOMBAY.

ಸುವರ್ಣಸಂಧಿ.

ಶ್ರೀಮಂತ [illegible]ಗಳಲ್ಲಿ ನೂಲನ್ನು ಹೆಣೆಯುವ ವಸ್ತ್ರಗಳಿಗೆ ಬೇಕಾಗುವ ಯಾವತ್ತು ಸಾಮಾನುಗಳು, ನೂಲಿಗೆ ಹಾಕುವ ನಾನಾ ತರದ ರಂಗುಗಳು ಅಗತ್ಯವಿರುವ ನಾನಾ ಬಗೆಯ ಯಂತ್ರಗಳು ಇವನ್ನು ನಮ್ಮಲ್ಲಿಂದ ನ್ಯಾಯವಾದ ಬೆಲೆಗೆ ಹೊಂದಬಹುದು. ನಮ್ಮಲ್ಲಿ ದೊರೆಯುವ ಯಾವತ್ತು ಸಾಮಾನುಗಳನ್ನು [illegible] ನಾಟಿಕೆ, [illegible].

ಪಿ. ಪಿ. ತ್ರಿವೇದಿ ಎಂಡ್ ಕೋ.,
ನಂ. [illegible]
ಫೋರ್ಟ ಮುಂಬಯಿ.

Edited, Printed & Published by V. S. Kamath at the M. T. A. SHARADA PRESS, MANGALORE.

Registered: No. M. 498.

ಮುಂಗಡಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ | ನ ಭೇಜಿರೇ ಭೀಮವಿಷೇಣ ಭೀತಿಮ್ ‖ ಸುಧಾಂ ವಿನಾ ನ ಪ್ರಯಯುರ್ವಿರಾಮಂ | ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ‖ ೧ ‖
ದೊರೆಯಲನುಪಮರತ್ನಗಳು ಸಾ | ಗರವ ಮಥಿಸಲು ಸುರರಿಗದರಿಂ | ಹರುಷವಾಯಿತೆ! ಮತ್ತೆ ವಿಷದ ಸುಡುತ ಬರುತಿರುವ ‖
ಗರಲಕವರಂಜಿದರೆ ! ಸುಧೆಯನು | ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ‖ ೧ ‖

ಪುಸ್ತಕ ೧೯. ಮಂಗಳೂರು, ತಾರೀಕು ೬ನೇ ಶುಕ್ರವಾರ ಮಾರ್ಚಿ ೧೯೨೫. ಸಂಚಿಕೆ ೧೦

The Canara Banking Corporation Udipi, Ltd.

Head Office:—	Branch:—
Udipi	**Coondapoor**
Paidup Capital	1,66,165—9—11
Reserve etc	64,700—0—0

Season Deposits

Carrying Special rate of 7% up to 15th June 1925 only.

Further Particulars on Application.

ದಿ ಕೆನರಾ ಬ್ಯಾಂಕಿಂಗ್ ಕೋರ್ಪೊ
ರೇಶನ್ ಉಡುಪಿ, ಲಿಮಿಟೆಡ್.

ಹೆಡ್ ಆಫೀಸು—ಉಡುಪಿ.	ಶಾಖೆ—ಕುಂದಾಪುರ.
ವಸೂಲಾದ ಮೂಲಧನ	1,66,165—9—11
ರಿಜರ್ವ ವಗೈರೆ ಫಂಡುಗಳು	64,700—0—0

ತಾ. 15—6—1925ರವರೆಗೆ ಮಾತ್ರ
ಸಾಲಿಯಾನ್ ಸೇಕಡಾ 7ರ ದರದ ಬಡ್ಡಿಯ ಮೇಲೆ
ಮುಸುಂ ಠೇವಣಾತಿಗಳನ್ನು
ಅಂಗೀಕರಿಸೋಣಾಗುತ್ತದೆ.
ಹೆಚ್ಚಿನ ಮಾಹಿತಿಗೆ ಬರಕೊಳ್ಳಿರಿ.

Office of the Corporation, Udipi, 1-3-25 } **N. Ananda Rao,** *Secretary.*

Wanted Agents
FOR
Every District in South India

For Pushing Sales of Our Calenders, Xmas and New Year Cards, Blotters, Pictures and Picture Post Cards, at wholesale rates. Deposit of Rs. 100—0—0 Essential.

Apply to:—
The South Indian Advertising Agency,
13, Kilary Road,
BANGALORE CITY.

ಶುದ್ಧ ರೋಮದ ಧಾವಳಿಗಳು.

1 ಮೊಳ ಉದ್ದ 1¼ ಮೊಳ ಅಗಲ ರೂ. 1½ರಿಂದ 2 ವರೆಗೆ, 5 ಮೊಳ ಉದ್ದ 1½ ಮೊಳ ಅಗಲ ರೂ. 1½ರಿಂದ 5 ವರೆಗೆ, 6 ಮೊಳ ಉದ್ದ 1½ ಮೊಳ ಅಗಲ ರೂ. 2½ರಿಂದ 6 ವರೆಗೆ, 8 ಮೊಳ ಉದ್ದ 2 ಮೊಳ ಅಗಲ ರೂ. 3½ರಿಂದ 10 ವರೆಗೆ, 12 ಮೊಳ ಉದ್ದ 2¼ ಮೊಳ ಅಗಲ ರೂ. 6ರಿಂದ 12 ವರೆಗೆ, 16 ಮೊಳ ಉದ್ದ 2¼ ಮೊಳ ಅಗಲ ರೂ. 9ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಉಣ್ಣೆ ರೇಶ್ಮೆ ಮುಡಿಗಳು, [illegible], ಶಾಲು ಪೀತಾಂಬರಗಳು, [illegible], ರುದ್ರಾಕ್ಷಿ, [illegible] ಸಾಮಾನುಗಳು [illegible] ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುದು. ಕ್ಯಾಟಲಾಗ್ ಇನಾಂ.

ವಿಳಾಸ—
ಶಿರೋಮಣಿ ಯು. ನಾರಾಯಣಾಚಾರ್ಯ
ಮತ್ತು ಕಂಪೆನಿ, [illegible]

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ.

450 ಪುಟಗಳು ಎಮ್. ಗಣಪತಿರಾವ್ ಐಗಳ್ ಇವರಿಂದ ರಚಿತವಾದದ್ದು. ಕ್ರಯ ರೂ 1-4-0

ಮಾರಾಟಕ್ಕೆ ಸಿದ್ಧವಾಗಿವೆ **— ತುಳು ಪಾಡ್ದನಗಳು —** ಮಾರಾಟಕ್ಕೆ ಸಿದ್ಧವಾಗಿವೆ.

ದೈಯ್ಯೊಂಗುಳು, ಕಲ್ಲುರ್ಟಿ—ಕಲ್ಕುಡ, ಕಣಂದೂರು ದೈಯ್ಯೊಂಗುಳು, ಮುಂಡತ್ತಾಯ, ಬೊಬ್ಬರ್ಯ.

ಸುಲಭ ದರಗಳು **— ಶಾಲಾ ಪುಸ್ತಕಗಳು —** ರಖಂ ಕೊಂಡುಕೊಳ್ಳುವವರಿಗೆ ಯೋಗ್ಯ ಡಿಸ್ಕೌಂಟ್.

ಅದ್ಭುತ ಕಥೆಗಳು:—ಮೂರು ಕರಡಿಗಳು; ಜೇನುಸಕ್ಕರೆ ಕಾಗೆ ಬಡವಾಯಿತು; ಅರ್ಗಣೆ ಮುದ್ದೆ; ಇಲಿಗಳ ಥಕ್ಕ ಥೈ; ಅಂಗಳ ದುಗ್ಗು; ಸಿಗಡಿ ಯಾಕೆ ಒಣಗಲಿಲ್ಲ; ಗುಡುಗುಡು ಗುಮ್ಮಟ ದೇವರು; ಮೊಲನಿನ ಕಾಳಪ್ಪ; ಒಡ್ಡನ ಓಟ; ಹೊಸ ಕನ್ನಡ ಪುಸ್ತಕ ಭಾಗ ೧; ಹೊಸ ಕನ್ನಡ ಪುಸ್ತಕ ಭಾಗ ೨; ಕನ್ನಡ ಪದ್ಯಗಳು; ಮಗ್ಗಿ ಪುಸ್ತಕ; ಅಜಿತಕುಮಾರ; ಪದ್ಯ ರತ್ನಾವಳಿ, ಎಕ್ಸರ್‌ಸೈಜ್ ಮತ್ತು ನೋಟು ಪುಸ್ತಕಗಳು, ಕಾಪಿ ಪುಸ್ತಕಗಳು, ಡ್ರಾಯಿಂಗ್ ಪುಸ್ತಕಗಳು

ಇತರ ಪುಸ್ತಕಗಳು:—ಸಂಕ್ಷೇಪಗೀತೆ, ಕೇತುಭಂಗ, ಹಿಂದೂ ವ್ರತವಿವೇಕ, ಚಂದ್ರಗುಪ್ತ ಚಕ್ರವರ್ತಿ, ಶ್ರೀ ಕೃಷ್ಣಸಂಧಾನ, ಪದ್ಯಪಾಠಗಳು, ಹರಿಕಥಾ ಮೃತಸಾರ ಹರಿನಾಮಸಂಕೀರ್ತನೆ ಸುಧಾಂಮೃತ ಪದ್ಯಗಳು. ಬೆಂಕಿಪೆಟ್ಟಿಗೆ ತಯಾರಿಸುವ ವಿಧಾನ, ಸಾಬೂನು ತಯಾರಿಸುವ ವಿಧಾನ, ಸ್ವರಾಜ್ಯ ಭಕ್ತೋಲ್ಲಾಸ, ಚರಕಗೀತೆ, ಕೊಂಕಣಿ ಭಾಷೆಯಲ್ಲಿ ಚಂದ್ರಹಾಸ ನಾಟಕ, ಪ್ರಹ್ಲಾದ ಚರಿತ್ರ ನಾಟಕ, ಕನ್ನಡ ಮೃಚ್ಛಕಟಿಕ ನಾಟಕ, ಚಂದ್ರಹಾಸಾಭ್ಯುದಯ ನಾಟಕ, ಕೋವಿಲನ್ ಚರಿತ್ರ ನಾಟಕ, ಮಾದರಿ ಉಪನ್ಯಾಸ ಭಾಗ ೧, ೨, ಮತ್ತು ೩.

AMRUTANJAN
Best Indian Pain Balm
Amrutanjan
BOMBAY

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಶತ್ರುವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು.

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 2 ಆಣೆ.

ಅಮೃತಾಂಜನ ಡಿಪೊ,

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

109 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

— ರಥೋತ್ಸವ, ವಿವಾಹ ಉಪನಯನಗಳ ಸಮಯ —
ಸರ್ವರಿಗೂ ಉಡಿಗೆ ತೊಡಿಗೆಗಳು ಬೇಕಾಗುವ ಸಂದರ್ಭ.

ಯಾರು, ಯಾವುದನ್ನು ಎಲ್ಲಿ ಪಡೆಯಬೇಕೆಂಬ ಶಂಕೆಯಿಂದ ವಿಳಂಬ ಮಾಡಬೇಡಿರಿ. ಉಡಿಗೆತೊಡಿಗೆಗಳನ್ನು ಕೊಳ್ಳುವವರು ಬೇಕಾದ ಯಥಾರ್ಥ ಮಾಹಿತಿಯನ್ನು ಕಳೆದ ಹತ್ತಿಪ್ಪತ್ತು ವರುಷಗಳಿಂದ ಪಡೆದು ನಮ್ಮಲ್ಲಿಯ ವ್ಯಾಪಾರವು ಗಿರಾಕಿಗಳಿಗೆ ಸರ್ವ ದೃಷ್ಟಿಯಿಂದಲೂ ಲಾಭಕರವಾಗಿ ಪರಿಣಮಿಸುವಂತೆ ನಮ್ಮ ಜವಳಿ ಸಂಗ್ರಹವನ್ನು ಮಾಡಿರುತ್ತೇವೆ.

ಗುಪ್ರ್ರುಕರ್ರ್ ಬ್ರದರ್ಸ್, ರಥಬೀದಿ, ಮಂಗಳೂರು.

ಹೆಡ್ ಆಫೀಸು:—ರಥಬೀದಿ—(ಮೊದಲು ಸುಜೀರ ನಾಗಪ್ಪನಾಯಕ್, ಎಂಡ್ ಕೊ, ಇದ್ದಲ್ಲಿ; ಅಜೀಜುದ್ದೀನ್ ರಸ್ತೆಗೆ ತಿರುಗುವಲ್ಲಿ) ಮಂಗಳೂರು.

ಬ್ರೆಂಚ್ ಆಫೀಸು:—ರಥಬೀದಿ—(ಹಳೇ ತಾಲೂಕು ಕಚೇರಿಯ ಪಟಾರಕ್ಕೆ ಸಮೀಪವಿರುವ ಮಳಿಗೆ,) ಮಂಗಳೂರು.

ಈ ದೇಶದ ಪ್ರಖ್ಯಾತಪಟ್ಟ ನೇಯಿಗೆಯ ಕೇಂದ್ರಸ್ಥಳಗಳಾದ—ಬನಾರಿಸ್, ಪೂನಾ, ಅಹಮ್ಮದಾಬಾದ್, ಸೂರತ್, ಬೆಂಗಳೂರು, ಧರ್ಮಾವರಮ್, ಕಂಜೀವರಮ್, ಕೊಯಮುತ್ತೂರು, ಮಧುರೆ, ತಂಜಾವೂರು, ಕುಂಭಕೋಣ, ಅರ್ನಿ, ಪಾಲಿಸೇಟಿ, ಹುಬ್ಬಳ್ಳಿ, ಇಳಕಲ್, ಗದಗ, ಮದ್ರಾಸು ಈ ಪ್ರಾಂತ್ಯಗಳಲ್ಲಿ ತಯ್ಯಾರಾದ

ಜರಿಸೀರೆಗಳು, ದುಪ್ಪಟಾ, ಜರಿಕಣ, ಪೇಟ್ಟಿ, ರೇಶ್ಮೆ ಸೀರೆಗಳು, ಅರಳಿಪೇಟೆ ಸೀರೆಗಳು, ಜಾರ್ಜೆಟ್ ರೇಶ್ಮೆ ಸೀರೆಗಳು, ಜರಿ ಅಂಚಿನ ಸೀರೆಗಳು, ರೇಶ್ಮೆ ಮಡಿಗಳು, ನಿತ್ಯ ಉಪಯೋಗದ ಸೀರೆಗಳು ಬಟ್ಟೆಯನ್, ಕರ್ನಾಟಕ ಮಿಲ್ಸ್‌ಗಳ ವ ಇತರ ಮಿಲ್ಸ್‌ಗಳ ಶೂಟಿಂಗ್ ಶರ್ಟಿಂಗ್. ಕೈರಾಟೆಯಲ್ಲಿ ತಯಾರಿಸಿದ ನೂಲಿನಿಂದ ಮಾಡಿದ—

ಖದ್ದರ್ ಶರ್ಟಿಂಗ್, ಖದ್ದರ್ ಕೋಟಿಂಗ್, ಖದ್ದರ್ ಟೋಪಿ, ಖದ್ದರ್ ಪೇಟ್ಟಿ, ಅಂಗವಸ್ತ್ರ, ಇತ್ಯಾದಿ—
ಮುಸಲ್ಮಾನರಿಗೆ ಬೇಕಾದ ನಮೂನೆಯ [illegible] ವಗೈರೆ—
[illegible] ಸಂಗ್ರಹಿಸಿ ತಂದಿರುತ್ತಾರೆ.

ಶರ್ತ—[illegible] 5ಕ್ಕೆ [illegible] ರೂ. [illegible] 10%, ರೂ. 250 ರಿಂದ 1000ಕ್ಕೆ 12½% [illegible]

ಪ್ರತಿಯೊಂದು ಕುಟುಂಬಿಗಳ ಮನೆಗಳಲ್ಲಿ ಸೌಖ್ಯವನ್ನು ತೋರಿಸುವುದಕ್ಕೂ ಮತ್ತು ಅವರವರ ಉಪಯೋಗಾರ್ಥವನ್ನು ತಿಳುವಳಿಕೆ ಬಗ್ಗೆ ನಡಿಸುವುದಕ್ಕೂ ಒಂದು ಮರ್ಯಾದಿತ ನಿಘಂಟು ಪುಸ್ತಕವು ಈ ನಮ್ಮ ಹಿಂದೂದೇಶದ ಸಮೂಹದಲ್ಲಿರುವುದು. ಅಂಥಾ ಪುಸ್ತಕವು ಯಾವದೆಂಬುದು

ನೀವುಗಳು ಬಲ್ಲಿರಾ?
(ಅದೇ)
"ಕಾಮಶಾಸ್ತ್ರವೆಂಬುವುದು."

ತಾವುಗಳು ಇನ್ನೂ ಈ ಪುಸ್ತಕದಲ್ಲಿ ಬರೆದಿರುವ ಸಾರಾಂಶವನ್ನು ಓದಿಲ್ಲದಿದ್ದರೆ, ಒಡನೇ ಒಂದು ಪುಸ್ತಕವನ್ನು ಕಳುಹಿಸುವಂತೆ ಒಂದು ಪೋಸ್ಟುಕಾರ್ಡು ಬರಿಯಿರಿ.

ಪುಸ್ತಕವನ್ನು ಇನಾಮಾಗಿ ಕಳುಹಿಸುವೆವು.

ಮುಖ್ಯವಾದ ತಿಳುವಳಿಕೆ.

ತಾವುಗಳು ಧೃಢಚಿತ್ತರಾಗಿಯೂ, ನಿಧಾನಸ್ಥರಾಗಿಯೂ, ಸೌಖ್ಯವಾಗಿಯೂ, ಕಷ್ಟವಿಲ್ಲದೇ ವಿಷಯಗಳನ್ನು ಭರಿಸುವ ಮನಸ್ಸನ್ನು ಹೊಂದಬೇಕಾದರೆ ನಮ್ಮ ಅಮೂಲ್ಯವಾದ "ಕಾಮಶಾಸ್ತ್ರವೆಂಬುವ ಪುಸ್ತಕದಲ್ಲಿ ಕಾಣಿಸಿರುವ ಆತಂಕನಿಗ್ರಹ ಮಾತ್ರೆಗಳನ್ನು ಸೇವಿಸಬೇಕು."

ಒಂದು ರೂಪಾಯಿ ಖರ್ಚುಮಾಡಿದರೆ 32 ಮಾತ್ರೆಗಳುಳ್ಳ ಒಂದು ಡಬ್ಬಿಯನ್ನು ತರಿಸಿ ಪ್ರಯುಕ್ತಿಸಬಹುದು.

ವಿವರವಾಗಿ ಬರೆದಿರುವ ಒಂದು ಕ್ಯಾಟಲಾಗು ಕಳುಹಿಸುವಂತೆ ಈ ದಿನವೇ ಒಂದು ಪೋಸ್ಟುಕಾರ್ಡು ಬರಿಯಿರಿ.

ಆತಂಕನಿಗ್ರಹ ಔಷದಾಲಯ,
ನಂಬ್ರ 26, ಬ್ರಾಡ್ವೆ, ಮದರಾಸು.

ಹೊಸಗ್ರಂಥಗಳು!! ಬೇಗನೇ ತರಿಸಿಕೊಳ್ಳಿರಿ!!!

ಕೋಕಶಾಸ್ತ್ರವು.

ರಸಿಕ ವಾಚಕ ಮಹಾಶಯರೇ,

ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ, ಸಂಪಾದಿಸಿ, ಅದರಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನಷ್ಟೇ ಶೋಧಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ಲೀಷ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿನಿ, ಸ್ತ್ರೀಯರಿದರಂತೆ ಪುರುಷರಲ್ಲಿಯ ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ, ಜನನೇಂದ್ರಿಯಾದಿಗಳ ವರ್ಣನೆಯನ್ನೂ, ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ, ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ, ನಪುಂಸಕತ್ವ ವಂಧ್ಯಾದೋಷಗಳ ಚಿಕಿತ್ಸೆಯನ್ನೂ, ಸ್ತ್ರೀಯರ ಗೂಢ ರಹಸ್ಯವನ್ನೂ, ದಂಪತಿ ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನೂ ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನು ಒಮ್ಮೆ ಅವಲೋಕಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ

ಇದರ ಬೆಲೆ ೧—೮—೦, ಟಪ್ಪಾಲು ಹಾಸಲು ೦—೪—೦

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ

ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ಮೂರನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್. ಗಣಪತಿರಾವ್ ಐಗಳ್—ಗ್ರಂಥಕರ್ತರು.

ಮನೋರಂಜಕ ಚಿತ್ರಗಳೂ ಇವೆ.

ಇದರಲ್ಲಿ ಸಾವಿತ್ರಿ, ಶಕುಂತಳಾ, ಕೃಷ್ಣಾಕುಮಾರಿ, ಪದ್ಮಿನಿ, ಜೋನ್ ಒಫ್ ಆರ್ಕ, ಫ್ಲಾರೆನ್ಸನಾಯಿಟಿಂಗೇಲ ಪರಶುರಾಮ, ಭೂತಾಳಪಾಂಡ್ಯ, ಕಾರ್ಕಳ ಗೋಮಟೇಶ್ವರ ಮತ್ತು ಭೈರವರಾಜ, ಮೂಡಬಿದ್ರೆಯ ಚೌಟರು, ನಂದಾವರ ಬಂಗರು, ಕಾರ್ಕಳ ರಾಮಸಮುದ್ರ ಮತ್ತು ರಾಮನಾಥ ಒಡೆಯರ ಅಜಿಲಕಟ್ಟು, ಗುರುಪುರ ಜಂಗಮ ಮಠ, ಕಲ್ಯಾಣಪ್ಪನ ಕಾಟಕಾಯಿ, ಗುರುವಾಯನಕೆರೆ, ಜಮಾಲಾಬಾದುಕೋಟೆ, ಸುಲ್ತಾನಬತ್ತೇರಿ, ಈದಗಾಪ್ರಾರ್ಥನಾಮಂದಿರ, ಸೇಂಟಮೇರಿ ದ್ವೀಪಗಳು ಮತ್ತು ದರಿಯಾಬಹಾದರಗಡ, ಕೊರಗರು, ಕೊಡಗರು, ತೋಡರು, ರಜಪೂತರು, ಕಂದಾರಿಗಳು ಭುಖಾರ ಜನರು, ಅರಬಿಯರು. ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ಮೂರನೇ ದರ್ಜೆಯ ಮಕ್ಕಳಿಗೆ ಉಪಯುಕ್ತವಾಗಿದೆ. ಕ್ರಯ 6 ಆಣೆ.

ಪುಸ್ತಕ ದೊರಕುವ ವಿಳಾಸ:—

ಶಾರದಾ ಛಾಪಖಾನೆ,
ಮಂಗಳೂರು.

ಗಣಪತಿರಾವ್, ಐಗಳ್,
ಮಂಜೇಶ್ವರು,

ಡಾಕ್ಟರುಗಳು ಭಿನ್ನಾಭಿಪ್ರಾಯಪಡುವಾಗ್ಯೆ ತೀರ್ಮಾನಿಸುವದು ಯಾರು?

ಅಂಥಾ ಸಂದರ್ಭಗಳಲ್ಲಿ ಡೆಂಗ್ಯೂ ಮುಂತಾದ ಜ್ವರಗಳನ್ನು ನಿವಾರಿಸುವಂಥಾ "ಬಾಟ್ಲಿವಾಲರ ಏಗ್ಯುಮಿಕ್ಸ್ಚರ"ನ್ನು ಸರಾಗವಾಗಿಯೂ, ಮತ್ತು ಜ್ವರಗಳನ್ನು ಖಂಡಿತವಾಗಿ ನಿಲ್ಲಿಸುವಂಥಾದೂ, ಎಲ್ಲಾ ತರದ ತಲೆನೋವುಗಳನ್ನು ಹೋಗಲಾಡಿಸುವಂಥಾದ್ದೂ ಆದ "ಬಾಟ್ಲಿವಾಲರ ಏಗ್ಯುಪಿಲ್ಸ್" ಇದನ್ನು ಉಪಯೋಗಿಸಿರಿ.

ಐ. ಎಮ್. ಎಸ್. ಡಾಕ್ಟರುಗಳಿಂದ ಶಿಫಾರಸು ಮಾಡಲ್ಪಟ್ಟಿದ್ದು. ಇವರ ಉಪಯೋಗದಿಂದ ಹೃದಯದ ಮೇಲೆ ಯಾವದೊಂದೂ ಬಾಧಕವಿಲ್ಲ. ಅರ್ಧ ಶತಮಾನದಿಂದ ಹಿಂದೂಸ್ಥಾನ, ಬರ್ಮಾ, ಸಿಲೋನ್, ಆಫ್ರಿಕಾ ಇವುಗಳಲ್ಲಿ ಪ್ರಖ್ಯಾತಪಟ್ಟಿದ್ದಾಗಿರುತ್ತದೆ.

ಅನೇಕ ಹಿಂದೀ ಪ್ರದರ್ಶನಗಳಲ್ಲಿ ಬೆಳ್ಳಿ ಮತ್ತು ಬಂಗಾರದ ಪದಕಗಳನ್ನು ಪಡೆದಿರುತ್ತೆ. ಚಾಲ್ತಿ ಸಾಧ್ಯದಂತಿದ್ದು ಮಾರಾಟಗಾರರಿಗಳೂ ಕೂಡ ಅದರ ಮೇಲೆ ಹಣವನ್ನು ಮುಂಗಡವಾಗಿ ಕೊಡುತ್ತಾರೆ. ಬಡ ಮತ್ತು ಮಧ್ಯಮ ತರಗತಿಯ ಜನರಿಗೆ ವರಪ್ರದಾನವಾಗಿದ್ದು ಸಂಚಾರ, ಪ್ರಯಾಣ, ದೇಶಾಟನೆಗಳ ಸಮಯದಲ್ಲಿ ಹತ್ತಿರದಲ್ಲಿ ಇರಿಸಿಕೊಳ್ಳದಾಗಿರುತ್ತದೆ.

ಬಾಟ್ಲಿವಾಲರ ಬಾಲಾಮೃತ ಅಥವಾ ಟೊನಿಕ್ ಸಿರಪ್.

ಕೆಮ್ಮನ್ನು ಹೋಗಲಾಡಿಸಿ, ಎದೆನೋವನ್ನು ಶಾಂತಗೊಳಿಸಿ, ಜ್ವರವನ್ನು ಉಪಶಮನಿಸಿ, ನಿದ್ರಾಭಂಗವನ್ನು ಕಡಿಮೆ ಮಾಡಿ ಧಾತುವರ್ಧನವನ್ನು ಮಾಡುವದರಲ್ಲಿ ಅತ್ಯುತ್ತಮವಾಗಿರುತ್ತದೆ ಕಫವನ್ನು ಒಣಗಿಸಿ ಮಾಯವಾಗುವಂತೆ ಮಾಡುವುದಲ್ಲದೆ ಅದೇ ಸಮಯದಲ್ಲಿ ಒಳ್ಳೇ ಜೀರ್ಣವನ್ನೂ ಉಂಟುಮಾಡುವುದು. ದರ ವೊದಲಾದ ಮಾಹಿತಿಯನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಕಾರಖಾನೆ:-CAWASHAPUR, BOMBAY.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.,
ಪಿ. ವಾರ್ಲಿ, ಮುಂಬಯಿ, ನಂಬ್ರ 18.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ
ಇವರ
ಬಾಲಾಮೃತ.

ಈ ಔಷಧವನ್ನು ಸೇವನೆಮಾಡುವುದರಿಂದ ಮಕ್ಕಳು ರೋಗರಹಿತರೂ ಸಶಕ್ತರೂ ಆಗುವರು. ಇದು ಮಧುರವಾಗಿದೆ; ಮಕ್ಕಳು ಸಂತೋಷದಿಂದ ಸೇವಿಸುತ್ತಾರೆ.

ನಮ್ಮ ವಿಳಾಸ:—

ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.

ವಿಜಂಟರು:— ಡಿ. ಊಲನ್ ಮಾರ್ಟ, ಮಂಗಳೂರು.

OUR RECENT IMPORT IN WRIST WATCHES

Have you used anyone of these Watches?

SEND YOUR ORDER NOW ALL GUARANTEED.

Fashionable wrist wrist Lady's size. Reliable movement Guaranteed.

No. 368

Handy to wear and looks beautiful. Gives punctual time and with strong movement.

Nickel case Rs. 8—0

High-class Radium dial watch watch with Roman figures.

No. 367.

Can be seen in dark nights, Well fitted with best movement and strong to use. Used by one and all

Silver case Rs. 9—0.

Radio light wrist watch.

No. 372.

Fitted with the best mechanism and guaranteed to work and keep perfect time for a long time.

Nickel case Rs. 7—8
Electro rolled-gold „ 9—0

(N. B. In addition to the above, we have good number of varieties of fancy wrist watches, pocket watches. Please write for a descriptive catalogue, which will be sent free)

WHOLESALE IMPORTERS

PETER WATCH COY.,
POST BOX 27, MADRAS

ಶಾಲಿವಾಹನಶಕ ೧೮೪೬ನೆಯ ರಕ್ತಾಕ್ಷಿ ಸಂವತ್ಸರದ ಫಾಲ್ಗುಣ ಶು॥೧೩ ಶನಿವಾರದಿಂದ ರಕ್ತಾಕ್ಷಿ ಸಂವತ್ಸರದ ಫಾಲ್ಗುಣ ಬ॥೩ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೫ನೆಯ ಕುಂಭ ಮಾಸ.)

ತಾರೀಕು	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	ಸೌರಮಾನ.	ಸೂರ್ಯ ಉ.	ಸೂರ್ಯ ಅಸ್ತ.
7	ಶನಿ	೧೩	೩೬.೪೪	ಪುಷ್ಯ	೩೩.೧೪	೨೪	6 45	6.39
8	ರವಿ	೧೪	೪೩.೧೬	ಅಶ್ಲೇಷಾ	೩೬.೧೬	೨೫	6.44	6.39
9	ಸೋಮ	೧೫	೪೪. ೨	ಮಘಾ	೪೧.೪೬	೨೬	6.44	6.39
10	ಕುಜ	○	೪೫.೪೦	ಹುಬ್ಬಾ	೪೪.೧೬	೨೭	6.43	6.39
11	ಬುಧ	೧	೪೫.೨೮	ಉತ್ತರಾ	೪೫.೪೬	೨೮	6 42	6.39
12	ಗುರು	೨	೪೪.೧೬	ಹಸ್ತಾ	೪೬.೧೬	೨೯	6 42	6.39
13	ಶುಕ್ರ	೩	೪೧.೪೪	ಚಿತ್ತಾ	೪೫.೧೪	೩೦	6 41	6.39

ಮಂಗಳೂರಿನ ವಾಯುಸ್ಥಿತಿ.

(೧೯೨೫ನೆಯ ಮಕರ ಫೆಬ್ರುವರಿ.)

Date ತಾರೀಕು	Temperature. ಉಷ್ಣ (ಕಾವು) Maximum ಹೆಚ್ಚೆಂದರೆ	Minimum ಕಡಿಮೆ	Rainfall. ಮಳೆ ದಿನದ ಮಳೆ	ಜುಮಲಾ ಮಳೆ.
27	89—7	72—2	—	—
28	89—9	73—3	—	—
1	88—2	73—2	—	—
2	88—9	71—2	—	—
3	89—7	73—[illegible]	—	—
4	90—8	74—5	—	—
5	90—4	74—0	—	140-89

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ	ವರೆಗೆ
	ರೂ. ಆ.	ರೂ. ಆ
ಹೊಸ ಮಸ್ಕತಿ	7—14	8—10
ಹೊಸ ಗುಡ್ನ ...	7- 4	7—10
ಹೊಸ ರಾಶಿ ...	6- 12	7—8
ಅವ್ವಲ್ ಬೆಳ್ತಿಗೆ ...	8- 4	9—2
ಗುಡ್ನ ಬೆಳ್ತಿಗೆ ...	7- 12	8—2
ರಂಗೂನು ಬೆಳ್ತಿಗೆ ಗೋಣಿ ೧ ...	14- 0	14—8
ಗೋದಿ ಗೋಣಿ ೧ಕ್ಕೆ ...	19- 0	21—8
ಹುರುಳಿಗೋಣಿ ೧ಕ್ಕೆ ...	9- 4	10—8
ಅಲಸಂಡೆಗೋಣಿ ೧ಕ್ಕೆ ...	12- 0	12—8
ತೊಗರಿಗೋಣಿ ೧ಕ್ಕೆ ...	12- 8	13—0
ತೊಗರಿಬೇಳೆ ಗೋಣಿ ೧ಕ್ಕೆ ...	14-0	17—2
ಉದ್ದುಗೋಣಿ ೧ಕ್ಕೆ ...	13- 0	13 8
ಹೆಸರುಗೋಣಿ ೧ಕ್ಕೆ ...	14—0	15—0
ಊರು ಬೆಲ್ಲ ಖಂಡಿ ೧ಕ್ಕೆ ...	—	85—0
ಉಪ್ಪು ಗೋಣಿ ೧ಕ್ಕೆ ...	4- 6	4—9
ಕೊಬ್ರಿ ಖಂಡಿ ೧ಕ್ಕೆ ...	110-0	120—0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	43- 0	—
ಎಳ್ಳಿಂಡಿ ಖಂಡಿ ೧ಕ್ಕೆ ...	40-0	45—0
ಕೊಬ್ರಿ ಎಣ್ಣೆ ಮುಡಿ ೧ಕ್ಕೆ ...	8- 4	9—4
ಎಳ್ಳೆಣ್ಣೆ ಮುಡಿ ೧ಕ್ಕೆ ...	7- 0	11—0
ಸೀಮೆ ಎಣ್ಣೆ ಪೆಟ್ಟಿಗೆ ೧ಕ್ಕೆ ...	8-15-6	—
ಮೋರಿಸ ಸಕ್ಕರೆ ಮುಡಿ ೧ಕ್ಕೆ ...	4—14	5-0
ಊರ ಮೆಣಸಿನಕಾಯಿ ಮುಡಿ ೧ಕ್ಕೆ ...	7. - 8	8—12
ಸಾಸಿವೆ ಮುಡಿ ೧ಕ್ಕೆ ...	9- 0	—
ಕೊತ್ತಂಬರಿ ಮುಡಿ ೧ಕ್ಕೆ ...	3- 10	4—0
ಕಾಫಿ ಖಂಡಿ ೧ಕ್ಕೆ ...	390- 0	440—0
ಬೆಳಗೋಟು ಅಡಿಕೆ ಖಂಡಿ ೧ಕ್ಕೆ ಹಳತು ...	240- 0	245—0
„ ಹೊಸ ಅಡಿಕೆ	185—0	210—0
ಕಾಳುಮೆಣಸು ಖಂಡಿ ೧ಕ್ಕೆ ...	155-0	160—0
ಯಾಲಕ್ಕಿ ಮುಡಿ ೧ಕ್ಕೆ ...	80- 0	85—0
ಗೇರುಬೀಜ ಮುಡಿ ೧ಕ್ಕೆ ...	4—0	4—10
ಕಬ್ಬಿಣ ಖಂಡಿ ೧ಕ್ಕೆ ...	45- 0	65—0
[illegible] ಹಗಣ ಮುಡಿ ೧ಕ್ಕೆ ...	17-12	23—0
ತಾಮ್ರ ಪಾತ್ರಗಳು ಮುಡಿ ೧ಕ್ಕೆ ...	26- 0	—
ಬೀಡಿ ಬೆಳ್ಳಿ ಸೇರು ೧ಕ್ಕೆ ...	22 - 0	
ಹಿತ್ತಾಳೆ ಹಗಣ ಮುಡಿ ೧ಕ್ಕೆ ...	18- 8	
ಪವನು	14-3-6	

Pandit B. Ramakrishna Baliga's Siddha Ayurvedic medicines of 50 years' reputation.

ಮಹಾ ಮದನಕಾಮೇಶ್ವರಿ ಲೇಹ—ಇದನ್ನು ಭಂಗಾರ, ಅಭ್ರಕಭಸ್ಮ, ರಸಸಿಂಧೂರ, ಕಸ್ತೂರಿ, ಕುಂಕುಮಕೇಸರ ವಗೈರೆ ಅಮೂಲ್ಯವಾದ ರಸಾಯನ ದ್ರವ್ಯಗಳಿಂದ ತಯಾರಿಸಲ್ಪಟ್ಟಿರುತ್ತದೆ. ಇದು ಎಲ್ಲಾ ತರದ ನಪುಂಸಕ ರೋಗಗಳನ್ನೂ ಸ್ವಪ್ನಾವಸ್ಥೆಯಲ್ಲಿ ಧಾತುಪತನೆಯನ್ನೂ ಗುಣಪಡಿಸಿ, ದೇಹಕ್ಕೆ ದಿವ್ಯಕಾಂತಿಯನ್ನೂ, ಪುಷ್ಟಿಯನ್ನೂ, ಪುರುಷತ್ವವನ್ನೂ, ವೀರ್ಯಸ್ತಂಭನವನ್ನೂ ಉಂಟುಮಾಡಿ ಅತ್ಯಾನಂದವನ್ನು ಕೊಡುವುದಲ್ಲದೆ, ಅಜೀರ್ಣ, ಅತಿಸಾರ, ಗ್ರಹಣಿ, ಅಮ್ಲ, ಪಿತ್ತ, ಉದರಶೂಲೆ, ಪ್ರಮೇಹ ವಗೈರೆ ರೋಗಗಳನ್ನು ಗುಣಪಡಿಸುವಲ್ಲಿ ಕೇವಲ ಅಮೃತಸಮಾನವಾಗಿರುವುದು. ಇದನ್ನು ಅಬಾಲವೃದ್ಧರೂ ಸೇವಿಸಬಹುದು.

ಸ್ವರ್ಣ ಮಿಶ್ರಿತ ಲೇಹಕ್ಕೆ (43 ದಿನಗಳ ವರೆಗೆ ಸಾಕಾಗುವ) ಸೇರು ೧ರ ರೂ. 4—0—0.
ಸ್ವರ್ಣ ಇಲ್ಲದ „ „ „ 3—0—0.

ಬ್ರಿಹತ್ ಶಾರಿವ್ಯಾದಿ ರಸಾಯನ—ಇದು ಶಾಸ್ತ್ರಿಯಂತೆ ರಕ್ತವನ್ನು ಶೋಧಿಸುವ ದಿವ್ಯೌಷಧವಾಗಿರುತ್ತದೆ. ಇದರ ಸೇವನೆಯಿಂದ 20 ತರದ ಪ್ರಮೇಹ ರೋಗಗಳೂ ಎಲ್ಲಾ ತರದ ಫರಂಗಿ ರೋಗಗಳೂ ಅಲ್ಪ ಸಮಯದಲ್ಲಿ ಗುಣಹೊಂದುವವು. ಅದಲ್ಲದೆ ಇದು ಎಲ್ಲಾ ತರದ ಕುಷ್ಠವ್ಯಾಧಿಗಳನ್ನೂ, ತುಚ್ಛ, ಕುರು ಮೊದಲಾದ ಸಕಲ ಚರ್ಮವ್ಯಾಧಿಗಳನ್ನೂ, ಪಾದರಸ ಸೇವನೆಯಿಂದ ಉಂಟಾದ ರೋಗಗಳನ್ನೂ ಮತ್ತು ಹೆಂಗಸರ ಪ್ರದರ ರೋಗಗಳನ್ನೂ ಶಾಸ್ತ್ರಿಯಂತೆ ಗುಣಪಡಿಸುವುದು.

8 ಟಿನ್ನಿನ ಬಾಟ್ಲಿ ಒಂದರ ಕ್ರಯ ಬರೇ ರೂ. 1—0—0.

ಧಾರ್ಲಿ ಪರ್ಪಟಕಾದಿ ತೈಲ—(ಸದ್ಯ ಇಲ್ಲದವರಿಗೆ ಸಿದ್ಧೌಷಧ.) ಇದನ್ನು ತಲೆಗೆ ಇಟ್ಟಲ್ಲಿ ಸಕಲ ಶಿರೋರೋಗಗಳೂ, ಕರ್ಣ, ನೇತ್ರ, ದಂತ, ಜಿಹ್ವಾರೋಗಗಳೂ, ತಲೆ ತಿರುಗುವುದು, ಕಠಿಣವಾದ ತಲೆ ಶೂಲೆ ಮೊದಲಾದ ರೋಗಗಳು ನಾಶವಾಗಿ, ಸ್ಮರಣಶಕ್ತಿಯನ್ನೂ, ಜ್ಞಾನಶಕ್ತಿಯನ್ನೂ ವೃದ್ಧಿಗೊಳಿಸುವುದು. ಇದು ವಿದ್ಯಾರ್ಥಿಗಳಿಗೂ ವಕೀಲರಿಗೂ ಒಂದು ಸಿದ್ಧೌಷಧ.

4 ಟಿನ್ನಿನ ಬಾಟ್ಲಿ ೧ರ ರೂಪಾಯಿ 1—0—0.

ಸೂಚನೆ:—ಟಪ್ಪಾಲ ಹಾಸಲು ಪ್ರತ್ಯೇಕ. ಸ್ವಲ್ಪ ಬಡ ಜನರಿಗೆ ಔಷಧವು ಧರ್ಮಾರ್ಥವಾಗಿ ಕೊಡಲ್ಪಡುವುದು.

ವಿಳಾಸ:— ಪಂಡಿತ, ಬಿ. ರಾಮಕೃಷ್ಣ ಬಾಳಿಗ, ಬಂಟವಾಳ ದ. ಕ.

The Canara Public Conveyance Co., Ltd, Mangalore.

(ESTABLISHED 1914).

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು
- ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು
- ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
- ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
- ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.
- ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತಿರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ—ಈ ಪ್ರಾಂತ್ಯಗಳಿಗೆ ಈ ಕಂಪೆನಿಯು ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯೆ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd, Mangalore. S. K.

ಕನ್ನಡಿಗರೆ! **ವಸಂತ.** ಕನ್ನಡಿಯರೆ!

ಈಗಾಗಲೇ ಎರಡನೇ ಸಂಪುಟವು ಆರಂಭವಾಗಿದೆ.

ಇತಿಹಾಸನಿಧಿ ಎಂದರೆ . . . . ವಸಂತ
ನವನವಕುಸುಮಾರವನೆಂದರೆ . . . . ವಸಂತ
ಕೈಗಾರಿಕೆಯ ಸಾಮ್ರಾಜ್ಯವೆಂದರೆ . . . . ವಸಂತ
ಕರ್ನಾಟಕ ಭಾಷಾಸೇವಕನೆಂದರೆ . . . . ವಸಂತ
ದೀನಬಂದೇಶ ಬಂಧುವೆಂದರೆ . . . . ವಸಂತ
ಕಾದಂಬರಿಗಳ ಭಂಡಾರವೆಂದರೆ . . . . ವಸಂತ
ಚಿತ್ರಾಕರ್ಷ ಚಿತ್ರಶಾಲೆಯೆಂದರೆ . . . . ವಸಂತ
ದೇಶಭಕ್ತನೆಂದರೆ . . . . ವಸಂತ

ಇಂತಹ ವಸಂತನು ಯಾರಿಗೆ ಬೇಕು, ಯಾರಿಗೆ ಬೇಡ?

48 (ಕ್ರೌನ್ ¼ ಫುಟ ಸ್ಕ್ಯಾಪ) ಪುಟಗಳನ್ನುಳ್ಳ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3—4—0 ಮಾತ್ರ.

ವ್ಯವಸ್ಥಾಪಕ,
ವಸಂತ ಕಾರ್ಯಾಲಯ,
ಕುಂದಾಪುರ, ದಕ್ಷಿಣ ಕನ್ನಡ.

CAR FESTIVAL
CONCESSION
MAKE HASTE AND BUY A
Pocket Electric Lamp
AVAILABLE
In different varieties, Mother of pearl lamps. Cycle lamps.
NICKEL PLATED.
Hammered Brand, with Powerful Bulls-eye lance,
Use with it
Bull's-eye Dry Batteries.

The Mangalore Trading Association,
Car Street, MANGALORE.

ಬಂದು ನೋಡಿರಿ! ತಿಂದು ನೋಡಿರಿ!
ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ
ಪದಕವನ್ನು
ಬಹುಮಾನವಾಗಿ ಪಡೆದಿರುವ
ಎಸ್. ಪಿ. ಆಚಾರ್ಯ
ಇವರಿಂದ ತಯಾರಿಸಲ್ಪಟ್ಟ
ಉಪ್ಪಿನ ಕಾಯಿಗಳನ್ನು
ಬಂದು ನೋಡಿರಿ! ತಿಂದು ನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ, ಶುಂಠಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನ್ನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ
ಬಂದು ನೋಡಿರಿ! ತಿಂದು ನೋಡಿರಿ!

ಇಂಡಿಯನ್ ಸ್ವೀಟ್‌ಮೀಟ್ ಮಾರ್ಟ್.

ಮನೋಲ್ಲಾಸಿನಿ ಕಾಫಿ ಕ್ಲಬ್. ನವಶೇರಿಟು ರೋಡು, ಮಂಗಳೂರು. } ಅಥವಾ { "ಸದಾನಂದ ಕಾಫಿ ಕ್ಲಬ್" ರಥಬೀದಿ, ಮಂಗಳೂರು.

ಕುಂದಾಪುರ ಸರ್ಕಲ್ ಓಟರರಲ್ಲಿ ವಿನಂತಿ.

ಮಹಾಶಯರೇ,

ಕುಂದಾಪುರ ತಾಲೂಕು ಬೋರ್ಡಿಗೆ ನಾನೊಬ್ಬನು ನಿಮ್ಮೆಲ್ಲರ ಸೇವೆಯನ್ನು ಮಾಡುವುದರ ಸಲುವಾಗಿ ಉಮೇದ್ವಾರನಾಗಿ ನಿಂತಿರುವೆನು. ದೇಶಸೇವೆಗಾಗಿ ಕೆಲಸಮಾಡುತ್ತಿರುವ ಕಾಂಗ್ರೆಸ್ಸಿನ ನಿಯಮವನ್ನು ಅನುಸರಿಸಿ ವಿದ್ಯಾಭಿವೃದ್ಧಿ ಮೊದಲಾದ ಸಾರ್ವಜನಿಕ ಉಪಯೋಗಕಾರಿಯಾದ ವಿಚಾರಗಳಲ್ಲಿ ಹೆಚ್ಚಿನ ಪರಿಶ್ರಮ ತೆಗೆದುಕೊಳ್ಳಲು ಬಯಸುವೆನು. ತಾವು ನನ್ನಲ್ಲಿ ಆ ಯೋಗ್ಯತೆ ಇರುವುದೆಂದು ನಂಬುವುದಾದರೆ ತಮ್ಮ ಓಟನ್ನು ನನಗೆ ಕೊಡಿಸಬೇಕೆಂದು ಪ್ರಾರ್ಥಿಸುತ್ತೇನೆ.

ಕುಂದಾಪುರ, ತಾ. 2-3-1925. } ಇಂತಿ ತಮ್ಮಗಳ ವಿಧೇಯ,
ಅಮಾಸೆಬೈಲು ಕೃಷ್ಣರಾಯ ಕೊಡಗಿ.

ದಕ್ಷಿಣ ಕನ್ನಡ ಜಿಲ್ಲಾ ಶಿಕ್ಷಣ ಪ್ರದರ್ಶನದಲ್ಲಿ ಬೆಳ್ಳಿಯ ಪದಕ ಬಹುಮಾನಹೊಂದಿದವರ ಹೆಸರುಗಳು.

1. ಪ್ರಾಣಿ ಗುಣ ವಿಜ್ಞಾನ (Physiology) ಮತ್ತು ಆರೋಗ್ಯ ನಿಧಾನ (Hygiene)ದ ಮೊದೆಲ ಬಗ್ಗೆ-ಕಟ್ಟಪ್ಪು ಬೋರ್ಡು ಶಾಲಾ ಉಪಾಧ್ಯಾಯ ಕೆ. ದೊಂಬಯ್ಯ ಹೆಗ್ಡೆ.

2. ಚರಿತ್ರೆ ಮತ್ತು ಸಿವಿಕ್ಸ್ ಬಗ್ಗೆ— ಕಾರ್ಕಳ ಹಿಂದೂ ಎಲಿಮೆಂಟರಿ ಶಾಲೆಯ ಹೆಡ್ ಮಾಸ್ತರ್ ಕೆ. ಗಣಪಯ್ಯ ಶೆಟ್ಟಿ.

3 ಭೂಗೋಳದ ಮೊಡೆಲಿನ ಬಗ್ಗೆ— ಪ್ರಕೃತಿಯ ನಾನಾ ಪರಿಸ್ಥಿತಿಯನ್ನು ತೋರಿಸುವ ಮೊಡೆಲನ್ನು ತಯಾರಿಸಿದ ನಾರಾವಿ ಎಲಿಮೆಂಟರಿ ಶಾಲೆಯ ಎಸ್. ಸದಾಶಿವರಾವ್.

4. ಮಣ್ಣಿನ ಕೈಗಾರಿಕೆ ಬಗ್ಗೆ — ಧರ್ಮಸ್ಥಳದ ಸಿಂಹಾವಲೋಕನದ ಚಿತ್ರವನ್ನು ಮಣ್ಣಿನಿಂದಲೇ ತಯಾರಿಸಿದ ಎಲಿಮೆಂಟರಿ ಟ್ರೈನಿಂಗ್ ಶಾಲೆಯ ವಿದ್ಯಾರ್ಥಿ ಡಿ. ಅನಂತಯ್ಯ.

5. ರಟ್ಟೆಯ ಹಾಗೂ ಎಲೆಗಳ ಕೆಲಸಗಳ ಮತ್ತು ಮರದ ಕೆಲಸ ಮೊದಲಾದ ಕೈಗಾರಿಕೆಗೆ— ಇನ್ನವಳ್ಳಿ ಬೋರ್ಡು ಶಾಲಾ ಉಪಾಧ್ಯಾಯ ಪಿ. ಸೋಮಯ್ಯ ಇವರಿಗೆ.

6 ನೆಚರಲ್ ಹಿಸ್ಟರಿ ಸಂಬಂಧವಾದ ಉಪಕರಣಗಳನ್ನು ತಯಾರಿಸಿದ ಬಗ್ಗೆ— ಎ. ಜೆ. ಕೆರಟ್, ಗವರ್ನಮೆಂಟ ಸೆಕೆಂಡರಿ ಟ್ರೈನಿಂಗ್ ಸ್ಕೂಲ್.

7. ಡ್ರೋಯಿಂಗ್ ಮತ್ತು ಪೈಂಟಿಂಗ್-ಗವರ್ನಮೆಂಟ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯ ವಿದ್ಯಾರ್ಥಿ [illegible] ಪೈ ಇವರಿಗೆ.

8. ಕಸೂತಿ ಕೆಲಸದ ಬಹುಮಾನ-ಸೆಂಟ್ ಎನ್ಸ್ ಟ್ರೈನಿಂಗ್ ಶಾಲೆಯ ಮಿಸ್‌ಟ್ರೆಸ್ ರೋಸಿ ಫರ್ನಾಂಡಿಸ್ ಇವರಿಗೆ.

9. ಮೇಣದಿಂದ ತಯಾರಿಸಿದ ಸಾಮಾನುಗಳ ಬಗ್ಗೆ ಬೊಕ್ಕಪಟ್ಣ ಮುನ್ಸಿಪಲ್ ಹುಡುಗಿಯರ ಶಾಲೆಯ ಹೆಡ್ ಮಿಸ್ಟ್ರೆಸಿಗೆ.

10. ಮೇಜುಗಳು ಮತ್ತು ಚಾರ್ಟುಗಳ ಬಗ್ಗೆ— ಸೆಂಟ್ ಎನ್ಸ್ ಸೆಕೆಂಡರಿ ಟ್ರೈನಿಂಗ್ ಶಾಲೆಗೆ, ಈ ರೀತಿ ಪದಕಗಳನ್ನು ಹಂಚಿದ್ದಾರೆಂದು ತಿಳಿಯುತ್ತೇವೆ. ಇನ್ನು ಅನೇಕರಿಗೆ I ಕ್ಲಾಸ್ ಸೆಕೆಂಡ್ ಕ್ಲಾಸ್ ಸರ್ಟಿಫಿಕೇಟುಗಳೂ ದೊರಕಿವೆ.

ಮದರಾಸು ಲೆಜಿಸ್ಲೇಟಿವ್ ಕೌನ್ಸಿಲಿನ ದಕ್ಷಿಣ ಕನ್ನಡ ಜಿಲ್ಲೆಯ ಓಟರುಗಳಿಗೆ ವಿನಂತಿ.

ಮಹಾಶಯರೇ,

ಮದರಾಸು ಸರಕಾರದವರು ಕೊಟ್ಟ ಗವರ್ನಮೆಂಟು ಪ್ಲೀಡರಿಯನ್ನು ನಾನು ಕೈಕೊಳ್ಳಲು ಸಮ್ಮತಿಸಿದ ಕಾರಣದಿಂದ ಇಲೆಕ್ಷನ್ ರೂಲುಗಳ ಪ್ರಕಾರ ಕೌನ್ಸಿಲಿನ ನನ್ನ ಮೆಂಬರಿಕೆಯು ತನ್ನಂತೆ ಅಂತ್ಯವಾಗುವುದಾದರೂ, ಖಾಲಿಬೀಳುವ ಆ ನನ್ನ ಮೆಂಬರಿಕೆಗೆ ಅದರ ಅವಧಿಯು ಪರ್ಯಂತ ನಾನೇ ಪುನಃ ಉಮೇದುವಾರನಾಗಿ ನಿಲ್ಲುವೆನೆಂಬ ಸಂಗತಿಯನ್ನು ಈ ಮೂಲಕ ತಮ್ಮೆಲ್ಲರಿಗೆ ತಿಳುಹಲು ಸಂತೋಷಿಸುತ್ತೇನೆ. ಈ ಮೊದಲಿನ ನನ್ನ ಮೆಂಬರಿಕೆಯ ಅವಧಿಯಲ್ಲಿ ನಾನು ಮಾಡಿರುವ ತಮ್ಮೆಲ್ಲರ ಪರವಾದ ಸೇವಾ ಕಾರ್ಯದಿಂದ ತಾವೆಲ್ಲರೂ ತೃಪ್ತರೂ ಸಂತುಷ್ಟರೂ ಆಗಿರಬಹುದೆಂದು ನಾನು ಭಾವಿಸುವೆನು. ಮುಂದೆಯೂ ತಾವು ನನ್ನನ್ನು ಪುನಃ ಮೆಂಬರರಾಗಿ ಚುನಾಯಿಸುವುದಾದರೆ, ಹಿಂದಿನಂತೆ ಕ್ರಮದಿಂದ ನನ್ನ ಕೈಯ್ಯಲ್ಲಾದಷ್ಟು ಮಟ್ಟಿಗೆ ಉತ್ಸಾಹಾತಿಶಯವಾಗಿ ತಮ್ಮೆಲ್ಲರ ಸೇವೆಯನ್ನು ಮಾಡಲು ಸಿದ್ಧನಾಗಿರುವೆನು.

ತಾ. 2-3-25. ತಮ್ಮ ಆಜ್ಞಾಧಾರಕನಾದ
ಬಿ. ಮಹಾಬಲ ಹೆಗ್ಗಡೆ.

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ ಮುನ್ಸಿಫ ಕೋರ್ಟಿನಲ್ಲಿ.
ಕ್ರಮನಂಬ್ರ 66/1925.
ವಾದಿ—ಅನಂತಭಟ್ಟ ಕೂಡಾ ೩ ಜನರು
ಪ್ರತಿವಾದಿರು—ಕೃಷ್ಣರಾಯ ಕೊಡಗಿ ಕೂಡಾ ೨ ಜನರು

ಸದರಿ ವ್ಯಾಜ್ಯದ ವಾದಿರು ಕುಂದಾಪುರ ಕಸಬಾ ಗ್ರಾಮದ ಸರ್ವೆ ನಂಬ್ರ 67/8A ಸ್ಥಳವು ವಾದಿರು ಮತ್ತು ಪಬ್ಲಿಕ್ ಜನರು ಮಾಮೂಲ ಪ್ರಕಾರ ಉಪಯೋಗಿಸಿದಂತೆ ಅದನ್ನು ವಿಂಗಡಿಸಿಡಬೇಕಾಗಿ ವಗ್ಯೆರೆ ಬಗ್ಗೆ ತಂದ ದಾವೆಯನ್ನು ಸರ್ವೆ ಜನರ ಬಗ್ಗೆ ಸಹಾ ನಡಿಸಲಿಕ್ಕೆ ತಮಗೆ ಹುಕುಂ ಕೊಡಬೇಕಾಗಿ ವಾದಿರು ಕೊಟ್ಟ ಅರ್ಜಿಯು ಇದೇ ತಿಂಗಳ ತಾರೀಕು 19ನೇ ದಿವಸ ತನಖಿಗೆ ಇಟ್ಟದೆ. ಆ ಕುರಿತು ಆಕ್ಷೇಪ ಇದ್ದವರು ಸ್ವತಹಾ ಆಗಲಿ ಅಥವಾ ಕ್ರಮವಾಗಿ ಅಧಿಕಾರ ಹೊಂದಿದ ಪ್ಲೀಡರ ಮೂಲಕವಾಗಲಿ ಸದರಿ ದಿವಸ ಹಗಲು ಹನ್ನೊಂದು ಗಂಟೆಗೆ ಸದರಿ ಕೋರ್ಟಿನಲ್ಲಿ ಜ್ಯಾಹೀರು ಮಾಡಿಕೊಳ್ಳದೆ ಇದ್ದರೆ ಸದರಿ ವಿಷಯವು ಯೇಕಪಕ್ಷವಾಗಿ ತೀರ್ಮಾನಿಸಲ್ಪಡುವದೆಂದು ಈ ಮೂಲಕ ತಿಳಿಯಪಡಿಸಿಯದೆ.

ಕುಂದಾಪುರ, ತಾ. 4-3-'25. } K. Narayana Shenai
Pleader for Plaintiff.

ಮದ್ರಾಸು ನ್ಯಾಯ ವಿಧಾಯಕ ಸಭೆಯ ದಕ್ಷಿಣ ಕನ್ನಡ ಜಿಲ್ಲಾ ಮಹಮ್ಮದೀಯರಲ್ಲದ (ರೂರಲ್) ವೋಟರರ ಸಮುದಾಯದವರು ೧೯೨೫ನೇ ಇಸವಿ ಎಪ್ರಿಲ ೨೦ನೇ ತಾರೀಕಿನಲ್ಲಿಯೂ ಅದಕ್ಕೆ ಮುಂಚೆ ಒಂದು ಮೆಂಬರರನ್ನು ಚುನಾವಣೆ ಮಾಡಬೇಕಾಗಿ ಇಸ್ತಿಹಾರು ಮೂಲಕವಾಗಿ ಕೇಳಲ್ಪಟ್ಟಿರುವುದರಿಂದ ಸದರಿ ವೋಟರರ ಸಮುದಾಯದ ರಿಟರ್ನಿಂಗ್ ಅಧೀಸರನಾದ ದಕ್ಷಿಣ ಕನ್ನಡ ಜಿಲ್ಲಾ ಕಲೆಕ್ಟರ ಸಿ. ಎ. ಸೌಟರ್ ಆದ ನಾನು ಈ ಕೆಳಗಿನ ಸಾರ್ವಜನಿಕ ನೋಟೀಸನ್ನು ಈ ಮೂಲಕವಾಗಿ ಕೊಟ್ಟಿರುತ್ತೇನೆ.

ಸಾರ್ವಜನಿಕ ನೋಟೀಸು.

(I) ಚುನಾವಣೆಯಾಗಬೇಕಾದ ಮನುಷ್ಯರ ಸಂಖ್ಯೆಯು ಒಂದು ಆಗಿರುತ್ತದೆ.

(II) ಶಿಫಾರಸು ಪತ್ರಗಳು ಈ ಕೆಳಗೆ ದಸ್ಕತುಮಾಡಿದವರಿಗೆ ಹಜೂರು ಆಫೀಸಿನಲ್ಲಿ ಅಥವಾ ಸದರಿಯವರು ಅನಿವಾರ್ಯವಾಗಿ ಅದನ್ನು ಪಡೆದು ಕೊಳ್ಳುವರಿ ಆಗದ ಸಂಗತಿಯಲ್ಲಿ ಖಜಾನಾ ಡಿಪ್ಯುಟಿ ಕಲೆಕ್ಟರಿಗೆ ಹಜೂರು ಆಫೀಸಿನಲ್ಲಿ ಒಪ್ಪಿಸಲ್ಪಡಬಹುದು. ಅವು ೧೯೨೫ನೇ ಇಸವಿ ಮಾರ್ಚಿ ೧೬ನೇ ತಾರೀಕಿನಲ್ಲಿಯೂ ಅದಕ್ಕೆ ಮುಂಚೆ ಪೂರ್ವಾಹ್ನ ೧೧ ಗಂಟೆಯಿಂದ ಅಪರಾಹ್ನ ೩ ಗಂಟೆಯೊಳಗೆ ಹಾಜರುಪಡಿಸೋಣಾಗತಕ್ಕದ್ದು.

(III) ಶಿಫಾರಸು ಪತ್ರದ ಫಾರ್ಮುಗಳನ್ನು ಮೇಲೆ ಹೇಳಲ್ಪಟ್ಟ ಮನುಷ್ಯರ ಆಫೀಸುಗಳಲ್ಲಿ ೧೯೨೫ನೇ ಇಸವಿ ಮಾರ್ಚಿ ೯ನೇ ತಾರೀಕಿನಿಂದ ೧೯೨೫ನೇ ಇಸವಿ ಮಾರ್ಚಿ ೧೬ನೇ ತಾರೀಕು ವರೆಗೆ ಮಧ್ಯಾಹ್ನ ೧೨ ಗಂಟೆಯಿಂದ ಸಾಯಂಕಾಲ ೩ ಗಂಟೆಯ ವರೆಗೆ ಪಡೆಯಬಹುದು.

(IV) ಶಿಫಾರಸು ಪತ್ರಗಳು ಹಜೂರು ಆಫೀಸಿನಲ್ಲಿ ೧೯೨೫ನೇ ಇಸವಿ ಮಾರ್ಚಿ ೧೯ನೇ ತಾರೀಕಿನಲ್ಲಿ ಮಧ್ಯಾಹ್ನ ೨ ಗಂಟೆಗೆ ಪರಿಶೋಧನೆ ಬಗ್ಗೆ ತೆಗೆದುಕೊಳ್ಳಲ್ಪಡುವವು.

(V) ಚುನಾವಣೆಯ ವಿಷಯವಾಗಿ ಮೇಲಾಟವಿರುವ ಸಂಗತಿಯಲ್ಲಿ ಪೋಲು ೧೯೨೫ನೇ ಇಸವಿ ಎಪ್ರಿಲ ೨೦ನೆ ತಾರೀಕಿನಲ್ಲಿ ಬೆಳಿಗ್ಗೆ ೭ ಗಂಟೆಯಿಂದ ಸಾಯಂಕಾಲ ೬ ಗಂಟೆಯ ವರೆಗೆ ಮಧ್ಯಾಹ್ನ ೧೨ ಗಂಟೆಯಿಂದ ೧ ಗಂಟೆಯ ವರೆಗೆ ವಿಶ್ರಾಂತಿಯ ಬಗ್ಗೆ ಸಮಯವನ್ನು ಬಿಟ್ಟು ಜರಗತಕ್ಕದ್ದು.

(VI) ಯಾವ ಇಲೆಕ್ಟರನಾದರೂ ಇಲೆಕ್ಟರರ ಪಟ್ಟಿಯಲ್ಲಿ ಯಾವ ಪೋಲಿಂಗ್ ಪ್ರದೇಶದೊಳಗೆ ಅವನ ಹೆಸರು ಕಂಡುಬರುತ್ತದೆಯೋ—ಆ ಪ್ರದೇಶದ ಹೊರಗೆ ಪೋಲು ಕೊಡಲಿಕ್ಕೆ ಬಿಡಲ್ಪಡಲಿಕ್ಕಿಲ್ಲ. ಮತ್ತು ಪ್ರತಿಯೊಂದು ಪೋಲಿಂಗ್ ಪ್ರದೇಶದಲ್ಲಿ ಇಲೆಕ್ಟರರು ವೋಟು ಕೊಡಬಹುದಾದ ಪೋಲಿಂಗ್ ಸ್ಟೇಶನುಗಳನ್ನು ಕಾಣಿಸುವ ಪಟ್ಟಿಯಿಂದ ತಿಳಿಯಬಹುದು.

ಯಚ್. ಸುಬ್ಬರಾವ್,
ರಿಟರ್ನಿಂಗ್ ಆಫೀಸರರ ಬಗ್ಗೆ.

ದಕ್ಷಿಣಕನ್ನಡ ಜಿಲ್ಲಾ ಶಿಕ್ಷಣ ಪ್ರದರ್ಶನ ಕಾಲದಲ್ಲಿ ನೆರೆದು ಬಂದಿರುವ ದಕ್ಷಿಣಕನ್ನಡ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಉಪಾಧ್ಯಾಯರು ತಾರೀಕು 1-8-'25ರಲ್ಲು ಜರಗಿಸಿದ ಸಭೆಯಲ್ಲಿ ಪಾಸಾದ ನಿರ್ಣಯಗಳ ಪ್ರೊಸಿಡಿಂಗ್ಸ್.

ಮ। ರಾ। ಅಮ್ಮೆಂಬಳ ಶ್ರೀನಿವಾಸ ಪೈ ಅವರ್ಗಳ್ ಬಿ. ಎ. ಬಿ. ಎಲ್. ಕೆನರಾ ಹೈಸ್ಕೂಲಿನ ಮೆನೇಜರ್ ಮಂಗಳೂರು, ಮ। ರಾ। ರಾವ್ ಬಹದ್ದೂರ್ ಎನ್. ಸುಬ್ಬರಾವ್ ಅವರ್ಗಳ್ ಡಿಸ್ಟ್ರಿಕ್ ಬೋರ್ಡು ಪ್ರೆಸಿಡೆಂಟ್ ದಕ್ಷಿಣಕನ್ನಡ, ಮ। ರಾ। ಮೊಳಹಳ್ಳಿ ಶಿವರಾವ್ ಅವರ್ಗಳ್ ಪುತ್ತೂರು ತಾಲೂಕು ಬೋರ್ಡು ವೈಸ್ ಪ್ರೆಸಿಡೆಂಟ್, ಮ। ರಾ। ಅತ್ತಾವರ ಬಾಲಕೃಷ್ಣ ಸೆಟ್ಟಿ ಅವರ್ಗಳ್ ಡಿಸ್ಟ್ರಿಕ್ಟ್ ಎಡ್ಯುಕೇಶನಲ್ ಮೆಂಬರ, ದಕ್ಷಿಣ ಕನ್ನಡ, ಮ। ರಾ। ಬಿ ವೆಂಕಟಪ್ಪಯ್ಯ ಮಲ್ಯ ಅವರ್ಗಳ್, ಶಾಲಾ ಡಿಪ್ಟಿ ಇನ್ಸ್‌ಪೆಕ್ಟರ್ ಉಡ್ಪಿ ರೇಂಜು, ಮ। ರಾ। ಕೋಡಿಕಲ್ ಮಂಗೇಶರಾವ್ ಅವರ್ಗಳ್ ಶಾಲಾ ಡಿಪ್ಟಿ ಇನ್ಸ್‌ಪೆಕ್ಟರ್ ಮಂಗಳೂರು ರೇಂಜು, ಮ। ರಾ। ಉಳ್ಳಾಲ ಮಂಗೇಶರಾವ್ ಅವರ್ಗಳ್ ಗವರ್ನಮೆಂಟ್ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲಾ ಮುಖ್ಯ ಉಪಾಧ್ಯಾಯ ಮಂಗಳೂರು, ಮೊದಲಾದ ಗೃಹಸ್ಥರು ಹಾಜರಿದ್ದರು.

ಈ ಸಭೆಯು ರಾಜಶ್ರೀ ಅಮ್ಮೆಂಬಳ ಶ್ರೀನಿವಾಸ ಪೈಗಳವರ ಅಧ್ಯಕ್ಷತೆಯಲ್ಲಿ ಜರಗಿ ಈ ಕೆಳಗಿನ ಠರಾವುಗಳು ಸರ್ವಸಮ್ಮತದಿಂದ ಮಂಜೂರಾದವು.

ಈ ಕೆಳಗೆ ಕಾಣಿಸಿದ ಪರಿಮಾಣದಲ್ಲಿ ಎಯಿಡೆಡ್ ಶಾಲೆಗಳ ಆಯಾಯ ಗ್ರೇಡಿನ ಉಪಾಧ್ಯಾಯರಿಗೆ ತಿಂಗಳು ೧ಕ್ಕೆ ಟೀಚಿಂಗ್ ಗ್ರಾಂಟು ಸಿಕ್ಕುವಂತೆ ಎಡ್ಯುಕೇಶನಲ್ ಕೌನ್ಸಿಲಿಗೆ ಗ್ರಾಂಟು ಕೊಡಿಸಬೇಕು.

(a) ಅನ್‌ಟ್ರೈನ್ಡ್ ಲೋವರ್ ಗ್ರೇಡ್ ತಿಂಗಳು ೧ಕ್ಕೆ ರೂ. ೬, ಅನ್‌ಟ್ರೈನ್ಡ್ ಹಾಯರ್ ಗ್ರೇಡ್ ತಿಂಗಳು ೧ಕ್ಕೆ ರೂ. ೮, ಅನ್‌ಟ್ರೈನ್ಡ್ ಸೆಕೆಂಡರಿ ಗ್ರೇಡ್ ತಿಂಗಳು ೧ಕ್ಕೆ ರೂ. ೧೨. (b) ಟ್ರೈನ್ಡ್ ಲೋವರ್ ಗ್ರೇಡ್ ತಿಂಗಳು ೧ಕ್ಕೆ ರೂ. ೧೦, ಟ್ರೈನ್ಡ್ ಹಾಯರ್ ಗ್ರೇಡ್ ರೂ. ೧೨, ಟ್ರೈನ್ಡ್ ಸೆಕೆಂಡರಿ ಗ್ರೇಡ್ ರೂ. ೨೦. (c) ಟ್ರೈನ್ಡ್ ಆಗಿ ಒಂದೇ ಶಾಲೆಯಲ್ಲಿ ಬಿಡದೆ ೩ ವರುಷ ಸರ್ವೀಸು ಮಾಡುತ್ತಿದ್ದಲ್ಲಿ ಆಯಾಯ ಗ್ರೇಡಿನ ಉಪಾಧ್ಯಾಯರುಗಳಿಗೆ ೩ ವರುಷಕ್ಕೊಮ್ಮೆ (ತಿಂಗಳು ೧ಕ್ಕೆ) ರೂ. ೧ರಂತೆ ೧೫, ೧೮, ೨೫ ರೂಪಾಯಿ ಆಗುವ ವರೆಗೆ ಗ್ರಾಂಟು ಏರಿಸಬೇಕು.

೨ ಬೋರ್ಡು ಶಾಲಾ ಉಪಾಧ್ಯಾಯರಿಗೆ ಯಾವ ದರದಲ್ಲಿ ಸಂಬಳ ಸಿಕ್ಕುತ್ತದೋ ಅದೇ ದರದಲ್ಲಿ ಎಯಿಡೆಡ್ ಶಾಲಾ ಉಪಾಧ್ಯಾಯರುಗಳಿಗೆ ಸಂಬಳ ಸಿಕ್ಕಬೇಕು.

೩ ಉತ್ತಮ ತರದ ಶಿಕ್ಷಣವನ್ನು ಕೊಡುವ ಎಯಿಡೆಡ್ ಶಾಲೆಗಳಿಗೆ ಸೇಕಡ ೧೦೦/ ವರೆಗೆ ಹೆಚ್ಚಿಗೆ ಟೀಚಿಂಗ್ ಗ್ರಾಂಟು ಕೊಡಬೇಕು.

೪. ಹಿಂದೂದೇಶದ ಬೇರೆ ಕೆಲವು ಭಾಗಗಳಲ್ಲಿರುವಂತೆ ಸರಕಾರದವರು ಮೌಲ್ಯದ ½ನೇ ಅಂಶ ಫರ್ನಿಚರ್ ಗ್ರಾಂಟು ಕೊಡಬೇಕು.

೫. ಶಾಲಾ ಕಟ್ಟಡಗಳ ನಕ್ಷೆ ಮತ್ತು ಎಸ್ಟಿಮೇಟುಗಳನ್ನು ಧರ್ಮಾರ್ಥವಾಗಿಯೇ ಡಿಪಾರ್ಟುಮೆಂಟಿನಿಂದಲೇ ಒದಗಿಸಿಕೊಡತಕ್ಕದ್ದು. ಮತ್ತು ½ನೇ ಅಂಶ ಬಿಲ್ಡಿಂಗ್ ಗ್ರಾಂಟು ಸಿಕ್ಕುವಂತೆ ಆಗಬೇಕು. ಗ್ರಾಂಟು ಸಿಕ್ಕಿದ ೨೦ ವರುಷಗಳ ವಳಗೆ ಶಾಲೆ ಮುಚ್ಚಲ್ಪಟ್ಟರೆ ಸರಕಾರದವರು ಕಟ್ಟೋಣದ ಹಕ್ಕನ್ನು ಕೇಳಬಹುದು. ಅದೂ ಅಲ್ಲದೆ ಶಾಲಾ ಕಟ್ಟೋಣಕ್ಕಾಗಿ ಪ್ರತೀ ಗ್ರಾಮದಲ್ಲಿ ಸ್ಥಳವನ್ನು ರಿಜರ್ವಾಗಿ ಇಡಿಸಬೇಕು.

೬. ಯಾವುದಾದರೂ ಮಂಜೂರಾದ ಶಾಲೆಗಳಲ್ಲಿ ೮ ವರುಷಕ್ಕೆ ಕಡಿಮೆಯಾಗದಷ್ಟು ಸರ್ವೀಸುಮಾಡಿದವರಿಗೆ [illegible] ಸರ್ಟಿಫಿಕೇಟು ಕೊಟ್ಟು ಟ್ರೈನ್ಡ್ ಉಪಾಧ್ಯಾಯನಂತೆ ಗ್ರಾಂಟು ಸಿಕ್ಕಬೇಕು. (ಈ ಠರಾವು ಈಗ ೮ ವರುಷ ಸರ್ವೀಸು ಆದವರಿಗೆ ಮಾತ್ರ ಲಾಗುವಾಗಬೇಕು).

೭. ಜಿಲ್ಲಾ ಎಡ್ಯುಕೇಶನಲ್ ಕೌನ್ಸಿಲಿಗೆ ಅಥವಾ ತಾಲೂಕು ಎಡ್ಯುಕೇಶನಲ್ ಕೌನ್ಸಿಲಿಗೆ ಟೀಚರ್ ಮೆನೇಜರ್‌ಗಳಿಂದ ಒಬ್ಬ ಪ್ರತಿನಿಧಿಯನ್ನೂ ಉಪಾಧ್ಯಾಯರುಗಳಿಂದ ಒಬ್ಬ ಪ್ರತಿನಿಧಿಯನ್ನೂ ಹೀಗೆ ಇಬ್ಬರು ಮೆಂಬರರನ್ನು ತೆಗೆದುಕೊಳ್ಳಬೇಕು.

೮. ಪ್ರತಿ ವರುಷವೂ ಅನುಕೂಲವಿರುವ ಸಮಯ ಟ್ರೈನಿಂಗ್ ಶಾಲೆಗಳಲ್ಲಿ ಮತ್ತು ಇತರ ಹ್ಯಾಸ್ಕೂಲುಗಳಲ್ಲಿ ಸಮರ್ಥರಾದ ಉಪಾಧ್ಯಾಯರು ಜಿಲ್ಲೆಯ ಪ್ರಾಮುಖ್ಯ ಸ್ಥಳಗಳಲ್ಲಿ ಮೂಲಪಾಠಶಾಲಾ ಉಪಾಧ್ಯಾಯರ ಸಭೆ ಸೇರಿಸಿ ಕನಿಷ್ಠ ಒಂದು ವಾರದ ವರೆಗಾದರೂ ಯೋಗ್ಯವಾದ ವಿಷಯಗಳ ಕುರಿತು ತಕ್ಕ ಭಾಷಣವನ್ನು ಕೊಡಿಸಬೇಕಾಗಿ ವಿದ್ಯಾ ಇಲಾಖಾ ಮೇಲು ಉದ್ಯೋಗಸ್ಥರನ್ನು ಕೇಳಿಕೊಳ್ಳಬೇಕು. ಇಂಥಾ ಸಂದರ್ಭದಲ್ಲಿ ಹಳ್ಳಿಗಳ ಇತರ ಜನರಿಗೂ ಸಭೆ ಸೇರಿಸಿ ದೇಶದ ಸ್ಥಿತಿ ಕುರಿತು ತಕ್ಕ ಅನುಭವವನ್ನು ಕೊಡುವಂತೆ ಏರ್ಪಾಟು ಮಾಡಿದ್ದಲ್ಲಿ ವಿದ್ಯಾ ಪ್ರಚಾರದ ಬಗೆ ಊರವರ ಸಹಾನುಭೂತಿ ಸಾಕಷ್ಟು ಸಿಕ್ಕೀತು ಎಂತ ಇಲ್ಲಿನ ಸಭೆಯ ಅಭಿಪ್ರಾಯ ಪಡುತ್ತದೆ.

೯ ಎಯಿಡೆಡ್ ಶಾಲೆಗಳಲ್ಲಿ ಟ್ರೈನ್ಡ್ ಉಪಾಧ್ಯಾಯರೆಲ್ಲರನ್ನೂ ಪ್ರೊವಿಡೆಂಟ್ ಫಂಡಿಗೆ ಸೇರಿಸಬೇಕಾಗಿ ಕಾನೂನು ತಿದ್ದುಪಾಟುಮಾಡಬೇಕು.

೧೦. ಜಿಲ್ಲೆಯ ಎಲ್ಲಾ ಬೋರ್ಡು ಎಲಿಮೆಂಟರಿ ಶಾಲೆಗಳಲ್ಲಿ ಉಪಾಧ್ಯಾಯರ ಸಂಬಳದ ಒಂದೇ ಸ್ಕೇಲು ಇಡಬೇಕು. ಮತ್ತು ಅದು ಗವರ್ನಮೆಂಟಿನವರ ಸ್ಕೇಲೇ ಆಗಿರಬೇಕು.

೧೧. ೧ನೇ ಠರಾವನ್ನು ಸರಕಾರದವರು ಜ್ಯಾರಿಗೆ ತರುವ ವರೆಗೆ ಬೋರ್ಡು ಶಾಲೆಗಳಲ್ಲಿರುವ ಎಡ್ಯುಕೇಶನ್ ಫಂಡಿನ ಮಟ್ಟಿಗೆ ಈಗಿರುವ ಸ್ಕೇಲಿಗೆ ಕೂಡಿಸಿ ಉಪಾಧ್ಯಾಯರಿಗೆ ಎಲೊವೆನ್ಸ್ ಕೊಡಿಸಬೇಕು.

೧೨. ಒಂದರಿಂದ ೧೧ರ ವರೆಗಿನ ಠರಾವುಗಳನ್ನು ಮದ್ರಾಸ್ ಸಂಸ್ಥಾನದ ವಿದ್ಯಾ ಇಲಾಖೆಯ ಮಂತ್ರಿಗಳಿಗೂ ವಿದ್ಯಾ ಇಲಾಖೆಯ ಡೈರೆಕ್ಟರವರಿಗೂ ಮದ್ರಾಸ್ ನ್ಯಾಯವಿಧಾಯಕ ಸಭೆಯಲ್ಲಿರುವ ನಮ್ಮ ಜಿಲ್ಲೆಯ ಪ್ರತಿನಿಧಿಗಳಿಗೂ, ವಿದ್ಯಾ ಅಧಿಕಾರಿಗಳಿಗೂ, ಎಡ್ಯುಕೇಶನಲ್ ಕೌನ್ಸಿಲಿಗೂ ಕಳುಹಿಸುವಂತೆಯೂ ಮತ್ತು ೧೧ನೇ ಠರಾವನ್ನು ಜಿಲ್ಲೆಯ ತಾಲೂಕು ಬೋರ್ಡುಗಳಿಗೂ ಕಳುಹಿಸುವಂತೆಯೂ ಈ ಸಭೆಯ ಅಧ್ಯಕ್ಷರಿಗೆ ಸಭೆಯವರೆಲ್ಲರೂ ಅಧಿಕಾರ ಕೊಟ್ಟಿರುತ್ತಾರೆ.

ಕೆ. ಸುಬ್ರಹ್ಮಣ್ಯಯ್ಯ.
ಕೆ. ಪಿ. ಕಾಮತ್. } ಮಂಗಳೂರು ತಾಲೂಕು ಎಯಿಡೆಡ್ ಶಾಲೆಗಳ ಎಸೋಸಿಯೇಶನ್ ಸೆಕ್ರೆಟರಿಗಳು,
ಕೆ. ಗಣಪಯ್ಯ ಶೆಟ್ಟಿ } ಉಡ್ಪಿ ತಾಲೂಕು ಎಯಿಡೆಡ್ ಶಾಲಾ ಎಸೋಸಿಯೇಶನ್ ಸೆಕ್ರೆಟರಿ.

ವಿದೇಶ ವರ್ತಮಾನ.

ಪ್ರೆಸಿಡೆಂಟ ಎಬ್ಬರ್ಟರ ನಿಧನ:— ಜರ್ಮನ್ [illegible] ರಿಪಬ್ಲಿಕಿನ ಮೊದಲನೇ ಪ್ರೆಸಿಡೆಂಟರಾದ ಫ್ರೆಡ್ರಿಕ್ ಎಬ್ಬರ್ಟರವರು ಕಳೆದ ತಾ. ೨೮ರಲ್ಲಿ ನಿಧನರಾದರು. ಇವರು ಆದಿಯಲ್ಲಿ ಒಬ್ಬ ದರ್ಜಿಯ ಮಗ. ಕಾಲಾನುಕ್ರಮದಲ್ಲಿ ಈ ಪದವಿಗೆ ಬಂದಿದ್ದರು. ಇವರು ೧೯೧೯ನೇ ಇಸವಿಯ ಪ್ರೆಬ್ರವರಿ ತಿಂಗಳಲ್ಲಿ ಚುನಾಯಿಸಿದರು.

ದನಗಳು ಮತ್ತು ಮಲೇರಿಯಾ ರೋಗದ ನಿವಾರಣೆ:- ಫ್ರಾನ್ಸ್ ದೇಶದ ಕೆಲವು ಶಾರೀರಿಕ ಶಾಸ್ತ್ರಜ್ಞರೂ, ದನಗಳನ್ನು ಸಾಕುವುದರಿಂದ ಮಲೇರಿಯಕ್ಕೆ ಬಹಳಮಟ್ಟಿಗೆ ಅವಕಾಶವಿಲ್ಲವೆಂಬುದನ್ನು ಈ ಕೆಳಗೆ ಕಂಡ ಕಾರಣಗಳಿಂದ ನಿರೂಪಿಸುತ್ತಿರುವರು. ಅವರು ಹೇಳುವುದೇನಂದರೆ- ಐರೋಪ್ಯದೇಶಗಳಲ್ಲಿ ಮಲೇರಿಯಾ ವ್ಯಾಧಿಯು ಅಷ್ಟು ವಿಶೇಷವಾಗಿ ಕಾಣದಿರುವುದಕ್ಕೆ ಅಲ್ಲಿನ ಜನರಲ್ಲಿ ಅನೇಕರು ಮನೆಯಲ್ಲಿ ದನಗಳನ್ನು ಸಾಕುವುದೇ ಕಾರಣವೆಂದು ಊಹಿಸಬೇಕಾಗಿದೆ. ಮಲೇರಿಯವನ್ನು ಜನಗಳಲ್ಲಿ ಹಂಚುವುದಕ್ಕೆ ಮುಖ್ಯ ಕಾರಣಗಳಾದ ಅನಾಫಲೀಸ್ ಎಂಬ ಜಾತಿಯ ಸೊಳ್ಳೆಗಳಿಗೆ ದನಗಳ ರಕ್ತವೆಂದರೆ ಬಹಳ ಇಷ್ಟವು. ಆ ದನಗಳಿದ್ದ ಕಡೆಯಲ್ಲಿ ಅವು ಮನುಷ್ಯರ ಮೇಲೆ ಬೀಳಲಾರವು. ಇದಲ್ಲದೆ ಅವರು ಮತ್ತೊಂದು ವಿಧವಾದ ಶೋಧನೆಯಿಂದ ಇದರ ನಿದರ್ಶನವನ್ನು ಕಾಣಬಹುದೆಂಬುದಾಗಿಯೂ ಹೇಳುವರು. ಏನೆಂದರೆ, ಮೇಲ್ಕಂಡ ಮಲೇರಿಯಾ ಸೊಳ್ಳೆಯು ಹೆಚ್ಚಾಗಿ ತುಂಬಿರುವ ಸ್ಥಳಗಳಲ್ಲಿಯೇ ಒಬ್ಬ ಮನುಷ್ಯನು ವಾಸಮಾಡುತ್ತಿದ್ದರೂ ಅವನಿರುವ ಸ್ಥಳಕ್ಕೆ ಸಮೀಪವಾಗಿ ದನದ ಗೂಡುಗಳಿದ್ದ ಪಕ್ಷದಲ್ಲಿ, ಅವನು ಅಲ್ಲಿ ಎಷ್ಟು ದಿನಗಳಿದ್ದರೂ ಈ ಮಲೇರಿಯಾ ಜ್ವರವು ಬರಲಾರದು. ಮನುಷ್ಯನಿಗೆ ಮಾತ್ರವೆ ಅಲ್ಲ, ದನಗಳಿದ್ದ ಕಡೆ ಬೇರೆ ಯಾವ ಮೃಗಗಳಿದ್ದರೂ ಈ ರೋಗದ ಭಯವಿಲ್ಲ.

ಒಳದೇಶ ವರ್ತಮಾನ.

ಓಲ್ ಇಂಡಿಯಾ ಸಾಧು ಮಹಾ ಮಂಡಲ:— ಓಲ್ ಇಂಡಿಯಾ ಸಾಧು ಮಹಾ ಮಂಡಲದ ನಾಲ್ಕನೆಯ ಅಧಿವೇಶನವು ಬರುವ ಎಪ್ರಿಲ್ ತಾ. ೨, ೩ ಮತ್ತು ೪ರಲ್ಲಿ ಬನಾರಸಿನಲ್ಲಿ ಸೇರುವುದು.

ಗೋವುಗಳ ಏಲಂ ಬಹಿಷ್ಕಾರ:—ರಾಮೇಶ್ವರ ಕ್ಷೇತ್ರದಲ್ಲಿ ಸಂಪನ್ನ ಯಾತ್ರಿಕರು ಗೋವುಗಳನ್ನು ದಾನವಾಗಿ ಬಿಡುವರು. ಅದರ ಆ ಕ್ಷೇತ್ರದ ಅಧಿಕಾರಿಗಳು ಅವನ್ನು ಏಲಂ ಮೂಲಕ ಮಾರಾಟಮಾಡುವುದರಿಂದ ಅಲ್ಲಿನ ಕಾಂಗ್ರೆಸ್ ಕಮ್ಮಿಟಿಯವರೇ ಮೊದಲಾದವರು ಇದನ್ನು ನಿಷೇಧಿಸುತ್ತಿದ್ದಾರೆ.

ಮುಂಬಯಿಯ ಕಟುಕರು:—ಅರ್ಧ ನೊರಗಿದ ಎತ್ತುಗಳನ್ನು ಕಡಿಯಬಾರದೆಂದು ಮುಂಬಯಿ ಕೊರ್ಪೊರೇಶನಿನ ಅಧಿಕಾರಿಗಳು ಸೂಚಿಸಿದ್ದರಿಂದ ಮುಂಬಯಿಯ ಕಸಾಯಿಗಳೆಲ್ಲರೂ ಮುಷ್ಕರ ಹಿಡಿದಿದ್ದಾರೆ.

ಇಂಟರ್ ನೇಶನಲ್ ಲೇಬರ್ ಕೊನ್ಫರೆನ್ಸ್:—ಓಲ್ ಇಂಡಿಯಾ ಟ್ರೇಡ್ ಯೂನಿಯನ್ನಿನ ಜನರಲ್ ಸೆಕ್ರೆಟರಿಗಳೂ ಲೆಜಿಸ್ಲೇಟಿವ್ ಕೌನ್ಸಿಲಿನ ಸ್ವರಾಜ್ಯಪಕ್ಷದ ಮೆಂಬರರೂ ಆದ ಶ್ರೀಯುತ ಚಮನ್ ಲಾಲರು ಬರುವ ಇಂಟರ ನೇಶನಲ್ ಲೇಬರ್ ಕೊನ್ಫರೆನ್ಸಿಗೆ ಹೋಗುವರು.

ಶ್ರೀಯುತ ಸಂಜೀವ ಕಾಮತ್:—ಸ್ಕೌಟ ದಳದ ಕಾರ್ಯಕ್ಕಾಗಿ ಹೈದರಾಬಾದಿನ ನೈಜಾಮರಿಂದ ಆಮಂತ್ರಿಸಲ್ಪಟ್ಟ ಶ್ರೀಯುತ ಕೆ. ಸಂಜೀವ ಕಾಮತರು ಹೈದರಾಬಾದಿಗೆ ಸಧ್ಯದಲ್ಲೇ ತೆರಳಲಿಕ್ಕಿದ್ದಾರೆಂದು ತಿಳಿಯುತ್ತೇವೆ.

ದಕ್ಷಿಣ ಕನ್ನಡ.

ಪದವು:—ಪದವು ಶ್ರೀ ಕೃಷ್ಣಾಶ್ರಮ ಶಾಲೆಯ ಕಟ್ಟಡದ ಬುನಾದಿ ಕಲ್ಲು ಹಾಕುವ ಸಮಾರಂಭವು ಇದೆ ತಾ. ೨—೩—೧೯೨೫ನೇ ಸೋಮವಾರ ಬೆಳಿಗ್ಗೆ ಘಂಟೆ ೧೦-೩ಕ್ಕೆ ಮ। ರಾ। ಮಾಜಿ ಡಿಪ್ಯುಟಿ ಕಲೆಕ್ಟರ ಮತ್ತು ಸಹಕಾರಿ ಸಂಘದ ಅ. ರಜಿಸ್ಟ್ರಾರರಾಗಿದ್ದ ಡಿ. ಆನಂದರಾಯರಿಂದ ನೆರವೇರಿಸೋಣಾಯಿತು. ಈ ಕಾರ್ಯವು ಮುಗಿದನಂತರ ಗ್ರಾಮಸ್ಥರ ಸಭೆಸೇರಿ ಸಭಾಧ್ಯಕ್ಷಸ್ಥಾನವನ್ನು ಮ। ರಾ। ಡಿ. ಆನಂದರಾಯರೆ ಅಲಂಕರಿಸಿದರು. ಸಭೆಯಲ್ಲಿ ಕೊಂಚಾಡಿ ಎಡ್ಯುಕೇಶನಲ್ ಟ್ರಸ್ಟಿನ ಪ್ರೆಸಿಡೆಂಟರಾದ ರಾ। ಕೆ. ಕೃಷ್ಣಯ್ಯ ಶ್ಯಾನುಭಾಗರು ಮತ್ತು ಕಾರ್ಯದರ್ಶಿಗಳಾದ ರಾ। ಪೊಳ್ಳಿಲ್ ನರಸಿಂಹ ಪೈಗಳು, ರಾ। ಪದವು ಜನಾರ್ಧನ ಶ್ಯಾನುಭಾಗರು, ರಾ। ಅಳ್ಕೆ ಸುಬ್ರಾಯಕಿಣಿ, ಪಟೇಲ್ ಮಂಜಯ ಶೆಟ್ಟಿ ಕಂಟ್ರಾಕ್ಟರ್ ಪಿ. ಕೊರಗಪ್ಪನವರೇ ಮೊದಲಾದ ಹಲವು ಮಂದಿ ಗ್ರಾಮಸ್ಥರು ಸೇರಿದ್ದರು. ಅಧ್ಯಕ್ಷರ ಭಾಷಣವಾದನಂತರ ಸದರಿ ಶಾಲೆಯ ಮುಖ್ಯ ಉಪಾಧ್ಯಾಯರಾದ ಮ। ರಾ। ಕೆ. ಸುಬ್ರಾಯಭಟ್ಟರು ಶಾಲೆಯ ಬಾಬ್ತು ವರದಿಯನ್ನು ಓದಿದರು. ಅನಂತರ ರಾ। ಪೊಳ್ಳಿಲ್ ನರಸಿಂಹ ಪೈಗಳು ಈ ಶಾಲೆಯ ಕಟ್ಟೋಣವನ್ನು ಕಟ್ಟಿಸುವರೆ ಗ್ರಾಮಸ್ಥರ ಸಹಾಯವು ಅಗತ್ಯವಿದೆಯೆಂಬವರ ಕುರಿತು ಸುರಸವಾದ ಭಾಷಣಮಾಡಿದನಂತರ ಅಲ್ಲಿ ನೆರೆದ ಸಭಿಕರು ಸುಮಾರು ರೂಪಾಯಿ ೩೦೦—೦—೦ ವಾಗ್ದಾನಮಾಡಿದರು. ಸಭಾಧ್ಯಕ್ಷರು ಸೂಚಿಸಿದ ಮೇರೆಗೆ ನಂಬ್ರ ೩೮೭೩ನೇ ಸಹಕಾರ ಸಂಘದಲ್ಲಿ ಕೊಂಚಾಡಿ ರಾಮಾಶ್ರಮ ಶಾಲೆಗೂ ಪದವು ಕೃಷ್ಣಾಶ್ರಮ ಶಾಲೆಗೂ ಸಮ ಹಂಚಿಕೆಯಿಂದ ಉದಾರ ಬುದ್ಧಿಯುಳ್ಳ ಮೆಂಬರರಿಂದ ಮತ್ತು ಸಾರ್ವಜನೋಪಯೋಗನಿಧಿಯಿಂದ ಕೂಡ ವಿಂಗಡಿಸಿಟ್ಟ ಹಣವು ಬಹು ದೀನ ಸ್ಥಿತಿಯಲ್ಲಿರುವ ಈ ಶಾಲೆಯ ಕಟ್ಟೋಣಕ್ಕೆ ಉಪಯೋಗಿಸಬಹುದೆಂತ ಸಹಕಾರ ಜ್ಞಾನವುಳ್ಳ ರಾ। ಡಿ. ಆನಂದರಾಯರು ಸೂಚಿಸಿದ್ದನ್ನು ನೆರವೇರಿಸುವಂತೆ ಈ ಸಂಸ್ಥೆಗಳ ಅಧಿಕಾರ ವರ್ಗದವರು ವರ್ತಿಸಿ ಈ ಬಡ ಶಾಲೆಯನ್ನು ಉದ್ಧರಿಸುವರಾಗಿ ನಂಬುತ್ತೇವೆ. (ಪ್ರೇಕ್ಷಕ)

ಉಡುಪಿ:— ೧೯೨೦ನೇ ಇಸವಿಯ ೧೪ನೇ ಮದ್ರಾಸ್ ಸ್ಥಳೀಯ ಬೋರ್ಡ್ ಆಕ್ಟಿಗನುಸಾರವಾಗಿ ಆಗತಕ್ಕ ಉಡುಪಿ ತಾಲೂಕು ಬೋರ್ಡಿಗೆ ಉಡ್ಪಿ ಸರ್ಕಲಿಂದ ೩, ಬ್ರಹ್ಮಾವರ ಸರ್ಕಲಿನಿಂದ ೩, ಕೋಟ ಸರ್ಕಲಿನಿಂದ ೩, ಕಾಪು ಸರ್ಕಲಿನಿಂದ ೩, ಹೀಗೆ ೧೨ ಮೆಂಬರರ ಚುನಾವಣೆಯು ೧೯೨೫ನೇ ಇಸವಿ ಮಾರ್ಚಿ ತಾರೀಕು ೨೮ನೇ ಶನಿವಾರಕ್ಕೆ ಜರಗುವುದು. ಚುನಾವಣೆ ಸಂಬಂಧದ ನಂಬ್ರ ೩೩ಕ್ಕೆ ಅನುಗುಣವಾಗಿ ಉಡುಪಿ ಸ್ಥಳೀಯ ಡಿಪ್ಯುಟಿ ತಹಶೀಲ್ದಾರರವರು ಸದರಿ ಚುನಾವಣೆಯ ಸಂಬಂಧ ಪ್ರೆಸಿಡೆಂಟರಾಗಿ ಎಲ್ಲಾ ಕೆಲಸಗಳನ್ನು ನಡಿಸುವರೆ ಅಧಿಕಾರ ಹೊಂದಿರುತ್ತಾರೆ. ಉಮೇದ್ವಾರರಾಗತಕ್ಕವರು ತಮ್ಮ ನೋಮಿನೇಶನು ಅರ್ಜಿಗಳನ್ನು ಮಾರ್ಚಿ ತಾ. ೯ಕ್ಕೆ ಮಧ್ಯಾಹ್ನ ೩ರಿಂದ ೫ರ ವರೆಗೆ ಪ್ರೆಸಿಡೆಂಟರ ಮುಂದೆ ಹಾಜರುಪಡಿಸತಕ್ಕದ್ದು.

ಮುಲ್ಕಿ:— ಇಲ್ಲಿಯ ಜನಪ್ರಿಯ ವರ್ತಕರಾದರೂ ಸಾವುಕಾರರೂ ಆದ ಮ। ರಾ। ರಾ। ಬೋಳ ಮಾಧವರಾಯರವರ ನೂತನ ಗೃಹಪ್ರವೇಶ ಸಮಾರಂಭವು ಕಳೆದ ತಿಂಗಳ ತಾ. ೨೬ನೇ ರಾತ್ರಿಯಲ್ಲಿ ವಿಶೇಷ ವಿಜೃಂಭಣೆಯಿಂದ ನೆರವೇರಿತು. ಗೃಹಪ್ರವೇಶದ ಮುಂಚಿನ ದಿನ ಮಾಧವರಾಯರ ವಕ್ಕಲುಗಳು ಮತ್ತು ಇತರ ಇವರ ಸ್ನೇಹಿತರು ಆನೆ, ಬೇಂಡ ವಾದ್ಯ ಇತ್ಯಾದಿಗಳಿರುವ ಮೆರವಣಿಗೆಯಲ್ಲಿ ವಿಧವಿಧವಾದ ಕಾಯಿಪಲ್ಯ, ಹಣ್ಣುಹಂಪಲುಗಳು, ದವಸಧಾನ್ಯ ಇತ್ಯಾದಿಗಳ ಹೊರೆಗಳನ್ನು ಮಾಧವರಾಯರ ನೂತನ ಗೃಹಕ್ಕೆ ಕಳುಹಿಸಿ ಕೊಟ್ಟಿದ್ದರು. ಗೃಹಪ್ರವೇಶದ ಮುಹೂರ್ತ ಕಾಲದ ಮೊದಲು ಈ ನೂತನ ಗೃಹದ ಕೆಲಸವನ್ನು ಪೂರೈಸಿ ಕೊಟ್ಟ ಕಂಟ್ರಾಕ್ಟರಿಗೂ, ಅಲ್ಲಿನ ಕೆಲಸದವರಿಗೂ ಇತರ ಕೆಲಸದವರಿಗೂ ಅವರವರ ತಾರತಮ್ಯ ಪ್ರಕಾರ ಚಿನ್ನದ ಬಳೆ, ವಸ್ತ್ರ ಇತ್ಯಾದಿಗಳ ಉಚಿತಗಳು ಕೊಡೋಣಾದವು. ನಂತರ ಗೃಹಪ್ರವೇಶದ ಸಂಧಿಯಲ್ಲಿ ತನ್ನ ಕಾರ್ಯವನ್ನು ನೆರವೇರಿಸಿ ಕೊಡುವದರಲ್ಲಿ ಸಹಕರಿಸಿದ ಕೆಲಸಗಾರರನ್ನೂ ತನ್ನ ವಕ್ಕಲುಗಳನ್ನೂ ತನ್ನಲ್ಲಿ ಪ್ರೀತಿ ವಿಶ್ವಾಸವನ್ನಿಟ್ಟು ತನ್ನ ಕುಟುಂಬದ ಒಳ್ಳಿತವನ್ನು ಯೋಚಿಸಿ ಈ ಮುಹೂರ್ತ ಸಮಾರಂಭದ ಕಾರ್ಯಗಳಲ್ಲಿ ಸಹಕರಿಸಲು ಉದ್ಯುಕ್ತರಾಗಿ ಬಂದ ತನ್ನ ಮಿತ್ರ ಮತ್ತು ಬಾಂಧವ ವರ್ಗಗಳನ್ನೂ ವಂದಿಸಿ ಇವರೆಲ್ಲರ ಉಪಕಾರ ಸ್ಮರಣೆಯನ್ನು ಮಾಧವ ರಾಯರು ಮಾಡಿದರು. ಇವರ ಸದ್ಭಾವನೆಯ ಈ ಮಾತುಗಳಿಗೆ ಸಭಿಕರ ಪರವಾಗಿ ಬ್ರಹ್ಮಶ್ರೀ ವೇದಮೂರ್ತಿ ರಾಮಭಟ್ಟರೂ, ರಾ। ವಿ. ಎಸ್. ಕಾಮತರವರು ಉತ್ತರವನ್ನು ಕೊಟ್ಟು ದೇವಪ್ರಾರ್ಥನೆಯನ್ನು ಮಾಡಿದ ನಂತರ ನಿರ್ಣಯಿಸಿದ ಮುಹೂರ್ತದಲ್ಲಿ ಗೃಹಪ್ರವೇಶವಾಯಿತು. ಮರುದಿನ ಈ ನೂತನ ಗೃಹಪ್ರವೇಶದ ಬಗ್ಗೆ ಮುಲ್ಕಿಯಲ್ಲಿರುವ ಎಲ್ಲಾ ದೇವಸ್ಥಾನಗಳಲ್ಲಿ ಪೂಜಾಸಂತರ್ಪಣೆಗಳನ್ನು ನಡಿಸಿದರು. ಇದೇ ದಿನ ಈ ನೂತನ ಗೃಹದ ವಠಾರದಲ್ಲಿ ಆಯಾ ಜಾತಿಗಳ ಬಡಬಗ್ಗರಿಗೂ ಇತರರಿಗೂ ಊಟವನ್ನು ಬಡಿಸಿದರು. ಊಟಕ್ಕೆ ಸುಮಾರು ನಾಲ್ಕೈದು ಸಾವಿರ ಜನರು ಬಂದಿದ್ದರು.

ಇಲ್ಲಿ ಇತ್ತಲಾಗೆ ತೆರಿಯೋಣಾದ ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮದ ಚಿಕಿತ್ಸಾಲಯದಲ್ಲಿ ರೋಗಿಗಳ ಹಾಜರಿಯು ಸರಾಸರಿ ದಿನವೊಂದಕ್ಕೆ ೬೦ ಯಾ ೭೦ಕ್ಕೆ ಮಿಕ್ಕಿರುತ್ತದೆ. ಈ ಚಿಕಿತ್ಸಾಲಯವನ್ನು ತೆರದಂದಿನಿಂದ ಇಲ್ಲಿಯ ಲೋಕಲ್ ಫಂಡು ಡಿಸ್ಪೆನ್ಸರಿಯಲ್ಲಿ ರೋಗಿಗಳ ಹಾಜರಿಯು ಬಹಳವಾಗಿ ತಗ್ಗಿರುವುದು.

ಮಂಜೇಶ್ವರ:— ಇಲ್ಲಿಯ ಹಾಯರ್ ಎಲಿಮೆಂಟರಿ ಶಾಲೆಯ ವರ್ಧಂತಿ ಉತ್ಸವವು ಬಹಳ ವಿಜೃಂಭಣೆಯಿಂದ ಜರಗಿತು. ನಂಬ್ರ ೭ನೇ ಸರ್ವೆಪಾರ್ಟಿಯ ಎಸಿಸ್ಟಾಂಟ ಕಲೆಕ್ಟರರಾದ ರಾಮಸ್ವಾಮಿ ಅಯ್ಯರ ಎಂ. ಎ. ಯವರು ಅಧ್ಯಕ್ಷರಾಗಿದ್ದರು. ಶಾಲೆಯ ಮುಖ್ಯ ಉಪಾಧ್ಯಾಯರಾದ ಗುರ್ಪುರ ನರಸಿಂಹ ಪ್ರಭುಗಳವರು ಶಾಲಾ ರಿಪೋರ್ಟನ್ನು ಓದಿ ಹೇಳಿದರು. ಶಾಲೆ ಇಲ್ಲದೆ ವಿದ್ಯೆಯಲ್ಲಿ ಹಿಂದುಳಿದಿದ್ದ ಮಂಜೇಶ್ವರ ಊರಿಗೆ ಹಾಯರ ಎಲಿಮೆಂಟರಿ ಶಾಲೆಯನ್ನು ತೆರದು ಎಂಟನೇ ದರ್ಜೆಯ ವರೆಗೆ ಪ್ರಾಥಮಿಕ ವಿದ್ಯೆಯನ್ನು ಧರ್ಮಾರ್ಥವಾಗಿ ಕೊಡಿಸಿದುದಕ್ಕೆ ತಾಲೂಕು ಬೋರ್ಡು ಪ್ರೆಸಿಡೆಂಟರಾದ ರಾ। ವಿ. ಎಲ್. ಛತ್ರರವರಿಗೆ ಧನ್ಯವಾದವನ್ನಿತ್ತರು. ಅನಂತರ ಶಾಲಾ ಮಕ್ಕಳು 'ಕಳೆದು ಹೋದ ಮಗನ ಕಥೆ'' ಎಂಬ ನಾಟಕವನ್ನು ಕನ್ನಡ ಭಾಷೆಯಲ್ಲಿ ಉತ್ಕೃಷ್ಟ ರೀತಿಯಲ್ಲಿ ಆಡಿ ತೋರಿಸಿದರು. ಅನಂತರ ಶಾಲಾ ಮಕ್ಕಳಿಗೆ ಇನಾಮಾಗಿ ಪುಸ್ತಕಗಳನ್ನೂ, ಖಾದಿಯ ಶಾಲುಗಳನ್ನೂ ಹಂಚಿದರು. ಇದಾದ ಮೇಲೆ ಇಲ್ಲಿಯ ಸಾಹುಕಾರ ರಾ। ನರಸಿಂಹ ಶೆಣೆಯವರು ಮಂಜೇಶ್ವರ ಊರಿನವರ ಪರವಾಗಿ ಶಾಲೆಯು ಇನ್ನೂ ಅಭಿವೃದ್ಧಿಯಾಗಲೆಂದು ಆಶೀರ್ವಾದವನ್ನಿತ್ತರು. ಅನಂತರ ಕೂಡಿದ ಸಭೆಯವರಿಗೆ ರಾ। ಎಸ್. ವಿ. ಶೆಣೆಯವರು ಪನ್ನೀರು ತಾಂಬೂಲಾದಿಗಳನ್ನು ಹಂಚಿದರು.

ಇಲ್ಲಿ ಹೊಸತಾಗಿ ಚುನಾವಣೆಯಾಗಲಿರುವ ತಾಲೂಕು ಬೋರ್ಡು ಮೆಂಬರರ ೨ ಸೀಟುಗಳಿಗೆ ರಾ।ಗಳಾದ ಸರ್ವೋತ್ತಮ ಕಮ್ತಿಯವರೂ ನರಹರಿ ಕಮ್ತಿಯವರೂ, ಗೋಪಾಲ ನಾಯ್ಕರೂ, ವರ್ಕಾಡಿ ಲಿಂಗಪ್ಪ ಭಂಡಾರಿಯವರೂ, ಕಡಂಬಾರ ತ್ಯಾಂಪಣ್ಣ ಶೆಟ್ರೂ, ಭವಾನಿ ಶಂಕರರಾಯರೂ, ಇಬ್ಬಿನ್ ಕುಂಞಾಲಿಬ್ಯಾರಿ ಸಾಹೇಬರೂ ನಿಂತಿರುತ್ತಾರೆ. ವಿ. ಎಲ್. ಛತ್ರರವರು ಉಮೇದ್ವಾರರಾಗಿ ನಿಲ್ಲಲಿಲ್ಲ.

ಇಲ್ಲಿ ಶ್ರೀಮದನಂತೇಶ್ವರ ದೇವಸ್ಥಾನದ ಸ್ಕೀಮು ತಯಾರಿಸಿ ೩ ವರುಷಗಳಾದರೂ ಆ ಸ್ಕೀಮಿನ ಪ್ರಕಾರ ಯಾವದೊಂದು ವಿಲೇವಾರಿಯನ್ನು ಮಾಡದ ಕಮಿಟಿ ಮೆಂಬರರು ಕಾಲಹರಣ ಮಾಡುತ್ತಿರುವುದರಿಂದ ಇಲ್ಲಿ ವೈದಿಕರೆಲ್ಲರೂ ಕೂಡಿ ಇದನ್ನು ಜ್ಯಾರಿಗೆ ಬರುವಂತೆ ಮಾಡಬೇಕೆಂದು ಸಬ್ ಕೋರ್ಟಿಗೆ ಅಮಲ್ದಾರಿ ದಾಖಲು ಮಾಡಿದ ಮೇರೆಗೆ ಇದೇ ತಿಂಗಳ ೨೦ನೇ ತಾರೀಕಿನೊಳಗೆ ಸ್ಕೀಮಿನಲ್ಲಿ ಕಾಣುವ ಎಲ್ಲಾ ಶರ್ತಗಳ ಪ್ರಕಾರ ನಡಿಯದೆ ಇದ್ದರೆ ದೇವಸ್ಥಾನವನ್ನು ಸರಕಾರ ಸ್ವಾಧೀನ ತೆಗೆದುಕೊಳ್ಳುವಂತೆ ಸರಕಾರಕ್ಕೆ ಬರೆಯುತ್ತೇನೆಂದು ಕಮಿಟಿ ಮೆಂಬರರಿಗೆ ಸಬ್‌ಜಡ್ಜರು ತಿಳಿಸಿದ್ದಾರಂತೆ. ಗೌಡಸಾರಸ್ವತರೇ! ಇನ್ನಾದರೂ ನಿದ್ರೆಯಿಂದ ಎಚ್ಚೆತ್ತು ಈ ಕಮಿಟಿಯವರ ಮತ್ತು ಆಡಳಿತದಾರರ ಮೂಲಕ ದೇವಸ್ಥಾನವು ಸರಕಾರ ಸ್ವಾಧೀನವಾಗದಂತೆ ಮಾಡಿರಿ!

— ಜಿಲ್ಲಾ ಶಿಕ್ಷಣ ಪ್ರದರ್ಶನ —

ದಕ್ಷಿಣ ಕನ್ನಡ ಜಿಲ್ಲಾ ಶಿಕ್ಷಣ ಪ್ರದರ್ಶನವು ಕಳೆದ ಶನಿವಾರ ಬೆಳಿಗ್ಗೆ ಜಿಲ್ಲಾ ಕಲೆಕ್ಟರರಿಂದ ಇಲ್ಲಿಯ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯಲ್ಲಿ ತೆರಿಯಲ್ಪಟ್ಟಿತು. ಈ ಕಾಲದಲ್ಲಿ ಜಿಲ್ಲೆಯ ಆಯಾ ಭಾಗಗಳ ಉಪಾಧ್ಯಾಯರೂ ವಿದ್ಯಾಭಿಮಾನಿಗಳಾದ ಅನೇಕ ಮಂದಿ ಗೃಹಸ್ಥರೂ ಗೃಹಿಣಿಯರೂ ತಮ್ಮ ತಮ್ಮ ಮಕ್ಕಳೊಡನೆ ಹಾಜರಿದ್ದರು. ಸಭಾಮಂದಿರ ಮತ್ತು ಆಫೀಸು ಕೋಣೆಗಳನ್ನು ಬಿಟ್ಟು ಶಾಲೆಯ ಉಳಿದ ಎಲ್ಲಾ ಕೋಣೆಗಳಲ್ಲಿ ಪ್ರದರ್ಶನ ವಸ್ತುಗಳು ಇಡಲ್ಪಟ್ಟಿದ್ದವು. ಶಾಲೆಯ ಹೊರಗಿನ ವಠಾರದಲ್ಲಿ ಹಣ್ಣುಹಂಪಲಿನ ಸಂತೆ ಮತ್ತು ಕಾಫಿ ತಿಂಡಿಯ ಸಂತೆಯು ಇತ್ತು. ಕಳೆದ ೧೯೨೩ನೇ ಇಸವಿಯಲ್ಲಿ ಹೊಸತಾಗಿ ಕಟ್ಟಿಸಿದ ಶಾಲೆಯ ಕೋಣೆಯಲ್ಲಿ ನಾನಾ ತರದ ದಶಾವತಾರದ ಗೊಂಬೆಗಳ ಕಾಗದದ ನಕ್ಷೆ, ಇತರ ಸಾಮಾನುಗಳು, ಗಣಪತಿ ಸೆಕೆಂಡರಿ ಶಾಲೆಯ ವಿದ್ಯಾರ್ಥಿಗಳು ತಯಾರಿಸಿದ ಮರದ ಸಾಮಾನುಗಳು ಮತ್ತು ಇತರ ಕೈಗಾರಿಕೆ ಸಾಮಾನುಗಳು, ಕುತ್ತೆತ್ತೂರು ಶಾಲೆಯಲ್ಲಿ ತಯಾರಿಸಿದ ಗಾಳಿಯನ್ನು ಬೀಸುವ ಯಂತ್ರದ ಮೊಡೆಲ್, ಬಂಟವಾಳ ಟೆಂಪಲ್ ಶಾಲಾ ಉಪಾಧ್ಯಾಯ ಕೆ. ಫಕೀರಇವರಿಂದ ತಯಾರಿಸಿದ ಬತ್ತ ಕುಟ್ಟುವ ಮೊಡಲ್, ಗ್ಲೋಬ್, ಮಣ್ಣಿಂದಲೇ ತಯಾರಿಸಿದ ಮಟ್ಟುಗಳು ಕಾಗದದ ಪಟಲಾಮು, ಟ್ರೈನಿಂಗಶಾಲೆಯ ಮೆನುವಲ್ ಟ್ರೈನಿಂಗ್ ಇನ್ಸ್‌ಪೆಕ್ಟರರು ತಯಾರಿಸಿದ ಕೆತ್ತನೆಯ ಅನಂತಶಯನ ಪ್ರತಿಮೆ, ಚೀಟಿನ ತುಂಡಿನಿಂದ ತಯಾರಿಸಿದ ಚಿಕ್ಕಚಿಕ್ಕ ಸಾಮಾನುಗಳು, ಗಣಪತಿ ಸೆಕೆಂಡರಿ ಶಾಲಾ ವಿದ್ಯಾರ್ಥಿಗಳೂ ಇದ್ದ ಶಾಲಾ ವಿದ್ಯಾರ್ಥಿಗಳೂ ತಯಾರಿಸಿದ ಬಗೆ ಬಗೆಯ ವಸ್ತ್ರಗಳು, ಸೀರೆಗಳು, ಮೋಟಾರಕಾರಿನ ಮೊಡೆಲುಗಳು, ಪತ್ತೆಮಾರಿಗಳು ಗಡಿಯಾರದ ಮೊಡೆಲ್ ಮೊದಲಾದ ಇನ್ನೂ ನಾನಾ ತರದ ವಸ್ತುಗಳು ಆಕರ್ಷಿಸುವಂತಿದ್ದವು. ಗರಟೆಯ ಮೇಲೆ ಕೆತ್ತಿ ತಯಾರಿಸಿದ ಸಾಮಾನು ಅತ್ಯುತ್ಕೃಷ್ಟವಾಗಿತ್ತು. ಅಲ್ಲದೆ ಕೋಣೆಯ ಪ್ರತಿಯೊಂದು ಗೋಡೆಯ ಮೇಲೂ ಬಗೆ ಬಗೆಯ ಮೊಡೆಲ್ ಚಿತ್ರಗಳು ತೂಗಾಡಿಸಲ್ಪಟ್ಟಿದ್ದವು. ಈ ಕೋಣೆಗೆ ಒತ್ತಾಗಿರುವ ಇನ್ನೊಂದು ಕೋಣೆಯಲ್ಲಿ ಐತಿಹಾಸಿಕ ಹಾಗು ಭೂಗೋಲ ಶಾಸ್ತ್ರ ಸಂಬಂಧವಾದ ಮೊಡೆಲುಗಳು ಮತ್ತು ನಕ್ಷೆಗಳು ಇದ್ದವು. ಈ ಹೋಲಿನ ಸುತ್ತಲೂ ಇರುವ ಗೋಡೆಗಳನ್ನು ನೋಡಿದರೆ, ಬೆಂಕಿಯನ್ನು ನಿವಾರಿಸುವ ಉಪಕರಣದ ಚಿತ್ರ, ರಾಜ್ಯಭಾರ ಚಿತ್ರ, ಆಯಾ ಕಡೆಗಳಲ್ಲಿ ಯಾವ ಯಾವ ಪೈದಾಸು ಇರುವುದೆಂದು ತೋರಿಸುವ ಚಿತ್ರ, ಮೂಲನಿವಾಸಿಗಳ ಚಿತ್ರ, ಜಿಲ್ಲೆಯ ಮೂಡಬಿದ್ರೆಯಂಥ ಐತಿಹಾಸಿಕ ಸ್ಥಳಗಳ ಚಿತ್ರ, ಇವುಗಳ ಕೆಳಗೆ ಅದೇ ಚಿತ್ರದ ಮಣ್ಣಿನ ಮೊಡೆಲುಗಳು, ಉಸುಬಿನ ಚಿತ್ರ, ಮಣ್ಣಿನಿಂದಲೇ ತಯಾರಿಸಿದ ಆಯಾ ತಾಲೂಕುಗಳ ಪಟಗಳು, ಬಂಟವಾಳದ ಕೆ. ಫಕೀರ ಮಾಸ್ತರರಿಂದ ತಯಾರಿಸಲ್ಪಟ್ಟ ಭೂಮಿಯ ವಿವಿಧ ಸ್ಥಳಗಳ ಮೊಡೆಲ್, ನಾರಾವಿ ಎಲಿಮೆಂಟರಿ ಶಾಲೆಯ ಉಪಾಧ್ಯಾಯ, ಯಸ್. ಸದಾಶಿವರಾಯರು ತಯಾರಿಸಿದ ಜ್ವಾಲಾಮುಖಿ, ಪರ್ವತಗಳು, ಹಿಮಗುಡ್ಡೆ ತಪ್ಪಲು ಸ್ಥಳಗಳು ಬಯಲುಗಳು ಮೊದಲಾದ್ದನ್ನು ವಿದ್ಯುಚ್ಛಕ್ತಿಯ ಸಹಾಯದಿಂದ ಪ್ರತ್ಯಕ್ಷ ತೋರಿಸುವ ಮೊಡೆಲು ಪ್ರಶಂಸಿಸುವಂತಿತ್ತು. ಇಂಥಾ ಮೊಡೆಲನ್ನು ಪ್ರತಿಯೊಂದು ಶಾಲೆಯಲ್ಲೂ ಇರಗೊಡಿಸಿದರೆ ಹಳ್ಳಿ ಮಕ್ಕಳ ಶಿಕ್ಷಣಕ್ಕೆ ತುಂಬಾ ಸಹಕಾರಿಯಾಗುವುದು. ಶ್ರೀಮನ್ಮಧ್ವಾಚಾರ್ಯರ ಜನ್ಮಸ್ಥಳವಾದ ಕುಂಜಾರಿನಲ್ಲಿರುವ ದುರ್ಗಾ ಪರಮೇಶ್ವರಿ ದೇವಸ್ಥಾನದ ಮಣ್ಣಿನ ಮೊಡೆಲು ಎಲ್ಲಾ ದೇಶಾಭಿಮಾನಿಗಳ ಮನಸ್ಸನ್ನು ಸೆಳೆಯುವಂತಿತ್ತು. ಇದನ್ನು ಕಾರ್ಕಳ ಹಿಂದೂ ಶಾಲೆಯ ಉಪಾಧ್ಯಾಯ ಕೆ. ಗಣಪ್ಪಯ್ಯ ಶೆಟ್ಟರು ತಯಾರಿಸಿದ್ದರು. ಇದಕ್ಕೆ ಸಮೀಪವಾಗಿ ಬಂಟವಾಳ ಉಪಾಧ್ಯಾಯ ಕೆ. ಫಕೀರ ಇವರು ತಯಾರಿಸಿದ ಕಾರಂಜಿ ಗುಡ್ಡೆಯ ಮೊಡೆಲ್, ಉಳ್ಳಾಲ ಸಂಕ ಮೊದಲಾದ್ದು ಇತ್ತು. ಇಲ್ಲಿ ಈ ಉಪಾಧ್ಯಾಯರು ಬಂಟವಾಳವು ನೆರೆಯ ಮೊದಲು ಹಾಗು ಅನಂತರ ಇರುವ ಸ್ಥಿತಿಯನ್ನು ತೋರಿಸುವ ಚಿತ್ರವೂ ಪ್ರೇಕ್ಷಕರ ಲಕ್ಷ್ಯ ಸೆಳೆಯುತ್ತಿತ್ತು. ಇನ್ನು ಜಮಲಾಬಾದ ಕೋಟೆಯ ಮೊಡಲ, ಶಿವಾಜಿಯ ಕುದುರೆಯ ಮೇಲೆ ಸವಾರಿ ಮಾಡುವ ಮಣ್ಣಿನ ಗೊಂಬೆ ಮೊದಲಾದ್ದು ಪ್ರೇಕ್ಷಣೀಯವಿತ್ತು. ಇಲ್ಲಿ ನೋಡಿದ ಎಲ್ಲಾ ಮೊಡೆಲುಗಳಿಗಿಂತಲೂ ಅನಂತಯ್ಯ ಇವರು ತಯಾರಿಸಿದ ಧರ್ಮಸ್ಥಳದ ಸಿಂಹಾವಲೋಕನದ ಮೊಡೆಲು ಅವರ ಆಲೋಚನಾ ಶಕ್ತಿಯನ್ನೂ ಕೌಶಲ್ಯವನ್ನೂ ಚೆನ್ನಾಗಿ ವ್ಯಕ್ತಪಡಿಸಿ ಪ್ರತಿಯೊಬ್ಬ ಪ್ರೇಕ್ಷಕರ ಮನಸ್ಸನ್ನು ಬಹಳವಾಗಿ ಬೆರಗುಗೊಳಿಸುವಂತಿತ್ತು. ಇನ್ನು ಈ ಕೋಣೆಯಲ್ಲಿ ಸಿದ್ಧಗೊಳಿಸಿದ್ದ ಸಿಗರೇಟ್ ಪೆಟ್ಟಿಗೆಯ ಬೇಕಲ್ ಕೋಟೆ, ಉಳ್ಳಾಲ ಸಂಕ, ಮೊದಲಾದ್ದೂ ನಾನಾ ತರದ ಮೇಪುಗಳೂ ನೋಡುವಂತಿದ್ದವು. ಸಭಾಮಂಟಪಕ್ಕೆ ಒತ್ತಾಗಿರುವ ಕೋಣೆಯಲ್ಲಿ ಪ್ರಕೃತ ಸ್ಥಿತಿಯ ಜ್ಞಾನ ಬೋಧಿಸುವ ಚಿತ್ರಗಳು, ಸಸ್ಯವರ್ಗದ ಚಿತ್ರಗಳು ಡ್ರೋಯಿಂಗ್ ಚಿತ್ರಗಳು, ಗಣಿತ ಶಾಸ್ತ್ರದ ಪಟಗಳು ಲೆಕ್ಕದ ಪಾಠಗಳನ್ನು ಬೋಧಿಸುವ ಪಟಗಳು ಗವರ್ನಮೆಂಟ್ ಟ್ರೈನಿಂಗ್ ಶಾಲೆಯ ಮ್ಯೂಜಿಯಮಿನ ವಸ್ತುಗಳು ಮೊದಲಾದ್ದು ಇತ್ತು. ಇಲ್ಲಿಯ ಮ್ಯೂಜಿಯಮಿನಲ್ಲಿ ಸಂಗ್ರಹಿಸಲ್ಪಟ್ಟ ವಿವಿಧ ವಸ್ತುಗಳೂ ಪ್ರಾಣಿಗಳ ಶವಗಳೂ ವನಸ್ಪತಿ ವಸ್ತುಗಳೂ ಎಲ್ಲಾ ಶಾಲೆಯ ಮಕ್ಕಳ ಮನಸ್ಸನ್ನು ಬಹಳವಾಗಿ ಆಕರ್ಷಿಸಿ ಅವರನ್ನು ಆನಂದಗೊಳಿಸಿತ್ತು. ಮತ್ತೊಂದು ಕೋಣೆಯಲ್ಲಿ ಕೆ. ಇ. ಎವನ್ಸ್ ಬುಕ್ ಡಿಪೋ ಲೋಂಗ್‌ಮನ್ಸ್ ಬುಕ್‌ಡಿಪೋ ಮೆಕ್‌ಮಿಲನ್ ಬುಕ್‌ಡಿಪೋ, ಶೆಟ್ಟಿ ಬ್ರದರ್ಸ್ಸರ ಬುಕ್‌ಡಿಪೋ ಇವರ ವ್ಯಾಪಾರದ ಅಂಗಡಿಗಳಿದ್ದವು. ಇದಕ್ಕೆ ತಾಗಿರುವ ಕೋಣೆಯಲ್ಲಿ ಕೋಪಿ ಬರೆಯುವ ವಿಧಾನ, ಪಿಕ್ಚರ್ ಎಲ್ಬಮ್, ಶರೀರ ಶಾಸ್ತ್ರದ ಮೊಡೆಲ್ ಇದರಲ್ಲಿ ಕೆ. ದೊಂಬಯ್ಯ ಹೆಗ್ಡೆ ತಯಾರಿಸಿದ ಮೊಡೆಲ್ ಬಹಳ ನಾಜೂಕಾಗಿತ್ತು ಅಲ್ಲದೆ ಈ ಕೋಣೆಯಲ್ಲಿ ಕನ್ನಡ ಭಾಷೆಯನ್ನು ವ್ಯಾಕರಣ ಮುಖದಲ್ಲಿ ಕಲಿಸುವ ನಾನಾ ತರದ ಚಾರ್ಟುಗಳು ಇದ್ದವು. ಇನ್ನೊಂದು ಕೋಣೆಯಲ್ಲಿ ಸ್ತ್ರೀಯರಿಂದಲೇ ತಯಾರಿಸಿದ ವಿವಿಧ ಕಸೂತಿಯ ಕೆಲಸಗಳು ಜಿಲ್ಲೆಯ ಮಹಿಳೆಯರ ಕೈಗಾರಿಕೆ ಶಕ್ತಿಯನ್ನು ವ್ಯಕ್ತಪಡಿಸುವಂತಿತ್ತು. ಇಲ್ಲಿನ ವಸ್ತುಗಳು ಪ್ರತಿಯೊಂದೂ ತುಂಬಾ ಚಲೋದಾಗಿತ್ತು. ನಾನಾತರದ ಬೀಜಗಳಿಂದ ತಯಾರಿಸಿದ ಬಟ್ಟಲು ಚೀಲ ಕಾಗದದ ಹೂಗಳು, ಕಸೂತಿಯ ಫ್ರೇಮುಗಳು ಮೊದಲಾದ್ದು ಬಹಳ ಅಂದವಾಗಿದ್ದವು. ಸೆಂಟ್ ಎನ್ಸ್ ಟ್ರೈನಿಂಗ ಶಾಲೆಯ ವಿದ್ಯಾರ್ಥಿನಿಗಳಿಂದ ತಯಾರಿಸಿದ ವಿವಿಧ ಚಿತ್ರ [illegible] ತಯಾರಿಸಿದ [illegible] ಪ್ರತ್ಯಕ್ಷ ನಿಸರ್ಗಶಂಕೆಯೇ ತೋರುತ್ತಿದ್ದವು. ಬೊಕ್ಕಪಟ್ಣ ಮುನ್ಸಿಪಲ್ ಶಾಲೆಯ ಹೆಡ್‌ಮಿಸ್ಟ್ರೆಸ್‌ರಿಂದ ತಯಾರಿಸಿದ ಮೇಣದ ಹಣ್ಣುಹಂಪಲುಗಳು ಗಾತ್ರದಲ್ಲಿ ರಂಗಿನಲ್ಲಿ ಆಕಾರದಲ್ಲಿ ಪ್ರತ್ಯಕ್ಷ ಹಣ್ಣುಗಳಂತೆಯೇ ತೋರುತ್ತಿದ್ದವು. ಹೆಂಗಸರು ಮನೆ ಕೈಗಾರಿಕೆಯಾಗಿ ಯಾವ ಯಾವ ತರದ ಕೈಗಾರಿಕೆಗಳನ್ನು ಮಾಡಬಲ್ಲರೆಂಬುದಕ್ಕೆ ಇದೊಂದು ಆದರ್ಶನೀಯ ಪ್ರದರ್ಶನವಾಗಿತ್ತೆಂದರೆ ಅತಿಶಯೋಕ್ತಿಯಾಗಲಾರದು. ಹೊರಗೆ ಡಿಸ್ಟ್ರಿಕ್ಟ ಎಡ್ವಾನ್ಸ್‌ಮೆಂಟಿನವರಿಂದ ತಯಾರಿಸಲ್ಪಟ್ಟ ಬಳ್ಳಿಯ ಮತ್ತು ಬೆತ್ತದ ಸಾಮಾನುಗಳೂ ಪ್ರದರ್ಶನಕ್ಕೆ ಇಡಲ್ಪಟ್ಟಿದ್ದವು.

ಪ್ರದರ್ಶನವನ್ನು ಮೊದಲನೇ ದಿನ ನೋಡಿದ ಪ್ರೇಕ್ಷಕರು ಆನಂದಪಟ್ಟು ಇತರರಿಗೂ ತಿಳಿಸಿದ್ದರಿಂದ ಎರಡನೇ ದಿನದಿಂದ ಪ್ರೇಕ್ಷಕ ಸಮೂಹವು ಇನ್ನೂ ಗುಂಪು ಗುಂಪಾಗಿ ಬರಲಾರಂಭಿಸಿತು, ಆದುಕಾರಣ ಪ್ರದರ್ಶನವನ್ನು ಸೋಮವಾರ ದಿವಸವೇ ಕೊನೆಗಾಣಿಸಬೇಕೆಂದು ನಿರ್ಧರಿಸಿದ್ದರೂ ಬುಧವಾರದ ವರೆಗೆ ಮುಂದರಿಸಲಾಯಿತು. ಪ್ರೇಕ್ಷಕರಿಗೆ ಪ್ರವೇಶದ ಬಗ್ಗೆ ಟಿಕೇಟು ಫೀಯನ್ನು ಇಟ್ಟಿಲ್ಲವಾದ್ದರಿಂದ ಬಡವರೂ ಶ್ರೀಮಂತರೂ ಅನೇಕರು ಏಕರೀತಿಯಲ್ಲಿ ಪ್ರದರ್ಶನವನ್ನು ಬಂದು ನೋಡಿದರು. ಪ್ರದರ್ಶನ ಶಾಲೆಯಲ್ಲಿ ಯಾವ ತರದ ಗಲಾಟೆಯೂ ಉಂಟಾಗದಂತೆ ಸ್ವಯಂಸೇವಕರೂ ಪ್ರದರ್ಶನದ ಅಧಿಕಾರಿಗಳೂ ತುಂಬಾ ಜಾಗ್ರತೆಯನ್ನು ತೆಗೆದುಕೊಳ್ಳುತ್ತಿದ್ದರು.

ಅನುಕ್ರಮಣಿಕೆ.

ಅಗ್ರಲೇಖ ಪುಟಗಳು.
೧ ಶೈಕ್ಷಣಿಕ ಪ್ರದರ್ಶನ, ೬
೨ ಈ ವರ್ಷದ ಎಸೆಂಬ್ಲಿ ,,
ಸ್ಫುಟವಿಚಾರಗಳು—
೧ ಗಾಂಧಿಗಳೂ ಕೋಹಟೂ. ೨ ಹಿಂದು ಮುಸಲ್ಮಾನರ ಐಕ್ಯವು ಸಾಧವಿಲ್ಲ. ೩ ಬಂಗಾಲ ಒರ್ಡಿನನ್ಸು. ೪ ಮದ್ರಾಸ ಬಜೆಟು ೫ ರೆಡಿಂಗ ಸಾಹೇಬರ ರಜೆ. ೬ ಇಲ್ಲಿಯ ಬ್ರಾಹ್ಮಣೇತರರ ಕೌನ್ಸಿಲ್ ಉಮೇದುವಾರಿಕೆ.
ಮಂಗಳೂರು
ವರ್ತಮಾನಸಂಗ್ರಹಗಳು—
ವಿದೇಶ, ಒಳದೇಶ ೫
ದಕ್ಷಿಣ ಕನ್ನಡ—ಪದವು, ಮುಲ್ಕಿ, ಮಂಜೇಶ್ವರ ,,
ದಕ್ಷಿಣ ಕನ್ನಡ ಜಿಲ್ಲಾ ಶಿಕ್ಷಣ ಪ್ರದರ್ಶನ ಕಾಲದಲ್ಲಿ ನೆರೆದು ಬಂದಿರುವ ದಕ್ಷಿಣಕನ್ನಡ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಉಪಾಧ್ಯಾಯರುಗಳ ಸಭೆಯಲ್ಲಿ ಪಾಸಾದ ನಿರ್ಣಯಗಳ ಪ್ರೊಸಿಡಿಂಗ್ಸ್ ೪

ಸ್ವದೇಶಾಭಿಮಾನಿ.

ಶಕ ೧೮೪೬ ಫಾಲ್ಗುಣ ಶು॥ ೧೨ ಶುಕ್ರವಾರ.

ದಕ್ಷಿಣ ಕನ್ನಡ ಜಿಲ್ಲೆಯ ಶೈಕ್ಷಣಿಕ ಪ್ರದರ್ಶನ.

ಕಳೆದವಾರ ಇಲ್ಲಿಯ ಎಲಿಮೆಂಟರಿ ಟ್ರೈನಿಂಗ್ ಶಾಲೆಯಲ್ಲಿ ಈ ಜಿಲ್ಲೆಯ ಶಿಕ್ಷಣ ವಿಷಯಕ ಪ್ರದರ್ಶನವು ನಡೆಯಿತು. ಇದು ಡಿ. ಎಜ್ಯುಕೇಶನಲ್ ಬೋರ್ಡಿನ ಪರವಾಗಿ ನೆರೆದಿತ್ತು. ವಸ್ತುತಃ ಈ ಪ್ರದರ್ಶನವು ಕಳೆದ ದಶಂಬರ ತಿಂಗಳಲ್ಲಿ ಶಿಕ್ಷಣ ಮಂತ್ರಿಗಳ ಕೈಯಿಂದ ತೆರೆಯಲ್ಪಡತಕ್ಕದಿತ್ತು. ಆದರೆ ಅಂದಿನಿಂದ ಇದುವರೆಗೆ ಶಿಕ್ಷಣ ಮಂತ್ರಿಗಳಿಗೆ ಇಲ್ಲಿ ಚಿತ್ತಯಿಸಲು ಅವಕಾಶವು ದೊರಕಲಿಲ್ಲ! ಹೀಗಾಗಿ ಪ್ರದರ್ಶನದ ವ್ಯವಸ್ಥಾಪಕರಿಗೆ ಕೊನೆಗೆ ಕಲೆಕ್ಟರ ಸಾಹೇಬರ ಕೈಯಿಂದ ಪ್ರದರ್ಶನದ ಅನಾವರಣ ಸಮಾರಂಭವನ್ನು ಮಾಡಿಸಬೇಕಾಯಿತು. ಈ ಸಮಾರಂಭವು ಮತ್ತು ಪ್ರದರ್ಶನವು ನಿರ್ವಿಘ್ನವಾಗಿಯೂ, ಉತ್ತಮ ರೀತಿಯಿಂದಲೂ ಮುಗಿಯಿತೆಂಬುದನ್ನು ತಿಳಿಸಲು ನಾವು ಸಂತೋಷಪಡುತ್ತೇವೆ.

ಅನಾವರಣ ಸಮಾರಂಭದ ಆದಿಯಲ್ಲಿ ರಾ. ಬ. ಎನ್. ಸುಬ್ಬರಾಯರು ಮತ್ತು ಕಲೆಕ್ಟರ ದೊರೆಗಳು ಪ್ರತ್ಯೇಕ ಪ್ರತ್ಯೇಕವಾಗಿ ಒಂದೊಂದು ಚಿಕ್ಕ ಭಾಷಣವನ್ನು ಕೊಟ್ಟರು. ಈ ಭಾಷಣಗಳು ಬರೆ ಔಪಚಾರಿಕವಾಗಿಯೆ ಇದ್ದವಲ್ಲದೆ, ಅವುಗಳಲ್ಲಿ ಅಪೂರ್ವವಾದ ವಿಷಯವು ಇದ್ದಿಲ್ಲ. ಕಲೆಕ್ಟರ ಸಾಹೇಬರು ತಮ್ಮ ಈ ಔಪಚಾರಿಕ ಭಾಷಣದಲ್ಲಿ ಶಿಕ್ಷಣ ವಿಷಯಕ ಮತ್ತು ಔದ್ಯೋಗಿಕ ವಿಷಯಕ ಪ್ರದರ್ಶನಗಳ ಉಪಯುಕ್ತತೆಯನ್ನು ಹೇಳುವಾಗ ಮುಂದಿನ ಒಂದು ವಿಷಯವನ್ನು ಪ್ರಸ್ತಾಪಿಸಿದರೆಂದು ಕೇಳುತ್ತೇವೆ. "ಹಿಂದುಸ್ಥಾನದಲ್ಲಿ ಹಿಂದಿಗಳು ಸ್ವರಾಜ್ಯವನ್ನು ಕೇಳುತ್ತಿದ್ದಾರೆ. ಮತ್ತು ಸ್ವರಾಜ್ಯದ ಚಳವಳವು ಪ್ರಾರಂಭವಾಗಿದೆ. ಆದರೆ ಈ ಹೊತ್ತೆ, ನಾಳೆಯೆ ಸ್ವರಾಜ್ಯವು ಸಿಗಬೇಕೆಂದರೆ ಸಿಗಲಿಕ್ಕಿಲ್ಲ, ಇಂಥ ಪ್ರದರ್ಶನಗಳನ್ನು ಜರಗಿಸುತ್ತ, ಆಯಾ ವಿಷಯಗಳಲ್ಲಿ ನೈಪುಣ್ಯವನ್ನು ಪಡೆಯುತ್ತ ಕಾಲಕ್ರಮೇಣ ಸ್ವರಾಜ್ಯವನ್ನು ಹೊಂದಬೇಕು, ಸುಮ್ಮಗಲ್ಲ"!! ಕಲೆಕ್ಟರ ಸಾಹೇಬರ ಈ ಉಪದೇಶವು ಬಹಳ ಚಲೋದೆಂಬುದಕ್ಕೆ ಅಡ್ಡಿ ಇಲ್ಲ. ಆದರೆ ಹುಡುಗಿಯರ ಕಸೂತಿಯ (ಹೊಲಿಗೆಯ) ಕೆಲಸದಿಂದ ಅಥವಾ ಹುಡುಗರ ಆವೆಮಣ್ಣಿನ ಕೆಲಸದಿಂದ ಸ್ವರಾಜ್ಯದ ಪಾತ್ರತೆ ಬಂದೀತೆಂಬೀ ಸಂಗತಿಯು ನಿಜವಾಗಿ ನೂತನವೆ ಸರಿ! ಆದರೆ ಕಸೂತಿಯಿಂದ ಮತ್ತು ಗೊಂಬೆಗಳಿಂದ ಸ್ವರಾಜ್ಯವು ಬರುವದಾದರೆ ಅದು ಬೇಡವೆಂದೆ ಹೇಳಬೇಕು! ವಿಲಾಯತಿಯವರು ಸ್ವರಾಜ್ಯವನ್ನು ಗಳಿಸುವದಕ್ಕಿಂತ ಮುಂಚೆ ಇಂಥ ಪ್ರದರ್ಶನಗಳನ್ನು ಎಷ್ಟು ಕೂಡಿಸಿದ್ದರೊ! ನಾವು ಹೇಳುವದಾದರೆ, ಸ್ವರಾಜ್ಯ ಬಂದ ಮೇಲೆ ಇಂಥ ಆಪಾತ ರಮಣೀಯ ವಸ್ತುಗಳ ಅಥವಾ ಕಲೆಗಳ ಪ್ರದರ್ಶನಗಳಿಗೆ ಇಂಗ್ಲಂಡಿನಂಥ ಪಾಶ್ಚಾತ್ಯರಾಷ್ಟ್ರವು ಉತ್ತೇಜನ ಕೊಡುತ್ತಿದೆ. ಇರಲಿ.

ಪ್ರದರ್ಶನದ ಮಟ್ಟಿಗೆ ಹೇಳುವದಾದರೆ ಅದು ಸರ್ವಾಂಗ ಶುದ್ಧವಾಗಿತ್ತು. ಈ ವಿಷಯದಲ್ಲಿ ಯಾವ ಸಂದೇಹವೂ ಇಲ್ಲ. ಪ್ರದರ್ಶನೀಯ ವಸ್ತುಗಳ ವಿವರಣೆಯನ್ನು ಈ ಹೊತು ಇನ್ನೊಂದು ಪುಟದಲ್ಲಿ ಪ್ರಕಟಿಸಿದ್ದೇವೆ. ಅದರ ಮೇಲಿಂದ ಪ್ರದರ್ಶನದ ಸಂಗತಿಯು ವಾಚಕರಿಗೆ ತಿಳಿಯುವುದು. ಈ ಪ್ರದರ್ಶನವು ಈ ಜಿಲ್ಲೆಯ ಶಿಕ್ಷಣ ಮಂಡಲದ ಪರವಾಗಿ ಜರಗಿದೆಯಾದರೂ ಪ್ರದರ್ಶನ ಗೃಹದಲ್ಲಿಯ ಎಲ್ಲ ತರದ ವ್ಯವಸ್ಥೆಯನ್ನು ಎಲಿಮೆಂಟರಿ ಟ್ರೈನಿಂಗ ಶಾಲೆಯ ಮುಖ್ಯಾಧ್ಯಾಪಕರಾದ ಶ್ರೀ॰ ಉ. ಮಂಗೇಶರಾವ್ ಬಿ. ಎ. ಎಲ್. ಟಿ ಯವರೂ ಮತ್ತು ಅವರ ಸಹಕಾರಿಗಳೂ ಬಹು ದಕ್ಷತೆಯಿಂದ ಮಾಡಿದ್ದಾರೆ. ಆದ್ದರಿಂದ ಅವರೆಲ್ಲರನ್ನು ಅಭಿನಂದಿಸುವದು ಜನತೆಯ ಕೆಲಸವಾಗಿದೆ. ಪ್ರದರ್ಶನೀಯ ವಸ್ತುಗಳಿಂದ ನೇತ್ರಾನಂದವಾಗುವಂತೆ ಬೇರೆ ಬೇರೆ ಉಪನ್ಯಾಸಗಳೂ, ನಾಟಕ, ತಾಳಮದ್ದಳೆ ಮುಂತಾದ್ದರಿಂದ ಮನೋರಂಜನವೂ ಬೋಧವೂ ಉಂಟಾಗುತ್ತಿದ್ದವು. ಸಾರಾಂಶ ಶೈಕ್ಷಣಿಕ ಪ್ರದರ್ಶನವು ಸರ್ವದೃಷ್ಟಿಯಿಂದ ಯಥಾರ್ಥವಾಗಿದ್ದಿತೆಂದು ಹೇಳಿದರೆ ಅದು ಅತ್ಯುಕ್ತಿಯಾಗಲಿಕ್ಕಿಲ್ಲ. ಈ ಅನುಕರಣೀಯವಾದ ಹೊಸ ಉಪಕ್ರಮವುಂಟಾದ ಬಗ್ಗೆ ಶಿಕ್ಷಣಪ್ರೇಮಿಗಳು ಈ ಪ್ರದರ್ಶನದ ಪ್ರವರ್ತಕರಿಗೆ ಋಣಿಯಾಗದೆ ಇರಲಿಕ್ಕಿಲ್ಲ.

ಈ ವರ್ಷದ ಎಸೆಂಬ್ಲಿ.

ಜನವರಿಯಿಂದ ಜರಗುತ್ತಬಂದಿರುವ ಎಸೆಂಬ್ಲಿಯ ಅಧಿವೇಶನಗಳ ಕಾರ್ಯಾಕಲಾಪಗಳನ್ನು ನಿರೀಕ್ಷಿಸಿದರೆ, ಎಸೆಂಬ್ಲಿಯಲ್ಲಿ ಕಳೆದ ವರ್ಷ ಇದ್ದಷ್ಟು, ಲೋಕಪಕ್ಷದ ಸಭಾಸದರಲ್ಲಿ ಐಕ್ಯವಿದ್ದದ್ದು ಕಂಡುಬರುವುದಿಲ್ಲ. ಹಿಂದೊಮ್ಮೆ ನಾವು ಸೂಚಿಸಿದಂತೆ ಸ್ವತಂತ್ರರು ಅನೇಕ ಸಂಗತಿಗಳಲ್ಲಿ ಮನಸ್ವಿಯಾಗಿ ವರ್ತಿಸತೊಡಗಿದ್ದಾರೆ. ಇದರ ಮೇಲಿಂದ ಸ್ವರಾಜ್ಯ ಪಕ್ಷದಂತೆ ಅಥವಾ ಇನ್ನೊಂದು ವಿವಕ್ಷಿತತಂಡದವರಂತೆ ಒಂದು ನಿಶ್ಚಿತವಾದ ಕಾರ್ಯ ಮತ್ತು ಅದಕ್ಕೆ ಬೇಕಾಗಿರುವ ನಿಯಮಗಳಿಲ್ಲದಿರುವದರಿಂದ ಸ್ವತಂತ್ರರನ್ನು ಇನ್ನು ಮುಂದಿನ ಚುನಾವಣೆಯಲ್ಲಿ ಚುನಾಯಿಸಿ ಕೊಡುವದಕ್ಕಿಂತ ಸ್ವರಾಜ್ಯಪಕ್ಷೀಯರಂಥವರನ್ನು ಚುನಾಯಿಸಿ ಕೊಡುವದೆ ಲೇಸೆಂಬದೊಂದು ಪಾಠವನ್ನು ದೇಶವು ಕಲಿಯದೆ ಇರಲಿಕ್ಕಿಲ್ಲ. ಇರಲಿ, ಜನವರಿ, ಫೆಬ್ರವರಿ, ಮಾರ್ಚ ಈ ತಿಂಗಳಲ್ಲಿ ಜರಗತಕ್ಕ ಎಸೆಂಬ್ಲಿಯು—ಅಥವಾ ಇತರ ಪ್ರಾಂತಿಕ ಕಾಯಿದೆ ಕೌನ್ಸಿಲುಗಳು ಸರಕಾರದ ಮುಂಚಿನ ಜಮಾಖರ್ಚಿನ ವಿವರಣೆಯನ್ನು ಕೊಟ್ಟು ಮುಂದಿನದನ್ನು ವ್ಯವಸ್ಥೆಗೊಳಿಸಿಕೊಳ್ಳುವದಕ್ಕಾಗಿ ಸೇರತಕ್ಕವುಗಳಾದ್ದರಿಂದ, ಮಧ್ಯ ಮಧ್ಯದಲ್ಲಿ ಕೆಲವು ಲೋಕಪಕ್ಷದ ಬಿಲುಗಳು, ಠರಾವುಗಳು ಪ್ರಶ್ನೋತ್ತರಗಳು ನಡೆಯುತ್ತವೆಯಾದರೂ ಮುಖ್ಯವಾಗಿ ಎಲ್ಲ ಕಡೆಗಳಲ್ಲಿ ಜಮಾ ಖರ್ಚಿನ ಪ್ರಸ್ತಾಪವು ನಡೆದಿರುತ್ತದೆ. ಮಾರ್ಚ ತಿಂಗಳೆಂಬುದು ಸರಕಾರಿ ಖಜಾನಜಿಗಳಿಗೆ ವಸಂತಮಾಸವೆಂದು ಹೇಳಿದರೆ ಅದು ತಪ್ಪಾಗಲಿಕ್ಕಿಲ್ಲ! ವಸಂತ ಮಾಸವು ಬರುತ್ತಲೆ ಮೌನವಾಗಿದ್ದ ಪಕ್ಷಿಗಳವಾಗಿಂದ್ರಿಯವು ಹೇಗೆ ಪಸರಿಸುವುದೊ ಹಾಗೆಯೆ ನಮ್ಮೆಲ್ಲ ಖಜಾನಜಿಗಳ ಪ್ರತಿಪಾದನವು ಹೊರಡುವದು. ಈ ರೂಪಕವನ್ನು ಇನ್ನೂ ಮುಂದಕ್ಕೆ ಕೊಂಡುಹೋಗಿ ಹೇಳಬಹುದೇನೆಂದರೆ, ಸರಕಾರದ ಈ ಕೋಗಿಲೆಗಳು ಅನಾಯಾಸದಿಂದ ಬೆಳದಿರುವ ವನಶ್ರೀಯನ್ನು ಯಥೇಚ್ಛವಾಗಿ ಲುಟಾಯಿಸಿ ಗತ ವರ್ಷದ ವರದಿಯನ್ನು ನಿವೇದಿಸುವಾಗ ತಮ್ಮ ತಮ್ಮ ಕಾರ್ಯಭಾರದ ಕೌಶಲ್ಯದ ಮತ್ತು ಮಿತವ್ಯಯದ ಪಾಂಡಿತ್ಯವನ್ನು ಪಂಚಮಸ್ವರದಿಂದ ಹಾಡುತ್ತಿರುತ್ತವೆ. ತಥಾಪಿ ಈ ಮನೋಹರ ಗಾಯನವು ಅನೇಕ ಸಂಗತಿಗಳಲ್ಲಿ ವ್ಯಕ್ತವಾಗುವ ಅವರ ಅಪಸ್ವರದಿಂದ ಶ್ರೋತೃಗಳಿಗೆ ವೈರಸ್ಯವನ್ನುಂಟುಮಾಡದೆ ಇರುವದಿಲ್ಲ. ಮತ್ತು ಇದೆ ಕಾರಣದಿಂದ ಸರಕಾರಿ ಖಜಾನಜಿಗಳ ಈ ಅಪಸ್ವರವು ತಮ್ಮ ಗೋಚರಕ್ಕೆ ಬಂದಿದೆ ಎಂದು ತೋರಿಸುವಂತೆ, ಉಡುಗರೆಯ ಬದಲು ಎರಡೆರಡು ಕಪೋಲಚಪೇಟಿಕೆಗಳನ್ನೆಳೆಯುವ ರೀತಿಯಲ್ಲಿ ಅವರ ಜಮಾಖರ್ಚಿನ ನಿಷೇಧಕ್ಕಾಗಿ ವ್ಯಂಜಕ ಠರಾವುಗಳನ್ನು ಲೋಕಪಕ್ಷದ ಸಭಾಸದರಿಗೆ ತರಬೇಕಾಗಿ ಬಂತು!

ಇದರ ಸ್ಪಷ್ಟೀಕರಣವು ಮುಂದಿನಂತೆ ಇದೆ. ಹಿಂದುಸ್ಥಾನದ ಕೋಶ ಮಂತ್ರಿಗಳಾದ ಸರ್ ಬೆಸಿಲ್ ಬ್ಲೆಕೆಟ್ ಸಾಹೇಬರು ೧೯೨೫—೨೬—ನೆಯ ವರ್ಷದ ಜಮಾಖರ್ಚಿನ ಪಟ್ಟಿಯನ್ನು ಸಾದರಗೊಳಿಸಿದರು. ಇದನ್ನು ಸಾದರಗೊಳಿಸುವಾಗ ಅವರು ಯಥಾಕ್ರಮ ಒಂದು ಭಾಷಣವನ್ನು ಕೊಟ್ಟರು. ಈ ಭಾಷಣದಲ್ಲಿ ಅವರು ಮುಂದಿನ ಜಮಾಖರ್ಚಿನ ವ್ಯವಸ್ಥೆಯನ್ನು ಹೇಳುವಾಗ ಆತ್ಮ ಸಮರ್ಥನವನ್ನು ಮಾಡಿದ್ದಾರೆ. ಅವರ ಭಾಷಣವನ್ನು ಪರಿಶೀಲಿಸಿದ್ದಲ್ಲಿ ಮತ್ತು ಅವರ ಲೆಕ್ಕತಖ್ತೆಯನ್ನು ಅವಲೋಕಿಸಿದ್ದಲ್ಲಿ ಅವೆರಡರಲ್ಲೂ ಹಿಂದುಸ್ಥಾನದ ಮೇಲೆ ಸಹಾನುಭೂತಿಯ ಲೇಶವು ಕೂಡ ಇದ್ದುದಾಗಿ ಕಂಡು ಬರುವದಿಲ್ಲ. ಸ್ವಾರ್ಥಮೂರ್ತಿ ಪುಟ್ಟೆಂಭಟ್ಟನು ಹೇಗೆ ತನ್ನ ಹೋಳಿಗೆಯ ಮೇಲಿಯ ತುಪ್ಪವನ್ನೆಲ್ಲ ಬಡಿಸಿಕೊಳ್ಳುವನೊ ಹಾಗೆಯೇ ಬ್ಲೆಕೆಟರು ಸೈನ್ಯದ ಇಲಾಖೆಯ ಹೋಳಿಗೆಯನ್ನು ಈ ಬಜೇಟಿನ ತುಪ್ಪದಲ್ಲಿ ಮುಳುಗಿಸಿ ತಿನ್ನುತಿದ್ದಾರೆ! ಸೈನ್ಯದ ಇಲಾಖೆಯ ಖರ್ಚನ್ನು ಪರಮಾವಧಿಗೆ ಕೊಂಡುಹೋಗಿರುವದರಿಂದ ಪೋಸ್ಟಿನ ಮತ್ತು ರೈಲಿನ ಚಾರ್ಜುಗಳನ್ನು ಕಡಿಮೆಮಾಡುವವಾಗಲಿ, ಈ ಇಲಾಖೆಗಳಲ್ಲಿ ಇತರ ಸೌಕರ್ಯಗಳನ್ನು ಒದಗಿಸಿಕೊಡುವದಾಗಲಿ, ಔದ್ಯೋಗಿಕ ಮತ್ತು ವ್ಯಾಪಾರ ವಿಷಯಕ ಸಂಗತಿಗಳಲ್ಲಿ ದ್ರವ್ಯವನ್ನು ವಿನಿಯೋಗಿಸುವದಾಗಲಿ ಅಥವಾ ಇತರ ಒಂದೆ ಉಪಯುಕ್ತ ಸಂಗತಿಯಾಗಲಿ ಈ ಕೋಶಮಂತ್ರಿಯವರ ಭಾಷಣದಲ್ಲಿ ಅಥವಾ ಅವರ ಲೆಕ್ಕತಖ್ತೆಯಲ್ಲಿ ಸರ್ವಥಾ ಇಲ್ಲ! ಜಮಾಖರ್ಚಿನ ಪಟ್ಟಿಯನ್ನು ತಯಾರಿಸುವಾಗ ಎರಡು ತರದ ದೋಷಗಳನ್ನು ಮಾಡುವ ಶಿಷ್ಟಾಚಾರವು ಹಿಂದಿನಿಂದಲೆ ಇದೆ. ಒಂದು ಮುಂದಿನ ಖರ್ಚಿನ ರಕಮನ್ನು ಆದಷ್ಟು ಹೆಚ್ಚಿಸಿಕೊಳ್ಳುವದು. ಇನ್ನೊಂದು, ಉತ್ಪನ್ನವನ್ನು ಸಾಧ್ಯವಿದ್ದಷ್ಟು ಕಡಿಮೆ ಹಿಡಿಯುವದು. ಈ ಮೇರೆಗೆ ಖರ್ಚಿನ ಮತ್ತು ಜಮೆಯ ನಿಷ್ಕಾರಣವಾಗಿ ಉತ್ತರ ದಕ್ಷಿಣ ಗೋಲಾರ್ಧಗಳಿಗೆ ಹೋಗುವ ಕಾರಣ ಪ್ರಜೆಗಳ ಮೇಲೆ ಬೇರೆ ಬೇರೆ ಕರಗಳು ಹೊರಿಸಲ್ಪಡುತ್ತವೆ. ಎಂದರೆ ಖರ್ಚಿನ ರಕಮನ್ನು ಹೆಚ್ಚಿಸಿಕೊಳ್ಳುವದರಿಂದ ಅಷ್ಟು ದೊಡ್ಡ ಖರ್ಚನ್ನು ನಿರ್ವಹಿಸುವಂತೆ ಹೊಸ ತೆರಿಗೆಗಳ ಬೀಜವನ್ನು ಬಿತ್ತಿ ಉತ್ಪನ್ನದ ಗದ್ದೆಯನ್ನು ಬೆಳಸಬೇಕಾಗುತ್ತದೆ. ಇದರೊಡನೆ ಇನ್ನೊಂದು ಅನರ್ಥವು ಸಹ ಸಂಭವಿಸುತ್ತದೆ. ಅಯಥಾರ್ಥವಾದ ಖರ್ಚಿನ ರಕಮನ್ನು ಜಮಾಯಿಸಿಕೊಂಡಿರುವದರಿಂದ ವರ್ಷದ ಅಂತ್ಯದಲ್ಲಿ ಶಿಲುಕು ಸಹ ಹೆಚ್ಚು ಉಳಿಯುತ್ತದೆ, ಮತ್ತು ಈ ಮೇರೆಗೆ ಉಳಿಯುವ ಹಿಂದುಸ್ಥಾನದ ಸಿಲುಕು ವಿಲಾಯತಿಯ ಶೀತಳ ಹವೆಯಲ್ಲಿ ಶಾಂತವಾಗಿ ನಿಂತುಕೊಂಡಿರುತ್ತದೆ! ಜಮಾಖರ್ಚಿನ ಪಟ್ಟಿಯಲ್ಲಿ ಯಾವಾಗಲೂ ಇರುವ ಈ ಎರಡು ದೋಷಗಳನ್ನು ಈ ವರ್ಷದಲ್ಲೂ ಬ್ಲೆಕೆಟ್ ಸಾಹೇಬರು ಮಾಡಿಯೆ ಇದ್ದಾರೆ. ಈ ಬ್ಲೆಕೆಟ ಸಾಹೇಬರು, ಇಲ್ಲಿಯ ಖಜಾನಜಿಗಳಾಗಿ ಮೂರು ವರ್ಷಗಳಾದವು. ಆದರೂ ಅವರ ಪಟ್ಟಿಯಲ್ಲಿ ಈ ದೋಷಗಳು ಯಥಾಸ್ಥಿತವಾಗಿಯೆ ಇವೆ. ಸಾರಾಂಶ ಹಿಂದುಸ್ಥಾನದ ಈ ವರ್ಷದ ಜಮಾಖರ್ಚು ಮುಂಚಿನಂತೆಯೆ ಆಕ್ಷೇಪಪೂರ್ಣವಾಗಿಯೆ ಇದೆ.

ಮತ್ತು ಇದೇ ಕಾರಣದಿಂದ ಲೋಕಪಕ್ಷದ ಸಭಾಸದರು ಒಂದರ ಮೇಲೊಂದು ನಿಂದಾವ್ಯಂಜಕ ಠರಾವುಗಳನ್ನು ತಂದು ಸರಕಾರದ ಪರಾಜಯವನ್ನು ಮಾಡಿದರು. ವಸ್ತುತಃ ಸ್ವರಾಜ್ಯಪಕ್ಷದವರು ಕಳೆದ ವರ್ಷದಂತೆ ಈ ವರ್ಷವೂ ಸರಕಾರಿ ಬಜೆಟನ್ನು ಸಂಪೂರ್ಣವಾಗಿ ನಿರಾಕರಿಸಲಿದ್ದರು. ಆದರೆ ಮೇಲೆ ಸೂಚಿಸಿದಂತೆ ಅವರ ಬಹುಮತದ ಬಂಧುಗಳಾದ ಸ್ವತಂತ್ರರು ಕೊಂಚ ಮಟ್ಟಿಗೆ ಟೋಪಿಯನ್ನು ತಿರುಗಿಸಿದ ಕಾರಣ ಸಂಪೂರ್ಣ ಬಜೆಟನ್ನು ನಿರಾಕರಿಸುವ ಕಾರ್ಯಕ್ರಮವನ್ನು ಅವರಿಗೆ ಬಿಟ್ಟುಬಿಡಬೇಕಾಯಿತು. ಆದರೂ ಕೋಶಮಂತ್ರಿಗಳು ಸಾದರಗೊಳಿಸಿದ ಬಜೆಟನ ರಕಮಿನಿಂದ, ರೈಲ್ ಇಲಾಖೆಯಲ್ಲಿ ಹಿಂದಿಗಳಿಗೆ ಪ್ರವೇಶವಿಲ್ಲ, ಅಪವಾದಕ್ಕೆ ಇದ್ದರೂ ಅದು ಇರುವೆಯ ನಡೆಯಷ್ಟು ಮಂದವಾಗಿದ್ದ ಕಾರಣದಿಂದ ನೂರು ನೂರು ರೂಪಾಯಿ ರಕಮನ್ನು ಕಡಿಯಲು ನಿಂದ್ಯಾವ್ಯಂಜಕ ಠರಾವುಗಳು ಬಂದು ಪಾಸಾದವು. ಶ್ರೀ ವಿ. ಜೆ. ಪಟೇಲರು ಲಂಡನಿನಲ್ಲಿ ಸ್ಥಾಪಿಸಿರುವ ಬೋರ್ಡ ಎಸ್ಟೆಬ್ಲಿಷ್‌ಮೆಂಟಿನ ಮೇಲಿನ ಖರ್ಚಿನಲ್ಲಿ (೨,೦೫,೦೦೦) ಎರಡು ಲಕ್ಷವನ್ನು ಕಡಿಯಬೇಕೆಂದು ಠರಾವನ್ನು ತಂದರು. ಈ ಠರಾವು ಕೂಡ ಪಾಸಾಯಿತು. ಇದಲ್ಲದೆ, ರೈಲ್ವೆಬೋರ್ಡಿನ ಖರ್ಚಿನೊಳಗಿಂದ ೭೭೦೦೦ ರಕಮನ್ನು ಕಡಿಯಬೇಕೆಂಬ ಠರಾವು ಪಾಸಾಯಿತು. ಈ ಮೇರೆಗೆ ಈ ವರ್ಷದ ಜಮಾಖರ್ಚಿನ ಪಟ್ಟಿಯ ಮೇಲೆ ಚರ್ಚೆಯು ನಡೆಯುತ್ತಲಿದೆ. ಮತ್ತು ಸಾಧ್ಯವಿದ್ದ ಮಟ್ಟಿಗೆ ಅದರ ಸ್ವಾರ್ಥಪರತೆಯ ಪರಿಸ್ಫೋಟವನ್ನು ಲೋಕಪಕ್ಷದ ಸಭಾಸದರು ಮಾಡುತ್ತಿದ್ದಾರೆ ಮತ್ತು ಮಾಡಲಿಕ್ಕಿದ್ದಾರೆ.

ಎಸೆಂಬ್ಲಿಯಲ್ಲಿ ಈ ಮೇರೆಗೆ ಬಜೇಟಿನ ವಿಷಯವಾಗಿ ವಾದ ವಿವಾದವು ಇತ್ತಲಾಗೆ ನಡೆಯುತ್ತಲಿರುವಾಗ ಅದಕ್ಕಿಂತ ಮುಂಚೆ ಅದೆ ಎಸೆಂಬ್ಲಿಯಲ್ಲಿ ಒಂದು ಉಪಯುಕ್ತವಾದ ಠರಾವು ಪಾಸಾಯಿತು. ಹಿಂದುಸ್ಥಾನದಲ್ಲಿ ಲಷ್ಕರಿ ಶಿಕ್ಷಣದ ಕೊಲೇಜನ್ನು ಸ್ಥಾಪಿಸಬೇಕೆಂದು ಶ್ರೀ. ವೆಂಕಟಪತಿರಾಜುಗಳು ಒಂದು ಠರಾವನ್ನು ತಂದಿದ್ದರು. ಈ ಠರಾವು ೫೮ ಅನುಕೂಲ, ೩೭ ಪ್ರತಿಕೂಲ ಮತಗಳಿಂದ ಪಾಸಾಯಿತು. ಈ ಠರಾವು ಹೊಸತಲ್ಲ. ಇದರ ಪೂರ್ವ ಚರಿತ್ರೆಯನ್ನು ಸಂಕ್ಷೇಪದಿಂದಲಾದರೂ ತಿಳಕೊಳ್ಳುವದು ಅಗತ್ಯವಾಗಿದೆ. ಸರ್ ಶಿವಸ್ವಾಮಿ ಐಯ್ಯರರು ೧೯೨೧ರಲ್ಲಿ ಹಿಂದುಸ್ಥಾನದಲ್ಲಿ ಲಷ್ಕರಿಶಿಕ್ಷಣದ ಕೊಲೇಜನ್ನು ಸ್ಥಾಪಿಸಬೇಕೆಂದು ಒಂದು ಠರಾವನ್ನು ತಂದಿದ್ದರು. ಅದು ಸರಕಾರದ ಸಮ್ಮತಿಯಿಂದಲೆ ಪಾಸಾಯಿತು. ತಿರುಗಿ ೧೯೨೩ರಲ್ಲಿ ಇದೆ ಠರಾವಿನ ಪುನರಾವೃತ್ತಿಯಾಯಿತು. ಆದರೆ ಪ್ರಥಮತಃ ಪಾಸಾಗಿರುವ ಠರಾವು ಪಾಸಾಗಿ ೪ ವರ್ಷಗಳು ದಾಟಿಹೋದವು. ಆದರೂ ಅದು ಜಾರಿಯಲ್ಲಿ ಬರುವದಿಲ್ಲ. ಈ ಸ್ಥಿತಿಯನ್ನು ಕಂಡು ವೆಂಕಟಪತಿರಾಜುಗಳು ಮೇಲಿನ ಠರಾವನ್ನು ತಂದಿದ್ದಾರೆ. ಈ ಠರಾವು ಕಾಯಿದೆಮಂಡಲದ ಮುಂದೆ ಬಂದಾಗ ಗೃಹಮಂತ್ರಿಗಳಾದ ಮಡಿಮನರು ಇಂಥ ಕೊಲೇಜು ಅಗತ್ಯವೂ ಹೇಗೆ ಎಂಬುದನ್ನು ನಿರೀಕ್ಷಿಸಲು ಒಂದು ಕಮಿಟಿಯನ್ನು ನೇಮಿಸಬಹುದೆಂಬ ಉಪಾಯವನ್ನು ಸೂಚಿಸಿ ಈ ಠರಾವಿನ ಉಪಸರ್ಗವನ್ನು ತಪ್ಪಿಸಿಕೊಳ್ಳಲು ಕುಟಿಲವಾದ ಹಂಚಿಕೆಯನ್ನು ಹೂಡಿದರು. ಬೇಕೊ ಬೇಡವೊ ಎಂಬ ಪ್ರಶ್ನೆಯನ್ನು ಚರ್ಚಿಸುತ್ತಲೆ ಕಾಲಹರಣವನ್ನು ಮಾಡಬಹುದಲ್ಲವೆ ಎಂಬುದು ಮಂತ್ರಿಗಳ ಮಂತ್ರ! ಆದರೆ ಪಂಡಿತ ಮಾಲವೀಯರು ಅಪಾಯಕ್ಕೆ ಉಪಾಯವೆಂಬಂತೆ ಬೇರೊಂದು ಉಪಸೂಚನೆಯನ್ನು ತಂದು ಅದರಲ್ಲಿ ಲಷ್ಕರಿಕೊಲೇಜನ್ನು ಸ್ಥಾಪಿಸಲು ಬೇಕಾದ ಸಿದ್ಧತೆಯನ್ನು ಒದಗಿಸಿಕೊಳ್ಳಲು ಒಂದು ಕಮಿಟಿಯನ್ನು ನೇಮಿಸಬೇಕೆಂದು ಸೂಚಿಸಿದರು. ಪಂಡಿತಜಿಯವರ ಈ ಉಪಸೂಚನೆಯನ್ನು ಮೂಲ ಠರಾವಿನ ಕರ್ತರಿಂದ ವೆಂಕಟಪತಿಗಳು ಅಂಗೀಕರಿಸಿದರು. ಆಗ ಗೃಹಮಂತ್ರಿಗಳಿಗಾಗಲಿ ಇತರ ತಂತ್ರಿಗಳಿಗಾಗಲಿ ಯಾವ ಉಪಾಯವೂ ಇಲ್ಲದೆ ಹೋಯಿತು. ಮತ್ತು ಈ ಉಪಸೂಚನೆಯಿಂದ ಒಡಗೂಡಿದ ಲಷ್ಕರಿ ಶಿಕ್ಷಣದ ಠರಾವು ಪಾಸಾಯಿತು. ವಸ್ತುತಃ ಹೇಳುವದಾದರೆ ಸರಕಾರವು ಐದು ವರ್ಷಕ್ಕೆ ಮುಂಚೆಯೆ ಲಷ್ಕರಿ ಉಚ್ಚ ಶಿಕ್ಷಣವನ್ನು ಇಲ್ಲಿ ಕೊಟ್ಟೇವೆಂದು ಅಭಯವನ್ನು ಕೊಟ್ಟಿತು; ಮತ್ತು ಆ ಮೇರೆಗೆ ಯುವರಾಜರು ಹಿಂದುಸ್ಥಾನಕ್ಕೆ ಬಂದಾಗ ಅವರ ಕೈಯಿಂದ ಕಿಚ್‌ನರ್ ಕೊಲೆಜಿನ ಶಂಕುಸ್ಥಾಪನೆಯು ಕೂಡ ಮಾಡಲ್ಪಟ್ಟಿತ್ತು; ಎಂದ ಮೇಲೆ ಸರಕಾರವು ಈ ಠರಾವನ್ನು ಉಪರೋಧಿಸಿದ್ದು ನ್ಯಾಯವಾಗಿರಲಿಲ್ಲ. ಆದರೆ ಇತ್ತಲಾಗೆ ಸರಕಾರವು ತನ್ನ ಅನೇಕ ವಕ್ರಕೃತ್ಯಗಳಿಂದ ಭರವಸೆಯನ್ನು ಕಡಿಮೆಮಾಡಿಕೊಂಡಿದೆ. ಸರಕಾರವು ಒಂದೆ ಒಂದು ಗಳಿಗೆಯಲ್ಲಿ ಮೊದಲಿನ ವಚನವನ್ನು ತಿರುಗಿಸುತ್ತದೆ. ಇಂಥ ಪರಿಸ್ಥಿತಿಯು ಇದ್ದ ಕಾರಣ ವೆಂಕಟಪತಿಗಳು ಲಷ್ಕರಿ ಶಿಕ್ಷಣದ ಠರಾವನ್ನು ಎಸೆಂಬ್ಲಿಯಲ್ಲಿ ತಂದರು. ಎಸೆಂಬ್ಲಿಯು ಅದನ್ನು ಬಹುಮತದಿಂದ ಪಾಸು ಮಾಡಿತು. ಈ ಕಾರಣದಿಂದ ಎಸೆಂಬ್ಲಿಯು ಅಭಿನಂದನೀಯವಾಗಿದೆ.

ಸ್ಫುಟವಿಚಾರಗಳು.

೧. ಗಾಂಧಿಜಿಗಳಿಗೆ ಇನ್ನೊಮ್ಮೆ ಕೋಹತಿಗೆ ಹೋಗಲು ಸರಕಾರವು ಪುನಃ ನಿರಾಕರಿಸಿತು. ಸರಕಾರವು ತನ್ನ ಪ್ರಯತ್ನದಿಂದ ಕೋಹತಿನಲ್ಲಿ ಹಿಂದುಮಹಮ್ಮದೀಯರೊಳಗೆ ಯಾವ ಐಕ್ಯವನ್ನು ಪ್ರಸ್ಥಾಪಿಸಿರುವದೊ ಅದನ್ನು ಗಾಂಧಿಜಿಗಳು ಹಾಳುಮಾಡಿಯಾರೆಂಬುದರಿಂದ ಅವರನ್ನು ಅಲ್ಲಿ ಹೋಗಲು ಅಪ್ಪಣೆ ಕೊಡಲಾಗುವದಿಲ್ಲವೆಂದು ಸರಕಾರವು ತನ್ನ ನಿರಾಕರಣದ ಹುಕುಮಿನಲ್ಲಿ ಹೇಳುತ್ತಿದೆ! ಇದು ಸರಕಾರದ ಅನ್ಯಾಯವು! ಅಲ್ಲಿ ಸರಕಾರವು ಇಬ್ಬರಲ್ಲಿ ಯಾವ ಐಕ್ಯವನ್ನು ಸ್ಥಾಪಿಸಿದೆ ಎಂಬುದು ಈ ನಿರಾಕರಣೆಯಿಂದಲೆ ಕಂಡು ಬರುತ್ತದೆ. ಸರಕಾರದ ಪ್ರಯತ್ನದಿಂದ ಐಕ್ಯವು ಸ್ಥಾಪಿತವಾದ್ದಾದರೆ ಮತ್ತು ಆ ಐಕ್ಯವು ನಿಜವಾದ ಐಕ್ಯವಾದ್ದಾದರೆ ಅಂಥ ಕಡೆಯಲ್ಲಿ ಗಾಂಧಿಯವರ ಗಮನದಿಂದ ಅದು ಹೇಗೆ ತಾನೇ ಹಾಳಾದೀತು? ಗಾಂಧಿಯಂಥ ದೇವತಾಸ್ವಭಾವದ ಪುರುಷನು ಒಂದು ಕಡೆಯಲ್ಲಿಯ ಐಕ್ಯವನ್ನು ಹಾಳುಗೊಳಿಸುವನೆಂದು ತಿಳಿಯುವವನೆ ನಿಜವಾಗಿ ವಿಕೃತಬುದ್ಧಿಯವನಾಗಿರಬೇಕು ಅಥವಾ ಹೃದಯಶೂನ್ಯನಾಗಿರಬೇಕು. ಈಗ ಗಾಂಧಿಯವರು ಅಲ್ಲಿ ಹೋಗುವದರಿಂದಲಾದರೂ ಅಲ್ಲಿಯ ಹಿಂದು ಮುಸಲ್ಮಾನರಲ್ಲಿ ಅಭೇದ್ಯವಾದ ಐಕ್ಯವುಂಟಾಗುತ್ತಿತ್ತೊ ಎಂಬೀ ಪ್ರಶ್ನೆಯು ಬೇರೆ. ಮತ್ತು ಅವರಿಂದ ಈಗಿರುವ ಐಕ್ಯಕ್ಕೆ ತೊಂದರೆ ತಟ್ಟುವ ಸಂಭವವುಂಟು ಎಂದು ಹೇಳುವ ಮಾತು ಬೇರೆ. ಈ ಎರಡನೆಯ ಮಾತನ್ನು ನಾವೆ ಅಲ್ಲ, ಗಾಂಧಿಗಳ ಶತ್ರುಗಳು ಕೂಡ ಹೇಳಲಿಕ್ಕಿಲ್ಲ. ಅಂಥ ನಿರಾಧಾರವಾದ ಸಂಗತಿಯನ್ನು ಹಿಂದುಸ್ಥಾನದ ಸರಕಾರವು ಈ ಹೊತ್ತು ಹೇಳುತ್ತಿದೆ, ಇದು ಆಶ್ಚರ್ಯವಲ್ಲವೆ?

೨. ದಿಲ್ಲಿಯಲ್ಲಿ ನೆರೆದ ಸರ್ವ ಹಿಂದುಸ್ಥಾನ ಮುಖಂಡರ ಪರಿಷತ್ತು ಹಿಂದು ಮಹಮ್ಮದೀಯರಲ್ಲಿ ಐಕ್ಯದ ಪ್ರಶ್ನೆಯನ್ನು ವಿಚಾರಿಸಲು ಒಂದು ಸಬ್‌ಕಮಿಟಿಯನ್ನು ನೇಮಿಸಿತ್ತು. ಈ ಸಬ್ ಕಮಿಟಿಯ ಪರವಾಗಿ ಗಾಂಧಿಜಿಯವರು ಮತ್ತು ಪಂಡಿತಜಿಯವರು ತಮ್ಮ ಅಭಿಪ್ರಾಯದ ಪತ್ರಕವನ್ನು ಪ್ರಕಟಿಸಿದ್ದಾರೆ. ಅದರಲ್ಲಿ ಹಿಂದು ಮಹಮ್ಮದೀಯರ ಐಕ್ಯದ ವಿಷಯವು ಸದ್ಯಕ್ಕಾದರೂ ನಿರ್ಣಯವಾಗುವಂತಿಲ್ಲವೆಂಬುದಾಗಿ ಬರೆಯುತ್ತಾರೆ. ನೇಮಕಪಟ್ಟ ಸಬ್ ಕಮಿಟಿಯ ೫೩ ಸಭಾಸದರಿರುತ್ತಾರೆ. ಆದರೆ ಗಾಂಧಿ-ಪಂಡಿತರ ಅನುಭವವನ್ನು ಹೇಳುವದಾದರೆ ೧೪ ಸಭಾಸದರು ಮಾತ್ರ ಹಾಜರಿರುತ್ತಿದ್ದರಂತೆ! ೫೩ ಸಭಾಸದರೆಲ್ಲಿ ಮತ್ತು ೧೪ ಸಭಾಸದರೆಲ್ಲಿ! ಇದರ ಮೇಲಿಂದ ಈ ಐಕ್ಯಕಾರ್ಯದಲ್ಲಿ ಮುಖಂಡರಿಗೂ ಕೂಡ ಶ್ರದ್ಧೆ ಇಲ್ಲವೆಂಬುದು ಸ್ಪಷ್ಟವಾಗುತ್ತದೆ. ಈ ರೀತಿಯಿಂದ ಶ್ರದ್ಧೆಇದ್ದಿಲ್ಲವಾದ್ದರಿಂದಲೆ ಅನಾಸ್ಥೆಯುಂಟಾಗಿದೆ. ಅಂಥ ಪರಿಸ್ಥಿತಿಯಲ್ಲಿ ಐಕ್ಯವುಂಟಾಗಬೇಕಾದ್ದು ಹೇಗೆ? ಎನಿಬೆಸೆಂಟರು ಪ್ರಕಟಿಸಿದ ಸ್ವರಾಜ್ಯಯೋಜನೆಯ ವಿಷಯವಾಗಿ ಅನೇಕ ಮಹತ್ವದ ಮತಭೇದಗಳನ್ನು ಪ್ರದರ್ಶಿಸುವ ಪತ್ರಕಗಳು ಆ ಕಮಿಟಿಯ ಸಭಾಸದರಿಂದ ದಿನೇ ದಿನೇ ಬರುತ್ತಿವೆಯೆಂದು ಇದೆ ಅಭಿಪ್ರಾಯ ಪತ್ರಕದಲ್ಲಿ ಪ್ರಕಟಿಸೋಣಾಗಿದೆ. ಸಾರಾಂಶ, ಈ ಎರಡೂ ಪ್ರಶ್ನೆಗಳೂ ಸದ್ಯಕ್ಕಾದರೂ ನಿರ್ಣಯದ ಸ್ಥಿತಿಯಲ್ಲಿ ಇದ್ದಂತೆ ಕಂಡುಬರುವದಿಲ್ಲ. ಆದರೂ ಬಿಝೆಂಟರ ಪ್ರಯತ್ನವು ಅವ್ಯಾಹತವಾಗಿ ನಡಕೊಂಡಿರುವದರಿಂದ ಒಂದು ವೇಳೆ ಅವರು ಕೈಕೊಂಡದ್ದನ್ನು ಕೊನೆಗಾಣಿಸಲು ದಕ್ಷತೆಯನ್ನು ತೋರಿಸಿಯಾರು, ಹಿಂದು ಮಹಮ್ಮದೀಯರ ಐಕ್ಯದ ಪ್ರಶ್ನೆಯನ್ನು ಗಾಂಧಿಜಿಯವರು ಸದ್ಯಕ್ಕಾದರೂ ಅಸಾಧ್ಯವೆಂದು ಹೇಳಿರುವರು!!

೩. ಕಟ್ಟಕಡೆಗೆ ಬಂಗಾಲದ ಓರ್ಡಿನನ್ಸಿಗೆ ಪಾರ್ಲಿಮೆಂಟಿನ ಮಂತ್ರಿಮಂಡಲದ ಸಮ್ಮತಿಯು ಸಿಕ್ಕಿ ಬಾದಶಹರ ಅನುಮತಿಯ ಮೋಹರು ಕೂಡಬಿತ್ತು. ಸರಕಾರವು ಈ ವಿಷಯವಾಗಿ ಏನೆ ತಿಳಕೊಳ್ಳಲಿ, ಜನತೆಯು ಬಂಗಾಲ ಸರಕಾರದ ಮತ್ತು ಹಿಂದುಸ್ಥಾನ ಸರಕಾರದ ಇದು ಮಹಾ ಪರಾಭವವೆಂದೆ ತಿಳಿಯುವದು. ಜನತೆಯ ಸಮ್ಮತಿಯ ಕಾನೂನುಗಳು ವಿಲಾಯತಿಯ ಬಾದಶಹರ ಮುದ್ರೆಗಳನ್ನು ತೆಕೊಳ್ಳಬೇಕೆಂದಿರಲ್ಲಿಲ್ಲ. ಇಲ್ಲಿಯವರಿಗೆ ಬೇಡದಿರುವ ಸಂಗತಿಗಳನ್ನು ಮಾಡುವಾಗಲೆ ಬಾದಶಹರ ಮೊಹರಿನ ಆವಶ್ಯಕತೆಯುಂಟಾಗುತ್ತದೆ. ಓರ್ಡಿನನ್ಸಿನಂಥ ಅನ್ಯಾಯದ ಕಾನೂನಿಗೆ ಪ್ರಾಂತಾಧಿಪತಿಗಳು, ವೈಸರಾಯರು, ಭಾರತಮಂತ್ರಿಗಳು, ಕಟ್ಟಕಡೆಗೆ ಬಾದಶಹರು ಸಮ್ಮತಿಯನ್ನು ಕೊಡಲಿ, ಆದರೂ ಅದರ ಅನ್ಯಾಯದ ಸ್ವರೂಪವು ನಷ್ಟವಾಗುವದಿಲ್ಲ.

೪. ಈ ಮಾರ್ಚ ತಿಂಗಳಲ್ಲಿ ಇತರ ಕಡೆಗಳಂತೆ ನಮ್ಮ ಮದ್ರಾಸಿನ ಕೋಶ ಮಂತ್ರಿಗಳು ಸಹ ಈ ಸಂಸ್ಥಾನದ ಜಮಾಖರ್ಚಿನ ಪಟ್ಟಿಯನ್ನು ಕೌನ್ಸಿಲಿಗೆ ಸಾದರಗೊಳಿಸಿರುವರು. ಇಲ್ಲಿಯ ಖಜಾನೆಯ ಸಂಗತಿಯೆ ಪ್ರತ್ಯೇಕ! ಉತ್ಪನ್ನಕ್ಕಿಂತ ಖರ್ಚಿನ ಬಾಯಿಯು ದೊಡ್ಡದಾಗಿರುವದರಿಂದ ಸಾಲವೆತ್ತಬೇಕೆಂಬುದಾಗಿ ಖಜಾನಜಿಯವರು ಸೂಚಿಸಿರುವರು. ವರಿಷ್ಠ ಸರಕಾರಕ್ಕೆ ಪ್ರಾಂತಿಕ ಸರಕಾರಗಳು ಯಾವ ವಾರ್ಷಿಕ ಖಂಡಣಿಯನ್ನು ಸಲಾಯಿಸುವದಿರುತ್ತದೊ ಅದರಲ್ಲಿ ಈ ವರ್ಷ ಮದ್ರಾಸ್ ಸರಕಾರದ ಖಂಡಣಿಯು ಕಡಿಮೆಯಾಗಿದೆ. ಎಂದರೆ ಹಿಂದುಸ್ಥಾನ ಸರಕಾರಕ್ಕೆ ಕೊಡತಕ್ಕ ರಕಮು ಈ ವರ್ಷ ಕಡಿಮೆಯಾಗಿದೆ. ಎಂದ ಮೇಲೆ ಈ ಹೊರೆಯು ಸಹ ಕಡಿಮೆಯಾಗಿದೆ. ಹೀಗಿರಲು ಮದ್ರಾಸ ಸರಕಾರಕ್ಕೆ ಸಾಲವೆತ್ತುವ ಸಂದರ್ಭವೇನು ಎಂಬುದಾಗಿ ವಾಚಕರು ಒಂದು ಸವಾಲನ್ನು ಕೇಳಬಹುದು. ಶಿಕ್ಷಣ, ಆರೋಗ್ಯ ಇತ್ಯಾದಿ ಖಾತೆಗಳ ಮೇಲೆ ಸರಕಾರವು ತನ್ನ ಕೈಯನ್ನು ಮುಂಚಿಗಿಂತ ಹೆಚ್ಚು ಸಡಿಲವಾಗಿ ಬಿಟ್ಟಿದೆ ಎಂಬುದು ಹೌದು. ಆದರೆ ಬರೆ ಈ ಕಾರಣದಿಂದಲೆ ಖಜಾನೆಯು ಖಾಲಿಯಾಗುವ ಸಂದರ್ಭ ಒದಗಿದೆ ಎಂಬುದನ್ನು ಮಾತ್ರ ಎಂದೂ ಒಪ್ಪಲಾಗುವದಿಲ್ಲ. ಒಪ್ಪಿಸಿದ ಖಾತೆಗಳಿಗೆ ಎಷ್ಟರ ಮಟ್ಟಿಗೆ ದ್ರವ್ಯಾನುಕೂಲತೆಯನ್ನು ಒದಗಿಸಿಕೊಡೋಣಾಗುವದೊ ಅದಕ್ಕಿಂತಲೂ ಸರಕಾರದ ಕೈಯಲ್ಲಿರುವ ಖಾತೆಗಳ ಮೇಲೆ ವಿಪರೀತ ದ್ರವ್ಯವು ವೆಚ್ಚಮಾಡಲ್ಪಡುತ್ತದೆ. ಈ ಕಾರಣದಿಂದಲೆ ಖಜಾನೆಯಲ್ಲಿ ಹಣದ ನ್ಯೂನತೆಯುಂಟಾಗಿದೆಯಲ್ಲದೆ ಬೇರೆ ಕಾರಣದಿಂದ ಅಲ್ಲ. ನಮ್ಮ ಸಂಸ್ಥಾನದ ಜಮಾಖರ್ಚಿನ ವಿಷಯವು ಒಂದು ಸ್ವತಂತ್ರ ಲೇಖದಲ್ಲಿ ಉಲ್ಲಖಿತವಾಗುವದು ವಿಹಿತವಾದ್ದರಿಂದ ಇನ್ನೊಂದು ಸಂದರ್ಭದಲ್ಲಿ ಈ ವಿಷಯವನ್ನೆತ್ತಿಕೊಳ್ಳೋಣ.

೫. ನಮ್ಮ ವೈಸರಾಯರಾದ ರೆಡಿಂಗ್ ಸಾಹೇಬರು ನಾಲ್ಕು ತಿಂಗಳ ರಜೆಯ ಮೇಲೆ ವಿಲಾಯತಿಗೆ ಹೋಗುತ್ತಾರೆಂದು ಸರಕಾರಿ ರೀತಿಯಿಂದ ಪ್ರಕಟವಾಗಿದೆ. ಇವರ ಸ್ಥಾನಕ್ಕೆ ಬಂಗಾಲ ಒರ್ಡಿನನ್ಸನ್ನು ಜಾರಿಯಲ್ಲಿ ತರುತ್ತಿದ್ದ ಲೊ. ಲಿಟನರು ಬರುವರು! ಲಿಟನರ ಕ್ರೂರ ಕೃತ್ಯಕ್ಕೆ ಇದು ಸರಿಯಾದ ಫಲವು!! ರೆಡಿಂಗರು ಮಂತ್ರಿ ಮಂಡಲದೊಡನೆ ಹಿಂದುಸ್ಥಾನದ ರಾಜಕೀಯ ಪರಿಸ್ಥಿತಿಯನ್ನು ಚರ್ಚಿಸಲು ಹೋಗುತ್ತಾರೆ. ಇದೆ ಸಮಯದಲ್ಲಿ ಎನ್‌ಕ್ವಾಯರಿ ಕಮಿಟಿಯ ರಿಪೋರ್ಟ ಪ್ರಕಟವಾಗುವುದಿದೆ. ಬ್ರಹ್ಮದೇಶದ ಕ್ಷೇತ್ರಪರು ಹಾಗೂ ಬಿಹಾರದ ಗವರ್ನರರು ಮುಂಚೆಯೆ ವಿಲಾಯತಿಯಲ್ಲಿ ಹೋಗಿ ಕುಳಿತಿದ್ದಾರೆ! ಈ ಎಲ್ಲ ಸಂಗತಿಗಳು ಒಟ್ಟು ನೋಡುವಾಗ ಹಿಂದುಸ್ಥಾನದ ರಾಜಕಾರಣದ ಆಕಾಶದಲ್ಲಿ ಇನ್ನು ಬೇಗನೆ ಪುನಃ ಕಪ್ಪು ಮೋಡಗಳು ಬಂದಾವೊ ಎಂದು ಅನೇಕರು ಶಂಕಿತರಾಗಿದ್ದಾರೆ.

೬. ರಾವ ಸಾಹೇಬ ಮಹಾಬಲ ಹೆಗಡೆಯವರು ಇಲ್ಲಿಯ ಪಬ್ಲಿಕ್ ಪ್ರೊಸಿಕ್ಯುಟರರಾಗಿರುವುದರಿಂದ ಮದ್ರಾಸ ಕೌನ್ಸಿಲಿನ ಬ್ರಾಹ್ಮಣೇತರ ಸಭಾಸದತ್ವದ ತನ್ನ ಜಾಗೆಗೆ ರಾಜಿಯನ್ನು ಕೊಟ್ಟವರು. ಆ ಸ್ಥಾನಕ್ಕೆ ಪುನಃ ಅದೆ ಮಹಾಬಲ ಹೆಗಡೆಯವರೂ ಶ್ರೀಯುತ ಎ. ಬಿ. ಶೆಟ್ಟರೂ ಉಮೇದ್ವಾರರಾಗಿ ನಿಂತಿದ್ದಾರೆ. ಹೆಗಡೆಯವರು ನಮ್ಮ ಜಿಲ್ಲೆಯವರಿಗೆ ಸರ್ವಥಾ ಅಪರಿಚಿತರಲ್ಲ; ಅವರು ಇದು ವರೆಗೆ ಸಭಾಸದರಾಗಿಯೆ ಇದ್ದರು. ಮಾತ್ರವಲ್ಲ, ಮಂತ್ರಿ ಮಂಡಲದ ಮೇಲೆ ನಿಂದ್ಯಾವ್ಯಂಜಕ ಠರಾವು ಪಾಸಾದಾಗ ಇವರು ಸರಕಾರದ ಪರವಾಗಿ ತನ್ನ ಮತವನ್ನು ಕೊಟ್ಟಿದ್ದಾರೆ. ಈಗಲಂತೂ ಪಬ್ಲಿಕ್ ಪ್ರೊಸಿಕ್ಯುಟರರಾಗಿದ್ದಾರೆ. ಎಂದ ಮೇಲೆ ಅವರ ಮನಃಪ್ರವೃತ್ತಿಯ ಮುಳ್ಳು ಯಾವ ಕಡೆಗೆ ಬಗ್ಗೀತೆಂಬದನ್ನು ಚತುರರಾದ ಮತದಾರರು ನಿರ್ಣಯಿಸಬಲ್ಲರು. ಇನ್ನೊಬ್ಬ ಉಮೇದುವಾರರಾದ ಎ. ಬಾಲಕೃಷ್ಣ ಸೆಟ್ಟಿ ಇವರು 'ನವಯುಗ' ಪತ್ರದ ಸಂಪಾದಕರಾದ್ದರಿಂದ ಈ ಜಿಲ್ಲೆಯವರಿಗೆ ಮತ್ತು ಕನ್ನಡಿಗರಿಗೆ ಸುಪರಿಚಿತರೆ ಸರಿ. ನಾಡವರ ಹೊಸ್ಟೆಲಿನ ಮತ್ತು ಜಾತಿಯ ಸಂಘಗಳ ಕಾರ್ಯಗಳಲ್ಲಿ ಇವರು ಇದು ವರೆಗೆ ಹೆಚ್ಚಿನ ಭಾಗವನ್ನು ಎತ್ತುತ್ತಿದ್ದರಿಂದ ಸ್ವಮತಸ್ಥರಿಗೂ, ಇತರ ಬ್ರಾಹ್ಮಣೇತರರಿಗೂ ಅವರು ಚಿರ ಪರಿಚಿತರೆ ಸರಿ. ಅಲ್ಲದೆ, ೫-೬ ವರುಷಗಳ ಹಿಂದೆ ಬಿಝೆಂಟರ ಹೋಮ್ ರೂಲಿನ ಚಳವಳವು ಈ ಜಿಲ್ಲೆಯಲ್ಲಿ ನಡೆಯುವಾಗ ಮತ್ತು ರಾಷ್ಟ್ರೀಯ ಶಿಕ್ಷಣದ ಚಳವಳವು ನಡೆಯುವಾಗ ಬಾಲಕೃಷ್ಣ ಸೆಟ್ಟಿ ಇವರು ಹೆಚ್ಚಿನ ಪರಿಶ್ರಮವನ್ನು ತೆಕೊಳ್ಳುತಿದ್ದದ್ದನ್ನು ಯಾರೂ ಮರೆತಿರಲಿಕ್ಕಿಲ್ಲ. ಈಗಲಂತು ಅವರು ಮದ್ರಾಸಿನ ರಾಷ್ಟ್ರೀಯ ಪಕ್ಷದಲ್ಲಿ (ಸ್ವರಾಜ್ಯ ಪಕ್ಷದಲ್ಲಿ ಅಲ್ಲ,) ಸೇರಿದ್ದಾರೆಂದು ಪ್ರಕಟಿಸಲು ನಮಗೆ ಬರೆದಿರುತ್ತಾರೆ. ಸಿ. ಆರ್. ರಡ್ಡಿ, ರಾಮದಾಸ ಮುಂತಾದ ರಾಷ್ಟ್ರೀಯ ಪಕ್ಷದವರು ಇವರ ಉಮೇದುವಾರಿಕೆಯನ್ನು ಪುರಸ್ಕರಿಸುತ್ತಿದ್ದಾರೆ. ಈ ಎಲ್ಲ ಕಾರಣಗಳನ್ನು ವಿಚಾರಿಸಿ ಮತದಾರರು ತಮ್ಮ ಮತಗಳ ಸದ್ವಿನಿಯೋಗವನ್ನುಮಾಡ್ಯಾರೆಂದು ನಂಬಿದ್ದೇವೆ. ಇದೆ ಸಂದರ್ಭದಲ್ಲಿ ಶ್ರೀ. ಸೆಟ್ಟರಿಗೆ—ಬ್ರಾಹ್ಮಣ—ಬ್ರಾಹ್ಮಣೇತರ ಪ್ರಶ್ನೆಯ ಕಡೆಗೆ ಇನ್ನೂ ಕೊಂಚ ವ್ಯಾಪಕದೃಷ್ಟಿಯಿಂದ ಮತ್ತು ಸರಳ ಮನಸ್ಸಿನಿಂದ ನೋಡಬೇಕೆಂಬುದಾಗಿ ನಾವು ಮಿತ್ರತ್ವದಿಂದ ಸೂಚಿಸುವೆವು.

ಮಂಗಳೂರು.

ಇಲ್ಲಿಂದ ರಜೆಯ ಮೇಲೆ ಸೀಮೆಗೆ ತೆರಳುವ ಡಿಸ್ಟ್ರಿಕ್ಟ ಪೋಲೀಸ್ ಸುಪರಿಂಟೆಂಡೆಂಟ ಮೆ॥ ಡೊಸನ್ ದೊರೆಗಳವರ ಚಾರ್ಜನ್ನು ಶ್ರೀಯುತ ರಾಜಗೋಪಾಲ ತಂಪನ್‌ರವರು ಕಳೆದ ವಾರ ವಹಿಸಿಕೊಂಡರು.

ಉಡ್ಪಿಯ ಸಬ್ ರಿಜಿಸ್ಟ್ರಾರರಾದ ಮೆ॥ ಜೆ. ವಾಸರು ೩ ತಿಂಗಳ ರಜೆಯನ್ನು ಪಡೆದಿರುವುದರಿಂದ ರಿಜಿಸ್ಟ್ರಿ ಆಫೀಸಿನ ಕ್ಲಾರ್ಕ ಮ॥ ರಾ॥ ಎನ್. ಟಿ. ಬಾಬು ಇವರು ಉಡ್ಪಿಯ ಹಂಗಾಮಿ ಸಬ್ ರಿಜಿಸ್ಟ್ರಾರರಾಗಿ ನೇಮಕಪಟ್ಟಿರುತ್ತಾರೆ.

The Calicut Bank, Ltd.,
ದಿ ಕೆಲಿಕಟ್ ಬೇಂಕ್, ಲಿಮಿಟೆಡ್,

ಹೆಡ್ ಆಫೀಸು—ಕಲ್ಲಿಕೋಟೆ.
ಬ್ರಾಂಚುಗಳು:—ಮಿಲ್ಲಸ್‌ಚೇರಿ, ತಲಚೇರಿ, ಕೊಚ್ಚಿ ಮತ್ತು ಪಾಲ್ಘಾಟು.
ರಿಜಿಸ್ಟರ್ಡ್ ಮತ್ತು ಅಧಿಕಾರಗೊಳಿಸಲ್ಪಟ್ಟ ಮೂಲಧನ ರೂ. 5,00,000—0—0.
ರೂಪಾಯಿ 10ರ 50,000 ಪಾಲುಗಳು.
(30—8—1924)ರ ವರೆಗೆ ಮಾಲ್ಯ ಮೂಲಧನ ರೂಪಾಯಿ 1,81,850—0—0.
ಒಂದು ವರುಷದ ಕಾಯಂ ಠೇವಣಾತಿಗೆ ಬಡ್ಡಿ ದರ ಸೇಕಡಾ ರೂ. 7—8—0.
ಕಳೆದ 4 ವರುಷಗಳಲ್ಲಿ ಪಾಲುಗಾರರಿಗೆ ಸೇಕಡಾ 12ರಂತೆ ಬಡ್ಡಿ ಹಂಚಿದೆ.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.
ಸಿ. ಕೃಷ್ಣನ್, ಬಿ. ಎ. ಬಿ. ಎಲ್.,
ಮೆನೇಜಿಂಗ್ ಡ್ಯಾರೆಕ್ಟರ್
ಡ್ಯಾರೆಕ್ಟರರಲ್ಲಿ ಒಬ್ಬರು—
ಎಮ್. ನಾರಾಯಣ ಕಾಮತ್, ಬಿ. ಎ.,
ಪ್ಲೀಡರ್, ಕುಂದಾಪುರ.

ಡಿಸ್ಟ್ರಿಕ್ಟ ಬೋರ್ಡಿನ ಮುಂದಿನ ಜನರಲ್ ಮೀಟಿಂಗು ಜಿಲ್ಲಾ ಕಲೆಕ್ಟರರ ಆಫೀಸಿನಲ್ಲಿ ಇದೇ ಬರುವ ತಾ. ೧೦ನೇ ಮಂಗಳವಾರ ಅಪರಾಹ್ನ ೩-೩೦ ಗಂಟೆಗೆ ಜರಗುವುದು. ೧೯೨೫-೨೬ನೇ ವರುಷದ ಬಜೆಟ್ ಅಂದಾಜು ಪಟ್ಟಿಯು ಈ ಮೀಟಿಂಗಿನ ಮುಂದಿಡಲಾಗುವುದು.

— ತಿದ್ದುಪಡಿ. —

ಕಳೆದ ತಾ. ೨೭ನೇ ಸ್ವದೇಶಾಭಿಮಾನಿಯ ೮ನೇ ಪುಟದಲ್ಲಿ—ಬರುವ ಮಾರ್ಚಿ ತಿಂಗಳ ಮೂರನೇ ವಾರದಲಿ ಇಲ್ಲಿಯ ಗೌಡಸಾರಸ್ವತ ಕ್ಲಬ್ಬಿನಲ್ಲಿ ಟೆನ್ನಿಸ್‌ಟೂರ್ನಮೆಂಟೆ (ಡಬ್ಬಲ್ಸ್ ಹಾಗು ಸಿಂಗಲ್ಸ್) ಪಂದ್ಯಾಟವು ಜರಗುವುದು. ಈ ಪಂದ್ಯಾಟಗಳಿಗೆ ಗೌಡಸಾರಸ್ವತ ಬ್ರಾಹ್ಮಣ ಕಮ್ಯುನಿಟಿಯ ಮೆಂಬರರು ಮಾತ್ರ ಸ್ಪರ್ಧಿಸಬಹುದು. ಸ್ಪರ್ಧಿಸತಕ್ಕವರು ಮಾರ್ಚಿ ತಾ. ೧೦ರೊಳಗೆ ಪ್ರವೇಶ ಫಿ—ಸಿಂಗಲ್ಸಿಗೆ ರೂ. ೨ ಡಬ್ಬಲ್ಸಿಗೆ ರೂ. ೪ ಈ ರೀತಿ ಟೂರ್ನಮೆಂಟಿನ ಸೆಕ್ರಿಟರಿಗಳ ವಶಕೊಪ್ಪಿಸಿ ತಮ್ಮ ಹೆಸರುಗಳನ್ನು ದಾಖಲ್ಯ ಮಾಡಿಕೊಳ್ಳಬೇಕಾಗಿದೆ ಎಂದು ಓದಿಕೊಳ್ಳತಕ್ಕದ್ದು.

ಜಿಲ್ಲಾ ಶಿಕ್ಷಣ ಪ್ರದರ್ಶನವು ಕಳೆದ ಶನಿವಾರ ಬೆಳಿಗ್ಗೆ ೯ ಗಂಟೆಗೆ ಜಿಲ್ಲಾ ಕಲೆಕ್ಟರ ದೊರೆಗಳವರಿಂದ ತೆರಿಯಲ್ಪಟ್ಟಿತು. ಈ ಕಾಲದಲ್ಲಿ ತುಂಬಾ ಜನಸ್ತೋಮವೂ ನೆರೆದಿತ್ತು. ಆ ದಿನ ಅಪರಾಹ್ನ ೨-೩೦ ಗಂಟೆಗೆ ಲೆಜಿಸ್ಲೇಟಿವ್ ಕೌನ್ಸಿಲಿನ ಮೆಂಬರರಾದ ಮೆ| ಜೆ. ಎ. ಸಾಲ್ಡಾಞ, ಬಿ. ಎ. ಎಲ್. ಎಲ್. ಬಿ. ಯವರು ದ. ಕನ್ನಡದ ಹಳ್ಳಿ ನಾಡಿನ ನುಡಿಗಳು ಎಂಬದರ ಕುರಿತು ಭಾಷಣಮಾಡಿದರು. ಅನಂತರ ಕರ್ನಾಟಕ ಪದ್ಯಗಳನ್ನು ಕಲಿಸುವ ವಿಧಾನಗಳನ್ನು ಶ್ರೀಯುತ ಎಮ್. ಎ. ಕಾಮತರು ಬೋಧಿಸಿದರು. ಬಳಿಕ ಟ್ರೈನಿಂಗ್ ಶಾಲಾ ವಿದ್ಯಾರ್ಥಿಗಳ ಡ್ರಿಲ್ ಮತ್ತು ಆಟಗಳ ಪ್ರದರ್ಶನ ನಡೆಯಿತು. ಕೊನೆಗೆ ರಾತ್ರಿ ಎಲಿಮೆಂಟರಿ ಟ್ರೈನಿಂಗ್ ಶಾಲಾ ವಿದ್ಯಾರ್ಥಿಗಳು 'ಗ್ರಹಫಲ' ಎಂಬ ನಾಟಕವನ್ನು ಅಭಿನಯಿಸಿದರು. ಮರುದಿನ ಬೆಳಿಗ್ಗೆ ಪ್ರದರ್ಶನವು ಸ್ತ್ರೀಯರ ಬಗ್ಗೆ ಮಾತ್ರ ತೆರೆದಿತ್ತು. ಈ ದಿನ ಎಲ್ಲಾ ಕಡೆಯಿಂದ ಸ್ತ್ರೀಯರು ತಮ್ಮ ತಮ್ಮ ಮಕ್ಕಳೊಡನೆ ಬಂದಿದ್ದರು. ಕ್ರಮಪಟ್ಟಿಯಲ್ಲಿ ಬೆಳಿಗ್ಗೆ ಶಾಲೆಯ ಸಭಾಸದನದಲ್ಲಿ ಉಪಾಧ್ಯಾಯರ ಪರಿಷದವು ಜರಗಿತು. ಈ ಪರಿಷತ್ತಿನಲ್ಲಿ ಆದ ಠರಾವುಗಳನ್ನು ಇನ್ನೊಂದು ಕಡೆಯಲ್ಲಿ ಕೊಟ್ಟಿರುತ್ತದೆ. ಅನಂತರ ಅಪರಾಹ್ನ ಕಾರ್ಯಕ್ರಮದ ಪಟ್ಟಿಯಲ್ಲಿ ಸೂಚಿಸಿದ ಮೇರೆಗೆ ಮಕ್ಕಳ ಆರೈಕೆ ಮತ್ತು ಗೃಹಕೃತ್ಯದ ವಿಚಾರಗಳ ಕುರಿತು ಸ್ತ್ರೀಯರಿಗೆ ಉಪನ್ಯಾಸವಾಯಿತು. ಅನಂತರ ಸಾಯಂಕಾಲ ೪-೪೫ರಿಂದ ಸುಮಾರು ಒಂದು ಗಂಟೆಯ ವರೆಗೆ ಶ್ರೀಯುತ ಎಮ್. ಎಸ್. ಏಕಾಂಬರರಾಯರು ಶಿಕ್ಷಣ ಮತ್ತು ಸಮಾಜಸೇವೆಯ ಕುರಿತು ಬೋಧಪ್ರದವಾದ ಭಾಷಣಮಾಡಿದರು. ತರುವಾಯ ಡಿಸ್ಟ್ರಿಕ್ಟ್ ಹೆಲ್ತ ಆಫೀಸರರಾದ ಮ| ರಾ| ಬಿ. ಜಿ. ಪ್ರಭುಗಳವರ ಮಾಯಾಲಾಂದ್ರಯುಕ್ತವಾದ ಭಾಷಣ ನಡೆಯಿತು. ಕೊನೆಗೆ ಇಡ್ಯ ವಿದ್ಯಾದಾಯಿನಿ ಶಾಲೆಯ ವಿದ್ಯಾರ್ಥಿಗಳ ಯಕ್ಷಗಾನವು ಆಯಿತು. ಮರುದಿನ ಬೆಳಿಗ್ಗೆ ದ. ಕನ್ನಡ ಐತಿಹಾಸದ ಕುರಿತು ಮ| ರಾ| ಎಮ್. ಬಾಬು ಬಿ. ಎ., ಎಲ್. ಟಿ. ಯವರ ಭಾಷಣ, ಶಿಕ್ಷಣ ಮತ್ತು ಸಮಾಜೋನ್ನತಿಯ ಕುರಿತು ಚರ್ಚೆ, ಮಧ್ಯಾಹ್ನದ ನಂತರ ಪ್ರದರ್ಶನದ ಉಮೇದ್ವಾರರಿಗೆ ಬಹುಮಾನ ಹಂಚುವಿಕೆ ನಡೆಯಿತು. ಬೆಳ್ಳಿಯ ಪದಕ ಬಹುಮಾನ ಹೊಂದಿದವರ ಹೆಸರುಗಳನ್ನು ಇನ್ನೊಂದು ಕಡೆಯಲ್ಲಿ ಪ್ರಕಟಿಸಿದೆ. ರಾತ್ರಿ ನಾಟಕವೂ ನಡೆಯಿತು. ಪ್ರದರ್ಶನವು ಮಂಗಳವಾರ ಮತ್ತು ಬುಧವಾರದ ವರೆಗೂ ನಡೆಯಿತು. ಜಿಲ್ಲೆಯ ಆಯಾ ಭಾಗಗಳಿಂದ ಸುಮಾರು ೫೦೦ಕ್ಕೆ ಮೇಲ್ಪಟ್ಟು ಉಪಾಧ್ಯಾಯರು ಬಂದಿದ್ದರು. ಈ ರೀತಿ ಉಪಾಧ್ಯಾಯರ ಸಮ್ಮೇಳನವು ಎಂದೂ ನಡೆಯಲಿಲ್ಲ. ಹೊರ ಊರುಗಳಿಂದ ಬಂದ ಉಪಾಧ್ಯಾಯರಿಗೆ ಉಳಕೊಳ್ಳಲಿಕ್ಕೆ ತಕ್ಕ ವ್ಯವಸ್ಥೆಯೂ ಮಾಡಲಾಗಿತ್ತು. ಈ ಪ್ರದರ್ಶನ ಕಾಲದಲ್ಲಿ ಇಲ್ಲಿಯ ಹೆಚ್ಚಿನ ಎಲಿಮೆಂಟರಿ ಶಾಲೆಗಳಿಗೆ ರಜೆಯು ಕೊಡೋಣಾಗಿತ್ತು.

ಮ| ರಾ| ಪಂಜೆ ಶಂಕರರಾಯರಿಗೆ ಕರ್ನೂಲಿನ ಡಿಸ್ಟ್ರಿಕ್ಟ್ ಬೋರ್ಡ ಇಂಜೇನಿಯರ್ ಹುದ್ದೆಯು ಕಾಯಂ ಆಗಿದೆ.

ಇದೇ ತಿಂಗಳ ತಾ. ೮ನೇ ಆದಿತ್ಯವಾರ ಶ್ಯಾಮ ಘಂಟೆ ೫-೪೫ಕ್ಕೆ ಹೆಡ್ ಪೋಸ್ಟಾಫೀಸಿನ ಬಳಿ ಎನ್. ದೇರಣ್ಣ ಸುವರ್ಣನವರಿಂದ ನಡಿಸಲ್ಪಡುವ ಸರ್ವಜನೋಪಕಾರಾರ್ಥವಾದ 'ಅರ್ಶಚಿಕಿತ್ಸಾ ಭವನದ' ಸಪ್ತಮ ವಾರ್ಷಿಕೋತ್ಸವವು ಮುನಿಸಿಪಲ್ ಚೆಯರ್ಮೇನರಾದ ಮ| ರಾ| ರಾ| ಎನ್. ವೆಂಕಟ್ರಾವ್ ಅವರ್ಗಳ್‌ರವರ ಅಧ್ಯಕ್ಷತೆಯಲ್ಲಿ ಜರಗುವುದು. ಈ ಸಮಾರಂಭದಲ್ಲಿ ಭಾಗಿಗಳಾಗಲು ಸರ್ವರಿಗೂ ಸುಸ್ವಾಗತವಿದೆ.

ಮಂಗಳೂರು ಪಟ್ಟಣದ ಮಾರ್ಗಗಳಲ್ಲಿ ಧೂಳಿಯ ಕಾಟವನ್ನು ಸಾಧ್ಯವಿದ್ದಷ್ಟು ಕಡಿಮೆಮಾಡಲು ಮೋಟರ್ ಬಸ್ಸ್ ಚಲಾವಣೆ ಬಗ್ಗೆ ಆಯಾ ಮಾರ್ಗಗಳನ್ನು ವಿಂಗಡಿಸಿ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರ ಹುಕುಮು ಹೊರಟಿರುವುದು.

ಉತ್ತರ ದಿಕ್ಕಿನ ಮಾರ್ಗ—ಕರಾವಳಿರಸ್ತೆ— ಈ ಮಾರ್ಗದಲ್ಲಿ ಪ್ರಯಾಣಿಕರನ್ನು ಒಯ್ಯುವ ಬಸ್ಸುಗಳು ರಥಬೀದಿಯಿಂದಲೇ ಹೊರಡತಕ್ಕದ್ದು. ಇವುಗಳು ಹಂಪನಕಟ್ಟೆಗೆ ಹೋಗಕೂಡದು. ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿಯು ಉತ್ತರ ದಿಕ್ಕಿನ ಮಾರ್ಗಕ್ಕೆ ಹೋಗುವ ಬಸ್ಸುಗಳು ಈ ಕಂಪೆನಿಯ ಜಪ್ಪು ಗೇರೇಜಿನಿಂದ ಮಂಗಳಾದೇವಿ ದೇವಸ್ಥಾನದ ರಸ್ತೆಯ ಮಾರ್ಗವಾಗಿ ಪೋಲೀಸು ಆಫೀಸಿನ ಎದುರುಗಡೆಯಿಂದ ಮಿಶ್ಯನ್ ಬುಕ್ ಡೇಪೊ ಮಾರ್ಗದಿಂದ ಅಜಿಜುದ್ದೀನ್ ರಸ್ತೆಗಾಗಿ ರಥಬೀದಿಗೆ ಬರತಕ್ಕದ್ದು. ಇದೇ ರಸ್ತೆಯಲ್ಲಿ ಈ ಬಸ್ಸುಗಳು ಜಪ್ಪು ಗೇರೇಜಿಗೆ ಹೋಗತಕ್ಕದ್ದು.

ಸ್ಟಾರ್ ಮೋಟರ್ ಕಂಪೆನಿಯ ಬಸ್ಸುಗಳು ತಮ್ಮ ಗೇರೇಜಿನಿಂದ ಹೊರಟು ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿಯ ಮಾರ್ಗವಾಗಿಯೇ ರಥಬೀದಿಗೆ ಬಂದು ಅದೇ ಮಾರ್ಗವಾಗಿ ತಮ್ಮ ಗೇರೇಜಿಗೆ ಹೋಗತಕ್ಕದ್ದು.

ಇಂಡಿಯನ್ ಮೋಟರ್ ಸರ್ವಿಸಿನ ಬುಸ್ಸುಗಳು ಕೇಡಿಗುಡ್ಡೆ ಮತ್ತು ಡೊಂಗರಕೇರಿ ಮಾರ್ಗವಾಗಿ ರಥಬೀದಿಗೆ ಬರತಕ್ಕದ್ದು.

ಈ ಎಲ್ಲಾ ಬಸ್ಸುಗಳು ಹಂಪನಕಟ್ಟೆಗೆ ಹೋಗದೇ ಕಾರೂರಿಗೆ ಹೋಗಿ ಬರತಕ್ಕದ್ದು.

ಮರವೂರಿಗೆ ಹೋಗುವ ಶಂಕರವಿಟ್ಠಲ ಕಂಪೆನಿಯ ಬಸ್ಸುಗಳು ಅವರ ಗೇರೇಜಿನಿಂದ ಸ್ತ್ರೀಯರ ಮತ್ತು ಮಕ್ಕಳ ಆಸ್ಪತ್ರೆ ಮಾರ್ಗವಾಗಿ ಮೈದಾನ ರೋಡಿನಿಂದ ಅಜಿಜುದ್ದೀನ್ ರಸ್ತೆಯಿಂದ ರಥಬೀದಿಗೆ ಬಂದು ಅಲ್ಲಿಂದ ಸೀದಾ ಮರವೂರಿಗೆ ಹೋಗತಕ್ಕದ್ದು. ಇವುಗಳು ಸಹ ಹಂಪನಕಟ್ಟೆಗೆ ಹೋಗಕೂಡದು.

ಕಾರ್ಕಳ ಮಾರ್ಗ—ಈ ರಸ್ತೆಗಾಗಿ ಹೋಗುವ ಬಸ್ಸುಗಳು ರಥಬೀದಿಯಿಂದಲೇ ಹೊರಟು ರಥಬೀದಿಗೇನೇ ಹಿಂತಿರುಗತಕ್ಕದ್ದು. ಇವುಗಳು ಸಹ ಹಂಪನಕಟ್ಟೆಗೆ ಹೋಗಕೂಡದು. ಇವುಗಳು ರಥಬೀದಿಯಿಂದ ಡೊಂಗರಕೇರಿ, ಕೇಡಿಗುಡ್ಡೆ, ಕದ್ರಿ ರಸ್ತೆಯಿಂದ ಪದವು ಈ ಮಾರ್ಗವಾಗಿ ಹೋಗತಕ್ಕದ್ದು.

ಪೂರ್ವದಿಕ್ಕಿನ ಬಂಟವಾಳ ರಸ್ತೆ- ಈ ಮಾರ್ಗವಾಗಿ ಹೋಗುವ ಎಲ್ಲಾ ಬಸ್ಸುಗಳು ಹಂಪನಕಟ್ಟೆಯಿಂದ ಹೊರಟು ಹಂಪನಕಟ್ಟೆಗೇನೇ ಹಿಂತಿರುಗಬೇಕಾಗಿವೆ. ರಥಬೀದಿಗೆ ಅವು ಬರಕೂಡದು. ಕೆನರಾ ಪಬ್ಲಿಕ್ ಕಂಪೆನಿಯ ಈ ಮಾರ್ಗಕ್ಕೆ ಹೋಗುವ ಬಸ್ಸುಗಳು ಸದರಿ ಕಂಪೆನಿಯ ಜಪ್ಪು ಗೇರೇಜಿನಿಂದ ಕಂಕನಾಡಿ ಬಲ್ಮಠರಸ್ತೆಗಾಗಿ ಹಂಪನಕಟ್ಟೆಗೆ ಬಂದು ಹಿಂತಿರುಗಬೇಕಾಗಿವೆ.

ಪೊಪ್ಯುಲರ್ ಮೋಟರ್ ಸರ್ವಿಸ್ಸಿನ ಬಸ್ಸುಗಳು ಸದರಿ ಸರ್ವಿಸ್ಸಿನ ಗೇರೇಜಿನಿಂದ ರೈಲ್ವೆಯ ಲೆವೆಲ್‌ಕ್ರಾಸಿಂಗಿನ ಮಾರ್ಗದಿಂದ ಡಿಸ್ಟ್ರಿಕ್ಟ್ ಪೋಲೀಸ್ ಆಫೀಸಿನ ಹತ್ತರದಿಂದ ಸೀದಾ ಹಂಪನಕಟ್ಟೆಗೆ ಬರಬೇಕಾಗಿವೆ.

ಸ್ಟಾರ್ ಬಸ್ಸುಗಳು ತಮ್ಮ ಗೇರೇಜಿನಿಂದ ಡಿಸ್ಟ್ರಿಕ್ಟ್ ಪೋಲೀಸ್ ಆಫೀಸಿನ ಹತ್ತರದಿಂದ ಸೀದಾ ಹಂಪನಕಟ್ಟೆಗೆ ಬರಬೇಕಾಗಿವೆ. ಬಸ್ಸುಗಳು ಹೊರಡುವ ಆಯಾ ಠಾಣ್ಯಗಳಿಗೆ ಹೋಗಿ ಬರುವಾಗ ಪ್ರಯಾಣಿಕರನ್ನು ಕೆಳಗಿಳಿಸುವ ಬಗ್ಗೆಯಾಗಲಿ ಅಥವಾ ಅವರನ್ನು ಬಸ್ಸಿನಲ್ಲಿ ಹತ್ತಿಸುವ ಬಗ್ಗೆಯಾಗಲಿ ನಿಲ್ಲಿಸಕೂಡದು.

ಮೇಲೆ ಸೂಚಿಸೋಣಾದ ರಸ್ತೆಗಳಲ್ಲದೆ ಪಟ್ಟಣದ ಇತರ ಎಲ್ಲಾ ರಸ್ತೆಗಳು ಬಸ್ಸ್ ಚಲಾವಣೆಗೆ ನಿರ್ಬಂಧಿಸಲ್ಪಟ್ಟಿವೆ. ರಿಪೇರಿಬಗ್ಗೆ ಅಥವಾ ಇನ್ಸ್‌ಪೆಕ್ಷನ್ ಬಗ್ಗೆ ಬಸ್ಸುಗಳನ್ನು ತೆಕ್ಕೊಂಡುಹೋಗುವಾಗ ಈ ನಿರ್ಬಂಧವು ಇರದು. ವಿಶೇಷ ಸಂದರ್ಭಗಳಲ್ಲಿ ಬಸ್ಸುಗಳನ್ನು ಪಟ್ಟಣದ ಇತರ ಯಾವುದಾದರೂ ಮಾರ್ಗಗಳಲ್ಲಿ ಕೊಂಡುಹೋಗಬೇಕಾದರೆ ಮುನ್ಸಿಪಲ್ ಚೆಯರ್ಮೇನರ ಅಪ್ಪಣೆಯನ್ನು ಪಡಕೊಳ್ಳತಕ್ಕದ್ದು. ಮತ್ತು ಹೀಗೆ ಮುನ್ಸಿಪಲ್ ಚೆಯರ್ಮೇನರು ಯಾವ ಮಾರ್ಗವಾಗಿ ಅಪ್ಪಣೆಕೊಟ್ಟಿರುತ್ತಾರೆ ಎಂಬ ಸಂಗತಿಯನ್ನು ಪೋಲೀಸಿನವರಿಗೆ ತಿಳಿಸತಕ್ಕದ್ದು.

ಮುಖ್ಯವಾಗಿ ಬಂದರಕ್ಕೆ ಹೋಗುವ ಯಾವ ಮಾರ್ಗಗಳಲ್ಲಿಯೂ ಬಸ್ಸ್ ಚಲಾವಣೆ ಇರಕೂಡದು. ಪೆಟ್ರೋಲ್ ಇತ್ಯಾದಿಗಳನ್ನು ಕೂಲಿಗಳ ಅಥವಾ ಗಾಡಿಗಳ ಮೂಲಕ ತರಿಸತಕ್ಕದ್ದು.

ಸ್ವಾಮಿ,

ಮುಂದಿನ ತಾಲೂಕು ಬೋರ್ಡು ಮೆಂಬರರ ಚುನಾವಣೆಯ ಬಾಬಿನಲ್ಲಿ ಹಲವು ಜನ ಓಟರ ಅಭಿಪ್ರಾಯದಂತೆ ನಾನು ಕೇಳುವ ಕೆಳಗಣ ಪ್ರಶ್ನೆಗಳಿಗೆ ದಯವಿಟ್ಟು ಅನುಭವದ ಬಗ್ಗೆ ಉತ್ತರಗಳನ್ನು ಕೊಡಿಸುವದಾಗ ಬೇಕಾಗಿ ಅಪೇಕ್ಷಿಸೋಣಾಗುತ್ತದೆ.

ಪ್ರಶ್ನೆಗಳು.

೧. ಚುನಾಯಿಸಿ ಬರತಕ್ಕ ಮೆಂಬರರ (ಉಮೇದ್ವಾರಿಕೆಯ ನೋಮಿನೇಶನ)ನ್ನು ದಾಖಲುಮಾಡತಕ್ಕ ವ್ಯಾದೆಯನ್ನು ಇಂತಿಷ್ಟೇ ದಿವಸಗಳ ಮುಂದಾಗಿ ಪ್ರಕಟಿಸಬೇಕೆಂಬ ನಿಯಮವಿದೆಯೊ?

೨. ಮುಂದಿನ ಚುನಾವಣೆಯ ವಿಷಯವನ್ನು ನಿಯಮದಂತೆ ಪ್ರಕಟಿಸೋಣಾಗಿದೆಯೊ?

೩. ಪ್ರಕಟಿಸಿದ್ದರೆ ಯಾವ್ಯಾವ ಸ್ಥಳೀಕ ಪತ್ರಿಕೆಗಳಲ್ಲಿ ಯಾವ್ಯಾವ ತಾರೀಕುಗಳಲ್ಲಿ?

ಶಂಕರಭವನಂ, ತಾ. ೬—೩—೧೯೨೫. } B. B. Parameshwaraya,
ಒಟರ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳ್ಳುಕುಡಿಕತನ.

ಒಂದು ಜಿಲ್ಲೆಯಲ್ಲಿಯಾಗಲಿ, ಒಂದು ತಾಲೂಕಿನಲ್ಲಿಯಾಗಲಿ ಕಳ್ಳುಕುಡಿಕತನವು ಯಾವ ಸ್ಥಿತಿಯಲ್ಲಿದೆ ಎಂದು ನೋಡಬೇಕಾದರೆ ಅಲ್ಲಿರುವ ಕಳ್ಳುಮಾರುವ ಗಡಂಗುಗಳ ಸಂಖ್ಯೆಯನ್ನೂ, ಆ ಗಡಂಗುಗಳಿಂದ ಸರಕಾರಕ್ಕೆ ಆ ಗಡಂಗುಗಳ ವಿಲುವಿನಿಂದ ಒಂದು ವರುಷಕ್ಕೆ ಎಷ್ಟು ಹಣ ಸಿಕ್ಕುತ್ತದೆಂಬದನ್ನೂ, ಅನಂತರ ಆ ಗಡಂಗುದಾರರಿಗೆ ಸರಕಾರಕ್ಕೆ ಕೊಡತಕ್ಕ ಹಣ ಕಳೆದು ಎಷ್ಟು ಹಣ ಸಿಕ್ಕುತ್ತದೆಂದೂ ವಿಚಾರಿಸಿದರೆ, ಆ ಸಂಗತಿಯು ಸರಿಯಾಗಿ ತಿಳಿದು ಬರುವದು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೭೯೯ ರೆವಿನ್ಯು ಗ್ರಾಮಗಳು ಇವೆ. ಇವುಗಳಲ್ಲಿ ಮಂಗಳೂರು ತಾಲೂಕಿನಲ್ಲಿ ೧೪೦; ಉಪ್ಪಿನಂಗಡಿ ತಾಲೂಕಿನಲ್ಲಿ ೧೮೫; ಕುಂದಾಪುರ ತಾಲೂಕಿನಲ್ಲಿ ೧೦೩; ಉಡುಪಿ ತಾಲೂಕಿನಲ್ಲಿ ೧೧೫; ಕಾರ್ಕಳ ತಾಲೂಕಿನಲ್ಲಿ ೧೦೫; ಕಾಸರಗೋಡು ತಾಲೂಕಿನಲ್ಲಿ ೧೧೪.

ಕಳ್ಳು ಗಡಂಗುಗಳು ಇಡೀ ಜಿಲ್ಲೆಯಲ್ಲಿ ೬೦೨ ಇವೆ. ಮಂಗಳೂರು ಟೌನ್ ಮತ್ತು ಸುತ್ತುಮುತ್ತಲು ೧೫ ಗಡಂಗುಗಳು; ಉಳಿದ ಮಂಗಳೂರು ತಾಲೂಕಿನ ಗ್ರಾಮಗಳಲ್ಲಿ ೧೩೧ ಗಡಂಗುಗಳು, ಉಪ್ಪಿನಂಗಡಿ ತಾಲೂಕಿನಲ್ಲಿ ೧೨೭. ಗಡಂಗುಗಳು. ಕುಂದಾಪುರ ತಾಲೂಕಿನಲ್ಲಿ ೪೮ ಗಡಂಗುಗಳು; ಉಡುಪಿ ತಾಲೂಕಿನಲ್ಲಿ ೭೪ ಗಡಂಗುಗಳು; ಕಾರ್ಕಳ ತಾಲೂಕಿನಲ್ಲಿ ೭೯ ಗಡಂಗುಗಳು; ಕಾಸರಗೋಡು ತಾಲೂಕಿನಲ್ಲಿ ೧೨೮ ಗಡಂಗುಗಳು. ರೆವಿನ್ಯು ಗ್ರಾಮಗಳ ಮತ್ತು ಗಡಂಗುಗಳ ಸಂಖ್ಯೆಯ ಪ್ರಮಾಣವನ್ನು ನೋಡಿದರೆ ಮಂಗಳೂರು ತಾಲೂಕಿನಲ್ಲಿ ಗ್ರಾಮಕ್ಕೆ ಒಂದರಂತೆ ಗಡಂಗು ಇದೆ. ಉಪ್ಪಿನಂಗಡಿ ತಾಲೂಕಿನಲ್ಲಿ ೧½ ಗ್ರಾಮಕ್ಕೆ ಒಂದು ಗಡಂಗು ಇದೆ. ಕುಂದಾಪುರ ತಾಲೂಕಿನಲ್ಲಿ ಸಾಧಾರಣ ೨ ಗ್ರಾಮಗಳಿಗೆ ಒಂದು ಗಡಂಗು ಇದೆ. ಉಡುಪಿ ತಾಲೂಕಿನಲ್ಲಿ ಸಾಧಾರಣ ೧½ ಗ್ರಾಮಕ್ಕೆ ಒಂದು ಗಡಂಗು ಇದೆ. ಕಾರ್ಕಳ ತಾಲೂಕಿನಲ್ಲಿ 1⅓ ಗ್ರಾಮಕ್ಕೆ ಒಂದು ಗಡಂಗಿನಂತೆ ಇದೆ. ಕಾಸರಗೋಡು ತಾಲೂಕಿನಲ್ಲಿ ಒಂದು ಗ್ರಾಮಕ್ಕೆ 1⅛ನೆ ಗಡಂಗಿನಂತೆ ಇದೆ.

ಗಡಂಗುಗಳಿಂದ ಸರಕಾರಕ್ಕೆ ಒಂದು ತಿಂಗಳಿಗೆ ಸಿಕ್ಕುವ ಆದಾಯವನ್ನು ನೋಡಿದರೆ ಮಂಗಳೂರು ಟೌನ ಮತ್ತು ಸುತ್ತುಮುತ್ತಲಿನ ಗಡಂಗುಗಳಿಂದ ರೂ. ೮೬೪೪ ಮಂಗಳೂರು ತಾಲೂಕಿನ ಉಳಿದ ಗ್ರಾಮಗಳಿಂದ ರೂ. ೬೮೨೦ ಉಪ್ಪಿನಂಗಡಿ ತಾಲೂಕಿನಿಂದ ರೂ. ೨೬೬೬ ೧೨ ೪; ಕುಂದಾಪುರ ತಾಲೂಕಿನಿಂದ ರೂ. ೨೫೨೨ ಕಾರ್ಕಳ ತಾಲೂಕಿನಿಂದ ರೂ. ೨೦೦೪ ಕಾಸರಗೋಡು ತಾಲೂಕಿನಿಂದ ರೂ. ೮೯೧೬, ಹೀಗೆ ಎಲ್ಲಾ ತಾಲೂಕುಗಳಿಂದ ರೂ. ೩೮೪೪೨—೧೨೪. ಆದಾಯವು ಒಂದು ತಿಂಗಳಿಗೆ ಸಿಕ್ಕುತ್ತದೆ. ಒಂದು ವರುಷಕ್ಕೆ ರೂ. ೪,೬೧,೧೧೩ ಸರಕಾರಕ್ಕೆ ೬೦೨ ಗಡಂಗುಗಳಿಂದ ಸಿಕ್ಕುತ್ತದೆ.

ಕಳ್ಳುಕುಡುಕತನದಲ್ಲಿ ಮಂಗಳೂರು ತಾಲೂಕು ಮೊದಲನೇ ಸ್ಥಾನವನ್ನು ಪಡಿಯುತ್ತದೆ. ಈ ತಾಲೂಕಿನಿಂದ ವರುಷಕ್ಕೆ ರೂ. ೧,೫೨,೩೬೪ ಸರಕಾರಕ್ಕೆ ಕಳ್ಳು ಗಡಂಗುಗಳಿಂದ ಸಿಕ್ಕುತ್ತದೆ. ಉಡುಪಿ ತಾಲೂಕು ಎರಡನೆ ಸ್ಥಾನವನ್ನು ಪಡೆಯುತ್ತದೆ. ಈ ತಾಲೂಕಿನಿಂದ ರೂ. ೧,೨೪೭೬೪ ಸಿಗುತ್ತದೆ. ಕಾಸರಗೋಡು ತಾಲೂಕು ಮೂರನೆ ಸ್ಥಾನವನ್ನು ಪಡಿಯುತ್ತದೆ. ಈ ತಾಲೂಕಿನಿಂದ ವರುಷಕ್ಕೆ ರೂ. ೯೮೩೬೪ ಸಿಕ್ಕುತ್ತದೆ. ಉಪ್ಪಿನಂಗಡಿ ತಾಲೂಕು ನಾಲ್ಕನೇ ಸ್ಥಾನವನ್ನು ಪಡೆಯುತ್ತದೆ. ರೂ. ೩೨,೧೨೮ ವರುಷಕ್ಕೆ ಸಿಗುತ್ತದೆ. ಕುಂದಾಪುರ ತಾಲೂಕು ೫ನೇ ಸ್ಥಾನವನ್ನು ಪಡೆಯುತ್ತದೆ. ಇಲ್ಲಿಂದ ವರುಷಕ್ಕೆ ರೂ. ೩೦,೨೬೪ ಸಿಗುತ್ತದೆ. ಕಾರ್ಕಳ ತಾಲೂಕು ೬ನೇ ಸ್ಥಾನವನ್ನು ಪಡೆಯುತ್ತದೆ. ರೂ. ೨೪೦೯೬ ವರುಷಕ್ಕೆ ಸಿಗುತ್ತದೆ.

ಕಳ್ಳು ಕುಡಿಯುವದರಲ್ಲಿ ಪ್ರಖ್ಯಾತಿಪಟ್ಟ ಪಟ್ಟಣಗಳು ಜಿಲ್ಲೆಯ ಮುಖ್ಯ ಪಟ್ಟಣವಾದ ಮಂಗಳೂರು ಮೊದಲನೇ ಸ್ಥಾನವನ್ನು ಪಡಿಯುತ್ತದೆ. ಈ ಊರಿನ ಮತ್ತು ಸುತ್ತಲಿನ ಜನರು ಕಳ್ಳುಕುಡಿಯುವದಕ್ಕಾಗಿ ಒಂದು ವರುಷಕ್ಕೆ ರೂ. ೧೪೦,೯೬೬ ಖರ್ಚು ಮಾಡುತ್ತಾರೆ. ಕಾಸರಗೋಡು ಪಟ್ಟಣವು ಎರಡನೇ ಮರ್ಯಾದೆಯನ್ನು ಪಡೆಯುತ್ತದೆ. ಇಲ್ಲಿಯ ಜನರು ರೂ. ೨೫,೪೪೦ ಒಂದು ವರುಷಕ್ಕೆ ಕಳ್ಳಿಗೆ ಖರ್ಚು ಮಾಡುತ್ತಾರೆ. ಉಡುಪಿ ಪಟ್ಟಣಕ್ಕೆ ಮೂರನೇ ಸ್ಥಾನ ರೂ. ೧೬,೫೦೦ ಕಲ್ಯಾಣಪುರವು ನಾಲ್ಕನೇ ಸ್ಥಾನವನ್ನು ಪಡಿಯುತ್ತದೆ, ರೂ. ೧೬,೫೦೦ ಕಟ್ಟಪಾಡಿಗೆ ೫ನೇ ಸ್ಥಾನ ರೂ. ೧೬,೫೦೦; ೬. ಕಡೆಕಾರ, ೧೪,೪೦೦ ೭. ನಿಲೇಶ್ವರ, ೧೪,೪೦೦. ೮. ಕೊಡವೂರು ೧೩,೪೬೪. ೯. ಮಂಜೇಶ್ವರ, ರೂ. ೧೨,೦೦೦ ೧೦. ಕುಂದಾಪುರ, ರೂ. ೧೦,೫೦೦ ೧೧. ಪಡುಬಿದ್ರೆ ರೂ. ೯೬೦೦, ೧೨. ಹಳೆಯಂಗಡಿ. ೧೩. ಹೊಸದುರ್ಗ. ೧೪. ಗಂಗೊಳ್ಳಿ ೧೫. ಉದ್ಯಾವರ ೧೬. ಬಡಕಂಕನಾಡಿಯೂರು.

ಮಂಗಳೂರು:-ತಾಲೂಕಿನಲ್ಲಿ ಕಳ್ಳುಕುಡಿಯುವುದರಲ್ಲಿ ಪ್ರಖ್ಯಾತಿಪಟ್ಟ ಊರುಗಳು ಮಂಗಳೂರು, ಮೂಲ್ಕಿ, ಬಂಟವಾಳ, ಪಾಣೆ ಮಂಗಳೂರು, ಉಳ್ಳಾಲ.

ಕಾಸರಗೋಡು ತಾಲೂಕು:—ಕಾಸರಗೋಡು, ನೀಲೇಶ್ವರ ಮಂಜೇಶ್ವರ, ಚಿತ್ತಾರಿ, ಬೇಕಲ, ಕುಂಬಳೆ, ಬಲ್ಲ, ಹೊಸದುರ್ಗ.

ಉಡುಪಿ ತಾಲೂಕು:—ಉಡುಪಿ, ಕಲ್ಯಾಣಪುರ, ಕಡೆಕಾರು, ಕಟ್ಟಪಾಡಿ, ಪಡುಬಿದರೆ.

ಕುಂದಾಪುರ ತಾಲೂಕು:—ಕುಂದಾಪುರ, ಗಂಗೊಳ್ಳಿ.

ಕಾರ್ಕಳ ತಾಲೂಕು:—ಕಾರ್ಕಳ, ಮೂಡಬಿದರೆ,

ಉಪ್ಪಿನಂಗಡಿ ತಾಲೂಕು:—ಪುತ್ತೂರು, ವಿಟ್ಲ, ಗುರುವಾಯನಕೆರೆ.

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಜಡ್ಜರ ಕೋರ್ಟಿನಲ್ಲಿ
O. P. 16/'25.
ರಂಗಪ್ಪಯ್ಯ ಐತಾಳ—ಅರ್ಜಿದಾರ.

ಮಂಗಳೂರು ತಾಲೂಕು ಸಜಿಪ ಮಾಗಣೆ ಮೂಡ ಗ್ರಾಮದ ಕಂದೂರಲ್ಲಿರುವ ಅನಂತಯ್ಯ ಐತಾಳರ ಮಗ ಸಂಕಣ ಐತಾಳನನ್ನು ಬುದ್ಧಿಭ್ರಮೆಯವನೆಂತ ಇತ್ಯರ್ಥಿಸಿ ಆತನ ಆಸ್ತಿಯ ಆಡಳಿತೆ ನಡಿಸುವ ಬಗ್ಗೆ ಅರ್ಜಿದಾರನನ್ನು ಮೆನೇಜರನಾಗಿ ನೇಮಿಸುವರೆ ಅರ್ಜಿದಾರನು ಈ ಕೋರ್ಟಿನಲ್ಲಿ ದಾಖಲು ಮಾಡಿದ ಮೇಲೆ ಕಾಣಿಸಿದ ಅರ್ಜಿಯು ತಾ. 17—3—'25ಕ್ಕೆ ತನಖಿಗೆ ಇಡೋಣಾಗಿಯದೆ. ಆಕ್ಷೇಪ ಇದ್ದವರು ಆ ದಿವಸ ಕೋರ್ಟ ಮುಂದೆ ಹಾಜರು ಆಗಿ ತಮ್ಮ ಆಕ್ಷಪಣೆಯನ್ನು ಜಾಹೀರು ಮಾಡಿಕೊಳ್ಳಬಹುದು.

ತಾ. 2-3-'25. } B. R. Vyasraya Achar,
Vakil for Petitioner.

ಮ| ರಾ| ರಾ| ಯಂ. ಗಿರಿಯಪ್ಪ ಅವರ್ಗಳ್ ಬಿ. ಎ.
ತಾ. 28—5—1925. ಅಸಿಸ್ಟಂಟ್ ರಿಜಿಸ್ತ್ರಾರು,

ಪ್ರಕಟಣೆ.

ದಕ್ಷಿಣ ಕನ್ನಡ ಜಿಲ್ಲಾ ಉಪ್ಪಿನಂಗಡಿ ತಾಲೂಕು, ಉಪ್ಪಿನಂಗಡಿ ಗ್ರಾಮದಲ್ಲಿ ಸ್ಥಾಪಿಸಿರುವ ನಂಬ್ರ 1198ನೇ ಉಪ್ಪಿನಂಗಡಿ ಸಹಕಾರಿ ಸಂಘವು ರಜಿಸ್ತ್ರಿ ಮಾಡಲ್ಪಟ್ಟದ್ದನ್ನು ರದ್ದು ಮಾಡಿರುವುದರಿಂದಲೂ ಸಂಘದ ಕಾರ್ಯಗಳನ್ನು ವ್ಯವಸ್ಥೆ ಪಡಿಸುವ ಬಗ್ಗೆ ತಕ್ಕ ವಿಲೆವಾರಿ ಮಾಡಿರುವುದರಿಂದಲೂ ಸದರಿ ಸಂಘದ ಮೇಲ್ಪ ದಾವೆ ಇರುವ ಎಲ್ಲಾ ಜನರು ತಮ್ಮ ದಾವೆಗಳನ್ನು ಸದರಿ ಸಂಘದ ಲಿಕ್ವಿಡೇಟರರಾದ ಮಂಗಳೂರು ಸೆಕ್ಷನ್ ಸಹಕಾರಿ ಸಂಘಗಳ ಅಸಿಸ್ಟಾಂಟು ರಿಜಿಸ್ತ್ರಾರವರ ಮುಂದೆ ಪ್ರಕಟಣೆಯ ತಾರೀಕಿನಿಂದ ಮೂರು ತಿಂಗಳೊಳಗೆ ತರತಕ್ಕದ್ದೆಂದು ಈ ಮೂಲಕ ಪ್ರಕಟಿಸೋಣಾಗುತ್ತದೆ.

(sd) M. GIRIAPPA, *Assistant Registrar.*

ಆರೋಗ್ಯ ಚಂದ್ರಿಕೆ.
ಮದ್ರಾಸ್.
ಸಂಪಾದಕರು: ಡಾಕ್ಟರ್ ಯು. ರಾಮರಾವ್, ಎಲ್. ಎಮ್. ಸಿ. ಎಫ್. ಎಮ್. ಯು. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವುದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ.

ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ.

ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವುವು.

'ಹೆಲ್ತ್' ಎಂಬ ನಮ್ಮ ಇಂಗ್ಲಿಷ್ ಮಾಸಪತ್ರಿಕೆಯನ್ನೋದಿ ಸಂತೋಷಿಸಿದ ಅನೇಕ ದೊಡ್ಡ ಮನುಷ್ಯರ ಪ್ರೋತ್ಸಾಹದ ಮೇಲೆ ಈ ಕನ್ನಡ ಪತ್ರಿಕೆಯನ್ನು ಹೊರಡಿಸಿದೆ.

ಅದರ ಸಂಪುಟ ೨ ಮತ್ತು ೧೧ನೇಯ ನವಂಬರ ೧೯೨೪ ಸಂಚಿಕೆಯಲ್ಲಿ ಕಾಣಿಸಿರುವ ವಿಷಯಗಳು.

ಮುಖಚಿತ್ರ:—ಸರ್ವಜನವಾಸಿಯಾದ ಒಬ್ಬ ರೂಪವತಿ.
ಶ್ವಾಸಕ್ರಮ ಅಥವಾ ಪ್ರಾಣಾಯಾಮ.
ಹುಣಿಸೇಹಣ್ಣಿನ ಆಹಾರಗುಣಗಳು ಮತ್ತು ಔಷಧಗುಣಗಳು.
ಕಾಲುನಡೆಯೇ ಉತ್ತಮವಾದ ವ್ಯಾಯಾಮವು
ಜೇನಿನಲ್ಲಿರುವ ಗುಣಗಳು.
ಹಲ್ಲುಗಳ ರಚನೆ, ಪ್ರಯೋಜನ, ಕೆಲಸ ಮುಂತಾದವು.
ಮದ್ಯಪಾನದಿಂದ ಆರೋಗ್ಯಕ್ಕೆ ಉಂಟಾಗತಕ್ಕ ಹಾನಿ.
ಅಂಗಸಾಧನೆ ಮತ್ತು ಬುದ್ಧಿವ್ಯವಸಾಯ (ವಿದ್ಯಾಭ್ಯಾಸ).
ಗಾಯಗಳು, ಮತ್ತು ಉಳುಕು ಮುಂತಾದವು, ಅವುಗಳ ಚಿಕಿತ್ಸೆ
ನವನಾಗರಿಕ ಪ್ರಪಂಚಕ್ಕೆ ಸಹಜವಾದ ಮೂರು ಕೆಡುಕುಗಳು.
ಒಬ್ಬ ಉರವಾಸಿಯ ಅನುಭವ.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವುವು. ಆರೋಗ್ಯಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ ರೂ. ೧—೮—೦; ಬಿಡುಪತ್ರಿಕೆ ಒಂದಕ್ಕೆ ರೂ. ೦—೩—೦ ಹಿಂದಿನ ಸಂಚಿಕೆಗಳು ಕೂಡ ದೊರಿಯುವವು.

ಚಂದಾದಾರರಾಗುವವರು ವಿ. ಪಿ. ಮೂಲಕವಾಗಿ ತರಿಸಿಕೊಳ್ಳುವದಕ್ಕಿಂತಲೂ ಹಣವನ್ನು ಮುಂಗಡವಾಗಿ ಕಳುಹಿಸುವುದು ಲಾಭಕರ. ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು 'ಆರೋಗ್ಯ ಚಂದ್ರಿಕೆ'ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು.

ಪತ್ರವ್ಯವಹಾರಕ್ಕೆ: 'ಆರೋಗ್ಯ ಚಂದ್ರಿಕೆ'
೩೨೩ ತಂಬುಚೆಟ್ಟಿ ಬೀದಿ, ಮದ್ರಾಸ್

ತುಳು ಪಾಡ್ದನಗಳು.

ಬೊಬ್ಬರ್ಯ, ಕಲ್ಲುರ್ಟಿ—ಕಲ್ಕುಡ, ದೈಯ್ಯೊಂಗುಳು—ಕೋಡಕಿನಾರ್, ಮುಂಡತ್ತಾಯ ಪ್ರತಿ ಒಂದಕ್ಕೆ 2 ಆಣೆ. 11¼ ಆಣೆ ಟಪ್ಪಾಲು ಚೀಟು ಕಳಹಿಸಿದರೆ 5 ಪುಸ್ತಕಗಳು ಕೂಡಲೇ ಕಳುಹಿಸಲ್ಪಡುವವು.

ವಿಳಾಸ: ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

The Canara Bank, Limited, Magalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟ, ಪೂರ್ಣವಾಗಿ ಕೆತ್ತ ಮೂಲಧನವು ರೂ. 300,000—0—0
Reserve and other sinking Funds „ 259,000—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು „ 259,000—0—0

THE BANK RECEIVES FIXED, CURRENT ACCOUNT, & SAVINGS BANK DEPOSITS
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳೋಣಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರಿಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1925.

K. Venkat Rao,
Secretary

ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧಾಷಧಿಗಳಲ್ಲಿ ಒಂದಾದ,
ಲೋಕಾಮಯಹರ ಕಸ್ತೂರಿ ಮಾತ್ರೆಯನ್ನು ಇಂದೇ ತಾವು ತರಿಸಿಕೊಳ್ಳಿರಿ! ಏಕೆಂದರೆ,

ಲೋಕಾಮಯಹರ ಕಸ್ತೂರಿ ಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ ಅದು ಹೇಗೆಂದರೆ ಈ ಮಾತ್ರೆಗಳಲ್ಲಿ ಒಂದೆರಡನ್ನು ಕಾಂಟಾಲವಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುವದರಿಂದ ಯಾವ ಕಾಹಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರ ವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟ ಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ವೇಗಡಿ, ಕೆಮ್ಮಲು, ಶೀತ, ಶೀತವಾತ, ತ್ವಕ್ಕಭಾರ, ಆಹಾರವು ಜೀರ್ಣವಾಗದೆ ಬರುವ ಹಳೆನೋವು, ಕರುಳಿನ ಮೊರೆತ, ಜ್ವರ, ಚಳಿಜ್ವರ ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲ್ಯುಯನ್‌ಜಾ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು

ವ್ಯಾಯಾಮವನ್ನು ಬಲವರ್ಧಕವಿಲ್ಲದ ವ್ಯಾಪಾರಗಳಿಗೂ ಗೋಷ್ಠಾಪ್ರಿಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು ಪ್ರತಿ ಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯ ಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ 250ರಿಂದ 300 ಮಾತ್ರೆಗಳ ವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1—4—0, 12 ಸೀಸೆಗಳಿಗೆ 2—7—0, 25 ಸೀಸೆಗಳಿಗೆ 4—10—0 ಪೋಸ್ಟೇಜು ಜೀರೆ. ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತದೆ.

ಏಜಂಟ್
ಮಂಗಳೂರು ಟವನಿಗೆ ಮಾತ್ರ.
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ.

ವಿಳಾಸ:— ಪಾಳ್ಯದ ವೆಂಕಟಾಚಲ ಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ವಿದ್ಯಾವಾಚಸ್ಪತಿ
ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ
"ಸಂಕ್ಷೇಪಗೀತೆ"

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ, ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದೆ ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೦, ಟಪ್ಪಾಲು ಖರ್ಚು ಕೂಡಿ ಆಣೆ ೧೧ನ್ನು ಮನಿಯಾರ್ಡರ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ೩ರಕ್ಕಿಂತ ಜಾಸ್ತಿ ಖರ್ಚು ತಗಲುವುದು. ರಖಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.

ಪುಸ್ತಕ ದೊರಿಯುವ ವಿಳಾಸ:—
ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು. ಮತ್ತು
ಕೆನರಿಸ್ ಮಿಶ್ಯನ್ ಬುಕ್ ಎಂಡ್ ಟ್ರಾಕ್ಟ ಡಿಪೋಜಿಟರಿ,
ಮಂಗಳೂರು.

ಉಚಿತ! ಬಿಟ್ಟಿ!! ಪುಗಸಟ್ಟೆ!!!

ವೈದ್ಯವಿದ್ಯ
PROPRIETOR RAJVAIDYA NARAYANJI KESHAVJI
NO PRICE NO POSTAGE

ಎಂಬ ಈ ಪುಸ್ತಕದಲ್ಲಿ ಆಯುರ್ವೇದ ಶಾಸ್ತ್ರದಲ್ಲಿ ಸ್ತ್ರೀಪುರುಷರು ಆರೋಗ್ಯದೃಢಕಾಯರಾಗಿ ಆರೋಗ್ಯದಿಂದ ಕೂಡಿದ ಸಂತಾನಗಳನ್ನು ಪಡೆದು ಸತಿಪತಿಯರು ಅನ್ಯೋನ್ಯವಾಗಿ ಅನುರಾಗವುಳ್ಳವರಾಗಿ ಸುಖದಿಂದಲೂ ಸಂತೋಷದಿಂದಲೂ ಸಂಸಾರಯಾತ್ರೆಯನ್ನು ಮಾಡಲು ಅತ್ಯಂತ ಉಪಯುಕ್ತವಾದ ವಿಷಯಗಳು ಅಲ್ಲಲ್ಲಿ ಹೇಳಲ್ಪಟ್ಟಿರುವುದನ್ನು ಒಂದಾಗಿ ಕ್ರೋಡೀಕರಿಸಿ ಅಜ್ಞಾನದಿಂದಲೂ ಸಂಕಷ್ಟದಿಂದಲೂ ನರಳುತ್ತಿರುವ ಸಂಸಾರಿಗಳನ್ನುದ್ಧಾರಮಾಡುವ ಸಲುವಾಗಿ ಈ ಪುಸ್ತಕವನ್ನು ಕ್ರಯವೂ ಅಂಚೇ ಹಾಸಲೂ ಇಲ್ಲದೆ ಬೇಡಿದವರ್ರಿಗೆ ಸರ್ವತ್ರ ಉಚಿತವಾಗಿ ಕಳುಹಿಸುತ್ತೇವೆ. ಹೆಚ್ಚು ಮಾಹಿತಿಗೆ ಪತ್ರ ಬರೆಯಿರಿ.

ರಾಜವೈದ್ಯ ನಾರಾಯಣಜಿ ಕೇಶವಜಿ,
49, ಬಂದರ್ ಸ್ಟ್ರೀಟ್, ಜಿ. ಟಿ. ಮದ್ರಾಸ್

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀಕಾಶೀ, ಗಯಾ, ಪ್ರಯಾಗ, ಹರಿದ್ವಾರ ಬದ್ರಿನಾರಾಯಣ ದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರ ಕಡೆಯಿಂದ ಅನುಭವ ತೆಗೆದು ಪ್ರತಿವಂದು ಸಿದ್ಧಮಾಡಿಕೊಂಡು ಬರೆದಿರುವರು. ೧ನೇದು ಮಂತ್ರಪ್ರಕರಣದಲ್ಲಿ ಮಂತ್ರ ಪಠಣದಿಂದಲೂ, ಮಂತ್ರಪ್ರಯೋಗದಿಂದಲೂ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವೂ ಇದೆ. ೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳು ಹೊರಡುವಿಕೆ, ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅದನ್ನು ಸಿದ್ಧಮಾಡಿಕೊಳ್ಳುವ ವಿವರವೂ ಇದೆ. ೩ನೇದು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅವನ್ನು ಅನುಭವ ತೆಗೆದುಕೊಂಡು ತಿಳಿಸಿರುವರು ೪ನೇದು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಧಾವಾಜಗಳ ಚುಟ್ಕಾ ಸಹ, ಇದರಲ್ಲಿ ಉಂಟು. ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷದ ಮಾಡುವ ಕ್ರಮವನು ಚೆನ್ನಾಗಿ ಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಳಾಸವು ತಿಳಿಸಿರುವರು. ೫ನೇದು ಯಂತ್ರ ಪ್ರಕರಣದಲ್ಲಿ ವಶೀಕರಣ ಗ್ರಹಪೀಡಾ ನಿವಾರಣ ಭೂತಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು, ಇದಲ್ಲದೆ ಇನ್ನು ಅನೇಕ ವಿಧವಾದ ಅದ್ಭುತ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು, ಈ ಗ್ರಂಥವು ಹತ್ತರ ಇದ್ದ ಬಳಿಕ ಎಲ್ಲಾ ದೇವಾನು ದೇವತೆಗಳು ದ್ರವ್ಯಗಳೂ ವೈದ್ಯರೂ ಜೋತಿಷ್ಯರು, ಮಾಂತ್ರಿಕರು ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥ ಗ್ರಂಥವು ಯಾರು ಇದುವರೆಗೆ ನೋಡಿರಲಿಕ್ಕಿಲ್ಲಾ. ಪ್ರತಿಯೊಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆ ಶೀರ ಕಡಿಮೆಮಾಡಿ ಇರುವದು. ೨—೮—೦ ಟಪ್ಪಾಲು ಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ ನಾಟಕ ಕಾವ್ಯ, ಕಥೆಗಳು, ಯಕ್ಷಗಾನ, ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ:—
ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ

Just Arrived OF **Fresh Consignment**

Best English Cycles.



REDUCTION IN PRICES.

Ranger Cycles Model M. Made in Birmingham.
WITH DUNLOP OR BATES TYRES & TUBES ... @ Rs. 90—0—0
Barton Humber on Advance
WITH DUNLOP OR BATES TYRES & TUBES ... @ „ 100—0—0
Senior Royal with B. S. A. Fitting.
WITH DUNLOP OR BATES TYRES & TUBES ... ...@ Rs. 145—0—0
Royal Saxon with B. S A. Fitting.
WITH DUNLOP OR BATES TYRES & TUBES ... ... @ Rs. 175—0—0
All the above Cycles include pump and tools.
BROOKES PATEERN 90/2 GERMAN SADDLE ... ...@ „ 9—8—0
„ SADDLE 90/2 „ ... ..@ „ 21—0—0
„ „ B/30 „ ... ...@ „ 26—0—0

For further particulars please write to us or call on us:—
All kinds of Cycle Accessories, Dunlop and German Tyres and Tubes
ARE AVAILABLE AT VERY CHEAP RATES.
Special Discount to Traders *Easy Terms Arranged*
APPLY TO:—**The Mangalore Trading Association,**
Wholesale Dealers in Cycles and Cycle Accessories,
Car-Street, MANGALORE

—ಗೋಡೆಗೆ ತಗಲಿಸುವ
ಹೊಸ ನಮೂನೆಯ—
ಟಿಕ್—ಟಾಕ್

ಎಂಬ ಈ ಗಡಿಯಾರಗಳು ಜರ್ಮನೀ ದೇಶದಲ್ಲಿ ತಯಾರಿಸಿದ್ದು. ಇವು ಕಂಠಾರು ಘಂಟೆಯನ್ನು ತೋರಿಸುವವು. ಇವಕ್ಕೆ ಬೀಗ ಕೊಡಬೇಕಾದಿಲ್ಲ. ಇದರಲ್ಲಿ ಕಾಣುತ್ತಿರುವ ಗುಂಡನ್ನು ಮೇಲಕ್ಕೆ ಎಳೆದರೆ ಸಾಕು. ತನ್ನಷ್ಟಕ್ಕೆ ತಾನೇ ಟಿಕ್—ಟಾಕ್ ಎಂಬ ಶಬ್ದವನ್ನು ಮಾಡುತ್ತಾ ಸರಿಯಾದ ಕಾಲವನ್ನು ತೋರಿಸುವದು. ಇದು ನೋಡುವುದಕೆ ಬಹು ಲಕ್ಷಣವಾಗಿರುವುದು.

ಕ್ರಯ 1ಕ್ಕೆ ರೂ. 8—0—0
ಪೀಟರ್ ವಾಚ್ ಕಂಪೆನಿ
ಪೋಸ್ಟ್ ಬಾಕ್ಸ್ ನಂ. 27, ಮದ್ರಾಸ್.

ADVERTISE IN
The Business Directory
OF INDIA, BURMA & CEYLON

A Comprehensive Directory of the various Business-men, Exporters and Importers, Firms, Factories, Mills, Manufacturers, Merchants and Industries of the principal Cities, Ports and Towns of India, Burma and Ceylon.

PUBLISHED ANNUALLY
Rates for Advertisements

¼ Page	Rs.	50.
2 in. Single Column	"	20.
1 in. Single Column	"	15.
Name in Bold Types	"	5.

Price per Copy Rs. 10.
PRINTERS & PUBLISHERS.
Business Directory Co.,
Kanara Press Buildings, MADRAS. E.
Telegrams: "KETHAKI" Phone 540

ದಕ್ಷಿಣ ಕನ್ನಡ ಜಿಲ್ಲೆಯ
ಪ್ರಾಚೀನ ಇತಿಹಾಸ
450 ಪುಟಗಳು ಕ್ರಯ ರೂ. 2—4—0
ಪುಸ್ತಕಗಳು ಸಿಕ್ಕುವ ವಿಳಾಸ:—
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

JUST ARRIVED
Goodrich Belts.
OF VARIOUS SIZES
Price Re. 1—12—0 each
Mangalore Trading Association,
Car Street, MANGALORE.

ಸಾರಸ್ವತ.

ಕನ್ನಡ ಮತ್ತು ಕೊಂಕಣಿ ಭಾಷೆಗಳಲ್ಲಿ ಕಳೆದ ವಿಜಯದಶಮಿಯ ದಿನದಿಂದ ಪ್ರತಿ ದಶಮಿಗೆ ಹೊರಡುವ ಪತ್ರಿಕೆ.

ವಿ. ಎಸ್. ಕಾಮತ್,
ಮೂಲ್ಕಿ ವಾಮನ ಕುಡುವ } ಸಂಪಾದಕರು.

ಮತಸಂಸ್ಥೆ ಮತ್ತು ಸಮಾಜಕ್ಕೆ ಸಂಬಂಧಪಟ್ಟ ಇತರ ಸಂಸ್ಥೆಗಳ ಸುಸಂಘಟನ.
ಸಮಾಜದೊಳಗೆ ಅನ್ಯೋನ್ಯ ಸಾಧನೆ.
ಸ್ತ್ರೀಸಮಾಜಕ್ಕೆ ಉಪಯುಕ್ತವಾದ ವಿಷಯಗಳ ನಿರೂಪಣ.
ಮತಭಾವನೆಗಳ ಉಜ್ಜೀವನ ಇತ್ಯಾದಿ ಉದ್ದೇಶಗಳಿಂದ ಈ ಪತ್ರಿಕೆಯು ಹೊರಡಿಸಲ್ಪಡುವುದು. ಸಾರಸ್ವತ ಸಮಾಜವು ಇದಕ್ಕೆ ಪ್ರೋತ್ಸಾಹವನ್ನೀಯಬೇಕಾಗಿ ಪ್ರಾರ್ಥನೆ.

ಚಂದಾಹಣ ಅಂಚೆವೆಚ್ಚ ಕೂಡಾ ರೂ. ೧—೪—೦. ಪೋಷಕರು ರೂ. ೧೦-೦-೦. ಸಹಾಯಕರು ರೂ. ೫-೦-೦. ಮಾದರಿ ಸಂಚಿಕೆಯನ್ನು ಟಪ್ಪಾಲು ಖರ್ಚಿಗಾಗಿ ಅರ್ಧಾಣೆ ಸ್ಟ್ಯಾಂಪು ಕಳುಹಿಸುವವರಿಗೆ ಉಚಿತವಾಗಿ ಕಳುಹಿಸುವೆವು.

ಕನ್ನಡ ನಾಡಿನಲ್ಲಿ ಪ್ರತಿ ಕಡೆಯಲ್ಲಿಯೂ
ಚಾತವಿೂದಾರರು ಬೇಕು.

ಎಲ್ಲಾ ಪತ್ರವ್ಯವಹಾರಗಳನ್ನು ಕೆಳಗಿನ ವಿಳಾಸಕ್ಕೆ ನಡೆಸಬೇಕು.

ಯು. ನಾರಾಯಣನಾಯ್ಕ, ಕಾರ್ಯದರ್ಶಿ,
ಸಾರಸ್ವತ, ಉಡುಪಿ.

ಆರ್. ಮಾರ್ಟಿನ್ನರ ಲಪ್ಪಾ ಎಣ್ಣೆ

ಇದರ ಸುವಾಸನೆಯು, (ಪರಿಮಳವು) ಬಹಳ ಅಂದವಾಗಿಯೂ ಇರುವುದಲ್ಲದೆ, ಬಹಳ ಹೊತ್ತಿನ ವರೆಗೂ ಇರುತ್ತದೆ. ಈ ಎಣ್ಣೆಯನ್ನು ತಲೆಗೆ ಹಾಕಿಕೊಳ್ಳುವುದರಿಂದ ಕಣ್ಣುಗಳು ತಂಪಾಗಿಯೂ, ಶುಭ್ರವಾಗಿಯೂ, ಆಗವುದಲದೆ, ಮೆದುಳು ಚೆನ್ನಾಗಿ ಬೆಳೆಯುತ್ತದೆ. ಇದನ್ನು ಪ್ರತಿದಿವಸವೂ ಉಪಯೋಗಿಸುವುದರಿಂದ ಕೂದಲುಗಳು ಕಪ್ಪಾಗಿ ಹೊಳೆಯುವಂತೆ ಮಾಡುತ್ತದೆ. ಕೂದಲುಗಳಲ್ಲಿರುವ ಹೇನುಗಳು ಮುಂತಾದುವು ನಾಶವಾಗಿ ತಲೆಬುರುಡೆಯನ್ನು ಚೆನ್ನಾಗಿ ಬೆಳೆಯುವಂತೆ ಮಾಡುತ್ತದೆ. ಗಡ್ಡ ಮತ್ತು ಮೀಸೆಗಳು ಸಹ ಬೆಳೆಯುತ್ತವೆ. ಇದನ್ನು ಉಪಯೋಗಿಸಿದ ಜನರು ಇದಕ್ಕಿಂತ ಉತ್ತಮವಾದ ಎಣ್ಣೆಯು ಬೇರೆ ಇಲ್ಲವೆಂದು ಹೇಳಿರುತ್ತಾರೆ.

ಕ್ರಯ ಬಾಟಿ 1ಕ್ಕೆ ರೂ. 1-4-0.

ಆರ್ ಮಾರ್ಟಿನ್ನರ ಗಿಟೋಡಯಿನ್.

ಗಂಡಸರಿಗೂ ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ, ಅಥವಾ ಹೊಸತಾಗಿದ್ದರೂ ಸರಿ. ಬಿಳುಪು ಹೋಗುವುದು ಉರಿಯುವುದು, ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೆ ಉರಿ ಮೂತ್ರವನ್ನು ನಿಲ್ಲಿಸಿ, ಮೂತ್ರವು ಬಿಳುಪಾಗಿ ನಿರ್ಮಲವಾಗುವುದಲ್ಲದೆ ರೋಗದ ಪಟ್ಟನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ.

ಬೆಲೆ ಸೀಸೆ 1ಕ್ಕೆ ರೂ. 2—0—0.

ಆರ್. ಮಾರ್ಟಿನ್ನರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮು ಗೂರಲು ಶ್ವಾಸ, ಸೀತ, ನೆಗಡಿ, ಗಂಟಲುನೋವು, ಎದೆ ನೋವುಗಳನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನಮಾಡಿ ಪರೀಕ್ಷಿಸಿ ನೋಡಿರಿ. ಅನಂತರ ಬೇರೆ ಯಾವ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮುಗಳಿಗೂ ರಾಜನಾಗಿಯೂ, ಎದೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತಲೆಯಿಕ್ಕದಂತೆ ಮಾಡುತ್ತದೆ.

60 ಮಾತ್ರೆಗಳ ಸೀಸೆ 1ಕ್ಕೆ ರೂ. 1—4—0.

ವಿಳಾಸ:—ಆರ್. ಡಿ. ಕಟೆ ಮತ್ತು ಕಂಪೆನಿ,
ನಂಬ್ರ ಬಿ. ಫ್ರಿಯರ್ ರೋಡ್,
ಸಾಂಜ ವರ್ತಮಾನ ಪ್ರೆಸ್,
ಟೋಡಿವಾಲಾ ಬಿಲ್ಡಿಂಗ ಎದುರುಗಡೆ, ಫೋರ್ಟ ಮುಂಬಯಿ,
R. D. Kately & Co.
No. B. Frere Road,
Opposit Sanjvertaman Press,
Todivala Building, FORT BOMBAY.

ಸುವರ್ಣಸಂಧಿ.

ಕೈ ಮಗ್ಗಗಳಲ್ಲಿ ನೂಲನ್ನು ನೆಯುವ ಮಗ್ಗಗಳಿಗೆ ಬೇಕಾಗುವ ಯಾವತ್ತು ಸಾಮಾನುಗಳು, ನೂಲಿಗೆ ಹಾಕುವ ನಾನಾ ತರದ ರಂಗುಗಳು ಆಗತ್ಯವಿರುವ [illegible] ಬಗೆಯ ರಸಾಯನಗಳು ಇವನ್ನು ನಮ್ಮಲ್ಲಿಂದ ನ್ಯಾಯವಾದ ಬೆಲೆಗೆ ಹೊಂದಬಹುದು. ನಮ್ಮಲ್ಲಿ ದೊರಕುವ ಯಾವತ್ತು ಸಾಮಾನುಗಳನ್ನು ಸೇಕಡಾ ೩ರಂತೆ ಕಮ್ಮಿಷನ್ ಪಡೆದು ಏಜಂಟರು ಮಾರಾಟಕ್ಕೆ ಪಡೆಯಬಹುದು.

ಪಿ. ಪಿ. ತ್ರಿವೇದಿ ಎಂಡ್ ಕೋ.,
ನಂಬ್ರ 66 [illegible] ಲೇನ್,
ಫೋರ್ಟ ಮುಂಬಯಿ.

Edited, Printed & Published by V. S. Kamath at the M. T. A. SHARADA PRESS, MANGALORE.

Registered: No. M. 498.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಶ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೯. ಮಂಗಳೂರು, ತಾರೀಕು ೧೩ನೇ ಶುಕ್ರವಾರ ಮಾರ್ಚಿ ೧೯೨೫. ಸಂಚಿಕೆ ೧೧.

The Canara Banking Corporation Udipi, Ltd.

Head Office:— **Udipi** Branch:— **Coondapoor**

Paidup Capital	1,66,165—9—11
Reserve etc	64,700—0—0

Season Deposits
Carrying Special rate of 7% up to 15th June 1925 only.
Further Particulars on Application.

ದಿ ಕೆನರಾ ಬ್ಯಾಂಕಿಂಗ್ ಕೋರ್ಪೊರೇಶನ್ ಉಡುಪಿ, ಲಿಮಿಟೆಡ್.
ಹೆಡ್ ಆಫೀಸು:—ಉಡುಪಿ. ಶಾಖೆ:—ಕುಂದಾಪುರ.

ವಸೂಲಾದ ಮೂಲಧನ	1,66,165—9—11
ರಿಜರ್ವ ವಗೈರೆ ಫಂಡುಗಳು	64,700—0—0

ತಾ. 15—6—1925ರವರೆಗೆ ಮಾತ್ರ
ಸಾಲಿಯಾನ್ ಸೇಕಡಾ 7ರ ದರದ ಬಡ್ಡಿಯ ಮೇಲೆ
ಮುಸುಂ ಠೇವಣಾತಿಗಳನ್ನು
ಅಂಗೀಕರಿಸೋಣಾಗುತ್ತದೆ.
ಹೆಚ್ಚಿನ ಮಾಹಿತಿಗೆ ಬರಕೊಳ್ಳಿರಿ.

Office of the Corporation, Udipi, 1-3-'25 } **N. Ananda Rao,** *Secretary.*

Wanted Agents
FOR
Every District in South India
For Pushing Sales of Our Calenders, Xmas and New Year Cards, Blotters, Pictures and Picture Post Cards, at wholesale rates. Deposit of Rs. 100—0—0 Essential.
Apply to:—
The South Indian Advertising Agency,
13, Kilary Road,
BANGALORE CITY.

ಶುದ್ಧ ರೋಮದ ಧಾವಳಿಗಳು.

1 ಮಳ ಉದ್ದ 1¼ ಮಳ ಅಗಲ ರೂ. 1½ರಿಂದ 2 ವರೆಗೆ, 5 ಮಳ ಉದ್ದ 1½ ಮಳ ಅಗಲ ರೂ. 1½ ರಿಂದ 5 ವರೆಗೆ, 6 ಮಳ ಉದ್ದ 1½ ಮಳ ಅಗಲ ರೂ. 2½ರಿಂದ 6 ವರೆಗೆ, 8 ಮಳ ಉದ್ದ 2 ಮಳ ಅಗಲ ರೂ. 3½ರಿಂದ 10 ವರೆಗೆ, 12 ಮಳ ಉದ್ದ 2¼ ಮಳ ಅಗಲ ರೂ. 6ರಿಂದ 12 ವರೆಗೆ, 16 ಮಳ ಉದ್ದ 2¼ ಮಳ ಅಗಲ ರೂ. 9 ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಜಿದ್ದರ್ ರೇಶ್ಮೆ ಮಡಿಗಳು, ಸಾಮುರಿಗಳು, ಕಾಶಿ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, ಬಾಜಲಿಂಗ, ಚಾಫೆಂಟೆ, ತಾಳ, ಪನ್ನೀರ್‌ದಾನಿ, ಹಿತ್ತಾಳೆಯ ಆಟದ ಸಾಮಾನುಗಳು, ಫೋಟೋ ಉಂಗುರಗಳು ಮತ್ತು ಇನ್ನೂ ಅನೇಕ ಸಾಮಾನುಗಳು ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುವು. ಕ್ಯಾಟಲಾಗ್ ಇನಾಂ.
ವಿಳಾಸ—
ಶಿರೋಮಣಿ ಯು. ನಾರಾಯಣಾಚಾರ್ಯ
ಮತ್ತು ಕಂಪೆನಿ, [illegible], ಕಾಶೀ ಕ್ಷೇತ್ರ.

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ.
450 ಪುಟಗಳು ಎಮ್. ಗಣಪತಿರಾವ್ ಐಗಳ್ ಇವರಿಂದ ರಚಿತವಾದದ್ದು. ಕ್ರಯ ರೂ 1-4-0

ಮಾರಾಟಕ್ಕೆ ಸಿದ್ಧವಾಗಿವೆ **— ತುಳು ಪಾಡ್ದನಗಳು —** ಮಾರಾಟಕ್ಕೆ ಸಿದ್ಧವಾಗಿವೆ.
ದೈಯ್ಯೊಂಗುಳು, ಕಲ್ಲುರ್ಟಿ—ಕಲ್ಕುಡ, ಕಣಂದೂರು ದೈಯ್ಯೊಂಗುಳು, ಮುಂಡತ್ತಾಯ, ಬೊಬ್ಬರ್ಯ.

ಸುಲಭ ದರಗಳು **— ಶಾಲಾ ಪುಸ್ತಕಗಳು —** ರಖಂ ಕೊಂಡುಕೊಳ್ಳುವವರಿಗೆ ಯೋಗ್ಯ ಡಿಸ್ಕೌಂಟ್.

ಅಜ್ಜಿ ಕಥೆಗಳು:—ಮೂರು ಕರಡಿಗಳು; ಹೇನುಸತ್ತು ಕಾಗೆ ಬಡವಾಯಿತು; ಅಗಸನ ಮುದ್ದೆ, ಇಲಿಗಳ ಥಕ್ಕ ಥೈ; ಅಂಗಳ ದುಗ್ಗು; ಸಿಗಡಿ ಯಾಕೆ ಒಣಗಲಿಲ್ಲ; ಗುಡುಗುಡು ಗುಮ್ಮಟ ದೇವರು; ಮೆಣಸಿನ ಕಾಳಪ್ಪ ಒಡ್ಡನ ಓಟ; ಹೊಸ ಕನ್ನಡ ಪುಸ್ತಕ ಭಾಗ ೧; ಹೊಸ ಕನ್ನಡ ಪುಸ್ತಕ ಭಾಗ ೨; ಕನ್ನಡ ಪದ್ಯಗಳು; ಮಗ್ಗಿ ಪುಸ್ತಕ; ಅಜಿತಕುಮಾರ; ಪದ್ಯ ರತ್ನಾವಳಿ, ಎಕ್ಸರ್‌ಸೈಜ್ ಮತ್ತು ನೋಟು ಪುಸ್ತಕಗಳು, ಕೋಪಿ ಪುಸ್ತಕಗಳು, ಡ್ರಾಯಿಂಗ್ ಪುಸ್ತಕಗಳು

ಇತರ ಪುಸ್ತಕಗಳು:—ಸಂಕ್ಷೇಪಗೀತ, ಕೇತುಭಂಗ, ಹಿಂದೂ ವ್ರತವಿವೇಕ, ಚಂದ್ರಗುಪ್ತ ಚಕ್ರವರ್ತಿ, ಶ್ರೀ ಕೃಷ್ಣಸಂಧಾನ ಪದ್ಯಪಾಠಗಳು, ಹರಿಕಥಾ ಮೃತಸಾರ ಹರಿನಾಮಸಂಕೀರ್ತನೆ ಸುಧಾಂಮೃತ ಪದ್ಯಗಳು. ಬೆಂಕಿಪೆಟ್ಟಿಗೆ ತಯಾರಿಸುವ ವಿಧಾನ, ಸಾಬೂನು ತಯಾರಿಸುವ ವಿಧಾನ, ಸ್ವರಾಜ್ಯ ಭಕ್ತೋಲ್ಲಾಸ, ಚರಕಗೀತೆ, ಕೊಂಕಣಿ ಭಾಷೆಯಲ್ಲಿ ಚಂದ್ರಹಾಸ ನಾಟಕ, ಪ್ರಹಲ್ಲಾದ ಚರಿತ್ರ ನಾಟಕ, ಕನ್ನಡ ಮೃಚ್ಛಕಟಿಕ ನಾಟಕ, ಚಂದ್ರಹಾಸಾಭ್ಯುದಯ ನಾಟಕ, ಕೋವಿಲನ್ ಚರಿತ್ರ ನಾಟಕ, ಮಾದರಿ ಉಪನ್ಯಾಸ ಭಾಗ ೧, ೨, ಮತ್ತು ೩.

AMRUTANJAN BO
AMRUTANJ
Best Indian Pain Balm
Amrutanjan
BOMBAY

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು.
ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು.

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.
ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.
ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣಾದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 2 ಆಣೆ.

ಅಮೃತಾಂಜನ ಡಿಪೊ.
6, 7 ತಂಬುಚೆಟ್ಟಿ ಸ್ಟ್ರೀಟ್, ಜೋರ್ಜ ಟೌನ್, ಮದ್ರಾಸು. 109 ಫ್ರೇಯರ್ ರೋಡ್ ಮುಂಬಯಿ.
ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

— ರಥೋತ್ಸವ, ವಿವಾಹ ಉಪನಯನಗಳ ಸಮಯ —
ಸರ್ವರಿಗೂ ಉಡಿಗೆ ತೊಡಿಗೆಗಳು ಬೇಕಾಗುವ ಸಂದರ್ಭ.

ಯಾರು, ಯಾವುದನ್ನು ಎಲ್ಲಿ ಪಡೆಯಬೇಕೆಂಬ ಶಂಕೆಯಿಂದ ವಿಳಂಬ ಮಾಡಬೇಡಿರಿ. ಉಡಿಗೆತೊಡಿಗೆಗಳನ್ನು ಚುನಾಯಿಸಿ ತಮಗೆ ಬೇಕಾದ ಯಥಾರ್ಥ ಮಾಹಿತಿಯನ್ನು ಕಳೆದ ಹತ್ತುಹತ್ತು ವರುಷಗಳಿಂದ ಪಡೆದು ನಮ್ಮಲ್ಲಿಯ ವ್ಯಾಪಾರವು ಗಿರಾಕಿಗಳಿಗೆ ಸರ್ವ ದೃಷ್ಟಿಯಿಂದಲೂ ಲಾಭಕರವಾಗಿ ಪರಿಣಮಿಸುವಂತೆ ನಮ್ಮ ಜವಳಿ ಸಂಗ್ರಹವನ್ನು ಮಾಡಿರುತ್ತೇವೆ.

ಗುಪ್ಪುರ್ಕಾರ್ ಬ್ರದರ್ಸ್, ರಥಬೀದಿ, ಮಂಗಳೂರು.

ಹೆಡ್ ಆಫೀಸು:—ರಥಬೀದಿ—(ಮೊದಲು ಸುಜೀರ ನಾಗಪ್ಪನಾಯಕ್, ಎಂಡ್ ಕೊ, ಇದ್ದಲ್ಲಿ; ಅಜೀಜುದ್ದೀನ್ ರಸ್ತೆಗೆ ತಿರುಗುವಲ್ಲಿ) ಮಂಗಳೂರು.

ಬ್ರೇಂಚ್ ಆಫೀಸು:—ರಥಬೀದಿ—(ಹಳೇ ತಾಲೂಕು ಕಚೇರಿಯ ಪಟಾರಕ್ಕ ಸಮೀಪವಿರುವ ಮಳಿಗೆ) ಮಂಗಳೂರು.
ಈ ದೇಶದ ಪ್ರಖ್ಯಾತಪಟ್ಟ ನೇಯಿಗೆಯ ಕೇಂದ್ರಸ್ಥಳಗಳಾದ—ಬನಾರಿಸ್, ಪೂನಾ, ಅಹಮ್ಮದಾಬಾದ್, ಸುರತ್, ಬೆಂಗಳೂರು, ಧರ್ಮಾವರಮ್, ಕಂಜೀವರಮ್, ಕೊಯಿಮುತ್ತೂರು, ಮಧುರೆ, ತಂಜಾವೂರು, ಕುಂಭಕೋಣ, ಆರ್ನಿ, [illegible], ಹುಬ್ಬಳ್ಳಿ, [illegible], ಗದಗ, ಮದ್ರಾಸು ಈ ಪ್ರಾಂತ್ಯಗಳಲ್ಲಿ ತಯ್ಯಾರಾದ
ಜರಿಸೀರೆಗಳು, ದುಪ್ಪಟಾ, ಜರಿಕಣ, ಪೇಟ್ಸ್, ರೇಶ್ಮೆ ಸೀರೆಗಳು, ಅರಳುಪಟ್ಟೆ ಸೀರೆಗಳು, [illegible] ರೇಶ್ಮೆ ಸೀರೆಗಳು, ಜರಿ ಅಂಚಿನ ಸೀರೆಗಳು, ರೇಶ್ಮೆ ಮಡಿಗಳು, [illegible] ಸೀರೆಗಳು [illegible], [illegible] ಮಿಲ್ಲ್‌ಗಳ ವ ಇತರ ಮಿಲ್ಲ್‌ಗಳ [illegible].
ಕೈರಾಟೆಯಲ್ಲಿ ತಯಾರಿಸಿದ ನೂಲಿನಿಂದ ಮಾಡಿದ—
ಖದ್ದರ್ ಶರ್ಟಿಂಗ್, ಖದ್ದರ್ ಕೋಟಿಂಗ್, ಖದ್ದರ್ ಟೋಪಿ, ಖದ್ದರ್ ಪೇಟ್ಸ್, ಅಂಗವಸ್ತ್ರ, ಇತ್ಯಾದಿ—
[illegible]
ಎಲ್ಲ ಸಂಗ್ರಹವನ್ನೂ ನಮ್ಮ ಪ್ರೊಪ್ರೈಟರರಾದ [illegible] ಅವರು [illegible] ಸಂಗ್ರಹಿಸಿ ತಂದಿರುತ್ತಾರೆ.

ಶರ್ತ:—ನಗದು, ರೂಪಾಯಿ 50ಕ್ಕೆ ಮಿಕ್ಕಿದ [illegible] ಸೇಕಡಾ 6¼ರ, ರೂ. 50ರಿಂದ 250ರವರೆಗೆ ಸೇಕಡಾ 10%, ರೂ. 250 ರಿಂದ 1000ಕ್ಕೆ 12½% [illegible] ಕೊಡಲಾಗುವುದು.

ಪ್ರತಿಯೊಂದು ಕುಟುಂಬಿಗಳ ಮನೆಗಳಲ್ಲಿ ಸೌಖ್ಯವನ್ನು ತೋರಿಸುವದಕ್ಕೂ ಮತ್ತು ಅವರವರ ಉಪಯೋಗಾರ್ಥವನ್ನು ತಿಳುವಳಿಕೆ ಬಗ್ಗೆ ನಡಿಸುವುದಕ್ಕೂ ಒಂದು ಮರ್ಯಾದವಾದ ನಿಘಂಟು ಪುಸ್ತಕವು ಈ ನಮ್ಮ ಹಿಂದೂದೇಶದ ಸಮೂಹದಲ್ಲಿರುವುದು. ಅಂಥಾ ಪುಸ್ತಕವು ಯಾವದೆಂಬುದು

ನೀವುಗಳು ಬಲ್ಲಿರಾ?
(ಅದೇ)
"ಕಾಮಶಾಸ್ತ್ರವೆಂಬುವುದು."

ತಾವುಗಳು ಇನ್ನೂ ಈ ಪುಸ್ತಕದಲ್ಲಿ ಬರೆದಿರುವ ಸಾರಾಂಶವನ್ನು ಓದಿಲ್ಲದಿದ್ದರೆ, ಒಡನೇ ಒಂದು ಪುಸ್ತಕವನ್ನು ಕಳುಹಿಸುವಂತೆ ಒಂದು ಪೋಸ್ಟುಕಾರ್ಡು ಬರಿಯಿರಿ.

ಪುಸ್ತಕವನ್ನು ಇನಾಮಾಗಿ ಕಳುಹಿಸುವೆವು.

ಮುಖ್ಯವಾದ ತಿಳುವಳಿಕೆ.

ತಾವುಗಳು ಧೃಢಚಿತ್ತರಾಗಿಯೂ, ನಿಧಾನಸ್ಥರಾಗಿಯೂ, ಸೌಖ್ಯವಾಗಿಯೂ, ಕಷ್ಟವಿಲ್ಲದೇನೇ ವಿಷಯಗಳನ್ನು ಭರಿಸುವ ಮನಸ್ಸನ್ನು ಹೊಂದಬೇಕಾದರೆ ನಮ್ಮ ಅಮೂಲ್ಯವಾದ "ಕಾಮಶಾಸ್ತ್ರವೆಂಬುವ ಪುಸ್ತಕದಲ್ಲಿ ಕಾಣಿಸಿರುವ ಆತಂಕನಿಗ್ರಹ ಮಾತ್ರೆಗಳನ್ನು ಸೇವಿಸಬೇಕು."

ಒಂದು ರೂಪಾಯಿ ಖರ್ಚುಮಾಡಿದರೆ 32 ಮಾತ್ರೆಗಳುಳ್ಳ ಒಂದು ಡಬ್ಬಿಯನ್ನು ತರಿಸಿ ಪ್ರಯತ್ನಿಸಬಹುದು.

ವಿವರವಾಗಿ ಬರೆದಿರುವ ಒಂದು ಕ್ಯಾಟಲಾಗು ಕಳುಹಿಸುವಂತೆ ಈ ದಿನವೇ ಒಂದು ಪೋಸ್ಟುಕಾರ್ಡು ಬರಿಯಿರಿ.

ಆತಂಕನಿಗ್ರಹ ಔಷದಾಲಯ,
ನಂಬ್ರ 26, ಬ್ರಾಡ್ವೆ, ಮದರಾಸು.

ಹೊಸಗ್ರಂಥಗಳು!! ಬೇಗನೇ ತರಿಸಿಕೊಳ್ಳಿರಿ!!!

ಕೋಕ ಶಾಸ್ತ್ರವು.

ರಸಿಕ ವಾಚಕ ಮಹಾಶಯರೇ,

ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ, ಸಂಪಾದಿಸಿ, ಅದರಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನಷ್ಟೇ ಶೋಧ ಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ತಿನಿ, ಸ್ತ್ರೀಯರಂತೆ ಪುರುಷರಲ್ಲಿಯ ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ, ಜನನೇಂದ್ರಿಯಾದಿಗಳ ವರ್ಣನೆಯನ್ನೂ, ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ, ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ, ನಪುಂಸಕತ್ವ ವಂಧ್ಯಾ ದೋಷಗಳ ಚಿಕಿತ್ಸೆಯನ್ನೂ, ಸ್ತ್ರೀಯರ ಗೂಡ ರಹಸ್ಯವನ್ನೂ, ದಂಪತಿ ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನೂ, ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನು ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ.

ಇದರ ಬೆಲೆ ೧-೮-೦, ಟಪ್ಪಾಲು ಹಾಸಲು ೦-೪-೦.

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ

ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ಮೂರನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್. ಗಣಪತಿರಾವ್ ಐಗಳ್—ಗ್ರಂಥಕರ್ತರು.

ಮನೋರಂಜಕ ಚಿತ್ರಗಳೂ ಇವೆ.

ಇದರಲ್ಲಿ ಸಾವಿತ್ರಿ, ಶಕುಂತಳಾ, ಕೃಷ್ಣಾಕುಮಾರಿ, ಪದ್ಮಿನಿ, ಜೋನ್ ಒಫ್ ಆರ್ಕ, ಫ್ಲಾರೆನ್ಸನಾಯಿಟಿಂಗೇಲ ಪರಶುರಾಮ, ಭೂತಾಳಪಾಂಡ್ಯ, ಕಾರ್ಕಳ ಗೋಮಟೇಶ್ವರ ಮತ್ತು ಭೈರವರಾಜ, ಮೂಡಬಿದ್ರೆಯ ಚೌಟರು, ನಂದಾವರ ಬಂಗರು, ಕಾರ್ಕಳ ರಾಮಸಮುದ್ರ ಮತ್ತು ರಾಮನಾಥ ಒಡೆಯರ ಅಣೆಕಟ್ಟು, ಗುರುಪುರ ಜಂಗಮ ಮಠ, ಕಲ್ಯಾಣಪ್ಪನ ಕಾಟಕಾಯಿ, ಗುರುವಾಯನಕೆರೆ, ಜಮಾಲಾಬಾದುಕೋಟೆ, ಸುಲ್ತಾನಬತ್ತೇರಿ, ಉದಗಾಪ್ರಾರ್ಥನಾಮಂದಿರ, ಸೇಂಟಮೇರಿ ದ್ವೀಪಗಳು ಮತ್ತು ದರಿಯಾಬಾದರಗಡ, ಕೊರಗರು, ಕೊಡಗರು, ತೋಡರು, ರಜಪೂತರು, ಕಂದಾರಿಗಳು ಘುರ್ಖಾ ಜನರು, ಅರಬಿಯರು. ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ಮೂರನೇ ದರ್ಜೆಯ ಮಕ್ಕಳಿಗೆ ಉಪಯುಕ್ತವಾಗಿದೆ. ಕ್ರಯ 6 ಆಣೆ.

ಪುಸ್ತಕ ದೊರಕುವ ವಿಳಾಸ:—

ಶಾರದಾ ಛಾಪಖಾನೆ,
ಮಂಗಳೂರು.

ಗಣಪತಿರಾವ್, ಐಗಳ್.
ಮಂಜೇಶ್ವರು.

ಡಾಕ್ಟರುಗಳು ಭಿನ್ನಾಭಿಪ್ರಾಯಪಡುವಾಗ್ಯೆ ತೀರ್ಮಾನಿಸುವದು ಯಾರು?

ಅಂಥಾ ಸಂದರ್ಭಗಳಲ್ಲಿ ಡೆಂಗ್ಯೂ ಮುಂತಾದ ಜ್ವರಗಳನ್ನು ನಿವಾರಿಸುವಂಥಾ "ಬಾಟ್ಲಿವಾಲರ ಏಗ್ಯುಮಿಕ್ಸ್ಚರ್"ನ್ನು ಸರಾಗವಾಗಿಯೂ, ಮತ್ತು ಜ್ವರಗಳನ್ನು ಖಂಡಿತವಾಗಿ ನಿಲ್ಲಿಸುವಂಥಾದೂ, ಎಲ್ಲಾ ತರದ ತಲೆನೋವುಗಳನ್ನು ಹೋಗಲಾಡಿಸುವಂಥಾದ್ದೂ ಆದ "ಬಾಟ್ಲಿವಾಲರ ಏಗ್ಯುಪಿಲ್ಸ್" ಇದನ್ನು ಉಪಯೋಗಿಸಿರಿ.

ಐ. ಎಮ್. ಎಸ್. ಡಾಕ್ಟರುಗಳಿಂದ ಶಿಫಾರಸು ಮಾಡಲ್ಪಟ್ಟಿದ್ದು. ಇದರ ಉಪಯೋಗದಿಂದ ಹೃದಯದ ಮೇಲೆ ಯಾವದೊಂದೂ ಬಾಧಕವಿಲ್ಲ. ಅರ್ಧ ಶತಮಾನದಿಂದ ಹಿಂದೂಸ್ಥಾನ, ಬರ್ಮಾ, ಸಿಲೋನ್, ಆಫ್ರಿಕಾ ಇವುಗಳಲ್ಲಿ ಪ್ರಖ್ಯಾತಪಟ್ಟದ್ದಾಗಿರುತ್ತದೆ.

ಅನೇಕ ಹಿಂದೀ ಪ್ರದರ್ಶನಗಳಲ್ಲಿ ಬೆಳ್ಳಿ ಮತ್ತು ಬಂಗಾರದ ಪದಕಗಳನ್ನು ಪಡೆದಿರುತ್ತೆ. ಚಾಲ್ತಿ ಸಾಧ್ಯದಂತಿದ್ದ ವ್ಯಾಪಾರಿಗಳೂ ಕೂಡ ಅದರ ಮೇಲೆ ಹಣವನ್ನು ಮುಂಗಡವಾಗಿ ಕೊಡುತ್ತಾರೆ. ಬಡ ಮತ್ತು ಮಧ್ಯಮ ತರಗತಿಯ ಜನರಿಗೆ ವರಪ್ರದಾನವಾಗಿದ್ದು ಸಂಚಾರ, ಪ್ರಯಾಣ, ದೇಶಾಟನೆಗಳ ಸಮಯದಲ್ಲಿ ಹತ್ತಿರದಲ್ಲಿ ಇರಿಸಿಕೊಳ್ಳದಾಗಿರುತ್ತದೆ.

ಬಾಟ್ಲಿವಾಲರ ಬಾಲಾಮೃತ ಅಥವಾ ಟೊನಿಕ್ ಸಿರಪ್.

ಕೆಮ್ಮನ್ನು ಹೋಗಲಾಡಿಸಿ, ಎದೆನೋವನ್ನು ಶಾಂತಗೊಳಿಸಿ, ಜ್ವರವನ್ನು ಉಪಶಮನಿಸಿ, ನಿದ್ರಾಭಂಗವನ್ನು ಕಡಿಮೆ ಮಾಡಿ ಧಾತುವರ್ಧನವನ್ನು ಮಾಡುವವರಲ್ಲಿ ಅತ್ಯುತ್ತಮವಾಗಿರುತ್ತದೆ. ಕಫವನ್ನು ಒಣಗಿಸಿ ಮಾಯವಾಗುವಂತೆ ಮಾಡುವುದಲ್ಲದೆ ಅದೇ ಸಮಯದಲ್ಲಿ ಒಳ್ಳೇ ಜೀರ್ಣವನ್ನು ಉಂಟುಮಾಡುವುದು. ದರ ಮೊದಲಾದ ಮಾಹಿತಿಯನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ತಾರಿನಪತ್ತೆ:-CAWASHAPUR, BOMBAY.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.,
ಪಿ. ವಾರ್ಲಿ, ಮುಂಬಯಿ, ನಂಬ್ರ 18.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ

ಇವರ

ಬಾಲಾಮೃತ.

ಈ ಔಷಧವನ್ನು ಸೇವನೆ ಮಾಡುವುದರಿಂದ ಮಕ್ಕಳು ರೋಗರಹಿತರೂ ಸಶಕ್ತರೂ ಆಗುವರು. ಇದು ಮಧುರವಾಗಿದೆ; ಮಕ್ಕಳು ಸಂತೋಷದಿಂದ ಸೇವಿಸುತ್ತಾರೆ.

ನಮ್ಮ ವಿಳಾಸ:—
ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಏಜಂಟರು:— ಡಿ. ಊಲನ್ ಮಾರ್ಟ್, ಮಂಗಳೂರು.

OUR RECENT IMPORT IN WRIST WATCHES

Have you used anyone of these Watches?

SEND YOUR ORDER NOW ALL GUARANTEED.

Fashionable wrist wrist Lady's size. Reliable movement Guaranteed.

No. 368.

Handy to wear and looks beautiful. Gives punctual time and with strong movement.

Nickel case Rs. 8—0

High-class Radium dial watch watch with Roman figures.

No. 367.

Can be seen in dark nights, Well fitted with best movement and strong to use. Used by one and all

Silver case Rs. 9—0.

Radio light wrist watch.

No. 372.

Fitted with the best mechanism and guaranteed to work and keep perfect time for a long time.

Nickel case Rs. 7—8
Electro rolled-gold „ 9—0

(N. B. In addition to the above, we have good number of varieties of fancy wrist watches, pocket watches. Please write for a descriptive catalogue, which will be sent free)

WHOLESALE IMPORTERS

PETER WATCH COY.,
POST BOX 27, MADRAS

ಶಾಲಿವಾಹನಶಕ ೧೮೪೬ನೆಯ ರಕ್ತಾಕ್ಷಿ ಸಂ||ರದ ಫಾಲ್ಗುಣ ಬ|| ೪ ಶನಿವಾರದಿಂದ ರಕ್ತಾಕ್ಷಿ ಸಂ||ರದ ಫಾಲ್ಗುಣ ಬ|| ೧೧ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೫ನೆಯ ಕುಂಭ ಮಾಸ.)

ತಾರೀಖು	ವಾರ	ತಿ.	ಘಳಿಗೆ	ನಕ್ಷತ್ರ	ಘಳಿಗೆ	[illegible]	ಸೂರ್ಯ ಉ.	ಸೂರ್ಯ ಅಸ್ತ
14	ಶನಿ	೪	೨೮.೩೦	ಸ್ವಾತಿ	೩೩.೨೮	೧	6.40	6.40
15	ರವಿ	೫	೨೪.೧೬	ವಿಶಾಖಾ	೩೦.೪೬	೨	6.40	6.40
16	ಸೋಮ	೬	೧೯.೦	ಅನುರಾಧಾ	೨೭.೪೪	೩	6.39	6.40
17	ಕುಜ	೭	೧೩.೪೬	ಜ್ಯೇಷ್ಠಾ	೨೩.೪೬	೪	6.39	6.40
18	ಬುಧ	೮	೮.೦	ಮೂಲಾ	೨೦.೨	೫	6.38	6.40
19	ಗುರು	೯	೨.೨	ಪೂ. ಷಾ.	೧೫.೪೬	೬	6.38	6.40
20	ಶುಕ್ರ	೧೧	೫೦.೩೧	ಉ. ಷಾ.	೧೧.೪೪	೭	6.37	6.40

ಮಂಗಳೂರಿನ ವಾಯುಸ್ಥಿತಿ.

(೧೯೨೫ನೆಯ [illegible])

Date ತಾರೀಖು	Temperature. ಉಷ್ಣ (ಕಾವು) Maximum	Temperature. ಉಷ್ಣ (ಕಾವು) Minimum	Rainfall. ಮಳೆ ದಿನದ ಮಳೆ	Rainfall. ಮಳೆ ಜುಮಲಾ ಮಳೆ.
6	91—1	73—0	—	—
7	96—8	72—4	—	—
8	91—0	73—7	—	—
9	92—3	74—0	—	—
10	92—2	76—3	—	—
11	92—3	75—1	—	—
12	90—9	74—4	—	140-89

ಮಂಗಳೂರಿನ ಪೇಟೆ ಧಾರಣೆ.

ಜಿನಸು	ಇಂದ	ವರೆಗೆ
	ರೂ. ಆ.	ರೂ ಆ
ಹೊಸ ಮುಸ್ಕಿ	7—12	8—10
ಹೊಸ ಗುಡ್ಡು ...	7-4	7—10
ಹೊಸ ರಾಶಿ ...	6-12	7—4
ಅವ್ವಲ್ ಬೆಳ್ತಿಗೆ ...	8-4	9-2
ಗುಡ್ಡು ಬೆಳ್ತಿಗೆ ...	7-12	8 2
ರಂಗೂನು ಬೆಳ್ತಿಗೆ ಗೋಣಿ ೧ ...	12-8	13-0
ಗೋಧಿ ಗೋಣಿ ೧ಕ್ಕೆ ...	19-0	21-8
ಹುರುಳಿಗೋಣಿ ೧ಕ್ಕೆ ...	9-4	10-8
ಕಡಲೆಗೋಣಿ ೧ಕ್ಕೆ ...	13-0	13-8
ತೊಗರಿಗೋಣಿ ೧ಕ್ಕೆ ...	12-8	13-0
ತೊಗರಿಬೇಳೆ ಗೋಣಿ ೧ಕ್ಕೆ ...	14-0	17-2
ಉದ್ದುಗೋಣಿ ೧ಕ್ಕೆ ...	14-0	14 8
ಹೆಸರುಗೋಣಿ ೧ಕ್ಕೆ ...	14—0	15-0
ಊರು ಬೆಲ್ಲ ಖಂಡಿ ೧ಕ್ಕೆ ...	-	85-0
ಉಪ್ಪು ಗೋಣಿ ೧ಕ್ಕೆ ...	4-4	4-9
ಕೊಬ್ರಿ ಖಂಡಿ ೧ಕ್ಕೆ ...	105-0	110—0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	40-0	—
ಎಳ್ಳಿಂಡಿ ಖಂಡಿ ೧ಕ್ಕೆ ...	40-0	45—0
ಕೊಬ್ರಿ ಎಣ್ಣೆ ಮಣ ೧ಕ್ಕೆ ...	7—14	9—0
ಎಳ್ಳೆಣ್ಣೆ ಮಣ ೧ಕ್ಕೆ ...	7-0	11—0
ಚಿಮಣಿ ಎಣ್ಣೆ ಪೆಟ್ಟಿಗೆ ೧ಕ್ಕೆ ...	8-15-6	—
ಬೋರಿನ ಸಕ್ಕರೆ ಮಣ ೧ಕ್ಕೆ ...	4—14	5-0
ಊರ ಮೆಣಸಿನಕಾಯಿ ಮಣ ೧ಕ್ಕೆ ...	7-8	8 12
ಸಾಸಿವೆ ಮುಡಿ ೧ಕ್ಕೆ ...	9-0	—
ಕೊತ್ತಂಬರಿ ಮುಡಿ ೧ಕ್ಕೆ ...	3-10	4—0
ಕಾಫಿ ಖಂಡಿ ೧ಕ್ಕೆ ...	382-0	390-0
ಬೆಳಗೋಟು ಅಡಿಕೆ ಖಂಡಿ ೧ಕ್ಕೆ ಹಳತು ...	240-0	245—0
ಹೊಸ ಅಡಿಕೆ	195—0	210—0
ಕಾಳುಮೆಣಸು ಖಂಡಿ ೧ಕ್ಕೆ ...	155-0	160—0
ಏಲಕ್ಕಿ ಮಣ ೧ಕ್ಕೆ ...	80-0	90—0
ಗೇರುಬೀಜ ಮುಡಿ ೧ಕ್ಕೆ ...	4—4	4—10
ಕಬ್ಬಿಣ ಖಂಡಿ ೧ಕ್ಕೆ ...	45-0	65—0
ತಾಂಬ್ರ ತಗಡು ಮಣ ೧ಕ್ಕೆ ...	17-12	23-0
ಹಿತ್ತಾಳೆ ಪಾತ್ರಗಳು ಮಣ ೧ಕ್ಕೆ ...	26-0	—
ಚೀನಿ ಬೆಳ್ಳಿ ಸೇರು ೧ಕ್ಕೆ ...	22-0	
ಹಿತ್ತಾಳೆ ತಗಡು ಮಣ ೧ಕ್ಕೆ ...	18-8	
ಪವನು	14—2-6	

Pandit B. Ramakrishna Baliga's Siddha Ayurvedic medicines of 50 years' reputation.

ಮಹಾ ಮದನಕಾಮೇಶ್ವರಿ ಲೇಹ—ಇದನ್ನು ಭಂಗಾರ, ಅಭ್ರಕಭಸ್ಮ, ರಸಸಿಂಧೂರ, ಕಸ್ತೂರಿ, ಕುಂಕುಮಕೇಸರ ವಗ್ಯೆರೆ ಅಮೂಲ್ಯವಾದ ರಸಾಯನ ದ್ರವ್ಯಗಳಿಂದ ತಯಾರಿಸಲ್ಪಟ್ಟಿರುತ್ತದೆ. ಇದು ಎಲ್ಲಾ ತರದ ನಪುಂಸಕ ರೋಗಗಳನ್ನೂ, ಸ್ವಪ್ನಾವಸ್ಥೆಯಲ್ಲಿ ಧಾತುಪತನೆಯನ್ನೂ ಗುಣಪಡಿಸಿ, ದೇಹಕ್ಕೆ ದಿವ್ಯಕಾಂತಿಯನ್ನೂ, ಪುಷ್ಟಿಯನ್ನೂ, ಪುರುಷತ್ವವನ್ನೂ, ವೀರ್ಯಸ್ತಂಭನವನ್ನೂ ಉಂಟುಮಾಡಿ ಅತ್ಯಾನಂದವನ್ನು ಕೊಡುವುದಲ್ಲದೆ, ಅಜೀರ್ಣ, ಅತಿಸಾರ, ಗ್ರಹಣಿ, ಅಮ್ಲ, ಪಿತ್ತ, ಉದರಶೂಲೆ, ಪ್ರಮೇಹ ವಗ್ಯೆರೆ ರೋಗಗಳನ್ನು ಗುಣಪಡಿಸುವಲ್ಲಿ ಕೇವಲ ಅದ್ವಿತೀಯವಾಗಿರುವುದು. ಇದನ್ನು ಅಬಾಲವೃದ್ಧರೂ ಸೇವಿಸಬಹುದು.

ಸ್ವರ್ಣ ಮಿಶ್ರಿತ ಲೇಹಕ್ಕೆ (43 ದಿನಗಳ ವರೆಗೆ ಸಾಕಾಗುವ) ಸೇರು ೧ರ ರೂ. 4—0—0.
ಸ್ವರ್ಣ ಇಲ್ಲದ „ „ „ „ 3—0—0.

ಬ್ರಹತ್ ಶಾರಿವ್ಯಾದಿ ರಸಾಯನ—ಇದು ಖಾತ್ರಿಯಿಂದ ರಕ್ತವನ್ನು ಶೋಧಿಸುವ ದಿವ್ಯೌಷಧವಾಗಿರುತ್ತದೆ. ಇದರ ಸೇವನೆಯಿಂದ 20 ತರದ ಪ್ರಮೇಹ ರೋಗಗಳೂ ಎಲ್ಲಾ ತರದ ಫರಂಗಿ ರೋಗಗಳೂ ಅಲ್ಪ ಸಮಯದಲ್ಲಿ ಗುಣಹೊಂದುವವು. ಅದಲ್ಲದೆ ಇದು ಎಲ್ಲಾ ತರದ ಕುಷ್ಠವ್ಯಾಧಿಗಳನ್ನೂ, ಖಜ್ಜಿ, ಕುರು ಮೊದಲಾದ ಸಕಲ ಚರ್ಮವ್ಯಾಧಿಗಳನ್ನೂ, ಪಾದರಸ ಸೇವನೆಯಿಂದ ಉಂಟಾದ ರೋಗಗಳನ್ನೂ ಮತ್ತು ಹೆಂಗಸರ ಪ್ರದರ ರೋಗಗಳನ್ನೂ ಖಾತ್ರಿಯಿಂದ ಗುಣಪಡಿಸುವುದು.

8 ಔನ್ಸಿನ ಬಾಟ್ಲಿ ಒಂದರ ಕ್ರಯ ಬರೇ ರೂ. 1—7—0.

ಧಾರ್ಲಿ ಪರ್ಪಟಿಕಾದಿ ತೈಲ—(ಸಿದ್ಧ ಇಲ್ಲದವರಿಗೆ ಸಿದ್ಧೌಷಧ.) ಇದನ್ನು ತಲೆಗೆ ಇಟ್ಟಲ್ಲಿ ಸಕಲ ಶಿರೋರೋಗಗಳೂ, ಕರ್ಣ, ನೇತ್ರ, ದಂತ, ಜಿಹ್ವಾರೋಗಗಳೂ, ತಲೆ ತಿರುಗುವುದು, ಕಠಿಣವಾದ ತಲೆ ಶಿಡಿತವು ಮೊದಲಾದ ರೋಗಗಳು ನಾಶವಾಗಿ, ಸ್ಮರಣಶಕ್ತಿಯನ್ನೂ, ಜ್ಞಾನಶಕ್ತಿಯನ್ನೂ ವೃದ್ಧಿಗೊಳಿಸುವುದು. ಇದು ವಿದ್ಯಾರ್ಥಿಗಳಿಗೂ ವಕೀಲರಿಗೂ ಒಂದು ಸಿದ್ಧೌಷಧ.

4 ಔನ್ಸಿನ ಬಾಟ್ಲಿ ೧ರ ರೂಪ್ಯ 1—0—0.

ಸೂಚನೆ:—ಟಪ್ಪಾಲ ಹಾಸಲು ಪ್ರತ್ಯೇಕ. ಸ್ವಲ್ಪ ಬಡ ಜನರಿಗೆ ಔಷಧವು ಧರ್ಮಾರ್ಥವಾಗಿ ಕೊಡಲ್ಪಡುವುದು

ವಿಳಾಸ:— ಪಂಡಿತ, ಬಿ. ರಾಮಕೃಷ್ಣ ಬಾಳಿಗ, ಬಂಟವಾಳ ದ. ಕ.

The Canara Public Conveyance Co., Ltd, Mangalore.

(Established 1914).

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು
- ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು
- ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
- ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
- ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.
- ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ—ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯೆ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd, Mangalore. S. K.

ಕನ್ನಡಿಗರೆ! **ವಸಂತ.** ಕತ್ತೆರೆಯಿರಿ!

ಈಗಾಗಲೇ ಎರಡನೇ ಸಂಪುಟವು ಆರಂಭಿಸಲಿದೆ.

ಇತಿಹಾಸನಿಧಿ ಎಂದರೆ	ವಸಂತ
ಸಮಾಜಸುಧಾರಕನೆಂದರೆ	ವಸಂತ
ಕೈಗಾರಿಕೆಯ ಸಾಮ್ರಾಜ್ಯವೆಂದರೆ	ವಸಂತ
ಕರ್ನಾಟಕ ಭಾಷಾಸೇವಕನೆಂದರೆ	ವಸಂತ
ದೇಶಬಾಂಧವ ಬಂಧುವೆಂದರೆ	ವಸಂತ
ಕಾದಂಬರಿಗಳ ಭಂಡಾರವೆಂದರೆ	ವಸಂತ
ಚಿತ್ರಾಕರ್ಷ ಚಿತ್ರಶಾಲೆಯೆಂದರೆ	ವಸಂತ
ದೇಶಭಕ್ತನೆಂದರೆ	ವಸಂತ

ಇಂತಹ ವಸಂತನು ಯಾರಿಗೆ ಬೇಕು,
ಯಾರಿಗೆ ಬೇಡ?

48 (ಕ್ರೌನ್ ¼ ಪುಟ ಸ್ಯಾಜಿನ) ಪುಟಗಳನ್ನು ಮುಕ್ಕಿದ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3—4—0 ಮಾತ್ರ.

ವ್ಯವಸ್ಥಾಪಕ,
ವಸಂತ ಕಾರ್ಯಾಲಯ,
ಕುಂದಾಪುರ, ದಕ್ಷಿಣ ಕನ್ನಡ.

CAR FESTIVAL

CONCESSION

MAKE HASTE AND BUY A

Pocket Electric Lamp

AVAILABLE

In different varieties, Mother of pearl lamps. Cycle lamps.

NICKEL PLATED.

Hammered Brand, with Powerful Bulls-eye lance,

Use with it

Bull's-eye Dry Batteries.

The Mangalore Trading Association,
Car Street, MANGALORE.

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ ಕೋರ್ಟಿನಲ್ಲಿ.

O. P. 24/1925

ಪರಮೇಶ್ವರ ಭಟ್ಟ ಕೃಷ್ಣ ಭಟ್ಟರ ಮಗ, ಕಾಸರಗೋಡು ತಾಲೂಕು ಬಾಯಾರಕಸಬ ಗ್ರಾಮಸ್ಥ — ಅರ್ಜಿದಾರ.

ತನ್ನ ಸಂರಕ್ಷಣೆಯಲ್ಲಿರುವ ತನ್ನ ಮೈನರ್ ಮಗ ಕೇಶವ ಭಟ್ಟನ ವ ಆತನ ಬಾಬತು ಅರ್ಜಿಯ ಸೆಡ್ಯೂಲಿನಲ್ಲಿ ನಮೂದಿಸಿದ ಆಸ್ತಿಯ ಕುರಿತು ತನಗೆ ಗಾರ್ಡಿಯನ್ ಮೊಕರ್ರು ಮಾಡಬೇಕಾಗಿ ಮೇಲ್ಕಂಡ ಅರ್ಜಿದಾರನು ಮೇಲ್ಕಂಡ ಅರ್ಜಿಯನ್ನು ದಾಖಲು ಮಾಡಿರುವದರಿಂದ ಆ ಕುರಿತು ಆಕ್ಷೇಪವಿದ್ದವರು ಸದರಿ ಅರ್ಜಿ ತನಿಕೆಗೆ ಇಟ್ಟ ತಾ. 19—3—1925ನೇ ದಿವಸ ಪೂರ್ವಾಹ್ನ 11 ಗಂಟೆಗೆ ಮೇಲ್ಕಂಡ ಕೋರ್ಟಿಗೆ ಹಾಜರಾಗಿ ತಮ್ಮ ಆಕ್ಷೇಪಗಳನ್ನು ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

Mangalore, 8-3-1925. } M. MADHAVA RAO.
Vakil for Petitioner.

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ ಕೋರ್ಟಿನಲ್ಲಿ.

O. P. NO. 23/1925

ಯು. ಪುರುಷೋತ್ತಮ ಭಟ್ಟ ಕೂಡ — ಅರ್ಜಿದಾರರು.

ತಾ. 27—7—1924ರಲ್ಲು ಮುಂಬಾಯಿಯಲ್ಲಿ ಮೃತಪಟ್ಟ ಯು. ರಾಘವೇಂದ್ರ ಪುರುಷೋತ್ತಮ ಭಟ್ಟರಿಗೆ ಅರ್ಜಿಯ B ಸೆಡ್ಯೂಲಿನಲ್ಲಿ ನಮೂದಿಸಿದ ಸಾಲಗಳನ್ನು ವಸೂಲು ಮಾಡಿಕೊಳ್ಳುವರೆ 1ನೇ ಅರ್ಜಿದಾರನ ಹೆಸರಲ್ಲಿ ವಾರಿಸಿ ಸರ್ಟಿಫಿಕೇಟು ಕೊಡಬೇಕೆಂತ ಮೇಲ್ಕಂಡ ಅರ್ಜಿದಾರರು ಸದರಿ ಅರ್ಜಿಯನ್ನು ದಾಖಲು ಮಾಡಿರುವ ಕಾರಣ ಆ ಕುರಿತು ಆಕ್ಷೇಪವಿದ್ದವರು ಸದರಿ ಅರ್ಜಿ ತನಕೆಗೆ ಇಟ್ಟ, ತಾ. 19—3—1925ನೇ ದಿವಸ ಪೂರ್ವಾಹ್ನ 11 ಗಂಟೆಗೆ ಮೇಲ್ಕಂಡ ಕೋರ್ಟಿಗೆ ಹಾಜರಾಗಿ ತಮ್ಮ ಆಕ್ಷೇಪಗಳನ್ನು ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

Mangalore, 8-3-1925. } M. MADHAVA RAO.
Vakil for petitioner

ಬಂದು ನೋಡಿರಿ! ತಿಂದು ನೋಡಿರಿ!
ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ
ಪದಕವನ್ನು
ಬಹುಮಾನವಾಗಿ ಪಡೆದಿರುವ
ಎಸ್. ಪಿ. ಆಚಾರ್ಯ
ಇವರಿಂದ ತಯಾರಿಸಲ್ಪಟ್ಟ
ಉಪ್ಪಿನಕಾಯಿಗಳನ್ನು
ಬಂದು ನೋಡಿರಿ! ತಿಂದು ನೋಡಿರಿ!

ದೇಶಬಂಧುಗಳೇ,
ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ, ಕುಂಬಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನ್ನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.
ಅವುಗಳನ್ನು ನಮ್ಮಲ್ಲಿಗೆ
ಬಂದು ನೋಡಿರಿ! ತಿಂದು ನೋಡಿರಿ!
ಇಂಡಿಯನ್ ಸ್ವೀಟ್‌ಮೀಟ್ ಮಾರ್ಟ್.
ಮನೋಲ್ಲಾಸಿನಿ ಕಾಫಿ ಕ್ಲಬ್. ಮಾರ್ಕೆಟು ರೋಡು, ಮಂಗಳೂರು. } ಅಥವಾ { ಸದಾನಂದ ಕಾಫಿ ಕ್ಲಬ್. ರಥಬೀದಿ, ಮಂಗಳೂರು.

ಪದವು ಶ್ರೀ ಕೃಷ್ಣಾಶ್ರಮ ಶಾಲೆಯ ವರದಿ.

೧. ಈ ಶಾಲೆಯು ಸುಮಾರು ೨೭ ವರುಷಗಳಿಂದ ಪದವು ಗ್ರಾಮದಲ್ಲಿ ಸ್ಥಾಪಿತವಾಗಿ ಹಲವು ಜನರ ಆಡಳಿತೆಯು ನಡೆಯುತ್ತಾ ಬಂದು ಆಗಾಗ್ಗೆ ಹೀನ ವೃದ್ಧಿ ಸ್ಥಿತಿಯನ್ನು ಹೊಂದುತ್ತಾ ಬರುವಲ್ಲಿ ಕಳೆದ ೧೯೧೪ನೇ ಇಸವಿಯಲ್ಲಿ ರಾ। ಪಡುಮುನ್ನೂರು ರಾಮಚಂದ್ರರಾಯರು ಈ ಶಾಲೆಯನ್ನು ಪಡೆದು ೧೯೧೮ನೇ ಇಸವಿ ವರೆಗೆ ನಡಿಸಿ ಅನಂತರ ಸದರಿಯವರಿಗೆ ರಾಜಮಹೇಂದ್ರಿಗೆ ಹೋಗುವ ಅಗತ್ಯಬಿದ್ದು ಕೆಲವು ಮಂದಿ ಈ ಗ್ರಾಮಸ್ಥರ ಕೈಯಲ್ಲಿ ಇದರ ಆಡಳಿತೆಯನ್ನು ಒಪ್ಪಿಸಿಕೊಟ್ಟರು.

೨ ಬಳಿಕ ಹಲವರು ಈ ಶಾಲೆಯ ಆಡಳಿತೆಯನ್ನು ನೋಡುತ್ತಾ ಬಂದು ಕಳೆದ ೧೯೧೯ನೇ ಇಸವಿಯಲ್ಲಿ ಪ್ರಕೃತದ ಇದರ ಮ್ಯಾನೇಜರ್ ಮತ್ತು ಕರೆಸ್ಪೊಂಡೆಂಟರಾದ ರಾ। ಕೊಡಂಗೆ ಶ್ರೀನಿವಾಸ ನಾಯ್ಕರು ಈ ಶಾಲೆಯ ಆಡಳಿತೆಯನ್ನು ನಡಿಸಿಕೊಂಡು ಇದಕ್ಕೆ ಯೋಗ್ಯರಾದ ಟ್ರೈನ್ಡ ಉಪಾಧ್ಯಾಯರನ್ನು ವಗೈರೆ ನೇಮಿಸಿ. ಸರಕಾರದಿಂದ ಸಿಕ್ಕುವ ಅಲ್ಪ ಗ್ರೇಂಟು ಈ ಶಾಲೆಯ ಸಿಬಂದಿಗೆ ಸಾಕಾಗದೆ ಸುಮಾರು ರೂಪಾಯಿ ೧೦೧೫—೮—ಅನ್ನು ತನ್ನ ಕೈಯಿಂದಲೆ ಈ ವಿದ್ಯಾಸಂಸ್ಥೆಗೆ ಸಹಾಯದ್ರವ್ಯವಾಗಿ ಒಪ್ಪಿಸಿವರು.

೩ ಈ ರೀತಿ ಗ್ರಾಮಸ್ಥರ ಸಹಾಯ ವಗೈರೆ ಏನೊಂದು ಈ ಬಡ ಹಳ್ಳಿಯಲ್ಲಿ ಸಿಕ್ಕದ ಕಾರಣ ಮೇಲ್ಕಂಡ ೧೦೦೫-೮-ಅಷ್ಟೆಯಷ್ಟು ದೊಡ್ಡ ಮೊತ್ತವು ರಾ। ಕೊಡಂಗೆ ಶ್ರೀನಿವಾಸ ನ್ಯಾಕರವರೇ ತನ್ನ ಕೈಯಿಂದ ಖರ್ಚು ಮಾಡುವ ಅಗತ್ಯ ಬಂತು.

೪ ಇಷ್ಟು ಹಣವು ಸದರಿಯವರೊಬ್ಬರೆ ತಮ್ಮ ಕೈಯಿಂದ ಹಾಕಿ ಖರ್ಚು ನೋಡಿ ಬಂದಾಗ್ಯೂ ಇವರು ಇನ್ನೂ ದೃಢಮನಸ್ಕರಾಗಿ ಈ ಶಾಲೆಯ ಆಡಳಿತೆಯನ್ನು ನೋಡುತ್ತಾ ಬರುತ್ತಾರೆ.

೫ ಇಷ್ಟು ಕಾಲದಿಂದ ಈ ಗ್ರಾಮದಲ್ಲಿ ಶಾಲೆಯು ನಡಿಯುತ್ತಾ ಬರುತ್ತದಾದರೂ ಈ ಶಾಲೆಗೆ ಈ ವರೆಗೆ ಸ್ವಂತ ಕಟ್ಟೋಣವಿಲ್ಲದ್ದು ದೊಡ್ಡದೊಂದು ಕುಂದಕವೆ ಆಗಿದೆ.

೬ ಅದಕಾರಣ ಈ ಶಾಲೆಗೆ ಒಂದು ಸ್ವಂತ ಕಟ್ಟೋಣವನ್ನು ಕಟ್ಟಿಸುವ ಆತುರಪಟ್ಟು, ಸದರಿ ಕೊಡಂಗೆ ಶ್ರೀನಿವಾಸ ನಾಯ್ಕರು ಮಂಗಳೂರು ತಾಲೂಕು ಬೋರ್ಡಿನವರಿಂದ ರಾಜಮಾರ್ಗಕ್ಕೆ ಲಗ್ತ ಇರುವ ಸ್ಥಳವನ್ನು ಕೂಡ ತಮ್ಮ ಪ್ರಯತ್ನಗಳಿಂದ ವಿದ್ಯಾ ಇಲಾಖೆಯ ನಿಬಂಧನೆಗಳಿಗೆ ಸರಿಯಾಗಿ ಎಲಿನೇಶನ್ ಆಗಿ ಸ್ಥಳಕೂಡ ಒದಗಿಸಿಟ್ಟಿರುತ್ತಾರೆ.

೭ ಈ ರೀತಿಯಾಗಿ ಸಿಕ್ಕಿದ ಈ ಸ್ಥಳದಲ್ಲಿ ಕಟ್ಟೋಣವನ್ನು ಇಲ್ಲಿಯ ಬಡ ನಿವಾಸಿಗಳಿಂದ ಕಟ್ಟಿಸುವುದು ಅಸಾಧ್ಯವೆಂತಲೇ ತೋರಿಬರುವುದು.

೮ ಅದು ಕಾರಣ ಇದೇ ಕಳೆದ ತಾ. ೮-೧೧-೧೯೨೪ರಲ್ಲು ಗ್ರಾಮಸ್ಥರ ಮತ್ತು ಇತರ ಕೆಲವು ಮಾನ್ಯ ಗೃಹಸ್ಥರ ಒಂದು ಸಭೆಯನ್ನು ಕರೆದು ಸದರಿ ಸಭೆಗೆ ರಾ। ಕವಿಭೂಷಣ ವೆಂಕಪ್ಪ ಶೆಟ್ರನ್ನು ಸಭಾಧ್ಯಕ್ಷರಾಗಿ ಗ್ರಾಮಸ್ಥರು ಚುನಾಯಿಸಿ ಶಾಲೆಗೆ ಕಟ್ಟೋಣ ಕಟ್ಟಿಸುವರೆ ಕೆಲವು ಯೋಜನೆಗಳನ್ನು ನಿರ್ಣೈಸುವ ಒಂದು ಕಮಿಟಿಯನ್ನು ಕೂಡ ಈ ಸಭೆಯಲ್ಲಿ ಏರ್ಪಡಿಸಿರುತ್ತದೆ.

೯ ಮತ್ತು ಈ ಕಮಿಟಿಯವರ ಅಭಿಪ್ರಾಯ ಪ್ರಕಾರ ವರದಿಯನ್ನು ಹೊರಪಡಿಸಿ ಎಲ್ಲಾ ಉದಾರ ಗೃಹಸ್ಥರಿಂದ ಶಾಲೆಯ ಕಟ್ಟೋಣಕ್ಕೆ ಸಹಾಯದ್ರವ್ಯವನ್ನು ವಂತಿಗೆರೂಪವಾಗಿ ಸಂಗ್ರಹಿಸುವುದೆಂತ ನಿರ್ಣೈಸಿರುತ್ತದೆ.

೧೦ ವಂತಿಗೆಯಾದ ಹಣವನ್ನು ಪುತ್ತೂರು ಕೊ-ಒಪರೇಟಿವ್ ಸೆಂಟ್ರಲ್ ಬೇಂಕಿನ ಮಂಗಳೂರು ಶಾಖೆಯಲ್ಲಿ ಸೇವಿಂಗ್ಸ ಡಿಪೋಜಿಟಾಗಿ ಇಟ್ಟು ಆಗಾಗ್ಗೆ ಸ್ವದೇಶಾಭಿಮಾನಿ ಪತ್ರಿಕೆಯ ಮೂಲಕ ಜಮಾ ಖರ್ಚಿನ ಲೆಕ್ಕವನ್ನು ಸೂಚಿಸುವುದಾಗಿಯೂ ವಂತಿಗೆದಾರರ ಹೆಸರುಗಳನ್ನು ಪ್ರಕಟಿಸುವುದಾಗಿಯೂ ಕೂಡ ನಿರ್ಣಯವು ಕಮಿಟಿಯವರಿಂದ ಮಾಡೋಣಾಗಿದೆ.

ಈ ಶಾಲಾ ಕಮಿಟಿಯವರು.

೧ ಕೆ. ಕೃಷ್ಣಯ್ಯ ಶ್ಯಾನುಭಾಗ, ಜಮೀನ್‌ದಾರ್; ೨ ಕೆ. ಶ್ರೀನಿವಾಸ ನ್ಯಾಕ, ಮ್ಯಾನೇಜರ್; ೩ ಪಿ. ಅನಂತ ಭಟ್ಟ, ಜಮೀನ್‌ದಾರ್; ೪ ಮರೋಳಿ ವೆಂಕಟರಾವ್ ಪಟೇಲು; ೫ ಪದವು ಸುಬ್ರಾಯಕಮ್ತಿ; ೬ ಮರೋಳಿ ಪಾಂಡುರಂಗ ಶೆಣೈ; ೭ ಮಂಜಯ್ಯ ಶೆಟ್ಟಿ ಪಟೇಲ್; ೮ ಕವಿಭೂಷಣ ವೆಂಕಪ್ಪ ಶೆಟ್ಟಿ; ೯ ಪಿ. ಕೊರಗಪ್ಪ ಕಂಟ್ರೆಕ್ಟರ್.

೧೧ ದೀರ್ಘಕಾಲದಿಂದ ನಡೆದುಬಂದ ಪದವು, ಮರೋಳಿ, ಕುಲಶೇಕರ ಇಷ್ಟು ಗ್ರಾಮದ ಮಕ್ಕಳಿಗೆ ಲಗ್ತವಿರುವ ಪ್ರಕೃತಕ್ಕೆ ಕಟ್ಟೋಣದ ಅಭಾವದಿಂದ ಮಕ್ಕಳನ್ನು ಕೂಡ ಸೇರಿಸಲು ಸಾಧ್ಯವಿಲ್ಲದೆ ಇರುವ ಈ ಬಡ ಶಾಲೆಗೆ ದಯಾಳು ಜನರು ಉದಾರಾಶ್ರಯ ಕೊಟ್ಟು ಈ ಶಾಲೆಯ ಕಟ್ಟೋಣವನ್ನು ಕಟ್ಟಿಸುವಂತೆ ಸಹಾಯಮಾಡಬೇಕಾಗಿ ವಿನಂತಿ.

ಪಿ. ಕೊರಗಪ್ಪ,
ಗ್ರಾಮಸ್ಥರ ಶಾಲಾಕಮಿಟಿ
ಕಾರ್ಯದರ್ಶಿ.

ಕೆ. ಶ್ರೀನಿವಾಸ ನಾಯ್ಕ,
ಮ್ಯಾನೇಜರ್ ಮತ್ತು
ಕರೆಸ್ಪೊಂಡೆಂಟ್.

ಮೇಲಣ ಶಾಲೆಗೆ ವಂತಿಗೆದಾರರ ಹೆಸರುಗಳು ಮತ್ತು ಮೊಬಲಗು.

ಮ। ರಾ। ಗಳಾದ ಡಿ. ಅನಂದರಾವ್ ರೂ. ೫, ಪಿ. ಕೊರಗಪ್ಪ ಬೆಳ್ಚಾಡ ರೂ. ೧೦೦, ಪಿ. ಜನಾರ್ದನ ಶ್ಯಾನುಭಾಗ ರೂ. ೫೦, ಅಳ್ಕೆ ಸುಬ್ರಾಯ ಕಮ್ತಿ ರೂ. ೨೫, ಪಟೇಲ ಮಂಜಯ್ಯ ಶೆಟ್ಟಿ ರೂ. ೨೫, ಪಿ. ಗುರುವಪ್ಪ ಪೂಜಾರಿ ರೂ. ೨೫, ಮರೋಳಿ ಪಾಂಡುರಂಗ [illegible] ೧೫, ಕೊಂಚಾಡಿ ನರಸಿಂಹ ಕೊರಗಪ್ಪೆ ರೂ. ೧೫, ಪೊಳ್ಳೆಲ್ ನರಸಿಂಹ ಪೈ ರೂ. ೧೧, ಕಲ್ಯಾ ದಮ್ಮರ್ಸೆಟ್ಟಿ ರೂ. ೧೧, ಕೊಂಚಾಡಿ ಕೃಷ್ಣಯ್ಯ ಶ್ಯಾನುಭಾಗ ರೂ. ೧೦, ಮರೋಳಿ ನಾರಾಯಣ ರಾವ್ ರೂ ೧೦, ಕವಿಭೂಷಣ ವೆಂಕಪ್ಪ ಶೆಟ್ರು ರೂ. ೧೦, ಪಿ. ವೆಂಕಟೇಶ ಕಮ್ತಿ ರೂ. ೫, ಬೋಳಂತೂರು ಗೋಪಾಳ ಪ್ರಭು ರೂ. ೫, ಪದವು ರಾಘವೇಂದ್ರ ನ್ಯಾಕ ರೂ. ೫, ಪದವು ಹರಿಶ್ಯಾನುಭಾಗ ರೂ. ೫, ಪುಂಚಮೆ ವಾಸ್ತೇವಯ್ಯ ರೂ. ೫, ಮರೋಳಿ ಕೊಡ್ಮಣ್‌ಕಾರ್ ರಾಯಪ್ಪ ಶ್ಯಾನುಭಾಗ ರೂ. ೫, ಪದವು ವಾಮನ ಶ್ಯಾನುಭಾಗ ರೂ. ೫, ಪದವು ಲಿಂಗಪ್ಪ ಶ್ಯಾನುಭಾಗ ರೂ. ೨, ಕುಲಶೇಕರ ವೆಂಕಪ್ಪ ಪೂಜಾರಿ ರೂ. ೨, ನೀರುಮಾರ್ಗ ಕೊಡಪೂಜಾರಿ ರೂ. ೨, ಕಲ್ಯಾ ಉಪೇಂದ್ರ ಶ್ಯಾನುಭಾಗ ರೂ. ೩, ಪದವು ದಾಮೋದರ ಶ್ಯಾನುಭಾಗ ರೂ. ೨, ಪದವು ವೀರಬ್ರಾಚಾರಿ ರೂ. ೨, ಪದವು ದೇವಪ್ಪ ಪ್ರಭು ರೂ. ೨, ಕಲ್ಯಾ ವೆಂಕಟೇಶ ಶೆಣೈ ರೂ. ೧, ಪದವು ಪುಟ್ಟಣ್ಣಾಚಾರಿ ರೂ. ೧, ಮರೋಳಿ ಪಣಿಯಪ್ಪಯ್ಯ ರೂ. ೧, ಪದವು ಸೀತಾರಾಮ ಶೆಟ್ಟಿ (ಸದರಿ ಶಾಲೆಯ ವಿದ್ಯಾರ್ಥಿ) ರೂ. ೧, ಜುಮ್ಲಾ ರೂಪಾಯಿ ೩೬೦—೦—೦.

ಕಾಸರಗೋಡು ತಾಲೂಕು ಬೋರ್ಡು ಇಲೆಕ್ಷನ್ ಉಮೇದ್ವಾರರ ಹೆಸರುಗಳು.

ಆದೂರು—೧ ಮೆಂಬರಿಕೆಗೆ—ರಾಜಶ್ರೀಗಳಾದ ಸುಂದರ ರಾಮರಾವ್ ಎಸ್, ಗೋಪಾಲಕೃಷ್ಣ ಭಟ್ಟ.

ಬಾಯಾರು—೧ ಮೆಂಬರಿಕೆಗೆ—ರಾ।ಗಳಾದ ಭೀಮಭಟ್ಟ ಮೂಣಿಪಾಡಿ, ಮಹಮದ್ ಶರೂಲ್.

ಕಾಸರಗೋಡು—೨ ಮೆಂಬರಿಕೆಗೆ—ರಾ।ಗಳಾದ ಕುಂಞಿ ಕಲಂದನ್, ಸುಂದರ ರಾಮರಾವ್, ಎಸ್. ಎಸ್. ವೆಂಕಟ ರಾಮರಾವ್, ಕೆ. ನರಸಿಂಹ ನಾಯಕ, ಮುತ್ತಯಶೆಟ್ಟಿ, ಎಚ್. ಶ್ರೀನಿವಾಸ ಕಾಮತ್.

ಪೆರ್ಡಾಲ—೧ ಮೆಂಬರಿಕೆಗೆ-ರಾ।ಗಳಾದ ಕೆ. ನರಸಿಂಹ ನಾಯಕ, ಬಂಟ್ವಾಳ ವೆಂಕಪ್ಪ ಪೂಂಜ, ಕೇಶವ ಭಟ್ಟ.

ಮಂಜೇಶ್ವರ—೨ ಮೆಂಬರಿಕೆಗೆ—ರಾ।ಗಳಾದ ಭವಾನಿಶಂಕರ ರಾವ್, ಕಡಂಬಾರು ತ್ಯಾಂಪಣ್ಣಶೆಟ್ಟಿ, ವರ್ಕಾಡಿ ಲಿಂಗಪ್ಪಭಂಡಾರಿ, ಪುರುಷೋತ್ತಮ ಕಾಮತ್, ನರಹರಿ ಕಾಮತ್; ಚಂದ್ರಗಿರಿ ಗೋಪಾಲ ನಾಯಕ್, ಇಡ್ಡಿನ್ ಕುಂಞಿಬ್ಯಾರಿ ಸಾಹೇಬ್.

ಹೊಸದುರ್ಗ—೧ ಮೆಂಬರಿಕೆಗೆ-ರಾ।ಗಳಾದ ಎ. ಸಿ. ಚಾತುಕುಟಿ ನಾಯರ್.ಎಚ್. ಶ್ರೀನಿವಾಸ ಕಾಮತ್, ಬಿ. ಮಾಧವ ರಾವ್, ಎಚ್. ವಿಠ್ಠಲ ಕಾಮತ್.

ಪಳ್ಳಿಕೆರೆ—೧ ಮೆಂಬರಿಕೆಗೆ-ರಾ।ಗಳಾದ ಮಹಮ್ಮದ ಬ್ಯಾರಿ, ಎಂ. ಕೃಷ್ಣ ನಾಯರ್, ಕೇಳು ನಂಬಿಯಾರ್.

ನೀಲೇಶ್ವರ—೧ ಮೆಂಬರಿಕೆಗೆ-ರಾ।ಗಳಾದ ಪಿ. ಸಿ. ರವಿವರ್ಮ ರಾಜ, ಎಚ್. ವಿಠ್ಠಲ ಕಾಮತ್, ಕುಂಞಿಕಣ್ಣನ್ ನಂಬಿಯಾರ್.

ಕುಂಬಳೆ—೧ ಮೆಂಬರಿಕೆಗೆ-ರಾ।ಗಳಾದ ಚಿಕ್ಕಪ್ಪನಾಯ್ಕ, ಕುಂಞಿಮ್ಮುಕಾ ಮೊಗ್ರಾಲ್.

ತ್ರಿಕರಪುರ—೧ ಮೆಂಬರಿಕೆಗೆ-ರಾ।ಗಳಾದ ಪಿ. ಕೆ. ಸಿ. ಮಹಮ್ಮದ್, ಚೆಂದೇರಿ ಮಡಿಯನ್ ಕುಂಞಂಬು ನಾಯರ್, ನಾರಾಯಣ ತಿರುಮುಂಬು, ಪೊನ್ನನ್ ಕುಂಞಂಬು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗೋವಧೆ.

ಹಿಂದೂದೇಶದ ಎಲ್ಲಾ ಭಾಗಗಳಲ್ಲಿಯೂ ಬಹಳ ಪುರಾತನ ಕಾಲದಿಂದಲೂ ಗೋಮಾಂಸವನ್ನು ತಿನ್ನುತ್ತಿರಲಿಲ್ಲ. ಇತರ ಕುರಿ ಆಡು ಮುಂತಾದ ಮೃಗಗಳ ಮಾಂಸವನ್ನೂ ಕೋಳಿ ಮುಂತಾದ ಪಕ್ಷಿಗಳ ಮಾಂಸವನ್ನೂ ತಿನ್ನುತ್ತಿದ್ದರು. ಇದನ್ನು ಸಹ ಬ್ರಾಹ್ಮಣರು ತಿನ್ನುತ್ತಿರಲಿಲ್ಲ. ಉಳಿದ ಮೂರು ವರ್ಣದವರು ತಿನ್ನುತ್ತಿದ್ದರು.

ಅನಂತರ ಹಿಂದೂದೇಶಕ್ಕೆ ಮುಸಲ್ಮಾನರು ಅಭಿಯೋಗ ಮಾಡಿದ ಮೇಲೆ ಅವರು ಗೋಮಾಂಸವನ್ನು ತಿನ್ನಲಾರಂಭಿಸಿದರು. ಇಲ್ಲಿಯ ಅನೇಕರು ಮುಸಲ್ಮಾನರಾಗಿ ತಿನ್ನಲಾರಂಭಿಸಿದರು. ಮುಸಲ್ಮಾನರ ತರುವಾಯ ಬಂದ ಕ್ರೈಸ್ತರ ಕಾಲದಲ್ಲಿ ಗೋಮಾಂಸವನ್ನು ತಿನ್ನುವುದು ಮತ್ತಷ್ಟು ಹೆಚ್ಚಾಯಿತು.

ದಕ್ಷಿಣ ಕನ್ನಡ ಜಿಲ್ಲೆಯ ಮುಖ್ಯ ಪಟ್ಟಣವಾದ ಮಂಗಳೂರಿನ ಜನಸಂಖ್ಯೆಯಲ್ಲಿ ಸಾಧಾರಣ ಅರೆವಾಸಿ ಜನರು ಕ್ರೈಸ್ತರಾಗಿರುತ್ತಾರೆ. ಸಾಧಾರಣ ¼ನೇ ಪಾಲು ಮುಸಲ್ಮಾನರು. ಉಳಿದವರು ಎಲ್ಲಾ ಜಾತಿಯ ಹಿಂದುಗಳಾಗಿರುತ್ತಾರೆ. ಇವರಲ್ಲಿ ಕೆಲವು ಮುಸಲ್ಮಾನರು ದನಗಳನ್ನು ಕೊಂದು ಮಾಂಸ ಮಾರುವ ಕಸಾಯಿಗಳಾಗಿರುತ್ತಾರೆ. ಇವರು ದಿನ ಒಂದಕ್ಕೆ ಸರಾಸರಿ ೮-೧೦ ದನಗಳನ್ನೂ ಎತ್ತುಗಳನ್ನೂ ಮಾಂಸಕ್ಕಾಗಿ ಕೊಲ್ಲುತ್ತಾರೆ. ದನದ ಮಾಂಸ ಮಾರುವ ಶೆಡ್ಡಿನ ಹತ್ತಿರ ಹೋದರೆ ಸೂರ್ಯೋದಯದಿಂದ ಸೂರ್ಯಾಸ್ತಮಾನದ ವರೆಗೆ ದಡಬಡ ಎಂಬ ಮಾಂಸ ತುಂಡುಮಾಡುವ ಶಬ್ದವು ಕೇಳಿಸುತ್ತಲೆ ಇದೆ. ಒಂದು ದಿನಕ್ಕೆ ೮ ದನಗಳ ಪ್ರಕಾರ ಎಣಿಸಿದರೆ ತಿಂಗಳಿಗೆ ೨೪೦ ದನಗಳಾದವು. ವರುಷಕ್ಕೆ ೨೮೮೦ ದನಗಳಾದವು. ಇದರಿಂದ ಮಂಗಳೂರು ಒಂದು ಊರಿನಲ್ಲಿಯೇ ಇಷ್ಟು ದನ ಎತ್ತುಗಳ ಕೊಲ್ಲಲ್ಪಡುತ್ತವೆ. ಇದು ಈ ಜಿಲ್ಲೆಯ ೭೯೯ ಗ್ರಾಮಗಳ ಪೈಕಿ ಒಂದೊಂದು ಗ್ರಾಮದಲ್ಲಿ ತಿಂಗಳಿಗೆ ಒಂದೊಂದು ದನದ ಪ್ರಕಾರ ಮಾಂಸಕ್ಕಾಗಿ ಕೊಲ್ಲುತ್ತಾರೆಂದು ಲೆಕ್ಕ ಹಿಡಿದರೆ ವರುಷಕ್ಕೆ ಇಡೀ ಜಿಲ್ಲೆಯಲ್ಲಿ ೯೫೮೮ ದನಗಳು ಕೊಲ್ಲಲ್ಪಡುತ್ತವೆಂದು ಹೇಳಬಹುದು. ಒಟ್ಟಾರೆ ಜಿಲ್ಲೆಯಲ್ಲಿ ಒಂದು ವರುಷಕ್ಕೆ ೧೨,೪೬೮ ದನಗಳನ್ನೂ ಎತ್ತುಗಳನ್ನೂ ಮಾಂಸಕ್ಕಾಗಿ ಕೊಲ್ಲುತ್ತಾರೆಂದು ಎಣಿಸಬಹುದು.

ಹೀಗೆ ಮಾಂಸಕ್ಕಾಗಿ ಕೊಲ್ಲುವುದರಿಂದ ದನಗಳ ಸಂಖ್ಯೆಯು ಕಡಿಮೆಯಾಗಿ ಅವುಗಳಿಂದ ಸಿಕ್ಕುವ ಹಾಲು, ತುಪ್ಪ ಮುಂತಾದ್ದು ಕಡಿಮೆಯಾಗಿ ಮನುಷ್ಯನ ಆಯುಷ್ಯವನ್ನೂ ಬುದ್ಧಿಶಕ್ತಿಯನ್ನೂ ಹೆಚ್ಚಿಸುವ ಒಂದು ಸಾಧನೆಯನ್ನು ಕಳಕೊಂಡಂತಾಯಿತು. ಹೀಗಾದುದರಿಂದ ಜನರಲ್ಲಿ ಆಯುಷ್ಯವೂ ಬುದ್ಧಿಶಕ್ತಿಯೂ ಕಡಿಮೆಯಾದವು; ಮಕ್ಕಳಿಗೂ ಹೆಂಗಸರಿಗೂ ನಾನಾ ನಮೂನೆಯ ಕ್ಷಯ ರೋಗಗಳು ಶುರುವಾಗಲಾರಂಭಿಸಿದವು.

ಎತ್ತುಗಳನ್ನು ಮಾಂಸಕ್ಕಾಗಿ ಕೊಲ್ಲುವುದರಿಂದ ಬೇಸಾಯಕ್ಕೆ ಬೇಕಾಗುವ ಎತ್ತುಗಳ ಸಂಖ್ಯೆಯು ಕಡಿಮೆಯಾಯಿತು. ಜನಸಂಖ್ಯೆ ಹೆಚ್ಚಾಗುತ್ತಿರುವಾಗ ಆಹಾರ ಜೀನಸಾದ ಅಕ್ಕಿಯ ಬೆಳೆಯು ಹೆಚ್ಚಾಗಬೇಕು. ಹೀಗೆ ಎತ್ತುಗಳನ್ನು ಕೊಲ್ಲುವುದರಿಂದ ಸಾಗುವಳಿ ಎತ್ತುಗಳಿಲ್ಲದೆ ಸಾಗು ಭೂಮಿಯು ಕಡಿಮೆಯಾಗಿ, ಬೆಳೆಯುವ ಅಕ್ಕಿಯೂ ಕಡಿಮೆಯಾಗಿ ಅಕ್ಕಿಯ ಬೆಲೆಯು ಏರುವುದು.

ವಸ್ತ್ರದ ವಿಷಯ ನಾವು ಸಾಧಾರಣ ಮಟ್ಟಿಗೆ ಅನ್ಯದೇಶದವರ ಮೇಲೆ ಈಗ ಆಧರಿಸಿಕೊಂಡಿದ್ದೇವೆ. ಇನ್ನು ಈ ಗೋವಧೆಯು ದಿನೇ ದಿನೇ ಹೆಚ್ಚಾಗುತ್ತಾ ಬಂದರೆ ನಾವು ನಮ್ಮ ಆಹಾರ ಪದಾ[illegible] ಅಕ್ಕಿಗೂ ಪರದೇಶದವರ ಮೇಲೆ ಆಧರಿಸಿಕೊಂಡಿರುವ ಕಾಲವು ಬರು[illegible]. ಆದುದರಿಂದ ಗೋವಧೆಯನ್ನು ಕಡಿಮೆಮಾಡಲು ವಿಚಾರಿಸುವುದು ಒಳ್ಳೇಯದೆಂದು ತೋರುತ್ತದೆ. ಪಾಶ್ಚಿಮಾತ್ಯ ಜನರ [illegible]ದಿಂದ ಅವರ ಸದ್ಗುಣಗಳನ್ನು ತೆಗೆದುಕೊಳ್ಳುವುದರ ಬದಲಾಗಿ ಅವರಲ್ಲಿರುವ ದುರ್ಗುಣಗಳನ್ನು ಮಾತ್ರವೆ ಹೆಚ್ಚಾಗಿದೆ. ಇವರಲ್ಲಿ ಗೋಮಾಂಸವನ್ನೂ ವಿಲಾಯಿತಿಯ ನಾನಾ ತರದ ಹೆಚ್ಚು ಬೆಲೆಬಾಳುವ ಬ್ರಾಂಡಿ, ವಿಸ್ಕಿ ಮುಂತಾದ ಮಾದಕ ಪದಾರ್ಥಗಳನ್ನು ಇಷ್ಟರ ವರೆಗೆ ಮಾಂಸಾಹಾರವೇನೆಂಬುದು ಗೊತ್ತಿಲ್ಲದೆಯೂ ಗೋಮಾಂಸವೆಂದೊಡನೆ ಕಿವಿಗಳಿಗೆ ಬೆರಳುಹಾಕಿಕೊಳ್ಳುತ್ತಿದ್ದ ಮೇಲ್ಜಾತಿಯವರಲ್ಲಿ ಈ ದುರ್ಗುಣವು ಹೆಚ್ಚಾಗುತ್ತಾ ಬರುತ್ತಿದೆ. [illegible]

ವಿವಿಧ ಸಮಾಚಾರ.

ಕೋಟ್ಯಾಧೀಶರು ಯಾರು?

ಪ್ರಪಂಚದಲ್ಲೆಲ್ಲಾ ಮಿಗಿಲಾದ ಕೋಟ್ಯಾಧೀಶನು ಈಗ ಫೋರ್ಡ್ ಮೋಟಾರ ಗಾಡಿಗಳ ಉತ್ಪಾದಕನಾದ ಅಮೇರಿಕದ ಮಿ। ಹೆನ್ರಿ ಫೋರ್ಡ್ ಎಂಬ ಮಹನೀಯನು. ಎರಡನೇಯ ಕೋಟ್ಯಾಧೀಶನು ಮಿಣಿ ಎಣ್ಣೆಯ ಮೂಲ ಮಾಲಿಕನಾದ ಮಿ। ಜೆ. ಡಿ ರಾಕ್‌ಫೆಲರ್ ಎಂಬ ಗೃಹಸ್ಥನು. ಕೆಲವು ವರ್ಷಗಳ ಪೂರ್ವದಲ್ಲಿ ಈತನೇ ಪ್ರಪಂಚದಲ್ಲಿ ಎಲ್ಲರಿಗಿಂತಲೂ ಮಿಗಿಲಾದ ಕೋಟ್ಯಾಧೀಶನಾಗಿದ್ದನು. ಮಿ। ಹೆನ್ರಿ ಫೋರ್ಡ್ ಇವರ ಮೋಟಾರ ಗಾಡಿಗಳು, ಅವುಗಳ ಕಾರ್ಖಾನೆಯು ಮೊದಲಾದವುಗಳು ಒಟ್ಟು ೬೦೦ ಕೋಟಿ ರೂಪಾಯಿಗಳ ಬೆಲೆಯುಳ್ಳವುಗಳಾಗಿವೆ. ಇವರಲ್ಲಿರುವ ನಗದಿ ಹಣವಾದರೊ ೫೪ ಕೋಟಿ ರೂಪಾಯಿಗಳು. ಇವರ ವಾರ್ಷಿಕ ಲಾಭವು ೩೩ ಕೋಟಿ ರೂಪಾಯಿ. ಇವರು ೧೯೨೩ರಲ್ಲಿ ಸರಕಾರಕ್ಕೆ ೭೫ ಲಕ್ಷ ರೂಪಾಯಿ ತೆರಿಗೆಯನ್ನು ಕೊಟ್ಟಿರುವದಾಗಿ ತಿಳಿಯುತ್ತದೆ. ಮಿ। ರಾಕ್‌ಫೆಲರ್ ಇವರ ಧನವು ೩೩೦ ಕೋಟಿ ರೂಪಾಯಿಗಳೆಂದು ಕೆಲವು ವರ್ಷಗಳ ಮುಂಚೆ ಗೊತ್ತಾಗಿದ್ದಿತು. ಇವರ ವಿದ್ಯಾಭಿವೃದ್ಧಿಗೂ, ಇತರ ಪರೋಪಕಾರ ಕೆಲಸಗಳಿಗೂ ೧೭೫ ಕೋಟಿ ರೂಪಾಯಿಗಳನ್ನು ಕೊಟ್ಟಿರುವರು. ಈ ಕಾರಣದಿಂದಲೆ ಇವರಲ್ಲಿ ಹಣವು ಸ್ವಲ್ಪ ಕಡಿಮೆಯಾಯಿತು. ಇನ್ನೂ ಪ್ರಖ್ಯಾತಿಗೆ ಬಾರದ ಕೋಟ್ಯಾಧೀಶರರು ಅಮೇರಿಕೆಯಲ್ಲಿ ಕೆಲವರಿದ್ದಾರೆ. ಮಿ। ಫೋರ್ಡ್ ಅಥವಾ ರಾಕ್‌ಫೆಲರ್ ರಂಥ ಬಹು ದೊಡ್ಡ ಧನವಂತರು ಇಂಗ್ಲಂಡದಲ್ಲಿಲ್ಲ. ಅಲ್ಲಿಯ ಐಶ್ವರ್ಯವಂತರ ಹತ್ತಿರ ಎಷ್ಟು ಹಣವಿದೆಯೆಂಬುದು ಅವರು ಸತ್ತ ಮೇಲೆ ಅವರ ಮರಣಶಾಸನದಿಂದಲೆ ಗೊತ್ತಾಗಬೇಕಲ್ಲದೆ ಅವರು ಜೀವಿಸುವಾಗ ತಿಳಿಯುವದಿಲ್ಲ. ಇಂಗ್ಲೆಂಡ ದೊಡ್ಡ ಧನವಂತನಾದರೂ ಕೇವಲ ಸಾಮಾನ್ಯ ಜನರಂತೆ ಉಡುಪು ನಡತೆಯುಳ್ಳವನಾದುದರಿಂದ ಅವನು ಧನಿಕನೆಂಬುವದು ಅವನ ನೆರೆಯವರಿಗೂ ಕೂಡ ತಿಳಿಯುವದಿಲ್ಲ.

ಪ್ರಾಚೀನ ಗ್ರಂಥಗಳಲ್ಲಿಯ ವಿಚಿತ್ರ ಉಪಾಯಗಳು.

ಡಾಕ್ಟರ್ ಸಯ್ಯದ್ ಮಹಮ್ಮದಖಾನ ಎಂಬ ಜಹಗೀರುದಾರರು ನೈಜಾಂ ಇಲಾಖೆಯಲ್ಲಿದ್ದಾರೆ. ಅವರಲ್ಲಿ ಪ್ರಾಚೀನ ಗ್ರಂಥ ಸಂಗ್ರಹವಿದ್ದು ಕೆಲವು ಗ್ರಂಥಗಳು ಅಮೂಲ್ಯವಾಗಿವೆ. ಕೆಲವು ತಾಡವಾಲೆಯ ಗ್ರಂಥಗಳಾಗಿದ್ದು ಅವು ವೇದಗಳ ಕಾಲದಷ್ಟು ಪ್ರಾಚೀನವಾಗಿವೆಯಂತೆ. ಅವುಗಳೊಳಗಿನ ಕೆಲವು ಗ್ರಂಥಗಳಲ್ಲಿ ಅದ್ಭುತ ಚಮತ್ಕಾರವನ್ನು ಮಾಡುವಂಥ ಇಂದ್ರಜಾಲ ಮಹೇಂದ್ರಜಾಲಗಳಿವೆ. ಇವುಗಳಿಂದ ಮೃತ ಶರೀರವನ್ನು ಸಾವಿರಾರು ವರ್ಷಗಳ ವರೆಗೆ ಹಾಳಾಗದಂತೆ ಇಡುವದು ಸಾಧ್ಯವಾಗಿದೆ. ನಮಗೆ ಬೇಕಾದ ಬಣ್ಣದ ಹತ್ತಿಯನ್ನು ಬಿತ್ತಿ ಆ ಬಣ್ಣದ ಹತ್ತಿಯನ್ನು ಬೆಳೆಯುವುದು ಶಕ್ಯವಿದೆ. ಅದೇ ಪ್ರಕಾರ ಭೂಭಾಗದ ಮೇಲಿರುವ ನೀರನ್ನು ಎತ್ತರವಾದ ಪ್ರದೇಶಕ್ಕೆ ಏರಿಸಬಹುದು. ಮತ್ತು ಬೇಕಾದ ಧಾತುವಿನಿಂದ ಬಂಗಾರ, ಬೆಳ್ಳಿಗಳನ್ನು ಮಾಡಬಹುದು ಎಂದು ತಿಳಿದುಬಂದಿದೆ.

ದಕ್ಷಿಣ ಕನ್ನಡ.

ಬಂಟವಾಳ:— ಇಲ್ಲಿಯ ಟೆಂಪಲ್ ಎಲಿಮೆಂಟರಿ ಶಾಲೆಯ ಉಪಾಧ್ಯಾಯರಾದ ಬಿ. ಪಕೀರ ಮಾಸ್ತರರಿಗೆ ಕಳೆದ ಎಡ್ಯುಕೇಶನಲ್ ಎಕ್ಸಿಬಿಶನಿನಲ್ಲಿ ಬಂಟವಾಳದ ನೆರೆಯ ಸಮಯ ಹೇಗಿತ್ತೆಂಬ ಪಟವನ್ನೂ ಪ್ರಾಕೃತಿಕ ಲಕ್ಷಣಗಳನ್ನು ತೋರಿಸಿದ ಆವೆ ಮಣ್ಣಿನ ಆಕೃತಿಗೂ ಕಾರಂಜಿ ಗುಡ್ಡೆಯ ಆಕೃತಿಗೂ ಎರಡು ಸರ್ಟಿಫಿಕೇಟುಗಳು ದೊರೆತಿವೆ.

ಇಲ್ಲಿಯ ಟೆಂಪಲ್ ಸೆಕೆಂಡರಿ ಶಾಲೆಯನ್ನು ಸರಿಯಾದ ಬಿ ಎ. ಎಲ್. ಟಿ. ಹೆಡ್ ಮಾಸ್ತರರನ್ನೂ ಇತರ ಮಾಸ್ತರರನ್ನೂ ಇಟ್ಟು ಅಭಿವೃದ್ಧಿಮಾಡಬೇಕೆಂದು ನಿಶ್ಚಯಿಸಿರುತ್ತಾರೆ.

ತಲಪಾಡಿ:— ಇಲ್ಲಿಯ ದೇವಸ್ಥಾನದಲ್ಲಿ ಇದೇ ತಾರೀಕು ೧೩ರಲ್ಲಿ ಧ್ವಜಾರೋಹಣ, ಈ ಸಮಯದಲ್ಲಿ ಇಲ್ಲಿ ಪ್ರತಿ ವರುಷವೂ ಕೋಳಿಯ ಜೂಜಾಟವು ನಡಿಯುತ್ತದೆ. ಈ ವರುಷ ತಲಪಾಡಿಯ ೨ ಗುತ್ತಿನವರು ಶರ್ತದ ಮೇಲೆ ಜೂಜ್ಯಾಟವನ್ನು ಮಾಡಲಿಕ್ಕಿದ್ದಾರೆ. ಒಂದು ಸಾವಿರ ಕೋಳಿ ತಯಾರಾಗಿದೆ. ಇನ್ನೊಂದು ಕಡೆಯಲ್ಲಿ ಸುಮಾರು ೮೦೦ ಕೋಳಿ ತಯಾರಾಗಿದೆ. ಆದುದರಿಂದ ಇದನ್ನು ನೋಡುವುದಕ್ಕಾಗಿ ಜನಸಮೂಹವು ವಿಶೇಷವಾಗಿ ಕೂಡಿಬರುವುದು.

ಮಂಜೇಶ್ವರ:— ಮಾರ್ಚಿ ತಾರೀಕು ೨೦ ಹತ್ತಿರ ಬಂತು ಆದರೂ ಇಲ್ಲಿಯ ದೇವಸ್ಥಾನದ ಆಡಳಿತೆಯವರು ಸ್ಕೀಮಿನ ಪ್ರಕಾರ ಯಾವ ಒಂದನ್ನು ಮಾಡಿದ್ದು ಕಂಡು ಬರುವುದಿಲ್ಲ. ಒಟ್ಟಾರೆ ಗೌಡ ಸಾರಸ್ವತ ವರ್ಗದ ದೇವಸ್ಥಾನವಾದ ಶ್ರೀಮದನಂತೇಶ್ವರ ದೇವಸ್ಥಾನವು ಸರಕಾರಿ ವರ್ಗಕ್ಕೆ ದಾಖಲಾಗುವ ಕಾಲವು ಹತ್ತಿರ ಬಂತೆಂದು ಕಾಣುತ್ತದೆ. ಗೌಡ ಸಾರಸ್ವತರಲ್ಲಿ ಬಹಳ ಬುದ್ಧಿವಂತರೂ, ವಿದ್ಯಾವಂತರೂ ಇದ್ದು ಈ ದೇವಸ್ಥಾನಕ್ಕೆ ಈ ತರದ ದುಸ್ಥಿತಿಯು ಬರುವದೆಂದು ಹೇಳಿದರೆ ಕಾಲಮಹಿಮೆಯಂತಲೇ ಹೇಳಬೇಕಾಗಿದೆ.

ಕುಂಬಳೆ:— ಇಲ್ಲಿಯ ಬೋರ್ಡ ಎಲಿಮೆಂಟರಿ ಶಾಲೆಯಲ್ಲಿ ಹುಡುಗರ ಸಂಖ್ಯೆಯು ೧೮೦ ಇದೆ. ಆದರೆ ಇವರಲ್ಲಿ ಇರಬೇಕಾದ ಉಪಾಧ್ಯಾಯರ ಸಂಖ್ಯೆಯು ಬಹಳ ಕಡಿಮೆ ಇದೆ. ಮಂಗಳಪಾಡಿ ಶಾಲೆಯಲ್ಲಿ ಹುಡುಗರ ಸಂಖ್ಯೆಯು ಕಡಿಮೆ ಇದ್ದರೂ ೬ ಮಂದಿ ಇರಬೇಕಾದ ಉಪಾಧ್ಯಾಯರು ಇರುತ್ತಾರೆ. ಆದುದರಿಂದ ಮಂಗಳಪಾಡಿ ಶಾಲೆಯಿಂದ ಈ ಶಾಲೆಗೆ ಒಬ್ಬರಿಬ್ಬರು ಇರಬೇಕಾದ ಉಪಾಧ್ಯಾಯರನ್ನು ವರ್ಗಾಯಿಸಿದರೆ ಶಾಲೆಯ ಶಿಕ್ಷಣವು ಒಳ್ಳೇದಾಗುತ್ತಿತ್ತು.

ಇಲ್ಲಿಯ ಬಾಲಿಕಾ ಪಾಠಶಾಲೆಯಲ್ಲಿ ಬರುವ ಜೂನ್ ತಿಂಗಳಿಂದಾದರೂ ೫ನೇ ತರಗತಿಯನ್ನು ತೆರೆದರೆ ಉತ್ತಮವಿತ್ತು.

ಬೇಕಲ:— ಇಲ್ಲಿ ಬೋರ್ಡಿನವರು ಒಂದು ಜೂನಿಯರ್ ಎಲಿಮೆಂಟರಿ ಶಾಲೆಯನ್ನು ತೆರೆದರೆ ಬಡ ಮಕ್ಕಳು ೫ನೇ ದರ್ಜೆಯ ವರೆಗೆ ವಿದ್ಯೆಯನ್ನು ಸಂಪಾದಿಸುತ್ತಿದ್ದರು. ಐಶ್ವರ್ಯವಂತರ ಮಕ್ಕಳು ಕಾಸರಗೋಡಿಗೆ ಹೋಗಿ ಕಲಿಯುತ್ತಿದ್ದಾರೆ. ಆದರೆ ಅವರ ಸಂಖ್ಯೆಯು ಕಡಿಮೆ ಬಡ ಮಕ್ಕಳ ಸಂಖ್ಯೆಯೇ ಹೆಚ್ಚಾಗಿದೆ. ಜೂನಿಯರ್ ಎಲಿಮೆಂಟರಿ [illegible]

ಕುಂಜತ್ತೂರು:— ಇಲ್ಲಿಯ ಶಾಲೆಯಲ್ಲಿ ಈಗ ೧೨೫ ಮಂದಿ ಹುಡುಗರು ಇರುತ್ತಾರೆ. ನಾಲ್ಕನೇ ದರ್ಜೆಯ ವರೆಗೆ ಕ್ಲಾಸುಗಳಿವೆ. ಉಪಾಧ್ಯಾಯರು ಇಬ್ಬರೇ ಇದ್ದಾರೆ. ಹುಡುಗರ ಸಂಖ್ಯೆಯು ಬಹಳ ಕಡಿಮೆ ಇರುವ ಉದ್ಯಾವರ ಶಾಲೆಯಲ್ಲಿ ಮೂವರು ಇರಬೇಕಾದ ಉಪಾಧ್ಯಾಯರನ್ನು ಇಡುವುದರ ಬದಲಾಗಿ ಅಲ್ಲಿಯ ಒಬ್ಬ ಉಪಾಧ್ಯಾಯರನ್ನಾದರೂ ವರ್ಗಾಯಿಸಿದರೆ ಆಗುತ್ತಿತ್ತು. ಹೆಡ್ ಮಾಸ್ತರರು ಬೋರ್ಡ ಪ್ರೆಸಿಡೆಂಟರಿಗೆ ಅನೇಕ ಮನವಿ ಮಾಡಿದರೂ, ಊರಿನವರು ಮನವಿ ಮಾಡಿದರೂ ಇಷ್ಟರ ವರೆಗೆ ಉಪಾಧ್ಯಾಯರನ್ನು ಕಳುಹಿಸಿದ್ದು ಕಂಡು ಬರುವುದಿಲ್ಲ. ಹುಡುಗರಿಲ್ಲದ ಶಾಲೆಗೆ ಉಪಾಧ್ಯಾಯರನ್ನು ಹೆಚ್ಚಿಗೆ ಕೊಡುವುದೂ, ಮಕ್ಕಳು ಹೆಚ್ಚಾಗಿರುವ ಶಾಲೆಗೆ ಉಪಾಧ್ಯಾಯರ ಸಂಖ್ಯೆಯನ್ನು ಕಡಿಮೆ ಮಾಡುವುದೂ ಒಂದು ಪದ್ಧತಿಯೆ ಆಗಿದೆ. ಒಟ್ಟಾರೆ ಬೋರ್ಡಿನವರು ಶಾಲೆ ಇಟ್ಟಿದ್ದಾದರೆ ಸಾಕು. ಮತ್ತು ಅದರ ಸ್ಥಿತಿಯು ಹ್ಯಾಗೂ ಆಗಲಿ.

ಸಂಪಾಜೆ:— ದಕ್ಷಿಣಕನ್ನಡ ಗೌಡ ವಿದ್ಯಾವರ್ಧಕ ಸಂಘದ ೯ನೇ ಆಡಳಿತ ಸಭೆಯು ಪುತ್ತೂರು ಬಲ್ನಾಡು ಕಟ್ಟಮನೆ ಸಂಕಪ್ಪ ಗೌಡರಲ್ಲಿ ತಾ. ೨೮-೨-'೨೫ನೇ ಶನಿವಾರ ಹಗಲು ಗಂಟೆ ೧೨ಕ್ಕೆ ಜರಗಿತು. ಸಭೆಗೆ ಅಧ್ಯಕ್ಷರು ಮತ್ತು ಆಡಳಿತ ಮಂಡಳಿಯವರ ಪೈಕಿ ೭ ಜನರು ಕೂಡ ಹಾಜರಿದ್ದುದಲ್ಲದೆ, ಸ್ವಜಾತಿ ಬಂಧುಗಳು ಸುಮಾರು ೩೦ ಮಂದಿ ಮಹನೀಯರು ಸಹ ನೆರೆದಿದ್ದರು. ೧೫ ಜನ ಹೊಸ ಮೆಂಬರರಾಗಿ ರೂ. ೪೨೫ ವಾಗ್ದಾನವನ್ನು ಮಾಡಿ ಮನವಿ ಪತ್ರಗಳನ್ನು ಬರಕೊಂಡಿರುವರು. ಕಂತಿನ ಹಣ ರೂ. ೬೯ ವಸೂಲು ಬಂದವರಲ್ಲಿ ವಿದ್ಯಾರ್ಥಿ ಭವನದ ೬ ತಿಂಗಳ ಬಾಡಿಗೆ ರೂ. ೩೩ ಸಲಾಯಿಸಿ ಮಿಕ್ಕುಳಿದ ಐವಜನ್ನು ಪುತ್ತೂರು ವರ್ತಕರ ಸಹಕಾರ ಸಂಘದಲ್ಲಿ ನಿರಖು ಠೇವಣಾತಿಯಾಗಿ ಇಡುವಂತೆ ಕಾರ್ಯದರ್ಶಿಯವರ ಸ್ವಾಧೀನ ಕೊಡಲಾಯಿತು. ಮುಂದಿನ ಸಭೆಯು ತಾ. ೨೯-೩-'೨೫ನೇ ಆದಿತ್ಯವಾರ ಕಡಬ ಕೋಡಿಂಗಳ ಬೋರ್ಡು ಶಾಲೆಯಲ್ಲಿ ಹಗಲು ಗಂಟೆ ೩ಕ್ಕೆ ಜರಗಿಸುವುದೆಂತ ನಿರ್ಣಯಿಸಲಾಗಿದೆ. ಸಂಘದ ಮೆಂಬರರೂ ಅಭಿಮಾನಿಗಳೂ ಸರ್ವರೂ ದಯಮಾಡಿ ಬರಬೇಕಾಗಿ ವಿನಂತಿ.

ಪತ್ರವ್ಯವಹಾರ.

ಅಯ್ಯಾ,

'ರೆಡ್ಡಿಯವರ ತುತ್ತೂರಿ' ಎಂಬ ಶಿರೋನಾಮದಿಂದ ಕಂಠೀರವನು ತನ್ನ ೩-೩-'೨೫ನೇ ಸಂಚಿಕೆಯಲ್ಲಿ ಬರೆದ ಅಗ್ರಲೇಖದ ಯುಕ್ತಾಯುಕ್ತತೆಯ ಕುರಿತು ಕೆಲವು ಮಾತುಗಳನ್ನು ವಾಚಕರ ಮುಂದಿಡುವುದು ಅಗತ್ಯವೆಂದು ನಂಬುತ್ತೇನೆ.

ಶ್ರೀಯುತ ರೆಡ್ಡಿಯವರು ಮದರಾಸಿನ 'ಹಿಂದೂ' ಎಂಬ ಇಂಗ್ಲಿಷ್ ಪತ್ರಿಕೆಯಲ್ಲಿ ತನ್ನ ಮೆನಿಫೆಸ್ಟೋವನ್ನು ಪ್ರಕಟಿಸಿರುವರೇ ಹೊರತು ಕನ್ನಡ ಪತ್ರಿಕೆಗಳಲ್ಲಲ್ಲ; ಹಾಗೂ ದಕ್ಷಿಣಕನ್ನಡದ ಕಂಠೀರವಾದಿ ಪತ್ರಿಕೆಗಳಲ್ಲಲ್ಲ. ಹಿಂದೂ ಪತ್ರಿಕೆಯನ್ನೋದುವ ದಕ್ಷಿಣ ಕನ್ನಡಿಗರೆಲ್ಲರೂ ರೆಡ್ಡಿಯವರಾರೆಂದು ಸಾಮಾನ್ಯವಾಗಿ ತಿಳಿಯದಿರರು. ಹಾಗೂ ದಕ್ಷಿಣ ಕನ್ನಡಿಗರಿಗೆ ಎ. ಬಿ. ಸೆಟ್ರ ಪರಿಚಯವು ರೆಡ್ಡಿಯವರ ಮೂಲಕ ಆಗ ಬೇಕೆಂದಿಲ್ಲ. ಆದರೂ ಸಂಯುಕ್ತ ರಾಷ್ಟ್ರೀಯ ಪಕ್ಷದ ಪ್ರಾಮುಖ್ಯ ಮೆಂಬರರಲ್ಲೊಬ್ಬರಾದ ಇವರು ದಕ್ಷಿಣ ಕನ್ನಡದಿಂದ ತಮ್ಮ ಪಕ್ಷಕ್ಕೆ ಇನ್ನೊಬ್ಬ ಮೆಂಬರರು ಬಂದು ಸೇರಲೆಂಬ ಲವಲವಿಕೆಯಿಂದ, ಸಂತೋಷದಿಂದ, ತನ್ನ ಪ್ರಾರ್ಥನೆಯ ಮೂಲಕ, ನ್ಯಾಶನಲಿಸ್ಟ್ ಪಕ್ಷೀಯ ಉಮೇದ್ವಾರರಾದ ಸೆಟ್ರಿಗೆ ಏನಾದರೂ ಸಹಾಯವಾಗುವುದಾದರೆ ಆಗಲೆಂದು ಈ ರೀತಿ ಪ್ರಕಟಿಸಿದರಲ್ಲದೆ ಬೇರೆಯಲ್ಲ. ಇದನ್ನು ವಿಶೇಷವಾಗಿ ಔಪಚಾರಿಕವಾಗಿಯೇ ತೆಗೆದುಕೊಳ್ಳುವುದು ಉಚಿತವಿತ್ತು. ಕಂಠೀರವನಿಗೆ ಮಾತ್ರ ಇದು ವಿಶೇಷ ಶಬ್ದಮಾಡುವ ತುತ್ತೂರಿಯಾಯಿತು. ಹಾಗಾದರೆ ಕಂಠೀರವನ ಈ ಅಗ್ರಲೇಖಕ್ಕೇನೆನ್ನಬೇಕು? ಡಾ। ರಾಮರಾಯರಿಗೆ, ಮಿ। ಹೆಗ್ಡೆಯವರೂ, ಸೆಟ್ರು ಸಮಾನ ಸ್ನೇಹಿತರಿರಬಹುದಾದುದರಿಂದ ಅವರು ಈ ವಿಷಯ ಮೌನ ಧಾರಣೆ ಮಾಡಿರುವುದು ಸ್ವಾಭಾವಿಕವೂ ನ್ಯಾಯವೂ ಆಗಿದೆ. ಇದರಲ್ಲೇನೋ ವಿಶೇಷ ಒಳಗುಟ್ಟಿರುವುದೆಂದು ಭಾವಿಸಲಿಡೆಯಿರುವುದು ಹೇಗೆ? ಈ ವಿಷಯದಲ್ಲಿ ರಾಮರಾಯರ ಮಾನಸಿಕವು ಬೇರೆ, ಕಂಠೀರವದ ಮಾನಸಿಕವು ಬೇರೆ.

ಕಂಠೀರವನು ಪ್ರಕಟಿಸಿರುವ ರೆಡ್ಡಿಯವರ ಮೆನಿಫೆಸ್ಟೋವಿನ ಸಾಮಾನ್ಯ ಅಭಿಪ್ರಾಯವನ್ನೇ ವಾಚಕರು ಚನ್ನಾಗಿ ಓದಿ ನೋಡಿ, ಅದೊಂದು ವಿಶೇಷ ಶಬ್ದಮಾಡುವ ಹೊಸ ಪರಿಯ ತುತ್ತೂರಿಯೋ, ಅಥವಾ ಕಂಠೀರವನು ತನ್ನ ಪಿತೂರಿಯ ತುತ್ತೂರಿಯನ್ನೂದುವುದಕ್ಕಾಗಿ ಈ ಸರಳ ಮೆನಿಫೆಸ್ಟೋವನ್ನು ತುಪ್ಪಾನಿಮಿತ್ತವಾಗಿ ಮಾಡಿಕೊಂಡುದೋ ಎಂಬುದು ವಿಶದವಾಗದಿರದು.

'ತನ್ನ ಕಾಲಡಿಯಲ್ಲವೇ' ಎಂಬುದರಿಂದಲೋ ಅಥವಾ ಇನ್ನಿತರ ಕಾರಣಗಳಿಂದಲೋ ಕಾಲ ಬಳಿಯಿರುವುದನ್ನೇ ಕಣ್ಮುಚ್ಚಿ ಅಲ್ಲಗಳೆದರೆ, ಕಾಲ ಬಳಿಯ ಸಂಗತಿಗಳನ್ನೇ ದೂರದವರಿಂದ ತಿಳಿದುಕೊಳ್ಳುವ ಕಾಲ ಬಾರದಿರುವುದಿಲ್ಲ. ಎ. ಬಿ. ಸೆಟ್ರು ಯಾರಾಗಿದ್ದರೆಂದು ಕಂಠೀರವನು ತಿಳಿಯನೆಂದರೂ, ನವಯುಗದ ವಾಚಕರು ಅರಿಯದಿರಲಾರರು. ಬರಿ 'ಸರ್' 'ರಾವ್ ಬಹದ್ದೂರ್' 'ಖಾನ್ ಬಹದ್ದೂರ್' 'ಆ ಆಫೀಸರ್ ಈ ಆಫೀಸರ್' ಎಂಬ ಮಾತ್ರಕ್ಕೆ ಓಟು ಕೊಡುವುದಕ್ಕಿಂತಲೂ ಬರಿ ನ್ಯಾಶನಲಿಸ್ಟ್ ಎಂದ ಮಾತ್ರಕ್ಕಾದರೂ ಓಟು ಕೊಡುವುದು ಎಷ್ಟೋಂದು ಸ್ತುತ್ಯಾರ್ಹವು. ಬರೇ ನ್ಯಾಶನಲಿಸ್ಟೆಂದ ಮಾತ್ರಕ್ಕೆ ಓಟು ಕೊಡುವುದು ಬುದ್ಧಿಶೂನ್ಯತೆಯಾ[illegible], ಬರೇ ಸರಕಾರದ ಬಿರುದು ಪಡೆದವನೆಂದ ಮಾತ್ರಕ್ಕೆ ಓಟು ಕೊಡುವುದನ್ನೇನೆಂದು ಕಂಠೀರವನು ಕರೆಯುವನು. ಈ ಬುದ್ಧಿಶೂನ್ಯತೆಯಾದರೂ ನಮ್ಮ ಓಟರರಲ್ಲಿದ್ದರೆ ಅದೊಂದು ದೇಶದ ಸುದೈವವೆನ್ನಬೇಕಲ್ಲವೇ? ಸರ್ವ ವಿದಿತವಾಗಿ ಸೆಟ್ರು ನ್ಯಾಶನಲಿಸ್ಟರಾದುದು, ಅವರು ಆ ಪಕ್ಷದ ಪರವಾಗಿ ಉಮೇದ್ವಾರರಾದಂದಿನಿಂದೆಂಬುದನ್ನು ಬೇರೆ ಹೇಳಬೇಕೆ? ಅವರು ಯಾವಾಗಿಂದ ನ್ಯಾಶನಲಿಸ್ಟರೆಂಬುದು ನವಯುಗವು ಹೊರಡುವ ಮೊದಲೇ ಹಲ ಕೆಲವರು ತಿಳಿದಿರುವರು. ಯಾಕೆ? ಕಂಠೀರವನರಿಯನೆ? ನವಯುಗವು ಹೊರಡಿದಂದಿನಿಂದಂತೂ ಅವರ ಅಭಿಪ್ರಾಯಗಳೆಲ್ಲಾ ಸರ್ವ ವಿದಿತವಷ್ಟೆ. ಈ ವಿಷಯ ಕಂಠೀರವನಿಗೆ ಹೆಚ್ಚಿನ ಅನುಭವ ಬೇಕಾದರೆ ನವಯುಗದ ಹಿಂದಿನ ಸಂಚಿಕೆಗಳನ್ನೆಲ್ಲಾ ಸ್ವಲ್ಪ ವಿಶಾಲ ದೃಷ್ಟಿಯಿಂದ ಓದಿ ನೋಡುವುದು ಉಚಿತವಲ್ಲವೆ?

ರೆಡ್ಡಿಯವರಿಗೆ ಸೆಟ್ಟರು ನ್ಯಾಶನಲಿಸ್ಟರೆಂದರೊಂದೇ ಸಾಕು ಬೇರೇನೂ ಬೇಡ. ನಮ್ಮ ಜಿಲ್ಲೆಯಲ್ಲಿ ತಾನು ನ್ಯಾಶನಲಿಸ್ಟನೆಂದು ಸರ್ವ ವಿದಿತವಾಗಿ ಹೇಳುವವರು ಅನೇಕರಿರರು. ಈ ಸಂದರ್ಭದಲ್ಲಿ ಎ. ಬಿ. [illegible] ನಿಂತಿರುವುದು ನಿಜವಾಗಿಯೂ ದಕ್ಷಿಣಕನ್ನಡಕ್ಕೆ ಅಭಿಮಾನಾಸ್ಪದವಾದ ಸಂಗತಿಯಾಗಿದೆ.

ಈಗ ಒಂದು ಸ್ಥಾನಕ್ಕೆ ಇಬ್ಬರಾದರೂ ಉಮೇದ್ವಾರರಾಗಿರುವುದು ಉಚಿತ. ಅದರಲ್ಲೂ ಆದರಿಬ್ಬರೂ ಒಂದೇ ಜಾತಿ ಗೃಹಸ್ಥರಾದರೆ ಮತ್ತೂ ಹಿತ, ಸಮೀಪ ಸಂಬಂಧಿಗಳಾದರೆ ಇನ್ನಷ್ಟು ಹಿತ, ಇದೇಕೆಂದು ವಾಚಕರೆಲ್ಲರಿಗೂ ವಿಶೇಷವಾಗಿ ಹಾಡದ ಸಮಾಜಕ್ಕೂ ತಿಳಿಯದಿರದು. ಚುನಾವಣೆಯಲ್ಲದೆ ಮೆಂಬರರಾದರೂ ಕಂಠೀರವನೆನ್ನುವ ಭಾರ, ಭೀತಿ, ಸಂಬಂಧಗಳಿಗೆ ಹೋಗುವರೆ? ಆ ಮೆಂಬರನು ನ್ಯಾಶನಲಿಸ್ಟನಾದ ಪಕ್ಷಕ್ಕೆ ಸ್ವಾತಂತ್ರ್ಯ ಸಮರದ ಈ ಸಮಯದಲ್ಲಿ ಆತನ ಉಪಯೋಗ ಎಷ್ಟಿದೆ ಎಂಬುದನ್ನು ವಾಚಕರಲ್ಲಿ ಹಲ ಕೆಲವರಾದರೂ ಅರಿಯದಿರರು. ಅರಿಯದಿದ್ದರೂ ಕಂಠೀರವನು ಸುಮ್ಮನಿರನೆನ್ನುವ.

ಇತಿ, ಓರ್ವ ನಿಷ್ಪಕ್ಷಪಾತಿ.

ಕಾಸರಗೋಡು ತಾಲೂಕು ಬೋರ್ಡು ನೋಮಿನೇಟೆಡ್ ಮೆಂಬರುಗಳ ಚುನಾವಣೆಯ ವಿಷಯ ಡಿಸ್ಟ್ರಿಕ್ಟ ಬೋರ್ಡ ಪ್ರೆಸಿಡೆಂಟರಿಗೆ ಸೂಚನೆ.

ಈ ತಾಲೂಕು ಬೋರ್ಡಿನ ೧೬ ಮಂದಿ ಮೆಂಬರರಲ್ಲಿ ೧೨ ಮಂದಿ ಮೆಂಬರರು ಓಟರರಿಂದ ಚುನಾಯಿಸಲ್ಪಡುವವರು. ಉಳಿದ ನಾಲ್ಕು ಮಂದಿಯನ್ನು ಡಿಸ್ಟ್ರಿಕ್ಟ ಬೋರ್ಡ ಪ್ರೆಸಿಡೆಂಟರು ನೇಮಕಮಾಡುವರು. ಈ ನೇಮಕ ಮಾಡುವ ಮೆಂಬರರಲ್ಲಿ ಒಬ್ಬರು ಕ್ರೈಸ್ತರೂ, ಒಬ್ಬರು ಆದಿದ್ರಾವಿಡರೂ, ಒಬ್ಬರು ಮಹಮ್ಮದೀಯರೂ, ಒಬ್ಬರು ಹಿಂದುಳಿದ ಜಾತಿಯವರೂ ಆಗಬೇಕು ಎಂಬ ಸರಕಾರಿ ಕ್ರಮವಿದೆ.

ಕಾಸರಗೋಡು ತಾಲೂಕು ಬೋರ್ಡು ೫-೬ ವರುಷಗಳಾದರೂ ಈ ತಾಲೂಕು ಬೋರ್ಡಿನಲ್ಲಿ ಕ್ರೈಸ್ತ ಮೆಂಬರರು ಒಬ್ಬರೇ ಒಬ್ಬರು ಇಲೆಕ್ಷನಿಗೆ ಉಮೇದವಾರರಾಗಿ ನಿಂತದ್ದು ಕಂಡುಬರುವದಿಲ್ಲ. ಡಿಸ್ಟ್ರಿಕ್ಟ ಬೋರ್ಡ ಪ್ರೆಸಿಡೆಂಟ ಕ್ರೈಸ್ತ ಮೆಂಬರರನ್ನು ನೇಮಿಸಿದ್ದೂ ಇಲ್ಲ. ಯೋಗ್ಯರಾದ ಕ್ರೈಸ್ತ ಮೆಂಬರರು ಸಿಕ್ಕಲಿಕ್ಕಿಲ್ಲವೆಂದು ಹೇಳಲಿಕ್ಕೆ ಕಾರಣವಿಲ್ಲ. ಯಾಕೆಂದರೆ ಎಷ್ಟೋ ಮಂದಿ ಕ್ರೈಸ್ತ ವಿದ್ಯಾವಂತರೇ ಇರುತ್ತಾರೆ. ಪ್ರೆಸಿಡೆಂಟರ ಲಕ್ಷ್ಯ ಆಚೆಗೆ ಹೋಗಲಿಲ್ಲವೆಂದೆ ಹೇಳಬೇಕಾಗಿದೆ. ಮಹಮ್ಮದೀಯ ಮೆಂಬರರು ಚುನಾವಣೆಯಾಗಿ ನಿಂತವರು ಇಷ್ಟರ ವರೆಗೆ ನಾಲ್ಕು ಮಂದಿ ಇದ್ದರೂ ಈ ಸಾರಿಯೂ ಅನೇಕರು ಉಮೇದ್ವಾರರಾಗಿ ನಿಂತಿರುತ್ತಾರೆ. ಆದ್ದರಿಂದ ತಿರಿಗಿ ಇನ್ನೊಬ್ಬ ಮಹಮ್ಮದಿಯ ಮೆಂಬರರನ್ನು ನೇಮಿಸುವದು ಅಗ್ಯತವಿಲ್ಲ. ಇತರ ಹಿಂದೂಜಾತಿಯವರು ಅನೇಕ ಮಂದಿ ಉಮೇದ್ವಾರರು ಇರುವಾಗ ಮಹಮ್ಮದೀಯರ ಪ್ರತಿನಿಧಿಗಳು ಇರಲಿಕ್ಕೆ ಅಡ್ಡಿ ಬಂದೀತೆಂಬದಕ್ಕಾಗಿ ಒಬ್ಬ ಮಹಮ್ಮದೀಯ ಮೆಂಬರರನ್ನು ನೇಮಿಸಬೇಕೆಂಬ ಕಾಯಿದೆಯನ್ನು ಮಾಡಿದ್ದಾಗಿರುತ್ತದೆ. ಈ ತಾಲೂಕಿನಲ್ಲಿ ಎಷ್ಟೋ ಮಂದಿ ವಿದ್ಯಾವಂತರೂ, ಐಶ್ವರ್ಯವಂತರೂ ಆದ ಮಹಮ್ಮದೀಯರು ಅನೇಕ ಮಂದಿ ಇರುತ್ತಾರೆ. ಮಾತ್ರವಲ್ಲ ಮಹಮ್ಮದೀಯ ಓಟರುಗಳು ಕಾಲುವಾಸಿ ಎಂಬಂತೆ ಇರುತ್ತಾರೆ. ಆದುದರಿಂದ ಮಹಮ್ಮದೀಯ ಮೆಂಬರರನ್ನು ಈ ತಾಲೂಕಿನ ಮಟ್ಟಿಗೆ ನೇಮಿಸುವುದು ಅಗತ್ಯಕಾಣುವದಿಲ್ಲ.

ಆದಿದ್ರಾವಿಡರಲ್ಲಿ ಒಬ್ಬರನ್ನು ಇದೇ ತಾಲೂಕಿನಿಂದಲೆ ಚುನಾಯಿಸಬೇಕು. ಕ್ರೈಸ್ತ ಮತಕ್ಕಾಗಲೀ, ಬ್ರಹ್ಮ ಸಮಾಜಕ್ಕಾಗಲಿ, ಆರ್ಯಸಮಾಜಕ್ಕಾಗಲಿ ಸೇರಿದ ಆದಿದ್ರಾವಿಡರನ್ನು ಆದಿದ್ರಾವಿಡ ಮೆಂಬರರೆಂತ ನೇಮಿಸಿದರೆ ಅದಕ್ಕೆ ಅರ್ಥವಿಲ್ಲ. ಯಾಕೆಂದರೆ ಒಬ್ಬನು ಒಂದು ಮತವನ್ನು ಬಿಟ್ಟು ಬೇರೆ ಮತಕ್ಕೆ ಸೇರಿದರೆ ಅವನನ್ನು ಮತ್ತೂ ಮೊದಲನೇ ಮತದವನೆಂದು ಎಣಿಸಲಾಗುವುದಿಲ್ಲ. ಆದುದರಿಂದ ಇದೇ ತಾಲೂಕಿನಲ್ಲಿರುವ ಮುಂಡಾಲ ಬಾಕುಡ, ಮೇರ, ಕೊರಗ, ಮಾರಿ ಮುಗ್ಗೇರ ಈ ವಂಶದವರ ಪೈಕಿ ಜಾತಿಯಲ್ಲಿಯೇ ಇರುವವನನ್ನು ನೇಮಿಸಬೇಕಾಗಿದೆ. ಇಲ್ಲಿ ಉದ್ಯಾವರ ಗ್ರಾಮದಲ್ಲಿ ಒಳ್ಳೇ ಬುದ್ಧಿವಂತರೂ, ತಕ್ಕಮಟ್ಟಿಗೆ ಐಶ್ವರ್ಯವಂತರೂ, ಜಾತಿ ಧರ್ಮಾಚಾರಕ್ಕೆ ಸರಿಯಾಗಿ ನಡಿಯುವವರೂ ಇರುತ್ತಾರೆ, ಅಂಥವರನ್ನು ನೇಮಿಸಬಹುದು. ಅದಲ್ಲದೆ ತಾಲೂಕಿನ ಇತರ ಭಾಗದಲ್ಲಿ ಯೋಗ್ಯರಾದವರು ಇರಲಿಕ್ಕೂ ಸಾಕು.

ಇನ್ನು ಬೇಕ್‌ವರ್ಡ ಜಾತಿಯವರಲ್ಲಿ ಚಪಟೆಗಾರರು, ರಾಮರಾಜಕ್ಷತ್ರಿಯರು, ಮರಾಟಿಯವರು, ಕುಂಬಾರರು, ಗಾಣಿಗರು, ಮುಕ್ಕವರು, ಮೊಗೇರರು, ಸಾಲಿಯವರು, ಬಿಲ್ಲವರು, ತೀಯರರು, ಇನ್ನು ಇತರ ಅನೇಕ ಜಾತಿಯವರು ಇರುತ್ತಾರೆ. ಇವರಲ್ಲಿ ಬಿಲ್ಲವರೂ, ತೀಯರರೂ ಉಮೇದವಾರರಾಗಿ ನಿಲ್ಲುತ್ತಾರೆ. ಆದರೆ ಈ ತಾಲೂಕಿನ ಮಟ್ಟಿಗೆ ಇಷ್ಟರ ವರೆಗೆ ಕಳೆದ ೫-೬ ವರುಷಗಳಲ್ಲಿ ನಿಂತದ್ದು ಕಂಡುಬರುವುದಿಲ್ಲ. ಆದರೆ ಬಿಲ್ಲವರ ಪರವಾಗಿ ಕೆ. ಎಸ್. ಅಮ್ಮು ಎಂಬವರು ೫-೬ ವರುಷಗಳಿಂದ ನೇಮಿಸಲ್ಪಟ್ಟ ಮೆಂಬರರಾಗಿದ್ದರು. ಆದುದರಿಂದ ಈ ಸಾರಿ ಬಿಲ್ಲವ ಜಾತಿಯವರನ್ನು ಬಿಟ್ಟು ಉಳಿದ ಬೇಕ್‌ವಾರ್ಡ ಜಾತಿಯವರಲ್ಲಿ ಯಾರನ್ನಾದರೂ ನೇಮಿಸುವುದು ಒಳ್ಳೇಯದು. ಕುಂಬಾರರು ಪ್ರತಿಯೊಂದು ತಾಲೂಕಿನಲ್ಲಿಯೂ ಹಿಂದೆ ಬಿದ್ದಿರುತ್ತಾರೆ. ಅವರನ್ನು ಕೇಳುವವರೇ ಇಲ್ಲ. ಯಾವ ತಾಲೂಕು ಬೋರ್ಡಿನಲ್ಲಿಯೂ ಕುಂಬಾರ ಮೆಂಬರರೇ ಕಂಡುಬರುವುದಿಲ್ಲ.

ಇನ್ನು ಮಹಮ್ಮದೀಯ ಮೆಂಬರರಲ್ಲಿ ಅನೇಕರು ಓಟರರಿಂದಲೇ ಚುನಾಯಿಸಲ್ಪಡುವುದರಿಂದ ಉಳಿದ ಇನ್ನೊಂದು ಮೆಂಬರಿಕೆಯನ್ನು ಬೇಕ್‌ವರ್ಡ ಜಾತಿಯವರಲ್ಲಿ ಇನ್ನೊಂದು ಜಾತಿಗೆ ಕೊಡಬಹುದು. ಈ ತಾಲೂಕಿನಲ್ಲಿ ಅನೇಕ ಮಂದಿ ಮುಕ್ಕವರೂ, ಮೊಗೇರರೂ, ಸಾಲಿಯವರೂ ಗಾಣಿಗರೂ ಇರುತ್ತಾರೆ. ಇವರಲ್ಲಿ ಯಾವದಾದರೊಂದು ಜಾತಿಯ ಮೆಂಬರರನ್ನು ಚುನಾಯಿಸಬಹುದು. ಕಳೆದ ೫-೬ ವರುಷಗಳ ವರೆಗೆ ಈ ತಾಲೂಕು ಬೋರ್ಡಿನಲ್ಲಿ ರಾ। ಮಂಜಪ್ಪ ಆಳ್ವರೆಂಬ ಬಂಟ ಮಹಶಯರು ನೇಮಕಪಟ್ಟ ಮೆಂಬರರಾಗಿದ್ದರು. ಆದ್ದರಿಂದ ಎಲ್ಲಾ ತರದ ಸ್ವಾತಂತ್ರ್ಯವೂ, ಐಶ್ವರ್ಯವೂ, ಮರ್ಯಾದೆಯೂ, ಗೌರವವೂ ಇರುವ ನಾಡವ ಬಂಟ ಮಹಶಯರು ಅನೇಕ ಮಂದಿ ಮೆಂಬರರಾಗಿ ಚುನಾಯಿಸಲ್ಪಡುವಾಗ ತಿರಿಗೊಮ್ಮೆ ನಾಡವ ಬಂಟ ಮಹಶಯರನ್ನು ನೇಮಕಪಟ್ಟ ಮೆಂಬರರಾಗಿ ನೇಮಿಸುವುದು ಉಚಿತವಾಗಿ ತೋರುವದಿಲ್ಲ.

ಆದುದರಿಂದ ಮಾನ್ಯ ಡಿಸ್ಟ್ರಿಕ್ಟ ಬೋರ್ಡ ಪ್ರೆಸಿಡೆಂಟರವರು ೪ ಮಂದಿ ನೇಮಕಪಡುವ ಮೆಂಬರರಲ್ಲಿ ಒಬ್ಬ ಕ್ರೈಸ್ತ, ಒಬ್ಬ ಜಾತಿ ಆದಿದ್ರಾವಿಡ ಒಬ್ಬ ಕುಂಬಾರ, ಒಬ್ಬ ಮುಕ್ಕವ, ಮೊಗೇರ ಅಥವಾ [illegible]

ಅನುಕ್ರಮಣಿಕೆ.

ಅಗ್ರಲೇಖ ಪುಟಗಳು.
ಮುಡಿಮನ ಕಮಿಟಿಯು ಪ್ರಸವಿಸಿತು! ೬
ಸ್ಫುಟವಿಚಾರಗಳು— ೬
೧ ಲೋ. ರೆಡಿಂಗ ಸಾಹೇಬರ ಪ್ರವಾಸ ೨ ಬ್ರಿಟಿಷ ಪಾರ್ಲಿಮೆಂಟನಲ್ಲಿ ಸಾಮ್ರಾಜ್ಯ ಒರ್ಡಿನೆನ್ಸ ಬೀಲಿನ ಚರ್ಚೆ—ಮಿ| ಸಕ್ಲಾತ್‌ವಾಲರ ಭಾಷಣ. ೩ ಗಾಂಧಿಜಿಯವರ ಆಗಮನ. ೪ ಸುಧಾರಣಾ ವಿಚಾರಣಾ ಕಮಿಟಿಯ ವರದಿಯ ಮೇಲೆ ಮುಂಬಯಿ ಕೌನ್ಸಿಲಿನ ನಿಷೇಧ. ೫ ರಿಲಿಜಿಯಸ್ ಎಂಡೌಮೆಂಟ್ ಬೀಲಿನ ಖಂಡನೆ ಬಗ್ಗೆ ಶ್ರೀ ಸತ್ಯಮೂರ್ತಿಯವರ ಬೀಲು.
ಮಂಗಳೂರು
ವರ್ತಮಾನಸಂಗ್ರಹಗಳು—
ದಕ್ಷಿಣ ಕನ್ನಡ—, ಬಂಟವಾಳ, ಕಲಬಾಡಿ, ಮಂಜೇಶ್ವರ, ಕುಂಬಳೆ ೭
ಬೇಕಲ, ಕುಂಜಪುತ್ತೂರು, ಸಂಪಾಜೆ ,,
ವಿವಿಧ ಸಮಾಚಾರ ,,
ಪತ್ರವ್ಯವಹಾರ ೧, ೨, ೩, ೪, ೫. ೮
ಪದವು ಶ್ರೀ ಕೃಷ್ಣಾಶ್ರಮ ಶಾಲೆಯ ವರದಿ. ೯
ಕಾಸರಗೋಡು ತಾಲೂಕು ಬೋರ್ಡು ಇಲೆಕ್ಷನ್ ಉಮೇದ್ವಾರರ ಹೆಸರುಗಳು ,,
ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗೋವಧೆ ,,

ಸ್ವದೇಶಾಭಿಮಾನಿ.

ಶಕ ೧೮೪೬ ಫಾಲ್ಗುಣ ಬ| ೩ಯು ಶುಕ್ರವಾರ.

ಮುಡಿಮನ ಕಮಿಟಿಯು ಪ್ರಸವಿಸಿತು!

ಸರ್ ಮುಡಿಮನ ಸಾಹೇಬರ ಅಧ್ಯಕ್ಷತೆಯಲ್ಲಿ ನಡೆಯುತ್ತಿದ್ದ ಸುಧಾರಣಾ-ವಿಚಾರಣಾ-ಕಮಿಟಿಯು ಕಳೆದವಾರ ಪ್ರಸವಿಸಿತು. ಕಮಿಟಿಯ ಪ್ರಸವದ ಫಲಶ್ರುತಿಯನ್ನು ಒಂದೆ ಮಾತಿನಿಂದ ಹೇಳಿಬಿಡುವುದಾದರೆ, ಮೂಲನಕ್ಷತ್ರದ ತೃತೀಯ ಚರಣದಲ್ಲಿ ಜನಿಸಿದ ಮಗುವು ಹೇಗೆ "ಧನನಾಶ"ಕ್ಕೆ ಕಾರಣವಾಗುವುದೆಂದು ಜ್ಯೋತಿಃ ಶಾಸ್ತ್ರವು ಹೇಳುವುದೊ ಹಾಗೆಯೆ ಈ ಮುಡಿಮನ್ ರಿಪೋರ್ಟು ತತ್ಕಾಲಕ್ಕಾದರೂ ಅರ್ಧಲಕ್ಷ ರೂಪಾಯಿಯ ದುರ್ವ್ಯಯಕ್ಕೆ ಕಾರಣವಾಗಿದೆ ಎನ್ನಬೇಕು. ಸುಧಾರಣಾ ಕಮಿಟಿಯಿಂದ ಹಿಂದುಸ್ಥಾನದ ಆಕಾಂಕ್ಷೆಗಳು ಸಫಲವಾದಾವೆಂದು ಯಾರೂ ನಿರೀಕ್ಷಿಸಿರಲಿಲ್ಲ. ಮತ್ತು ಜನತೆಯ ಈ ನಿರೀಕ್ಷಣೆಗನುಗುಣವಾಗಿಯೆ ಕಮಿಟಿಯು ತನ್ನ ವರದಿಯನ್ನು ರಚಿಸಿದೆ ಎಂದ ಮೇಲೆ ಸ್ವರಾಜ್ಯದ ಕಂತುಗಳನ್ನು ಸಿಫಾರಸು ಮಾಡದ ರಿಪೋರ್ಟನ್ನು ಹೊರಪಡಿಸಿದ ಬಗ್ಗೆ ಕಮಿಟಿಯನ್ನು ಈ ಆಧಾರದಿಂದಲಾದರೂ ಯಾರೂ ದೂರಲಿಕ್ಕಿಲ್ಲವೆಂಬುದು ನಿಜ.

ಈ ಪ್ರಸ್ತಾವನೆಯ ಮೇಲಿಂದ ಮತ್ತು ಮುಂಚಿನ ನಿರೀಕ್ಷೆಯ ಮೇಲಿಂದ ಜನರಿಗೆ ಈ ರಿಪೋರ್ಟಿನ ಸಂಗತಿಗಳನ್ನು ತಿಳಕೊಳ್ಳುವ ಆತುರವು ಹುಟ್ಟಲಿಕ್ಕಿಲ್ಲವಾದರೂ, ಅದರ ಮುಖ್ಯಾಂಶಗಳನ್ನು ಹೇಳಿ ಅದರ ಸ್ವರೂಪವನ್ನು ಆವಿಷ್ಕರಿಸುವುದು ನಮ್ಮ ಪತ್ರಕಾರರ ಕರ್ತವ್ಯವಾದ್ದರಿಂದ ಆ ಬಗ್ಗೆ ನಾಲ್ಕು ಮಾತುಗಳನ್ನು ಹೇಳಬೇಕೆಂದಿದ್ದೇವೆ. ಮುಡಿಮನ್ ಕಮಿಟಿಯಲ್ಲಿ ರಿಪೋರ್ಟನ್ನು ಪ್ರಕಟಿಸುವಾಗ ಎರಡು ತಂಡಗಳಾಗಿವೆ. ಬಹುಮತದವರು ಹೊಸ ಸುಧಾರಣೆಗಳ ಕಂತನ್ನು ಸೂಚಿಸುವುದಿಲ್ಲ. ಒಂದೆರಡು ಅಲ್ಪ ಸುಧಾರಣೆಗಳನ್ನು ಮೂಲೆಮೂಲೆಯಲ್ಲಿ ಉಲ್ಲೇಖಿಸಿದ್ದಾರಷ್ಟೆ. ಅಲ್ಪಸಂಖ್ಯಾಕರು ಸುಧಾರಣಾ ಕಾನೂನನ್ನೆ ದುರುಸ್ತಿಪಡಿಸಬೇಕೆಂದು ಹೇಳುವರು. ಈ ಎರಡು ತಂಡಗಳಲ್ಲಿಯ ಮುಖ್ಯ ಅಭಿಪ್ರಾಯವು ಇಷ್ಟು. ಅಲ್ಪ ಸಂಖ್ಯಾಕರು ಯಾವ ಅಭಿಪ್ರಾಯವನ್ನೆ ಪಡಲಿ, ಆದರೆ ಬಹುಪಕ್ಷದವರು ಇನ್ನು ಮುಂದಕ್ಕೆ ಇಷ್ಟು ಬೇಗನೇ ಸ್ವರಾಜ್ಯದ ಕಂತು ಅಗತ್ಯವಿಲ್ಲವೆಂದು ಹೇಳಿ ಹಿಂದಿಸ್ವರಾಜ್ಯದ ದಾರಿಯಲ್ಲಿ ಕಲ್ಲು ಮುಳ್ಳುಗಳನ್ನು ಹೇಗೆ ಹಾಸಿಟ್ಟಿದ್ದಾರೆ, ಎಂದೀ ವಿಷಯದ ಮರ್ಮವು ವಾಚಕರಿಗೆ ತಿಳಿಯಬೇಕಾದರೆ ಈ ಸುಧಾರಣಾ-ಕಮಿಟಿಯ ಪೂರ್ವವೃತ್ತವನ್ನು ಅವರು ಸ್ಥೂಲಮಾನದಿಂದಲಾದರೂ ತಿಳಕೊಳ್ಳುವುದು ಅವಶ್ಯವು.

ಮೊಂಟಫರ್ಡ ಸುಧಾರಣೆಗಳು ಬಂದಾಗಲೆ ಆ ಸುಧಾರಣೆಗಳು ಪೂರ್ಣ ನಿರಾಶಾಜನಕವಾದವುಗಳೆಂದು ಲೋಕಮತವು ಪ್ರಕಟವಾಗಿತ್ತು. ಇಸೆಂಬ್ಲಿಯಲ್ಲಿ ಆ ಕಾಲದ ಸಭಾಸದರು ಮುಂದಿನ ಸುಧಾರಣೆಗಳ ಕಂತನ್ನು ಕೊಡಲು ೧೦ ವರ್ಷಗಳ ಅವಧಿಯನ್ನು ಇಟ್ಟದ್ದು ಅನವಶ್ಯಕ, ಅದ್ದರಿಂದ ಸುಧಾರಣೆಗಳನ್ನು ಪುನಃ ಕೊಡಬೇಕೆಂಬುದಾಗಿ ಒಂದು ಠರಾವನ್ನು ಪಾಸುಮಾಡಿದ್ದರು. ತರುವಾಯ ಈಗಿನ ಹೊಸ ಎಸೆಂಬ್ಲಿಯಲ್ಲಂತೂ ಪಂಡಿತ ಮೋತಿಲಾಲಜಿಯವರು "ರೌಂಡ್‌ಟೇಬಲ ಕೊನ್‌ಫರೆನ್ಸ"ನ್ನು ಸೇರಿಸಬೇಕೆಂಬ ಠರಾವನ್ನು ಪಾಸುಮಾಡಿಸಿಕೊಂಡಿದ್ದಾರೆ. ಈ ರೀತಿಯಿಂದ ವರ್ಷವರ್ಷದಲ್ಲಿ ಲೋಕಮತದ ಅತೃಪ್ತಿಯು ವ್ಯಕ್ತವಾಗುತ್ತಿದ್ದದರಿಂದ ಸರಕಾರಕ್ಕೆ ಸುಧಾರಣೆಗಳ ವಿಷಯವಾಗಿ ತನ್ನ ಪ್ರಯತ್ನವುಕೂಡ ನಡೆದಿದೆ ಎಂದು ತೋರಿಸಲು ಸುಧಾರಣಾ-ವಿಚಾರಣಾ-ಕಮಿಟಿಯ ಕಣ್‌ಕಟ್ಟನ್ನು ಮಾಡಬೇಕಾಗಿ ಬಂತು. ಈ ಕಮಿಟಿಯು ನೇಮಿಸಲ್ಪಟ್ಟಾಗ ವಿಲಾಯತಿಯಲ್ಲಿ ಕೂಲಿಪಕ್ಷವು ಅಧಿಕಾರರೂಢವಾಗಿತ್ತು. ಈಗ ಅದು ಕೂಡ ವಿಸರ್ಜಿತವಾಗಿ ಕಲ್ಲೆದೆಯವರ ಪಕ್ಷವು ಸಾಮ್ರಾಜ್ಯದ ಸೂತ್ರಗಳನ್ನು ನಡಿಸುತ್ತಿದೆ. ಈ ಮೇರೆಗೆ ಮುಂಚಿನ ಚರಿತ್ರೆ ಮತ್ತು ಇಂದಿನ ಪರಿಸ್ಥಿತಿ ಇವುಗಳನ್ನು ಸರಿಯಾಗಿ ಹೋಲಿಸಿ ನೋಡಿದರೆ ಈ ಕಮಿಟಿಯ ಬಹುಮತವು ಸ್ವರಾಜ್ಯದ ಪ್ರಗತಿಯನ್ನು ಖಂಡಿಸುವ ನಮೂನೆಯ ರಿಪೋರ್ಟನ್ನು ಪ್ರಕಟಿಸಿದ್ದು ಏನೂ ಆಶ್ಚರ್ಯವಲ್ಲ.

ಈಗಿನ ಸುಧಾರಣಾ ಕಾನೂನಿನ ಆಡಳಿತದಲ್ಲಿ ಯಾವ ಯಾವ ಕುಂದುಗಳು ತೋರುತ್ತವೆ, ಅದರಲ್ಲಿ ಯಾವ ಯಾವ ಸುಧಾರಣೆಗಳನ್ನು ಮಾಡಬಹುದು ಎಂಬಿತ್ಯಾದಿ ಸಂಗತಿಗಳನ್ನು ವಿಚಾರಿಸುವುದಕ್ಕಾಗಿ ಈ ಕಮಿಟಿಯು ಏರ್ಪಡಿಸಲ್ಪಟ್ಟಿತ್ತು. ಅಂಥ ಈ ಕಮಿಟಿಯು ಬಹುಮತದ ರಿಪೋರ್ಟನಲ್ಲಿ ಏನು ಹೇಳುತ್ತದೆ ನೋಡೋಣ. ರಾಷ್ಟ್ರವು ಸ್ವರಾಜ್ಯವನ್ನು ಕೇಳುತ್ತಿದೆ. ಆದರೆ ಬಹುಮತದ ರಿಪೋರ್ಟು ಈ ವಿಷಯವಾಗಿ ಒಂದು ಎಳ್ಳಷ್ಟು ಕೂಡ ಅನುಕೂಲ ಅಭಿಪ್ರಾಯವನ್ನು ಕೊಡುವದಿಲ್ಲ. ಮಾತ್ರವಲ್ಲ, ಅದು ಈ ವಿಷಯವನ್ನೆ ಪ್ರಸ್ತಾಪಿಸುವದಿಲ್ಲ. ಬಹುಮತದವರ ಅಭಿಪ್ರಾಯದಂತೆ ಅಲ್ಪವಾದ ಬರೆ ಎರಡು ಮೂರು ಸೂಚನೆಗಳು ಮಾತ್ರ ಸೂಚಿತವಾಗಿವೆ. ಭಾರತ ಮಂತ್ರಿಗಳಿಗೆ ನಿರಂಕುಶವಾದ ಅಧಿಕಾರವಿದೆ. ಆ ಅಧಿಕಾರವನ್ನು ಕೆಲವು ಮಟ್ಟಿಗೆ ತಗ್ಗಿಸಬೇಕು, ಕಾರ್ಯಕಾರಿ ಮಂಡಲಕ್ಕೂ, ಕಾಯಿದೆ ಮಂಡಲಕ್ಕೂ ಕೆಲವು ಹೆಚ್ಚಿನ ಅಧಿಕಾರಗಳನ್ನೂ, ಅನುಕೂಲತೆಗಳನ್ನೂ ಕೊಡಬೇಕು, ಕಾರಖಾನೆಗಳ ಕೂಲಿಗಳಿಗೂ, ಅಸ್ಪೃಶ್ಯ ವರ್ಗಕ್ಕೂ ಮತದಾನದ ಪ್ರಮಾಣವನ್ನು ಹೆಚ್ಚಿಸಬೇಕು, ಆರು ತಿಂಗಳಿನ ಶಿಕ್ಷೆ ಹೊಂದಿದವರು ಕೌನ್ಸಿಲಿಗೆ ಅನರ್ಹರೆಂಬ ಯಾವ ಮಾತುಂಟೋ ಅದರ ಬದಲು ಒಂದು ವರ್ಷದ ಶಿಕ್ಷೆ ಎಂದು ತಿಳಿಯಬೇಕು. ಹೆಂಗಸರಿಗೆ ಕೌನ್ಸಿಲ್ ಸಭಾಸದತ್ವದ ಅಧಿಕಾರವಿರಬೇಕು, ಕಾರ್ಯಕಾರಿ ಮಂತ್ರಿಮಂಡಲವೂ, ಕಾಯಿದೆ ಮಂಡಲದ ಮಂತ್ರಿಗಳೂ ಸಂಯುಕ್ತ ರೀತಿಯಿಂದ ವಿಚಾರವಿನಿಮಯವನ್ನು ಮಾಡಬೇಕು, ಪ್ರಾಂತಿಕ ಖಂಡಣಿಯನ್ನು, ಅನುಕೂಲ ಪರಿಸ್ಥಿತಿ ಬಂದ ಕೂಡಲೆ ಬದಲಾಯಿಸಬೇಕು, ಜೊಯಿಂಟ್ ಫಿನೆನ್‌ಶಲ್ ಸೆಕ್ರೆಟರಿ ಎಂಬೀ ಇಸಮನ್ನು ತೆಗೆದು ಹಾಕಿ ಅವನ ಬದಲಿಗೆ ಮಂತ್ರಿಗಳಿಗೆ ಸಹಾಯಾರ್ಥವಾಗಿ ಒಬ್ಬ ಫಿನೆನ್‌ಶಲ್ ಎಡ್ವಾಯಿಜರ್ (ಆರ್ಥಿಕ ಸಮುಪದೇಶಕ) ಎಂಬ ಇಸಮನ್ನು ಇಡಬೇಕು, ಎಲ್ಲ ಪ್ರಾಂತಗಳಲ್ಲಿ ಫೊರೆಸ್ಟ ಇಲಾಖೆಯನ್ನು ಮಂತ್ರಿಗಳ ವಶಕ್ಕೆ ಕೊಡಬೇಕು, ಆಸ್ಸಾಮಿನಲ್ಲಿ ಅಬಕಾರಿ ಮತ್ತು ಮೀನಿನ ಇಲಾಖೆಗಳನ್ನು ವಿಭಕ್ತಮಾಡಬಹುದು, ಇದೆ ಸಮಯದಲ್ಲಿ ಲೆಂಡ್ ಎಕ್ವಿಝಿಶನ್, ಪ್ರಾಂತಿಕ ಲೋ ರಿಪೋರ್ಟುಗಳು, ಸ್ಟೋರುಗಳೂ, ಸ್ಟೇಶನರಿ ಮತ್ತು ಪ್ರೆಸ್ಸು ಇತ್ಯಾದಿ ವಿಷಯಗಳನ್ನು ವಿಭಕ್ತಪಡಿಸಿ ಕೊಡಬಹುದೊ ಹೇಗೆ ಎಂಬುದನ್ನು ಪ್ರಾಂತಿಕ ಸರಕಾರಗಳಿಗೆ ಕೇಳಬೇಕು ಎಂಬುದಾಗಿ ಈ ಬಹುಮತದ ವರದಿಯಲ್ಲಿ ನಮೂದಾಗಿದೆ. ಬಹುಮತದ ಈ ವರದಿಯೊಳಗಿನ ಈ ಮುಖ್ಯ ಸಂಗತಿಗಳನ್ನು ಪರಿಶೀಲಿಸಿದ ಬಳಿಕ ಈ ಬಹುಮತದ ಭಾಗವು ಕೇವಲ ಟೊಳ್ಳೆಂದು ಯಾರೂ ಹೇಳದೆ ಇರಲಿಕ್ಕಿಲ್ಲ. ಅಲ್ಪಸ್ವಲ್ಪ ಅಧಿಕಾರಗಳನ್ನು ಕೊಡಲು ಸಿಫಾರಸು ಮಾಡುವದರಿಂದ ಸ್ವರಾಜ್ಯವನ್ನಪೇಕ್ಷಿಸುವ ಜನತೆಯ ಸಮಾಧಾನವುಂಟಾದರೂ ದ್ವಿದಲ ರಾಜ್ಯಪದ್ಧತಿಯನ್ನು ಮುಳುಗಿಸಬೇಕು ಅಥವಾ ಮುರಿಯಬೇಕೆಂದು ಲೋಕಮತವಿರುವಾಗ ಬಹುಮತದ ರಿಪೋರ್ಟು ಈ ದ್ವಿದಲ ಪದ್ಧತಿಗೆ ಇನ್ನೂ ಪೋಷಕವಾಗುವಂತೆ ವಿಭಕ್ತ ಖಾತೆಗಳಲ್ಲಿ ಫೊರೆಸ್ಟ ಇಲಾಖೆಯ ಹೊಸ ಭರತಿಯನ್ನು ವರದಿಯು ಮಾಡುತ್ತಿದೆ! ಇದು ಪ್ರತಿಗಾಮಿ ಸೂಚನೆಯೆ ಸರಿ. ಬಹುಮತದ ರಿಪೋರ್ಟಿನ ಪ್ರತಿಗಾಮಿತ್ವವು ಇನ್ನೊಂದರಲ್ಲೂ ವ್ಯಕ್ತವಾಗುತ್ತದೆ. ಜಾತಿ ಮೂಲಕ ಪ್ರಾತಿನಿಧ್ಯವನ್ನಿರಗೊಡಬಾರದೆಂದು ಲೋಕವೆಲ್ಲ ಹೇಳುವಾಗ ಈ ರಿಪೋರ್ಟು ಅಸ್ಪೃಶ್ಯ ವರ್ಗಕ್ಕೆ ಪ್ರಾತಿನಿಧ್ಯವನ್ನು ಹೆಚ್ಚಿಸುವ ನೆನವನ್ನು ಮಾಡಿ ಜಾತಿಭೇದದ ಬಾಯಿಯನ್ನು ಅದಷ್ಟು ತೆರೆದಿಡುವಂತೆ ಯತ್ನಿಸಿದೆ. ಸಾರಾಂಶ ಬಹುಮತದ ರಿಪೋರ್ಟು ಸ್ವರಾಜ್ಯ ಪ್ರಾಪ್ತಿಗೆ ವಿಘಾತಕವಾದ್ದೆ ಸರಿ.

ಈ ಮೇರೆಗೆ ಬಹುಮತದ ವರದಿಯಲ್ಲಿ ಬಹಳ ಘಾತಕವಾದ ಅಂಶಗಳಿರುವುದರಿಂದ ಅಲ್ಪ ಸಂಖ್ಯಾಕರ ರಿಪೋರ್ಟು ಬಹುಮತದವರ ತಪ್ಪು ಗ್ರಹಿಕೆಯನ್ನು ತೋರಿಸಿಕೊಟ್ಟಿದೆ. ದ್ವಿದಲ ಪದ್ಧತಿಯನ್ನು ನಾಶಗೊಳಿಸದೆ ಉಪಾಯವಿಲ್ಲ. ಆ ಪದ್ಧತಿಯು ಇರುವುದರಿಂದ ಜನತೆಗೆ ಪ್ರಾತಿನಿಧಿಕ ಸ್ವರಾಜ್ಯದ ತರಬೇತಿಯೂ ಸಿಗಲಿಕ್ಕಿಲ್ಲ, ಈಗಿರುವ ಪ್ರವಾದಗಳನ್ನು ಹೋಗಲಾಡಿಸಲೂ ಆಗಲಿಕ್ಕಿಲ್ಲ. ಅಥವಾ ಸರಕಾರದ ಪರಿಸ್ಥಿತಿಯೂ ದೃಢವಾಗಲಿಕ್ಕಿಲ್ಲ. ಸ್ವರಾಜ್ಯದ ನಿಜವಾದ ಅಧಿಕಾರಗಳನ್ನು ಕೊಡಲು ಸರಕಾರವು ಮನಃಪೂರ್ವಕವಾದ ಪ್ರಯತ್ನವನ್ನು ಮಾಡದೆ ಇದ್ದಲ್ಲಿ ಜನತೆಯಲ್ಲಿ ಉಂಟಾಗಿರುವ ಅಸಂತೋಷವು ಅಂತ್ಯವಾಗಲಿಕ್ಕಿಲ್ಲ. ಎಂಬುದಾಗಿ ಸ್ವಲ್ಪ ಸಂಖ್ಯೆಯವರ ವರದಿಯು ಹೇಳುವುದು.

ಎನ್‌ಕ್ವಾಯರಿ ಕಮಿಟಿಯು ಇಷ್ಟು ಸಮಯದ ವರೆಗೆ ಕೆಲಸಮಾಡಿ ಕೊನೆಗೆ ಯಾವ ಅಭಿಪ್ರಾಯವನ್ನು ಹೊರಗೆಡಹಿದೆ ಎಂಬುದು ಇದರಮೇಲಿಂದ ಗೊತ್ತಾಗುತ್ತದೆ. ಅಲ್ಪ ಸಂಖ್ಯಾಕರ ಮತವು ಹಿಂದಿಲೋಕಮತಕ್ಕೆ ಅನುವಾಗಿದ್ದದ್ದಾದರೂ, ಅಥವಾ ಅದರಲ್ಲಿ ಲೋಕಮತದ ಅನೇಕ ಅಂಶಗಳು ಪ್ರತಿಬಿಂಬಿತವಾಗಿವೆ ಎಂದು ಕೂಡ ಹೇಳಬಹುದಾದರೂ ಆ ಮತಕ್ಕೆ ಸರಕಾರದ ದರಬಾರದಲ್ಲಿ ಆಸ್ಪದ ಸಿಗಲಿಕ್ಕಿಲ್ಲವೆಂದು ಹೇಳಲು ಜೋಯಿಸನು ಅಗತ್ಯವಿಲ್ಲ!

ಸ್ಫುಟವಿಚಾರಗಳು.

೧. ಲೋರ್ಡರೆಡಿಂಗ ಸಾಹೇಬರು ನಾಲ್ಕು ತಿಂಗಳ ರಜೆಯ ಮೇಲೆ ವಿಲಾಯತಿಗೆ ಹೋಗುತ್ತಾರೆಂದು ನಾವು ಕಳೆದ ಸಂಚಿಕೆಯಲ್ಲಿ ತಿಳಿಸಿದ್ದೇವಷ್ಟೆ. ಇವರ ನಿರ್ಗಮನವು ಅನೇಕರಿಗೆ ಅನೇಕ ದೃಷ್ಟಿಯಿಂದ ಚರ್ಚಾಸ್ಪದವಾಗಿದೆ. ಹಿಂದುಸ್ಥಾನದಲ್ಲಿ ಒತ್ತಾಳಿಕೆಯನ್ನು ಯಾವ ರೀತಿಯಿಂದ ಪ್ರಾರಂಭಿಸಬಹುದು, ಅಥವಾ ಪ್ರಾರಂಭಿಸಿದ್ದನ್ನು ಯಾವ ರೀತಿಯಿಂದ ಮುಂಪರಿಸಬಹುದು ಎಂಬುದನ್ನು ವಿಲಾಯತಿಯ ಕಲ್ಲದೆಯವರೊಡನೆ ಆಲೋಚಿಸಲು ರೆಡಿಂಗರು ಇಲ್ಲಿಂದ ವಿಲಾಯತಿಗೆ ಪ್ರಯಾಣವನ್ನು ಬೆಳಸುತ್ತಿದ್ದಾರೆಂದು ಹಲವರು ತರ್ಕಿಸುತ್ತಿದ್ದಾರೆ. ಇನ್ನು ಹಲವರು ಇದೇ ವಿಷಯದಲ್ಲಿ ಬೇರೆ ವಿಧವಾಗಿಯೂ ಊಹನೆಯನ್ನು ಕಟ್ಟುವರು. ಸುಧಾರಣಾ-ವಿಚಾರಣಾ ಕಮಿಟಿಯ ಅಲ್ಪಸಂಖ್ಯಾಕರ ರಿಪೋರ್ಟಿನಲ್ಲಿ ಸೂಚಿತವಾದ ಸುಧಾರಣೆಗಳನ್ನು ಜಾರಿಯಲ್ಲಿ ತರಬೇಕೆಂದು ರೆಡಿಂಗ ಸಾಹೇಬರ ಮನೋಗತವಿದೆ. ಆದ್ದರಿಂದ ಅವರು ಖುದ್ದು ವಿಲಾಯತಿಗೆ ಹೋಗಿ ಅಲ್ಲಿಯವರೊಡನೆ ಮಾತಾಡಿ ಅಂಥ ಸುಧಾರಣೆಗಳನ್ನು ಜಾರಿಯಲ್ಲಿ ತರಲು ಯತ್ನಿಸುವವರಿದ್ದಾರೆ. ರೆಡಿಂಗ ಸಾಹೇಬರ ಈ ಪ್ರಯತ್ನವು ಸಫಲವಾಗದ ಪಕ್ಷದಲ್ಲಿ ಅವರು ಅಲ್ಲಿಂದಲೆ ರಾಜಿಯನ್ನು ಕೊಟ್ಟು ಪುನಃ ಹಿಂದುಸ್ಥಾನಕ್ಕೆ ಬರಲಿಕ್ಕಿಲ್ಲ ಎಂಬುದಾಗಿ ಈ ಪಂಗಡದವರ ಅಭಿಪ್ರಾಯವಿದೆ. ಈ ಎರಡು ಮತಗಳಲ್ಲಿ ಯಾವದು ಸತ್ಯವೆಂಬುದನ್ನು ಈಗಲೆ ಹೇಳಲು ಅನ್ಯರಿಗೆ ಸಾಧ್ಯವಿಲ್ಲ. ಆದರೆ ಇವೆರಡರಲ್ಲಿ ಯಾವದು ಸಂಭವನೀಯವೆಂಬುದನ್ನು ಮಾತ್ರ ಅನುಮಾನದಿಂದ ಒಂದುವೇಳೆ ನೆನಸಬಹುದು. ಹಾಗೆ ನೆನಸುವುದಾದರೆ ರೆಡಿಂಗ ಸಾಹೇಬರು ಹಿಂದುಸ್ಥಾನಕ್ಕೆ ಬಂದಂದಿನಿಂದ ಇದುವರೆಗೆ ಅವರ ಕೃತ್ಯಗಳನ್ನೆಲ್ಲ ನೋಡುವಾಗ ಅವರಲ್ಲಿ ಇಂಥ ಉದಾರ ಬುದ್ಧಿ ಹುಟ್ಟಿದೆಂದು ಹೇಳಲಾಗುವದಿಲ್ಲ. ನಿಜವಾಗಿ ಅಂಥ ಸದ್‌ಬುದ್ಧಿಯು ಅವರಲ್ಲಿ ಹುಟ್ಟಿದ್ದಾದರೆ ಅದು ಸಂಪೂರ್ಣವಾಗಿ ಅಭಿನಂದನೀಯವೆ ಸರಿ.

೨. ಪಾರ್ಲಿಮೆಂಟನಲ್ಲಿ ಇತ್ತಲಾಗೆ ಒಂದು ವಿಲಕ್ಷಣ ಪ್ರಕಾರವು ನಡೆಯುತ್ತಿದೆ. ಸಾಮ್ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ "ಕೊಮ್ಯುನಿಷ್ಟ" ಎಂದರೆ ಒಂದು ಬಗೆಯ ಬಲಶೇವಿಕ್ ಚಳವಳಗಾರರನ್ನು ಪ್ರತಿಬಂಧಿಸಲೂ ಶಿಕ್ಷಿಸಲೂ ಮತ್ತು ಹದ್ದುಪಾರ ಮಾಡಲೂ ಆಯಾ ದೇಶದ ಗವರ್ನರರಿಗೆ ಮತ್ತು ವೈಸರಾಯರಿಗೆ ಅಧಿಕಾರವಿರಬೇಕೆಂಬುದಕ್ಕಾಗಿ ಒಂದು ಒರ್ಡಿನನ್ಸು ಬೀಲು ಪಾರ್ಲಿಮೆಂಟನಲ್ಲಿ ಬಂದಿತ್ತು. ಬೀಲಿನಲ್ಲಿ ಇಡಿ ಬ್ರಿಟಿಷ್ ಸಾಮ್ರಾಜ್ಯದ ಹೆಸರಿದ್ದರೂ ಈ ಬೀಲನ್ನು ಸಮರ್ಥಿಸತಕ್ಕ ವಕ್ತೃಗಳೆಲ್ಲರು ಹಿಂದುಸ್ಥಾನದ ಚಳವಳವನ್ನು ಮಾತ್ರ ಉಲ್ಲೇಖಿಸಹತ್ತಿದರು. ಉಪಭಾರತ ಮಂತ್ರಿಗಳಾದ ವಿಂಟೆರಟನ್ ಸಾಹೇಬರು ಕೂಡ ಹಿಂದುಸ್ಥಾನದ ಲೋಕಪಕ್ಷದ ಚಳವಳಗಾರರನ್ನು ದೂಷಿಸುವಂತೆ ಶಬ್ದಪ್ರಯೋಗ ಮಾಡಿದರು. ಈ ಎಲ್ಲ ಪ್ರಕಾರಗಳನ್ನು ಕಂಡು ಮಿ| ಸಕಲಾತವಾಲರು ಭಾಷಣ ಮಾಡಲು ನಿಂತು ತಮ್ಮ ಭಾಷಣದಲ್ಲಿ ಇಲ್ಲಿಯ ನೋಕರಶಾಹಿಯು ಉಚ್ಛೃಂಖಲತೆಯ ಪ್ರದರ್ಶನವನ್ನು ತೋರುವ ದೃಷ್ಟಾಂತಗಳನ್ನು ಎತ್ತಿಹೇಳಿ ಮಾತಾಡಿದರು, ಇಲ್ಲಿಯವರ ಕೃತ್ಯಗಳನ್ನು ಇಂಡಿಯಾ ಒಫೀಸು ಯಾವ ರೀತಿಯಿಂದ ಎತ್ತಿ ಹಿಡಿಯುತ್ತಿದೆ ಎಂಬಿತ್ಯಾದಿ ವಿಷಯದ ಪರಿಸ್ಫೋಟವನ್ನು ಅವರು ಯಾವಾಗ ಮಾಡತೊಡಗಿದರೊ ಆಗ "ಟೋರಿ" ಎಂದರೆ ಕಲ್ಲೆದೆ ಪಕ್ಷದ ಸಭಾಸದರು ಸಕಲಾತವಾಲರ ಭಾಷಣವು ಯಾರಿಗೂ ಕೇಳಬಾರದೆಂಬ ಉದ್ದೇಶದಿಂದ ಗಟ್ಟಿಯಾಗಿ ಬೊಬ್ಬೆಮಾಡಹತ್ತಿ, ಪಾರ್ಲಿಮೆಂಟವಾದವಿವಾದವು ಅಂತ್ಯವಾಯಿತೆಂದು ಹೇಳತೊಡಗಿದರು! ಮತ್ತು ಆ ಬೀಲಿನ ಮೇಲೆ ಮತಗಳನ್ನು ಕೊಡಲುಪಕ್ರಮಿಸಿದರು! ಆಗ ಲೇಬರ ಪಾರ್ಟಿಯವರು ಇದರ ಪ್ರತೀಕಾರಾರ್ಥವಾಗಿ ಬಹು ಗಟ್ಟಿಯಾಗಿ ಬೊಬ್ಬೆ ಇಟ್ಟು 'ಇನ್ನೂ ಚರ್ಚೆ ಅಂತ್ಯವಾಗಲಿಲ್ಲ'ವೆಂದು ಹೇಳಿ ಈ ಪ್ರಕರಣವನ್ನು "ಸ್ಪೀಕರನ" ವರೆಗೆ ಕೊಂಡುಹೋದರು, ಸ್ಪೀಕರನು ಅವರ ಕಡೆಗನೆ ನಿರ್ಣಯವನ್ನು ಕೊಟ್ಟ ಕಾರಣ ಸಕಲಾತವಾಲರ ಭಾಷಣವು ಮುಂದರಿಯ ಹತ್ತಿತು. ಸಾಮ್ರಾಜ್ಯ ಒರ್ಡಿನನ್ಸ ಬೀಲಿನ ಚರ್ಚೆಯು ಇನ್ನೂ ಮುಗಿದಿಲ್ಲ, ಆದರೆ ಈ ಸಂದರ್ಭದಲ್ಲಿ ಸಾಮ್ರಾಜ್ಯವಾದಿಗಳಾದ ಕಲ್ಲೆದೆಯವರ ದುಶ್ಚೇಷ್ಟೆಗಳು ಮಾತ್ರ ವ್ಯಕ್ತವಾಗುವದು ನಿಲ್ಲಲಿಲ್ಲ.

೩. ಗಾಂಧಿಜಿಗಳು ವೈಕಮ್ ಸತ್ಯಾಗ್ರಹಿಗಳನ್ನು ಅಭಿನಂದಿಸಲು ಮತ್ತು ಇತ್ತಂಡಗಳಲ್ಲಿ ಒಪ್ಪಂದವನ್ನು ಮಾಡಲು ವೈಕಮಿಗೆ ಬಂದಿದ್ದರು. ಪುರಾಣಮತವಾದಿಗಳು ಗಾಂಧಿಗಳಿಗೆ ತಮ್ಮ ಅಂಬೋಣವನ್ನು ತಿಳಿಸಿದರು. ಗಾಂಧಿಗಳು ಅವರ ಎಷ್ಟೋ ಸಂಗತಿಗಳನ್ನು ಒಪ್ಪಿಕೊಂಡರು. ಆದರೂ ಇದರ ಫಲಿತಾಂಶವು ಇನ್ನೂ ಬಹಿರಂಗಕ್ಕೆ ಬಂದಿಲ್ಲ. ಅನಂತಶಯನದ ಮಹಾರಾಣಿಯವರನ್ನು ಸಹ ಗಾಂಧಿಜಿಯವರು ನೋಡಿದ್ದಾರೆ. ಗಾಂಧಿಗಳು ವೈಕಮಿಗೆ ಬರುವಾಗ ಮದ್ರಾಸಿನಿಂದ ಎಲ್ಲ ಕಡೆಗಳಲ್ಲಿ ಅವರಿಗೆ ಅಪೂರ್ವವಾದ ಸ್ವಾಗತವುಂಟಾಗಿದೆ. ಮದ್ರಾಸಿನಲ್ಲಿ ಕೊರ್ಪೊರೆಶನು ಹಾಗು ಮಹಾಜನಸಭೆ ಮುಂತಾದ ಬೇರೆ ಸಂಸ್ಥೆಗಳು ಸಹ ಅವರಿಗೆ ಮಾನಪತ್ರಗಳನ್ನು ಸಮರ್ಪಿಸಿದವು. ಗಾಂಧಿಜಿಗಳು ಮದ್ರಾಸಿನ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುವಾಗ ಇತರ ಪ್ರಸ್ತಾಪಗಳೊಡನೆ ಹಿಂದು ಮಹಮ್ಮದೀಯರ ಐಕ್ಯವನ್ನು ಕುರಿತು ಯಾವ ಅಭಿಪ್ರಾಯವನ್ನು ಕೊಟ್ಟಿರುವರೊ ಅದರ ಮೇಲಿಂದ ಗಾಂಧಿಜಿಯವರು ಈ ಐಕ್ಯದ ವಿಷಯವಾಗಿ ನಿರಾಶೆಪಟ್ಟಿದ್ದಾರೆಂದು ಹೇಳಬೇಕಾಗುತ್ತದೆ. "ಹಿಂದು ಮಹಮ್ಮದೀಯರ ಐಕ್ಯವು ಈಗಿನ ಪರಿಸ್ಥಿತಿಯಲ್ಲಿ ಅವಶ್ಯವೆಂದು ನನಗೆ ಖಾತ್ರಿಯಾಗಿದೆ" ಎಂದು ಅವರು ಸ್ಪಷ್ಟವಾಗಿ ಹೇಳಿದ್ದಾರೆ. ನಿಜವಾಗಿ ಮಹಾತ್ಮಾ ಗಾಂಧಿಗಳಿಗೆ ಈ ಸಂಗತಿಯು ಇತ್ತಿತ್ತಲಾಗೆ ತಿಳಿಯುತ್ತ ಬಂದಿದೆಯಾದರೂ ಪಂಡಿತ ಮದನಮೋಹನ ಮಾಲವೀಯ, ಲಾಲಾಲಜಪತರಾಯರಂಥ ಅನೇಕ ದೇಶಭಕ್ತರು ಈ ಸಂಗತಿಯನ್ನು ಮೊದಲೆ ಮನಗಂಡಿದ್ದರು. ಆದರೆ ಗಾಂಧಿಗಳು ಈಗಲಾದರೂ ಈ ಐಕ್ಯದ ನಿಜಸ್ವರೂಪವನ್ನು ತಿಳಿಯಹತ್ತಿದ್ದಾರೆ. ಇದು ತುಂಬಾ ಸಂತೋಷದ ಮಾತು. ಆದರೆ ಇದೆ ಕ್ರಮವು ಮುಂದರಿಸುತ್ತ ಮುಂದರಿಸುತ್ತ ಒಂದು ದಿನ ಮಹಮ್ಮದೀಯ ಅಪೂರ್ವ ಸ್ನೇಹಿತರ ಗುಟ್ಟು ರಟ್ಟಾಗದೆ ಇದ್ದರೆ ಸಾಕೆಂದು ನಾವು ಬಯಸುತ್ತೇವೆ.

೪. ಸುಧಾರಣಾ-ವಿಚಾರಣಾ-ಕಮಿಟಿಯ ವರದಿಯು ಬಹಿರಂಗಕ್ಕೆ ಬಂದಬಳಿಕ—ಅದರ ಸ್ವರೂಪವನ್ನು ತಿಳಿದು ಇಡಿ ದೇಶವು ಹೇಗೆ ತನ್ನ ನಿಷೇಧವನ್ನು ಪ್ರದರ್ಶಿಸುತ್ತಿದೆ ಎಂಬುದಕ್ಕೆ ಮುಂಬಯಿ ಕೌನ್ಸಿಲಿನೊಳಗಿನ ಅಧಿವೇಶನದ ತಹಕೂಬಿಯ ಠರಾವೆ ದೃಷ್ಟಾಂತವಾಗಿದೆ. "ಈ ರಿಪೋರ್ಟಿನ ಬಹುಮತದ ಉಲ್ಲೇಖಕರು ಲೋಕಮತವನ್ನು ಅನಾದರಿಸಿ ಪ್ರತಿಗಾಮಿ ಧೋರಣವನ್ನು ಪುರಸ್ಕರಿಸಿದ್ದಾರೆ. ಇಂಥ 'ಕ್ರೂರ ತಮಾಶೆ'ಯು ನಮಗೆ ಅಗತ್ಯವಿಲ್ಲ, ಈ ರಿಪೋರ್ಟಿನ ಪ್ರಕಟನೆಯಿಂದ ದೇಶದಲ್ಲಿ ಉತ್ಪನ್ನವಾದ ಅಸಂತೋಷವನ್ನು ವ್ಯಕ್ತಗೊಳಿಸಲು ಕೌನ್ಸಿಲಿನ ಅಧಿವೇಶನವನ್ನು ನಿಲ್ಲಿಸಬೇಕು" ಎಂದು ಬಿ. ಮುಕುಂದರಾವ್ ಜಯಕರರು ಠರಾವನ್ನು ತಂದರು. ಇವರು ಠರಾವನ್ನು ಕೌನ್ಸಿಲಿನ ಮುಂದಿಡುವಾಗ "ಲೋರ್ಡ ರೆಡಿಂಗರು ವಿಲಾಯತಿಗೆ ಹೋಗುತ್ತಿದ್ದಾರೆ, ಅಲ್ಲಿಯು ಸರಕಾರದ ಮುಂದೆ ಇಲ್ಲಿಯ ಲೋಕಮತವನ್ನು ತಿಳಿಸುವಾಗ ಅಲ್ಪಸಂಖ್ಯಾಕರ ರಿಪೋರ್ಟಿನಲ್ಲಿ ಪ್ರತಿಪಾದಿತವಾದ ಮತಗಳನ್ನೆ ವ್ಯಕ್ತಗೊಳಿಸಬೇಕು. ಈ ರೀತಿ ಅವರು ವ್ಯಕ್ತಗೊಳಿಸಿ ಬ್ರಿಟಿಷ್ ಮಂತ್ರಿಮಂಡಲವನ್ನು ಅನುಕೂಲಪಡಿಸಿಕೊಳ್ಳಬೇಕು" ಎಂದು ಒತ್ತಿ ಹೇಳಿದ್ದಾರೆ. ಶ್ರೀ. ಜಯಕರರ ಈ ಠರಾವನ್ನು ಇತರ ಪಕ್ಷೀಯರು ಎಂದರೆ ಶಾಂತ ಮತ್ತು ಸ್ವತಂತ್ರ ಪಕ್ಷದ ಸಭಾಸದರು ಸಮರ್ಥಿಸಿ ಅದಕ್ಕೆ ತಮ್ಮ ಅನುಕೂಲ ಮತವನ್ನು ಕೊಟ್ಟರು. ಈ ಸಂದರ್ಭದಲ್ಲಿ ಲಕ್ಷದಲ್ಲಿಡಬೇಕಾದ ಒಂದು ಸಂಗತಿಯು ಯಾವದೆಂದರೆ ಸರಕಾರ ನಿಯುಕ್ತಸಭಾಸದರು ಪ್ರತಿಕೂಲರಾಗದೆ ತಟಸ್ಥರಾಗಿದ್ದರು. ಇದರ ಮೇಲಿಂದ ಬಹುಮತದ ರಿಪೋರ್ಟು ಎಷ್ಟು ಅನುದಾರವೂ, ಸಹಾನುಭೂತಿಶೂನ್ಯವೂ, ಪ್ರತಿಗಾಮಿ ಧೋರಣಪೂರ್ಣವೂ ಆಗಿದೆ ಎಂಬುದು ಅತಿ ಸ್ಪಷ್ಟ ವ್ಯಕ್ತವಾಗುತ್ತದೆ. ಇರಲಿ, ಇದೇ ಮೇರೆಗೆ ಈ ವರದಿಯನ್ನು ಕುರಿತು ದೇಶದಲ್ಲಿ ಸರ್ವತ್ರ ನಿಷೇಧಪ್ರದರ್ಶನವುಂಟಾಗುವುದು ಅತ್ಯಂತ ಅವಶ್ಯವಾಗಿದೆ.

೫. ರಿಲಿಜಿಯಸ್ ಎಂಡೌಮೆಂಟ್ ಬೀಲು ಪಾಸಾಗಿದೆಯಷ್ಟೆ. ಆದರೆ ಇದನ್ನು ನಿರ್ಮೂಲಿಸಬೇಕೆಂದು ಶ್ರೀ. ಸತ್ಯಮೂರ್ತಿಯವರು ಒಂದು ಬೀಲನ್ನು ತರಲು ನೋಟೀಸು ಕೊಟ್ಟಿರುವರು. ಅದಲ್ಲದೆ, ವೆಂಕಟರಮಣ ಐಯ್ಯಂಗಾರರು ಆ ಮುಂಚಿನ ಬೀಲಿಗೆ ಒಂದು ಉಪಸೂಚನೆಯನ್ನು ತರುವವರಿದ್ದಾರೆ. ಐವತ್ತು ವರ್ಷದ ಹಿಂದಿನ ದೇವಸ್ಥಾನಗಳಿಗೂ ಮತ್ತು ಮಠಗಳಿಗೂ ಈ ಕಾನೂನು ಲಗಾವು ಆಗಕೂಡದು, ಒಂದು ವೇಳೆ ಲಗಾವು ಮಾಡುವುದೆ ಇದ್ದರೆ ಕಾಯಿದೆ ಕೌನ್ಸಿಲಿನ ಸಮ್ಮತಿಯನ್ನು ತೆಕ್ಕೊಳ್ಳಬೇಕು ಎಂದು ಐಯ್ಯಂಗಾರರು ತರಲಪೇಕ್ಷಿಸುವ ಉಪಸೂಚನೆಯಲ್ಲಿ ನಮೂದಾಗಿದೆ. ಹಿಂದು ಧರ್ಮಸಂಸ್ಥೆಗಳ ಮೇಲೆ ಬಂದಿರುವ ಎಂಡೌಮೆಂಟ್ ಬೀಲಿನ ಆಪತ್ತನ್ನು ಪರಿಹರಿಸಲು ನಿಶ್ಚಯಿಸುವ ಸಭಾಸದರ ಸಂಖ್ಯೆಯು ಕೌನ್ಸಿಲಿನಲ್ಲಿ ಅಧಿಕವಾಗುವುದು ಈ ಸಂದರ್ಭದಲ್ಲಿ ಇಷ್ಟ.

ಮಂಗಳೂರು.

ಜಿಲ್ಲಾ ಕಲೆಕ್ಟರ್ ದೊರೆಗಳು ಈ ದಿನ ಇಲ್ಲಿಂದ ಉಡ್ಪಿ ತಾಲೂಕು ಜಮಾಬಂದಿ ಬಗ್ಗೆ ಕೋಟೆಕ್ಕೆ ತೆರಳಿರುತ್ತಾರೆ. ಕೋಟದಿಂದ ಇವರ ಸರ್ಕೀಟು ಕ್ರಮಪಟ್ಟಿಯು ಈ ರೀತಿಯಾಗಿರುತ್ತದೆ:—ಮಾರ್ಚಿ ತಾ. ೧೪, ೧೫ ಮತ್ತು ೧೬ ಕೋಟ, ತಾ. ೧೭ ಕೋಟದಿಂದ ಬ್ರಹ್ಮಾವರ, ತಾ. ೧೮, ೧೯ ಬ್ರಹ್ಮಾವರ, ತಾ. ೨೦ ಬ್ರಹ್ಮಾವರದಿಂದ ಕಾಪು, ತಾ. ೨೧, ೨೨, ೨೩, ೨೪ ಕಾಪು, ತಾ. ೨೫ ಕಾಪುನಿಂದ ಉಡ್ಪಿ, ತಾ. ೨೬ ಉಡ್ಪಿಯಿಂದ ಮಂಗಳೂರು.

ಜಪ್ಪಿನಲ್ಲಿ ರೋಮನ್‌ಕೆಥೋಲಿಕರ ಸೆಮಿನರಿಯ ಎದುರ್ಭಾಗದಲ್ಲಿರುವ ಜೇರ್ಲಗುಡ್ಡದಲ್ಲಿ ಸುಮಾರು ೨೦ ಎಕ್ರೆ ವಿಸ್ತೀರ್ಣವುಳ್ಳ ಸ್ಥಳವನ್ನು ಆದಿದ್ರಾವಿಡರ ನಿವಾಸದ ಬಗ್ಗೆ ಪ್ರತ್ಯೇಕಿಸಿರುತ್ತಾರೆ. ಈ ನಿವಾಸ ಸ್ಥಳವು ಇಲ್ಲಿಯ ಕಲೆಕ್ಟರ ದೊರೆಗಳಾದ ಸೂಟರ್ ಸಾಹೇಬರ ಹೆಸರಲ್ಲಿ "ಸೂಟರ್ ಕೊಲೊನಿ" ಎಂಬುದಾಗಿ ಕರೆಯಲ್ಪಡುವುದು. ಆದಿದ್ರಾವಿಡರಿಗೆ ಬೇಕಾದ ವಸತಿಗಳನ್ನು ಕಟ್ಟಿಸಿಕೊಳ್ಳಲು ಅಗತ್ಯವಿರುವ ಸಹಾಯವನ್ನು ಮಾಡಲಿಕ್ಕೂ ಗ್ರಹಕೃತ್ಯದ ಇತರ ಅನುಕೂಲತೆಗಳನ್ನು ಇವರಿಗೆ ಒದಗಿಸಿಕೊಡಲಿಕ್ಕೂ ಒಂದು ಪರಸ್ಪರ ಸಹಾಯಕ ಸಂಘವು ಸ್ಥಾಪಿಸಲ್ಪಟ್ಟಿರುತ್ತದೆ. ದೇರೆಬೈಲಿನಲ್ಲಿಯೂ ಸಹ ಇದೇ ತರದ ಇನ್ನೊಂದು ಸಂಘವು ಸ್ಥಾಪಿಸಲ್ಪಟ್ಟು ಲೇಬರ ಡಿಪಾರ್ಟಮೆಂಟಿನವರ ಆರೈಕೆಯಲ್ಲಿ ಕೆಲಸ ಪ್ರಾರಂಭಿಸಿರುವರು.

ತಾರೀಕು ೭—೩—'೨೫ರಲ್ಲು ಕೂಡಿದ ಮಂಗಳೂರು ತಾಲೂಕು ಕೊಂಗ್ರೆಸ್ ಕಮಿಟಿಯ ಮಹಾಸಭೆಯಲ್ಲಿ ಈ ಕೆಳಗಣ ನಿರ್ಣಯಗಳು ನಿಶ್ಚಿತವಾಗಿರುವವು:—ಕಳೆದ ವರುಷದ ಲೆಕ್ಕವನ್ನು ಪರಿಶೋಧಿಸಿ ಬರುವ ಮಹಾಸಭೆಯ ಮುಂದಿಡತಕ್ಕದ್ದು. ಬೋಳಾರ ರಾಷ್ಟ್ರೀಯ ಶಾಲೆಯನ್ನು ಬರುವ ಎಪ್ರಿಲ ತಿಂಗಳಿನಿಂದ ಮುಚ್ಚತಕ್ಕದೆಂದೂ ಕದ್ರಿ ರಾಷ್ಟ್ರೀಯ ಶಾಲೆಯ ವಿಷಯ ನಿರ್ಣಯಿಸುವುದರ ಮೊದಲು ಮಾದರಿಯಾದ ಒಂದು ಶಾಲೆಯನ್ನು ಇಡುವರೆ ವ ಅಗತ್ಯವಿದ್ದರೆ ಭಾರತ ಸೇವಾ ಸಮಿತಿಯವರು ನಡಿಸುವ ಸಂದರ್ಭವಿದ್ದಲ್ಲಿ ಅದು ಎಷ್ಟರ ಮಟ್ಟಿಗೆ ಯೋಗ್ಯ ಮತ್ತು ಸಾಧ್ಯ, ಅಗತ್ಯವಿದ್ದರೆ ಸಮಿತಿಯವರ ಕೂಡೆ ಪತ್ರವ್ಯವಹಾರ ನಡೆಯಿಸಿ ಸ್ಪಷ್ಟವಾದ ಸೂಚನೆಯನ್ನು ಈ ತಿಂಗಳ ಆಖೈರಿಗೆ ನಡಿಯುವ ಮಹಾಸಭೆಯು ಮುಂದೆ ಇಡುವರೆ ಈ ಕೆಳಗೆ ಕಾಣಿಸಿದ ಸದಸ್ಯರ ಉಪಮಂಡಳಿಯೊಂದನ್ನು ನೇಮಿಸಲಾಯಿತು. ರಾ|ಗಳಾದ ಕಾರ್ನಾಡ ಸದಾಶಿವರಾವ್, ಮು| ಉಮೇಶರಾವ್, ಅ. ಭೋಜರಾವ್, ಶ್ರೀಪಾದ ಶರ್ಮರವರು, ಉ. ಸಂಜೀವರಾವ್. ಕಾರ್ಯಕಾರಿ ಮಂಡಳಿಯವರು ಶಿಫಾರಸು ಮಾಡಿದ ಖರ್ಚಿನ ಬಗ್ಗೆ ವ ಸಾಲಕೊಡುವರೆ ಕೂಡ ರೂ. ೫೦೦ವನ್ನು ಮೇ ಆಖೈರೊಳಗೆ ಶೇಖರಿಸಬೇಕಾಗಿಯೂ ಆ ಬಗ್ಗೆ ಶ್ರೀಯುತ ಅ. ಭೋಜರಾವ್ ವ ಮು| ಉಮೇಶರಾಯರು ತಮ್ಮ ಪೂರ್ಣ ಸಮಯವನ್ನು ಇದೇ ತಿಂಗಳ ತಾ. ೧೬ರಿಂದ ಉಪಯೋಗಿಸಬೇಕಾಗಿಯೂ ನಿಶ್ಚಯಿಸಲಾಯಿತು. ಈ ವರುಷದ ಬಗ್ಗೆ ಈ ಕೆಳಗಿನ ಗೃಹಸ್ಥರಿಂದ ಕೂಡಿದ ಕಾರ್ಯಕಾರಿ ಮಂಡಳಿಯು ಚುನಾಯಿಸಲಾಯಿತು:—ಶ್ರೀ| ಅ. ಭೋಜರಾವ್, ಅಧ್ಯಕ್ಷ; ಶ್ರೀ| ಮು. ಉಮೇಶರಾವ್, ಕಾರ್ಯದರ್ಶಿ; ಕೆ. ಯಮ್. ದಾಸಪ್ರಭು, ಉಪಾಧ್ಯಕ್ಷ; ಶ್ರೀ. ಉ. ಸಂಜೀವರಾವ್, ಖಜಾಂಚಿ; ಕಾ. ಸದಾಶಿವರಾವ್, ಆ| ರಾ| ಅಡ್ಯಂತಾಯ, ಯು. ಕೆ. ವೈದ್ಯ, ಯಂ. ಗುಲಾಮ ಹೈದರ್ ಸಾಹೇಬ್, ವ ಇವರು ಕೂಡಿಸಿಕೊಳ್ಳಬಹುದಾದ ಇತರ ಇಬ್ಬರು. ಜಿಲ್ಲಾ ಕಮಿಟಿಗೆ ಪ್ರತಿನಿಧಿಗಳಾಗಿ ಮೇಲಿನ ಮಂಡಳಿಯಲ್ಲದೆ ಶ್ರೀಮತಿ ಕಮಲಾಬಾಯಿ ಚಟ್ಟೋಪಾಧ್ಯಾಯ ಮತ್ತು ಯಮ್. ಎನ್. ಶೆಣೈಯವರನ್ನು ಚುನಾಯಿಸಲಾಯಿತು.

The Calicut Bank, Ltd.,
ದಿ ಕೆಲಿಕಟ್ ಬೇಂಕ್, ಲಿಮಿಟೆಡ್,

ಹೆಡ್ ಆಫೀಸು — ಕಲ್ಲಿಕೋಟೆ.
ಬ್ರಾಂಚುಗಳು:— ಮುಲ್ಲಸ್ಸೇರಿ, ತಲಶ್ಶೇರಿ, ಕೊಚ್ಚಿ ಮತ್ತು ಪಾಲ್ಘಾಟು.
ರಿಜಿಸ್ಟರ್ಡ್ ಮತ್ತು ಅಧಿಕಾರಗೊಳಿಸಲ್ಪಟ್ಟ ಮೂಲಧನ ರೂ. 5,00,000—0—0.
ರೂಪಾಯಿ 10ರ 50,000 ಪಾಲುಗಳು.
(30—8—1924)ರ ವರೆಗೆ ಮಾಲ್ಯ ಮೂಲಧನ ರೂಪಾಯಿ 1,81,850—0—0.
ಒಂದು ವರುಷದ ಕಾಯಂ ಠೇವಣಾತಿಗೆ ಬಡ್ಡಿ ದರ ಸೇಕಡಾ ರೂ. 7—8—0.
ಕಳೆದ 4 ವರುಷಗಳಲ್ಲಿ ಪಾಲುಗಾರರಿಗೆ ಸೇಕಡಾ 12ರಂತೆ ಬಡ್ಡಿ ಹಂಚಿದೆ.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.
ಸಿ. ಕೃಷ್ಣನ್, ಬಿ. ಎ. ಬಿ. ಎಲ್.,
ಮೆನೇಜಿಂಗ್ ಡೈರೆಕ್ಟರ್.
ಡ್ಯಾರೆಕ್ಟರರಲ್ಲಿ ಒಬ್ಬರು—
ಎಮ್. ನಾರಾಯಣ ಕಾಮತ್, ಬಿ. ಎ.
ಪ್ಲೀಡರ್, ಕುಂದಾಪುರ.

ಮದ್ರಾಸು ನ್ಯಾಯವಿಧಾಯಕ ಸಭೆಯಲ್ಲಿ ಖಾಲಿ ಇರುವ ನಮ್ಮ ಜಿಲ್ಲೆಯ ಬ್ರಾಹ್ಮಣೇತರರ ಸ್ಥಾನಕ್ಕೆ ಶ್ರೀ ಧರ್ಮಸ್ಥಳದ ಮಂಜಯ್ಯ ಹೆಗ್ಗಡೆಯವರು ಉಮೇದುವಾರರಾಗಿ ನಿಂತಿರುವರು. ಈ ಜಿಲ್ಲೆಯಲ್ಲಿರುವ ದೇವಸ್ಥಾನಗಳ ಸಂಬಂಧವಾದ ಕಾರ್ಯಕಲಾಪಗಳ ಉದ್ಯೋಗದಿಂದ ಯಥೋಚಿತವಾದ ದೇವತಾ ಸೇವೆಯನ್ನೂ, ಅದರೊಡನೆ ಪ್ರಜಾಸೇವೆ, ದೇಶಸೇವೆಗಳನ್ನೂ ಏಕಕಾಲದಲ್ಲಿ ತನುಮನಧನಗಳಿಂದ ಸಮರ್ಪಿಸುವ ಅಪೇಕ್ಷೆಯುಳ್ಳವನಾಗಿದ್ದೇನೆಂತಲೂ ಈ ಕಾರಣ ತನ್ನ ಮೆಂಬರಿಕೆಯ ಉಮೇದುವಾರಿಕೆಗೆ ಹಿಂದೂ ಮತಾಭಿಮಾನಿಗಳೆಲ್ಲರೂ ಸರ್ವತೋಮುಖವಾದ ಪ್ರೋತ್ಸಾಹವನ್ನು ಕೊಡಬೇಕೆಂತಲೂ ಸೂಚಿಸಿ ಹೆಗ್ಗಡೆಯವರು ತಮ್ಮ ಮೆನಿಫೆಸ್ಟೋವನ್ನು ಪ್ರಕಟಿಸಿರುವರು. ಇದರ ಪ್ರತಿಗಳನ್ನು ಈ ಸಂಚಿಕೆಯೊಂದಿಗೆ ಪುರವಣಿಯಾಗಿ ಕಳುಹಿಸಿಕೊಟ್ಟಿರುತ್ತೇವೆ.

ಮಂಗಳೂರು ತಾಲೂಕು ಬೋರ್ಡಿನ ಮಂಗಳೂರು ಸರ್ಕಲಿನಲ್ಲಿ ವಿ. ಜೆ. ಪಿ. ಸಿಕ್ವೇರಾ ಮತ್ತು ಮು| ರಾ| ರಾ| ನೆಲ್ಲಿಕಾಯಿ ವೆಂಕಟ್ರಾವ್ ಇವರೊಬ್ಬರು ಮೆಂಬರರಾಗಿ ಆರಿಸಲ್ಪಟ್ಟಿರುವರು.

ಇದೇ ಬರುವ ಮಂಗಳವಾರ ತಾ. ೧೭ರಲ್ಲಿ ಮೈಸೂರು ಸೀಮೆಯ ಪ್ರಖ್ಯಾತಪಟ್ಟ ಶ್ರೀಪಾದದಾಸರವರು ಇಲ್ಲಿಯ ನೆಲ್ಲಿಕಾಯಿ ಶ್ರೀನಿವಾಸರಾಯರ ಮನೆಯಲ್ಲಿ 'ಸುಂದರಕಾಂಡ' ಎಂಬ ಹರಿಕಥೆಯನ್ನು ಮಾಡುವರು, ಎಲ್ಲರಿಗೂ ಸ್ವಾಗತವಿದೆ.

ಇದೇ ತಿಂಗಳ ತಾ. ೧೦ರಲ್ಲಿ ಕೂಡಿದ ಡಿಸ್ಟ್ರಿಕ್ಟ್ ಬೋರ್ಡಿನ ಸಭೆಯಲ್ಲಿ ೧೯೨೫-೨೬ನೇ ವರುಷದ ಆಯವ್ಯಯಗಳ ಅಂದಾಜುಪಟ್ಟಿಯು ಆಲೋಚಿಸಲ್ಪಟ್ಟು ಮೋಟಾರ್ ಬಸ್ಸುಗಳ ಟನ್ ಟೇಕ್ಸನ್ನು ಮತ್ತಷ್ಟು ಹೆಚ್ಚಿಸಬೇಕೆಂಬ ನಿರ್ಣಯವಾಗಿದೆ. ಇದರ ವಿವರವನ್ನು ಇನ್ನೊಂದು ಸಂಚಿಕೆಯಲ್ಲಿ ಪ್ರಕಟಿಸುವೆವು.

ಗಾಂಧಿಜಿಯವರ ಸಂಚಾರ:—ತಾ. 11ನೇ ಸಾಯಂಕಾಲ ಆಲಪ್ಪೆ, ತಾ. 12 ಕ್ವಿಲೋನ್, ವರ್ಕಲ್ಲೈ ತಾ. 12 ಮತ್ತು 13, ತಿರುವನಂತಪುರ 13ನೇ ಸಾಯಂಕಾಲ; ನಾಗರ್‌ಕೋಯಿಲ್ ಮತ್ತು ಕೇಪನ್ನು ತಾ. 14ರಲ್ಲಿ ಸಂದರ್ಶಿಸುವರು. ಕೊಟಿಯಮನ್ನು ತಾ. 15ರಲ್ಲಿ ಸಂದರ್ಶಿಸಿ ತಾ. 16ಕ್ಕೆ ಪುನಃ ವೈಕಮ್ಮಿಗೆ ಬರುವರು, ತಾ. 17ನೇ ದಿನ ವೈಕಮಿನಿಂದ ಹೊರಟು ಆಲ್ವೈ, ತ್ರಿಚೂರು, ಪಾಲ್ಘಾಟುಗಳನ್ನು ತಾ. 18ರಲ್ಲಿ ಸಂದರ್ಶಿಸಿ ತಾ. 19ರಲ್ಲಿ ತಿರುಚನ್ನಾಪಳ್ಳಿಯಿಂದ ಮದ್ರಾಸಿಗೆ ತೆರಳುವರು.

ಮದ್ರಾಸು ನ್ಯಾಯವಿಧಾಯಕ ಸಭೆ—ಈ ಸಭೆಯ ಮುಂದೆ ಬರುವ ಇತರ ವಿಷಯಗಳಲ್ಲಿ ಈ ಕೆಳಗಿನವು ಮುಖ್ಯವಾದವುಗಳಾಗಿವೆ. ಮದ್ರಾಸು ಯುನಿವರ್ಸಿಟಿಗೆ ಗವರ್ನಮೆಂಟು ಗ್ರೇಂಟುಗಳು ಕೊಡೋಣಾಗುವ ವಿಧಾನಗಳನ್ನು ಬದಲಿಸುವ [illegible] ತಿಳಿಯುವಕ್ಕೆ ಈ ಬಗ್ಗೆ ಪ್ರತ್ಯೇಕಿಸಿರುವ ರೂ. ೧,೬,೩೦೦ರಲ್ಲಿ ರೂ. ೧೦೦ನ್ನು ಕಡಿಮೆಮಾಡಬೇಕೆಂಬುವ ವಿಷಯ ಒಂದು ನಿರ್ಣಯವು ಚರ್ಚೆ ಬಗ್ಗೆ ಬರೋಣಾಗುವದು.

([illegible] ಪೇಜಿಗೆ ಮುಂದುವರಿಸಿಯದೆ).

ತಾಲೂಕು ಬೋರ್ಡು ವೋಟರುಗಳಿಗೆ

— ವಿನಂತಿ. —

ಅಯ್ಯಾ,

ತಾಲೂಕು ಬೋರ್ಡುಗಳಿಗೆ ಇರುವ ಕೆಲಸವು ಮುಖ್ಯವಾಗಿ ಪ್ರಾಥಮಿಕ ಶಾಲೆಗಳನ್ನಿಡುವುದು, ಆಸ್ಪತ್ರೆಗಳನ್ನೂ, ಸೂಲಗಿತ್ತಿಯರನ್ನೂ ಇಡುವದು ಹಳ್ಳಿಯ ಮಾರ್ಗಗಳನ್ನು ಮಾಡಿಸುವದು, ಹಳ್ಳಿಗಳಲ್ಲಿ ತೋಡುಗಳಿಗೆ ಸೇತುವೆಗಳನ್ನು ಮಾಡಿಸುವುದು, ಒಳ್ಳೇ ನೀರಿಲ್ಲದ ಹಳ್ಳಿಗಳಲ್ಲಿ ಶುದ್ಧವಾದ ನೀರು ಸಿಕ್ಕುವಂತೆ ಕೆರೆಗಳನ್ನೂ, ಬಾವಿಗಳನ್ನೂ ತೋಡಿಸುವುದು, ಪಟ್ಟಣಗಳಲ್ಲಿ ಉರಿಯುವ ದೀಪಸ್ತಂಭಗಳನ್ನು ಇಡುವದು ಇವೇ ಮುಖ್ಯವಾದ ಕೆಲಸಗಳು. ತಾಲೂಕು ಬೋರ್ಡು ಮೆಂಬರಿಕೆಗೆ ಉಮೇದ್ವಾರರಾಗಿ ನಿಂತುಕೊಂಡವರೆಯೇ ತಮ್ಮ ತಮ್ಮ ಸೆಂಟರಿನ ವೋಟರರ ಪಟ್ಟಿಯನ್ನು ಕೈಯಲ್ಲಿ ಹಿಡಿದು ಅವರ ಮನೆಗಳಿಗೆ ಹೋಗಿಯೂ ಕಾಗದ ಪತ್ರಗಳ ಮೂಲಕ ಅವರನ್ನು ಪುಸಲಾಯಿಸಿ ತಾವು ದೊಡ್ಡವರು, ಅವರ ಸಮ್ಮಂಧಿಕರು, ಇವರ ಸಮ್ಮಂಧಿಕರು, ನಿಮ್ಮ ಹಿರಿಯರ ಪರಿಚಯ ನಮಗೆ ಚೆನ್ನಾಗಿತ್ತು, ಅವರು ನಮಗೆ ಉಪಕಾರ ಮಾಡಿದ್ದಾರೆ, ಮುಂತಾದ ಬೆಲ್ಲದಂಥಾ ಮಾತುಗಳನ್ನು ಹೇಳಿ ಪೋಲಿಂಗ ಸ್ಟೇಶನಿಗೆ ಬಂದಾಗ ಅವರಿಗೆ ಬೇಕಾದಷ್ಟು ಊಟ, ಕಾಫಿ, ಚಾ, ಸೋಡಾ ಲೀಯಾಣ, ಬೀಡಿ, ಸಿಗರೇಟ್, ಎಲೆಅಡಿಕೆ ಕೊಟ್ಟು ಚೀಟಿಗೆ ಗುರ್ತು ಹಾಕಲಿಕ್ಕೆ ಒಳಗೆ ಹೋಗುವಾಗ ಅವರ ಬೆನ್ನು ತಟ್ಟಿ ಸ್ವಾಮಿ, ತಾನು ಇಂಥವನು ತಿಳಿಯಿತೇ ವೋಟು ನನಗೆ ಕೊಟ್ಟುಬಿಡಿ ಎಂದು ಹೇಳುವರು. ಅವರು ಹೊರಗೆ ಬರುವಾಗ ಇವರಿಲ್ಲ. ಮೆಂಬರರಾದ ಮೇಲೆ ಆ ಹಳ್ಳಿಯಲ್ಲಿ ಶಾಲೆ ಬೇಡ, ಈ ಊರಿನಲ್ಲಿ ಆಸ್ಪತ್ರೆ ಬೇಡ, ಆ ಶಾಲೆ ಕವಚಿಹಾಕಿ, ಈ ಆಸ್ಪತ್ರೆ ತೆಗಿಯಿರಿ, ಬಾವಿ ಅಗಿಯಲಿಕ್ಕೆ ದುಡ್ಡಿಲ್ಲ, ಮಾರ್ಗ ಹಳ್ಳಿಗೆ ಅವಶ್ಯವಿಲ್ಲ, ತೋಡಿಗೆ ಅಗತ್ಯವಿದ್ದರೆ ಶಾಲೇ ಮರವನು, ವರ್ಗದ ಜಾಗೆಯಿಂದ ಯಾರಾದರೂ ಕಡಿದು ಹಾಕಲಿ. ಮತ್ತೆ ಹಳ್ಳಿಯವರ ಗುರುತವೇ ಇಲ್ಲ. ಪ್ರಾಥಮಿಕ ವಿದ್ಯೆಯನ್ನು ಧರ್ಮಾರ್ಥ ಕೊಟ್ಟುಬಿಟ್ಟರೆ ಹಿಂದುಳಿದ ಎಲ್ಲಾ ಜಾತಿಯವರು ಕಲಿತು ಬಿಟ್ಟರೆ ಮತ್ತೆ ಮೇಲು ಜಾತಿಯವರಿಗೆ ಮರ್ಯಾದೆ ಸಿಕ್ಕಲಿಕ್ಕಿಲ್ಲ, ತಮ್ಮ ಗುಲಾಮಗಿರಿಗೆ ಒಳಪಡಲಿಕ್ಕಿಲ್ಲ ಮುಂತಾದ್ದನ್ನು ತಲೆಯಲ್ಲಿಟ್ಟುಕೊಂಡು ಬೋರ್ಡಿನಲ್ಲಿ ಹಣವಿಲ್ಲ ಎಂಬ ಒಂದೆ ಸ್ವರವು ಹೊರಡುವದು.

ಆದುದರಿಂದ ವೋಟರರು ಓಟು ಕೊಡುವಾಗಲೆ ಉಮೇದ್ವಾರರನ್ನು ಚೆನ್ನಾಗಿ ಎಚ್ಚರಿಸಿ ಓಟು ಕೊಡಬೇಕಲ್ಲದೆ ಅವರ ಜಾತಿ, ದುಸ್ತು, ಮುಖ, ವಾಕ್ಚಾತುರ್ಯ, ಅವರ ಕಾಫಿ ಲೀಯಾಣ ಮುಂತಾದನ್ನು ನೋಡಿ ಓಟು ಕೊಡಬಾರದು. ಹೀಗೆ ಮಾಡಿದರೆ ಓಟಿಗೆ ಬೆಲೆಯಿದೆ. ಇಲ್ಲವಾದರೆ ವೋಟಿಂಗ ಎಂಬದು ನಾಟಕದಂತಾಗುವದು. ವೋಟರರೇ ಚೆನ್ನಾಗಿ ವಿಚಾರಿಸಿ ನೋಡಿರಿ!!!

ಹಳ್ಳಿ ನಿವಾಸಿಕ.

ದಕ್ಷಿಣ ಕನ್ನಡ ಕೋ-ಒಪರೇಟಿವ್ ಸೆಂಟ್ರಲ್ ಬೇಂಕು

— ಪುತ್ತೂರು. —

ಅಯ್ಯಾ,

ಈ ಬೇಂಕಿನ ಕುರಿತು ಪ್ರಸ್ತಾಪಗಳನ್ನು ಸಹಕಾರಿಗಳು ಪತ್ರಗಳಿಗೆ ಬರೆದು ಕಳುಹಿಸುತ್ತಿರುವರು. ಇದು ಸಹಕಾರಿ ಚಳವಳದ ಶುಭಸೂಚಕ ಚಿಹ್ನೆಯಾಗಿರುವದು. ಆದರೆ ಈ ಬೇಂಕಿನ ಇಂಥ ಪ್ರಸ್ತಾಪಗಳನ್ನು ಎತ್ತಿ ಬರೆಯುವಾಗ ಸಹಕಾರಿ ಚಳವಳಕ್ಕೆ ವಿರೋಧವಾದ ಮತ್ತು ವ್ಯಕ್ತಿಪರವಾದ ಟೀಕೆಗಳು ಇಂಥಾ ಪ್ರಸ್ತಾಪಗಳಲ್ಲಿ ಬಹಳವಾಗಿರುವವು. ಎಂಥೆಂಥಾ ಸಾಮಾನ್ಯಗಳನ್ನು ಹೇಳಿಕೊಂಡು ಏನೇನೂ ಬರೆಯುವರು. ಇಲ್ಲದ ದೋಷಗಳನ್ನು ಆರೋಪಿಸಿಕೊಂಡು ಅವುಗಳನ್ನು ಆರೋಪಣಾರೂಪದಲ್ಲಿಯೇ ಬಿಡುವ ಸಹ ಸಮಾಧಾನವಿಲ್ಲದೆ ಅವುಗಳನ್ನು ಯಾರ ತಲೆಯ ಮೇಲೂ ಹಾಕುತ್ತಲಿದ್ದಾರೆ. ಯಥಾರ್ಥವಾದ ದೋಷಗಳನ್ನು ಸರಳಸ್ವಭಾವದಿಂದ ಸ್ಪಷ್ಟೀಕರಿಸಿ ಸಹಕಾರ ಮೈತ್ರಿಯನ್ನು ಬೆಳಸುವದರಲ್ಲಿ ಸಹಾಯಕರಾಗುವ ಬದಲಿಗೆ ಹೆಸರು ವಿಳಾಸವಿಲ್ಲದ ರೀತಿಗಳಲ್ಲಿ ತಮ್ಮ ಹೆಸರುಗಳನ್ನು ಗುಟ್ಟಿನಲ್ಲಿ ಬಿಗಿ ಹಿಡಿದು ಉದ್ಧವಾದ ಬಾಹ್ಯ ಪತ್ರಗಳ ಬರವಣಿಗೆಗಳಿಂದ ತಮ್ಮ ಬುದ್ಧಿ ಅಭಿಪ್ರಾಯಗಳ ಸ್ವಾತಂತ್ರ್ಯ ಸ್ವರೂಪವನ್ನು ಹೊರಪಡಿಸುತ್ತಿರುವರು. ಇನ್ನೂ ಕೆಲವರು ಈ ಸಹಕಾರ ಚಳವಳ ಮತ್ತು ಸಂಸ್ಥೆಗಳು 'ನಮಗೆ' ಅಲ್ಲದೆ ಇತರ ಯಾರಿಗಾದರೂ ಸಾಧ್ಯವಾದವುಗಳಲ್ಲ, ಇಷ್ಟವಾದವುಗಳೂ ಅಲ್ಲ, ಇತರರ ಪ್ರವೇಶವು ಅನರ್ಥಕಾರಿಯಾಗಿ ಪರಿಣಮಿಸಿ "ನಮ್ಮ" ಕೈಯಲ್ಲಿರುವ ಈ ಸಹಕಾರ ಸೂರ್ಯನು ಕವಚಿಬಿದ್ದು ಸರ್ವತ್ರ ಅಂಧಕಾರಮಯವಾಗಿ ಪ್ರಳಯವೇ ಖಂಡಿತವಾಗಿ ಬಂದು ಪ್ರಕೃತಿಯ ಸ್ಥಿತಿಯೇ ಏಕಾದೀತೆಂಬ ಶಂಕೆಯಿಂದ ತಡೆಯಿರಿ, ಹೆಚ್ಚಿಗೆ ಮಾತಾಡಬೇಡಿರಿ, ಕಲಿಯಿರಿ, ನೀವು ಇನ್ನೂ ಸರಿಯಾಗಿ ಕಲಿತವರಲ್ಲ, ಈಗ ಸುಮ್ಮನಿದ್ದು 'ನಾವು' ಬರೆದುಕೊಟ್ಟ ಸಹಕಾರ ಮಂತ್ರವನ್ನು ಯಾರಿಗೂ ಕೇಳಿಸದಂತೆ ಜಪಿಸಿರಿ, ಒಲಿಸಿರಿ ಎಂಬೀ ಧ್ಯೇಯದ ಆಚರಣೆಯ ಸಾಧನಗಳನ್ನು ತಮ್ಮ ಜಪಮೂಲಕವೇ ಮುಂದೊತ್ತಿ ಸರ್ವಕಾರ್ಯಾಲೋಪವನ್ನು ತಮ್ಮ ಹೆಚ್ಚಿಟ್ಟಿನ ಕೆಳಗೆನೇ ಒತ್ತಿಹಿಡಿದು ಸಹಕಾರದ ಭ್ರಾತೃಪ್ರೇಮದ ಅನನ್ಯಭಾವದಿಂದ ಸುಮ್ಮನಿರುವವರಂತೆ ನಟಿಸುತ್ತಿರುವರು. ಈ ನಟನೆಯ ಸ್ವರೂಪವನ್ನು ಅರಿದುವುದರಲ್ಲಿ ಕೆಲವರ ಸಮಯವು ವ್ಯರ್ಥವಾಗಿ ಹೋಗುವಾಗ ಮತ್ತು ಕೆಲವರ ಆಯುಷ್ಯಕಾಲವು ಈ ಕೃತ್ರಿಮ ಪರಿಸ್ಥಿತಿಯ ಸಹಕಾರ ಚಳವಳದ ಅವಮಾನದ ಇಂಗಿತವನ್ನು ಭೇದಿಸಿ ಕಲಿಯುವದರಲ್ಲಿ ವ್ಯರ್ಥವಾಗುವದು. ಅಂತೂ ಇಂತೂ ಸಹಕಾರ ಚಳವಳದ ಮತ್ತು ಈ ಚಳವಳಕ್ಕೆ ಸಂಬಂಧಪಟ್ಟ ಸಂಸ್ಥೆಗಳ ಯಥಾರ್ಥಸ್ಥಿತಿಯನ್ನು ತಿಳಕೊಂಡು ಅವುಗಳ ಅಭಿವೃದ್ಧಿ ಸಾಧನೆಗಳಲ್ಲಿ ಕೈಹಾಕುವಂಥಾದ್ದು ವಿಪರೀತ ಕಷ್ಟೋಬಲವುಳ್ಳ ಸಹಕಾರಿ ಚಟಿಯೋಗಿಗೆ ಸಹ ದುಸಾಧ್ಯವಾಗಿದೆ. ಹೇಗೂ ಈ ಚಿಕ್ಕ ಪ್ರಸ್ತಾಪನೆಯನ್ನು ಪ್ರಥಮದಲ್ಲಿ ಬರಕೊಂಡು ನಾನು ನಮ್ಮ ಬೇಂಕಿನ ಪರವಾಗಿ ಸೆಂಟ್ರಲ್ ಬೇಂಕಿನ ಡೇಗೇಟಾಗಿ ಆರಿಸಲ್ಪಟ್ಟೆ. ಅಂದಿನಿಂದ ಇಂದಿನವರೆಗೂ ನಡೆದ ಸಮಾಚಾರವನ್ನು ಈ ಪತ್ರದ ಮೂಲಕ ಎಲ್ಲಾ ಸಹಕಾರಿಗಳ ಲಕ್ಷ್ಯಕ್ಕೆ ತರಬೇಕೆಂದಿರುವೆನು. ಸೆಂಟ್ರಲ್ ಬೇಂಕಿನ ಮುಂದರಿಸಿಟ್ಟ ಪಾಲು ಮಾಲಿಕರ ಮಹಾಸಭೆಯು ಇನ್ನು ಸಧ್ಯದಲ್ಲಿ ಕೂಡಲಿಕ್ಕಿದೆ. ನಾನು ಪಡಕೊಂಡ ಮಾಹಿತಿಯನ್ನು ಈ ಸಭೆಯು ಕೂಡುವ ಮೊದಲೇ ಸಹಕಾರಿಗಳ ಮುಂದೆ ಇಡಬೇಕೆಂದಿರುವೆನು.

ಪ್ರತಿನಿಧಿ,
ಮಂಗಳೂರು ಟೌನ್ ಕೋ-ಒಪರೇಟಿವ್ ಬೇಂಕು,
ಲಿಮಿಟೆಡ್, ಮಂಗಳೂರು.

ಕಾಸರಗೋಡು ತಾಲೂಕು ಬೋರ್ಡ್ ಉಪಾಧ್ಯಾಯರ ಗೋಳು.

ಅಯ್ಯಾ,

ಈ ತಾಲೂಕು ಬೋರ್ಡಿನ ಕೈಕೆಳಗಿದ್ದಷ್ಟು ಎಲಿಮೆಂಟರಿ ಶಾಲೆಗಳು ಬೇರೆ ಯಾವ ತಾಲೂಕು ಬೋರ್ಡಿನಲ್ಲಿಯೂ ಇಲ್ಲ. ಈ ತಾಲೂಕಿನ ೧೧೪ ಗ್ರಾಮಗಳಲ್ಲಿ ೯೬ ಲೋವರ ಎಲಿಮೆಂಟರಿ ಶಾಲೆಗಳೂ ೫ ಹಾಯರ್ ಎಲಿಮೆಂಟರಿ ಶಾಲೆಗಳೂ ಇವೆ. ಸಾಧಾರಣವಾಗಿ ೫೦೦ ಮಂದಿ ಉಪಾಧ್ಯಾಯರು ಈ ಬೋರ್ಡಿನ ಕೈಕೆಳಗಿರುತ್ತಾರೆ. ೧೯೨೪ನೇ ಇಸವಿಯ ಅಕ್ಟೋಬರ ತಿಂಗಳಿನಿಂದ ಈ ತಾಲೂಕು ಬೋರ್ಡ ಮೆಂಬರರು ಮತ್ತು ಪ್ರೆಸಿಡೆಂಟರೊಳಗೆ ಕಲಹಗಳು ಎದ್ದ ಪ್ರತಿ ತಿಂಗಳ ೨ನೇ ಹಪ್ತೆಗೆ ಸಿಕ್ಕತಕ್ಕ ಸಂಬಳವು ಮೂರು ತಿಂಗಳಿಗೊಮ್ಮೆ ಒಂದು ತಿಂಗಳ ಸಂಬಳ ಸಿಕ್ಕುವ ಸ್ಥಿತಿಗೆ ಬಂತು. ಕಳೆದ ದಶಂಬರ ತಿಂಗಳ ವರೆಗೆ ಹ್ಯಾಗೂ ನವಂಬರ ಆಖೈರು ವರೆಗಿನ ಸಂಬಳವು ಸಿಕ್ಕಿತು. ಅದರಲ್ಲಿಯೂ ೧೯೨೪ನೇ ಇಸವಿ ಎಪ್ರಿಲ್ ೧ನೇ ತಾರೀಕಿನಿಂದ ಜಾರಿಗೆ ಬರಬೇಕಾದ ಸ್ಕೇಲು ೧೯೨೪ನೇ ಇಸವಿ ಸಪ್ಟಂಬರ ೧ನೇ ತಾರೀಕಿನಿಂದ ಜಾರಿಗೆ ತಂದದ್ದು ಪಪ್ಪೆಂದು ೧೧ ತಿಂಗಳು ವರೆಗೆ ಅನೇಕ ಮಂದಿ ಉಪಾಧ್ಯಾಯರಿಗೆ ಸರ್ವಿಸು ಪ್ರಕಾರ ಕೊಡಿಸಿಕೊಟ್ಟ ಸಂಬಳವನ್ನು ಹಿಂತಿರುಗಿ ಕೊಡಬೇಕೆಂಬ ಹುಕುಂ ಹೊರಟು, ಹೆಚ್ಚು ಸರ್ವಿಸು ಇರುವ ಉಪಾಧ್ಯಾಯರಿಗೆ ತಿಂಗಳಿಗೆ ಸರಾಸರಿ ೬—೮—೧೦ ರೂಪಾಯಿ ಮಾತ್ರವೇ ಸಿಗುತ್ತದೆ. ಇತ್ತಲಾಗೆ ದಶಂಬರ, ಜನವರಿ, ಫೆಬ್ರವರಿ ತಿಂಗಳ ಸಂಬಳವು ಇನ್ನೂ ಸಿಕ್ಕಲಿಲ್ಲ. ಈಗ ಪ್ರೆಸಿಡೆಂಟರು ಪುತ್ತೂರು ಡಿವಿಜನಲ್ ಆಫೀಸರರು. ಇವರ ಕಾಲದಲ್ಲಾದರೂ ಸಂಬಳವು ತಿಂಗಳು ತಿಂಗಳು ಸರಿಯಾಗಿ ಸಿಕ್ಕೀತು ಎಂದು ಉಪಾಧ್ಯಾಯರು ನಿರೀಕ್ಷಿಸಿಕೊಂಡಿದ್ದರು. ಆಗಳವ ಸಮಯ ೩ ತಿಂಗಳಿಗೊಮ್ಮೆ ಒಂದು ತಿಂಗಳ ಸಂಬಳ ಸಿಗುತಿತ್ತು. ಈ ಮೂರು ತಿಂಗಳ ಸಂಬಳ ಅಲ್ಲಿಯೇ ಬಾಕಿ ಇದೆ, ನಾಲ್ಕನೆ ತಿಂಗಳು ನಡಿಯುತ್ತದೆ. ಒಟ್ಟಾರೆ ಎಲ್ಲರ ಮನಸ್ಸಿನಲ್ಲಿಯೂ ಎಲಿಮೆಂಟರಿ ಶಾಲಾ ಉಪಾಧ್ಯಾಯರನ್ನು ಉಪವಾಸ ಹಾಕಿ ಕೊಲ್ಲಬೇಕೆಂಬದೇ ಇದರ ಪರಿಣಾಮವೆಂದು ಕಾಣುತ್ತದೆ. ಇನ್ನು ಇದೇ ತಿಂಗಳ ೧೫ನೇ ತಾರೀಕಿಗೆ ಕೆಲವು ಮಂದಿ ಉಪಾಧ್ಯಾಯರನ್ನು ತೆಗಿಯುತ್ತಾರಂತೆ. ಒಟ್ಟಾರೆ ಉಪಾಧ್ಯಾಯರೆಂಬವರು ಮಾರ್ಗದ ಬದಿಯ ಚರಂಡಿಯ ಕಸವೆಂತಲೆ ಬೋರ್ಡಿನವರ ಭಾವನೆಯಾಗಿದೆ. ಅಚೆಯಿಂದ ಡಿಪ್ಯುಟಿ ಇನ್ಸ್‌ಪೆಕ್ಟರರು ಬಂದು ಆ ಮೆಥಡ್ ಸರಿಯಿಲ್ಲ. ಈ ಮೆಥಡ್ ಸರಿಯಿಲ್ಲ, ಕಡ್ಡಿಗಳಿಲ್ಲ, ಕವಡಿಗಳಿಲ್ಲ, ನೇಚರಸ್ಟಡಿ ಅನ್‌ಸೆಟಿಸ್‌ಪೆಕ್ಟರಿ, ಚರಿತ್ರೆ ಪೂವರ್, ಸಂಭಾಷಣೆ ಸರಿಯಿಲ್ಲವೆಂದು ವಿಜಿಟರ್ಸ ಪುಸ್ತಕದ ಮೇಲೆ ಬರಿಯುತ್ತಲೇ ಇದ್ದಾರೆ. ಕೆಲವು ಊರುಗಳಲ್ಲಿಯೂ ಹಳ್ಳಿಗಳಲ್ಲಿಯೂ ಉಪಾಧ್ಯಾಯರ ಮೇಲೆ ತಪ್ಪು ಅರ್ಜಿಗಳು ಆಗುತ್ತಲೆ ಇವೆ. ಹೊಟ್ಟೆಗಿಲ್ಲದೆ ನರಳುತ್ತಿರುವ ಉಪಾಧ್ಯಾಯರ ಮೇಲೆ ಅಸ್ತ್ರಗಳನ್ನು ಬಿಡುವವರಿಗೆ ಮಿತಿಯೇ ಇಲ್ಲ. ಈ ನಿರ್ಗತಿಕ ತನವು ಎಂದು ನಮ್ಮನ್ನು ಬಿಡುವುದೋ ದೇವರೇ ಬಲ್ಲ.

ಹರಿ.

ಒಳದೇಶವರ್ತಮಾನ.

(೭ನೇ ಪುಟದಿಂದ ಮುಂದರಿಸಿದುದು.)

ಸರಕಾರದ ಕಾರ್ಯಕಾರಿ ಕೌನ್ಸಿಲಿನ ಮೆಂಬರರ ಸಂಖ್ಯೆಯನ್ನು ನಾಲ್ಕರಿಂದ ೩ಕ್ಕೆ ತಗ್ಗಿಸಬೇಕೆಂಬುವ ಚರ್ಚೆಯನ್ನೆತ್ತಲಿಕ್ಕೆ ಈ ಬಗ್ಗೆ ಪ್ರತ್ಯೇಕಿಸಿಟ್ಟ ರೂ. ೧೬,೨೦೦ನ್ನು ಕಡಮೆಮಾಡಬೇಕೆನ್ನುವ ನಿರ್ಣಯವು ಸಭೆಯ ಮುಂದೆ ಬರುವದು.

ಹೈಕೋರ್ಟಿನಲ್ಲಿ ಪ್ರಕೃತವಿರುವ ಹೈಕೋರ್ಟ ಜಡ್ಜರ ಸಂಖ್ಯೆಯ ವಿಷಯ ವಾದವನ್ನು ನಡಿಸುವದ: ಅಗತ್ಯವಾದ್ದರಿಂದ ಈ ಬಾಬಿನಲ್ಲಿ ಬಿಂಗಡಿಸಿಟ್ಟಿರುವ ರೂ. ೫,೬೦,೭೦೦ ಮೊಬಲಗಿನಿಂದ ಒಂದು ಲಕ್ಷ ರೂಪಾಯಿಗಳನ್ನು ತೆಗೆದು ಹಾಕಬೇಕೆನ್ನುವ ನಿರ್ಣಯವು ಸಭೆ ಮುಂದೆ ಬರಲಿಕ್ಕಿರುವುದು

ಮಂತ್ರಿಗಳ ಸಂಬಳವನ್ನು ಕಡಿಮೆಮಾಡುವ ವಿಷಯವನ್ನು ಸಭೆಯ ಮುಂದೆ ಪರ್ಯಾಲೋಚನೆಗೆ ತರಲಾಗುವಂತೆ ಈ ಬಾಬಿನಲ್ಲಿ ಪ್ರತ್ಯೇಕಿಸಿಟ್ಟ ೧,೭೪೦೦೦ದಲ್ಲಿ ೭೪,೦೦೦ದ ಮೊಬಲಗನ್ನು ತೆಗೆದುಹಾಕಬೇಕೆನ್ನುವ ಠರಾವು ಚರ್ಚೆಗೆ ಬರುವುದು.

ಎಕ್ಸೈಜ್ ಮಿನಿಸ್ಟರರಲ್ಲಿ ವಿಶ್ವಾಸವಿರದೆಂಬುವ ವಿಷಯವನ್ನು ಸಭೆಯಲ್ಲಿ ಎತ್ತಲಿಕ್ಕೆ ಈ ಬಗ್ಗೆ ಪ್ರತ್ಯೇಕ ಇಟ್ಟ ರೂ. ೪೩,೦೫,೬೦೦ನ್ನು ತೆಗೆದು ಹಾಕಬೇಕೆನ್ನುವ ನಿರ್ಣಯದ ಚರ್ಚೆಯು ನಡಿಯುವುದು.

ಗವರ್ನರ ಸಾಹೇಬರಿಗೆ ಪ್ರೈವೇಟ್ ಸೆಕ್ರಿಟರಿಯಾಗಿ ಹಿಂದಿಯನ್ನು ನೇಮಿಸುವ ವಿಷಯ ಒಂದು ನಿರ್ಣಯವನ್ನು ಸಭೆಯಲ್ಲಿ ತರಲಾಗುವಂತೆ ಈ ಬಾಬಿನಲ್ಲಿ ಪ್ರತ್ಯೇಕಿಸಿಟ್ಟ ೨೬,೪೧,೦೦೦ ಮೊಬಲಗಿನಲ್ಲಿ ರೂ. ೧೦೦ನ್ನು ಕಡಿಮೆಮಾಡಬೇಕೆನ್ನುವ ಚರ್ಚೆಯು ನಡಿಯುವುದು.

ಗವರ್ನರ ದೊರೆಗಳ ಪರ್ಯಟನದ ಬಗ್ಗೆ ಸ್ಪೆಶಲ್ ಟ್ರೈನುಗಳ ಏರ್ಪಾಡನ್ನು ಚರ್ಚೆಗೆ ತರುವಂತೆ ಈ ಬಾಬಿನಲ್ಲಿ ಪ್ರತ್ಯೇಕಿಸಿಟ್ಟ ರೂಪಾಯಿ ೧,೩೪,೦೦೦ದಿಂದ ಒಂದು ನೂರನ್ನು ಕಡಮೆಮಾಡ ಬೇಕೆಂಬುವ ವಾದವು ನಡಿಯುವುದು.

ವೈಕಮಿನಲ್ಲಿ ಮಹಾತ್ಮಾಜಿಯವರು—ತಾ. ೧೦ನೇ ದಿನ ಪ್ರಾತಃಕಾಲ ಗಾಂಧಿಜಿಯವರು ಸತ್ಯಾಗ್ರಹಿಗಳೊಡನೆ ದೇವಪ್ರಾರ್ಥನೆಯನು ಮಾಡಿದರು. ಆಯವು ಲಭಿಸುವ ತನಕ ಸತ್ಯಾಗ್ರಹಿಗಳು ತಮ್ಮ ಕಾದಾಟವನ್ನು ಮುಂದುವರಿಸಬೇಕಾಗಿ ವಿಜ್ಞಾಪಿಸಿಕೊಂಡರು.

ಪೋಲೀಸು ಕಮ್ಮಿಶನರಾದ ಮಿ। ಡಬ್ಲ್ಯು. ಎಚ್. ಪಿಟ್ ಸಾಹೇಬರಿಗೂ ಡ್ಯಾ. ಎಸ್. ಸಿ. ಎ. ಇವರ ಸೀನಿಯರ್ ಸೆಕ್ರೆಟರಿಗಳಾಗಿದ್ದ ಚ್ಯಾಕಮೆನ್ ಇತ್ಯಾದಿ ಗ್ರಹಸ್ಥರಿಗೂ ಭೇಟಿಕೊಟ್ಟರು.

ವೈಕಮದಲ್ಲಿಯ ಸತ್ಯಾಗ್ರಹ ವಿರೋಧಿಗಳಲ್ಲಿ ಮುಖಂಡರಾದವರಿಗೂ ಗಾಂಧಿಜಿಯವರಿಗೂ ಪರಸ್ಪರ ಸಂದರ್ಶನೆಯಾಯಿತು. ಮೂರು ತಾಸುಗಳ ತನಕ ಇವರೊಡನೆ ಪರ್ಯಾಲೋಚನೆಮಾಡಿದರೂ ಸತ್ಯಾಗ್ರಹವನ್ನು ಕೊನೆಗಾಣಿಸುವ ಯಾವ ಹಂಚಿಕೆಯನ್ನಾದರೂ ಏರ್ಪಡಿಸಲಾಗಲಿಲ್ಲ.

ತಾ. ೧೧ನೇ ದಿನ ಮಹಾತ್ಮಾಜಿಯವರು ವೈಕಮಿನಿಂದ ಹೊರಡುವರು.

ಸುಭಾಸ್ ಚಂದ್ರಬೋಸ್:—ಕಲ್ಕತ್ತಾ ಕೋರ್ಪೋರೇಶನಿನ ಕಾರ್ಯಕಾರಿ ಅಧಿಕಾರಿಯಾಗಿದ್ದು ಪ್ರಕೃತ ಒರ್ಡಿನೆನ್ಸ್ ಬಲೋದ್ದಂಡಿಯ ಪ್ರಕಾರ ಬಂಧಿಸಲ್ಪಟ್ಟಿರುವ ಸುಭಾಸಚಂದ್ರ ಬೋಸರಿಗೆ ಕಲ್ಕತ್ತಾ ಕೋರ್ಪೋರೇಶನಿನವರು ಇನ್ನು ಮೂರು ತಿಂಗಳುಗಳ ರಜೆಯನ್ನು ಕೊಟ್ಟಿರುತ್ತಾರೆ.

ತಂಜಾವೂರ ಡಿಸ್ಟ್ರಿಕ್ಟ್ ಬೋರ್ಡಿನವರು:—ತಮ್ಮ ಅಧಿಕಾರದಲ್ಲಿರುವ ಎಲ್ಲಾ ಶಾಲೆಗಳಲ್ಲಿ ಹಿಂದಿಯನ್ನು ಕಲಿಸಬೇಕೆನ್ನುವ ನಿರ್ಣಯವನ್ನು ಬಹು ಮತದಿಂದ ಮಂಜೂರು ಮಾಡಿರುತ್ತಾರೆ. ಮತ್ತು ಬೋರ್ಡಿನ ಜನರಲ್ ಫಂಡಿನಿಂದ ರೂ. 2520ನ್ನು ಈ ಬಗ್ಗೆ ಸಂಕಲ್ಪ ಮಾಡಿರುತ್ತಾರೆ.

ಎಸೆಂಬ್ಲಿ ಅಧಿವೇಶನ:—ನಾಲ್ಕು ದಿವಸಗಳ ರಜೆನಂತರ ಎಸೆಂಬ್ಲಿಯ ಅಧಿವೇಶನವು ಇದೇ ತಿಂಗಳ ತಾ. 12ರಲ್ಲಿ ಪ್ರಾರಂಭವಾಗಿದೆ. ಸುಧಾರಣಾವಿಚಾರಣಾ ಕಮಿಟಿಯವರ ವರದಿಯ ವಿಷಯ ಚರ್ಚೆ ನಡಿಸುವರೆ ಒಂದು ದಿವಸವನ್ನು ಪ್ರತ್ಯೇಕಿಸಬೇಕೆಂಬುವ ವಿಜ್ಞಾಪನೆಯು ಈಗ ತತ್ಕಾಲದಲ್ಲಿ ಪ್ರಯೋಜನವಿಲ್ಲದ್ದೆಂತ ನಿರಾಕರಿಸಲ್ಪಟ್ಟಿರುವದರಿಂದ ಪಂಡಿತ ಮೋತಿಲಾಲನೆಹರುಗಳವರು ಎಡ್ಜರ್ನಮೆಂಟ ನಿರ್ಣಯದ ನೋಟೀಸನ್ನು ಕೊಟ್ಟಿರುತ್ತಾರೆ. ಕೋಟನ್ ಎಕ್ಸೈಜ್ ಸುಂಕವನ್ನು ಕಡಮೆ ಮಾಡಲಿಕ್ಕಾಗುವದಿಲ್ಲವೆಂತ ಸರಕಾರದ ಕಡೆಯಿಂದ ಉತ್ತರ ದೊರಕಿರುವದು.

ವೈಕಮ್ ದೇವಸ್ಥಾನದ ಅಧಿಕಾರಿಗಳು ಪ್ರಕೃತ ವಿವಾದಲ್ಲಿರುವ ರಸ್ತೆಗಳನ್ನು ಗೋಡೆಗಳನ್ನು ಕಟ್ಟಿಸಿ ಮುಚ್ಚಿ ಬಿಟ್ಟು ಹಿಂದುಗಳಲ್ಲದ ಇತರರನ್ನು ಸಹ ಈ ರಸ್ತೆಗಳಲ್ಲಿ ಬರಲು ಬಿಡದಂತೆ ತಕ್ಕ ವ್ಯವಸ್ಥೆಯನ್ನು ಮಾಡಲಿಕ್ಕಿರುವರು.

ಬಂಗಾಲ ಗವರ್ನರರ ಕಾರ್ಯಕಾರಿ ಕೌನ್ಸಿಲಿನ ಸೀನಿಯರ್ ಮೆಂಬರರಾದ ಸರ್ ಅಬ್ದುರ್ ರಹೀಮರನ್ನು ಬಂಗಾಳದ ಆಕ್ಟಿಂಗ್ ಗವರ್ನರರಾಗಿ ನೇಮಿಸದೆ ಇದ್ದಕ್ಕಿದ್ದ ವಿಷಯ ಬ್ರಿಟಿಷ ಪಾರ್ಲಿಮೇಂಟಿನಲ್ಲಿ ಕರ್ನೆಲ್ ವೇಜವೂಡರು ಹಿಂದೂಸ್ಥಾನದ ಅಂಡರ್ ಸೆಕ್ರೆಟರಿಗಳನ್ನು ಕುರಿತು ಪ್ರಶ್ನೆಗಳನ್ನು ಕೇಳಿದರು. ತೃಪ್ತಿಕರವಾದ ಉತ್ತರವು ಈ ಬಗ್ಗೆ ಅಂಡರ್ ಸೆಕ್ರೆಟರಿಗಳಿಂದ ದೊರೆಯಲಿಲ್ಲ.

ಜಾತಿವಿಚಾರ ಮತ್ತು ಸಹಪಂಕ್ತಿ ಭೋಜನ. ಶರ್ಮಾದೇವಿ ಎಂಬಲ್ಲಿರುವ ತಮಿಳು ಗುರುಕುಲದಲ್ಲಿ ಜಾತಿಭೇದದ ಗಣನೆಯಿಲ್ಲದೆ ಸಹಪಂಕ್ತಿ ಭೋಜನವನ್ನು ವಿದ್ಯಾಲಯದಲ್ಲಿ ಮಾಡಿಸುವ ವಿಷಯ ಗಾಂಧಿಜಿಯವರ ಅಭಿಪ್ರಾಯವು ಕೇಳಿಕೊಳ್ಳಲಾಯಿತು. ಈ ಬಾಬಿನಲ್ಲಿ ಯಾವ ಬಗ್ಗೆಯದಾದರೂ ಪಕ್ಷಾಯ ಇರಕೂಡದೆಂದೂ ಈ ವಿಷಯದಲ್ಲಿ ಆಕ್ಷೇಪ ಇದ್ದಂಥವರ ಅಭಿಪ್ರಾಯಗಳನ್ನು ಮನ್ನಿಸಬೇಕೆಂತಲೂ ಗಾಂಧಿಜಿಯವರು ಹೇಳಿರುವರು. ಜಾತಿವಿಚಾರವನ್ನು ತೆಗೆದುಹಾಕುವುದು ಸಹ ಗಾಂಧಿಜಿಯವರಿಗೆ ಇಷ್ಟತೋರುವುದಿಲ್ಲ. ಈ ವಿಷಯ ತಮ್ಮ ಅಭಿಪ್ರಾಯವನ್ನು ಯಂಗ್ ಇಂಡಿಯಾದಲ್ಲಿ ಸಧ್ಯದಲ್ಲಿ ಪ್ರಕಟಿಗೊಳಿಸುವರಾಗಿ ತಿಳಿದುಬರುತ್ತದೆ.

ಅಖಿಲ ಭಾರತ ವರ್ಷದ ಆಯುರ್ವೇದ ಪರಿಷತ್ತು ಮತ್ತು ಪ್ರದರ್ಶನವು ಬರುವ ಎಪ್ರಿಲ್ ತಿಂಗಳ ತಾ. ೭, ೮, ೯ರಲ್ಲಿ ಹರಿದ್ವಾರದ ಋಷಿಕುಲ ಆಯುರ್ವೇದಿಕ್ ಕೋಲೇಜಿನಲ್ಲಿ ಕೂಡುವುದು.

ಶ್ರವಣ ಬೆಳ್ಗೊಳದಲ್ಲಿ ಮಹಾ ಮಸ್ತಕಾಭಿಷೇಕ ಪೂಜಾ ಸಮಾರಂಭ:—ಈ ತಿಂಗಳ ತಾ. 15ರಲ್ಲಿ ಈ ಪೂಜಾಮಹೋತ್ಸವವು ನಡೆಯುವದು. ಈ ಸಂದರ್ಭದಲ್ಲಿ ಜೈನವಿದ್ಯಾ ಫಂಡಿನ ಸಂಘದ ಅಧಿವೇಶನವೂ ಕೂಡುವದು. ರಾಜ್ಯಭೂಷಣ ದಾನವೀರ ಸರ್. ಸೇಟ್ ಸರೂಪಚಂದಜಿ ಹುಕುಮಚಂದ ಕೆ. ಟಿ.ರವರು ಈ ಅಧಿವೇಶನದ ಅಧ್ಯಕ್ಷರಾಗಿರುವರು. ಶ್ರೀಮನ್ ಮೈಸೂರು ಮಹಾರಾಜರವರು ಈ ಅಧಿವೇಶನದ ಮುಹೂರ್ತವನ್ನು ತಾ. ೧೪ನೇ ದಿನ ನೆರವೇರಿಸಿ ಕೊಡುವರು.

ಡಿಸ್ಟ್ರಿಕ್ಟ್ ಎಡ್ಯುಕೇಶನಲ್ ಕೌನ್ಸಿಲಿನ ನಿಸ್ವಾರ್ಥಕತೆ:—ಕೋಲನಾಡದ ಮುನ್ಸಿಪಲ್ ಕೌನ್ಸಿಲಿನ ಪರವಾಗಿ ರಾ। ಸುಬ್ಬರಾವ್ ಎಂಬ ಕೌನ್ಸಿಲರೊಬ್ಬರು ಜಿಲ್ಲಾ ಎಜ್ಯುಕೇಶನಲ್ ಕೌನ್ಸಿಲಿಗೆ ಪ್ರತಿನಿಧಿಗಳಾಗಿದ್ದರು. ಇವರು ಈ ಜಿಲ್ಲಾ ಕೌನ್ಸಿಲಿನಲ್ಲಿ ಈ ಕೌನ್ಸಿಲಿನಿಂದ ಯಾವ ಪ್ರಯೋಜನವೂ ಇಲ್ಲದೆ ಇರುವುದರಿಂದ ಈ ಕೌನ್ಸಿಲನ್ನು ತೆಗೆದುಹಾಕಬೇಕೆನ್ನುವ ನಿರ್ಣಯವನ್ನು ತಂದು ಅದು ಬಹುಮತದಿಂದ ಮಂಜೂರುಮಾಡಿಸಿದರು. ಈ ನಿರ್ಣಯಕ್ಕನುಸಾರವಾಗಿ ಇವರು ಈ ಜಿಲ್ಲಾ ಕೌನ್ಸಿಲು ಮೆಂಬರುತನಕ್ಕೆ ರಾಜಿಕೊಟ್ಟರು. ಇವರು ರಾಜಿಕೊಟ್ಟ ಸ್ಥಾನಕ್ಕೆ ಇನ್ನೊಬ್ಬ ಪ್ರತಿನಿಧಿಯನ್ನು ಮುನ್ಸಿಪಲ್ ಕೌನ್ಸಿಲಿಂದ ಆರಿಸಬೇಕೆಂಬುವ ಸಂದರ್ಭದಲ್ಲಿ ಜಿಲ್ಲಾ ಎಡ್ಯುಕೇಶನಲ್ ಕೌನ್ಸಿಲಿನ ನಿಸ್ವಾರ್ಥಕತೆಯು ಚರ್ಚಿಸಲ್ಪಟ್ಟು ಇಂಥಾ ಸಂಸ್ಥೆಗೆ ಪ್ರತಿನಿಧಿಯನ್ನು ಕಳುಹಿಸಿ ಕೊಡುವುದು ಯುಕ್ತವಲ್ಲವೆಂತ ನಿರ್ಣಯಿಸಿರುತ್ತಾರೆ.

NOTICE.

In the Court of the District Munsiff of MANGALORE.

I. A. No. 15/1925 in
I. P. No. 27/1923.

BETWEEN:—
K. Narayana Kudva—Petitioner.
AND
Chunilal Daya Bai & Co. & others—Respondents.

That the above named Petitioner has applied for an absolute order of discharge under section 41 of Act V of 1920 and that the said application will come on for hearing on 30—3—1925 at 11 A. M. before the abovementioned Court. His creditors may appear either in person or by pleader on or before the said date and oppose the said application.

Mangalore
6—3—1925

B. Vaikunta Baliga
Vakil for Petitioner.

ಆರೋಗ್ಯ ಚಂದ್ರಿಕೆ.
ಮದ್ರಾಸ್.
ಸಂಪಾದಕರು: ಡಾಕ್ಟರ್ ಯು. ರಾಮರಾವ್, ಎಲ್. ಎಮ್. ಸಿ. ಎಫ್. ಎಮ್. ಯು. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಚಿಕಿತ್ಸೆಯ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವುದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ.

ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ.

ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವುವು.

'ಹೆಲ್ತ್' ಎಂಬ ನಮ್ಮ ಇಂಗ್ಲಿಷ್ ಮಾಸಪತ್ರಿಕೆಯನ್ನೋದಿ ಸಂತೋಷಿಸಿದ ಅನೇಕ ದೊಡ್ಡ ಮನುಷ್ಯರ ಪ್ರೋತ್ಸಾಹದ ಮೇಲೆ ಈ ಕನ್ನಡ ಪತ್ರಿಕೆಯನ್ನು ಹೊರಡಿಸಿದೆ.

ಅದರ ಸಂಪುಟ ೩ ಮತ್ತು ೧೦ನೇಯ ನವಂಬರ ೧೯೨೪ ಸಂಚಿಕೆಯಲ್ಲಿ ಕಾಣಿಸಿರುವ ವಿಷಯಗಳು.

ಮುಖಚಿತ್ರ:—ಸರ್ವತಂತ್ರಸ್ವತಂತ್ರನ ಒಬ್ಬ ರಾಜನತಿ.
ಶ್ವಾಸಕ್ರಮ ಅಥವಾ ಪ್ರಾಣಾಯಾಮ.
ಹುಡಿಸೇಡಲ್ಲಿನ ಆಹಾರಗುಣಗಳು ಮತ್ತು ದೋಷಗುಣಗಳು.
ಕಾಲುನಡೆಯೇ ಉತ್ತಮವಾದ ವ್ಯಾಯಾಮವು.
ಜೇನಿನಲ್ಲಿರುವ ಗುಣಗಳು.
ಹಲ್ಲುಗಳ ರಕ್ಷೆ, ಪ್ರಯೋಜನ, ಕೆಲಸ ಮುಂತಾದವು.
ಮದ್ಯಪ್ರಾಶನದಿಂದ ಆರೋಗ್ಯಕ್ಕೆ ಉಂಟಾಗತಕ್ಕ ಹಾನಿ.
ಅಂಗಸಾಧನೆ ಮತ್ತು ಬುದ್ಧಿವ್ಯವಸಾಯ (ವಿದ್ಯಾಭ್ಯಾಸ).
ಗಾಯಗಳು, ಮತ್ತು ಉಳುಕು ಮುಂತಾದವು, ಅವುಗಳ ಚಿಕಿತ್ಸೆ
ನವನಾಗರಿಕ ಪ್ರಪಂಚಕ್ಕೆ ಸಹಜವಾದ ಮೂರು ಕೇಡುಗಳು.
ಒಬ್ಬ ಉಪವಾಸಿಯ ಅನುಭವ.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವುವು. ಆರೋಗ್ಯಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ ರೂ. ೧—೮—೦; ಬಿಡುಪತ್ರಿಕೆ ಒಂದಕ್ಕೆ ರೂ. ೦—೩—೦. ಹಿಂದಿನ ಸಂಚಿಕೆಗಳು ಕೂಡ ದೊರೆಯುವವು.

ಚಂದಾದಾರರಾಗುವವರು ವಿ. ಪಿ. ಮೂಲಕವಾಗಿ ತರಿಸಿಕೊಳ್ಳುವುದಕ್ಕಿಂತಲೂ ಹಣವನ್ನು ಮುಂಗಡವಾಗಿ ಕಳುಹಿಸುವುದು ಲಾಭಕರ. ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು 'ಆರೋಗ್ಯ ಚಂದ್ರಿಕೆ'ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು.

ಪತ್ರವ್ಯವಹಾರಕ್ಕೆ: 'ಆರೋಗ್ಯ ಚಂದ್ರಿಕೆ'
೩೩೩ ತಂಬುಚೆಟ್ಟಿ ಬೀದಿ, ಮದ್ರಾಸ್

ತುಳು ಪಾಡ್ದನಗಳು.

ಬೊಬ್ಬರ್ಯ, ಕಲ್ಲುರ್ಟಿ-ಕಲ್ಕುಡ, ದೈಯ್ಯೊಂಗುಳು—ಕೋಡಕಿನಾರ್, ಮುಂಡತ್ತಾಯ ಪ್ರತಿ ಒಂದಕ್ಕೆ 2 ಆಣೆ. 1½ ಆಣೆ ಟಪ್ಪಾಲು ಚೀಟು ಕಳಹಿಸಿದರೆ 5 ಪುಸ್ತಕಗಳು ಕೂಡಲೇ ಕಳುಹಿಸಲ್ಪಡುವವು.

ವಿಳಾಸ: ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

The Canara Bank, Limited, Magalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.	1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟು, ಪೂರ್ಣವಾಗಿ ತೆತ್ತ ಮೂಲಧನವು ರೂ. 300,000—0—0
Reserve and other sinking Funds „ 259,000—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು 259,000—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1925.

K. Venkat Rao,
Secretary

ಪರೀಕ್ಷಾಕಾಲ.
ವಿದ್ಯಾರ್ಥಿಗಳೇ ಇತ್ತ ನೋಡಿರಿ.

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ನೋಯುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ.

"ಸಾರಸ್ವತಾಸವ"ವು ಒಳಗಣ ಮುಖ್ಯಾವಯವಗಳಲ್ಲುಂಟಾಗುವ ವ್ಯತ್ಯಾಸವನ್ನು ಸರಿಪಡಿಸಿ, ಜೀರ್ಣಶಕ್ತಿಯನ್ನು ಹೆಚ್ಚಿಸಿ, ಪಂಕ್ತಿಭ್ರಮಣೆ ತಲೆತಿರುಗು, ನೆತ್ತಿಯಕಾವು, ಇಂದ್ರಿಯ ದೌರ್ಬಲ್ಯಗಳನ್ನು ಹೋಗಲಾಡಿಸಿ ಶುದ್ಧರಕ್ತವನ್ನು ವೃದ್ಧಿಪಡಿಸುತ್ತದೆ ಸೀಸೆ 1ಕ್ಕೆ ಬೆಲೆ 1 ರೂಪಾಯಿ, ಪೋಸ್ಟೇಜು ಬೇರೆ,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ—ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ ಹೊಟ್ಟೆನೋವು ಇಂಪ್ಲೂಯಂನ್‌ಜಾ ಪ್ಲೇಗುಜ್ವರ.

ಮಕ್ಕಳ—ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು. ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಶಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳ ವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಬ್ರಾಂಚ್ ಆಫೀಸ್, ಚಿಕ್ಕಪೇಟೆ, ಬೆಂಗಳೂರು ಸಿಟಿ.
ಹೆಡ್ ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಪಾಳ್ಯದ ವೆಂಕಟಾಚಲ ಪಂಡಿತರು,
ಏಜಂಟರು:-
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ,
ಮಂಗಳೂರು ಟವನಿಗೆ ಮಾತ್ರ.

ವಿದ್ಯಾವಾಚಸ್ಪತಿ
ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ
"ಸಂಕ್ಷೇಪಗೀತೆ"

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ್ಳ, ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದೆ. ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೦. ಟಪ್ಪಾಲು ಖರ್ಚು ಕೂಡಿ ಆಣೆ ೧೧ನ್ನು ಮನಿಯಾರ್ಡರ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ೩ಕ್ಕಿಂತ ಜಾಸ್ತಿ ಖರ್ಚು ತಗಲುವುದು. ರಖಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.

ಪುಸ್ತಕ ದೊರೆಯುವ ವಿಳಾಸ:—
ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು. ಮತ್ತು ಕೆನರಿಸ್ ಮಿಶನ್ ಬುಕ್ ಎಂಡ್ ಟ್ರೆಕ್ಟ್ ಡಿಪೋಜಿಟರಿ,
ಮಂಗಳೂರು.

ಉಚಿತ! ಬಿಟ್ಟಿ!! ಪುಗಸಟ್ಟೆ!!!

ವೈದ್ಯವಿದ್ಯ
PROPRIETOR RAJVAIDYA NARAYANJI KESHAVJI
NO PRICE NO POSTAGE.

ಎಂಬ ಈ ಪುಸ್ತಕದಲ್ಲಿ ಆಯುರ್ವೇದ ಶಾಸ್ತ್ರದಲ್ಲಿ ಸ್ತ್ರೀಪುರುಷರು ಆರೋಗ್ಯದೃಢಕಾಯರಾಗಿ ಆರೋಗ್ಯದಿಂದ ಕೂಡಿದ ಸಂತಾನಗಳನ್ನು ಪಡೆದು ಸತಿಪತಿಯರು ಅನ್ಯೋನ್ಯವಾಗಿ ಅನುರಾಗವುಳ್ಳವರಾಗಿ ಸುಖದಿಂದಲೂ ಸಂತೋಷದಿಂದಲೂ ಸಂಸಾರಯಾತ್ರೆಯನ್ನು ಮಾಡಲು ಅತ್ಯಂತ ಉಪಯುಕ್ತವಾದ ವಿಷಯಗಳು ಅಲ್ಲಲ್ಲಿ ಹೇಳಲ್ಪಟ್ಟಿರುವುದನ್ನು ಒಂದಾಗಿ ಕ್ರೋಢೀಕರಿಸಿ ಅಜ್ಞಾನದಿಂದಲೂ ಸಂಕಷ್ಟದಿಂದಲೂ ನರಳುತ್ತಿರುವ ಸಂಸಾರಿಗಳನ್ನುದ್ಧಾರಮಾಡುವ ಸಲುವಾಗಿ ಈ ಪುಸ್ತಕವನ್ನು ಕ್ರಯವೂ ಅಂಚೇ ಹಾಸಲೂ ಇಲ್ಲದೆ ಬೇಡಿದವರಿಗೆ ಸರ್ವತ್ರ ಉಚಿತವಾಗಿ ಕಳುಹಿಸುತ್ತೇವೆ. ಹೆಚ್ಚು ಮಾಹಿತಿಗೆ ಪತ್ರ ಬರೆಯಿರಿ.

ರಾಜವೈದ್ಯ ನಾರಾಯಣಜಿ ಕೇಶವಜಿ,
49, ಬಂದರ್ ಸ್ಟ್ರೀಟ್, ಜಿ. ಟಿ. ಮದ್ರಾಸ್

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಶ್ರೀಮದವಧೂತರು,

ಶ್ರೀಕಾಶೀ, ಗಯಾ, ಪ್ರಯಾಗ, ಹರಿದ್ವಾರ ಬದ್ರಿನಾರಾಯಣ ದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಮುನಿಗಳೊಡನೆ ಭೇಟ್ಟಿಯಾಗಿ ಅವರ ಕಡೆಯಿಂದಅನುಭವ ತೆಗೆದು ಪ್ರತಿವಂದು ಸಿದ್ಧಮಾಡಿಕೊಂಡು ಬರೆದಿರುವರು. ೧ನೇದು ಮಂತ್ರಪ್ರಕರಣದಲ್ಲಿ ಮಂತ್ರ ಜಪದಿಂದಲೂ, ಮಂತ್ರಪ್ರಯೋಗದಿಂದಲೂ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವೂ ಇದೆ. ೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳು ಹೊರಡುವಿಕೆ, ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ವಾಂತ್ರಿಕ ಮಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅವನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ. ೩ನೇದು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನು ಅನುಭವ ತೆಗೆದುಕೊಂಡು ತಿಳಿಸಿರುವರು. ೪ನೇದು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಧಾತುಗಳ ಭಸ್ಮ ಸಹ, ಇದರಲ್ಲಿ ಉಂಟು, ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷಧ ಮಾಡುವ ಕ್ರಮವನು ಚೆನ್ನಾಗಿ ಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಳಾಸವು ತಿಳಿಸಿರುವರು. ೫ನೇದು ಯಂತ್ರ ಪ್ರಕರಣದಲ್ಲಿ ವಶೀಕರಣ ಗೃಹಪೀಡಾ ನಿವಾರಣ ಭೂತಪ್ರೇತ, ಪಿಶಾಚಿ, ಬ್ರಹ್ಮರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು, ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರದಿರುವರು. ಈ ಗ್ರಂಥವು ಹತ್ತರ ಇದ್ದ ಬಳಿಕ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷಗಳು ವೈದ್ಯರೂ ಜೋತಿಷ್ಯರು, ಮಾಂತ್ರಿಕರು ತಾಂತ್ರಿಕರೂ ಮನೆಯೊಳಗೆ ಇದ್ದ ಹಾಗೆ ಆಗುತ್ತದೆ. ಇಂಥ ಗ್ರಂಥವು ಯಾರು ಕಣ್ಣಿಂದ ನೋಡಿರಲಿಕ್ಕಿಲ್ಲ. ಪ್ರತಿಗಳು ತರಿಸಿ ನೋಡಬೇಕೆಂದು ಇದರ ಬೆಲೆ ಸಹ ಕಡಿಮೆಮಾಡಿ ಇರುವವು. ೩—೮—೦ ಟಪ್ಪಾಲು ಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ ನಾಟಕ ಕಾವ್ಯ, ಕಥೆಗಳು, ಯಕ್ಷಗಾನ, ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ:—
ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ

Just Arrived OF **Fresh Consignment**

Best English Cycles.



REDUCTION IN PRICES.

Ranger Cycles Model M. Made in Birmingham.	
WITH DUNLOP OR BATES TYRES & TUBES ...	@ Rs. 90—0—0
Barton Humber on Advance	
WITH DUNLOP OR BATES TYRES & TUBES ...	@ „ 100—0—0
Senior Royal with B. S. A. Fitting.	
WITH DUNLOP OR BATES TYRES & TUBES ..	...@ Rs. 145—0—0
Royal Saxon with B. S. A. Fitting.	
WITH DUNLOP OR BATES TYRES & TUBES ...	... @ Rs. 175—0—0

All the above Cycles include pump and tools.

BROOKES PATEERN 90/2 GERMAN SADDLE ...	...@ „ 9—8—0
„ SADDLE 90/2 „ ...	..@ „ 21—0—0
„ „ B/30 „ ...	...@ „ 26—0—0

For further particulars please write to us or call on us:—

All kinds of Cycle Accessories, Dunlop and German Tyres and Tubes
ARE AVAILABLE AT VERY CHEAP RATES.

Special Discount to Traders *Easy Terms Arranged*

APPLY TO:—**The Mangalore Trading Association,**
Wholesale Dealers in Cycles and Cycle Accessories,
Car-Street, MANGALORE

—ಗೋಡೆಗೆ ತಗಲಿಸುವ
ಹೊಸ ನಮೂನೆಯ—

ಟಿಕ್—ಟಾಕ್

ಎಂಬ ಈ ಗಡಿಯಾರಗಳು ಜರ್ಮನೀ ದೇಶದಲ್ಲಿ ತಯಾರಿಸಿದ್ದು. ಇವು ಕಂಠಾರು ಘಂಟೆಯನ್ನು ತೋರಿಸುವವು. ಇವಕ್ಕೆ ಬೀಗ ಕೊಡಬೇಕಾದಿಲ್ಲ. ಇದರಲ್ಲಿ ಕಾಣುತ್ತಿರುವ ಗುಂಡನ್ನು ಮೇಲಕ್ಕೆ ಎಳೆದರೆ ಸಾಕು. ತನ್ನಷ್ಟಕ್ಕೆ ತಾನೇ ಟಿಕ್—ಟಾಕ್ ಎಂಬ ಶಬ್ದವನ್ನು ಮಾಡುತ್ತಾ ಸರಿಯಾದ ಕಾಲವನ್ನು ತೋರಿಸುವದು. ಇದು ನೋಡುವುದಕೆ ಬಹು ಲಕ್ಷಣವಾಗಿರುವುದು.

ಕ್ರಯ 1ಕ್ಕೆ ರೂ. 8—0—0

ಪೀಟರ್ ವಾಚ್ ಕಂಪೆನಿ
ಪೋಸ್ಟ್ ಬಾಕ್ಸ್ ನಂ. 27, ಮದ್ರಾಸ್.

ADVERTISE IN

The Business Directory
OF INDIA, BURMA & CEYLON

A Comprehensive Directory of the various Business-men, Exporters and Importers, Firms, Factories, Mills, Manufacturers, Merchants and Industries of the principal Cities, Ports and Towns of India, Burma and Ceylon.

PUBLISHED ANNUALLY
Rates for Advertisements

¼ Page	Rs.	50.
2 in. Single Column	„	20.
1 in. Single Column	„	15.
Name in Bold Types	„	5.

Price per Copy Rs. 10.

PRINTERS & PUBLISHERS.
Business Directory Co.,
Kanara Press Buildings, MADRAS. E.

Telegrams: "KETHAKI" Phone 540

ದಕ್ಷಿಣ ಕನ್ನಡ ಜಿಲ್ಲೆಯ

ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

JUST ARRIVED
Goodrich Belts.
OF VARIOUS SIZES
Price Re. 1—12—0 each
Mangalore Trading Association,
Car Street, MANGALORE.

ಸಾರಸ್ವತ.

ಕನ್ನಡ ಮತ್ತು ಕೊಂಕಣಿ ಭಾಷೆಗಳಲ್ಲಿ ಕಳೆದ ವಿಜಯದಶಮಿಯ ದಿನದಿಂದ ಪ್ರತಿ ದಶಮಿಗೆ ಹೊರಡುವ ಪತ್ರಿಕೆ.

ವಿ. ಎಸ್. ಕಾಮತ್,
ಮೂಲ್ಕಿ ವಾಮನ ಕುಡುವ } ಸಂಪಾದಕರು.

ಮತಸಂಸ್ಥೆ ಮತ್ತು ಸಮಾಜಕ್ಕೆ ಸಂಬಂಧಪಟ್ಟ ಇತರ ಸಂಸ್ಥೆಗಳ ಸುಸಂಘಟನ.

ಸಮಾಜದೊಳಗೆ ಅನ್ಯೋನ್ಯ ಸಾಧನೆ.

ಸ್ತ್ರೀಸಮಾಜಕ್ಕೆ ಉಪಯುಕ್ತವಾದ ವಿಷಯಗಳ ನಿರೂಪಣ.

ಮತಭಾವನೆಗಳ ಉಜ್ಜೀವನ ಇತ್ಯಾದಿ ಉದ್ದೇಶಗಳಿಂದ ಈ ಪತ್ರಿಕೆಯು ಹೊರಡಿಸಲ್ಪಡುವುದು. ಸಾರಸ್ವತ ಸಮಾಜವು ಇದಕ್ಕೆ ಪ್ರೋತ್ಸಾಹವನ್ನೀಯಬೇಕಾಗಿ ಪ್ರಾರ್ಥನೆ.

ಚಂದಾಹಣ ಅಂಚೆವೆಚ್ಚ ಕೂಡಾ ರೂ. ೧—೪—೦.

ಪೋಷಕರು ರೂ. ೧೦-೦-೦. ಸಹಾಯಕರು ರೂ. ೫-೦-೦. ಮಾದರಿ ಸಂಚಿಕೆಯನ್ನು ಟಪ್ಪಾಲು ಖರ್ಚಿಗಾಗಿ ಅರ್ಧಾಣೆ ಸ್ಟಾಂಪು ಕಳುಹಿಸುವವರಿಗೆ ಉಚಿತವಾಗಿ ಕಳುಹಿಸುವೆವು.

ಕನ್ನಡ ನಾಡಿನಲ್ಲಿ ಪ್ರತಿ ಕಡೆಯಲ್ಲಿಯೂ ಬಾತಮೀದಾರರು ಬೇಕು.

ಎಲ್ಲಾ ಪತ್ರವ್ಯವಹಾರಗಳನ್ನು ಕೆಳಗಿನ ವಿಳಾಸಕ್ಕೆ ನಡೆಸಬೇಕು.

ಯು. ನಾರಾಯಣನಾಯ್ಕ, ಕಾರ್ಯದರ್ಶಿ,
ಸಾರಸ್ವತ, ಉಡುಪಿ.

ಆರ್. ಮಾರ್ಟಿನ್ಸರ

ಜ್ವರದ ಗುಳಿಗೆಗಳು.

ಸುಲಭ ಸ್ವೇದನಕಾರಿಯಾದ ಈ ಘುಟಿಕೆಗಳು ಚಳಿಜ್ವರದ ವಿಷದಾರ್ಥಗಳನ್ನು ತಟ್ಟನೆ ನಿರ್ಮೂಲಪಡಿಸಿ, ವ್ರಣಗಳನ್ನು ಸಂಪೂರ್ಣ ನಾಶಪಡಿಸಿ, ಮಲೇರಿಯಾ ಜ್ವರ, ಚಳಿಜ್ವರ, ಬಾರಿಜ್ವರ, ಮತ್ತು ಆಗಾಗ್ಗೆ ಬಿಟ್ಟುಕೊಂಡು ಬರುವ ಇತರ ಜ್ವರಗಳ ಬಾಧೆಯಿಂದ ಗುಣಪಡಿಸುವವು.

ತಟ್ಟನೆ ವಾಸಿಪಡಿಸುವುದಕ್ಕೆ ಹತ್ತಾರುಗಳಲ್ಲಿ ಪ್ರಸಿದ್ಧತೆಯನ್ನು ಹೊಂದಿದ್ದು, ಅತಿ ಬಿಟ್ಟುಬಿಟ್ಟ ಅನೇಕ ಸಂದರ್ಭಗಳಲ್ಲಿ ಗುಣಪಡಿಸಿದವುಗಳಾಗಿರುತ್ತವೆ.

ಇವುಗಳು ಗಿರಣಿಗಳಲ್ಲಿಯೂ ಕಾರ್ಖಾನೆಗಳಲ್ಲಿಯೂ ವಿಶೇಷವಾಗಿ ಉಪಯೋಗಿಸಲ್ಪಡುವುವು. ಸಾಮಾನ್ಯವಾಗಿ ಹಿಂದೂಸ್ಥಾನದಲ್ಲಿ ಎಲ್ಲಾ ಕೋಟಗಾರರಿಂದ ಉಪಯೋಗಿಸಲ್ಪಡುವುದು. ಅಲ್ಲದೆ ದಿಗಂತ ವಿಶ್ರಾಂತವಾದ ಕೀರ್ತಿಯನ್ನು ಕೂಡ ಸಂಪಾದಿಸಿರುವುದು. ಕಠಿಣ ಜ್ವರವು ತಟ್ಟನೆ ಇಳಿಯಬೇಕಾದರೆ ಆರ್ ಮಾರ್ಟಿನರ ಎಗ್ಯೂ ಮಿಕ್ಸರ್ ಒಡನೆ ಇದನು ಸೇವಿಸಬೇಕು. ಈ ಇವೆರಡು ಅದ್ಭುತ ಶಕ್ತಿಯುಳ್ಳ ಔಷಧಿಗಳು ಪ್ರತಿಯೊಂದು ಕುಟುಂಬದ ಮನೆಯಲಿಟ್ಟುಕೊಳ್ಳಲು ಯೋಗ್ಯ ವಸ್ತುಗಳಾಗಿವೆ. ಪ್ರತಿಯೊಂದು ಬಾಟ್ಲಿಯಲ್ಲಿ 40 ಮಾತ್ರೆಗಳು ಇರುವುವು.

ಬಾಟ್ಲಿ 1ಕ್ಕೆ ರೂ. 1—8—0.

ಆರ್. ಮಾರ್ಟಿನ್ಸರ ಎಗ್ಯೂಮಿಕ್ಸರ್.

ಇದು ಜ್ವರ, ಸೀತಜ್ವರ ಮಲೇರಿಯಾ, ಬಾರಿಜ್ವರ, ಸನ್ನಿಪಾತ ಪಟ್ಟ ವಾಯುವಿನಿಂದುಂಟಾದ ರೋಗ ಇವೇ ಮೊದಲಾದ ಎಲ್ಲಾ ತರದ ಜ್ವರಗಳನ್ನೂ ಕೂಡಲೇ ನಾಶಮಾಡುತ್ತದೆ. ಎಲುಬುಗಳಲ್ಲಿ ಹರಡಿಕೊಂಡಿರುವ ಜ್ವರವನ್ನೂ ಸಹ ನಾಶಮಾಡುವುದಲ್ಲದೆ, ಇದು ಸಿಹಿಯಾಗಿರುವುದರಿಂದ ಸಣ್ಣ ಕೂಸುಗಳು ಸಹ ಕುಡಿಯಲಿಕ್ಕೆ ಇಷ್ಟಪಡುತ್ತವೆ. ಅನೇಕ ನಿಪುಣ ವಿದ್ವಾಂಸ ವೈದ್ಯರಿಂದ ಗುಣಮಾಡುವುದಕ್ಕಾಗದ ಜ್ವರವನ್ನು ಈ ಎರಡೇ ಎರಡು ಬಾಟ್ಲಿಗಳ ಸೇವನೆಯಿಂದ ಹುಷಾರಾಗಿದೆ

ಬಾಟ್ಲಿ 1ಕ್ಕೆ ರೂ. 0—13—0.

ಆರ್. ಮಾರ್ಟಿನ್ಸರ ಮೂಲವ್ಯಾಧಿ ಮಲಾಮು.

ಮನುಷ್ಯನಿಗೆ ಮೂಲವ್ಯಾಧಿ ಆದಾಗ, ಬಹಳ ಸಲ ಮೂತ್ರಕಂಕೆಯಾಗುವಿಕೆ, ಮರ್ಮಸ್ಥಾನದಲ್ಲಿ ಉರಿಯುವುದು, ಮಲಬದ್ಧತೆ ಇವೇ ಮುಂತಾದರಿಂದ ವಠಿಪಡುತ್ತಾನೆ. ಈ ಔಷಧದ ಒಂದೇ ಒಂದು ಬಾಟ್ಲಿಯ ಉಪಯೋಗದಿಂದ, ರಕ್ತ ಸುರಿಯುವ ಮೂಲವ್ಯಾಧಿ, ಕಂಕುಳಲ್ಲಿ ಸೋಯುವ ಮೂಲವ್ಯಾಧಿ ಮತ್ತು ಎಂತ ತರಹದ ಕಠಿಣವಾದ ಮೂಲವ್ಯಾಧಿಯ್ಯಾದರೂ ಕೂಡಲೇ ವಾಸಿಯಾಗುತ್ತದೆ. ಇದು ಒಳ್ಳೇ ಔಷಧಗಳಿಂದ ತಯಾರಿಸಲ್ಪಟ್ಟು ತೆಗೆದುಕೊಳ್ಳುವವರಿಗೆ ಏನೊಂದೂ ನೋವನ್ನೂ ಕೊಡದೆ ತಂಪಾಗಿ ಮಾಡುತ್ತದೆ. ಬಾಟ್ಲಿ 1ರ ದರ ರೂ. 1—8—0 ಮಾತ್ರ.

ವಿಳಾಸ:—ಆರ್. ಡಿ. ಕಟ್ಲೆ ಮತ್ತು ಕಂಪೆನಿ,
ನಂಬ್ರ ಬಿ. ಫ್ರಿಯರ್ ರೋಡ್,
ಸಾಂಜ ವರ್ತಮಾನ ಪ್ರೆಸ್,
ಟೋಡಿವಾಲಾ ಬಿಲ್ಡಿಂಗ ವಿದುರುಗಡೆ, ಫೋರ್ಟ ಮುಂಬಯಿ.

R. D. Kately & Co.
No. B. Frere Road,
Opposit Sanjvertaman Press,
Todivala Building, FORT BOMBAY.

ಸುವರ್ಣಸಂಧಿ.

ಕೈ ಮಗ್ಗಗಳಲ್ಲಿ ನೂಲನ್ನು ನೇಯುವ ಮಗ್ಗಗಳಿಗೆ ಬೇಕಾಗುವ ಯಾವತ್ತು ಸಾಮಾನುಗಳು, ನೂಲಿಗೆ ಹಾಕುವ ನಾನಾ ತರದ ರಂಗುಗಳು ಅಗತ್ಯವಿರುವ ನಾನಾ ಬಗೆಯ ರಸಾಯನಗಳು ಇವನ್ನು ನಮ್ಮಲ್ಲಿಂದ ನ್ಯಾಯವಾದ ಬೆಲೆಗೆ ಹೊಂದಬಹುದು. ನಮ್ಮಲ್ಲಿ ದೊರಕುವ ಯಾವತ್ತೂ ಸಾಮಾನುಗಳನ್ನು ಸೇಕಡಾ ೫ರಂತೆ ಕಮ್ಮಿಶನ್ ಪಡೆದು ಏಜಂಟರು ಮಾರಾಟಕ್ಕೆ ಪಡೆಯಬಹುದು.

ಪಿ. ಪಿ. ತ್ರಿವೇದಿ ಎಂಡ್ ಕೋ,
ನಂಬ್ರ 66 [illegible] ಲೇನ್,
ಫೋರ್ಟ ಮುಂಬಯಿ.

Edited, Printed & Published by V. S. Kamath at the M. T. A. Sharada Press, Mangalore.

Registered: No. M. 498.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ? ಮತ್ತೆ ವಿಶ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ । ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೯. ಮಂಗಳೂರು, ತಾರೀಕು ೨೦ನೇ ಶುಕ್ರವಾರ ಮಾರ್ಚ್ ೧೯೨೫. ಸಂಚಿಕೆ ೧೨.

The Canara Banking
orporation Udipi, Ltd.

ad Office:— Udipi
Branch:— Coondapoor

Paidup Capital	1,66,165—9—11
Reserve etc.	64,700—0—0

Season Deposits

Carrying Special rate of 7% up to 15th June 1925 only.

Further Particulars on Application.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಉಡುಪಿ, ಲಿಮಿಟೆಡ್.

ಹೆಡ್ ಆಫೀಸು:—ಉಡುಪಿ. ಶಾಖೆ—ಕುಂದಾಪುರ.

ವಸೂಲಾದ ಮೂಲಧನ	1,66,165—9—11
ರಿಜರ್ವ ವಗೈರೆ ಫಂಡುಗಳು	64,700—0—0

ತಾ. 15—6—1925ರವರೆಗೆ ಮಾತ್ರ
ಸಾಲಿಯಾನ್ ಸೇಕಡಾ 7ರ ದರದ ಬಡ್ಡಿಯ ಮೇಲೆ
ಮುಸುಂ ಠೇವಣಾತಿಗಳನ್ನು
ಅಂಗೀಕರಿಸೋಣಾಗುತ್ತದೆ.
ಹೆಚ್ಚಿನ ಮಾಹಿತಿಗೆ ಬರಕೊಳ್ಳಿರಿ.

Office of the Corporation, Udipi, 2-3-'25 } **N. Ananda Rao,** *Secretary.*

Wanted Agents
FOR
Every District in South India

For Pushing Sales of Our Calenders, Xmas and New Year Cards, Blotters, Pictures and Picture Post Cards, at wholesale rates. Deposit of Rs. 100—0—0 Essential.

Apply to:—
The South Indian Advertising Agency,
13, Kilary Road,
BANGALORE CITY.

ಶುದ್ಧ ರೋಮದ ಧಾವಳಿಗಳು.

4 ಮೊಳ ಉದ್ದ 1¼ ಮೊಳ ಅಗಲ ರೂ. 1½ರಿಂದ 2 ವರೆಗೆ, 5 ಮೊಳ ಉದ್ದ 1½ ಮೊಳ ಅಗಲ ರೂ. 1½ ರಿಂದ 5 ವರೆಗೆ, 6 ಮೊಳ ಉದ್ದ 1¼ ಮೊಳ ಅಗಲ ರೂ. 2¼ರಿಂದ 6 ವರೆಗೆ, 8 ಮೊಳ ಉದ್ದ 2 ಮೊಳ ಅಗಲ ರೂ. 3½ರಿಂದ 10 ವರೆಗೆ, 12 ಮೊಳ ಉದ್ದ 2¼ ಮೊಳ ಅಗಲ ರೂ. 6ರಿಂದ 12 ವರೆಗೆ, 16 ಮೊಳ ಉದ್ದ 2¼ ಮೊಳ ಅಗಲ ರೂ. 9ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಪಟ್ಟೆ ರೇಶ್ಮೆ ಮಡಿಗಳು, [illegible] ರುದ್ರಾಕ್ಷಿ, [illegible] ಇತ್ಯಾದಿ [illegible] ಸಾಮಾನುಗಳು [illegible]

ವಿಳಾಸ—
ಶಿರೋಮಣಿ ಯು. ನಾರಾಯಣಾಚಾರ್ಯ
ಮತ್ತು [illegible]

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ.

450 ಪುಟಗಳು ಎಮ್. ಗಣಪತಿರಾವ್ ಐಗಳ್ ಇವರಿಂದ ರಚಿತವಾದದ್ದು. ಕ್ರಯ ರೂ 1-4-0

ಮಾರಾಟಕ್ಕೆ ಸಿದ್ಧವಾಗಿವೆ **— ತುಳು ಪಾಡ್ದನಗಳು —** ಮಾರಾಟಕ್ಕೆ ಸಿದ್ಧವಾಗಿವೆ.

ದೈಯ್ಯೊಂಗುಳು, ಕಲ್ಲುರ್ಟಿ—ಕಲ್ಕುಡ, ಕಣಂದೂರು ದೈಯ್ಯೊಂಗುಳು, ಮುಂಡತ್ತಾಯ, ಬೊಬ್ಬರ್ಯ.

ಸುಲಭ ದರಗಳು **— ಶಾಲಾ ಪುಸ್ತಕಗಳು —** ರಖಂ ಕೊಂಡುಕೊಳ್ಳುವವರಿಗೆ ಯೋಗ್ಯ ಡಿಸ್ಕೌಂಟ್.

ಅಜ್ಜಿಕಥೆಗಳು:—ಮೂರು ಕರಡಿಗಳು; ಜೇನುಸಕ್ಕು ಕಾಗೆ ಬಡವಾಯಿತು; ಅರಗಿಣಿ ಮುದ್ದು; ಇಲಿಗಳ ಥಕ್ಕ ಥೈ; ಅಂಗಳ ಮುಗ್ಗು; ಸಿಗಡಿ ಯಾಕೆ ಒಣಗಲಿಲ್ಲ; ಗುಡುಗುಡು ಗುಮ್ಮಟೆ ದೇವರು; ಮೆಣಸಿನ ಕಾಳಪ್ಪ; ಒಡ್ಡನ ಓಟ; ಹೊಸ ಕನ್ನಡ ಪುಸ್ತಕ ಭಾಗ ೧; ಹೊಸ ಕನ್ನಡ ಪುಸ್ತಕ ಭಾಗ ೨; ಕನ್ನಡ ಪದ್ಯಗಳು; ಮಗ್ಗಿ ಪುಸ್ತಕ; ಅಜಿತಕುಮಾರ; ಪದ್ಯ ರತ್ನಾವಳಿ, ಎಕ್ಸರ್‌ಸೈಜ್ ಮತ್ತು ನೋಟು ಪುಸ್ತಕಗಳು, ಕಾಪಿ ಪುಸ್ತಕಗಳು, ಡ್ರಾಯಿಂಗ್ ಪುಸ್ತಕಗಳು

ಇತರ ಪುಸ್ತಕಗಳು:—ಸಂಕ್ಷೇಪಗೀತೆ, ಕೇಕಾಭಂಗ, ಹಿಂದೂ ವ್ರತವಿವೇಕ, ಚಂದ್ರಗುಪ್ತ ಚಕ್ರವರ್ತಿ, ಶ್ರೀ ಕೃಷ್ಣಸಂಧಾನ, ಪದ್ಯಪಾಠಗಳು, ಹರಿಕಥಾ ಮೃತಸಾರ ಹರಿನಾಮಸಂಕೀರ್ತನೆ ಸುಧಾಮೃತ ಪದ್ಯಗಳು. ಬೆಂಕಿಪೆಟ್ಟಿಗೆ ತಯಾರಿಸುವ ವಿಧಾನ, ಸಾಬೂನು ತಯಾರಿಸುವ ವಿಧಾನ, ಸ್ವರಾಜ್ಯ ಭಕ್ತೋಲ್ಲಾಸ, ಚರಕಗೀತೆ, ಕೊಂಕಣಿ ಭಾಷೆಯಲ್ಲಿ ಚಂದ್ರಹಾಸ ನಾಟಕ, ಪ್ರಹ್ಲಾದ ಚರಿತ್ರ ನಾಟಕ, ಕನ್ನಡ ಮೃಚ್ಛಕಟಿಕ ನಾಟಕ, ಚಂದ್ರಹಾಸಾಭ್ಯುದಯ ನಾಟಕ, ಕೋರಿಯೊಲೇನ್ ಚರಿತ್ರ ನಾಟಕ, ಮಾದರಿ ಉಪನ್ಯಾಸ ಭಾಗ ೧, ೨, ಮತ್ತು ೩.

MRUTANJAN B
Best Indian Pain Balm
rutanjan
BOMBAY

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಶತ್ರುವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ತಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ, ರಕ್ತ ಬರುವುದು ನಿಲ್ಲುತ್ತದೆ, ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 2 ಆಣೆ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ ಟೌನ್, ಮದ್ರಾಸು.

109 ಫ್ರೀಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

— ರಥೋತ್ಸವ, ವಿವಾಹ ಉಪನಯನಗಳ ಸಮಯ —
ಸರ್ವರಿಗೂ ಉಡಿಗೆ ತೊಡಿಗೆಗಳು ಬೇಕಾಗುವ ಸಂದರ್ಭ.

ಯಾರು, ಯಾವುದನ್ನು ಎಲ್ಲಿ ಪಡೆಯಬೇಕೆಂಬ ಶಂಕೆಯಿಂದ ವಿಳಂಬ ಮಾಡಬೇಡಿರಿ. ಉಡಿಗೆತೊಡಿಗೆಗಳನ್ನು [illegible] ನಿಮಗೆ ಬೇಕಾದ ಯಥಾರ್ಥ ಮಾಹಿತಿಯನ್ನು ಕಳೆದ ಹತ್ತುಹತ್ತು ವರುಷಗಳಿಂದ ಪಡೆದು ನಮ್ಮಲ್ಲಿಯ ವ್ಯಾಪಾರವು ಗಿರಾಕಿಗಳಿಗೆ ಸರ್ವ ತೃಪ್ತಿಯುಂಟಾಗುವ [illegible] ನಮ್ಮ ಜವಳಿ ಸಂಗ್ರಹವನ್ನು ಮಾಡಿರುತ್ತೇವೆ.

ಗುರ್ಪುರ್ಕಾರ್ ಬ್ರದರ್ಸ್, ರಥಬೀದಿ, ಮಂಗಳೂರು.

ಹೆಡ್ ಆಫೀಸು:—ರಥಬೀದಿ—(ಮೊದಲು ಸುಜೀರ ನಾಗಪ್ಪನಾಯಕ್, ಎಂಡ್ ಕೊ. ಇದ್ದಲ್ಲಿ; ಅಜೀಜುದ್ದೀನ್ ರಸ್ತೆಗೆ ತಿರುಗುವ [illegible]) ಮಂಗಳೂರು.

ಬ್ರೆಂಚ್ ಆಫೀಸು:—ರಥಬೀದಿ—(ಹಳೇ ತಾಲೂಕು ಕಚೇರಿಯ ಪಟಾರಕ್ಕೆ ಸಮೀಪವಿರುವ ಮಳಿಗೆ) ಮಂಗಳೂರು.

ಈ ದೇಶದ ಪ್ರಖ್ಯಾತವಾದ ನೇಯಿಗೆಯ ಕೇಂದ್ರಸ್ಥಳಗಳಾದ—ಬನಾರಿಸ್, ಪೂನಾ, ಅಹಮ್ಮದಾಬಾದ್, ಸುರತ್, ಬೆಂಗಳೂರು ಧರ್ಮಾವರಮ್, ಕಂಜೀವರಮ್, ಕೊಯಿಮುತ್ತೂರು, ಮಧುರೆ, ತಂಜಾವೂರು, ಕುಂಭಕೋಣ, ಆರ್ನಿ, ಶಾಂತಿಪೇಟೆ, ಹುಬ್ಬಳ್ಳಿ, ಇಳಕಲ್, ಗದಗ, ಮದ್ರಾಸು ಈ ಪ್ರಾಂತ್ಯಗಳಲ್ಲಿ ತಯ್ಯಾರಾದ

ಜರಿಸೀರೆಗಳು, ದುಪ್ಪಟಾ, ಜರಿಶಾಲು, ಪೇಟ್ಟ, ರೇಶ್ಮೆ ಸೀರೆಗಳು, [illegible] ಸೀರೆಗಳು, [illegible] ಸೀರೆಗಳು, [illegible] ರೇಶ್ಮೆ ಮಡಿಗಳು, [illegible] ಮತ್ತು ಇತರ [illegible] ಕೈರಾಟೆಯಲ್ಲಿ ತಯಾರಿಸಿದ ನೂಲಿನಿಂದ ಮಾಡಿದ—

ಖದ್ದರ್ ಶರ್ಟಿಂಗ್, ಖದ್ದರ್ ಕೋಟಿಂಗ್, ಖದ್ದರ್ ಟೋಪಿ, ಖದ್ದರ್ ಪೇಟ್ಟ, ಅಂಗವಸ್ತ್ರ, ಇತ್ಯಾದಿ—

[illegible]

[illegible] ಸಂಗ್ರಹಿಸಿ ಇಟ್ಟಿದ್ದೇವೆ.

[illegible] 10%, ರೂ. 350 ರಿಂದ 1000ಕ್ಕೆ 12½% [illegible]

ಪ್ರತಿಯೊಂದು ಕುಟುಂಬಿಗಳ ಮನೆಗಳಲ್ಲಿ ಸೌಖ್ಯವನ್ನು ತೋರಿಸುವುದಕ್ಕೂ ಮತ್ತು ಅವರವರ ಉಪಯೋಗಾರ್ಥವನ್ನು ತಿಳುವಳಿಕೆ ಬಗ್ಗೆ ನಡಿಸುವುದಕ್ಕೂ ಒಂದು ಮುರ್ದಾವಾದ ನಿಘಂಟು ಪುಸ್ತಕವು ಈ ನಮ್ಮ ಹಿಂದೂದೇಶದ ಸಮೂಹದಲ್ಲಿರುವುದು. ಅಂಥಾ ಪುಸ್ತಕವು ಯಾವದೆಂಬುದು

ನೀವುಗಳು ಬಲ್ಲಿರಾ?

(ಅದೇ)

"ಕಾಮಶಾಸ್ತ್ರವೆಂಬುವುದು."

ತಾವುಗಳು ಇನ್ನೂ ಈ ಪುಸ್ತಕವಲ್ಲಿ ಬರೆದಿರುವ ಸಾರಾಂಶವನ್ನು ಓದಿಲ್ಲದಿದ್ದರೆ, ಒಡನೇ ಒಂದು ಪುಸ್ತಕವನ್ನು ಕಳುಹಿಸುವಂತೆ ಒಂದು ಪೋಸ್ಟುಕಾರ್ಡು ಬರಿಯಿರಿ,

ಪುಸ್ತಕವನ್ನು ಇನಾಮಾಗಿ ಕಳುಹಿಸುವೆವು.

ಮುಖ್ಯವಾದ ತಿಳುವಳಿಕೆ.

ತಾವುಗಳು ಧೃಢಚಿತ್ತರಾಗಿಯೂ, ನಿಧಾನಸ್ಥರಾಗಿಯೂ, ಸೌಖ್ಯವಾಗಿಯೂ, ಕಷ್ಟವಿಲ್ಲದೇನೇ ವಿಷಯಗಳನ್ನು ಧರಿಸುವ ಮನಸ್ಸನ್ನು ಹೊಂದಬೇಕಾದರೆ ನಮ್ಮ ಅಮೂಲ್ಯವಾದ "ಕಾಮಶಾಸ್ತ್ರವೆಂಬುವ ಪುಸ್ತಕದಲ್ಲಿ ಕಾಣಿಸಿರುವ ಆತಂಕನಿಗ್ರಹ ಮಾತ್ರೆಗಳನ್ನು ಸೇವಿಸಬೇಕು."

ಒಂದು ರೂಪಾಯಿ ಖರ್ಚುಮಾಡಿದರೆ 32 ಮಾತ್ರೆಗಳುಳ್ಳ ಒಂದು ಡಬ್ಬಿಯನ್ನು ತರಿಸಿ ಪ್ರಯತ್ನಿಸಬಹುದು.

ವಿವರವಾಗಿ ಬರೆದಿರುವ ಒಂದು ಕ್ಯಾಟಲಾಗು ಕಳುಹಿಸುವಂತೆ ಈ ದಿನವೇ ಒಂದು ಪೋಸ್ಟುಕಾರ್ಡು ಬರಿಯಿರಿ.

ಆತಂಕನಿಗ್ರಹ ಔಷದಾಲಯ,
ನಂಬ್ರ 26, ಬ್ರಾಡ್ವೆ, ಮದರಾಸು.

ಹೊಸಗ್ರಂಥಗಳು !! ಬೇಗನೇ ತರಿಸಿಕೊಳ್ಳಿರಿ !!!

ಕೋಕ ಶಾಸ್ತ್ರವು.

ರಸಿಕ ವಾಚಕ ಮಹಾಶಯರೇ,

ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ, ಸಂಪಾದಿಸಿ, ಅದರಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನೇ ಶೋಧಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿನಿ, ಸ್ತ್ರೀಯ ಇದರಂತೆ ಪುರುಷರಲ್ಲಿಯ ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ, ಜನನೇಂದ್ರಿಯಾದಿಗಳ ವರ್ಣನೆಯನ್ನೂ, ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ, ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ, ನಪುಂಸಕತ್ವ ವಂಧ್ಯಾದೋಷಗಳ ಚಿಕಿತ್ಸೆಯನ್ನೂ, ಸ್ತ್ರೀಯರ ಗೂಢ ರಹಸ್ಯವನ್ನೂ, ದಂಪತಿ, ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನೂ, ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನು ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ

ಇದರ ಬೆಲೆ ೧—೮—೦, ಟಪ್ಪಾಲು ಹಾಸಲು ೦—೪—೦.

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ

ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ಮೂರನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್. ಗಣಪತಿರಾವ್ ಐಗಳ್—ಗ್ರಂಥಕರ್ತರು.

ಮನೋರಂಜಕ ಚಿತ್ರಗಳೂ ಇವೆ.

ಇದರಲ್ಲಿ ಸಾವಿತ್ರಿ, ಶಕುಂತಳಾ, ಕೃಷ್ಣಾಕುಮಾರಿ, ಪದ್ಮಿನಿ, ಜೋನ್ ಒಫ್ ಆರ್ಕ, ಫ್ಲೊರೆನ್ಸನಾಯಿಟಿಂಗೇಲ ಪರಶುರಾಮ, ಭೂತಾಳಪಾಂಡ್ಯ, ಕಾರ್ಕಳ ಗೋಮಟೇಶ್ವರ ಮತ್ತು ಭೈರವರಾಜ, ಮೂಡಬಿದ್ರೆಯ ಚೌಟರು, ನಂದಾವರ ಬಂಗರು, ಕಾರ್ಕಳ ರಾಮಸಮುದ್ರ ಮತ್ತು ರಾಮನಾಥ ಒಡೆಯರ ಅಣೆಕಟ್ಟು, ಗುರುಪುರ ಜಂಗಮ ಮಠ, ಕಲ್ಯಾಣಪ್ಪನ ಕಾಟಕಾಯಿ, ಗುರುವಾಯನಕೆರೆ, ಜಮಾಲಾಬಾದುಕೋಟೆ, ಸುಲ್ತಾನಬತ್ತೇರಿ, ಈದಗಾಪ್ರಾರ್ಥನಾಮಂದಿರ, ಸೇಂಟಮೇರಿ ದ್ವೀಪಗಳು ಮತ್ತು ದರಿಯಾಬಾದರಗಡ್ಡ, ಕೊರಗರು, ಕೊಡಗರು, ತೋಡರು, ರಜಪೂತರು, ಕಂದಾರಿಗಳು, ಘುರ್ಖಾ ಜನರು, ಅರಬಿಯರು. ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ಮೂರನೇ ದರ್ಜೆಯ ಮಕ್ಕಳಿಗೆ ಉಪಯುಕ್ತವಾಗಿದೆ. ಕ್ರಯ 6 ಆಣೆ.

ಪುಸ್ತಕ ದೊರಕುವ ವಿಳಾಸ:—

ಶಾರದಾ ಛಾಪಖಾನೆ, ಮಂಗಳೂರು.	ಗಣಪತಿರಾವ್, ಐಗಳ್, ಮಂಜೇಶ್ವರು.

ಡಾಕ್ಟರುಗಳು ಭಿನ್ನಾಭಿಪ್ರಾಯಪಡುವಾಗ್ಯೆ ತೀರ್ಮಾನಿಸುವದು ಯಾರು?

ಅಂಥಾ ಸಂದರ್ಭಗಳಲ್ಲಿ ಡೆಂಗ್ಯೂ ಮುಂತಾದ ಜ್ವರಗಳನ್ನು ನಿವಾರಿಸುವಂಥಾ "ಬಾಟ್ಲಿವಾಲರ ಏಗ್ಯೂಮಿಕ್ಸ್ಚರ್"ನ್ನು ಸರಾಗವಾಗಿಯೂ, ಮತ್ತು ಜ್ವರಗಳನ್ನು ಖಂಡಿತವಾಗಿ ನಿಲ್ಲಿಸುವಂಥಾದ್ದೂ, ಎಲ್ಲಾ ತರದ ತಲೆನೋವುಗಳನ್ನು ಹೋಗಲಾಡಿಸುವಂಥಾದ್ದೂ ಆದ "ಬಾಟ್ಲಿವಾಲರ ಏಗ್ಯೂಪಿಲ್ಸ್" ಇದನ್ನು ಉಪಯೋಗಿಸಿರಿ.

ಬಿ. ಎಮ್. ಎಸ್. ಡಾಕ್ಟರುಗಳಿಂದ ಶಿಫಾರಸು ಪಡೆದಲ್ಪಟ್ಟಿವನ್ನು. ಇವರ ಉಪಯೋಗದಿಂದ ಹೃದಯದ ಮೇಲೆ ಯಾವದೊಂದೂ ಬಾಧಕವಿಲ್ಲ. ಅರ್ಧ ಶತಮಾನದಿಂದ ಹಿಂದೂಸ್ಥಾನ, ಬರ್ಮಾ, ಸಿಲೋನ್, ಆಫ್ರಿಕಾ ಇವುಗಳಲ್ಲಿ ಪ್ರಖ್ಯಾತಪಟ್ಟಿದ್ದಾಗಿರುತ್ತದೆ.

ಅನೇಕ ಹಿಂದೀ ಪ್ರದರ್ಶನಗಳಲ್ಲಿ ಬೆಳ್ಳಿ ಮತ್ತು ಬಂಗಾರದ ಪದಕಗಳನ್ನು ಪಡೆದಿರುತ್ತೆ. ಖ್ಯಾತಿ ಸಾಧ್ಯವಂತಿದ್ದು ಮಾರ್ವಾರಿಗಳೂ ಕೂಡ ಅವರ ಮೇಲೆ ಹಣವನ್ನು ಮುಂಗಡವಾಗಿ ಕೊಡುತ್ತಾರೆ. ಬಡ ಮತ್ತು ಮಧ್ಯಮ ತರಗತಿಯ ಜನರಿಗೆ ವರಪ್ರದಾನವಾಗಿದ್ದು ಸಂಚಾರ, ಪ್ರಯಾಣ, ದೇಶಾಟನೆಗಳ ಸಮಯದಲ್ಲಿ ಹತ್ತಿರದಲ್ಲಿರಿಸಿಕೊಳ್ಳದಾಗಿರುತ್ತದೆ.

ಬಾಟ್ಲಿವಾಲರ ಬಾಲಾಮೃತ ಅಥವಾ ಟೋನಿಕ್ ಸಿರಪ್.

ಕೆಮ್ಮನ್ನು ಹೋಗಲಾಡಿಸಿ, ಎದೆನೋವನ್ನು ಶಾಂತಗೊಳಿಸಿ, ಜ್ವರವನ್ನು ಉಪಶಮನಿಸಿ, ನಿದ್ರಾಭಂಗವನ್ನು ಕಡಿಮೆ ಮಾಡಿ ಧಾತುವರ್ಧನವನ್ನು ಮಾಡುವದರಲ್ಲಿ ಅತ್ಯುತ್ತಮವಾಗಿರುತ್ತದೆ ಕಫವನ್ನು ಒಣಗಿಸಿ ಮಾಯವಾಗುವಂತೆ ಮಾಡುವುದಲ್ಲದೆ ಅದೇ ಸಮಯದಲ್ಲಿ ಒಳ್ಳೇ ಜೀರ್ಣವನ್ನು ಉಂಟುಮಾಡುವುದು. ದರ ಮೊದಲಾದ ಮಾಹಿತಿಯನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಕಾರಿನಪತ್ತೆ:-CAWASHAPUR, BOMBAY.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ.	ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್., ಪಿ. ವಾರ್ಲಿ, ಮುಂಬಯಿ, ನಂಬ್ರ 18.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ

ಇವರ

ಬಾಲಾಮೃತ.

ಈ ಔಷಧವನ್ನು ಸೇವನೆ ಮಾಡುವುದರಿಂದ ಮಕ್ಕಳು ರೋಗರಹಿತರೂ ಸಶಕ್ತರೂ ಆಗುವರು. ಇದು ಮಧುರವಾಗಿದೆ; ಮಕ್ಕಳು ಸಂತೋಷದಿಂದ ಸೇವಿಸುತ್ತಾರೆ.

ನಮ್ಮ ವಿಳಾಸ:—

ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.

ಏಜಂಟರು:— ಡಿ. ಊಲಸ್ ಮಾರ್ಟ್ಸ್, ಮಂಗಳೂರು.

OUR RECENT IMPORT IN WRIST WATCHES | **Have you used anyone of these Watches?** | **SEND YOUR ORDER NOW ALL GUARANTEED.**

Fashionable wrist wrist Lady's size. Reliable movement Guaranteed.



No. 368.

Handy to wear and looks beautiful. Gives punctual time and with strong movement.

Nickel case Rs. 8—0

High-class Radium dial watch — watch with Roman figures.



No. 367.

Can be seen in dark nights. Well fitted with best movement and strong to use. Used by one and all.

Silver case Rs. 9—0.

Radiolight wrist watch.



No. 372.

Fitted with the best mechanism and guaranteed to work and keep perfect time for a long time.

Nickel case Rs. 7—8
Electro rolled-gold „ 9—0

(N. B. In addition to the above, we have good number of varieties of fancy wrist watches, pocket watches. Please write for a descriptive catalogue, which will be sent free)

WHOLESALE IMPORTERS

PETER WATCH COY.,
POST BOX 27, MADRAS

ಶಾಲಿವಾಹನಶಕ ೧೮೪೬ನೆಯ ರಕ್ತಾಕ್ಷಿ ಸಂವರದ ಫಾಲ್ಗುಣ ಬ। ೧೨ ಶನಿವಾರದಿಂದ ಕ್ರೋಧನ ಸಂವರದ ಚೈತ್ರ ಶು। ೩ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೫ನೆಯ ಇಸವಿ (ಸುಗ್ಗಿ.)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೌರಮಾನ	ಸೂರ್ಯ ಉ.	ಸೂರ್ಯ ಅಸ್ತ.
21	ಶನಿ	೧೨	೪೫.೨೮	ಶ್ರವಣ	೮.೧೬	೮	6.37	6.40
22	ರವಿ	೧೩	೪೧.೨	ಧನಿಷ್ಠಾ	೫.೨	೯	6.36	6.40
23	ಸೋಮ	೧೪	೩೭.೨೮	ಶತಭಿಷಾ	೨.೪೬	೧೦	6.35	6.41
24	ಕುಜ	●	೩೩.೪೬	ಪೂ. ಭಾ.	೧.೨	೧೧	6.35	6.41
25	ಬುಧ	೧	೩೩.೧೨	ಉ. ಭಾ.	೨.೩೪	೧೨	6.34	6.41
26	ಗುರು	೨	೩೩.೫	ರೇವತಿ	೧.೧೬	೧೩	6.33	6.41
27	ಶುಕ್ರ	೩	೩೪.೨	ಅಶ್ವಿನೀ	೩.೧೪	೧೪	6.33	6.41

ಮಂಗಳೂರಿನ ವಾಯುಸ್ಥಿತಿ.

ತಾರೀಖು Date	Temperature. ಉಷ್ಣ (ಕಾವು) Maximum ಹೆಚ್ಚಿನದು	Temperature. ಉಷ್ಣ (ಕಾವು) Minimum ಕಡಿಮೆ	Rainfall. ಮಳೆ ದಿನದ ಮಳೆ	Rainfall. ಮಳೆ ಜುಮಲಾ ಮಳೆ.
13	90—1	75—7	—	—
14	90—8	77—6	—	—
15	93—6	68—7	1—58	—
16	88—0	75—2	—	—
17	87—9	75—1	—	—
18	93—8	77—8	—	—
19	91—9	75—3	—	142·42

ಮಂಗಳೂರಿನ ಪೇಟೆ ಧಾರಣೆ.

ಜೀನಸು		ಇಂದ	ವರೆಗೆ
		ರೂ. ಅ.	ರೂ ಅ
ಹೊಸ ಮುಸ್ಕತಿ		7—12	8—6
ಹೊಸ ಗುಡ್ಡು	...	7—4	7—10
ಹೊಸ ರಾಶಿ	...	6—12	7—8
ಅವ್ವಲ್ ಬೆಳ್ತಿಗೆ	...	8—14	9—6
ಗುಡ್ಡು ಬೆಳ್ತಿಗೆ	...	7—12	8—2
ರಂಗೂನು ಬೆಳ್ತಿಗೆ ಗೋಣಿ ೧	...	12—8	13—0
ಗೋಧಿ ಗೋಣಿ ೧ಕ್ಕೆ	...	19—0	21—8
ಹುರುಳಿಗೋಣಿ ೧ಕ್ಕೆ	...	9—4	10—8
ಅವರೆಗೋಣಿ ೧ಕ್ಕೆ	...	13—0	13—8
ತೊಗರಿಗೋಣಿ ೧ಕ್ಕೆ	...	12—8	13—0
ತೊಗರಿಬೇಳೆ ಗೋಣಿ ೧ಕ್ಕೆ	...	14—0	17—2
ಉದ್ದು ಗೋಣಿ ೧ಕ್ಕೆ	...	14—0	14—8
ಹೆಸರುಗೋಣಿ ೧ಕ್ಕೆ	...	14—0	15—0
ಊರು ಬೆಲ್ಲ ಖಂಡಿ ೧ಕ್ಕೆ	...	–	85—0
ಉಪ್ಪು ಗೋಣಿ ೧ಕ್ಕೆ	...	4—4	4—9
ಕೊಬ್ರಿ ಖಂಡಿ ೧ಕ್ಕೆ	...	105—0	110—0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	...	38—0	—
ಎಳ್ಳಿಂಡಿ ಖಂಡಿ ೧ಕ್ಕೆ	...	40—0	45—0
ಕೊಬ್ರಿ ಎಣ್ಣೆ ಮುಡಿ ೧ಕ್ಕೆ	...	7—14	9—0
ಎಳ್ಳೆಣ್ಣೆ ಮುಡಿ ೧ಕ್ಕೆ	...	7—0	11—0
ಚಿಮಣಿ ಎಣ್ಣೆ ಪೆಟ್ಟಿಗೆ ೧ಕ್ಕೆ	...	8—15—6	—
ಮೋರಿಸ ಸಕ್ಕರೆ ಮುಡಿ ೧ಕ್ಕೆ	...	4—14	5—0
ಊರ ಮೆಣಸಿನಕಾಯಿ ಮುಡಿ ೧ಕ್ಕೆ	...	7—8	8—12
ಸಾಸಿವೆ ಮುಡಿ ೧ಕ್ಕೆ	...	9—0	—
ಕೊತ್ತಂಬರಿ ಮುಡಿ ೧ಕ್ಕೆ	...	3—10	4—0
ಕಾಫಿ ಖಂಡಿ ೧ಕ್ಕೆ	...	382—0	390—–
ಬಿಂಗೋಟು ಅಡಿಕೆ ಖಂಡಿ ೧ಕ್ಕೆ ಹಳತು	...	240—0	245—0
„ ಹೊಸ ಅಡಿಕೆ		195—0	210—0
ಕಾಳುಮೆಣಸು ಖಂಡಿ ೧ಕ್ಕೆ	...	155—0	160—0
[illegible] ಮುಡಿ ೧ಕ್ಕೆ	...	80—0	90—0
ಗೇರುಬೀಜ ಮುಡಿ ೧ಕ್ಕೆ	...	4—4	4—10
[illegible] ಖಂಡಿ ೧ಕ್ಕೆ	...	45—0	65—–
[illegible] ಹಗಲು ಮುಡಿ ೧ಕ್ಕೆ	...	17—12	23—0
[illegible] ಮುಡಿ ೧ಕ್ಕೆ	...	26—0	—
[illegible] ೧ಕ್ಕೆ	...	22—0	
[illegible] ಮುಡಿ ೧ಕ್ಕೆ	...	18—8	
ಪವನು		14—2—6	

The Canara Public Conveyance Co., Ltd, Mangalore.

(ESTABLISHED 1914).

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು
- ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು
- ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
- ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
- ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.
- ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ — ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd, Mangalore. S. K.

ಉಚಿತ! ಬಿಟ್ಟಿ!! ಪುಗಸಟ್ಟೆ!!!

ವೈದ್ಯವಿದ್ಯ
NO PRICE NO POSTAGE

ಎಂಬ ಈ ಪುಸ್ತಕದಲ್ಲಿ ಆಯುರ್ವೇದ ಶಾಸ್ತ್ರದಲ್ಲಿ ಸ್ತ್ರೀಪುರುಷರು ಆರೋಗ್ಯದೃಢಕಾಯರಾಗಿ ಆರೋಗ್ಯದಿಕಿದ ಕೂಡಿದ ಸಂತಾನಗಳನ್ನು ಪಡೆದು ಸತಿಪತಿಯರು ಅನ್ಯೋನ್ಯವಾಗಿ ಅನುರಾಗವುಳ್ಳವರಾಗಿ ಸುಖದಿಂದಲೂ ಸಂತೋಷದಿಂದಲೂ ಸಂಸಾರಯಾತ್ರೆಯನ್ನು ಮಾಡಲು ಅತ್ಯಂತ ಉಪಯುಕ್ತವಾದ ವಿಷಯಗಳು ಅಲ್ಲಲ್ಲಿ ಹೇಳಲ್ಪಟ್ಟಿರುವುದನ್ನು ಒಂದಾಗಿ ಕ್ರೋಢೀಕರಿಸಿ ಅಜ್ಞಾನದಿಂದಲೂ ಸಂಕಷ್ಟದಿಂದಲೂ ನರಳುತ್ತಿರುವ ಸಂಸಾರಿಗಳನ್ನುದ್ಧಾರಮಾಡುವ ಸಲುವಾಗಿ ಈ ಪುಸ್ತಕವನ್ನು ಕ್ರಯವೂ ಅಂಚೇ ಹಾಸಲೂ ಇಲ್ಲದೆ ಬೇಡಿದವರಿಗೆ ಸರ್ವತ್ರ ಉಚಿತವಾಗಿ ಕಳುಹಿಸುತ್ತೇವೆ. ಹೆಚ್ಚು ಮಾಹಿತಿಗೆ ಪತ್ರ ಬರೆಯಿರಿ.

ರಾಜವೈದ್ಯ ನಾರಾಯಣಜಿ ಕೇಶವಜಿ,
49, ಬಂದರ್ ಸ್ಟ್ರೀಟ್, ಜಿ. ಟಿ. ಮದ್ರಾಸ್

ಕನ್ನಡಿಗರೆ! **ವಸಂತ.** ಕಣ್ತೆರೆಯಿರಿ!

ಈಗಾಗಲೇ ಎರಡನೇ ಸಂಪುಟವು ಆರಂಭಿಸಲಿದೆ.

ಇತಿಹಾಸನಿಧಿ ಎಂದರೆ	ವಸಂತ
ಸಮಾಜಸುಧಾರಕನೆಂದರೆ	ವಸಂತ
ಕೈಗಾರಿಕೆಯ ಸಾಮ್ರಾಜ್ಯವೆಂದರೆ	ವಸಂತ
ಕರ್ನಾಟಕ ಭಾಷಾಸೇವಕನೆಂದರೆ	ವಸಂತ
ದೇಶವಿದೇಶ ಬಂಧುವೆಂದರೆ	ವಸಂತ
ಆಡಂಬರಿಗಳ ಭಂಡಾರವೆಂದರೆ	ವಸಂತ
ಚಿತ್ರಾಕರ್ಷ ಚಿತ್ರಶಾಲೆಯೆಂದರೆ	ವಸಂತ
ದೇಶಭಕ್ತನೆಂದರೆ	ವಸಂತ

ಇಂತಹ ವಸಂತನು ಯಾರಿಗೆ ಬೇಕು,
ಯಾರಿಗೆ ಬೇಡ?

48 (ಕ್ರೌನ್ ⅛ ಘಟ ಸ್ಯಾಜಿಸ) ಪುಟಗಳನ್ನು ಮುಕ್ತಿದ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3—4—0 ಮಾತ್ರ.

ವ್ಯವಸ್ಥಾಪಕ,
ವಸಂತ ಕಾರ್ಯಾಲಯ,
ಕುಂದಾಪುರ, ದಕ್ಷಿಣ ಕನ್ನಡ.

JUST ARRIVED

Continental Belts.

OF VARIOUS SIZES

Price Re. 1—10—0 each

Mangalore Trading Association,
Car Street, MANGALORE

FOR SALE.

One new **Harley Davidson sports Model** Motor Cycle used only for 250 miles in perfect running order complete with equipments. Price Rs. 1000 or near offer.

For further particulars.

Apply to:—

The Mangalore Trading Association,
Car-Street Mangalore

ಬಂದು ನೋಡಿರಿ! ತಿಂದು ನೋಡಿರಿ!

ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ
ಪದಕವನ್ನು
ಬಹುಮಾನವಾಗಿ ಪಡೆದಿರುವ
ಎಸ್. ಪಿ. ಆಚಾರ್ಯ
ಇವರಿಂದ ತಯಾರಿಸಲ್ಪಟ್ಟ
ಉಪ್ಪಿನಕಾಯಿಗಳನ್ನು
ಬಂದು ನೋಡಿರಿ! ತಿಂದು ನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ, ಶುಂಠಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನ್ನು ಶುದ್ಧನಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ
ಬಂದು ನೋಡಿರಿ! ತಿಂದು ನೋಡಿರಿ!

ಇಂಡಿಯನ್ ಸ್ವೀಟ್ ಮೀಟ್ ಮಾರ್ಟ್.

ಮನೋಲ್ಲಾಸಿನಿ ಕಾಫಿ ಕ್ಲಬ್.
ಮಾರ್ಕೆಟು ರೋಡು,
ಮಂಗಳೂರು.
ಅಥವಾ
'ಸದಾನಂದ ಕಾಫಿ ಕ್ಲಬ್'
ರಥಬೀದಿ, ಮಂಗಳೂರು.

ನೋಟೀಸು.

ದಕ್ಷಿಣ ಕನ್ನಡ ಒಫಿಶಿಯಲ್ ರಿಸೀವರರ ಕೋರ್ಟಿನಲ್ಲಿ
I. P. No. 16/1925.
ಶ್ರೀನಿವಾಸ ಭಟ್ಟ-ಸುಬ್ರಾಯಭಟ್ಟರ ಮಗ-ಹರೇಕಳ ಕಸಬಾ ಗ್ರಾಮ-ದಿವಾಳಿ ಅರ್ಜಿದಾರ.
ಮತ್ತು
ಕಂದೂರು ರಂಗಪ್ಪ ಐತಾಳ-ಕ್ರೆಡಿಟರ.

ಮೇಲ್ಕಂಡ ಅರ್ಜಿದಾರನು ತನ್ನನ್ನು ದಿವಾಳಿಯೆಂತ ಎಡ್ಜುಜ್ಯ ಮಾಡಬೇಕಾಗಿ ಮೇಲ್ಕಂಡ ದಿವಾಳಿ ಅರ್ಜಿ ದಾಖಲು ಮಾಡಿರುತ್ತಾನೆ. ಸದರಿ ದಿವಾಳಿ ಅರ್ಜಿಯು 1925ನೇ ಇಸವಿ ಎಪ್ರಿಲ್ ತಾ. 4ನೇ ಶನಿವಾರ ದಿವಸ ತನಖಿಗೆ ಇಟ್ಟಿದೆ. ಯಾರಾದರೂ ಆಕ್ಷೇಪ ಉಳ್ಳವರು ಮೇಲ್ಕಂಡ ತಾರೀಕಿಗೆ ಬೆಳಿಗ್ಗೆ ಗಂಟೆ 11ಕ್ಕೆ ಹಾಜರು ಆಗಿ ತಮ್ಮ ಆಕ್ಷೇಪಗಳನ್ನು ದಾಖಲು ಮಾಡತಕ್ಕದ್ದು. ಜಾಹೀರು ಆಗುವದು.

ಮಂಗಳೂರು,
ತಾ. 17-3-'25.
ಶ್ರೀನಿವಾಸಭಟ್ಟ ರುಜು.
ದಿವಾಳಿ ಅರ್ಜಿದಾರ.

ನೋಟೀಸು.

ದಕ್ಷಿಣ ಕನ್ನಡ ಆಫೀಶಿಯಲ್ ರಿಸೀವರರ
ಕೋರ್ಟಿನಲ್ಲಿ.
1925ನೇ ಇಸವಿ ದಿವಾಳಿ ಅರ್ಜಿ ನಂಬ್ರ 14.
(ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನ 1925ನೇ ಇಸವಿಯ ದಿವಾಳಿ ಅರ್ಜಿನಂಬ್ರ 2.
ಕಾಶ್ಮೀರ್ ವ್ಯಾಗಸ್ ಅರ್ಜಿದಾರ (ಇನ್‌ಸೋಲ್‌ವೆಂಟ)
ಮತ್ತು
ಆದಾಮ್ ಮಸ್ಕರೆಂಞ ಕೂಡಾ—ಕ್ರೆಡಿಟರರು.

ಮೇಲ್ಕಂಡ ಅರ್ಜಿಯಲ್ಲಿ ನಮೂದಿಸಿದ ಸಾಲಗಳನ್ನು ಸಂದಾಯ ಮಾಡುವರೆ ಸದರಿ ಅರ್ಜಿದಾರನು ಅಸಮರ್ಥನಾದ ಕಾರಣ ತನ್ನನ್ನು ದಿವಾಳಿಯೆಂತ ಕಾಯಂ ಮಾಡಬೇಕಾಗಿ ವಗೈರೆ ಕಾಣಿಸಿ ದಾಖಲು ಮಾಡಿದ ಸದರಿ ಮೇಲ್ಕಂಡ ಅರ್ಜಿಯು ಇದೇ ಬರುವ ಎಪ್ರಿಲ್ ತಿಂಗಳ ತಾ. 4ಕ್ಕೆ ತನಖಿಗೆ ಇಟ್ಟಿರುವುದರಿಂದ ಆ ಕುರಿತು ಆಕ್ಷೇಪವುಳ್ಳವರು ತಮ್ಮ ಆಕ್ಷೇಪಣೆಗಳನ್ನು ಮೇಲ್ಕಂಡ ಕೋರ್ಟಿನಲ್ಲಿ ಸದರಿ ವ್ಯಾದೆ ಒಳಗೆ ಜಾಹೀರು ಮಾಡಿಕೊಳ್ಳಬೇಕಾಗಿ ಈ ಮೂಲಕ ಸರ್ವ ಜನರಿಗೆ ತಿಳಿಸೋಣಾಗಿಯದೆ.

ಮಂಗಳೂರು,
ತಾ. ೧೨ನೇ ಮಾರ್ಚ '25
K. R. KARANT
ಅರ್ಜಿದಾರನ ಕಡೆ ವಕೀಲ್.

FOR INVESTORS

A few shares of the Saraswathi Printing Works Ltd., are available for sale. They are all fully paid up shares of Rs. 50 each. For terms:

Apply to - X
C/o MANAGER,
Swadeshabhimani.

ಮ| ರಾ| ರಾ| ಎಮ್. ಗಿರಿಯಪ್ಪ ಅವರ್ಗಳ್ ಬಿ. ಎ.
ಅಸಿಸ್ಟಾಂಟ ರಿಜಿಸ್ಟ್ರಾರ್ ಮತ್ತು ಲಿಕ್ವಿಡೇಟರ್
ಮಂಗಳೂರು.

ಮಂಗಳೂರು ತಾಲೂಕು ಅತ್ತಾವರ ಲಿಕ್ವಿಡೇಟೆಡ್ ಸಹಕಾರ ಸಂಘದ ಲೆಖ್ಖಾಚಾರವನ್ನು ಅಖೈರು ಮಾಡುವುದಕ್ಕೋಸ್ಕರ ಇದೇ ತಿಂಗಳ ತಾ. ೨೨ನೇ ಆದಿತ್ಯವಾರ ಪೂರ್ವಾಹ್ನ ೮ ಗಂಟೆಗೆ ದಕ್ಷಿಣ ಕನ್ನಡ ಜಿಲ್ಲಾ ಅಸಿಸ್ಟಾಂಟು ರಿಜಿಸ್ಟ್ರಾರರವರ ಆಫೀಸಿನಲ್ಲಿ (ಹಳೇ ತಾಲೂಕು ಕಚೇರಿ ಕಟ್ಟೋಣದಲ್ಲಿ) ಅಖೈರು ಮಹಾ ಸಭೆಯನ್ನು ಜರಗಿಸಬೇಕಾಗಿ ನಿಶ್ಚಯಿಸಿಯದೆ. ಸದರಿ ಸಂಘದ ಎಲ್ಲಾ ಮೆಂಬರರು ಮಹಾ ಸಭೆಗೆ ಕ್ಲಪ್ತ ಸಮಯಕ್ಕೆ ತಪ್ಪದೆ ಹಾಜರಾಗಬೇಕಾಗಿ ಅಪೇಕ್ಷಿಸೋಣಾಗುತ್ತದೆ.

(By order)
T. Rama Rao,
16-3-'25.
Inspector of C. S.
For Liquidator.

ಪ್ರಕಟಣೆ ಬಗ್ಗೆ.

ದ. ಕ. ಜಿಲ್ಲಾ ೩ನೇ ಪರಿಷತ್ತು ಕಾರ್ಕಳದಲ್ಲಿ ಶ್ರೀಯುತ ಡಿ. ಬಿ. ಕಲಿಲ್ಕಾರರ ಅಧ್ಯಕ್ಷತೆಯಲ್ಲಿ ಮೇ ತಿಂಗಳ ೧ನೇ ವಾರದಲ್ಲಿ ಜರಗಲಿಕ್ಕಿರುವುದು. ಸದರಿ ಪರಿಷತ್ತಿನ ಮುಂದೆ ತರುವಂಥಾ ವಿಚಾರಗಳನ್ನು ಠರಾವಿನ ರೂಪದಲ್ಲಿ ಪ್ರತಿನಿಧಿಗಳು ಸ್ವತಂತ್ರವಾಗಲಿ ಯಾ ತಂತಮ್ಮ ಕಾಂಗ್ರೆಸ ಕಮಿಟಿಗಳ ಮೂಲಕವಾಗಲಿ ಆದಷ್ಟು ತ್ವರ್ಯದಲ್ಲಿ ನನಗೆ ತಲ್ಪುವಂತೆ ಕಳುಹಿಸಬೇಕಾಗಿ ವಿನಂತಿ.

K. Panduranga Pai.
ತಾ. 17-3-'25.
ಕಾರ್ಯದರ್ಶಿ,
ದ. ಕ. ಜಿ. ಕಾಂ. ಕಮಿಟಿ.

೧೯೨೫ನೇ ಇಸವಿ ಮಾರ್ಚಿ ತಾ. ೬ನೇ ಶುಕ್ರವಾರ ಅಪರಾಹ್ನ ಗಂಟೆ ೨ಕ್ಕೆ ವಿಟ್ಲ ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಜರಗಿದ ವಿಟ್ಲ ಸೆಂಟರಿನ ಉಪಾಧ್ಯಾಯರ ಸಂಘದ ಸಭೆಯ ಪ್ರೊಸಿಡಿಂಗ್ಸು.

ಈ ಸಭೆಯು ವಿಟ್ಲ ಶಾಲಾ ಸಹಾಯಕ ಉಪಾಧ್ಯಾಯ ವಾಂಕುಡೆ [illegible]

[illegible]

ಪ್ರಕಟಣೆ.

ಮಂಗಳೂರಿನಲ್ಲಿ ಒಂದು ಮಾದರಿ ರಾಷ್ಟ್ರೀಯ ಶಾಲೆಯನ್ನು ನಡೆಸುವ ವಿಷಯ ಆಲೋಚಿಸಿ ಸೂಚನೆಗಳನ್ನು ಮುಂದಿಡುವರೆ ನೇಮಿಸಲ್ಪಟ್ಟ ಉಪ ಕಮಿಟಿಯ ಸೂಚನೆಗಳನ್ನು ಆಲೋಚಿಸಿ ಜಾರಿಯಲ್ಲಿ ತರುವರೆ ಮಂಗಳೂರು ತಾಲೂಕು ಕಾಂಗ್ರೆಸು ಕಮಿಟಿಯ ಮಹಾಸಭೆಯು ಬರುವ ತಿಂಗಳ ತಾ. ೩ನೇ ಶುಕ್ರವಾರ ಅಪರಾಹ್ನ ಗಂಟೆ ೫-೩೦ಕ್ಕೆ ಮಂಗಳೂರು ತಿಲಕ ವಿದ್ಯಾಲಯದಲ್ಲಿ ಸೇರುತ್ತದೆ. ಸದಸ್ಯರೆಲ್ಲರೂ ತಪ್ಪದೆ ಬರಬೇಕಾಗಿ ವಿನಂತಿ. ಈ ವರುಷದ ಬಗ್ಗೆ ಅಂದಾಜು ಜಮಾ ಖರ್ಚಿನ ಪಟ್ಟಿಯನ್ನು ತಯಾರಿಸುವುದು, ಕಳೆದ ವರ್ಷದ ಜಮಾ ಖರ್ಚಿನ ಪಟ್ಟಿಯನ್ನು ಮಂಜೂರು ಮಾಡುವುದು, ಈ ವರ್ಷದ ಬಗ್ಗೆ ಪರಿಶೋಧಕರ ನೇಮಕ ಮತ್ತು ಸಭೆಯ ಮುಂದೆ ಬರಬಹುದಾದ ಇತರ ಜರೂರು ವಿಷಯಗಳು ಕೂಡ ಆಲೋಚಿಸಲ್ಪಡುವವು.

ಮ. ತಾ. ಕಾ. ಕಮಿಟಿ.
ತಾ. ೨೦-೩-'೨೫.
ಮ. ಉಮೇಶರಾವ್.
ಕಾರ್ಯದರ್ಶಿ.

ಪತ್ರವ್ಯವಹಾರ.

— ಕೆನರಾ ಕೆಥೋಲಿಕ್ ಬೇಂಕ್. —

ಬಡಬಗ್ಗ ರೋಮಿಯ ಕ್ರೈಸ್ತರ ಮೇಲೆ ಕನಿಕರವಿದ್ದ ಸದರಿ ಸಮಾಜದ ಕೆಲವು ಮಹನೀಯರು ಸರಕಾರವು ಇತ್ತಲಾಗಿ ನಿರ್ಮಿಸಿದ ಸಹಕಾರಿ ಸಂಘಗಳ ವಿಲೆವಾರಿಯಿಂದ ಬಡ ಕ್ರೈಸ್ತರು ಪ್ರಯೋಜನ ಪಡುವಂತೆ ೧ದಿ ಮಂಗಳೂರು ಕೆಥೋಲಿಕ್ ಕೋಪರೇಟಿವ್ ಕ್ರೆಡಿಟ್ ಸೊಸೈಟಿ ಸಂಘವನ್ನು ಸ್ಥಾಪಿಸಿ ಈಗ ಸುಮಾರು ೧೨ ವರುಷಗಳಾದವು. ಪ್ರಭುಗಳೇ [illegible]

[illegible]

ಕೊ-ಒಪರೇಟಿವ್ ಸೆಂಟ್ರಲ್ ಬೇಂಕು, ಪುತ್ತೂರು.

ಅಯ್ಯಾ,

ಕಳೆದ ಸಾರಿ ಕೂಡಿದ ಈ ಬೇಂಕಿನ ವಾರ್ಷಿಕ ಮಹಾಸಭೆಗೆ ನಮ್ಮ ಬೇಂಕಿನ ಪ್ರತಿನಿಧಿಯಾಗಿ ಹೋದಂದಿನಿಂದ ಈ ಬೇಂಕಿನ ಪರಿಚಯವನ್ನು ಮುಖತಃ ಮಾಡಿಕೊಳ್ಳುವ ಸಂದರ್ಭವು ದೊರಕಿತು. ಈ ಮಹಾ ಸಭೆಗೆ ಹೋಗುವ ಮೊದಲು ಇದರ ನಿಬಂಧನೆಗಳ ಮಾಹಿತಿಯನ್ನು ಅಲ್ಪಸ್ವಲ್ಪ ಮಾಡಿಕೊಂಡಿದ್ದೆನು. ದಕ್ಷಿಣ ಕನ್ನಡ ಜಿಲ್ಲೆಯು ಈ ಬೇಂಕಿನ ಮೂಲಕ ಸಹಕಾರಿ ಚಳವಳದಲ್ಲಿ ನಮ್ಮ ಸಂಸ್ಥಾನದ ಪ್ರಾಮುಖ್ಯ ಸ್ಥಾನದಲ್ಲಿದೆ ಎಂಬುದು ಸರ್ವರಿಗೂ ಗೊತ್ತಿರುವ ವಿಷಯ. ಇಂಥಾ ಬೇಂಕಿನ ನಿಬಂಧನೆಗಳು, ನಡವಳಿಕೆ ಕ್ರಮಗಳು ಅದರ ಖ್ಯಾತಿಗೆ ತಕ್ಕಂತೆ ಇರಬಹುದೆಂಬುದು ನನ್ನ ನಿರೀಕ್ಷಣೆ ಇತ್ತು. ಇಂಥ ನಿರೀಕ್ಷಣೆಯು ಹೇಗೆ ಸಮರ್ಥನೀಯವಾಯಿತೆಂಬುವದನ್ನು ಸಹಕಾರಿಗಳು ಅರ್ಥೈಸಿಕೊಳ್ಳುವಂತೆ ಕಳೆದ ಮಹಾಸಭೆಯ ನೋಟೀಸು ಹೊರಬಂದಂದಿನಿಂದ ಇಂದಿನ ವರೆಗೆ ನಡೆದ ಸಂಗತಿಗಳನ್ನು ಈ ಮೂಲಕ ವಿಜ್ಞಾಪಿಸಿಕೊಳ್ಳುವೆನು.

ಕಳೆದ ಆಕ್ಟೋಬರ ತಿಂಗಳ ೧೬ನೇ ತಾರೀಕಿನಲ್ಲಿ ಮಂಗಳೂರಿನಲ್ಲಿರುವ ಸೆಂಟ್ರಲ್ ಬೇಂಕಿನ ಕಟ್ಟೋಣದಲ್ಲಿ ಸದರಿ ಸೆಂಟ್ರಲ್ ಬೇಂಕಿನ ಮಹಾಸಭೆ ಕೂಡಿದ್ದು ಸಹಕಾರಿಗಳ ನೆನಪಿನಲ್ಲಿರಬಹುದು. ಸಭೆಗೆ ಬರಬೇಕೆಂತ ಕಳುಹಿಸಿದ ನೋಟೀಸುಕಾರ್ಡಿನ ಹಿಂಬದಿಯ ಒಂದು ಪಕ್ಕದಲ್ಲಿ ಸಭೆಯ ಮುಂದೆ ಬರುವ ಎಲ್ಲಾ ವಿಷಯಗಳಲ್ಲ,—ಮುಖ್ಯ ವಿಷಯಗಳು ಮಾತ್ರ,—ವಿವರವಾಗಿ ಅಲ್ಲ, ಕಾರ್ಡಿನಲ್ಲಿ ವಿಳಾಸ ಬರೆದು ಉಳಿಯಬಹುದಾದ ಚಿಕ್ಕದೊಂದು ಎಡೆಯಲ್ಲಿ,—ಈ ಮುಖ್ಯ ವಿಷಯಗಳು ಬಹು ಸಂಕ್ಷೇಪ ರೂಪದಿಂದ ಪ್ರಕಟಿಸಲ್ಪಟ್ಟಿದ್ದವು. ಇಂಥ ಸಂಕೋಚರೂಪದ ಈ ಆಮಂತ್ರಣ ಪತ್ರವನ್ನು—ಬಹು ವರುಷಗಳಿಂದ ಈ ರೂಪದಲ್ಲಿಯೇ ಮತ್ತು ಈ ವಿಧಾನದಲ್ಲಿಯೇ ಬರುವಂಥ—ಈ ಆಮಂತ್ರಣ ಪತ್ರದ ಸ್ವರೂಪವನ್ನು ಚೆನ್ನಾಗಿ [illegible]

[illegible]

ಈ ಎಲ್ಲಾ ವಿವರವನ್ನು ತಿಳಕೊಂಡು ಅಗತ್ಯವಿರುವ ನಿರ್ಣಯಗಳನ್ನು ಸಭೆಯ ಮುಂದಿಡಲು ಬೇಂಕಿನ ಅಧಿಕಾರಿಗಳು ವಿನಾ ಅವಕಾಶ ಕೊಟ್ಟಿದ್ದಿಲ್ಲ. ಅಂದರೆ ಲೆಕ್ಕ ತಪ್ಪ ವಗೈರೆಗಳನ್ನು ಸಹ ಮುಂದಾಗಿ ಖಾಲು ದ್ಸಾಲಿಕರೊಳಗಾದರೂ ಪ್ರಕಟಿಸಲಿಲ್ಲ. (೪) ಬೇಂಕಿಗೆ ಎರಡು ಕಡೆಗಳಲ್ಲಿ ಆಫೀಸುಗಳಿವೆ. ಆದ್ದರಿಂದ ಸಂಘಗಳಿಗೂ ಬೇಂಕಿಗೂ ಇರುವ ಸಂಬಂಧವನ್ನು ಮಾರ್ಪಡಿಸುವುದು ಅಗತ್ಯ. ಮತ್ತು ಬೇಂಕಿನ ನಿಯಮಗಳ ತಿದ್ದುಪಡಿ ಸಹ ಬಹಳವಿರುವದು. ಇವುಗಳನ್ನು ಮಾಡುವುದು ಅಗತ್ಯ. ಇಂಥಾ ತಿದ್ದುಪಡಿಗಳು ಆಗದೆ ಡೈರೆಕ್ಟರರ ಚುನಾವಣೆ ಸಹ ಆಗುವುದು ಉಚಿತವಲ್ಲ.

ಈ ಕಾರಣಗಳನ್ನು ಬರೆದುಕೊಟ್ಟು ಸಭೆಯನ್ನು ಮುಂದರಿಸಬೇಕೆಂತ ಸಭೆಯಲ್ಲಿ ವಿಜ್ಞಾಪಿಸಿಕೊಂಡರೂ ನಿಬಂಧನೆಗಳ ತಿದ್ದುಪಡಿಯನ್ನು ಮಾತ್ರ ಬಾಕಿ ಇಟ್ಟು ಸಭಾಕಾರ್ಯಗಳನ್ನು ನಿರ್ವಹಿಸಿದರು.

ಸೆಂಟ್ರಲ್ ಬೇಂಕಿನ ಮಹಾ ಸಭೆಗಳ ವೃತ್ತಾಂತವನ್ನು ಇನ್ನು ಮುಂದರಿಸಿ ಬರಿಯುವ ಮೊದಲು—ಸೆಂಟ್ರಲ್ ಬೇಂಕಿನ ನಿಬಂಧನೆಗಳ ಪ್ರತಿ, ಸಂಘಗಳಿಗೆ ಕೊಡೋಣಾದ ಸಾಲಗಳ ಪಟ್ಟಿಯ ಪ್ರತಿ, ಇತ್ಯಾದಿಗಳನ್ನು ಏಕೆ ಕೇಳಿದೆನು ಎಂಬುವದನ್ನು ವಿವರಿಸುವದು ಅಗತ್ಯ. ಇದಕ್ಕೆ ಮುಂದಿನ ಸಂಚಿಕೆಯಲ್ಲಿ ಅವಕಾಶ ಕೊಡಬೇಕೆಂತ ವಿಜ್ಞಾಪಿಸಿಕೊಳ್ಳುತ್ತೇನೆ.

ಪ್ರತಿನಿಧಿ.
ಟೌನ್ ಕೊ-ಒಪರೇಟಿವ್ ಬೇಂಕು, ಲಿಮಿಟೆಡ್
ಮಂಗಳೂರು.

ಮದ್ರಾಸು ಲೆಜಿಸ್ಲೇಟಿವ್ ಕೌನ್ಸಿಲ್ ಯಾನೆ ನ್ಯಾಯವಿಧಾಯಕ ಸಭೆ.

ದಕ್ಷಿಣ ಕನ್ನಡ ಜಿಲ್ಲೆಯಿಂದ ಒಬ್ಬ ಬ್ರಾಹ್ಮಣೇತರ ಮೆಂಬರರನ್ನು ಚುನಾಯಿಸಬೇಕಾಗಿದೆ.

ಚುನಾವಣೆ: ೧೯೨೫ನೇ ಎಪ್ರಿಲ್ ತಾ ೨೦ನೇ ಸೋಮವಾರ.

ಮದ್ರಾಸು ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ನಮ್ಮ ಜಿಲ್ಲೆಯ ಬ್ರಾಹ್ಮಣೇತರರ ಮೆಂಬರರಾಗಿ ಚುನಾವಣೆ ಹೊಂದಿದ್ದ ರಾವ್ ಸಾಹೇಬ್ ಬಿ. ಮಹಾಬಲ ಹೆಗ್ಗಡೆಯವರು ಈಗ ಪಬ್ಲಿಕ್ ಪ್ರಾಸಿಕ್ಯೂಟರ್ ಯಾನೆ ಸರಕಾರದ ಕಡೆಯ ವಕೀಲರ ಹುದ್ದೆಯನ್ನು ಪಡೆದಿರುವ ಪ್ರಯುಕ್ತ ನ್ಯಾಯವಿಧಾಯಕ ಸಭೆಗಳ ಸೂತ್ರಗಳಿಗೆ ಅನುಸಾರವಾಗಿ ಅವರ ಕೌನ್ಸಿಲ್ ಮೆಂಬರಿಕೆಸ್ಥಾನವು ಖಾಲಿಯಾಗಿದೆ. ಸದರಿ ಸ್ಥಾನಕ್ಕೆ ಒಬ್ಬ ಬ್ರಾಹ್ಮಣೇತರ ಮೆಂಬರರನ್ನು ನಮ್ಮ ಜಿಲ್ಲೆಯವರು, ಇದೇ ಬರುವ ಎಪ್ರಿಲ್ ತಾ. ೨೦ನೇ ಸೋಮವಾರ ದಿನ ಚುನಾಯಿಸಬೇಕಾಗಿದೆ. ಈ ಚುನಾವಣೆಗೆ ಮದ್ರಾಸು ಕೌನ್ಸಿಲಿನಲ್ಲಿ ಬ್ರಾಹ್ಮಣ ಬ್ರಾಹ್ಮಣೇತರರೂ ಸೇರಿರುವ "ಯುನೈಟೆಡ್ ನೆಷನಲಿಸ್ಟ್ ಪಾರ್ಟಿ" ಎಂಬ ಸಂಯುಕ್ತ ರಾಷ್ಟ್ರೀಯ ಪಕ್ಷದ ಪರವಾಗಿ ನಾನು ಉಮೇದ್ವಾರನಾಗಿರುವೆನು. ಆ ಪಕ್ಷದ ಮುಖಂಡರಾದ ಶ್ರೀ. ಸಿ. ವಿ ಯಸ್ ನರಸಿಂಹ ರಾಜುರವರೂ, ಅದಕ್ಕೆ ಸೇರಿರುವ ಶ್ರೀಯುತರುಗಳಾದ ಡಾಕ್ಟರ್ ಸುಬ್ಬರಾಯನ್; ಸಿ. ಆರ್. ರೆಡ್ಡಿ; ಎಸ್. ಸತ್ಯಮೂರ್ತಿ; ಎ. ಜೆ ಸಾಲ್ಡಾಂಘಾ ಮೊದಲಾದವರಲ್ಲದೆ ಮ. ಎಸ್. ಶ್ರೀನಿವಾಸ ಅಯ್ಯಂಗಾರರೂ, ಹೊಸಕೊಪ್ಪ ಕೃಷ್ಣರಾಯರೂ, ವಿ. ರಾಮದಾಸರವರೂ, ನನ್ನ ಉಮೇದ್ವಾರಿಕೆಯನ್ನು ಸಮರ್ಥಿಸಿರುವರು. ಇವರೂ, ಮದ್ರಾಸಿನ ಪ್ರಾಮುಖ್ಯ ಪತ್ರಿಕೆಗಳಾಗಿರುವ "ಹಿಂದೂ" ಸ್ವರಾಜ್ಯ ಪತ್ರಿಕೆಗಳೂ ಈ ನನ್ನ ಉಮೇದುವಾರಿಕೆಯ ವಿಚಾರವಾಗಿ ಬರೆಯುವದರಲ್ಲಿ,—ಸರಕಾರದಿಂದ ಹುದ್ದೆಗಳನ್ನು ಸ್ವೀಕರಿಸುವವರೇ [illegible]

[illegible] ವಲ್ಲವೆಂದೂ, ಅವರ ಬದಲಾಗಿ, ಸರಕಾರದ ಹಂಗೇನೂ ಇಲ್ಲದ ಸ್ವತಂತ್ರ ವೃತ್ತಿಯವರೇ ಮೆಂಬರರಾಗುವಲ್ಲಿ ಚುನಾಯಿಸಿದವರಿಗೆ ಪ್ರಯೋಜನವು ಹೆಚ್ಚಾಗುವುದೆಂದೂ, ಹೀಗಿರುವುದರಿಂದ ಉಮೇದುವಾರರಾಗಿರುವವರು ಪ್ರಜಾಭಿಮತಕ್ಕೆ ಅನುಕೂಲರೇ ಎಂಬುದನ್ನು ವೋಟರರು ನಿರ್ಧರಿಸಿಕೊಂಡು ವೋಟುಗಳನ್ನು ಕೊಡಬೇಕೆಂದೂ, ರಾಷ್ಟ್ರೀಯ ಪಕ್ಷದವರಾದ ಬ್ರಾಹ್ಮಣೇತರರನ್ನು ಆರಿಸುವುದು ಸಂಗತವಾದುದೆಂದೂ, ವಿವರಿಸಿ ಬರೆಯಲಾಗಿದೆ. ನೀವು ದಯೆಯಿಟ್ಟು ಈ ವಿಷಯವನ್ನು ಪರಾಂಬರಿಸಿ ಈ ಚುನಾವಣೆಯಲ್ಲಿ ನಿಮಗೆ ಇರುವ ಒಂದೇ ವೋಟನ್ನು ವೋಟುಕೊಡುವ ದಿನ, ನನಗೆ ಕೊಟ್ಟು, ನನ್ನ ಉಮೇದುವಾರಿಕೆಯನ್ನು ಸಮರ್ಥಿಸುವಿರಾದರೆ, ನಿಮ್ಮ ಮನೋಭಿಪ್ರಾಯಗಳಿಗೆ ಸರಿಯಾಗಿಯೂ, ದೇಶಕ್ಕೆ ಹಿತವಾಗುವ ಹಾಗೆಯೂ, ಕೌನ್ಸಿಲಿನಲ್ಲಿ ನಾನು ಸಾಧಿಸುವೆನೆಂದು ಈ ಮೂಲಕ ತಿಳಿಯಪಡಿಸುತ್ತೇನೆ.

ಇತಿ ವಿಜ್ಞಾಪಿಸಿಕೊಳ್ಳುವ,
ಅತ್ತಾವರ ಬಾಲಕೃಷ್ಣ ಶೆಟ್ಟಿ.

ಸ್ವೀಕಾರ.

ಕಾಮಿನಿಯಾ ಡೈರಿ ೧೯೨೫—ಈ ಮರಾಠಿ ಡೈರಿಯು ಕಾಬಿನಿಯಾ ಪರಫ್ಯೂಮರಿ ಕಂ, ಮುಂಬಯಿ ಈ ಕಂಪೆನಿಯ ಪರವಾಗಿ ಇಲ್ಲಿಯ 'ಅಲನ್ ಮಾರ್ಟ ಹಂಪನಕಟ್ಟೆ" ಇವರ ಕಡೆಯಿಂದ ಬಂದಿದೆ. ಡೈರಿಯಲ್ಲಿ ಹಿಂದುಗಳ ಹಬ್ಬ, ಸರಕಾರಿ ರಜೆಯ ದಿವಸಗಳು, ಪಾರ್ಸಿ, ಮುಸಲ್ಮಾನ ರಜೆ ದಿವಸಗಳು, ಪರ್ಜನ್ಯ ನಕ್ಷತ್ರ, ಉಪನಯನ ಮತ್ತು ವಿವಾಹ ಮುಹೂರ್ತ, ಚಿತ್‌ಪಾವನರ ಗೋತ್ರಾವಳಿ, ರೈಲು ಸ್ಟೇಶನುಗಳು ಇ. ಇ. ಉಪಯುಕ್ತ ಮಾಹಿತಿಯು ಇರುವುದರಿಂದ ಮರಾಠಿ ತಿಳಿದವರಿಗೆ ಇದು ಬಹಳ ಪ್ರಯೋಜನಕಾರಿಯಾಗಿದೆ ಇದರ ಬೆಲೆ ೦-೮-೦.

ಒಂದೇಶ ವರ್ತಮಾನ.

ಬ್ರಿಟಿಷ ಎಕ್ಸ್‌ಪೋರ್ಟ ವ್ಯಾಪಾರ. ಕಳೆದ ಫೆಬ್ರವರಿ ತಿಂಗಳಲ್ಲಿ ಬ್ರಿಟಿಷ ದ್ವೀಪಗಳಿಂದ ಸಮುದ್ರ ಮಾರ್ಗವಾಗಿ ಹೊರಗೆ ರಫ್ತಾದ ವ್ಯಾಪಾರದ ಮೊಬಲಗು ೬೯ ಮಿಲಿಯ ೩೩ ಸಾವಿರ ಪವನುಗಳಷ್ಟಾಗಿತ್ತು. ಕಳೆದ ಜನವರಿ ತಿಂಗಳಲ್ಲಿ ಈ ಮೊಬಲಗು ೬೯ ಮಿಲಿಯ ೫೦ ಸಾವಿರ ಪವನುಗಳಾಗಿತ್ತು. ಗತವರುಷದ ಫೆಬ್ರವರಿ ತಿಂಗಳಲ್ಲಿ ಈ ವ್ಯಾಪಾರದ ಸಂಖ್ಯೆಯು ೬೫ ಮಿಲಿಯವಾಗಿತ್ತು.

ಕೊಂಗ್ರೆಸು ಮೆಂಬರಿಕೆ ಮತ್ತು ಮುಂಬಯಿ ಡಿಪ್ಲೊಲ್ಟರು [illegible]

ಪ್ರಾಂತ್ಯವು ಚರಕದಲ್ಲಿ ನೂಲುವ ಕೊಂಗ್ರೆಸ್ಸು ಸದಸ್ಯರ ಯೋಗ್ಯತೆಯಲಿ ಮುಂಮುವರಿದು ಇರುವುದಾದರೂ ಸದಸ್ಯತನದ ಈ ನೂಲು ತೆಗೆಯುವ ಶರ್ತವು ಪರೀಕ್ಷಿಸಿದಷ್ಟು ಮುಂಬಯಿ ಪ್ರಾಂತ್ಯದಲ್ಲಿ ಸಹ ಆಚರಿಸಲ್ಪಡುವಂತೆ ತೋರುವುದಿಲ್ಲ. ಸದಸ್ಯತನಕ್ಕೆ ಶಾಲ್ಯದ ವರ್ಗಣಿಯನ್ನು ಕೊಡುವುದರ ಬದಲಿಗೆ ೨೦೦೦ ಸಾವಿರ ಯಾರ್ಡು ಚರಕದಲ್ಲಿ ನೂತ ನೂಲನ್ನು ಕೊಡಬೇಕೆನ್ನುವ ಶರ್ತವನ್ನು ಕೊಂಗ್ರೆಸ್ಸು ನಿಯಮಗಳಲ್ಲಿ ಕಳೆದ ಬೆಳಗಾಂ ಅಧಿವೇಶನದ ಕಾಲದಲ್ಲಿ ಸೇರಿಸಿರುತ್ತಾರೆ. ಮುಂಬಯಿ ಪ್ರಾವಿನ್ಸಿಯಲ್ ಕಮಿಟಿಯ ಮೂರರಲ್ಲಿ ಒಂದು ಪಾಲಿನಷ್ಟು ಮೆಂಬರರು ಈ ಸದಸ್ಯತನದ ಶರ್ತವನ್ನು ಉಲ್ಲಂಘಿಸಿ ಡಿಪ್ಲೊಲ್ಟರರಾಗಿರುತ್ತಾರೆ. ಈ ಡಿಫೊಲ್ಟರರ ಪೈಕಿ ಶ್ರೀ. ಜಯಕರರೂ, ಕೊಂಗ್ರೆಸ್ ಖದ್ದರ್ ಬೋರ್ಡಿನ ಮೆಂಬರರಾದ ಶ್ರೀ. ಎನ್. ಎಚ್. ಬೆಳ್ಗಾಂವಾಲಾರವರೂ ಮತ್ತು ಬೇಡಬದಲಾವಣೆ ಪಕ್ಷದ ಶ್ರೀ. ಬಿ. ಎನ್. ಮೋತಿವಾಲರವರೂ ಇರುವರಂತೆ. ಈ ಕಮ್ಮಿಟಿಯ ಅಧ್ಯಕ್ಷರಾದ ಸರೋಜಿನಿ ದೇವಿಯವರು ಕ್ರಮಪ್ರಕಾರ ಚರಕದಿಂದ ನೂಲನ್ನು ತೆಗೆಯುತ್ತಿರುವರು.

ದಕ್ಷಿಣ ಕನ್ನಡ.

ಪುತ್ತೂರು:—ಜಿಲ್ಲಾ ಕಲೆಕ್ಟರ ದೊರೆಗಳವರು ಪುತ್ತೂರು ಮೊಕ್ಕಾಮಿನ ಜಮಾಬಂದಿಯು ಫೆಬ್ರವರಿ ತಾ. ೨೪ ಮತ್ತು ೨೫ರಲ್ಲಿ ತೀರಿಸಿ ತಾ. ೨೭ಕ್ಕೆ ಇಲ್ಲಿಂದ ಮಂಗಳೂರಿಗೆ ಹಿಂತೆರಳಿದರು.

ಉಪ್ಪಿನಂಗಡಿ:—ಇಲ್ಲಿಯ ತಾಲೂಕು ಬೋರ್ಡಿನ ಮೆಂಬರಿಕೆಗೆ ಉಪ್ಪಿನಂಗಡಿ ಸರ್ಕಲಿಗೆ ಮ| ರಾ| ವಕೀಲ ಹೊಸದುರ್ಗ ಗಣಪತಿ ರಾವ್, ವಿಟ್ಲ, ಕೆ. ಗಣಪಯ್ಯ, ಕೆದಂಬಾಡಿ ಗ್ರಾಮದ ಬಿದ್ರಮಾರ ಸುಬ್ರಪ್ಪ ರೈ, ಮಂಜೇಶ್ವರ ಜನಾರ್ಧನ ಭಟ್; ಮಾಡ್ನೂರು ಅತ್ರಪ್ಪ ರೈ, ಕೊಡಿಪಾಡಿ ನಟ್ಟೋಜಿ ಕೃಷ್ಣ ರಾವ್, ಕಬಕ ಪುವಣಿ ಹೆಗ್ಗಡೆ; ಕೊಯಿಲ ಪಟೇಲ ಸುಬ್ಬಣ್ಣ ರೈ, ಶಾಂತಿ ಗೌಡ, ಸೀತಾರಾಮ ಕೊಳಪಾಡಿ ತ್ರಾಯ ಮತ್ತು ವಕೀಲ ಜಿ. ವೇಣುಗೋಪಾಲ ರಾವ್.

ಪುತ್ತೂರು ಸರ್ಕಲಿಗೆ ಮ| ರಾ| ಎಮ್. ಅನಂತ ರಾವ್ ವಕೀಲ, ವಕೀಲ ಬೆಳ್ಳಿಪಾಡಿ ದಾಸ ರೈ, ವಕೀಲ ಎಚ್. ಗಣಪತಿರಾವ್, ವಿಟ್ಲ ಕೆ. ಗಣಪಯ್ಯ, ಕೊಡಿಪಾಡಿ ನಟ್ಟೋಜಿ ಕೃಷ್ಣರಾವ್, ಆಯುರ್ವೇದ ರಾಮಚಂದ್ರ ಬನ್ನಿಂತಾಯ, ವಕೀಲ ಮೊಳಹಳ್ಳಿ ಶಿವರಾವ್, ಕಬಕ ಗ್ರಾಮದ ತುಂಗ ಸುಬ್ಬರಾವ್.

ಬೆಳತಂಗಡಿ ಸರ್ಕಲಿಗೆ—ಪುತ್ತೂರು ವಕೀಲ ಬೆಳ್ಳಿಪಾಡಿ ದಾಸ ರೈ, ವಕೀಲ ಎಚ್. ಗಣಪತಿ ರಾವ್, ವಿಟ್ಲ ಕೆ. ಗಣಪಯ್ಯ, ಮಾಡ್ನೂರ ಅತ್ರಪ್ಪ ರೈ, ಕೊಡಿಪಾಡಿ ನಟ್ಟೋಜಿ ಕೃಷ್ಣ ರಾವ್ [illegible]

[illegible] ಪುತ್ತೂರು, ಬೆಳ್ತಂಗಡಿ ಈ ಸರ್ಕಲಿಗೆ ಬಿ. ದಾಸ ರೈ, ಹೊಸದುರ್ಗ ಗಣಪತಿ ರಾವ್, ಕೆ. ಗಣಪಯ್ಯನವರು ವ ಉಪ್ಪಿನಂಗಡಿ ಬೆಳ್ತಂಗಡಿ ಸರ್ಕಲಿಗೆ ವಕೀಲ ವೇಣುಗೋಪಾಲರಾಯರು ಮತ್ತು ಉಪ್ಪಿನಂಗಡಿ, ಪುತ್ತೂರು, ಬೆಳ್ತಂಗಡಿ, ಸುಳ್ಯ ಈ ೪ ಸರ್ಕಲಿಗೆ ಕೊಡಿಪಾಡಿ ಗ್ರಾಮದ ನಟ್ಟೋಜಿ ಕೃಷ್ಣರಾವ್ ಇವರು ಉಮೇದ್ವಾರರಾಗಿ ನಿಂತಿರುವರು.

ಮಾರ್ಚ ತಾ. ೧೪ನೇ ರಾತ್ರಿ ಗುಡುಗು ಮಳೆ ಬಂದದ್ದಲ್ಲದೆ ತಾ. ೧೫ನೇ ಶ್ಯಾಮ ೪ ಗಂಟೆಗೆ ಮಿಂಚು, ಗುಡುಗು ಮತ್ತು ಸುಂಟರ ಗಾಳಿ ಮಳೆ ಬೀಸಿತ್ತು. ಅನೇಕ ಮರಗಳು ಬಿದ್ದದ್ದಲ್ಲದೆ ಅನೇಕ ಮನೆ ಮಾಡುಗಳ ಮುಳಿ ಹೋಗಿ ಅಪಾರ ನಷ್ಟ ಉಂಟಾಗಿಯದೆ.

ಮುಲ್ಕಿ:—ಇದೇ ಕಳೆದ ತಾ. ೧೨ನೇ ಗುರುವಾರ ಅಪರಾಹ್ನ ಗಂಟೆ ೫ಕ್ಕೆ ಮ| ರಾ| ರಾ| ಡಾಕ್ಟರ್ ಎಮ್. ಆರ್. ಕಾಮತ್‌ರವರ ಅಧ್ಯಕ್ಷತೆಯಲ್ಲಿ "ಮುಲ್ಕಿ ಯೂನಿಯನ್ ಕ್ಲಬ್,"ನಲ್ಲಿ ಜರಗಿದ ಈ ಊರ ನಿವಾಸಿಕರ ಮಹಾ ಸಭೆಯಲ್ಲಿ ಈ ಕೆಳಗಿನ ಠರಾವು ಸರ್ವಾನುಮತದಿಂದ ಪಾಸಾಯಿತು.

"ಇತ್ತೀಚೆಗೆ ಬ್ರಾಹ್ಮಣೇತರ ಪಕ್ಷದಲ್ಲಿ ಖಾಲಿ ಬಿದ್ದಿರುವ ಮದ್ರಾಸು ನ್ಯಾಯ ವಿಧಾಯಕ ಸಭೆಯ ಮೆಂಬರಿಕೆಗೆ ರಾಜೇಶ್ರೀ ಎ. ಬಾಲಕೃಷ್ಣ ಶೆಟ್ಟಿ ಉಮೇದುವಾರರಾಗಿ ನಿಂತಿರುತ್ತಾರೆಂದು ಕೇಳಿ ನಮಗೆ ಬಹಳ ಸಂತೋಷವಾಗುತ್ತದೆ. ಈ ದಿವಸ ಕೂಡಿದ ಈ ಮಹಾ ಸಭೆಯು ಸದರಿ ಶೆಟ್ಟಿ ಉಮೇದುವಾರಿಕೆಯನ್ನು ಸಂತೋಷದಿಂದ ಸರ್ವಾನುಮತವಾಗಿ ಅನುಮೋದಿಸುತ್ತದೆ. ರಾಜೇಶ್ರೀ ಶೆಟ್ಟಿ ತಮ್ಮ ಸಾರ್ವಜನಿಕ ಕಾರ್ಯ ಕಲಾಪಗಳಿಂದಲೂ, ತಮ್ಮ ಜಾತಿ ಬಾಂಧವರ ಹಿತ ಸಾಧನೆಗೂ, ಈ ಜಿಲ್ಲೆಯ ಉತ್ಕರ್ಷಕ್ಕೂ, ಹಿಂದುಳಿದ ವರ್ಗದವರ ಉದ್ಧಾರ್ಯದ ಸ್ಥಿತಿಗೂ ಮನಮುಟ್ಟಿ ಕಾದಾಡುತ್ತಿರುವದು ಈ ಜಿಲ್ಲೆಯವರಿಗೆಲ್ಲಾ ಚಿರಪರಿಚಿತವುಳ್ಳದ್ದಾಗಿದೆ. ಅದೂ ಅಲ್ಲದೆ ಅವರು ಬಕ್ಷ್ಯರಾಜ್ಯ ಪಕ್ಷದವರಾಗಿ ಉಮೇದುವಾರರಾಗಿ ನಿಂತದ್ದು ಅವರ ಯೋಗ್ಯತೆಗೆ ತಕ್ಕದಾಗಿದೆ. ರಾ| ಶೆಟ್ಟಿ ನಮ್ಮ ಜಿಲ್ಲೆಯ ಹಿತ ದೃಷ್ಟಿಯಿಂದ ಮನಃ ಪೂರ್ವಕವಾಗಿಯೂ, ನಿಸ್ವಾರ್ಥತೆಯಿಂದಲೂ, ಸ್ವಪ್ರಯೋಜನಾಪೇಕ್ಷೆಯಿಲ್ಲದೆಯೂ ಎಷ್ಟು ಮಟ್ಟಿಗೆ ಕೆಲಸಮಾಡುತ್ತಿರುವರೆಂದು ತಿಳಿದೇ ಅವರ ಉಮೇದುವಾರಿಕೆಯನ್ನು ನಾವು ಸರ್ವಾನುಮತದಿಂದ ಪುಷ್ಟೀಕರಿಸುತ್ತೇವೆ. ಇದೇ ರೀತಿಯಲ್ಲಿ ಜಿಲ್ಲೆಯ ಎಲ್ಲಾ ಭಾಗದವರೂ ತಂತಮ್ಮ ವೋಟುಗಳನ್ನು ಇವರಿಗೇ ಕೊಟ್ಟು ಇವರು ಬಹುಪಕ್ಷದಿಂದ ಆರಿಸಲ್ಪಟ್ಟು ಕೃತಕೃತ್ಯರಾಗುವಂತೆ ಮುಲ್ಕಿ ನಿವಾಸಿಕರಾದ ನಾವು ಪ್ರಾರ್ಥಿಸುತ್ತೇವೆ".

[illegible]

ಅನುಕ್ರಮಣಿಕೆ.

ಅಗ್ರಲೇಖ ಪುಟಗಳು.
ಮಧ್ಯಪ್ರಾಂತದ ರಾಜಕಾರಣ ೬
ಸ್ಫುಟವಿಚಾರಗಳು— ೭
೧, ೨ ಮ. ಗಾಂಧಿಗಳೂ ವೈಕಮ್ ಸತ್ಯಾಗ್ರಹವೂ ,,
೩, ೪ ಎಸೆಂಬ್ಲಿಯ ಪ್ರಸ್ತಾಪಗಳು ೭
೫ ಆಸಾಮಿನ ಕೂಲಿಗಳ ವಿಷಯವಾಗಿ ಮದ್ರಾಸ ಸರಕಾರದ ಹುಕುಮು
ಮಂಗಳೂರು
ವರ್ತಮಾನಸಂಗ್ರಹಗಳು—
ಪತ್ರವ್ಯವಹಾರ, ೨, ೮-೯
ದಕ್ಷಿಣ ಕನ್ನಡ—, ಪುತ್ತೂರು, ಉಪ್ಪಿನಂಗಡಿ, ಮುಲ್ಕಿ, ಕುಂಬಳೆ ,,
ದೇವಬೆಳ್ಳ, ಮಂಜೇಶ್ವರ, ಪೊಳಲಿ, ಇರುವೈಲು ,,
ಒಳದೇಶ ವರ್ತಮಾನ ೮

ಸ್ವದೇಶಾಭಿಮಾನಿ.

ಶಕ ೧೮೪೬ ಫಾಲ್ಗುಣ ಬ॥ ೧೧ಯು ಶುಕ್ರವಾರ.

ಮಧ್ಯಪ್ರಾಂತದ ರಾಜಕಾರಣ.

ಹಿಂದುಸ್ಥಾನದೊಳಗಿನ ಇತರ ಎಲ್ಲ ಭಾಗಗಳಲ್ಲಿಯ ರಾಜಕಾರಣದ ಸ್ವರೂಪವು ಬೇರೆ; ಮತ್ತು ಮಧ್ಯಪ್ರಾಂತದೊಳಗಿನ ರಾಜಕಾರಣದ ಸ್ವರೂಪವು ಬೇರೆ. ಅಸಹಕಾರದ ಮೊದಲನೆಯ ತೆರೆಯು ಈ ದೇಶಕ್ಕೆ ಬಂದು ಅಪ್ಪಳಿಸಿದಾಗ ಯಾವ ಯಾವ ಸಂಗತಿಗಳು ಜನಗಳ ಕೈಗೆ ಸಿಕ್ಕಿದವೊ ಅವುಗಳ ಸಾಧ್ಯಾಸಾಧ್ಯತೆಯನ್ನು ಜನತೆಯು ಪರೀಕ್ಷಿಸಿ ನೋಡಿತು. ಅಷ್ಟರಲ್ಲಿ ಅದರ ಎರಡನೆಯ ತೆರೆಯು ಬಂದು ಅಪ್ಪಳಿಸಿತು. ಈ ಎರಡನೆಯ ತೆರೆಯೆಂಬುದೆ ಸ್ವರಾಜ್ಯಪಕ್ಷದ ಜನ್ಮವು. ಸ್ವರಾಜ್ಯಪಕ್ಷವು ಅಸ್ತಿತ್ವದಲ್ಲಿ ಬಂದ ಬಳಿಕ ಅದರ ಉದ್ದೇಶ ಮತ್ತು ಕಾರ್ಯಪದ್ಧತಿ ಇವುಗಳನ್ನು ಭಂಗಿಸಲು ನಮ್ಮಲ್ಲಿಯ ಹಲವರು, ನೋಕರಶಾಹಿಯೊಳಗಿನ ಎಲ್ಲರು ಏಕಪ್ರಕಾರವಾಗಿ ಯತ್ನಿಸಿದರೂ ಅದರ ಬಲವು ಮತ್ತು ಪ್ರಭಾವವು ದಿನೇದಿನೇ ಹೆಚ್ಚುತ್ತ ಹೋದವು. ಆದರೂ ಬೇರೆಬೇರೆ ಪ್ರಾಂತಗಳಲ್ಲಿ ಸ್ವರಾಜ್ಯಪಕ್ಷದ ಬಲವು ಬೇರೆ ಬೇರೆ ವಿಧವಾಗಿತ್ತು. ಮಧ್ಯಪ್ರಾಂತದಲ್ಲಿ ಮಾತ್ರ ಅದು ಒಂದೆ ರೂಪದ್ದಾಗಿತ್ತು. ಮಧ್ಯಪ್ರಾಂತದ ಕೌನ್ಸಿಲಿನಲ್ಲಿ ಶಾಂತರು, ಸ್ವತಂತ್ರರು ಎಂಬುದಾಗಿ ಹಲಕೆಲವರು ಲೋಕಪಕ್ಷದ ಸಭಾಸದರಿದ್ದರೂ ಸ್ವರಾಜ್ಯಪಕ್ಷವೆ ಅಧಿಕವಾಗಿತ್ತು. ಹುಲಿಗಳ ಹಿಂಡಿನ ಎಡೆಯಲ್ಲಿ ಒಂದೆರಡು ಇತರ ಮೃಗಗಳಿದ್ದರೂ ಹೇಗೆ ಅವುಗಳ ಮಹತ್ವವಿರುವುದಿಲ್ಲವೊ ಅಥವಾ ಯುದ್ಧಕ್ಕೆ ಹೊರಟ ಸೈನ್ಯದಲ್ಲಿ ಹತ್ತೆಂಟು ಜನ ಪಂಚಾರಕರು ನಿರಾಯುಧರಾಗಿದ್ದರೂ ಹೇಗೆ ಆ ಇತರ ಸಾವಿರಾರು ಸಾಯುಧವೀರರ ಮಧ್ಯದಲ್ಲಿ ಅಲ್ಪ ನಿರಾಯುಧರ ಗಣನೆ ಇಲ್ಲವೊ ಹಾಗೆಯೆ ಮಧ್ಯಪ್ರಾಂತದ ಕೌನ್ಸಿಲಿನಲ್ಲಿ ಇತರ ಪಂಗಡದವರು ಲೆಕ್ಕಕ್ಕೆ ತಕ್ಕಷ್ಟು ಇದ್ದಾರಲ್ಲದೆ, ಅತಿ ದೊಡ್ಡ ಪಂಗಡವಾದ ಸ್ವರಾಜ್ಯ ಪಕ್ಷದ ಮುಂದೆ ಅವರ ಗಣನೆ ಇದ್ದಿಲ್ಲ. ಇದು ಕಳೆದ ವರ್ಷದ ಸ್ಥಿತಿ. ಡೊ. ಮುಂಜೇಯವರಂಥ ಧುರೀಣರು ಈ ಪಕ್ಷದ ಸೂತ್ರಧಾರರಾಗಿದ್ದು ಬಹು ಯಶಸ್ವಿಯಾದ ರೀತಿಯಲ್ಲಿ ಸ್ವಪಕ್ಷದ ಚಳವಳವನ್ನು ನಡಿಸಿದರು. ನಮ್ಮ ಅಂಬೋಣವನ್ನು ಮನ್ನಿಸುವುದಿಲ್ಲವಾದರೆ ನಿಮ್ಮ ಕಾರ್ಯಕ್ಕೆ ನಾವು ಅನುಮತಿಯನ್ನು ಕೊಡಲಿಕ್ಕಿಲ್ಲ, ಅದುವರೆಗೆ ನಿಮ್ಮನ್ನು ನಾವು ತಡೆಗಟ್ಟುವೆನೆಂಬೀ ಉಪರೋಧಾತ್ಮಕ ಚಳವಳದ ಸೂತ್ರಕ್ಕನುಸಾರವಾಗಿ ಮಧ್ಯಪ್ರಾಂತದ ಕೌನ್ಸಿಲು ಇಡೀ ಒಂದು ವರ್ಷದ ಮಾರ್ಗವನ್ನು ಆಕ್ರಮಿಸಿತು; ವಾರ್ಷಿಕ ಜಮಾ ಖರ್ಚಿನ ಬೀಲನ್ನು ನಿರಾಕರಿಸಿತು; ಮಂತ್ರಿಗಳ ಮೇಲೆ ನಿಂದೆಯನ್ನು ತೋರ್ಪಡಿಸಲು ಮಂತ್ರಿಯ ವಾರ್ಷಿಕ ವೇತನವು ಎರಡು ರುಪಾಯಿ ಇರಬೇಕೆಂದು ಠರಾವು ಪಾಸುಮಾಡಿತು! ಈ ಮೇರೆಗೆ ಮ. ಪ್ರಾಂತದ ಕಳೆದ ವರ್ಷದ ಕೌನ್ಸಿಲು ಪ್ರತಿಬಂಧವನ್ನು ಮಾಡಿದ ಬಳಿಕ ಪ್ರಾಂತಾಧಿಪತಿಗಳಿಗೆ ನಿರುಪಾಯವಾಗಿ ಕೌನ್ಸಿಲನ್ನು ತತ್ಕಾಲದ ಮಟ್ಟಿಗೆ ನಿಲ್ಲಿಸಬೇಕಾಯಿತು.

ಈ ವರ್ಷ ಪುನಃ ಕೌನ್ಸಿಲು ಪ್ರಾರಂಭವಾಯಿತು. ಕಳೆದ ವರ್ಷದ ಗವರ್ನರರು ತಮ್ಮ ಯಾವ ಆಟವೂ ನಡಿಯುವುದಿಲ್ಲವೆಂದು ನಿಶ್ಚಯಿಸಿ ಕೊನೆಗೆ ಕೌನ್ಸಿಲಿನ ಬಾಗಿಲನ್ನೆ ಮುಚ್ಚಿದ್ದರು. ಈ ವರ್ಷದ ಗವರ್ನರರು ಹೊಸಬರು. ಆದ್ದರಿಂದ ಕೌನ್ಸಿಲನ್ನು ಹತ್ತೋಟಿಯಲ್ಲಿ ತಂದೇನೆಂದು ಅವರಲ್ಲಿ ಉತ್ಸಾಹವಿರುವುದು ಸಹಜ. ಅಲ್ಲದೆ, ಇನ್ನೊಂದು ಕಾರಣವೂ ಇದೆ. ಕಳೆದ ವರ್ಷ ಸರಕಾರ ಪಕ್ಷವು ಸಂಪೂರ್ಣ ಪರಾಜಿತವಾದ ಬಳಿಕ ಸರಕಾರವು ರಾಜಮಾರ್ಗವನ್ನು ಬಿಟ್ಟು ಕೌನ್ಸಿಲಿನಲ್ಲಿ ಮತ್ತು ದೇಶದಲ್ಲಿ ಬುದ್ಧಿಭೇದವನ್ನು ತರಲು ಯತ್ನಿಸಿತು. ಕಾರ್ಯಕಾರಿ ಕೌನ್ಸಿಲರುಗಳು, ಸ್ವತಃ ಹಳೆ ಗವರ್ನರರು ಮತ್ತು ಇತರ ದೊಡ್ಡ ಮನುಷ್ಯರು ಸ್ವರಾಜ್ಯಪಕ್ಷವನ್ನು ದೂರ ಹತ್ತಿದರು. ಗುಪ್ತಪತ್ರಿಕೆಗಳ ಪ್ರಸಾರವಾಗತೊಡಗಿ ಅವುಗಳಲ್ಲಿ ಸ್ವರಾಜ್ಯಪಕ್ಷದ ನಿಂದೆ ಬರಹತ್ತಿತು. ಈ ಪ್ರಕಾರವಾಗಿ ಇತರ ಪ್ರಯತ್ನಗಳು ನಡೆದು ಅವುಗಳ ದೆಸೆಯಿಂದ ಜನತೆಯು ಮತ್ತು ಸಭಾಸದರಲ್ಲಿ ಮತಾಂತರವುಂಟಾಗಿರಬೇಕೆಂಬ ನಿರೀಕ್ಷೆ ಇತ್ತು. ಸಾರಾಂಶ ಹೊಸ ಗವರ್ನರರ ಉತ್ಸಾಹ, ಬುದ್ಧಿಭೇಧಕ್ಕಾಗಿ ಮಾಡಿದ ಪ್ರಯತ್ನ ಈ ಎರಡು ಕಾರಣಗಳಿಂದ ಮೊನ್ನೆ ತಿರುಗಿ ಅದೆ ಕೌನ್ಸಿಲು ಜರಗಿಸಲ್ಪಟ್ಟಿತು. ಆದರೆ ಈ ಕೌನ್ಸಿಲಿನಲ್ಲಿಯೂ ಕಳೆದ ವರ್ಷದಂತೆ ಮಂತ್ರಿಗಳ ಸಂಬಳ ೨ ರುಪಾಯಿ ಇರಬೇಕೆಂದು ಠರಾವು ಪಾಸಾಯಿತು!

ಸ್ವಾತಂತ್ರ್ಯಪ್ರಿಯರೆಂದು ಗರ್ವಪಡುವ ಅಧಿಕಾರಿಗಳಿಗೆ ತಮ್ಮ ಲೋಕಮತಾನುವರ್ತಿತ್ವವನ್ನು ತೋರಿಸಲು ವಸ್ತುತಃ ಇದೊಂದು ಉತ್ತಮ ಸಂಧಿಯಾಗಿತ್ತು. ಆದರೆ ನೋಕರಶಾಹಿಯು ಅದನ್ನು ಸದುಪಯೋಗಿಸಿಕೊಂಡದ್ದು ಕಂಡುಬರುವುದಿಲ್ಲ. ಸರಕಾರವು ತನ್ನಲ್ಲಿ ಯಾವ ಬದಲಾವಣೆಯನ್ನು ಮಾಡಿದ್ದು ಕಂಡುಬರುವುದಿಲ್ಲ. ಕಳೆದ ವರ್ಷ ಅದು ಎಲ್ಲಿ ಇತ್ತೊ, ಈ ವರ್ಷವೂ ಅಲ್ಲೆ ಇದೆ. ನೋಕರಶಾಹಿಯು ಈ ವಿಧವಾಗಿ ದುರಾಗ್ರಹ ಮತ್ತು ಸ್ವಾರ್ಥವನ್ನು ಅಪ್ಪಿಕೊಂಡು ಇರುವುದಾದರೆ ಲೋಕಪಕ್ಷವಾದರೂ ತನ್ನಲ್ಲಿ ಯಾಕೆ ಬದಲಾವಣೆ ಮಾಡಿಕೊಂಡೀತು? ಅದ್ದರಿಂದ ಮಧ್ಯಪ್ರಾಂತದ ಕೌನ್ಸಿಲಿನಲ್ಲಿ ಕಳೆದ ವರ್ಷದಂತೆಯೆ ಈ ವರ್ಷವೂ ಮಂತ್ರಿಮಂಡಲದ ಮೇಲೆ ಎರಡು ರುಪಾಯಿ ಸಂಬಳದ ನಿಂದಾವ್ಯಂಜಕ ಠರಾವನ್ನು ಸ್ವರಾಜ್ಯಪಕ್ಷವು ತಂದಿತು. ಈ ಠರಾವು ಬಂದು ಪಾಸಾಗುವದಕ್ಕಿಂತ ಮುಂಚೆ ಸ್ವರಾಜ್ಯಪಕ್ಷದಲ್ಲಿ ಕೊಂಚ ಮತಭೇದವುಂಟಾಗಿತ್ತು. ಕೆಲವರ ಅಭಿಪ್ರಾಯದಂತೆ ಮಂತ್ರಿತ್ವವನ್ನು ಸ್ವೀಕರಿಸಿ ಎಷ್ಟರ ಮಟ್ಟಿಗೆ ಅದರಿಂದ ದೇಶಕ್ಕೆ ಲಾಭವನ್ನು ಕೊಡಲು ಸಾಧ್ಯವುಂಟೊ ಅದನ್ನು ಕೊಡೋಣವೆಂದಿತ್ತು. ಕೆಲವರು ಈ ಅಭಿಪ್ರಾಯವನ್ನು ಅಲ್ಲಗಳೆದಿಲ್ಲವಾದರೂ ಸ್ವರಾಜ್ಯಪಕ್ಷದ ಮಧ್ಯವರ್ತಿಯಾದ ಅಧಿಕಾರಮಂಡಲದ ಅಭಿಪ್ರಾಯದಂತೆ ಇಷ್ಟು ಬೇಗನೆ ಉಪರೋಧಕ ತತ್ವವನ್ನು ಬಿಟ್ಟುಬಿಡುವುದು ಚಂದವಲ್ಲವೆಂದು ಅಭಿಪ್ರಾಯಪಟ್ಟಿದ್ದರು. ಈ ಪ್ರಕಾರವಾಗಿ ಮತಭೇದವು ಹುಟ್ಟಿದ ಕಾರಣ, ಈ ಮತಭೇದದ ಛಿದ್ರದಲ್ಲಿ ಪ್ರವೇಶಿಸಿ ನೋಕರಶಾಹಿಯು ತನ್ನ ಇಷ್ಟಾರ್ಥವನ್ನು ಸಾಧಿಸಿಕೊಳ್ಳುತ್ತದೊ ಎಂಬುದೊಂದು ಭಯವಿತ್ತು. ಆದರೆ ಸುದೈವದ ಮಾತೇನೆಂದರೆ, ಆ ತಕ್ಕ ಸಮಯದಲ್ಲಿ ಮತಭೇದದ ಮೋಡಗಳು ಕಂಗಿಹೋಗಿ ಅಭೇದ್ಯವಾದ ಸ್ವರಾಜ್ಯ ಪಕ್ಷದ ಏಕಮತ್ಯದಿಂದ ನಿದಾಂವ್ಯಂಜಕ ಠರಾವು ಈ ವರ್ಷ ಪುನಶ್ಚ ಪಾಸಾಯಿತು!

ವಸ್ತುತಃ ಈ ಠರಾವು ಪಾಸಾದ್ದು ಏನೂ ಆಶ್ಚರ್ಯವಲ್ಲ. ಸರಕಾರದ ದೃಷ್ಟಿಕೋನದಲ್ಲಿ ಕಳೆದ ವರ್ಷಕ್ಕಿಂತ ಯಾವ ಬದಲಾವಣೆಯೂ ಆಗಿಲ್ಲ. ಮುಡಿಮನ್ ಕಮಿಟಿಯ ರಿಪೋರ್ಟಿನ ಮೇಲಿಂದ ಹೇಳುವುದಾದರೆ ನೋಕರಶಾಹಿಯು ಈಗಿರುವ ಸುಧಾರಣಾ ಕಾಯಿದೆಯ ಕಾಲುಗಳನ್ನು ಹಿಂದಕ್ಕೆಳೆಯುವುದರಲ್ಲಿದೆ ಎಂದು ತೋರುತ್ತದೆ. ಸರಕಾರದ ಯಂತ್ರವು ಸರಾಗವಾಗಿ ನಡಿಯಲು ಮಧ್ಯಮಧ್ಯದಲ್ಲಿ ಯಾವ ತಡೆಗಳು ಬರುತ್ತವೆಂಬ ಅನುಭವವು ನೋಕರಶಾಹಿಗೆ ಈಗ ಬಂದಿರುವುದೊ ಆ ತಡೆಯನ್ನು ತಪ್ಪಿಸಲು ಬೇಕಾದ ಏರ್ಪಾಡನ್ನು ಬಹುಮತದ ವರದಿಯು ಸೂಚಿಸಿರುವ ಕಾರಣ ಸರಕಾರದ ದೃಷ್ಟಿಯು ಮುಂಚಿಗಿಂತಲೂ ಕಲುಷಿತವಾಗಿದೆ, ಸ್ವಾರ್ಥಪರತೆಯಿಂದ ತುಂಬಿಹೋಗಿದೆ ಎಂದೆ ಹೇಳಬೇಕು. ಸರಕಾರದ ಸ್ಥಿತಿಯು ಹೀಗಿರುವಾಗ ಸರಕಾರದ ವಿರುದ್ಧವಾಗಿ ಯಾರು ಮತಕೊಡದೆ ಇದ್ದಾರು? ಇದು ಹೊರತಾಗಿ ಸ್ವರಾಜ್ಯಪಕ್ಷವು ರಾಷ್ಟ್ರೀಯ ಸಭೆಯ ಸಮ್ಮತಿಯ ಮುದ್ರೆಯನ್ನು ಪಡೆದಿರುವುದರಿಂದ ಅದು ಪ್ರಬಲವಾದ ಲೋಕಪಕ್ಷವೆನ್ನಬೇಕು. ಇಂಥ ಪ್ರಬಲ ಲೋಕಪಕ್ಷದಿಂದ ಪರಾಜಿತವಾದ ಮ. ಪ್ರಾಂ. ಸರಕಾರವು ಇನ್ನು ಮುಂದೆ ಏನುಮಾಡುತ್ತದೆಂದು ನೋಡಬೇಕಾಗಿದೆ. ಈಗಿನ ಕೌನ್ಸಿಲನ್ನು ವಿಸರ್ಜಿಸಿ ಪುನಃ ಚುನಾವಣೆಯನ್ನು ಪ್ರಾರಂಭಿಸುವುದು ಅಥವಾ ವಿಭಕ್ತಖಾತೆಗಳನ್ನು ಗವರ್ನರರೆ ಕೈಯಲ್ಲಿ ತೆಕ್ಕೊಳ್ಳುವುದು ಎಂಬುದಾಗಿ ಎರಡು ದಾರಿಗಳಿವೆ. ಸರಕಾರವು ಈ ಎರಡನೆ ದಾರಿಯನ್ನೆ ಅವಲಂಬಿಸುವುದಿದೆ ಎಂದು ಹೇಳೋಣಾಗುತ್ತದೆ. ಈ ಹೇಳಿಕೆಯಂತೆ ಸಂಗತಿಯು ಸಂಭವಿಸುವುದಾದರೆ, ನಮ್ಮ ದ್ವಿದಲ ರಾಜ್ಯಪದ್ಧತಿಯು ನಮಗೆ ಬೇಡ, ನಮ್ಮ ಹೊಸ ಕೌನ್ಸಿಲೂ ನಮಗೆ ಬೇಡ, ಅದಕ್ಕಿಂತ ಮುಂಚಿನ ಸ್ಥಿತಿಯೆ ಆಗಬಹುದೆಂದು ಜನತೆಯು ಮುಂಚೆಯಿಂದ ಏನು ಹೇಳಿಕೊಂಡು ಬರುತ್ತಿತ್ತೊ ಮತ್ತು ಯಾವ ದ್ವಿದಲ ಪದ್ಧತಿಯ ಜೇಳಿನ ಬಾಲವನ್ನು ಮುರಿಯಲು ಮ. ಗಾಂಧಿಗಳು ಅಸಹಕಾರದ ಯಜ್ಞವನ್ನು ಪ್ರಾರಂಭಿಸಿರುವರೋ ಅಂಥ ದ್ವಿದಲ ಪದ್ಧತಿಯ ಮರಣವು ಮಧ್ಯಪ್ರಾಂತದ ಮಟ್ಟಿಗಾದರೂ ಅಲ್ಲಿಯ ಗವರ್ನರರ ಕೈಯಿಂದಲೆ ಉಂಟಾಗುತ್ತದೆಂಬ ಮಾತು ಸಮಾಧಾನಕರವಲ್ಲವೆ? ಕೌನ್ಸಿಲು ಬೇಡವೆಂದು ಗಾಂಧಿಗಳು ಹೇಳುವಾಗ ನೋಕರ ಶಾಹಿಯು ಕೌನ್ಸಿಲಿನ ಪ್ರಾಶಸ್ತ್ಯವನ್ನು ಹೊಗಳುತಿತ್ತು. ಈಗ ಅದೆ ನೋಕರಶಾಹಿಯು ನಾವು ಇನ್ನು ಕೌನ್ಸಿಲನ್ನು ಮುಚ್ಚುತ್ತೇವೆಂದು ಹೇಳಹತ್ತಿದೆ! ಈ ವಿಪರೀತಾರ್ಥದ ನುಡಿಯು ಅದರ ಬಾಯಿಂದ ಹೇಗೆ ಬರಹತ್ತಿತು?

ಮಧ್ಯಪ್ರಾಂತಿಕ ಸರಕಾರವು ಕೌನ್ಸಿಲನ್ನು ವಿಸರ್ಜಿಸಿ ಸುಧಾರಣಾ ಕಾಯಿದೆಯನ್ನು ಹಿಂದಕ್ಕೆ ತೆಕೊಳ್ಳದೆ ಮೇಲೆ ಹೇಳಿದ ಇನ್ನೊಂದು ಮಾರ್ಗವನ್ನು ಅವಲಂಬಿಸಿ ಪುನಃ ಚುನಾವಣೆಯನ್ನು ಮಾಡಲುದ್ಯುಕ್ತವಾದರೆ ಅದು ಇನ್ನೂ ಉತ್ತಮವೆಂದೆ ಹೇಳಬೇಕು. ಕಾರಣ, ಬರುವ ಚುನಾವಣೆಯಲ್ಲಿ ಸ್ವರಾಜ್ಯಪಕ್ಷದ ಸಭಾಸದರೆ ಇನ್ನೂ ಅಧಿಕ ಸಂಖ್ಯಾಕರಾಗಿ ಬರುವರೆಂಬುದಕ್ಕೆ ಸಂದೇಹವಿಲ್ಲ. ಅದ್ದರಿಂದ ಸರಕಾರವು ಈ ದಾರಿಯನ್ನು ಅವಲಂಬಿಸಿದರೂ ಒಂದೆ, ಸುಧಾರಣೆಗಳನ್ನು ಹಿಂದಕ್ಕೆಳೆಯುವ ಆಲೋಚನೆಯನ್ನು ಕೈಕೊಂಡರೂ ಒಂದೆ, ಅದರಿಂದ ಸರಕಾರದ ಅಪಜಯವೆ ಅಲ್ಲದೆ, ಜನತೆಯದಲ್ಲ. ಈ ಸುಧಾರಣೆಗಳು ಬೇಡ. ಸ್ವಾತಂತ್ರ್ಯವಿಲ್ಲದ ಮಂತ್ರಿಪದ, ಕಾರ್ಯಕಾರಿ ಮಂಡಲದ ಮೇಲೆ ಅಧಿಕಾರ ನಡಿಸದ ಕಾಯಿದೆ ಕೌನ್ಸಿಲು, ಹಣದ ಚೀಲವಿಲ್ಲದೆ ನಡಿಸುವ ಕಾರಭಾರ, ಇವೊಂದೂ ನಮಗೆ ಬೇಡ, ಇವುಗಳಿಲ್ಲದ ಸುಧಾರಣೆಯು ಪಂಚಪ್ರಾಣಗಳಿಲ್ಲದ ದೇಹದಂತೆ ಸುಮ್ಮಗೆ ಭಾರವೆ ಸರಿ. ಜೀವಕಳೆ ಇಲ್ಲದ ದೇಹಕ್ಕೆ ಅಲಂಕಾರವು ಹೇಗೆ ನಿರರ್ಥಕವೊ ಹಾಗೆಯೆ ಸ್ವಾಯತ್ತತೆ ಇಲ್ಲದ ಸುಧಾರಣೆಯು ನಿರರ್ಥಕವು. ಜೀವವಿಲ್ಲದ್ದು ವ್ಯಕ್ತಿಯು ಪ್ರೇತವೆಂಬಂತೆ ಅದು ಸುಧಾರಣೆಯಲ್ಲ, ಕುಧಾರಣೆಯೆಂದು ಜನತೆಯು ಏಕಪ್ರಕಾರವಾಗಿ ಎಷ್ಟೊ ಸಮಯದಿಂದ ಹೇಳುತ್ತಿದೆ. ಮ. ಪ್ರಾ. ಗವರ್ನರರು ಕೌನ್ಸಿಲನ್ನು ನಿಲ್ಲಿಸುವುದಾದರೆ ಜನತೆಯ ಈ ಅಪೇಕ್ಷೆಯನೆ ಮಿತ್ರಭಾವದಿಂದ ಅಲ್ಲವಾದರೂ, ವಿರೋಧಬುದ್ಧಿಯಿಂದಲಾದರೂ ಪೂರಯಿಸಿದರೆನ್ನಬೇಕಾದೀತು! ಇದಾದರೂ ಲೋಕಪಕ್ಷದ ಜಯವೆ ಸರಿ.

ಸ್ಫುಟವಿಚಾರಗಳು.

೧. ಮಹಾತ್ಮಾ ಗಾಂಧಿಗಳು ವೈಕಮಿನ ಸತ್ಯಾಗ್ರಹಿಗಳನ್ನು ಅಭಿನಂದಿಸಲು ಮತ್ತು ಮುಖ್ಯವಾಗಿ ಸಾಂಪ್ರದಾಯಿಕರ ಮತ್ತು ಸತ್ಯಾಗ್ರಹಿಗಳೊಳಗೆ ಒಪ್ಪಂದವನ್ನು ಸಾಧಿಸಲು ವೈಕಮಿಗೆ ಬಂದಿದ್ದರಷ್ಟೆ. ಆದರೆ ಹೇಳಲು ವ್ಯಸನವಾಗುತ್ತದೆ ಏನೆಂದರೆ? ಮ. ಗಾಂಧಿಗಳ ಈ ಪ್ರಯಾಣವು ಯಶಸ್ವಿಯಾಗಲಿಲ್ಲ! ಮ. ಗಾಂಧಿಗಳು ವೈಕಮಿಗೆ ಬರುವಾಗ ದಾರಿಯಲ್ಲಿ ವೈಕಮಿನಿಂದ ತಿರುಗಿ ಹೋಗುವಾಗ ಇತರ ಕಡೆಗಳಲ್ಲಿ ಕೊಚ್ಚಿಯಂಥ ರಾಜಧಾನಿಯಲ್ಲಿ, ಅಲ್ಲಿ, ಇಲ್ಲಿ ಎಂದು ಅನೇಕ ಕಡೆಗಳಲ್ಲಿ ಮಹಾತ್ಮಾಜಿಗಳಿಗೆ ಮಾನಪತ್ರಗಳನ್ನು ಬಹು ಭಕ್ತಿಯಿಂದ ಜನರು ಸಮರ್ಪಿಸುತ್ತಿದ್ದರು. ಮಾನಪತ್ರಗಳನ್ನು ಸಮರ್ಪಿಸುವುದೆ ಗಾಂಧಿ ಭಕ್ತಿ ಎಂದು ಜನರು ತಿಳಕೊಳ್ಳುತ್ತಾರಲ್ಲದೆ ಅವರು ಕೈಕೊಂಡಿರುವ ದೇಶಹಿತದ ಕಾರ್ಯಗಳಲ್ಲಿ ನೆರವಾಗುವದು, ಅವರ ಉದ್ದೇಶಗಳನ್ನು ಪೂರಯಿಸುವುದು ಅವರ ನಿಜವಾದ ಭಕ್ತಿ ಎಂದು ತಿಳಿಯುವದಿಲ್ಲ. ಇದು ನಿಜವಾಗಿ ಶೋಚನೀಯವು. ಇರಲಿ. ಮ. ಗಾಂಧಿಜಿಗಳು ಸಾಂಪ್ರದಾಯಿಕರನ್ನು ಕಂಡರು, ಅನಂತಶಯನದ ಮಹಾರಾಣಿಯವರನ್ನೂ ಕಂಡರು. ತಥಾಪಿ ಮ. ಗಾಂಧಿಗಳ ಉದ್ದೇಶವು ಫಲಿಸಲಿಲ್ಲ. "ಪ್ರಾಚೀನ ಕಾಲದಿಂದ ಅನೂಚಾನ"ವಾಗಿ ನಡೆದು ಬಂದಿರುವ ಕ್ರಮವನ್ನು ಬಿಟ್ಟುಬಿಡಲು ಆಗುವದಿಲ್ಲ, ಇನ್ನು ಮುಂದೆ ಮಹಮ್ಮದೀಯರು ಮತ್ತು ಕ್ರೈಸ್ತರು ಸಂಚರಿಸದಂತೆ ದೇವಸ್ಥಾನದ ಪ್ರಾಕಾರಕ್ಕೆ ಕೂಡ ಹೊರಗಿನಿಂದ ಇನ್ನೊಂದು ಗೋಡೆಯನ್ನು ರಚಿಸುವ ಆಲೋಚನೆಯಲ್ಲಿ ದೇವಸ್ಥಾನದ ಅಧಿಕಾರಿಗಳು ಇದ್ದಾರೆ" ಎಂಬುದಾಗಿ ಮ. ಗಾಂಧಿಗಳಿಗೆ ಸಾಂಪ್ರದಾಯಿಕರ ಭೇಟಿಯಲ್ಲಿ ತಿಳಿದುಬಂತು. ಅಲ್ಲಿಂದ ಮಹಾರಾಣಿಯವರನ್ನು ಕಂಡಾಗ ಮ. ಗಾಂಧಿಗಳಿಗೆ ಮಹಾರಾಣಿಯವರು "ನೀವು ಪಡುವ ಅಭಿಪ್ರಾಯವು ನ್ಯಾಯವಾಗಿದ್ದರೂ ಪುರಾಣಪ್ರಿಯರ ಮನಸ್ಸು ನೋಯಿಸಿ, ಇದುವರೆಗೆ ಇಲ್ಲದ ಹೊಸ ಸಂಪ್ರದಾಯವನ್ನು ಪ್ರವರ್ತಿಸಲು ಸಾಧ್ಯವಿಲ್ಲ. ಸಂಸ್ಥಾನದ ಕೌನ್ಸಿಲಿನಲ್ಲಿ ಈ ಪ್ರಶ್ನೆಯು ಹಿಂದಾಗ ಬಹುಮತದಿಂದ ಅದು ಬಿದ್ದುಹೋಗಿದ್ದು [illegible] ರಿಂದ ಇದು ನಿರುಪಾಯದ ಕಾರ್ಯವಾಗಿದೆ." ಎಂದು ಬಹು ಚಂದದಿಂದಲೆ ಉತ್ತರಕೊಟ್ಟು ಅವರನ್ನು ಕಳುಹಿಸಿದರು. ಮಹಾತ್ಮಾಜಿಗಳು ಅಲ್ಲಿಂದ ಹಿಂತಿರುಗಿ ಹೊರಟಿರುವರು. ವೈಕಮಿನ ವಿಷಯದಲ್ಲಿ ಅವರು ಎಂದಾದರೂ ಒಂದು ದಿವಸ ತನ್ನ ಅಂಬೋಣವನ್ನು ಸಾಂಪ್ರದಾಯಿಕರಿಗೆ ಮಾನ್ಯ ಮಾಡಬೇಕಾಗಿ ಬಂದೀತೆಂದು ಅಭಿಪ್ರಾಯ ವ್ಯಕ್ತಗೊಳಿಸಿದ್ದಾರೆ.

೨. ಮ. ಗಾಂಧಿಗಳು ಕೋಹತಿಗೆ ಹೋಗದೆ ವೈಕಮಿಗೆ ಪ್ರಯಾಣ ಬೆಳಸಿದ್ದು ಯಾಕೆ ಎಂಬುದೊಂದು ಮನೋರಂಜಕವಾದ ಚರ್ಚೆಯು ಪತ್ರಿಕೆಗಳಲ್ಲಿ ನಡೆದಿದೆ. ವೈಸರಾಯರು ಕೋಹತಿಗೆ ಹೋಗಕೂಡದೆಂದು ಗಾಂಧಿಗಳಿಗೆ ಹುಕುಮನ್ನು ಕೊಟ್ಟ ಬಳಿಕ ಮಧ್ಯಪ್ರಾಂತದ ಸುಪ್ರಸಿದ್ಧ ಕಡು ಅಸಹಕಾರಿಗಳಾದ ಭಗವಾನದಿನರೆಂಬ ಗೃಹಸ್ಥರು ಸಭೆ ಸೇರಿಸಿ ಅದರಲ್ಲಿ "ಗಾಂಧಿಗಳು ವೈಸರಾಯರ ಹುಕುಮನ್ನು ಉಲ್ಲಂಘಿಸುವ ಸತ್ಯಾಗ್ರಹವನ್ನು ಮಾಡಬೇಕು, ಅವರಿಗೆ ಮಧ್ಯಪ್ರಾಂತದಿಂದ ಬೇಕಷ್ಟು ಸಾಹಾಯ್ಯ ಸಿಕ್ಕೀತು" ಎಂದು ಒಂದು ಠರಾವನ್ನು ಪಾಸು ಮಾಡಿದರು! ಈ ಭಗವಾನದಿನರ ಮಧ್ಯಪ್ರಾಂತವು ಗಾಂಧಿಗಳಿಗೆ ಇಷ್ಟು ದೊಡ್ಡ ಸಹಾಯ ಕೊಡಲು ಸಿದ್ಧವಿದ್ದಾಗಲೂ ಗಾಂಧಿಗಳು ಅಲ್ಲಿ ಸತ್ಯಾಗ್ರಹವನ್ನು ಮಾಡದೆ ದಕ್ಷಿಣ ದಿಕ್ಕಿಗೆ ವೈಕಮಿಗೆ ತೆರಳಿದರು ಇದು ಯಾಕೆ ಎಂಬ ಪ್ರಶ್ನೆಯನ್ನು ಕುರಿತು "ಕೇಸರಿ" ಪತ್ರಿಕೆಯು ಟೀಕಿಸಿರುವ ಒಂದೆರಡು ಮಾತುಗಳನ್ನು ನಮ್ಮ ವಾಚಕರೆದುರಿನಲ್ಲಿಡಲು ನಾವಿಚ್ಛಿಸುತ್ತೇವೆ. "ಮಹಾತ್ಮಾಜಿಗಳ ಶಿಷ್ಯರು ಸತ್ಯಾಗ್ರಹದ ವಿಷಯವಾಗಿ ಮಹಾತ್ಮಾಜಿಗಳಿಗೆ ಸಂದೇಶವನ್ನು ಕಳುಹಿಸಿರುವಾಗ ಮಹಾತ್ಮಾಜಿಗಳು ಆ ವಿಜ್ಞಾಪನೆಯನ್ನು ಯಾಕೆ ಅಲ್ಲಗಳೆದರು? ಸತ್ಯಾಗ್ರಹದ ಮಾರ್ಗವನ್ನು ಯಾಕೆ ಅವಲಂಬಿಸಲಿಲ್ಲ?—ಮಹಾತ್ಮರಿಗೆ ಸತ್ಯಾಗ್ರಹದ ಮೇಲಿನ ನಂಬಿಕೆಯೆ ತಪ್ಪಿ ಹೋಗಿದೆ ಎಂದು ಹೇಳಲಿಕ್ಕಾಗುವದಿಲ್ಲ. ಕಾರಣ, ಅವರು ವೈಕಮಿಗೆ ಸತ್ಯಾಗ್ರಹ ಸಂದರ್ಶನಾರ್ಥವಾಗಿಯೇ ಹೋಗಿದ್ದಾರೆ. ಕೋಹತಿಗೆ ಹೋಗದೆ ವೈಕಮಿನ ಅಸ್ಪೃಶ್ಯ ಸತ್ಯಾಗ್ರಹಕ್ಕಾಗಿಯೆ ಅವರು ಹೋಗಿರುವರು. ಇದು ಯಾಕೆ? ಸತ್ಯಾಗ್ರಹವನ್ನೆ ಮಾಡುವದಿದ್ದರೆ ಎಲ್ಲಿ ಅದರ ಆವಶ್ಯಕತೆಯು ಹೆಚ್ಚುಂಟೊ ಅಲ್ಲಿ ಅದನ್ನು ಕೈಕೊಳ್ಳಬೇಕು. ಈ ತುಲನಾತ್ಮಕ ದೃಷ್ಟಿಯಿಂದ ನೋಡಿದ್ದಲ್ಲಿ ವೈಕಮಿಗಿಂತಲೂ ಕೋಹತಿನ ಸತ್ಯಾಗ್ರಹವು ಹೆಚ್ಚು ಅಗತ್ಯವೆಂದು ಹೇಳಬೇಕಾಗುತ್ತದೆ. ವೈಕಮಿನಲ್ಲಿ ಒಂದು ರಸ್ತೆಯಲ್ಲಿ ಮಾತ್ರ ಅಸ್ಪೃಶ್ಯರಿಗೆ ಪ್ರತಿಬಂಧವಿದೆ; ಕೋಹತಿನ ಹಿಂದುಗಳಿಗೆ ಕೋಹತಿನ ಇಡಿ ಊರೆ ವರ್ಜ್ಯವಾಗಿದೆ. ವೈಕಮಿನ ಅಸ್ಪೃಶ್ಯರ ಆ ವಿವಾದ್ಯ ರಸ್ತೆಯಲ್ಲಿ ನಡೆಯ ಕೂಡದೆಂದು ಹೇಳುವದರಿಂದ ಅವರ ಉದ್ಯೋಗಗಳಿಗಾಗಲಿ, ನಿತ್ಯ ವ್ಯವಸಾಯಕ್ಕಾಗಲಿ ತೊಂದರೆ ಬರುವದಿಲ್ಲ; ಕೋಹತಿನ ಹಿಂದುಗಳಾದರೂ ಮನೆಮಠಗಳು ಮತ್ತು ಇತರ ಉದ್ಯೋಗ ಸ್ಥಾನಗಳು ಕೋಹತಿನಲ್ಲೇ ಇರುವದಾದ್ದರಿಂದ ಅಲ್ಲಿ ಅವರು ಹೋಗಗೊಡದೆ ಇದ್ದಲ್ಲಿ ಅವರ ಉಪಜೀವಿಕೆಗೆ ತೊಂದರೆ ಒದವು ಆದ್ದರಿಂದ ಹಿಂದುಗಳು ಕೋಹತಿನಲ್ಲಿ ಹೋಗುವದು ಅಗತ್ಯ. ವೈಕಮಿನ ಅಸ್ಪೃಶ್ಯವರ್ಗವು ದೇವಸ್ಥಾನದ ಬಳಿಯ ಹೋಗಲು ಹೊಸ ರೂಢಿಯನ್ನು ಪ್ರಾರಂಭಿಸಬೇಕು ಜಗಳವಾಡುತ್ತಿದೆ; ಇತ್ತ ಕೋಹತಿನ ಹಿಂದುಗಳಿಗೆ ಯಾವ ಹೊಸ ರೂಢಿಯನ್ನೂ ಜಾರಿಯಲ್ಲಿ ತರಬೇಕಿಲ್ಲದೆ ಆರು ತಿಂಗಳ ಮುಂಚೆ ಅವರು ಯಾವ ಹಕ್ಕುಗಳನ್ನು ಅನುಭವಿಸುತ್ತಿದ್ದರೊ ಅವುಗಳನ್ನು ಪಡೆಯಬೇಕೆಂಬುದೆ ಅವರ ಅಪೇಕ್ಷೆ. ವೈಕಮಿನ ಸತ್ಯಾಗ್ರಹವು ಭಾವನಾತ್ಮಕ ಮಾನಾಪಮಾನದ್ದಾಗಿದೆ; ಆದರೆ ಕೋಹತಿನ ಹಿಂದುಗಳ ಈ ವಿಷಯವು ಹೊಟ್ಟೆಯ ಪ್ರಶ್ನೆಯಾಗಿದೆ. ಸಾರಾಂಶ ಈ ಮೇರೆಗೆ ಯಾವ ರೀತಿಯಿಂದ ನೋಡಿದರೂ ವೈಕಮಿಗಿಂತ ಕೋಹತಿನ ಸತ್ಯಾಗ್ರಹವೆ ನೂರು ಪಾಲಷ್ಟು ಅಗತ್ಯವಿರುವಾಗ ಮಹಾತ್ಮಾಜಿಗಳು ಕೋಹತಿಗೆ ಹೋಗದೆ ವೈಕಮಿಗೆನೆ ಹೋಗುತ್ತಿದ್ದಾರೆ ಇದು ಆಶ್ಚರ್ಯವಲ್ಲವೆ?"

೩. ಲೆಜಿಸ್ಲೇಟಿವ್ ಎಸೆಂಬ್ಲಿ, ವೈಸರಾಯರ ಮತ್ತು ಕಾರ್ಯಕಾರಿ ಕೌನ್ಸಿಲಿನ ಮೇಲೆ ನಿಂದಾವ್ಯಂಜಕ ಠರಾವು ಪಾಸಾಯಿತು. ಈ ಠರಾವನ್ನು ಪಂ. ಮೋತಿಲಾಲರು ಎಸೆಂಬ್ಲಿಯಲ್ಲಿ ತಂದಿದ್ದರು. ಠರಾವನ್ನು ಸಮರ್ಥಿಸುವಾಗ ಪಂಡಿತನೇಹರುಗಳು ಮಾಡಿದ ಭಾಷಣವು ಯುಕ್ತಿಯುಕ್ತವೂ, ಸರಕಾರದ ಕೃಷ್ಣಕಾರಸ್ಥಾನಗಳ ಮತ್ತು ಬಿಕ್ಕಟ್ಟಿನ ಪರಿಸ್ಫೋಟವನ್ನು ಮಾಡತಕ್ಕದ್ದೂ ಆಗಿತ್ತು. ಸರಕಾರವು ಒಂದು ಕಾಲದಲ್ಲಿ ಅದಾಲತಿಯಲ್ಲಿ ದ್ದಾಗ ಅದರಿಂದ ತಪ್ಪಿಸಿಕೊಳ್ಳಲು ಜನತೆಗೆ ಸ್ವರಾಜ್ಯ ಅಭಿವಚನವನ್ನು ಕೊಟ್ಟು ಆ ಮೇರೆಗೆ ಸುಧಾರಣಾ ಎಸ್ಟ್ ಪಾಸು ಮಾಡಿ ದಂಡಿನಿಂದ [illegible] ಜನತೆಯು ಸ್ಥಿತಿಯು ಮುಂತಾದ ಪರಿವರ್ತನೆಗಳ ಶಬ್ದಚಿತ್ರವನ್ನು ಪಂಡಿತಜಿಯವರು ಬಹು ಮಾರ್ಮಿಕ ರೀತಿಯಿಂದ ಮತ್ತೂ ನಿರುತ್ತರವಾದ ಕ್ರಮದಿಂದ ಸಮರ್ಥಿಸಿದರು. ಇತ್ತಲಾಗಿನ ವಿಚಾರಣಾ ಕಮಿಟಿಯ ರಿಪೋರ್ಟಿನೊಳಗಿನ ದೋಷಗಳನ್ನೂ ಬಾಧಕ ಸ್ಥಳಗಳನ್ನೂ ಎತ್ತಿ ತೋರಿಸಿದರು. ಅಲ್ಲದೆ ಪಂಡಿತಜಿಯವರು ಅದರ ಪ್ರತಿಗಾಮಿತ್ವವನ್ನು ಸಹ ಬಹಿರಂಗ ಪಡಿಸಿದರು. ಈ ವಿಧವಾಗಿ ಸರಕಾರವು ಸಹಾನುಭೂತಿಯ ಲೇಶವನ್ನು ಕೂಡ ತೋರಿಸದೆ ಉಚ್ಛೃಂಖಲವಾಗಿ ನಡೆಯುತ್ತಿದ್ದ ಕಾರಣ ಜನತೆಯ ಸಂತಾಪವನ್ನು ಸೂಚಿಸುವುದಕ್ಕಾಗಿ ವೈಸರಾಯರ ಮತ್ತು ಅವರ ಕಾರ್ಯಕಾರಿ ಮಂಡಲದ ಮೇಲೆ ನಿಂದಾವ್ಯಂಜಕ ಠರಾವು ಎಸೆಂಬ್ಲಿಯಲ್ಲಿ ಬಂತು. ವೈಸರಾಯರ ಮತ್ತು ಕಾರ್ಯಕಾರಿ ಮಂಡಲದ ಖರ್ಚನ್ನು ಬಜೆಟಿನಿಂದ ತೆಗೆಯಬೇಕೆಂದು ಈ ಠರಾವಿನಲ್ಲಿ ನಿರ್ದಿಷ್ಟವಾಗಿತ್ತು. ಈ ಠರಾವನ್ನು ಇತರ ಎಲ್ಲ ಲೋಕಪಕ್ಷದವರು ಅನುಕೂಲ ಭಾಷಣದಿಂದ ಪುಷ್ಟೀಕರಿಸಿದರು. ಠರಾವು ೪೮ ಪ್ರತಿಕೂಲ, ೬೫ ಅನುಕೂಲ ಮತಗಳಿಂದ ಪಾಸಾಯಿತು.

೪. ಎಸೆಂಬ್ಲಿಯಲ್ಲಿ ಸರಕಾರದ ಮೇಲಿನ ನಿಂದಾವ್ಯಂಜಕ ಠರಾವು ಬಹುಮತದಿಂದ ಪಾಸಾದರೂ ಕಳೆದ ವರ್ಷದಂತೆಯೆ ಈ ವರ್ಷವೂ ಅದರ ಸಂಪೂರ್ಣ ಜಮಾಖರ್ಚಿನ ನಿರಾಕರಣದ ಯಾವ ಠರಾವನ್ನು ಸ್ವರಾಜ್ಯ ಪಕ್ಷದವರು ತಂದಿದ್ದರೊ ಅದು ಮಾತ್ರ ಪಾಸಾಗಲಿಲ್ಲ ಇದು ವ್ಯಸನಾಸ್ಪದವು. ಸ್ವತಂತ್ರರು ಮತ್ತು ಶಾಂತರು ಈ ಠರಾವಿನ ಕಾಲನ್ನು ಹಿಂದಕ್ಕೆಳೆದರು! ಸ್ವರಾಜಿಷ್ಟರಿಗೆ ಇತರರು ಈ ಠರಾವಿಗೆ ಅನುಮತಿಯನ್ನು ಕೊಡಲಿಕ್ಕಿಲ್ಲ, ಅದರ ಕಾಲನ್ನು ಹಿಂದಕ್ಕೆ ಎಳೆದಾರೆಂಬುದು ಮೊದಲೆ ಗೊತ್ತಿತ್ತು. ಆದರೂ ಸ್ವರಾಜ್ಯಪಕ್ಷದ ಧ್ಯೇಯವನ್ನೂ, ಆ ಧ್ಯೇಯಕ್ಕನುಸಾರವಾಗಿರುವ ಉಪರೋಧಕ ಕಾರ್ಯಕ್ರಮವನ್ನೂ ಅನುಸರಿಸುವುದು ಆ ಪಕ್ಷದ ಕರ್ತವ್ಯವಾದಕಾರಣ ಅದು ಎಸೆಂಬ್ಲಿಯಲ್ಲಿ ಈ ಠರಾವನ್ನು ತಂದಿತ್ತು. ಸ್ವರಾಜ್ಯಪಕ್ಷದವರ ಬಲವು ಕಾಯಿದೆಮಂಡಲಗಳಲ್ಲಿ ಇನ್ನಷ್ಟು ಹೆಚ್ಚುವದು ಹೇಗೆ ಆವಶ್ಯಕವೆಂಬುದು ಇಂಥ ಸಂದರ್ಭಗಳಲ್ಲಿ ಇನ್ನಷ್ಟು ಗೊತ್ತಾಗುತ್ತದೆ. ಇರಲಿ. ಲೆ. ಎಸೆಂಬ್ಲಿಯಲ್ಲಿ ಪಾಸಾದ ಇನ್ನೊಂದು ಠರಾವು ಎಂದರೆ ಹತ್ತಿಯ ಮೇಲಿನ ಕರವನ್ನು ತೆಗೆಯಬೇಕೆಂದಿರುವ ಠರಾವು ಹಿತಕರವೂ ಪ್ರಶಂಸನೀಯವೂ ಆಗಿದೆ.

೫. ಮದ್ರಾಸ ಸಂಸ್ಥಾನದಿಂದ ಆಸಾಮಿನ ಚಾ ಕೃಷಿಗೆ ಕೂಲಿಗಳು ಹೋಗುತ್ತಿದ್ದರು. ಅಲ್ಲಿ ಕೂಲಿಗಳಿಗೆ ಹಲವು ವಿಧದ ಕಷ್ಟಗಳು ಚಾ ತೋಟಗಳ ಯಜಮಾನರಿಂದ ಸಂಭವಿಸುತ್ತಿದ್ದವು. ಆದ್ದರಿಂದ ಮದ್ರಾಸ್ ಕೌನ್ಸಿಲಿನಲ್ಲಿ ಒಂದು ಠರಾವು ಬಂದು ಆಸಾಮಿಗೆ ಕೂಲಿಗಳನ್ನು ಕಳುಹಿಸಬಾರದೆಂಬ ನಿರ್ಣಯವಾಗಿತ್ತು. ಮದ್ರಾಸ ಸರಕಾರವು ಮಿ. ಪೆಡ್ಡಿಸನರೆಂಬವರನ್ನು ಅಲ್ಲಿಯ ಕೂಲಿಗಳ ಸ್ಥಿತಿಯನ್ನು ಪರಿಶೀಲಿಸುವುದಕ್ಕಾಗಿ ಕಳುಹಿಸಿಕೊಟ್ಟಿತ್ತು. ಅವರು ಅದನ್ನು ನಿರೀಕ್ಷಿಸಿ ಯಥಾಪ್ರಕಾರ ಚಾ ತೋಟಗರಿಗೆ ಅನುಕೂಲವಾಗುವಂತೆಯೆ ರಿಪೋರ್ಟನ್ನು ಮಾಡಿದರು. ಈಗ ಮದ್ರಾಸ್ ಸರಕಾರವು ಒಂದು ಹುಕುಮನ್ನು ಹೊರಡಿಸಿ ಅದರಲ್ಲಿ ಅದು ಬರೆಯುತ್ತದೆ ಏನೆಂದರೆ:—"ಕೂಲಿವರ್ಗಕ್ಕೆ ಅಲ್ಲಿ ಹೋಗಕೂಡದು, ಇಲ್ಲಿ ಹೋಗಕೂಡದು ಎಂಬುದಾಗಿ ಪ್ರತಿಬಂಧವನ್ನು ಹಾಕಿ ಅದರ ಲಾಭವನ್ನು ತಪ್ಪಿಸುವುದು ಸರಿಯಲ್ಲ" ಸರಕಾರದ ಈ ಯುಕ್ತಿವಾದವು ಬಹು ಅಪೂರ್ವವಾಗಿದೆ! ಕೂಲಿಯವರ 'ಸ್ವಾತಂತ್ರ್ಯ' ಕುಡಿಕರ ಪಾನಸ್ವಾತಂತ್ರ್ಯ ಇವೆಲ್ಲ, ಸರಕಾರದ ಮತ್ತು ಯುರೋಪಿಯನರ ಪ್ರಯೋಜನವಾಗುವುದಾದರೆ ಸ್ವರ್ಗೀಯ ಸಂಗತಿಗಳಾಗುತ್ತವೆ! ಸ್ವಾರ್ಥಪರತೆ ಎಂಬುದು ಇದೆ ಸರಿ!!

ಮಂಗಳೂರು.

ಶಹರಿನ ಆಯಾ ಕಡೆಗಳಲ್ಲಿ ಇಲಿಗಳು ಬೀಳುವವಲ್ಲದೆ ಕೆಲವು ಕಡೆಗಳಲ್ಲಿ ಪ್ಲೇಗ್ ಮರಣಗಳೂ ಉಂಟಾಗಲು ಪ್ರಾರಂಭವಾಗಿದೆ. ಈ ತಿಂಗಳ ತಾ. ೧೪ ಮತ್ತು ೧೫ನೇ ರಾತ್ರೆ ಮಳೆಯು ವಿಶೇಷವಿದ್ದದರಿಂದ ಈ ವಾರದಲ್ಲೆಲ್ಲಾ ಪಟ್ಟಣದ ಹವೆಯು ವಿಶೇಷವಾಗಿ ಮಾರ್ಪಟ್ಟಿರುವದು. ಆಕಾಶದಲ್ಲಿ ಮೋಡಗಳು ವಿಶೇಷವಾಗಿ ಕವಿದುಬರುತ್ತಿರುವುದರಿಂದ ಶೆಕೆಯು ವಿಶೇಷವಾಗಿದೆ. ಪೂರ್ವ ಕರಾವಳಿಯಲ್ಲಿರುವ ಬಂಗಾಳ ಕೊಲ್ಲಿಯಲ್ಲಿ ವಿಶೇಷ ತುಪಾನು ಎದ್ದು ಗಾಳಿಮಳೆಯು ಬೀಸುತ್ತಿದ್ದದರಿಂದ ಈ ಪ್ರಾಂತ್ಯದಲ್ಲಿ ಮಳೆಯಾಗಲು ಕಾರಣವಾಯಿತೆಂದು ತಿಳಿಯುತ್ತೇವೆ.

ಬ್ರಾಹ್ಮಣೇತರ ಪಕ್ಷದಲ್ಲಿ ಬಿಳಿದಿದ್ದ ಮದ್ರಾಸ್ ನ್ಯಾಯವಿಧಾಯಕಸಭೆಯ ಮೆಂಬರಿಕೆಗೆ ತಾನು ಉಮೇದುವಾರನಾಗಿ ನಿಂತಿರುವೆನೆಂದೂ ವೋಟರುಗಳು ತಮ್ಮ ವೋಟುಗಳನ್ನು ತನಗೆ ಕೊಡಬೇಕೆಂದೂ ಹೊರಡಿಸಿರುವ ಮ॥ ರಾ॥ ಅತ್ತಾವರ ಬಾಲಕೃಷ್ಣಶೆಟ್ಟಿಯವರ ವಿಜ್ಞಾಪನೆಯನ್ನು ಈ ಸಂಚಿಕೆಯ ಇನ್ನೊಂದು ಕಡೆಯಲ್ಲಿ ಪ್ರಕಟಿಸಿರುತ್ತೇವೆ.

ಕಳೆದ ತಾ॥ ೧೧ರಲ್ಲಿ ಕೂಡಿದ ಡಿಸ್ಟ್ರಿಕ್ಟ್‌ಬೋರ್ಡಿನ ಸಭೆಯಲ್ಲಿ ಮ॥ ರಾ॥ ಅಸಿಸ್ಟಾಂಟ ಇಂಜಿನೀಯರಾದ ಯು. ಶ್ರೀನಿವಾಸರಾಯರನ್ನು ಪಾಣೆಮಂಗಳೂರು ಸೇತುವೆ ಕಟ್ಟುವ [illegible] ಕೆಲಸಕ್ಕೆ ನೇಮಿಸಿರುವುದರಿಂದ ಇವರ ಬದಲಿಗೆ ನಾಲ್ಕು ತಿಂಗಳ ಕಾಲಕ್ಕೆ ಮಾಡಿದ ಅಸಿಸ್ಟಾಂಟ ಇಂಜಿನೀಯರ ನೇಮಕವು ಮಂಜೂರಾಗಿರುವದು. ಡಿಸ್ಟ್ರಿಕ್ಟ್‌ಬೋರ್ಡ ಮೆಂಬರರಾದ ರಾ॥ ಯು. ರಾಮಚಂದ್ರರಾಯರು ಉದ್ಯಾವರದಲ್ಲಿ ಸಂಕವನ್ನು ಹಾಕಿಸುವ ವಿಷಯ ಒಂದು ನಿರ್ಣಯವನ್ನು ಸಭೆಯಮುಂದೆ ತರಲಿಕ್ಕಿದ್ದರು. ಆದರೆ ಈ ನಿರ್ಣಯವನ್ನು ಇವರು ಹಿಂದಕ್ಕೆ ತೆಗೆದಿರುವರು. ಉಪ್ಪಿನಂಗಡಿಯಲ್ಲಿ ನೇತ್ರಾವತಿ ಕುಮಾರಧಾರಿ ನದಿಗಳಿಗೂ ಕರಾವಳಿಮಾರ್ಗದಲ್ಲಿ ಉದ್ಯಾವರ ನದಿಗೂ ಸಂಕಗಳನ್ನು ಹಾಕಿಸುವರೆ ಈಗ ಸಂಚಯದಲ್ಲಿರುವ ರೈಲ್ವೆ ಸೆಸ್ಸಿನ ಐವೇಜನ್ನು ವಿನಿಯೋಗಿಸಬಹುದೆಂಬ ಅಭಿಪ್ರಾಯವಿರುವದಾದರೂ ಇದು ಕೂಡಲೆ ಸಾಧ್ಯವಲ್ಲವೆಂತ ತಿಳಿಯುತ್ತೇವೆ. ರೈಲ್ವೆಯನ್ನು ಹಾಕಿಸಲು ಸೆಸ್ಸುಮೂಲಕ ಸಂಗ್ರಹಿಸಲ್ಪಟ್ಟ ಹಣವನ್ನು ಸಂಕಗಳು ಯಾ ಇತರ ಮಾರ್ಗ ದುರುಸ್ತಿ ಬಗ್ಗೆ ವಿನಿಯೋಗಿಸಲಾಗುವಂತೆ ಪ್ರತ್ಯೇಕ ಒಂದು ಕಾನೂನು ಮಸೂದೆಯು ನ್ಯಾಯವಿಧಾಯಕ ಸಭೆಯ ಮುಂದಿರುವದು. ಇದು ಮಂಜೂರಾಗದ ಹೊರತು ಈ ರೈಲ್ವೆ ಸೆಸ್ಸನ್ನು ಸಂಕಗಳ ಬಗ್ಗೆ ವಿನಿಯೋಗಿಸಲು ಕೂಡದೆಂಬುದಾಗಿ ತಿಳಿಯುತ್ತೇವೆ.

ದಕ್ಷಿಣ ಕನ್ನಡ ಸೆಂಟ್ರಲ್ ಕೊ-ಒಪರೇಟಿವ್ ಬ್ಯಾಂಕಿಗೆ ತಿಂಗಳಿಗೆ ರೂ. ೧೫೦ರ ಸಲಬು ಮತ್ತು ೫೦ ರೂಪಾಯಿ ಭತ್ತೆ ಕೊಡೋಣಾಗುವ ಒಬ್ಬ ಅಸಿಸ್ಟಾಂಟ ಸೆಕ್ರೆಟರಿಯ ಇಸಂ ಕಳೆದ ಡ್ಯಾರೆಕ್ಟರರ ಸಭೆಯಲ್ಲಿ ಸೆಂಕ್ಷನು ಆಗಿರುವದೆಂತಲೂ ಈ ಹುದ್ದೆಗೆ ಒನೆರರಿ ಅಸಿಸ್ಟಾಂಟ ರಿಜಿಸ್ಟ್ರಾರರಾಗಿರುವ ಮ॥ ರಾ॥ ರಾ॥ ಜಿ. ವೇಣುಗೋಪಾಲಕೃಷ್ಣರಾಯರು ನೇಮಕ ಹೊಂದಲಿಕ್ಕಿರುವರೆಂದೂ ಕೇಳುತ್ತೇವೆ.

ಮಂಗಳೂರು ತಾಲೂಕು ಸರ್ಕೀಟು ರೋಡಿಗೆ ಒಂದು ಟೋಲುಗೇಟನ್ನೂ ಮತ್ತು ಜಿಲ್ಲೆಯ ಆಯಾ ಭಾಗಗಳಲ್ಲಿ ನವೀನವಾಗಿ ಇನ್ನೂ ಹಲವು ಟೋಲುಗೇಟುಗಳನ್ನು ಹಾಕಿಸುವ ವಿಚಾರವು ಡಿಸ್ಟ್ರಿಕ್ಟ್ ಬೋರ್ಡಿನಲ್ಲಿದೆ ಎಂಬುದಾಗಿ ಕೇಳುತ್ತೇವೆ.

The Calicut Bank, Ltd.,
ದಿ ಕೆಲಿಕಟ್ ಬೇಂಕ್, ಲಿಮಿಟೆಡ್,

ಹೆಡ್ ಆಫೀಸು— ಕಲ್ಲಿಕೋಟೆ.
ಬ್ರಾಂಚುಗಳು:— ಮುಲ್ಲಸ್‌ಚೇರಿ, ತಲಚೇರಿ, ಕೊಚ್ಚಿ, ಮತ್ತು ಪಾಲ್ಘಾಟು.
ರಿಜಿಸ್ಟರ್ಡ್ ಮತ್ತು ಅಧಿಕಾರಗೊಳಿಸಲ್ಪಟ್ಟ ಮೂಲಧನ ರೂ. 5,00,000—0—0.
ರೂಪಾಯಿ 10ರ 50,000 ಪಾಲುಗಳು.
(30—8—1924)ರ ವರೆಗೆ ಮೌಲ್ಯ ಮೂಲಧನ ರೂಪಾಯಿ 1,81,850—0—0.
ಒಂದು ವರುಷದ ಕಾಯಂ ಠೇವಣಾತಿಗೆ ಬಡ್ಡಿ ದರ ಸೇಕಡಾ ರೂ. 7—8—0.
ಕಳೆದ 4 ವರುಷಗಳಲ್ಲಿ ಪಾಲುಗಾರರಿಗೆ ಸೇಕಡಾ 12ರಂತೆ ಬಡ್ಡಿ ಹಂಚಿದೆ.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.
ಸಿ. ಕೃಷ್ಣನ್, ಬಿ. ಎ. ಬಿ. ಎಲ್.,
ಮೆನೇಜಿಂಗ್ ಡ್ಯಾರೆಕ್ಟರ್.
ಡ್ಯಾರೆಕ್ಟರರಲ್ಲಿ ಒಬ್ಬರು—
ಎಮ್. ನಾರಾಯಣ ಕಾಮತ್, ಬಿ. ಎ.
ಪ್ಲೀಡರ್, ಕುಂದಾಪುರ.

ಒಬ್ಬ ರೋಮನ್ ಕೆಥೋಲಿಕ ಬಾತ್ಮೀದಾರರು ಈ ಕೆಳಗಿನ ವಿಷಯಗಳನ್ನು ಪ್ರಕಟಣೆ ಬಗ್ಗೆ ಕಳುಹಿಸಿರುವರು:—

ಇಲ್ಲಿಯ ರೋಮನ್ ಕೆಥೋಲಿಕ್ ಸಹಕಾರಿ ಸಂಘದ ವರ್ಷಾವಧಿ ಮಹಾ ಸಭೆಯು ಕಳೆದ ಮೂರು ಆದಿತ್ಯವಾರಗಳಲ್ಲಿ ನಡೆಯಿತು. ಪ್ರಭು ಪಕ್ಷದವರಿಗೂ ಸಾಮಾನ್ಯ ಪಕ್ಷದವರಿಗೂ ವಾದವಿತ್ತು. ಸಾಮಾನ್ಯ ಪಕ್ಷದವರು ಪ್ರಯತ್ನ ಮಾಡಿ ಹ್ಯಾಗೂ ಲೆಕ್ಕಪರಿಶೋಧಕತ್ವದ ೨ ಸ್ಥಾನಗಳಲ್ಲಿ ತಮ್ಮ ಕೂಟದ ಒಬ್ಬರನ್ನು ಸೇರಿಸಿದರು.

ನಿನ್ನೆ ಜರುಗಿದ ಕೊಡಿಯಾಲಬೈಲು ಪ್ರೆಸ್ಸಿನ ಪ್ರೋತ್ಸಾಹಕ ಅರ್ಚ ಸಾಂತಜೋಸೆಫ ಹಬ್ಬದ ದಿವಸ ಪ್ರೆಸ್ಸಿನ ಪ್ರತಿ ಒಂದು ವ್ಯಕ್ತಿಗೂ ಬಟ್ಟಲು ತುಂಬ ಕೇಕ್ ಕೆಕಿಣಾ ವಗೈರೆ ಮಿಠಾಯಿ ಹಂಚೋಣದ ರೂಢಿ ಇತ್ತು. ಹೀಗೆ ಈ ಹಬ್ಬದಿವಸ ಪ್ರೆಸ್ಸ್ ಕೆಲಸಗಾರರ ಮನೆಯವರ ಬಾಯಿ ಸಿಹಿ ಆಗುತ್ತಿತ್ತು. ಏನೋ ಕಾರಣ ಈ ವರ್ಷ ಬಟ್ಟಲು ಖಾಲಿ. ಮನೆಯವರ ಬಾಯಿ ಕಹಿ. ಹೀಗಾಗಿ ಪ್ರೆಸ್ಸಿನವರು ತಮಗೆ ಈ ವರ್ಷ "ಕಹಿಬಟ್ಟಲು" ಸಿಕ್ಕಿಯದೆ ಎಂದು ಗುಣುಗುಟ್ಟುತ್ತಾರೆ.

ಕುಂಬಳೆ:— ಇಲ್ಲಿಯ ಲೋವರ್ ಎಲಿಮೆಂಟರಿ ಶಾಲೆಯಲ್ಲಿ ತರಬೇತಾದ ಉಪಾಧ್ಯಾಯರಸಂಖ್ಯೆಯು ಕಡಿಮೆಯೆಂತಲೂ ಮಂಗಲಪಾಡಿ ಶಾಲೆಯಿಂದ ಒಬ್ಬಿಬ್ಬರು ತರಬೇತಿ ಉಪಾಧ್ಯಾಯರನ್ನು ಇಲ್ಲಿಗೆ ವರ್ಗಾಯಿಸಬೇಕೆಂತಲೂ, ಇಲ್ಲಿಯ ಬೋರ್ಡು ಬಾಲಿಕಾ ಪಾಠಶಾಲೆಯಲ್ಲಿ ೫ನೇ ಕ್ಲಾಸನ್ನು ಬರುವ ಜೂನ್ ತಿಂಗಳಿಂದ ತೆರೆಯಬೇಕಾಗಿ ವಗೈರೆ ಇದೆ ಕಳೆದ ಸಂಚಿಕೆಯಲ್ಲಿ ಪ್ರಕಟಿಸಿದ ಇಲ್ಲಿಯ ಬಾತ್ಮಿದಾರರ ಜಾಹಿರಾತಿಗೆ ಆಶ್ಚರ್ಯ ಪಡಬೇಕಾಗಿದೆ. ಈ ಶಾಲೆಯಲ್ಲಿ ಮೂವರು ತರಬೇತಾದ ಉಪಾಧ್ಯಾಯರೂ, ಸ್ಕೂಲ್‌ಫೈನಲ್ ಉಪಾಧ್ಯಾಯರಿಬ್ಬರೂ ತರಬೇತಾಗದ ಉಪಾಧ್ಯಾಯನೊಬ್ಬನೂ ಸಹಾ ಇದ್ದು ಶಾಲೆಯು ಕ್ರಮದಂತೆ ನಡೆಯುವ ಮತು ಬಾಲಿಕಾ ಪಾಠಶಾಲೆಯಲ್ಲಿ ಕಳೆದ ವರ್ಷದಿಂದಲೇ ತೆರದಿರುತ್ತಾ ಇದನ್ನೆಲ್ಲಾ ಅರಿಯದೆ ಶಾಲಾ ಕಟ್ಟೋಣಗಳ ಹೊರಗಿನಿಂದ ಎಕ್ಸರೆಸ್ ಮೂಲಕ ಸ್ತುತಿ ಗತಿಗಳು ಪ್ರಕಟಿಸಿದ್ದೆಂತ ಊಹಿಸಬೇಕಾಗಿದೆ.

ಇಲ್ಲಿಯ ಮಾರ್ಕೆಟು ರಸ್ತೆಯಲ್ಲಿರುವ ಆಲದ ಸಾಲುಮರಗಳಿಗೆ ಹುಳಹಿಡಿಯುವರೆ ಈಚಿಗೆ ಶುರುವಾಗಿದೆ. ಈ ಹುಳುಗಳು ಎಲೆ ಚಿಗುರುಗಳನ್ನೆಲ್ಲಾ ತಿಂದು ನಾಶಪಡಿಸಿದ ಮರಗಳು ಸಾಯುತ್ತಿವೆ. ಮಾನ್ಯ ಮೇಲಾಧಿಕಾರರು ಇಲ್ಲಿಯ ರಸ್ತೆಯ ಇಕ್ಕೆಡೆಯಲ್ಲೂ ಅಂದವಾಗಿರುವ ಈ ಮರಗಳನ್ನು ಕಾಪಾಡುವರೆ ತ್ವರ್ಯ ಏರ್ಪಾಡು ಮಾಡಬೇಕಾಗಿದೆ.

ದೇವಹಳ್ಳಿ:— ಇಲ್ಲಿಯ ಸಹಕಾರ ಸಂಘದ ೨೦—೨ನೇ ಇಸವಿಯ ಅಫೀಸಿಯಲ್ ಮಹಾಸಭೆಯು ಧರ್ಮಿಷ್ಠರಾದ ಎಲಿಮಲೆ ಅಹಮ್ಮದ ಸಾವುಕಾರರು ಈ ಸಂಘದ ಬಗ್ಗೆ ವಿದ್ಯಾಭ್ಯಾಸವನ್ನುದ್ದೇಶಿಸಿ ಐದು ಸಾವಿರ ರೂಪಾಯಿ ಖರ್ಚುಮಾಡಿ ಹೊಸತಾಗಿ ಕಟ್ಟಿಸಿ ದಾನಮಾಡಿರುವ ಕಟ್ಟಡದಲ್ಲಿ ಕಳೆದ ತಾ. ೧೫—೩—೨೫ನೇ ಆದಿತ್ಯವಾರ ಬಹು ವಿಜೃಂಭಣೆಯಿಂದ ನಡೆಯಿತು.

ಈ ಮಹಾಸಭೆಯು ಈ ಜಿಲ್ಲೆಯಲ್ಲಿ ನಡೆದ ಸಂಘಗಗಳ ಮಹಾಸಭೆಗಳಲ್ಲಿ ಪ್ರಸಿದ್ಧವಾದುದೆಂತ ಖಂಡಿತವಾಗಿ ಹೇಳಬಹುದು. ಸದರಿ ಮಹಾಸಭೆಗೆ ಚಿತ್ತಯಿಸಿದ ಮಹನೀಯರಾದ ಇಲಾಖೆಯ ಅಸಿಸ್ಟಾಂಟ್ ರಿಜಿಸ್ಟ್ರಾರ್ ಎಮ್. ಗಿರಿಯಪ್ಪನವರೂ, ಗೌರವ ಅಸಿಸ್ಟಾಂಟ್ ರಿಜಿಸ್ಟ್ರಾರ್ ವೇಣುಗೋಪಾಲ ರಾಯರೂ, ಸೆಂಟ್ರಲ್ ಬೇಂಕಿನ ಉಪಾಧ್ಯಕ್ಷ ಮೊಳಹಳ್ಳಿ ಶಿವರಾಯರೂ, ಸೆಕ್ರಿಟರಿ ಅನಂತರಾಯರು, ಆಡಿಟ್ ಇನ್ಸ್‌ಪೆಕ್ಟರ್ ರಾಮಯ ಆಳ್ವರು, ಇನ್ಸ್‌ಪೆಕ್ಟರ ರಾಮನಾಥರು ಅದೇ ಯೂನಿಯನ್ನಿನ ಮಹಾಸಭೆ ಅಲ್ಲಿಯೇ ಇದ್ದುದರಿಂದ, ಸದರಿ ಯೂನಿಯನ್ನಿನ ಡೈರೆಕ್ಟರ ಡೆಲಿಗೇಟರರು ಮೆಂಬರ ನೊನ್‌ಮೆಂಬರ ಪ್ರೇಕ್ಷಕರನೇಕರಿದ್ದು, ಮೂಡಸೀಮೆಯಲ್ಲಿ ಇದೊಂದು ನವೀನ ಉತ್ಸವವೆಂತಲೇ ಕಾಣಿಸಿತು.

ಅದೇ ದಿನ ರಾತ್ರಿ ಸದರಿ ಶಾಲೆಯ ಹುಡುಗರ ನಾಟಕವಿದ್ದು, ಅಹಮ್ಮದ ಸಾವುಕಾರರ ಪರವಾಗಿ ಸದರಿ ಹುಡುಗರಿಗೆ ಇನಾಮು ಹಂಚೋಣವು ಆಸಿಸ್ಟಾಂಟ ರಿಜಿಸ್ಟ್ರಾರರಿಂದಲೇ ನಡೆಯಿತು.

ಹಾಗು ಮಹಾಸಭೆಗೆ ಹೋದ ಮೆಂಬರ ನೊನ್ ಮೆಂಬರರಿಗೆ ಸಾವುಕಾರರ ಕಡೆಯಿಂದಿರುವ ಉಪಚಾರಗಳು ಇದ್ದವು.

ಸದರಿ ಸಂಘದ ಅಧ್ಯಕ್ಷ ಮುದ್ದುಕುಂಞಿ ಕಾರ್ಯದರ್ಶಿ ಬಾಬಯ ಕುಂಞಿಯರ ಸಹಕಾರದ ಉತ್ಸಾಹವು ಸ್ತುತಿಸತಕ್ಕದ್ದಾಗಿದೆ.

ಮೇಲೆ ಹೇಳಿದ ಸದರಿ ಶಾಲೆಗೆ ಪ್ರತಿ ವರ್ಷ ಖರ್ಚಾಗುತ್ತಿರುವ ನಾನೂರು ರುಪಾಯಿಗಳನ್ನು ಇಂದಿನ ವರೆಗೆ ಸಾವುಕಾರರೇ ಕೊಟ್ಟುಬರುತ್ತಿದ್ದರೂ ಮುಂದಾದರೂ ಬೋರ್ಡಿನವರು ಬಡ ಹುಡುಗರ ವಿದ್ಯೆಯ ಸಲುವಾಗಿ ಗಮನಕೊಡಬೇಕಾಗಿದೆ.

ಮದ್ರಾಸು ಕೌನ್ಸಿಲಿಗೆ ಉಮೇದ್ವಾರರಾಗಿ ನಿಂತ ಎ. ಬಿ. ಶೆಟ್ಟಿಯವರಿಗೆ ತಂತಮ್ಮ ಓಟನ್ನು ಕೊಡಬೇಕಾಗಿ ಸೂಚಿಸಲಾಯಿತು.

ಹಾಗು ಈ ಮಹಾಸಭೆಯು ಈ ಜಿಲ್ಲೆಯಲ್ಲಿ ನಡೆದ ರೂರಲ್ ಸಂಘಗಳ ಮಹಾಸಭೆಗಳಲ್ಲಿ ಪ್ರಾಮುಖ್ಯವಾದದ್ದೆಂತ ಹೇಳಬೇಕಲ್ಲದೆ ಹೆಚ್ಚಿಗೆ ವರ್ಣಿಸಲು ನಾನು ಶಕ್ತನಲ್ಲ. ಆದುದರಿಂದ ಎಲಿಮಲೆ ಅಹಮ್ಮದ ಸಾವುಕಾರರನ್ನು ಶ್ರೀ ಭಗವಂತನು ಆಯುರಾರೋಗ್ಯ ಐಶ್ವರ್ಯಾಭಿವೃದ್ಧಿಯಿಂದ ಬಾಳಿಸಲೆಂದು, ಬಂಟ್ವಾಳ ಯೂನಿಯನ್ ಡೈರೆಕ್ಟರ ಎ. ಅದ್ದೆಬ್ಯಾರಿಗಳು ಅಪೇಕ್ಷಿಸುತ್ತಾರೆ.

ಮಂಜೇಶ್ವರ:— ಇಲ್ಲಿಯ ಶ್ರೀ ಮದನಂತೇಶ್ವರ ದೇವಸ್ಥಾನದ ಆಡಳಿತೆಯಲ್ಲಿ ಒಂದು ಹೊಸ ಹಾಯರ್ ಎಲಿಮೆಂಟರಿ ಶಾಲೆಯು ಇದೇ ತಿಂಗಳ ತಾ. ೩೧ರಲ್ಲು ತೆರೆಯಲ್ಪಡುವುದು.

ಹೊಸಬೆಟ್ಟು ಪಂಚಾಯತ ಕೋರ್ಟಿನ ಕೆಲಸವು ಚಲೋ ರೀತಿಯಿಂದ ನಡೆದು ಬರುವುದು ತುಂಬಾ ಸಂತೋಷಕರವಾದ ವಾರ್ತೆ. ವ್ಯಾಜ್ಯಗಳು ಅನೇಕ ಫಡಿಚಾ ಆಗುತ್ತಲಿವೆ. ಅಪೇಕ್ಷಿಸಲ್ಪಟ್ಟ ಮಂಜೂರ ನಕಲುಗಳು ಒಂದೆರಡು ಹಪ್ತೆ ಒಳಗೆನೇ ಸಿಕ್ಕುತ್ತವೆ. ಕಕ್ಷಿಗಾರರಿಗೆ ಕೋರ್ಟಿನಲ್ಲಿ ಸ್ಥಳ ಸಂಕೋಚವಾಗಿದೆ. ಈ ಕುರಿತು ಪ್ರೆಸಿಡೆಂಟರವರು ಮೇಲುದ್ಯೋಗಸ್ಥರಿಗೆ ಬರಮ ಕಟ್ಟೋಣವನ್ನು ದುರುಸ್ತಿಪಡಿಸಲು ಪ್ರಯತ್ನಿಸುವರಾಗಿ ಕೋರುತ್ತೇವೆ.

ಇಲ್ಲಿಯ ಪೋಸ್ಟಾಫೀಸಿನ ವಿಲ್ಲೇಜ ಪೋಸ್ಟಮೇನರಾದ ಬಾಬಣ್ಣ ಮಂಜುನಾಥ ಎಂಬವರು ಡ್ಯೂಟಿ ಮೇಲಿರುವಾಗ ತಮ್ಮನ್ನು ಹೊಡೆದರೆಂದು ಮೇಲಾಧಿಕಾರರಿಗೆ ಅರ್ಜಿ ಮಾಡಿರುತ್ತಾರಾಗಿಯೂ, ಈ ಕುರಿತು ಇವರಿಗೆ ಇಲ್ಲಿಯ ಕೆಲವು ಪ್ರಮುಖರು ಸಹಾಯಮಾಡುತ್ತಲಿರುವರೆಂದೂ ಕೇಳುತ್ತೇವೆ. ಮೇಲಾಧಿಕಾರರವರು ಸರಿಯಾಗಿ ಕುಲಾಂಕುಶ ವಿಚಾರಿಸದೆ ಇರಲಾರರೆಂದು ಭಾವನೆ.

ಪೊಳಲಿ:— ಕರ್ಣಾಟಕದಲ್ಲಿ ಬಹು ಪುರಾತನದಿಂದ ಪ್ರಖ್ಯಾತಿಗೊಂಡಿರುವ ಪುಣ್ಯಪ್ರಸಿದ್ಧವಾದ ಶಕ್ತಿದೇವಾಲಯಗಳಲ್ಲಿ ಒಂದಾದ ಪೊಳಲಿ ಶ್ರೀ ರಾಜರಾಜೇಶ್ವರಿ ಅಮ್ಮನವರ ದೇವಸ್ಥಾನದಲ್ಲಿ ಇದೆ. ಮಾರ್ಚಿ ೨೩ನೇ ಮೀನಸಂಕ್ರಮಣ ದಿವಸ ನಿಯಮದಂತೆ ಧ್ವಜಾರೋಹಣದೊಂದಿಗೆ ಪ್ರಾರಂಭವಾಗಿ ಈ ವರ್ಷಕ್ಕೆ ನಿರ್ಣಯಿಸಲ್ಪಟ್ಟ ೨೮ ದಿವಸಗಳ ಉತ್ಸವ ಕೂಡಿ ಬರುವ ಎಪ್ರಿಲ್ ತಾ. ೧೧ಕ್ಕೆ ಅವಭೃತವಾಗುವುದು. ಈ ಮಧ್ಯ ತಾ. ೫ರಿಂದ ಚೆಂಡು ಶುರುವಾಗಿ ಕ್ರಮದಂತೆ ಕುಮಾರ ರಥೋತ್ಸವ, ಪುಷ್ಪರಥೋತ್ಸವ, ಅಂಕುರಾರೋಪಣ, ಸೂರ್ಯಮಂಡಲೋತ್ಸವ, ಚಂದ್ರಮಂಡಲ, ಪಟ್ಟಣಪರ್ಯಟನೋತ್ಸವಗಳಾಗಿ ತಾ. ೯ನೇ ಕ್ರೋಧನ ಸಂವತ್ಸರದ ಚೈತ್ರ ಪೌರ್ಣಮಿ ಪುಣ್ಯಯೋಗ ಗುರುವಾರ ದಿವಸ ಅಖಂಡ ಯಕೋಟಿ ಪ್ರಚಂಡ ಕಡೆ ಚೆಂಡು ಮಹೋತ್ಸವ, ಆಳಪಲ್ಲಕಿ ರಥೋತ್ಸವ ವಿಜಯ ಯಾತ್ರೋತ್ಸವ ಸಿಂಹಾಸನಾರೋಹಣ ಉತ್ಸವಗಳಾಗಿ ತಾ. ೧೦ಕ್ಕೆ ಮಹಾರಥೋತ್ಸವವಾಗುವುದು. ಭಕ್ತಜನರು ಹಿಂದಿನಂತೆ ಬಂದು

ಮಹೋಚಿತ ಸೇವೆ ನಡಿಸಿ ಇಷ್ಟಾರ್ಥ ಫಲಪ್ರಸಾದ ಪಡೆಕೊಳ್ಳುವರೆಂದು ಹಾರೈಸೋಣಾಗುತ್ತದೆ.

ಇರುವೈಲು:— ಇರುವೈಲು ಶ್ರೀ ದುರ್ಗಾಪರಮೇಶ್ವರಿ ಅಮ್ಮನವರ ಸನ್ನಿಧಿಯಲ್ಲಿ ಕಟೀಲು ಶ್ರೀ ದುರ್ಗಾಪರಮೇಶ್ವರಿ ಅಮ್ಮನವರ ದಶಾವತಾರ ಮೇಳದವರಿಂದ ಶ್ರೀ. ಇರುವೈಲು ಕೃಷ್ಣಭಟ್ಟ ವಗೈರೇರು ಕೂಡಿ ಇದೇ ತಾ. ೧೭ನೇ ಮಂಗಳವಾರ ಮೊದಲುಗೊಂಡು ೧೨ ದಿವಸಗಳ ರಾಮಾಯಣ ಕಥೆಯ ಆಟವನ್ನು ಆಡಿಸುವರು. ಬೈಲಾಟವು ಪಾಮರರಿಂದಿಯಾಗಿ ಪಂಡಿತರವರೆಗೆ ಏಕಪ್ರಕಾರ ಆನಂದವನ್ನು ಕೊಡತಕ್ಕದ್ದಾದುದರಿಂದ ಸಕಲರೂ ಬಂದು ನೋಡಿ ಸಂತೋಷಪಡುವಂತೆ ಅಪೇಕ್ಷಿಸೋಣಾಗುತ್ತದೆ.

ಶ್ರವಣ ಬೆಳಗೊಳದಲ್ಲಿ ನಡೆದ ನಿಖಿಲ ಭಾರತೀಯ ಜೈನ ಸಮ್ಮೇಳನದಲ್ಲಿ ಮೈಸೂರಿನ ಶ್ರೀಮನ್ ಮಹಾರಾಜರವರು ಅಪ್ಪಣೆಕೊಡಿಸಿದ ಭಾಷಣ.

ಪವಿತ್ರವಾದೊಂದು ಕಾರ್ಯವನ್ನು ನೆರವೇರಿಸುವುದಕ್ಕಾಗಿ ಭರತಖಂಡದ ಎಲ್ಲಾ ಭಾಗಗಳಿಂದಲೂ ಸಂತೋಷಕಂಡವಾಗಿ ಬಂದು ನೀವೆಲ್ಲರೂ ಇಲ್ಲಿ ಸಭೆಸೇರಿರುವ ಈ ಶುಭಸಮಯದಲ್ಲಿ, ನಿಮ್ಮೊಡನೆ ಸೇರಿರುವುದು ನಮಗೆ ವಿಶೇಷ ಸಂತೋಷಕರವಾಗಿರುತ್ತದೆ.

ಈಗ ನೆರೆದಿರುವ ನಿಖಿಲಭಾರತೀಯ ಜೈನ ಸಭೆಯವರನ್ನು ಮೈಸೂರು ದೇಶಕ್ಕೆ ಆದರಪೂರ್ವಕವಾಗಿ ಬರಮಾಡಿಕೊಳ್ಳುವುದರಲ್ಲಿ, ಈ ದೇಶವು ಜೈನಮತಕ್ಕೆ ಸಂಬಂಧಪಟ್ಟ ಪವಿತ್ರವಾದ ಕೆಲವು ಐತಿಹ್ಯಗಳಿಂದಲೂ, ಮತ್ತು ಚಿರಕಾಲದಿಂದಲೂ ಅಂಕಿತಗೊಂಡು ಬಂದಿರುವ ಆದರಣೀಯವಾದ ಸ್ಮೃತಿವಿಶೇಷಗಳಿಂದಲೂ ಕೂಡಿ, ಜೈನರೆಲ್ಲರಿಗೂ ಯಾತ್ರಾಸ್ಥಳವಾಗಿರುವುದೆಂಬುದನ್ನು ನಾವು ಮರೆಯುವಂತಿಲ್ಲ. ಪೂಜ್ಯರಾದ ಶ್ರುತಕೇವಲಿ ಭದ್ರಬಾಹುಗಳವರು ದಕ್ಷಿಣದೇಶಕ್ಕೆ ಮೊಟ್ಟಮೊದಲು ಹೊರಟ ಜೈನತಂಡದವರೊಡನೆ ದಯಮಾಡಿಸಿ, ಅರಣ್ಯಗಳಲ್ಲಿ ನುಗ್ಗಿ ಬಂದಾಗ್ಗೆ, ಉನ್ನತವಾದ ಪ್ರಕೃತಿಭೂಮಿಯ ಮೇಲೆ ಚಿತ್ರಿತವಾಗಿರುವಂತೆ ಮನೋಹರವಾಗಿ ಕಾಣುತ್ತಿರುವ ಈ ಬಂಡೆಯ ಮೇಲೆ ಮಾತ್ರವೇ ನೆಲಸಿದರು; ಈ ಅಂಶವು ಈಗ್ಗೆ ಸಾವಿರ ವರುಷಗಳಿಂದಲೂ ಇರುವ ಐತಿಹ್ಯದಿಂದ ತಿಳಿಯಬರುತ್ತದೆ. ಆ ಪುಣ್ಯಾತ್ಮರು ಇಲ್ಲಿ ನೆಲಸಿದ ಅನೇಕ ವರುಷಗಳ ಬಳಿಕ ಈ ಬಂಡೆಯ ಮೇಲೆ ತಮ್ಮ ಪದಚಿನ್ಹೆಗಳನ್ನು ಬಿಟ್ಟು, ಇಲ್ಲಿರುವ ಗುಹೆಯಲ್ಲಿ ಸಲ್ಲೇಖನದಿಂದ ದೇಹವನ್ನು ತ್ಯಜಿಸಿದರೆಂದು ಈಗಲೂ ಐತಿಹ್ಯವು ತೋರುತ್ತಿದೆ. ಇದೇ ಐತಿಹ್ಯದಿಂದ ತಿಳಿದುಬಂದಿರುವಂತೆ, ಯಾವನ ಶಕ್ತಿಸಾಮರ್ಥ್ಯಗಳ ಪ್ರಖ್ಯಾತಿಯನ್ನು ಕೇಳಿದ ಮಾತ್ರವೇ, ಅಲೆಗ್ಜಾಂಡರನ ಅಪ್ರತಿಹತವಾದ ಸೈನ್ಯವು ಪಲಾಯನ ಮಾಡಿತೋ, ಆ ಮೌರ್ಯಚಕ್ರವರ್ತಿ ಚಂದ್ರಗುಪ್ತನು ತನ್ನ ಚಕ್ರವರ್ತಿ ಪದವಿಯನ್ನು ಬಿಟ್ಟು, ಸನ್ಯಾಸವನ್ನು ಸ್ವೀಕರಿಸಿ, ತನ ಗುರುವಾದ ಶ್ರುತಕೇವಲಿಯವರನ್ನು ಅವರ ಅಂತ್ಯಕಾಲದಲ್ಲಿ ಉಪಚರಿಸಿ, ಅವರ ಪದಚಿನ್ಹೆಗಳನ್ನು ಪೂಜಿಸಿದುದು, ದಕ್ಷಿಣಕಾಶಿಯೆಂದು ಪ್ರಸಿದ್ಧವಾಗಿರುವ ಈ ಪುಣ್ಯಭೂಮಿಯಲ್ಲಿ ಮಾತ್ರವೇ. ಆಗಿನಿಂದಲೂ ದಕ್ಷಿಣದೇಶಗಳಿಂದ ಬಂದ ಅನೇಕ ರಾಜರುಗಳೂ, ಮತ್ತು ಉತ್ತರದೇಶಗಳಿಂದ ಬಂದ ಅನೇಕ ಸನ್ಯಾಸಿಗಳೂ, ಹಿಂದೂಯೋಗಿಗಳ ಸಮಾಧಿಮರಣವನ್ನು ಹೋಲುವ ಸಲ್ಲೇಖನವ್ರತದ ದೀಕ್ಷೆಯನ್ನು ವಹಿಸಿರುತ್ತಾರೆ.

ಯಾರ ಹೆಸರಿನ ಮೇಲೆ ಇಂಡಿಯಾದೇಶವು ಭರತವರ್ಷವೆಂದು ಕರೆಯಲ್ಪಟ್ಟಿದೆಯೋ, ಆ ಭರತಚಕ್ರವರ್ತಿಯ ತಮ್ಮನೆಂಬುದಾಗಿ ಐತಿಹ್ಯವಿರುವ ಗೋಮಟಮುನೀಶ್ವರನ ದೆಸೆಯಿಂದ ಪವಿತ್ರವಾದ ಪುಣ್ಯಸ್ಥಳವೂ, ಇದೇ ಆಗಿರುತ್ತದೆ. ಆದಕಾರಣ, ಭರತವರ್ಷವು ಭರತಚಕ್ರವರ್ತಿಯ ಸಾಮ್ರಾಜ್ಯಕ್ಕೆ ಗುರುತಾಗಿರುವಂತೆಯೇ ಮೈಸೂರುದೇಶವು ಕೂಡ, ಆತನ ತಮ್ಮನಾದ ಗೋಮಟಮುನೀಶ್ವರನ ಪಾರಮಾರ್ಥಿಕ ಸಾಮ್ರಾಜ್ಯದ ಗುರುತಾಗಿರುತ್ತದೆ. ಈ ಗುಡ್ಡದ ಮೇಲೆ ದೊಡ್ಡ ಬಂಡೆಯೊಂದರಲ್ಲಿ ರಚಿಸಲ್ಪಟ್ಟು ಅನೇಕ ಮೈಲಿಗಳ ವರೆಗೂ ಕಾಣುತ್ತಾ, ಈಜಿಪ್ಟಿನ ಅಥವಾ ಅಸ್ಸಿರಿಯದ ಯಾವ ಸ್ಮಾರಕ ವಸ್ತುವಿನಿಂದಲೂ ಮೀರಿಸಲ್ಪಡದಿರುವಷ್ಟು ಮಟ್ಟಿಗೆ ಅಪೂರ್ವವಾದ ಚೆಲುವಿಕೆಯಿಂದಲೂ, ಮತ್ತು ಪಾರಮಾರ್ಥಿಕ ಗಾಂಭೀರ್ಯದಿಂದಲೂ ಕೂಡಿ ಗೋಮಟಮುನೀಶ್ವರನ ಉನ್ನತ ಪ್ರತಿಮೆಯು ಈಗ್ಗೆ ಸಾವಿರ ವರುಷಗಳಿಂದಲೂ ಈ ಸುಂದರ ದೃಶ್ಯಕ್ಕೆ ಅಧಿಷ್ಠಾತೃವೆನಿಸಿ ಮೆರೆಯುತ್ತಿದೆ.

ಜೈನಮತವು ತನ್ನ ಎರಡನೆಯ ಜನ್ಮಸ್ಥಾನವೆನಿಸಿದ ಈ ಮೈಸೂರು ಸಂಸ್ಥಾನದಲ್ಲಿ ಆಶ್ರಯವನ್ನು ಪಡೆದು ನೆಲೆಗೊಂಡ ಬಳಿಕ, ಉಪಕಾರಕ್ಕೆ ಪ್ರತ್ಯುಪಕಾರಮಾಡಿ ತನ್ನ ಮೇಲಣ ಸಾಲವನ್ನು ತೀರಿಸಿಕೊಂಡಿತು. ಜೈನಮತವು ಕನ್ನಡ ಸಾಹಿತ್ಯವನ್ನೇ ಸೃಷ್ಟಿಸಲಿಲ್ಲವಾದರೂ, ಆ ಸಾಹಿತ್ಯಚರಿತ್ರೆಯ ಆದಿಭಾಗದಲ್ಲಿ ಅತ್ಯುತ್ತಮವಾದ ಉದ್ದಾಮ ಗ್ರಂಥಗಳನ್ನು ರಚಿಸಲು ಪ್ರೇರಣೆಯುಂಟಾದುದು ಜೈನಮತದ ಪ್ರಭಾವದಿಂದ ಮಾತ್ರವೇ.

ಇಂಡಿಯಾದೇಶದ ಪಾರಮಾರ್ಥಿಕವಾದ ಮತ್ತು ತತ್ವಮಯವಾದ ಜೀವನಕ್ರಮದ ಬೆಳವಣಿಗೆಯಲ್ಲಿಯೂ ಕೂಡ, ಜೈನಮತದಿಂದ ಅಮೋಘವಾದ ಸಹಾಯವು ದೊರೆತಿರುತ್ತದೆ. ಆ ಜೀವನಕ್ರಮದ ಕೆಲವು ಅಂಶಗಳನ್ನು ಜೈನಮತವು ಅಭ್ಯಾಸಮಾಡಿಸಿ ಆಚರಣೆಗೆ ತಂದುದರಿಂದ ಮತವಿಚಾರಗಳಲ್ಲಿ ಭಾರತೀಯರ ಮನೋಭಾವವು ಮತ್ತಷ್ಟು ವಿಕಾಸಹೊಂದಿತು. ಐಹಿಕಜೀವನದಲ್ಲಿನ ಪ್ರಯೋಜನಗಳಿಂದ ಪ್ರತಿಬಂಧಿಸಲ್ಪಡದೆ, ಯುಕ್ತರೀತಿಯಲ್ಲಿ ಅಹಿಂಸಾತತ್ವದ ಪರಾಕಾಷ್ಠ ದೆಸೆಯನ್ನು ಪಡೆಯುವುದೊಂದನ್ನೇ ಜೈನಮತವು ಲಕ್ಷ್ಯವಾಗಿಟ್ಟುಕೊಂಡಿರಲಿಲ್ಲ. ಲೌಕಿಕ ವಿಚಾರಗಳಲ್ಲಿನ ಮಗ್ನತೆಯನ್ನು ನಿಗ್ರಹಿಸಿ ಪಾರಮಾರ್ಥಿಕತೆಯನ್ನು ಪಡೆಯಬೇಕೆಂಬ ತತ್ವವನ್ನು ಜೈನಸಿದ್ಧಾಂತದಲ್ಲಿ ಪರಿಪೂರ್ಣಗೊಳಿಸುವುದೊಂದಕ್ಕೆ ಮಾತ್ರವೇ ಜೈನರು ಪ್ರಯತ್ನಿಸಿರುವುದಿಲ್ಲ—ಆತ್ಮೋನ್ನತಿಯ ಮೂಲಕ ಜೀವಾತ್ಮನನ್ನು ಆಧ್ಯಾತ್ಮಿಕವಾದ ಅನಂತಧಾಮಕ್ಕೆ ಸೇರಿಸುವುದರಿಂದ ಮುಕ್ತಿಯನ್ನು ಪಡೆಯಬೇಕೆಂಬುದು ಭರತಖಂಡದ ಮತಸಿದ್ಧಾಂತಗಳಲ್ಲೆಲ್ಲಾ, ಭರತಖಂಡದ ತತ್ವಸಿದ್ಧಾಂತಗಳಲ್ಲೆಲ್ಲಾ, ಜೈನಸಿದ್ಧಾಂತವೊಂದರಲ್ಲಿ ಮಾತ್ರವೇ ಕಂಡುಬರುವ ವಿಶೇಷ ಲಕ್ಷಣವಾಗಿರುತ್ತದೆ.—ಶಕ್ತಿ, ಚಿತ್ತ, ಮತ್ತು ಶೀಲಸ್ವಭಾವಗಳು, ಇವುಗಳನ್ನು ಎಂದರೆ, ಒಟ್ಟು ಚಾರಿತ್ರವನ್ನು, ಪರಿಷ್ಕರಿಸಿಕೊಳ್ಳುವುದೂ ಸಹ, ಜ್ಞಾನ ಭಕ್ತಿಗಳಂತೆಯೇ ಪರಿಪೂರ್ಣತೆಗೆ ಸಾಧಕವಾದ ಅಂಗವಿಶೇಷವೆಂದು ಏರ್ಪಡಿಸುವುದೊಂದಕ್ಕೆ ಮಾತ್ರವೇ ಜೈನಮತವು ಗಮನಕೊಡಲಿಲ್ಲ. ಅದು ತನ್ನ "ಸರ್ವಧರ್ಮ"ದಲ್ಲಿಯೂ, ಮತ್ತು ಅನೇಕಾಂತವಾದ"ದಲ್ಲಿಯೂ, ಎಲ್ಲಾ ಮತಸಿದ್ಧಾಂತಗಳನ್ನೂ, ಎಲ್ಲಾ ತತ್ವಸಿದ್ಧಾಂತಗಳಿಗೂ, ಮತ್ತು ಎಲ್ಲಾ ವಿಧವಾದ ಜೀವನಮಾರ್ಗಗಳಿಗೂ ಪರಸ್ಪರವಾಗಿ

ಸಾಮರಸ್ಯಭಾವವು ನೆಲೆಗೊಳ್ಳುವುದಕ್ಕೆ ಸಾಧಕವಾಗುವಂತೆ ಬೋಧಿಸಿರುತ್ತದೆ. ಮತ್ತೊಂದು ಕಡೆಯಲ್ಲಿ ನೋಡಿದರೆ (ಎಂದರೆ, ಐಹಿಕ ವಿಚಾರಗಳಲ್ಲಿಯೂ ಕೂಡ) ಜೈನರು ಕಲ್ಲಿನ ಕೆತ್ತನೆಯ ಕೆಲಸದಲ್ಲಿ ವಿಶೇಷ ಕೌಶಲ್ಯದಿಂದ ಕಟ್ಟಡಗಳೇ ಮುಂತಾದುವನ್ನು ನಿರ್ಮಿಸಿ, ತನ್ಮೂಲಕ ಶಿಲ್ಪಕಲೆಯಲ್ಲಿ ಒಂದು ಹೊಸ ರೀತಿಯನ್ನೇ ಕಲ್ಪಿಸಿರುತ್ತಾರಲ್ಲದೆ, ಅದನ್ನು ಅತ್ಯುತ್ತಮ ರೀತಿಯಲ್ಲಿ ವೃದ್ಧಿಗೊಳಿಸಿಯೂ ಇರುತ್ತಾರೆ; ಅದರ ಫಲಿತಾಂಶವಾಗಿ, ಅಬೂಪರ್ವತದಲ್ಲಿರುವ ಪ್ರಸಿದ್ಧವಾದ ಕಟ್ಟಡಗಳು, ತಾಜಮಹಲಿನಂತೆಯೇ ಶಿಲ್ಪಕಲೆಯಲ್ಲಿ ಪ್ರಪಂಚದಲ್ಲೆಲ್ಲಾ ಅತ್ಯಾಶ್ಚರ್ಯಕರವಾದ ದಾಖಲೆಗಳೆನಿಸಿವೆ.

ಆದರೆ, ಮಾನುಷಿಕವ್ಯಾಪಾರಗಳೆಲ್ಲಾ ಕ್ಷೀಣದೆಸೆಗೆ ಬರಲೇಬೇಕು; ಸಾರ್ವತ್ರಿಕವಾಗಿ ಅನ್ವಯಿಸುವ ಈ ನಿಯಮಕ್ಕೆ ನಿಮ್ಮ ಈಚಿನ ಇತಿಹಾಸವೂ ಅಧೀನವೆನಿಸಿ ನಡೆಯಬೇಕಾಯಿತು. ಅದಾಗ್ಯೂ, ಸೌಭಾಗ್ಯದೆಸೆಯು ಚಕ್ರಗತಿಯಲ್ಲಿ ಸಂಚರಿಸಿರುವಂತೆ ವರ್ಣಿಸಲ್ಪಟ್ಟಿದೆ. ಪ್ರತಿಯೊಂದು ಅವನತಿಯು ಮುಂದೆ ಬರುವ ಉನ್ನತಿಗೆ ಕಾರಣವೆನಿಸುತ್ತದೆ; ಅವಸರ್ಪಿಣೆಯ ಅವಧಿಯು ಕಳೆದೊಡನೆಯೇ ಉತ್ಸರ್ಪಿಣೆಯ ಅವಧಿಯು ಬಂದೇ ತೀರಬೇಕು. ಈಗಿನ ಕಾಲದ ಮುಖ್ಯ ಲಕ್ಷಣಗಳನ್ನು ತದೇಕಚಿತ್ತನಾಗಿ ಪರಿಶೀಲಿಸತಕ್ಕವನಿಗೆ, ಇಂಡಿಯಾದೇಶದಲ್ಲಿ ಜೈನಪಂಗಡದವರಲ್ಲೆಲ್ಲಾ ನವಜೀವನದ ಕಳೆಯುಂಟಾಗಿ ಅವರ ಮನೋಭಾವಗಳು ವಿಕಾಸಿತವಾಗುತ್ತಿರುವುವೆಂಬುದು ಗೋಚರಿಸದೇ ಹೋಗಲಾರದು. ನಿಮ್ಮ ಮತಪದ್ಧತಿಗಳನ್ನೂ, ಸಂಪ್ರದಾಯಗಳನ್ನೂ, ನ್ಯಾಯಸ್ಥಾನಗಳ ವರೆಗೂ ಸೆಳೆದಿರತಕ್ಕ ಒಳಪಂಗಡಗಳ ವಿವಾದಗಳಿಗೂ, ವೈಷಮ್ಯಗಳಿಗೂ, ಇನ್ನುಮುಂದೆ ಲೇಶವೂ ಅವಕಾಶ ಕೊಡಕೂಡದೆಂದು ನೀವು ನಿರ್ಧರಮಾಡಿಕೊಂಡಿರುತ್ತೀರಿ. ಇನ್ನುಮುಂದೆ ಯಾವ ವಿಧವಾದ ಭೇದಭಾವಗಳೂ ಇಲ್ಲದೆ ಐಕಮತ್ಯದಿಂದಿರಬೇಕೆಂದು ನೀವೆಲ್ಲರೂ ನಿರ್ಧರಿಸಿಕೊಂಡಿರುತ್ತೀರಿ. ನಿಮ್ಮ ಸಾಮಾಜಿಕ ವ್ಯವಹಾರದಲ್ಲಿ ಈಚೆಗೆ ಸೇರಿಕೊಂಡಿರತಕ್ಕ ಜೈನಮತ ವಿರುದ್ಧವಾದ ಕಲ್ಮಷಗಳೆಲ್ಲಾ ನಿವಾರಣೆಮಾಡಿ, ಸರಳವಾದ ನಿಮ್ಮ ಧರ್ಮನಿಷ್ಠೆಯನ್ನು ಕೈಗೊಳ್ಳುವುದಕ್ಕೂ ನಿಮ್ಮ ಮತಸಿದ್ಧಾಂತಗಳಲ್ಲಿಯೂ, ಮತ್ತು ನಿಮ್ಮ ಮತಧರ್ಮಗಳಲ್ಲಿಯೂ ಪೂರ್ವದ ಪಾರಿಶುದ್ಧ್ಯವನ್ನವಲಂಬಿಸಿ ಮತ್ತೊಮ್ಮೆ ಸರಿಯಾಗಿ ಅವುಗಳನ್ನು ಅನುಷ್ಠಾನಕ್ಕೆ ತರಬೇಕೆಂದೂ ಸಹ ನೀವೆಲ್ಲರೂ ನಿರ್ಧರಮಾಡಿಕೊಂಡಿರುತ್ತೀರಿ. ಮತವಿಷಯಕವಾದ ಮತ್ತು ಸಮಾಜಿಕವಾದ ಈ ಮಹದುದ್ದೇಶಗಳು ನೆರವೇರುವುದಕ್ಕೆ ಅವಶ್ಯವಾದ ಸನ್ನಿವೇಶಗಳೂ, ಮತ್ತು ಅವಶ್ಯವಾದ ಸಾಧನಗಳೂ, ಒದಗಲನುಕೂಲಿಸುವಂತೆ ಸ್ವರೀತಿಯಲ್ಲಿ ತತ್ವಪ್ರಸಾರಣಾಕಾರ್ಯವನ್ನು ನೆರವೇರಿಸಬೇಕೆಂದೂ ಕೂಡ ನೀವೆಲ್ಲರೂ ನಿರ್ಧರಿಸಿಕೊಂಡಿರುತ್ತೀರಿ. ನಿಮ್ಮ ಸ್ವಂತ ಧರ್ಮಶಾಸ್ತ್ರವೇ ನ್ಯಾಯಸ್ಥಾನಗಳಲ್ಲಿ ವ್ಯಕ್ತಿಶವಾಗಿ ನಿಮಗೆ ಅನ್ವಯಿಸುವಂತೆ ಮಾಡಿಕೊಂಡು, ಭದ್ರಬಾಹುಸಂಹಿತೆಯ ಆಧಾರದಮೇಲೆ ಅದನ್ನು ಏರ್ಪಡಿಸಿ ಅದರ ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳಬೇಕೆಂದು ಉದ್ದೇಶಿಸಿ ಕೆಲಸಮಾಡುತ್ತಿರುವಿರಿ. ಜಗತ್ಪ್ರಪಂಚಕ್ಕೆ ಪ್ರಯೋಜನವಾಗಲೆಂದು ಯೋಚಿಸಿ, ನಿಮ್ಮ ದೊಡ್ಡದೊಡ್ಡ ಪುಸ್ತಕ ಭಂಡಾರಗಳ ಅನರ್ಘ್ಯವಾದ ಗ್ರಂಥರತ್ನಗಳು ಜನರ ದೃಷ್ಟಿಗೆ ಗೋಚರಿಸುವಂತೆ ಮಾಡಲುದ್ದೇಶಿಸಿರುತ್ತೀರಿ. ನೀವು ಪ್ರಕಟಿಸಿರುವ ಪವಿತ್ರವಾದ ನಿಮ್ಮ ಮತಗ್ರಂಥಗಳೂ, ಅವುಗಳಿಗೆ ಅಲಂಕಾರಪ್ರಾಯವಾಗಿರುವ "ಅರ್ಧಮಾಗಧಿ ನಿಘಂಟು" ಮತ್ತು ಸರ್ವವಿಷಯಸಂಗ್ರಹ ನಿಘಂಟುಗಳೆಂಬ ಎರಡು ಗ್ರಂಥಗಳೂ, ಮತ್ತು ಜೈನಮತ ತತ್ವಗಳನ್ನೂ ಜೈನ ಸಂಪ್ರದಾಯಗಳನ್ನೂ, ವಿವರಿಸುವ ಬಗೆಬಗೆಯ ಪತ್ರಿಕೆಗಳೂ, ನಿಮ್ಮ ಘನವಾದ ಸಂಕಲ್ಪವನ್ನು ಘನವಾದ ರೀತಿಯಲ್ಲಿ ನೀವು ಈಡೇರಿಸಿದುದರ ನಿದರ್ಶನವೆನಿಸಿವೆ.

ನಿಮ್ಮ ಪೂರ್ವಿಕರಂತೆಯೂ, ಮತ್ತು ವಿಶ್ವಾಖಂಡದ ಇತರ ಮತಾನುಯಾಯಿಗಳಾದ ನಿಮ್ಮ ಭ್ರಾತೃವರ್ಗದವರಂತೆಯೂ, ನೀವುಗಳೆಲ್ಲರೂ ಯಾತ್ರಾರ್ಥಿಗಳಾಗಿ ಮತವಿಷಯಕವಾದ ಮುಖ್ಯೋದ್ದೇಶದಿಂದ ಇಲ್ಲಿಗೆ ಬಂದಿರುತ್ತೀರಿ; ಆದರೂ, ಮಹಾರವೂ, ಜೀವನಪಥವೂ, ಸಮ್ಮಿಳಿತವಾಗಿ ಸೇರಿದ್ದ ಪ್ರಾಚೀನಪದ್ಧತಿಯ ಉಪೇಕ್ಷೆಯಿಂದ ಕೈಬಿಡದೆ, ಈ ಪವಿತ್ರ ಸಮಯವನ್ನೇ ಜೈನ ಪಂಗಡದ ಸಮ್ಮೇಳನವೊಂದನ್ನು ನಡೆಸುವುದಕ್ಕೂ ಕೂಡ ಉಪಯೋಗಿಸಿಕೊಂಡಿದ್ದೀರಿ. ಈ ಸಮ್ಮೇಳನವು ಕೇವಲ ಮತಸಂಬಂಧವಾದ ಮತ್ತು ಸಮಾಜಸಂಬಂಧವಾದ ಉದ್ದೇಶಗಳಿಂದ ಮಾತ್ರವೇ ನಡೆಸಲ್ಪಟ್ಟಿರುವುದಾಗಿ ನಮಗೆ ತಿಳಿಯಬಂದಿರುತ್ತದೆ. ರಾಜಕೀಯ ವಿಚಾರಗಳಿಗೂ, ಇದಕ್ಕೂ ಯಾತೊಂದು ಸಂಬಂಧವೂ ಇರುವುದಿಲ್ಲ. ಈ ಸಮ್ಮೇಳನದ ಕಾರಣಕರ್ತರು ವಿಧದ ಎಚ್ಚರಿಕೆಯನ್ನು ಸ್ಪಷ್ಟಗೊಳಿಸುವುದರಲ್ಲಿ ತೋರಿಸಿರುವ ಪ್ರಾಜ್ಞತೆಗಾಗಿ ಅವರನ್ನು ಶ್ಲಾಘಿಸುತ್ತೇವೆ. ಆದರೆ, ರಾಜಕೀಯ ವಿಚಾರಗಳು ಯಾವಹಾವೂ, ಉಪೇಕ್ಷಣೀಯವೂ ಆಗಿರುವುವೆಂಬುದೂ, ನೀವು ಅವುಗಳ ಪರ್ಯಾಲೋಚನೆಗೇ ಹೋಗದೆ ದೂರವಾಗಿಟ್ಟಿರಬೇಕೆಂದೂ, ನಮ್ಮ ಅಭಿಪ್ರಾಯವೆಂದು ಯಾರೊಬ್ಬರೂ ಈ ಶ್ಲಾಘನೆಗೆ ಅಪಾರ್ಥವನ್ನು ಕಲ್ಪಿಸಕೂಡದು. ಅದಕ್ಕೆ ಪ್ರತಿಯಾಗಿ ಪ್ರತಿಯೊಬ್ಬ ವಿದ್ಯಾವಂತನೂ ತನ್ನ ದೇಶದ ರಾಜಕೀಯ ವಿಚಾರಗಳಲ್ಲಿ ಆತ್ಮಾದರದಿಂದಲೂ, ವಿವೇಕದಿಂದಲೂ ಆಸಕ್ತಿಯನ್ನು ವಹಿಸಬೇಕೆಂಬುದೇ ನಮ್ಮ ಅಭಿಪ್ರಾಯವಾಗಿದೆ; ಜನರ ಮನೋವಿಕಾಸವು ಹೆಚ್ಚುತ್ತಾ ಬಂದ ಹಾಗೆಲ್ಲಾ, ಅದಕ್ಕನುಸಾರವಾಗಿ ಹೊಂದಿಕೆಯಿಂದ ಸಮಾಜವನ್ನು ವ್ಯವಸ್ಥೆಗೊಳಿಸುವ ಅವಶ್ಯಕತೆಯುಂಟಾಗುತ್ತದೆ; ಈ ಅವಶ್ಯಕತೆಯ ದೆಸೆಯಿಂದ ಅನೇಕ ಕ್ಲಿಷ್ಟಸ್ಥಿತಿಗಳು ತಪ್ಪದೆ ಸಂಭವಿಸುತ್ತವೆ; ಇವುಗಳನ್ನು ಬಗೆಹರಿಸುವುದರಲ್ಲಿ ಪ್ರತಿಯೊಬ್ಬ ವಿದ್ಯಾವಂತನೂ, ("ಪ್ರತಿಯೊಬ್ಬ ವಿದ್ಯಾವತಿಯೂ" ಎಂದೂ ನಾವು ಸೇರಿಸಬೇಕೆಂದು ತೋರುತ್ತದೆ). ತನ್ನ ಭಾಗದ ಸೇವೆಯನ್ನು ಸಲ್ಲಿಸಬೇಕೆಂಬುದೂ ಕೂಡ, ನಮ್ಮ ಅಭಿಪ್ರಾಯವಾಗಿರುತ್ತದೆ.

(ಮುಂದುವರಿಯುವುದು.)

ಲಜೀ ಸೀರೆಗಳು.

ಈ ಸೀರೆಗಳು ಉತ್ತಮವಾದ ಭಟ್ಟಿ ಬಣ್ಣದ ಮರ್ಸ್ರೈಜ್ಡ್ ನಲ್ಲಿ ತಯಾರಿಸಿರುತ್ತವೆ. ಇವುಗಳನ್ನು ಸಕಲ ಸ್ತ್ರೀಯರು ಉಡಲು ಬಹಳ ಮನೋಹರವಾಗಿವೆ. ಒಂದು ಸಾರಿ ತರಿಸಿ ನೋಡಿರಿ. 18×2½ ಮೊಳ ಸೀರೆ 1ಕ್ಕೆ 10 ವಿ. ಪಿ. ಪ್ರತ್ಯೇಕ ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕು.

ವಿಳಾಸ,

ಪಿ. ನಾಗಪ್ಪ ಬ್ರದರ್ಸ್,

ದೊಡ್ಡ ಬಳ್ಳಾಪುರ.

ಆರೋಗ್ಯ ಚಂದ್ರಿಕೆ.

ಪ್ರೆಸ್.

ಸಂಪಾದಕರು: ಡಾಕ್ಟರ್, ರಾಮರಾವ್, ಎಲ್. ಎಮ್. ಪಿ. ಎಫ್. ಪಿ. ಯು. ಯವರು.

ಆರೋಗ್ಯ ಚಂದ್ರಿಕೆ ಆರೋಗ್ಯ ಮತ್ತು ಚಿಕಿತ್ಸೆಯ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ತಿಳಿ ದೊರೆಯುವುದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ.

ಈ ಮಾಸಪತ್ರಿಕೆಯು "ಹೆಲ್ತ್" ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ.

ಆರೋಗ್ಯಚಂದ್ರಿಕೆಯು ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳುಳ್ಳದ್ದಾಗಿ ಪ್ರಕಟವಾಗುವುದು.

'ಹೆಲ್ತ್,' ಎಂಬ ಇಂಗ್ಲಿಷ್ ಮಾಸಪತ್ರಿಕೆಯು ಸಂಪಾದಿಸಿ ಸಂಕಲಿಸಿದ ಅನೇಕ ದೊಡ್ಡ ವೈದ್ಯ ಗ್ರಂಥಗಳ ಮೇಲೆ ಈ ಕನ್ನಡ ಪತ್ರಿಕೆಯನ್ನು ಹೊರಡಿಸಿದೆ.

ಅದರ ಸಂಪುಟ ೨ ಎರಡನೇಯ ನವಂಬರ ೧೯೨೪ ಸಂಚಿಕೆಯಲ್ಲಿ ಅಡಗಿರುವ ವಿಷಯ:

- ಮುಖಚಿತ್ರ:—ಶಸ್ತ್ರಚಿಕಿತ್ಸೆಯ ಒಬ್ಬ ರೋಗಿ.
- ಕ್ಷಯರೋಗವು ಅಥವಾ ಕ್ಷಯವು,
- ಹುಣಸೆಹಣ್ಣಿನ ಆಹಾರಗಳು ಮತ್ತು ಔಷಧಗುಣಗಳು.
- ಕಾಲುನಡಿಗೆಯೇ ಉತ್ತಮ ವ್ಯಾಯಾಮವು
- ಜೇನಿನಲ್ಲಿರುವ ಗುಣಗಳು
- ಹಲ್ಲುಗಳ ರಚನೆ, ಪೃಥ್ವಿ, ಕೆಲಸ ಮುಂತಾದವು.
- ಮದ್ಯಪಾನದಿಂದ ಆತ್ಮಕ್ಕೆ ಉಂಟಾಗತಕ್ಕ ಹಾನಿ.
- ಅಂಗಸಾಧನೆ ಮತ್ತು ವ್ಯವಸಾಯ (ವಿದ್ಯಾಭ್ಯಾಸ).
- ಗಾಯಗಳು, ಮತ್ತು ಅವು ಮುಂತಾದವು, ಅವುಗಳ ಚಿಕಿತ್ಸೆ
- ನವನಾಗರಿಕ ಪ್ರಪಂಚದ ಮೂರು ಕೆಡುಕುಗಳು.
- ಒಬ್ಬ ಉಪವಾಸಿಯ ಕಥೆ.

ಆರೋಗ್ಯ ಚಂದ್ರಿಕೆಯ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿವೆ. ಆರೋಗ್ಯಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು.

ಅಂಚೆಯ ವೆಚ್ಚ ಸೇರಿ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ ರೂ. ೧—೮—೦; ಬಿಡಿ ಒಂದಕ್ಕೆ ರೂ. ೦—೨—೦. ಹಿಂದಿನ ಸಂಚಿಕೆಗಳು ಕೂಡ ದೊರೆಯುವವು.

ಚಂದಾದಾರರಾಗುವವರು ವಿ. ಪಿ. ಮೂಲಕವಾಗಿ ತರಿಸಿಕೊಳ್ಳುವುದಕ್ಕಿಂತಲೂ ಹಣವನ್ನು ಮುಂಗಡವಾಗಿ ಕಳುಹಿಸುವುದು ಲಾಭಕರ. ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು 'ಆರೋಗ್ಯ ಚಂದ್ರಿಕೆ'ಗೆ ಎಂದು ಸ್ಪಷ್ಟವಾಗಿ ಬರೆದು ಕಳಿಸಿ.

ಪತ್ರವ್ಯವಹಾರ 'ಆರೋಗ್ಯ ಚಂದ್ರಿಕೆ'

೩೩ ತಂಬುಚೆಟ್ಟಿ ಬೀದಿ, ಮದ್ರಾಸ್

* * *

ತುಳು ಒಡ್ಡನಗಳು.

ಬೊಬ್ಬರ್ಯ, ಕಲ್ಲ—ಕಲ್ಕುಡ, ದೈಯ್ಯೊಂಗುಳು—ಕೋಡಿಕಿನಾರ್, ಮುಂಡಯ್ಯ ಪ್ರತಿ ಒಂದಕ್ಕೆ 2 ಆಣೆ. 1½ ಆಣೆ ಟಪ್ಪಾಲು ಚೀಟಿ ಕಳುಹಿಸಿದರೆ 5 ಪುಸ್ತಕಗಳು ಕೂಡಲೇ ಕಳುಹಿಸಲ್ಪಡುವು.

ವಿಳಾಸ: ಶಾರದಾ ಛಾಪಖಾನೆ,

ರಥಬೀದಿ, ಮಂಗಳೂರು.

* * *

The Canara Bank, Limited, Magnalore.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.	1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ಕೆತ್ತ ಮೂಲಧನವು ರೂ. 300,000—0—0
Reserve and other sinking Funds ,, 259,000—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು 259,000—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳೋಣಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರಿಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangulore, 9th Feb. 1925.

K. Venkat Rao,
Secretary.

ಪರೀಕ್ಷಾಕಾಲ.

ವಿದ್ಯಾರ್ಥಿಗಳೇ ಇತ್ತ ನೋಡಿರಿ.

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ನೋಯುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ.

"ಸಾರಸ್ವತಾಸವ"ವು ಒಳಗಳ ಮುಖ್ಯಾವಯವಗಳಲ್ಲುಂಟಾಗುವ ವ್ಯತ್ಯಾಸವನ್ನು ಸರಿಪಡಿಸಿ, ಜೀರ್ಣಶಕ್ತಿಯನ್ನು ಹೆಚ್ಚಿಸಿ, ಪಂಕ್ತಿಧ್ರುಮಣೆ ತಲೆತಿರುಗು, ನೆತ್ತಿಯುರಾವು, ಇಂದ್ರಿಯ ದೌರ್ಬಲ್ಯಗಳನ್ನು ಹೋಗಲಾಡಿಸಿ ಶುದ್ಧರಕ್ತವನ್ನು ವೃದ್ಧಿಪಡಿಸುತ್ತದೆ. ಸೀಸೆ 1ಕ್ಕೆ ಬೆಲೆ 1 ರೂಪಾಯಿ, ಪೋಸ್ಟೇಜು ಬೇರೆ,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ—ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ ಹೊಟ್ಟೆನೋವು ಇಂಫ್ಲುಯಂಜಾ ಪ್ಲೇಗುಜ್ವರ.

ಮಕ್ಕಳ—ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು. ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಶಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳ ವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಬ್ರಾಂಚ್ ಆಫೀಸ್, ಚಿಕ್ಕಪೇಟೆ, ಬೆಂಗಳೂರು ಸಿಟಿ.
ಹೆಡ್ ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಪಾಳ್ಯದ ವೆಂಕಟಾಚಲ ಪಂಡಿತರು,
ಏಜಂಟರು:—
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ,
ಮಂಗಳೂರು ಟವನಿಗೆ ಮಾತ್ರ.

ವಿದ್ಯಾವಾಚಸ್ಪತಿ
ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ

"ಸಂಕ್ಷೇಪಗೀತೆ"

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ, ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದೆ ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೧. ಟಪ್ಪಾಲು ಖರ್ಚು ಕೂಡಿ ಆಣೆ ೧೧ನ್ನು ಮನಿಯಾರ್ಡರ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ೨ರಕ್ಕಿಂತ ಜಾಸ್ತಿ ಖರ್ಚು ತಗಲುವುದು. ರಖಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.

ಪುಸ್ತಕ ದೊರಿಯುವ ವಿಳಾಸ:—

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು, ಮತ್ತು ಕೆನರಿಸ್ ಮಿತ್ರಸ್ ಬುಕ್ ಎಂಡ್ ಟ್ರಕ್ಟ ಡಿಪೋಜಿಟರಿ, ಮಂಗಳೂರು.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀಕಾಶಿ, ಗಯಾ, ಪ್ರಯಾಗ, ಹರಿದ್ವಾರ ಬದ್ರಿನಾರಾಯಣ ದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರ ಕಡೆಯಿಂದ ಅನುಭವ ತೆಗೆದು ಪ್ರತಿನಿಂದು ಸಿದ್ಧಮಾಡಿಕೊಂಡು ಬರೆದಿರುವರು. ೧ನೇದು ಮಂತ್ರಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರಪ್ರಯೋಗದಿಂದಲೂ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವವಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವು ಇದೆ. ೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ, ಆಸನದಡಿಯಲ್ಲಿ ರೂಪಾಯಿಗಳು ಹೊರಡುವಿಕೆ, ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ. ೩ನೇದು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನು ಅನುಭವ ತೆಗೆದುಕೊಂಡು ತಿಳಿಸಿರುವರು. ೪ನೇದು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾ ಸಹ, ಇದರಲ್ಲಿ ಉಂಟು, ಇದು ಪ್ರತಿನಿಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷಧ ಮಾಡುವ ಕ್ರಮವನು ಚೆನ್ನಾಗಿ ಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಕಾಸವು ತಿಳಿಸಿರುವರು. ೫ನೇದು ಯಂತ್ರ ಪ್ರಕರಣದಲ್ಲಿ ವಶೀಕರಣ ಗ್ರಹಪೀಡಾ ನಿವಾರಣ ಭೂತಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು, ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರದಿರುವರು. ಈ ಗ್ರಂಥವು ಹತ್ತರ ಇದ್ದ ಬಳಿಕ ಎಲ್ಲಾ ದೇವಾನು ದೇವತೆಗಳು ದ್ರವ್ಯಗಳೂ ವೈದ್ಯರೂ ಜೋತಿಷ್ಯರು, ಮಾಂತ್ರಿಕರು ತಾಂತ್ರಿಕರೂ ಮನೆಯೊಳಗೆ ಇದ್ದ ಹಾಗೆ ಆಗುತ್ತದೆ. ಇಂಥ ಗ್ರಂಥವು ಯಾರು ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿಯವರು ತರಿಸಿ ನೋಡಬೇಕೆಂದು ಇದರ ಬೆಲೆ ತೀರ ಕಡಿಮೆಮಾಡಿ ಇರುವವು. ೨—೮—೦ ಟಪ್ಪಾಲು ಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ ನಾಟಕ ಕಾವ್ಯ, ಕಥೆಗಳು, ಯಕ್ಷಗಾನ, ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ:—

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ

Pandit BRamakrishna Baliga's Siddha Ayurvedic edicines of 50 years' reputation.

ಮಹಾ ಮಕರಾಮೋಕ್ಷರಿ ಲೇಹ—ಇದನ್ನುಭಂಗಾರ. ಅಭ್ರಕಭಸ್ಮ, ರಸಸಿಂಧೂರ, ಕಸ್ತೂರಿ, ಕುಂಕುಮಕೇಸರ ವಗೈರೆ ಅಮೂಲ್ಯವಾದ ರಸಾದಿ ದ್ರವ್ಯಗಳಿಂದ ತಯಾರಿಸಲ್ಪಟ್ಟಿರುತ್ತದೆ. ಇದು ಎಲ್ಲಾ ತರದ ನಪುಂಸಕ ರೋಗಗಳನ್ನೂ, ಸ್ವಪ್ನಾವಸ್ಥೆಯಲ್ಲಿ ಧಾತುಪತನವನ್ನು ಗುಣಪಡಿಸಿ, ದೇಹಕ್ಕೆ ದಿವ್ಯಕಾಂತಿಯನ್ನೂ, ಪುಷ್ಟಿಯನ್ನೂ, ಪುರುಷತ್ವವನ್ನೂ, ವೀರ್ಯಸ್ತಂಭನವನ್ನೂ ಉಂಟುಮಾಡಿ ಅಕಾಲವನ್ನು ಕೊಡುವುದಲ್ಲದೆ, ಅಜೀರ್ಣ, ಅತಿಸಾರ, ಗ್ರಹಣೆ, ಅಮ್ಲ, ಪಿತ್ತ, ಉದರಶೂಲೆ, ಪ್ರಮೇಹ ವಗೈರೆ ರೋಗಗಳನ್ನು ಪಡಿಸುವಲ್ಲಿ ಕೇವಲ ಅಮೃತಸಮಾನವಾಗಿರುವುದು. ಇದನ್ನು ಅಬಾಲವೃದ್ಧರೂ ಸೇವಿಸಬಹುದು.

ಸ್ವರ್ಣ ಮಿಶ್ರಿತ ಲೇಹಕ್ಕೆ (48 ದಿನಗಳ ವರೆಗೆ ಸಾಕಾಗುವ) ಸೇರು ೧ರ ರೂ. 4—0—0.
ಸ್ವರ್ಣ ಇಲ್ಲದ ,, ,, ,, ,, 3—0—0.

ಬ್ರಹತ್ ಶಾರ್ಙ್ಗಾದಿ ರಸಾಯನ—ಇದು ಶಕ್ತಿಯಿಂದ ರಕ್ತವನ್ನು ಶೋಧಿಸುವ ದಿವ್ಯೌಷಧವಾಗಿರುತ್ತದೆ. ಇದರ ಸೇವನೆಯಿಂದ 20 ತ ಪ್ರಮೇಹ ರೋಗಗಳೂ ಎಲ್ಲಾ ತರದ ಫರಂಗಿ ರೋಗಗಳೂ ಅಲ್ಪ ಸಮಯದಲ್ಲಿ ಗುಣಹೊಂದುವವು. ಅದಲ್ಲದೆ ಇದು ಎಲ್ಲಾ ತರದ ಕುಷ್ಠವ್ಯಾಧಿಗಳನ್ನೂ, ತುಚ್ಛ, ಕುರು ಮೊದಲಾದ ಸಕಲ ಚರ್ಮವ್ಯಾಧಿಗಳನ್ನೂ, ಪಾದರಸ ಸೇವನೆಯಿಂದ ಉಂಟಾದ ರೋಗಗಳನ್ನು ಮತ್ತು ಹೆಂಗಸರ ಪ್ರದರ ರೋಗಗಳನ್ನೂ ಶಾಶ್ವತಿಯಿಂದ ಗುಣಪಡಿಸುವುದು.

8 ಔನ್ಸಿನ ಬಾಟ್ಲಿ ಒಂದರ ಕ್ರಯ ಬರೇ ರೂ. 1—9—0.

ಧಾತ್ರಿ ಪರ್ಪಟಾದಿ ತೈಲ—(ಸಿದ್ಧ ಇಲ್ಲದವರಿಗೆ ಸಿದ್ಧೌಷಧ.) ಇದನ್ನು ತಲೆಗೆ ಹಚ್ಚುವಲ್ಲಿ ಸಕಲ ಶಿರೋರೋಗಗಳೂ, ಕರ್ಣ, ನೇತ್ರ, ದಂತ, ಕ್ಷಾರರೋಗಗಳೂ, ತಲೆ ತಿರುಗುವುದು, ಕಳಾಹಾದ ತಲೆ ಹಿಡಿತವು ಮೊದಲಾದ ರೋಗಗಳು ನಾಶವಾಗಿ, ಸ್ಮರಣಶಕ್ತಿಯನ್ನೂ, ಬುದ್ಧಿಶಕ್ತಿಯನ್ನೂ ವೃದ್ಧಿಗೊಳಿಸುವುದು. ಇದು ವಿದ್ಯಾರ್ಥಿಗಳಿಗೂ ವಕೀಲರಿಗೂ ಒಂದು ಸಿದ್ಧೌಷಧ.

4 ಔನ್ಸಿನ ಬಾಟ್ಲಿ ೧ರ ರೂಪಾಯಿ 1—0—0.

ಸೂಚನೆ:—ಬ್ಯಾಲ ಹಾಸಲು ಪ್ರತ್ಯೇಕ. ಸ್ವಲ್ಪ ಬಡ ಜನರಿಗೆ ಔಷಧವು ಧರ್ಮಾರ್ಥವಾಗಿ ಕೊಡಲ್ಪಡುವುದು.

ವಿಳಾಸ:— ಪಂಡಿತ, ಬಿ. ರಾಮಕೃಷ್ಣ ಬಾಳಿಗ, ಬಂಟವಾಳ ದ. ಕ.

Just Arrived OF **Fresh Consignment**

Best English Cycles.



REDUCTION IN PRICES.

Ranger Cycles Model M. Made in Birmingham.

WITH DUNLOP OR BATES TYRES & TUBES ... @ Rs. 90—0—0

Barton Humber on Advance

WITH DUNLOP OR BATES TYRES & TUBES ... @ „ 100—0—0

Senior Royal with B. S. A. Fitting.

WITH DUNLOP OR BATES TYRES & TUBES .. ...@ Rs. 145—0—0

Royal Saxon with B. S A. Fitting.

WITH DUNLOP OR BATES TYRES & TUBES ... ... @ Rs. 175—0—0

All the above Cycles include pump and tools.

BROOKES PATEERN 90/2 GERMAN SADDLE ... ...@ „ 9—8—0
„ SADDLE 90/2 „ ... ..@ „ 21—0—0
„ „ B/30 „ ... ...@ „ 26—0—0

For further particulars please write to us or call on us:—

All kinds of Cycle Accessories, Dunlop and German Tyres and Tubes
ARE AVAILABLE AT VERY CHEAP RATES.

Special Discount to Traders *Easy Terms Arranged*

APPLY TO:—**The Mangalore Trading Association,**
Wholesale Dealers in Cycles and Cycle Accessories,
Car-Street, MANGALORE

—ಗೋಡೆಗೆ ತಗಲಿಸುವ
ಹೊಸ ನಮೂನೆಯ—

ಟಿಕ್—ಟಾಕ್

ಎಂಬ ಈ ಗಡಿಯಾರಗಳು ಜರ್ಮನೀ ದೇಶದಲ್ಲಿ ತಯಾರಿಸಿದ್ದು. ಇವು ಕರಾರು ಘಂಟೆಯನ್ನು ತೋರಿಸುವವು. ಇವಕ್ಕೆ ಬೀಗ ಕೊಡಬೇಕಾದಿಲ್ಲ. ಇದರಲ್ಲಿ ಕಾಣುತ್ತಿರುವ ಗುಂಡನ್ನು ಮೇಲಕ್ಕೆ ಎಳೆದರೆ ಸಾಕು. ತನ್ನಷ್ಟಕ್ಕೆ ತಾನೇ ಟಿಕ್—ಟಾಕ್ ಎಂಬ ಶಬ್ದವನ್ನು ಮಾಡುತ್ತಾ ಸರಿಯಾದ ಕಾಲವನ್ನು ತೋರಿಸುವದು. ಇದು ನೋಡುವುದಕೆ ಬಹು ಲಕ್ಷಣವಾಗಿರುವುದು.

ಕ್ರಯ 1ಕ್ಕೆ ರೂ. 8—0—0

ಪೀಟರ್ ವಾಚ್ ಕಂಪೆನಿ
ಪೋಸ್ಟ್ ಬಾಕ್ಸ್ ನಂ. 27, ಮದ್ರಾಸ್.

ADVERTISE IN

The Business Directory
OF INDIA, BURMA & CEYLON

A Comprehensive Directory of the various Business-men, Exporters and Importers, Firms, Factories, Mills, Manufacturers, Merchants and Industries of the principal Cities, Ports and Towns of India, Burma and Ceylon.

PUBLISHED ANNUALLY

Rates for Advertisements

¼ Page	Rs.	50.
2 in. Single Column	„	20.
1 in. Single Column	„	15.
Name in Bold Types	„	5.

Price per Copy Rs. 10.

PRINTERS & PUBLISHERS.
Business Directory Co.,
Kanara Press Buildings, MADRAS. E.

Telegrams: "KETHAKI" Phone 540

Just arrived! *Look Shrap!*

SCREW TORCH LAMPS
&
Pocket Electric Lamps

AVAILABLE

In different varieties, Mother of pearl lamps. Cycle lamps.

NICKEL PLATED.

Hammered Brand, with Powerful Bulls-eye lance,

Use with it

Bull's-eye Dry Batteries.

The Mangalore
Trading Association,
Car Street, MANGALORE.

ಸಾರಸ್ವತ.

ಕನ್ನಡ ಮತ್ತು ಕೊಂಕಣ ಭಾಷೆಗಳಲ್ಲಿ ಕಳೆದ ವಿಜಯದಶಮೀ ದಿನದಿಂದ ಪ್ರತಿ ದಶಮಿಗೆ ಹೊರಡುವ ಪತ್ರಿಕೆ.

ವಿ. ಎಸ್. ಕಾಮತ್,
ಮೂಲ್ಕಿ, ವಾಮನ ಕುಡ್ವ } ಸಂಪಾದಕರು.

ಮತಸಂಸ್ಥೆ ಮತ್ತು ಸಮಾಜ ಸಂಬಂಧಪಟ್ಟ ಇತರ ಸಂಸ್ಥೆಗಳ ಸುಸಂಘಟನ.

ಸಮಾಜದೊಳಗೆ ಅನ್ಯೋನ್ಯ ಸ್ನೇಹ.

ಸ್ತ್ರೀಸಮಾಜಕ್ಕೆ ಉಪಯುಕ್ತವಾದ ವಿಷಯಗಳ ನಿರೂಪಣ.

ಮತಭಾವನೆಗಳ ಉಜ್ಜೀವನ ಇತ್ಯಾದಿ ಉದ್ದೇಶಗಳಿಂದ ಈ ಪತ್ರಿಕೆಯು ಹೊರಡಿಸಲ್ಪಡುವುದು. ಸಾರಸ್ವತ ಸಮಾಜವು ಇದಕ್ಕೆ ಪ್ರೋತ್ಸಾಹವನ್ನೀಯಬೇಕಾಗಿ ಪ್ರಾರ್ಥನೆ.

ಚಂದಾಹಣ ಅಂಚೆವೆಚ್ಚ ಸಹಾ ರೂ. ೧—೪—೦. ಪೋಷಕರು ರೂ. ೧೦—೦—೦. ಸಹಾಯಕರು ರೂ. ೫—೦—೦. ಮಾದರಿ ಸಂಚಿಕೆಯನ್ನು ಟಪ್ಪಾಲ ಖರ್ಚಿಗಾಗಿ ಅರ್ಧಾಣೆ ಸ್ಟ್ಯಾಂಪು ಕಳುಹಿಸುವವರಿಗೆ ಉಚಿತವಾಗಿ ಕಳುಹಿಸುವೆವು.

ಕನ್ನಡ ನಾಡಿನಲ್ಲಿ ಪ್ರತಿ ಕಡೆಯಲ್ಲಿಯೂ ಬಾತಮೀದಾರರು ಬೇಕು.

ಎಲ್ಲಾ ಪತ್ರವ್ಯವಹಾರಗಳು ಕೆಳಗಿನ ವಿಳಾಸಕ್ಕೆ ನಡೆಸಬೇಕು.

ಯು. ನಾರಾಯಣನಾಯ್ಕ, ಕಾರ್ಯದರ್ಶಿ,
ಸಾರಸ್ವತ, ಉಡುಪಿ.

ಆರ್. ಮಾರ್ಟಿನ್ನ ಲಪ್ತಾ ಎಣ್ಣೆ

ಇದರ ಸುವಾಸನೆಯು, (ಪರಿಮಳ) ಬಹಳ ಅಂದವಾಗಿಯೂ ಇರುವುದಲ್ಲದೆ, ಬಹಳ ಹೊತ್ತಿನ ವರೆಗೆ ಇರುತ್ತದೆ. ಈ ಎಣ್ಣೆಯನ್ನು ತಲೆಗೆ ಹಾಕಿಕೊಳ್ಳುವುದರಿಂದ ಕಣ್ಣಿಗೆ ತಂಪಾಗಿಯೂ, ಶುಭ್ರವಾಗಿಯೂ, ಆಗುವುದಲ್ಲದೆ, ಮೆದುಳು ಚೆನ್ನಾಗಿ ಬೆಳೆಯುತ್ತದೆ. ಇದನ್ನು ಪ್ರತಿದಿವಸವೂ ಉಪಯೋಗಿಸುವುದರಿಂದ ಕೂದಲುಗಳು ಕಪ್ಪಾಗಿ ಹೊಳೆಯುವಂತೆ ಮಾಡುತ್ತದೆ. ಕೂದಲುದುರುವ ಹೇನುಗಳು ಮುಂತಾದವು ನಾಶವಾಗಿ ತಲೆಬುರುಡೆಯನ್ನು ತಣ್ಣಗೆ ಇಡುವಂತೆ ಮಾಡುತ್ತದೆ. ಗಡ್ಡ ಮತ್ತು ಮೀಸೆಗಳು ಸಹ ಬೆಳೆಯುತ್ತವೆ. ಇದನ್ನು ಉಪಯೋಗಿಸಿದ ಜನರು ಇದಕ್ಕಿಂತ ಉತ್ತಮವಾದ ಎಣ್ಣೆಯು ಬೇರೆ ಇಲ್ಲವೆಂದು ಹೇಳಿರುತ್ತಾರೆ.

ಕ್ರಯ ಬಾಟ 1ಕ್ಕೆ ರೂ. —4—0.

ಆರ್ ಮಾರ್ಟಿನ್ನರ ಗೋಡಯಿನ್.

ಗಂಡಸರಿಗೂ ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ, ಅಥವಾ ಹೊಸತಾಗಿದ್ದರೂ ಸರಿ. ಬೆಳುಪು ಹೋಗುವ ಉರಿಯುವುದು, ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದರ್ಧ ಸೇವಿಸಿದ ಮಾತ್ರಕ್ಕೆ ಉರಿ ಮೂತ್ರವನ್ನು ನಿಲ್ಲಿಸಿ, ಮೂತ್ರವು ಸಲೀಸಾಗಿ ನಿರ್ಮಲವಾಗುವದಲ್ಲದೆ ರೋಗದ ಪತ್ತೆನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ.

ಬೆಲೆ ಸೀಸೆ 1ಕ್ಕೆ ರೂ. 2—0—0.

ಆರ್. ಮಾರ್ಟಿನ್ನರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧಿ ಎಲ್ಲಾ ವಿಧವಾದ ಕೆಮ್ಮು ಗೂರಲು ಶ್ವಾಸ, ಶೀತ, ನೆಗಡಿ, ಗಂಟಲುನೋವು, ಎದೆ ನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನಮಾಡಿ ಪರೀಕ್ಷಿಸಿ ನೋಡಿರಿ. ಅನಂತರ ಬೇರೆ ಯಾವ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮಿಗೂ ರಾಜೆಯಾಗಿಯೂ, ಎದೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ಹುಟ್ಟದಂತೆ ಮಾಡುತ್ತದೆ.

60 ಮಾತ್ರೆಗಳ ಸೀಸೆ 1ಕ್ಕೆ ರೂ. 1—4—0.

ವಿಳಾಸ:—ಆರ್. ಡಿ. ಕಟೆ ಮತ್ತು ಕಂಪೆನಿ,
ನಂಬ್ರ ಬಿ. ಫ್ರೀರ್ ರೋಡ್,
ಸಾಂಜವರ್ತಮಾನ ಪ್ರೆಸ್,
ಟೋಡಿವಾಲಾ ಬಿಲ್ಡಿಂಗ ಎದುರು, ಫೋರ್ಟ ಮುಂಬಯಿ,

R. D. Katy & Co.
No. B. rere Road,
Opposit Saertaman Press,
Todivala Buildin FORT BOMBAY.

ದಕ್ಷಿಣ ಕನ್ನಡಜಿಲ್ಲೆಯ

ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

Edited, Printed & Published by V. S. Kamath at the M. T. A. Sharada Press, Mangalore.

Registered No. M. 498.

ಚಂದಾನಿರ್ಣಯ:= ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಿಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ | ನ ಭೇಜಿರೇ ಭೀಮವಿಷೇಣ ಭೀತಿಮ್ || ಸುಧಾಂ ವಿನಾ ನ ಪ್ರಯಯುರ್ವಿರಾಮಂ | ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ || ೧ ||
ದೊರೆಯಲನುಪಮರತ್ನಗಳು ಸಾ | ಗರವ ಮಥಿಸಲು ಸುರರಿಗದರಿಂ | ಹರುಷವಾಯಿತೆ! ಮತ್ತೆ ವಿಷವು ಸುಡುತ ಬರುತಿರುವ ||
ಗರಳಕವರಂಜಿದರೆ! ಸುಧೆಯನು | ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು || ೧ ||

ಪುಸ್ತಕ ೧೯. ಮಂಗಳೂರು, ತಾರೀಕು ೨೦ನೇ ಶುಕ್ರವಾರ ಮಾರ್ಚಿ ೧೯೨೫. ಸಂಚಿಕೆ ೧೩.

The Canara Banking Corporation Udipi, Ltd.

Head Office:— Udipi	Branch:— Coondapoor
P up Capital	1,66,165—9—11
Reserve etc	64,700—0—0

Season Deposits

Carrying Special rate of 7% up to 15th June 1925 only.

Further Particulars on Application.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರ್ರೇಶನ್ ಉಡುಪಿ ಲಿಮಿಟೆಡ್.

ಹೆಡ್ ಆಫೀಸು:—ಉಡುಪಿ.	ಶಾಖೆ:—ಕುಂದಾಪುರ.
ವಸೂಲಾದ ಮೂಲಧನ	1,66,165—9—11
ರಿಜರ್ವ ವಗೈರೆ ಫಂಡುಗಳು	64,700—0—0

ತಾ. 15—6—1925ರವರೆಗೆ ಮಾತ್ರ ಸಾಲಿಯಾನ್ ಸೇಕಡಾ 7ರ ದರದ ಬಡ್ಡಿಯ ಮೇಲೆ ಮುಸುಂ ಠೇವಣಾತಿಗಳನ್ನು ಅಂಗೀಕರಿಸೋಣಾಗುತ್ತದೆ.

ಹೆಚ್ಚಿನ ಮಾಹಿತಿಗೆ ಬರೆಕೊಳ್ಳಿರಿ.

Office of the Corporation, Udipi, 1-3-25 } N. Ananda Rao, *Secretary.*

Wanted Agents
FOR
Every District in South India

For Pushing Sales of Our Calenders, Xmas and New Year Cards, Blotters, Pictures and Picture Post Cards, at wholesale rates. Deposit of Rs. 100—0—0 Essential.

Apply to:—

The South Indian Advertising Agency,
13, Kilary Road,
BANGALORE CITY.

ಶುದ್ಧ ರೋಮದ ಧಾವಳಿಗಳು.

4 ಮೊಳ ಉದ್ದ 1¼ ಮೊಳ ಅಗಲ ರೂ. 1¼ರಿಂದ 2 ವರೆಗೆ, 5 ಮೊಳ ಉದ್ದ 1½ ಮೊಳ ಅಗಲ ರೂ. 1½ ರಿಂದ 5 ವರೆಗೆ, 6 ಮೊಳ ಉದ್ದ 1½ ಮೊಳ ಅಗಲ ರೂ. 2¼ರಿಂದ 6 ವರೆಗೆ, 8 ಮೊಳ ಉದ್ದ 2 ಮೊಳ ಅಗಲ ರೂ. 3½ರಿಂದ 10 ವರೆಗೆ, 12 ಮೊಳ ಉದ್ದ 2¼ ಮೊಳ ಅಗಲ ರೂ. 6ರಿಂದ 12 ವರೆಗೆ, 16 ಮೊಳ ಉದ್ದ 2¼ ಮೊಳ ಅಗಲ ರೂ. 9 ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಜರ್ಬರ್ ರೇಷ್ಮೆ ಮಡಿಗಳು, ಪಾಮರಿಗಳು, ಕಾಶಿ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, [illegible], [illegible], [illegible], [illegible] ಮೊದಲಾದ ಸಾಮಾನುಗಳು, [illegible] ಅಂಗುರಗಳು ಮತ್ತು ಇನ್ನೂ ಅನೇಕ ಸಾಮಾನುಗಳು ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುದು. ಕ್ಯಾಟಲಾಗ್ ಉಚಿತ.

ವಿಳಾಸ—
[illegible] ಯು. ನಾರಾಯಣಾಚಾರ್ಯ
ಮತ್ತು ಕಂಪೆನಿ, [illegible], ಕಾಶೀ ಕ್ಷೇತ್ರ.

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ.

450 ಪುಟಗಳು ಎಮ್. ಗಣಪತಿರಾವ್ ಐಗಳ್ ಇವರಿಂದ ರಚಿತವಾದದ್ದು. ಕ್ರಯ ರೂ 1-4-0

ಮಾರಾಟಕ್ಕೆ ಸಿದ್ಧವಾಗಿವೆ — ತುಳು ಪಾಡ್ದನಗಳು — ಮಾರಾಟಕ್ಕೆ ಸಿದ್ಧವಾಗಿವೆ.

ದೈಯೊಂಗುಳು, ಕಲ್ಲುರ್ಟಿ—ಕಲ್ಕುಡ, ಕಣಿಂದೂರು ದೈಯೊಂಗುಳು, ಮುಂಡತ್ತಾಯ, ಬೊಬ್ಬರ್ಯ.

ಸುಲಭ ದರಗಳು — ಶಾಲಾ ಪುಸ್ತಕಗಳು — ರೊಖಂ ಕೊಂಡುಕೊಳ್ಳುವವರಿಗೆ ಯೋಗ್ಯ ಡಿಸ್ಕೌಂಟ್.

ಅಚ್ಚಿನ ಕಥೆಗಳು:—ಮೂರು ಕರಡಿಗಳು; ಜೇನುಸತ್ತು ಕಾಗೆ ಬಡವಾಯಿತು; ಅರ್ಗಣೆ ಮುದ್ದೆ; ಇಲಿಗಳ ಥಕ್ಕ ಥೈ; ಅಂಗಳ ದುಗ್ಗು; ಹಿಡಿ ಯಾಕೆ ಒಡೆಗಳಿಲ್ಲ; ಗುಡುಗುಡು ಗುಮ್ಮಟ ದೇವರು; ಮೊಲನ ಕಾಲಕ್ಷೇಪ; ಒಡ್ಡನ ಓಟ; ಹೊಸ ಕನ್ನಡ ಪುಸ್ತಕ ಭಾಗ ೧; ಹೊಸ ಕನ್ನಡ ಪುಸ್ತಕ ಭಾಗ ೨; ಕನ್ನಡ ಪದ್ಯಗಳು; ಮಗ್ಗಿ ಪುಸ್ತಕ; ಅಜಿತಕುಮಾರ; ಪದ್ಯ ರತ್ನಾವಳಿ. ಎಕ್ಸರ್‌ಸೈಜ್ ಮತ್ತು ನೋಟು ಪುಸ್ತಕಗಳು, ಕಾಪಿ ಪುಸ್ತಕಗಳು, ಡ್ರಾಯಿಂಗ್ ಪುಸ್ತಕಗಳು

ಇತರ ಪುಸ್ತಕಗಳು:—ಸಂಕ್ಷೇಪಗೀತ, ಕೇತುಭಂಗ, ಹಿಂದೂ ವ್ರತವಿವೇಕ, ಚಂದ್ರಗುಪ್ತ ಚಕ್ರವರ್ತಿ, ಶ್ರೀ ಕೃಷ್ಣಸಂಧಾನ ಪದ್ಯಪಾಠಗಳು, ಹರಿಕಥಾ ಮೃತಸಾರ ಹರಿನಾಮಸಂಕೀರ್ತನೆ ಸುಧಾಮೃತ ಪದ್ಯಗಳು. ಬಂಕಿಪೆಟ್ಟಿಗೆ ತಯಾರಿಸುವ ವಿಧಾನ, ಸಾಬೂನು ತಯಾರಿಸುವ ವಿಧಾನ, ಸ್ವರಾಜ್ಯ ಭಕ್ತೋಲ್ಲಾಸ, ಚರಕಗೀತೆ, ಕೊಂಕಣಿ ಭಾಷೆಯಲ್ಲಿ ಚಂದ್ರಹಾಸ ನಾಟಕ, ಪ್ರಹ್ಲಾದ ಚರಿತ್ರೆ ನಾಟಕ, ಕನ್ನಡ ಮೃಚ್ಛಕಟಿಕ ನಾಟಕ, ಚಂದ್ರಹಾಸಾಭ್ಯುದಯ ನಾಟಕ, ಕೋವಿಲನ್ ಚರಿತ್ರೆ ನಾಟಕ, ಮಾದರಿ ಉಪನ್ಯಾಸ ಭಾಗ ೧, ೨, ಮತ್ತು ೩.

AMRUTANJAN BO
AMRUTANJAN
Best Indian Pain Balm
Amrutanjan D
BOMBAY

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಶತ್ರುವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು

❋ ಅಮೃತಾಂಜನ ❋

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಸುಗಂಧಿತವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 3 ಆಣೆ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ ಟೌನ್, ಮದ್ರಾಸು.

109 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರೆಯುವುದು.

— ರಥೋತ್ಸವ, ವಿವಾಹ ಉಪನಯನಗಳ ಸಮಯ —
ಸರ್ವರಿಗೂ ಉಡಿಗೆ ತೊಡಿಗೆಗಳು ಬೇಕಾಗುವ ಸಂದರ್ಭ.

ಯಾರು, ಯಾವುದನ್ನು, ಎಲ್ಲಿ ಪಡೆಯಬೇಕೆಂಬ ಶಂಕೆಯಿಂದ ವಿಳಂಬ ಮಾಡಬೇಡಿರಿ. ಉಡಿಗೆತೊಡಿಗೆಗಳನ್ನು ಕೊಳ್ಳುವಾಗ ನಿಮಗೆ ಬೇಕಾದ ಯಥಾರ್ಥ ಮಾಹಿತಿಯನ್ನು ಕಳೆದ ಹತ್ತುಹತ್ತು ವರುಷಗಳಿಂದ ಪಡೆದು ನಮ್ಮಲ್ಲಿಯ ವ್ಯಾಪಾರವು ಗಿರಾಕಿಗಳಿಗೆ ಸರ್ವ ದೃಷ್ಟಿಯಿಂದಲೂ ಲಾಭಕರವಾಗಿ ಪರಿಣಮಿಸುವಂತೆ ನಮ್ಮ ಜವಳಿ ಸಂಗ್ರಹವನ್ನು ಮಾಡಿರುತ್ತೇವೆ.

ಗುರ್ಪುರ್ ಕಾರ್ಕಾರ್ ಬ್ರದರ್ಸ್, ರಥಬೀದಿ, ಮಂಗಳೂರು.

ಹೆಡ್ ಆಫೀಸು:—ರಥಬೀದಿ—(ಮೊದಲು ಸುಜೀರ ನಾಗಪ್ಪನಾಯಕ್, ಎಂಡ್ ಕೊ, ಇದ್ದಲ್ಲಿ; ಅಜಿಜುದ್ದೀನ್ ರಸ್ತೆಗೆ ತಿರುಗುವಲ್ಲಿ) ಮಂಗಳೂರು.

ಬ್ರಾಂಚ್ ಆಫೀಸು:—ರಥಬೀದಿ—(ಹಳೇ ತಾಲೂಕು ಕಚೇರಿಯ ವಠಾರಕ್ಕೆ ಸಮೀಪವಿರುವ ಮಳಿಗೆ) ಮಂಗಳೂರು.

ಈ ದೇಶದ ಪ್ರಖ್ಯಾತಪಟ್ಟ ನೇಯುಗೆಯ ಕೇಂದ್ರಸ್ಥಳಗಳಾದ—ಬನಾರಸ್, ಪೂನಾ, ಅಹಮ್ಮದಾಬಾದ್, ಸೂರತ್, ಬೆಂಗಳೂರು, ಧರ್ಮಾವರಮ್, ಕಂಜೀವರಮ್, ಕೊಯಮುತ್ತೂರು, ಮಧುರೆ, ತಂಜಾವೂರು, ಕುಂಭಕೋಣ, ಆರ್ಣಿ, [illegible], ಹುಬ್ಬಳ್ಳಿ, ಇಳಕಲ್, ಗದಗ, ಮದ್ರಾಸು ಈ ಪ್ರಾಂತ್ಯಗಳಲ್ಲಿ ತಯ್ಯಾರಾದ

ಜರಿಸೀರೆಗಳು, ದುಪ್ಪಟಾ, ಜರಿಕಣ, ಪೇಟ, ರೇಷ್ಮೆ ಸೀರೆಗಳು, ಅರಳಿಪೇಟೆ ಸೀರೆಗಳು, ಜಾರ್ಜೆಟ್ ರೇಷ್ಮೆ ಸೀರೆಗಳು, ಜರಿ ಅಂಚಿನ ಸೀರೆಗಳು, ರೇಷ್ಮೆ ಮಡಿಗಳು, [illegible] ಸೀರೆಗಳು ಬನಿಯನ್, ಕರ್ನಾಟಕ ಮಿಲ್ಸ್‌ಗಳ ವ ಇತರ ಮಿಲ್ಸ್‌ಗಳ ಕೋಟಿಂಗ್ ಶರ್ಟಿಂಗ್.

ಕೈರಾಟೆಯಲ್ಲಿ ತಯಾರಿಸಿದ ನೂಲಿನಿಂದ ಮಾಡಿದ—

ಖದ್ದರ್ ಶರ್ಟಿಂಗ್, ಖದ್ದರ್ ಕೋಟಿಂಗ್, ಖದ್ದರ್ ಟೊಪ್ಪಿ, ಖದ್ದರ್ ಪೇಟ, ಅಂಗವಸ್ತ್ರ, ಇತ್ಯಾದಿ—
ಮುಸಲ್ಮಾನರಿಗೆ ಬೇಕಾದ ನಮೂನೆಯ ಲುಂಗಿ [illegible] ವಗೈರೆ—

ಎಲ್ಲ ಸಂಗ್ರಹವನ್ನೂ ನಮ್ಮ ಪ್ರೊಪ್ರೈಟರರಾದ [illegible] ಸಂಗ್ರಹಿಸಿ ತಂದಿರುತ್ತಾರೆ.

ಸೂಚನೆ—ನಗದು, [illegible] 50ಕ್ಕೆ [illegible] ರೂ. 50ರಿಂದ 250ವರೆಗೆ [illegible] ರೂ. 250 ರಿಂದ 1000ಕ್ಕೆ 12½% [illegible]

ಪ್ರತಿಯೊಂದು ಕುಟುಂಬಿಗಳ ಮನೆಗಳಲ್ಲಿ ಸೌಖ್ಯವನ್ನು ತೋರಿಸುವುದಕ್ಕೂ ಮತ್ತು ಅವರವರ ಉಪಯೋಗಾರ್ಥವನ್ನು ತಿಳುವಳಿಕೆ ಬಗ್ಗೆ ನಡಿಸುವುದಕ್ಕೂ ಒಂದು ಮರ್ಯಾದವಾದ ನಿಘಂಟು ಪುಸ್ತಕವು ಈ ನಮ್ಮ ಹಿಂದೂದೇಶದ ಸಮೂಹದಲ್ಲಿರುವುದು. ಅಂಥಾ ಪುಸ್ತಕವು ಯಾವದೆಂಬುದು

ನೀವುಗಳು ಬಲ್ಲಿರಾ?

(ಅದೇ)

“ಕಾಮಶಾಸ್ತ್ರವೆಂಬುವುದು.”

ತಾವುಗಳು ಇನ್ನೂ ಈ ಪುಸ್ತಕದಲ್ಲಿ ಬರೆದಿರುವ ಸಾರಾಂಶವನ್ನು ಓದಿಲ್ಲದಿದ್ದರೆ, ಒಡನೇ ಒಂದು ಪುಸ್ತಕವನ್ನು ಕಳುಹಿಸುವಂತೆ ಒಂದು ಪೋಸ್ಟುಕಾರ್ಡು ಬರಿಯಿರಿ.

ಪುಸ್ತಕವನ್ನು ಇನಾಮಾಗಿ ಕಳುಹಿಸುವೆವು.

ಮುಖ್ಯವಾದ ತಿಳುವಳಿಕೆ.

ತಾವುಗಳು ದೃಢಚಿತ್ತರಾಗಿಯೂ, ನಿಧಾನಸ್ಥರಾಗಿಯೂ, ಸೌಖ್ಯವಾಗಿಯೂ, ಕಷ್ಟವಿಲ್ಲದೇ ವಿಷಯಗಳನ್ನು ಭರಿಸುವ ಮನಸ್ಸನ್ನು ಹೊಂದಬೇಕಾದರೆ ನಮ್ಮ ಅಮೂಲ್ಯವಾದ “ಕಾಮಶಾಸ್ತ್ರವೆಂಬುವ ಪುಸ್ತಕದಲ್ಲಿ ಕಾಣಿಸಿರುವ ಆತಂಕನಿಗ್ರಹ ಮಾತ್ರೆಗಳನ್ನು ಸೇವಿಸಬೇಕು.”

ಒಂದು ರೂಪಾಯಿ ಖರ್ಚುಮಾಡಿದರೆ 32 ಮಾತ್ರೆಗಳುಳ್ಳ ಒಂದು ಡಬ್ಬಿಯನ್ನು ತರಿಸಿ ಪ್ರಯತ್ನಿಸಬಹುದು.

ವಿವರವಾಗಿ ಬರೆದಿರುವ ಒಂದು ಕ್ಯಾಟಲಾಗು ಕಳುಹಿಸುವಂತೆ ಈ ದಿನವೇ ಒಂದು ಪೋಸ್ಟುಕಾರ್ಡು ಬರಿಯಿರಿ.

ಆತಂಕನಿಗ್ರಹ ಔಷದಾಲಯ,
ನಂಬ್ರ 26, ಬ್ರಾಡ್ವೆ, ಮದರಾಸು.

ಹೊಸಗ್ರಂಥಗಳು!! ಬೇಗನೇ ತರಿಸಿಕೊಳ್ಳಿರಿ!!!

ಕೋಕಶಾಸ್ತ್ರವು.

ರಸಿಕ ವಾಚಕ ಮಹಾಶಯರೇ,

ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ, ಸಂಪಾದಿಸಿ, ಅದರಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನಷ್ಟೇ ಶೋಧ ಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿನಿ, ಸ್ತ್ರೀಯ ಇದರಂತೆ ಪುರುಷರಲ್ಲಿಯ ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ, ಜನನೇಂದ್ರಿಯಾದಿಗಳ ವರ್ಣನೆಯನ್ನೂ, ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ, ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ, ನಪುಂಸಕತ್ವ ವಂಧ್ಯಾದೋಷಗಳ ಚಿಕಿತ್ಸೆಯನ್ನೂ, ಸ್ತ್ರೀಯರ ಗೂಢ ರಹಸ್ಯವನ್ನೂ, ದಂಪತಿ ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನೂ, ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನು ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ.

ಇದರ ಬೆಲೆ ೧—೮—೦, ಟಪ್ಪಾಲು ಹಾಸಲು ೦—೪—೦.

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ

ಚರಿತ್ರೆ ಮತ್ತು ಕಥಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ಮೂರನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್. ಗಣಪತಿರಾವ್ ಐಗಳ್—ಗ್ರಂಥಕರ್ತರು.

ಮನೋರಂಜಕ ಚಿತ್ರಗಳೂ ಇವೆ.

ಇದರಲ್ಲಿ ಸಾವಿತ್ರಿ, ಶಕುಂತಳಾ, ಕೃಷ್ಣಾಕುಮಾರಿ, ಪದ್ಮಿನಿ, ಜೋನ್ ಒಫ್ ಆರ್ಕ, ಫ್ಲೊರೆನ್ಸನಾಯಿಟಿಂಗೇಲ ಪರಶುರಾಮ, ಭೂತಾಳಪಾಂಡ್ಯ, ಕಾರ್ಕಳ ಗೋಮಟೇಶ್ವರ ಮತ್ತು ಭೈರವರಾಜ, ಮೂಡಬಿದ್ರೆಯ ಚೌಟರು, ನಂದಾವರ ಬಂಗರು, ಕಾರ್ಕಳ ರಾಮಸಮುದ್ರ ಮತ್ತು ರಾಮನಾಥ ಒಡೆಯರ ಅಣೆಕಟ್ಟು, ಗುರುಪುರ ಜಂಗಮ ಮಠ, ಕಲ್ಯಾಣಪ್ಪನ ಕಾಟಕಾಯಿ, ಗುರುವಾಯನಕೆರೆ, ಜಮಾಲಾಬಾದು ಕೋಟೆ, ಸುಲ್ತಾನಬತ್ತೇರಿ, ಈದಗಾಪ್ರಾರ್ಥನಾಮಂದಿರ, ಸೇಂಟಮೇರಿ ದ್ವೀಪಗಳು ಮತ್ತು ದರಿಯಾಬಾದರಗಡ, ಕೊರಗರು, ಕೊಡಗರು, ತೋಡರು, ರಜಪೂತರು, ಕಂದಾರಿಗಳು ಘುರ್ಖಾ ಜನರು, ಅರಬಿಯರು. ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ಮೂರನೇ ದರ್ಜೆಯ ಮಕ್ಕಳಿಗೆ ಉಪಯುಕ್ತವಾಗಿದೆ. ಕ್ರಯ 6 ಆಣೆ.

ಪುಸ್ತಕ ದೊರಕುವ ವಿಳಾಸ:—

ಶಾರದಾ ಛಾಪಖಾನೆ,
ಮಂಗಳೂರು.

ಗಣಪತಿರಾವ್, ಐಗಳ್.
ಮಂಜೇಶ್ವರ.

ಡಾಕ್ಟರುಗಳು ಭಿನ್ನಾಭಿಪ್ರಾಯಪಡುವಾಗ್ಯೆ ತೀರ್ಮಾನಿಸುವದು ಯಾರು?

ಅಂಥಾ ಸಂದರ್ಭಗಳಲ್ಲಿ ಡೆಂಗ್ಯೂ ಮುಂತಾದ ಜ್ವರಗಳನ್ನು ನಿವಾರಿಸುವಂಥಾ “ಬಾಟ್ಲಿವಾಲರ ಏಗ್ಯೂಮಿಕ್ಸ್ಚರ್”ನ್ನು ಸರಾಗವಾಗಿಯೂ, ಮತ್ತು ಜ್ವರಗಳನ್ನು ಖಂಡಿತವಾಗಿ ನಿಲ್ಲಿಸುವಂಥಾದ್ದೂ, ಎಲ್ಲಾ ತರದ ತಲೆನೋವನ್ನು ಹೋಗಲಾಡಿಸುವಂಥಾದ್ದೂ ಆದ “ಬಾಟ್ಲಿವಾಲರ ಏಗ್ಯೂಪಿಲ್ಸ್” ಇದನ್ನು ಉಪಯೋಗಿಸಿರಿ.

ಐ. ಎಮ್. ಎಸ್. ಡಾಕ್ಟರುಗಳಿಂದ ಶಿಫಾರಸು ಮಾಡಲ್ಪಟ್ಟಿದ್ದು. ಇವರ ಉಪಯೋಗದಿಂದ ಹೃದಯದ ಮೇಲೆ ಯಾವದೊಂದೂ ಬಾಧಕವಿಲ್ಲ. ಅರ್ಧ ಶತಮಾನದಿಂದ ಹಿಂದೂಸ್ಥಾನ, ಬರ್ಮಾ, ಸಿಲೋನ್, ಆಫ್ರಿಕಾ ಇವುಗಳಲ್ಲಿ ಪ್ರಖ್ಯಾತಪಟ್ಟಿದ್ದಾಗಿರುತ್ತದೆ.

ಅನೇಕ ಹಿಂದೀ ಪ್ರದರ್ಶನಗಳಲ್ಲಿ ಬೆಳ್ಳಿ ಮತ್ತು ಬಂಗಾರದ ಪದಕಗಳನ್ನು ಪಡೆದಿರುತ್ತೆ. ಚಾಲ್ತಿ ನಾಣ್ಯದಂತಿದ್ದು ಮಾರ್ವಾರಿಗಳೂ ಕೂಡ ಅದರ ಮೇಲೆ ಹಣವನ್ನು ಮುಂಗಡವಾಗಿ ಕೊಡುತ್ತಾರೆ. ಬಡ ಮತ್ತು ಮಧ್ಯಮ ತರಗತಿಯ ಜನರಿಗೆ ವರಪ್ರದಾನವಾಗಿದ್ದು ಸಂಚಾರ, ಪ್ರಯಾಣ, ದೇಶಾಟನೆಗಳ ಸಮಯದಲ್ಲಿ ಹತ್ತಿರದಲ್ಲಿರಿಸಿಕೊಳ್ಳದಾಗಿರುತ್ತದೆ.

ಬಾಟ್ಲಿವಾಲರ ಬಾಲಾಮೃತ ಅಥವಾ ಟೋನಿಕ್ ಸಿರಪ್.

ಕೆಮ್ಮನ್ನು ಹೋಗಲಾಡಿಸಿ, ಎದೆನೋವನ್ನು ಶಾಂತಗೊಳಿಸಿ, ಜ್ವರವನ್ನು ಉಪಶಮಿಸಿ, ನಿದ್ರಾಭಂಗವನ್ನು ಕಡಿಮೆ ಮಾಡಿ ಧಾತುವರ್ಧನವನ್ನು ಮಾಡುವದರಲ್ಲಿ ಅತ್ಯುತ್ತಮವಾಗಿರುತ್ತದೆ. ಕಫವನ್ನು ಒಣಗಿಸಿ ವಾಯುಶಾಂತವಾಗುವಂತೆ ಮಾಡುವುದಲ್ಲದೆ ಅದೇ ಸಮಯದಲ್ಲಿ ಒಳ್ಳೇ ಜೀರ್ಣವನ್ನು ಉಂಟುಮಾಡುವುದು. ದರ ಮೊದಲಾದ ಮಾಹಿತಿಯನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ತಾರಿನಪತ್ತೆ:-CAWASHA[illegible], BOMBAY.

ಎಲ್ಲಾ ಕಡೆಗಳಲ್ಲಿ
ಏಜಂಟರು ಬೇಕಾಗಿದ್ದಾರೆ.

ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.,
ಪಿ. ವಾರ್ಲಿ, ಮುಂಬಯಿ, ನಂಬ್ರ 18.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ

ಇವರ

ಬಾಲಾಮೃತ.

ಈ ಔಷಧವನ್ನು ಸೇವನೆ ಮಾಡುವುದರಿಂದ ಮಕ್ಕಳು ರೋಗರಹಿತರೂ ಸಶಕ್ತರೂ ಆಗುವರು. ಇದು ಮಧುರವಾಗಿದೆ; ಮಕ್ಕಳು ಸಂತೋಷದಿಂದ ಸೇವಿಸುತ್ತಾರೆ.

ನಮ್ಮ ವಿಳಾಸ:—

ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.

ಏಜಂಟರು:— ದಿ. ಊಲನ್ ಮಾರ್ಟ್, ಮಂಗಳೂರು.

OUR RECENT IMPORT IN WRIST WATCHES

Have you used anyone of these Watches?

SEND YOUR ORDER NOW ALL GUARANTEED.

Fashionable wrist wrist Lady's size. Reliable movement Guaranteed.



No. 368.

Handy to wear and looks beautiful. Gives punctual time and with strong movement.

Nickel case Rs. 8—0

High-class Radium dial watch watch with Roman figures.



No. 367.

Can be seen in dark nights. Well fitted with best movement and strong to use. Used by one and all.

Silver case Rs. 9—0.

Radiolight wrist watch.



No. 372.

Fitted with the best mechanism and guaranteed to work and keep perfect time for a long time.

Nickel case Rs. 7—8
Electro rolled-gold „ 9—0

(N. B. In addition to the above, we have good number of varieties of fancy wrist watches, pocket watches. Please write for a descriptive catalogue, which will be sent free)

WHOLESALE IMPORTERS

PETER WATCH COY.,
POST BOX 27, MADRAS

ಶಾಲಿವಾಹನಶಕ ೧೮೫೩ನೆಯ ಪ್ರಜೋತ್ಪತ್ತಿ ಸಂವತ್ಸರದ? ಚೈತ್ರ ಶು| ೪ ಶನಿವಾರದಿಂದ ಕ್ರೋಧನ ಸಂ|ರದ ಚೈತ್ರ ಶು| ೧೦ ಶುಕ್ರವಾರದ ವರೆಗಿನ ಪಂಚಾಂಗ.

(ಗಣಿತರೀತ್ಯಾ ಮಾನ ಸುಗ್ಗಿ.)

ತಾರೀಕು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	ಸೂರ್ಯ ಉ.	ಸೂರ್ಯ ಅಸ್ತ.
28	ಶನಿ	೪	೩೬.೧೬	ಭರಣೀ	೬.೩೭	೧೫	6.32	6.41
29	ರವಿ	೫	೩೯.೩೦	ಕೃತ್ತಿಕಾ	೧೦.೪೬	೧೬	6.31	6 42
30	ಸೋಮ	೬	೪೩.[illegible]	ರೋಹಿಣೀ	೧೬. [illegible]	೧೭	6.31	6 42
31	ಮಂಗಳ	೭	೪೫.೪೪	ಮೃಗಶಿರ	೨೨.೧೪	೧೮	6.30	6.42
1	ಬುಧ	೮	೫೪. ೨	ಆರ್ದ್ರಾ	೨೮.೪೬	೧೯	6.39	6.42
2	ಗುರು	೯	೫೯. ೧	ಪುನರ್ವಸು	[illegible]	೨೦	6.29	6.42
3	ಶುಕ್ರ	೧೦	೬೦. ೦	ಪುಷ್ಯಾ	೪೧. ೧	೨೧	6.28	6 42

ಮಂಗಳೂರಿನ ವಾಯುಸ್ಥಿತಿ.

Date ತಾರೀಕು	Temperature. ಉಷ್ಣ (ಕಾವು) Maximum ಹೆಚ್ಚಿನದು	Temperature. ಉಷ್ಣ (ಕಾವು) Minimum ಕಡಿಮೆ	Rainfall. ಮಳೆ ದಿವಸದ ಮಳೆ	Rainfall. ಮಳೆ ಒಟ್ಟು ಮಳೆ.
20	93—2	78—8	—	—
21	90—2	78—2	—	—
22	92—3	78—3	—	—
23	91—6	76—6	—	—
24	93—2	77—0	—	—
25	92—5	78—1	—	—
26	93—7	79—3	—	142 42

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ. ಅ.	ವರೆಗೆ ರೂ. ಅ.
ಹೊಸ ಮುಸ್ಕಿ ...	7—2	8— 6
ಹೊಸ ಗುಡ್ಡ ...	7-4	7—10
ಹೊಸ ರಾಶಿ ...	6- 12	7—8
ಅಕ್ಕಲ್ ಬೆಳ್ತಿಗೆ ...	8--4	9 - 6
ಗುಡ್ಡ ಬೆಳ್ತಿಗೆ ...	72 12	8 . 2
ರಂಗೂನು ಬೆಳ್ತಿಗೆ ಗೋಣಿ ೧ ...	12- 8	13 - 0
ಗೋಧಿ ಗೋಣಿ ೧ಕ್ಕೆ ...	19- 0	21 - 8
ಹುರುಳಿಗೋಣಿ ೧ಕ್ಕೆ ...	9- 4	10 - 8
ಕಡಲೆಗೋಣಿ ೧ಕ್ಕೆ ...	13- 0	13 - 8
ತೊಗರಿಗೋಣಿ ೧ಕ್ಕೆ ...	12- 8	13 - 0
ತೊಗರಿಬೇಳೆ ಗೋಣಿ ೧ಕ್ಕೆ ...	14-0	17 - 2
ಉದ್ದುಗೋಣಿ ೧ಕ್ಕೆ ...	14- 0	14 8
ಹೆಸರುಗೋಣಿ ೧ಕ್ಕೆ ...	14 0	15 - 0
ಊರು ಬೆಲ್ಲ ಖಂಡಿ ೧ಕ್ಕೆ ...	-	85 - 0
ಉಪ್ಪು ಗೋಣಿ ೧ಕ್ಕೆ ...	4- 4	4 9
ಕೊಬ್ರಿ ಖಂಡಿ ೧ಕ್ಕೆ ...	105-0	110—0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	38- 0	—
ಎಳ್ಳಿಂಡಿ ಖಂಡಿ ೧ಕ್ಕೆ ...	40-0	45 - 0
ಕೊಬ್ರಿ ಎಣ್ಣೆ ಮುಡಿ ೧ಕ್ಕೆ ...	7—14	9 0
ಎಳ್ಳೆಣ್ಣೆ ಮುಡಿ ೧ಕ್ಕೆ ...	7- 0	11 0
[illegible] ಎಣ್ಣೆ ಬೆಸ್ತಿಗೆ ೧ಕ್ಕೆ ...	8-15-6	—
ಮೋರಿಸ್ ಸಕ್ಕರೆ ಮುಡಿ ೧ಕ್ಕೆ ...	4 - 14	5 0
ಊರ ಮೆಣಸಿನಕಾಯಿ ಮುಡಿ ೧ಕ್ಕೆ ...	7 - 8	8 12
ಸಾಸಿವೆ ಮುಡಿ ೧ಕ್ಕೆ ...	9- 0	—
ಕೊತ್ತಂಬರಿ ಮುಡಿ ೧ಕ್ಕೆ ...	3- 10	4 0
ಕಾಫಿ ಖಂಡಿ ೧ಕ್ಕೆ ...	382- 0	390--0
ಹೊಗೋಟು ಅಡಿಕೆ ಖಂಡಿ ೧ಕ್ಕೆ, ಹಳತು ...	240- 0	245--0
ಹೊಸ ಅಡಿಕೆ	195—0	210—0
ಕಾಳುಮೆಣಸು ಖಂಡಿ ೧ಕ್ಕೆ ...	155-0	160—0
[illegible] ಮಣ ೧ಕ್ಕೆ ...	80- 0	90—0
ಜೀರಿಗೆ ಮುಡಿ ೧ಕ್ಕೆ ...	4 - 4	4 - 10
[illegible] ಖಂಡಿ ೧ಕ್ಕೆ ...	45- 0	65 - 0
ತಾಮ್ರ ತಗಡು ಮಣ ೧ಕ್ಕೆ ...	17-12	26 - 0
ತಾಮ್ರ ಪಾತ್ರೆಗಳು ಮಣ ೧ಕ್ಕೆ ...	26- 0	—
ಚೀನಿ ಬೆಳ್ಳಿ [illegible] ೧ಕ್ಕೆ ...	22 - 0	
ಹಿತ್ತಾಳೆ ತಗಡು ಮಣ ೧ಕ್ಕೆ ...	18- 8	
ಸತುವು	14-3-6	

The Canara Public Conveyance Co., Ltd, Mangalore.
(ESTABLISHED 1914).

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು
- ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು
- ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
- ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
- ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.
- ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ—ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd., Mangalore. S. K.

ಉಚಿತ! ಬಿಟ್ಟಿ!! ಪುಗಸಟ್ಟೆ!!!

ವೈದ್ಯವಿದ್ಯ

PROPRIETOR RAJVAIDYA NAR[illegible]

NO PRICE NO POSTAGE.

ಎಂಬ ಈ ಪುಸ್ತಕದಲ್ಲಿ ಆಯುರ್ವೇದ ಶಾಸ್ತ್ರದಲ್ಲಿ ಸ್ತ್ರೀಪುರುಷರು ಆರೋಗ್ಯದೃಢಕಾಯರಾಗಿ ಆರೋಗ್ಯದಿಂದ ಕೂಡಿದ ಸಂತಾನಗಳನ್ನು ಪಡೆದು ಸತಿಪತಿಯರು ಅನ್ಯೋನ್ಯವಾಗಿ ಅನುರಾಗವುಳ್ಳವರಾಗಿ ಸುಖದಿಂದಲೂ ಸಂತೋಷದಿಂದಲೂ ಸಂಸಾರಯಾತ್ರೆಯನ್ನು ಮಾಡಲು ಅತ್ಯಂತ ಉಪಯುಕ್ತವಾದ ವಿಷಯಗಳು ಅಲ್ಲಲ್ಲಿ ಹೇಳಲ್ಪಟ್ಟಿರುವುದನ್ನು ಒಂದಾಗಿ ಕ್ರೋಡೀಕರಿಸಿ ಅಜ್ಞಾನದಿಂದಲೂ ಸಂಕಷ್ಟದಿಂದಲೂ ನರಳುತ್ತಿರುವ ಸಂಸಾರಿಗಳನ್ನುದ್ಧಾರಮಾಡುವ ಸಲುವಾಗಿ ಈ ಪುಸ್ತಕವನ್ನು ಕ್ರಯವೂ ಅಂಚೇ ಹಾಸಲೂ ಇಲ್ಲದೆ ಬೇಡಿದವರಿಗೆ ಸರ್ವತ್ರ ಉಚಿತವಾಗಿ ಕಳುಹಿಸುತ್ತೇವೆ. ಹೆಚ್ಚು ಮಾಹಿತಿಗೆ ಪತ್ರ ಬರೆಯಿರಿ.

ರಾಜವೈದ್ಯ ನಾರಾಯಣಜಿ ಕೇಶವಜಿ,
49, ಬಂದರ್ ಸ್ಟ್ರೀಟ್, ಜಿ. ಟಿ. ಮದ್ರಾಸ್

ಕನ್ನಡಿಗರೆ! **ವಸಂತ.** ಓದ್ಬೇಕೆಯರಿ!

ಈಗಾಗಲೇ ಎರಡನೇ ಸಂಪುಟವು ಆರಂಭಿಸಲಿದೆ.

ಇತಿಹಾಸನಿಧಿ ಎಂದರೆ	ವಸಂತ
ಸಮಾಜಸುಧಾರಕನೆಂದರೆ	ವಸಂತ
ಕೈಗಾರಿಕೆಯ ಸಾಮ್ರಾಜ್ಯವೆಂದರೆ	ವಸಂತ
ಕರ್ನಾಟಕ ಭಾಷಾಸೇವಕನೆಂದರೆ	ವಸಂತ
ದೇಶಬಾಂಧವ ಬಂಧುವೆಂದರೆ	ವಸಂತ
ಕಾದಂಬರಿಗಳ ಭಂಡಾರವೆಂದರೆ	ವಸಂತ
ಚಿತ್ರಾಕರ್ಷ ಚಿತ್ರಶಾಲೆಯೆಂದರೆ	ವಸಂತ
ದೇಶಭಕ್ತನೆಂದರೆ	ವಸಂತ

ಇಂತಹ ವಸಂತನು ಯಾರಿಗೆ ಬೇಕು,
ಯಾರಿಗೆ ಬೇಡ?

48 (ಕ್ರೌನ್ ⅛ ಪಟ ಸ್ಯಾಜಿನ) ಪುಟಗಳನ್ನು ಒಳಗೊಂಡ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3—4—0 ಮಾತ್ರ.

ವ್ಯವಸ್ಥಾಪಕ,
ವಸಂತ ಕಾರ್ಯಾಲಯ,
[illegible], ದಕ್ಷಿಣ ಕನ್ನಡ.

JUST ARRIVED

Continental Belts.

OF VARIOUS SIZES

Price Rs. 1—10—0 each

Mangalore Trading Association,
Car Street, MANGALORE

FOR SALE.

One new **Harley Davidson sports Model** Motor Cycle used only for 250 miles in perfect running order complete with equipments. Price Rs 1000 or near offer.

For further particulars,

Apply to—
The Mangalore Trading Association,
Car Street Mangalore

ಬಂದು ನೋಡಿರಿ! ತಿಂದು ನೋಡಿರಿ!
ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ
ಪದಕವನ್ನು
ಬಹುಮಾನವಾಗಿ ಪಡೆದಿರುವ
ಎಸ್. ಪಿ. ಆಚಾರ್ಯ
ಇವರಿಂದ ತಯಾರಿಸಲ್ಪಟ್ಟ
ಉಪ್ಪಿನಕಾಯಿಗಳನ್ನು
ಬಂದು ನೋಡಿರಿ! ತಿಂದು ನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ, ತುಂತಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನ್ನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ
ಬಂದು ನೋಡಿರಿ! ತಿಂದು ನೋಡಿರಿ!

ಇಂಡಿಯನ್ ಸ್ವೀಟ್‌ಮೀಟ್ ಮಾರ್ಟ್.

ಮನೋಲ್ಲಾಸಿನಿ ಕಾಫಿ ಕ್ಲಬ್.
ಮಾರ್ಕೇಟು ರೋಡು,
ಮಂಗಳೂರು.
ಅಥವಾ
'ಸದಾನಂದ ಕಾಫಿ ಕ್ಲಬ್'
ರಥಬೀದಿ, ಮಂಗಳೂರು.

The Canara Banking Corporation, Udipi,
LIMITED.,

Head Office: **Udipi,** *Branch:* **Coondapoor.**

Applications are invited for the post of an Agent at the Canara Banking Corporation, Udipi, Ltd., Coondapoor Branch. Pay Rupees 50-5-75. Security to be deposited Rs. 2,000.

Those having practical Banking experience and diplomas in Banking and accounts need apply, with testimonials and diplomas held to the undersigned by the 15th April 1925.

N. Ananda Rau,
Manager.

ಬಿಲ್ಲವರ ಹಿತವರ್ಧಕ ಸಂಘ ಮುಂಬಯಿ.

ಮೇಲಿನ ಸಂಘದ ವಾರ್ಷಿಕ ಮಹಾ ಸಭೆಯು ಕಳೆದ ತಿಂಗಳ ತಾ. ೧೫ಕ್ಕೆ ಶೇರ್ ಬಜಾರಿನ ಶೇರ್ ದಲಾಲಿ ಮಂದಿರದಲ್ಲಿ ಶ್ರೀಯುತ ಬಿ. ವಾಮನರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಅಂದಿನ ಸಭೆಗೆ ಹೆಚ್ಚು ಕಡಮೆ ನೂರು ಜನ ಜಾತಿ ಮತ್ತು ಪರಜಾತಿ ಗೃಹಸ್ಥರುಗಳು ನೆರೆದಿದ್ದರು. ಕಾರ್ಯಾರಂಭದಲ್ಲಿ ಭಗವತ್ಪ್ರಾರ್ಥನೆಯಾದ ನಂತರ ಕಾರ್ಯದರ್ಶಿಯವರು ಚಿತ್ತೈಸಿದ್ದ ಸಭಿಕರಿಗೆ ಸಂಘದ ಕಡೆಯಿಂದ ಅಭಿವಂದನೆಯನ್ನು ಮಾಡಿ ಕಾರ್ಯಾರಂಭಕ್ಕೆ ಅಪ್ಪಣೆಯನ್ನು ಕೇಳಿದರು. ಶ್ರೀಯುತ ಬಿ. ಆರ್. ಕರ್ಕೇರರು, ಶ್ರೀಯುತ ಬಿ. ವಾಮನರಾಯರನ್ನು ಅಧ್ಯಕ್ಷರನ್ನಾಗಿ ಆರಿಸಿದುದನ್ನು ಶ್ರೀಯುತ ಎ. ಪಿ. ಕಿರೋಡಿಯನರು ಅನುಮೋದಿಸಿದರು. ಕಾರ್ಯದರ್ಶಿಯವರು ಸಂಘವು ಸ್ಥಾಪಿತವಾದಂದಿನಿಂದ ಮಾಡಿದ ಕೆಲಸಗಳನ್ನು ವಿವರಿಸಿ ಅದರ ಒಂದು ವರ್ಷದ ವರದಿಯನ್ನು ಓದಿ ತಿಳಿಸಿದರು. ಸಂಘಕ್ಕೆ ಇಷ್ಟರ ತನಕ ರೂ. ೭೭೪-೧-೦ ವಂತಿಗೆ ಮತ್ತು ಸಹಾಯ ಧನಗಳ ಮೂಲಕ ಸಿಕ್ಕಿಯದೆಂದೂ ಆ ಪೈಕಿ ರೂ. ೪೩೬-೧೪-೦ನ್ನು ಯೋಗ್ಯ ರೀತಿಯಿಂದ ವಿನಿಯೋಗಿಸಿದುದನ್ನು ವಿವರಿಸಿ ತಿಳಿಸಿದರು. ವರದಿ ಓದಿದ ನಂತರ ಆ ಸಭೆಗೆ ಚಿತ್ತೈಸಿದ್ದ ಮಹನೀಯರುಗಳ ಪೈಕಿ ಶ್ರೀಯುತರುಗಳಾದ ಚಿಲಿಂಬಿ ಅಪ್ಪಾಜಿ ಸುವರ್ಣ, ಎ. ಪಿ. ಕಿರೋಡಿಯನ್, ಎಮ್. ರಾಮಚಂದ್ರ ಮತ್ತು ಮೊಗವೀರ ವ್ಯವಸ್ಥಾಪಕ ಮಂಡಳಿಯ ಪ್ರತಿನಿಧಿಗಳಲ್ಲಿ ಅವರ ಕಾರ್ಯದರ್ಶಿ ಶ್ರೀಯುತ ಬಿ. ಕೆ. ಬಂಗೇರರೂ ಸಂಘದ ಅಭಿವೃದ್ಧಿಯ ಕುರಿತು ಅದು ಇನ್ನು ಮಾಡತಕ್ಕುದಾದ ಕೆಲಸಗಳನ್ನೂ ಚಲೋ ರೀತಿಯಿಂದ ವಿವರಿಸಿ ಶ್ಲಾಘನೀಯ ಭಾಷಣಗಳನ್ನಿತ್ತಿರುವರು. ತದನಂತರ ಅಧ್ಯಕ್ಷರು ಸುರಸವಾದ ಈ ಕೆಳಗಿನ ಭಾಷಣವನ್ನು ಮಾಡಿದರು.

"ಹಿತವರ್ಧಕ"ವೆಂಬ ಹೆಸರುಳ್ಳ ಮುಂಬಯಿ ಬಿಲ್ಲವರಿಂದ ಸ್ಥಾಪಿತವಾದ ಈ ಸಂಘವು ಇಂದಿಗೆ ಒಂದು ವರ್ಷವನ್ನು ದಾಟಿತು. ಈ ಸಂಘವನ್ನು ಕೆಲವರು ದೂರದೃಷ್ಟಿಯಿಂದ ನೋಡಿ ಇದು ತಮ್ಮ ವಿರೋಧವಾಗಿ ಸ್ಥಾಪಿಸಿದ ಸಂಘವೆಂದು ಹೇಳುತ್ತಾರೆ. ಹ್ಯಾಗೂ ಸಂಘವು ಒಂದು ವರ್ಷವನ್ನು ನಿಷ್ಕಂಟಕದಿಂದ ದಾಟಿದುದಕ್ಕೆ ನಾನು ಸಂತೋಷಿಸುತ್ತೇನೆ. ಆದರೆ ಈ ಸಂಘವು ಇನ್ನೂ ಬಾಲ್ಯಾವಸ್ಥೆಯಲ್ಲಿದೆ. ಇದು ಇಷ್ಟು ಬೇಗನೆ ಹೆಚ್ಚು ಕೆಲಸಗಳನ್ನು ಮಾಡಲಿಕ್ಕಾಗಲಿಲ್ಲವೆಂದು ಇದರಲ್ಲಿರುವ ಮೆಂಬರರಾದ ನೀವು ವಿಷಾದಿಸಬಾರದು. ಎಷ್ಟೇ ಕಷ್ಟ ಬಂದರೂ ನಿಶ್ಚಿತ ಕಾರ್ಯಗಳನ್ನು ಬಿಡದೆ ಉದ್ದೇಶಗಳನ್ನು ಆದಷ್ಟು ಬೇಗನೇ ನೆರವೇರಿಸಲಿಕ್ಕೆ ಪ್ರಯತ್ನಿಸಿರಿ. ಮಾತ್ರ, ಕೆಲಸಗಳನ್ನು ಬೇಗನೇ ಸಾಧಿಸಬೇಕೆಂದು ಅವುಗಳನ್ನು ಒತ್ತಾಯದಿಂದ ಮಾಡಿದರೆ ಹುಲ್ಲು ಕೂಡಾ ಹುಟ್ಟಿದ ಮಗುವು ಬೇಗನೆ ಬಲಶಾಲಿಯಾಗಿ ನಡೆಯಬೇಕೆಂದು ಅದಕ್ಕೆ ಬಲಾತ್ಕಾರದಿಂದ ಆಹಾರವನ್ನು ಕೊಟ್ಟಂತಾಗುವುದು. ಈ ಸಂಘಕ್ಕೆ ಮುಖ್ಯವಾಗಿ ಧನ ಮತ್ತು ಜನ ಬಲಗಳು ಬೇಕು. ಇವು ಇಲ್ಲದೆ ಯಾವ ಕಾರ್ಯಗಳೂ ನಡೆಯಲಾರವು. ಸಂಘಕ್ಕೆ ಸೇರಿದ ೨೫೦ ಜನರ ಪೈಕಿ ೧೫೦ ಜನರು ಮಾತ್ರ ವಂತಿಗೆ ಕೊಡುತ್ತಾರೆಂದು ವರದಿಯಿಂದ ಗೊತ್ತಾಯಿತು. ಆದರೆ ಆ ೧೫೦ ಜನರೂ ಇದರಲ್ಲಿ ಉತ್ತೇಜನ ತಕ್ಕೊಂಡು ಕೆಲಸಮಾಡುವ ಮೆಂಬರರ ಬಲಾತ್ಕಾರಕ್ಕೆ ಕೊಡುವುದಲ್ಲದೆ ಸಂಘದ ಮೇಲಿದ್ದ ಸಂಪೂರ್ಣ ಪ್ರೀತಿಯಿಂದ ಕೊಡುವುದಿಲ್ಲ. ಇಂಥಾ ೨೫೦ ಜನರಿರುವದಕ್ಕಿಂತಲೂ ಸರಿಯಾಗಿ ವಂತಿಗೆ ಕೊಟ್ಟು ಅದರ ಅಭ್ಯುದಯಕ್ಕಾಗಿ ಪ್ರಯತ್ನಿಸುವ ೫೦ ಜನರು ಇದ್ದರೆ ಸಾಕು. – (ಕರತಾಡನ) ಹಡಗವು ಅದರ ಚುಕ್ಕಾಣಿಯು ತಿರುಗಿದಂತೆ ಹೇಗೆ ಓಡುತ್ತದೋ ತದ್ರೀತಿ ಸಂಘವನ್ನು ನಡಿಸುವರೆ ಕೆಲವು ಮೆಂಬರರ ಒಂದು ಕಮಿಟಿಯು ಬೇಕು. ಅದರಲ್ಲಿದ್ದ ಪ್ರತಿ ಒಬ್ಬೊಬ್ಬನಿಗೂ ಒಂದೊಂದು ಕೆಲಸವನ್ನು ಕೊಡಬೇಕು. ತಂತಮ್ಮ ಕೆಲಸಗಳನ್ನೂ ಪ್ರತಿ ಒಬ್ಬನೂ ಅತಿ ಶ್ರದ್ಧೆಯಿಂದ ಮಾಡಬೇಕು. ಹಾಗೆ ಮಾಡುವರೆ ತಪ್ಪಿದಾತನು ಸಂಘದವರು ಕೇಳಿದ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳನ್ನು ಕೊಡುವರೆ ಸಿದ್ಧನಿರಬೇಕು. ತಕ್ಕ ವ್ಯವಸ್ಥೆಮಾಡಿ ಅದನ್ನು ಮುಟ್ಟಿನ ಭದ್ರತೆಯಲ್ಲಿಡುವರೆ ಪ್ರಯತ್ನಿಸಿ, ಅಂದರೆ ಜಾತಿಯ ಸರ್ವ ಹಿತವಾದ ಕಾರ್ಯಗಳನ್ನು ಸಾಧಿಸುವರೆ ಶಕ್ಯವಾಗುವದು. ಇದಕ್ಕಿಂತ ಮುಂಚೆ ತಲೆದೋರಿ ಮಾಯವಾದ ಬೇರೆ ಸಂಘಗಳ ಗತಿಯಾದರೂ ಇದಕ್ಕೆ ಬರಬಾರದಾಗಿ ನನ್ನ ಅಪೇಕ್ಷೆ. ಅದಕ್ಕೆ ಕೊಟ್ಟ "ಹಿತವರ್ಧಕ"ವೆಂಬ ನಾಮವು ಇದು ಮಾಡುವ ಕೆಲಸಗಳಿಗೆ ಸರಿಯಾದ ನಾಮವು. ಇದನ್ನು ಕೊಡುವುದಕ್ಕೆ ಮುಂಚೆ ಒಳ್ಳೇ ಆಲೋಚಿಸಿಯೇ ಕೊಟ್ಟಿರಬೇಕು". ಎಂಬಿತ್ಯಾದಿ ಸವಿಸ್ತಾರವಾಗಿ ಸುಮಾರು ಮುಕ್ಕಾಲು ಗಂಟೆ ವಿವರಿಸಿ ಸಭಿಕರ ಕರತಾಡನದೊಡನೆ ತಮ್ಮ ಭಾಷಣವನ್ನು ಅಂತ್ಯಗೊಳಿಸಿದರು.

ಸಂಘದ ಅಭಿವೃದ್ಧಿಯನ್ನು ಬಯಸಿ ಬಂದ ಮಂಗಳೂರಿನ ಶ್ರೀ ಗೋಕರ್ಣನಾಥ ವೆಂಕಟೇಶ ಸೇವಾ ಸಮಿತಿ ಮತ್ತು ಶ್ರೀಯುತ ಕೋಡಿಯಾಲ ಬೈಲು ಎಮ್. ರಾಘುನವರ ತಂತಿಗಳನ್ನು ಓದಿ ತಿಳಿಸಿದ್ದಲ್ಲದೆ, ಮೊಗವೀರ ವ್ಯವಸ್ಥಾಪಕ ಮಂಡಳಿಯಿಂದ ಬಂದ ಕಾಗದವನ್ನು, ಅದರೊಂದಿಗಿದ್ದ ರೂ. ೭-೦-೦ನ್ನು ಸ್ವೀಕರಿಸಲಾಯಿತು. ಶ್ರೀಯುತ ಎಮ್. ರಾಮದಾಸರಿಂದ ಬಂದ ಕಾಗದವನ್ನು ಓದಿ ಅವರು ಸಂಘಕ್ಕೆ ಉಚಿತವಾಗಿ ಕೊಟ್ಟ ಶ್ರೀ ಗುರು ನಾರಾಯಣ ಸ್ವಾಮಿ ಪರಮ ಹಂಸರ ಭಾವ ಚಿತ್ರವನ್ನು ಅಂಗೀಕರಿಸಿತು. ಅಂದಿನ ಸಭೆಗೆ ಚಿತ್ತೈಸಿದ್ದ ಶ್ರೀಯುತ ಸುರತಕಲ್ಲು ಸೋಮಪ್ಪ ಕೋಟ್ಯಂಕಾರರು ರೂ. ೫-೦-೦ನ್ನು ಸಹಾಯ ಮಾಡಿರುತ್ತಾರೆ.

ಕಾರ್ಯದರ್ಶಿಯವರು ಒಂದು ಸಣ್ಣ ಭಾಷಣಮಾಡಿ ಕೂಡಿದ ಸಭೆಯಲ್ಲಿ ಮೆಂಬರರಾಗದೆ ಇದ್ದ ಜಾತಿ ಗೃಹಸ್ಥರ್‍ಯಾರಾದರೂ ಇದ್ದರೆ ಮೆಂಬರರಾಗಬೇಕೆಂದು ಕೇಳಿಕೊಂಡಲ್ಲಿ ೬ ಜನರು ಮೆಂಬರರಾಗಿ ಸೇರಿದರು.

ಕಾರ್ಯಗಳೆಲ್ಲಾ ಸಾಂಗವಾಗಿ ನೆರವೇರಿದ ನಂತರ ಶ್ರೀಯುತ ಎ. ಪಿ. ಕಿರೋಡಿಯನರು ಅಧ್ಯಕ್ಷರಿಗೂ ಶ್ರೀಯುತ ಹಾರ್ಮೋನಿಯಮ್ ಬಾಬುರಾಯರಿಗೂ, ಮೊಗವೀರ ವ್ಯವಸ್ಥಾಪಕ ಮಂಡಳಿಯ ಪ್ರತಿನಿಧಿಗಳಿಗೂ ಇತರ ಜಾತಿ ಮತ್ತು ಪರಜಾತಿ ಗೃಹಸ್ಥರುಗಳಿಗೂ ಸಂಘದ ಕಡೆಯಿಂದ ಧನ್ಯವಾದವನ್ನು ಕೊಟ್ಟನಂತರ ಪುಷ್ಪ ತಾಂಬೂಲಾದಿಗಳಿಂದ ಸತ್ಕರಿಸಿ ಅಂತ್ಯಗೊಳಿಸಿತು.

ಇತಿ,

ಮುಂಬಯಿ, 18-3-'25.
ಬಿಲ್ಲವರ ಹಿತವರ್ಧಕ ಸಂಘದ ಪರವಾಗಿ,
ಬಿ. ಪಿ. ಕೋಳೂರ್ ಕಾರ್.
ಮಾನಾರ್ಥ ಕಾರ್ಯದರ್ಶಿ.

ಜಪಾನ್ ದೇಶದ ಗ್ರಾಮಾಂತರಗಳು.

ಜಪಾನ ದೇಶದ ಉನ್ನತ ಸ್ಥಿತಿಗೆ ಅಸ್ತಿವಾರ ಸಮಾನವಾದ ಗ್ರಾಮಗಳ ಸ್ಥಿತಿಗಳನ್ನು ವಿದೇಶಿಯರು ಸಾಮಾನ್ಯರಾಗಿ ನೋಡುವುದಿಲ್ಲ. ಪರದೇಶಸ್ಥರಿಗೆ ದೊಡ್ಡ ದೊಡ್ಡ ಊರುಗಳನ್ನು ನೋಡಿಕೊಂಡು ಬರಲು ಅನುಕೂಲವಿರುವಷ್ಟು ಗ್ರಾಮಾಂತರಗಳನ್ನು ನೋಡಲು ಆಗುವದಿಲ್ಲ. ಜಪಾನ್ ದೇಶದ ಜನಾಂಗದ ಕಟ್ಟುಪಾಡನ್ನು, ಸಾಮರ್ಥ್ಯವನ್ನು, ಶಿಲ್ಪಸ್ವಭಾವವನ್ನೂ ತಿಳಿಯಬೇಕಾದರೆ ಅಲ್ಲಿಯ ಹಳ್ಳಿಗಳ ಸ್ಥಿತಿಯನ್ನು ಸ್ವತಹ ನೋಡಿ ತಿಳಿಯಬೇಕು.

ಭೂ ವ್ಯವಸಾಯವನ್ನು ನೋಡಿದರೆ ಎಂಥವರಿಗೂ ಆಶ್ಚರ್ಯವಾಗುವದು. ಅಲ್ಲಿ ಸ್ವಲ್ಪವೂ ಕಳೆಗಳಿಲ್ಲ. ಬಿತ್ತುವ ಬೀಜ, ವ್ಯವಸಾಯ ಕ್ರಮ, ಶಾಸ್ತ್ರೀಯವಾದ ಸಹಾಯ, ಇವೆಲ್ಲಾ ಅತ್ಯುತ್ತಮವಾದವುಗಳು. ವ್ಯವಸಾಯವನ್ನೆ ಅವುಗಳ ಮೂಲಕ ಗ್ರಾಮಾಭಿವೃದ್ಧಿಯನ್ನು ಮುಂದರಿಸುವ ಕೆಲಸಗಳು ಎಡೆಬಿಡದೆ ನಡೆಯುವವು. ಸರಕಾರಿ, ಸಾಹುಕಾರಿ ಎಂಬ ವ್ಯತ್ಯಾಸವಿಲ್ಲದೆ, ಭೂ ವ್ಯವಸಾಯದಲ್ಲಿ ನಿಪುಣರಾದವರೆಲ್ಲರೂ ಆಸಕ್ತಿಯಿಂದ ಕೆಲಸಮಾಡುವರು. ಪ್ರತಿ ಗ್ರಾಮದಲ್ಲಿಯೂ ವ್ಯವಸಾಯ ಮತ್ತು ಪರಸ್ಪರ ಸಹಾಯಕ ಸಂಘಗಳು ಇದ್ದೇ ಇರುವವು. ತಾಲೂಕುಗಳಲ್ಲಿ ವ್ಯವಸಾಯ ಪಾಠಶಾಲೆಗಳೂ, ಮಾದರಿಕ್ಷೇತ್ರಗಳೂ ಇರುವವು. ಇನ್ನು ದೊಡ್ಡ ಸ್ಥಳಗಳಲ್ಲಿ ಪ್ರೌಢವ್ಯವಸಾಯ ಸ್ಕೂಲುಗಳೂ ನೇಶನಲ್ ವ್ಯವಸಾಯ ಕಾಲೇಜುಗಳೂ ಇರುವವು. ಗ್ರಾಮಸ್ಥರಿಗೆ ಅಗತ್ಯವಾದ ವ್ಯವಸಾಯವು ಅತೀ ಶ್ರೇಷ್ಠ ಸ್ಥಿತಿಯಲ್ಲಿದ್ದು ಸಕಲರಿಂದಲೂ ಮನ್ನಿಸತಕ್ಕದ್ದಾಗಿದೆ. ಭೂ ವ್ಯವಸಾಯವನ್ನು ರೈತರ ಮಕ್ಕಳಿಗೆ ಬೋಧಿಸುವ [illegible] ಸಂಬಳದ ಅಧಿಕಾರಿಗಳಿರುವರು. ಇದರಿಂದ ಕಸಬುವಾರಿ ವಿದ್ಯೆ ಗ್ರಾಮಸ್ಥರಿಗೆ ಸುಲಭವಾಗಿ ದೊರೆಯುವದು. ವ್ಯವಸಾಯ ಬೋಧನೆಯ ಜೊತೆಗೆ ಅಂಗಸಾಧನೆ, ಮಿತವ್ಯಯ, ನೀತಿಮಾರ್ಗ, ದಿನಚರಿಯ ನಡವಳಿಕೆ ಇವುಗಳೆಲ್ಲವನ್ನು ಕಲಿಸುವರು. ಪ್ರತಿ ಹಳ್ಳಿಯಲ್ಲಿಯೂ ಮುಖ್ಯವಾದ ಕಟ್ಟಡ ಹಳ್ಳಿಯ ವ್ಯವಸಾಯ ಪಾಠಶಾಲೆ. ಹೆಚ್ಚಿಗೆ ಸರಕಾರಿ ಶಿಬಂದಿಯೇ ಇದಕ್ಕೆ ಸೇರಿದುದಾಗಿರುತ್ತದೆ.

ಪ್ರತಿ ಗ್ರಾಮದಲ್ಲಿಯೂ ದೃಢಾಂಗಿಗಳಾದ ಜನರು ಸಂಘವಾಗಿ ಸೇರಿ, ತಮ್ಮ ತಮ್ಮ ಗ್ರಾಮಗಳಿಗೆ ಬೇಕಾದ ರಸ್ತೆಗಳನ್ನು ಮಾಡಿ ಅವುಗಳಲ್ಲಿ ಸಾಲುಮರಗಳನ್ನು ನಡುವರು. ಬಂಜರು ಭೂಮಿಗಳನ್ನು ಒಳ್ಳೇ ರೀತಿಯಲ್ಲಿ ಸಾಗುವಳಿ ಮಾಡುವರು. ಜನರಿಗೆ ನೀತಿಬೋಧಕವಾದ ಉಪನ್ಯಾಸಗಳನ್ನು ಮಾಡಿಸುವರು. ಸಂಜೆಯ ವೇಳೆಗಳಲ್ಲಿ ಎಲ್ಲರೂ ಕಲಿತು ಹುಲ್ಲಿನ ಹಗ್ಗವನ್ನಾಗಲೀ ಚಾಪೆಗಳನ್ನಾಗಲೀ ತಯಾರಿಸಿ ಹಣವನ್ನು ಸಂಪಾದಿಸುವರು.

ದೇಶದ ಒಂದೊಂದು ಕಡೆ, ಪ್ರತಿ ವರ್ಷವೂ ಗ್ರಾಮಾಭಿವೃದ್ಧಿಯನ್ನು ಕುರಿತ ಪ್ರದರ್ಶನಗಳು ನಡೆಯುವವು. ವ್ಯವಸಾಯವನ್ನು ಕುರಿತ ಮಾದರೀ ಹೊಲಗಳೂ ಸಂಘಗಳ ಕಾರ್ಯಕ್ರಮಗಳೂ ಬೋಧನಾರೀತಿಯೂ, ಹೊಸ ಹೊಸ ಪುಸ್ತಕಗಳೂ ಈ ಪ್ರದರ್ಶನದಲ್ಲಿ ಕಾರ್ಯರೂಪದಲ್ಲಿ ತೋರಿಸಲ್ಪಡುವವು. ವ್ಯವಸಾಯ ಪರೀಕ್ಷೆ ಕಾರ್ಯಗಳು, ರೈತನ ದ್ರವ್ಯಾನುಕೂಲತೆಗೆ ತಕ್ಕ ಹಾಗೆ ನಡೆಸಲ್ಪಟ್ಟು ಲಾಭಕರವಾಗಿರುವಂತೆ ತೋರಿಸಲ್ಪಡುವವು.

ಜಪಾನ ರೈತರು ಬುದ್ಧಿವಂತರಾದರೂ ಇತರ ದೇಶದವರಲ್ಲಿರಬಹುದಾದ ಗುಣಗಳನ್ನು ಗ್ರಹಿಸುವುದರಲ್ಲಿ ತುಂಬಾ ಆಸಕ್ತರು. ಇದಕ್ಕಾಗಿ ಯೌವನಸ್ಥರು ವರ್ಷಂಪ್ರತಿ ಪರದೇಶಗಳಿಗೆ ಹೋಗುತ್ತಿರುವರು. ಪರದೇಶಗಳಿಂದ ಕಲಿತದ್ದನ್ನೂ ಸ್ವದೇಶದಲ್ಲಿ ಪರೀಕ್ಷೆಯಲ್ಲಿ ತಿಳಿದುದನ್ನೂ ಅವರು ರೂಢಿಯಲ್ಲಿ ತರುವರು. ಒಂದು ದೇಶದಲ್ಲಿರುವ ಉತ್ತಮ ಮಾರ್ಗಗಳನ್ನು ಜಪಾನಿಯರು ಇತರರಿಗಿಂತಲೂ ಜಾಗ್ರತೆಯಾಗಿ ಗ್ರಹಿಸುವರು.

ದೊಡ್ಡ ಪಟ್ಟಣಗಳಿಗೆ ಬೇಕಾದ ಸಮಸ್ತವೂ ಹಳ್ಳಿಗಳಿಂದಲೇ ಬೇಕಾಗಿರುವುದರಿಂದ ಹಳ್ಳಿಗಳು ಅಭಿವೃದ್ಧಿಯಲ್ಲಿದ್ದಷ್ಟು ಲಾಭವಿದೆ. ಹತ್ತಿ, ರೇಶ್ಮೆ ಮತ್ತು ಇತರ ವಸ್ತುಗಳ ಸಣ್ಣ ಸಣ್ಣ ಕಾರ್ಖಾನೆಗಳು ಹಳ್ಳಿಗಳಲ್ಲಿರುವವು. ಅಚ್ಚು ಹಾಕುವ ಕಾರ್ಖಾನೆಗಳು ಎಲ್ಲೆಲ್ಲಿಯೂ ಇರುವವಲ್ಲದೆ ಅಚ್ಚಿನ ದರವು ಬಹಳ ಸುಲಭ. ಪ್ರಪಂಚದ ಆಶ್ಚರ್ಯ ವಿಷಯಗಳನ್ನು ಅಲ್ಲಿಯ ಮಕ್ಕಳಿಗೆ ಸಿನಿಮಾ ಚಿತ್ರಗಳ ಮೂಲಕ ತೋರಿಸಿ ಅವುಗಳಲ್ಲಿ ಅವರಿಗೆ ಅಭಿರುಚಿಯನ್ನುಂಟುಮಾಡುವರು.

ಗ್ರಾಮಾಂತರದ ಜನರಲ್ಲಿಯೂ ನಿರ್ಮಾಣ ಶಕ್ತಿ, ಆತ್ಮಾವಲಂಬನೆ, ದೃಢಪ್ರಯತ್ನಗಳು ಕಂಡು ಬರುವವು. ಗ್ರಾಮಗಳಲ್ಲಿ ಇಲ್ಲದಿದ್ದರೂ ಬುದ್ಧಿವಂತರೂ ಧನಿಕರೂ ತಮ್ಮ ಸಾಮರ್ಥ್ಯಗಳನ್ನು ಖರ್ಚುಮಾಡಿ ಗ್ರಾಮಸ್ಥರಿಗೆ ಅನುಕೂಲಗಳನ್ನು ಉಂಟುಮಾಡಿಕೊಡುವರು. ಜನರಲ್ಲಿ ಸ್ವಾರ್ಥತ್ಯಾಗವು ಚೆನ್ನಾಗಿ ಹರಡಿರುವುದರಿಂದ ಯಾರೂ ಸಹಾಯಹೀನರಾಗಿ ವ್ಯಥೆಪಡಬೇಕಾಗುವುದಿಲ್ಲ. ಎಷ್ಟೆ ಧನಿಕರಾದರೂ ಭೂ ವ್ಯವಸಾಯ ವಿಷಯದಲ್ಲಿ ಗೌರವವನ್ನು ಇಟ್ಟುಕೊಂಡಿರುವರು. ಅಲ್ಲದೆ ರೈತ ಜನರ ನಿದರ್ಶನಕ್ಕಾಗಿ ಕಷ್ಟಪಟ್ಟು ಕೆಲಸಮಾಡುವರು. ಇವುಗಳನ್ನೆಲ್ಲಾ ಪರಿಶೀಲಿಸಿದರೆ ಜಪಾನೀಯರ ಗ್ರಾಮಗಳಲ್ಲಿ ಐಕ್ಯಮತ್ಯವೂ, ಉತ್ಸಾಹವೂ, ಜನರಲ್ಲಿ ತುಂಬಿರುವವೆಂದು ಕಂಡು ಬರುವವು. ಭೂ ವ್ಯವಸಾಯವೇ ಎಲ್ಲಾ ಕಸುಬಿಗೂ ಮೂಲವಾದುದರಿಂದ ಇದು ಪೂಜ್ಯವೃತ್ತಿ ಎಂಬುದು ಎಲ್ಲರಿಗೂ ವಿದಿತವಾಗಿದೆ. ರೈತನನ್ನು ಅಭಿವೃದ್ಧಿಗೆ ತರಬೇಕೆಂದು ಪ್ರಜೆಗಳೆಲ್ಲರ ಮುಖ್ಯ ಉದ್ದೇಶವಾಗಿದೆ. ಸರಕಾರದವರಲ್ಲದೆ ವಿದ್ಯಾವಂತರೂ ಧನಿಕರೂ ರೈತನಿಗೆ ಬೆಂಬಲರಾಗಿರುವರು. ತಮ್ಮ ವೃತ್ತಿಯನ್ನು ಅತ್ಯುತ್ತಮ ಸ್ಥಿತಿಯಲ್ಲಿಟ್ಟುಕೊಂಡಿದ್ದರೂ, ಅದನ್ನು ಇನ್ನು ರೂಢಿಸಬೇಕೆಂಬುದು ಅಲ್ಲಿನ ರೈತನ ಮನೋಗತವಾಗಿದೆ. ಬೆಳೆದುದನ್ನು ಮಾರಾಟಮಾಡಿ ಬಂದುದರಲ್ಲಿ ಅವರು ತೃಪ್ತಿಪಡುವದಿಲ್ಲ. ತಮ್ಮಿಂದಾಗುವ ಕೈಗಾರಿಕೆಗಳನ್ನೆಲ್ಲಾ ಗ್ರಾಮಗಳಲ್ಲಿಯೇ ಮಾಡಿ ತಯಾರಾದ ಉಪಯೋಗ ವಸ್ತುಗಳನ್ನು ಪಟ್ಟಣಗಳಿಗೆ ಕಳುಹಿಸುವರು. ಇದರಿಂದ ಅಲ್ಲಿನ ಗ್ರಾಮಸ್ಥರು ತುಂಬಾ ಸಮೃದ್ಧಿಯಾಗಿಯೂ ಉತ್ಸಾಹಪರರಾಗಿಯೂ ಇರುವರೆಂದು ಗೊತ್ತಾಗುತ್ತದೆ.

ವಿದೇಶ ವರ್ತಮಾನ.

ಸ್ಕಾಟ್ಲೆಂಡಿನ ಬೆಸಿಮೆರಿಸ್ ಎಂಬ ಪರ್ವತವನ್ನು ಕೊರೆದು ಆ ಸುರಂಗದ ಮೂಲಕ ಫ್ರೀನ್ ಮತ್ತು ಲೋಗನ್ ಎಂಬ ಸರೋವರಗಳ ನೀರನ್ನು ಒಂದುಗೂಡಿಸಿ ಅವುಗಳ ನೀರಿನ ಸಹಾಯದಿಂದ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡಬೇಕೆಂದು ನೋರ್ತ ಬ್ರಿಟಿಷ್ ಅಲುಮಿನಿಯಮ್ ಕಂಪೆನಿಯವರು ಪ್ರಯತ್ನಿಸಿರುವರು. ಈ ಸುರಂಗವು ೧೫ ಮೈಲುಗಳ ಉದ್ದವಿದ್ದು ಯುರೋಪಿನಲ್ಲೆಲ್ಲಾ ಅತ್ಯಂತ ಉದ್ದವೆನಿಸುವುದು. ಇದರ ಕೆಲಸವನ್ನು ೨೪ ಕಡೆ ಏಕಕಾಲದಲ್ಲಿ ಪ್ರಾರಂಭಿಸಿರುವರು.

ಉತ್ತರ ಅಮೇರಿಕದಲ್ಲಿ ಭೂಕಂಪ:— ಈ ತಿಂಗಳ ಆದಿಭಾಗದಲ್ಲಿ ಉತ್ತರ ಅಮೇರಿಕದಲ್ಲಿ ಭೂಕಂಪ ಉಂಟಾಗಿ ಬಹಳ ಅನರ್ಥವಾಗಿರುತ್ತದೆ. ನ್ಯೂಯೋರ್ಕ ನಗರದಲ್ಲಿ ಒಬ್ಬನು ರೈಲ್ವೆ ಪ್ಲಾಟ್‌ಫೋರ್ಮಿನಿಂದ ಬಿದ್ದು ಮೃತಪಟ್ಟನು. ಇಬ್ಬರಿಗೆ ಗಾಯಗಳಾಯಿತು. ಕೆಲವು ಕಡೆ ಅರ್ಧ ನಿಮಿಷದಿಂದ ೩ ನಿಮಿಷಗಳ ವರೆಗೂ ಭೂಮಿ ನಡುಗಿತು. ಕಟ್ಟಡಗಳು ತೂಗಾಡಿ ಎತ್ತರವಾದ ಸರಕಾರಿ ಕಟ್ಟಡಗಳೂ ಅನೇಕ ದೇವಾಲಯಗಳೂ ನೆಲಸಮವಾದವು. ಕೆನಡಾ ರಾಜ್ಯದಲ್ಲಿ ಭಯದಿಂದ ಆರುಮಂದಿ ಮೃತಪಟ್ಟರು. ಅನೇಕ ಕಟ್ಟಡಗಳಿಗೆ ಬೆಂಕಿ ಬಿದ್ದು ಸುಟ್ಟುಹೋಗಿರುತ್ತವೆ.

ಸರ್ವಿಯಾ ದೇಶದ ಮಿ| ಬೋರಿಸ್ ಕಾಸ್ಟಿಕ್ ಎಂಬವರು ಚತುರಂಗದ ಆಟದಲ್ಲಿ ನಿಪುಣರು. ಇವರು ಈಗ ಮುಂಬಾಯಿಯಲ್ಲಿ ಚತುರಂಗದ ಆಟಕ್ಕಾಗಿ ಬಂದಿರುವರು. ಶ್ರೀ| ಕಾಡಿಲಕರ, ಜೋಶಿ, ಬೋಡಸ ಮೊದಲಾದ ಮಹಾರಾಷ್ಟ್ರೀಯರು ಕಳೆದ ೨೭ನೇ ತಾರೀಕಿನಿಂದ ಇವರಿಗೆ ಇದಿರಾಗಿರುವರು.

ಒಳದೇಶ ವರ್ತಮಾನ.

ಕೊಲೊಂಬೊದಲ್ಲಿ ಮುತ್ತನ್ನು ಈ ವರುಷ ತೆಗಿಯುವರು. ೧೯೦೭ರಲ್ಲಿ ಒಂದು ಸಾರಿ ತೆಗೆದಿದ್ದರು. ೧೮ ವರುಷಗಳಿಂದ ಈ ವರ್ಷ ಪುನ್ಹ ಪ್ರಾರಂಭಿಸಿದ್ದಾರೆ. ಅನೇಕ ಸಾಹುಕಾರರು ಅಲ್ಲಿ [illegible] ಹೂಡಿರುವರು. ಸುಮಾರು ೩೦೦ ಮಂದಿ ಮುಳುಗಿ ಮುತ್ತು ತೆಗಿಯುವರಂತೆ.

ಶ್ರೀ ಶಿವಾಜಿ ಮಹಾರಾಜರು ೧೬೨೭ರಲ್ಲಿ ಜನಿಸಿವರೆಂದು ಇಷ್ಟರವರೆಗೆ ಎಲ್ಲರ ತಿಳುವಳಿಕೆಯಲ್ಲಿತ್ತು. ಆದರೆ ಪೂನೆಯ ಭಾರತ ಸಂಶೋಧಕ ಮಂಡಳಿಯವರು ೧೬೩೦ ಎಂದು ನಿಶ್ಚಯಿಸಿದ್ದಾರೆ. ಆದುದರಿಂದ ಈ ವರುಷ ಫಾಲ್ಗುಣ ವದ್ಯತೃತಿಯೆ ದಿನ ವರ್ಧಂತಿ ಉತ್ಸವ ಜರಗಿಸಬೇಕೆಂದು ಶ್ರೀ| ಕೇಳಕರ, ಭೋಪಟಕರ ಮೊದಲಾದವರು ನಿಶ್ಚಯಿಸಿದ್ದಾರೆ.

ಪೂನೆಯ ಫರ್ಗ್ಯುಸನ್ ಕೊಲೇಜಿನಲ್ಲಿ ಲೋಕಮಾನ್ಯ ತಿಲಕರ ಶಿಲಾಪ್ರತಿಮೆಯನ್ನು ಸ್ಥಾಪಿಸುವ ಸಮಾರಂಭವು ದಿವಾನಬಹದ್ದೂರ ಗೋಡಬೋಲೆಯವರ ಅಧ್ಯಕ್ಷತೆಯಲ್ಲಿ ನಡೆಯಿತು.

ಮುಂಬಾಯಿ ಸರಕಾರದ ಸಾಲವು ೧೯೧೯ರಲ್ಲಿ ೧೦ಕೋಟಿ ಇತ್ತು. ೧೯೨೪ರಲ್ಲಿ ಅದು ೪೩ ಕೋಟಿಗೆ ಬೆಳೆದಿರುವುದು.

ಪಂಜಾಬಿನ ಮುಖ್ಯಪಟ್ಟಣವಾದ ಲಾಹೋರಿನಲ್ಲಿರುವ ಲೋರೆನ್ಸರ ಶಿಲಾಪ್ರತಿಮೆಯನ್ನು ಈಗಿರುವ ಸ್ಥಳದಿಂದ ಕಿತ್ತುತೆಗೆಯಬೇಕೆಂದು ಪಂಜಾಬ ನ್ಯಾಯವಿಧಾಯಕ ಸಭೆಯಲ್ಲಿ ಚರ್ಚೆ ನಡೆಯುತ್ತದೆ.

ಅಸ್ಸಾಮ ದೇಶದಲ್ಲಿ ೩೦ ಸಾವಿರ ಕೈಮಗ್ಗಗಳು ಕೆಲಸಮಾಡುತ್ತವೆ. ನೂಲು ಮಾತ್ರ ಪರದೇಶಿ.

ದಕ್ಷಿಣ ಕನ್ನಡ.

ಕುಂಬಳೆ:— ಇಲ್ಲಿಯ ಫಿಶಮಾರ್ಕೆಟನ್ನು ಏಲಂಮಾಡಲಿಕ್ಕಾಗಿ ಕಾಸರಗೋಡು ತಾಲೂಕು ತಹಸೀಲದಾರರು ತಾಲೂಕು ಬೋರ್ಡು ಪ್ರೆಸಿಡೆಂಟರ ಬದಲಾಗಿ ಇಲ್ಲಿಗೆ ಬಂದಿದ್ದರು.

ಇಲ್ಲಿಯ ಒಂದು ಬೀಡಿ ಅಂಗಡಿಯಲ್ಲಿ ಒಬ್ಬ ಬಂಟರ ಜಾತಿಯವನು ಬೀಡಿಯನ್ನು ತೆಗೆದುಕೊಂಡು ಹಣಕೊಡುವಾಗ ೧೦೦ ರೂಪಾಯಿಗಳ ಒಂದು ನೋಟನ್ನೂ ೮ ರೂಪಾಯಿಗಳನ್ನೂ ಕಳಕೊಂಡನು. ಅದಕ್ಕಾಗಿ ನೋಟು ಕಳಕೊಂಡ ಮನುಷ್ಯನು ಪಟೇಲರ ರಿಪೋರ್ಟು ತೆಗೆದುಕೊಂಡು ಕಾಸರಗೋಡು ಪೋಲಿಸ ಅಧಿಕಾರಿಗಳಿಗೆ ತಿಳಿಸಲಿಕ್ಕೆ ಹೋಗಿರುತ್ತಾನೆ.

ಇಲ್ಲಿಯ ಬೋರ್ಡು ಲೋವರ ಎಲಿಮೆಂಟರಿ ಶಾಲೆಯಿಂದ ತರಬೇತಾಗದ ಕೆಲವು ಮಂದಿ ಉಪಾಧ್ಯಾಯರನ್ನು ತೆಗದುಹಾಕುತ್ತಾರೆಂಬ ವರ್ತಮಾನವಿದ್ದುದರಿಂದ ಇವರಲ್ಲಿ ಕೆಲವರು ಮಂಜೇಶ್ವರ ದೇವಸ್ಥಾನದ ಕಡೆಯಿಂದ ಹೊಸತಾಗಿ ಆಗುವ ಶಾಲೆಗೆ ಅರ್ಜಿಮಾಡಿದ್ದರು. ಆದರೆ ಆ ಶಾಲೆಯನ್ನು ಸಧ್ಯದಲ್ಲಿ ತೆರಿಯುವ ಆಲೋಚನೆಯಿಲ್ಲದ್ದರಿಂದ ಇದೇ ತಿಂಗಳ ತಾರೀಕು ೨೦ನೇಗೆ ಮಂಜೇಶ್ವರಕ್ಕೆ ಹೋಗಿ ಧರ್ಮ ಅಗ್ರಹಾರದ ಜಗಲಿಯ ಮೇಲೆ ಸಾಯಂಕಾಲದ ವರೆಗೆ ಕೂತು ಹಿಂತಿರುಗಿ ಬಂದರು. ಕಾಸರಗೋಡು ತಾಲೂಕು ಬೋರ್ಡು ಉಪಾಧ್ಯಾಯರ ಗೋಳನ್ನು ಹೇಳಿ ತೀರದು. ಆದರೂ ಈ ಬೆಂಕಿಯಲ್ಲಿ ಬಿದ್ದು ಸಾಯಲಿಕ್ಕೆ ಇನ್ನೂ ಉಪಾಧ್ಯಾಯರ ಅರ್ಜಿಗಳು ಬರುತ್ತಲೇ ಇವೆ.

ಇಲ್ಲಿಯ ಹುಡುಗಿಯರ ಶಾಲೆಯ ತರಬೇತಾಗದ ಒಬ್ಬ ಉಪಾಧ್ಯಾಯಿನಿಯನ್ನು ತೆಗದು ತರಬೇತಾದ ಒಬ್ಬ ಉಪಾಧ್ಯಾಯಿನಿಯನ್ನು ಇಡುತ್ತಾರಂತೆ. ಮಂಜೇಶ್ವರ ಮತ್ತು ಬಂಗ್ರಮಂಜೇಶ್ವರ ಹುಡುಗಿಯರ ಶಾಲೆಗಳಲ್ಲಿ ನಾಲ್ಕನೇ ದರ್ಜೆಯ ವರೆಗೆ ಕ್ಲಾಸುಗಳು ಇದ್ದರೂ ಆ ಶಾಲೆಗಳಿಗೆ ಬರೇ ಒಬ್ಬ ಉಪಾಧ್ಯಾಯಿನಿಯರೇ ಸಾಕಂತೆ. ಕುಂಬಳೆಯಲ್ಲಿ ತರಬೇತಾದ ಉಪಾಧ್ಯಾಯಿನಿ ರಾಕಿಸಬೇಕಂತೆ. ಇದರ ಬದಲಾಗಿ ತರಬೇತಾಗದ ಕುಂಬಳೆ ಶಾಲೆಯ ಉಪಾಧ್ಯಾಯಿನಿಯನ್ನಾಗಲೀ ಅಥವಾ ಹೊಸತಾಗಿ ತರಬೇತಾಗಿ ಬರುವ ಉಪಾಧ್ಯಾಯಿನಿಯನ್ನಾಗಲಿ ಮಂಜೇಶ್ವರ ಅಥವಾ ಬಂಗ್ರ ಮಂಜೇಶ್ವರ ಹುಡುಗಿಯರ ಶಾಲೆಗೆ ವರ್ಗಮಾಡಿದರೆ ಆಗುವುದಿಲ್ಲವೇ?

ಮಂಜೇಶ್ವರ:— ಇಲ್ಲಿಯ ಶ್ರೀ| ಮದನಂತೇಶ್ವರ ದೇವಸ್ಥಾನದ ಕಡೆಯಿಂದ ಶಾಲೆ ತೆರಿಯುತ್ತಾರೆಂದು ಅನೇಕ ಮಂದಿ ಗೌಡಸಾರಸ್ವತ ಉಪಾಧ್ಯಾಯರು ಅರ್ಜಿಕೊಟ್ಟಿದ್ದರು. ಅವರಲ್ಲಿ ಕೈಲಾಬಾಡಿ ಬೋರ್ಡು ಎಲಿಮೆಂಟರಿ ಶಾಲೆಯಿಂದ ಮೂವರನ್ನೂ ಮಂಜೇಶ್ವರ ನಾಯರ ಎಲಿಮೆಂಟರಿ ಶಾಲೆಯ ಹೆಡ್ ಮಾಸ್ತರರನ್ನೂ ಎರಡನೇ ಉಪಾಧ್ಯಾಯರನ್ನೂ, ಮಾಪಿಲ್ಲಾ ಬೋರ್ಡು ಶಾಲೆಯಿಂದ ಒಬ್ಬರನ್ನೂ ಇನ್ನು ಇತರ ಮೂರು ಮಂದಿಯನ್ನೂ ಚುನಾಯಿಸಿದ್ದರು. ಇವರೆಲ್ಲರೂ ೨೦ನೇ ತಾರೀಕು ಆದಿತ್ಯವಾರ ಪ್ರಾತಃರಾಗಿ ಧರ್ಮ ಅಗ್ರಹಾರದ ಜಗಲಿಯನ್ನು ಕಾಯುತ್ತಾ ೪ ಗಂಟೆ ವರೆಗೆ ಕೂತರು. ಕಡೆಗೆ "ಶಾಲೆ ತೆರಿಯುವ ಒಂದು ತಿಂಗಳ ಮುಂಚೆ ನಿಮಗೆ ತಿಳಿಸುತ್ತೇವೆಂದು" ಕಮಿಟಿಯವರ ಅಪ್ಪಣೆಯಾಯಿತು. ಉಪಾಧ್ಯಾಯರು ಒಂದೆರಡು ರೂಪಾಯಿ ಖರ್ಚುಮಾಡಿ ಬಂದು ತಲೆಮೇಲೆ ಕೈಯಿಟ್ಟು ತಮ್ಮ ತಮ್ಮ ಊರುಗಳಿಗೆ ತೆರಳಿದರು. ಇದರಿಂದ ಈ ತಿಂಗಳ ೩೧ನೇ ತಾರೀಕಿಗೆ ಶಾಲೆ ಆಗುವುದಿಲ್ಲವೆಂಬುದು ಖಂಡಿತವಾಯಿತು.

ತಾ. ೨೩ನೇ ದಿವಸ ಮಂಜೇಶ್ವರ ಸರ್ಕಲಿನ ತಾಲೂಕು ಬೋರ್ಡು ಮೆಂಬರರ ಚುನಾವಣೆಯು ಇಲ್ಲಿಯ ಲೋಕಲ್ ಫಂಡ ಬಂಗ್ಲೆಯಲ್ಲಿ ಪೋಲಿಂಗ ಆಫೀಸರರಾದ ಸಬ್ ರಿಜಿಸ್ಟ್ರಾರರವರಿಂದ ನಡೆಯಿತು. ಈ ಸರ್ಕಲಿಗೆ ೩೦ ಗ್ರಾಮಗಳು ಇವೆ. ೬೩೩ ಮಂದಿ ಓಟರರು ಇರುತ್ತಾರೆ. ಇವರಲ್ಲಿ ೧೮೦ ಮಂದಿ ಮೃತ ಓಟರರಿರುತ್ತಾರೆ. ಆದುದರಿಂದ ೬೩೩ರಲ್ಲಿ ಜೀವಂತರಾಗಿರುವವರು ೬೪೩ ಮಂದಿ. ಇವರಲ್ಲಿ ೧೪೩ ಮಂದಿ ಹೆಂಗಸರು. ಇಬ್ಬರು ಕೆಥೋಲಿಕ ಮುದುಕಿಯರು ಮಾತ್ರವೇ ಓಟು ಕೊಡಲಿಕ್ಕೆ ಬಂದಿದ್ದರು. ಉಳಿದ ಹೆಂಗಸರು ಬರಲಿಲ್ಲ. ಗಂಡಸರ ಪೈಕಿ ೩೫೭ ಮಂದಿ ಓಟರರು ಓಟುಕೊಟ್ಟಿರುತ್ತಾರೆ.

ಇಲ್ಲಿಯ ದೇವಸ್ಥಾನದ ಕಮಿಟಿಯ ಮೆಂಬರರು ಸ್ಕೀಮಿನ ಪ್ರಕಾರ ಯಾವದೊಂದನ್ನು ಮಾಡಲಿಲ್ಲವೆಂಬದಕ್ಕಾಗಿ ಸಬ್ ಕೋರ್ಟಿನಲ್ಲಿ ಮಾಡಿದ ನಂಬ್ರವು ಕಳೆದ ೨೦ನೇ ತಾರೀಕಿಗೆ ಇಟ್ಟಿದ್ದರು. ಸ್ಕೀಮಿನ ಪ್ರಕಾರ ಎಲ್ಲವನ್ನೂ ಮಾಡಿದ್ದೇವೆಂದು ಕಮಿಟಿ ಮೆಂಬರರು ಸ್ಟೇಟ್‌ಮೆಂಟ ಕೊಟ್ಟಿರುತ್ತಾರೆ. ಅದಕ್ಕೆ ಎದುರು ಕಕ್ಷಿಯವರು ಸ್ಟೇಟ್‌ಮೆಂಟ ಕೊಡಲಿಕ್ಕೆ ವಾಯಿದೆ ತೆಗೆದುಕೊಂಡಿರುತ್ತಾರೆ. ಇದೇ ಬರುವ ೩೦ನೇ ತಾರೀಕಿಗೆ ತನಿಖೆಗೆ ಇಟ್ಟಿದ್ದರೂ ಇದನ್ನು ೩೦ನೇಗೆ ಮುಂದರಿಸಿಟ್ಟರು.

ಇಲ್ಲಿಯ ಪೋಸ್ಟಾಫೀಸಿನಲ್ಲಿ ಕೆಲಸದ ಗಲಾಟೆಯು ವಿಪರೀತವೆಂಬಂತೆ ಕಾಣುತ್ತದೆ. ಕಾರ್ಡು ಕವರುಗಳು ಸಿಕ್ಕಬೇಕಾದರೆ ೨-೩ ದಫೆಯಾದರೂ ಹೋಗಬೇಕು. ಮೇಲಾಫೀಸರರು ಈ ಕಡೆ ಗಮನ ಕೊಟ್ಟು ಇನ್ನೊಬ್ಬನನ್ನು ಇಡುವುದು ಒಳ್ಳೇದು.

ಕುಂಬಳೆ ಲೋಕಲ್ ಫಂಡ್ ಡಿಸ್ಪೆನ್ಸರಿಯಲ್ಲಿರುವ ಸ್ಟೇಶನರಿ ವಗೈರೆ ಪೂರಾ ಸಾಮಾನುಗಳನ್ನು ಇಲ್ಲಿಯ ಆಸ್ಪತ್ರೆಗೆ ತರಬೇಕಾಗಿ ಹುಕುಂ ಆಗಿಯದಂತೆ.

ಪುತ್ತೂರು:— ಇಲ್ಲಿ ಮೋಟರು ಬಸ್ಸುಗಳನ್ನು ಲೋಕಲ್ ಫಂಡ್ ಭಾವಿಗಳ ಹತ್ತರ ತಂದು ತೊಳಿಯುವುದರಿಂದ ಬಹಳ ತೊಂದರೆಯಾಗಿದೆ. ನೀರಾಶ್ರಯವು ಬಹಳ ಕಡಿಮೆಯಾಗಿರುವ ಪುತ್ತೂರು ಊರಿನಲ್ಲಿ ನೀರನ್ನು ಈ ರೀತಿಯಲ್ಲಿ ಹಾಳುಮಾಡಿವರೆ ನಿವಾಸಿಕರಿಗೆ ಬಹಳ ಉಪದ್ರವಾಗುವುದು.

ಕಾಸರಗೋಡು ಜಮಾಬಂದಿಯನ್ನು ಮುಗಿಸಿ ಪುತ್ತೂರು ಡಿವಿಜನಲ್ ಆಫೀಸರರು ಪುತ್ತೂರಿಗೆ ಬಂದಿರುವರು. ಇಲ್ಲಿ ಇವರಿಗೆ ವಿಶೇಷ ಕೆಲಸವಿದೆ.

ಉಪ್ಪಿನಂಗಡಿ ತಾಲೂಕು ಬೋರ್ಡಿನ ಮೆಂಬರಿಕೆಗೆ ಉಮೇದ್ವಾರರಾಗಿ ನಿಂತ ಮೆಂಬರ ಓಟುಗಳು ಇದೆ ತಿಂಗಳ ತಾ. ೨೦-೨೧ರಲ್ಲಿ ಇಲ್ಲಿಯ ತಾಲೂಕು ಬೋರ್ಡು ಆಫೀಸಿನಲ್ಲಿ ಅಧ್ಯಕ್ಷರಾದ ಮಾ| ರಾ| ರಾ| ತಾಲೂಕು ಬೋರ್ಡು ಮೆಂಬರ ಮೊಯಿದಿನ ಇಸ್ಮಾಯಿಲ್ ಸಾಹೇಬರಿಂದ ತೆಗೆಯಲಾಗಿದೆ.

ಸುಳ್ಯ ಸರ್ಕಲಿನ ೩ ಜನ ಮೆಂಬರಿಕೆಸ್ಥಾನಕ್ಕೆ ಉಮೇದ್ವಾರರಾಗಿ ನಿಂತ ೧೩ ಜನರ ಪೈಕಿ ಮಾ| ರಾ| ರಾ| ಐವರನಾಡ ಗ್ರಾಮದ ಪಟೇಲ ಮುತ್ತಿಲ ರಾಮಣ್ಣ ಗೌಡರಿಗೆ ೩೫೪ ಸಾವುಕಾರ ಎಲಿಮಲೆ ಮಂಮ್ಮುಕುಂಞಿ ಬ್ಯಾರಿಗಳಿಗೆ ೨೨೭ ಮತ್ತು ಐವರನಾಡ ರಾಮರಾಯರಿಗೆ ೨೦೪ ಓಟುಗಳು.

ಪುತ್ತೂರು ಸರ್ಕಲಿಗೆ ೨ ಜನ ಮೆಂಬರಿಕೆಸ್ಥಾನಕ್ಕೆ ಉಮೇದ್ವಾರರಾಗಿ ನಿಂತ ೮ ಜನರ ಪೈಕಿ ಮಾ| ರಾ| ರಾ| ಆರಿಯಾಪು ಗ್ರಾಮದ ಜಮೀನದಾರ ರಾಮಚಂದ್ರ ಬನ್ನಿಂತ್ತಾಯರಿಗೆ ೩೧೧, ವಕೀಲ ಬೆಳ್ಳಿಪಾಡಿ ದಾಸಯ್ಯರಿಗೆ ೩೧೩ ಓಟುಗಳು.

ಉಪ್ಪಿನಂಗಡಿ ಸರ್ಕಲಿನ ೩ ಮೆಂಬರಿಕೆಸ್ಥಾನಕ್ಕೆ ಉಮೇದ್ವಾರರಾಗಿ ನಿಂತ ೧೦ ಜನ ಉಮೇದ್ವಾರರಲ್ಲಿ ಮಾ| ರಾ| ಪುತ್ತೂರು ಸಾವುಕಾರ ಮಂಜೇಶ್ವರ ಜನಾರ್ದನ ಭಟ್ಟರಿಗೆ ೧೭೩, ಕೆದಂಬಾಡಿ ಗ್ರಾಮದ ಜಮೀನದಾರ ಬಧ್ರಮಾರ ಸುಕ್ರಪ್ಪ ರೈರಿಗೆ ೧೫೦ ಮತ್ತು ಕಟ್ಯಾ ಗ್ರಾಮದ ಜಮೀನದಾರ ಕೈಲ್ಯ ಪುನಚ ಹೆಗ್ಗಡೆರಿಗೆ ೧೪೪ ಓಟುಗಳು.

ಬೆಳ್ತಂಗಡಿ ಸರ್ಕಲಿನ ಮೂರು ಮೆಂಬರಿಕೆ ಸ್ಥಾನಕ್ಕೆ ಉಮೇದ್ವಾರರಾಗಿ ನಿಂತ ಹತ್ತು ಜನ ಉಮೇದ್ವಾರರ ಪೈಕಿ ಮಾ| ರಾ| ವಕೀಲ ಹೊಸದುರ್ಗ ಗಣಪತಿರಾಯರಿಗೆ ವಕೀಲ ಬೆಳ್ತಂಗಡಿ ಮಂಗೇಶರಾಯರಿಗೆ ಸರಿಸಮಾನ ೧೧೭ ಮತ್ತು ನಟ್ಟೊಜ ಶ್ಯಾನುಭಾಗ ಕೃಷ್ಣರಾಯರಿಗೆ ೮೭ ಓಟುಗಳು ಸಿಕ್ಕಿ ಮೆಂಬರಿಕೆಗೆ ಅರ್ಹರಾದರು. ಆದರೆ ಈ ಓಟುಗಳಿಂದ ಬ್ರಾಹ್ಮಣರು ೩; ಜೈನ ೧; ಗೌಡಸಾರಸ್ವತ ಬ್ರಾಹ್ಮಣರು ೨; ಸಾರಸ್ವತ ಬ್ರಾಹ್ಮಣರು ೧; ಬಂಟ ೨; ಗೌಡ ೧; ಮಹಮ್ಮದಿ ೧ ಈ ರೀತಿ ೧೩ ಜನ ಮೆಂಬರರನ್ನು ಚುನಾಯಿಸಲ್ಪಡುವದಾಯಿತು. ಆದರೆ ಬೆಳ್ತಂಗಡಿ, ಪುತ್ತೂರು ಈ ಸರ್ಕಲುಗಳಲ್ಲಿ ಅನೇಕ ರೋಮನ್ ಕೆಥೋಲಿಕರು ಇದ್ದಾಗ್ಯೂ ಒಬ್ಬರಾದರೂ ಉಮೇದ್ವಾರರಾಗಿ ಮುಂದೊತ್ತಿ ಬಾರದ ಕಾರಣವೇನೋ ತಿಳಿಯದು. ತನಗೊಂದು ತಾಲೂಕು ಬೋರ್ಡು ಮೆಂಬರಿಕೆಸ್ಥಾನ ಕೊಡಬೇಕೆಂತ ಇಲ್ಲಿಯ ರಾಗಿಗುಡ್ಡ ಕುಮಾರ ಶಾಲಾಮಾಸ್ತರ ಪಂಚಮರ ಜಾತಿಯ ಕುಳ್ಳ ಯಾನೆ ಮುಕುಂದ ಎಂಬವರು ಡಿಸ್ಟ್ರಿಕ್ಟ ಬೋರ್ಡಿಗೊಂದು ಅರ್ಜಿಮಾಡಿದ್ದಾಗಿ ಕೇಳುತ್ತೇವೆ. ಹಿಂದುಳಿದ ಪಂಚಮ ಜಾತಿಯವರನ್ನು ಮುಂದೊತ್ತಿ ತರಲಿಕ್ಕೆ ಒಬ್ಬ ಪಂಚಮ ಮೆಂಬರನನ್ನು ನೇಮಿಸುವುದು ಹಿತವಲ್ಲವೆ.

ಮೋಟರಕಾರಿನ ಅವಗಡ— ಮೂಡಬಿದ್ರೆಯಿಂದ ಮೈಸೂರು ಶ್ರವಣಬೆಳಗೊಳ ಜಾತ್ರೆಗೆ ಹೋಗಿ ಬಂದು ವಾಪಾಸು ಮೂಡಬಿದ್ರೆಗೆ ಹೋಗುವ ಒಂದು ಕಾರು ಇದೇ ತಿಂಗಳ ತಾ. ೨೨ನೇ ಆದಿತ್ಯವಾರ ಮಧ್ಯಾಹ್ನ ೩ ಘಂಟೆಗೆ ಕಬಕ ಗ್ರಾಮದ ಮಂಜಲ ಪಡ್ಪಿಗೆ ಸಮೀಪ ಪುತ್ತೂರು ಕಸಬಾ ಗ್ರಾಮದ ಬೊಳುವಾರ ಎಂಬಲ್ಲಿ ಕಾರು ಹಿಂದೆ ಜಾರಿ ಸಂಕದ ಕೆಳಗೆ ಬಿದ್ದು ಅದರಲ್ಲಿ ಇದ್ದ ಮಲ್ಲಜಿಶೆಟ್ಟಿಯ ಕುಟುಂಬದ ವಗೈರೆ ೬ ಜನರ ಪೈಕಿ ೪ ಜನರು ಜಖಂ ಹೊಂದಿದವರನ್ನು ಆಸ್ಪತ್ರೆಯಲ್ಲಿ ಚಿಕಿತ್ಸೆ ಬಗ್ಗೆ ಒಯಿದು ಚಿಕಿತ್ಸೆಹೊಂದುತ್ತಾರೆ. ಒಂದು ಹೆಂಗಸಿಗೆ ಮತ್ತು ಗಂಡಸಿಗೆ ಜಖಂ ಇಲ್ಲ. ಕಾರು ಈ ವರೆಗೆ ಸಂಕದ ಅಡಿಯಲ್ಲಿಯೆ ಇದೆ.

ಉಡುಪಿ:— ಇಲ್ಲಿಯ ಬೋರ್ಡ ಎಲಿಮೆಂಟರಿ ಶಾಲೆಯ ಮುಖ್ಯ ಉಪಾಧ್ಯಾಯರಾದ ಐರೋಡಿ ಚೆನ್ನಯ್ಯರನ್ನು ಹಂಗಾರ ಕಟ್ಟೆಯ ಬೋರ್ಡು ನಾಯರ ಎಲಿಮೆಂಟರಿ ಶಾಲೆಯ ಹೆಡ್ ಮಾಸ್ತರರಾಗಿ ವರ್ಗಾಯಿಸಿದ್ದಾರೆ. ಇದು ಮಂಗಳೂರಿನಲ್ಲಿ ನಡೆದ ಉಪಾಧ್ಯಾಯರ ಸಭೆಯಲ್ಲಿ ಧೈರ್ಯದಿಂದ ಮಾತಾಡಿದುದರ ಪ್ರತಿಫಲವೇ ಎಂದು ಸಂಶಯಾಸ್ಪದವಾಗಿದೆ.

ಕಾಸರಗೋಡು:— ಇಲ್ಲಿಯ ಎಡಿಶನಲ್ ಮುನಸೀಫ್ ಕೋರ್ಟಿನ ಅವಧಿಯು ಮುಗಿಯಿತು. ಇನ್ನು ಇದೇ ಜಿಲ್ಲೆಯ ಇತರ ಮುನಸೀಫ್ ಕೋರ್ಟುಗಳಲ್ಲಿ ನಂಬ್ರಗಳ ರಾಶಿ ಬಿದ್ದಿದ್ದರೆ ಅಲ್ಲಿಗೆ ವರ್ಗವಾಗುತ್ತದೊ ಏನೊ?

ಇಲ್ಲಿಯೇ ಹತ್ತಿರ ಕಾವು ಗೋಳಿಯಲ್ಲಿ ಈ ಊರಿನ ರಾಮ ಎಂಬ ಕ್ಲಾರಿಕನನ್ನು ಕೊಂದುಹಾಕಿರುತ್ತಾರೆ. ಇನ್ನೊಬ್ಬ ಬಟಿಯನೆಂಬ ಕ್ಲಾರಿಕನಿಗೆ ಗಾಯವಾಗಿ ಅವನು ಆಸ್ಪತ್ರೆಯಲ್ಲಿರುತ್ತಾನೆ.

ಕುಂದಾಪುರ:— ಕುಂದಾಪುರ ತಾಲೂಕಿನ ಜಮಾಬಂದಿಯು ಮುಗಿಯಿತು. ಪಟೇಲರ ಮೇಲೆ ಏನೊಂದು ಗಲಾಟೆ ಇಲ್ಲ.

ಇಷ್ಟರ ವರೆಗೆ ಕುಂದಾಪುರ ತಾಲೂಕು ಬೋರ್ಡ ಪ್ರೆಸಿಡೆಂಟರಾದವರು ಈ ಸಾರಿ ಉಮೇದ್ವಾರರಾಗಿ ನಿಲ್ಲಲಿಲ್ಲ. ಆದುದರಿಂದ ಈ ತಾಲೂಕು ಬೋರ್ಡಿಗೆ ಹೊಸ ಪ್ರೆಸಿಡೆಂಟರಾಗುವರು.

ಇಲ್ಲಿಯ ರಿಜಿಸ್ಟ್ರಿ ಆಫೀಸನ್ನು ತನಿಖೆಮಾಡಲಿಕ್ಕೆ ಜಿಲ್ಲಾ ರಿಜಿಸ್ಟ್ರಾರು ಬಂದಿದ್ದರು.

ಮುಲ್ಕಿ:— ಇತ್ತಲಾಗೆ ಒಂದು ವಾರದಿಂದ ತಾಳಲಾರದಷ್ಟು ಸೆಕೆಯು ಹಗಲು ರಾತ್ರೆ ಒಂದೇವಿಧವಾಗಿ ಪ್ರಾರಂಭವಾಗಿರುವುದು. ಬೇಗನೆ ಮಳೆಯಾಗುವ ಚಿಹ್ನೆ ಇದೆಂದು ಹೇಳುತ್ತಾರೆ.

ಇಲ್ಲಿಂದ ಕಾರ್ಕಳಕ್ಕೆ ಪಡುಬಿದ್ರೆ ಮಾರ್ಗವಾಗಿಯೂ ಮತ್ತು ಮೂಡಬಿದ್ರೆ ಮಾರ್ಗವಾಗಿಯೂ ಹೋಗುವ ಬಸ್ಸುಗಳ ಸುಳಿದಾಟವೇ ಇತ್ತಲಾಗೆ ಕೆಲವು ದಿವಸಗಳಿಂದ ಕಾಣದೆ ಪ್ರಯಾಣಿಕರು ಹೆಚ್ಚಿನ ಅಡಚಣೆಯಲ್ಲಿ ಬಿದ್ದಿರುವರು. ಮೋಟಾರು ಸರ್ವಿಸುಗಳು ಇರುವವೆಂತ ನಿಶ್ಚಯಿಸಿಕೊಂಡು ಕೋರ್ಟು ಇತ್ಯಾದಿ ವಿಶೇಷ ಕೆಲಸಗಳಿಗೆ ಅಯಾ ದಿನವೇ ಹೋಗಬಹುದೆಂದು ಆಜುಬಾಜುಗಳಿಂದ ಕಾರ್ಕಳಕ್ಕೆ ಹೋಗಲು ಮುಲ್ಕಿ ಸ್ಟೇಶನಿಗೆ ಬರುತ್ತಿದ್ದ ಪ್ರಯಾಣಿಕರು ವಿಶೇಷ ನಷ್ಟಕ್ಕೆ ಸಹ ಗುರಿಯಾಗುತ್ತಿರುವರು. ಇಂಥಾ ನಷ್ಟಗಳನ್ನು ಈ ಮೋಟಾರ್ ಕಂಪೆನಿಯವರು ಯಾವ ರೀತಿಯಲ್ಲಿಯಾದರೂ ಮನಸ್ಸಿಗೆ ತಂದುಕೊಂಡಂತೆ ತೋರದಿಲ್ಲ. ಇಂತಿಷ್ಟು ದಿನಗಳಿಗೆ ಸರ್ವಿಸು ಇಲ್ಲವೆಂತ ನೋಟೀಸುಗಳನ್ನು ಈ ಕಂಪೆನಿಯವರ ಆಫೀಸುಗಳಲ್ಲಿ ಪ್ರಕಟಿಸಿದರೆ ಅನುಕೂಲವಾಗುತ್ತಿತ್ತು. ಈ ಕಂಪೆನಿಗಳ ಏಜಂಟರುಗಳ ಕೂಡೆ ಯಾವಾಗ ಹೋಗಿ ಕೇಳಿದರೂ ನಾಳೆಗೆ ನಿಶ್ಚಯ ಬರುವುದೆಂದು ಹೇಳುತ್ತಾರೆ. ಆದರೆ ಇಂಥಾ ನಾಳೆಯು ಇತ್ತಲಾಗೆ ಹಲವು ದಿವಸಗಳಿಂದ ಬಂದದ್ದೇ ಇಲ್ಲ. ಮೋಟರ್ ಕಂಪೆನಿಯವರು ಈ ನಾಳೆಯನ್ನು ತಮ್ಮ ಬಸ್ಸುಗಳ ಮೇಲೆ ಹಾಕಿದ್ದು ಬಸ್ಸುಗಳು ತಪ್ಪಿಲ್ಲವಾದ್ದರಿಂದ ನಾಳೆಯೂ ಬಂದು ತಪ್ಪಿದ್ದಿಲ್ಲ. ಈ "ನಾಳೆ" ಯಾವಾಗ ಬರುವುದೋ?

ಮಾ| ರಾ| ರಾ| ಅತ್ತಾವರ ಬಾಲಕೃಷ್ಣ ಶೆಟ್ಟಿಯವರು ಮಾ| ರಾ| ರಾ| ಕಾರ್ನಾಡ ಸದಾಶಿವರಾಯರೊಡನೆ ಮುಲ್ಕಿಗೆ ಬಂದು ಕುಂದಾಪುರಕ್ಕೆ ತೆರಳಿರುವರು.

ಇಲ್ಲಿಯ ಗೌಡಸಾರಸ್ವತ ಬ್ರಾಹ್ಮಣರ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ದೇವಸ್ಥಾನದ ಭಜಕ ಓಟರ್ ಮಹಾಜನರ ಸಭೆಯು ಸದ್ರಿ ದೇವಸ್ಥಾನದಲ್ಲಿ ತಾ. ೨೫ನೇ ಯುಗಾದಿ ದಿನ ಸಾಯಂಕಾಲ ಕೂಡಿತ್ತು. ವೈದಿಕ ವರ್ಗದವರ ಶಿಕ್ಷಣಯೋಗ್ಯತೆಗಳನ್ನು ಹೆಚ್ಚಿಸುವುದು, ಶ್ರೀ ದೇವಸ್ಥಾನದಲ್ಲಿ ಪುರಾಣವೃತ್ತಿ ಇತ್ಯಾದಿಗಳನ್ನು ಇನ್ನಷ್ಟು ಹೆಚ್ಚಾಗಿ ಹೆಚ್ಚಿಸುವುದು, ಸಂಸ್ಕೃತ ವಿದ್ಯಾಪ್ರಚಾರವು ವೈದಿಕರಲ್ಲಿಯೂ ಸ್ವಜಾತಿಯ ಇತರರಲ್ಲಿಯೂ ಚೆನ್ನಾಗಿ ಆಗುವಂತೆ ಸಂಸ್ಕೃತ ಶಾಲೆಯನ್ನು ಏರ್ಪಡಿಸುವುದು ಇತ್ಯಾದಿ ಸೂಚನೆಗಳನ್ನು ಕಾರ್ಯರೂಪ ಹೇಗೆಗೊಳಿಸಬಹುದೆಂಬುದನ್ನು ನಿರ್ಣಯಿಸುವರೆ ನೇಮಕಪಟ್ಟ ಕಮಿಟಿಯವರ ರಿಪೋರ್ಟನ್ನು ಆಲೋಚಿಸಿ ಇದರ ಬಾಬ್ತಿಗೆ ಬೇಕಾಗಿರುವ ಐವೇಜು ಇತ್ಯಾದಿಗಳನ್ನು ಸಂಕ್ಷನ್ ಮಾಡುವುದೇ ಈ ಸಭೆಯ ಮುಖ್ಯ ಉದ್ದೇಶವಾಗಿತ್ತು. ಡಾಕ್ಟರ್ ಎಮ್. ರಾಯಪ್ಪ ಕಾಮತರವರು ಈ ಸಭೆಯ ಅಧ್ಯಕ್ಷರಾಗಿದ್ದರು. ವರುಷ ಒಂದಕ್ಕೆ ರೂಪಾಯಿ ೨೦೦೦ಕ್ಕೆ ಮಿಕ್ಕದ ಐವೇಜನ್ನು ಮಹಾಸಭೆಯವರು ಈ ಬಗ್ಗೆ ಸೆಂಕ್ಷನುಮಾಡಿರುತ್ತಾರೆ. ಧಾರ್ಮಿಕ ಗ್ರಂಥಗಳ ಒಂದು ಪುಸ್ತಕ ಭಂಡಾರವನ್ನು ಸಹ ಏರ್ಪಡಿಸಬೇಕೆಂತ ನಿರ್ಣಯಿಸಿರುತ್ತಾರೆ. ಒಂದೇ ರಾತ್ರೆ ಈ ಸಭಾಕಾರ್ಯಗಳು ಪೂರೈಸದೆ ಹೋದ್ದರಿಂದ ಮರುದಿನ ರಾತ್ರೆ ಸಹ ಈ ಸಭೆಯು ನಡೆದು ಸಭೆಯ ಮುಂದೆ ಬಂದ ಎಲ್ಲಾ ಕಾರ್ಯಗಳು ಇತ್ಯರ್ಥ ಸೋಣಾಗಿರುವವು.

ಈ ಸಭೆಯು ಯುಗಾದಿದಿನ ಸಾಯಂಕಾಲ ಶ್ರೀ ದೇವಸ್ಥಾನದಲ್ಲಿ ಕೂಡಿದೊಡನೆ ಮುಲ್ಕಿ ದೊಡ್ಡ ಮನೆ ಮಾ| ರಾ| ದಾಸಸೆಟ್ಟರವರೂ ಇನ್ನು ಇವರ ಇತರ ಸಂಬಂಧಿಗಳೂ ಸ್ನೇಹಿತರೂ ಸಭೆಯಲ್ಲಿ ರಾ| ಅತ್ತಾವರ ಬಾಲಕೃಷ್ಣ ಸೆಟ್ಟಿಯವರು ನ್ಯಾಯವಿಧಾಯಕ ಸಭೆಯ ಮೆಂಬರುತನಕ್ಕೆ ಉಮೇದುವಾರರಾಗಿ ನಿಂತಿರುವುದರಿಂದ ಅವರಿಗೆ ಮುಲ್ಕಿಯ ಗೌಡಸಾರಸ್ವತ ಬ್ರಾಹ್ಮಣರ ವೃಂದವು ತಮ್ಮ ವ ತಮ್ಮ ಇಷ್ಟಮಿತ್ರರ ಓಟುಗಳನ್ನು ಕೊಟ್ಟು ಸಹಾಯಮಾಡಬೇಕೆಂದು ಅಪೇಕ್ಷಿಸಿದ ಪ್ರಕಾರ ಸಭಿಕರೆಲ್ಲರೂ ಒಮ್ಮನಸ್ಸಿನಿಂದ ತಮ್ಮೆಲ್ಲಾ ಸಹಾಯವನ್ನು ರಾ| ಅತ್ತಾವರ ಬಾಲಕೃಷ್ಣ ಸೆಟ್ರವರಿಗೆ ಕೊಡುವೆವೆಂಬುದಾಗಿ ಭರವಸೆ ಕೊಟ್ಟಿರುವರು. ಸದ್ಯದಲ್ಲಿ ಈ ಬಗ್ಗೆ ಇಲ್ಲಿಯ ಬಪ್ಪನಾಡು ಶ್ರೀ ದುರ್ಗಾಪರಮೇಶ್ವರಿ ಅಮ್ಮನವರ ದೇವಸ್ಥಾನದಲ್ಲಿ ಈ ದೇವಸ್ಥಾನದ ಹೋಬಳಿಯ ಒಂಭತ್ತು ಮಾಗಣೆಯವರ ಸಭೆಯು ಕೂಡುವದಾಗಿ ತಿಳಿಯುತ್ತೇನೆ.

ಕಾಸರಗೋಡು ಹೊಸ ತಾಲೂಕು ಬೋರ್ಡು.

ಕಳೆದ ೨೩ನೇ ತಾರೀಕಿಗೆ ಆದ ಚುನಾವಣೆಯಲ್ಲಿ ಈ ಕೆಳಗಿನ ಮೆಂಬರರು ಚುನಾಯಿಸಲ್ಪಟ್ಟಿರುವರು.

ತ್ರಿಕರಪುರ ಸರ್ಕಲಿಗೆ ರಾ| ಚೆಂದೇರೆ ಮಡಿಯನ್ ಕುಂಞಂಬು ನಾಯರವರೂ, ನೀಲೇಶ್ವರ ಸರ್ಕಲಿಗೆ ರಾ| ಕುಂಞಿಕಂಡನ್ ನಂಬಿಯಾರವರೂ, ಹೊಸದುರ್ಗ ಸರ್ಕಲಿಗೆ ರಾ| ಎ. ಸಿ. [illegible] ನಾಯರ್ ರವರೂ, ಪಳ್ಳಿಕೆರೆ ಸರ್ಕಲಿಗೆ ರಾ| ವಕೀಲ ಕೃಷ್ಣನ್ ನಾಯರವರೂ, ಆದೂರು ಸರ್ಕಲಿಗೆ ರಾ| ವಕೀಲ ಸುಂದರರಾಮರಾಯರೂ, ಕಾಸರಗೋಡು ಸರ್ಕಲಿಗೆ ರಾ| ಕುಂಞಿಕಲಂದನ್ ಬ್ಯಾರಿಗಳವರೂ, ರಾ| ವಕೀಲ ನರಸಿಂಹ ನಾಯ್ಕರವರೂ, ಕುಂಬಳೆ ಸರ್ಕಲಿಗೆ ರಾ| ಬೆಳ್ಳಪ್ಪ ಭಂಡಾರಿಗಳವರೂ, ಪೆರ್ಡಾಲ ಸರ್ಕಲಿಗೆ ರಾ| ವೆಂಕಪ್ಪ ಪೂಂಜರವರೂ, ಮಂಜೇಶ್ವರ ಸರ್ಕಲಿಗೆ ರಾ| ಭವಾನಿ ಶಂಕರರಾಯರೂ ರಾ| ಕಡಂಬಾರ [illegible] ಶೆಟ್ರವರೂ, ಬಾಯಾರ ಸರ್ಕಲಿಗೆ ರಾ| ಮಹಮ್ಮದ್ ತರವಳರವರೂ ಚುನಾಯಿಸಲ್ಪಟ್ಟಿರುವರು.

ಅನುಕ್ರಮಣಿಕೆ.

ಅಗ್ರಲೇಖ ಪುಟಗಳು.
ಲೊರ್ಡ ಕರ್ಝನರ ಮೃತ್ಯು. ೬
ಸ್ಫುಟವಿಚಾರಗಳು— ೭
೧. ಹಿಂದು-ಮಹಮ್ಮದೀಯರ ಐಕ್ಯ-ಇವರೊಳಗೆ ಡಿಲ್ಲಿಯಲ್ಲಿ ಗುಜರಾಥ ಪ್ರಾಂತ್ಯಗಳಲ್ಲಿ ನಡೆದ ದಂಗೆಗಳು. ೨-೩. ಬಂಗಾಳದ ಕೌನ್ಸಿಲಿನಲ್ಲಿ ಪುನಃ ಲೋಕಪಕ್ಷದವರ ಜಯ. ೪. ಒತ್ತಾಳಿಕೆಯ ಕಾಯಿದೆಗಳನ್ನು ರದ್ದುಪಡಿಸುವ ಬೀಲು. ೫ ವೈಕಮಿನ ಸತ್ಯಾಗ್ರಹ. ೬. ಕಾಬೂಲಿನ ಮಹಮ್ಮದೀಯರ ಅಕೃತ್ಯಗಳು—ಗಾಂಧೀಜಿಯವರ ಉಪದೇಶ. ೭. ಶ್ರೀಯುತ ಶ್ರೀನಿವಾಸ ಅಯ್ಯಂಗಾರರವರ ಆಗಮನ—ಮಠಾಧೀಶರ ಉಡ್ಪಿ ಸಭೆ. ೮. ಹಿಂದೂ ಮಹಾಸಭೆಯ ಅಧಿವೇಶನ.
ಮಂಗಳೂರು
ವರ್ತಮಾನಸಂಗ್ರಹಗಳು—
ವಿದೇಶ ವರ್ತಮಾನ, ಒಳದೇಶ ವರ್ತಮಾನ ೫
ದಕ್ಷಿಣ ಕನ್ನಡ—ಕುಂಬಳೆ, ಮಂಜೇಶ್ವರ, ಪುತ್ತೂರು, ಉಡುಪಿ, ,,
ಕಾಸರಗೋಡು, ಕುಂದಾಪುರ, ಮುಲ್ಕಿ. ,,
ವಿವಿಧ ಸಮಾಚಾರ. ೮
ಶ್ರವಣ ಬೆಳಗೊಳದಲ್ಲಿ ನಡೆದ ಅಖಿಲ ಭಾರತೀಯ ಜೈನ ಸಮ್ಮೇಳನದಲ್ಲಿ ಮೈಸೂರಿನ ಶ್ರೀಮನ್ಮಹಾರಾಜರವರು ಅಪ್ಪಣೆಕೊಡಿಸಿದ ಭಾಷಣ.
ಜ್ಞಾನಶೀಲರಾದ ಮತದಾರರಲ್ಲಿ ವಿನಂತಿ. ,,
ಬಿಲ್ಲವರ ಹಿತವರ್ಧಕ ಸಂಘ ಮುಂಬಯಿ. ೪
ಜಪಾನ ದೇಶದ ಗ್ರಾಮಾಂತರಗಳು. ,,

ಸ್ವದೇಶಾಭಿಮಾನಿ.

ಶಕ ೧೮೪೭ ಚೈತ್ರ ಶು॥ ೩ಯು ಶುಕ್ರವಾರ.

ಲೊರ್ಡ ಕರ್ಝನರ ಮೃತ್ಯು.

ಹಿಂದುಸ್ಥಾನದ ಮಾಜಿ ವೈಸರಾಯರಾದ ಲೊರ್ಡ ಕರ್ಝನರು ಕಳೆದ ವಾರ ತನ್ನ ಪ್ರಾಯದ ೬೬ನೇ ವಯಸ್ಸಿನಲ್ಲಿ ಮೃತಪಟ್ಟರು. ಇವರು ಯುರೋಪಿಯನರ ಮಾನದಿಂದ ಅಷ್ಟೊಂದು ವೃದ್ಧರಾಗಿದ್ದಿಲ್ಲವಾದರೂ ಮೂಲತಃವೆ ಅವರ ಪ್ರಕೃತಿಮಾನವು ಕೊಂಚ ವ್ಯಾಧಿ ಗ್ರಸ್ತವಾಗಿಯೆ ಇತ್ತು. ಮರಣಕ್ಕೆ ಒಂದು ವಾರವಿರುವಾಗ ಒಂದು ಚಿಕ್ಕ ನೆವದಿಂದ ಕಾಯಿಲೆಯುಂಟಾಗಿ ಅವರು ಹಾಸಿಗೆ ಹಿಡಿದರು. ಉತ್ತರೋತ್ತರ ಕಾಯಿಲೆಯು ಬೆಳೆಯುತ್ತ ಹೋಗಿ ಅದರಲ್ಲೇ ಅವರ ಅಂತ್ಯವಾಯಿತು. ಅವರ ಶವ ಸಂಸ್ಕಾರಕ್ಕೆ ಇಂಗ್ಲಂಡಿನೊಳಗಿನ ಪ್ರತಿಷ್ಠಿತರೂ, ಮಂತ್ರಿ ಮಂಡಲದವರೂ ಹಾಜರಿದ್ದದರಿಂದ ಅವರ ಶವ ಸಂಸ್ಕಾರವು ಅವರ ಹೆಸರಿಗೆ ತಕ್ಕಂತೆಯೆ ಆಯಿತೆನ್ನಲು ಅಡ್ಡಿ ಇಲ್ಲ.

ಕರ್ಝನ ಸಾಹೇಬರು ಮುಂಚಿನಿಂದಲೆ ಸಾಮ್ರಾಜ್ಯವಾದಿಗಳಾಗಿದ್ದರೂ, ಅವರಿಗೂ ಹಿಂದುಸ್ಥಾನಕ್ಕೂ ಅವರು ವೈಸರಾಯರಾಗುವದಕ್ಕಿಂತ ಮುಂಚಿನಿಂದಲೆ ಸಂಬಂಧವುಂಟಾಗಿದೆ. ಅವರು ಮೊದಲು ಹಿಂದುಸ್ಥಾನದ ಅಂಡರ ಸೆಕ್ರೆಟರಿಗಳಾಗಿದ್ದರು. ಆಗಿನಿಂದಲೆ ಅವರಿಗೆ ಹಿಂದುಸ್ಥಾನದ ಮಾಹಿತಿಯು ಉಂಟಾಗ ಹತ್ತಿತು. ಅವರು ಅತಿ ಮಹತ್ವಾಕಾಂಕ್ಷಿಗಳಲ್ಲಿ ಒಬ್ಬರಾದ ಕಾರಣ ವೈಸರಾಯರಾಗಿ ಈ ದೇಶಕ್ಕೆ ಬರುತ್ತಲೆ ಇಲ್ಲಿಂದ ರಾಜಿನಾಮೆ ಕೊಟ್ಟು ಸ್ವದೇಶಕ್ಕೆ ತೆರಳುವ ವರೆಗಿನ ೭-೭॥ ವರ್ಷದ ಅವಧಿಯಲ್ಲಿ ಅವರು ಯಾವ ಯಾವ ಕೃತ್ಯಗಳನ್ನು ಮಾಡಿದರೆಂಬುದನ್ನು ವಿವರವಾಗಿ ಉಲ್ಲೇಖಿಸುವದು ಈ ಹೊತ್ತಿನಂಥ ಅವರ ಮೃತ್ಯುಲೇಖದ ವಿಷಯವಲ್ಲವಾದರೂ ಅವರ ವೈಸರಾಯತನದ ಒಂದೆರಡು ಸಂಗತಿಗಳನ್ನಾದರೂ ನಿರ್ದೇಶಿಸದೆ ನಿರ್ವಾಹವಿಲ್ಲ. ಕರ್ಝನರ ಆಳಿಕೆಯಲ್ಲಿ ಬರಗಾಲ ಮತ್ತು ಪ್ಲೇಗ ಈ ಆಪತ್ತುಗಳು ಪ್ರಬಲವಾಗಿ ಆ ಕಾರಣದಿಂದ ಜನಸಂಹಾರವಾಗಹತ್ತಿತ್ತು. ಇದರ ಪತ್ರಿಕಾರಾರ್ಥವಾಗಿ ಕರ್ಝನರು ಯತ್ನಿಸಲಿಲ್ಲವೆಂದಿಲ್ಲ; ಆದರೆ ಅವರ ಯತ್ನವು ಸರಿಯಾದ ದಾರಿಯಿಂದ ಉಪಕ್ರಾಂತವಾಗದೆ ಇದ್ದ ಕಾರಣ ಅದು ಸಫಲವಾಗಲಿಲ್ಲ. ಯಾವ ಆಪತ್ತನ್ನೆ ಪರಿಹರಿಸುವದಿರಲಿ, ಹೊಸ ಸುಧಾರಣೆಯನ್ನು ಪ್ರಚಾರದಲ್ಲಿ ತರುವ ಸಂದರ್ಭವಿರಲಿ, ಕರ್ಝನ ಸಾಹೇಬರು ಅದಕ್ಕಾಗಿ ಕಮಿಶನುಗಳನ್ನು ನೇಮಿಸುವರು. ಇವರು ಆಳಿಕೆಯನ್ನು ಕೈಕೊಂಡ ಕೂಡಲೆ ತಾನು ಮಹತ್ವಾದ ೧೨ ಕೃತ್ಯಗಳನ್ನು ಮಾಡುವವನಿದ್ದೇನೆಂದು ಗ್ರೀಕ ಪುರಾಣದೊಳಗಿನ ಹರ್ಕ್ಯುಲಸನಂತೆ ನುಡಿದು ತೋರಿಸಿದರು. ಆದರೆ ಇವರ ಕೈಯಿಂದ ಯಾವ ಮಹತ್ವದ ಕಾರ್ಯವೂ ಸಾಧ್ಯವಾಗಲಿಲ್ಲ. ಕಮಿಶನು ಕಮಿಟಿಗಳನ್ನು ಒಂದರ ಮೇಲೊಂದು ನೇಮಕ ಪಡಿಸಿ ಅವುಗಳ ಖರ್ಚಿಗೆ ಒಂದು ದಾರಿಯನ್ನು ಮಾತ್ರ ಮಾಡಿಟ್ಟರು! ಇವರ ಆಳಿಕೆಯು ಕಮಿಟಿಮಯವಾದ್ದೆಂದು ವಿಧಿಸಿದರೆ ಅದು ಅವಾಸ್ತವವಲ್ಲ.

ಕರ್ಝನರಲ್ಲಿ ವಿದ್ವತ್ತೆ, ಬುದ್ಧಿಮತ್ತೆ ಮತ್ತು ಕರ್ತೃತ್ವ ಇವು ತುಂಬಿಕೊಂಡದ್ದರಿಂದ ಏನಾದರೂ ಒಂದು ಹೊಸ ಸಂಗತಿಯನ್ನೆ ಮಾಡದೆ ಅವರು ಸಮಾಧಾನವಾಗುತ್ತಿರಲಿಲ್ಲ. ಅವರು ವೈಸರಾಯರಾಗಿ ಬರುವದಗಿಂತ ಮುಂಚೆ ಹಿಂದೂಸ್ಥಾನದಲ್ಲಿ ರಾಷ್ಟ್ರೀಯ ಸಭೆ, ಪತ್ರಿಕೆಗಳು, ಇತ್ಯಾದಿ ಸಾಧನಗಳಿಂದ ರಾಜಕೀಯ ಜಾಗೃತಿಯಾಗುತ್ತಿತ್ತಾದರೂ, ಅವರ ಕೈಯಿಂದ ಬಂಗಾಲ ಇಲಾಖೆಯು ಹೋಳಾಗುವ ವರೆಗೆ ಸಾರ್ವತ್ರಿಕ ರಾಜಕೀಯ ಚಳವಳವು ಜನಿಸಿರಲಿಲ್ಲ. ಅಪಕಾರ ಬುದ್ಧಿಯಿಂದ ಅವರು ಯಾವದನ್ನು ಘಟಿಸಿ ತಂದರೊ ಅದೆ ಲೋಕಜಾಗೃತಿಗೆ ಉಪಕಾರಕವಾಯಿತು. ಈ ದೃಷ್ಟಿಯಿಂದ ವಿಚಾರ ಮಾಡಲು ಹಿಂದುಸ್ಥಾನದಲ್ಲಿ ಈಗ ಉಂಟಾಗಿರುವ ರಾಜಕೀಯ ಜಾಗೃತಿಯ ನವಯುಗವು ಕರ್ಝನರಿಂದಲೆ ಪ್ರವರ್ತಿತವಾಯಿತಾದ್ದರಿಂದ ಈ ನವಯುಗದ ಶ್ರೇಯಸ್ಸಿಗೆ ಅವರೆ ಭಾಗಿಗಳಾಗಿದ್ದರೆನ್ನಬಹುದು. ಇರಲಿ. ಇವರು ಸತ್ಯವು ಪಶ್ಚಿಮ ದೇಶದಲ್ಲೆ ಮೊದಲು ಬೆಳಗಿತು, ಪೂರ್ವ ದೇಶದೊಳಗಿನವರು ಸತ್ಯ ಪ್ರಿಯರಲ್ಲ ಎಂಬುದಾಗಿ ವೃಥಾ ಅಹಂಕಾರದ ಜಲ್ಪನೆಯನ್ನು ಮಾಡಿ ಜನತೆಯಲ್ಲಿ ಇನ್ನಷ್ಟು ಹುರಿದುಂಬಿಸಿದರಿಂದ ಮುಂಚಿನ ಜಾಗೃತಿಗೆ ಇದು ಇನ್ನಷ್ಟು ಸಹಾಯವಾಯಿತು. ಗಾಜಿನ ಮನೆಯಲ್ಲಿ ನಿಲ್ಲುವವನು ಬೇರೆಯವರ ಮನೆಗೆ ಕಲ್ಲು ಎಸೆಯಬಾರದು. ಎಸೆದರೆ ತನ್ನ ಆಶ್ರಯವೆ ನಾಶವಾಗುತ್ತದೆ. ಕರ್ಝನರ ಅವಸ್ಥೆಯಾದರೂ ಹೀಗೆಯೆ ಆಯಿತು. ಸರಸ್ವತಿಯ ಪವಿತ್ರ ಮಂದಿರದಲ್ಲಿ ನಿಂತು ಚಾನ್ಸಲರಾಗಿ ಭಾಷಣ ಮಾಡುವಾಗ ವಿದ್ಯಾರ್ಥಿಗಳಿಗೆ ಸತ್ಯಪ್ರೀತಿ ಇತ್ಯಾದಿ ಸಾಮಾನ್ಯ ಉಪದೇಶ ಮಾಡುವದನ್ನು ಬಿಟ್ಟು 'ನೀವೆಲ್ಲರು ಅಸತ್ಯವಂತರು' ಎಂಬುದಾಗಿ ಯಾವಾಗ ಹೇಳ ತೊಡಗಿದರೊ ಆಗ ಅವರ ಪೂರ್ವ ಚರಿತ್ರೆಯೊಳಗಿನ ಕೋರಿಯದ ಮಂತ್ರಿಯೊಡನೆ ಇವರು ನುಡಿದ ಅಸತ್ಯ ವಾಕ್ಯಗಳನ್ನು ಬೈಲಿಗೆ ತಂದು ಜನತೆಗೆ ಕರ್ಝನರ ಸ್ವರೂಪ ಪರಿಸ್ಫೋಟವನ್ನು ಮಾಡಬೇಕಾಗಿ ಬಂತು. ಇಂಥ ಎಲ್ಲ ಕಾರಣಗಳಿಂದ ಅವರು ಕರ್ತೃತ್ವಶಾಲಿಗಳಾದರೂ ಜನತೆಗೆ ಅಪ್ರಿಯರಾದರು. ವಿದ್ವತ್ತೆಯುಳ್ಳವರಾದರೂ ಮಹತ್ವಾಕಾಂಕ್ಷಿಗಳಾಗಿದ್ದರಿಂದಲೂ ಬರೋಡಾ ಮಹಾರಾಜರಂಥವರ ಮೇಲೆ ವಕ್ರ ದೃಷ್ಟಿಯನ್ನಿಟ್ಟದ್ದರಿಂದಲೂ ಇವರು ಬಾದಶಹರ ಠೇಂಕಾರವುಳ್ಳವರೆಂಬ ಹೆಸರನ್ನು ಪಡೆದರು, ಮಾತ್ರವಲ್ಲ, ದಿಲ್ಲಿ ದರಬಾರದ ಸಮಯದಲ್ಲಿ ಇವರು ಆನೆಯ ಅಂಬಾರಿಯಲ್ಲಿ ಮೆರೆದು ಆ ಹೆಸರಿಗೆ ಅನುರೂಪವಾಗಿಯೆ ವರ್ತಿಸಿದರು. ಸಾರಾಂಶ ಕರ್ಝನರು ಬಹು ಗರ್ವಿಷ್ಠರಾದ ಏಕತಂತ್ರಿಗಳಾಗಿದ್ದರು.

ಆದರೂ ಗಾಂಜಾ ಗಿಡಗಳ ಮಧ್ಯದಲ್ಲಿ ಒಂದೆರಡು ತುಲಸೀ ಗಿಡಗಳಿರುವಂತೆ ಕರ್ಝನ ಸಾಹೇಬರ ಈ ಘೋರ ಆಳಿಕೆಯಲ್ಲೂ ಒಂದೆರಡು ಸತ್ಕೃತ್ಯಗಳು ಸಂಭವಿಸದೆ ಇರಲಿಲ್ಲ. ಒಬ್ಬ ಅಡಿಗೆಯ ಪರಿಚಾರಕನನ್ನು ಸೇನೆಯ ಒಂದು ತುಕಡಿಯವರು ಕೊಂದ ಕಾರಣ ಆ ತುಕಡಿಗೆ ಸರಿಯಾಗಿ ಶಿಕ್ಷಿಸುವುದರಲ್ಲಿ ಅವರು ತಮ್ಮ ನ್ಯಾಯ ಪ್ರಿಯತೆಯನ್ನು ತೋರಿಸಿದರು. ಸರಕಾರಿ ಗೋಪ್ಯಗೋಪನ ಬೀಲು ಮುಂತಾದ ಅನೇಕ ಪ್ರತಿಗಾಮಿ ಧೋರಣದ ಕಾನೂನುಗಳನ್ನು ಈ ಬಾದಶಹರ ಆಳಿಕೆಯಲ್ಲಿ ಪಾಸಾಗಿವೆಯಾದರೂ ಐತಿಹಾಸಿಕ ವಸ್ತುಗಳ ಮತ್ತು ಕಟ್ಟೋಣಗಳ ಸಂರಕ್ಷಣದ ಬೀಲನ್ನು ಪಾಸುಮಾಡಿ ಅದರಿಂದ ಹಿಂದುಸ್ಥಾನದ ಇತಿಹಾಸಕ್ಕೆ ಕೊಂಚ ಮಟ್ಟಿಗೆ ಮಹತ್ವವನ್ನು ಕೊಟ್ಟರು.

ಈ ಮೇರೆಗೆ ಪ್ರತಾಪಶಾಲಿಗಳಾದ ಕರ್ಝನರು ಕೊನೆಗೆ ಕಿಚನರ ಸಾಹೇಬರೊಡನೆ—ಸೇನೆಯ ಇಲಾಖೆಗೆ ಸರ್ವ ಸ್ವಾತಂತ್ರ್ಯವಿರಕೂಡದೆಂಬ ಹಿತಕರ ಪಕ್ಷವನ್ನು ಎತ್ತಿಹಿಡಿದು ಕಾದಾಡಿದ್ದರಿಂದ ಅದರಲ್ಲಿ ಜಯಸಿಗದೆ ರಾಜಿಯನ್ನು ಕೊಟ್ಟು ದೇಶಕ್ಕೆ ತೆರಳಿದರು. ಅಲ್ಲಿ ಪಾರ್ಲಿಮೆಂಟಿನಲ್ಲಿ ಪ್ರವೇಶಿಸಿ ಕಲ್ಲೆದೆಯವರ ನಾಯಕತ್ವವನ್ನು ವಹಿಸಿ ಸಾಮ್ರಾಜ್ಯದ ಹಿತವನ್ನು ಸಾಧಿಸತೊಡಗಿದರು. ಅವರು ಮುಖ್ಯತಃ ಕಲ್ಲೆದೆಯ ಸಾಮ್ರಾಜ್ಯವಾದಿಗಳೂ, ಏಕತಂತ್ರವಾದಿಗಳೂ ಆಗಿದ್ದುದರಿಂದ ಸಾಯುವತನಕ ತನ್ನ ಆ ವ್ರತವನ್ನೆ ನಡಿಸಿದರು. ಹಿಂದುಸ್ಥಾನಕ್ಕೆ ನವಸುಧಾರಣೆಗಳ ಪ್ರಸ್ತಾಪವು ಬರುತ್ತಲೆ ಇವರ ಹೊಟ್ಟೆಯು ಕಚ್ಚುತ್ತಿತ್ತು. ಇವರು ಗತಿಸಿದ್ದರಿಂದ ಇವರ ಸಾಲಿನಲ್ಲಿ ಸಿಡನ್‌ಹೇಮ ಸಾಹೇಬರಂಥವರೊಬ್ಬರು ಇದ್ದಾರೆ. ಇವರ ಮರಣದಿಂದ ಈ ಜತೆಗಾರರಿಗೆ ದುಃಖವಾಗುವುದು ಸಹಜವಾಗಿದ್ದರೂ ಬ್ರಿಟಿಷ್ ಸಾಮ್ರಾಜ್ಯದ ಅಂಧಭಕ್ತರಲ್ಲಿ ಮೂರ್ಧನ್ಯರಾದ ಈ ಲೊರ್ಡಸಾಹೇಬರ ಮೃತ್ಯುವಿನಿಂದ ಸಾಮಾನ್ಯ ಬ್ರಿಟಿಷರಿಗೂ ವ್ಯಸನವಾಗದೆ ಇರಲಿಕ್ಕಿಲ್ಲ.

ಸ್ಫುಟವಿಚಾರಗಳು.

೧ ಹಿಂದು-ಮಹಮ್ಮದಿಯರಲ್ಲಿ ಐಕ್ಯವನ್ನು ಸಾಧಿಸಲು ಇತರರು ಯಾರು ಎಷ್ಟೆ ಪ್ರಯತ್ನಮಾಡಿದ್ದಿರಲಿ, ಆದರೆ ಮಹಾತ್ಮಾ ಗಾಂಧಿಗಳಷ್ಟು ಈ ವಿಷಯದಲ್ಲಿ ಇದುವರೆಗೆ ಯಾವ ಹಿಂದಿಯೂ ಯತ್ನಿಸಿದ್ದಿಲ್ಲವೆಂದು ಹೇಳಿದರೆ ಅದು ಸತ್ಯಾಭಾಸವಾಗಲಿಕ್ಕಿಲ್ಲ. ಮ॥ ಗಾಂಧಿಗಳು ಈ ಎರಡು ಮತಗಳ ಅನುಯಾಯಿಗಳಲ್ಲಿ ಐಕ್ಯವನ್ನು ಸಾಧಿಸಲು ಅಲ್ಲಲ್ಲಿ ಉಪನ್ಯಾಸ, ಪತ್ರಿಕೆಗಳಲ್ಲಿ ಲೇಖ, ಖಾಸಗಿ ಸಂಭಾಷಣದಲ್ಲಿ ಅದರ ಪ್ರತಿಪಾದನ ಇತ್ಯಾದಿ ಸಾಮಾನ್ಯ ಸಾಧನಗಳನ್ನು ಯಥಾಶಕ್ತಿ ಮಾಡಿದ್ದಲ್ಲದೆ, ಮುಖ್ಯ ಮುಖ್ಯ ಮುಖಂಡರನ್ನು ಸೇರಿಸಿ ಈ ವಿಷಯದ ಚರ್ಚೆಯನ್ನು ಮಾಡಿ, ಹಿಂದುಗಳಿಗೆ ಕೆಲವು ಮಟ್ಟಿಗೆ ಬಾಧಕವಾಗುವ ಮತ್ತು ಅಪ್ರಿಯವಾಗುವ ಶರ್ತಗಳನ್ನು ಸಹ ಅಂಗೀಕರಿಸಲು ಹಟಹಿಡಿದರು. ಹಿಂದು ಮಹಮ್ಮದೀಯರ ಐಕ್ಯದ ವಿಷಯವಾಗಿ ಗಾಂಧಿಗಳ ಪ್ರಯತ್ನವು ಇಷ್ಟರಿಂದಲೆ ಅಂತ್ಯವಾಗಲಿಲ್ಲ; ೨೧ ದಿನ ನಿರಶನ ವ್ರತದಿಂದ ತಪಸ್ಸಾಚರಿಸಿ ಅವರು ಈ ಕಾರ್ಯದಲ್ಲಿ ದೇವರ ಕರುಣೆಯನ್ನು ಪ್ರಾರ್ಥಿಸಿದರು. ಈ ವಿಧವಾಗಿ ಸಾಧಾರಣ ಮತ್ತು ಅಸಾಧಾರಣ, ದೃಶ್ಯ ಮತ್ತು ಅದೃಶ್ಯಫಲಕ ಪ್ರಯತ್ನಗಳನ್ನು ಗಾಂಧಿಜಿಯವರು— ಹಿಂದು-ಮುಸಲ್ಮಾನರಿಗೆ ಪೂಜ್ಯರಾದ ಗಾಂಧಿಜಿಯವರು—ಏಕಪ್ರಕಾರವಾಗಿ ನಡಿಸಿದರೂ, ದೈವದ ಆಟವೆ ಬೇರೆ!! ಹಿಂದು-ಮಹಮ್ಮದೀಯರಲ್ಲಿ ದಂಗೆಯುಂಟಾಗದೆ, ಕಡೆಗೆ ವೈಮನಸ್ಯವಾದರೂ ಸಂಭವಿಸದೆ ಇರುವ ಒಂದೆಯೊಂದು ತಿಂಗಳು ಕೂಡ ದಾಟುವುದಿಲ್ಲ. ಇದು ಶೋಚನೀಯವಲ್ಲವೆಂದು ಯಾರು ಹೇಳುವಹಾಗಿದೆ? ಕಳೆದ ವಾರ ಗುಜರಾಥ ಪ್ರಾಂತದೊಳಗಿನ ವಿರಮಗಾವ ತಾಲೂಕಿನ ಒಂದು ಹಳ್ಳಿಯಲ್ಲಿ ಹಿಂದು ಪೈಕಿ ಜೈನ ಮತ್ತು ಮಹಮ್ಮದೀಯರೊಳಗೆ ದಂಗೆಯಾಗಿದೆ ಎಂದು ಪ್ರಕಟವಾಗಿದೆ. ಬಾವಿಯಮೇಲೆ ನೀರುಸೇದುವಾಗ ಒಬ್ಬ ಜೈನ ಹೆಂಗಸು ಮತ್ತು ಮಹಮ್ಮದೀಯ ಸ್ತ್ರೀಯರು ಇವರೊಳಗೆ ಜಗಳವು ಪ್ರಾರಂಭವಾಗಿ ಕೊನೆಗೆ ಅದು ಅನ್ಯೋನ್ಯ ದಂಗೆಯಲ್ಲಿ ಪರಿಣಮಿಸಿದೆ. ಮೂಲಕಾರಣವು ಎಷ್ಟು ಕ್ಷುಲ್ಲಕವಾದ್ದು; ಆದರೆ ಅದರ ಪರಿಣಾಮವು ಎಷ್ಟು ಭಯಂಕರವಾಗಿದೆ! ಅಹಮದಾಬಾದಿನ ಈ ಸಂಗತಿಯೆ ಎಂದಲ್ಲ, ಇತರ ಕಡೆಗಳಲ್ಲುಂಟಾದ ಇಂಥ ದಂಗೆಗಳ ಮೂಲಕಾರಣವು ಬರೆ ಚಿಕ್ಕದೆ ಇರುವುದು. ಅಲ್ಲಿಂದಲ್ಲೆ ಅಂಥ ಕಾರಣಗಳನ್ನು ಮರೆತುಬಿಡಬಹುದು. ಪರಂತು ಮನಸ್ಸಿನಲ್ಲಿ ಹುಳುಕಿದ್ದರೆ ಅಂತರಂಗದಲ್ಲಿ ದ್ವೇಷವಿದ್ದರೆ ಮಾತ್ರ ಆ ದ್ವೇಷದ ಬೆಂಕಿಕಡ್ಡಿಗೆ ಈ ಅಲ್ಪ ನೆವವೆ ದೊಡ್ಡದೊಂದು ಕಟ್ಟಿಗೆ ರಾಶಿಯಾಗುತ್ತದೆ. ಇದಕ್ಕೆ ದಿಲ್ಲಿಯೊಳಗಿನ ಮೊನ್ನೆಯ ದಂಗೆಯೆ ಒಂದು ದೃಷ್ಟಾಂತವು. ಮುನ್ಸಿಪಾಲಿಟಿಯ ಚುನಾವಣೆಯನ್ನು ಕುರಿತು ಹಿಂದು-ಮಹಮ್ಮದೀಯರಲ್ಲಿ ವಾಚಾಟವು ನಡೆದು, ಅದು ದೀರ್ಘವಾಗಿ, ಒಂದು ಪ್ರಾಣಹಾನಿ ಸಂಭವಿಸಿತು. ಈ ದಂಗೆಯಲ್ಲಿ ಲಾಠಿಗಳ ಮತ್ತು ಇಟ್ಟಿಗೆಯ ಚೂರುಗಳ ಪ್ರಯೋಗವು ಯಥೇಷ್ಟವಾಗಿ ಮಾಡಲ್ಪಟ್ಟಿತು. ಒಂದು ಹಿಂದು ದೇವಸ್ಥಾನವು ಹಾಳು ಮಾಡಲ್ಪಟ್ಟಿತು! ಇಂಥ ಭಯಂಕರ ಪ್ರಕಾರಗಳು ದಿಲ್ಲಿಯಲ್ಲಿ ಸಂಭವಿಸುವುದು ಅತಿ ಆಶ್ಚರ್ಯಕರವೆ ಸರಿ. ಕಾರಣ, ಯಾವ ದಿಲ್ಲಿಯಲ್ಲಿ ಹಿಂದು-ಮಹಮ್ಮದೀಯರ ಐಕ್ಯಕ್ಕಾಗಿಯೆ ಮಹಾತ್ಮಾ ಗಾಂಧಿಗಳು ೨೧ ದಿವಸ ಉಪೋಷಣಮಾಡಿದರಿಂದ ಅದಕ್ಕೆ ಒಂದು ಪವಿತ್ರ ಕ್ಷೇತ್ರದ ಯೋಗ್ಯತೆಯು ಬಂದಿರುವುದೋ, ಯಾವ ದಿಲ್ಲಿಯಲ್ಲಿ ಹಿಂದು-ಮಹಮ್ಮದೀಯರ ಐಕ್ಯದ ಗುರುತೆಂಬಂತೆ ಮತ್ತು ಗೋವಧೆಯ ಪರಿತ್ಯಾಗದ ಒಂದು ಆಶ್ವಾಸನವೆಂಬಂತೆ ಮೌಲಾನಾ ಮಹಮ್ಮದಅಲ್ಲಿಗಳು ಗಾಂಧಿಗಳಿಗೆ ಗೋದಾನವನ್ನು ಕೊಟ್ಟಿದ್ದರೊ ಮತ್ತು ಯಾವ ದಿಲ್ಲಿಯಲ್ಲಿ ಐಕ್ಯಪರಿಷತ್ತಾಗಿ ಡಝನುಗಟ್ಟಲೆ ಠರಾವುಗಳು ಪಾಸಾಗಿದ್ದವೊ ಅದೆ ದಿಲ್ಲಿಯಲ್ಲಿ ಮೂರು ನಾಲ್ಕು ತಿಂಗಳಾಗುವಷ್ಟರೊಳಗೆ ಈ ಮೇರೆಗೆ ದಂಗೆಯಾಗುವುದೆಂದರೆ ಅರ್ಥವೇನು? ಸಾರಾಂಶ ಇಬ್ಬರೂ ತುಲ್ಯಬಲಿಗಳಾಗದೆ ಇಂಥ ಪ್ರಕಾರಗಳು ನಿಲ್ಲಲಿಕ್ಕಿಲ್ಲ.

೨. ಬಂಗಾಲದ ಕೌನ್ಸಿಲಿನಲ್ಲಿ ಸುದೈವದಿಂದ ಲೋಕಪಕ್ಷದಲ್ಲಿ ಪುನಃ ಐಕ್ಯವು ಪ್ರಸ್ಥಾಪಿತವಾಗಿದೆ. ಸುದೈವದಿಂದ ಎಂದು ಹೇಳಲು ಕಾರಣವೇನೆಂದರೆ, ಕೆಲವು ಸಮಯದ ಮುಂಚೆ ಮಹಮ್ಮದೀಯ ಪ್ರತಿನಿಧಿಗಳು ಸ್ವರಾಜ್ಯ ಪಕ್ಷದವರೊಡನೆ ಸೇರದೆ ಸರಕಾರದ ಕಡೆಗೆ ನಿಂತಿದ್ದರು. ಈ ಕಾರಣದಿಂದ ಲೋಕಪಕ್ಷದ ಕಾರ್ಯವು ಸರಿಯಾಗಿ ಸಾಗುತ್ತಿದ್ದಿಲ್ಲ. ಆದರೆ ಮೊನ್ನೆ ಈ ಒಡಕು ನಿಲ್ಲಲಿಲ್ಲ. ಮಹಮ್ಮದೀಯರು ದೇಶಬಂಧು ದಾಸರ ಕಡೆಗೆನೆ ನಿಂತಿರುವರು. ಇದು ಸಮಾಧಾನದ ಸಂಗತಿಯಾಗಿದೆ. ಸರಕಾರವು ೨ ಮಂತ್ರಿಗಳನ್ನೂ ಅವರಿಗೆ ಸೆಕ್ರೆಟರಿಗಳನ್ನೂ ನೇಮಿಸಿತ್ತು. ಮಂತ್ರಿಗಳ ಸಂಬಳವು ೪ ಸಾವಿರ ಇತ್ತು. ಲೋಕಪಕ್ಷಕ್ಕೆ ಸಂತೋಷಪಡಿಸಬೇಕೆಂಬ ಉದ್ದೇಶದಿಂದ ಸರಕಾರವು ತಾನಾಗಿಯೆ ೪ ಸಾವಿರ ಇದ್ದದನ್ನು ೩ ಸಾವಿರ ಮಾಡಿತ್ತು. ಪರಂತು ಕೌನ್ಸಿಲಿಗೆ ಈ ರಕಮು ಮಂಜೂರಾತಿಗೆ ಬಂದಾಗ ಪೂರ್ಣವಾಗಿ ಬಿದ್ದುಹೋಯಿತು. ಮಂತ್ರಿಗಳಿಗೆ ಸಂಬಳವು ಇರಕೂಡದು ಎಂಬುದರ ಅರ್ಥವು ಅವರ ಮೇಲೆ ನಿಂದಾವ್ಯಂಜಕದ ಠರಾವು ಪಾಸಾಯಿತೆಂಬುದೆ ಸರಿ. ಕೌನ್ಸಿಲು ಮಂತ್ರಿಗಳ ಸಂಬಳಕ್ಕನೆ ಈ ರೀತಿಯಿಂದ ಅರ್ಧ ಚಂದ್ರ ಪ್ರಯೋಗವನ್ನು ಕೊಟ್ಟ ಬಳಿಕ ಸರಕಾರವು ಸೆಕ್ರೆಟರಿಗಳ ಸಂಬಳದ ಸುದ್ದಿಯನ್ನು ಹೇಗೆ ಎತ್ತೀತು? ಸಾರಾಂಶ ಬಂಗಾಲದಲ್ಲಿ ಮತ್ತು ನಾಗಪುರದಲ್ಲಿ ಮಂತ್ರಿಗಳ ಸಂಬಳದ ಠರಾವು ಕಳೆದ ವರ್ಷದಂತೆಯೆ ಬಿದ್ದುಹೋಯಿತು.

೩. ಈ ಸಂದರ್ಭದಲ್ಲಿ ಒಂದು ಚಿಕ್ಕ ಸಂಗತಿಯನ್ನು ಅವಶ್ಯವಾಗಿ ನಿರ್ದೇಶಿಸಬೇಕಾಗಿದೆ. ಬಂಗಾಲ ಕೌನ್ಸಿಲಿನಲ್ಲಿ ಯಾವ ಮಹಮ್ಮದೀಯ ಪ್ರತಿನಿಧಿಗಳು ದಾಸಪಕ್ಷಕ್ಕೆ ವಿರೋಧಿಗಳಾಗಿದ್ದರೊ ಅವರೆ ಈಗ ಸರಕಾರಕ್ಕೆ ವಿರುದ್ಧಮತ ಕೊಟ್ಟಿದ್ದಾರೆ. ಸುಪ್ರಸಿದ್ಧ ಫಜಲುಲ್ ಹಕ್ಕರ ಹೆಸರು ಸರಕಾರಕ್ಕೆ ವಿರುದ್ಧಮತ ಕೊಟ್ಟವರ ಸಾಲಿನಲ್ಲಿ ಇದೆ. ಇದು ತುಂಬಾ ಆಶ್ಚರ್ಯವು! ಗೃಹಮಂತ್ರಿಗಳು ಈ ಸಂದರ್ಭದಲ್ಲಿ ಫಜಲುಲ್ ಹಕ್ಕರನ್ನು "ಇವರು ದ್ವಿದಲ ರಾಜಪದ್ಧತಿಯ ಭೋಕ್ತೃಗಳಾಗಿದ್ದು ಮಂತ್ರಿಪದವನ್ನು ಅಲಂಕರಿಸಿಕೊಂಡಿದ್ದರು. ಈಗ ಮಂತ್ರಿಪದವಿಲ್ಲದ ಬಳಿಕ ದ್ರಾಕ್ಷೆಯು ಹುಳಿ ಎಂಬಂತೆ ಇವರು ಮಂತ್ರಿಪದವನ್ನು ದೂಷಿಸುತ್ತಾರೆ" ಎಂಬುದಾಗಿ ಕೆಲವು ಮಟ್ಟಿಗೆ ಜರೆಯುವಂತೆಯೂ, ಕೆಲವು ಮಟ್ಟಿಗೆ ಉಪಹಾಸಾಸ್ಪದವಾಗುವಂತೆಯೂ ನುಡಿದರು. ಗೃಹಮಂತ್ರಿಗಳ ಈ ವಿಚಾರಗಳು ಅಸತ್‌ಬುದ್ಧಿಯಿಂದ ಪ್ರೇರಿತವಾದವುಗಳೆಂಬ ತತ್ವವನ್ನು ತಿಳಿದ ಬಳಿಕ ಅವುಗಳಿಗೆ ಪ್ರತ್ಯೇಕವಾಗಿ ಉತ್ತರವನ್ನು ಕೊಡುವದು ಅಗತ್ಯವಿಲ್ಲ.

೪. ಎಸೆಂಬ್ಲಿಯಲ್ಲಿ ಶ್ರೀ. ಪಟೇಲರ ಬೀಲು—ಬಂಗಾಲ, ಮದ್ರಾಸ, ಮುಂಬಯಿ, ಪಂಜಾಬ ಈ ಪ್ರಾಂತಗಳಲ್ಲಿಯ ಒತ್ತಾಳಿಕೆಯ ಕಾಯಿದೆಗಳನ್ನು ರದ್ದುಪಡಿಸಬೇಕೆಂದಿರುವ ಬೀಲು—ಲೋಕಪಕ್ಷದ ಬಹುಮತದಿಂದ ಪಾಸಾಯಿತು. ಇದು ಸಮಾಧಾನಕರ ಸಂಗತಿಯು. ಎಸೆಂಬ್ಲಿಯ ಡೆಪ್ಯುಟಿ ಪ್ರೆಸಿಡೆಂಟರಾದ ರಂಗಾಚಾರ್ಯರು ಸರಕಾರಿ ಪಕ್ಷಪಾತಿಗಳಾದ ಕಾರಣ ಹಲವು ನಮೂನೆಯ ಉಪಸೂಚನೆಗಳನ್ನು ತರಲು ಒದ್ದಾಡಿದರು. ಕೊನೆಗೆ ಪಂಜಾಬದ ಮಟ್ಟಿಗಾದರೂ ಒತ್ತಾಳಿಕೆಯ ಕಾಯಿದೆಗಳಿರಬೇಕೆಂದು ಯತ್ನಿಸಿದರು. ಆದರೆ ಅವರ ಈ ಅಸತ್‌ಪ್ರಯತ್ನವು ಸಾರ್ಥಕವಾಗಲಿಲ್ಲ. ಇದು ಇನ್ನಷ್ಟು ಸಮಾಧಾನಕರವು. ಒತ್ತಾಳಿಕೆಯ ಕಾನೂನುಗಳನ್ನು ಪಟೇಲರು ದಿಲ್ಲಿಯ ಗೋರಿಗಳಲ್ಲಿ ಹೂತುಹಾಕಿದ್ದಾರೆ. ಆದರೂ ಅವು ಪುನಃ ಪಿಶಾಚಸ್ವರೂಪದಿಂದ ಎದ್ದು ಎಲ್ಲೆಲ್ಲಿ ಯಾವ ವಿಧದಿಂದ ಜನತೆಯನ್ನು ಪೀಡಿಸುವವೆಂಬುದನ್ನು ನೋಡಬೇಕು.

೫. ವೈಕಮಿನ ಸತ್ಯಾಗ್ರಹದ ವಿಷಯವಾಗಿ ಗಾಂಧಿಜಿ ಮತ್ತು ತ್ರಾವಣಕೋರ ಸರಕಾರ ಇವರೊಳಗೆ ಒಂದು ಬಗೆಯ ಒಪ್ಪಂದವಾಗಿದೆ ಎಂದು ತಿಳಿದು ಬರುತ್ತದೆ. ಅಸ್ಪೃಶ್ಯರು ಯಾವ ಮಾರ್ಗವನ್ನು ಪ್ರವೇಶಿಸಕೂಡದೆಂಬುದಾಗಿ ಸಾಂಪ್ರದಾಯಿಕರ ಅಂಬೋಣವಿದೆಯೊ ಮತ್ತು ಎಲ್ಲಿ ಪ್ರವೇಶಿಸಕೂಡದೆಂಬುದಕ್ಕೆ ಸರಕಾರವು ಬೇಲಿಯನ್ನು ಹಾಕಿತ್ತೊ ಆ ಮಾರ್ಗದ ಬೇಲಿಯನ್ನು ಸರಕಾರವು ತೆಗೆಯಬೇಕು, ಸರಕಾರವು ಬೇಲಿಯನ್ನು ತೆಗೆದರೂ ಅಸ್ಪೃಶ್ಯರು ಮತ್ತು ಸತ್ಯಾಗ್ರಹಿಗಳು ಅಲ್ಲಿ ವರೆಗೆ ಬರಬಹುದು, ಬೇಲಿ ಇಲ್ಲವೆಂಬುದರಿಂದ ಆ ಮಾರ್ಗವನ್ನು ಅಸ್ಪೃಶ್ಯರು ಉಲ್ಲಂಘಿಸಕೂಡದು, ಈ ಎರಡು ಶರ್ತಗಳ ಮೇರೆಗೆ ಒಪ್ಪಂದವುಂಟಾಗುವದಿದೆ. ತ್ರಾವಣಕೋರಿನ ಕಮಿಶನರರು ವಿವಾದ್ಯ ಸ್ಥಳವನ್ನು ಸತ್ಯಾಗ್ರಹಿಗಳು ಉಲ್ಲಂಘಿಸಲಿಕ್ಕಿಲ್ಲವೆಂದು ಹೇಳಿದರೆ ಅಲ್ಲಿಯ ಬೇಲಿಯನ್ನು ತೆಗೆಯಬಹುದೆಂಬುದಾಗಿ ಹೇಳಿದ್ದಾರೆ. ಗಾಂಧಿಜಿಯವರು ಸತ್ಯಾಗ್ರಹಿಗಳಿಗೆ ಈ ಶರ್ತದ ಮಾನ್ಯತೆಯ ಬಗ್ಗೆ ಕೇಳಿ ತಿಳಿಸುವವರಿದ್ದಾರೆ. ವಿವಾದ್ಯಸ್ಥಾನದ ವರೆಗೆ ಸತ್ಯಾಗ್ರಹಿಗಳು ಬಂದು ಪ್ರತಿ ದಿನ ಅಲ್ಲಿಯೆ ನಿಂತು ನೂಲುವ ಕೆಲಸ ಮಾಡಿ ಹೋಗುವದರಿಂದ ಸಾಂಪ್ರದಾಯಿಕರ ಮನಸ್ಸಿಗೆ ಈ ಸತ್ಯಾಗ್ರಹಿಗಳ ವಿಷಯದಲ್ಲಿ ಸದಭಿಪ್ರಾಯವುಂಟಾಗಿ ಅವರೆ ಸ್ವಸಂತೋಷದಿಂದ ಅಂತ್ಯಜರಿಗೆ ಒಪ್ಪಿಗೆಯನ್ನು ಕೊಟ್ಟಾರು ಎಂದು ಗಾಂಧಿಜಿಯವರು ನಂಬಿದ್ದಾರೆ. ವೈಕಮಿನ ಸತ್ಯಾಗ್ರಹಿಗಳು ಗಾಂಧಿಗಳ ಶರ್ತವನ್ನು ಒಪ್ಪಿಕೊಂಡು ಬಹು ಸಮಯದಿಂದ ನಡೆಯುತ್ತಿರುವ ಈ ವಿವಾದವನ್ನು ನಿಲ್ಲಿಸುವದೂ, ಇದಕ್ಕಿಂತಲೂ ಹೆಚ್ಚು ಉಪಯುಕ್ತವಾದ ದೇಶಸೇವೆಯ ಕಾರ್ಯಗಳಲ್ಲಿ ತಮ್ಮ ಶಕ್ತಿಸರ್ವಸ್ವವನ್ನು ಖರ್ಚು ಮಾಡುವದೂ ಹಿತಾವಹವಾಗಿದೆ. ಆದ್ದರಿಂದ ತ್ರಾವಣಕೋರಿನ ಸತ್ಯಾಗ್ರಹಿಗಳು ಈ ವಿಷಯದಲ್ಲಿ ದೂರದರ್ಶಿತೆಯ ಮಾರ್ಗವನ್ನು ಅಂಗೀಕರಿಸಿಯಾರೆಂದು ನಂಬಿದ್ದೇವೆ. ವಸ್ತುತಃ ಮೇಲೆ ತೋರಿಸಿದ ಶರ್ತಗಳಿಂದ ಪಂಚಮರಿಗೆ ಯಾವ ಗುಣವೂ ಸಿಗಲಿಲ್ಲವೆಂಬುದು ಹೌದಾದರೂ ಗಾಂಧಿಜಿಗಳು ವೈಕಮು ವರೆಗೆ ಚಿತ್ತಯಿಸಿದ್ದಕ್ಕೆ ಏನೂ ಕಾರ್ಯವಾಗದೆ ಬರೆಗೈಯಿಂದ ಬಂದು ಬರೆಗೈಯಿಂದಲೆ ಹಿಂತೆರಳಿದರೆಂಬ ಅಪಕೀರ್ತಿಗೆ ಅವರನ್ನು ಗುರಿ ಮಾಡುವುದಕ್ಕಿಂತ, ಯಾವದಾದರೂ ಒಂದು ಬಗೆಯ ಒಪ್ಪಂದವಾಯಿತೆಂದು ತೋರಿಸುವದು ಎಷ್ಟೊ ಒಳ್ಳೇಯದು. ಆದ್ದರಿಂದ ವೈಕಮ್ ಸತ್ಯಾಗ್ರಹಿಗಳು ಪುನಃ ಆಗ್ರಹವನ್ನು ಹಿಡಿಯಲಿಕ್ಕಿಲ್ಲವೆಂದು ನಂಬಿದ್ದೇವೆ.

೬. ಕಾಬೂಲಿನ ಮಹಮ್ಮದೀಯರಲ್ಲಿ ಒಂದು ಅನುಚಿತ ಪ್ರಕಾರವು ನಡೆಯುತ್ತಿರುತ್ತದೆ. ಅಲ್ಲಿಯ ಅಹ್ಮದೀಯ ಜನರನ್ನು ಅವರ ಧರ್ಮಕ್ಕಾಗಿ ಕಲ್ಲುಗಳಿಂದ ಜಜ್ಜಿಕೊಂದ ಬಗ್ಗೆ ಮ. ಗಾಂಧಿಗಳು ಈ ರೀತಿಯಿಂದ ಮನುಷ್ಯವಧೆಯು ಉಚಿತವಲ್ಲವೆಂದು ಬರೆದಿದ್ದರು. ಗಾಂಧಿಗಳ ಈ ಅಹಿಂಸಾತ್ಮಕ ಉಪದೇಶವು ಮುಸಲ್ಮಾನರಿಗೆ ಹಿಡಿಯುವದುಂಟೆ? ಧರ್ಮದ ಹೆಸರಿನಿಂದ ಮನುಷ್ಯವಧೆಯನ್ನು ಮಾಡುವದು ಎಷ್ಟರ ಮಟ್ಟಿಗೆ ಭಯಂಕರವೆಂದರೆ ಅದರ ಹೆಸರು ಕೇಳಿದೊಡನೆಯೆ ರೋಮಾಂಚವಾಗುತ್ತದೆ. ಗಾಂಧಿಗಳ ಹಿತೋಪದೇಶಕ್ಕೆ ಮಹಮ್ಮದೀಯರು ಅವರ ಆಭಾರ ಮನ್ನಿಸುವದರ ಬದಲಾಗಿ ಅವರನ್ನೇ ಟೀಕಿಸಲುಪಕ್ರಮಿಸಿದ್ದಾರೆ. ಈ ರೀತಿಯಿಂದ ಟೀಕಿಸುವವರ ಪೈಕಿ ಒಬ್ಬರು ಬರೆಯುತ್ತಾರೆ ಏನಂದರೆ, "ಯಾವ ಸಂಗತಿಯು ನಮ್ಮ ಧರ್ಮದಲ್ಲಿ ಹೇಳಿದೆಯೊ ಅದು ಲೋಕದೃಷ್ಟಿಯಿಂದ ಎಷ್ಟೆ ನಿಂದ್ಯವಾಗಿದ್ದರೂ ಅದನ್ನು ನಾವು ಮಾಡಿಯೆ ಮಾಡಿಯೇವು. ಗಾಂಧಿಗಳ ಒಗ್ಗರಣೆಯು ಅದರಲ್ಲಿ ಅಗತ್ಯವಿಲ್ಲ." ಮಹಮ್ಮದೀಯ ಬಂಧುಗಳ ಈ ಅಭಿಪ್ರಾಯವನ್ನು ನೋಡಿದ್ದಲ್ಲಿ ನಮ್ಮಂಥವರ ಮನಸ್ಸು ಗೊಂದಳದಲ್ಲಿ ಬೀಳುವದು ಸಹಜವೆ, ಅವರ ಧರ್ಮವಚನಗಳ ಅರ್ಥವನ್ನು ಅವರೆ ಹೇಳಬೇಕಾದ್ದು ನ್ಯಾಯ, ಇತರರಿಗೆ ಆ ಅಧಿಕಾರವು ಬರುವದಿಲ್ಲವೆಂಬೀ ಸಂಗತಿಯು ನಿಜವಾದದ್ದಾದರೂ ಮನುಷ್ಯವಧೆಯು ಅತಿ ಭಯಂಕರವೆಂಬುದನ್ನು ಯಾರೂ ಒಪ್ಪಿಕೊಳ್ಳದೆ ಇರರು.

೭. ಹಿಂದು ರಿಲಿಜಸ್ ಎಂಡೋಮೆಂಟ ಬೀಲು, ಜನತೆಯ ವಿರೋಧವಿದ್ದರೂ ಪಾಸಾಯಿತು. ಈಗ ಅದು ಬೇಗನೆ ಕಾಯಿದೆಯ ರೂಪವನ್ನು ಹೊಂದಿ ಪ್ರಚಾರದಲ್ಲಿ ಬರುವದಿದೆ. ಆದರೆ ಇದು ಜಾರಿಯಲ್ಲಿ ಬರುವದಗಿಂತ ಮುಂಚಿತವಾಗಿಯೆ ಅದಕ್ಕೆ ಪ್ರತಿಕೂಲವಾಗಿ ಚಳವಳವನ್ನು ಪ್ರಾರಂಭಿಸಲು ನಮ್ಮ ಜಿಲ್ಲೆಯಲ್ಲಿ ಸಿದ್ಧತೆಯು ನಡೆದಿದೆ. ಉಡಿಪಿಯ ಮತ್ತು ಈ ಜಿಲ್ಲೆಯೊಳಗಿನ ಧಾರ್ಮಿಕ ಪೀಠಾಧಿಪತಿಗಳ ಒಂದು ಪರಿಷತ್ತು ಈ ತಿಂಗಳ ತಾ. ೨೮ರಲ್ಲಿ ಜರಗುವದಿದೆ. ಈ ಕಾರ್ಯಕ್ಕಾಗಿ ಮದ್ರಾಸಿನಿಂದ ಸುಪ್ರಸಿದ್ಧ ಎಸ್. ಶ್ರೀನಿವಾಸ ಐಯ್ಯಂಗಾರರು ಬರುವವರಿದ್ದಾರೆ. ಅವರು ಕಾಯಿದೆ ಪಂಡಿತರಾಗಿರುವದರಿಂದ ಅವರ ಆಲೋಚನೆಯು ಈ ಕಾರ್ಯದಲ್ಲಿ ಯಶಸ್ವಿಯಾದೀತೆಂದು ಎಲ್ಲರಿಗೆ ಭರವಸೆ ಇದೆ. ಆದರೆ ನಮ್ಮ ಧಾರ್ಮಿಸಂಸ್ಥೆಗಳ ವಿಧಿಲಿಖಿತವು ಹೇಗಿದೆಯೊ!

೮. ಬರುವ ಬೇಸಿಗೆಯ ರಜೆಯ ದಿವಸಗಳಲ್ಲಿ ಕಲಕತ್ತೆಯಲ್ಲಿ ಹಿಂದು ಮಹಾ ಸಭೆಯ ಅಧಿವೇಶನವು ಜರಗುವದಿದೆ. ಲಾಲಾಲಜಪತರಾಯರು ಅಗ್ರಾಸನವನ್ನು ವಹಿಸುವವರಿದ್ದಾರೆ. ಈ ಪರಿಷತ್ತಿನಲ್ಲಿ ಹಿಂದಿಗಳ ಸಂಘಟನದ ವಿಷಯವೂ ಇತರ ಮಹತ್ವದ ಚರ್ಚೆಗಳೂ ಉಂಟಾಗಲಿಕ್ಕಿದ್ದದರಿಂದ ಕಲಕತ್ತೆಯ ಈ ಅಧಿವೇಶನವು ವಿಶೇಷ ಮಹತ್ವವುಳ್ಳದ್ದಾದೀತೆಂದು ಹೇಳಲು ಅಡ್ಡಿ ಇಲ್ಲ.

ಮಂಗಳೂರು.

ಮದ್ರಾಸಿನ ಸ್ವರಾಜ್ಯಪಕ್ಷದ ಶ್ರೀಯುತ ಎಸ್. ಶ್ರೀನಿವಾಸ ಐಯ್ಯಂಗಾರರವರು ನಾಳೆ ಉಡುಪಿಗೆ ಬರುವರಾಗಿಯೂ ಮತ್ತು ಉಡುಪಿಯಲ್ಲಿ ಇವರ ಸತ್ಕಾರದ ಸನ್ನಾಹಗಳು ನಡಿಯುತ್ತಿವೆಂಬದಾಗಿಯೂ ತಿಳಿಯುತ್ತೇವೆ. ಇನ್ನು ಸದ್ಯದಲ್ಲಿಯೇ ಜ್ಯಾರಿಗೆ ಬರಲಿಕ್ಕಿರುವ ಎಂಡೌಮೆಂಟ ಆಕ್ಟಿನ ವಿಷಯ ಮಠಾಧಿಪತಿಗಳು ಏನೇನು ಮಾಡಬೇಕೆಂಬುದನ್ನು ಆಲೋಚಿಸಿ ನಿರ್ಣಯಿಸುವರೆ ಶ್ರೀ, ಅಯ್ಯಂಗಾರರು ಬರುವರು. ಇವರು ರಾ॥ ಹೊಸಕೊಪ್ಪ ಕೃಷ್ಣರಾಯರೊಡನೆ ತಾ. ೨೬ನೇ ದಿನ ಮದ್ರಾಸಿನಿಂದ ತೆರಳಿ ತಾ. ೭ಕ್ಕೆ ಶಿವಮೊಗ್ಗಕ್ಕೆ ಬಂದು ತಲ್ಪಿ ತಾ. ೮ಕ್ಕೆ ಉಡುಪಿಗೆ ತಲ್ಪುವರೆಂತಲೂ ಅಲ್ಲಿ ಈ ಜಿಲ್ಲೆಯ ಎಲ್ಲಾ ಮಠಾಧಿಪತಿಗಳ ಒಂದು ಸಭೆಯು ಜರಗುವದೆಂದೂ ಗೊತ್ತಾಗುತ್ತದೆ.

ಮಂಗಳೂರು ಟೌನ್ ಕೊ-ಓಪರೇಟಿವ್ ಬೇಂಕಿನ ಪಾಲುಮಾಲಿಕರ ಮಹಾ ಸಭೆಯು ಇದೇ ಬರುವ ತಿಂಗಳ ತಾ. ೫ನೇ ಆದಿತ್ಯವಾರ ಇಲ್ಲಿಯ ಸಹಕಾರಿ ಸಂಘಗಳ ಅಸಿಸ್ಟಾಂಟ ರಿಜಿಸ್ತ್ರಾರವರ ಆಫೀಸಿನಲ್ಲಿ ಜರಗುವದು. ಈ ಬೇಂಕಿನ ಕಳೆದ ತಾ. ೨೧—೧೨—'೨೪ರಲ್ಲಿ ಕೂಡಿದ ಮಹಾ ಸಭೆಯವರಿಂದ ನೇಮಕಪಟ್ಟ ಕಮಿಟಿಯವರು ಬೇಂಕಿನ ನಿಬಂಧನೆಗಳಲ್ಲಿ ಸೂಚಿಸಿದ ತಿದ್ದುಪಡಿಗಳನ್ನು ಪರ್ಯಾಲೋಚಿಸುವ ವಿಷಯವು ಈ ಸಭೆಯ ಮುಂದೆ ಬರುವದು.

The Calicut Bank, Ltd.,
ದಿ ಕೆಲಿಕಟ್ ಬೇಂಕ್, ಲಿಮಿಟೆಡ್,
ಹೆಡ್ ಆಫೀಸು—ಕಲ್ಲಿಕೋಟೆ.
ಬ್ರಾಂಚುಗಳು:— ಮುಲ್ಲಸ್‌ಚೇರಿ, ತಲಚೇರಿ, ಕೊಚ್ಚಿ, ಮತ್ತು ಪಾಲ್ಘಾಟು.
ರಿಜಿಸ್ಟರ್ಡ್ ಮತ್ತು ಅಧಿಕಾರಗೊಳಿಸಲ್ಪಟ್ಟ ಮೂಲಧನ ರೂ. 5,00,000—0—0.
ರೂಪಾಯಿ 10ರ 50,000 ಪಾಲುಗಳು.
(30—8—1924)ರ ವರೆಗೆ ಮೌಲ್ಯ ಮೂಲಧನ ರೂಪಾಯಿ 1,81,850—0—0.
ಒಂದು ವರುಷದ ಕಾಯಂ ಠೇವಣಾತಿಗೆ ಬಡ್ಡಿ ದರ ಸೇಕಡಾ ರೂ. 7—8—0.
ಕಳೆದ 4 ವರುಷಗಳಲ್ಲಿ ಪಾಲುಗಾರರಿಗೆ ಸೇಕಡಾ 12ರಂತೆ ಬಡ್ಡಿ ಹಂಚಿದೆ.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.
ಸಿ. ಕೃಷ್ಣನ್, ಬಿ. ಎ. ಬಿ. ಎಲ್.,
ಮೆನೇಜಿಂಗ್ ಡ್ಯಾರೆಕ್ಟರ್.
ಡ್ಯಾರೆಕ್ಟರರಲ್ಲಿ ಒಬ್ಬರು—
ಎಮ್. ನಾರಾಯಣ ಕಾಮತ್, ಬಿ. ಎ.
ಪ್ಲೀಡರ್, ಕುಂದಾಪುರ.

ಉಡುಪಿ ತಾಲೂಕಿನ ಜಮಾಬಂದಿ ಬಗ್ಗೆ ಹೋದ ಜಿಲ್ಲಾ ಕಲೆಕ್ಟರದೊರೆಗಳವರು ತಾ. ೨೮ಕ್ಕೆ ಇಲ್ಲಿಗೆ ಹಿಂತಿರುಗಿ ಬರುವರು.

ಅಖಿಲ ಭಾರತೀಯ ಆಯುರ್ವೇದ ಮಹಾ ಮಂಡಲದವರಿಂದ ಏರ್ಪಡಿಸಲ್ಪಟ್ಟ ಆಯುರ್ವೇದಿಕ್ ಪರೀಕ್ಷೆಗಳಲ್ಲಿ ಸಂಸ್ಕೃತ ಭಾಷಾಪರಿಚಿತಿಯು ವಿಶೇಷವಾಗಿ ಇಲ್ಲದಿರುವವರನ್ನು ದೇಶಾಭಾಷೆಯಲ್ಲಿಯೇ ಸಾಧ್ಯವಿರುವ ಭಿಷಕ್ ಪರೀಕ್ಷೆಗೆ ಉಮೇದುವಾರರಾಗಿ ತಯಾರಿಸುವ ಬಗ್ಗೆ ಒಂದು ಲೆಕ್ಚರಿಂಗ್ ಕ್ಲಾಸು ತೆರೆಯುವ ವಿಷಯವನ್ನು ಆಲೋಚಿಸುವರೆ ಇಲ್ಲಿಯ ಶ್ರೀರಾಮಕೃಷ್ಣ ವೈದ್ಯ ಧರ್ಮಾಶ್ರಮದ ಡೊಂಗರ ಕೇರಿಯಲ್ಲಿರುವ ಚಿಕಿತ್ಸಾಲಯದಲ್ಲಿ ಇಲ್ಲಿಯ ವೈದ್ಯರ ಒಂದು ಸಣ್ಣ ಸಭೆಯು ಯುಗಾದಿ ದಿನ ಬೆಳಿಗ್ಗೆ ಕೂಡಿತ್ತು. ಆಯುರ್ವೇದ ಭೂಷಣ ಎಮ್. ವಿ. ಶಾಸ್ತ್ರಿಗಳವರು ಈ ಸಭೆಯ ಅಧ್ಯಕ್ಷರಾಗಿದ್ದರು.

ಮಂಗಳೂರು ಶಹರ ಮುನಿಸಿಪಾಲಿಟಿಯೊಳಗೆ ಇರುವ ಉಪಾಧ್ಯಾಯರುಗಳ ಪ್ರಯೋಜನಾರ್ಥವಾಗಿ ಒಂದು ಸಹಕಾರಿ ಸಂಘವನ್ನು ನಿರ್ಮಿಸುವರೆ ಬೇಕಾದ ಪ್ರಯತ್ನಗಳು ನಡೆಯುತ್ತಿವೆ. ತತ್ಸಂಬಂಧವಾಗಿ ಬರುವ ಎಪ್ರಿಲ್ ತಿಂಗಳ ೪ನೇ ತಾರೀಕು ಸಾಯಂಕಾಲ ೫ ಘಂಟೆಗೆ ಮಿಶ್ಯನ್ ಹೈಸ್ಕೂಲಿನಲ್ಲಿ ಉಪಾಧ್ಯಾಯರ ಒಂದು ಸಭೆಯು ಸೇರುವುದು. ಆ ಮೀಟಿಂಗಿಗೆ ಬರಬೇಕೆಂದು ಆಮಂತ್ರಿಸುವ ನೋಟೀಸುಗಳು ಸದ್ಯ ಬೇಗನೇ ಛಾಪೆಯಾಗಿ ಉಪಾಧ್ಯಾಯರುಗಳ ಕೈ ಸೇರುವುವು. ಎಲ್ಲಾ ಉಪಾಧ್ಯಾಯರುಗಳು ಏಕಸ್ಥರಾಗಿ ಈ ಪ್ರಯತ್ನದಲ್ಲಿ ಪ್ರೋತ್ಸಾಹ ಕೊಡಬೇಕಾಗಿ ಈ ಸಂಘದ ಪ್ರೋತ್ಸಾಹಕರ ವಿನಂತಿ ಇರುವರು.

ಕಳೆದ ಜನವರಿ ತಿಂಗಳಲ್ಲಿ ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಬೋರ್ಡು ಪ್ರಾಂತ್ಯದಲ್ಲಿ ೩೪೮೭ ಜನಗಳೂ ೩೦೪೦ ಮರಣಗಳೂ ಇದ್ದವು. ವಾಂತಿಭೇದಿಯಿಂದ ೪ ಮರಣಗಳು ಸಿಡುಬಿನಿಂದ ೩೫ ಮರಣಗಳೂ ಇದ್ದವು.

ಈ ಸಂಸ್ಥಾನದಲ್ಲಿ ಸಹಕಾರ ಇಲಾಖೆಯ ಸಿಬಂದಿಯ ಮಾರ್ಪಾಟವು ಈ ರೀತಿಯಾಗಿರುವುದು:—ಇದೇ ಸಂಸ್ಥಾನಕ್ಕೆ ೯ ಜನ ಡಿಪ್ಯುಟಿ ರಿಜಿಸ್ತ್ರಾರವರು, ಇವರಲ್ಲಿ ಒಬ್ಬರು ರಿಜಿಸ್ತ್ರಾರವರ ಆಫೀಸಿನಲ್ಲಿ ಪರ್ಸನಲ್ ಅಸಿಸ್ಟೆಂಟರಾಗುವರು, ಬಾಕಿ ಎಂಟು ಜನರು ಸಂಸ್ಥಾನದ ಎಂಟು ಸೆಕ್ಷನ್‌ಗಳಲ್ಲಿ ಡಿಪ್ಯುಟಿ ರಿಜಿಸ್ತ್ರಾರರಾಗುವರು. ಇವರ ಸಂಬಳವು ತಿಂಗಳಿಗೆ ರೂ. ೩೦೦-೩೦-೪೫೦ಗಳ ಐದು ಇಸಂಗಳು ಮತ್ತು ೫೫೦-೫೦-೭೫೦ರ ನಾಲ್ಕು ಇಸಂಗಳು ಈ ಪ್ರಕಾರವಿದೆ. ಪ್ರತಿ ಜಿಲ್ಲೆಗೆ ಒಬ್ಬರಂತೆ ೨೪ ಜನ ಅಸಿಸ್ಟಾಂಟ್ ರಿಜಿಸ್ತ್ರಾರವರೂ ಮತ್ತು ಇದೇ ಇಸಮಿನ ರಿಜಿಸ್ತ್ರಾರರ ಆಫೀಸಿನ ಮೆನೇಜರ ಕೆಲಸದ ಬಗ್ಗೆ ಒಬ್ಬ ಅಸಿಸ್ಟಾಂಟ್ ರಿಜಿಸ್ತ್ರಾರರೂ ಈ ರೀತಿ ೨೫ ಜನ ಅಸಿಸ್ಟಾಂಟ್ ರಿಜಿಸ್ತ್ರಾರರು ಇವರ ಸಂಬಳದ ಇಸಂ ರೂ. ೧೫೦-೫-೨೦೦ ಮತ್ತು ೨೦೦-೧೦-೩೫೦ ಈ ರೀತಿಯಾಗಿರುತ್ತದೆ. ಜೇಫ್ ಇನ್ಸ್‌ಪೆಕ್ಟರರುಗಳ ಇಸಂಗಳನ್ನು ತೆಗೆದು ಹಾಕಿ ಇದೇ ಸಂಸ್ಥಾನಕ್ಕೆ ಒಟ್ಟಿಗೆ ೩೧೬ ಇನ್ಸ್‌ಪೆಕ್ಟರರ ನೇಮಕವನ್ನಿಟ್ಟಿರುವರು. ಇವರ ಸಂಬಳದ ಇಸಂ ೪೦-೪-೬೦; ೬೦-೫-೮೦ ಮತ್ತು ೮೦-೪-೧೦೦.

ವಿವಿಧ ಸಮಾಚಾರ.

ತೆಂಗಿನ ಕಾಯಿಯಲ್ಲಿ ಮುತ್ತು ಇರುವುದು

ತೆಂಗಿನ ಕಾಯಿಯಲ್ಲಿ ಅತ್ಯಂತ ಬೆಳ್ಳಗೆ, ಗುಂಡಾಗಿಯೂ ಇರುವ ಮುತ್ತು ಬಹು ಅಪೂರ್ವವಾಗಿ ದೊರಕುವದು. ಆದ್ದರೆ ಮುತ್ತಿನ ಚಿಪ್ಪಿನಲ್ಲಿ ಸಿಕ್ಕುವ ಮುತ್ತಿಗೆ ಇರುವ ತಳಕು ಮಾತ್ರ ತೆಂಗಿನ ಕಾಯಿಯ ಮುತ್ತಿಗಿರುವುದಿಲ್ಲ. ಉಷ್ಣದೇಶದ ದ್ವೀಪಗಳಲ್ಲಿ ವಾಸಮಾಡುವವರು ಈ ಮುತ್ತುಗಳನ್ನು ಬಹಳ ಭಕ್ತಿಯಿಂದ ಕಾಯುವರು. ಮತ್ತು ಅವು ಬಹಳ ಶ್ರೇಯಸ್ಕರವೆಂದು ಭಾವಿಸಿ ಅವನ್ನು ಯಾರಿಗೂ ಕೊಡರು. ಸಾಧಾರಣವಾಗಿ ತೆಂಗಿನ ಕಾಯಿಯ ಜುಟ್ಟಿನ ಬಳಿ ಮೂರು ಕಣ್ಣುಗಳಿರುತ್ತವೆ. ಕೆಲವು ತೆಂಗಿನ ಕಾಯಿಗಳಿಗೆ ಈ ಕಣ್ಣುಗಳಿರುವುದಿಲ್ಲ. ಆ ಸ್ಥಳಗಳಲ್ಲಿ ಈ ಮುತ್ತುಗಳು ಹತ್ತಿಕೊಂಡಿರುವವು ಎಂದು ಎಮ್ಸ್ಟಾರ್ಡಮಿನ ವೃಕ್ಷಶಾಸ್ತ್ರಜ್ಞನಾದ ಹ್ಯೊಂಜೇರ್ ಎಂಬಾತನು ಬರೆದಿರುತ್ತಾನೆ.

• • • • •

ಸಾಕಿದ ಜೇನುನೊಣಗಳಿಂದ ಉತ್ಪತ್ತಿ:—ಉತ್ತರ ಅಮೇರಿಕದ ಕೆನಡಾ ರಾಜ್ಯದ ಜಮೀನುದಾರರು ಜೇನುನೊಣಗಳನ್ನು ಸಾಕುವ ವೃತ್ತಿಯನ್ನು ಉಪಕಸುಬನ್ನಾಗಿ ಇಟ್ಟುಕೊಂಡಿರುವರು. ೧೯೨೪ನೇ ಇಸವಿಯಲ್ಲಿ ಇವರು ೩,೧೩,೧೩೪ ಪೌಂಡು ಜೇನುತುಪ್ಪವನ್ನು ಯುರೋಪ್ ಖಂಡಕ್ಕೆ ಕಳುಹಿಸಿದ್ದರು. ಈಗ ಇವರ ವ್ಯವಸಾಯವು ಇನ್ನೂ ಅಭಿವೃದ್ಧಿಯಾಗಿರುವುದರಿಂದ ಈ ವರುಷ ಒಂದರಲ್ಲೇ ಕೆನಡಾ ರೈತರು, ಒಂದುವರೆ ಕೋಟಿ ಪೌಂಡು ಜೇನುತುಪ್ಪವನ್ನು ಮಾಡಿ ಅವರಲ್ಲಿ ಸುಮಾರು ೬೦ ಲಕ್ಷ ಪೌಂಡುಗಳನ್ನು ಯುರೋಪಿಗೆ ರಫ್ತುಮಾಡುವರೆಂದು ಅಂದಾಜಾಗಿದೆ.

• • • • •

ಸಕ್ಕರೆಗಿಂತಲೂ ಸಿಹಿಯಾದ ಎಲೆ:—ದಕ್ಷಿಣ ಅಮೇರಿಕದ ಪರಾಗ್ವೆ ದೇಶದಲ್ಲಿ ಒಂದು ಬಗೆಯ ಗಿಡವು ಕಂಡುಹಿಡಿಯಲ್ಪಟ್ಟಿದೆ. ಇದರ ಎಲೆಗಳಿಂದ ಸಕ್ಕರೆಯು ೨೦೦ರಷ್ಟು ಅಧಿಕವಾದ ಸಿಹಿ ವಸ್ತುವು ದೊರೆಯುವುದೆಂದು ಗೊತ್ತಾಗುತ್ತದೆ. ಎಲೆಗಳನ್ನು ಒಣಗಿಸಿ ಪುಡಿಮಾಡಿ ಸಿಹಿಮಾಡಬೇಕೆಂಬ ವಸ್ತುಗಳಿಗೆ ಉಪಯೋಗಿಸಬಹುದು. ಹಸಿ ಎಲೆಗಳನ್ನು ನೀರಿನಲ್ಲಿ ತೋಯಿಸಿದರೆ ನೀರು ಸಿಹಿಯಾಗುವದು. ಇದರಿಂದ ಆದ ಸಿಹಿ ಪದಾರ್ಥಗಳು ಎಷ್ಟು ದಿನಗಳಿಟ್ಟರೂ ಹುಳಿ ಬರುವದಿಲ್ಲವಂತೆ! ಇದನ್ನು ಮಾತ್ರ ವ್ಯಾಧಿ ಇರುವವರು ಕ್ಷೇಮದಿಂದ ಉಪಯೋಗಿಸಬಹುದೆಂದು ಅಮೇರಿಕದ ಒಂದು ಪತ್ರಿಕೆಯಲ್ಲಿ ಪ್ರಕಟವಾಗಿದೆ

• • • • •

ಕಲ್ಕತ್ತೆಯ ಒಬ್ಬ ದೋಬಿ:—ಕಲ್ಕತ್ತೆಯಲ್ಲಿ ಬಹಳ ದರಿದ್ರಾವಸ್ಥೆಯಲ್ಲಿದ್ದ ಒಬ್ಬ ದೋಬಿಯು ದಿನಕ್ಕೆ ೪ ಆಣೆ ಸಂಪಾದಿಸುತ್ತಿದ್ದನು. ಇವನು ಇದರಲ್ಲಿ ಸ್ವಲ್ಪ ಹಣ ಉಳಿಸಿ ೬೦ ರೂಪಾಯಿಗೆ ಒಂದು ಸಣ್ಣ ಮನೆ ತೆಗೆದಿದ್ದನು. ಕಲ್ಕತ್ತಾ ಪಟ್ಟಣವು ಅಭಿವೃದ್ಧಿಯಾಗುತ್ತಾ ಬರಲು ಈ ಮನೆಯಿಂದ ಅವನಿಗೆ ೨೪೦೦೦ ರೂಪಾಯಿಗಳು ಸಿಕ್ಕಿದವು. ಇವನು ಈ ಹಣವನ್ನು ಬಡ್ಡಿಗೆ ಕೊಟ್ಟು ಅವನು ಸಾಯುವ ಕಾಲದಲ್ಲಿ ೩,೦೫,೦೦೦ ರೂಪಾಯಿಗಳಾದವು. ಇವನಿಗೆ ವಾರಿಸುದಾರರು ಇಲ್ಲದ್ದರಿಂದ ಈ ಹಣವು ಸರಕಾರಕ್ಕೆ ಸಿಕ್ಕಿತು.

• • • • •

ವಾಯುಮಂಡಲದಲ್ಲಿ ಎತ್ತರಕ್ಕೆ ಹೋದ ಹಾಗೆ ವಾಯುವು ವಿರಳವಾಗುತ್ತಾ ಬಂದು ೨-೩ ಮೈಲುಗಳ ಮೇಲೆ ಉಸಿರಾಡುವುದು ಕಷ್ಟವಾಗುವುದು. ಇದರಿಂದ ಜ್ಞಾನತಪ್ಪುವದೂ ಉಂಟು. ಕೆಲಿಹೊ ಎಂಬ ಫ್ರೆಂಚ ವೈಮಾನಿಕನು ಉಸಿರಾಡಲಿಕ್ಕೆ ಆಮ್ಲಜನಕವನ್ನು ತೆಗೆದುಕೊಂಡು ೪೧೫೮೦ ಅಡಿಗಳ (ಸುಮಾರು ೭ ಮೈಲು) ಎತ್ತರಕ್ಕೆ ವಿಮಾನದಲ್ಲಿ ಹಾರಿ ಬಂದಿರುವನು. ಅಲ್ಲಿನ ಶೈತ್ಯದಿಂದ ನೀರೂ ಗಡ್ಡೆಯಾಗಿ ಕಲ್ಲಿನ ಹಾಗೆ ಗಟ್ಟಿಯಾಗುತ್ತದೆಂದು ಅವನು ತಿಳಿಸುತ್ತಾನೆ.

• • • • •

ಝೂಡಮಾಲಿಗೆ ಒಂದು ಸ್ಮಾರಕ—ಹಂಗೇರಿಯಾ ರಾಜ್ಯಕ್ಕೆ ಸೇರಿದ ಇಡನಬರ್ಗ ಎಂಬ ಊರಲ್ಲಿ ಆ ಊರಿನ ಝೂಡಮಾಲಿಯ ಜ್ಞಾಪಕಾರ್ಥವಾಗಿ ಒಂದು ಸ್ಮಾರಕ ವಸ್ತುವನ್ನು ನಿರ್ಮಿಸಬೇಕೆಂದು ಪ್ರಯತ್ನ ನಡೆಯುತ್ತಾ ಇದೆ. ಈ ಝೂಡಮಾಲಿಯು ಮುದುಕನಾದರೂ ವಾರದಲ್ಲೆಲ್ಲಾ ತನ್ನ ಕೆಲಸವನ್ನು ಮಾಡುತ್ತಿದ್ದು ತನ್ನ ಚಿಕ್ಕ ವಯಸ್ಸಿನಲ್ಲಿ ತನ್ನ ಅಜ್ಜ ಮುತ್ತಜ್ಜರಿಂದ ಕಲಿತ ಪುರಾತನ ಕಥೆಗಳನ್ನೂ ಹಾಡುಗಳನ್ನೂ ಪ್ರತಿ ಆದಿತ್ಯವಾರ ಹೇಳುತ್ತಿದ್ದನು. ಇವೆಲ್ಲವೂ ಈಗಿನ ನಾಗರೀಕರಲ್ಲಿ ಮರೆತು ಹೋಗಿದ್ದುದರಿಂದ ಜನರು ಗುಂಪುಗುಂಪಾಗಿ ಕೂಡಿ ಬಂದು ಅವುಗಳನ್ನು ಆದರದಿಂದ ಕೇಳುತ್ತಿದ್ದರು. ಒಬ್ಬ ಶಾಲಾ ಉಪಾಧ್ಯಾಯರು ಇವುಗಳನ್ನು ಸಂಗ್ರಹಿಸಿ ಈಗ ಪುಸ್ತಕರೂಪವಾಗಿ ಮಾಡಿರುವರಂತೆ.

• • • • •

— ಸೂರ್ಯಗ್ರಹಣ —

ಕಳೆದ ಪುಷ್ಯ ಬಹುಳ ಅಮಾವಾಸ್ಯೆ (ತಾ. ೨೪—೧—'೨೫)ಗೆ ಅಮೇರಿಕದಲ್ಲಿ ಪೂರ್ಣ ಖಗ್ರಾಸ ಗ್ರಹಣವಾಯಿತು. ಅನೇಕ ಮಂದಿ ಜ್ಯೋತಿಷಜ್ಞರೂ, ಶಾಸ್ತ್ರಜ್ಞರೂ ಅನೇಕ ದಿವಸಗಳಿಂದ ಇದರ ಕಡೆಗೆ ಲಕ್ಷ್ಯವಿಟ್ಟಿದ್ದರು. ಗ್ರಹಣವು ಪೂರ್ವದಿಂದ ಪಶ್ಚಿಮದ ಕಡೆಗೆ ಹಿಡಿಯುತ್ತಾ ಹೋಗುವದೆಂದು ಮುಂಚಿತವಾಗಿ ಹೇಳಿದುದು ಸುಳ್ಳಾಗಿ ಅದು ದಕ್ಷಿಣದಿಂದ ಉತ್ತರದ ಕಡೆಗೆ ಹಿಡಿಯುತ್ತಾ ಹೋಯಿತು. ಪೂರ್ಣ ಖಗ್ರಾಸವು ೧ ಗಂಟೆಗೆ ಆಯಿತು. ಖಗ್ರಾಸದ ಕಾಲದಲ್ಲಿ ಬುಧ, ಗುರು, ಮತ್ತು ಶುಕ್ರ ಈ ಮೂರು ಗ್ರಹಗಳು ಮಾತ್ರವೇ ಆಕಾಶದಲ್ಲಿ ಕಾಣುತ್ತಿದ್ದವು. ಸೂರ್ಯನ ತೇಜೋವಲಯವು ಉತ್ಕೃಷ್ಟ ರೀತಿಯಿಂದ ಚಕಿಸುತ್ತಿತ್ತು. ಗ್ರಹಣದ ಕಾಲದಲ್ಲಿ ಉಷ್ಣತೆಯು ಒಂದಂಶ ಮಾತ್ರ ಕಡಿಮೆಯಾಗಿತ್ತು.

ಗ್ರಹಣದ ವೇಧವನ್ನು ಪರೀಕ್ಷಿಸಲು ೨೦-೨೫ ವಿಮಾನಗಳು ಆಕಾಶದಲ್ಲಿ ಬಹು ದೂರ ಹಾರಿದ್ದವು. ಲೆ. ಗೊಡಾರ್ಡ, ಇವರ ವಿಮಾನವು ೧೬ ಸಾವಿರ ಪೂಟು ವರೆಗೆ ಏರಿದ್ದಿತು; ಈ ವೈಮಾನಿಕನಿಗೆ ಆಕಾಶದಲ್ಲಿ ಒಂದು ಅದೃಷ್ಟಪೂರ್ವ ಚಮತ್ಕಾರವು ಕಂಡಿತು. ಸೂರ್ಯ ಗ್ರಹಣವು ಆಗುತ್ತಾ ಆಗುತ್ತಾ ಕೇವಲ ಸುತ್ತಿನ ತುದಿಯ ಅಂಚುಮಾತ್ರ ಉಳಿದಾಗ ಅದರ ಸೌಮ್ಯ ಬಿಸಿಲೂ, ಗ್ರಹಣದ ನೆರಳೂ ಒಂದೇ ಕಾಲಕ್ಕೆ ಬಹು ರಮ್ಯವಾಗಿ ಕಾಣುತ್ತಿದ್ದವು. ಗೊಡಾರ್ಡ ಇವರು ನೆರಳಿನ ೧೬ ಪ್ರಕಾರದ ಫೋಟೋಗಳನ್ನು ತೆಗೆದಿರುವರು. ಈ ಗ್ರಹಣದ ಕಾಲಕ್ಕೆ ಮತ್ತೊಂದು ಹೊಸ ಶೋಧನೆಯಾಗಿದೆ. ಮಿ ಪಾಟಿಜ್ ಎಂಬವರು ಗ್ರಹಣದ ಕಾಲಕ್ಕೆ [illegible] ಪದ್ಧತಿಯಿಂದ ೩೦೦ ಅಲ್ಲಿನ ವರ್ತಮಾನವನ್ನು ತೆಗೆದುಕೊಂಡರು. ಈ ಸಂದೇಶಗಳು ಹಗಲು ಸ್ಪಷ್ಟವಾಗಿ ಕೇಳಿಸುವದಿಲ್ಲ. ಆದರೆ ಗ್ರಹಣದ ಕಾಲಕ್ಕೆ ಬಹು ಸ್ಪಷ್ಟವಾಗಿ ಕೇಳಿಸಿರುವವಂತೆ.

• • • • •

ದಕ್ಷಿಣ ಅಮೇರಿಕದ ಬ್ರೆಜಿಲ್ ಪ್ರಾಂತ್ಯದ ಪಾರಾಣಾ ನದಿಯಲ್ಲಿರುವ ಒಂದು ಪ್ರಕಾರದ ಮೀನುಗಳು ನಾಯಿಗಳಂತೆ ಕಚ್ಚುತ್ತವೆ ಮತ್ತು ಬೊಗಳುತ್ತವೆಂದು ಗೊತ್ತಾಗಿದೆ.

• • • • •

ನೇಪಾಳದಲ್ಲಿಯ ಗುಲಾಮಗಿರಿ.

ನೇಪಾಳದ ಮಹಾರಾಜರವರು ತಮ್ಮ ರಾಜ್ಯದೊಳಗಿನ ಗುಲಾಮಗಿರಿಯನ್ನು ನಿಲ್ಲಿಸಿರುವರು. ನೇಪಾಳದ ಜನ ಸಂಖ್ಯೆಯು ೫೦ ಲಕ್ಷ. ಗುಲಾಮರ ಸಂಖ್ಯೆಯು ೫೧,೪೧೯ ಇತ್ತು. ಅಂದರೆ ನೇಪಾಳದ ನೂರು ಜನರಿಗೆ ಒಬ್ಬ ಗುಲಾಮನಿದ್ದನು. ಗುಲಾಮರ ಧನಿಗಳ ಸಂಖ್ಯೆಯು ೧೫,೭೧೯ ಇದ್ದಿತು; ಅಂದರೆ ಒಬ್ಬ ಧನಿಯು ಹತ್ತರ ೩-೪ ಜನ ಗುಲಾಮರಿದ್ದರು. ೫ ಜನರಿಗೊಂದು ಕುಟುಂಬವನ್ನು ಹಿಡಿದರೆ ನೇಪಾಳದಲ್ಲಿ ೧೦ ಲಕ್ಷ ಕುಟುಂಬಗಳಿರುವವು. ಆದುದರಿಂದ ೨೦ ಕುಟುಂಬಕ್ಕೆ ಒಬ್ಬ ಗುಲಾಮನಿದ್ದಂತಾಯಿತು. ಗುಲಾಮರ ಸೇವೆಯನ್ನು ಹೊಂದುತ್ತಿದ್ದ ಧನಿಗಳ ಮತ್ತು ಅವರ ಕುಟುಂಬಗಳ ಸಂಖ್ಯೆಯು ೭೫ ಸಾವಿರಕ್ಕೆ ಮಿಕ್ಕಿರಲಿಲ್ಲ. ಅಂದರೆ ಗುಲಾಮರ ಸೇವೆಯನ್ನು ಹೊಂದದೆ ಇರುವ ಜನರ ಸಂಖ್ಯೆಯೇ ನೇಪಾಳದಲ್ಲಿ ಹೆಚ್ಚಾಗಿತ್ತು.

ಮನುಷ್ಯ ಜಾತಿಯಲ್ಲಿ ಜನಿಸಿದ ಈ ಗುಲಾಮರ ಸ್ಥಿತಿಯು ದನಕರುಗಳಂತಿದ್ದುದರಿಂದ ಅವರೂ ದನಕರುಗಳಂತೆ ಆಸ್ತಿಯ ಒಂದು ಭಾಗವಾಗಿದ್ದರೆಂದು ತಿಳಿಯುತ್ತಿದ್ದರು. ಆದಕಾರಣ ಗುಲಾಮರ ಬಿಡುಗಡೆಯಿಂದ ಅವರ ಧನಿಗಳಿಗೆ ನಷ್ಟ ಭರತಿಮಾಡುವುದಕ್ಕಾಗಿ ನೇಪಾಳ ಮಹಾರಾಜರು ೧೪ ಲಕ್ಷ ರೂಪಾಯಿಗಳನ್ನು ಧನಿಗಳಿಗೂ ಕೊಟ್ಟು ಗುಲಾಮರನ್ನು ಅವರ ಧನಿಗಳಿಂದ ಬಿಡಿಸಿರುವರು.

ಗುಲಾಮಗಿರಿಯಲ್ಲಿರುತ್ತಿದ್ದ ಜನರ ಸ್ಥಿತಿಯು ಮೂಕ ದನಗಳಂತೆ ಇತ್ತು. ಆದುದರಿಂದ ಅವರನ್ನು ತಿರಿಗಿ ಮನುಷ್ಯರಲ್ಲಿ ತರುವಂತೆ ಅವರು ಕೆಲವು ಸಮಯದ ವರೆಗಾದರೂ ಮನುಷ್ಯತ್ವದ ಉಮೇದ್ವಾರಿಕೆಯನ್ನು ಮಾಡಬೇಕಾಗುವುದು. ನೇಪಾಳ ಮಹಾರಾಜರು ಈ ಜನರನ್ನು ಹೊಸ ಧನಿಗಳ ವಶಕ್ಕೆ ಕೊಟ್ಟಿರುವರು. ಅವರು ಕೆಲವು ಕಾಲದ ವರೆಗೆ ಈ ಧನಿಗಳಲ್ಲಿ ನೌಕರರಂತೆ ಕೆಲಸಮಾಡಬೇಕಾಗುವುದು. ಹೀಗಾದರೆ ಅವರು ಮನುಷ್ಯರಂತೆ ವರ್ತಿಸಲು ಅಡ್ಡಿಯಾಗುವುದಿಲ್ಲ. ಈ ಸ್ಥಿತಿಯಲ್ಲಿ ಅವರನ್ನು ಯೋಗ್ಯ ರೀತಿಯಲ್ಲಿ ನಡೆಯಿಸಿಕೊಳ್ಳುವಂತೆ ಮಹಾರಾಜರವರೂ ವ್ಯವಸ್ಥೆಮಾಡಿರುವರು. ಮತ್ತು ಆ ಜನರ ಮಕ್ಕಳು ಜನ್ಮದಿಂದಲೇ ಸ್ವತಂತ್ರ ನಾಗರಿಕರೆಂದು ಎಣಿಸಲ್ಪಡುವರು.

• • • • •

ಅಮೇರಿಕದ ಡಾ. ಪಿಲಿಪ್ಸ ಥೊಮಸ್ ಎಂಬವರು "ಅಲ್ಟ್ರಾ ಅಂಡಿಬಲ್ ಮೇಯುರೋಫೋನ್'' ಎಂಬ ಹೊಸದೊಂದು ಯಂತ್ರದ ಮೂಲಕ ಮನುಷ್ಯನ ಹೃದಯದ ಹಾರುವಿಕೆಯ ಶಬ್ದವನ್ನು ಎಷ್ಟೋ ದೂರದ ವರೆಗೆ ಕೇಳಬರುವಂತೆ ತಯಾರಿಸಿರುವರು. ಈ ಯಂತ್ರವನ್ನು ''ವೆಸ್ಟಿಂಗ್ ಹೌಸ್ ಕಡ್ಕಾ ಎಂಬಲ್ಲಿ ಉಪಯೋಗಿಸಿ ಹೃದಯದ ನಾಡಿಗಳ ಶಬ್ದವು ಉತ್ತರ ಅಮೇರಿಕದಲ್ಲೆಲ್ಲಾ ಕೇಳ ಬಂದಿತಂತೆ' ಅದಲ್ಲದೆ ಆ ಶಬ್ದವು ಯುರೋಪು ಖಂಡಕ್ಕೂ ಕೇಳ ಬಂದಿದೆಯಂತೆ.

• • • • •

ಆಸ್ಟ್ರಿಯಾ ದೇಶದಲ್ಲಿ ವಿಯನ್ನಾ ಎಂಬಲ್ಲಿ ಕೆಲವು ಡಾಕ್ಟರರು ಗುಂಗಾಡುಗಳ ಮೂಲಕ ಹುಚ್ಚುತನವನ್ನು ಬಿಡಿಸುತ್ತಿರುವರಂತೆ. ಹುಚ್ಚುಹಿಡಿದವರಿಗೆ ಗುಂಗಾಡುಗಳಿಂದ ಕಚ್ಚಿಸಿ ಚಳಿಜ್ವರ ಹಿಡಿಸಿದರೆ ಹುಚ್ಚು ವಾಸಿಯಾಗುತ್ತದೆ. ಆ ಮೇಲೆ ಚಳಿಜ್ವರಕ್ಕೆ ಮದ್ದು ಕೊಟ್ಟು ಗುಣಮಾಡುವರಂತೆ. ಈ ಚಿಕಿತ್ಸೆಯನ್ನು ಈಗ ಇಂಗ್ಲಂಡಿನಲ್ಲಿಯೂ ಶುರುಮಾಡಿರುವರು. ನಮ್ಮ ದೇಶದ ಡಾಕ್ಟರರೂ ಪ್ರಯತ್ನಿಸಿದರೆ ಹುಚ್ಚರ ಸಂಖ್ಯೆಯು ಕಡಿಮೆಯಾಗುತ್ತಿತ್ತಲ್ಲವೇ?

ಜ್ಞಾನಶೀಲರಾದ ಮತದಾರರಲ್ಲಿ ವಿನಂತಿ.

ಬಂಧುಭಗಿನಿಯರೇ,

ಎಂದಿನಂತೆ ಇಂದೂ ನಿಮ್ಮ ಪರವಾಗಿ ಮದ್ರಾಸು ನ್ಯಾಯವಿಧಾಯಕ ಸಭೆಗೆ ಮೆಂಬರನನ್ನು ಆರಿಸುವ ವೇಳೆಯು ಬಂದಿರುವದು. ತಾವು ಈ ವಿಚಾರದಲ್ಲಿ ದಯವಿಟ್ಟು ಈ ಸಂಗತಿಗಳನ್ನು ಪರಾಂಬರಿಸಬೇಕೆಂದು ಬೇಡಿಕೊಳ್ಳುವೆನು.

ನಿಮ್ಮ ಮತದಿಂದ ಪ್ರತಿನಿಧಿಯಾಗತಕ್ಕವನು ಮುಂದೆ ಆ ಸಂಸ್ಥೆಗಳಲ್ಲಿ ಮಾಡಬಹುದಾದ ಯಾವತ್ತು ಕೆಲಸಕ್ಕೂ ನೀವು ಬಾಧ್ಯರಾಗುವದರಿಂದ ಅದರಂತೆ ನೀವು ನಡೆಯಲೇಬೇಕಾಗುವದು.

ಇದಕ್ಕಾಗಿ ನೀವು ಯೋಗ್ಯ ಜನರನ್ನು ಆರಿಸುವ ಕೆಲಸವನ್ನು ಮಾಡಲೇಬೇಕು. ಈಗ ನಿಮ್ಮ ಕಡೆಯಿಂದ ಹೋಗುವವರಿಗೆ ಇದು ವರೆಗೆ ನಿಮ್ಮ ಗುರುತಿಲ್ಲದಿದ್ದರೂ ಇಂದು ನಿಮ್ಮ ಮುಂದೆ ತಲೆದೋರಿಸುವವರು ನೀವು ಮೆಂಬರರಾಗುವಲ್ಲಿ ಏನು ಕೆಲಸವನ್ನು ಮಾಡುವಿರಿ ಎಂದು ಅವರನ್ನು ಕೇಳಿರಿ. ಅವರ ಉತ್ತರದಿಂದ ನಿಮಗೆ ಸಂತೋಷವಾಗುವದಾದರೆ ಅವರನ್ನು ಆರಿಸಿರಿ.

ಯಾವಾತನು ನಿಜವಾಗಿ ನಿಮ್ಮ ಸೇವೆಯನ್ನು ಮಾಡಲಪೇಕ್ಷಿಸುವನೊ ಯಾರು ಹೊಸ ಕಾನೂನುಗಳನ್ನು ಚರ್ಚೆಗೆ ತರುವ ಮೊದಲು ನಿಮ್ಮೆಲ್ಲರನ್ನು ಸಭೆ ಸೇರಿಸಿ ಆ ಕುರಿತು ನಿಮ್ಮ ಮತವನ್ನು ಗ್ರಹಿಸುವನೊ ಅವರನ್ನು ನಿಮ್ಮ ಬಗ್ಗೆ ಆರಿಸಿರಿ ಅಲ್ಲದೆ ಹೋಳಿ ಜಪರಂತೆ ನೆರದು ಕುರ್ಚಿ ಭರತಿ ಅಸಾಮಿಗಳ ಕಡೆಗೆ ಮೊರೆಯನ್ನು ತಿರುಗಿಸಬೇಡಿರಿ. ಹಾಗೆ ಇನ್ನೂ ಮಾಡುತ್ತಿರುವಿರಾದರೆ ಅದೊಂದು ಬಗೆಯ ಆತ್ಮಹತ್ಯೆಯೆಂದೇ ತಿಳಿಯಿರಿ.

ಈ ಬಾರಿ ನಿಮ್ಮೆಲ್ಲರ ಪರವಾಗಿ ಉಮೇದ್ವಾರರಾಗಿ ನಿಂತವರಲ್ಲಿ ಯಾರು ನಿಮ್ಮೆಲ್ಲರ ಸೇವೆಯನ್ನು ಮಾಡಲು ಯೋಗ್ಯರೆಂಬುದನ್ನು ವಿಚಾರಿಸಿರಿ. ದೇಶದ ಕಲ್ಯಾಣಕ್ಕಾಗಿ ಎಷ್ಟೊಂದು ವರುಷಗಳಿಂದ ಮಹಾತ್ಮರೇ ಮೊದಲಾದವರ ಸೂತ್ರಧಾರತ್ವದಲ್ಲಿ ನಲಿಯುತ್ತಿರುವ ರಾಷ್ಟ್ರೀಯ ಪಕ್ಷವು ತಮ್ಮ ಸೇವೆಗಾಗಿ ಬದ್ಧಕಂಕಣವಾಗಿರುವದೆಂಬುದು ತಮಗೆ ಮಾನ್ಯವಿರುವದು. ಆ ನಿಯಮವನ್ನು ಮಾನ್ಯಮಾಡದೆ ಊರಿಗೆ ಅರಸನಾಗಲಿಚ್ಛಿಸುವವನನ್ನು ಆರಿಸುವದಕ್ಕಿಂತಲೂ ಆ ನಿಯಮವನ್ನು ಮಾನ್ಯಮಾಡಿ ಊರಿನ ಸೇವಕನಾಗುವವನನ್ನು ಆರಿಸಿರಿ. ಇಂತಿ ತಮ್ಮಗಳ ಹಿತಾಭಿಲಾಷಿ,

ದೇಶಾಭಿಮಾನಿ.

ಶ್ರವಣ ಬೆಳಗೊಳದಲ್ಲಿ ನಡೆದ ನಿಖಿಲ ಭಾರತೀಯ ಜೈನ ಸಮ್ಮೇಳನದಲ್ಲಿ ಮೈಸೂರಿನ ಶ್ರೀಮನ್ ಮಹಾರಾಜರವರು ಅಪ್ಪಣೆಕೊಡಿಸಿದ ಭಾಷಣ.

(ಕಳೆದ ಸಂಚಿಕೆಯಿಂದ ಮುಂದುವರಿದುದು).

ಮಹನೀಯರೆ, ಒಂದು ಪ್ರತ್ಯೇಕವಾದ ಮತಕ್ಕೆ ಸೇರಿದವರಾಗಿರುವ ನೀವೆಲ್ಲರೂ ಇಲ್ಲಿ ಸಭೆಸೇರಿರುತ್ತೀರಿ; ನಿಮ್ಮ ಮತಕ್ಕೂ, ನಿಮ್ಮ ಪಂಗಡಕ್ಕೂ, ಮಾತ್ರವೇ ಅನ್ವಯಿಸುವ ವಿಶೇಷ ಸ್ವಭಾವದ ಹಲವು ತೊಡಕಿನ ಸಂಗತಿಗಳನ್ನು ನೀವು ವ್ಯವಸ್ಥೆಗೊಳಿಸಬೇಕಾಗಿರುತ್ತದೆ. ನೀವು ಇವಗಳನ್ನೆಲ್ಲಾ ಚರ್ಚಿಸಿ ನಿಮ್ಮ ಪಂಗಡದ ಪುರೋಭಿವೃದ್ಧಿಗೆ ತಕ್ಕ ಸಾಧನಗಳನ್ನು ಕಲ್ಪಿಸಬೇಕೆಂಬುದೇ ನಿಮ್ಮ ಉದ್ದೇಶವಾಗಿರುತ್ತದೆ. ಈ ಸಮಯದಲ್ಲಿ ನೀವುಗಳು ಪ್ರಥಮತಃ ಜೈನರೆಂಬುದನ್ನು ಗಮನಿಸಿ ಜೈನಪಂಗಡದ ಶ್ರೇಯೋಭಿವೃದ್ಧಿಯನ್ನು ಚಿಂತಿಸಿ, ಆ ಬಳಿಕ ಒಟ್ಟಿನಲ್ಲಿ ನೀವು ಭಾರತೀಯರೆಂಬುದನ್ನು ನೆನಪಿಗೆ ತಂದುಕೊಂಡು ಸಮಗ್ರ ಭರತಖಂಡದ ಹಿತಸಾಧನೆಯ ವಿಚಾರಕ್ಕೆ ಮನಸ್ಸುಕೊಡಬೇಕಾಗಿದೆ. ಆದಕಾರಣ, ಸ್ವವಿಷಯ ದೃಷ್ಟಿಯಿಂದ ಎಲ್ಲಾ ಅಂಶಗಳನ್ನೂ ನಿರ್ಧರಿಸಲು ನಿಮಗೆ ಪೂರ್ಣಾಧಿಕಾರವುಂಟು; ನಿಮ್ಮ ಸ್ವಂತ ಅವಶ್ಯಕತೆಗಳ ವಿಚಾರದಲ್ಲಿಯೂ, ನಿಮ್ಮ ಸ್ವಂತ ಆಕಾಂಕ್ಷೆಗಳ ವಿಚಾರದಲ್ಲಿಯೂ ನೀವು ಚರ್ಚೆಮಾಡತಕ್ಕುದೇ ಯುಕ್ತವಾಗಿರುತ್ತದೆ. ಆದರೆ, ರಾಜಕೀಯ ವಿಚಾರಗಳಲ್ಲಿ ಮಾತ್ರ, ಅವು ಒಟ್ಟು ಇಂಡಿಯಾ ದೇಶಕ್ಕೆ ಸಂಬಂಧಪಟ್ಟಿದ್ದರೂ ಸರಿ, ಅಥವಾ ಅದರಲ್ಲಿನ ಯಾವುದೊಂದು ಪ್ರದೇಶಕ್ಕೆ ಸಂಬಂಧಪಟ್ಟಿದ್ದರೂ ಸರಿ, ನೀವು ಮೊಟ್ಟಮೊದಲು ಭಾರತೀಯರೆಂಬುದನ್ನು ನೆನಪಿನಲ್ಲಿಟ್ಟು ಕರ್ತವ್ಯವನ್ನು ನೆರವೇರಿಸಿ, ಆ ಬಳಿಕ ಜೈನರೆಂಬ ಭಾವನೆಯಿಂದ ಸ್ವಂತ ವಿಚಾರಕ್ಕೆ ಗಮನ ಕೊಡಬೇಕು. ನೀವು ಜೈನಪಂಗಡದವರೆಂಬ ದೃಷ್ಟಿಯಿಂದ ನಿಮ್ಮ ಸ್ವಂತ ಶ್ರೇಯಸ್ಸು ಲಭಿಸಲನುಕೂಲಿಸುವಂತೆ ನಿಮ್ಮ ಪಂಗಡಕ್ಕೆ ಸಂಬಂಧ ಪಟ್ಟ ಸಂಗತಿಗಳನ್ನು ಇತ್ಯರ್ಥಪಡಿಸಿಕೊಳ್ಳುವ ಪ್ರಯತ್ನದಲ್ಲಿ ಪ್ರತಿಯೊಬ್ಬರೂ ನಿಮ್ಮಲ್ಲಿ ಸಹಾನುಭೂತಿ (sympathy) ಯನ್ನು ತೋರ್ಪಡಿಸುತ್ತಾರೆ. ನೀವು ಭಾರತೀಯರೆಂಬ ದೃಷ್ಟಿಯಿಂದ, ರಾಜಕೀಯ ವಿಚಾರಗಳಲ್ಲಿ ನಿಮ್ಮ ಮನೋವೃತ್ತಿಗಳೂ, ಮತ್ತು ಇಂಡಿಯಾ ದೇಶದಲ್ಲಿನ ಇತರ ಮತಸ್ಥರ ಮನೋವೃತ್ತಿಗಳೂ ಸಹ ಒಟ್ಟು ಇಂಡಿಯಾದೇಶದ ಹಿತಚಿಂತನೆಗೆ ಸಾಧಕವಾಗಿರಬೇಕೆಂಬುದೇ ನಮ್ಮ ಅಭಿಮತವಾಗಿರುತ್ತದೆ.

ನಮ್ಮ ದೇಶದಲ್ಲಿರುವ ಸಾವಿರಾರು ಪಂಗಡಗಳವರೂ ಕೂಡ, ಈ ಸಾರತತ್ವವನ್ನು ಮನಸ್ಸಿನಲ್ಲಿಟ್ಟುಕೊಂಡು ಪರಸ್ಪರವಾಗಿ ನಿಜವಾದ ಭ್ರಾತೃವಾತ್ಸಲ್ಯದಿಂದ ಕೂಡಿ ವರ್ತಿಸುತ್ತಾ ಬರುವುದಾದರೆ, ನಮ್ಮ ದೇಶಕ್ಕೆ ಮುಂದೆ ವಿಪುಲವಾದ ಶ್ರೇಯಸ್ಸುಂಟಾಗುವ ವಿಚಾರದಲ್ಲಿ ಯಾವ ಶಂಕೆಯನ್ನೂ ಇಟ್ಟುಕೊಳ್ಳಬೇಕಾಗಿಲ್ಲ. ಆದರೆ, ರಾಜಕೀಯ ವಿಚಾರಗಳಲ್ಲಿ ಕೇವಲ ಮತಸಂಬಂಧವಾದ ವಿಚಾರಗಳು ಪ್ರವೇಶಿಸಿದಲ್ಲಿ ಮಾತ್ರ, ಅತಿ ಗಹನವಾದ ತೊಂದರೆಗಳುಂಟಾಗುತ್ತವೆ; ಈ ತೊಂದರೆಗಳು ದೇಶದ ಪುರೋಭಿವೃದ್ಧಿಗೆ ತಪ್ಪದೆ ಕಾಲವಿಳಂಬವನ್ನುಂಟುಮಾಡುವುವು. ಪ್ರತಿಯೊಂದು ಪಂಗಡದಲ್ಲಿಯೂ ಕೂಡ, ಮತಸಂಬಂಧವಾಗಿಯೂ ಮತ್ತು ಸಮಾಜ ಸಂಬಂಧವಾಗಿಯೂ, ವಾಸ್ತವಿಕವಾಗಿ ಯಾವ ಅಭಿವೃದ್ಧಿಯುಂಟಾದದ್ದೂ ಕೂಡ, ಅದು ಒಟ್ಟು ದೇಶದ ಪುರೋಭಿವೃದ್ಧಿಗೆ ಸಾಧಕವಾಗುವುದೆಂದಿಗೂ ತಪ್ಪದು. ಆದಕಾರಣ, ಮತವಿಚಾರಗಳಲ್ಲಿಯೂ, ಸಾಮಾಜಿಕ ವಿಚಾರಗಳಲ್ಲಿಯೂ ಮತ್ತು ವಿದ್ಯಾಭ್ಯಾಸ ವಿಚಾರದಲ್ಲಿಯೂ, ಮುಂದುವರಿಯುವ ಪ್ರಯತ್ನದಲ್ಲಿ ಪ್ರತಿಯೊಂದು ಪಂಗಡದವರಿಗೂ ಸಾಧ್ಯವೆನಿಸುವಷ್ಟು ಸಫಲವು ದೊರಕಲೆಂದು ಹಾರೈಸುವುದು ನಮ್ಮ ಕರ್ತವ್ಯವಾಗಿದೆ. ಇದರೊಡನೆ ನಾವು ಮತ್ತೊಂದು ವಿಚಾರವನ್ನೂ ಗಮನಿಸಬೇಕಾಗಿದೆ; ಒಟ್ಟಿನಲ್ಲಿ ದೇಶವೇ ವಾಸ್ತವಿಕವಾಗಿ ಮುಂದುವರಿಯಬೇಕಾದರೆ ಸರ್ವತೋಮುಖವಾಗಿ ಅಭಿವೃದ್ಧಿಯುಂಟಾಗಬೇಕೆಂಬುದನ್ನೂ, ಮತ್ತು ಅದು ಪ್ರತಿಯೊಂದು ಪಂಗಡದವರಿಗೂ ಲಭಿಸಬೇಕೆಂಬುದನ್ನೂ, ನಾವು ಮನವಟ್ಟುಮಾಡಿಕೊಳ್ಳಬೇಕು. ಈಗ ಅಭಿವೃದ್ಧಿಸ್ಥಿತಿಯಲ್ಲಿರುವ ಪಂಗಡಗಳವರು, ತಾವು ಇನ್ನೂ ಮುಂದುವರಿಯುವುದರಲ್ಲಿ ಆಸಕ್ತಿಯನ್ನು ವಹಿಸುವುದು ಮಾತ್ರವೇ ಅಲ್ಲದೆ, ಸಮಾಜ ಪರಿಣಾಮ ಕ್ರಮದಲ್ಲಿ ಯಾವುದೋ ಒಂದು ಪರಿಹಾರ್ಯವಾದ ಕಾರಣದ ದೆಸೆಯಿಂದ ಹಿಂದುಳಿದಿರುವ, ಅಷ್ಟೊಂದು ಭಾಗ್ಯಶಾಲಿಗಳಲ್ಲದ ಇತರ ಪಂಗಡಗಳವರಿಗೆ, ಕರಾವಲಂಬನವನ್ನು ಕೊಟ್ಟು ಸಹಾಯ ಮಾಡುವುದೂ ಸಹ ಅವರ ಪವಿತ್ರ ಕರ್ತವ್ಯವಾಗಿರುವುದೆಂಬುದೇ ನಮ್ಮ ಸ್ವಂತ ಅಭಿಪ್ರಾಯ.

ಈ ಸಮ್ಮೇಳನದ ಕಾರ್ಯಗಳೆಲ್ಲಾ ಸಫಲರೀತಿಯಲ್ಲಿ ಪರಿಣಮಿಸಲೆಂದು ನಾವು ಹಾರೈಸುತ್ತೇವೆ. ನಿಮ್ಮೆಲ್ಲರಿಗೂ ತಿಲಕಪ್ರಾಯರೆನಿಸಿರುವ ಸರ್ ಹುಕುಂಚಂದರವರು ನಿಮ್ಮ ಸಮ್ಮೇಳನದ ಅಧ್ಯಕ್ಷರಾಗಿರುತ್ತಾರೆ. ಅವರ ಹಿತಬೋಧನೆಯೂ ಮತ್ತು ಮಾರ್ಗದರ್ಶನವೂ, ನಿಮ್ಮೆಲ್ಲರಿಗೂ ಅತ್ಯಮೂಲ್ಯವಾಗಿ ಪರಿಣಮಿಸಿರುವುದೆಂದು ನಾವು ನಿಸ್ಸಂದೇಹವಾಗಿ ಹೇಳುತ್ತೇವೆ. ನಿಮ್ಮ ಪಂಗಡದ ಯುವಕರೆಲ್ಲರಿಗೂ ಅವರ ಆದರ್ಶತೆಯು ಉತ್ತೇಜಕವಾದುದೆನಿಸಿರುತ್ತದೆ. ಅವರ ಮೇಲ್ಪಂಕ್ತಿಯನ್ನನುಸರಿಸಿ ವರ್ತಿಸಲು ಪ್ರಯತ್ನ ಮಾಡತಕ್ಕವರು ನಿಮ್ಮಲ್ಲಿ ಅನೇಕ ಮಂದಿಗಳಿದ್ದಾರೆಂದು ನಂಬಿರುತ್ತೇವೆ.

ಮಹನೀಯರೇ, ನೀವು ವಿಜ್ಞಾಪನಾ ಪತ್ರಿಕೆಯನ್ನು ಒಪ್ಪಿಸಿದುದಕ್ಕಾಗಿಯೂ, ಮತ್ತು ಅದರ ಪೂರ್ವಕವಾದ ನಿಮ್ಮ ಮನೋಭಾವವನ್ನು ವ್ಯಕ್ತಗೊಳಿಸಿರುವುದಕ್ಕಾಗಿಯೂ, ನಿಮ್ಮನ್ನು ಮತ್ತೊಮ್ಮೆ ವಂದಿಸುತ್ತೇವೆ. ಅಲ್ಲದೆ, ನಿಮ್ಮೆಲ್ಲರಿಗೂ ಅಭ್ಯುದಯಪರಂಪರೆಗಳುಂಟಾಗಲೆಂದು ಹಾರೈಸುತ್ತೇವೆ.

FOR INVESTORS

A few shares of the Saraswathi Printing Works Ltd., are available for sale. They are all fully paid up shares of Rs. 50 each. For terms:

Apply to X
C/o MANAGER,
Swadeshabhimani.

ಆರೋಗ್ಯ ಚಂದ್ರಿಕೆ.

ಮದ್ರಾಸ್.

ಸಂಪಾದಕರು: ಡಾಕ್ಟರ್ ಯು. ರಾಮರಾವ್, ಎಲ್. ಎಮ್. ಸಿ. ಎಸ್. ಎಮ್. ಯು. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವುದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ.

ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ.

ಆರೋಗ್ಯಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವುದು.

'ಹೆಲ್ತ್' ಎಂಬ ನಮ್ಮ ಇಂಗ್ಲಿಷ್ ಮಾಸಪತ್ರಿಕೆಯನ್ನೋದಿ ಸಂತೋಷಿಸಿದ ಅನೇಕ ದೊಡ್ಡ ಮನುಷ್ಯರ ಪ್ರೋತ್ಸಾಹದ ಮೇಲೆ ಈ ಕನ್ನಡ ಪತ್ರಿಕೆಯನ್ನು ಹೊರಪಡಿಸಿದೆ.

ಆದರ ಸಂಪುಟ ೨ ಮತ್ತು ೧೧ನೇಯ ನವಂಬರ ೧೯೨೪ ಸಂಚಿಕೆಯಲ್ಲಿ ಕಾಣಿಸಿರುವ ವಿಷಯಗಳು.

ಮುಖಚಿತ್ರ:—ಪರ್ವತವಾಸಿಯಾದ ಒಬ್ಬ ರೂಪವತಿ.
ಶ್ವಾಸಕ್ರಮ ಅಥವಾ ಪ್ರಾಣಾಯಾಮ.
ಹುಣಿಸೇಹಣ್ಣಿನ ಆಹಾರಗುಣಗಳು ಮತ್ತು ಔಷಧಗುಣಗಳು.
ಕಾಲುನಡಿಗೆಯೇ ಉತ್ತಮವಾದ ವ್ಯಾಯಾಮವು
ಜೇನಿನಲ್ಲಿರುವ ಗುಣಗಳು.
ಹಲ್ಲುಗಳ ರಚನೆ, ಪ್ರಯೋಜನ, ಕೆಲಸ ಮುಂತಾದವು.
ಮದದ್ರವ್ಯಗಳಿಂದ ಆರೋಗ್ಯಕ್ಕೆ ಉಂಟಾಗತಕ್ಕ ಹಾನಿ.
ಅಂಗಸಾಧನೆ ಮತ್ತು ಬುದ್ಧಿವ್ಯವಸಾಯ (ವಿದ್ಯಾಭ್ಯಾಸ).
ಗಾಯಗಳು, ಮತ್ತು ಉಳುಕು ಮುಂತಾದವು, ಅವುಗಳ ಚಿಕಿತ್ಸೆ
ನವನಾಗರಿಕ ಪ್ರಪಂಚಕ್ಕೆ ಸಹಜವಾದ ಮೂರು ಕೆಡುಕುಗಳು.
ಒಬ್ಬ ಉಪವಾಸಿಯ ಅನುಭವ.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವುವು. ಆರೋಗ್ಯಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ ರೂ. ೧—೮—೦; ಬಿಡುಪತ್ರಿಕೆ ಒಂದಕ್ಕೆ ರೂ. ೦—೨—೦ ಹಿಂದಿನ ಸಂಚಿಕೆಗಳು ಕೂಡ ದೊರಿಯುವವು.

ಚಂದಾದಾರರಾಗುವವರು ವಿ. ಪಿ. ಮೂಲಕವಾಗಿ ತರಿಸಿಕೊಳ್ಳುವದಕ್ಕಿಂತಲೂ ಹಣವನ್ನು ಮುಂಗಡವಾಗಿ ಕಳುಹಿಸುವುದು ಲಾಭಕರ ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು 'ಆರೋಗ್ಯ ಚಂದ್ರಿಕೆ'ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು.

ಪತ್ರವ್ಯವಹಾರಕ್ಕೆ: 'ಆರೋಗ್ಯ ಚಂದ್ರಿಕೆ'
೩೩೩ ತಂಬುಚೆಟ್ಟಿ ಬೀದಿ, ಮದ್ರಾಸ್

ತುಳು ಪಾಡ್ದನಗಳು.

ದೊಬ್ಬಯರ್, ಕಲ್ಲುರ್ಟಿ–ಕಲ್ಕುಡ, ದೈಯ್ಯೊಂಗುಳು—ಕೋಟಿಚೆನ್ನಾಯ(?) ತೋಡಕಿನಾರ್, ಮುಂಡತ್ತಾಯ ಪ್ರತಿ ಒಂದಕ್ಕೆ 2 ಆಣೆ. 1½ ಆಣೆ ಟಪ್ಪಾಲು ಚೀಟು ಕಳಹಿಸಿದರೆ 5 ಪುಸ್ತಕಗಳು ಕೂಡಲೇ ಕಳುಹಿಸಲ್ಪಡುವವು.

ವಿಳಾಸ: ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

The Canara Bank, Limited, Magnalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.
Authorised and fully paid
up Capital Rs. 300,000—0—0
Reserve and other sinking
Funds „ 259,000—0—0

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
ಅಧಿಕಾರಗೊಳಿಸಲ್ಪಟ್ಟು, ಪೂರ್ಣವಾಗಿ
ತೆತ್ತ ಮೂಲಧನವು ರೂ. 300,000—0—0
ಕ್ಷೇಮನಿಧಿ ಮತ್ತು ಇತರ ಫಂಡುಗಳು
259,000—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲ್ಪಡುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1925.

K. Venkat Rao,
Secretary

ಪರೀಕ್ಷಾಕಾಲ.

ವಿದ್ಯಾರ್ಥಿಗಳೇ ಇತ್ತ ನೋಡಿರಿ.

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ.

"ಸಾರಸ್ವತಾಸವ"ವು ಒಳಗಳ ಮುಖ್ಯಾವಯವಗಳಲ್ಲುಂಟಾಗುವ ವ್ಯತ್ಯಾಸವನ್ನು ಸರಿಪಡಿಸಿ, ಜೀರ್ಣಶಕ್ತಿಯನ್ನು ಹೆಚ್ಚಿಸಿ, ಪಂಕ್ತಿಭ್ರಮಣೆ ತಲೆತಿರುಗು, ನೆತ್ತಿಯುರಿತ, ಇಂದ್ರಿಯ ದೌರ್ಬಲ್ಯಗಳನ್ನು ಹೋಗಲಾಡಿಸಿ ಶುದ್ಧರಕ್ತವನ್ನು ವೃದ್ಧಿಪಡಿಸುತ್ತದೆ. ಸೀಸೆ 1ಕ್ಕೆ ಬೆಲೆ 1 ರೂಪಾಯಿ, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ—ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ ಹೊಟ್ಟೆನೋವು ಇಂಫ್ಲೂಯಂಜಾ ಪ್ಲೇಗುಜ್ವರ.

ಮಕ್ಕಳ—ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು. ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಕಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳ ವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಬ್ರಾಂಚ್ ಆಫೀಸ್, ಚಿಕ್ಕಪೇಟೆ, ಬೆಂಗಳೂರು ಸಿಟಿ.
ಹೆಡ್ ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಪಾಳ್ಯದ ವೆಂಕಟಾಚಲ ಪಂಡಿತರು,
ಏಜಂಟರು:—
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ,
ಮಂಗಳೂರು ಟವನಿಗೆ ಮಾತ್ರ.

ವಿದ್ಯಾವಾಚಸ್ಪತಿ
ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ
"ಸಂಕ್ಷೇಪಗೀತೆ"

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ್ಳ, ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದೆ ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೦. ಟಪ್ಪಾಲು ಖರ್ಚು ಕೂಡಿ ಆಣೆ ೧೧ನ್ನು ಮನಿಯಾರ್ಡರ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ೩ರಕ್ಕಿಂತ ಜಾಸಿ ಖರ್ಚು ತಗಲುವುದು. ರಖಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.

ಪುಸ್ತಕ ದೊರಿಯುವ ವಿಳಾಸ:—
ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು. ಮತ್ತು
ಕೆನರಿಸ್ ಮಿತ್ರಸ್ ಬುಕ್ ಎಂಡ್ ಟ್ರಾಕ್ಟ ಡಿಪೋಜಿಟರಿ,
ಮಂಗಳೂರು.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀಕಾಶೀ, ಗಯಾ, ಪ್ರಯಾಗ, ಹರಿದ್ವಾರ ಬದ್ರಿನಾರಾಯಣ ದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರ ಕಡೆಯಿಂದಅನುಭವ ತೆಗೆದು ಪ್ರತಿವಂದು ಸಿದ್ಧಮಾಡಿಕೊಂಡು ಬರೆದಿರುವರು. ೧ನೇದು ಮಂತ್ರಪ್ರಕರಣದಲ್ಲಿ ಮಂತ್ರ ಪಠಣದಿಂದಲೂ, ಮಂತ್ರಪ್ರಯೋಗದಿಂದಲೂ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವೂ ಇದೆ. ೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳು ಹೊರಡುವಿಕೆ, ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂಇದೆ. ೩ನೇದು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು. ೪ನೇದು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದು? ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾ ಸಹ, ಇದರಲ್ಲಿ ಉಂಟು. ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತೂ ರೋಗಗಳಿಗೂ ಸುಲಭವಾಗಿ ಔಷಧ ಮಾಡುವ ಕ್ರಮವನು ಚೆನ್ನಾಗಿ ಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಳಾಸವು ತಿಳಿಸಿರುವರು. ೫ನೇದು ಯಂತ್ರ ಪ್ರಕರಣದಲ್ಲಿ ವಶೀಕರಣ ಗ್ರಹಪೀಡಾ ನಿವಾರಣ ಭೂತಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವಗ್ಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು, ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ ಇದ್ದ ಬಳಿಕ ಎಲ್ಲಾ ದೇವಾನು ದೇವತೆಗಳು ಧನ್ವಂತರಿಗಳೂ ವೈದ್ಯರೂ ಜೋತಿಷ್ಯರು, ಮಾಂತ್ರಿಕರು ತಾಂತ್ರಿಕರೂ ಮನೆಯೊಳಗೆ ಇದ್ದ ಹಾಗೆ ಆಗುತ್ತದೆ. ಇಂಥ ಗ್ರಂಥವು ಯಾರು ಇದುವರೆಗೆ ನೋಡಿರಲಿಕ್ಕಿಲ್ಲಾ. ಪ್ರತಿ ಮನುಷ್ಯರು ತರಿಸಿ ನೋಡಬೇಕೆಂದು ಇದರ ಬೆಲೆ ಕೂಡ ಕಡಿಮೆಮಾಡಿ ಇರುವದು. ೨—೮—೦ ಟಪಾಲು ಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ ನಾಟಕ ಅನ್ನ, ಕಥೆಗಳು, ಯಕ್ಷಗಾನ, ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ:—
ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ

Pandit B. Ramakrishna Baliga's Siddha Ayurvedic medicines of 50 years' reputation.

ಮಹಾ ಮದನಕಾಮೇಶ್ವರಿ ಲೇಹ—ಇದನ್ನು ಸ್ವರ್ಣಂಗಾರ. ಅಭ್ರಕಭಸ್ಮ, ರಸಸಿಂಧೂರ, ಕಸ್ತೂರಿ, ಕುಂಕುಮಕೇಸರ ವಗೈರೆ ಅಮೂಲ್ಯವಾದ ರಸಾಯನ ದ್ರವ್ಯಗಳಿಂದ ತಯಾರಿಸಲ್ಪಟ್ಟಿರುತ್ತದೆ. ಇದು ಎಲ್ಲಾ ತರದ ನಪುಂಸಕ ರೋಗಗಳನ್ನೂ ಸ್ವಪ್ನಾವಸ್ಥೆಯಲ್ಲಿ ಧಾತುಪತನೆಯನ್ನೂ ಗುಣಪಡಿಸಿ, ದೇಹಕ್ಕೆ ದಿವ್ಯಕಾಂತಿಯನ್ನೂ, ಪುಷ್ಟಿಯನ್ನೂ, ಪುರುಷತ್ವವನ್ನೂ, ವೀರ್ಯಸ್ತಂಭನವನ್ನೂ ಉಂಟುಮಾಡಿ ಆತ್ಯಾನಂದವನ್ನು ಕೊಡುವುದಲ್ಲದೆ, ಅಜೀರ್ಣ, ಅತಿಸಾರ, ಗ್ರಹಣಿ, ಆಮ್ಲ, ಪಿತ್ತ, ಉದರಶೂಲೆ, ಪ್ರಮೇಹ ವಗ್ಗೈರೆ ರೋಗಗಳನ್ನು ಗುಣಪಡಿಸುವಲ್ಲಿ ಕೇವಲ ಅಮೃತಸಮಾನವಾಗಿರುವುದು. ಇದನ್ನು ಅಬಾಲವೃದ್ಧರೂ ಸೇವಿಸಬಹುದು.

ಸ್ವರ್ಣ ಮಿಶ್ರಿತ ಲೇಹಕ್ಕೆ (48 ದಿನಗಳ ವರೆಗೆ ಸಾಕಾಗುವ) ಸೇರು ೧ರ ರೂ. 4—0—0.
ಸ್ವರ್ಣ ಇಲ್ಲದ „ „ 3—0—0.

ಬ್ರಿಹತ್ ಶಾರಿವ್ಯಾದಿ ರಸಾಯನ—ಇದು ಶಾಸ್ತ್ರಿಯಿಂದ ರಕ್ತವನ್ನು ಶೋಧಿಸುವ ದಿವ್ಯೌಷಧವಾಗಿರುತ್ತದೆ. ಇದರ ಸೇವನೆಯಿಂದ 20 ತರದ ಪ್ರಮೇಹ ರೋಗಗಳೂ ಎಲ್ಲಾ ತರದ ಫರಂಗಿ ರೋಗಗಳೂ ಅಲ್ಪ ಸಮಯದಲ್ಲಿ ಗುಣಹೊಂದುವವು. ಅದಲ್ಲದೆ ಇದು ಎಲ್ಲಾ ತರದ ಕುಷ್ಠವ್ಯಾಧಿಗಳನ್ನೂ, ಖಜ್ಜಿ, ಕುರು ಮೊದಲಾದ ಸಕಲ ಚರ್ಮವ್ಯಾಧಿಗಳನ್ನೂ ಪಾದರಸ ಸೇವನೆಯಿಂದ ಉಂಟಾದ ರೋಗಗಳನ್ನೂ ಮತ್ತು ಹೆಂಗಸರ ಪ್ರದರ ರೋಗಗಳನ್ನೂ ಶಾಸ್ತ್ರಿಯಿಂದ ಗುಣಪಡಿಸುವುದು.

8 ಔನ್ಸಿನ ಬಾಟ್ಲಿ ಒಂದರ ಕ್ರಯ ಬ್ರಿ ರೂ. 1—9—0.

ಬ್ರಾಹ್ಮಿ ಪರ್ಪಟಕಾದಿ ತೈಲ—(ಸಿದ್ಧ, ಇಲ್ಲದವರಿಗೆ ಸಿದ್ಧೌಷಧ.) ಇದನ್ನು ತಲೆಗೆ ಇಟ್ಟಲ್ಲಿ ಸಕಲ ಶಿರೋರೋಗಗಳೂ, ಕರ್ಣ, ನೇತ್ರ, ದಂತ, ಜಿಹ್ವಾರೋಗಗಳೂ, ತಲೆ ತಿರುಗುವುದು. ಕಠಿಣವಾದ ತಲೆ ನೋವು ಮೊದಲಾದ ರೋಗಗಳು ಶಾಂತವಾಗಿ, ಸ್ಮರಣಶಕ್ತಿಯನ್ನೂ, ಜ್ಞಾನಶಕ್ತಿಯನ್ನೂ ವೃದ್ಧಿಗೊಳಿಸುವುದು. ಇದು ವಿದ್ಯಾರ್ಥಿಗಳಿಗೂ ವಕೀಲರಿಗೂ ಒಂದು ಸಿದ್ಧೌಷಧ.

4 ಔನ್ಸಿನ ಬಾಟ್ಲಿ ೧ರ ರೂಪಾಯಿ 1—0—0.

ಸೂಚನೆ:—ಟಪ್ಪಾಲು ಹಾಸಲು ಪ್ರತ್ಯೇಕ. ಸ್ವರ್ಗೀಯ ಬಡ ಜನರಿಗೆ ಔಷಧವು ಧರ್ಮಾರ್ಥವಾಗಿ ಕೊಡಲ್ಪಡುವುದು.

ವಿಳಾಸ:— ಪಂಡಿತ, ಬಿ. ರಾಮಕೃಷ್ಣ ಬಾಳಿಗ, ಬಂಟವಾಳ ದ. ಕ.

Just Arrived **Fresh Consignment**

OF

Best English Cycles.



REDUCTION IN PRICES.

Ranger Cycles Model M. Made in Birmingham.
WITH DUNLOP OR BATES TYRES & TUBES ... @ Rs. 90—0—0
Barton Humber on Advance
WITH DUNLOP OR BATES TYRES & TUBES ... @ " 100—0—0
Senior Royal with B. S. A. Fitting.
WITH DUNLOP OR BATES TYRES & TUBES .. ...@ Rs. 145—0—0
Royal Saxon with B. S. A. Fitting.
WITH DUNLOP OR BATES TYRES & TUBES ... ... @ Rs. 175—0—0
All the above Cycles include pump and tools.
BROOKES PATEERN 90/2 GERMAN SADDLE ... ...@ " 9—8—0
" SADDLE 90/2 " ... ..@ " 21—0—0
" " B/30 " ... ...@ " 26—0—0
For further particulars please write to us or call on us:—

All kinds of Cycle Accessories, Dunlop and German Tyres and Tubes
ARE AVAILABLE AT VERY CHEAP RATES.

Special Discount to Traders. *Easy Terms Arranged.*

APPLY TO:—**The Mangalore Trading Association,**
Wholesale Dealers in Cycles and Cycle Accessories,
Car-Street, MANGALORE

—ಗೋಡೆಗೆ ತಗಲಿಸುವ
ಹೊಸ ನಮೂನೆಯ—
ಟಿಕ್—ಟಾಕ್

ಎಂಬ ಈ ಗಡಿಯಾರಗಳು ಜರ್ಮನೀ ದೇಶದಲ್ಲಿ ತಯಾರಿಸಿದ್ದು. ಇವು ಕಂಠಾರು ಘಂಟೆಯನ್ನು ತೋರಿಸುವವು. ಇವಕ್ಕೆ ಬೀಗ ಕೊಡಬೇಕಾದಿಲ್ಲ. ಇದರಲ್ಲಿ ಕಾಣುತ್ತಿರುವ ಗುಂಡನ್ನು ಮೇಲಕ್ಕೆ ಎಳೆದರೆ ಸಾಕು. ತನ್ನಷ್ಟಕ್ಕೆ ತಾನೇ ಟಿಕ್—ಟಾಕ್ ಎಂಬ ಶಬ್ದವನ್ನು ಮಾಡುತ್ತಾ ಸರಿಯಾದ ಕಾಲವನ್ನು ತೋರಿಸುವದು. ಇದು ನೋಡುವುದಕೆ ಬಹು ಲಕ್ಷಣವಾಗಿರುವುದು.

ಕ್ರಯ 1ಕ್ಕೆ ರೂ. 8—0—0

ಪೀಟರ್ ವಾಚ್ ಕಂಪೆನಿ
ಪೋಸ್ಟ್ ಬಾಕ್ಸ್ ನಂ. 27, ಮದ್ರಾಸ್.

ADVERTISE IN

The Business Directory
OF INDIA, BURMA & CEYLON

A Comprehensive Directory of the various Business-men, Exporters and Importers, Firms, Factories, Mills, Manufacturers, Merchants and Industries of the principal Cities, Ports and Towns of India, Burma and Ceylon.

PUBLISHED ANNUALLY
Rates for Advertisements

¼ Page	Rs.	50.
2 in. Single Column	"	20.
1 in. Single Column	"	15.
Name in Bold Types	"	5.

Price per Copy Rs. 10.
PRINTERS & PUBLISHERS
Business Directory Co.,
Kanara Press Buildings, MADRAS. E.
Telegrams: "KETHAKI" Phone 540

Just arrived! Look Shrap!

SCREW TORCH LAMPS
&
Pocket Electric Lamps
AVAILABLE
in different varieties, Mother of pearl lamps. Cycle lamps.
NICKEL PLATED.
Hammered Brand, with Powerful Bulls-eye lance,
Use with it
Bull's-eye Dry Batteries.
The Mangalore Trading Association,
Car Street, MANGALORE.

ಸಾರಸ್ವತ.

ಕನ್ನಡ ಮತ್ತು ಕೊಂಕಣಿ ಭಾಷೆಗಳಲ್ಲಿ ಕಳೆದ ವಿಜಯ ದಶಮಿಯ ದಿನದಿಂದ ಪ್ರತಿ ದಶಮಿಗೆ ಹೊರಡುವ ಪತ್ರಿಕೆ.

ವಿ. ಎಸ್. ಕಾಮತ್,
ಮೂಲ್ಕಿ, ವಾಮನ ಕುಡುವ } ಸಂಪಾದಕರು.

ಮಠಸಂಸ್ಥೆ ಮತ್ತು ಸಮಾಜಕ್ಕೆ ಸಂಬಂಧಪಟ್ಟ ಇತರ ಸಂಸ್ಥೆಗಳ ಸುಸಂಘಟನೆ.
ಸಮಾಜದೊಳಗೆ ಅನ್ಯೋನ್ಯ ಸಾಧನೆ.
ಸ್ತ್ರೀಸಮಾಜಕ್ಕೆ ಉಪಯುಕ್ತವಾದ ವಿಷಯಗಳ ನಿರೂಪಣ.
ಮತಭಾವನೆಗಳ ಉಜ್ಜೀವನ ಇತ್ಯಾದಿ ಉದ್ದೇಶಗಳಿಂದ ಈ ಪತ್ರಿಕೆಯು ಹೊರಡಿಸಲ್ಪಡುವುದು. ಸಾರಸ್ವತ ಸಮಾಜವು ಇದಕ್ಕೆ ಪ್ರೋತ್ಸಾಹವನ್ನೀಯಬೇಕಾಗಿ ಪ್ರಾರ್ಥನೆ.
ಚಂದಾಹಣ ಅಂಚೆವೆಚ್ಚ ಕೂಡಾ ರೂ. ೧—೪—೦. ಪೋಷಕರು ರೂ. ೧೫-೦-೦. ಸಹಾಯಕರು ರೂ. ೫-೦-೦. ಮಾದರಿ ಸಂಚಿಕೆಯನ್ನು ಟಪ್ಪಾಲು ಖರ್ಚಿಗಾಗಿ ಅರ್ಧಾಣೆ ಸ್ಟಾಂಪು ಕಳುಹಿಸುವವರಿಗೆ ಉಚಿತವಾಗಿ ಕಳುಹಿಸುವೆವು.

ಕನ್ನಡ ನಾಡಿನಲ್ಲಿ ಪ್ರತಿ ಕಡೆಯಲ್ಲಿಯೂ ಬಾತಮೀದಾರರು ಬೇಕು.

ಎಲ್ಲಾ ಪತ್ರವ್ಯವಹಾರಗಳನ್ನು ಕೆಳಗಿನ ವಿಳಾಸಕ್ಕೆ ನಡೆಸಬೇಕು.

ಯು. ನಾರಾಯಣನಾಯ್ಕ, ಕಾರ್ಯದರ್ಶಿ,
ಸಾರಸ್ವತ, ಉಡುಪಿ.

ಆರ್. ಮಾರ್ಟಿನ್ನರ
ಜ್ವರದ ಗುಳಿಗೆಗಳು.

ಸುಲಭ ಸ್ವೇದನಕಾರಿಯಾದ ಈ ಘುಟಿಕೆಗಳು ಚಳಿಜ್ವರದ ವಿಷದಾರ್ಥಗಳನ್ನು ಚಟ್ಟನೆ ನಿರ್ಮೂಲಪಡಿಸಿ, ವ್ರಣಗಳನ್ನು ಸಂಪೂರ್ಣ ನಾಶಪಡಿಸಿ, ಮಲೇರಿಯಾ ಜ್ವರ, ಚಳಿಜ್ವರ, ಬಾರಿಜ್ವರ, ಮತ್ತು ಆಗಾಗ್ಗೆ ಬಿಟ್ಟುಕೊಂಡು ಬರುವ ಇತರ ಜ್ವರಗಳ ಬಾಧೆಯಿಂದ ಗುಣಪಡಿಸುವವು.

ಚಟ್ಟನೆ ವಾಸಿಪಡಿಸುವುದಕ್ಕೆ ಹತ್ತೂರುಗಳಲ್ಲಿ ಪ್ರಸಿದ್ಧತೆಯನ್ನು ಹೊಂದಿವೆ, ಆಶೆ ಬಿಟ್ಟುಬಿಟ್ಟ ಅನೇಕ ಸಂದರ್ಭಗಳಲ್ಲಿ ಗುಣಪಡಿಸಿದವುಗಳಾಗಿರುತ್ತವೆ.

ಇವುಗಳು ಗಿರಣಿಗಳಲ್ಲಿಯೂ ಕಾರ್ಖಾನೆಗಳಲ್ಲಿಯೂ ವಿಶೇಷವಾಗಿ ಉಪಯೋಗಿಸಲ್ಪಡುವುವು. ಸಾಮಾನ್ಯವಾಗಿ ಹಿಂದೂಸ್ಥಾನದಲ್ಲಿ ಎಲ್ಲಾ ತೋಟಗಾರರಿಂದ ಉಪಯೋಗಿಸಲ್ಪಡುವುವು. ಅಲ್ಲದೆ ದಿಂಗತ ವಿಶ್ರಾಂತವಾದ ಕೀರ್ತಿಯನ್ನು ಕೂಡ ಸಂಪಾದಿಸಿರುವುದು. ಕಠಿಣ ಜ್ವರವು ಚಟ್ಟನೆ ಇಳಿಯಬೇಕಾದರೆ ಆರ್ ಮಾರ್ಟಿನರ ಎಗ್ಯೂ ಮಿಕ್ಚರ್ ಒಡನೆ ಇದನ್ನು ಸೇವಿಸಬೇಕು. ಈ ಇವೆರಡು ಅದ್ಭುತ ಶಕ್ತಿಯುಳ್ಳ ಔಷಧಿಗಳು ಪ್ರತಿಯೊಂದು ಕುಟುಂಬದ ಮನೆಯಲ್ಲಿಟ್ಟುಕೊಳ್ಳಲು ಯೋಗ್ಯ ವಸ್ತುಗಳಾಗಿವೆ ಪ್ರತಿಯೊಂದು ಬಾಟ್ಲಿಯಲ್ಲಿ 40 ಮಾತ್ರೆಗಳು ಇರುವುವು.

ಬಾಟ್ಲಿ 1ಕ್ಕೆ ರೂ. 1—8—0.

ಆರ್. ಮಾರ್ಟಿನ್ನರ ಎಗ್ಯೂಮಿಕ್ಚರ್.

ಇದು ಜ್ವರ, ಶೀತಜ್ವರ ಮಲೇರಿಯಾ, ಬಾರಿಜ್ವರ, ಸನ್ನಿಪಾತ ಪಟ್ಟೆ ವಾಯುವಿಕಾರದಿಂದುಂಟಾದ ರೋಗ ಇವೇ ಮೊದಲಾದ ಎಲ್ಲಾ ತರದ ಜ್ವರಗಳನ್ನೂ ಕೂಡಲೇ ನಾಶಮಾಡುತ್ತದೆ. ಎಲುಬುಗಳಲ್ಲಿ ಹರಡಿಕೊಂಡಿರುವ ಜ್ವರವನ್ನೂ ಸಹ ನಾಶಮಾಡುವುದಲ್ಲದೆ, ಇದು ಸಿಹಿಯಾಗಿರುವುದರಿಂದ ಸಣ್ಣ ಕೂಸುಗಳು ಸಹ ಕುಡಿಯಲಿಕ್ಕೆ ಇಷ್ಟಪಡುತ್ತವೆ. ಅನೇಕ ನಿಜ ವಿದ್ವಾಂಸ ವೈದ್ಯರಿಂದ ಗುಣಮಾಡುವುದಕ್ಕಾಗದ ಜ್ವರವನ್ನು ಈ ಎರಡೇ ಎರಡು ಬಾಟ್ಲಿಗಳ ಸೇವನೆಯಿಂದ ಹುಷಾರಾಗಿದೆ

ಬಾಟ್ಲಿ 1ಕ್ಕೆ ರೂ. 0—13—0.

ಆರ್. ಮಾರ್ಟಿನ್ನರ ಮೂಲವ್ಯಾಧಿ ಮಲಾಮು.

ಮನುಷ್ಯನಿಗೆ ಮೂಲವ್ಯಾಧಿ ಆದಾಗ, ಬಹಳ ಸಲ ಮೂತ್ರಶಂಕೆಯಾಗುವಿಕೆ, ಮರ್ಮಸ್ಥಾನದಲ್ಲಿ ಉರಿಯುವುದು, ಮಲಬದ್ಧತೆ ಇವೇ ಮುಂತಾದರಿಂದ ಪೀಡಿಸಲ್ಪಡುತ್ತಾನೆ. ಈ ಔಷಧದ ಒಂದೇ ಒಂದು ಬಾಟ್ಲಿಯ ಉಪಯೋಗದಿಂದ, ರಕ್ತ ಸುರಿಯುವ ಮೂಲವ್ಯಾಧಿ, ಕಂಕುಳಲ್ಲಿ ನೋಯುವ ಮೂಲವ್ಯಾಧಿ ಮತ್ತು ಎಂಥ ತರಹದ ಕಠಿಣವಾದ ಮೂಲವ್ಯಾಧಿಯುಳ್ಳವರದ ಕೂಡಲೇ ವಾಸಿಯಾಗುತ್ತದೆ. ಇದು ಒಳ್ಳೇ ಔಷಧಗಳಿಂದ ತಯಾರಿಸಲ್ಪಟ್ಟು ತೆಗೆದುಕೊಳ್ಳುವವರಿಗೆ ಏನೊಂದೂ ನೋವನ್ನೂ, ತೊಂದರೆಯನ್ನೂ ಕೊಡದೆ ಶಾಂತವಾಗಿ ಮಾಡುತ್ತದೆ. ಬಾಟ್ಲಿ 1ರ ದರ ರೂ. 1—8—0 ಮಾತ್ರ.

ವಿಳಾಸ:—ಆರ್. ಡಿ. ಕಟೆ ಮತ್ತು ಕಂಪೆನಿ,
ನಂಬ್ರ ಬಿ. ಫ್ರೆಯರ್ ರೋಡ್,
ಸಾಂಜ ವರ್ತಮಾನ ಪ್ರೆಸ್,
ಟೋಡಿವಾಲಾ ಬಿಲ್ಡಿಂಗ ಎದುರುಗಡೆ, ಫೋರ್ಟ ಮುಂಬಯಿ.
R. D. Kately & Co.
No. B. Frere Road,
Opposit Sanjvertaman Press,
Todivala Building, FORT BOMBAY.

ದಕ್ಷಿಣ ಕನ್ನಡ ಜಿಲ್ಲೆಯ
ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0
ಪುಸ್ತಕಗಳು ಸಿಕ್ಕುವ ಸ್ಥಳ:—
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

Edited, Printed & Published by V. S. Kamath at the M. T. A. SHARADA PRESS, MANGALORE.

Registered No. M. 498.
ಚಂದಾನಿರ್ಣಯ: ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರದ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಶ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೯. ಮಂಗಳೂರು, ತಾರೀಕು ೩ನೇ ಶುಕ್ರವಾರ ಎಪ್ರಿಲ್ ೧೯೨೫. ಸಂಚಿಕೆ ೧೪.

The Canara Banking Corporation, Udipi, Ltd.

Head Office:— Branch:—
Udipi **Coondapoor**

Applications are invited for the post of an Agent at the Canara Banking Corporation, Udipi, Ltd, Coondapoor Branch. Pay Rupees 50-5-75. Security to be deposited Rs. 2,000.

Those having practical Banking experience and diplomas in Banking and accounts need Apply, with testimonial and diplomas held to the undersigned by the 15th April 1925.

N. Ananda Rau,
Manager.

Wanted Agents
FOR
Every District in South India

For Pushing Sales of Our Calenders, Xmas and New Year Cards, Blotters, Pictures and Picture Post Cards, at wholesale rates. Deposit of Rs. 100—0—0 Essential.

Apply to:—

The South Indian Advertising Agency,
13, Kilary Road,
BANGALORR CITY.

ಶುದ್ಧ ರೋಮದ ಧಾವಳಿಗಳು.

1 ಮೊಳ ಉದ್ದ 1¼ ಮೊಳ ಅಗಲ ರೂ. 1¼ರಿಂದ 2 ವರೆಗೆ, 5 ಮೊಳ ಉದ್ದ 1½ ಮೊಳ ಅಗಲ ರೂ. 1½ ರಿಂದ 5 ವರೆಗೆ, 6 ಮೊಳ ಉದ್ದ 1½ ಮೊಳ ಅಗಲ ರೂ. 2¼ರಿಂದ 6 ವರೆಗೆ, 8 ಮೊಳ ಉದ್ದ 2 ಮೊಳ ಅಗಲ ರೂ. 3½ರಿಂದ 10 ವರೆಗೆ, 12 ಮೊಳ ಉದ್ದ 2¼ ಮೊಳ ಅಗಲ ರೂ. 6ರಿಂದ 12 ವರೆಗೆ, 16 ಮೊಳ ಉದ್ದ 2¼ ಮೊಳ ಅಗಲ ರೂ. 9 ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಖದ್ದರ್ ರೇಶ್ಮೆ ಮಡಿಗಳು, ಜಾಮಖಾನೆಗಳು, ಕಾಶಿ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, [illegible] ಸಾಮಾನುಗಳು, [illegible] ಮತ್ತು ಇನ್ನೂ ಅನೇಕ ಸಾಮಾನುಗಳು ವಿ. ಪಿ. ಮುಖಾಂತರ ಕಳುಹಿಸಲ್ಪಡುವುವು. ಕ್ಯಾಟಲಾಗ್ ಇನಾಂ.

ವಿಳಾಸ—
ಶಿರೋಮಣಿ ಯು. ನಾರಾಯಣಾಚಾರ್ಯ
ಮತ್ತು ಕಂಪೆನಿ, [illegible], ಉಡುಪಿ ಕ್ಷೇತ್ರ.

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ.

450 ಪುಟಗಳು ಎಮ್. ಗಣಪತಿರಾವ್ ಐಗಳ್ ಇವರಿಂದ ರಚಿತವಾದದ್ದು. ಕ್ರಯ ರೂ. 2-4-0

ಮಾರಾಟಕ್ಕೆ ಸಿದ್ಧವಾಗಿವೆ — ತುಳು ಪಾಡ್ದನಗಳು — ಮಾರಾಟಕ್ಕೆ ಸಿದ್ಧವಾಗಿವೆ.

ದೈಯ್ಯೊಂಗುಳು, ಕಲ್ಕುರ್ಟಿ—ಕಲ್ಲುಡ, ಕಣಂದೂರು ದೈಯ್ಯೊಂಗುಳು, ಮುಂಡತ್ತಾಯ, ಬೊಬ್ಬರ್ಯ.

ಸುಲಭ ದರಗಳು — ಶಾಲಾ ಪುಸ್ತಕಗಳು — ರಖಂ ಕೊಂಡುಕೊಳ್ಳುವವರಿಗೆ ಯೋಗ್ಯ ಡಿಸ್ಕೌಂಟ್.

ಅಜ್ಜಿ ಕಥೆಗಳು:—ಮೂರು ಕರಡಿಗಳು; ಜೇನುಸತ್ತು ಕಾಗೆ ಬಡವಾಯಿತು; ಅಗಣಿ ಮುದ್ದೆ; ಇಲಿಗಳ ಥಕ್ಕ ಥೈ; ಅಂಗಳ ಮುಗ್ಗು; ಸಿಗಡಿ ಯಾಕೆ ಒಣಗಲಿಲ್ಲ; ಗುಡುಗುಡು ಗುಮ್ಮಟ ದೇವರು; ತೆಂಗಿನ ಕಾಳಪ್ಪ; ಒಡ್ಡನ ಓಟ; ಹೊಸ ಕನ್ನಡ ಪುಸ್ತಕ ಭಾಗ ೧; ಹೊಸ ಕನ್ನಡ ಪುಸ್ತಕ ಭಾಗ ೨; ಕನ್ನಡ ಪದ್ಯಗಳು; ಮಗ್ಗಿ ಪುಸ್ತಕ; ಅಜಿತಪುರಾಣ; ಪದ್ಯ ರತ್ನಾವಳಿ. ಎಕ್ಸರ್‌ಸೈಜ್ ಮತ್ತು ನೋಟು ಪುಸ್ತಕಗಳು, ಕಾಪಿ ಪುಸ್ತಕಗಳು, ಡ್ರಾಯಿಂಗ್ ಪುಸ್ತಕಗಳು

ಇತರ ಪುಸ್ತಕಗಳು:—ಸಂಕೀರ್ತನಗೀತ, ಕೀಚಕವಧೆ, ಹಿಂದೂ ವ್ರತವಿವೇಕ, ಚಂದ್ರಗುಪ್ತ ಚಕ್ರವರ್ತಿ, ಶ್ರೀ ಕೃಷ್ಣಸಂಧಾನ, ಪದ್ಯಪಾಠಗಳು, ಹರಿಕಥಾ ಮೃತಸಾರ ಹರಿನಾಮಸಂಕೀರ್ತನೆ ಸುಧಾಂಮೃತ ಪದ್ಯಗಳು. ಬೆಂಕಿಪೆಟ್ಟಿಗೆ ತಯಾರಿಸುವ ವಿಧಾನ, ಸಾಬೂನು ತಯಾರಿಸುವ ವಿಧಾನ, ಸ್ವರಾಜ್ಯ ಭಕ್ತ್ಯೋಲ್ಲಾಸ, ಚರಕಗೀತ, ಕೊಂಕಣಿ ಭಾಷೆಯಲ್ಲಿ ಚಂದ್ರಹಾಸ ನಾಟಕ, ಪ್ರಹ್ಲಾದ ಚರಿತ್ರ ನಾಟಕ, ಕನ್ನಡ ಮೃಚ್ಛಕಟಿಕ ನಾಟಕ, ಚಂದ್ರಹಾಸಾಭ್ಯುದಯ ನಾಟಕ, ಕೋವಿಲನ್ ಚರಿತ್ರ ನಾಟಕ, ವಿನೋದ ಉಪನ್ಯಾಸ ಭಾಗ ೧, ೨, ಮತ್ತು ೩.

Best Indian Pain Balm
BOMBAY

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಶತ್ರುವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು.

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 3 ಆಣೆ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

109 ಫ್ರೆಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

— ರಥೋತ್ಸವ, ವಿವಾಹ ಉಪನಯನಗಳ ಸಮಯ —
ಸರ್ವರಿಗೂ ಉಡಿಗೆ ತೊಡಿಗೆಗಳು ಬೇಕಾಗುವ ಸಂದರ್ಭ.

ಯಾರು, ಯಾವುದನ್ನು, ಎಲ್ಲಿ ಪಡೆಯಬೇಕೆಂಬ ಶಂಕೆಯಿಂದ ವಿಳಂಬ ಮಾಡಬೇಡಿರಿ. ಉಡಿಗೆತೊಡಿಗೆಗಳನ್ನು ಕುರಿತಾಗಿಯೂ ನಿಮಗೆ ಬೇಕಾದ ಯಥಾರ್ಥ ಮಾಹಿತಿಯನ್ನು ಕಳೆದ ಹತ್ತುಹತ್ತು ವರುಷಗಳಿಂದ ಪಡೆದು ನಮ್ಮಲ್ಲಿಯ ವ್ಯಾಪಾರವು ಗಿರಾಕಿಗಳಿಗೆ ಸರ್ವ ತೃಪ್ತಿಯಿಂದಲೂ ಲಾಭಕರವಾಗಿ ಪರಿಣಮಿಸುವಂತೆ ನಮ್ಮ ಜವಳಿ ಸಂಗ್ರಹವನ್ನು ಮಾಡಿರುತ್ತೇವೆ.

ಗುರ್ಪುರ್ಕರ್ ಬ್ರದರ್ಸ್, ರಥಬೀದಿ, ಮಂಗಳೂರು.

ಹೆಡ್ ಆಫೀಸು:—ರಥಬೀದಿ—(ಮೊದಲು ಸುಜೀರ ನಾಗಪ್ಪನಾಯಕ್, ಎಂಡ್ ಕೊ. ಇದ್ದಲ್ಲಿ; ಅಜೀಜುದ್ದೀನ್ ರಸ್ತೆಗೆ ತಿರುಗುವಲ್ಲಿ) ಮಂಗಳೂರು.

ಬ್ರೆಂಚ್ ಆಫೀಸು:—ರಥಬೀದಿ—(ಹಳೇ ತಾಲೂಕು ಕಚೇರಿಯ ವಠಾರಕ್ಕೆ ಸಮೀಪವಿರುವ ಮಳಿಗೆ) ಮಂಗಳೂರು.

ಈ ದೇಶದ ಪ್ರಖ್ಯಾತಪಟ್ಟ ನೇಯಿಗೆಯ ಕೇಂದ್ರಸ್ಥಳಗಳಾದ—ಬನಾರಿಸ್, ಪೂನಾ, ಅಹಮ್ಮದಾಬಾದ್, ಸೂರತ್, ಬೆಂಗಳೂರು, ಧರ್ಮಾವರಮ್, ಕಂಜೀವರಮ್, ಕೊಯಮುತ್ತೂರು, ಮಧುರೆ, ತಂಜಾವೂರು, ಕುಂಭಕೋಣ, ಆರ್ಣಿ, ಪಾಲಿಕೇಟ್, ಹುಬ್ಬಳ್ಳಿ, ಇಳಕಲ್, ಗದಗ, ಮದ್ರಾಸು ಈ ಪ್ರಾಂತ್ಯಗಳಲ್ಲಿ ತಯ್ಯಾರಾದ

ಜರಿಸೀರೆಗಳು, ದುಪ್ಪಟ್ಟಾ, ಜರಿಕಣ, ಪೇಟ್ಯಾ, ರೇಶ್ಮೆ ಸೀರೆಗಳು, ಅರಲಪೇಟೆ ಸೀರೆಗಳು, ಜಾರ್ಜೆಟ್ ರೇಶ್ಮೆ ಸೀರೆಗಳು, ಜರಿ ಅಂಚಿನ ಸೀರೆಗಳು, ರೇಶ್ಮೆ ಮಡಿಗಳು, ನಿತ್ಯ ಉಪಯೋಗದ ಸೀರೆಗಳು ಬನಿಯನ್, ಕರ್ನಾಟಕ ಮಿಲ್ಲ್‌ಗಳ ವ ಇತರ ಮಿಲ್ಲ್‌ಗಳ ಕೋಟಿಂಗ್ ಶರ್ಟಿಂಗ್. ಕೈರಾಟೆಯಲ್ಲಿ ತಯಾರಿಸಿದ ನೂಲಿನಿಂದ ಮಾಡಿದ—

ಖದ್ದರ್ ಶರ್ಟಿಂಗ್, ಖದ್ದರ್ ಕೋಟಿಂಗ್, ಖದ್ದರ್ ಟೋಪಿ, ಖದ್ದರ್ ಪೇಟ್ಯಾ, ಅಂಗವಸ್ತ್ರ, ಇತ್ಯಾದಿ—
ಮುಸಲ್ಮಾನರಿಗೆ ಬೇಕಾದ ನಮೂನೆಯ ಲುಂಗಿ [illegible] ವಗೈರೆ—
ಎಲ್ಲಾ ಸಂಗ್ರಹವನ್ನೂ, ನಮ್ಮ ಪ್ರೋಪ್ರೈಟರರಾದ ರಾ| ನಾರಾಯಣ ಪ್ರಭುಗಳು ತಾವೇ ಸ್ವತಃ ಆಯಾ ಊರುಗಳಿಗೆ ಹೋಗಿ ಸಂಗ್ರಹಿಸಿ ತಂದಿರುತ್ತಾರೆ.

ಶರ್ತ:—ನಗದಿ, ರೂಪಾಯಿ 5ಕ್ಕೆ ಮೀರಿದ ಖರೀದಿಯನ್ನು [illegible] ಸೀಕಡಾ 6¼, ರೂ. 500ರಿಂದ 250ವರೆಗೆ ಸೀಕಡಾ 10½, ರೂ. 250 ರಿಂದ 1000ಕ್ಕೆ 12½ [illegible]

ಪ್ರತಿಯೊಂದು ಕುಟುಂಬಿಗಳ ಮನೆಗಳಲ್ಲಿ ಸೌಖ್ಯವನ್ನು ತೋರಿಸುವದಕ್ಕೂ ಮತ್ತು ಅವರವರ ಉಪಯೋಗಾರ್ಥವನ್ನು ತಿಳುವಳಿಕೆ ಬಗ್ಗೆ ನಡಿಸುವುದಕ್ಕೂ ಒಂದು ಮರ್ಯಾದೆಯಾದ ನಿಘಂಟು ಪುಸ್ತಕವು ಈ ನಮ್ಮ ಹಿಂದೂದೇಶದ ಸಮೂಹದಲ್ಲಿರುವುದು. ಅಂಥಾ ಪುಸ್ತಕವು ಯಾವದೆಂದರೆ

ನೀವುಗಳು ಬಲ್ಲಿರಾ?

(ಅದೇ)

"ಕಾಮಶಾಸ್ತ್ರವೆಂಬುವುದು."

ತಾವುಗಳು ನ್ನಾ ಈ ಪುಸ್ತಕದಲ್ಲಿ ಬರೆದಿರುವ ಸಾರಾಂಶವನ್ನು ಓದಿಲ್ಲದಿದ್ದರೆ, ಒಡನೇ ಒಂದು ಪುಸ್ತಕವನ್ನು ಕಳುಹಿಸುವಂತೆ ಒಂದು ಪೋಸ್ಟುಕಾರ್ಡು ಬರಿಯಿರಿ.

ಪುಸ್ತಕವನ್ನು ಇನಾಮಾಗಿ ಕಳುಹಿಸುವೆವು.

ಮುಖ್ಯವಾದ ತಿಳುವಳಿಕೆ.

ತಾವುಗಳು ದೃಢಚಿತ್ತರಾಗಿಯೂ, ನಿಧಾನಸ್ಥರಾಗಿಯೂ, ಸೌಖ್ಯವಾಗಿಯೂ, ಕಷ್ಟವಿಲ್ಲದೇ ವಿಷಯಗಳನ್ನು ಭಂಗಿಸುವ ಮನಸ್ಸನ್ನು ಹೊಂದಬೇಕಾದರೆ ನಮ್ಮ ಅಮೂಲ್ಯವಾದ "ಕಾಮಶಾಸ್ತ್ರವೆಂಬುವ ಪುಸ್ತಕದಲ್ಲಿ ಕಾಣಿಸಿರುವ ಆತಂಕನಿಗ್ರಹ ಮಾತ್ರೆಗಳನ್ನು ಸೇವಿಸಬೇಕು."

ಒಂದು ರೂಪಾಯಿ ಖರ್ಚುಮಾಡಿದರೆ 32 ಮಾತ್ರೆಗಳುಳ್ಳ ಒಂದು ಡಬ್ಬಿಯನ್ನು ತರಿಸಿ ಪ್ರಯತ್ನಿಸಬಹುದು.

ವಿವರವಾಗಿ ಬರೆದಿರುವ ಒಂದು ಕ್ಯಾಟಲಾಗು ಕಳುಹಿಸುವಂತೆ ಈ ದಿನವೇ ಒಂದು ಪೋಸ್ಟುಕಾರ್ಡು ಬರಿಯಿರಿ.

ಆತಂಕನಿಗ್ರಹ ಔಷಧಾಲಯ,
ನಂಬ್ರ ೨೮, ಬ್ರಾಡ್ವೆ, ಮದರಾಸು.

ಹೊಸಗ್ರಂಥಗಳು!! ಬೇಗನೇ ತರಿಸಿಕೊಳ್ಳಿರಿ!!!

ಕೋಕಶಾಸ್ತ್ರವು.

ರಸಿಕ ವಾಚಕ ಮಹಾಶಯರೇ,

ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ, ಸಂಪಾದಿಸಿ, ಅದರಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನೇ ಶೋಧ ಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿಣಿ. ಸ್ತ್ರೀಯ ಇದರಂತೆ ಪುರುಷರಲ್ಲಿಯ ಭೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನೂ, ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ, ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ, ನಪುಂಸಕತ್ವ ವಂಥ್ಯಾ ದೋಷಗಳ ಚಿಕಿತ್ಸೆಯನ್ನೂ, ಸ್ತ್ರೀಯರ ಗೂಢ ರಹಸ್ಯವನ್ನೂ, ದಂಪತಿ ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾತಕ್ಕೆ ಉಪಾಯಗಳನ್ನೂ ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನು ಒಮ್ಮೆ ಅವಲೋಕಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ

ಇದರ ಬೆಲೆ ೧—೮—೦, ಟಪ್ಪಾಲು ಹಾಸಲು ೦—೪—೦.

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪ್ಪೋ ಪ್ರೆಸ್, ಬಳ್ಳಾರಿ

ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ಮೂರನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್. ಗಣಪತಿರಾವ್ ಐಗಳ್—ಗ್ರಂಥಕರ್ತರು.

ಮನೋರಂಜಕ ಚಿತ್ರಗಳೂ ಇವೆ.

ಇದರಲ್ಲಿ ಸಾವಿತ್ರಿ, ಶಕುಂತಳಾ, ಕೃಷ್ಣಾಕುಮಾರಿ, ಪದ್ಮಿನಿ, ಜೋನ್ ಒಫ್ ಆರ್ಕ್, ಫ್ಲೊರೆನ್ಸನಾಯಿಟಿಂಗೇಲ ಪರಶುರಾಮ, ಭೂತಾಳಪಾಂಡ್ಯ, ಕಾರ್ಕಳ ಗೋಮಟೇಶ್ವರ ಮತ್ತು ಭೈರವರಾಜ, ಮೂಡಬಿದ್ರೆಯ ಚೌಟರು, ನಂದಾವರ ಬಂಗರು, ಕಾರ್ಕಳ ರಾಮಸಮುದ್ರ ಮತ್ತು ರಾಮನಾಥ ಒಡೆಯರ ಅಣೆಕಟ್ಟು, ಗುರುಪುರ ಜಂಗಮ ಮಠ, ಕಲ್ಯಾಣಪ್ಪನ ಕಾಟಕಾಯಿ, ಗುರುವಾಯನಕೆರೆ, ಜಮಾಲಾಬಾದು ಕೋಟೆ, ಸುಲ್ತಾನಬತ್ತೇರಿ, ಈದಗಾಪ್ರಾರ್ಥನಾಮಂದಿರ, ಸೇಂಟಮೇರಿ ದ್ವೀಪಗಳು ಮತ್ತು ದರಿಯಾಬಾದರಗಡ, ಕೊರಗರು, ಕೊಡಗರು, ತೋಡರು, ರಜಪೂತರು, ಕಂದಾರಿಗಳು ಘುರ್ಖಾ ಜನರು, ಅರಬಿಯರು. ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ಮೂರನೇ ದರ್ಜೆಯ ಮಕ್ಕಳಿಗೆ ಉಪಯುಕ್ತವಾಗಿದೆ. ಕ್ರಯ 6 ಆಣೆ.

ಪುಸ್ತಕ ದೊರಕುವ ವಿಳಾಸ:—

ಶಾರದಾ ಛಾಪಖಾನೆ, ಮಂಗಳೂರು. ||| ಗಣಪತಿರಾವ್, ಐಗಳ್. ಮಂಜೇಶ್ವರು.

ಡಾಕ್ಟರುಗಳು ಭಿನ್ನಾಭಿಪ್ರಾಯಪಡುವಾಗ್ಯೆ ತೀರ್ಮಾನಿಸುವದು ಯಾರು?

ಅಂಥಾ ಸಂದರ್ಭಗಳಲ್ಲಿ ಡೆಂಗ್ಯೂ ಮುಂತಾದ ಜ್ವರಗಳನ್ನು ನಿವಾರಿಸುವಂಥಾ "ಬಾಟ್ಲಿವಾಲರ ಏಗ್ಯುಮಿಕ್ಸ್ಚರ್"ನ್ನು ಸರಾಗವಾಗಿಯೂ, ಮತ್ತು ಜ್ವರಗಳನ್ನು ಖಂಡಿತವಾಗಿ ನಿಲ್ಲಿಸುವಂಥಾದ್ದೂ, ಎಲ್ಲಾ ತರದ ತಲೆನೋವುಗಳನ್ನು ಹೋಗಲಾಡಿಸುವಂಥಾದ್ದೂ ಆದ "ಬಾಟ್ಲಿವಾಲರ ಏಗ್ಯುಪಿಲ್ಸ್" ಇದನ್ನು ಉಪಯೋಗಿಸಿರಿ.

ಐ. ಎಮ್. ಎಸ್. ಡಾಕ್ಟರುಗಳಿಂದ ಶಿಫಾರಸು ಮಾಡಲ್ಪಟ್ಟಿದ್ದು. ಇದರ ಉಪಯೋಗದಿಂದ ಹೃದಯದ ಮೇಲೆ ಯಾವದೊಂದೂ ಬಾಧಕವಿಲ್ಲ. ಅರ್ಧ ಶತಮಾನದಿಂದ ಹಿಂದೂಸ್ಥಾನ, ಬರ್ಮ, ಸಿಲೋನ್, ಆಫ್ರಿಕಾ ಇವುಗಳಲ್ಲಿ ಪ್ರಖ್ಯಾತಪಟ್ಟದ್ದಾಗಿರುತ್ತದೆ.

ಅನೇಕ ಹಿಂದೀ ಪ್ರದರ್ಶನಗಳಲ್ಲಿ ಬೆಳ್ಳಿ ಮತ್ತು ಬಂಗಾರದ ಪದಕಗಳನ್ನು ಪಡೆದಿರುತ್ತೆ. ಚಾಲ್ತಿ ಪಾಠ್ಯಮಂತಿದ್ದು ಮಾರ್ವಾರಿಗಳೂ ಕೂಡ ಅವರ ಮೇಲೆ ಹಣವನ್ನು ಮುಂಗಡವಾಗಿ ಕೊಡುತ್ತಾರೆ. ಬಡ ಮತ್ತು ಮಧ್ಯಮ ತರಗತಿಯ ಜನರಿಗೆ ವರಪ್ರದಾನವಾಗಿದ್ದು ಸಂಚಾರ, ಪ್ರಯಾಣ, ದೇಶಾಟನೆಗಳ ಸಮಯದಲ್ಲಿ ಹತ್ತಿರದಲ್ಲಿ ಇರಿಸಿಕೊಳ್ಳದಾಗಿರುತ್ತದೆ.

ಬಾಟ್ಲಿವಾಲರ ಬಾಲಾಮೃತ ಅಥವಾ ಟೊನಿಕ್ ಸಿರಪ್.

ಕೆಮ್ಮನ್ನು ಹೋಗಲಾಡಿಸಿ, ಎದೆನೋವನ್ನು ಶಾಂತಗೊಳಿಸಿ, ಜ್ವರವನ್ನು ಉಪಶಮನಿಸಿ, ನಿದ್ರಾಭಂಗವನ್ನು ಕಡಿಮೆ ಮಾಡಿ ಧಾತುವರ್ಧನವನ್ನು ಮಾಡುವದರಲ್ಲಿ ಅತ್ಯುತ್ತಮವಾಗಿರುತ್ತದೆ. ಕಫವನ್ನು ಒಣಗಿಸಿ ವಾಯುವಾಗುವಂತೆ ಮಾಡುವುದಲ್ಲದೆ ಅದೇ ಸಮಯದಲ್ಲಿ ಒಳ್ಳೇ ಜೀರ್ಣವನ್ನೂ ಉಂಟುಮಾಡುವುದು. ದರ ಮೊದಲಾದ ಮಾಹಿತಿಯನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಕಾರಿನಪತ್ತೆ:-CAWASHAPUR, BOMBAY.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ. | ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.,
ಪಿ. ವಾರ್ಲಿ, ಮುಂಬಯಿ, ನಂಬ್ರ 18.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ

ಇವರ

ಬಾಲಾಮೃತ.

ಈ ಔಷಧವನ್ನು ಸೇವನೆ ಮಾಡುವುದರಿಂದ ಮಕ್ಕಳು ರೋಗರಹಿತರೂ ಸಶಕ್ತರೂ ಆಗುವರು. ಇದು ಮಧುರವಾಗಿದೆ; ಮಕ್ಕಳು ಸಂತೋಷದಿಂದ ಸೇವಿಸುತ್ತಾರೆ.

ನಮ್ಮ ವಿಳಾಸ:—

ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.

ಏಜಂಟರು:— ದಿ. ಊಲನ್ ಮಾರ್ಟ್, ಮಂಗಳೂರು.

OUR RECENT IMPORT IN WRIST WATCHES

Have you used anyone of these Watches?

SEND YOUR ORDER NOW ALL GUARANTEED.

Fashionable wrist wrist Lady's size. Reliable movement Guaranteed.

No. 368.

Handy to wear and looks beautiful. Gives punctual time and with strong movement.

Nickel case Rs. 8—0

High-class Radium dial watch — watch with Roman figures.

No. 367.

Can be seen in dark nights. Well fitted with best movement and strong to use. Used by one and all

Silver case Rs. 9—0.

Radiolight wrist watch.

No. 372.

Fitted with the best mechanism and guaranteed to work and keep perfect time for a long time.

Nickel case Rs. 7—8
Electro rolled-gold „ 9—0

(*N. B. In addition to the above, we have good number of varieties of fancy wrist watches, pocket watches. Please write for a descriptive catalogue, which will be sent free*)

WHOLESALE IMPORTERS

PETER WATCH COY.,
POST BOX 27, MADRAS

ಶಾಲಿವಾಹನಶಕ ೧೮೫೭ನೆಯ ಕ್ರೋಧನ ಸಂವತ್ಸರದ ಚೈತ್ರ ಶು| ೧೦ರ ಶನಿವಾರದಿಂದ ಕ್ರೋಧನ ಸಂ|ರದ ಚೈತ್ರ ಬ| ೧ ಶುಕ್ರವಾರದ ವರೆಗಿನ ಪಂಚಾಂಗ.

(೧೯೩೬ನೆಯ ಏಪ್ರಿಲ ಸುಗ್ಗಿ.)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೌರಮಾನ	ಸೂರ್ಯ ಉ.	ಸೂರ್ಯ ಅಸ್ತ.
4	ಶನಿ	೧೦	೩.೧೪	ಆಶ್ಲೇಷಾ	೪೬.೧೬	೨೨	6.26	6.42
5	ರವಿ	೧೧	೬.೪೬	ಮಘಾ	೫೦.೩೨	೨೩	6.27	6.42
6	ಸೋಮ	೧೨	೯.೧೬	ಹುಬ್ಬಾ	೫೩.೩೦	೨೪	6.26	6.42
7	ಕುಜ	೧೩	೧೦.೨೮	ಉತ್ತರಾ	೫೫.೨೮	೨೫	6.26	6.42
8	ಬುಧ	೧೪	೧೦.೧೪	ಹಸ್ತಾ	೫೬. ೨	೨೬	6.25	6.42
9	ಗುರು	⊙	೯. ೧	ಚಿತ್ತಾ	೫೫.೩೦	೨೭	6.24	6.42
10	ಶುಕ್ರ	೧	೬.೩೬	ಸ್ವಾತಿ	೫೪. ೧	೨೮	6 24	6.42

ಮಂಗಳೂರಿನ ವಾಯುಸ್ಥಿತಿ.

Date ತಾರೀಖು	Temperature. ಉಷ್ಣ (ಕಾವು) Maximum ಪರಮಾವಧಿ	Minimum ಅಲ್ಪಾವಧಿ	Rainfall ಮಳೆ ದಿನದ ಮಳೆ	ಜುಮಲಾ ಮಳೆ.
27	93—6	78—4	—	—
28	93—4	81—3	—	—
29	93—9	81—1	—	—
30	93—2	80—4	—	—
31	93—7	79—8	—	—
1	94—2	79—2	—	—
2	93—3	82—3	—	142 42

ಮಂಗಳೂರಿನ ಪೇಟೆ ಧಾರಣೆ.

ಜಿನಸು	ಇಂದ ರೂ. ಆ.	ವರೆಗೆ ರೂ. ಆ.
ಹೊಸ ಮಸ್ಕತಿ	8—0	8—10
ಹೊಸ ಗುಡ್ಡು ...	7-4	7—10
ಹೊಸ ರಾಶಿ ...	6—12	7—6
ಅಸ್ಪಲ್ ಬೆಳ್ತಿಗೆ ...	8—4	9—6
ಗುಡ್ಡು ಬೆಳ್ತಿಗೆ ...	7—12	8 2
ರಂಗೂನು ಬೆಳ್ತಿಗೆ ಗೋಣಿ ೧ ...	12—8	13 8
ಗೋದಿ ಗೋಣಿ ೧ಕ್ಕೆ ...	19—0	20 8
ಹುರುಳಿಗೋಣಿ ೧ಕ್ಕೆ ...	9—4	10—8
ಕಡಲೆಗೋಣಿ ೧ಕ್ಕೆ ...	11—8	12—8
ತೊಗರಿಗೋಣಿ ೧ಕ್ಕೆ ...	12—8	13—0
ತೊಗರಿಬೇಳೆ ಗೋಣಿ ೧ಕ್ಕೆ ...	14-8	21—0
ಉದ್ದುಗೋಣಿ ೧ಕ್ಕೆ ...	14—0	14 8
ಹೆಸರುಗೋಣಿ ೧ಕ್ಕೆ ...	14—0	15—0
ಊರು ಬೆಲ್ಲ ಖಂಡಿ ೧ಕ್ಕೆ ...	—	85—0
ಉಪ್ಪು ಗೋಣಿ ೧ಕ್ಕೆ ...	4—4	4—12
ಕೊಬ್ರಿ ಖಂಡಿ ೧ಕ್ಕೆ ...	110—0	115—0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	35—0	—
ಎಳ್ಳಿಂಡಿ ಖಂಡಿ ೧ಕ್ಕೆ ...	40—0	45—0
ಕೊಬ್ರಿ ಎಣ್ಣೆ ಮುಡಿ ೧ಕ್ಕೆ ...	7—13	9 0
ಎಳ್ಳೆಣ್ಣೆ ಮುಡಿ ೧ಕ್ಕೆ ...	7—0	11 0
ಚಿಮಣಿ ಎಣ್ಣೆ ಪೆಟ್ಟಿಗೆ ೧ಕ್ಕೆ ...	8-15-6	—
ಮೋರಿಸ ಸಕ್ಕರೆ ಮುಡಿ ೧ಕ್ಕೆ ...	4—14	5 0
ಊರ ಮೆಣಸಿನಕಾಯಿ ಮುಡಿ ೧ಕ್ಕೆ ...	6—0	8 0
ಸಾಸಿವೆ ಮುಡಿ ೧ಕ್ಕೆ ...	8—12	
ಕೊತ್ತಂಬರಿ ಮುಡಿ ೧ಕ್ಕೆ ...	3—8	3—14
ಕಾಫಿ ಖಂಡಿ ೧ಕ್ಕೆ ...	380—0	390—0
ಬೆಳಗೋಟು ಅಡಿಕೆ ಖಂಡಿ ೧ಕ್ಕೆ ಹಳತು ...	245—0	255—0
„ ಹೊಸ ಅಡಿಕೆ	230—0	240—0
ಕಾಳುಮೆಣಸು ಖಂಡಿ ೧ಕ್ಕೆ ...	155—0	160—0
ಯಾಲಕ್ಕಿ ಮಣ ೧ಕ್ಕೆ ...	80—0	90 0
ಗೇರುಬೀಜ ಮುಡಿ ೧ಕ್ಕೆ ...	4—6	4—8
[illegible] ಖಂಡಿ ೧ಕ್ಕೆ ...	45—0	65—0
ತಾಂಬ್ರ ತಗಡು ಮಣ ೧ಕ್ಕೆ ...	17-12	23—0
ತಾಮ್ರ ಪಾತ್ರಗಳು ಮಣ ೧ಕ್ಕೆ ...	26—0	—
ಬಿಳಿ ಬೆಳ್ಳಿ ಸೇರು ೧ಕ್ಕೆ ...	22—0	
ಹಿತ್ತಾಳೆ ತಗಡು ಮಣ ೧ಕ್ಕೆ ...	18—8	
ಪವನು	14-2-6	

The Canara Public Conveyance Co., Ltd, Mangalore.

(ESTABLISHED 1914).

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪನಿ ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು
- ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು
- ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
- ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
- ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.
- ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ—ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು

Secretary,
The Canara Public Conveyance Co., Ltd, Mangalore. S. K.

ಕನ್ನಡಿಗರೇ! ವಸಂತ. ಕಣ್ತೆರೆಯಿರಿ!

ಈಗಾಗಲೇ ಎರಡನೇ ಸಂಪುಟವು ಆರಂಭಿಸಲಿದೆ.

ಇತಿಹಾಸನಿಧಿ ಎಂದರೆ . . . . . . ವಸಂತ
ಸಮಾಜಸುಧಾರಕನೆಂದರೆ . . . . . ವಸಂತ
ಕೈಗಾರಿಕೆಯ ಸಾಮ್ರಾಜ್ಯವೆಂದರೆ . . . . ವಸಂತ
ಕರ್ನಾಟಕ ಭಾಷಾಸೇವಕನೆಂದರೆ . . . . ವಸಂತ
ದೇಶವಿದೇಶ ಬಂಧುವೆಂದರೆ . . . . . ವಸಂತ
ಕಾದಂಬರಿಗಳ ಭಂಡಾರವೆಂದರೆ . . . . ವಸಂತ
ಚಿತ್ರಾಕರ್ಷ ಚಿತ್ರಶಾಲೆಯಂದರೆ . . . . ವಸಂತ
ದೇಶಭಕ್ತನೆಂದರೆ . . . . . . ವಸಂತ

ಇಂತಹ ವಸಂತನು ಯಾರಿಗೆ ಬೇಕು,
ಯಾರಿಗೆ ಬೇಡ?

48 (ಕ್ರೌನ್ ¼ ಪುಟ ಸ್ಯಾಜಿನ) ಪುಟಗಳನ್ನು ಮಿಕ್ಕಿದ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3—4—0 ಮಾತ್ರ.

ವ್ಯವಸ್ಥಾಪಕ,
ವಸಂತ ಕಾರ್ಯಾಲಯ,
ಕುಂದಾಪುರ, ದಕ್ಷಿಣ ಕನ್ನಡ.

FOR SALE.

One new **Harley Davidson sports Model** Motor Cycle used only for 250 miles in perfect running order complete with equipments. Price Rs. 1000 or near offer.

For further particulars,

Apply to:—

The Mangalore Trading Association,
Car-Street Mangalore

FOR INVESTORS

A few shares of the Saraswathi Printing Works Ltd., are available for sale. They are all fully paid up shares of Rs. 50 each. For terms:

Apply to- X
C/o MANAGER,
Swadeshabhimani

JUST ARRIVED

Continental Belts.

OF VARIOUS SIZES

Price Re. 1—10—0 each

Mangalore Trading Association,
Car Street, MANGALORE.

ಬಂದುನೋಡಿರಿ! ತಿಂದುನೋಡಿರಿ!

ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ

ಪದಕವನ್ನು

ಬಹುಮಾನವಾಗಿ ಪಡೆದಿರುವ

ಎಸ್. ಪಿ. ಆಚಾರ್ಯ

ಇವರಿಂದ ತಯಾರಿಸಲ್ಪಟ್ಟ

ಉಪ್ಪಿನಕಾಯಿಗಳನ್ನು

ಬಂದುನೋಡಿರಿ! ತಿಂದುನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ, ಹುಂತಿಮುರಬ್ಬಾಗಳೂ, ಹಪ್ಪಳಗಳೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನ್ನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ

ಬಂದು ನೋಡಿರಿ! ತಿಂದು ನೋಡಿರಿ!

ಇಂಡಿಯನ್ ಸ್ಪಿರಿಟ್ ವಿಟ್ ಮಾರ್ಟ್.

ಮನೋಲ್ಲಾಸ ಆಫ್ ಕ್ಲಬ್. ಮಾರ್ಕೆಟು ರೋಡು, ಮಂಗಳೂರು. | ಅಥವಾ | ಸದಾನಂದ ಕಾಫಿ ಕ್ಲಬ್ ರಥಬೀದಿ, ಮಂಗಳೂರು

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ
ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ
ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ಯಾವಂತರೂ ತಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುತವೆ. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ಗಾವರ್ಗಿಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನ್ನು ಕುರಿತ ಲೆಕ್ಕಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಅಧಿಕಾರಿಗಳೂ ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪೋಷಕರಿಗೆ	ರೂ. [illegible]
ಇತರರಿಗೆ, ಪರಸ್ಥಳಕ್ಕೆ, ಪೋಸ್ಟೇಜು ಸೇರಿ	,, 2-8-0
,, ಸ್ಥಳೀಕರಿಗೆ ...	,, 1-8-0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪತ್ರಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿಯಬಹುದು.

ಎಡಿಟರ್,
ಬಿ. ಹನುಮಂತಯ್ಯಗೌಡ,
ಅರ್ಥಸಾಧಕ ಪತ್ರಿಕೆ,
ಅರಳೇಪೇಟೆ, ಬೆಂಗಳೂರು ಸಿಟಿ.

ಕೋಕಶಾಸ್ತ್ರವು.

ಈ ಪುಸ್ತಕದಲ್ಲಿ 72 ಅಧ್ಯಾಯಗಳೂ ಮತ್ತು 112 ಮನೋಹರವಾದ ಚಿತ್ರಗಳೂ ಇವೆ. ಈ ಪುಸ್ತಕದ ಸಾರಾಂಶ:

ಹೆಂಗಸರಲ್ಲಿ ನಾಲ್ಕು ಜಾತಿ: (1) ಪದ್ಮಿನಿ, (2) ಚಿತ್ರಿಣಿ, (3) ಶಂಖಿನಿ ಮತ್ತು (4) ಹಸ್ತಿನಿ ಇವರ ನಕ್ಷೆಗಳನ್ನು ಕೊಟ್ಟು ವಿವರಿಸಲ್ಪಟ್ಟಿದೆ. ಹಾಗೆಯೇ ನಾಲ್ಕು ಜಾತಿಯ ಮನುಷ್ಯರು. ಹೆಂಗಸರನ್ನು ಮತ್ತು ಗಂಡಸರನ್ನು ನೋಡಿ ಯಾವ ಜಾತಿ ಎಂದು ಕಂಡುಹಿಡಿಯುವ ಕ್ರಮ. ಚಂದ್ರನ ಮತ್ತು ನಕ್ಷತ್ರಗಳ ಸ್ಥಾನಗಳನ್ನು ನೋಡಿ ಶುಭಕಾಲವನ್ನು ಕಂಡುಹಿಡಿಯುವ ಕ್ರಮ. ರಜಸ್ವಲೆಯಾಗುವಿಕೆ ಇದರ ವಿವರ. ಇದರ ರೋಗಗಳು, ಈ ರೋಗಗಳ ನಿವಾರಣ ಕ್ರಮ. ಬಸುರಾಗುವಿಕೆ, ನವಮಾಸದ ಗರ್ಭದ ಬೆಳವಣಿಗೆ (ಇದರ ನಕ್ಷೆಕೊಡಲ್ಪಟ್ಟಿದೆ). ಬಸುರಾದ ಕಾಲದಲ್ಲಿ ಹೆಂಗಸರು ನಡೆಯುವ ಕ್ರಮ. ನೋವು ಮತ್ತು ಕಷ್ಟವಿಲ್ಲದೆ ಪ್ರಸವ ಆಗುವ ಕ್ರಮ. ಕಳೆದುಕೊಂಡ ಶಕ್ತಿಯನ್ನು ಹಿಂತಿರುಗಿ ಪಡೆಯುವ ಕ್ರಮ. ತಮ್ಮ ಇಚ್ಛಾನುಸಾರ ಮಿತ ಸಂತತಿಯನ್ನು ಮಾಡುವ ಕ್ರಮ. ತಮ್ಮ ಇಚ್ಛಾನುಸಾರ ಗಂಡು ಅಥವಾ ಹೆಣ್ಣು ಕೂಸನ್ನು ಪಡೆಯುವ ಕ್ರಮ. ಗರ್ಭಾವಸ್ಥೆಯಲ್ಲಿ ಕೂಸಿನ ಲಿಂಗವನ್ನು ಕಂಡುಹಿಡಿಯುವ ಕ್ರಮ. ಹೆಂಗಸರ ಸೌಂದರ್ಯವನ್ನು ಕಾಪಾಡುವುದು ಹೇಗೆ. ಗೊಡ್ಡುತನವನ್ನು ಹೋಗಲಾಡಿಸುವ ಕ್ರಮ. ಮತ್ತು ಅನೇಕ ಇಲ್ಲಿ ವಿವರಿಸಲಿಕ್ಕೆ ಆಗದ ಸಂಗತಿಗಳು ಸಂಕ್ಷೇಪವಾಗಿ ವಿವರಿಸಲ್ಪಟ್ಟಿವೆ. ಬಹಳ ಪ್ರಾಚೀನಕಾಲದ ರೋಗನಿವಾರಣೆಯ ಔಷಧಗಳು ಕೊಡಲ್ಪಟ್ಟಿದೆ.

ಪುಸ್ತಕ ೧ರ ಕ್ರಯ ರೂ. 4—0—0

ಇಂಟರ್‌ನೇಶನಲ್ ಪಬ್ಲಿಷಿಂಗ್ ಕಂಪೆನಿ,
ಇಂಟರ್‌ನೇಶನಲ್ ಬಿಲ್ಡಿಂಗ್,
ಲುಧಿಯಾನಾ, (ಪಂಜಾಬ)

International Publishing Company,
International Building,
Ludhiyana, PUNJAB

ನೋಟೀಸು.

ದಕ್ಷಿಣ ಕನ್ನಡ ಡಿಸ್ಟ್ರಿಕ್ಟ ಕೋರ್ಟಿನಲ್ಲಿ.

O. P. No. $\frac{35}{1925}$

ಜೋನ್ ಫೆರ್ನಾಂಡಿಸ್ — ಅರ್ಜಿದಾರ.

ತಾ. 8—7—1924ರಲ್ಲು ಮಂಗಳೂರು ಶಹಾರ ಕೊಡಿಯಾಲ ಬೈಲಲ್ಲಿ ಮೃತಪಟ್ಟ ಜೋಕಿಯಮ ಜೋಸ ಕೊನ್ಸಾಲೆಕೋ ಫೆರ್ನಾಂಡಿಸರ ಬಾಬ್ತು ವೀಲಿನ ಪ್ರೊಬೇಟ ಕೇಳಿ ಅರ್ಜಿದಾರನು ಕೊಟ್ಟ ಅರ್ಜಿಯನ್ನು ಮೇಲ್ಕಂಡ ಕೋರ್ಟಿನಲ್ಲಿ ತಾ. 24-6-25ಕ್ಕೆ ತನ್ನಿಗೆ ಇಟ್ಟಿದೆ. ಆಕ್ಷೇಪ ಇದ್ದವರು ಅವರವರ ಆಕ್ಷೇಪಗಳನ್ನು ಸದರಿ ತಾರೀಕಿಗೆ ಸದರಿ ಕೋರ್ಟಿನಲ್ಲಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು.

Mangalore, 24—3—'25.
K. SADASHIVA RAO,
Counsel for Petitioner.

"THE MANGALORE MAIL"
THE PIONEER ENGLISH WEEKLY OF
S. KANARA.
Rates of Subscription Rs. 6/- only.
Post free.
Apply to:
THE MANAGER,
"The Mangalore Mail"
Mangalore, S. Kanara.

ನೋಟೀಸು.

ಈ ಕೆಳಗೆ ದಸ್ಕತು ಮಾಡಿದವನಾದ ನಾನು ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ—

ನಿನ್ನೆ ರಾತ್ರೆ ನನ್ನ ಭಂಡಸಾಲೆಯಿಂದ ನನ್ನ ವಾಸ್ತವ್ಯದ ಮನೆಗೆ ಕೊಂಡುಹೋಗುವರೆ ಕಳೆದ 1921, 1922, 1923 ಈ ಮೂರು ಇಸವಿಗಳ ಹಳೆ ವರ್ಗಊಳಿಗ ಮತ್ತು ಸದರಿ ಇಸವಿಗಳ ಬೀಲುಪುಸ್ತಕಗಳ ಡುಪ್ಲಿಕೇಟುಗಳು ವ ಇನ್ನೂ ಕೆಲವು ರಿಕಾರ್ಡುಗಳು ಕೂಡ ಕಟ್ಟುಮಾಡಿ ನನ್ನ ನೌಕರ ಬಿ. ಅಬ್ಬುಕೈಯ್ಯ ಕೊಟ್ಟದ್ದನ್ನು ಸದರಿಯವನು ಭಂಡಸಾಲೆಗೆ ಬೀಗ ಹಾಕುವಾಗ್ಗೆ ಸದರಿ ಗಂಟನ್ನು ಹೊರಗಿನ ಪೊಂಡದ ಜಗಲಿಯಲ್ಲಿಟ್ಟು ಬೀಗ ಹಾಕಿ ಹೊರಡುವಾಗ ಮರತು ಬಿಟ್ಟು ಹೋಗಿರುತ್ತಾನೆ. ಸದರಿ ಕಟ್ಟು ಮಾರಣೆ ದಿವಸ ನೋಡುವಾಗ ಅಲ್ಲಿ ಇರಲಿಲ್ಲವಾದ್ದರಿಂದ ಅದು ಸಿಕ್ಕಿದವರ್‍ಯಾರಾದರೂ ನನಗೆ ತಂದುಕೊಟ್ಟರೆ ರೂಪಾಯಿ 25/- ಇನಾಮಾಗಿ ಕೊಡಲಿಕ್ಕೆ ನಾನು ಸಿದ್ಧವಿದ್ದೇನೆಂತ ಅಪೇಕ್ಷಿಸುವ.

ಮಂಗಳೂರು, ತಾ. ೨—4—'25. ಬಿ. ಅಮುದ್ ಬಿನ್ ಬ್ಯಾರಿಯ್ಯಬ್ಯಾ.

ಬುದ್ಧನು ಹುಟ್ಟಿದ ಸ್ಥಳ.

ಬುದ್ಧನು ಹುಟ್ಟಿದ ನಿಜವಾದ ಸ್ಥಳವು ಯಾವದು ಎಂಬುದರ ವಿಷಯ "ಡೈಲಿ ಟೆಲಿಗ್ರಾಫ್" ಎಂಬ ವರ್ತಮಾನ ಪತ್ರಿಕೆಯಲ್ಲಿ ಪರ್ಸಿವಲ್ ಲೆಂಡನ್ ಎಂಬವರು ಈ ರೀತಿಯಲ್ಲಿ ಬರೆದಿರುತ್ತಾರೆ. ಈ ಸಂಗತಿಯನ್ನು ಇಂಡಿಯನ್ ಆರ್ಕಿಯೊಲೊಜಿಕಲ್ ಪ್ರೊಸೀಡಿಂಗ್ಸಿನಲ್ಲಿ ಈ ಕೆಳಗಿನ ರೀತಿಯಲ್ಲಿ ಸೂಚಿಸಿರುತ್ತಾರೆ. ೧೮೯೬ನೇ ಇಸವಿಯಲ್ಲಿ ಡಾಕ್ಟರ್ ಫ್ಯೂರರ್ ಎಂಬವರು ಪೂರ್ವ ಕಾಲದ ಬುದ್ಧನ ಜನನ ನಿರ್ವಾಣ ಸ್ಥಾನವನ್ನು ಕಂಡುಕೊಂಡರು. ಇದರ ಹೆಸರು "ಕೋಣಾಗಮನ" ಇದು ನೇಪಾಳ ದೇಶದ "ನಿಗ್ಲಿವಾ" ಎಂಬಲ್ಲಿರುವ ನಿಗಳಿ ಸಾಗರ ಎಂಬ ನದಿಯ ದಡದಲ್ಲಿದೆ. ೧೮೯೬ನೇ ಇಸವಿಯಲ್ಲಿ ಡಾಕ್ಟರ ಫ್ಯೂರರು ಅಲ್ಲಿಯೇ ಇನ್ನು ವಿನಾಶದ ಕುರುಹುಗಳ ನಿಶ್ಚಯಕ್ಕೆ ಎಂದು ನೇಪಾಳದ ಒಂದು ಭಾಗವಾದ ಪಾಲ್ಪಾದೇಶದ ಅಧಿಪತಿಯಾದ "ಜನರಲ್ ಖಡ್ಗ" ಎಂಬವರ ಭೇಟಿಮಾಡಿದರು. ಆದರೆ ಈ ಅಧಿಪತಿಯು ನಿಗ್ಲೀವದ ಹತ್ತಿರ ಕಾಣಸಿಗಲಿಲ್ಲ. ಆದರೆ ಅಧಿಪತಿಯು ಈ ಚರಿತ್ರ ಶೋಧಕರಿಗೆ ಪಡೆರಿಯದ ಹತ್ತಿರ ಸಿಕ್ಕಿದನು. ಈ ಸ್ಥಳವು ನಿಗ್ಲಿವದ ೧೫ ಮೈಲು ಪೂರ್ವ ಆಗ್ನೇಯಕ್ಕೆ ಇದೆ. ಮರುದಿನ ಅಂದರೆ ೧೮೯೫ನೇ ಇಸವಿಯ ಡಿಸೆಂಬರ ೧ನೇ ತಾರೀಕಿಗೆ ಅಧಿಪತಿಯು ಉಳುಕೊಂಡ ಸ್ಥಳದ ಸಮೀಪದಲ್ಲಿಯೇ ಹೊಲಗಳ ಮಧ್ಯದಲ್ಲಿ ಒಂದು ಎತ್ತರವಾದ ಗುಡ್ಡದ ಮೇಲೆ ಬೆಳೆದಿರುವ ಕಾಡಿನ ಮಧ್ಯದಲ್ಲಿ ಅಶೋಕನು ೨೧೭೫ ವರುಷಗಳ ಹಿಂದೆ ಸ್ಥಾಪಿಸಿದ ಶಿಲೆಯ ಒಂದು ಸ್ತಂಭವು ಕಾಣಸಿಕ್ಕಿತು.

ಈ ಕಂಭದ ಹೆಚ್ಚಿನ ಭಾಗವು ಮಣ್ಣಿನೊಳಗೆ ಹೂತುಹೋಗಿತ್ತು. [illegible] ಇದ್ದ ಕೆಲವು ಅಡಿ ಮಣ್ಣನ್ನು ಅಗೆದ ಮೇಲೆ ಕಂಭದ ಮೇಲೆ ಶಾಸನವು ಓದಲಿಕ್ಕೆ ಸಿಕ್ಕಿತು. ಈ ಶಾಸನದಿಂದ ಬೌದ್ಧಶಾಸ್ತ್ರಗಳಲ್ಲಿಯೂ, ಅನಂತರ ಬರೆದ ಚರಿತ್ರೆ ಗ್ರಂಥಗಳಲ್ಲಿಯೂ ಬರೆಯಲ್ಪಟ್ಟ ಲುಂಬಿನಿ ಎಂಬ ಉದ್ಯಾನವನದಲ್ಲಿ ಈ ಕಂಭ ಇದ್ದ ಸ್ಥಳವೇ ಬುದ್ಧನು ಹುಟ್ಟಿದ ಸ್ಥಳವೆಂದು ತಿಳಿದು ಬಂತು. ಈ ಶಾಸನದಲ್ಲಿ ಹೀಗೆ ಬರೆದಿದೆ:— ದೇವಪ್ರಿಯ ಅಂಸನಾದ ಪ್ರಿಯದರ್ಶಿಯು (ಅಶೋಕನು) ತನಗೆ ಪಟ್ಟಾಭಿಷೇಕವಾದ ೨೦ನೇ ವರುಷದಲ್ಲಿ ತಾನೇ ಈ ಸ್ಥಳಕ್ಕೆ ಬಂದು ಈ ಸ್ಥಳವನ್ನು ಪೂಜಿಸಿದನು. ಇಲ್ಲಿ ಶಾಕ್ಯಮುನಿಯಾದ ಬುದ್ಧನು ಹುಟ್ಟಿದನು. ಇಲ್ಲಿ ಅರಸನು ಒಂದು ಮಂಟಪವನ್ನು ಶಿಲೆಯಿಂದಲೇ ಕಟ್ಟಿಸಿದನು. ಇಲ್ಲಿ ಒಂದು ಶಿಲೆಯ ಕಂಭವನ್ನು ಪ್ರತಿಷ್ಠಿಸಿದನು. ಇದರ ಮೇಲೆ ಇಲ್ಲಿ ಪರಿಶುದ್ಧನಾದವನು ಹುಟ್ಟಿದನು. ಈ ಲುಂಬಿನ ಗ್ರಾಮದಲ್ಲಿರುವವರು ಸರಕಾರಕ್ಕೆ ಕಂದಾಯವನ್ನು ಕೊಡುವದು ಬೇಡವೆಂದು ಬರೆಸಿದನು. ಇದಕ್ಕೆ ಹೆಚ್ಚು ಹಣವನ್ನು ಉಂಬಳಿ ಬಿಟ್ಟನು.

ಅಶೋಕ ಚಕ್ರವರ್ತಿಯು ಲುಂಬಿನಿ ವನಕ್ಕೆ ಬಂದುದು.

ಅಶೋಕನು ಲುಂಬಿನಿ ವನಕ್ಕೆ ಬಂದುದರ ವಿಷಯ ಬೌದ್ಧಗ್ರಂಥಗಳಲ್ಲಿಯೂ ಈ ರೀತಿಯಲ್ಲಿ ಬರೆದಿದೆ. ಅಶೋಕನು ತನ್ನ ಕುಲಗುರುವಾದ ಉಪಗುಪ್ತ ಮಂತ್ರಿ, ಸಾಮಾಜಿಕರೊಡನೆ ರಾಜವೈಭವದಿಂದ ಲುಂಬಿನಿ ವನಕ್ಕೆ ಹೊರಟನು. ಇವನ ಸಂಗಡ ನಾಲ್ಕು ಸೈನ್ಯಗಳು ಹೋಗಿದ್ದವು. ಇವರು ಹೋಗುವಾಗ ಫಲಪುಷ್ಪಗಳನ್ನೂ ಸುಗಂಧ ದ್ರವ್ಯಗಳನ್ನೂ ಕೊಂಡುಹೋಗಿದ್ದರು. ಈ ಸ್ಥಳಕ್ಕೆ ಬಂದೊಡನೆಯೇ ಉಪಗುಪ್ತನು ತನ್ನ ಬಲಕೈಯನ್ನು ಚಾಚಿ ಅಶೋಕನೊಡನೆ ಈ ರೀತಿ ಹೇಳಿದನು. "ಮಹಾರಾಜನೇ ಇಲ್ಲಿ ಮಹಾತ್ಮನು ಹುಟ್ಟಿದನು. ಆದುದರಿಂದ ಈ ಸ್ಥಳದಲ್ಲಿ ಬುದ್ಧನ ಹೆಸರಲ್ಲಿ ಮೊದಲನೇ ಶಿಲಾಶಾಸನವನ್ನು ಪ್ರತಿಷ್ಠಿಸಬೇಕು" ಆಗ ಅರಸನು ಒಂದು ಲಕ್ಷ ಭಂಗಾರದ ನಾಣ್ಯಗಳನ್ನು ದಕ್ಷಿಣೆಯಾಗಿ ಹಂಚಿ ಈ ಶಾಸನವನ್ನು ಪ್ರತಿಷ್ಠಿಸಿ ರಾಜಧಾನಿಗೆ ಹಿಂತಿರುಗಿದನು.

ಎಂಟುನೂರು ವರುಷಗಳ ತರುವಾಯ ಚೀನಾ ದೇಶದ ಯಾತ್ರಿಕನಾದ ಹಿಯನ್ ಸಾಂಗನು ಈ ಸ್ಥಳಕ್ಕೆ ಬಂದನು. ಇವನು ನೋಡುವಾಗ ಈ ಕಂಭಕ್ಕೆ ಸಿಡಿಲುಬಡಿದು ಕಂಭದ ತಲೆಯು ಹಾರಿಹೋಗಿತ್ತು. ಇದರ ತಲೆಯ ಮೇಲಿದ್ದ ಕುದುರೆಯೂ ಆದರ ಕೆಳಗಿದ್ದ ಬೋದಿಯ ಹಲಗೆಯೂ ಕೆಳಗೆ ಬಿದ್ದಿದ್ದವು. ಕುದುರೆಯು ಎಲ್ಲಿದೆಯೆಂದು ಈಗ ತಿಳಿಯುವುದಿಲ್ಲ. ಪರ್ಶಿಯಾ ದೇಶದ ರೀತಿಯಲ್ಲಿ ತಯಾರಿಸಿದ ಬೋದಿಗೆಯು ಕಲ್ಲು ಈ ಕಂಭದಿಂದ ಸುಮಾರು ೨೫ ಯಾರ್ಡು ದೂರದಲ್ಲಿರುವ ಒಂದು ಸಣ್ಣ ಹಿಂದೂ ದೇವಸ್ಥಾನದ ಅಂಗಳದಲ್ಲಿದೆ.

ಈಗ ಈ ಲುಂಬಿನಿ ವನದ ಹೆಸರು ರುಮ್ಮಿನದೇವಿ, ಇಲ್ಲಿಗೆ ಹೋಗುವದು ಸುಲಭಸಾಧ್ಯವಲ್ಲ. ಇಲ್ಲಿಗೆ ಹೋಗಬೇಕಾದರೆ ನೇಪಾಳ ಮಹಾರಾಜರ ಅಪ್ಪಣೆಯೂ ಸಹಾಯವೂ ಇಲ್ಲದೆ ಹೋಗುವದು ಅಸಾಧ್ಯವಾಗಿದೆ. ಇಲ್ಲಿಗೆ ಉಸ್ಕಾ ಬಜಾರಿನಿಂದ ಹೋಗಬೇಕಾದರೆ ಒಂದು ರಾತ್ರೆ ಪಾಲಕಿಯಲ್ಲಿ ಕೂತು ಕಾಡಿನ ಮಧ್ಯದಿಂದ ೮ ಗಂಟೆ ಪ್ರಯಾಣ ಮಾಡಬೇಕಾಗಿದೆ. ಇಲ್ಲಿಂದ ಮುಂದಕ್ಕೆ ಪಾಲಕಿಯಲ್ಲಿ ಕೂತು ಹೋಗಲಿಕ್ಕೆ ಸಾಧ್ಯವಿಲ್ಲ. ಅನೇಕ ಹೊಳೆಗಳು ಇವೆ. ಆದುದರಿಂದ ಆನೆಗಳ ಮೇಲೆ ಕುಳಿತು ಹೋಗಬೇಕಾಗುತ್ತದೆ. ಕಡೆಗೆ ೪ ಎಕ್ರೆ ವಿಸ್ತಾರವಾದ ಲುಂಬಿನಿ ವನವೂ ಕಾಣಸಿಗುತ್ತದೆ. ಬೇಸಿಗೆ ಕಾಲದಲ್ಲಾದರೆ ದೂರದಿಂದಲೇ ಎಲೆಗಳಿಲ್ಲದ ಮರಗಳ ನಡುವೆ ಮೇಲೆ ಹೋದ ಹಿಂದೂ ದೇವಸ್ಥಾನದ ಶಿಖರವು ಕಾಣುತ್ತದೆ. ಈ ದೇವಸ್ಥಾನದ ಈಶಾನ್ಯ ದಿಕ್ಕಿನಲ್ಲಿ ನೇಪಾಳದ ಮಹಾರಾಜರು ಹೊಸದಾಗಿ ಕಟ್ಟಿಸಿದ ಬಂಗ್ಲೆಯು ಇದೆ. ಆನೆಗಳ ಮೇಲೆ ಕೂತು ಈ ಬಂಗ್ಲೆಗೆ ಹೋಗಬೇಕಾಗಿದೆ. ಇಲ್ಲಿ ನಿಂತು ನೋಡಿದರೆ ಕಾಡಿನ ಮಧ್ಯದಿಂದ ಈ ದೇವಸ್ಥಾನವು ಸುಮಾರು ೧೦-೨೦ ಅಡಿ ಮೇಲಕ್ಕೆ ಕಾಣುವುದು. ಇದು ಒಟ್ಟಾರೆ ಒಂದು ಮಣ್ಣಿನ ರಾಶಿಯೆಂತಲೇ ಹೇಳಬಹುದು. ಇದರಲ್ಲಿ ಒಂದು ಶಾರದಾ ದೇವಿಯ ಪ್ರತಿಮೆ ಇದೆ. ಆದರೆ ಈ ದೇವಸ್ಥಾನದ ಕೆಳಭಾಗವು ಸುಮಾರು ೫-೬ ಅಡಿ ಮಣ್ಣಿನಲ್ಲಿ ಹೂತು ಹೋಗಿದೆ. ಕೆಳಗಡೆ ಇಳಿಯುವ ಮೆಟ್ಟುಗಳೂ ಬುದ್ಧನ ಜನನವನ್ನು ತೋರಿಸುವ ಕೆಲವು ಪ್ರತಿಮೆಗಳೂ ಕಾಣುತ್ತವೆ. ಇವುಗಳಿಂದ ಈಗ ಈ ದೇವಸ್ಥಾನವೆಂದು ಕಂಡು ಬಂದರೂ, ಬೌದ್ಧಮತವು ಹಿಂದೂ ದೇಶದಿಂದ ಅಳಿದು ಹೋಗುವ ಮುಂಚೆ ಇದನ್ನು ಬುದ್ಧನ ಜನನದ ನೆನಪಿಗಾಗಿ ಬೌದ್ಧರು ಕಟ್ಟಿದರೆಂದು ಹೇಳಬಹುದು.

ಈ ದೇವಸ್ಥಾನದ ಅಂಗಳವನ್ನು ಬಿಟ್ಟು ಇಳಿಜಾರಿನಿಂದ ಸ್ವಲ್ಪ ಕೆಳಗಿಳಿದರೆ, ದೇವಸ್ಥಾನದ ಪಶ್ಚಿಮಗೋಡೆಯಿಂದ ಸುಮಾರು ೨೦ ಯಾರ್ಡ ದೂರದಲ್ಲಿ ಅಶೋಕನು ಸ್ಥಾಪಿಸಿದ ಶಿಲಾಶಾಸನವು ಇದೆ. ಈ ಕಂಭವು ಕಾಳಾಗದ ಹಾಗೆ ನೇಪಾಳದ ಜನರು ಇದರ ತಲೆಯ ಮೇಲೆ ಕಲ್ಲಿನ ತಳ್ಳಗಾದ ಒಂದು ಬೋದಿಗೆಯನ್ನು ಇಟ್ಟಿರುತ್ತಾರೆ. ಮೊದಲಿನ ಬೋದಿಗೆಯನ್ನು ದೇವಸ್ಥಾನದ ಅಂಗಳದಿಂದ ತಂದು ಇಟ್ಟರೆ ಈ ಕಂಭವು ಬಹಳ ಚಂದವಾಗಿ ಕಾಣುತ್ತಿತ್ತು. ಈ ಕಂಭದ ಸುತ್ತಲೂ ಇರುವ ಮಣ್ಣನ್ನು ಇನ್ನೂ ಅಗಿದುತೆಗಿಯಲಿಲ್ಲ. ಡೊಕ್ಟರ್ ಫರಾರರು ಈ ಕಂಭವು ಎಷ್ಟು ಅಡಿಯ ವರೆಗೆ ಇದೆ ಎಂದೂ ಇದನ್ನು ಯಾವದರ ಮೇಲೆ ನಿಲ್ಲಿಸಿದ್ದಾರೆಂದೂ ನೋಡುವುದಕ್ಕೆ ಸ್ವಲ್ಪ ಭಾಗವನ್ನು ಮಾತ್ರವೇ ಅಗೆದು ನೋಡಿದ್ದಾರೆ.

ಬುದ್ಧನ ತಾಯಿ.

ಈ ಕಂಭದ ದಕ್ಷಿಣ ದಿಕ್ಕಿನಲ್ಲಿ ಬೌದ್ಧ ಮತದ ಶಾಸ್ತ್ರಪುಸ್ತಕಗಳಲ್ಲಿ ಹೇಳಿದಂತೆ, ಬುದ್ಧನು ಹುಟ್ಟುವ ಸ್ವಲ್ಪ ಸಮಯಕ್ಕೆ ಮುಂಚೆ ಸ್ನಾನಮಾಡಿದ ಸರೋವರವು ಇದೆ. ಬುದ್ಧನ ತಾಯಿಯಾದ ಮಾಯಾದೇವಿಯು ತನ್ನ ಪತಿಯ ರಾಜಧಾನಿಯಾದ ಕಪಿಲವಸ್ತುವಿನಿಂದ ತನ್ನ ತಂದೆಯ ರಾಜಧಾನಿಗೆ ಹೋಗುವಾಗ ಅವಳು ಈ ಲುಂಬಿನಿ ವನದಲ್ಲಿ ಉಳಕೊಂಡಾಗ ಒಂದು ಮರದ ಅಡಿಯಲ್ಲಿ ಬುದ್ಧನು ಜನಿಸಿದನು. ರಾಜನು ಈ ವಾರ್ತೆಯನ್ನು ಕೇಳಿ ಅವಳನ್ನೂ ಮಗುವನ್ನೂ ಕಪಿಲವಸ್ತುವಿಗೆ ಕೊಂಡುಹೋದನು. ಆದರೆ ಮಾಯಾದೇವಿಯು ಬುದ್ಧನು ಹುಟ್ಟಿದ ಏಳನೇ ದಿವಸ ಮರಣ ಹೊಂದಿದಳು. ಬೌದ್ಧಶಾಸ್ತ್ರದಲ್ಲಿ ಬುದ್ಧನು ಹುಟ್ಟಿದ ಸ್ಥಳದ ಮತ್ತು ಅದರ ಸುತ್ತಮುತ್ತಲಿನ ಹೆಸರುಗಳು ಈಗಲೂ ಹಾಗೆಯೇ ಇವೆ. ಶಾಸ್ತ್ರದಲ್ಲಿ ಲುಂಬಿನಿ ಎಂದಿದೆ. ಇದೇ ಸ್ವಲ್ಪ ಬದಲಾವಣೆಯಾಗಿ ಲುಮ್ಮಿನಿ ಅಥವಾ ರುಮ್ಮಿಣೀದೇವಿ ಎಂದಾಗಿದೆ. ಇದರ ಹತ್ತಿರವೇ ಶಾಸ್ತ್ರಗಳಲ್ಲಿ ಹೇಳಿದ ನಿಗ್ಲಿ ಸಾಗರವೆಂಬ ಎಣ್ಣೆ ಹೊಳೆಯ ಪೂರ್ವ ಆಗ್ನೇಯಕ್ಕಾಗಿ ಸುಮಾರು ೨-೩ ಮೈಲುಗಳ ವರೆಗೆ ಈಗಲೂ ಹರಿಯುತ್ತದೆ. ಈ ಜಿಲ್ಲೆಯಲ್ಲಿ ಇನ್ನೂ ಬೇರೆ ಬೇರೆ ಪ್ರಾಚೀನಕಾಲದ ಕುರುಹುಗಳು ಇವೆ. ಏಳನೇ ಶತಮಾನದಲ್ಲಿ ಚೀನಾ ದೇಶದ ಯಾತ್ರಿಕನಾದ ಹೀಯನ್ ಸಾಂಗನು ಬಂದಾಗ ಕಪಿಲವಸ್ತುವು ಒಂದು ಕಾಡಾಗಿತ್ತು. ಈ ಯಾತ್ರಿಕನಿಗಿಂತಲೂ ಮೊದಲು ಬಂದ ಫಾಯಿಯಾನನಿಗೆ ಕಪಿಲವಸ್ತು ಇದ್ದ ಸ್ಥಳವು ಸಹ ಕಾಣಸಿಗಲಿಲ್ಲ. ಹಿಯನ್‌ಸಾಂಗನು ತಿಲೌರಾ ಕೋಟೆಯನ್ನು ಕಪಿಲವಸ್ತು ಎಂದು ಭಾವಿಸಿದ್ದನು. ೨೫೦ ವರುಷಗಳಿಗೆ ಮುಂಚೆ ಬಂದ ಫಾಯಿಯಾನನು ಹಿಂದೂ ದೇಶದ ಗಡಿಯಲ್ಲಿರುವ ಹಾಳುಬಿದ್ದ ಪಿಪ್ರಾವಾ ಪಟ್ಟಣದ ಕುರುಹುಗಳನ್ನು ನೋಡಿ ಅದನ್ನು ಕಪಿಲವಸ್ತು ಎಂದು ಭಾವಿಸಿದನು.

ಇನ್ನು ಬುದ್ಧನು ಮರಣಪಟ್ಟ ಮತ್ತು ಅವನನ್ನು ಸುಟ್ಟ ಸ್ಥಳ ಕೈಸಾ ಎಂಬದನ್ನು ನಿಶ್ಚಯಿಸುವುದಕ್ಕೆ ಇನ್ನು ಶಾಸನಗಳನ್ನು ಹುಡುಕಬೇಕಾಗಿದೆ. ಹಿಮಾಲಯ ಪರ್ವತದ ಬುಡದಲ್ಲಿರುವ ಈ ಸಾಮ್ರಾಜ್ಯದ ವಂಶದವರು ಅನೇಕ ಯುದ್ಧಗಳಲ್ಲಿ ನಿರತರಾದ್ದರಿಂದ ಕಪಿಲವಸ್ತುವು ಬೌದ್ಧರ ನಾಲ್ಕು ಪರಿಶುದ್ಧ ಸ್ಥಳಗಳಲ್ಲಿ ಒಂದಾಗಿದೆ ಎಂದು ಎಣಿಸಲಾಗುವುದಿಲ್ಲ. ಅದ್ದರಿಂದ ಇಲ್ಲಿಗೆ ಯಾರು ಹೋಗಲೂ ಇಲ್ಲ, ಆ ಪಟ್ಟಣವನ್ನು ಸಂಪಾದಿಸಲೂ ಇಲ್ಲ, ಅದಕ್ಕೆ ಯಾರೂ ಉಂಬಳಿ ಬಿಡಲೂ ಇಲ್ಲ.

ಬೌದ್ಧರ ನಾಲ್ಕು ಪರಿಶುದ್ಧ ಸ್ಥಳಗಳು.

(೧) ಬುದ್ಧನು ಹುಟ್ಟಿದ ಸ್ಥಳವಾದ ಲುಂಬಿನಿ ವನ, (೨) ಬುದ್ಧನು ಬುದ್ಧನೆನಿಸಿಕೊಂಡ ಬುದ್ಧಗಯಾ, (೩) ಬೆನಾರಸಿನ ಒಂದೆರಡು ಮೈಲು ಹೊರಗೆ ಬುದ್ಧನು ತನ್ನ ಮತಬೋಧನೆಯನ್ನು ಮೊದಲನೇ ಸಾರಿ ಮಾಡಿದ ಸಾರನಾಥ (೪) ಬುದ್ಧನು ನಿರ್ವಾಣಹೊಂದಿದ ಸ್ಥಳವಾದ ಕೈಸಾ. ಕಳೆದ ೩೦ ವರುಷಗಳಲ್ಲಿ ಈ ನಾಲ್ಕು ಸ್ಥಳಗಳನ್ನು ಹುಡುಕಿ ತೆಗೆದಿರುತ್ತಾರೆ. ಆದರೆ ಇವುಗಳನ್ನು ಸರಿಯಾಗಿ ಅಗಿದು ನೋಡುವುದಕ್ಕೆ ಹಣವು ಇಷ್ಟರ ವರೆಗೆ ಒದಗಲಿಲ್ಲ. ಕೈಸವನ್ನು ಅಗಿಯಲಿಕ್ಕೆ ಸ್ವಲ್ಪ ಹಣ ಸಿಕ್ಕಿ ಸ್ವಲ್ಪ ಮಟ್ಟಿಗೆ ಶೋಧನೆಯಾಗಿದೆ. ಆದರೆ ಬುದ್ಧನ ವಿಷಯ ಹೆಚ್ಚಿನ ಅನುಭವ ಸಿಕ್ಕಬೇಕಾದರೆ ಲುಂಬಿನಿ ವನವನ್ನು ಅಗಿಯಲಿಕ್ಕೆ ಹೆಚ್ಚು ಹಣವು ಬೇಕಾಗಿಯದೆ. ಈಗ ಇದರಲ್ಲಿರುವ ದೇವಸ್ಥಾನವನ್ನು ದೊಡ್ಡದಾಗಿ ಕಟ್ಟಿಸುತ್ತಾರಂತೆ. ಕಟ್ಟಿಸುವುದಾದರೆ ಇದರ ಸುತ್ತಲೂ ಇರುವ ಮಣ್ಣಿನ ರಾಶಿಯನ್ನು ಅಗಿದು ತೆಗಿಯಬೇಕಾಗುವುದು. ಇದರ ಅಡಿಯಲ್ಲಿ ಅನೇಕ ಕಂಭಗಳಿಂದ ಕೂಡಿದ ವಿಶಾಲವಾದ ಕೋಣೆಗಳಿರುವ ಬೌದ್ಧ ಸನ್ಯಾಸಿಗಳ ವಿಹಾರಗಳು ಇರಬಹುದು. ಈ ಕಂಭದ ಸುತ್ತಲು ಬಹಳ ಅಂದವಾದ ಬೇಲಿಯು ಇರಬಹುದು. ಇನ್ನೂ ಇಷ್ಟರ ವರೆಗೆ ಕಾಣದ ಅನೇಕ ವಿಶೇಷಗಳು ಕಾಣಸಿಗಬಹುದು.

ಒಳದೇಶ ವರ್ತಮಾನ.

ಕಲ್ಕತ್ತಾ ಕೊರ್ಪೊರೇಶನ್—ಶ್ರೀಯುತ ಸಿ. ಆರ್. ದಾಸರವರನ್ನು ಮೇಯರರನ್ನಾಗಿ ಪುನಃ ಆರಿಸಿರುತ್ತಾರೆ.

ಲೋರ್ಡ ಬರ್ಕನ್‌ಹೆಡ್ಡರು ಸಿ. ಆರ್. ದಾಸರಿಗೆ ಮಾಡಿದ ವಿಜ್ಞಾಪನೆ:—ಹಿಂದೂದೇಶದಲ್ಲಿರುವ ಯುರೋಪಿಯನರಿಗೆ ಶ್ರೀ. ಸಿ. ಆರ್. ದಾಸರವರು ಮಾಡಿದ ವಿಜ್ಞಾಪನೆಯ ಕುರಿತು ಈ ದೇಶದ ಸ್ಟೇಟ್ ಸೆಕ್ರೆಟರಿಗಳಾದ ಬರ್ಕನ್‌ಹೆಡ್ ಪ್ರಭುಗಳವರು ದಾಸರವರು ತಮ್ಮ ಹೇಳಿಕೆಯಲ್ಲಿ ವ್ಯಕ್ತಗೊಳಿಸಿದಂತೆ ಕಾರ್ಯತಃ ಬಂಗಾಳ ಸರಕಾರದೊಡನೆ ಸಹಕರಿಸಬೇಕೆಂತ ತಮ್ಮ ಪಾರ್ಲಿಮೆಂಟ್ ಭಾಷಣದಲ್ಲಿ ವಿಜ್ಞಾಪಿಸಿಕೊಂಡಿರುವರು.

ಲೋರ್ಡ ಲಿಟ್ಟನ್‌ರವರು ಬರಕ್‌ಪುರಕ್ಕೆ ಹೋದಾಗ ಸುರೇಂದ್ರನಾಥ ಬೆನರ್ಜಿಯವರ ವಾಸ್ತವ್ಯಕ್ಕೆ ಹೋಗಿ ಬಹಳ ಸಮಯ ಬೆನರ್ಜಿಯವರ ಕೂಡೆ ಮಾತಾಡುತ್ತ ಇದ್ದರೆಂತ ತಿಳಿದುಬರುತ್ತದೆ.

ತಿರುವಾಂಕೂರು—ತಿರುವಾಂಕೂರು ಸಂಸ್ಥಾನಕ್ಕೆ ಹಿಂದುಗಳಲ್ಲದ ದಿವಾನರನ್ನು ನೇಮಿಸುವ ಸಂಭವವನ್ನು ತಿಳಿದುಕೊಂಡು ಅಲ್ಲಿಯ ಹಿಂದುಗಳು ಕಳೆದ ತಿಂಗಳ ತಾ. ೨೨ರಲ್ಲಿ ಸಭೆ ಕೂಡಿಕೊಂಡು ಇಂಥಾ ನೇಮಕವನ್ನು ಮಾಡಕೂಡದೆಂತ ನಿರೋಧಿಸಿರುತ್ತಾರೆ. ಈ ಸಭೆಯಲ್ಲಿ ಕೆಲವು ಕ್ರೈಸ್ತರು ಸಹ ಹಾಜರಿದ್ದರು.

ದಕ್ಷಿಣ ಕನ್ನಡ.

ಮುಲ್ಕಿ:—ಇಲ್ಲಿಯ ಶ್ರೀ ಬಪ್ಪನಾಡು ದುರ್ಗಾಪರಮೇಶ್ವರಿ ಅಮ್ಮನವರ ಸನ್ನಿಧಿಯಲ್ಲಿ ವರ್ಷಂಪ್ರತಿ ಜರಗಲಿಕ್ಕಿರುವ ಜಾತ್ರೆಯು ಈ ಕೆಳಗೆ ಕಂಡಂತೆ ನೆರವೇರಲಿಕ್ಕಿರುವುದು: ತಾ. ೮-೪-೨೫ ಧ್ವಜಾರೋಹಣ, ತಾ. ೯ ಅಯನೋತ್ಸವ, ತಾ. ೧೦ ಪೇಟೆ ಸವಾರಿ, ತಾ. ೧೧ ಕೊಪ್ಪ ಸವಾರಿ, ತಾ. ೧೨ ಬಾಕಿಮಾರು ದೀಪ, ತಾ. ೧೩ ಕೆರೆದೀಪ, ತಾ. ೧೪ ರಥಾರೋಹಣ, ತಾ. ೧೫ ರಥೋತ್ಸವ ಮತ್ತು ಅವಭೃತ.

ಎಂದಿನಂತೆ ಭಕ್ತಾದಿಗಳು ಬಂದು ಶ್ರೀ ದೇವರ ಗಂಧ ಪ್ರಸಾದಾದಿಗಳನ್ನು ಸ್ವೀಕರಿಸಿ, ಶ್ರೀ ದೇವಿಯ ಕೃಪಾಪಾತ್ರರಾಗಬೇಕಾಗಿ ಕೋರುತ್ತೇವೆ.

ಕಟಪಾಡಿ:—ಉಡುಪಿ ತಾಲೂಕು ಬೋರ್ಡಿಗೆ ಕಾಪು ಸರ್ಕಲಿನ ಪರವಾಗಿ ಉಮೇದ್ವಾರರಾಗಿದ್ದ ನಮ್ಮವರ ಶ್ರೀ ಕೆ. ಜಿ. ಬಲ್ಲಾಳವರೂ ಶ್ರೀ ಉಪೇಂದ್ರ ನಾಯ್ಕರವರೂ ಮೆಂಬರರಾಗಿ ಆರಿಸಲ್ಪಟ್ಟಿರುವರೆಂಬ ಸುವಾರ್ತೆಯನ್ನು ಕೇಳಿ ತುಂಬಾ ಸಂತೋಷಪಡುತ್ತೇವೆ.

ಕುಂಬಳೆ:—ಇಲ್ಲಿಯ ಮ॥ ರಾ॥ ರಾ॥ ಗಳಾದ ವಕೀಲ್ ಕುಂಬಳೆ ನರಸಿಂಗ ನಾಯ್ಕರವರು, ಬಿ. ಚಿಕ್ಕಪ್ಪ ಭಂಡಾರಿಗಳು, ವ ಕೆ. ವೆಂಕಪ್ಪ ಪುಂಜರು ಸಹಾ ಕಾಸರಗೋಡು ತಾಲೂಕು ಬೋರ್ಡ ಮೆಂಬರರಾಗಿ ಚುನಾವಣೆ ಹೊಂದಿರುವುದು ಸಂತೋಷಕರವಾಗಿದೆ. ಎಲ್ಲಾ ಮನೆತನದವರಾದ ಇವರಿಂದ ಈ ಪ್ರಾಂತದವರಿಗೆ ಹೆಚ್ಚಿನ ಸೌಕರ್ಯಗಳು ಲಭಿಸುವವೆಂತ ನಂಬುವೆವು.

ಇದೆ ತಾ. ೨೩ರಲ್ಲು ಇಲ್ಲಿಗೆ ಬಂದಿರುತ್ತಿದ್ದ ಮದ್ರಾಸ್ ನ್ಯಾಯ ವಿಧಾಯಕ ಸಭೆಯ ಮೆಂಬರಿಕೆಗೆ ಉಮೇದ್ವಾರರಾದ ಮ॥ ರಾ॥ ರಾ॥ ಎ ಬಾಲಕೃಷ್ಣ ಶೆಟ್ಟಿಯವರಿಗೆ ಈ ಸೆಂಟರಿನ ಅನೇಕ ಓಟರರು ಪ್ರೋತ್ಸಾಹಿಸಿರುವುದರಿಂದ ಇವರು ವಿಜಯಶಾಲಿಗಳಾಗುವರಾಗಿ ತಿಳಕೊಳ್ಳುವೆವು.

ಇಲ್ಲಿಯ ಪರಸ್ಪರ ಸಹಾಯಕ ಸಂಘದಲ್ಲಿರುವ ಚರ್ಚೆಯು ಇನ್ನೂ ಮುಗಿದಿಲ್ಲ. ಸದ್ಯಕ್ಕೆ ಸಾಲ ಕೊಡುವುದನ್ನು ಬಂದುಮಾಡಿರುವುದರಿಂದ ಬಡ ಮೆಂಬರರಿಗೆ ತ್ರಿಶಂಕುವಿನಂತಾಗಿದೆ. ದಾಕ್ಷ ಅಧಿಕಾರರಾದರೂ ಚಿಕಿತ್ಸೆಯು ಇಕ್ಕಿಯಾದರೆ ಆಗುತ್ತಿತು.

ಸುಮಾರು ೧೨೫ ವಿದ್ಯಾರ್ಥಿಗಳಿದ್ದು ೫ನೆ ಕ್ಲಾಸು ತನಕ ಕಲಿಸುವ ಇಲ್ಲಿಯ ಬೋರ್ಡ ಬಾಲಿಕಾ ಪಾಠಶಾಲೆಯಲ್ಲಿ ೪ ಮಂದಿ ಮಿಸ್ಟ್ರೆಸರು ಇರುವುದು ಇಲ್ಲಿಯ ಬ್ರಾಹ್ಮಣರರೊಬ್ಬರಿಗೆ ರಾಶಿರಾಶಿಯಾಗಿ ಕಂಡಿತಂತೆ! ಪಾಪ! ಇವರು ಶಾಲೆಯನ್ನು ಪರಾಂಬರಿಸಿದ್ದರೂ ಕಳೆದ ಸಂಚಿಕೆಯಲ್ಲಿ ರಾಶಿಪೂಜೆ ಮಾಡಿಯೇ ಬಿಟ್ಟರು!

ಇಲ್ಲಿಯ ಸ್ಯಾಕ್ಷನ ಎಂಬಲ್ಲಿ ಹುಲಿಯ ಅವಾಂತರದಿಂದ ಜಾನುವಾರುಗಳು ನಷ್ಟವಾಗುತ್ತಾ ಬರುತ್ತಿವೆ. ಲೈಸನ್ಸುದಾರರು ಇನ್ನಾದರೂ ಗೋರಕ್ಷಣೆ ಮಾಡಬಾರದೆ!

ಗವರ್ನಮೆಂಟ ಫಿಶರೀಸ್ ಡಿಪಾರ್ಟಮೆಂಟಿನವರು ಮುಚ್ಚಿ ತೆಕ್ಕಿರಿ ಕಸಬಿನವರ ಬಾಲಕರಿಗಾಗಿ ಇಲ್ಲಿ ಎಲಿಮೆಂಟರಿ ಶಾಲೆಯೊಂದನ್ನು ಈಚೆಗೆ ತೆರೆದಿರುವರು.

ಕಾಸರಗೋಡು:—ಇಲ್ಲಿಯ ಹೊಸತಾದ ತಾಲೂಕು ಬೋರ್ಡಿಗೆ, ಪ್ರೊಟೆಸ್ಟಾಂಟ ಕ್ರೈಸ್ತರಾದ ಕ್ರಿಶ್ಚನ್ ತಿಯೊದೊರ್ ಬಿ ಎ. ಎಲ್. ಟಿ. ಬಿ. ಎಲ್ ಇವರೂ, ನಿಲೇಶ್ವರದ ಚಾಡರ ಜಾತಿಯವರಾದ ಚಾತುರವರೂ, ಬೇಕಲದ ಮುಕ್ಕುವ ಜಾತಿಯವರಾದ ಚಂದನ್ ಎಂಬವರೂ, ಮಂಜೇಶ್ವರದ ಹತ್ತಿರ ಉದ್ಯಾವರ ಆದಿದ್ರಾವಿಡ ಮುದ್ದನವರೂ ಸರಕಾರದಿಂದ ನೇಮಕಪಟ್ಟು ಮೆಂಬರರಾಗಿರುವರು.

ರಾ॥ ಎನ್. ಕೃಷ್ಣನ್ ನಂಬಿಯಾರ ಬಿ. ಎ. ಬಿ. ಎಲ್. ಹೈಕೋರ್ಟ ವಕೀಲರೂ, ರಾ॥ ವಕೀಲ ಕುಂಬಳೆ ನರಸಿಂಹ ನಾಯ್ಕರವರೂ, ರಾ॥ ವಕೀಲ ಶೆಡ್ಡೆ ಸುಂದರರಾಮರಾಯರೂ ಈ ತಾಲೂಕು ಬೋರ್ಡ ಪ್ರೆಸಿಡೆಂಟ ಕೆಲಸಕ್ಕೆ ಉಮೇದವಾರರಾಗಿ ನಿಂತಿರುವರು. ಒಂದೊಂದು ಪಾರ್ಟಿಗೆ ೫-೫ ಮಂದಿ ಮೆಂಬರರು ಒಟ್ಟುಕೂಡಿದ್ದಾರೆ. ಒಬ್ಬ ಮೆಂಬರರು ಇಷ್ಟರ ವರೆಗೆ ಯಾವ ಪಾರ್ಟಿಗೂ ಸೇರಲಿಲ್ಲ. ಮೂರು ಕಡೆಯಿಂದಲೂ ತಮ್ಮ ಕಡೆಗೆ ಸೇರಬೇಕು ತಮ್ಮ ಕಡೆಗೆ ಸೇರಬೇಕೆಂದು ಪತ್ತಾಯವು ನಡಿಯುತ್ತದೆ. ಈ ಮೆಂಬರರು ಮತ್ತೆ ಯಾರೂ ಅಲ್ಲ, ಆದಿದ್ರಾವಿಡ ಮೆಂಬರರಾದ ಉದ್ಯಾವರ ಮುದ್ದನವರು. ಮೊದಲು ಈ ತಾಲೂಕು ಬೋರ್ಡಿನಲ್ಲಿ ೨ ಪಾರ್ಟಿಗಳಿದ್ದವು. ಒಂದು ಪಾರ್ಟಿಯಲ್ಲಿ ಮೂವರೂ, ಇನ್ನೊಂದು ಪಾರ್ಟಿಯಲ್ಲಿ ೯ ಮಂದಿ, ಒಬ್ಬರು ಯಾರ ಕಡೆಗೂ ಇರಲಿಲ್ಲ. ಮೂವರು ಮೆಂಬರುಗಳ ಸ್ಥಾನವು ಖಾಲಿ ಇತ್ತು. ಈಗ ಮೂರು ಪಾರ್ಟಿಗಳಾಗಿವೆ. ಆದರೆ ಮುಂಚಿನ ೯ ಮಂದಿ ಮೆಂಬರರಲ್ಲಿ ಇಬ್ಬರು ಉಮೇದುವಾರರಾಗಿ ನಿಲ್ಲಲಿಲ್ಲ. ಒಬ್ಬರಿಗೆ ಓಟು ಸಿಗಲಿಲ್ಲ. ಉಳಿದ ಆರು ಮಂದಿ ಈ ಮೂರು ಬೇರೆ ಬೇರೆ ಪಾರ್ಟಿಗೆ ಸೇರಿರುತ್ತಾರೆ.

ಇಲ್ಲಿಯ ಬೋರ್ಡ ಹೈಸ್ಕೂಲಿನಲ್ಲಿ ೬ನೇ ಫೋರ್ಮಿನಲ್ಲಿದ್ದ ೩೦ ಮಂದಿ ಹುಡುಗರಲ್ಲಿ ೨೫ ಮಂದಿ ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಕೂತಿರುತ್ತಾರೆ.

ಇಲ್ಲಿಯ ಪ್ರೊಟೆಸ್ಟಾಂಟ ಕೆ. ಇ. ಮಿಶನ್ ಶಾಲೆಗಳ ಮತ್ತು ಮತಪ್ರಸಾರಣೆಯ ಕೆಲಸಕ್ಕೆ ಮುಖ್ಯಸ್ಥರಾದ ರೆವರೆಂಡ್ ಎಡವರ್ಡ ಶೆಟ್ಟಿಯವರು ಇಲ್ಲಿಗೆ ವರ್ಗಾಯಿಸಲ್ಪಟ್ಟಿರುತ್ತಾರೆ. ಇವರು ಇಲ್ಲಿಗೆ ಬರುವಾಗ ಇಲ್ಲಿಯ ಪ್ರೊಟೆಸ್ಟಾಂಟ ಕ್ರೈಸ್ತರಲ್ಲಿ ಅನೇಕ ಜಗಳಗಳು ಇದ್ದವು. ಇವರು ಬಂದು ಅವುಗಳೆಲ್ಲವನ್ನು ಸರಿಯಾಗಿ ತೀರಿಸಿದರು.

ಕ್ಲಾರಿಕ ರಾಮನನ್ನು ಕೊಂದ ಆರೋಪದ ಮೇಲೆ ಕ್ಲಾರಿಕ ಬಟಿಯನನ್ನು ಕೈದು ಮಾಡಿರುತ್ತಾರೆ.

ಇದೇ ತಿಂಗಳ ೨೭ನೇ ತಾರೀಕಿಗೆ ಇಲ್ಲಿಯ ಬೋರ್ಡ ಹೈಸ್ಕೂಲಿನ ಹುಡುಗರು ಈ ಶಾಲೆಯನ್ನು ಬಿಟ್ಟು ಹೋಗುವ ರಾ॥ ವಾಸುದೇವ ಕಾರಂತರಿಗೆ ಭಂಗಾರದ ಒಂದು ಪದಕವನ್ನು ಕೊಟ್ಟು ಗುರುಭಕ್ತಿಯನ್ನು ತೋರಿಸಿದರು. ಈ ಸಮಯ ಕೂಡಿದ ಸಭೆಯಲ್ಲಿ ಈ ಶಾಲೆಯ ಕರ್ನಾಟಕ ಪಂಡಿತರಾದ "ಕಾವ್ಯಭೂಷಣ" ಮತ್ತು ಕರ್ನಾಟಕ ಸಾಹಿತ್ಯರತ್ನ" ಎಂಬ ಬಿರುದುಳ್ಳ ಸರಕಳ ಸುಬ್ಬರಾಯರೂ, ಶಾಲಾ ಹೆಡ್‌ಮಾಸ್ತರರೂ ರಾ॥ ಕಾರಂತರವರ ಗುಣಕಥನ ಮಾಡಿ ಮಾತನಾಡಿದರು.

ಇದೇ ತಾ. ೩೧ನೇ ಬುಧವಾರ ಸಾಯಂಕಾಲ ೫ ಘಂಟೆಗೆ ಇಲ್ಲಿಯ ಕೋರ್ಟಿನ ಎದುರಿನ ಕ್ಲಬ್ಬಿನಲ್ಲಿ ಆರ್ಯಸಮಾಜದ ಒಂದು ಪ್ರಚಂಡ ಸಭೆಯು ಕೂಡಿತ್ತು. ಶ್ರೀ. ರಘುರಾಮ ದಂಡಿಲ್ಲಾಯ. ಎಮ್. ಎ. ಎಲ್. ಎಲ್ ಬಿ ಯವರು ಅಗ್ರಾಸನವನ್ನು ವಹಿಸಿದ್ದರು. ಊರಿನ ಅನೇಕ ಮಹಾಜನರು ಸಭೆಯನ್ನು ಅಲಂಕರಿಸಿದ್ದರು. ಸಭೆಯವರ ಅಪೇಕ್ಷೆಯಂತೆ ಕವಿವರ್ಯ ಶ್ರೀ ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚಿತ್ತಾಯರು ರಸಭರಿತವಾದ ತಮ್ಮ "ಲೀಲೆ"ಯ ಕೆಲವು ಪದ್ಯಗಳನ್ನು ಓದಿದರು ಸಭಿಕರೆಲ್ಲರೂ ಆನಂದಪರವಶರಾದರು. ಅನಂತರ ಸರ್ವೆ ಡಿಪಾರ್ಟಮೆಂಟಿನ ಅಸಿಸ್ಟಾಂಟ್ ಡೈರೆಕ್ಟರರು ಶ್ರೀ ರಾಮಸ್ವಾಮಿ ಐಯ್ಯರರವರ ಮನೋಹರವಾದ ಭಾಷಣವಾಯಿತು. ಕೊನೆಗೆ ಸಭಾಧ್ಯಕ್ಷರ ಗಂಭೀರವಾದ ಭಾಷಣವಾಗಿ ಸಭೆಯು ಮುಕ್ತಾಯವಾಯಿತು.

ಪುತ್ತೂರು:—ಇಲ್ಲಿಯ ಬೊಳ್ವಾರು ಸಂಕದ ಹತ್ತಿರ ಕೆಳಗೆ ಬಿದ್ದ ಮೋಟರಕಾರಿನಲ್ಲಿದ್ದ ಜನರಲ್ಲಿ ಇಬ್ಬರು ಇಲ್ಲಿಯ ಆಸ್ಪತ್ರೆಯಲ್ಲಿ ಕಠಿಣಸ್ಥಿತಿಯಲ್ಲಿರುತ್ತಾರೆ.

ಇಲ್ಲಿಯ ಸಬ್ ಪೋಸ್ಟುಮಾಸ್ತರರಾದ ರಾ॥ ಎಮ್ ವಿಟ್ಟಪ್ಪ ಕವಿತ್ರಯವರಿಗೆ ಬಡ್ತಿ ಮೇಲೆ ತಿರೂರಿಗೆ ವರ್ಗವಾಗಿಯದೆ.

ಇಲ್ಲಿಯ ಯೂನಿಯನ್ ಕ್ಲಬ್ಬಿನ ಹಿಂದಕ್ಕಿರುವ ಓಣಿಯಲ್ಲಿ ಕಸದ ರಾಶಿಯು ಬಿದ್ದು ಬಹಳ ಗಲೀಜಾಗಿದೆ. ಸೆನಿಟರಿ ಇನ್ಸಪೆಕ್ಟರವರು ಇದನ್ನು ಸ್ವಲ್ಪ ನೋಡಿದರೆ ಒಳ್ಳೇದಿತ್ತು.

ಕಾಸರಗೋಡಿನಿಂದ ವಿಟ್ಲಕ್ಕೆ ಬಂದು ಸರ್ಕಸ್ ಆಟವಾಡುವ ಭಾರತ ರಿಫ್ಯಾನ್ಸ ಕಂಪೆನಿಯವರು ಇಲ್ಲಿಗೆ ಬೇಗನೇ ಬರುತ್ತಾರಂತೆ.

ಇಲ್ಲಿ ಆದಿದ್ರಾವಿಡರ ವಾಸಸ್ಥಾನಕ್ಕಾಗಿ ಕೊಟ್ಟ ಸ್ಥಳದ ಹತ್ತಿರ ಒಂದು ಮಾರ್ಗ ಮಾಡಬೇಕೆಂದು ಆದಿದ್ರಾವಿಡರ ಅಪೇಕ್ಷೆಯಂತೆ ಸಮ್ಮಂದಪಟ್ಟವರು ಮಾಡಿಸಿದರಾಗುತ್ತಿತ್ತು.

ಮದ್ರಾಸು ಸಂಸ್ಥಾನದಲ್ಲಿಯ ಮಹಮ್ಮದೀಯರ ವಿದ್ಯಾಭ್ಯಾಸ.

ಮಹಮ್ಮದೀಯರಿಗಾಗಿ ಸ್ಥಾಪಿಸಿದ ಶಾಲೆಗಳ ಸಂಖ್ಯೆಯು ೨೩೩೫ರಿಂದ ೨೯೯೩ಕ್ಕೆ ಏರಿತು. ಈ ಶಾಲೆಗಳಲ್ಲಿ ಕಲಿಯುವ ಮಕ್ಕಳ ಸಂಖ್ಯೆಯು ೧೨೬,೬೫೫ರಿಂದ ೧೩೬,೬೦೮ಕ್ಕೆ ಏರಿತು. ಖಾಸಗಿ ಶಾಲೆಗಳ ಸಂಖ್ಯೆಯು ೬೨೫ರಿಂದ ೮೫೭ಕ್ಕೆ ಏರಿತು. ಇವುಗಳಲ್ಲಿ ಕಲಿಯುವ ಹುಡುಗರ ಸಂಖ್ಯೆಯು ೩೧,೧೫೫ರಿಂದ ೩೫,೭೫೪ಕ್ಕೆ ಏರಿತು.

ಕೊಲೇಜು ವಿದ್ಯಾಭ್ಯಾಸ.

ಮದರಾಸಿನಲ್ಲಿರುವ ಗವರ್ನಮೆಂಟ ಮಹಮ್ಮದೀಯ ಕೊಲೇಜನ್ನು ಹಂಗಾಮಿಯಾಗಿ ಇನ್ನೊಂದು ವರುಷಕ್ಕೆ ಮುಂದರಿಸಲಾಯಿತು. ಅದು ಈಗಲೂ ಮದರಾಸಾ-ಏ-ಆಜಾದು ಕಟ್ಟೋಣದಲ್ಲಿಯೇ ಇದೆ. ಈ ಕಟ್ಟೋಣವು ಸಾಕಾಗದೆ ಇದ್ದದ್ದೆ ಈ ಕೊಲೇಜು ಅಭಿವೃದ್ಧಿಯಾಗದೆ ಇರಲು ಕಾರಣವಾಗಿದೆ. ಈ ಕೊಲೇಜಿನ ಕೆಲವು ಮಂದಿ ಹುಡುಗರು ಪ್ರೆಸಿಡೆನ್ಸಿ ಕೊಲೇಜಿಗೆ ಕೆಲವು ಪಾಠಗಳಿಗಾಗಿ ಹೋಗಬೇಕಾದುದರಿಂದಲೂ ಪ್ರೆಸಿಡೆನ್ಸಿ ಕೊಲೇಜಿನ ಇಂಟರಮಿಡಿಯೇಟ ಕ್ಲಾಸಿನ ಕೆಲವು ಹುಡುಗರು ಈ ಕೊಲೇಜಿಗೆ ಬರಬೇಕಾದುದರಿಂದಲೂ ಮಹಮ್ಮದೀಯ ಕೊಲೇಜು ಕ್ಲಾಸುಗಳನ್ನು ಮೌಂಟರೋಡಿನಲ್ಲಿ ಇಡುವುದಕ್ಕಿಂತ ಚಿಪಾಕ್‌ನಲ್ಲಿ ಇಡುವುದೇ ಉಚಿತವೆಂದು ಕಾಣುತ್ತದೆ. ಆರ್ಟ ಕೊಲೇಜುಗಳಲ್ಲಿ ಕಲಿಯುವ ಹುಡುಗರ ಸಂಖ್ಯೆಯು ೧೮೪ರಿಂದ ೨೧೫ಕ್ಕೆ ಏರಿತು. ಇವರಲ್ಲಿ ಒಂದು ವಿದ್ಯಾರ್ಥಿನಿಯು ಇರುತ್ತಾಳೆ. ಇತರ ವೃತ್ತಿ ಕಲಿಯುವ ಕೊಲೇಜುಗಳಲ್ಲಿ ಕಲಿಯುವವರ ಸಂಖ್ಯೆಯು ೪೧ರಿಂದ ೪೮ಕ್ಕೆ ಏರಿತು.

ಸೆಕೆಂಡರಿ ವಿದ್ಯಾಭ್ಯಾಸ.

ರೋಯಪುರಂನಲ್ಲಿ ಚರ್ಚಮಿಶನರಿ ಸೊಸೈಟಿಯವರು ಸ್ಥಾಪಿಸಿದ ಹೆರಿಸ್ ಹ್ಯಾಸ್ಕೂಲನ್ನು ಅವರು ಮುಚ್ಚಿದುದರಿಂದ ಮಹಮ್ಮದೀಯ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಅವನ್ನು ಸರಕಾರವು ವಹಿಸಿಕೊಂಡಿತು. ಇದರ ಅಭಿವೃದ್ಧಿಗಾಗಿ ಸರಕಾರವೂ, ದಕ್ಷಿಣ ಇಂಡಿಯದ ಮಹಮ್ಮದಿ ವಿದ್ಯಾ ಸಂಘವೂ ಕೂಡಿ ೩೦೦೦ ರೂಪಾಯಿ ಖರ್ಚುಮಾಡಿತು.

ಗುಂಟೂರಲ್ಲಿರುವ ಮಹಮ್ಮದಿ ಸೆಕೆಂಡರಿ ಶಾಲೆಯಲ್ಲಿ ೫ನೇ ಫೋರ್ಮನ್ನು, ವೆಲ್ಲೂರು ಗವರ್ನಮೆಂಟ ಮಹಮ್ಮದಿ ಶಾಲೆಯಲ್ಲಿ ೬ನೇ ಫೋರ್ಮನ್ನು ತೆರೆಯಲಾಯಿತು.

ಇವುಗಳಲ್ಲಿ ಕಲಿಯುವ ಹುಡುಗರಲ್ಲದೆ ಇತರ ಶಾಲೆಗಳಲ್ಲಿ ಕಲಿಯುವ ಮಹಮ್ಮದಿ ಮಕ್ಕಳ ಸಂಖ್ಯೆಯು ೮,೦೮೫ರಿಂದ ೮,೩೪೮ಕ್ಕೆ ಏರಿತು.

ಮಾಪಿಳ್ಳೆಯವರ ವಿದ್ಯಾಭ್ಯಾಸ.

ಮಾಪಿಳ್ಳೆಯರಿಗಾಗಿ ಸ್ಥಾಪಿಸಿದ ಶಾಲೆಗಳ ಸಂಖ್ಯೆಯು ೫೫೩ರಿಂದ ೬೬೧ಕ್ಕೆ ಏರಿತು. ಅವುಗಳಲ್ಲಿ ಕಲಿಯುವ ಮಕ್ಕಳ ಸಂಖ್ಯೆಯು ೪೩,೩೬೪ರಿಂದ ೫೧,೨೭೭ಕ್ಕೆ ಏರಿತು. ಮಾಪಿಳ್ಳೆಯರಿಗಾಗಿ ಇಟ್ಟ ಖಾಸಗಿ ಶಾಲೆಗಳ ಸಂಖ್ಯೆಯೂ ಸ್ವಲ್ಪ ಏರಿತು. ಆದರೆ ಅವುಗಳಲ್ಲಿ ಕಲಿಯುವ ಮಕ್ಕಳ ಸಂಖ್ಯೆಯು ೧೩,೭೮೩ರಿಂದ ೧೩,೫೮೮ಕ್ಕೆ ಇಳಿಯಿತು. ಆದರೆ ಸರಕಾರ ಶಾಲೆಗಳಲ್ಲಿ ಕಲಿಯುವ ಸಂಖ್ಯೆ ಏರಿಯದೆ. ಕಲ್ಲಿಕೋಟೆಯಲ್ಲಿರುವ ಹೈಮಯುಳ ಇಸ್ಲಾಂ ಹ್ಯಾಸ್ಕೂಲಿನಲ್ಲಿ ೫ನೇ ಫೋರಮ್ಮು ತೆರೆಯಲಾಯಿತು. ಮಲಬಾರಿನಲ್ಲಿ (ಮಾಪಿಳ್ಳ ದಂಗೆಯ ದೆಸೆಯಿಂದ) ಪ್ರಾಥಮಿಕ ವಿದ್ಯಾಭ್ಯಾಸವನ್ನು ಖಡ್ಡಾಯವಾಗಿ ಕಲಿಸಬೇಕೆಂಬ ಹುಕುಮನ್ನು ಜಾರಿಗೆ ತರಲಿಕ್ಕೆ ಲೋಕಲ ಬೋರ್ಡುಗಳಿಗೆ ಸಾಧ್ಯವಾಗಲಿಲ್ಲ. ಮಲ್ಲಪುರಂನಲ್ಲಿರುವ ಮಾಪಿಳ್ಳ ಲೋವರ್ ಎಲಿಮೆಂಟರಿ ಶಾಲೆಯನ್ನು ತೆಗೆದು ಹಾಕುವದರ ಬದಲಾಗಿ ಅದನ್ನು ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯಾಗಿ ಮಾಡಬೇಕೆಂಬ ಸರಕಾರಿ ಹುಕುಂ ಆಗಿಯದೆ. ಮಾಪಿಳ್ಳೆಯ ಮಕ್ಕಳಿಗಾಗಿ ಕುರಾನಿನಿಂದಲೂ, ಕಿತಾಬಿನಿಂದಲೂ ಕಥೆಗಳನ್ನು ತೆಗೆದು ಮಲೆಯಾಳಿ ಭಾಷೆಯಲ್ಲಿ ಬರೆದು ಅಚ್ಚು ಹಾಕಿಸಲಿಕ್ಕೆ ಅನೇಕ ಮಂದಿ ಮಾಪಿಳ್ಳ ಮುಖಂಡರು ಸಹಾಯಮಾಡಿರುತ್ತಾರೆ. ಟೆಕ್ಸ್ಟ ಬುಕ್ ಕಮಿಟಿಯವರೂ ಇದಕ್ಕೆ ಶಿಫಾರಸುಮಾಡಿರುತ್ತಾರೆ. ಶಾಲಾ ಪುಸ್ತಕಗಳನ್ನು ತಯಾರಿಸುವುದಕ್ಕೆ ೫ ಮಂದಿ ಮೆಂಬರರಿರುವ ಒಂದು ಕಮಿಟಿಯು ನೇಮಿಸಲ್ಪಟ್ಟಿದೆ.

ಹೊಸ ಕಾಸರಗೋಡು ತಾಲೂಕು ಬೋರ್ಡು ಮೆಂಬರರು ಮಾಡಬೇಕಾದ ಕೆಲಸಗಳು.

ಕಳೆದ ೧೯೨೩ನೇ ಇಸವಿಯ ಅಕ್ಟೋಬರ ತಿಂಗಳಿಂದ ಕಾಸರಗೋಡು ತಾಲೂಕು ಬೋರ್ಡಿನ ಎಲ್ಲಾ ಕೆಲಸಗಳು ಬಾಕಿ ಬಿದ್ದಿವೆ. ಸುಮಾರು ೬೦೦ ಚಿಲ್ಲರೆ ರಿಜೊಲ್ಯೂಶನುಗಳು ಇವೆ.

ಕಳೆದ ಸಾರಿಯ ತಾಲೂಕು ಬೋರ್ಡಿನಲ್ಲಿ ಎದ್ದ ಜಗಳದಿಂದ ಮೆಂಬರುಗಳಿಗಾಗಲಿ, ಪ್ರೆಸಿಡೆಂಟರಿಗಾಗಲಿ ಏನೊಂದೂ ಕಷ್ಟಗಳು ಸಂಭವಿಸಲಿಲ್ಲ. ನಿಜವಾಗಿ ಕಷ್ಟಪಟ್ಟವರು ಕಾಸರಗೋಡು ತಾಲೂಕಿನ ನಿವಾಸಿಕರೂ ತಾಲೂಕು ಬೋರ್ಡಿನ ನೌಕರರೂ. ಎಷ್ಟೊ ಮಾರ್ಗಗಳು ಅರ್ಧದಲ್ಲಿಯೇ ಇವೆ. ಎಷ್ಟೊ ಕಂಟ್ರಾಕ್ಟರರಿಗೆ ಕೆಲಸಮಾಡಿದ ಹಣ ಬಾಕಿ ಇದೆ. ಶಾಲಾ ಉಪಾಧ್ಯಾಯರು ಪಟ್ಟ ಕಷ್ಟಗಳನ್ನು ಹೇಳಿ ತೀರದು. ಸಂಬಳವು ೧೮ ತಿಂಗಳಿನಿಂದ ಸರಿಯಾಗಿ ಸಿಕ್ಕಲಿಲ್ಲ. ವರ್ಗಾವರ್ಗಿಗೆ ಮಿತಿಯೇ ಇಲ್ಲ. ಪ್ರೆಸಿಡೆಂಟರು ಎಲ್ಲಿ ಹೊಸತಾಗಿ ಶಾಲೆ ತೆರಿಯುತ್ತಾರೊ, ಆ ಶಾಲೆ ಮುಚ್ಚಬೇಕೆಂದು ಎದುರು ಮೆಂಬರರ ಸಾಧನೆ. ಕುಂಬಳೆ ಆಸ್ಪತ್ರೆಯನ್ನು ತೆಗಿಯಬೇಕೆಂದು ಮಾಡಿದ ಸಾಧನೆಯ ರಿಕಾರ್ಡು ಮುನಿಸಿಫರ ಆಫೀಸಿನಲ್ಲಿ ಒಂದು ಕೋಣೆ ತುಂಬಾ ಆದೀತು. ಆ ಬೋರ್ಡು ಶಾಲೆ ರಿಕೊಗ್ನೈಜ ಮಾಡಬಾರದು. ಈ ಶಾಲೆ ತೆಗಿಸಬೇಕೆಂದು ಬರದ ರಿಕಾರ್ಡು ಡಿಸ್ಟ್ರಿಕ್ಟ ಎಜ್ಯುಕೇಶನ ಆಫಿಸರರ ಆಫಿಸಿನಲ್ಲಿಯೂ, ಡಿಸ್ಟ್ರಿಕ್ಟ ಎಜ್ಯುಕೇಶನ ಕೌನ್ಸಿಲಿನ ಆಫಿಸಿನಲ್ಲಿಯೂ ದೊಡ್ಡ ದೊಡ್ಡ ಕಟ್ಟುಗಳಾದೀತು.

ಈಗ ಕಪ್ಪಾದ ಮೋಡವು ಹೋಗಿ ಸ್ವಲ್ಪ ಬೆಳಕು ಬೀಳುವ ಸಂಭವ ಕಾಣುತ್ತದೆ. ಆದುದರಿಂದ ಈಗ ಬಂದಿರುವ ಮೆಂಬರರು ತಾಲೂಕಿನ ನಿವಾಸಿಕರಿಗೆ ಬೇಕಾದ ಕೆಲಸಗಳನ್ನು ಮಾಡುವದರಲ್ಲಿ ತಮ್ಮ ಮೂರು ವರುಷಗಳ ಅವಧಿಯನ್ನು ಕಳೆಯಬೇಕಲ್ಲದೆ ತಮ್ಮ ತಮ್ಮೊಳಗೆ ಜಗಳಮಾಡಿಕೊಂಡು ಮೂರು ವರುಷಗಳನ್ನು ಕಳೆಯುವದಲ್ಲ.

ಈಗ ಮಾಡಬೇಕಾದ ಕೆಲಸಗಳು ಯಾವವೆಂದರೆ:—

(೧) ಹೊಸದುರ್ಗ ಹಾಯರ್ ಎಲಿಮೆಂಟರಿ ಶಾಲೆಯನ್ನು ಒಂದನೇ ದರ್ಜೆಯಿಂದ ಎಂಟನೇ ದರ್ಜೆಯ ವರೆಗೆ ಒಂದು ಸಂಪೂರ್ಣ ಎಲಿಮೆಂಟರಿ ಶಾಲೆಯಾಗಿ ಮಾಡುವದು.

(೨) ಪಳ್ಳಿಕೆರೆಯಲ್ಲಿ ಹೊಳೆಗೆ ಒಂದು ಸೇತುವೆಯನ್ನು ಕಟ್ಟಿಸುವಂತೆ ಡಿಸ್ಟ್ರಿಕ್ಟ ಬೋರ್ಡಿನಲ್ಲಿ ಪ್ರಯತ್ನಿಸಿ ಮುಕ್ಕುವರ ಹೆಂಗಸರು ಹೊಳೆಗೆ ಆಹುತಿಯಾಗದಂತೆ ಮಾಡುವದು.

(೩) ಕುಂಬಳೆ ಹಾಯರ್ ಎಲಿಮೆಂಟರಿ ಶಾಲೆಯನ್ನು ಕೈವಾಡಿ ಹಾಯರ್ ಎಲಿಮೆಂಟರಿ ಶಾಲೆಯನ್ನು ಒಂದಾಗಿ ಕೂಡಿಸಿ ಒಂದೇ ಶಾಲೆಯಾಗಿ ಮಾಡುವದು.

(೪) ಕುಂಬಳೆಯಲ್ಲಿ ಇತ್ತಲಾಗಿ ತೆರದ ರೂರಲ್ ಆಸ್ಪತ್ರೆಯನು ಮುಚ್ಚಿ ಮುಂಚಿನಂತೆಯೇ ಆಸ್ಪತ್ರೆಯನ್ನು ತೆರೆಯುವದು. ಇಲ್ಲಿಯ ಆಸ್ಪತ್ರೆಗೆ ಕಟ್ಟೋಣವನ್ನು ಕಟ್ಟಿಸಿಕೊಡುತ್ತೇನೆಂದು ಹೇಳಿದ್ದ ರಾ॥ ವೆಂಕಪ್ಪ ಪುಂಜರವರು ಈಗ ಮೆಂಬರರಾಗಿ ಚುನಾಯಿಸಲ್ಪಟ್ಟಿರುವರು.

(೫) ಪೆರ್ಡಾಲಿನಲ್ಲಿ ಮುಚ್ಚಿದ ಆಯುರ್ವೇದಿಕ್ ಆಸ್ಪತ್ರೆಯನ್ನು ತೆರಿಯುವದು.

(೬) ಬಾಯಾರಿನಲ್ಲಿ ಒಂದು ಆಸ್ಪತ್ರೆಯನ್ನು ತೆರಿಯುವದು.

(೭) ಮಂಜೇಶ್ವರ ಹಾಯರ್ ಎಲಿಮೆಂಟರಿ ಶಾಲೆಯನ್ನು ಮಾಪಿಳ್ಳಾ ಬೋರ್ಡು ಶಾಲೆಯ ಹಿಂದೂ ಸೆಕ್ಷನನ್ನು ಒಟ್ಟುಗೂಡಿಸಿ ಒಂದನೇ ದರ್ಜೆಯಿಂದ ೮ನೇ ದರ್ಜೆಯ ವರೆಗಿರುವ ಹಾಯರ್ ಎಲಿಮೆಂಟರಿ ಶಾಲೆಯಾಗಿ ಮಾಡಿ ಈ ಊರಿನ ಬ್ರಾಹ್ಮಣೇತರರ ಮಕ್ಕಳನ್ನೆಲ್ಲಾ ವಿದ್ಯಾವಂತರಾಗಿ ಮಾಡಿ ಅವರನ್ನು ಅಭಿವೃದ್ಧಿಗೆ ತರುವದು.

(೮) ಮಂಜೇಶ್ವರ ಹೊಳೆಗೊಂದು ಸೇತುವೆ ಕಟ್ಟಿಸುವ ಪ್ರಯತ್ನವನ್ನು ಡಿಸ್ಟ್ರಿಕ್ಟ ಬೋರ್ಡಿನಲ್ಲಿ ಸಾಧಿಸಿ ಹೊಳೆಯನ್ನು ದಾಟುವ ಹೆಂಗಸರು ಮಕ್ಕಳನ್ನು ಬಚಾವುಮಾಡುವದು. ಇದು ಕಡಿಮೆ ಖರ್ಚಿನಿಂದ ಆಗುವ ಸಣ್ಣ ಸಂಕ.

(೯) ಈ ತಾಲೂಕು ಬೋರ್ಡಿನ ಶಾಲಾ ಉಪಾಧ್ಯಾಯರಿಂದ ಕಳೆದು ತೆಗೆದ ಸಂಬಳವನ್ನು ಅವರವರಿಗೆ ಹಿಂತಿರುಗಿ ಕೊಡುವದು.

(೧೦) ಹೊಸಪಟ್ಟ ಮಾಪಿಳ್ಳಾ ಬೋರ್ಡು ಶಾಲೆಯ ಹಿಂದೂ ಸೆಕ್ಷನನ್ನು ತೆಗೆದುಹಾಕಬೇಕೆಂಬ ಬೋರ್ಡಿನಲ್ಲಿ ಬಾಕಿ ಇರುವ ಠರಾವನ್ನು ತೆಗೆದುಹಾಕಿ ಆ ಸೆಕ್ಷನನ್ನು ಹಾಯರ್ ಎಲಿಮೆಂಟರಿ ಶಾಲೆಗೆ ಕೂಡಿಸಬೇಕೆಂಬ ಉಪಕಾರವು ಮಾಡಿ ಸೆಂಕ್ಷನ್‌ಮಾಡುವದು.

(೧೧) ಉಪಾಧ್ಯಾಯರನ್ನು ಅವರವರ ಊರಿನ ಹತ್ತಿರವೇ ವರ್ಗಮಾಡಿ ಕಡಿಮೆ ಸಂಬಳದ ನೌಕರರಾದ ಉಪಾಧ್ಯಾಯರೂ ಅವರ ಹೆಂಡಿರು ಮಕ್ಕಳೂ ಒಟ್ಟಿಗಿದ್ದು ಗಂಜಿನೀರು ಒಟ್ಟಿಗೆ ತಿನ್ನುವಂತೆ ಮಾಡುವದು.

(೧೨) ಇನ್ನು ಯಾವ ಸಂಸ್ಥೆಯನ್ನು ಕವಚಿಹಾಕದೆ ಕಾಸರಗೋಡು ತಾಲೂಕು ಬೋರ್ಡನ್ನು ಉತ್ತಮ ರೀತಿಯಲ್ಲಿ ಕೆಲಸಮಾಡುವ ತಾಲೂಕು ಬೋರ್ಡು ಮದರಾಸು ಸಂಸ್ಥಾನದ ಯಾವ ಜಿಲ್ಲೆಯಲ್ಲಿಯೂ ಇಲ್ಲವೆಂದು ತೀರ್ಮಾನಿಸುವದು.

ಅನುಕ್ರಮಣಿಕೆ.

ಅಗ್ರಲೇಖ ಪುಟಗಳು.
ಸಂಶಯವು ಒಳ್ಳೇದಲ್ಲ ೨
ಸ್ಫುಟವಿಚಾರಗಳು— ೩
೧ ಎಸ್. ಶ್ರೀನಿವಾಸ ಅಯ್ಯಂಗಾರರ ಭಾಷಣ
೨ ಮದ್ರಾಸ ಸೆನೆಟ ಮೀಟಿಂಗು
೩ ಹತ್ತಿಯ ಮೇಲಿನ ಕರ
೪ ಕಲಕತ್ತೆಯ ಯು. ಎಸೋಸಿಯೇಶನ್
೫ ಎಸೆಂಬ್ಲಿಯ ಸಮಾರೋಪ
ಮಂಗಳೂರು
ವರ್ತಮಾನಸಂಗ್ರಹಗಳು—
ವಿದೇಶ-ಒಳದೇಶ ವರ್ತಮಾನ ೫
ದಕ್ಷಿಣ ಕನ್ನಡ – ಮುಲ್ಕಿ, ಕಟಪಾಡಿ, ಕುಂಬಳೆ, ಕಾಸರಗೋಡು, ಪುತ್ತೂರು, ಉಡುಪಿ ,,
ಹೊಸ ತಾಲೂಕು ಬೋರ್ಡ ಮೆಂಬರರು ಮಾಡಬೇಕಾದ ಕೆಲಸಗಳು ,,
ಮದ್ರಾಸ ಸಂಸ್ಥಾನದಲ್ಲಿಯ ಮಹಮ್ಮದೀಯರ ವಿದ್ಯಾಭ್ಯಾಸ ,,
ಪತ್ರವ್ಯವಹಾರ, ೧, ೨, ೩, ೮
ಬುದ್ಧನು ಹುಟ್ಟಿದ ಸ್ಥಳ ೪

ಸ್ವದೇಶಾಭಿಮಾನಿ.

ಶಕ ೧೮೪೭ ಚೈತ್ರ ಶು ೧೦ಯು ಶುಕ್ರವಾರ.

ಸಂಶಯವು ಒಳ್ಳೇದಲ್ಲ.

ಸಂಶಯವು ಆಗಾಗ್ಗೆ ಉದ್ಭವಿಸುತ್ತಿದ್ದರೆ ಅದೊಂದು ಮಾನಸಿಕ ರೋಗವಾಗಿ ಪರಿಣಮಿಸುತ್ತದೆ. ಸರ್ವದಾ ಸಂಶಯಗ್ರಸ್ತನಾಗಿರುವುದು ಹೇಗೆ ಹಿತಾವಹವಲ್ಲವೊ, ಹಾಗೆಯೇ ಸರ್ವತ್ರ ಸಂದೇಹಯುಕ್ತನಾಗಿರುವುದೂ ಯೋಗ್ಯವಲ್ಲ. ನೈತಿಕ ವರ್ತನದ ವಿಷಯದಲ್ಲಿ ಯಾವಾಗಲೂ ಶಂಕಾಕುಲನಾಗಿರುವ ಒಬ್ಬ ಗೃಹಸ್ಥನು ತನ್ನ ಹೆಂಡತಿಯನ್ನು ಸರ್ವದಾ ಹೇಗೆ ಪೆಟ್ಟಿಗೆಯಲ್ಲೆ ಬಚ್ಚಿಡುತ್ತಿದ್ದನೆಂಬೀ ಕಥೆಯು ಪ್ರಾಯಶಃ ಎಲ್ಲರ ಹೇಳಿಕೆಯಲ್ಲಿ ಬಂದಿರುವುದರಿಂದ ಪುನಃ ಅದರ ಉಲ್ಲೇಖವು ಅಗತ್ಯವಿಲ್ಲ. ಆದರೆ ಈ ಮೂರ್ಖ ಗಂಡನು ಹೇಗೆ ಉಪಹಾಸ್ಯನಾಗಿರುವನೊ ಹಾಗೆಯೆ ಅಕಾರಣವಾಗಿ ಸಂಶಯ ಪಿಶಾಚಿಕೆಯಿಂದ ಗ್ರಸ್ತರಾದವರು ಲೋಕದ ಉಪಹಾಸಕ್ಕೂ, ಕಡೆಗೆ ಅನಾದರಕ್ಕೂ ಪಾತ್ರರಾಗುತ್ತಾರೆ.

ಈ ಹೊತ್ತು ಈ ಪ್ರಸ್ತಾವನೆಯನ್ನು ಪ್ರಾರಂಭಿಸಲು ಕಾರಣವೇನೆಂದರೆ, ಬಂಗಾಲದ ಯುರೋಪಿಯನ ಗೃಹಸ್ಥರು ಸ್ವರಾಜ್ಯಪಕ್ಷದವರ ಮೇಲೆ ರಾಜಕೀಯ ಖೂನಿಗಳ ಸಂಶಯವನ್ನು ತಕ್ಕೊಳ್ಳುತ್ತಿದ್ದಾರೆ. ಅಂಥವರಿಗೆ ದೇ. ಬಂ. ದಾಸರು ಒಂದು ವಿಜ್ಞಾಪನೆಯನ್ನು ಮಾಡಿಕೊಂಡಿದ್ದಾರೆ. ವಿಲಾಯತಿಯ ಜನರು ಇಲ್ಲಿ ರಾಜ್ಯಭಾರವನ್ನು ನಡಿಸುವಾಗ ಹಿಂದಿಗಳ ಮೇಲೆ ಸಂಶಯವನ್ನು ತಕ್ಕೊಳ್ಳಲು ಎಷ್ಟೊ ಕಾರಣಗಳಿವೆ. ಹಿಂದುಸ್ಥಾನವು ವಿಲಾಯತಿಯಿಂದ ೬ ಸಾವಿರ ಮೈಲು ದೂರದಲ್ಲಿ ಇದೆ. ವಿಲಾಯತಿಯವರ ಮತ್ತು ಭಾರತೀಯರ ಧರ್ಮ ಬೇರೆ ಬೇರೆ, ಭಾಷೆ ಬೇರೆ ಬೇರೆ ಸಂಸ್ಕೃತಿ ಬೇರೆ ಬೇರೆ, ಹಿತಸಂಬಂಧವು ಸಹ ಬೇರೆ ಬೇರೆ. ಈ ಕಾರಣಗಳಿಂದ ಇಲ್ಲಿಯವರನ್ನು ಅವರು ನಂಬಲೊಲ್ಲರು. ಹಿಂದಿ ಜನರ ಯಾವ ಚಳವಳವಿದ್ದರೂ, ಯಾವ ಸಭೆ ಇದ್ದರೂ, ಯಾವ ಭಾಷಣವಿದ್ದರೂ ಅವೆಲ್ಲ ರಾಜದ್ರೋಹದಿಂದ ತುಂಬಿಕೊಂಡಿದೆ, ರಾಜಕೀಯ ಕಟದಿಂದ ಯುಕ್ತವಾಗಿದೆ, ರಾಜಕೀಯ ಖೂನಿಗಳಿಗೆ ಉತ್ತೇಜನವನ್ನು ಕೊಡುತ್ತದೆ ಎಂಬಿತ್ಯಾದಿ ಸಂದೇಹಗಳು ಯುರೋಪಿಯನರ ಮನಸ್ಸುಗಳನ್ನು ಅಲ್ಲೋಲಕಲ್ಲೋಲಪಡಿಸುತ್ತವೆ. ಬಡವನ ಮನಸ್ಸಿನಲ್ಲಿ ಸಂಶಯವುಂಟಾದರೆ ಅವನು ಹೆಚ್ಚಿಗೆ ಏನು ಮಾಡಬಲ್ಲನು? ಇವನು ದುರ್ಬಲನಾದ್ದರಿಂದ ಅವನ ಸಂಶಯವಾಗಲಿ, ದ್ವೇಷವಾಗಲಿ ಪ್ರತಿಕ್ರಿಯಾರೂಪವನ್ನು ತಾಳಲಾರದು. ಆದರೆ ರಾಜ್ಯಕರ್ತರ ಸಂಗತಿ ಇದಲ್ಲ. ಪ್ರತಿಕಾರದ ಸಾಧನೆಗಳ ವೈಪುಲ್ಯದಿಂದ ಅವರು ತುಂಬಿ ತುಳುಕುವವರಾದ ಕಾರಣ ತಮ್ಮ ಸಂಶಯವೃತ್ತಿಯಿಂದ ದೀನ ಹಾಗು ದುರ್ಬಲವಾದ ಪ್ರಜೆಗಳನ್ನು ಹಣ್ಣಿಗೆ ತರಲು ಟೊಂಕಕಟ್ಟಿಕೊಳ್ಳುವ ಸಂದರ್ಭಗಳು ಬಹಳ ಸಿಗುವವು. ಇದು ನಮ್ಮ ಕೈಗಂಟಿನ ಮಾತಲ್ಲ. ಪ್ರಾಚೀನ ಕಾಲದ ಎಷ್ಟೊ ಐತಿಹಾಸಿಕ ದಾಖಲೆಗಳೂ, ಈ ಹೊತ್ತಿನ ಸಂಗತಿಗಳೂ ನಮ್ಮ ಮೇಲಿನ ವಿಧಾನವನ್ನು ರುಜುಪಡಿಸಲು ಸಿದ್ಧವಿರುತ್ತವೆ.

ಬಂಗಾಲದ ಒರ್ಡಿನೆನ್ಸ ಇದಕ್ಕೆ ಈಗಿನ ದೃಷ್ಟಾಂತವು. ಬಂಗಾಲದಲ್ಲಿ ಅಗತಕ್ಕ ಖೂನಿಗಳು ಸ್ವರಾಜ್ಯಪಕ್ಷದವರ ಪ್ರೇರಣೆಯಿಂದುಂಟಾಗುತ್ತವೆಂಬ ದುರಾಗ್ರಹವನ್ನು ಹಚ್ಚಿಕೊಂಡು ಅಲ್ಲಿಯ ಅಧಿಕಾರಿಗಳು ಬಂಗಾಲದ ಸ್ವರಾಜ್ಯಪಕ್ಷದವರನ್ನು ಯಾವ ಯಾವ ರೀತಿಯಲ್ಲಿ ದಣಿಸುತ್ತಿದ್ದಾರೆಂಬುದು ಪತ್ರಗಳ ವಾಚಕವೃಂದಕ್ಕೆ ಹೊಸತಾಗಿ ತಿಳಿಸಬೇಕಾದ ಅವಶ್ಯವಿಲ್ಲ. ಸರಕಾರವು ಸ್ವರಾಜ್ಯಪಕ್ಷದವರ ಮೇಲೆ ಬೀಳಲು ಕಾರಣವೇನು? ಈ ಪ್ರಶ್ನೆಗೆ ಅಧಿಕಾರಿಗಳ ಮತ್ತು ಯುರೋಪಿಯನ್ ಗೃಹಸ್ಥರ ವೃಥಾಸಂಶಯವೆ ಕಾರಣವೆಂಬ ಉತ್ತರವು ಸಮಂಜಸವಾಗಿದೆ. ಆದರೆ ದೇ. ಬಂ. ದಾಸರವರು ಈ ವಿಷಯವಾಗಿ ಯುರೋಪಿಯನ್ ಗೃಹಸ್ಥರಿಗೆ ಮುಂದಿನಂತೆ ತಿಳಿಸಿರುವರು. ದಾಸರವರು ಯುರೋಪಿಯನ್ ಮಿತ್ರರೊಡನೆ ಇತ್ತಲಾಗೆ ಸಂಭಾಷಣವನ್ನು ನಡಿಸಿದ್ದಲ್ಲಿ ಆ ಯುರೋಪಿಯನರ ಮನಸ್ಸಿನಲ್ಲಿ ಸ್ವರಾಜ್ಯಪಾರ್ಟಿಯು ರಾಜಕೀಯ ಖೂನಿಗಳಿಗೆ ಉತ್ತೇಜನವನ್ನು ಕೊಡುತ್ತಿದೆಂಬ ಅಭಿಪ್ರಾಯವುಂಟೆಂದು ತಿಳಿದುಬಂದಿದೆ. ಸ್ವರಾಜ್ಯಪಕ್ಷದ ಉದ್ದೇಶವಾಗಲಿ, ಧ್ಯೇಯವಾಗಲಿ ಈ ರೀತಿಯದಾಗಿದೆ ಎಂದು ತಿಳಕೊಳ್ಳುವುದು ವಿಚಿತ್ರವಾದ್ದು. ಈಗ ೫-೬ ವರ್ಷಗಳಿಂದ ಮ. ಗಾಂಧಿಗಳು ಅತ್ಯಾಚಾರಕ್ಕೆ ವಿರುದ್ಧವಾಗಿ ಸತತ ಉಪದೇಶವನ್ನು ಮಾಡುತ್ತ ಬಂದಿರುವಾಗ ಮತ್ತು ಅವರ ಉಪದೇಶಾನುಸಾರವಾಗಿಯೂ, ಇತರ ಅನೇಕ ಮುಖಂಡರ ಉಪದೇಶದ ಮೇರೆಗೂ ಸ್ವರಾಜ್ಯಪಕ್ಷವು ನಡಕೊಳ್ಳುತ್ತಿರುವಾಗ ಅಂಥ ಪಕ್ಷದ ಮೇಲೆ ಈ ತರದ ಅಪಕೃತ್ಯಗಳನ್ನು ಆರೋಪಿಸುವದು ಇನ್ನಷ್ಟು ವಿಚಿತ್ರವಾಗಿದೆ. ದಾಸರೂ ಇತರ ಪ್ರಮುಖರೂ ಅತ್ಯಾಚಾರವನ್ನು ಪರಿಪರಿಯಿಂದ ಖಾಸಗಿ ಮತ್ತು ಸಾರ್ವಜನಿಕ ಭಾಷಣಗಳಲ್ಲಿ ನಿಷೇಧಿಸುತ್ತಿರುವಾಗ ಸ್ವರಾಜ್ಯಪಕ್ಷದ ಮೇಲೆ ಇಂಥ ಹೇತುಗಳನ್ನು ಹೊರಿಸುವುದು ಬುದ್ಧಿಹೀನತೆಯ ಲಕ್ಷಣವಾಗಿದೆ; ಆದರೆ ಇಂಥ ಭಯವು ಆ ಜನರಲ್ಲಿ ಉಂಟೆಂಬುದು ಮಾತ್ರ ಸುಳ್ಳಲ್ಲ. ಈ ಎಲ್ಲ ಸಂಗತಿಗಳನ್ನು ತೋರಿಸಿ ದಾಸರವರು ಅತ್ಯಾಚಾರದ ಕ್ರಮಗಳನ್ನು ತೀವ್ರವಾಗಿ ನಿಷೇಧಿಸಿದ್ದಾರೆ. ಅತ್ಯಾಚಾರವು ಸ್ವರಾಜ್ಯಪಕ್ಷಕ್ಕೆ ಲಜ್ಜಾಸ್ಪದವಾದ್ದು. ಅದು ರಾಜಕೀಯ ಪ್ರಗತಿಯ ಮಾರ್ಗದಲ್ಲಿ ಒಂದು ವಿಘ್ನವು. ಅದು ಧಾರ್ಮಿಕ ತತ್ವಗಳಿಗೂ ವಿರುದ್ಧವಾಗಿದೆ. ವ್ಯಾವಹಾರಿಕ ರಾಜಕಾರಣದ ದೃಷ್ಟಿಯಿಂದ ಹೇಳುವುದಾದರೆ ಅತ್ಯಾಚಾರದಿಂದ ಸ್ವರಾಜ್ಯವು ಸರ್ವಥಾ ಸಾಧ್ಯವಿಲ್ಲವೆಂದೇ ಹೇಳಬೇಕಾದೀತು. ಆದ್ದರಿಂದ ರಾಜಕಾರಣದಲ್ಲಿ ಅತ್ಯಾಚಾರದ ಸಾಧನವನ್ನು ಇನ್ನು ಮುಂದೆಯಾದರೂ ಯಾರೂ ಸರ್ವಥಾ ಉಪಯೋಗಿಸಕೂಡದು ಎಂಬುದಾಗಿ ದಾಸರವರು ತನ್ನ ದೇಶಬಾಂಧವರಿಗೆ ಕೇಳಿಕೊಂಡಿದ್ದಾರೆ, ದಾಸರವರ ಈ ಹಿತೋಪದೇಶವು ಬಂಗಾಲದಲ್ಲಿ ಮತ್ತು ಅಗತ್ಯವಿರುವ ಇತರ ಕಡೆಗಳಲ್ಲಿ ಸರಿಯಾಗಿ ಫಲಿಸೀತೆಂದು ನಂಬಲು ಅಡ್ಡಿ ಇಲ್ಲ.

ಈ ರೀತಿಯಿಂದ ದಾಸರು ಅತ್ಯಾಚಾರವನ್ನು ನಿಷೇಧಿಸಿ ಮತ್ತು ತನ್ನ ಬಾಂಧವರಿಗೆ ಅದನ್ನು ತ್ಯಜಿಸಲು ಬುದ್ಧಿಮಾರ್ಗವನ್ನು ಹೇಳಿ ಯುರೋಪಿಯನ್ ಗೃಹಸ್ಥರಿಗೆ ತಿಳುವಳಿಕೆಯ ಒಂದೆರಡು ಮಹತ್ವದ ಮಾತುಗಳನ್ನು ಹೇಳಿದ್ದಾರೆ. ದೇಶದಲ್ಲಿ ಎಲ್ಲಿಯಾದರೂ ಅಲ್ಪಸಂಖ್ಯಾಕರು ಅತ್ಯಾಚಾರವನ್ನು ನಡಿಸಲುದ್ಯುಕ್ತರಾಗಿದ್ದಾರೆ ಎಂಬುದರ ಮೇಲಿಂದ ಸರಕಾರವು ಒತ್ತಾಳಿಕೆಯನ್ನು ಪ್ರಾರಂಭಿಸುವ ಮೂರ್ಖತನವನ್ನು ಮಾಡುತ್ತದೆ. ಅದರ ಈ ಮೂರ್ಖತ್ವದಿಂದ ಅತ್ಯಾಚಾರವು ನಾಮಶೇಷವಾಗುವದರ ಬದಲು ಇನ್ನಷ್ಟು ದೃಢಮೂಲವಾಗುತ್ತದೆ. ಅತ್ಯಾಚಾರಕ್ಕೆ ಒತ್ತಾಳಿಕೆಯು ಔಷಧವಲ್ಲ. ಸರಕಾರವು ಅವಿವೇಕದಿಂದ ಅಥವಾ ಸಂಶಯಗ್ರಸ್ತವಾಗಿ ಯಾವ ಒತ್ತಾಳಿಕೆಯನ್ನು ಪ್ರಾರಂಭಿಸುತ್ತಿದೆಯೊ ಅದನ್ನು ಯುರೋಪಿಯನ ಗೃಹಸ್ಥರು ನಿಷೇಧಿಸಬೇಕು. ಹೊರತು ಅವರು ಸರಕಾರಕ್ಕೆ ಬೆಂಬಲವನ್ನು ಕೊಡಬಾರದು. ನೋಕರಶಾಹಿಯ ಮಾನಸಿಕ ವೃತ್ತಿಯು ಸಂಶಯಗ್ರಸ್ತವಾಗಿದೆ. ಮತ್ತು ಈ ಸಂಶಯ ಪಿಶಾಚಿಕೆಯ ಬಾಧೆಯನ್ನು ತಡೆಯಲಾರದೆ ಅದು ನಾನಾ ವಿಧದ ಒತ್ತಾಳಿಕೆಯ ಲೀಲೆಗಳನ್ನು ಪ್ರಾರಂಭಿಸುತ್ತಿದೆ. ಆದರೆ ಅದಕ್ಕೆ ನೀವು—ಯುರೋಪಿಯನ್ ಗೃಹಸ್ಥರು ಸರ್ವಥಾ ಪ್ರೋತ್ಸಾಹವನ್ನು ಕೊಡಬೇಡಿರಿ. ಎಂಬುದಾಗಿ ದಾಸರು ಕೊನೆಗೆ ಬರೆದಿರುವರು.

ಸ್ವದೇಶ ಬಾಂಧವರಿಗೆ ಮತ್ತು ಪರದೇಶದ ಮಿತ್ರರಿಗೆ ಹೇಳಿದ ದಾಸರ ಹಿತೋಕ್ತಿಯು ಅಸ್ಥಾನದಲ್ಲಾಗಲಿಕ್ಕಿಲ್ಲವೆಂದು ಹೇಳಬಹುದು. ಸಂಶಯವು—ಪುನಃ ಅಸ್ಥಾನದಲ್ಲಿ ಪಟ್ಟ ಸಂಶಯವು ಸರ್ವಥಾ ವಿಘಾತಕವಾಗಿದೆ. ಆದ್ದರಿಂದ ರಾಜ್ಯಕರ್ತರು ಕಂಡಕಂಡವರ ಮೇಲೆ ಸಂಶಯ ಪಟ್ಟವರಾಗಿ ಒತ್ತಾಳಿಕೆಯ ಅತ್ಯಾಚಾರವನ್ನು ನಡಿಸುವದು ಯುಕ್ತವಲ್ಲ. ದಾಸರವರ ಈ ಅಭಿಪ್ರಾಯವು ವಿದೇಶೀಯರ ಆತ್ಮನಿರೀಕ್ಷಣಕ್ಕೆ ಸಹಾಯಕವಾದ್ದಲ್ಲಿ ಅದು ಎಷ್ಟರ ಮಟ್ಟಿಗೆ ಪ್ರಯೋಜನಕಾರಿಯಾದೀತೊ ಅಷ್ಟೇ ಯಾಕೆ, ಅದಕ್ಕಿಂತಲೂ ಹೆಚ್ಚು ಪ್ರಯೋಜನವು ಏಕದೃಷ್ಟೀಯರಿಗೆ ಅತ್ಯಾಚಾರದ ಮಾರ್ಗಗಳನ್ನು ಬಿಟ್ಟು ಬಿಡಲು ಹೇಳಿದ ಮಾತು ಫಲಿತವಾದಲ್ಲಿ ಉಂಟಾದೀತೆಂಬುದಕ್ಕೆ ತಿಲಮಾತ್ರವೂ ಸಂದೇಹವಿಲ್ಲ. ಅತ್ಯಾಚಾರದಿಂದ ಸ್ವರಾಜ್ಯವು ಬರುವದಿಲ್ಲ, ಅದು ಇನ್ನಷ್ಟು ದೂರದೂರಕ್ಕೆ ಹೋಗುವದು. ಆದ್ದರಿಂದ ಈ ಘಾತಕ ಮಾರ್ಗವನ್ನು ಬಿಟ್ಟು ಬಿಡಿರಿ, ಆದರೂ ಸ್ವರಾಜ್ಯದ ಯುದ್ಧವನ್ನು ಮಾತ್ರ ಬಿಟ್ಟು ಬಿಡಬೇಡಿರಿ. ಮದ್ದಿಲ್ಲ, ಕತ್ತಿ ಇಲ್ಲ, ಗುಂಡಿಲ್ಲ, ಕೋವಿ ಇಲ್ಲ, ಏನೂ ಇಲ್ಲ; ಅದು ಸನದುತೀರಾದ ಯುದ್ಧವಾಗಿದೆ, ಅದನ್ನು ಮಾತ್ರ ಬಿಟ್ಟುಬಿಡಬೇಡಿರಿ ಎಂದು ಅವರು ತನ್ನ ದೇಶಬಾಂಧವರಿಗೆ ಸಂದೇಶವನ್ನು ಕೊಟ್ಟಿರುವರು. ಇನ್ನಾದರೂ ಸರಕಾರವು ಸಂಶಯವನ್ನು ಬಿಟ್ಟೀತೆ?

ಸ್ಫುಟವಿಚಾರಗಳು.

೧. ರಿಲಿಜಸ್ ಎಂಡೊಮೆಂಟ್ ಬಿಲ್ಲಿನ ಚರ್ಚೆಯನ್ನು ಮಾಡಲು ಉಡುಪಿಗೆ ಬಂದ ಶ್ರೀಯುತ ಶ್ರೀನಿವಾಸ ಅಯ್ಯಂಗಾರರು ನಮ್ಮ ಪಟ್ಟಣಕ್ಕೆ ಚಿತ್ತಯಿಸಿ ಇಲ್ಲಿಯವರ ವಿನಂತಿಯ ಮೇರೆಗೆ ಒಂದು ಭಾಷಣವನ್ನು ಕೊಟ್ಟರು. ಇವರ ಭಾಷಣದ ವಿಷಯವು ಸದ್ಯಸ್ಥಿತಿಯಾಗಿತ್ತು. ಇದನ್ನು ವಿವರಿಸುವಾಗ ಅವರು ಮುಖ್ಯವಾಗಿ ರಾಷ್ಟ್ರೀಯ ಸಭೆಗೆ ಜನರು ಸಭಾಸದರಾಗಿ ಅದರ ಬಲವನ್ನು ಅಭಿವೃದ್ಧಿಗೊಳಿಸಬೇಕೆಂಬುದನ್ನು ಪ್ರಸ್ತಾಪಿಸಿದರು. ರಾಷ್ಟ್ರೀಯ ಸಭೆಗೆ ಸಭಾಸದನಾಗಲು ನೂಲಿನ ಶರ್ತವನ್ನು ಪೂರಯಿಸಬೇಕಾಗುತ್ತದೆ. ಸ್ವತಃ ನೂಲು ತೆಗೆಯುವುದು ಉತ್ತಮ. ಸಾಧ್ಯವಿಲ್ಲದವನು ಮನೆಯಲ್ಲಿ ನೂಲುವವರನ್ನಿಟ್ಟುಕೊಂಡು, ತನ್ನ ಸಭಾಸದತ್ವದ ನೂಲನ್ನು ಭರತಿಮಾಡಬಹುದು. ಇದೂ ಸಾಧ್ಯವಿಲ್ಲದವನು ನೂಲಿನ ಕ್ರಯವನ್ನು ಕೊಡಬಹುದು. ಅಂತು ರಾಷ್ಟ್ರೀಯ ಸಭೆಯ ಶರ್ತವನ್ನು ಪೂರಯಿಸಲು ಈ ನೇರೆಗೆ ಎಷ್ಟೊ ದಾರಿಗಳಿವೆ. ಅಸಹಕಾರವನ್ನು ಸದ್ಯಕ್ಕೆ ನಿಲ್ಲಿಸಿದ್ದರಿಂದ ರಾಷ್ಟ್ರೀಯ ಸಭೆಯನ್ನು ಪ್ರವೇಶಿಸಲು ಈಗ ಯಾರಿಗೂ ಆತಂಕವಿಲ್ಲ. ನೂಲುವ ಕಾರ್ಯಕ್ರಮವು ನೀರಸವಾದ್ದು, ಉತ್ತೇಜಕವಲ್ಲವೆಂದು ಅಭಿಪ್ರಾಯ ಪಡುವವರು ರಾಷ್ಟ್ರೀಯ ಸಭಾಂತರ್ಗತವಾದ ಕೌನ್ಸಿಲ್ ಪಕ್ಷವನ್ನು ಅಂಗೀಕರಿಸಿ ರಾಜಕೀಯ ಚಳವಳವನ್ನು ನಡಿಸಬಹುದು. ಅವರವರಿಗೆ ಅವರವರ ರುಚಿಗನುಸಾರವಾಗಿ ಬೇಕಾದ ಕಾರ್ಯಕ್ರಮವನ್ನು ಕೈಕೊಳ್ಳಲು ಅಡ್ಡಿ ಇಲ್ಲ. ಅದ್ದರಿಂದ ಜನರೆಲ್ಲರು ರಾಷ್ಟ್ರೀಯ ಸಭೆಗೆ ಮೆಂಬರರಾಗಿರಿ ಎಂದು ಶ್ರೀನಿವಾಸ ಐಯ್ಯಂಗಾರರ ಹಂಬೋಣವಿದೆ. ಅಲ್ಲದೆ, ಇವರು ಇನ್ನೊಂದು ಮಹತ್ವಾದ ವಿಷಯವನ್ನು ಸೂಚಿಸಿದರು. ಲೋಕಲ್ ಬೋರ್ಡು ಸಂಸ್ಥೆಗಳನ್ನೂ, ಮುನ್ಸಿಪಾಲಿಟಿಗಳನ್ನೂ ಕೊಂಗ್ರೆಸ್‍ವಾಲರು ಆಕ್ರಮಿಸುವುದು ಅವಶ್ಯವಿದೆ. ಇತರರ ಕೈಗೆ ಇಂಥ ಸಂಸ್ಥೆಗಳನ್ನು ಹೋಗಗೊಟ್ಟು ಅವುಗಳನ್ನು ನಿರರ್ಥಕಪಡಿಸುವುದು ಹಿತಾವಹವಲ್ಲ. ಅದು ಕಾರಣ ಈ ಸಂಸ್ಥೆಗಳನ್ನು ರಾಷ್ಟ್ರೀಯ ಸಭಾನುಯಾಯಿಗಳು ಸ್ವವಶಮಾಡಿಕೊಳ್ಳಬೇಕು. ಶ್ರೀನಿವಾಸ ಐಯ್ಯಂಗಾರರು ಸಭೆಯಲ್ಲಿ ಯಾವ ಈ ಮಹತ್ವದ ಸಂಗತಿಗಳನ್ನು ಪ್ರಸ್ತಾಪಿಸಿದರೊ ಅವುಗಳನ್ನು ಯಾವ ಯಾವ ವಿಧದಿಂದ ಜಾರಿಯಲ್ಲಿ ತರಬಹುದೆಂಬುದನ್ನು ಚರ್ಚಿಸಲು ಕೊನೆಗೆ ವಿವಿಧ ಜಾತಿಯ ಮುಖಂಡರ ಒಂದು ಖಾಸಗಿ ಸಭೆ ಇತ್ತು. ಈ ಮೇರೆಗೆ ಶ್ರೀಯುತ ಶ್ರೀನಿವಾಸ ಐಯ್ಯಂಗಾರರು ಇಲ್ಲಿಯವರ ಮುಂದೆ ಯೋಗ್ಯವಾದ ಕಾರ್ಯಕ್ರಮವನ್ನೆ ಇಟ್ಟಿದ್ದಾರೆನ್ನಲು ಅಡ್ಡಿ ಇಲ್ಲ.

೨. ಕೆಲಸಮಾಡಬೇಕೆಂಬ ಉತ್ಸಾಹವಿದ್ದರೆ ಸಾಲದು, ಆ ಉತ್ಸಾಹಕ್ಕೆ ಅನುಕೂಲವಾಗಿ ದೀರ್ಘದರ್ಶಿತೆ ಮತ್ತು ಪರಿಸ್ಥಿತಿಯ ನಿರೀಕ್ಷಣ ಇವು ಜೊತೆಗೂಡಿದರೆ ಕರ್ತವ್ಯದ ಲವಲವಿಕೆಯು ಮತ್ತು ತತ್ಪರತೆಯು ಸಾರ್ಥಕವಾಗುತ್ತವೆ. ಇದಕ್ಕೆ ಬದಲಾಗಿ ಬರೆ ಉತ್ಸಾಹದ ಬೆನ್ನನ್ನೆ ಹಚ್ಚಿಕೊಂಡು ಹೋದರೆ "ಆಶ್ರಮ ಮೃಗೋಯಂನಹಂತವ್ಯಃ" ಎಂದು ಋಷಿಕುಮಾರಕರು ಮೃಗಯಾಮತ್ತನಾದ ದುಷ್ಯಂತನನ್ನು ಹೇಗೆ ಎಚ್ಚರಿಸಬೇಕಾಗಿ ಬಂತೊ ಹಾಗೆಯೆ ಅವಿವೇಕಿಗಳಾದ ಉತ್ಸಾಹವಂತರನ್ನು ತಡೆಯಬೇಕಾಗಿ ಬರುವುದು. ನಮ್ಮ ಮದ್ರಾಸ ಸೆನೆಟಿನ ಕಳೆದ ಅಧಿವೇಶನದ ವೃತ್ತಾಂತವನ್ನು ಪರಿಶೀಲಿಸಿದ್ದಲ್ಲಿ ನಮ್ಮ ಈ ವಿಧಾನವು ಅತಿ ಸಮರ್ಪಕವಾದ್ದೆಂದು ಯಾರೂ ಹೇಳದೆ ಇರಲಿಕ್ಕಿಲ್ಲ. ಸೆನೆಟಿನ ಕಳೆದ ಅಧಿವೇಶನದಲ್ಲಿ ವಿವಾಹಿತ ವಿದ್ಯಾರ್ಥಿಗಳಿಗೆ ಬಿ. ಎ. ಇತ್ಯಾದಿ ಪದವಿಗಳ ಪರೀಕ್ಷೆಗೆ ಕುಳಿತುಕೊಳ್ಳಲು ಬಿಡಬಾರದೆಂಬ ಅರ್ಥದ ಠರಾವು ಬಂದಿತ್ತು. ಪರೀಕ್ಷೆಗೆ ಕುಳಿತುಕೊಳ್ಳಲು ವಿವಾಹಿತರನ್ನು ನಿರ್ಬಂಧಿಸುವುದು ಯುಕ್ತವೆಂದು ವಾದಿಸಿ 'ಬೆಚಲರ್' ಎಂದರೆ ಬ್ರಹ್ಮಚಾರಿ ಎಂಬ ಹೆಸರಿಗೆ ಆ ನಿರ್ಬಂಧವು ಅನ್ವರ್ಥಕವಾದ್ದಲ್ಲವೆ ಎಂದು ಎದುರು ಕಡೆಯವರು ಸವಾಲನ್ನು ಹಾಕಬಹುದು. ಆದರೆ ಶಿಕ್ಷಣದಾನ ಮಾಡತಕ್ಕ ಸಂಸ್ಥೆಯು ಸಾಮಾಜಿಕ ಹಾಗು ಧಾರ್ಮಿಕ ಪ್ರಶ್ನೆಯ ಪಾರಿಪತ್ಯಕ್ಕೆ ಹೊರಡುವುದು ಅನುಚಿತವಲ್ಲವೆ? ಇಂಥ ಅನುಚಿತ ಕೃತ್ಯಕ್ಕೆ ಯಾಕೆ ಹೇಗೆ ಅವಕಾಶ ಕೊಡುತ್ತೀರೆಂದು ಮಿ| ಕೃಷ್ಣಸ್ವಾಮಿ ಐಯ್ಯರು ಕೇಳಿದಲ್ಲಿ ಅಧ್ಯಕ್ಷ ಮಹಾಶಯರು ಏನೂ ಅಡ್ಡಿ ಇಲ್ಲವೆಂದು ನಿಸ್ಸಂಕೋಚವಾಗಿ ನುಡಿದರು, ಇದು ತುಂಬಾ ವ್ಯಸನಾಸ್ಪದವಾಗಿದೆ! ಅಧ್ಯಕ್ಷ ಮಹಾಶಯರು ಈ ಚರ್ಚೆಯನ್ನು ಪ್ರಾರಂಭಿಸಲು ತಲೆಯಲ್ಲಾಡಿಸುವಾಗ 'ಲಕ್ಷರಿ ಶಿಕ್ಷಣವನ್ನು ಕಡ್ಡಾಯದಿಂದ ಪ್ರಾರಂಭಿಸಬೇಕೆಂಬ ಠರಾವನ್ನು ಚರ್ಚಿಸಬಹುದಾದರೆ ಇದು ಮಾತ್ರ ಯಾಕೆ ಕೂಡದು?' ಎಂಬುದಾಗಿ ಯಾವ ಯುಕ್ತಿವಾದವನ್ನು ಮಾಡಿದರೊ ಅದು ಅಧ್ಯಕ್ಷರ ಬುದ್ಧಿಮಾಂದ್ಯವನ್ನೆ ವ್ಯಕ್ತಗೊಳಿಸುವುದು ಕಾರಣ, ಪುಸ್ತಕ ಶಿಕ್ಷಣದಿಂದ ಮಾನಸಿಕ ಶಕ್ತಿಯನ್ನು ವೃದ್ಧಿಗೊಳಿಸುವಂತೆ ಲಕ್ಷರಿ ಶಿಕ್ಷಣದಿಂದ ಶಾರೀರಿಕ ಶಕ್ತಿಯನ್ನು ಬಲಪಡಿಸುವ ವಿಷಯವು ಅಧ್ಯಕ್ಷರಿಗೆ ಕೋಚದೆ ಹೋಯಿತು! ಹಿಂದಿ ವಿದ್ಯಾರ್ಥಿಗಳ ಮಾರ್ಗದಲ್ಲಿ ಮೊದಲೆ ಬೇಕಷ್ಟು ವಿಘ್ನಗಳಿರುವಾಗ ಪುನಃ ಇದೊಂದು ವಿಘ್ನವನ್ನು ತಂದೊಡ್ಡುವುದು ಬುದ್ಧಿವಂತಿಕೆಯಲ್ಲ. ಇಂಥ ಅನೇಕ ಕಾರಣಗಳಿಂದ ಮೇಲಿನ ಠರಾವು ಬಹುಮತದಿಂದ ಬಿದ್ದುಹೋಯಿತು. ಇದು ಮಾತ್ರ ಸಂತೋಷದ ಮಾತಾಗಿದೆ.

೩. ಅಹಮದಾಬಾದಿನ ಮತ್ತು ಮುಂಬಯಿಯ ಗಿರಣಿಯವರ ಸಂಘವು ಹಿಂದುಸ್ಥಾನ ಸರಕಾರಕ್ಕೆ ಒಂದು ಮನವಿಯನ್ನು ಬರಕೊಂಡಿದೆ. ಹತ್ತಿಯ ಮೇಲಿನ ಕರವನ್ನು ತೆಗೆಯಬೇಕೆಂದು ಈ ಮನವಿಯಲ್ಲಿ ಸಂಘದವರು ಬರೆದಿರುವರು. ಲೆಜಿಸ್ಲೆಟಿವ್ ಎಸೆಂಬ್ಲಿಯಲ್ಲೂ ಇದೆ ಆಶಯದ ಠರಾವನ್ನು ತಂದಾಗಲೆ ಸರಕಾರದ ಮನಸ್ಸು ವ್ಯಕ್ತವಾಗಿದೆ. ಇಂಥ ಕರವು ಯೋಗ್ಯವಲ್ಲವೆಂದು ಸರಕಾರವು ಪ್ರಸಂಗವಶಾತ್ ಹೇಳಿದರೂ ವಿಲಾಯತಿಯೊಳಗಿನ ವಸ್ತ್ರ ವ್ಯಾಪಾರಸ್ಥರ ಹೊಟ್ಟೆಯು ತುಂಬಿ ಬೆಳೆಯುವಂತೆ ನೋಡಿಕೊಳ್ಳುವ ಕರ್ತವ್ಯವನ್ನು ಮರೆಯಲಿಕ್ಕಾಗದ ಕಾರಣ ಎಸೆಂಬ್ಲಿಯಲ್ಲಿ ಲೋಕಮತವು ವ್ಯಕ್ತವಾಗಲಿ, ಇಲ್ಲವೆ ಹಿಂದಿ ಗಿರಣಿಯವರು ಮನವಿಯನ್ನು ಬೇಕಾದರೆ ಮಾಡಿಕೊಳ್ಳಲಿ, ಸರಕಾರವು ಅದನ್ನು ತೆಗೆದುಹಾಕಲಿಕ್ಕಿಲ್ಲ. ಜಪಾನಿಯವರು ಸ್ಪರ್ಧೆಯನ್ನು ಪ್ರಾರಂಭಿಸಿರುವದರಿಂದ ಇಲ್ಲಿಯ ಈ ಉದ್ಯೋಗವು ಈಗಲೆ ಬಹಳ ಹೀನ ಸ್ಥಿತಿಗೆ ಬಂದಿರುವದು ಎಂಬುದಾಗಿಯೂ ಮನವಿಯಲ್ಲಿ ನಿರ್ದೇಶಿಸಲ್ಪಟ್ಟಿದೆ. ಆದರೂ ನಾವು ಮೇಲೆ ಹೇಳಿದಂತೆ ಸ್ವಾರ್ಥಪರವಶವಾದ ಸರಕಾರದ ನ್ಯಾಯಬುದ್ಧಿಯು ಜಾಗೃತಿಯಾಗುವಂತೆ ಇಲ್ಲ.

೪. ಯುರೋಪಿಯನ್ ಗೃಹಸ್ಥರು ಸ್ವರಾಜ್ಯ ಪಕ್ಷದವರ ಮೇಲೆ ಅರಾಜಕತ್ವದ ಆರೋಪವನ್ನು ಹೊರಿಸುವದು ಯಾಕೆ ಮತ್ತು ಹೇಗೆ ಯುಕ್ತವಲ್ಲವೆಂದು ದೇ. ಬಂ. ದಾಸರು ಕಾರಣಪೂರ್ವಕವಾಗಿ ತಿಳಿಸಿದ ಬಳಿಕ ಬಂಗಾಲದ ಯುರೋಪಿಯನ್ ಎಸೋಸಿಯೇಶನಿನ ಅಧ್ಯಕ್ಷರು ಮುಂದೆ ಬಂದು ಈಗ ಸಂತೋಷವನ್ನು ವ್ಯಕ್ತಗೊಳಿಸುತ್ತಿದ್ದಾರೆ. ಅವರು ತನ್ನ ಸಂತೋಷವನ್ನು ವ್ಯಕ್ತಗೊಳಿಸುವ ಭರದಲ್ಲಿ ಒಂದು ಸಂಗತಿಯನ್ನು ಮೆಲ್ಲನೆ ಹೊರಗೆ ಚೆಲ್ಲಿದ್ದಾರೆ. "ದಾಸರವರು ಮುಂಚಿತವಾಗಿಯೆ ಈ ರೀತಿಯಿಂದ ಸ್ವರಾಜ್ಯಪಕ್ಷದ ನಿರ್ದೋಷತೆಯನ್ನು ಜಾಹೀರಪಡಿಸಿದ್ದಾದರೆ ಬಂಗಾಲ ಒರ್ಡಿನನ್ಸು ಹುಟ್ಟುತ್ತಿರಲಿಲ್ಲ!" ಎಂದು ಯುರೋಪಿಯನ್ ಎಸೋಸಿಯೇಶನಿನ ಅಧ್ಯಕ್ಷರ ಮತವು. ಈ ಮಾತಿನ ಸರಳವಾದ ಅರ್ಥವೇನೆಂದರೆ, ಒರ್ಡಿನನ್ಸಿನ ಚಕ್ರವು ಸ್ವರಾಜ್ಯ ಪಕ್ಷದವರ ಮೇಲೆಯೆ ಬಿಡಲ್ಪಟ್ಟದ್ದು. ರೆಡಿಂಗ ಸಾಹೇಬರು ಮತ್ತು ಇತರ ಅಧಿಕಾರಿಗಳು ಮುಂಚೆ ಆಗ್ಗಾಗ್ಗೆ ಭಾಷಣಮಾಡುವಾಗ ಇದು ಸ್ವರಾಜ್ಯಪಕ್ಷದವರ ಮೇಲೆ ಎತ್ತಿದ ಶಸ್ತ್ರವಲ್ಲವೆಂದು ಹೇಳುತ್ತಿದ್ದರು. ಮತ್ತು ಈ ರೀತಿಯಿಂದ ಹೇಳಿ ತಮ್ಮ ಮೇಲಿನ ಕಲಂಕವನ್ನು ತೊಳೆದುಕೊಳ್ಳಲು ಯತ್ನಿಸುತ್ತಿದ್ದರು. ಆದರೂ ಕಾಯಿದೆಯನ್ನು ರಚಿಸಿದ ಈಸರಿನ ಅವರ ಕೈಯು ಅವರ ಮೈಯನ್ನೆಲ್ಲಾ ಕಲಂಕಿತವನ್ನಾಗಿಯೆ ಮಾಡುತಿತ್ತು. ಈಗಲಂತೂ ತಿಳಿದಾಗಲಿ, ತಿಳಿಯದಾಗಲಿ, ಅವರ ಜಾತಿಯ ಈ ಅಧ್ಯಕ್ಷರೆ ಈ ಗುಟ್ಟನ್ನು ರಟ್ಟುಪಡಿಸಿದರು! ರೆಡಿಂಗ ಸಾಹೇಬರ ಮಾತು ಸುಳ್ಳೊ? ಅಥವಾ ಈ ಅಧ್ಯಕ್ಷರು ಗುಟ್ಟು ರಟ್ಟುಮಾಡಿದ್ದು ತಪ್ಪೆ? ಇಬ್ಬರೂ ಪ್ರಾಯಶ್ಚಿತ್ತಾರ್ಹರಾಗುವ ಪಕ್ಷದಲ್ಲಿ ಒರ್ಡಿನನ್ಸನ್ನು ಕೂಡಲೆ ರದ್ದುಪಡಿಸುವದೆ ಇಬ್ಬರಿಗೂ ಯೋಗ್ಯವಾದ ಪ್ರಾಯಶ್ಚಿತ್ತವಾಗಿದೆ.

೫. ಎಸೆಂಬ್ಲಿಯ ಅಧಿವೇಶನವು ಮುಗಿದು ಪ್ರತಿನಿಧಿಗಳೆಲ್ಲರೂ ತಮ್ಮ ತಮ್ಮ ಊರುಗಳಿಗೆ ಬಂದು ತಲಪಿರುವರು. ಕಳೆದ ವರ್ಷದ ಇದೆ ಅಧಿವೇಶನ ಮತ್ತು ಈ ವರ್ಷದ ಅಧಿವೇಶನ ಇವುಗಳನ್ನು ತುಲನೆಮಾಡಿ ನೋಡಿದರೆ ಕಳೆದ ವರ್ಷದ ಅಧಿವೇಶನವೆ ಹೆಚ್ಚು ಯಶಸ್ವಿಯಾಗಿತ್ತೆಂದು ಯಾವ ಸಂಕೋಚವಿಲ್ಲದೆ ಹೇಳಬಹುದು. ಹಿರೆ ಹೆಂಡತಿ ಪತಿವ್ರತೆ ಎಂದು ಹೇಳಿದ ಬಳಿಕ ಪರಿಶೇಷ ನ್ಯಾಯದಿಂದ ಕಿರಿಯವಳ ಚಾರಿತ್ರ್ಯವು ನಿರ್ದುಷ್ಟವಾದ್ದಲ್ಲವೆಂದು ಹೇಗೆ ಊಹಿಸುವ ವಾಡಿಕೆ ಇದೆಯೊ ಹಾಗೆಯೆ ಕಳೆದ ವರ್ಷದ್ದು ಹೆಚ್ಚು ಯಶಸ್ವಿಯೆಂದು ವಿಧಿಸಿದ ಬಳಿಕ ಈ ವರ್ಷದ್ದು ಅಷ್ಟೊಂದು ಯಶಸ್ವಿಯಲ್ಲವೆಂಬ ಮಾತು ಒಘದಿಂದಲೆ ಪ್ರಾಪ್ತವಾಗುತ್ತದೆ ಇದು ಸುಳ್ಳಲ್ಲ. ಆದರೆ ಈ ವರ್ಷವು ಯಶಸ್ಸಿನ ಯಾವ ಭಾಗವು ಕಡಿಮೆಯಾಗಿದೆಯೊ ಅದು ಯಾಕೆ ಎಂಬುದನ್ನು ಮಾತ್ರ ವಿಚಾರಿಸಿ ನೋಡಬೇಕು. ಸ್ವರಾಜ್ಯಪಕ್ಷದವರು ಕಳೆದ ವರ್ಷ ಯಾವ ತತ್ವವನ್ನು ಪ್ರತಿಪಾದಿಸುತ್ತಿದ್ದರೊ ಯಾವ ಕಾರ್ಯಕ್ರಮವನ್ನಿಟ್ಟುಕೊಂಡಿದ್ದರೊ ಈ ವರ್ಷವೂ ಅದೆ ಇರುವದು. ಕಳೆದ ವರ್ಷ ಸ್ವತಂತ್ರರು ಇವರೊಟ್ಟಿಗೆ ಸೇರಿ ಇವರ ಕಾರ್ಯಕ್ರಮವನ್ನು ಬಲಪಡಿಸಿದ್ದರು; ಆದರೆ ಈ ವರ್ಷ ಹಿಂದಕ್ಕೆ ಬಂದು ಸ್ವರಾಜ್ಯವಾದಿಗಳ ಪಕ್ಷವನ್ನು ದುರ್ಬಲ ಪಡಿಸಿದರು. ಈ ವಸ್ತುಸ್ಥಿತಿಯನ್ನು ನಾವು ಎಸೆಂಬ್ಲಿಯ ವೃತ್ತಾಂತವನ್ನು ಆಗಾಗ್ಗೆ ಕೊಡುವಾಗ ಸರಿಯಾಗಿ ಪ್ರತಿಪಾದಿಸಿ ತೋರಿಸಿದ್ದೇವೆ. ಅದನ್ನು ವಾಚಕರು ಮರೆತಿರಲಾರರು. ಈ ತರದ ವರ್ತನವನ್ನು ಮಾಡುತ್ತಿರುವ ಸ್ವತಂತ್ರರನ್ನು ಮುಂದಿನ ಚುನಾವಣೆಯಲ್ಲಿ ಮತದಾರರು ಚುನಾಯಿಸಿ ಕೊಟ್ಟು ಆತ್ಮಘಾತವನ್ನು ಮಾಡಿಕೊಳ್ಳಬಾರದೆಂದು ನಮ್ಮ ಹೇಳಿಕೆ.

ಮಂಗಳೂರು.

ಕಳೆದ ಮುನ್ಸಿಪಲ್ ಕೌನ್ಸಿಲಿನ ಬಜೇಟು ಮೀಟಿಂಗಿನಲ್ಲಿ ಮಿ. ಪಿ. ಎಫ್. ಎಕ್ಸ್ ಸಾಲ್ಡಾನರವರ ಕಾಫಿ ಕಾರ್ಖಾನೆಯ ಅತ್ತ ಹೋಗಲು ನಂದಿಗುಡ್ಡೆ ರಸ್ತೆಯಲ್ಲಿರುವ ಸ್ಲೊಟರ್ ಹೌಸಿನಿಂದ ಒಂದು ಮಾರ್ಗವು ಸೆಂಕ್ಷನಾಗಿರುವದು.

ಇಲ್ಲಿಯ ಗವರ್ನಮೆಂಟು ಕೊಲೇಜಿನ ಪ್ರಿನ್ಸಪಲರಾಗಿರುವ ಮಿ| ಜಿ. ಕೆ. ಚೆಟ್ಟೂರವರಿಗೆ ಇಲ್ಲಿಂದ ಕುಂಭಕೋಣಕ್ಕೆ ವರ್ಗಾಯಿಸಲ್ಪಟ್ಟ ಸಂದರ್ಭದಲ್ಲಿ ಅವರ ವಿದ್ಯಾರ್ಥಿಗಳು ಸದರಿಯವರ ಬಹುಮಾನಾರ್ಥವಾಗಿ ಒಂದು ಪಾರ್ಟಿಯನ್ನು ಏರ್ಪಡಿಸಿದ್ದರು

ಮಂಗಳೂರು ತಾಲೂಕು ಬೋರ್ಡು ಮೆಂಬರರಾದ ಮ| ರಾ| ರಾ| ಬಿ. ವೆಂಕಟರಾಯ ಪ್ರಭುಗಳವರು ತಾಲೂಕು ಬೋರ್ಡು ಶಾಲೆಗಳಲ್ಲಿ ವಸ್ತ್ರ ನೇಯುವ ಕೈಗಾರಿಕೆಯ ಪಾಠಗಳು ವಿದ್ಯಾರ್ಥಿಗಳಿಗೆ ಕೊಡೋಣಾಗುವಂತೆ ಚರಕಗಳಲ್ಲಿ ನೂಲುವುದು ಇತ್ಯಾದಿ ಏರ್ಪಾಡುಗಳನ್ನು ತಾಲೂಕು ಬೋರ್ಡು ಶಾಲೆಗಳಲ್ಲಿ ಜ್ಯಾರಿಗೆ ತರಬೇಕೆಂಬುವ ನಿರ್ಣಯವು ತಾಲೂಕು ಬೋರ್ಡು ಸಭೆಯಲ್ಲಿ ಮಂಜೂರಾಗಿರುವದಾಗಿ ತಿಳಿಯುತ್ತೇವೆ.

ಜಿಲ್ಲಾ ಎಡ್ಯುಕೇಶನಲ್ ಕೌನ್ಸಿಲು ಸಭೆಯು ಇದೇ ತಿಂಗಳ ತಾ. ೧೬ಕ್ಕೆ ಗಂಟೆ ೩ಕ್ಕೆ ಇಲ್ಲಿಯ ತಾಲೂಕು ಬೋರ್ಡು ಆಫೀಸಿನಲ್ಲಿ ಕೂಡುವದು.

ಇಲ್ಲಿಯ ಡಿಸ್ಟ್ರಿಕ್ಟ್ ಕೋರ್ಟಿಗೆ ಇದೇ ತಿಂಗಳ ತಾ. ೨೦ನೇಯಿಂದ ಶೆಖೆಕಾಲದ ರಜೆಯು ಪ್ರಾರಂಭವಾಗುವದು.

The Calicut Bank, Ltd.,

ದಿ ಕೆಲಿಕಟ್ ಬೇಂಕ್, ಲಿಮಿಟೆಡ್,

ಹೆಡ್ ಆಫೀಸು – ಕಲ್ಲಿಕೋಟೆ.

ಬ್ರಾಂಚುಗಳು:– ಮುಲ್ಲಸ್‍ಚೇರಿ, ತಲಚೇರಿ, ಕೊಚ್ಚಿ, ಮತ್ತು ಪಾಲ್ಘಾಟು.

ರಿಜಿಸ್ಟರ್ಡ್ ಮತ್ತು ಅಧಿಕಾರಗೊಳಿಸಲ್ಪಟ್ಟ ಮೂಲಧನ ರೂ. 5,00,000—0—0.

ರೂಪಾಯಿ 10ರ 50,000 ಪಾಲುಗಳು.

(30—8—1924)ರ ವರೆಗೆ ಮೌಲ್ಯ ಮೂಲಧನ ರೂಪಾಯಿ 1,81,850—0—0.

ಒಂದು ವರುಷದ ಕಾಯಂ ಠೇವಣಾತಿಗೆ ಬಡ್ಡಿ ದರ ನೇಕಡಾ ರೂ. 7—8—0.

ಕಳೆದ 4 ವರುಷಗಳಲ್ಲಿ ಪಾಲುಗಾರರಿಗೆ ನೇಕಡಾ 12ರಂತೆ ಬಡ್ಡಿ ಹಂಚಿದೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಸಿ. ಕೃಷ್ಣನ್, ಬಿ. ಎ. ಬಿ. ಎಲ್.,
ಮೆನೇಜಿಂಗ್ ಡೈರೆಕ್ಟರ್.

ಡೈರೆಕ್ಟರರಲ್ಲಿ ಒಬ್ಬರು—
ಎಮ್. ನಾರಾಯಣ ಕಾಮತ್, ಬಿ. ಎ.
ಪ್ಲೀಡರ್, ಕುಂದಾಪುರ.

ಮಂಗಳೂರು ತಾಲೂಕು ಬೋರ್ಡಿಗೆ ಈ ಕೆಳಗೆ ಹೆಸರು ಕಾಣಿಸಿದ ಗೃಹಸ್ಥರು ಮೆಂಬರರಾಗಿ ನೇಮಕ ಪಟ್ಟಿರುವರು:— ರಾ| ಎಮ್. ಕೆ. ಬಸಪ್ಪನವರು, ರಾ| ಎಮ್. ರಾಮಪ್ಪನವರು, ರಾ| ಮಹಮ್ಮದ್ ಪುತ್ತೂರು ಸಾಹೇಬರವರು, ರಾ| ಕಾರ್ನಾಡ ಸದಾಶಿವರಾಯರು.

ಉಪ್ಪಿನಂಗಡಿ ತಾಲೂಕು ಬೋರ್ಡಿಗೆ ಈ ಕೆಳಗಣ ಮೆಂಬರರ ನೇಮಕವಾಗಿದೆ:— ರಾ| ಯಸ್. ಎಲಿಯಣ್ಣ ಪೂಜಾರಿ, ರಾ| ಎ. ರಾಜಾಲಕ್ಷ್ಮೀನಾಥ ಸ್ವಾಮಿಜಿ ಅರಸು, ರಾ| ಮೊಳಹಳ್ಳಿ ಶಿವರಾಯರು.

ಕಾರ್ಕಳ ತಾಲೂಕು ಬೋರ್ಡಿಗೆ ನೇಮಕ ಪಟ್ಟ ಮೆಂಬರರು:—ರಾ| ಸಯ್ಯದ್‍ಮಿರ್‍ಹೈದರ್ ಸಾಹೇಬ ಬಹದ್ದೂರ್, ರಾ| ಮೂಡಬಿದ್ರೆ ತಿಮ್ಮಪ್ಪ; ರಾ| ಕೆ. ಸದಾಶಿವ ಭಟ್ಟ.

ಉಡುಪಿ ತಾಲೂಕು ಬೋರ್ಡಿನ ಚುನಾವಣೆಯು ಈ ರೀತಿಯಾಗಿರುತ್ತದೆ. ಉಡುಪಿ ಸರ್ಕಲಿಗೆ—ಮ| ರಾ| ರಾ| ಕಡೆಕಾರ ರಾಜಗೋಪಾಲ ಕೃಷ್ಣರಾವ್, ಮ| ರಾ| ರಾ| ಕೊಡ್ಡಕಾರ ವಕೀಲ ರಮಾನಾಥ ಪೈ, ಮ| ರಾ| ರಾ| ಕೊಡ್ಡಕಾರ ನರಸಿಂಹ ಪೈ,—ಬ್ರಹ್ಮಾವರ ಸರ್ಕಲ್— ಮ| ರಾ| ರಾ| ಎಮ್. ವಿಟ್ಟಳ ಕಾಮತ್, ಮ| ರಾ| ರಾ| ಸುರಾಲ ಅರಮನೆ ನಾಭಿರಾಜಯ್ಯ, ಮ| ರಾ| ರಾ| ಯರ್ನಾಡ ದುಗ್ಗಪ್ಪ ಸೆಟ್ಟರು, — ಕಾಪು ಸರ್ಕಲ್—ಮ| ರಾ| ರಾ| ಆದಿರಾಜ ಬಳ್ಳಾಲರು, ಮ| ರಾ| ರಾ| ಪಾಂಗಾಳ ಶ್ರೀನಿವಾಸ ಉಪೇಂದ್ರ ನಾಯ್ಕರು, ಮ| ರಾ| ರಾ| ವಕೀಲ ಜಗನ್ನಾಥ ಬಳ್ಳಾಲರು, ಕೋಟ ಸರ್ಕಲ್ —ಮ| ರಾ| ರಾ| ಸಣ್ಣಯ್ಯ ಹೆಬ್ಬಾರು, ಮ| ರಾ| ಹಂದಾಡಿ ಮಂಜಪ್ಪ ಸೇರ್ವೆಗಾರರು, ಮ| ರಾ| ರಾ| ಸುಬ್ಬಣ್ಣ ಹೆಗ್ಗಡೇರು, ಈ ರೀತಿ ಮೆಂಬರರು ಆರಿಸಲ್ಪಟ್ಟಿರುವರು. ಖಾನ್‍ಬಹದೂರ್ ಹಾಜಿ ಅಬ್ದುಲ್ಲಾ ಹಾಜಿ ಕಾಸಿಮ್ ಬಹದ್ದೂರರವರೂ, ಮಲ್ಪೆ ಮ| ರಾ| ರಾ| ಚೆನ್ನಪ್ಪ ಮರಕಾಲರವರೂ, ಉದಿಯಾವರ ಮ| ರಾ| ರಾ| ವೆಂಕಟಯ್ಯ ಪೂಜಾರಿಗಳವರೂ, ಬಾರ್ಕೂರು ರೋಮನ್ ಕೆಥೋಲಿಕ್ ದೇವಾಲಯದ ವಿಕಾರರವರೂ ಈ ತಾಲೂಕು ಬೋರ್ಡಿನ ಮೆಂಬರರಾಗಿ ನೇಮಕ ಹೊಂದಿರುತ್ತಾರೆ.

ಉಡುಪಿಯಿಂದ ಇಲ್ಲಿಗೆ ತಾ. ೩೧ನೇ ಸಾಯಂಕಾಲ ಬಂದಿದ್ದ ಶ್ರೀಯುತ ಎಸ್ ಶ್ರೀನಿವಾಸ ಐಯ್ಯಂಗಾರರವರು ತಾ. ೧ನೇ ದಿನ ಇಲ್ಲಿದ್ದು ತಾ. ೨ನೇ ಗುರುವಾರ ಪ್ರಾತಃಕಾಲ ಇಲ್ಲಿಂದ ಮದ್ರಾಸಿಗೆ ತೆರಳಿ ಹೋಗಿದ್ದಾರೆ. ಅರ್ಕುಳದಲ್ಲಿರುವ ಫ್ಲಡ್ ರಿಲೀಫ್ ಡಿಪೋವನ್ನು ಮತ್ತು ಇಲ್ಲಿಯ ಮುನ್ಸಿಪಲ್ ಶಾಲೆಗಳನ್ನೂ ಇವರು ನೋಡಿ ಬಂದದಲ್ಲದೆ ಇಲ್ಲಿಯ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯನ್ನೂ ಕದ್ರಿಯಲ್ಲಿರುವ ಸಾಧಕಾಶ್ರಮವನ್ನೂ ಸಂದರ್ಶಿಸಿರುತ್ತಾರೆ. ರಾಷ್ಟ್ರೀಯ ಬಾಲಿಕಾ ಪಾಠಶಾಲೆಯ ಪ್ರಿನ್ಸಿಪಾಲರಾಗಿರುವ ಶ್ರೀಮತಿ ಮನೋರಮಾಬಾಯಿಯವರ ಕೈಕೆಳಗೆ ಕೊಡೋಣಾಗುತ್ತಿರುವ ಶಿಕ್ಷಣ ವಿಧಾನಗಳನ್ನು ನೋಡಿ ಶ್ರೀನಿವಾಸ ಅಯ್ಯಂಗಾರರವರು ತಮ್ಮ ವಿಶೇಷವಾದ ತೃಪ್ತಿಯನ್ನು ವ್ಯಕ್ತಗೊಳಿಸಿರುವರು. ಸಾಧಕಾಶ್ರಮದ ಮೂಲಕ ಶ್ರೀ ಕಾರ್ನಾಡ ಸದಾಶಿವರಾಯರು ಕಾರ್ಯತಃ ಮಾಡಿ ತೋರಿಸಿದ ರಾಷ್ಟ್ರಸೇವೆಯ ಉದಾತ್ತ ದೃಷ್ಟಾಂತವು ರಾಷ್ಟ್ರಭಕ್ತರೆಲ್ಲರಿಗೂ ಆದರ್ಶಪ್ರಾಯವಾಗಿದೆಂತ ಶ್ರೀ ಅಯ್ಯಂಗಾರರವರು ಅಭಿಪ್ರಾಯ ಪಟ್ಟಿರುವರು.

ಕುಂದಾಪುರ ತಾಲೂಕು ಬೋರ್ಡಿಗೆ ನೇಮಕಪಟ್ಟ ಮೆಂಬರರು:—ರಾ| ಕೆ. ವೆಂಕಪ್ಪ ಶೆಟ್ರು ಬಿ. ಎ. ಬಿ. ಎಲ್; ರಾ| ಮಾನಿ ಮೈದಿನ್ ಸಾಹೇಬರು, ರಾ| ವೆಂಕಟಯ್ಯನವರು, ರೆವೆರೆಂಡ್ ಫಾದರ್ ಪೀಟರ್ ಆರ್. ಡಿ. ಸೋಜರು.

ಕಾರ್ಕಳ ಹೈಸ್ಕೂಲಿನಲ್ಲಿ ಮೆನ್ಯುಲ್ ಟ್ರೈನಿಂಗ್ ಕ್ಲಾಸುಗಳನ್ನು ಪ್ರಾರಂಭಿಸಿ ಅವುಗಳನ್ನು ಆ ಶಾಲೆಯಲ್ಲಿ ನಡಿಸಲಾಗುವಂತೆ ವರುಷಂಪ್ರತಿ ಬೇಕಾಗುವ ಖರ್ಚನ್ನು ಸೆಂಕ್ಷನ್ ಮಾಡುವ ವಿಷಯವು ಕಳೆದ ಡಿಸ್ಟ್ರಿಕ್ಟ ಬೋರ್ಡಿನ ಸಭೆಯ ಮುಂದೆ ಬಂದಿತ್ತು. ಈ ವರುಷದಲ್ಲಿ ರೂ. ೩೫೦ ಈ ಬಗ್ಗೆ ಪ್ರತ್ಯೇಕಿಸಿದ್ದು, ಹೊರತು ಇನ್ನು ಈ ಬಗ್ಗೆ ಬೋರ್ಡಿನಿಂದ ಸಹಾಯ ಮಾಡಲು ಸಾಧ್ಯವಿಲ್ಲದ್ದರಿಂದ ಸರಕಾರಕ್ಕೆ ಈ ವಿಷಯ ಬರಕೊಳ್ಳುವುದೆಂತ ನಿಶ್ಚಯಿಸಲಾಗಿದೆ.

೧೯೨೫-೨೬ನೇ ವರುಷದಲ್ಲಿ ಡಿಸ್ಟ್ರಿಕ್ಟ್ ಬೋರ್ಡು ರಸ್ತೆಗಳಿಗೆ ಈ ಕೆಳಗೆ ಕಾಣಿಸಿದ ಪ್ರಕಾರ ಖರ್ಚಿನ ಮೊಬಲಗುಗಳು ಸೆಂಕ್ಷನ್ ಆಗಿರುತ್ತವೆ:—ಬಂಟವಾಳ ಚಾರ್ಮಾಡಿ-ರೂ. ೨೧,೭೭೦; ಈ ರಸ್ತೆಯಲ್ಲಿ ೧೭ ಮತ್ತು ೧೮ ಮೈಲುಗಳಲ್ಲಿ ಸ್ಪೆಶ್ಯಲ್ ರಿಪೇರಿ ಬಗ್ಗೆ-ರೂ. ೪೪೦೦; ಮಂಗಳೂರು ಆಗುಂಬೆ ಘಟ್ಟದ ದಾರಿಗೆ ರೂ. ೯೮೮೦; ಮಂಜರಾಬಾದ ಘಟ್ಟದ ರಸ್ತೆಗೆ ರೂ. ೮೩೦೦; ಕರಾವಳಿ ರಸ್ತೆಗೆ-೨೫೯೩೫; ಕಾರ್ಕಳ ಉಡುಪಿ ಮಲ್ಪೆ ರಸ್ತೆಗೆ-ರೂ. ೯೮೮೮; ಕಾಸರಗೋಡು ಜಾಲ್ಸೂರು ರಸ್ತೆಗೆ-ರೂ. ೪೦೫೦; ಕಲ್ಲಡ್ಕ-ಕಂಚಿನಾಡು ರಸ್ತೆಗೆ ರೂ. ೯೦೭೫ ಸೀತಾನದಿ ಬ್ರಹ್ಮಾವರ ರಸ್ತೆಗೆ-ರೂ. ೮೦೮೮; ಸೋಮೇಶ್ವರ ಕೋಟೇಶ್ವರ ರಸ್ತೆಗೆ-ರೂ. ೮೫೦೦; ಹೊಸಂಗಡಿ ಘಾಟಿ ರಸ್ತೆಗೆ ರೂ. ೫೫೦೦; ನಾಗೋಡಿ ಘಾಟಿ ರಸ್ತೆಗೆ-ರೂ. ೭೮೫೫, ಕಾರ್ಕಳ ಪಡುಬಿದ್ರಿ ರಸ್ತೆಗೆ-ರೂ. ೭೦೪೫; ಮೂಡಬಿದ್ರೆ ಮುಲ್ಕಿ-ರೂ. ೩೧೫೫; ಮೂಡಬಿದ್ರಿ ಗುರುವಾಯನಕೆರೆ-ರೂ. ೪೧೦೦.

ಒಳದೇಶವರ್ತಮಾನ.

ಕೊಂಗ್ರೆಸ್ ಸಂಸ್ಥೆಗಳಿಗೆ ಗಾಂಧಿಜಿಯವರ ಎಚ್ಚರಿಕೆ:— ಕೊಂಗ್ರೆಸ್ಸು ಸದಸ್ಯತನದ ಬಗ್ಗೆ ಪ್ರತಿಯೊಬ್ಬನು ಚರಕದಲ್ಲಿ ನೇತನೂಲನ್ನು ಕೊಡುವ ಬದಲಿಗೆ ಅವರ ಮೌಲ್ಯವನ್ನು ಕೊಂಗ್ರೆಸ್ಸು ಸಂಸ್ಥೆಯವರು ಪಡಿಯುವುದು ನ್ಯಾಯಸಮ್ಮತವಲ್ಲವೆಂಬುವ ತಮ್ಮ ಅಭಿಪ್ರಾಯವನ್ನು ಯಂಗ್ ಇಂಡಿಯಾದಲ್ಲಿ ವ್ಯಕ್ತಗೊಳಿಸಿರುತ್ತಾರೆ.

ತಾ. ೨ನೇ ಮೇ ತಿಂಗಳಲ್ಲಿ ಫರದಪುರದಲ್ಲಿ ಜರಗಲಿಕ್ಕಿರುವ ಬಂಗಾಳದ ಪ್ರೊವಿನ್ಸಿಯಲ್ ಕೊನ್ಫರೆನ್ಸಿಗೆ ಗಾಂಧಿಜಿಗಳವರು ಹೋಗಲಿಕ್ಕಿರುವರು.

ರಾಷ್ಟ್ರೀಯ ಸಪ್ತಾಹ— ಇದೇ ತಿಂಗಳ ತಾ. ೬ರಿಂದ ೧೩ರ ವರೆಗೆ ರಾಷ್ಟ್ರೀಯ ಸಪ್ತಾಹವನ್ನು ಹರತಾಳಗಳ ಮೂಲಕ ಆಚರಿಸುವದು ಯುಕ್ತವಲ್ಲವೆಂತ ಸೂಚಿಸಿ ಉಪವಾಸ ಮತ್ತು ಪ್ರಾರ್ಥನೆಗಳಲ್ಲಿ ಈ ವಾರವನ್ನು ವಿನಿಯೋಗಿಸಬೇಕಲ್ಲದೆ, ಖದ್ದರ ಪ್ರಚಾರ, ಅಸ್ಪೃಶ್ಯತಾ ನಿವಾರಣೆ, ಹಿಂದೂ ಮುಸಲ್ಮಾನ ಐಕ್ಯ ಈ ವಿಷಯಗಳಿಗೆ ಸಂಬಂಧಪಟ್ಟ ಕಾರ್ಯವಿವರವನ್ನು ನಡಿಸಬಹುದಾಗಿ ಮಹಾತ್ಮಾ ಗಾಂಧಿಗಳವರು ಸೂಚಿಸಿರುತ್ತಾರೆ.

ಲೋರ್ಡ್ ರೊವಿಲ್‌ಸನ್‌ರ ಮೃತ್ಯು:— ಇಲ್ಲಿಯ ಸರ್ವ ಸೇನಾಯಕರಾಗಿದ್ದ ಲೋರ್ಡ್ ರೊವಿಲ್‌ಸನ್‌ರವರು ಕಳೆದ ವಾರದಲ್ಲಿ ಮೃತಪಟ್ಟರು. ಇವರ ಶವ ನಿಧನವನ್ನು ವಿಲಾಯತಿಯಲ್ಲಿಯೇ ಮಾಡೋಣಾಗುವದರಿಂದ ತಾ. ೨ನೇ ದಿನ ಇವರ ಶವವು ದಿಲ್ಲಿಯಿಂದ ಮುಂಬಯಿಗೆ ವಯ್ಯಲ್ಪಟ್ಟು ಎಸ್ಸ್ ಎಂಬ ಸ್ಟೀಮರಿನಲ್ಲಿ ಸೀಮೆಗೆ ವಯ್ಯೋಣಾಗುವದು. ಇವರ ಮೃತ್ಯುವಿನಿಂದ ದೇಶದಲ್ಲೆಲ್ಲಾ ಉಂಟಾದ ವಿಷಾದ ಸೂಚನಾರ್ಥವಾಗಿ ಸರಕಾರದ ಆಫೀಸು ಇತ್ಯಾದಿಗಳಿಗೆ ರಜೆಯು ಕೊಡೋಣಾಗಿತ್ತು.

ಪೋಸ್ಟಮಾಸ್ಟರ್ ಜನರಲ್ ರೈ ಬಹದ್ದೂರ ಪಿ. ಎನ್ ಬೋಸರವರು ಮುಂಬಯಿ ಸಂಸ್ಥಾನದ ಪೋಸ್ಟಮಾಸ್ಟರ್ ಜನರಲರಾಗಿ ನೇಮಿಸಲ್ಪಟ್ಟಿರುತ್ತಾರೆ. ಮುಂಬಯಿಯಲ್ಲಿ ದೇಶೀಯರು ಈ ಹುದ್ದೆಗೆ ನೇಮಕಪಟ್ಟದ್ದು ಇದು ಪ್ರಥಮ ಸಾರಿಯಾಗಿರುತ್ತದೆ. ಮುಂಬಯಿಯಲ್ಲಿ ಈ ಹುದ್ದೆಯನ್ನು ನೋಡಿದಂಥವರನ್ನು ಪೋಸ್ಟ ಮತ್ತು ಟೆಲಿಗ್ರಾಫ ಇಲಾಖೆಯ ಮುಖ್ಯ ಹುದ್ದೆಯಾದ ಡಿರೆಕ್ಟರ ಹುದ್ದೆಗೆ ನೇಮಕವಾಗುವದರಿಂದ ಬೋಸರವರಿಗೆ ಈ ಅಪರೂಪ ಬಹುಮಾನವು ದೊರೆಯಬಹುದೆಂತ ನಿರೀಕ್ಷಿಸುತ್ತಾರೆ.

೧೭ ಲಕ್ಷ ರೂಪಾಯಿಗಳ ದಾನ:— ಮುಂಬಯಿಯಲ್ಲಿ ಸ್ತ್ರೀಯರ ಬಗ್ಗೆ ಒಂದು ಆಸ್ಪತ್ರೆಯನ್ನು ಕಟ್ಟಿಸುವ ಬಗ್ಗೆ ಅಲ್ಲಿಯ ಗಿರಣಿಗಳ ಮಾಲಿಕರಾದ ಮಿ! ವಾಡಿಯಾ ಸಿ. ಐ. ಇ. ರವರು ೧೭ ಲಕ್ಷ ರೂಪಾಯಿಗಳ ಮೊಬಲಗನ್ನು ಕೊಟ್ಟಿರುತ್ತಾರೆ.

ಮದ್ರಾಸ್ ಲೆಜಿಸ್ಲೇಟಿವ್ ಕೌನ್ಸಿಲು:— ಕೌನ್ಸಿಲಿನಲ್ಲಿ ಮೆಂಬರರು ತೆಗೆದು ಹಾಕಿದ ಖರ್ಚಿನ ಐಟೆಮುಗಳನ್ನೆಲ್ಲ ಗವರ್ನರ ದೊರೆಗಳವರು ಸರ್ಟಿಫಿಕೇಶನ ಮೂಲಕ ಬಜೇಟಿನಲ್ಲಿ ಕೂಡಿಸಿರುತ್ತಾರೆ. ಕೌನ್ಸಿಲಿನಲ್ಲಿ ಗವರ್ನರ ಈ ಪರವಾದ ಸಂದೇಶವನ್ನು ತಿಳಿದೊಡನೆ ಬಿನ್ ಸರಕಾರಿ ಮೆಂಬರರು ಸಭೆಬಿಟ್ಟು ಹೊರಗೆಹೋದರು.

ದಕ್ಷಿಣ ಕನ್ನಡ ಜಿಲ್ಲೆಯ ಡಿಸ್ಟ್ರಿಕ್ಟ್ ಬೋರ್ಡಿನ ಬಜ್ಜೇಟು.

1924—'25ನೇ ವರುಷದ ಆಯವು ಸರಕಾರದಿಂದ ಪಡೆದ ಸಾಲ ಮತ್ತು ಗ್ರೆಂಟುಗಳು ಕೂಡಿ ರೂ. 767,330 ಮತ್ತು ವ್ಯಯವು 608,760 ಆಗುವದೆಂತಲೂ ಅಂದಾಜು ಮಾಡಿರುತ್ತದೆ.

1925—'26ನೇ ವರುಷದ ಆಯಗಳ ಅಂದಾಜು ಈ ರೀತಿಯಾಗಿರುವುದು:— ಸಾಮಾನ್ಯ ತೆರಿಗೆಗಳ ಮತ್ತು ಇತರ ಮಿಸಲೇನಿಯಸ್ ಮೂಲಗಳಿಂದ ರೂ. 116,730. ಲೆಂಡ್ ಸೆಸ್ಸಿನ ಅಂದಾಜು ಇದರಲ್ಲಿ ರೂ. 116,700 ಆಗಿರುವದು,

ಗವರ್ನಮೆಂಟಿನವರಿಂದ ಡಿಸ್ಟ್ರಿಕ್ಟ್ ಮತ್ತು ತಾಲೂಕು ಬೋರ್ಡು ಲೆಕ್ಕಗಳನ್ನು ಸಂಗ್ರಹಿಸುವ ಸಿಬಂದಿ ಬಗ್ಗೆ ದೊರೆಯುವ ಮೊಬಲಗು ರೂ. 1560.

ಕಮ್ಯೂನಿಕೇಶನ್ ಅಂದರೆ ರಸ್ತೆಗಳ ಬಾಬಿನಲ್ಲಿ ಆಯ: ಸರಕಾರದವರಿಂದ ಟ್ರಂಕ್ ರೋಡಿನ ಬಗ್ಗೆ ರೂ. 32,800, ಸರಕಾರದವರಿಂದ ಸೆಕೆಂಡ್ ಕ್ಲಾಸ್ ರಸ್ತೆಗಳ ಬಗ್ಗೆ ರೂ. 103,920 ಟೋಲ್ಲು ಗೇಟುಗಳ ಮೂಲಕ ರೂ. ೫೮೮೦೦೦; ಬಸ್ಸು ಟೆಕ್ಸುಗಳ ಮೂಲಕ ರೂ. ೨೮೦೦೦; ವಂಗಳ ಮೂಲಕ ರೂ. ೫೪೦೦೦; ಗವರ್ನಮೆಂಟಿನವರು ನೆರೆಯಿಂದ ಹಾಳಾದ ರಸ್ತೆ ಇತ್ಯಾದಿಗಳ ದುರುಸ್ತಿ ಪಾಣೆಮಂಗಳೂರು ಸೇತುವೆಯ ದುರುಸ್ತಿ ಬಗ್ಗೆ ವಾಗ್ದಾನಮಾಡಿದ ಮೊಬಲಗಿನ ಪೈಕಿ ಬಾಕಿ ರೂ. ೭೭೮೧೦; ಅಡ್ಯಾರು ಸೇತುವೆಯನ್ನು ಸಂಪೂರ್ಣವಾಗಿ ಮಾಡಲು ಇನ್ನು ಬೇಕಾಗಿರುವ ಸಾಲ ರೂ. ೧೭,೭೦೦; ಇತರ ಐಟೆಮುಗಳು ರೂ. ೧,೮೩೦; ಜುಮ್ಲಾ ರೂ. ೩೭೪,೬೭೦. ವಿದ್ಯಾಬಾಬಿನಲ್ಲಿ ಅಂದರೆ ಸೆಕೆಂಡರಿ ಶಾಲೆಗಳಲ್ಲಿ ಸಿಕ್ಕುವ ಶಾಲಾ ಫೀಸು ರೂ. ೫೭೯೧೦. ಕುಳುಗುಂದ ಜಾನುವಾರು ಸಂತೆಯ ಮೂಲಕ ಜಮಾ ರೂ. ೧೨೦೦; ಮಾರ್ಗಗಳ ಕಿನಾರೆಯಲ್ಲಿರುವ ಸಾಲುಮರಗಳ ಇತ್ಯಾದಿಗಳಿಂದ ರೂ. ೩೪೫೦; ರೈಲ್ವೆ ಸೆಸ್ಸಿನಿಂದ ಸಂಗ್ರಹವಾದ ಮೊಬಲಗಿನ ಮೇಲಣ ಬಡ್ಡಿಯಿಂದ ರೂ. ೧೯,೫೨೦; ಡಿಪೋಜಿಟುಗಳು ಮತ್ತು ಎಡ್ವಾನ್ಸುಗಳು ರೂ. ೫೯,೯೧೦. ಒಟ್ಟಿಗೆ ಜುಮ್ಲಾ ಆಯವು ರೂ. ೬೩೪,೧೯೦ ಆಗಿರುವದು.

ವ್ಯಯ:— ಎಲ್ಲಾ ಬಾಬುಗಳ ಮೊಬಲಗುಗಳನ್ನು ಒಟ್ಟು ಕೂಡಿಸಿದಲ್ಲಿ ರೂ. ೮,೫೮೦೦೦ದ ವ್ಯಯದ ಅಂದಾಜುಮಾಡೋಣಾಗಿದೆ. ಅದು ಹೇಗೆಂದರೆ:—

ಮೆನೇಜಮೆಂಟ—ಅಂದರೆ ಡಿಸ್ಟ್ರಿಕ್ಟ್‌ಬೋರ್ಡು ಆಫೀಸಿನ ಸಿಬಂದಿ ಇತ್ಯಾದಿಗಳ ಬಗ್ಗೆ ರೂ. ೨೮೪೦೦. ಇದರಲ್ಲಿ ಪ್ರತಿ ಗುಮಾಸ್ತರಿಗೆ ತಿಂಗಳಿಗೆ ರೂ. ೫ರಂತೆ ಇದೇ ಕಳೆದ ಮಾರ್ಚ ತಿಂಗಳ ಒಂದನೇ ತಾರೀಕಿನಿಂದ ಹೆಚ್ಚಿಗೆ ಸಿಕ್ಕುವಂತೆ ಏರ್ಪಾಡುಮಾಡಿದೆ.

ಕಮ್ಯೂನಿಕೇಶನ್—ರಸ್ತೆಗಳು ಇತ್ಯಾದಿಗಳು—ಇಂಜಿನಿಯರಿಂಗ್ ಇಲಾಖೆಯ ಬಗ್ಗೆ ರೂ. ೫೦,೯೫೦; ಟ್ರಂಕ್ ರಸ್ತೆಯ ಬಗ್ಗೆ ರೂ. ೩೩,೫೦೦; ಎರಡನೇ ಕ್ಲಾಸು ರಸ್ತೆಗಳ ಬಗ್ಗೆ ರೂ. ೨೧೩,೦೦೦; ಇತರ ಮಾರ್ಗಗಳ ಬಗ್ಗೆ ರೂ. ೧೭,೦೦೦; ಸಾಲ ಮರುಬಾವಿ ಬಗ್ಗೆ ರೂ. ೩೨,೧೬೦; ಬಂಗ್ಲೆಗಳ ಬಗ್ಗೆ—೧೩,೦೦೦; ಛತ್ರಗಳ ಬಗ್ಗೆ ರೂ. ೨೬೦೦; ಇತರ ೭೯೭೦ ಜುಮ್ಲಾ ರೂ. ೩೬೨,೧೫೦. ಡಿಸ್ಟ್ರಿಕ್ಟ್ ಬೋರ್ಡು ಇಂಜಿನಿಯರರ ಅಪೇಕ್ಷೆಪ್ರಕಾರ ನೆರೆಯಿಂದ ಹಾಳಾದ ರಸ್ತೆ ಇತ್ಯಾದಿಗಳ ಕೆಲಸದ ಬಗ್ಗೆ ಅಸಿಸ್ಟೆಂಟ ಇಂಜಿನಿಯರ್, ಕೆಲವು ಸಬ್ ಓವರ್‌ಸಿಯರುಗಳು ಇವರ ನೇಮಕಕ್ಕೆ ಈ ಬಜೆಟಿನಲ್ಲಿ ಅಸ್ಪದವಿಟ್ಟಿದೆ. ಸೆಕೆಂಡ್ ಕ್ಲಾಸು ರಸ್ತೆಗಳ ದುರುಸ್ತಿ ಬಗ್ಗೆ ಹೆಚ್ಚಿಗೆ ಹಣದ ಏರ್ಪಾಡುಮಾಡೋಣಾಗಿರುವದು. ನೆರೆಯಿಂದ ಹಾಳಾದ ಕೆಲಸಗಳ ದುರುಸ್ತಿ ಬಗ್ಗೆ ರೂ. ೨೬,೬೦೦ ವಿಂಗಡಿಸಲ್ಪಟ್ಟಿರುವದು.

ವಿದ್ಯಾಖಾತೆ:— ಇದರ ವೆಚ್ಚದ ಬಗ್ಗೆ ಒಟ್ಟಿಗೆ ರೂ. 95,750 ವಿಂಗಡಿಸಲ್ಪಟ್ಟಿರುವದು. ಈ ಪೈಕಿ ರೂ. 9,000ದಲ್ಲಿ ರೂ. 6,000 ಕಾಸರಗೋಡು ಹೈ ಸ್ಕೂಲಿನ ಕಟ್ಟಡಗಳ ಬಗ್ಗೆಯೂ, ರೂ. 1,500 ಪುತ್ತೂರು ಹೈ ಸ್ಕೂಲಿನ ಕಟ್ಟಡಕ್ಕೆ ಕೂಡಿಸಿಕೊಂಡು ಒಂದು ಬ್ಲೋಕ್ ಕಟ್ಟಿಸಲಿಕ್ಕೂ, ಇನ್ನು ರೂ. 1,500 ಕಾರ್ಕಳ ಹೈ ಸ್ಕೂಲಿನ ಆಡುವ ಸ್ಥಳದ ಬಗ್ಗೆಯೂ ವಿಂಗಡಿಸಲ್ಪಟ್ಟಿರುತ್ತದೆ. ಕಾಸರಗೋಡು ಹೈ ಸ್ಕೂಲಿನ ಕಟ್ಟಡಗಳ ಬಗ್ಗೆ ಅಲ್ಲಿಯ ಜನರು ಕೂಡಿಸಿಕೊಟ್ಟ ರೂ. 10,000 ಪ್ರತ್ಯೇಕವಿರುವದು.

ಪಬ್ಲಿಕ್ ಹೆಲ್ತ್ ಅಂದರೆ ಆರೋಗ್ಯಖಾತೆಯ ವೆಚ್ಚದ ಬಗ್ಗೆ ರೂ. 11,000ನ್ನು ವಿಂಗಡಿಸಿರುತ್ತಾರೆ. ಈ ಪೈಕಿ ಪ್ರಚಾರದ ಕೆಲಸದ ಬಗ್ಗೆ ರೂ. 1,000, ಕುಳಗುಂದ ಸಂತೆಯ ಏರ್ಪಾಡಿನ ಬಗ್ಗೆ ಖರ್ಚು ರೂ. 3,000; ಮತ್ತು ಕಾಸರಗೋಡು ಆಸ್ಪತ್ರೆಯ ಬಾವಿ ಕೆಲಸವನ್ನು ಪೂರೈಸಲಿಕ್ಕೆ ರೂ. 1,500 ಪ್ರತ್ಯೇಕಿಸಲ್ಪಟ್ಟಿರುವದು. ಸಾಲುಮರ ಇತ್ಯಾದಿಗಳ ಬಗ್ಗೆ ರೂ. 3,400; ರೈಲ್ವೆ ಲೆಕ್ಕಕ್ಕೆ ಅಂದರೆ ಸೆಸ್ಸು ಮೊಬಲಗಿನಿಂದ ಹುಟ್ಟಿಬಂದದ್ದನ್ನು ಪುನಹ ಸಂಚಯದಲ್ಲಿಡಲಿಕ್ಕೆ ರೂ. 15,530, ಎಡ್ವಾನ್ಸುಗಳ. ಮತ್ತು ಡಿಪೋಜಿಟುಗಳ ಪರತ್ತು ರೂ. ೬೪,೬೩೦. ಈ ರೀತಿ ಜುಮ್ಲಾ ವ್ಯಯ ರೂ. 858000 ಆಗಿರುವದು,

ದಕ್ಷಿಣ ಕನ್ನಡಾ ಸೆಂಟ್ರಲ್ ಕೋಓಪರೇಟಿವ್ ಬೇಂಕು, ಪುತ್ತೂರು.

ಅಯ್ಯಾ,

ಸದರಿ ಬೇಂಕಿನ ನಿಬಂಧನೆಗಳ ಪ್ರತಿಯೊಂದನ್ನು ನಮ್ಮ ಟೌನ ಬೇಂಕಿನ ಪರವಾಗಿ ಯಾಕೆ ನನಗೆ ದೊರಕಿಸಿಕೊಡಬೇಕೆಂದು ಬರೆದೆನೆಂಬುದಕ್ಕೆ ನನ್ನ ಉದ್ದೇಶವನ್ನು ಹೇಳಬೇಕಾಗಿದೆ. ಸೆಂಟ್ರಲ್ ಬೇಂಕಿನವರು ಆಗಿಂದಾಗ್ಗೆ ನಿಬಂಧನೆಗಳಲ್ಲಿ ಮಾಡಿಸಿದ ತಿದ್ದುಪಡಿಗಳು ನಮ್ಮ ಬೇಂಕಿನ ರಿಕಾರ್ಡಿನಲ್ಲಿರುವ ಸೆಂಟ್ರಲ್ ಬೇಂಕಿನ ನಿಬಂಧನೆಯ ಪ್ರತಿಯಲ್ಲಿ ಸಂಪೂರ್ಣವಾಗಿದ್ದವೂ ಎಂಬುವುದರಲ್ಲಿ ಸಂಶಯವಿತ್ತು. ಅದ್ದರಿಂದ ವರ್ಷಾವಧಿ ಸಭೆಯು ಮುಂದೆ ಬರುವ ಈ ಬೇಂಕಿನ ಆಡಳಿತೆಯ ವಿಮರ್ಶೆ, ಇವರ ಲೆಕ್ಕತಕ್ತೆಗಳ ಪರಿಶೀಲನೆ ಇದರ ಆರ್ಥಿಕ ಸ್ಥಿತಿ ಇದಕ್ಕೂ ಇದರ ಸಂಯೋಜಿತ ಸಂಘಗಳಿಗೂ ಇರುವ ಪರಸ್ಪರ ಸಹಾಯ ಸಂಬಂಧ ಮತ್ತು ಲೇವಾದೇವಿಗಳ ಸ್ಥಿತಿ ವಿಷಯ ಪ್ರಸ್ತಾಪಗಳನ್ನೆತ್ತಬೇಕಾದರೆ ಬೇಂಕಿನ ನಿಬಂಧನೆಗಳ ಮಾಹಿತಿಯಿಲ್ಲದೆ ಯಾವುದೂ ಸಾಧ್ಯವಲ್ಲ. ಈ ಉದ್ದೇಶದಿಂದ ಸೆಂಟ್ರಲ್ ಬೇಂಕಿನ ನಿಬಂಧನೆಗಳ ಪ್ರತಿಯೊಂದನ್ನು ಅಪೇಕ್ಷಿಸಿ ಸೆಂಟ್ರಲ್ ಬೇಂಕಿಗೆ ಕಳೆದ ವಾರ್ಷಿಕ ಮಹಾಸಭೆಯು ಕೂಡುವ ಕೆಲವು ದಿವಸಗಳ ಮುಂಚಿತವಾಗಿಯೇ ಬರಕೊಂಡೆನು ಆದರೆ ಅಂಥಾ ಪ್ರತಿಯು ಸಭೆಗೆ ಹೋಗುವ ಮುಂಚೆ ದೊರಕಲಿಲ್ಲ. ಹೀಗೆ ದೊರಕದೆ ಇರಲಿಕ್ಕೆ ಬಲವಾದ ಕಾರಣಗಳಿದ್ದಿರಬಹುದು.

ಸೆಂಟ್ರಲ್ ಬೇಂಕಿನ ನಿಬಂಧನೆಗಳ ಪ್ರತಿಯು ಹೀಗೆ ದೊರಕದೆ ಹೋದ್ದರಿಂದ ಈ ಎಲ್ಲಾ ನಿಬಂಧನೆಗಳಿಗೆ ಮುಖ್ಯ ಆಧಾರವಾದ ಕೂಓಪರೇಟಿವ್ ಆಕ್ಟು ಮತ್ತು ಇದರ ಮೇಲಣ ಟಿಪ್ಪಣಿ, ಮತ್ತು ಸಹಕಾರಿ ಚಳವಳದ ಪ್ರಖ್ಯಾತ ಗ್ರಂಥಕರ್ತರ ಅನುಭವ ಇತರ ಸೆಂಟ್ರಲ್ ಬ್ಯಾಂಕುಗಳ ನಿಬಂಧನೆಗಳು ಇವೆಲ್ಲವುಗಳ ಅಲ್ಪಸ್ವಲ್ಪ ಅನುಭವವನ್ನು ತಿಳಕೊಂಡೆನು.

ಸೆಂಟ್ರಲ್ ಬ್ಯಾಂಕು ಕೂಓಪರೇಟಿವ್ ಆಕ್ಟಿನ ಪ್ರಕಾರ ರಿಜಿಸ್ಟ್ರಿಮಾಡಲ್ಪಟ್ಟಿರುವುದಾದರೂ ಈ ಸ್ಥಾಪನೆಗೂ ಸಾಮಾನ್ಯ ಮಿತ ವ ಅಮಿತ ಜವಾಬ್ದಾರಿಗಳ ಸಂಘಗಳ ಸ್ಥಾಪನೆಗೂ ವ್ಯತ್ಯಾಸವಿರುವುದು. ಸಹಕಾರದ ಸಾಮಾನ್ಯ ತತ್ವಗಳನ್ನು ಅವಲಂಬಿಕೊಂಡೇ ಸೆಂಟ್ರಲ್ ಬೇಂಕುಗಳು ಇರಬೇಕೆಂತಿಲ್ಲ. ಅವಕ್ಕೆ ಸಂಯೋಜಿಸಲ್ಪಡುವ ಸಹಕಾರಿ ಸಂಘಗಳಿಗೆ ಬೇಕಾದ ಹಣವನ್ನು ಶೇಖರಿಸುವುದು ಮತ್ತು ಜೋಯಿಂಟ್ ಸ್ಟೋಕ್ ಕಂಪೆನಿಗಳ ಮುಖ್ಯ ಉದ್ದೇಶವಾದ ಲಾಭ—ಇಂಥಾ ಉದ್ದೇಶವನ್ನು ಮುಖ್ಯವಾಗಿಡದೆ ಎರಡನೇದಾಗಿಟ್ಟುಕೊಂಡು ಕೆಲಸನಡಿಸುವುದು.—ಈ ಎರಡು ಉದ್ದೇಶಗಳಿಂದ ಸೆಂಟ್ರಲ್ ಬೇಂಕುಗಳು ನಡಿಸೋಣಾಗುತ್ತವೆ. ನಮ್ಮ ಸೆಂಟ್ರಲ್ ಬ್ಯಾಂಕಾದರೂ ಇದೇ ಉದ್ದೇಶಗಳಿಂದ ನಡಿಸೋಣಾಗುತ್ತದೆಂತ ಹೇಳಬಹುದು. ಸಂಯೋಜಿತ ಸಂಘಗಳಿಗೆ ಬೇಕಾದಷ್ಟು ಹಣವನ್ನು ಒದಗಿಸಿ ಕೊಡುವದರಲ್ಲಿ ನಮ್ಮ ಸೆಂಟ್ರಲ್ ಬೇಂಕಾದರೂ ಹಿಂದಿಲ್ಲ. ಆದರೆ ಈ ರೀತಿ ಬೇಂಕಿನ ಸಹಾಯವಿದ್ದರೂ ಸಂಯೋಜಿತ ಸಂಘಗಳ ಲೇವಾದೇವಿ ಸ್ಥಿತಿಯು ಅಷ್ಟೊಂದು ತೃಪ್ತಿಕರವಾಗಿರುವಂತೆ ತೋರುವದಿಲ್ಲ. ೧೯೨೩—೨೪ನೇ ವರುಷದ ವರದಿಯನ್ನು ಪರಿಶೀಲಿಸಿ ನೋಡಿದರೆ ವಾಯಿದೆ ದಾಟಿದ ಸಾಲಗಳ ಒಟ್ಟು ಮೊಬಲಗು ೬೩೦೦೦ಕ್ಕೆ ಮಿಕ್ಕಿರುವದು. ವಾಯಿದೆ ಮುಂದರಿಸಲು ಕ್ಲಪ್ತಕಾಲದಲ್ಲಿ ಸಂಘಗಳಿಂದ ಅರ್ಜಿಗಳು ಬಾರದೆ ಇದ್ದದ್ದರಿಂದ ಈ ಮೊಬಲಗು ಬೆಳೆದು ಹೋಗಲು ಕಾರಣವಾಯಿತೆಂದು ಬೇಂಕಿನ ವರದಿಯಲ್ಲಿ ಸೂಚಿಸಿರುತ್ತದೆ. ವಾಯಿದೆ ದಾಟಿದ ಸಾಲಗಳ ಮೊಬಲಗು ದೊಡ್ಡದಾಗಿ ಹೋದುದಕ್ಕೆ ಇನ್ನೂ ಕೆಲವು ಕಾರಣಗಳನ್ನು ಕೊಟ್ಟಿರುವರು. ಈ ಎಲ್ಲಾ ಕಾರಣಗಳಿಗಿಂತ ಬರೇ ಅರ್ಜಿಗಳ ಮೂಲಕ ಮಾತ್ರ ವಾಯಿದೆಗಳನ್ನು ವೃದ್ಧಿಸಿಕೊಂಡು ಇನ್ನೂ ದೊಡ್ಡದಾಗಿ ಬೆಳೆದು ಹೋಗಬೇಕಾಗಿದ್ದ ಈ ವಾಯಿದೆ ದಾಟಿದ ಸಾಲಗಳ ಮೊಬಲಗನ್ನು ಕಡಿಮೆಮಾಡಿದ ವಿಧಾನವಾದರೋ ಅತೃಪ್ತಿಕರವೆಂದೇ ಹೇಳಲೇಬೇಕು. ಅರ್ಜಿಗಳ ಮೂಲಕ ಎಷ್ಟು ಸಾಲಗಳಿಗೆ ಅವಧಿಯು ಕೊಡೋಣಾಯಿತೆಂಬುದನ್ನು ವರದಿಯಲ್ಲಿ ಕಾಣಿಸದೆ ಇದ್ದದ್ದು ಯಾವ ಕಾರಣದಿಂದೆಂಬುದು ಗೊತ್ತಾಗುವದಿಲ್ಲ. ಬೇಂಕಿನ ಯಥಾರ್ಥಸ್ಥಿತಿ ಮತ್ತು ಸಂಯೋಜಿತ ಸಂಘಗಳ ಯಥಾರ್ಥ ಸ್ಥಿತಿಯನ್ನು ಗೊತ್ತುಮಾಡಿಕೊಳ್ಳಲು ಬೇಕಾದ ಈ ವಿವರವನ್ನೆಲ್ಲಾ ವರದಿಯಲ್ಲಿ ತೋರಿಸಿಕೊಡುವದಾದ್ದು ಉಪಯುಕ್ತವಾಗಿತ್ತು. ಸರಕಾರದ ಕಡೆಯಿಂದ ಬೇಂಕಿನ ಲೆಕ್ಕಗಳನ್ನು ಪರಿಶೋಧಿಸುವಂಥವರು ಈ ವಿಷಯವನ್ನು ಯಾವ ರೀತಿ ಪರಿಶೋಧಿಸಿರುವರೆಂಬುದು ಸಹ ಬೇಂಕಿನ ಮೆಂಬರರಾಗಿರುವ ಸಂಘಗಳಿಗಾಗಲಿ ವ್ಯಕ್ತಿಮೆಂಬರರಿಗಾಗಲಿ ತಿಳಿಯಪಡಿಸುವಂತೆ ಹಳ್ಳೆ ಪ್ರಯತ್ನ ನಡಿಸಿದ್ದು ವರದಿಯಲ್ಲಿ ಪ್ರಕಟವಾದಂಥಾ ಒಡಿಟ್ ಒರ್ಡರಿನಲ್ಲಿ ಸಹ ವ್ಯಕ್ತವಾಗುವದಿಲ್ಲ.

ಸೆಂಟ್ರಲ್ ಬೇಂಕಿನ ವಾರ್ಷಿಕ ವರದಿಯ ಪರಿಶೀಲನೆಯನ್ನು ಮಾಡುವಂಥಾದ್ದು ಈ ಲೇಖನದ ಮುಖ್ಯ ಉದ್ದೇಶವಲ್ಲದಿದ್ದರೂ ಬೇಂಕಿನ ಸ್ಥಿತಿ ಈ ಸ್ಥಿತಿಯನ್ನು ಬರಮಾಡಿಕೊಂಡಿರುವ ಹೀಗಿನ ನಡವಳಿ ಕ್ರಮಗಳು ಮತ್ತು ನಿಬಂಧನೆಗಳು ಇವುಗಳನ್ನು ಯಾವ ರೀತಿ ತಿದ್ದಬೇಕೆಂಬುದು ಚೆನ್ನಾಗಿ ಗೊತ್ತಾಗಬೇಕಾದರೆ ಪ್ರಕೃತ ಸ್ಥಿತಿಯನ್ನು ತಿಳಕೊಳ್ಳುವುದು ಅಗತ್ಯ. ಈ ಸ್ಥಿತಿಯನ್ನು ಬೇಂಕಿನ ವರದಿಯಲ್ಲಿ ಹೊರಹಾಕಿದ ಅಪೂರ್ಣವಾದ ಮಾಹಿತಿಯಿಂದಲೇ ತಿಳಕೊಳ್ಳಬೇಕಲ್ಲದೆ ಬೇರೆ ಯಾವ ವಿಧಾನದಿಂದಲೂ ಸಾಧ್ಯವಿರದು. ಅದುದರಿಂದ ಈ ವಿಮರ್ಶೆಯನ್ನು ಮತ್ತಷ್ಟು ವಿವರವಾಗಿ ಬರೆದಂಥ ನಂತರ ಬೇಂಕಿನ ನಿಯಮಗಳ ವಿಷಯ ಪ್ರಸ್ತಾಪಿಸಬೇಕೆಂದಿದ್ದೇವೆ.

ಪ್ರತಿನಿಧಿ,
ಟೌನ್ ಕೊ-ಓಪರೇಟಿವ್ ಬೇಂಕು ಲಿಮಿಟೆಡ್, ಮಂಗಳೂರು.

ಪತ್ರವ್ಯವಹಾರ.

ವೋಟರರಿಗೆ ಎಚ್ಚರಿಕೆ.

ಅಯ್ಯಾ ವೋಟರರೇ,

ಇದೇ ಬರುವ ಎಪ್ರಿಲ್ ತಾ: ೨೦ನೇ ಸೋಮವಾರ ಮದ್ರಾಸು ನ್ಯಾಯವಿಧಾಯಕ ಸಭೆಗೆ ನಮ್ಮ ಜಿಲ್ಲೆಯಿಂದ ಒಬ್ಬ ಬ್ರಾಹ್ಮಣೇತರ ಮೆಂಬರನ ಚುನಾವಣೆಯಷ್ಟೆ. ಆ ಬಗ್ಗೆ ಉಮೇದುವಾರರಾಗಿರುವ ಮಹನೀಯರೊಳಗೆ ಯೋಗ್ಯರು, ಸಮರ್ಥರು ಸ್ವತಂತ್ರ ವ್ಯಕ್ತಿಯವರು ಯಾರೋ ಅವರಿಗೆ ನಿಮ್ಮ ಹಕ್ಕಿನ ಒಂದೇ ಒಂದು ವೋಟನ್ನು ಏಕೆ ಕೊಡಬೇಕೆಂಬುದನ್ನು ಶೃತಪಡಿಸುವ ಉದ್ದೇಶ ಈ ಲೇಖನವನ್ನು ತಮ್ಮ ಮುಂದಿಟ್ಟಿರುವೆನು.

ವೋಟೆಂದರೆ ಪೋಲಿಂಗ್ ಸ್ಟೇಶನಿಗೆ ಹೋಗಿ ಹಾಕುವ ಬರೇ (×) ಗುಣಾಕಾರ ಗುರುತಲ್ಲ. ಯಾವ ವಿಧದಿಂದಾದರೂ ಕಂದಾಯ ಕೊಡುವ ಪ್ರಜೆಗಳ ಪರವಾಗಿ ಸರಕಾರದೊಡನೆ ನ್ಯಾಯವಿಧಾಯಕ ಸಭೆಯಲ್ಲಿ ವಾದಿಸುವ ಬಗ್ಗೆ ಬರಕೊಡುವ (Power of-Attorney) ಮೊಕ್ತ್ಯಾರಿಯೇ ವೋಟಾಗಿರುತ್ತದೆ. ವೋಟನ್ನು ಪಡೆದು, ಸಭೆಗೆ ಹೋಗುವವನೇ ನಮ್ಮ ಪ್ರತಿನಿಧಿ. ಹೀಗಿರುವಲ್ಲಿ ಸರಕಾರದ ಏನೂ ಹಂಗಿಲ್ಲದ ಮತ್ತು ರಾಜಕೀಯ ಜ್ಞಾನವೂ ಸಭೆಯಲ್ಲಿ ಮಾತಾಡುವ ಸಾಮರ್ಥ್ಯವೂ ಇರುವ ಮಹನೀಯರನ್ನೇ ನಮ್ಮ ಪ್ರತಿನಿಧಿಯಾಗಿ ಆರಿಸಬೇಕಲ್ಲವೇ?

ತಮ್ಮ ಹತ್ತರದ ಬಂಧುಗಳು ಎಂಬ ಭಾವನೆಯನ್ನು ಮಾತ್ರ ಕಟ್ಟಿಕೊಂಡು ವೋಟು ಕೊಡಕೂಡದು. ಯೋಗ್ಯತೆಯನ್ನು ಆಲೋಚಿಸದೆ, ವೋಟುಕೊಡುವುದಾದರೆ, ನಿಮ್ಮ ವ್ಯಾಜ್ಯದಲ್ಲಿ ವಕಾಲತನ್ನು ನಿಮ್ಮ ಸಂಬಂಧಿಕರನ್ನೆ ನೋಡಿ ಕೊಡುವಿರೋ? ಎಷ್ಟಕ್ಕೂ ಇಲ್ಲ. ಹಾಗೆಯೇ ಬರೇ ಗೌರವಸ್ಥಾನದ ಆಡಂಬರವನ್ನಾಗಲೀ ಜಾತಿ ಬೇಧವನ್ನಾಗಲೀ ಯೋಚಿಸಿ ಪ್ರತಿನಿಧಿಯನ್ನು ಚುನಾಯಿಸಬಾರದು.

ಪ್ರತಿನಿಧಿಗಳು ಪ್ರಜೆಗಳ ಪರವಾಗಿ ಸರಕಾರದೊಡನೆ ಸಭೆಯಲ್ಲಿ ಹೋರಾಡ ಬೇಕಾದುದರಿಂದ ಸರಕಾರದ ಉದ್ಯೋಗವಿರುವವನನ್ನೆ ಸಭೆಗೆ ಆರಿಸಿದರೆ ಅವರಿಂದ ನಮಗೇನು ಪ್ರಯೋಜನವಾದೀತೆಂಬುದನ್ನು ನೀವೇ ಆಲೋಚಿಸಿರಿ. ಅಂಥವರಿಂದ ನಮಗೆ ಕೆಡುಕಲ್ಲದೆ ಎಂದೂ ಪ್ರಯೋಜನ ದೊರೆಯಲಾರದು. ಇವರು ಸರಕಾರದ ಯಾವ ಬಿಲಿಗೂ ಆಲೋಚಿಸದೆ ಕೈಯೆತ್ತಬೇಕೇಬೇಕು. ನ್ಯಾಯವಿಧಾಯಕ ಸಭೆಗೆ ಸರಕಾರಿ ಉದ್ಯೋಗವಿರುವ ಯಾವ ಮೆಂಬರನೂ ಈ ವರೆಗೆ ಚುನಾಯಿಸಲ್ಪಡಲಿಲ್ಲ. ಸರಕಾರಿ ಉದ್ಯೋಗದವರಿಗೆ ವೋಟು ಕೊಟ್ಟು ಪ್ರತಿನಿಧಿಯಾಗಿ ಸಭೆಗೆ ಆರಿಸಿದರೆ, ವೋಟಿನ ಬೆಲೆಯೇ ಅರಿಯದವರೆಂಬ ಅಪವಾದವನ್ನು ಇಡೀ ಜಿಲ್ಲೆಗೆ ಸಂಪಾದಿಸುವಿರಿ.

ಈ ಸಂದರ್ಭದಲ್ಲಿ ಇನ್ನೊಂದು ವಿಷಯ ಸ್ವಲ್ಪ ಹೇಳಬೇಕಾಗಿದೆ. ಕೆಲ ದೊಡ್ಡ ವಕೀಲರು ವಿಚಾರಶೂನ್ಯರಾಗಿ, ತಮ್ಮ ಕಕ್ಷಿಗಾರರನ್ನು ಹೆದರಿಸಿ, ಬೆದರಿಸಿ, ತಮಗೆ ಬೇಕಾದವರಿಗೆ ವೋಟು ಕೊಡಿಸುತ್ತಾರೆ. ಅವರ ಈ ವರ್ತನೆಯು ಸರ್ವಮತದಿಂದಲೂ ಖಂಡಿಸತಕ್ಕದು. ವಕೀಲರ ಕಾಳಕ್ಕೆ ಸಂಯಾದ ಕಕ್ಷಿಗಾರರ ಈ ಮೇಳವು ಬಹಳ ಅಸಹ್ಯವೇ ಸರಿ ವಕಾಲತು ಕೊಟ್ಟ ಮಾತ್ರಕ್ಕೆ ಕಕ್ಷಿಗಾರರು ಬೊಂಬೆಯಾಟದ ಬೊಂಬೆಗಳಾದರೋ! ಆಹಾ ಸ್ವಾತಂತ್ರ್ಯದ ವಿಧಿಯೇ!!

ಇನ್ನೊಂದು ಕಡೆಯ ಮಾತು. ಉಮೇದುವಾರರ ಏಜಂಟರ ಅಥವಾ ದಳ್ಳಾಳಿಗಳ ಶಂಖಧ್ವನಿಗೆ ಮರುಳಾಗಬೇಡಿ. ಅವರ ಆ ಶಂಖಧ್ವನಿಯು ದ್ರೋಣನನ್ನು ಮೋಸಗೊಳಿಸಿದಂತೆ, ನಿಮ್ಮನ್ನು ಸಹ ಮೋಸಗೊಳಿಸದಂತೆ ಎಚ್ಚರದಲ್ಲಿರಿ. ಅವರು ನಿಮ್ಮೊಡನೆ ವೋಟುಕೊಡಬೇಕೆಂದು ಕೇಳಿದರೆ ಆ ಉಮೇದುವಾರನ ಯೋಗ್ಯತೆಯೇನು? ಅವನು ಸಭೆಯಲ್ಲಿ ಕಾರ್ಯನಿರ್ವಹಿಸಲು ಸಮರ್ಥನಿರುವನೋ? ಅವನಿಗೆ ಸರಕಾರದ ಹಂಗೇನಾದರೂ ಇದೆಯೋ ಎಂಬುದನ್ನು ತಪ್ಪದೆ ಕೇಳಿರಿ. ಉಮೇದುವಾರರು ನಿಮಗೆ ಅಪರಿಚಿತರಾದರೆ ಅವರ ಯೋಗ್ಯತೆಯನ್ನು ಚೆನ್ನಾಗಿ ತಿಳಿಯದೆ ವೋಟು ಕೊಟ್ಟು, ನಿಮ್ಮ ಹಕ್ಕನ್ನು ಕಳಕೊಳ್ಳಬೇಡಿ. ನಿಮ್ಮ ಮನಸಾಕ್ಷಿಗೆ ವಿರುದ್ಧವಾಗಿ ಎಂದೂ ವೋಟುಕೊಡಬೇಡಿರಿ.

ತಾ. ೨೬-೩-'೨೫, ಇತಿ,
ಕೆ. ಗೋಪಾಲ ನಾಯ್ಕ.

ಅಯ್ಯಾ,

ಇದೇ ಕಳೆದ ದಶಂಬರ ತಿಂಗಳಲ್ಲಿ ಸಂಬಾವರದಲ್ಲಿ ಜರಗಿದ ದ. ಕ. ಜಿಲ್ಲಾ ದ್ರಾವಿಡ ಬ್ರಾಹ್ಮಣರ ಸಂಘದ ಪಂಚಮ ಪರಿಷದದ ಮಹಾ ಸಭೆಯಲ್ಲಿ ಮಂಜೂರಾದ ನಿರ್ಣಯದ ಮೇರೆಗೆ, ಈ ತಾಲ್ಲೂಕು ಬೆಳಂಜ ಗ್ರಾಮಗಳ ಬ್ರಾಹ್ಮಣರಲ್ಲಿ ನಡೆದ ಶುಭಶೋಭನ ಕಾರ್ಯಗಳಲ್ಲಿ ಸಂಗ್ರಹವಾದ ರೂಪಾಯಿ ೩-೦-೦ ಎರಡನ್ನು, ವಸೂಲುಮಾಡಿದ ತಾಲ್ಲೂಕು ಫಿರ್ಕಾ ಶ್ಯಾನುಭಾಗ ಎ. ಪಾರ್ಥಪ್ಪಯ್ಯನಿಂದ "ಈಗ ಶಾಖೆಗಳ ತಾಲೂಕಿಗೆ ಸ್ಥಳೀಕ ಮಂಡಲಿಯು ನೇಮಕವಿಲ್ಲದ್ದರಿಂದ" ಪ್ರಕೃತ ತಾಲ್ಲೂಕು ಸಹಕಾರ ಸಂಘದಲ್ಲಿ ಅಮಾನತು ಧನವಾಗಿ ಇಡಲ್ಪಟ್ಟಿದೆ. ಇದೇ ರೀತಿ ಪ್ರತಿ ಗ್ರಾಮದಲ್ಲಿಯೂ ಶುಭಪ್ರಸ್ತ ಒಂದರ ಪಾಲ್ಯಾಣೆಯಂತೆ ಪ್ರಮುಖರು ಶೇಖರಿಸಿ ಸಂಘಕ್ಕೆ ಸಲಿಸುವಂತೆಯೂ, ಸಂಘದ ಕಾರ್ಯಗಳೆಲ್ಲಾ ಸರಾಗವಾಗಿ ನಡೆಯುವ ಸಲಹೆಗಳನ್ನು ಅಲ್ಲಲ್ಲಿ ಬೋಧಿಸುವಂತೆಯೂ, ಅನುಭವಜರಕ್ಕೆ ಸಮಾಚಾರಗಳನ್ನು ಸ್ಥಳೀಕ ವೃತ್ತಪತ್ರಿಕೆಗಳಲ್ಲಿ ವ ಪತ್ರಪತ್ರಿಕೆಗಳಲ್ಲಿ ಪ್ರಕಟಿಸುವ ಏರ್ಪಾಡು ಕೂಡ, ಸಂಘದ ಕಾರ್ಯದರ್ಶಿಗಳು ಕೈಗೊಳ್ಳುವುದು ಅವಶ್ಯಕವು. ಅಲ್ಲದೆ, ಈ ಶಾಖೆಗಳ ತಾಲೂಕಿಗೆ ಸ್ಥಳೀಕ ಮಂಡಲಿಯನ್ನು ಶೀಘ್ರದಲ್ಲಿ ಸ್ಥಾಪಿಸುವಂತೆ ಕೂಡ ಪ್ರತಿನಿಧಿಗಳನ್ನು ಎಚ್ಚರಿಸಬೇಕಾಗಿ ಆತುರಪಡುವ,

ದ. ಕ. ದ್ರಾವಿಡ ಬ್ರಾಹ್ಮಣರ ಸಂಘದ ಮೆಂಬರರಲ್ಲೊಬ್ಬ.

ಆರೋಗ್ಯಚಂದ್ರಿಕೆ.

ಮದ್ರಾಸ್.

ಸಂಪಾದಕರು: ಡಾಕ್ಟರ್ ಯು. ರಾಮರಾವ್, ಎಲ್. ಎಮ್. ಸಿ. ಎಫ್. ಎಮ್. ಯು. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವುದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ.

ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ.

ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವವು.

'ಹೆಲ್ತ್' ಎಂಬ ನಮ್ಮ ಇಂಗ್ಲಿಷ್ ಮಾಸಪತ್ರಿಕೆಯನ್ನೋದಿ ಸಂತೋಷಿಸಿದ ಅನೇಕ ದೊಡ್ಡ ಮನುಷ್ಯರ ಪ್ರೋತ್ಸಾಹದ ಮೇಲೆ ಈ ಕನ್ನಡ ಪತ್ರಿಕೆಯನ್ನು ಹೊರಡಿಸಿದೆ.

ಅದರ ಸಂಪುಟ ೩ ಮತ್ತು ೧೧ನೇಯ ನವಂಬರ ೧೯೨೪ ಸಂಚಿಕೆಯಲ್ಲಿ ಕಾಣಿಸಿರುವ ವಿಷಯಗಳು.

ಮುಖಚಿತ್ರ:—ಪರ್ವತವಾಸಿಯಾದ ಒಬ್ಬ ರೂಪವತಿ.
ಶ್ವಾಸಕ್ರಮ ಅಥವಾ ವ್ಯಾಯಾಮವು.
ಹುಣಿಸೇಹಣ್ಣಿನ ಆಹಾರಗುಣಗಳು ಮತ್ತು ಔಷಧಗುಣಗಳು.
ಕಾಲುನಡೆಯೇ ಉತ್ತಮವಾದ ವ್ಯಾಯಾಮವು
ಜೇನಿನಲ್ಲಿರುವ ಗುಣಗಳು.
ಹಲ್ಲುಗಳ ರಚನೆ, ಪ್ರಯೋಜನ, ಕೆಲಸ ಮುಂತಾದವು.
ಮದಪ್ರಾವಕಗಳಿಂದ ಆರೋಗ್ಯಕ್ಕೆ ಉಂಟಾಗತಕ್ಕ ಹಾನಿ.
ಅಂಗಸಾಧನೆ ಮತ್ತು ಬುದ್ಧಿವ್ಯವಸಾಯ (ವಿದ್ಯಾಭ್ಯಾಸ).
ಗಾಯಗಳು, ಮತ್ತು ಉಳುಕು ಮುಂತಾದವು, ಅವುಗಳ ಚಿಕಿತ್ಸೆ.
ನವನಾಗರಿಕ ಪ್ರಪಂಚಕ್ಕೆ ಸಹಜವಾದ ಮೂರು ಕೆಡುಕುಗಳು.
ಒಬ್ಬ ಉಪವಾಸಿಯ ಅನುಭವ.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವವು. ಆರೋಗ್ಯಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ ರೂ. ೧—೮—೦; ಬಿಡುಪತ್ರಿಕೆ ಒಂದಕ್ಕೆ ರೂ. ೦—೨—೦. ಹಿಂದಿನ ಸಂಚಿಕೆಗಳು ಕೂಡ ದೊರೆಯುವವು.

ಚಂದಾದಾರರಾಗುವವರು ವಿ. ಪಿ. ಮೂಲಕವಾಗಿ ತರಿಸಿಕೊಳ್ಳುವುದಕ್ಕಿಂತಲೂ ಹಣವನ್ನು ಮುಂಗಡವಾಗಿ ಕಳುಹಿಸುವುದು ಲಾಭಕರ. ಮಲ್ಯಾಳ ಪತ್ರಿಕೆಯನ್ನು ಅಪೇಕ್ಷಿಸುವವರು 'ಆರೋಗ್ಯ ಚಂದ್ರಿಕೆ'ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು.

ಪತ್ರವ್ಯವಹಾರಕ್ಕೆ: 'ಆರೋಗ್ಯ ಚಂದ್ರಿಕೆ'
೩೨೩ ತಂಬುಚೆಟ್ಟಿ ಬೀದಿ, ಮದ್ರಾಸ್

ತುಳು ಪಾಡ್ದನಗಳು.

ಬೊಬ್ಬರ್ಯ, ಕಲ್ಲುರ್ಟಿ—ಕಲ್ಕುಡ, ದೈಯ್ಯೊಂಗುಳು— ಕೋಡಕಿನಾರ್, ಮುಂಡತ್ತಾಯ ಪ್ರತಿ ಒಂದಕ್ಕೆ 2 ಆಣೆ. 1½ ಆಣೆ ಟಪ್ಪಾಲು ಚೀಟು ಕಳುಹಿಸಿದರೆ 5 ಪುಸ್ತಕಗಳು ಕೂಡಲೇ ಕಳುಹಿಸಲ್ಪಡುವವು.

ವಿಳಾಸ: ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

The Canara Bank, Limited, Magnalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.
Authorised and fully paid
up Capital Rs. 300,000—0—0
Reserve and other sinking
Funds „ 259,000—0—0

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
ಅಧಿಕಾರಗೊಳಿಸಲ್ಪಟ್ಟು, ಪೂರ್ಣವಾಗಿ
ಕೆತ್ತ ಮೂಲಧನವು ರೂ. 300,000—0—0
ಕ್ಷೇಮನಿಧಿ ಮತ್ತು ಇತರ ಫಂಡುಗಳು
259,000—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳೋಣಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರಿಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1925.

K. Venkat Rao,
Secretary

ಪರೀಕ್ಷಾಕಾಲ.
ವಿದ್ಯಾರ್ಥಿಗಳೇ ಇತ್ತ ನೋಡಿರಿ.

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ.

"ಸಾರಸ್ವತಾಸವ"ವು ಒಳಗಳ ಮುಖ್ಯಾವಯವಗಳಲ್ಲುಂಟಾಗುವ ವ್ಯತ್ಯಾಸವನ್ನು ಸರಿಪಡಿಸಿ, ಜೀರ್ಣಶಕ್ತಿಯನ್ನು ಹೆಚ್ಚಿಸಿ, ಪಂಕ್ತಿಭ್ರಮಣೆ ತಲೆತಿರುಗು, ನೆತ್ತಿಯುರಾವು, ಇಂದ್ರಿಯ ದೌರ್ಬಲ್ಯಗಳನ್ನು ಹೋಗಲಾಡಿಸಿ ಶುದ್ಧರಕ್ತವನ್ನು ವೃದ್ಧಿಪಡಿಸುತ್ತದೆ. ಸೀಸೆ 1ಕ್ಕೆ ಬೆಲೆ 1 ರೂಪಾಯಿ, ಪೋಸ್ಟೇಜು ಬೇರೆ,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ—ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ ಹೊಟ್ಟೆನೋವು ಇಂಪ್ಲೂಯಂನ್‌ಜಾ ಪ್ಲೇಗುಜ್ವರ.

ಮಕ್ಕಳ—ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು. ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಶಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳ ವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಬ್ರಾಂಚ್ ಆಫೀಸ್, ಚಿಕ್ಕಪೇಟೆ, ಬೆಂಗಳೂರು ಸಿಟಿ.
ಹೆಡ್ ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಪಾಳ್ಯದ ವೆಂಕಟಾಚಲ ಪಂಡಿತರು,
ಏಜಂಟರು:—
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ,
ಮಂಗಳೂರು ಟವನಿಗೆ ಮಾತ್ರ.

ವಿದ್ಯಾವಾಚಸ್ಪತಿ
ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ
"ಸಂಕ್ಷೇಪಗೀತೆ"

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ್ಳ, ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದೆ. ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೦ ಟಪ್ಪಾಲು ಖರ್ಚು ಕೂಡಿ ಆಣೆ ೧೧ನ್ನು ಮನಿಯಾರ್ಡರ್ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ೩ರಕ್ಕಿಂತ ಜಾಸ್ತಿ ಖರ್ಚು ತಗಲುವುದು. ರಖಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.

ಪುಸ್ತಕ ದೊರಿಯುವ ವಿಳಾಸ:—
ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು. ಮತ್ತು
ಕೆನರಿಸ್ ಮಿಶನ್ ಬುಕ್ ಎಂಡ್ ಟ್ರಾಕ್ಟ ಡಿಪೋಜಿಟರಿ,
ಮಂಗಳೂರು.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀಕಾಶೀ, ಗಯಾ, ಪ್ರಯಾಗ, ಹರಿದ್ವಾರ ಬದ್ರಿನಾರಾಯಣ ದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರ ಕಡೆಯಿಂದಅನುಭವ ತೆಗೆದು ಪ್ರತಿವಂದು ಸಿದ್ಧಮಾಡಿಕೊಂಡು ಬರೆದಿರುವರು. ೧ನೇದು ಮಂತ್ರಪ್ರಕರಣದಲ್ಲಿ ಮಂತ್ರ ಪಠಣೆಯಿಂದಲೂ, ಮಂತ್ರಪ್ರಯೋಗದಿಂದಲೂ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವೂ ಇದೆ. ೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳು ತೋರದುವಿಕೆ, ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ. ೩ನೇದು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು. ೪ನೇದು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಗಳ ಚುಟ್ಕಾ ಸಹ, ಇದರಲ್ಲಿ ಉಂಟು. ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತೂ ರೋಗಗಳಿಗೂ ಸುಲಭವಾಗಿ ಔಷಧ ಮಾಡುವ ಕ್ರಮವನು ಚೆನ್ನಾಗಿ ಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಳಾಸವು ತಿಳಿಸಿರುವರು. ೫ನೇದು ಯಂತ್ರ ಪ್ರಕರಣದಲ್ಲಿ ವಶೀಕರಣ ಗೃಹಪೀಡಾ ನಿವಾರಣ ಭೂತಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು, ಇವಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರದಿರುವರು. ಈ ಗ್ರಂಥವು ಹತ್ತರ ಇದ್ದ ಬಳಿಕ ಎಲ್ಲಾ ದೇವಾನು ದೇವತೆಗಳು ದ್ರವ್ಯಗಳೂ ವೈದ್ಯರೂ ಜೋತಿಷ್ಯರು, ಮಾಂತ್ರಿಕರು ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥ ಗ್ರಂಥವು ಯಾರು ಕಣ್ಣಿಂದ ನೋಡಿರಲಿಕ್ಕಿಲ್ಲಾ. ಪ್ರತಿಯಬರು ತರಿಸಿ ನೋಡಬೇಕೆಂದು ಇದರ ಬೆಲೆ ತೀರ ಕಡಿಮೆಮಾಡಿ ಇರುವವು. ೩—೮—೦ ಟಪ್ಪಾಲು ಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ ನಾಟಕ ಕಾವ್ಯ, ಕತೆಗಳು, ಯಕ್ಷಗಾನ, ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ:—
ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ

ವೈದ್ಯವಿದ್ಯ
PROPRIETOR RAJVAIDYA NAR
NO PRICE NO POSTAGE

ಉಚಿತ! ಬಿಟ್ಟಿ!! ಪುಗಸಟ್ಟೆ!!!

ಎಂಬ ಈ ಪುಸ್ತಕದಲ್ಲಿ ಆಯುರ್ವೇದಶಾಸ್ತ್ರದಲ್ಲಿ ಸ್ತ್ರೀಪುರುಷರು ಆರೋಗ್ಯದೃಢಕಾಯರಾಗಿ ಆರೋಗ್ಯದಿಂದ ಕೂಡಿದ ಸಂತಾನಗಳನ್ನು ಪಡೆದು ಸತಿಪತಿಯರು ಅನ್ಯೋನ್ಯವಾಗಿ ಅನುರಾಗವುಳ್ಳವರಾಗಿ ಸುಖದಿಂದಲೂ ಸಂತೋಷದಿಂದಲೂ ಸಂಸಾರಯಾತ್ರೆಯನ್ನು ಮಾಡಲು ಅತ್ಯಂತ ಉಪಯುಕ್ತವಾದ ವಿಷಯಗಳು ಅಲ್ಲಲ್ಲಿ ಹೇಳಲ್ಪಟ್ಟಿರುವುದನ್ನು ಒಂದಾಗಿ ಕ್ರೋಡೀಕರಿಸಿ ಅಜ್ಞಾನದಿಂದಲೂ ಸಂಕಷ್ಟದಿಂದಲೂ ನರಳುತ್ತಿರುವ ಸಂಸಾರಿಗಳನ್ನುದ್ಧಾರಮಾಡುವ ಸಲುವಾಗಿ ಈ ಪುಸ್ತಕವನ್ನು ಕ್ರಯವೂ ಅಂಚೇ ಹಾಸಲೂ ಇಲ್ಲದೆ ಬೇಡಿದವರಿಗೆ ಸರ್ವತ್ರ ಉಚಿತವಾಗಿ ಕಳುಹಿಸುತ್ತೇವೆ. ಹೆಚ್ಚು ಮಾಹಿತಿಗೆ ಪತ್ರ ಬರೆಯಿರಿ.

ರಾಜವೈದ್ಯ, ನಾರಾಯಣಜಿ ಕೇಶವಜಿ,
49, ಬಂದರ್ ಸ್ಟ್ರೀಟ್, ಜಿ. ಟಿ. ಮದ್ರಾಸ್

Just Arrived OF **Fresh Consignment**

Best English Cycles.



REDUCTION IN PRICES.

Ranger Cycles Model M. Made in Birmingham.		
WITH DUNLOP OR BATES TYRES & TUBES	... @	Rs. 90—0—0
Barton Humber on Advance		
WITH DUNLOP OR BATES TYRES & TUBES	... @	„ 100—0—0
Senior Royal with B. S. A. Fitting.		
WITH DUNLOP OR BATES TYRES & TUBES ...	...@	Rs. 145—0—0
Royal Saxon with B. S. A. Fitting.		
WITH DUNLOP OR BATES TYRES & TUBES ...	... @	Rs. 175—0—0

All the above Cycles include pump and tools.

BROOKES PATEERN 90/2 GERMAN SADDLE ...	...@	„ 9—8—0
„ SADDLE 90/2 „ ...	..@	„ 21—0—0
„ „ B/30 „ ...	...@	„ 26—0—0

For further particulars please write to us or call on us:—

All kinds of Cycle Accessories, Dunlop and German Tyres and Tubes
ARE AVAILABLE AT VERY CHEAP RATES.

Special Discount to Traders *Easy Terms Arranged*

APPLY TO:—**The Mangalore Trading Association,**
Wholesale Dealers in Cycles and Cycle Accessories,
Car-Street, MANGALORE

ಗೋಡೆಗೆ ತಗಲಿಸುವ
ಹೊಸ ನಮೂನೆಯ—
ಟಿಕ್—ಟಾಕ್

ಎಂಬ ಈ ಗಡಿಯಾರಗಳು ಜರ್ಮನೀ ದೇಶದಲ್ಲಿ ತಯಾರಿಸಿದ್ದು. ಇವು ಕರಾರು ಘಂಟೆಯನ್ನು ತೋರಿಸುವವು. ಇವಕ್ಕೆ ಬೀಗ ಕೊಡಬೇಕಾದಿಲ್ಲ. ಇದರಲ್ಲಿ ತಾಣುತ್ತಿರುವ ಗುಂಡನ್ನು ಮೇಲಕ್ಕೆ ಎಳೆದರೆ ಸಾಕು. ತನ್ನಷ್ಟಕ್ಕೆ ತಾನೇ ಟಿಕ್—ಟಾಕ್ ಎಂಬ ಶಬ್ದವನ್ನು ಮಾಡುತ್ತಾ ಸರಿಯಾದ ಕಾಲವನ್ನು ತೋರಿಸುವದು. ಇದು ನೋಡುವುದಕ್ಕೆ ಬಹು ಲಕ್ಷಣವಾಗಿರುವುದು.

ಕ್ರಯ 1ಕ್ಕೆ ರೂ. 3—0—0

ಪೀಟರ್ ವಾಚ್ ಕಂಪೆನಿ
ಪೋಸ್ಟ್ ಬಾಕ್ಸ್ ನಂ. 27, ಮದ್ರಾಸ್.



ADVERTISE IN

The Business Directory
OF INDIA, BURMA & CEYLON

A Comprehensive Directory of the various Business-men, Exporters and Importers, Firms, Factories, Mills, Manufacturers, Merchants and Industries of the principal Cities, Ports and Towns of India, Burma and Ceylon.

PUBLISHED ANNUALLY
Rates for Advertisements

¼ Page	Rs.	50.
2 in. Single Column	„	20.
1 in. Single Column	„	15.
Name in Bold Types	„	5.

Price per Copy Rs. 10.

PRINTERS & PUBLISHERS.
Business Directory Co.,
Kanara Press Buildings, MADRAS. E.
Telegrams: "KETHAKI" Phone 540

Just arrived! *Look Sharp!*

SCREW TORCH LAMPS
&
Pocket Electric Lamps
AVAILABLE
In different varieties, Mother of pearl lamps. Cycle lamps.
NICKEL PLATED.
Hammered Brand, with Powerful Bulls-eye lance,
Use with it
Bull's-eye Dry Batteries.
The Mangalore
Trading Association,
Car Street, MANGALORE.

ಸಾರಸ್ವತ

ಕನ್ನಡ ಮತ್ತು ಕೊಂಕಣಿ ಭಾಷೆಗಳಲ್ಲಿ ಕಳೆದ ವಿಜಯ ದಶಮಿಯ ದಿನದಿಂದ ಪ್ರತಿ ದಶಮಿಗೆ ಹೊರಡುವ ಪತ್ರಿಕೆ.

ವಿ. ಎಸ್. ಕಾಮತ್,
ಮೂಲ್ಕಿ ವಾಮನ ಕುಡುವ } ಸಂಪಾದಕರು.

ಮತಸಂಸ್ಥೆ ಮತ್ತು ಸಮಾಜಕ್ಕೆ ಸಂಬಂಧಪಟ್ಟ ಇತರ ಸಂಸ್ಥೆಗಳ ಸುಸಂಘಟನ.
ಸಮಾಜದೊಳಗೆ ಅನ್ಯೋನ್ಯ ಸಾಧನೆ.
ಸ್ತ್ರೀಸಮಾಜಕ್ಕೆ ಉಪಯುಕ್ತವಾದ ವಿಷಯಗಳ ನಿರೂಪಣ.
ಮತಭಾವನೆಗಳ ಉಜ್ಜೀವನ ಇತ್ಯಾದಿ ಉದ್ದೇಶಗಳಿಂದ ಈ ಪತ್ರಿಕೆಯು ಹೊರಡಿಸಲ್ಪಡುವುದು. ಸಾರಸ್ವತ ಸಮಾಜವು ಇದಕ್ಕೆ ಪ್ರೋತ್ಸಾಹವನ್ನೀಯಬೇಕಾಗಿ ಪ್ರಾರ್ಥನೆ.

ಚಂದಾಹಣ ಅಂಚೆವೆಚ್ಚ ಕೂಡಾ ರೂ. ೧—೪—೦. ಪೋಷಕರು ರೂ. ೧೦-೦-೦. ಸಹಾಯಕರು ರೂ. ೫-೦-೦. ಮಾದರಿ ಸಂಚಿಕೆಯನ್ನು ಟಪ್ಪಾಲು ಖರ್ಚಿಗಾಗಿ ಅರ್ಧಾಣೆ ಸ್ಟ್ಯಾಂಪು ಕಳುಹಿಸುವವರಿಗೆ ಉಚಿತವಾಗಿ ಕಳುಹಿಸುವೆವು.

ಕನ್ನಡ ನಾಡಿನಲ್ಲಿ ಪ್ರತಿ ಕಡೆಯಲ್ಲಿಯೂ ಬಾತಮಿದಾರರು ಬೇಕು.

ಎಲ್ಲಾ ಪತ್ರವ್ಯವಹಾರಗಳನ್ನು ಕೆಳಗಿನ ವಿಳಾಸಕ್ಕೆ ನಡೆಸಬೇಕು.

ಯು. ನಾರಾಯಣನಾಯ್ಕ, ಕಾರ್ಯದರ್ಶಿ,
ಸಾರಸ್ವತ, ಉಡುಪಿ.

ಆರ್. ಮಾರ್ಟಿನ್ಸರ ಲಪ್ತಾ ಎಣ್ಣೆ

ಇದರ ಸುವಾಸನೆಯು, (ಪರಿಮಳವು) ಬಹಳ ಅಂದವಾಗಿಯೂ, ಇರುವುದಲ್ಲದೆ, ಬಹಳ ಹೊತ್ತಿನ ವರೆಗೂ ಇರುತ್ತದೆ. ಈ ಎಣ್ಣೆಯನ್ನು ತಲೆಗೆ ಹಾಕಿಕೊಳ್ಳುವುದರಿಂದ ಕಣ್ಣುಗಳು ತಂಪಾಗಿಯೂ, ಶುಭ್ರವಾಗಿಯೂ, ಆಗುವುದಲ್ಲದೆ, ತಲೆಗೂದಲು ಚೆನ್ನಾಗಿ ಬೆಳೆಯುತ್ತದೆ. ಇದನ್ನು ಪ್ರತಿದಿವಸವೂ ಉಪಯೋಗಿಸುವುದರಿಂದ ಕೂದಲುಗಳು ಕಪ್ಪಾಗಿ ಹೊಳೆಯುವಂತೆ ಮಾಡುತ್ತದೆ. ಕೂದಲುಗಳಲ್ಲಿರುವ ಹೇನುಗಳು ಮುಂತಾದುವು ನಾಶವಾಗಿ ತಲೆಬುರುಡೆಯನ್ನು ಚೆನ್ನಾಗಿ ಬೆಳೆಯುವಂತೆ ಮಾಡುತ್ತದೆ. ಗಡ್ಡ ಮತ್ತು ಮೀಸೆಗಳು ಸಹ ಬೆಳೆಯುತ್ತವೆ. ಇದನ್ನು ಉಪಯೋಗಿಸಿದ ಜನರು ಇದಕ್ಕಿಂತ ಉತ್ತಮವಾದ ಎಣ್ಣೆಯು ಬೇರೆ ಇಲ್ಲವೆಂದು ಹೇಳಿರುತ್ತಾರೆ.

ಕ್ರಯ ಬಾಟ್ಲಿ 1ಕ್ಕೆ ರೂ. 1-4-0.

ಆರ್ ಮಾರ್ಟಿನ್ಸರ ಗಿಟೋಡಯಿನ್.

ಗಂಡಸರಿಗೂ ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ, ಅಥವಾ ಹೊಸತಾಗಿದ್ದರೂ ಸರಿ. ಬಿಳುಪು ಹೋಗುವುದು ಉರಿಯುವುದು, ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೆ ಉರಿ ಮೂತ್ರವನ್ನು ನಿಲ್ಲಿಸಿ, ಮೂತ್ರವು ಬಿಳುಪಾಗಿ ನಿರ್ಮಲವಾಗುವುದಲ್ಲದೆ ರೋಗದ ಪತ್ತೆಯೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ.

ಬೆಲೆ ಸೀಸೆ 1ಕ್ಕೆ ರೂ. 2—0—0.

ಆರ್. ಮಾರ್ಟಿನ್ಸರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮು ಗೂರಲು ಶ್ವಾಸ, ಸೀತ, ನೆಗಡಿ, ಗಂಟಲುನೋವು, ಎದೆ ನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇನ್ನೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನಮಾಡಿ ಪರೀಕ್ಷಿಸಿ ನೋಡಿರಿ. ಅನಂತರ ಬೇರೆ ಯಾವ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮುಗಳಿಗೂ ರಾಣಿಯಾಗಿಯೂ, ಎದೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತಲೆಯಿಕ್ಕದಂತೆ ಮಾಡುತ್ತದೆ.

60 ಮಾತ್ರೆಗಳ ಸೀಸೆ 1ಕ್ಕೆ ರೂ. 1—4—0.

ವಿಳಾಸ:—ಆರ್. ಡಿ. ಕಟೆ ಮತ್ತು ಕಂಪೆನಿ,
ನಂಬ್ರ ಬಿ. ಫ್ರಿಯರ್ ರೋಡ್,
ಸಾಂಜ ವರ್ತಮಾನ ಪ್ರೆಸ್,
ಟೋಡಿವಾಲಾ ಬಿಲ್ಡಿಂಗ ಎದುರುಗಡೆ, ಫೋರ್ಟ ಮುಂಬಯಿ.

R. D. Kately & Co.
No. B. Frere Road,
Opposit Sanjvertaman Press,
Todivala Building, FORT BOMBAY.

ದಕ್ಷಿಣ ಕನ್ನಡ ಜಿಲ್ಲೆಯ
ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0
ಪುಸ್ತಕಗಳು ಸಿಕ್ಕುವ ವಿಳಾಸ:—
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

Edited, Printed & Published by V. S. Kamath at the M. T. A. Sharada Press, Mangalore.

Registered: No. M. 498.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 3-0-0. ಟಪ್ಪಾಲು ಹಾಸಲು ಸೇರಿ ರೂಪಾಯಿ 3-13-0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ | ನ ಭೇಜಿರೇ ಭೀಮವಿಷೇಣ ಭೀತಿಮ್ || ಸುಧಾಂ ವಿನಾ ನ ಪ್ರಯಯುರ್ವಿರಾಮಂ | ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ || ೧ ||
ದೊರೆಯಲನುಪಮರತ್ನಗಳು ಸಾ | ಗರವ ಮಥಿಸಲು ಸುರರಿಗವರಿಂ | ಹರುಷವಾಯಿತೆ! ಮತ್ತೆ ವಿಶ್ವವ ಸುಡುತ ಬರುತಿರುವ ||
ಗರಲಕವರಂಜಿದರೆ | ಸುಧೆಯನು | ಪಡೆತು ಕ್ಷುದ್ರರ ತೆರದಿ ಕಾಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು || ೧ ||

ಪುಸ್ತಕ ೧೧. ಮಂಗಳೂರು, ತಾರೀಕು ೧೦ನೇ ಶುಕ್ರವಾರ ಎಪ್ರಿಲ್ ೧೯೨೫. ಸಂಚಿಕೆ ೧೫.

The Canara Banking Corporation, Udipi, Ltd.

Head Office:— Branch:—
Udipi Coondapoor

Applications are invited for the post of an Agent at the Canara Banking Corporation, Udipi, Ltd, Coondapoor Branch. Pay Rupees 50-5-75. Security to be deposited Rs. 2,000.

Those having practical Banking experience and diplomas in Banking and accounts need Apply, with testimonial and diplomas held to the undersigned by the 15th April 1925.

N. Ananda Rau,
Manager.

Wanted Agents
FOR
Every District in South India

For Pushing Sales of Our Calenders, Xmas and New Year Cards, Blotters, Pictures and Picture Post Cards, at wholesale rates. Deposit of Rs. 100-0-0 Essential.

Apply to:—
The South Indian Advertising Agency.
13, Kilary Road,
BANGALORE CITY.

ಶುದ್ಧ ರೋಮದ ಧಾವಳಿಗಳು.

3 ಮೊಳ ಉದ್ದ 1¼ ಮೊಳ ಅಗಲ ರೂ. 1¼ರಿಂದ 3 ವರೆಗೆ, 5 ಮೊಳ ಉದ್ದ 1¼ ಮೊಳ ಅಗಲ ರೂ. 1¼ರಿಂದ 5 ವರೆಗೆ, 6 ಮೊಳ ಉದ್ದ 1¼ ಮೊಳ ಅಗಲ ರೂ. 2¼ರಿಂದ 6 ವರೆಗೆ, 8 ಮೊಳ ಉದ್ದ 2 ಮೊಳ ಅಗಲ ರೂ. 3¼ರಿಂದ 10 ವರೆಗೆ, 12 ಮೊಳ ಉದ್ದ 2¼ ಮೊಳ ಅಗಲ ರೂ. 6ರಿಂದ 12 ವರೆಗೆ, 16 ಮೊಳ ಉದ್ದ 2¼ ಮೊಳ ಅಗಲ ರೂ. 9ರಿಂದ 16 ವರೆಗೆ. [illegible]

[illegible]

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ.

450 ಪುಟಗಳು ಎಮ್. ಗಣಪತಿರಾವ್ ಐಗಳ್ ಇವರಿಂದ ರಚಿತವಾದದ್ದು. ಕ್ರಯ ರೂ. 2-4-0

ಮಾರಾಟಕ್ಕೆ ಸಿದ್ಧವಾಗಿವೆ – ತುಳು ಪಾಡ್ದನಗಳು – ಮಾರಾಟಕ್ಕೆ ಸಿದ್ಧವಾಗಿವೆ

ದೈಯ್ಯೊಂಗುಳು, ಕಲ್ಲುರ್ಟಿ—ಕಲ್ಕುಡ, ಕಾಂತಾಬಾರೆ ದೈಯ್ಯೊಂಗುಳು, ಮುಂಡತ್ತಾಯ, ದೊಂಬ್ಯಾರ್.

ಸುಲಭ ದರಗಳು – ಶಾಲಾ ಪುಸ್ತಕಗಳು – ರಖಂ ಕೊಂಡುಕೊಳ್ಳುವವರಿಗೆ ಯೋಗ್ಯ ಡಿಸ್ಕೌಂಟ್.

ಅಚ್ಚಿನ ಕತೆಗಳು:—ಮೂರು ಕರಡಿಗಳು; ಜೇನುಸಕ್ಕರೆ ಕಾಗೆ ಏನಾಯಿತು; [illegible]; [illegible]; ಗುಡುಗುಡು ಗುಮ್ಮಟ ದೇವರು; [illegible]; ಹೊಸ ಕನ್ನಡ ಪುಸ್ತಕ ಭಾಗ ೧; ಹೊಸ ಕನ್ನಡ ಪುಸ್ತಕ ಭಾಗ ೨; ಕನ್ನಡ ಪದ್ಯಗಳು; [illegible]; [illegible]; ಪದ್ಯ ರತ್ನಾವಳಿ, ಎಕ್ಸರ್‌ಸೈಜ್ ಮತ್ತು ನೋಟು ಪುಸ್ತಕಗಳು, ಕಾಪಿ ಪುಸ್ತಕಗಳು, ಡ್ರಾಯಿಂಗ್ ಪುಸ್ತಕಗಳು

ಇತರ ಪುಸ್ತಕಗಳು:—[illegible], ಚಂದ್ರಗುಪ್ತ ಚಕ್ರವರ್ತಿ, ಶ್ರೀ ಕೃಷ್ಣಸಂಧಾನ [illegible], ಕೊಂಕಣಿ ಭಾಷೆಯಲ್ಲಿ ಚಂದ್ರಹಾಸ ನಾಟಕ, [illegible] ನಾಟಕ, ಕನ್ನಡ [illegible] ನಾಟಕ, [illegible], ವಾಮನ ಉಪಾಖ್ಯಾನ ಭಾಗ ೧, ೨, ಮತ್ತು ೩.

ಬೇನೆಯುಂಟಾದಾಗ ಜೀವನವು ಕಷ್ಟಮಯವಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡುವದೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಶತ್ರುವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೆ ಕ್ಷಣದಲ್ಲಿ ನಿಲ್ಲದು. ಇದು ಯಾವ ತರದ ಶಿರಃಶೂಲೆಯನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ತಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 3 ಆಣೆ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ ಟೌನ್, ಮದ್ರಾಸು.

100 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುವು.

— ರಥೋತ್ಸವ, ವಿವಾಹ ಉಪನಯನಗಳ ಸಮಯ —
ಸರ್ವರಿಗೂ ಉಡಿಗೆ ತೊಡಿಗೆಗಳು ಬೇಕಾಗುವ ಸಂದರ್ಭ.

[illegible]

ಗುರ್ಪುರ್‌ಕಾರ್ ಬ್ರದರ್ಸ್, ರಥಬೀದಿ, ಮಂಗಳೂರು.

ಹೆಡ್ ಆಫೀಸು:—ರಥಬೀದಿ—(ಮೊದಲು ಸುಜೀರ ನಾಗಪ್ಪನಾಯಕ್, ಎಂಡ್ ಕೊ. ಇದ್ದಲ್ಲಿ; [illegible] ರಸ್ತೆಗೆ ತಿರುಗುವಲ್ಲಿ) ಮಂಗಳೂರು.

ಬ್ರೆಂಚ್ ಆಫೀಸು:—ರಥಬೀದಿ—(ಹಳೇ ತಾಲೂಕು ಕಚೇರಿಯ ವಠಾರಕ್ಕೆ ಸಮೀಪವಿರುವ ಮನೆಗೆ) ಮಂಗಳೂರು.

[illegible] ಮದ್ರಾಸು ಈ ಪ್ರಾಂತ್ಯಗಳಲ್ಲಿ ತಯ್ಯಾರಾದ [illegible]

[illegible]

ಕೈರಾಟೆಯಲ್ಲಿ ತಯಾರಿಸಿದ ನೂಲಿನಿಂದ ಮಾಡಿದ—

[illegible]

[illegible]

ಪ್ರತಿಯೊಂದು ಕುಟುಂಬಿಗಳ ಮನೆಗಳಲ್ಲಿ ಸೌಖ್ಯವನ್ನು ತೋರಿಸುವುದಕ್ಕೂ ಮತ್ತು ಅವರವರ ಉಪಯೋಗಾರ್ಥವನ್ನು ತಿಳುವಳಿಕೆ ಬಗ್ಗೆ ನಡೆಸುವುದಕ್ಕೂ ಒಂದು ಮುರ್ದಾವಾದ ನಿಘಂಟು ಪುಸ್ತಕವು ಈ ನಮ್ಮ ಹಿಂದೂದೇಶದ ಸಮೂಹದಲ್ಲಿರುವುದು. ಅಂಥಾ ಪುಸ್ತಕವು ಯಾವದೆಂಬುದು

ನೀವುಗಳು ಬಲ್ಲಿರಾ?

(ಅದೇ)

"ಕಾಮಶಾಸ್ತ್ರವೆಂಬುವುದು."

ತಾವುಗಳು ಇನ್ನೂ ಈ ಪುಸ್ತಕದಲ್ಲಿ ಬರೆದಿರುವ ಸಾರಾಂಶವನ್ನು ಓದಿಲ್ಲದಿದ್ದರೆ, ಒಡನೇ ಒಂದು ಪುಸ್ತಕವನ್ನು ಕಳುಹಿಸುವಂತೆ ಒಂದು ಪೋಸ್ಟುಕಾರ್ಡು ಬರಿಯಿರಿ.

ಪುಸ್ತಕವನ್ನು ಇನಾಮಾಗಿ ಕಳುಹಿಸುವೆವು.

ಮುಖ್ಯವಾದ ತಿಳುವಳಿಕೆ.

ತಾವುಗಳು ಧೃಡಚಿತ್ತರಾಗಿಯೂ, ನಿಧಾನಸ್ಥರಾಗಿಯೂ, ಸೌಖ್ಯವಾಗಿಯೂ, ಕಷ್ಟವಿಲ್ಲದೇ ವಿಷಯಗಳನ್ನು ಭರಿಸುವ ಮನಸ್ಸನ್ನು ಹೊಂದಬೇಕಾದರೆ ನಮ್ಮ ಅಮೂಲ್ಯವಾದ "ಕಾಮಶಾಸ್ತ್ರವೆಂಬುವ ಪುಸ್ತಕದಲ್ಲಿ ಕಾಣಿಸಿರುವ ಆತಂಕನಿಗ್ರಹ ಮಾತ್ರೆಗಳನ್ನು ಸೇವಿಸಬೇಕು."

ಒಂದು ರೂಪಾಯಿ ಖರ್ಚುಮಾಡಿದರೆ 32 ಮಾತ್ರೆಗಳುಳ್ಳ ಒಂದು ಡಬ್ಬಿಯನ್ನು ತರಿಸಿ ಪ್ರಯತ್ನಿಸಬಹುದು.

ವಿವರವಾಗಿ ಬರೆದಿರುವ ಒಂದು ಕ್ಯಾಟಲಾಗು ಕಳುಹಿಸುವಂತೆ ಈ ದಿನವೇ ಒಂದು ಪೋಸ್ಟುಕಾರ್ಡು ಬರಿಯಿರಿ.

ಆತಂಕನಿಗ್ರಹ ಔಷದಾಲಯ,
ನಂಬ್ರ 26, ಬ್ರಾಡ್ವೆ, ಮದರಾಸು.

ಹೊಸಗ್ರಂಥಗಳು!! ಬೇಗನೇ ತರಿಸಿಕೊಳ್ಳಿರಿ!!!

ಕೋಕ ಶಾಸ್ತ್ರವು.

ರಸಿಕ ವಾಚಕ ಮಹಾಶಯರೇ,

ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ, ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನೇ ಶೋಧ ಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ವೃದ್ಧಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿಣಿ, ಸ್ತ್ರೀಯರು ಇದರಂತೆ ಪುರುಷರಲ್ಲಿಯ ಭೇದ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ, ಜನನೇಂದ್ರಿಯಾದಿಗಳ ವರ್ಣನೆಯನ್ನೂ, ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ, ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ, ನಪುಂಸಕತ್ವ, ವಂಧ್ಯಾದೋಷಗಳ ಚಿಕಿತ್ಸೆಯನ್ನೂ, ಸ್ತ್ರೀಯರ ಗೂಢ ರಹಸ್ಯವನ್ನೂ, ದಂಪತಿ ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನೂ, ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನು ಒಮ್ಮೆ ರಸಿಕರು ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ

ಇದರ ಬೆಲೆ ೧—೮—೦, ಟಪ್ಪಾಲು ಹಾಸಲು ೦—೪—೦.

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ

ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ಮೂರನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್. ಗಣಪತಿರಾವ್ ಐಗಳ್—ಗ್ರಂಥಕರ್ತರು.

ಮನೋರಂಜಕ ಚಿತ್ರಗಳೂ ಇವೆ.

ಇದರಲ್ಲಿ ಸಾವಿತ್ರಿ, ಶಕುಂತಳಾ, ಕೃಷ್ಣಾಕುಮಾರಿ, ಪದ್ಮಿನಿ, ಜೋನ್ ಒಫ್ ಆರ್ಕ, ಫ್ಲೊರೆನ್ಸನಾಯಿಟಿಂಗೇಲ, ಪರಶುರಾಮ, ಭೂತಾಳಪಾಂಡ್ಯ, ಕಾರ್ಕಳ ಗೋಮಟೇಶ್ವರ ಮತ್ತು ಭೈರವರಾಜ, ಮೂಡಬಿದ್ರೆಯ ಚೌಟರು, ನಂದಾವರ ಬಂಗರು, ಕಾರ್ಕಳ ರಾಮಸಮುದ್ರ ಮತ್ತು ರಾಮನಾಥ ಒಡೆಯರ ಅಣೆಕಟ್ಟು, ಗುರುಪುರ ಜಂಗಮ ಮಠ, ಕಲ್ಯಾಣಪ್ಪನ ಕಾಟಕಾಯಿ, ಗುರುವಾಯನಕೆರೆ, ಜಮಾಲಾಬಾದುಕೋಟೆ, ಸುಲ್ತಾನಬತ್ತೇರಿ, ಈದಗಾಪ್ರಾರ್ಥನಾಮಂದಿರ, ಸೇಂಟಮೇರಿ ದ್ವೀಪಗಳು ಮತ್ತು ದರಿಯಾಬಾದರಗಡ್ಡ, ಕೊರಗರು, ಕೊಡಗರು, ತೋಡರು, ರಜಪೂತರು, ಕಂದಾರಿಗಳು ಘುರ್ಖಾಜನರು, ಅರಬಿಯರು, ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ಮೂರನೇ ದರ್ಜೆಯ ಮಕ್ಕಳಿಗೆ ಉಪಯುಕ್ತವಾಗಿದೆ. ಕ್ರಯ 6 ಆಣೆ.

ಪುಸ್ತಕ ದೊರಕುವ ವಿಳಾಸ:—

ಶಾರದಾ ಛಾಪಖಾನೆ, ಮಂಗಳೂರು. ||| ಗಣಪತಿರಾವ್, ಐಗಳ್. ಮಂಜೇಶ್ವರ.

ಡಾಕ್ಟರುಗಳು ಭಿನ್ನಾಭಿಪ್ರಾಯಪಡುವಾಗ್ಯೆ ತೀರ್ಮಾನಿಸುವದು ಯಾರು?

ಅಂಥಾ ಸಂದರ್ಭಗಳಲ್ಲಿ ಡೆಂಗ್ಯು ಮುಂತಾದ ಜ್ವರಗಳನ್ನು ನಿವಾರಿಸುವಂಥಾ "ಬಾಟ್ಲಿವಾಲರ ಏಗ್ಯುಮಿಕ್ಸ್ಚರ್"ನ್ನು ಸರಾಗವಾಗಿಯೂ, ಮತ್ತು ಜ್ವರಗಳನ್ನು ಖಂಡಿತವಾಗಿ ನಿಲ್ಲಿಸುವಂಥಾದೂ, ಎಲ್ಲಾ ತರದ ತಲೆನೋವುಗಳನ್ನು ಹೋಗಲಾಡಿಸುವಂಥಾದ್ದೂ ಆದ "ಬಾಟ್ಲಿವಾಲರ ಏಗ್ಯುಪಿಲ್ಸ್" ಇದನ್ನು ಉಪಯೋಗಿಸಿರಿ.

ಐ. ಎಮ್. ಎಸ್. ಡಾಕ್ಟರುಗಳಿಂದ ಶಿಫಾರಸು ಮಾಡಲ್ಪಟ್ಟಿದ್ದು. ಇದರ ಉಪಯೋಗದಿಂದ ಹೃದಯದ ಮೇಲೆ ಯಾವ ತೊಂದರೆ ಬಾಧಕವಿಲ್ಲ. ಅರ್ಧ ಶತಮಾನದಿಂದ ಹಿಂದೂಸ್ಥಾನ, ಬರ್ಮ, ಸಿಲೋನ್, ಆಫ್ರಿಕಾ ಇವುಗಳಲ್ಲಿ ಪ್ರಖ್ಯಾತಪಡೆದ್ದಾಗಿರುತ್ತದೆ. ಅನೇಕ ಹಿಂದೀ ಪ್ರದರ್ಶನಗಳಲ್ಲಿ ಬೆಳ್ಳಿ ಮತ್ತು ಬಂಗಾರದ ಪದಕಗಳನ್ನು ಪಡೆದಿರುತ್ತೆ. ಚಾಲ್ತಿ ಸಾಧ್ಯವಾಗದ್ದು ಮಾರ್ವಾರಿಗಳೂ ಕೂಡ ಅದರ ಮೇಲೆ ಹಣವನ್ನು ಮುಂಗಡವಾಗಿ ಕೊಡುತ್ತಾರೆ. ಬಡ ಮತ್ತು ಮಧ್ಯಮ ತರಗತಿಯ ಜನರಿಗೆ ವರಪ್ರದಾನವಾಗಿದ್ದು ಸಂಚಾರ, ಪ್ರಯಾಣ, ದೇಶಾಟನೆಗಳ ಸಮಯದಲ್ಲಿ ಹತ್ತಿರದಲ್ಲಿರಿಸಿಕೊಳ್ಳದಾಗಿರುತ್ತದೆ.

ಬಾಟ್ಲಿವಾಲರ ಬಾಲಾಮೃತ ಅಥವಾ ಟೊನಿಕ್ ಸಿರಪ್.

ಕೆಮ್ಮನ್ನು ಹೋಗಲಾಡಿಸಿ, ಎದೆನೋವನ್ನು ಶಾಂತಗೊಳಿಸಿ, ಜ್ವರವನ್ನು ಉಪಶಮನಿಸಿ, ನಿದ್ರಾಭಂಗವನ್ನು ಕಡಿಮೆ ಮಾಡಿ ಧಾತುವರ್ಧನವನ್ನು ಮಾಡುವದರಲ್ಲಿ ಅತ್ಯುತ್ತಮವಾಗಿರುತ್ತದೆ. ಕಫವನ್ನು ಒಣಗಿಸಿ ಮಾಯವಾಗುವಂತೆ ಮಾಡುವುದಲ್ಲದೆ ಅದೇ ಸಮಯದಲ್ಲಿ ಒಳ್ಳೇ ಜೀರ್ಣವನ್ನೂ ಉಂಟುಮಾಡುವುದು. ದರ ಮೊದಲಾದ ಮಾಹಿತಿಯನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಕಾರಿನಪತ್ತೆ:-CAWASHAPUR, BOMBAY.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.,
ಪಿ. ವಾರ್ಡ್, ಮುಂಬಯಿ, ನಂಬ್ರ 18.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ

ಇವರ

ಬಾಲಾಮೃತ.

ಈ ಔಷಧವನ್ನು ಸೇವನೆ ಮಾಡುವುದರಿಂದ ಮಕ್ಕಳು ರೋಗರಹಿತರೂ ಸಶಕ್ತರೂ ಆಗುವರು. ಇದು ಮಧುರವಾಗಿದೆ; ಮಕ್ಕಳು ಸಂತೋಷದಿಂದ ಸೇವಿಸುತ್ತಾರೆ.

ನಮ್ಮ ವಿಳಾಸ:—
ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.

ಏಜಂಟರು:— ಡಿ. ಊಲನ್ ಮಾರ್ಟ್, ಮಂಗಳೂರು.

OUR RECENT IMPORT IN WRIST WATCHES

Have you used anyone of these Watches?

SEND YOUR ORDER NOW ALL GUARANTEED.

Fashionable wrist wrist Lady's size. Reliable movement Guaranteed.

No. 368.

Handy to wear and looks beautiful. Gives punctual time and with strong movement.

Nickel case Rs 8—0

High-class Radium dial watch watch with Roman figures.

No. 367.

Can be seen in dark nights. Well fitted with best movement and strong to use. Used by one and all

Silver case Rs. 9—0.

Radiolight wrist watch.

No. 372.

Fitted with the best mechanism and guaranteed to work and keep perfect time for a long time.

Nickel case Rs. 7—8
Electro rolled-gold ,, 9—0

(N. B. In addition to the above, we have good number of varieties of fancy wrist watches, pocket watches. Please write for a descriptive catalogue, which will be sent free)

WHOLESALE IMPORTERS

PETER WATCH COY.,
POST BOX 27, MADRAS

ಶಾಲಿವಾಹನಶಕ ೧೮೪೭ನೆಯ ಕ್ರೋಧನ ಸಂವತ್ಸರದ ಚೈತ್ರ ಬ॥ ೩ ಶನಿವಾರದಿಂದ ಕ್ರೋಧನ ಸಂವತ್ಸರದ ಚೈತ್ರ ಬ॥ ೯ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೫ನೆಯ ಮೇಷ ಪಗ್ಗು.)

ತಾರೀಖು	ವಾರ.	ತಿ.	ಘಳಿಗೆ.	ನಕ್ಷತ್ರ.	ಘಳಿಗೆ.	[illegible]	ಸೂರ್ಯ ಉ.	ಸೂರ್ಯ ಅಸ್ತ.
11	ಶನಿ	೩	೩	ವಿಶಾಖಾ	೫೧.೨೮	೨೯	6.23	6.42
12	ರವಿ	೪	೫೩. ೧	ಅನುರಾಧಾ	೪೮.೧೬	೩೦	6.22	6.42
13	ಸೋಮ	೫	೪೮. ೨	ಜ್ಯೇಷ್ಠಾ	೪೪.೪೬	೧	6.22	6.42
14	ಕುಜ	೬	೪೩. ೧	ಮೂಲಾ	೪೦.೪೬	೨	6.21	6.42
15	ಬುಧ	೭	೩೬. ೨	ಪೂ. ಷಾ.	೩೬.೪೫	೩	6.20	6.42
16	ಗುರು	೮	೩೦. ೩	ಉ. ಷಾ.	೩೨.೩೦	೪	6.20	6.42
17	ಶುಕ್ರ	೯	೨೪.೩೧	ಶ್ರವಣಾ	೨೮.೪೪	೫	6.19	6.42

ಮಂಗಳೂರಿನ ವಾಯುಸ್ಥಿತಿ.

ತಾರೀಖು Date	Temperature. ಉಷ್ಣ (ಕಾವು) Maximum ಹೆಚ್ಚು	Minimum ಕಡಿಮೆ	Rainfall. ಮಳೆ ಇವತ್ತಿನ ಮಳೆ	ಜುಮಲಾ ಮಳೆ.
3	9[illegible]—7	31—3	—	—
4	93—9	81—5	—	—
5	94—7	50—4	—	—
6	94—2	80—5	—	—
7	95—3	80—8	—	—
8	95—2	32—2	—	—
9	95—2	82—5	—	142 42

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ	ವರೆಗೆ
	ರೂ. ಆ.	ರೂ. ಆ.
ಹೊಸ ಮುಸ್ಕತಿ	8—0	8—10
ಹೊಸ ಗುಡ್ಡು	7-4	7—10
ಹೊಸ ರಾಶಿ	6- 12	7—6
ಅನ್ವಲ್ ಬೆಳ್ತಿಗೆ	8—4	9 6
ಗುಡ್ಡು ಬೆಳ್ತಿಗೆ	7—12	8 - 2
ರಂಗೂನು ಬೆಳ್ತಿಗೆ ಗೋಣಿ ೧	12- 8	13 - 8
ಗೋಧಿ ಗೋಣಿ ೧ಕ್ಕೆ	19- 0	20 - 8
ಹುರುಳಿಗೋಣಿ ೧ಕ್ಕೆ	9- 8	10 - 8
ಕಡಲೆಗೋಣಿ ೧ಕ್ಕೆ	11- 8	12 - 8
ತೊಗರಿಗೋಣಿ ೧ಕ್ಕೆ	12- 8	13 0
ತೊಗರಿಬೇಳೆ ಗೋಣಿ ೧ಕ್ಕೆ	14-8	21 0
ಉದ್ದುಗೋಣಿ ೧ಕ್ಕೆ	14- 0	14 8
ಹೆಸರುಗೋಣಿ ೧ಕ್ಕೆ	14 - 0	15 0
ಊರು ಬೆಲ್ಲ ಖಂಡಿ ೧ಕ್ಕೆ	-	85 0
ಉಪ್ಪು ಗೋಣಿ ೧ಕ್ಕೆ	4- 4	4-12
ಕೊಬ್ರಿ ಖಂಡಿ ೧ಕ್ಕೆ	110-0	115—0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	32- 9	—
ಎಳ್ಳಿಂಡಿ ಖಂಡಿ ೧ಕ್ಕೆ	40-0	45 - 0
ಕೊಬ್ರಿ ಎಣ್ಣೆ ಮಣ ೧ಕ್ಕೆ	8—2	9 0
ಎಳ್ಳೆಣ್ಣೆ ಮಣ ೧ಕ್ಕೆ	7- 0	11 0
ಜಿಂಜಲಿ ಎಣ್ಣೆ ಬುದ್ದಿಗೆ ೧ಕ್ಕೆ	8-15-6	—
ಮೋರಿಸ ಸಕ್ಕರೆ ಮಣ ೧ಕ್ಕೆ	4—14	5 0
ಊರ ಮೆಣಸಿನಕಾಯಿ ಮಣ ೧ಕ್ಕೆ	6 - 0	8 0
ಸಾಸಿವೆ ಮುಡಿ ೧ಕ್ಕೆ	8- 12	—
ಕೊತ್ತುಂಬರಿ ಮುಡಿ ೧ಕ್ಕೆ	3- 8	3—14
ಕಾಫಿ ಖಂಡಿ ೧ಕ್ಕೆ	380- 0	390—0
ಬೆಳಿಗೋಟು ಅಡಿಕೆ ಖಂಡಿ ೧ಕ್ಕೆ ಹಳೇದು	245- 0	255—0
,, ಹೊಸ ಅಡಿಕೆ	230—0	240—0
ಕಾಳುಮೆಣಸು ಖಂಡಿ ೧ಕ್ಕೆ	155-0	160—0
ಯಾಲಕ್ಕಿ ಮಣ ೧ಕ್ಕೆ	80- 0	90 0
ಗೇರುಬೀಜ ಮುಡಿ ೧ಕ್ಕೆ	4—6	4—8
[illegible] ಖಂಡಿ ೧ಕ್ಕೆ	45- 0	65—0
[illegible] ಹಗಡು ಮಣ ೧ಕ್ಕೆ	17-12	23
ತಾಮ್ರ ಪಾತ್ರೆಗಳು ಮಣ ೧ಕ್ಕೆ	36- 0	—
[illegible] ಮುಡಿ ೧ಕ್ಕೆ	[illegible] - 0	
[illegible] ಹಗಡು ಮಣ ೧ಕ್ಕೆ	[illegible] - 8	
[illegible]	[illegible]-2-8	

The Canara Public Conveyance Co., Ltd, Mangalore.

(ESTABLISHED 1914).

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪನಿ ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು
- ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು
- ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
- ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
- ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.
- ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ—ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary.
The Canara Public Conveyance Co., Ltd. Mangalore. S. K.

ಕನ್ನಡಿಗರೆ! **ವಸಂತ.** ಕನ್ನಡಿಯರಿ!

ಈಗಾಗಲೇ ಎರಡನೇ ಸಂಪುಟವು ಆರಂಭಿಸಲಿದೆ.

ಇತಿಹಾಸನಿಧಿ ಎಂದರೆ	ವಸಂತ
ಸಮಾಜಸುಧಾರಕನೆಂದರೆ	ವಸಂತ
ಸ್ತ್ರೀಯರಿಗೆಯ ಸಾಮ್ರಾಜ್ಯವೆಂದರೆ	ವಸಂತ
ಕರ್ನಾಟಕ ಭಾಷಾಸೇವಕನೆಂದರೆ	ವಸಂತ
ದೇಶವಿದೇಶ ಬಂಧುವೆಂದರೆ	ವಸಂತ
ಕಾದಂಬರಿಗಳ ಭಂಡಾರವೆಂದರೆ	ವಸಂತ
ಚಿತ್ರಾಕರ್ಷ ಚಿತ್ರಶಾಲೆಯೆಂದರೆ	ವಸಂತ
ದೇಶಭಕ್ತನೆಂದರೆ	ವಸಂತ

ಇಂತಹ ವಸಂತನು ಯಾರಿಗೆ ಬೇಕು,
ಯಾರಿಗೆ ಬೇಡ?

48 (ಕ್ರೌನ್ ೮ ಪಟ ಸ್ವಾಜನ) ಪುಟಗಳನ್ನು ಮಿಕ್ಕಿದ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3—4—0 ಮಾತ್ರ.

ವ್ಯವಸ್ಥಾಪಕ,
ವಸಂತ ಕಾರ್ಯಾಲಯ,
ಕುಂದಾಪುರ, ದಕ್ಷಿಣ ಕನ್ನಡ.

FOR SALE.

One new **Harley Davidson sports Model** Motor Cycle used only for 250 miles in perfect running order complete with equipments. Price Rs. 1000 or near offer.

For further particulars,

Apply to:—
The Mangalore Trading Association,
Car Street Mangalore

FOR INVESTORS

A few shares of the Saraswathi Printing Works Ltd., are available for sale. They are all fully paid up shares of Rs. 50 each. For terms:

Apply to X
C/o MANAGER.
Swadeshabhimani

JUST ARRIVED

Continental Belts.

OF VARIOUS SIZES

Price Re. 1—10—0 each

Mangalore Trading Association,
Car Street, MANGALORE

ಬಂದು ನೋಡಿರಿ! ತಿಂದು ನೋಡಿರಿ!

ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ

ಪದಕವನ್ನು

ಬಹುಮಾನವಾಗಿ ಪಡೆದಿರುವ

ಎಸ್. ಪಿ. ಆಚಾರ್ಯ

ಇವರಿಂದ ತಯಾರಿಸಲ್ಪಟ್ಟ

ಉಪ್ಪಿನಕಾಯಿಗಳನ್ನು

ಬಂದು ನೋಡಿರಿ! ತಿಂದು ನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ, ಹುಂಡಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಬೇಕಾದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನ್ನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ

ಬಂದು ನೋಡಿರಿ! ತಿಂದು ನೋಡಿರಿ!

ಇಂಡಿಯನ್ ಸ್ವೀಟ್‌ಮಿಟ್ ಮಾರ್ಟ್,

ಮುಹಮ್ಮದಲಿ ಸಾಹೇಬ್ ಬ್ಲಿ. ಮಡಿಕೇರಿ ರೋಡು, ಮಂಗಳೂರು. | ಶಾಖೆ: | ಸದಾನಂದ ಶಾಫಿ ಕೃ ನಾ. ರಥಬೀದಿ, ಮಂಗಳೂರು.

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ
ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ
ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಅಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ಯಾವಂತರೂ ತಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ಗಾವರ್ಗಿಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನ್ನು ಕುರಿತ ಲೆಖ್ಖಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಅಧಿಕಾರಿಗಳೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪೋಷಕರಿಗೆ	ರೂ. 3-0-0.
ಇತರರಿಗೆ, ಪರಸ್ಥಳಕ್ಕೆ, ಪೋಸ್ಟೇಜು ಸೇರಿ	,, 2-8-0
,, ಸ್ಥಳೀಕರಿಗೆ ...	,, 1-8-0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪತ್ರಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿಯಬಹುದು. ಎಡಿಟರ್,

ಬಿ. ಹನುಮಂತಯ್ಯಗೌಡ,
ಅರ್ಥಸಾಧಕ ಪತ್ರಿಕೆ,
ಅರಳೇಪೇಟೆ, ಬೆಂಗಳೂರು ಸಿಟಿ.

ಕೋಕಶಾಸ್ತ್ರವು.

ಈ ಪುಸ್ತಕದಲ್ಲಿ 72 ಅಧ್ಯಾಯಗಳೂ ಮತ್ತು 112 ಮನೋಹರವಾದ ಚಿತ್ರಗಳೂ ಇವೆ. ಈ ಪುಸ್ತಕದ ಸಾರಾಂಶ:

ಹೆಂಗಸರಲ್ಲಿ ನಾಲ್ಕು ಜಾತಿ: (1) ಪದ್ಮಿನಿ, (2) ಚತರಿಣಿ, (3) ಸೌಖನಿ ಮತ್ತು (4) ಹಸ್ತಿನಿ ಇವರ ನಕ್ಷೆಗಳನ್ನು ಕೊಟ್ಟು ವಿವರಿಸಲ್ಪಟ್ಟಿದೆ. ಹಾಗೆಯೇ ನಾಲ್ಕು ಜಾತಿಯ ಮನುಷ್ಯರು. ಹೆಂಗಸರನ್ನು ಮತ್ತು ಗಂಡಸರನ್ನು ನೋಡಿ ಯಾವ ಜಾತಿ ಎಂದು ಕಂಡುಹಿಡಿಯುವ ಕ್ರಮ. ಚಂದ್ರನ ಮತ್ತು ನಕ್ಷತ್ರಗಳ ಸ್ಥಾನಗಳನ್ನು ನೋಡಿ ಶುಭಕಾಲವನ್ನು ಕಂಡುಹಿಡಿಯುವ ಕ್ರಮ. ರಜಸ್ವಲೆಯಾಗುವಿಕೆ. ಇದರ ವಿವರ. ಇದರ ರೋಗಗಳು, ಈ ರೋಗಗಳ ನಿವಾರಣೆ ಕ್ರಮ. ಬಸುರಾಗುವಿಕೆ, ನವಮಾಸದ ಗರ್ಭದ ಬೆಳವಣಿಗೆ (ಇದರ ನಕ್ಷೆಕೊಡಲ್ಪಟ್ಟಿದೆ). ಬಸುರಾದ ಕಾಲದಲ್ಲಿ ಹೆಂಗಸರು ನಡೆಯುವ ಕ್ರಮ. ನೋವು ಮತ್ತು ಕಷ್ಟವಿಲ್ಲದೆ ಪ್ರಸವ ಆಗುವ ಕ್ರಮ. ಕಳೆದುಕೊಂಡ ಶಕ್ತಿಯನ್ನು ಹಿಂತಿರುಗಿ ಪಡೆಯುವ ಕ್ರಮ. ತಮ್ಮ ಇಚ್ಛಾನುಸಾರ ಮಿತ ಸಂತತಿಯನ್ನು ಮಾಡುವ ಕ್ರಮ. ತಮ್ಮ ಇಚ್ಛಾನುಸಾರ ಗಂಡು ಅಥವಾ ಹೆಣ್ಣು ಕೂಸನ್ನು ಪಡೆಯುವ ಕ್ರಮ. ಗರ್ಭಾವಸ್ಥೆಯಲ್ಲಿ ಕೂಸಿನ ಲಿಂಗವನ್ನು ಕಂಡುಹಿಡಿಯುವ ಕ್ರಮ. ಹೆಂಗಸರ ಸೌಂದರ್ಯವನ್ನು ಕಾಪಾಡುವುದು ಹೇಗೆ. ಗೊಡ್ಡುತನವನ್ನು ಹೋಗಲಾಡಿಸುವ ಕ್ರಮ. ಮತ್ತು ಅನೇಕ ಇಲ್ಲಿ ವಿವರಿಸಲಿಕ್ಕೆ ಆಗದ ಸಂಗತಿಗಳು ಸಂಕ್ಷೇಪವಾಗಿ ವಿವರಿಸಲ್ಪಟ್ಟವೆ. ಬಹಳ ಪ್ರಾಚೀನಕಾಲದ ರೋಗನಿವಾರಣೆಯ ಔಷದಗಳು ಕೊಡಲ್ಪಟ್ಟಿದೆ.

ಪುಸ್ತಕ ೧ರ ಕ್ರಯ ರೂ. 4—0—0.

ಇಂಟರ್‌ನೇಶನಲ್ ಪಬ್ಲಿಷಿಂಗ್ ಕಂಪೆನಿ,
ಇಂಟರ್‌ನೇಶನಲ್ ಬಿಲ್ಡಿಂಗ್,
ಲುಧಿಯಾನಾ, (ಪಂಜಾಬ).

International Publishing Company,
International Building,
Ludhiyana, PUNJAB.

"THE MANGALORE MAIL"
THE PIONEER ENGLISH WEEKLY OF
S. KANARA.
Rates of Subscription Rs. 6/- only.
Post free.
Apply to:—
THE MANAGER,
"The Mangalore Mail"
Mangalore S. Kanara.

ನೋಟೀಸು.

ದಕ್ಷಿಣ ಕನ್ನಡ ಮಂಗಳೂರು ಡಿಸ್ಟ್ರಿಕ್ಟ ಮುನ್ಸೀಫ್ ಕೋರ್ಟಿನಲ್ಲಿ.

ದಿವಾಳಿ ಅರ್ಜಿ ನಂಬ್ರ 15/1923
ಐ. ಎ. ನಂಬ್ರ 22/1925.

ಸೈಯದ್ ಉಸ್ಮಾನ್ ಸಾಹೇಬ, ಸೈಯದ್ ಹೈಯದ್ ಸಾಹೇಬರ ಮಗ, ಮಂಗಳೂರು ತಾಲೂಕು ಉಳ್ಳಾಲ ಕಸಬಾ ಗ್ರಾಮಸ್ಥ, } ಅರ್ಜಿದಾರ
ವಿಟ್ಟಪ್ಪ ಕಮ್ತಿ ವಗೈರಾ—ಎದ್ರಿ, ಕ್ರೆಡಿಟರರು, ರೆಸ್ಪೊಂಡೆಂಟರು.

ಅರ್ಜಿದಾರನು ತನ್ನನ್ನು ಡಿಸ್‌ಚಾರ್ಜ ಮಾಡಬೇಕೆಂತ ವಗೈರೆ ಕೊಟ್ಟ ಮೇಲ್ಕಂಡ ಐ. ಎ. ನಂಬ್ರ 22/1925ನೇ ಅರ್ಜಿಯು ತನ್ನಿ ಬಗ್ಗೆ ತಾ. 17—4—1925ಕ್ಕೆ ಇಟ್ಟಿರುವ ಪ್ರಯುಕ್ತ ಆ ಬಗ್ಗೆ ಆಕ್ಷೇಪವುಳ್ಳವರು ತಮ್ಮ ಆಕ್ಷೇಪಣೆಗಳನ್ನು ಸದರಿ ತಾರೀಕಿನ ದಿವಸ ಪೂರ್ವಾಹ್ನ ಘಂಟೆ 11 ರೊಳಗೆ ಮಂಗಳೂರು ಡಿಸ್ಟ್ರಿಕ್ಟ ಮುನ್ಸೀಫ್ ಕೋರ್ಟಿಗೆ ಜ್ಯಾಹೀರು ಮಾಡಿಕೊಳ್ಳತಕ್ಕದ್ದೆಂದು ಈ ಮೂಲಕ ತಿಳಿಸಲಾಗಿದೆ.

ಮಂಗಳೂರು, ತಾ. 9-4-'25. } M ANANTHA SHASTRI, *Vakil for Petitioners*

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ ಕೋರ್ಟಿನಲ್ಲಿ.

O. P. No. 32/1925

1. ಮಂಜೇಶ್ವರ ಸುಬ್ರಾಯ ಕಮ್ತಿ,
2. ಕಾಂಥವಿ ಯಾನೆ ರುಕ್ಮಾಬಾಯಿ } ಅರ್ಜಿದಾರ

ಮತ್ತು

1. ಸುಂದರ ಯಾನೆ ಕೃಷ್ಣ ಕಮ್ತಿ
2. ಯಂ. ಜಿ. ಕಾಮತ್. } ರೆಸ್ಪೊಂಡೆಂಟರು

ಮಂಗಳೂರು ಕ್ಯಾಹರ ಹಂಪನಕಟ್ಟೆಯಲ್ಲಿ ವ್ಯಾಪಾರ ಮಾಡುತ್ತಿದ್ದ ಇತ್ತಲಾಗೆ ಮೃತಪಟ್ಟ ಮಂಜೇಶ್ವರ ವಿಟ್ಟಪ್ಪ ಕಮ್ತಿರ ಬಾಬ್ತು ಅರ್ಜಿಯ ಶೆಡ್ಯೂಲುಗಳಲ್ಲಿ ವಿವರಿಸಿದ ಆಸ್ತಿಗಳ ಕುರಿತು ಮತ್ತು ಸದರಿ ವಿಟ್ಟಪ್ಪ ಕಮ್ತಿರ ಮ್ಯಾನರ್ ಮಕ್ಕಳು ವೆಂಕಟೇಶಕಮ್ತಿ 1, ರಮಾನಾಥ ಕಮ್ತಿ 1, ಪಂಡರಿಬಾಯಿ 1 ಕೂಡಾ 3 ಜನರ ಬಗ್ಗೆ ಗಾರ್ಡಿಯನರಾಗಿ ತಮ್ಮನ್ನು ನೇಮೂರು ಮಾಡಬೇಕಾಗಿ ಸದರಿ ಅರ್ಜಿದಾರರು ಮೇಲ್ಕಂಡ ಅರ್ಜಿಯನ್ನು ದಾಖಲು ಮಾಡಿರುವ ಕಾರಣ ಈ ಕುರಿತು ಆಕ್ಷೇಪವಿದ್ದವರು ಸದರಿ ಅರ್ಜಿಯನ್ನು ತನ್ನಿಗೆ ಇಟ್ಟ ತಾರೀಕು 15—4—'25ನೇ ದಿವಸ ಪೂರ್ವಾಹ್ನ 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ತಮ್ಮ ಆಕ್ಷೇಪಗಳನ್ನು ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

Mangalore, 26-3-1925. } *M. Madhava Rau, Vakil for Petrs*

ಉಪ್ಪಿನಂಗಡಿ ತಾಲೂಕು ಬೋರ್ಡಿನ ಸಭಾ ಪ್ರೊಸಿಡಿಂಗ್ಸು, ತಾ. 25—3—25.

ಕಳೆದ ತಿಂಗಳ ತಾ. ೨೫ರಲ್ಲಿ ಈ ತಾಲೂಕು ಬೋರ್ಡಿನ ಸಭೆಯು ತಾಲೂಕು ಬೋರ್ಡಿನ ಅಧ್ಯಕ್ಷರಾದ ಮ| ರಾ| ಎಚ್. ಗಣಪತಿರಾಯರ ಅಧ್ಯಕ್ಷತೆಯಲ್ಲಿ ಕೂಡಿತ್ತು.

ಮೂರು ಸಭೆಗಳಲ್ಲಿ ಗೈರುಹಾಜರಾಗಿ ತಮ್ಮ ಮೆಂಬರಿಕೆಯನ್ನು ಕಳಕೊಂಡ ಮ| ರಾ| ಬಿಸ್. [illegible] ಪೂಜಾರಿ ಮತ್ತು ಬಿಸ್. ಎನ್. ಎಸ್. [illegible]ರವರನ್ನು ಪುನಃ ಮೆಂಬರರಾಗಿ ಚುನಾಯಿಸಿದರು.

• • • • •

ಪುಂಜಾಲಕಟ್ಟೆಯಲ್ಲಿ ಪ್ರಕೃತ ರೂರಲ್ ಡಿಸ್ಪೆನ್ಸರಿಯು ಸ್ಥಾಪಿಸಲ್ಪಟ್ಟಿರುವುದರಿಂದ ಬೆಳ್ತಂಗಡಿಯ ಮೆಡಿಕಲ್ ಆಫೀಸರರು ಪುಂಜಾಲಕಟ್ಟೆಗೆ ಹೋಗುವ ಬದಲಿಗೆ ಒಂದು ಪಕ್ಷದಲ್ಲಿ ಮೂರು ದಿವಸಗಳಾದರೂ ಮುಂಡಾಜೆಗೆ ಹೋಗಿ ಅಲ್ಲಿ ಇದ್ದುಕೊಂಡು ಜನರಿಗೆ ಚಿಕಿತ್ಸೆಯನ್ನು ಕೊಡತಕ್ಕದೆಂತ ನಿರ್ಣಯಿಸಲ್ಪಟ್ಟಿರುತ್ತದೆ.

• • • • •

ಉಪ್ಪಿನಂಗಡಿ ತಾಲೂಕು ಬೋರ್ಡಿನ ಎಲಿಮೆಂಟರಿ ಎಜ್ಯುಕೇಶನ್ ಫಂಡನ್ನು ದಕ್ಷಿಣ ಕನ್ನಡಾ ಕೊ-ಒಪರೇಟಿವ್ ಸೆಂಟ್ರಲ್ ಬೇಂಕಿನಲ್ಲಿಟ್ಟುಕೊಂಡು ಆ ಬೇಂಕಿನ ಚೆಕ್ಕಿನ ಮೂಲಕ ತಾಲೂಕು ಬೋರ್ಡು ಉಪಾಧ್ಯಾಯರ ಸಂಬಳವನ್ನು ಕೊಡಿಸಬಹುದೆಂದು ಸರಕಾರದಿಂದ ಬಂದ ಸಮ್ಮತಿಯನ್ನು ರಿಕಾರ್ಡುಮಾಡಿದ್ದಲ್ಲದೆ ಸದರಿ ಬೇಂಕಿನವರ ಈ ಬಗ್ಗೆ ಸಮ್ಮತಿಯು ಬಂದೊಡನೆ ಈ ಕ್ರಮವನ್ನು ಜಾರಿಗೆ ತರಬೇಕೆಂತ ನಿಶ್ಚಯಿಸಲಾಗಿದೆ.

• • • • •

ಮ| ರಾ| ರಾ| ವಿ. ರಾಜಾ ಲಕ್ಷ್ಮೀನಾಥ ಸ್ವಾಮಿಜಿ ಅರಸುಗಳವರು ಎಂದಿನಂತೆ ವಿಟ್ಲದ ಕಸಬೆಯಲ್ಲಿರುವ ಹುಡುಗರ ಮತ್ತು ಹುಡುಗಿಯರ ಶಾಲೆಗಳ ವಿದ್ಯಾರ್ಥಿಗಳ ತಾಲಾ ಸಂಬಳದ ಬಗ್ಗೆ ಕಳುಹಿಸಿಕೊಟ್ಟಿರುವ ರೂ. ೧೮೦ನ್ನು ಬೋರ್ಡಿನವರು ಕೃತಜ್ಞತಾ ಪೂರ್ವಕ ಸ್ವೀಕರಿಸಿದ್ದಲ್ಲದೆ ೧೯೨೫-೨೬ನೇ ವರುಷದಲ್ಲಿ ಬೋರ್ಡು ಶಾಲೆಗಳಲ್ಲಿ ವಿದ್ಯಾಭ್ಯಾಸವನ್ನು ಧರ್ಮಾರ್ಥವಾಗಿ ಕೊಡಬೇಕೆಂತ ನಿರ್ಧರಿಸಲಾಗಿದೆ.

• • • • •

ತಮ್ಮ ಕೆಲಸದ ಅವಧಿಯು ತೀರಿರುವ ಈ ಬೋರ್ಡಿನ ಅಧ್ಯಕ್ಷರಾದ ಎಚ್. ಗಣಪತಿರಾವ್ ಮತ್ತು ಉಪಾಧ್ಯಕ್ಷರಾದ ಮ| ರಾ| ರಾ| ದೊಳಹಳ್ಳಿ ಶಿವರಾಯರಿಗೆ ಅವರು ಬೋರ್ಡಿನ ಕಾರ್ಯ ನಿರ್ವಾಹವನ್ನು ವಿಶೇಷ ದಕ್ಷತೆಯಿಂದ ಮಾಡಿದ ಬಗ್ಗೆ ಬೋರ್ಡು ಸಭೆಯವರು ಇವರಿಬ್ಬರಿಗೂ ತಮ್ಮ ಕೃತಜ್ಞತೆಯನ್ನು ಸೂಚಿಸಿರುವರು.

ಧಾರವಾಡ ರಡ್ಡೀಸಾಮಾಜಿಕ ಪರಸ್ಪರ ಸಹಾಯಕಾರಕ ಬ್ಯಾಂಕ.

ನಮ್ಮ ಬ್ಯಾಂಕಿನ ಸನ್ ೧೯೨೪-೨೫ನೇ ಸಾಲಿನ ೩ನೇ ವಾರ್ಷಿಕ ಸಾಧಾರಣ ಸಭೆಯು ಧಾರವಾಡ ಜಿಲ್ಲಾ ನವಲಗುಂದ ತಾಲೂಕು "ಶಿರ್ಲಾಪುರ" ಗ್ರಾಮದಲ್ಲಿ ಇದೇ ಮೇ ತಿಂಗಳ ೨ನೇ ತಾರೀಕು ಶನಿವಾರ ಮಧ್ಯಾಹ್ನದ ೧೨ ಘಂಟೆಗೆ ಕೂಡುವದು. ಸದರಿ ಸಭೆಯಲ್ಲಿ ಬ್ಯಾಂಕಿನ ಶೇರ್ ಬಾಂಡವಾಲಿನ ಮತ್ತು ಬ್ಯಾಂಕಿನ ಇಮಾರತು ಫಂಡು ಕೂಡಿಸುವ ಬ್ಯಾಂಕಿನಶಾಖಾ ಸಂಘಗಳನ್ನು ಸ್ಥಾನಿಕ ಸಿಫಾರಸು ಕಮಿಟಿಗಳನ್ನು ಸ್ಥಾಪಿಸುವ ವಿಷಯಕ್ಕೆ ಚರ್ಚೆಮಾಡಿ ನಿಶ್ಚಿತಯೋಜನೆ ಹಾಗು ಕಾರ್ಯಕ್ರಮಗಳನ್ನು ಗೊತ್ತುಮಾಡತಕ್ಕದಿದೆ. ಈ ವಿಷಯಗಳಿಗೆ ಸಂಬಂಧಿಸಿ ಯಾರಾದರೂ ಸೂಚನೆ ಅಥವಾ ಪ್ರಶ್ನೆಗಳನ್ನು ಕಳುಹಿಸುವದಿದ್ದಲ್ಲಿ ಬ್ಯಾಂಕಿನ ಮ್ಯಾನೇಜಿಂಗ ಡ್ಯಾರೆಕ್ಟರರ ಕಡೆಗೆ ಇದೇ ಎಪ್ರಿಲ ೨೫ನೇ ತಾರೀಕಿನೊಳಗಾಗಿ ಬ್ಯಾಂಕಿನ ಆಫೀಸಿಗೆ ಮುಟ್ಟುವಂತೆ ಬರೆದು ಕಳಿಸಬೇಕು.

ಶಿರ್ಲಾಪುರ ಗ್ರಾಮವು ಹುಬ್ಬಳ್ಳಿ ಗದಗ ರೈಲ್ವೆಮಾರ್ಗದ ಮೇಲಿರುವ ದುಂಡೂರ ಸ್ಟೇಶನ್‌ದಿಂದ ೧೦ ಮೈಲು ಇರುವದು. ಸದರಿ ಸ್ಟೇಶನದಲ್ಲಿ ಸಭೆಯ ಯಾವತ್ತು ಜನರನ್ನು ಕರಕೊಂಡು ಹೋಗಲಿಕ್ಕೆ ಶಿರ್ಲಾಪುರ ಗ್ರಾಮದ ರಡ್ಡೀಬಾಂಧವರು ಗಾಡಿಗಳ ವ್ಯವಸ್ಥೆಯನ್ನು ಮಾಡಿದ್ದಾರೆ. ಆದ್ದರಿಂದ ಈ ವರ್ಷದ ಸಭೆಯು ಎಲ್ಲ ದೃಷ್ಟಿಯಿಂದ ಬಹಳೇ ಮಹತ್ವದ್ದಿದ್ದು ಯಾವತ್ತು ಬ್ಯಾಂಕಿನ ಮೆಂಬರರು ಹಾಗು ಬ್ಯಾಂಕಿನ ವಿಷಯಕ್ಕೆ ಕಳಕಳಿಯುಳ್ಳವರು ಈ ಸಭೆಗೆ ಅವಶ್ಯವಾಗಿ ಬರಬೇಕೆಂದು ಆಗ್ರಹದ ವಿನಂತಿಯದೆ.

ಧಾರವಾಡ ರಡ್ಡೀ ಪರಸ್ಪರ
ಸಹಾಯಕಾರಕ ಬ್ಯಾಂಕ
ನಿಯಮಿತ, ಧಾರವಾಡ,
ತಾ. ೧—೪—೧೯೨೫.

ತಮ್ಮ ವಿಶ್ವಾಸಪಾತ್ರ,
ದೇವನಗೌಡ ಲಿಂಗನಗೌಡ ಪಾಟೀಲ,
ಬಿ. ಎ.,
ಮ್ಯಾನೇಜಿಂಗ ಡ್ಯಾರೆಕ್ಟರ.

ಉಡುಪಿ ತಾಲೂಕು ಕುರುಕಾಲು ಹಿಂದೂ ಹಾಯರ್ ಎಲಿಮೆಂಟರಿ ಶಾಲೆಯ ಕೈಗಾರಿಕೆ ವ ಕಟ್ಟೋಣದ ಸಂಬಂಧ ಧರ್ಮಸಹಾಯದ ಫಂಡಿಗೆ, ದ್ರವ್ಯಸಹಾಯವನ್ನಿತ್ತ ಮಹನೀಯರ ವಿವರ.

ವಸೂಲು ಕೊಟ್ಟವರ ಹೆಸರುಗಳು.

(೧) ಮಾ| ರಾ| ರಾ| ಡಿಸ್ಟ್ರಿಕ್ಟ ಎಜ್ಯುಕೇಶನಲ್ ಕೌನ್ಸಿಲು ಮೆಂಬರ ಅತ್ತಾವರ ಬಾಲಕೃಷ್ಣ ಸೆಟ್ರಿಂದ ರೂ. ೫—೦—೦.

(a) ಸದರಿ ಶಾಲೆಯ ಸಹಾಯಕ ಉಪಾಧ್ಯಾಯರಾದ ಎಸ್. ದೇಜಪ್ಪ ಸೆಟ್ರು ಕೆ. ಅಣ್ಣಯ್ಯ ಸೆಟ್ರ ಮುಖಾಂತರ.

(೨) ಡಿಸ್ಟ್ರಿಕ್ಟ ಬೋರ್ಡು ವೈಸ್ ಪ್ರೆಸಿಡೆಂಟ್ ರಾವ್ ಬಹದೂರ್ ಬಿ. ಮಹಾಬಲ ಹೆಗ್ಡೆರಿಂದ ರೂ. ೫-೦-೦. (ಮತ್ತು ಮುಂದಕ್ಕೆ ಪ್ರತಿ ವರ್ಷ ರೂಪಾಯಿ ೫-೦-೦ರಂತೆ ಕೊಡುತ್ತೇನಾಗಿ ವಾಗ್ದಾನಮಾಡಿದ್ದಾರೆ) (೩) ಕಾಪು ರೆವಿನ್ಯು ಇನ್ಸ್ಪೆಕ್ಟರ್ ಕೊಡಿಯಾಲಗುತ್ತು ನಾರಾಯಣ ಸೆಟ್ರಿಂದ ರೂ. ೫-೦-೦. (೪) ಮಂಗಳೂರು ಟ್ರೈನಿಂಗ್ ಸ್ಟೂಡೆಂಟ್ ಆಯಕಳ ಬಾವ ಕೃಷ್ಣಯ್ಯ ಸೆಟ್ರಿಂದ ರೂ. ೫-೦-೦. (೫) ಮಂಗಳೂರು ಟ್ರೈನಿಂಗ್ ಸ್ಟೂಡೆಂಟ್ ಬೊಂಡಾಳಗುತ್ತು ಜನಾರ್ಧನ ಸೆಟ್ರು ವಾಗ್ದಾನ ಮಾಡಿದ ರೂ. ೫-೮-೦ ಆ ಪೈಕಿ ವಸೂಲು ಕೊಟ್ಟ ರೂ. ೨-೦-೦. (೬) ಮಂಗಳೂರು ಡಾಕ್ಟರ್ ಸಂಜೀವ ಹೆಗ್ಡೆರಿಂದ ರೂ. ೨-೦-೦. (೭) ಇಂಜಿನಿಯರ್ ಬಡಿಲಗುತ್ತು ರಾಮಣ್ಣ ಸೆಟ್ಟರಿಂದ ರೂ. ೧-೦-೦.

(b) ಮುಂಬಯಿಯಲ್ಲಿ ಅಡ್ವೆ ನಂದ್ಯಪ್ಪ ಸೆಟ್ರ ಮುಖಾಂತರ.

(೮) ಮುಂಬಯಿಯಲ್ಲಿರುವ ಮುಂಡ್ಕೂರು ತಿಮ್ಮಗುತ್ತು ಲೋಕಯ್ಯ ಸೆಟ್ರಿಂದ ರೂ. ೫-೦-೦. (೯) ಮುಂಬಯಿಯಲ್ಲಿರುವ ಮುಂಡ್ಕೂರು ರೆಂಜಗುತ್ತು ಕಾಮರಾಯ ಸೆಟ್ರಿಂದ ರೂ. ೫-೦-೦. (೧೦) ಮುಂಬಯಿಯಲ್ಲಿರುವ ಹೆಜಮಾಡಿ ಕೆಳಮನೆ ಅಣ್ಣುಸೆಟ್ರವರಿಂದ ರೂ. ೨-೦-೦. (೧೧) ಮುಂಬಯಿಯಲ್ಲಿರುವ ನಿಂಜೂರು ಚಂದಯ್ಯ ಸೆಟ್ರಿಂದ ರೂ. ೧-೦-೦. (೧೨) ಮುಂಬಯಿಯಲ್ಲಿರುವ ನಿಂಜೂರು ಸೂರ್ಯ ನಾಯಕರಿಂದ ರೂ. ೧-೦-೦. (೧೩) ಮುಂಬಯಿಯಲ್ಲಿರುವ ಬಳಕುಂಜೆ ಕಂಬು ಸೆಟ್ರಿಂದ ರೂ. ೧-೦-೦. (೧೪) ಮುಂಬಯಿಯಲ್ಲಿರುವ ಮುಂಡ್ಕೂರು ವೆಂಕಪ್ಪ ಸೆಟ್ರಿಂದ ರೂ. ೧-೦-೦. (೧೫) ಮುಂಬಯಿಯಲ್ಲಿರುವ ಕರನೀರೆ ನಾರಾಯಣ ಹೆಗ್ಡೆರಿಂದ ರೂ. ೧-೦-೦. (೧೬) ಮುಂಬಯಿಯಲ್ಲಿರುವ ಅಡ್ವೆ ವೀರಪ್ಪ ಸೆಟ್ರಿಂದ ರೂ. ೧-೦-೦. (೧೭) ಕೊಪ್ಪಳಕಾಡಿ ನಾರಾಯಣ ಸೆಟ್ರಿಂದ ರೂ. ೧-೦-೦. (೧೮) ಅಡ್ಯಾರು ದೇವು ಮುಲಯರಿಂದ ರೂ. ೧-೦-೦. ಜುಮ್ಲಾ ರೂಪಾಯಿ [illegible]—೦—೦.

ವಾಗ್ದಾನ ಮಾಡಿದವರ ಹೆಸರುಗಳು.

(೧) ಮಂಗಳೂರು ಟ್ರೈನಿಂಗ್ ಸ್ಟೂಡೆಂಟ್ ಎರ್ಮಾಳ ತಬುರ ಸೆಟ್ರಿಂದ ರೂ. ೫-೦-೦. (೨) ಮಂಗಳೂರು ತಹಶಿಲ್ದಾರ್ ಗಣೇಶ ರಾಯರಿಂದ ರೂ. ೧-೦-೦. (೩) ಮಂಗಳೂರು ಎಲೋಸಿಯಸ್ ಕೋಲೇಜ್ ಟೀಚರ್ ಬಿ. ಭುಜಂಗರಾಯರಿಂದ ರೂ. ೧-೦-೦ (೪) ಮಂಗಳೂರು ಟ್ರೈನಿಂಗ್ ಸ್ಟೂಡೆಂಟ್ ಎಸ್. ಸಿದ್ದಯ್ಯ ಸೆಟ್ರಿಂದ ರೂ. ೧-೦-೦. (೫) ಮಂಗಳೂರು ಟ್ರೈನಿಂಗ್ ಸ್ಟೂಡೆಂಟ್ ಟಿ. ಮಂಜಯ್ಯ ಸೆಟ್ರಿಂದ ರೂ. ೧-೦-೦. (೬) ಮಂಗಳೂರು ಟ್ರೈನಿಂಗ್ ಸ್ಟೂಡೆಂಟ್ ಬಿ. ಗುಡ್ಡಪ್ಪ ಶೆಟ್ಟಿಗಳಿಂದ ರೂ. ೧-೦-೦. (೭) ಮಂಗಳೂರು ಟ್ರೈನಿಂಗ್ ಸ್ಟೂಡೆಂಟ್ ಮುಂಡ್ಕೂರು ಶಂಕರ ಸೆಟ್ರಿಂದ ಆಣೆ ೦-೮-೦, (೮) ಕಾಪೂರು ಶ್ರೀನಿವಾಸ ಆಳ್ವರಿಂದ ಆಣೆ ೦-೮-೦.

ಜುಮ್ಲಾ ರೂಪಾಯಿ [illegible]—೦.

ವಿದ್ಯಾ ದಾನಕ್ಕಾಗಿ ನಮ್ಮ ಶಾಲಾ ಧರ್ಮ ಸಹಾಯದ ಫಂಡಿಗೆ ದ್ರವ್ಯಸಹಾಯವನ್ನು ಮಾಡಿರುವ ಮಹನೀಯರುಗಳಿಗೆ ಧನ್ಯವಾದಗಳನ್ನು ಸಮರ್ಪಿಸುತ್ತೇವೆ. ಈ ಮಹನೀಯರಂತೆಯೇ ವಿದ್ಯಾಭಿಮಾನಿಗಳು ಶಾಲೆಯ ಫಂಡಿಗೆ ಸಹಾಯವನ್ನಿತ್ತು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥಿಸುತ್ತೇವೆ.

ಕುರುಕಾಲು ಹಿಂದೂ ಹಾಯರ್
ಎಲಿಮೆಂಟರಿ ಶಾಲೆ,
ತಾರೀಕು ೬—೪—೧೯೨೫.

ಕೆ. ಗಣಪಯ್ಯ ಸೆಟ್ಟಿ,
[illegible]

ವಿದೇಶ ವರ್ತಮಾನ.

ಫ್ರಾನ್ಸ್ ದೇಶದಲ್ಲಿ ಹಣದ ಮುಗ್ಗಟ್ಟು ಬಹಳ ವಿಶೇಷವಾಗಿರುವದು. ನಮ್ಮ ದೇಶದ ರಪ್ತು ವ್ಯಾಪಾರವು ಆ ದೇಶದೊಂದಿಗಿರುವದರಿಂದ ಫ್ರಾನ್ಸ್ ದೇಶದ ಸಾಂಪತ್ತಿಕ ಸ್ಥಿತಿ ಭಂಗದ ಬಾಧೆಯು ಬಹುಮಟ್ಟಿಗೆ ನಮ್ಮ ದೇಶಕ್ಕೂ ತಟ್ಟದೆ ಇರದು. ಫ್ರೆಂಚ್ ಫ್ರಾಂಕ್ಸನಲ್ಲಿ ಸಡಿಲಿದ ಬೆಲೆಯು [illegible] ಫ್ರಾನ್ಸಿಗೆ ಬಹಳ ವಿಪರೀತವಾಗಿರುವುದು. ಜೊತೆಗೆ ಸಲ್ಲಬೇಕಾದ ಹಣದ ಮೊಬಲಗು ಬಹಳ ವಿಶೇಷವಿದೆ. ೪೫,೦೦೦,೦೦೦,೦೦೦ ಫ್ರಾಂಕುಗಳ ಬಜೆಟಿನಲ್ಲಿ ೧೯,೦೦೦,೦೦೦,೦೦೦ ಸಾಲದ ಬಡ್ಡಿಗೇ ಬೇಕಾಗಿದೆ. ಸಾಲಕೊಟ್ಟ ಬ್ರಿಟನ್ ಮತ್ತು ಅಮೇರಿಕಾ ದೇಶಗಳ ಒತ್ತಾಯವು ಬಹಳ ಇರುವುದು. ಈ ಪರಿಸ್ಥಿತಿಯ ಕಾರಣವಾದರೋ ಬಹಳ ಮಟ್ಟಿಗೆ ರಾಜಕೀಯವಾಗಿರುವದು. ಮಿಲಿಟರಿ ಖರ್ಚು ಸಿವಿಲ್ ಖರ್ಚಿನಷ್ಟೆ ಇರುವದು. ಹೀಗಿದ್ದರೂ ಜರ್ಮನಿಯ ಮೇಲೆ [illegible] ವಕ್ರದೃಷ್ಟಿಯೇ ಇದೆ. ಇದನ್ನು ಬಿಟ್ಟು ಮಿಲಿಟರಿ ಖರ್ಚನ್ನು ಕಡಿಮೆಮಾಡಿದ ವಿನಹ ಫ್ರಾನ್ಸದೇಶಕ್ಕೆ ಉಳಿಗಾಲವಿಲ್ಲವೆಂತ ತಜ್ಞರ ಅಭಿಪ್ರಾಯವಿರುವುದು.

ಹಿಂದುಸ್ಥಾನದಲ್ಲಿಯೇ ನೇಮಕಹೊಂದಿದ ಬ್ರಿಟಿಷ ಪ್ರೊವಿನ್ಸಿಯಲ್ ಸರ್ವಿಸ್ಸಿನವರ ಸಂಬಳ ಇತ್ಯಾದಿಗಳನ್ನು ಹೆಚ್ಚಿಸುವ ವಿಷಯ ಬ್ರಿಟಿಷ ಪಾರ್ಲಿಮೆಂಟಿನಲ್ಲಿ ಪ್ರಸ್ತಾಪಿಸಲ್ಪಟ್ಟಿರುವದು. ಈ ವಿಷಯದಲ್ಲಿ ಇಂಡಿಯಾ ಕೌನ್ಸಿಲಿನಲ್ಲಿಯೂ ವೈಸರಾಯರೊಡನೆಯೂ ಪ್ರಕೃತ ಆಲೋಚನೆಯು ನಡೆಯುತ್ತಿರುವುದು.

ಸರ್. ವಿಲಿಯಮ್ ಬರ್ಡವುಡರವರು ಹಿಂದುಸ್ಥಾನಕ್ಕೆ ಬಂದು ತಲ್ಪುವ ವರೆಗೆ ಸರ್ ಕ್ಲೋಡ್ ಜಾಕೋಬರವರನ್ನು ಇಲ್ಲಿಯ ಸರ್ವ ಸೇನಾಧಿಪತಿಯನ್ನಾಗಿಯೂ ವೈಸರಾಯರ ಕೌನ್ಸಿಲಿನ ಮೆಂಬರರನ್ನಾಗಿಯೂ ಮಾಡಿದ ನೇಮಕವು ಚಕ್ರವರ್ತಿಗಳ ಮಂಜೂರಾತಿಯನ್ನು ಹೊಂದಿರುವದು.

ವೈಸರಾಯ ಪ್ರಭುಗಳವರು ಇಂಗ್ಲಾಂಡಕ್ಕೆ ಬರುವಂಥಾ ವೇಳೆಯಲ್ಲಿ ಶ್ರೀ| ದೇಶಬಂಧು ದಾಸರವರನ್ನು ಮಹಾತ್ಮಾಜಿಯವರನ್ನು ಆಮಂತ್ರಿಸುವದು ಉಚಿತವಲ್ಲವೊ ಎಂಬುದಾಗಿ ಕರ್ನಲ್ ವೆಜ್‌ವುಡ್‌ರವರು ವಿಂಟರಟನ್ನರವರನ್ನು ಕೇಳಿಕೊಂಡರು. ಹಿಂದುಸ್ಥಾನ ಮತ್ತು ಇಂಗ್ಲಾಂಡದ ಮನೋಭಾವನೆಗಳು ನೆಟ್ಟಗಾಗಿ ಬರುವಂಥಾ ಇಂಥ ಸಂದರ್ಭಗಳಲ್ಲಿ ಇಂಥ ಪ್ರಶ್ನೆಗಳಿಗೆ ಉತ್ತರವನ್ನು ಬರಮಾಡಿಕೊಳ್ಳುವುದು ಉಪಯುಕ್ತವಲ್ಲವೆಂತ ವಿಂಟರ್‌ಟನ್ನರು ಸೂಚಿಸಿದರು.

ಒಳದೇಶ ವರ್ತಮಾನ.

ಮುಂಬಯಿ ಕಾರ್ಪೊರೇಶನಿನ ಶ್ರೀ. ವಿ. ಜೆ. ಪಟೇಲರ ಅಧ್ಯಕ್ಷತನದ ಅವಧಿಯು ಮುಗಿದುಹೋದ್ದರಿಂದ ಮಿ| ಬೆಪ್ಟಿಸ್ತಾರವರನ್ನು ಅಧ್ಯಕ್ಷರನ್ನಾಗಿ ಚುನಾಯಿಸಿರುತ್ತಾರೆ.

ಮುಂಬಯಿಯ ಬಾವ್ಲಾ ಕೊಲೆ ಮೊಕದ್ದಮೆಯಲ್ಲಿ ಮ್ಯಾಜಿಸ್ಟ್ರೇಟರು ಅಪಾದಿತರನ್ನು ಸೆಶನ್ಸಿಗೆ ಕಮಿಟುಮಾಡಿರುತ್ತಾರೆ.

ಶ್ರೀ| ಜಮುನಾದಾಸಮೇಥಾ ಎಮ್. ಎಲ್. ಎ. ಸ್ವರಾಜ್ಯವಾದಿಗಳು ಕೊಂಗ್ರೆಸ್ಸಿಗೆ ಮೆಂಬರರನ್ನು ಚರಕದಿಂದ ನೂಲುವ ಯೋಗ್ಯತ ಮೇಲೆ ಸಂಗ್ರಹಿಸುವ ವಿಧಾನವನ್ನು ಈ ರೀತಿ ಟೀಕಿಸಿರುವರು:—೩೩ ಕೋಟಿ ಜನಸಂಖ್ಯೆಯಲ್ಲಿ ಈ ಜನತ ಕೊಂಗ್ರೆಸ್ಸಿನ ಮೆಂಬರರಾಗುವರ ಸಂಖ್ಯೆಯು ೧೧,೦೦೦ ವಿರುತ್ತದೆ. ಕೊಂಗ್ರೆಸ್ಸಿನ ಅಧಿಕಾರರುಗಳ ಚುನಾವಣೆ ಕಾಲದೊಳಗೆ ಅಂದರೆ ಬರುವ ಸೆಪ್ಟಂಬರ ತಿಂಗಳ ಅಂತ್ಯದೊಳಗೆ ಈ ಸಂಖ್ಯೆಯು ಅತ್ಯಧಿಕವಾದರೆ ೫೦,೦೦೦ಕ್ಕೆ ಮಿಕ್ಕಲಿಕ್ಕಿಲ್ಲ. ಇಷ್ಟು ಅಲ್ಪ ಸಂಖ್ಯೆಯಿಂದ ಆರಿಸಲ್ಪಟ್ಟ ಪ್ರತಿನಿಧಿಗಳು ನಿಜವಾದ ಜನರ ಪ್ರತಿನಿಧಿಗಳೆಂದು ಹೇಳಲು ಸಾಧ್ಯವಿಲ್ಲ. ಕೊಂಗ್ರೆಸ್ಸಿಗೆ ಮೆಂಬರರಾಗಲು ಪ್ರಕೃತ ಇಟ್ಟಿರುವ ಈ ಯೋಗ್ಯತೆಯನ್ನು ಹಾಗೆಯೇ ಜಾರಿಗೊಳಿಸಿದರೆ ಕೊಂಗ್ರೆಸು ಸಭೆಯು ತನ್ನ ರಾಷ್ಟ್ರೀಯ ಸ್ವರೂಪವನ್ನೇ ಕಳಕೊಳ್ಳುವದು. ಕೊಂಗ್ರೆಸು ಕಮಿಟಿಯವರು ರಾಷ್ಟ್ರೀಯ ಸಭೆಗೆ ಈ ಅವಸ್ಥೆ ಬಂದೊದಗದಂತೆ ಈ ಪ್ರಶ್ನೆಯನ್ನು ವಿಚಾರಮಾಡುವದು ಅಗತ್ಯವಿದೆ. ಮಹಾತ್ಮಾಜಿಯವರ ನೂಲುವ ಕಾರ್ಯಕ್ರಮವನ್ನು ಕೊಂಗ್ರೆಸ್ಸಿನ ಕಾರ್ಯಕ್ರಮದ [illegible] ಸಾಧಿಸಬಹುದು.

ಬಂಗಾಳದ ಆಕ್ಟಿಂಗ್ ಗವರ್ನರರಾಗಿ ನೇಮಿಸಲ್ಪಟ್ಟ ಸರ್ ಜೋನ್ ಕರ್‌ರವರು ಇದೇ ತಿಂಗಳ ತಾ. ೧೦ನೇ ಶುಕ್ರವಾರ ಚಾರ್ಜನ್ನು ವಹಿಸಿಕೊಳ್ಳುವರು.

ಲೋರ್ಡ ರೀಡಿಂಗ್‌ರವರು ಸೀಮೆಗೆ ತೆರಳಲು ಇದೇ ತಿಂಗಳ ತಾ. ೧೦ರಲ್ಲಿ ಮುಂಬಯಿಗೆ ಬಂದು ತಲ್ಪುವರು.

ಕೇರಳದಲ್ಲಿ ಖಾದಿ ವಿಕ್ರಯ:—ಪಾಲ್ಘಾಟಿನಲ್ಲಿ ಮೂರು ದಿವಸಗಳಲ್ಲಿ ರೂ. ೩೭೦೦, ತ್ರಿಚೂರಿನಲ್ಲಿ ಎರಡು ದಿವಸಗಳಲ್ಲಿ ರೂ. ೧೬೦೦, ಕೊಚ್ಚಿಯಲ್ಲಿ ಎರಡು ದಿವಸಗಳಲ್ಲಿ ರೂ. ೩೮೦೦. ಈ ರೀತಿ ಖಾದಿ ವಿಕ್ರಯವು ಆಗಿದೆ.

ಇದೇ ತಿಂಗಳ ತಾ. ೩ನೇ ದಿನ ಕೊಚ್ಚಿ ಸಂಸ್ಥಾನದಲ್ಲಿ ನೂತನವಾಗಿ ಏರ್ಪಡಿಸಲ್ಪಟ್ಟ ನ್ಯಾಯವಿಧಾಯಕ ಸಭೆಯ ಪ್ರಾರಂಭೋತ್ಸವವು ಮಹಾರಾಜರವರಿಂದ ನೆರವೇರಿಸಲಾಯಿತು.

ದಕ್ಷಿಣ ಕನ್ನಡ.

ಕಾಸರಗೋಡು:—ಕಳೆದ ತಾ. ೩ರಿಂದ ಇಲ್ಲಿಯ ಎಡಿಶನಲ್ ಮುನ್ಸೀಫ್ ಕೋರ್ಟನ್ನು ಇಲ್ಲಿಂದ [illegible] ಕುಂದಾಪುರಕ್ಕೆ ವರ್ಗಾಯಿಸಿದ್ದಾರೆ.

ಇಲ್ಲಿಯ ಶ್ರೀ ಮಲ್ಲಿಕಾರ್ಜುನ ದೇವಸ್ಥಾನದಲ್ಲಿ ವರ್ಷಂಪ್ರತಿ ನಡೆಯುವ ಜಾತ್ರೋತ್ಸವವು ಕಳೆದ ತಾ. ೧೯ನೇ ಪ್ರಾರಂಭವಾಗಿ ತಾ. ೨೨ಕ್ಕೆ ಮುಕ್ತಾಯವಾಯಿತು. ಈ ವರ್ಷ ಮಳೆ ವಗೈರೆಯ ತೊಂದರೆಗಳು ಇಲ್ಲದ್ದರಿಂದ ಉತ್ಸವಾದಿಗಳು ಬಹು ವಿಜೃಂಭಣೆಯಿಂದ ನಡೆದವು. ಆ ನಂತರ ವರ್ಷಂಪ್ರತಿ ಜಾತ್ರೆಯಾದ ನಂತರ ಆಗುವ ಕೋಳಿಕಟ್ಟವೂ ಕೂಡ ಆಗಿಹೋಯಿತು.

ಬೇಸಿಗೆಯಿಂದ ಸೆಕೆಯು ದಿನೇದಿನೇ ಹೆಚ್ಚಾಗಿರುತ್ತದೆ. ರಾತ್ರಿ ಹೊತ್ತಿನಲ್ಲಿ ಸೆಕೆಯು [illegible]ದಿಂದ ನಿದ್ರೆ ಕೂಡಾ ಬರುವದು ದುರ್ಲಭವಾಗಿರುತ್ತದೆ.

ಕೆಲ ದಿವಸಗಳ ಹಿಂದೆ ಒಂದು ದಿನ [illegible] ಇಂಚು ಮಳೆ ಬಿದ್ದಿದ್ದಿತು. ಅನಂತರ ಸೆಕೆಯು ಉಲ್ಬಣವೂ ಮಿತಿಮೀರಿ ಹೋಗಿಯದೆ.

ಕೆಲ ದಿನಗಳ ಹಿಂದೆ ಇಲ್ಲಿಗೆ ಚಿತ್ತೈಸಿದ್ದ ಶ್ರೀ ಸಿದ್ಧಸಮಾಜದ ಸೆಕ್ರೆಟರಿಗಳವರಾದ ರಾ| ಪುಟ್ಟಪ್ಪ ಪಿಳ್ಳೆಯವರು ೩ ದಿನಗಳ ತನಕ, ಇಲ್ಲಿಯ ಶ್ರೀ ಮಲ್ಲಿಕಾರ್ಜುನ ದೇವಸ್ಥಾನದ ಎದುರುಗಡೆಯಲ್ಲಿ ತಮ್ಮ ಸಮಾಜದ ಮತ್ತು ಆತ್ಮನಿವೇದನದ ಕುರಿತು ಚೆಲೋ ಭಾಷಣಗಳನ್ನು ಕೊಟ್ಟು ಜನರನ್ನು ಹರ್ಷಗೊಳಿಸಿದರು. ಇವರ ಸಮಾಜವು ದಿನೇದಿನೇ ಅಭಿವೃದ್ಧಿಯಾಗಲೆಂದು ಕೋರುತ್ತೇವೆ.

ಇಲ್ಲಿಯ ಸರಕಾರಿ ನೌಕರರ ಪರಸ್ಪರ ಸಹಾಯಕ ಸಂಘವು ಇತ್ತೀಚೆಗೆ ಚೆಲೋ ರೀತಿಯಲ್ಲಿ ನಡೆಯುತ್ತದೆ. ಇಲ್ಲಿಯ ತಹಸಿಲ್ದಾರರಾದ ಮ| ರಾ| [illegible] ಭವಾನಿಶಂಕರರಾಯರವರು ಈ ಸಂಘದ ಪ್ರೆಸಿಡೆಂಟರಾಗಿಯೂ ಹೆಡ್ ಎಕೌಂಟ ವ ಟ್ರೆಜರರಾದ ಮ| ರಾ| ಬಿ. ಸೋಮಪ್ಪನವರು ಸೆಕ್ರೆಟರಿಗಳಾಗಿಯೂ ಇರುವರು. ಈ ಊರಿನ ಎಲ್ಲಾ ಗವರ್ನಮೆಂಟ ನೌಕರರು ಈ ಸಂಘಕ್ಕೆ ಸೇರುವುದು ಲೇಸು.

ನಮ್ಮ ಜಿಲ್ಲೆಯಲ್ಲಿ ಇರಿಗೇಶನ್ ಸ್ಕೀಮು ಜಾರಿಗೆ ಬರುತ್ತದಾಗಿ ವರ್ತಮಾನವಿರುತ್ತದೆ. ಇದು ಜಾರಿಗೆ ಬಂದರೆ ಜಿಲ್ಲೆಯ ಭೂಮಿಯನ್ನು ಸಾಗುವಳಿ ಮಾಡಲಬಹುದೆಂಬುದು ನಿಸ್ಸಂದೇಹ. ಆದಷ್ಟು ಬೇಗನೇ ಇದು ಆಗಲೆಂದು ಕೋರುತ್ತೇವೆ.

ಶ್ರೀ ಲಕ್ಷ್ಮೀ ಮೋಟಾರ್ ಸರ್ವಿಸಿನವರು ಇನ್ನೊಂದು ಹೊಸ ಬಸ್ಸನ್ನು ತರಿಸಿದ್ದಾರಂತೆ. ಈ ಕಂಪೆನಿಯವರಿಗೂ, ಶಂಕರ ವಿಠ್ಠಲ್ ಸರ್ವಿಸಿನವರಿಗೂ ತುಂಬಾ ಪ್ರಯಾಣಿಕರು ಸಿಕ್ಕುತ್ತಾರೆ. ಕೆಲವು ವೇಳೆ ಟಿಕೇಟುಗಳೇ ಸಿಕ್ಕುವುದಿಲ್ಲ.

ಬೆಳ್ತಂಗಡಿ:—ಬಿಸಿಲಿನ ತಾಪದೊಂದಿಗೆ ಜ್ವರದ ತಾಪವು ಪ್ರಾರಂಭವಾಗಿರುವುದು. ಮಳೆಯು ಒಂದೆರಡು ದಿನಗಳಲ್ಲಿ ಬಂದು ಹೋದಂದಿನಿಂದ ಊರಲ್ಲಿ ಜ್ವರವು ಅಧಿಕವಾಗಿದೆ. ಇಲ್ಲಿಯ ಓಟರರು ಗಡಿಬಿಡಿಯಲ್ಲಿ ಶ್ರೀ ಧರ್ಮಸ್ಥಳ ಹೆಗ್ಗಡೆರಿಗೆ ಓಟುಕೊಡುವುದೊ ಅಥವಾ ರಾ| ಬಾಲಕೃಷ್ಣ ಶೆಟ್ರಿಗೆ ಕೊಡುವುದೋ ಎಂಬ ಸಂಶಯದಲ್ಲಿರುವರು. ಓಟುಗಳು ಬಹುಪಕ್ಷದಲ್ಲಿ ಯಾರಿಗೆ ಕೊಡೋಣಾಗುವವೆಂಬುದನ್ನು ಅಂದಾಜು ಮಾಡುವುದು ಬಹಳ ಕಷ್ಟವಾಗಿದೆ.

ಸಾವಿರಾರು ರೂಪಾಯಿಗಳು ನಮ್ಮತ್ತ ಕಡೆಯ ರಸ್ತೆಗಳಿಗೆ ಸೆಂಕ್ಷನ್ ಆಗಿಯದಂತೆ. ಹೀಗಿದ್ದರೂ ಈ ಸೆಂಕ್ಷನ್ ಆದ ಹಣವನ್ನು ಖರ್ಚು ಮಾಡುವ ಬಗೆಯಾವದೋ ತಿಳಿಯದು. ಮಾರ್ಗದಲ್ಲಿ ಅಲ್ಲಲ್ಲಿ ಧೂಳು ರಾಶಿಯಿಂದ ಅಡಗಿಸಲ್ಪಟ್ಟ ದೊಡ್ಡ ದೊಡ್ಡ ಹೊಂಡಗಳಲ್ಲಿ ಗಾಡಿಚಕ್ರಗಳು ಬಿದ್ದು ಚಕ್ಕಲಿಗಳ ಹಾಗೆ ಹುಡಿಯಾಗಿ ಹೋಗುವಾಗ ಎತ್ತುಗಳ ಹೆಗಲು ಮುರಿದು ರಕ್ತ ಸುರಿಯುತ್ತಿರುವುದು. ಚಡಾವುಗಳಲ್ಲಿ ಇಂಥಾ ಹೊಂಡಗಳಿದ್ದಲ್ಲಿ ಸರಕು ತುಂಬಿದ ಗಾಡಿಗಳನ್ನು ಎತ್ತುಗಳಿಂದ ಎಳೆಯಲಿಕ್ಕಾಗದೆ ಗಾಡಿಗಳು ಅತ್ತಿತ್ತ ಬಿದ್ದುಹೋಗುವಂಥಾದ್ದು ಅಪರೂಪ ನೋಟಗಳಲ್ಲ. ಇಂಥಾ ಅಪಾಯಕರವಾದ ಹೊಂಡಗಳನ್ನು ಈಗಲೆ ಸರಿ ಮಾಡಿಸಕೂಡದೆ? ಜನಜಾನುವಾರುಗಳು ಇವುಗಳಲ್ಲಿ ಬಿದ್ದೇಳುವದರಿಂದ ಬೋರ್ಡಿನವರಿಗೆ ಪ್ರಯೋಜನವೇನು? ಮಳೆ ಬಾರದೆ ರಸ್ತೆ ರಿಪೇರಿ ಕೆಲಸಗಳನ್ನು ಮಾಡಿಸಲಿಕ್ಕಿಲ್ಲವೆಂತ ಬೋರ್ಡಿನವರು ಆಣೆಭಾಷೆಕೊಂಡಿರುವರೊ? ಬೆಳ್ತಂಗಡಿಯಿಂದ ಚಾರ್ಮಾಡಿ ಗೇಟು, ನಂತರ ಮೈಸೂರಿ ಗಡಿವರೆಗಿರುವ ರಸ್ತೆ, ಬೆಳ್ತಂಗಡಿಯಿಂದ ಬಂಟವಾಳದ ವರೆಗೆ ರಸ್ತೆಗಳ ಸ್ಥಿತಿಯು ಏಕಪ್ರಕಾರವಾಗಿದ್ದು ಡಿಸ್ಟ್ರಿಕ್ಟ ಬೋರ್ಡಿನ ಅಡಳಿತೆಯ ಸಮರ್ಥವಾದ ಮೇಲ್ವಿಚಾರಕ್ಕೆ ಸಾಕ್ಷಿಭೂತಗಳಾಗಿವೆ.

ಉಪ್ಪಿನಂಗಡಿ ತಾಲೂಕು ಬೋರ್ಡಿಗೆ ನಮ್ಮ ಫಿರ್ಕಾದಿಂದ ಆದ ಮೆಂಬರರ ಚುನಾವಣೆಯ ಫಲವನ್ನು ನೋಡಿದರೆ ಜಿಲ್ಲೆಯ ಮಲೆನಾಡು ಪ್ರಾಂತ್ಯಗಳಿಗೆ ಇನ್ನು ಸುದಿನಗಳು ಪ್ರಾಪ್ತವಾಗುವ ಸಂಭವವು ತೋರುವುದಿಲ್ಲ. ಪುತ್ತೂರಿನ ವಕೀಲರ ಎದುರಿನಲ್ಲಿ ಈ ಬಡ ಪ್ರಾಂತ್ಯದಿಂದ ಮೇಲಾಡುವವರು ಯಾರು? ತಾಲೂಕು ಬೋರ್ಡಿಗೆ ಉಮೇದ್ವಾರರಾಗಿ ಧೈರ್ಯದಿಂದ ನಿಂತರೂ ಆರಿಸುವವರಾರು? ಈ ತಾಲೂಕು ಬೋರ್ಡಿಗೆ ಡಿಸ್ಟ್ರಿಕ್ಟ ಬೋರ್ಡು ಪ್ರೆಸಿಡೆಂಟರು ಮಾಡಿದ ನೇಮಕವನ್ನು ನೋಡಿದರೆ ಸಂತಾಪಕ್ಕೆ ಕಾರಣವಾಗುತ್ತದೆ. ಇಲ್ಲಿಯ ರಸ್ತೆಗಳ ಸ್ಥಿತಿ, ಆರೋಗ್ಯಸ್ಥಿತಿ, ವಿದ್ಯಾಸ್ಥಿತಿ ಇವುಗಳ ಕಡೆಗೆ ಸಮರ್ಪಕವಾದ ಲಕ್ಷ್ಯಕೊಡತಕ್ಕವರಿಲ್ಲ. ನಿಡಿಗಲ್ಲು ಸೇತುವೆ ಮುರಿದುಹೋಯಿತು. ಚಾರ್ಮಾಡಿ ಘಟ್ಟದ ಮಾರ್ಗವು ಕುಸಿದು ಬಿತ್ತು. ಮಾರ್ಗಗಳು ಅಲ್ಲಲ್ಲಿ ಚೂರಾಗಿ ಹೋದವು. ಗಾಡಿಗಳಿಗಾಗಲಿ ಜನರಿಗಾಗಲಿ ಅತ್ತಿತ್ತ ಹೋಗಲಿಕ್ಕಾಗದ ವಿಪರೀತ ಸಂಕಷ್ಟಗಳು ಬಂದೊದಗಿದವು. ಕೇಳುವವರಾರು? ನೋಡುವವರಾರು? ಗ್ರಹಚಾರ ಹಿಡಿದ ಓವರ್‌ಸೀಯರರ ಹೊರತು ಈ ಪ್ರಾಂತ್ಯಗಳಿಗೆ ಮೆಂಬರರ ಪೈಕಿ ಯಾರು ಬಂದರು? ಬೋರ್ಡು ಸಭೆಗಳಲ್ಲಿ ಏನು ಮಾತಾಡಿದರು? ರಸ್ತೆಗಳ ಸ್ಥಿತಿಯು ಇನ್ನೂ ಹಾಗೆಯೇ ಇದೆ. ನಿಡಿಗಲ್ಲು ಸಂಕವು ಇನ್ನೂ ದುರುಸ್ಥಿಯಲ್ಲಿದೆ. ಇಂಥಾ ಸಂದರ್ಭಗಳಲ್ಲಿ ಡಿಸ್ಟ್ರಿಕ್ಟ ಬೋರ್ಡು ಪ್ರೆಸಿಡೆಂಟರು ಮೆಂಬರರ ನೇಮಿಸೋಣದ ಬಗ್ಗೆ ಪುತ್ತೂರು ಪ್ರಾಂತ್ಯದಲ್ಲಿಯೇ ಸುಲಿದಾಡುತ್ತಿದ್ದಾರೆ. ಏನು ಗ್ರಹಚಾರ? ಕಾಗದದಲ್ಲಿ ಈ ರಸ್ತೆಗೆ ಹಣ ಜಾಸ್ತಿ, ಕಾರ್ಯದಲ್ಲಿ ಏನೂ ಇಲ್ಲ. ಈ ವರ್ಷದ ಮಳೆಗಾಲದ ಹಾವಳಿಯಲ್ಲಿ ಈ ದುಡ್ಡಿನ ರಾಶಿ ಬರೆದಿಟ್ಟ ಕಾಗದವು ಹರಿದುಹೋಗಿ ಇನ್ನೊಬ್ಬ ಅಸಿಸ್ಟಂಟ ಇಂಜಿನಿಯರ್ ಅಥವಾ ದೊಡ್ಡ ಮುಂಡಾಸಿನ ಬೋರ್ಡು ಮೆಂಬರರ ಮಕ್ಕಳದ್ದಲ್ಲಿ ಇನ್ನೊಂದು ಹ್ಯಾಸ್ಕೂಲ್ ಸ್ಥಾಪನೆಯಲ್ಲಿ ಮುಳುಗಿಹೋಗುವದೂ ಎಂಬುದನ್ನು ಈಗ ತಿಳಿಯಲು ದೂರದೃಷ್ಟಿ ಸಾಲದು. ಸಜ್ಜನರಾದ ಒಬ್ಬ ಡೆಪ್ಯುಟಿ ತಹಸೀಲ್ದಾರರು ಅವರಿಗೆ ತಮ್ಮಂಥಾ ನಮ್ಮಂಥಾ ಬಡಜನರು ಇದ್ದುಕೊಂಡು ಹ್ಯಾಗೂ ಬೆಳ್ತಂಗಡಿಯಲ್ಲಿ ಸುಖಸಂತೋಷಗಳಿಂದ ಬಾಳಿಕೊಂಡಿದ್ದೇವೆ.

ಮುಲ್ಕಿ:—ಶ್ರೀ ವೆಂಕಟರಮಣ ದೇವಸ್ಥಾನದ ರಥೋತ್ಸವವು ಕಳೆದ ರಾಮನವಮಿ ದಿನ ಬಹಳ ಸಾಂಗವಾಗಿ ನಡೆಯಿತು. ದೇವಸ್ಥಾನದಲ್ಲಿ ಬಂದಂಥ ಹಣ ಕಾಣಿಕೆಗಳು ವಿಶೇಷವಾಗಿದ್ದವು. ರಥೋತ್ಸವಕ್ಕೆ ಸಂಬಂಧಪಟ್ಟ ಉತ್ಸವ ಸಮಾರಾಧನೆಗಳು ಕ್ಷೇತ್ರಶಾಲೆಗಳಲ್ಲಿ ನಡೆದದ್ದರಿಂದ ವಿಶೇಷ ಗಲಭೆಗೆ ಇಂಬಿರಲಿಲ್ಲ. ಮುಲ್ಕಿ ದೇವಸ್ಥಾನದಲ್ಲಿ ಒಂದು ವಿಶೇಷ ಪದ್ಧತಿ ಇದೆ. ಪರಸ್ಥಳದಿಂದ ಹೋದಂಥಾ ಜನರನ್ನು ದೇವಸ್ಥಾನಕ್ಕೆ ಬರುವ ದೇವರೇ ಕೇಳಿಕೊಳ್ಳಬೇಕಲ್ಲದೆ, ಮತ್ಯಾರೂ ಕೇಳುವವರಿಲ್ಲ. ಯಾವ ಅನುಕೂಲತೆಗಳನ್ನಾದರೂ ಒದಗಿಸಿಕೊಳ್ಳುವುದು ಕಷ್ಟ. ಈ [illegible] ಸಾಧಾರಣವಾಗಿ ಎಲ್ಲಾ ಹಿಂದು ದೇವಸ್ಥಾನಗಳಲ್ಲಿರುವುದರಿಂದ ಮುಲ್ಕಿಯಲ್ಲಿ ಇದು ವಿಶೇಷವೆಂತ ಹೇಳಬಹುದೋ?

ಟೌನ್ ಬೇಂಕಿನ ಕೆಲಸವು ಯಥಾರೀತಿ ಯೋಗ್ಯಸ್ಥಾನದಲ್ಲಿ ನಡೆಯುವದು. ನಮ್ಮ ಊರು ಬುದ್ಧಿವಂತರ ಊರೆಂತ ಹೇಳುತ್ತಾರೆ. ಇತರ ಕೆಲವು ಪಂಚಾಯತರ ಮೀಟಿಂಗುಗಳಲ್ಲಿ ಪಂಚಾಯತರು ಸ್ವಲ್ಪ ಸೇರುವದಾದರೆ ನಮ್ಮಲ್ಲಿ ಪ್ರೊಸಿಡಿಂಗ್ಸು ಪುಸ್ತಕವೆ ಅತ್ತಿತ್ತ ಹೋಗಿ ಪಂಚಾಯತರ ಕ್ರಮವನ್ನು ಉಳಿಸುತ್ತದೆ. ಇದು ಒಂದು ಬುದ್ಧಿವಂತಿಕೆಯ ವಿಶೇಷ ಲಕ್ಷಣ. ಈ ವಿಚಾರವನ್ನು ಪರಸ್ಪರ ಸಹಾಯಕ ಸಂಘದವರು ಸಂಪೂರ್ಣವಾಗಿ ಅನುಸರಿಸುವ ಬಗ್ಗೆ ತಮ್ಮ ಉಪನಿಬಂಧನೆಗಳಲ್ಲಿ ಇದನ್ನು ಶೀಘ್ರದಲ್ಲಿಯೆ ಕೂಡಿಸಿಕೊಳ್ಳುವದು ಅಗತ್ಯವಾಗಿದೆ.

ಪೋಲಿಸ ಇಲಾಖೆಯ ಕೆಲಸವು ಇಲ್ಲಿ ಬಹಳ ಚೆಲೋ ರೀತಿಯಲ್ಲಿ ನಡೆಯುತ್ತಿರುವದು. ಅತ್ತಿತ್ತ ಹೋಗುತ್ತಿರುವ ಬಸ್ಸುಗಳ ಸಂಖ್ಯೆ, ಸಮಯ ಎಷ್ಟು ಸರಿ ಹೋಗುತ್ತಿವೆ ಎಂಬುದನ್ನು ಬಹಳ ಎಚ್ಚರಿಕೆಯಿಂದ ನೋಡುತಿದ್ದಾರೆ. ಎಳ್ಳಷ್ಟಾದರೂ ಈ ಕೆಲಸದಲ್ಲಿ ವ್ಯತ್ಯಾಸ ಬರುವದಿಲ್ಲ. ಮುಖ್ಯವ ಕೆಲಸಕ್ಕೆ ಅತಿ ಸಮೀಪವಾದ ಈ ಪೇಟೆಯಲ್ಲಿ ಅಸ್ಪದವಿಲ್ಲ. ಚಾರ್ಮಾಡಿ ಪೋಲಿಸು ಸ್ಟೇಶನನ್ನು ತೆಗೆಯುವ ಬದಲಾಗಿ ಮುಲ್ಕಿ ಸ್ಟೇಶನನ್ನು ಅಲ್ಲಿಗೆ ವರ್ಗಾಯಿಸುವದು ಒಳ್ಳೇದು. ಅದರೆ ಕೂಡಲೆ ವರ್ಗಾಯಿಸಕೂಡದು. ಚಾರ್ಮಾಡಿಯಲ್ಲಿ ಮಳೆ ಬಂದು ಸ್ವಲ್ಪ ಜ್ವರ ಕಡಮೆಯಾಗಿ ಮುಲ್ಕಿಯಲ್ಲಿಯ ಮಾವಿನ ಕಾಯಿಗಳು ಕೊಯಿಲು ಮುಗಿದ ನಂತರ ಅಂದರೆ ಅಲ್ಲಿಯ ಜ್ವರವು ನಿಲ್ಲುವ ಕಾಲವೂ ಇಲ್ಲಿಯ ಮಾವಿನ ಕೊಯಿಲು ಮುಗಿಯುವ ಕಾಲವೂ ಒಂದೇ ಆದ್ದರಿಂದ ನಂತರ ವರ್ಗಾವರ್ಗಿಯನ್ನು ಯೋಚಿಸಿದರೆ ಎಲ್ಲರಿಗೂ ಸಂತೋಷ ಉಂಟಾದೀತು.

ಮಂಜೇಶ್ವರ:—ಇಲ್ಲಿ [illegible] ಗುಡಿಯ ಹತ್ತಿರವಿರುವ ಬಂಡೆಯ ಕಲ್ಲಿನ ಮೇಲೆ ಒಂದು ಕೋಟೆಯ ಕುರುಹುಗಳು ಇವೆ. ಈ ಬಂಡೆಯನ್ನು ಒಡೆದು ಸರ್ವೇ ಕಲ್ಲುಗಳನ್ನು ತಯಾರಿಸುತ್ತಾರೆ. ಚರಿತ್ರೆಗೆ ಸಂಬಂಧಪಟ್ಟ ಈ ಕೋಟೆಯ ಕುರುಹುಗಳನ್ನು ನಾಶಮಾಡದಂತೆ ಬೇರೆ ಎಲ್ಲಿಂದಲಾದರೂ ಕಲ್ಲುಗಳನ್ನು ತೆಗೆದರೆ ಒಳ್ಳೇದಿತ್ತು.

ಇಲ್ಲಿ ಕಳೆದ ವಾರ ಎರಡು ಪ್ಲೇಗು ಮರಣಗಳಾದವು. ಒಬ್ಬನು ಮುದುಕನು. ಇನ್ನೊಂದು ಮಗು. ಇಬ್ಬರೂ ಗಾಣಿಗ ಜಾತಿಯವರು. ಮಂಗಳೂರಲ್ಲಿ ತಮ್ಮ ನೆಂಟರ ಮನೆಗೆ ಹೋದವರು ಅಲ್ಲಿ ರೋಗದ ಸೋಂಕು ತಟ್ಟಿ ಇಲ್ಲಿಗೆ ಬಂದರು. ಜಿಲ್ಲಾ ಹೆಲ್ತ ಆಫೀಸರರು ಇಲ್ಲಿಗೆ ಬಂದು ಇದರ ಸೋಂಕು ಮತ್ತಾರಿಗೂ ತಟ್ಟದಂತೆ ತಕ್ಕ ವ್ಯವಸ್ಥೆಯನ್ನು ಮಾಡಿಹೋಗಿದ್ದಾರೆ.

ಇಲ್ಲಿ ಸಣ್ಣ ಹುಡುಗರ ದಶಾವತಾರದ ಮೇಳದವರ ಆಟಗಳು ಆಗುತ್ತ ಇವೆ. ಭಾಗವತರು ಒಬ್ಬ ಶಾಲಾ ಉಪಾಧ್ಯಾಯರು. ವೇಷಧಾರಿ ಹುಡುಗರೆಲ್ಲರೂ ಚೆನ್ನಾಗಿ ಗೊತ್ತಿದ್ದವರು. ಪೋಷಾಕು ಕಿರೀಟ ಇತ್ಯಾದಿಗಳು ಬಹಳ ಅಂದವಾಗಿರುವವು.

ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಮೇಲ್ವಿಚಾರದ ಮಂಡಲಿ, ಲಿಮಿಟೆಡ್.

ಪ್ರಕಟಣೆ.

ಸಹಕಾರಿ ವಿಷಯಗಳ ಮೇಲಿನ ಉಪನ್ಯಾಸಗಳಿಗೆ ಬಹುಮಾನಗಳು.

ಸಹಕಾರಿ ವಿಷಯಗಳ ಮೇಲೆ ಉಪನ್ಯಾಸಗಳನ್ನು ಬರೆಸಿ ಅವುಗಳೊಳಗೆ ಅತ್ಯುತ್ತಮವಾದವುಗಳೆಂದು ತಂದುಬಂದವುಗಳನ್ನು ಬರೆದವರಿಗೆ ಬಹುಮಾನಗಳನ್ನು ಕೊಡುವ ವಿಚಾರವನ್ನು, ಕೆಲವು ವರ್ಷಗಳ ಹಿಂದೆ ಈ ಜಿಲ್ಲೆಯ ಸೆಂಟ್ರಲ್ ಬೇಂಕಿನವರು ಪ್ರಾರಂಭಿಸಿದ್ದರು. ಆದರೆ, ಉಪನ್ಯಾಸಗಳನ್ನು ಬರೆದು ಕಳುಹಿಸುವುದಕ್ಕೆ ಕೂಡ ಯಾರೂ ವಿಶೇಷ ಉತ್ಸಾಹವನ್ನು ತೋರಿಸದುದರಿಂದ, ಕೊನೆಗೆ ವಿಚಾರವನ್ನು ನಿಲ್ಲಿಸಿಯೇ ಬಿಡಬೇಕಾಯಿತು. ಉತ್ಸಾಹಹೀನತೆಗೆ ಕಾರಣಗಳೇನಿದ್ದುವೆಂದು ನಿರ್ಣಯಿಸುವುದು ಸುಲಭವಲ್ಲ. ಆದರೂ ಉಪನ್ಯಾಸಗಳನ್ನು ಬರೆದುಕಳುಹಿಸತಕ್ಕವರು ಶಾಲಾ ವಿದ್ಯಾರ್ಥಿಗಳು ಅಥವಾ ಸಹಕಾರಿ ಸಂಘಗಳ ಮೆಂಬರರೇ ಆಗಿರಬೇಕೆಂದು ವಿಧಿಸಿದ್ದ ಶರ್ತಿನ ದೆಸೆಯಿಂದ, ಬರೆಯಲಿಕ್ಕೆ ಇಷ್ಟವಿದ್ದವರಿಗೆ ಕೂಡ ಸ್ವಲ್ಪಮಟ್ಟಿಗೆ ಅಡ್ಡಿಯಾಗಿರಬಹುದೆಂದು ಹೇಳಬಹುದು. ಬಹುಮಾನಗಳ ಹಣವೂ ಅಷ್ಟೊಂದು ಹೆಚ್ಚೆಂದು ಹೇಳಕೂಡುತ್ತಿದ್ದಿಲ್ಲ; ಮಾತ್ರವಲ್ಲ, ಉಪನ್ಯಾಸಗಳನ್ನು ಕನ್ನಡ ಭಾಷೆಯಲ್ಲೇ ಬರೆಯಬೇಕೆಂದಿದ್ದುದರಿಂದ ನಮ್ಮಲ್ಲಿಯ ಬರಹಗಾರರಿಗೆ ಹೆಚ್ಚಾಗಿ ಕನ್ನಡದಲ್ಲಿರುವ ಕಲಿಕೆಗಿಂತ ಇಂಗ್ಲಿಷಿನ ಪರಿಶ್ರಮವೇ ವಿಶೇಷವಾಗಿರುವ ಸಂಪ್ರದಾಯದ ದೆಸೆಯಿಂದ ಸಹ ಬುದ್ಧಿಶಕ್ತಿಯುಳ್ಳವರಿಗೆ ಭಾಷಾಸಾಮರ್ಥ್ಯವಿಲ್ಲದೆಯೂ ತಡೆಯಾಗಿರಬಹುದು. ಉಪನ್ಯಾಸಗಳನ್ನು ಬರೆಸುವುದರಿಂದ ಯಾವುದೊಂದು ವಿಷಯವು ಸಂಬಂಧಪಟ್ಟವರಿಗೆ ಮಂದಟ್ಟಾಗಲಿಕ್ಕೆ ಅವಕಾಶವಿರುವುದರಿಂದಲೂ, ಸಹಕಾರತತ್ವಗಳು ಜನರಿಗೆ ಮಂದಟ್ಟಾಗುವುದು ಸಹಕಾರದ ಆಚಾರ-ವಿಚಾರ-ಪ್ರಚಾರ ಕಾರ್ಯಗಳಿಗೆ ಅತ್ಯಂತ ಸಹಾಯಕವಾಗಿರುವುದರಿಂದಲೂ, ಆಚಾರ-ವಿಚಾರ-ಪ್ರಚಾರ ಕಾರ್ಯಗಳು ಈ ಮಂಡಲದ ಕರ್ತವ್ಯಗಳಲ್ಲಿ ಬಹಳ ಪ್ರಾಮುಖ್ಯತೆಯನ್ನು ಹೊಂದಿರತಕ್ಕವುಗಳಾಗಿರುವುದರಿಂದಲೂ, ಸ್ಪರ್ಧೆಗಳ ವಿಚಾರವನ್ನು ಪುನಃ ಪ್ರಾರಂಭಿಸಬೇಕೆಂದು ನಿರ್ಣಯಿಸಲಾಗಿದೆ, ಆ ವಿಚಾರದಿಂದ ಅಗತ್ಯವಾದ ಕ್ರಮಗಳನ್ನು ಇದರಡಿ ಪ್ರಕಟಿಸಿಯದೆ. ಪ್ರಕೃತದ ವಿಚಾರದಲ್ಲಿ ಬರೆಯುವವರು ಶಾಲಾವಿದ್ಯಾರ್ಥಿಗಳಾಗಬೇಕೆಂಬ ನಿಯಮವಾಗಲಿ, ಸಹಕಾರಿ ಸಂಘಗಳ ಮೆಂಬರರಾಗಿರಬೇಕೆಂಬ ನಿರ್ಬಂಧವಾಗಲಿ, ಇಂಗ್ಲಿಷಿನಲ್ಲಿ ಬರೆಯಕೂಡದೆಂಬ ನಿಷೇಧವಾಗಲಿ ಯಾವುದೊಂದೂ ಇಲ್ಲದೆ, ಬಹುಮಾನಗಳ ಮೊಬಲಗನ್ನು ತಕ್ಕಮಟ್ಟಿಗೆ ಏರಿಸಿಟ್ಟಿರುವುದರಿಂದ, ಇನ್ನಾದರೂ ಅಭಾವವಿರಲಾರದೆಂದು ತೋರಿಕೆಯದೆ.

— ಕ್ರಮಗಳು —

೧ ಉಪನ್ಯಾಸಗಳನ್ನು ಅಡಿಯಲ್ಲಿ ಕೊಡಲ್ಪಟ್ಟಿರುವ ವಿಷಯಗಳ ಮೇಲೆ ಬರೆದುಕಳುಹಿಸಬೇಕು.

೨ ಉಪನ್ಯಾಸಗಳನ್ನು ಕನ್ನಡ ಭಾಷೆಯಲ್ಲಿಯೂ ಬರೆಯಬಹುದು ಇಂಗ್ಲಿಷ್ ಭಾಷೆಯಲ್ಲಿಯೂ ಬರೆಯಬಹುದು.

೩ ಉಪನ್ಯಾಸಗಳನ್ನು ಸಂವಾದ, ನಾಟಕ, ಕಥೆ, ಪದ್ಯ, ಪ್ರಬಂಧ ಮೊದಲಾದ ಯಾವ ರೂಪವನ್ನಾದರೂ ಬರೆಯಬಹುದು.

([illegible])

ಅನುಕ್ರಮಣಿಕೆ.

ಅಗ್ರಲೇಖ ಪುಟಗಳು.
ಮತದಾರರ ಕರ್ತವ್ಯ ೬
ಸ್ಫುಟವಿಚಾರಗಳು— ೭
೧. ಹಿಂದೂ ಮಹಾಸಭೆಯ ಅಧಿವೇಶನವು, ೨-೩ ಶ್ರೀಯುತ ದೇಶಬಂಧು ದಾಸರವರ ಮೆನಿಫೆಸ್ಟೊ, ೪. ಮದ್ರಾಸ ಗವರ್ನರರ ಸರ್ಟಿಫಿಕೇಶನ್, ೫ ಮುಸಲ್ಮಾನ ಸಂಸ್ಥಾನದೊಳಗಿನ ನ್ಯಾಯ
ಮಂಗಳೂರು
ವರ್ತಮಾನಸಂಗ್ರಹಗಳು—
ವಿದೇಶ-ಒಳದೇಶ ವರ್ತಮಾನ ೮
ದಕ್ಷಿಣ ಕನ್ನಡ – ಕಾಸರಗೋಡು, ಬೆಳ್ತಂಗಡಿ, ಮುಲ್ಕಿ, ಮಂಜೇಶ್ವರ „
ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಮೇಲ್ವಿಚಾರದ ಮಂಡಲಿ ಲಿಮಿಟೆಡ್ „
ಪತ್ರವ್ಯವಹಾರ, ೧, ೨, ೩, ೪ ೯

ಸ್ವದೇಶಾಭಿಮಾನಿ.

ಶಕ ೧೮೪೭ ಚೈತ್ರ ಬ| ೧ಯು ಶುಕ್ರವಾರ.

ಮತದಾರರ ಕರ್ತವ್ಯ.

ನಮ್ಮ ಸಂಸ್ಥಾನದ ಕಾಯಿದೆ ಕೌನ್ಸಿಲಿಗೆ ಈ ಜಿಲ್ಲೆಯಿಂದ ಬ್ರಾಹ್ಮಣೇತರ ಸಭಾಸದತ್ವದ ಸ್ಥಾನವು ಸದ್ಯಃ ಖಾಲಿಯಾಗಿದ್ದು ಆ ಸ್ಥಾನಕ್ಕೆ ಇಬ್ಬರು ಮೂವರು ಹೇಗೆ ಉಮೇದುವಾರರಾಗಿ ನಿಂತಿದ್ದಾರೆ, ಆಯಾ ಉಮೇದುವಾರರ ಪ್ರಯತ್ನಗಳು ಹೇಗೆ ನಡೆದಿವೆ, ಈ ವಿಷಯಗಳು ಮತದಾರರಿಗೆ ನವೀನವಲ್ಲ. ಈ ಸಂದರ್ಭದಲ್ಲಿ ಮತದಾರರು ಯಾರನ್ನು ಚುನಾಯಿಸಿ ಕೊಡುವದು ಉಚಿತವಾಗಿದೆ ಎಂಬುದನ್ನು ಈ ಕುರಿತು ಈ ಹೊತ್ತು ಒಂದೆರಡು ಮಾತುಗಳನ್ನು ಹೇಳಲಿದ್ದೇವೆ.

ನಮ್ಮ ಜಿಲ್ಲೆಯ ರಾಜಕೀಯ ಪರಿಸ್ಥಿತಿಯನ್ನು ಪರಿಶೀಲಿಸಿದರೆ; ಕೌನ್ಸಿಲಿನ ಮಟ್ಟಿಗೆ ಅಷ್ಟೊಂದು ಸಮಾಧಾನಕರ ವಿದೆ ಎಂದು ಹೇಳಲಾಗದು. ಈ ಜಿಲ್ಲೆಯಿಂದ ಸಾಮಾನ್ಯ ಮತದಾರರ ಪರವಾಗಿಯೂ ವಿಶಿಷ್ಟ ಜಾತಿಗಳ ಪರವಾಗಿಯೂ ಎಂದು ೩—೪ ಪ್ರತಿನಿಧಿಗಳಿದ್ದಾರೆ. ಆದರೆ ಅವರಲ್ಲಿ ಒಬ್ಬನೂ ಸ್ವರಾಜ್ಯ ಪಕ್ಷದವನಿಲ್ಲ! ನ್ಯಾಯವಾಗಿ ಹೇಳುವದಾದರೆ, ಈ ತಪ್ಪು ಉಮೇದುವಾರರದೂ ಅಲ್ಲ, ಚುನಾಯಿಸಿ ಬಂದ ಪ್ರತಿನಿಧಿಗಳದೂ ಅಲ್ಲ, ಆದರೆ ಮತದಾರರೆ ಈ ದೋಷಕ್ಕೆ ಪಾತ್ರರು. ವಿಶಿಷ್ಟ ಮತಗಳನ್ನು ಕಟ್ಟಿಕೊಂಡವರು ಉಮೇದುವಾರರಾಗಿ ನಿಂತಾಗ ಮತದಾರರು ಅಂಥವರಿಗೆ ಮತಕೊಡದೆ ತಮಗೆ ಬೇಕಾದವರನ್ನೆ ಉಮೇದುವಾರರನ್ನಾಗಿ ನಿಲ್ಲಿಸಿ ಚುನಾಯಿಸಿ ಕಳುಹಿಸಬೇಕು. ನಿಂತವನಿಗೆ ಮತಕೊಡುವದಲ್ಲ, ಬೇಕಾದವನನ್ನು ನಿಲ್ಲಿಸಿ ಚುನಾಯಿಸಿ ಕಳುಹಿಸುವದೆ ಮತದಾರತನಕ್ಕೆ ಉಚಿತವು. ಸುಧಾರಿಸಿದ ಜನಾಂಗಗಳಲ್ಲಿ ಇದೆ ಕ್ರಮವಿದೆ. ಅನೇಕ ರಾಜಕೀಯ ತಂಡದವರು ತಮ್ಮ ತಮ್ಮ ಉಮೇದುವಾರರನ್ನು ನಿಲ್ಲಿಸುವ ವಾಡಿಕೆ ಇತರ ಜನಾಂಗಗಳಲ್ಲಿ ಇದೆಯಾದರೂ, ಲೋಕಸತ್ತಾವಾದವೆ ಕಾಲಕ್ರಮೇಣ ಉತ್ತರೋತ್ತರ ವಿಶೇಷ ಪ್ರಭಾವಶಾಲಿಯಾಗುತ್ತ ಬರುತ್ತದಾದ ಕಾರಣ ವಿಲಾಯತಿಯಂಥ ದೇಶದಲ್ಲಿ ಲೋಕಸತ್ತಾವಾದಿಗಳೆ ಚುನಾಯಿಸಿಬರುತ್ತಾರೆ. ಆದರೆ ಅಲ್ಲಿಯೂ ಕನ್‌ಸರವೇಟಿವ್ ಪಕ್ಷದ ಪ್ರಚಂಡ ವ್ಯಕ್ತಿಗಳು ಚುನಾಯಿಸಿ ಬರುವದಿಲ್ಲವೆ, ಇವರ ಮತಾಧಿಕ್ಯವೆ ಅನೇಕ ಸಾರೆ ಇರುವದಿಲ್ಲವೆ ಎಂದು ಒಂದು ಅಡ್ಡ ಸವಾಲನ್ನು ಇಲ್ಲಿ ಕೇಳಬಹುದು. ಈ ಸವಾಲಿಗೆ ಅಸ್ತಿಪಕ್ಷದಿಂದಲೆ ನಾವಾದರೂ ಉತ್ತರವನ್ನು ಕೊಡುತ್ತೇವೆ. ಆದರೆ ಆ ಅನುಕಾರಣವು ಇಲ್ಲಿಯ ಕೌನ್ಸಿಲಿಗೆ ಲಗಾವಾಗುವುದಿಲ್ಲ. ಅಲ್ಲಿಯ ಪಾರ್ಲಿಮೆಂಟು ಸರ್ವಸತ್ತಾಧಾರಿಯು. ಇಲ್ಲಿಯ ಕೌನ್ಸಿಲುಗಳು ಲೋಕಮತಕ್ಕೆ ಇನ್ನೂ ಜವಾಬದಾರವಾಗಲಿಲ್ಲ. ಇವು ಪರಾವಲಂಬಿಗಳು. ವಿಲಾತಿಯಲ್ಲಿ ಒಂದು ವೇಳೆ ಎಲ್ಲರೂ ಕನ್‌ಸರವೇಟಿವರೆ ಬಂದು ಅವರ ತಂತ್ರವು ಪ್ರಾರಂಭವಾಗಿ ಅದರಿಂದ ದೇಶದ ಮೇಲೆ ಅನರ್ಥವುಂಟಾಗುವ ಸಂದರ್ಭವು ಬಂದರೆ, ಅಲ್ಲಿಯ ಜನತೆಯು ಇಂಥವರ ಕಾರಭಾರವನ್ನು ಕೂಡಲೆ ನಿಲ್ಲಿಸಿ ಪುನಃ ಚುನಾವಣೆಯಿಂದ ಸ್ವಮತದ ಪ್ರತಿನಿಧಿಗಳನ್ನು ಅಧಿಕಾರಾರೂಢರನ್ನಾಗಿ ಮಾಡಬಲ್ಲುದು. ಇಂಥ ಪ್ರಸಂಗಗಳು ಮೊದಲು ಎಷ್ಟೊ ಸಾರೆ ನಡೆದಿದೆ. ಇಲ್ಲಿ ಯಾದರೊ ಸರಕಾರವೆ ಸತ್ತಾಧಾರಿಯಾಗಿರುವುದರಿಂದ ಆ ಸರಕಾರದ ಕಂಕುಳಲ್ಲಿ ಸೇರತಕ್ಕವರು ಕೌನ್ಸಿಲಿಗೆ ಬಂದರೆ ಸರಕಾರದ ಕೈಯೊಳಗಿನ ಅಧಿಕಾರವು ಜನತೆಯ ಕೈಗೆ ಯಾವಾಗ ಬಂದೀತು? ಅದ್ದರಿಂದ ಲೋಕಸತ್ತಾವಾದಿಗಳನ್ನೇ ಕೌನ್ಸಿಲಿಗೆ ಕಳುಹಿಸಲು ಮತದಾರರು ನಿಶ್ಚಯಿಸಬೇಕು.

ನಮ್ಮ ದೇಶದ ರಾಜಕಾರಣದಲ್ಲಿ ಕೇವಲ ವ್ಯಕ್ತಿಸ್ವಾರ್ಥವನ್ನು ಬಯಸುವವರನ್ನು ಬಿಟ್ಟರೆ ಮೂರು ನಾಲ್ಕು ಭೇದಗಳಿವೆ. ಸರಕಾರದ ದೋಷಕ್ಕೆ ಸ್ವಲ್ಪ ಮಟ್ಟಿಗೂ ಪಾತ್ರರಾಗದೆ ದೇಶಸೇವೆ ಮಾಡುವವರು, ಸರಕಾರಕ್ಕೆ ಸ್ವಲ್ಪ ರೋಷ ಬಂದರೂ ಅಡ್ಡಿ ಇಲ್ಲ, ದೇಶಕ್ಕಾಗಿ ಹಲ ಕೆಲವು ಸುಧಾರಣೆಗಳನ್ನು ಕೇಳುವವರು, ಸರಕಾರದ ರೋಷವನ್ನು ಲಕ್ಷಿಸದೆ, ಸ್ವದೇಹದ ಯಾತನೆಯಿಂದ ಸಹ, ದೇಶಹಿತವನ್ನು ಸಾಧಿಸುವವರು, ದೇಶಹಿತಕ್ಕಿಂತಲೂ ಸ್ವವರ್ಗದ ಹಿತವೆ ಪ್ರಧಾನವೆಂದು ತಿಳಿದು ಯತ್ನಿಸುವವರು ಈ ಮೇರೆಗೆ ರಾಜಕೀಯ ಕಾರ್ಯಗಳನ್ನು ಮಾಡುವವರಲ್ಲಿ ವರ್ಗಗಳಿವೆ. ಇವುಗಳಲ್ಲಿ ಸ್ವರಾಜ್ಯಪಕ್ಷವು ಸ್ವಾರ್ಥತ್ಯಾಗದ ಮತ್ತು ದೇಶಹಿತದ ದೃಷ್ಟಿಯಿಂದ ಮೇಲಿನ ತರಗತಿಯದು. ಆ ಪಕ್ಷಕ್ಕೆ ಸೇರಿದ ಗೃಹಸ್ಥರು ಚುನಾಯಿಸಿ ಬರುವದು ಅತ್ಯಂತ ಹಿತಾವಹವಾಗಿದೆ. ಸರಕಾರದ ಕೈಯಲ್ಲಿಯ ಗೊಂಬೆಗಳಾದ ಹೌದುಬಸವಣ್ಣರು ಕೌನ್ಸಿಲಿನ ಕುರ್ಚಿಗಳನ್ನಾಕ್ರಮಿಸುವದರಿಂದ ಸರಕಾರದ ನಿರಂಕುಶ ಪ್ರವರ್ತನೆಗೆನೆ ಇನ್ನಷ್ಟು ಹೆಚ್ಚಿನ ಸಹಾಯವುಂಟಾಗುತ್ತದಲ್ಲದೆ ಪ್ರಜಾಹಿತದ ಹೆಜ್ಜೆಯು ಹಿಂದಕ್ಕೆ ಬೀಳುತ್ತದೆ. ಈ ಅನುಭವವು ಅನ್ವಯ ವ್ಯತಿರೇಕದಿಂದ ಸ್ಥಾಪಿತವಾಗಿದೆ. ಎಂದ ಮೇಲೆ ಸ್ವರಾಜ್ಯಪಕ್ಷದವರೆ ಕೌನ್ಸಿಲುಗಳನ್ನು ಆಕ್ರಮಿಸುವದು ಯೋಗ್ಯವೆಂದು ಯಾವ ವಿವೇಕಿಯು ಹೇಳಲಿಕ್ಕಿಲ್ಲ?

ಉಮೇದುವಾರನು ಮೊದಲೊಂದು ಮತದವನಾಗಿದ್ದು ಮತ್ತೆ ಮತಾಂತರ ಹೊಂದಿದರೆ ಅವನನ್ನು ನಂಬುವದು ಹೇಗೆ ಎಂಬದೊಂದು ಆಕ್ಷೇಪವು ಬರುವದು. ಈ ಆಕ್ಷೇಪವು ನಿಜವಾಗಿದೆ. ಆದರೂ ಮತಾಂತರದಲ್ಲಿ ಎರಡು ನಮೂನೆಗಳಿವೆ. ಚುನಾಯಿಸಿ ಬರುವ ತನಕ ಲೋಕಪಕ್ಷದ ಪ್ರತಿನಿಧಿಯಾಗಿ, ಕೌನ್ಸಿಲಿನಲ್ಲಿ ಮತಕೊಡುವಾಗ ಸರಕಾರದ ಪ್ರತಿನಿಧಿಯಾಗುವದೂ ಒಂದು ಬದಲಾವಣೆ. ಪ್ರಥಮತಃ ಕನ್‌ಸರವೇಟಿವ್ ಮತಗಳನ್ನು ಅಥವಾ ಏಕ ದೇಶೀಯ ಮತಗಳನ್ನು ಕಟ್ಟಿಕೊಂಡು ಇಲ್ಲವೆ ಸಂಕುಚಿತ ದೃಷ್ಟಿಯನ್ನು ಆರಾಧಿಸಿ ಕೊನೆಕೊನೆಗೆ ಲೋಕಸತ್ತಾವಾದದ ಕೋಟೆಯಲ್ಲಿ ಬಂದು ಸೇರುವವರದೂ ಒಂದು ಬಗೆಯ ಮತಾಂತರ. ಆದರೆ ಈ ಎರಡು ತರದ ಮತಾಂತರಗಳಲ್ಲಿ ಲೋಕಹಿತದ ದೃಷ್ಟಿಯಿಂದ ಎರಡನೆಯ ನಮೂನೆಯು ಸಹ್ಯವಾದ್ದು ಮಾತ್ರವಲ್ಲ, ಒಂದು ದೃಷ್ಟಿಯಿಂದ ಶ್ಲಾಘ್ಯವೆಂದೆ ಹೇಳಬೇಕು. ಚಂದನವು ಸ್ವಾಭಾವಿಕವಾಗಿಯೆ ಸೌಗಂಧ್ಯವುಳ್ಳದ್ದು. ಆದರೆ ಅದರ ಸಹವಾಸದಿಂದ ಇತರ ಮರಗಳು ಒಂದು ವೇಳೆ ಈ ಗುಣವನ್ನು ಅಂಗೀಕರಿಸಿದ್ದಾದರೆ ಅವುಗಳನ್ನು ಅಲ್ಲಗಳೆಯ ಬಹುದೆ? ಈ ದೃಷ್ಟಿಯಿಂದ ವಿಚಾರಮಾಡಿದಲ್ಲಿ ಉಮೇದುವಾರನು ಸ್ವಾಭಾವಿಕವಾಗಿಯೆ ಸಮದೃಷ್ಟಿಯ ಲೋಕಸತ್ತಾವಾದಿಯಾಗಿರುವುದು ಉತ್ತಮವೆ. ಪರಂತು ಪ್ರಸಂಗ ವಶಾತ್, ಅಥವಾ ಅನುಭವ ವಶಾತ್ ಲೋಕಸತ್ತಾವಾದ ಅಂಗೀಕಾರವನ್ನು ಮಾಡಿದ್ದಲ್ಲಿ ಅವನ ಪ್ರಾಮಾಣಿಕತ್ವವನ್ನು ಹೀಯಾಳಿಸುವದು ಎಂದೂ ಸಮಂಜಸವಾಗಲಾರದು. ಇಲ್ಲಿ "ಪ್ರಾಮಣಿಕತ್ವ"ವೆಂದು ಹೇಳಲು ಕಾರಣವೇನೆಂದರೆ, ಚುನಾವಣೆಯ ತನಕ ಉದಾತ್ತ ಭಾವೆಯ ಮತ್ತು ಉತ್ತಮ ಪಕ್ಷದ ಹೆಸರಿನ ಉಪಯೋಗವನ್ನು ಮಾಡಿ ಅನಂತರ "ಧಾತಾ ಯಥಾ ಪೂರ್ವಮ ಕಲ್ಪಯತ್" ಎಂದು ಮಾಡುವವನ ನಿರ್ದೇಶವು ನಮ್ಮ ವಿಧಾನದಿಂದ ಆಗಕೂಡದು. ಆದರೆ ಇಂಥ ಅನಿಷ್ಟ ಸಂದರ್ಭವು ಬಹು ಕ್ವಚಿತಾಗಿ ಬರುತ್ತದೆ. ಒಮ್ಮೆ ಬಂದರೆ, ಪುನಃ ಅದಕ್ಕೆ ಅಸ್ಪದವು ಸಿಗುವದಿಲ್ಲ. ಈ ಸಂಗತಿಯು ಉಮೇದುವಾರರಿಗೂ ಗೊತ್ತಿರುವದರಿಂದ ಅವರಾದರೂ ಇಂಥ ಪ್ರಕಾರಗಳಲ್ಲಿ ಪ್ರವರ್ತಿಸುವದಿಲ್ಲ.

ಇರಲಿ; ಪ್ರಕೃತಕ್ಕೆ ನಿಂತ ಉಮೇದುವಾರರಲ್ಲಿ ಯಾರ ಯಾರ ರಾಜಕೀಯ ಮತಗಳು ಹೇಗೆ ಹೇಗಿವೆ ಎಂಬುದನ್ನು ಈಗ ಮತದಾರರು ಪುನಃ ಚರ್ಚಿಸುತ್ತ ಕುಳಿತುಕೊಳ್ಳುವ ಅಗತ್ಯವಿಲ್ಲ. ಹಿಂದುಸ್ಥಾನದೊಳಗಿನ ಎಲ್ಲ ಕೌನ್ಸಿಲುಗಳಲ್ಲಿ ಇರುವ ಎಲ್ಲ ಪಕ್ಷಗಳ ಪೈಕಿ ಸ್ವರಾಜ್ಯ ಪಕ್ಷವು ತೇಜಸ್ವಿಯೂ, ವಿವಕ್ಷಿತ ಘಟನೆಯುಳ್ಳದ್ದೂ, ಕ್ರಮವಾದ ಒಂದು ಸೂತ್ರವನ್ನು ಅನುವರ್ತಿಸಿಕೊಂಡಿರುವದೂ ಆಗಿದೆಂಬೀ ಸಂಗತಿಯು ಈಗ ಸೂರ್ಯಪ್ರಕಾಶದಷ್ಟು ಸ್ಪಷ್ಟವಾಗಿದೆ. ಅಂಥ ಸ್ವರಾಜ್ಯಪಕ್ಷದ ಉಮೇದುವಾರರು ನಮ್ಮ ಜಿಲ್ಲೆಯಿಂದ ನಿಂತಿದ್ದಾರಾದರೆ ಅವರಿಗೆ ಮತ ಕೊಡುವದೆ ಮತದಾರರ ಕರ್ತವ್ಯವಲ್ಲವೆ? ಮದ್ರಾಸ ಕೌನ್ಸಿಲಿನಲ್ಲಿ ಸ್ವರಾಜ್ಯಪಕ್ಷದವರು ಬಹು ಕಡಿಮೆ, ಅಂಥವರಿಂದೇನಾಗುತ್ತದೆ ಎಂದು ಶುಷ್ಕತರ್ಕವನ್ನು ಯಾರಾದರೂ ಮಾಡ ಬಹುದು. ಆದರೆ ಯಾವ ಪಕ್ಷದವರು ಅಲ್ಪಸಂಖ್ಯಾಕರಾಗಿದ್ದಾರೊ ಅಂಥವರ ಸಂಖ್ಯೆಯನ್ನೆ ಹೆಚ್ಚಿಸಲು ಪ್ರಯತ್ನಿಸ ಬೇಕಲ್ಲದೆ, ಇನ್ನೂ ಕಡಿಮೆ ಮಾಡಲು ಉಪದೇಶಿಸುವದು ಅಶ್ಲಾಘ್ಯವಲ್ಲವೆ? ಸಾರಾಂಶ ನಮ್ಮ ಮದ್ರಾಸ್ ಕೌನ್ಸಿಲಿಗೆ ಸ್ವರಾಜ್ಯಪಕ್ಷೀಯ ಸಭಾಸದನನ್ನೆ ಕೌನ್ಸಿಲ್ ಸಭಾಸದನನ್ನಾಗಿ ಚುನಾಯಿಸಿ ಕೊಡುವದು ಜಿಲ್ಲೆಯೊಳಗಿನ ಮತದಾರರ ಆದ್ಯಕರ್ತವ್ಯವಾಗಿದೆ.

ಸ್ಫುಟವಿಚಾರಗಳು.

೧. ಹಿಂದು ಮಹಾಸಭೆಯ ಅಧಿವೇಶನವು ಸಮೀಪಿಸುತ್ತ ಬಂದಿದೆ. ಈ ವರ್ಷದ ಮಹಾಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿದ ಸನ್ಮಾನ್ಯ ಲಾಲಾಲಜಪತರಾಯರು ಹಿಂದಿಗಳಿಗೆ ಅಪರಿಚಿತರಲ್ಲ. ಪಂಡಿತ ಮಾಲವೀಯ ಹಾಗು ಲಾಲಾಜಿಯಂಥವರು ಈ ಸಂದರ್ಭದಲ್ಲಿ ಹಿಂದುಗಳ ಉನ್ನತಿಯ ವಿಷಯದಲ್ಲಿ ಅನವರತ ಪ್ರಯತ್ನಪಡುತ್ತಿರುವದು ನಮ್ಮ ಸುಯೋಗವೆಂದೆ ಭಾವಿಸ ಬೇಕಾಗಿದೆ. ಈ ವರ್ಷದ ಮಹಾಸಭೆಯು ಹಲವು ದೃಷ್ಟಿಯಿಂದ ಮಹತ್ವವನ್ನು ಹೊಂದಿರುವದು. ಹಿಂದು ಸಮಾಜದ ಭಿನ್ನಭಿನ್ನ ಮತಾನುಯಾಯಿಗಳು ಈ ಮಹಾ ಸಭೆಗೆ ಬರುವರಿದ್ದಾರೆ. ಅಲ್ಲದೆ ಹಲವು ಮಹತ್ವದ ಠರಾವುಗಳು ಕೂಡ ಸಭೆಯ ಮುಂದೆ ಬರಲಿಕ್ಕಿದ್ದಾವೆ. ಪ್ರಥಮತಃ ಜಾತಿವಾರ ಪ್ರಾತಿನಿಧ್ಯದ ಕ್ರಮವನ್ನು ತೆಗೆಯಬೇಕೆಂದು ಠರಾವು ಬರಲಿಕ್ಕಿರುವದು. ಜಾತಿವಾರ ಪ್ರಾತಿನಿಧ್ಯವು ಪ್ರಜಾಸತ್ತಾಕ ರಾಜ್ಯಕ್ಕೆ ಅಡ್ಡಿ ತರುತ್ತದೆಂಬ ಸಂಗತಿಯನ್ನು ಹಿಂದಿಗಳು ಹೆಚ್ಚಾಗಿ ಲಕ್ಷ್ಯದಲ್ಲಿಡಬೇಕಾಗಿದೆ. ದಕ್ಷಿಣ ಹಿಂದುಸ್ಥಾನದಲ್ಲಿ ಬ್ರಾಹ್ಮಣ ಬ್ರಾಹ್ಮಣೇತರ ಚಳವಳವು ಪ್ರಬಲವಾಗಿದ್ದುದರಿಂದ ಇಲ್ಲಿ ಈ ಠರಾವನ್ನು ಜಾರಿಯಲ್ಲಿ ತರುವದು ಅಗತ್ಯವಾಗಿದೆ. ಇರಲಿ, ಹಿಂದು ಮಿಷನರಿಯ ಸ್ಥಾಪನೆ, ಸಂಘಟನವನ್ನು ಉರ್ಜಿತಸ್ಥಿತಿಗೆ ತರೋಣ ಮುಂತಾದ ಮುಖ್ಯ ಠರಾವುಗಳು ಸಹ ಈ ವರ್ಷದ ಅಧಿವೇಶನದ ಮುಂದೆ ಬರಲಿಕ್ಕಿದೆ. ಹಿಂದುಸ್ಥಾನದ ಹಲವು ಭಾಗಗಳಲ್ಲಿ ಹಿಂದುಗಳಿಗೂ ಇತರ ಧರ್ಮೀಯರಿಗೂ ಜಗಳ ಬರುವದರಿಂದ ಮತ್ತು ಇಂಥ ಪ್ರಸಂಗದಲ್ಲಿ ಬಹಳ ಮಟ್ಟಿಗೆ ಹಿಂದುಗಳೆ ಹೆಚ್ಚಿನ ಕಷ್ಟಕ್ಕೆ ಈಡಾಗುತ್ತಾರೆಂದು ಸಿದ್ಧವಾಗಿರುವದರಿಂದ ಹಿಂದುಗಳನ್ನು ಈ ಸಂದರ್ಭದಲ್ಲಿ ರಕ್ಷಿಸುವದಕ್ಕೋಸ್ಕರ ಸ್ವಯಂಸೇವಕರ ದಳವನ್ನು ಸ್ಥಾಪಿಸಬೇಕು ಎಂಬೀ ಅರ್ಥದ ಸೂಚನೆಯನ್ನು ಸ್ವಾಗತಕಮಿಟಿಯು ಮುಖ್ಯ ಅಧಿವೇಶನದ ಮುಂದೆ ತರಲಿರುವದು. ಇವೆಲ್ಲ ಸಂಗತಿಗಳನ್ನು ನೋಡುವಾಗ ಮಹಾ ಸಭೆಯ ಬರುವ ಅಧಿವೇಶನವು ಚಿರಸ್ಮರಣೀಯವಾದೀತೆಂದು ಹೇಳಿದರೆ ಅದು ಅತಿಶಯೋಕ್ತಿಯಾಗಲಾರದು. ಇವೆಲ್ಲ ಠರಾವುಗಳು ಮೆಲ್ಲ ಮೆಲ್ಲನೆ ಕಾರ್ಯರೂಪದಲ್ಲಿ ಬಂದಾವೆಂದು ಕೂಡ ಊಹಿಸಬೇಕಾಗಿದೆ. ಅಲ್ಲದೆ ಧರ್ಮಾಭಿಮಾನಿಗಳು ಮಹಾಸಭೆಗೆ ಹಲವು ತರದ ಸಹಾಯ್ಯವನ್ನು ಕೊಡಬೇಕೆಂದು ಸ್ವಾಗತಕಮಿಟಿಯು ಬೇಡಿಕೊಂಡಿದೆ. ಈ ಹೇಳಿಕೆಯ ಕಡೆಗೆ ಹಿಂದುಗಳು ಲಕ್ಷ್ಯಗೊಟ್ಟಾರೆಂದು ನಾವು ನಂಬಿರುವೆವು.

೨. ದೇಶಬಂಧು ದಾಸರು ತಮ್ಮ ಪ್ರಕಟಣೆಯನ್ನು ಹೊರಪಡಿಸಿದ ತರುವಾಯ ಯುರೋಪಿಯನ್, ಎಂಗ್ಲೊ ಇಂಡಿಯನ್ ಹಾಗು ಶಾಂತ ತಂಡ—ಇವರಲ್ಲಿ ದೊಡ್ಡ ಕೋಲಾಹಲವು ಉತ್ಪನ್ನವಾಗಿದೆ. ಸ್ವರಾಜ್ಯ ಪಾರ್ಟಿಯ ದ್ವೇಷಿಗಳಾದ ಹಲವರು ಅಲ್ಲದಸಲ್ಲದ ತರ್ಕಗಳನ್ನು ಹುಟ್ಟಿಸಿ ಆತ್ಮತೃಪ್ತಿಯನ್ನು ಮಾಡಿಕೊಳ್ಳುತ್ತಿದ್ದಾರೆ. ಸ್ವರಾಜ್ಯಪಾರ್ಟಿಯು ಪ್ರಥಮತಃ ಮಂತ್ರಿತನವನ್ನು ಸ್ವೀಕರಿಸುವುದಿಲ್ಲವೆಂದು ಹೇಳಿತ್ತು. ಆದರೆ, ಅದರ ಮುಖ್ಯ ನಾಯಕರಾದ ದಾಸರೆ ಮಂತ್ರಿಸ್ಥಾನದ ಕಡೆಗೆ ಕಿರುಗಣ್ಣಿನಿಂದ ನೋಡಹತ್ತಿರುವರು ಎಂದು ಮುಂತಾಗಿ ಕೆಲವು ಸ್ವರಾಜ್ಯ ಪಾರ್ಟಿಯ ದ್ವೇಷಿಗಳು ಕುತರ್ಕಮಾಡಹತ್ತಿರುವರು. ಸರ್ ಸುರೇಂದ್ರನಾಥ ಬಾನರ್ಜಿ ಮುಂತಾದವರು ಇನ್ನೊಂದು ತರದ ಕುಶಂಕೆಯನ್ನು ಉಪಸ್ಥಿತಮಾಡಿದ್ದಾರೆ! "ಸರಕಾರದೊಡನೆ ನಾವು ಸನ್ಮಾನ್ಯ ರೀತಿಯಲ್ಲಿ ಸಹಕಾರವನ್ನು (Honourable Co-operation) ಮಾಡಬೇಕೆಂದು ದಾಸರು ಪ್ರಕಟಿಸಿದ್ದಾರೆ. ಆದರೆ ಇದರ ಅರ್ಥವು ಗೂಢವಾಗಿದೆ; ದಾಸರು ಬೇರಿಸ್ಟರರಿದ್ದಾರೆ. ಆದ್ದರಿಂದ ಅವರು ಒಂದು ಶಬ್ದದ ಮೇಲೆ ಭಿನ್ನಾರ್ಥವನ್ನು ಮಾಡಲು ಬಹು ನಿಪುಣರಿರುವರು". ಈ ರೀತಿಯಾಗಿ ಸುರೇಂದ್ರನಾಥರು ತಮ್ಮ ಸ್ವಕಪೋಲ ಕಲ್ಪಿತ ತರ್ಕವನ್ನು ಹುಟ್ಟಿಸಿರುವರು! ಇವರು ಈ ರೀತಿಯಾಗಿ ಶಂಕೆಯನ್ನು ಹುಟ್ಟಿಸಿ ದೇಶಬಂಧುಗಳ ಮೇಲೆ ಜನರ ವಿಶ್ವಾಸವಿದ್ದುದನ್ನು ಕಳಚಿ ಬಿಡಲು ಹವಣಿಸಿರುತ್ತಾರೆ! ಇರಲಿ ಇನ್ನೂ ಅನೇಕರು ಬೇರೆ ವಿಧಾನದಿಂದ ಶಂಕೆಯನ್ನು ಮಾಡುತ್ತಿರುವರು. ಇಂಥ ಶಂಕೆಗಳಿಂದ ಪ್ರಯೋಜನವೇನೂ ಆಗಲಿಕ್ಕಿಲ್ಲ.

೩. ಕಲಕತ್ತೆಯ ಸ್ಟೇಟ್ಸ್‌ಮನ್ ಪತ್ರಿಕೆಯು ಮಾತ್ರ ವಿಕ್ರತ ವರ್ತಮಾನವನ್ನು ಪ್ರಕಟಿಸಿ ದಾಸರಲ್ಲಿ ಎಷ್ಟೋ ಬದಲಾವಣೆಯಾಗಿದೆಂದು ಹೇಳ ಹತ್ತಿದೆ. ಅದು ಬರೆಯುತ್ತದೆ:—ಈಗಿನ ಕೌನ್ಸಿಲನ್ನು ಸಂಪೂರ್ಣ ವಿಸರ್ಜನೆ ಮಾಡಬೇಕೆಂದು ದಾಸರು ಬಂಗಾಲದ ಗವರ್ನರರಿಗೆ ಬರೆದಿರುವರೆಂದು ನಾವು ಕೇಳುತ್ತೇವೆ. ಮತ್ತು ಬರುವ ಚುನಾವಣೆಯಲ್ಲಿ ಸ್ವರಾಜ್ಯಸ್ಥರೆ ಬಹುಸಂಖ್ಯಾಕರಾಗಿ ಬಂದು ಅನಂತರ ಮಂತ್ರಿತ್ವವನ್ನು ಸ್ವೀಕರಿಸುವರೆಂಬ ವರ್ತಮಾನವಿದೆ. ಆದರೆ ಮಂತ್ರಿತ್ವವನ್ನು ಸ್ವೀಕರಿಸಬೇಕಾದರೆ ಕೆಲವು ಯೋಗ್ಯವಾದ ಶರ್ತಗಳನ್ನು ದಾಸರು ಕೊಡಲಿರುವರು! ಈ ರೀತಿಯಾಗಿ ಸ್ಟೇಟ್ಸ್‌ಮನ್ ಪತ್ರಿಕೆಯು ಬರೆದು ಜನರ ಮನಸ್ಸನ್ನು ಕಲುಷಿತ ಮಾಡಲು ಹೊರಟಿದೆ. ಸ್ವರಾಜ್ಯಸ್ಥರು ಮಂತ್ರಿತ್ವವನ್ನು ಸ್ವೀಕರಿಸಬೇಕಾದರೆ ಎಷ್ಟೊ ಶರ್ತಗಳನ್ನು ಸರಕಾರವು ಮಾನ್ಯ ಮಾಡಬೇಕಾಗಿರುವದು. ಇದನ್ನು ಲಕ್ಷ್ಯದಲ್ಲಿ ತಂದಿಡಬೇಕು. ಇದ್ದ ಸ್ಥಿತಿಯಲ್ಲಿಯೇ ಅವರು ಅದನ್ನು ಸ್ವೀಕರಿಸಲಿಕ್ಕಿಲ್ಲ. ಇದನ್ನು ದೇಶಬಂಧುಗಳು ತಮ್ಮ ಲೇಖದಲ್ಲಿ ಸ್ಪಷ್ಟವಾಗಿ ತಿಳಿಸಿರುವರು. ಅದ್ದರಿಂದ ಅದನ್ನು ಒಪ್ಪಿದರೆ ಮಾತ್ರ ಸ್ವರಾಜ್ಯಸ್ಥರು ಮಂತ್ರಿತ್ವವನ್ನು ಸ್ವೀಕರಿಸುವರು. ಇರಲಿ; ಹಿಂದುಸ್ಥಾನದಲ್ಲಿ ಈ ಪ್ರಸಂಗಗಳು ಉಪಸ್ಥಿತವಾಗುತ್ತಿರುವಾಗ ಇಂಗ್ಲಂಡಿನಲ್ಲಿ ಬದಲಾವಣೆಗಳಾಗುತ್ತ ಬಂದಿವೆ. ಲೊ. ಬರ್ಕನಹೆಡ್ಡರು ದಾಸರ ಪ್ರಕಟಣೆಗೆ ಉತ್ತರಕೊಟ್ಟಿರುವರು. ಅದರಲ್ಲಿ ಅವರು ದಾಸರು ಹಿಂಸಾತ್ಮಕ ಚಳವಳವನ್ನು ಮುರಿಯಲು ಸರಕಾರಕ್ಕೆ ಸಾಹಾಯ್ಯ ಮಾಡಬೇಕೆಂದು ಬೇಡಿಕೊಂಡಿರುವರು. ಅಲ್ಲದೆ, ಹಿಂದುಸ್ಥಾನದ ಈ ಪರಿಸ್ಥಿತಿಯಲ್ಲಿ ಸುಧಾರಣೆಯನ್ನು ಕುರಿತು ಆಲೋಚಿಸಲು ಹಿಂದಿ ನಾಯಕರಾದ ದೇಶಬಂಧು ದಾಸ, ಮಹಾತ್ಮಾಗಾಂಧಿಯವರನ್ನು ಕರೆಯುವದು ಉತ್ತಮವಲ್ಲವೇ ಎಂದು ಪಾರ್ಲಿಮೆಂಟಿನಲ್ಲಿ ಕರ್ನಲ್ ವೆಜವುಡ್‌ರು ಪ್ರಶ್ನಿಸಿದಕ್ಕೆ ಅಂಡರ ಸೆಕ್ರೆಟರಿಗಳು ಸಮಕ್ಕೆ ತಕ್ಕ ಉತ್ತರವನ್ನು ಹೇಳಿ ದಾಸರ ಪ್ರಕಟನೆಯಲ್ಲಿ ವಿಧಾಯಕ ಹೇಳಿಕೆಯನ್ನು ನಾವು ನೋಡುವೆವು ಎಂದು ಆಶ್ವಾಸನವಿತ್ತರು. ಹಿಂದುಸ್ಥಾನದ ಪ್ರಶ್ನೆಯು ಬಹು ಗೂಢವಾಗಿದೆಂಬುದು ನಿಜ. ಇಂಗ್ಲಂಡಿಗೆ ಹಿಂದುಸ್ಥಾನದಲ್ಲಿರುವ ವೈಮನಸ್ಯವನ್ನು ಮತ್ತು ಎಲ್ಲ ಚಳವಳವನ್ನು ಯೋಗ್ಯರೀತಿಯಲ್ಲಿ ನಿಲ್ಲಿಸಬೇಕಾದರೆ ದೇಶಬಂಧು ದಾಸ, ಮಹಾತ್ಮಾಜಿ ಮತ್ತು ಲಾಲಾಲಜಪತರಾಯರಂಥ ಲೋಕನಾಯಕರನ್ನು ಕರಿಸಿ ಅವರೊಡನೆ ಪರ್ಯಾಲೋಚಿಸಿ ಯಥೋಚಿತ ರೀತಿಯಿಂದ ಈ ಗೂಢ ಪ್ರಶ್ನೆಯನ್ನು ಬಿಡಿಸುವದು ಅಲ್ಲಿಯ ಮಂತ್ರಿಮಂಡಳದ ಪ್ರಥಮ ಕರ್ತವ್ಯವಾಗಿದೆ.

೪. ಮದ್ರಾಸ ಕೌನ್ಸಿಲಿನಲ್ಲಿ ಇಲ್ಲಿಯ ಸರಕಾರವು ಒಂದು ವಿಚಿತ್ರ ಸಂಗತಿಯನ್ನು ಪ್ರಕಟಿಸಿ ಜನತೆಯ ದೂಷಣೆಗೆ ಪಾತ್ರ ಮಾಡಿಕೊಂಡಿದೆ. ಜನರಲ್ ಬಜೆಟಿನ ಚರ್ಚೆಯು ಕೌನ್ಸಿಲಿನ ಮುಂದೆ ಬಂದಾಗ ಜಮಾ ಖರ್ಚಿನ ಪಟ್ಟಿಯಲ್ಲಿ ಎಷ್ಟೋ ಅಂಶಗಳು ಈ ಬಹುಮತದಿಂದ ಕಡಿದು ಹಾಕಲ್ಪಟ್ಟಿದ್ದವು. ಆದರೆ ಗವರ್ನರು ತನ್ನ ಸರ್ಟಿಫಿಕೇಶನಿನ ಬಲದಿಂದ ಕಡಿದುಹಾಕಿದ ಅಂಶವನ್ನು ಪುನಃ ಸೇರಿಸಿರುವರು! ಈ ವರ್ತಮಾನವು ಗವರ್ನಮೆಂಟ ಮೆಂಬರರು ಕೌನ್ಸಿಲಿನಲ್ಲಿ ಓದಿ ಹೇಳಿದ ನಂತರ ನೆಶನಲಿಷ್ಟ ತಂಡದವರೆಲ್ಲರೂ ಕೌನ್ಸಿಲಿನಿಂದ ಹೊರಟು ಹೋಗಿ ತಮ್ಮ ನಿಷೇಧವನ್ನು ಸರಕಾರಕ್ಕೆ ಸಂಪೂರ್ಣ ವ್ಯಕ್ತಮಾಡಿದರು. ಮುಖ್ಯತಃ ನೋಡಹೋದರೆ ಸರ್ಟಿಫಿಕೇಶನಿನ ಬೆಂಬಲವನ್ನು ಪ್ರಸಂಗವಶಾತ್ ಗವರ್ನರರಾಗಲಿ, ವೈಸರಾಯರಾಗಲಿ ಉಪಯೋಗಿಸಕೊಳ್ಳಬೇಕೆಂದು ಕಾಯದೆಯಲ್ಲಿ ಸೂಚಿಸಿಯದೆ. ಆದರೆ ಹಿಂದುಸ್ಥಾನದೊಳಗಿನ ಸರಕಾರವು ಈ ಅಸಾಧಾರಣ ಕಾಯದೆಯ ಉಪಯೋಗವನ್ನು ಪ್ರತಿ ದಿವಸವು ಪ್ರತಿ ಅಧಿವೇಶನದಲ್ಲಿಯೂ ಪಡಕೊಳ್ಳುತ್ತಿದೆ. ಇದಕ್ಕೆ ಮದ್ರಾಸ ಸರಕಾರವೇನು ಅಪವಾದವಾಗಿಲ್ಲ! ಆದರೆ ಪ್ರಕೃತ ವಿಷಯದಲ್ಲಿ ಒಂದು ಮನನೀಯ ಸಂಗತಿಯು ನಡೆದು ಬಂತು, ಅದನ್ನು ಮಾತ್ರ ಯಾರೂ ಮರೆಯಕೂಡದಾಗಿದೆ. ನಿಷೇಧವನ್ನು ವ್ಯಕ್ತಮಾಡಲು ನೆಶನಲಿಷ್ಟ ಪಾರ್ಟಿಯವರು ಮಾತ್ರ ಹೊರಟು ಹೋದರೆಂದಲ್ಲ! ಮಂತ್ರಿ ಪಕ್ಷದೊಳಗಿನ ಎಷ್ಟೊ ನಕ್ಷತ್ರಗಳೂ ಕೂಡ ಈ ಗುಂಪಿಗೆ ಸೇರಿದ್ದವು! ಕೌನ್ಸಿಲಿನ ಬೈಠಕವನ್ನು ಮುಂದರಿಸಬೇಕಾದರೆ ಕೋರಮ್ ಸಿಗುವದು ಕೂಡ ಬಹು ಕಷ್ಟವಾಯಿತು! ಈ ಪ್ರಕಾರದ ತೀವ್ರ ನಿಷೇಧವು ಸಾಕ್ಷಾತ್ ಕಣ್ಣೆದುರು ಇರುವಾಗ ಸರಕಾರವು ತನ್ನ ದುರಾಗ್ರಹವನ್ನು ಬಿಡಲಿಲ್ಲ. ಈ ಸಂಗತಿಯಿಂದ ಪ್ರಜಾಪಕ್ಷದ ಮತಕ್ಕೆ ಸರಕಾರವು ಎಷ್ಟು ಬೆಲೆಯನ್ನು ಕೊಡುತ್ತದೆಂಬುದು ಸ್ಪಷ್ಟವಾಗುತ್ತದೆ. ಇಂಥ ಪ್ರಸಂಗಗಳು ಜನಜಾಗ್ರತೆಗೆ ಮೂಲಕಾರಣವಾಗಿರುವವು. ಮತ್ತು ಇವುಗಳಿಂದಲೆ ಜನರಲ್ಲಿ ಸ್ವರಾಜ್ಯಕಾಂಕ್ಷೆಯು ಇನ್ನಷ್ಟು ಬಲವತ್ತರವಾಗಿ ಏರುವದು. ಇವನ್ನು ಬ್ಯುರೋಕ್ರಸಿ ಎಂದಿಗೂ ಮರೆಯಕೂಡದಾಗಿದೆ.

೫. ನಿಝಾಮರು ಹಿಂದು ಪ್ರಜೆಗಳನ್ನು ಯಾವ ರೀತಿಯಿಂದ ಪ್ರೀತಿಸುತ್ತಾರೆಂಬುದನ್ನು ವಾಚಕರು ಈ ಮೊದಲೆ ಅರಿತಿರಬಹುದು. ಗುಲ್‌ಬರ್ಗೆಯಲ್ಲಿ ದಂಗೆಮಾಡಿದ ಮುಸಲ್ಮಾನ ಪುಂಡರನ್ನು ನಿರಪರಾಧಿಗಳೆಂದು ಸ್ವತಃ ಬಿಟ್ಟು ಅವರೆ ಪುನಃ ದಂಗೆಮಾಡಿದರೂ ಅವರ ವಿಚಾರಣೆಯನ್ನು ಮಾಡರು! ಈಗ ಈ ನಿಝಾಮರು ಇನ್ನೊಂದು ವಿಚಿತ್ರ ಕೃತ್ಯವನ್ನು ಮಾಡಿ ಮುಸಲ್ಮಾನೀ ನ್ಯಾಯ ಸ್ವರೂಪವನ್ನು ಪ್ರತ್ಯಕ್ಷ ಪ್ರಕಟಮಾಡಿರುವರು. ಗದ್ವಾಲದ ಹಿಂದುರಾಜರು ತೀರಿದ ನಂತರ, ಅವರ ಮಹಾರಾಣಿಯವರು ಆ ಗದ್ದುಗೆಗೆ ಅಧಿಕಾರಿಗಳೋ ಎಂದು ನಿಶ್ಚಯಿಸುವದಕ್ಕೋಸ್ಕರ ಮೂವರು ಮುಸಲ್ಮಾನರಿಂದ ಯುಕ್ತವಾದ ಒಂದು ಕಮಿಶನನ್ನು ನೇಮಿಸಿ ಈಗಿನ ರಾಣಿಯವರು ಆ ಗದ್ದುಗೆಗೆ ಅನಧಿಕಾರಿಗಳೆಂದು ಫರ್ಮಾನ್ ಹೊರಡಿಸಿದ್ದಾರೆ! ಸಾಹೇಬ ಬಹಾದ್ದೂರರು ಇದರಿಂದಲೂ ತೃಪ್ತಪಟ್ಟರೆ? ರಾಜರ ಹೆಣ್ಣುಮಕ್ಕಳಿಗೆ ಗಂಡು ಕೂಸು ಹುಟ್ಟಿ ಅವನು ರಾಜ ದರ್ಬಾರದಲ್ಲಿ ವಿದ್ಯಾವ್ಯಾಸಂಗಮಾಡಿ ೨೧ವರುಷ ಪ್ರಾಯವಂತನಾಗುವ ತನಕ ರಾಜರ ಗಾದಿಯು ನಿಝಾಮರಿಂದಲೆ ನೋಡಲ್ಪಡಬೇಕೆಂದು ಮೊದಲಿನ ರಾಜರು ಗುಪ್ತವಾಗಿ ಮೃತ್ಯುಪತ್ರಮಾಡಿರುವರೆಂದು ಹೇಳುತ್ತಾರೆ. ಆದರೆ ನಿಜಾಮರು ಗುಪ್ತಪತ್ರವನ್ನು ಮಾತ್ರ ಯಾರಿಗೂ ತೋರಿಸ ಕೊಡರು!

ಮಂಗಳೂರು.

ಇದೇ ತಿಂಗಳ ತಾರೀಖು ೧೩ನೇ ಸೋಮವಾರ ಸೌರ ಯುಗಾದಿ ದಿನ ಸಾಯಂಕಾಲ ೪|| ಘಂಟೆಗೆ ಶ್ರೀ ಜ್ಞಾನೋದಯ ಸಮಾಜದ ಹದಿನೈದನೇ ವಾರ್ಷಿಕೋತ್ಸವವು ಡಿಸ್ಟ್ರಿಕ್ಟ್ ಫಿಶರೀಸ್ ಆಫೀಸರರಾದ ಶ್ರೀಯುತ ಉಪ್ಪೂರು ನಾಗಪ್ಪ ಅವರ್ಗಳವರ ಅಧ್ಯಕ್ಷತೆಯಿಂದ ಹೊಗೆ ಬಜಾರದಲ್ಲಿ ಇರುವ ಜ್ಞಾನೋದಯ ಮಂದಿರದಲ್ಲಿ ಜರಗಿಸೋಣಾಗುವುದು.

ಇದೇ ಕಳೆದ ಆದಿತ್ಯವಾರ ಈ ಮೊದಲು ಪ್ರಕಟಿಸಿದಂತೆ ಇಲ್ಲಿಯ ಟೌನ್ ಕೊ-ಒಪರೇಟಿವ್ ಬೇಂಕಿನ ಪಾಲುವಾಲಿಕರ ಸಭೆಯು ಇಲ್ಲಿಯ ಅಸಿಸ್ಟಾಂಟ ರಿಜಿಸ್ತ್ರಾರರವರ ಆಫೀಸಿನಲ್ಲಿ ಕೂಡಿತ್ತು. ಈ ಬೇಂಕಿನ ಅಧ್ಯಕ್ಷರಾದ ಮತ್ತು ಮಾಜಿ ಅಸಿಸ್ಟಾಂಟ ರಿಜಿಸ್ತ್ರಾರರಾದ ಮ| ರಾ| ರಾ| ಡಿ. ಆನಂದ ರಾಯರು ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿಕೊಂಡಿದ್ದರು. ಬೇಂಕಿನ ನಿಬಂಧನೆಗಳಲ್ಲಿ ಈ ಬಗ್ಗೆ ಏರ್ಪಡಿಸಿದ ಉಪ ಕಮ್ಮಿಟಿಯವರು ನಿರ್ಣಯಿಸಿದ ತಿದ್ದುಪಡಿಗಳಲ್ಲಿ ಹಲವು ಮಹಾ ಸಭೆಯಲ್ಲಿ ಮಂಜೂರಾದವು. ಬೇಂಕಿನ ಪಾಲು ಭಂಡವಾಳವನ್ನು ರೂ. ೨೫,೦೦೦ದಿಂದ ೫೦,೦೦೦ಕ್ಕೆ ಹೆಚ್ಚಿಸಿ ನಿರಕು ಠೇವಾಣಾತಿ ಬಡ್ಡಿ ದರವನ್ನು ಒಂದು ವರುಷಕ್ಕೆ ಮಿಕ್ಕಿದ ಅವಧಿಗೆ ಮೆಂಬರರಿಗೂ ಮೆಂಬರರಲ್ಲದವರಿಗೂ ಸೇಕಡಾ ೭||ರಂತೆ ಕೊಡಬೇಕೆಂತ ನಿರ್ಣಯಿಸಲ್ಪಟ್ಟಿದೆ. ಸರ್ವಸಾಧಾರಣವಾಗಿ ಜೀವ ವಿಮೆ ವಿಧಾನಗಳಿಗೆ ಸರಿಯಾದ ಮೆಂಬರರ ಪ್ರುಡೆನ್ಶಲ್ ಠೇವಣಾತಿಗಳ ಕ್ರಮವನ್ನು ಬೇಂಕಿನ ನಿಬಂಧನೆಗಳಲ್ಲಿ ಕೂಡಿಸಬೇಕೆಂತ ನಿರ್ಣಯಿಸಿರುತ್ತಾರೆ. ಗೌರವಾರ್ಥವಾಗಿ ಕೆಲಸದ ಮಾಡುವ ಡ್ಯಾರೆಕ್ಟರ್-ಸೆಕ್ರೆಟರಿಯು ಬದಲಾಗಿ ಸಂಬಳ ನಿರ್ಣಯದ ಮೇಲೆ ಸೆಕ್ರೆಟರಿಯ ಹುದ್ದೆಯನ್ನು ನಿರ್ಮಿಸಿ ಈ ಕೆಲಸದ ಬಗ್ಗೆ ಡ್ಯಾರೆಕ್ಟರರಲ್ಲದವರನ್ನು ನೇಮಿಸುವ ಏರ್ಪಾಡಾಗಬೇಕೆಂದು ನಿರ್ಣಯಿಸಿರುತ್ತಾರೆ. ಮೆಂಬರಿಕೆಗೆ ಕೊಡೋಣಾಗುವ ಸಾಲದ ಅತ್ಯಧಿಕ ಮಿತಿಯನ್ನು ರೂ. ೨೫೦ಕ್ಕೆ ಏರಿಸಬೇಕೆಂತ ನಿರ್ಣಯಿಸಿರುವರು.

ಈ ಶಹರಿನಲ್ಲಿ ಕಳ್ಳರ ಒಂದು ನೂತನ ಬಗೆಯ ಕಾಟವು ಪ್ರಾರಂಭವಾಗಿದೆ. ವಕೀಲರ ಬಾಗಿಲಲ್ಲಿಯೇ ಕಳ್ಳರು ತಮ್ಮ ಈ ಕಾಟದ ಸಾಧನೆಯನ್ನು ಪೂರೈಸುತ್ತಿರುವದು ಬಹಳ ಚೋದ್ಯವಾಗಿದೆ. ಯಾವನಾದರೂ ಕಕ್ಷಿಗಾರರ ಹೆಸರನ್ನು ಕಲ್ಪಿಸಿಕೊಂಡು ಆತನ ಕೈಕಾಗದ ಒಂದನ್ನು ಸೃಷ್ಟಿಸಿ ಅದರಲ್ಲಿ ಸುಮಾರು ೧೦ ಯಾ ೧೫ ರೂಪಾಯಿಗಳ ಕಾಯಿಪಲ್ಯ ಫಲವಸ್ತುಗಳ ವಿವರವನ್ನು ಕಾಣಿಸಿ ಇವು ಬಂದರಕ್ಕೆ ದೋಣಿಗಳ ಮೇಲೆ ಬಂದಿರುವದೆಂದೂ ಅವುಗಳನ್ನು ವಕೀಲರ ಮನೆಗೆ ತರಿಸಿಕೊಳ್ಳಲಿಕ್ಕೆ ರೂ. ೧—೪—೦ ಅಥವಾ ಹೆಚ್ಚಿಗೆ ಬೇಕೆಂದೂ ಹೇಳಿ ಹೀಗೆ ಕೊಡೋಣಾಗುವ ಐವಜನ್ನು ಹಿಡಿದು ಪಲಾಯಣ ಮಾಡುತ್ತಿರುವರೆಂತ ತಿಳಿದು ಬರುತ್ತದೆ.

ಇದೇ ತಿಂಗಳ ತಾ. ೧೫ನೇ ದಿನ ಬುಧವಾರ ಮಧ್ಯಾಹ್ನ ಘಂಟೆ ೩ಕ್ಕೆ ಮಂಗಳೂರು ತಾಲೂಕು ಬೋರ್ಡು ಆಫೀಸಿನಲ್ಲಿ ತಾಲೂಕು ಬೋರ್ಡು ಸಭೆಯು ಜರಗುವದು. ತಾಲೂಕು ಬೋರ್ಡಿಗೆ ಒಬ್ಬ ಅಧ್ಯಕ್ಷರನ್ನೂ ಈ ಬೋರ್ಡಿನಿಂದ ಡಿಸ್ಟ್ರಿಕ್ಟ್ ಬೋರ್ಡಿಗೆ ಮೂರು ಜನ ಮೆಂಬರರನ್ನೂ ಆರಿಸುವುದು ಸಭೆಯ ಮುಂದಿರುವ ಕೆಲಸವಾಗಿರುತ್ತದೆ.

ರಿಲಿಜಿಯಸ್ ಎಂಡೌಮೆಂಟು ಬಿಲ್ಲ್ ಪ್ರಕಾರ ನೇಮಕಪಟ್ಟ ಕಮ್ಮಿಶನರರ ಪ್ರಥಮ ಬೋರ್ಡು ಮೀಟಿಂಗು ಇದೇ ತಿಂಗಳ ತಾ. ೮ನೇ ದಿನ ಬೋರ್ಡಿನ ಪ್ರೆಸಿಡೆಂಟರಾದ ಸರ್. ಟಿ. ಸದಾಶಿವಯ್ಯರರವರ ಮನೆಯಲ್ಲಿ ಕೂಡಿತ್ತು. ಬೋರ್ಡಿನ ಕೆಲಸವನ್ನು ಪ್ರಾರಂಭಿಸಲು ಬೇಕಾಗಿರುವ ಸಿಬಂದಿಯ ಪಟ್ಟಿಯನ್ನು ಈ ಸಭೆಯಲ್ಲಿ ಇತ್ಯರ್ಥಿಸಿರುತ್ತಾರೆ. ಮದ್ರಾಸು ನ್ಯಾಯವಿಧಾಯಕ ಸಭೆಯ ಆಫೀಸಿನ ಸುಪರಿಂಟೆಂಡೆಂಟರಾದ ಮಿ| ಸಿ. ಯಸ್. ಸ್ವಾಮಿನಾಥ ಮುದಲಿಯಾರ್ ಎಂಬವರನ್ನು ತಿಂಗಳಿಗೆ ರೂ. ೪೦೦-೫೦-೬೦೦ ಸಂಬಳದ ಮೇಲೆ ಈ ಬೋರ್ಡಿನ ಕಾರ್ಯದರ್ಶಿಗಳಾಗಿ ನೇಮಿಸಿರುತ್ತಾರೆ.

ಮದ್ರಾಸು ಮೆಡಿಕಲ್ ಕೌನ್ಸಿಲಿನ ಮೆಂಬರರಾಗಿ ಮ| ರಾ| ರಾ| ಡಾಕ್ಟರ್ ಯು. ರಾಮ ರಾವ್, ಎಮ್. ಎಲ್. ಸಿ. ಯವರು ಇದೇ ಕಳದ ತಾ. ೭ರಲ್ಲಿ ನಡದ ಚುನಾವಣೆಯಲ್ಲಿ ಆರಿಸಲ್ಪಟ್ಟಿರುವರು.

ಮದ್ರಾಸು ಗವರ್ನರ ದೊರೆಗಳ ಕಾರ್ಯಕಾರಿ ಕೌನ್ಸಿಲಿನ ಮೆಂಬರರಾಗಿರುವ ಮಿ| ಆರ್. ಎ. ಗ್ರೇಹಮ್ ಇವರ ಸ್ಥಾನದಲ್ಲಿ ಮಿ| ಟಿ. ಇ. ಮೊಯರರವರು ನೇಮಕಪಡುವರಾಗಿ ತಿಳಿದುಬರುತ್ತದೆ.

ಮಂಗಳೂರು ಗವರ್ನಮೆಂಟು ಕೊಲೇಜಿನ ಸಿಲೆಕ್ಶನ್ ಕಮ್ಮಿಟಿಯ ಮೆಂಬರರಾಗಿ ಈ ಕೆಳಗೆ ಹೆಸರು ಕಾಣಿಸಿದ ಗ್ರಹಸ್ಥರು ಪುನಹ ನೇಮಕಪಟ್ಟಿರುವರು. ಇವರ ಮೆಂಬರತನದ ಅವಧಿಯು ಮೂರು ವರುಷಗಳ ವರೆಗೆ ಇದೆ. ಇವರ್ಯಾರಂದರೆ—ಕೊಲೇಜಿನ ಪ್ರಿನ್ಸಿಪಾಲರು; ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟ ಮ| ರಾ| ರಾ| ರಾವ್ ಬಹದ್ದೂರ್ ಎನ್. ಸುಬ್ಬರಾವ್‌ರವರು; ಇಲ್ಲಿಯ ಮುನ್ಸಿಪಲ್ ಚೇಯರ್ಮೆನ್ ಮ| ರಾ| ರಾ| ಎನ್. ವೆಂಕಟ್ರಾವ್‌ರವರು; ಮ| ರಾ| ರಾ| ರಾವ್ ಸಾಹೇಬ ಬಿ. ಮಹಾಬಲ ಹೆಗ್ಗಡೆಯವರು; ಖಾನ್ ಬಹದ್ದೂರ್ ಹಾಜಿ ಅಬ್ದುಲ್ಲಾ ಹಾಜಿ ಕಾಸಿಮ್ ಸಾಹೇಬ ಬಹದ್ದೂರರವರು. ಕೊಲೇಜಿನ ಪ್ರಿನ್ಸಿಪಲರು ಎಕ್ಸ್ ಆಫೀಸಿಯೋ ಪ್ರೆಸಿಡೆಂಟರಾಗಿರುವರು. ಇವರೆಲ್ಲರ ಮೆಂಬರುತನವು ಬರುವ ಮೇ ತಿಂಗಳ ತಾ. ೨ನೇ ಯಿಂದ ಪ್ರಾರಂಭವಾಗುವದು.

ಬಹುಮಾನಪಟ್ಟ ಸಿ. ಪಿ. ರಾಮಸ್ವಾಮಿ ಅಯ್ಯರರವರನ್ನು ಗವರ್ನರರು ತನ್ನ ಎಕ್ಸಿಕ್ಯುಟಿವ್ ಕೌನ್ಸಿಲಿನ ವ್ಯಾಸ ಪ್ರೆಸಿಡೆಂಟರನ್ನಾಗಿ ನೇಮಿಸಿರುತ್ತಾರೆ.

The Calicut Bank, Ltd.,
ದಿ ಕೆಲಿಕಟ್ ಬೇಂಕ್, ಲಿಮಿಟೆಡ್,

ಹೆಡ್ ಆಫೀಸು — ಕಲ್ಲಿಕೋಟೆ.
ಬ್ರಾಂಚುಗಳು: — ಮುಲ್ಲಸ್‌ಚೇರಿ, ತಲಚೇರಿ, ಕೊಚ್ಚಿ, ಮತ್ತು ಪಾಲ್ಘಾಟು.
ರಿಜಿಸ್ಟರ್ಡ್ ಮತ್ತು ಅಧಿಕಾರಗೊಳಿಸಲ್ಪಟ್ಟ ಮೂಲಧನ ರೂ. 5,00,000—0—0.
ರೂಪಾಯಿ 10ರ 50,000 ಪಾಲುಗಳು.
(30—8—1924)ರ ವರೆಗೆ ಮೌಲ್ಯ ಮೂಲಧನ ರೂಪಾಯಿ 1,81,850—0—0.
ಒಂದು ವರುಷದ ಕಾಯಂ ಠೇವಣಾತಿಗೆ ಬಡ್ಡಿ ದರ ಸೇಕಡಾ ರೂ. 7—8—0.
ಕಳೆದ 4 ವರುಷಗಳಲ್ಲಿ ಪಾಲುಗಾರರಿಗೆ ಸೇಕಡಾ 12ರಂತೆ ಬಡ್ಡಿ ಹಂಚಿದೆ.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.
ಸಿ. ಕೃಷ್ಣನ್, ಬಿ. ಎ. ಬಿ. ಎಲ್.,
ಮೆನೇಜಿಂಗ್ ಡ್ಯಾರೆಕ್ಟರ್.
ಡ್ಯಾರೆಕ್ಟರರಲ್ಲಿ ಒಬ್ಬರು—
ಎಮ್. ನಾರಾಯಣ. ಕಾಮತ್, ಬಿ. ಎ.
ಪ್ಲೀಡರ್, ಕುಂದಾಪುರ.

ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ತು ಬರುವ ತಿಂಗಳ ೧ನೇ ೨ನೇ ತಾರೀಖುಗಳಲ್ಲಿ ಜರಗುವುದು.

ಕಳೆದ ಫೆಬ್ರವರಿ ತಿಂಗಳಲ್ಲಿ ದಕ್ಷಿಣ ಕನ್ನಡ ಡಿಸ್ಟ್ರಿಕ್ ಬೋರ್ಡ ಪ್ರಾಂತ್ಯದಲ್ಲಿ ೨೬೪೭ ಜನನಗಳೂ ೩೮೮೮ ಮರಣಗಳೂ ಇದ್ದವು. ಮರಣಗಳ ಪೈಕಿ ೩೭ ಮರಣಗಳು ಸಿಡುಬುರೋಗದಿಂದಾಗಿದ್ದವು.

ಸ್ತ್ರೀಯರ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಇದ್ದ ಲೇಡಿ ಎಪೊತ್ಕೆರಿಯರಾದ ಮಿಸ್ ಜಾನಕಿಯವರನ್ನು ಕಲ್ಲಿಕೋಟೆಗೆ ವರ್ಗಾಯಿಸಿರುವರಾಗಿ ತಿಳಿದು ಬರುತ್ತದೆ.

ಇಲ್ಲಿಯ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯ ಸಹಾಯಾರ್ಥವಾಗಿ ಇದೇ ತಿಂಗಳ ತಾ. ೧೨ನೇ ಆದಿತ್ಯವಾರದಿಂದ ಒಂದು ಸಪ್ತಾಹದ ಆಚರಣೆಯು ನಡೆಯುವದು. ಇದರ ಕಾರ್ಯಕ್ರಮವು ಈ ರೀತಿಯಾಗಿರುವದು:—ಆದಿತ್ಯವಾರ ಪ್ರಾತಃಕಾಲ ಗಂಟೆ ೭ಕ್ಕೆ—ಫೆನ್ಸಿ ಬಜಾರನ್ನು ತೆರಿಯುವದು. ಬೆಳಿಗ್ಗೆ ೮ ಗಂಟೆಯಿಂದ ೧೨ ಗಂಟೆ ನಂತರ ೨-೩೦ ಗಂಟೆಯಿಂದ ಸಾಯಂಕಾಲ ೫ ಗಂಟೆಯ ವರೆಗೆ ಫೆನ್ಸಿ ಬಜಾರು ತೆರದಿರುವದು. ಸಾಯಂಕಾಲ ಗಂಟೆ ೫-೧೫ಕ್ಕೆ ಶಾಲಾ ವಿದ್ಯಾರ್ಥಿನಿಯರ ಹೆತ್ತವರ ಸಭೆಯು ಜರಗುವದು. ಸೋಮವಾರ ತಾ. ೧೩ಕ್ಕೆ ಮುಂಚಿನ ದಿವಸದಂತೆಯೇ ಫೆನ್ಸಿ ಬಜಾರು ತೆರದಿರುವುದಲ್ಲದೆ ಸಾಯಂಕಾಲ ೪-೩೦ರಿಂದ ೫-೩೦ರ ವರೆಗೆ ಶಾಲಾ ಹುಡುಗಿಯರ ಗಾನವಿದೆ. ಮಂಗಳವಾರ ತಾ. ೧೪ನೇ ದಿನ ಗಂಟೆ ೬-೩೦ಕ್ಕೆ "ಸುಧಾಮಚರಿತೆ" ನಾಟಕವನ್ನು ಅಭಿನಯಿಸುವರು. ಫೆನ್ಸಿ ಬಜಾರಿಗೆ ಪ್ರವೇಶ ಹಾಸಲು ಜನ ಒಂಬಳ್ಕೆ ಆಣೆ ಒಂದು ಮತ್ತು ನಾಟಕಕ್ಕೆ ಟಿಕೇಟುಗಳ ದರವು ಒಂದನೇ ಕ್ಲಾಸಿಗೆ ರೂ. ೧-೦-೦, ಎರಡನೇ ಕ್ಲಾಸಿಗೆ ಆಣೆ ೦-೮-೦ರ ಪ್ರಕಾರವಿದೆ.

(೭ನೇ ಪುಟದಿಂದ ಮುಂದುವರಿಸಿದುದು)

೪ ಉಪನ್ಯಾಸಗಳನ್ನು ಪುತ್ತೂರಲ್ಲಿರುವ ಈ ಮಂಡಲದ ಅಧ್ಯಕ್ಷರಿಗೆ ಆಗಿಂದಾಗ್ಗೆ ಪ್ರಕಟಿಸಲ್ಪಡುವ ತಾರೀಖಿನೊಳಗೆ ಮುಟ್ಟುವಂತೆ ಕಳುಹಿಸಬೇಕು.

೫ ಬರೆದುಬಂದ ಉಪನ್ಯಾಸಗಳಲ್ಲಿ ಅತ್ಯುತ್ತಮವಾದ ಉಪನ್ಯಾಸವು ಯಾ ಉಪನ್ಯಾಸಗಳು ಯಾವುವೆಂದು ಇತ್ಯರ್ಥಿಸುವ ಅಧಿಕಾರವು ಸಂಪೂರ್ಣವಾಗಿ ಈ ಮಂಡಲದ ಅಧ್ಯಕ್ಷರಿಗೆ ಒಪ್ಪಿಸಿದ್ದಾಗಿದೆ. ಅವರ ಇತ್ಯರ್ಥವನ್ನು ಆಕ್ಷೇಪಿಸುವುದಕ್ಕೆ ಯಾರಿಗೂ ಅಧಿಕಾರವಿರುವುದಿಲ್ಲ.

೬ ಉಪನ್ಯಾಸಗಳಲ್ಲಿ ಮೇಲೆ ಕಾಣಿಸಿದಂತೆ ಅತ್ಯುತ್ತಮವಾದುದೆಂದು ಇತ್ಯರ್ಥಿಸಲ್ಪಟ್ಟ ಉಪನ್ಯಾಸಕ್ಕೆ ರೂ ೨೫ ಬಹುಮಾನವಾಗಿ ಕೊಡಲಾಗುವುದು, ಮತ್ತು ಉಳಿದವುಗಳಲ್ಲಿ ಅತ್ಯುತ್ತಮವೆಂದು ಇತ್ಯರ್ಥಿಸಲ್ಪಟ್ಟ ಉಪನ್ಯಾಸಕ್ಕೆ ರೂ. ೧೫ ಬಹುಮಾನವಾಗಿ ಕೊಡಲಾಗುವುದು.

೭ ಉಪನ್ಯಾಸಗಳೊಳಗೆ ಯಾವುದೊಂದು ಉಪನ್ಯಾಸವು ಬಹುಮಾನ ಪಡೆಯುವುದಕ್ಕೆ ತಕ್ಕಷ್ಟು ಅರ್ಹವಲ್ಲವೆಂದು ಅಭಿಪ್ರಾಯವಾದರೆ, ಯಾವುದೊಂದಕ್ಕೂ ಬಹುಮಾನವನ್ನು ಕೊಡದಿರುವುದಕ್ಕೆ ಮಂಡಲಿಯ ಅಧ್ಯಕ್ಷರಿಗೆ ಸ್ವಾತಂತ್ರ್ಯವಿರುವುದು.

೮ ಸ್ಪರ್ಧೆಗಳ ಫಲಿತಾಂಶವನ್ನು ಆಗಿಂದಾಗ್ಗೆ ಪ್ರಕಟಿಸಿ, ಬಹುಮಾನಗಳನ್ನು ಹಂಚಲಿಕ್ಕಿದ್ದರೆ ಕಾರ್ಯಕಾರಿ ಪರಿಷತ್ತಿನ ವೇಳೆ ಹಂಚಲಾಗುವುದು.

೯ ಬಹುಮಾನಗಳನ್ನು ಹೊಂದಿದ ಉಪನ್ಯಾಸಗಳ ಮೇಲೆ ಸದರಿ ಉಪನ್ಯಾಸಗಳನ್ನು ಬರೆದವರಿಗೆ ಅನಂತರ ಯಾವುದೊಂದು ಹಕ್ಕು ಇರಲಿಕ್ಕಿಲ್ಲ. ಅಂತಹ ಉಪನ್ಯಾಸಗಳನ್ನು ಯುಕ್ತತೋರಿದಂತೆ ಪ್ರಕಟಿಸುವರೆ ಯಾ ವಿನಿಯೋಗಿಸುವರೆ ಈ ಮಂಡಲಕ್ಕೆ ಸಂಪೂರ್ಣ ಅಧಿಕಾರವಿರುತ್ತದೆ.

೧೦ ಬಹುಮಾನಹೊಂದದ ಉಪನ್ಯಾಸಗಳನ್ನು ಬರೆದವರು ವಾಪಸು ಪಡೆಯಲಪೇಕ್ಷಿಸಿ ಸ್ಪರ್ಧೆಯ ಫಲಿತಾಂಶವು ಪ್ರಕಟವಾದ ಒಂದು ತಿಂಗಳೊಳಗಾಗಿ ಅಗತ್ಯವಿರುವ ಅಂಚೆ ಖರ್ಚನ್ನು ಕಳುಹಿಸಿದ್ದಲ್ಲಿ ಅವರವರಿಗೆ ಟಪ್ಪಾಲುದ್ವಾರ ವಾಪಾಸು ಕಳುಹಿಸಲಾಗುವುದು; ಆದರೆ ಅವುಗಳನ್ನು ಸುರಕ್ಷಿತವಾಗಿ ಸಂಬಂಧಪಟ್ಟವರಿಗೆ ತಪ್ಪದೆ ಮುಟ್ಟಿಸುವ ವಿಷಯದಲ್ಲಿ ಯಾವುದೊಂದೂ ತರದ ಜವಾಬ್ದಾರಿ ವಹಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ.

ಪುತ್ತೂರು,
ತಾ. 8-4-'25. } M. ANANTHA RAO.
ಕಾರ್ಯದರ್ಶಿ.

ಪತ್ರವ್ಯವಹಾರ.

ದಕ್ಷಿಣ ಕನ್ನಡ ಸೆಂಟ್ರಲ್ ಕೊ-ಒಪರೇಟಿವ್ ಬೇಂಕು, ಲಿಮಿಟೆಡ್, ಪುತ್ತೂರು.

ಅಯ್ಯಾ,

ವ್ಯಾದೆ ದಾಟಿದ ಸಾಲಗಳ ವಿಷಯ ಕಳೆದ ಸಾರಿ ಪ್ರಸ್ತಾಪಿಸಿದ್ದಾಯಿತು. ಬೇಂಕಿನ ಮೆಂಬರರಾಗಿರುವ ಸೊಸೈಟಿಗಳಿಗೆ ಕೊಟ್ಟು ಬರುವಂಥ ಸಾಲಗಳ ಜುಮ್ಲಾ ಮೊಬಲಗು ಸುಮಾರು ೧೨ ಲಕ್ಷ ರೂಪಾಯಿಗಳಿಗೆ ಬಂದಿದೆ. ಇದರಲ್ಲಿ ಕೋ-ಒಪರೇಟಿವ್ ಸ್ಟೋರ್ಸ್ಸುಗಳಿಗೆ ಕೊಟ್ಟ ಐವಜುಗಳ ಪೈಕಿ ರೂ. ೬೮,೩೪೮-೦-೦ನ್ನು ಕುಳುವಾರ ಬಾಡಿ ಲೆಕ್ಕಕ್ಕೆ ವಜಾ ಮಾಡಲು ಪ್ರತ್ಯೇಕಿಸಿಟ್ಟಿರುತ್ತಾರೆ. ಮಿತ ಜವಾಬ್ದಾರಿಯ ಸ್ಟೋರ್ಸ್ಸು ಇತ್ಯಾದಿ ಸಂಘಗಳಿಗೆ ಸಾಲವಾಗಿ ಕೊಟ್ಟ ಮೊಬಲಗುಗಳ ಪ್ರತ್ಯೇಕ ಸಂಖ್ಯೆಯನ್ನು ಬೇಂಕಿನ ವರದಿಯಿಂದ ಗೊತ್ತುಮಾಡಿಕೊಳ್ಳಲು ಉಪಾಯವಿಲ್ಲ. ಬೇಂಕಿಗೆ ಸಂಯೋಜಿಸಲ್ಪಟ್ಟ ಮಿತಜವಾಬ್ದಾರಿ ಸಂಘಗಳಲ್ಲಿ ಬೇರೆ ಬೇರೆ ಸ್ವಭಾವದ ಸಂಘಗಳಿರುವವು, ಲೇವಾದೇವಿ ಕ್ರಮಗಳು ಈ ಸಂಘಗಳಲ್ಲಿ ಒಂದೇ ವಿಧವಾಗಿರವು, ಸೆಂಟ್ರಲ್ ಬ್ಯಾಂಕಿನಿಂದ ಪಡೆದ ಸಾಲಗಳ ವಿನಿಯೋಗವು ಒಂದೇ ರೀತಿಯಾಗಿರದು. ಈ ಸಾಲಗಳ ವಿನಿಯೋಗಗಳು ಸಹಕಾರ ತತ್ವವನ್ನು ಎಷ್ಟರ ಮಟ್ಟಿಗೆ ಅವಲಂಬಿಸಿಕೊಂಡಿವೆ ಎಂಬುದು ಹೇಳಲು ಸಾಧ್ಯವಿಲ್ಲ. ಈ ಎಲ್ಲಾ ವಿಚಾರವನ್ನು ಬೇಂಕಿನ ಅಧಿಕಾರಿಗಳು ಮಾಡಿಕೊಂಡಿರಬೇಕು. ಪುತ್ತೂರು ಸ್ಟೋರ್ಸ್ಸು ಮತ್ತು ಮಂಗಳೂರು ಕೊ-ಒಪರೇಟಿವ್ ಟ್ರೇಡಿಂಗ್ ಯೂನಿಯನ್ನುಗಳಿಂದ ರೂಪಾಯಿ ಆರು ಸಾವಿರಕ್ಕೆ ಮುಟ್ಟಿದ ಪೆಟ್ಟು ಬಂದಂತಾದರೆ ಇನ್ನುಳಿದ ಮಿತಜವಾಬ್ದಾರಿ ಸಂಘಗಳ ಮೇಲೆ ಬಾಕಿ ಇರುವ ಸಾಲಗಳ ಪರಿಶೀಲನೆಯನ್ನು ಮಾಡಿ ಅಂಥಾ ಸಾಲಗಳ ಸಾಧಕ ಬಾಧಕಗಳ ವಿಷಯ ಒಂದೆರಡು ಮಾತುಗಳನ್ನಾದರೂ ಪಾಲುಮಾಲಿಕರ ಸಮಾಧಾನದ ಬಗ್ಗೆ ವರದಿಯಲ್ಲಿ ಸೂಚಿಸುವದು ಅಗತ್ಯವಿತ್ತು. ಸಹಕಾರ ತತ್ವಗಳನ್ನು ಬೀರಿ ಬಿಸಿಪತ್ತಿನ ಲೇವಾದೇವಿಗಳ ಮೂಲಕ ಸಮಾಜಕ್ಕೆ ಒಳ್ಳಿತವನ್ನು ಸಾಧಿಸುವ ಅವಸರದಲ್ಲಿ ಸಹಕಾರ ತತ್ವವು ಹಾಕಿಟ್ಟ ಮೇರೆಯನ್ನು ಮೀರಿಕೊಂಡು ವ್ಯಾಪಾರಿಗಳಂತೆಯೇ ವ್ಯಾಪಾರದಲ್ಲಿ ಮೇಲಾಟ ನಡಿಸಿ ಮಿತ ಜವಾಬ್ದಾರಿಯ ಸಂಘಗಳು ಕಳಚಿ ಬೀಳುವದು ಅಸಾಮಾನ್ಯವಲ್ಲ. ಆದ್ದರಿಂದ ಬಲವಾದ ದ್ರವ್ಯ ಸಂಚಯವು ಬೇಂಕಿನ ರಿಜರ್ವ್ ಫಂಡಿನಲ್ಲಿ ಇಲ್ಲದ ವೇಳೆಯಲ್ಲಿ ಬೇಂಕಿನ ಸಾಲ ಬಾಕಿ ಮಾಡಿಕೊಂಡಿರುವ ಮಿತ ಜವಾಬ್ದಾರ ಸಂಘಗಳ ದಿವಾಳಿ ಅಂದರೆ ಬೇಂಕಿನ ಸಹಾಯಶಕ್ತಿಯನ್ನು ಮುರಿದುಬಿಟ್ಟಂತಾಗುವುದು.

ಇನ್ನು ಅಮಿತ ಜವಾಬ್ದಾರಿ ಸಂಘಗಳ ಮೇಲೆ ಸಾಲಗಳು ಯಾವ ರೀತಿಯಲ್ಲಿ ಬಾಕಿ ಉಳಿದಿರುವವೂ ಗೊತ್ತಾಗುವದಿಲ್ಲ. ಇವುಗಳಲ್ಲಿ ಒಂದೆರಡು ಸಂಘಗಳು ಮುಚ್ಚಲ್ಪಟ್ಟಿವೆ. ಬೇರೆ ಕೆಲವು ಸಂಘಗಳು ಮುಚ್ಚಲ್ಪಡಲು ತಯ್ಯಾರಿರುವವು. ಬೇಂಕಿನ ಸಾಲಗಳು ಆಧರಿಸಿಕೊಂಡಿರುವ ಜವಾಬ್ದಾರಿಗಳು ಅಮಿತವಾದದರಿಂದ ಮಿತಜವಾಬ್ದಾರಿಯಂತೆ ಇವುಗಳಿಂದ ನಷ್ಟ ಉಂಟಾಗುವದಿಲ್ಲ. ಆದರೆ ಹಣದ ನಷ್ಟವಿಲ್ಲವೆಂತ ಹೇಳಿದರೂ ಅಮಿತ ಜವಾಬ್ದಾರಿಯ ಸಂಘಗಳಲ್ಲಿ ಸಾಲದ ಮರುಪಾವತಿಯ ವ್ಯವಸ್ಥೆಯು ತಕ್ಕ ರೀತಿಯಲ್ಲಿಲ್ಲದಿದ್ದರೆ ಆ ಮೂಲಕ ಉಂಟಾಗುವ ಗಲಿಬಿಲಿಯಲ್ಲಿ ಸಂಘಗಳನ್ನು ಮುಚ್ಚುವ ಸಂಭವಗಳು ಹನ್ನಂತೆಯೇ ಉಂಟಾಗುತ್ತವೆ. ಹೀಗೆ ಸಂಘಗಳನ್ನು ಮುಚ್ಚುವುದೆಂದರೆ ಸಹಕಾರ ಚಳವಳವನ್ನು ಅದು ಎಷ್ಟು ಅನಪೇಕ್ಷಿತ ದುರವಸ್ಥೆಗೆ ಗುರಿಪಡಿಸುವುದೆಂಬುದನ್ನು ಇಲ್ಲಿ ಪ್ರತ್ಯೇಕವಾಗಿ ಹೇಳಬೇಕೆಂದಿಲ್ಲ. ಸಂಘವನ್ನು ಮುಚ್ಚುವ ಸಂದರ್ಭಗಳಲ್ಲಿ ಸಂಘದಿಂದ ಏನೂ ಹಣ ಪಡೆಯದೆ ನಷ್ಟವೆಂದ ಸಹ ತಮ್ಮ ಪಾಲುಧಂಡವಾದ ಬಾಕಿಯನ್ನು ಬರಿಗೆನಿಸದೆ ಸೆಂಟ್ರಲ್ ಬೇಂಕಿನ ಸಾಲದ ಹಣಗಳನ್ನು ವಸೂಲುಮಾಡಿಕೊಳ್ಳಬಹುದು. ಹೀಗೆ ಹಣ ವಸೂಲು ಮಾಡುವದರಿಂದ ಬೇಂಕಿನ ಹಣವನ್ನು ಭರ್ತಿಮಾಡಿಕೊಳ್ಳಬಹುದಾದರೂ ಸಹಕಾರ ತತ್ವದಲ್ಲಿ ಜನರಿಗೆ ನಂಬಿಗೆಯುಂಟಾಗುವ ಬಗೆಗೆ ದಿಗಿಲು ಉಂಟಾಗಿ ಯಾವ ಉದ್ದೇಶಗಳ ನೆರವೇರಿಕೆಯ ಬಗ್ಗೆ ಸೆಂಟ್ರಲ್ ಬೇಂಕು ಇತ್ಯಾದಿಗಳು ಸ್ಥಾಪಿಸಲ್ಪಟ್ಟಿರುವವೂ ಅಂಥಾ ಉದ್ದೇಶಗಳ ಫಲ ಸಾಧನೆಯ ಅವಿಶ್ವಾಸದ ಮೂಲಕ ಕಷ್ಟವಾಗುವುದು.. ಬೇಂಕಿಗೆ ಬರಬೇಕಾಗಿರುವ ಹಣ ವಸೂಲಿಯ ಪ್ರಯತ್ನಗಳಲ್ಲಿ ಅಭಾವವನ್ನು ಕಾಳುವುದರಿಂದ ಇಂಥಾ ಪರಿಣಾಮವು ಸಂಯೋಜಿತ ಸಂಘಗಳಿಗೆ ಬಂದೇಬರುತ್ತದೆ. ಆದ್ದರಿಂದ ಸಾಮಾನ್ಯ ವಿಧ್ಯಮಾನಗಳಲ್ಲಿ ಕ್ಲಪ್ತವ್ಯಾದೆಗೆ ಹಣಗಳನ್ನು ಸಂಘಗಳಿಂದ ವಸೂಲು ಪಡಿಯುವದಂಥಾದ್ದು ಅತ್ಯಗತ್ಯ. ಹೀಗಿರುತ್ತ ಸಾಲಗಳನ್ನು ವ್ಯಾದೆಗೆ ವಸೂಲು ಕೊಡದೆ ವ್ಯಾದೆ ಮುಂದರಿಸುವ ಅರ್ಜಿಗಳನ್ನು ಮಾಡಿ ವರುಷಕಟ್ಟಳೆಯಿಂದ ಬಾಕಿ ಇರುವಂಥ ಸಾಲಗಳು ಸೆಂಟ್ರಲ್ ಬ್ಯಾಂಕಿನಿಂದ ಸಾಲವಾಗಿ ಕೊಡೋಣಾದ ೧೨ ಲಕ್ಷಗಳ ಮೊಬಲಗಿನಲ್ಲಿ ಎಷ್ಟಿರುವವೋ ತಿಳಿಯಲು ಸಾಧ್ಯವಿಲ್ಲ. ಸಂಘಗಳ ಸ್ಥಿತಿಯನ್ನು ನೋಡಿದರೆ ಬೇಂಕಿನ ಹಣವನ್ನು ಪರತು ಕ್ಲಪ್ತಕಾಲದಲ್ಲಿ ಕೊಡುವಂಥಾ ಆತುರವು ಇಲ್ಲ ಅಥವಾ ಬಹಳ ಮಟ್ಟಿಗೆ ಕಡಿಮೆಯಾಗಿದೆಯೆಂದರೂ ಅದು ತಪ್ಪಾಗದು. ಸಂಘಗಳಲ್ಲಿ ಅಲ್ಲಲ್ಲಿ ವ್ಯಕ್ತವಾಗಿ ಬರುತ್ತಿರುವ ಈ ಭಾವವು ಸೆಂಟ್ರಲ್ ಬೇಂಕಿನವರ ಲಕ್ಷ್ಯಕ್ಕೆ ಬಂದಿರುವದೋ, ಬಂದಿರುವುದಾದರೆ ಬೇಂಕಿನವರು ಇಂಥಾ ಭಾವವನ್ನು ಬೆಳೆಯಬಿಡದಂತೆ ಯಾವ ಎಚ್ಚರವನ್ನು ತಕ್ಕೊಂಡಿರುವರೆಂಬುದು ಸಹ ತಿಳಿಯಲು ಸಾಧ್ಯವಿಲ್ಲ. ಆರು ಸಾವಿರಕ್ಕೆ ಮಿಕ್ಕಿದ ಕುಳುವಾರ ಬಾಡಿಯು ಗತವರುಷದಲ್ಲಿ ಬಂತು. ಇನ್ನು ಇಂಥಾ ಕುಳುವಾರ ಬಾಡಿಯು ಎಷ್ಟು ಬರಬಹುದು, ಸಂಘಗಳ ಸ್ಥಿತಿಯು ಹೇಗಿದೆ? ಮಿತಜವಾಬ್ದಾರಿ ಸಂಘಗಳಲ್ಲಿ ಇನ್ನೂ ಆದ್ದು ಬಿಡಬೇಕಾದ ಸಾಲಗಳ ಮೊಬಲಗುಗಳೆಷ್ಟು? ಈ ವಿಚಾರ ದೃಷ್ಟಿಯಿಂದ ವರದಿಯ ಚರ್ಚೆಯನ್ನು ಮಹಾಸಭೆಗಳಲ್ಲಿ ಮಾಡಲು ಯಾವ ಆಸ್ಪದವೂ ವರದಿಯಲಿಲ್ಲ. 'ಪರಸ್ಪರ ಸಹಾಯ'ವನ್ನು ಸಮರ್ಪಕವಾದ ರೀತಿಯಲ್ಲಿ ಒಬ್ಬೊರಿಗೊಬ್ಬರು ಮಾಡಬೇಕಾದರೆ ಒಬ್ಬರಿಗೊಬ್ಬರ ಪರಿಚಿತಿಯು, ಮಾಹಿತಿಯು ಚೆನ್ನಾಗಿದ್ದು ಮೈತ್ರಿಯು ಬೆಳೆಯಬೇಕು ಇಂಥಾ ಮೈತ್ರೀ ಭಾವದಿಂದ ಸಹಾಯವನ್ನು ಮಾಡಬೇಕು. ಪರಸ್ಪರ ಪರಿಚಿತಿಯು ಇಲ್ಲದ ಪಕ್ಷದಲ್ಲಿ ಸ್ನೇಹದ ಮಾತೆಲ್ಲಿ? ಸೆಂಟ್ರಲ್ ಬ್ಯಾಂಕಿನ ಮೆಂಬರರಾಗಿರುವ ಸಂಯೋಜಿಸಲ್ಪಟ್ಟ ಸಂಘಗಳಲ್ಲಿ ಒಂದರ ಪರಿಚಿತಿ ಇನ್ನೊಂದಕ್ಕಿಲ್ಲವೆಂತಾದರೆ, ಒಂದರ ಲೇವಾದೇವಿ ಇತ್ಯಾದಿಗಳಲ್ಲಿ ತೋರ್ಪಡಿಸುವ ವರ್ತನೆಯ ಲಕ್ಷಣಗಳು ಮತ್ತೊಂದಕ್ಕೆ ತಿಳಿಯಲು ಸಾಧ್ಯವಲ್ಲದಿದ್ದರೆ ಕೇಂದ್ರಸಂಸ್ಥೆಯಾದ ಸೆಂಟ್ರಲ್ ಬ್ಯಾಂಕಿನ ಸಂಯೋಜನೆಯಿಂದ ಏನು ಪ್ರಯೋಜನ? ಅತಿ ಸರಳವಾದ ರಮ್ಯವಾದ ಮತ್ತು ಶುದ್ಧವಾದ ಇಂಗ್ಲೀಷ ಭಾಷೆಯಲ್ಲಿ ವರದಿಯನ್ನು ಬರೆದು ಅದರಲ್ಲಿ ಸಹಕಾರ ತತ್ವದ ಉಚ್ಚ ಆದರ್ಶಗಳನ್ನು ಸೂಚಿಸುವದರಿಂದ ಈ ಜಿಲ್ಲೆಯಲ್ಲಿ 'ಸಹಕಾರ'ದ ಯಥಾರ್ಥವಾದ ಸ್ಥಿತಿಯು ವ್ಯಕ್ತವಾಗುವದೇ? ಮಾತಾಡಲು ಗೊತ್ತಿಲ್ಲದ ಹಳ್ಳಿ ಜನರಿಗೆ ಈ ತತ್ವಗಳನ್ನು ವರದಿಯ ಮೂಲಕ ಬೇಂಕಿನ ಚಾಲಕರಲ್ಲೊಬ್ಬರು ಓದಿ ಹೇಳಿ ಇನ್ನೊಬ್ಬ ಚಾಲಕರು ನಿರ್ಣಯಗಳನ್ನು ಬರೆಯುವದರಿಂದ ಪ್ರಯೋಜನವೇನು? ಸಂಯೋಜಿತ ಸಂಘಗಳಲ್ಲಿ ಅಥವಾ ಅಂಥಾ ಸಂಘಗಳ ಪರವಾಗಿ ಬರುವಂಥ ಪ್ರತಿನಿಧಿಗಳಲ್ಲಿರುವಂಥ ವಿಚಾರ ಬುದ್ಧಿಗೆ ವಿಕಾಸಕೊಡುವ ರೀತಿಯಲ್ಲಿ ವಾರ್ಷಿಕ ವರದಿಯ ಸ್ವರೂಪವು ಇಲ್ಲದಿದ್ದರೆ ಇಂಥಾ ವರದಿಗಳನ್ನು ಉದ್ದುದ್ದವಾಗಿ ಅಚ್ಚು ಹಾಕಿಸುವುದು ಏಕೆ? ಬೇಂಕಿನ ನಿಯಮಗಳ ಕುರಿತು ಬರೆಯುವುದರ ಮೊದಲು ವರದಿಯಲ್ಲಿ ಸೂಚಿತವಾದ ಇನ್ನೂ ಕೆಲವು ಅಂಗಗಳ ವಿಷಯ ಪ್ರಸ್ತಾಪಿಸಬೇಕೆಂತಿರುವೆನು. ಬೇಂಕಿನಿಂದ ಕೊಡೋಣಾದ ಸಾಲಗಳ ಕುರಿತು ಇನ್ನು ಒಂದೆರಡು ಮಾತುಗಳನ್ನು ಬರೆದಾದ ನಂತರ ಈ ಅಂಗಗಳ ವರ್ಣನೆಯನ್ನು ಮಾಡಬೇಕೆಂತಿದ್ದೇನೆ.

ಪ್ರತಿನಿಧಿ,
ಟೌನ್ ಕೊ-ಒಪರೇಟಿವ್ ಬೇಂಕ್ ಲಿಮಿಟೆಡ್,
ಮಂಗಳೂರು.

ಪ್ರಿಯ ಭಗಿನಿಯರೇ, ಮತ್ತು ದೇಶಬಾಂಧವರೇ,

ಮಲೆನಾಡು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಶ್ರೀಯುತ ಎಸ್. ಶ್ರೀನಿವಾಸ ಐಯ್ಯಂಗಾರರವರ ಸಂಚಾರದಿಂದ ಆ ಪ್ರಾಂತ್ಯಗಳಿಗೆ ಮಹದುಪಕಾರವಾಗಿದೆಯೆಂದು ನಾನು ನೆನೆಸುತ್ತೇನೆ. ಒಬ್ಬೊಬ್ಬರ ಮನೋಭಿಪ್ರಾಯಗಳನ್ನು ತಿಳಿದುಕೊಳ್ಳುವುದಕ್ಕೆ ಅವಕಾಶ ಉಂಟಾಗಿ, ಜನಗಳಿಗೆ ಅವರ ಜವಾಬ್ದಾರಿಯನ್ನು ತಿಳಿದುಕೊಳ್ಳಲು ಇವರ ಸಂದೇಶವು ಬಹಳ ಮಟ್ಟಿಗೆ ಸಹಾಯಕರವಾಗದೆ ಇರಲಿಕ್ಕಿಲ್ಲ:—

ಹಿಂದೂ ಮತಕ್ಕೆ ಸಂಬಂಧಪಡುವ ಪುದುವಟ್ಟಿನ ಕಾನೂನು ಇದಕ್ಕೆ ನಿದರ್ಶನೀಯವಾಗಿದೆ. ಮಠಾಧಿಪತಿಗಳು ಈ ಕಾನೂನಿನಿಂದ ಹಿಂದೂ ಮತಕ್ಕೆ ಒದಗಬಹುದಾದ ಕಷ್ಟಗಳನ್ನು ಪರಿಗಣಿಸದೆ ತಟಸ್ಥರಾಗಿ ನಿಂತದ್ದರಿಂದಲೇ ಈ ಭಯೋತ್ಪಾದಕವಾದ ಮಸೂದೆಯ ಮಂಜೂರಾತಿಗೆ ಕಾರಣವಾಯಿತು. ಸುಪ್ರಸಿದ್ಧ ವಕೀಲರಾದ ಶ್ರೀನಿವಾಸ ಅಯ್ಯಂಗಾರರೊಡನೆ ಮಠಾಧಿಪತಿಗಳು ಮುಖತಃ ಮಾತನ್ನು ಬೆಳಸಿದ್ದರಿಂದ ತಮ್ಮ ಜವಾಬ್ದಾರಿಕೆಗೆ ಕಣ್ದೆರೆಯಲ್ಪಟ್ಟವರಾಗಿ, ಈ ಮಸೂದೆಯ ಮಂಜೂರಾತಿಗೆ ಅಡ್ಡ ಹಾಕಲು ಸರ್ವ ಪ್ರಯತ್ನಗಳನ್ನು ಮಾಡಬೇಕೆಂದು ನಿಶ್ಚಯಿಸಿರುವರು. ಈ ಕಾರ್ಯದಲ್ಲಿ ಶಿಷ್ಯಮಂಡಲಿಯವರೂ ಮತ್ತೂ ಇತರ ಸಹೃದಯರೂ ಸಹಾಯಕರಾಗುವರೆಂದು ಶ್ರೀ.ಗಳವರು ನೆನಸುತ್ತಾರೆ.

ಶ್ರೀಯುತ ದೇಶಭಕ್ತ ಕಾರ್ನಾಡ ಸದಾಶಿವರಾಯರಿಂದ ನಡೆಸಲ್ಪಡುತ್ತಿರುವ ವಿದ್ಯಾ ಸಂಸ್ಥೆಗಳನ್ನು ಪರಾಂಬರಿಸಲು ಶ್ರೀಯುತ ಅಯ್ಯಂಗಾರರವರಿಗೆ ಬಹಳ ಆನಂದವಾಯಿತು. ಇವರ ನಿಷ್ಕಲ್ಮಷವಾದ ದೇಶಭಕ್ತಿಯನ್ನೂ, ನಿಶ್ಚಂಚಲವಾದ ಹೃದಯವನ್ನೂ, ಸ್ವಾರ್ಥತ್ಯಾಗವನ್ನೂ, ಕಂಡು ಶ್ರೀಯುತ ಐಯ್ಯಂಗಾರರವರು ಬಹಳ ಸಂತುಷ್ಟರಾದರು. ಖದ್ದರ್ ಮತ್ತು ಚರಕದ ವಿಷಯವಾಗಿ ಮಹಾತ್ಮಾಜಿಯವರ ಬಲಗೈಯಾದ ಶ್ರೀಯುತ ಐಯ್ಯಂಗಾರರಿಂದ ಹೇಳಲ್ಪಟ್ಟ ಸಂದೇಶವು ವೃಥಾಸಮುದ್ರಕ್ಕೆ ನೀರನ್ನು ಬೆರಸುವಂತೆ ನಿಷ್ಫಲವಾಗಲಾರದೆಂದು ನಾನು ಭಾವಿಸುತ್ತೇನೆ.

ಈ ಸಮಯದಲ್ಲೇ, ಮುಂದಿನ ಚುನಾವಣೆಯಲ್ಲಿ ಶ್ರೀಯುತ ಬಾಲಕೃಷ್ಣ ಸೆಟ್ಟಿಯವರನ್ನು ಕೌನ್ಸಿಲಿನ ಮೆಂಬರರಾಗಿ ಚುನಾವಣೆಮಾಡಬೇಕಾಗಿ ಶ್ರೀಯುತ ಐಯ್ಯಂಗಾರರವರು ಇಚ್ಛಿಸುತ್ತಾರೆ. ಶ್ರೀಯುತ ಸೆಟ್ಟಿಯವರು ಸ್ವರಾಜ್ಯಪಕ್ಷವನ್ನು ಸೇರಿ, ದೇಶೀಯೈಕ್ಯಕ್ಕಾಗಿಯೂ, ಈ ಬೇಜವಾಬ್ದಾರಿ ಸರಕಾರವನ್ನು ಕಳಚಿಬಿಡುವುದಕ್ಕಾಗಿಯೂ, ಜನಸಾಮಾನ್ಯದಲ್ಲಿ ಕಾರ್ಯ ಗೌರವವನ್ನು ಹೆಚ್ಚಿಸುವುದಕ್ಕಾಗಿಯೂ, ಕೌನ್ಸಿಲಿನಲ್ಲಿ ಕಾರ್ಯಮಾಡುವುದಾಗಿ ವಚನವಿತ್ತಿರುವುದರಿಂದ ತಮ್ಮಗಳ ಓಟನ್ನು ಅವರಿಗೆ ಕೊಡಬೇಕೆಂದು ಪ್ರಾರ್ಥನೆ.

ನಮ್ಮ ಮುಂದಿರುವ ಕಾರ್ಯವು ಬಹಳ ಜವಾಬ್ದಾರಿಕೆಯದು, ಮತ್ತು ಭಿನ್ನತೆಯುಳ್ಳದ್ದು ಅದುದರಿಂದ ಕಾಂಗ್ರೆಸ್ಸಿನವರೆಲ್ಲರೂ ಒಟ್ಟುಗೂಡಿ, ದಕ್ಷಿಣ ಕನ್ನಡ ಜಿಲ್ಲೆಗೆ ಒಂದು ಸ್ವರಾಜ್ಯಪಕ್ಷವನ್ನು ಸ್ಥಾಪಿಸಿಕೊಳ್ಳಬೇಕು. ಕಾಂಗ್ರೆಸ್ಸಿನವರ ಐಕ್ಯ ಮತ್ತ ಬೇರೆಯದರಿಂದ ಈ ಕಾರ್ಯವು ಸಾಧ್ಯವಲ್ಲ. ಕಾಂಗ್ರೆಸ್ಸಿನವರೇ ಇದನ್ನು ಕೈಕೊಳ್ಳಬೇಕು. ಇದಕ್ಕಾಗಿ ಬೆಳಗಾಂ ಕಾಂಗ್ರೆಸ್ಸಿನವರಿಂದ ಬೆಂಬಲಿತವಾಗಿರುವ ಸ್ವರಾಜ್ಯಪಕ್ಷವನ್ನು ಒತ್ತಾಯಮಾಡಿ ಅನ್ಯಾಯದಿಂದ ಸರಕಾರವನ್ನು ವಿರೋಧಿಸಲು ಸಿದ್ಧರಾಗಬೇಕು,

ಈ ವಿಷಯವಾಗಿ ತಮ್ಮಗಳ ಸಲಹೆಯನ್ನು ನಿರೀಕ್ಷಿಸುತ್ತೇನೆ. ಜಾಗ್ರತೆಯಾಗಿ ಎಲ್ಲರೂ ಸೇರಿ ಕಾರ್ಯಕ್ರಮವನ್ನು ನಿರ್ಧರಿಸಬೇಕಾಗಿದೆ. ಇದಕ್ಕೆ ಅನುಕೂಲವಾದ ಸ್ಥಾನವನ್ನೂ ತಾರೀಕನ್ನೂ ತಾವೆ ಸೂಚಿಸಬೇಕಾಗಿ ಪ್ರಾರ್ಥನೆ.

ತಮ್ಮ ಜವಾಬನ್ನು ಈ ಪತ್ರಮೂಲಕ ಆತುರದಿಂದ ನಿರೀಕ್ಷಿಸುತ್ತೇನೆ.

ಉಡುಪಿ, 3-4-'25. ಹೊಸಕೊಪ್ಪ ಕೃಷ್ಣರಾವ್

ಉಡುಪಿ ತಾಲೂಕು ಬೋರ್ಡಿನ ಉಡುಪಿ ಸರ್ಕಲಿನ ಓಟರುಗಳಲ್ಲಿ, ಸಹಾಯಕರಲ್ಲಿ.

ಅಯ್ಯಾ

ತಾವೆಲ್ಲರೂ ನನ್ನಲ್ಲಿ ಏಕಪ್ರಕಾರವಾಗಿ ನಂಬುಗೆಯಿಟ್ಟು, ಏಕರೀತಿಯಾಗಿ ಪ್ರೋತ್ಸಾಹಿಸಿ, ತಮ್ಮೆಲ್ಲರ ಏಕಮತದಿಂದ ಇಂದಿನ ಚುನಾವಣೆಯಲ್ಲಿ ನನ್ನನ್ನು ಅಗ್ರಗಣ್ಯನನ್ನಾಗಿ ಆರಿಸಿದುದಕ್ಕಾಗಿ ನನ್ನ ಮನಃಪೂರ್ವಕವಾದ ಧನ್ಯವಾದಗಳಿವೆ. ಜಿಲ್ಲೆಯ ಇತರ ಪ್ರದೇಶಗಳಲ್ಲಿ, ಇಂತಹ ಚುನಾವಣೆಗಳಲ್ಲಿ ಕಂಗೊಳಿಸುತ್ತಿದ್ದ ಆ ವ್ಯಕ್ತಿದ್ವೇಷಕ್ಕಾಗಲಿ, ಜಾತಿದ್ವೇಷಕ್ಕಾಗಲಿ ಈ ನನ್ನ ಚುನಾವಣೆಯಲ್ಲಿ ಎಡೆಯಿರಲಿಲ್ಲ; ಆ ವ್ಯಕ್ತಿ ಈ ವ್ಯಕ್ತಿಯೆನ್ನದೆ, ಎಲ್ಲ ಜಾತಿಯವರೂ ಮತದವರೂ ಜನ ತಾವು ನನ್ನಲ್ಲಿ ತಮ್ಮ ಏಕಪ್ರಕಾರವಾದ ವಿಶ್ವಾಸವನ್ನು ಪ್ರದರ್ಶಿಸಿರುವಿರಿ. ಇದಕ್ಕಾಗಿ ನಾನೆಷ್ಟು ತಮಗೆ ಕೃತಜ್ಞನಾದರೂ ಸಾಲದು. ತಮ್ಮ ಈ ಏಕಪ್ರಕಾರವಾದ ವಿಶ್ವಾಸಕ್ಕೆ ಸರ್ವಪ್ರಕಾರದಿಂದಲೂ ಅರ್ಹನೆನಿಸಿಕೊಳ್ಳಲು ಶಕ್ತಿಮೀರಿ ಪ್ರಯತ್ನಪಡುವುದು ನನ್ನ ಪ್ರಥಮ ಕರ್ತವ್ಯವೆಂದು ತಿಳಿದಿರುತ್ತೇನೆ. ಚುನಾವಣೆಯಲ್ಲಿ ನನಗೆ ಸಹಾಯಕರೂ ಪ್ರೋತ್ಸಾಹಕರೂ ಆದ ನನ್ನ ಸನ್ಮಿತ್ರರೇ! ತಮಗೆಲ್ಲರಿಗೂ ನನ್ನ ಅಶೇಷ ಧನ್ಯವಾದಗಳು.

ಜನಸೇವೆಯ ದೃಷ್ಟಿಯಿಂದ ದೊಡ್ಡ ಜವಾಬ್ದಾರಿಯನ್ನೇ ನನ್ನ ಮೇಲೆ ತಾವು ಹೊರಿಸಿರುವಿರಿ. ಈ ನನ್ನ ಕರ್ತವ್ಯವನ್ನು ನಾನು ನೆರವೇರಿಸುವಲ್ಲಿ ತಮ್ಮೆಲ್ಲರ ಜನಾಭಿಪ್ರಾಯವೆಂಬ ನೆರವು ನನಗೆ ಅತ್ಯಗತ್ಯವೆಂದು ಅಂಗೀಕರಿಸುತ್ತೇನೆ. ತಮ್ಮ ತಮ್ಮ ಗ್ರಾಮಗಳಲ್ಲಿ ವಿದ್ಯೆ, ಆರೋಗ್ಯ, ಮರಾಮತ್ತು ಮೊದಲಾದುವುಗಳ ಅಭಿವೃದ್ಧಿಪ್ರಶ್ನೆಗೆ ಏನೇನು ಅಗತ್ಯವೆಂಬುದನ್ನು ತಾವು ನನಗೆ ಆಗಾಗ ತಿಳಿಸುತ್ತಿರಬೇಕು.

ಇಂತಿ ತಮ್ಮ ನಂಬುಗೆಯ,
ಎನ್. ರಾಜಗೋಪಾಲಕೃಷ್ಣ ರಾವ್.

— ದೇವೀಜಾತ್ರೆ. —

ಅನೇಕ ಸ್ಥಳಗಳಲ್ಲಿ ಗ್ರಾಮ ದೇವತೆಗಳ ಹಬ್ಬವು ಪ್ರಾರಂಭವಾಗಿ ಆ ಹಬ್ಬಗಳ ನೆವದಿಂದ ಸಹಸ್ರಾರು ಪ್ರಾಣಿಗಳು ಇಹಲೋಕದ ಯಾತ್ರೆಯನ್ನೇ ಮುಗಿಸಿಬಿಡುವ ವಿಷಯವು ಸರ್ವರಿಗೂ ತಿಳಿದದ್ದೇ ಆಗಿದೆ. ಈ ಅಧರ್ಮ ಕೃತ್ಯವನ್ನು ನಿಲ್ಲಿಸಲು ದಾವಣಗೆರೆ ತಾಲೂಕು ಮಳಲ್ಕೆರೆ ಗ್ರಾಮದವರು ಅನುಸರಿಸಿರುವ ವಿಧಾನವನ್ನು ನೋಡಿ ಇತರ ಗ್ರಾಮಸ್ಥರಾದರೂ ಹಿಂಸಾಯುಕ್ತ ದೇವೀಜಾತ್ರೆಯುಂಟಾಗುವ ಪಾಪಕೃತ್ಯವನ್ನು ನಿಲ್ಲಿಸಿ ಆ ಮೂಲಕ ಪುಣ್ಯಭಾಗಿಗಳಾಗಲೆಂಬ ಉದ್ದೇಶದಿಂದ ಈ ವಿಷಯವನ್ನು ಪ್ರಕಟಿಸಲಾಗಿದೆ. ಅದುವರಿಂದ ಇದುವರೆಗೂ ಹಿಂಸಾಯುಕ್ತವಾದ ದೇವೀಜಾತ್ರೆಯನ್ನು ಮಾಡುತ್ತಿದ್ದ ಮಹಾಶಯರೇ? ಈಗಲಾದರೂ ಚೆನ್ನಾಗಿ ಆಲೋಚಿಸಿ ಹಿಂಸಾಯುಕ್ತವಾದ ದೇವೀಜಾತ್ರೆಯನ್ನು ಮಳಲ್ಕೆರೆ ಗ್ರಾಮದವರಂತೆ ತಾವಾದರೂ ನಿಲ್ಲಿಸದೇ ಇರಲಾರಿರೆಂದು ನಂಬಿದೆ. ಮಳಲ್ಕೆರೆ ಗ್ರಾಮದಲ್ಲಿ ಪ್ರತಿಸಾರಿಯೂ ದೇವೀಜಾತ್ರೆಯಾಗುತ್ತಾ ಇದ್ದು ಆ ಕಾಲದಲ್ಲಿ ನಿರಪರಾಧಿಗಳಾದ ಅನೇಕ ಮೂಕ ಪ್ರಾಣಿಗಳನ್ನು ಕೊಲ್ಲುತ್ತಿದ್ದರು ಹಾಯ್! ಹಾಯ್! ಎಂತಹ ದುಷ್ಟಪದ್ಧತಿಯು. ತಮ್ಮ ಕಷ್ಟಗಳನ್ನು ಲಕ್ಷಿಸದೇ ಹಗಲಿರುಳೂ ಮಳೆ, ಬಿಸಿಲು, ಗಾಳಿಯೆನ್ನದೆ ನಮ್ಮ ಸುಖಕ್ಕಾಗಿ ದುಡಿವ ಪ್ರಾಣಿಗಳಿಗೆ ಈ ಗತಿಯೇ? ಪ್ರತಿ ಪ್ರಾಣಿಯು ಸಹ ಉಪಕಾರ ಮಾಡಿದವರಿಗೆ ಪ್ರತ್ಯುಪಕಾರಮಾಡುವುದು. ಆದರೆ ಶ್ರೇಷ್ಠವಾದ ಮನುಷ್ಯ ಜನ್ಮದಲ್ಲಿದ್ದು ಉಪಕಾರಕ್ಕೆ ಪ್ರತ್ಯುಪಕಾರವನ್ನು ಮಾಡುವುದು ಕರ್ತವ್ಯವಾಗಿದ್ದರೂ ಅಪಕಾರವನ್ನಾದರೂ ಮಾಡದಿರಬಾರದೆ! ಈ ವಿಷಯವನ್ನೆಲ್ಲಾ ಯೋಚಿಸಿ ಮ॥ ರಾ॥ ದಾವಣಗೆರೆ ಮಳಲ್ಕೆರೆ ಸತ್ಯಪ್ಪನವರು ಮತ್ತು ನಮ್ಮ ಸಂಘದ ಮ॥ ರಾ॥ ಸಿದ್ಧಲಿಂಗಪ್ಪ ಬಿಲ್ಲದ ಇವರು ಮಳಲ್ಕೆರೆ ಗ್ರಾಮದವರಿಗೆ ಚೆನ್ನಾಗಿ ಬೋಧಿಸಲು ಆ ಗ್ರಾಮದ ಸರ್ವರೂ ಹಿಂಸಾಮಾಡತಕ್ಕದ್ದು ರಾಕ್ಷಸಕೃತ್ಯವೇ ಹೊರತು ಮಾನುಷ್ಯಕೃತ್ಯವಲ್ಲವೆಂದು ತಿಂದು ಇನ್ನು ಮುಂದೆ ತಮ್ಮ ಗ್ರಾಮದಲ್ಲಿ ಯಾರೂ ಯಾವ ಕಾಲದಲ್ಲಿಯೂ ಹಿಂಸೆಯನ್ನು ಮಾಡುವುದಿಲ್ಲವೆಂದೂ ಮತ್ತು ಮಾಂಸವನ್ನು ಸಹ ತಿನ್ನುವುದಿಲ್ಲವೆಂದೂ ಪ್ರತಿಜ್ಞೆ ಮಾಡಿರುವರು. ಅಲ್ಲದೆ ತಮ್ಮ ಗ್ರಾಮದಲ್ಲಿ ನಡೆದ ಈ ಸಾರಿಯ 'ದೇವೀಜಾತ್ರೆ'ಯಲ್ಲಿ ಪಟ್ಟದಕೋಣವನ್ನು ಸಹ ಕಡಿಯದೆ ಪಂಚಾಮೃತದಿಂದ ಚರಣವನ್ನು ಮಾಡಿ [illegible] ಭಜನೆ ಮುಂತಾದ ಸತ್ಕಾರ್ಯೋತ್ಸವದಿಂದ ಜಾತ್ರೆಯನ್ನು ಕಳೆದರು. ದೇವಿಗೆ ಹರಕೆಯನ್ನು ಕಟ್ಟಿಕೊಂಡಿದ್ದವರೆಲ್ಲರೂ ಹಣ್ಣು-ಕಾಯಿ-ಕರ್ಪೂರ ಮುಂತಾದವುಗಳಿಂದ ದೇವಿಯನ್ನು ಪೂಜಿಸಿ ದೇವಿಯ ಭಂಡಾರಕ್ಕೆ ಹಣವನ್ನು ಹಾಕಿದರು. ಮಳಲ್ಕೆರೆಯ ಜನಗಳು ಈ ರೀತಿಯಾಗಿ ಇತರ ಗ್ರಾಮಸ್ಥರಿಗೆಲ್ಲಾ ಮೇಲ್ಪಂಕ್ತಿಯಾದುದು ಸಂತೋಷದ ಸಂಗತಿಯೇ ಸರಿ. ಇದನ್ನು ನೋಡಿಯಾದರೂ ಇತರ ಗ್ರಾಮದವರು ತಮ್ಮ ಗ್ರಾಮದಲ್ಲಿಯೂ ಹಿಂಸಾಯುಕ್ತ ಜಾತ್ರೆಯು ನಡೆಯುತ್ತಿದ್ದರೆ ಮಳಲ್ಕೆರೆ ಗ್ರಾಮದವರಂತೆ ತಾವಾದರೂ ನಿಲ್ಲಿಸಲು ಪ್ರಯತ್ನಿಸಬೇಕಾಗಿ ಕೋರುವ,

ಪ್ರಕಾಶಕರು
ಪ್ರಾಣಿದಯಾ ಜ್ಞಾನಪ್ರಸಾರಕಾ ಸಂಘ ದಾವಣಗೆರೆ,
ಅಧ್ಯಕ್ಷರು
[illegible] ಬೇವಿನ ವೀರಪ್ಪನವರು,

ಆರೋಗ್ಯ ಚಂದ್ರಿಕೆ.
ಮದ್ರಾಸ್.
ಸಂಪಾದಕರು: ಡಾಕ್ಟರ್ ಯು. ರಾಮರಾವ್, ಎಲ್. ಎಮ್. ಎಸ್. ಎಫ್. ಎಮ್. ಯು. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವುದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ.

ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ.

ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ-ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವುವು.

'ಹೆಲ್ತ್' ಎಂಬ ನಮ್ಮ ಇಂಗ್ಲಿಷ್ ಮಾಸಪತ್ರಿಕೆಯನ್ನೋದಿ ಸಂತೋಷಿಸಿದ ಅನೇಕ ದೊಡ್ಡ ಮನುಷ್ಯರ ಪ್ರೋತ್ಸಾಹದ ಮೇಲೆ ಈ ಕನ್ನಡ ಪ್ರತಿಯನ್ನು ಹೊರಡಿಸಿದೆ.

ಅದರ ಸಂಪುಟ ೨ ಮತ್ತು ೧೦ನೇಯ ನವಂಬರ ೧೯೨೪ ಸಂಚಿಕೆಯಲ್ಲಿ ಕಾಣಿಸಿರುವ ವಿಷಯಗಳು.

ಮುಖಚಿತ್ರ:—ಸರ್ವಶತಮಾನಿಯಾದ ಒಬ್ಬ ರೂಪವತಿ.
ಶ್ವಾಸಕ್ರಮ ಅಥವಾ ಪ್ರಾಣಾಯಾಮ.
ಹುಣಿಸೇಹಣ್ಣಿನ ಆಹಾರಗುಣಗಳು ಮತ್ತು ಔಷಧಗುಣಗಳು.
ಕಾಲುನಡೆಯೇ ಉತ್ತಮವಾದ ವ್ಯಾಯಾಮವು
ಜೇನಿನಲ್ಲಿರುವ ಗುಣಗಳು.
ಹಲ್ಲುಗಳ ರಚನೆ, ಪ್ರಯೋಜನ, ಕೆಲಸ ಮುಂತಾದವು.
ಮದ್ಯಪಾನಕಗಳಿಂದ ಆರೋಗ್ಯಕ್ಕೆ ಉಂಟಾಗತಕ್ಕ ಹಾನಿ.
ಅಂಗಸಾಧನೆ ಮತ್ತು ಬುದ್ಧಿವ್ಯವಸಾಯ (ವಿದ್ಯಾಭ್ಯಾಸ).
ಗಾಯಗಳು; ಮತ್ತು ಉಳುಕು ಮುಂತಾದವು, ಅವುಗಳ ಚಿಕಿತ್ಸೆ.
ನವನಾಗರಿಕ ಪ್ರಪಂಚಕ್ಕೆ ಸಹಜವಾದ ಮೂರು ಕೆಡುಕುಗಳು.
ಒಬ್ಬ ಉಪವಾಸಿಯ ಅನುಭವ.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವುವು. ಆರೋಗ್ಯಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ ರೂ. ೧-೮-೦; ಬಿಡುಪತ್ರಿಕೆ ಒಂದಕ್ಕೆ ರೂ. ೦-೨-೦. ಹಿಂದಿನ ಸಂಚಿಕೆಗಳು ಕೂಡ ದೊರೆಯುವವು.

ಚಂದಾದಾರರಾಗುವವರು ವಿ. ಪಿ. ಮೂಲಕವಾಗಿ ತರಿಸಿಕೊಳ್ಳುವುದಕ್ಕಿಂತಲೂ ಹಣವನ್ನು ಮುಂಗಡವಾಗಿ ಕಳುಹಿಸುವುದು ಲಾಭಕರ. ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು 'ಆರೋಗ್ಯ ಚಂದ್ರಿಕೆ'ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು.

ಪತ್ರವ್ಯವಹಾರಕ್ಕೆ: 'ಆರೋಗ್ಯ ಚಂದ್ರಿಕೆ'
೩೨೩ ತಂಬುಚೆಟ್ಟಿ ಬೀದಿ, ಮದ್ರಾಸ್

ತುಳು ಪಾಡ್ದನಗಳು.

ಬೊಬ್ಬರ್ಯ, ಕಲ್ಲುರ್ಟಿ-ಕಲ್ಕುಡ, ದೈಯ್ಯೊಂಗುಳು—ಕೋಡಕಿನಾರ್, ಮುಂಡತ್ತಾಯ ಪ್ರತಿ ಒಂದಕ್ಕೆ 2 ಆಣೆ. 11½ ಆಣೆ ಟಪ್ಪಾಲು ಚೀಟು ಕಳುಹಿಸಿದರೆ 5 ಪುಸ್ತಕಗಳು ಕೂಡಲೇ ಕಳುಹಿಸಲ್ಪಡುವವು.

ವಿಳಾಸ: ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

The Canara Bank, Limited, Magnalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.
Authorised and fully paid
up Capital Rs. 300,000-0-0
Reserve and other sinking
Funds „ 259,000-0-0

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು
ಅಧಿಕಾರಗೊಳಿಸಲ್ಪಟ್ಟು, ಪೂರ್ಣವಾಗಿ
ಕೆತ್ತ ಮೂಲಧನವು ರೂ. 300,000-0-0
ಕ್ಷೇಮನಿಧಿ ಮತ್ತು ಇತರ ಫಂಡುಗಳು
259,000-0-0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1925.
K. Venkat Rao,
Secretary.

ಪರೀಕ್ಷಾಕಾಲ.
ವಿದ್ಯಾರ್ಥಿಗಳೇ ಇತ್ತ ನೋಡಿರಿ.

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ.

"ಸಾರಸ್ವತಾಸವ"ವು ಒಳಗಳ ಮುಖ್ಯಾವಯವಗಳಲ್ಲುಂಟಾಗುವ ವ್ಯತ್ಯಾಸವನ್ನು ಸರಿಪಡಿಸಿ, ಜೀರ್ಣಶಕ್ತಿಯನ್ನು ಹೆಚ್ಚಿಸಿ, ಪಂಕ್ತಿಭ್ರಮಣೆ ತಲೆತಿರುಗು, ನೆತ್ತಿಯುಕಾವು, ಇಂದ್ರಿಯ ದೌರ್ಬಲ್ಯಗಳನ್ನು ಹೋಗಲಾಡಿಸಿ ಶುದ್ಧರಕ್ತವನ್ನು ವೃದ್ಧಿಪಡಿಸುತ್ತದೆ ಸೀಸೆ 1ಕ್ಕೆ ಬೆಲೆ 1 ರೂಪಾಯಿ, ಪೋಸ್ಟೇಜು ಬೇರೆ,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ—ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ ಹೊಟ್ಟೆನೋವು ಇಂಫ್ಲೂಯಂಜಾ ಪ್ಲೇಗುಜ್ವರ.

ಮಕ್ಕಳ—ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು. ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗರ್ಭಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳ ವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1-4-0, 12 ಸೀಸೆಗೆ 2-7-0, 25 ಸೀಸೆಗೆ 4-10-0 ಪೋಸ್ಟೇಜು ಬೇರೆ.

ಬ್ರಾಂಚ್ ಆಫೀಸ್, ಚಿಕ್ಕಪೇಟೆ, ಬೆಂಗಳೂರು ಸಿಟಿ.
ಹೆಡ್ ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಪಾಳ್ಯದ ವೆಂಕಟಾಚಲ ಪಂಡಿತರು,
ಏಜಂಟರು:—
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ,
ಮಂಗಳೂರು ಟವನಿಗೆ ಮಾತ್ರ.

ವಿದ್ಯಾವಾಚಸ್ಪತಿ
ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ
"ಸಂಕ್ಷೇಪಗೀತೆ"

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ್ಳ, ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದೆ ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೦. ಟಪ್ಪಾಲು ಖರ್ಚು ಕೂಡಿ ಆಣೆ ೧೧ನ್ನು ಮನಿಯಾರ್ಡರ್ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ೩ರಕ್ಕಿಂತ ಜಾಸ್ತಿ ಖರ್ಚು ತಗಲುವುದು. ರಖಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.

ಪುಸ್ತಕ ದೊರೆಯುವ ವಿಳಾಸ:—
ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು. ಮತ್ತು
ಕೆನರಿಸ್ ಮಿಶ್ಯನ್ ಬುಕ್ ಎಂಡ್ ಟ್ರಾಕ್ಟ ಡಿಪೊಜಿಟರಿ,
ಮಂಗಳೂರು.

ವೈದ್ಯವಿದ್ಯ
PROPRIETOR RAJVAIDYA NARAYANJI KESHAVJI
NO PRICE NO POSTAGE

ಉಚಿತ! ಬಿಟ್ಟಿ!! ಪುಗಸಟ್ಟೆ!!!

ಎಂಬ ಈ ಪುಸ್ತಕದಲ್ಲಿ ಆಯುರ್ವೇದ ಶಾಸ್ತ್ರದಲ್ಲಿ ಸ್ತ್ರೀಪುರುಷರು ನಿರೋಗ್ಯದೃಢಕಾಯರಾಗಿ ಆರೋಗ್ಯದಿಂದ ಕೂಡಿದ ಸಂತಾನಗಳನ್ನು ಪಡೆದು ಸತಿಪತಿಯರು ಅನ್ಯೋನ್ಯವಾಗಿ ಅನುರಾಗವುಳ್ಳವರಾಗಿ ಸುಖದಿಂದಲೂ ಸಂತೋಷದಿಂದಲೂ ಸಂಸಾರಯಾತ್ರೆಯನ್ನು ಮಾಡಲು ಅತ್ಯಂತ ಉಪಯುಕ್ತವಾದ ವಿಷಯಗಳು ಅಲ್ಲಲ್ಲಿ ಹೇಳಲ್ಪಟ್ಟಿರುವುದನ್ನು ಒಂದಾಗಿ ಕ್ರೋಡೀಕರಿಸಿ ಅಜ್ಞಾನದಿಂದಲೂ ಸಂಕಷ್ಟದಿಂದಲೂ ನರಳುತ್ತಿರುವ ಸಂಸಾರಿಗಳನ್ನುದ್ಧಾರಮಾಡುವ ಸಲುವಾಗಿ ಈ ಪುಸ್ತಕವನ್ನು ಕ್ರಯವೂ ಅಂಚೇ ಹಾಸಲೂ ಇಲ್ಲದೆ ಬೇಡಿದವರಿಗೆ ಸರ್ವತ್ರ ಉಚಿತವಾಗಿ ಕಳುಹಿಸುತ್ತೇವೆ. ಹೆಚ್ಚು ಮಾಹಿತಿಗೆ ಪತ್ರ ಬರೆಯಿರಿ.

ರಾಜವೈದ್ಯ ನಾರಾಯಣಜಿ ಕೇಶವಜಿ,
49, ಬಂದರ್ ಸ್ಟ್ರೀಟ್, ಜಿ. ಟಿ. ಮದ್ರಾಸ್

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀಕಾಶೀ, ಗಯಾ, ಪ್ರಯಾಗ, ಹರಿದ್ವಾರ ಬದ್ರಿನಾರಾಯಣ ದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರ ಕಡೆಯಿಂದ ಅನುಭವ ತೆಗೆದು ಪ್ರತಿವಂದು ಸಿದ್ಧಮಾಡಿಕೊಂಡು ಬರೆದಿರುವರು. ೧ನೇದು ಮಂತ್ರಪ್ರಕರಣದಲ್ಲಿ ಮಂತ್ರ ಪಠಣದಿಂದಲೂ, ಮಂತ್ರಪ್ರಯೋಗದಿಂದಲೂ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವು ಇದೆ. ೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ, ಆಸನದಡಿಯಲ್ಲಿ ರೂಪಾಯಿಗಳು ಹೊರಡುವಿಕೆ, ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ. ೩ನೇದು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅವನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು. ೪ನೇದು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ? ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು, ಮತ್ತು ಭಾವಾಜಿಗಳ ಚುಟ್ಕಾ ಸಹ, ಇದರಲ್ಲಿ ಉಂಟು, ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷಧ ಮಾಡುವ ಕ್ರಮವನು ಚೆನ್ನಾಗಿ ಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಳಾಸವು ತಿಳಿಸಿರುವರು. ೫ನೇದು ಯಂತ್ರ ಪ್ರಕರಣದಲ್ಲಿ ವಶೀಕರಣ ಗ್ರಹಪೀಡಾ ನಿವಾರಣ ಭೂತಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು, ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅಮೃತ ವಿಷಯಗಳನ್ನು ಬರದಿರುವರು. ಈ ಗ್ರಂಥವು ಹತ್ತರ ಇದ್ದ ಬಳಿಕ ಎಲ್ಲಾ ದೇವಾನು ದೇವತೆಗಳು ದ್ರವ್ಯಗಳೂ ವೈದ್ಯರೂ ಜೋತಿಷ್ಯರು, ಮಾಂತ್ರಿಕರು ತಾಂತ್ರಿಕರೂ ಮನೆಯೊಳಗೆ ಇದ್ದ ಹಾಗೆ ಆಗುತ್ತದೆ. ಇಂಥ ಗ್ರಂಥವು ಯಾರು ಕಣ್ಣಿಂದ ನೋಡಿರಲಿಕ್ಕಿಲ್ಲಾ. ಪ್ರತಿಯಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆ ಶೀರ ಕಡಿಮೆಮಾಡಿ ಇರುತ್ತವು. ೨-೮-೦ ಟಪ್ಪಾಲು ಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ ನಾಟಕ ಕಾವ್ಯ, ಕತೆಗಳು, ಯಕ್ಷಗಾನ, ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ:—
ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್ ಡಿಪೋ ಪ್ರೆಸ್, ಬಳ್ಳಾರಿ

Just Arrived OF **Fresh Consignment**

Best English Cycles.

REDUCTION IN PRICES.

Ranger Cycles Model M. Made in Birmingham.

With Dunlop or Bates Tyres & Tubes	... @ Rs. 90—0—0
Barton Humber on Advance	
With Dunlop or Bates Tyres & Tubes	... @ " 100—0—0
Senior Royal with B. S. A. Fitting.	
With Dunlop or Bates Tyres & Tubes ..	...@ Rs. 145—0—0
Royal Saxon with B. S. A. Fitting.	
With Dunlop or Bates Tyres & Tubes ...	... @ Rs. 175—0—0

All the above Cycles include pump and tools.

Brookes Pateern 90/2 German Saddle ...	...@ " 9—8—0
" Saddle 90/2 " ...	·@ " 21—0—0
" " B/30 " ...	...@ " 26—0—0

For further particulars please write to us or call on us:—

All kinds of Cycle Accessories, Dunlop and German Tyres and Tubes
ARE AVAILABLE AT VERY CHEAP RATES.

Special Discount to Traders *Easy Terms Arranged*

APPLY TO:—**The Mangalore Trading Association,**
Wholesale Dealers in Cycles and Cycle Accessories,
Car-Street, MANGALORE

—ಗೋಡೆಗೆ ತಗಲಿಸುವ
ಹೊಸ ನಮೂನೆಯ—
ಟಿಕ್—ಟಾಕ್

ಎಂಬ ಈ ಗಡಿಯಾರಗಳು ಜರ್ಮನೀ ದೇಶದಲ್ಲಿ ತಯಾರಿಸಿದ್ದು. ಇವು ಕಂಠಾರು ಘಂಟೆಯನ್ನು ತೋರಿಸುವವು. ಇವಕ್ಕೆ ಬೀಗ ಕೊಡಬೇಕಾದಿಲ್ಲ. ಇದರಲ್ಲಿ ಕಾಣುತ್ತಿರುವ ಗುಂಡನ್ನು ಮೇಲಕ್ಕೆ ಎಳೆದರೆ ಸಾಕು. ತನ್ನಷ್ಟಕ್ಕೆ ತಾನೇ ಟಿಕ್—ಟಾಕ್ ಎಂಬ ಶಬ್ದವನ್ನು ಮಾಡುತ್ತಾ ಸರಿಯಾದ ಕಾಲವನ್ನು ತೋರಿಸುವದು. ಇದು ನೋಡುವುದಕ್ಕೆ ಬಹು-ಲಕ್ಷಣವಾಗಿರುವುದು.

ಕ್ರಯ 1ಕ್ಕೆ ರೂ. 3—0—0

ಪೀಟರ್ ವಾಚ್ ಕಂಪೆನಿ
ಪೋಸ್ಟ್ ಬಾಕ್ಸ್ ನಂ. 27, ಮದ್ರಾಸ್.

ADVERTISE IN
The Business Directory
OF INDIA, BURMA & CEYLON

A Comprehensive Directory of the various Business-men, Exporters and Importers, Firms, Factories, Mills, Manufacturers, Merchants and Industries of the principal Cities, Ports and Towns of India, Burma and Ceylon.

PUBLISHED ANNUALLY
Rates for Advertisements

¼ Page	Rs.	50.
in. Single Column	"	20.
in. Single Column	"	15.
Name in Bold Types	"	5.

Price per Copy Rs. 10.
PRINTERS & PUBLISHERS.
Business Directory Co.,
Kanara Press Buildings, MADRAS. E.
Telegrams: "KETHAKI" Phone 540

Just arrived! *Look Sharp!*

SCREW TORCH LAMPS
&
Pocket Electric Lamps
AVAILABLE
In different varieties, Mother of pearl lamps. Cycle lamps.
NICKEL PLATED.
Hammered Brand, with Powerful Bulls-eye lance.
Use with it
Bull's-eye Dry Batteries.
The Mangalore
Trading Association,
Car Street, MANGALORE.

ಸಾರಸ್ವತ.

ಕನ್ನಡ ಮತ್ತು ಕೊಂಕಣಿ ಭಾಷೆಗಳಲ್ಲಿ ಕಳೆದ ವಿಜಯ ದಶಮಿಯ ದಿನದಿಂದ ಪ್ರತಿ ಪಕ್ಷಕ್ಕೆ ಹೊರಡುವ ಪತ್ರಿಕೆ.

ವಿ. ಎಸ್. ಕಾಮತ್,
ಮುಲ್ಕಿ ವಾಮನ ಕುಡುವ } ಸಂಪಾದಕರು.

ಮತಸಂಸ್ಥೆ ಮತ್ತು ಸಮಾಜಕ್ಕೆ ಸಂಬಂಧಪಟ್ಟ ಇತರ ಸಂಸ್ಥೆಗಳ ಸುಸಂಘಟನ.
ಸಮಾಜದೊಳಗೆ ಅನ್ಯೋನ್ಯ ಸಾಧನೆ.
ಸ್ತ್ರೀಸಮಾಜಕ್ಕೆ ಉಪಯುಕ್ತವಾದ ವಿಷಯಗಳ ನಿರೂಪಣ.
ಮತಭಾವನೆಗಳ ಉಜ್ಜೀವನ ಇತ್ಯಾದಿ ಉದ್ದೇಶಗಳಿಂದ ಈ ಪತ್ರಿಕೆಯು ಹೊರಡಿಸಲ್ಪಡುವುದು. ಸಾರಸ್ವತ ಸಮಾಜವು ಇದಕ್ಕೆ ಪ್ರೋತ್ಸಾಹವನ್ನೀಯಬೇಕಾಗಿ ಪ್ರಾರ್ಥನೆ.

ಚಂದಾಹಣ ಅಂಚೆವೆಚ್ಚ ಕೂಡಾ ರೂ. ೧—೮—೦. ಪೋಷಕರು ರೂ. ೧೦-೦-೦. ಸಹಾಯಕರು ರೂ. ೫-೦-೦. ಮಾದರಿ ಸಂಚಿಕೆಯನ್ನು ಟಪ್ಪಾಲು ಖರ್ಚಿಗಾಗಿ ಅರ್ಧಾಣೆ ಸ್ಟಾಂಪು ಕಳುಹಿಸುವವರಿಗೆ ಉಚಿತವಾಗಿ ಕಳುಹಿಸುವೆವು.

ಕನ್ನಡ ನಾಡಿನಲ್ಲಿ ಪ್ರತಿ ಕಡೆಯಲ್ಲಿಯೂ ಬಾತಮಿದಾರರು ಬೇಕು.

ಎಲ್ಲಾ ಪತ್ರವ್ಯವಹಾರಗಳನ್ನು ಕೆಳಗಿನ ವಿಳಾಸಕ್ಕೆ ನಡೆಸಬೇಕು.

ಯು. ನಾರಾಯಣನಾಯ್ಕ, ಕಾರ್ಯದರ್ಶಿ,
ಸಾರಸ್ವತ, ಉಡುಪಿ.

ಆರ್. ಮಾರ್ಟಿನ್ಸರ
ಜ್ವರದ ಗುಳಿಗೆಗಳು.

ಸುಲಭ ಸೇವನಕಾರಿಯಾದ ಈ ಗುಳಿಗೆಗಳು ಚಳಿಜ್ವರದ ವಿಷಪದಾರ್ಥಗಳನ್ನು ತಟ್ಟನೆ ನಿರ್ಮೂಲಪಡಿಸಿ, ವ್ಯಾಧಿಗಳನ್ನು ಸಂಪೂರ್ಣ ನಾಶಪಡಿಸಿ, ಮಲೇರಿಯಾ ಜ್ವರ, ಚಳಿಜ್ವರ, ಬಾರಿಜ್ವರ, ಮತ್ತು ಆಗಾಗ್ಗೆ ಬಿಟ್ಟುಕೊಂಡು ಬರುವ ಇತರ ಜ್ವರಗಳ ಬಾಧೆಯಿಂದ ಗುಣಪಡಿಸುವವು.

ತಟ್ಟನೆ ವಾಸಿಪಡಿಸುವುದಕ್ಕೆ ಹತ್ತಾರುಗಳಲ್ಲಿ ಪ್ರಸಿದ್ಧತೆಯನ್ನು ಹೊಂದಿದ್ದು, ಅತಿ ಬಿಟ್ಟುಬಿಟ್ಟ ಅನೇಕ ಸಂದರ್ಭಗಳಲ್ಲಿ ಗುಣಪಡಿಸಿದವುಗಳಾಗಿರುತ್ತವೆ.

ಇವುಗಳು ಗಿರಿನೆಗಳಲ್ಲಿಯೂ ಕಾರ್ಖಾನೆಗಳಲ್ಲಿಯೂ ವಿಶೇಷವಾಗಿ ಉಪಯೋಗಿಸಲ್ಪಡುತ್ತವೆ. ಸಾಮಾನ್ಯವಾಗಿ ಹಿಂದೂಸ್ಥಾನದಲ್ಲಿ ಎಲ್ಲಾ ತೋಟಗಾರರಿಂದ ಉಪಯೋಗಿಸಲ್ಪಡುವವು. ಅಲ್ಲದೆ ದಿಂಗತ ವಿಶ್ರಾಂತವಾದ ಕೀರ್ತಿಯನ್ನು ಕೂಡ ಸಂಪಾದಿಸಿರುವವು. ಚಳಿ ಜ್ವರವು ತಟ್ಟನೆ ಇಳಿಯಬೇಕಾದರೆ ಆರ್ ಮಾರ್ಟಿನರ ಎಗ್ಯೂ ಮಿಕ್ಚರ್ ಜೊತೆ ಇದನ್ನು ಸೇವಿಸಬೇಕು. ಈ ಎರಡು ಅಮೃತ ತುಲ್ಯವುಳ್ಳ ಔಷಧಿಗಳು ಪ್ರತಿಯೊಂದು ಕುಟುಂಬದ ಮನೆಯಲ್ಲಿಟ್ಟುಕೊಳ್ಳಲು ಯೋಗ್ಯ ವಸ್ತುಗಳಾಗಿವೆ ಪ್ರತಿಯೊಂದು ಬಾಟ್ಲಿಯಲ್ಲಿ 40 ಮಾತ್ರೆಗಳು ಇರುವುವು.

ಬಾಟ್ಲಿ 1ಕ್ಕೆ ರೂ. 1—8—0.

ಆರ್. ಮಾರ್ಟಿನ್ಸರ ಎಗ್ಯೂಮಿಕ್ಚರ್.

ಇದು ಜ್ವರ, ಶೀತಜ್ವರ ಮಲೇರಿಯಾ, ಬಾರಿಜ್ವರ, ಸನ್ನಿಪಾತ ಪಟ್ಟ ವಾಯುವಿನಿಂದುಂಟಾದ ರೋಗ ಇವೇ ಮೊದಲಾದ ಎಲ್ಲಾ ತರದ ಜ್ವರಗಳನ್ನು ಕೂಡಲೇ ನಾಶಮಾಡುತ್ತದೆ. ಎಲುಬುಗಳಲ್ಲಿ ಹರಡಿಕೊಂಡಿರುವ ಜ್ವರವನ್ನು ಸಹ ನಾಶಮಾಡುವುದಲ್ಲದೆ, ಇದು [illegible] ಸಣ್ಣ ಕೂಸುಗಳು ಸಹ ಕುಡಿಯುವುದಕ್ಕೆ ಇಷ್ಟಪಡುತ್ತವೆ. ಅನೇಕ ನಿಪುಣ ವಿದ್ವಾಂಸ ವೈದ್ಯರಿಂದ ಗುಣಮಾಡುವುದಕ್ಕಾಗದ ಜ್ವರವನ್ನು ಈ ಎರಡೇ ಎರಡು ಬಾಟ್ಲಿಗಳ ಸೇವನೆಯಿಂದ [illegible]

ಬಾಟ್ಲಿ 1ಕ್ಕೆ ರೂ. 0—13—0

ಆರ್. ಮಾರ್ಟಿನ್ಸರ ಮೂಲವ್ಯಾಧಿ ಮಲಾಮು.

ಮನುಷ್ಯನಿಗೆ ಮೂಲವ್ಯಾಧಿ ಆದಾಗ, ಬಹಳ ಸಲ ಮೂತ್ರಕೃಚ್ಛ್ರವಾಗುವಿಕೆ, ಮರ್ಮಸ್ಥಾನದಲ್ಲಿ ಉರಿಯುತ್ತದೆ, ಮಲಬದ್ಧತೆ ಇವೇ ಮುಂತಾದವುಗಳಿಂದ ಪೀಡಿಸಲ್ಪಡುತ್ತಾನೆ. ಈ ಔಷಧದ ಒಂದೇ ಒಂದು ಬಾಟ್ಲಿಯ ಉಪಯೋಗದಿಂದ, ರಕ್ತ ಸುರಿಯುವ ಮೂಲವ್ಯಾಧಿ, ಕರುಳುಗಳಲ್ಲಿ ನೋಯುವ ಮೂಲವ್ಯಾಧಿ ಮತ್ತು ಎಂತ ಕಠಿಣ ಕಠಿಣವಾದ ಮೂಲವ್ಯಾಧಿಯಾದರೂ ಕೂಡಲೇ ವಾಸಿಯಾಗುತ್ತದೆ. ಇದು ಒಳ್ಳೇ ಔಷಧಗಳಿಂದ ತಯಾರಿಸಲ್ಪಟ್ಟು ಹಚ್ಚಿಕೊಳ್ಳುವವರಿಗೆ ಏನೊಂದೂ ನೋವನ್ನು ಕೊಡದೆ ತಂಪಾಗಿ ಮಾಡುತ್ತದೆ. ಬಾಟ್ಲಿ 1ರ ದರ ರೂ. 1—8—0 ಮಾತ್ರ

ವಿಳಾಸ:—ಆರ್. ಡಿ. ಕಟಿ ಮತ್ತು ಕಂಪೆನಿ,
ನಂಬ್ರ ಬಿ. ಫ್ರಿಯರ್ ರೋಡ್,
ಸಾಂಜ ವರ್ತಮಾನ ಪ್ರೆಸ್,
ಟೋಡಿವಾಲಾ ಬಿಲ್ಡಿಂಗ ಎದುರುಗಡೆ, ಫೋರ್ಟ ಮುಂಬಯಿ.

R. D. Kately & Co.
No. B. Frere Road,
Opposit Sanjvertaman Press,
Todivala Building, FORT BOMBAY.

ದಕ್ಷಿಣ ಕನ್ನಡ ಜಿಲ್ಲೆಯ
ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0.
ಪುಸ್ತಕಗಳು ಸಿಕ್ಕುವ ವಿಳಾಸ:—
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

Edited, Printed & Published by V. S. Kamath at the M. T. A. Sharada Press, Mangalore.

Registered: No. M. 498.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಳಕವರಂಜಿದರೆ । ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೯. ಮಂಗಳೂರು, ತಾರೀಕು ೧೭ನೇ ಶುಕ್ರವಾರ ಎಪ್ರಿಲ್ ೧೯೨೫. ಸಂಚಿಕೆ ೧೬.

The Canara Banking Corporation, Udipi. Ltd.

Head Office:—	Branch:—
Udipi	Coondapoor
Paidup Capital	1,66,165—9—11
Reserve etc	64,700—0—0

Season Deposits

Carrying Special rate of 7% up to 15th June 1925 only.
Further Particulars on Application.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಉಡುಪಿ, ಲಿಮಿಟೆಡ್.

ಹೆಡ್ ಆಫೀಸು:—ಉಡುಪಿ.	ಶಾಖೆ—ಕುಂದಾಪುರ.
ವಸೂಲಾದ ಮೂಲಧನ	1,66,165—9—11
ರಿಜರ್ವ ವಗೈರೆ ಫಂಡುಗಳು	64,700—0—0

ತಾ. 15—6—1925ರವರೆಗೆ ಮಾತ್ರ
ಸಾಲಿಯಾನ್ ಸೇಕಡಾ 7ರ ದರದ ಬಡ್ಡಿಯ ಮೇಲೆ
ಮುಸುಂ ಠೇವಣಾತಿಗಳನ್ನು
ಅಂಗೀಕರಿಸೋಣಾಗುತ್ತದೆ.
ಹೆಚ್ಚಿನ ಮಾಹಿತಿಗೆ ಬರೆಕೊಳ್ಳಿರಿ.

Office of the Corporation, Udipi, 1-3-'25 } N. Ananda Rao, *Secretary*

Wanted Agents
FOR
Every District in South India

For Pushing Sales of Our Calenders, Xmas and New Year Cards, Blotters, Pictures and Picture Post Cards, at wholesale rates. Deposit of Rs. 100—0—0 Essential.

Apply to:—
The South Indian Advertising Agency,
13, Kilary Road,
BANGALORE CITY.

ಶುದ್ಧ ಕೋಮದ ಧಾವಳಿಗಳು.

1 ಮಳ ಉದ್ದ 1¼ ಮಳ ಅಗಲ ರೂ. 1½ರಿಂದ 2 ವರೆಗೆ, 5 ಮಳ ಉದ್ದ 1½ ಮಳ ಅಗಲ ರೂ. 1½ ರಿಂದ 5 ವರೆಗೆ, 6 ಮಳ ಉದ್ದ 1½ ಮಳ ಅಗಲ ರೂ. 2½ರಿಂದ 6 ವರೆಗೆ, 8 ಮಳ ಉದ್ದ 2 ಮಳ ಅಗಲ ರೂ. 3½ರಿಂದ 10 ವರೆಗೆ, 12 ಮಳ ಉದ್ದ 2¼ ಮಳ ಅಗಲ ರೂ. 6ರಿಂದ 12 ವರೆಗೆ, 16 ಮಳ ಉದ್ದ 2¼ ಮಳ ಅಗಲ ರೂ. 9 ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಖದ್ದರ್ ರೇಷ್ಮೆ ಮುಂಡಿಗಳು, ಶಾಮುಗಳು, ಕಾಶೀ ಪೀತಾಂಬರಗಳು, ಶಾಲುಗಳು, ರುದ್ರಾಕ್ಷಿ, [illegible], ಜಪಮಾಲೆ, [illegible] ಮುಂತಾದ ಅನೇಕ ಸಾಮಾನುಗಳು [illegible]

ವಿಳಾಸ—
ಶಿರೋಮಣಿ ಯು. ನಾರಾಯಣಾಚಾರ್ಯ
ಮತ್ತು ಕಂಪೆನಿ, [illegible]

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ.

450 ಪುಟಗಳು ಎಮ್. ಗಣಪತಿರಾವ್ ಐಗಳ್ ಇವರಿಂದ ರಚಿತವಾದದ್ದು. ಕ್ರಯ ರೂ. 2-4-0

ಮಾರಾಟಕ್ಕೆ ಸಿದ್ಧವಾಗಿವೆ — **ತುಳು ಪಾಡ್ದನಗಳು** — ಮಾರಾಟಕ್ಕೆ ಸಿದ್ಧವಾಗಿವೆ.

ದೈಯ್ಯೊಂಗುಳು, ಕಲ್ಲುರ್ಟಿ—ಕಲ್ಕುಡ, ಕಡಂಬೂರು ದೈಯ್ಯೊಂಗುಳು, ಮುಂಡತ್ತಾಯ, ಬೊಬ್ಬರ್ಯ.

ಸುಲಭ ದರಗಳು — **ಶಾಲಾ ಪುಸ್ತಕಗಳು** — ರಖಂ ಕೊಂಡುಕೊಳ್ಳುವವರಿಗೆ ಯೋಗ್ಯ ಡಿಸ್ಕೌಂಟ್.

ಅಜ್ಜಿ ಕಥೆಗಳು:—ಮೂರು ಕರಡಿಗಳು; ಜೇನುಸಕ್ಕು ಕಾಗೆ ಬಡವಾಯಿತು; ಅಗಸನ ಮುದ್ದು; ಇಲಿಗಳ ಪಕ್ಕ ಹೈ; ಅಂಗಳ ಮಗ್ಗು; ಶಿಗಡಿ ಯಾಕೆ ಬಾಗಲಿಲ್ಲ; ಗುಡುಗುಡು ಗುಮ್ಮಟ ದೇವರು; ಮುದಿಯನ ಕೋಳಿ; ಒಡ್ಡನ ಓಟ; ಹೊಸ ಕನ್ನಡ ಪುಸ್ತಕ ಭಾಗ ೧, ಹೊಸ ಕನ್ನಡ ಪುಸ್ತಕ ಭಾಗ ೨; ಕನ್ನಡ ಪದ್ಯಗಳು; ಮಗ್ಗಿ ಪುಸ್ತಕ; ಅಜಿತಕುಮಾರ; ಪದ್ಯ ರತ್ನಾವಳಿ, ಎಕ್ಸರ್‌ಸೈಜ್ ಮತ್ತು ನೋಟು ಪುಸ್ತಕಗಳು, ಕಾಪಿ ಪುಸ್ತಕಗಳು, ಡ್ರಾಯಿಂಗ್ ಪುಸ್ತಕಗಳು

ಇತರ ಪುಸ್ತಕಗಳು:—ಸಂಕ್ಷೇಪಗೀತೆ, ಶೀಶುಭಂಗ, ಹಿಂದೂ ವ್ರತವಿವೇಕ, ಚಂದ್ರಗುಪ್ತ ಚಕ್ರವರ್ತಿ, ಶ್ರೀ ಕೃಷ್ಣಸಂಧಾನ, ಪದ್ಯಪಾಠಗಳು, ಹರಿಕಥಾ ಮೃತಸಾರ ಹರಿನಾಮಸಂಕೀರ್ತನೆ ಸುಧಾಂಮೃತ ಪದ್ಯಗಳು. ಬೆಂಕಿಪೆಟ್ಟಿಗೆ ತಯಾರಿಸುವ ವಿಧಾನ, ಸಾಬೂನು ತಯಾರಿಸುವ ವಿಧಾನ, ಸ್ವರಾಜ್ಯ ಭಕ್ತೋಲ್ಲಾಸ, ಚರಕಗೀತೆ, ಕೊಂಕಣಿ ಭಾಷೆಯಲ್ಲಿ ಚಂದ್ರಹಾಸ ನಾಟಕ, ಪ್ರಹ್ಲಾದ ಚರಿತ್ರ ನಾಟಕ, ಕನ್ನಡ ಮೃಚ್ಛಕಟಿಕ ನಾಟಕ, ಚಂದ್ರಹಾಸಾಭ್ಯುದಯ ನಾಟಕ, ಕೋಲಿಲನ್ ಚರಿತ್ರ ನಾಟಕ, ಮಾದರಿ ಉಪನ್ಯಾಸ ಭಾಗ ೧, ೨, ಮತ್ತು ೩.

AMRUTANJAN BO
AMRUTANJAN
Best Indian Pain Balm
Amrutanjan
BOMBAY

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಪ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು.

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ, ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 3 ಆಣೆ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್, ಜೋರ್ಜ ಟೌನ್, ಮದ್ರಾಸು.	109 ಫ್ರೇಯರ್ ರೋಡ್ ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

— ರಥೋತ್ಸವ, ವಿವಾಹ ಉಪನಯನಗಳ ಸಮಯ —
ಸರ್ವರಿಗೂ ಉಡಿಗೆ ತೊಡಿಗೆಗಳು ಬೇಕಾಗುವ ಸಂದರ್ಭ.

ಯಾರು, ಯಾವುದನ್ನು ಎಲ್ಲಿ ಪಡೆಯಬೇಕೆಂಬ ಶಂಕೆಯಿಂದ ವಿಳಂಬ ಮಾಡಬೇಡಿರಿ. ಉಡಿಗೆತೊಡಿಗೆಗಳನ್ನು ಚುನಾಯಿಸಿ ತಮಗೆ ಬೇಕಾದ ಯಥಾರ್ಥ ಮಾಹಿತಿಯನ್ನು ಕಳೆದ ಹತ್ತಿಪ್ಪತ್ತು ವರುಷಗಳಿಂದ ಪಡೆದು ನಮ್ಮಲ್ಲಿಯ ವ್ಯಾಪಾರವು ಗಿರಾಕಿಗಳಿಗೆ ಸರ್ವ ತೃಪ್ತಿಯಿಂದಲೂ ಲಾಭಕರವಾಗಿ ಪರಿಣಮಿಸುವಂತೆ ನಮ್ಮ ಜವಳಿ ಸಂಗ್ರಹವನ್ನು ಮಾಡಿರುತ್ತೇವೆ.

ಗುರ್ಪುರ್ಕಾರ್ ಬ್ರದರ್ಸ್, ರಥಬೀದಿ, ಮಂಗಳೂರು.

ಹೆಡ್ ಆಫೀಸು:—ರಥಬೀದಿ—(ಮೊದಲು ಸುಜೀರ ನಾಗಪ್ಪನಾಯಕ್, ಎಂಡ್ ಕೊ. ಇದ್ದಲ್ಲಿ; ಅಜಿಜುದ್ದೀನ್ ರಸ್ತೆಗೆ ತಿರುಗುವಲ್ಲಿ) ಮಂಗಳೂರು.

ಬ್ರೇಂಚ್ ಆಫೀಸು:—ರಥಬೀದಿ—(ಹಳೇ ತಾಲೂಕು ಕಚೇರಿಯ ಮಹಾರಕ್ಕೆ ಸಮೀಪವಿರುವ ಮಳಿಗೆ) ಮಂಗಳೂರು.

ಈ ದೇಶದ ಪ್ರಖ್ಯಾತಪಟ್ಟ ನೇಯಿಗೆಯ ಕೇಂದ್ರಸ್ಥಳಗಳಾದ—ಬನಾರಸ್, ಪೂನಾ, ಅಹಮ್ಮದಾಬಾದ್, ಸೂರತ್, ಬೆಂಗಳೂರು, ಧರ್ಮಾವರಮ್, ಕಂಜೀವರಮ್, ಕೊಯಮುತ್ತೂರು, ಮಧುರೆ, ತಂಜಾವೂರು, ಕುಂಭಕೋಣ, ಆರ್ಣಿ, ಹುಬ್ಬಳ್ಳಿ, [illegible], ಗದಗ, ಮದ್ರಾಸು ಈ ಪ್ರಾಂತ್ಯಗಳಲ್ಲಿ ತಯ್ಯಾರಾದ

ಜರಿಸೀರೆಗಳು, ದುಪ್ಪಟ್ಟಾ, ಜರಿಶಾಲು, ಪೇಟ್ಯಾ, ರೇಷ್ಮೆ ಸೀರೆಗಳು, ಅರಳಪಟ್ಟೆ ಸೀರೆಗಳು, [illegible] ರೇಷ್ಮೆ ಸೀರೆಗಳು, [illegible] ಸೀರೆಗಳು, ರೇಷ್ಮೆ ಮುಂಡಿಗಳು, [illegible] ಸೀರೆಗಳು [illegible], [illegible]
ಕೈರಾಟೆಯಲ್ಲಿ ತಯಾರಿಸಿದ ನೂಲಿನಿಂದ ಮಾಡಿದ—

ಖದ್ದರ್ ಶರ್ಟಿಂಗ್, ಖದ್ದರ್ ಕೋಟಿಂಗ್, ಖದ್ದರ್ ಟೋಪಿ, ಖದ್ದರ್ ಪೇಟ್ಯಾ, ಅಂಗವಸ್ತ್ರ, [illegible]—
ಮುಸಲ್ಮಾನರಿಗೆ ಬೇಕಾದ [illegible] ವಗೈರೆ—
ಎಲ್ಲ ಸಂಗ್ರಹವನ್ನು ನಮ್ಮ [illegible] ಕೈಯಿಂದ [illegible] ಸಂಗ್ರಹಿಸಿ ಇಟ್ಟಿರುತ್ತಾರೆ.

ಶರತ್ತು—ನಗದು, ರೂಪಾಯಿ 50ಕ್ಕೆ [illegible] ಸೇಕಡಾ 6¼ರ, ರೂ. 50ರಿಂದ 250ರವರೆಗೆ ಸೇಕಡಾ 10%. ರೂ. 250 ರಿಂದ 1000ಕ್ಕೆ 12½% [illegible]

ಪ್ರತಿಯೊಂದು ಕುಟುಂಬಿಗಳ ಮನೆಗಳಲ್ಲಿ ಸೌಖ್ಯವನ್ನು ತೋರಿಸುವುದಕ್ಕೂ ಮತ್ತು ಅವರವರ ಉಪಯೋಗಾರ್ಥವನ್ನು ತಿಳುವಳಿಕೆ ಬಗ್ಗೆ ನಡಿಸುವುದಕ್ಕೂ ಒಂದು ಮರ್ಮವಾದ ನಿಘಂಟು ಪುಸ್ತಕವು ಈ ನಮ್ಮ ಹಿಂದೂದೇಶದ ಸಮೂಹದಲ್ಲಿರುವುದು. ಅಂಥಾ ಪುಸ್ತಕವು ಯಾವದೆಂಬುದು

ನೀವುಗಳು ಬಲ್ಲಿರಾ?

(ಅದೇ)

"ಕಾಮಶಾಸ್ತ್ರವೆಂಬುವುದು."

ತಾವುಗಳು ಇನ್ನೂ ಈ ಪುಸ್ತಕವಲ್ಲಿ ಬರೆದಿರುವ ಸಾರಾಂಶವನ್ನು ಓದಿಲ್ಲದಿದ್ದರೆ, ಒಡನೇ ಒಂದು ಪುಸ್ತಕವನ್ನು ಕಳುಹಿಸುವಂತೆ ಒಂದು ಪೋಸ್ಟುಕಾರ್ಡು ಬರಿಯಿರಿ.

ಪುಸ್ತಕವನ್ನು ಇನಾಮಾಗಿ ಕಳುಹಿಸುವೆವು.

ಮುಖ್ಯವಾದ ತಿಳುವಳಿಕೆ.

ತಾವುಗಳು ಧೃಢಚಿತ್ತರಾಗಿಯೂ, ನಿಧಾನಸ್ಥರಾಗಿಯೂ, ಸೌಖ್ಯದಾಗಿಯೂ, ಕಷ್ಟವಿಲ್ಲದನೇ ವಿಷಯಗಳನ್ನು ಭರಿಸುವ ಮನಸ್ಸನ್ನು ಹೊಂದಬೇಕಾದರೆ ನಮ್ಮ ಅಮೂಲ್ಯವಾದ "ಕಾಮಶಾಸ್ತ್ರವೆಂಬುವ ಪುಸ್ತಕದಲ್ಲಿ ಕಾಣಿಸಿರುವ ಆತಂಕನಿಗ್ರಹ ಮಾತ್ರೆಗಳನ್ನು ಸೇವಿಸಬೇಕು."

ಒಂದು ರೂಪಾಯಿ ಖರ್ಚುಮಾಡಿದರೆ 32 ಮಾತ್ರೆಗಳುಳ್ಳ ಒಂದು ದಬ್ಬಿಯನ್ನು ತರಿಸಿ ಪ್ರಯತ್ನಿಸಬಹುದು.

ವಿವರವಾಗಿ ಬರೆದಿರುವ ಒಂದು ಕ್ಯಾಟಲಾಗು ಕಳುಹಿಸುವಂತೆ ಈ ದಿನವೇ ಒಂದು ಪೋಸ್ಟುಕಾರ್ಡು ಬರಿಯಿರಿ.

ಆತಂಕನಿಗ್ರಹ ಔಷದಾಲಯ,
ನಂಬ್ರ 26, ಬ್ರಾಡ್ವೆ, ಮದರಾಸು.

ಹೊಸಗ್ರಂಥಗಳು !! ಬೇಗನೇ ತರಿಸಿಕೊಳ್ಳಿರಿ !!!

ಕೋಕ ಶಾಸ್ತ್ರವು.

ರಸಿಕ ವಾಚಕ ಮಹಾಶಯರೇ,

ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ, ಸಂಪಾದಿಸಿ, ಅದರಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನಷ್ಟೇ ಶೋಧ ಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿಣಿ, ಸ್ತ್ರೀಯ ಇದರಂತೆ ಪುರುಷರಲ್ಲಿಯ ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ, ಜನನೇಂದ್ರಿಯಾದಿಗಳ ವರ್ಣನೆಯನ್ನೂ, ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ, ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ, ನಪುಂಸಕತ್ವ ವಂಧ್ಯಾದೋಷಗಳ ಚಿಕಿತ್ಸೆಯನ್ನೂ, ಸ್ತ್ರೀಯರ ಗೂಢ ರಹಸ್ಯವನ್ನೂ, ದಂಪತಿ ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನೂ, ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಅದ್ದರಿಂದ ಈ ಗ್ರಂಥವನ್ನು ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ.

ಇದರ ಬೆಲೆ ೧—೮—೦, ಟಪ್ಪಾಲು ಹಾಸಲು ೦—೪—೦.

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ

ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ಮೂರನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್. ಗಣಪತಿರಾವ್ ಐಗಳ್—ಗ್ರಂಥಕರ್ತರು.

ಮನೋರಂಜಕ ಚಿತ್ರಗಳೂ ಇವೆ.

ಇದರಲ್ಲಿ ಸಾವಿತ್ರಿ, ಶಕುಂತಳಾ, ಕೃಷ್ಣಾಕುಮಾರಿ, ಪದ್ಮಿನಿ, ಜೋನ್ ಒಫ್ ಆರ್ಕ, ಫ್ಲೊರೆನ್ಸನಾಯಿಟಂಗೇಲ ಪರಶುರಾಮ, ಭೂತಾಳಪಾಂಡ್ಯ, ಕಾರ್ಕಳ ಗೋಮಟೇಶ್ವರ ಮತ್ತು ಭೈರವರಾಜ, ಮೂಡಬಿದ್ರೆಯ ಚೌಟರು, ನಂದಾವರ ಬಂಗರು, ಕಾರ್ಕಳ ರಾಮಸಮುದ್ರ ಮತ್ತು ರಾಮನಾಥ ಒಡೆಯರ ಅಣೆಕಟ್ಟು, ಗುರುಪುರ ಜಂಗಮ ಮಠ, ಕಲ್ಯಾಣಪ್ಪನ ಕಾಟಕಾಯಿ, ಗುರುವಾಯನಕೆರೆ, ಜಮಾಲಾಬಾದುಕೋಟೆ, ಸುಲ್ತಾನಬತ್ತೇರಿ, ಈದಗಾಪ್ರಾರ್ಥನಾಮಂದಿರ, ಸೇಂಟಮೇರಿ ದ್ವೀಪಗಳು ಮತ್ತು ದರಿಯಾಬಾದರಗಡ, ಕೊರಗರು, ಕೊಡಗರು, ತೋಡರು, ರಜಪೂತರು, ಕಂದಾರಿಗಳು ಘುರ್ಖಾಜನರು, ಅರಬಿಯರು. ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ಮೂರನೇ ದರ್ಜೆಯ ಮಕ್ಕಳಿಗೆ ಉಪಯುಕ್ತವಾಗಿದೆ. ಕ್ರಯ 6 ಆಣೆ.

ಪುಸ್ತಕ ದೊರಕುವ ವಿಳಾಸ:—

ಶಾರದಾ ಛಾಪಖಾನೆ, ಮಂಗಳೂರು. ||| ಗಣಪತಿರಾವ್, ಐಗಳ್. ಮಂಜೇಶ್ವರ.

ಡಾಕ್ಟರುಗಳು ಭಿನ್ನಾಭಿಪ್ರಾಯಪಡುವಾಗ್ಯೆ ತೀರ್ಮಾನಿಸುವದು ಯಾರು?

ಅಂಥಾ ಸಂದರ್ಭಗಳಲ್ಲಿ ಡೆಂಗ್ಯೂ ಮುಂತಾದ ಜ್ವರಗಳನ್ನು ನಿವಾರಿಸುವಂಥಾ "ಬಾಟ್ಲಿವಾಲರ ಏಗ್ಯುಮಿಕ್ಸ್ಚರ್"ನ್ನು ಸರಾಗವಾಗಿಯೂ, ಮತ್ತು ಜ್ವರಗಳನ್ನು ಖಂಡಿತವಾಗಿ ನಿಲ್ಲಿಸುವಂಥಾದ್ದೂ, ಎಲ್ಲಾ ತರದ ತಲೆನೋವುಗಳನ್ನು ಹೋಗಲಾಡಿಸುವಂಥಾದ್ದೂ ಆದ "ಬಾಟ್ಲಿವಾಲರ ಏಗ್ಯುಪಿಲ್ಸ್" ಇದನ್ನು ಉಪಯೋಗಿಸಿರಿ.

ಐ. ಎಮ್. ಎಸ್. ಡಾಕ್ಟರುಗಳಿಂದ ಶಿಫಾರಸು ಮಾಡಲ್ಪಟ್ಟಿದ್ದು. ಇದರ ಉಪಯೋಗದಿಂದ ಹೃದಯದ ಮೇಲೆ ಯಾವ ದೊಂದೂ ಬಾಧಕವಿಲ್ಲ. ಅರ್ಧ ಶತಮಾನದಿಂದ ಹಿಂದೂಸ್ಥಾನ, ಬರ್ಮಾ, ಸಿಲೋನ್, ಆಫ್ರಿಕಾ ಇವುಗಳಲ್ಲಿ ಪ್ರಖ್ಯಾತಪಟ್ಟಿದ್ದಾಗಿರುತ್ತದೆ.

ಅನೇಕ ಹಿಂದೀ ಪ್ರದರ್ಶನಗಳಲ್ಲಿ ಬೆಳ್ಳಿ ಮತ್ತು ಬಂಗಾರದ ಪದಕಗಳನ್ನು ಪಡೆದಿರುತ್ತೆ. ಜಾಸ್ತಿ ಪಾತ್ಯದಂತಿದ್ದು ಮಾರ್ವಾರಿಗಳೂ ಕೂಡ ಅದರ ಮೇಲೆ ಹಣವನ್ನು ಮುಂಗಡವಾಗಿ ಕೊಡುತ್ತಾರೆ. ಬಡ ಮತ್ತು ಮಧ್ಯಮ ತರಗತಿಯ ಜನರಿಗೆ ವರಪ್ರದಾನವಾಗಿದ್ದು ಸಂಚಾರ, ಪ್ರಯಾಣ, ದೇಶಾಟನೆಗಳ ಸಮಯದಲ್ಲಿ ಹತ್ತಿರದಲ್ಲಿರಿಸಿಕೊಳ್ಳದಾಗಿರುತ್ತದೆ.

ಬಾಟ್ಲಿವಾಲರ ಬಾಲಾಮೃತ ಅಥವಾ ಟೊನಿಕ್ ಸಿರಪ್.

ಕೆಮ್ಮನ್ನು ಹೋಗಲಾಡಿಸಿ, ಎದೆನೋವನ್ನು ಶಾಂತಗೊಳಿಸಿ, ಜ್ವರವನ್ನು ಉಪಶಮನಿಸಿ, ನಿದ್ರಾಭಂಗವನ್ನು ಕಡಿಮೆ ಮಾಡಿ ಧಾತುವರ್ಧನವನ್ನು ಮಾಡುವದರಲ್ಲಿ ಅತ್ಯುತ್ತಮವಾಗಿರುತ್ತದೆ. ಕಫವನ್ನು ಒಡಗಿಸಿ ಮಾಯವಾಗುವಂತೆ ಮಾಡುವುದಲ್ಲದೆ, ಅದೇ ಸಮಯದಲ್ಲಿ ಒಳ್ಳೇ ಜೀರ್ಣವನ್ನೂ ಉಂಟುಮಾಡುವುದು. ದರ ಮೊದಲಾದ ಮಾಹಿತಿಯನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಕಾರಿನಪತ್ರ:-CAWASHAPUR, BOMBAY.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ. | ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್., ಪಿ. ವಾರ್ಲಿ, ಮುಂಬಯಿ, ನಂಬ್ರ 18.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ

ಇವರ

ಬಾಲಾಮೃತ.

ಈ ಔಷಧವನ್ನು ಸೇವನೆ ಮಾಡುವುದರಿಂದ ಮಕ್ಕಳು ರೋಗರಹಿತರೂ ಸಶಕ್ತರೂ ಆಗುವರು. ಇದು ಮಧುರವಾಗಿದೆ; ಮಕ್ಕಳು ಸಂತೋಷದಿಂದ ಸೇವಿಸುತ್ತಾರೆ.

ನಮ್ಮ ವಿಳಾಸ:—
ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಏಜಂಟರು:— ಡಿ. ಊಲನ್ ಮಾರ್ಟ್, ಮಂಗಳೂರು.

OUR RECENT IMPORT IN WRIST WATCHES | Have you used anyone of these Watches? | SEND YOUR ORDER NOW ALL GUARANTEED.

Fashionable wrist wrist Lady's size. Reliable movement Guaranteed.



No. 368.

Handy to wear and looks beautiful. Gives punctual time and with strong movement.

Nickel case Rs. 8—0

High-class Radium dial watch watch with Roman figures.



No. 367.

Can be seen in dark nights. Well fitted with best movement and strong to use. Used by one and all.

Silver case Rs. 9—0.

Radiolight wrist watch.



No. 372.

Fitted with the best mechanism and guaranteed to work and keep perfect time for a long time.

Nickel case Rs. 7—8
Electro rolled-gold „ 9—0

(N. B. In addition to the above, we have good number of varieties of fancy wrist watches, pocket watches. Please write for a descriptive catalogue, which will be sent free)

WHOLESALE IMPORTERS

PETER WATCH COY.,
POST BOX 27, MADRAS

ಶಾಲಿವಾಹನಶಕ ೧೮೪೭ನೆಯ ಕ್ರೋಧನ ಸಂವತ್ಸರದ ಚೈತ್ರ ಬ॥ ೧೦ ಶನಿವಾರದಿಂದ ಕ್ರೋಧನ ಸಂವತ್ಸರದ ವೈಶಾಖ ಶು॥ ೧ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೫ನೆಯ ಮೇಷ ಪಕ್ಷ.)

ತಾರೀಕು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೌರಮಾನ	ಸೂರ್ಯ ಉ	ಸೂರ್ಯ ಅಸ್ತ
18	ಶನಿ	೧೦	೧೯.೧೬	ಧನಿಷ್ಠಾ	೨೫.೪೬	೬	6.18	6.42
19	ರವಿ	೧೧	೧೪.೪೪	ಶತಭಿಷಾ	೨೩. ೦	೭	6.18	6.43
20	ಸೋಮ	೧೨	೧೧. ೦	ಪೂ. ಭಾ.	೨೧.೧೪	೮	6.17	6.43
21	ಕುಜ	೧೩	೮.೧೪	ಉ. ಭಾ.	೨೦.೨೮	೯	6.16	6.43
22	ಬುಧ	೧೪	೬.೪೬	ರೇವತಿ	೨೧. ೦	೧೦	6.16	6.43
23	ಗುರು	●	೬.೩೨	ಅಶ್ವಿನೀ	೨೨.೪೬	೧೧	6.15	6.43
24	ಶುಕ್ರ	೧	೭.೧೬	ಭರಣೀ	೨೫.೨೮	೧೨	6.15	6.43

ಮಂಗಳೂರಿನ ವಾಯುಸ್ಥಿತಿ.

ತಾರೀಕು Date	Temperature. ಉಷ್ಣ (ಕಾವು) Maximum ಹೆಚ್ಚಾದ	Minimum ಕಡಿಮೆ	Rainfall. ಮಳೆ ದಿನದ ಮಳೆ	ಜುಮಲಾ ಮಳೆ.
10	95—2	82—3	—	—
11	96—1	80—8	—	—
12	95—8	79—4	—	—
13	95—0	81—5	—	—
14	95—3	81—0	—	—
15	95—4	81—5	—	—
16	95—1	79—7	—	142-42

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ	ವರೆಗೆ
	ರೂ. ಆ.	ರೂ ಆ
ಹೊಸ ಮುಸ್ಕಿ	8—0	8—10
ಹೊಸ ಗುಡ್ಡು ...	7-8	7—14
ಹೊಸ ರಾಶಿ ...	6- 12	7—8
ಅವ್ವಲ್ ಬೆಳ್ತಿಗೆ ...	8--4	9 - 6
ಗುಡ್ಡು ಬೆಳ್ತಿಗೆ ...	7 — 12	8 - 2
ರಂಗೂನು ಬೆಳ್ತಿಗೆ ಗೋಣಿ ೧ ...	13- 8	-
ಗೋದಿ ಗೋಣಿ ೧ಕ್ಕೆ ...	19- 0	24 - 0
ಹುರುಳಿಗೋಣಿ ೧ಕ್ಕೆ ...	9- 8	10 - 8
ಕಡಲೆಗೋಣಿ ೧ಕ್ಕೆ ...	11- 8	12 - 8
ತೊಗರಿಗೋಣಿ ೧ಕ್ಕೆ ...	12- 8	13 - 0
ತೊಗರಿಬೇಳೆ ಗೋಣಿ ೧ಕ್ಕೆ ...	14-8	21—0
ಉದ್ದು ಗೋಣಿ ೧ಕ್ಕೆ ...	14- 0	14 8
ಹೆಸರುಗೋಣಿ ೧ಕ್ಕೆ ...	14 - 0	15 0
ಊರು ಬೆಲ್ಲ ಖಂಡಿ ೧ಕ್ಕೆ ...	-	85 - 0
ಉಪ್ಪು ಗೋಣಿ ೧ಕ್ಕೆ ...	4- 4	4-12
ಕೊಬ್ರಿ ಖಂಡಿ ೧ಕ್ಕೆ ...	110-0	115 - 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	32- 8	—
ಎಳ್ಹಿಂಡಿ ಖಂಡಿ ೧ಕ್ಕೆ ...	40-0	45 — 0
ಕೊಬ್ರಿ ಎಣ್ಣೆ ಮಣ ೧ಕ್ಕೆ ...	8 — 2	9 — 0
ಎಳ್ಳೆಣ್ಣೆ ಮಣ ೧ಕ್ಕೆ ...	7- 0	11 — 0
ಚಿಮಣಿ ಎಣ್ಣೆ ಪೆಟ್ಟಿಗೆ ೧ಕ್ಕೆ ...	8-15-6	—
ಮೋರಿಸ ಸಕ್ಕರೆ ಮಣ ೧ಕ್ಕೆ ...	6 — 0	—
ಊರ ಮೆಣಸಿನಕಾಯಿ ಮಣ ೧ಕ್ಕೆ ...	6 - 0	7 - 0
ಸಾಸಿವೆ ಮುಡಿ ೧ಕ್ಕೆ ...	8- 12	—
ಕೊತ್ತಂಬರಿ ಮುಡಿ ೧ಕ್ಕೆ ...	3- 8	3 — 14
ಕಾಫಿ ಖಂಡಿ ೧ಕ್ಕೆ ...	370- 0	380--0
ಚಾಳಿಗೋಟು ಅಡಿಕೆ ಖಂಡಿ ೧ಕ್ಕೆ ಹಳತು ...	245- 0	255--0
„ ಹೊಸ ಅಡಿಕೆ	230 — 0	240 — 0
ಕಾಳುಮೆಣಸು ಖಂಡಿ ೧ಕ್ಕೆ ...	155-0	160--0
ಯಾಲಕ್ಕಿ ಮಣ ೧ಕ್ಕೆ ...	80- 0	90- 0
ಗೇರುಬೀಜ ಮುಡಿ ೧ಕ್ಕೆ ...	8 — 10	—
ಕಬ್ಬಿಣ ಖಂಡಿ ೧ಕ್ಕೆ ...	45- 0	65 — 0
ತಾಮ್ರ ತಗಡು ಮಣ ೧ಕ್ಕೆ ...	17-12	23 — 0
ತಾಮ್ರ ಪಾತ್ರೆಗಳು ಮಣ ೧ಕ್ಕೆ ...	26- 0	—
ಚೀನಿ ಬೆಳ್ಳಿ ಸೇರು ೧ಕ್ಕೆ ...	22 - 0	
ಹಿತ್ತಾಳೆ ತಗಡು ಮಣ ೧ಕ್ಕೆ ...	18- 8	
ಪವನು	13-12-6	

The Canara Public Conveyance Co., Ltd, Mangalore.

(ESTABLISHED 1914).

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು
- ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು
- ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
- ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
- ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.
- ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ—ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯುಬಹುದು.

Secretary,
The Canara Public Conveyance Co., Ltd, Mangalore. S K

ಕನ್ನಡಿಗರೆ! **ವಸಂತ.** ಕಚ್ಚೆರಿಯಿರಿ!

ಈಗಾಗಲೇ ಎರಡನೇ ಸಂಪುಟವು ಆರಂಭಿಸಲಿದೆ.

ಇತಿಹಾಸನಿಧಿ ಎಂದರೆ	ವಸಂತ
ಸಮಾಜಸುಧಾರಕನೆಂದರೆ	ವಸಂತ
ಕೈಗಾರಿಕೆಯ ಸಾಮ್ರಾಜ್ಯವೆಂದರೆ	ವಸಂತ
ಕರ್ನಾಟಕ ಭಾಷಾಸೇವಕನೆಂದರೆ	ವಸಂತ
ದೇಶವಿದೇಶ ಬಂಧುವೆಂದರೆ	ವಸಂತ
ಕಾದಂಬರಿಗಳ ಭಂಡಾರವೆಂದರೆ	ವಸಂತ
ಚಿತ್ರಾಕರ್ಷ ಚಿತ್ರಶಾಲೆಯೆಂದರೆ	ವಸಂತ
ದೇಶಭಕ್ತನೆಂದರೆ	ವಸಂತ

ಇಂತಹ ವಸಂತನು ಯಾರಿಗೆ ಬೇಕು, ಯಾರಿಗೆ ಬೇಡ?

48 (ಕ್ರಾನ್ ¼ ಪುಟ ಸ್ಯಾಜಿನ) ಪುಟಗಳನ್ನು ಪಿಕ್ಕಿದ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3—4—0 ಮಾತ್ರ.

ವ್ಯವಸ್ಥಾಪಕ,
ವಸಂತ ಕಾರ್ಯಾಲಯ,
ಕುಂದಾಪುರ, ದಕ್ಷಿಣ ಕನ್ನಡ.

FOR SALE.

One new **Harley Davidson sports Model** Motor Cycle used only for 250 miles in perfect running order complete with equipments. Price Rs. 1000 or near offer.

For further particulars,
Apply to:—
The Mangalore Trading Association,
Car-Street Mangalore

FOR INVESTORS

A few shares of the Saraswathi Printing Works Ltd., are available for sale. They are all fully paid up shares of Rs. 50 each. For terms:

Apply to- X
C/o MANAGER,
Swadeshabhimani

JUST ARRIVED

Continental Belts.

OF VARIOUS SIZES
Price Re. 1—10—0 each
Mangalore Trading Association,
Car Street, MANGALORE

ಬಂದು ನೋಡಿರಿ! ತಿಂದು ನೋಡಿರಿ!

ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ
ಪದಕವನ್ನು
ಬಹುಮಾನವಾಗಿ ಪಡೆದಿರುವ
ಎಸ್. ಪಿ. ಆಚಾರ್ಯ
ಇವರಿಂದ ತಯಾರಿಸಲ್ಪಟ್ಟ
ಉಪ್ಪಿನಕಾಯಿಗಳನ್ನು
ಬಂದು ನೋಡಿರಿ! ತಿಂದು ನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ, ಕುಂಬಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನ್ನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ
ಬಂದು ನೋಡಿರಿ! ತಿಂದು ನೋಡಿರಿ!

ಇಂಡಿಯನ್ ಸ್ವೀಟ್‌ಮೀಟ್ ಮಾರ್ಟ್.

ಮನೋರ್ಮ್ಯಾಸಿಸ ಕಾಫಿ ಕ್ಲಬ್, ಮಾರ್ಕೆಟು ರೋಡು, ಮಂಗಳೂರು. | ಅಥವಾ | ಸದಾನಂದ ಕಾಫಿ ಕ್ಲಬ್, ರಥಬೀದಿ, ಮಂಗಳೂರು.

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ
ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ
ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ಯಾವಂತರೂ ತಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ಗಾವರ್ಗಿಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನ್ನು ಕುರಿತ ಲೆಖ್ಖಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಅಧಿಕಾರಿಗಳೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪೋಷಕರಿಗೆ ... ... ರೂ. 3–0–0.
ಇತರರಿಗೆ, ಪಠ್ಯಶಾಲೆಗಳಿಗೆ, ಪೋಸ್ಟೇಜು ಸೇರಿ ,, 2–8–0.
,, ಸ್ಕೂಲಿನವರಿಗೆ ... ,, 1–8–0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪತ್ರಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿಯಬಹುದು.

ಎಡಿಟರ್,
ಬಿ. ಹನುಮಂತಯ್ಯಗೌಡ,
ಅರ್ಥಸಾಧಕ ಪತ್ರಿಕೆ,
ಅರಳೇಪೇಟೆ, ಬೆಂಗಳೂರು ಸಿಟಿ.

ಕೋಕಶಾಸ್ತ್ರವು.

ಈ ಪುಸ್ತಕದಲ್ಲಿ 72 ಅಧ್ಯಾಯಗಳೂ ಮತ್ತು 112 ಮನೋಹರವಾದ ಚಿತ್ರಗಳೂ ಇವೆ. ಈ ಪುಸ್ತಕದ ಸಾರಾಂಶ:

ಹೆಂಗಸರಲ್ಲಿ ನಾಲ್ಕು ಜಾತಿ: (1) ಪದ್ಮಿನಿ, (2) ಚಿತ್ರಿಣಿ, (3) ಶಂಖಿನಿ ಮತ್ತು (4) ಹಸ್ತಿನಿ ಇವರ ನಕ್ಷೆಗಳನ್ನು ಕೊಟ್ಟು ವಿವರಿಸಲ್ಪಟ್ಟಿದೆ. ಹಾಗೆಯೇ ನಾಲ್ಕು ಜಾತಿಯ ಮನುಷ್ಯರು. ಹೆಂಗಸರನ್ನು ಮತ್ತು ಗಂಡಸರನ್ನು ನೋಡಿ ಯಾವ ಜಾತಿ ಎಂದು ಕಂಡುಹಿಡಿಯುವ ಕ್ರಮ. ಚಂದ್ರನ ಮತ್ತು ನಕ್ಷತ್ರಗಳ ಸ್ಥಾನಗಳನ್ನು ನೋಡಿ ಶುಭಕಾಲವನ್ನು ಕಂಡುಹಿಡಿಯುವ ಕ್ರಮ. ರಜಸ್ವಲೆಯಾಗುವಿಕೆ. ಇದರ ವಿವರ. ಇದರ ರೋಗಗಳು, ಈ ರೋಗಗಳ ನಿವಾರಣೆ ಕ್ರಮ. ಬಸುರಾಗುವಿಕೆ, ನವಮಾಸದ ಗರ್ಭದ ಬೆಳವಣಿಗೆ (ಇದರ ನಕ್ಷೆಕೊಟ್ಟಲ್ಪಟ್ಟಿದೆ). ಬಸುರಾದ ಕಾಲದಲ್ಲಿ ಹೆಂಗಸರು ನಡೆಯುವ ಕ್ರಮ. ನೋವು ಮತ್ತು ಕಷ್ಟವಿಲ್ಲದೆ ಪ್ರಸವ ಆಗುವ ಕ್ರಮ. ಕಳೆದುಕೊಂಡ ಶಕ್ತಿಯನ್ನು ಹಿಂತಿರುಗಿ ಪಡೆಯುವ ಕ್ರಮ. ತಮ್ಮ ಶಕ್ತ್ಯಾನುಸಾರ ಮಿತ ಸಂತತಿಯನ್ನು ಮಾಡುವ ಕ್ರಮ. ತಮ್ಮ ಇಚ್ಛಾನುಸಾರ ಗಂಡು ಅಥವಾ ಹೆಣ್ಣು ಕೂಸನ್ನು ಪಡೆಯುವ ಕ್ರಮ. ಗರ್ಭಾವಸ್ಥೆಯಲ್ಲಿ ಕೂಸಿನ ಲಿಂಗವನ್ನು ಕಂಡುಹಿಡಿಯುವ ಕ್ರಮ, ಹೆಂಗಸರ ಸೌಂದರ್ಯವನ್ನು ಕಾಪಾಡುವುದು ಹೇಗೆ. ಗೊಡ್ಡುತನವನ್ನು ಹೋಗಲಾಡಿಸುವ ಕ್ರಮ. ಮತ್ತು ಅನೇಕ ಇಲ್ಲಿ ವಿವರಿಸಲಿಕ್ಕೆ ಆಗದ ಸಂಗತಿಗಳು ಸಂಕ್ಷೇಪವಾಗಿ ವಿವರಿಸಲ್ಪಟ್ಟಿವೆ. ಬಹಳ ಪ್ರಾಚೀನಕಾಲದ ರೋಗನಿವಾರಣೆಯ ಔಷದಗಳು ಕೊಡಲ್ಪಟ್ಟಿದೆ.

ಪುಸ್ತಕ ೧ರ ಕ್ರಯ ರೂ. 4—0—0.

ಇಂಟರ್‌ನೇಶನಲ್ ಪಬ್ಲಿಷಿಂಗ್ ಕಂಪೆನಿ,
ಇಂಟರ್‌ನೇಶನಲ್ ಬಿಲ್ಡಿಂಗ್,
ಲುಧಿಯಾನಾ, (ಪಂಜಾಬ)

International Publishing Company,
International Building,
Ludhiyana, PUNJAB.

ಮೂಡಬಿದ್ರೆ ಶ್ರೀ ಗೋಪಾಲಕೃಷ್ಣ ದೇವಸ್ಥಾನದ ಸಹಾಯಕ ಫಂಡ್.

ಈ ನಮ್ಮ ಸಂಘಕ್ಕೆ ಕಳೆದ ಫೆಬ್ರವರಿ ಮತ್ತು ಮಾರ್ಚಿ ತಿಂಗಳಲ್ಲಿ ಸದಸ್ಯರಾಗಿ ಸೇರಿ ಧನ ವಾಗ್ದಾನಮಾಡಿದ ಯಾ ಕೊಟ್ಟು ಸೇರಿದ ಮಹನೀಯರ ನಾಮಾವಳಿಗಳು.

ಮ| ರಾ| ರಾ| ಕೆದಿಂಜೆ ತಿಮ್ಮಪ್ಪ ಹೆಗಡೆರವರು ರೂ. ೫೦, ವಕೀಲ ರಾಮರಾಯ ಹೆಗಡೇರವರು ೨೫, ಪಣಂಬೂರು ವಾಸುದೇವರಾವ್, ಪಚ್ಚನಾಡಿ ಪಟೇಲ ನಾರ್ಣಪ್ಪಯ್ಯನವರು, ಅಬ್ಕಾರಿ ಇನ್ಸಪೆಕ್ಟರ್ ಸರ್ಪೂರ್ ರಾಮಚಂದ್ರ ರಾವ್ ಬಜಪೆಯವರು, ರೂ. ೧೫ರಂತೆಯೂ ಅಮಟಾಡಿ ಶರಮೋಶ್ವರ ಹೊಳ್ಳರು, ಚೆಂಡಾಡಿ ನಾರಾಯಣ ಸೋಮಯಾಜಿರು, ಪಟೇಲ ಶೀನಗಿರಿ ಹೆಗಡೇರು, ಪಾಂಡೇಶ್ವರ ಶ್ರೀನಿವಾಸ ಉಪಾಧ್ಯಾಯ, ಮ| ಬಾಗ್ಲೋಡಿ ಕೃಷ್ಣರಾವ್, ಕಲ್ಯಾಣ ಯಾನೆ ರುಕ್ಮಿಣಿ ಹೆಂಗಸು, ಪುತ್ತಿಗೆ ಮಠದ ಶ್ಯಾ| ಮಂಕಿ ರಾಮರಾವ್, ಅಡ್ಡಿ ಪುತ್ತಿಗೆ ಮಠದ ಪಾರುಪತ್ಯದಾರ ರಾಮಚಂದ್ರಾಚಾರ್ಯರವರು, ರೂ. ೧೦ರಂತೆಯೂ ಬೇರಜೆ ರಾಮಪ್ಪಯ್ಯನವರು, ಅಗ್ರಬೈಲು ಕೃಷ್ಣ ಹೊಳ್ಳರು, ಕಾವಳ ಕೃಷ್ಣಯ್ಯನವರು ದುರ್ಗೆ ವಿನಾಯಕ ಭಟ್ಟರು, ಕೋಯಿಕ ವಾಸುದೇವ ಹೊಳ್ಳರು, ಇರುವೈಲ ದೇವಪ್ಪರಾಯ ರೂ. ೫ರಂತೆಯೂ ಕೂಡಾ ೨೩೦ ಆಗಿರುತ್ತದೆ.

ಇದರ ಪೈಕಿ ಸದರಿ ತಿಂಗಳಲ್ಲಿ ವಸೂಲಾದ ರೂ ೧೫೬. ಆಗಿಯದೆ.

ವೇಣೂರು ಕೃಷ್ಣಯ್ಯ.
ಕಾರ್ಯದರ್ಶಿ.

ಪ್ರಕಟಣೆ.

ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಮಹಾಸಭೆಯು ಕಾರ್ಕಳದಲ್ಲಿ ೩ನೇ ಜಿಲ್ಲಾ ಪರಿಷತ್ತಿನ ಮಂಟಪದಲ್ಲಿ, ಮೇ ತಿಂಗಳ ತಾರೀಕು ೨ನೇ ರಾತ್ರಿ ೯ ಗಂಟೆಗೆ ಸೇರುವುದು. ಎಲ್ಲಾ ಸದಸ್ಯರು ಅಗತ್ಯ ಬರಬೇಕಾಗಿ ವಿನಂತಿ.

ಸಭೆಯ ಮುಂದಿಡತಕ್ಕ ವಿಷಯಗಳು:—

೧ ತಾರೀಕು ೯-೫-೨೪ರಿಂದ ೩೦-೪-೨೫ರ ವರೆಗಿನ ಕೆಲಸದ ವರದಿ ಮತ್ತು ಲೆಕ್ಕದ ಮಂಜೂರಾತಿ.

೨ ಪರಿಷತ್ತಿನಲ್ಲಿ ಮಂಜೂರಾದ ಠರಾವುಗಳ ವಿಚಾರ, ಕಮಿಟಿಯವರ ಕರ್ತವ್ಯ.

೩ ಜಿಲ್ಲಾ ಕಾಂಗ್ರೆಸ್ ಕಮಿಟಿಯ ನಿಯಮಗಳ ಬದಲಾವಣೆ.

೪ ಜಿಲ್ಲಾ ಖಾದೀ ಬೋರ್ಡಿನ ಲೆಕ್ಕದ ಮತ್ತು ಮುಂದಿನ ವರ್ಷದ ಅಂದಾಜು ಪಟ್ಟಿ.

೫ ಜಿಲ್ಲೆಯೊಳಗಿನ ಖಾದೀ ಕೆಲಸದ ಬಗ್ಗೆ ಸೂಚನೆಗಳು, ಮತ್ತು ಅಗತ್ಯವಿದ್ದಲ್ಲಿ ಹೊಸ ಬೋರ್ಡನ್ನು ಸ್ಥಾಪಿಸುವುದು.

೫ (a) ಹೊಸ ವರ್ಷದ ಬಗ್ಗೆ ಹೊಸ ಕಾರ್ಯಕಾರೀ ಮಂಡಳಿಯನ್ನು ಸ್ಥಾಪಿಸುವುದು.

೬ ಜತೆಕಾರ್ಯದರ್ಶಿಯವರ ಕೆಲಸ ಸ್ಪಷ್ಟಪಡಿಸುವುದು.

೭ ಹೊಸ ವರ್ಷಕ್ಕೆ ಲೆಖ್ಖಪರಿಶೋಧಕರ ನೇಮಕ.

೮ ಅಗತ್ಯವಿದ್ದಲ್ಲಿ ಕಮಿಟಿಯ ಸ್ಥಾನವನ್ನು ಬದಲಾಯಿಸುವುದು.

೯ ಜಿಲ್ಲಾ ಶಿಕ್ಷಣ ಸಮಿತಿಯವರ ವರದಿ ಮತ್ತು ಹೊಸ ವರ್ಷಕ್ಕೆ ಹೊಸ ಸಮಿತಿಯನ್ನು ಸ್ಥಾಪಿಸುವುದು.

೧೦ ಅಧ್ಯಕ್ಷರ ಪರವಾನಗಿಯಿಂದ ತರಬಹುದಾದ ಇತರ ವಿಷಯಗಳು.

ಸೂ.—(೧) ಸದಸ್ಯರು ಬೆಳಗಾಂವಿಯ ನಿರ್ಣಯದ ಪ್ರಕಾರ ಮಾರ್ಚಿ ತಿಂಗಳ ಮೊದಲ್ಗೊಂಡು ತಿಂಗಳೊಂದರ ೨೦೦೦ ವಾರು ನೂಲು ಕೊಟ್ಟವರಿರಬೇಕು ಯಾ ೨೦ ಸಾವಿರ ಗಜ ಮುಂಗಡವಾಗಿ ಕೊಟ್ಟವರಿರತಕ್ಕದು. (೨) ಸಭೆಗಳಿಗೆ ಹಾಜರಾಗುವ ಸದಸ್ಯರು ಖಾದಿ ಧರಿಸಿದವರಾಗಿರತಕ್ಕದು. (೩) ಸದಸ್ಯರು ಮೇ ತಿಂಗಳ ನೂಲನ್ನು ಮೇ ತಾರೀಕು ೧ರೊಳಗೆ ಕೊಡತಕ್ಕದ್ದು.

ಮೊಕ್ಕಾಂ— ಉಡುಪಿ,
೧೩-೪-೨೫.

K. Panduranga Pai.
ಕಾರ್ಯದರ್ಶಿ, ಜಿ. ಕಾ. ಕ.

ಸದಸ್ಯರು ತಮ್ಮ ಸೂಚನೆಗಳನ್ನು ಮುಂಚಿತವಾಗಿಯೇ ಕಳುಹಿಸಬೇಕಾಗಿ ವಿನಂತಿ.

(ತಾರೀಕು ೨-೫-೨೫ನೇ ರಾತ್ರಿ ೯ ಘಂಟೆಗೆ ಸಭೆಸೇರುವುದು.)

ಉಪಾಧ್ಯಾಯರಿಗೊಂದು ಸಹಕಾರಿ ಸಂಘ.

ನೋಟೀಸಿನಲ್ಲಿ ಪ್ರಕಟಿಸಿದಂತೆ ೪ನೇ ತಾರೀಕು ಶನಿವಾರ ಸಾಯಂಕಾಲ ೫ ಗಂಟೆಗೆ ಮಿಶ್ಯನ್ ಹೈಸ್ಕೂಲಿನಲ್ಲಿ ಉಪಾಧ್ಯಾಯರ ಸಭೆಯೊಂದು ಸೇರಿತು. ಕೋ-ಓಪರೇಟಿವ್ ಸಂಘಗಳ ಇನ್‌ಸ್ಪೆಕ್ಟರ್ ಮ| ರಾ| ರಾ| ರಾಮರಾಯರೂ ಸಭೆಗೆ ದಯಮಾಡಿಸಿದ್ದರು. ಮ| ರಾ| ರಾ| ಟಿ. ಪದ್ಮನಾಭಯ್ಯನವರನ್ನು ಅಧ್ಯಕ್ಷಸ್ಥಾನಕ್ಕೆ ಆರಿಸಲಾಯಿತು.

ಅಂದಿನ ಸಭೆಯಲ್ಲಿ ಎರಡು ನಿರ್ಣಯಗಳಾದವು. ಮೊದಲನೇದು— ಮಂಗಳೂರು ಶಹರಿನ ಉಪಾಧ್ಯಾಯರ ಪ್ರಯೋಜನಾರ್ಥವಾಗಿ ಒಂದು ಸಹಕಾರಿ ಸಂಘವನ್ನೇರ್ಪಡಿಸಬೇಕು. ಪರಂತು, ಈ ವರೆಗೆ ಯಾವ ಸಂಘಕ್ಕೂ ಸೇರದ ಕಡಿಮೆ ಪಕ್ಷಕ್ಕೆ ೨೫ ಮಂದಿ ಉಪಾಧ್ಯಾಯರಾದರೂ ತಾವು ಮೇಲೆ ಹೇಳಿದ ಸಂಘಕ್ಕೆ ಸೇರುತ್ತೇವೆಂದು ಬರಹ ಮೂಲಕ ತಮ್ಮ ಅಪೇಕ್ಷೆಯನ್ನು ಸೂಚಿಸಬೇಕಾಗಿ, ಎರಡನೇ ನಿರ್ಣಯ— ಕೆಳಗೆ ಹೇಳಿದ ಆರು ಮಂದಿ ಕೂಡಿದ ಒಂದು ಕಮಿಟಿ ನೇಮಕವಾಯಿತು.

ಮ| ರಾ| ರಾ| ಗಳಾದ ಎನ್. ರಾಮಚಂದ್ರ ಐಯ್ಯರ್, ಎಸ್. ಎಸ್. ನೀಲಂಬರರಾವ್, ಉಳಿಯ ಗೋಪಾಲಕೃಷ್ಣ ರಾವ್, ಎ. ವಾಸುದೇವ ಪೈ, ಮಿಸ್ಟರ್ ಎಸ್. ಎ. ಫರ್ನಾಂಡಿಸ್, ಮಿಸ್ಟರ್ ಜೆ ಅಮ್ಮನ.

ಈ ಕಮಿಟಿಯವರು ೨೫ ಮಂದಿ ಸಂಘಕ್ಕೆ ಸೇರುತ್ತೇವೆಂದು ವಾಗ್ದತ್ತಮಾಡಿದ ಕೂಡಲೇ ಸಭೆ ಸೇರಿ ಸಂಘದ ಉಪನಿಬಂಧನೆಗಳನ್ನು ಬರೆದು ಉಪಾಧ್ಯಾಯರ ಮಹಾಸಭೆಯ ಮುಂದಿಡಬೇಕು.

ಉಪಾಧ್ಯಾಯರಿಗೋಸ್ಕರ ಪ್ರತ್ಯೇಕ ಸಂಘವನ್ನು ಏರ್ಪಡಿಸುವುದು ವಿಹಿತವೆಂತಲೇ ಹೇಳಬೇಕು. ಆದರೆ ಹಾಜರಿದ್ದ ಉಪಾಧ್ಯಾಯರಲ್ಲಿ ಹಲವರು ಇತರ ಸಂಘಗಳಲ್ಲಿ ಮೆಂಬರುಗಳಾಗಿರುವುದರಿಂದಲೂ, ಎರಡು ಲೇವಾದೇವಿ ಸಂಘಗಳಲ್ಲಿ ಯಾವನೊಬ್ಬನಾದರೂ ಮೆಂಬರನಾಗುವುದು ಕ್ರಮಗಳಿಗೆ ವಿರೋಧವಾಗಿದ್ದದರಿಂದಲೂ, ಈ ವರೆಗೆ ಬೇರೆ ಯಾವ ಸಂಘಗಳಲ್ಲಿಯಾದರೂ ಮೆಂಬರರಾಗದಿರುವ ಕಡಿಮೆಪಕ್ಷಕ್ಕೆ ೨೫ ಮಂದಿ ಉಪಾಧ್ಯಾಯರು ಪ್ರತ್ಯೇಕ ಸಂಘವನ್ನು ಏರ್ಪಡಿಸಬೇಕೆಂದು ಬರಹಮೂಲಕ ಮೇಲೆಹೇಳಿದ ಕಮಿಟಿ ಮೆಂಬರರಿಗೆ ತಮ್ಮ ಅಪೇಕ್ಷೆಯನ್ನು ಸೂಚಿಸಿದರೆ, ಸಂಘವನ್ನು ಏರ್ಪಡಿಸುವುದಕ್ಕೋಸ್ಕರ ತಕ್ಕದಾದ ಉಪನಿಬಂಧನೆಗಳನ್ನು ಅಂಗೀಕರಿಸಿ ಇಲಾಖಾಧಿಕಾರಿಗಳಿಗೆ ಬರಕೊಳ್ಳಬೇಕಾಗಿ ನಿರ್ಣಯಿಸಲಾಗಿಯದೆ. ಆದುದರಿಂದ ಈ ವಿಷಯವನ್ನು ಎಲ್ಲಾ ಉಪಾಧ್ಯಾಯರು ಗಮನಕ್ಕೆ ತಂದು ಪ್ರತ್ಯೇಕ ಒಂದು ಸಹಕಾರಿ ಸಂಘವನ್ನು ಏರ್ಪಡಿಸುವುದಕ್ಕೆ ಅಪೇಕ್ಷೆಯುಳ್ಳವರು ಕಮಿಟಿ ಮೆಂಬರರ ಪೈಕಿ ಯಾರೊಬ್ಬನಿಗಾದರೂ ದಯಮಾಡಿ ತಿಳಿಸಬೇಕಾಗಿ ವಿನಂತಿ.

ಪ್ರತ್ಯೇಕ ಸಹಕಾರಿ ಸಂಘವನ್ನು ಸ್ಥಾಪಿಸಿದಲ್ಲಿ ಉಪಾಧ್ಯಾಯರೊಳಗೆ ವಿಶೇಷವಾದ ಒಕ್ಕಟ್ಟೂ ಅನ್ಯೋನ್ಯ ಪ್ರೀತಿಯೂ ಉಂಟಾಗುವುದೆಂದು ನಂಬಿಕೆ ಇದೆ.

ಶ್ರೀ ಜ್ಞಾನೋದಯ ಸಮಾಜದ ಹದಿನೈದನೇ ವಾರ್ಷಿಕೋತ್ಸವವೂ ಜ್ಞಾನೋದಯ ಶಾಲೆಯ ವರ್ಧಂತಿ ಉತ್ಸವವೂ.

ಕಳೆದ ಸೌರಯುಗಾದಿ ದಿನ ಬಹೂ ವಿಜೃಂಭಣೆಯಿಂದ ಹೊಯಿಗೆ ಬಜಾರದಲ್ಲಿ ಜರಗಿಸಲಾಯಿತು. ಅಂದು ಸೂರ್ಯೋದಯ ಕಾಲದಲ್ಲಿ ಸಮಾಜದ ಸದಸ್ಯರೆಲ್ಲರೂ ಸಮುದ್ರಕರೆಯಲ್ಲಿ ಒಟ್ಟುಸೇರಿ ಸ್ನಾನ ಸಂಧ್ಯಾ ಅಗ್ನಿಹೋತ್ರಾದಿಗಳನ್ನು ಮಾಡಿ ಪ್ರತಿಒಬ್ಬರೂ ಮದ್ಯಪಾನತ್ಯಾಗದ ವ್ರತವನ್ನು ಕೈಕೊಂಡು ಒಬ್ಬರಿಗೊಬ್ಬರು ಪ್ರಮಾಣದಾರಗಳನ್ನು ಕಟ್ಟಿಕೊಂಡರು. ಕೆಲವರು ಹೊಗೆಸೊಪ್ಪು, ಚುರುಟು, ಬೀಡಿ, ಸಿಗರೇಟುಗಳ ಅಭ್ಯಾಸವನ್ನು ಸಹ ಬಿಡುವ ಶಪಥಗಳನ್ನು ಉಚ್ಚರಿಸಿ ಪ್ರಮಾಣ ಮಾಡಿದರು! ಬೆಳಗ್ಗೆ ಹತ್ತು ಗಂಟೆಗೆ ಶಾಲಾ ವಿದ್ಯಾರ್ಥಿಗಳನ್ನೆಲ್ಲಾ ಒಟ್ಟುಗೂಡಿಸಿ ಫಲಹಾರ ಪಾನಕಗಳಿಂದ ತೃಪ್ತಿಪಡಿಸಿದರು. ಸಮಾಜದ ಕಾರ್ಯದರ್ಶಿಯವರು- ಯುಗಾದಿಯ ದಿನದಲ್ಲಿ ವಿದ್ಯಾರ್ಥಿಗಳು ಸಂಕಲ್ಪಿಸಬೇಕಾದ್ದು ಏನು? ಎಂಬ ಕುರಿತು ವಿದ್ಯಾರ್ಥಿಗಳಿಗೆ ಭೋದಪರವಾದ ಒಂದು ಭಾಷಣ ಕೊಟ್ಟರು.

ಸಾಯಂಕಾಲ ಐದು ಘಂಟೆಗೆ ಸರಿಯಾಗಿ ತಳಿರುತೋರಣಗಳಿಂದ ಅಲಂಕೃತವಾದ ಶ್ರೀ. ಜ್ಞಾನೋದಯ ಮಂದಿರದಲ್ಲಿ ಮೊಗವೀರ ಸ್ತ್ರೀಪುರುಷರ ಮಹಾಸಭೆಯು ನೆರೆದು ಬಂತು. ಸಭಿಕರ ಪೈಕಿ ಅರೆವಾಸಿ ಸ್ತ್ರೀಯರೇ ಆಗಿದ್ದರು. ಮಂದಿರವೆಲ್ಲ ಸಭಿಕರಿಂದ ತುಂಬಿಹೋಗಿ ಎಷ್ಟೋ ಜನರು ಹೊರಗಿನ ವರಾಂಡದಲ್ಲಿ ನಿಲ್ಲಬೇಕಾಯಿತು! ಪ್ರಥಮತಃ ದೇವತಾ ಪ್ರಾರ್ಥನೆ, ಕೀರ್ತನೆಗಳಿಂದ ಸಭಾಕಾರ್ಯವು ಪ್ರಾರಂಭವಾಗಿ ಮೊದಲೇ ನಿಶ್ಚಯವಾಗಿದ್ದಂತೆ ಡಿಸ್ಟ್ರಿಕ್ಟ್ ಫಿಶರೀಸ್ ಆಫೀಸರರಾದ ಶ್ರೀಯುತ ಉಳ್ಳೂರು ನಾಗಪ್ಪಾ ಅವರ್ಗಳ್‌ರವರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದರು. ತರುವಾಯ ಸಮಾಜದ ಕಾರ್ಯದರ್ಶಿಯವರು, ಸಮಾಜದ ಹದಿನೈದು ವರುಷಗಳ ಸಂಕ್ಷಿಪ್ತ ಇತಿಹಾಸವನ್ನು ವಿವರಿಸಿ, ಕಳೆದ ಮೂರು ನಾಲ್ಕು ವರುಷಗಳಿಂದ ಮೊಗವೀರರ ಕಸಬು ಕೈಗಾರಿಕೆಗಳು ಕ್ಷೀಣಗತಿಗೆ ಬಂದುದರಿಂದಲೂ ನೆರೆಯ ಹಾವಳಿಯು ಸಮಾಜದ ಮುಂದಾಳುಗಳನ್ನು ಕಠಿಣವಾಗಿ ಪೀಡಿಸಿದ್ದರಿಂದಲೂ ಸಮಾಜದ ಕಾರ್ಯವಿಸ್ತಾರವು ಸಾಕಷ್ಟು ಮುಂದುವರಿಯದಿದ್ದುದಕ್ಕಾಗಿ ದುಃಖಪ್ರದರ್ಶಿಸಿದರು. ಮೊಗವೀರರ ಅವನತಿಗೆ ಮುಖ್ಯ ಕಾರಣವಾದ ಮದ್ಯಪಾನ ವ್ಯಸನ ಪಿಶಾಚಿಯ ಕೈಯಿಂದ ಬಿಡುಗಡೆಯಾಗದ ವಿನಹಾ ತಮ್ಮ ಸಮುದಾಯವು ಯಾವ ವಿಷಯದಲ್ಲಿಯೂ, ಉನ್ನತಿಯನ್ನು ಹೊಂದಲಾರದೆಂದೂ ಇದಕ್ಕಾಗಿ ಸಮಾಜದ ಸದಸ್ಯರೆಲ್ಲರೂ ತಮ್ಮ ತನುಮನಧನಗಳನ್ನು ಅರ್ಪಿಸಿ ಮದ್ಯಪಾನತ್ಯಾಗದ ಚಳುವಳಿಯನ್ನು ವಿಶೇಷವಾಗಿ ನಡಿಸಬೇಕೆಂದೂ, ಹೊಸ ವರ್ಷದಲ್ಲಿ ಪರಮೇಶ್ವರನ ಕೃಪೆಯಿಂದ ಮೊಗವೀರರಿಗೊದಗಿದ ಜೀವನ ಸಂಕಷ್ಟವು ದೂರವಾಗಲೆಂದೂ ಹಾರೈಸಿದರು. ನಂತರ ಜ್ಞಾನೋದಯ ಶಾಲೆಯ ಮುಖ್ಯೋಪಾಧ್ಯಾಯರಾಗಿರುವ ರಾ| ಕೆ. ಮಹಾಲಿಂಗ ಪಂಡಿತರು ಶಾಲಾ ವರದಿಯನ್ನು ಓದಿದರು. ಮತ್ತು ಕಳೆದ ವರ್ಷದಲ್ಲಿ ಸದಸ್ಯರಾಗಿ ಸೇರಿದ ಕೆಲವು ವೀರ ಸದಸ್ಯರ ಪರಿಚಯವನ್ನು ರಾ| ಮೋಹನಪ್ಪ ತಿಂಗಳಾಯರು ಸಭಿಕರಿಗೆ ಮಾಡಿಕೊಟ್ಟರು. ಇವರಲ್ಲಿ ಅಣ್ಣಪ್ಪತಂಗಿಯಣ್ಣಾಯ ಮತ್ತು ಸುಬ್ಬ ಕರಿಯದಣ್ಣಾಯ ಎಂಬ ಇಬ್ಬರು ಮದ್ಯಪಾನ ಮತ್ತು ಬೀಡಿ ಸಿಗರೇಟುಗಳ ಸೇವನೆಯಲ್ಲಿ ಮುಳುಗಿಹೋಗಿ ತಮ್ಮ ಆರೋಗ್ಯಭಾಗ್ಯವನ್ನು ಕಳಕೊಂಡವರು! ಸಮಾಜದ ಸದಸ್ಯರ ಸತ್ಸಂಗದಿಂದ ಆ ವ್ಯಸನ ಪಿಶಾಚಿಯಿಂದ ಬಿಡುಗಡೆಯಾಗಿ ಪೂರ್ವ ಸ್ನೇಹಿತರ ದುರಾಪ್ರೇರಣೆಗೆ ಬಲಿಬೀಳದೆ ತಮ್ಮ ವ್ರತವನ್ನು ಶ್ರದ್ಧೆಯಿಂದ ಹೇಗೆ ಪಾಲಿಸಿಕೊಂಡು ಬಂದರೆಂದೂ, ಚುಟ್ಟ, ಬೀಡಿ, ಚುರುಟುಗಳ ಎಳೆಯುವಿಕೆಯಿಂದ ಒಮ್ಮೆ ಕೇವಲ ಬತ್ತಿಹೋಗಿ ನಿಸ್ತೇಜವಾಗಿದ್ದ ಇವರ ಮುಖವು ಈಗ ಹೇಗೆ ಉಬ್ಬಿ ತೇಜಸ್ವಿಯಾಗಿ ತೋರುತ್ತದೆಂದೂ, ಸಭಿಕರಿಗೆಲ್ಲ ಕಾಣಿಸಿದರು.

ತರುವಾಯ ಶಾಲಾಮಕ್ಕಳು ವಿದ್ಯಾರ್ಥಿಗಳಿಗೂ ಹೆತ್ತವರಿಗೂ ಅತ್ಯಂತ ಭೋಧಕರವಾದ "ವಿದ್ಯಾಭ್ಯಾಸ" ಎಂಬ ಒಂದು ನಾಟಕವನ್ನು ಅಭಿನಯಿಸಿದರು.

ಅಧ್ಯಕ್ಷರ ಭಾಷಣ.

ನಂತರ ಅಧ್ಯಕ್ಷರು ಭಾಷಣವನಿತ್ತಕೊಡಗಿ, ಲೋಕಸೇವೆಯೇ ಮನುಷ್ಯ ಜನ್ಮದ ಸಾರ್ಥಿಕ್ಯವೆಂದೂ, ಇಂತಹ ಲೋಕಸೇವೆಯನ್ನು ಮಾಡಿ ಕೃತಾರ್ಥರಾಗಲಿಕ್ಕೆ ಯತ್ನಿಸುವ ಈ ಸಮಾಜದವರ ಉದ್ದೇಶವು ಇಷ್ಟು ಸಫಲವಾಗಿರುವುದನ್ನು ಕಂಡು ಆನಂದಿಸಿ ಪ್ರಥಮತಃ ಅವರಿಗೆ ತನ್ನ ಧನ್ಯವಾದವನ್ನು ಕೊಡುತ್ತೇನೆಂದೂ, ಯಾವ ಕಾರ್ಯಸಾಧನೆಯಲ್ಲಿ ಆದರೂ ಸಾಕಷ್ಟು ಫಲಸಿಕ್ಕಲಿಲ್ಲವೆಂಬ ಮಾತ್ರದಿಂದ ಅದು ವ್ಯರ್ಥವಾಗುವುದಿಲ್ಲ. ಉತ್ತಮ ಕಾರ್ಯಕ್ಕೆ ಉತ್ತಮ ಫಲವು ತಡವಾದರೂ ಸಿಕ್ಕಲೇಬೇಕು. ಪೂರ್ವಕಾಲದ ಮಹಾತ್ಮಾ ಪುರುಷರುಗಳು ಆಗಾಗ್ಗೆ ಊರಲ್ಲಿ ಬ್ರಾಹ್ಮಣರ ಸಂಖ್ಯೆಯು ಕಡಿಮೆಯಾದಾಗ ಮೊಗವೀರರಿಂದಲೇ ಕೆಲವು ಜನರನ್ನು ಆರಿಸಿ ಬ್ರಾಹ್ಮಣರನ್ನಾಗಿ ಮಾಡಿದ್ದರೆಂದೂ, ಇವರ ವಂಶಜರು ಈಗಲೂ ಬ್ರಾಹ್ಮಣರೆಂದೆನಿಸಿಕೊಳ್ಳುವರೆಂದೂ, ಆ ಮಹಾತ್ಮರುಗಳು ಇತರ ಸಮುದಾಯವನ್ನು ಬಿಟ್ಟು ಮೊಗವೀರರಿಂದಲೆ ಪದೇ ಪದೇ ಬ್ರಾಹ್ಮಣವರ್ಗವನ್ನು ಉಂಟುಮಾಡಿದ್ದು ನೋಡುವಾಗ ಮೊಗವೀರರಲ್ಲಿ ಸ್ವಭಾವಿಕವಾಗಿರುವ ಧಾರ್ಮಿಕ ಲಕ್ಷಣಗಳೇ ಕಾರಣವಾಗಿರಬೇಕೆಂದೂ, ಇಂಥಾ ಸುಲಕ್ಷಣಗಳು ಮದ್ಯಪಾನವೇ ಮೊದಲಾದ ದುರಭ್ಯಾಸಗಳಿಂದ ಪ್ರಸ್ತುತ ಮೊಗವೀರರಲ್ಲಿ ಅಳಿದುಹೋಗುತ್ತಿರುವುದೆಂದೂ ಈ ಶೋಚನೀಯಾವಸ್ಥೆಯನ್ನು ಹೋಗಲಾಡಿಸಲು ಜ್ಞಾನೋದಯ ಸಮಾಜದವರೊಂದಿಗೆ ಜಾತಿಯ ಪ್ರಮುಖರೆಲ್ಲರೂ ಸಹಕರಿಸಬೇಕೆಂದು ವಿಜ್ಞಾಪಿಸಿಕೊಂಡರು. ಅನಂತರ ಸ್ತ್ರೀವಿದ್ಯಾಭ್ಯಾಸದ ಅವಶ್ಯಕತೆಯನ್ನು ಹೇಳಿ ಯಾವಾಗ ಹೆಂಗಸರಿಗೆ ಸಾಕಷ್ಟು ವಿದ್ಯೆ ಬಂದು ತಮ್ಮ ಮತ್ತು ತಮ್ಮ ಗಂಡಸರ ತಪ್ಪನ್ನು ತಿದ್ದುವ ಶಕ್ತಿಯು ಅವರಿಗೆ ಬರುವುದೋ ಆಗಲೇ ಈ ಸಮಾಜದ ಉದ್ದೇಶಗಳು ಸಿದ್ಧಿಯಾಯಿತೆಂದು ತಿಳಿಯಬೇಕು. ಸಮಾಜದ ಸದಸ್ಯರುಗಳು ಮದ್ಯಪಾನ ತ್ಯಾಗದ ವ್ರತವನ್ನು ಪಾಲಿಸುವುದರಲ್ಲಿ ಹ್ಯಾಗೆ ತಮ್ಮ ಶಕ್ತಿಯನ್ನು ಉಪಯೋಗಿಸುವರೋ ಹಾಗೆಯೇ ಸ್ತ್ರೀವಿದ್ಯಾಭಿವೃದ್ಧಿಗಾಗಿಯೂ ವ್ರತಧಾರಣೆ ಮಾಡಿಕೊಳ್ಳಬೇಕಾಗಿ ಕೇಳಿಕೊಂಡರು.

ತರುವಾಯ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆಲ್ಲ ಅಧ್ಯಕ್ಷರ ಮುಖಾಂತರ ವಿವಿಧ ಪಾರಿತೋಷಕಗಳನ್ನು ಕೊಡೋಣಾಯಿತು. ಈ ಸಭಾಕಾರ್ಯದ ನಡುನಡುವೆ ಸಮಾಜದ ಸಂಗೀತ ಮೇಳದವರು ಮದ್ಯಪಾನತ್ಯಾಗ, ಸತ್ಸಂಗ ಮತ್ತು ವಿದ್ಯಾಭಿವೃದ್ಧಿವಿಷಯಕವಾದ ತುಳು ಭಾಷೆಯ ಸಂಗೀತಗಳನ್ನು ಹಾಡಿ ಮನೋರಂಜನೆಗೊಳಿಸುತ್ತಿದ್ದರು. ಉಪಕಾರಸ್ಮರಣೆ ಮತ್ತು ಮಂಗಲಗೀತೆಯಾಗಿ ಪನ್ನೀರು, ಪುಷ್ಪತಾಂಬೂಲ ದೊಂದಿಗೆ ಸಭಾವಿಸರ್ಜನೆಯಾಯಿತು.

ವಿದೇಶ ವರ್ತಮಾನ.

ಪರರಾಷ್ಟ್ರೀಯ ವಕೀಲರು ರಾಜಧಾನಿಯಲ್ಲಿ ಇರಬೇಕೆಂದು ತೀಯಮ ವಿರುವಾಗ ತುರ್ಕಿಸ್ಥಾನದಲ್ಲಿರುವ ಸೋವಿಯೆಟ್ ವಕೀಲರು ಇನ್ನೊಂದು ಕಡೆಯಲ್ಲಿ ಇರುತ್ತೇವೆಂದು ಹಟಹಿಡಿದದ್ದನ್ನು ನೋಡಿ ತುರ್ಕಿಯರು ಇದನ್ನು ನಿಷೇಧಿಸಿರುವರು.

ಲೋರ್ಡ ಬಲಫರರು ಜೆರುಸಲೇಮಿಗೆ ಹೋಗಿದ್ದಾಗ ಅವರನ್ನು ನಿಷೇಧಿಸಬೇಕೆಂದು ಅಲ್ಲಿಯ ಅರಬಿಯರು ಎಲ್ಲ ವ್ಯವಹಾರಗಳನ್ನು ಬಂದು ಮಾಡಿದರು, ಅಲ್ಲಿಯ ಟ್ರೈನಿಂಗ್‌ಕೊಲೇಜಿನ ವಿದ್ಯಾರ್ಥಿಗಳು ಹರತಾಳವನ್ನು ಆಚರಿಸಿದ್ದುದರಿಂದ ಕೊಲೇಜನ್ನು ಕೂಡ ಮುಚ್ಚಿದರಂತೆ.

ಕಡಿಮೆ ತರಗತಿಯ ಹತ್ತಿಯಿಂದ ಅತಿಶಯ ಕಡಿಮೆ ಕ್ರಯದ ವಸ್ತ್ರಗಳನ್ನು ಹೇಗೆ ತಯಾರು ಮಾಡಬೇಕೆಂದು ಆಲೋಚಿಸುವುದಕ್ಕಾಗಿ ಲಂಕೆಶಯರದಲ್ಲಿ ಗಿರಣಿಮಾಲಿಕರ ಸಭೆಸೇರಿತ್ತು.

ಮೊದಲು ಮುಂಬಯಿಯಲ್ಲಿ ಗವರ್ನರರಾಗಿದ್ದ ಸರ್ ಜೋರ್ಜ ಲೋಯಡರನ್ನು ಕೆನೆಯಾ ಸಂಸ್ಥಾನದ ಅಧಿಪತಿಯಾಗಿ ಮಾಡುವರೆಂದು ಮೆಂಚೆಸ್ಟರದ ಒಂದು ಪತ್ರಿಕೆಯು ಬರೆಯುತ್ತದೆ.

ಇಂಗ್ಲಂಡಿನ ಪಾರ್ಲಿಮೆಂಟಿನ ಅಧಿವೇಶನವು ಮುಗಿದಿರುವುದು.

ಪ್ರಾಯಕ್ಕೆ ಬಂದ ಪ್ರತಿ ಒಬ್ಬ ಮನುಷ್ಯನಿಗೂ ಮತಾಧಿಕಾರ ವಿರಬೇಕೆಂಬ ಠರಾವು ಇಟಾಲಿನಲ್ಲಿ ಪಾಸಾಗಿಯದೆ.

ಚೀನಾ ದೇಶದ ಮುಖ್ಯ ಪಟ್ಟಣವಾದ ಪೆಕಿಂಗ ಪಟ್ಟಣದಲ್ಲಿ ಬುದ್ಧ ಮತದ ಮುಖ್ಯಗುರುವಾದ ಪಂಚಾನನ್ನ ಲಾಮಾ ಎಂಬವರು ಇರುವರು. ಇವರು ಕಳೆದವಾರ ಭಿನ್ನಮತದ ೮೦೦ ಅನುಯಾಯಿಗಳಿಗೆ ತಮ್ಮ ದರ್ಶನವನ್ನು ಕೊಟ್ಟರು.

ಒಳದೇಶ ವರ್ತಮಾನ.

ಬಂಗಾಲದಲ್ಲಿ ಒಬ್ಬ ಹೊಟೇಲ ಮಾಲಿಕನು ಅಲ್ಲಿಯ ಪೋಲೀಸ್ ಸಾರ್ಜಂಟಿನ ವಿರುದ್ಧವಾಗಿ ದಾವೆಮಾಡಿದ್ದನು. ಈ ದಾವೆಯ ಸರ್ವ ಹಕೀಕತನ್ನು ಪ್ರಕಟಿಸಿದ್ದಕ್ಕಾಗಿ ಅಲ್ಲಿಯ 'ಫೋರ್ವರ್ಡ' ಮತ್ತು 'ವಸುಮತಿ' ಎಂಬೀ ಎರಡು ಪತ್ರಿಕೆಗಳ ಮಾಲಿಕರ ಮೇಲೆ ಪೋಲೀಸ್ ಸಾರ್ಜಂಟನು ಮಾನನಷ್ಟದ ದಾವೆಯನ್ನು ಮಾಡಿದನು. ಆದರೆ ಮೆಜಿಸ್ಟ್ರೇಟರು ಸಾರ್ಜಂಟನು ಮಾಡಿದ ದಾವೆಯನ್ನು ತೆಗೆದುಹಾಕಿದರು.

ಬಂಗಾಲಿನ ಪ್ರಾಂತಿಕ ಪರಿಷತ್ತು ದೇಶಬಂಧು ದಾಸರ ಅಧ್ಯಕ್ಷಸ್ಥಾನದಲ್ಲಿ ನಡೆಯಲಿಕ್ಕಿರುವುದು. ಈ ಸಮಾರಂಭಕ್ಕೆ ಮಹಾತ್ಮಜೀಯವರು ಚಿತ್ತೈಸುವರಿದ್ದದರಿಂದ ಖಾದಿ ಮತ್ತು ಚರಕದ ಪ್ರಸಾರವನ್ನು ಹೆಚ್ಚಾಗಿ ಮಾಡಬೇಕೆಂದು ಡಾ. ಪಿ. ಸಿ. ರೋಯರು ವಿನಂತಿಮಾಡಿಕೊಂಡಿದ್ದಾರೆ.

ಕೂಚ್‌ಬಿಹಾರ (ಬಂಗಾಲ)ದ ರಾಣಿಯು ತನ್ನ ಗಂಡನ ಮೇಲೆ ವಿವಾಹ ಶರ್ತಗಳನ್ನು ಮುರಿದನೆಂದು ದಾವೆಯು ಮಾಡಿರುವಳು!

ಬಂಗಾಲ ಕೌನ್ಸಿಲಿನ ಇಬ್ಬರು ಮೆಂಬರರನ್ನು ಓರ್ಡಿನೆನ್ಸ ಕಾಯದೆಯ ಮೇರೆಗೆ ಕೈದುಮಾಡಿದ್ದರಷ್ಟೆ. ಅವರ ಜಾಗೆಗೆ ಬೇರೆ ಚುನಾವಣೆಯನ್ನು ಮಾಡಲು ಇಷ್ಟರ ವರೆಗೆ ಹೇಳದೆ ಈಗ ೬ ತಿಂಗಳ ನಂತರ ಉಪ ಚುನಾವಣೆಯನ್ನು ಮಾಡಲು ಸರಕಾರವು ಅಪ್ಪಣೆ ಕೊಡಿಸಿಯದೆ.

ಮುಂಬಯಿಯ ಸುಪ್ರಸಿದ್ಧ ಬಾವಲಾ ಖೂನಿಯು ವಿಚಾರಣೆಗೆ ಬಂದಿರುವದು. ಆ ಕೇಸನ್ನು ಮುಂಬಯಿಯಿಂದ ತೆಗೆದು ಬೇರೆ ಹೈಕೋರ್ಟಿಗೆ ಕಳುಹಿಸಿಕೊಡಬೇಕೆಂದು ಅಪಾದಿತರು ಅರ್ಜಿಮಾಡಿದ್ದಕ್ಕೆ ಮುಮತಾಜ ಬೇಗಮ್ಮಳು ಹಾಗೆ ಮಾಡಕೂಡದೆಂದು ತಾನೂ ಅರ್ಜಿಮಾಡಿಕೊಂಡಿರುವಳು.

ಕಲಕತ್ತೆಯಲ್ಲಿ ಇಬ್ಬರು ಬಂಗಾಲಿಗಳು ಚೀನಿ ಜನರೊಡನೆ ಸಂಧಾನ ಮಾಡಿ ಕೆಲವು ಬಂದೂಕುಗಳನ್ನು ತೆಗೆದುಕೊಂಡರೆಂಬ ಅಪರಾಧದ ಮೇಲೆ ಅವರಿಗೆ ೯ ತಿಂಗಳು ಕಠಿಣ ಶಿಕ್ಷೆಯು ವಿಧಿಸಲಾಗಿದೆ.

ತಮಿಳನಾಡಿನಲ್ಲಿ ಒಂದು ಗುರುಕುಲವಿದೆ. ಇಲ್ಲಿ ಬ್ರಾಹ್ಮಣರು ಅಡಿಗೆಮಾಡುವರು ಮತ್ತು ಅದನ್ನು ಬ್ರಾಹ್ಮಣ-ಬ್ರಾಹ್ಮಣೇತರರು ಉಪಯೋಗಿಸಿಕೊಳ್ಳುವರು. ಆದರೆ ಗಾಂಧಿಜಿಯವರ ಪಟ್ಟಶಿಷ್ಯರೆಂದು ಅನ್ನಿಸಿಕೊಳ್ಳುವ ಡಾ. ವರದರಾಜಲು ನಾಯಡರು ಬ್ರಾಹ್ಮಣ-ಬ್ರಾಹ್ಮಣೇತರರನ್ನು ಒಂದೇ ಪಂಕ್ತಿಯಲ್ಲಿ ಬಡಿಸಬೇಕೆಂದು ಗಾಂಧಿಜಿಯವರೊಡನೆ ಕೇಳಿಕೊಂಡರು. ಅದಕ್ಕೆ ಬ್ರಾಹ್ಮಣರಲ್ಲಿ ಯಾರು ಖುಷಿಪಡುವರೊ ಅವರು ಬ್ರಾಹ್ಮಣೇತರರೊಡನೆ ಊಟಮಾಡಬಹುದೆಂದು ಗಾಂಧೀಜಿಯವರು ಹೇಳಿದರು. ಅದಕ್ಕೆ ಡೊಕ್ಟರರು ಸಮಾಧಾನಪಡದೆ ಗಾಂಧಿಜಿಯವರಿಗೆ ವಿರುದ್ಧವಾಗಿ ಚಳವಳವನ್ನು ಮಾಡಿ ಬ್ರಾಹ್ಮಣ ಆಚಾರವನ್ನೆ ತೆಗೆಯಬೇಕೆಂದು ಹಟಹಿಡಿದಿರುವರು! ಹಾಗಾದರೆ ಬ್ರಾಹ್ಮಣೇತರರಾದ ನೀವು ಪಂಚಮರು ಮಾಡಿದ ಅನ್ನವನ್ನು ಸ್ವೀಕರಿಸುವರೋ ಎಂದು ಅವರನ್ನು ಪ್ರಶ್ನಿಸಿದಕ್ಕೆ ಅವರು ಒಪ್ಪಲಿಲ್ಲ. ಹೀಗಿದ್ದರೂ ತಮ್ಮ ಹಟವನ್ನು ಮಾತ್ರ ಬಿಡದೆ ಸತ್ಯಾಗ್ರಹದ ಕೆಳಗೆ ದುರಾಗ್ರಹ ಮಾಡುತ್ತ ನಡೆದಿರುವರು! ಭಸ್ಮಾಸುರನ ಕಥೆಯಂತೆ ತನ್ನ ಗುರುಗಳಿಗೆ ವಿರುದ್ಧವಾಗಿ ಅವರ ಶಿಷ್ಯರೇ ಶಸ್ತ್ರವನ್ನು ಹಿಡಿದಿರುವರು.

ಗುಜರಾಥದೊಳಗಿನ ಕಾಟಿವಾಡದಲ್ಲಿ ಹುಡುಗಿಯರನ್ನು ಹಣಕ್ಕಾಗಿ ವಿವಾಹದಲ್ಲಿ ಮಾರಲ್ಪಡುತ್ತಾರಂತೆ. ಇಂಥ ಒಂದು ಪ್ರಸಂಗದಲ್ಲಿ ಒಬ್ಬಳು ತನ್ನ ಮಗಳನ್ನು ಮುದುಕನಿಗೆ ಮಾರುವುದನ್ನು ಸಹಿಸಲಾರದೆ ವಸ್ತ್ರಕ್ಕೆ ಬೆಂಕಿಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಳು!

ಮುಂಬಯಿಯಲ್ಲಿ 'ಜಲಿಯನ್ ವಾಲಾ ಬಾಗದ' ದಿವಸ ಗಾಂಧಿಯವರು ಭಾಷಣಮಾಡುವಾಗ ಖಾದಿಯನ್ನೇ ಉಪಯೋಗಿಸಬೇಕೆಂದು ಹೇಳಿರುವರು.

ದೇಶಬಂಧು ದಾಸರು ಇನ್ನೂ ಸಂಪೂರ್ಣವಾಗಿ ಗುಣವಾಗದೆ ಇದ್ದುದರಿಂದ ದೇಹಾರೋಗ್ಯದ ಸಂಬಂಧ ಯುರೋಪಿಗೆ ಹೋಗಬೇಕೆಂದು ಅವರ ವೈದ್ಯರು ಹೇಳಿರುವರು.

ದಕ್ಷಿಣ ಕನ್ನಡ.

ಸುರತಕಲ್ಲು:— ಇಲ್ಲಿಯ ಇಷ್ಟ ವಿದ್ಯಾದಾಯಿನೀ ಶಾಲಾ ವರ್ಧಂತಿ ಮಹೋತ್ಸವವು ಇದೇ ಬರುವ ತಾ. ೨೨-೪-೧೯೨೫ನೇ ಬುಧವಾರ ಶ್ಯಾಮ ಗಂಟೆ ೫ಕ್ಕೆ ಬಹುಮಾನಪಟ್ಟ ಜಿಲ್ಲಾ ಕಲೆಕ್ಟರ್ ದೊರೆಗಳವರ ಅಧ್ಯಕ್ಷತೆಯಿಂದ ನಡೆಯಲಿಕ್ಕಿರುವುದು. ವಿದ್ಯಾಭಿಮಾನಿಗಳೆಲ್ಲರೂ ಈ ಮಹೋತ್ಸವಕ್ಕೆ ದಯವಿಟ್ಟು ಬಂದು ಪ್ರೋತ್ಸಾಹಿಸಬೇಕಾಗಿ ಶಾಲಾ ಅಧ್ಯಕ್ಷರಾದ ಇಷ್ಟ ಕೃಷ್ಣಯ್ಯನವರ ಸವಿನಯ ವಿನಂತಿ ಇದೆ.

ಬಂಟ್ವಾಳ:— ಇಲ್ಲಿಯ ಪರಸ್ಪರ ಸಹಾಯಕ ಸಂಘದ ಮೆಂಬರರನೇಕರು ೧೯೨೪ನೇ ಭಾರಿ ನೆರೆಯ ನಿಮಿತ್ತ ತಾವು ಪಡೆದ ಸಾಲದ ಮೊಬಲಗನ್ನು ಕಂತು ಪ್ರಕಾರ ಸರಿಯಾಗಿ ಕಟ್ಟದೆ ಇದ್ದದ್ದಕ್ಕಾಗಿ ಪ್ರೆಸಿಡೆಂಟರು ಒಂದು ವರ್ಷ ೬ ತಿಂಗಳ ರಿಯಾತಿ ಇಟ್ಟು ಸಮಾಧಾನದಿಂದ ಅನೇಕ ಸಾರಿ ಹೇಳಿಯೂ ರಿಜಿಸ್ತ್ರಿ ನೋಟೀಸು ಬಿಟ್ಟರೂ ಅನೇಕರು ಒಂದು ಪೈಯಾದರೂ ಕೊಡದೆ ಬಾಕಿ ಮಾಡಿಕೊಂಡವರ ಮೇಲೆ ಕೈಪೆತು ನಡಿಸಿದಲ್ಲಿ ಕಂತು ಡಿಕ್ರಿಮಾಡಿ ಅಸಿಸ್ಟೆಂಟ ರಿಜಿಸ್ತ್ರಾರವರು ದಯೆತೋರಿಸಿರುತ್ತಾರೆ. ಮೆಂಬರರು ಇನ್ನಾದರೂ ವಾಯಿದೆಗೆ ಕ್ರಮವಾಗಿ ಹಣವನ್ನು ತಂದುಕೊಟ್ಟು ಸೊಸ್ಯಾಟಿಯನ್ನು ಊರ್ಜಿತಕ್ಕೆ ತರಬೇಕಾಗಿದೆ.

ಬಂಟ್ವಾಳ ಚಾರ್ಮಾಡಿ ರೋಡಿನಲ್ಲಿ ಪುಂಜಾಲಕಟ್ಟೆ ಹತ್ತರ ಮಾರ್ಜೆ ಕಾಡಿನ ಬಳಿ ಕಳ್ಳರು ಅತ್ತಿತ್ತ ಹೋಗುವ ಪ್ರಯಾಣಿಕರಿಗೂ ಗಾಡಿಕಾರರಿಗೂ ಬಹಳ ಮನಸ್ಸಿಗೆ ಭಯವನ್ನುಂಟುಮಾಡುತ್ತಿರುವರು. ಇದಕ್ಕೆ ಪೋಲಿಸಿನವರ ನಿಗಾ ಅಗತ್ಯ.

ಪಾಣೆಮಂಗಳೂರು:— ಇಲ್ಲಿಯ ಸಂಕಕ್ಕೆ ಕಂಕ್ರೀಟ ಹಾಕುವ ಉದ್ದಿಶ್ಯ ಸಂಕದ ಮರ ಪೂರಾ ಬಿಚ್ಚಿ ಹಾಕಿರುತ್ತಾರೆ. ಇದರ ಪೂರ್ಣ ಕೆಲಸ ಈ ಮಳೆಗಾಲದ ಮೊದಲು ಪೂರೈಸದೆ ಇದ್ದದರಿಂದ ಜನರಿಗೆ ಕಡವಿನ ದೋಣಿಬಾಧೆ ತಪ್ಪುವಹಾಗಿಲ್ಲ ಆದುದರಿಂದ ತಕ್ಷಾಲಕ್ಕೆ ಬೋರ್ಡಿನವರೆ ದೋಣಿಯನ್ನು ಸಂಬಳಕ್ಕೆ ಇಡಿಸಬೇಕಾಗಿ ವಿನಂತಿ.

ವೇಣೂರು:— ಇದು ಪೂರ್ವಕಾಲದಲ್ಲಿ ಅಜಿಲರ ರಾಜಧಾನಿಯಾಗಿ ಬಹಳ ಪ್ರಖ್ಯಾತಿಪಟ್ಟಿತ್ತು. ಈಗ ಒಂದು ಕಾಡುಸೀಮೆಯಾಗಿ ಮಲೇರಿಯ ಪ್ರದೇಶವಾದ್ದರಿಂದ ಇಲ್ಲಿ ನಾನಾ ತರದ ರೋಗಾದಿಗಳಿಂದ ಬಾಧೆಪಡುತ್ತಿರುವ ಜನರಿಗೆ ಹೊಸ ಸ್ಕೀಮಿನ ಆಸ್ಪತ್ರಿ ಒಂದನ್ನು ತೆರೆದರೆ ಬಹಳ ಉಪಕಾರವಾಗುತ್ತಿತ್ತು.

ಮೂಡುಸೆಡ್ಡೆ:— ಸನ್ ೧೯೨೫ನೇ ಇಸವಿ ತಾರೀಕು ೫ರಲ್ಲು ಮ| ರಾ| ರಾ| ಅತ್ತಾವರ ಬಾಲಕೃಷ್ಣ ಶೆಟ್ರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ ಮೂಡುಸೆಡ್ಡೆ ಬೋರ್ಡು ಶಾಲೆಯ ಮತ್ತು ಶ್ರೀ ಶಾರದಾ ಪ್ರವರ್ಧನ ಸಂಘದ ವರ್ಧಂತಿ ಮಹೋತ್ಸವವು ಬಹು ವಿಜೃಂಭಣೆಯಿಂದ ಜರಗಿಸಲ್ಪಟ್ಟಿತು. ಸಭೆಗೆ ಚಿತ್ತಯಿಸಿದ ಮ| ರಾ| ಅಧ್ಯಕ್ಷ ಬಾಲಕೃಷ್ಣ ಶೆಟ್ರು, ಮ| ರಾ| ಕೆ. ಮುತ್ತಯ ಶೆಟ್ರು, ಮ| ರಾ| ವಕೀಲ ರಂಗನಾಥ ಪೂಂಜರು ಕೂಡ ಮಹನೀಯರುಗಳನ್ನು ಎದುರುಗೊಂಡನಂತರ ಶಾಲೆಯ ಮತ್ತು ಸಂಘದ ವರದಿಗಳನ್ನು ಓದಲಾಯಿತು. ಅಧ್ಯಕ್ಷರು ಅರ್ಥಗರ್ಭಿತವಾದ ಭಾಷಣಗಳನ್ನು ಕೊಟ್ಟದ್ದಲ್ಲದೆ ನಿಮ್ಮ ಸಂಘವು ಒಳ್ಳೆ ಫಲದಾಯಕವಾದದ್ದು; ಆದ್ದರಿಂದ ಇದನ್ನು ಬೇಗನೇ ರಿಜಿಸ್ತ್ರಿಮಾಡಿಸಬೇಕಾಗಿಯೂ ತಾ. ೧೨-೩-೨೫ನೇ ಮೀಟಿಂಗಿಗೆ ಚಿತ್ತಯಿಸಿದ ಜಿಲ್ಲಾ ಕಲೆಕ್ಟರ್ ದೊರೆಗಳವರ ಸಹಾನುಭೂತಿಯಿಂದ ನಿರ್ಣಯಿಸಿದ ಪ್ರಕಾರ ಒಂದು ಗೋಶಾಲೆಯನ್ನು ತೆರೆಯುವುದಾಗಿಯೂ ಠರಾವು ನಿರ್ಧರಿಸಲಾಯಿತು. ಸಭಾನಂತರ ಹೆಡ್ ಮಾಸ್ತರ್ ಉಗ್ಗಪ್ಪನವರ ಪ್ರೇರಣೆಯಿಂದ ಶಾಲಾ ಮಕ್ಕಳ ನಾಟಕವು ಪ್ರೇಕ್ಷಕರನ್ನು ಬಹಳ ಆನಂದಗೊಳಿಸಿತು.

ಸನ್ ೧೯೨೫ನೇ ಇಸವಿ ಎಪ್ರಿಲ್ ತಾ. ೫ರಲ್ಲು ಮ| ರಾ| ಅಬೀನಾಂಞಾಮಲ್ಲಿಯವರ ಅಧ್ಯಕ್ಷತೆಯಲ್ಲಿ ಸಭೆಸೇರಿದ ಮೂಡುಶೆಡ್ಡೆ, ಪಡುಶೆಡ್ಡೆ, ಅಮ್ಮಪಾಡಿ, ಪೇಜಾವರ ಗ್ರಾಮ ನಿವಾಸಿಗಳು ಎಪ್ರಿಲ್ ತಾ. ೨೦ಕ್ಕೆ ನಡಿಯಲಿಕ್ಕಿರುವ ಮದ್ರಾಸು ಕೌನ್ಸಿಲ್ ಚುನಾವಣೆಯಲ್ಲಿ ಉಮೇದ್ವಾರರಾಗಿ ನಿಂತವರ ಪೈಕಿ ಮ| ರಾ| ಅತ್ತಾವರ ಬಾಲಕೃಷ್ಣ ಶೆಟ್ರವರಿಗೆ ಎಲ್ಲಾ ಓಟರರು ತಮ್ಮ ಓಟುಗಳನ್ನು ಕೊಡಬೇಕಾಗಿ ಏಕಮತ್ಯದಿಂದ ನಿರ್ಧರಿಸಲಾಯಿತು. ಮತ್ತು ಈ ಠರಾವನ್ನು ಅಧ್ಯಕ್ಷರು ಸಂಬಂಧಪಟ್ಟ ಎಲ್ಲಾ ಪತ್ರಿಕೆಗಳಿಗೂ ಕೂಡಲೆ ಸೂಚಿಸಬೇಕಾಗಿ ಸಹ ನಿರ್ಧರಿಸಲಾಯಿತು.

ವಿವಿಧ ವಿಷಯಗಳು.

ರೈಲ್ವೆ ಸ್ಟೇಶನುಗಳಲ್ಲಿ ಹಿಂದಿಗಳನ್ನು ಯುರೋಪಿಯನರು ಎಷ್ಟು ಅನ್ಯಾಯವಾಗಿ ನೋಡುತ್ತಾರೆಂಬುದನ್ನು ಮುಂದಿನ ಸಂಗತಿಯಿಂದ ಕಂಡು ಬರುವದು. ಮೈಸೂರಿನ ದಿವಾನರಾದ ಮಿ| ಬಾನರ್ಜಿಯವರು ಪಾಟ್ನಾದಿಂದ ತಮ್ಮ ಊರಿಗೆ ತೆರಳುವಾಗ ೧ನೇ ತರಗತಿಯ ಕೋಣೆಯಲ್ಲಿ ತನ್ನ ಗಂಟನ್ನು ಇಟ್ಟುಕೊಂಡು ತಮ್ಮ ಸಂಬಂಧಿಕರಾದ ಹಾಗೂ ಪಾಟ್ನಾದ ಕಮ್ಮಿಶನರಾದ ಬಿ. ಸಿ. ಸೇನರೊಡನೆ ಮಾತಾಡುತ್ತ ನಿಂತಿದ್ದರು. ಅಷ್ಟರೊಳಗೆ ಒಬ್ಬ ಯುರೋಪಿಯನ ಗೃಹಸ್ಥನು ಬಂದು ಅದೆ ಜಾಗೆಯಲ್ಲಿ ತನ್ನ ಸಾಮಾನನ್ನು ಇಟ್ಟು ತಾನು ಆರೂಢನಾದನು. ಆ ಕೋಣೆಯನ್ನು ಮೊದಲೆ ಉಪಯೋಗಿಸಲ್ಪಟ್ಟಿದೆಂದು ಹೇಳಿದರು. ಗಣ್ಯಮಾಡದೆ ಆ ಉದ್ಧಟ ಮನುಷ್ಯನು ನಿಂತುಕೊಂಡನು. ಆಗ ಕಮಿಶನರು ತನ್ನ ಹುದ್ದೆಯನ್ನು ಅವನಿಗೆ ತಿಳಿಸಲಾಗಿ ಅವನು ನುಡಿದನು "ನೀನು ಕಮಿಶನರರಾಗಿರಲಿ, ಯಾರೆ ಆಗಿರಲಿ ಅಂಥವರನ್ನು ಲಕ್ಷಿಸಲು ನಾನು ಬಂದವನಲ್ಲ. ಗಾಡಿಯು ಪ್ರಯಾಣ ಸಿದ್ಧವಾಗಲಿ ಮತ್ತೆ ನಿನಗೆ ಕಲಿಸುತ್ತೇನೆ" ಆದರೆ ಇಂಥ ಉನ್ಮತ್ತ ಮತ್ತು ಪಾಶವಿ ಮನುಷ್ಯನೊಡನೆ ಮಾತಾಡುವುದು ಅಯುಕ್ತವೆಂದು ನೆನಸಿ ದಿವಾನರು ಮತ್ತೊಂದು ಕೋಣೆಗೆ ಹೊರಟು ಹೋದರು.

* * *

ಸುಪ್ರಸಿದ್ಧ ಶ್ರೀ ಸ್ವಾಮಿ ವಿವೇಕಾನಂದರ ಭ್ರಾತರಲ್ಲೊಬ್ಬರಾದ ಡಾ. ಭೂಪೇಂದ್ರನಾಥ ದತ್ತರು ಎಷ್ಟೋ ವರುಷಗಳ ವರೆಗೆ ಸ್ವದೇಶವನ್ನು ಬಿಟ್ಟವರಾಗಿ ಮರಳಿ ತಮ್ಮ ದೇಶಕ್ಕೆ ಬರಲು ಹೊರಟಿದ್ದಾರೆ. ಇವರು ಮೊದಲು 'ವಸುಮತಿ' ಎಂಬ ಪತ್ರಿಕೆಯ ಸಂಪಾದಕರಾಗಿದ್ದಾಗ ೧ ವರುಷದ ಶಿಕ್ಷೆಯನ್ನು ಅನುಭವಿಸಿದ್ದರು. ನಂತರ ಇವರು ಅಮೇರಿಕದಲ್ಲಿ ಹೋಗಿ ಐದು ವರುಷಗಳ ತನಕ ವಿದ್ಯಾಭ್ಯಾಸವನ್ನು ಸಾಂಗಮಾಡಿಕೊಂಡು ಜರ್ಮನಿಗೆ ತೆರಳಿದರು. ಅಲ್ಲಿಯ ವಿದ್ಯಾಭ್ಯಾಸವನ್ನು ಮುಗಿಸಿಕೊಂಡು ಇಲ್ಲಿಗೆ ಬರಲಿಕ್ಕೆ ಬ್ರಿಟಿಷ ಗವರ್ನಮೆಂಟಿನೊಡನೆ ಅಪ್ಪಣೆಯನ್ನು ಕೇಳಿದರೂ ಕೊಡಲಿಲ್ಲ. ಆದರೆ ಈಗ ಅವರಿಗೆ ಅಪ್ಪಣೆಯು ದೊರಕಿದೆ. ಮತ್ತು ಅವರು ಇದೇ ತಿಂಗಳೊಳಗೆ ಸ್ವದೇಶಕ್ಕೆ ಬಂದು ಶಾಸ್ತ್ರೀಯ ಶೋಧದಲ್ಲಿ ತಮ್ಮ ಆಯುಷ್ಯವನ್ನು ಉಪಯೋಗಿಸಲಿಕ್ಕಿದ್ದಾರೆ.

* * *

ಹಿಂದುಸ್ಥಾನದಲ್ಲಿ ಈಗ ವಸ್ತ್ರ ಮತ್ತು ಗಾಜಿನ ಗಿರಣಿಗಳು ಸ್ಥಾಪನೆಯಾಗಿ ಎಷ್ಟೋ ಕಾಲವಾಗುತ್ತ ಬಂತು. ಮತ್ತು ಈ ಗಿರಣಿಗಳ ಬೆಳವಣಿಗೆಯನ್ನು ನೋಡಿದರೆ ಹಿಂದಿಗಳು ವಸ್ತ್ರ ಮತ್ತು ಗಾಜಿನ ಸಾಮಾನುಗಳಲ್ಲಿ ಇತರ ದೇಶಗಳನ್ನು ಹಿಂದಕ್ಕೆ ಹಾಕ್ಯಾರೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಇವುಗಳಂತೆಯೆ ಬೆಂಕಿಪೆಟ್ಟಿಗೆಗಳ ಕಾರಖಾನೆಗಳು ಸಹ ಹಿಂದುಸ್ಥಾನದಲ್ಲಿ ಬಹು ಬೇಗನೆ ಊರ್ಜಿತ ಅವಸ್ಥೆಗೆ ಬರುತ್ತಿರುವವು. ಬೆಂಕಿಪೆಟ್ಟಿಗೆಯ ಸಂಬಂಧ ಹಿಂದುಸ್ಥಾನವು ಜಪಾನ ಮತ್ತು ವಿಲಾಯತಿ ಇವೆರಡು ದೇಶಗಳ ಮೇಲೆಯೆ ಅವಲಂಬಿಸಿರಬೇಕಿತ್ತು. ಆದರೆ ಈಗೀಗ ನಮ್ಮಲ್ಲಿಯೂ ಕೂಡ ಸ್ವದೇಶಿ ಪೆಟ್ಟಿಗೆಗಳು ಹೆಚ್ಚಾಗಿ ತಯಾರಾಗುತ್ತಿವೆ. ಪರದೇಶದಿಂದ ಈ ಮೊದಲು ಬರುವ ಪೆಟ್ಟಿಗೆಗಳ ಕ್ರಯ ಹಾಗೂ ಕಳೆದೆರಡು ವರ್ಷಗಳಲ್ಲಿ ಬರುವ ಪೆಟ್ಟಿಗೆಗಳ ಕ್ರಯ ಇವೆರಡುಗಳನ್ನು ತುಲನೆ ಮಾಡಿದಲ್ಲಿ ಸಧ್ಯದಲ್ಲಿ ಪರದೇಶದಿಂದ ಬಹು ಕಡಿಮೆಯಾಗಿ ಬೆಂಕಿಪೆಟ್ಟಿಗೆಗಳು ಬರುತ್ತಿವೆಂದು ಕಂಡುಬರುತ್ತದೆ. ೧೯೨೪ನೇ ಇಸವಿಯಲ್ಲಿ ಮೊದಲಿಗಿಂತಲೂ ೬೯ಲಕ್ಷ ಬೆಲೆಬಾಳುವ ಪೆಟ್ಟಿಗೆಗಳು ಇಲ್ಲಿಗೆ ಬರಲಿಲ್ಲ. ಯಾಕಂದರೆ ಪರದೇಶಿ ಪೆಟ್ಟಿಗೆಗಳ ಮೇಲೆ ಕ್ರಯ ಹೆಚ್ಚಾದ್ದರಿಂದ ಸ್ವದೇಶಿ ಪೆಟ್ಟಿಗೆಗಳೆ ಖರ್ಚಾದವು. ಇದು ಸಮಾಧಾನಕಾರಕ ಸಂಗತಿಯೇ ಸರಿ.

* * *

ಬೆಂಕಿಪೆಟ್ಟಿಗೆಯಂತೆಯೆ ಸಿಗರೇಟಿನ ದಂದೆಯೂ ಕೂಡ ಹಿಂದುಸ್ಥಾನದಲ್ಲಿ ಬೆಳೆಯುತ್ತ ನಡೆದಿದೆ. ಸಿಗರೇಟಿಗೆ ಮುಖ್ಯವಾಗಿ ಬೇಕಾಗಿರುವ ಹೊಗೆಸೊಪ್ಪು ಹಿಂದುಸ್ಥಾನದಲ್ಲಿ ಬೇಕಾದಷ್ಟು ಬೆಳೆಯುವುದಾದರೂ, ಅದಕ್ಕೆ ಬೇಕಾಗುವ ಮಸಾಲೆಯನ್ನು ತಯಾರಿಸಲು ಹಿಂದಿಗಳಿಗೆ ತಿಳಿಯುವುದಿಲ್ಲ. ಆದ್ದರಿಂದ ಪರದೇಶದ ಮಸಾಲೆಯುಳ್ಳ ಹೊಗೆಸೊಪ್ಪನ್ನೆ ಇವರು ಉಪಯೋಗಿಸಬೇಕಾಗಿದೆ. ಸಿಗರೇಟಿನ ಮೇಲೆ ಸುಂಕವನ್ನು ಹೊರಿಸಿದ್ದರಿಂದ ಅದು ಹೊಗೆಸೊಪ್ಪಿನ ರೂಪದಿಂದ ಬರುತ್ತದೆ. ಹೀಗಾಗಿ ಇಲ್ಲಿಯ ಹಣವು ಪರದೇಶಿಯರ ಕಿಸೆಯಲ್ಲಿ ಹೋಗುತ್ತದೆ. ಈಗ ಸಿಗರೇಟನ್ನು ಎಳೆಯುವುದರಿಂದ ಸುಧಾರಣೆ ಹೊಂದಿದ ಅಗ್ರಣಿಯೆಂದು ಎನ್ನಿಸಿಕೊಳ್ಳುವನು. ಯಾವ ಪ್ರಕಾರ ಗಾರುಡಿಯು ತನ್ನ ಡೊಂಬರ ಆಟದ ಜನರ ಆಕರ್ಷಣಮಾಡಿಕೊಳ್ಳಲು ಡೋಲು ವಾದ್ಯ ಮುಂತಾದ ಸಾಹಿತ್ಯಗಳನ್ನು ಉಪಯೋಗಿಸುತ್ತಾನೊ, ಅದೆ ರೀತಿಯಲ್ಲಿ ಸಿಗರೇಟು ಭಕ್ತರ ಮನಸನ್ನು ಎಳೆಯಲು ಕಂಪನಿಗಾರರು ನಾನಾ ತರದ ಉಪಾಯಗಳನ್ನು ಮಾಡುತ್ತಾರೆ. ಮತ್ತು ಎಷ್ಟೊ ಯುವಕರು ಅಂಧಮನಸ್ಕರಾಗಿ ಫೆಶನ ಹೆಸರಿನ ಕೆಳಗೆ ಎಲ್ಲ ಹಣವನ್ನು ಪರದೇಶಿ ಸಮುದ್ರದಲ್ಲಿ ಚೆಲ್ಲುತ್ತಾರಲ್ಲವೆ?

* * *

ದೀರ್ಘಾಯುಗಳಾಗುವುದು ಹೇಗೆ?

ಜಗತ್ತಿನಲ್ಲಿ ಪ್ರಸ್ತುತ ಅತ್ಯಧಿಕ ಸಂಪನ್ನ ಗೃಹಸ್ಥರಲ್ಲಿ ಪ್ರಥಮಸ್ಥಾನದಲ್ಲಿರುವ ಫೋರ್ಡ ಮೋಟಾರ ಗಾಡಿಗಳ ಕಾರ್ಖಾನೆಯ ಮಾಲಿಕರಾದ ಹೆನ್ರಿ ಫೋರ್ಡ್ ಎಂಬವರು ಹೇಳುವುದೇನೆಂದರೆ:—ಕಾಫಿ, ಚಾ, ಹೊಗೆಸೊಪ್ಪು ಮತ್ತು ಮದ್ಯಗಳನ್ನು ಸಂಪೂರ್ಣವಾಗಿ ತ್ಯಜಿಸಿ ಬಿಟ್ಟರೆ ೧೨೫ ವರುಷಗಳ ವರೆಗೆ ಬದುಕಬಹುದು. ಮೋಟಾರ ಗಾಡಿಗಳ ಇಂಜಿನುಗಳಲ್ಲಿ ಮಸಿಯು ಕೂತುಕೊಳ್ಳದಂತೆ ಇಂಜಿನುಗಳನ್ನು ಉಪಯೋಗಿಸಿದರೆ ಅವು ಹೇಗೆ ದೀರ್ಘಕಾಲದ ವರೆಗೆ ಬಾಳುವವೊ ಅದೇ ರೀತಿ ಮನುಷ್ಯ ದೇಹದ ಇಂಜಿನಿನಲ್ಲಿ ಮಸಿಯ ಕಾರ್ಬನ್ ಸಂಗ್ರಹವಾಗದಂತೆ ನೋಡಿದರೆ ಮನುಷ್ಯನು ದೀರ್ಘಾಯುಯಾಗುವನು. ಮಸಿಯು ಮನುಷ್ಯ ಯಂತ್ರದಲ್ಲಿ ಮೊದಲೇ ಇದ್ದರೆ ಅದನ್ನು ಹೇಗೆ ಹೋಗಗೊಳಿಸಬಹುದೆಂಬುದಾಗಿ ಫೋರ್ಡರವರನ್ನು ಕೇಳಿದ್ದಕ್ಕೆ ಅವರಿಂದ ಈ ಉತ್ತರವು ದೊರೆಯಿತು. ತಿನ್ನುವ ಆಹಾರವನ್ನು ಸರಿಯಾಗಿ ಜಗಿದೇ ತಿನ್ನಬೇಕು. ಹೀಗೆ ಜಗಿದು ತಿನ್ನುವುದರಿಂದ ಆಹಾರದಲ್ಲಿ ತೃಪ್ತಿಯುಂಟಾಗುತ್ತದೆ. ಮತ್ತು ಇದರಿಂದ ಬಹಳ ಆಹಾರ ರಾಶಿಯು ಅಗತ್ಯಬೀಳುವದಿಲ್ಲ. ಒಳ್ಳೇ ತಿಂಡಿಯನ್ನೇ ಸಂಗ್ರಹಿಸಿಕೊಂಡು ಉಪಯೋಗಿಸತಕ್ಕದ್ದು. ಆಸ್ಪತ್ರೆಯಲ್ಲಿ ಆಹಾರವಿಲ್ಲದೆ ಇದ್ದ ಇಲಿಗಳು ಮೂರು ದಿವಸಗಳ ಹೆಚ್ಚಿಗೆ ಬದುಕಿರುವಾಗ 'ವ್ಹಾಟ್ ಬ್ರೆಡ್' ಇದನ್ನು ತಿಂದುಕೊಂಡು ಜೀವಿಸಿದ ಇಲಿಗಳು ಮೂರು ದಿವಸಗಳ ಮುಂಚಿತವಾಗಿಯೇ ಸತ್ತುಹೋದವು.

ಕಾಫಿ, ಚಾ, ಹೊಗೆಸೊಪ್ಪು ಮತ್ತು ಮದ್ಯ ಈ ನಾಲ್ಕು ಪದಾರ್ಥಗಳು ಈ ರೀತಿ ಆಯುಷ್ಯವೃದ್ಧಿ ಸಾಧನೆಯಲ್ಲಿ ತ್ಯಜಿಸತಕ್ಕವುಗಳೆಂದು ಮಿ| ಫೋರ್ಡರವರು ಹೇಳಿರುತ್ತಾರೆ.

ಅಮೇರಿಕದ ಇನ್ನೊಬ್ಬ ದೊಡ್ಡ ಕಲಾಶಾಸ್ತ್ರ ವಿಜ್ಞಾನಗಳ ಪರಿಶೋಧಕರಾದ ಎಡಿಸನ್ ಎಂಬವರ ಮುತ್ತಜ್ಜರು ಕಾರ್ನಾರೊ ಎಂಬವರ ಸರಳ ಜೀವನ ಕ್ರಮವನ್ನು ನೋಡಿ ಅದನ್ನು ಅವಲಂಬಿಸಿಕೊಂಡದ್ದರಿಂದ ನೂರೆರಡು ವರುಷಗಳ ಕಾಲ ಬದುಕಿದರು. ಇದೇ ಎಡಿಸನರ ಅಜ್ಜನ ಜೀವಿತವು ಸಹ ತನ್ನ ತಂದೆಯ ವಿಧಾನಗಳಲ್ಲಿಯೆ ಇದ್ದುದರಿಂದ ಇವರು ೧೦೫ ವರುಷಗಳ ವರೆಗೆ ಬಾಳಿದರು. ಇವರಿಗೆ ಏಳು ಜನ ಗಂಡುಮಕ್ಕಳು, ಇವರಲ್ಲೊಬ್ಬರು ಎಡಿಸನರ ತಂದೆಯಾಗಿದ್ದರು. ಈ ಏಳು ಜನರ ಪೈಕಿ ಮೂವರು ೮೩ ವರುಷಗಳ ಪ್ರಾಯ ದಾಟುವ ವರೆಗೆ ಜೀವಿಸಿ ಕೊಂಡಿದ್ದರು. ಮುತ್ತಜ್ಜನಿಂದ ಪಾರಂಪರ್ಯದಿಂದ ತಮ್ಮ ಕುಟುಂಬದಲ್ಲಿ ಅನುಸರಿಸಿ ಬಂದ ಸರಳ ಜೀವನ ವಿಧಾನವೇ ತನ್ನ ಅತಿಶಯವಾದ ಆರೋಗ್ಯಕ್ಕೂ ಮತ್ತು ತನ್ನ ಪ್ರಯೋಜನಕಾರಿಯಾದ ಜೀವಿತಕ್ಕೂ ಮುಖ್ಯ ಆಧಾರವಾಗಿದೆ ಎಂತ ಮಿ| ಎಡಿಸನರವರ ಅಂಬೋಣವಿದೆ.

ಸಸ್ಯ ವಿಜ್ಞಾನ ಶಾಸ್ತ್ರದಲ್ಲಿ ಲೋಕವಿಖ್ಯಾತರಾದ ಲುಥರ್ ಬರ್ಬೆಂಕರವರು ಕಾಫಿ, ಚಾ, ಹೊಗೆಸೊಪ್ಪು, ಮದ್ಯ ಇವುಗಳನ್ನು ತ್ಯಜಿಸಿಕೊಂಡು ಎಡಿಸನ್, ಫೋರ್ಡರಂತೆಯೇ ಖ್ಯಾತಿ ಹೊಂದಿದ ದೀರ್ಘಾಯುಗಳಾಗಿದ್ದಾರೆ. ಎಲ್ಲರಿಗೂ ೧೨೫ ಅಥವಾ ೧೦೦ ವರುಷಗಳ ವರೆಗೆ ಬಾಳುವಂತೆ ಜೀವಿಸಲು ಸಾಧ್ಯವಲ್ಲದಿದ್ದರೂ ಎಡಿಸನ್, ಫೋರ್ಡ, ಬರ್ಬೆಂಕ್ ಇವರ ಜೀವನ ವಿಧಾನಗಳನ್ನು ಅವಲಂಬಿಸುವದರಿಂದ ಸಾಧ್ಯವಾದಷ್ಟು ದೀರ್ಘಕಾಲಕ್ಕೆ ಆಯುಷ್ಯವನ್ನು ವರ್ಧಿಸಬಹುದು.

ಅಂಗ್ಲಾಂಡದ ವೆಸ್ಟ ಮಿನಿಸ್ಟರ್ ಎಬ್ಬೆಯಲ್ಲಿ ನಿಧನಹೊಂದಿದ ಥೋಮಸ್ ಪಾರ್ ಎಂಬವರು ತಮ್ಮ ೧೫೨ನೇ ವರುಷದಲ್ಲಿ ಮೃತಪಟ್ಟನು. ಇವರು ಮೃತಪಡುವುದಕ್ಕೆ ಸ್ವಲ್ಪ ಕಾಲಕ್ಕೆ ಮುಂಚಿತವಾಗಿ ಚಿಕಿತ್ಸಕರುಗಳ

(ಇನ್ನೂ ಹೆಚ್ಚಿಗೆ ಮುಂದುವರಿಯುವುದು.)

ಅನುಕ್ರಮಣಿಕೆ.

ಅಗ್ರಲೇಖ ಪುಟಗಳು.
ಹಿಂದೂ ಮಹಾ ಸಭೆ ೬
ಸ್ಫುಟವಿಚಾರಗಳು—
೧-೨ ದೇಶಬಂಧು ದಾಸ ಮತ್ತು ವಿಲಾಯತಿಯ ಲೋಕಮತ ,,
೩ ಲೊ. ಲಿಟನರು ವೈಸರಾಯರಾದರು ೭
೪ ವೈಕಮಿನ ಸತ್ಯಾಗ್ರಹ ,,
೫ ಮೃತ್ಯು ಲೇಖ—ಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಯ ,,
೬ ಕೊಚ್ಚಿಯಲ್ಲಿ ಸುಧಾರಣೆ ,,
೭ ಸಿವಿಲ್ ಸರ್ವಿಸು ,,
ಮಂಗಳೂರು
ವರ್ತಮಾನಸಂಗ್ರಹಗಳು—
ವಿದೇಶ-ಒಳದೇಶ ವರ್ತಮಾನ ೫
ದಕ್ಷಿಣ ಕನ್ನಡ—ಸುರತಕಲ್ಲು, ಬಂಟ್ವಾಳ, ಪಾಣೆಮಂಗಳೂರು, ವೇಣೂರು, ಮೂಡುಸೆಡ್ಡೆ ,,
ವಿವಿಧ ವಿಷಯಗಳು ,,
ಕಲಕತ್ತೆಯಲ್ಲಿ ನೆರೆದ ಹಿಂದೂ ಮಹಾ ಸಭೆ ೮
ಉಪಚುನಾವಣೆ ,,
೧೦ನೆಯ ಕರ್ನಾಟಕ ಸಾಹಿತ್ಯ ಸಮ್ಮೇಳನ ಬೆಳಗಾಂವಿ ,,

ಸ್ವದೇಶಾಭಿಮಾನಿ.

ಶಕೆ ೧೮೪೭ ಚೈತ್ರ ಬ| ೧೦ಯು ಶುಕ್ರವಾರ.

ಹಿಂದೂ ಮಹಾ ಸಭೆ.

ಕಲಕತ್ತಾ ನಗರಿಯಲ್ಲಿ ಸನ್ಮಾನ್ಯಮುಖಂಡರಾದ ಲಾಲ ಲಜಪತರಾಯರ ಅಧ್ಯಕ್ಷತೆಯಲ್ಲಿ ಹಿಂದು ಮಹಾಸಭೆಯು ಜರಗಿತು. ಬೆಳಗಾವಿನಲ್ಲಿ ರಾಷ್ಟ್ರೀಯ ಸಭೆಯು ಜರಗಿದಾಗ ಹಿಂದು ಮಹಾ ಸಭೆಯ ಅಧಿವೇಶನವು ಜರಗಿರುತ್ತ ಪುನಃ ಅಷ್ಟು ಬೇಗನೆ ಹಿಂದು ಮಹಾ ಸಭೆಯು ಜರಗಿದ್ದು ಯಾಕೆ ಎಂದು ಯಾರಾದರೂ ಕೇಳಬಹುದು. ಬೆಳಗಾವಿನ ಅಧಿವೇಶನವು ವಾರ್ಷಿಕ ಅಧಿವೇಶನವಲ್ಲ. ರಾಷ್ಟ್ರೀಯ ಸಭೆಗಾಗಿ ಎಲ್ಲ ಕಡೆಯ ಮುಂದಾಳುಗಳು ಮತ್ತು ಅನುಯಾಯಿಗಳು ಕೂಡುತ್ತಾರಾದ ಕಾರಣ ಹಿಂದುಮಹಾ ಸಭೆಯ ಒಂದು ವಿಶಿಷ್ಟ ಅಧಿವೇಶನವು ಜರಗಿಸಲ್ಪಟ್ಟಿತ್ತು. ಹಿಂದು ವರ್ಗದ ಎಲ್ಲ ವಿಷಯಗಳನ್ನೂ, ಪ್ರಶ್ನೆಗಳನ್ನೂ ಚರ್ಚಿಸುವದಕ್ಕಾಗಿ ಕ್ರಮವಾಗಿ ಈಗ ಕಲಕತ್ತೆಯಲ್ಲಿ ಈ ಅಧಿವೇಶನವು ಸೇರಿಸಲ್ಪಟ್ಟಿದೆ. ಈ ಸಭೆಯ ಅಧ್ಯಕ್ಷರು ಲಾಲಜಿಯವರು. ಸ್ವಾಗತ ಮಂಡಲದ ಮುಖ್ಯರು ಸರ್ ಪ್ರಫುಲ್ಲ ಚಂದ್ರರಾಯರು ಅಧಿವೇಶನದೊಳಗಿನ ಠರಾವುಗಳು ಅಸ್ಪೃಶ್ಯೋದ್ಧಾರ, ಸಂಘಟನ ಇತ್ಯಾದಿಗಳು. ಅಧ್ಯಕ್ಷರು, ಚೆಯರಮೆನರು, ಸೌಮ್ಯವಾದ ಠರಾವುಗಳು ಈ ಮೇರೆಗೆ ತ್ರಿವೇಣಿಸಂಗಮವು ಒಟ್ಟಿಗೆ ಸೇರಿದಲ್ಲಿ ಅಂಥ ಅಧಿವೇಶನದಿಂದ ಹಿಂದು ಸಮಾಜದ ಮತ್ತು ಹಿಂದಿ ರಾಷ್ಟ್ರದ ಹಿತವನ್ನೆ ನಿರೀಕ್ಷಿಸಬೇಕಲ್ಲದೆ ಕುಶಂಕೆಗಳಿಗಾಗಲಿ, ಸಂಶಯಕ್ಕಾಗಲಿ ಆಸ್ಪದವಿಲ್ಲ. ಅದ್ದರಿಂದ ಅದು ಯಶಸ್ವಿಯಾಗಿಯೇ ಮುಗಿದೀತೆಂದು ನಾವು ನಂಬಿದ್ದೇವೆ. ಈ ಅಧಿವೇಶನವನ್ನು ಕುರಿತು ಇದುವರೆಗೆ ನಮ್ಮ ಕೈಸೇರಿರುವ ಮುಖ್ಯ ಮುಖ್ಯ ವೃತ್ತಾಂತವನ್ನು ಬೇರೊಂದು ಕಡೆಯಲ್ಲಿ ಪ್ರಕಟಿಸಿದ್ದೇವೆ.

ಹಿಂದು ಮಹಾಸಭೆಯ ಹೆಸರು ಕೇಳಿದೊಡನೆ ಅನೇಕರಲ್ಲಿ ದುರ್ಭಾವನೆಗಳು ಮೂಡುತ್ತವೆ. ಹಿಂದುಗಳು ಈ ಮಹಾಸಭೆಯ ನೆವವನ್ನು ಹೂಡಿ ಮುಸಲ್ಮಾನರನ್ನು ಎದುರಿಸಲು ಶಾರೀರಕ ಬಲವನ್ನು ಸಿದ್ಧಗೊಳಿಸಿಕೊಳ್ಳುತ್ತಿದ್ದಾರೆ, ಪತಿತ ಪರಾವರ್ತನೆಯಿಂದ ಮಹಮ್ಮದೀಯರ ಸಂಖ್ಯೆಗೆ ಹಾನಿ ಬಂದು ತಟ್ಟುವದು, ಇದು ತೋರಿಕೆಯ ಮಟ್ಟಿಗೆ ಧಾರ್ಮಿಕ ಅಥವಾ ರಾಜಕೀಯ ಚಳವಳವೆಂದು ತೋರಿದರೂ ಹಿಂದುಗಳಿಗೆ ಹಿಂದು ರಾಜನನ್ನು ನೆಲೆಗೊಳಿಸಬೇಕೆಂಬ ಇಚ್ಛೆ ಇದೆ ಎಂದಿತ್ಯಾದಿ ಎಷ್ಟೊ ಆಕ್ಷೇಪಗಳನ್ನು ಮಹಮ್ಮದೀಯರು ಎತ್ತುವರು; ನಮ್ಮೊಳಗಿನ ಅನೇಕರು ಇವುಗಳನ್ನೆ ಅನುವಾದಿಸುವರು. ಈ ಎಲ್ಲ ಆಕ್ಷೇಪಗಳಿಗೆ ಲಾಲಾಜಿಯವರು ತಮ್ಮ ಅಧ್ಯಕ್ಷತೆಯ ಭಾಷಣದಲ್ಲಿ ಸಮರ್ಪಕವಾದ ಮತ್ತು ಸ್ಪಷ್ಟವಾದ ಉತ್ತರವನ್ನು ಕೊಟ್ಟಿದ್ದಾರೆ. ವಸ್ತುತಃ ಮುಸಲ್ಮಾನರು ಇಂಥ ಆಕ್ಷೇಪಗಳನ್ನೆತ್ತುವದು ಅನುಚಿತವು. ಹಿಂದುಗಳು ಈ ಸಭೆಯನ್ನು ಯಾಕೆ ಸೇರಿಸುತ್ತಿದ್ದಾರೆಂಬುದು ಅವರ ಉದ್ದೇಶ, ಕಾರ್ಯಕ್ರಮ ಇವುಗಳ ಮೇಲಿಂದ ನಿರ್ಣಯಿಸಬೇಕು. ಸ್ವಂತ ಮನಸ್ಸಿನ ಚಿತ್ರವನ್ನು ಇತರರ ಮುಖದ ಮೇಲೆ ಛಾಪಿಸಿಕೊಂಡು ವಾದಿಸುವದು ಚಂದವಲ್ಲ. ಮುಸಲ್ಮಾನರ ದ್ವೇಷಸಾಧನೆಗಾಗಿ ಈ ಚಳವಳವು ಖಂಡಿತವಾಗಿ ಅಸ್ತಿತ್ವದಲ್ಲಿ ಬಂದಿಲ್ಲ. ಹೀಗಿರಲು ಮೇಲಿನಂತೆ ಆರೋಪಿಸುವದು ಬಂಗಾಲದ ಸ್ವರಾಜ್ಯಪಕ್ಷದ ಅಕಾರಣವಾದ ಶಂಕೆಯನ್ನಿಟ್ಟುಕೊಂಡು ಒರ್ಡಿನನ್ಸನ್ನು ಜಾರಿಮಾಡುವಂತೆಯೆ ಸರಿ. ನಮ್ಮ ಮಹಮ್ಮದೀಯ ಬಂಧುಗಳ ಕೈಯಲ್ಲಿ ಕಾನೂನಿನ ಸೂತ್ರಗಳಿದ್ದರೆ ಅವರು ಕೂಡ ಈ ಬಗ್ಗೆ ಒಂದು ಒರ್ಡಿನನ್ಸನ್ನು ಜಾರಿಯಲ್ಲಿ ತರುತ್ತಿದ್ದರೊ ಏನೊ! ಇರಲಿ, ಹಿಂದುಗಳು ಯಾವಾಗಲೂ ಇಂಥ ಹೇತುವಿನವರು ಇರುವದಿಲ್ಲವೆಂಬುದನ್ನು ಎಲ್ಲರೂ ತಿಳಿಯಬೇಕು. ಒಂದು ವೇಳೆ ಹಿಂದು ಪರಿಷತ್ತನ್ನು ಊರ್ಜಿತಪಡಿಸುವದರಲ್ಲಿ ಹಿಂದುಗಳ ಮೇಲೆ ಈ ಅಸದ್ಧೇತುವನ್ನು ಬೇಕಾದರೆ ಆರೋಪಿಸೋಣ. ಆದರೆ ಅದರಿಂದ ಹಿಂದುಗಳು ದೋಷಿಗಳಾಗುವದಿಲ್ಲ. ಗಾಜಿನಮನೆಯಲ್ಲಿ ಇರುವವನು ಬೇರೆಯವರ ಮನೆಗೆ ಕಲ್ಲೆಸೆಯುವಾಗ ಆತ್ಮನಿರೀಕ್ಷಣೆಯನ್ನು ಮಾಡಿಕೊಳ್ಳಬೇಕು. ಈಗ ಎಷ್ಟು ಶತಮಾನಗಳಿಂದ ಯಾಕೆ ಧರ್ಮಸಂಸ್ಥಾಪಕನೂ ಪವಿತ್ರಾತ್ಮನೂ ಆದ-ಮಹಮ್ಮದನು ಧರ್ಮದ ಆಜ್ಞೆಯನ್ನು ಬೆಳಕಿಗೆ ತಂದಂದಿನಿಂದ ಆ ಧರ್ಮದಲ್ಲಿ ಧರ್ಮಾಂತರವು ಇಲ್ಲವೆ? ಬರೆ ಸಂತೋಷದಿಂದಲೆ ಅಲ್ಲ, ಅನೇಕ ಸಾರಿ ಬಲತ್ಕಾರದಿಂದ, ಸಂಪ್ರದಾಯ ಧರ್ಮಾಂತರದ ಚಳವಳವು ಲೋಕದ ಈ ಧ್ರುವದಿಂದ ಆ ಧ್ರುವದ ವರೆಗೆ ನಡಕೊಂಡಿತ್ತಲ್ಲವೆ? ಜಗತ್ತಿನ ಇತಿಹಾಸದ ಪುಟಗಳು ಏನನ್ನುತ್ತವೆ?

ಆದರೆ ಇತ್ತಲಾಗಿನ ಶತಮಾನಗಳಲ್ಲಿ ಸಹಿಷ್ಣುತೆ, ಭೂತದಯೆ, ವಿಚಾರ ಮತ್ತು ವರ್ತನ ಸ್ವಾತಂತ್ರ ಇತ್ಯಾದಿ ನೀತಿತತ್ತ್ವಗಳು ಲೋಕದಲ್ಲೆಲ್ಲ ಬಹು ರಭಸದಿಂದ ಪ್ರಸಾರಹೊಂದುತ್ತ ಬಂದ ಕಾರಣ ನಮ್ಮ ಮಹಮ್ಮದೀಯ ಬಂಧುಗಳ ಮೇಲೆ ಇದರ ಸುಪರಿಣಾಮವುಂಟಾಗುತ್ತ ಬಂದಿದೆ. ಇದು ಸಂತೋಷದ ಮಾತಾಗಿದೆ. ಮಹಮ್ಮದಿಯರಲ್ಲಿ ಉಗ್ರವಾದಿಗಳಾದ ಧಾರ್ಮಿಕರು ಇನ್ನೂ ಹಲ ಕೆಲವರಿದ್ದಾರೆ ಎಂಬುದು ಹೌದು, ಆದರೆ ಮಹಾತ್ಮಾಜಿಯವರ ಶಾಂತತಾ ಮತ್ತು ಅಹಿಂಸಾಪ್ರಧಾನವಾದ ಸದುಪದೇಶದಿಂದಲೂ ಹಕೀಮ ಅಜಮಲಖಾನ ಮತ್ತು ಡಾ. ಅನಸಾರಿಗಳಂಥ ವಿಶಾಲ ಹೃದಯದ ಜನರ ಮುತ್ಸದ್ದಿತನದಿಂದಲೂ ಮಹಮ್ಮದೀಯರು ಸ್ವೇತರ ಧರ್ಮಬಂಧುಗಳ ವಿಚಾರ ಸ್ವಾತಂತ್ರ್ಯವನ್ನು ಮನಗಂಡಹತ್ತಿದ್ದಾರೆ. ಇದು ಕೂಡ ಅತ್ಯಂತ ಸುದೈವವೆ ಸರಿ.

ಹಿಂದುಗಳು ಹಿಂದು ಧರ್ಮಸಭೆಯನ್ನು ಊರ್ಜಿತಪಡಿಸಿದ್ದು ಮಹಮ್ಮದೀಯರ ಮನಸ್ಸು ನೋಯಿಸಲಿಕ್ಕಲ್ಲ. ಹಿಂದುಗಳಿಗೆ ಹಿಂದುರಾಜ ಸ್ಥಾಪಿಸುವ ಆಕಾಂಕ್ಷೆಯು ಇಲ್ಲ. ಹಿಂದುಗಳಿಗೆ ಮಹಮ್ಮದೀಯರನ್ನು ಹಿಂದುಸ್ಥಾನದಿಂದ ಓಡಿಸಬೇಕೆಂಬುದೂ ಇಲ್ಲ. ಆದರೆ ಹಿಂದುಗಳು ಕೇವಲ ಆತ್ಮಸಂರಕ್ಷಣೆಗಾಗಿ ಈ ಚಳವಳವನ್ನು ಊರ್ಜಿತಪಡಿಸಿದ್ದಾರೆ. ಆದುದರಿಂದ ಯಾರೂ—ಮಹಮ್ಮದೀಯರು, ಕ್ರಿಶ್ಚನರು, ಪಾರ್ಸಿಗಳು ಮುಂತಾದ ಯಾರೂ ಈ ಚಳವಳದಿಂದ ಭಯಪಡಬೇಕಾದ್ದಿಲ್ಲ.

ಹಿಂದು ಮಹಾ ಸಭೆಯ ಲೋಕ ಪ್ರಿಯ ಅಧ್ಯಕ್ಷರಾದ ಲಾಲಾಲಜಪತರಾಯರು ತಮ್ಮ ಭಾಷಣದಲ್ಲಿ ಈ ಮೇರೆಗೆ ಸುವಿಚಾರಗಳನ್ನು ವ್ಯಕ್ತಗೊಳಿಸಿ ಟೀಕಾಕಾರರ ತಪ್ಪು ತಿಳಿವನ್ನು ಅಳಿಸಲು ಯತ್ನಿಸಿದ್ದಾರೆ. ಅವರ ಯತ್ನವು ಸಫಲವಾದೀತೆಂದು ನೆನಸಿದ್ದೇವೆ.

ಸ್ಫುಟ ವಿಚಾರಗಳು.

೧. ಸ್ವರಾಜ್ಯಪಕ್ಷದ ಮುಖಂಡರಾದ ದೇಶಬಂಧು ದಾಸರು ನ್ಯಾಯವಾದ ಮಾರ್ಗವನ್ನವಲಂಬಿಸಿ ಸರಕಾರವು ನಡಕೊಳ್ಳುವದಾದರೆ ಒರ್ಡಿನನ್ಸನ್ನು ರದ್ದುಪಡಿಸಿ ಕೈದುಮಾಡಿದವರನ್ನು ಬಿಟ್ಟುಕೊಡುವದಾದರೆ ಸರಕಾರದೊಡನೆ ಸನ್ಮಾನ್ಯವಾದ ಸಹಕಾರವನ್ನು ಮಾಡಲಾತಂಕವಿಲ್ಲವೆಂದು ಪ್ರಕಟಿಸಿದಂದಿನಿಂದ ಅನೇಕ ಇಂಗ್ಲಿಷ್ ಜನರು ದಾಸರ ಮತದಂತೆ ಸರಕಾರವು ನಡಕೊಳ್ಳುವದು ಯುಕ್ತವಾಗಿದೆ ಎಂದು ಹೇಳುತ್ತಿದ್ದಾರೆ. ವಿಲಾಯತಿಯೊಳಗಿನ ಮಜೂರಪಕ್ಷದ ಸುಪ್ರಸಿದ್ಧ ಪತ್ರಿಕೆಯಾದ ಡೈಲಿ ಹೆರಲ್ಡ ಎಂಬುದು ಈ ವಿಷಯವನ್ನು ಪ್ರಸ್ತಾಪಿಸುವಾಗ ಯೋಗ್ಯವಾದ ಎರಡು ಮಾತುಗಳನ್ನು ಬರೆದಿದೆ. "ಹಿಂದುಸ್ಥಾನದೊಳಗಿನ ರಾಜಕಾರಣದ ವ್ಯವಸ್ಥೆಗೆ ಅಸಾಧ್ಯ ಸ್ವರೂಪವು ಬರಬಾರದೆಂದಿದ್ದರೆ, ಹಿಂದುಸ್ಥಾನದ ಮುಖಂಡರಾದ ದಾಸರು ಸರಕಾರಕ್ಕೆ ಈಗ ಯಾವ ಹೊಸ ಸಂದರ್ಭವನ್ನು ತಂದುಕೊಟ್ಟಿದ್ದಾರೊ ಅದನ್ನು ಸರಕಾರವು ಸದುಪಯೋಗಿಸಿಕೊಳ್ಳುವದು ಹಿತಾವಹವು. ಲೊ. ಬರ್ಕನ ಹೆಡ್ಡರಿಗೂ ಅವರ ಸರಕಾರಗಳಿಗೂ ಇದೊಂದು ಉತ್ತಮ ಸಂದರ್ಭವು. ಅವರು ಇದನ್ನು ನಿರಾಕರಿಸಿದ್ದಾದರೆ, ದಾಸರವರು ಕೇಳಿದ ಸಂಗತಿಗಳನ್ನು ಅಲ್ಲಗಳೆದದ್ದಾದರೆ, ಹಿಂದುಸ್ಥಾನದೊಳಗಿನ ಸನದುಶೀಲ ಚಳವಳದ ಅಸ್ತಿತ್ವಕ್ಕೆ ಭಂಗಬಂದೀತು, ಕ್ರಾಂತಿಕಾರಕರು ರಾಜಕೀಯ ರಂಗಭೂಮಿಯನ್ನು ಆಕ್ರಮಿಸುವರು, ಮತ್ತು ಈ ಕಾರಣದಿಂದ ರಾಜಪ್ರಜಾಪಕ್ಷಗಳಲ್ಲಿ ಒಪ್ಪಂದದ ಯಾವ ಸಂದರ್ಭವು ಬಂದೊದಗಿತ್ತೊ ಅದು ಕೂಡ ಸರ್ವಥಾ ದೂರವಾಗುವದು". ಡೈಲಿ ಹೆರಲ್ಡ ಪತ್ರಿಕೆಯು ಹೇಳುವ ಈ ಹಿತೋಪದೇಶವು ಸರ್ವರಿಗೂ ಆದರಣೀಯವಾಗಿದೆ. ನಿಜವಾಗಿ ಹೇಳುವದಾದರೆ ಬರೆ ಆದರಣೀಯವೆ ಅಲ್ಲ, ಆಚರಣೀಯವಾಗಿದೆ. ಹಿಂದುಸ್ಥಾನದೊಳಗಿನ ಕ್ರಾಂತಿಕಾರಕರ ಬೇರನ್ನು ಕಿತ್ತುಬಿಡಬೇಕಾದರೆ ದಾಸರಂಥವರ ಸಹಾಯವನ್ನು ಪಡಕೊಂಡ ಹೊರತು, ಅವರು ಹೇಳುವಂತೆ ಸರಕಾರವು ತನ್ನದು ಸ್ವಾರ್ಥ ಮತ್ತು ದುರಾಗ್ರಹ ಇವುಗಳನ್ನು ಬಿಟ್ಟು ಹಿತಾಳಿಕೆಯ ಶ್ರೀಗಣೇಶವನ್ನು ಅಳಿಸಿದ ಹೊರತು ಸಾಧ್ಯವಾಗಲಿಕ್ಕಿಲ್ಲ. ದೊಣ್ಣೆಯಿಂದ ಕ್ರಾಂತಿಕಾರಕರನ್ನು ಮುರಿಯಲು ಸಾಧ್ಯವಿಲ್ಲ; ಬೆಣ್ಣೆಯಿಂದ ಸದ್ಭಾವನೆಯನ್ನು ಹುಟ್ಟಿಸಬೇಕು. ಈ ಮುತ್ಸದ್ದಿತನವನ್ನು ಮತ್ತು ಉದಾತ್ತ ಭಾವವನ್ನು ನೋಕರಶಾಹಿಯು ತೋರಿಸೀತೆ?

೨. ಆದರೆ ಲೊ. ಬರ್ಕನ ಹೆಡ್ಡರ ಸಹಾಯಕರಾದ ವಿಂಟರಟನ್ ಸಾಹೇಬರು ಪಾರ್ಲಿಮೆಂಟಿನಲ್ಲಿ ಕೊಟ್ಟ ಉತ್ತರದ ಮೇಲಿಂದ ಹೇಳುವದಾದರೆ, ಇಂಥ ಸುಯೋಗವು ಬೇಗನೆ ಬರುವಂತೆ ಕಾಣುವುದಿಲ್ಲ. "ಹಿಂದುಸ್ಥಾನದ ರಾಜಕಾರಣವನ್ನು ವ್ಯವಸ್ಥೆಗೊಳಿಸಲು ಸರಕಾರವು ದಾಸ, ಗಾಂಧಿ, ಶಾಸ್ತ್ರಿ, ಲಜಪತರಾಯ, ಬಿರ್ಖೆಂಟ ಮುಂತಾದ ಮುಖಂಡರನ್ನು ಕರೆಯಿಸುವದೆ?" ಎಂದು ಲೆನ್ಸಬರಿ ಎಂಬವರು ಕೇಳಿದ್ದಕ್ಕೆ ಮೇಲ್ಕಂಡ ವಿಂಟರಟನ್ನರು ಕೆಳಗಿನಂತೆ ಉತ್ತರಕೊಟ್ಟರು. "ಸರಕಾರವು ಈ ವಿಷಯದಲ್ಲಿ ಯಾರನ್ನು ಕರೆಯಿಸಲಿಲ್ಲ. ಕರೆಯಿಸುವ ಇರಾದೆಯಲ್ಲಿಯೂ ಇಲ್ಲ, ಬ್ರಿಟಿಷ ಪಾರ್ಲಿಮೆಂಟು ಹಿಂದುಸ್ಥಾನ ಸರಕಾರಕ್ಕೆ ಮತ್ತು ಪ್ರಾಂತಿಕ ಸರಕಾರಗಳಿಗೆ ರಾಜ್ಯಕಾರಭಾರವನ್ನು ಒಪ್ಪಿಸಿಕೊಟ್ಟಿರುವದರಿಂದ ಹಿಂದುಸ್ಥಾನ ಮತ್ತು ಪ್ರಾಂತಿಕ ಸರಕಾರಗಳ ಜವಾಬದಾರವಲ್ಲದೆ ಇತರರಲ್ಲ. ಅದ್ದರಿಂದ ಏನಾದರು ಹೆಚ್ಚು ಕಡಿಮೆ ಮಾಡುವದಿದ್ದರೆ, ಹಿಂದುಸ್ಥಾನ ಮತ್ತು ಪ್ರಾಂತಿಕ ಸರಕಾರಗಳನ್ನೆ ನಾವು ಕೇಳೇವು. ಇತರ ಮುಖಂಡರೊಡನೆ ಕೇಳುವ ಕಾರಣವಿಲ್ಲ. ಹಿಂದುಸ್ಥಾನದೊಳಗಿನ ಮುಖಂಡರು, ಅವಶ್ಯವಿದ್ದರೆ ಹಿಂದುಸ್ಥಾನ ಸರಕಾರದೊಡನೆ ತಮ್ಮ ಅಂಬೋಣವನ್ನು ತಿಳಿಸಬಹುದು" ಎಂಬುದಾಗಿ ನುಡಿದು ಅರ್ಲವಿಂಟರಟನ್ನರು ಮುಂದರಿಸಿದ್ದೇನೆಂದರೆ—ರೆಡಿಂಗಸಾಹೇಬರು ಈಗ ಬೇಗನೆ ಬರಲಿಕ್ಕಿದ್ದಾರೆ. ಅವರು ಇಲ್ಲಿ ಹಿಂದುಸ್ಥಾನದ ರಾಜಕಾರಣವನ್ನು ಚರ್ಚಿಸುವಾಗ ಹಿಂದುಸ್ಥಾನದ ಮುಖಂಡರನ್ನು ಸಹ ಕರೆಯಿಸಿದರೆ ರೆಡಿಂಗರ ಸ್ಥಾನ, ಗೌರವ ಮುಂತಾದ್ದನ್ನೆಲ್ಲಾ ತಗ್ಗಿಸಿದಂತಾಗುವದಿಲ್ಲವೆ"? ವಿಂಟರಟನ್ನರ ಈ ಶುಷ್ಕ ಯುಕ್ತಿವಾದವನ್ನು ನೋಡುವಾಗ ಅವರ ನಿಃಸಹಾನುಭೂತಿಯ ಬಗ್ಗೆ ಪಶ್ಚಾತ್ತಾಪ ಪಡಬೇಕಾಗುತ್ತದೆ. ರೆಡಿಂಗರ ಯೋಗ್ಯತೆಗೆ ಅಥವಾ ಭಾರಕ್ಕೆ ಭಂಗ ಬರಬಾರದೆಂಬುದಕ್ಕೆ ಹಿಂದುಸ್ಥಾನ ರಾಜಕೀಯ ಮುಖಂಡರನ್ನು ಕರೆಯಿಸದೆ ಇರುವುದು ಶುದ್ಧ ಅನ್ಯಾಯವಲ್ಲವೆ? ಸ್ವರಾಜ್ಯದ ಪ್ರಸ್ತಾಪವು ಬಂದಾಗ ಪಾರ್ಲಿಮೆಂಟಿಗೆ ಹಿಂದುಸ್ಥಾನ ಸರಕಾರವು ಜವಾಬದಾರವು ಮತ್ತು ಆಗ ಲೋಕಮತವನ್ನು ಕೇಳುವ ಅಗತ್ಯವಿಲ್ಲ. ಆದರೆ ಯುದ್ಧದಂಥ ಸಮಯವು ಬಂದರೆ ಆಗ ಮಾತ್ರ ಬಾದಶಹರ ಹೆಸರಿನ ಹಿಂದಿ ರಾಷ್ಟ್ರಕ್ಕೆ ಸಹಾಯಾರ್ಥ ವಿನಂತಿ ಪತ್ರಗಳು ಹೊರಡುತ್ತವೆ! ಇದು ರಾಜನೀತಿಯ ಉತ್ತಮ ನಮೂನೆ!!

೩. ಲೊ. ರೆಡಿಂಗ ಸಾಹೇಬರು ವಿಲಾಯತಿಗೆ ತೆರಳಿದರು. ಪೂರ್ವ ನಿಶ್ಚಯದಂತೆ ಬಂಗಾಲದ ಗವರ್ನರರೂ, ಒರ್ಡಿನನ್ಸಿನ ಜನಕರೂ, ಪ್ರಚಾರಕರೂ ಆದ ಲೊ. ಲಿಟನರು ಹಿಂದುಸ್ಥಾನದ ವೈಸರಾಯರ "ಗಾದಿ"ಯನ್ನೇರಿದರು. ಈ ಸಂದರ್ಭದಲ್ಲಿ ಒಂದು ಮನೋರಂಜಕವಾದ ಸಂಗತಿಯು ನಡೆಯಿತು. ವೈಸರಾಯರ ಸ್ಥಾನಕ್ಕೆ ಅಥವಾ ಪ್ರಾಂತಾಧಿಪತಿಗಳ ಸ್ಥಾನಕ್ಕೆ ಬರುವಾಗ ಶಪತ ವಿಧಿಯು ನಡೆಯತಕ್ಕದ್ದಿರುತ್ತದೆ. ವಿಲಾಯತಿಯಿಂದ ಬರುವಾಗ ಅಲ್ಲಿಯೆ ಈ ವಿಧಿಯನ್ನು ಬಾದಶಹರ ಮುಂದೆ ಅಥವಾ ಮುಖ್ಯ ನ್ಯಾಯಾಧೀಶರ ಮುಂದೆ ಮುಗಿಸಿಕೊಂಡು ಬರುತ್ತಾರೆ. ಲಿಟನರಿಗೆ ಇಲ್ಲಿ ಇರುವಾಗಲೆ ವೈಸರಾಯತನದ ಹೊಸ ನೇಮಕವುಂಟಾದ್ದರಿಂದ ಈ ನೂತನ ಶಪಥವಿಧಿಯು ಹಿಂದುಸ್ಥಾನದಲ್ಲಿ ಆಗಬೇಕಾಯಿತಲ್ಲದೆ, ಬರೆ ಅಷ್ಟಕ್ಕಾಗಿ ವಿಲಾಯತಿಗೆ ಹೋಗಲು ಆಗಲಿಲ್ಲ. ಹೀಗಾಗಿ ಲಿಟನ ಸಾಹೇಬರು ನಿರುಪಾಯವಾಗಿ ಲಾಹೋರಿನ ಮುಖ್ಯ ನ್ಯಾಯಾಧೀಶರ ಮುಂದೆ ಈ ವಿಧಿಯನ್ನು ತೀರಿಸಿಕೊಂಡರು. ಇಲ್ಲಿ ನಿರುಪಾಯವಾಗಿ ಹೇಳುವ ಕಾರಣವೇನೆಂದ್ರರೆ, ಲಾಹೋರಿನ ನ್ಯಾಯಮೂರ್ತಿಗಳು ಹಿಂದುಮತಸ್ಥರು. ಅಂಥವರ ಮುಂದೆ ಎಂದರೆ ಹಿಂದಿ ಗೃಹಸ್ಥರ ಮುಂದೆ ಕೈಕಟ್ಟಿಕೊಂಡು ನಿಂತು ಶಪಥವನ್ನು ಎತ್ತುವದು ಸಾಹೇಬರಿಗೆ—ಅದರಲ್ಲೂ ವೈಸರಾಯ ಸ್ಥಾನಕ್ಕೆ ಬರುವ ಸಾಹೇಬರಿಗೆ ಬಹು ಅನುಚಿತವಾಗಿ ತೋರಿತು! ಪಾಯೋನಿಯರದಂಥ ಪತ್ರಿಕೆಗಳು ಇದೊಂದು ದೊಡ್ಡ ಅಪಮಾನವೆಂದು ಗೃಹಿಸಹತ್ತಿದವು. ಹಿಂದಿ ಗೃಹಸ್ಥನ ಮುಂದೆ ಶಪಥವನ್ನೆತ್ತುವದು ದೊಡ್ಡದೊಂದು ಶಿಕ್ಷೆಯೆಂದೆಣಿಸಿ ಯುರೋಪಿಯನ್ ನ್ಯಾಯಾಧೀಶನಿದ್ದರೆ ಆಗಬಹುದಿತ್ತೆಂಬುದಾಗಿ ಕೂಡ ಈ ಪಕ್ಷದವರು ಆಲೋಚಿಸ ಹತ್ತಿದರು! ವಿಲಾಯತಿಯವರಲ್ಲಿ ಜಾತಿಭೇದವಿಲ್ಲವೆಂದು ವಾದಿಸುವವರು ಈ ದೃಷ್ಟಾಂತವನ್ನು ಸರಿಯಾಗಿ ಮನನ ಮಾಡಬೇಕು. ಯೋಗ್ಯತೆಯ ಮೇರೆಗೆ ನ್ಯಾಯಾಸನದ ಉಚ್ಚಪದವಿಯನ್ನಲಂಕರಿಸಿದವನು ಬರೆ ಹಿಂದಿ ಎಂಬ ಕಾರಣದಿಂದ ಅವನ ಮುಂದೆ ತಲೆಬಗ್ಗಿಸಲು ತಪ್ಪಿಸಿಕೊಳ್ಳುವವರು ಜಾತಿಭೇದದ ಸಮರ್ಥನವನ್ನು ಇನ್ನು ಬೇರೆ ವಿಧದಿಂದ ಮಾಡಬೇಕಾದ್ದುಂಟೆ? ಜಾತಿಭೇದದಿಂದ ಹೀಗೆ ಮಾಡಿದ್ದಲ್ಲಿ ಜಿತಜನಾಂಗದವರಾದ ಕಾರಣ ಹಿಂದಿಗಳ ಮುಂದೆ ಜೇತೃ ವರ್ಗದವರು ಶಪಥವಿಧಿಗಾಗಿ ತಲೆಬಗ್ಗಿಸುವದು ಅನುಚಿತವೆಂದು ಯಾರಾದರೂ ಹೇಳಿದರೆ ಈ ಕಾರಣವು ಇನ್ನಷ್ಟು ಅಪ್ರಬುದ್ಧವಾದ್ದೆಂದು ಹೇಳಬೇಕಾಗುತ್ತದೆ. ಮಾತ್ರವಲ್ಲ, ದುರಭಿಮಾನ ಮೂಲಕವಾದ್ದು. ಸರಕಾರದ ಹುದ್ದೆ ಎಂಬ ಜನಿವಾರವಿದ್ದ ಮೇಲೆ ಜಿತ, ಜೇತೃವೆಂಬ ಭೇದವನ್ನು ಕಲ್ಪಿಸುವದು ವಿಸಂಗತವಾಗಿದೆ. ಇರಲಿ, ಕೊನೆಗೆ ಲೊ. ಲಿಟನರು ಲಾಹೋರಿನ ನ್ಯಾಯಮೂರ್ತಿಗಳಾದ ಶಹಾದಿಲಾಲರ ಮುಂದೆ ಶಪಥವನ್ನೆತ್ತಿ ವೈಸರಾಯತನದ ಸ್ಥಾನವನ್ನಲಂಕರಿಸಿದ್ದರು.

೪. ವೈಕಮಿನ ಸತ್ಯಾಗ್ರಹದ ಕುರಿತು ಉಂಟಾಗಿರುವ ಒಪ್ಪಂದವು ಈಗ ಕಾರ್ಯರೂಪವನ್ನು ಹೊಂದಿದೆ. ಇದು ಸಮಾಧಾನದ ಸಂಗತಿಯು. ತ್ರಾವಣಕೋರ ಸರಕಾರ ಮತ್ತು ಮಹಾತ್ಮಾಜಿ ಈ ಉಭಯತರಲ್ಲಿ ನಡೆದ ಕರಾರಿನ ಪ್ರಕಾರ ಅಲ್ಲಿಯ ಸತ್ಯಾಗ್ರಹಿಗಳ ಮೇಲೆ ಇರುವ ಪ್ರತಿಬಂಧದ ಹುಕುಮನ್ನು ರದ್ದುಪಡಿಸಲು ತ್ರಾವಣಕೋರ ಸರಕಾರವು ಹುಕುಂ ಕೊಟ್ಟಿದೆ. ಅಸ್ಪೃಶ್ಯ ಸತ್ಯಾಗ್ರಹಿಗಳು ವಿವಾದ್ಯಸ್ಥಲವನ್ನು ಉಲ್ಲಂಘಿಸುವುದಿಲ್ಲ. ಅಲ್ಲಿ ತನಕ ಬಂದು ಚರಕ ತಿರುಗಿಸಿ ಹಿಂತಿರುಗುವರು. ಮಹಾರಾಣಿಯವರು ಮತ್ತು ದಿವಾಣರು ಎಲ್ಲ ಪ್ರಜೆಗಳು ವಿಶೇಷತಃ ಸಂಪ್ರದಾಯವಾದಿಗಳು ಈ ಪ್ರಶ್ನೆಯ ಕಡೆಗೆ ಸಹಾನುಭೂತಿಯಿಂದ ನೋಡಬೇಕೆಂದು ಸೂಚಿಸಿದ್ದಾರೆ. ಈ ಸಂಗತಿಯಾದರೂ ಅಭಿನಂದನೀಯವೆ ಸರಿ. ಇದೇ ರೀತಿಯಿಂದ ಮೆಲ್ಲಮೆಲ್ಲನೆ ಸುಧಾರಣೆಗಳಾಗುವದು ಒಳ್ಳೆಯದು. ಆದರೆ ಅಸ್ಪೃಶ್ಯತೆಯ ಪ್ರಶ್ನೆಯನ್ನು ಈಗ ಹೆಚ್ಚು ಉದ್ದ ಎಳೆಯುವದು ಯಾರಿಗೂ ಅಷ್ಟೊಂದು ಹಿತಕರವಲ್ಲ. ದೇವಸ್ಥಾನದಲ್ಲಿ ಪ್ರವೇಶವು ಇಷ್ಟು ಬೇಗನೆ ಸಾಧ್ಯವಿಲ್ಲವಾದರೂ ಅದರ ಬಳಿಗೆ ಕೂಡ ಬರಬಾರದೆಂದು ಹೇಳುವದು ಯೋಗ್ಯವಲ್ಲ. ಈ ರೀತಿಯಿಂದ ಉಪಮರ್ದವುಂಟಾಗುವದರಿಂದ ಆ ಇಡಿ ವರ್ಗವೆ ಮತಾಂತರವನ್ನು ಅವಲಂಬಿಸುತ್ತದೆ. ಇದು ದೇಶದ ದೃಷ್ಟಿಯಿಂದ ಅತ್ಯಂತ ಹಾನಿಕರವು. ಅದ್ದರಿಂದ ಈ ವಿಷಯವನ್ನು ಆಲೋಚಿಸಿ ಅಲ್ಲಿಯ ಸಾಂಪ್ರದಾಯಿಕರು ತಮ್ಮ ಮನಸ್ಸನ್ನು ಉದಾರವನ್ನಾಗಿ ಮಾಡಿಯಾರೆಂದು ನಂಬಿದ್ದೇವೆ

೫. ಮೂಡಬಿದ್ರೆಯ ಜೈನಮತದ ಗುರುಗಳಾದ ಶ್ರೀ. ಚಾರುಕೀರ್ತಿಪಂಡಿತಾಚಾರ್ಯವರ್ಯರು ಈ ತಿಂಗಳ ತಾ.೫ರಲ್ಲಿ ಸಮಾಧಿಸ್ಥರಾದರೆಂದು ಕೇಳಿ ನಾವು ತುಂಬಾವಿಷಾದಪಡುತ್ತೇವೆ. ಹಿಂದುಸ್ಥಾನದಲ್ಲಿ ಮೂಡಬಿದ್ರೆಯು ಜೈನಮತಾನುಯಾಯಿಗಳಿಗೆ ಪವಿತ್ರಸ್ಥಾನವಾದ್ದು. ಅಲ್ಲಿ ಪ್ರೇಕ್ಷಣೀಯವಾದ ಬಸ್ತಿಯು ಇದ್ದಂತೆ ಜೈನರ ಆಧಿಪತ್ಯಕಾಲೀನವಾದ ಅವರ ಧಾರ್ಮಿಕ ಮತ್ತು ಕಾವ್ಯ ಗ್ರಂಥಗಳ ವಾಙ್ಮಯವು ಧಾರಳವಾಗಿ ಉಂಟು. ಕಾಲವಾದ ಗುರುಗಳು ವಿದ್ವಾಂಸರೂ, ನಿಯತರೂ ಆಗಿದ್ದರು. ಇವರ ನಿಧನದಿಂದ ಜೈನಮತಸ್ಥರಿಗೆ ಮಾತ್ರ ವ್ಯಸನವುಂಟಾದೀತೆಂದಲ್ಲ, ವಿದ್ಯಾಪ್ರಿಯರಾದ ಎಲ್ಲರಿಗೂ ವ್ಯಸನವುಂಟಾದೀತು.

೬. ಕೊಚ್ಚಿಯ ಸಂಸ್ಥಾನವು ಸ್ವರಾಜ್ಯದಾನದಲ್ಲಿ ಒಂದು ಹೆಜ್ಜೆಯನ್ನು ಇನ್ನೂ ಮುಂದಕ್ಕೆ ಇಟ್ಟಿದೆ ಇದು ಸಂತೋಷದ ಮಾತಾಗಿದೆ. ಸಂಸ್ಥಾನದ ಸರಕಾರವು ತನ್ನ ಪ್ರಜೆಗಳಿಗೆ ಕಾಯಿದೆ ಕೌನ್ಸಿಲನ್ನು ಕೊಟ್ಟಿದೆ. ಈ ಕಾಯಿದೆ ಸಭೆಯ ರಚನೆಯು ಲೋಕಪಕ್ಷದ ಮತಾಧಿಕ್ಯವಿರುವಂತೆ ತಯಾರಿಸಲ್ಪಟ್ಟಿದೆ. ಮತಾಧಿಕಾರವು ಸ್ತ್ರೀಪುರುಷರಿಗೆ ಸಮಾನವಾಗಿದೆ. ರಾಜ್ಯಕಾರಭಾರಕ್ಕೆ ಸಂಬಂಧಪಟ್ಟ ಎಲ್ಲ ಮಹತ್ವದ ಸಂಗತಿಗಳನ್ನು ಇದರಲ್ಲಿ ಚರ್ಚಿಸಬಹುದು. ಕಾಯಿದೆ ಕಾನೂನುಗಳನ್ನು ತಯಾರಿಸಬಹುದು. ಸಾರ್ವಜನಿಕ ವಿಷಯಗಳನ್ನು ಕುರಿತು ಪ್ರಶ್ನೆಗಳನ್ನು ಕೇಳಬಹುದು. ಜನತೆಗೆ ಬೇಕಾದ ಠರಾವುಗಳನ್ನು ಪಾಸುಮಾಡಬಹುದು. ರಾಜಭಾರಕ್ಕೆ ಮುಖ್ಯ ಸಾಧನವಾದ ಆರ್ಥಿಕ ವಿಷಯವು ಸಹ ಎಸೆಂಬ್ಲಿಯ ಕೈಯಲ್ಲಿ ಉಂಟು. ಈ ಮೇರೆಗೆ ಸಾಮಾನ್ಯವಾಗಿ ಸರ್ವಾಂಗ ಸುಂದರವಾದ ಕಾಯಿದೆಯ ಸಭೆಯು ಕೊಚ್ಚಿ ಸಂಸ್ಥಾನವು ಜನಗಳಿಗೆ ಕೊಟ್ಟಿದೆ. ಹಿಂದೀ ಸಂಸ್ಥಾನಿಕರು ಮನಸ್ಸುಮಾಡಿದರೆ ಪ್ರಜೆಗಳಿಗೆ ಇಂಥ ಹಕ್ಕುಗಳನ್ನು ಕೊಡಬಹುದು. ವಾಸ್ತವವಾಗಿ ಈ ಹಕ್ಕುಗಳು ಜನಗಳದೆ. ಅವರ ಹಕ್ಕುಗಳನ್ನು ಅವರಿಗೆ ಬಿಟ್ಟುಕೊಡುವದು ಯುಕ್ತವೆ ಸರಿ. ಅಲ್ಲದೆ, ದೇಶೀಯ ಸಂಸ್ಥಾನಿಕರು ಏಳು ಸಮುದ್ರಗಳ ಆಚೆಯವರಲ್ಲ. ರಾಜರೂ ಪ್ರಜೆಗಳೂ ಒಂದೆ ದೇಹದ ಎರಡು ಭಾಗಗಳು. ಅಂಥವರು ಪರಸ್ಪರ ವಿಶ್ವಾಸದಿಂದ ಪ್ರೀತಿಯಿಂದ ನಡಕೊಳ್ಳುವದು ಅತಿ ಅಗತ್ಯವು.

೭. ಹಿಂದುಸ್ಥಾನದಲ್ಲಿ ಸಿವಿಲ್ ಸರ್ವಿಸನ್ನು ಊರ್ಜಿತಸ್ಥಿತಿಗೆ ತರಬೇಕೆಂಬ ನೆವದಿಂದ ಹಲವು ತರದ ಕುಟಿಲ ಕೃತ್ಯಗಳನ್ನು ಲೊ. ಮೆಸ್ಟನ್ ಪ್ರಭೃತಿಗಳು ಮಾಡುತ್ತಾರೆಂದು ಕೇಳುತ್ತೇವೆ. ಹಿಂದುಸ್ಥಾನವು ಬ್ರಿಟಿಷ ಸಾಮ್ರಾಜ್ಯದ ಕೈಯಿಂದ ತಪ್ಪಿ ಹೋಗದೆ ಇರಬೇಕೆಂದು ಗವರ್ನಮೆಂಟಿನ ಇಚ್ಛೆ ಇದ್ದುದಾದರೆ ಪ್ರಕೃತ 'ಹೀನ' ಸ್ಥಿತಿಯಲ್ಲಿರುವ ಸಿವಿಲ್ ಸರ್ವಿಸನ್ನು ಸುಧಾರಿಸಬೇಕೆಂಬುದೇ ಮೆಸ್ಟನ್ ಸಾಹೇಬರ ಅಂಬೋಣವಿದೆ. ಐ. ಸಿ. ಯಸ್. ಪರೀಕ್ಷೆಗೆ ಮೊದಲಿನಷ್ಟು ಬ್ರಿಟಿಷ್ ವಿದ್ಯಾರ್ಥಿಗಳು ಬರುವದಿಲ್ಲ. ಇದಕ್ಕೆ ಅವರ ಆರ್ಥಿಕ ಕೊರತೆಯೆ ಕಾರಣವು ಎಂದು ಈ ಮಹಾ ಪುರುಷರು ಕಂಡುಹಿಡಿದಿದ್ದಾರೆ. ಅದ್ದರಿಂದ ಇವರು ಹಿಂದುಸ್ಥಾನದ ಸ್ಟೇಟ ಸೆಕ್ರೆಟರಿಗಳಿಗೆ ಒಂದು ಹೊಸ ಉಪಾಯವನ್ನು ಸೂಚಿಸಿರುವರು. ಸೆಕ್ರೆಟರಿಗಳು ಸಿವಿಲಿಯನ್ನರ ಸಂಬಳವನ್ನು ಹೆಚ್ಚಿಸಬೇಕು, ಅಲ್ಲದೆ ಅವರನ್ನು ಇಲ್ಲಿಯ ಮಂತ್ರಿಗಳ ಕೈಕೆಳಗೆ ಇಡಕೂಡದು, ಈ ಎರಡು ಜಾಗ್ರತೆಯನ್ನು ತೆಕ್ಕೊಂಡು ಬ್ರಿಟಿಷ್ ಯುವಕರಿಗೆ ಆರ್ಥಿಕ ಸಾಹಾಯ್ಯವನ್ನು ಮಾಡುತ್ತೇವೆಂದು ಸ್ಟೇಟ ಸೆಕ್ರೆಟರಿಗಳು ವಚನವನ್ನು ಕೊಟ್ಟಿದ್ದಾದರೆ ಸಿವಿಲ್ ಸರ್ವಿಸ್ಸು ಸುಧಾರಿಸೀತೆಂದು ಸಾಹೇಬರು ಭವಿಷ್ಯ ಹೇಳಿರುವರು! ಮೆಸ್ಟನ್ ಸಾಹೇಬರು ಈ ರೀತಿಯಾಗಿ ಉಪದೇಶಿಸಿದ್ದೇನು ಆಶ್ಚರ್ಯವಲ್ಲ! ಆದರೆ ಲೊ. ಒಲಿವಿಯರಂಥ ಲೇಬರ ಪಕ್ಷದ ಅಗ್ರಣಿಗಳು ಈ ಆಲೋಚನೆಗಳಿಗೆ ಉತ್ತೇಜನ ಕೊಡುವದು ಮಾತ್ರ ಆಶ್ಚರ್ಯವೇ ಸರಿ. ವಿಲಾಯತಿಯ ಯುನಿವರ್ಸಿಟಿಗಳಲ್ಲಿರುವ ಬ್ರಿಟಿಷ್ ಯುವಕರನ್ನು ಸಿವಿಲ್ ಸರ್ವಿಸಿಗೆ ಸೇರಿಸಲು ಪ್ರೊಫೆಸರರು ಉಪದೇಶಿಸಬೇಕೆಂದು ಲೊ. ಒಲಿವಿಯರ್ ಕೂಡ ಹೇಳಿದ್ದಾರೆಂದು ಪ್ರಕಟವಾಗಿದೆ, ಅಲ್ಲದೆ ನಮ್ಮ ಸೆಕ್ರೆಟರಿಗಳಾದ ಬರ್ಕನ್‌ಹೆಡ್ಡರು ಈ ಕಾರ್ಯದಲ್ಲಿ ಪ್ರವತ್ತರಾಗಿರುವರು. ಒಟ್ಟಿನ ಮೇಲೆ ಯಾವ ನೆವದಿಂದಾದರೂ ವಿಲಾಯತಿಯವರ ಕೈಸೇರುವಂಥ ಹಿಂದೂಸ್ಥಾನದ ದ್ರವ್ಯರಾಶಿಯು ಮಿತಿಯಿಲ್ಲದ ಏರಿಸುವಂಥಾದ್ದು ಈಗಿನ ರಾಜಕ್ರಮವಾಗಿದೆ.

ಮಂಗಳೂರು.

ಮದ್ರಾಸಿನಲ್ಲಿರುವ ಕಸ್ಟಮುಖಾತೆಯ ಕಲೆಕ್ಟರರು ಕಳೆದ ಬುಧವಾರ ದಿವಸ ಇಲ್ಲಿಯ ಆಫೀಸನ್ನು ಸಂದರ್ಶಿಸಿ ಮರುದಿವಸ ಇಲ್ಲಿಂದ ತೆರಳಿದರು.

ಮಂಗಳೂರು ತಾಲೂಕು ಕಾಂಗ್ರೆಸ್ ಕಮಿಟಿಯ ಮಹಾಸಭೆಯು ಇದೇ ತಿಂಗಳ ತಾ. ೨೮ನೇ ಮಂಗಳವಾರ ಸಾಯಂಕಾಲ ಗಂಟೆ ೫ಕ್ಕೆ ಮಂಗಳೂರು ತಿಲಕ ವಿದ್ಯಾಲಯದಲ್ಲಿ ಸೇರುವುದು. ಸಭೆಯು ಮುಂದೆ ಬರುವ ವಿಷಯಗಳು:—೧. ಮಾದರಿಯಾದ ಒಂದು ಶಾಲೆಯನ್ನು ಇಡುವ ವಿಷಯ ಉಪ ಕಮಿಟಿಯ ವರದಿಯನ್ನಾಲೋಚಿಸುವದು. ೨. ಜಿಲ್ಲಾ ಪರಿಷತ್ತಿಗೆ ಪ್ರತಿನಿಧಿಗಳನ್ನಾರಿಸುವದು. ೩. ಕಾರ್ಯಕಾರಿ ಮಂಡಳಿಗೆ ೩ ಸದಸ್ಯರನ್ನು ಸೇರಿಸಿಕೊಳ್ಳುವುದು. ೪. ಕನಿಷ್ಟ ಹಾಜರಿಯನ್ನು ಬದಲಾಯಿಸುವುದು.

ಮುಲ್ಕಿ ಸಬ್ ಇನ್ಸ್‌ಪೆಕ್ಟರರ ಮೇಲೆ ಈ ಕೆಳಗಿನ ಆರೋಪಣೆಗಳಿರುವ ಒಂದು ವೃತ್ತಾಂತವು ಪ್ರಕಟಣೆಗೆ ಬಂದಿರುವದು. ಶ್ರೀ ದುರ್ಗಾ ಪರಮೇಶ್ವರೀ ದೇವಸ್ಥಾನದ ರಥೋತ್ಸವದ ದಿವಸ ರಾತ್ರೆ ಸುಮಾರು ೯ ಘಂಟೆ ಸಮಯದಲ್ಲಿ ದೇವರು ರಥಕ್ಕೆ ಹತ್ತುವ ವೇಳೆ ಸುಮಾರು ೫ ಸಾವಿರ ಭಜಕರ ಸಭೆ ನೆರೆದಿತ್ತು. ಆ ಸಮಾರಂಭದಲ್ಲಿ ಮುಲ್ಕಿ ಪೋಲಿಸ್ ಸಬ್‌ಇನ್ಸ್‌ಪೆಕ್ಟರ್ ರಾ| ಗಿರಿಯಪ್ಪನವರು ಸಮೂಹಕ್ಕೆ ಒಳನುಗ್ಗಿ ಶ್ರೀದೇವರು ರಥವನ್ನು ಏರುವರೆ ಬಾಜು ಮಾಡುವ ಸಮ್ಮಂಧ ಭಜಕ ಜನರಿಗೆ ತನ್ನ ಕೈಯಲ್ಲಿದ್ದ ದೊಣ್ಣೆಯಿಂದ ಹೊಡೆಯುತ್ತಿದ್ದರು. ಇಂಥಾ ಇವರ ಕೃತ್ಯದಿಂದ ಹಿಲಾಲುಗಳು ಜನರ ಮೇಲೆ ಬಿದ್ದು ಪಟಾಪಟಿಯಾಯಿತು. ಈ ಸಂದರ್ಭದಲ್ಲಿ ಈ ರೀತಿ ವರ್ತಿಸಬಾರದಾಗಿ ಪ್ರಮುಖ ಜನರು ಸದರಿ ಸಬ್ ಇನ್ಸ್‌ಪೆಕ್ಟರರಿಗೆ ಹೇಳಿಕೊಂಡರೂ ಕೇಳದೆ ಮತ್ತೂ ಮತ್ತೂ ಜನರ ಸಮೂಹಕ್ಕೆ ಹೊಡೆಯುತ್ತಾ ಇದ್ದರು. ಜನರ ದಕಾಮುಕಿಯಲ್ಲಿ ಕೆಲವು ಹಿಲಾಲುಗಳು ಸದರಿ ಸಬ್ ಇನ್ಸ್‌ಪೆಕ್ಟರರ ಮೇಲೆ ಬಿದ್ದು ಕೋಪೋದ್ರೇಕದಿಂದ ಸಬ್ ಇನ್ಸ್‌ಪೆಕ್ಟರರು ಪೋಲೀಸ್ ಸ್ಟೇಶನಿಗೆ ಹೋಗಿ ನಾಲ್ಕು ಬಂದೂಕುಗಳನ್ನೂ ಕೆಲವು ತಲವಾರುಗಳನ್ನೂ ತಂದು ರಥವನ್ನು ಎಳೆದರೆ ಈಗಲೇ ಗುಂಡು ಹೊಡೆದು ಕೊಲ್ಲುತ್ತೇನಾಗಿ ಜನರಿಗೆ ಸಾರಿದರು. ಸ್ಥಳವಂದಿತರಾದ ಮಂಗಳೂರು ತಾಲೂಕು ಬೋರ್ಡ ಪ್ರೆಸಿಡೆಂಟರು, ಸಬ್ ರಿಜಿಸ್ಟ್ರಾರರು, ಓವರ್‌ಸೀಯರರು ಮುಂತಾದವರು ಈ ರೀತಿ ಮಾಡುವುದು ಅನ್ಯಾಯವೆಂಬುದಾಗಿಯೂ ರಥವನ್ನು ನಿಲ್ಲಿಸಬೇಕಾದರೆ ಬರಹಮೂಲಕ ಹುಕುಂ ಕೊಡಬೇಕಾಗಿಯೂ ಕೇಳಿಕೊಂಡರೂ ತಿರಸ್ಕರಿಸಿ ರಥವನ್ನು ಎಳೆದರೆ ಕೂಡಲೇ (fire) ಗುಂಡು ಹಾರಿಸುವೆನಾಗಿಯೂ, ಜನಸಮೂಹದ ಕಡೆಗೆ ಗುರಿಮಾಡಿದರು. ಕೆಲವು ಪೋಲೀಸರ ತಳವಾರು ಆಟವು ನಡೆಯಿತು. ಕಟ್ಟಕಡೆಗೆ, ಸುಮಾರು ಒಂದು ಗಂಟೆ ನಂತರ ಸದರಿ ಸಬ್ ಇನ್ಸ್‌ಪೆಕ್ಟರರು ಸ್ವಸ್ಥತೆಗೆ ಬಂದು ಪುನಃ ರಥವನ್ನು ಎಳೆಯುವವೆ ಹುಕುಂ ಕೊಟ್ಟರಂತೆ. ತನ್ಮಧ್ಯೆ ಕೆಲವು ಜನರನ್ನು ಎರೆಸ್ಟ ಮಾಡುವುದಾಗಿ ಛಾಪೆಹಾಕಿಕೊಂಡಿದ್ದಾರಂತೆ. ಈ ರೀತಿ (fire) ಗುಂಡು ಹಾರಿಸುವುದಾಗಿ ಸಾರಿದ ಕೂಡಲೇ ಸಾವಿರಾರು ಗಂಡಸರೂ ಹೆಂಗಸರೂ ಓಡಿಹೋಗುತ್ತಿರುವಲ್ಲಿ ಕೆಲವರ ಆಭರಣಗಳು ನಷ್ಟವಾಗಿದೆಯಾಗಿಯೂ, ಕೆಲವರ ಮಕ್ಕಳು ಇನ್ನೂ ಸಿಕ್ಕಲಿಲ್ಲವೆಂದೂ ಕೆಲವರು ಬಿದ್ದು ಘಾಯಗಳಾಗಿದೆಯಾಗಿಯೂ ವದಂತಿ ಇದೆ. ಈ ರೀತಿ ಸಬ್ ಇನ್ಸ್‌ಪೆಕ್ಟರರು ಹೊಡೆದವರ ಪೈಕಿ ಪ್ರೊಸೆಕ್ಯೂಶನ್ ಇನ್ಸ್‌ಪೆಕ್ಟರ ರಾವ್ ಸಾಹೇಬ ನಾರಾಯಣರಾಯರ ಮಗ ರಮೇಶ ಎಂಬ ಯುವಕಗೆ ಕೈಯಲ್ಲಿ ಚೆನ್ನಾಗಿ ಪೆಟ್ಟು ಬಿದ್ದಿರುತ್ತದಂತೆ. ಇದೇ ಕಳೆದ ಎಪ್ರಿಲ್ ತಾ. ೩ರಲ್ಲು ಸುರತಕಲ್‌ದಲ್ಲಿ ಆದ ಮಾರಿಪೂಜೆ ಸಮಯಲ್ಲಿ ಇದೇ ಸಬ್ ಇನ್ಸ್‌ಪೆಕ್ಟರರು ಜನಸಮೂಹಕ್ಕೆ ಬಿದ್ದು ಹೆಚ್ಚು ಜನರಿಗೆ ಹೊಡೆದಿದ್ದಾರಂತೆ. ಇವರ ಈ ವರ್ತನೆಯ ಕುರಿತು ಕೂಡಲೆ ತನಖಿ ನಡಿಸಿ ನ್ಯಾಯಪಡಿಸಬೇಕಾಗಿ ಕೇಳಿಕೊಳ್ಳುವರೆ ಮುಲ್ಕಿಯಿಂದ ಸದರಿ ಸೀಮೆಯ ಆಶ್ರಿತ ಅರಸರಾದ ದುಗ್ಗಣ ಸಾಮಂತ (Political Pensioner) ಇವರೂ ಮಂಗಳೂರು ತಾಲೂಕು ಪ್ರೆಸಿಡೆಂಟ್ ಮ| ರಾ| ರಾಮಕೃಷ್ಣ ಪೂಂಜರು, ತಾಲೂಕು ಬೋರ್ಡ ಮೆಂಬರರಾದ ಮ| ರಾ| ಬೋಳ ಮಾಧವರಾಯರೂ, ಸದರಿ ದೇವಸ್ಥಾನದ ಮೊಕ್ತೇಸರರಾದ ರಾ| ದಾಸುಸೆಟ್ರು ಪಾದೆ ಮಂಜಯ್ಯಸೆಟ್ರು ಮುಂತಾದ ಪ್ರಮುಖ ಗೃಹಸ್ಥರ ಒಂದು ಡೆಪ್ಯುಟೇಶನ ಕಲೆಕ್ಟರರಲ್ಲಿ ಈ ಹೊತ್ತು ಹೋಗುವುದಾಗಿ ವರ್ತಮಾನವಿದೆ. ತಾ. ೧೬-೪-'೨೫.

The Calicut Bank, Ltd.,

ದಿ ಕೆಲಿಕಟ್ ಬೇಂಕ್, ಲಿಮಿಟೆಡ್,

ಹೆಡ್ ಆಫೀಸು—ಕಲ್ಲಿಕೋಟೆ.

ಬ್ರಾಂಚುಗಳು:—ಮುಲ್ಲಸ್‌ಚೇರಿ, ತಲಚೇರಿ, ಕೊಚ್ಚಿ, ಮತ್ತು ಪಾಲ್ಘಾಟು.

ರಿಜಿಸ್ಟರ್ಡ್ ಮತ್ತು ಅಧಿಕಾರಗೊಳಿಸಲ್ಪಟ್ಟ ಮೂಲಧನ ರೂ. 5,00,000—0—0.

ರೂಪಾಯಿ 10ರ 50,000 ಪಾಲುಗಳು.

(30—8—1924)ರ ವರೆಗೆ ಮೌಲ್ಯ ಮೂಲಧನ ರೂಪಾಯಿ 1,81,850—0—0.

ಒಂದು ವರುಷದ ಕಾಯಂ ಠೇವಣಾತಿಗೆ ಬಡ್ಡಿ ದರ ಸೇಕಡಾ ರೂ. 7—8—0.

ಕಳೆದ 4 ವರುಷಗಳಲ್ಲಿ ಪಾಲುಗಾರರಿಗೆ ಸೇಕಡಾ 12ರಂತೆ ಬಡ್ಡಿ ಹಂಚಿದೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಸಿ. ಕೃಷ್ಣನ್, ಬಿ. ಎ. ಬಿ. ಎಲ್.,
ಮೆನೇಜಿಂಗ್ ಡ್ಯಾರೆಕ್ಟರ್.

ಡ್ಯಾರೆಕ್ಟರರಲ್ಲಿ ಒಬ್ಬರು—
ಎಮ್. ನಾರಾಯಣ ಕಾಮತ್, ಬಿ. ಎ.
ಪ್ಲೀಡರ್, ಕುಂದಾಪುರ.

ಮಂಗಳೂರು ತಾಲೂಕು ಬೋರ್ಡಿಗೆ ಮ| ರಾ| ರಾ| ಅತ್ತಾವರ ರಾಮಕೃಷ್ಣ ಪೂಂಜರವರು ಪ್ರೆಸಿಡೆಂಟರಾಗಿ ಆರಿಸಲ್ಪಟ್ಟಿರುವರು. ಈ ತಾಲೂಕು ಬೋರ್ಡಿನಿಂದ—ಮ| ರಾ| ರಾ| ನೆಲ್ಲಿಕಾಯಿ ವೆಂಕಟ್ರಾವ್, ಮಹಮ್ಮದ ಪುತ್ತೂರು ಸಾಹೇಬ ಬಹದ್ದೂರರವರು ಒಟ್ಟಿಗೆ ನಾಲ್ಕು ಜನರು ಡಿಸ್ಟ್ರಿಕ್ಟ ಬೋರ್ಡು ಮೆಂಬರರಾಗಿ ಆರಿಸಲ್ಪಟ್ಟಿರುತ್ತಾರೆ.

ಉಡ್ಪಿ ತಾಲೂಕು ಬೋರ್ಡಿಗೆ ಖಾನ್ ಬಹದ್ದೂರ್ ಹಾಜಿ ಅಬ್ದುಲ್ಲಾ ಹಾಜಿ ಕಾಶಿಮರವರು ಪ್ರೆಸಿಡೆಂಟರಾಗಿ ಚುನಾಯಿಸಲ್ಪಟ್ಟಿರುತ್ತಾರೆ. ಮ| ರಾ| ರಾ| ಎನ್. ರಾಜಗೋಪಾಲಕೃಷ್ಣರಾವ್, ಮ| ರಾ| ರಾ| ವಕೀಲ ಕೊಚ್ಚಿಕಾರ ರಾಮನಾಥ ಪೈ, ಮ| ರಾ| ರಾ| ಸುಬ್ಬಣ್ಣ ಹೆಗ್ಗಡೆ ಮತ್ತು ಮಂಜಪ್ಪ ಸೆರ್ವೆಗಾರರು ಈ ನಾಲ್ಕು ಜನರು ಡಿಸ್ಟ್ರಿಕ್ಟ ಬೋರ್ಡು ಮೆಂಬರರಾಗಿ ಚುನಾಯಿಸಲ್ಪಟ್ಟಿರುವರು. ಈ ಬೋರ್ಡಿಗೆ ವ್ಯಾಸ ಪ್ರೆಸಿಡೆಂಟರಾಗಿ ಮ| ರಾ| ರಾ| ಬಳ್ಳಾಲರು ಚುನಾಯಿಸಲ್ಪಟ್ಟಿರುವರು. ಕುಂದಾಪುರ ತಾಲೂಕು ಬೋರ್ಡಿಗೆ ಪ್ರೆಸಿಡೆಂಟರಾಗಿ ಮ| ರಾ| ರಾ| ವಿ. ನರಸಿಂಹ ಕಾರಾಂತರವರು ಆರಿಸಲ್ಪಟ್ಟಿರುವರು. ಮ| ರಾ| ರಾ| ಕೆ. ಕೃಷ್ಣರಾಯ ಕೊಡಗಿಯರು, ಮ| ರಾ| ರಾ| ಬಿ. ಸೂರಪ್ಪ ಹೆಬ್ಬಾರರವರು, ಮ| ರಾ| ರಾ| ಸಪ್ಳೂರು ಅಂತಯ್ಯ ಶೆಟ್ರು, ಮ| ರಾ| ವಕೀಲ ನಾರಾಯಣ ಶ್ಯಾನುಭಾಗ ಡಿಸ್ಟ್ರಿಕ್ಟ ಬೋರ್ಡು ಮೆಂಬರರಾಗಿ ಆರಿಸಲ್ಪಟ್ಟಿರುವರು. ಮ| ರಾ| ರಾ| ವಕೀಲ ವೆಂಕಪ್ಪಶೆಟ್ರವರನ್ನು ವ್ಯಾಸ ಪ್ರೆಸಿಡೆಂಟರನ್ನಾಗಿ ಆರಿಸಿರುತ್ತಾರೆ.

(೫ನೇ ಪೇಜಿನಿಂದ ಮುಂದುವರಿದುದು.)

ವೈದ್ಯರು ಇವರನ್ನು ಪರೀಕ್ಷಿಸಿ ನೋಡಿದ್ದಲ್ಲಿ ಇವರು ಇನ್ನೂ ಹತ್ತು ವರುಷಗಳ ಕಾಲ ಬದುಕುವಷ್ಟು ಇವರ ರಕ್ತನಾಡಿಗಳು ಚೊಕ್ಕದಾಗಿವೆ ಎಂತ ಹೇಳಿದ್ದರು. ಇವರನ್ನು ತಮ್ಮ ವಾಸ್ತವ್ಯದಿಂದ ಅರಮನೆಗೆ ತಕ್ಕೊಂಡು ಹೋದ್ದರಿಂದ ಅಲ್ಲಿಯ ಆಹಾರದಲ್ಲಿ ಉಂಟಾದ ಭೇದದಿಂದ ತಮ್ಮ ೧೪೯ ವಯಸ್ಸಿನಲ್ಲಿ ಮೃತಪಡಲು ಕಾರಣವಾಯಿತೆಂದು ಹೇಳುತ್ತಾರೆ. ಕಾಫಿ, ಚಾ, ಹೊಗೆಸೊಪ್ಪು, ಮದ್ಯ ಇವುಗಳ ಪರಿಚಿತಿಯು ಸಹ ಇವರಿಗಿದ್ದಿಲ್ಲ. ವಿಶೇಷವಾಗಿ ಇವರು ಮಾಂಸಾಹಾರಿಗಳಾಗಿಯೂ ಇದ್ದಿಲ್ಲ.

• • • • • •

ವೃತ್ತಿ ಸಾಧನಗಳು.

ಟಾಟಾ ಆಯರ್ನ್ ಮತ್ತು ಸ್ಟೀಲ್ ಕಂಪೆನಿಯ ಪರಿಚಿತಿಯು ಹಲವರಿಗಿರಬಹುದು. ಕಬ್ಬಿಣ ಮತ್ತು ಉಕ್ಕು ಈ ಎರಡು ಲೋಹಗಳನ್ನು ಇವುಗಳಿಂದ ಇನ್ನೂ ಅನೇಕ ಸಾಮಗ್ರಿಗಳನ್ನೂ ತಯಾರಿಸುವ ಬಗ್ಗೆ ಈ ಕಂಪೆನಿಯು ಸ್ಥಾಪಿಸಲ್ಪಟ್ಟು ಹಲವು ವರುಷಗಳಾದವು. ಈ ಕಾರಖಾನೆಯಲ್ಲಿ ಬೇಕಾದ ಕೆಲಸಗಳ ಮಾಹಿತಿಯುಳ್ಳವರನ್ನು ವಿದೇಶಗಳಿಂದ ತರಿಸಿ ಕಾರಖಾನೆಯ ಭಾರಿ ಹುದ್ದೆಗಳನ್ನು ವಿದೇಶಸ್ಥರಿಗೆನೇ ಕೊಡಬೇಕಾಗಿ ಬಂದಿದೆ. ಈ ವಿದ್ಯಮಾನವನ್ನು ಆಲೋಚಿಸಿಕೊಂಡು ಇಂಥ ಹುದ್ದೆಗಳು ದೇಶೀಯರಿಗೂ ಸಹ ಕೊಡೋಣಾಗುವಂತೆ ದೇಶೀಯರಿಗೆ ತಕ್ಕ ಶಿಕ್ಷಣವನ್ನು ಕೊಡತಕ್ಕ ಜೇಮುಸೇಡ್‌ಪುರ ಟೆಕ್ನಿಕಲ್ ಇನ್ಸ್ಟಿಟ್ಯುಟ್ ಎಂಬ ಕಲಾಶಾಲೆಯನ್ನು ಪ್ರತ್ಯೇಕವಾಗಿ ಏರ್ಪಡಿಸಿರುತ್ತಾರೆ. ಈ ಶಾಲೆಗೆ ಪ್ರಾಂತಿಕ ಸರಕಾರದಿಂದಲೂ ಇಂಡಿಯಾ ಗವರ್ನಮೆಂಟಿನಿಂದಲೂ ಮೈಸೂರು ಸರಕಾರದಿಂದಲೂ ಗ್ರೇಂಟು ದೊರಕುತ್ತದೆ. ಈ ಕಲಾಶಾಲೆಯಲ್ಲಿ ತರಬೇತಿಯನ್ನು ಹೊಂದಿದವರಿಗೆ ಕೂಡಲೆ ಈ ಕಂಪೆನಿಯ ಕಾರ್ಖಾನೆಯಲ್ಲಿ ಹುದ್ದೆಗಳು ಕೊಡೋಣಾಗುವವು. ಈ ಶಾಲೆಯಲ್ಲಿ ಪ್ರವೇಶವನ್ನು ಅಪೇಕ್ಷಿಸಿ ಮನವಿಯನ್ನು ಮಾಡತಕ್ಕವರಿಗೆ ಪ್ರಾಯವು ೨೨ ವರುಷಗಳಿಗೆ ಮಿಕ್ಕಿರಕೂಡದು, ಶಿಕ್ಷಣವು ಮೂರು ವರುಷಗಳ ಪರ್ಯಂತರವಿದೆ. ಯಾವದಾದರೂ ಯುನಿವರ್ಸಿಟಿಯ ಇಂಟರ ಮಿಡಿಯೇಟ್ ಪರೀಕ್ಷೆ ಪಾಸಾದ ಶಿಕ್ಷಣ ಯೋಗ್ಯತೆಯು ಉಮೇದುವಾರರಲ್ಲಿ ಇರತಕ್ಕದ್ದು. ತಿಂಗಳು ಒಂದಕ್ಕೆ ರೂ. ೬೦ರ ವೇತನವು ವಿದ್ಯಾರ್ಥಿಗಳಿಗೆ ಮೂರು ವರುಷಗಳ ಕಾಲದಲ್ಲಿಯೇ ದೊರಕುವದು. ಈ ತನಕ ಈ ಕಲಾಶಾಲೆಯಲ್ಲಿ ಉತ್ತೀರ್ಣರಾದ ೧೫ ಮಂದಿ ವಿದ್ಯಾರ್ಥಿಗಳೆಲ್ಲರಿಗೂ ಹುದ್ದೆಗಳು ದೊರೆತಿವೆ. ಉಮೇದುವಾರರ ಯೋಗ್ಯತೆಗಳನ್ನು ನಿರ್ಣಯಿಸಿಕೊಂಡು ವಿದ್ಯಾರ್ಥಿಗಳನ್ನು ಕಲಾಶಾಲೆಯ ಶಿಕ್ಷಣದ ಬಗ್ಗೆ ಬಹಳ ಸಮರ್ಥವಾದ ರೀತಿಯಲ್ಲಿ ಚುನಾಯಿಸುತ್ತಾರೆ. ಈ ಶಾಲೆಯಲ್ಲಿ ಸೇರಿಸಿಕೊಳ್ಳೋಣಾಗುವ ವಿದ್ಯಾರ್ಥಿಗಳ ಸಂಖ್ಯೆಯು ಕಾರಖಾನೆಯಲ್ಲಿ ಬೇಕಾಗುವ ಹುದ್ದೆಗಳನ್ನು ಅನುಸರಿಸಿಕೊಂಡಿರುವುದು. ಕಳೆದ ವರುಷದಲ್ಲಿ ೨೪ ಜನ ವಿದ್ಯಾರ್ಥಿಗಳಿಗೆ ಪ್ರವೇಶವು ಕೊಡೋಣಾಗಿರುವುದು. ೨೪೯೭ ಜನ ಉಮೇದುವಾರಗಳು ಶಾಲೆಯಲ್ಲಿ ಪ್ರವೇಶವನ್ನು ಅಪೇಕ್ಷಿಸಿ ಮನವಿಮಾಡಿಕೊಂಡಿದ್ದರು. ಮದ್ರಾಸ ಸಂಸ್ಥಾನದಿಂದ ಬಂದ ೩೧೭ ಮನವಿಗಳಲ್ಲಿ ಮೂರು ಜನರಿಗೆ ಪ್ರವೇಶವು ಕೊಡೋಣಾಗಿದೆ.

• • • • • •

ಶಿಶುಗಳ ಅಕಾಲಮರಣಕ್ಕೂ ವಾಸ್ತವ್ಯಗಳ ಇಕ್ಕಟ್ಟಿಗೂ ಇರುವ ಸಂಬಂಧ.

ಗ್ರಾಮಗಳು ನಾಶವಾಗುತ್ತ ಬಂದು ಪಟ್ಟಣಗಳು ದೊಡ್ಡದಾಗಿ ಬೆಳೆಯುವ ಕಾಲವು ಇದಾಗಿರುವದು. ಹಲವು ಕಾರಣಗಳಿಂದ ಗ್ರಾಮನಿವಾಸಿಗರು ಬಂದು ಪಟ್ಟಣಗಳನ್ನು ಸೇರುತ್ತಿರುವರು. ಇದರಿಂದ ಪಟ್ಟಣಗಳಲ್ಲಿ ವಾಸ್ತವ್ಯಗಳಲ್ಲಿ ಅಸ್ಪದವಿಲ್ಲದೆ ಸಣ್ಣ ಸಣ್ಣ ಕೋಣೆಗಳಲ್ಲಿ ಚಿಕ್ಕ ಮೂಲೆ ಇಂಥವುಗಳಲ್ಲಿ ಜನರು ಬಹಳ ಕಷ್ಟದಿಂದ ಜೀವಿಸುತ್ತಿದ್ದಾರೆ. ವಾಸ್ತವ್ಯಗಳ ಇಕ್ಕಟ್ಟು ಯಾವ್ಯಾವ ಕಡೆಗಳಲ್ಲಿ ವಿಪರೀತವಾಗುತ್ತದೋ ಅಂಥ ಪಟ್ಟಣಗಳಲ್ಲಿ ಶಿಶುಗಳ ಅಕಾಲಮೃತ್ಯುವು ಸಹ ವಿಪರೀತವಾಗಿ ಹೆಚ್ಚುತ್ತಿರುವದು. ಈ ಇಕ್ಕಟ್ಟಿನಲ್ಲಿ ಬೆಳೆಯುವಂಥ ಮಕ್ಕಳು ನಿಸ್ತೇಜರಾಗಿ ಬೆಳೆದು ಬಾಲ್ಯದ ಉತ್ಸಾಹವಿಹೀನರಾಗಿದ್ದು ಯಾವಾಗಲೂ ರೋಗಪೀಡಿತರೇ ಆಗಿರುವವು. ಒಂದೇ ಕೋಣೆ ಇರುವ ಮನೆಗಳಲ್ಲಿ ವಾಸಿಸುವಂಥ ಹುಡುಗರನ್ನೂ ನಾಲ್ಕು ಕೋಣೆಗಳಿರುವ ಮನೆಗಳಲ್ಲಿ ವಾಸಿಸುವಂಥ ಹುಡುಗರ ಬೆಳವಣಿಗೆಯನ್ನೂ ಸರಿಹೋಲಿಸಿ ನೋಡಿದ್ದಲ್ಲಿ ಒಂದು ಕೋಣೆಯ ಮನೆಯಲ್ಲಿ ವಾಸಿಸುವಂಥವರು ತೂಕದಲ್ಲಿ ೧೧ ರಾತ್ಲಗಳ ಪ್ರಕಾರ ಕಡಿಮೆಯಾಗಿರುವರೆಂತಲೂ, ಉದ್ದದಲ್ಲಿ ಮೂರು ಇಂಚುಗಳ ಪ್ರಕಾರ ಗಿಡ್ಡಗೆ ಆಗಿರುವರೆಂತಲೂ ತಿಳಿಯುತ್ತೇವೆ.

ಕಲಕತ್ತೆಯಲ್ಲಿ ನೆರೆದ ಹಿಂದೂ ಮಹಾಸಭೆ.

ಈ ವರ್ಷದ ಮಹಾಸಭೆಯ ಅಧಿವೇಶನದಲ್ಲಿ ಪಾಸಾದ ಠರಾವುಗಳು:—

ಹಿಂದು ಮತಾನುಯಾಯಿಗಳೊಳಗಿಂದ ಲಕ್ಷಾವಧಿ ಜನರು ಪರಧರ್ಮದಲ್ಲಿ ಸೇರುವದನ್ನೂ ನಿಲ್ಲಿಸಲಿಕ್ಕಾಗಿ ಹಿಂದು ಸಂರಕ್ಷಕ ಸಂಘವನ್ನು ಸ್ಥಾಪಿಸಿ ಹಿಂದುಸ್ಥಾನದಲ್ಲೆಲ್ಲ ಬೋಧನ ಕ್ರಮವನ್ನು ನಡಿಸಬೇಕೆಂದು ನಿಶ್ಚಯಿಸಿಯದೆ. ಇದಕ್ಕಾಗಿ ಒಂದು ಲಕ್ಷ ರೂಪಾಯಿಯನ್ನು ಮಹಾಸಭೆಯು ವಿನಿಯೋಗಿಸಿಯದೆ.

ಅಸ್ಪೃಶ್ಯೋದ್ಧಾರಕ್ಕಾಗಿ ಮಹಾ ಸಭೆಯಿಂದ ೪ ಲಕ್ಷ ರೂಪಾಯಿಯನ್ನು ಕೊಡಲ್ಪಟ್ಟಿಯದೆ.

ಹಿಂದುಸ್ಥಾನದಲ್ಲಿ ಸ್ವರಾಜ್ಯಕ್ಕೆ ಅಯೋಗ್ಯವಾಗಿರುವಂಥ ಜಾತಿವಾರ ಪ್ರಾತಿನಿಧ್ಯದ ಸಂಪ್ರದಾಯವನ್ನು ತೆಗೆದುಹಾಕಬೇಕೆಂದು ಠರಾಯಿಸಿಯದೆ.

ಗೋವಧೆಯನ್ನು ಹಿಂದುಸ್ಥಾನದಲ್ಲಿಯ ಎಲ್ಲಾ ಭಾಗಗಳಲ್ಲಿಯೂ ನಿಲ್ಲಿಸಬೇಕೆಂದೂ, ಭಗವದ್ಗೀತೆಯನ್ನು ಎಲ್ಲರಿಗೂ ಸಿಗುವಂತೆ ಮಾಡಬೇಕೆಂದೂ ನಿಶ್ಚಯಿಸೋಣಾಯಿತು.

ಇವುಗಳಲ್ಲದೆ, ಎಲ್ಲ ಮುಖ್ಯ ಊರುಗಳಲ್ಲಿ ಸಂಘಟನೆಯನ್ನು ಸ್ಥಾಪಿಸುವುದು, ಅನಾಥ ಬಾಲ ಸಂರಕ್ಷಕ ಶಾಲೆಯನ್ನು ತೆರೆಯುವುದು ಎಂಬ ಹಲವು ಠರಾವುಗಳು ಪಾಸಾದವು.

ಮಹಾಸಭೆಯು ಅಂತ್ಯವಾಗುವುದರೊಳಗಾಗಿಯೆ ರೂ. ೧೬೫೦೦೦ ಕೂಡಿತು. ಈ ಪೈಕಿ ಪಂ. ರಾಮಕುಮಾರ ಜಜಾ ಎಂಬವರು ಹತ್ತು ಸಾವಿರ ರೂಪಾಯಿಯ ದಾನಮಾಡಿದರು.

ಬರುವ ವರ್ಷದ ಮಹಾಸಭೆಯು ದಿಲ್ಲಿಯಲ್ಲಿ ನೆರವೇರಬೇಕೆಂದು ನಿಶ್ಚಯಿಸಿಯದೆ.

ಇದೇ ತಿಂಗಳು ತಾರೀಕು ೨೦ರಲ್ಲಿ ನಡೆಯುವ ಉಪಚುನಾವಣೆ.

ಶ್ರೀಯುತ ಹೊಸಕೊಪ್ಪ ಕೃಷ್ಣರಾಯರು ದಕ್ಷಿಣ ಕನ್ನಡ ಜಿಲ್ಲಾ ಮತದಾರರಲ್ಲಿ ಈ ರೀತಿ ವಿಜ್ಞಾಪಿಸಿಕೊಳ್ಳುತ್ತಾರೆ.

ಕಳೆದ ತಿಂಗಳ ಅಂತ್ಯಭಾಗದಲ್ಲಿ ಶ್ರೀಮಾನ್ ಎಸ್. ಶ್ರೀನಿವಾಸ ಐಯ್ಯಂಗಾರರವರು ದಕ್ಷಿಣ ಕನ್ನಡ ಜಿಲ್ಲೆಗೆ ದಯಮಾಡಿಸಿದ ಮೇಲೆ ಉಡುಪಿ, ಕಾರ್ಕಳ, ಮತ್ತು ಮಂಗಳೂರು ಪ್ರಮುಖರನ್ನೂ ಕಾಂಗ್ರೆಸ್ಸ್ ಸದಸ್ಯರನ್ನೂ ಕರೆದು ಯೋಚಿಸಿ ನಿರ್ಧರಿಸಿದ ಪ್ರಕಾರ—ಶ್ರೀ. ಅತ್ತಾವರ ಬಾಲಕೃಷ್ಣ ಶೆಟ್ಟರ ಉಮೇದ್ವಾರಿಕೆಯನ್ನು ಹೆಚ್ಚು ಜನಗಳು ಪ್ರೋತ್ಸಾಹಿಸುತ್ತಿರುವುದು ತುಂಬಾ ಶ್ಲಾಘನೀಯವಾದುದೇ ಸರಿ. ಕಾಂಗ್ರೆಸ್ ಸದಸ್ಯರೆಲ್ಲರೂ ಶ್ರೀ ಶೆಟ್ಟರ ಚುನಾವಣೆಯ ಸಾಫಲ್ಯಕ್ಕಾಗಿ ವಿಶೇಷ ಪ್ರಯತ್ನಪಡುತ್ತಿರುವುದು ಇಷ್ಟಕ್ಕೂ ಶ್ಲಾಘನೀಯವಾದುದು. ಶ್ರೀ ಶೆಟ್ಟರು ಈ ಸ್ಥಾನಕ್ಕೆ ಅರ್ಹರೆಂದು ತತ್ರಾಪಿ ಇವರು ಕಾಂಗ್ರೆಸ್ಸಿಗೆ ಸೇರಿ ಕಾಂಗ್ರೆಸ್ಸಿನ ಧ್ಯೇಯವನ್ನನುಸರಿಸಿ ಕೌನ್ಸಿಲಿನಲ್ಲಿ ಸ್ವರಾಜ್ಯ ಪಾರ್ಟಿಗೆ ಸೇರಿ ಕಾರ್ಯವನ್ನು ನಡಿಸುವುದಾಗಿ ಶ್ರೀಮಾನ್ ಅಯ್ಯಂಗಾರರವರಿಗೆ ಭರವಸೆಕೊಟ್ಟಿರುತ್ತಾರೆ. ಎಂಡೌಮೆಂಟ್ ಕಾನೂನಿಗೆ ತಾವು ಸಂಪೂರ್ಣ ವಿರೋಧಿಗಳಾಗಿರುವಿರೆಂತಲೂ ಶ್ರೀ. ಶೆಟ್ಟರು ತಮ್ಮ ಮತವನ್ನೇ ಈ ವಿಷಯದಲ್ಲಿ ಅನುಸರಿಸಬೇಕೆಂತಲೂ ಶ್ರೀಮಾನ್ ಅಯ್ಯಂಗಾರರವರು ಶ್ರೀ. ಶೆಟ್ಟರವರಿಗೆ ಸ್ಪಷ್ಟವಾಗಿ ಹೇಳಿ ಅವರ ಮತವನ್ನು ತಾವು ಅಂಗೀಕರಿಸುವೆವೆಂದು ಶ್ರೀ. ಶೆಟ್ಟರು ಶ್ರೀಮಾನ್ ಅಯ್ಯಂಗಾರರವರಿಗೆ ಭರವಸೆ ಕೊಟ್ಟಿರುತ್ತಾರೆ. ಈ ಎಲ್ಲಾ ಕಾರಣಗಳ ಮೇಲೂ ಶ್ರೀ. ಶೆಟ್ಟರೇ ಈ ಸ್ಥಳಕ್ಕೆ ಅರ್ಹರೆಂದು ದಕ್ಷಿಣ ಕನ್ನಡ ಜಿಲ್ಲೆಯ ಮತದಾರರೆಲ್ಲರೂ ತಿಳಿದು ಶ್ರೀಯುತ ಶೆಟ್ಟರಿಗೆನೇ ತಮ್ಮ ವೋಟನ್ನು ಕೊಟ್ಟು ಆ ಮೂಲಕ ಈ ಜಿಲ್ಲೆಯ ಭವಿಷತ್ಸ್ಥಿತಿಯನ್ನು ಕಾಪಾಡುವರಾಗಿ ನಂಬಿ ಈ ಮೂಲಕ ಮತದಾರರಲ್ಲಿ ವಿಜ್ಞಾಪಿಸಿಕೊಳ್ಳುತ್ತೇನೆ.

ಹೊಸಕೊಪ್ಪ ಕೃಷ್ಣರಾವ್.

೧೧ನೆಯ ಕರ್ನಾಟಕ ಸಾಹಿತ್ಯ ಸಮ್ಮೇಳನ
ಬೆಳಗಾವಿ.

ಪ್ರಕಟಣೆ.

ಬರುವ ಮೇ ತಿಂಗಳಿನ ತಾ ೯, ೧೦, ೧೧ ಈ ದಿವಸಗಳಲ್ಲಿ ಈ ಸಮ್ಮೇಲನವನ್ನು ಬೆಳಗಾವಿಯಲ್ಲಿ ಜರಗಿಸುವದು ಗೊತ್ತಾಗಿದೆ. ಈ ಸಮ್ಮೇಲನಕ್ಕಾಗಿ, ಸ್ವಾಗತ ಸಂಘದ ಸಭಾಸದರ ಚಂದಾ ರೂ. ೫ ಮತ್ತು ಪ್ರತಿನಿಧಿಗಳ ಚಂದಾ ರೂ. ೨ ಪ್ರೇಕ್ಷಕರ ಚಂದಾ ರೂ. ೧ ಇರಬೇಕೆಂದು ಗೊತ್ತಾಗಿದೆ; ಬೆಳಗಾವಿ ಜಿಲ್ಲೆಯ ನಿವಾಸಿಗಳೂ, ಅದಕ್ಕೆ ಹೊಂದಿರುವ ದೇಶೀಯ ಸಂಸ್ಥಾನಗಳವರೂ ಅವಶ್ಯವಾಗಿ ಸ್ವಾಗತ ಸಂಘದ ಸಭಾಸದರಾಗಬೇಕು. ಬೇರೆ ಕಡೆಯ ಕನ್ನಡಿಗರಾದರೂ ಸಭಾಸದರಾಗಬಹುದು. ಕರ್ಣಾಟಕ ಸಭೆ, ಸಂಘ, ವಾಚನಾಲಯ ಮತ್ತು ಸಮಿತಿಗಳು ಸಮ್ಮೇಲನಕ್ಕೆ ಪ್ರತಿನಿಧಿಗಳನ್ನು ಆರಿಸಿ ಕಳುಹಿಸಬಹುದು. ಯಾವ ಊರುಗಳಲ್ಲಿ ಈ ಬಗೆಯ ಸಂಸ್ಥೆಗಳಾವವೂ ಇರುವದಿಲ್ಲವೋ ಅಲ್ಲಿಯವರು ತಾವು ಸಭೆ ಸೇರಿಸಿ ಪ್ರತಿನಿಧಿಗಳನ್ನು ಆರಿಸಬಹುದು. ಪ್ರತಿನಿಧಿಗಳು ತಾವು ಬೆಳಗಾವಿಗೆ ಯಾವ ದಿವಸ ಯಾವ ಬಂಡಿಯಿಂದ ಬರಬಹುದೆಂಬದನ್ನು ಕಾರ್ಯದರ್ಶಿಗಳಿಗೆ ಇದೇ ತಿಂಗಳಿನ ಕೊನೆಯ ದಿವಸದೊಳಗಾಗಿ ತಿಳಿಸಬೇಕು. ಜೈನ, ಲಿಂಗಾಯತ, ಮುಸಲ್ಮಾನ ಮತ್ತು ಬ್ರಾಹ್ಮಣ ಜಾತಿಗಳ ಪ್ರತಿನಿಧಿಗಳಿಗೆ ಇರುವ ಮತ್ತು ಊಟದ ವ್ಯವಸ್ಥೆಯು ಮೇ ತಿಂಗಳ ತಾ. ೮ರಿಂದ ೧೨ರ ವರೆಗೆ ದಿನವೊಂದಕ್ಕೆ ರೂ. ೧ ತೆಗೆದುಕೊಂಡು ಮಾಡಲಾಗುವುದು.

ಸಮ್ಮೇಲನದಲ್ಲಿ ನಿಬಂಧಗಳನ್ನು ಓದಬೇಕೆಂದು ಬಯಸುವವರು ಕರ್ನಾಟಕದ ಇತಿಹಾಸ, ಸಾಹಿತ್ಯ, ಸಂಗೀತ, ಶಿಲ್ಪ, ಚಿತ್ರಕಲೆ, ಹಳ್ಳಿಯ ಹಾಡುಗಳು ಲಾವಣಿಗಳು ಮುಂತಾದ ವಿಷಯಗಳ ಮೇಲೆ ನಿಬಂಧನೆಗಳನ್ನು ಬರೆದು ಇದೇ ತಿಂಗಳ ಕೊನೆಯ ದಿವಸದೊಳಗಾಗಿ ಕಾರ್ಯದರ್ಶಿಗಳ ಕಡೆಗೆ ಕಳುಹಿಸಬೇಕು. ಯಾವ ನಿಬಂಧವಾದರೂ ಓದುವುದಕ್ಕೆ ಅರ್ಧ ಗಂಟೆಗೆ ಮೀರುವಂತಿರಬಾರದು.

ಸಮ್ಮೇಲನದಲ್ಲಿ ಕೈಬರಹದ ಹಳೆಯ ಗ್ರಂಥಗಳು, ತಾಮ್ರ ಪಟಗಳು, ನಾಣ್ಯಗಳು ಮತ್ತು ಪ್ರಚಲಿತ ಮಾಸ ಪತ್ರಿಕೆ, ತ್ರೈಮಾಸಿಕ ಪತ್ರಿಕೆಗಳು, ಹಾಗು ಹೊಸದಾಗಿ ಪ್ರಸಿದ್ಧವಾದ ಗ್ರಂಥಗಳು ಮುಂತಾದ ವಸ್ತುಗಳ ಒಂದು ಪ್ರದರ್ಶನದ ಏರ್ಪಾಟು ಮಾಡುವುದು ನಿಶ್ಚಿತವಾಗಿದೆ. ಈ ಪ್ರದರ್ಶನದಲ್ಲಿ ಇರಿಸಬೇಕಾದ ವಸ್ತುಗಳನ್ನು ಈ ತಿಂಗಳ ಕೊನೆಯ ದಿವಸದೊಳಗೆ ಕಾರ್ಯದರ್ಶಿಗಳ ಕಡೆಗೆ ಕಳುಹಿಸಬೇಕು.

ಕನ್ನಡ ನುಡಿಯ ಅಭಿಮಾನವು ಬೆಳಗಾವಿ ಜಿಲ್ಲೆಯಲ್ಲಿಯೂ ಮತ್ತು ಅದಕ್ಕೆ ತಗಲಿರುವ ಸಂಸ್ಥಾನಗಳಲ್ಲಿಯೂ, ಕುಂದುತ್ತಿರುವದೆಂಬದನ್ನು ಹೊಸದಾಗಿ ಹೇಳಬೇಕಾಗಿಲ್ಲ. ತಾಯ್ನುಡಿಯ ಮೆಚ್ಚುಗೆಯನ್ನು ಹೆಚ್ಚಿಸಬೇಕೆಂತಲೇ ಈ ಸಮ್ಮೇಲನವನ್ನು ಬೆಳಗಾವಿಯಲ್ಲಿ ನೆರವೇರಿಸಬೇಕೆಂದು ನಮ್ಮ ಲವಲವಿಕೆ. ಕನ್ನಡ ನುಡಿಯನ್ನಾಡುವವರೆಲ್ಲರೂ ಜಾತಿ-ಮತ-ಭೇದಗಳನ್ನು ಬದಿಗಿಟ್ಟು ಸಮ್ಮೇಲನವು ಯಶಸ್ವಿಯಾಗುವಂತೆಯೂ, ಕನ್ನಡ ನಾಡಿನ ಹಿರಿಯರಸರಾದ ಕೃಷ್ಣರಾಜ ಒಡೆಯರವರು ಕನ್ನಡ ನುಡಿಯ ಏಳಿಗೆಗಾಗಿ ಏರ್ಪಡಿಸಿದ ಕರ್ನಾಟಕ-ಸಾಹಿತ್ಯ-ಪರಿಷತ್ತಿನ ಉದ್ದೇಶಗಳು ಕೊನೆಗಾಣುವಂತೆಯೂ, ತಮ್ಮ ಕೈಲಾದ ಮಟ್ಟಿಗೆ ನೆರವಾಗಬೇಕೆಂದು ಬೇಡಿಕೊಳ್ಳುತ್ತೇವೆ.

೧೧ನೆ ಸಾಹಿತ್ಯ ಸಮ್ಮೇಲನ ಆಫೀಸ
೧೯೬೩ ಜನವನ ಓಣಿ ಬೆಳಗಾವಿ.
ತಾ ೫—೪—೧೯೨೫.

ಕೃ. ಗೋ. ಗೆಜ್ಜಿ,
ಪಿ. ಆರ್. ಚಿಕ್ಕೋಡಿ,
ಸಹಾಯಕ ಕಾರ್ಯದರ್ಶಿಗಳು.

ಪ್ರಕಟಣೆ.
ದಕ್ಷಿಣ ಕನ್ನಡ ಜಿಲ್ಲಾ ಸ್ವದೇಶಿ ವಸ್ತುಪ್ರದರ್ಶನ,
ಕಾರ್ಕಳ ೧೯೨೫.

೧ ಈ ಪ್ರದರ್ಶನವು ಮೇ ತಿಂಗಳ ಮೊದಲನೇ ವಾರದಲ್ಲಿ ಜರಗಲಿಕ್ಕಿರುವ "ಜಿಲ್ಲಾ ಪರಿಷತ್ತಿ"ನ ಸಮಯದಲ್ಲಿ "ಶ್ರೀನಿವಾಸಾಶ್ರಮ"ದಲ್ಲಿ ನಡೆಯುವುದು.

೨ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತಯಾರಿಸಲ್ಪಡುವ ಎಲ್ಲಾ ತರದ ಪ್ರದರ್ಶನಕ್ಕೆ ಯೋಗ್ಯವಾದ ವಸ್ತುಗಳನ್ನು ಇಡುವ ಏರ್ಪಾಡು ಮಾಡಲ್ಪಡುವುದು.

೩ ಜಿಲ್ಲೆಯ ಪ್ರತಿಯೊಂದು ಗ್ರಾಮದಲ್ಲಿಯೂ ತಯಾರಾಗುವ ಉತ್ತಮವಾದ ಕೈನೂಲನ್ನು, ನೂಲು ತೆಗೆದವರ ಹೆಸರು ಸಮೇತವಾಗಿ ಪ್ರದರ್ಶನಮಾಡುವ ವಿಲೇವಾರಿಮಾಡಲ್ಪಡುವುದು. ನೂಲನ್ನು ತಯಾರಿಸಿದವರು ಕ್ರಮವಾಗಿ ಒಂದೊವರೆ ವಾರು ಉದ್ದದ ೮೦ ಸುತ್ತುಗಳುಳ್ಳ ಏಳೇಳು ಅಡಿಗಳ ಒಂದೊಂದು ಗಳ್ಳಿಯನ್ನು ಮಾಡಿ ತಮ್ಮ ಹೆಸರು, ವಯಸ್ಸು, ಜಾತಿ, ವೃತ್ತಿ, ವ ಗ್ರಾಮಗಳನ್ನು ಬರೆದ ಪ್ರತ್ಯೇಕ ಕಾಗದವನ್ನು ಸಹಾ ಅದರ ಒಟ್ಟಿಗೆ ಇಟ್ಟು ಕಳುಹಿಸತಕ್ಕದ್ದು.

೪ ಇದೇ ಸಮಯದಲ್ಲಿ ನೂಲಿನ ಪಂದ್ಯಾಟವೂ ಇರುವುದು, ಪಂದ್ಯಾಟಕ್ಕೆ ಜಿಲ್ಲೆಯ ಯಾವ ಗ್ರಾಮದವರೂ ಉಮೇದುವಾರರಾಗಿ ಸೇರಬಹುದು. ಉಮೇದುವಾರರು ತಮ್ಮ ಅಭ್ಯಾಸದ ಚರಕವನ್ನೂ, ಕದುರುಗಳನ್ನೂ ತರುವುದು ಉತ್ತಮವಾಗಿದೆ. ನೂಲಿನ ಉದ್ದಳತೆಯು ಹೆಚ್ಚು ಇದ್ದು ತೂಕ ಕಡಿಮೆ ಇರುವ ನೂಲೇ ಉತ್ತಮವೆಂದು ಗ್ರಹಿಸಲ್ಪಡುವುದು. ಹೀಗೆ ಉತ್ತಮವಾದ ನೂಲು ತಯಾರಿಸಿದವರಿಗೆ ಬಹುಮಾನವನ್ನು ಹಂಚುವುದಾಗಿ ನಿಶ್ಚಯಿಸಿರುತ್ತದೆ.

೫ ಪ್ರದರ್ಶನಕ್ಕಾಗಿ ಸಾಮಾನು ತಂದವರು ಉಪಯೋಗಿಸುವ ಸ್ಥಳಕ್ಕೆ ಬಾಡಿಗೆ ವಸೂಲ್ಮಾಡೋಣಾಗಲಿಕ್ಕಿಲ್ಲ.

೬. ಪ್ರದರ್ಶನಕ್ಕಾಗಿ ಸಾಮಾನು ಕಳುಹಿಸುವವರು ಯಾ ತರುವವರು ಎಪ್ರಿಲ್ ತಿಂಗಳ ೨೫ನೇ ತಾರೀಕಿನೊಳಗಾಗಿ ತಮ್ಮ ಹೆಸರನ್ನೂ, ಸಾಮಾನಿನ ವಿಷಯವನ್ನೂ ನಮಗೆ ತಿಳಿಸತಕ್ಕದು.

ಕಾರ್ಕಳ,
೮—೪—೧೯೨೫.

ಕಾರ್ಕಳ ಪದ್ಮನಾಭ ಪುರಾಣಿಕ,
ಕಾರ್ಯದರ್ಶಿ, ಸ್ವದೇಶಿ ವಸ್ತುಪ್ರದರ್ಶನ.

ದಕ್ಷಿಣಕನ್ನಡ ಜಿಲ್ಲಾ ತೃತೀಯ ಪರಿಷತ್ತು ಕಾರ್ಕಳ.
೧೯೨೫.

ಪ್ರಕಟಣಾ ಪತ್ರ ನಂಬ್ರ ೨.

ಶ್ರೀಯುತ ದತ್ತಾತ್ರೇಯ ಬಾಲಕೃಷ್ಣ ಕಾಲೆಲಕರ್. ಅಧ್ಯಕ್ಷರು

೧. ಸ್ಥಳ 'ಶ್ರೀನಿವಾಸ ಆಶ್ರಮ' ಕಾರ್ಕಳ.

೨. ಸಮಯ ೧೯೨೫ನೇ ಮೇ ತಿಂಗಳ ೧—೨ನೇ ತಾರೀಕುಗಳಲ್ಲಿ.

೩. ಟಿಕೇಟುಗಳ ದರ i ಸ್ವಾಗತಮಂಡಳಿ ಸದಸ್ಯರಿಗೆ—ಟಿಕೇಟು ೧ರ ರೂ. ೧೦, ೧ನೇ ತರಗತಿಗೆ, ೨ನೇ ತರಗತಿಗೆ ರೂ. ೫, ೩ನೇ ತರಗತಿಗೆ ರೂ. ೩, ೪ನೇ ತರಗತಿಗೆ ರೂ. ೨. ii. ಪ್ರತಿನಿಧಿಯರಿಗೆ ರೂ. ೧.
iii. ಪ್ರೇಕ್ಷಕರಿಗೆ ೧ನೇ ತರಗತಿಗೆ ರೂ. ೫, ೨ನೇ ತರಗತಿಗೆ ರೂ. ೩ ೩ನೇ ತರಗತಿಗೆ ರೂ. ೧.

೪. ಪ್ರತಿನಿಧಿಯಾಗುವವರು ಭಾರತ ರಾಷ್ಟ್ರೀಯ ಸಭೆಯ ಯಾವದಾದರೂ ಒಂದು ಶಾಖೆಯ ಚಾಲ್ತಿ ವರ್ಷದ ಸದಸ್ಯರಾಗಿದ್ದು ಆಯಾಯ ಶಾಖೆಯ ಕಾರ್ಯದರ್ಶಿಯಿಂದ ಪಡೆದ ತಮ್ಮ ಸದಸ್ಯತನದ ಪತ್ರವನ್ನು ಟಿಕೇಟಿನ ಹಣದೊಡನೆ ಹಾಜರುಪಡಿಸಿದಲ್ಲಿ ಪ್ರತಿನಿಧಿಯ ಟಿಕೇಟು ಕೊಡಲಾಗುವುದು.

ದೇಶಭಕ್ತ ಸೇಟ ಜಮನಾಲಾಲಬಜಾಜ್, ಶಂಕರಲಾಲ್ ಬೇಂಕರ್, ಡಾಕ್ಟರ್ ಯು. ರಾಮರಾವ್, ಗಂಗಾಧರ ರಾವ್ ದೇಶಪಾಂಡೆ ವ ಇತರ ಕೆಲವು ಪ್ರಮುಖ ಮುಖಂಡರು ಈ ಪರಿಷತ್ತಿಗೆ ಬರಲಿಕ್ಕಿರುವರು.

೬. ಪರಿಷತ್ತಿಗೆ ಚುನಾಯಿಸಲ್ಪಟ್ಟ ಎಲ್ಲಾ ಪ್ರತಿನಿಧಿಯರ ಹೆಸರು ವ ವಿಳಾಸದ ಪಟ್ಟಿಯನ್ನು ಆಯಾಯ ಕಾರ್ಯದರ್ಶಿಯರು ಎಪ್ರಿಲು ೨೦ರ ವಳಗೆನೇ ಸ್ವಾಗತ ಮಂಡಳಿಯ ಕಾರ್ಯದರ್ಶಿಯರಿಗೆ ತಲ್ಪುವಂತೆ ಕಳುಹಿಸತಕ್ಕದ್ದು.

೭. ಪರಿಷತ್ತಿಗೆ ಬರುವ ಪ್ರತಿನಿಧಿಯರಿಗೂ ಪ್ರೇಕ್ಷಕರಿಗೂ ಊಟ ಮತ್ತು ಬಿಡಾರದ ವ್ಯವಸ್ಥೆಮಾಡಲ್ಪಡುವದು ಊಟ ೧ಕ್ಕೆ ೪ ಅಣೆ ಕೊಡಬೇಕಾಗುವುದು. ಬಿಡಾರದ ವ ಊಟದ ವ್ಯವಸ್ಥೆ ಬೇಕಾದವರು ಸ್ವಾಗತ ಮಂಡಳ ಕಾರ್ಯದರ್ಶಿಯರಿಗೆ ತಪ್ಪದೆ ಎಪ್ರಿಲು ತಾ. ೨೦ರ ವಳಗೆ ತಿಳಿಸತಕ್ಕದ್ದು.

೮. ಪರಿಷತ್ತಿನ ಸಂಬಂಧವಾಗಿ ಒಂದು ಸ್ವದೇಶಿ ವಸ್ತುಪ್ರದರ್ಶನವು ಅದೇ ಸಮಯದಲ್ಲಿಯೇ ಏರ್ಪಡಿಸಲ್ಪಡುವದು. ಅದರಲ್ಲಿ ದಕ್ಷಿಣಕನ್ನಡಾ ಜಿಲ್ಲೆಯಲ್ಲಿ ತಯಾರಿಸಲ್ಪಡುವ ಎಲ್ಲಾ ತರದ ಪ್ರದರ್ಶನಕ್ಕೆ ಯೋಗ್ಯವಾದ ವಸ್ತುಗಳು ಮುಖ್ಯವಾಗಿ ಕೈನೂಲು ಮತ್ತು ಕೈ ಮಗ್ಗಕ್ಕೆ ಉತ್ತೇಜನ ಕೊಡುವಂಥಾ ಎಲ್ಲಾ ತರದ ಪ್ರದರ್ಶನಗಳು ಕೂಡಾ ಇಡುವರೆ ವಿಲೇವಾರಿ ಮಾಡಲ್ಪಡುವದು. ಹಾಗೆ ಪ್ರದರ್ಶನಕ್ಕೆ ಇಟ್ಟಿಸುವಂಥವರು ಸ್ವಾಗತ ಮಂಡಳದ ಕಾರ್ಯದರ್ಶಿಯರಿಗೆ ಎಪ್ರಿಲು ತಾ. ೨೦ರ ವಳಗೆ ಸೂಚಿಸುವುದಲ್ಲದೆ ತಾ. ೩೦ರ ವಳಗೆ ವಸ್ತುಗಳನ್ನು ಖುದ್ದು ತರತಕ್ಕದ್ದು. ಅವರು ಉಪಯೋಗಿಸುವ ಸ್ಥಳಕ್ಕೆ ಬಾಡಿಗೆ ವಸೂಲು ಮಾಡೋಣಾಗಲಿಕ್ಕಿಲ್ಲ.

೯. ಪರಿಷತ್ತಿನ ಸಮಯದಲ್ಲಿ ಒಂದು ನೂಲಿನ ಪಂದ್ಯಾಟವನ್ನು ಜರಗಿಸಬೇಕಾಗಿ ಇಚ್ಛೈಸಿರುವುದರಿಂದ ಉಮೇದ್ವಾರರು ತಮ್ಮ ಹೆಸರುಗಳನ್ನು ಆಯಾಯ ತಾಲೂಕಿನ ಕಾರ್ಯದರ್ಶಿಗಳ ಮುಖಾಂತರ ಎಪ್ರಿಲು ತಾ. ೨೦ರ ವಳಗೆ ಸ್ವಾಗತ ಮಂಡಲದ ಕಾರ್ಯದರ್ಶಿಯರಿಗೆ ತಿಳಿಸತಕ್ಕದ್ದು.

೧೦. ಪರಿಷತ್ತಿನ ಸಮಯದಲ್ಲಿ ಸ್ವರಾಜ್ಯಪಕ್ಷದ ಸಭೆಯೂ, ಮಹಿಳಾ ಸಭೆಯೂ ಕೂಡುವುದರಿಂದ ಜಿಲ್ಲೆಯ ಎಲ್ಲಾ ಜನರು ವ ಮಹಿಳೆಯರು ಮಹಾ ಸಭೆಗೆ ತಪ್ಪದೆ ಬರಬೇಕಾಗಿ ವಿನಂತಿ.

೧೧. ಪ್ರೇಕ್ಷಕರಾಗಿ ಬರುವ ಮಹಿಳೆಯರು ಟಿಕೇಟು ಪಡೆಯಬೇಕಾಗಿಲ್ಲ.

ಸ್ವಾಗತ ಮಂಡಳ
ದಕ್ಷಿಣಕನ್ನಡ ಜಿಲ್ಲಾ ತೃತೀಯ
ಪರಿಷತ್ತು ತಾ. ೬—೪—೧೯೨೫.

ಕಾರ್ಕಳ ಲಕ್ಷ್ಮಣ ಕುಡ್ವಾ,
ಸ್ವಾಗತಾಧ್ಯಕ್ಷರು.

ಆರೋಗ್ಯ ಚಂದ್ರಿಕೆ.

ಮದ್ರಾಸ್.

ಸಂಪಾದಕರು: ಡಾಕ್ಟರ್ ಯು. ರಾಮರಾವ್, ಎಲ್. ಎಮ್. ಸಿ. ಎಫ್. ಎಮ್. ಯು. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಚಿಕಿತ್ಸೆಯ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವುದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ.

ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ.

ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವುದು.

'ಹೆಲ್ತ್' ಎಂಬ ನಮ್ಮ ಇಂಗ್ಲಿಷ್ ಮಾಸಪತ್ರಿಕೆಯನ್ನೋದಿ ಸಂತೋಷಿಸಿದ ಅನೇಕ ದೊಡ್ಡ ಮನುಷ್ಯರ ಪ್ರೋತ್ಸಾಹದ ಮೇಲೆ ಈ ಕನ್ನಡ ಪತ್ರಿಕೆಯನ್ನು ಹೊರಪಡಿಸಿದೆ.

ಅದರ ಸಂಪುಟ ೨ ಮತ್ತು ೧೦ನೇಯ ನವೆಂಬರ ೧೯೨೪ ಸಂಚಿಕೆಯಲ್ಲಿ ಕಾಣಿರುವ ವಿಷಯಗಳು.

ಮುಖಚಿತ್ರ:—ಪರ್ವತವಾಸಿಯಾದ ಒಬ್ಬ ರೂಪವತಿ.
ಶ್ವಾಸಕ್ರಮ ಅಥವಾ ಪ್ರಾಣಾಯಾಮ.
ಹುಣಿಸೇಹಣ್ಣಿನ ಆಹಾರಗುಣಗಳು ಮತ್ತು ಔಷಧಗುಣಗಳು.
ಕಾಲುನಡೆಯೇ ಉತ್ತಮವಾದ ವ್ಯಾಯಾಮವು.
ಜೇನಿನಲ್ಲಿರುವ ಗುಣಗಳು.
ಹಲ್ಲುಗಳ ರಚನೆ, ಪ್ರಯೋಜನ, ಕೆಲಸ ಮುಂತಾದವು.
ಮದದ್ರಾವಕಗಳಿಂದ ಆರೋಗ್ಯಕ್ಕೆ ಉಂಟಾಗತಕ್ಕ ಹಾನಿ.
ಅಂಗಸಾಧನೆ ಮತ್ತು ಬುದ್ಧಿವ್ಯವಸಾಯ (ವಿದ್ಯಾಭ್ಯಾಸ).
ಗಾಯಗಳು, ಮತ್ತು ಉಳುಕು ಮುಂತಾದವು, ಅವುಗಳ ಚಿಕಿತ್ಸೆ.
ನವನಾಗರಿಕ ಪ್ರಪಂಚಕ್ಕೆ ಸಹಜವಾದ ಮೂರು ಕೆಡುಕುಗಳು.
ಒಬ್ಬ ಉಪವಾಸಿಯ ಅನುಭವ.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವುವು. ಆರೋಗ್ಯಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ ರೂ. ೧—೮—೦; ಬಿಡಿಪತ್ರಿಕೆ ಒಂದಕ್ಕೆ ರೂ. ೦—೨—೦ ಹಿಂದಿನ ಸಂಚಿಕೆಗಳು ಕೂಡ ದೊರಿಯುವವು.

ಚಂದಾದಾರರಾಗುವವರು ವಿ. ಪಿ. ಮೂಲಕವಾಗಿ ತರಿಸಿಕೊಳ್ಳುವುದಕ್ಕಿಂತಲೂ ಹಣವನ್ನು ಮುಂಗಡವಾಗಿ ಕಳುಹಿಸುವುದು ಲಾಭಕರ. ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು 'ಆರೋಗ್ಯ ಚಂದ್ರಿಕೆ'ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು.

ಪತ್ರವ್ಯವಹಾರಕ್ಕೆ: 'ಆರೋಗ್ಯ ಚಂದ್ರಿಕೆ'
೩೨೩ ತಂಬುಚೆಟ್ಟಿ ಬೀದಿ, ಮದ್ರಾಸ್

ತುಳು ಪಾಡ್ದನಗಳು.

ಬೊಬ್ಬರ್ಯ, ಕಲ್ಲುರ್ಟಿ-ಕಲ್ಕುಡ, ದೈಯ್ಯೊಂಗುಳು—ತೋಡಕಿನಾರ್, ಮುಂಡತ್ತಾಯ ಪ್ರತಿ ಒಂದಕ್ಕೆ 2 ಆಣೆ. 11½ ಆಣೆ ಟಪ್ಪಾಲು ಚೀಟು ಕಳೆಹಿಸಿದರೆ 5 ಪುಸ್ತಕಗಳು ಕೂಡಲೇ ಕಳುಹಿಸಲ್ಪಡುವವು.

ವಿಳಾಸ: ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಉಚಿತ! ಬಿಟ್ಟಿ!! ಪುಗಸಟ್ಟೆ!!!

ವೈದ್ಯವಿದ್ಯ
PROPRIETOR RAJVAIDYA NAR
NO PRICE NO POSTAGE

ಎಂಬ ಈ ಪುಸ್ತಕದಲ್ಲಿ ಆಯುರ್ವೇದ,ಶಾಸ್ತ್ರದಲ್ಲಿ ಸ್ತ್ರೀಪುರುಷರು ಆರೋಗ್ಯದೃಢಕಾಯರಾಗಿ ಆರೋಗ್ಯದಿಂದ ಕೂಡಿದ ಸಂತಾನಗಳನ್ನು ಪಡೆದು ಸತಿಪತಿಯರು ಅನ್ಯೋನ್ಯವಾಗಿ ಅನುರಾಗವುಳ್ಳವರಾಗಿ ಸುಖದಿಂದಲೂ ಸಂತೋಷದಿಂದಲೂ ಸಂಸಾರಯಾತ್ರೆಯನ್ನು ಮಾಡಲು ಅತ್ಯಂತ ಉಪಯುಕ್ತವಾದ ವಿಷಯಗಳು ಅಲ್ಲಲ್ಲಿ ಹೇಳಲ್ಪಟ್ಟಿರುವುದನ್ನು ಒಂದಾಗಿ ಕ್ರೋಡೀಕರಿಸಿ ಅಜ್ಞಾನದಿಂದಲೂ ಸಂಕಷ್ಟದಿಂದಲೂ ನರಳುತ್ತಿರುವ ಸಂಸಾರಿಗಳನ್ನುದ್ಧಾರಮಾಡುವ ಸಲುವಾಗಿ ಈ ಪುಸ್ತಕವನ್ನು ಕ್ರಯವೂ ಅಂಚೆ ಹಾಸಲೂ ಇಲ್ಲದೆ ಬೇಡಿದವರಿಗೆ ಸರ್ವತ್ರ ಉಚಿತವಾಗಿ ಕಳುಹಿಸುತ್ತೇವೆ. ಹೆಚ್ಚು ಮಾಹಿತಿಗೆ ಪತ್ರ ಬರೆಯಿರಿ.

ರಾಜವೈದ್ಯ ನಾರಾಯಣಜಿ ಕೇಶವಜಿ,
49, ಬಂದರ್ ಸ್ಟ್ರೀಟ್, ಜಿ. ಟಿ. ಮದ್ರಾಸ್

The Canara Bank, Limited, Magnalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.	1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟು, ಪೂರ್ಣವಾಗಿ ತೆತ್ತ ಮೂಲಧನವು ರೂ. 300,000—0—0
Reserve and other sinking Funds ,, 259,000—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು 259,000—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳೋಣಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1925.

K. Venkat Rao,
Secretary.

ಪರೀಕ್ಷಾಕಾಲ.
ವಿದ್ಯಾರ್ಥಿಗಳೇ ಇತ್ತ ನೋಡಿರಿ.

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ.

"ಸಾರಸ್ವತಾಸವ"ವು ಒಳಗಳ ಮುಖ್ಯಾವಯವಗಳಲ್ಲುಂಟಾಗುವ ವ್ಯತ್ಯಾಸವನ್ನು ಸರಿಪಡಿಸಿ, ಜೀರ್ಣಶಕ್ತಿಯನ್ನು ಹೆಚ್ಚಿಸಿ, ಪಂಕ್ತಿಭ್ರಮಣೆ ತಲೆತಿರುಗು, ನೆತ್ತಿಯ ಕಾವು, ಇಂದ್ರಿಯ ದೌರ್ಬಲ್ಯಗಳನ್ನು ಹೋಗಲಾಡಿಸಿ ಶುದ್ಧರಕ್ತವನ್ನು ವೃದ್ಧಿಪಡಿಸುತ್ತದೆ. ಸೀಸೆ 1ಕ್ಕೆ ಬೆಲೆ 1 ರೂಪಾಯಿ, ಪೋಸ್ಟೇಜು ಬೇರೆ,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ—ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ ಹೊಟ್ಟೆನೋವು ಇಂಫ್ಲುಯಂನ್‌ಜಾ ಪ್ಲೇಗುಜ್ವರ.

ಮಕ್ಕಳ—ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು. ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಶಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳ ವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಬ್ರಾಂಚ್ ಆಫೀಸ್, ಚಿಕ್ಕಪೇಟೆ, ಬೆಂಗಳೂರು ಸಿಟಿ.
ಹೆಡ್ ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಪಾಳ್ಯದ ವೆಂಕಟಾಚಲ ಪಂಡಿತರು,
ಏಜಂಟರು:—
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ,
ಮಂಗಳೂರು ಟವನಿಗೆ ಮಾತ್ರ.

ವಿದ್ಯಾವಾಚಸ್ಪತಿ
ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ

"ಸಂಕ್ಷೇಪಗೀತೆ"

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ್ಳ, ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠ ಸ್ಥಾನವನ್ನು ಹೊಂದಿದೆ ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೦. ಟಪ್ಪಾಲು ಖರ್ಚು ಕೂಡಿ ಆಣೆ ೧೧ನ್ನು ಮನಿಯಾರ್ಡರ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ೨ರಕ್ಕಿಂತ ಜಾಸ್ತಿ ಖರ್ಚು ತಗಲುವುದು. ರಖಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.

ಪುಸ್ತಕ ದೊರೆಯುವ ವಿಳಾಸ:—

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು. ಮತ್ತು ಕೆನರಿಸ್ ಮಿತ್ರಸ್ ಬುಕ್ ಎಂಡ್ ಪ್ರೆಸ್ಸ್ ಡಿಪೋಜಿಟರಿ,
ಮಂಗಳೂರು.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀಕಾಶೀ, ಗಯಾ, ಪ್ರಯಾಗ, ಹರಿದ್ವಾರ ಬದ್ರಿನಾರಾಯಣ ದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರ ಕಡೆಯಿಂದಅನುಭವ ತೆಗೆದು ಪ್ರತಿಯೊಂದು ಸಿದ್ಧಮಾಡಿಕೊಂಡು ಬರೆದಿರುವರು. ೧ನೇದು ಮಂತ್ರಪ್ರಕರಣದಲ್ಲಿ ಮಂತ್ರ ಪಠಣದಿಂದಲೂ, ಮಂತ್ರಪ್ರಯೋಗದಿಂದಲೂ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವು ಇದೆ. ೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳು ಹೊರಡುವಿಕೆ, ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ. ೩ನೇದು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅವನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು. ೪ನೇದು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ? ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಗಳ ಮುಖ್ಯಾ ಸಹ, ಇದರಲ್ಲಿ ಉಂಟು. ಇದು ಪ್ರತಿಯೊಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷಧ ಮಾಡುವ ಕ್ರಮವನು ಚೆನ್ನಾಗಿ ಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಳಾಸವು ತಿಳಿಸಿರುವರು. ೫ನೇದು ಯಂತ್ರ ಪ್ರಕರಣದಲ್ಲಿ ವಶೀಕರಣ ಗ್ರಹಪೀಡಾ ನಿವಾರಣ ಭೂತಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು, ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರದಿರುವರು. ಈ ಗ್ರಂಥವು ಹತ್ತರ ಇದ್ದ ಬಳಿಕ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷಗಳೂ ವೈದ್ಯರೂ ಜೋತಿಷ್ಯರು, ಮಾಂತ್ರಿಕರು ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥ ಗ್ರಂಥವು ಯಾರು ಕಣ್ಣಿಂದ ನೋಡಿರಲಿಕ್ಕಿಲ್ಲ. ಪ್ರತಿಯೊಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆ ತೀರ ಕಡಿಮೆಮಾಡಿ ಇರುವವು. ೨—೮—೦ ಟಪ್ಪಾಲು ಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ ನಾಟಕ ಕಾವ್ಯ, ಕಥೆಗಳು, ಯಕ್ಷಗಾನ, ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ:—

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ

Just Arrived OF **Fresh Consignment**

Best English Cycles.



REDUCTION IN PRICES.

Ranger Cycles Model M. Made in Birmingham.
WITH DUNLOP OR BATES TYRES & TUBES ... @ Rs. 90—0—0
Barton Humber on Advance
WITH DUNLOP OR BATES TYRES & TUBES ... @ „ 100—0—0
Senior Royal with B. S. A. Fitting.
WITH DUNLOP OR BATES TYRES & TUBES ... ...@ Rs. 145—0—0
Royal Saxon with B. S. A. Fitting.
WITH DUNLOP OR BATES TYRES & TUBES ... ... @ Rs. 175—0—0
All the above Cycles include pump and tools.
BROOKES PATEERN 90/2 GERMAN SADDLE ... ...@ „ 9—8—0
„ SADDLE 90/2 „ ... ..@ „ 21—0—0
„ „ B/30 „ ... ...@ „ 26—0—0

For further particulars please write to us or call on us:—

All kinds of Cycle Accessories, Dunlop and German Tyres and Tubes
ARE AVAILABLE AT VERY CHEAP RATES.

Special Discount to Traders. *Easy Terms Arranged.*

APPLY TO:—**The Mangalore Trading Association,**
Wholesale Dealers in Cycles and Cycle Accessories,
Car-Street, MANGALORE

—ಗೋಡೆಗೆ ತಗಲಿಸುವ
ಹೊಸ ನಮೂನೆಯ—
ಟಿಕ್—ಟಾಕ್

ಎಂಬ ಈ ಗಡಿಯಾರಗಳು ಜರ್ಮನೀ ದೇಶದಲ್ಲಿ ತಯಾರಿಸಿದ್ದು. ಇವು ಕಂಠಾರು ಘಂಟೆಯನ್ನು ತೋರಿಸುವವು. ಇವಕ್ಕೆ ಬೀಗ ಕೊಡಬೇಕಾದಿಲ್ಲ. ಇದರಲ್ಲಿ ಕಾಣುತ್ತಿರುವ ಗುಂಡನ್ನು ಮೇಲಕ್ಕೆ ಎಳೆದರೆ ಸಾಕು. ತನ್ನಷ್ಟಕ್ಕೆ ತಾನೇ ಟಿಕ್—ಟಾಕ್ ಎಂಬ ಶಬ್ದವನ್ನು ಮಾಡುತ್ತಾ ಸರಿಯಾದ ಕಾಲವನ್ನು ತೋರಿಸುವದು. ಇದು ನೋಡುವುದಕ್ಕೆ ಬಹು ಲಕ್ಷಣವಾಗಿರುವುದು.

ಕ್ರಯ 1ಕ್ಕೆ ರೂ. 8—0—0

ಪೀಟರ್ ವಾಚ್ ಕಂಪೆನಿ
ಪೋಸ್ಟ್ ಬಾಕ್ಸ್ ನಂ. 27, ಮದ್ರಾಸ್.

ADVERTISE IN

The Business Directory
OF INDIA, BURMA & CEYLON

A Comprehensive Directory of the various Business-men, Exporters and Importers, Firms, Factories, Mills, Manufacturers, Merchants and Industries of the principal Cities, Ports and Towns of India, Burma and Ceylon.

PUBLISHED ANNUALLY
Rates for Advertisements

¼ Page	Rs. 50.
2 in. Single Column	„ 30.
1 in. Single Column	„ 15.
Name in Bold Types	„ 5.

Price per Copy Rs. 10.
PRINTERS & PUBLISHERS.
Business Directory Co.,
Kanara Press Buildings, MADRAS. E.
Telegrams: "KETHAKI" Phone 540

Just arrived! *Look Sharp!*

SCREW TORCH LAMPS
&
Pocket Electric Lamps
AVAILABLE
In different varieties, Mother of pearl lamps. Cycle lamps.
NICKEL PLATED.
"Hammered Brand, with Powerful Bulls-eye lance,
Use with it
Bull's-eye Dry Batteries.
The Mangalore
Trading Association,
Car Street, MANGALORE.

ಸಾರಸ್ವತ.

ಕನ್ನಡ ಮತ್ತು ಕೊಂಕಣಿ ಭಾಷೆಗಳಲ್ಲಿ ಕಳೆದ ವಿಜಯದಶಮೀ ದಿನದಿಂದ ಪ್ರತಿ ದಶಮಿಗೆ ಹೊರಡುವ ಪತ್ರಿಕೆ.

ವಿ. ಎಸ್. ಕಾಮತ್,
ಮೂಲ್ಕಿ ವಾಮನ ಕುಡುವ } ಸಂಪಾದಕರು.

ಮತಸಂಸ್ಥೆ ಮತ್ತು ಸಮಾಜಕ್ಕೆ ಸಂಬಂಧಪಟ್ಟ ಇತರ ಸಂಸ್ಥೆಗಳ ಸುಸಂಘಟನ.
ಸಮಾಜದೊಳಗೆ ಅನ್ಯೋನ್ಯ ಸಾಧನೆ.
ಸ್ತ್ರೀಸಮಾಜಕ್ಕೆ ಉಪಯುಕ್ತವಾದ ವಿಷಯಗಳ ನಿರೂಪಣ.
ಮತಭಾವನೆಗಳ ಉಜ್ಜೀವನ ಇತ್ಯಾದಿ ಉದ್ದೇಶಗಳಿಂದ ಈ ಪತ್ರಿಕೆಯು ಹೊರಡಿಸಲ್ಪಡುವುದು. ಸಾರಸ್ವತ ಸಮಾಜವು ಇದಕ್ಕೆ ಪ್ರೋತ್ಸಾಹವನ್ನೀಯಬೇಕಾಗಿ ಪ್ರಾರ್ಥನೆ.

ಚಂದಾಹಣ ಅಂಚೆವೆಚ್ಚ ಕೂಡಾ ರೂ. ೧—೪—೦. ಪೋಷಕರು ರೂ. ೧೦-೦-೦. ಸಹಾಯಕರು ರೂ. ೫-೦-೦. ಮಾದರಿ ಸಂಚಿಕೆಯನ್ನು ಟಪ್ಪಾಲು ಖರ್ಚಿಗಾಗಿ ಅರ್ಧಾಣೆ ಸ್ಟಾಂಪು ಕಳುಹಿಸುವವರಿಗೆ ಉಚಿತವಾಗಿ ಕಳುಹಿಸುವೆವು.

ಕನ್ನಡ ನಾಡಿನಲ್ಲಿ ಪ್ರತಿ ಕಡೆಯಲ್ಲಿಯೂ
ಬಾತಮೀದಾರರು ಬೇಕು.

ಎಲ್ಲಾ ಪತ್ರವ್ಯವಹಾರಗಳನ್ನು ಕೆಳಗಿನ ವಿಳಾಸಕ್ಕೆ ನಡೆಸಬೇಕು.

ಯು. ನಾರಾಯಣನಾಯ್ಕ, ಕಾರ್ಯದರ್ಶಿ,
ಸಾರಸ್ವತ, ಉಡುಪಿ.

ಆರ್. ಮಾರ್ಟಿನ್ಸನ ಲಪ್ಪಾ ಎಣ್ಣೆ

ಇದರ ಸುವಾಸನೆಯು, (ಪರಿಮಳವು) ಬಹಳ ಅಂದವಾಗಿಯೂ ಇರುವುದಲ್ಲದೆ, ಬಹಳ ಹೊತ್ತಿನ ವರೆಗೂ ಇರುತ್ತದೆ. ಈ ಎಣ್ಣೆಯನು ತಲೆಗೆ ಹಾಕಿಕೊಳ್ಳುವುದರಿಂದ ಕಣ್ಣುಗಳು ತಂಪಾಗಿಯೂ, ಶುಭ್ರವಾಗಿಯೂ, ಆಗವುದಲದೆ, ಮೆದುಳು ಚೆನ್ನಾಗಿ ಬೆಳೆಯುತ್ತದೆ. ಇದನ್ನು ಪ್ರತಿದಿವಸವೂ ಉಪಯೋಗಿಸುವುದರಿಂದ ಕೂದಲುಗಳು ಕಪ್ಪಾಗಿ ಹೊಳೆಯುವಂತೆ ಮಾಡುತ್ತದೆ. ಕೂದಲುಗಳಲ್ಲಿರುವ ಹೇನುಗಳು ಮುಂತಾದವು ನಾಶವಾಗಿ ತಲೆಬುರುಡೆಯನ್ನು ಚೆನ್ನಾಗಿ ಬೆಳೆಯುವಂತೆ ಮಾಡುತ್ತದೆ. ಗಡ್ಡ ಮತ್ತು ಮೀಸೆಗಳು ಸಹ ಬೆಳೆಯುತ್ತವೆ. ಇದನ್ನು ಉಪಯೋಗಿಸಿದ ಜನರು ಇದಕ್ಕಿಂತ ಉತ್ತಮವಾದ ಎಣ್ಣೆಯು ಬೇರೆ ಇಲ್ಲವೆಂದು ಹೇಳಿರುತ್ತಾರೆ.

ಕ್ರಯ ಬಾಟಿ 1ಕ್ಕೆ ರೂ. 1-4-0.

ಆರ್ ಮಾರ್ಟಿನ್ಸನ ಗಿಟೋಡಯಿನ್.

ಗಂಡಸರಿಗೂ ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ, ಅಥವಾ ಹೊಸತಾಗಿದ್ದರೂ ಸರಿ. ಬಿಳುಪು ಹೋಗುವುದು ಉರಿಯುವುದು, ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೆ ಉರಿ ಮೂತ್ರವನ್ನು ನಿಲ್ಲಿಸಿ, ಮೂತ್ರವು ಸಲೀಸಾಗಿ ನಿರ್ಮಲವಾಗುವುದಲ್ಲದೆ ರೋಗದ ಶಕ್ತಿಯನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ.

ಬೆಲೆ ಸೀಸೆ 1ಕ್ಕೆ ರೂ. 2—0—0.

ಆರ್. ಮಾರ್ಟಿನ್ಸನ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮು, ಉಬ್ಬಸ, ಕ್ಷಯ, ಶೀತ, ನೆಗಡಿ, ಗಂಟಲುನೋವು, ಎದೆ ನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನಮಾಡಿ ಪರೀಕ್ಷಿಸಿ ನೋಡಿರಿ. ಅನಂತರ ಬೇರೆ ಯಾವ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮಿಗೂ ರಾಣಿಯಾಗಿಯೂ, ಎದೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತಲೆಯೆತ್ತದಂತೆ ಮಾಡುತ್ತದೆ.

60 ಮಾತ್ರೆಗಳ ಸೀಸೆ 1ಕ್ಕೆ ರೂ. 1—4—0.

ವಿಳಾಸ:—ಆರ್. ಡಿ. ಕಟೆ ಮತ್ತು ಕಂಪೆನಿ,
ನಂಬ್ರ ಬಿ. ಫ್ರಿಯರ್ ರೋಡ್,
ಸಾಂಜ ವರ್ತಮಾನ ಪ್ರೆಸ್,
ಟೋಡಿವಾಲಾ ಬಿಲ್ಡಿಂಗ್ ಎದುರುಗಡೆ, ಫೋರ್ಟ ಮುಂಬಯಿ.

R. D. Kately & Co.
No. B. Frere Road,
Opposit Sanjvertaman Press,
Todivala Building, FORT BOMBAY.

ದಕ್ಷಿಣ ಕನ್ನಡ ಜಿಲ್ಲೆಯ
ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

Edited, Printed & Published by V. S. Kamath at the M. T. A. Sharada Press, Mangalore.

Registered: No. M. 498.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೯. ಮಂಗಳೂರು, ತಾರೀಕು ೨೪ನೇ ಶುಕ್ರವಾರ ಎಪ್ರಿಲ್ ೧೯೨೫. ಸಂಚಿಕೆ ೧೭.

The Canara Banking Corporation, Udipi, Ltd.

Head Office:—	Branch:—
Udipi	Coondapoor
Paidup Capital	1,66,165—9—11
Reserve etc	64,700—0—0

Season Deposits
Carrying Special rate of 7% up to 15th June 1925 only.
Further Particulars on Application.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಉಡುಪಿ, ಲಿಮಿಟೆಡ್.

ಹೆಡ್ ಆಫೀಸು:—ಉಡುಪಿ.	ಶಾಖೆ—ಕುಂದಾಪುರ.
ವಸೂಲಾದ ಮೂಲಧನ	1,66,165—9—11
ರಿಜರ್ವ ವಗೈರೆ ಫಂಡುಗಳು	64,700—0—0

ತಾ. 15—6—1925ರವರೆಗೆ ಮಾತ್ರ ಸಾಲಿಯಾನ್ ಸೇಕಡಾ 7ರ ದರದ ಬಡ್ಡಿಯ ಮೇಲೆ
ಮುಸುಂ ಠೇವಣಾತಿಗಳನ್ನು
ಅಂಗೀಕರಿಸೋಣಾಗುತ್ತದೆ.
ಹೆಚ್ಚಿನ ಮಾಹಿತಿಗೆ ಬರೆಕೊಳ್ಳಿರಿ.

Office of the Corporation, Udipi, 1-3-'25 } **N. Ananda Rao,**
Secretary

Wanted Agents
FOR
Every District in South India

For Pushing Sales of Our Calenders, Xmas and New Year Cards, Blotters, Pictures and Picture Post Cards, at wholesale rates. Deposit of Rs. 100—0—0 Essential.

Apply to:—
The South Indian Advertising Agency,
13, Kilary Road,
BANGALORE CITY.

ಶುದ್ಧ ರೋಮದ ಧಾವಳಿಗಳು.

1 ಮೊಳ ಉದ್ದ 1¼ ಮೊಳ ಅಗಲ ರೂ. 1¼ರಿಂದ 2 ವರೆಗೆ, 5 ಮೊಳ ಉದ್ದ 1¼ ಮೊಳ ಅಗಲ ರೂ. 1¼ರಿಂದ 5 ವರೆಗೆ, 6 ಮೊಳ ಉದ್ದ 1¼ ಮೊಳ ಅಗಲ ರೂ. 2¼ರಿಂದ 6 ವರೆಗೆ, 8 ಮೊಳ ಉದ್ದ 2 ಮೊಳ ಅಗಲ ರೂ. 3½ರಿಂದ 10 ವರೆಗೆ, 12 ಮೊಳ ಉದ್ದ 2¼ ಮೊಳ ಅಗಲ ರೂ. 6ರಿಂದ 12 ವರೆಗೆ, 16 ಮೊಳ ಉದ್ದ 2¼ ಮೊಳ ಅಗಲ ರೂ. 9 ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಜಪ್ಪರ್ ರೇಷ್ಮೆ ಮಡಿಗಳು, ಪಾಮಡಿಗಳು, ಕಾಶೀ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, [illegible], ಶಾಳಿ, ಪನ್ನೀರ್‌ಬಾಣಿ, ಹಿತ್ತಾಳೆಯ ಅಚ್ಚಿನ ಸಾಮಾನುಗಳು, ಫೋಟೋ ಚೌಕಟ್ಟುಗಳು ಮತ್ತು ಇನ್ನೂ ಅನೇಕ ಸಾಮಾನುಗಳು ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುವು. ಕ್ಯಾಟಲಾಗ್ ಉಚಿತ.

ವಿಳಾಸ—
ಶಿರೋಮಣಿ ಯು. ನಾರಾಯಣಾಚಾರ್ಯ
ಮತ್ತು ಕಂಪೆನಿ, [illegible]

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ.

450 ಪುಟಗಳು ಎಮ್. ಗಣಪತಿರಾವ್ ಐಗಳ್ ಇವರಿಂದ ರಚಿತವಾದದ್ದು. ಕ್ರಯ ರೂ. 2-4-0

ಮಾರಾಟಕ್ಕೆ ಸಿದ್ಧವಾಗಿವೆ **— ತುಳು ಪಾಡ್ದನಗಳು —** ಮಾರಾಟಕ್ಕೆ ಸಿದ್ಧವಾಗಿವೆ.

ದೈಯ್ಯೊಂಗುಳು, ಕಲ್ಲುರ್ಟಿ—ಕಲ್ಕುಡ, ಕಣಂದೂರು ದೈಯ್ಯೊಂಗುಳು, ಮುಂಡತ್ತಾಯ, ಬೊಬ್ಬರ್ಯ.

ಸುಲಭ ದರಗಳು **— ಶಾಲಾ ಪುಸ್ತಕಗಳು —** ರಖಂ ಕೊಂಡುಕೊಳ್ಳುವವರಿಗೆ ಯೋಗ್ಯ ಡಿಸ್ಕೌಂಟ್.

ಅಜ್ಜಿ ಕಥೆಗಳು:—ಮೂರು ಕರಡಿಗಳು; ಜೇನುಸಕ್ಕು ಕಾಗೆ ಬಡವಾಯಿತು; ಅರ್ಗಣೆ ಮುದ್ದೆ; ಇಲಿಗಳ ಥಕ್ಕ ಥೈ; ಅಂಗಳ ಮುಗ್ಗು; ಸೀಡಿ ಮೂಳೆ ಒಡೆಗಲಿಲ್ಲ; ಗುಡುಗುಡು ಗುಮ್ಮಟ ದೇವರು; ಮಡಿವಾಳ ಮಾಚಯ್ಯ ಒಕ್ಕನ ಓಟ; ಹೊಸ ಕನ್ನಡ ಪುಸ್ತಕ ಭಾಗ ೧; ಹೊಸ ಕನ್ನಡ ಪುಸ್ತಕ ಭಾಗ ೨; ಕನ್ನಡ ಪದ್ಯಗಳು; ಮಗ್ಗಿ ಪುಸ್ತಕ; ಅಜಿತಕುಮಾರ; ಪದ್ಯ ರತ್ನಾವಳಿ, ಎಕ್ಸರ್‌ಸೈಜ್ ಮತ್ತು ನೋಟು ಪುಸ್ತಕಗಳು, ಕಾಪಿ ಪುಸ್ತಕಗಳು, ಡ್ರಾಯಿಂಗ್ ಪುಸ್ತಕಗಳು

ಇತರ ಪುಸ್ತಕಗಳು:—ಸಂಕ್ಷೇಪಗೀತೆ, ಕೇತುಭಂಗ, ಹಿಂದೂ ವ್ರತವಿವೇಕ, ಚಂದ್ರಗುಪ್ತ ಚಕ್ರವರ್ತಿ, ಶ್ರೀ ಕೃಷ್ಣಸಂಧಾನ ಪದ್ಯಪಾಠಗಳು, ಹರಿಕಥಾ ಮೃತಸಾರ ಹರಿನಾಮಸಂಕೀರ್ತನೆ ಸುಧಾಮೃತ ಪದ್ಯಗಳು. ಬಂಕಿಪೆಟ್ಟಿಗೆ ತಯಾರಿಸುವ ವಿಧಾನ, ಸಾಬೂನು ತಯಾರಿಸುವ ವಿಧಾನ, ಸ್ವರಾಜ್ಯ ಭಕ್ತೋಲ್ಲಾಸ, ಚತಕಗೀತೆ, ಕೊಂಕಣಿ ಭಾಷೆ ಮುಳ್ಳಿ, ಚಂದ್ರಹಾಸ ನಾಟಕ, ಪ್ರಹ್ಲಾದ ಚರಿತ್ರೆ ನಾಟಕ, ಕನ್ನಡ ಮೃಚ್ಛಕಟಿಕ ನಾಟಕ, ಚಂದ್ರಹಾಸಾಭ್ಯುದಯ ನಾಟಕ, ಕೋವಿಲನ್ ಚರಿತ್ರೆ ನಾಟಕ, ಮಾದರಿ ಉಪನ್ಯಾಸ ಭಾಗ ೧, ೨, ಮತ್ತು ೩.

AMRUTANJAN
Best Indian Pain Balm
Amrutanjan
BOMBAY

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು.

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಸಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ, ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 2 ಆಣೆ.

ಅಮೃತಾಂಜನ ಡಿಪೊ,

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

109 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

— ರಥೋತ್ಸವ, ವಿವಾಹ ಉಪನಯನಗಳ ಸಮಯ —
ಸರ್ವರಿಗೂ ಉಡಿಗೆ ತೊಡಿಗೆಗಳು ಬೇಕಾಗುವ ಸಂದರ್ಭ.

ಯಾರು, ಯಾವುದನ್ನು ಎಲ್ಲಿ ಪಡೆಯಬೇಕೆಂಬ ಶಂಕೆಯಿಂದ ವಿಳಂಬ ಮಾಡಬೇಡಿರಿ. ಉಡಿಗೆತೊಡಿಗೆಗಳನ್ನು ಚುನಾಯಿಸಿ ನಿಮಗೆ ಬೇಕಾದ ಯಥಾರ್ಥ ಮಾಹಿತಿಯನ್ನು ಕಳೆದ ಹತ್ತುವರ್ಷಗಳಿಂದ ಪಡೆದು ನಮ್ಮಲ್ಲಿಯ ವ್ಯಾಪಾರವು ಗಿರಾಕಿಗಳಿಗೆ ಸರ್ವ ತೃಪ್ತಿಯಂತೆಯೂ ರಾಹತರವಾಗಿ ಪರಿಣಮಿಸುವಂತೆ ನಮ್ಮ ಜವಳಿ ಸಂಗ್ರಹವನ್ನು ಮಾಡಿರುತ್ತೇವೆ.

ಗುಪ್ತೇಕಾರ್ ಬ್ರದರ್ಸ್, ರಥಬೀದಿ, ಮಂಗಳೂರು.

ಹೆಡ್ ಆಫೀಸು:—ರಥಬೀದಿ—(ಮೊದಲು ಸುಜೀರ ನಾಗಪ್ಪನಾಯಕ್, ಎಂಡ್ ಕೊ., ಇದ್ದಲ್ಲಿ; ಅಜಿಜುದ್ದೀನ್ ರಸ್ತೆಗೆ ತಿರುಗುವಲ್ಲಿ) ಮಂಗಳೂರು.

ಬ್ರೆಂಚ್ ಆಫೀಸು:—ರಥಬೀದಿ—(ಹಳೇ ತಾಲೂಕು ಕಚೇರಿಯ ವಠಾರಕ್ಕೆ ಸಮೀಪವಿರುವ ಮಳಿಗೆ) ಮಂಗಳೂರು.

ಈ ದೇಶದ ಪ್ರಖ್ಯಾತಪಟ್ಟ ನೇಯಿಗೆಯ ಕೇಂದ್ರಸ್ಥಳಗಳಾದ—ಬನಾರಸ್, ಪೂನಾ, ಅಹಮ್ಮದಾಬಾದ್, ಸುರತ್, ಬೆಂಗಳೂರು, ಧರ್ಮಾವರಮ್, ಕಂಜೀವರಮ್, ಕೊಯಮುತ್ತೂರು, ಮಧುರೆ, ತಂಜಾವೂರು, ಶಂಖಕೋಣಂ, ಆರ್ಣಿ, ಹಾಡಿಪೇಟೆ, ಹುಬ್ಬಳ್ಳಿ, ಆರಣಿ, ಗದಗ, ಮದ್ರಾಸು ಈ ಪ್ರಾಂತ್ಯಗಳಲ್ಲಿ ತಯ್ಯಾರಾದ

ಜರಿಸೀರೆಗಳು, ದುಪ್ಪಟಾ, ಜರಿಕಾ, ಪೇಟ್ಟಿ, ರೇಷ್ಮೆ ಸೀರೆಗಳು, ಅರಳಿಪೇಟೆ ಸೀರೆಗಳು, ಜಾರ್ಜೆಟ್ ರೇಷ್ಮೆ ಸೀರೆಗಳು, [illegible] ಸೀರೆಗಳು, ರೇಷ್ಮೆ ಮಡಿಗಳು, ನಿತ್ಯ ಉಪಯೋಗದ ಸೀರೆಗಳು ಖಾದಿ, [illegible]
ಕೈಮಗ್ಗಗಳಲ್ಲಿ ತಯಾರಿಸಿದ ನೂಲಿನಿಂದ ಮಾಡಿದ—

ಖದ್ದರ್ ಶರ್ಟಿಂಗ್, ಖದ್ದರ್ ಕೋಟಿಂಗ್, ಖದ್ದರ್ ಟೋಪಿ, ಖದ್ದರ್ ಪೇಟ್ಟಿ, ಅಂಗವಸ್ತ್ರ, ಇತ್ಯಾದಿ—
ಮುಸಲ್ಮಾನರಿಗೆ ಬೇಕಾದ ನಮೂನೆಯ ಲುಂಗಿ [illegible]—

ಎಲ್ಲ ಸಂಗ್ರಹವನ್ನು ನಮ್ಮ [illegible] ಕೈಯಿಂದ [illegible]

ಸೂಚನೆ:—[illegible]

Firestone
TYRES.
(PNEUMATIC & SOLID)

MOST MILES PER RUPEE.

Owing to the increased demand for Firestone Tyres and to give promt service to Motorists and Service Owners of Kanara & Mysore a Service & Distribution Depot is opened at Mangalore.

Fresh Supplies of Solid and Pneumatic Tyres and Tubes could be given from stock.

An Hydraulic Press for fitting solid tyres will shortly be erected.

For particulars apply to:-

FIRESTONE TYRE DISTRIBUTORS,
(KANARA & MYSORE),
Telegrams:—"FIRESTONE"
Maidan Road, MANGALORE.

ಕೋಕಶಾಸ್ತ್ರವು.

ಈ ಪುಸ್ತಕದಲ್ಲಿ 72 ಅಧ್ಯಾಯಗಳೂ ಮತ್ತು 112 ಮನೋಹರವಾದ ಚಿತ್ರಗಳೂ ಇವೆ. ಈ ಪುಸ್ತಕದ ಸಾರಾಂಶ:

ಹೆಂಗಸರಲ್ಲಿ ನಾಲ್ಕು ಜಾತಿ: (1) ಪದ್ಮಿನಿ, (2) ಚಿತ್ರಿಣಿ, (3) ಶಂಖಿನಿ ಮತ್ತು (4) ಹಸ್ತಿನಿ ಇವರ ನಕ್ಷೆಗಳನ್ನು ಕೊಟ್ಟು ವಿವರಿಸಲ್ಪಟ್ಟಿದೆ. ಹಾಗೆಯೇ ನಾಲ್ಕು ಜಾತಿಯ ಮನುಷ್ಯರು. ಹೆಂಗಸರನ್ನು ಮತ್ತು ಗಂಡಸರನ್ನು ನೋಡಿ ಯಾವ ಜಾತಿ ಎಂದು ಕಂಡುಹಿಡಿಯುವ ಕ್ರಮ. ಚಂದ್ರನ ಮತ್ತು ನಕ್ಷತ್ರಗಳ ಸ್ಥಾನಗಳನ್ನು ನೋಡಿ ಶುಭಕಾಲವನ್ನು ಕಂಡುಹಿಡಿಯುವ ಕ್ರಮ. ರಜಸ್ವಲೆಯಾಗುವಿಕೆ. ಇದರ ವಿವರ. ಇದರ ರೋಗಗಳು, ಈ ರೋಗಗಳ ನಿವಾರಣೆ ಕ್ರಮ. ಬಸುರಾಗುವಿಕೆ, ನವಮಾಸದ ಗರ್ಭದ ಬೆಳವಣಿಗೆ (ಇದರ ನಕ್ಷೆಕೊಟ್ಟಿಲ್ಪಟ್ಟಿದೆ). ಬಸುರಾದ ಕಾಲದಲ್ಲಿ ಹೆಂಗಸರು ನಡೆಯುವ ಕ್ರಮ. ನೋವು ಮತ್ತು ಕಷ್ಟವಿಲ್ಲದೆ ಪ್ರಸವ ಆಗುವ ಕ್ರಮ. ಕಳೆದುಕೊಂಡ ಶಕ್ತಿಯನ್ನು ಹಿಂತಿರುಗಿ ಪಡೆಯುವ ಕ್ರಮ. ತಮ್ಮ ಶಕ್ತ್ಯಾನುಸಾರ ಮಿತ ಸಂತತಿಯನ್ನು ಮಾಡುವ ಕ್ರಮ. ತಮ್ಮ ಇಚ್ಛಾನುಸಾರ ಗಂಡು ಅಥವಾ ಹೆಣ್ಣು ಕೂಸನ್ನು ಪಡೆಯುವ ಕ್ರಮ. ಗರ್ಭಾವಸ್ಥೆಯಲ್ಲಿ ಕೂಸಿನ ಲಿಂಗವನ್ನು ಕಂಡುಹಿಡಿಯುವ ಕ್ರಮ, ಹೆಂಗಸರ ಸೌಂದರ್ಯವನ್ನು ಕಾಪಾಡುವುದು ಹೇಗೆ. ಗೊಡ್ಡುತನವನ್ನು ಹೋಗಲಾಡಿಸುವ ಕ್ರಮ. ಮತ್ತು ಅನೇಕ ಇಲ್ಲಿ ವಿವರಿಸಲಿಕ್ಕೆ ಆಗದ ಸಂಗತಿಗಳು ಸಂಕ್ಷೇಪವಾಗಿ ವಿವರಿಸಲ್ಪಟ್ಟಿವೆ. ಬಹಳ ಪ್ರಾಚೀನಕಾಲದ ರೋಗನಿವಾರಣೆಯ ಔಷದಗಳು ಕೊಡಲ್ಪಟ್ಟಿದೆ.

ಪುಸ್ತಕದ ಕ್ರಯ ರೂ. 4—0—0.

ಇಂಟರ್‌ನೇಶನಲ್ ಪಬ್ಲಿಷಿಂಗ್ ಕಂಪೆನಿ,
ಇಂಟರ್‌ನೇಶನಲ್ ಬಿಲ್ಡಿಂಗ್,
ಲುಧಿಯಾನಾ, (ಪಂಜಾಬ),
International Publishing Company,
International Building,
Ludhiyana, PUNJAB.

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ
ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ
ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ಯಾವಂತರೂ ತಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ಗಾವರ್ಗಿಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನ್ನು ಕುರಿತ ಲೆಕ್ಕಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಅಧಿಕಾರಿಗಳೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪೋಷಕರಿಗೆ	ರೂ. [illegible]—0—0.
ಇತರರಿಗೆ, ಪರಸ್ಥಳಕ್ಕೆ, ಪೋಸ್ಟೇಜು ಸೇರಿ	„ 2-8-0.
„ ಸ್ಥಳೀಕರಿಗೆ ...	„ 1-8-0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪತ್ರಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿಯಬಹುದು. ಎಡಿಟರ್,

ಬಿ. ಹನುಮಂತಯ್ಯಗೌಡ,
ಅರ್ಥಸಾಧಕ ಪತ್ರಿಕೆ,
ಅರಳೇಪೇಟೆ, ಬೆಂಗಳೂರು ಸಿಟಿ.

WANTED.

Wanted from the 1st of May next (1) experienced printer and (2) experienced compositor for job work. Apply stating exeperience & salary required C/o Swadeshabimani.

FOR SALE.

One new **Harley Davidson sports Model** Motor Cycle used only for 250 miles in perfect running order complete with equipments. Price Rs. 1000 or near offer.

For further particulars,
Apply to:—
The Mangalore Trading Association,
Car-Street Mangalore.

ಪೊಳಲಿ ಚೆಂಡು ಉತ್ಸವದ ಕಾಲದಲ್ಲಿ ನಡಿಸಿದ
— ಪ್ರದರ್ಶನ. —

ಇದೇ ಎಪ್ರಿಲ್ ತಿಂಗಳ ತಾ. ೯ರಲ್ಲಿ ಪೊಳಲಿಯಲ್ಲಿ ಕಡೇಚೆಂಡು ನಡೆಯಿತು. ಇದಕ್ಕೆ ಸುಮಾರು ೭ ಸಾವಿರ ಜನರು ಕೂಡಿದ್ದರು. ಮರುದಿನ ೧೦ನೇ ತಾರೀಕಿನಲ್ಲಿ ಶ್ರೀ ರಾಜರಾಜೇಶ್ವರಿ ದೇವಿಯರ ಮಹೋತ್ಸವವು ಬಹಳ ಸಮಾರಂಭದಿಂದ ನಡೆಯಿತು. ಇದಕ್ಕೆ ಸುಮಾರು ೬ ಸಾವಿರ ಜನರು ಕೂಡಿದ್ದರು. ಈ ದಿವಸ ಸಮೀಪದಲ್ಲಿ ಕೋಳಿಕಟ್ಟೆಯ ತಮಾಶೆಯು ನಡೆಯುತ್ತಿತ್ತು. ಇವೆರಡೂ ದಿನಗಳಲ್ಲಿ—ಮೆಸ್ಟನ್ ಎಂಬ ಕಬ್ಬಿಣದ ನೇಗಲುಗಳೂ ಮತ್ತು ಆ ನೇಗಲುಗಳಿಂದ ಆಗುವ ಉತ್ಕೃಷ್ಟವಾದ ಕೆಲಸಗಳೂ ಪ್ರದರ್ಶಿಸಲ್ಪಟ್ಟವು. ಇದಲ್ಲದೆ, ಕಾಳಿಂಜ, ದೈಂಚಾ ಎಂಬ ಹಸಿ ಎಲೆ ಗೊಬ್ಬರದ ಬೀಜಗಳೂ, ಹರಳ ಕಲ್ಲ ವ ನೆಡಾನ್ ಭತ್ತಗಳ ಸೆಂಪ್ಲಗಳೂ ಜನರಿಗೆ ತೋರಿಸಲ್ಪಟ್ಟು ಅವುಗಳ ಉಪಯೋಗಗಳೂ ವಿವರಿಸಲ್ಪಟ್ಟವು. ಇವುಗಳು ಯಾವ ಸ್ಥಿತಿಗತಿಗಳಿಗೆ ಯೋಗ್ಯವೆಂಬುದೂ ಜನರಿಗೆ ತಿಳಿಸಲಾಯಿತು. ತೆಂಗಿನ ಮರದ ತಲೆಗಳನ್ನು ಕೊರೆಯುವ ದುಂಬಿ ಹುಳಗಳನ್ನು ತಿವಿದು ಕೊಲ್ಲುವದಕ್ಕೆ ಉಪಯೋಗಿಸಲ್ಪಡುವ ಕಬ್ಬಿಣದ ಸರಳನ್ನೂ ಅದರ ಪ್ರಯೋಗವನ್ನೂ ಜನರಿಗೆ ಪ್ರದರ್ಶಿಸಲ್ಪಟ್ಟಿತು. ಮೆಸ್ಟನ್ ನೇಗಲಿನ ವಿಷಯ ಜನರು ಎತ್ತಿದ ಆಕ್ಷೇಪಗಳನ್ನು ಖಂಡಿಸಲಾಯಿತು, ಆದರೆ ಅದರ ಕ್ರಯವು ಹೆಚ್ಚು ಎಂಬ ಆಕ್ಷೇಪವನ್ನು ಖಂಡಿಸುವುದಕ್ಕೆ ಮಾಡಿದ ಪ್ರಯತ್ನಗಳು ಅಷ್ಟು ಸಾರ್ಥಕವಾಗಲಿಲ್ಲ. ಒಂದು ನೇಗಲು ಮಾರಲ್ಪಟ್ಟು ಇನ್ನೊಂದಕ್ಕೆ ಓರ್ಡರ ರಿಜಿಸ್ಟರ್ ಮಾಡಲ್ಪಟ್ಟಿತು.

ಮಂಗಳೂರು, }
11-4-'25. } ಎಗ್ರಿಕಲ್ಚರಲ್ ಡಿಮೊನ್‌ಸ್ಟ್ರೇಟರ್,

ವಿದೇಶ ವರ್ತಮಾನ.

ಸೋಫಿಯದಲ್ಲಿ ಅರಸರಾದ ಬೋರಿಸ್‌ರವರು ದೇವರಾಧನೆ ಬಗ್ಗೆ ಸ್ವೆಟಾನಡೆಲಿಯಾ ದೇವಾಲಯದಲ್ಲಿ ಬರುವರೆಂತ ನೆನಸಿಕೊಂಡು ಅರಸರ ಬಗ್ಗೆ ತಯ್ಯಾರಿಸಿಟ್ಟ ಪೀಠದ ಹತ್ತಿರವೇ ಇವರನ್ನು ಸಿಡಿಮದ್ದಿನಿಂದ ಹಾರಿಸಿಬಿಟ್ಟು ಕೊಂದುಬಿಡುವ ಒಳಸಂಚನ್ನು ನಡಿಸಿದ ಕೊಮ್ಯುನಿಷ್ಟ ಮುಖಂಡ ಆದ ಮಿಂಕೋಫ್ ಎಂಬವರು ತಲೆತಪ್ಪಿಸಿಕೊಂಡು ಹೋಗುವ ಪ್ರಯತ್ನದಲ್ಲಿ ಪೋಲೀಸಿನವರ ಕೈಯಲ್ಲಿ ಮಡಿದುಹೋಗಿರುವರು.

ಟರ್ಕಿಯ ಕರ್ಡಿಸ್ತಾನ್ ದಂಗೆಯಲ್ಲಿ ಅಪರಾಧಿಗಳೆಂದು ಕಂಡುಬಂದು ೫೩ ಜನ ದಂಗೆಗಾರರನ್ನು ಗಲ್ಲಿಕ್ಕೆ ಹಾಕಿದರು.

ಒಳದೇಶ ವರ್ತಮಾನ.

ಮಹಾತ್ಮಾ ಗಾಂಧಿಗಳು:—ಮಲೇರಿಯಾ ಜ್ವರದಿಂದ ತಾನು ಸೌಖ್ಯಹೊಂದಿರುವೆನೆಂತಲೂ ಮೇ ತಾ. ೧ಕ್ಕೆ ಕಲ್ಕತ್ತೆಗೆ ಹೋಗುವೆನೆಂತಲೂ ಗಾಂಧಿಜಿಯವರು ತಂತಿ ಮೂಲಕ ಕಲ್ಕತ್ತೆಗೆ ತಿಳಿಸಿರುವರು.

ನವಸಾರಿ ಮತ್ತು ಬ್ರೋಚ್ ಇವುಗಳನ್ನು ಸಂದರ್ಶಿಸಿಕೊಂಡು ಗಾಂಧಿಜಿಯವರು ಅಹಮ್ಮದಾಬಾದಿಗೆ ಬಂದು ತಲ್ಪಿರುತ್ತಾರೆ. ಈ ತಿಂಗಳ ತಾ. ೧೫ರಿಂದ ಮಹಾತ್ಮಾಜಿಯವರಿಗೆ ಜ್ವರವಿಲ್ಲ. ತಾ. ೨೪ಕ್ಕೆ ಮುಂಬಯಿಗೆ ಹೋಗಿ ತಾ. ೨೯ರಲ್ಲಿ ಮುಂಬಯಿಯಿಂದ ಕಲ್ಕತ್ತೆಗೆ ತೆರಳುವರು.

ಬಾವ್ಲಾ ಖೂನಿ ಮೊಕದ್ದಮೆಯನ್ನು ಮುಂಬಯಿ ಹೈಕೋರ್ಟಿನಿಂದ ಬೇರೆ ಯಾವ ಹೈಕೋರ್ಟಿಗೆ ಟ್ರಾನ್ಸ್‌ಫರ್ ಮಾಡಬೇಕೆಂಬ ಮನವಿಯನ್ನು ವ್ಯಾಸರಾಯಿಗಳವರು ತೆಗೆದುಹಾಕಿರುವರು.

ಮೈಸೂರು ದಿವಾನರಾಗಿರುವ ಶ್ರೀ. ಎ. ಆರ್. ಬೆನರ್ಜಿಯವರು ಪಾಟ್ನಾ ರೈಲ್ವೆ ಸ್ಟೇಶನಿನಲ್ಲಿ ತನಗೆ ಅಪಮಾನಕರ ಮಾತುಗಳನ್ನಾಡಿದ [illegible] ಇಬ್ಬರು ಯುರೋಪಿಯನರಿಗೆ ರೂ. ೧೦,೦೦೦, ಮಾನನಷ್ಟದ ದಾವೆಯ ನೋಟೀಸನ್ನು ಕೊಟ್ಟಿರುವರಾಗಿ ತಿಳಿದುಬರುತ್ತದೆ.

ಗದ್ವಾಲ್ ಸಂಸ್ಥಾನವನ್ನು ಹೈದರಾಬಾದು ಸಂಸ್ಥಾನದ ನೈಜಾಮ ಸರಕಾರದ ಕೋರ್ಟ ಒಫ್ ವಾರ್ಡ್ಸಿನ ಸ್ವಾಧೀನದಲ್ಲಿರಗೊಳಿಸಿದ ವಿಷಯ ಮದ್ರಾಸು ನ್ಯಾಯವಿಧಾಯಕ ಸಭೆಯ ಮೆಂಬರರೆಲ್ಲರೂ ಕೂಡಿಕೊಂಡು ನೈಜಾಮರಿಗೆ ಒಂದು ಮನವಿಯನ್ನು ಮಾಡಿರುವರು. ಈ ಮನವಿಯಲ್ಲಿ ನೈಜಾಮ ಸಂಸ್ಥಾನದ ಆಶ್ರಯದಲ್ಲಿರುವ ಈ ಹಿಂದೂ ಸಂಸ್ಥಾನವಾದ ಗದ್ವಾಲ ಸಂಸ್ಥಾನವನ್ನು ಅದರ ಇತ್ತಲಾಗೆ ಮೃತಪಟ್ಟ ರಾಜರ ನಂತರ ಅವರ ರಾಣಿಯವರು ಆಳಲಿಕ್ಕೆ ಹಿಂದೂ ಧರ್ಮಶಾಸ್ತ್ರಗಳ ಪ್ರಕಾರ ಅರ್ಹರಾಗಿರುವರೆಂದೂ ಈ ಸಂಸ್ಥಾನವನ್ನು ಆಳತಕ್ಕ ಯೋಗ್ಯತೆಯು ಗದ್ವಾಲಿನ ಮಹಾರಾಣಿಯವರಲ್ಲಿರುವದೆಂದೂ ವಿಜ್ಞಾಪಿಸಿಕೊಂಡಿರುತ್ತಾರೆ. ಮತ್ತು ಈ ಸಂಸ್ಥಾನದ ರಾಜರು ಮೃತಪಡುವ ಕಾಲದಲ್ಲಿ ತಕ್ಕುದಾದ ದತ್ತಪುತ್ರಸ್ವೀಕಾರವನ್ನು ಮಾಡಲಿಕ್ಕೆ ಮಹಾರಾಣಿಯವರಿಗೆ ಅಜ್ಞಾಪಿಸಿರುವರು, ಗದ್ವಾಲ್ ಸಂಸ್ಥಾನವು ರಡ್ಡಿ ಜಾತಿಯವರಿಗೆ ಬಹಳ ಪೂಜ್ಯವಾದದ್ದು. ಈ ಸಂಸ್ಥಾನದ ರಾಜರನ್ನು ಈ ಜಾತಿಯವರು ಗುರುಭಾವನೆಯಿಂದ ಮನ್ನಿಸುತ್ತಿರುವರು. ಪುತ್ರಸಂತಾನವು ಮೃತಪಟ್ಟ ರಾಜರಲ್ಲಿ ಇಲ್ಲದೆ ಹೋದ್ದರಿಂದ ರಾಜರವರ ಹತ್ತು ವರುಷ ಪ್ರಾಯದ ಮತ್ತು ಆರು ವರುಷ ಪ್ರಾಯದ ಹುಡುಗಿಯರು ಪ್ರಾಯಕ್ಕೆ ಬಂದು ಅವರಲ್ಲಿ ಜನಿಸುವ ಗಂಡು ಸಂತಾನಕ್ಕೆ ೨೧ ವರುಷ ಪ್ರಾಯವಾಗುವ ವರೆಗೆ ಗದ್ವಾಲ್ ಸಂಸ್ಥಾನದ ಆಡಳಿತೆಯು ಕೋರ್ಟ ಆಫ್ ವಾರ್ಡ್ಸಿನವರಿಂದ ನಡಿಸೋಣಾಗತಕ್ಕದೆಂಬ ನೈಜಾಮರವರ ಆಜ್ಞೆಯಿಂದ ರಡ್ಡಿಜಾತಿಯವರಿಗೂ ಆ ಮೂಲಕ ಇತರ ಹಿಂದೂಗಳಿಗೂ ಸಂತಾಪಕ್ಕೆ ಕಾರಣವಾಗಿರುವುದರಿಂದ ಮಹಾರಾಣಿಯವರಿಂದಲೇ ಈ ಸಂಸ್ಥಾನದ ಆಡಳಿತೆಯು ನಡಿಸೋಣಾಗುವಂತೆ ನೈಜಾಮರವರು ಹುಕುಮು ಕೊಡಿಸಬೇಕಾಗಿ ಮನವಿದಾರರು ಪ್ರಾರ್ಥಿಸಿರುವರು.

ಕಲ್ಕತ್ತೆಯಲ್ಲಿ ಇತ್ತಲಾಗೆ ಹಿಂದೂ ಮಹಾಸಭೆ ಬಗ್ಗೆ ಹೋಗಿದ್ದ ಶ್ರೀ. ಪಂಡಿತ ಮದನಮೋಹನ ಮಾಲವೀಯಾ ಮತ್ತು ಲಾಲಾಲಜಪತರಾಯಿಗಳವರಿಗೆ ಕಲ್ಕತ್ತಾ ಕೋರ್ಪೊರೇಷನಿನವರು ಬಿನ್ನಹ ಪತ್ರಗಳನ್ನು ಸನ್ಮಾನಾರ್ಥವಾಗಿ ಅರ್ಪಿಸಿದರು. ಈ ಸಂದರ್ಭದಲ್ಲಿ ಕೋರ್ಪೊರೇಷನಿನ ಯುರೋಪಿಯ ಮೆಂಬರ್ಯಾರೂ ಬರಲಿಲ್ಲ.

ಮಲಬಾರಿನಲ್ಲಿ ದೇವಸ್ಥಾನಗಳ ಆಡಳಿತೆದಾರರಾದ ಊರಾಳರ ಸಭೆಯು ಕೋಳಿಕೋಡಿನಲ್ಲಿ ಇದೇ ತಿಂಗಳ ತಾ. ೧೧ನೇ ದಿನ ಕೂಡಿತ್ತು. ದೇಶಮಂಗಲಂ ಅಪ್ಪಮೂರ್ತಿ ನಂಬೂರಿಪಾದರವರು ಈ ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿಕೊಂಡಿದ್ದರು. ೫೦೦ಕ್ಕೆ ಮಿಕ್ಕಿದ ಸಂಖ್ಯೆಯಲ್ಲಿ ಊರಾಳರು ಈ ಸಭೆಯಲ್ಲಿ ಹಾಜರಿದ್ದರು. ಎಂಡೋಮೆಂಟ್ ಆಕ್ಟನ್ನು ನಿಷೇಧಿಸುವಂಥಾದ್ದು ಈ ಸಭೆಯ ಪ್ರಥಮ ಕರ್ತವ್ಯವಾಗಿತ್ತು. ಈ ಆಕ್ಟನ್ನು ರದ್ದುಪಡಿಸುವಂತೆ ಇನ್ನೊಂದು ಆಕ್ಟನ್ನು ಮದ್ರಾಸು ನ್ಯಾಯವಿಧಾಯಕ ಸಭೆಯಲ್ಲಿ ತರಬೇಕೆಂತಲೂ ಮತ್ತು ಎಂಡೋಮೆಂಟ ಆಕ್ಟಿಗೆ ಚಕ್ರವರ್ತಿಯವರ ಮಂಜೂರಾತಿಯು ಕೊಡೋಣಾಗದಂತೆ ಸ್ಟೇಟ್ ಸೆಕ್ರೆಟರಿಗಳನ್ನು ವಿಜ್ಞಾಪಿಸಿಕೊಳ್ಳಬೇಕೆಂತಲೂ ಮಹಾಸಭೆಯಲ್ಲಿ ನಿಶ್ಚಯಿಸಲ್ಪಟ್ಟಿರುವದು.

ಹಿಂದುಸ್ಥಾನದ ಸಾಂಪತ್ತಿಕ ಸ್ಥಿತಿ ವಿಚಾರಣಾ ಕಮಿಟಿಯವರ ಮುಂದೆ ಸರ್. ಪಿ. ಸಿ. ರೋಯಿಯವರು ತಮ್ಮ ಅಭಿಪ್ರಾಯವನ್ನು ಈ ರೀತಿ ಕೊಟ್ಟಿರುವರು. ವರ್ಗದಾರರು ತಂತಮ್ಮ ಗ್ರಾಮಗಳನ್ನು ಬಿಟ್ಟು ಹೋಗಿ ಶಹರುಗಳಲ್ಲಿ ವಾಸಿಸುತ್ತಿರುವುದರಿಂದ ಗ್ರಾಮಗಳಿಂದ ಸಂಗ್ರಹವಾದ ಸಂಪತ್ತು ಗ್ರಾಮಗಳಲ್ಲಿ ಉಳಿಯದೆ ಶಹರುಗಳಲ್ಲಿ ಖರ್ಚಾಗಿ ಹೋಗುವದರಿಂದ ಒಕ್ಕಲುಗಳ ಸ್ಥಿತಿಯು ಬಹಳ ಹೀನವಾಗಿದೆ. ವರ್ಗದಾರರು ಗ್ರಾಮಗಳಲ್ಲಿಯೇ ಉಳಕೊಳ್ಳುವಾಗ ಅವರ ಸಂಪತ್ತಿನ ಪ್ರಯೋಜನವು ಒಂದಲ್ಲ ಒಂದು ರೂಪದಲ್ಲಿ ಒಕ್ಕಲುಗಳಿಗೆ ದೊರಿಯುವದಿತ್ತು. ಈ ವಿಷಯದಲ್ಲಿ ವಿಚಾರ ಪಡಿಸಿದ್ದಲ್ಲಿ ಕೃಷಿಕರು ಸರಿಯಾದ ಮಾಹಿತಿಯನ್ನು ಕೊಡುವರೆಂಬುದಾಗಿ ರೋಯಿಯವರು ಸೂಚಿಸಿರುತ್ತಾರೆ.

ಇತ್ತಲಾಗೆ ಹಳ್ಳಿ ಪ್ರಾಂತಗಳಲ್ಲಿ ಸ್ಥಾಪಿಸಲ್ಪಟ್ಟ ರೂರಲ್ ಆಸ್ಪತ್ರೆಗಳ ವಿಷಯ ಮದ್ರಾಸು ನ್ಯಾಯವಿಧಾಯಕ ಸಭೆಯ ಮೆಂಬರರಾದ ಡಾಕ್ಟರ್ ಯು. ರಾಮರಾಯರು ಈ ರೀತಿ ಬರೆದಿರುತ್ತಾರೆ.— ಸಂಸ್ಥಾನದ ಹಳ್ಳಿ ಪ್ರಾಂತ್ಯಗಳಲ್ಲಿರುವ ಪ್ರಜಾವರ್ಗಕ್ಕೆ ಸಾಧ್ಯವಿರುವ ವೈದ್ಯ ಸಹಾಯವನ್ನು ಕೊಡಲು [illegible] ದಾರಿಗಳನ್ನು ವ್ಯವಸ್ಥೆಗೊಳಿಸಬೇಕೆಂತ ಬಹು ಕಾಲದಿಂದ ಚಳವಳಿಯು ನಡೆಯುತ್ತಲಿತ್ತು. ಕಳೆದ ವರುಷ ಹೋಗಿ ಆಯಾ ಹಳ್ಳಿ ಪ್ರಾಂತಗಳಲ್ಲಿರುವ ಡಾಕ್ಟರರುಗಳಿಗೆ ದ್ರವ್ಯಸಹಾಯಕೊಟ್ಟು ಬಡವರಿಗೆ ಇವರ ಚಿಕಿತ್ಸೆ ಮೂಲಕ ತಕ್ಕ ಉಪಶಮನವನ್ನು ಕೊಡುವ ಏರ್ಪಾಡು ಯೋಜಿಸಲ್ಪಟ್ಟು ಈ ಬಗ್ಗೆ ೧೯೨೪—೨೫ನೇ ವರುಷದ ಬಜೆಟಿನಲ್ಲಿ ಸಹಾಯಕ್ಕೆ ಬೇಕಾದ ಖರ್ಚಿನ ಮೊಬಲಗು ಪ್ರತ್ಯೇಕಿಸಲ್ಪಟ್ಟಿತು. ೩೦೦ ರೂರಲ್ ಆಸ್ಪತ್ರೆಗಳನ್ನು ತೆರಿಯಬೇಕಾಗಿ ನಿರ್ಣಯಿಸಲ್ಪಟ್ಟು ಇದೇ ತಿಂಗಳ ಆರಂಭದಿಂದ ಈ ಹಂಚಿಕೆಯು ಜಾರಿಗೆ ಬಂದಿದೆ. ಆದರೆ ಈ ಹಂಚಿಕೆಯ ಜ್ಯಾರಿಯನ್ನು ಸರಕಾರದವರು ಲೋಕಲ್ ಬೋರ್ಡುಗಳಿಗೆ ಒಪ್ಪಿಸಿಕೊಟ್ಟದ್ದರಿಂದ ಇದರ ಜಾರಿಯಲ್ಲಿ ವಿಶೇಷ ಗಲಿಬಿಲಿಯುಂಟಾಗಿದೆ. ಪ್ರಸ್ತುತ ಇರುವ ಗವರ್ನಮೆಂಟ ಅಥವಾ ತಾಲೂಕು ಬೋರ್ಡು ಆಸ್ಪತ್ರೆಗಳನ್ನು ಹಾಗೆಯೇ ಇರಗೊಳಿಸಿ ಇವುಗಳ ವಿನಹ ರೂರಲ್ ಆಸ್ಪತ್ರೆಗಳನ್ನು ಸ್ಥಾಪಿಸಬೇಕಲ್ಲದೆ ಮೊದಲಿನಿಂದ ಇದ್ದ ಆಸ್ಪತ್ರೆಗಳನ್ನು ತೆಗೆದು ಈ ನವೀನ ಆಸ್ಪತ್ರೆಗಳನ್ನು ಅವುಗಳ ಸ್ಥಾನದಲ್ಲಿಡುವಂಥಾದ್ದು ಈ ಹಂಚಿಕೆಯ ಉದ್ದೇಶವಲ್ಲ. ಮತ್ತು ಹೀಗೆ ನವೀನವಾಗಿ ಸ್ಥಾಪಿಸಲ್ಪಡುವ ರೂರಲ್ ಆಸ್ಪತ್ರೆಗಳನ್ನು ಜನರಿಗೆ ವೈದ್ಯಸಹಾಯವು ಸುಲಭವಾಗಿ ದೊರಕಲು ಅನುಕೂಲವಿಲ್ಲದ ಪ್ರಾಂತ್ಯಗಳಲ್ಲಿ ಇರಗೊಳಿಸಬೇಕು. ಮತ್ತು ಬಡವರಿಗೆ ಧರ್ಮಾರ್ಥವಾಗಿ ಚಿಕಿತ್ಸೆಯು ದೊರೆಯಬೇಕು. ಈ ಉದ್ದೇಶಗಳನ್ನು ಸರಿಯಾಗಿ ಸ್ಮರಣೆಯಲ್ಲಿಟ್ಟುಕೊಂಡು ರೂರಲ್ ಆಸ್ಪತ್ರೆಗಳನ್ನು ಆಯಾ ಪ್ರಾಂತಗಳಲ್ಲಿ ಸ್ಥಾಪಿಸಬೇಕಾಗಿದೆ. ಇದರ ಬದಲಾಗಿ ತಾಲೂಕು ಬೋರ್ಡಿನವರು ಇದ್ದ ಆಸ್ಪತ್ರೆಗಳನ್ನು ಮುಚ್ಚಿ ಅವುಗಳು ಮುಚ್ಚಲ್ಪಟ್ಟ ಸ್ಥಾನದಲ್ಲಿ ರೂರಲ್ ಆಸ್ಪತ್ರೆಗಳನ್ನು ತೆರಿಯುವರು. ಉಪ್ಪಿನಂಗಡಿ ತಾಲೂಕು ಬೋರ್ಡಿನ ಉದಾಹರಣೆಯನ್ನು ಡಾಕ್ಟರ್ ರಾಮರಾಯರು ಈ ಬಗ್ಗೆ ತೋರಿಸಿಕೊಟ್ಟಿರುತ್ತಾರೆ. ಮತ್ತು ಸರಕಾರದವರು ಧರ್ಮಾರ್ಥವಾಗಿ ಚಿಕಿತ್ಸೆ ಹೊಂದತಕ್ಕಂಥ ಬಡವರು ಯಾರೆಂಬುದನ್ನು ಸ್ಪಷ್ಟೀಕರಿಸದೆ ಇರುವದರಿಂದ ಅನರ್ಥಕ್ಕೆ ಕಾರಣವಾಗುವದೆಂತ ಸೂಚಿಸಿರುತ್ತಾರೆ. ರೂರಲ್ ಡಿಸ್ಪೆನ್ಸರಿಗಳ ಸಹಾಯಾರ್ಥವಾಗಿ ಕೊಟ್ಟ ಹಣವು ಅತ್ಯಲ್ಪವಾಗಿರುವದರಿಂದಲೂ ಇಂಡಿಯಾ ಸರಕಾರದವರಿಂದ ಪ್ರೊವಿನ್ಶಿಯಲ್ ಕಂಟ್ರಿಬ್ಯೂಷನ್ ಮೂಲಕ ಹೆಚ್ಚಿನ ದ್ರವ್ಯಸಹಾಯವು ಮದ್ರಾಸು ಸರಕಾರಕ್ಕೆ ದೊರಕಿರುವುದರಿಂದಲೂ ಅಗತ್ಯವಿರುವ ಕಡೆಗಳಲ್ಲಿ ಇಂಥಾ ಆಸ್ಪತ್ರೆಗಳ ಬಗ್ಗೆ ಬೇಕಾಗಿರುವ ದ್ರವ್ಯಸಹಾಯವನ್ನು ಕೊಡುವದಲ್ಲದೆ ಯಾವ್ಯಾವ ಆಸ್ಪತ್ರೆಗಳು ಮುಚ್ಚೋಣಾಗಿರುವವೋ ಅಂಥವುಗಳನ್ನು ಪುನಹ ತೆರಿಯಲಿಕ್ಕೆ ಬೇಕಾಗಿರುವ ಹಣವನ್ನು ಸರಕಾರದವರು ಒದಗಿಸಿಕೊಡುವಂತೆ ಚೀಫ್ ಮಿನಿಸ್ಟರರು ಈ ವಿಷಯ ತಕ್ಕ ನಿಗಾ ಕೊಡಬೇಕೆಂತ ಡಾ। ರಾಮರಾಯರು ಬರೆದಿರುತ್ತಾರೆ.

ದಕ್ಷಿಣ ಕನ್ನಡ.

ಸಂಪಾಜೆ:—ಮಲೇರಿಯಾ ಜ್ವರವು ತುಂಬಿ ತುಳುಕುವ ಈ ಸಂಪಾಜೆ ಗ್ರಾಮದ ಸಂಪಾಜೆ ಸರಕಾರಿ ಬಂಗ್ಲೆಯಲ್ಲು ಇದೇ ತಾರೀಕು ೬—೪—೨೫ರಲ್ಲು ಹಂಗಾಮಿಯಾಗಿ ಒಂದು ಆಸ್ಪತ್ರೆಯನ್ನು ತೆರೆದಿರುತ್ತಾರೆ. ಸದರಿ ಆಸ್ಪತ್ರೆಗೆ ದಿನಕ್ಕೆ ೧೫೦ ಮಂದಿ ರೋಗಿಗಳು ನೆರೆಹೊರೆಯ ಗ್ರಾಮಗಳಿಂದ ಬಂದು ಮದ್ದನ್ನು ಪಡೆಯುತ್ತಿರುವರು. ಸದರಿ ರೋಗಿಗಳೆಲ್ಲಾ ಮ। ರಾ। ರಾ। ಡಾಕ್ಟರ್ ಅಜ್ಜಮಾಡ ಕಾಳಯ್ಯನವರು ಪ್ರೀತಿಯಿಂದಲೂ ಶ್ರದ್ಧೆಯಿಂದಲೂ ಕೆಲಸಮಾಡುವರು. ಮಲೇರಿಯಾ ತುಂಬಿರುವ ಈ ಪ್ರಾಂತ್ಯದವರಿಗೆ ಸದರಿ ಆಸ್ಪತ್ರೆಯನ್ನು ಕಾಯಂ ಇರಗೊಡಿಸುವಂತೆ ಸಂಬಂಧಪಟ್ಟ ಅಧಿಕಾರಿಗಳು ನಿಗಾ ಇಟ್ಟು ನಡಿಸುವರಾಗಿ ನಂಬುವೆವು.

ಕುಂಬಳೆ:—ಇಲ್ಲಿಯ ಹಾಯರ್ ಎಲಿಮೆಂಟರಿ ಶಾಲೆಯು ಚಿಕ್ಕದಾದ ಮಾಳಿಗೆಯ ಮೇಲೆ ನಡಿಸೋಣಾಗುತ್ತ. ಮೊದಲೆ ಸ್ಥಳಸಂಕೋಚವಿರುತ್ತಾ ಒಂದು ವಾರದ ಈಚೆಗೆ ಕೈಪಾಡಿ ಬೋರ್ಡ ಎಲಿಮೆಂಟರಿ ಶಾಲೆಯಿಂದ ಸುಮಾರು ೩೦ ವಿದ್ಯಾರ್ಥಿಗಳು ಪ್ರೊಮೋಶನ್ ಹೊಂದಿ ಈ ಶಾಲೆಗೆ ಬಂದು ಸೇರಿರುವರು. ಈ ಶಾಲೆಯನ್ನು ಬೇರೆ ಕಟ್ಟೋಣಕ್ಕೆ ಒಯ್ಯತಕ್ಕದ್ದೆಂತಲೂ ಮೊದಲೇ ಶಾಲಾ ಅಧಿಕಾರಿಗಳು ಸೂಚಿಸಿರುವರಂತೆ! ವಿಸ್ತಾರವಾಗಿಯೂ ಹವೆಗೆ ಯೋಗ್ಯವಿರುವ ಕೈಪಾಡಿ ಬೋರ್ಡ ಎಲಿಮೆಂಟರಿ ಶಾಲಾ ಕಟ್ಟೋಣಕ್ಕೆ ಈ ಹಾಯರ್ ಎಲಿಮೆಂಟರಿ ಶಾಲೆಯನ್ನು ತ್ವರ್ಯ ಒಯಿದು ಒಂದಾಗಿ ಕೂಡಿಸಿ ಕಂಪ್ಲಿಟ್ ಹಾಯರ್ ಎಲಿಮೆಂಟರಿ ಶಾಲೆಯಾಗಿ ಮಾಡುವುದು ಮಾನ್ಯ ಬೋರ್ಡಿನವರ ಮುಖ್ಯ ಕರ್ತವ್ಯವಾಗಿದೆ

ಇಲ್ಲಿಯ ಲೋಕಲ್ ಫಂಡ್ ಡಿಸ್ಪೆನ್ಸರಿಯನ್ನು ಸುಮಾರು ೪ ತಿಂಗಳ ಮೊದಲು ವಜಾ ಮಾಡಿದ್ದಾಗ್ಯೂ ಈ ಆಸ್ಪತ್ರೆಯು ತಾನು ರೂರಲ್ ಎಂಬ ನೂತನ ಹೆಸರನ್ನು ತಾಳಿದ್ದಾಗಿ ಜನರನ್ನು ಸಮಾಧಾನಗೊಳಿಸುತ್ತಿತ್ತು. ಒಂದು ತಿಂಗಳ ಮೊದಲು ಇಲ್ಲಿಯ ಪೂರಾ ಸಾಮಾನುಗಳನ್ನು ಬೋರ್ಡಿನವರು ಕೊಂಡೊಯ್ದದ್ದರಿಂದ ಇದಕ್ಕೀಗ ಹೆಸರು ಇಲ್ಲದಂತಾಗಿದೆ. ದಿನಂಪ್ರತಿ ನೂರಾರು ಜನರು ಔಷಧ ಪಡೆಯುತ್ತಿರುವ ಇಲ್ಲಿ ಮಾನ್ಯ ಬೋರ್ಡಿನವರು ತಕ್ಕ ವೈದ್ಯಉದ್ಯೋಗಸ್ಥರೊಬ್ಬರನ್ನು ನೇಮಿಸಿ ಮೊದಲಿನಂತೆ ಲೋಕಲ್ ಫಂಡ್ ಡಿಸ್ಪೆನ್ಸರಿ ಸ್ಥಾಪಿಸುವುದು ಅಗತ್ಯವಾಗಿದೆ

ಹೊಸದುರ್ಗ:—ಎರಡು ಮೂರು ದಿವಸಗಳಿಂದ ಮೇಘರಾಜನ ಗರ್ಜನೆಯೂ ಪವನನ ಪೂರ್ಣ ಪರಾಕ್ರಮದ ಗಮನವೂ ಕಾಣಬರುತ್ತದೆ ಮಾತ್ರವಲ್ಲ ಮಳೆಯು ಸುತರಾ ಇರುವುದಿಲ್ಲ. ಈ ಟೌನಿನ ಹೊರಗೆ ತೆಂಕು ದಿಕ್ಕಿನಲ್ಲಿ ಮಳೆಯು ತೃಪ್ತಿಕರವಾಗಿ ಸುರಿದಿರುತ್ತದೆ. ನಮಗೆ ಮಾತ್ರ ಕುಡಿಯಲಿಕ್ಕೆ ನೀರಿಗೆ ಕೋಪಬರುವಂತಿದೆ. ಅಹಾ! ನಮ್ಮ ಭಾಗ್ಯವೇ!

ನಿನ್ನೆ ದಿವಸ ಮದ್ರಾಸ ನ್ಯಾವಿಧಾಯಕ ಸಭೆಗೆ ಮೆಂಬರರನ್ನು ಚುನಾಯಿಸುವ ದಿವಸ ಓಟುದಾರರ ಗಡಿಬಿಡಿ ಉಮೇದ್ವಾರರ ಪೈಕಿ ಮ। ರಾ। ರಾ। ಧರ್ಮಸ್ಥಳ ಮಂಜಯ್ಯ ಹೆಗಡೆರಿಗೆ ಸಿಕ್ಕಿದ ಓಟುಗಳು ಅತ್ಯಧಿಕವೆಂತ ಇಲ್ಲಿಯವರ ಅಭಿಪ್ರಾಯ. ಶ್ರೀ ದೈವಾನುಗ್ರಹದಿಂದ ಇವರಿಗೆ ಜಯ ಪ್ರದಕ್ಕಿಲೆಂದು ನಮ್ಮ ಪ್ರಾರ್ಥನೆ.

ಇಲ್ಲಿ ಪೇಟೆಯಲ್ಲಿ ಮಳೆ ಬೀಳುವ ಮೊದಲು ಚಿಲ್ಲರೆ ಕಳವುಗಳು ನಡೆಯಲಿಕ್ಕೆ ಪ್ರಾರಂಭವಾಯಿತು. ಪೋಲೀಸ ಉದ್ಯೋಗಸ್ಥರು ಹೆಚ್ಚಿನ ಗಮನಕೊಡುವರಾಗಿ ನಂಬುತ್ತೇವೆ.

ಪುತ್ತೂರು:—ಇದೇ ತಿಂಗಳ ತಾ. ೧೯ನೇ ಆದಿತ್ಯವಾರ ದಿನ ಮಡಿಕೇರಿಯಿಂದ ಪುತ್ತೂರಿಗೆ ಬರುತ್ತಿದ್ದ ಶಂಕರ ವಿಟ್ಠಲ ಕಂಪೆನಿಯ S. K. ನಂಬ್ರ ೧೦೩ನೇ ಬಸ್ ಪುತ್ತೂರು ದರ್ಬೆ ಟೋಲಗೇಟ್ ಹಾರಾಗುವಾಗ್ಗೆ ಟೋಲಗೇಟ ಕಂಟ್ರಾಕ್ಟರನು ಸುಂಕಕೊಡಬೇಕಾಗಿ ಹೇಳಿದಾಗ್ಯೂ ಕೇಳದೆ ಅತಿ ವೇಗದಿಂದ ಓಡಿಕೊಂಡು ಹೋದ್ದು ಅಲ್ಲಿ ದರ್ಬೆಯಲ್ಲಿರುವ ಸಾವುಕಾರರುಗಳಾದ ವೆಂಕಟ್ರಮಣ ಪೈಗಳ ಅಂಗಡಿಗೆ ತಾಗಿ ಅಂಗಳ ಕಲ್ಲು ಮತ್ತು ಜರಿದದ್ದರಿಂದ ಅಂಗಳದ ಕಲ್ಲು ಮತ್ತು ಜರಿದು ಬಿದ್ದು ಮೋಟರು ಹಿಂದೆ ಜಾರಿ ಬಿದ್ದುಬಿಟ್ಟಿತು. ಬಸ್ಸಿನಲ್ಲಿ ಕ್ಲೀನರ್ ಮತ್ತು ಡ್ರಾಯಿವರುಗಳಲ್ಲದೆ ಪ್ರಯಾಣಿಕರಿಲ್ಲದೊಂದು ಉಪಕಾರ.

ಈ ತಿಂಗಳ ತಾ. ೧೨ನೇ ಆದಿತ್ಯವಾರ ರೋಮನ್ ಕೆಥೋಲಿಕರಿಗೆ ಪಾಮುಸಂಡೆ ದಿವಸವಾಗಿ ಶ್ಯಾಮ ೫॥ ಗಂಟೆಗೆ ಒಂದು ಸಾವಿರ ಜನ ಗಂಡಸರು ಹೆಂಗಸರು ಹುಡುಗ ಹುಡುಗಿಯರು ಮೆರವಣಿಗೆ ಹೋಗುವಾಗ್ಗೆ ಶಂಕರವಿಟ್ಠಲ ಕಂಪೆನಿಯ S. K. ೫೩ನೇ ಬಸ್ ಜನಸಮೂಹದ ಮಧ್ಯದಿಂದ ಡ್ರಾಯಿವರ ಸಂಕಪ್ಪ ಓಡಿಸಿದ, ದೈವವಶಾತ್ ಯಾರಿಗೂ ಜಖಂ ಆಗದ್ದೊಂದುಉಪಕಾರ.

ಇದೇ ತಾ, ೨೦ನೇ ನ್ಯಾಯವಿಧಾಯಕ ಸಭೆಗೆ ಉಮೇದ್ವಾರರನ್ನು ಚುನಾಯಿಸುವ ದಿನವಷ್ಟೆ. ಮ। ರಾ। ಧರ್ಮಸ್ಥಳ ಮಂಜಯ್ಯ ಹೆಗಡೆರಿಗೆ ಓಟುಕೊಡುವುದಕ್ಕೆ ಜೈನ ಮತದ ಹೆಂಗಸರು ಇಲ್ಲಿಯ ತಾಲೂಕು ಆಫೀಸಿಗೆ ಬಂದಿದ್ದರು.

ಇಲ್ಲಿಯ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಕೆರೆ ಬಳಿಗಾಗಿ ದೇವಸ್ಥಾನಕ್ಕೆ ಹೋಗುವರೆ ಜನರಿಗೆ ಕತ್ತಲೆಗೆ ಉಪದ್ರವಾಗುವುದನ್ನು ನಿವಾರಿಸುವ ಉದ್ದಿಶ್ಯ ಇಲ್ಲಿಯ ಕಾಫಿ ಹೊಟೇಲ ಸಾವುಕಾರ ಮ। ರಾ। ರಾ। ಮಿಜಾರ ಮಂಜುನಾಥ ಭಂಡಾರಿಗಳು ಶಿಲೆಕಲ್ಲಿನ ಕಂಭವನ್ನು ಕೆತ್ತಿಸಿ ಅದರಲ್ಲಿ ತನ್ನ ಹೆಸರು ಕೆತ್ತಿಸಿ ಬೆಳಕಿಗಾಗಿ ದೀಪಸ್ತಂಭ ಇಟ್ಟಿರುವರು.

ಇಲ್ಲಿಯ ಸಾವುಕಾರ ಮ। ರಾ। ರಾ। ಹಾಗಲವಾಡಿ ಮಹಮ್ಮದ್ ಇಸ್ಮಾಯಿಲ ಸಾಹೇಬರು ರಮಜಾನ (ಉಪವಾಸದ) ಸಂಬಂಧ ಇದೇ ತಾ. ೨೦ರಲ್ಲು ರಾತ್ರಿ ಮಹಮ್ಮದಿ ಮತದ ಬಡ ಹೆಂಗಸರಿಗೂ ಮಕ್ಕಳಿಗೂ ವೃದ್ಧರಿಗೂ ಸಹಾ ಸುಮಾರು ೫೦೦ ಜನರಿಗೆ ಗಂಜಿಯೂ ತಾ. ೨೧ರಲ್ಲು ಸುಮಾರು ೧೦೦೦ ಜನರಿಗೆ ಸಣ್ಣ ಮಕ್ಕಳಿಗೆ ೨ ಆಣೆ ಹೆಂಗಸರಿಗೆ ೪ ಆಣೆ ಗಂಡಸರಿಗೆ ವೃದ್ಧರಿಗೆ ೮ ಆಣೆ ಕೋಯಿರಿಗೂ ಮುಕ್ರಿಯವರಿಗೂ ರೂಪಾಯಿ ಒಂದರಂತೆ ಧರ್ಮ ಹಂಚಿದರು

ಕೆಯ್ಯೂರು ಗ್ರಾಮದ ಮಾಡಾವು ಗುತ್ತು ಬಳಿ ಶೇಂದಿ ಕುಡಿಯುತ್ತಿದ್ದ ಮೇರ ಹೊಲೆಯರು ದಾರಿ ಬಿಟ್ಟುಕೊಡದ್ದರಿಂದ ವಿವಾದವುಂಟಾಗಿ ಹೊಲೆಯರ ಪೈಕಿ ಒಬ್ಬನನ್ನು ಇದೇ ತಾ. ೧೭ರಲ್ಲು ಕೆಯ್ಯೂರು ಗ್ರಾಮದ ಮಾಡಾವುಪರವ ಹುಕ್ರಯೆಂಬವನು ಚೂರಿಯಿಂದ ತಿವಿದು ಕೊಂದನೆಂಬ ಅನುಮಾನದ ಮೇಲೆ ಬೆಳ್ಳಾರೆ ಸ್ಟೇಶನ ಪೋಲೀಸ ಅಧಿಕಾರರು ಕೈದುಮಾಡಿ ತಂದವನನ್ನು ರಿಮಾಂಡಿನಲ್ಲಿಟ್ಟಿರುವರು.

ವಿವಿಧ ವಿಷಯಗಳು.

ಜಪಾನ ದೇಶದ ಟೋಕಿಯೋ ವಿಶ್ವವಿದ್ಯಾಲಯದ ಪುಸ್ತಕ ಭಂಡಾರವು ೧೯೨೩ರಲ್ಲಿ ಸಂಭವಿಸಿದ ಭೂಕಂಪಗಳ ಉತ್ಪಾತಗಳಲ್ಲಿ ಸುಟ್ಟುಹೋದದ್ದನ್ನು ಪುನಹ ಸಂಗ್ರಹಿಸುವದಕ್ಕೋಸ್ಕರ ಜಪಾನ ಸರಕಾರದವರು ೧೩,೦೦,೦೦೦ ಯೆನ್ನುಗಳ ದ್ರವ್ಯ ಸಹಾಯವನ್ನು ಕೊಟ್ಟಿದ್ದಾರೆ. ಅಮೇರಿಕದ ಸಂಪನ್ನ ಗೃಹಸ್ಥರಾದ ಮಿ। ಜೋನ್ ಡಿ. ರೊಕ್‌ಫೆಲ್ಲರು ೪೦,೦೦,೦೦೦ ಯೆನ್ನುಗಳ ಮೊಬಲಗನ್ನು ಇದೇ ಉದ್ದೇಶಕ್ಕಾಗಿ ಟೋಕಿಯೊ ವಿಶ್ವವಿದ್ಯಾಲಯದ ಅಧ್ಯಕ್ಷರಿಗೆ ಉಚಿತಾರ್ಥವಾಗಿ ಕೊಟ್ಟಿರುತ್ತಾರೆ.

• • • • •

ಅಮೇರಿಕದ ಯುನೈಟೆಡ್ ಸ್ಟೇಟ್ಸ್‌ನಲ್ಲಿ ಕಳೆದ ವರುಷ ನಡೆದ ಚುನಾವಣೆಗಳಲ್ಲಿ ವಾಯೋಮಿಂಗ್ ಮತ್ತು ಟೆಕ್ಸಸ್ ಸಂಸ್ಥಾನಗಳ ಗವರ್ನರರುಗಳಾಗಿ ಇಬ್ಬರು ಸ್ತ್ರೀಯರು ನೇಮಿಸಲ್ಪಟ್ಟಿರುವರು. ಸ್ಟೇಟಿನ ನ್ಯಾಯವಿಧಾಯಕ ಸಭೆಗಳಲ್ಲಿ ೪೪ ಜನರು ಮೆಂಬರರಾಗಿ ಚುನಾಯಿಸಲ್ಪಟ್ಟಿರುವರು. ಅಮೇರಿಕದ ಕೊಂಗ್ರೆಸು ಸಭೆಗೆ ಪ್ರತಿನಿಧಿಯಾಗಿ ಒಬ್ಬ ಸ್ತ್ರೀಯು ಆರಿಸಲ್ಪಟ್ಟಿರುವಳು. ನ್ಯೂಯೋರ್ಕ ಸಂಸ್ಥಾನಕ್ಕೆ ಸ್ಟೇಟ್ ಸೆಕ್ರೆಟರಿಯಾಗಿ ಇನ್ನೊಬ್ಬ ಸ್ತ್ರೀಯಳು ನೇಮಿಸಲ್ಪಟ್ಟಿರುತ್ತಾಳೆ. ಬರೇ ಹತ್ತು ವರುಷಗಳ ಹಿಂದೆ ವೋಟಿನ ಅಧಿಕಾರವು ಸ್ತ್ರೀಯರಿಗೆ ಪುರುಷರಷ್ಟು ಇರಲಿಲ್ಲ. ಇಷ್ಟು ಸ್ವಲ್ಪ ಕಾಲದಲ್ಲಿ ಸ್ತ್ರೀಯರು ಅಮೇರಿಕದಲ್ಲಿ ನಡಿಸಿದ ಈ ಕಾರ್ಯ ವೃತ್ತಾಂತವು ಅತೀ ಚೋದ್ಯವಾಗಿರುವದು.

• • • • •

ಜಪಾನು ದೇಶದ ಸ್ತ್ರೀಯರ ಸ್ಥಿತಿ:—ಶಹರುಗಳಲ್ಲಿ ಶಾಲೆಗೆ ಹೋಗುತ್ತಿರುವ ಬಾಲಿಕೆಯರು ಸಾಮಾನ್ಯವಾಗಿ ವಿದೇಶಿ ಉಡುಪನ್ನು ಹಾಕಿಕೊಳ್ಳುತ್ತಾರೆ. ಆದರೆ ಶಹರುಗಳನ್ನು ಬಿಟ್ಟು ಇತರ ಹಳ್ಳಿ ಪ್ರಾಂತಗಳಲ್ಲಿ ಪಾಶ್ಚಾತ್ಯ ವಿಧಾನಗಳಲ್ಲಿ ಉಡುಪನ್ನು ಹಾಕುವದಿಲ್ಲ. ೧೪ ಅಥವಾ ೧೯ನೇ ವರುಷ ಪ್ರಾಯದಲ್ಲಿ ಬಾಲಿಕೆಯರು ಹೈಸ್ಕೂಲ್ ಶಾಲೆಗಳಿಂದ ಉತ್ತೀರ್ಣರಾಗುವರು. ಈ ಪ್ರಾಯದಲ್ಲಿಯೇ ಇವರಿಗೆ ವಿವಾಹವಾಗುವಂಥಾದ್ದು. ಈ ವಾಡಿಕೆಯು ಕೆಲವು ವರುಷಗಳ ಮೊದಲಿನದ್ದಾಗಿರುವದು. ಈಗ ೨೩ ಅಥವಾ ೨೪ನೇ ವರುಷ ದಾಟಿದ ವಿನಹ ವಿವಾಹವಾಗುವದಿಲ್ಲ. ಹಳ್ಳಿ ಪ್ರಾಂತ್ಯಗಳಲ್ಲಿ ಮಾತ್ರ ೧೪ ಯಾ ೧೯ ವರುಷಗಳಲ್ಲಿ ಅಂದರೆ ಹೈಸ್ಕೂಲು ಶಾಲೆಗಳಲ್ಲಿ ಇವರ ಶಿಕ್ಷಣವು ಸಂಪೂರ್ಣವಾದೊಡನೆ ವಿವಾಹವಾಗುವರು. ವಿವಾಹದ ಬಗ್ಗೆ ನೆಂಟಸ್ತಿಕೆಯನ್ನು ಗೊತ್ತುಮಾಡುವಂಥಾದ್ದು ಮೂರನೇಯವರ ಮೂಲಕವಾಗಿದೆ. ಇವರು ಗಂಡಿನ ಕಡೆಗೂ ಹೆಣ್ಣಿನ ಕಡೆಗೂ ಹೋಗಿ ಅವರವರ ಸ್ಥಿತಿಗತಿಗಳನ್ನು ತಿಳಕೊಂಡು ಉಭಯ ಕಡೆಯವರಿಗೂ ಹೇಳುವರು. ನಂತರ ಉಭಯ ಕಡೆಯವರಿಗೂ ಸಮ್ಮತವಾದ ಪಕ್ಷದಲ್ಲಿ ಈ ನೆಂಟಸ್ತಿಕೆಯ ವಿಚಾರವನ್ನು ಹೆಣ್ಣಿಗೂ ಗಂಡಿಗೂ ತಿಳಿಸುವರು. ಅವರು ಸಮ್ಮತಪಟ್ಟಲ್ಲಿ ವಿವಾಹವಾಗುವದು. ಈ ವಿವಾಹಕ್ರಮವು ಈಗಲೂ ಆಚರಣೆಯಲ್ಲಿರುವದಾದರೂ ಇದರಿಂದ ಕೆಲವು ತೊಂದರೆಗಳುಂಟಾಗುವದನ್ನು ನೋಡಿ ವಧೂವರರು ತಂತಮ್ಮ ಹೆತ್ತವರ ಮೇಲ್ವಿಚಾರದಲ್ಲಿ ಒಬ್ಬರನ್ನೊಬ್ಬರ ಶೀಲ ಇತ್ಯಾದಿಗಳನ್ನು ಸಾಧಾರಣ ಒಂದು ವರುಷ ಕಾಲದ ವರೇಗೆ ಪರೀಕ್ಷಿಸಿಕೊಂಡು ನಂತರ ಮದುವೆಯಾಗುವರು. ಗಂಧರ್ವ ವಿವಾಹದ ಕ್ರಮವು ಜಪಾನ ದೇಶದಲ್ಲಿ ಮಾನ್ಯವಲ್ಲ. ಆದರೂ ಇಂಥಾ ವಿವಾಹಗಳಾಗುವದುಂಟು. ಮಧ್ಯಮ ತರಗತಿಯವರು ಸಾಧಾರಣವಾಗಿ ಮಧ್ಯಮ ತರಗತಿಯವರಲ್ಲಿಯೇ ವಿವಾಹಿತರಾಗುವರು. ಜಪಾನ ಸ್ತ್ರೀಯರು ವಿಶೇಷವಾಗಿ ಪತಿವ್ರತೆಗಳಾಗಿರುವರು. ದೊಡ್ಡ ಶಹರುಗಳಲ್ಲಿರುವವರಲ್ಲಿ ಕೆಲವರು ವಿವಾಹವಾದ ಕೂಡಲೆ ಹೆತ್ತವರ ಮನೆಬಿಟ್ಟು ಪ್ರತ್ಯೇಕ ಮನೆಗಳಲ್ಲಿ ನಿಲ್ಲುತ್ತಾರೆ. ಆದರೆ ದೇಶದಲ್ಲೆಲ್ಲಾ ಈ ರೂಢಿಯು ಬಹಳ ಕಡಿಮೆಯಾಗಿರುವದು. ಮಾವ ಅತ್ತೆಯರ ಸೇವೆಗಳಲ್ಲಿ ನಿರತರಾಗಿರುವದು ವಿಶೇಷವಾದ ಧರ್ಮವಾಗಿದೆ ಎಂಬುವ ಭಾವನೆಯು ಜಪಾನ ದೇಶದ ಸ್ತ್ರೀಯರಲ್ಲಿರುವದು. ಈ ಭಾವನೆಯುಳ್ಳವರಾದ್ದರಿಂದ ವಿವಾಹವಾದೊಡನೆ ಕನ್ಯೆಯವರು ಗ್ರಹಕೃತ್ಯದ ಭಾರವನ್ನು ವಹಿಸಿಕೊಂಡು ಗ್ರಹಕೃತ್ಯದ ಕೆಲಸಗಳಲ್ಲಿ ಮಗ್ನರಾಗುವದರಿಂದ ಇವರ ಯೌವನದಲ್ಲಿ ಇವರಿಗೆ ಸಮಯ ಸಿಕ್ಕುವದು ದುರ್ಲಭವಾಗಿದೆ. ಶ್ರೀಮಂತ ಕುಟುಂಬಗಳಲ್ಲಿ ಕೆಲಸಕ್ಕೆ ಬೇಕಾದ ಹಾಗೆ ಸ್ತ್ರೀಪುರುಷರಿರುವಲ್ಲಿ ಗೃಹಿಣಿಯರಿಗೆ ಗೃಹಕೃತ್ಯದ ಭಾರವು ಅಷ್ಟೊಂದು [illegible].

ಅನುಕ್ರಮಣಿಕೆ.

ಅಗ್ರಲೇಖ. ಪುಟಗಳು.
ಉರಿಯುವ ಬೆಂಕಿಗೆ ಪೆಟ್ರೋಲಿನ ಸಹಾಯ ೬
ಸ್ಫುಟವಿಚಾರಗಳು—
೧-೨ ರ್‍ಯಾಟ್ ಒನರೆಬಲ್ ಶ್ರೀನಿವಾಸ ಶಾಸ್ತ್ರಿಗಳು ಮತ್ತು ದೇಶದ ಪ್ರಕೃತ ರಾಜಕೀಯ ಸ್ಥಿತಿ.
೩ ಫ್ರಾನ್ಸದೇಶದ ಕೆಬಿನೆಟ್ ೭
೪ ಮುಂಬಯಿಯಲ್ಲಿ ಮಿ। ಬೆಪ್ಟಿಸ್ಟರವರು ಕೊರ್ಪೊರೇಶನಿನ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟದ್ದು. ,,
೫ ಕಾರ್ಕಳದಲ್ಲಿ ಕೂಡುವ ಜಿಲ್ಲಾ ಪರಿಷತ್ತು. ,,
೬ ದಕ್ಷಿಣ ಆಫ್ರಿಕದಲ್ಲಿ "ಒಂದು ಹಸಿಗೆ ನಾಲ್ಕು ಬಿಸಿ". ,,
ಮಂಗಳೂರು
ವರ್ತಮಾನಸಂಗ್ರಹಗಳು—
ವಿದೇಶ-ಒಳದೇಶ ವರ್ತಮಾನ ೫
ದಕ್ಷಿಣ ಕನ್ನಡ—ಸಂಪಾಜೆ, ಹೊಸದುರ್ಗ, ಕುಂಬಳೆ, ಪುತ್ತೂರು ,,
ವಿವಿಧ ವಿಷಯಗಳು ,,
ಪತ್ರವ್ಯವಹಾರ ೧, ೨, ೩ ೮
ಸ್ವರಾಜ್ಯಪಾರ್ಟಿಯವರ ಪರಿಷತ್ತು. ,,
ದೇಶಬಾಂಧವರಲ್ಲಿ ವಿಜ್ಞಾಪನೆ. ,,
ಪೊಳಲಿ ಚೆಂಡು ಉತ್ಸವದ ಕಾಲದಲ್ಲಿ ನಡಿಸಿದ ಪ್ರದರ್ಶನ ೯

ಸ್ವದೇಶಾಭಿಮಾನಿ.

ಶಕ ೧೮೪೭ ವೈಶಾಖ ಶು। ೧ವು ಶುಕ್ರವಾರ.

ಉರಿಯುವ ಬೆಂಕಿಗೆ ಪೆಟ್ರೋಲಿನ — ಸಹಾಯ! —

ಹಿಂದು-ಮಹಮ್ಮದೀಯರಲ್ಲಿ ಪರಸ್ಪರ ದ್ವೇಷವು ಬೆಳೆಯುತ ಹೋಗಿದೆ. ಇದು ದೇಶದ ದೊಡ್ಡ ದುರ್ದೈವವೆ ಸರಿ. ಹಿಂದುಸ್ಥಾನವು ಪರತಂತ್ರವಾಗಿದ್ದದರಿಂದ ಸ್ವರಾಜ್ಯವು ಅದರ ರಾಜಕೀಯ ಚಳವಳದ ಮುಖ್ಯಧ್ಯೇಯವಾಗಿರುವದು ಸಾಹಜಿಕವು. ಈ ಚಳವಳವು ಸಫಲವಾಗಬೇಕಾದರೆ ಹಿಂದುಸ್ಥಾನದೊಳಗಿನ ಎಲ್ಲಾ ಮತದವರು ರಾಜಕಾರಣದ ಮಟ್ಟಿಗಾದರೂ ಏಕತ್ವವನ್ನು ಹೊಂದಬೇಕು. ಒಂದೊಂದು ಮತದವರು ಎಷ್ಟೆ ಬುದ್ಧಿಶಾಲಿಗಳೂ, ಕರ್ತೃತ್ವವುಳ್ಳವರೂ, ಬಲವಂತರೂ ಆದಾಗ್ಯೂ ಅವರ ಪರಸ್ಪರ ಐಕ್ಯದ ಅಭಾವದಿಂದ ಅವರ ಪ್ರಯತ್ನಕ್ಕೆ ಯಶಸ್ಸು ದೂರಾಪಾಸ್ತವೆ ಸರಿ. ಈ ಸಂಗತಿಯು ಈಗ ಹಿಂದುಸ್ಥಾನದೊಳಗಿನ ಎಲ್ಲರ ಲಕ್ಷ್ಯದಲ್ಲಿ ಬಂದಿದೆ. ಹಿಂದು ಮಹಾ ಸಭೆಯಂಥ ವಿಶಿಷ್ಟ ವರ್ಗದ ಪರಿಷತ್ತಿನಲ್ಲಿ ಸಹ ಲಾಲಾ ಲಜಪತರಾಯರಾಗಲಿ ಅಥವಾ ಪಂಡಿತ ಮದನಮೋಹನ ಮಾಲವೀಯರಾಗಲಿ ತಮ್ಮ ಹಿಂದು ಬಂಧುಗಳಿಗೆ ಇತರ ಮತದವರೊಡನೆ ಅಖಂಡ ಸ್ನೇಹವನ್ನು ಬೆಳಸಲು ಉಪದೇಶಿಸುತ್ತಿದ್ದಾರೆ. ಇದರ ಕಾರಣವಾದರೂ ಪರಸ್ಪರ ಐಕ್ಯವಿಲ್ಲದ ಹಿಂದುಸ್ಥಾನಕ್ಕೆ ಗತ್ಯಂತರವಿಲ್ಲವೆಂಬುದೆ ಆಗಿದೆ. ಆದರೂ ದುರ್ದೈವದಿಂದ ಹಿಂದು-ಮಹಮ್ಮದೀಯರೊಳಗೆ ದ್ವೇಷಾಗ್ನಿಯು ಇನ್ನಷ್ಟು ಉರಿಯಹತ್ತಿದೆ. ಕೋಹತಿನ ದೃಷ್ಟಾಂತದ ಮೇಲಿಂದಾಗಲಿ ಇಲ್ಲವೆ ನಮ್ಮ ಕರ್ನಾಟಕದೊಳಗಿನ ಗುಲಬುರ್ಗದ ಉದಾಹರಣೆಯ ಮೇಲಿಂದಾಗಲಿ ಹಿಂದು-ಮಹಮ್ಮದೀಯರ ಕಲಹಾಗ್ನಿಯು ಪ್ರದೀಪ್ತವಾಗುತ್ತ ನಡೆದಿದೆ ಎಂದು ಹೇಳಬೇಕಾಗುತ್ತದೆ. ಹಿಂದು-ಮಹಮ್ಮದೀಯರ ಐಕ್ಯಕ್ಕಾಗಿ ಹಿಂದು ಸಮಾಜದಿಂದ ಮುಂದೆ ಬಂದು ವಿಶ್ವಪ್ರಯತ್ನವನ್ನು ಮಾಡುವವರು ಮ. ಗಾಂಧಿಗಳಂಥ ಒಬ್ಬಿಬ್ಬರಾದರೂ ಹಿಂದು ಸಮಾಜದಲ್ಲಿ ಇದ್ದಾರೆ. ಅಂತೆ ಈ ಕಾರ್ಯಕ್ಕೆ ತಾತ್ಪರ್ಯದಿಂದ ಯತ್ನಿಸುವವರು ಮಹಮ್ಮದೀಯರಲ್ಲಿ ಯಾರಿದ್ದಾರೆ? ಅಲ್ಲಿ-ಬಂಧುಗಳು ತಮ್ಮ ತಾಯಿಯೊಡನೆ 'ಇನ್ನು ಮುಂದೆ ನಾವು ಹಿಂದು-ಮಹಮ್ಮದೀಯರ ಐಕ್ಯಕ್ಕಾಗಿ ದುಡಿದೇವೆ'ಂದು ಭಾಷೆ ಕೊಟ್ಟಿದ್ದು ಮುಂಚೆ ಪತ್ರಿಕೆಗಳಲ್ಲಿ ಸುಪ್ರಸಿದ್ಧವಾಗಿತ್ತು. ಈಗ ಈ ಕಾರ್ಯದಲ್ಲಿ ಈ ಬಂಧುಗಳು ಎಷ್ಟರ ಮಟ್ಟಿಗೆ ಯತ್ನಿಸುತ್ತಿದ್ದಾರೆ? ಈ ಇಬ್ಬರ ಪೈಕಿ ವಿದ್ವಾಂಸರಾದ ಮೌಲಾನಾ ಮಹಮ್ಮದ ಅಲ್ಲಿಯವರು ಸಂದರ್ಭ ಬಂದ ಬಂದಲ್ಲಿ ಹಿಂದುಗಳನ್ನು ಜರಿದು ಮಾತಾಡಲು ತತ್ಪರರಾಗಿಯೆ ಇರುವರು! "ಬಡಾಭಾಯಿ"ಯವರ ಕೋಹತಿನ ರಿಪೋರ್ಟಂತು ಸರ್ವವಿಶ್ರುತವಾದ್ದೆ ಸರಿ! ಬೇರೆಯವಂದಿರಲಿ, ಗಾಂಧಿಜಿಯವರ ಮತಕಷ್ಟು ಕೂಡ ಅದು ಹೋಲಲಿಲ್ಲ. ಈ ಪ್ರಕಾರವಾಗಿ ಮಹತ್ಪದದಲ್ಲಿ ಐಕ್ಯ ಪ್ರಯತ್ನದ ನಾಗ್ವಾನ ಮಾಡಿದ ದೊಡ್ಡ ಮನುಷ್ಯರ ಅವಸ್ಥೆ ಹೀಗಿರುವಾಗ ಇತರೇ ಜನಗಳ ಪಾಡೇನು? ಇತರ ಜನಗಳೆಂದರೆ ಕೇವಲ ಸಾಮಾನ್ಯರೆಂದು ತಿಳಿಯಬಾರದು; ಅಶಿಕ್ಷಿತರು, ಜವಾಬದಾರಿ ಇಲ್ಲದವರು ಇಂಥವರಲ್ಲ. ವಿದ್ವಾಂಸರಾದ ಮುಖಂಡರೆ ಹಿಂದು-ಮಹಮ್ಮದೀಯರ ದ್ವೇಷಾಗ್ನಿಯನ್ನು ಬೆಳಸುತ್ತಿದ್ದಾರೆ. ಡೊ. ಕಿಶ್ಲು, ಜಾಫರ ಅಲ್ಲಿ ಖಾನರಂಥವರೇನಾದರೂ ಸಾಮಾನ್ಯರೆ? ದೊಡ್ಡ ಮುಖಂಡರು. ವಸ್ತುತಃ ಈ ಮುಖಂಡರು ಹಿಂದು-ಮಹಮ್ಮದೀಯರ ಐಕ್ಯದ ಕೋಟೆಯನ್ನು ಬಲುಭದ್ರವಾಗಿ ಕಟ್ಟಬೇಕಿತ್ತು. ಅದರ ಬದಲಿಗೆ ಅನ್ಯೋನ್ಯದ್ವೇಷಾಗ್ನಿಗೆ ಈ ಇಬ್ಬರೂ ಮುಖಂಡರು ಪೆಟ್ರೋಲನ್ನು ಯಥೇಷ್ಟವಾಗಿ ಪೂರೈಸುತ್ತಿದ್ದಾರೆ. ಇದನ್ನು ನೋಡಿ ನಮಗನಕಲಜ್ಜೆಯಿಂದ ತಲೆತಗ್ಗಿಸಬೇಕೆಂದು ತೋರುವದು. ಹಿಂದು-ಮಹಮ್ಮದೀಯರಲ್ಲಿ ಐಕ್ಯವನ್ನು ಸಾಧಿಸಿ ಇಬ್ಬರಿಗೂ, ಎಲ್ಲ ಹಿಂದಿಗಳಿಗೂ ಏಕಧ್ಯೇಯವಾಗಿರಬೇಕಾದ ಸ್ವರಾಜ್ಯವನ್ನು ಸಂಪಾದಿಸುವದು ನಿಮ್ಮಂಥ ಮುಖಂಡರ ಮತ್ತು ಅನುಯಾಯಿಗಳ ಮುಖ್ಯಕರ್ತವ್ಯವಾಗಿರುವಲ್ಲಿ ಇಂಥ ಪ್ರಕಾರಗಳು ಕೇಳಿಬರುವದೆಂದರೆ ಬಲು ನಾಚಿಗೆಗೇಡೆಂಬುದಕ್ಕೆ ಅಡ್ಡಿ ತೋರುವದಿಲ್ಲ.

ಡೊ. ಕಿಶ್ಲು ಸಾಹೇಬರು ಮತ್ತು ಜಾಫರಖಾನ ಸಾಹೇಬರು ಇತ್ತಲಾಗೆ ಪಂಜಾಬದ ಪ್ರಾಂತದಲ್ಲಿ ಒಂದು ಸಂಚಾರವನ್ನು ಮಾಡಿದರು. ಈ ಸಂಚಾರದಲ್ಲಿ ಈ ಇಬ್ಬರು ಮಹಮ್ಮದಭಕ್ತರು ಯಾವ ಯಾವ ಬಗೆಯ ವಾಗ್ರತ್ನಗಳನ್ನು ಚಲ್ಲಿದಾರೆಂಬುದನ್ನು ಇನ್ನು ಹೆಚ್ಚಿನ ಪ್ರಸ್ತಾವನೆಯನ್ನು ಬೆಳಸದೆ ತೋರಿಸುವದು ಯುಕ್ತವಾಗಿದೆ. ಕಿಶ್ಲು ಖಾನಸಾಹೇಬರು ಎಂದರು: "ಲಾಲಾ ಲಜಪತರಾಯರೂ, ಮದನಮೋಹನ ಮಾಲವೀಯರೂ ಇವರೆ ಹಿಂದು-ಮುಸಲ್ಮಾನರ ದಂಗೆಯ ನಿಜವಾದ ಕಾರಣ. ಬಂಗಾಲ ಪ್ರಾಂತವು ಸರ್ ಸುರೇಂದ್ರನಾಥರನ್ನೂ, ಮದ್ರಾಸ ಸಂಸ್ಥಾನವು ಡೊ. ಎನಿಬಿಝಂಟರನ್ನೂ ಮೂಲೆಗೊತ್ತಿದಂತೆ ಹಿಂದುಗಳು ಈ ಇಬ್ಬರನ್ನು ಬಿಟ್ಟುಬಿಡಬೇಕು. ಹಿಂದುಗಳು ಮಹಮ್ಮದೀಯರ ಸಂಘಟನವನ್ನು ಟನ್‌ಝುಮನ್ನು—ವಿರೋಧಿಸಬಾರದು. ಆದರೆ ಅವರು ತಮ್ಮ ಹಿಂದು ಸಂಘಟನವನ್ನು ಬಿಟ್ಟುಬಿಡಬೇಕು. ರಾಷ್ಟ್ರೀಯ ಸಭೆಗೆ ನಾಲ್ವತ್ತು ವರ್ಷಗಳಿಂದ ಯಾವ ಯಶಸ್ಸು ದೊರಕಿರಲಿಲ್ಲವೊ, ಆ ಯಶಸ್ಸು ಖಿಲಾಫತ ಕೊನ್ಫರೆನ್ಸಿಗೆ ಒಂದೆ ವರ್ಷದಲ್ಲಿ ಸಿಕ್ಕಿದೆ. ನೀವು ನಮ್ಮ ಟನ್‌ಝುಮನ್ನು (ಮುಸಲ್ಮಾನ ಸಂಘಟನವನ್ನು) ಎದುರಿಸಿದ್ದಾದರೆ ನಾವು ಅಫಘಾನಸ್ಥಾನದ ಮತ್ತು ಇತರ ಎಲ್ಲ ಮುಸಲ್ಮಾನರೊಡನೆ ಒಟ್ಟು ಸೇರಿ ಹಿಂದುಸ್ಥಾನದಲ್ಲಿ ಪುನಶ್ಚ ಮಹಮ್ಮದೀಯ ರಾಜ್ಯವನ್ನು ಸ್ಥಾಪಿಸುವೆವು. ನಾವು ನಿಮ್ಮನ್ನು ಸ್ವರಾಜ್ಯ ಸಂಪಾದನೆಯಲ್ಲಿ ಸಹಾಯಮಾಡಲಿಕ್ಕಿಲ್ಲ. ಅದನ್ನು ಎದುರಿಸುವೆವು."

ಡೊ. ಕಿಶ್ಲುಗಳ ಈ ಮುಕ್ತಾಫಲಗಳು ಹೇಗೆ ಹೊಳಯುತ್ತಿದ್ದಾವೆ ಎಂಬುದನ್ನು ಪ್ರತ್ಯೇಕವಾಗಿ ವಿವರಿಸಬೇಕಾದ ಅಗತ್ಯವಿಲ್ಲ. ಆದರೂ ಒಂದೆರಡು ಮಾತುಗಳಿಂದ ಈ ಖಾನ ಸಾಹೇಬರ ಕಟು ಪ್ರಲಾಪಗಳನ್ನು ಪರಾಂಬರಿಸುವುದು ನಮ್ಮ ಕರ್ತವ್ಯವಾಗಿದೆ. ಹಿಂದು ಮುಸಲ್ಮಾನರ ದಂಗೆಗೆ ಲಾಲಾಜಿಯವರು ಮತ್ತು ಮಾಲವೀಯರು ಕಾರಣವೆಂಬುದಾಗಿ ಹೇಳೋಣಾಗುತ್ತದೆಯಷ್ಟೆ. ಮಾಲವೀಯರು ಮತ್ತು ಪಂಡಿತಜಿಯವರು ಇತ್ತಲಾಗೆ ಸಂಘಟನ ಚಳವಳದಲ್ಲಿ ಸೇರಿದ್ದಾರಲ್ಲದೆ ಅದಕ್ಕಿಂತ ಮುಂಚೆಯೆ ಅನೇಕ ಕಡೆಗಳಲ್ಲಿ ಮಹಮ್ಮದೀಯರು ಹಿಂದುಗಳ ವಿತ್ತ ಜೀವಿತವನ್ನು ಹಾಳುಮಾಡಿದ್ದಾರೆ. ಮಲಬಾರದಲ್ಲಿ ಅನರ್ಥವು ನಡೆದಾಗ ಮುಲ್ತಾನಿನಲ್ಲಿ ಭಯಂಕರ ಪ್ರಕಾರಗಳು ವರ್ತಿಸಿದಾಗ ಯಾವ ಪಂಡಿತಜಿಯವರಿದ್ದರು? ಯಾವ ಲಾಲಾಜಿಯವರಿದ್ದರು? ಅನೇಕ ಕಡೆಗಳಲ್ಲಿ ಇಂಥ ಅನ್ಯಾಯಗಳು, ಧರ್ಮಚ್ಛಲಗಳು ನಡೆದ ಮೇಲೆಯೆ, ಸ್ವಧರ್ಮ ಬಂಧುಗಳ ದುರ್ಬಲತೆಯನ್ನು ನೋಡಲಾರದೆ ಪಂಡಿತಜಿಯವರೂ ಲಾಲಾಜಿಯವರೂ ಈ ಚಳವಳದಲ್ಲಿ ಸೇರಿದರು. ಮುಂಚೆ ಯಾವದು, ಮತ್ತೆ ಯಾವದು ಎಂಬ ಪೌರ್ವಾಪರ್ಯವನ್ನಾಲೋಚಿಸದೆ ವಿಧಾನಗಳನ್ನು ಮಾಡುವುದು ಮೂರು ತಿಂಗಳಿನ ಆಡ ಮರಿಗೆ 'ನೀನು ಆರು ತಿಂಗಳ ಹಿಂದೆ ಬೈದಿದ್ದಿ' ಎಂದು ತೋಳವು ಹೇಳುವಂತೆಯೆ ಸರಿ. ಈ ವಕ್ರನೀತಿಯು ಕಿಶ್ಲುಗಳಂಥವರಿಗೆ ಮಾತ್ರ ಒಪ್ಪೀತಲ್ಲದೆ ಅನ್ಯರಿಗಲ್ಲ. ಮತ್ತು ಇಂಥಾ ನೀತಿಯನ್ನು ಆಡುವವರೆ ಸಂಘಟನವನ್ನು ಮಹಮ್ಮದೀಯರು ಮಾತ್ರ ಮಾಡಬೇಕು, ಹಿಂದುಗಳು ಮಾಡಬಾರದು ಎಂದು ಹೇಳಿದರೆ ಅದಕ್ಕೆ ಶೋಭೆಯಲ್ಲವೆ? ಈ ತರದ ಸ್ವಾರ್ಥಪರವಾದ ವಿಚಾರಸರಣಿಯವರ ಬಾಯಿಂದ "ನಾವು ತಿರುಗಿ ಮಹಮ್ಮದೀಯ ರಾಜ್ಯವನ್ನು ಸ್ಥಾಪಿಸುವೆವೆಂಬ ಮಾತುಗಳು ಬರುವುದು ಆಶ್ಚರ್ಯವೆ? ಆದರೆ ಕಿಶ್ಲು ಪ್ರಭೃತಿಗಳು ಚನ್ನಾಗಿ ತಿಳಿದಿರಬೇಕಾದ್ದೇನೆಂದರೆ ಈಗಿನ ಶತಮಾನಗಳಲ್ಲಿ ಪ್ರಾತಿನಿಧಿಕ ಸ್ವರೂಪದ ರಾಜ್ಯ ಪದ್ಧತಿ ಮಾತ್ರ ನಿಂತೀತಲ್ಲದೆ ಮಹಮ್ಮದೀಯ ರಾಜ್ಯ ಸ್ಥಾಪಿಸ್ಯೇವು, ಯಹುದಿ ರಾಜ್ಯ ಸ್ಥಾಪಿಸ್ಯೇವು ಎಂಬಿತ್ಯಾದಿ ಧರ್ಮ ಭ್ರಾಂತಿಯ ಗೊಂಬೆಗಳನ್ನು ನಿಲ್ಲಿಸೇವೆಂದು ನೆನಸುವುದು ವ್ಯರ್ಥವಾಗಿದೆ. ಅಂಥ ದಿವಸಗಳು ಈಗ ಸಂಪೂರ್ಣವಾಗಿ ನಾಮಶೇಷವಾದವು.

ಜಾಫರ ಅಲ್ಲಿ ಖಾನರೆಂಬವರು ಇನ್ನೂ ಭಯಂಕರವಾದ ವಿಷವನ್ನು ಕಾರಿದ್ದಾರೆ. "ಸ್ವರಾಜ್ಯ ಚಳವಳವು ಸತ್ತು ಹೋಯಿತು. ಬ್ರಿಟಿಷರ ಯೂನಿಯನ್ ಜೆಕು ಇನ್ನಷ್ಟು ವೈಭವದಿಂದ ಬೀಸುತ್ತಿದೆ. ನಮ್ಮ ಮಹಮ್ಮದೀಯ ಪೂರ್ವಜರು ಈ ದೇಶವನ್ನು ೮೦೦ ವರ್ಷ ಆಳಿದ್ದಾರೆ. ಅಂಥವರ ಪರಂಪರೆಯವರೂ ಅನುಯಾಯಿಗಳೂ ಆದ ನಾವು ಇಂಥ ಹೀನ ಸ್ಥಿತಿಯಲ್ಲಿ ಸರ್ವಥಾ ಇರಕೂಡದು. ಇಂಗ್ಲಿಷರಂತೆ ಮಹಮ್ಮದೀಯರಾದ ನಾವು ಕೂಡ ಹಿಂದುಸ್ಥಾನದ ಆಳ್ಕರಾಗಬೇಕು. ಇಂಗ್ಲಿಷರು ನಮ್ಮ ಬಂಧುಗಳು. 'ನಾವಿಬ್ಬರು ಎಡಿಮನ ಸಂತತಿಯವರು; ಆದ್ದರಿಂದ ನಮಗೆ ಇಂಗ್ಲಿಷರೊಡನೆ ಜಗಳವಿಲ್ಲ. ಆದರೆ ಹಿಂದುಗಳ ವಿಷಯವು ಮಾತ್ರ ಬೇರೆಯಾಗಿದೆ. ಅವರು ವಿಗ್ರಹಾರಾಧಕರು. ಹಿಂದುಗಳು ಮೂರ್ತಿಗಳನ್ನು ಕಿತ್ತುಹಾಕುವ ವರೆಗೆ, ಮೂರ್ತಿ ಪೂಜಕತ್ವವನ್ನು ಬಿಡುವ ವರೆಗೆ ಅವರು ಆಳ್ಕರಾಗಲು ಅರ್ಹರಲ್ಲ. ಗ್ರೀಕರೂ, ಇಜಿಪ್ಶಿಯನರೂ ಬೆಬಿಲೋನಿಯದವರೂ ವಿಗ್ರಹಾರಾಧಕರಾಗಿದ್ದರಿಂದಲೆ ನಶಿಸಲ್ಪಟ್ಟರು. ಈಗ ಅವರ ಯಾವ ಚಿಹ್ನೆಯೂ ಉಳಿಯಲಿಲ್ಲ."

ಸಾಕು. ಬುದ್ಧಿ ಚಲಿಸಿದವರ ಮಾತುಗಳಿಗೆ ಹೆಚ್ಚಿನ ಬೆಲೆಗೊಡಬಾರದು. ಡಿಲ್ಲಿಯಲ್ಲಿ ಸ್ಥಾಪಿತವಾದ ಮತ್ತು ಹಿಂದುಸ್ಥಾನದಲ್ಲಿ ಹಂಡುತ್ತಿದ್ದ ಮೊಗಲ ಸಾಮ್ರಾಜ್ಯವು ನಾಶಹೊಂದಲು ಕಾರಣವೇನಾಯಿತು? ಅದು ಮೂರ್ತಿಯನ್ನೆ ಆರಾಧಿಸ ಹತ್ತಿತೆ? ಟೀಪು ಸಾಹೇಬರ ಆಳಿಕೆಯು ಯಾಕೆ ಹೋಯಿತು? ಟೀಪುವಿಗೆ ವಿಗ್ರಹವು ಮುಟ್ಟಿತೆ? ಈ ಜಾಫರ ಖಾನನಂಥ ವಿಕೃತ ಬುದ್ಧಿಯ ಗೃಹಸ್ಥನು ಐತಿಹಾಸಿಕ ಸತ್ಯವೆಂದು ಬಾಯಿಗೆ ಬಂದುದನ್ನು ಮಾತಾಡತೊಡಗಿದರೆ ಅಂಥವನ ಬಾಯಿ ಕಟ್ಟುವುದು ಸಾಧ್ಯವಿಲ್ಲ. ಆದರೂ ಕೇಳುವವರು ತಮ್ಮ ಕಿವಿಗಳನ್ನಾದರೂ ಮುಚ್ಚಿಕೊಳ್ಳುವುದು ಶಿಷ್ಟಲಕ್ಷಣವಾಗಿದೆ. ಎಲ್ಲರ ರಾಜ್ಯಗಳೂ ಹೋಗುತ್ತವೆ. ಒಳ್ಳೆಯವರದೂ ಹೋಗುತ್ತವೆ. ಕೆಟ್ಟವರದೂ ಹೋಗುತ್ತವೆ. ಇತಿಹಾಸ ಪ್ರವರ್ತಕನಾದ ಹೆರೊಡೋಟಸನು ಹೇಳುವಂತೆ ದುಷ್ಟರಂತೆ ಶಿಷ್ಟರು ಕೂಡ ತಮ್ಮ ರಾಜ್ಯಗಳನ್ನು ಕಳಕೊಳ್ಳುತ್ತಾರೆ. ಈ ಹೊತ್ತು ಇದ್ದ ವೈಭವವು ನಾಳೆ ಒಂದು ವೇಳೆ ಮಾಯವಾಗಬಹುದು. ಆದ್ದರಿಂದ ಗ್ರೀಕ್, ಇಜಿಪ್ಶಿಯನ್ ಮುಂತಾದವರ ರಾಜ್ಯಗಳು ವಿಗ್ರಹಾರಾಧನೆಯ ದೆಸೆಯಿಂದ ನಾಶವಾದವೆಂದು ವಾದಿಸುವುದು ಮೂರ್ಖತನವಾಗಿದೆ.

ಇಂಥ ಮೂರ್ಖತನದ ವಿಧಾನಗಳಿಂದಲೂ, ಸ್ವಾರ್ಥಪಂತೆಯ ಮಾತುಗಳಿಂದಲೂ ಪರಸ್ಪರ ದ್ವೇಷವನ್ನು ಹೆಚ್ಚಿಸುವದು, ವೈರವನ್ನು ಬೆಳಸುವದು ಎಂದೂ ಯೋಗ್ಯವಲ್ಲ. ಸಮಾಜದೊಳಗಿನ ಇತರ ವಿವೇಕಿಗಳೂ, ದೂರದರ್ಶಿಗಳೂ, ಮುತ್ಸದಿಗಳೂ, ಸಜ್ಜನರೂ ಆದ ಮುಖಂಡರು ಪೆಟ್ರೋಲ್ ಸ್ವರೂಪಿಗಳಾದ ಸಮಾಜ ಕಂಟಕರನ್ನು ಆಗಾಗ್ಗೆ ಎಚ್ಚರಿಸುತ್ತ ಅವರ ದುಃಸ್ವಭಾವವನ್ನು ಹೋಗಲಾಡಿಸಲು ಯತ್ನಿಸಿ ಎಲ್ಲ ಸಮಾಜಗಳ ಮತ್ತು ಮತಗಳ ಐಕ್ಯವನ್ನು ಸಾಧಿಸಿ ಸ್ವರಾಜ್ಯವನ್ನು ಸಂಪಾದಿಸಬೇಕೆಂದು ನಮ್ಮ ಪ್ರಾರ್ಥನೆ.

ಸ್ಫುಟವಿಚಾರಗಳು.

೧. ರ್‍ಯಾಟ್ ಓನರೆಬಲ್ ಶ್ರೀನಿವಾಸ ಶಾಸ್ತ್ರಿಗಳು ರಾಜಕೀಯ ವಾತಾವರಣದಿಂದ ನಿವೃತ್ತರಾಗಿ ಸಾಧಾರಣ ಆರು ಮಾಸಗಳಾಗುತ್ತ ಬಂದವು. ದೇಹ ಪ್ರಕೃತಿಯು ನೆಟ್ಟಗಿಲ್ಲದಿದ್ದುದರಿಂದ ಶಾಸ್ತ್ರಿಗಳು ರಾಜಕೀಯ ಸನ್ಯಾಸವನ್ನು ಸ್ವೀಕರಿಸಿದ್ದರು. ಆದರೂ ಹಿಂದುಸ್ಥಾನದ ಪ್ರಕೃತಿಮಾನದಲ್ಲಿ ಬದಲಾವಣೆಯಾಗುವ ಸೂಚನೆಗಳು ಕಂಡು ಬಂದ ಕೂಡಲೆ ಶ್ರೀಯುತರು ತಮ್ಮ ಅಭಿಪ್ರಾಯವನ್ನು ಹೊರಪಡಿಸಿ ಮಹತ್ವವನ್ನು ಹೊಂದುತ್ತಿರುವರು. ಇದು ಅವರ ಸ್ವಾಭಾವಿಕ ಗುಣವಾಗಿದ್ದರೂ ಸದ್ಯದಲ್ಲಿ ಅವರಿಂದ ಹೊರಬಿದ್ದ ಮಾತುಗಳು ಮನನೀಯವಾಗಿವೆ. ದೇಶದಲ್ಲೆಲ್ಲ ಪಾರ್ಟಿ ವೈಮನಸ್ಯವು ಇದ್ದುದು ಶಾಸ್ತ್ರಿಗಳಿಗೆ ಸಹನವಾಗುವುದಿಲ್ಲ! ಸ್ವತಂತ್ರಪಕ್ಷ ಹಾಗು ಶಾಂತಪಕ್ಷ ಇವುಗಳ ಸಂಗಮದಿಂದ ಎಸೆಂಬ್ಲಿಯ ಕಳೆದ ಅಧಿವೇಶನದಲ್ಲಿ ಯಾವ ಅನಾಹುತಗಳು ಬಂದೊದಗಿದವೊ ಅವು ಸರ್ವಥಾ ಇವರನ್ನು ಪೀಡಿಸುತ್ತಿವೆ. ಅವರು ಹೇಳುತ್ತಾರೆ:— "ರಾಜಕಾರಣದಲ್ಲಿ ತಾವೆಲ್ಲವರೂ ಒಗ್ಗಟ್ಟಿನಿಂದ ಹೋರಾಡುವದು ಯೋಗ್ಯವು. ಮುಖ್ಯವಾಗಿ ಸ್ವರಾಜ್ಯ ಪಾರ್ಟಿ-ಸ್ವತಂತ್ರ ಪಾರ್ಟಿಗಳಲ್ಲಿ ಭದ್ರವಾದ ಐಕ್ಯವಾಗುವದು ಹಿತಾವಹವಾಗಿದೆ. ನಮಗೂ ಸ್ವರಾಜ್ಯಪಾರ್ಟಿಯವರಿಗೂ ಹೆಚ್ಚಿನ ಭೇದವಿಲ್ಲ. ಸಮಯವು ಒದಗಿದಾಗ ನಾವೂ ಕೂಡ, ಶಾಂತಪಕ್ಷದವರೂ ಸಹ ಸ್ವರಾಜ್ಯಪಾರ್ಟಿಯವರೊಡನೆ ಸಹಕಾರವನ್ನು ಮಾಡಿ ಉಪರೋಧವನ್ನು ನಡಿಸಿರುವೆವು. ಆದ್ದರಿಂದ ಉಪರೋಧವು ಶಾಂತಪಕ್ಷದವರಿಗೆ ಅನುಮತಿ ಇಲ್ಲವೆಂದು ಹೇಳಲಾಗುವುದಿಲ್ಲ. ಒಂದು ವೇಳೆ ಚಿಕ್ಕ ವಿಷಯಗಳಲ್ಲಿ ಭೇದವಿರಬಹುದು. ಆದರೆ ಸ್ವರಾಜ್ಯಪಾರ್ಟಿಯವರು ತಮ್ಮಲ್ಲಿಯ ಕೆಲವಂಶವನ್ನು ಬದಲಾಯಿಸಿದಲ್ಲಿ ನಮ್ಮ ಸಹಾಯ್ಯವೂ ಸಹ ದೊರಕೀತೆಂಬುದರಲ್ಲಿ ಸಂಶಯವಿಲ".

೨. ಈ ಪ್ರಕಾರ ನಾಮದಾರ ಶ್ರೀನಿವಾಸ ಶಾಸ್ತ್ರಿಗಳು ಕಳೆದ ವಾರ ಸರ್ವೆಂಟ್ ಒಫ್ ಇಂಡಿಯಾ ಪತ್ರಿಕೆಯಲ್ಲಿ ಬರೆದಿರುವರು. ಶಾಂತಪಕ್ಷದ ಅಗ್ರಣಿಗಳಾದ ಇವರು ಮೆಲ್ಲಮೆಲ್ಲನೆ ಮುಂದರಿಯುತ್ತ ಬರುತ್ತಾರೆಂಬುದರಲ್ಲಿ ತಿಲಮಾತ್ರವೂ ಸಂಶಯವಿಲ್ಲ. ಆದರೆ ಇವರ ಹೇಳಿಕೆಯಲ್ಲಿರುವ ಕೊನೆಯ ಅಂಶವು ಮಾತ್ರ ಸಾಧ್ಯವಾಗದ ಸಂಗತಿಯಾಗಿದೆ. ಮೊದಲು ಇದೆ ಶ್ರೀನಿವಾಸ ಶಾಸ್ತ್ರಿಗಳು ಉಪರೋಧದ ತತ್ವಕ್ಕೆ ಸಂಪೂರ್ಣ ವಿರೋಧಿಗಳಾಗಿದ್ದರು. ಆದರೆ ಇಂದಿಗೆ ಅವರು ಪೂರ್ವದ ಮೆಟ್ಲನ್ನೂ ದಾಟಿ ಅದೆ ಉಪರಥವು ತಮಗೆ ಸಮ್ಮತಿಯಿದೆ ಎಂದು ಹೇಳುತ್ತಿದ್ದಾರೆ. ಇದರಂತೆಯೆ ಅವರು ಮುಂದರಿಸಿ ಸ್ವರಾಜ್ಯಪಾರ್ಟಿಯವರೊಡನೆಯೆ ಬಂದು ಸೇರ್‍ಯಾರೆಂದು ನಾವು ನಂಬಬೇಕಾಗಿದೆ.

೩. ಕಳೆದ ವರ್ಷದ ಇಂಗ್ಲಿಷ ಪಾರ್ಲಿಮೆಂಟಿನಲ್ಲಿ ಮಂತ್ರಿತ್ವವನ್ನು ಸ್ವೀಕರಿಸುವುದು ಕಷ್ಟವೆಂದು ಹೇಗೆ ಕಂಡುಬಂದಿತ್ತೊ ಅದೆ ಪ್ರಕಾರ ಫ್ರಾನ್ಸದಲ್ಲಿಯೂ ಕೂಡ ಈ ತರದ ಸಂಕಟವು ಬಂದೊದಗಿದೆ. ಇಷ್ಟರ ವರೆಗೆ ಎಂ. ಹೆರಿಯಟ್‌ರು ಮುಖ್ಯಮಂತ್ರಿಗಳಾಗಿದ್ದರು. ಆದರೆ ಕಳೆದ ಸಿನೆಟ ವೋಟಿಂಗಿನಲ್ಲಿ ಅವರ ಠರಾವು ಬಿದ್ದುಹೋದದರಿಂದ ಅವರು ಹಾಗು ಅವರ ಪಾರ್ಟಿಯವರು ಮಂತ್ರಿತ್ವಕ್ಕೆ ರಾಜಿನಾಮೆಯನ್ನು ಕೊಟ್ಟರು. ಅನಂತರದ ಸ್ಥಾನವನ್ನು ಯಾರಿಗೆ ಕೊಡಬೇಕೆಂದು ನಿಶ್ಚಯಿಸುವದು ಬಹು ಕಷ್ಟವಾಗಿದೆ. ಇಬ್ಬರು ಮೂವರು ನಾಯಕರನ್ನು ಮಂತ್ರಿತ್ವವನ್ನು ಸ್ವೀಕರಿಸೆಂದು ಹೇಳಿದರೆ ಅವರು ಹಿಂಜರಿಯುತಿದ್ದಾರೆ. ಕಟ್ಟ ಕಡೆಗೆ ಮ. ಪೆನಲೀವ ಇವರು ಒಂದು ಸಂಯುಕ್ತ ಮಂತ್ರಿ ಮಂಡಲವನ್ನು ಸ್ಥಾಪಿಸಲು ಒಪ್ಪಿರುವರು. ಈ ಪ್ರಕಾರ ಇಂಗ್ಲಂಡಿನಲ್ಲಿ ಒಂದು ವರ್ಷದ ಹಿಂದೆ ಮಂತ್ರಿತ್ವ ವಿಷಯದಲ್ಲಿ ಯಾವ ಪ್ರಕಾರವಾಗಿ ದೊಡ್ಡ ಚರ್ಚೆಯು ಉದ್ಭವಿಸಿತ್ತೊ ಅದೇ ಮೇರೆಗೆ ಫ್ರಾನ್ಸದಲ್ಲೂ ಕೂಡ ಗಲಭೆಯು ಎದ್ದಿರುವದು. ಸಂಯುಕ್ತ ಮಂತ್ರಿ ಮಂಡಲವು ಯಶಸ್ವಿಯಾಗಿ ನಡೆಯುವದುಬಹುಕಷ್ಟವಾಗಿದೆ. ಹೇಗಿದ್ದರೂ ಇಂಗ್ಲಂಡದ ಇತಿಹಾಸದಲ್ಲಿ ಕಡೆಯ ತನಕ ಯಶಸ್ವಿ ರೀತಿಯಿಂದ ಸಂಯುಕ್ತ ಮಂತ್ರಿ ಮಂಡಲವು ನಡೆದುದ್ದು ಇಲ್ಲವೆ ಇಲ್ಲ. ಫ್ರಾನ್ಸದಲ್ಲಿ ಮಾತ್ರ ಅದು ಹೇಗೆ ಸಂಭವಿಸೀತು? ಒಂದು ವೇಳೆ ಇಂಥಾ ಹೊಸ ಸಂಗತಿಯು ನಡೆದ ಪ್ರಸಂಗದಲ್ಲಿ ಇಂಗ್ಲಂಡ ದೇಶವು ಫ್ರಾನ್ಸದೇಶದಿಂದ ಹೊಸ ರೀತಿಯನ್ನು ಕಲಿಯಬೇಕಾಗಿರುವುದು.

೪. ಮುಂಬಯಿಯ ಕೊರ್ಪರೇಶನಿನ ಅಧ್ಯಕ್ಷರ ಚುನಾವಣೆಯು ಕಳೆದವಾರ ನಡೆದು ಆ ಸ್ಥಾನವು ಬೆ. ಬಾಪ್ಟಿಸ್ಟಾ ಇವರಿಗೆ ಕೊಡೋಣಾಯಿತೆಂದು ತಿಳಿಸಲು ತುಂಬಾ ಸಂತೋಷವಾಗುತ್ತದೆ. ಬಾಪ್ಟಿಸ್ಟರು ಸ್ವರಾಜ್ಯ ಪಾರ್ಟಿಯವರಾಗಿದ್ದು ಲೋಕಮಾನ್ಯರ ಪಟ್ಟ ಶಿಷ್ಯರಾಗಿದ್ದರು. ಅಂಥ ದೇಶಭಕ್ತರಿಗೆ ಈ ಸ್ಥಾನವು ಸಿಕ್ಕಿದುದು ಯೋಗ್ಯವೆಂದೆ ಹೇಳಬೇಕು. ಮೊದಲಿನ ಚುನಾವಣೆಯಲ್ಲಿ ಶ್ರೀ. ಪಟೇಲರು ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದರು. ಮತ್ತು ಅವರ ಕಾಲದಲ್ಲಿ ಲೋಕಹಿತದ ಕೃತ್ಯಗಳು ಎಷ್ಟು ನಡೆದವೆಂಬುದು ವಾಚಕರ ಅವಗಾಹನೆಯಲ್ಲಿ ಇರಬಹುದು. ಆಫ್ರಿಕದಲ್ಲಿ ಹಿಂದಿಗಳನ್ನು ಅನ್ಯಾಯವಾಗಿ ನಡಿಸುತ್ತಾರಾದ್ದರಿಂದ ಬ್ರಿಟಿಷ ವಸ್ತುಗಳ ಬಹಿಷ್ಕಾರವನ್ನು ಕೊರ್ಪರೇಶನು ಆಚರಿಸಬೇಕಾಯಿತು. ಮತ್ತು ಈ ಠರಾವು ಈಗಲೂ ಕೂಡ ಆಚರಣೆಯಲ್ಲಿದೆ. ಅನಂತರ ಸ್ವತಃ ಪಟೇಲರು, ವೈಸರಾಯರ ಆಗಮನ ಕಾಲದಲ್ಲಿ ಹರತಾಳವನ್ನೂ ಆಚರಿಸಿದರು. ಇಂದಿಗೆ ಇಂಥ ಸ್ಥಾನಕ್ಕೆ ಬಂದ ಬಾಪ್ಟಿಸ್ಟ ಸಾಹೇಬರು ಕೂಡ ಅದೇ ರೀತಿಯಿಂದ ತಮ್ಮ ಆಳಿಕೆಯಲ್ಲಿ ಲೋಕಮತವನ್ನು ಪ್ರತಿಬಿಂಬಿಸಿ ಕೊರ್ಪರೇಶನಿನ ನಿಜವಾದ ಉಪಯೋಗವನ್ನು ಜನರಿಗೆ ಕೊಟ್ಟಾರೆಂದು ಭಾವಿಸುವೆವು.

೫. ಬರುವ ತಿಂಗಳ ತಾ. ೧—೨ರಲ್ಲಿ ದಕ್ಷಿಣಕನ್ನಡ ಜಿಲ್ಲಾ ಪರಿಷತ್ತಿನ ಅಧಿವೇಶನವು ಕಾರ್ಕಳದ ಸುಪ್ರಸಿದ್ಧ ಇತಿಹಾಸ ಪಟ್ಟಣದಲ್ಲಿ ಜರುಗುವದಾಗಿ ನಿಶ್ಚಿತವಾಗಿದೆ. ಶ್ರೀ. ದತ್ತಾತ್ರೇಯ ಬಾಲಕೃಷ್ಣ ಕಾಲೇಲಕರರೆಂಬುವರು ಅಧ್ಯಕ್ಷಸ್ಥಾನವನ್ನು ವಹಿಸುವವರಿದ್ದಾರೆ. ಈ ಅಧ್ಯಕ್ಷರು ನಮ್ಮ ಜಿಲ್ಲೆಯ ಮಟ್ಟಿಗೆ ಸುಪರಿಚಿತರಲ್ಲರಾದರೂ ನಮ್ಮ ಜಿಲ್ಲೆಯೊಳಗಿನ ಮಹನೀಯರ ಮಾರ್ಗದರ್ಶಿತೆಯಿಂದಲೂ ತರುಣ ಮಂಡಲಿಯ ಉತ್ಸಾಹದಿಂದಲೂ ಸಭಾಕಾರ್ಯಗಳು ನಿರ್ವಿಘ್ನವಾಗಿ ಸಾಂಗವಾದಾವೆಂದು ನಂಬಿದ್ದೇವೆ. ರಾಷ್ಟ್ರೀಯ ಸಭೆಯ ಮುಖ್ಯ ಸಂಸ್ಥೆಯಲ್ಲಿಯೆ ಮತಭೇದದ ದಶೆಯಿಂದಲೂ ಪ್ರೋತ್ಸಾಹಕರವಾದ ಕಾರ್ಯಕ್ರಮದ ಅಭಾವದಿಂದಲೂ ನಿರ್ಜೀವತೆಯು ಬಂದು ಹೋಗಿದೆ. ನೂಲಿನ ದುರಾಗ್ರಹದಲ್ಲಿ ಸುತ್ತು ಬಿದ್ದ ಕಾರಣ ರಾಷ್ಟ್ರೀಯ ಸಭೆಯು ಅಪ ಸಂಖ್ಯಾಕತ್ವ ದೋಷಕ್ಕೆ ಪುನಃ ಕಾರಣವಾಗಿದೆ. ನಮ್ಮ ಕರ್ನಾಟಕದ ಪರಿಸ್ಥಿತಿಯನ್ನೆ ಎತ್ತಿ ಹೇಳುವದಾದರೆ ಇತರ ಕಡೆಗಳಂತೆಯೆ ಇಲ್ಲಿಯೂ ಮೆಂಬರರು ಬಹು ಕಡಿಮೆ. ಇಡೀ ಕರ್ನಾಟಕದ ಪ್ರಾಂತದಲ್ಲಿ ೫೮೭ ಇಷ್ಟೆ ಕೊಂಗ್ರೆಸ್ಸು ಮೆಂಬರರಿದ್ದಾರೆ! ಈ ಮೇರೆಗೆ ಸರ್ವತ್ರ ಕುಗ್ಗುತ್ತ ಬರುವ ರಾಷ್ಟ್ರೀಯ ಸಭೆಯನ್ನು ಪುನಃ ಹೇಗೆ ಬಲವಂತವಾಗಿ ಮಾಡುವದೆಂಬುದು ಇಡಿ ರಾಷ್ಟ್ರದ ಪ್ರಶ್ನೆಯಾಗಿದೆ. ಇದನ್ನು ರಾಷ್ಟ್ರದೊಳಗಿನ ಇತರ ಮುಖಂಡರು ಬಿಡಿಸುವಾಗ ನಾವು ನಮ್ಮ ಜಿಲ್ಲೆಯ ಮತವನ್ನು ಪರಿಷತ್ತಿನ ಮುಖಾಂತರ ಪ್ರಾಂತಿಕ ಸಂಸ್ಥೆಗೂ ಮತ್ತು ಮಧ್ಯವರ್ತಿ ಸಂಸ್ಥೆಗೂ ತಿಳಿಸುವದು ನಮ್ಮ ಸತ್ಯನಿಷ್ಠೆಗೆ ಒಪ್ಪಿದ ಕರ್ತವ್ಯವಾಗಿದೆ. ಈ ಪವಿತ್ರ ಕರ್ತವ್ಯವನ್ನು ಕಾರ್ಕಳದಲ್ಲಿ ಜರಗುವ ಪರಿಷತ್ತು ನೆರವೇರಿಸೀತೆಂದು ನಾವು ದೃಢವಾಗಿ ನಂಬಿರುವೆವು. ಅಲ್ಲದೆ, ರಾಷ್ಟ್ರೀಯ ಸಭೆಯ ಮುಖ್ಯ ಧ್ಯೇಯವನ್ನು ಈ ಜಿಲ್ಲೆಯ ಜನರಲ್ಲಿ ಪಸರಿಸುವಂತೆ ಯೋಗ್ಯ ವ್ಯವಸ್ಥೆಯನ್ನು ಸಹ ಇಂದಿನ ಪರಿಷತ್ತು ಮಾಡುವುದು ಉಚಿತವು. ಇಂಥ ಉಪಾಯಗಳಿಂದ ನಮ್ಮಲ್ಲಿ ಲೋಕ ಜಾಗ್ರತೆಯು ಉತ್ಪನ್ನವಾಗಿ ಕರ್ನಾಟಕರು ಸಹ ಸ್ವರಾಜ್ಯ ಪಥದಲ್ಲಿ ಇತರರಂತೆ ಮುಂದರಿಸ್ಯಾರೆಂಬುವುದರಲ್ಲಿ ಸಂಶಯವೇನು?

೬. ದಕ್ಷಿಣ ಆಫ್ರಿಕದ ಕೋರ್ಟಿನಲ್ಲಿ ಒಂದು ವಿಚಿತ್ರ ಪ್ರಕಾರವು ನಡೆಯಿತು. ಒಬ್ಬ ಗೌರವರ್ಣದ ಹುಡುಗನು ಒಬ್ಬ ಕಪ್ಪು ಜನವನ್ನು ಬೈದನು. ನಿಷ್ಕಾರಣವಾಗಿ ಆ ಹುಡುಗನ ಬೈಗಳನ್ನು ತಿನ್ನಲು ಅಸಾಧ್ಯವಾಗಿ ಆ ಕಪ್ಪು ಮನುಷ್ಯನು ಹುಡುಗನ ಮೈಮೇಲೆ ಒಂದು ಚಿಕ್ಕ ಬೆತ್ತವನ್ನು ಎಸೆದನು. ಈ ಚಿಕ್ಕ ಅಪರಾಧಕ್ಕಾಗಿ ಅವನ ಮೇಲೆ ಕೋರ್ಟಿನಲ್ಲಿ ಖಟ್ಲೆಯು ದಾಖಲಾಯಿತು. ಮೆಜಿಸ್ಟ್ರೇಟರು ಈ ಖಟ್ಲೆಯ ತನಿಖೆಯಲ್ಲಿ ಮುಂದಿನಂತೆ ಒಂದೆರಡು ಅಭಿಪ್ರಾಯಗಳನ್ನು ವ್ಯಕ್ತಗೊಳಿಸಿದರು: "ಯುರೋಪಿಯ ಹುಡುಗರನ್ನು ಸ್ವಾಭಾವಿಕವಾಗಿಯೆ ಈ ರೀತಿಯಲ್ಲಿ ಬೆಳಸುವ ಪದ್ಧತಿಯು ಬಿದ್ದುಹೋಗಿರುವದರಿಂದ ಕಪ್ಪುಜನರನ್ನು ಬೈಯುವದೆ ತಮ್ಮ ಕರ್ತವ್ಯವೆಂದು ಅವರು ತಿಳಿಯುತ್ತಿದ್ದಾರೆ. ಮತ್ತು ಈ ಕಾರಣದಿಂದಲೆ ಈ ಹುಡುಗನು ಬೈದಿದ್ದಾಗಿದೆ." ಮೆಜಿಸ್ಟ್ರೇಟರು ಈ ಮೇರೆಗೆ ವಿಧಾನ ಮಾಡಿದ್ದು ಆ ಹುಡುಗನ ತಂದೆಗೆ ಮೆಚ್ಚಲಿಲ್ಲ. ಅವನಿಗೆ ಸಿಟ್ಟು ಬಂದು ಮೆಜಿಸ್ಟ್ರೇಟರ ಈ ಮಾತಿನಿಂದ ಯುರೋಪಿಯನರ ಗೌರವಕ್ಕೆ ಹಾನಿ ಬರುತ್ತದೆಂದು ತಿಳಿಯಹತ್ತಿದನು. ಪರಂತು ಇವನ ಈ ದುರ್ಬುದ್ಧಿಯನ್ನು ನೋಡಿ ಮೆಜಿಸ್ಟ್ರೇಟರು ಕೋರ್ಟಿನಿಂದ ಅವನನ್ನು ಹೊರಪಡಿಸಿದರು! ಆದರೆ ಈ ನ್ಯಾಯ ನಿರ್ಣಯದಲ್ಲಿ ಶುದ್ಧವಾದ ಹದಿನಾರಾಣೆಯ ನ್ಯಾಯವನ್ನು ಕೊಟ್ಟಲ್ಲಿ ಅದು ಅನ್ಯಾಯವಾದೀತೆಂದು ತಿಳಿದೋ ಏನೊ ಮೆಜಿಸ್ಟ್ರೇಟರು ಹೊರಪಡಿಸಿದ ಯುರೋಪಿಯನ ಗೃಹಸ್ಥರನ್ನು ಸಂತೋಷಪಡಿಸುವದಕ್ಕಾಗಿ ನೇಟಿವನಿಗೆ ನಾಲ್ಕು ಬೆತ್ತಗಳನ್ನು ಎಳಿಸಿದರು! ಮೊದಲು ನ್ಯಾಯಾಸನದ ಮೇಲೆ ಪವಿತ್ರರಾಗಿ ವಿರಾಜಮಾನರಾಗಿದ್ದರೂ ಕಡೆಗೆ ಈ ನ್ಯಾಯಾಧೀಶರಲ್ಲಿ ಮಂಥರೆಯು ಪ್ರವೇಶಿಸದೆ ಬಿಡಲಿಲ್ಲ. ಇರಲಿ ಇಂಥ ಶೋಚನೀಯ ಪ್ರಕಾರಗಳು ದಕ್ಷಿಣ ಆಫ್ರಿಕದಲ್ಲಿ ಎಷ್ಟೋ ಎಷ್ಟೋ ನಡಿಯುತ್ತಿದ್ದಾವೆ. ಆದರೂ ಜನರಲ್ ಸ್ಮಟ್ಸರು ಸರ್ವಾತ್ಮ ದೃಷ್ಟಿಯ ಮತ್ತು ಸಮಾನತ್ವದ ತತ್ವಜ್ಞಾನವನ್ನು ದೊಡ್ಡ ದೊಡ್ಡ ಸಭೆಗಳಲ್ಲಿ ಹೇಳುವುದನ್ನೂ ಬಿಡುವದಿಲ್ಲ.

ಮಂಗಳೂರು.

ಉಪ್ಪಿನಂಗಡಿ ತಾಲೂಕು ಬೋರ್ಡಿನ ಅಧಿವೇಶನವು ಇದೇ ತಿಂಗಳ ತಾ. ೧೭—೪—'೨೫ರಲ್ಲಿ ಕೂಡಿತ್ತು. ಮ। ರಾ। ರಾ। ಎಚ್. ಗಣಪತಿರಾಯರು ಹಂಗಾಮಿಯಾಗಿ ಈ ಸಭೆಯ ಅಧ್ಯಕ್ಷರಾಗಿದ್ದರು. ಮ। ರಾ। ರಾ। ಎಚ್. ಗಣಪತಿರಾಯರು ಮ। ರಾ। ರಾ। ಎಮ್. ಶಿವರಾಯರನ್ನು ತಾಲೂಕು ಬೋರ್ಡಿನ ಅಧ್ಯಕ್ಷರನ್ನಾಗಿ ಚುನಾಯಿಸ ಬೇಕೆಂತ ಸೂಚಿಸಿದರು. ಈ ಸೂಚನೆಯು ಮ। ರಾ। ರಾ। ಎಮ್. ರಾಮಕೃಷ್ಣ ಭಟ್ಟರಿಂದ ಅನುಮೋದಿಸಲ್ಪಟ್ಟಿತು. ಮ। ರಾ। ರಾ। ಎಮ್. ಹುಕ್ರಪ್ಪ ರೈಗಳವರು ಮ। ರಾ। ರಾ। ಬಿ. ದಾಸ ರೈಗಳವರನ್ನು ತಾಲೂಕು ಬೋರ್ಡು ಅಧ್ಯಕ್ಷರನ್ನಾಗಿ ಚುನಾಯಿಸ ಬೇಕೆಂತ ಸೂಚಿಸಿದರು. ಮತ್ತು ಈ ಸೂಚನೆಯು ಮ। ರಾ। ರಾ। ಪಿ. ರಾಮಚಂದ್ರಬನ್ನಿತ್ತಾಯರವರುಗಳಿಂದ ಅನುಮೋದಿಸಲ್ಪಟ್ಟಿತು. ಇದಾದ ಮೇಲೆ ಇಬ್ಬರು ಉಮೇದ್ವಾರರು ಇರುವದರಿಂದ ವೋಟುಗಳು ತೆಗಿಯೋಣಾದವು. ಮ। ರಾ। ರಾ। ಮೊಳಹಳ್ಳಿ ಶಿವರಾಯರಿಗೆ ೯ ವೋಟು ಸಿಕ್ಕಿದ್ದರಿಂದಲೂ ಮ। ರಾ। ರಾ। ದಾಸರೈಗಳವರಿಗೆ ೫ ವೋಟುಗಳು ಸಿಕ್ಕಿದ್ದರಿಂದಲೂ ಶಿವರಾಯರೇ ತಾಲೂಕು ಬೋರ್ಡು ಪ್ರೆಸಿಡೆಂಟರಾಗಿ ಚುನಾಯಿಸಲ್ಪಟ್ಟರು. ನಂತರ ಮ। ರಾ। ಬಿ. ಮಂಗೇಶರಾಯರು ಮ। ರಾ। ರಾ। ಎಸ್. ಎಸ್. ಕೃಷ್ಣರಾಯರನ್ನು ತಾಲೂಕು ಬೋರ್ಡಿನ ವ್ಯಾಸ ಪ್ರೆಸಿಡೆಂಟರಾಗಿ ಚುನಾಯಿಸಬೇಕೆಂತ ಸೂಚಿಸಿದರು. ಮ। ರಾ। ರಾ। ವಿ. ಲಕ್ಷ್ಮೀನಾಥ ಸ್ವಾಮಿಜಿ ಅರಸುರವರು ಈ ಸೂಚನೆಯನ್ನು ಅನುಮೋದಿಸಿದರು. ಈ ಸ್ಥಾನಕ್ಕೆ ಮತ್ಯಾರೂ ಉಮೇದ್ವಾರರು ಇಲ್ಲದ್ದರಿಂದ ಮ। ರಾ। ಎಸ್. ಎಸ್. ಕೃಷ್ಣರಾಯರನ್ನು ವ್ಯಾಸ ಪ್ರೆಸಿಡೆಂಟರನ್ನಾಗಿ ಚುನಾಯಿಸಿದ್ದಾಯಿತು. ಈ ತಾಲೂಕು ಬೋರ್ಡಿನ ಪರವಾಗಿ ಮ। ರಾ। ರಾ। ಎಚ್. ಗಣಪತಿರಾವ್; ಮ। ರಾ। ರಾ। ಬಿ. ಮಂಗೇಶರಾವ್ ಮತ್ತು ಮ। ರಾ। ರಾ। ಎಮ್. ರಾಮಣ್ಣ ಗೌಡರನ್ನು ಡಿಸ್ಟ್ರಿಕ್ಟ ಬೋರ್ಡು ಮೆಂಬರರಾಗಿ ಆರಿಸಿರುತ್ತಾರೆ. ತಾಲೂಕು ಬೋರ್ಡಿನ ಸ್ಟೇಂಡಿಂಗ್ ಕಮ್ಮಿಟಿಯ ಮೆಂಬರರನ್ನಾಗಿ ಮ। ರಾ। ರಾ। ಎಚ್. ಗಣಪತಿರಾವ್, ಬೆಳ್ತಂಗಡಿ ಮಂಗೇಶರಾವ್, ಬಿ. ದಾಸರೈ, ಮತ್ತು ಎಸ್. ಎಸ್. ಕೃಷ್ಣರಾವ್‌ರವರನ್ನು ಆರಿಸಲ್ಪಟ್ಟಿತು. ಪ್ರೆಸಿಡೆಂಟರು ಈ ಕಮ್ಮಿಟಿಯ ಪ್ರೆಸಿಡೆಂಟರಾಗಿರುತ್ತಾರೆ.

ಜಿಲ್ಲಾ ಕಲೆಕ್ಟರ ದೊರೆಗಳವರಾದ ಸೊಟೆಲ್ ಸಾಹೇಬರಿಂದ ಚಾರ್ಜನ್ನು ಇದೇ ಬರುವ ಮೇ ತಿಂಗಳ ೯ನೇ ತಾರೀಕಿನೊಳಗೆ ವಿ. ಜೆ. ಡಬ್ಲ್ಯುವೆಲ್ಲ ದೊರೆಗಳವರು ವಹಿಸಿಕೊಳ್ಳುರೆಂತ ತಿಳಿದುಬರುತ್ತದೆ.

ಕಾಸರಗೋಡು ತಾಲೂಕು ಬೋರ್ಡಿಗೆ ಮ। ರಾ। ರಾ। ಎಸ್. ಎಸ್. ರಾಮರಾವ್‌ರವರು ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟಿರುತ್ತಾರೆ. ವೈಸ್ ಪ್ರೆಸಿಡೆಂಟರ ಮತ್ತು ಈ ತಾಲೂಕ ಬೋರ್ಡಿನಿಂದ ಡಿಸ್ಟ್ರಿಕ್ಟ ಬೋರ್ಡು ಮೆಂಬರುಗಳ ಚುನಾವಣೆಯು ಇನ್ನು ಬಾಕಿ ಇರುವದು.

ಮದರಾಸಿನಲ್ಲಿರುವ ಸರಕಾರದ ವಸ್ತ್ರ ನೇಯಿಗೆಯ ಕಲಾಶಾಲೆಯಲ್ಲಿ ಸುಪರ್‌ವೈಜರರ ಮತ್ತು ಕೆಲಸಗಾರರ ತರಬೇತಿ ಶಿಕ್ಷಣದ ಪ್ರಾರಂಭವು ಇದೇ ಬರುವ ಜುಲಾಯಿ ತಿಂಗಳ ತಾ. ೬ನೇಯಿಂದಾಗುವುದು. ಈ ಶಿಕ್ಷಣದ ಬಗ್ಗೆ ದಾಖಲುಮಾಡಿಕೊಳ್ಳಲು ಮನಸ್ಸುಳ್ಳ ಉಮೇದ್ವಾರರು ಇದೇ ಬರುವ ಜೂನು ತಾ. ೧೫ರೊಳಗೆ ಮನವಿಮಾಡಿಕೊಳ್ಳತಕ್ಕದ್ದು. ಮನವಿಮಾಡಿಕೊಳ್ಳತಕ್ಕ ವಿಳಾಸ ಗವರ್ನಮೆಂಟ ಟೆಕ್ಸ ಟ್ಯಾಲ್ ಇನ್‌ಸ್ಟಿಟ್ಯೂಟ್ ಮುಖರನಲ್ಲಿ ಮತ್ತು ಸ್ಟ್ರೀಟ್, ಜೋರ್ಜ ಟೌನ್ ಮದ್ರಾಸು. ಕೆಲಸಗಾರರ ಅಥವಾ ಆರ್ಟಿಸನ್ ತರಬೇತಿಯು ಆರು ತಿಂಗಳ ವರೆಗೆ ಮಾತ್ರ ಇದೆ. ಸುಪರ್‌ವ್ಯಾಜರರ ತರಬೇತಿಯು ಎರಡು ವರುಷಗಳದ್ದಾಗಿರುವುದು.

ಇಲ್ಲಿಯ ಸ್ಪೇಶನರಿ ಸಬ್ ಮೆಜಿಸ್ಟ್ರೇಟರಾಗಿರುವ ಮ। ರಾ। ರಾ। ವರ್ಕಾಡಿ ವೆಂಕಟರಾಯರಿಗೆ ಪುತ್ತೂರಿಗೂ ಪುತ್ತೂರಿನ ಸಬ್ ಮೆಜಿಸ್ಟ್ರೇಟರಾಗಿರುವ ಮಿ। ಡಿ'ಸೋಜರಿಗೆ ಇಲ್ಲಿಗೂ ವರ್ಗವಾಗಿಯದೆ.

ಮಂಗಳೂರು ತಹಸೀಲ್ದಾರರಾಗಿರುವ ಮ। ರಾ। ರಾ। ಎಮ್. ಗಣೇಶರಾಯರಿಗೆ ಪುತ್ತೂರಿಗೂ ಪುತ್ತೂರು ತಹಸೀಲ್ದಾರರಾಗಿರುವ ಮ। ರಾ। ಸುಜೀರ ಬಾಬುರಾಯರಿಗೆ ಮಂಗಳೂರಿಗೂ ವರ್ಗವಾಗಿರುವುದು.

ಇಲ್ಲಿಯ ಟ್ರೆಜರಿ ಡಿಪ್ಯುಟಿ ಕಲೆಕ್ಟರರವರು ಟ್ರೆಜರಿ ಇನ್‌ಸ್ಪೆಕ್ಶನ್ ಬಗ್ಗೆ ಕುಂದಾಪುರಕ್ಕೆ ಹೋಗಿರುವುದರಿಂದ ಖಜಾನಾ ಚಾರ್ಜು ಹೆಡ್‌ಕ್ವಾಟರ್ಸ್ ಡಿಪ್ಯುಟಿ ಕಲೆಕ್ಟರರು ವಹಿಸಿಕೊಂಡಿರುವರು.

ಶ್ರೀ. ಕಾರ್ನಾಡ ಸದಾಶಿವರಾಯರು ಡಿಸ್ಟ್ರಿಕ್ಟ ಬೋರ್ಡಿನ ನೋಮಿನೇಟೆಡ್ ಸೀಟನ್ನು ವಹಿಸಿಕೊಂಡದ್ದರಿಂದ ಕರ್ನಾಟಕ ಕೊಂಗ್ರೆಸ್ಸು ಕಮ್ಮಿಟಿಗೆ ಅಪಮಾನವನ್ನು ತಂದರೆಂತ ಒಂದು ಉದ್ದವಾದ ಬಾತ್ಮೀಪತ್ರವು ಪ್ರಕಟನೆಗೆ ಕೊಂಗ್ರೆಸ್ ಸದಸ್ಯರೊಬ್ಬರಿಂದ ಬಂದಿರುತ್ತದೆ. ಈ ಲೇಖದಲ್ಲಿ ಹಲವು ವ್ಯಕ್ತಿಪರದೋಷಾರೋಪಣೆಗಳಿದ್ದದ್ದರಿಂದ ಅದನ್ನು ಪ್ರಕಟಿಸಲಿಲ್ಲ. ಬಾತ್ಮೀದಾರರು ತಮ್ಮ ಪತ್ರದಲ್ಲಿ ಸೂಚಿಸೋಣಾದ ಹಲವು ಸಂಶಯಗಳಿಗೆ ಉತ್ತರಗಳನ್ನು ಶ್ರೀ ಸದಾಶಿವ ರಾಯರಿಂದಲೇ ತಿಳಕೊಂಡು ವ್ಯಕ್ತಿಪರ ಆರೋಪಣೆಗಳನ್ನು ತೆಗದುಹಾಕಿ ನಂತರ ಇಂಥಾ ಬಾತ್ಮೀ ಪತ್ರವನ್ನು ಪ್ರಕಟಿಸುವದು ಉತ್ತಮವೆಂತ ಕಾಣುತ್ತದೆ.

ಮಂಗಳೂರು ತಾಲೂಕು ಬೋರ್ಡಿನ ಒಬ್ಬ ಮೆಂಬರರ ಅವಧಿಯು ೧೯೨೫ನೇ ಜೂನ್ ತಾ. ಲಕ್ಕೆ ಗುಜಾರಾಗುವುದರಿಂದ ಮಂಗಳೂರು ಸರ್ಕಲಿಗೆ ಒಬ್ಬ ಮೆಂಬರರನ್ನು ಚುನಾಯಿಸಬೇಕಾಗಿದೆ. ಈ ಬಗ್ಗೆ ನೋಮಿನೇಷನ್ ಪೇಪರುಗಳನ್ನು ಇದೇ ಬರುವ ಮೇ ತಾರೀಖು ೧೧ನೇ ಸೋಮವಾರ ಅಪರಾಹ್ನ ೧೧ಂಟೆ ಇರಿಂದ ನಾಲ್ಕರೊಳಗೆ ಬೋರ್ಡು ಆಫೀಸಿನಲ್ಲಿ ಹಾಜರು ಮಾಡಬೇಕಾಗಿರುವುದು. ನೋಮಿನೇಶನುಗಳು ಪರಿಶೋಧಿಸಲ್ಪಟ್ಟು ಮೇ ತಾ. ೧೩ಕ್ಕೆ ಪ್ರಕಟಿಸಲ್ಪಡುವವು. ಚುನಾವಣೆಯು ಇದ್ದ ಸಂದರ್ಭದಲ್ಲಿ ಅದು ತಾಲೂಕು ಬೋರ್ಡು ಆಫೀಸಿನಲ್ಲಿ ಜೂನ್ ತಾರೀಖು ೧ನೇ ಸೋಮವಾರ ನಡಿಯುವುದು.

ಪತ್ರವ್ಯವಹಾರ.

ಕೌನ್ಸಿಲು ಮೆಂಬರುತನವು ಯಾರಿಗಾಗುವುದು?

ಅಯ್ಯಾ,

ತಾ. ೨೦ನೇ ದಿವಸ ಜಿಲ್ಲೆಯ ೬೦ ಯಾ ೭೨ ಪೋಲಿಂಗ್ ಠಾಣ್ಯಗಳಲ್ಲಿ ಚುನಾವಣೆಯು ನಡೆದು ಕೌನ್ಸಿಲಿಗೆ ಮೂರು ಜನ ಉಮೇದ್ವಾರರಲ್ಲಿ ಮೂವರಿಗೂ ವೋಟುಗಳು ಕೊಡೋಣಾಗಿ ಮೂವರಲ್ಲೊಬ್ಬರು ಖಂಡಿತವಾಗಿ ಚುನಾಯಿಸಲ್ಪಟ್ಟಿರುತ್ತಾರೆಂಬುದು ನಿಶ್ಚಿತವಾದರೂ ಹೀಗೆ ಚುನಾಯಿಸಲ್ಪಟ್ಟವರ ಹೆಸರು ಈ ತಿಂಗಳ ೩೦ನೇ ತಾರೀಕಿನ ಮೊದಲು ತಿಳಕೊಳ್ಳಲು ಸಾಧ್ಯವಾಗದೆ ಇರುವದರಿಂದ ೩೦ನೇ ತಾರೀಕಿನ ವರೆಗಾದರೂ "ಕೌನ್ಸಿಲು ಮೆಂಬರುತನವು ಯಾರಿಗಾಗುವುದು" ಎಂಬ ಪ್ರಶ್ನೆಯ ವಿಚಾರವನ್ನು ವೋಟರರ ಪಟ್ಟಿಗಳನ್ನು ಹಿಡಿದು ಕೆಂಪು ಪಚ್ಚೆ ಪೆನ್ಸಿಲುಗಳಿಂದ ಆಯಾ ಹೆಸರುಗಳಿಗೆ ಗುರ್ತು ಹಾಕಿ ಒಂದು ಸರ್ತಿ ಅಲ್ಲ, ನಾಲ್ಕಾರು ಸರ್ತಿಯಾದರೂ ಕೂಡಿಸಿ, ಕಳೆದು ನೋಡಿ ಮೆಂಬರುತನವು ಯಾರಿಗಾಗುವದೆಂಬುವ ವಿಚಾರಶೋಧನೆಯ ವೇಗವು ಹಲವು ತಲೆಗಳನ್ನು ಸುತ್ತುತ್ತಿರುವದು. ಮಂಗಳೂರು ಶಹರಿನಲ್ಲಿ ವೋಟುಗಳ ಪರಿಸ್ಥಿತಿ ಹೇಗೆ. ಮೂರು ಜನ ಉಮೇದ್ವಾರರಿಗೂ ಒಂದೇ ಸಮಾನವಾಗಿ ವೋಟುಗಳು ಸಿಕ್ಕಿರಬೇಕೆಂದು ವಾದಿಸುವಾಗ, ಇನ್ನೊಬ್ಬರು ಥಕ್ಕನೆ ಬಂದು, ಏನು ಇಂಥಾ ಸಂಭವವು ಎಂದಿಗೂ ಆಗದು. ಹೈಕೋರ್ಟು ವಕೀಲರಾದ ಕೃಷ್ಣ ಭಟ್ಟರ ಮಾತು ಹುಸಿಯಾಗುವದೋ? ನಗರ್‌ಕಾರ್ ಶ್ರೀನಿವಾಸರಾವ್, ಕಸ್ತೂರಿ ನಾಗೇಶಪೈಗಳ ಪಂಥವು ಫಲವಿಲ್ಲದೆ ಹೋದೀತೇ? ಸೆಂಟ್ರಲ್ ಮತ್ತು ಕೊಡಿಯಾಳ ಬೈಲ್ ವೆಸ್ಟುವಾರ್ಡುಗಳಲ್ಲಿ ಸೇಕಡಾ ೯೦ರಂತೆ ವೋಟುಗಳು ರಾ। ಮಂಜಯ್ಯ ಹೆಗ್ಗಡೆಯವರಿಗೆ ಸಿಕ್ಕಿರುತ್ತವೆ, ಎಂಬ ಮಾತುಗಳನ್ನು ಮುಗಿಸುವಷ್ಟರಲ್ಲಿ ಬಿಳೀ ಟೋಪಿಯವರೊಬ್ಬರು ಮುಂದೆ ಬಂದು, ಏನು ಸ್ವಾಮಿ, ಆ ಎರಡು ವಾರ್ಡುಗಳ ಮಾತು ಹಾಗಿರಲಿ, ಕೊಡಿಯಾಳ ಬೈಲು ಈಸ್ಟ ಮತ್ತು ಜಪ್ಪು ವಾರ್ಡುಗಳಲ್ಲಿ ಬಾಲಕೃಷ್ಣ ಸೆಟ್ಟಿಯವರಿಗೆ ಸಿಕ್ಕಿದ ವೋಟುಗಳ ಸಂಖ್ಯೆಯನ್ನು ವಿಚಾರಿಸಿದರೆ ಮಂಜಯ್ಯ ಹೆಗ್ಗಡೆಯವರಿಗೆ ಈ ವಾರ್ಡುಗಳಲ್ಲಿ ನಾಲ್ಕಾರು ವೋಟುಗಳ ಪ್ರಕಾರ ಸಿಕ್ಕಿರಬಹುದಾದ್ದರಿಂದ ಶ್ರೀ ಧರ್ಮಸ್ಥಳ ಹೆಗ್ಗಡೆಯವರ ವಿಷಯ ಖಂಡಿತ ಹೇಳುವಿರಿ ಹೇಗೆ? ಇಷ್ಟರ ತನಕ ಮೌನವನ್ನು ತಾಳಿದ್ದ ಮತ್ತೊಬ್ಬರು, ಸರಿ ಸರಿ ಮಂಗಳೂರು ಶಹರಿನಲ್ಲಿ ಮಹಾಬಲ ಹೆಗ್ಗಡೆಯವರಿಗೆ ಯಾರ ಪ್ರಯತ್ನವೂ ಬೇಡ; ಶಹರಿನಲ್ಲಿರುವ ಎಲ್ಲಾ ವೋಟರರುಗಳಿಗೆ ಇವರ ಪರಿಚಿತಿಯು ಚೆನ್ನಾಗಿದ್ದದ್ದರಿಂದ ಇವರು ವಿಶೇಷ ಪ್ರಯತ್ನ ಮಾಡದೆ ಸುಮ್ಮನಿದ್ದರೂ ಶಹರಿನ ಒಂಭತ್ತು ಪೋಲಿಂಗ್ ಸ್ಟೇಶನುಗಳಲ್ಲಿಯೂ ಇವರಿಗೆ ವೋಟುಗಳಿಲ್ಲದ ಠಾಣ್ಯಗಳಿಲ್ಲ. ಎಲ್ಲಾ ಠಾಣ್ಯಗಳ ವೋಟುಗಳನ್ನು ಲೆಕ್ಕಮಾಡಿದಲ್ಲಿ ಒಟ್ಟಾರೆ ಮೇಲೆ ಮಹಾಬಲ ಹೆಗ್ಗಡೆಯವರಿಗೆ ಸಿಕ್ಕಿದ ವೋಟುಗಳ ಸಂಖ್ಯೆಯು ಬಹಳ ಕಡಿಮೆಯಾಗಲಿಕ್ಕಿಲ್ಲ. ಮಂಗಳೂರು ಶಹರಿನ ಸ್ಥಿತಿಯನ್ನು ಹೀಗೆಯೇ ಇಟ್ಟುಕೊಂಡು, ಮಿಕ್ಕ ಪೋಲಿಂಗ್ ಸ್ಟೇಶನುಗಳ ಲೆಕ್ಕಾಚಾರಗಳನ್ನು ಕೇಳಿದ ಮಟ್ಟಿಗೆ ತಿಳಕೊಂಡು ಗುಣಿಸಿ ನೋಡುವಾ!

ಮಂಗಳೂರು ತಾಲೂಕು.— ಮುಲ್ಕಿ, ಬಜಪೆ, ಗುರ್ಪುರ, ಸುರತ್ಕಲ್ಲು ಮೊದಲಾದ ಠಾಣ್ಯಗಳಲ್ಲಿ ಬಾಲಕೃಷ್ಣ ಸೆಟ್ಟಿಯವರಿಗೆ ವೋಟುಗಳು ಹೆಚ್ಚು, ನಂತರ ಮಂಜಯ್ಯ ಹೆಗ್ಗಡೆಯವರು ನಂತರ ಮಹಾಬಲ ಹೆಗ್ಗಡೆಯವರು. ಫರಂಗಿಪೇಟೆ ಬಂಟ್ವಾಳ ಮೊದಲಾದ ಪ್ರಾಂತ್ಯಗಳಲ್ಲಿ ರಾ। ಮಂಜಯ್ಯ ಹೆಗ್ಗಡೆಯವರಿಗೆ ಹೆಚ್ಚು, ಎರಡನೇ ಬಾಲಕೃಷ್ಣ ಸೆಟ್ಟಿ ಮೂರನೇ ಮಹಾಬಲ ಹೆಗ್ಗಡೆಯವರು. ಉಪ್ಪಿನಂಗಡಿ ತಾಲೂಕಿನಲ್ಲಿ ಒಂದನೇ ಮಂಜಯ್ಯ ಹೆಗ್ಗಡೆಯವರು, ಎರಡನೇ ಬಾಲಕೃಷ್ಣ ಸೆಟ್ಟಿಯವರು, ಮೂರನೇ ಮಹಾಬಲ ಹೆಗ್ಗಡೆಯವರು. ಕಾಸರಗೋಡು ತಾಲೂಕಿನಲ್ಲಿ — ಒಂದನೇ ಬಾಲಕೃಷ್ಣ ಸೆಟ್ಟಿಯವರು, ಎರಡನೇ ಮಂಜಯ್ಯ ಹೆಗ್ಗಡೆಯವರು, ಮೂರನೇ ಮಹಾಬಲ ಹೆಗ್ಗಡೆಯವರು. ಕಾರ್ಕಳ ತಾಲೂಕಿನಲ್ಲಿ ಒಂದನೇ ಮಂಜಯ್ಯ ಹೆಗ್ಗಡೆಯವರು, ಎರಡನೇ ಬಾಲಕೃಷ್ಣ ಸೆಟ್ರು, ಮೂರನೇ ಮಹಾಬಲ ಹೆಗ್ಗಡೆಯವರು. ಉಡ್ಪಿ ತಾಲೂಕಿನಲ್ಲಿ — ಇಲ್ಲಿಯ ಅಂದಾಜು ಮಾಡುವದು ಬಹಳ ಕಷ್ಟವಾಗಿದೆ. ಉಡ್ಪಿಯಲ್ಲಿ ಪ್ರಥಮ ಸರ್ತಿಗೆ ಬಾಲಕೃಷ್ಣ ಸೆಟ್ರು ಬಂದಾಗ ಎಸ್. ಶ್ರೀನಿವಾಸ ಅಯ್ಯಂಗಾರರವರ ಸಮ್ಮುಖದಲ್ಲಿ ತಾನು ಸ್ವರಾಜ್ಯವಾದಿ ಎಂಬುದನ್ನು ರಾ। ಬಾಲಕೃಷ್ಣ ಸೆಟ್ರು ಹೇಳಲಿಲ್ಲವೆಂಬ ನೆವ ಹಿಡಿದು ಬಿಳೀ ಟೋಪಿಗಳ ಪ್ರಯತ್ನವು ಮಾತು ಕೊಟ್ಟ ಹಂಗಿನಿಂದ ಮಂಜಯ್ಯ ಹೆಗ್ಗಡೆಯವರ ಪಕ್ಷಕ್ಕೆ ತಿರುಗಿದೆ. ಅದಲ್ಲದೆ ಮಂಗಳೂರಿನ ಗೌಡಸಾರಸ್ವತ ಬ್ರಾಹ್ಮಣ ವಠಾರುಗಳಲ್ಲಿ ಕೆಲವರು ಬಿಳಿ ಟೋಪಿಯರ ಸೆರಗನ್ನು ಹಿಡಿದು ಮಂಜಯ್ಯ ಹೆಗ್ಗಡೆಯವರತ್ತಕಡೆ ಪ್ರಯತ್ನ ನಡಿಸಿದ್ದರಿಂದ ಪಕ್ಷಪಾಂಡವರಲ್ಲಾಗಿ ಹೋಗಿ ಊಟ ಮಾತ್ರ ಕೌರವರಲ್ಲಾಗ ಬಹುದು. ಆದ್ದರಿಂದ ಈ ತಾಲೂಕಿನ ಹೆಚ್ಚಿನ ವೋಟುಗಳು ಮಂಜಯ್ಯ ಹೆಗ್ಗಡೆಯವರಿಗೂ ಎರಡನೇ ಸ್ಥಾನವು ಮಹಾಬಲ ಹೆಗ್ಗಡೆಯವರಿಗೂ ಸಂದು ಹೋಗಿ ಸೆಟ್ರಿಗೆ ಮೂರನೇ ಸ್ಥಾನವು ದೊರಕಿರ ಬಹುದು. ಕುಂದಾಪುರ ತಾಲೂಕಿನಲ್ಲಿಯೂ ಒಂದನೇ ಸ್ಥಾನವು ಮಂಜಯ್ಯ ಹೆಗ್ಗಡೆಯವರಿಗೂ, ಎರಡನೇದು ಬಾಲಕೃಷ್ಣ ಸೆಟ್ರಿಗೂ ಮೂರನೇದು ಮಹಾಬಲ ಹೆಗ್ಗಡೆಯವರಿಗೂ, ದೊರಕಿರ ಬಹುದು.

ಈ ರೀತಿ ವೋಟುಗಳನ್ನು ಹಾಕಿದ ಪೆಟ್ಟಿಗೆಗಳನ್ನು ಬಿಚ್ಚಿ ಮೆಂಬರುತನವು ಯಾರಿಗೆ ಖಾತ್ರಿಯಾಗಿ ದೊರಕಿದೆ, ಎಂಬುದನ್ನು ತಿಳಕೊಳ್ಳುವ ಮೊದಲು ಮೇಲಣ ಅಂದಾಜಿನಿಂದ ಈ ರೀತಿ ತಿಳಿಯಬಹುದು. ರಾವ್ ಸಾಹೇಬ ಮಹಾಬಲ ಹೆಗ್ಗಡೆಯವರು ಈ ಸರ್ತಿ ಜಯಶೀಲರಾಗುವ ಸಂಭವ ಕಡಿಮೆ. ಸ್ಪರ್ಧೆಯು ನಿಜವಾಗಿ ಮಂಜಯ್ಯಹೆಗ್ಗಡೆ ಮತ್ತು ಬಾಲಕೃಷ್ಣಸೆಟ್ರೊಳಗಿರುವದು. ಕುಂದಾಪುರ ಮತ್ತು ಉಡುಪಿ ತಾಲೂಕುಗಳಲ್ಲಿ ಪಡದ ನಷ್ಟವನ್ನು ಭರ್ತಿಮಾಡಿಕೊಂಡು ಮತ್ತಷ್ಟು ವೋಟುಗಳು ಕಾಸರಗೋಡು ತಾಲೂಕಿನಲ್ಲಿ ಬಾಲಕೃಷ್ಣಸೆಟ್ರಿಗೆ ಸಿಕ್ಕಿರುವವಾದರೆ ಬಾಲಕೃಷ್ಣಸೆಟ್ರು ಜಯಶೀಲರಾಗುವರು. ಇಲ್ಲದೆ ಇದ್ದರೆ ಮಂಜಯ್ಯ ಹೆಗ್ಗಡೆಯವರು ಜಯಶೀಲರಾಗುವರೆಂದು ಊಹಿಸಬೇಕಾಗುತ್ತದೆ.

ಹೀಗಿದ್ದರೂ ಈ ಶೋಧನಾವೇದ್ಯವನ್ನು ತಲೆಯಲ್ಲಿ ತಣ್ಣಗಿರಿಸಿ ನಮ್ಮ ಪೂರ್ವ ಪರಿಚಿತರೂ ಸಾಧನೆಯಲ್ಲಿ ಚತುರರೂ ಆದ ರಾವ್ ಸಾಹೇಬ್ ಮಹಾಬಲ ಹೆಗ್ಗಡೆಯವರಿಗೇ ಈ ಮೆಂಬರುತನವು ಆಗಲಿ ಎಂಬ ಅಪೇಕ್ಷೆಯನ್ನು ವ್ಯಕ್ತಗೊಳಿಸಿ ಮೆಂಬರುತನದ ಗಣಿತ ಗುಣಾಕಾರವನ್ನು ಇಲ್ಲಿಗೆ ಮುಗಿಸುವ.

"ಅಂದಾಜು"

ಕಾರ್ಕಳ ತಾಲೂಕಿನ ಗದ್ದಲದ ಸದ್ದಿಲ್ಲ!

ಸ್ವಾಮಿ,

ನಮ್ಮ ಜಿಲ್ಲೆಯಲ್ಲಿ ಹಲವು ವರ್ತಮಾನ ಪತ್ರಗಳಿದ್ದರೂ ಕಾರ್ಕಳ ಪಟ್ಟಣದ ಅಥವಾ ಕಾರ್ಕಳ ತಾಲೂಕಿನ ಇತರ ಯಾವ ಪ್ರಾಂತ್ಯದ ಸಮಾಚಾರವಾಗಲಿ ಪತ್ರಗಳಲ್ಲಿ ಕಂಡುಬರುವುದು ಅಪರೂಪ. ಕಾರಣವೇನೊ ತಿಳಿಯದು. ಪತ್ರಗಳ ಮೂಲಕ ಪ್ರಸಿದ್ಧಿಯನ್ನು ಪಡೆಯುವಂಥಾದ್ದು ಕಾರ್ಯಪಟುಗಳ ಲಕ್ಷಣವಲ್ಲವಾದ್ದರಿಂದ ಆ ಪ್ರಾಂತಗಳಿಂದ ಯಾರೂ ಏನೂ ಬರೆಯದಿರಲು ಕಾರಣವಾಗಬಹುದು. ಸತ್ಕಾರ್ಯಗಳ ಸದ್ದು ಈ ಕಾರಣದಿಂದ ಇರುವುದಿಲ್ಲವೆಂತ ಹೇಳಿದರೂ ಆ ತಾಲೂಕಿನಲ್ಲಿ ಖೂನಿಗಳ ದುಷ್ಕೃತ್ಯಗಳು ಬಹಳವಾಗಿ ನಡಿಯುತ್ತಿರುವವಾದರೂ ಇವುಗಳ ಸುದ್ದಿ ಸಹ ವರ್ತಮಾನಪತ್ರಗಳಲ್ಲಿ ಕಂಡುಬರುವುದು ದುರ್ಲಭವಾಗಿದೆ. ಕಾರ್ಕಳ ತಾಲೂಕು ಜಿಲ್ಲೆಯಲ್ಲಿ ಹಿಂದುಳಿದ ತಾಲೂಕು ಎಂತ ಹೇಳುವೆನೋ? ಅಬ್ಬಬ್ಬ! ಮದ್ರಾಸು ನ್ಯಾಯವಿಧಾಯಕ ಸಭೆಯನಂತರ ಎಸೆಂಬ್ಲಿಗೂ ಮೆಂಬರರು ಈ ತಾಲೂಕಿನಿಂದಲೇ ಸಂಗ್ರಹಿಸಲ್ಪಟ್ಟದ್ದು. ಇಷ್ಟೇ ಅಲ್ಲ, ಹೈಸ್ಕೂಲು, ಬಾಲಿಕೆಯರ ಶಾಲೆಗಳು, ಎಲಿಮೆಂಟರಿ ಶಾಲೆಗಳು, ಸಂಸ್ಕೃತ ಶಾಲೆ, ಜೈನರ ಬಸ್ತಿಗಳು, ಗುಮಟೇಶ್ವರ ಸ್ವಾಮಿಗಳು, ಹಲವು ಪ್ರಸಿದ್ಧ ಹಿಂದೂ ದೇವಸ್ಥಾನಗಳು, ತೀಕ್ಷ್ಣವಾದ ಪೋಟಾಪೋಟಿಯಿಂದ ನಡಿಸೋಣಾಗುವ ಒಂದಲ್ಲ ಮೂರು ಮೋಟಾರ ಸರ್ವಿಸ್ಸುಗಳ ತವರುಮನೆ, ಅತಿ ವಿಶೇಷವಾದ ಜವಳಿ ವ್ಯಾಪಾರದ ಕೇಂದ್ರಸ್ಥಳ, ಮುನ್ಸಿಫ್ ಕೋರ್ಟು ತಾಲೂಕು ಕಚೇರಿ, ಸಬ್ ಮೆಜಿಸ್ಟ್ರೇಟರ ಕಚೇರಿ ಇನ್ನೂ ಹಲವು ಕಚೇರಿಗಳು, ಇಷ್ಟೆ ಅಲ್ಲ, ನಮ್ಮ ಜಿಲ್ಲೆಯಿಂದ ಲೆಜಿಸ್ಲೇಟಿವ್ ಎಸೆಂಬ್ಲಿಗೆ ಪ್ರತಿನಿಧಿಯಾಗಿರುವ ಮೂಲಕ ಜಿಲ್ಲೆಯ ಪ್ರಾಮುಖ್ಯ ಪುರುಷರಾದ ಬಹುಮಾನಪಟ್ಟ ಮ॥ ರಾ॥ ರಾ॥ ಸದಾಶಿವ ಭಟ್ಟರ ಕಾರ್ಯಭಾರಿನ ರಂಗಸ್ಥಳ, ಇಷ್ಟಾದರೂ ಯಾವ ಪತ್ರಗಳಲ್ಲಾದರೂ ಕಾರ್ಕಳದ ಸದ್ದಿಲ್ಲ! ಅಮಮ!! ಇದು ವಿಶೇಷ ಪ್ರಭಾವವೇ ಸರಿ. ಇನ್ನು ಸದ್ಯದಲ್ಲಿ ಜಿಲ್ಲಾ ಪರಿಷತ್ತು ಅಲ್ಲಿ ಕೂಡುವುದಂತೆ, ಸ್ವದೇಶಿ ವಸ್ತು ಪ್ರದರ್ಶನ ಇರುವುದಂತೆ, ಕೆಲವು ದಿನಗಳಲ್ಲಿಯೇ ಅಲ್ಲಿಯ ಗೌಡಸಾರಸ್ವತ ಬ್ರಾಹ್ಮಣ ಶ್ರೀ ವೆಂಕಟರಮಣ ದೇವಸ್ಥಾನದ ರಥೋತ್ಸವ ಸಂಭ್ರಮಗಳಿರುವವು, ಇವುಗಳನ್ನು ಹೋಗಿ ನೋಡುವಷ್ಟು ಭಾಗ್ಯವು ಇಲ್ಲದಂಥವರ ಬಗ್ಗೆ ಈ ಎಲ್ಲಾ ಸಮಾಚಾರಗಳನ್ನು ಪ್ರಕಟಿಸಬೇಕೊ? ಸ್ವರಾಜ್ಯಪಾರ್ಟಿಯು ಕಾರ್ಕಳದಲ್ಲಿಯೇ ಜನ್ಮವೆತ್ತುವದಂತೆ. ಸ್ಥಳವಾದರೂ ಈ ಸ್ಥಾಪನೆಗೆ ಯೋಗ್ಯವೇ ಸರಿ. ಆದರೆ ಇದರ ಸದ್ದು ಇಲ್ಲದೆ ಹೋದೀತೇ?

ಕೆಲವು ತಿಂಗಳುಗಳ ಹಿಂದೆ ಒಬ್ಬ ಜೈನ ಗ್ರಹಸ್ಥರನ್ನು ಹಾದಿಯಲ್ಲಿ ಕೊಂದು ಬಿಟ್ಟರು, ಇದರ ಸದ್ದಿಲ್ಲ. ಮತ್ತು ಕೆಲವು ದಿನಗಳಲ್ಲಿ ಇನ್ನೊಂದು ದೊಡ್ಡ ಖೂನಿಯಾಯಿತು! ಸದ್ದಿಲ್ಲ! ಅತ್ಯಾಚಾರಗಳನ್ನು ನಡಿಸುವುದರಲ್ಲಿ ಪರಾಕ್ರಮಶಾಲಿಯೆಂತ ಹಲವು ವರುಷಗಳಿಂದ ಹೆಸರು ತಾಳಿದ 'ಹಸು' ಸಾಹೇಬರನ್ನು ಅಗ್ನ್ಯಸ್ತ್ರಗಳಿಂದ ಸುಟ್ಟುಬಿಟ್ಟರೂ ಸದ್ದಿಲ್ಲ! ಇತ್ತಲಾಗೆ ದೇವಕಮ್ಮ ಎಂಬ ಸ್ತ್ರೀಯಳನ್ನು ಅವಳ ಮನೆ ನುಗ್ಗಿಕೊಂಡು ಸೀಳಬಿಟ್ಟರೂ ಸದ್ದಿಲ್ಲ! ಇನ್ನೂ ಇಂಥಾ ಮಹಾಕೃತ್ಯಗಳು ಎಷ್ಟು ನಡೆದಿವೆಯೋ? ಸದ್ದಿಲ್ಲ!

ತಾಲೂಕು ಬೋರ್ಡು ಚುನಾವಣೆಗಳ ವಿಷಯ ಜಿಲ್ಲೆಯ ಇತರ ಎಲ್ಲಾ ಪ್ರಾಂತಗಳ ವಿಷಯ ಪತ್ರಗಳಲ್ಲಿ ಪ್ರಕಟವಾದ ವಿಷಯಗಳನ್ನು ಓದಿ ತಿಳಕೊಂಡೆವು. ಕಾರ್ಕಳ ತಾಲೂಕಿನಲ್ಲಿಯೂ ಇಂಥಾ ಚುನಾವಣೆಯು ನಡೆದಿರಬೇಕು! ಆದರೆ ಸದ್ದಿಲ್ಲ! ಇಡೀ ತಾಲೂಕಿನಲ್ಲಿ ನಡೆದ ಈ ಚುನಾವಣೆಯಲ್ಲಿ ಏನೊ ಅವಾಂತರಗಳು ಎದ್ದಿವೆಯಂತೆ! ರಿಜಿಸ್ಟ್ರಿನೋಟೀಸುಗಳು ಹೊರಟಿವೆಯಂತೆ! ಗವರ್ನಮೆಂಟಿಗೆ ಮನವಿಗಳು ಹೋಗಿವೆಯಂತೆ! "ದೊಡ್ಡ್ಯಾಸ್ ಎಂಟರ್ಡ್ ತಾಲೂಕು ಬೋರ್ಡ ಛಾರ್ಜ್" ಎಂಬ ಟೆಲಿಗ್ರಾಮು ಡಿಲ್ಲಿಗೆ ಹೋಯಿತಂತೆ! ಆದರೂ ಸದ್ದಿಲ್ಲ! ಕಾರ್ಕಳ! ಜಿಲ್ಲಾ ಲೋಕಲ್ ಬೋರ್ಡು ಆದಳಿತದ ಪಿತಾಮಹರಲ್ಲೊಬ್ಬರ ಚಟುವಟಿಕೆಯ ರಂಗಸ್ಥಳ! ಆದರೂ ಕಾರ್ಕಳದ ಗದ್ದಲದ ಸದ್ದಿಲ್ಲವಲ್ಲ"

ಕಾರ್ಕಳದಿಂದ ಮೇಲೆ ಹೇಳೋಣಾದ ಗದ್ದಲಗಳ ವಿವರವಾದ ವರ್ತಮಾನವನ್ನು ನಿಮ್ಮ ಪತ್ರದ ಎರಡು ಕಲಮಿಗೆ ಕಡಿಮೆಯಾಗದಂತೆ ಬರೆದು ಕಳುಹಿಸಿದರೆ ಹಾಗೆ ಈ ವರ್ತಮಾನವನ್ನು ಕೊಡುವವರಿಗೆ ರೂ. ೫ರ ಬಹುಮಾನವನ್ನು ಕೊಡಲು ಸಿದ್ಧನಾಗಿರುವೆನು ಪತ್ರಾಧಿಪರೇ, ಈ ವರ್ತಮಾನವು ತಮ್ಮ ಕೈಸೇರಿದೊಡನೆ ನನಗೆ ತಿಳಿಸಿದ್ದಲ್ಲಿ ರೂ. ೫ನ್ನು ಅಂಥಾ ವರ್ತಮಾನವನ್ನು ಬರೆದು ಕಳುಹಿಸಿದಂಥವರಿಗೆ ಇನಾಮು ಕೊಡಲು ಕಳುಹಿಸಿಕೊಡುವೆನು. ಆದರೂ ಸದ್ದಿಲ್ಲದೆ ಹೋದೀತೇ?

"ವರ್ತಮಾನಪ್ರೇಮಿ".

ಅಯ್ಯಾ ಪತ್ರಿಕಾಕರ್ತರೆ!

ಹೊಸದುರ್ಗ ಟೌನ್ ಗಡಿ ಒಳಗೆ ಒಂದು ಮೀನುಮಾರ್ಕೆಟು ಸ್ಥಾಪಿಸಿ ಕಾಲಂಪ್ರತಿ ತಾಲೂಕು ಬೋರ್ಡು ಮುಖಾಂತರ ಬಹಿರಂಗವಾಗಿ ಫೀಸು ವಸೂಲು ಮಾಡುವ ಹಕ್ಕನ್ನು ಏಲಂಮಾಡುತ್ತಾರೆ. ಸದರಿ ಫೀಸು ಇಂಥಾ ಗಡಿಯಿಂದ ಇಂಥಾ ಗಡಿ ಒಳಗೆ ವಸೂಲುಮಾಡಬೇಕಾಗಿಯೂ ಗಡಿ ಹೊರಗೆ ಮೀನು ಮಾರಾಟವಾದರೆ ಟೌನ್ ನ್ಯೂಸೆನ್ಸ ಆಕ್ಟಿಗೆ ತುತ್ತಾಗಬೇಕಾಗಿಯೂ ಕ್ರಮವಿರುವುದೆಂತ ಕಾಣುತ್ತದೆ. ಆ ಪ್ರಕಾರ ಫೀಸು ವಸೂಲು ಮಾಡುವ ಹಕ್ಕು ಅತ್ಯಧಿಕ ದರಕಾಸ್ತಿಗೆ ಪಡಕೊಂಡವನು ಮಾರ್ಕೆಟ ಸರಹದ್ದಿನ ಹೊರಗೆ ಮಾರಾಟ ಮಾಡುವದರಿಂದ ಫೀಸು ವಸೂಲುಮಾಡಬಹುದೊ! ಹಾಗೆ ವಸೂಲು ಕೊಡದೆ ಇದ್ದವರಿಗೆ ನ್ಯೂಸೆನ್ಸ ಆಕ್ಟಿಗೆ ಒಳಪಡಿಸುತ್ತೇನಾಗಿ ಗದರಿಸಿ ಫೀಸು ವಸೂಲು ಮಾಡಿದ ಸಬಬಿನ ಮೇಲೆ ನ್ಯೂಸೆನ್ಸ ತಕ್ಸೀರು ಮಾಫಿ ಆಗುತ್ತದೊ ಎಂಬ ಸವಾಲು ಉತ್ಪನ್ನವಾಗುತ್ತದೆ. ಸಂಬಂಧಪಟ್ಟ ಇಲಾಖಾ ಉದ್ಯೋಗಸ್ಥರು ಇದಕ್ಕೆ ನಿಗಾ ಕೊಟ್ಟರೆ ತಾಲೂಕು ಬೋರ್ಡಿಗೆ ಹೆಚ್ಚಿನ ಆದಾಯವಾಗುವಲ್ಲಿ ಸಂದೇಹವಿರಲಾರದು ಯಾಕಂದರೆ ಮಾರ್ಕೇಟು ಸರಹದ್ದಿನ ಹೊರಗೆ ಎರಡು ಕಡೆಗಳಲ್ಲಿ ಮೀನು ಮಾರಲ್ಪಡುತ್ತದೆ. ರೂಲು ಪ್ರಕಾರ ಕಂಟ್ರಾಕ್ಟದಾರರಿಗೆ ಹೊರಗೆ ಫೀಸು ವಸೂಲು ಮಾಡುವ ಸ್ವತಂತ್ರವಿರುವುದಿಲ್ಲವೆಂತ ಕಾಣುತ್ತದೆ. ಆ ಪ್ರಕಾರ ಮಾರಲ್ಪಡುವ ಎರಡು ಕಡೆಗಳಲ್ಲಿ ಫೀಸು ವಸೂಲುಮಾಡುವ ಅಧಿಕಾರವನ್ನು ಏಲಂಮಾಡಿದಾದರೆ ಯಾಕೆ ಆಗಲಾರದು.

ಗ್ರಾಮನಿವಾಸಿಕ.

ಸ್ವರಾಜ್ಯಪಾರ್ಟಿಯವರ ಪರಿಷತ್ತು.

೧. ಹಿಂದೀ ಸ್ವರಾಜ್ಯ ಸಾಧನೆಯಲ್ಲಿ ದೀಕ್ಷಾಬದ್ಧವಾದ ಹಿಂದೀ ಕಾಂಗ್ರೆಸ್ ಸಭೆಯೊಳಗಣ ಒಂದಂಶವು ಸರಕಾರದಿಂದ ಸ್ಥಾಪಿತವಾದ ಸಂಸ್ಥೆಗಳ ಮೂಲಕವೂ ರಾಷ್ಟ್ರೀಯತ್ವವನ್ನು ಸಾಧಿಸಬೇಕಾಗಿಯೂ ಕೌನ್ಸಿಲ್ ಎಸೆಂಬ್ಲಿ ಮುಂತಾದ ಬೊಂಬೆಯಾಟದ ರಂಗಮಂದಿರಗಳನ್ನು ಮುರಿಯಬೇಕಾಗಿಯೂ ನಿರ್ಧರಿಸಿ ಸ್ವರಾಜ್ಯಪಕ್ಷವೆಂದು ಪ್ರತ್ಯೇಕ ಪಕ್ಷವನ್ನು ಮಾಡಿಕೊಂಡು ಈ ತರದ ಸಾಧನೆಗಳಲ್ಲಿ ಕೈಯಿಕ್ಕಿದ ಮೇಲೆ ಸ್ವರಾಜ್ಯಪಕ್ಷವು ದೇಶದಲ್ಲೆಲ್ಲೆಲ್ಲಿಯೂ ಗೌರವಾನ್ವಿತವಾಗಿ ಹೆಚ್ಚು ಪ್ರಚುರತೆಯನ್ನು ಪಡೆದುದೆಯಲ್ಲದೆ ಸರಕಾರದ ವಿರೋಧ ಪ್ರತಿರೋಧಗಳಲ್ಲಿಯೂ ಬಹುಮಟ್ಟಿಗೆ ವಿಜಯಿಯಾಗಿದೆ. ಮತ್ತು ಈಗಿನ ಸರಕಾರದ ಟೊಳ್ಳುತನವನ್ನು ಹೊರಗೆಡಹುವುದರಲ್ಲಿ ಸಂಪೂರ್ಣ ಕೃತಕೃತ್ಯವಾಗಿದೆ ಎಂಬ ವಿಷಯಗಳು ಸರ್ವರಿಗೂ ತಿಳಿದವುಗಳೇ ಆಗಿವೆ.

೨. ದೇಶದೊಳಗೆ ಸ್ಥಳೀಕವಾಗಿಯೂ ಪ್ರಾಂತಿಕವಾಗಿಯೂ ಮಧ್ಯವರ್ತಿ ಸರಕಾರಕ್ಕೆಂದಾಗಿಯೂ ಆಗಾಗ ಅನೇಕ ಚುನಾವಣೆಗಳು ನಡೆಯುತ್ತಾ ಇರುತ್ತವೆ. ಸ್ವರಾಜ್ಯಪಕ್ಷವು ಸ್ಥಿರವಾಗುವ ಮೊದಲು ಯಾವದೊಂದು ಪಕ್ಷವೂ ಸುಸಂಘಟಿತವಾಗಿ ತನ್ನ ಮೂಲಸೂತ್ರಗಳ ಸ್ವೀಕಾರದ ಮೂಲಕ ಕೆಲಸಮಾಡುತ್ತಿರಲಿಲ್ಲ. ಫಲವಾಗಿ, ಈ ಚುನಾವಣೆಗಳೂ ವ್ಯಕ್ತಿಯ ಸಂಪನ್ನತೆ, ಅಧಿಕಾರ, ಗರ್ವ ಮತ್ತು ವ್ಯಕ್ತಿಗಳೊಳಗಿನ ಮಾತ್ಸರ್ಯ ಇವುಗಳ ಮೂಲಕವೇ ಸಾಧಿಸಲ್ಪಡುತ್ತಿದ್ದವು. ಇದರಿಂದ ಸಮಾಜ ಜೀವನದಲ್ಲಿ ಇಲ್ಲದ ದುರ್ಘಟನೆಗಳು ಉಪಸ್ಥಿತವಾಗಿ ಬಹಳವಾಗಿ ಕೆಡುತ್ತಿದ್ದವು ಸ್ವರಾಜ್ಯಪಕ್ಷ ಸ್ಥಾಪನೆಯಾದಂದಿನಿಂದ ಈ ವ್ಯಕ್ತಿವ್ಯಕ್ತಿಗಳೊಳಗಣ ದ್ವೇಷಾಸೂಯೆಗಳ ಚುನಾವಣೆಗಳ ಬದಲಿಗೆ, ಸೂತ್ರಬದ್ಧವಾದ ದೀಕ್ಷಾಬದ್ಧವಾದ ಪಕ್ಷದ ಪ್ರಾಮುಖ್ಯವು ಎಲ್ಲವನ್ನೂ ಮೀರಿಸಿ ಮೇಲೆದ್ದಿತು. ಅಲ್ಲದೆ ಗೌರವಾಭಿಲಾಷಿಗಳಾದ ಕೆಲವರು ಸ್ವಾರ್ಥಸಾಧನೆಗಾಗಿ ಹೊರಡುವ ಬದಲಿಗೆ ದೇಶಹಿತದ ಒಂದೇ ಭಾವನೆಯಿಂದ ಸೊಂಟಕಟ್ಟಿ ಹೊರಡಬಲ್ಲ ದೇಶಪ್ರೇಮಿಗಳೂ ಬಯಲಿಗೆ ಬರುವಂತಾಯಿತು.

೩. ನಮ್ಮ ಜಿಲ್ಲೆಯಲ್ಲಿಯೂ ಈ ಪ್ರಬಲವಾದ ಸಂಸ್ಥೆಯ ಶಾಖೆಯನ್ನು ರಚಿಸಿ ವ್ಯವಸ್ಥೆಗೊಳಿಸುವುದು ಅತೀ ಅವಶ್ಯವೆಂದು ನಮ್ಮ ಭಾವನೆ ಇದೆ. ಈ ಮೂಲಕ ನಮ್ಮ ಜಿಲ್ಲೆಯ ವಿದ್ಯಾವಂತ ಮಂಡಳಿಯ ಮತ್ತು ದೇಶಹಿತಕ್ಕಾಗಿ ಮುಂದಾದವರೆಲ್ಲರ ಶಕ್ತಿಯನ್ನು ಕೇಂದ್ರೀಕರಿಸಿದಂತಾಗಿ ಶಕ್ತಿಮಯವಾದ ರಾಜಕೀಯ ಸಂಸ್ಥೆಯ ಅಡಿಗಟ್ಟನ್ನು ಹಾಕಿದಂತಾಗುವುದು. ಕಾಂಗ್ರೆಸ್ಸಿನ ಹೆಸರಿನಲ್ಲಿ ಈ ಸರಕಾರದ ರಾಜಕೀಯ ಸಂಸ್ಥೆಗಳನ್ನು ಪ್ರವೇಶಿಸಿ ಕಾಂಗ್ರೆಸ್ಸಿನ ಧ್ಯೇಯವನ್ನು ಸಾಧನೆ ಮಾಡುವ ಅಧಿಕಾರವು ಸ್ವರಾಜ್ಯಪಕ್ಷದ್ದಾಗಿದೆ. ಕಾಂಗ್ರೆಸ್ಸಿನ ಅಭಿಮಾನಿಗಳೂ ಸ್ವರಾಜ್ಯ ಸಾಧನೆಯಲ್ಲಿ ಚಿಂತಿತರೂ ಸ್ವರಾಜ್ಯ ಪಕ್ಷದ ಧೋರಣದಲ್ಲಿ ವಿಶ್ವಾಸವುಳ್ಳವರೂ ಆಗಿರುವ ಎಲ್ಲರೂ ಈ ಸಂಸ್ಥೆಯ ರಚನೆಯಲ್ಲಿ ಉತ್ಸಾಹಪೂರ್ವಕವಾಗಿ ಕಾರ್ಯಭಾಗಿಗಳಾಗುವುದು ಅವಶ್ಯವಿದೆ.

೪. ನಮ್ಮ ಜಿಲ್ಲೆಯೊಳಗೆ ತಾಲೂಕು ಬೋರ್ಡು ಮುನಿಸಿಪಾಲಿಟಿ ಮುಂತಾಗಿ ಅನೇಕ ಸರಕಾರಿ ಸಂಸ್ಥೆಗಳ ಮೆಂಬರರಿದ್ದಾರೆ. ನಮ್ಮ ಜಿಲ್ಲೆಯ ಪರವಾಗಿ ಕೌನ್ಸಿಲು ಎಸೆಂಬ್ಲಿಗಳಿಗೆ ಹೋದ ಪ್ರತಿನಿಧಿಗಳೂ ಹಲವರಿದ್ದಾರೆ. ಅವರೆಲ್ಲರೂ ಈ ಬಾರಿ ಈ ಉದ್ದೇಶ ಮತ್ತು ಧೋರಣವನ್ನು ಮಾಡಿಸಿ ಸ್ವೀಕರಿಸಿ ಈ ಧೋರಣವನ್ನು ಸಮನಸ ವಿಕಪ್ರಕಾರವಾದ ಕಾರ್ಯಸಾಧನೆಗಳ ಮೂಲಕ ಕಾರ್ಯಕಾರಿ ಮಾಡಲಿಕ್ಕೆ ಶಿಸ್ತುವುಳ್ಳ ಸುವ್ಯಧುರೀಣರಿಂದೊಳಗೊಳಿಸಿ ಶಕ್ತಿಮಯವಾಗಿ ಮಾಡಿಸಬೇಕಾಗಿ ನಮ್ಮ ವಿನಯದ ವಿಜ್ಞಾಪನೆ ಇದೆ

೫. ಈ ಉದ್ದೇಶದಿಂದ ಶ್ರೀ. ಶ್ರೀನಿವಾಸ ಅಯ್ಯಂಗಾರರಿಗೆ ಅಧ್ಯಕ್ಷತನಕ್ಕಾಗಿ ಆಮಂತ್ರಣವನ್ನಿತ್ತು ನಾವು ಸ್ವರಾಜ್ಯ ಪಕ್ಷದ ಪರಿಷತ್ತನ್ನು ಮೇ ತಿಂಗಳ ೩ನೇ ತಾರೀಕಿಗೆ ಜರಗಿಸುವವರಿರುವೆವು. ತಾಲೂಕು ಬೋರ್ಡು ಮುನಿಸಿಪಾಲಿಟಿ ಕೌನ್ಸಿಲು ಎಸೆಂಬ್ಲಿ ಇತ್ಯಾದಿ ಸಂಸ್ಥೆಗಳ ಮೆಂಬರರೂ ಅಲ್ಲದೆ ಸ್ವರಾಜ್ಯ ಪಕ್ಷದ ಧೋರಣ ವಿಶ್ವಾಸವಿರುವ ಇತರರೂ ಬಂದು ಈ ಪರಿಷತ್ತನ್ನು ವಿಜಯಿಯಾಗಿ ಮಾಡಬೇಕಾಗಿ ಪ್ರಾರ್ಥಿಸುತ್ತೇವೆ.

ಪಿ. ಸೊ:—ಸ್ವರಾಜ್ಯಪಕ್ಷದ ಸುಸಂಘಟನೆಗಾಗಿ ಯಾವುದಾದರೂ ಮುಖ್ಯ ಸೂಚನೆಗಳನ್ನು ಕೊಡಲಿಕ್ಕಿದ್ದವರು ಅಂತಹ ಸೂಚನೆಗಳನ್ನು ಕೆಳಗಿನ ವಿಳಾಸಕ್ಕೆ ಕಳುಹಿಸಬಹುದು.

ವಾಮನಕುಡ್ವಾ, ಸಾರಸ್ವತ ಆಫೀಸು ಉಡುಪಿ.
ಲಕ್ಷ್ಮಣ ಕುಡ್ವಾ ಕಾರ್ಕಳ.
ಕೊಜ್ಜಿಕಾರ ನರಸಿಂಹ ಪೈ ಉಡುಪಿ.
ಪಿ. ಎಸ್. ಉಪಾಧ್ಯಾಯ ಉಡುಪಿ.

— ದೇಶಬಾಂಧವರಲ್ಲಿ ವಿಜ್ಞಾಪನೆ. —

೧. ಭಾರತೀಯ ಮುಕ್ತಿಸಾಧನೆಯಲ್ಲಿಯೇ ಚಿಂತಿತವಾಗಿದ್ದು ಅದಕ್ಕಾಗಿ ತಮ್ಮ ಸಂಪೂರ್ಣ ಶಕ್ತಿಯನ್ನು ಕೇಂದ್ರೀಕರಿಸುತ್ತಿರುವ ಸಮಗ್ರ ದೇಶದ ಏಕಮಾತ್ರ ವಿಶಾಲ ಸಭೆಯಾಗಿರುವ ಕಾಂಗ್ರೆಸಿನ ಉಪಾಂಗವಾಗಿ ನಮ್ಮ ಜಿಲ್ಲೆಯ ಬಗ್ಗೆ ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಪರಿಷತ್ತು ಬರುವ ಮೇ ತಿಂಗಳ ತಾರೀಕು ೧ ಮತ್ತು ೨ನೇಗೆ ಕಾರ್ಕಳದಲ್ಲಿ ಕೂಡುವುದು.

೨. ಈ ಸಮಯದಲ್ಲಿ ಭಾರತ ರಾಷ್ಟ್ರೀಯ ಸಭೆಯ ಕಾರ್ಯಕ್ರಮದ ಪುಷ್ಟೀಕರಣವೂ ನಮ್ಮ ಜಿಲ್ಲೆಗಾಗಿ ರಾಜಕೀಯ ಕೆಲಸದ ನಿರ್ಮಾಣವೂ ಆಗುವುದು.

೩. ದೇಶ ಹಿತದ ದೃಷ್ಟಿಯಿಂದಲೂ ನಮ್ಮ ಜಿಲ್ಲೆಯ ರಾಷ್ಟ್ರೀಯ ಉನ್ನತಿಯ ದೃಷ್ಟಿಯಿಂದಲೂ ಜನತೆಯ ಆರ್ಥಿಕ ಮತ್ತು ಸಮಾಜಿಕ ಲಾಭದ ದೃಷ್ಟಿಯಿಂದಲೂ ಈ ಸಮಯದಲ್ಲಿ ನಮ್ಮ ಜಿಲ್ಲೆಯ ಧುರೀಣರೂ, ಜನರೂ ತಮ್ಮ ಮತಭೇದಗಳನ್ನು ಲಕ್ಷಿಸದೆ ಈ ಪರಿಷತ್ತಿನಲ್ಲಿ ಕೂಡಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಗೊಳಿಸಿ ಸನ್ಮಾನ್ಯ ಕಾರ್ಯಕಾರಿಯೂ ಗೌರವವೂ ಆದ ಕಾರ್ಯಕ್ರಮವನ್ನು ರಚಿಸುವುದು ಅವಶ್ಯವಿದೆ.

೪. ಅಖಿಲ ಭಾರತದ ಪ್ರಾಮುಖ್ಯತೆಯನ್ನು ತಾಳಿರುವ ಮಹಾತ್ಮರ ಬಳಗ್ಗೆಯಂತಿರುವ ಶ್ರೀಯುತ ದತ್ತಾತ್ರೇಯ ಬಾಲಕೃಷ್ಣ ಕಾಲೇಲ್ಕರರೇ ಅಧ್ಯಕ್ಷರಾಗಿ ಬರುವವರಿರುವರು.

೫. ಬರುವ ಎಲ್ಲರಿಗಾಗಿ ಊಟ ವಿಶ್ರಾಂತಿಯ ಬಗ್ಗೆ ಯೋಗ್ಯ ವ್ಯವಸ್ಥೆ ಮಾಡಲ್ಪಡುತ್ತದೆ.

೬. ಈ ಎಲ್ಲಾ ವಿಷಯಗಳನ್ನು ಮನಸ್ಸಿನಲ್ಲಿಟ್ಟು ಜಿಲ್ಲೆಯ ಸಮಸ್ತ ಜನರೂ ಬಂದು ಸೇರಿದು ಪರಿಷತ್ತನ್ನು ಕಾರ್ಯಕಾರಿಯಾಗಿ ಮಾಡಬೇಕಾಗಿ ವಿನಯದ ವಿನಂತಿಯಿದೆ.

ಕಾರ್ಕಳ.
ತಾ. 15—4—'25.

ಕಾರ್ಕಳ ಲಕ್ಷ್ಮಣ ಕುಡ್ವಾ,
[illegible]

ಆರೋಗ್ಯಚಂದ್ರಿಕೆ.

ಮದ

ಸಂಪಾದಕರು: ಡಾಕ್ಟರ್ ಯು. ಇವ್, ಎಲ್. ಎಮ್. ಸಿ. ಎಫ್. ಎಮ್ ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಚಿಕಿತ್ಸದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ಕೊಡುವದಕ್ಕಾಗಿ ನಿರ್ಮಿಸಿದ ಒಂದು ಸಚಿತ್ರ ಮಾಸಪತ್ರಿಕೆ.

ಈ ಮಾಸಪತ್ರಿಕೆಯು 'ಹೆಲ್ತ್' ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ.

ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧ ವೈದ್ಯರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ [illegible].

'ಹೆಲ್ತ್' ಎಂಬ ನಮ್ಮ ಇಂಗ್ಲಿಷ್ ಪತ್ರಿಕೆಯನ್ನೋದಿ ಸಂತೋಷಿಸಿದ ಅನೇಕ ದೊಡ್ಡ ಮನುಷ್ಯರ ಆಶೆ ಮೇಲೆ ಈ ಕನ್ನಡ ಪತ್ರಿಕೆಯನ್ನು ಹೊರಡಿಸಿದೆ.

ಅದರ ಸಂಪುಟ ೨ ಮತ್ತು ೧೦ನಂಬರ ೧೯೨೪ ಸಂಚಿಕೆಯಲ್ಲಿ ಕಾಣಿಸಿರುವ ವಿಷಯಗಳು.

ಮುಖಚಿತ್ರ:—ಧರ್ಮತವಾಸಿನಿಯಲ್ಲ ರೂಪವತಿ.
ಶ್ವಾಸಕ್ರಮ ಅಥವಾ ಪ್ರಾಣಾಯಾಮ
ಹುಣಿಸೇಹಣ್ಣಿನ ಆಹಾರಗುಣಗಳು ಔಷಧಗುಣಗಳು.
ಕಾಲುನಡೆಯೇ ಉತ್ತಮವಾದ ವ್ಯಾಯಾಮ
ಜೇನಿನಲ್ಲಿರುವ ಗುಣಗಳು.
ಹಲ್ಲುಗಳ ರಕ್ಷೆ, ಪ್ರಯೋಜನ, ಕೆಂಡಾದವು.
ಮದದ್ರಾವಕಗಳಿಂದ ಆರೋಗ್ಯಕ್ಕೆ ಆಪತ್ತು, ಹಾನಿ.
ಅಂಗಸಾಧನೆ ಮತ್ತು ಬುದ್ಧಿವ್ಯವಸಾಯಾಭ್ಯಾಸ).
ಗಾಯಗಳು, ಮತ್ತು ಉಳುಕು ಮುಂ, ಅವುಗಳ ಚಿಕಿತ್ಸೆ.
ನವನಾಗರಿಕ ಪ್ರಪಂಚಕ್ಕೆ ಸಹಜವಾದ ಕೆಡುಕುಗಳು.
ಒಬ್ಬ ಉಪವಾಸಿಯ ಅನುಭವ.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖ ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವುವು. ಆರೋಗ್ಯಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎ[illegible] ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಮೊಬಲಗು ವರ್ಷಕ್ಕೆ ರೂ. ೧—೮—೦; ಬಿಡುಪತ್ರಿಕೆ ಒಂದಕ್ಕೆ ೦—೨—೦. ಹಿಂದಿನ ಸಂಚಿಕೆಗಳು ಕೂಡ ದೊರಿಯುವವು.

ಚಂದಾದಾರರಾಗುವವರು ವಿ. ಪಿ. ಯಾಗಿ ತರಿಸಿಕೊಳ್ಳುವುದಕ್ಕಿಂತಲೂ ಹಣವನ್ನು ಮುಂಗಡವಾಗಿ ಕಳುಹುವುದು ಲಾಭಕರ. ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು ಆರೋಗ್ಯ ಚಂದ್ರಿಕೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು.

ಪತ್ರವ್ಯವಹಾರಕ್ಕೆ 'ಆರೋಗ್ಯ ಚಂದ್ರಿಕೆ'
೩೨೩ ತಂಬುಚೆಟ್ಟಿ, ಮದ್ರಾಸ್

ತುಳು ಪಾಡ್ದನಳು:

ಬೊಟ್ಟಿಯರ್, ಕಲ್ಲುರ್ಟಿ—ಕಲ್ಕುಡೆಯ್ಯೊಂಗುಳು—ಕೋಡಕಿನಾರ್', ಮುಂಡತ್ತಾಯ ಪ್ರತಿಒಂದಕ್ಕೆ 2 ಆಣೆ. 1½ ಆಣೆ ಟಪ್ಪಾಲು ಚೀಟು ಕಳಿಹಿದರೆ 5 ಪುಸ್ತಕಗಳು ಕೂಡಲೇ ಕಳುಹಿಸಲ್ಪಡುವವು.

ವಿಳಾಸ: ಶಾರದಾ ಛಾಪಖಾನೆ,
ರಥಬೀ. ಮಂಗಳೂರು.

The Canara Bank, Limited, Magnalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.
Authorised and fully paid up Capital Rs. 300,000—0—0
Reserve and other sinking Funds „ 259,000—0—0

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
ಅಧಿಕಾರಗೊಳಿಸಲ್ಪಟ್ಟು, ಪೂರ್ಣವಾಗಿ
ಕೊಟ್ಟ ಮೂಲಧನವು ರೂ. 300,000—0—0
ಕ್ಷೇಮನಿಧಿ ಮತ್ತು ಇತರ ಫಂಡುಗಳು
259,000—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳೋಣಾಗುತ್ತದೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1925.

K. Venkat Rao,
Secretary.

ಪರೀಕ್ಷಾಕಾಲ.

ವಿದ್ಯಾರ್ಥಿಗಳೇ ಇತ್ತ ನೋಡಿರಿ.

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ.

"ಸಾರಸ್ವತಾಸವ"ವು ಒಳಗಳ ಮುಖ್ಯಾವಯವಗಳಲ್ಲುಂಟಾಗುವ ವ್ಯತ್ಯಾಸವನ್ನು ಸರಿಪಡಿಸಿ, ಜೀರ್ಣಶಕ್ತಿಯನ್ನು ಹೆಚ್ಚಿಸಿ, ಪಂಕ್ತಿಭ್ರಮಣೆ ತಲೆತಿರುಗು, ನೆತ್ತಿಯಕಾವು, ಇಂದ್ರಿಯ ದೌರ್ಬಲ್ಯಗಳನ್ನು ಹೋಗಲಾಡಿಸಿ ಶುದ್ಧರಕ್ತವನ್ನು ವೃದ್ಧಿಪಡಿಸುತ್ತದೆ. ಸೀಸೆ 1ಕ್ಕೆ ಬೆಲೆ 1 ರೂಪಾಯಿ, ಪೋಸ್ಟೇಜು ಬೇರೆ,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ—ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ ಹೊಟ್ಟೆನೋವು ಇಂಫ್ಲುಯಂಜಾ ಪ್ಲೇಗುಜ್ವರ.

ಮಕ್ಕಳ—ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು. ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗರ್ಭಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳ ವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲ ಪಂಡಿತರು,

ಬ್ರಾಂಚ್ ಆಫೀಸ್, ಚಿಕ್ಕಪೇಟೆ, ಬೆಂಗಳೂರು ಸಿಟಿ.
ಹೆಡ್ ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ,
ಮಂಗಳೂರು ಟವನಿಗೆ ಮಾತ್ರ.

ವಿದ್ಯಾವಾಚಸ್ಪತಿ
ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ

"ಸಂಕ್ಷೇಪಗೀತೆ"

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ್ಳ, ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದೆ. ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೦ ಟಪ್ಪಾಲು ಖರ್ಚು ಕೂಡಿ ಆಣೆ ೧೧ನ್ನು ಮನಿಯಾರ್ಡರಿನ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ೨ರಕ್ಕಿಂತ ಜಾಸ್ತಿ ಖರ್ಚು ತಗಲುವುದು. ರಖಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.

ಪುಸ್ತಕ ದೊರಿಯುವ ವಿಳಾಸ—

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು, ಮತ್ತು ಕೆನರಾಸ್ ಮಿತ್ರಾಸ್ ಬುಕ್ ಎಂಡ್ ಟ್ರಾಕ್ಟ್ ಡಿಪೋಜಿಟರಿ,
ಮಂಗಳೂರು.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು [illegible],

ಶ್ರೀಕಾಶೀ, ಗಯಾ, ಪ್ರಯಾಗ, ಹರಿದ್ವಾರ [illegible]

ಎಸ್. ಕೆ. ಕೃಷ್ಣಸ್ವಾಮಿಸೆಟ್ಟಿ ಅಂಡ್ ಸನ್ಸ್,
[illegible]

ಉಚಿತ! ಬಿಟ್ಟಿ!! ಪುಗಸಟ್ಟೆ!!!

ವೈದ್ಯವಿದ್ಯ
NO PRICE NO POSTAGE

ಎಂಬ ಈ ಪುಸ್ತಕದಲ್ಲಿ ಆಯುರ್ವೇದಶಾಸ್ತ್ರದಲ್ಲಿ [illegible] ಆರೋಗ್ಯ ದಿಂದ ಕೂಡಿದ ಸಂತಾನಗಳನ್ನು ಪಡೆದು ಸತಿಪತಿಯರು ಅನ್ಯೋನ್ಯರಾಗಿ ಅನುರಾಗವುಳ್ಳವರಾಗಿ ಸುಖ ದಿಂದಲೂ ಸಂತೋಷದಿಂದಲೂ [illegible]

ರಾಜವೈದ್ಯ ನಾರಾಯಣಜೀ ಕೇಶವಜೀ,
49, ಬಂದರ್ ಸ್ಟ್ರೀಟ್, ಜಿ. ಟಿ. ಮದ್ರಾಸ್

Just Arrived **Fresh Consignment**

OF

Best English Cycles.

REDUCTION IN PRICES.

Ranger Cycles Model M. Made in Birmingham. With Dunlop or Bates Tyres & Tubes	... @ Rs. 90—0—0
Barton Humber on Advance With Dunlop or Bates Tyres & Tubes	... @ ,, 100—0—0
Senior Royal with B. S. A. Fitting. With Dunlop or Bates Tyres & Tubes ...	...@ Rs. 145—0—0
Royal Saxon with B. S A. Fitting. With Dunlop or Bates Tyres & Tubes ...	... @ Rs. 175—0—0

All the above Cycles include pump and tools.

Brookes Pateern 90/2 German Saddle ...	...@ ,, 9—8—0
,, Saddle 90/2 ,, ...	...@ ,, 21—0—0
,, ,, B/30 ,, ...	...@ ,, 26—0—0

For further particulars please write to us or call on us:—

All kinds of Cycle Accessories, Dunlop and German Tyres and Tubes
ARE AVAILABLE AT VERY CHEAP RATES.

Special Discount to Traders. *Easy Terms Arranged.*

APPLY TO:—**The Mangalore Trading Association,**
Wholesale Dealers in Cycles and Cycle Accessories,
Car-Street, MANGALORE

—ಗೋಡೆಗೆ ತಗಲಿಸುವ—
ಹೊಸ ನಮೂನೆಯ—
ಟಿಕ್—ಟಾಕ್

ಎಂಬ ಈ ಗಡಿಯಾರಗಳು ಜರ್ಮನೀ ದೇಶದಲ್ಲಿ ತಯಾರಿಸಿದ್ದು. ಇವು ಕಂಠಾರು ಘಂಟೆಯನ್ನು ತೋರಿಸುವವು. ಇವಕ್ಕೆ ಬೀಗ ಕೊಡಬೇಕಾದಿಲ್ಲ. ಇದರಲ್ಲಿ ಕಾಣುತ್ತಿರುವ ಗುಂಡನ್ನು ಮೇಲಕ್ಕೆ ಎಳೆದರೆ ಸಾಕು. ತನ್ನಷ್ಟಕ್ಕೆ ತಾನೇ ಟಿಕ್—ಟಾಕ್ ಎಂಬ ಶಬ್ದವನ್ನು ಮಾಡುತ್ತಾ ಸರಿಯಾದ ಕಾಲವನ್ನು ತೋರಿಸುವದು. ಇದು ನೋಡುವುದಕ್ಕೆ ಬಹು ಲಕ್ಷಣವಾಗಿರುವುದು.

ಕ್ರಯ 1ಕ್ಕೆ ರೂ. 8—0—0

ಪೀಟರ್ ವಾಚ್ ಕಂಪೆನಿ
ಪೋಸ್ಟ್ ಬಾಕ್ಸ್ ನಂ. 27, ಮದ್ರಾಸ್.

. ADVERTISE IN

The Business Directory
OF INDIA, BURMA & CEYLON

A Comprehensive Directory of the various Business-men, Exporters and Importers, Firms, Factories, Mills, Manufacturers, Merchants and Industries of the principal Cities, Ports and Towns of India, Burma and Ceylon.

PUBLISHED ANNUALLY

Rates for Advertisements

¼ Page	Rs. 50
[illegible] in. Single Column	,, 20
[illegible] in. Single Column	,, 15
Name in Bold Types	,, 5

Price per Copy Rs. 10.

PRINTERS & PUBLISHERS.
Business Directory Co.,
Kanara Press Buildings, MADRAS. E.
Telegrams: "KETHAKI" Phone 540

Just arrived! *Look Sharp!*

SCREW TORCH LAMPS
&
Pocket Electric Lamps

AVAILABLE

In different varieties, Mother of pearl lamps. Cycle lamps.

NICKEL PLATED.

Hammered Brand, with Powerful Bulls-eye lance.

Use with it

Bull's-eye Dry Batteries.

The Mangalore
Trading Association,
Car Street, MANGALORE.

ಸಾರಸ್ವತ

ಕನ್ನಡ ಮತ್ತು ಕೊಂಕಣಿಯಲ್ಲಿ ಕಳೆದ ವಿಜಯದಶಮಿಯ ದಿನದಿಂದ ಪ್ರತಿ ದಶಮಿಗೆ ಹೊರಡುವ ಪತ್ರಿಕೆ.

ವಿ. ಎಸ್. ಕಾಮತ್,
ಮೂಲ್ಕಿ ವಾಮನ ಕುಡ ಸಂಪಾದಕರು.

ಮಠಸಂಸ್ಥೆ ಮತ್ತು ಸಮಾಜಸಂಬಂಧಪಟ್ಟ ಇತರ ಸಂಸ್ಥೆಗಳ ಸುಸಂಘಟನೆ.

ಸಮಾಜದೊಳಗೆ ಅನ್ಯೋನ್ಯ.

ಸ್ತ್ರೀಸಮಾಜಕ್ಕೆ ಉಪಯುಕ್ತ ವಿಷಯಗಳ ನಿರೂಪಣ.

ಮತಭಾವನೆಗಳ ಉಜ್ಜೀವನಾದಿ ಉದ್ದೇಶಗಳಿಂದ ಈ ಪತ್ರಿಕೆಯು ಹೊರಡಿಸಲ್ಪಡಲು ಸಾರಸ್ವತ ಸಮಾಜವು ಇದಕ್ಕೆ ಪ್ರೋತ್ಸಾಹವನ್ನೀಯಬೇಕಾಗಿ ಪ್ರಾರ್ಥನೆ.

ಚಂದಾಹಣ ಅಂಚೆವೆಚ್ಚ ಕೂಡಿ ರೂ. ೧—೪—೦.

ಪೋಷಕರು ರೂ. ೧೦—೦—೦. ಸಹಕರು ರೂ. ೫—೦—೦.

ಮಾದರಿ ಸಂಚಿಕೆಯನ್ನು ಟಪ್ಪಾಲು ಖರ್ಚಿಗಾಗಿ ಅರ್ಧಾಣೆ ಸ್ಟ್ಯಾಂಪು ಕಳುಹಿಸುವವರಿಗೆ ಕಳುಹಿಸುವೆವು.

ಕನ್ನಡ ನಾಡಿನಲ್ಲಿ ಕಡೆಯಲ್ಲಿಯೂ ಬಾತಮಿದಾರ ಬೇಕು.

ಎಲ್ಲಾ ಪತ್ರವ್ಯವಹಾರ ಕೆಳಗಿನ ವಿಳಾಸಕ್ಕೆ ನಡೆಸಬೇಕು.

ಯು. ನಾರಾಯಣಪ್ಪ, ಕಾರ್ಯದರ್ಶಿ,
ಸಾರಸ್ವತ, ಉಡುಪಿ.

ಆರ್. ಮಾರ್ಟಿನ್ನರ

ಜ್ವರದ ಗುಳಿಗೆಗಳು.

ಸುಲಭ ಸ್ವೇದನಕಾರಿಯು ಘಟಕಗಳು ಚಳಿಜ್ವರದ ವಿಷದಾರ್ಥಗಳನ್ನು ತಟ್ಟನೆ ನಿರ್ಮೂಲ ವ್ಯಾಧಿಗಳನ್ನು ಸಂಪೂರ್ಣ ಶಾಂತ ಪಡಿಸಿ, ಮಲೇರಿಯಾ ಜ್ವರ, ಛ, ಚಾರಿಜ್ವರ, ಮತ್ತು ಆಗಾಗ್ಗೆ ಬಿಟ್ಟುಕೊಂಡು ಬರುವ ಇತರ ಬಾಧೆಯಿಂದ ಗುಣಪಡಿಸುವವು.

ತಟ್ಟನೆ ವಾಸಿಪಡಿಸುವುದರಲ್ಲಿ ರೋಗಗಳಲ್ಲಿ ಪ್ರಸಿದ್ಧಿಯನ್ನು ಹೊಂದಿದ್ದು, ಆಕೆ ಬಿಟ್ಟುಬಿಟ್ಟ ಅನೇಕ ರೋಗಗಳಲ್ಲಿ ಗುಣಪಡಿಸಿದವುಗಳಾಗಿರುತ್ತವೆ.

ಇವುಗಳು ಗಿರಣಿಗಳಲ್ಲಿ ಕಾರ್ಖಾನೆಗಳಲ್ಲಿಯೂ ವಿಶೇಷವಾಗಿ ಉಪಯೋಗಿಸಲ್ಪಡುತ್ತವೆ. ಸ್ವಾವಾಗಿ ಹಿಂದೂಸ್ಥಾನದಲ್ಲಿ ಎಲ್ಲಾ ತೋಟಗಾರರಿಂದ ಉಪಯೋಗಿಸುವದು. ಅಲ್ಲದೆ ದಿಂಗತ ವಿಶ್ರಾಂವಾದ ಕೀರ್ತಿಯನ್ನು ಕೂಡ ಪಸರಿಸುವುದು. ಕಠಿಣ ಜ್ವರವು ತಟ್ಟನೆ ಇಳಿಯಬೇಕಾದರೆ ಆರ್. ಮಾರ ಎಗ್ಯೂ ಮಿಕ್ಚರ್ ಒಡನೆ ಇದನ್ನು ಸೇವಿಸಬೇಕು. ಈ ಇವೆರಡು ಅದ್ಭುತ ಶಕ್ತಿಯುಳ್ಳ ಔಷಧಿಗಳು ಪ್ರತಿಯೊಂದು ಕುಟುಂಬದ ಮನೆಯಲ್ಲಿಟ್ಟುಕೊಳ್ಳಲು ಯೋಗ್ಯ ವಸ್ತುಗಳಾಗಿವೆ. ಪ್ರತಿಯೊಂದು ಬಾಟ್ಲಿಯಲ್ಲಿ 48ಮಾತ್ರೆಗಳು ಇರುವವು.

ಬಾಟ್ಲಿ 1ಕ್ಕೆ ರೂ. 1—8—0.

ಆರ್. ಮಾರ್ಟಿನ್ನರ ಎಗ್ಯೂ ಮಿಕ್ಚರ್.

ಇದು ಜ್ವರ, ಶೀತ ಮಲೇರಿಯಾ, ಚಾರಿಜ್ವರ, ಸನ್ನಿಪಾತ ಪಟ್ಟಿ ವಾಯುವಿಕಾರದಿಂದುಂಟಾದರೆ ಇವೇ ಮೊದಲಾದ ಎಲ್ಲಾ ತರದ ಜ್ವರಗಳನ್ನೂ ಕೂಡಲೇ ನಾಶಪಡುತ್ತದೆ. ಎಲುಬುಗಳಲ್ಲಿ ಹರಡಿಕೊಂಡಿರುವ ಜ್ವರವನ್ನೂ ಸಹ ನಾಶಪಡುವುದಲ್ಲದೆ, ಇದು ಸಿಹಿಯಾಗಿರುವುದ್ದರಿಂದ ಸಣ್ಣ ಕೂಸುಗಳು ಸಹ ಕುಡಿಯಲಿಕ್ಕೆ ಇಷ್ಟಪಡುತ್ತವೆ. ಅನೇಕ ನಿಜ ವಿದ್ವಾಂಸ ವೈದ್ಯರಿಂದ ಗುಣಪಡಿಸುವುದಕ್ಕಾಗದ ಜ್ವರವನ್ನು ಈ ಎರಡೇ ಎರಡು ಬಾಟ್ಲಿಗಳ ಸೇವನೆಯು ಹುಷಾರಾಗಿದೆ.

ಬಾಟ್ಲಿ 1ಕ್ಕೆ ರೂ. 0—13—0

ಆರ್. ಮಾರ್ಟಿನ್ನ ಮೂಲವ್ಯಾಧಿ ಮಲಾಮು.

ಮನುಷ್ಯನಿಗೆ ಮೂಲವ್ಯಾಧಿಯಾದಾಗ, ಬಹಳ ಸಲ ಮೂತ್ರಶಂಕೆಯಾಗುವಿಕೆ, ಮರ್ಮಸ್ಥಾನದಲ್ಲಿ ಉರಿಯುವುದು, ಮಲಬದ್ಧತೆ ಇವೇ ಮುಂತಾದವುಗಳಿಂದ ನರಳಿಪಡುತ್ತಾನೆ. ಔಷಧದ ಒಂದೇ ಒಂದು ಬಾಟ್ಲಿಯ ಉಪಯೋಗದಿಂದ, ರಕ್ತ ಸುರಿಯ ಮೂಲವ್ಯಾಧಿ, ಕಂಕುಳಲ್ಲಿ ನೋಯುವ ಮೂಲವ್ಯಾಧಿ ಮತ್ತು ಎಂತರಹದ ಕಠಿಣವಾದ ಮೂಲವ್ಯಾಧಿಯಾದರದ ಕೂಡಲೇ ವಾಸಿಯಾಗುತ್ತದೆ. ಇದು ಒಳ್ಳೇ ಔಷಧಗಳಿಂದ ತಯಾರಿಸಲ್ಪಟ್ಟು ತೆಗೆದುಕೊಳ್ಳುವವರಿಗೆ ಏನೊಂದೂ ನೋವನ್ನು ಕೊಡದೆ ತಂಪಾಗಿ ಮಾಡುತ್ತದೆ. ಬಾಟ್ಲಿಯ ದರ ರೂ. 1—8—0 ಮಾತ್ರ.

ವಿಳಾಸ:—ಆರ್. [illegible] ಕಟ್ಲಿ ಮತ್ತು ಕಂಪೆನಿ,
ನಂ. 9 ಬಿ. ಫ್ರಿಯರ್ ರೋಡ್,
ಸಾಂಜ ವರ್ತಮಾನ ಪ್ರೆಸ್,
ಟೋಡಿವಾಲಾ ಬಿಲ್ಡಿಂಗ ಎದುರುಗಡೆ, ಫೋರ್ಟ ಮುಂಬಯಿ.

R. [illegible] Kately & Co.
No. B. Frere Road,
Oppsit Sanjvertaman Press,
Todiwal Building, FORT BOMBAY.

ದಕ್ಷಿಣ ಕನ್ನಡ ಜಿಲ್ಲೆಯ

ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—

ಶಾರದಾ ಛಾಪಖಾನೆ,
ರಥಬೀದಿ ಮಂಗಳೂರು

Edited, Printed & Published by V. S. Kamath at the M. T. A. Sharada Press, Mangalore.

Registered: No. M. 498.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಶ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ । ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೯. ಮಂಗಳೂರು, ತಾರೀಕು ೧ನೇ ಶುಕ್ರವಾರ ಮೇ ೧೯೨೫. ಸಂಚಿಕೆ ೧೮.

The Canaa Banking Corporation Udipi, Ltd.

Head Office:—	Branch:—
Udipi	Coondapoor
Paidup Capital	1,66,165—9—11
Reserve etc	64,700—0—0

Season Deposits

Carrying Special rate of 7% up to 15th June 1925 only.

Further Particulars on Application.

ದಿ ಕೆನರಾ ಬ್ಯಾಕಿಂಗ್ ಕೊರ್ಪೊರೇಶನ್ ಉಡುಪಿ, ಲಿಮಿಟೆಡ್.

ಹೆಡ್ ಆಫೀಸು:—ಉಡುಪಿ.	ಶಾಖೆ:—ಕುಂದಾಪುರ.
ವಸೂಲುಕತ್ತ ಮೂಲಧನ	1,66,165—9—11
ರಿಜರ್ ವಗೈರೆ ಫಂಡುಗಳು	64,700—0—0

ತಾ. 15—6—1925ವರೆಗೆ ಮಾತ್ರ ಸಾಲಿಯಾನ್ ಸೇಕಡಾ 7 ದರದ ಬಡ್ಡಿಯ ಮೇಲೆ

ಮುಸುಂ ಠೇವಣಾತಿಗಳನ್ನು

ಅಂಗೀಕರಿಸೋಣಾಗುತ್ತದೆ.

ಹೆಚ್ಚಿನ ಮಾಹಿತಿ ಬರಕೊಳ್ಳಿರಿ.

Office of the Corporation, Udipi, 1-3-'25
N. Ananda Rao,
Secretary

Wanted Agents
FOR
Every District in South India

For Pushing Sales of Our Calenders, Xmas and New Year Card, Blotters, Pictures and Picture Post Cards, at wholesale rates. Deposit of Rs. 100—0—0 Essential.

Apply to:—

The South Indian Advrtising Agency,
1, Kilary Road,
BANGALORE CITY.

ಶುದ್ಧ ರೋಮದ ಶಾವಳಿಗಳು.

1 ಮಳ ಉದ್ದ 1¼ ಮಳ ಅಗಲ ರೂ. 1¼ರಿಂದ 2 ವರೆಗೆ, 5 ಮಳ ಉದ್ದ 1¼ ಮಳ ಅಗಲ ರೂ. 1¼ ರಿಂದ 5 ವರೆಗೆ, 6 ಮಳ ಉದ್ದ 1¼ ಮಳ ಅಗಲ ರೂ. 2¼ರಿಂದ 8 ವರೆಗೆ, 8 ಮಳ ಉದ್ದ 2 ಮಳ ಅಗಲ ರೂ. 3¼ರಿಂದ 10 ವರೆಗೆ, 1[illegible] ಮಳ ಉದ್ದ 2¼ ಮಳ ಅಗಲ ರೂ. 6ರಿಂದ 12 ವರೆಗೆ, 16 ಮಳ ಉದ್ದ 2¼ ಮಳ ಅಗಲ ರೂ. 9ರಿಂದ 16 ವರೆಗೆ. ಇದಲ್ಲದೆ ಶುದ್ಧ ಜಲ್ತಾರ್ [illegible] ಮುಂಡಾಸುಗಳು, ಸಾಮಾನುಗಳು, ಜರಿ ಶಾಲುಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, ಸಾಲಿಗ್ರಾಮ, [illegible], ಜಪಮಾಲೆ, ಹುತ್ತಿನ ಅಟ್ಟಿದ ಸಾಧನಗಳು, ಫೋಟೋ ಉಂಗುರಗಳು ಮತ್ತು [illegible] ಅನೇಕ ಸಾಮಾನುಗಳು [illegible]

ವಿಳಾಸ—

[illegible]

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ.

450 ಪುಟಗಳು ಎಮ್. ಗಣಪತಿರಾವ್ ಐಗಳ್ ಇವರಿಂದ ರಚಿತವಾದದ್ದು. ಕ್ರಯ ರೂ. 2-4-0

ಮಾರಾಟಕ್ಕೆ ಸಿದ್ಧವಾಗಿವೆ **— ತುಳು ಪಾಡ್ದನಗಳು —** ಮಾರಾಟಕ್ಕೆ ಸಿದ್ಧವಾಗಿವೆ.

ದೈಯ್ಯೊಂಗುಳು, ಕಲ್ಕುರ್ಟಿ—ಕಲ್ಕುಡ, ಕಣಂದೂರು ದೈಯ್ಯೊಂಗುಳು, ಮುಂಡತ್ತಾಯ, ಬೊಬ್ಬರ್ಯ.

ಸುಲಭ ದರಗಳು **— ಶಾಲಾ ಪುಸ್ತಕಗಳು —** ರಖಂ ಕೊಂಡುಕೊಳ್ಳುವವರಿಗೆ ಯೋಗ್ಯ ಡಿಸ್ಕೌಂಟ್.

ಅಜ್ಜಿ ಕಥೆಗಳು:—ಮೂರು ಕರಡಿಗಳು; ಹೆಣುಸತ್ತು ಕಾಗೆ ಬಡವಾಯಿತು; ಅಗಣಿ ಮುದ್ದೆ; ಇಲಿಗಳ ಕತೆ ಸೈ; ಅಂಗಳ ದುಗ್ಗು; ಸಿಗಡಿ ಯಾಕೆ ಒಣಗಲಿಲ್ಲ; ಗುಡುಗುಡು ಗುಮ್ಮಟ ದೇವರು; ಮೊಣಸಿನ ಕಾಳಪ್ಪ; ಒತ್ತಿನ ಓಟ; ಹೊಸ ಕನ್ನಡ ಪುಸ್ತಕ ಭಾಗ ೧; ಹೊಸ ಕನ್ನಡ ಪುಸ್ತಕ ಭಾಗ ೨; ಕನ್ನಡ ಪದ್ಯಗಳು; ಮಗ್ಗಿ ಪುಸ್ತಕ; ಅಚಿತಕುಬಾರ; ಪದ್ಯ ರತ್ನಾವಳಿ, ಎಕ್ಸರ್‌ಸೈಜ್ ಮತ್ತು ನೋಟು ಪುಸ್ತಕಗಳು, ಕಾಪಿ ಪುಸ್ತಕಗಳು, ಡ್ರಾಯಿಂಗ್ ಪುಸ್ತಕಗಳು

ಇತರ ಪುಸ್ತಕಗಳು:—ಸಂಕ್ಷೇಪಗೀತೆ, ಕೆ ಸುಭಂಗ, ಹಿಂದೂ ವ್ರತವಿವೇಕ, ಚಂದ್ರಗುಪ್ತ ಚಕ್ರವರ್ತಿ, ಶ್ರೀ ಕೃಷ್ಣಸಂಧಾನ, ಪದ್ಯಪಾಠಗಳು, ಹರಿಕಥಾ ವ್ಯಕಸಾರ ಹನುಮಾಮಸಂಕೀರ್ತನೆ ಸುದಾಂಮೃತ ಪದ್ಯಗಳು. ಬೆಂಕಿಪೆಟ್ಟಿಗೆ ತಯಾರಿಸುವ ವಿಧಾನ, ಸಾಬೂನು ತಯಾರಿಸುವ ವಿಧಾನ, ಸ್ವರಾಜ್ಯ ಭಕ್ತೋಲ್ಲಾಸ, ಚರಕಗೀತೆ, ಕೊಂಕಣಿ ಭಾಷೆಯಲ್ಲಿ ಚಂದ್ರಹಾಸ ನಾಟಕ, ಪ್ರಹ್ಲಾದ ಚರಿತ್ರ ನಾಟಕ, ಕನ್ನಡ ಮೃಚ್ಛಕಟಿಕ ನಾಟಕ, ಚಂದ್ರಹಾಸಾಭ್ಯುದಯ ನಾಟಕ, ಕೋವಿಲನ್ ಚರಿತ್ರ ನಾಟಕ, ನಾದರ ಉಪನ್ಯಾಸ ಭಾಗ ೧, ೨, ಮತ್ತು ೩.

AMRUTANJAN BO
AMRUTANJAN
Best Indian Pain Balm
Amrutanjan D
BOMBAY

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿ ನರ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು.

✻ ಅಮೃತಾಂಜನ ✻

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಉತ್ಕೃಷ್ಟವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 2 ಆಣೆ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ ಟೌನ್, ಮದ್ರಾಸು.

109 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

— ರಥೋತ್ಸವ, ವಿವಾಹ ಉಪನಯನಗಳ ಸಮಯ —
ಸರ್ವರಿಗೂ ಉಡಿಗೆ ತೊಡಿಗೆಗಳು ಬೇಕಾಗುವ ಸಂದರ್ಭ.

ಯಾರು, ಯಾವುದನ್ನು ಎಲ್ಲಿ ಪಡೆಯಬೇಕೆಂಬ ಶಂಕೆಯಿಂದ ಏಕಾಂತ ತಡಬೇಡಿರಿ. ಉಡಿಗೆತೊಡಿಗೆಗಳನ್ನು ಆರಿಸುವ ನಿಮಗೆ ಬೇಕಾದ ಯಥಾರ್ಥ ಮಾಹಿತಿಯನ್ನು ಕಳೆದ ಹತ್ತುಹತ್ತು ವರುಷಗಳಿಂದ ಪಡೆದು ನಮ್ಮಲ್ಲಿಯ ವ್ಯಾಪಾರವು ಗಿರಾಕಿಗಳಿಗೆ ಸರ್ವ ತೃಪ್ತಿಯುಂಟಾಗುವ ರೀತಿಯಲ್ಲಿ ಪರಿಣಮಿಸುವಂತೆ ನಮ್ಮ ಅವಶ್ಯ ಸಂಗ್ರಹವನ್ನು ಮಾಡಿರುತ್ತೇವೆ.

ಗುರ್ಪುರ್ಕಾರ್ ಬ್ರದರ್ಸ್, ರಥಬೀದಿ, ಮಂಗಳೂರು.

ಹೆಡ್ ಆಫೀಸು:—ರಥಬೀದಿ—(ಮೊದಲು ಸುಜೀರ ನಾಗಪ್ಪನಾಯಕ್, ಎಂಡ್ ಕೊ. ಇದ್ದಲ್ಲಿ; ಅಬೂಬಕ್ಕರ್ ರಸ್ತೆಗೆ ತಿರುಗುವಲ್ಲಿ) ಮಂಗಳೂರು.

ಬ್ರೆಂಚ್ ಆಫೀಸು:—ರಥಬೀದಿ—(ಹಳೇ ತಾಲೂಕು ಕಚೇರಿಯ ಪಟಾರಕ್ಕ ಸಮೀಪವಿರುವ ಮಳಿಗೆ,) ಮಂಗಳೂರು.

ಈ ದೇಶದ ಪ್ರಖ್ಯಾತಪಟ್ಟ ನೇಯಿಗೆಯ ಕೇಂದ್ರಸ್ಥಳಗಳಾದ—ಬನಾರಸ್, ಪೂನಾ, ಅಹಮ್ಮದಾಬಾದ್, ಸುರತ್, ಬೆಂಗಳೂರು, ಧರ್ಮಾವರಮ್, ಕಂಜೀವರಮ್, ಕೊಯಮುತ್ತೂರು, ಮಧುರೆ, ತಂಜಾವೂರು, ಕುಂಭಕೋಣ, ಆರ್ಣಿ, [illegible], ಹುಬ್ಬಳ್ಳಿ, ಇಳಕಲ್, [illegible], ಮದ್ರಾಸು ಈ ಪ್ರಾಂತ್ಯಗಳಲ್ಲಿ ತಯ್ಯಾರಾದ

ಇರಾಸೀರೆಗಳು, ದುಪ್ಪಟ್ಟಾ, ಅರಿವೆ, ಪೇಟ್ಟ, ರೇಶ್ಮೆ ಸೀರೆಗಳು, ಅರದಬಿಟ್ಟ ಸೀರೆಗಳು, ಜಾರ್ಜ್ಜೆಟ್ ರೇಶ್ಮೆ ಸೀರೆಗಳು, ಜರಿ ಅಂಚಿನ ಸೀರೆಗಳು, ರೇಶ್ಮೆ ಮಡಿಗಳು, [illegible] ಶಿರೋನ್.

ಕೈರಾಟೆಯಲ್ಲಿ ತಯಾರಿಸಿದ ನೂಲಿನಿಂದ ಮಾಡಿದ—

ಖದ್ದರ್ ಶರ್ಟಿಂಗ್, ಖದ್ದರ್ ಕೋಟಿಂಗ್, ಖದ್ದರ್ ಟೋಪಿ, ಖದ್ದರ್ ಪೇಟ್ಟ, ಅಂಗವಸ್ತ್ರ, ಇತ್ಯಾದಿ—
ಮುಸಲ್ಮಾನರಿಗೆ ಬೇಕಾದ [illegible]—
[illegible]

[illegible]

ಪ್ರತಿಯೊಂದು ಕುಟುಂಬಿಗಳ ಮನೆಗಳಲ್ಲಿ ಸೌಖ್ಯವನ್ನು ತೋರಿಸುವುದಕ್ಕೂ ಮತ್ತು ಅವರವರ ಉಪಯೋಗಾರ್ಥವನ್ನು ತಿಳುವಳಿಕೆ ಬಗ್ಗೆ ನಡಿಸುವುದಕ್ಕೂ ಒಂದು ಮಾರ್ಗದರ್ಶಕ ನಿಘಂಟು ಪುಸ್ತಕವು ಈ ನಮ್ಮ ಹಿಂದೂದೇಶದ ಸಮೂಹದಲ್ಲಿರುವುದು. ಅಂಥಾ ಪುಸ್ತಕವು ಯಾವದೆಂಬುವದು

ನೀವುಗಳು ಬಲ್ಲಿರಾ?

(ಅದೇ)

"ಕಾಮಶಾಸ್ತ್ರವೆಂಬುವುದು."

ತಾವುಗಳು ಇನ್ನೂ ಈ ಪುಸ್ತಕದಲ್ಲಿ ಬರೆದಿರುವ ಸಾರಾಂಶವನ್ನು ಓದಿಲ್ಲದಿದ್ದರೆ, ಒಡನೇ ಒಂದು ಪುಸ್ತಕವನ್ನು ಕಳುಹಿಸುವಂತೆ ಒಂದು ಪೋಸ್ಟುಕಾರ್ಡು ಬರಿಯಿರಿ.

ಪುಸ್ತಕವನ್ನು ಇನಾಮಾಗಿ ಕಳುಹಿಸುವೆವು.

ಮುಖ್ಯವಾದ ತಿಳುವಳಿಕೆ.

ನಾವುಗಳು ದೃಢಚಿತ್ತರಾಗಿಯೂ, ನಿಧಾನಸ್ಥರಾಗಿಯೂ, ಸೌಖ್ಯವಾಗಿಯೂ, ಕಷ್ಟವಿಲ್ಲದೇನೇ ವಿಷಯಗಳನ್ನು ಧರಿಸುವ ಮನಸ್ಸನ್ನು ಹೊಂದಬೇಕಾದರೆ ನಮ್ಮ ಅಮೂಲ್ಯವಾದ "ಕಾಮಶಾಸ್ತ್ರವೆಂಬುವ ಪುಸ್ತಕದಲ್ಲಿ ಕಾಣಿಸಿರುವ ಆತಂಕನಿಗ್ರಹ ಮಾತ್ರೆಗಳನ್ನು ಸೇವಿಸಬೇಕು."

ಒಂದು ರೂಪಾಯಿ ಖರ್ಚುಮಾಡಿದರೆ 32 ಮಾತ್ರೆಗಳುಳ್ಳ ಒಂದು ಡಬ್ಬಿಯನ್ನು ತರಿಸಿ ಪ್ರಯತ್ನಿಸಬಹುದು.

ವಿವರವಾಗಿ ಬರೆದಿರುವ ಒಂದು ಕ್ಯಾಟಲಾಗು ಕಳುಹಿಸುವಂತೆ ಈ ದಿನವೇ ಒಂದು ಪೋಸ್ಟುಕಾರ್ಡು ಬರಿಯಿರಿ.

ಆತಂಕನಿಗ್ರಹ ಔಷದಾಲಯ,
ನಂಬ್ರ 26, ಬ್ರಾಡ್ವೆ, ಮದರಾಸು.

ಹೊಸಗ್ರಂಥಗಳು!! ಬೇಗನೇ ತರಿಸಿಕೊಳ್ಳಿರಿ!!!

ಕೋಕಶಾಸ್ತ್ರವು.

ರಸಿಕ ವಾಚಕ ಮಹಾಶಯರೇ,

ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ, ಸಂಪಾದಿಸಿ, ಅದರಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನಷ್ಟೇ ಶೋಧಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ಲೇಜ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇವರಲ್ಲಿ ಪದ್ಮಿನಿ, ಚಿತ್ರಿನಿ, ಸ್ತ್ರೀಯ ಇದರಂತೆ ಪುರುಷರಲ್ಲಿಯ ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನೂ ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ, ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ ವಂಧ್ಯಾದೋಷಗಳ ಚಿಕಿತ್ಸೆಯನ್ನೂ, ಸ್ತ್ರೀಯರ ಗೂಢ ರಹಸ್ಯವನ್ನೂ ದಂಪತಿ ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನೂ, ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನು ಒಮ್ಮೆ ರಸಿಕರು ತರಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ

ಇದರ ಬೆಲೆ ೧—೮—೦, ಟಪ್ಪಾಲು ಹಾಸಲು ೦—೪—೦.

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಟ್ರೇಡಿಂಗ್ ಪ್ರೆಸ್, ಬಳ್ಳಾರಿ

ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ಮೂರನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್. ಗಣಪತಿರಾವ್ ಐಗಳ್—ಗ್ರಂಥಕರ್ತರು.

ಮನೋರಂಜಕ ಚಿತ್ರಗಳೂ ಇವೆ.

ಇದರಲ್ಲಿ ಸಾವಿತ್ರಿ, ಶಕುಂತಲಾ, ಕೃಷ್ಣಾಕುಮಾರಿ, ಪದ್ಮಿನಿ, ಜೋನ್ ಒಫ್ ಆರ್ಕ, ಫ್ಲೊರೆನ್ಸನಾಯಿಟಿಂಗೇಲ ಪರಶುರಾಮ, ಭೂತಾಳಪಾಂಡ್ಯ, ಕಾರ್ಕಳ ಗೋಮಟೇಶ್ವರ ಮತ್ತು ಭೈರವರಾಜ, ಮೂಡಬಿದ್ರೆಯ ಚೌಟರು, ನಂದಾವರ ಬಂಗರು, ಕಾರ್ಕಳ ರಾಮಸಮುದ್ರ ಮತ್ತು ರಾಮನಾಥ ಒಡೆಯರ ಅಣೆಕಟ್ಟು, ಗುರುಪುರ ಜಂಗಮ ಮಠ, ಕಲ್ಯಾಣಪ್ಪನ ಕಾಟಕಾಯಿ, ಗುರುವಾಯನಕೆರೆ, ಜಮಾಲಾಬಾದುಕೋಟೆ, ಸುಲ್ತಾನಬತ್ತೇರಿ, ಈದಗಾಪ್ರಾರ್ಥನಾಮಂದಿರ, ಸೇಂಟಮೇರಿ ದ್ವೀಪಗಳು ಮತ್ತು ದರಿಯಾಬಹಾದರಗಡ, ಕೊರಗರು, ಕೊಡಗರು, ತೋಡರು, ರಜಪೂತರು, ಕಂದಾರಿಗಳು ಘುರ್ಖಾಜನರು, ಅರಬಿಯರು, ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ಮೂರನೇ ದರ್ಜೆಯ ಮಕ್ಕಳಿಗೆ ಉಪಯುಕ್ತವಾಗಿದೆ. ಕ್ರಯ 6 ಆಣೆ.

ಪುಸ್ತಕ ದೊರಕುವ ವಿಳಾಸ:—

ಶಾರದಾ ಛಾಪಖಾನೆ, ಮಂಗಳೂರು. | ಗಣಪತಿರಾವ್, ಐಗಳ್. ಮಂಜೇಶ್ವರ.

ಡಾಕ್ಟರುಗಳು ಭಿನ್ನಾಭಿಪ್ರಾಯಪಡುವಾಗ್ಯೆ ತೀರ್ಮಾನಿಸುವದು ಯಾರು?

ಅಂಥಾ ಸಂದರ್ಭಗಳಲ್ಲಿ ಡೆಂಗ್ಯೂ ಮುಂತಾದ ಜ್ವರಗಳನ್ನು ನಿವಾರಿಸುವಂಥಾ "ಬಾಟ್ಲಿವಾಲರ ಏಗ್ಯೂಮಿಕ್ಸ್ಚರ್"ನ್ನು ಸರಾಗವಾಗಿಯೂ, ಮತ್ತು ಜ್ವರಗಳನ್ನು ಖಂಡಿತವಾಗಿ ನಿಲ್ಲಿಸುವಂಥಾದೂ, ಎಲ್ಲಾ ತರದ ತಲೆನೋವುಗಳನ್ನು ಹೋಗಲಾಡಿಸುವಂಥಾದ್ದೂ ಆದ "ಬಾಟ್ಲಿವಾಲರ ಏಗ್ಯೂಪಿಲ್ಸ್" ಇದನ್ನು ಉಪಯೋಗಿಸಿರಿ.

ಐ. ಎಮ್. ಎಸ್. ಡಾಕ್ಟರುಗಳಿಂದ ಶಿಫಾರಸು ಮಾಡಲ್ಪಟ್ಟವು. ಇವರ ಉಪಯೋಗದಿಂದ ಹೃದಯದ ಮೇಲೆ ಯಾವದೊಂದೂ ಬಾಧಕವಿಲ್ಲ. ಅರ್ಧ ಶತಮಾನದಿಂದ ಹಿಂದೂಸ್ಥಾನ, ಬರ್ಮಾ, ಸಿಲೋನ್, ಆಫ್ರಿಕಾ ಇವುಗಳಲ್ಲಿ ಪ್ರಖ್ಯಾತಪಟ್ಟಿದ್ದಾಗಿರುತ್ತದೆ.

ಅನೇಕ ಹಿಂದೀ ಪ್ರದರ್ಶನಗಳಲ್ಲಿ ಬೆಳ್ಳಿ ಮತ್ತು ಬಂಗಾರದ ಪದಕಗಳನ್ನು ಪಡೆದಿರುತ್ತೆ. ಚಾಲ್ತಿ ಸಾಮ್ರಾದೆಂತಿದ್ದು ಮಾರ್ವಾರಿಗಳೂ ಕೂಡ ಅದರ ಮೇಲೆ ಹಣವನ್ನು ಮುಂಗಡವಾಗಿ ಕೊಡುತ್ತಾರೆ. ಬಡ ಮತ್ತು ಮಧ್ಯಮ ತರಗತಿಯ ಜನರಿಗೆ ವರಪ್ರದಾನವಾಗಿದ್ದು ಸಂಚಾರ, ಪ್ರಯಾಣ, ದೇಶಾಟನೆಗಳ ಸಮಯದಲ್ಲಿ ಹತ್ತಿರದಲ್ಲಿರಿಸಿಕೊಳ್ಳದಾಗಿರುತ್ತದೆ.

ಬಾಟ್ಲಿವಾಲರ ಬಾಲಾಮೃತ ಅಥವಾ ಟೊನಿಕ್ ಸಿರಪ್.

ಕೆಮ್ಮನ್ನು ಹೋಗಲಾಡಿಸಿ, ಎದೆನೋವನ್ನು ಶಾಂತಗೊಳಿಸಿ, ಜ್ವರವನ್ನು ಉಪಶಮನಿಸಿ, ನಿದ್ರಾಭಂಗವನ್ನು ಕಡಿಮೆ ಮಾಡಿ ಧಾತುವರ್ಧನವನ್ನು ಮಾಡುವದರಲ್ಲಿ ಅತ್ಯುತ್ತಮವಾಗಿರುತ್ತದೆ ಕಫವನ್ನು ಒಣಗಿಸಿ ಮಾಯವಾಗುವಂತೆ ಮಾಡುವುದಲ್ಲದೆ ಅದೇ ಸಮಯದಲ್ಲಿ ಒಳ್ಳೇ ಜೀರ್ಣವನ್ನೂ ಉಂಟುಮಾಡುವುದು. ದರ ಮೊದಲಾದ ಮಾಹಿತಿಯನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ತಾರಿನಪತ್ತೆ:—CAWASHARUR, BOMBAY.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ. | ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್., ಪಿ. ವಾರ್ಡಿ, ಮುಂಬಯಿ, ನಂಬ್ರ 18.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ

ಇವರ

ಬಾಲಾಮೃತ.

ಈ ಔಷಧವನ್ನು ಸೇವನೆ ಮಾಡುವುದರಿಂದ ಮಕ್ಕಳು ರೋಗರಹಿತರೂ ಸಶಕ್ತರೂ ಆಗುವರು. ಇದು ಮಧುರವಾಗಿದೆ; ಮಕ್ಕಳು ಸಂತೋಷದಿಂದ ಸೇವಿಸುತ್ತಾರೆ.

ನಮ್ಮ ವಿಳಾಸ:—
ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಏಜಂಟರು:— ಡಿ. ಊಲನ್ ಮಾರ್ಟ, ಮಂಗಳೂರು.

OUR RECENT IMPORT IN WRIST WATCHES | Have you used anyone of these Watches? | SEND YOUR ORDER NOW ALL GUARANTEED.

Fashionable wrist wrist Lady's size. Reliable movement Guaranteed.

No. 368.

Handy to wear and looks beautiful. Gives punctual time and with strong movement.

Nickel case Rs 8—0

High-class Radium dial watch watch with Roman figures.

No. 367.

Can be seen in dark nights. Well fitted with best movement and strong to use. Used by one and all.

Silver case Rs. 9—0.

Radiolight wrist watch.

No. 372.

Fitted with the best mechanism and guaranteed to work and keep perfect time for a long time.

Nickel case Rs. 7—8
Electro rolled-gold „ 9—0

(N. B. In addition to the above, we have good number of varieties of fancy wrist watches, pocket watches. Please write for a descriptive catalogue, which will be sent free).

WHOLESALE IMPORTERS

PETER WATCH COY.,
POST BOX 27, MADRAS

ಶಾಲಿವಾಹನಶಕ ೧೮೪೭ನೆಯ ಕ್ರೋಧನ ಸಂವತ್ಸರದ ವೈಶಾಖ ಶು|| ೯ ಶನಿವಾರದಿಂದ ಕ್ರೋಧನ ಸಂವತ್ಸರದ ವೈಶಾಖ ಶು|| ೧೫ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೫ನೆಯ ಮೇಷ ಪಕ್ಷ.)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಶ್ರೀದಿನಮಾನ	ಸೂರ್ಯ ಉ.	ಸೂರ್ಯ ಅಸ್ತ
2	ಶನಿ	೯	೩೯.೦೬	ಆಶ್ಲೇಷಾ	೫.೨	೩೦	6 12	6.44
3	ರವಿ	೧೦	೪೩. ೦	ಮಘಾ	೯.೩೩	೩೧	6.11	6 44
4	ಸೋಮ	೧೧	೪೩.೧೬	ಹುಬ್ಬಾ	೧೩. ೧	೩೩	6 11	6.44
5	ಕುಜ	೧೨	೪೩ ೦	ಉತ್ತರಾ	೧೫. ೨	೩೩	6 11	6.44
6	ಬುಧ	೧೩	೪೧.೨೮	ಹಸ್ತಾ	೧೬. ೫	೩೭	6 10	6.44
7	ಗುರು	೧೪	೩೯.೩೩	ಚಿತ್ತಾ	೧೫.೫೦	೨೫	6.10	6.45
8	ಶುಕ್ರ	⊙	೩೫.೩೦	ಸ್ವಾತೀ	೧೪.೧೮	೩೬	6 10	6 45

ಮಂಗಳೂರಿನ ವಾಯುಸ್ಥಿತಿ.

Date ತಾರೀಖು	Temperature. ಉಷ್ಣ (ಕಾವು) Maximum ಹೆಚ್ಚಾದದ್ದು	Minimum ಕಡಿಮೆ	Rainfall ಮಳೆ ದಿನದ ಮಳೆ	ಜುವಾಲಾ ಮಳೆ.
24	94—3	83—4	—	—
25	96—4	80—8	—	—
26	96—3	83—7	—	—
27	95—2	81—0	—	—
28	95—7	80—8	—	—
29	94—7	72—1	0—26	—
30	94—8	78—8	—	0-29

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ	ವರೆಗೆ
	ರೂ. ಆ.	ರೂ ಆ
ಹೊಸ ಮಸ್ಸೂರಿ	8—0	8—10
ಹೊಸ ಗುಡ್ಡು ...	7-8	7—14
ಹೊಸ ರಾಶಿ ...	6- 12	7—8
ಅಪ್ಪಲ್ ಬೆಳ್ತಿಗೆ ...	8—4	9 6
ಗುಡ್ಡು ಬೆಳ್ತಿಗೆ ...	7—12	8 2
ರಂಗೂನು ಬೆಳ್ತಿಗೆ ಗೋಣಿ ೧ ...	13- 8	—
ಗೋದಿ ಗೋಣಿ ಗಳ್ಳೆ ...	18- 8	23 0
ಹುರುಳಿಗೋಣಿ ಗಳ್ಳೆ ...	9- 12	10 12
ಕಡಲೆಗೋಣಿ ಗಳ್ಳೆ ...	11- 8	12 5
ತೊಗರಿಗೋಣಿ ಗಳ್ಳೆ ...	12- 8	13—0
ತೊಗರಿಬೇಳೆ ಗೋಣಿ ಗಳ್ಳೆ ...	13-8	21 0
ಉದ್ದುಗೋಣಿ ಗಳ್ಳೆ ...	14- 0	14 8
ಹೆಸರುಗೋಣಿ ಗಳ್ಳೆ ...	14—0	15 0
ಊರು ಬೆಲ್ಲ ಖಂಡಿ ಗಳ್ಳೆ ...	—	85 0
ಉಪ್ಪು ಗೋಣಿ ಗಳ್ಳೆ ...	4- 4	4—12
ಕೊಬ್ರಿ ಖಂಡಿ ಗಳ್ಳೆ ...	110—0	115 0
ಕೊಬ್ರಿ ಹಿಂಡಿ ಖಂಡಿ ಗಳ್ಳೆ ...	32- 8	33—0
ಎಳ್ಳಿಂಡಿ ಖಂಡಿ ಗಳ್ಳೆ ...	40—0	45 0
ಕೊಬ್ರಿ ಎಣ್ಣೆ ಮುಡಿ ಗಳ್ಳೆ ...	8—4	9 0
ಎಳ್ಳೆಣ್ಣೆ ಮುಡಿ ಗಳ್ಳೆ ...	7- 0	11 0
ಹರಳಿನ ಎಣ್ಣೆ ಪೆಟ್ಟಿಗೆ ಗಳ್ಳೆ ...	8-15-6	—
ಮೋರಿಸ ಸಕ್ಕರೆ ಮುಡಿ ಗಳ್ಳೆ ...	5— 0	—
ಊರ ಮೆಣಸಿನಕಾಯಿ ಮುಡಿ ಗಳ್ಳೆ ...	7- 4	—
ಸಾಸಿವೆ ಮುಡಿ ಗಳ್ಳೆ ...	8- 12	—
ಕೊತ್ತಂಬರಿ ಮುಡಿ ಗಳ್ಳೆ ...	3- 8	3 14
ಅರಿಶಿ ಖಂಡಿ ಗಳ್ಳೆ ...	352- 0	370—0
ಬೀಗೋಟು ಅಡಿಕೆ ಖಂಡಿ ಗಳ್ಳೆ ಹಳತು ...	235- 0	245 0
„ ಹೊಸ ಅಡಿಕೆ	225—0	230—0
ಕಾಳುಮೆಣಸು ಖಂಡಿ ಗಳ್ಳೆ ...	155—0	160—0
ಯಾಲಕ್ಕಿ ಮುಡಿ ಗಳ್ಳೆ ...	80— 0	90—0
ಗೇರುಬೀಜ ಮುಡಿ ಗಳ್ಳೆ ...	3— 9	3 10
ಶುಂಠಿ ಖಂಡಿ ಗಳ್ಳೆ ...	45— 0	65—0
ಹುಂಮ್ಸ ಕಡಲೆ ಮುಡಿ ಗಳ್ಳೆ ...	17-12	23
ಕಾಯ್ಕು ಬಾಕ್ಸಗಳು ಮುಡಿ ಗಳ್ಳೆ ...	26- 0	—
ಚೀನಿ ಬೆಲ್ಲ ಸೇರು ಗಳ್ಳೆ ...	22 — 0	—
ಹಿಪ್ಪಳೆ ಹಣ್ಣು ಮುಡಿ ಗಳ್ಳೆ ...	18- 8	—
ಹವಣು	14— 0	—

The Canara Public Conveyance Co., Ltd, Mangalore.
(ESTABLISHED 1914).

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು
- ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು
- ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
- ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
- ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.
- ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ—ಈ ಪ್ರಾಂತ್ಯಗಳಿಗೆ ಈ ಕಂಪೆನಿಯು ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯೆ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು

Secretary,
The Canara Public Conveyance Co., Ltd., Mangalore. S K

ಆರ್. ಮಾರ್ಟಿನ್ನರ ಲಪ್ತಾ ಎಣ್ಣೆ

ಇದರ ಸುವಾಸನೆಯು, (ಪರಿಮಳವು) ಬಹಳ ಆಂದವಾಗಿರುವುದಲ್ಲದೆ, ಬಹಳ ಹೊತ್ತಿನ ವರೆಗೂ ಇರತ್ತದೆ. ಈ ಎಣ್ಣೆಯನ್ನು ತಲೆಗೆ ಹಾಕಿಕೊಳ್ಳುವುದರಿಂದ ಕೂದಲುಗಳು ತಂಪಾಗಿಯೂ, ಶುಭ್ರವಾಗಿಯೂ, ಆಗವುದಲದೆ, ಮುದುಳು ಚೆನ್ನಾಗಿ ಬೆಳೆಯುತ್ತದೆ. ಇದನ್ನು ಪ್ರತಿದಿವಸವೂ ಉಪಯೋಗಿಸುವುದರಿಂದ ಕೂದಲುಗಳು ದಪ್ಪಾಗಿ ಬೆಳೆಯುವಂತೆ ಮಾಡುತ್ತದೆ ಕೂದಲುಗಳಲ್ಲಿರುವ ಹೇನುಗಳು ಮತ್ತು ಹೊಟ್ಟು ಶಾಶ್ವತವಾಗಿ ತಲೆಬುರುಡೆಯನ್ನು ಚೆನ್ನಾಗಿ ಬೆಳೆಯುವಂತೆ ಮಾಡುತ್ತದೆ. ಗಡ್ಡ ಮತ್ತು ಮೀಸೆಗಳು ಸಹ ಬೆಳೆಯುತ್ತವೆ. ಇದನ್ನು ಉಪಯೋಗಿಸಿದ ಜನರು ಇದಕ್ಕಿಂತ ಉತ್ತಮವಾದ ಎಣ್ಣೆಯು ಬೇರೆ ಇಲ್ಲವೆಂದು ಹೇಳಿರುತ್ತಾರೆ.

ಕ್ರಯ ಬಾಟಿ 1ಕ್ಕೆ ರೂ 1-4-0.

ಆರ್ ಮಾರ್ಟಿನ್ನರ ಗಿಟೋಡಯಿನ್.

ಗಂಡಸರಿಗೂ ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ, ಅಥವಾ ಹೊಸತಾಗಿದ್ದರೂ ಸರಿ. ಬಿಳುಪು ಹೋಗುವುದು ಉರಿಯುವುದು, ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕೆ ಉರಿ ಮೂತ್ರವನ್ನು ನಿಲ್ಲಿಸಿ, ಮೂತ್ರವು ಬಿಳುಪಾಗಿ ನಿರ್ಮಲವಾಗುವುದಲ್ಲದೆ ರೋಗದ ಪತ್ತೆಯೇ ಅಡಗಿಹೋಗುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ.

ಬೆಲೆ ಸೀಸೆ 1ಕ್ಕೆ ರೂ. 2—0—0.

ಆರ್. ಮಾರ್ಟಿನ್ನರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮು ಉಬ್ಬಸ ಶ್ವಾಸ, ಸೀತ, ನೆಗಡಿ, ಗಂಟಲುನೋವು, ಎದೆ ನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನಮಾಡಿ ಪರೀಕ್ಷಿಸಿ ನೋಡಿರಿ. ಅನಂತರ ಬೇರೆ ಯಾವ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮಿಲಿಗೂ ರಾಣಿಯಾಗಿಯೂ, ಎದೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತಲೆಯಿಕ್ಕದಂತೆ ಮಾಡುತ್ತದೆ.

60 ಮಾತ್ರೆಗಳ ಸೀಸೆ 1ಕ್ಕೆ ರೂ. 1—4—0.

ವಿಳಾಸ:—ಆರ್. ಡಿ. ಕಟೆ ಮತ್ತು ಕಂಪೆನಿ,
ನಂಬ್ರ ಬಿ. ಫ್ರಿಯರ್ ರೋಡ್,
ಸಾಂಜ ವರ್ತಮಾನ ಪ್ರೆಸ್,
ಟೋಡಿವಾಲಾ ಬಿಲ್ಡಿಂಗ ಎದುರುಗಡೆ, ಫೋರ್ಟ ಮುಂಬಯಿ.

R. D. Kately & Co.
No. B. Frere Road,
Opposit Sanjvertaman Press,
Todivala Building, FORT BOMBAY

ಕನ್ನಡಿಗರೆ! ವಸಂತ. ಓದುಗರೇ!

ಈಗಾಗಲೇ ಎರಡನೇ ಸಂಪುಟವು ಆರಂಭಿಸಲಿದೆ.

ಇತಿಹಾಸನಿಧಿ ಎಂದರೆ . . . . ವಸಂತ
ಸಮಾಜಸುಧಾರಕನೆಂದರೆ . . . . ವಸಂತ
ಕೈಗಾರಿಕೆಯ ಸಾಮ್ರಾಜ್ಯವೆಂದರೆ . . . . ವಸಂತ
ಕರ್ನಾಟಕ ಭಾಷಾಸೇವಕನೆಂದರೆ . . . . ವಸಂತ
ದೇಶವಿದೇಶ ಬಂಧುವೆಂದರೆ . . . . ವಸಂತ
ಕಾದಂಬರಿಗಳ ಭಂಡಾರವೆಂದರೆ . . . . ವಸಂತ
ಚಿತ್ತಾಕರ್ಷ ಚಿತ್ರಶಾಲೆಯೆಂದರೆ . . . . ವಸಂತ
ದೇಶಭಕ್ತನೆಂದರೆ . . . . ವಸಂತ

ಇಂತಹ ವಸಂತನು ಯಾರಿಗೆ ಬೇಕು, ಯಾರಿಗೆ ಬೇಡ?

48 (ಕ್ರೌನ್ ¼ ಪುಟ ಸೈಜಿನ) ಪುಟಗಳನ್ನು ಒಳಗೊಂಡ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3—4—0 ಮಾತ್ರ.

ವ್ಯವಸ್ಥಾಪಕ,
ವಸಂತ ಕಾರ್ಯಾಲಯ,
ಕುಂದಾಪುರ, ದಕ್ಷಿಣ ಕನ್ನಡ.

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ಯಾವಂತರೂ ತಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ಮಾರ್ಗದರ್ಶಿಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನ್ನು ಕುರಿತ ಲೆಕ್ಕಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಅಧಿಕಾರಿಗಳೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪೋಷಕರಿಗೆ ... ... ರೂ. 3—0—0.
ಇತರರಿಗೆ, ಪರಸ್ಥಳಕ್ಕೆ, ಪೋಸ್ಟೇಜು ಸೇರಿ „ 2—8—0.
„ ಸ್ಥಳೀಕರಿಗೆ ... „ 1—8—0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪತ್ರಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿಯಬಹುದು.

ಎಡಿಟರ್,
ಡಿ. ಹನುಮಂತೇಗೌಡ,
ಅರ್ಥಸಾಧಕ ಪತ್ರಿಕೆ,
ಅವೆನ್ಯೂರೋಡ್, ಬೆಂಗಳೂರು ಸಿಟಿ.

ಸಾರಸ್ವತ.

ಕನ್ನಡ ಮತ್ತು ಕೊಂಕಣಿ ಭಾಷೆಗಳಲ್ಲಿ ಕಳೆದ ವಿಜಯ ದಶಮಿಾ ದಿನದಿಂದ ಪ್ರತಿ ದಶಮಿಗೆ ಹೊರಡುವ ಪತ್ರಿಕೆ.

ವಿ. ಎಸ್. ಕಾಮತ್,
ಮೂಲ್ಕಿ ವಾಮನ ಕುಡುವ } ಸಂಪಾದಕರು.

ಮತಸಂಸ್ಥೆ ಮತ್ತು ಸಮಾಜಕ್ಕೆ ಸಂಬಂಧಪಟ್ಟ ಇತರ ಸಂಸ್ಥೆಗಳ ಸುಸಂಘಟನ.

ಸಮಾಜದೊಳಗೆ ಅನ್ಯೋನ್ಯ ಸಾಧನೆ.

ಸ್ತ್ರೀಸಮಾಜಕ್ಕೆ ಉಪಯುಕ್ತವಾದ ವಿಷಯಗಳ ನಿರೂಪಣ.

ಮತಭಾವನೆಗಳ ಉಜ್ಜೀವನ ಇತ್ಯಾದಿ ಉದ್ದೇಶಗಳಿಂದ ಈ ಪತ್ರಿಕೆಯು ಹೊರಡಿಸಲ್ಪಡುವುದು. ಸಾರಸ್ವತ ಸಮಾಜವು ಇದಕ್ಕೆ ಪ್ರೋತ್ಸಾಹವನ್ನೀಯಬೇಕಾಗಿ ಪ್ರಾರ್ಥನೆ.

ಚಂದಾಹಣ ಅಂಚೆವೆಚ್ಚ ಕೂಡಾ ರೂ. ೧—೪—೦. ಪೋಷಕರು ರೂ. ೧೦—೦—೦. ಸಹಾಯಕರು ರೂ. ೫—೦—೦. ಮಾದರಿ ಸಂಚಿಕೆಯನ್ನು ಟಪಾಲು ಖರ್ಚಿಗಾಗಿ ಅರ್ಧಾಣೆ ಸ್ಟಾಂಪು ಕಳುಹಿಸುವವರಿಗೆ ಉಚಿತವಾಗಿ ಕಳುಹಿಸುವೆವು

ಕನ್ನಡ ನಾಡಿನಲ್ಲಿ ಪ್ರತಿ ಕಡೆಯಲ್ಲಿಯೂ
ಚಾತವಿಾದಾರರು ಬೇಕು.

ಎಲ್ಲಾ ಪತ್ರವ್ಯವಹಾರಂಗಳನ್ನು ಕೆಳಗಿನ ವಿಳಾಸಕ್ಕೆ ನಡೆಸಬೇಕು.

ಯು. ನಾರಾಯಣನಾಯ್ಕ, ಕಾರ್ಯದರ್ಶಿ,
ಸಾರಸ್ವತ, ಉಡುಪಿ.

* * *

ದಕ್ಷಿಣ ಕನ್ನಡ ಜಿಲ್ಲೆಯ

ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

* * *

ಕೋಕಶಾಸ್ತ್ರವು.

ಈ ಪುಸ್ತಕದಲ್ಲಿ 72 ಅಧ್ಯಾಯಗಳೂ ಮತ್ತು 112 ಮನೋಹರವಾದ ಚಿತ್ರಗಳೂ ಇವೆ. ಈ ಪುಸ್ತಕದ ಸಾರಾಂಶ:

ಹೆಂಗಸರಲ್ಲಿ ನಾಲ್ಕು ಜಾತಿ: (1) ಪದ್ಮಿನಿ, (2) ಚಿತರಿಣಿ, (3) ಸಾಖನಿ ಮತ್ತು (4) ಹಸ್ತಿನಿ ಇವರ ನಕ್ಷೆಗಳನ್ನು ಕೊಟ್ಟು ವಿವರಿಸಲ್ಪಟ್ಟಿದೆ. ಹಾಗೆಯೇ ನಾಲ್ಕು ಜಾತಿಯ ಮನುಷ್ಯರು. ಹೆಂಗಸರನ್ನು ಮತ್ತು ಗಂಡಸರನ್ನು ನೋಡಿ ಯಾವ ಜಾತಿ ಎಂದು ಕಂಡುಹಿಡಿಯುವ ಕ್ರಮ. ಚಂದ್ರನ ಮತ್ತು ನಕ್ಷತ್ರಗಳ ಸ್ಥಾನಗಳನ್ನು ನೋಡಿ ಶುಭಕಾಲವನ್ನು ಕಂಡುಹಿಡಿಯುವ ಕ್ರಮ. ರಜಸ್ವಲೆಯಾಗುವಿಕೆ. ಇದರ ವಿವರ. ಇದರ ರೋಗಗಳು, ಈ ರೋಗಗಳ ನಿವಾರಣೆ ಕ್ರಮ. ಬಸುರಾಗುವಿಕೆ, ನವಮಾಸದ ಗರ್ಭದ ಬೆಳವಣಿಗೆ (ಇದರ ನಕ್ಷೆಕೊಡಲ್ಪಟ್ಟಿದೆ). ಬಸುರಾದ ಕಾಲದಲ್ಲಿ ಹೆಂಗಸರು ನಡೆಯುವ ಕ್ರಮ. ನೋವು ಮತ್ತು ಕಷ್ಟವಿಲ್ಲದೆ ಪ್ರಸವ ಆಗುವ ಕ್ರಮ. ಕಳೆದುಕೊಂಡ ಶಕ್ತಿಯನ್ನು ಹಿಂತಿರುಗಿ ಪಡೆಯುವ ಕ್ರಮ. ತಮ್ಮ ಶಕ್ತ್ಯಾನುಸಾರ ಮಿತ ಸಂತತಿಯನ್ನು ಮಾಡುವ ಕ್ರಮ. ತಮ್ಮ ಇಚ್ಛಾನುಸಾರ ಗಂಡು ಅಥವಾ ಹೆಣ್ಣು ಕೂಸನ್ನು ಪಡೆಯುವ ಕ್ರಮ. ಗರ್ಭಾವಸ್ಥೆಯಲ್ಲಿ ಕೂಸಿನ ಲಿಂಗವನ್ನು ಕಂಡುಹಿಡಿಯುವ ಕ್ರಮ, ಹೆಂಗಸರ ಸೌಂದರ್ಯವನ್ನು ಕಾಪಾಡುವುದು ಹೇಗೆ. ಗೊಡ್ಡುತನವನ್ನು ಹೋಗಲಾಡಿಸುವ ಕ್ರಮ. ಮತ್ತು ಅನೇಕ ಇಲ್ಲಿ ವಿವರಿಸಲಿಕ್ಕೆ ಆಗದ ಸಂಗತಿಗಳು ಸಂಕ್ಷೇಪವಾಗಿ ವಿವರಿಸಲ್ಪಟ್ಟವೆ. ಬಹಳ ಪ್ರಾಚೀನಕಾಲದ ರೋಗನಿವಾರಣೆಯ ಔಷಧಗಳು ಕೊಡಲ್ಪಟ್ಟಿವೆ.

ಪುಸ್ತಕ ೧ರ ಕ್ರಯ ರೂ. 4—0—0.

ಇಂಟರ್‌ನೇಶನಲ್ ಪಬ್ಲಿಷಿಂಗ್ ಕಂಪೆನಿ;
ಇಂಟರ್‌ನೇಶನಲ್ ಬಿಲ್ಡಿಂಗ್,
ಲುಧಿಯಾನಾ, (ಪಂಜಾಬು),
International Publishing Company,
International Building,
Ludhiyana, PUNJAB.

FOR INVESTORS

A few shares of the Saraswthi Printing Works Ltd., are available for sale. They are all fully paid up shares of Rs. 50 each. For terms:

Apply to X
C/o MANAGER,
Swadeshabhimani

FOR SALE.

One new **Harley Davidson sports Model** Motor Cycle used only for 250 miles in perfect running order complete with equipments. Price Rs. 1000 or near offer.

For further particulars,
Apply to:—
The Mangalore Trading Association,
Car-Street Mangalore.

WANTED.

Wanted from the 1st of May next (1) experienced printer and (2) expersnced compositor for job work. Apply stating exeperience & salary required
C/o Swadeshabimani.

ಸಿರಿಗನ್ನಡಂಗೆಲ್ಗೆ.

೧೧ನೆಯ ಕರ್ನಾಟಕ ಸಾಹಿತ್ಯಸಮ್ಮೇಲನ ಬೆಳಗಾಂವಿ

ಪ್ರಕಟಣೆ ೨.

ಈ ಮೊದಲೆ ತಿಳಿಯಪಡಿಸಿದಂತೆ ಮೇ ತಿಂಗಳ ೯, ೧೦, ೧೧ ಈ ಮೂರು ದಿವಸಗಳಲ್ಲಿ ಕರ್ನಾಟಕ ಸಾಹಿತ್ಯಸಮ್ಮೇಲನವು ಬೆಳಗಾಂವಿನಲ್ಲಿ ನಡೆಯುವದು. ಸಮ್ಮೇಲನಕ್ಕೆ ಬರುವ ಪ್ರತಿನಿಧಿಗಳಿಗೂ, ಬೇರೆ ಅತಿಥಿಗಳಿಗೂ ತಾ. ೮ರಿಂದ ೧೨ರ ವರೆಗೆ ಇರುವ ಮತ್ತು ಊಟದ ಏರ್ಪಾಡು ಬೆಳಗಾಂವಿಯ ಸರಕಾರಿ ಹೈಸ್ಕೂಲಿನ ವಸತಿಗೃಹದಲ್ಲಿ (Hostel) ಮಾಡಲ್ಪಡುವದು. ಜೈನ, ಲಿಂಗಾಯತ, ಬ್ರಾಹ್ಮಣ ಮುಂತಾದ ಎಲ್ಲ ಜಾತಿಯವರಿಗೂ ಊಟದ ವ್ಯವಸ್ಥೆಯು ಬೇರೆ ಬೇರೆಯಾಗಿ ಮಾಡಲಾಗುವದು. ಆದರೆ ಈ ವಿಷಯದಲ್ಲಿ ಏರ್ಪಾಡು ಮಾಡಬೇಕೆಂದು ಬಯಸುವವರೆಲ್ಲರು ಮೇ ತಿಂಗಳಿನ ೫ನೆಯ ತಾರೀಖಿನೊಳಗಾಗಿ ಕಾರ್ಯದರ್ಶಿಗಳವರಿಗೆ ಬರೆದು ತಿಳುಹಿಸಬೇಕು.

ಮೇ ತಿಂಗಳಿನ ತಾ. ೮ (ಶುಕ್ರವಾರ) ಸಂಜೆಯ ೫|| ಗಂಟೆಗೆ ಸಮ್ಮೇಲನದ ಅಧ್ಯಕ್ಷರ ಹಾಗು ಕನ್ನಡ ನುಡಿಯ ಹೆಸರಾದ ಸೇವಕರ ಮೆರವಣಿಗೆಯಾಗುವದು. ಕನ್ನಡ ನಾಡಿನ ಎಲ್ಲ ವೃತ್ತಪತ್ರಗಳ ಹಾಗು ಮಾಸಿಕ, ದ್ವೈಮಾಸಿಕ, ತ್ರೈಮಾಸಿಕ ಪತ್ರಿಕೆಗಳ ಸಂಪಾದಕರು ದಯವಿಟ್ಟು ಸಮ್ಮೇಲನಕ್ಕೆ ಅವಶ್ಯವಾಗಿ ಬರಬೇಕೆಂದು ಬೇಡಿಕೊಳ್ಳುತ್ತೇವೆ.

ಕರ್ನಾಟಕದಲ್ಲಿ ಪ್ರಸಿದ್ಧರಾದ ಜೈನ, ಲಿಂಗಾಯತ, ಬ್ರಾಹ್ಮಣ ಕೀರ್ತನಕಾರರಿಗೂ, ಸಂಗೀತಕಾರರಿಗೂ ಸಮ್ಮೇಲನಕ್ಕೆ ಬರಲು ಕೇಳಿಕೊಂಡಿದೆ. ಕನ್ನಡನಾಡಿಗೆ ಹೆಸರಾದ ದತ್ತಾತ್ರಯ ನಾಟಕ ಮಂಡಲದವರು ಬಂದ ಜನರ ಮನೋರಂಜನೆಗಾಗಿ ತಮ್ಮ ಸರಸವಾದ ನಾಟಕವನ್ನು ಆಡಿ ತೋರಿಸಲು ಒಪ್ಪಿದ್ದಾರೆ. ಕರ್ನಾಟಕದ ಎಲ್ಲ ಭಾಗಗಳ ಪ್ರಮುಖರಿಗೆ ನಿಮಂತ್ರಣ ಪತ್ರಿಕೆಗಳು ಕಳುಹಿಸಲಾಗುವವು.

ಉತ್ತರ ಕರ್ನಾಟಕದ ಕನ್ನಡ ಶಾಲೆಗಳ ಶಿಕ್ಷಕರಿಗೆ ಸಮ್ಮೇಲನಕ್ಕೆ ಬರಲು ಅನುಕೂಲವಾಗಬೇಕೆಂದು ವಿದ್ಯಾಖಾತೆಯ ಅಧಿಕಾರಿಗಳು ಮೇ ತಿಂಗಳಿನ ಮೊದಲನೆಯ ವಾರದಿಂದಲೇ ಶಾಲೆಗಳಿಗೆ ಬೇಸಿಗೆಯ ರಜೆಯನ್ನು ಕೊಡಲು ಒಪ್ಪಿರುವರು.

ಕನ್ನಡ ನುಡಿಯ ಏಳಿಗೆಗಾಗಿ ಬಹುಕಾಲದಿಂದ ಎಡೆಬಿಡದೆ ದುಡಿಯುತ್ತಿರುವವರಾದ ಮ|| ತಮ್ಮಪ್ಪ, ಸ| ಚಿಕ್ಕೋಡಿಯವರು ಸ್ವಾಗತಸಂಘದ ಅಧ್ಯಕ್ಷರಾಗಿ ಏಕಮತ್ಯದಿಂದ ಆರಿಸಲ್ಪಟ್ಟಿರುವರು. ಮತ್ತು ಕನ್ನಡ ನುಡಿಯ ಸೇವಕರೆಂದು ಹೆಸರುಗೊಂಡ ಮ|| ಬೆನಗಲ್ ರಾಮರಾಯರು (ಎಮ್. ಎ. ಎಲ್. ಎಲ್. ಬಿ ಗವರ್ನಮೆಂಟ ಟ್ರಾನ್ಸಲೇಟರ ಮದ್ರಾಸ) ಸಮ್ಮೇಲನದ ಅಧ್ಯಕ್ಷರಾಗಲು ಒಪ್ಪಿದ್ದಾರೆ.

ಈ ಸಮ್ಮೇಲನದೊಂದಿಗೆ ಏರ್ಪಡಿಸುವ ಪ್ರದರ್ಶನಕ್ಕಾಗಿ ವೃತ್ತಪತ್ರಗಳ ಹಾಗು ನಿಯತ ಕಾಲಿಕಗಳ ಸಂಪಾದಕರು ಸಮ್ಮೇಲನದ ವಾರದಲ್ಲಿ ಹೊರಡುವ ತಮ್ಮ ತಮ್ಮ ಪತ್ರಿಕೆಗಳನ್ನು ಕಾರ್ಯದರ್ಶಿಗಳವರ ವಿಳಾಸಕ್ಕೆ ಕಳುಹಿಸಬೇಕು.

ಅಚ್ಚಾಗದ, ಹಳೆಗನ್ನಡ ಗ್ರಂಥಗಳೂ, ಹೊಸದಾಗಿ ಅಚ್ಚಾಗಿರುವ ಗ್ರಂಥಗಳೂ, ತಾಮ್ರಪಟಗಳೂ, ತಾಡವಾಲೆಗಳೂ, ಕರ್ನಾಟಕದ ಚಿತ್ರಗಳೂ, ವಾದ್ಯಗಳೂ ಪ್ರದರ್ಶನದಲ್ಲಿ ಇಡಲಿಕ್ಕಿರುವವು ಬೇಕಾದವರು ಈ ಬಗೆಯ ಒಡವೆಗಳನ್ನು ಕಳುಹಿಸಬೇಕಾಗಿ ಕೋರುತ್ತೇವೆ.

ಮುಂದಿನ ಪ್ರಕಟನೆಯಲ್ಲಿ ಸಮ್ಮೇಲನದ ಕಾರ್ಯಕ್ರಮವು ಪ್ರಕಟಿಸಲಾಗುವದು.

ಬೆಳಗಾಂವಿ [illegible]
[illegible]

ಕೃ. ಗೋ. ಗೆಜ್ಜಿ,
ಪ. ರಾ. ಚಿಕ್ಕೋಡಿ,
ಸ್ವಾಗತ ಕಾರ್ಯದರ್ಶಿಗಳು.

ಮಂಗಳೂರಲ್ಲಿ ಜರಗಿದ ಶ್ರೀಮತ್ ಶಂಕರಾಚಾರ್ಯರ ಜಯಂತಿ ಮಹೋತ್ಸವ.

ವೈಶಾಖ ಶುದ್ಧ ೫ ಮಂಗಳವಾರ ದಿವಸ ಶ್ರೀಮತ್ ಶಂಕರಾಚಾರ್ಯರು ಅವತಾರವೆತ್ತಿದ ದಿವಸವಾದ್ದರಿಂದ ಅದನ್ನು ಮಂಗಳೂರಲ್ಲಿ ಈ ವರ್ಷ ಹೊಸದಾಗಿ ಆಚರಿಸಲ್ಪಟ್ಟಿತು. ಶ್ರೀಯುತ ಗೊಲ್ಲರಕೇರಿ ಕೃಷ್ಣರಾವ, ಬಿ. ಎ. ಬಿ. ಎಲ್. ವಕೀಲರು ಮತ್ತು ಎಲೋಸಿಯಸ್ ಕೊಲೇಜಿನ ಗಣಿತಶಾಸ್ತ್ರದ ಲೆಕ್ಚರರಾದ ಶ್ರೀ. ಎಸ್. ರಾಮಚಂದ್ರ ಅಯ್ಯರ್ ಬಿ. ಎ. ಈ ಇಬ್ಬರು ಸದ್ಗೃಹಸ್ಥರ ಹೆಸರಿನಿಂದ ಆಮಂತ್ರಣ ಪತ್ರಿಕೆಯು ಹೊರಟು ಅದರಲ್ಲಿ ನಿರ್ದೇಶಿಸಿದ ಮೇರೆಗೆ ಶ್ರೀ. ಅಯ್ಯರರಲ್ಲಿ ಸಂಜೆಗೆ ೫ ಘಂಟೆಯಿಂದ ಜಯಂತಿ ಮಹೋತ್ಸವದ ಕಾರ್ಯಗಳು ಪ್ರಾರಂಭವಾದವು. ಈ ಸುಸಂದರ್ಭದಲ್ಲಿ ಶ್ರೀಯುತ ಸದಾಶಿವ ಅಡಿಗ ಬಿ. ಎ. ಬಿ. ಎಲ್. ರವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಉಚ್ಚ ಸ್ಥಾನದಲ್ಲಿ ಶ್ರೀಮತ್ ಶಂಕರಾಚಾರ್ಯರ ಮತ್ತು ಅವರ ನಾಲ್ಕು ಶಿಷ್ಯರ ಚಿತ್ರವು ವಿರಾಜಮಾನವಾಗಿತ್ತು. ಪ್ರಥಮತ ಶ್ರೀ. ಚಟ್ಟೋಪಾಧ್ಯಾಯರ ಮಧುರವಾದ ಗಾಯನ ವಾದನಗಳು ನಡೆದ ತರುವಾಯ ಅಧ್ಯಕ್ಷರ ಪ್ರಾಸ್ತಾವಿಕ ಭಾಷಣವಾಯಿತು. ತರುವಾಯ ಬ್ರಹ್ಮಶ್ರೀ ಆತ್ಮಾರಾಮಶಾಸ್ತ್ರೀ ಓಜ್ಜಮನೆ ಇವರು ಆಚಾರ್ಯರ ಜನ್ಮಚರಿತ್ರ ಪರವಾಗಿಯೂ ಆಚಾರ್ಯರ ಅದ್ವೈತವು ಎಲ್ಲ ತತ್ವಜ್ಞಾನಗಳಲ್ಲಿ ಮತ್ತು ಧರ್ಮಗಳಲ್ಲಿ ಡೆಮೊಕ್ರೆಟಿಕ್ ತತ್ವದ ಮೇಲೆ ಹೇಗೆ ಆವರಿಸಿಕೊಂಡಿದೆ ಎಂಬೀ ಸಂಗತಿ ವಿಷಯವಾಗಿಯೂ ಭಾಷಣವನ್ನು ಮಾಡಿದ ಬಳಿಕ ಬ್ರಹ್ಮಶ್ರೀ ನಿಡ್ಲೋಡಿ ಅನಂತ ಉಪಾಧ್ಯಾಯರೂ, ಆಯುರ್ವೇದ ಭೂಷಣರಾದ ಎಮ್. ವಿ. ಶಾಸ್ತ್ರಿಗಳವರು ಮುಂತಾದ ವಕ್ತೃಗಳು ಶ್ರೀಮತ್ ಶಂಕರಾಚಾರ್ಯರ ಪ್ರಶಂಸಾಪರವಾದ ಭಾಷಣವನ್ನು ಮಾಡಿದ ಬಳಿಕ ಅಧ್ಯಕ್ಷ ಮಹಾಶಯರ ಸಮಾರೋಪಾತ್ಮಕವಾದ ಭಾಷಣದಿಂದಲೂ ಪ್ರಸಾದ ತಾಂಬೂಲಾದಿಗಳ ಹಂಚುವಿಕೆಯಿಂದಲೂ ಶ್ರೀ. ಉಡುಪರ ಸುಶ್ರಾವ್ಯ ಗಾಯನದಿಂದಲೂ ಅಂದಿನ ಮಹೋತ್ಸವವು ಅಂತ್ಯವಾಯಿತು.

ಮಹಾರಾಜಶ್ರೀ ಮಂಗಳೂರು ತಾಲೂಕು ಬೋರ್ಡು ಪ್ರೆಸಿಡೆಂಟರವರ ಸಂ|ಕ್ಕೆ

ಮಂಗಳೂರು ತಾಲೂಕಿಗೆ ಸೇರಿದ ಶ್ರೀ ಮನ್ಮಹಾ ದೇವದೇವೋತ್ತಮ ಪೊಳಲಿ ಶ್ರೀ ರಾಜರಾಜೇಶ್ವರಿ ಅಮ್ಮನವರ ಸನ್ನಿಧಿಯಲ್ಲಿ ಇದೇ ೧೯೨೫ನೇ ಇಸವಿ ಏಪ್ರಿಲಲ್ಲಿ ಜರಗಿದ ಮಹೋತ್ಸವ ಸಂಬಂಧ ಕೂಡಿದ ಹಲವು ಕಡೆಯಿಂದ ಬಂದಿರುವ ಭಜಕ ಮಂಡಲಿಯವರು ಬಹು ದೈನ್ಯದಿಂದ ಪ್ರಾರ್ಥಿಸಿಕೊಂಡ ಅರ್ಜಿ.

ಸ್ವಾಮಿ,

ಕರ್ನಾಟಕದಲ್ಲಿ ಬಹು ಪುರಾತನದಿಂದಲೂ ಪ್ರಖ್ಯಾತಿಪಟ್ಟಿರುವ ಪುರಾಣ ಪ್ರಸಿದ್ಧವಾದ ಶಕ್ತಿದೇವಾಲಯಗಳಲ್ಲಿ ಒಂದಾದ ಜಂಗಮ, ಜೈನ, ಹಿಂದು, ಮಹಮ್ಮದಿ ಮೊದಲಾದ ಮಹಾಮಹಾ ರಾಜರುಗಳಿಂದ ಅನರ್ಘ ಸೇವೆಗಳನ್ನು ಪಡೆಯುತ್ತಿದ್ದು ಅನೇಕ ಉಂಬಳಿ ಉತ್ತಾರಗಳನ್ನು ಕೂಡಾ ಹೊಂದಿದ್ದು ಇಡೀ ಭೂಮಂಡಲದಲ್ಲಿ ಬೇರೆ ಎಲ್ಲಿಯೂ ಕೇಳದ ಚೆಂಡಾಟವೆ ಮೊದಲಾದ ಬಿರುದುಗಳಿಂದ ಕೀರ್ತಿಗೊಂಡಿರುವ ಈ ಪೊಳಲಿ ದಾರಿಯಾಗಿ ಬಂಟ್ವಾಳದಿಂದ ಗುರುಪುರಕ್ಕೆ ಒಂದು ರಾಜರಸ್ತೆಯನ್ನು ಮಾಡಿಸಬೇಕೆಂದು ಸುಮಾರು ಅರ್ಧ ಶತಮಾನದಿಂದ ಆಲೋಚಿಸುತ್ತಿದ್ದು, ಕಳೆದ ೧೯೨೫ನೇ ಇಸವಿ ಮಹೋತ್ಸವ ಸಮಯ ಮೊದಲುಗೊಂಡು ಇತ್ತರ ವರೆಗೆ ಹಲವು ಅರ್ಜಿಗಳಲ್ಲಿ ಈ ಸ್ಥಳಕ್ಕೆ ಬರಲಿಕ್ಕೆ ಭಜಕವೃಂದಕ್ಕಾಗುವ ತೊಡಕುಗಳನ್ನೂ ಮತ್ತು ಜನವರಿ ಯಾ ಫೆಬ್ರವರಿ ತಿಂಗಳುಗಳ ಒಳಗೆ ಈ ಪಲ್ಗುಣೀ ನದಿಯಲ್ಲಿ ನೀರು ಬತ್ತಿಹೋಗುವ ದೆಸೆಯಿಂದ ಸಮೀಪ ರಾಜರಸ್ತೆ ಇಲ್ಲದೆ ಪೊಳಲಿಯೇ ಮೊದಲಾದ ಹಲವು ಗ್ರಾಮಸ್ಥರು ತೀರ್ವೆಕೊಡುವ ಸಮಯಕ್ಕೆ ದೋಣಿ ವ ಗಾಡಿಗಳಿಂದ ನ್ಯಾಯವಾಗಿ ಬೆಲೆ ಬರತಕ್ಕ ಬಂದರುಗಳಿಗೆ ವೈದು ವಿಕ್ರೈಸುವರೆ ಅನಾನುಕೂಲತೆಯ ದೆಸೆಯಿಂದ ಅಣೆಯು ಮಾಲನು ಆರು ಕಾಸಿಗೆ ಮಾರುವ ಸಂದರ್ಭದಲ್ಲಿ ಅನುಭವಿಸಬೇಕಾದ ದಾರಿದ್ರ್ಯ ದೆಸೆಯನ್ನು ಪರಿಹರಿಸಿಕೊಡಬೇಕೆಂದು ಮೊರೆ ಇಟ್ಟು ಬೇಡಿಕೊಂಡರೂ ಪ್ರಜಾಪ್ರಮುಖರ ದೃಷ್ಟಿಯು ಈ ಕಡೆಗೆ ತಿರುಗದಿದ್ದುದನ್ನು ಕಂಡರೆ ಬಹಳ ವಿಷಾದಪಡಬೇಕಾಗಿದೆ.

ಯಾಕಂದರೆ— ಬಂಟ್ವಾಳ ಇಗರ್ಜಿ ಬರುವರೆ ಕ್ರೈಸ್ತ ಮತಸ್ಥರೇ ಹಿಂದೆ ಮಾಡಿಕೊಂಡಿರುವ ಅರ್ಧ ಮೈಲು ರಸ್ತೆಯನ್ನು ವಿಕ್ಟೋರಿ ಮಹಾರಾಣಿಯವರ ಕಾಲದಲ್ಲಿ ೨ ಮೈಲು ಆ ಮೇಲೆ ಎಡ್ವರ್ಡರ ಕಾಲದಲ್ಲಿ ೨ ಮೈಲು ಆ ಮೇಲೆ ಜೋರ್ಜ ಮಹಾರಾಜರ ಕಾಲದಲ್ಲಿ ಈ ವರೆಗೆ ೨ ಮೈಲು ರಸ್ತೆಮಾಡಿಸುವರೆ ಸಂಕ್ಷೆಪಾಗಿ ಆಮೆಕಡಾ ೩೦ ವರ್ಷಗಳಲ್ಲಿ ಪೂರೈಸಲಿಲ್ಲ. ಈ ರಸ್ತೆಗೆ ಪ್ರಾರಂಭವಾದ ಮೇಲೆ ಸದಿ ಮತ್ತು ಮಾರ್ಗಗಳ ಅನುಕೂಲತೆಗಳೇ ಇರತಕ್ಕ ಇತರ ಗ್ರಾಮಗಳಲ್ಲಿ ನೂರಾರು ಮೈಲು ರಸ್ತೆ ಮಾಡಿಸಿದ್ದಾಯಿತು. ಉಳ್ಳಾಲ-ಪಾಣೆಮಂಗಳೂರು-ಗುರುಪುರ ಈ ಮೂರು ದೊಡ್ಡ ಸಂಕಗಳ ಕೆಲಸವೂ ಆಯಿತು. ಇವುಗಳನ್ನು ಮಾಡಿಸಿ ಪಟ್ಟಣಗಳಿಗೆ ಬೇಕಷ್ಟು ಸೌಕರ್ಯಗಳನ್ನು ಮಾಡಿಸಿಕೊಂಡರೂ, ಈ ಬಡ ರೈತರ ಗೋಳನ್ನು ಕೇಳಿಗೆ ಕೃಪಣತ್ವದಿಂದಿರುವುದು ಸರಿಯಲ್ಲವೆಂಬುದು ಯಾರೂ ಹೇಳದಿರಲಾರರೆಂದು ನಂಬುತ್ತೇವೆ.

ಅದುದರಿಂದ ಬರುವ ವರ್ಷವಾದರೂ ರಸ್ತೆಯನ್ನು ಪೂರೈಸಿಕೊಡಬೇಕೆಂದು ಪ್ರಾರ್ಥಿಸುತ್ತೇವೆ.

ಇದರ ಯಥಾ ನಕಲುಗಳನ್ನು ಎಲ್ಲಾ ಮೆಂಬರರುಗಳಿಗೆ ಕಳುಹುವಂತೆಯೂ, ಸ್ಥಳೀಕ ಪತ್ರಿಕೆಗಳಲ್ಲಿ ಪ್ರಕಟಿಸುವಂತೆಯೂ ಪತ್ರವ್ಯವಹಾರ ನಡಿಸುವ ಅಧಿಕಾರವನ್ನು ನಮ್ಮ ಪೈಕಿ ಬಡಕಬೈಲ್ ಪರಮೇಶ್ವರಯ್ಯನವರಿಗೆ ಅಧಿಕಾರ ಕೊಟ್ಟಿರುತ್ತೇವೆ. ಇದರ ಮೇಲಣ ಜವಾಬನ್ನು ಅವರಿಗೆ ಕಳುಹಿಸಿಕೊಡಬೇಕು.

ಇದರ ಮೂಲಪ್ರತಿಯಲ್ಲಿ ೮೫೨ ಜನರ ಸಹಿಗಳಿರುತ್ತವೆ.

ಮುಕ್ಕಾಂ ಪೊಳಲಿ, } ಬಡಕಬೈಲ್ ಪರಮೇಶ್ವರಯ್ಯ.
ತಾ. ೯—೪—'೨೫.

ವಿದೇಶ ವರ್ತಮಾನ.

ಮಿ| ಒಸ್ಟಿನ್ ಚೆಂಬರ್‌ಲೆನ್‌ರವರನ್ನು ಕೆಲವು ಘಾತುಕರು ಉದ್ದೇಶಿಸಿದರೆಂತಲೂ ಆದರೆ ಈ ಒಳಸಂಚು ಸಕಾಲದಲ್ಲಿ ತಿಳಿದುಬಂದುದರಿಂದ ಇಂಥಾದ್ದೇನಾಗಲಿಲ್ಲವೆಂದೂ ತಿಳಿದು ಬರುತ್ತದೆ.

ಬ್ರಿಟಿಷ್ ಪಾರ್ಲಿಮೆಂಟಿನ [illegible] ತಿಂಗಳ ತಾ. ೨೮ರಲ್ಲಿ ಮಿ| ಚರ್ಚಿಲ್ಲರು ಬ್ರಿಟಿಷ್ ಬಜೆಟ್ಟಿರುತ್ತಾರೆ. ಅಲ್ಲಿಯ ಪ್ರಜಾವರ್ಗಗಳಲ್ಲಿ ಹೆಚ್ಚಿನ ತೃಪ್ತಿಯು ಇದರಿಂದ ಉಂಟಾಗಿರುವದು. ೧೯೨೫ನೇ ವರುಷದ ಖರ್ಚು [illegible] ೪ ಲಕ್ಷ ಪವನುಗಳು ಇರುವದೆಂದು ಅಂದಾಜುಮಾಡೋಣ [illegible] ಆಯವು ೮೦೩ ಮಿಲಿಯವೆಂದು ಗೊತ್ತುಮಾಡಿದರು. ಈ ರೀತಿಯ ೬ ಲಕ್ಷ ಪವನುಗಳು ಸಿಲುಕಿನಲ್ಲಿ ಉಳಿಯ ಬಹುದೆಂದು ಹೇಳಿರುತ್ತಾರೆ. ಆದಾಯ ತಂಗೆಯನ್ನು ಕಡಮೆ ಮಾಡಿರುವದಲ್ಲ[illegible] ರೀತಿ ಸುಪರ್ ಟೆಕ್ಸನ್ನೂ ಕಡಮೆ ಮಾಡಿರುತ್ತಾರೆ. ಕಷ್ಟ[illegible]ವು ಅಥವಾ ಇನ್ಸುರೆನ್ಸ್ ಏರ್ಪಾಡು ಈ ಬಜೆಟ್ಟಿನಲ್ಲಿ [illegible]ಗಾರರೂ ಕೆಲಸವಮಾಡುತ್ತಿರುವವರೂ ಪ್ರತಿ ಪುರುಷನಿಗೆ, ಸ್ತ್ರೀಗೆ ಯುಕ್ತ ೨ ಪೆನ್ಸಗಳ ಪ್ರಕಾರ ಈ ವಿಮೆ ಫಂಡಿಗೆ ತೆರಬೇಕಾಗಿದೆ. [illegible] ಸಹ ಈ ವಿಮೆ ಫಂಡಿಗೆ ಕೆಲಸಗಾರರ ಪರವಾಗಿ ವಂತಿಗೆಗಳನ್ನು [illegible]ಕಾಗಿರುವದು. ಈ ರೀತಿ ಈ ಪಂಚಿಕೆಯ ಸಂಪೂರ್ಣ ಜ್ಯಾರಿಗೆ ಸರಕಾರದಿಂದ ೭೫೦ ಮಿಲಿಯದ ಪ್ರನ್ಯಸಹಾಯವು ಇವರಿಗಾಗುವುದು. ಇದರಿಂದ ಕೆಲಸಗಾರರಿಗೆ ವೃದ್ಧಾಪ್ಯದಲ್ಲಿ ಪೆನಶನ್ ದೊರೆಯುವದು. ೧೫ ಮಿಲಿಯ ಜನರಿಗೆ ಈ ರೀತಿ ಪೆನಶನು ಕೊಡತಕ್ಕದ್ದು ಈ ಏರ್ಪಾಡಿನಿಂದ ನೆರವೇರುತ್ತದೆ. ಹೊರದೇಶಗಳಿಂದ ಬರತಕ್ಕ ಸಾಮಗ್ರಿಯ ಮೇಲೆ ಸುಂಕವು ವಿಧಿಸೋಣಾಗಿರುವದು.

ಜರ್ಮನಿ ದೇಶದ ರಿಪಬ್ಲಿಕಿನ ಪ್ರೆಸಿಡೆಂಟರಾಗಿ ಮಾರ್ಶೆಲ್ ವೊನ್ ಹಿಂಡೆನ್ ಬರ್ಗರವರು ಚುನಾಯಿಸಲ್ಪಟ್ಟರು. ಇವರು ವಾಚಕರಿಗೆ ಅಪರಿಚಿತರಲ್ಲ. ಯುರೋಪ್ ಖಂಡದ ಮಹಾಯುದ್ಧದಲ್ಲಿ ಜರ್ಮನಿಯ ಸೇನಾನಾಯಕರಾಗಿದ್ದರು. ಇವರು ಪ್ರೆಸಿಡೆಂಟರಾಗಿ ಆರಿಸಲ್ಪಟ್ಟದ್ದರಿಂದ ಕೆಲವು ಬೇರೆ ರಾಜ್ಯಗಳಲ್ಲಿ [illegible] ಉತ್ಪನ್ನವಾಗಿದೆ.

ಒಳದೇಶ ವರ್ತಮಾನ.

ಪ್ರಕೃತ ವೈಸರಾಯಿಗಳಾದ [illegible] ಲಿಟನ್ ಸಾಹೇಬರಿಗೆ ಊಟಕಮಂಡಿನಲ್ಲಿ ಮದ್ರಾಸ್ [illegible] ಕಡೆಯಿಂದ ಒಂದು ಪಾರ್ಟಿಯು ಕೊಡೋಣಾಯಿತು. ಸುಮಾರು ೬೦ ಮಂದಿ ಗೃಹಸ್ಥರು ಈ ಪಾರ್ಟಿಗೆ ಆಮಂತ್ರಿಸಲ್ಪಟ್ಟಿದ್ದರು. [illegible]ವಸಗಳ ತನಕ ಊಟಕಮಂಡಿನಲ್ಲಿದ್ದು ತಾ. ೨೭ರಲ್ಲಿ ಸಿಮ್ಲಾಕ್ಕೆ ಹೋಗಿರುತ್ತಾರೆ.

ಜೋಧಪುರ ಸಂಸ್ಥಾನದವರು ಒಂದು [illegible] ಕಾನೂನನ್ನು ಜಾರಿಯಲ್ಲಿ ತಂದಿರುವರಂತೆ. ಈ ಸಂಸ್ಥಾನ ಪೋಲೀಸಿನವರ ಅಪ್ಪಣೆಯನ್ನು ಮುಂಚಿತವಾಗಿ ಪಡಿಯದೆ ಯಾರೂ ಒಂದು ಟ್ಯಾಪರ್ಯಾಟರ್ ಅಥವಾ ಸೈಕ್ಲೊಸ್ಟೈಲ್ ಯಂತ್ರವನ್ನು ಇಡಬಾರದಂತೆ.

ಗ್ವಾಲಿಯರ್ ಸಂಸ್ಥಾನದ ಮಹಾರಾಜರು ಕುಷ್ಠರೋಗ ನಿವಾರಣಾ ಫಂಡಿಗೆ ರೂ. ೬೦ ಸಾವಿರವನ್ನು ಕೊಟ್ಟಿರುತ್ತಾರೆ.

ದೇಶಬಂಧು ಸಿ. ಆರ್. ದಾಸರವರು ವಿಲಾಯತಿಗೆ ಹೋಗುವರೆಂತ ಗೊತ್ತಾಗಿತಷ್ಟೆ. ಇವರು ವಿಲಾಯತಿಗೆ ಹೋಗಲಿಲ್ಲವೆಂತಲೂ ಆರೋಗ್ಯಕ್ಕಾಗಿ ಇವರು ಕೆಲವು ಕಾಲ ಊಟಕ[illegible]ದಲ್ಲಿ ನಿಲ್ಲುವರೆಂತಲೂ ತಿಳಿಯುತ್ತೇವೆ.

ಮದ್ರಾಸಿನಲ್ಲಿ ಬಹುಮಾನಪಟ್ಟ ಶ್ರೀನಿವಾಸ ಶಾಸ್ತ್ರಿಗಳವರ ಅಧ್ಯಕ್ಷತೆಯಲ್ಲಿ ಗೋಖಲೆ ಸಭಾಮಂದಿರದಲ್ಲಿ ಒಂದು ಮದ್ರಾಸು ಮಹಾಜನ ಸಭೆಯು ಕೂಡಿತ್ತು. ಡಾಕ್ಟರ್ ಅನ್ನಿಬೆಸೆಂಟರವರು ಬ್ರಿಟಿಷ್ ಪಾರ್ಲಿಮೆಂಟ ಸಭೆಯ ಮುಂದಿಡಲು ತಯ್ಯಾರಿಸಿರುವ ಕಾಮನ್ ವೆಲ್ತ್ ಒಫ್ ಇಂಡಿಯಾ ಬಿಲ್ಲ್, ಇದರ ವಿಷಯ ಡಾ|| ಬೆಸೆಂಟರವರ ಭಾಷಣವು ಈ ಸಭೆಯಲ್ಲಾಯಿತು.

ಬಂಗಾಳದಲ್ಲಿ ಮಹಮ್ಮದೀಯ ಕನ್‌ಸ್ಟಿಟ್ಯೂನ್ಸಿಯಲ್ಲಿ ಖಾಲಿಬಿದ್ದ ಎಸೆಂಬ್ಲಿಯ ಮೆಂಬರುತನಕ್ಕೆ ಮಿ| ಸಯ್ಯದ್ ರುಸೀದ್ ಬಕ್ಷ್ ಎಂಬ ಸ್ವರಾಜಿಸ್ಟರು ಮೆಂಬರರಾಗಿ ಚುನಾಯಿಸಲ್ಪಟ್ಟಿರುತ್ತಾರೆ.

ಗಾಂಧಿಜಿಯವರು ಮುಂಬಯಿಯಿಂದ [illegible]ಗೆ ಹೋಗುವಾಗ ನಾಗಪುರದಲ್ಲಿ ಇಳಿದಿದ್ದರು. ರೈಲ್ವೆ ಸ್ಟೇಶನಿನ ಸಮೀಪದಲ್ಲಿ ಸಾವಿರಕಟ್ಟಳೆಯಿಂದ ಜನರು ಗಾಂಧಿಜಿಯವರ ಭಾಷಣವನ್ನು ಕೇಳುವಂತೆ ಎಲ್ಲಾ ಸಿದ್ಧತೆಯನ್ನು ಮಾಡಿದ್ದರು. ಹಿಂದೂ ಮಹಮ್ಮದೀಯ ಐಕ್ಯಸಾಧನೆ, ಖದ್ದರ್ ಪ್ರಚಾರ ಅಸ್ಪೃಶ್ಯತೆ ಇವುಗಳ ವಿಷಯ ನಡಿಸಬೇಕಾದ ಪ್ರಯತ್ನಗಳನ್ನು ಕುರಿತು ಮಾತಾಡಿ ಅಲ್ಲಿಂದ ತೆರಳಿದರು.

ಮುಂಬಯಿಯಲ್ಲಿ ಜರುಗಿದ ಗೋರಕ್ಷಣಾ ಪರಿಷತ್ತಿನ ಅಧಿವೇಶನದ ಅಧ್ಯಕ್ಷಸ್ಥಾನವನ್ನು ಗಾಂಧಿಜಿಯವರು ಸ್ವೀಕರಿಸಿದ್ದರು. ಗೋವಧೆಯನ್ನು ನಿಲ್ಲಿಸಿದಮಾತ್ರದಿಂದ ಗೋವುಗಳ ಅಭಿವೃದ್ಧಿಯು ಸಾಗದು. ಗೋವುಗಳನ್ನು ತಕ್ಕರೀತಿಯಲ್ಲಿ ಸಾಕುವ ಪ್ರಯತ್ನ ನಡಿಯತಕ್ಕದೆಂದು ಗಾಂಧಿಜಿಯವರು ಅಪ್ಪಣೆ ಕೊಡಿಸಿ ಪರಿಷತ್ತಿನ ಉದ್ದೇಶ ನೆರವೇರುವಿಕೆಗೆ ತಕ್ಕದಾದ ಸಹಾಯವೂ ಪ್ರಜಾಭಿಪ್ರಾಯಪುಷ್ಟಿಯೂ ಬೇಕಾಗಿದೆ, ಎಂತ ಸೂಚಿಸಿರುತ್ತಾರೆ. ಈ ಅಧಿವೇಶನಕ್ಕೆ ಸರೋಜಿನಿ ನಾಯುಡು, ಸರ್ ಪುರುಷೋತ್ತಮದಾಸ ಠಾಕರದಾಸ, ಮೌಲಾನಾ ಶೌಕತಲ್ಲಿ ಮೊದಲಾದವರು ಹಾಜರಿದ್ದರು.

ದಕ್ಷಿಣ ಕನ್ನಡ

ಸುರತಕಲ್:— ಇಲ್ಲಿಯ ಇದ್ಯ ವಿದ್ಯಾದಾಯಿನಿ ಶಾಲೆಯ ಅಷ್ಟಮ ವಾರ್ಷಿಕ ವರ್ಧಂತಿ ಮಹೋತ್ಸವದ ಸಭೆಯು ತಾ. ೨೨-೪-೨೫ನೇ ಬುಧವಾರ ಜಿಲ್ಲಾ ಕಲೆಕ್ಟರವರಾದ ಮೆಹರ್ಬಾನ್ ಸಿ. ಎ. ಸೌಟರ್ ದೊರೆಗಳವರ ಅಧ್ಯಕ್ಷತೆಯಿಂದ ಜರಗಿತು. ಈ ಸಭೆಗೆ ಮಾನ್ಯ ಗೃಹಸ್ಥರನೇಕರು ಚಿತ್ತಯಿಸಿದ್ದರು. ದೇವತಾಪ್ರಾರ್ಥನೆ, ಶಾಲಾಭಿನಂದನ, ಚಿಕ್ಕ ಮಕ್ಕಳ ಧ್ರುವವಿಜಯನಾಟಕ, ಸಂಗೀತ ಪಾರ್ಟು, ಕನ್ನಡ ಪಾರ್ಟು, ಮೊದಲಾದ ಕಾರ್ಯಕ್ರಮಗಳು ವಿದ್ಯಾರ್ಥಿಗಳಿಂದ ನೆರವೇರಿಸಲ್ಪಟ್ಟವು ಮುಖ್ಯೋಪಾಧ್ಯಾಯರು ಶಾಲಾವರದಿಯನ್ನೋದಿದ ತರುವಾಯ ಮಕ್ಕಳಿಗೆ ಇನಾಮು ಹಂಚಲಾಯಿತು. ತದನಂತರ ಸಭಿಕರಲ್ಲಿ ಕೆಲವರು ತಮ್ಮ ಅಭಿಪ್ರಾಯಗಳನ್ನು ಸೂಚಿಸಿದೊಡನೆ ಅಧ್ಯಕ್ಷರ ಮನೋರಂಜಕವಾದ ಭಾಷಣವೂ ನಡೆಯಿತು. ಈ ಸಭೆಗೆ ಚಿತ್ತಯಿಸಿದ ಅಧ್ಯಕ್ಷರಿಗೂ ಸಭಿಕರಿಗೂ ಶಾಲೆಯ ಕಡೆಯಿಂದ ಧನ್ಯವಾದಗಳನ್ನರ್ಪಿಸಿ ತಾಂಬೂಲಾದಿ ಸತ್ಕಾರಗಳೊಡನೆ ಸಭೆಯು ವಿಸರ್ಜನೆಯಾಯಿತು.

ಅದೇ ದಿನ ರಾತ್ರೆ ಇದ್ಯ ವಿದ್ಯಾದಾಯಿನಿ ಎಮೆಚ್ಯೂರ್ ನಾಟಕ ಮಂಡಲಿಯವರು ಶಾಲಾ ಸಹಾಯಾರ್ಥವಾಗಿ 'ಕಬೀರದಾಸ ಚರಿತ್ರೆ' ಎಂಬ ನಾಟಕವನ್ನಾಡಿತೋರಿಸಿದರು.

ಮೇಲೆ ಹೇಳಿದಂತೆ ಬಾಲಕರಿಗೆ ಇನಾಮು ಹಂಚುವುದಕ್ಕಾಗಿ ಧನಸಹಾಯ ಮಾಡಿದ ಮಹನೀಯರು.

ಅದಮಾರು ಮಠದ ಶ್ರೀಮದ್ವಿಬುಧಪ್ರಿಯ ತೀರ್ಥ ಶ್ರೀಪಾದಂಗಳವರು ರೂ. ೫, ಪುತ್ತಿಗೆ ಮಠದ ಶ್ರೀಮತ್ಸುಧೀಂದ್ರ ತೀರ್ಥ ಶ್ರೀಪಾದಂಗಳವರು ರೂ. ೨, ಪೇಜಾವರ ಮಠದ ಶ್ರೀಮದ್ವಿಶ್ವಮಾನ್ಯ ತೀರ್ಥ ಶ್ರೀಪಾದಂಗಳವರು ರೂ. ೨, ರಾ| ಯು. ವೆಂಕಟ್ರಾವ್ ರಿಟಾಯರ್ಡ್ ಇಂಜಿನಿಯರ್, ಉಡುಪಿ ರೂ. ೫, ರಾ| ಕೆ. ಲಕ್ಷ್ಮೀನಾರಾಯಣ ರಾವ್ ವಕೀಲ, ಮಂಗಳೂರು ರೂ. ೫, ರಾ| ಪಿ. ಎನ್. ಪ್ರಭು, ಪ್ರಭಾಕರ ಪ್ರೆಸ್ ಉಡುಪಿ (೧೪ ಪುಸ್ತಕಗಳು) ರೂ. ೫—೮—೦, ರಾ| ಪಾಂಗಾಳ ಸುಬ್ಬರಾವ್ ವಕೀಲ ಮಂಗಳೂರು ರೂ. ೩, ರಾ| ಪಿ. ರಾಮಕೃಷ್ಣಯ್ಯ, ಮಾಜಿ ಜಿಲ್ಲಾ ರಿಜಿಸ್ಟ್ರಾರ್ ರೂ. ೨, ರಾ| ಎ. ಲಕ್ಷ್ಮೀನಾರಾಯಣರಾವ್, ವಕೀಲ, ಉಡುಪಿ ರೂ. ೨, ಖಾನ್ ಬಹದೂರ್ ಹಾಜಿ ಅಬ್ದುಲ್ಲಾ ಹಾಜಿ ಕಾಸಿಂ ಸಾಹೇಬ್, ಉಡುಪಿ ೨, ಡಾಕ್ಟರ್ ಪಿ. ಜನಾರ್ಧನ ರಾವ್, ಕಾರ್ಕಳ ರೂ ೨, ರಾ| ಎಚ್. ಎನ್. ರಾವ್, ಮುಂಬಯಿ ರೂ. ೨, ರಾ| ಸಿದ್ದಾಪುರ ಅನಂತಯ್ಯ ಪ್ರಭು, ಉಡುಪಿ ರೂ. ೨, ಪಾವಂಜೆ ಗುರುರಾವ್, ಉಡುಪಿ (೫ ಪುಸ್ತಕಗಳು) ೨—೮—೦, ಕೆನ್ನೆ ಬ್ರದರ್ಸ್ ಮತ್ತು ಕಂಪೆನಿ, ಮಂಗಳೂರು (೩ ಪುಸ್ತಕಗಳು) ೧—೪—೦, ರಾ| ಯು. ಸಿ. ಸುಬ್ರಮಣ್ಯ ಭಟ್, ವಕೀಲ ಮಂಗಳೂರು ರೂ. ೧, ರಾ| ಡಿ. ವಾಸುದೇವ ರಾವ್, ರಿಟಾಯರ್ಡ್ ಸಬ್ ಮೆಜಿಸ್ಟ್ರೇಟ್, ಮಂಗಳೂರು ರೂ. ೧, ರಾ| ಎಚ್. ವಿಷ್ಣುಭಟ್, ಸಬ್ ರಜಿಸ್ಟ್ರಾರ್ ಮುಲ್ಕಿ ರೂ. ೧, ರಾ| ಬಿ. ಎಮ್. ತಿಂಗಳಾಯ, ಮಂಗಳೂರು ರೂ. ೧, ರಾ| ಎಮ್. ರಾಮಕೃಷ್ಣ, ಸಹಕಾರಿ ಸಂಘಗಳ ಗೌರವ ಅಸಿಸ್ಟಾಂಟ್ ರಜಿಸ್ಟ್ರಾರ್ ರೂ. ೧, ರಾ| ಹೆಜಮಾಡಿ ರಾಮಣ್ಣ ಸೆಟ್ಟಿ ರೂ. ೧, ರಾ| ಬಿ. ಮಂಜುನಾಥ, ಸಿಟಿ ಸ್ಕೂಲ್ ಸ್ಟೋರ್, ಮಂಗಳೂರು ರೂ. ೧, ರಾ| ಇದ್ಯ ಬೀರ್ಣ ಪೂಜಾರಿ ರೂ. ೧, ರಾ| ಎಚ್. ರಾಮರಾವ್, ಗೌರವ ಕಾರ್ಯದರ್ಶಿ, ಎಚ್. ವಿ. ಸಂಘ ಸುರತ್ಕಲ್ ರೂ. ೪, ರಾ| ಬಿ. ಪಿ. ರಾಮ, ಬಾರ್ಕೂರು ರೂ. ೦—೪—೦, ರಾ| ಇದ್ಯ ಶೇಷಪ್ಪಯ್ಯ ಸುರತಕಲ್ ರೂ ೨, ಬಪ್ಪನಾಡು ಭೋಜರಾವ್, ಮುಲ್ಕಿ ರೂ. ೧, ರಾ| ಐ. ಪಿ. ಮರಿಯಪ್ಪಯ್ಯ ಮುಲ್ಕಿ ರೂ. ೧, ರಾ| ಪಿ. ಸುಂದರ ಭಟ್, ಮುಲ್ಕಿ ೦—೮—೦, ರಾ| ಎಚ್ ಪದ್ಮನಾಭಯ್ಯ, ಮುಲ್ಕಿ ರೂ. ೧, ರಾ| ಪಿ. ಶಂಕರನಾರಾಯಣ ರಾವ್, ಬೋಳೂರು ರೂ ೧, ರಾ| ಎಸ್. ವೈಕುಂಠ ಮುಂಬಯಿ ರೂ. ೩, ರಾ| ಇದ್ಯ ಮಹಾಬಲಯ್ಯ, ಸುರತಕಲ್ ರೂ ೧, ಡಾಕ್ಟರ್ ಪಿ ವೆಂಕಟ್ರಾವ್, ಉರ್ವ (೨ ಪುಸ್ತಕಗಳು) ರೂ ೨, ರಾ| ಉಪ್ಪಿಜೆ ವೆಂಕಪ್ಪಯ್ಯ, ಹೊಸಬೆಟ್ಟು ೦—೮—೦, ರಾ| ಎಮ್. ಎಸ್. ಬಿಕ್ಕಂಬರ ರಾವ್, ಹೆಡ್ಮಾಸ್ಟರ್, ಗಣಪತಿ ಹ್ಯಾಸ್ಕೂಲ್, ಮಂಗಳೂರು ರೂ. ೧, ಮೆಹರ್ಬಾನ್, ಸಿ. ಎ. ಸೌಟರ್ ದೊರೆಗಳವರು, ಜಿಲ್ಲಾ ಕಲೆಕ್ಟರ್ ರೂ. ೧೦, ರಾ| ಎಚ್. ಡಿ ರಾವ್ ರೂ. ೨.

ಕುಂಬಳೆ:— ಪರ್ಶಿಯನ್ ಗಲ್ಫಿನ ಅಬಿದಾನ್ ಎಂಬಲ್ಲಿ ಸುಮಾರು ೮ ವರುಷಗಳ ತನಕ ಸರಕಾರಿ ಡಾಕ್ಟರರಾಗಿದ್ದ ದೇಹಾಲಸ್ಯದ ಸಂಬಂಧ ಊರಾದ ಮಂಗಳೂರಿಗೆ ಹಿಂತೆರಳಿದ ಡಾಕ್ಟರ್ ಎಮ್. ಎಲ್. ಫೆರ್ನಾಂಡಿಸ್‌ರವರು ಇದೇ ತಾ. ೨೬ರಿಂದ ಇಲ್ಲಿ ಆಸ್ಪತ್ರೆಯೊಂದನ್ನು ತೆರೆದಿರುವರು. ಎಲ್ಲರಿಗೂ ಅನುಕೂಲವಾಗುವಂತೆ ರಿಯ್ಯಾತಿಯಿಂದ ಔಷಧಗಳು ಕೊಡುತ್ತಿರುವ ಇವರನ್ನು ಎಲ್ಲರೂ ತುಂಬಾ ಪ್ರೋತ್ಸಾಹಿಸುವರೆಂತ ನಂಬುತ್ತೇವೆ.

ಇದೆ ತಾ. ೨೬ಲ್ಲು ಇಲ್ಲಿಯ ಪರಸ್ಪರ ಸಹಾಯಕ ಸಂಘದ ಆಫೀಸಿನಲ್ಲಿ ಮಹಾಸಭೆಯು ಕೂಡಿ ಹಿಂದಿನ ಚರ್ಚೆಗಳೆಲ್ಲವೂ ತೀರ್ಮಾನವಾಗಿ ಚುನಾವಣೆಯಿಂದ ನೂತನ ಪಂಚಾಯತರು ನೇಮಕ ಪಟ್ಟರೆಂತ ಕೇಳುತ್ತೇವೆ.

ಜಿಲ್ಲಾ ಕಲೆಕ್ಟರ್ ದೊರೆಗಳವರು ಇದೇ ತಾ. ೨೬ನೇ ಬೆಳಗ್ಗೆ ಮೈಲಿನಲ್ಲಿ ಮಂಗಳೂರಿಂದ ಇಲ್ಲಿಗೆ ಚಿತ್ತಯಿಸಿ ಕೆಲವು ಸ್ಥಳಗಳ ತನ್ಖಿ ನಡಿಸಿ ಸಾಯಂಕಾಲ ಮೈಲಿನಲ್ಲಿ ಹಿಂತೆರಳಿದರು.

ಬಂಟವಾಳ:— ಇಲ್ಲಿ ಇನ್ನೊಂದು ಹೊಸ ಮೋಟರ್ ಕಂಪೆನಿಯ ಬಸ್ಸು ಪಿ. ವಿ. ಎಸ್ ಮೋಟರ್ ಸರ್ವಿಸ್ ಎಂಬ ನಾಮಧೇಯವನ್ನು ತಾಳಿಕೊಂಡು ಇತ್ತಲಾಗೆ ಕೆಲವು ದಿನಗಳಿಂದ ಮಂಗಳೂರಿನಿಂದ ಬಂಟವಾಳಕ್ಕೆ ಬರಲು ಪ್ರಾರಂಭವಾಗಿದೆ. ಬಂಟವಾಳ ಊರಿಗೆ ಬರತಕ್ಕ ಬಸ್ಸುಗಳ ಸಂಖ್ಯೆಯನ್ನು ಲೆಕ್ಕಮಾಡಿ ನೋಡಿದರೆ ನಮ್ಮ ಇಡೀ ಸಂಸ್ಥಾನದಲ್ಲಿ ಈ ರೀತಿ ಬಸ್ಸುಗಳು ಬರುವಂಥಾ ಊರು ಮತ್ತೊಂದು ಇರುವದೆಂದು ಹೇಳಲಾಗುವುದಿಲ್ಲ. ಆದರೂ ಮಾಡುವುದೇನು? ನೆರೆಯ ಕಾಟವು ಈ ವರುಷದಲ್ಲಾದರೂ ತಪ್ಪುವುದೋ? ಇಲ್ಲಿ ಕೆಲವರಲ್ಲಿ ಹೊಸ ಹೊಸ ಆಲೋಚನೆಗಳು ಹೊರಟಿವೆ. ಅಮೇರಿಕದಲ್ಲಿಯೂ ಯುರೋಪದ ಇನ್ನು ಕೆಲವು ಕಡೆಗಳಲ್ಲಿ ಸಣ್ಣ ಸಣ್ಣ ಮೋಟಾರು ಬಸ್ಸುಗಳಲ್ಲಿ ವಾಸ್ತವ್ಯ ಮನೆಗಳನ್ನೂ ವ್ಯಾಪಾರದ ಅಂಗಡಿಗಳನ್ನೂ ಕಟ್ಟಿಸುವರು. ಮತ್ತು ಬೇಕಾದ ಹಾಗೆ ಅತ್ತಿತ್ತ ತಕ್ಕೊಂಡು ಹೋಗುವರು. ಬಂಟವಾಳದಲ್ಲಿ ವಾಸ್ತವ್ಯದ ಮನೆಗಳನ್ನು ಹೀಗೆ ಕಟ್ಟಿಸಲಿಕ್ಕೆ ಸಾಧ್ಯವಿಲ್ಲವಾದರೂ ಅಂಗಡಿ ಛಂದಸಾಲೆಗಳನ್ನು ಕಟ್ಟಿಸಿದರೆ ಬಹಳ ಪ್ರಯೋಜನವನ್ನು ಪಡಕೊಳ್ಳಬಹುದಲ್ಲದೆ ನೆರೆಯ ಸಂಕಷ್ಟಗಳಿಂದಲೂ ವಸೂಲಿಗೆ ಆಗಿಂದಾಗ್ಗೆ ಬರುವವರ ಕಾಟದಿಂದ ತಪ್ಪಿಸಿಕೊಳ್ಳಬಹುದು. ಈ ಆಲೋಚನೆಯಾದರೆ ಬಹಳ ಉತ್ತಮವೇ ಸರಿ.

ಬಂಟವಾಳ ಅತ್ತಕಡೆ ತಾಲೂಕು ಬೋರ್ಡು ಪ್ರೆಸಿಡೆಂಟರು ಸರ್ಕೀಟು ಬೀಸದೆ ಬಹಳ ಸಮಯವಾಯಿತು. ಒಂದು ಸರ್ತಿ ಬಂದು ಬಂಟವಾಳದಲ್ಲಿರುವ ಲೋಕಲ್ ಫಂಡ್ ಆಸ್ಪತ್ರೆ ಇತ್ಯಾದಿಗಳನ್ನು ನೋಡಿ ಹೋಗಬಹುದಿತ್ತು. ಆಸ್ಪತ್ರೆಯಲ್ಲಿ ಹೋಗುವ ರೋಗಿಗಳ ಸಂಖ್ಯೆಗಿಂತ ಔಷಧಗಳ ಸಂಖ್ಯೆಯೇ ಹೆಚ್ಚಿರುವುದರಿಂದ ಆಸ್ಪತ್ರೆಯು ಬಹಳ ಜನಪ್ರಿಯವಾಗಿದೆಂದು ಹೇಳಬಹುದು.

ಈ ಊರು ಚಿಕ್ಕದಾದರೂ ಇಲ್ಲಿಯ ವ್ಯಾಪಾರವು ದೊಡ್ಡದಿದೆ. ಆದರೆ ಸಾಕಷ್ಟು ಹಣವಿಲ್ಲದ್ದರಿಂದ ಬಹಳ ಕಷ್ಟವಾಗಿದೆ. ನೆರೆಯ ಹಾವಳಿಯನಂತರ ಹಣದ ಬಲವು ಮತ್ತಷ್ಟು ಕುಗ್ಗಿ ಹೋಗಿ ಜನರು ವಿಶೇಷವಾಗಿ ಸಹಾಯಹೀನರಾದ್ದರಿಂದ ತಳಮಳಗೊಳ್ಳುವರು. ಇಂಥ ಸಂಕಷ್ಟಗಳಿಂದ ಪಾರಾಗುವ ಉಪಾಯವನ್ನು ಯೋಚಿಸುವುದು ಸಹ ಕಷ್ಟವಾಗಿದೆ. ಸಾಧಾರಣ ತರಗತಿಯ ವ್ಯಾಪಾರಸ್ಥರಿಗೆ ಒಂದು ಸಹಕಾರ ಸಂಘವಿದೆ. ಇದರಲ್ಲಿಯೂ ನೆರೆಯ ಹಾವಳಿ ದೆಸೆಯಿಂದ ಹಣವನ್ನು ವಾಪತಿಮಾಡಲಾಗದೆ ಅನೇಕರು ಸಿಲುಕಿಬಿದ್ದಿರುವರು. ಊರುಬಿಟ್ಟು ಹೋಗುವಷ್ಟು ಹಣದ ತ್ರಾಣವೂ ಇಲ್ಲ, ಸಂಸಾರವು ಬೆಳೆದುಹೋಗಿದೆ, ಜೀವನವನ್ನು ಯಾವ ರೀತಿಯಲ್ಲಾದರೂ ಸಾಗಿಸುವಾ ಅಂದರೆ ಕೈಯಲ್ಲಿ ಕಾಸೂ ಇಲ್ಲ. ಇಂಥಾ ಸಂದರ್ಭಗಳಲ್ಲಿ ಪರಸ್ಪರ ಸಹಾಯಕ ಸಂಘಗಳ ಬೆಂಬಲವು ವಿಶೇಷವಾಗಿ ಬೇಕಾಗಿರುವಂಥಾದ್ದು. ಆದರೆ ಇದ್ದ ಸಂಘಕ್ಕೇನೇ ಕಾಲುಜಾರಿ ಹೋಗಿರುವುದಾದರೆ ಇಂಥಾ ಸಂಘವನ್ನು ಪುನರುಜ್ಜೀವಿಸಿ ಜನಸಹಾಯಾರ್ಥವಾಗಿ ಪ್ರಯತ್ನ ಮಾಡುವವರು ಯಾರು? ವ್ಯಾಪಾರದ ಬಗ್ಗೆ ಒಂದೇ ವರುಷದ ವಾಯಿದೆಯನ್ನು ಮಾಡಿಕೊಂಡು ಸಾಲಗಳನ್ನು ಪಡಿಯುವುದರ ಬದಲಾಗಿ ಮೂರು ವರುಷಗಳ ವಾಯಿದೆಗೆ ಸಾಲಗಳನ್ನು ಪಡಿಯುವುದು ಉತ್ತಮ. ವ್ಯಾಪಾರಕ್ಕೂ ಇತರರೂ ತಮ್ಮ ಯಥಾರ್ಥವಾದ ವರ್ತನೆಗಳಿಂದ ಬೇಕಾದ ಉಪಕಾರವನ್ನು ಸಹಕಾರ ಸಂಘಗಳಿಂದ ಪ್ರಾಪ್ತಿಸಿಕೊಳ್ಳಬಹುದು. ಆದರೆ ಇದ್ದ ಸಂಘವನ್ನು ಮುಚ್ಚುವ ಸಾಧನೆಯನ್ನು ಮಾಡುವರಲ್ಲದೆ ಮತ್ಯಾವ ಸಾಧನೆಯೂ ನಡಿಯುವುದಿಲ್ಲ. ಬಂಟವಾಳದಲ್ಲಿ ಇಂಥಾ ಸಾಧನೆಗಳ ಬಗ್ಗೆ ಮುಂದಾಳುಗಳು ಇರುವರೋ?

ಮೊನ್ನೆ ಮಂಗಳವಾರ ರಾತ್ರೆ ಇಲ್ಲಿ ಅತಿ ಜೋರಾದ ಸುಂಟರಗಾಳಿ ಇತ್ತು. ಜ್ವರವು ಅಲ್ಲಲ್ಲಿರುವುದಾದರೂ ಕಳೆದ ವರುಷ ಇದೇ ಸಮಯದಲ್ಲಿ ಇದ್ದಷ್ಟು ಜ್ವರವು ಈಗ ಇರುವುದಿಲ್ಲ. ಈ ವರುಷ ಮಳೆಗಾಲದಲ್ಲಿ ನೆರೆಯು ಯಾವ ರೀತಿ ಬಂದುಬಿಟ್ಟೀತೆಂಬುವುದನ್ನು ಈಗಲೆ ಅಜಮಾಯಿಸಿ ಮಾಡುತ್ತಿರುವರು. ನದಿಯಲ್ಲಿ ನೀರು ಬಹಳ ಕಡಿಮೆಯಾದುದರಿಂದ ನೆರೆಯ ಹಾವಳಿಯು ವಿಶೇಷವಾಗಬಹುದೆಂತ ವಾದಿಸುತ್ತಿರುವರು.

ವಿವಿಧ ವಿಷಯಗಳು:

ಅಮೇರಿಕದಿಂದ ತಿಳಕೊಳ್ಳುವ ಸಂಗತಿಗಳು.

ಕೆಲಸ ಮಾಡುವವರಲ್ಲಿ ಸಾಮಾನ್ಯವಾಗಿ ಎರಡು ವಿಧಾನಗಳ ಕೆಲಸಗಾರರಿದ್ದಾರೆ. ತರಬೇತಿ ಹೊಂದಿದವರು ಮತ್ತು ತರಬೇತಿ ಹೊಂದದವರು. ಕಲ್ಲುಕಟ್ಟುವವರು ಬಡಗಿ ಕೆಲಸದವರು ಇವರು ತರಬೇತಿ ಹೊಂದಿದ ಕೆಲಸದವರ ವರ್ಗಕ್ಕೆ ಸೇರಿದವರು. ಕಲ್ಲು ಯಾ ಇಟ್ಟಿಗೆಗಳನ್ನು ಕಟ್ಟುವವರಿಗೆ ಅಥವಾ ಬಡಗಿ ಕೆಲಸದವರಿಗೆ ದಿನ ಒಂದಕ್ಕೆ ಡೊಲ್ಲರುಗಳು ೧೫ ಅಥವಾ ರೂ. ೪೬ ಸಿಕ್ಕುತ್ತವೆ. ಹಿಂದೂ ದೇಶದಲ್ಲಿ ಇಂಥವರಿಗೆ ಸರಾಸರಿ ಮೇಲೆ ಆಣೆ ೧೪ ದಿನ ಒಂದಕ್ಕೆ ಸಿಕ್ಕುತ್ತದೆಂತ ಹೇಳಬಹುದು. ತರಬೇತಿ ಇಲ್ಲದವರು ಅಂದರೆ ಗುಡಿಸುವವರು ಇಂಥವರಿಗೆ ಡೊಲ್ಲರು ೫ ಅಂದರೆ ದಿನವಂದಕ್ಕೆ ರೂ. ೧೫ ದೊರಕುವದು. ಇದರಿಂದ ಅಮೇರಿಕದ ಸಂಪತ್ತು ಎಷ್ಟೆಂದು ತಿಳಿಯಬಹುದು. ಆದರೆ ಇಂಥಾ ಸಂಪತ್ತು ಪ್ರಜಾವರ್ಗದಲ್ಲಿ ಇರುವ ಸರಾಸರಿ ಯಾವದೆಂದರೆ, ನೂರಕಡಾ ೫ ಜನರಲ್ಲಿ ರಾಜ್ಯದ ನೂರಕಡಾ ೯೫ರಷ್ಟು ಸಂಪತ್ತಿರುವದು. ಹೀಗಿದ್ದರೂ ಅಮೇರಿಕದಲ್ಲಿ ಬಡತನವಿಲ್ಲ. ಅಮೇರಿಕದಲ್ಲಿ ಸೋಮಾರಿತನವನ್ನು ಬಿಟ್ಟು ಕೆಲಸಮಾಡಬೇಕೆಂಬುವ ಮನಸ್ಸುಳ್ಳವನಿಗೆ ಕನಿಷ್ಠಪಕ್ಷ ದಿನವಂದಕ್ಕೆ ರೂ. ೧೫ ಆದರೂ ದೊರಕುವದು.

• • • • •

ಅಮೇರಿಕದಲ್ಲಿ ವಿದ್ಯಾ ಏರ್ಪಾಡು ಬಹಳ ವಿಶೇಷವಾದದ್ದು. ಹದಿನೈದು ವರುಷ ಪ್ರಾಯ ಆಗುವ ವರೆಗೆ ಪ್ರತಿಯೊಬ್ಬ ಹುಡುಗ ಯಾ ಹುಡುಗಿಯು ಶಾಲೆಗೆ ಕಡ್ಡಾಯವಾಗಿ ಹೋಗತಕ್ಕದ್ದು. ಇದು ಅಮೇರಿಕ ಸಂಸ್ಥಾನದ ವಿಧಾಯಕ ಕ್ರಮವಾಗಿದೆ. ಬಡವರಾದ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಬೇಕಾದ ಪುಸ್ತಕ ಇತ್ಯಾದಿ ಎಲ್ಲಾ ಸಾಮಾಗ್ರಿಗಳು ಸರಕಾರದವರಿಂದ ಧರ್ಮಾರ್ಥವಾಗಿ ಕೊಡೋಣಾಗುತ್ತವೆ. ಶಾಲಾ ಫೀಸು ಇಲ್ಲವೇ ಇಲ್ಲ.

• • • • •

ಅಮೇರಿಕದ ಆರೋಗ್ಯಪಾಲನೆಯ ಏರ್ಪಾಡುಗಳು ಮತ್ತನು ಸ್ತುತ್ಯವಾದವುಗಳಾಗಿರುವವು, ಎಲ್ಲಿಯಾದರೂ ಅಂಟುರೋಗವು ಉದ್ಭವವಾಯಿತೆಂದರೆ ನೂರಾರು ಜನರು ಬಂದು ಈ ರೋಗ ನಿವಾರಣೆಯ ಪ್ರಯತ್ನಗಳನ್ನು ಧರ್ಮಾಭಿಮಾನದಿಂದ ಕೈಕೊಳ್ಳಲು ಮುಂದೆ ಬರುವರು. ಮತ್ತು ಇಂಥಾ ಪ್ರಯತ್ನಗಳಿಗೆ ಬೇಕಾದ ಎಷ್ಟು ಹಣವನ್ನಾದರೂ ಸರಕಾರದವರು ಕೊಡುವರು. ರೋಗದ ಚಿಕಿತ್ಸಾಲಯಗಳನ್ನು ಕಟ್ಟಿಸಲಿಕ್ಕೂ ಅವುಗಳ ಕಾರಣಗಳನ್ನು ಶೋಧಿಸಿ ತಿಳಕೊಳ್ಳಲಿಕ್ಕೆ ಬೇಕಾಗಿರುವ ಶೋಧನಾಲಯಗಳನ್ನು ಏರ್ಪಡಿಸಲಿಕ್ಕೂ, ತಜ್ಞರಿಂದ ಬೇಕಾಗಿರುವ ಸಾಧನಗಳನ್ನು ನಡಿಸಲಿಕ್ಕೂ ಹಣವನ್ನು ಧಾರಾಳವಾಗಿ ಸರಕಾರದವರು ಕೊಡುವರು. ಮತ್ತು ಅಲ್ಲಿಯ ಸರಕಾರವು ಪ್ರಜಾಸತ್ತೆಯದೇ ಆದ ಕಾರಣ ಒಂದು ವೇಳೆ ಸರಕಾರದ ಖಜಾನೆಗಳಲ್ಲಿ ಬೇಕಾದ ಹಣವು ಇಲ್ಲದೆ ಹೋದ ಸಂದರ್ಭದಲ್ಲಿ ವಿಧಾಯಕ ವಿಧಾನಗಳಿಂದ ಪ್ರಜಾಹಿತ ಉಪಯೋಗಾರ್ಥವಾಗಿ ಬೇಕಾಗಿರುವ ದ್ರವ್ಯ ಸಹಾಯವನ್ನು ಸಂಪನ್ನರಿಂದ ಬರಮಾಡಿಕೊಳ್ಳುವರು.

• • • • •

ಅಮೇರಿಕದಲ್ಲಿ ಜನಿಸುವ ಎಲ್ಲಾ ಮಕ್ಕಳ ಆರೋಗ್ಯವನ್ನು ಸರಕಾರದ ಡಾಕ್ಟರರು ಪರೀಕ್ಷಿಸಿ ನೋಡುವ ಕ್ರಮವಿದೆ. ಆರೋಗ್ಯವು ಸರಿಯಿಲ್ಲದ ಮಕ್ಕಳಲ್ಲಿ ದೇಹದಾರ್ಢ್ಯವು ಸರಿಯಿಲ್ಲದೆ ಅವರ ಬುದ್ಧಿ ಮತ್ತು ನಡವಳಿಕೆಯಲ್ಲಿ ಸಹ ಕುಂದಕಗಳಿರುವವು. ಸುಳ್ಳಾಡುವದು, ಶಾಲೆಯಿಂದ ತಪ್ಪಿಸಿ ಹೋಗುವದು, ಕದಿಯುವದು, ಇತ್ಯಾದಿ ದುರ್ಗುಣಗಳು ಸರಿಯಾದ ಆರೋಗ್ಯವು ಇಲ್ಲದ್ದರಿಂದ ಪ್ರಾಪ್ತವಾಗುತ್ತವೆಂಬುದು ಅಮೇರಿಕದ ಪ್ರಜಾಜನರಿಗೆ ಸರಿಯಾಗಿ ಗೊತ್ತಿರುವದರಿಂದ ಮಕ್ಕಳ ಆರೋಗ್ಯ ಪಾಲನೆಗೆ ವಿಶೇಷ ಲಕ್ಷ್ಯಕೊಡುವರು.

• • • • •

ಕೊಚ್ಚಿ ಸಂಸ್ಥಾನದಲ್ಲಿ ಇತ್ತಲಾಗೆ. ವ್ಯವಸ್ಥೆಗೊಳಿಸಿದ ಹೊಸ ನ್ಯಾಯವಿಧಾಯಕ ಸಭೆಯ ಮೆಂಬರರಾಗಿ ಮಿಸೆಸ್. ಟಿ. ಮಾಧವಿ ಅಮ್ಮ ಎಂಬವರನ್ನು ಕೊಚ್ಚಿನ್ ಸರಕಾರದವರು ನೇಮಿಸಿರುತ್ತಾರೆ. ಸ್ತ್ರೀಯರು ಈ ರೀತಿ ಕೌನ್ಸಿಲ್ ಮೆಂಬರರಾಗಿ ನೇಮಿಸಲ್ಪಟ್ಟದ್ದು ಈ ದೇಶದಲ್ಲಿ ಇದೇ ಪ್ರಥಮ ಸಲವಾಗಿರುವದು. (ಇನ್ನೂ ಹೆಚ್ಚಿಗೆ ಮುಂದುವರಿಯುವದು.)

ಅನುಕ್ರಮಣಿಕೆ.

ಅಗ್ರಲೇಖ — ಪುಟಗಳು.
ಈಗಿನ ರಾಜಕೀಯ ಪರಿಸ್ಥಿತಿ ೬
ಕೌನ್ಸಿಲ್ ಚುನಾವಣೆ ,,
ಸ್ಫುಟವಿಚಾರಗಳು—
೧. ಮದ್ರಾಸು ಎಕ್ಸಿಕ್ಯುಟೀವ್ ಮೆಂಬರಿಕೆಗೆ ಮಿ| ಮೊಯರರ ನೇಮಕ ೭
೨. ಬಾಬು ಸತ್ಯೇಂದ್ರ ಮಿತ್ರರು ಪುನಹ ಬಂಗಾಲ ನ್ಯಾಯ ವಿಧಾಯಕ ಸಭೆಯ ಮೆಂಬರರಾಗಿ ಆರಿಸಲ್ಪಟ್ಟರು. ,,
೩. ಬಂಗಾಲ ಓರ್ಡಿನೆನ್ಸ್ ಕಾಯಿದೆಗೆ ಮತ್ತಷ್ಟು ಭಯಂಕರ ಸ್ವರೂಪವು ಕೊಡೋಣಾಯಿತು ,,
೪. ಪಾಲಘಾಟ್ ಕೊಂಗ್ರೆಸ್ ಸೆಕ್ರೆಟರಿಗಳ ಮಾನನಷ್ಟದ ದಾವೆ ,,
ಮಂಗಳೂರು
ವರ್ತಮಾನಸಂಗ್ರಹಗಳು—
ವಿಶೇಷ — ಒಳದೇಶ ವರ್ತಮಾನ ೫
ದಕ್ಷಿಣ ಕನ್ನಡ — ಕಾರಕಳ್, ಕುಂಬಳೆ, ಬಂಟವಾಳ ,,
ವಿವಿಧ ವಿಷಯಗಳು ೮
ಪತ್ರವ್ಯವಹಾರ ೧, ೨, ,,

ಸ್ವದೇಶಾಭಿಮಾನಿ.

ಶಕ ೧೮೪೭ ವೈಶಾಖ ಶು| ೯ವು ಶುಕ್ರವಾರ.

ಈಗಿನ ರಾಜಕೀಯ ಪರಿಸ್ಥಿತಿ.

ಹಿಂದುಸ್ಥಾನದ ಈಗಿನ ರಾಜಕೀಯ ಪರಿಸ್ಥಿತಿಯು ವಿಚಾರಣೀಯವಾಗಿದೆ. ೧೯೧೯ನೆಯ ಸುಧಾರಣಾ ಕಾಯಿದೆಯಲ್ಲಿ ಸೂಚಿಸಿದ ಮೇರೆಗೆ ಹಿಂದುಸ್ಥಾನಕ್ಕೆ ರಾಜಕೀಯ ಹಕ್ಕುಗಳ ಮುಂದಿನ ಕಂತು ೧೯೨೯ರಲ್ಲಿ ಸಿಗಬೇಕಾದ್ದು. ಆದರೂ ಹಿಂದುಸ್ಥಾನದೊಳಗಿನ ಎಲ್ಲ ಕಾಯಿದೆ ಸಂಸ್ಥೆಗಳ ಕಳೆದ ಚುನಾವಣೆಯಲ್ಲಿ ಅಸಹಕಾರವಾದಿಯಾದ ಸ್ವರಾಜ್ಯ ಪಕ್ಷವು ಅವುಗಳನ್ನು ಯಥಾಪ್ರಮಾಣ ಆಕ್ರಮಿಸಿದ ಕಾರಣ ಮತ್ತು ಎಸೆಂಬ್ಲಿಯಲ್ಲಿ, ಬಂಗಾಲ-ನಾಗಪುರಗಳಲ್ಲಿ ಉಪರೋಧವು ಎಡಬಿಡದೆ ನಡೆದಕಾರಣ ಈ ಪ್ರತಿಕ್ರಿಯೆಯ ಪರಿಣಾಮವು ನೋಕರಶಾಹಿಯ ಮನಸ್ಸಿನ ಮೇಲೂ ಉಂಟಾಯಿತು. ಎಸೆಂಬ್ಲಿಯು ರೌಂಡಟೇಬಲ್ ಕೊನ್ಫರೆನ್ಸಿನ ಠರಾವನ್ನು ಪಾಸುಮಾಡಿತು, ಬಜೆಟನ್ನು ನಿರಾಕರಿಸಿತು, ಲೀಕಮಿಶನಿನ ಶಿಫಾರಸುಗಳನ್ನು ತಿರಸ್ಕರಿಸಿತು, ರೈಲ್ವೆ ಬಜೇಟನ್ನೂ ನಿರಾಕರಿಸಿತು, ಮಧ್ಯವರ್ತಿ ಸರಕಾರದ ಕಾರ್ಯಕಾರಿ ಮಂಡಲದ ಖರ್ಚನ್ನು ಅಲ್ಲಗಳೆದು ಸರಕಾರದ ಮೇಲೆ ನಿಂದಾವ್ಯಂಜಕ ಠರಾವನ್ನು ಪಾಸುಮಾಡಿತು. ಈ ಮೇರೆಗೆ ಒಂದಕ್ಕಿಂತ ಒಂದು ಪರಿಣಾಮಜನಕವಾದ ಸಂಗತಿಗಳಿಂದ ಎಸೆಂಬ್ಲಿಯು ಸರಕಾರದ ಮನಃಸ್ವಾಸ್ಥ್ಯವನ್ನು ಭಂಗಪಡಿಸಿತು. ಕೋಣದ ಬೆನ್ನಿನ ಚರ್ಮವು ಬಹು ದಪ್ಪವಾಗಿರುವದರಿಂದ ಅದಕ್ಕೆ ಕುದುರೆಯನ್ನೆಬ್ಬಿಸುವ ಚಬುಕವು ತಗಲುವದಿಲ್ಲ. ಆದರೂ ತೋರದ ಬೆತ್ತದಿಂದ ಸರಿಯಾದ ಎರಡು ಏಟು ಬಿದ್ದ ಕೂಡಲೆ ಆ ದಪ್ಪದ ಬೆನ್ನಿನ ಚರ್ಮವು ಕೂಡ ಹದವಾಗುವದು. ಮತ್ತು ಆ ಕೋಣವು ಹತೋಟಿಯಲ್ಲಿ ಬರುವದು. ನಮ್ಮ ನೋಕರಶಾಹಿಯು ಅವಸ್ಥೆಯಾದರೂ ಹೀಗೆಯೆ ಇದೆ. ಲಿಬರಲ್ ಮತ್ತು ಶಾಂತಪಕ್ಷದವರ ಚಬುಕು ಅದಕ್ಕೆ ನಾಟಲಿಲ್ಲ. ಪಂಡಿತ ನೇಹರುಗಳ ಬೆತ್ತದ ಬಲವಾದ ಏಟುಗಳು ಒಂದರ ಮೇಲೊಂದು ಬೀಳಹತ್ತಿದ ಬಳಿಕ ಅದು ಕುಂಭಕರ್ಣನ ನಿದ್ರೆಯಿಂದ ಎಚ್ಚತ್ತು "ಇನ್ನು ಉಪಾಯವಿಲ್ಲ, ಸ್ವರಾಜ್ಯಪಕ್ಷದ ಅಸಹಕಾರಿಗಳು ಬಾಗಿಲು ಒಡೆಯುತ್ತಿದ್ದಾರೆ" ಎಂದು ಆಲೋಚಿಸಿ ಅದಕ್ಕೇನಾದರೂ ಒಂದು ಸಮಾಧಾನವನ್ನು ಕಲ್ಪಿಸಲು ಮುಡಿಮನರ ಅಧ್ಯಕ್ಷತೆಯಲ್ಲಿ ಸುಧಾರಣಾ—ವಿಚಾರಣಾ—ಕಮಿಟಿಯನ್ನು ನೇಮಿಸಿತು. ಈ ಕಮಿಟಿಯಲ್ಲಿ ಸರ್ವದಾ ಸರಕಾರಪಕ್ಷವನ್ನು ಎತ್ತಿಹಿಡಿಯುವ ಕೆಲವರು ಭಾಗವನ್ನೆತ್ತಿದರು. ಮೊಂಟೆಗ್ಯು ದೊರೆಗಳ ದ್ವಿದಲಪದ್ಧತಿಯನ್ನು ಶ್ಲಾಘಿಸಿ, ಅದನ್ನು ಯಶಸ್ವಿಯನ್ನಾಗಿ ಮಾಡಲು ಯಾರು ಸೊಂಟಕಟ್ಟಿದ್ದರೊ ಅಂಥ ಗೃಹಸ್ಥರೆ—ಮಂತ್ರಿಪದವನ್ನು ಸ್ವೀಕರಿಸಿದ ಸಪ್ರೆತಂಡದವರೆ—ದ್ವಿದಲ ಪದ್ಧತಿಯನ್ನು ಕಿತ್ತುಹಾಕಬೇಕೆಂದು ತಮ್ಮ ತಮ್ಮ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ವ್ಯಕ್ತಗೊಳಿಸಿದರು. ನೋಕರಶಾಹಿಯ ಆಧಾರಸ್ತಂಭಗಳಾದ ಸಪ್ರೆತಂಡದವರೆ ಈ ವಿಧವಾಗಿ ದ್ವಿದಲ ಪದ್ಧತಿಗೆ ಗೋರಿಯನ್ನು ಸಿದ್ಧಪಡಿಸಿದ ಬಳಿಕ ಮತ್ತು ಪ್ರಾಂತಿಕ ಸ್ವರಾಜ್ಯವನ್ನು ಆಕಾಂಕ್ಷಿಸಿದ ಬಳಿಕ, ಇನ್ನು ಸರಕಾರವು ಯಾರನ್ನು ಆಶ್ರಯಿಸಬೇಕಾಯಿತು? ಎಸೆಂಬ್ಲಿಯಲ್ಲಿ ಒಂದು ಕಡೆಯಿಂದ ಸ್ವರಾಜ್ಯಪಕ್ಷದವರು ಏಟು ಕೊಡುವದು; ಇನ್ನೊಂದು ಕಡೆಯಲ್ಲಿ ಲಿಬರಲ್ಸರ ಆಧಾರವು ತಪ್ಪಿದ್ದು, ಇಂಥ ಅನುಕಂಪನೀಯ ಸ್ಥಿತಿಯು ಬಂದಬಳಿಕ ಹಿಂದುಸ್ಥಾನ ಸರಕಾರಕ್ಕೆ ಮತ್ತು ವಿಲಾಯತಿಯೊಳಗಿನ ಅಧಿಕಾರ ಮಂಡಲಕ್ಕೆ ನಾಚಿಕೆಯುಂಟಾಯಿತು. ಅಧಿಕಾರವನ್ನು ಅನುಭವಿಸುವವರಿಗೆ ಆ ಅಧಿಕಾರವನ್ನು ಬಿಟ್ಟುಬಿಡಲು ಮನಸ್ಸು ಬರುವದಿಲ್ಲ. ಆದರೂ ಲೋಕಲಜ್ಜೆಗಾಗಿ ಹಿಂದುಸ್ಥಾನಕ್ಕೆ ಏನಾದರೂ ಹೆಚ್ಚಿನ ಅಧಿಕಾರವನ್ನು ಕೊಡಲು ಸರಕಾರವು ಸಂಕಲ್ಪಿಸಿದೆ. ಈ ಸಂಕಲ್ಪಕ್ಕೆ ಸಾಧ್ಯವಿದ್ದರೆ ಮೂರ್ತಸ್ವರೂಪವನ್ನು ಕೊಡಲು ಎಲ್ಲ ಸಂಗತಿಗಳನ್ನು ಆಲೋಚಿಸುವದಕ್ಕಾಗಿ ಭಾರತ ಮಂತ್ರಿಗಳಾದ ಬರ್ಕನ್‌ಹೆಡ್ಡರು ವೈಸರಾಯರಾದ ರೆಡಿಂಗ ಸಾಹೇಬರನ್ನು ಕರೆಯಿಸಿರುವರು. ಇಲ್ಲಿಂದ ಹೊರಟ ರೆಡಿಂಗ ಸಾಹೇಬರು ಈಗ ವಿಲಾಯತಿಗೆ ಹೋಗಿ ತಲಪಿರುವರು.

ಇದು ಪ್ರಕೃತದ ರಾಜಕೀಯ ಪರಿಸ್ಥಿತಿಯು. ಇದನ್ನು ಅನೇಕರು ಅನೇಕ ವಿಧದಿಂದ ಪೃಥಕ್ಕರಿಸಲು ಯತ್ನಿಸುತ್ತಿದ್ದಾರೆ. ಬರ್ಕನಹೆಡ್ಡರು ಹಿಂದುಸ್ಥಾನದ ರಾಜಕಾರಣದ ಪರಿಸ್ಥಿತಿಯನ್ನು ತಿಳಕೊಳ್ಳಲು ರೆಡಿಂಗರನ್ನು ಕರೆಯಿಸಿದ್ದಾರೆ. ಇವರಿಬ್ಬರಲ್ಲಿ ಸಮಕ್ಷಮವಾಗಿ ಚರ್ಚೆಯು ನಡೆದೀತು. ಇಬ್ಬರಲ್ಲಿ ತೀವ್ರವಾದ ಮತಭೇದವು ಇದ್ದಿಲ್ಲವಾದರೆ ರೆಡಿಂಗರಿಗೆ ಇಲ್ಲಿಂದ ಅಲ್ಲಿತನಕ ಪ್ರಯಾಣಬೆಳಿಸುವ ಅಗತ್ಯವಿರಲಿಲ್ಲ. ತಂತಿಗಳ ಮೂಲಕವಾಗಲಿ, ಪತ್ರವ್ಯವಹಾರದ ಮೂಲಕವಾಗಲಿ ಸಾಮಾನ್ಯ ಮತಭೇದವನ್ನು ಸರಿಪಡಿಸಿಕೊಳ್ಳಬಹುದಿತ್ತು. ಅದರ ಬದಲಿಗೆ ರೆಡಿಂಗಸಾಹೇಬರನ್ನು ಅಲ್ಲಿಗೆ ಕರೆಯಿಸಿಕೊಂಡದ್ದರ ಮೇಲಿಂದ ಆ ಸಾಹೇಬರು ಒಂದು ಧ್ರುವದಲ್ಲಿ ಈ ಸಾಹೇಬರು ಇನ್ನೊಂದು ಧ್ರುವದಲ್ಲಿ ಇದ್ದಾರೆ ಎಂದು ಸಹಜವಾಗಿಯೆ ಊಹಿಸಬೇಕಾಗುತ್ತದೆ. ಆಗ ರೆಡಿಂಗ ಸಾಹೇಬರ ಧ್ರುವವು ಯಾವದು, ಬರ್ಕನ್ ಹೆಡ್ಡರ ಧ್ರುವವು ಯಾವದು ಎಂಬದನ್ನು ಪರೀಕ್ಷಿಸಬೇಕು. ಲೋರ್ಡ ರೆಡಿಂಗ ಸಾಹೇಬರು ಹಿಂದುಸ್ಥಾನದ ಸ್ವರಾಜ್ಯಾಕಾಂಕ್ಷೆಯನ್ನು ಪೂರಯಿಸಬೇಕೆಂದು ಅಭಿಪ್ರಾಯಪಡುತ್ತಾರೆಂದು ಹೇಳೋಣಾಗುತ್ತದೆ. ಮುಡಿಮನ್ ಕಮಿಟಿಯ ಅಲ್ಪ ಸಂಖ್ಯಾಕ ಸಭಾಸದರು ಯಾವ ಸಂಪೂರ್ಣ ಪ್ರಾಂತಿಕ ಸ್ವರಾಜ್ಯವನ್ನು ಕೇಳಿದ್ದಾರೊ ಅದನ್ನು ಕೊಡಬೇಕು, ಮತ್ತು ಮಧ್ಯವರ್ತಿ ಸರಕಾರವು ಕೂಡ ಜನತೆಗೆ ಕೆಲವಂಶದಿಂದ ಜವಾಬದಾರವಾಗಿರಬೇಕೆಂದು ಅಲ್ಪ ಸಂಖ್ಯಾಕ ಸಭಾಸದರು ಏನು ಬರೆದಿರುವರೊ ಅದನ್ನು ಸಹ ಸರಕಾರವು ಕೊಡಬೇಕು ಎಂದು ರೆಡಿಂಗ ಸಾಹೇಬರ ಮನೋಗತವಿದೆ ಎಂದು ಕೆಲವರು ಹೇಳುತ್ತಿದ್ದಾರೆ. ಇದು ಸತ್ಯವಾದ್ದೆಂದಾದರೆ ಬರ್ಕನಹೆಡ್ಡರ ಧ್ರುವವು ಇದಕ್ಕೆ ಸಂಪೂರ್ಣ ವಿರುದ್ಧವಾದ್ದೆಂಬುದು ಸ್ವಾಭಾವಿಕವಾಗಿಯೆ ಸ್ಪಷ್ಟವಾಗುತ್ತದೆ.

ಇನ್ನೊಂದು ಕಡೆಯವರ ಅಭಿಪ್ರಾಯದಂತೆ, ಬರ್ಕನಹೆಡ್ಡರೆ ಉದಾರ ದೃಷ್ಟಿಯವರಾಗಿದ್ದಾರೆ, ಹಿಂದುಸ್ಥಾನಕ್ಕೆ ಸ್ವರಾಜ್ಯದ ಹಕ್ಕನ್ನು ಕೊಡಲು ಉದ್ಯುಕ್ತರಾಗಿದ್ದಾರೆ, ಪರಂತು ಅಧಿಕಾರಲೋಲುಪವಾದ ಇಲ್ಲಿಯ ನೋಕರಶಾಹಿಯು ಅಧಿಕಾರದ ಒಂದು ಚೂರನ್ನು ಕೂಡ ಬಿಟ್ಟುಕೊಡಲು ತಯಾರಿಲ್ಲ, ಅದ್ದರಿಂದ ಆ ನೋಕರಶಾಹಿಯ ಶಿಖಾಮಣಿಗಳಾದ ರೆಡಿಂಗಸಾಹೇಬರು ಸ್ವರಾಜ್ಯದಾನಕ್ಕೆ ಪ್ರತಿಕೂಲರಿದ್ದಾರೆ. ತಮ್ಮ ತೀವ್ರ ಪ್ರತಿಕೂಲತ್ವವನ್ನು ಭಾರತ ಮಂತ್ರಿಗಳಿಗೆ ತಿಳಿಪಡಿಸಲು ಈ ಕಾರಣದಿಂದ ಅವರು ಇಲ್ಲಿಂದ ಹೋಗಿದ್ದಾರೆ.

ಈ ಪ್ರಕಾರವಾಗಿ ಪರಸ್ಪರ ವಿರುದ್ಧವಾದ ಎರಡು ತರದ ಊಹನೆಗಳು ಪ್ರಚಲಿತವಾಗಿವೆ. ಇವುಗಳಲ್ಲಿ ಯಥಾರ್ಥವಾದ್ದು ಯಾವದು, ಅಥವಾ ಇವೆರಡೂ ಪ್ರಕಾರಗಳು ಕಣ್ಣುಕಟ್ಟಾಗಿದ್ದು ಕಡೆಗೆ ಇದೆಲ್ಲ "ಬರೆಗುಲ್ಲು, ನಿದ್ದೆಗೇಡೆ ಆಗುವದೊ ಇತ್ಯಾದಿ ವಿಷಯಗಳು ಈಗಲ್ಲವಾದರೂ, ಮುಂದೆ ಬೇಗನೆ ಬಹಿರಂಗವಾಗದೆ ಇರಲಿಕ್ಕಿಲ್ಲ. ತಥಾಪಿ ಭವಿಷ್ಯತ್‌ಕಾಲದ ಉದರದಲ್ಲಿರುವ ಸಂಗತಿಯನ್ನು ಅನುಮಾನಿಕ ದೃಷ್ಟಿಯಿಂದ ಕಂಡುಹಿಡಿಯುವ ಕುತೂಹಲವು ಮನುಷ್ಯನಲ್ಲಿ ಸರ್ವಸಾಧಾರಣವಾಗಿರುವದರಿಂದ ಈ ವಿಷಯದಲ್ಲಿ ಜನರ ತರ್ಕ ವಿತರ್ಕಗಳು ನಡೆದಿರುತ್ತವೆ. ಇವುಗಳಲ್ಲಿ ಯಾವದು ನಿಜವಾದೀತೆಂಬುದನ್ನು ಈಗ ಖಂಡಿತವಾಗಿ ಹೇಳಲಾಗುವುದಿಲ್ಲವಾದರೂ ಮುಂದಿನ ಒಂದು ಸಂಗತಿಯನ್ನು ಎಲ್ಲರೂ ಒಪ್ಪಿಕೊಳ್ಳಬೇಕಾಗಿದೆ. ೧೯೧೯ನೆಯ ಸುಧಾರಣಾ ಕಾಯಿದೆಯಿಂದ ಜನತೆಯಲ್ಲಿ ಸಮಾಧಾನವುಂಟಾಗಲಿಲ್ಲ, ಜನಾಂಗವು ಅಸಂತುಷ್ಟವಾಗಿದೆ ಎಂಬಿತ್ಯಾದಿ ವಿಷಯವು ಅಧಿಕಾರಿ ವರ್ಗಕ್ಕೆ ಮತ್ತು ವಿಲಾಯತಿಯ ಪಾರ್ಲಿಮೆಂಟಿಗೆ ಸರಿಯಾಗಿ ಗೊತ್ತಾಗಿದೆ. ಸ್ವರಾಜ್ಯಪಕ್ಷವು ಕೌನ್ಸಿಲುಗಳನ್ನು ಆಕ್ರಮಿಸಿ ಮಾಡಿದ್ದೇನೆಂದು ಸದ್‌ಬುದ್ಧಿಯಿಂದಾಗಲಿ, ಅಸದ್‌ಬುದ್ಧಿಯಿಂದಾಗಲಿ ಅಥವಾ ಕುತ್ಸಿತತನದಿಂದಾಗಲಿ ಯಾರು ಕೇಳುತ್ತಿದ್ದಾರೊ ಅಂಥವರು ಈ ಎಲ್ಲ ರಾಜಕೀಯ ಪರಿಸ್ಥಿತಿಯನ್ನು—ವಿಶೇಷತಃ ಲೋರ್ಡರೆಡಿಂಗರು ಇಲ್ಲಿಂದ ಹೊರಟುಹೋದ ಸಂಗತಿಯನ್ನು—ಆಲೋಚಿಸಿ ನೋಡಬೇಕು. ಹಾಗೆ ಆಲೋಚಿಸಿದ್ದಲ್ಲಿ ಅವರ ತಲೆಯಲ್ಲಿ ಕೊಂಚವಾದರೂ ಬೆಳಕು ಬಿದ್ದೀತೆಂದು ತಿಳಿಯುತ್ತೇವೆ. ಇರಲಿ, ಲೋರ್ಡರೆಡಿಂಗರು ಹಿಂದುಸ್ಥಾನದ ಪರಿಸ್ಥಿತಿಯನ್ನು ವರ್ಣಿಸಲು ಹೋಗಿದ್ದಾರಷ್ಟೆ. ಅವರಿಗೆ ಇಲ್ಲಿಯ ಸಂಗತಿಗಳು ಸಾಕ್ಷಾತ್ತಾಗಿ ಗೊತ್ತಾಗಿವೆ. ಸುಧಾರಣಾ ಕಮಿಟಿಯ ಅಲ್ಪ ಸಂಖ್ಯಾಕರ ಅಭಿಪ್ರಾಯದ ಮೇಲಿಂದ ಅವರು ಜನಾಂಗದ ನಾಡಿಯನ್ನು ಪರೀಕ್ಷಿಸಿರಬಹುದು. ಅವರ ಕಾರ್ಯಕಾರಿ ಮಂಡಲದೊಳಗಿನ ಹಿಂದಿ ಸಭಾಸದರು ಈ ದೇಶದ ಆಕಾಂಕ್ಷೆಯನ್ನು ಅವರಿಗೆ ತಿಳಿಸಿರಬಹುದು. ಇಷ್ಟೆಲ್ಲ ಮಾರ್ಗಗಳು ಅನುಕೂಲವಿರುವಾಗ ಅವುಗಳಿಂದ ಹಿಂದುಸ್ಥಾನದ ಅಪೇಕ್ಷೆಯನ್ನು ರೆಡಿಂಗಸಾಹೇಬರು ತಿಳಕೊಳ್ಳದೆ ಎಂದೂ ಇರಲಿಕ್ಕಿಲ್ಲ. ಒಂದು ವೇಳೆ ಈ ಸಾಧನಗಳನ್ನವರು ಉಪಯೋಗಿಸಿಕೊಳ್ಳಲಿಲ್ಲವೆಂದು ತಿಳಿದರೂ ಅವರು ಹೋಗಿರುವ ಬೋಟಿನ ಮೇಲೆ ಹಕೀಮ ಅಜಮಲಖಾನ, ಡೊ. ಅನ್‌ಸಾರಿ ಮುಂತಾದ ಹಿಂದಿ ಮುಖಂಡರು ವಿಲಾಯತಿಗೆ ಪ್ರಯಾಣ ಬೆಳಿಸಿದ್ದರಿಂದ ಅವರ ಬಾಯಿಂದಲಾದರೂ ಹಿಂದುಸ್ಥಾನದ ಹೇಳಿಕೆಯು ಲೊ. ರೆಡಿಂಗರ ಕಿವಿಗಳಲ್ಲಿ ಬೀಳದೆ ಇರಲಿಕ್ಕಿಲ್ಲ.

ಈ ರೀತಿಯಿಂದ ಉಪಲಬ್ಧವಾದ ಮಾಹಿತಿಯನ್ನು ರೆಡಿಂಗ ಸಾಹೇಬರು ಸರಿಯಾಗಿ ಉಪಯೋಗಿಸುವರೆಂದು ಆಶೆಪಡಲು ಒಂದು ಸಂದರ್ಭವು ಉತ್ಪನ್ನವಾಗಿದೆ. ರೆಡಿಂಗರು ವಿಲಾಯತಿಗೆ ತಲಪಿದ ಬಳಿಕ ಒಬ್ಬ ಬಾತಮಿದಾರನೊಡನೆ ಮಾತಾಡುವಾಗ ತಾನು ಹಿಂದುಸ್ಥಾನದ ರಾಜಕಾರಣದ ಚರ್ಚೆಯನ್ನು ಮಾಡಿ ಪುನಃ ಹಿಂದುಸ್ಥಾನಕ್ಕೆ ಹೋಗುವವನಿದ್ದೇನೆ, ಹಿಂದುಸ್ಥಾನದ ಸಂಬಂಧವನ್ನು ತಾನು ಕಡದಿದ್ದೆಂದು ಪುಕಾರೆ ಎಬ್ಬಿಸಿದ್ದು ಅಪ್ರಾಮಾಣಿಕವಾದ್ದೆಂದು ಹೇಳಿದ್ದಾರೆ. ಇದರ ಮೇಲಿಂದ ರೆಡಿಂಗ ಸಾಹೇಬರ ಮಟ್ಟಿಗಾದರೂ ತನ್ನ ಅಂಬೋಣವು ಕಾರ್ಯರೂಪದಲ್ಲಿ ಬಂದೀತೆಂಬ ಭರವಸೆಯುಂಟೆಂಬದು ಸ್ಪಷ್ಟವಾಗುತ್ತದೆ. ಇದಕ್ಕೆ ಅನುಕೂಲವಾಗಿಯೆ ಇನ್ನೊಂದು ವಾರ್ತೆಯು ಕೂಡ ಪ್ರಕಟವಾಗಿದೆ. ಸಿ. ಆರ್. ದಾಸರನ್ನು ಬರ್ಕನ್ ಹೆಡ್ಡರು ಕರೆಯಿಸುವವರಿದ್ದಾರೆ. ದಾಸರವರು ಕೂಡ ಅಲ್ಲಿಗೆ ಹೋಗಿ ಹಿಂದುಸ್ಥಾನದ ಪರಿಸ್ಥಿತಿಯನ್ನು ನಿವೇದಿಸುವವರಿದ್ದಾರೆ. ಇದಕ್ಕೆ ಪೂರ್ವ ಭಾವಿಯಾಗಿ ಸರಕಾರವು ರಾಜಕೀಯ ಕೈದಿಗಳನ್ನು ಬಿಟ್ಟು ಬಿಡಬೇಕು ಎಂಬಿತ್ಯಾದಿ ಪ್ರಸ್ತಾಪಗಳು ನಡೆಯುತ್ತಿವೆ. ಇವುಗಳನ್ನೆಲ್ಲ ಏಕತ್ರ ಸೇರಿಸಿ ಸಮಾಲೋಚಿಸುವಾಗ ಈಗ ಬೇಗನೆ ಹಿಂದುಸ್ಥಾನಕ್ಕೆ ಹೆಚ್ಚಿನ ಹಕ್ಕುಗಳು ಸಿಗುವಂತಿವೆ ಎಂದು ಒಂದು ವೇಳೆ ಊಹನೆ ಕಟ್ಟಬಹುದು. ಅಥವಾ ಮೇಲೊಂದು ಕಡೆಯಲ್ಲಿ ಹೇಳಿದಂತೆ ಇದೆಲ್ಲ ವಂಧ್ಯಾಪುತ್ರನ ಮಹೋತ್ಸವದ ಆಡಂಬರವೂ ಆಗಿರಬಹುದು. ಇಂಥ ಆಡಂಬರವನ್ನು ಮಾಡುವರಿದ್ದರೆ, ಧೂರ್ತವಾದ ನೋಕರಶಾಹಿಯು "ಅಶುಭಸ್ಯ ಕಾಲಹರಣಮ್" ಎಂಬಂತೆ ಕಾಲವನ್ನು ದೂಡುವದಕ್ಕಾಗಿ ಇನ್ನೊಂದು ಕಮಿಶನನ್ನು ನೇಮಿಸಿ, ಅದಕ್ಕೆ ಸಾಕ್ಷಿಗಳನ್ನು ಒಟ್ಟುಗೂಡಿಸುವ ಕೆಲಸವನ್ನು ಕೊಡಲೂ ಬಹುದು. ಸಾರಾಂಶ ಈಗಿನ ರಾಜಕೀಯ ಪರಿಸ್ಥಿತಿಯನ್ನು ಒಂದೆ ಮಾತಿನಲ್ಲಿ ವರ್ಣಿಸುವದಾದರೆ, ರಾಜಕೀಯ ಆಕಾಶದಲ್ಲಿ ಮಳೆಯ ಮೋಡಗಳು ಬಂದು [illegible]ತ್ತಿದ್ದಾವೆ; ಇವು ಮಳೆ ಸುರಿಸುತ್ತವೊ ಅಥವಾ ಗಾಳಿಯಿಂ[illegible]ಕ್ಕಾಪಾಲಾಗಿ ಹೋಗುತ್ತವೊ ಎಂಬುದನ್ನು ಮಾತ್ರ ನೋಡಬೇಕು.

ಕೌನ್ಸಿಲ್ ಚುನಾವಣೆ.

ಕೌನ್ಸಿಲಿಗೆ ಉಮೇದ್ವಾರರಾಗಿ ನಿಂತ ಮೂವರಲ್ಲಿ ಧರ್ಮಸ್ಥಳದ ಮ| ರಾ| ಮಂಜಯ್ಯ ಹೆಗಡೆಯವರು ಬಹುಮತದಿಂದ (೪೬೩೭ ಮತಗಳಿಂದ) ಚುನಾಯಿಸಿ ಬಂದಿರುವದರಿಂದ ನಮ್ಮ ಮಿತ್ರರಾದ ಎ. ಬಿ. ಸೆಟ್ಟರು ಈ ಚುನಾವಣೆಯ ಹೋರಾಟದಲ್ಲಿ ಪರಾಜಿತರಾದರು. ಇದು ವಿಷಾದದ ಸಂಗತಿಯಾಗಿದೆ. ಸೆಟ್ಟರು ಸ್ವರಾಜ್ಯಪಕ್ಷವನ್ನು ಸರಿಯಾಗಿ ಅಂಗೀಕರಿಸದೆ ಇದ್ದದರಿಂದ ಅವರಿಗೆ ಈ ಪರಾಜಯವು ಬಂದಿದೆಂದು ಹೇಳಲಾಗದು. ಕಾರಣ, ಚುನಾಯಿಸಿ ಬಂದ ಹೆಗಡೆಯವರೇನಾದರೂ ಸ್ವರಾಜಿಸ್ಟರಲ್ಲ. ಸೆಟ್ಟರಿಗೆ ಬಂದಿರುವ ಪರಾಜಯವನ್ನು ನೋಡುವಾಗ, ಅವರು ಸ್ವರಾಜ್ಯಪಕ್ಷಕ್ಕೆ ಸೇರದೆ ಇದ್ದದ್ದು ಆ ಪಕ್ಷಕ್ಕೆ ಒಂದು ಬಗೆಯ ಉಪಕಾರವೆ ಉಂಟಾಗಿದೆ ಎನ್ನಬೇಕು. ಸ್ವರಾಜ್ಯಪಕ್ಷದ ಉಮೇದುವಾರನೆಂಬ ಹೆಸರನ್ನು ತಾಳಿ ಮುಂದೆ ಬಂದು, ರಾಜಕಾರಣದ ತಿಳುವಳಿಕೆ ಶಿಕ್ಷಣವಿಲ್ಲದ ಮತದಾರರ ಅಚಾತುರ್ಯದಿಂದ ಸೋತು ಹೋಗಿ ಆ ಪಕ್ಷದ ಬೆಲೆಯನ್ನು ತಗ್ಗಿಸುವದಕ್ಕಿಂತ ಸ್ವಂತ ಜವಾಬದಾರಿಯಿಂದ ಬಂದ ಪರಾಜಯವು ಲೇಸೆನ್ನಬೇಕು. ಆದರೂ ಒಂದು ಸಂಗತಿಯು ಈ ಚುನಾವಣೆಯಿಂದ ನಿಷ್ಪನ್ನವಾಗಿದೆ. ಯಾವುದೆಂದರೆ, ಈ ಜಿಲ್ಲೆಯ ಮತದಾರರಿಗೆ ರಾಜಕೀಯ ಶಿಕ್ಷಣವು ಇನ್ನು ಅವಶ್ಯವಿದೆ.

ಚುನಾಯಿಸಿ ಬಂದ ಮಂಜಯ್ಯ ಹೆಗಡೆಯವರನ್ನು, ಅವರ ಯಶಸ್ಸಿನ ಬಗ್ಗೆ ನಾವು ಅಭಿನಂದಿಸುತ್ತೇವೆ. ಇವರು ಇದು ವರೆಗೆ ರಾಜಕಾರಣದಲ್ಲಿ ಯಾವದೊಂದು ವಿಧದಿಂದಲಾದರೂ ಭಾಗವನ್ನೆತ್ತಿದ್ದದ್ದಿಲ್ಲ. ಇದು ಒಂದು ದೃಷ್ಟಿಯಿಂದ ಒಳ್ಳೆಯದೆ. ಕಾ[illegible]ದ್ಧವಾದ ಬಿಳಿ ಬಟ್ಟೆಗೆ ಹೇಗೆ ಬೇಕಾದ ಬಣ್ಣವನ್ನು ಹಾಕಿದೊ, ಹಾಗೆಯೆ ರಾಜಕೀಯ ವಿವಿಧ ಪಕ್ಷೋಪಪಕ್ಷಗಳಿಂದ ಅಲಿಪ್ತರಾಗಿರುವವರು ದೇಶ ಪರಿಸ್ಥಿತಿ, ಲೋಕಮತ ಸಂಚಳವಳದ ಮಹತ್ವ ಇತ್ಯಾದಿ ಸಂಗತಿಗಳನ್ನು ಸಾಂಗೋಪಾಂಗವಾಗಿ ಪರೀಕ್ಷಿಸಿ ಹೆಚ್ಚು ಸ್ವಾರ್ಥತ್ಯಾಗೋದ್ಯುಕ್ತ ಸ್ವರಾಜ್ಯಪಕ್ಷವನ್ನು ಸೇರಿ ದೇಶಸೇವೆಯನ್ನು ಮಾಡಲು ಈ ಸಂದರ್ಭವು ಮ| ರಾ| ಹೆಗ್ಗಡೆಯವರಿಗೆ ದೊರಕಿದೆ. ಈ ಸುಸಂಧಿಯನ್ನು ಅವರು ಸದ್ ರೀತಿಯಲ್ಲಿ ಉಪಯೋಗಿಸಿಕೊಳ್ಳಲು ತಪ್ಪಲಿಕ್ಕಿಲ್ಲವೆಂದು ನಾವು ನಮ್ಮ ಜಿಲ್ಲೆಯ ಪರವಾಗಿ ಭರವಸೆ ಪಟ್ಟದ್ದೇವೆ ಮತ್ತು ನಮ್ಮ ಈ ಭರವಸೆಯು ಅಸ್ಥಾನದಲ್ಲಾಗಲಿಕ್ಕಿಲ್ಲವೆಂದು ನಂಬಿಕೆ ಇದೆ.

ಸ್ಫುಟವಿಚಾರಗಳು.

೧. ನಮ್ಮ ಮದ್ರಾಸಸರಕಾರದ ಎಕ್ಸಿಕ್ಯುಟಿವ್ ಕೌನ್ಸಿಲಿಗೆ ಮಿ. ಮೊಯರರ ಅವರು ಮೆಂಬರರನ್ನಾಗಿ ನಮ್ಮ ಸರಕಾರವು ನೇಮಿಸುವುದೆ. ಎಕ್ಸಿಕ್ಯುಟಿವ್ ಕೌನ್ಸಿಲಿಗೆ ಸರಕಾರವು ಹೆಚ್ಚಾಗಿ ಯುರೋಪಿಯನ್ ಗೃಹಸ್ಥರನ್ನೆ ನೇಮಿಸುತ್ತದೆ. ಕ್ವಚಿತತ್ತ್ವಾಗಿ ಒಂದೆರಡು ಹಿಂದಿಗಳ ಪ್ರವೇಶವು ಕೂಡ ಆಗುವ ಸಂಭವವಿರುತ್ತದೆ. ಈ ಸಂದರ್ಭವು ಬಹು ಕ್ವಚಿತ್ತೆ ಸರಿ. ಅದ್ದರಿಂದ ಮಿ. ಮೊಯರರಂಥ ಯುರೋಪಿಯನ ಗೃಹಸ್ಥರನ್ನು ಮದ್ರಾಸ ಸರಕಾರ ನೇಮಿಸಿದ್ದಲ್ಲಿ ಆಶ್ಚರ್ಯಪಡಬೇಕಾಗಿಲ್ಲ. ಆದರೆ ವಿಷಾದ ಸಂಗತಿ ಏನೆಂದರೆ ಯುರೋಪಿಯನ ಗೃಹಸ್ಥರಲ್ಲಿ ಅನೇಕರು ಸರಕಾರದ ಈ ನೇಮಕವು ಪ್ರಶಸ್ತವಲ್ಲವೆಂದು ಅಭಿಪ್ರಾಯಪಡುತ್ತಾರೆ. ಸಿವಿಲ ಸರ್ವಿಸ್ ಖಾತೆಯಲ್ಲಿ ಇದಲೂ ಯೋಗ್ಯ ಮತ್ತು ಲೋಕ ಪರಿಸ್ಥಿತಿಯನ್ನು ಅರಿತಂಥ ಅನೇಕರಿರುತ್ತ ಇಂಥವರನ್ನು ನೇಮಿಸಿದ್ದು ಸಿವಿಲಿಯನರ ದೃಷ್ಟಿಗೆ ಬೀಳುವದಿಲ್ಲ. ಇದು ಹೇಗೂ ಇರಲಿ. ಮೊಯರರ ಪೂರ್ವ ಚರಿತ್ರೆಯನ್ನು ನೋಡಿ ಇವರ ಮತವು ಯಾವ ರೀತಿಯಾದುದು ಇಲ್ಲಿ ಸ್ವಲ್ಪ ಮಟ್ಟಿಗೆ ವಿಚಾರಮಾಡೋಣ. ಮದ್ರಾಸ ಸರಕಾರದಿಂದ ನಿಯುಕ್ತರಾದ ಎಸೆಂಬ್ಲಿ ಮೆಂಬರರಲ್ಲಿ ಇವರೊಬ್ಬರಾಗಿರುವರು. ಎಸೆಂಬ್ಲಿಯೊಳಗಿನ ಇವರ ವರ್ತನ ಭಾಷಣ ಮುಂತಾದವುಗಳನ್ನು ಪರಿಶೀಲಿಸಿದ್ದಲ್ಲಿ ಇವರಿಂದ ಪ್ರಜೆಗೆ ಹಿತಕಾರಕ ಸಂಗತಿಗಳು ಆಗುವವೆಂದು ಹೇಳಲು ಸಾಧ್ಯವಿಲ್ಲ. ಯಾಕೆಂದರೆ, ಎರಡು ವರುಷಗಳ ಹಿಂದೆ ಉಪ್ಪಿನ ತೆರಿಗೆಯನ್ನು ಏರಿಸಿದಾಗ ಈ ಮೊಯರ ಸಾಹೇಬರು ಸರಕಾರ ಪರವಾಗಿ ಸಮರ್ಥನವನ್ನು ಮಾಡಿ ಲೋಕದ ಅಪ್ರೀತಿಗೆ ಕಾರಣರಾದರು. ಅಷ್ಟೆ ಅಲ್ಲ 'ನಾನು ಯಾವ ಊರಿನ ಪರವಾಗಿ ಮೆಂಬರನಾಗಿ ಬಾರದಿದ್ದರೂ ನನ್ನ ವರ್ತನವನ್ನು ಮದ್ರಾಸ ಪ್ರಾಂತವೆ ಹೊಗಳೀತೆಂದು' ಹೇಳಿ ಮದ್ರಾಸ ಪ್ರಾಂತದ ಹೆಸರಿನ ಕೆಳಗೆ ತಮ್ಮ ಮತವನ್ನೆ ಪ್ರಕಟಮಾಡಿದರು. ಈ ರೀತಿಯಾಗಿ ಎಷ್ಟೊ ಸಂದರ್ಭದಲ್ಲಿ ಮಿಥ್ಯಾನಿರೂಪಣವನ್ನು ಮಾಡಿದ್ದಾರೆ. ಹಿಂದುಸ್ಥಾನದ ರಾಜಕೀಯ ಸುಧಾರಣೆಯನ್ನು ಕೊಡಬೇಕೆಂದು ಅನೇಕರು ಲೊ. ಪೀಲರಕಾಲದಲ್ಲಿ ಹೇಳುತ್ತಿದ್ದಾಗ ಈ ಸಾಹೇಬರು ಸುಧಾರಣೆಕೊಟ್ಟಿದ್ದಾದರೆ ಹಿಂದಿಗಳ ಪರಿಸ್ಥಿತಿಯೂ ಇನ್ನೂ ಹಾಳಾದೀತೆಂದು ಹೇಳಿ ಸ್ವರಾಜ್ಯದ್ವೇಷಿಗಳೆಂದು ಮೊದಲೇ ಪ್ರಕಟಿಸಿಕೊಂಡಿರುವರು. ಮೊಯರಸಾಹೇಬರ ಈ ಚರಿತ್ರೆಯನ್ನು ನೋಡುವಾಗ ಅವರಿಂದ ಯಾವ ಪ್ರಯೋಜನವಾದೀತೆಂಬುದನ್ನು ವಾಚಕರೆ ಊಹಿಸಬಹುದು. ಇರಲಿ, ಯುರೋಪಿಯನರು ಮೊಯರರ ನೇಮಕದಿಂದ ಅಸಂತುಷ್ಟರಾಗಿದ್ದಾರೆ. ಹಿಂದಿಗಳೂ ಸಹ ಇನ್ನೂ ಅಸಂತುಷ್ಟರಾಗಿರುವರು. ಅದ್ದರಿಂದ ಮದ್ರಾಸ ಸರಕಾರವು ಬುದ್ಧಿಮತ್ತೆಯಿಂದ ನಡಿಯಲಿಲ್ಲವೆಂದು ಎಲ್ಲ ದೃಷ್ಟಿಯಿಂದಲೂ ವ್ಯಕ್ತವಾಗುತ್ತದೆ.

೨. ಬಾಬೂ ಸತ್ಯೇಂದ್ರ ಮಿತ್ರರು ಬಂಗಾಲ ಕೌನ್ಸಿಲಿನ ಮೆಂಬರರು. ಇವರನ್ನು ಮತ್ತು ಇನ್ನೊಬ್ಬ ಮೆಂಬರರಾದ ಬಾಬೂ ಅನಿಲವರ್ಣರೊಯರನ್ನು ಬಂಗಾಲ ಸರಕಾರವು ಓರ್ಡಿನೆನ್ಸಿನ ಪ್ರಭಾವದಿಂದ ಕೈದು ಮಾಡಿದ ಸಂಗತಿಯು ವಾಚಕರ ಸ್ಮೃತಿಯಲ್ಲಿರಬಹುದು. ಇವರನ್ನು ಕೈದುಮಾಡಿ ಅನೇಕ ತಿಂಗಳುಗಳಾಗುತ್ತ ಬಂದರೂ ಅವರನ್ನು ಕೌನ್ಸಿಲಿಗೆ ಬರಲಿಕ್ಕೂ ಬಿಡುವದಿಲ್ಲ ಅಥವಾ ಅದರ ವಿಚಾರಣೆಯನ್ನು ಮಾಡುವುದೂ ಇಲ್ಲ. ಹೀಗೆ ಸರಕಾರವು ಎಷ್ಟು ತಿಂಗಳ ವರೆಗೆ ವರ್ತಿಸಿ ಕಡೆಗೆ ಅವರ ಸ್ಥಾನವನ್ನು ಪುನಃ ಚುನಾವಣೆಗೆ ಹಾಕಿತು. ಯಾಕಂದರೆ, ಕೌನ್ಸಿಲಿನ ಎರಡು ಅಧಿವೇಶನಗಳಾದರೂ ಮೆಂಬರರು ಗೈರ್ಹಾಜರಾಗಿದ್ದದರಿಂದ ಅವರು ತಮ್ಮ ಸ್ಥಾನವನ್ನು ಕಳಕೊಂಡಿರುವರಾಗಿ ಸರಕಾರವು ತಿಳಿಸಿತು. ಸರಕಾರವು ಇದರಲ್ಲಿ ತನ್ನ ಕುಟಿಲ ಹೇತುವನ್ನು ಸಾಧಿಸಿಕೊಳ್ಳಬೇಕೆಂದು ನೆನೆಸಿತ್ತು. ಆದರೆ ದೈವ ಇಚ್ಛೆಯು ಅದಕ್ಕೆ ಅನುಕೂಲವಾಗಿಲ್ಲ. ಇತರ ಯಾರಾದರು ಸ್ವತಂತ್ರ ಅಥವಾ ಸಪ್ರೆತಂಡದವರು ಅವರ ಸ್ಥಾನಕ್ಕೆ ನಿಂತಾರೆಂದು ಸರಕಾರದ ಮನಸ್ಸಿನಲ್ಲಿ ಪ್ರಾಯಶಃ ಇದ್ದಿರಬಹುದು. ಆದರೆ ದೇಶಬಂಧು ದಾಸರು ಇದನ್ನೆಲ್ಲ ಅರಿತು ಕೈದಿನಲ್ಲಿರುವ ಗೃಹಸ್ಥರ ಹೆಸರನ್ನೆ ಚುನಾವಣೆಗೆ ಕೊಟ್ಟರು. ಅನಂತರ ಅವರು ಒಂದು ವಿನಂತಿಯನ್ನು ಹೊರಡಿಸಿ ಅದರಲ್ಲಿ ಜನರಿಗೆ ಸರಕಾರದ ಅಂತರ್ಹೇತುವನ್ನೆಲ್ಲ ತಿಳಿಪಡಿಸಿ ಸ್ವರಾಜ್ಯಪಾರ್ಟಿಯಿಂದ ನಿಯುಕ್ತರಾದವರನ್ನೆ ಚುನಾಯಿಸಬೇಕೆಂದು ಜಾಗ್ರತೆ ಕೊಟ್ಟಿದ್ದರು. ಅಷ್ಟೆ ಅಲ್ಲ "ಸರಕಾರವು ಅನ್ಯಾಯವಾಗಿ ವಿಚಾರಣೆಯನ್ನು ಕೂಡ ನಡಿಸದೆ ಕೌನ್ಸಿಲ ಮೆಂಬರರಂಥ ದೊಡ್ಡ ಗೃಹಸ್ಥರನ್ನೂ ಕಾರಾಗ್ರಹದಲ್ಲಿ ಇಟ್ಟಿಯದೆ. ಸರಕಾರದ ಅನ್ಯಾಯದ ಕೃತ್ಯವು ನಿಮಗೆ ನಿಜವಾಗಿ ಅವಮಾನಪವೆಂದು ಕಂಡು ಬಂದಿದ್ದರೆ ಇನ್ನು ಯಾರೂ ಗೃಹಸ್ಥರು ಉಮೇದ್ವಾರರ ಸ್ಥಾನಕ್ಕೆ ಬರಬಾರದೆಂದು" ದೇಶ ಬಂಧುಗಳು ಸೂಚಿಸಿದ್ದರು. ಅವರ ಹೇಳಿಕೆಯಂತೆಯೆ ಬಾಬು ಸತ್ಯೇಂದ್ರರು ತಿರುಗಿ ಚುನಾಯಿಸಿ ಬಂದಿದ್ದಾರೆ. ಅವರ ಎದುರಾಗಿ ನಿಂತ ಗೃಹಸ್ಥರು ದಾಸರ ಹೇಳಿಕೆಗೆ ತಲೆ ಒಗ್ಗಿಸಿ ತಮ್ಮ ಹೆಸರನ್ನು ಹಿಂತೆಗೆದುಕೊಂಡಿರುವರು. ಅದ್ದರಿಂದ ಸತ್ಯೇಂದ್ರ ಬಾಬುಗಳ ಚುನಾವಣೆಯು ಎದುರಿಲ್ಲದೆ ಪಾರಾಯಿತು. ಮತ್ತೊಬ್ಬರ ಸ್ಥಾನವು ಏನಾಯಿತೆಂದು ಇನ್ನೂ ಗೊತ್ತಿಲ್ಲ. ಮೇಲಿನ ಸಂಗತಿಯಿಂದ ಒಂದು ವಿಷಯವು ಮಾತ್ರ ನಿಷ್ಪನ್ನವಾಗುತ್ತದೆ. ಸರಕಾರದ ಕರ್ತವ್ಯವು ಬಹು ಅನ್ಯಾಯವಾಗಿದೆಂದು ಜನರೆಲ್ಲರೂ ಅರಿತಿರುವರು. ಅದರ ನ್ಯಾಯಾನ್ಯಾಯವನ್ನು ಕೂಡ ಅರಿಯುವರು ಆಹ್ವಾಹನ ಮಾಡಿದ್ದಾರೆ. ಇನ್ನು ಯಾವ ಕುಟಿಲ ಉಪಾಯವನ್ನು ಸರಕಾರವು ನಡಿಸುತ್ತವೆಂದು ನೋಡಬೇಕಾಗಿದೆ.

೩. ಬಂಗಾಲ ಓರ್ಡಿನೆನ್ಸ ಕಾಯಿದೆಗೆ ಅಲ್ಲಿಯ ಸರಕಾರವು ಇನ್ನು ಅನೇಕ ಉಪಸೂಚನೆ ಕೂಡಿಸಿ ಅದಕ್ಕೆ ಇನ್ನಷ್ಟು ವಿಕೃತ ರೂಪವನ್ನು ಕೊಟ್ಟಿರುವದು. ಈ ಸೂಚನೆಯ ಮೇರೆಗೆ ಕೈದಿಯು ತನ್ನ ಕಡೆಯಿಂದ ವಕೀಲನನ್ನು ಕೂಡ ಕೊಡಲಿಕ್ಕೆ ಸಾಧ್ಯವಿಲ್ಲ. ಅಷ್ಟೆ ಅಲ್ಲ ಸರಕಾರದ ತರ್ಫಿಯಿಂದ ಕೊಟ್ಟ ಸಾಕ್ಷಿದಾರರನ್ನು ಇತರ ಕೈದಿಗಳಂತೆ ಫೇರ ಪರೀಕ್ಷೆಮಾಡಲು ಕೂಡ ಉಪಾಯವಿಲ್ಲವಾಗಿದೆ. ಒಂದೆ ಮಾತಿನಿಂದ ಹೇಳಬೇಕಾದರೆ ಮೊದಲಿನ ರಾಕ್ಷಸೀ ಕಾಯಿದೆಯಲ್ಲಿ ಭೂತ ಪ್ರವೇಶವಾದಂತಾಗಿದೆ. ಆದರೆ ಇಂಥ ಕೃತ್ಯಗಳಿಂದ ಲೋಕದೃಷ್ಟಿ ಇನ್ನಷ್ಟು ದೂಷಿತ ಹೊಂದಿ ಸರಕಾರವು ಅಪ್ರೀತಿಗೆ ಪಾತ್ರವಾದೀತು. ಮತ್ತು ಇಂಥ ಜನತೆಯ ಅಪ್ರೀತಿಯು ಕಟ್ಟಕಡೆಗೆ ಭಯಂಕರ ರೂಪದಲ್ಲಿ ಪರಿಣಮಿಸುತ್ತದೆಂಬ ಸಂಗತಿಯು ಇತಿಹಾಸ ಪ್ರಸಿದ್ಧವೆ ಸರಿ. ಅದ್ದರಿಂದ ಸರಕಾರವು ಮೊದಲಾಗಿಯೆ ಸ್ಮೃತಿಯನ್ನು ಹೊಂದುವುದು ಉಚಿತವು.

೪. ಪಾಲಘಾಟಿನ ಕೋರ್ಟಿನಲ್ಲಿ ಒಂದು ಮನೋರಂಜಕವಾದ ವ್ಯವಹಾರವು ನಡೆಯಿತು. ಅದರ ಸಂಕ್ಷೇಪ ವೃತ್ತಾಂತವು ಮುಂದಿನಂತಿದೆ. ಪಾಲಘಾಟಿನ ಕೊಂಗ್ರೆಸ್ ಸೆಕ್ರೆಟರಿಗಳಾದ ಒಬ್ಬ ಐಯ್ಯರರು ಅಲ್ಲಿಯ ೪-೬ ವೈದಿಕ ಬ್ರಾಹ್ಮಣರ ಮೇಲೆ ಮಾನನಷ್ಟದ ದಾವೆಯನ್ನು ಮಾಡಿದ್ದರು. ಈ ಸೆಕ್ರೆಟರಿಗಳು ಕೊಂಗ್ರೆಸವಾಲರಾದ್ದರಿಂದ ಅಸ್ಪೃಶ್ಯರನ್ನು ಮುಟ್ಟುತ್ತಿದ್ದರು. ಅವರು ಪ್ರವೇಶಿಸಕೂಡದೆಂಥ ಬ್ರಾಹ್ಮಣ ಕೇರಿಯಲ್ಲಿ ಅವರು ಬರಬಹುದೆಂಬುದಾಗಿ ಅವರಿಗೆ ಉಪದೇಶವನ್ನೂ ಉತ್ತೇಜನವನ್ನೂ ಕೊಡುತ್ತಿದ್ದರು. ಈ ಎಲ್ಲ ಕಾರಣಗಳಿಂದ ಈ ಕೊಂಗ್ರೆಸ್ ಸೆಕ್ರೆಟರಿಗಳು ಸಂಪ್ರದಾಯವಾದಿಗಳ ಅಪ್ರೀತಿಗೆ ಪಾತ್ರರಾಗಿದ್ದರು. ಸೆಕ್ರೆಟರಿಗಳ ಮನೆಯಲ್ಲಿ ಒಂದು ವೈದಿಕ ಶ್ರಾದ್ಧವು ಆಯಿತು, ಅದಕ್ಕೆ ಅವರು ೫-೬ ಬ್ರಾಹ್ಮಣರನ್ನು ಆಮಂತ್ರಿಸಿದರು. ಯಾರೂ ಬರಲಿಲ್ಲ. ಆಗ ಆ ಬ್ರಾಹ್ಮಣರ ಮೇಲೆ ತನ್ನನ್ನು ಸಾಮಾಜಿಕ ಬಹಿಷ್ಕಾರಕ್ಕೆ ಒಳಪಡಿಸಿದ್ದಕ್ಕಾಗಿ ಕೋರ್ಟಿನಲ್ಲಿ ದಾವೆಯನ್ನು ಮಾಡಿದರು. ದಾವೆಯಲ್ಲಿ ಐಯರರಿಗೆ ಎಂದರೆ ವಾದಿಗೆ ಅವಗುಣವಾಯಿತು. ನ್ಯಾಯಸ್ಥಾನದಲ್ಲಿ ಇಂಗ್ಲಿಷ್‌ಮನ್ ಅಧಿಕಾರಿ ಇದ್ದನು. ಸಾಮಾಜಿಕರಿಗೆ ತಮ್ಮ ತಮ್ಮ ಪ್ರಾಚೀನ ಮತಾನುರೂಪವಾಗಿ ನಡಕೊಳ್ಳಲು ಮತ್ತು ಆ ರೀತಿಯಿಂದ ನಡಕೊಳ್ಳುವುದಿಲ್ಲವೆಂದು ಯಾರ ಬಗ್ಗೆ ಕಂಡುಬಂದಿದೆಯೊ ಅಂಥವರನ್ನು ಬಹಿಷ್ಕರಿಸಲು ಹಕ್ಕು ಇದೆ, ಇದು ಮಾನನಷ್ಟವಾಗುವುದಿಲ್ಲವೆಂದು ನ್ಯಾಯಸ್ಥಾನದಿಂದ ತೀರ್ಮಾನವು ಕೊಡಲ್ಪಟ್ಟಿದೆ. ಇರಲಿ, ಕೊಂಗ್ರೆಸ್‌ವಾಲರಾಗಿ ಸಾಮಾಜಿಕ ಕಲಹಗಳನ್ನು ಮೂರನೆಯ ಪಕ್ಷವಾದ ಸರಕಾರಿ ಕೋರ್ಟಿನಲ್ಲಿ ಕೊಂಡು ಹೋದದ್ದು ಅಯ್ಯರರಿಗೆ ನಿಜವಾಗಿ ಲಾಂಛನಾಸ್ಪದವಾದ ವಿಷಯವಾಗಿದೆ. ಸರಕಾರಿ ಅಧಿಕಾರದ ಮುಖಾಂತರವಾಗಿ ಸಮಾಜದಲ್ಲಿ ಅಥವಾ ಧರ್ಮದಲ್ಲಿ ಸುಧಾರಣೆಯನ್ನು ಸಾಧಿಸಲು ಯತ್ನಿಸುವುದು ಮತ್ತು ಅದು ಕೂಡ ಪರಕೀಯ ಸರಕಾರದ ಆಳಿಕೆಯಲ್ಲಿ ಯತ್ನಿಸುವುದು ಕೇವಲ ಅಪ್ರಬುದ್ಧತನವೆ ಸರಿ. ಇಂಥ ದೋಷಕ್ಕೆ ಪಾಲಘಾಟಿನ ಕೊಂಗ್ರೆಸ್ ಸೆಕ್ರೆಟರಿಗಳು ತನ್ನನ್ನು ಪಾತ್ರಮಾಡಿಕೊಂಡಬಗ್ಗೆ ನಮಗೆ ತುಂಬಾ ವ್ಯಸನವಾಗದೆ ಇರುವುದಿಲ್ಲ.

ಮಂಗಳೂರು.

ಇಲ್ಲಿಗೆ ಸಾಯಂಕಾಲದಲ್ಲಿ ಒಂದು ದಿವಸವಾದರೂ ಮೈಲು ಬಂಡಿಯು ಕ್ಲಪ್ತ ಸಮಯಕ್ಕೆ ಬಂದು ತಲ್ಪುವದಿಲ್ಲ. ಬೆಳಗಲೂ ಹೀಗೆ ಕ್ಲಪ್ತ ಕಾಲದಲ್ಲಿ ಬಂದು ತಲ್ಪದೆ ಇದ್ದದರಿಂದ ಟಪ್ಪಾಲು ಬಟವಾಡೆಯಲ್ಲಿ ವಿಳಂಬವುಂಟಾಗಿ ಇದರಿಂದ ಹೆಚ್ಚಿನ ಅಡಚಣೆಗಳು ಉಂಟಾಗುತ್ತವೆ. ಈ ಅಡಚಣೆಯ ನಿವಾರಣೆಗಾಗಿ ಜಿಲ್ಲಾ ಕಲೆಕ್ಟರ ದೊರೆಗಳವರು ರೈಲ್ವೆ ಅಧಿಕಾರಿಗಳಿಗೆ ಬರೆದಿರುತ್ತಾರೆ. ವಿಶೇಷ ವ್ಯಾಪಾರ ವ್ಯವಹಾರಗಳನ್ನು ನಡಿಸುತ್ತಿರುವ ಇಲ್ಲಿಯ ಸಾಹುಕಾರರೂ ಇತರರೂ ಈ ವಿಷಯ ರೈಲ್ವೆ ಅಧಿಕಾರಿಗಳಿಗೆ ಬರೆಯುವುದು ಅಗತ್ಯವಾಗಿರುವುದು.

ಕಳೆದ ತಿಂಗಳ ತಾ. ೨೮ರಲ್ಲಿ ಇಲ್ಲಿಯ ಎಡ್ವಾನ್ಸ್‌ಮೆಂಟ ಎಸೋಸಿಯೇಶನಿನ ವಾರ್ಷಿಕ ಸಭೆಯು ಸೇರಿತ್ತು. ವಸ್ತುಪ್ರದರ್ಶನವನ್ನು ಈ ವರುಷ ಜರಗಿಸುವದು ಬೇಡ ಎಂತ ನಿರ್ಧರಿಸಿರುವರು. ಮೊದಲಿನ ಎಸೋಸಿಯೇಶನಿನ ಅಧಿಕಾರಿಗಳನ್ನು ಪುನಃ ಆರಿಸಿಟ್ಟಿರುತ್ತಾರೆ. ಜಿಲ್ಲಾ ಕಲೆಕ್ಟರ ದೊರೆಗಳವರು ಈ ಸಭೆಯಲ್ಲಿ ಹಾಜರಿರಲಿಲ್ಲ.

The Calicut Bank, Ltd.,
ದಿ ಕೆಲಿಕಟ್ ಬೇಂಕ್, ಲಿಮಿಟೆಡ್,
ಹೆಡ್ ಆಫೀಸು — ಕಲ್ಲಿಕೋಟೆ.
ಬ್ರಾಂಚುಗಳು: — ಮುಲ್ಲಪ್‌ಚೇರಿ, ತಲಚೇರಿ, ಕೊಚ್ಚಿ ಮತ್ತು ಪಾಲ್ಘಾಟು.
ರಿಜಿಸ್ಟರ್ಡ್ ಮತ್ತು ಅಧಿಕಾರಗೊಳಿಸಲ್ಪಟ್ಟ ಮೂಲಧನ ರೂ. 5,00,000—0—0.
ರೂಪಾಯಿ 10ರ 50,000 ಪಾಲುಗಳು.
(30—8—1924)ರ ವರೆಗೆ ಮೌಲ್ಯ ಮೂಲಧನ ರೂಪಾಯಿ 1,81,850—0—0.
ಒಂದು ವರುಷದ ಕಾಯಂ ಠೇವಣಾತಿಗೆ ಬಡ್ಡಿ ದರ ಸೇಕಡಾ ರೂ. 7—8—0.
ಕಳೆದ 4 ವರುಷಗಳಲ್ಲಿ ಪಾಲುಗಾರರಿಗೆ ಸೇಕಡಾ 12ರಂತೆ ಬಡ್ಡಿ ಹಂಚಿದೆ.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.
ಸಿ. ಕೃಷ್ಣನ್, ಬಿ. ಎ. ಬಿ. ಎಲ್.,
ಮೆನೇಜಿಂಗ್ ಡ್ಯಾರೆಕ್ಟರ್.
ಡ್ಯಾರೆಕ್ಟರರಲ್ಲಿ ಒಬ್ಬರು —
ಎಮ್. ನಾರಾಯಣ, ಕಾಮತ್, ಬಿ. ಎ.,
ಪ್ಲೀಡರ್, ಕುಂದಾಪುರ.

ನ್ಯಾಯವಿಧಾಯಕ ಸಭೆಗೆ ಅಬ್ರಾಹ್ಮಣ ಮೆಂಬರರೊಬ್ಬರನ್ನು ಆರಿಸಲು ನಡೆದ ಚುನಾವಣೆಯಲ್ಲಿ ರಾವ್ ಸಾಹೇಬ ರಾ| ಮಹಾಬಲ ಹೆಗಡೆಯವರಿಗೆ ೧೩೮೫, ರಾ| ಅತ್ತಾವರ ಬಾಲಕೃಷ್ಣ ಸೆಟ್ರಿಗೆ ೩೪೫೮, ಶ್ರೀ ಧರ್ಮಸ್ಥಳದ ಮಂಜಯ್ಯ ಹೆಗ್ಗಡರಿಗೆ ೪೬೩೭ ವೋಟುಗಳು ಸಿಕ್ಕಿದ್ದರಿಂದ ರಾ| ಮಂಜಯ್ಯ ಹೆಗ್ಗಡರೇ ಮೆಂಬರರಾಗಿ ಚುನಾಯಿಸಲ್ಪಟ್ಟಿರುತ್ತಾರೆ.

ರಿಲಿಜಿಯಸ್ ಎಂಡೌಮೆಂಟ ಆಕ್ಟು ಪ್ರಕಾರ ನೇಮಿಸಿದ ಟ್ರಸ್ಟ ಬೋರ್ಡಿನ ಮೆಂಬರರು ಮಠ ಸಂಬಂಧವಾದ ಸಂಸ್ಥೆಗಳಿರುವ ಆಯಾ ಪ್ರಾಂತ್ಯಗಳನ್ನು ಪ್ರತ್ಯೇಕಿಸಿಕೊಂಡು ಪ್ರತಿಯೊಬ್ಬರು ತಂತಮಗೆ ಪ್ರತ್ಯೇಕಿಸಲ್ಪಟ್ಟ ಪ್ರಾಂತ್ಯಗಳಿಗೆ ಇನ್ನು ಸದ್ಯದಲ್ಲಿ ಸರ್ಕೀಟು ಬೆಳಿಸುವರು. ಮಲಬಾರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿಗೆ ಬೋರ್ಡಿನ ಅಧ್ಯಕ್ಷರಾದ ಸರ್. ಟಿ. ಸದಾಶಿವ ಅಯ್ಯರರೇ ಬರುವರು.

ಉಡುಪಿಯ ಡಿಸ್ಟ್ರಿಕ್ಟ ಮುನ್ಸಿಫರಾಗಿರುವ ಮ| ರಾ| ರಾ| ವಿ. ಕುಂಜರಾಮನ್ನಾಯರಿಗೆ ಉಡುಪಿಯಿಂದ ತಲ್ಲಿಪರಂಬಕ್ಕೆ ವರ್ಗವಾಗಿದೆ. ಉಡುಪಿಗೆ ಡಿಸ್ಟ್ರಿಕ್ಟ ಮುನ್ಸಿಫರಾಗಿ ಮ| ರಾ| ರಾ| ಸಿ. ಆರ್. ಕೃಷ್ಣರಾಯರು ವರ್ಗಾಯಿಸಲ್ಪಟ್ಟಿರುವರು.

ತಲಚೇರಿಯಲ್ಲಿ ಡಿಸ್ಟ್ರಿಕ್ಟ ಮುನ್ಸಿಫರಾಗಿರುವ ಮ| ರಾ| ರಾ| ಬಿ. ವೆಂಕಟ್ರಾಯರಿಗೆ ತಲಚೇರಿಯಿಂದ ಪಾಲ್ಘಾಟಿಗೆ ವರ್ಗವಾಗಿರುವದು.

ಮದ್ರಾಸಿನ ಮೆಡಿಕಲ್ ಕೊಲೇಜಿನಲ್ಲಿ ಸರ್ಜರಿಯ ಅಸಿಸ್ಟಾಂಟ ಪ್ರೊಫೆಸರರಾಗಿರುವ ಡಾಕ್ಟರ್ ಎಮ್. ಗೋಪಾಲಕಿಣಿಯವರಿಗೆ ಅವರ ಹುದ್ದೆಯು ಕಾಯಂಪಡಿಸಿರುವದು.

ತಂಜಾವೂರಿನಲ್ಲಿ ಅಸಿಸ್ಟಾಂಟ ಸರ್ಜನರಾಗಿರುವ ಡಾಕ್ಟರ್ ಎಮ್. ಎ. ಕಾಮತರಿಗೆ ಮೂರು ತಿಂಗಳ ರಜೆಯು ಸಿಕ್ಕಿದೆ.

ಆಯಾ ಕ್ಲಾಸುಗಳಲ್ಲಿ ಸಂಚರಿಸುವ ರೈಲ್ವೆ ಪ್ರಯಾಣಿಕರು.

ಹಿಂದುಸ್ಥಾನದ ಜನಸಂಖ್ಯೆಯು ೩೦೦ ಮಿಲಿಯಕ್ಕೆ ಮಿಕ್ಕಿದೆ. ೧೯೨೩-೨೪ನೇ ವರುಷದಲ್ಲಿ ಈ ದೇಶದಲ್ಲಿ ಸಂಚರಿಸಿದ ಪ್ರಯಾಣಿಕ ಸಂಖ್ಯೆಯು ಆಯಾ ಕ್ಲಾಸುಗಳಲ್ಲಿ ಈ ರೀತಿಯಾಗಿತ್ತು:—

Iನೇ ಕ್ಲಾಸು	೯೧೬,೭೦೦
IIನೇ ಕ್ಲಾಸು	೫,೧೩೨,೮೦೦
ಇಂಟರ್ ಕ್ಲಾಸು	೮,೧೨೮,೯೦೦
IIIನೇ ಕ್ಲಾಸು	೫೦೨,೮೫೧,೧೦೦
ಸಿಸನ್ ಟಿಕೇಟು ಇತ್ಯಾದಿ	೫೫,೬೬೪,೯೦೦
	೫೭೧,೬೯೫,೪೦೦.

• • • • •

ಕಾಫಿ ವ್ಯವಸಾಯ ಮತ್ತು ವ್ಯಾಪಾರವು ಮೈಸೂರು ದೇಶದಲ್ಲಿ ಮುಖ್ಯವಾದ್ದೆಂದು ಹೇಳಬೇಕು. ಸಾಧಾರಣವಾಗಿ ಕಾಫಿಯು ಘಟ್ಟದ ಸೀಮೆಯಾದ ಕಡೂರು ಮತ್ತು ಹಾಸನ ಜಿಲ್ಲೆಗಳಲ್ಲೇ ಬೆಳೆಯುತ್ತದೆ. ಸುಮಾರು ೧,೦೮,೦೦೦ ಎಕರೆಗಳಷ್ಟು ಭೂಮಿಯಲ್ಲಿ ಕಾಫಿ ವ್ಯವಸಾಯವು ನಡೆಯುತ್ತದೆ. ಪ್ರತಿ ವರುಷವೂ ಸರಿ ಸುಮಾರು ೧೦-೧೨ ಸಾವಿರ ಟನ್ನುಗಳ ಕಾಫಿಯು ಬೆಳೆಯುತ್ತದೆ. ಇದರ ಬೆಲೆಯು ಸರಾಸರಿ ೧ ಕೋಟಿ ಪೌಂಡುಗಳಾಗುತ್ತದೆಯೆಂದು ಹೇಳಬಹುದು. ಕಾಫಿ ಬೀಜವು ಮಂಗಳೂರಿನ ಮುಖಾಂತರ ಇಂಗ್ಲೆಂಡಿಗೂ, ಕಾಫೀ ಪುಡಿಯ ರೂಪದಲ್ಲಿ ಯುರೋಪಿನ ಗಿರಾಕಿಗಳಿಗೂ ಹೋಗುತ್ತದೆ. ಮೈಸೂರು ಕಾಫಿಯು ಅರೇಬಿಯ ಕಾಫಿಯಷ್ಟೇ ಉತ್ತಮವಾಗಿದೆ.

• • • • •

೧. ಶುಂಠಿಯ ಉತ್ಪತ್ತಿ ಸ್ಥಾನವು ಏಶಿಯಾ ಖಂಡ. ಪ್ರಾಚೀನ ಕಾಲದಿಂದ ಈ ದೇಶದಲ್ಲಿ ಶುಂಠಿಯ ಬೇಸಾಯವು ನಡಿಯುತ್ತಲಿದೆ. ಆಯುರ್ವೇದ್ಯದಲ್ಲಿ ಶುಂಠಿಯ ಉಪಯೋಗವು ವಿಶೇಷವಾಗಿ ಹೇಳಲ್ಪಟ್ಟಿದೆ. ಶುಂಠಿಯು ಚೀನ ದೇಶದಲ್ಲಿ ಬಹು ದೊಡ್ಡ ಪ್ರಮಾಣದಿಂದ ಬೆಳೆಯುತ್ತಿದೆ. ಹಿಂದುಸ್ಥಾನವು ಶುಂಠಿಯ ಬೇಸಾಯದಲ್ಲಿ ಎರಡನೇ ನಂಬರವನ್ನು ಪಡೆದಿದೆ. ಹಿಂದುಸ್ಥಾನದ ಎಲ್ಲ ಭಾಗದಲ್ಲೂ ಶುಂಠಿ ಬೆಳೆಯುವುದು. ಕೊಚೀನದ ಶುಂಠಿಯು ಪ್ರಸಿದ್ಧವಾದದ್ದು. ಬಂಗಾಲದಲ್ಲಿ ರಂಗಪುರ, ಮಿದ್ನಾಪುರ, ಹುಗಳಿ ಜಿಲ್ಲೆಗಳಲ್ಲಿ ಶುಂಠಿಯ ಬೇಸಾಯವು ಚೆನ್ನಾಗಿ ನಡೆಯುತ್ತಿದೆ. ಮುಂಬಯಿ ಇಲಾಖೆಯ ಸುರತ ಠಾಣೆ ಜಿಲ್ಲೆಗಳಲ್ಲಿ ಚೆನ್ನಾಗಿ ಶುಂಠಿಯ ಬೆಳೆಬರುತ್ತದೆ

• • • • •

೨. ಸಮುದ್ರ ಸಪಾಟ ಪ್ರದೇಶದಲ್ಲೂ ಸಮುದ್ರ ಸಪಾಟಗಿಂತ ೫ ಸಾವಿರ ಫೂಟು ಎತ್ತರ ಪ್ರದೇಶದಲ್ಲೂ ಶುಂಠಿಯು ಚೆನ್ನಾಗಿ ಬೆಳೆಯುತ್ತಿದೆ. ಚೀನ ದೇಶದಲ್ಲಿ ವರ್ಷದಲ್ಲಿ ಎರಡು ಸಾರೆ ಶುಂಠಿಯ ಬೆಳೆ ತೆಗೆಯುತ್ತಿರುವರು. ಹಿಂದುಸ್ಥಾನದ ಶುಂಠಿಗಿಂತ ಜಮೇಕಾದ ಶುಂಠಿಯು ಉತ್ತಮವಾದದ್ದು. ೧೯೧೩-೧೪ರಲ್ಲಿ ಹಿಂದುಸ್ಥಾನದಿಂದ ೯೨ ಲಕ್ಷ ರತ್ತಲು ಶುಂಠಿಯು ಪರದೇಶಕ್ಕೆ ಹೋಯಿತು ಅದರ ಬೆಲೆ ೧೮ ಲಕ್ಷ ರೂಪಾಯಿ. ೧೯೨೨-೨೩ರಲ್ಲಿ ೫೮ ಲಕ್ಷ ರತ್ತಲು ಶುಂಠಿಯು ಪರದೇಶಕ್ಕೆ ಹೋಯಿತು. ಅದರ ಬೆಲೆ ೧೬ ಲಕ್ಷ ರೂಪಾಯಿ ಆಯಿತು. ಪರದೇಶದಿಂದ ಹಿಂದುಸ್ಥಾನಕ್ಕೆ ೨೦ ಲಕ್ಷ ರತ್ತಲು ಶುಂಠಿಯು ಬರುವುದು. ಈ ದೇಶದ ಶುಂಠಿಯು ಇಂಗ್ಲಂಡ, ಅಮೇರಿಕಾ, ಅರಬಸ್ಥಾನ, ತುರ್ಕಸ್ಥಾನ, ಸಿಲೋನ ದೇಶಗಳಿಗೆ ಹೋಗುವದು.

• • • • •

ಹಿಂದೂಸ್ಥಾನದ ಮತ್ತು ಜಪಾನದೇಶದ ಮಿಲಿಟರಿ ಖರ್ಚು.

೧೯೨೪-೨೫ನೇ ವರುಷದ ಹಿಂದೂಸ್ಥಾನ ಸರಕಾರದ ಬಜೇಟನ್ನು ಪರಿಶೀಲಿಸಿದರೆ ಆಯವು ೧೩೩ ಕೋಟಿ ೬೮ ಲಕ್ಷ ರೂಪಾಯಿಗಳೆಂತಲೂ ವ್ಯಯವು ೧೩೦ ಕೋಟಿ ೪೪ ಲಕ್ಷ ರೂಪಾಯಿಗಳೆಂತಲೂ ತೋರಿಬರುತ್ತದೆ. ಈ ಖರ್ಚಿನಲ್ಲಿ ಮಿಲಿಟರಿ ಖರ್ಚು ೫೬ ಕೋಟಿ ರೂಪಾಯಿಗಳದ್ದಾಗಿರುವುದು. ಗತವರುಷದಲ್ಲಿ ಹಿಂದೂಸ್ಥಾನದ ಈ ಖರ್ಚು ೫೬ ಕೋಟಿ ೪೩ ಲಕ್ಷ ರೂಪಾಯಿಗಳಾಗಿತ್ತು.

ಜಪಾನು ದೇಶದಲ್ಲಿ ೧೯೨೪-೨೫ರಲ್ಲಿ ೨೧೧ ಕೋಟಿ ೩೫ ಲಕ್ಷ ೮೧ ಸಾವಿರ ರೂಪಾಯಿಗಳಲ್ಲಿ ಆಯವಿತ್ತು. ಅಂದರೆ ಜಪಾನು ದೇಶದ ಉತ್ಪತ್ತಿಯು ಹಿಂದೂಸ್ಥಾನದ ಉತ್ಪತ್ತಿಕ್ಕಿಂತ ಒಂದೂವರೆ ಪಾಲಷ್ಟು ಅಧಿಕವಿದೆ. ಈ ಉತ್ಪತ್ತಿಯಲ್ಲಿ ೨೮ ಕೋಟಿ ೯೬ ಲಕ್ಷ ೬೯ ಸಾವಿರ ರೂಪಾಯಿಗಳ ಮೊಬಲಗು ಮಿಲಿಟರಿ ಖರ್ಚಿಗೆ ಸಂದಿರುವುದು. ಈ ಸಂಖ್ಯೆಗಳನ್ನು ಪರ್ಯಾಲೋಚಿಸಿ ನೋಡಿದಲ್ಲಿ ಜಪಾನಿನ ಉತ್ಪತ್ತಿಯು ಸೇಕಡಾ ೫೦ರಷ್ಟು ನಮ್ಮ ದೇಶದಕ್ಕಿಂತಲೂ ಹೆಚ್ಚಿದ್ದರೂ ಅದರ ಮಿಲಿಟರಿ ಖರ್ಚು ನಮ್ಮ ದೇಶದ ಸರಾಸರಿಕ್ಕಿಂತಲೂ ಬಹಳ ಕಡಿಮೆಯಿರುವುದು. ಇಷ್ಟು ಕಡಿಮೆ ಖರ್ಚಿನಲ್ಲಿ ಬಲವಾದಂಥಾ ನೌಕಾ ಸೈನ್ಯ ಸಂಗ್ರಹವು ಸಹ ಜಪಾನದೇಶಕ್ಕಿರುವುದು. ಈ ರೀತಿ ಮಿಲಿಟರಿ ಖರ್ಚಿನಿಂದ ಜಪಾನು ಭೂಲೋಕದ ಸಮರ್ಥವಾದ ರಾಜ್ಯಗಳಲ್ಲಿ ಒಂದಾಗಿ ಇತರ ರಾಜ್ಯಗಳೊಡನೆ ಸ್ವತಂತ್ರ ರಾಜ್ಯವಾಗಿರುವುದಲ್ಲದೆ ಇತರ ಸಾಮ್ರಾಜ್ಯಗಳ ಅಭಿಮಾನಕ್ಕೆ ಸಂಪೂರ್ಣ ಪಾತ್ರವಾಗಿರುವುದು.

ಹಿಂದೂಸ್ಥಾನವು ಸರಾಸರಿ ಮೇಲೆ ಜಪಾನ ದೇಶಕ್ಕಿಂತ ಮಿಲಿಟರಿ ಖರ್ಚನ್ನು ಅಧಿಕವಾಗಿ ಮಾಡುತ್ತದಾದರೂ ಭೂಸೈನ್ಯವಲ್ಲದೆ ಹಿಂದೂಸ್ಥಾನಕ್ಕೆ ಸಂಬಂಧವುಳ್ಳ ನೌಕಾಸೇನೆ ಸಾಹಿತ್ಯಗಳು ಇರುವುದಿಲ್ಲ. ನೌಕಾಸೇನೆಯು ಬಗ್ಗೆ ಸಂಪೂರ್ಣವಾಗಿ ಹಿಂದೂಸ್ಥಾನವು ಅಂಗ್ಲಾಂಡದ ಮೇಲೆ ಹೊಂದಿಕೊಂಡಿರಬೇಕು. ಸ್ವತಂತ್ರ ರಾಜ್ಯಗಳ ಮತ್ತು ಅಧೀನ ರಾಜ್ಯಗಳ ವ್ಯತ್ಯಂತರವು ಎಷ್ಟೆಂಬುದು ಇಂಥಾ ದೃಷ್ಟಾಂತಗಳಿಂದ ವ್ಯಕ್ತವಾಗುವುದು.

• • • • •

ಫೋರ್ಡ ಮೋಟರ ಕಂಪೆನಿಯ ಮಾಲಿಕರಿಗೆ ೧೯೨೪ ಇಸವಿಯ ವರುಷದ ಬಾಬತು ೨ ಕೋಟಿ ೧ ಲಕ್ಷ ಪವನು ಮುನಾಫೆಯಾಗಿದೆ.

ಪತ್ರವ್ಯವಹಾರ.

ಪತ್ರಾಧಿಪರೇ,

ತಾಲೂಕು ಬೋರ್ಡು ಚುನಾವಣೆಗಳು ಮುಗಿದರೂ ಈ ಚುನಾವಣೆಗಳ ವಾಸನೆಯು ಇನ್ನೂ ಇದೆ. ಸ್ವರಾಜ್ಯಪಾರ್ಟಿ, ಅಸಹಕಾರ, ಇನ್ನು ನಾನಾ ತರದ ಹೆಸರುಗಳ ಅಡಂಬರವು ಈ ಊರಲ್ಲಿರುವದಾದರೂ ಚುನಾವಣೆಗಳ ವಾಸನೆಯು ತೀರಲಿಲ್ಲ. ರಾ। ಪದ್ಮ ಬಲ್ಲಾಳರು ತಮ್ಮ ಮೆಂಬರುತನಕ್ಕೆ ರಾಜೀನಾಮೆ ಕೊಟ್ಟಿರುವರಂತೆ, ಹಾಗೆಯೇ ಆರಿಸಲ್ಪಟ್ಟ ಪ್ರೆಸಿಡೆಂಟರೂ ರಾಜೀನಾಮೆ ಕೊಟ್ಟಿರುವರಾಗಿ ವರ್ತಮಾನ. ಈ ರಾಜೀಗಳ ಸಂಗತಿ ಹ್ಯಾಗಿದ್ದರೂ ಪ್ರೆಸಿಡೆಂಟ ಸ್ಥಾನಕ್ಕೂ ಮತ್ತು ಮೆಂಬರ ಸ್ಥಾನಕ್ಕೂ ಪೋಟಾಪೋಟಿಯು ಈಗಲೆ ನಡಿಯಲು ಪ್ರಾರಂಭವಾಗಿರುವದು. ಪೋಟಾಪೋಟಿಯು ಯಾವುದರಲ್ಲಿಯೂ ಬೇಕು. ಆದರೆ ಇಲ್ಲಿ ಮಾತ್ರ ಈ ಸ್ಪರ್ಧೆಯ ಸ್ವಭಾವವು ದುಷ್ಟವಾಗಿದೆ. ಜಾತಿ-ಜಾತಿ-ಜಾತಿ! ಯಾವುದರಲ್ಲಿಯೂ ಜಾತಿ! ಜಾತಿಗಳ ಹೆಸರನ್ನು ಹೇಳುವುದರಿಂದ ಪ್ರಯೋಜನವಿಲ್ಲ. ಚುನಾವಣೆಯ ಪರಿಯಂತ ಅತಿ ಆಪ್ತರಾಗಿರುವಂಥವರು ಈಗ ಕಡು ಶತ್ರುಗಳು. ಯಾವ ದೆಸೆಯಿಂದ ಇಂಥಾ ಭಾವನೆಗಳು ಉತ್ಪಾದಿತವಾಗುವವೋ ತಿಳಿಯದು. ಇಷ್ಟು ವರೆಗೆ ತಾಲೂಕು ಬೋರ್ಡು ಮೆಂಬರರಾಗಿ ಮಾಡಿದ ಪ್ರಜಾಸೇವೆಯ ರಾಶಿಯನ್ನೂ, ಅಂಥಾ ರಾಶಿಯು ದೃಗ್ಗೋಚರವಾಗುವದು ಕಷ್ಟವಾದ್ದರಿಂದ, ಊಹನಾಬಲದಿಂದಲಾದರೂ ಗ್ರಹಿಸಿಕೊಂಡು ಈ ಚುನಾವಣೆಯ ವಾಸನೆಯಾದರೂ ಬೇಕೇಬೇಕೆಂದು ಹೇಳುವವೆಂದರೂ ಅಂಥಾ ಪ್ರಜಾಸೇವೆಯು ಊಹನೆಗೆ ಸಹ ಬಾರದು. ನಿಷ್ಠುರದ ಗಂಟು ಮಾತ್ರ ದೊಡ್ಡದಾಗುತ್ತ ಬಂದಿದೆ.

ಇನ್ನು ಸ್ವರಾಜ್ಯಪಾರ್ಟಿಯ ಸ್ಥಾಪನೆಗೆ ಕೆಲವರು ಸೊಂಟಕಟ್ಟಿದ್ದಾರೆ. ಮಂಗಳೂರಿನಿಂದ ಈ ಪಾರ್ಟಿಯವರ ತುತೂರಿನಾದವು ರಾವ್‌ಸಾಹೇಬ್ ಡಾಕ್ಟರ್ ಯು. ರಾಮರಾಯರ ಆಗಮನದ ನಂತರ ಮಂಗಳೂರಿನಿಂದ ಕೇಳಿಸುತ್ತಿರುವದು. ಈ ತುತೂರಿ ಧ್ವನಿಯಲ್ಲಿ ಈಗಲೆ ಅಪಸ್ವರಗಳು ಕೇಳಿಸುತ್ತಿವೆಯೆಂತ ಹಲವರಲ್ಲಿ ಅನುಮಾನವು ಉಂಟುಬಂದಿರುವುದು. ಒಂದು ಕಡೆ ಪತ್ರ ತುತೂರಿಗಳ ಮೂಲಕ ಸ್ವರಾಜ್ಯಪಾರ್ಟಿಯೆಂಬ ಹೆಸರನ್ನು ಜಾರಿಸಿಕೊಂಡು ಇನ್ನೊಂದು ಕಡೆಯಲ್ಲಿ ಜಿಲ್ಲೆಯ ಹುಟ್ಟು ಜಾತಿಗಳು ಒಂದಾಗಬೇಕು, ಇತರರಿಗೆ ಏನಿದೆ ಎಂದೆಂದುಕೊಂಡು ನ್ಯಾಯವಿಧಾಯಕ ಸಭೆಗಳ ಮೆಂಬರಿಕೆಗೆ ಈಗಲೆ ಪ್ರಯತ್ನಗಳ ಅಸ್ತಿವಾರವನ್ನು ಹಾಕುತ್ತಿರುವರೋ ಎಂಬ ಶಂಕೆಯು ಹಲವರಲ್ಲಿ ಮೂಡಿರುತ್ತದೆ ಹ್ಯಾಗೂ ಯಾವ ಪಾರ್ಟಿಯನ್ನಾದರೂ ಇಲ್ಲಿ ನೆಲೆಗೊಳಿಸಲು ಬಲವಾದ ಕಾರಣಗಳನ್ನು ಕೊಟ್ಟು ಅಂಥಾದೊಂದು ಪಾರ್ಟಿಯು ಇಲ್ಲದೆ ಇಲ್ಲಿ ಹಾಳಾಗಿ ಹೋಗುವ ಸಂದರ್ಭಗಳನ್ನು ತೋರಿಸಿಕೊಟ್ಟು ನಂತರ ಯಾವುದಾದರೂ ಪಾರ್ಟಿಯ ನಾಮೋಚ್ಚರಣೆಯನ್ನು ಮಾಡಿದರೆ ಸಾರ್ಥಕವಾಗುವುದು. ಅದರ ಮೊದಲು ಪಾರ್ಟಿಗಳೆಂದರೆ-ಜಾತಿ ಪಾರ್ಟಿಗಳು!

ಇನ್ನೊಂದು, ಉಡುಪಿಯ ಶಹರಿನಲ್ಲಿ ಮುನ್ಸಿಪಾಲಿಟಿ ಸ್ಥಾಪಿಸೋಣಾಗುವ ಒಂದು ಪ್ರಸ್ತಾಪವು ನಡಿಯುತ್ತಿರುವದು. ಎಷ್ಟೋ ಜನರು ಕೌನ್ಸಿಲರರಾಗಿ ನೇಮಿಸಲ್ಪಡಲಿಕ್ಕೂ ಮುನ್ಸಿಪಲ್ ಚೇಯರ್ಮೇನರಾಗಿ ನೇಮಕಹೊಂದಲಿಕ್ಕೂ ಹಲವು ನೌಕರರ ಕಾಲು ಹಿಡಿಯಲಿಕ್ಕೆ ಮಂಗಳೂರಿಗೆ ಬಹಳ ಸರ್ತಿ ಹೋಗಿ ಬಂದದ್ದಾಯಿತು. ಇಲ್ಲಿ ಮುನ್ಸಿಪಾಲಿಟಿ ಯಾಕೆ ಬೇಕೆಂಬುದನ್ನು ಸರಿಯಾಗಿ ಆಲೋಚಿಸುವಂಥಾ ಶಕ್ತಿಯು ಸಹ ಇಲ್ಲದೆ ಬರೆ ಪದವಿಗಳ ಪ್ರೇಮದಿಂದ ಅತ್ತಿತ್ತ ಕುಣಿದಾಡುತ್ತಿರುವವರನ್ನು ನೋಡಿದರೆ ಎಂಥವನಿಗಾದರೂ ನಗೆ ಬಾರದೆ ಇರದು. ಆದರೆ ಕೆಲವು ಮುನ್ಸಿಪಾಲಿಟಿಗಳ ಆಡಳಿತೆಗಳ ಕ್ರಮವನ್ನು ಇಂಥವರು ನೋಡಿಕೊಂಡು ಅಂಥಾ ಕಡೆಗಳಲ್ಲಿ ಉಂಟಾಗುತ್ತಿರುವ ಲಾಭದೃಷ್ಟಿಯಿಂದ ಈ ಪದವಿಗಳ ಬಗ್ಗೆ ಕುಣಿದಾಡುತ್ತಾರೋ ಏನೋ?

ಪಟ್ಟಣದ ಆರೋಗ್ಯ ಸ್ಥಿತಿಯು ಚೆನ್ನಾಗಿಲ್ಲ. ಜ್ವರದ ಬಾಧೆಯು ಅಲ್ಲಲ್ಲಿರುವಾಗ ಇದರೊಂದಿಗೆ ಈಗ ಮೈಲಿಗೆಯೂ ಬಂದು ಬಿಟ್ಟಿದೆ. ಇತ್ತಿತ್ತಲಾಗೆ ಚುನಾಯಿಸಿಬಂದ ತಾಲೂಕು ಬೋರ್ಡು ಮೆಂಬರರು ಇಂಥಾ ಸಂದರ್ಭಗಳಲ್ಲಿ ತಾವು ಮಾಡಬೇಕಾದ ಕರ್ತವ್ಯಗಳನ್ನು ತಿಳಿದರೆ ಚುನಾವಣೆಯ ವಾಸನೆಯಾದರೂ ಸ್ವಲ್ಪ ಕಡಿಮೆಯಾಗಬಹುದು.

ಉಡುಪಿಯಲ್ಲಿರುವ ಸಹಕಾರದ ಲೇವಾದೇವಿ ಸಂಘಗಳಿಗೆ ಕಡಿಮೆಯಿಲ್ಲ. ಇವುಗಳ ನಂತರ ಕಂಪೆನಿ ಆಕ್ಟು ಪ್ರಕಾರ ರಜಿಸ್ತ್ರಿಯಾಗಿ ವ್ಯಪಾರಗಳನ್ನು ನಡಿಸುತ್ತಿರುವ ಎರಡು ದೊಡ್ಡ ಬೇಂಕುಗಳಿವೆ ಈಗ ಮೂರನೇ ಇನ್ನೊಂದು ಬೇಂಕು ಸ್ಥಾಪನೆಯಾಗುವದು ಭಂಡವಾಳ ಎರಡುಲಕ್ಷವಂತೆ. ಇನ್ನು ಬರೆಯತಕ್ಕ ಕೆಲವು ಸಾಮಾನ್ಯ ವಿಷಯಗಳಿವೆ. ಅವನ್ನು ಇನ್ನೊಮ್ಮೆ ಬರಕೊಳ್ಳುವೆನು.

ಉಡುಪಿ, ತಾ. ೨೬-೪-'೨೫.

ಡಿಸ್ಟ್ರಿಕ್ಟ ಬೋರ್ಡಿನವರನ್ನು ನಿದ್ರೆಯಿಂದ ಎಚ್ಚರಿಸುವದು ಹೇಗೆ?

ಅಯ್ಯಾ,

ತಾಲೂಕು ಬೋರ್ಡುಗಳು ಇತ್ಯಾದಿಗಳ ಮೆಂಬರರನ್ನು ಆರಿಸುವ ಬೊಬ್ಬಾಟವನ್ನು ನಡಿಸಿದ್ದನ್ನು ನೋಡಿದರೆ ಇನ್ನು ಸ್ವಲ್ಪದರಲ್ಲಿಯೇ ನಮಗೆ ಸ್ವರಾಜ್ಯ ಪ್ರಾಪ್ತಿಯಾಗುವದೆಂತ ನೆನಸಿದೆವು. ಆದರೆ ಊರಲ್ಲಿ ಎಂಥಾ ಬೊಬ್ಬೆಯಿದ್ದರೂ ಡಿಸ್ಟ್ರಿಕ್ಟ ಬೋರ್ಡನ್ನು ಎಚ್ಚರಿಸುವದು ಸಾಧ್ಯವಲ್ಲ. ಸ್ವರಾಜ್ಯ ಪ್ರಾಪ್ತಿಗೆ ಬ್ಯುರೋಕ್ರೆಟರು ಅಡ್ಡ ಬಂದು ನಿಲ್ಲುತ್ತಾರೆಂತ ಹೇಳಿ ಪ್ರಜೆಗಳ ಅಭಿಪ್ರಾಯಗಳನ್ನು ಮೂಲೆಗೊತ್ತುತ್ತಾರೆಂತ ಪತ್ರಗಳಲ್ಲಿ ಟೀಕೆಯು ಬರುತ್ತಿರುವಾಗ ಇಂಥಾ ಬ್ಯುರೋಕ್ರೆಟರಂತೆಯೇ ತಾವೂ ಮೆರೆಯುವೆವೆಂತ ಹಳ್ಳಿ ಜನರು ಯಾವ ರೀತಿ ಕೂಗಿದರೂ ನಮ್ಮ ಡಿಸ್ಟ್ರಿಕ್ಟ ಬೋರ್ಡಿನ ಬ್ಯುರೊಕ್ರೆಟರು ಕೇಳುವದಿಲ್ಲ. ಬಂಟವಾಳ ಬೆಳ್ತಂಗಡಿ-ಚಾರ್ಮಾಡಿ ರಸ್ತೆಯಲ್ಲಿ ಗಾಡಿಗಳು ಮುರಿದು ಬೀಳುತ್ತವೆ, ಹೋರಿಗಳ ಕುತ್ತಿಗೆ ಮುರಿಯುತ್ತದೆ, ಹಾದಿಯಲ್ಲಿ ಬಿದ್ದ ಹೊಂಡಗಳಿಗೆ ಲೆಕ್ಕವೇ ಇಲ್ಲ ಎಂತ ಎಷ್ಟು ಕೂಗಿದರೂ ರಸ್ತೆಗಳು ದುರುಸ್ತಿಯಾಗುವ ಸಮಯ, ಅಂದರೆ ಜೋರಿನಿಂದ ಮಳೆ ಬಂದು ರಸ್ತೆಯಲ್ಲಿ ಹಾಕಿದ ಮೆಟಲ್ ಇತ್ಯಾದಿಗಳು ತೇಲಿಹೋಗುವ ಸಮಯ, ರಸ್ತೆ ರಿಪೇರಿ ಕೆಲಸಗಳನ್ನು ಮಾಡುವ ಅನುಕೂಲ ಸಮಯ, ಇಂಥಾ ಸಮಯವು ಬಂದೊದಗದೆ ಯಾವ ಕೆಲಸವನ್ನೂ ಬೋರ್ಡಿನವರು ಮಾಡಿಸಲಿಕ್ಕಿಲ್ಲ. ಈಗ ಹ್ಯಾಗೂ ಇನ್ನೊಂದು ಬಲವಾದ ವಾದವನ್ನು ಬೋರ್ಡಿನವರ ಸಹಾಯಕ್ಕಿದೆ ಅದೇನೆಂದರೆ—ಗಾಡಿಗಳು ಬರುವಂಥಾದ್ದು ಈಗ ಕಡಿಮೆಯಾದ್ದರಿಂದ ಮಳೆಗಾಲದಲ್ಲಿಯೇ ಗಟ್ಟಿಯಾದ ರಿಪೇರಿಯನ್ನು ಮಾಡಿಸಬಹುದು. ಬಸ್ಸುಗಳು ಚಲಾವಣೆಯಾಗುತ್ತವೆ, ಅವುಗಳು ಮುರಿದು ಬೀಳುತ್ತವೆ ಆದರೂ ಚಿಂತೆಯಿಲ್ಲ. ಬಸ್ಸುಗಳು ಕೆಲವರು ಹಣಸಂಪಾದನೆಗೆ ಇಟ್ಟಿರುವವರಲ್ಲದೆ ಅಂಥವುಗಳು ಮುರಿದು ಬಿದ್ದರೆ ನಮಗೇನು ನಷ್ಟ! ಹಾಗೆ ಬೀಳುತ್ತಾ ಬೀಳುತ್ತಾ ಬಸ್ಸುಗಳ ಸಂಖ್ಯೆಯಾದರೂ ಕಡಿಮೆಯಾಗಲಿ—ಈ ವಾದವನ್ನು ಇಟ್ಟುಕೊಂಡು ಅತೀ ವಿಶೇಷವಾದ ನಿಷ್ಠುರತೆಯಿಂದ ರಸ್ತೆಯಲ್ಲಿರುವ ಅತಿ ದೊಡ್ಡ ಹೊಂಡಗಳನ್ನು ಸಹ ಸರಿಪಡಿಸದೆ ಇರುವರು. ಇನ್ನು ಸುಪರಿಂಟೆಂಡೆಂಟ್ ಇಂಜಿನಿಯರು ಇತ್ಯಾದಿ ಸರಕಾರದ ಆಫೀಸರರು ಬಂದುಹೋಗಿ ಡಿಸ್ಟ್ರಿಕ್ಟ ಬೋರ್ಡು ರಸ್ತೆಗಳ ವಿಷಯ ಶಿಫಾರಸುಗಳ ಬರೆದ ನಂತರ ಮತ್ತೇನು ಯಾರು ಹೇಳಿದರೂ [illegible]ಗುವದು? ವಿಡಿಗಲ್ ಸಂಕವು ಮುರಿದು ಹೋದದ್ದು ಸಂಯೋಗುತ್ತಾ ಬಂದು ಮಳೆಯು ಅತಿ ವಿಶೇಷವಾಗಿ ಬೀಳುವಾಗ ಜಲಾವಣೆಗೆ ಸಿದ್ಧವಾಗುವದು. ಶ್ರೀ ದೇವರ ದಯೆಯಿಂದ ನೆರೆಯು ಬಂದು ಜಲಾವಣೆಯಾಗಿ ಮುತ್ತಿರಡು ಕಡೆಗಳಲ್ಲಿ ಸಂಕವು ಜರಿದುಹೋದ ಪಕ್ಷದಲ್ಲಿ ಯಾರಿಗೆ ದೂರಿ ಏನು ಪ್ರಯೋಜನ? ಆದ್ದರಿಂದ ದೊರಿಸ ಮುಟ್ಟಿಗೆ ನೆರೆಯ ಸಹಾಯದ ಸಂಭವವು ವಿಶೇಷವಾಗಿರುವಾಗ ನಿದ್ರೆಯಿಂದ ಯಾತಕ್ಕೆ ಏಳಬೇಕು? ಯಾರಭಿಪ್ರಾಯವನ್ನು ಯಾಕೆ ಪರಿಗಣಿಸಬೇಕು? ಮಾರ್ಗಗಳನ್ನು ಸರಿಪಡಿಸದೆ ಇದ್ದರೂ, ರೈತವರ್ಗಕ್ಕೆ ಬೇಕಾದ ಮುಖ್ಯ ಅನುಕೂಲತೆಗಳನ್ನು ಸಂಗ್ರಹಿಸಿಕೊಡದೆ ಹೋದರೂ, ಟೆಕ್ಸಗಳನ್ನು ಇಮ್ಮಡಿ ಮಾಡಿ ಅವುಗಳನ್ನು ಕ್ಲಪ್ತಕಾಲದಲ್ಲಿ ಸಂಗ್ರಹಿಸಿ ಡಿಸ್ಟ್ರಿಕ್ಟ ಬೋರ್ಡಿನ ಇಂಥಿಂಥಾ ಕಾಲದಲ್ಲಿ ಇಂಥಿಂಥವರ ಆಡಳಿತೆಯಲ್ಲಿ ಇಂತಿಷ್ಟು ಸಾವಿರದಷ್ಟು ಬೋರ್ಡಿನ ಉತ್ಪತ್ತಿಯನ್ನು ಇಂತಿಷ್ಟು ಲಕ್ಷಕ್ಕೆ ಏರಿಸಿದೆವು ಎಂತ ಮೀಸೆ ಎಳದು ತೋರಿಸಿಬಿಟ್ಟರೆ ಎಲ್ಲಿ ಹೋದರೂ ಶಿಫಾರಸು, ಆದ್ದರಿಂದ ನಿದ್ರೆಯಿಂದ ಯಾಕೆ ಏಳಬೇಕು? ಮೆಂಬರರು! ಡಿಸ್ಟ್ರಿಕ್ಟ ಬೋರ್ಡು ಮೆಂಬರರು! ಇವರ ಕಾರಬಾರಿನ ಗುಟ್ಟೆಲ್ಲ ನಮಗೆ ಗೊತ್ತಿರುವಾಗ ಮತ್ತು ಯಾವುದಕ್ಕೂ ಅವರು ಕೈಗುಟ್ಟುವಾಗ ಆಡಳಿತೆಯಲ್ಲಿ ಯಾವ ದೋಷಗಳು ಬಂದಾವು! ಆದ್ದರಿಂದ ನಿದ್ರೆಯಿಂದ ಯಾಕೆ ಏಳಬೇಕು? ಬಂಟವಾಳ ಚಾರ್ಮಾಡಿ ಮಾರ್ಗವು ನಮ್ಮ ಜಿಲ್ಲೆಯಲ್ಲಿ ಘಟ್ಟಗಳ ಮೇಲಣ ವ್ಯಾಪಾರ ವೈವಾಟುಗಳಿಗೆ ಮುಖ್ಯ ಮಾರ್ಗವಾಗಿದೆ. ರಸ್ತೆಯು ಸರಿಯಿಲ್ಲದೆ ಹೋದ್ದರಿಂದ ಸರಕುಗಳ ಸರಾಗವಾದ ವೈವಾಟಕ್ಕೆ ವಿಪರೀತ ತೊಡಕುಂಟಾಗಿ ವ್ಯಾಪಾರ ನಷ್ಟವು ಜಿಲ್ಲೆಗೆ ವಿಶೇಷವಾಗಿ ಉಂಟಾಗುತ್ತಿರುವದು. ಆದರೆ ವ್ಯಾಪಾರಿಗಳು ಡಿಸ್ಟ್ರಿಕ್ಟ ಬೋರ್ಡಿನಲ್ಲಿ ಯಾರಿರುವರು? ಇದ್ದರೂ ರಸ್ತೆಗಳು ಕೆಟ್ಟು ಹೋದರೆ ವ್ಯಾಪಾರವು ಕೆಡುತ್ತದೆಂಬುದು ಅವರಿಗೆ ಹ್ಯಾಗೆ ಗೊತ್ತು? ಈ ರೀತಿ ಡಿಸ್ಟ್ರಿಕ್ಟ ಬೋರ್ಡಿನ ಪ್ರಭಾವವು ಮೆರೆಯುತ್ತಿರುವಾಗ ಅದನ್ನು ನಿದ್ರೆಯಿಂದ ಎಚ್ಚರಿಸುವದೆಂದರೆ ಸಾಧಾರಣ ಕೆಲಸವೇ? ಆದರೆ ಮುಟ್ಟಿಗೆ ಹ್ಯಾಗಾದರೂ ಯಾರಿಗೂ ಲಗಾವಿಲ್ಲ. ಆ ಜಾತಿ ಈ ಜಾತಿ ಮೆಂಬರರು ಇದ್ದುಕೊಂಡು ಮತ್ಯಾವ ಜಾತಿಯರಿಗಾದರೂ ನೌಕರಿ ಸಿಕ್ಕೀತೆಂತ ಕಾರ್ಯದಲ್ಲಿ ಏನೂ ಮಾಡಲಿಕ್ಕಾಗದೆ ಮನಸ್ಸಿನಲ್ಲಿ ಮಾತ್ರ ನೊಂದುಕೊಂಡು ಇದ್ದು ಎಲ್ಲಕ್ಕೂ ಕೈಗುಟ್ಟಿ ಬಂದರೆ ಡಿಸ್ಟ್ರಿಕ್ಟ ಬೋರ್ಡು ಎಷ್ಟು ಕಾಲವಾದರೂ ಸುಖರೂಪಿ ನಿದ್ರೆಯಿಂದ ಇರಬಹುದು. ಅದಲ್ಲದೆ ಈಗ ಇತ್ತಲಾಗೆ ಪತ್ರಗಳಲ್ಲಿ ಪ್ರಕಟವಾದಂತೆ ಡಿಸ್ಟ್ರಿಕ್ಟ ಬೋರ್ಡು ಮೆಂಬರರುಗಳ ಚುನಾವಣೆ ಮೂಲಕ ಮತ್ತು ನೋಮಿನೇಶನುಗಳ ಮೂಲಕ ಹೊಸ ಮೆಂಬರರಾಗಿ ಬಂದವರ ಹೆಸರುಗಳನ್ನು ನೋಡಿದರೆ ಈ ಸುಖರೂಪಿ ನಿದ್ರೆಯಿಂದ ಎಚ್ಚರಿಕೆಯಾಗುವ ಯಾ ಸಂದರ್ಭವು ಕಾಣುವದಿಲ್ಲ. ಆದ್ದರಿಂದ ಮಳೆ ಮತ್ತು ನೆರೆಗಳನ್ನು ಕಳುಹಿಸಿ ಕೊಡುವ ದೇವರು ಈ ವರುಷ ಮಳೆಗಾಲದಲ್ಲಿ ಮಳೆ ನೆರೆಗಳ ನೀರಿನೊಂದಿಗೆ ಬಂಟವಾಳದಿಂದ ಚಾರ್ಮಾಡಿ ನಮ್ಮ ಜಿಲ್ಲೆಯ ಗಡಿಯ ವರೆಗೂ ಒಳ್ಳೇ ಕಲ್ಲು ಹಾಕಿಸಿದ ಮಾರ್ಗವನ್ನು ಕಳುಹಿಸಿಕೊಡಬೇಕೆಂಬ ಪ್ರಾರ್ಥನೆಯನ್ನು ಮಾಡುವ ಒಂದೇ ಉಪಾಯವು ಈ ಪ್ರಾಂತ್ಯದವರಿಗೆ ಉಳಿದಿರುವದಲ್ಲದೆ ಮತ್ಯಾವ ಸಾಧನವೂ ಕಾಣದು.

ದಾರಿಗ.

ಹೊಸಬೆಟ್ಟು ಗ್ರಾಮದಲ್ಲಿ ಜರಗಿದ ಮದ್ಯಪಾನ ನಿಷೇಧಕ ಸಭೆ.

ಇಲ್ಲಿ ಕಳೆದ ೨೩-೪-'೨೫ರಲ್ಲಿ ಶ್ರೀಯುತ ವೆಂಕಟೇಶ ಸಾಲಿಯಾನರ ಉತ್ತೇಜನದಿಂದ ಮೊಗವೀರರ ಒಂದು ಮಹಾಸಭೆಯು ರಾ। ಇದ್ಯ ನಾರಾಯಣರಾಯರ ಅಧ್ಯಕ್ಷತೆಯಲ್ಲಿ ಕೂಡಿಬಂತು. ಈ ಸಭೆಗೆ ಶ್ರೀ ಜ್ಞಾನೋದಯ ಸಮಾಜದ ಅನೇಕ ಸದಸ್ಯರೂ ಬಂದಿದ್ದರು. ಮನುಷ್ಯನ ಬುದ್ಧಿಶಕ್ತಿಯ ವಿಕಾಸಕ್ಕೆ ಮೂಲವಾದ ಮೆದುಳನ್ನು ಮದ್ಯಪಾನವು ಹ್ಯಾಗೆ ನಿಸ್ತೇಜಗೊಳಿಸುವುದೆಂಬುದನ್ನು, ಇದರಿಂದ ಉಂಟಾಗುವ ಅನರ್ಥಗಳನ್ನು ವಿವಿಧ ಉದಾಹರಣೆಗಳ ಮೂಲಕವೂ ಕಥಾ ಕೀರ್ತನ ಭಾಷಣಗಳಿಂದಲೂ ರಾ। ಮೋಹನಪ್ಪ ತಿಂಗಳಾಯರು ವಿವರಿಸಿದರು. ತರುವಾಯ ಅಧ್ಯಕ್ಷರು ಕಾಲೋಚಿತ ಭಾಷಣಮಾಡಿ ಮಾನುಷ್ಯ ಜನ್ಮದ ಸಾರ್ಥಕತೆಯನ್ನು ಹ್ಯಾಗೆ ಸಾಧಿಸತಕ್ಕದ್ದೆಂದು ಹೇಳಿದರು. ಹೊಸಬೆಟ್ಟು ಮೊಗವೀರರೂ ನಿಶಾರಕ್ಷಸನನ್ನು ತಮ್ಮ ಮನಃಶಕ್ತಿ ಎಂಬ ಆಯುಧದಿಂದ ಜಯಿಸಿ ಕೀರ್ತಿಪಡೆಯಬೇಕೆಂದು ರಾ। ವೆಂಕಟೇಶ ಸಾಲಿಯಾನರು ಕೇಳಿಕೊಂಡರು ಹೊಸಬೆಟ್ಟು ಮೊಗವೀರ ಪಟ್ಟಣದ ಮುಖ್ಯಸ್ಥರಾದ ರಾ। ತಿಮ್ಮ ಗುರಿಕಾರರೂ, ರಾ। ಈರು ಗುರಿಕಾರರೂ ಆಗ ಮುಂದೆ ಬಂದು ತಾವು ಇನ್ನು ಎಂದಿಗೂ ಮದ್ಯಪಾನ ಮಾಡಲಿಕ್ಕಿಲ್ಲವೆಂದು ಶಪಥಮಾಡಿದರು. ನಂತರ ಇವರನ್ನು ಹಿಂಬಾಲಿಸಿ ಇತರ ಮೂವತ್ತನಾಲ್ಕು ಜನ ಯುವ್ವನಸ್ಥರೂ ಮದ್ಯಪಾನತ್ಯಾಗ ವ್ರತವನ್ನು ಕೈಕೊಂಡರು! ಕಠಿಣ ಕಾಹಿಲೆಯಲ್ಲಿ ವೈದ್ಯರು ಮದ್ಯಪಾನ ಮಿಶ್ರಿತಮಾಡಿ ಕೊಟ್ಟ ಔಷಧಿಯನ್ನಾದರೂ ಸೇವಿಸದೆ ಪ್ರಾಣಹೋದರೂ ಮದ್ಯಪಾನವನ್ನು ಮುಟ್ಟಲಿಕ್ಕಿಲ್ಲವೆಂದು ಹಟಹಿಡಿದು ತಮ್ಮ ವ್ರತವನ್ನು ಪರಿಪಾಲಿಸಿ ಆರೋಗ್ಯ ಹೊಂದಿದ ಸಮಾಜದ ಕೆಲವು ವೀರ ಸದಸ್ಯರ ಉದಾಹರಣೆಗಳನ್ನು ಜೊತೆಗೆ ಬಜಾರ ರಾ। ಕೋಟಿ ಮಂದಣ್ಣಯರು ಹೇಳಿ ಮದ್ಯಮೋಹರಕ್ಕಸನನ್ನು ಸೋಲಿಸುವ ವಿಧಾನವನ್ನು ನವೀನ ವ್ರತಧಾರಿಗಳಿಗೆಲ್ಲ ತಿಳಿಸಿದರು.

— ಪ್ರಕಟನೆ. —

ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿ, ಗದಗ.

ಇಸವಿ ಸನ್ ೧೯೨೫ನೆಯ ಮೇ ತಿಂಗಳ ೧೩ನೆಯ ತಾರೀಕು ಬುಧವಾರ ದಿವಸ ಸಂಜೆಯ ೬ ಘಂಟೆಗೆ ಬೆಳಗಾವಿಯಲ್ಲಿ ಕ. ಕಾ. ಕ.ಯ ಕಚೇರಿಯಲ್ಲಿ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಸಾಧಾರಣ ಅಧಿವೇಶನವು ಜರಗುವುದು. ಸದಸ್ಯರು ಬರಬೇಕೆಂದು ಬೇಡಿಕೆಯುದೆ.

— ಚರ್ಚಿಸತಕ್ಕ ವಿಷಯಗಳು. —

೧ ಬೆಳಗಾವಿಯ ರಾಷ್ಟ್ರೀಯ ಮಹಾಸಭೆಯ ಅಧಿವೇಶನದಲ್ಲಿ ಹಾಕಿ ಕೊಟ್ಟ ಕಾರ್ಯಕ್ರಮವನ್ನು ಮುಂದೆಸಾಗಿಸುವ ಕುರಿತು ಮಾಡತಕ್ಕ ಯೋಜನೆಯು.

೨ ಈ ವರುಷದ ಆಯ-ವ್ಯಯದ ಅಂದಾಜು ಪತ್ರಿಕೆಯನ್ನು ತಯಾರಿಸುವುದು.

೩ ಕಳೆದ ವರುಷದ ಲೆಖ್ಖವನ್ನು ಮಂಜೂರು ಮಾಡುವುದು.

೪ ಕಳೆದ ಅಧಿವೇಶನದಲ್ಲಿ ಚರ್ಚಿಸದೆ ಉಳಿದ ವಿಷಯಗಳ ವಿಚಾರಣೆ.

೫ ಅಧ್ಯಕ್ಷರ ಅಪ್ಪಣೆಯ ಮೇರೆಗೆ ಅನ್ಯ ವಿಷಯಗಳು.

ಗದಗ, ೨೭-೪-'೨೫. } ಮದ್ಧರಾವ ಕೆಂಭಾವಿ,
ಕಾರ್ಯದರ್ಶಿ ಕ. ಪ್ರಾ. ಕಾ. ಕ.

ಆರೋಗ್ಯ ಚಂದ್ರಿಕೆ.
ಮದ್ರಾಸ್.
ಸಂಪಾದಕರು: ಡಾಕ್ಟರ್ ಯು. ರಾಮರಾವ್, ಎಲ್. ಎಮ್. ಸಿ. ಎಫ್. ಎಮ್. ಯು. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಚಿಕಿತ್ಸದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವುದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ.

ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ.

ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಯೆ ಪ್ರಕಟವಾಗುವುದು.

'ಹೆಲ್ತ್' ಎಂಬ ನಮ್ಮ ಇಂಗ್ಲಿಷ್ ಮಾಸಪತ್ರಿಕೆಯನ್ನೋದಿ ಸಂತೋಷಿಸಿದ ಅನೇಕ ದೊಡ್ಡ ಮನುಷ್ಯರ ಪ್ರೋತ್ಸಾಹದ ಮೇಲೆ ಈ ಕನ್ನಡ ಪತ್ರಿಕೆಯನ್ನು ಹೊರಪಡಿಸಿದೆ.

ಅದರ ಸಂಪುಟ ೨ ಮತ್ತು ೧೧ನೇಯ ನವಂಬರ ೧೯೨೪ ಸಂಚಿಕೆಯಲ್ಲಿ ಕಾಣಿಸಿರುವ ವಿಷಯಗಳು.

ಮುಖಚಿತ್ರ:—ಪರ್ಣಶವಾಸಿನಿಯಾದ ಒಬ್ಬ ರೂಪವತಿ.
ಶ್ವಾಸಕ್ರಮ ಅಥವಾ ಪ್ರಾಣಾಯಾಮ.
ಹುಣಿಸೇಹಣ್ಣಿನ ಆಹಾರಗುಣಗಳು ಮತ್ತು ಔಷಧಗುಣಗಳು.
ಕಾಲುನಡೆಯೇ ಉತ್ತಮವಾದ ವ್ಯಾಯಾಮವು
ಜೇನಿನಲ್ಲಿರುವ ಗುಣಗಳು.
ಹಲ್ಲುಗಳ ರಚನೆ, ಪ್ರಯೋಜನ, ಕೆಲಸ ಮುಂತಾದವು.
ಮದದ್ರಾವಕಗಳಿಂದ ಆರೋಗ್ಯಕ್ಕೆ ಉಂಟಾಗತಕ್ಕ ಹಾನಿ.
ಅಂಗಸಾಧನೆ ಮತ್ತು ಬುದ್ಧಿವ್ಯವಸಾಯ (ವಿದ್ಯಾಭ್ಯಾಸ).
ಗಾಯಗಳು, ಮತ್ತು ಉಳುಕು ಮುಂತಾದವು, ಅವುಗಳ ಚಿಕಿತ್ಸೆ
ನವನಾಗರಿಕ ಪ್ರಪಂಚಕ್ಕೆ ಸಹಜವಾದ ಮೂರು ಕೆಡುಕುಗಳು.
ಒಬ್ಬ ಉಪವಾಸಿಯ ಅನುಭವ.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವುವು. ಆರೋಗ್ಯಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ ರೂ. ೧-೮-೦; ಬಿಡಿಪತ್ರಿಕೆ ಒಂದಕ್ಕೆ ರೂ. ೦-೨-೦. ಹಿಂದಿನ ಸಂಚಿಕೆಗಳು ಕೂಡ ದೊರಿಯುವವು.

ಚಂದಾದಾರರಾಗುವವರು ವಿ. ಪಿ. ಮೂಲಕವಾಗಿ ತರಿಸಿಕೊಳ್ಳುವದಕ್ಕಿಂತಲೂ ಹಣವನ್ನು ಮುಂಗಡವಾಗಿ ಕಳುಹಿಸುವುದು ಲಾಭಕರ. ನೋಟ್ಟಂಡ ಪತ್ರಿಕೆಯನ್ನು ಅಪೇಕ್ಷಿಸುವವರು 'ಆರೋಗ್ಯ ಚಂದ್ರಿಕೆ'ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು.

ಪತ್ರವ್ಯವಹಾರಕ: 'ಆರೋಗ್ಯ ಚಂದ್ರಿಕೆ'
೩೨೩ ತಂಬುಚೆಟ್ಟಿ ಬೀದಿ, ಮದ್ರಾಸ್.

The Canara Bank, Limited, Magnalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.
Authorised and fully paid up Capital Rs. 300,000-0-0
Reserve and other sinking Funds „ 259,000-0-0

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
ಅಧಿಕಾರಗೊಳಿಸಲ್ಪಟ್ಟು, ಪೂರ್ಣವಾಗಿ ತೆತ್ತ ಮೂಲಧನವು ರೂ. 300,000-0-0
ಕ್ಷೇಮನಿಧಿ ಮತ್ತು ಇತರ ಫಂಡುಗಳು 259,000-0-0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲ್ಪಡುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1925.
K. Venkat Rao,
Secretary

ಪರೀಕ್ಷಾಕಾಲ.
ವಿದ್ಯಾರ್ಥಿಗಳೇ ಇತ್ತ ನೋಡಿರಿ.

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ.

"ಸಾರಸ್ವತಾಸವ"ವು ಒಳಗಣ ಮುಖ್ಯಾವಯವಗಳಲ್ಲುಂಟಾಗುವ ವ್ಯತ್ಯಾಸವನ್ನು ಸರಿಪಡಿಸಿ, ಜೀರ್ಣಶಕ್ತಿಯನ್ನು ಹೆಚ್ಚಿಸಿ, ಪಂಕ್ತಿಭ್ರಮಣೆ ತಲೆತಿರುಗು, ನಿಶ್ಶಕ್ತಿ, ಇಂದ್ರಿಯ ದೌರ್ಬಲ್ಯಗಳನ್ನು ಹೋಗಲಾಡಿಸಿ ಶುದ್ಧರಕ್ತವನ್ನು ವೃದ್ಧಿಪಡಿಸುತ್ತದೆ. ಸೀಸೆ 1ಕ್ಕೆ ಬೆಲೆ 1 ರೂಪಾಯಿ, ಪೋಸ್ಟೇಜು ಬೇರೆ,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ—ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ ಹೊಟ್ಟೆನೋವು ಇಂಫ್ಲುಯಂನ್ಜಾ ಪ್ಲೇಗುಜ್ವರ.

ಮಕ್ಕಳ—ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು. ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಕಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳ ವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1-4-0, 12 ಸೀಸೆಗೆ 2-7-0, 25 ಸೀಸೆಗೆ 4-10-0 ಪೋಸ್ಟೇಜು ಬೇರೆ.

ಬ್ರಾಂಚ್ ಆಫೀಸ್, ಚಿಕ್ಕಪೇಟೆ, ಬೆಂಗಳೂರು ಸಿಟಿ.
ಹೆಡ್ ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.
ಪಾಳ್ಯದ ವೆಂಕಟಾಚಲ ಪಂಡಿತರು,
ಏಜಂಟರು:-
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ,
ಮಂಗಳೂರು ಟವನಿಗೆ ಮಾತ್ರ.

ತುಳು ಪಾಡ್ದನಗಳು.

ಬೊಬ್ಬರ್ಯ, ಕಲ್ಲುರ್ಟಿ-ಕಲ್ಕುಡ, ದೈಯ್ಯೊಂಗುಳು—ಕೋಡದಕಿನ್ನಾರ್, ಮುಂಡತ್ತಾಯ ಪ್ರತಿ ಒಂದಕ್ಕೆ 2 ಆಣೆ. 1½ ಆಣೆ ಟಪ್ಪಾಲು ಚೀಟು ಕಳುಹಿಸಿದರೆ 5 ಪುಸ್ತಕಗಳು ಕೂಡಲೇ ಕಳುಹಿಸಲ್ಪಡುವವು.

ವಿಳಾಸ: ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ವಿದ್ಯಾವಾಚಸ್ಪತಿ
ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ
"ಸಂಕ್ಷೇಪಗೀತೆ"

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ್ಳ ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದೆ. ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೦. ಟಪ್ಪಾಲು ಖರ್ಚು ಕೂಡಿ ಆಣೆ ೧೧ನ್ನು ಮನಿಯಾರ್ಡರ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ೨ಕ್ಕಿಂತ ಜಾಸ್ತಿ ಖರ್ಚು ತಗಲುವುದು. ೧೦ಕ್ಕಿಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.

ಪುಸ್ತಕ ದೊರೆಯುವ ವಿಳಾಸ:—
ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು, ಮತ್ತು
ಕೆನರಿಸ್ ಮಿಗ್ಗನ್ ಬುಕ್ ಎಂಡ್ ಟ್ರೆಕ್ಟ ಡಿಪೋಜಿಟರಿ,
ಮಂಗಳೂರು.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀಕಾಶೀ, ಗಯಾ, ಪ್ರಯಾಗ, ಹರಿದ್ವಾರ ಬದ್ರಿನಾರಾಯಣ ದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೆಟ್ಟಿಯಾಗಿ ಅವರ ಕಡೆಯಿಂದಅನುಭವ ತೆಗೆದು ಪ್ರತಿವಂದು ಸಿದ್ಧಮಾಡಿಕೊಂಡು ಬರೆದಿರುವರು. ೧ನೇದು ಮಂತ್ರಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರಪ್ರಯೋಗದಿಂದಲೂ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವವಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವೂ ಇದೆ. ೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳು ಹೊರಡುವಿಕೆ, ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿ[illegible] ನೂರಾರು ವಿಷಯಗಳು ಇದರಲ್ಲಿ ಅಡಕವಾಗಿಯುತ್ತವೆ. ಅವನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ. ೩ನೇದು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು. ೪ನೇದು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಮಹ್ಯಾ ಸಹ, ಇದರಲ್ಲಿ ಉಂಟು, ಇದು ಪ್ರತಿಯೊಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷಧ ಮಾಡುವ ಕ್ರಮವನ್ನು ಚೆನ್ನಾಗಿ ಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಳಾಸವು ತಿಳಿಸಿರುವರು. ೫ನೇದು ಯಂತ್ರ ಪ್ರಕರಣದಲ್ಲಿ ಮಹೇಶರಿ ಗೃಹಪೀಡಾ ನಿವಾರಣ ಭೂತಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು, ಇದಲ್ಲದೆ ಇನ್ನು ಅನೇಕ ವಿಧವಾದ ಅದ್ಭುತ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ ಇದ್ದ ಬಳಿಕ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷಗಳೂ ವೈದ್ಯರೂ ಜೋತಿಷ್ಯರು, ಮಾಂತ್ರಿಕರು ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥ ಗ್ರಂಥವು ಯಾರು ಕಣ್ಣಿಂದ ನೋಡಿರಲಿಕ್ಕಿಲ್ಲಾ. ಪ್ರತಿಯಬರು ತರಿಸಿ ನೋಡಬೇಕೆಂದು ಇದರ ಬೆಲೆ ತೀರ ಕಡಿಮೆಮಾಡಿ ಇರುವದು. ೨-೮-೦ ಟಪ್ಪಾಲು ಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ ನಾಟಕ ಕಾವ್ಯ, ಕತೆಗಳು, ಯಕ್ಷಗಾನ, ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ;—
ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

ಸ್ಪಿರಿಟ್ ಸ್ಟೋವ್.

ಈ ಸ್ಟೋವುಗಳು ವಿಲಾಯತಿಯಿಂದ ತಯಾರಾದವು. ಇದರಲ್ಲಿ ಬಹುಬೇಗನೆ ಅಡಿಗೆ, ಕಾಫಿ, ಟೀ ಮುಂತಾದುಗಳನ್ನು ಮಾಡಬಹುದು. ಬೇಗನೆ ಕೆಡದು, ಕಪ್ಪಾಗದು, ಕಷ್ಟವಿರುವದಿಲ್ಲ. ಪ್ರಯಾಣಿಕರಿಗೂ ಬಹು ಅನುಕೂಲವಾದದ್ದು. ಕೆಲವು ಮಾತ್ರವೇ ಇರುವುದರಿಂದ ಬೇಗನೆ ಬರೆಯಿರಿ.

ಕ್ರಯ ೧ಕ್ಕೆ 3-8-0.



ಹೊಸ ನಮೂನೆಯ ಸೆಲ್ಫ್ ಫಿಲ್ಲಿಂಗ್ ಫೌಂಟೆನ್ ಪೆನ್ನುಗಳು.

ಈ ಪೇನಾಗಳು ವಿಲಾಯತಿಯಲ್ಲಿ ತಯಾರಾದವು. ಇವು ಹೊಸ ನಮೂನೆಯವು. ಇವಕ್ಕೆ ಗಿಲೀಟಿನ ನಿಬ್ಬು ಇರುವವು. ಈ ನಿಬ್ಬು ಎಂದಿಗೂ ಕೆಡದು. ಭಾರಿ ಕ್ರಯದ ಭಂಗಾರದ ನಿಬ್ಬುಗಳು ಬರೆಯುವದಕ್ಕಿಂತಲು ಬಹು ಚೆನ್ನಾಗಿ ಬರೆಯುವದು. ಮತ್ತು ತನ್ನಷ್ಟಕ್ಕೆತಾನೇ ಇಂಕಿಯನ್ನು ತುಂಬಿಕೊಳ್ಳುವದು. ಒಂದನ್ನು ತರಿಸಿನೋಡಿರಿ. ಬೇಡವಾದರೆ ಹಣ ವಾಪಾಸು ಕೊಡುವೆವು.

ಕ್ರಯ ೧ಕ್ಕೆ ರೂ. 1-12-0.

The American Watch Co., } ವಿಳಾಸ:— ಅಮೇರಿಕನ್ ವಾಚ್ ಕಂಪೆನಿ,
P. B. No. 509, G. T. MADRAS. } ಪೋ ಬಾ 509, ಜಿ. ಟಿ. ಮದರಾಸು.

ಆಯಾ ಕ್ಲಾಸುಗಳಲ್ಲಿ ಸಂಚರಿಸುವ ರೈಲ್ವೆ ಪ್ರಯಾಣಿಕರು.

ಹಿಂದುಸ್ಥಾನದ ಜನಸಂಖ್ಯೆಯು ೩೦೦ ಮಿಲಿಯಕ್ಕೆ ಮಿಕ್ಕಿದೆ. ೧೯೨೩-೨೪ನೇ ವರುಷದಲ್ಲಿ ಈ ದೇಶದಲ್ಲಿ ಸಂಚರಿಸಿದ ಪ್ರಯಾಣಿಕರ ಸಂಖ್ಯೆಯು ಆಯಾ ಕ್ಲಾಸುಗಳಲ್ಲಿ ಈ ರೀತಿಯಾಗಿತ್ತು:—

Iನೇ ಕ್ಲಾಸು	೯೧೭,೬೦೦
IIನೇ ಕ್ಲಾಸು	೫,೧೩೩,೮೦೦
ಇಂಟರ್ ಕ್ಲಾಸು	೬,೧೨೮,೯೦೦
IIIನೇ ಕ್ಲಾಸು	೫೦೨,೪೫೧,೧೦೦
ಸಿಸನ್ ಟಿಕೇಟು ಇತ್ಯಾದಿ	೫೫,೬೬೪,೯೦೦
	೫೭೦,೬೯೫,೪೦೦.

• • • • •

ಕಾಫಿ ವ್ಯವಸಾಯ ಮತ್ತು ವ್ಯಾಪಾರವು ಮೈಸೂರು ದೇಶದಲ್ಲಿ ಮುಖ್ಯವಾದ್ದೆಂದು ಹೇಳಬೇಕು. ಸಾಧಾರಣವಾಗಿ ಕಾಫಿಯು ಘಟ್ಟದ ಸೀಮೆಯಾದ ಕಡೂರು ಮತ್ತು ಹಾಸನ ಜಿಲ್ಲೆಗಳಲ್ಲೇ ಬೆಳೆಯುತ್ತದೆ. ಸುಮಾರು ೧,೦೪,೦೦೦ ಎಕರೆಗಳಷ್ಟು ಭೂಮಿಯಲ್ಲಿ ಕಾಫಿ ವ್ಯವಸಾಯವು ನಡೆಯುತ್ತದೆ. ಪ್ರತಿ ವರುಷವೂ ಸರಿ ಸುಮಾರು ೧೦-೧೨ ಸಾವಿರ ಟನ್ನುಗಳ ಕಾಫಿಯು ಬೆಳೆಯುತ್ತದೆ. ಇದರ ಬೆಲೆಯು ಸರಾಸರಿ ೧ ಕೋಟಿ ಪೌಂಡುಗಳಾಗುತ್ತದೆಯೆಂದು ಹೇಳಬಹುದು. ಕಾಫಿ ಬೀಜವು ಮಂಗಳೂರಿನ ಮುಖಾಂತರ ಇಂಗ್ಲೆಂಡಿಗೂ, ಕಾಫೀ ಪುಡಿಯು ರೂಪದಲ್ಲಿ ಯುರೋಪಿನ ಗಿರಾಕಿಗಳಿಗೂ ಹೋಗುತ್ತದೆ. ಮೈಸೂರು ಕಾಫಿಯು ಅರೇಬಿಯ ಕಾಫಿಯಷ್ಟೇ ಉತ್ತಮವಾಗಿದೆ.

• • • • •

೧. ಶುಂಠಿಯ ಉತ್ಪತ್ತಿ ಸ್ಥಾನವು ಏಶಿಯಾ ಖಂಡ. ಪ್ರಾಚೀನ ಕಾಲದಿಂದ ಈ ದೇಶದಲ್ಲಿ ಶುಂಠಿಯ ಬೇಸಾಯವು ನಡಿಯುತ್ತಲಿದೆ. ಆಯುರ್ವೇದ್ಯದಲ್ಲಿ ಶುಂಠಿಯ ಉಪಯೋಗವು ವಿಶೇಷವಾಗಿ ಹೇಳಲ್ಪಟ್ಟಿದೆ. ಶುಂಠಿಯು ಚೀನ ದೇಶದಲ್ಲಿ ಬಹು ದೊಡ್ಡ ಪ್ರಮಾಣದಿಂದ ಬೆಳೆಯುತ್ತಿದೆ. ಹಿಂದುಸ್ಥಾನವು ಶುಂಠಿಯ ಬೇಸಾಯದಲ್ಲಿ ಎರಡನೇ ನಂಬರವನ್ನು ಪಡೆದಿದೆ. ಹಿಂದುಸ್ಥಾನದ ಎಲ್ಲ ಭಾಗದಲ್ಲೂ ಶುಂಠಿ ಬೆಳೆಯುವುದು. ಕೊಚೀನದ ಶುಂಠಿಯು ಪ್ರಸಿದ್ಧವಾದದ್ದು. ಬಂಗಾಲದಲ್ಲಿ ರಂಗಪುರ, ಮಿದ್ನಾಪುರ, ಹುಗಳಿ ಜಿಲ್ಲೆಗಳಲ್ಲಿ ಶುಂಠಿಯ ಬೇಸಾಯವು ಚನ್ನಾಗಿ ನಡೆಯುತ್ತಿದೆ. ಮುಂಬಯಿ ಇಲಾಖೆಯ ಸುರತ ಠಾಣೆ ಜಿಲ್ಲೆಗಳಲ್ಲಿ ಚೆನ್ನಾಗಿ ಶುಂಠಿಯ ಬೆಳೆಬರುತ್ತದೆ

• • • • •

೨. ಸಮುದ್ರ ಸಪಾಟ ಪ್ರದೇಶದಲ್ಲೂ ಸಮುದ್ರ ಸಪಾಟಗಿಂತ ೫ ಸಾವಿರ ಫೂಟು ಎತ್ತರ ಪ್ರದೇಶದಲ್ಲೂ ಶುಂಠಿಯು ಚೆನ್ನಾಗಿ ಬೆಳೆಯುತ್ತಿದೆ. ಚೀನ ದೇಶದಲ್ಲಿ ವರ್ಷದಲ್ಲಿ ಎರಡು ಸಾರೆ ಶುಂಠಿಯ ಬೆಳೆ ತಕ್ಕೊಳ್ಳುತ್ತಿರುವರು. ಹಿಂದುಸ್ಥಾನದ ಶುಂಠಿಗಿಂತ ಜಮೇಕಾದ ಶುಂಠಿಯು ಉತ್ತಮವಾದದ್ದು. ೧೯೧೩-೧೪ರಲ್ಲಿ ಹಿಂದುಸ್ಥಾನದಿಂದ ೯೨ ಲಕ್ಷ ರತ್ತಲು ಶುಂಠಿಯು ಪರದೇಶಕ್ಕೆ ಹೋಯಿತು ಅದರ ಬೆಲೆ ೧೮ ಲಕ್ಷ ರೂಪಾಯಿ. ೧೯೨೨-೨೩ರಲ್ಲಿ ೫೮ ಲಕ್ಷ ರತ್ತಲು ಶುಂಠಿಯು ಪರದೇಶಕ್ಕೆ ಹೋಯಿತು ಅದರ ಬೆಲೆ ೧೬ ಲಕ್ಷ ರೂಪಾಯಿ ಆಯಿತು. ಪರದೇಶದಿಂದ ಹಿಂದುಸ್ಥಾನಕ್ಕೆ ೨೦ ಲಕ್ಷ ರತ್ತಲು ಶುಂಠಿಯು ಬರುವುದು. ಈ ದೇಶದ ಶುಂಠಿಯು ಇಂಗ್ಲಂಡ, ಅಮೇರಿಕಾ, ಅರಬಸ್ಥಾನ, ತುರ್ಕಸ್ಥಾನ, ಸಿಲೋನ ದೇಶಗಳಿಗೆ ಹೋಗುವದು.

• • • • •

ಹಿಂದೂಸ್ಥಾನದ ಮತ್ತು ಜಪಾನದೇಶದ ಮಿಲಿಟರಿ ಖರ್ಚು.

೧೯೨೪-೨೫ನೇ ವರುಷದ ಹಿಂದೂಸ್ಥಾನ ಸರಕಾರದ ಬಜೇಟನ್ನು ಪರಿಶೀಲಿಸಿದರೆ ಆಯವು ೧೩೩ ಕೋಟಿ ೬೮ ಲಕ್ಷ ರೂಪಾಯಿಗಳೆಂತಲೂ ವ್ಯಯವು ೧೩೦ ಕೋಟಿ ೪೪ ಲಕ್ಷ ರೂಪಾಯಿಗಳೆಂತಲೂ ತೋರಿಬರುತ್ತದೆ. ಈ ಖರ್ಚಿನಲ್ಲಿ ಮಿಲಿಟರಿ ಖರ್ಚು ೫೬ ಕೋಟಿ ರೂಪಾಯಿಗಳಷ್ಟಾಗಿರುವುದು. ಗತವರುಷದಲ್ಲಿ ಹಿಂದೂಸ್ಥಾನದ ಈ ಖರ್ಚು ೫೬ ಕೋಟಿ ೪೩ ಲಕ್ಷ ರೂಪಾಯಿಗಳಾಗಿತ್ತು.

ಜಪಾನು ದೇಶದಲ್ಲಿ ೧೯೨೪-೨೫ರಲ್ಲಿ ೨೧೧ ಕೋಟಿ ೩೫ ಲಕ್ಷ ೮೧ ಸಾವಿರ ರೂಪಾಯಿಗಳಲ್ಲಿ ಆಯವಿತ್ತು. ಅಂದರೆ ಜಪಾನು ದೇಶದ ಉತ್ಪತ್ತಿಯು ಹಿಂದೂಸ್ಥಾನದ ಉತ್ಪತ್ತಿಕ್ಕಿಂತ ಒಂದೂವರೆ ಪಾಲಷ್ಟು ಅಧಿಕವಿದೆ. ಈ ಉತ್ಪತ್ತಿಯಲ್ಲಿ ೨೮ ಕೋಟಿ ೯೬ ಲಕ್ಷ ೬೯ ಸಾವಿರ ರೂಪಾಯಿಗಳ ಮೊಬಲಗು ಮಿಲಿಟರಿ ಖರ್ಚಿಗೆ ಸಂದಿರುವುದು. ಈ ಸಂಖ್ಯೆಗಳನ್ನು ಪರ್ಯಾಲೋಚಿಸಿ ನೋಡಿದಲ್ಲಿ ಜಪಾನಿನ ಉತ್ಪತ್ತಿಯು ಸೇಕಡಾ ೫೦ರಷ್ಟು ನಮ್ಮ ದೇಶದಕ್ಕಿಂತಲೂ ಹೆಚ್ಚಿದ್ದರೂ ಅದರ ಮಿಲಿಟರಿ ಖರ್ಚು ನಮ್ಮ ದೇಶದ ಸರಾಸರಿಕ್ಕಿಂತಲೂ ಬಹಳ ಕಡಿಮೆಯಿರುವುದು. ಇಷ್ಟು ಕಡಿಮೆ ಖರ್ಚಿನಲ್ಲಿ ಬಲವಾದಂಥಾ ನೌಕಾ ಸೈನ್ಯ ಸಂಗ್ರಹವು ಸಹ ಜಪಾನದೇಶಕ್ಕಿರುವುದು. ಈ ರೀತಿ ಮಿಲಿಟರಿ ಖರ್ಚಿನಿಂದ ಜಪಾನು ಭೂಲೋಕದ ಸಮರ್ಥವಾದ ರಾಜ್ಯಗಳಲ್ಲಿ ಒಂದಾಗಿ ಇತರ ರಾಜ್ಯಗಳೊಡನೆ ಸ್ವತಂತ್ರ ರಾಜ್ಯವಾಗಿರುವುದಲ್ಲದೆ ಇತರ ಸಾಮ್ರಾಜ್ಯಗಳ ಅಭಿಮಾನಕ್ಕೆ ಸಂಪೂರ್ಣ ಪಾತ್ರವಾಗಿರುವುದು.

ಹಿಂದೂಸ್ಥಾನವು ಸರಾಸರಿ ಮೇಲೆ ಜಪಾನ ದೇಶಕ್ಕಿಂತ ಮಿಲಿಟರಿ ಖರ್ಚನ್ನು ಅಧಿಕವಾಗಿ ಮಾಡುತ್ತದಾದರೂ ಭೂಸೈನ್ಯವಲ್ಲದೆ ಹಿಂದೂಸ್ಥಾನಕ್ಕೆ ಸಂಬಂಧವುಳ್ಳ ನೌಕಾಸೇನೆ ಸಾಹಿತ್ಯಗಳು ಇರುವುದಿಲ್ಲ. ನೌಕಾಸೇನೆಯ ಬಗ್ಗೆ ಸಂಪೂರ್ಣವಾಗಿ ಹಿಂದೂಸ್ಥಾನವು ಅಂಗ್ಲಾಂಡದ ಮೇಲೆ ಹೊಂದಿಕೊಂಡಿರಬೇಕು. ಸ್ವತಂತ್ರ ರಾಜ್ಯಗಳ ಮತ್ತು ಅಧೀನ ರಾಜ್ಯಗಳ ಸ್ಥಿತ್ಯಂತರವು ಎಷ್ಟೆಂಬುದು ಇಂಥಾ ದೃಷ್ಟಾಂತಗಳಿಂದ ವ್ಯಕ್ತವಾಗುವುದು,

• • • • •

ಫೋರ್ಡ ಮೋಟರ ಕಂಪೆನಿಯ ಮಾಲಿಕರಿಗೆ ೧೯೨೪ ಇಸವಿಯ ವರುಷದ ಬಾಬತು ೨ ಕೋಟಿ ೧ ಲಕ್ಷ ಪವನು ಮುನಾಫೆಯಾಗಿದೆ.

ಪತ್ರವ್ಯವಹಾರ.

ಪತ್ರಾಧಿಪರೇ,

ತಾಲೂಕು ಬೋರ್ಡು ಚುನಾವಣೆಗಳು ಮುಗಿದರೂ ಈ ಚುನಾವಣೆಗಳ ವಾಸನೆಯು ಇನ್ನೂ ಇದೆ, ಸ್ವರಾಜ್ಯಪಾರ್ಟಿ, ಅಸಹಕಾರ, ಇನ್ನು ನಾನಾ ತರದ ಹೆಸರುಗಳ ಆಡಂಬರವು ಈ ಊರಲ್ಲಿರುವಬಾದರೂ ಚುನಾವಣೆಗಳ ವಾಸನೆಯು ತೀರಲಿಲ್ಲ. ರಾ। ಪಡುಬಿದ್ರೆ ಬಲ್ಲಾಳರು ಜಿಲ್ಲಾ ಮೆಂಬರುತನಕ್ಕೆ ರಾಜಿಕೊಟ್ಟಿರುವರಂತೆ. ಹಾಗೆಯೇ ಅನಿಸಲ್ಪಟ್ಟ ಪ್ರೆಸಿಡೆಂಟರೂ ರಾಜಿಕೊಟ್ಟಿರುವರಾಗಿ ವರ್ತಮಾನ. ಈ ರಾಜಿಗಳ ಸಂಗತಿಯು ಹ್ಯಾಗಿದ್ದರೂ ಪ್ರೆಸಿಡೆಂಟ ಸ್ಥಾನಕ್ಕೂ ಮತ್ತು ಮೆಂಬರ ಸ್ಥಾನಕ್ಕೂ ಪೋಟಾಪೋಟಿಯು ಈಗಲೆ ನಡೆಯಲು ಪ್ರಾರಂಭವಾಗಿರುವದು. ಪೋಟಾಪೋಟಿಯು ಯಾವುದರಲ್ಲಿಯೂ ಬೇಕು. ಆದರೆ ಇಲ್ಲಿ ಮಾತ್ರ ಈ ಸ್ಪರ್ಧೆಯ ಸ್ವಭಾವವು ದುಷ್ಟವಾಗಿದೆ. ಜಾತಿ-ಜಾತಿ-ಜಾತಿ! ಯಾವುದರಲ್ಲಿಯೂ ಜಾತಿ! ಜಾತಿಗಳ ಹೆಸರನ್ನು ಹೇಳುವುದರಿಂದ ಪ್ರಯೋಜನವಿಲ್ಲ. ಚುನಾವಣೆಯ ಪರಿಯಂತ ಅತಿ ಆಪ್ತರಾಗಿರುವಂಥವರು ಈಗ ಕಡು ಶತ್ರುಗಳು. ಯಾವ ದೆಸೆಯಿಂದ ಇಂಥಾ ಭಾವನೆಗಳು ಉತ್ಪಾದಕವಾಗುವವೋ ತಿಳಿಯದು. ಇಷ್ಟು ವರೆಗೆ ತಾಲೂಕು ಬೋರ್ಡು ಮೆಂಬರರಾಗಿ ಮಾಡಿದ ಪ್ರಜಾಸೇವೆಯ ರಾಶಿಯನ್ನೂ, ಅಂಥಾ ರಾಶಿಯು ದೃಗ್ಗೋಚರವಾಗುವದು ಕಷ್ಟವಾದ್ದರಿಂದ, ಊಹನಾಬಲದಿಂದಲಾದರೂ ಗ್ರಹಿಸಿಕೊಂಡು ಈ ಚುನಾವಣೆಯ ವಾಸನೆಯಾದರೂ ಬೇಕೇಬೇಕೆಂದು ಹೇಳುವವೆಂದರೂ ಅಂಥಾ ಪ್ರಜಾಸೇವೆಯು ಊಹನೆಗೆ ಸಹ ಬಾರದು. ನಿಷ್ಠುರದ ಗಂಟು ಮಾತ್ರ ದೊಡ್ಡದಾಗುತ್ತ ಬಂದಿದೆ.

ಇನ್ನು ಸ್ವರಾಜ್ಯಪಾರ್ಟಿಯ ಸ್ಥಾಪನೆಗೆ ಕೆಲವರು ಸೊಂಟಕಟ್ಟಿದ್ದಾರೆ. ಮಂಗಳೂರಿನಿಂದ ಈ ಪಾರ್ಟಿಯವರ ತುತೂರಿನಿನಾದವು ರಾವ್ ಸಾಹೇಬ್ ಡಾಕ್ಟರ್ ಯು. ರಾಮರಾಯರ ಆಗಮನದ ನಂತರ ಮಂಗಳೂರಿನಿಂದ ಕೇಳಿಸುತ್ತಿರುವದು. ಈ ತುತೂರಿ ಧ್ವನಿಯಲ್ಲಿ ಈಗಲೆ ಅಪಸ್ವರಗಳು ಕೇಳಿಸುತ್ತಿವೆಯೆಂತ ಹಲವರಲ್ಲಿ ಅನುಮಾನವು ಕಂಡುಬಂದಿರುವುದು. ಒಂದು ಕಡೆ ಪತ್ರ ತುತೂರಿಗಳ ಮೂಲಕ ಸ್ವರಾಜ್ಯಪಾರ್ಟಿಯೆಂಬ ಹೆಸರನ್ನು ಹಾರಿಸಿಕೊಂಡು ಇನ್ನೊಂದು ಕಡೆಯಲ್ಲಿ ಜಿಲ್ಲೆಯ ಹುಟ್ಟು ಜಾತಿಗಳು ಒಂದಾಗಬೇಕು, ಇತರರಿಗೆ ಏನಿದೆ ಎಂದೆಂದುಕೊಂಡು ನ್ಯಾಯವಿಧಾಯಕ ಸಭೆಗಳ ಮೆಂಬರಿಕೆಗೆ ಈಗಲೆ ಪ್ರಯತ್ನಗಳ ಅಸ್ತಿವಾರವನ್ನು ಹಾಕುತ್ತಿರುವರೋ ಎಂಬ ಶಂಕೆಯು ಹಲವರಲ್ಲಿ ಮೂಡಿರುತ್ತದೆ. ಹ್ಯಾಗೂ ಯಾವ ಪಾರ್ಟಿಯನ್ನಾದರೂ ಇಲ್ಲಿ ನೆಲೆಗೊಳಿಸಲು ಬಲವಾದ ಕಾರಣಗಳನ್ನು ಕೊಟ್ಟು ಅಂಥಾದೊಂದು ಪಾರ್ಟಿಯು ಇಲ್ಲದೆ ಇಲ್ಲಿ ಹಾಳಾಗಿ ಹೋಗುವ ಸಂದರ್ಭಗಳನ್ನು ತೋರಿಸಿಕೊಟ್ಟು ನಂತರ ಯಾವುದಾದರೂ ಪಾರ್ಟಿಯ ನಾಮೋಚ್ಚರಣೆಯನ್ನು ಮಾಡಿದರೆ ಸಾರ್ಥಕವಾಗುವುದು. ಅದರ ಮೊದಲು ಪಾರ್ಟಿಗಳೆಂದರೆ-ಜಾತಿ ಪಾರ್ಟಿಗಳು!

ಇನ್ನೊಂದು, ಉಡುಪಿಯ ಶಹರಿನಲ್ಲಿ ಮುನ್ಸಿಪಾಲಿಟಿ ಸ್ಥಾಪಿಸೋಣಾಗುವ ಒಂದು ಪ್ರಸ್ತಾಪವು ನಡಿಯುತ್ತಿರುವದು. ಎಷ್ಟೋ ಜನರು ಕೌನ್ಸಿಲರರಾಗಿ ನೇಮಿಸಲ್ಪಡಲಿಕ್ಕೂ ಮುನ್ಸಿಪಲ್ ಚೇಯರ್ಮನರಾಗಿ ನೇಮಕಹೊಂದಲಿಕ್ಕೂ ಹಲವು ನೌಕರರ ಕಾಲು ಹಿಡಿಯಲಿಕ್ಕೆ ಮಂಗಳೂರಿಗೆ ಬಹಳ ಸರ್ತಿ ಹೋಗಿ ಬಂದದ್ದಾಯಿತು. ಇಲ್ಲಿ ಮುನ್ಸಿಪಾಲಿಟಿ ಯಾಕೆ ಬೇಕೆಂಬುದನ್ನು ಸರಿಯಾಗಿ ಆಲೋಚಿಸುವಂಥಾ ಶಕ್ತಿಯು ಸಹ ಇಲ್ಲದೆ ಬರೆ ಪದವಿಗಳ ಪ್ರೇಮದಿಂದ ಅತ್ಯಿತ್ತ ಕುಣಿದಾಡುತ್ತಿರುವವರನ್ನು ನೋಡಿದರೆ ಎಂಥವನಿಗಾದರೂ ನಗೆ ಬಾರದೆ ಇರದು. ಆದರೆ ಕೆಲವು ಮುನ್ಸಿಪಾಲಿಟಿಗಳ ಆಡಳಿತೆಗಳ ಕ್ರಮವನ್ನು ಇಂಥವರು ನೋಡಿಕೊಂಡು, ಅಂಥಾ ಕಡೆಗಳಲ್ಲಿ ಉಂಟಾಗುತ್ತಿರುವ ಲಾಭದೃಷ್ಟಿಯಿಂದ ಈ ಪದವಿಗಳ ಬಗ್ಗೆ ಕುಣಿದಾಡುತ್ತಾರೊ ಏನೋ?

ಪಟ್ಟಣದ ಆರೋಗ್ಯ ಸ್ಥಿತಿಯು ಚನ್ನಾಗಿಲ್ಲ. ಜ್ವರದ ಬಾಧೆಯು ಅಲ್ಲಲ್ಲಿರುವಾಗ ಇದರೊಂದಿಗೆ ಈಗ ಮೈಲಿಗೆಯೂ ಬಂದು ಬಿಟ್ಟಿದೆ. ಇತ್ತಿತ್ತಲಾಗೆ ಚುನಾಯಿಸಿಬಂದ ತಾಲೂಕು ಬೋರ್ಡು ಮೆಂಬರರು ಇಂಥಾ ಸಂದರ್ಭಗಳಲ್ಲಿ ತಾವು ಮಾಡಬೇಕಾದ ಕರ್ತವ್ಯಗಳನ್ನು ತಿಳಿದರೆ ಚುನಾವಣೆಯ ವಾಸನೆಯಾದರೂ ಸ್ವಲ್ಪ ಕಡಿಮೆಯಾಗಬಹುದು.

ಉಡುಪಿಯಲ್ಲಿರುವ ಸಹಕಾರದ ಲೇವಾದೇವಿ ಸಂಘಗಳಿಗೆ ಕಡಿಮೆ ಇಲ್ಲ. ಇವುಗಳ ನಂತರ ಕಂಪೆನಿ ಆಕ್ಟು ಪ್ರಕಾರ ರಿಜಿಸ್ಟ್ರಿಯಾಗಿ ವ್ಯವಹಾರಗಳನ್ನು ನಡಿಸುತ್ತಿರುವ ಎರಡು ದೊಡ್ಡ ಬೇಂಕುಗಳಿವೆ ಈಗ ಮೂರನೇ ಇನ್ನೊಂದು ಬೇಂಕು ಸ್ಥಾಪನೆಯಾಗುವದು ಧಂಡವಾಳ ಎರಡುಲಕ್ಷವಂತೆ. ಇನ್ನು ಬರೆಯತಕ್ಕ ಕೆಲವು ಸಾಮಾನ್ಯ ವಿಷಯಗಳಿವೆ. ಅವನ್ನು ಇನ್ನೊಮ್ಮೆ ಬರಕೊಳ್ಳುವೆನು.

ಉಡುಪಿ, ತಾ. ೨೬—೪—'೨೫.

ಡಿಸ್ಟ್ರಿಕ್ಟ್ ಬೋರ್ಡಿನವರನ್ನು ನಿದ್ರೆಯಿಂದ ಎಚ್ಚರಿಸುವದು ಹೇಗೆ?

ಅಯ್ಯಾ,

ತಾಲೂಕು ಬೋರ್ಡುಗಳು ಇತ್ಯಾದಿಗಳ ಮೆಂಬರರನ್ನು ಆರಿಸುವ ಬೊಬ್ಬಾಟವನ್ನು ನಡಿಸಿದ್ದನ್ನು ನೋಡಿದರೆ ಇನ್ನು ಸ್ವಲ್ಪದರಲ್ಲಿಯೇ ನಮಗೆ ಸ್ವರಾಜ್ಯ ಪ್ರಾಪ್ತಿಯಾಗುವದೆಂತ ನೆನಸಿದೆವು. ಆದರೆ ಊರಲ್ಲಿ ಎಂಥಾ ಬೊಬ್ಬೆಯಿದ್ದರೂ ಡಿಸ್ಟ್ರಿಕ್ಟ ಬೋರ್ಡನ್ನು ಎಚ್ಚರಿಸುವದು ಸಾಧ್ಯವಲ್ಲ. ಸ್ವರಾಜ್ಯ ಪ್ರಾಪ್ತಿಗೆ ಬ್ಯುರೋಕ್ರೇಟರು ಅಡ್ಡ ಬಂದು ನಿಲ್ಲುತ್ತಾರೆಂತ ಹೇಳಿ ಪ್ರಜೆಗಳ ಅಭಿಪ್ರಾಯಗಳನ್ನು ಮೂಲೆಗೊತ್ತುತ್ತಾರೆಂತ ಪತ್ರಗಳಲ್ಲಿ ಟೀಕೆಯು ಬರುತ್ತಿರುವಾಗ ಇಂಥಾ ಬ್ಯುರೋಕ್ರೇಟರಂತೆಯೇ ತಾವೂ ಮೆರೆಯುವವೆಂತ ಹಳ್ಳಿ ಜನರು ಯಾವ ರೀತಿ ಕೂಗಿದರೂ ನಮ್ಮ ಡಿಸ್ಟ್ರಿಕ್ಟ ಬೋರ್ಡಿನ ಬ್ಯುರೋಕ್ರೇಟರು ಕೇಳುವದಿಲ್ಲ. ಬಂಟವಾಳ ಬೆಳ್ತಂಗಡಿ-ಚಾರ್ಮಾಡಿ ರಸ್ತೆಯಲ್ಲಿ ಗಾಡಿಗಳು ಮುರಿದು ಬೀಳುತ್ತವೆ, ಹೋರಿಗಳ ಕುತ್ತಿಗೆ ಮುರಿಯುತ್ತದೆ, ಹಾದಿಯಲ್ಲಿ ಬಿದ್ದ ಹೊಂಡಗಳಿಗೆ ಲೆಕ್ಕವೇ ಇಲ್ಲ, ಎಂತ ಎಷ್ಟು ಕೂಗಿದರೂ ರಸ್ತೆಗಳು ದುರುಸ್ತಿಯಾಗುವ ಸಮಯ, ಅಂದರೆ ಜೋರಿನಿಂದ ಮಳೆ ಬಂದು ರಸ್ತೆಯಲ್ಲಿ ಹಾಕಿದ ಮೆಟಲ್ ಇತ್ಯಾದಿಗಳು ತೇಲಿಹೋಗುವ ಸಮಯ, ರಸ್ತೆ ರಿಪೇರಿ ಕೆಲಸಗಳನ್ನು ಮಾಡುವ ಅನುಕೂಲ ಸಮಯ, ಇಂಥಾ ಸಮಯವು ಬಂದೊದಗದೆ ಯಾವ ಕೆಲಸವನ್ನೂ ಬೋರ್ಡಿನವರು ಮಾಡಿಸಲಿಕ್ಕಿಲ್ಲ. ಈಗ ಹ್ಯಾಗೂ ಇನ್ನೊಂದು ಬಲವಾದ ವಾದವನ್ನು ಬೋರ್ಡಿನವರ ಸಹಾಯಕ್ಕಿದೆ ಅದೇನೆಂದರೆ—ಗಾಡಿಗಳು ಬರುವಂಥಾದ್ದು ಈಗ ಕಡಿಮೆಯಾದ್ದರಿಂದ ಮಳೆಗಾಲದಲ್ಲಿಯೇ ಗಟ್ಟಿಯಾದ ರಿಪೇರಿಯನ್ನು ಮಾಡಿಸಬಹುದು. ಬಸ್ಸುಗಳು ಚಲಾವಣೆಯಾಗುತ್ತವೆ. ಅವುಗಳು ಮುರಿದು ಬೀಳುತ್ತವೆ ಅದರೂ ಚಿಂತೆಯಿಲ್ಲ. ಬಸ್ಸುಗಳು ಕೆಲವರು ಹಣಸಂಪಾದನೆಗೆ ಇಟ್ಟಿರುವದಲ್ಲದೆ ಅಂಥವುಗಳು ಮುರಿದು ಬಿದ್ದರೆ ನಮಗೇನು ನಷ್ಟ! ಹಾಗೆ ಬೀಳುತ್ತಾ ಬೀಳುತ್ತಾ ಬಸ್ಸುಗಳ ಸಂಖ್ಯೆಯಾದರೂ ಕಡಿಮೆಯಾಗಲಿ—ಈ ವಾದವನ್ನು ಇಟ್ಟುಕೊಂಡು ಅತೀ ವಿಶೇಷವಾದ ನಿಷ್ಠುರತೆಯಿಂದ ರಸ್ತೆಯಲ್ಲಿರುವ ಅತಿ ದೊಡ್ಡ ಹೊಂಡಗಳನ್ನು ಸಹ ಸರಿಪಡಿಸದೆ ಇರುವರು. ಇನ್ನು ಸುಪರಿಂಟೆಂಡೆಂಟ್ ಇಂಜಿನಿಯರು ಇತ್ಯಾದಿ ಸರಕಾರದ ಆಫೀಸರರು ಬಂದುಹೋಗಿ ಡಿಸ್ಟ್ರಿಕ್ಟ ಬೋರ್ಡು ರಸ್ತೆಗಳ ವಿಷಯ ಶಿಫಾರಸುಗಳ ಬರೆದ ನಂತರ ಮತ್ತೇನು ಯಾರು ಹೇಳಿದರೂ ಆಗುವದು? ಪಿಡಿಗಲ್ ಸಂಕವು ಮುರಿದು ಹೋದದ್ದು ಸರಿಯಾಗುತ್ತಾ ಬಂದು ಮಳೆಯು ಅತಿ ವಿಶೇಷವಾಗಿ ಬೀಳುವಾಗ ಚಲಾವಣೆಗೆ ಸಿದ್ಧವಾಗುವದು. ಶ್ರೀ ದೇವರ ದಯೆಯಿಂದ ಕೆರೆಯು ಬಂದು ಚೆಲೋವನೆಯಾಗಿ ಮತ್ತೆರಡು ಕಡೆಗಳಲ್ಲಿ ಸಂಕವು ಜರಿದುಹೋದ ಪಕ್ಷದಲ್ಲಿ ಯಾರಿಗೆ ದೂರಿ ಏನು ಪ್ರಯೋಜನ? ಅದ್ದರಿಂದ ದೊರೆಟ್ಟಿಗೆ ನೆರೆಯ ಸಹಾಯದ ಸಂಭವವು ವಿಶೇಷವಾಗಿರುವಾಗ ನಿದ್ದೆಯಿಂದ ಯಾತಕ್ಕೆ ಏಳಬೇಕು? ಯಾರಭಿಪ್ರಾಯವನ್ನು ಯಾಕೆ ಪರಿಗಣಿಸಬೇಕು? ಮಾರ್ಗಗಳನ್ನು ಸರಿಪಡಿಸದೆ ಇದ್ದರೂ, ರೈತವರ್ಗಕ್ಕೆ ಬೇಕಾದ ಅನುಕೂಲತೆಗಳನ್ನು ಸಂಗ್ರಹಿಸಿಕೊಡದೆ ಹೋದರೂ, ಟೆಂಡರುಗಳ ಸಮ್ಮತಿ ಮಾಡಿ ಅವುಗಳನ್ನು ಕ್ಲಪ್ತಕಾಲದಲ್ಲಿ ಸಂಗ್ರಹಿಸಿ ಡಿಸ್ಟ್ರಿಕ್ಟ ಬೋರ್ಡಿನ ಇಂಥಿಂಥಾ ಕಾಲದಲ್ಲಿ ಇಂಥಿಂಥವರ ಆಡಳಿತೆಯಲ್ಲಿ ಇಂತಿಷ್ಟು ಇದ್ದ ಬೋರ್ಡಿನ ಉತ್ಪತ್ತಿಯನ್ನು ಇಂತಿಷ್ಟು ಲಕ್ಷಕ್ಕೆ ಏರಿಸಿದೆವು ಎಂತ ಮಿಸೆ ಎಳದು ತೋರಿಸಿಬಿಟ್ಟರೆ ಎಲ್ಲಿ ಹೋದರೂ ಶಿಫಾರಸು, ಅದರಿಂದ ನಿದ್ದೆಯಿಂದ ಯಾಕೆ ಏಳಬೇಕು? ಮೆಂಬರರು! ಡಿಸ್ಟ್ರಿಕ್ಟ ಬೋರ್ಡು ಮೆಂಬರರು! ಇವರ ಕಾರಬಾರಿನ ಗುಟ್ಟೆಲ್ಲ ನಮಗೆ ಗೊತ್ತಿರುವದು ಮತ್ತು ಯಾವುದಕ್ಕೂ ಅವರು ಕೈಗಟ್ಟುವಾಗ ಆಡಳಿತೆಯಲ್ಲಿ ಯಾವ ದೋಷಗಳು ಬಂದಾವು! ಅದ್ದರಿಂದ ನಿದ್ರೆಯಿಂದ ಯಾಕೆ ಏಳಬೇಕು? ಬಂಟವಾಳ ಚಾರ್ಮಾಡಿ ಮಾರ್ಗವು ನಮ್ಮ ಜಿಲ್ಲೆಯಲ್ಲಿ ಘಟ್ಟಗಳ ಮೇಲಿನ ವ್ಯಾಪಾರ ವ್ಯವಹಾರಗಳಿಗೆ ಮುಖ್ಯ ಮಾರ್ಗವಾಗಿದೆ. ರಸ್ತೆಯು ಸರಿಯಿಲ್ಲದೆ ಹೋದ್ದರಿಂದ ಸರಕುಗಳ ಸರಾಗವಾದ ವೈವಾಟಿಕ್ಕೆ ವಿಪರೀತ ಅಡಚಣೆಯುಂಟಾಗಿ ವ್ಯಾಪಾರ ನಷ್ಟವು ಜಿಲ್ಲೆಗೆ ವಿಶೇಷವಾಗಿ ಉಂಟಾಗುತ್ತಿರುವುದು. ಆದರೆ ವ್ಯಾಪಾರಿಗಳು ಡಿಸ್ಟ್ರಿಕ್ಟ ಬೋರ್ಡಿನಲ್ಲಿ ಯಾರಿರುವರು? ಇದ್ದರೂ ರಸ್ತೆಗಳು ಕೆಟ್ಟುಹೋದರೆ ವ್ಯಾಪಾರವು ಕೆಡುತ್ತದೆಂಬದು ಅವರಿಗೆ ಹ್ಯಾಗೆ ಗೊತ್ತು? ಈ ರೀತಿ ಡಿಸ್ಟ್ರಿಕ್ಟ ಬೋರ್ಡಿನ ಪ್ರಭುತ್ವವು ಮೆರೆಯುತ್ತಿರುವಾಗ ಅದನ್ನು ನಿದ್ರೆಯಿಂದ ಎಚ್ಚರಿಸುವದೆಂದರೆ ಸಾಮಾನ್ಯ ಕೆಲಸವೇ? ಆದರೆ ಮುಟ್ಟಿಗೆ ಹ್ಯಾಗಾದರೂ ಯಾರಿಗೂ ಲಗಾವಿಲ್ಲ, ಆ ಜಾತಿ ಈ ಜಾತಿ ಮೆಂಬರರು ಇದ್ದುಕೊಂಡು ಮತ್ಯಾವ ಜಾತಿಯರಿಗೂ ನೌಕರಿ ಸಿಕ್ಕೀತೆಂತ ಕಾರ್ಯದಲ್ಲಿ ಏನೂ ಮಾಡಲಿಕ್ಕಾಗದೆ ಮನಸ್ಸಿನಲ್ಲಿ ಮಾತ್ರ ನೊಂದುಕೊಂಡು ಇದ್ದು ಎಲ್ಲಕ್ಕೂ ಕೈಗುಟ್ಟಿ ಬಂದರೆ ಡಿಸ್ಟ್ರಿಕ್ಟ ಬೋರ್ಡು ಎಷ್ಟು ಕಾಲವಾದರೂ ಸುಖರೂಪಿ ನಿದ್ರೆಯಿಂದ ಇರಬಹುದು. ಅದಲ್ಲದೆ ಈಗ ಇತ್ತಲಾಗೆ ಪತ್ರಗಳಲ್ಲಿ ಪ್ರಕಟವಾದಂತೆ ಡಿಸ್ಟ್ರಿಕ್ಟ ಬೋರ್ಡು ಮೆಂಬರರುಗಳ ಚುನಾವಣೆ ಮೂಲಕ ಮತ್ತು ನೋಮಿನೇಶನುಗಳ ಮೂಲಕ ಹೊಸ ಮೆಂಬರರಾಗಿ ಬಂದವರ ಹೆಸರುಗಳನ್ನು ನೋಡಿದರೆ ಈ ಸುಖರೂಪಿ ನಿದ್ರೆಯಿಂದ ಎಚ್ಚರಿಕೆಯಾಗುವ ಯಾ : ಸಂದರ್ಭವು ಕಾಣದಿಲ್ಲ. ಅದ್ದರಿಂದ ಮಳೆ ಮತ್ತು ನೆರೆಗಳನ್ನು ಕಳುಹಿಸಿ ಕೊಡುವ ದೇವರು ಈ ವರುಷ ಮಳೆಗಾಲದಲ್ಲಿ ಮಳೆ ನೆರೆಗಳ ನೀರಿನೊಂದಿಗೆ ಬಂಟವಾಳದಿಂದ ಚಾರ್ಮಾಡಿ ನಮ್ಮ ಜಿಲ್ಲೆಯ ಗಡಿಯ ವರೆಗೂ ಒಳ್ಳೇ ಕಲ್ಲು ಹಾಕಿದ ಮಾರ್ಗವನ್ನು ಕಳುಹಿಸಿಕೊಡಬೇಕೆಂಬ ಪ್ರಾರ್ಥನೆಯನ್ನು ಮಾಡುವದೊಂದೇ ಉಪಾಯವು ಈ ಪ್ರಾಂತ್ಯದವರಿಗೆ ಉಳಿದಿರುವದಲ್ಲದೆ ಮತ್ಯಾವ ಸಾಧನವೂ ಕಾಣದು.

ದಾರಿಗ.

ಹೊಸಬೆಟ್ಟು ಗ್ರಾಮದಲ್ಲಿ ಜರಗಿದ ಮದ್ಯಪಾನ ನಿಷೇಧಕ ಸಭೆ.

ಇಲ್ಲಿ ಕಳೆದ ೨೩-೪-'೨೫ರಲ್ಲಿ ಶ್ರೀಯುತ ವೆಂಕಟೇಶ ಸಾಲಿಯಾನರ ಉತ್ತೇಜನದಿಂದ ಮೊಗವೀರರ ಒಂದು ಮಹಾಸಭೆಯು ರಾ। ಇಡ್ಯ ನಾರಾಯಣರಾಯರ ಅಧ್ಯಕ್ಷತೆಯಲ್ಲಿ ಕೂಡಿಬಂತು. ಈ ಸಭೆಗೆ ಶ್ರೀ ಜ್ಞಾನೋದಯ ಸಮಾಜದ ಅನೇಕ ಸದಸ್ಯರೂ ಬಂದಿದ್ದರು. ಮನುಷ್ಯನ ಬುದ್ಧಿಶಕ್ತಿಯ ವಿಕಾಸಕ್ಕೆ ಮೂಲವಾದ ಮೆದುಳನ್ನು ಮದ್ಯಪಾನವು ಹ್ಯಾಗೆ ನಿಸ್ತೇಜಗೊಳಿಸುವುದೆಂಬುದನ್ನು, ಇದರಿಂದ ಉಂಟಾಗುವ ಅನರ್ಥಗಳನ್ನು ವಿವಿಧ ಉದಾಹರಣೆಗಳ ಮೂಲಕವೂ ಕಥಾ ಕೀರ್ತನ ಭಾಷಣಗಳಿಂದಲೂ ರಾ। ಮೋಹನಪ್ಪ ತಿಂಗಳಾಯರು ವರ್ಣಿಸಿದರು. ತರುವಾಯ ಅಧ್ಯಕ್ಷರು ಆಲೋಚಿತ ಭಾಷಣಮಾಡಿ ಮನುಷ್ಯ ಜನ್ಮದ ಸಾರ್ಥಕತೆಯನ್ನು ಹ್ಯಾಗೆ ಸಾಧಿಸತಕ್ಕದ್ದೆಂದು ಹೇಳಿದರು. ಹೊಸಬೆಟ್ಟು ಮೊಗವೀರರೂ ಸಿಕಾರಕ್ಕೆಸನನ್ನು ತಮ್ಮ ಮನಃಶಕ್ತಿ ಎಂಬ ಆಯುಧದಿಂದ ಜಯಿಸಿ ಕೀರ್ತಿಪಡೆಯಬೇಕೆಂದು ರಾ। ವೆಂಕಟೇಶ ಸಾಲಿಯಾನರು ಕೇಳಿಕೊಂಡರು. ಹೊಸಬೆಟ್ಟು ಮೊಗವೀರ ಪಟ್ಟಣದ ಮುಖ್ಯಸ್ಥರಾದ ರಾ। ತಿಮ್ಮ ಗುರಿಕಾರರೂ, ರಾ। ಊರು ಗುರಿಕಾರರೂ ಆಗ ಮುಂದೆ ಬಂದು ತಾವು ಇನ್ನು ಎಂದಿಗೂ ಮದ್ಯಪಾನ ಮಾಡಲಿಕ್ಕಿಲ್ಲವೆಂದು ಶಪಥಮಾಡಿದರು. ನಂತರ ಇವರನ್ನು ಹಿಂಬಾಲಿಸಿ ಇತರ ಮೂವತ್ತನಾಲ್ಕು ಜನ [illegible] ಮದ್ಯಪಾನತ್ಯಾಗ ವ್ರತವನ್ನು ಕೈಕೊಂಡರು! ಕಠಿಣ ಕಾಹಿಲೆಗಳಲ್ಲಿ ವೈದ್ಯರು ಮದ್ಯಪಾನ ಮಿಶ್ರಿತಮಾಡಿ ಕೊಟ್ಟ ಔಷಧಿಯನ್ನಾದರೂ ಸೇವಿಸದೆ ಪ್ರಾಣಹೋದರೂ ಮದ್ಯಪಾನವನ್ನು ಮುಟ್ಟಲಿಕ್ಕಿಲ್ಲವೆಂದು ಹಟಹಿಡಿದು ತಮ್ಮ ವ್ರತವನ್ನು ಪರಿಪಾಲಿಸಿ ಆರೋಗ್ಯ ಹೊಂದಿದ ಸಮಾಜದ ಕೆಲವು ವೀರ ಸದಸ್ಯರ ಉದಾಹರಣೆಗಳನ್ನು ಜೊಯಿಗೆ ಬಜಾರ ರಾ। ಕೋಟಿ ಮುಂಡಪ್ಪಯರು ಹೇಳಿ ಮದ್ಯಮೋಹರಾಕ್ಷಸನನ್ನು ಸೋಲಿಸುವ ವಿಧಾನವನ್ನು ನವೀನ ವ್ರತಧಾರಿಗಳಿಗೆಲ್ಲ ತಿಳಿಸಿದರು.

— ಪ್ರಕಟನೆ. —

ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿ, ಗದಗ.

ಇಸವಿ ಸನ್ ೧೯೨೫ನೆಯ ಮೇ ತಿಂಗಳ ೧೩ನೆಯ ತಾರೀಖು ಬುಧವಾರ ದಿವಸ ಸಂಜೆಯು ೬ ಘಂಟೆಗೆ ಬೆಳಗಾವಿಯಲ್ಲಿ ಕ. ಪ್ರಾ. ಕ.ಯ ಕಚೇರಿಯಲ್ಲಿ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಸಾಧಾರಣ ಅಧಿವೇಶನವು ಜರಗುವುದು. ಯಾವತ್ತು ಸದಸ್ಯರು ಬರಬೇಕೆಂದು ಬೇಡಿಕೆಯದೆ.

— ಚರ್ಚಿಸತಕ್ಕ ವಿಷಯಗಳು. —

೧ ಬೆಳಗಾವಿಯ ರಾಷ್ಟ್ರೀಯ ಮಹಾಸಭೆಯ ಅಧಿವೇಶನದಲ್ಲಿ ಹಾಕಿ ಕೊಟ್ಟ ಕಾರ್ಯಕ್ರಮವನ್ನು ಮುಂದರಿಸುವ ಕುರಿತು ಮಾಡತಕ್ಕ ಯೋಜನೆಯು.
೨ ಈ ವರುಷದ ಆಯ—ವ್ಯಯದ ಅಂದಾಜು ಪತ್ರಿಕೆಯನ್ನು ತಯಾರಿಸುವುದು.
೩ ಕಳೆದ ವರುಷದ ಲೆಕ್ಕವನ್ನು ಮಂಜೂರು ಮಾಡುವುದು.
೪ ಕಳೆದ ಅಧಿವೇಶನದಲ್ಲಿ ಚರ್ಚಿಸದೆ ಉಳಿದ ವಿಷಯಗಳ ವಿಚಾರಣೆ.
೫ ಅಧ್ಯಕ್ಷರ ಅಪ್ಪಣೆಯ ಮೇರೆಗೆ ಅನ್ಯ ವಿಷಯಗಳು.

ಗದಗ, ೨೬—೪—'೨೫. } ಮಧ್ವರಾವ ಕೆಂಭಾವಿ,
ಕಾರ್ಯದರ್ಶಿ ಕ. ಪ್ರಾ. ಕಾ. ಕ.

ಆರೋಗ್ಯಚಂದ್ರಿಕೆ.

ಮದ್ರಾಸ.

ಸಂಪಾದಕರು: ಡಾಕ್ಟರ್ ಯು. ರಾಮರಾವ್, ಎಲ್. ಎಮ್. ಸಿ. ಎಫ್. ಎಮ್. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ಕೊಡುವುದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ.

ಈ ಮಾಸಪತ್ರಿಕೆಯು 'ಹೆಲ್ತ್' ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ.

ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವುದು.

'ಹೆಲ್ತ್' ಎಂಬ ನಮ್ಮ ಇಂಗ್ಲಿಷ್ ಪತ್ರಿಕೆಯನ್ನೋದಿ ಸಂತೋಷಿಸಿದ ಅನೇಕ ದೊಡ್ಡ ಮನುಷ್ಯರ ಪ್ರೇರಣದ ಮೇಲೆ ಈ ಕನ್ನಡ ಪತ್ರಿಕೆಯನ್ನು ಹೊರಪಡಿಸಿದೆ.

ಅದರ ಸಂಪುಟ ೨ ಮತ್ತು ೧೦ನೆ ನಂಬರ ೧೯೨೫ ಸಂಚಿಕೆಯಲ್ಲಿ ಕಾಣಿಸಿರುವ ವಿಷಯಗಳು.

ಮುಖಚಿತ್ರ:—ಪರ್ವತವಾಸಿನಿ ಒಬ್ಬ ರೂಪವತಿ.
ಶ್ವಾಸಕ್ರಮ ಅಥವಾ ಪ್ರಾಣಾಯಾಮ
ಹುಣಿಸೇಹಣ್ಣಿನ ಆಹಾರಗುಣಗಳೂ ಔಷಧಗುಣಗಳು.
ಕಾಲುನಡೆಯೇ ಉತ್ತಮವಾದ ವ್ಯಾಯಾಮವು
ಜೇನಿನಲ್ಲಿರುವ ಗುಣಗಳು.
ಹಲ್ಲುಗಳ ರಚನೆ, ಪ್ರಯೋಜನ, [illegible].
ಮದ್ಯಪಾನಕಗಳಿಂದ ಆರೋಗ್ಯಕ್ಕೆ ಆಗತಕ್ಕ ಹಾನಿ.
ಅಂಗಸಾಧನೆ ಮತ್ತು ಬುದ್ಧಿವ್ಯಸನ (ವಿದ್ಯಾಭ್ಯಾಸ).
ಗಾಯಗಳು, ಮತ್ತು ಉಳುಕು ತಾಗುವವು, ಅವುಗಳ ಚಿಕಿತ್ಸೆ
ನವನಾಗರಿಕ ಪ್ರಪಂಚಕ್ಕೆ ಸಹಜವಾದರೂ ಕೆಡುಕುಗಳು.
ಒಬ್ಬ ಉಪವಾಸಿಯ ಅನುಭವ.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವುವು. ಆರೋಗ್ಯಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಇದೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯಿಂದಾ ಮೊಬಲಗು ವರ್ಷಕ್ಕೆ ರೂ. ೧—೮—೦; ಬಿಡುಪತ್ರಿಕೆ ಒಂದಕ್ಕೆ. ೦—೨—೦. ಹಿಂದಿನ ಸಂಚಿಕೆಗಳು ಕೂಡ ದೊರಿಯುವವು.

ಚಂದಾದಾರರಾಗುವವರು ವಿ. ಪಿ.ಮೂಲಕವಾಗಿ ತರಿಸಿಕೊಳ್ಳುವುದಕ್ಕಿಂತಲೂ ಹಣವನ್ನು ಮುಂಗಡವಾಗಿ ಕಳುಹಿಸುವುದು ಲಾಭಕರ. ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು 'ಆರೋಗ್ಯ ಚಂದ್ರಿಕೆ'ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು.

ಪತ್ರವ್ಯವಹಾರಕ್ಕೆ: 'ಆರೋಗ್ಯ ಚಂದ್ರಿಕೆ'
೩೩೩ ತಂಬುಚೆಟ್ಟಿ ಬೀದಿ, ಮದ್ರಾಸ್.

ತುಳು ಪಾಡ್ದನಗಳು.

ಬೊಬ್ಬರ್ಯ, ಕಲ್ಲುರ್ಟಿ—ಕಲ್ಕುಡ, ದೈಯ್ಯೊಂಗುಳು—ಕೋಡಕಿನಾರ್, ಮುಂಡತ್ತಾಯ ೩ ಒಂದಕ್ಕೆ 2 ಆಣೆ. 1½ ಆಣೆ ಟಪ್ಪಾಲು ಚೀಟು ಕಳಿಸಿದರೆ 5 ಪುಸ್ತಕಗಳು ಕೂಡಲೇ ಕಳುಹಿಸಲ್ಪಡುವವು.

ವಿಳಾಸ: ಶಾರದಾಛಾಪಖಾನೆ,
ರಥಬೀದಿ, ಮಂಗಳೂರು

The Canara Bank, Limited, Magnalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.
Authorised and fully paid up Capital Rs. 300,000—0—0
Reserve and other sinking Funds „ 259,000—0—0

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
ಅಧಿಕಾರಗೊಳಿಸಲ್ಪಟ್ಟು, ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
ಕ್ಷೇಮನಿಧಿ ಮತ್ತು ಇತರ ಫಂಡುಗಳು 259,000—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲ್ಪಡುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1925.
K. Venkat Rao,
Secretary

ಪರೀಕ್ಷಾಕಾಲ.

ವಿದ್ಯಾರ್ಥಿಗಳೇ ಇತ್ತ ನೋಡಿರಿ.

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ನೋಯುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ.

"ಸಾರಸ್ವತಾಸವ"ವು ಒಳಗಿನ ಮುಖ್ಯಾವಯವಗಳಲ್ಲುಂಟಾಗುವ ವ್ಯತ್ಯಾಸವನ್ನು ಸರಿಪಡಿಸಿ, ಜೀರ್ಣಶಕ್ತಿಯನ್ನು ಹೆಚ್ಚಿಸಿ, ಪಂಕ್ತಿಭ್ರಮಣೆ ತಲೆತಿರುಗು, ನಿತ್ರಾಣವು, ಇಂದ್ರಿಯ ದೌರ್ಬಲ್ಯಗಳನ್ನು ಹೋಗಲಾಡಿಸಿ ಶುದ್ಧರಕ್ತವನ್ನು ವೃದ್ಧಿಪಡಿಸುತ್ತದೆ. ಸೀಸೆ 1ಕ್ಕೆ ಬೆಲೆ 1 ರೂಪಾಯಿ, ಪೋಸ್ಟೇಜು ಬೇರೆ,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ—ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ ಹೊಟ್ಟೆನೋವು ಇಂಪ್ಲೂಯಂಜಾ ಪ್ಲೇಗುಜ್ವರ.

ಮಕ್ಕಳ—ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು.

ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗರ್ಭಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳ ವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಬ್ರಾಂಚ್ ಆಫೀಸ್, ಚಿಕ್ಕಪೇಟೆ, ಬೆಂಗಳೂರು ಸಿಟಿ.
ಹೆಡ್ ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಪಾಳ್ಯದ ವೆಂಕಟಾಚಲ ಪಂಡಿತರು,
ಏಜಂಟರು:—
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ,
ಮಂಗಳೂರು ಟವನಿಗೆ ಮಾತ್ರ.

ವಿದ್ಯಾವಾಚಸ್ಪತಿ
ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ
"ಸಂಕ್ಷೇಪಗೀತೆ"

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ್ಳ, ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದೆ ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೦. ಟಪ್ಪಾಲು ಖರ್ಚು ಕೂಡಿ ಆಣೆ ೧೧ನ್ನು ಮನಿಯಾರ್ಡರಿ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ೩ರಿಕ್ಕಿಂತ ಜಾಸಿ ಖರ್ಚು ತಗಲುವುದು. ೧೦ಕಿಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.

ಪುಸ್ತಕ ದೊರಿಯುವ ವಿಳಾಸ:—

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು. ಮತ್ತು
ಕೆನರಿಸ್ ಮಿಶ್ಯನ್ ಬುಕ್ ಎಂಡ್ ಟ್ರ್ಯಾಕ್ಟ ಡಿಪೋಜಿಟರಿ,
ಮಂಗಳೂರು.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀಕಾಶೀ, ಗಯಾ, ಪ್ರಯಾಗ, ಹರಿದ್ವಾರ ಬದರಿನಾರಾಯಣ ದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಮಹಿಗಳೊಡನೆ ಭೆಟ್ಟಿಯಾಗಿ ಅವರ ಕಡೆಯಿಂದಅನುಭವ ತೆಗೆದು ಪ್ರತಿವಂದು ಸಿದ್ಧಮಾಡಿಕೊಂಡು ಬರೆದಿರುವರು. ೧ನೇದು ಮಂತ್ರಪ್ರಕರಣದಲ್ಲಿ ಮಂತ್ರ ಪಠಣದಿಂದಲೂ, ಮಂತ್ರಪ್ರಯೋಗದಿಂದಲೂ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವೂ ಇದೆ. ೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ, ಆಸನದಡಿಯಲ್ಲಿ ರೂಪಾಯಿಗಳು ಹೊರಡುವಿಕೆ, ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಾಶ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅವನ್ನು ಸಿದ್ಧಿ ಮಾಡಿಕೊಳ್ಳುವ ವಿವರವೂ ಇದೆ. ೩ನೇದು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು. ೪ನೇದು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾರ್ಥಗಳ ಜುಟ್ಟು ಸಹ, ಇದರಲ್ಲಿ ಉಂಟು, ಇದು ಪ್ರತಿಯಂದು ಕುಟುಂಬದಲ್ಲಿ ಉಂಟಾಗುವ ಯಾವತ್ತೂ ರೋಗಗಳಿಗೂ ಸುಲಭವಾಗಿ ಔಷಧ ಮಾಡುವ ಕ್ರಮವನು ಚೆನ್ನಾಗಿ ಬರೆದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಳಾಸವು ತಿಳಿಸಿರುವರು. ೫ನೇದು ಯಂತ್ರ ಪ್ರಕರಣದಲ್ಲಿ ವಶೀಕರಣ ಗ್ರಹಪೀಡಾ ನಿವಾರಣ ಭೂತಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣವಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು, ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತಿರ ಇದ್ದ ಬಳಿಕ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷರು ವೈದ್ಯರೂ ಜೋತಿಷ್ಯರು, ಮಾಂತ್ರಿಕರು ತಾಂತ್ರಿಕರೂ ಮನೆಯೊಳಗೆ ಇದ್ದ ಹಾಗೆ ಆಗುತ್ತದೆ. ಇಂಥ ಗ್ರಂಥವು ಯಾರು ಕಣ್ಣಿಂದ ನೋಡಿರಲಿಕ್ಕಿಲ್ಲಾ. ಪ್ರತಿಯವರು ತರಿಸಿ ನೋಡಬೇಕೆಂದು ಇದರ ಬೆಲೆ ಬಹಳ ಕಡಿಮೆಮಾಡಿ ಇರುವದು. ೨—೮—೦ ಟಪ್ಪಾಲು ಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ ನಾಟಕ ಕಾವ್ಯ, ಕಥೆಗಳು, ಯಕ್ಷಗಾನ, ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ:—

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

ಸ್ಪಿರಿಟ್ ಸ್ಟೋವ್.

ಈ ಸ್ಟೋವುಗಳು ಹಿತ್ತಾಳೆಯಿಂದ ತಯಾರಾದವು. ಇದರಲ್ಲಿ ಬಹುಬೇಗನೆ ಅಡಿಗೆ, ಕಾಫಿ, ಟೀ ಮುಂತಾದ್ದುಗಳನ್ನು ಮಾಡಬಹುದು. ಬೇಗನೆ ಕೆಡದು, ಕಪ್ಪಾಗದು, ಕಷ್ಟವಿರುವದಿಲ್ಲ. ಪ್ರಯಾಣಿಕರಿಗೂ ಬಹು ಅನುಕೂಲವಾದದ್ದು. ಕೆಲವು ಮಾತ್ರವೇ ಇರುವುದರಿಂದ ಬೇಗನೆ ಬರೆಯಿರಿ.

ಕ್ರಯ 1ಕ್ಕೆ 3—8—0.

ಹೊಸ ನಮೂನೆಯ ಸೆಲ್ಫ್ ಫಿಲ್ಲಿಂಗ್ ಫೌಂಟನ್ ಪೇನಾಗಳು.

ಈ ಪೇನಾಗಳು ವಿಲಾಯತಿಯಲ್ಲಿ ತಯಾರಾದವು. ಇವು ಹೊಸ ನಮೂನೆಯವು. ಇವಕ್ಕೆ ಗಾಜಿನ ನಿಬ್ಬು ಇರುವದು, ಈ ನಿಬ್ಬು ಎಂದಿಗೂ ಕೆಡದು. ಭಾರಿ ಕ್ರಯದ ಭಂಗಾರದ ನಿಬ್ಬುಗಳು ಬರೆಯುವದಕ್ಕಿಂತಲು ಬಹು ಚೆನ್ನಾಗಿ ಬರೆಯುವವು. ಮತ್ತು ತನ್ನಷ್ಟಕ್ಕೆತಾನೇ ಇಂಕಿಯನ್ನು ತುಂಬಿಕೊಳ್ಳುವದು. ಒಂದನ್ನು ತರಿಸಿನೋಡಿರಿ. ಬೇರದಾದರೆ ಹಣ ವಾಪಾಸು ಕೊಡುವೆವು.

ಕ್ರಯ 1ಕ್ಕೆ ರೂ. 1—12—0.

The American Wath Co., P. B. No. 509, T. MADRAS. } ವಿಳಾಸ:— ಅಮೇರಿಕನ್ ವಾಚ್ ಕಂಪೆನಿ. ಪೋ. ಬಾ. 509, ತಿ. ಕೃ. ಮದರಾಸು.

Firestone

TYRES.

(PNEUMATIC & SOLID)

MOST MILES PER RUPEE.

Owing to the increased demand for Firestone Tyres and to give promt service to Motorists and Service Owners of Kanara & Mysore a Service & Distribution Depot is opened at Mangalore.

Fresh Supplies of Solid and Pneumatic Tyres and Tubes could be given from stok.

An Hydraulic Press for fitting solid tyres will shortly be erected.

For particulars apply to:—

FIRESTONE TYRE DISTRIBUTORS,
(KANARA & MYSORE),
Maidan Road, MANGALORE.

Telegrams:—"FIRESTONE"

—ಗೋಡೆಗೆ ತಗಲಿಸುವ
ಹೊಸ ನಮೂನೆಯ—

ಟಿಕ್—ಟಾಕ್

ಎಂಬ ಈ ಗಡಿಯಾರಗಳು ಜರ್ಮನೀ ದೇಶದಲ್ಲಿ ತಯಾರಿಸಿದ್ದು. ಇವು [illegible] ಘಂಟೆಯನ್ನು ತೋರಿಸುವವು. ಇವಕ್ಕೆ ಬೀಗ ಕೊಡಬೇಕಾದಿಲ್ಲ. ಇದರಲ್ಲಿ ಕಾಣುತ್ತಿರುವ ಗುಂಡನ್ನು ಮೇಲಕ್ಕೆ ಎಳೆದರೆ ಸಾಕು. ತನ್ನಷ್ಟಕ್ಕೆ ತಾನೇ ಟಿಕ್—ಟಾಕ್ ಎಂಬ ಶಬ್ದವನ್ನು ಮಾಡುತ್ತಾ ಸರಿಯಾದ ಕಾಲವನ್ನು ತೋರಿಸುವದು. ಇದು ನೋಡುವುದಕ್ಕೆ ಬಹು ಲಕ್ಷಣವಾಗಿರುವುದು.

ಕ್ರಯ 1ಕ್ಕೆ ರೂ. 8—0—0

ಪೀಟರ್ ವಾಚ್ ಕಂಪೆನಿ
ಪೋಸ್ಟ್ ಬಾಕ್ಸ್ ನಂ. 27, ಮದ್ರಾಸ್.

ADVERTISE IN

The Business Directory

OF INDIA, BURMA & CEYLON

A Comprehensive Directory of the various Business-men, Exporters and Importers, Firms, Factories, Mills, Manufacturers, Merchants and Industries of the principal Cities, Ports and Towns of India, Burma and Ceylon.

PUBLISHED ANNUALLY
Rates for Advertisements

¼ Page	Rs.	50.
2 in. Single Column	"	20.
1 in. Single Column	"	15.
Name in Bold Types	"	5.

Price per Copy Rs. 10.

PRINTERS & PUBLISHERS.
Business Directory Co.,
Kanara Press Buildings, MADRAS. E.
Telegrams: "KETHAKI." Phone 540

Just arrived! *Look Sharp!*

SCREW TORCH LAMPS & Pocket Electric Lamps

AVAILABLE

In different varieties, Mother of pearl lamps. Cycle lamps

NICKEL PLATED.

Hammered Brand, with Powerful Bulls-eye [illegible] lance,

Use with it

Bull's-eye Dry Batteries.

The Mangalore Trading Association,
Car Street, MANGALORE

JUST ARIVED

Continenal Belts.
OF VARIOUS SIZES
Price Re. 1|10—0 each
Mangalore Traing Association,
Car Steet, MANGALORE

ಬಂದು ನೋಡಿರಿ! ತಿಂದು ನೋಡಿರಿ!

ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ
ಪದಕವನ್ನು
ಬಹುಮಾನವಾಗಿ ಪಡೆದಿರುವ
ಎಸ್. [illegible]. ಆಚಾರ್ಯ
ಇವರಿಂದ ತಯಾರಿಸಲ್ಪಟ್ಟ

ಉಪ್ಪಿನಕಾಯಿಗಳನ್ನು

ಬಂದು ನೋಡಿರಿ! ತಿಂದು ನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ, ಕುಂಬಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನ್ನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ
ಬಂದು ನೋಡಿರಿ! ತಿಂದು ನೋಡಿರಿ!

ಇಂಡಿಯನ್ ಸ್ವೀಟ್‌ಮೀಟ್ ಮಾರ್ಟ್.

[illegible] [illegible] ರಥಬೀದಿ, ಮಂಗಳೂರು

Edited, Printed & Published by V. S. Kamath at the S. T. A. Sharada Press, Mangalore.

Registered: No. M. 498.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲು ಸಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ । ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೯. ಮಂಗಳೂರು, ತಾರೀಕು ೮ನೇ ಶುಕ್ರವಾರ ಮೇ ೧೯೨೫. ಸಂಚಿಕೆ ೧೯.

The Canara Banking Corporation, Udipi, Ltd.

Head Office:—	Branch:—
Udipi	Coondapoor

Paidup Capital	1,66,165—9—11
Reserve etc	64,700—0—0

Season Deposits

Carrying Special rate of 7% up to 15th June 1925 only.

Further Particulars on Application.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಉಡುಪಿ ಲಿಮಿಟೆಡ್.

ಹೆಡ್ ಆಫೀಸು:—ಉಡುಪಿ.	ಶಾಖೆ—ಕುಂದಾಪುರ.
ವಸೂಲಾದ ಮೂಲಧನ	1,66,165—9—11
ರಿಜರ್ವ ವಗೈರೆ ಫಂಡುಗಳು	64,700—0—0

ತಾ. 15—6—1925ರವರೆಗೆ ಮಾತ್ರ ಸಾಲಿಯಾನ್ ಸೇಕಡಾ 7ರ ದರದ ಬಡ್ಡಿಯ ಮೇಲೆ ಮುಸುಂ ಠೇವಣಾತಿಗಳನ್ನು ಅಂಗೀಕರಿಸೋಣಾಗುತ್ತದೆ.

ಹೆಚ್ಚಿನ ಮಾಹಿತಿಗೆ ಬರಕೊಳ್ಳಿರಿ.

Office of the Corporation, Udipi, 1-3-'25 } **N. Ananda Rao,** *Secretary*

Wanted Agents

FOR

Every District in South India

For Pushing Sales of Our Calenders, Xmas and New Year Cards, Blotters, Pictures and Picture Post Cards, at wholesale rates. Deposit of Rs. 100—0—0 Essential

Apply to:—

The South Indian Advertising Agency,
13, Kilary Road,
BANGALORE CITY.

ಶುದ್ಧ ರೋಮದ ಧಾವಳಿಗಳು.

1 ಮೊಳ ಉದ್ದ 1¼ ಮೊಳ ಅಗಲ ರೂ. 1¼ರಿಂದ 2 ವರೆಗೆ, 5 ಮೊಳ ಉದ್ದ 1¼ ಮೊಳ ಅಗಲ ರೂ. 1¼ ರಿಂದ 5 ವರೆಗೆ, 6 ಮೊಳ ಉದ್ದ 1¼ ಮೊಳ ಅಗಲ ರೂ. 2¼ರಿಂದ 6 ವರೆಗೆ, 8 ಮೊಳ ಉದ್ದ 2 ಮೊಳ ಅಗಲ ರೂ. 3½ರಿಂದ 10 ವರೆಗೆ, 12 ಮೊಳ ಉದ್ದ 2¼ ಮೊಳ ಅಗಲ ರೂ. 6ರಿಂದ 12 ವರೆಗೆ, 16 ಮೊಳ ಉದ್ದ 2¼ ಮೊಳ ಅಗಲ ರೂ. 9 ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಖದ್ದರ್ ರೇಶ್ಮೆ ಮಡಿಗಳು, [illegible], [illegible] ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, [illegible], [illegible], [illegible], ಪನ್ನೀರ್‌ದಾನಿ, [illegible] ಆಟದ ಸಾಮಾನುಗಳು, [illegible] [illegible] ಮತ್ತು ಇನ್ನೂ ಅನೇಕ ಸಾಮಾನುಗಳು ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುದು. [illegible] ಇನಾಂ.

ವಿಳಾಸ—

[illegible] [illegible]. [illegible]
ಮುಕ್ಕ್ಯ [illegible], [illegible], [illegible] [illegible],

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ.

450 ಪುಟಗಳು ಎಮ್. ಗಣಪತಿರಾವ್ ಐಗಳ್ ಇವರಿಂದ ರಚಿತವಾದದ್ದು. ಕ್ರಯ ರೂ. 2-4-0

ಮಾರಾಟಕ್ಕೆ ಸಿದ್ಧವಾಗಿವೆ — ತುಳು ಪಾಡ್ದನಗಳು — ಮಾರಾಟಕ್ಕೆ ಸಿದ್ಧವಾಗಿವೆ

ದೈಯ್ಯೊಂಗುಳು, ಕಲ್ಕುರ್ಟ—ಕಲ್ಲುರ್ಟಿ, ಕಣಂತೂರು ದೈಯ್ಯೊಂಗುಳು, ಮುಂಡತ್ತಾಯ, ಬೊಬ್ಬರ್ಯ.

ಸುಲಭ ದರಗಳು — ಶಾಲಾ ಪುಸ್ತಕಗಳು — ರಖಂ ಕೊಂಡುಕೊಳ್ಳುವವರಿಗೆ ಯೋಗ್ಯ ಡಿಸ್ಕೌಂಟ್.

ಅಜ್ಜಿ ಕಥೆಗಳು:—ಮೂರು ಕರಡಿಗಳು; ಜೇನುಸಕ್ಕು ಕಾಗೆ ಬಡವಾಯಿತು; ಅರ್ಗಣೆ ಮುದ್ದೆ; ಇಲಿಗಳ ಥಕ್ಕ ಥೈ; ಅಂಗಳ ದುಗ್ಗು; ಸಿಗಡಿ ಯಾಕೆ ಒಣಗಲಿಲ್ಲ; ಗುಡುಗುಡು ಗುಮ್ಮಟ ದೇವರು; ಮುಡಿಸಿನ ಕಾಳಪ್ಪ; ಒಡ್ಡನ ಓಟ; ಹೊಸ ಕನ್ನಡ ಪುಸ್ತಕ ಭಾಗ ೧; ಹೊಸ ಕನ್ನಡ ಪುಸ್ತಕ ಭಾಗ ೨; ಕನ್ನಡ ಪದ್ಯಗಳು; ಮಗ್ಗಿ ಪುಸ್ತಕ; ಅಚಿತ [illegible]; ಪದ್ಯ ರತ್ನಾವಳಿ, ಎಕ್ಸರ್‌ಸೈಜ್ ಮತ್ತು ನೋಟು ಪುಸ್ತಕಗಳು, ಕಾಪಿ ಪುಸ್ತಕಗಳು, ಡ್ರಾಯಿಂಗ್ ಪುಸ್ತಕಗಳು

ಇತರ ಪುಸ್ತಕಗಳು:—ಸಂಕ್ಷೇಪಗೀತೆ, ಕೀಚಕವಧೆ, ಹಿಂದೂ ವ್ರತವಿವೇಕ, ಚಂದ್ರಗುಪ್ತ ಚಕ್ರವರ್ತಿ, ಶ್ರೀ ಕೃಷ್ಣಸಂಧಾನ ಪದ್ಯಪಾಠಗಳು, ಹರಿಕಥಾ ಮೃತಸಾರ ಹರಿನಾಮಸಂಕೀರ್ತನೆ ಸುಧಾಂಮೃತ ಪದ್ಯಗಳು. ಬೆಂಕಿಪೆಟ್ಟಿಗೆ ತಯಾರಿಸುವ ವಿಧಾನ, ಸಾಬೂನು ತಯಾರಿಸುವ ವಿಧಾನ, ಸ್ವರಾಜ್ಯ ಭಕ್ತಿಉಲ್ಲಾಸ, ಚರಕಗೀತೆ, ಕೊಂಕಣಿ ಭಾಷೆಯಲ್ಲಿ ಚಂದ್ರಹಾಸ ನಾಟಕ, ಪ್ರಹಲ್ಲಾದ ಚರಿತ್ರ ನಾಟಕ, ಕನ್ನಡ ಮೃಚ್ಛಕಟಿಕ ನಾಟಕ, ಚಂದ್ರಹಾಸಾಭ್ಯುದಯ ನಾಟಕ, ಕೋವಿಲನ್ ಚರಿತ್ರ ನಾಟಕ, ಮಾದರಿ ಉಪನ್ಯಾಸ ಭಾಗ ೧, ೨, ಮತ್ತು ೩,

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಸಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಕಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ, ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ, ಡಬ್ಬಿ 1ರ ಕ್ರಯ 2 ಆಣೆ.

ಅಮೃತಾಂಜನ ಡಿಪೋ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

109 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

— ರಥೋತ್ಸವ, ವಿವಾಹ ಉಪನಯನಗಳ ಸಮಯ —
ಸರ್ವರಿಗೂ ಉಡಿಗೆ ತೊಡಿಗೆಗಳು ಬೇಕಾಗುವ ಸಂದರ್ಭ.

ಯಾರು, ಯಾವುದನ್ನು ಎಲ್ಲಿ ಪಡೆಯಬೇಕೆಂಬ ಶಂಕೆಯಿಂದ ವಿಳಂಬ ಮಾಡಬೇಡಿರಿ. ಉಡಿಗೆತೊಡಿಗೆಗಳನ್ನು ಚುನಾಯಿಸಿ ನಿಮಗೆ ಬೇಕಾದ ಯಥಾರ್ಥ ಮಾಹಿತಿಯನ್ನು ಕಳೆದ ಹತ್ತುಹತ್ತು ವರುಷಗಳಿಂದ ಪಡೆದು ನಮ್ಮಲ್ಲಿಯ ವ್ಯಾಪಾರವು ಗಿರಾಕಿಗಳಿಗೆ ಸರ್ವ ತೃಪ್ತಿಯಿಂದಲೂ ಲಾಭಕರವಾಗಿ ಪರಿಣಮಿಸುವಂತೆ ನಮ್ಮ ಜವಳಿ ಸಂಗ್ರಹವನ್ನು ಮಾಡಿರುತ್ತೇವೆ.

ಗುರ್ಪುರ್ಕಾರ್ ಬ್ರದರ್ಸ್, ರಥಬೀದಿ, ಮಂಗಳೂರು.

ಹೆಡ್ ಆಫೀಸು:—ರಥಬೀದಿ—(ಮೊದಲು ಸುಜೀರ ನಾಗಪ್ಪನಾಯಕ್, ಎಂಡ್ ಕೊ, ಇದ್ದಲ್ಲಿ; ಅಜೀಜುದ್ದೀನ್ ರಸ್ತೆಗೆ ತಿರುಗುವಲ್ಲಿ) ಮಂಗಳೂರು.

ಬ್ರೆಂಚ್ ಆಫೀಸು:—ರಥಬೀದಿ—(ಹಳೇ ತಾಲೂಕು ಕಚೇರಿಯ ವಠಾರಕ್ಕೆ ಸಮೀಪವಿರುವ ಮಳಿಗೆ) ಮಂಗಳೂರು.

ಈ ದೇಶದ ಪ್ರಖ್ಯಾತವಟ್ಟ ನೇಯಿಗೆಯ ಕೇಂದ್ರಸ್ಥಳಗಳಾದ—ಬನಾರಿಸ್, ಪೂನಾ, ಅಹಮ್ಮದಾಬಾದ್, ಸುರತ್, ಬೆಂಗಳೂರು, ಧರ್ಮಾವರಮ್, ಕಂಜೀವರಮ್, ಕೊಯಮುತ್ತೂರು, ಮಧುರೆ, ತಂಜಾವೂರು, ಕುಂಭಕೋಣ, ಆರ್ನಿ, ಪಾಡಿಪೇಟೆ, ಹುಬ್ಬಳ್ಳಿ, ಇಳಕಲ್, ಗದಗ, ಮದ್ರಾಸು ಈ ಪ್ರಾಂತ್ಯಗಳಲ್ಲಿ ತಯ್ಯಾರಾದ

ಜರಿಸೀರೆಗಳು, ದುಪ್ಪಟ್ಟಾ, ಜರಿಶಾಲು, ಧೋತ್ರಿ, ರೇಶ್ಮೆ ಸೀರೆಗಳು, ಅರಳಪೇಟೆ ಸೀರೆಗಳು, ಜಾರ್ಜೆಟ್ ರೇಶ್ಮೆ ಸೀರೆಗಳು, [illegible] [illegible] ಸೀರೆಗಳು, ರೇಶ್ಮೆ ಮಡಿಗಳು, ನಿತ್ಯ ಉಪಯೋಗದ ಸೀರೆಗಳು ಟುವಿಲ್ಸ್, ಕರ್ನಾಟಕ ಮಿಲ್ಸ್‌ಗಳ ವ ಇತರ ಮಿಲ್ಸ್‌ಗಳ ಕೋಟಿಂಗ್ ಶರ್ಟಿಂಗ್.

ಕೈರಾಟೆಯಲ್ಲಿ ತಯಾರಿಸಿದ ನೂಲಿನಿಂದ ಮಾಡಿದ—

ಖದ್ದರ್ ಶರ್ಟಿಂಗ್, ಖದ್ದರ್ ಕೋಟಿಂಗ್, ಖದ್ದರ್ ಟೋಪಿ, ಖದ್ದರ್ ಧೋತ್ರಿ, ಅಂಗವಸ್ತ್ರ, ಇತ್ಯಾದಿ—

ಮುಸಲ್ಮಾನರಿಗೆ ಬೇಕಾದ ನಮೂನೆಯ [illegible] ಹೊಸಿಗೆ [illegible] ವಸ್ತ್ರ—

ಎಲ್ಲ ಸಂಗ್ರಹವನ್ನೂ ನಮ್ಮ [illegible] [illegible] [illegible] [illegible] [illegible] [illegible] [illegible] [illegible] ಸಂಗ್ರಹಿಸಿ ಕಳುಹಿರುತ್ತಾರೆ.

ಬೆಲೆ:—[illegible], [illegible] 50ಕ್ಕೆ [illegible] [illegible] [illegible] [illegible] 6¼ರ, ರೂ. 50ರಿಂದ 250ರವರೆಗೆ [illegible] 10[illegible] ರೂ. 250 ರಿಂದ 1000ಕ್ಕೆ 12½% [illegible] [illegible] [illegible] [illegible]

ಪ್ರತಿಯೊಂದು ಕುಟುಂಬಿಗಳ ಮನೆಗಳಲ್ಲಿ ಸೌಖ್ಯವನ್ನು ತೋರಿಸುವುದಕ್ಕೂ ಮತ್ತು ಅವರವರ ಉಪಯೋಗಾರ್ಥವನ್ನು ತಿಳುವಳಿಕೆ ಬಗ್ಗೆ ನಡಿಸುವುದಕ್ಕೂ ಒಂದು ದುರ್ಲಭವಾದ ನಿಘಂಟು ಪುಸ್ತಕವು ಈ ನಮ್ಮ ಹಿಂದೂದೇಶದ ಸಮೂಹದಲ್ಲಿರುವುದು. ಅಂಥಾ ಪುಸ್ತಕವು ಯಾವದೆಂಬುದು

ನೀವುಗಳು ಬಲ್ಲಿರಾ?

(ಅದೇ)

“ಕಾಮಶಾಸ್ತ್ರವೆಂಬುವುದು.”

ತಾವುಗಳು ಇನ್ನೂ ಈ ಪುಸ್ತಕದಲ್ಲಿ ಬರೆದಿರುವ ಸಾರಾಂಶವನ್ನು ಓದಿಲ್ಲದಿದ್ದರೆ, ಒಡನೇ ಒಂದು ಪುಸ್ತಕವನ್ನು ಕಳುಹಿಸುವಂತೆ ಒಂದು ಪೋಸ್ಟುಕಾರ್ಡು ಬರೆಯಿರಿ.

ಪುಸ್ತಕವನ್ನು ಇನಾಮಾಗಿ ಕಳುಹಿಸುವೆವು.

ಮುಖ್ಯವಾದ ತಿಳುವಳಿಕೆ.

ತಾವುಗಳು ದೃಢಚಿತ್ತರಾಗಿಯೂ, ನಿಧಾನಸ್ಥರಾಗಿಯೂ, ಸೌಖ್ಯವಾಗಿಯೂ, ಕಷ್ಟವಿಲ್ಲದೇನೇ ವಿಷಯಗಳನ್ನು ಧರಿಸುವ ಮನಸ್ಸನ್ನು ಹೊಂದಬೇಕಾದರೆ ನಮ್ಮ ಅಮೂಲ್ಯವಾದ “ಕಾಮಶಾಸ್ತ್ರವೆಂಬುವ ಪುಸ್ತಕದಲ್ಲಿ ಕಾಣಿಸಿರುವ ಆತಂಕನಿಗ್ರಹ ಮಾತ್ರೆಗಳನ್ನು ಸೇವಿಸಬೇಕು.”

ಒಂದು ರೂಪಾಯಿ ಖರ್ಚುಮಾಡಿದರೆ 32 ಮಾತ್ರೆಗಳುಳ್ಳ ಒಂದು ಡಬ್ಬಿಯನ್ನು ತರಿಸಿ ಪ್ರಯತ್ನಿಸಬಹುದು.

ವಿವರವಾಗಿ ಬರೆದಿರುವ ಒಂದು ಕ್ಯಾಟಲಾಗು ಕಳುಹಿಸುವಂತೆ ಈ ದಿನವೇ ಒಂದು ಪೋಸ್ಟುಕಾರ್ಡು ಬರೆಯಿರಿ.

ಆತಂಕನಿಗ್ರಹ ಔಷಧಾಲಯ,
ನಂಬ್ರ 26, ಬ್ರಾಡ್ವೆ, ಮದರಾಸು.

ಹೊಸಗ್ರಂಥಗಳು!! ಬೇಗನೇ ತರಿಸಿಕೊಳ್ಳಿರಿ!!!

ಕೋಕ ಶಾಸ್ತ್ರವು.

ರಸಿಕ ವಾಚಕ ಮಹಾಶಯರೇ,

ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ, ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನಷ್ಟೇ ಶೋಧ ಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ಲೀಷ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿನಿ. ಸ್ತ್ರೀಯ ಇದರಂತೆ ಪುರುಷರಲ್ಲಿಯ ಭೇದ ಯಾವಜಾತಿ ಸ್ತ್ರೀಯರಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ, ಜನನೇಂದ್ರಿಯಾದಿಗಳ ವರ್ಣನೆಯನ್ನೂ, ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ, ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ, ನಪುಂಸಕತ್ವ ವಂಧ್ಯಾದೋಷಗಳ ಚಿಕಿತ್ಸೆಯನ್ನೂ, ಸ್ತ್ರೀಯರ ಗೂಢ ರಹಸ್ಯವನ್ನೂ, ದಂಪತಿ. ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನೂ, ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ಕಿರಿ ಕಡಿಮೆ. ಆದ್ದರಿಂದ ಈ ಗ್ರಂಥವನ್ನು ಒಮ್ಮೆ ಅವಲೋಕಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿ.

ಇದರ ಬೆಲೆ ೧—೮—೦, ಟಪಾಲು ಹಾಸಲು ೦—೪—೦

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ

ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ಮೂರನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್. ಗಣಪತಿರಾವ್ ಐಗಳ್—ಗ್ರಂಥಕರ್ತರು.

ಮನೋರಂಜಕ ಚಿತ್ರಗಳೂ ಇವೆ.

ಇದರಲ್ಲಿ ಸಾವಿತ್ರಿ, ಶಕುಂತಳಾ, ಕೃಷ್ಣಾಕುಮಾರಿ, ಪದ್ಮಿನಿ, ಜೋನ್ ಒಫ್ ಆರ್ಕ, ಫ್ಲೊರೆನ್ಸನಾಯಿಟಿಂಗೇಲ ಪರಶುರಾಮ, ಭೂತಾಳಪಾಂಡ್ಯ, ಕಾರ್ಕಳ ಗೋಮಟೇಶ್ವರ ಮತ್ತು ಭೈರವರಾಜ, ಮೂಡಬಿದ್ರಿಯ ಚೌಟರು, ನಂದಾವರ ಬಂಗರು, ಕಾರ್ಕಳ ರಾಮಸಮುದ್ರ ಮತ್ತು ರಾಮನಾಥ ಒಡೆಯರ ಅಣೆಕಟ್ಟು, ಗುರುಪುರ ಜಂಗಮ ಮಠ, ಕಲ್ಯಾಣಪ್ಪನ ಕಾಟಕಾಯಿ, ಗುರುನಾಯನಕೆರೆ, ಜಮಾಲಾಬಾದುಕೋಟೆ, ಸುಲ್ತಾನಬತ್ತೇರಿ, ಈದಗಾಪ್ರಾರ್ಥನಾಮಂದಿರ, ಸೇಂಟಮೇರಿ ದ್ವೀಪಗಳು ಮತ್ತು ದರಿಯಾಬಾದರಗಡ, ಕೊರಗರು, ಕೊಡಗರು, ತೋಡರು, ರಜಪೂತರು, ಕಂದಾರಿಗಳು ಭುಖಾರ ಜನರು, ಅರಬಿಯರು. ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟಶಬ್ದಗಳಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ಮೂರನೇ ದರ್ಜೆಯ ಮಕ್ಕಳಿಗೆ ಉಪಯುಕ್ತವಾಗಿದೆ. ಕ್ರಯ 6 ಆಣೆ.

ಪುಸ್ತಕ ದೊರಕುವ ವಿಳಾಸ:—

ಶಾರದಾ ಛಾಪಖಾನೆ,
ಮಂಗಳೂರು.

ಗಣಪತಿರಾವ್, ಐಗಳ್.
ಮಂಜೇಶ್ವರ.

ಡಾಕ್ಟರುಗಳು ಭಿನ್ನಾಭಿಪ್ರಾಯಪಡುವಾಗ್ಯೆ ತೀರ್ಮಾನಿಸುದು ಯಾರು?

ಅಂಥಾ ಸಂದರ್ಭಗಳಲ್ಲಿ ಡೆಂಗ್ಯೂ ಮುಂತಾದ ಜ್ವರಗಳನ್ನು ನಿವಾರಿಸುವಂಥಾ “ಬಾಟ್ಲಿವಾಲಾ ಏಗ್ಯುಮಿಕ್ಷ್ಚರ್”ನ್ನು ಸರಾಗವಾಗಿಯೂ, ಮತ್ತು ಜ್ವರಗಳನ್ನು ಖಂಡಿತವಾಗಿ ನಿಲ್ಲಿಸುವಂಥಾದೂ, ಎಲ್ಲಾ ತರದ ತಲೆನೋವುಗಳ ಹೋಗಲಾಡಿಸುವಂಥಾದ್ದೂ ಆದ “ಬಾಟ್ಲಿವಾಲರ ಏಗ್ಯುಪಿಲ್ಸ್” ಇದನ್ನು ಉಪಯೋಗಿಸಿರಿ.

ಐ. ಎಮ್. ಎಸ್. ಡಾಕ್ಟರುಗಳಿಂದ ಶಿಫಾರಸು ಮಾಡಲ್ಪಟ್ಟದ್ದು. ಇದರ ಉಪಯೋಗದ ಹೃದಯದ ಮೇಲೆ ಯಾವದೊಂದೂ ಬಾಧಕವಿಲ್ಲ. ಅರ್ಧ ಶತಮಾನದಿಂದ ಹಿಂದೂಸ್ಥಾನ, ಬರ್ಮಾ, ಸಿಲೋನ್, ಆಫ್ರಿಕಾ ಇವುಗಳಲ್ಲಿ ಖ್ಯಾತಪಟ್ಟದ್ದಾಗಿರುತ್ತದೆ.

ಅನೇಕ ಹಿಂದೀ ಪ್ರದರ್ಶನಗಳಲ್ಲಿ ಬೆಳ್ಳಿ ಮತ್ತು ಬಂಗಾರದ ಪದಕಗಳನ್ನು ಪಡೆದಿರುತ್ತೆ. ಪ್ರಾಮಾಣ್ಯದಂತಿದ್ದ ಮಾರ್ವಾರಿಗಳೂ ಕೂಡ ಅದರ ಮೇಲೆ ಹಣವನ್ನು ಮುಂಗಡವಾಗಿ ಕೊಡುತ್ತಾರೆ. ಬಡ ಮತ್ತು ಮಧ್ಯಮ ತರಗತಿಯವರಿಗೆ ವರಪ್ರದಾನವಾಗಿದ್ದು ಸಂಚಾರ, ಪ್ರಯಾಣ, ದೇಶಾಟನೆಗಳ ಸಮಯದಲ್ಲಿ ಹತ್ತಿರದಲ್ಲಿರಿಸಿಕೊಳ್ಳದಾಗಿರುತ್ತದೆ.

ಬಾಟ್ಲಿವಾಲರ ಬಾಲಾಮೃತ ಅಥವಾ ಟೊನಿಕ್ ಸಿರಪ್.

ಕೆಮ್ಮನ್ನು ಹೋಗಲಾಡಿಸಿ, ಎದೆನೋವನ್ನು ಶಾಂತಗೊಳಿಸಿ, ಜ್ವರವನ್ನು ಉಪಶಮನಿಸಿ, ಪ್ರಥಂಗವನ್ನು ಕಡಿಮೆ ಮಾಡಿ ಧಾತುವರ್ಧನವನ್ನು ಮಾಡುವದರಲ್ಲಿ ಅತ್ಯುತ್ತಮವಾಗಿರುತ್ತದೆ ಕಫವನ್ನು ಒಣಗಿಸಿ ಮಾಯವಾಗುವಂತೆ ಮಾಡುವುದಲ್ಲದೆ ಅದೇ ಸಮಯದಲ್ಲಿ ಒಳ್ಳೇ ಜೀರ್ಣವನ್ನು ಉಂಟುಮಾಡುವುದು. ಪರ ಮೊದಲಾದ ಮಾಹಿತಿಯನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ತಾರಿನಪತ್ತೆ:—CAWASHAPU BOMBAY.

ಎಲ್ಲಾ ಕಡೆಗಳಲ್ಲಿ
ಏಜಂಟರು ಬೇಕಾಗಿದ್ದಾರೆ.

ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.,
ಪಿ. ವಾರ್ಲಿ, ಮುಂಬಯಿ, ನಂಬ್ರ 18.

ಸಣ್ಣ ಹುಡುಗರ ಸಲುವಾ

ಡೋಂಗರೆ

ಇವರ

ಬಾಲಾಮೃತ

ಈ ಔಷಧವನ್ನು ಸೇವನೆ ಮಾಡುವುದರಿಂದ ಮಕ್ಕಳು ರೋಗಹೀನರೂ ಸಶಕ್ತರೂ ಆಗುವರು. ಇದು ಮಧುರವಾಗಿದೆ; ಮಕ್ಕಳು ಸಂತೋಷದಿಂದ ಸೇವಿಸುತ್ತಾರೆ.

ನಮ್ಮ ವಿಳಾಸ:—

ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ ಮುಂಬಯಿ.

ಏಜಂಟರು:— ದಿ. ಊಲನ್ ಮಾರ್ಟ್, ಮಂಗಳೂರು.

OUR RECENT IMPORT IN WRIST WATCHES

Have you used anyone of these Watches?

SEND YOUR ORDER NOW ALL GUARANTEED.

Fashionable wrist wrist Lady's size. Reliable movement Guaranteed.



No. 368.

Handy to wear and looks beautiful. Gives punctual time and with strong movement.

Nickel case Rs. 8—0

High-class Radium dial watch watch with Roman figures.



No. 367.

Can be seen in dark nights. Well fitted with best movement and strong to use. Used by one and all

Silver case Rs. 9—0.

Radiolight wrist watch.



No. 372.

Fitted with the best mechanism and guaranteed to work and keep perfect time for a long time.

Nickel case Rs. 7—8
Electro rolled-gold „ 9—0

(N. B. In addition to the above, we have good number of varieties of fancy wrist watches, pocket watches. Please write for a descriptive catalogue, which will be sent free)

WHOLESALE IMPORTERS

PETER WATCH COY.,
POST BOX 27, MADRAS

ಶಾಲಿವಾಹನಶಕ ೧೮೪೭ನೆಯ ಕ್ರೋಧನ ಸಂವತ್ಸರದ ವೈಶಾಖ ಬ॥ ೧ ಶನಿವಾರದಿಂದ ಕ್ರೋಧನ ಸಂ॥ರದ ವೈಶಾಖ ಬ॥ ೭ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೫ನೆಯ ಮೇಷ ಪಗ್ಗ.)

ತಾರೀಖು	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	ಸೌರಮಾನ.	ಸೂರ್ಯ ಉ	ಸೂರ್ಯ ಅಸ್ತ
9	ಶನಿ	೧	೩೧.೦	ವಿಶಾಖಾ	೧೨.೨	೨೭	6. 9	6.45
10	ರವಿ	೨	೨೬.೨	ಅನುರಾಧಾ	೯.೧	೨೮	6. 9	6.45
11	ಸೋಮ	೩	೨೦.೧೪	ಜ್ಯೇಷ್ಠಾ	೫.೨೮	೨೯	6. 9	6.45
12	ಕುಜ	೪	೧೪.೩೨	ಮೂಲಾ	೧.೩೨	೩೦	6. 9	6.46
13	ಬುಧ	೫	೮.೧೬	ಉ. ಷಾ.	೫೩.೧೬	೩೧	6. 8	6.46
14	ಗುರು	೬	೨.೧೪	ಶ್ರವಣಾ	೪೯.೨೮	೧	6. 8	6.46
15	ಶುಕ್ರ	೭	೫೫.೧೬	ಧನಿಷ್ಠಾ	೪೬.೧೬	೨	6. 8	6.46

ಮಂಗಳೂರಿನ ವಾಯುಸ್ಥಿತಿ.

Date ತಾರೀಖು	Temperature. ಉಷ್ಣ (ಕಾವು) Maximum ಅಧಿಕತಮ	Minimum ಅಲ್ಪತಮ	Rainfall. ಮಳೆ ದಿನದ ಮಳೆ	ಜುಮಲಾ ಮಳೆ.
1	95—2	76—2	—	0-0-8
2	89—3	78—6	—	—
3	95—3	79—3	—	—
4	96—8	77—7	—	0-0-8
5	94—3	77—1	—	—
6	95—3	79—2	0—26	—
7	94—8	74—3	—	0-29

ಮಂಗಳೂರಿನ ಪೇಟೆ ಧಾರಣೆ.

ಜಿನಸು	ಇಂದ ರೂ. ಆ.	ವರೆಗೆ ರೂ. ಆ.
ಹೊಸ ಮಸ್ಕತಿ	8—0	8—12
ಹೊಸ ಗುಡ್ಡು ...	7-8	7—14
ಹೊಸ ರಾಶಿ ...	6—12	7—10
ಅವ್ವಲ್ ಬೆಳ್ತಿಗೆ ...	8—4	9—8
ಗುಡ್ಡು ಬೆಳ್ತಿಗೆ ...	7—12	8—2
ರಂಗೂನು ಬೆಳ್ತಿಗೆ ಗೋಣಿ ೧ ...	13—0	13—8
ಗೋಧಿ ಗೋಣಿ ೧ಕ್ಕೆ ...	18—8	23—0
ಹುರುಳಿಗೋಣಿ ೧ಕ್ಕೆ ...	9—12	10—12
ಕಡಲೆಗೋಣಿ ೧ಕ್ಕೆ ...	12—0	13—0
ತೊಗರಿಗೋಣಿ ೧ಕ್ಕೆ ...	12—0	13—0
ತೊಗರಿಬೇಳೆ ಗೋಣಿ ೧ಕ್ಕೆ ...	13—8	21—0
ಉದ್ದುಗೋಣಿ ೧ಕ್ಕೆ ...	14—0	14—8
ಹೆಸರುಗೋಣಿ ೧ಕ್ಕೆ ...	14—0	15—0
ಊರು ಬೆಲ್ಲ ಖಂಡಿ ೧ಕ್ಕೆ ...	—	85—0
ಉಪ್ಪು ಗೋಣಿ ೧ಕ್ಕೆ ...	4—4	4—12
ಕೊಬ್ರಿ ಖಂಡಿ ೧ಕ್ಕೆ ...	110—0	115—0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	34—8	35—0
ಎಳ್ಳಿಂಡಿ ಖಂಡಿ ೧ಕ್ಕೆ ...	40—0	42—8
ಕೊಬ್ರಿ ಎಣ್ಣೆ ಮುಡಿ ೧ಕ್ಕೆ ...	8—8	9—0
ಎಳ್ಳೆಣ್ಣೆ ಮುಡಿ ೧ಕ್ಕೆ ...	8—0	11—0
ಜಾವನೆ ಎಣ್ಣೆ ಪೆಟ್ಟಿಗೆ ೧ಕ್ಕೆ ...	8-15-6	—
ಜೋರಿನ ಸಕ್ಕರೆ ಮುಡಿ ೧ಕ್ಕೆ ...	6—0	6—2
ಊರ ಮೆಣಸಿನಕಾಯಿ ಮುಡಿ ೧ಕ್ಕೆ ...	7—0	—
ಸಾಸಿವೆ ಮುಡಿ ೧ಕ್ಕೆ ...	8—12	—
ಕೊತ್ತಂಬರಿ ಮುಡಿ ೧ಕ್ಕೆ ...	3—8	3—14
ಕಾಫಿ ಖಂಡಿ ೧ಕ್ಕೆ ...	352—0	370—0
ಬಿಳಿಗೋಟು ಅಡಿಕೆ ಖಂಡಿ ೧ಕ್ಕೆ ಹಳತು ...	235—0	245—0
„ ಹೊಸ ಅಡಿಕೆ	225—0	230—0
ಕಾಳುಮೆಣಸು ಖಂಡಿ ೧ಕ್ಕೆ ...	155—0	160—0
ಹುಣಸೆ ಮುಡಿ ೧ಕ್ಕೆ ...	80—0	90—0
ಗೇರುಬೀಜ ಮುಡಿ ೧ಕ್ಕೆ ...	3—9	3—10
ಶುಂಠಿ ಖಂಡಿ ೧ಕ್ಕೆ ...	45—0	65—0
[illegible] ಮುಡಿ ೧ಕ್ಕೆ ...	17—12	23—0
[illegible] ಮುಡಿ ೧ಕ್ಕೆ ...	26—0	—
[illegible] ೧ಕ್ಕೆ ...	22—0	
[illegible] ಮುಡಿ ೧ಕ್ಕೆ ...	18—8	
ಪವನು	13—13	

The Canara Public Conveyance Co., Ltd, Mangalore.

(ESTABLISHED 1914).

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು
- ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು
- ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
- ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
- ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.
- ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ—ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd, Mangalore. S. K

ಆರ್. ಮಾರ್ಟಿನ್ಸರ

ಜ್ವರದ ಗುಳಿಗೆಗಳು.

ಸುಲಭ ಸ್ವೇದನಕಾರಿಯಾದ ಈ ಘುಟಿಕೆಗಳು ಚಳಿಜ್ವರದ ವಿಷದಾರ್ಥಗಳನ್ನು ತಟ್ಟನೆ ನಿರ್ಮೂಲಪಡಿಸಿ, ವ್ರಣಗಳನ್ನು ಸಂಪೂರ್ಣ ನಾಶಪಡಿಸಿ, ಮಲೇರಿಯಾ ಜ್ವರ, ಚಳಿಜ್ವರ, ಛಾರಿಜ್ವರ, ಮತ್ತು ಆಗಾಗ್ಗೆ ಬಿಟ್ಟುಕೊಂಡು ಬರುವ ಇತರ ಜ್ವರಗಳ ಬಾಧೆಯಿಂದ ಗುಣಪಡಿಸುವವು

ತಟ್ಟನೆ ವಾಸಿಪಡಿಸುವುದಕ್ಕೆ ಹತ್ತಾರುಗಳಲ್ಲಿ ಪ್ರಸಿದ್ಧತೆಯನ್ನು ಹೊಂದಿದ್ದು, ಅತಿ ಬಿಟ್ಟುಬಿಟ್ಟ ಅನೇಕ ಸಂದರ್ಭಗಳಲ್ಲಿ ಗುಣಪಡಿಸಿದವುಗಳಾಗಿರುತ್ತವೆ.

ಇವುಗಳು ಗಿರಣಿಗಳಲ್ಲಿಯೂ ಕಾರ್ಖಾನೆಗಳಲ್ಲಿಯೂ ವಿಶೇಷವಾಗಿ ಉಪಯೋಗಿಸಲ್ಪಡುವುವು. ಸಾಮಾನ್ಯವಾಗಿ ಹಿಂದೂಸ್ಥಾನದಲ್ಲಿ ಎಲಾ ತೋಟಗಾರರಿಂದ ಉಪಯೋಗಿಸಲ್ಪಡುವುವು. ಅಲ್ಲದೆ ಬಂಗಾಳ ವಿಶಾಲ್ಯವಾದ ಕೀರ್ತಿಯನ್ನು ಕೂಡ ಸಂಪಾದಿಸಿರುವುವು ಕಠಿಣ ಜ್ವರವು ತಟ್ಟನೆ ಇಳಿಯಬೇಕಾದರೆ ಆರ್ ಮಾರ್ಟಿನಸರ ಎಗ್ಯೂ ಮಿಕ್ಸ್ಚರ್ ಒಡನೆ ಇವನ್ನು ಸೇವಿಸಬೇಕು. ಈ ಇವೆರಡು ಅದ್ಭುತ ಶಕ್ತಿಯುಳ್ಳ ಔಷಧಿಗಳು ಪ್ರತಿಯೊಂದು ಕುಟುಂಬದ ಮನೆಯಲ್ಲಿಟ್ಟುಕೊಳ್ಳಲು ಯೋಗ್ಯ ವಸ್ತುಗಳಾಗಿವೆ ಪ್ರತಿಯೊಂದು ಬಾಟ್ಲಿಯಲ್ಲಿ 40 ಮಾತ್ರೆಗಳು ಇರುವುವು

ಬಾಟ್ಲಿ 1ಕ್ಕೆ ರೂ. 1—8—0.

ಆರ್. ಮಾರ್ಟಿನ್ಸರ ಎಗ್ಯೂಮಿಕ್ಶರ್.

ಇದು ಜ್ವರ, ಶೀತಜ್ವರ ಮಲೇರಿಯಾ, ಛಾರಿಜ್ವರ, ಸನ್ನಿಪಾತ ಪಚ್ಚೆ ವಾಯುವಿನಿಂದುಂಟಾದ ರೋಗ ಇವೇ ಮೊದಲಾದ ಎಲ್ಲಾ ತರದ ಜ್ವರಗಳನ್ನೂ, ಕೂಡಲೇ ನಾಶಮಾಡುತ್ತದೆ ಎಲುಬುಗಳಲ್ಲಿ ಹರಡಿಕೊಂಡಿರುವ ಜ್ವರವನ್ನೂ ಸಹ ನಾಶಮಾಡುವುದಲ್ಲದೆ, ಇದು ಸಿಹಿಯಾಗಿರುವುದರಿಂದ ಸಣ್ಣ ಕೂಸುಗಳು ಸಹ ಕುಡಿಯಲಿಕ್ಕೆ ಇಷ್ಟಪಡುತ್ತವೆ ಅನೇಕ ನಿಜ ವಿದ್ವಾಂಸ ವೈದ್ಯರಿಂದ ಗುಣಮಾಡುವುದಕ್ಕಾಗದ ಜ್ವರವನ್ನು ಈ ಎರಡೇ ಎರಡು ಬಾಟ್ಲಿಗಳ ಸೇವನೆಯಿಂದ ಹುಷಾರಾಗಿದೆ

ಬಾಟ್ಲಿ 1ಕ್ಕೆ ರೂ. 0—13—0

ಆರ್. ಮಾರ್ಟಿನ್ಸರ ಮೂಲವ್ಯಾಧಿ ಮಲಾಮು.

ಮನುಷ್ಯನಿಗೆ ಮೂಲವ್ಯಾಧಿ ಆದಾಗ, ಬಹಳ ಸಲ ಮೂತ್ರಶಂಕೆಯಾಗುವಿಕೆ, ಮರ್ಮಸ್ಥಾನದಲ್ಲಿ ಉರಿಯುವುದು, ಮಲಬದ್ಧತೆ ಇವೇ ಮುಂತಾದವುಗಳಿಂದ ವ್ಯಥೆಪಡುತ್ತಾನೆ. ಈ ಔಷಧದ ಒಂದೇ ಒಂದು ಬಾಟ್ಲಿಯ ಉಪಯೋಗದಿಂದ, ರಕ್ತ ಸುರಿಯುವ ಮೂಲವ್ಯಾಧಿ, ಕಂಕುಳಲ್ಲಿ ಬೋಯುವ ಮೂಲವ್ಯಾಧಿ ಮತ್ತು ಎಂಥ ತರಹದ ಕಠಿಣವಾದ ಮೂಲವ್ಯಾಧಿಯ್ಯಾದರದ ಕೂಡಲೇ ವಾಸಿಯಾಗುತ್ತದೆ. ಇದು ಒಳ್ಳೇ ಔಷಧಗಳಿಂದ ತಯಾರಿಸಲ್ಪಟ್ಟು ಹಚ್ಚಿಕೊಳ್ಳುವವರಿಗೆ ಏನೊಂದೂ ನೋವನ್ನು ಕೊಡದೆ ತಂಪಾಗಿ ಮಾಡುತ್ತದೆ. ಬಾಟ್ಲಿ 1ರ ದರ ರೂ. 1—8—0 ಮಾತ್ರ

ವಿಳಾಸ:—ಆರ್. ಡಿ. ಕಟೆ ಮತ್ತು ಕಂಪೆನಿ,
ನಂಬ್ರ ಬಿ. ಫ್ರೇಯರ್ ರೋಡ್,
ಸಾಂಜ ವರ್ತಮಾನ ಪ್ರೆಸ್,
ಟೋಡಿವಾಲಾ ಬಿಲ್ಡಿಂಗ ಎದುರುಗಡೆ, ಫೋರ್ಟ್ ಮುಂಬಯಿ.

R. D. Kately & Co.
No. B. Frere Road,
Opposit Sanjvertaman Press,
Todivala Building, FORT BOMBAY

ಕನ್ನಡಿಗರೆ! **ವಸಂತ.** ಕಣ್ತೆರೆಯಿರಿ!

ಈಗಾಗಲೇ ಎರಡನೇ ಸಂಪುಟವು ಆರಂಭಿಸಲಿದೆ.

ಇತಿಹಾಸನಿಧಿ ಎಂದರೆ	ವಸಂತ
ನವಸಮಾಜಸುಧಾರಕನೆಂದರೆ	ವಸಂತ
ಕೈಗಾರಿಕೆಯ ಸಾಮ್ರಾಜ್ಯವೆಂದರೆ	ವಸಂತ
ಕರ್ನಾಟಕ ಭಾಷಾಸೇವಕನೆಂದರೆ	ವಸಂತ
ದೇಶವಿದೇಶ ಬಂಧುವೆಂದರೆ	ವಸಂತ
ಕಾದಂಬರಿಗಳ ಭಂಡಾರವೆಂದರೆ	ವಸಂತ
ಚಿತ್ರಾಕರ್ಷ ಚಿತ್ರಶಾಲೆಯೆಂದರೆ	ವಸಂತ
ದೇಶಭಕ್ತನೆಂದರೆ	ವಸಂತ

ಇಂತಹ ವಸಂತನು ಯಾರಿಗೆ ಬೇಕು,
ಯಾರಿಗೆ ಬೇಡ?

48 (ಕ್ರೌನ್ ¼ ಪುಟ ಸೈಜಿನ) ಪುಟಗಳನ್ನು ಮುಕ್ಕಿದ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3—4—0 ಮಾತ್ರ.

ವ್ಯವಸ್ಥಾಪಕ,
ವಸಂತ ಕಾರ್ಯಾಲಯ,
ಕುಂದಾಪುರ, ದಕ್ಷಿಣ ಕನ್ನಡ.

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ
ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ
ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ಯಾವಂತರೂ ತಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ತಮಾನಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನ್ನು ಕುರಿತ ಲೆಕ್ಕಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಅಧಿಕಾರಿಗಳೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪೋಷಕರಿಗೆ	ರೂ. 5—0—0.
ಇತರರಿಗೆ. ಪಾಠಶಾಲೆ, ಪೋಸ್ಟೇಜು ಸೇರಿ	„ 2—8—0.
„ ಸ್ತ್ರೀಯರಿಗೆ ...	„ 1—8—0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪತ್ರಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿಯಬಹುದು.

ಎಡಿಟರ್,
ಬಿ. ಹನುಮಂತಯ್ಯಗೌಡ,
ಅರ್ಥಸಾಧಕ ಪತ್ರಿಕೆ,
ಅರಳೇಪೇಟೆ, ಬೆಂಗಳೂರು [illegible]

ಸಾರಸ್ವತ.

ಕನ್ನಡ ಮತ್ತು ಕೊಂಕಣಿ ಭಾಷೆಗಳಲ್ಲಿ ಕಳೆದ ವಿಜಯ ದಶಮಿಯ ದಿನದಿಂದ ಪ್ರತಿ ದಶಮಿಗೆ ಹೊರಡುವ ಪತ್ರಿಕೆ.

ಎ. ಎಸ್. ಕಾಮತ್,
ಮೂಲ್ಕಿ ವಾಮನ ಕುಡುವ } ಸಂಪಾದಕರು.

ಮತಸಂಸ್ಥೆ ಮತ್ತು ಸಮಾಜಕ್ಕೆ ಸಂಬಂಧಪಟ್ಟ ಇತರ ಸಂಸ್ಥೆಗಳ ಸುಸಂಘಟನ.

ಸಮಾಜದೊಳಗೆ ಅನ್ಯೋನ್ಯ ಸಾಧನೆ.

ಸ್ತ್ರೀಸಮಾಜಕ್ಕೆ ಉಪಯುಕ್ತವಾದ ವಿಷಯಗಳ ನಿರೂಪಣ.

ಮತಭಾವನೆಗಳ ಉಜ್ಜೀವನ ಇತ್ಯಾದಿ ಉದ್ದೇಶಗಳಿಂದ ಈ ಪತ್ರಿಕೆಯು ಹೊರಡಿಸಲ್ಪಡುವುದು. ಸಾರಸ್ವತ ಸಮಾಜವು ಇದಕ್ಕೆ ಪ್ರೋತ್ಸಾಹವನ್ನೀಯಬೇಕಾಗಿ ಪ್ರಾರ್ಥನೆ.

ಚಂದಾಹಣ ಅಂಚೆವೆಚ್ಚ ಕೂಡಾ ರೂ. ೧—೪—೦. ಪೋಷಕರು ರೂ. ೧೦-೦-೦. ಸಹಾಯಕರು ರೂ. ೫-೦-೦. ಮಾದರಿ ಸಂಚಿಕೆಯನ್ನು ಟಪ್ಪಾಲು ಖರ್ಚಿಗಾಗಿ ಅರ್ಧಾಣೆ ಸ್ಟಾಂಪು ಕಳುಹಿಸುವವರಿಗೆ ಉಚಿತವಾಗಿ ಕಳುಹಿಸುವೆವು.

ಕನ್ನಡ ನಾಡಿನಲ್ಲಿ ಪ್ರತಿ ಕಡೆಯಲ್ಲಿಯೂ
ಬಾತಮಿದಾರರು ಬೇಕು.

ಎಲ್ಲಾ ಪತ್ರವ್ಯವಹಾರಗಳನ್ನು ಕೆಳಗಿನ ವಿಳಾಸಕ್ಕೆ ನಡೆಸಬೇಕು.

ಯು. ನಾರಾಯಣನಾಯ್ಕ, ಕಾರ್ಯದರ್ಶಿ,
ಸಾರಸ್ವತ, ಉಡುಪಿ.

ದಕ್ಷಿಣ ಕನ್ನಡ ಜಿಲ್ಲೆಯ
ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಕೋಕಶಾಸ್ತ್ರವು.

ಈ ಪುಸ್ತಕದಲ್ಲಿ 72 ಅಧ್ಯಾಯಗಳೂ ಮತ್ತು 112 ಮನೋಹರವಾದ ಚಿತ್ರಗಳೂ ಇವೆ. ಈ ಪುಸ್ತಕದ ಸಾರಾಂಶ:

ಹೆಂಗಸರಲ್ಲಿ ನಾಲ್ಕು ಜಾತಿ: (1) ಪದ್ಮಿನಿ, (2) ಚಿತ್ರಣಿ, (3) ಶಂಖಿನಿ ಮತ್ತು (4) ಹಸ್ತಿನಿ ಇವರ ನಕ್ಷೆಗಳನ್ನು ಕೊಟ್ಟು ವಿವರಿಸಲ್ಪಟ್ಟಿದೆ. ಹಾಗೆಯೇ ನಾಲ್ಕು ಜಾತಿಯ ಮನುಷ್ಯರು. ಹೆಂಗಸರನ್ನು ಮತ್ತು ಗಂಡಸರನ್ನು ನೋಡಿ ಯಾವ ಜಾತಿ ಎಂದು ಕಂಡುಹಿಡಿಯುವ ಕ್ರಮ. ಚಂದ್ರನ ಮತ್ತು ನಕ್ಷತ್ರಗಳ ಸ್ಥಾನಗಳನ್ನು ನೋಡಿ ಶುಭಕಾಲವನ್ನು ಕಂಡುಹಿಡಿಯುವ ಕ್ರಮ. ರಜಸ್ವಲೆಯಾಗುವಿಕೆ. ಇದರ ವಿವರ. ಇದರ ರೋಗಗಳು, ಈ ರೋಗಗಳ ನಿವಾರಣೆ ಕ್ರಮ. ಬಸುರಾಗುವಿಕೆ, ನವಮಾಸದ ಗರ್ಭದ ಬೆಳವಣಿಗೆ (ಇದರ ನಕ್ಷೆಕೊಡಲ್ಪಟ್ಟಿದೆ). ಬಸುರಾದ ಕಾಲದಲ್ಲಿ ಹೆಂಗಸರು ನಡೆಯುವ ಕ್ರಮ. ನೋವು ಮತ್ತು ಕಷ್ಟವಿಲ್ಲದೆ ಪ್ರಸವ ಆಗುವ ಕ್ರಮ. ಕಳೆದುಕೊಂಡ ಶಕ್ತಿಯನ್ನು ಹಿಂತಿರುಗಿ ಪಡೆಯುವ ಕ್ರಮ. ತಮ್ಮ ಶಕ್ತ್ಯಾನುಸಾರ ಮಿತ ಸಂತತಿಯನ್ನು ಮಾಡುವ ಕ್ರಮ. ತಮ್ಮ ಇಚ್ಛಾನುಸಾರ ಗಂಡು ಅಥವಾ ಹೆಣ್ಣು ಕೂಸನ್ನು ಪಡೆಯುವ ಕ್ರಮ. ಗರ್ಭಾವಸ್ಥೆಯಲ್ಲಿ ಕೂಸಿನ ಲಿಂಗವನ್ನು ಕಂಡುಹಿಡಿಯುವ ಕ್ರಮ, ಹೆಂಗಸರ ಸೌಂದರ್ಯವನ್ನು ಕಾಪಾಡುವುದು ಹೇಗೆ. ಗೊಡ್ಡುತನವನ್ನು ಹೋಗಲಾಡಿಸುವ ಕ್ರಮ. ಮತ್ತು ಅನೇಕ ಇಲ್ಲಿ ವಿವರಿಸಲಿಕ್ಕೆ ಆಗದ ಸಂಗತಿಗಳು ಸಂಕ್ಷೇಪವಾಗಿ ವಿವರಿಸಲ್ಪಟ್ಟಿವೆ. ಬಹಳ ಪ್ರಾಚೀನಕಾಲದ ರೋಗನಿವಾರಣೆಯ ಔಷದಗಳು ಕೊಡಲ್ಪಟ್ಟಿದೆ.

ಈ ಪುಸ್ತಕಗಳು ಇಂಗ್ಲಿಷಿನಲ್ಲೂ ಮರಾಠಿಯಲ್ಲೂ ದೊರೆಯುತ್ತವೆ.

ಪುಸ್ತಕ ೧ರ ಕ್ರಯ ರೂ. 4—0—0.

ಇಂಟರ್‌ನೇಶನಲ್ ಪಬ್ಲಿಶಿಂಗ್ ಕಂಪೆನಿ,
ಇಂಟರ್‌ನೇಶನಲ್ ಬಿಲ್ಡಿಂಗ್,
ಲುಧಿಯಾನಾ, (ಪಂಜಾಬ),

International Publishing Company,
International Building,
Ludhiyana, PUNJAB.

ಸಿರಿಗನ್ನಡಂ ಗೆಲ್ಗೆ.

ಕನ್ನಡನುಡಿಯ ಹನ್ನೊಂದನೆಯ ಹಬ್ಬ.

ಬೆಳಗಾಂವಿ, ಶಾ. ಶ. ೧೮೪೭.

ಕಯ್ಯೋಲೆ ೩.

— ಹಬ್ಬದಲ್ಲಿ ನಡೆಯುವ ಕೆಲಸಗಳ ವಿವರ. —

(೧) ಶುಕ್ರವಾರ ವೈಶಾಖ ಶು| ಹುಣ್ಣಿಮೆ (ಮೇ ೮)ನೆಯ ಸಂಜೆಗೆ ಸುಮಾರು ೫|| ಗಂಟೆಗೆ ಕನ್ನಡ ಸರಸ್ವತಿಯ ಮತ್ತು ಕನ್ನಡ ತಾಯಿಯ ಮುದ್ದು ಮಕ್ಕಳ ಮೆರವಣಿಗೆಯು ಬೆಳಗಾಂವಿಯ ನಿಲ್ಲುವನೆ (ಸ್ಟೇಶನ್)ಯಿಂದ ಹೊರಟು ಕೋಟೆಯೊಳಗಿನ ಬಸದಿಗಳನ್ನು ಕಂಡು ಪಟ್ಟಣದ ನಡುಬೀದಿಯೊಳಗಿಂದ ಸಾಗಿ, ಬಿಡಾರಕ್ಕೆ ತಲ್ಪುವುದು.

ಹಬ್ಬದ ಮೊದಲನೆಯ ದಿನ ಶನಿವಾರ—ವೈ. ಬ| ೧.

ಇಳಿಹೊತ್ತಿನ ೩|| ಗಂಟೆಗೆ ಸಭೆಯು ಶಿವಾನಂದ-ನಾಟಕ-ಶಾಲೆಯಲ್ಲಿ ಸೇರುವುದು ೧ (ಅ) ಕನ್ನಡಿಗರನ್ನು ಬರಮಾಡಿಕೊಳ್ಳುವ ಹಾಡು. ಗಂಟೆ ೩||-೪ (ಆ) ಕನ್ನಡದ ಬಣ್ಣನೆಯ ಹಾಡು. ಗಂಟೆ ೪—೪|| ೨ ಸ್ವಾಗತ ಮಂಡಳದ ಹಿರಿಯರಾದ ಮ| ಚಿಕ್ಕೋಡಿ ತಮ್ಮಪ್ಪನವರು ಕನ್ನಡಿಗರನ್ನು ಓಲಗಿಸುವುದು. ೩ ಸಭೆಗೆ ಹಿರಿಯರೆಂದು ಗೊತ್ತುಪಡಿಸಿದ ಮ| ಬೆನಗಲ್ ರಾಮರಾಯರನ್ನು ಸಭೆಯ ಒಡೆತನವನ್ನು ವಹಿಸಲು ಕೇಳಿಕೊಳ್ಳುವುದು. ಗಂಟೆ ೪||—೫ ಸೂಚಕರು:— ದೇ|| ಗಂಗಾಧರರಾಯರು. ಅನುಮೋದಕರು:— ಮ| ಬೆಳವಿಯವರು. ಗಂಟೆ ೫-೬|| ೪ ಸಭೆಯ ಹಿರಿಯರ ಮಾತುಗಳು.

ಭಾರತಮಾತೆಯ ಹಾಡು.

ಗಂಟೆ ೬||—೭ ೫ ವಿಷಯನಿಯಾಮಕ ಮಂಡಲವನ್ನೇರ್ಪಡಿಸುವುದು.

— ಎರಡನೆಯ ದಿನ. —

ಮುಂಜಾವಿನ ೮ ಗಂಟೆಯಿಂದ ೧೧ರ ವರೆಗೆ ವಿಷಯನಿಯಾಮಕ ಮಂಡಲದ ಸಭೆ. ಸ್ಥಳ—ಸರಕಾರದ ಇಂಗ್ಲಿಷ ಶಾಲೆಯ ಸಭಾಮಂದಿರ. ಮಧ್ಯಾಹ್ನ ಗಂಟೆ ೧—೩|| ಗೊತ್ತುವಳಿಗಳ ವಿಚಾರ ೩||—೫ ಬರಹಗಳ ಓದುವಿಕೆ. ೫-೬ ಕೀರ್ತನೆ, ೬-೭ ಗಾಯನವಾದನ.

— ಮೂರನೆಯ ದಿನ. —

ಮುಂಜಾವು ಗಂಟೆ ೮-೧೧ ವಿಷಯನಿಯಾಮಕ ಮಂಡಲದ ಸಭೆ. ಮಧ್ಯಾಹ್ನ ಗಂಟೆ ೧—೩|| ಗೊತ್ತುವಳಿಗಳ ವಿಚಾರ ೩||—೪ ಬರಹಗಳ ಓದುವಿಕೆ ೪-೫ ಕೀರ್ತನೆ ೫-೬ ಹಳ್ಳಿಯ ಹಾಡುಗಳು ದಾಸರ ಪದಗಳು ೬-೭ ಸಭೆಯನ್ನು ಮುಗಿಸುವ ಕೆಲಸಗಳು.

ವಿ. ಸೂ:—೨ನೆಯ ಪ್ರಕಟನೆಯಲ್ಲಿ ತಿಳಿಯಪಡಿಸಿದಂತೆ ಕನ್ನಡ ನಾಡಿನ ಎಲ್ಲ ತುಂಡುಗಳಲ್ಲಿರುವ ಹೆಸರಾದ ಕನ್ನಡಿಗರಿಗೂ ಅನ್ಯಭಾಷೆಯವರಿಗೂ ಸಭೆಗೆ ಬರಿಸುವ ಪತ್ರಿಕೆಗಳನ್ನು ಮನೆಗೆ ತಿಳಿದ ಮಟ್ಟಿಗೆ ಕಳುಹಿಸಲಾಗಿದೆ. ಅರಿಯದೆಯಾಗಲಿ, ಮರೆತಾಗಲಿ, ಯಾರಿಗಾದರೂ ಪತ್ರಿಕೆಗಳು ಬಾರದೆ ಇದ್ದಲ್ಲಿ, ಕ್ಷಮಿಸಬೇಕಾಗಿ ಬಿನ್ನಹ. ವೃತ್ತಪತ್ರಗಳಲ್ಲಿ ಪ್ರಚುರಪಡಿಸಿದ ೧-೨ ಪ್ರಕಟನೆಗಳಲ್ಲಿ ನಾವು ಬೇಡಿಕೊಂಡಂತೆಯೆ, ಕನ್ನಡಿಗರೆಲ್ಲರು ನಲುಮೆಯಿಂದ ಇಲ್ಲಿಗೆ ಬಂದು, ತಾಯ್ ನುಡಿಯ ಹಬ್ಬವನ್ನು ಹಿಗ್ಗಿನಿಂದ ಆಗಮಾಡಿಸಬೇಕೆಂದು ತಲೆವಾಗಿ ಇನ್ನೊಂದುಸಲ ಬೇಡಿಕೊಳ್ಳುತ್ತೇವೆ. ಬೇಕಾದಾಗ ಕಾರ್ಯಕ್ರಮವನ್ನು ಮಾರ್ಪಡಿಸಲಾದೀತು.

ಸ್ವಾಗತ ಸಂಘದ ಸಭಾಸದರ ಮತ್ತು ಪ್ರತಿನಿಧಿಗಳ ಚಂದಾಹಣವನ್ನು ಕೊಟ್ಟವರಿಗೆ ಟಿಕೀಟುಗಳು ತಾ. ೭, ಗುರುವಾರದಿಂದ ಸಮ್ಮೇಲನದ ಕಚೇರಿಯಲ್ಲಿಯೂ (ಸರಕಾರದ ಇಂಗ್ಲಿಷ ಶಾಲೆಯ ವಸತಿಗೃಹ-Hostel) ತಾ ೯, ಶನಿವಾರದಿಂದ ಶಿವಾನಂದ ನಾಟಕಶಾಲೆಯಲ್ಲಿಯೂ ದೊರೆಯುವವು.

ಬೆಳಗಾಂವಿ,
೧೪೩೩ ಬಸವನ ಓಣಿ
ತಾ. ೧—೫—'೨೫ }

ಕೃ. ಗೋ. ಗೆಜ್ಜಿ,
ಪ. ರಾ. ಚಿಕ್ಕೋಡಿ,
ಸನ್ಮಾನಿತ ಕಾರ್ಯದರ್ಶಿಗಳು ಬಿನ್ನಹ

ಮೂಡುಬಿದ್ರೆ ಶ್ರೀ ಗೋಪಾಲಕೃಷ್ಣ ದೇವಸ್ಥಾನದ

— ಸಹಾಯಕ ಫಂಡ್. —

ಈ ನಮ್ಮ ಧರ್ಮ ಸಂಘಕ್ಕೆ ಕಳೆದ ಎಪ್ರಿಲ್ ತಿಂಗಳಲ್ಲಿ ಸದಸ್ಯರಾಗಿ ಸೇರಿ ಧನಪ್ರಾಧಾನ ಮಾಡಿದ ಯಾ ಕೊಟ್ಟು ಸೇರಿದ ಮಹನೀಯರ ನಾಮಾವಳಿಗಳು—

ಮ| ರಾ| ಉಜ್ರೆ ಕೃಷ್ಣ ಕಡುಮೆಯಂಣಾಯರು ರೂ. ೫೦, ಕರಾಯ ಪದ್ಮನಾಭ ಉಡ್ಪೆಂಣಯರು ರೂ. ೨೫, ಎಮ್. ತಿಮ್ಮಪ್ಪ ಪೂಜಾರಿಗಳು ರೂ. ೧೫, ವಾರಂಬಳ್ಳಿ ಜನಾರ್ಧನಯ್ಯನವರು, ರಾಘವೇಂದ್ರ ನ್ಯಾಕರು, ಪುಂಡರೀಕ ಮಲ್ಯರು, ಕಡಬ ಅನಂತ ಹೆಬ್ಬಾರರು, ಸಾರಾವಿ ಮಂಜನಾಥ ಕಿಣಿಯವರು, ಕಲ್ಲಮಂಜಿ ರಾಮಚಂದ್ರ ಭಟ್ಟರು, ರಿಜಿಸ್ಟ್ರ್ಯಾದೆ ಕಾಂತು ಸೆಟ್ಟಿ ರೂ. ೫ರಂತೆ ಕೂಡಾ ರೂಪಾಯಿ ೧೨೫ ಆಗಿರುತ್ತದೆ.

ಈ ಪೈಕಿ ಕಳೆದ ತಿಂಗಳಲ್ಲಿ ರೂ. ೪೯ ವಸೂಲು ಆಗಿರುತ್ತದೆ.

ವೇಣೂರು ಕೃಷ್ಣಯ್ಯ,
ಕಾರ್ಯದರ್ಶಿ.

೧ನೆಯ ಕರ್ನಾಟಕ ವಿದ್ಯಾರ್ಥಿ ಸಮ್ಮೇಲನ ಬೆಳಗಾವಿ.

ಬಿನ್ನಹ.

ಕಳೆದ ಡಿಸೆಂಬರ ತಿಂಗಳಿನಲ್ಲಿ ಬೆಳಗಾವಿಯಲ್ಲಿ ಕೂಡಿಸಿದ ಐದನೆಯ ಅಖಿಲ ಭಾರತೀಯ ವಿದ್ಯಾರ್ಥಿ ಸಮ್ಮೇಲನದಲ್ಲಿ ಗೊತ್ತಾದ ಮೇರೆಗೆ, ಬರುವ ಮೇ ತಿಂಗಳಿನ ತಾ. ೯ರಿಂದ ೧೧ ಈ ಮೂರು ದಿವಸಗಳಲ್ಲಿ (ಬೆಳಗಾವಿಯಲ್ಲಿ ಜರಗುವ ೧೧ನೆಯ ಕರ್ನಾಟಕ ಸಾಹಿತ್ಯ ಸಮ್ಮೇಲನದೊಂದಿಗೆ) ಮೊದಲನೆಯ ಕರ್ನಾಟಕ ವಿದ್ಯಾರ್ಥಿ ಸಮ್ಮೇಲನವನ್ನೂ ಕೂಡಿಸುವುದು ಗೊತ್ತಾಗಿದೆ. ಕನ್ನಡ ಮಾತು ತಿಳಿಯುವ ಹಾಗೂ ಯಾವದಾದರೊಂದು ಶಿಕ್ಷಣ ಸಂಸ್ಥೆಯಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳು ಪ್ರತಿನಿಧಿಗಳಾಗಿ ಬರಬಹುದು. ಮಾತ್ರ ಪ್ರತಿನಿಧಿಗಳ ವಯಸ್ಸು ೧೬ ವರ್ಷಗಳಿಗೆ ಕಡಿಮೆಯಾಗಿರಲಾಗದು. ಪ್ರತಿನಿಧಿಯ ಚಂದಾ ೧ ಆಣೆ ಇರುವದು. ಸಾಹಿತ್ಯ ಸಮ್ಮೇಲನಕ್ಕೆ ಪ್ರತಿನಿಧಿಗಳಾಗಿ ಬಂದ ವಿದ್ಯಾರ್ಥಿಗಳಿಗೆ ಇರುವ ಸ್ಥಳದ ಮತ್ತು ಊಟದ ಏರ್ಪಾಟು ಮಾಡಲಾಗುವುದು.

ಸಮ್ಮೇಲನದಲ್ಲಿ ಮುಖ್ಯವಾಗಿ ಕೆಳಗೆ ಬರೆದ ನಾಲ್ಕು ವಿಷಯಗಳ ಚರ್ಚೆಯಾಗುವುದು.

೧. ಪ್ರಾಥಮಿಕ ಶಾಲೆಗಳಲ್ಲಿ ಕರ್ನಾಟಕದ ಎಲ್ಲ ಭಾಗಗಳಲ್ಲಿಯೂ ಒಂದೇ ಬಗೆಯ ಕ್ರಮಿಕ ಪುಸ್ತಕಗಳಿರಬೇಕು.

೨. ಹೈ ಸ್ಕೂಲುಗಳ ಶಿಕ್ಷಣಕ್ರಮದಲ್ಲಿ ಇಂಗ್ಲೀಷ ಭಾಷೆಯೊಂದನ್ನುಳಿದು, ಬೇರೆ ಎಲ್ಲ ವಿಷಯಗಳನ್ನು ಕನ್ನಡದಲ್ಲಿಯೇ ಹೇಳುವದು.

೩. ಉಚ್ಚಪ್ರತಿಯ ಶಿಕ್ಷಣದಲ್ಲಿ ಕನ್ನಡಕ್ಕೆ ಇರಬೇಕಾದ ಸ್ಥಾನವು.

೪. ಕರ್ನಾಟಕದ ಬೇರೆ ಬೇರೆ ಭಾಗಗಳ ವಿದ್ಯಾರ್ಥಿಗಳಲ್ಲಿ ಹೆಚ್ಚಿನ ಬಳಕೆಯಾಗಲಿಕ್ಕೆ ಮಾಡಬೇಕಾದ ಉಪಾಯಗಳು.

ಈ ವಿಷಯಗಳಲ್ಲೊಂದನ್ನಾಯ್ದು, ಪ್ರತಿನಿಧಿಗಳು ಲೇಖವನ್ನು ಬರೆದು ತರಬಹುದು. ಸ್ವಾಗತಸಂಘದ ಅಧ್ಯಕ್ಷರು— ಬೆಳವಿ ಬಳವಂತರಾಯರು ಬಿ. ಎ. ಸಮ್ಮೇಲನದ ಅಧ್ಯಕ್ಷರು— ತಲ್ಲೂರ್ ವೆಂಕಟಯ್ಯನವರ, ಎಮ್. ಎ. ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿಯ ಕನ್ನಡ ಪಂಡಿತರು.

ವಿದ್ಯಾರ್ಥಿಗಳೆಲ್ಲರೂ ಸಮ್ಮೇಲನಕ್ಕೆ ಅವಶ್ಯವಾಗಿ ಬಂದು, ಅದನು ಯಶಸ್ವಿಯಾಗಿಮಾಡಬೇಕೆಂದು ಬೇಡಿಕೊಳ್ಳುತ್ತೇವೆ.

ತಾ. ೨೮—೪—'೨೫ ಇಸ್ವಿ,
೧೪೬೭ ದೇಶಪಾಂಡೆ ಓಣಿ
ಬೆಳಗಾವಿ. }

ಮಡ್ಡಯ್ಯನವರ ಬಿ. ಎ.
ತೆರಗೊಂಡಿ ಹೆ ರಾ.
ಸ. ಕಾ. ದರ್ಶಿಗಳು.

ನೋಟೀಸು.

ಸರ್ವ ಜನರಿಗೆ ತಿಳಿಯಪಡಿಸುವದೇನಂದರೆ:—

ಮೂಡಬಿದ್ರೆ ಶ್ರೀ ಗೋಪಾಲಕೃಷ್ಣ ದೇವಸ್ಥಾನದ

— ಸಾಹಾಯಕ ಫಂಡ್. —

ಈ ಸಂಘದ ನಿಭಂಧನೆಯ (45ನೇ ಕಲಮಿನಲ್ಲಿ ಹೇಳುವ ಮೇರೆಗೆ 7ನೇ ವಾರ್ಷಿಕ ಮಹಾ ಸಭೆಯು ಮ| ರಾ| ರಾ| ಶ್ರೀ. ಧರ್ಮಸ್ಥಳ ಮಂಜಯ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಇದೇ ಮೇ ತಿಂಗಳ ತಾರೀಕು 24ನೇ ರವಿವಾರ ಅಪರಾಹ್ನ ಗಂಟೆ 2ರ ಸಮಯ ಮೂಡಬಿದ್ರೆಯಲ್ಲಿರುವ ಸದರಿ ಸಂಘದ ಆಫೀಸಿನಲ್ಲಿ ಜರಗುವ ಸಮಾರಂಭಗಳಿಗೆ ಸದರಿ ಸಂಘದ ಎಲ್ಲಾ ಡೈರೆಕ್ಟರರುಗಳೂ, ಸಂಘದ ಎಲ್ಲಾ ಸದಸ್ಯರುಗಳೂ, ಧರ್ಮ, ಮತ್ತು ವಿದ್ಯಾಭಿಮಾನಿಗಳು, ಕೂಡಾ ಸದರಿ ಧರ್ಮ ಸಂಘದ ಮೇಲೆ ಅಭಿಮಾನವಿಟ್ಟು ಸರ್ವರು ದಯಮಾಡಿ ಬಂದು ಸದರಿ ಸಂಘವು ಅಭಿವೃದ್ಧಿಯಾಗುವಂತೆ ಪ್ರೋತ್ಸಾಹಿಸಬೇಕಾಗಿ ಸಾದರದಿಂದ ಅಪೇಕ್ಷಿಸುವ,

ವೇಣೂರು ಕೃಷ್ಣಯ್ಯ,
ಸದರಿ ಸಂಘದ ಕಾರ್ಯದರ್ಶಿ,

"ENSUING ELECTION TO THE SENATE.

Mr. K. Sanjiva Kamath, B. A. B. L. High Court Vakil, and Provincial Secretary Boyscouts Association, Madras is a candidate for elections to the vacant seat in the Madras University Senate to be filled up by registered graduates at the ensuing election in or about July next"

K. Sanjiva Kamath,
High Court Vakil, Madras.

NOTICE.

Applicants for scholarships in the A Subba Rau Memorial Fund are requested to send their applications to the undersigned by the end of May 1925. Applications from young men wishing to pursue technological studies will be preferred.

M. Madhava Rao,
Secretary, A. S. R. Memorial Fund,
Court-Hill, Kodialbail P. O.
MANGALORE

FOR SALE.

One new **Harley Davidson sports Model** Motor Cycle used only for 250 miles in perfect running order complete with equipments. Price Rs. 1000 or near offer.

For further particulars,
Apply to:—
The Mangalore Trading Association,
Car-Street Mangalore.

ವಿದೇಶ ವರ್ತಮಾನ.

ಇಂಗ್ಲಿಷ ಪಾರ್ಲಿಮೆಂಟಿನಲ್ಲಿ ಕಳೆದವಾರ ಒಂದು ದೊಡ್ಡ ಗದ್ದಲವಾಯಿತು. ಮಿ. ಚರ್ಚಿಲ್ಲರು ಲೇಬರ ಪಕ್ಷಕ್ಕೆ ಅಪಮಾನಕಾರಕ ಮಾತುಗಳನ್ನು ಆಡಿ ಅದನ್ನು ಹಿಂತೆಕ್ಕೊಳ್ಳದೆ ಇದ್ದದರಿಂದ ಲೇಬರ್ ಪಕ್ಷದವರು ಗದ್ದಲವನ್ನು ಎಬ್ಬಿಸಿದರು. ಅಂಥ ಸಂದರ್ಭದಲ್ಲಿ ಮಂತ್ರಿ ಮಂಡಳದವರೆಲ್ಲರು ಹೊರಟುಹೋದರು.

ಕಮ್ಯುನಿಸ್ಟ ಸಂಘದ ಇಬ್ಬರು ಮೆಂಬರರು ಪೆರಿಸ್‌ನಲ್ಲಿ ಟ್ರಾಮಿನಲ್ಲಿ ತಿರುಗಾಡುತ್ತಿದ್ದ ಜನರಿಗೆ ಗುಂಡುಹಾಕಿ ಹೊಡೆಯುತ್ತಿದ್ದರು. ಅವರನ್ನು ಕೂಡಲೆ ಪೋಲೀಸರು ಕೈದುಮಾಡಿದರು.

ಆಫ್ರಿಕದಲ್ಲಿ ನಮ್ಮ ಯುವರಾಜರು ಸಂಚರಿಸುತ್ತಿದ್ದಾರೆ. ಅವರಿಗೆ ಗವರ್ನಮೆಂಟ ಪಕ್ಷದಿಂದ ಸ್ವಾಗತವಾಗಲ್ಪಡುತ್ತದೆ

ಕೂಲಿಗಾರರಿಗೆ ದಿವಸಕ್ಕೆ ೮ ಘಂಟೆ ಮಾತ್ರ ಕೆಲಸಕೊಡಬೇಕೆಂದು ಲೇಬರ ಪಕ್ಷದವರು ಒಂದು ನಿರ್ಣಯವನ್ನು ಪಾರ್ಲಿಮೆಂಟಿನಲ್ಲಿ ಒಂದು ಠರಾವನ್ನು ತಂದಿದ್ದರು. ಆದರೆ ಕನ್ಸರ್ವೇಟಿವ್ ಪಕ್ಷದವರು ವಿರುದ್ಧವಿದ್ದದರಿಂದ ಆ ಠರಾವು ಬಿದ್ದುಹೋಯಿತು.

ಲೊ. ರೆಡಿಂಗರು ಇಂಡಿಯಾ ಆಫೀಸಿಗೆ ಭೇಟಿಯನ್ನು ಕೊಟ್ಟರು ಅಲ್ಲದೆ ನಮ್ಮ ಸೆಕ್ರೆಟರಿಗಳಾದ ಬರ್ಕನಹೆಡ್ಡರೊಡನೆ ಅರ್ಧ ಗಂಟೆಯ ತನಕ ಚರ್ಚೆಯನ್ನು ನಡೆಸಿದ್ದರು. ಮತ್ತು ಚಕ್ರವರ್ತಿಗಳೂ ಸಹ ಮುಕ್ಕಾಲು ಘಂಟೆಯ ತನಕ ರೆಡಿಂಗ ದೊರೆಗಳೊಡನೆ ಸಂಭಾಷಣೆಮಾಡಿದ್ದರು.

ಚೆಂಬರ ಲೇನರಿಗೆ ಖೂನಿಮಾಡುವದಕ್ಕಾಗಿ ಒಂದು ಗುಪ್ತ ಕೂಟವು ಯುರೋಪಿನಲ್ಲಿದೆಂದು ಒಂದು ವರ್ತಮಾನವಿದೆ. ಆದರೆ ಅದಕ್ಕೆ ಸಂಪೂರ್ಣ ಆಧಾರವಿಲ್ಲ. ಆದರೂ ಸರಕಾರದವರು ಅವರ ರಕ್ಷಣೆಗಾಗಿ ಇಬ್ಬರು ಡಿಟೆಕ್ಟಿವ್ ಪೋಲೀಸರನ್ನು ಅವರ ಬಳಿ ಇಟ್ಟಿಯದೆ.

ಝಗಲುಲ ಪಾಷಾ ಇವರು ಬೇಗನೆ ಇಂಗ್ಲೆಂಡಿಗೆ ಹೋಗಲಿರುವರು

ಸರ್ವ ರಾಷ್ಟ್ರೀಯ ಕ್ರೈಸ್ತ ಪರಿಷದ ಜೂನ ತಿಂಗಳಲ್ಲಿ ಲಂಡನದಲ್ಲಿ [illegible] ಆ ಸಂದರ್ಭದಲ್ಲಿ ಇಂಗ್ಲಂಡಿನಲ್ಲಿ ಪ್ರಥಮದಲ್ಲಿ ಸ್ಥಾಪಿಸಿದ ಕ್ರೈಸ್ತೀಯ ಶತಸಾಂವತ್ಸರಿಕ ಸಮಾರಂಭವು ಆಚರಿಸಲಾದೀತು

ಬಲ್ಗೇರಿಯಾದಲ್ಲಿ ದೊಡ್ಡ ದಂಗೆಯಾಯಿತು. ಅದ್ದರಿಂದ ಅದರ ಸಂರಕ್ಷಣಕ್ಕಾಗಿ ೧೦ ಸಾವಿರ ಸೈನ್ಯವನ್ನು ಹೆಚ್ಚಿಗೆ ಸ್ಥಾಪಿಸಬಹುದೆಂದು ಎಲ್ಲ ರಾಷ್ಟ್ರಗಳು ಸಮ್ಮತಿಕೊಟ್ಟಿರುವವು. ಇದರಿಂದ ಗ್ರೀಸದೇಶವು ಭಯಪಟ್ಟಿದೆ.

ಒಳದೇಶ ವರ್ತಮಾನ.

ಹಿಂದುಸ್ಥಾನದ ಮಾಜಿ ಸೆಕ್ರೆಟರಿಗಳಾದ ಮೊಂಟೆಗ್ಯುರವರ ಪ್ರತಿಮೆಯನ್ನು ಶ್ರೀ. ಶ್ರೀನಿವಾಸ ಶಾಸ್ತ್ರಿಗಳವರ ಕೈಯಿಂದ ಅನಾವರಣಮಾಡಲು ನಿಶ್ಚಯಿಸಿಯದೆ.

ಬಂಗಾಲ ಪ್ರಾಂತಿಕ ಪರಿಷತ್ತು ದೇ. ಬಂಧು ಚಿತ್ತರಂಜನದಾಸರ ಅಧ್ಯಕ್ಷತೆಯಲ್ಲಿ ತಾ. ೩ ರಲ್ಲು ಬಹು ವಿಜೃಂಭಣೆಯಿಂದ ಜರಗಿತು. ಪರಿಷತ್ತಿಗೆ ಎಷ್ಟೋ ಮುಖಂಡರು ಹಾಜರಿದ್ದರು. ಬಂಗಾಲದಲ್ಲಿ ಪ್ರಯಾಣಕ್ಕಾಗಿ ಹೊರಟಿದ್ದ ಮಹಾತ್ಮಾ ಗಾಂಧಿಗಳೂ ಸಹ ಹಾಜರಿದ್ದರು. ಇವರು ಬಂಗಾಲಿಗಳಿಗೆ ತಮ್ಮ ಸಂದೇಶವೆಂದು ಖಾದಿ, ಚರಕ ಇವೆರಡನ್ನು ನೆರವೇರಿಸಲು ಹೇಳಿರುವರು.

ಮಾಯವರಮ್ ತಾಲೂಕು ಕೊ| ಕಮಿಟಿಯ ಸೆಕ್ರೆಟರಿ ಸುಬ್ರಮ್ಮಣ್ಯ ಪಿಳ್ಳೆಯವರು ಕೆಲವು ಸ್ವಯಂಸೇವಕರ ಸಾಹಾಯ್ಯದಿಂದ ತನ್ನನ್ನು ಹೊಡೆದರೆಂದು ಕೊ. ಕಾರ್ಯಕಾರಿ ಮಂಡಳಿಯ ಸಭಾಸದರಾದ ರಾಮಸ್ವಾಮಿ ಅಯ್ಯರರು ಪೊಲಿಸರಿಗೆ ರಿಪೋರ್ಟುಮಾಡಿರುವರು.

ಲಷ್ಕರೀ ಶಿಕ್ಷಣವು ವಿದ್ಯಾರ್ಥಿಗಳಿಗೆ ಕಡ್ಡಾಯವಾಗಿ ಇಡಬೇಕೆಂಬುದನ್ನು ಕುರಿತು ಡಾ. ಪರಾಂಜಪೆಯವರು ಮದ್ರಾಸಿನಲ್ಲಿ ಭಾಷಣಮಾಡಿದರು.

ನಾಗಪುರದ ಕೋರ್ಟಿನಲ್ಲಿಯೇ ಒಂದು ಭಯಂಕರ ಖೂನಿಯು ನಡೆಯಿತು. ರಾಮಶರಣ ಮತ್ತು ಜಗಲಾಲ ಎಂಬವರಲ್ಲಿ ವಾದ ವಿವಾದವು ನಡೆದಿತ್ತು. ತಾ. ೨೫ನೇ ದಿವಸ ಕೋರ್ಟಿನಲ್ಲಿ ಇವರ ವಿವಾದವು ಹಾಜರು ಮಾಡಲ್ಪಟ್ಟಿತು. ತನಿಖಿಯು ನಡೆಯುವ ಮೊದಲೇ ಅವರಿಬ್ಬರೊಳಗೆ ವಾದವು ನಡೆದು ರಾಮಶರಣನು ಜಗಲಾಲನನ್ನು ಅಲ್ಲಿರುವಾಗಲೆ ಖೂನಿ ಮಾಡಿದನು. ಅಷ್ಟೆ ಅಲ್ಲ ಅದೇ ಆಯುಧದಿಂದ ತಾನೆ ಆತ್ಮಹತ್ಯಮಾಡಿಕೊಂಡನು. ಭರ್ ಕೋರ್ಟಿನಲ್ಲಿ ಖೂನಿಯಾಗತೊಡಗಿದರೆ, ಸಾಕ್ಷಿಗಾರರು ಯಾರು ಬರುವ್ಯಾರು?

ಕೋಣಗಳನ್ನು ಕೈಸಲ್ಲಿಲ್ಲದೆ ಮಾರುತ್ತಾರೆಂಬ ಆರೋಪದ ಮೇಲೆ ಮೂರು ಜನ ಮುಸಲ್ಮಾನರ ಹುಡುಗರನ್ನು ಕಲಕತ್ತೆಯಲ್ಲಿ ಕೈದುಮಾಡಿದ್ದಾರೆ.

ಲಖನೊ ಮುನ್ಸಿಪಾಲಿಟಿಯು ಸನ್ಮಾನ್ಯ ಲಾಲಾ ಲಜಪತರಾಯರಿಗೆ ಒಂದು ಮಾನಪತ್ರವನ್ನು ಸಮರ್ಪಿಸಬೇಕೆಂದು ನಿಶ್ಚಯಿಸಿದೆ.

ವಾಯುವ್ಯ ಸರಹದ್ದಿನಲ್ಲಿ ರೈಲ್ವೆ ಕೂಲಿಗಳ ಮುಷ್ಕರವು ಇನ್ನೂ ಮುಗಿದಿಲ್ಲ.

[illegible] ಪರ್ಯಟನ ಮಾಡುತಿದ್ದ ವೈಸರಾಯರು, ಲೊ. ಲಿಟನರ ಸ್ವಾರಿಯು ಉತ್ತರ ಸಂಸ್ಥಾನಗಳನ್ನೆಲ್ಲ ಸಂದರ್ಶಿಸಿ ಸಿಮ್ಲಾ ಕಡೆಗೆ ಚಿತ್ತೈಸಿಯದೆ.

[illegible] ತಂಟೆಯು ಇನ್ನೂ ಮುಗಿದಿರುವದಿಲ್ಲ.

ರಾಜಮಹೇಂದ್ರಿಯಲ್ಲಿ ಖೋಟಾ ೫ ರೂಪಾಯಿಗಳ ನೋಟುಗಳನ್ನು ಮಾಡುತ್ತಿದ್ದ ಮೂರು ನಾಲ್ಕು ಜನರನ್ನು ಕೈದುಮಾಡಿದ್ದಾರೆ. ಇವರಲ್ಲಿ ಮೊದಲೊಂದು ಪ್ರಸಂಗದಲ್ಲಿ ಇಂಥ ಅಪರಾಧಕ್ಕಾಗಿಯೆ ಶಿಕ್ಷೆಹೊಂದಿದವನೊಬ್ಬನಿರುವನು.

ಹಿಂದುಸ್ಥಾನದಲ್ಲಿರುವ ಎಂಗ್ಲೋ ಇಂಡಿಯನರನ್ನು ಬ್ರಿಟಿಷ ಸರಕಾರವು [illegible] ಮಾಡದೆ ಇದ್ದದರಿಂದ ಅವರು ಒಕ್ಕಟ್ಟಿನಿಂದ ಮುಂತಾದ [illegible] ಎಂದು [illegible] ಪತ್ರಿಕೆಯು ಬರೆಯುತ್ತದೆ. ಹೀಗೆ ಮಾಡಲು ಇವರು ಒಪ್ಪುವರೆ?

ಅಮೃತಸರದ ಬೀದಿಯಲ್ಲಿ ಎಲ್ಲರ ಸಮಕ್ಷ ಕೆಲವರು ಜೂಗಾರಿ ಆಡುವವರನ್ನು ಅಲ್ಲಿಯ ಪೋಲಿಸರು ಕೈದುಮಾಡಿದರು. ಕೈದುಮಾಡುವಾಗ ಜೂಗಾರಿಕೋರರು ಪೋಲಿಸರ ಮೇಲೆ ಬೀಳಲು ಪ್ರಾರಂಭಿಸಿದ್ದರಿಂದ ಹೆಚ್ಚು ಜನರ ಸಹಾಯ್ಯದಿಂದ ಅವರನ್ನು ಕೈದುಮಾಡಿ ಪ್ರತಿ ಒಬ್ಬನಿಗೆ ೩ ತಿಂಗಳ ಶಿಕ್ಷೆ ವಿಧಿಸಲಾಯಿತು.

ಮದ್ರಾಸ ಅಧಿಪತಿಗಳಾದ ಲೊ. ಗೊಷ್ಷನರು ಉಟಕಮಂಡದಲ್ಲಿರುವಾಗ ಎಂಗ್ಲೊ ಇಂಡಿಯನರನ್ನುದ್ದೇಶಿಸಿ ಕೆಳಗಿನ ಬೋಧಕೊಟ್ಟಿರುವರು. "ನಿಮ್ಮ ಮೇಲೆ ಎರಡು ತರದ ಭಾರವಿದೆ. ಪ್ರಥಮತಃ ನಿಮ್ಮ ಪೂರ್ವ ಜನ್ಮ ಭೂಮಿಯಾದ ಇಂಗ್ಲಂಡ ದೇಶವನ್ನು ಪೂಜ್ಯಭಾವದಿಂದ ನೋಡಬೇಕು. ಎರಡನೇಯದ್ಯಾವುದೆಂದರೆ, ನಿಮ್ಮನ್ನು ಪೋಷಿಸುತ್ತಿರುವ ಹಿಂದೂ ದೇಶವನ್ನು ಸಹ ಮರೆಯಕೂಡದು." ಬಾವಲಿಗಳಿಗೆ ಉತ್ತಮವಾದ ಉಪದೇಶವಲ್ಲವೆ?

ಪೂನೆಯಲ್ಲಿ ವಸಂತೋತ್ಸವ ವ್ಯಾಖ್ಯಾನಮಾಲೆಯು ಸ್ಥಾಪಿಸಿ ಈಗ ೫೦ ಸಂವತ್ಸರಗಳಾದವು. ಇದರ ಮಹೋತ್ಸವವನ್ನು ಕಳೆದ ವಾರ ಆಚರಿಸಲ್ಪಟ್ಟು ದೇ. ಭ. ಕೇಳಕರ ಪ್ರೊ. ಪರಾಂಜಪೆಯವರ ವ್ಯಾಖ್ಯಾನಗಳಾದವು.

ಗಾಂಧಿಜಿಯವರಿಗೆ 'ನಿಮಗೆ ಇಷ್ಟೆಲ್ಲ ಪ್ರಯಾಣಮಾಡಲು ಹಣವೆಲ್ಲಿಯದು? ನಿಮಗೆ ಗುಜರಾಥ ಪ್ರಾ. ಸಭೆಯಿಂದಾಗಲೀ, ಓ. ಇಂ. ಕೊ ಕಮಿಟಿಯಿಂದಾಗಲಿ ಪ್ರಯಾಣಕ್ಕೋಸ್ಕರ ಹಣ ದೊರಕುತ್ತದೊ?" ಎಂದು ಯಾರೊ ಒಬ್ಬನು ಪ್ರಶ್ನಿಸಿದ್ದಾನೆ. ಅದಕ್ಕೆ ಗಾಂಧಿಜಿಯವರು ಯಂಗ ಇಂಡಿಯಾ ಪತ್ರಿಕೆಯಲ್ಲಿ ಬರೆಯುತ್ತಾರೆ. "ನಾನು ಯಾವ ಸಂಸ್ಥೆಯಿಂದಲೂ ಹಣ ತೆಕ್ಕೊಳ್ಳುವದಿಲ್ಲ ನಾನು ಎಲ್ಲೆಲ್ಲಿ ಹೋಗುತ್ತೆನೊ, ಆಗ ನನ್ನನ್ನು ಕರೆಸುವವರೆ ನನ್ನ ಎಲ್ಲ ಏರ್ಪಾಡನ್ನು ಮಾಡುತ್ತಾರೆ."

ದಕ್ಷಿಣ ಕನ್ನಡ.

ಮೊಗ್ರಾಲ್:— ಇಲ್ಲಿಯ ಜಮಾತ್ ಶಾಲೆಯಲ್ಲಿ ಕಳೆದ ತಾ ೨೮ರಲ್ಲು ಕಾಸರಗೋಡು ಕೋಪರೇಟಿವ್ ಯೂನಿಯನ್ನಿನ ಒಂದು ಡೈರೆಕ್ಟರ್ ಮೀಟಿಂಗ್ ಯೂನಿಯನ್ ಅಧ್ಯಕ್ಷ ಪಟೇಲ್ ಶ್ರೀನಿವಾಸ ಕಮ್ತಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಸಭಾ ಕೆಲಸಗಳು ಮುಗಿದ ತರುವಾಯ ಅಧ್ಯಕ್ಷರು ಸಭೆಯನ್ನು ಇಲ್ಲಿಗೆ ಕರೆದ ಡಾ. ಎಂ. ಸೀ ಮಮ್ಮಿಯವರನ್ನು ಅಭಿನಂದಿಸಿ ಸಭೆಯು ಮುಕ್ತಾಯವಾಯಿತು.

ರಮಜಾನ್ ಹಬ್ಬದ ಸಮ್ಮಂದ ೩೮ ದಿನಗಳ ರಜೆಯಲ್ಲಿ ಮುಚ್ಚಿದ್ದ ಜಮಾತ್ ಶಾಲೆಯು ತಾ ೨—೫—'೨೫ರಲ್ಲು ತೆರದು ಕೆಲಸ ಸಾಂಗವಾಗಿ ಆರಂಭಿಸಿದ ಕೂಡಲೇ ಸಪ್ಲಿಮೆಂಟ್ ಗ್ರೇಂಟಿನ ಬಿಲು ಮೆನೇಜರರ ವಕ್ಕಿನ ಬಗ್ಗೆ ಬಂತು. ರೂ. ೧೫ಕ್ಕೆ ಬಿಲು ಮುಂಚಿನ ಹಣವನ್ನು ಇದನ್ನು ಕೂಡಿಸಿ ಕಳದು ಗುಣಿಸಿ ಭಾಗಿಸಿ ನೋಡಿದರು. ಈ ವರುಷದ ಗ್ರೇಂಟು ಸಹಾ ಬಹಳ ಕಮ್ಮಿ ಎಂತಲೇ ಹೇಳದೆ ಉಪಾಯವಿಲ್ಲ. ಈ ರೀತಿ ನಡೆದ ಹಿಂದೂ ಶಾಲೆಗಳಿಗೆ ಸಿಕ್ಕಿದ ಗ್ರೇಂಟಿನ ಲೆಕ್ಕ ನೋಡಿದರೆ ಅದರ ಕಾಲಂಶವೂ ನಮಗಿಲ್ಲ.

ಮೌಲಾನಾ ಮಹಮ್ಮದಾಲಿಯವರು ಕಳೆದ ಎಪ್ರಿಲ್ ತಿಂಗಳಲ್ಲಿ ಕಲ್ಲಿಕೋಟೆಗೆ ಬರುವುದಾಗಿ ಒಪ್ಪಿದ್ದರೂ ಕೆಲವು ಕಾರಣಗಳಿಂದ ಆ ಪ್ರಕಾರ ಬರಲಿಕ್ಕೆ ಆಗಲಿಲ್ಲವೆಂತ ಅವರ ಪತ್ರ ಬಂದಿತ್ತು. ಕಲ್ಲಿಕೋಟೆಗೆ ಬರಲಿಕ್ಕೆ ಆಗದವರು ನಮ್ಮ ಮೊಗ್ರಾಲಿಗೂ ಬಾರದೆ ಇದ್ದದ್ದು ಆಶ್ಚರ್ಯವಲ್ಲ ಇನ್ನೊಂದು ವೇಳೆಯಾದರೂ ಮೌಲಾನಾರವರು ನಮ್ಮ ಜಿಲ್ಲೆಯನ್ನು ಚಿತ್ತೈಸದೆ ಇರರು.

ಪುತ್ತೂರು:— ಎಪ್ರಿಲು ತಿಂಗಳು ದಾಟಿತು ಮೇ ತಿಂಗಳ ಆರಂಭವಾಯಿತು. ಊರಲ್ಲಿ ಭಾವಿಗಳ ನೀರು ಬತ್ತಿ ಹೋದಂತೆ ಲೋಕಲ ಫಂಡ ಭಾವಿಗಳ ನೀರು ಬತ್ತಿಹೋಗಿ ಕುಡಿಯಲಿಕ್ಕೆ ಅಲ್ಪ ಸ್ವಲ್ಪ ಸಿಕ್ಕುವದು ದುರ್ಲಭ. ದೂಳು ಮಣ್ಣು ಎಲೆ ಮುಂತಾದು ಗಾಳಿಗೆ ಉದುರಿ ಬಿದ್ದು ಇದ್ದ ನೀರಿಗೆಂತು ನಾತಹುಟ್ಟಿ ಕುಡಿಯಲಿಕ್ಕೆ ಅಸಾಧ್ಯವಾಗಿಯದೆ. ಇನ್ನಾದರೂ ತಾಲೂಕು ಬೋರ್ಡಿನವರು ಭಾವಿಯ ಕೆಸರು ತೆಗಿಸಬಾರದೆ.

ಕಾಸರಗೋಡು:— ೧೯೨೫ನೇ ಇಸವಿ ಮೇ ತಿಂಗಳ ತಾರೀಖು ೧೬ನೇ ಶನಿವಾರ ಘಂಟೆ ೧೧ಕ್ಕೆ ದಕ್ಷಿಣ ಕನ್ನಡಾ ಜಿಲ್ಲಾ ಕಾಸರಗೋಡು ತಾಲೂಕು ಬೋರ್ಡ್ ಮೆಂಬರರ ಸಭೆಯು ಹೊಸದುರ್ಗ ಲೋಕಲಫಂಡ ಬಂಗಲೆಯಲ್ಲಿ ಕೂಡುವುದು.

ಕಟಪಾಡಿ:— ಇಲ್ಲಿಯ ಶ್ರೀ ವೆಂಕಟರಮಣಸ್ವಾಮಿ ಹಾಯರ್ ಎಲಿಮೆಂಟರಿ ಶಾಲಾ ವರ್ಧಂತ್ಯುತ್ಸವವು ಇದೇ ತಾ. ೪-೫-'೨೫ನೇ ಸೋಮವಾರ ದಿವಸ ಅಪರಾಹ್ನ ಶ್ರೀಯುತ ಅರೂರು ಲಕ್ಷ್ಮೀನಾರಾಯಣ ರಾವ್ ಅವರ್ಗಳ್ ಬಿ. ಎ. ಬಿ. ಎಲ್. ವಕೀಲ್ ಇವರ ಅಧ್ಯಕ್ಷತೆಯಿಂದ ಆಚರಿಸಲ್ಪಟ್ಟಿತು. ನೆರೆಕರೆಯ ವಿದ್ಯಾಭಿಲಾಷಿಗಳಾದ ಮಾನ್ಯಗೃಹಸ್ಥರು ಹಲವರು ಚಿತ್ತಯಿಸಿದ್ದರು. ಸುಸ್ವಾಗತ ಹಾಡು, ಶಾಲಾ ರಿಪೋರ್ಟು ಓದೋಣ, ಮಕ್ಕಳಿಗೆ ಇನಾಮು ಹಂಚೋಣ, ಸಭಿಕರ ಭಾಷಣ, ಅಧ್ಯಕ್ಷರ ಭಾಷಣಾದಿಗಳು ಮುಗಿದೊಡನೆ ಶಾಲಾ ವಿದ್ಯಾರ್ಥಿಗಳೂ ಹಳೆಯ ವಿದ್ಯಾರ್ಥಿಗಳೂ ಸೇರಿ ಮಹಾಪತಿವ್ರತೆ "ಸಾವಿತ್ರಿ" ನಾಟಕವನ್ನು ನಟಿಸಿ ಸಭಿಕರನ್ನು ಆನಂದಗೊಳಿಸಿದರು. ಸಭಾಂತ್ಯದಲ್ಲಿ ಧನ್ಯವಾದಗಳು ಅರ್ಪಿಸಲ್ಪಟ್ಟು ತಾಂಬೂಲಾದಿ ಉಪಚಾರಗಳಾಗಿ ಸಭೆಯು ಮುಕ್ತಾಯವಾಯಿತು. ಇದೇ ದಿನ ಬೆಳಗ್ಗೆ ಶಾಲಾ ವಿದ್ಯಾರ್ಥಿಗಳಿಗೆ ಫಲಾಹಾರವಿತ್ತಿತು. ಈ ದಿನದ ಸಭೆಗೆ ಮಹಿಳೆಯರಿಗಾರಿಗೂ ಆಮಂತ್ರಣವಿಲ್ಲದಿದ್ದುದರಿಂದ ಮರುದಿನ ಮಹಿಳೆಯರಿಗೆ ಹಾಗೂ ವಿದ್ಯಾರ್ಥಿಗಳಿಗಾಗಿಯೇ ಅದೇ ಸಾವಿತ್ರಿ ನಾಟಕವನ್ನು ಆಡಿತೋರಿಸಿದರು. ಶಾಲಾ ಕರೆಸ್ಪೊಂಡೆಂಟರಾದ ಶ್ರೀ. ಪಾಂಗಾಳ ಶ್ರೀನಿವಾಸ ನಾಯ್ಕರವರು ಸೂಚಿಸಿದಂತೆ ಕಳೆದ ವರ್ಧಂತಿಯ ಸಂದರ್ಭದಲ್ಲಿ ಚಂದ್ರಹಾಸಾಭ್ಯುದಯ ನಾಟಕವನ್ನು ಆಡಿ ಕೂಡಿಸಿದ್ದ ನಿಧಿಯನ್ನು ವೃದ್ಧಿಗೊಳಿಸಿ ಒಂದೆರಡು ಫರದೆಗಳನ್ನು ಮಾಡುವುದರ ಸಲುವಾಗಿ ಇದೇ ನಾಟಕವನ್ನು ಟಿಕೇಟು ಇಟ್ಟು ಇದೇ ತಾ. ೧೧ನೇ ಸೋಮವಾರ ದಿವಸ ಅಭಿನಯಿಸಬೇಕೆಂದು ನಿಶ್ಚಯಿಸಲಾಗಿದೆ. ಸದಾಶ್ರಯರಾದ ವಿದ್ಯಾಭಿಮಾನಿಗಳು ಈ ಸಂದರ್ಭದಲ್ಲಿ ಪ್ರೋತ್ಸಾಹಿಸುವುದು ಅತೀ ಅಗತ್ಯವಾಗಿದೆ.

ಹಳ್ಳಿಯು ಚಿಕ್ಕದಾದರೂ ಕಳವು ವರ್ಷಂಪ್ರತಿ ಮೂರು ನಾಲ್ಕು ಸಲ ಪೇಟೆಯಲ್ಲಿಯೇ ಆಗುತ್ತದೆ. ಕಳವಾದ ಸಮಯದಲ್ಲಿ ರಿಪೋರ್ಟು ಹೋಗಲಿಲ್ಲ; ಮೇಲಾಧಿಕಾರಿಗಳು ಬರುವುದಿಲ್ಲ. ಆದರೆ ಕಳ್ಳನು ಸಿಕ್ಕಲಿ ಅಥವಾ ಸಿಕ್ಕದಿರಲಿ ದಿವಸ ಕಳೆದ ಸಂಗತಿ ಅವರ ನೆನಪಿಲ್ಲ. ಇದೀಗ ನಮ್ಮ ಮಾನ್ಯ ಸರಕಾರ ಬಂಧುಗಳ ಸಮಯಸ್ಫೂರ್ತಿ ಇರಲಿ, ಮೊನ್ನೆ ಕಳೆದ ೨೦ನೇ ತಾರೀಕಿನ ದಿನ ಪೇಟೆಯಲ್ಲಿರುವ ಒಂದು ಜವುಳಿ ಅಂಗಡಿಗೆ ಕನ್ನ ಹಾಕಿದ್ದಾರೆ. ಕೂಡಲೇ ರಿಪೋರ್ಟು ಓಡಿತು; ಮೇಲಾಧಿಕಾರಿಗಳು ಬಂದರು; ವಿಚಾರಿಸಿದರು; ಸಿಕ್ಕಿ ಸಿಕ್ಕಿದವರೊಡನೆ ಕೇಳಿದರು; ಗದ್ದಲವೆಬ್ಬಿಸಿದರು, ಕಳ್ಳನು ಸಿಕ್ಕಲಿಲ್ಲ; ಹಿಂತಿರುಗಿ ಹೋದರು. [illegible] ನಿರ್ವಾಹವಿಲ್ಲದೆ ಈಗಲೂ ಆಗಾಗ್ಗೆ ಬಂದುಹೋಗುತ್ತಿರುವರು, ಕೆಲವು ಹಲವಾದರೂ ಕಳ್ಳನು ಸಿಕ್ಕಲಿಲ್ಲವೆಂದರೆ ಒಂದು ಆಶ್ಚರ್ಯವೇ ಸರಿ. ಅಲ್ಲದೆ ಸಿಕ್ಕದಿರಲು ಕಾರಣವಾದರೂ ಅಧಿಕಾರಿಗಳಹಾಗೂ ಊರವರ ಉದಾಸೀನತೆಯಲ್ಲದೆ ಮತ್ತೇನು? ಈ ಸಾರಿಯಾದರೂ ಉಭಯತರರೂ ಒಟ್ಟಾಗಿ ಕಾರ್ಯರಂಗಕ್ಕೆ ಸೊಂಟಕಟ್ಟಿ ಇಳಿದರೆ ಕಳ್ಳನು ಏಕೆ ಸಿಕ್ಕಲಾರನು? ಈ ಸಮಯದಲ್ಲಿ ಭಗವಂತನಾದರೂ ಏಕೆ ಬೆಂಬಲವಾಗ ಬಾರದು?

ವಿವಿಧ ವಿಷಯಗಳು.

ಪುಣೆಯ ಕೇಸರಿ ಪತ್ರದಲ್ಲಿ ಮುಂದಿನ ಮಾಹಿತಿಯು ಪ್ರಕಟವಾಗಿದೆ- "ಮಹಮ್ಮದೀಯರ ಧರ್ಮಭ್ರಾಂತಿಯ ಅಥವಾ ಅತ್ಯಾಚಾರ ಪ್ರವೃತ್ತಿಯ ಅತಿರೇಕದ ಉದಾಹರಣೆಗಳು ಇತ್ತಿತ್ತಲಾಗಿ ಹೆಚ್ಚು ಬಹಿರಂಗಕ್ಕೆ ಬರುತ್ತಿವೆ. ಹೆಚ್ಚಾಗಿ ನಿಝಾಮ ರಾಜ್ಯದಲ್ಲಿ ಇಂಥ ಸಂಗತಿಗಳು ಆಗಾಗ್ಗೆ ಸಂಭವಿಸುತ್ತಲಿವೆ. ವಾರಂಗಲ ಎಂಬಲ್ಲಿಯ ಸುಪ್ರಸಿದ್ಧ ಹಿಂದು ವಕೀಲರಾದ ಪಿಂಗಲ ರಂಗರಾವ ಎಂಬವರು ಇತ್ತಲಾಗಿ ಮೃತಪಟ್ಟರು. ಅವರಿಗೆ ನಿಝಾಮ ರಾಜ್ಯದಲ್ಲಿ ವಕಾಲತನ್ನು ನಡಿಸಬೇಕಾಗುತ್ತಿದ್ದರಿಂದ ಸ್ವಾಭಾವಿಕವಾಗಿಯೇ ಅರಬಿ, ಫಾರಸಿ, ಉರ್ದು ಈ ಭಾಷೆಗಳಲ್ಲಿ ಅವರು ಪ್ರಾವೀಣ್ಯವನ್ನು ಸಂಪಾದಿಸಿದ್ದ. ಜಾತಿ ಮಹಮ್ಮದೀಯನಿಗಿಂತಲೂ ಪಿಂಗಲ ರಂಗರಾಯರು ಈ ಭಾಷೆಗಳನ್ನು ಉತ್ತಮ ರೀತಿಯಿಂದ ಬರೆಯುತ್ತಿದ್ದರು ಮತ್ತು ಆಡುತ್ತಿದ್ದರು. ಆದರೆ ಆ ಭಾಷೆಗಳಲ್ಲಿ ಇಷ್ಟು ನೈಪುಣ್ಯವುಳ್ಳವನು ಹಿಂದುವಾಗಿರುವದು ಸಾಧ್ಯವಿಲ್ಲ ಎಂದು ಅಲ್ಲಿಯ ಕೆಲವು ಮೌಲವಿಗಳಿಗೆ ತೋರಿ ಅವರು ಈ ವಕೀಲರನ್ನು ಮಹಮ್ಮದೀಯ ಧರ್ಮದ ಅನುಯಾಯಿಗಳನ್ನಾಗಿ ನಿರ್ಣಯಿಸಿದರು! ಮತ್ತು ಅವರ ಮೃತಶರೀರವನ್ನು ಹಿಂದು ಧರ್ಮಶಾಸ್ತ್ರ ಪ್ರಕಾರವಾಗಿ ದಹನಮಾಡಕೂಡದು, ಮಹಮ್ಮದೀಯ ಧರ್ಮ ಪ್ರಕಾರವಾಗಿ ದಫನಮಾಡಬೇಕೆಂದು ಆಗ್ರಹವನ್ನು ಹಿಡಿದರು! ಹಿಂದುಗಳಿಗೆ ಇದು ತಿರಸ್ಕರಣೀಯವಾಗಿ ಅವರು ಇದನ್ನು ಒಪ್ಪಲಿಲ್ಲ. ಕೊನೆಗೆ ಈ ವಿವಾದವು ನಿಝಾಮ ಶಹ ಧರ್ಮದ ಇಲಾಖೆಗೆ ತಿಳಿಸಲ್ಪಟ್ಟು ಅದರ ನಿರ್ಣಯವು ಅಪೇಕ್ಷಿಸಲ್ಪಟ್ಟಿತು. "ಪಿಂಗಲ ರಂಗರಾಯರು ಇಸ್ಲಾಮಿ ಧರ್ಮವನ್ನು ಅಂಗೀಕರಿಸಿದ ಬಗ್ಗೆ ದಾಖಲೆಯು ಇದ್ದರೆ ಮಾತ್ರ ಅವರ ಶವವನ್ನು ದಫನಮಾಡಬೇಕು, ಇಲ್ಲವಾದರೆ ಅವರ ಶವವನ್ನು ದಹನ ಮಾಡಲು ಅಡ್ಡಿಮಾಡಕೂಡದು" ಎಂದು ಧರ್ಮ ಇಲಾಖೆಯು ನಿರ್ಣಯವನ್ನು ಕೊಟ್ಟಿತು. ರಂಗರಾಯರು ಇಸ್ಲಾಮಿ ಧರ್ಮವನ್ನು ಸ್ವೀಕರಿಸಿದ ಬಗ್ಗೆ ಯಾವ ದಾಖಲೆಯೂ ಇದ್ದಿಲ್ಲ. ಆದರೂ ಮುಸಲ್ಮಾನರ ಅಡ್ಡಿಯು ಯಥಾಪ್ರಕಾರ ಇದ್ದೆ ಇದ್ದ ಕಾರಣ ಪೋಲೀಸರ ಪಹಾರೆಯಲ್ಲಿ ಅವರ ಶವವನ್ನು ದಹಿಸಬೇಕಾಗಿ ಬಂತು! ಈ ಎಲ್ಲ ಸಂಗತಿಗಳು ನಡೆಯುವ ವರೆಗೆ ಎರಡು ದಿವಸಗಳು ದಾಟಿ ಹೋದವು, ಅಷ್ಟರ ವರೆಗೆ ಪಿಂಗಲ ರಂಗರಾಯರ ಶವವು ಹಾಗೆಯೇ ಬಿದ್ದುಕೊಂಡಿತ್ತು!! ಯಾವನೀ ಭಾಷೆಯನ್ನು ಬರೆ ಆಡುವವರಿಂದ ನಿಝಾಮ ರಾಜ್ಯದಲ್ಲಿ ಇಂಥ ಶೋಚನೀಯ ಸಂಗತಿಗಳು ಘಟಿಸುತ್ತವಾದ ಕಾರಣ "ನವದೇದ್ಯಾವನೀಂಭಾಷಾಂ ಪ್ರಾಣೈಃ ಕಂಠಗತೈರಪಿ" ಎಂದು ಹೇಳಿದ ಮಾತು ಸತ್ಯವೆಂದು ಅಲ್ಲಿಯವರಿಗೆ ತೋರದೆ ಇರಲಿಕ್ಕಿಲ್ಲ. ಇಂಥ ಪ್ರಕಾರಗಳು ಆಗಾಗ್ಗೆ ಸಂಭವಿಸುತ್ತಿರುವಾಗ ಅವುಗಳ ಪ್ರತಿಕಾರಕ್ಕೋಸ್ಕರ ಹಿಂದುಗಳು ಸಂಘಟನವನ್ನು ಮಾಡಿಕೊಳ್ಳಬಾರದೆಂದು ಹೇಳುವ ಮುಖಂಡರು ಇನ್ನೂ ಹಿಂದುಗಳಲ್ಲಿದ್ದಾರೆ. ಇದು ಆಶ್ಚರ್ಯವಲ್ಲವೆ?"

• • • • •

ಅದೆ ಪತ್ರಿಕೆಯಲ್ಲಿ ಮುಂದಿನ ಸಂಗತಿಯು ಪ್ರಕಟವಾಗಿದೆ. "ಸಂಯುಕ್ತ ಪ್ರಾಂತದಲ್ಲಿ ಸೀತಾಪುರ ಜಿಲ್ಲೆಯಲ್ಲಿ ನವೀನಗರವೆಂಬದೊಂದು ಚಿಕ್ಕ ಸಂಸ್ಥಾನವಿದೆ. ಅಲ್ಲಿ ಮಿ| ದಂಡ್ ಎಂಬ ಹೆಸರಿನ ಒಬ್ಬ ಯುರೋಪಿಯನ ಗೃಹಸ್ಥರು ಸಂಸ್ಥಾನದ ಎಡ್ಮಿನಿಸ್ಟ್ರೇಟರಿದ್ದಾರೆ. ಸಂಸ್ಥಾನದ ಸರಹದ್ದಿನೊಳಗಿನ ಕೆರೆ, ಬಾವಿ, ಕೋಟೆ, ಮಂದಿರ ಮುಂತಾದವುಗಳನ್ನು ಜೀರ್ಣೋದ್ಧಾರಪಡಿಸುವದು ಅವರಿಗೆ ತುಂಬಾ ಇಷ್ಟ. ಬ್ರಾಹ್ಮಣರ ಮಕ್ಕಳು ಸ್ನಾನಸಂಧ್ಯಾವಂದನೆಗಳನ್ನು ಮಾಡಬೇಕೆಂದು ಅವರ ಇಚ್ಛೆ ಇರುತ್ತದೆ. ಮತ್ತು ಬ್ರಾಹ್ಮಣ ವಿದ್ಯಾರ್ಥಿಗಳಿಗೆ ಅವರು ಶಿಷ್ಯವೃತ್ತಿ (ಸ್ಕೊಲರ್‌ಶಿಪ್)ಯನ್ನು ತಮ್ಮ ಸಂಬಳದಿಂದ ಕೊಡುವ ಪದ್ಧತಿಯನ್ನು ಇಟ್ಟುಕೊಂಡಿರುವರು. ನವೀನಗರದಿಂದ ಸ್ವಲ್ಪ ದೂರದಲ್ಲಿರುವ ಒಂದು ಶಿವಮಂದಿರವನ್ನು ಅವರು ಜೀರ್ಣೋದ್ಧಾರಪಡಿಸಿದ್ದಾರೆ. ಮತ್ತು ಅದಕ್ಕೆ 'ದಂಡೇಶ್ವರ'ವೆಂಬ ಹೆಸರನ್ನು ಕೊಟ್ಟಿದ್ದಾರೆ, ಆ ದೇವರನ್ನು ತನ್ನ ಕೈಯಿಂದಲೆ ಪೂಜಿಸಬೇಕೆಂಬ ಇಚ್ಛೆಯು ಅವರಲ್ಲಿ ಪ್ರಬಲಗೊಂಡು ಅವರು ಯವಭಕ್ಷಣ, ಪಂಚಗವ್ಯ, ಪ್ರಾಶನ ಮುಂತಾದ ಬ್ರಾಹ್ಮಣರು ಹೇಳಿದ ಎಲ್ಲ ಪ್ರಾಯಶ್ಚಿತ್ತಗಳನ್ನು ತಕ್ಕೊಂಡು ಪಟ್ಟೆಮಡಿಯನ್ನು ಉಟ್ಟು ಸಪತ್ನೀಕರಾಗಿ ದೇವರ ಪೂಜೆಯನ್ನು ಮಾಡಿದರು!!"

ಸ್ವೀಕಾರ.

ಆಯುರ್ವೇದ ಭೂಷಣರಾದ ಶ್ರೀ. ಎಸ್. ವಿ. ಶಾಸ್ತ್ರಿಗಳವರ ಗೋಪಾಲ ಭೇಷಜಾಶ್ರಮದ ವಾರ್ಷಿಕ ವರದಿ (೧೯೨೪) ಈ ವರದಿಯು ಎಂದಿನಂತೆ ಗೋಪಾಲ ಭೇಷಜಾಶ್ರಮದ ಪ್ರಗತಿಯನ್ನು ಸೂಚಿಸುತ್ತದೆ. ಈ ಆಶ್ರಮದ ಎರಡು ಶಾಖೆಗಳಿದ್ದು ಒಂದು ಬೇಡಿಗುಡ್ಡೆಯಲ್ಲೂ ಪ್ರಧಾನವಾದ ಇನ್ನೊಂದು ಕದ್ರಿಯಲ್ಲೂ ಇದೆ. ಈ ವರದಿಯ ವರುಷದಲ್ಲಿ ೪೯೯೬ ಹೊಸ ರೋಗಿಗಳು ಭೇಷಜಾಶ್ರಮದಿಂದ ಚಿಕಿತ್ಸೆಹೊಂದಿರುವರು. ಆಯುರ್ವೇದ ಭೂಷಣರಾದ ಶಾಸ್ತ್ರಿಗಳ ಪಾಂಡಿತ್ಯ, ದೀರ್ಘೋದ್ಯೋಗ, ವ್ಯವಸಾಯದಕ್ಷತೆ, ರೋಗಿಗಳ ಚಿಕಿತ್ಸೆಯಲ್ಲಿ ತಕ್ಕೊಳ್ಳುವ ಜಾಗ್ರತೆ ಇತ್ಯಾದಿ ವಿಷಯವಾಗಿ, ಅವರು ನಮ್ಮ ಇಡಿ ಜಿಲ್ಲೆಗೆ ಸುಪರಿಚಿತರಾಗಿರುವದರಿಂದ, ಯಾಕೆ, ಕರ್ನಾಟಕದಲ್ಲಿ ಕೂಡ ಪ್ರಸಿದ್ಧರಾಗಿರುವದರಿಂದ ಇಲ್ಲಿ ಬರೆಯುವದು ಚರ್ವಿತ ಚರ್ವಣವೆ ಸರಿ. ಆದರೆ ಇಲ್ಲಿ ಒಂದು ಸಂಗತಿಯನ್ನು ಮಾತ್ರ ಹೇಳುವದು ಅಗತ್ಯವಾಗಿದೆ. "ಗೋಪಾಲ ಭೇಷಜಾಶ್ರಮದಲ್ಲಿ ಔಷಧಗಳ ಕ್ರಯವನ್ನು ವ್ಯವಸ್ಥೆಗೊಳಿಸಿದ್ದಲ್ಲದೆ ಸಾಧ್ಯವಾದಷ್ಟು ಕಡಿಮೆ"ಮಾಡಿರುತ್ತದೆ. "ಅನುಕೂಲವಿಲ್ಲದ ರೋಗಿಗಳಿಗೆ ಔಷಧಗಳನ್ನು ಧರ್ಮಾರ್ಥವಾಗಿ" ಕೊಡೋಣಾಗುತ್ತದೆ. ಈ ಎರಡು ಸಂಗತಿಗಳು ಶಾಸ್ತ್ರಿಯವರಿಗೆ ಭೂಷಣವೆ ಮಾತ್ರ ಅಲ್ಲ, ಪ್ರಶಂಸನೀಯವಾಗಿದೆ. ಶ್ರೀಯುತ ಎಸ್. ವಿ. ಶಾಸ್ತ್ರಿಗಳು ಈ ಜಿಲ್ಲೆಯಲ್ಲಿ ಆದರ್ಶಭೂತವಾಗಿ ನಡೆಸುವ ಗೋ. ಭೇಷಜಾಶ್ರಮವು ಉತ್ತರೋತ್ತರ ಅಭ್ಯುದಯವನ್ನು ಹೊಂದಲಿ ಎಂದು ನಾವು ಹಾರೈಸುತ್ತೇವೆ.

ಅನುಕ್ರಮಣಿಕೆ.

ಅಗ್ರಲೇಖ ಪುಟಗಳು.
ಕಾರ್ಕಳ ಪರಿಷತ್ತುಗಳು ೬
ಸ್ಫುಟವಿಚಾರಗಳು—
೧. ತಮಿಳು ಪ್ರಾಂತದಲ್ಲಿಯ ಗುರುಕುಲ ,,
೨. ವ್ಯಕ್ತಿಲೇಖ—ಸರ್. ಪೀ. ಟಿ. ಚೆಟ್ಟಿ ,,
೩. ಬಂಗಾಲ ಪ್ರಾಂತಿಕ ಪರಿಷತ್ತು ,,
೪. ಗಾಂಧೀಜಿಯವರ ಉದ್ಗಾರಗಳು ,,
೫. ಸುರೇಂದ್ರನಾಥರು ಬಾಯಿಬಿಟ್ಟರು ೭
೬. ಪೃಥ್ವೀಶರು ಸ್ವರಾಜ್ಯಪಾರ್ಟಿಗೆ ಸೇರಿದರು ,,
೭. ಜರ್ಮನಿಯಲ್ಲಿಯ ಚುನಾವಣೆ ,,
ಮಂಗಳೂರು
ವರ್ತಮಾನಸಂಗ್ರಹಗಳು—
ವಿದೇಶ – ಒಳದೇಶ ವರ್ತಮಾನ ೫
ದಕ್ಷಿಣ ಕನ್ನಡ — ಮೊಗ್ರಾಲ್, ಪುತ್ತೂರು, ಕಾಸರಗೋಡು ಕಟಪಾಡಿ, ವಿವಿಧ ವಿಷಯಗಳು ೮
ಪತ್ರವ್ಯವಹಾರ ೧, ೨, ೩, ೪ ,,

ಸ್ವದೇಶಾಭಿಮಾನಿ.

ಶಕ ೧೮೪೭ ವೈಶಾಖ ಶು| ೧೫ವು ಶುಕ್ರವಾರ.

ಕಾರ್ಕಳ ಪರಿಷತ್ತುಗಳು.

ಈ ತಿಂಗಳ ಮೊದಲನೆ ವಾರದಲ್ಲಿ ಕಾರ್ಕಳದಲ್ಲಿ ಜಿಲ್ಲಾ ಪರಿಷತ್ತೂ, ಸ್ವರಾಜ್ಯಪಕ್ಷದ ಪರಿಷತ್ತೂ ಜರಗಿದವು. ಶ್ರೀ. ದತ್ತಾತ್ರೇಯ ಬಾಲಕೃಷ್ಣ ಕಾಲೇಲಕರರೆಂಬವರು ಜಿಲ್ಲಾ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಶ್ರೀ. ಶ್ರೀನಿವಾಸ ಅಯ್ಯಂಗಾರರು ಸ್ವರಾಜ್ಯಪಕ್ಷದ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಕಾಲೇಲಕರರು ಅಪರಿಚಿತರಾಗಿದ್ದರೂ, ಅವರು ತಮ್ಮ ಭಾಷಣದಲ್ಲಿ ಪ್ರದರ್ಶಿಸಿದ ವಿಚಾರಗಳೇನಾದರೂ ಅಪರಿಚಿತವಲ್ಲ. ಬೇಡ ಬದಲಾವಣೆಯ ಕಡುಸಾಂಪ್ರದಾಯಿಕರ ವಿಚಾರಗಳೆ ಇವರ ವಿಚಾರಗಳು. ಎಂದ ಮೇಲೆ ಅವುಗಳಲ್ಲಿ, ನಿಜವಾಗಿ ಹೇಳುವುದಾದರೆ, ಯಾವ ನಾವೀನ್ಯವೂ ಇರಲಿಲ್ಲ. ತಥಾಪಿ ಹಿಂದು ಮುಸಲ್ಮಾನರ ಐಕ್ಯದ ವಿಷಯವನ್ನು ಎತ್ತಿಕೊಂಡು ಕಾಲೇಲಕರರು ಯಾವ ವಿಚಾರಪ್ರವಾಹದಲ್ಲಿ ತೇಲುತ್ತ ಹೋಗಿದ್ದಾರೊ ಅದೆಲ್ಲ ನಿರ್ದೋಷವಾಗಿದೆ ಅಥವಾ ದೇಶಹಿತಕರವಾಗಿದೆ ಎಂದು ಮಾತ್ರ ಹೇಳಲಾಗದು. ಮತಾಂತರಗೊಳಿಸುವ ಚಳವಳವು ಪ್ರಥಮತಃ ಯಾರಲ್ಲಿ ಉದ್ಭವಿಸಿತು, ಆ ಚಳವಳವು ವಟವೃಕ್ಷದಂತೆ ಹೇಗೆ ಪ್ರಚಂಡವಾದ ರೀತಿಯಲ್ಲಿ ವಿಸ್ತಾರ ಹೊಂದುತ್ತಿದೆ ಇದರ ಇತಿಹಾಸವು ಜಗತ್ತಿಗೆ ಗೊತ್ತಿರುವದರಿಂದ ಅದನ್ನು ವಿಪರ್ಯಾಸಪಡಿಸಲು ಯಾರೆ ಎಷ್ಟೊ ಯತ್ನಿಸಿದಾಗ್ಯೂ ಅದು ವ್ಯರ್ಥವೆ ಸರಿ. ಮತಾಂತರ ಪರಿವರ್ತನದಿಂದ ಹಿಂದುಮತಕ್ಕೆ ಕ್ಷೀಣತೆ ಬರುವದನ್ನು ಕಂಡು ಈ ಅನರ್ಥದ ಪ್ರತಿಕಾರವನ್ನು ಹಿಂದುಗಳು ಮಾಡಬಾರದೆಂದು ಸೂಚಿಸುವದಕ್ಕೆ ಯಾವ ಹೆಸರು ಕೊಡಬೇಕೆಂದು ನಮಗೆ ತಿಳಿಯದು. ಹೆಂಗಸರು ಮಕ್ಕಳುಗಳನ್ನು ಕಳಕೊಂಡು ಆ ಐಕ್ಯವನ್ನು ಸಾಧಿಸುವದಾದರೆ ಅಂಥ ಐಕ್ಯವೆ ಅಗತ್ಯವಿಲ್ಲವೆಂದು ಯಾರೂ ಹೇಳದೆ ಇರಲಿಕ್ಕಿಲ್ಲ. ಡಿಲ್ಲಿ, ಪೂರ್ವ ಬಂಗಾಲ ಮುಂತಾದ ಕಡೆಗಳಲ್ಲಿ ಯಾವ ಯಾವ ಸಂಗತಿಗಳು ನಡೆಯುತ್ತಿವೆ ಎಂಬುದನ್ನು ಹಿಂದುಗಳಿಗನೆ ಉಪದೇಶ ಕೊಡತಕ್ಕ ಇಂಥಾ ಬೋಧಕರು ಕಣ್ಣು ಬಿಟ್ಟು ತಿಳಕೊಳ್ಳುವದು ಒಳ್ಳೇಯದು. ಇರಲಿ. ಕಾಲೇಲಕರರು ಖಾದಿಪ್ರಸಾರ, ಅಸ್ಪೃಶ್ಯತಾನಿವಾರಣೆ ಇತ್ಯಾದಿ ವಿಧಾಯಕಕಾರ್ಯಕ್ರಮವನ್ನು ಕುರಿತು ಜಿಲ್ಲೆಯ ಹೆಚ್ಚಿನ ಪರಿಶ್ರಮವನ್ನು ತೆಕ್ಕೊಂಡು ಕಾರ್ಯಪ್ರವಣವಾಗಬೇಕೆಂದು ಹೇಳಿದ ಮಾತು ಬಹು ಯೋಗ್ಯವಾಗಿದೆ. ವಿಧಾಯಕಕಾರ್ಯಕ್ರಮಕ್ಕೆ ಯಾರೂ ವಿರೋಧಿಗಳಲ್ಲ. ಅದರ ಪ್ರಗತಿಯಾಗುವದು ಎಲ್ಲರಿಗೂ ಇಷ್ಟ. ಅದ್ದರಿಂದ ಪರಿಷತ್ತಿನಲ್ಲಿ ಪಾಸಾದ ವಿಧಾಯಕ ಕಾರ್ಯಕ್ರಮದ ಠರಾವುಗಳನ್ನು ಕಾರ್ಯರೂಪದಲ್ಲಿ ತರಲು ಕೊಂಗ್ರೆಸ್‌ಭಕ್ತರು ಯತ್ನಿಸಬೇಕಾಗಿದೆ.

ಜಿಲ್ಲಾ ಪರಿಷತ್ತಿನವರು ತಮ್ಮ ಸಾಂಪ್ರದಾಯಿಕ್ಯಾನುಗುಣವಾಗಿ ಯಾವ ರಾಜಕೀಯಕಾರ್ಯವನ್ನು ಬಿಟ್ಟಿರುವರೊ ಅದನ್ನು ಸ್ವರಾಜ್ಯಪಕ್ಷವು ಸಾಧಿಸಬೇಕಾಗಿ ಬಂದಿದೆ. ಕಾರ್ಕಳದಲ್ಲಿ ಜರಗಿದ ಈ ಪಕ್ಷದ ಪರಿಷತ್ತಿನ ಅಧಿವೇಶನವು ಮೊದಲನೆಯದಾಗಿರುವದರಿಂದ ಎಂದರೆ ಇತ್ತಲಾಗೆನೆ ಅದು ಕರ್ನಾಟಕದಲ್ಲಿ ಅಸ್ತಿತ್ವವನ್ನು ತಾಳಿದ್ದರಿಂದ ಮೊನ್ನೆಯ ಅಧಿವೇಶನವು ಬರೆ ಸಂಘಟನಾತ್ಮಕವಾಗಿದ್ದಲ್ಲಿ ಆಶ್ಚರ್ಯವಿಲ್ಲ. ಇದರ ಅಧಿವೇಶನಕ್ಕೆ ಶ್ರೀ. ಅಯ್ಯಂಗಾರರಲ್ಲದೆ, ಡೊ. ಯು. ರಾಮರಾವ್ ಬಿಜಾಪುರದ ಶ್ರೀ. ಕೌಜಲಗಿ, ಡೊ. ಹರಡೀಕರ, ಹೊಸಕೊಪ್ಪ ಕೃಷ್ಣರಾವ ಮುಂತಾದವರು ಸೇರಿದ್ದರು. ಈ ಅಧಿವೇಶನದಲ್ಲಿ ಮುಖ್ಯವಾಗಿ ಎರಡು ಸಂಗತಿಗಳು ನಿರ್ಣಯಿಸಲ್ಪಟ್ಟವು. ಅಖಿಲಕರ್ನಾಟಕದಲ್ಲಿ ಸಂಚರಿಸಿ ಸ್ವರಾಜ್ಯಪಕ್ಷದ ಸಂಘಟನವನ್ನು ಮಾಡಬೇಕು, ಬರುವ ಎಲ್ಲ ತರದ ಚುನಾವಣೆಗಳಲ್ಲಿ ಕೊಂಗ್ರೆಸ್ ಪರವಾಗಿ ಸ್ವರಾಜ್ಯಪಕ್ಷೀಯರು ಉಮೇದುವಾರರಾಗಿ ನಿಂತು ಆಯಾ ಸ್ಥಾನಗಳನ್ನು ಜಯಿಸಬೇಕು. ಕಾರ್ಕಳದಲ್ಲಿ ನಿಶ್ಚಿತವಾದ ಈ ಎರಡು ವಿಷಯಗಳು ಬಹು ಸಮಾಧಾನಕರವಾಗಿವೆ.

ಕಾರ್ಕಳದಲ್ಲಿ ಎರಡು ಪರಿಷತ್ತುಗಳು ನಿರ್ವಿಘ್ನವಾಗಿ ಜರಗಿದವು. ಕಾರ್ಕಳಕಾರರ ಉತ್ಸಾಹವು ವರ್ಣನೀಯವಾಗಿತ್ತು. ಅವರ ಪರಿಶ್ರಮದಿಂದ ಪರಿಷತ್ತುಗಳು ಯಶಸ್ವಿಯಾಗಿ ಮುಗಿದ ಬಗ್ಗೆ ಅವರು ಅಭಿನಂದನೀಯರಾಗಿದ್ದಾರೆ.

ಸ್ಫುಟವಿಚಾರಗಳು.

೧. ತಮಿಳ ಪ್ರಾಂತದ ಕೊಂಗ್ರೆಸ್ ಕಮಿಟಿಯಲ್ಲಿ ಹಲವು ವಿಧದ ತೊಂದರೆಗಳು ಉದ್ಭವಿಸಿವೆ. ಆ ಪ್ರಾಂತದಲ್ಲಿ ಒಂದು ಗುರುಕುಲವುಂಟು. ಇದರಲ್ಲಿ ಎಲ್ಲ ವರ್ಣದವರು ಇದ್ದಾಗ್ಯೂ ಬ್ರಾಹ್ಮಣರು ಅಡಿಗೆಯ ಕೆಲಸದಲ್ಲಿದ್ದರು. ಭೋಜನಾದಿಕಗಳು ವರ್ಣ ವ್ಯವಸ್ಥೆಗನುಸಾರವಾಗಿ ನಡೆಯುತ್ತಿದ್ದವು. ಆದರೆ ಕೆಲವು ಸಮಯದ ಮುಂಚೆ ಜಾತಿಭೇದ ಸೂಚಕವಾದ ಈ ತೆರದ ವ್ಯವಹಾರವಿರಬಾರದು, ಎಲ್ಲರೂ ಏಕತ್ರ ಅನ್ನ ವ್ಯವಹಾರ ನಡಿಸಬೇಕು, ಅಡಿಗೆಯನ್ನು ಬ್ರಾಹ್ಮಣೇತರರೂ ಮಾಡಬಹುದು, ಬ್ರಾಹ್ಮಣರು ಅದನ್ನು ಊಟ ಮಾಡಬೇಕು, ಎಂಬಿತ್ಯಾದಿ ಮತಗಳು ಹೊರಟವು. ಈ ಗುರುಕುಲಕ್ಕೆ ದ್ರವ್ಯದ್ವಾರಾ ಬ್ರಾಹ್ಮಣೇತರರಿಂದಲೆ ಹೆಚ್ಚಿನ ಆಶ್ರಯವು ಸಿಕ್ಕಿದೆ. ಅದುಕಾರಣ ಬ್ರಾಹ್ಮಣೇತರರ ಅಡಿಗೆಯನ್ನು ಬ್ರಾಹ್ಮಣರು ಊಟಮಾಡಬೇಕೆಂದು ಹಟಹಿಡಿದಿರುವರು. ಮಹಾತ್ಮಾ ಗಾಂಧಿಯವರು ಕೆಲಸಮಯಕ್ಕೆ ಮುಂಚೆ ವೈಕಮಿಗೆ ಬಂದಾಗ ಅವರ ಮುಂದೆ ಈ ಸಂಗತಿ ಇಡಲ್ಪಟ್ಟಿತು. ಅವರು ಈ ಪ್ರಕರಣವನ್ನು ಸಮಗ್ರವಾಗಿ ಆಲೋಚಿಸಿ ವರ್ಣಾಶ್ರಮ ಕ್ರಮವನ್ನುಲ್ಲಂಘಿಸಲಾಗುವುದಿಲ್ಲ, ಬ್ರಾಹ್ಮಣರ ಅಡಿಗೆಯನ್ನು ಇತರರು ಊಟಮಾಡಬೇಕು, ಬ್ರಾಹ್ಮಣೇತರರು ಅಡಿಗೆಯನ್ನು ಮಾಡಬಾರದು ಎಂಬುದಾಗಿ ನಿರ್ಣಯವನ್ನು ಕೊಟ್ಟರು. ಬ್ರಾಹ್ಮಣೇತರ ಪಕ್ಷಕ್ಕೆ ಈ ನಿರ್ಣಯವು ಸಮ್ಮತವಾಗಲಿಲ್ಲ. ಡೊ. ನಾಯುಡು ಇವರು ಬ್ರಾಹ್ಮಣೇತರ ಪಕ್ಷದ ಮುಖ್ಯಸ್ಥರು ಜಾತಿಭೇದವನ್ನು ಮುರಿದು ಬ್ರಾಹ್ಮಣೇತರರ ಅಡಿಗೆಯನ್ನು ಬ್ರಾಹ್ಮಣರಿಂದ ಉಣ್ಣಿಸಬೇಕು ಎಂಬುದಕ್ಕಾಗಿ ಸತ್ಯಾಗ್ರಹವನ್ನು ಮಾಡಲು ಡೊ. ನಾಯುಡುಗಳು ಸಿದ್ಧರಾಗಿದ್ದಾರೆ. ಮಾತ್ರವಲ್ಲ, ಅವರು ತಮಿಳ ಪ್ರಾಂತದ ರಾಷ್ಟ್ರೀಯ ಸಭೆಯ ಅಧ್ಯಕ್ಷರಾದ ಕಾರಣ ಈ ಅರ್ಥದ ಠರಾವನ್ನು ಪ್ರಾಂತಿಕ ಕೊಂಗ್ರೆಸ ಕಮಿಟಿಯ ಸಭೆಯಲ್ಲಿ ತಂದು ಪಾಸುಮಾಡಿಸಿರುವರು. ವಸ್ತುತಃ ಸಾಮಾಜಿಕ ಅಥವಾ ಧಾರ್ಮಿಕ ಚಳವಳಕ್ಕೂ ರಾಷ್ಟ್ರೀಯ ಸಭೆಗೂ ಸಂಬಂಧವಿರುವುದಿಲ್ಲ. ಆದರೂ ಡೊ. ನಾಯುಡು ಮತ್ತು ಅವರ ಹಲವು ಅವಿಚಾರಿ ಅನುಯಾಯಿಗಳಿಗೆ ಈ ತಾರತಮ್ಯ ಜ್ಞಾನವಿರಲಿಲ್ಲ. ಆದ್ದರಿಂದ ಡೊ. ರಾಜನ್, ಶ್ರೀ. ಸಿ. ರಾಜಗೋಪಾಲಾಚಾರ್ಯ, ಟಿ. ಎ. ಯಸ್. ಶಾಸ್ತ್ರಿ ಮುಂತಾದವರು ತಮ್ಮ ಕೊಂಗ್ರೆಸ್ ಸಭಾಸ್ಥಾನಕ್ಕೆ ರಾಜಿಯನ್ನು ಕೊಟ್ಟಿರುವರು. ಸಾರ್ವರಾಷ್ಟ್ರೀಯ ಸಭೆಯ ಆಜ್ಞೆ ಅಥವಾ ಸಮ್ಮತಿ ಇಲ್ಲದೆ ಪ್ರಾಂತಿಕ ಸಂಸ್ಥೆಯು ಈ ಮೇರೆಗೆ ನಿರಂಕುಶ ರೀತಿಯಿಂದ ಪ್ರವರ್ತಿಸುವದು ಸಮಂಜಸವೆ, ಸನದುಶೀರಾದ ಕೆಲಸವೆ ಎಂಬುದಾಗಿ ಶ್ರೀಯುತ ಎಮ್. ಕೆ. ಆಚಾರ್ಯರು ಪ್ರಶ್ನೆಮಾಡಿದ್ದಾರೆ. ಅವಲ್ಲದೆ ಮಹಾತ್ಮಾ ಗಾಂಧಿಗಳು ಈ ವರ್ಷ ರಾಷ್ಟ್ರೀಯ ಸಭೆಯ ಅಧ್ಯಕ್ಷರಾಗಿದ್ದದರಿಂದ ಅಂಥವರ ಹೇಳಿಕೆಯನ್ನು ಉಲ್ಲಂಘಿಸುವದು ಹೇಗೆ ಅಯುಕ್ತವೆಂದು ಡೊ. ರಾಜನ್ ಪ್ರಭೃತಿಗಳು ಹೇಳುತ್ತಿದ್ದಾರೆ. ಸಾರಾಂಶ, ತಮಿಳು ನಾಡಿನಲ್ಲಿ ಬುದ್ಧಿಭೇದವುಂಟಾಗಿದೆ. ಜಾತಿಜಾತಿಗಳಲ್ಲಿ ಬೇಕೆಂದು ಕಲಹವನ್ನು ಹುಟ್ಟಿಸಿ ಅದನ್ನು ಬೆಳಸುವದರಲ್ಲೆ ಪರಮ ಪುರುಷಾರ್ಥವುಂಟು ಎಂದು ಭಾವಿಸುವವರು ತಮ್ಮನ್ನು ದೇಶಭಕ್ತರೆಂದು ತಿಳಕೊಳ್ಳುವರಾದರೆ ಶಬ್ದಾರ್ಥದ ಕೋಶಗಳನ್ನೆ ಬದಲಾಯಿಸಬೇಕಾಗಿ ಬರುವದು. ಸಮತ್ವವಾದಿಗಳಾದ ಡೊ. ನಾಯುಡುಗಳಂಥ ಬ್ರಾಹ್ಮಣೇತರ ಬಂಧುಗಳು ಪಂಚಮರ ಪಂಕ್ತಿಯಲ್ಲಿ ಕುಳಿತುಕೊಳ್ಳಲು, ಅಥವಾ ಅವರ ಊಟಉಪಚಾರ ಸಂಗ್ರಹಿಸಲು ಸಿದ್ಧರಿಲ್ಲ, ಹಾಗಾದರೆ ಈ ಸಮತ್ವದ ಅರ್ಥವೇನು? ತನ್ನ ಪ್ರಯೋಜನವಾಗುವದಾದರೆ ಆಗ ಸಮತ್ವವಾದ, ತನಗಿಂತ ಹೀನರೊಡನೆ ವ್ಯವಹಾರದ ಸಂದರ್ಭವು ಬರುವದಾದರೆ ಆಗ ಸಂಪ್ರದಾಯವಾದ, ಇದು ಒಳ್ಳೆಯ ನಮೂನೆಯೆ ಸರಿ! ಇದು ಡೊ. ನಾಯುಡುಗಳಂಥವರಿಗನೆ ಲಕ್ಷಲಾಭವಾಗಿರಲಿ!!

೨. ಮದ್ರಾಸಿನ ರಹಿವಾಸಿಗಳೂ, ಅಲ್ಲಿಯ ಕೊರ್ಪೊರೇಶನಿನ ಮಾಜಿಸೂತ್ರಧಾರರೂ ಜಸ್ಟಿಸ್‌ಪಾರ್ಟಿಯ ಜೀವಾಳರೂ ಆದ ಸರ್ ತ್ಯಾಗರಾಜ ಚೆಟ್ಟಿಯವರು ಕಳೆದವಾರ ಮೃತರಾದರೆಂದು ತಿಳಿಸಲು ತುಂಬಾ ವ್ಯಸನಪಡುತ್ತೇವೆ. ತ್ಯಾಗರಾಜರು ಪ್ರಥಮತಃ ರಾಷ್ಟ್ರೀಯ ಸಭೆಯ ಭಕ್ತರಾಗಿದ್ದರು. ಆದರೆ ಡೊ. ಟಿ. ಎಮ್. ನಾಯರರು ಜಸ್ಟಿಸ್‌ಪಾರ್ಟಿಯನ್ನು ಹೊರಡಿಸಿದಂದಿನಿಂದ ತ್ಯಾಗರಾಜರು ರಾಷ್ಟ್ರೀಯ ಸಭೆಯ ತ್ಯಾಗವನ್ನು ಮಾಡಿ ಬ್ರಾಹ್ಮಣೇತರ ಪಕ್ಷದ ಧುರೀಣರಾದರು. ಡೊ. ನಾಯರರು ತೀರಿದ ಬಳಿಕಂತೂ ತ್ಯಾಗರಾಜರೆ ಆ ಪಕ್ಷದ ಚಾಲಕರಾಗಿದ್ದರು. ಮದ್ರಾಸ್ ಕೊರ್ಪರೇಶನಿನಲ್ಲಿ ಸರ್ ಚೆಟ್ಟಿಯವರ ಸೇವೆಯು ಅಮೂಲ್ಯವಾಗಿದೆ. ಮದ್ರಾಸಿನವರಿಗೆ ಅವರ ಈ ಅಮೂಲ್ಯಸೇವೆಯು ಚಿರಕಾಲದವರೆಗೆ ವಿಸ್ಮೃತವಾಗಲಿಕ್ಕಿಲ್ಲ. ತ್ಯಾಗರಾಜರು ಬ್ರಾಹ್ಮಣೇತರ ಪಕ್ಷದ ಮುಂದಾಳುಗಳಾಗಿದ್ದರೂ ಅವರು ಗಂಭೀರರೂ, ಧೀರರೂ ಆಗಿದ್ದರು, ಇವರ ಮರಣದಿಂದ ಬರೆ ಬ್ರಾಹ್ಮಣೇತರ ಪಕ್ಷಕ್ಕೆನೆ ಅಲ್ಲ, ಮದ್ರಾಸ ಪಟ್ಟಣಕ್ಕೂ ಹಾನಿತಟ್ಟಿದೆ.

೩. ದೇಶಬಂಧುದಾಸರ ಪ್ರಕೃತಿಮಾನವು ಇನ್ನೂ ಸಂಪೂರ್ಣವಾಗಿ ಸುಧಾರಿಸಲಿಲ್ಲ. ಆದರೂ ಅವರು ದೇಶಸೇವೆಯ ಒಂದೆಯೊಂದು ಸಂದರ್ಭವನ್ನಾಗಲಿ, ಒಂದೆಯೊಂದು ಗಳಿಗೆಯನ್ನಾಗಲಿ ಬಿಟ್ಟುಬಿಡುವದಿಲ್ಲ. ಕಳೆದವಾರ ಅವರು ಫರಿದಪುರದಲ್ಲಿ ಜರಗಿದ ಬಂಗಾಲ ಪ್ರಾಂತಿಕ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಅಧ್ಯಕ್ಷಸ್ಥಾನದಿಂದ ಅವರು ಕೊಟ್ಟಿರುವ ಭಾಷಣವು ಸರ್ವ ದೃಷ್ಟಿಯಿಂದ ಅತಿ ಮಹತ್ವದ್ದಾಗಿದೆ. ಬಂಗಾಳದಲ್ಲಿ ಕ್ರಾಂತಿಕಾರಕರ ಚಳವಳವು ನಿಜವಾಗಿ ಎಲ್ಲಿಂದ ಬಂತು ಎಂಬುದನ್ನು ದಾಸರು ತಮ್ಮ ಭಾಷಣದಲ್ಲಿ ಬಹು ಮಾರ್ಮಿಕರೀತಿಯಿಂದ ವಿವೇಚಿಸಿದ್ದಾರೆ. ಅವರ ಮೀಮಾಂಸೆಯ ಪ್ರಕಾರ ಬಂಗಾಲದ ತರುಣರಲ್ಲಿ ಕ್ರಾಂತಿತತ್ವದ ಬೀಜವನ್ನೂರಿದ್ದು ಲೊರ್ಡ ಕರ್ಝನರ ಅಹಂಕಾರವೃತ್ತಿಯ ರಾಜ್ಯದಾಳಿತವೆ ಅಲ್ಲದೆ ಬೇರೆಯಲ್ಲ. ಬಂಗಾಲದಲ್ಲಿಯ ಈ ವಿಷಾದಕರ ರಾಜ್ಯಕ್ರಾಂತಿಯ ಚರಿತ್ರವನ್ನು ಕ್ರಮವಾಗಿ ವಿವರಿಸಿ ದಾಸರು ಕೊನೆಗೆ ಪ್ರಕೃತ ರಾಜಕಾರಣದ ಪ್ರಸ್ತಾಪವನ್ನೆತ್ತಿರುವರು. ಸರಕಾರದೊಡನೆ ಜನತೆಯು ಸಹಕರಿಸಬೇಕಾದರೆ ಸರಕಾರದ ಹೃದಯವು ಪರಿವರ್ತನಹೊಂದಬೇಕು. ಅದರಲ್ಲಿ ಪರಿವರ್ತನವುಂಟಾದದ್ದು ತಿಳಿಯಬೇಕಾದರೆ ಅದು ಎಲ್ಲ ರಾಜಕೀಯ ಕೈದಿಗಳನ್ನು ಬಿಟ್ಟುಬಿಡಬೇಕು, ಪ್ರಾಂತಿಕ ಸ್ವರಾಜ್ಯವನ್ನು ಕೊಡಬೇಕು, ಮತ್ತು ಹಿಂದುಸ್ಥಾನಕ್ಕೆ ಯಾವಾಗ ಬಹುಬೇಗನೆ ವಸಾಹತಪದ್ಧತಿಯ ಸ್ವರಾಜ್ಯಕೊಡೋಣಾದೀತೆಂಬುದರ ನಿಶ್ಚಿತ ಸಮಯವನ್ನು ತಿಳಿಸಬೇಕು. ದಾಸರವರು ಈ ಮೂರು ಶರ್ತಗಳನ್ನು ಕೊಟ್ಟಿರುವರು. ನೋಕರಶಾಹಿಯ ಮುಖವಾದ ಎಂಗ್ಲೊ-ಇಂಡಿಯನ್ ಪತ್ರಿಕೆಗಳು ದಾಸರು ಸರಕಾರಕ್ಕೆ ಸಹಾಯವನ್ನು ಕೊಡಬೇಕೆಂದು ಕೇಳುತ್ತಿದ್ದವು. ಈಗ ದಾಸರು ತಮ್ಮ ಅಂಬೋಣವನ್ನು ನೋಕರಶಾಹಿಯ ಮತ್ತು ಜಗತ್ತಿನ ಮುಂದೆ ಇಟ್ಟಿದ್ದಾರೆ. ಅದನ್ನು ಸ್ವೀಕರಿಸುವ ಕೆಲಸವು ನೋಕರಶಾಹಿಯದಾಗಿದೆ. ಬುರೊಕ್ರಸಿಯು ಅದನ್ನು ಸ್ವೀಕರಿಸುತ್ತದೊ ಅಥವಾ ನಿರಾಕರಿಸುತ್ತದೊ ಎಂಬುದು ಈಗ ಬೇಗನೆ ಗೊತ್ತಾದೀತು. ಲೋಕಪಕ್ಷದ ಹೇಳಿಕೆಯನ್ನು ಅಂಗೀಕರಿಸದೆ ತನ್ನ ಅಭಿಪ್ರಾಯಗಳನ್ನು ಮಾತ್ರ ಪೂರಯಿಸಿ ತನ್ನ ಹಾದಿಯನ್ನು ನಿಷ್ಕಂಟಕವನ್ನಾಗಿ ಮಾಡಿಕೊಳ್ಳುವ ಆಲೋಚನೆಯಲ್ಲಿ ಧೂರ್ತ ನೋಕರಶಾಹಿಯು ಇದ್ದದ್ದಾದರೆ ಅದರ ತಾದೃಶ ಪ್ರಯೋಜನವುಂಟಾಗುವಂತಿಲ್ಲ, ಕಾರಣ, ಸರಕಾರವು ಜನತೆಯ ಅಪೇಕ್ಷೆಯನ್ನು ಪೂರಯಿಸದೆ ಇದ್ದಲ್ಲಿ, ಜನತೆಗೆ ಕೊನೆಗೆ ಸಿವಿಲ್ ಡಿಸ್-ಒಬೀಡಿಯನ್ಸನ್ನೆ ಕೈಕೊಳ್ಳಬೇಕಾದೀತೆಂದು ದಾಸರವರು ಸ್ಪಷ್ಟವಾಗಿ ಹೇಳಿದ್ದಾರೆ. ಈ ರೀತಿಯಿಂದ ದಾಸರವರು ಕೊಟ್ಟಿರುವ ಆಹ್ವಾನವನ್ನು ಸರಕಾರವು ಸ್ವೀಕರಿಸಿ ಜನತೆಯ ಸಹಕಾರವನ್ನು ಪಡೆಯಬೇಕು. ಹೊರತು ತಾನು ಬೆಂಕಿಯಂತೆ ಸುಡುತ್ತಿರುವಾಗ ಜನತೆಯು ಮಂಜುಗಡ್ಡೆಯಂತೆ ಶಾಂತ ಮತ್ತು ಶೀತಲವಾಗಿರಬೇಕೆಂದು ಅದು ನೆನಸಿದರೆ ಅದು ವ್ಯರ್ಥವೆ ಸರಿ.

೪. ಈ ಸಂದರ್ಭದಲ್ಲಿ ಮ. ಗಾಂಧಿಗಳು ದಾಸರ ಭೇಟಿಯನ್ನು ಪಡಕೊಳ್ಳಲು ಕಲಕತ್ತೆಗೆ ಹೋಗಿರುವರು. ದಾಸರು ಹೊಟ್ಟೆ ನೋವಿನ ಉಪಶಮನಕ್ಕಾಗಿ ಕಲಕತ್ತೆಯನ್ನು ಬಿಟ್ಟಿದ್ದರು. ಗಾಂಧಿಜಿಯವರಿಗೆ ದಾಸರ ಬಂಗಲೆಯಲ್ಲಿಯೆ ಉಳಕೊಳ್ಳಲು ವ್ಯವಸ್ಥೆಮಾಡಲ್ಪಟ್ಟಿತು. ದಾಸರ ಆ ಬಂಗಲೆಯನ್ನು ಪ್ರವೇಶಿಸುವಾಗ ಮಹಾತ್ಮಾ ಗಾಂಧಿಗಳಿಗೆ ಇಂಥ ಅಪೂರ್ವ ಬಂಗಲೆಯನ್ನೂ, ಇತರ ಇಡೀ ಆಸ್ತಿಯನ್ನೂ ದೇಶ ಸೇವೆಗಾಗಿ ಅರ್ಪಿಸಿದ ದಾಸರ ಉದಾರ ಮಹತ್ಕೃತ್ಯದ ಸ್ಮರಣವುಂಟಾಗಿ ಕಣ್ಣಿಂದ ನೀರು ಬಾರದೆ ಉಳಿಯಲಿಲ್ಲ! ದಾಸರೆ ಧನ್ಯರೆಂಬ ಉದ್ಗಾರಗಳು ಮಹಾತ್ಮಾಜಿಯವರ ಬಾಯಿಂದ ಬಂದು ಹೋದವು. ಇರಲಿ. ಗಾಂಧಿಗಳು ವ್ಯಕ್ತಗೊಳಿಸಿದ ಮುಂದಿನ ಅಭಿಪ್ರಾಯವು ಇಲ್ಲಿ ನಮೂದಿಸತಕ್ಕದ್ದಾಗಿದೆ. ರಾಜಕಾರಣದ ಮಟ್ಟಿಗೆ ತಾನು ದಾಸ ಮತ್ತು ನೇಹರು ಇವರಿಗನೆ ಬಿಟ್ಟುಕೊಟ್ಟಿರುವೆನು, ಕೂಡಿದ ಮಟ್ಟಿಗೆ ತಾನು ಅವರಿಗೆ ಸಹಾಯ್ಯ ಕೊಡಲು ಬಂದಿದ್ದೇನೆ ಎಂಬುದಾಗಿ ಗಾಂಧಿಜಿಯವರು ಹೇಳಿರುವರು. ರಾಷ್ಟ್ರೀಯ ಸಭೆಯ ವರ್ಕಿಂಗ್ ಕಮಿಟಿಯು ಅಲ್ಲಿಗನೆ ಕರೆಯಿಸಲ್ಪಟ್ಟಿದೆ. ಈ ಕಮಿಟಿಯಲ್ಲಿ ಪ್ರಕೃತ ರಾಜಕೀಯ ಪರಿಸ್ಥಿತಿಯನ್ನು ಕುರಿತು ಅನೇಕ ಮಹತ್ವದ ವಿಷಯಗಳು ಚರ್ಚಿತವಾಗುವವಿದ್ದಾವೆ. ಅವುಗಳನ್ನೆಲ್ಲ ಚರ್ಚಿಸಿ ರಾಷ್ಟ್ರೀಯ ಸಭೆಯು ಪರವಾಗಿ ಯಾವ ಚಳವಳವನ್ನು ಮತ್ತು ಯಾವ ಧೋರಣವನ್ನು ಅಂಗೀಕರಿಸಬೇಕೆಂಬುದು ನಿಶ್ಚಯಿಸಲ್ಪಟ್ಟಿತು. ರೆಡಿಂಗ ಸಾಹೇಬರು ವಿಲಾಯಿತಿಗೆ ಹೋಗಿರುವುದರಿಂದ ಅವರ ಮತ್ತು ಭಾರತ ಮಂತ್ರಿಗಳ ಮಥನದಿಂದ ಏನು ನಿಷ್ಪನ್ನವಾದೀತೆಂಬುದನ್ನೆಲ್ಲ ಊಹಿಸಿ ಅದಕ್ಕದಕ್ಕೆ ತಕ್ಕದಾದ ಏರ್ಪಾಡುಗಳ್ನು ಗಾಂಧಿಜಿ, ದಾಸ, ನೇಹರು ಮುಂತಾದ ಮುಖಂಡರು ಮುಂಚಿತವಾಗಿಯೆ ಮಾಡಿಕೊಂಡಿರುವದು ಬಹು ಅಗತ್ಯದ್ದಾಗಿದೆ. ಅದ್ದರಿಂದ ಮಹಾತ್ಮಾಜಿಯವರು ಬಂಗಾಲಕ್ಕೆ ಹೋಗಿ ಅಲ್ಲಿ ವರ್ಕಿಂಗ್ ಕಮಿಟಿಯನ್ನು ಕರೆಯಿಸಿರುವರು. ವರ್ಕಿಂಗ್ ಕಮಿಟಿಯ ವೃತ್ತಾಂತದ ತಡೆಗೆ ಇಡೀ ರಾಷ್ಟ್ರದ ಚಿತ್ತವು ಈ ಕಾರಣದಿಂದ ವಿದ್ಧವಾಗದೆ ಇರಲಿಕ್ಕಿಲ್ಲ.

೫. ಮುದಿ ಪ್ರಾಯವಾಗುತ್ತ ಬಂದ ಹಾಗೆ ಮನುಷ್ಯನ ಬುದ್ಧಿಚಾಂಚಲ್ಯವು ಏರುತ್ತ ಹೋಗುತ್ತದೆ. ಮತ್ತು ವೃದ್ಧಾಪ್ಯದಲ್ಲಿ ಮನುಷ್ಯನು ಇನ್ನೊಂದು ಬಾಲತ್ವವನ್ನು ಹೊಂದುತ್ತಾನೆ. ಸರ್ ಸುರೇಂದ್ರನಾಥ ಬಾನರ್ಜಿಯವರು ಈಗ ಮುದುಕರಾಗಿರುವರು ಅಂತೆಯೆ ಅವರ ಬುದ್ಧಿಯೂ ಕೂಡ ಮುದಿಯಾಗಿದೆಂಬುದರಲ್ಲಿ ಸಂಶಯವಿಲ್ಲ. ರಾಜಕಾರಣದಲ್ಲಿ ಇವರು ಸದ್ಯದಲ್ಲಿ ಭಾಗವನ್ನೆ ತೆಕ್ಕೊಳ್ಳಲಿಲ್ಲ. ಕಾರಣ ಈ ವೃದ್ಧ ಋಷಿಗಳ ಮಾತನ್ನು ಯಾರೂ ಕೇಳರು. ಲೋಕಮತವಂತು ಇವರ ಬೆಂಬಲದಲ್ಲಿ ಇಲ್ಲವೆ ಇಲ್ಲ. ಕಳೆದ ಕೌನ್ಸಿಲ ಚುನಾವಣೆಗೆ ನಿಂತ ಇವರು ಅಯಶಸ್ವಿಯಾಗಿ ಅನಂತರ ರಾಜಕಾರಣದಿಂದ ಸನ್ಯಸ್ತರಾಗಿರುವರು. ಕೌನ್ಸಿಲಿನಲ್ಲಿಯೂ ಇವರ ಪ್ರವೇಶವೆ ಇಲ್ಲ. ಮುಂಬಯಿಯಲ್ಲಿಯೂ ದಿಲ್ಲಿಯಲ್ಲಿಯೂ ನೆರೆದ ಎಲ್ಲ ಸಂಘ ಪರಿಷತ್ತಿಗಳಲ್ಲೂ ಸಹ ಇವರಿಗೆ ಸ್ಥಾನವು ದೊರಕಿಲ್ಲ. ಹೀಗಿರುತ್ತ ಇವರು ಈಗ ತಮ್ಮ ತಲೆಯನ್ನು ಮೆಲ್ಲ ಮೆಲ್ಲನೆ ಮೇಲಕ್ಕೆತ್ತಿ ನಪ್ಪೆ ತಂಡದವರನ್ನು ಒಟ್ಟು ಗೂಡಿಸಲು ಪ್ರಯತ್ನಪಟ್ಟಿದ್ದಾರೆ. ಬಂಗಾಲ ಕೌನ್ಸಿಲಿನಲ್ಲಿ ಮೂರು ಸಲ ಮಂತ್ರಿಗಳ ಸಂಬಳವು ನಿರಾಕರಿಸಲ್ಪಟ್ಟಿತು. ಅಲ್ಲಿ ಸ್ವರಾಜ್ಯಪಾರ್ಟಿ ಹಾಗೂ ನೆಶನಲಿಸ್ಟ ಪಕ್ಷದವರ ಬಹುಮತವಿದೆ. ಹೀಗಿರುತ್ತ ಈ ಮಹಾಶಯರು ತಿರುಗಿ ಮಂತ್ರಿಮಂಡಳವನ್ನು ಸ್ಥಾಪಿಸಬೇಕೆಂದು ಸರಕಾರದೊಡನೆ 'ಅತಿ ನಮ್ರವಾಗಿ' ಬೇಡಿಕೊಂಡಿರುವರು. ಅಲ್ಲದೆ ತನ್ನ ಪಾರ್ಟಿಯವರು ಈ ಮಂತ್ರಿಮಂಡಳಕ್ಕೆ ಸಹಾಯ್ಯಕರಾಗಿ ನಿಂತಾರೆಂದು ಭರವಸೆಕೊಟ್ಟಿದ್ದಾರೆ. ನಿಜವಾಗಿ ಹೇಳುವುದಾದರೆ, ಬಾನರ್ಜಿಯವರಿಗಿಂತ ಸರಕಾರವು ಬುದ್ಧಿಯುಳ್ಳದ್ದೆಂದೆ ಭಾವಿಸಬೇಕು. ಯಾಕಂದರೆ ಈಗ ಮೂರು ಸಲ ಮಂತ್ರಿಮಂಡಲವನ್ನು ಮಾಡಲಿಕ್ಕೆ ಪ್ರಯತ್ನಿಸಿದರೂ ಅದು ಸಫಲವಾಗಿಲ್ಲ. ಹೀಗಿರುತ್ತ ಇದರ ನಾತಿಗೆ ತಲೆತೂಗಿಸಿ ಇನ್ನೊಂದು ಸಲ ವೃಥಾ ಪ್ರಯತ್ನಪಟ್ಟು ಇನ್ನೂ ಅಪಮಾನ ಮಾಡಿಕೊಳ್ಳುವಷ್ಟು ಸರಕಾರವು ಬುದ್ಧಿಹೀನವಾಗಿಲ್ಲ! ನಪ್ಪೆ ತಂಡದವರಂತೂ ಇಂಥ ಪ್ರಯತ್ನವು ನಿಷ್ಫಲವೆಂದು ಇದರ ಮೊದಲೆ ಅರಿತಿರುವರು. ಅದ್ದರಿಂದ ಈ ಮುದಿ ಭ್ರಾಂತರ ಮಾತನ್ನು ಅವರು ಗಣಿಸಲಿಕ್ಕಿಲ್ಲ. ಆದರೆ ಇವರ ಕೃತ್ಯದಿಂದ ಇವರು ಸ್ವರಾಜ್ಯ ದ್ವೇಷಿಗಳೆಂದು ಮಾತ್ರ ನಿಷ್ಪನ್ನವಾಗುತ್ತದೆ. ದೇಶ ಬಂಧು ದಾಸರು ಲೊ. ಬರ್ಕನಹೆಡ್ಡರಿಗೆ ಹೇಳಿದ ಮಾತುಗಳನ್ನು ಇವರು ಖಂಡಿಸಿ ಬ್ಯುರೊಕ್ರಸಿಗೆ ಆಶ್ವಾಸನೆಯನ್ನು ಕೊಟ್ಟಿರುವರು. ಲೊ. ರೆಡಿಂಗರು ವಿಲಾಯಿತಿಗೆ ಹೋದಾಗ ಶಾಂತಪಕ್ಷದವರು ಬ್ಯುರೊಕ್ರಸಿಯ ಈಗಿನ ಪದ್ಧತಿಗೆ ಸಹಾಯಕರಾಗಿದ್ದಾರೆಂದು ತಿಳಿಸಿ ಅವರ ಮನಸ್ಸನ್ನು ಕಲುಷಿತಮಾಡಲಿಕ್ಕೆ ಯತ್ನಿಸಿರುವರು. ಇಂಥ ಮುದಿ ಮನುಷ್ಯರ ಆತ್ಮಘಾತುಕ ಮಾತನ್ನು ಯಾವ ದೇಶಭಕ್ತನೂ ಕೇಳಲಿಕ್ಕಿಲ್ಲವೆಂದು ನಾವು ನಂಬಿರುವೆವು.

೬. ಇಂಥ ಆತ್ಮಘಾತಕ ಮನುಷ್ಯರು ನಮ್ಮಲ್ಲಿರುವಾಗ ಸದ ಸದ್ವಿವೇಕಿಗಳೂ ಕೂಡ ನಮ್ಮಲ್ಲಿ ಅನೇಕರಿದ್ದಾರೆಂದು ಸಮಾಧಾನಪಡಬೇಕಾಗಿದೆ. "ಬಂಗಾಲಿ" ಪತ್ರಿಕೆಯ ಸಂಪಾದಕರೂ, ನಪ್ಪೆ ತಂಡದ ಮುಖ್ಯಸ್ಥರೂ ಆಗಿದ್ದ ಶ್ರೀಯುತ ಪೃಥ್ವೀಶಚಂದ್ರರೊಯರು ಈಗ ಸ್ವರಾಜ್ಯಪಾರ್ಟಿಗೆ ಸೇರಿ "ಹಿಂದುಸ್ಥಾನಕ್ಕೆ ಸ್ವರಾಜ್ಯ ಸಂಪಾದನೆಗೆ ಒಂದೆ ಒಂದು ಮಾರ್ಗವಿದೆ, ಸ್ವರಾಜ್ಯಪಾರ್ಟಿಯ ಯಾವ ಮಾರ್ಗವನ್ನು ಹಾಕಿಕೊಟ್ಟಿದೆಯೊ ಅದೆ ಸರಿ" ಎಂಬದಾಗಿ ತಮ್ಮ ಪ್ರಕಟಣೆಯಲ್ಲಿ ಒತ್ತಿ ಹೇಳಿರುವರು. ಇದನ್ನೆಲ್ಲ ಕೇಳಿ ನಪ್ಪೆತಂಡದವರು ಸ್ಮೃತಿಯ ಮೇಲೆ ಬಂದು ಪೃಥ್ವೀಶರ ಮಾತನ್ನು ಕೇಳಿಯಾರೆಂದು ತಿಳಿಯಬೇಕಾಗಿದೆ. ಯಾಕಂದರೆ, ಪೃಥ್ವೀಶರಂಥ ನಪ್ಪೆತಂಡದ ಅಗ್ರಣಿಗಳು ಕಣ್ತೆರೆದು "ದೇಶಬಂಧು ದಾಸರ ನಾಯಕತ್ವದ ಕೆಳಗೆ ನಡೆಯಲು ಸಂಪೂರ್ಣ ತಯಾರಾಗಿದ್ದೇನೆ" ಎಂದು ಹೇಳಿರುವರು. ಅಲ್ಲದೆ ಶಾಂತಪಕ್ಷದ ಸ್ಥಿತಿಯು ಇಂದಿಗೆ ಈ ಪ್ರಕಾರವಾಗಿದೆಂದು ಶ್ರೀ. ರೊಯರು ಹೇಳುತ್ತಾರೆ "ಇಂಗ್ಲಂಡ ಮುಂತಾದ ಕಡೆಗಳಲ್ಲಿ ಹೇಗೊ ಹಾಗೆಯೆ ಹಿಂದುಸ್ಥಾನದಲ್ಲಿಯೂ ಸಹ ಲಿಬರಲ ಪಕ್ಷವು ಅಂತ್ಯವನ್ನು ಪಡೆಯುತ್ತಿದೆ. ಲಿಬರಲ ಪಾರ್ಟಿಯ ಹೆಸರನ್ನು ಕೇಳಿದೊಡನೆಯೆ ಅವರೆಲ್ಲರು ನಗುವರು. ಅಷ್ಟೆ ಅಲ್ಲ, ಅವರನ್ನು ಎಂದಿಗೂ ನಂಬರು. ಇದಕ್ಕೆ ಕಳೆದ ಇಲೆಕ್ಶನೆ ದೃಷ್ಟಾಂತವಾಗಿದೆ. ಲೊ. ಮೊರ್ಲೆಯವರು ಯಾವಾಗ ಶಾಂತಪಕ್ಷದವರನ್ನು ಮೋಹಿಸಿ ರಾಜ್ಯವಾಳಬೇಕೆಂದು ಪ್ರಕಟಿಸಿದರೊ ಅಂದಿನಿಂದಲೇ ಲಿಬರಲ್ ಪಕ್ಷದ ಮರಣ ಸೂಚನೆಯಾಯಿತೆಂದು ತಿಳಿಯಬೇಕು. ಯಾಕಂದರೆ, ಸ್ವತಂತ್ರವಾಗಿ ವಿಚಾರಿಸುವ ಶಕ್ತಿಯು ಆ ಪಾರ್ಟಿಯಿಂದ ಮಾಯವಾಯಿತು. ಮತ್ತು ಸರಕಾರದ ಬಿರುದಿನ ಮೋಹ ಪಾಶೆಗೆ ಬಿದ್ದು ತಮ್ಮ ನಿಜಧ್ಯೇಯವನ್ನು ಅದು ಕಳಕೊಂಡಿದೆ. ಇಂಥ ಸ್ಥಿತಿಯಲ್ಲಿ ನಾನು ಆ ಪಾರ್ಟಿಯಲ್ಲಿರಲು ಒಪ್ಪುವದಿಲ್ಲ. ಕೆಲವರು ನನ್ನ ಈ ಮತಾಂತರವನ್ನು ನೋಡಿ ನನ್ನನ್ನು ಹೀಯಾಳಿಸಿದರೂ ಚಿಂತೆಯಿಲ್ಲ. ಆದರೆ ನಾನು ನನ್ನ ಅಂತಃಕರಣದ ಹೇಳಿಕೆಯನ್ನು ಎಂದಿಗೂ ದಾಟೆನು ಅದ್ದರಿಂದಲೆ, ನಾನು ಶ್ರೀ. ದಾಸರ ನಾಯಕತ್ವದ ಕೆಳಗೆ ನಡೆಯಲು ಸಿದ್ಧನಿದ್ದೇನೆ" ಈ ರೀತಿಯಾಗಿ ಶ್ರೀಯುತ ಪೃಥ್ವೀಶರೊಯರು ತಮ್ಮ ಪ್ರಕಟನೆಯಲ್ಲಿ ಬರೆದಿರುವರು. ಇವರ ಹೇಳಿಕೆಯು ನಿಜವಾಗಿಯೂ ಮನನೀಯವಾಗಿದೆ, ಇವರ ಮತ ಪರಿವರ್ತನೆಯಂತೂ ದೇಶಕ್ಕೆ ಹಿತಾವಹವೆ ಸರಿ. ಈಗಿನ ಪ್ರಸಂಗದಲ್ಲಿ ರಾಜಕೀಯ ತಂಡಗಳಲ್ಲಿ ಐಕ್ಯವಿರಬೇಕೆಂದು ಎಲ್ಲರೂ—ಶ್ರೀನಿವಾಸ ಶಾಸ್ತ್ರಿಗಳಂಥವರು ಸಹ—ಒದರಿ ಹೇಳುತ್ತಿರುವಾಗ ಇತರ ಲಿಬರಲ್ ಪಕ್ಷದವರು ರೊಯರ ಉತ್ತಮ ಉದಾಹರಣೆಯನ್ನು ತಮ್ಮ ಕಣ್ಣೆದುರಿಟ್ಟುಕೊಂಡು ಸ್ವರಾಜ್ಯ ಪಾರ್ಟಿಗೆ ಬೆಂಬಲರಾಗಿ ಇಲ್ಲಿಯ ಬ್ಯುರೊಕ್ರಸಿಯೊಡನೆ ಹೋರಾಡಲು ಸಿದ್ಧರಾಯಾಗಿರೆಂದು ನಾವು ತಿಳಿಯಬೇಕಾಗಿದೆ. ದಿವಸಗಳು ಹೋದ ಹಾಗೆ ಜನರೆಲ್ಲರೂ ಸ್ವರಾಜ್ಯಪಾರ್ಟಿಗನೆ ಸೇರುತ್ತಾರೆ. ಇದರಿಂದಲೆ ಅದು ಎಷ್ಟು ಉಪಯುಕ್ತ ಕಾರ್ಯಗಳನ್ನು ರಾಷ್ಟ್ರದಲ್ಲಿ ಮಾಡುತ್ತದೆಂಬುದು ಸಿದ್ಧವಾಗುತ್ತದೆ. ಇರಲಿ. ಇತರರೂ ಕೂಡ ಇವರಂತೆಯೆ ವರ್ತಿಸಿ ಸ್ವರಾಜ್ಯದ ಹೋರಾಟದಲ್ಲಿ ಸಮಭಾಗಿಗಳಾಗುವರೆಂದು ತಿಳಿದಿರುವೆವು.

೭. ಜರ್ಮನಿಯ ಲೋಕಸತ್ತಾತ್ಮಕ ಪಾರ್ಲಿಮೆಂಟಿನ ಅಧ್ಯಕ್ಷರಾದ ಈಬರ್ಟರು ಮೃತಪಟ್ಟ ತರುವಾಯ ಅಧ್ಯಕ್ಷಸ್ಥಾನದ ಚುನಾವಣೆಯ ಗಲಾಟೆಯು ಜರ್ಮನಿಯಲ್ಲಿ ಈಗ ಎರಡು ತಿಂಗಳಿಂದ ನಡೆಯುತ್ತಿತ್ತು. ಅದು ಕಳೆದ ವಾರ ಮುಗಿದು ಹಿಂಡನಬರ್ಗರು ಬಹುಮತದಿಂದ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟಿದ್ದಾರೆ. ಈ ಚುನಾವಣೆಯಲ್ಲಿ ಲೋಕಸತ್ತಾವಾದಿಗಳಾದ ಡೊ. ಮಾರ್ಕ್ಸರು ಪರಾಜಿತರಾದರು. ಜರ್ಮನ ಚುನಾವಣೆಯಲ್ಲಿ ಉಂಟಾದ ಡೊ. ಮಾರ್ಕ್ಸರ ಪರಾಜಯವೂ ಮತ್ತು ರಾಜಸತ್ತೆಯ ಪುರಸ್ಕೃತ್ಯರ್ಗಳಾದ ಹಿಂಡನಬರ್ಗರ ಸ್ಥಾಪನವೂ ಯುರೋಪರ ರಾಜಕಾರಣದಲ್ಲಿ ಬೇಗನೆ ಹೊಸ ಬದಲಾವಣೆಯನ್ನುಂಟುಮಾಡೀತೆಂದು ಯುರೋಪಿಯನ್ ಮತ್ತು ಅಮೇರಿಕನ್ ಮುತ್ಸದಿಗಳು ಶಂಕಿಸುತ್ತಿದ್ದಾರೆ. ಈ ಚುನಾವಣೆಯಿಂದ ಫ್ರಾನ್ಸಿಗೆ ಹೆಚ್ಚು ಭಯವುಂಟಾಗಿದೆ. ಮಹಾಯುದ್ಧದ ಒಪ್ಪಂದದ ಪ್ರಕಾರ ಜರ್ಮನಿಯು ಫ್ರಾನ್ಸಿನ ಖಂಡಣಿಯನ್ನು ಇನ್ನೂ ತೀರಿಸಲಿಲ್ಲ. ಅಂಥ ಸಂದರ್ಭದಲ್ಲಿ ಹಿಂಡನ್ ಬರ್ಗನ ರಾಜಸತ್ತಾವಾದಿ ಪಕ್ಷವು ಅಧಿಕಾರಾರೂಢವಾದಲ್ಲಿ ಜರ್ಮನಿಯಲ್ಲಿ ಲಷ್ಕರಿ ಶಾಹಿಯು ತನ್ನ ತಲೆಯನ್ನು ಪುನಃ ಮೇಲಕ್ಕೆ ಎತ್ತಬಹುದೆಂದು ಫ್ರಾನ್ಸಿಗೆ ಸಕಾರಣವಾಗಿ ತೋರುತ್ತಿದೆ. ಇದೆ ವಿಚಾರ ಸರಣಿಯನ್ನು ಕೊಂಚಮಟ್ಟಿಗೆ ಮುಂದರಿಸಿ ಮುಂಚಿನ ಕೈಸರ ಶಾಹಿಯೆ ಪುನಃ ಪ್ರತಿಷ್ಠಿತವಾಗುತ್ತದೊ ಎಂದು ಕೂಡ ಅನೇಕರು ಸಂಶಯಪಡುತ್ತಿದ್ದಾರೆ. ಈ ಸಂಶಯವು ಎಷ್ಟರ ಮಟ್ಟಿಗೆ ನಿಜವಾದೀತೆಂಬುದನ್ನು ಈ ಹೊತ್ತೆ ಗಟ್ಟಿಯಾಗಿ ಹೇಳಲು ಸಾಧ್ಯವಿಲ್ಲ; ಅವರೂ ಜರ್ಮನಿಯೊಳಗಿನ ಲೋಕಸತ್ತಾವಾದವು ಮಿಂಚಿನಂತೆ ಕ್ಷಣಕಾಲದ ವರೆಗೆ ಮಾತ್ರ ಪ್ರಕಾಶಿಸಿ ಲಷ್ಕರಿ ಶಾಹಿಯ ಪ್ರಚಂಡ ಅಂಧಕಾರವೆ ಜರ್ಮನಿಯಲ್ಲಿ ಕವಿದುಕೊಂಡಿದೆ ಎಂಬ ಮಾತು ಮಾತ್ರ ಸುಳ್ಳಲ್ಲ. ಬೇರೆ ಮಾತುಗಳಿಂದ ಈ ಅರ್ಥವನ್ನು ಸೂಚಿಸುವದಾದರೆ ಜರ್ಮನಿಯಲ್ಲಿ ಲಷ್ಕರಿ ಶಾಹಿಯ ಭೇತಾಳನು ಹಿಂಡನಬರ್ಗನ ರೂಪದಿಂದ ಪೂರ್ವಸ್ಥಾನಕ್ಕೆ ಏರಹತ್ತಿದ್ದಾನೆಂದು ಹೇಳಬಹುದು. ಇದು ಸುಚಿಹ್ನೆಯೊ ದುಶ್ಚಿಹ್ನೆಯೊ ಎಂಬೀ ವಿಷಯದಲ್ಲಿ ಯುರೋಪ ಅಮೇರಿಕಾ ಮುಂತಾದ ಜಗತ್ತಿನೊಳಗಿನ ಅನೇಕ ರಾಜಕಾರಣಿ ಮುತ್ಸದಿಗಳು ತಮ್ಮ ತಲೆಯನ್ನು ಕೆರಡುಮಾಡುತ್ತಿದ್ದಾರೆ.

ಮಂಗಳೂರು.

ಕಳೆದ ಬೆಳಗಾಂ ಕೊಂಗ್ರೆಸು ಸಮಯದಲ್ಲಿ ಜರಗಿದ ಪ್ರಥಮ ಕರ್ನಾಟಕ ಆಯುರ್ವೇದ ಸಮ್ಮೇಳನದ ಪರೀಕ್ಷಕಾ ಕಮಿಟಿಯವರಿಂದ ಇಲ್ಲಿನ ಆಯುರ್ವೇದ ವೈದ್ಯರಾದ ಕವಿಭೂಷಣ ಕೆ. ಪಿ. ವೆಂಕಪ್ಪ ಸೆಟ್ರಿಗೆ "ಆಯುರ್ವೇದಿಂದ ಪಾಶ್ಚಾತ್ಯ ವೈದ್ಯರು ಕಲಿತುಕೊಳ್ಳಬೇಕಾದ ಸಂಗತಿಗಳು" ಎಂಬ ಲೇಖನಕ್ಕೆ ಒಂದನೇ ತರಗತಿಯ ಸರ್ಟಿಫಿಕೇಟನ್ನೂ ಬೆಳ್ಳಿಯ ಪದಕವನ್ನೂ ಪಾರಿತೋಷಕವಾಗಿ ಕೊಟ್ಟಿರುವರು.

The Calicut Bank, Ltd.,
ದಿ ಕೆಲಿಕಟ್ ಬೇಂಕ್, ಲಿಮಿಟೆಡ್,
ಹೆಡ್ ಆಫೀಸು — ಕಲ್ಲಿಕೋಟೆ.
ಬ್ರಾಂಚುಗಳು:— ಮುಲ್ಲಸ್‌ಚೇರಿ, ತಲಚೇರಿ, ಕೊಚ್ಚಿ ಮತ್ತು ಪಾಲ್ಘಾಟು.
ರಿಜಿಸ್ಟರ್ಡ್ ಮತ್ತು ಅಧಿಕಾರಗೊಳಿಸಲ್ಪಟ್ಟ ಮೂಲಧನ ರೂ. 5,00,000—0—0.
ರೂಪಾಯಿ 10ರ 50,000 ಪಾಲುಗಳು.
(30—8—1924)ರ ವರೆಗೆ ಮೌಲ್ಯ ಮೂಲಧನ ರೂಪಾಯಿ 1,81,850—0—0.
ಒಂದು ವರುಷದ ಕಾಯಂ ಠೇವಣಾತಿಗೆ ಬಡ್ಡಿ ದರ ಸೇಕಡಾ ರೂ. 7—8—0.
ಕಳೆದ 4 ವರುಷಗಳಲ್ಲಿ ಪಾಲುಗಾರರಿಗೆ ಸೇಕಡಾ 12ರಂತೆ ಬಡ್ಡಿ ಹಂಚಿದೆ.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.
ಸಿ. ಕೃಷ್ಣನ್, ಬಿ. ಎ. ಬಿ. ಎಲ್.,
ಮೆನೇಜಿಂಗ್ ಡ್ಯಾರೆಕ್ಟರ್.
ಡ್ಯಾರೆಕ್ಟರರಲ್ಲಿ ಒಬ್ಬರು —
ಎಮ್. ನಾರಾಯಣ. ಕಾಮತ್, ಬಿ. ಎ.,
ಪ್ಲೀಡರ್, ಕುಂದಾಪುರ.

ಇದೇ ತಿಂಗಳ ತಾ. ೨೪ನೇ ಆದಿತ್ಯವಾರ ಅಪರಾಹ್ನ ಗಂಟೆ ೪ಕ್ಕೆ ಮಂಗಳೂರು ತಾಲೂಕು ಕಾಂಗ್ರೆಸ ಕಮಿಟಿಯ ಮಹಾ ಸಭೆಯು ತಿಲಕ ವಿದ್ಯಾಲಯದಲ್ಲಿ ಸೇರುವುದು. ಸದಸ್ಯರೆಲ್ಲರೂ ತಪ್ಪದೆ ಬರಬೇಕಾಗಿ ವಿನಂತಿ ಇದೆ. ಆಲೋಚಿಸತಕ್ಕ ವಿಷಯಗಳು:— ೧. ಕಳೆದ ವರುಷ ದಲೆಕ್ಕದ ಮಂಜೂರಾತಿ. ೨. ನಿಯಮಗಳ ಬದಲಾವಣೆ. ೩. ರಾಷ್ಟ್ರೀಯ ಶಾಲೆಯ ವಿಶಯ ನಿಶ್ಚಯಿಸುವುದು. ೪. ಮುಂದಿನ ಕೆಲಸದ ವಿಚಾರ ಬೇಕಾದ ಏರ್ಪಾಡು. ೫. ಖಾಲಿ ಇರುವ ಸದಸ್ಯರ ಸ್ಥಳಗಳಲ್ಲಿ ಚುನಾವಣೆ. ಅಧ್ಯಕ್ಷರ ಪರವಾನಗಿಯಿಂದ ಸಭೆಯ ಮುಂದೆ ಬರಬಹುದಾದ ಇತರ ವಿಷಯಗಳು.

ಕುದ್ರೋಳಿ ಅಳಕೆ ಸಂಕದ ಬಳಿ ವಾಸಿಸುವ ಕೊರಪಳು ಎಂಬ ಹೆಂಗಸಿಗೆ ಅವಳ ಮನೆಯಲ್ಲಿ ಬಿಡಾರ ಇರುತ್ತಿದ್ದ ಕೊಗ್ಗ ಆಚಾರಿಯೆಂಬವನು ಚೂರಿಯಿಂದ ತಿವಿದು ಬಹಳವಾಗಿ ಗಾಯಪಡಿಸಿದ್ದರಿಂದ ಸದರಿ ಹೆಂಗಸು ಮೊದಂಡ ಸ್ಥಿತಿಯಲ್ಲಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವಳು.

ಶ್ರೀ ಗೋಕರ್ಣನಾಥ ವೆಂಕಟೇಶ ಸೇವಾ ಸಮಿತಿಯವರು ತಮ್ಮ ಜಾತಿಯ ವಿದ್ಯಾರ್ಥಿಗಳ ಬಗ್ಗೆ ಕಟ್ಟಿಸಲಿಕ್ಕಿರುವ ವಿದ್ಯಾರ್ಥಿ ಭವನದ ಶಂಕುಸ್ಥಾಪನೆಯನ್ನು ಜಿಲ್ಲಾ ಕಲೆಕ್ಟರ ದೊರೆಗಳಾದ ಮಿ| ಸೂಟರ್ ದೊರೆಗಳವರಿಂದ ಈ ದಿನ ಬೆಳಿಗ್ಗೆ ೯-೩೦ಕ್ಕೆ ಮಾಡಿಸಿದರು. ಈ ವಿದ್ಯಾರ್ಥಿಭವನಕ್ಕೆ ಸೂಟರ್ ಸ್ಟುಡೆಂಟ್ಸ್ ಹೋಮ ಎಂಬ ನಾಮನಾಂಕಿತವನ್ನು ಇಟ್ಟಿರುತ್ತಾರೆ.

ಜಿಲ್ಲಾ ಕಲೆಕ್ಟರ ದೊರೆಗಳಾದ ಮಿ| ಸೂಟರ್ ಸಾಹೇಬರಿಗೆ ಕೆನರಾ ಕ್ಲಬ್ಬಿನಲ್ಲಿ ಈ ದಿನ ಸಾಯಂಕಾಲ ಒಂದು ಪಾರ್ಟಿ ಇರುವುದು.

ಮದ್ರಾಸು ಸೆಂಟ್ರಲ್ ಫ್ಲಡ್ ರಿಲೀಫ್ ಫಂಡಿನ ಕಾರ್ಯನಿರ್ವಾಹಕ ಕಮ್ಮಿಟಿಯಲ್ಲಿ ನೆರೆಯಿಂದ ಗದ್ದೆಗಳಲ್ಲಿ ಬಿದ್ದ ಹೊಯ್ಗೆ ಕೆಸರು ಇತ್ಯಾದಿಗಳನ್ನು ತೆಗೆಸಲಿಕ್ಕೆ ಈ ಜಿಲ್ಲೆಗೆ ರೂ. ೧೩,೦೦೦ ಸಂಕ್ಷನಾಗಿರುವುದು.

ಖಾಲಿಯಾಗಿರುವ ಮಂಗಳೂರು ತಾಲೂಕು ಬೋರ್ಡು ಮಂಗಳೂರು ಸರ್ಕಲಿನ ಮೆಂಬರುತನಕ್ಕೆ ಮಿ| ಬಿ. ಯಮ್. ಡಿ'ಸೋಜ, ರಾ| ಉಳ್ಳಾಲ ಗೋವಿಂದ ಶೆಣೈ, ಮತ್ತು ಕೊಡಿಯಾಲಗುತ್ತು ತಿಮ್ಮಪ್ಪಹೆಗ್ಗಡೆಯವರು ಉಮೇದ್ವಾರರಾಗಿ ನಿಂತಿರುವರು.

ಪತ್ರವ್ಯವಹಾರ.

ಅಯ್ಯಾ ಪತ್ರಿಕಾಕರ್ತರೆ,

ನಮ್ಮಲ್ಲೊಂದು ಪಂಚ್ಯಾತಕೋರ್ಟು, ಕೋರ್ಟಿಗೆ ಬಂದ ಕಕ್ಷಿಗಾರರಿಗೆ ಬಿಸಿಲುಕಾಲದಲ್ಲಿ ಜಗಲಿ ವರೆಗೆ ಬಿಸಿಲು ಹೊಡೆತ, ಮಳೆಗಾಲದಲ್ಲಿ ಘೋರ ಮಳೆ ಹೊಡೆತದಿಂದ ಜಗಲಿ ಅಂದರೆ ಎದುರಿನ ಪೋರ್ಟಿಗೊ ತುಂಬ ನೀರು. ಪೋರ್ಟಿಗೊದಲ್ಲಿ ನಿಂತವರು ಕಾಗೆಗಳಂತೆ ಒದ್ದೆಯಾಗಬೇಕು. ಜಗಲಿಯಲ್ಲಿ ಎಂಟು ೧೫ ಜನ ಮಿಕ್ಕಿ ನಿಲ್ಲದಷ್ಟು ಸ್ಥಳ. ಬಿಸಿಲುಗಾಲ ಮರದ ನೆರಳಿನಲ್ಲಿಯಾದರೂ ನಿಲ್ಲುವರೆನ್ನುವ. ಮಳೆಗಾಲದಲ್ಲಿ ಸಮೀಪದ ಅಂಗಡಿಗಳಿಗೆ ಓಡಬೇಕು. ಕಕ್ಷಿಗಾರರಿಗೆ ಕರಿಯುವಾಗ್ಗೆ ಗೈರುಹಾಜರು ಎಂದು ನಂಬ್ರ ಡಿಸ್‌ಮಿಸ್. ಹಿಂದೊಮ್ಮೆ ಈ ಕುರಿತು ನಿಮ್ಮ ಪತ್ರದಲ್ಲಿ ಅರಿಕೆಮಾಡಿದನಂತರ ಡಿವಿಜನಲ್ ಆಫೀಸರರು ಕೋರ್ಟು ಬಳಿ ಬಂದು ಮೂಡು ಪಡು ಪಾರ್ಶ್ವ ಜಗಲಿಮಾಡಬೇಕೆಂತ ಆಲೋಚಿಸಿ ಹುಕುಂ ಆಗಿ ತಹಶೀಲದಾರರು ಓವರಶಿಯರು ಬಂದು ಅಳತೆಮಾಡಿ ಎಷ್ಟಿಮೇಟ ತಯಾರಿಸಿ ಈಗ ಸುಮಾರು ೯ ತಿಂಗಳು ಆಯಿತು. ಈ ಮೇರೆಗೆ ಆ ಕುರಿತು ಯಾವ ವಿಲೆವಾರಿ ಆಗದ್ದು ಕಕ್ಷಿಗಾರರದೊಂದು ಪುಣ್ಯ. ಒಂದು ಮಳೆಗಾಲ ಹೋಗಿ ಎರಡನೆ ಮಳೆಗಾಲ ಸಮೀಪಿಸಿತು, ಇನ್ನು ಯಾವದೊಂದು ಏರ್ಪಾಡು ಆದಿಲ್ಲ. ಒಮ್ಮೆ ತಯಾರಿಸಿದ ರಿಕಾರ್ಡು ಯಾರ ದಪ್ತರ ಗಂಟಿನಲ್ಲಿ ಸೇರಿತೊ ಹೇಳಲಾಗುವುದಿಲ್ಲ. ಇನ್ನಾದರೂ ಕಕ್ಷಿಗಾರರಿಗೆ ಅಭ್ಯಂತರವಾಗದಂತೆ ಅಡಿಗೆಬಿದ್ದ ರಿಕಾರ್ಡನ್ನು ಮೇಲಕ್ಕೆತ್ತಿಸಿ ಕಟ್ಟೋಣಕ್ಕೆ ಜಗಲಿಗಳು ಮಾಡಿಸಿ ಕಕ್ಷಿಗಾರರಿಗೆ ಸಾಕ್ಷಿಗಾರರಿಗೆ ಸ್ಥಳ ಸಿಕ್ಕುವಂತೆ ಏರ್ಪಾಡುಮಾಡಲೆಂದು ಕೋರುತ್ತೇವೆ

ಪುತ್ತೂರು,
೨—೫—'೨೫. } ಕಕ್ಷಿಗಾರ.

ಅಯ್ಯಾ,

ಡಿಸ್ಟ್ರಿಕ್ಟ ಮುನ್ಸಿಫ ಕೋರ್ಟುಗಳಿಗೆ ಸಾಕ್ಷಿಗಾಗಿ ಬರುವ ಟೌನಿನ ೪ನೇ ತರಗತಿ ಸಾಕ್ಷಿಗಾರರಿಗೆ ಒಂದು ದಿವಸದ ಊಟದ ಭತ್ತೆಗಾಗಿ ಆಣೆ ೧೨ ಮತ್ತು ಹೊರಗಿನವರಿಗೆ ಬಂದುಹೋಗುವ ೧೦ ಮೈಲುಗಳಿಗೆ ಆಣೆ ೨ರಂತೆ ಕೂಲಿ ಭತ್ತೆ ಕೊಡಲ್ಪಡುವವು. ಕ್ರಿಮಿನಲ್ ಕೋರ್ಟುಗಳಿಗೆ ಸಮನ್ಸಮಾಡೋಣಾಗುವ ಅದೇ ತರಗತಿಯ ಸಾಕ್ಷಿಗಾರರಿಗೆ ದಿನ ಒಂದರ ಊಟದ ಭತ್ತೆಗಾಗಿ ಆಣೆ ೪ ಮತ್ತು ದೂರದ ಸಂಗತಿಯಲ್ಲಿ ಮೈಲು ೧ಕ್ಕೆ ೩ ಪೈಯಂತೆ ಕೊಡಲ್ಪಡುವದು. ೪ನೇ ತರಗತಿಯ ಸಾಕ್ಷಿಗಾರನು ದಿನ ೧ಕ್ಕೆ ಆಣೆ ೮ಕ್ಕೆ ಕಮ್ಮಿಯಾಗದೆ ಒಂದು ರೂಪಾಯಿ ವರೆಗಾದರೂ ಸಂಪಾದಿಸುವನು ಕ್ರಿಮಿನಲ್ ಕೋರ್ಟುಗಳಲ್ಲಿ ಕೊಡೋಣಾಗುವ ದರದ ಭತ್ತೆಗಿಂತಲೂ ಆ ಸಾಕ್ಷಿಗಾರನು ಒಂದು ಊಟಕ್ಕಾಗಿ ಆಣೆ ೩ ಹೀಗೆ ದಿನ ಒಂದರ ಊಟದರಕ್ಕೆ ಆಣೆ ೬ ಕಾಫಿ ಫಲಾಹಾರಕ್ಕೆ ಕಸಾಕಸಿಯಿಂದಾದರೂ ಆಣೆ ೪ ಹೀಗೆ ೧೦ ಆಣೆ ವೆಚ್ಚಮಾಡಿ ಅಂಥಾ ಸಾಕ್ಷಿಗಾರನಿಗೆ ದಿನ ಒಂದಕ್ಕೆ ೪ ಆಣೆ ಕೈಯಿಂದ ನಷ್ಟಬೀಳುವುದು. ದಾರಿ ಖರ್ಚಿಗೆ ಮೈಲು ೧ಕ್ಕೆ ೩ಪೈ ಆದರೆ ಅಂಥಾ ಸಾಕ್ಷಿಗಾರನು ಮೋಟರ ಬಸ್ಸುಗಳಲ್ಲಿ ಪ್ರಯಾಣ ಬೆಳಸಿದರೆ ಬಸ್ ಚಾರ್ಜು ೧೦ ಮೈಲಿಗೆ ೧೨ ಆಣೆಯಂತೆ ವಾಪಾಸು ಹೋಗುವರೆ ಬಸ್ ಚಾರ್ಜು ರೂಪಾ ೧-೮-೦ ಬೀಳುವುದು. ಅಂಥಾ ಬಸ್ ಚಾರ್ಜು ಆದರೂ ಸಿಕ್ಕದು. ಕ್ರಿಮಿನಲ್ ಸಾಕ್ಷಿಗೆ ಸಮನ್ಸ ಪ್ರಕಾರ ಬಾರದಿದ್ದರೆ ವಾರಾಂಟ ಹುಟ್ಟಿ ಸಮನ್ಸ ಉಲ್ಲಂಘನೆ ಚಾರ್ಜು ಹೊರಿಸುವರು. ಸಾಕ್ಷಿಗಾರನು ಸಾಕ್ಷಿಗೆ ಬಂದರು ನಷ್ಟ. ಬಾರದಿದ್ದರು ಕಷ್ಟಪಡಿಯಬೇಕು. ಕ್ರಿಮಿನಲ ಮೊಕದಮೆಯ ಸಾಕ್ಷಿಗಾರರು ನಷ್ಟಹೊಂದದಂತೆ ಅಧಿಕಾರಿಗಳು ಭತ್ತೆ ದರಗಳು ಹೆಚ್ಚಿಸುವ ಏರ್ಪಾಡು ಮಾಡುವುದುಚಿತವು.

ಪುತ್ತೂರು,
ತಾ. ೨—೫—೧೯೨೫. } ಸಾಕ್ಷಿಗಾರ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ವರಾಜ್ಯಪಕ್ಷದ
— ಭವಿತವ್ಯ. —

ಕೌನ್ಸಿಲಿನೊಳಗೆ ಸೇರಿರುವ ರಾಜಕೀಯ ಪಕ್ಷದೊಳಗೆ, ಸ್ವರಾಜ್ಯ ಪಕ್ಷವು ಎಷ್ಟೇ ಊನತೆಗಳಿದ್ದರೂ, ಜನತೆಯಲ್ಲಿ ಮಾನಿತವಾಗಿದೆಯೆಂದೂ, ಸರಕಾರದ ಕಾರ್ಯಕ್ರಮಗಳಲ್ಲಿ ಪರಿಣಾಮಕಾರಿಯಾಗಿದೆಯೆಂದೂ ಎಲ್ಲರೂ ತಿಳಿದ ವಿಷಯವೇ. ಅಂತೂ ನಮ್ಮ ಜಿಲ್ಲೆಗಾಗಿ ಒಂದು ಪಕ್ಷಸ್ಥಾಪನೆಯೂ, ಆ ಪಕ್ಷದ ಪರವಾಗಿ ಚುನಾವಣೆಗಳಲ್ಲಿ ಕೆಲಸವೂ ಅಗತ್ಯವಿದೆಯೆಂಬುದರಲ್ಲಿ ಜನಾಭಿಮಾನಿಗಳಲ್ಲಿ ಹೆಚ್ಚಿನ ಮತಭೇದವಿದೆಯೆಂದು ನಾನು ತಿಳಿಯುವುದಿಲ್ಲ. ನಮ್ಮ ಜಿಲ್ಲೆಯಲ್ಲಿ ಜಾತೀಯ (Communal) ಕಲಹಗಳು ಮೇಲೆ ತೋರಲಿಕ್ಕಾರಂಭಿಸಿವೆ. ಅವು ಬೇರೂರುವ ಮೊದಲೇ ಜನತೆಯನ್ನು, ಈ ಸಮಾಜ ಹಿಂಸ್ರಕ ಜಾತೀಯ ಭಾವನೆಗಳಿಂದ ರಾಷ್ಟ್ರೀಯತೆಯ ಕಡೆಗೆ ತಿರುಗಿಸಬಲ್ಲ ಪಕ್ಷವನ್ನು ಸ್ಥಾಪಿಸುವ ಅವಶ್ಯಕತೆಯನ್ನು ಎಲ್ಲರೂ ಅನುಭವಿಸುತ್ತಲೇ ಇದ್ದಾರೆ.

ಆದರೆ, ಜಾತೀಯ ಕಲಹಗಳಿಂದಲೂ, ಸ್ವಾರ್ಥದ ದಾಕ್ಷಿಣ್ಯಗಳಿಂದಲೂ ತಮ್ಮನ್ನು ಬಿಡಿಸಿಕೊಳ್ಳಬಹುದಾದ, ಸ್ಥಿರನಿರ್ಧಾರ, ಅಕಲಂಕಿತ ದೇಶಪ್ರೇಮದ ವ್ಯಕ್ತಿಗಳೂ ಧುರೀಣರೂ ಸಿಕ್ಕುವರೇ? ಮತ್ತು ಸ್ವರಾಜ್ಯಪಕ್ಷೀಯರೆಂದು ಸ್ವರಾಜ್ಯಪಕ್ಷವನ್ನು ಸೇರುವವರು ಈ ತರ ಪಕ್ಷಾಭಿಮಾನಉಳ್ಳವರಾದಾರೇ ಎಂಬ ಶಂಕೆಯು ಈಗ ಹಲವು ಕಡೆಗಳಿಂದ ಪ್ರಕಟಿಸಲ್ಪಡುತ್ತಿದೆ.

ಕಳೆದ ಕೌನ್ಸಿಲ್ ಚುನಾವಣೆಯೇ ಈ ತರದ ಶಂಕೆಗೆ ಕಾರಣವಾಯಿತೆಂದು ಒಪ್ಪಬೇಕಾಗಿದೆ. ಆದರೆ ಈ ಶಂಕೆಯು ಸಾಧಾರವಾದುದಲ್ಲವೆಂದೂ, ಕಳೆದ ಚುನಾವಣೆಯನ್ನು ಸ್ವರಾಜ್ಯಪಕ್ಷದೊಂದಿಗೆ ಗಂಟಿಕ್ಕಿದುದರಲ್ಲಿ ಹೆಚ್ಚಿನ ಅವಸರವೂ ಅಜಾಗ್ರತೆಯೂ ಉಂಟಾಗಿದೆಯಾದರೂ ವಿಚಾರಶೀಲರು, ಸ್ವರಾಜ್ಯಪಕ್ಷವು ದೋಷಿಯೆಂದು ಹೇಳಲಾಸ್ಪದವಿಲ್ಲವೆಂದೂ ಆ ಚುನಾವಣೆಯ ಕಾಲದಲ್ಲಿನ ಘಟನೆಗಳನ್ನು ಲಕ್ಷಿಸಿದರೆ ತಿಳಿಯಬಹುದು,

ಶ್ರೀ. ಮಂಜಯ್ಯ ಹೆಗ್ಗಡೆಯ ಅನುಮೋದಕರು, ಶ್ರೀ. ಎ. ಬಿ ಶೆಟ್ಟರನ್ನು ಇಷ್ಟವಸರದಾಗಿ, ಕೊಂಗ್ರೆಸು ಉಮೇದುವಾರರಾಗಿ ಮಾಡಿದುದಕ್ಕಾಗಿಯೂ, ಶ್ರೀ. ಎ. ಬಿ ಶೆಟ್ಟರು, ಸ್ವರಾಜ ಪಕ್ಷದವರು ಸರಿಯಾಗಿ ಕೈಬಿಟ್ಟುದಕ್ಕಾಗಿಯೂ, ಇಷ್ಟಂತವರೂ ಸ್ವರಾಜ್ಯಪಕ್ಷದವರ ಮೇಲೆ ವಿರೋಧ ಪ್ರಮುಖರು ಸುರಿಸಾಳೆಯನ್ನು ಹಾಕುವುದು ಉಚಿತವೆಂದು ನಾನು ತಿಳಿಯುವುದಿಲ್ಲ. ಮುಖ್ಯವಾಗಿ ಶ್ರೀ. ಎ. ಬಿ. ಶೆಟ್ಟರು ಸ್ವರಾಜ್ಯಪಕ್ಷವನ್ನು ದೂರುವುದರಲ್ಲಿ ನ್ಯಾಯವಿಲ್ಲವೆಂದು ಹೇಳಲಾಗುವುದಿಲ್ಲ. ಎ. ಬಿ. ಶೆಟ್ಟರಿಗೆ ಸ್ವರಾಜ್ಯಪಕ್ಷದ ಹೆಸರಿನಿಂದಲೇ ಅನೇಕ ಓಟುಗಳು ಹೆಚ್ಚು ಸಿಕ್ಕಿವೆ. ಅದನ್ನವರು ಒಪ್ಪದಿರರು. ಅಲ್ಲದೆ ಶ್ರೀ. ಮಹಾಬಲ ಹೆಗ್ಗಡೆಯವರಿಗೆ ಓಟು ಸಿಕ್ಕದಿರುವುದೂ ಕೊಂಗ್ರೆಸ್ ಚಳವಳದ ಪರಿಣಾಮವೆಂದಾದರೂ ಅವರು ಒಪ್ಪಬೇಕು. ಅಂತೂ ಕೊಂಗ್ರೆಸ್ ಪಕ್ಷವು ಶ್ರೀ. ಮಹಾಬಲ ಹೆಗ್ಗಡೆಯರಿಗೆ ಓಟು ಕೊಡದೆ ಉಳಿದ ಇಬ್ಬರಲ್ಲೊಬ್ಬನನ್ನು ಚುನಾಯಿಸಬೇಕಿತ್ತು.

ಶ್ರೀಯುತ ಎ. ಬಿ. ಶೆಟ್ಟರು ಸ್ಪಷ್ಟ ಸ್ವರಾಜ್ಯಪಕ್ಷದವರಾಗದೆ, ಏನೋ ಸಂಶಯಮಯವಾದ ತೋರಿಕೆಗಳಿಂದ ಕೊಂಗ್ರೆಸ್ ಪಕ್ಷವನ್ನು ಒಲಿಸಲು ನೋಡಿ ಅದರಲ್ಲಿ ಕೆಲವರ ಮಟ್ಟಿಗೆ ಕೃತಕೃತ್ಯರಾಗಿದ್ದರೆ ಅವರ ದೋಷವು ಕೊಂಗ್ರೆಸ್ ಪಕ್ಷದಲ್ಲ. ಅದರಲ್ಲೂ ಜಿಲ್ಲೆಯಲ್ಲಿ ಸ್ವರಾಜ್ಯಪಕ್ಷವೇ ಇಲ್ಲದಿದ್ದಾಗ, ಕೊಂಗ್ರೆಸ್ ಪಕ್ಷದವರು ಅವರವರ ದಾಕ್ಷಿಣ್ಯಕ್ಕೆ ಸರಿಯಾಗಿ ಪಕ್ಷವನ್ನು ವಹಿಸಿಕೊಂಡಾಗ, ಶೆಟ್ಟರು ಸ್ವರಾಜ್ಯಪಕ್ಷಕ್ಕೆ ಸೇರದೆ, ಕೊಂಗ್ರೆಸ್ ಪಕ್ಷವು ಸಹಾಯ ಮಾಡಲಿಲ್ಲವೆಂದು ದೂರುವುದು ಯೋಗ್ಯವಲ್ಲ. ಶ್ರೀ. ಶೆಟ್ಟರ ಈಗಿನ ವರ್ತನವೂ, ನಮ್ಮಲ್ಲಿ ಹಲವರೊಳಗೆ ಉಂಟಾದ ಶಂಕೆಯನ್ನು ಸ್ಥಿರಪಡಿಸಿದೆ. ಶ್ರೀಯುತ ಶ್ರೀನಿವಾಸ ಐಯ್ಯಂಗಾರರನ್ನು ತರಿಸಿ, ತನ್ನ ಸ್ವಂತ ಖರ್ಚಿನಿಂದ ಓಟಿನ ಸಮಯದಲ್ಲಿ ಸ್ವರಾಜ್ಯಪಕ್ಷದ ಪರಿಷತ್ತನ್ನು ನಡೆಸಲು ಸಮ್ಮತಿಸಿದ್ದ ಶ್ರೀ. ಶೆಟ್ಟರು, ಸಹಜವಾಗಿ, ಜಿಲ್ಲೆಗಾಗಿ ನಡೆದ ಕಾರ್ಕಳ ಪರಿಷತ್ತಿಗೆ, ನಾವು ಬರಲಿಕ್ಕೆಂದು ತಂತಿಕೊಟ್ಟಿದ್ದರೂ ಬಾರದಿದ್ದುದೂ, ಸಹಾನುಭೂತಿಯನ್ನು ವ್ಯಕ್ತಪಡಿಸಬಲ್ಲ ಒಂದು ಪತ್ರವನ್ನಾದರೂ ಬರೆಯದಿದ್ದುದೂ, ಶ್ರೀ. ಶೆಟ್ಟರ ಸ್ವರಾಜ್ಯಪಕ್ಷದ ಮೇಲಿನ ಭಕ್ತಿಯು ಚುನಾವಣೆ ಸಮಯ ಮಟ್ಟಿಗೆ ಮಾತ್ರವಾಗಿತ್ತೆಂದು ತೋರಿಸುವಂತಿದೆ. ಕೊಂಗ್ರೆಸ್ ಪಕ್ಷದ ಯಾವ ದೋಷಗಳನ್ನಾದರೂ ಅಲ್ಲಿ ಶ್ರೀ. ಶ್ರೀನಿವಾಸ ಐಯ್ಯಂಗಾರರೊಡನೆಯೇ ತೋರಿಸಿ ಚರ್ಚಿಸಬಹುದಿತ್ತು. ಮತ್ತು ಸ್ವರಾಜ್ಯಪಕ್ಷದ ಸುಸಂಘಟನೆಯನ್ನು ಸಾಧಿಸಬಹುದಿದ್ದಿತು.

ಇನ್ನು, ಸ್ವದೇಶಾಭಿಮಾನಿಯ ಕಳೆದ ಸಂಚಿಕೆಯಲ್ಲಿ ಪ್ರಕಟವಾದ "ಶೆಟ್ಟರು ಸ್ವರಾಜ್ಯಪಕ್ಷವನ್ನು ಸರಿಯಾಗಿ ಅಂಗೀಕರಿಸದೆ ಇದ್ದುದರಿಂದ ಅವರಿಗೆ ಈ ಪರಾಜಯವು ಬಂದಿದೆಂದು ಹೇಳಲಾಗದು" ಎಂಬುದೂ ಸಾಧಾರವಿಲ್ಲದ್ದು. ಶೆಟ್ಟರು ಸ್ವರಾಜ್ಯಪಕ್ಷವನ್ನು ಸೇರದಿದ್ದರೂ ಶ್ರೀ. ಮಂಜಯ್ಯ ಹೆಗ್ಗಡೆಯವರಿಗೆ ಧರ್ಮಸ್ಥಳ ದೇವರ ಕಡೆಗಿದ್ದ ಭಯಭಾವನೆಯು ಸಹಾಯಕವಾಗಿದ್ದರೂ, ಮಂಜಯ್ಯ ಹೆಗ್ಗಡೆಯವರಿಗೆ ಮತ್ತು ಶೆಟ್ರಿಗೆ ಇರುವ ಓಟಿನ ಅಂತರವು ಅಷ್ಟು ದೊಡ್ಡದಲ್ಲ. ಮಂಜಯ್ಯ ಹೆಗ್ಗಡೆಯವರ ಪರವಾಗಿ ಬಲವಾದ ಕೊಂಗ್ರೆಸ್ ಸದಸ್ಯರು ಕೆಲಸಮಾಡಿದ್ದಾರೆ. ಶ್ರೀ. ಶೆಟ್ಟರು ಸ್ವರಾಜ್ಯಪಕ್ಷವನ್ನು ಮುಂದಾಗಿಯೇ ಸ್ವೀಕರಿಸಿ ಕೆಲಸಮಾಡಿದ್ದಾದರೆ ಅವರಿಗೂ ಮಂಜಯ ಹೆಗ್ಗಡೆಯವರಿಗೂ ಇದ್ದ ಅಂತರವು ಸುಲಭವಾಗಿಯೂ ಕಡೆಗಾಣಿಸಲ್ಪಡಬಹುದಿತ್ತು.

ಶ್ರೀ. ಶ್ರೀನಿವಾಸ ಐಯ್ಯಂಗಾರರಂತಹ ಧುರೀಣರ ಮಾತನ್ನು ನಾವು ಮನ್ನಿಸಬೇಕು ನಿಜ. ಆದರೆ ಶ್ರೀ. ಶೆಟ್ಟರ ಕಾರ್ಯಗಳು ಅದಕ್ಕೆ ತಡೆ ಹಾಕಿದವೆನ್ನಬಹುದು, ಶ್ರೀಯುತ ಐಯ್ಯಂಗಾರರು ಉಡುಪಿಗೆ ಬಂದಾಗ ಶೆಟ್ಟರು ಸ್ವರಾಜ್ಯ ಪಕ್ಷಕ್ಕೆ ಸೇರಿರುವರೆಂದು ತಾನು ಮಹಾಜನ ಸಭೆಯಲ್ಲಿ ಹೇಳುವೆನೆಂದಿದ್ದರು. ಆದರೆ ಅವರು ಹಾಗೆ ಹೇಳಲಿಲ್ಲ. ಆದುದರಿಂದ ಐಯ್ಯಂಗಾರರಿಗೂ ಶೆಟ್ರಿಗೂ ತೃಪ್ತಿಕರವಾದ ಒಪ್ಪಂದವಾಗಲಿಲ್ಲವೆಂದು ನಾವು ನೆನಸಬೇಕಾಯಿತು. ಮಂಗಳೂರಿನಲ್ಲಿ ಬಂದು, ಮಾತನಾಡಿ ಅವರು ಓಟುದಾರರಿಗೆ ಪ್ರಕಟನೆಯನ್ನು ಕೊಟ್ಟರು. ಆದರೆ ನವಯುಗದ ಮರು ಸಂಚಿಕೆಯಲ್ಲಿಯೇ ಶೆಟ್ರು ತಮ್ಮ "ತಿದ್ದುಪಡಿ"ಯನ್ನು ಕೊಟ್ಟರು. ಇವೆಲ್ಲಾ ಸಂದರ್ಭಗಳಲ್ಲಿ ಶೆಟ್ರನ್ನು ಶರ್ತವಿಲ್ಲದೆ ಕೊಂಗ್ರೆಸ್ ಸದಸ್ಯನು ಅನುಮೋದಿಸುವುದು ಹೇಗೆಂದು ನಮಗೆ ತಿಳಿಯುವುದಿಲ್ಲ. ಶ್ರೀಯುತ ಮಂಜಯ್ಯ ಹೆಗ್ಗಡೆಯವರು ಬಹಳ ಕಾಲದಿಂದ ಖದ್ದರ ಹಾಕುತ್ತಿದ್ದರೆಂದೂ, ಶ್ರೀ. ಶೆಟ್ಟರು, ಖದ್ದರ ಹಾಕುವುದನ್ನು ಬಿಟ್ಟು ದೇಶೀ ವಸ್ತ್ರಗಳನ್ನು ಕೊಳ್ಳುವುದರಲ್ಲಿ ಕೂಡ ಹಿಂದೆಂದೂ ನಾನು ಕೇಳಿದ್ದೇನೆ. ಇವೆಲ್ಲ ವಿಷಯಗಳು ಮುಂದೆ, ಕೊಂಗ್ರೆಸ್ ಪಕ್ಷದವರು ಯಾವ ಉಮೇದ್ವಾರರನ್ನೂ ಅನುಮೋದಿಸುವುದು ಉತ್ತಮವಿರಲಿಲ್ಲ. ನಾನು ಯಾರ ಪಕ್ಷವನ್ನೂ ವಹಿಸಲಿಲ್ಲ. ಮಂಜಯ್ಯ ಹೆಗ್ಗಡೆಯವರನ್ನು ಅನುಮೋದಿಸಿದಷ್ಟೇ ದೋಷವು, ಎ. ಬಿ. ಶೆಟ್ರನ್ನು ಅನುಮೋದಿಸಿದರಿಂದ ಉಂಟಾಗಿದೆ. ಫಲತಃ ಚುನಾವಣೆಯ ಕೆಲಸವು ಕೊಂಗ್ರೆಸ್ ಸೂತ್ರಗಳಿಂದ ಮಿಕ್ಕಿ ನಡೆದದೆ. ಅದಕ್ಕಾಗಿ ಕೊಂಗ್ರೆಸ್ ಸೂತ್ರಗಳನ್ನು ದೂಷಿಸಲಾಗುವುದಿಲ್ಲ. ಸುಸಂಘಟಿತ ಪಕ್ಷವಿದ್ದರೆ ಇವೆಲ್ಲಾ ದೋಷಗಳುಂಟಾಗುತ್ತಿರಲಿಲ್ಲ. ಶೆಟ್ರು ನಿಜವಾಗಿ ಕೊಂಗ್ರೆಸ್ಸಿನ ಮೇಲೂ ಸ್ವರಾಜ್ಯಪಕ್ಷದ ಮೇಲೂ ವಿಶ್ವಾಸವಿದ್ದವರಾದುದಾದರೆ ಈ ಸಂಘಟನೆಗಾಗಿ ಕೆಲಸಮಾಡತಕ್ಕದಿತ್ತು. ಸೋಲುಂಟಾಯಿತೆಂದು ಪಕ್ಷದ ಮೇಲೆ ಕೋಪಿಸಬಾರದಿತ್ತು.

ಈ ಚುನಾವಣೆಗಳಲ್ಲಿ, ಕರ್ನಾಟಕ ಪ್ರಾಂತಿಕ ಕೊಂಗ್ರೆಸ್ ಕಮಿಟಿಯ ಅಧ್ಯಕ್ಷರೂ, ಪ್ರಬಲ ಅಪರಿವರ್ತನವಾದಿಗಳೂ ಆಗಿರುವ ಶ್ರೀಯುತ ಕಾರ್ನಾಡ ಸದಾಶಿವರಾಯರ ಸಹಕಾರವು ವಿಚಿತ್ರವಾಗಿದೆ. ಶ್ರೀಯುತ ಸದಾಶಿವರಾಯರಿಗೆ ಕೌನ್ಸಿಲಿನ ಮೇಲೆ ಭಕ್ತಿಯಿಲ್ಲ; ಸ್ವರಾಜ್ಯಪಕ್ಷವು ಒಪ್ಪಿಗೆಯಿಲ್ಲ. ಆದರೂ ಕೊಂಗ್ರೆಸ್ ಮೆಂಬರ್ ಕೂಡ ಆಗದ ಶೆಟ್ರನ್ನು ತೆಗೆದುಕೊಂಡು ಇಡೀ ಜಿಲ್ಲೆಯನ್ನು ಓಟು ಕಾಡಿಸಲಿಕ್ಕೆ ತಿರುಗಿದುದೇ ಆಶ್ಚರ್ಯ.

ಆದದ್ದು ಹೇಗೂ ಆಗಿಹೋಯಿತು. ನಮ್ಮ ಜಿಲ್ಲೆಗೆ ಸದ್ಯದಲ್ಲಿಯೇ ಸ್ವರಾಜ್ಯಪಕ್ಷವು ಸ್ಥಾಪಿತವಾಗುವುದು. ಈ ಸಮಯದಲ್ಲಿ ಎಲ್ಲರೂ ಹಿಂದಿನ ಕಥೆಗಳನ್ನು ಮರೆತು, ಹೊಸ ಮನಸ್ಸಿನಿಂದ, ಹೊಸ ಉತ್ಸಾಹದಿಂದ ಕೂಡಿ ಸ್ವರಾಜ್ಯಪಕ್ಷವನ್ನು ಸ್ಥಾಪಿಸಬೇಕಾಗಿ ನನ್ನ ವಿನಂತಿ. ಒಳ್ಳೆಯ ವ್ಯವಸ್ಥೆ ಇದ್ದರೆ ಯಾವ ಕೆಲಸವೂ ಅಸಾಧ್ಯವಾಗುವುದಿಲ್ಲ. ಶ್ರೀಯುತ ಶೆಟ್ಟರು ಇದರ ಕೆಲಸವನ್ನೇಕೆ ಕೈಕೊಳ್ಳಬಾರದು?

ಸ್ವರಾಜ್ಯಪಕ್ಷದ ಹಾದಿಯಲ್ಲಿ ಬಹಳ ಅಭ್ಯಂತರಗಳಿವೆ. ಅವನ್ನು ನಾನು ಮುಂದಿನ ಲೇಖದಲ್ಲಿ ಚರ್ಚಿಸುತ್ತೇನೆ.

ಮುಲ್ಕಿ ವಾಮನ ಕುಡುವ.

ಬಡ ಜನೋಪಕಾರಿಯಾದ ಎಮ್. ಬಿ. (ಹೊಮಿಯೊ) ಡಾಕ್ಟರರೊಬ್ಬರು.

ಕಳೆದ ಆದಿತ್ಯವಾರ ತಾ. ೩ರಲ್ಲಿ ಬಿಜೈಯಲ್ಲಿ ಒಂದು ವಿಶೇಷ ಸಂಭ್ರಮ ನಡೆಯಿತು. ಈಗ ಸುಮಾರು ಒಂಭತ್ತು ವರ್ಷಗಳಿಂದ ಬಡಜನರ ಉಪಯೋಗಾರ್ಥವಾಗಿ ಸ್ವಲ್ಪ ಸ್ವಲ್ಪ ವೈದ್ಯಕವನ್ನು ನಡೆಸುತ್ತ, ಗುಣಲಾಭ ಹೊಂದಿ ಪ್ರಖ್ಯಾತಕ್ಕೆ ಬಂದು ಪರಂ ಚಿಕಿತ್ಸೆಯನ್ನು ಕ್ರಮಪ್ರಕಾರ ನಡಿಸಲಿಕ್ಕೆ 'ದಿ ಪೂವರ್ ಸರ್ವಿಸ್ ಲೋಜ್' ಎಂಬ ಸಂಸ್ಥೆಯ ರೂಪವಾಗಿ ಪ್ರತಿ ದಿನ ನೂರಕ್ಕಿಂತಲೂ ಹೆಚ್ಚು ಬಡ ರೋಗಿಗಳಿಗೆ ಧರ್ಮಾರ್ಥವಾಗಿ ಔಷಧಿಕೊಡುತ್ತಿದ್ದ ಬಿಜೈ ಶ್ರೀಯುತ ಕಾಸ್ಮಿರ್ ಮತ್ಥಾಯಸರಿಗೆ ಇತ್ತಲಾಗಿ ಎಮ್. ಬಿ. (ಹೊಮಿಯೊ) ಎಂಬ ಡಾಕ್ಟರ್ ಬಿರುದು ದೊರಕಿದ್ದರಿಂದ ಅವರನ್ನು ಸನ್ಮಾನಿಸಲು ಅವರ 'ದಿ ಪೂವರ್ ಸರ್ವಿಸ್ ಲೋಜ್'ನ ಸಾಲ್ಲನೇ ವಾರ್ಷಿಕೋತ್ಸವದ ದಿವಸ ಸುಮಾರು ೫೦೦ ಮಂದಿ ಪ್ರೋತ್ಸಾಹಕರೂ ಔಷಧಿಪಡಿಯುವವರೂ ಸಭೆಕೂಡಿದ್ದರು.

ಮಂಗಳೂರಿನ ಮೆಸ್ಸರ್ಸ್ ಜೆ. ಎಸ್. ಡಿ ಸೋಜ ಅಂಡ್ ಸನ್ಸ್ ಯವರ ಪ್ರಾಪ್ರಯಟ್ರು ವ್ಯಾಲೆಂಟಾಯಿನ್ ಸಾಲ್ದಾನ್ ಡಿ. ಸೋಜರು ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ್ದರು.

ಈ ೯ನೇ ವರ್ಷಕ್ಕೆ ಸುಮಾರು ೧೫೦೦೦ ಮಂದಿಗಳಲ್ಲಿ ಇವರು ಚಿಕಿತ್ಸೆ ನಡಿಸಲಿಕ್ಕೆ ಇವರಿಗೆ ಔಷಧಿ ಸಂಗ್ರಹ ವಗೈರೆಗೆ ತಗಲಿದ ಖರ್ಚು ರೂಪಾಯಿ ೩೯೦೦ ಆಗಿರುತ್ತಾ, ಚಿಕಿತ್ಸೆಯು ಧರ್ಮಾರ್ಥವಾಗಿರುತ್ತಾ ಈ ಧರ್ಮ ಸಂಸ್ಥೆ ಸಹಾಯಾರ್ಥವಾಗಿ ಬಂದ ಸಿಲ್ಕು ರೂಪಾಯಿ ೨೨೦೦ ಕಳೆದು ವೈದ್ಯ ಮತ್ಥಾಯಸರಿಗೆ ೬೦೦ ರೂಪಾಯಿ ವರೆಗೆ ಕಮ್ಮಿ ಬಿದ್ದದನ್ನು ಸಭಿಕರು ತಿಳಿದ ಕೂಡಲೇ ವಂತಿಗೆ ಪಟ್ಟಿ ತೆರೆಯಲ್ಪಟ್ಟು ಸುಮಾರು ರೂಪಾಯಿ ೬೫ನ್ನು ಜಮೆಯಾಗಿ ನಗದಾಗಿ ವೈದ್ಯ ಮತ್ಥಾಯಸರಿಗೆ ಅವರ ಈ ಪರೋಪಕಾರಿ ಕೆಲಸಕ್ಕೆ ಸಹಾಯಾರ್ಥವಾಗಿ ಒಪ್ಪಿಸಿದರು,

ಹೊಮಿಯೊಪತಿ ಔಷಧಿ ಕ್ರಮದಲ್ಲಿ ಪ್ರವೀಣರಾಗಿ ಎಮ್. ಬಿ. (ಹೊಮಿಯೊ) ಡಾಕ್ಟರ ಬಿರುದನ್ನು ಪಡೆದು ವೈದ್ಯ ಮತ್ಥಾಯಸರು ಬಾಲಕರ ರೋಗ ಚಿಕಿತ್ಸೆಯಲ್ಲಿ ಛಟ್ಟಿಗರು. ಇದಲ್ಲದೆ ಆಯುರ್ವೇದ ಶಾಸ್ತ್ರದಲ್ಲಿ ಕೂಡ ತಕ್ಕಮಟ್ಟಿಗೆ ಪ್ರವೀಣತೆಯನ್ನು ಹೊಂದಿ, ಮಲೇರಿಯಾ, ವಿಷಮಜ್ವರ, ವ ಇತರ ರೋಗಗಳನ್ನು ಗುಣಪಡಿಸಿ ಖ್ಯಾತಿಯನ್ನು ಹೊಂದಿರುತ್ತಾರೆ.

ಡಾಕ್ಟರ್ ಮತ್ಥಾಯಸರು ಅವರ ಚಿಕಿತ್ಸೆಯನ್ನು ಧರ್ಮಾರ್ಥವಾಗಿ ನಡೆಯಿಸುವುದರಿಂದ ಅವರ ಕಾಲಕ್ಷೇಪಕ್ಕಾಗಿ ಪ್ರತಿದಿನ ೧೧ರಿಂದ ೬ರ ವರೆಗೆ ಬೇರೆ ಕೆಲಸಕ್ಕೆ ಹೋಗಬೇಕಾಗಿರುತ್ತದೆ. ಹೀಗಾಗಿ ಪ್ರಾತಃಕಾಲ ೫ರಿಂದ ೧೦ರ ವರೆಗೂ, ಸಾಯಂಕಾಲ ೬ರಿಂದ ೧೦-೧೧ರ ವರೆಗೂ ಅವರ ವೈದ್ಯತನವನ್ನು ನಡಿಸಬೇಕಾಗಿದೆ. ಈ ಮಹಾ ಶ್ರಮದಿಂದ ಅವರ ದೇಹದಾರೋಗ್ಯವು ಒಂದು ವೇಳೆ ಹಾಳಾಗಿ ಹೋದಲ್ಲಿ ಈಗ ಇವರಲ್ಲಿ ಧರ್ಮಾರ್ಥವಾಗಿ ಚಿಕಿತ್ಸೆ ಹೊಂದುವ ನೂರಾರು ಬಡ ಜನಗಳಿಗೆ ವಿಪರೀತ ಕಷ್ಟವೂ ನಷ್ಟವೂ ಆದೀತು. ಇವರ ಜೀವನೋಪಾಯವು ಇದೇ ವೈದ್ಯತನದಲ್ಲಿ ನಡಿಯುವ ಹಾಗೆ ವಿಲೆವಾರಿ ಮಾಡಿ ಇವರ ಇದೇ ಸಮಯವನ್ನು ಈ ಪರೋಪಕಾರಿ ಕೆಲಸಕ್ಕೆ ವಿನಿಯೋಗಿಸಿದರೆ ಯೋಗ್ಯವಿತ್ತು.

ಡಾಕ್ಟರ್ ಮತ್ಥಾಯಸರಿಗೂ ಅವರ 'ಪೂವರ್ ಸರ್ವಿಸ್ ಲೋಜಿಗೂ' ದೀರ್ಘಾಯುರಾರೋಗ್ಯವಾಗಲಿ ಎಂದು ಭಗವಂತನ ಕೂಡೆ ನನ್ನದೊಂದು ವಿನಂತಿ.

ಕ್ಷೇಮಹೊಂದಿದ ಬಡರೋಗಿ.

ಕಾರ್ಕಳ ಪರಿಷತ್ತಿನ ನಿರ್ಣಯಗಳು.

೧. ಕಾರ್ಕಳದಲ್ಲಿ ಕೊಂಗ್ರೆಸ್ ಕೆಲಸವನ್ನು ಉತ್ಸಾಹದಿಂದ ಮಾಡುತ್ತಿದ್ದ ಶ್ರೀ. ಮುಕುಂದ ಶೆಣೈ ಮತ್ತು ಶ್ಯಾಮಸುಂದರ ಭಾಗವತರ ಅಕಾಲ ಮರಣದಿಂದಾದ ಅವರ ಕುಟುಂಬದ ದುಃಖದಲ್ಲಿ ಈ ಪರಿಷತ್ತು ಸಹಭಾಗಿಯಾಗಿರುತ್ತದೆ. ಮತ್ತು ಮೃತರ ಆತ್ಮಕ್ಕೆ ಶಾಂತಿಯನ್ನು ಉಂಟುಮಾಡಲೆಂದು ಪರಮಾತ್ಮನನ್ನು ಪ್ರಾರ್ಥಿಸುತ್ತದೆ. (ಅಧ್ಯಕ್ಷಸ್ಥಾನದಿಂದ). ೨ ರಾಷ್ಟ್ರ ಉದ್ಧಾರಕ್ಕಾಗಿ ಖಾದಿ ಕೆಲಸದ ಅವಶ್ಯಕತೆಯನ್ನು ಈ ಪರಿಷತ್ತು ಸಂಪೂರ್ಣ ಒಪ್ಪಿಕೊಳ್ಳುವದಲ್ಲದೆ ಈ ಕೆಲಸವನ್ನು ಜಿಲ್ಲೆಯ ಮಹಾಜನರು ಮತಭೇದಗಳನ್ನೆಣಿಸದೆ ಐಕ್ಯಮತ್ಯದಿಂದ ಮುಂದುವರಿಸುವಂತೆ ಕೇಳಿಕೊಳ್ಳುತ್ತದೆ. ಅಲ್ಲದೆ ಬೆಳಗಾಂವ ಕಾಂಗ್ರೆಸಿನಲ್ಲಿ ಮಂಜೂರಿರಾದ ನೂಲುವ ಕರದ ಸದಸ್ಯತನದ ಕ್ರಮದ ಅವಶ್ಯಕತೆಯನ್ನು ಈ ಪರಿಷತ್ತು ಸಂಪೂರ್ಣ ತಿಳಿದುಕೊಂಡು ಅದನ್ನು ಯಶಸ್ವಿಗೊಳಿಸಲು ಪೂರ್ಣ ಪ್ರಯತ್ನಪಡುವಂತೆ ಎಲ್ಲ ಕಾಂಗ್ರೆಸ್ ಜನರಿಗೆ ಕೇಳಿಕೊಳ್ಳುತ್ತದೆ. ೩. ಅಸ್ಪೃಶ್ಯತೆಯು ಹಿಂದೂ ಧರ್ಮದ ಮೇಲಿನ ಕಲಂಕವೆಂದು ನಮ್ಮ ಸಮಾಜವು ಈ ದೋಷವನ್ನು ಹೋಗಲಾಡಿಸದೆ ದೇಶಕ್ಕೆ ಸ್ವರಾಜ್ಯವು ಖಂಡಿತವಾಗಿಯೂ ಸಿಕ್ಕುವಂತಿಲ್ಲವೆಂದು ಈ ಪರಿಷತ್ತು ತನ್ನ ನಿಶ್ಚಯವಾದ ಅಭಿಪ್ರಾಯವನ್ನು ವ್ಯಕ್ತಪಡಿಸುವದಲ್ಲದೆ ರಾಷ್ಟ್ರೀಯ ಶಾಲೆಗಳಲ್ಲಿ ಅಸ್ಪೃಶ್ಯತಾ ನಿವಾರಣೆಯ ಬಗ್ಗೆ ಕೂಡಲೆ ಲಕ್ಷ್ಯಕೊಡಬೇಕೆಂದು ಅಪೇಕ್ಷಿಸುತ್ತದೆ. ೪. ಜಿಲ್ಲೆಯಲ್ಲಿ ಸಾರ್ವಜನಿಕ ಸೇವೆಯನ್ನು ಮಾಡಲು ಸ್ವಯಂಸೇವಕರ ದಳಗಳನ್ನೂ ಬಾಲಸೇವಾ ಸಮಿತಿಗಳನ್ನೂ ವ್ಯವಸ್ಥೆಗೊಳಿಸುವುದಕ್ಕಾಗಿ ಈ ಕೆಳಗಣ ಕಮಿಟಿಯನ್ನು ನೇಮಿಸುವುದಲ್ಲದೆ ಜಿಲ್ಲೆಯ ಯುವಕರೆಲ್ಲರೂ ಈ ದಳಕ್ಕೆ ಉತ್ಸಾಹದಿಂದ ಸೇರಬೇಕಾಗಿ ಈ ಪರಿಷತ್ತು ಕೇಳಿಕೊಳ್ಳುತ್ತದೆ ಮತ್ತು ಈ ಕಮಿಟಿಗೆ ಬೇಕಾದ ಖರ್ಚನ್ನು ಕೊಡಬೇಕಾಗಿ ಜಿಲ್ಲಾ ಕಮಿಟಿಗೆ ಸೂಚಿಸುತ್ತದೆ. ಮೆಂಬರರು:—೧ ಕೆ. ಪದ್ಮನಾಭ ಕಾಮತ್, ೨. ರಘುರಾಮ ದಂಡಿಲ್ಲಾಯ, ೩. ಉಳ್ಳಾಲ ಸಂಜೀವರಾಯ, ೪. ಶ್ರೀನಿವಾಸ ಉಪಾಧ್ಯಾಯ. ೫. ಪುಂಡರೀಕ ಕಾಮತ್, ೬. ಸ್ವರಾಜ್ಯಪ್ರಾಪ್ತಿಗೆ ರಾಷ್ಟ್ರೀಯ ವಿದ್ಯಾಭ್ಯಾಸವು ಸಹಾಯವಾಗಿರುವದರಿಂದ ಈಗ ಅಸ್ತಿತ್ವದಲ್ಲಿರುವ ರಾಷ್ಟ್ರೀಯ ಶಾಲೆಗಳಿಗೆ ಮಹಾಜನರು ಧನಸಹಾಯಮಾಡಬೇಕಾಗಿ ಕೇಳಿಕೊಳ್ಳುವುದಲ್ಲದೆ ಶಾಲಾ ಅಧ್ಯಾಪಕರು ರಾಷ್ಟ್ರೀಯ ಶಿಕ್ಷಣದ ಧ್ಯೇಯಗಳನ್ನು ಸರಿಯಾಗಿ ಆಚರಣೆಗೆ ತಂದು ಜನರ ಸಹಾನುಭೂತಿಯನ್ನು ಪಡೆಯಬೇಕಾಗಿ ಅಪೇಕ್ಷಿಸುತ್ತದೆ. ಧನವನ್ನು ಕೇಳಿಸಿ [illegible] ಕಮಿಟಿಯವರು ಗ್ರಾಂಟುಗಳನ್ನು ಕೊಡಿಸುವ ಏರ್ಪಾಡನ್ನು ಕೂಡಲೆ ಮಾಡಬೇಕೆಂದು ಈ ಪರಿಷತ್ತು ಸೂಚಿಸುತ್ತದೆ. ೬. ಈ ಜಿಲ್ಲೆಯ ವಿದ್ಯಾರ್ಥಿಗಳೆಲ್ಲರೂ ದೇಶಸೇವೆಯ ಕಡೆಗೆ ಸ್ವಲ್ಪ ಗಮನಕೊಡುವುದು ಅವಶ್ಯಕ [illegible] ಸ್ಥಾಪಿಸಿಕೊಳ್ಳಬೇಕೆಂದೂ [illegible]

ಬೇಕೆಂದೂ ಈ ಪಂಚಪತ್ತು ಅವರಿಗೆ ಕೇಳಿಕೊಳ್ಳುತ್ತದೆ. ೭. ಹಣದ ಅಭಾವದಿಂದ ಸರಾಗವಾಗಿ ಪತ್ರಿಕೆಯನ್ನು ನಡೆಯುವವರಿಗೆ ಒದಗಿಸಿಕೊಡಲಾಗದೆ ಖಾದಿ ಪ್ರಚಾರದ ಕೆಲಸವು ಹಿಂದುಳಿದುದರಿಂದ ಮಹಾಜನರಲ್ಲಿ ಈ ಬಗ್ಗೆ ಜಿಲ್ಲಾ ಕಮಿಟಿಗೆ ಬೇಕಾದ ಧನಸಹಾಯವನ್ನು ಮಾಡಬೇಕಾಗಿ ಕೇಳಿಕೊಳ್ಳುತ್ತದೆ.

ಆರೋಗ್ಯ ಚಂದ್ರಿಕೆ.

ಮದ್ರಾಸ್.

ಸಂಪಾದಕರು: ಡಾಕ್ಟರ್ ಯು. ರಾಮರಾವ್, ಎಲ್. ಎಮ್. ಸಿ. ಎಫ್. ಎಮ್. ಯು. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವುದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ.

ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ.

ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವುದು.

'ಹೆಲ್ತ್' ಎಂಬ ನಮ್ಮ ಇಂಗ್ಲಿಷ್ ಮಾಸಪತ್ರಿಕೆಯನ್ನೋದಿ ಸಂತೋಷಿಸಿದ ಅನೇಕ ದೊಡ್ಡ ಮನುಷ್ಯರ ಪ್ರೋತ್ಸಾಹದ ಮೇಲೆ ಈ ಕನ್ನಡ ಪ್ರತಿಕೆಯನ್ನು ಹೊರಡಿಸಿದೆ.

ಅದರ ಸಂಪುಟ ೨ ಮತ್ತು ೧೦ನೇಯ ನವಂಬರ ೧೯೨೪ ಸಂಚಿಕೆಯಲ್ಲಿ ಕಾಣಿಸಿರುವ ವಿಷಯಗಳು

- ಮುಖಚಿತ್ರ:—ಪರ್ವತವಾಸಿನಿಯಾದ ಒಬ್ಬ ರೂಪವತಿ.
- ಶ್ವಾಸಕ್ರಮ ಅಥವಾ ಪ್ರಾಣಾಯಾಮ.
- ಹುಣಿಸೇಹಣ್ಣಿನ ಆಹಾರಗುಣಗಳು ಮತ್ತು ಔಷಧಗುಣಗಳು.
- ಕಾಲುನಡೆಯೇ ಉತ್ತಮವಾದ ವ್ಯಾಯಾಮವು
- ಜೇನಿನಲ್ಲಿರುವ ಗುಣಗಳು.
- ಹಲ್ಲುಗಳ ರಚನೆ, ಪ್ರಯೋಜನ, ಕೆಲಸ ಮುಂತಾದವು.
- ಮದದ್ರಾವಕಗಳಿಂದ ಆರೋಗ್ಯಕ್ಕೆ ಉಂಟಾಗತಕ್ಕ ಹಾನಿ.
- ಅಂಗಸಾಧನೆ ಮತ್ತು ಬುದ್ಧಿವ್ಯವಸಾಯ (ವಿದ್ಯಾಭ್ಯಾಸ).
- ಗಾಯಗಳು, ಮತ್ತು ಉಳುಕು ಮುಂತಾದವು, ಅವುಗಳ ಚಿಕಿತ್ಸೆ.
- ನವನಾಗರಿಕ ಪ್ರಪಂಚಕ್ಕೆ ಸಹಜವಾದ ಮೂರು ಕೇಡುಕುಗಳು.
- ಒಬ್ಬ ಉಪವಾಸಿಯ ಅನುಭವ.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವುವು. ಆರೋಗ್ಯಚಂದ್ರಿಕೆ ಮಾಸ್ಸು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ ರೂ. ೧—೮—೦; ಬಿಡುಪತ್ರಿಕೆ ಒಂದಕ್ಕೆ ರೂ. ೦—೨—೦ ಹಿಂದಿನ ಸಂಚಿಕೆಗಳು ಕೂಡ ದೊರಿಯುವವು.

ಚಂದಾದಾರರಾಗುವವರು ವಿ. ಪಿ. ಮೂಲಕವಾಗಿ ತರಿಸಿಕೊಳ್ಳುವುದಕ್ಕಿಂತಲೂ ಹಣವನ್ನು ಮುಂಗಡವಾಗಿ ಕಳುಹಿಸುವುದು ಬಾಧಕರ. ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು 'ಆರೋಗ್ಯ ಚಂದ್ರಿಕೆ'ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು.

ಪತ್ರವ್ಯವಹಾರಕ: 'ಆರೋಗ್ಯ ಚಂದ್ರಿಕೆ'
೩೨೩ ತಂಬುಚೆಟ್ಟಿ ಬೀದಿ, ಮದ್ರಾಸ್

ತುಳು ಪಾಡ್ದನಗಳು.

ಬೊಬ್ಬರ್ಯ, ಕಲ್ಕುಡ-ಕಲ್ಲುಡ, ದೈಯ್ಯೊಂಗುಳು—ಕೋಡಕಿನಾರ್, ಮುಂಡತ್ತಾಯ ಪ್ರತಿ ಒಂದಕ್ಕೆ 2 ಆಣೆ. 1½ ಆಣೆ ಟಪ್ಪಾಲು ಚೀಟು ಕಳುಹಿಸಿದರೆ 5 ಪುಸ್ತಕಗಳು ಕೂಡಲೇ ಕಳುಹಿಸಲ್ಪಡುವವು.

ವಿಳಾಸ: ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

The Canara Bank, Limited, Magnalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.	1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
Reserve and other sinking Funds „ 259,000—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು 259,000—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳೋಣಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1925.

K. Venkat Rao,
Secretary

ಪರೀಕ್ಷಾಕಾಲ.

ವಿದ್ಯಾರ್ಥಿಗಳೇ ಇತ್ತ ನೋಡಿರಿ.

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ನೋಯುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ.

"ಸಾರಸ್ವತಾಸವ"ವು ಒಳಗಣ ಮುಖ್ಯಾವಯವಗಳಲ್ಲುಂಟಾಗುವ ವ್ಯತ್ಯಾಸವನ್ನು ಸರಿಪಡಿಸಿ, ಜೀರ್ಣಶಕ್ತಿಯನ್ನು ಹೆಚ್ಚಿಸಿ, ಪಂಕ್ತಿಭ್ರಮಣೆ ತಲೆತಿರುಗು, ನಿತ್ರಾಣ, ಇಂದ್ರಿಯ ದೌರ್ಬಲ್ಯಗಳನ್ನು ಹೋಗಲಾಡಿಸಿ ಶುದ್ಧರಕ್ತವನ್ನು ವೃದ್ಧಿಪಡಿಸುತ್ತದೆ ಸೀಸೆ 1ಕ್ಕೆ ಬೆಲೆ 1 ರೂಪಾಯಿ, ಪೋಸ್ಟೇಜು ಬೇರೆ,

ಬಾಲಸುಬೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ ಕೈಕಾಲು ಸಣ್ಣಗಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣವಿಲ್ಲದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಬೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ.

ಬೆಲೆ ಸೀಸೆ ೧ ಕ್ಕೆ ರೂ. ೦—೧೨—೦.

ಬ್ರಾಂಚ್ ಆಫೀಸ್, ಚಿಕ್ಕಪೇಟೆ, ಬೆಂಗಳೂರು ಸಿಟಿ.
ಹೆಡ್ ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಪಾಳ್ಯದ ವೆಂಕಟಾಚಲ ಪಂಡಿತರು,
ಏಜಂಟರು:—
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ,
ಮಂಗಳೂರು ಟವನಿಗೆ ಮಾತ್ರ.

ವಿದ್ಯಾವಾಚಸ್ಪತಿ
ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ

"ಸಂಕ್ಷೇಪಗೀತೆ"

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ್ಳ, ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದೆ ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೦, ಟಪ್ಪಾಲು ಖರ್ಚು ಕೂಡಿ ಆಣೆ ೧೧ನ್ನು ಮನಿಯಾರ್ಡರ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ೩ರಕ್ಕಿಂತ ಜಾಸ್ತಿ ಖರ್ಚು ತಗಲುವುದು, ರಖಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.

ಪುಸ್ತಕ ದೊರಿಯುವ ವಿಳಾಸ:—

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು. ಮತ್ತು ಕೆನರಿಸ್ ಮಿತ್ರನ್ ಬುಕ್ ಎಂಡ್ ಪ್ರಿಂಟ್ ಡಿಪೋಟಿರ್,
ಮಂಗಳೂರು.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀಕಾಶೀ, ಗಯಾ, ಪ್ರಯಾಗ, ಹರಿದ್ವಾರ ಬದ್ರಿನಾರಾಯಣ ದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರ ಕಡೆಯಿಂದಅನುಭವ ತೆಗೆದು ಪ್ರತಿವಂದು ಸಿದ್ಧಮಾಡಿಕೊಂಡು ಬರೆದಿರುವರು. ೧ನೇದು ಮಂತ್ರಪ್ರಕರಣದಲ್ಲಿ ಮಂತ್ರ ಪಠಣದಿಂದಲೂ, ಮಂತ್ರಪ್ರಯೋಗದಿಂದಲೂ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವವಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವೂ ಇದೆ. ೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳು ತೋರಮುರಿಕೆ, ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅವನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ. ೩ನೇದು ಜೋತಿಷ್ಯ ಪ್ರಕರದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನು ಅನುಭವ ತೆಗೆದುಕೊಂಡು ತಿಳಿಸಿರುವರು. ೪ನೇದು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದು! ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾ ಸಹ, ಇದರಲ್ಲಿ ಉಂಟು. ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾತನಾ, ರೋಗಗಳಿಗೂ ಸುಲಭವಾಗಿ ಔಷದ ಮಾಡುವ ಕ್ರಮವನು ಚೆನ್ನಾಗಿ ಬರೆದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಳಾಸವು ತಿಳಿಸಿರುವರು. ೫ನೇದು ಯಂತ್ರ ಪ್ರಕರಣದಲ್ಲಿ ವಶೀಕರಣ ಗ್ರಹಪೀಡಾ ನಿವಾರಣ ಭೂತಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು, ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರದಿರುವರು. ಈ ಗ್ರಂಥವು ಹತ್ತರ ಇಟ್ಟ ಬಳಿಕ ಎಲ್ಲಾ ದೇವಾನು ದೇವತೆಗಳು ದ್ರವ್ಯಗಳೂ ವೈದ್ಯರೂ ಜೋತಿಷ್ಯರು, ಮಾಂತ್ರಿಕರು ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದ. ಇಂಥ ಗ್ರಂಥವು ಯಾರು ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿಯಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆ ತೀರ ಕಡಿಮೆಮಾಡಿ ಇರುವವು. ೨—೮—೦ ಟಪ್ಪಾಲು ಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ ನಾಟಕ ಕಾವ್ಯ, ಕಥೆಗಳು, ಯಕ್ಷಗಾನ, ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ:—

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ



ಸ್ಪಿರಿಟ್ ಸ್ಟೋವ್.

ಈ ಸ್ಟೋವುಗಳು ಹಿತ್ತಾಳೆಯಿಂದ ತಯಾರಾದವು. ಇದರಲ್ಲಿ ಬಹುಬೇಗನೆ ಅಡಿಗೆ, ಕಾಫಿ, ಟಿ, ಮುಂತಾದವುಗಳನ್ನು ಮಾಡಬಹುದು. ಬೇಗನೆ ಕೆಡದು, ಕಪ್ಪಾಗದು, ಕಷ್ಟವಿರುವದಿಲ್ಲ. ಪ್ರಯಾಣಿಕರಿಗೂ ಬಹು ಅನುಕೂಲವಾದದ್ದು. ಕೆಲವು ಮಾತ್ರವೇ ಇರುವುದರಿಂದ ಬೇಗನೆ ಬರೆಯಿರಿ.

ಕ್ರಯ 1ಕ್ಕೆ 3—8—0.

ಹೊಸ ನಮೂನೆಯ ಸೆಲ್ಫ್ ಫಿಲ್ಲಿಂಗ್ ಫೌಂಟನ್ ಪೇನಾಗಳು.

ಈ ಪೇನಾಗಳು ವಿಲಾಯಿತಿಯಲ್ಲಿ ತಯಾರಾದವು. ಇವು ಹೊಸ ನಮೂನೆಯವು. ಇವಕ್ಕೆ ಗಾಜಿನ ನಿಬ್ಬು ಇರುವದು. ಈ ನಿಬ್ಬು ಎಂದಿಗೂ ಕೆಡದು. ಭಾರಿ ಕ್ರಯದ ಭಂಗಾರದ ನಿಬ್ಬುಗಳು ಬರೆಯುವದಕ್ಕಿಂತಲು ಬಹು ಚೆನ್ನಾಗಿ ಬರೆಯುವದು. ಮತ್ತು ತನ್ನಷ್ಟಕ್ಕೆ ತಾನೇ ಇಂಕಿಯನ್ನು ತುಂಬಿಕೊಳ್ಳುವದು. ಒಂದನ್ನು ತರಿಸಿನೋಡಿರಿ. ಬೇಡವಾದರೆ ಹಣ ವಾಪಾಸು ಕೊಡುವೆವು.

ಕ್ರಯ 1ಕ್ಕೆ ರೂ. 1—12—0.

The American Watch Co.,
P. B. No. 509, P. T. MADRAS.

ವಿಳಾಸ:— ಅಮೇರಿಕನ್ ವಾಚ್ ಕಂಪೆನಿ,
ಪೊ ಬಾ 509, ಪಿ. ಟಿ. ಮದರಾಸು.

FIRESTONE
TYRES.
(PNEUMATIC & SOLID)

MOST MILES PER RUPEE.

Owing to the increased demand for Firestone Tyres and to give promt service to Motorists and Service Owners of Kanara & Mysore a Service & Distribution Depot is opened at Mangalore.

Fresh Supplies of Solid and Pneumatic Tyres and Tubes could be given from stock.

An Hydraulic Press for fitting solid tyres will shortly be erected.

For particulars apply to:—

FIRESTONE TYRE DISTRIBUTORS,
(KANARA & MYSORE),
Maidan Road, MANGALORE.

Telegrams:—"FIRESTONE"

ಗೋಡೆಗೆ ತಗಲಿಸುವ
ಹೊಸ ನಮೂನೆಯ—
ಟಿಕ್—ಟಾಕ್

ಎಂಬ ಈ ಗಡಿಯಾರಗಳು ಜರ್ಮನೀ ದೇಶದಲ್ಲಿ ತಯಾರಿಸಿದ್ದು. ಇವು ಕಂಠಾರು ಘಂಟೆಯನ್ನು ತೋರಿಸುವವು. ಇವಕ್ಕೆ ಬೀಗ ಕೊಡಬೇಕಾದಿಲ್ಲ. ಇದರಲ್ಲಿ ಕಾಣುತ್ತಿರುವ ಗುಂಡನ್ನು ಮೇಲಕ್ಕೆ ಎಳೆದರೆ ಸಾಕು. ತನ್ನಷ್ಟಕ್ಕೆ ತಾನೇ ಟಿಕ್—ಟಾಕ್ ಎಂಬ ಶಬ್ದವನ್ನು ಮಾಡುತ್ತಾ ಸರಿಯಾದ ಕಾಲವನ್ನು ತೋರಿಸುವದು. ಇದು ನೋಡುವುದಕ್ಕೆ ಬಹು ಲಕ್ಷಣವಾಗಿರುವುದು.

ಕ್ರಯ 1ಕ್ಕೆ ರೂ. 8—0—0

ಪೀಟರ್ ವಾಚ್ ಕಂಪೆನಿ
ಪೋಸ್ಟ್ ಬಾಕ್ಸ್ ನಂ. 27, ಮದ್ರಾಸ್.

JUST ARRIVED

Continental Belts,
OF VARIOUS SIZES
Price Re. 1—10—0 each
Mangalore Trading Association,
Car Street, MANGALORE.

ಬಂದು ನೋಡಿರಿ! ತಿಂದು ನೋಡಿರಿ!

ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ
ಪದಕವನ್ನು
ಬಹುಮಾನವಾಗಿ ಪಡೆದಿರುವ
ಎಸ್. ಪಿ. ಆಚಾರ್ಯ
ಇವರಿಂದ ತಯಾರಿಸಲ್ಪಟ್ಟ
ಉಪ್ಪಿನಕಾಯಿಗಳನ್ನು
ಬಂದು ನೋಡಿರಿ! ತಿಂದು ನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸಲ್ಪಡುವ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ, ತಂಬುಳಿ ಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನ್ನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ
ಬಂದು ನೋಡಿರಿ! ತಿಂದು ನೋಡಿರಿ!

ಇಂಡಿಯನ್ ಸ್ಟೀಟ್ ವಿಟ್ ಮಾರ್ಟ್.

ಮಹಾಲಕ್ಷ್ಮೀ ಆಫೀಸ್ ಕ್ಲಬ್, ದಿವಾನ್‌ಬಹದೂರ್ ರೋಡು, ಮಂಗಳೂರು.	ಬ್ರಾಂಚ್	ಸದಾನಂದ ಆಫೀಸ್ ಕ್ಲಬ್, ರಥಬೀದಿ, ಮಂಗಳೂರು.

ADVERTISE IN
The Business Directory
OF INDIA, BURMA & CEYLON

A Comprehensive Directory of the various Business-men, Exporters and Importers, Firms, Factories, Mills, Manufacturers, Merchants and Industries of the principal Cities, Ports and Towns of India, Burma and Ceylon.

PUBLISHED ANNUALLY
Rates for Advertisements

¼ Page	Rs.	50.
2 in. Single Column	"	20.
1 in. Single Column	"	15.
Name in Bold Types	"	5.

Price per Copy Rs. 10.

PRINTERS & PUBLISHERS.
Business Directory Co.,
Kanara Press Buildings, MADRAS. E.

Telegrams: "KETHAKI" Phone 540

Just arrived! .Look Sharp!

SCREW ELECTRIC TORCH LAMPS &
Pocket Electric Lamps

AVAILABLE

In different varieties, Mother of pearl lamps. Cycle lamps.

NICKEL PLATED WITH SIDE LANCE.

Hammered Brand, with Powerful Bulls-eye lance.

The Mangalore Trading Association,
Car Street, MANGALORE.

Edited, Printed & Published by V. S. Kamath at the M. T. A. Sharada Press, Mangalore.

Registered: No. M. 498.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಶ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೯. ಮಂಗಳೂರು, ತಾರೀಕು ೧೫ನೇ ಶುಕ್ರವಾರ ಮೇ ೧೯೨೫. ಸಂಚಿಕೆ ೨೦.

The Canara Banking Corporation, Udipi, Ltd.

Head Office:—	Branch:—
Udipi	Coondapoor

Paidup Capital	1,66,165—9—11
Reserve etc	64,700—0—0

Season Deposits

Carrying Special rate of 7% up to 15th June 1925 only.

Further Particulars on Application.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಉಡುಪಿ, ಲಿಮಿಟೆಡ್.

ಹೆಡ್ ಆಫೀಸು:—ಉಡುಪಿ.	ಶಾಖೆ—ಕುಂದಾಪುರ.

ವಸೂಲಾದ ಮೂಲಧನ	1,66,165—9—11
ರಿಜರ್ವ ವಗೈರೆ ಫಂಡುಗಳು	64,700—0—0

ತಾ. 15—6—1925ರವರೆಗೆ ಮಾತ್ರ ಸಾಲಿಯಾನ್ ಸೇಕಡಾ 7ರ ದರದ ಬಡ್ಡಿಯ ಮೇಲೆ **ಮುಸುಂ ಠೇವಣಾತಿಗಳನ್ನು** ಅಂಗೀಕರಿಸೋಣಾಗುತ್ತದೆ.

ಹೆಚ್ಚಿನ ಮಾಹಿತಿಗೆ ಬರಕೊಳ್ಳಿರಿ.

Office of the Corporation, Udipi, 1-3-'25 } N. Ananda Rao,
Secretary

Wanted Agents
FOR
Every District in South India

For Pushing Sales of Our Calenders, Xmas and New Year Cards, Blotters, Pictures and Picture Post Cards, at wholesale rates. Deposit of Rs. 100—0—0 Essential.

Apply to:—

The South Indian Advertising Agency,
13, Kilary Road,
BANGALORE CITY.

ಶುದ್ಧ ರೋಮದ ಧಾವಳಿಗಳು.

1 ಮಳ ಉದ್ದ 1¼ ಮಳ ಅಗಲ ರೂ. 1¼ರಿಂದ 2 ವರೆಗೆ, 5 ಮಳ ಉದ್ದ 1¼ ಮಳ ಅಗಲ ರೂ. 1¼ ರಿಂದ 5 ವರೆಗೆ, 6 ಮಳ ಉದ್ದ 1¼ ಮಳ ಅಗಲ ರೂ. 2¼ರಿಂದ 6 ವರೆಗೆ, 8 ಮಳ ಉದ್ದ 2 ಮಳ ಅಗಲ ರೂ. 3¼ರಿಂದ 10 ವರೆಗೆ, 12 ಮಳ ಉದ್ದ 2¼ ಮಳ ಅಗಲ ರೂ. 6ರಿಂದ 12 ವರೆಗೆ, 16 ಮಳ ಉದ್ದ 2¼ ಮಳ ಅಗಲ ರೂ. 9 ರಿಂದ 16 ವರೆಗೆ. [illegible] ರೇಶ್ಮೆ ಮಡಿಗಳು, [illegible] ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುದು. [illegible]

ವಿಳಾಸ—

[illegible]

[illegible]

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ.

450 ಪುಟಗಳು ಎಮ್. ಗಣಪತಿರಾವ ಐಗಳ್ ಇವರಿಂದ ರಚಿತವಾದದ್ದು. ಕ್ರಯ ರೂ. 2-4-0

ಮಾರಾಟಕ್ಕೆ ಸಿದ್ಧವಾಗಿವೆ **— ತುಳು ಪಾಡ್ದನಗಳು —** ಮಾರಾಟಕ್ಕೆ ಸಿದ್ಧವಾಗಿವೆ.

ದೈಯ್ಯೊಂಗುಳು, ಕಲ್ಲುರ್ಟಿ—ಕಲ್ಕುಡ, ಕಜಂದೂರು ದೈಯ್ಯೊಂಗುಳು, ಮುಂಡತ್ತಾಯ, ದೊಬ್ಬಯರ್.

ಸುಲಭ ದರಗಳು **— ಶಾಲಾ ಪುಸ್ತಕಗಳು —** ರಖಂ ಕೊಂಡುಕೊಳ್ಳುವವರಿಗೆ ಯೋಗ್ಯ ಡಿಸ್ಕೌಂಟ್.

ಅಜ್ಜಿ ಕಥೆಗಳು:—ಮೂರು ಕರಡಿಗಳು; ಹೇನುಸತ್ತು ಕಾಗೆ ಬಡವಾಯಿತು; ಅರ್ಗಣೆ ಮುದ್ದೆ; ಇಲಿಗಳ ಥಕ್ಕಥೈ; ಅಂಗಳ ದುಗ್ಗಿ; ಸಿಗಡಿ ಯಾಕೆ ಒಣಗಲಿಲ್ಲ; ಗುಡುಗುಡು ಗುಮ್ಮಟ ದೇವರು; ಮಣಿಸಿದ ಕಾಳಪ್ಪ; ಒಡ್ಡನ ಓಟ; ಹೊಸ ಕನ್ನಡ ಪುಸ್ತಕ ಭಾಗ ೧; ಹೊಸ ಕನ್ನಡ ಪುಸ್ತಕ ಭಾಗ ೨; ಕನ್ನಡ ಪದ್ಯಗಳು; ಮಗ್ಗಿ ಪುಸ್ತಕ; ಅಜಿತಕುಮಾರ; ಪದ್ಯ ರತ್ನಾವಳಿ, ಎಕ್ಸರ್‌ಸೈಜ್ ಮತ್ತು ನೋಟು ಪುಸ್ತಕಗಳು, ಕಾಪಿ ಪುಸ್ತಕಗಳು, ಡ್ರಾಯಿಂಗ್ ಪುಸ್ತಕಗಳು

ಇತರ ಪುಸ್ತಕಗಳು:—ಸಂಕ್ಷೇಪಗೀತೆ, ಕೇಶುಭಂಗ. ಹಿಂದೂ ವ್ರತವಿವೇಕ, ಚಂದ್ರಗುಪ್ತ ಚಕ್ರವರ್ತಿ, ಶ್ರೀ ಕೃಷ್ಣಸಂಧಾನ ಪದ್ಯಪಾಠಗಳು, ಹರಿಕಥಾ ಮೃತಸಾರ ಹರಿನಾಮಸಂಕೀರ್ತನೆ ಸುಧಾಮೃತ ಪದ್ಯಗಳು. ಬೆಂಕಿಪೆಟ್ಟಿಗೆ ತಯಾರಿಸುವ ವಿಧಾನ, ಸಾಬೂನು ತಯಾರಿಸುವ ವಿಧಾನ, ಸ್ವರಾಜ್ಯ ಭಕ್ತೋಲ್ಲಾಸ, ಚರಕಗೀತೆ, ಕೊಂಕಣಿ ಭಾಷೆ ಮಲ್ಲಿ ಚಂದ್ರಹಾಸ ನಾಟಕ, ಪ್ರಹಲ್ಲಾದ ಚರಿತ್ರ ನಾಟಕ, ಕನ್ನಡ ಮೃಚ್ಛಕಟಿಕ ನಾಟಕ, ಚಂದ್ರಹಾಸಾಭ್ಯುದಯ ನಾಟಕ, ಕೋವಿಲನ್ ಚರಿತ್ರ ನಾಟಕ, ಮಾದರಿ ಉಪನ್ಯಾಸ ಭಾಗ ೧, ೨, ಮತ್ತು ೩.

AMRUTANJAN
Best Indian Pain Balm
Amrutanjan D.
BOMBAY

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಶ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ತಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ, ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 2 ಆಣೆ.

ಅಮೃತಾಂಜನ ಡಿಪೋ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

109 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

— ರಥೋತ್ಸವ, ವಿವಾಹ ಉಪನಯನಗಳ ಸಮಯ —
ಸರ್ವರಿಗೂ ಉಡಿಗೆ ತೊಡಿಗೆಗಳು ಬೇಕಾಗುವ ಸಂದರ್ಭ.

ಯಾರು, ಯಾವುದನ್ನು ಎಲ್ಲಿ ಪಡೆಯಬೇಕೆಂಬ ಶಂಕೆಯಿಂದ ವಿಕಂಟ ಮಾಡಬೇಡಿರಿ. ಉಡಿಗೆತೊಡಿಗೆಗಳನ್ನು [illegible] ನಿಮಗೆ ಬೇಕಾದ ಯಥಾರ್ಥ ಮಾಹಿತಿಯನ್ನು ಕಳೆದ ಹತ್ತಿಪ್ಪತ್ತು ವರುಷಗಳಿಂದ ಪಡೆದು ನಮ್ಮಲ್ಲಿಯ ವ್ಯಾಪಾರವು ಗಿರಾಕಿಗಳಿಗೆ ಸರ್ವ ತೃಪ್ತಿಯಿಂದಲೂ ಲಾಭಕರವಾಗಿ ಪರಿಣಮಿಸುವಂತೆ ನಮ್ಮ ಅತಿ ಸಂಗ್ರಹವನ್ನು ಮಾಡಿರುತ್ತೇವೆ.

ಗುರ್ಪುರ್‌ಕರ್ ಬ್ರದರ್ಸ್, ರಥಬೀದಿ, ಮಂಗಳೂರು.

ಹೆಡ್ ಆಫೀಸು:—ರಥಬೀದಿ—(ಮೊದಲು ಸುಜೀರ ನಾಗಪ್ಪನಾಯಕ್, ಎಂಡ್ ಕೊ. ಇದ್ದಲ್ಲಿ; ಅಜೀಜುದ್ದೀನ್ ರಸ್ತೆಗೆ ತಿರುಗುವಲ್ಲಿ) ಮಂಗಳೂರು.

ಬ್ರೇಂಚ್ ಆಫೀಸು:—ರಥಬೀದಿ—(ಹಳೇ ತಾಲ್ಲೂಕು ಕಚೇರಿಯ ವಠಾರಕ್ಕೆ ಸಮೀಪವಿರುವ ಮಳಿಗೆ) ಮಂಗಳೂರು.

ಈ ದೇಶದ ಪ್ರಖ್ಯಾತವಟ್ಟ ನೇಯಿಗೆಯ ಕೇಂದ್ರಸ್ಥಳಗಳಾದ—ಬನಾರಸ್, ಪೂನಾ, ಅಹಮ್ಮದಾಬಾದ್, ಸೂರತ್, ಬೆಂಗಳೂರು, ಧರ್ಮಾವರಮ್, ಕಂಜೀವರಮ್, ಕೊಯಮುತ್ತೂರು, ಮಧುರೆ, ತಂಜಾವೂರು, ಕುಂಭಕೋಣ, ಆರ್ಣಿ, [illegible], ಮದ್ರಾಸು ಈ ಪ್ರಾಂತ್ಯಗಳಲ್ಲಿ ತಯಾರಾದ

ಜರಿಸೀರೆಗಳು, ದುಪ್ಪಟಾ, ಜರಿಕಣ, ಪೇಟ, ರೇಶ್ಮೆ ಸೀರೆಗಳು, [illegible] ಸೀರೆಗಳು, ರೇಶ್ಮೆ ಮಡಿಗಳು, ನಿತ್ಯ ಉಪಯೋಗದ ಸೀರೆಗಳು [illegible] ಕೈರಾಟೆಯಲ್ಲಿ ತಯಾರಿಸಿದ ನೂಲಿನಿಂದ ಮಾಡಿದ—

[illegible]

[illegible]

ಆರ್. ಮಾರ್ಟಿನ್ನರ ಲಪ್ತಾ ಎಣ್ಣೆ

ಇದರ ಸುವಾಸನೆಯು, (ಪರಿಮಳವು) ಬಹಳ ಅಂದವಾಗಿಯೂ ಇರುವುದಲ್ಲದೆ, ಬಹಳ ಹೊತ್ತಿನ ವರೆಗೂ ಇರುತ್ತದೆ. ಈ ಎಣ್ಣೆಯನು ತಲೆಗೆ ಹಾಕಿಕೊಳ್ಳುವುದರಿಂದ ಕಣ್ಣುಗಳು ತಂಪಾಗಿಯೂ, ಶುಭ್ರವಾಗಿಯೂ, ಆಗವುದಲದೆ, ಮೆದುಳು ಚೆನ್ನಾಗಿ ಬೆಳೆಯುತ್ತದೆ. ಇದನ್ನು ಪ್ರತಿದಿವಸವೂ ಉಪಯೋಗಿಸುವುದರಿಂದ ಕೂದಲುಗಳು ಕಪ್ಪಾಗಿ ಹೊಳೆಯುವಂತೆ ಮಾಡುತ್ತದೆ. ಕೂದಲುಗಳಲ್ಲಿರುವ ಹೇನುಗಳು ಮುಂತಾದ್ದವು ನಾಶವಾಗಿ ತಲೆಬುರುಡೆಯನ್ನು ಚೆನ್ನಾಗಿ ಬೆಳೆಯುವಂತೆ ಮಾಡುತ್ತದೆ. ಗಡ್ಡ ಮತ್ತು ಮೀಸೆಗಳು ಸಹ ಬೆಳೆಯುತ್ತವೆ. ಇದನ್ನು ಉಪಯೋಗಿಸಿದ ಜನರು ಇದಕ್ಕಿಂತ ಉತ್ತಮವಾದ ಎಣ್ಣೆಯು ಬೇರೆ ಇಲ್ಲವೆಂದು ಹೇಳಿರುತ್ತಾರೆ.

ಕ್ರಯ ಬಾಟಿ 1ಕ್ಕೆ ರೂ. 1-4-0.

ಆರ್ ಮಾರ್ಟಿನ್ನರ ಗಿಟೋಡಯಿನ್.

ಗಂಡಸರಿಗೂ ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ, ಅಥವಾ ಹೊಸತಾಗಿದ್ದರೂ ಸರಿ. ಬಿಳುಪು ಹೋಗುವುದು ಉರಿಯುವುದು, ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೆ ಉರಿ ಮೂತ್ರವನ್ನು ಇಳಿಸಿ, ಮೂತ್ರವು ಬಿಳುಪಾಗಿ ನಿರ್ಮಲವಾಗುವುದಲ್ಲದೆ ರೋಗದ ಪಟ್ಟನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ.

ಬೆಲೆ ಸೀಸೆ 1ಕ್ಕೆ ರೂ. 2—0—0.

ಆರ್. ಮಾರ್ಟಿನ್ನರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮು, ಉಬ್ಬಸ, ಶ್ವಾಸ, ಶೀತ, ನೆಗಡಿ, ಗಂಟಲುನೋವು, ಎದೆ ನೋವುಗಳನ್ನೂ ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನಮಾಡಿ ಪರೀಕ್ಷಿಸಿ ನೋಡಿರಿ. ಅನಂತರ ಬೇರೆ ಯಾವ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮಲಿಗೂ ರಾಣಿಯಾಗಿಯೂ, ಎದೆಗೆ ಬಲಕೊಟ್ಟು ಮೇಲ್ಗಂಡ ರೋಗಗಳು ತಲೆಯುಕ್ಕದಂತೆ ಮಾಡುತ್ತದೆ.

60 ಮಾತ್ರೆಗಳ ಸೀಸೆ 1ಕ್ಕೆ ರೂ. 1—4—0.

ವಿಳಾಸ:—ಆರ್. ಡಿ. ಕಟೆ ಮತ್ತು ಕಂಪೆನಿ,
ನಂಬ್ರ ಬಿ. ಫ್ರಿಯರ್ ರೋಡ್,
ಸಾಂಜ ವರ್ತಮಾನ ಪ್ರೆಸ್,
ಟೋಡಿವಾಲಾ ಬಿಲ್ಡಿಂಗ ಎದುರುಗಡೆ, ಫೋರ್ಟ ಮುಂಬಯಿ.

R. D. Kately & Co.
No. B. Frere Road,
Opposit Sanjvertaman Press,
Todivala Building, FORT BOMBAY

ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ಮೂರನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್. ಗಣಪತಿರಾವ್ ಐಗಳ್—ಗ್ರಂಥಕರ್ತರು.

ಮನೋರಂಜಕ ಚಿತ್ರಗಳೂ ಇವೆ.

ಇದರಲ್ಲಿ ಸಾವಿತ್ರಿ, ಶಕುಂತಳಾ, ಕೃಷ್ಣಾಕುಮಾರಿ, ಪದ್ಮಿನಿ, ಜೋನ್ ಒಫ್ ಆರ್ಕ, ಫ್ಲೊರೆನ್ಸನಾಯಿಟಿಂಗೇಲ ಪರಶುರಾಮ, ಭೂತಾಳಪಾಂಡ್ಯ, ಕಾರ್ಕಳ ಗೋಮಟೇಶ್ವರ ಮತ್ತು ಭೈರವರಾಜ, ಮೂಡಬಿದ್ರೆಯ ಚೌಟರು, ನಂದಾವರ ಬಂಗರು, ಕಾರ್ಕಳ ರಾಮಸಮುದ್ರ ಮತ್ತು ರಾಮನಾಥ ಒಡೆಯರ ಅಣೆಕಟ್ಟು, ಗುರುಪುರ ಜಂಗಮ ಮಠ, ಕಲ್ಯಾಣಪ್ಪನ ಕಾಟಕಾಯಿ, ಗುರುವಾಯನಕೆರೆ, ಜಮಾಲಾಬಾದುಕೋಟೆ, ಸುಲ್ತಾನಬತ್ತೇರಿ, ಉದಗಾಪ್ರಾರ್ಥನಾಮಂದಿರ, ಸೇಂಟಮೇರಿ ದ್ವೀಪಗಳು ಮತ್ತು ದರಿಯಾಬಾದರಗಡ, ಕೊರಗರು, ಕೊಡಗರು, ತೋಡರು, ರಜಪೂತರು, ಕಂದಾರಿಗಳು ಘುರ್ಖಾ ಜನರು, ಅರಬಿಯರು. ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ಮೂರನೇ ದರ್ಜೆಯ ಮಕ್ಕಳಿಗೆ ಉಪಯುಕ್ತವಾಗಿದೆ. ಕ್ರಯ 6 ಆಣೆ.

ಪುಸ್ತಕ ದೊರಕುವ ವಿಳಾಸ:—

ಶಾರದಾ ಛಾಪಖಾನೆ, ಮಂಗಳೂರು. | ಗಣಪತಿರಾವ್, ಐಗಳ್. ಮಂಜೇಶ್ವರ.

ಡಾಕ್ಟರುಗಳು ಭಿನ್ನಾಭಿಪ್ರಾಯಪಡುವಾಗ್ಯೆ ತೀರ್ಮಾನಿಸುವದು ಯಾರು?

ಅಂಥಾ ಸಂದರ್ಭಗಳಲ್ಲಿ ಡೆಂಗ್ಯು ಮುಂತಾದ ಜ್ವರಗಳನ್ನು ನಿವಾರಿಸುವಂಥಾ "ಬಾಟ್ಲಿವಾಲರ ಏಗ್ಯುಮಿಕ್ಸ್ಚರ್"ನ್ನು ಸರಾಗವಾಗಿಯೂ, ಮತ್ತು ಜ್ವರಗಳನ್ನು ಖಂಡಿತವಾಗಿ ನಿಲ್ಲಿಸುವಂಥಾದ್ದೂ, ಎಲ್ಲಾ ತರದ ತಲೆನೋವುಗಳನ್ನು ಹೋಗಲಾಡಿಸುವಂಥಾದ್ದೂ ಆದ "ಬಾಟ್ಲಿವಾಲರ ಏಗ್ಯುಪಿಲ್ಸ್" ಇವನ್ನು ಉಪಯೋಗಿಸಿರಿ.

ಐ. ಎಮ್. ಎಸ್. ಡಾಕ್ಟರುಗಳಿಂದ ಶಿಫಾರಸು ಮಾಡಲ್ಪಟ್ಟಿದ್ದು. ಇವರ ಉಪಯೋಗದಿಂದ ಹೃದಯದ ಮೇಲೆ ಯಾವ ದೊಂದೂ ಬಾಧಕವಿಲ್ಲ. ಅರ್ಧ ಶತಮಾನದಿಂದ ಹಿಂದೂಸ್ಥಾನ, ಬರ್ಮಾ, ಸಿಲೋನ್, ಆಫ್ರಿಕಾ ಇವುಗಳಲ್ಲಿ ಪ್ರಖ್ಯಾತಪಟ್ಟಿದ್ದಾಗಿರುತ್ತದೆ.

ಅನೇಕ ಹಿಂದೀ ಪ್ರದರ್ಶನಗಳಲ್ಲಿ ಬೆಳ್ಳಿ ಮತ್ತು ಬಂಗಾರದ ಪದಕಗಳನ್ನು ಪಡೆದಿರುತ್ತೆ. ಚಾಲ್ತಿ ಸಾಧ್ಯದಂತಿದ್ದು ವಾಪಾರಿಗಳೂ ಕೂಡ ಅವರ ಮೇಲೆ ಹಣವನ್ನು ಮುಂಗಡವಾಗಿ ಕೊಡುತ್ತಾರೆ. ಬಡ ಮತ್ತು ಮಧ್ಯಮ ತರಗತಿಯ ಜನರಿಗೆ ವರಪ್ರಧಾನವಾಗಿದ್ದು ಸಂಚಾರ, ಪ್ರಯಾಣ, ದೇಶಾಟನೆಗಳ ಸಮಯದಲ್ಲಿ ಹತ್ತಿರದಲ್ಲಿರಿಸಿಕೊಳ್ಳದಾಗಿರುತ್ತದೆ.

ಬಾಟ್ಲಿವಾಲರ ಬಾಲಾಮೃತ ಅಥವಾ ಟೊನಿಕ್ ಸಿರಪ್.

ಕೆಮ್ಮನ್ನು ಹೋಗಲಾಡಿಸಿ, ಎದೆನೋವನ್ನು ಶಾಂತಗೊಳಿಸಿ, ಜ್ವರವನ್ನು ಉಪಶಮನಿಸಿ, ನಿದ್ರಾಭಂಗವನ್ನು ಕಡಿಮೆ ಮಾಡಿ ಧಾತುವರ್ಧನವನ್ನು ಮಾಡುವದರಲ್ಲಿ ಅತ್ಯುತ್ತಮವಾಗಿರುತ್ತದೆ. ಕಫವನ್ನು ಒಣಗಿಸಿ ಮಾಯವಾಗುವಂತೆ ಮಾಡುವುದಲ್ಲದೆ ಅದೇ ಸಮಯದಲ್ಲಿ ಒಳ್ಳೇ ಜೀರ್ಣವನ್ನೂ ಉಂಟುಮಾಡುವುದು. ದರ ಮೊದಲಾದ ಮಾಹಿತಿಯನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ತಾರಿನಪತ್ತೆ:-CAWASHAPUR, BOMBAY.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ. | ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್., ಪಿ. ವಾರ್ಲಿ, ಮುಂಬಯಿ, ನಂಬ್ರ 18.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟ. ಖ. 9 ಆಣೆ.

ನಮ್ಮ ವಿಳಾಸ:— ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಏಜಂಟರು:— ದಿ. ಊಲನ್ ಮಾರ್ಟ, ಮಂಗಳೂರು.

OUR RECENT IMPORT IN WRIST WATCHES

Have you used anyone of these Watches?

SEND YOUR ORDER NOW ALL GUARANTEED.

Fashionable wrist wrist Lady's size. Reliable movement Guaranteed.



No. 368.

Handy to wear and looks beautiful. Gives punctual time and with strong movement.

Nickel case Rs. 8—0

High-class Radium dial watch watch with Roman figures.



No. 367.

Can be seen in dark nights, Well fitted with best movement and strong to use. Used by one and all.

Silver case Rs. 9—0.

Radiolight wrist watch.



No. 372.

Fitted with the best mechanism and guaranteed to work and keep perfect time for a long time.

Nickel case Rs. 7—8
Electro-rolled-gold „ 9—0

(N. B. In addition to the above, we have good number of varieties of fancy wrist watches, pocket watches. Please write for a descriptive catalogue, which will be sent free)

WHOLESALE IMPORTERS

PETER WATCH COY.,
POST BOX 27, MADRAS

ಶಾಲಿವಾಹನಶಕ ೧೮೪೭ನೆಯ ಕ್ರೋಧನ ಸಂವತ್ಸರದ ವೈಶಾಖ ಬ| ೯ ಶನಿವಾರದಿಂದ ಕ್ರೋಧನ ಸಂವತ್ಸರದ ವೈಶಾಖ ಬ| ೧೫ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೫ನೆಯ ವೃಷಭ ಬೇಕ.)

ತಾರೀಕು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೌರಮಾನ	ಸೂರ್ಯ ಉ.	ಸೂರ್ಯ ಅಸ್ತ.
16	ಶನಿ	೯	೪೬.೪೭	ಶತಭಿಷ	೪೩.೨೮	೩	6. 8	6.46
17	ರವಿ	೧೦	೪೩.೪೪	ಪೂ. ಭಾ.	೪೧.೩೨	೪	6. 7	6.47
18	ಸೋಮ	೧೧	೪೦.೧೬	ಉ. ಭಾ.	೪೦.೨೮	೫	6. 7	6.47
19	ಕುಜ	೧೨	೩೮.೩೨	ರೇವತೀ	೪೦.೩೨	೬	6. 7	6.47
20	ಬುಧ	೧೩	೩೮. ೧	ಅಶ್ವಿನೀ	೪೨. ೨	೭	6. 7	6.48
21	ಗುರು	೧೪	೩೮.೪೨	ಭರಣೀ	೪೪. ೬	೮	6. 6	6.48
22	ಶುಕ್ರ	●	೪೦.೪೪	ಕೃತ್ತಿಕಾ	೪೮.೩೦	೯	6 6	6.49

ಮಂಗಳೂರಿನ ವಾಯುಸ್ಥಿತಿ.

Date ತಾರೀಕು	Temperature. ಉಷ್ಣ (ಕಾವು)		Rainfall. ಮಳೆ	
	Maximum ಹೆಚ್ಚಾದ್ದು	Minimum ಅಲ್ಪವಾದ್ದು	ದಿನದ ಮಳೆ	ಜುಮಲಾ ಮಳೆ.
8	93—7	76—4	—	—
9	94—1	76—9	—	—
10	94—8	78—3	—	—
11	95—3	76—2	0—55	—
12	92—3	77—2	0—08	—
13	93—3	77—3	—	—
14	94—7	79—8	—	—

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ	ವರೆಗೆ
	ರೂ. ಆ.	ರೂ. ಆ.
ಹೊಸ ಮಸ್ಕತಿ	8—4	8—14
ಹೊಸ ಗುಡ್ಡು ...	7-10	8—2
ಹೊಸ ರಾಶಿ ...	7- 4	7—12
ಅನ್ವಲ್ ಬೆಳ್ತಿಗೆ ...	8--4	9—8
ಗುಡ್ಡು ಬೆಳ್ತಿಗೆ ...	7—12	8 - 4
ರಂಗೂನು ಬೆಳ್ತಿಗೆ ಗೋಣಿ ೧ ...	13- 0	13 - 8
ಗೋಧಿ ಗೋಣಿ ೧ಕ್ಕೆ ...	18- 8	23 - 0
ಹುರುಳಿಗೋಣಿ ೧ಕ್ಕೆ ...	9- 10	10 - 8
ಕಡಲೆಗೋಣಿ ೧ಕ್ಕೆ ...	12-0	13 - 0
ತೊಗರಿಗೋಣಿ ೧ಕ್ಕೆ ...	12-0	13 - 0
ತೊಗರಿಬೇಳೆ ಗೋಣಿ ೧ಕ್ಕೆ ...	13-8	21—0
ಉದ್ದುಗೋಣಿ ೧ಕ್ಕೆ ...	14- 0	14 8
ಹೆಸರುಗೋಣಿ ೧ಕ್ಕೆ ...	14 - 0	15 - 0
ಊರು ಬೆಲ್ಲ ಖಂಡಿ ೧ಕ್ಕೆ ...	-	85 - 0
ಉಪ್ಪು ಗೋಣಿ ೧ಕ್ಕೆ ...	4- 4	4-12
ಕೊಬ್ರಿ ಖಂಡಿ ೧ಕ್ಕೆ ...	110-0	115 - 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	34- 8	35—0
ಎಳ್ಳಿಂಡಿ ಖಂಡಿ ೧ಕ್ಕೆ ...	40-0	42—8
ಕೊಬ್ರಿ ಎಣ್ಣೆ ಮಣ ೧ಕ್ಕೆ ...	8—8	9 - 0
ಎಳ್ಳೆಣ್ಣೆ ಮಣ ೧ಕ್ಕೆ ...	8- 0	11—0
ಚಿಮಿಣಿ ಎಣ್ಣೆ ಪೆಟ್ಟಿಗೆ ೧ಕ್ಕೆ ...	8-15-6	-
ಮೋರಿಸ ಸಕ್ಕರೆ ಮಣ ೧ಕ್ಕೆ ...	6— 0	6 - 2
ಊರ ಮೆಣಸಿನಕಾಯಿ ಮಣ ೧ಕ್ಕೆ ...	7- 0	-
ಸಾಸಿವೆ ಮುಡಿ ೧ಕ್ಕೆ ...	8- 12	-
ಕೊತ್ತಂಬರಿ ಮುಡಿ ೧ಕ್ಕೆ ...	3- 8	3—14
ಕಾಫಿ ಖಂಡಿ ೧ಕ್ಕೆ ...	352- 0	370—0
ಬಿಳಿಗೋಟು ಅಡಿಕೆ ಖಂಡಿ ೧ಕ್ಕೆ ಹಳತು ...	235- 0	245—0
,, ಹೊಸ ಅಡಿಕೆ	240—0	240—0
ಕಾಳುಮೆಣಸು ಖಂಡಿ ೧ಕ್ಕೆ ...	155-0	160—0
ಯಾಲಕ್ಕಿ ಮಣ ೧ಕ್ಕೆ ...	80- 0	90—0
ಗೇರುಬೀಜ ಮುಡಿ ೧ಕ್ಕೆ ...	3—7	—
ಕಬ್ಬಿಣ ಖಂಡಿ ೧ಕ್ಕೆ ...	45- 0	65—0
ತಾಮ್ರ ತಗಡು ಮಣ ೧ಕ್ಕೆ ...	17-12	23—0
ತಾಮ್ರ ಪಾತ್ರೆಗಳು ಮಣ ೧ಕ್ಕೆ ...	26- 0	—
ಚೀನಿ ಬೆಳ್ಳಿ ಸೇರು ೧ಕ್ಕೆ ...	22 - 0	
ಹಿತ್ತಾಳೆ ತಗಡು ಮಣ ೧ಕ್ಕೆ ...	18—8	
ಪಾವನು	13—13	

The Canara Public Conveyance Co., Ltd, Mangalore.
(ESTABLISHED 1914.)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು
- ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು.
- ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
- ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
- ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.
- ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ—ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd., Mangalore. S K

ಪ್ರತಿಯೊಂದು ಕುಟುಂಬಿಗಳ ಮನೆಗಳಲ್ಲಿ ಸೌಖ್ಯವನ್ನು ತೋರಿಸುವುದಕ್ಕೂ ಮತ್ತು ಅವರವರ ಉಪಯೋಗಾರ್ಥವನ್ನು ತಿಳುವಳಿಕೆ ಬಗ್ಗೆ ನಡಿಸುವುದಕ್ಕೂ ಒಂದು ಮರ್ಮವಾದ ನಿಘಂಟು ಪುಸ್ತಕವು ಈ ನಮ್ಮ ಹಿಂದೂದೇಶದ ಸಮೂಹದಲ್ಲಿರುವುದು. ಅಂಥಾ ಪುಸ್ತಕವು ಯಾವದೆಂಬುದು

ನೀವುಗಳು ಬಲ್ಲಿರಾ?

(ಅದೇ)

"ಕಾಮಶಾಸ್ತ್ರವೆಂಬುವುದು."

ತಾವುಗಳು ಇನ್ನೂ ಈ ಪುಸ್ತಕದಲ್ಲಿ ಬರೆದಿರುವ ಸಾರಾಂಶವನ್ನು ಓದಿಲ್ಲದಿದ್ದರೆ, ಒಡನೇ ಒಂದು ಪುಸ್ತಕವನ್ನು ಕಳುಹಿಸುವಂತೆ ಒಂದು ಪೋಸ್ಟುಕಾರ್ಡು ಬರಿಯಿರಿ.

ಪುಸ್ತಕವನ್ನು ಇನಾಮಾಗಿ ಕಳುಹಿಸುವೆವು.

ಮುಖ್ಯವಾದ ತಿಳುವಳಿಕೆ.

ತಾವುಗಳು ಧೃಢಚಿತ್ತರಾಗಿಯೂ, ನಿಧಾನಸ್ಥರಾಗಿಯೂ, ಸೌಖ್ಯವಾಗಿಯೂ, ಕಷ್ಟವಿಲ್ಲದೆನೇ ವಿಷಯಗಳನ್ನು ಭರಿಸುವ ಮನಸ್ಸನ್ನು ಹೊಂದಬೇಕಾದರೆ ನಮ್ಮ ಅಮೂಲ್ಯವಾದ "ಕಾಮಶಾಸ್ತ್ರವೆಂಬುವ ಪುಸ್ತಕದಲ್ಲಿ ಕಾಣಿಸಿರುವ ಆತಂಕನಿಗ್ರಹ ಮಾತ್ರೆಗಳನ್ನು ಸೇವಿಸಬೇಕು."

ಒಂದು ರೂಪಾಯಿ ಖರ್ಚುಮಾಡಿದರೆ 32 ಮಾತ್ರೆಗಳುಳ್ಳ ಒಂದು ಡಬ್ಬಿಯನ್ನು ತರಿಸಿ ಪ್ರಯತ್ನಿಸಬಹುದು.

ವಿವರವಾಗಿ ಬರೆದಿರುವ ಒಂದು ಕ್ಯಾಟಲಾಗು ಕಳುಹಿಸುವಂತೆ ಈ ದಿನವೇ ಒಂದು ಪೋಸ್ಟುಕಾರ್ಡು ಬರಿಯಿರಿ.

ಆತಂಕನಿಗ್ರಹ ಔಷದಾಲಯ,
ನಂಬ್ರ 26, ಬ್ರಾಡ್ವೆ, ಮದರಾಸು.

ಹೊಸಗ್ರಂಥಗಳು!! ಬೇಗನೇ ತಂಸಿಕೊಳ್ಳಿರಿ!!

ಕೋಕ ಶಾಸ್ತ್ರವು.

ರಸಿಕ ವಾಚಕ ಮಹಾಶಯರೇ,

ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ, ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನಷ್ಟೇ ಶೋಧ ಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿಣಿ, ಸ್ತ್ರೀಯು ಇವರಂತೆ ಪುರುಷರಲ್ಲಿಯ ಭೇದ ಯಾವಜಾತಿ ಸ್ತ್ರೀಯರಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನೂ ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ, ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ ವಂಧ್ಯಾದೋಷಗಳ ಚಿಕಿತ್ಸೆಯನ್ನೂ, ಸ್ತ್ರೀಯರ ಗೂಢ ರಹಸ್ಯವನ್ನೂ ದಂಪತಿ ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನೂ ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನು ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ.

ಇದರ ಬೆಲೆ ೧—೮—೦, ಟಪ್ಪಾಲು ಹಾಸಲು ೦—೪—೦.

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ

ಕನ್ನಡಿಗರೆ! | ವಸಂತ. | ಕಣ್ತೆರೆಯಿರಿ!

ಈಗಾಗಲೇ ಎರಡನೇ ಸಂಪುಟವು ಆರಂಭಿಸಲಿದೆ.

ಇತಿಹಾಸನಿಧಿ ಎಂದರೆ . . . . ವಸಂತ
ಸಮಾಜಸುಧಾರಕನೆಂದರೆ . . . . ವಸಂತ
ಕೈಗಾರಿಕೆಯ ಸಿದ್ಧಾಸ್ತ್ಯವೆಂದರೆ . . . . . ವಸಂತ
ಕರ್ಣಾಟಕ ಭಾಷಾಸೇವಕನೆಂದರೆ . . . . . ವಸಂತ
ದೇಶವಿದೇಶ ಬಂಧುವೆಂದರೆ . . . . ವಸಂತ
ಕಾದಂಬರಿಗಳ ಭಂಡಾರವೆಂದರೆ . . . . . . ವಸಂತ
ಚಿತ್ರಾಕರ್ಷ ಚಿತ್ರಶಾಲೆಯೆಂದರೆ . . . . . . ವಸಂತ
ದೇಶಭಕ್ತನೆಂದರೆ . . . . ವಸಂತ

ಇಂತಹ ವಸಂತನು ಯಾರಿಗೆ ಬೇಕು, ಯಾರಿಗೆ ಬೇಡ?

48 (ಕ್ರೌನ್ ¼ ಪುಟ ಸ್ಯಾಜಿನ) ಪುಟಗಳನ್ನು ಒಳ್ಳೆದ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3—4—0 ಮಾತ್ರ.

ವ್ಯವಸ್ಥಾಪಕ,
ವಸಂತ ಕಾರ್ಯಾಲಯ,
ಕುಂದಾಪುರ, ದಕ್ಷಿಣ ಕನ್ನಡ

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ

ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ಯಾವಂತರೂ ನಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ತಮಾನಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ದಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನ್ನು ಕುರಿತ ಲೆಕ್ಕಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಅಧಿಕಾರಿಗಳೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪೋಷಕರಿಗೆ	... ...	ರೂ. 3—0—0.
ಇತರರಿಗೆ, ಪರಸ್ಥಳಕ್ಕೆ, ಪೋಸ್ಟೇಜು ಸೇರಿ		„ 2—8—0.
„ ಸ್ಥಳೀಕರಿಗೆ	...	„ 1—8—0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪತ್ರಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಅಡಿಗೆ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಬಹುದು.

ಎಡಿಟರ್,
ಬಿ. ಹನುಮಂತಯ್ಯಗೌಡ,
ಅರ್ಥಸಾಧಕ ಪತ್ರಿಕೆ,
[illegible], ಬೆಂಗಳೂರು ಸಿಟಿ.

ಬೆಳಗಾಂವಿಯ ೧೧ನೇ ಕನ್ನಡ ಸಾಹಿತ್ಯ ಸಮ್ಮೇಲನವು.

ಮೊದಲು ಗೊತ್ತಾದ ಮೇರೆಗೆ ಹೋದ ಶನಿವಾರ, ರವಿವಾರ, ಸೋಮವಾರ (ತಾ, ೯-೧೦-೧೧ನೇ ಮೇ ೧೯೨೫) ದಿನಗಳಲ್ಲಿ ೧೧ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧಿವೇಶವು ಬೆಳಗಾಂವಿಯ ಶ್ರೀ ಶಿವಾನಂದ ನಾಟಕ ಶಾಲೆಯಲ್ಲಿ ನಿರ್ವಿಘ್ನದಾಗಿ ಸಾಂಗವಾಯಿತು.

ಇದರ ಅಧ್ಯಕ್ಷರ ಭಾಷಣದ ಸಾರಾಂಶವನ್ನು ಮತ್ತು ಸಮ್ಮೇಳನದಲ್ಲಿ ನಡೆದ ಕಾರ್ಯಕ್ರಮವನ್ನು ಈ ಕೆಳಗೆ ಪ್ರಕಟಿಸಿದ್ದೇವೆ.

ಸ್ವಾಗತಾಧ್ಯಕ್ಷರ ಭಾಷಣ ಮುಗಿದ ನಂತರ ಶ್ರೀ ದೇಶಪಾಂಡೆ ಗಂಗಾಧರರಾಯರು ತಮ್ಮ ನಿಸರ್ಗಸಿದ್ಧವಾದ ಗಂಭೀರವಾಣಿಯಿಂದ ಸ್ಫೂರ್ತಿದಾಯಕ ಭಾಷಣಮಾಡಿ ಶ್ರೀ. ಬೆನಗಲ್ ರಾಮರಾಯರು ಅಧ್ಯಕ್ಷಸ್ಥಾನವನ್ನು ವಹಿಸಬೇಕೆಂದು ಬೇಡಿಕೊಂಡರು. ಇದಕ್ಕೆ ಶ್ರೀ ಬೆಳವೀ ದತ್ತಾತ್ರೆಯರಾಯರು ಸಮ್ಮತಿಯನ್ನಿತ್ತ ಬಳಿಕ ಸಭ್ಯರ ಕರತಾಡನ ಪೂರ್ವಕ ಸ್ವಾಗತದಲ್ಲಿ ಶ್ರೀ ರಾಮರಾಯರು ಅಧ್ಯಕ್ಷಸ್ಥಾನವನ್ನು ವಹಿಸಿ ತಮ್ಮ ಭಾಷಣಕ್ಕೆ ಪ್ರಾರಂಭಮಾಡಿದರು.

ಅಧ್ಯಕ್ಷರ ಭಾಷಣದ ಸಾರಾಂಶ ಪರಿಷತ್ತಿನ ಸ್ಥಾಪನೆ.

ಕರ್ನಾಟಕ ರತ್ನ ಸಿಂಹಾಸನಾಧೀಶ್ವರರಾದ ಶ್ರೀಮತ್ಕೃಷ್ಣರಾಜೇಂದ್ರ ಒಡೆಯರವರ ಉದಾರಾಶ್ರಯದಿಂದಲೂ, ಪ್ರತಿಭಾಸಂಪನ್ನರೂ, ದೇಶಸೇವಾಗ್ರಣಿಗಳೂ ಆದ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರ ಪ್ರೋತ್ಸಾಹದಿಂದಲೂ, ಪರಿಷತ್ತಿನ ಪ್ರಥಮಸ್ಥಾನಾಚಾರ್ಯರಾದ ಶ್ರೀಮಾನ್ ಎಚ್. ವಿ. ನಂಜುಂಡಯ್ಯನವರ ಸಾಹಸದಿಂದಲೂ, ಎಲ್ಲ ಕನ್ನಡಿಗರ ಭಾಷಾಪ್ರೇಮದಿಂದಲೂ ಹತ್ತು ವರ್ಷಗಳ ಹಿಂದೆ ಕರ್ನಾಟಕ ಸಾಹಿತ್ಯ ಪರಿಷತ್ತು ಸ್ಥಾಪಿತವಾಯಿತು. ಮೊದಲನೆಯ ಪರಿಷತ್ತಿಗೆ ಅಖಿಲ ಕರ್ನಾಟಕದ ಕನ್ನಡಿಗರೆಲ್ಲರೂ ಮಹಾರಾಜರ ಅತಿಥಿಗಳಾಗಿ ಬಂದು, ಮಹದುತ್ಸಾಹದಿಂದ, ಕೆಲಸಕಾರ್ಯಗಳನ್ನು ನಡಿಸಿದರು. ಅಂದಿನಿಂದ ಇದುವರೆಗೂ ಪ್ರತಿವರ್ಷವೂ ಕರ್ನಾಟಕ ಸಾಹಿತ್ಯ ಸಮ್ಮೇಲನವು ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ, ಪ್ರತಿಭಾಸಂಪನ್ನರ, ಭಾಷಾಹಿತೈಷಿಗಳ ಅಧ್ಯಕ್ಷತೆಯಲ್ಲಿ ಸೇರಿ, ಕನ್ನಡಿಗರಲ್ಲಿ ಮಾತೃಪ್ರೇಮವನ್ನು ಹೆಚ್ಚಿಸುತ್ತಿದೆ. ಅಂದಿನಿಂದ ಕನ್ನಡಿಗರಲ್ಲಿ ಸೋದರಭಾವವು ಹೆಚ್ಚುತ್ತಿದೆ.

— ಪರಿಷತ್ತಿನ ಧ್ಯೇಯಗಳು. —

ದೇಶಭಾಷೆಯನ್ನುದ್ಧಾರಮಾಡುವದೇ ಪರಿಷತ್ತಿನ ಧ್ಯೇಯ. ಉದಾಸೀನಭಾವದಿಂದಿರುವ ಕನ್ನಡಿಗರಲ್ಲಿ ಭಾಷಾಭಿಮಾನವನ್ನು ಹುಟ್ಟಿಸುವುದೇ ಪರಿಷತ್ತಿನ ಧ್ಯೇಯ. ಹುಳುಕು, ಕೊಳೆತು, ನಾಶವಾಗುತ್ತಿರುವ ಗ್ರಂಥಗಳನ್ನು ಪ್ರಕಟಿಸಿ, ಕನ್ನಡಿಗರ ಮುಂದಿಟ್ಟು, ಅವರಲ್ಲಿ ವಾಚನಾಭಿರುಚಿಯನ್ನು ಹೆಚ್ಚಿಸುವುದೇ ಪರಿಷತ್ತಿನ ಧ್ಯೇಯ. ಇದಕ್ಕೆ ಅನೇಕ ಮಾರ್ಗಗಳುಂಟು. ಅವುಗಳಲ್ಲಿ, ಗ್ರಂಥಪ್ರಕಟಣೆ, ಗ್ರಂಥಕರ್ತರಿಗೆ ಪ್ರೋತ್ಸಾಹ, ಭಾಷಾವಿಷಯಕವಾದ ಚರ್ಚೆ, ಪರಭಾಷೆಗಳಿಂದ ಭಾಷಾಂತರ ಮಾಡಿಸುವಿಕೆ, ಮಾಸಪತ್ರಿಕೆ, ಸಾಹಿತ್ಯದಲ್ಲಿ ಸಂಶೋಧನಾಕಾರ್ಯ ಮಾಡುವವರಿಗೆ ಪ್ರೋತ್ಸಾಹ, ಮುಂತಾದವು ಮುಖ್ಯವಾದವು. ಅಲ್ಲದೆ ಕನ್ನಡ ನಾಡಿನಲ್ಲೆಲ್ಲಿಯೂ ವಾಚನಾಲಯಗಳನ್ನೂ, ಪುಸ್ತಕ ಭಂಡಾರಗಳನ್ನೂ ಸ್ಥಾಪಿಸುವುದು; ಕನ್ನಡ ನಾಡಿನಲ್ಲೆಲ್ಲ ವ್ಯಾಖ್ಯಾನಗಳನ್ನು ಕೊಡಿಸುವುದು, ಪರೀಕ್ಷೆಗಳನ್ನಿಟ್ಟು ಉತ್ತೀರ್ಣರಾದವರಿಗೆ ತಕ್ಕ ಬಿರುದು ಬಿಲ್ಲೆಗಳನ್ನು ಕೊಡಿಸುವುದು. ಹೀಗೆಯೇ ಅನೇಕ ಮಾರ್ಗಗಳುಂಟು. ಪರಿಷತ್ತಿನವರು ಹತ್ತು ವರ್ಷದಿಂದಲೂ ಸಾಧ್ಯವಾದಮಟ್ಟಿಗೆ ಇವೆಲ್ಲವುಗಳಿಗೂ ಲಕ್ಷ್ಯಕೊಟ್ಟಿರುವರು. ಆದರೆ ಇದಕ್ಕಿಂತಲೂ ಹೆಚ್ಚು ಲಕ್ಷ್ಯವನ್ನು ಅವರು ಹಲವು ವಿಚಾರಗಳಿಗೆ ತೋರಿಸಬಹುದಿತ್ತೆಂದಮಾತ್ರಕ್ಕೆ ಅವರ ಮೇಲೊಂದು ಆರೋಪವನ್ನು ಹೊರಿಸಿದಂತಾಗಲಿಲ್ಲ; ಟೀಕೆಮಾಡುವುದು ಸುಲಭ. ಕಾರ್ಯಕ್ಷೇತ್ರವನ್ನು ಹೊಕ್ಕಾಗ ಕಷ್ಟ ಸುಖಗಳು ಗೊತ್ತಾಗುತ್ತವೆ. ಹತ್ತು ವರ್ಷಗಳಿಂದ ಪರಿಷತ್ತಿನಿಂದಾಗಿರು ಕೆಲಸವನ್ನು ನೋಡಿ ಪ್ರತಿಯೊಬ್ಬ ಕನ್ನಡಿಗನೂ ಹಿಗ್ಗಬೇಕಾದುದೇ. ಇಂದು ಎಲ್ಲ ಕನ್ನಡಿಗರಲ್ಲಿ ಸೋದರಭಾವವು ಹೆಚ್ಚಿದೆ. ಇಂದು 'ಧಾರವಾಡ ಕನ್ನಡ', 'ಮೈಸೂರು ಕನ್ನಡ', 'ಮಂಗಳೂರು ಕನ್ನಡ'ವೆಂಬ ಕುಹಕದ ಮಾತುಗಳಿಲ್ಲ, ಇಂದು ನಾವೆಲ್ಲರೂ ಅಖಿಲ ಕರ್ನಾಟಕ ದೃಷ್ಟಿಯಿಂದ ನಮ್ಮ ದೇಶದ ವಿಚಾರಗಳೆಲ್ಲವನ್ನೂ ನೋಡುತ್ತಿದ್ದೇವೆ. ಇಂದು ನಮಗೆ ಒಂದು ಪ್ರಾಂತ್ಯ ಬೇಕೆಂದು ವಾದಿಸಲು ಸಿದ್ಧರಾಗಿದ್ದೇವೆ. ಹತ್ತು ವರ್ಷಗಳ ಹಿಂದೆ ಈ ಸವಿಕಸನಿಗೆ ಅವಕಾಶವಿತ್ತೇ?

ನಾವು ಎಣಿಸಿದೆಲ್ಲವೂ, ಭಾವಿಸಿದ್ದೆಲ್ಲವೂ, ಪರಿಷತ್ತಿನಿಂದಾಗದಿರಬಹುದು. ಇದಕ್ಕಾಗಿ ಪರಿಷತ್ತನ್ನು ನಿಂದಿಸಿ ಫಲವಿಲ್ಲ. ಧನಸಹಾಯವೂ ಜನಸಹಾಯವೂ ಇಲ್ಲದೆ ಈ ಕೆಲಸವು ಯಾರಿಂದಲೂ ಸಾಧ್ಯವಿಲ್ಲ. ಆದುದರಿಂದ ಪರಿಷತ್ತಿನ ಒಂದೆರಡು ಲೋಪಗಳನ್ನು ದೊಡ್ಡವು ಮಾಡಿ ನಿಂದಿಸದೆ, ಎಲ್ಲ ಕನ್ನಡಿಗರೂ ತಮ್ಮ ಸಹಾನುಭೂತಿಯನ್ನು ತೋರಿಸಿದರೆ, ಸಹಾಯವನ್ನು ಕೊಟ್ಟರೆ, ನಮ್ಮೆಲ್ಲರ ಆಶಯವು ಫಲಿಸುತ್ತದೆ. ವ್ಯಕ್ತಿಗಳಿಗಿಂತಲೂ ವಿಷಯಕ್ಕೆ ಪ್ರಾಧಾನ್ಯ ಕೊಡಬೇಕೆಂದು ಎಲ್ಲರಿಗೂ ಬಿನ್ನಹ.

ಪರಿಷತ್ತಿನ ವಿಚಾರವಾಗಿ ಅನೇಕರಿಗೆ ತಪ್ಪು ತಿಳುವಳಿಕೆಯಿದೆ. ಇದನ್ನು ಹೋಗಲಾಡಿಸುವುದು ಪರಿಷತ್ತಿನವರ ಕರ್ತವ್ಯ. ಇದಕ್ಕಾಗಿ ಅವರು ಹತ್ತು ವರ್ಷಗಳಲ್ಲಿ ತಮ್ಮಿಂದಾದ ಕೆಲಸವನ್ನೂ, ಬಂದ ಕಷ್ಟಪರಂಪರೆಗಳನ್ನೂ, ಎಲ್ಲವನ್ನೂ ಕುರಿತು ಒಂದು ವರದಿಯನ್ನು ಬರೆದು ಕನ್ನಡಿಗರ ಮುಂದಿಡಬೇಕು. ಆಗ ಪರಿಷತ್ತಿನ ವಿಚಾರದಲ್ಲಿ ಹಲವರಲ್ಲಿ ಬೇರೂರಿರುವ ಅನುಮಾನಗಳು ಮಾಯವಾಗುತ್ತವೆ.

— ಭಾಷಾಭಿವೃದ್ಧಿ —

ಭಾಷಾಸೇವೆಗಾಗಿ ಅನೇಕರು ಮುಂದಾಳುಗಳಾಗಿರುವರು. ಅತ್ಯುತ್ತಮ ಗ್ರಂಥಗಳೂ, ಪ್ರತಿಭಾಶಾಲಿಗಳಾದ ಲೇಖಕರೂ ಇನ್ನೂ ಹೊರಬಿದ್ದಿಲ್ಲವಾದರೂ ಅನೇಕ ಲೇಖಕರು ಮುಂದೆ ಬಂದಿರುವರು. ಗದ್ಯಲೇಖನವು ಹೊಸ ಹೊಸ ದಾರಿಗಳನ್ನು ಹಿಡಿದು ರೂಪುಗೊಳ್ಳುತ್ತಲಿದೆ. ಸಣ್ಣಕತೆಯೆಂಬುದು ಈ ಕಾಲದ ಸೃಷ್ಟಿಯೆಂದೇ ಹೇಳಬೇಕು.

ನಾಟಕರಚನೆಯಲ್ಲಿ ನಾವು ಬಹಳ ಹಿಂದೆ ಬಿದ್ದಿರುವೆವು. ಗಣಿಸಬಹುದಾದ ನಾಟಕವೊಂದಾದರೂ ಇದುವರೆಗೆ ಹೊರಬೀಳದಿರುವುದು ನಮ್ಮ ದುರದೃಷ್ಟವೇ ಸರಿ. ಹಲವು ಜೀವನಚರಿತ್ರೆಗಳು ಬರೆಯಲ್ಪಟ್ಟಿವೆ. ಚರಿತ್ರೆ ಭೂಗೋಲ ವಿಜ್ಞಾನ ಮುಂತಾದವು ಅತಿವಿರಳ. ವಿಮರ್ಶಾಗ್ರಂಥಗಳು, ಸ್ವತಂತ್ರ ಸಂಶೋಧನಾಗ್ರಂಥಗಳೂ ಇಲ್ಲವೇ ಇಲ್ಲ. ಕವಿತೆಯೆಂಬುದು [illegible]. ಹಳೆಗನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ: ಹೊಸಗನ್ನಡದಲ್ಲಿ, ಹೊಳಹುರುಪಿನಲ್ಲಿ, ಪ್ರತಿಭಾಯುತವಾಗಿ ಬರೆಯುವವರು ಹುಟ್ಟಿಲ್ಲ. ಬರೆಯುವವರೇನೋ ಬಹಳ ಮಂದಿ ಇರುವರು. ಹೊಸ ಹಾದಿಯನ್ನು ಹಾಕಲು ಹಲವರು ಮುಂದೆ ಬಂದಿರುವರು. ಆದರೆ ಅವರಿಗೆ ತಕ್ಕಸಾಧನ ಸಂಪತ್ತಿಯೂ, ಪ್ರತಿಭೆಯೂ, ಭಾವನಾಶಕ್ತಿಯೂ ಇಲ್ಲದಿರುವುದರಿಂದ ಅವರು ತಮ್ಮ ಬರಹಗಳಿಂದ ಕನ್ನಡಕ್ಕೊಂದು ಸೇವೆಯನ್ನು ಮಾಡುತ್ತಿರುವರೆಂದು ಹೇಳಲಾಗದು. ಗದ್ಯನಾಟಕಗಳಲ್ಲಿ ಹಲವರು ಉಪಯೋಗಿಸುತ್ತಿರುವ ವ್ಯಾವಹಾರಿಕ ಭಾಷೆಯ ವಿಚಾರದಲ್ಲೂ ಇದೇ ಮಾತನ್ನೇ ಹೇಳಬೇಕಾಗುತ್ತದೆ. ವ್ಯಾವಹಾರಿ ಭಾಷೆಯ ಉಪಯೋಗದಿಂದ ಭಾಷೆಯ ಏಕೀಕರಣದ ಉದ್ಯಮಕ್ಕೆ ಪ್ರತಿಬಂಧವುಂಟಾಗುವುದರಲ್ಲಿ ಸಂದೇಹವಿಲ್ಲ. ಆಂಧ್ರದೇಶದಲ್ಲಿ ಈ ಕಷ್ಟವು ಹೆಚ್ಚಾಗಿದೆ. ಕಂಡೂ ಕಂಡೂ ನಾವು ಆ ಗುಂಡಿಯಲ್ಲಿ ಬೀಳಬಾರದು. ನಮ್ಮ ಭಾಷಾವ್ಯಕ್ತಿತ್ವಕ್ಕೆ ಯಾವ ಕಳಂಕವನ್ನೂ ತರಲಾಗದು. ಸಂಪ್ರದಾಯಕ್ಕೆ ವಿರುದ್ಧವಾಗಿ ಹೋಗಬಾರದು.

ಇನ್ನು ನಮ್ಮ ವೃತ್ತ ಪತ್ರಿಕೆಗಳ ಸ್ಥಿತಿ. ಸುತ್ತಮುತ್ತಲಿನ ನಮ್ಮ ಸೋದರ ರಾಷ್ಟ್ರಗಳನ್ನು ಕಂಡರೆ ಈ ವಿಚಾರದಲ್ಲಿ ನಾವು ಶೋಚನೀಯಾವಸ್ಥೆಯಲ್ಲಿರುವೆವೆಂದೇ ಹೇಳಬೇಕು. ಹೆಸರು ಹೇಳಲು ಅಖಿಲ ಕರ್ನಾಟಕಕ್ಕೊಂದು ಚಲೋದಾದ ದಿನ ಪತ್ರಿಕೆಯಿಲ್ಲ! ವಾರ ಪತ್ರಿಕೆಗಳೇನೋ ಹಲವಿವೆ, ಅವರೇನು? ಅವುಗಳದು ಸಾವು ಜೀವನ! ನಿರಂತರ ಬಡತನ! ಮಾಸ ಪತ್ರಿಕೆಗಳ ಅವಸ್ಥೆಯಂತೂ ಇನ್ನು ಹೇಳತೀರದು; ಪ್ರೋತ್ಸಾಹವಿಲ್ಲ, ಕನ್ನಡಿಗರಿಗೆ ಏನೂ ಬೇಕಿಲ್ಲ. ಆಂಧ್ರ, ಬಂಗಾಳ, ಮರಾಠ, ದೇಶದ ಉದ್ಯಮಗಳನ್ನು ನೋಡಿದರೆ ನಾಚಿಕೆಯಾಗುತ್ತದೆ.

ರೆವೆರೆಂಡು ಕಿಟ್ಟೆಲರ ನಿಘಂಟುವಿನ ತರುವಾಯ ಬೇರೆ ಉದ್ಯಮವೇ ಇಲ್ಲ. ಕವಿ ಚರಿತ್ರೆಗಳನ್ನು ಬರೆದು ಶ್ರೀ. ನರಸಿಂಹಾಚಾರ್ಯರು ಎಲ್ಲ ಕನ್ನಡಿಗರ ಗೌರವಕ್ಕೆ ಪಾತ್ರರಾಗಿರುವರು. ಡಾ. ಫ್ಲೀಟ ದೊರೆಗಳವರು ಮಿ। ರಾಯಿಸ ಸಾಹೇಬರು ಪ್ರಾಚೀನ ಶಿಲಾಶಾಸನ ಪ್ರಾಚೀನ ಗ್ರಂಥಗಳ ಸಂಶೋಧನದ ವಿಷಯದಲ್ಲಿ ಮಾಡಿದ ಉದ್ಯೋಗವು ಕನ್ನಡಿಗರ ಕೃತಜ್ಞತೆಗೆ ಪಾತ್ರವಾಗಿದೆ. ಏನಾದರೇನು? ಎಲ್ಲರಂತೆ ನಾವೂ ತಲೆ ಎತ್ತಿ ನಿಲ್ಲಬೇಕಾದರೆ ನಾವಿನ್ನೂ ಬಹಳ ಮಟ್ಟಿಗೆ ಕೃಷಿಮಾಡಬೇಕು. ಕಷ್ಟಪಡಬೇಕು. ಸೇವೆಗೆ ಸಿದ್ಧರಾಗಬೇಕು. ಹೀಗಾದರೆ ನಾವು ಆ ಉಚ್ಚಸ್ಥಾನವನ್ನು ಬಹುಬೇಗ ಸಾಧಿಸುವೆವೆಂದು ನಂಬುಗೆಯುಂಟು. (ಸಶೇಷ)

— ಕರ್ನಾಟಕ ಸಾಹಿತ್ಯ ಸಮ್ಮೇಲನವು. —

ಅಧ್ಯಕ್ಷರ ಗಂಭೀರ ರಸಭರಿತವೂ ಮತ್ತು ಕಳೆದ ಹತ್ತು ವರ್ಷಗಳಲ್ಲಿ ಕರ್ನಾಟಕ ಸಾಹಿತ್ಯ ಪರಿಷತ್ತಿನಿಂದ ಕಾರ್ಯಗಳ ಸಮಾಲೋಚನ ಮಾಡಿ ಮುಂದಿನ ಕಾರ್ಯಕರ್ತೃತ್ವದ ವಿಷಯದಲ್ಲಿ ಕನ್ನಡಿಗರಿಗೆ ಅಂಜನಹಾಕುವಂತಹ ಭಾಷಣವು ಮುಗಿದನಂತರ ಕನ್ನಡನಾಡಿನ ಅನೇಕ ಮುಂದಾಳುಗಳಿಂದ ಸಾಹಿತ್ಯ ಸಭೆಯ ಯಶಸ್ವಿಕೆಯ ಬಗ್ಗೆ ಬಂದ ಅನೇಕ ಪತ್ರ ತಂತೀಟಪ್ಪಾಲುಗಳನ್ನು ಓದಿದರು. ಮುಂದೆ ವಿಷಯನಿಯಾಮಕ ಕಮಿಟಿಯು ಆದನಂತರ ಮೊದಲನೇ ದಿವಸದ ಕಾರ್ಯವು ಮುಗಿದಂತಾಯಿತು.

ಅಧ್ಯಕ್ಷರ ಭಾಷಣವನ್ನು ಕೇಳಿ ಜನರ ಮನಸ್ಸಿನಲ್ಲಿ ಸುಪ್ತಾವಸ್ಥೆಯಲ್ಲಿದ್ದ ಮಾತೃಭಾಷಾಭಿಮಾನವು ಜಾಜ್ವಲ್ಯಗೊಂಡು ಉರಿಯಲಾರಂಭಿಸಿತು. ಪ್ರತಿಯೊಬ್ಬನ ಮುಖದಿಂದ 'ಮಾತೃಭಾಷೆಯ ಉದ್ಧಾರವನ್ನು ಹೇಗೆ ಮಾಡೋಣ, ಯಾವರೀತಿಯಿಂದ ನಾವು ಕಾರ್ಯಮಾಡಿದರೆ ಸಭಿಕರಲ್ಲಿ ಮುಖತೋರಿಸುವಂತೆ ಆಗಬಹುದು' ಇವೇ ಉದ್ಗಾರಗಳು ಹೊರಡುತ್ತಿದ್ದವು. ಈ ಕಾಲಕ್ಕೆ ಮಾತ್ರ "ಬೆಳಗಾಂವಿಯು ಮಹಾರಾಷ್ಟ್ರ ಪ್ರಾಂತದಲ್ಲಿ ಬೆಳಗಾಂವಿಯಲ್ಲಿ ಏನಾದರೂ ಕಾರ್ಯಮಾಡಿದರೆ ಇದು ಮಹಾರಾಷ್ಟ್ರಕ್ಕೆ ಹಾದಿ ತೋರಿಸಿದಂತಾಗುವದು" ಎಂದು ಹೇಳುವ ಇತಿಹಾಸಜ್ಞರೆ? ಗ್ರಂಥಕಾರವು ಮಾತ್ರ ದೊರಾಗಿರಲಿಲ್ಲವೋ ಇಲ್ಲವೋ ತಿಳಿಯದ ಮಾತು. ಇರಲಿ ಇದನ್ನು ಸಾವಕಾಶ ವಿಚಾರಿಸೋಣ.

— ಆದಿತ್ಯವಾರ. —

ಮಧ್ಯಾಹ್ನ ಮೂರು ಘಂಟೆಗೆ ಸರಿಯಾಗಿ ಮತ್ತೆ ಸಭೆಯು ಪ್ರಾರಂಭವಾಗಿ ಮಹತ್ವದ ನಿಬಂಧನೆಗಳು ಓದಲ್ಪಟ್ಟವು. ಕೆಲವು ನಿಬಂಧನೆಗಳು ಐತಿಹಾಸಿಕವಿಷ್ಕರಿ ಕೆಲವು ಶಾಸ್ತ್ರೀಯ ವಿವೇಚನ ಪರ, ಕೆಲವು ಭಾಷಾ ವಿಷಯದ ಚರ್ಚೆಯಲ್ಲಿ ಜನರ ಮನೋರಂಜನವಾಡುವಂಥ ನಿಬಂಧಗಳೂ ಸರಸ ಕವಿತೆಗಳೂ ಓದಲ್ಪಟ್ಟವು.

ಅನಂತರ ಬೇರೆ ಬೇರೆ ವಿಷಯಗಳ ಬಗ್ಗೆ ಅನೇಕ ಮಹತ್ವದ ಗೊತ್ತುವಳಿಗಳಾದವು. ಅವುಗಳಲ್ಲಿ ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಒಂದೇ ರೀತಿಯಾಗಿ ಶಿಕ್ಷಣಕೊಡುವುದೂ ಹಾಗೂ ಒಂದು ಕರ್ನಾಟಕದಲ್ಲಿ ವಿಶ್ವವಿದ್ಯಾಲಯವನ್ನು ಸ್ಥಾಪಿಸುವುದಕ್ಕೆ ಎಲ್ಲರೂ ಕೂಡಿ ಕಾನೂನುಮಂಡಲ ಮುಖಾಂತರವಾಗಿ ಹಾಗು ಬೇರೆ ರೀತಿಯಾಗಿ ಪ್ರಯತ್ನಮಾಡಬೇಕು ಒಂದು ಉತ್ತಮತರವಾದ ಕನ್ನಡ ಕೋಶವನ್ನು ತಯಾರಿಸಬೇಕು. ಮತ್ತು ಕರ್ನಾಟಕ ಸರ್ವವಿದ್ಯಾಸಂಗ್ರಹ ಕೋಶ (ಇನ್‌ಸಾಯಕ್ಲೋಪಿಡಿಯಾ)ವನ್ನು ರಚಿಸಬೇಕು. ಇವೇ ಮೊದಲಾದವುಗಳು ಮುಖ್ಯವಾಗಿದ್ದವು.

ಗೊತ್ತುವಳಿಗಳನ್ನು ಮಾಡಿದನಂತರ ಶಿವಯೋಗಮಂದಿರದ ಶ್ರೀ ಪಂಡಿತ ಬಸವಯ್ಯನವರು ಉತ್ತಮತರವಾದ ಮಾದರಿ ಕೀರ್ತನವನ್ನು ಮಾಡಿತೋರಿಸಿದರು. ರಾತ್ರಿಕಾಲದಲ್ಲಿ ಶ್ರೀ ದತ್ತಾತ್ರಯ ನಾಟಕಮಂಡಳಿಯವರು ತಮ್ಮ ಉತ್ತಮವಾದ ಪಾದುಕಾಪಟ್ಟಾಭಿಷೇಕ ನಾಟಕ ಪ್ರಯೋಗವನ್ನು ಅತ್ಯುತ್ತಮ ರೀತಿಯಿಂದ ಮಾಡಿ ತೋರಿಸಿದರು. ಆ ಕಾಲಕ್ಕೆ ಸಭೆಯ ಎಲ್ಲ ಅತಿಥಿಗಳು ನಾಟಕ ನೋಡುವಾಗ್ಗೆ ಚಿತ್ರದಲ್ಲಿ ಚಿತ್ರಿತವಾದ ಉಸಿರಾಡಿಸುವ ಗೊಂಬೆಗಳಂತೆ ಕಂಡರು. ಅದೇ ಕಾಲಕ್ಕೆ ನಾಟಕ ಮಂಡಳಿಯ ಯಜಮಾನರಾದ ಶ್ರೀ. ಸದಾಶಿವರಾಯರಿಗೆ "ನಾಟಕಾಲಂಕಾರ"ವೆಂಬ ಬಿರುದನ್ನು ಕೊಟ್ಟರು.

— ಸೋಮವಾರ. —

ಉವತ್ತು ಕೆಲವು ಗೊತ್ತುವಳಿಗಳೇ ಮೊದಲಾದ ಉಳಿದ ಕಾರ್ಯಗಳಾದ ನಂತರ ದೊಡ್ಡ ಕಾನೂನ ಮಂಡಳಿಯ ಮೆಂಬರರಾದ ಬೆಳವಿಯವರು ಶ್ರೀ ಉತ್ತಂಗಿಯವರಿಗೆ ಸರ್ವಜ್ಞಪದವನ್ನು ಉತ್ತಮ ತರವಾಗಿ ಪ್ರಸಿದ್ಧಿಸುವದಕ್ಕಾಗಿ ೧೦೦ ರೂ. ಹಾಗೂ ಪರಿಷತ್ತಿನವರು ೫೦ ರೂಪಾಯಿಗಳನ್ನು ಕೊಟ್ಟರು. ಹಾಗೇ ದಾವಣಗೇರಿಯ ಶ್ರೀ [illegible]ರವರಿಗೆ ಶ್ರೀ ಷಡಕ್ಷರ ಕವಿಗಳ ಗ್ರಂಥಗಳನ್ನು ಪರಿಶೀಲಿಸಿ ಶುದ್ಧೀಕರಿಸಿ ಪ್ರಸಿದ್ಧಿಸಿದ ಬಗ್ಗೆ ಸಾಹಿತ್ಯ ಸಭೆಯವರು ಒಂದು ಭಂಗಾರದ ಪದಕವನ್ನು ಬಹುಮಾನ ಪೂರ್ವಕವಾಗಿ ಅರ್ಪಿಸಿದರು. ಹೀಗೆ ರಾತ್ರಿ ೮ ಘಂಟೆಯ ವರೆಗೂ ನಡೆದು ಕಡೆಗೆ ಅಧ್ಯಕ್ಷರ ಉಪಸಂಹಾರ ಭಾಷಣ, ಸ್ವಾಗತಾಧ್ಯಕ್ಷರ ಸಮ್ಮಾನಪರ ಭಾಷಣ, ಹೂಮಾಲೆಗಳ ಅರ್ಪಣೆ ಅನಂತರ ಅವರನ್ನು ಊರವರು ಗೌರವಿಸೋಣ ಇವೇ ಮೊದಲಾದ ಪರಸ್ಪರ ಸಮ್ಮಾನರೂಪ ಶಿಷ್ಟಾಚಾರಗಳು ಮುಗಿದ ನಂತರ ಶ್ರೀ ಭುವನೇಶ್ವರಿಯ ಸ್ತೋತ್ರ ಕರ್ನಾಟಕ ಮಾತೆಯ ಜಯಘೋಷದೊಂದಿಗೆ ಸಭೆಯು ವಿಸರ್ಜನೆಯಾಯಿತು.

ಕನ್ನಡಮಾತೆಗೆ ಜಯವಾಗಲಿ!

ನಿನ್ನಿನ ದಿವಸ ರಾತ್ರಿ ಶ್ರೀ. ದತ್ತಾತ್ರಯ ನಾಟಕ ಮಂಡಲಿಯವರು ಸಾಮಾಜಿಕ ನಾಟಕವಾದ ಪಶ್ಚಾತ್ತಾಪವೆಂಬ ನಾಟಕವನ್ನು ಮಾಡಿ ತೋರಿಸಿದರು, ಅದೆ ಕಾಲಕ್ಕೆ ಬೆಳಗಾಂವಿ ನಗರ ನಿವಾಸಿಗಳು ನಾಟಕಾಲಂಕಾರ ಸದಾಶಿವರಾಯರಿಗೆ ಒಂದು ಭಂಗಾರ ಪದಕವನ್ನು ಸನ್ಮಾನಪೂರ್ವಕವಾಗಿ ಸಮರ್ಪಿಸಿದರು. ಬೆಳಗಾವಿಯಂಥ ಮಹಾರಾಷ್ಟ್ರ ಭಾಷಾಪ್ರಾಚುರ್ಯವಾದ ಸುಶಿಕ್ಷಿತ ನಗರದಲ್ಲಿ ಅಪ್ರಬುದ್ಧ ಕನ್ನಡ ನಾಟಕಕಾರರು ಹೋಗಿ ವಿಜಯದುಂದುಭಿಯನ್ನು ಹೊಡಿಸಿ ಅಲ್ಲಿಯವರಿಂದ ಸನ್ಮಾನಿತರಾದವರಲ್ಲಿ ಶ್ರೀ. ಸದಾಶಿವರಾಯರೇ ಮೊದಲನೇಯವರಲ್ಲವೇ? ಸಂತೋಷ!

ಈವತ್ತೆ ಕರ್ನಾಟಕ ಏಕೀಕರಣದ ಸಭೆ ನಾಳೆ ಕರ್ನಾಟಕ ಪ್ರಾಂತಿಕ ಮಂಡಲಿ ಸಭೆ, ನಾಡದು ಅಖಿಲಭಾರತ ರಾಷ್ಟ್ರೀಯ ಸಭೆಯ ಸ್ವಾಗತ ಸಭೆಯ ಮೀಟಿಂಗು. ಹೀಗೆ ಒಂದರ ಮೇಲೊಂದು ಸಭೆ ಉಪಸಭೆಗಳು ಕೂಡಿ ಬೆಳಗಾಂವಿಯವರಿಗೆ ಹೋದದ್ದು ಕರ್ನಾಟ ಕಾಂಗ್ರೆಸೋ? ಇದುವೋ? ಎಂದು ಸಂಶಯವು ಬರಹತ್ತಿದೆ. ಅಂತೂ ಬೆಳಗಾಂವಿಯವರ ಭಾಗ್ಯೋದಯವೇ ಸರಿ! (ಕರ್ನಾಟಕ ವೃತ್ತದಿಂದ)

ಸಾರಸ್ವತ.

ಕನ್ನಡ ಮತ್ತು ಕೊಂಕಣಿ ಭಾಷೆಗಳಲ್ಲಿ ಕಳೆದ ವಿಜಯದಶಮಿಾ ದಿನದಿಂದ ಪ್ರತಿ ದಶಮಿಗೆ ಹೊರಡುವ ಪತ್ರಿಕೆ.

ವಿ. ಎಸ್. ಕಾಮತ್,
ಮೂಲ್ಕಿ, ವಾಮನ ಕುಡುವ } ಸಂಪಾದಕರು.

ಮತಸಂಸ್ಥೆ ಮತ್ತು ಸಮಾಜಕ್ಕೆ ಸಂಬಂಧಪಟ್ಟ ಇತರ ಸಂಸ್ಥೆಗಳ ಸುಸಂಘಟನ.

ಸಮಾಜದೊಳಗೆ ಅನ್ಯೋನ್ಯ ಸಾಧನೆ.

ಸ್ತ್ರೀಸಮಾಜಕ್ಕೆ ಉಪಯುಕ್ತವಾದ ವಿಷಯಗಳ ನಿರೂಪಣ,

ಮತಭಾವನೆಗಳ ಉಜ್ಜೀವನ ಇತ್ಯಾದಿ ಉದ್ದೇಶಗಳಿಂದ ಈ ಪತ್ರಿಕೆಯು ಹೊರಡಿಸಲ್ಪಡುವುದು. ಸಾರಸ್ವತ ಸಮಾಜವು ಇದಕ್ಕೆ ಪ್ರೋತ್ಸಾಹವನ್ನೀಯಬೇಕಾಗಿ ಪ್ರಾರ್ಥನೆ.

ಚಂದಾಹಣ ಅಂಚೆವೆಚ್ಚ ಕೂಡಾ ರೂ. ೧—೪—೦.
ಪೋಷಕರು ರೂ. ೧೦—೦—೦. ಸಹಾಯಕರು ರೂ. ೫—೦—೦.
ಮಾದರಿ ಸಂಚಿಕೆಯನ್ನು ಟಪ್ಪಾಲು ಖರ್ಚಿಗಾಗಿ ಅರ್ಧಾಣೆ ಸ್ಟಾಂಪು ಕಳುಹಿಸುವವರಿಗೆ ಉಚಿತವಾಗಿ ಕಳುಹಿಸುವೆವು.

ಕನ್ನಡ ನಾಡಿನಲ್ಲಿ ಪ್ರತಿ ಕಡೆಯಲ್ಲಿಯೂ
ಚಾತಮಿಾದಾರರು ಬೇಕು.

ಎಲ್ಲಾ ಪತ್ರವ್ಯವಹಾರಗಳನ್ನು ಕೆಳಗಿನ ವಿಳಾಸಕ್ಕೆ ನಡೆಸಬೇಕು

ಯು. ನಾರಾಯಣನಾಯ್ಕ, ಕಾರ್ಯದರ್ಶಿ,
ಸಾರಸ್ವತ,' ಉಡುಪಿ.

ಕೋಕಶಾಸ್ತ್ರವು.

ಈ ಪುಸ್ತಕದಲ್ಲಿ 72 ಅಧ್ಯಾಯಗಳೂ ಮತ್ತು 112 ಮನೋಹರವಾದ ಚಿತ್ರಗಳೂ ಇವೆ. ಈ ಪುಸ್ತಕದ ಸಾರಾಂಶ, ಹೆಂಗಸರಲ್ಲಿ ನಾಲ್ಕು ಜಾತಿ: (1) ಪದ್ಮಿನಿ, (2) ಚಿತರಣಿ, (3) ಸೌಖನಿ ಮತ್ತು (4) ಹಸ್ತನಿ ಇವರ ನಕ್ಷೆಗಳನ್ನು ಕೊಟ್ಟು ವಿವರಿಸಲ್ಪಟ್ಟದೆ. ಹಾಗೆಯೇ ನಾಲ್ಕು ಜಾತಿಯ ಮನುಷ್ಯರು. ಹೆಂಗಸರನ್ನು ಮತ್ತು ಗಂಡಸರನ್ನು ನೋಡಿ ಯಾವ ಜಾತಿ ಎಂದು ಕಂಡುಹಿಡಿಯುವ ಕ್ರಮ. ಚಂದ್ರನ ಮತ್ತು ನಕ್ಷತ್ರಗಳ ಸ್ಥಾನಗಳನ್ನು ನೋಡಿ ಶುಭಕಾಲವನ್ನು ಕಂಡುಹಿಡಿಯುವ ಕ್ರಮ. ರಜಸ್ವಲೆಯಾಗುವಿಕೆ. ಇದರ ವಿವರ. ಇದರ ರೋಗಗಳು, ಈ ರೋಗಗಳ ನಿವಾರಣೆ ಕ್ರಮ. ಬಸುರಾಗುವಿಕೆ, ನವಮಾಸದ ಗರ್ಭದ ಬೆಳವಣಿಗೆ (ಇದರ ನಕ್ಷೆಕೊಟ್ಟಲ್ಪಟ್ಟದೆ). ಬಸುರಾದ ಕಾಲದಲ್ಲಿ ಹೆಂಗಸರು ನಡೆಯುವ ಕ್ರಮ. ನೋವು ಮತ್ತು ಕಷ್ಟವಿಲ್ಲದೆ ಪ್ರಸವ ಆಗುವ ಕ್ರಮ. ಕಳೆದುಕೊಂಡ ಶಕ್ತಿಯನ್ನು ಹಿಂತಿರುಗಿ ಪಡೆಯುವ ಕ್ರಮ. ತಮ್ಮ ಶಕ್ತ್ಯಾನುಸಾರ ಮಿತ ಸಂತತಿಯನ್ನು ಮಾಡುವ ಕ್ರಮ. ತಮ್ಮ ಇಚ್ಛಾನುಸಾರ ಗಂಡು ಅಥವಾ ಹೆಣ್ಣು ಕೂಸನ್ನು ಪಡೆಯುವ ಕ್ರಮ. ಗರ್ಭಾವಸ್ಥೆಯಲ್ಲಿ ಕೂಸಿನ ಲಿಂಗವನ್ನು ಕಂಡುಹಿಡಿಯುವ ಕ್ರಮ, ಹೆಂಗಸರ ಸೌಂದರ್ಯವನ್ನು ಕಾಪಾಡುವುದು ಹೇಗೆ. ಗೊಡ್ಡುತನವನ್ನು ಹೋಗಲಾಡಿಸುವ ಕ್ರಮ. ಮತ್ತು ಅನೇಕ ಇಲ್ಲಿ ವಿವರಿಸಲಿಕ್ಕೆ ಆಗದ ಸಂಗತಿಗಳು ಸಂಕ್ಷೇಪವಾಗಿ ವಿವರಿಸಲ್ಪಟ್ಟವೆ. ಬಹಳ ಪ್ರಾಚೀನಕಾಲದ ರೋಗನಿವಾರಣೆಯ ಔಷದಗಳು ಕೊಡಲ್ಪಟ್ಟದೆ.

ಈ ಪುಸ್ತಕಗಳು ಇಂಗ್ಲಿಷಿನಲ್ಲೂ ಮರಾಠಿಯಲ್ಲೂ
ದೊರೆಯುತ್ತವೆ.

ಪುಸ್ತಕ ೧ರ ಕ್ರಯ ರೂ. 4—0—0.
ಇಂಟರ್‌ನೇಶನಲ್ ಪಬ್ಲಿಶಿಂಗ್ ಕಂಪೆನಿ,
ಇಂಟರ್‌ನೇಶನಲ್ ಬಿಲ್ಡಿಂಗ್,
ಲುಧಿಯಾನಾ, (ಪಂಜಾಬ).
International Publishing Company,
International Building,
Ludhiyana, PUNJAB.

ವಿದೇಶ ವರ್ತಮಾನ.

— ಹಿಂದುಸ್ಥಾನ ವಿಷಯಕ ಕೆಲವು ಸಂಗತಿಗಳನ್ನು ಸದ್ಯದ ಹಿಂಗ ಅಲ್ಲಿಯೆ ಸರಕಾರವು ಪ್ರಕಟಿಸಲಾಗದಿರೆಯಾಗಿ ಅರ್ಲ ವಿಂಟರಟನ್ನರು ಹೇಳಿದ್ದಾರೆ.

— ಹಿಂದುಸ್ಥಾನದ ಸ್ವಸ್ಥಳದಲ್ಲಿ ಕೊರಡೆಯ ಪೆಟ್ಟನ್ನು ಕೊಡುವ ಸಂಪ್ರದಾಯವಿದೆ. ಆದರೆ ಈ ಕೆಟ್ಟ ಸಂಪ್ರದಾಯವು ಬೇರೆ ಎಲ್ಲಿಯೂ ಇಲ್ಲ. ಆದ್ದರಿಂದ ಇದನ್ನು ತೆಗೆಯಬೇಕಾಗಿ ಪಾರ್ಲಿಮೆಂಟಿನಲ್ಲಿ ಒಬ್ಬನು ವಿಚಾರಿಸಿದನು. ಅದಕ್ಕೆ ವಿಂಟರಟನ್ನರು ಆಗುವದಿಲ್ಲವೆಂದು ಹೇಳಿದರು! ಬ್ರಿಟಿಷರು ಲೋಕದಲ್ಲಿ ಸುಧಾರಿಸಿದವರಲ್ಲವೆ?

— [illegible] ಸ್ತ್ರೀಯರ ಸ್ಥಿತಿಯು ಹೀಗಿರುವದೆಂದು ವಿಚಾರಮಾಡಲು ಸೋವಿಯಟ್ ರಶಿಯದಲ್ಲಿ ಇಂಗ್ಲೆಂಡಿನ ಸ್ತ್ರೀಯರ ಒಂದು [illegible] ಹೋಗಿರುವದೆ.

— ಸದ್ಯದಲ್ಲಿ ಕೀರಿಕೆಯಿಂದ ಲೊ. ಕರ್ಝನರ ಹೌಸ್ ಒಫ್ ಲೋರ್ಡ್ಸಿನಲ್ಲಿಯ ಪ್ರಮುಖ ಜಾಗೆಯನ್ನು ಲೊ. ಬೆಲ್ಫೋರರಿಗೆ ಕೊಡಲಾಗಿದೆ.

— ಚೀನ ದೇಶದ ಶೀಸ್ತ್ರಿ ಎಂಬ ಭಾಗದಲ್ಲಿ ಬಂಡಖೋರರು ಹೆಚ್ಚು ಪ್ರಬಲರಾಗಿರುವರು. ಇವರು ಅಲ್ಲಿಯ ಇಂಗ್ಲಿಷ ಮಿಶನರಿಗಳಿಗೆ ಆಗಾಗ್ಗೆ ತೊಂದರೆಕೊಟ್ಟು, ಅವರ ಇಮಾರತನ್ನು ಸುಟ್ಟುಬಿಟ್ಟು ಮಿಶನರಿಗಳ ಒಂದು ಸಾವಿರ ಹೆಂಗಸರನ್ನು ಓಡಿಸಿದರಂತೆ.

— ಮೆಸಪೊಟೆಮಿಯದಲ್ಲಿ ಒಂದು ವರ್ಷದೊಳಗಾಗಿ ೫ ಸರ್ತಿ ಬಾಂಬು ಬಿಸಾಡಿದರೆಂದು ಇಂಗ್ಲಿಷ ಪಾರ್ಲಿಮೆಂಟಿನಲ್ಲಿ ಒಂದು ಪ್ರಶ್ನೆಗೆ ಸರಕಾರವು ಉತ್ತರಿಸಿಯದೆ.

— ಸದ್ಯದಲ್ಲಿ ಚುನಾವಣೆ ಹೊಂದಿದ ಹಿಂಡೆನ ಬರ್ಗರಿಗೆ ಜರ್ಮನಿಯಲ್ಲಿ ಅಲ್ಲಲ್ಲಿ ಸ್ವಾಗತಮಾಡಲಾಗುತ್ತದೆ. ತಾನು ಆದಷ್ಟು ಬಡಬಗ್ಗರನ್ನು ಉದ್ಧರಿಸಿ, ಶಾಂತತೆಯನ್ನು ಸ್ಥಾಪಿಸುತ್ತೇನೆಂದು ಹಿಂಡೆನ ಬರ್ಗರು ಹೇಳಿರುವರು.

— ಅಮೇರಿಕದಿಂದ ಪಡೆದಿರುವ ಸಾಲವನ್ನು ಯಾವ ರೀತಿಯಾಗಿ ಪರಿಹಾರಮಾಡಬೇಕೆಂದು ಫ್ರೆಂಚ ಸರಕಾರವು ಆಲೋಚಿಸುತ್ತದೆ.

— ತುರ್ಕಸ್ಥಾನದ ಬಡಬಗ್ಗರ ಸಲುವಾಗಿ ೫೦ ಸಾವಿರ ರೂಪಾಯಿಗಳನ್ನು ಹೈದರಾಬಾದದ ನಿಜಾಮರು ಕೊಟ್ಟಿದ್ದಾರೆ. ಆದರೆ ಹಿಂದುಸ್ಥಾನದಲ್ಲಿ ಯಾಕೆ ಹೈದರಾಬಾದದಲ್ಲಿಯೆ ಹಲವರು ಮರಣೋನ್ಮುಖ ಬಡವರಿರುವಾಗ ಈ ಕರ್ಣದಾನವು ಅಸ್ಥಾನವಲ್ಲವೆ?

ಒಳದೇಶ ವರ್ತಮಾನ.

— ಮದ್ರಾಸಾಧಿಪತಿಗಳಾದ ಲೊ. ಗೋಷ್ಣನರು ಮೊನ್ನೆಯ ದಿವಸ ಊಟಕಮಂಡಿನಲ್ಲಿ ಒಂದು ಮೇಜವಾನಿಯನ್ನು ಕೊಟ್ಟರು. ಈ ಔತಣಕ್ಕೆ ಹವಣೋಸ್ಕರ ಬಂದ ಅನೇಕ ದೇಶೀ ಸಂಸ್ಥಾನಿಕರೂ, ಎಕ್ಸಿಕ್ಯುಟಿವ್ ಆಫೀಸರರೂ ಬಿಜ್ಜೈಸಿದ್ದರು. ಔತಣವು ಮುಗಿದ ನಂತರ ನರ್ತನವೂ, ಗಾಯನವೂ ನಡೆದಿತ್ತು!

— ಮಲಬಾರದ ಸಾಗುವಳಿಯ ಸಂಬಂಧ ಒಂದು ಬಿಲು ಬರುವ ಮದ್ರಾಸ ಕೌನ್ಸಿಲಿನ ಅಧಿವೇಶನದಲ್ಲಿ ಬರಲಿಕ್ಕಿರುವದು. ಆ ಬಿಲಿನ ಪೂರ್ವ ಚರ್ಚೆಗೋಸ್ಕರ ಒಂದು ಕಮಿಟಿಯು ಸ್ಥಾಪಿತವಾಗಿದೆ. ಇದರ ಅಧಿವೇಶನವು ಊಟಕಮಂಡದಲ್ಲಿ ನಡೆಯುತ್ತಿದೆ.

— ಶ್ರೀ। ಸತ್ಯಮೂರ್ತಿಯವರು ಇಂಗ್ಲಂಡಿಗೆ ಕಳೆದವಾರ ಹೊರಟರು. ಇಂಗ್ಲಂಡಿನಲ್ಲಿ ಸ್ವರಾಜ್ಯಪಾರ್ಟಿಯ ಮುಖ್ಯ ಧ್ಯೇಯವನ್ನು ಪ್ರಸಾರ ಮಾಡಿ ಅಲ್ಲಿಯವರಿಗೆ ಇಲ್ಲಿಯ ನಿಜವಾದ ಪರಿಸ್ಥಿತಿಯನ್ನು ತಿಳಿಸಬೇಕೆಂಬುದು ನನ್ನ ಪ್ರಯಾಣದ ಉದ್ದೇಶವೆಂದು ಸತ್ಯಮೂರ್ತಿಯವರು ತಿಳಿಸಿದ್ದಾರೆ.

— ರಾಜಮಹೇಂದ್ರಿಯಲ್ಲಿ ಗೋದಾವರಿ ನದಿಯ ತೀರದ ಮೇಲೆ ಒಂದು ಹೊಸದಾಗಿ ಗೌತಮೀ ಆಶ್ರಮವೆಂಬ ಒಂದು ಹೊಸ ಆಶ್ರಮವನ್ನು ಸ್ಥಾಪಿಸಿದ್ದಾರೆ. ಇವರಲ್ಲಿ ಬಡಬಗ್ಗರಿಗೆ ಔಷಧೋಪಚಾರ, ಪುಸ್ತಕ ಭಂಡಾರ, ವರ್ತಮಾನ ಪ್ರಕಟನ ಮುಂತಾದ ಉಪಯುಕ್ತ ಕಾರ್ಯಗಳು ನಡಿಯುತ್ತವೆ. ಬ್ರಾಹ್ಮಣ-ಬ್ರಾಹ್ಮಣೇತರ ಜಗಳವು ಇಲ್ಲಿ ಉಪಸ್ಥಿತವಾಗದೆ ಇದ್ದದು ಸುದೈವವೆಂದೇ ಹೇಳಬೇಕು.

— ಬರುವ ಕೌನ್ಸಿಲ ಒಫ್ ಸ್ಟೇಟಿನ ಚುನಾವಣೆಗೆ ಉಮೇದ್ವಾರರಾಗಿ ನಿಲ್ಲಬೇಕೆಂದು ಶ್ರೀ. ಶ್ರೀನಿವಾಸ ಅಯ್ಯಂಗಾರರಿಗೆ ಪಂಡಿತ ಮೋತಿಲಾಲ ನೇಹರೂಗಳು ತಂತಿಕೊಟ್ಟಿರುವರು.

— ಬಾವಲಾ ಖೂನಿಯ ವಿಚಾರಣೆಯು ನ್ಯಾಯಮೂರ್ತಿ ಕ್ರೆಂಪರ ಮುಂದೆ ನಡೆಯುತ್ತಿದೆ. ಇಷ್ಟರ ವರೆಗೆ ಮುಮತಾಜ ಬೇಗಮ್ಮ ಇವಳ ಕ್ರಾಸ ಪರೀಕ್ಷೆಯು ನಡೆದಿತ್ತು. ಇದರಲ್ಲಿ ತನಗೆ ಮೊದಲು ಇಂದೋರಿನಲ್ಲಿರುವಾಗ ಒಂದು ಕೂಸು ಹುಟ್ಟಿತ್ತೆಂದೂ ಅದನ್ನು ನರ್ಸಳು ಕೊಂದಳೆಂದು ಹೇಳಿದ್ದಾಳೆ. ಇದಲ್ಲದೆ ಇನ್ನೂ ಅನೇಕ ಅಶ್ಲೀಲ ಕೃತ್ಯಗಳು ತನ್ನಿಂದ ಆಗಿಯದೆಂದು ಒಪ್ಪಿದಳು.

— ಮುಂಬಯಿಯಲ್ಲಿಯ ಒಬ್ಬನು ಅಫೀಮನ್ನು ಅತಿಶಯವಾಗಿ ಸೇವಿಸಿ ಮೂರ್ಛೆಹೊಂದಿದನು. ಆಸ್ಪತ್ರೆಯಲ್ಲಿ ತಕ್ಕೊಂಡು ಉಪಚಾರ ಮಾಡುವಷ್ಟರೊಳಗೆ ಆತನು ಮೃತಪಟ್ಟನು. ಅಫೀಮು, ಮದ್ಯ ಮುಂತಾದ ಸೇವಕರು ಇದನ್ನು ಲಕ್ಷ್ಯದಲ್ಲಿಡುವರೆ?

— ಮಹಾರಾಷ್ಟ್ರ ಪ್ರಾಂತಿಕ ಪರಿಷತ್ತು ತಾ. ೧೧ನೇ ದಿವಸ ಸಾತಾರಿಯಲ್ಲಿ ಶ್ರೀ। ದೇಶಮುಖರ ಅಧ್ಯಕ್ಷತೆಯ ಕೆಳಗೆ ಬಹು ವಿಜೃಂಭಣೆಯಿಂದ ನಡೆಯಿತು. ದೇಶಮುಖರಿಗೆ ಪುಣೆಯ ಮುನ್ಸಿಪಾಲಿಟಿಯ ತರ್ಫೆಯಿಂದ ಒಂದು ಮಾನಪತ್ರವನ್ನು ಕೊಡಲಾಯಿತು. ಅಧ್ಯಕ್ಷರ ಭಾಷಣವಾದ ನಂತರ "ನಾಳಿನ [illegible] ರಾ. ಸಭೆಯ ಮೆಂಬರರ ಸಂಖ್ಯೆಯು ಕಡಿಮೆಯಾಗುತ್ತ [illegible] ಆ ಠರಾವನ್ನು ತೆಗೆದು ಮೊದಲಿನ "[illegible]"ದ ಠರಾವನ್ನು [illegible] ಕೊಂಗ್ರೆಸ್ಸು ಜಾರಿಗೆ ತರಲು ಓಲ್ ಇಂಡಿಯಾ ಕೊಂಗ್ರೆಸ್ ಕಮಿಟಿಯು ಶಿಫಾರಸುಮಾಡಬೇಕೆಂ"ಬ ಠರಾವು ಬಹುಮತದಿಂದ ಪಾಸಾಯಿತು. ಅಲ್ಲದೆ ಅನ್ನಿಬೆಝೆಂಟ ಬಾಯಿಯವರ ಸ್ವರಾಜ್ಯಬಿಲನ್ನು ಆ ಸಭೆಯು ಸ್ವೀಕರಿಸಿತು.

— [illegible] ಸ್ವರಾಜ್ಯಾರ್ಥವಾಗಿ ಒಂದು ಪ್ರಚಂಡ ಸಭೆಯು ಪುಣೆಯಲ್ಲಿ [illegible]. ಅದರಲ್ಲಿ [illegible] ದೇಶೋದ್ಧಾರಕ ಕೃತ್ಯಗಳು [illegible].

— [illegible] ಮುಖ್ಯ ಹಳ್ಳಿಹಳ್ಳಿಗಳನ್ನು [illegible] ಬೋಧವನ್ನು ಪ್ರವೇಶಿಸುತ್ತಿದ್ದಾರೆ. [illegible] ನಡೆಯುತ್ತಿದ್ದರು. ಅದೆ [illegible]

[illegible]ಯವರು ಚರ್ಕವನ್ನು ಒಂದು ಕಡೆಯಲ್ಲಿ ತಿರುಗಿಸುತ್ತಿದ್ದರು. ಅಲ್ಲಿ ಅವರ ಪಾಳಿಯನ್ನು ನೋಡಿ ಗಾಂಧಿಜಿಯವರು "ತಾವು ಹಗ್ಗವನ್ನು ಹೆಣೆಯುತ್ತೀರಿ!" ಎಂದು ಉದ್ಗರಿಸಿದರು! ಚರ್ಕವನ್ನು ಬಾಬುಗಳು ಕಲಿಯಬೇಕಾದ್ದು ಅದೇ ಮೊದಲಂತೆ!!

— ಫರಿದಪೂರ ಜಿಲ್ಲೆಯೊಳಗಿನ [illegible] ಎಂಬ ಸುಶಿಕ್ಷಿತ ಮುಸಲ್ಮಾನನನ್ನು ಆರ್ಯಸಮಾಜದವರು ಹಿಂದುಧರ್ಮಕ್ಕೆ ಸೇರಿಸಿಕೊಂಡರು

— ಕಲಕತ್ತೆಯ ನಾಲ್ಕು ಬ್ರಿಟಿಷ ಸೈನಿಕರು ಒಬ್ಬ ಪೋಲೀಸ ಸಾರ್ಜಂಟನ ಮೇಲೆ ಬಿದ್ದದರಿಂದ ಅವರನ್ನು ಪೋಲೀಸರು ಕೈದುಮಾಡಿರುವರು.

— ಕಲಕತ್ತೆಯ ಬ್ರಿ. ಇಂ. ಸ್ಟೀಮ ನೆವಿಗೇಶನ ಕಂಪೆನಿಯ ಕೂಲಿಗಳು ತಮ್ಮ ಸಂಬಳವನ್ನು ಏರಿಸಬೇಕೆಂದು ಮುಷ್ಕರ ಹಿಡಿದಿರುವರು.

— ವೀರ ಅಬದುಲ್ಲ [illegible] ಎಂಬವನು ತಾನು ಪುಣೆಯತ್ತಕಡೆಯವನೆಂದು ಕೆಲವು ಮಾರವಾಡಿಯವರನ್ನು ಮೋಸಮಾಡಿದ್ದಕ್ಕಾಗಿ ಅವನಿಗೆ ಮೂರು ತಿಂಗಳ ಶಿಕ್ಷೆ ವಿಧಿಸಲಾಯಿತು.

— ಎಂಗ್ಲೊ ಇಂಡಿಯನರು ಹಿಂದಿ ರಾಜಕಾರಣದಲ್ಲಿ ಮುಖ್ಯವಾಗಿ ಸ್ವರಾಜ್ಯ ಸಂಘಟನೆಯಲ್ಲಿ ಭಾಗ ತಕ್ಕೊಳ್ಳುವದು ಉತ್ತಮವೆಂದು ಮ. ಗಾಂಧಿಗಳು ಹೇಳಿದ್ದಾರೆ.

— ತಾರಕೇಶ್ವರದಲ್ಲಿ ನಿಯುಕ್ತನಾದ ಮಹಂತನು ಅಲ್ಲಿಯ ಕಮಿಟಿಯ ಹೇಳಿಕೆಯಂತೆ ನಡೆಯುವದಿಲ್ಲವಾದ ಕಾರಣ ಇನ್ನೊಬ್ಬನನ್ನು ನೇಮಿಸಲು ಡಿಸ್ಟ್ರಿಕ್ಟ ಜಡ್ಜರು ಅಪ್ಪಣೆಕೊಟ್ಟಿರುವರು.

— ಕೌನ್ಸಿಲಿನಲ್ಲಿ ಕಡಿಮೆಮಾಡಿದ ಬಜೆಟಿನ ಕೆಲವಂಶವನ್ನು ಗವರ್ನರರು ಸರ್ಟಿಫಿಕೇಶಿನ ಪೂರ್ವಕ ಪುನಃ ಸೇರಿಸಿರುವರು.

— ಮ. ಗಾಂಧಿಗಳು ಕಲ್ಕತ್ತೆಯಲ್ಲಿ ಅಷ್ಟಾಂಗ ಆಯುರ್ವೇದ ವಿದ್ಯಾಲಯದ ಅನಾವರಣ ಸಮಾರಂಭದಲ್ಲಿ ಈಗಿನ ಆಯುರ್ವೇದ ವೈದ್ಯರಿಗೆ ರೋಗದ ಪರೀಕ್ಷೆಯಾಗುವದಿಲ್ಲವೆಂದು ಹೇಳಿ ವಿದ್ಯಾಲಯದ ಶಂಕುಸ್ಥಾಪನೆಯನ್ನು ಮಾಡಿದರು. ಶಾಭಾಸ! ಉತ್ತಮ ಆಶೀರ್ವಚನವಲ್ಲವೆ? ಆದರೆ ರಾಜಕಾರಣದೊಳಗಿನ ವೈದ್ಯರು ಹೇಗೆ?

— ಮಲಬಾರದ ದಂಗೆಯಲ್ಲಿ ಮಡಿದವರ ನೆನಪಿಗಾಗಿ ಒಂದು ದಿನವನ್ನು ಆಚರಿಸಬೇಕಾಗಿ ಮಲಬಾರದವರು ನಿಶ್ಚಯಿಸಿದ್ದರು. ಆದರೆ ಸರಕಾರವು ಹಾಗೆ ಮಾಡ ಕೊಡಲಿಲ್ಲ.

— ಮುಂಬಯಿಯಲ್ಲಿ ಇಬ್ಬರು ಯುರೋಪಿಯನ ಗೃಹಸ್ಥರು ಅಲ್ಲಿಯ ಪೋಲೀಸ ಸ್ಟೇಶನಿಗೆ ಹೋಗಿ ಕೈದಿಯಲ್ಲಿರುವ ತಮ್ಮ ಮಿತ್ರನನ್ನು ನೋಡಬೇಕೆಂದು ಬಜಾಯಿಸಿ ಹೇಳಲು ಅಧಿಕಾರಿಗಳು ಒಪ್ಪಲಿಲ್ಲ. ಆಗ ಅವರು ಸಾರ್ಜಂಟ ಮತ್ತು ಇತರ ಪೋಲಿಸರ ಮೇಲೆ ದಂಗೆಮಾಡಲು ಅವರನ್ನು ಕೂಡಲೆ ಕೈದುಮಾಡಿದರು

— ಮುಸ್ಲಿಮ್ ಲೀಗಿನ ಅಧಿವೇಶನವು ಬರುವ ವಾರದಲ್ಲಿ ಲಕ್ನೋದಲ್ಲಿ ಸೇರಲಿರುವದು. ಆ ಸಂದರ್ಭದಲ್ಲಿ ಮುಡಿಮನ್ ಕಮಿಟಿಯಲಿ ಸೂಚಿಸೋಣಾದ ಹಲವು ಠರಾವುಗಳು ಚರ್ಚಿಸಲಾದೀತು

— ಮೌಲಾನಾ ಮಹಮ್ಮದಲ್ಲಿಯವರ 'ಕೊಮ್ರೇಡ' ಪತ್ರಿಕೆಗೆ ಬರೆ ೧೪೦ ಚಂದಾದಾರರು ಮಾತ್ರ ಇರುವರಂತೆ ಹೀಗಿದ್ದರೆ ತಾನು ಇದನ್ನು ಮುಚ್ಚುತ್ತೇನೆಂದು ದೀನವಾಗಿ ಹೇಳಿರುವರು. ಅಲ್ಲದೆ ಅವರ ಹಮದರ್ದ ಎಂಬ ಪತ್ರಿಕೆಯ ಖರ್ಚು ಎರಡು ತಿಂಗಳಲ್ಲಿ ಐದುವರೆ ಸಾವಿರ ರೂಪಾಯಿಗಳಾಯಿತಂತೆ.

— ಓಲ್ ಇಂಡಿಯಾ ಹಿಂದೂ ಮಹಾಸಭೆಯು ದಿಲ್ಲಿಯಲ್ಲಿ ೧೫ನೇ ತಾರೀಕಿಗೆ ಸೇರುವದು. ಆ ಸಂದರ್ಭದಲ್ಲಿ ಎಲ್ಲ ಕಡೆಯ ಪ್ರತಿನಿಧಿಗಳು ಬರಬೇಕೆಂದು ಲಾಲಾಜಿಯವರು ಹೇಳಿರುವರು.

— ಹಿಂದು ಮಹಾಸಭೆಯ ಕೆಲವು ಆಕ್ಷೇಪಕರನ್ನು ಉತ್ತರಿಸಿ ಇದರಲ್ಲಿ ರಾಜಕೀಯ ಪ್ರಶ್ನೆಗಳು ಚರ್ಚೆಗೆ ಬಾರದೆ ಬರೆ ಸಾಮಾಜಿಕ ವಿಷಯಗಳನ್ನೆ ವಿಚಾರಿಸುತ್ತಾರಾಗಿ ತಿಳಿಸಿರುವರು.

— ಖಾದಿಯು ಮಸರಾಟವಾಗುವದಿಲ್ಲವೆಂದು ತಮಿಳನಲ್ಲಿಯ ಒಬ್ಬನು ಕೆಲವು ದಿವಸಗಳ ತನಕ ಏಕ ಭುಕ್ತಮಾಡಿಕೊಂಡು ಅನಂತರ ಉಪವಾಸ ವ್ರತವನ್ನು ಯೋಗ್ಯರೀತಿಯಲ್ಲಿ ಆಚರಿಸಿದನು!

ದಕ್ಷಿಣಕನ್ನಡ.

ಕುರುಕಾಲು:— ಈ ಗ್ರಾಮದಲ್ಲಿ ಈ ವರೆಗೆ ಸಹಕಾರ ಸಂಘ ಒಂದು ಇಲ್ಲದ್ದರಿಂದ ಬಡ ಬೇಸಾಯಗಾರರು ಬಹಳ ಕಷ್ಟಪಡುತ್ತಿದ್ದರು. ಆದರೆ ಗ್ರಾಮದ ಶಾಲಾ ಮೆನೇಜರ್ ರಾ। ಕೆ. ಗಣಪಯ್ಯ ಸೆಟ್ಟಿಯವರ ಪ್ರಯತ್ನದಿಂದ ಗ್ರಾಮಸ್ಥರ ಅಪೇಕ್ಷೆ ಮೇರೆಗೆ ಕಳೆದ ತಾ. ೭-೫-೧೯೨೫ರಲ್ಲು ಸಹಕಾರ ಸಂಘಗಳ ಇನ್ಸ್‌ಪೆಕ್ಟರವರೂ, ಸುಪರ್‌ವೈಸರವರೂ ಬಂದು ಕುರುಕಾಲು ಹಾಯರ್ ಎಲಿಮೆಂಟರಿ ಶಾಲಾ ಕಟ್ಟೋಣದಲ್ಲಿ "ನಂಬ್ರ ೧೧೭೩ನೇ ಕುರುಕಾಲು ಸಹಕಾರ ಸಂಘವನ್ನು" ಸ್ಥಾಪಿಸೋಣಾಯಿತು. ಸಂಘಕ್ಕೆ ಈ ವರೆಗೆ ಸುಮಾರು ೬೦ರ ವರೆಗೆ ಮೆಂಬರರು ದಾಖಲಾಗಿರುತ್ತಾರೆ. ಪ್ರಕೃತಕ್ಕೆ ಸುಮಾರು ೩೫೦೦-೦-೦ ವರೆಗೆ ಸಾಲಕ್ಕೆ ಅರ್ಜಿಗಳು ಬಂದಿರುತ್ತವೆ. ಶ್ರೀಯುತ ಅಂತಯ್ಯ ಸೆಟ್ರನ್ನು ಸಂಘದ ಅಧ್ಯಕ್ಷರಾಗಿಯೂ, ರಾ। ಕೆ. ಗಣಪಯ್ಯ ಸೆಟ್ರನ್ನು ಕಾರ್ಯದರ್ಶಿಯರಾಗಿಯೂ, ರಾ।. ಎಮ್. ದೇಜಪ್ಪ ಸೆಟ್ರನ್ನು ಸಹಾಯಕ ಕಾರ್ಯದರ್ಶಿಯರಾಗಿಯೂ, ರಾ। ಗಿರಿಯ ಸೆಟ್ಟಿ, ರಾ। ಸಂಕು ಸೆಟ್ರಿ, ರಾ। ಮುದ್ದಣ್ಣ ಸೆಟ್ಟಿ, ರಾ। ರುಕ್ಕಣ್ಣ ನೋರಿಂಘಾರು ಕೂಡಾ ೭ ಮಂದಿಯನ್ನು ಸಂಘದ ಪಂಚಾಯತದಾರರನ್ನಾಗಿ ನೇಮಿಸೋಣಾಗಿಯದೆ ಈ ಸಂಘವನ್ನು ದೇವರು ಆಶೀರ್ವದಿಸಲಿ

ಪಡುವನ್ನೂರು:— ಈ ಗ್ರಾಮದ ಚೆನ್ನಪ್ಪ ಗೌಡರಲ್ಲಿ "ಗೌಡರ ವಿದ್ಯಾವರ್ಧಕ" ಸಂಘದ ಆಡಳಿತ ಸಭೆಯು ತಾ. ೨-೫-'೨೫ನೇ ಶನಿವಾರ ಗಂಟೆ ೪ಕ್ಕೆ ಜರಗಿಸುವದಾಗಿ ನಿರ್ಣಯಿಸಿ ಆಡಳಿತ ಮೆಂಬರರಿಗೆ ಪತ್ರ ಬರೆದಾಗ್ಯೂ ಕೋರಂ ಆನುವ ಜರೂರು ಬಾರದಿದ್ದುದರಿಂದ ಸಭೆ ಜರಗಿಸಲಿಕ್ಕೆ ಅಸಾಧ್ಯವಾಯಿತು. ತಾ. ೩೦-೫-'೨೫ನೇ ಶನಿವಾರ ಹಗಲು ಗಂಟೆ ೩ಕ್ಕೆ ಆಜ್ಜಾವರ ಗ್ರಾಮದಲ್ಲಿರುವ ಹುಲಿ ಮನೆ ಚೆನ್ನಪ್ಪ ಪಟೇಲರಲ್ಲಿ ಮುಂದಿನ ಸಭೆ ಜರಗಿಸುವುದಾಗಿ ನಿರ್ಣಯಿಸಲಾಯಿತು. ಹಾಜರಿದ್ದ ಆಡಳಿತ ಮೆಂಬರರ ಮೂಲಕ ವಸೂಲು ಬಂದ ರೂ. ೫೦ನ್ನು ಪುತ್ತೂರು ವರ್ತಕರ ಸಂಘದಲ್ಲಿ ನಿರಖು ಠೇವಣಾತಿ ಇಡುವಂತೆ ಕಾರ್ಯದರ್ಶಿಯವರ ಸ್ವಾಧೀನ ಕೊಡಲಾಯಿತು. ಆಜ್ಜಾವರದಲ್ಲಿ ಜರಗತಕ್ಕ ಆಡಳಿತ ಸಭೆಗಾದರೂ ಆಡಳಿತ ಮೆಂಬರರ ಮತ್ತು ಸಂಘದ ಅಭಿಮಾನಿಗಳು ತಪ್ಪದೆ ದಯಮಾಡಿ ಬರಬೇಕಾಗಿ ಕಾರ್ಯದರ್ಶಿಯ ವಿನಂತಿ.

ವಿವಿಧ ವಿಷಯಗಳು.

— ಭಯಂಕರ ಕೂಸು —

ತಿರುವಾಂಕೋಡಿನ ನೆಯ್ಯತ್ತಿನಕರದ ಎಂಬಲ್ಲಿ ಎಜುವಾ ಜಾತಿಯ ಒಬ್ಬ ಸ್ತ್ರೀಗೆ ಒಂದು ಭಯಂಕರ ಕೂಸು ಹುಟ್ಟಿರುವುದು. ಈ ಮಗು ಹುಟ್ಟಿದಾಗಲೇ ಎರಡು ವರ್ಷ ಪ್ರಾಯದ ಮಗುವಿನಷ್ಟು ಬೆಳೆದಿದ್ದು ನೆಲಕ್ಕೆ ಬಿದ್ದ ಕೂಡಲೇ ಕೈಯೂರಿ ಎದ್ದು ನಿಂತಿತಂತೆ. ಅವಯವಗಳು ಭಯಂಕರವಿದ್ದವು ಕಣ್ಣುಗಳು ಹಣೆಯಮೇಲಿದ್ದವು. ತಲೆಯ ಹಿಂಬಾಗದಲ್ಲಿ ಒಂದು ಜುಟ್ಟು ಇತ್ತು. ಮೂರು ಬುಗಟೆ ಮತ್ತು ಮೈಮೇಲೆಲ್ಲ ಒಂದೊಂದು ಇಂಚು ಉದ್ದ ಕೂದಲಿತ್ತು. ಕೈಕಾಲುಗಳೂ ಬಹಳ ಉದ್ದವಿದ್ದವು. ಕೂಸು ತಾಯಿಯ ಮೊಲೆ ಕುಡಿಯಲಿಲ್ಲ. ಆದ್ದರಿಂದ ಸೀಯಾಳದ ನೀರು ಕೊಟ್ಟರು. ೨೪ ತಾಸುಗಳಲ್ಲಿ ಮಗುವು ಸತ್ತುಹೋಯಿತಂತೆ. (ಕಾ. ಧು)

• • •

ಬೆರಿಸ್ಟರ ಸಾವರಕಾರರು 'ಮರಾಠಾ' ಪತ್ರಿಕೆಯಲ್ಲಿ ಬರೆಯುತ್ತಾರೆ:— ಶುದ್ಧಿ ಚಳವಳದಿಂದ ಹಿಂದುಗಳು ಮುಸಲ್ಮಾನರ ಮನಸ್ಸನ್ನು ನೋಯಿಸುತ್ತಾರೆಂದು ಹೇಳುತ್ತಾರೆ. ಆದರೆ ಮುಂದಿನ ಯಥಾಸ್ಥಿತಿಗಳನ್ನು ಕೇಳುವಾಗ ಶುದ್ಧಿಚಳವಳದ ಆವಶ್ಯಕತೆಯು ಎಷ್ಟರ ಮಟ್ಟಿಗೆ ಅಗತ್ಯವಿದೆಂದು ಗೊತ್ತಾದೀತು. ಸಾಂಭರ ಎಂಬಲ್ಲಿ ಹಾಸನ್ ನಿಝಾಮಿ ಪಕ್ಷದವರು ಬಂದು ಇಬ್ಬರು ಬ್ರಾಹ್ಮಣ ಸ್ತ್ರೀಯರನ್ನು ಬಲತ್ಕಾರದಿಂದ ಮತಾಂತರ ಮಾಡಿಸಿದರು. ಆ ಸಮಯದಲ್ಲಿ ಒಬ್ಬ ಬ್ರಾಹ್ಮಣ ಉಪದೇಶಕನು ಏನೂ ಅರಿಯದ ಆ ಸ್ತ್ರೀಯರಿಗೆ ಬುದ್ಧಿ ಹೇಳಲು ಹೋದಾಗ ಅವನನ್ನು ಗದರಿಸಿ ಅಲ್ಲಿಯ ಅಧಿಕಾರಿಗಳಿಗೆ ಕಳುಹಿಸಿದರು! ಇನ್ನೊಂದು ಸಂದರ್ಭದಲ್ಲಿ ಒಬ್ಬ ಕಾಕಾ ಎಂಬ ಕಾಶ್ಮೀರೀ ಬ್ರಾಹ್ಮಣನಿಗೆ ಅಲ್ಲಿಯ ಸರ್ವೇ ಅಧಿಕಾರಿಯಾದ ಒಬ್ಬ ಮುಸಲ್ಮಾನನು ಅಕಸ್ಮಾತ್ತಾಗಿ ಅವನಿದ್ದಲ್ಲಿಗೆ ಬಂದು ಮಾಂಸದ ತುಂಡುಗಳನ್ನು ಬಲತ್ಕಾರದಿಂದ ಆ ಬ್ರಾಹ್ಮಣನ ಬಾಯಿಗೆ ಹಾಕಲು ಪ್ರಯತ್ನಪಟ್ಟನು ಆಗ ಅವನು ತನ್ನ ಬಲದಿಂದ ಅವನ ಇಚ್ಛೆಯನ್ನು ಸಾಗಿಸಗೊಡಲಿಲ್ಲ. ಆದರೆ ಅಷ್ಟರೊಳಗೆ ಕೆಲವು ಮುಸಲ್ಮಾನ ಪುಂಡರು ಬಂದು ಅವನನ್ನು ಮೂರ್ಛೆಗೆಡವಿ ಮಸೀದಿಗೆ ಕರಕೊಂಡು ಹೋಗಿ ಅಲ್ಲಿ ಅವನ ಶಿಖಾಛೇದನ ಮಾಡಿದರು. ಅಲ್ಲದೆ ಅವನಿಗೆ ನಿಝಾಮುದ್ದೀನ ಎಂದು ನಾಮಕರಣ ಸಹ ಮಾಡಲಾಯಿತು!!! ಆದರೆ ಅವನು ತಿರುಗಿ ಹಿಂದೂ ಧರ್ಮಕ್ಕೆ ಬರಲು ಒಪ್ಪಿದ್ದರಿಂದ ಅವನನ್ನು ಶುದ್ಧಮಾಡಿರುವರು.

• • •

"ಹೈದರಾಬಾದಿನಲ್ಲಿಯ ಖಿಲಾಫತಿಗರು ಇದರಿಂದಲೂ ಭಯಂಕರ ಕೃತ್ಯಗಳನ್ನು ಮಾಡುತ್ತಿದ್ದಾರೆ. ಚಿಕ್ಕ ಹುಡುಗರನ್ನು ಎಳಕೊಂಡು ಹೋಗುವುದು, ಹೆಂಗಸರನ್ನು ಬಲಾತ್ಕರಿಸುವುದು, ಇವೆಲ್ಲವು ಪ್ರತಿ ದಿವಸವು ನಡೆಯುತ್ತಿವೆ. ಎಪ್ರಿಲ ತಿಂಗಳ ತಾ. ೧೭ರಲ್ಲಿ ಹರನಾಥ ಎಂಬ ೮ ವರ್ಷ ಪ್ರಾಯದ ಹುಡುಗನನ್ನು ಕೆಲವು ಮುಸಲ್ಮಾನ ಪುಂಡರು ಎಳಕೊಂಡು ಹೋಗಿ ಮತಾಂತರ ಮಾಡಿದರು! ಹಿಂದು ಸಮಾಜದ ಒಬ್ಬ ಪ್ರಮುಖ ಗೃಹಸ್ಥರು ಇದನ್ನು ತಿಳಿದು ಅವನಿರುವ ಸ್ಥಾನವನ್ನು ಗೊತ್ತುಹಚ್ಚಿ ಅವನನ್ನು ಒಂದಕ್ಕೆ ತೆಕ್ಕೊಂಡರು. ಆದರೆ ಮುಸಲ್ಮಾನರು ತಮ್ಮ ಮತದೊಳಗಿನ ಒಬ್ಬಳನ್ನು ಹಿಡಿದು ಈತನು ತನ್ನ ಮಗನು, ಇವನನ್ನು ಹಿಂದುಗಳು ಬಲತ್ಕರಿಸಿರುವರು ಎಂದು ಮುಂತಾಗಿ ಅಲ್ಲಿಯ ಕೋರ್ಟಿಗೆ ಅವಳ ಕಡೆಯಿಂದ ಅರ್ಜಿ ಹಾಕಿಸಿದರು. ಈ ವಿಷಯವು ವಿಚಾರಣೆಯಾಗಿ ಅದರಲ್ಲಿ ಆ ಪುಂಡರ ಸುಳ್ಳುತನವು ಹೊರಬಿತ್ತು. ಅದರಿಂದ ಮತ್ತಷ್ಟು ರೇಗಿ ಆ ಹುಡುಗನನ್ನು ಇನ್ನೊಂದು ಸಲ ಕಾಣೆ ಮಾಡಬೇಕೆಂದು ನಿಶ್ಚಯಿಸಿದರು. ಆದರೆ ಹಿಂದು ರಕ್ಷಕರಿದ್ದದರಿಂದ ಅವರ ದುರ್ವರ್ತನೆಯು ಸಫಲವಾಗಲಿಲ್ಲ!

• • •

"ಒಬ್ಬ ಮದ್ರಾಸಿ ಗೃಹಸ್ಥನು ತನ್ನ ಹೆಂಡತಿ ಮಕ್ಕಳನ್ನು ಕರಕೊಂಡು ರೈಲ್ವೆಯಲ್ಲಿ ಪ್ರಯಾಣಮಾಡುತ್ತಿದ್ದಾಗ ಅವನ ಹಣವನ್ನೆಲ್ಲ ಕಳ್ಳರು ಹೈದರಾಬಾದ ಸ್ಟೇಶನಿನಲ್ಲಿ ಕಳವು ಮಾಡಿದರು ಆಗ ಮುಸಲ್ಮಾನ ಮೌಲವಿಗಳು ಅವನ ಮೇಲೆ ಮೋಹ ಹಾಕಿ ಅವನಿಗೆ ಸಹಾಯ್ಯ ಕೊಡುವ ನೆವದಿಂದ ಮುಸಲ್ಮಾನರಿರುವ ಸ್ಥಳಕ್ಕೆ ಕರಕೊಂಡು ಹೋಗುತ್ತಿದ್ದರು. ಇಷ್ಟರಲ್ಲಿ ಪೂರ್ವಪುಣ್ಯದಿಂದ ಒಬ್ಬ ಸೇಟು ಗೃಹಸ್ಥನು ಇವರ ಅಂತರ್ಹೇತುವನ್ನು ಅರಿತು ಅವನನ್ನು ಅವರ ಕೈಯಿಂದ ತಪ್ಪಿಸಿ ಹಿಂದೂ ಮಹಾಸಭೆಯ ಆಫೀಸಿಗೆ ಕಳುಹಿಸಿದನು. • • ಇದೇ ಮೇರೆಗೆ ಹೈದರಾಬಾದಿನಲ್ಲಿ ಒಬ್ಬ ಹಿಂದು ಹುಡುಗಿಯನ್ನೂ ಬಲಾತ್ಕಾರದಿಂದ ಕಾಣೆಮಾಡಿದರು. ಹಿಂದುಗಳಿಗೆ ಇದು ತಿಳಿದ ಕೂಡಲೆ ಪೋಲಿಸರ ಸಹಾಯದಿಂದ ಅವಳನ್ನು ಬಿಡಿಸಿದರು.

• • •

"ಬಂಗಾಲಿನಲ್ಲಿ ಇದರಿಂದಲೂ ಭಯಂಕರ ಕೃತ್ಯಗಳಾಗುವವೆಂದು ಕಂಡುಬಂದಿದೆ. ಸ್ನಾನಕ್ಕಾಗಿ ನದಿ ತೀರಕ್ಕೆ ಹೋದ ಹೆಂಗಸರು ಮಕ್ಕಳನ್ನು ಅಲ್ಲಿಯ ಪುಂಡರು ಮತಾಂತರ ಮಾಡುತ್ತಾರೆ ಒಂದು ಸಂದರ್ಭದಲ್ಲಿ [illegible] ಹುಡುಗಿಯನ್ನು ಕಿಜರುದ್ದೀನ ಎಂಬವನು ಕೆಲವು ಪುಂಡುಗಾರರ ಸಹಾಯದಿಂದ ಯಾರಿಲ್ಲದ ಸಂದರ್ಭದಲ್ಲಿ ಮನೆಯಿಂದ ಸೆಳಕೊಂಡುಹೋದನು. ಅವಳು ಬೊಬ್ಬೆ ಇಡಲು ಅವಳ ಬಾಯಿಯನ್ನು ವಸ್ತ್ರದಿಂದ ಮುಚ್ಚಿದರು. ಹೀಗೆ ಅವಳ ಮಾನನಷ್ಟವಾದರೂ ತಾನು ಧರ್ಮಾಂತರಹೊಂದಲಿಕ್ಕಿಲ್ಲವೆಂದು ಧೈರ್ಯಶಾಲಿ ಹೇಳಿದಳು. ಒಂದು ದಿವಸ ಆ ಪುಂಡರು ಇಲ್ಲವಾದ್ದನ್ನು ನೋಡಿ ಓಡಿ ಬಂದು ರೈಲ್ವೆ ಗಾಡಿಯನ್ನು ಹತ್ತಲು ಹೋದಳು. ಆದರೆ ಅಲ್ಲಿಯ ದೋಗ್ರನಿಗೆ —ಈತನು ಸಹ ಮುಸಲ್ಮಾನನೆ— ಈ ಸಮಾಚಾರವೆಲ್ಲ ತಿಳಿದು ಅವನು ಪುನಃ ಆ ಜನರ ವಶಕ್ಕೆ ಅಬಲೆಯನ್ನು ಕಳಿಸಿದನು ಆದರೆ ದೈವವಶದಿಂದ ಜನರಿಗೆ ತಿಳಿಯಲು ಪೋಲೀಸರು ದೋಗ್ರನ ಸಹಿತ ಕೈದ ಮಾಡಿ ರಾಮಪುರದ ಮೆಜಿಸ್ಟ್ರೇಟರ ಮುಂದೆ ಇಟ್ಟರು. ಗುನ್ಹೆಗಾರರಿಗೆ ಭಯಂಕರ ಶಿಕ್ಷೆಯು ವಿಧಿಸಲಾಯಿತು.

• • •

"ಇದೇ ರೀತಿಯಲ್ಲಿ ಒಬ್ಬ ವಿಧವೆಯು ನದಿಘಾಟಿನ ಮೇಲೆ ಸ್ನಾನ ಮಾಡುತ್ತಿರುವಾಗ [illegible] ಎಂಬ ಮುಸಲ್ಮಾನನು ಅವಳ ಮೇಲೆ ಬಿದ್ದು ಅವಳ ಬಾಯಿಯನ್ನು ಗಟ್ಟಿಯಾಗಿ ಹಿಡಿದು ಪರಾರಿಯಾದನು. ಈ ಸಂಗತಿಯು ಅವಳ ಅಣ್ಣನಿಗೆ ತಿಳಿಯಲು ಆತನು ಪೋಲೀಸರ ಸಹಾಯದಿಂದ ಬಿಡಿಸಿದನು. ಈ ಮೇರೆಗೆ [illegible] ಕೃತ್ಯಗಳು ನಡೆಯುತ್ತಿರುವಾಗ ಶುದ್ಧಿಚಳವಳವನ್ನು ನಿಲ್ಲಿಸಬೇಕೆಂದು ಹೇಳುವುದು ಆತ್ಮಘಾತಕಲ್ಲವೆ? ಇಷ್ಟರ ವರೆಗೆ ಇಡಿ ಹಿಂದುಸ್ಥಾನದಲ್ಲಿ ಒಬ್ಬನೆ ಒಬ್ಬ ಮುಸಲ್ಮಾನನನ್ನು ಬಲತ್ಕಾರದಿಂದ ಹಿಂದು ಧರ್ಮಕ್ಕೆ ಮತಾಂತರ ಮಾಡಿದ ಒಂದೇ ಒಂದು ಉದಾಹರಣೆಯನ್ನು ಯಾರಾದರೂ ಕೊಡಲು ಸಿದ್ಧರಿರುವರೆ? ಧರ್ಮಭ್ರಾಂತಿತನವು ಯಾರ ತಲೆಯಲ್ಲಿ ಕುಣಿಯುತ್ತಿದೆಂಬುದು ಇವೆಲ್ಲವುಗಳಿಂದ ಸಿದ್ಧವಾಗುತ್ತವೆ. ಹೀಗಿರುತ್ತಲೂ ಮುಸಲ್ಮಾನರು ಬೊಬ್ಬೆಯಿಟ್ಟು ತಿರುಗಿ "[illegible]" ಎಂಬ ಗಾದೆಯಂತೆ ಹಿಂದುಗಳನ್ನು ತೊಂದರೆ ಕೊಡಲು ನೋಡುತ್ತಾರಲ್ಲವೆ? [illegible] ಮೇಲಿನ ಸಂಗತಿಗಳಿಂದ ಸಂಘಟನೆಯ ಅವಶ್ಯಕತೆಯನ್ನು ತಿಳಿಯದೆ ಇರಲಿಕ್ಕಿಲ್ಲ.

ಅನುಕ್ರಮಣಿಕೆ.

ಅಗ್ರಲೇಖ ಪುಟಗಳು.
ಇಂಗ್ಲಂಡಿನಲ್ಲಿ ೬
ಸ್ಫುಟವಿಚಾರಗಳು—
೧. ಸತ್ಯಮೂರ್ತಿಗಳ ಪ್ರಯಾಣ ,,
೨. ನೂಲಿನ ವರ್ಗಣಿ ,,
೩. ಬಂಗಾಲ ಗವರ್ನರರಿಗೆ ಬೇಂಡಿನ ಅಗತ್ಯವೊ ೭
೪. ಗಾಂಧಿಗಳೂ, ಎಂಗ್ಲೊ ಇಂಡಿಯನರೂ ,,
೫. ಅಕಾಲಿ ಕೈದಿಗಳ ಸ್ಥಿತಿ ,,
೬. ಮೈಸೂರಿನ ದಿವಾನ ,,
ಮಂಗಳೂರು
ವರ್ತಮಾನಸಂಗ್ರಹಗಳು—
ವಿದೇಶ – ಒಳದೇಶ ವರ್ತಮಾನ ೫
ದಕ್ಷಿಣ ಕನ್ನಡ — ಕುರುಕಾಲು, ಪಡುವನ್ನೂರು ,,
ವಿವಿಧ ವಿಷಯಗಳು ೮
ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ವರಾಜ್ಯ ಪಕ್ಷದ ಭವಿತವ್ಯ ,,
ಪತ್ರವ್ಯವಹಾರ ೧, ೨ ,,
ಕರ್ನಾಟಕದ ೧೧ನೇ ಸಮ್ಮೇಲನ ಬೆಳಗಾಂವಿ ೪

ಸ್ವದೇಶಾಭಿಮಾನಿ.

ಶಕ ೧೮೪೬ ವೈಶಾಖ ಬ| ೮ವು ಶುಕ್ರವಾರ.

ಇಂಗ್ಲಂಡಿನಲ್ಲಿ.

ವ್ಯವಹಾರ ನೀತಿಯಲ್ಲಿ ಆಯುಸ್ಸು, ವಿತ್ತ, ಗೃಹಚ್ಛಿದ್ರ, ಔಷಧ, ಅವಮಾನ ಮುಂತಾದ ಒಂಭತ್ತು ಸಂಗತಿಗಳನ್ನು ಗುಪ್ತವಾಗಿಡಬೇಕೆಂದು ಹೇಳಿದೆ. ಈ ನವ ಗೋಪ್ಯಗಳಲ್ಲಿ ಮಂತ್ರವೆಂದರೆ ಆಲೋಚನೆಯು ಒಂದಾಗಿದೆ. ಮನುಷ್ಯನು ತನ್ನ ಮನೆತನವನ್ನು ನಡಿಸಲು ಯಾವುದಾದರೂ ಒಂದು ಮಹತ್ವದ ಸಂಗತಿಯನ್ನು ಆಲೋಚಿಸಿದ್ದರೆ ಅದನ್ನು ಬೈಲುಮಾಡುವುದು ಯೋಗ್ಯವಲ್ಲ. ಅಂಥ ಸಂದರ್ಭದಲ್ಲಿ ಅವನು ಅದನ್ನು ಗುಪ್ತವಾಗಿಡುವನು. ಸಾಮಾನ್ಯ ಮನುಷ್ಯನು ತನ್ನ ನಿತ್ಯವ್ಯವಹಾರದಲ್ಲಿಯ ವಿಷಯವನ್ನು ಗೋಪ್ಯವಾಗಿಡುವಾಗ ರಾಜಕಾರಣದೊಳಗಿನ ಮಹತ್ವದ ಸಂಗತಿಗಳನ್ನು ಹೇಗೆ ತಾನೆ ಪಕ್ಕನೆ ಬಹಿರಂಗಪಡಿಸಲಾಗುತ್ತದೆ? ಅದ್ದರಿಂದಲೆ ರಾಜನೀತಿ ಶಾಸ್ತ್ರಜ್ಞರು ರಾಜಮಂತ್ರವನ್ನು ಇತರ ಎಲ್ಲ ಗೋಪ್ಯವಸ್ತುಗಳಿಗಿಂತಲೂ ಅತಿ ಗುಟ್ಟಿನಲ್ಲಿಡಬೇಕೆಂದು ಬರೆದಿರುವರು. "ಷಟ್ ಕರ್ಣೋಭಿದ್ಯತೇ ಮಂತ್ರಃ" ಎಂಬಿತ್ಯಾದಿ ರೂಢವಾಗಿರುವ ವಚನವು ಅನುಭವಪೂರ್ಣವಾದ್ದರಿಂದ ರಾಜಮಂತ್ರವನ್ನು ಗುಪ್ತವಾಗಿಡಬೇಕೆಂಬುದು ಸಹಜವೆ.

ಆದರೆ ಈ ಗೋಪನದಲ್ಲಿಯೂ ಎಷ್ಟೋ ವಿಧಗಳಿವೆ. ರಾಜ ಪ್ರಜೆಗಳ ಕಲಹದಲ್ಲಿ ಪ್ರಜೆಗಳು ಸ್ವರಾಜ್ಯದ ಹಕ್ಕುಗಳನ್ನು ಕೇಳುವಾಗ ಅಂಥ ಹಕ್ಕುಗಳನ್ನು ಕೊಡುವ ಅವಿರ್ಭಾವ ಮಾಡಿ ಕೊಡುವ ತನಕ ಆ ವಿಷಯವನ್ನು ಗುಟ್ಟಿನಲ್ಲಿಡುವುದು ಗೋಪನದ ಒಂದು ವಿಷಯವೆ ಆದರೂ ಅದು ಕೇಳುವವನ ಅಪೇಕ್ಷೆಯನ್ನು ಸರಿಯಾಗಿ ಪೂರಯಿಸುವಂಥ ದಾನವಿದ್ದರೆ ಆ ಗೋಪನವು ಸಹ್ಯವೆ. ಪರಂತು ಹೊರಗೆ ಸಾಲಗಾರನು ಬಂದು ಸಾಲವನ್ನು ಕೇಳಿದ್ದಲ್ಲಿ ಯಜಮಾನನು ಒಳಗೆ ಬಂದು ಬೀಗದ ಕೈಗಳ ಗೊಂಚಲನ್ನು ಅಲ್ಲಾಡಿಸಿ ಶಬ್ದಮಾಡಿ ಸೇಫಿನ ಬಾಗಿಲು ತೆರೆದು ಅದರ ಶಬ್ದವು ಸಹ ಹೊರಗೆ ಕೇಳುವಂತೆ ಮಾಡಿ, ಈ ಎಲ್ಲ ಅವಿರ್ಭಾವದಿಂದ ಸಾಲಗಾರನಲ್ಲಿ ಹಣ ಸಿಗುತ್ತದೆಂಬ ಆಸೆಯನ್ನು ಹುಟ್ಟಿಸಿ ಕೊನೆಗೆ ಮುಷ್ಟಿ ಮುಚ್ಚಿಕೊಂಡು ಹೊರಗೆ ಬರುವ ಗೋಪನದ ಒಂದು ಪ್ರಕಾರವಿದೆ. ಮುಷ್ಟಿ ಮುಚ್ಚಿಕೊಂಡು ಹೊರಗೆ ಬಂದ ರಾಯರು ಸಾಲಗಾರನ ಹತ್ತರ ಪುನಃ ವಾಯಿದೆಯನ್ನು ಕೇಳ ಹೊರಟರೆ ಅಥವಾ ಅಲ್ಪ ಅಂಶವನ್ನು ಕೊಡಲು ಹೊರಟರೆ ಈ ಮುಂಚಿನ ಗೋಪನವು ಅಥವಾ ನಟನೆಯು ಯಜಮಾನನ ಕ್ಷುದ್ರತೆಯನ್ನೆ ತೋರಿಸುತ್ತದಲ್ಲವೆ? ಅಂಥ ಸಂದರ್ಭದಲ್ಲಿ ಗೋಪನೆಯನ್ನು ಯಾಕೆ ಮಾಡಬೇಕು? ಸಾಲಗಾರನು ಬಂದೊಡನೆಯೆ ಸ್ಪಷ್ಟವಾಗಿ ಹೇಳಬಹುದಲ್ಲವೆ? ಇಲ್ಲ. ಹಾಗೆ ಹೇಳುವುದರಲ್ಲಿ ಮುತ್ಸದಿತನವಿಲ್ಲ. ಮೆಲ್ಲ ಮೆಲ್ಲನೆ, ಉಪಾಯದಿಂದ ದಣಿಸಿ ದಣಿಸಿ ಕೊನೆಗೆ ನಿರಾಶೆಯಿಂದ ಕಳುಹಿಸಿದರೆ ಇನ್ನು ಎಷ್ಟೊ ಸಮಯದ ವರೆಗೆ ಸಾಲಗಾರನು ಈ ಕಟು ಅನುಭವದ ದೆಸೆಯಿಂದ ಪುನಃ ಬೇಗನೆ ಬಾಗಿಲಿಗೆ ಬರಲಿಕ್ಕಿಲ್ಲ. ಅದ್ದರಿಂದಲೆ ಧೂರ್ತರು ಲೋಕದಲ್ಲಿ ಗೋಪನದ ಮತ್ತು ನಟನೆಯ ಈ ವಾಮಮಾರ್ಗವನ್ನು ಪ್ರಚಾರದಲ್ಲಿ ತಂದಿದ್ದಾರೆ.

ಈ ಹೊತ್ತು ಈ ವಿಚಾರಗಳು ಉದ್ಭವಿಸಲು ಕಾರಣವೇನೆಂದರೆ, ಇಂಗ್ಲಂಡಿನಲ್ಲಿ ಹಿಂದುಸ್ಥಾನದ ರಾಜಕಾರಣದ—ಹಿಂದಿ ಸ್ವರಾಜ್ಯದ—ಗುಪ್ತವಿಚಾರವು ನಡೆದಿದೆ. ಹಿಂದುಸ್ಥಾನಕ್ಕೆ ಸ್ವರಾಜ್ಯದ ಹಕ್ಕುಗಳನ್ನು ಕೊಡಬೇಕೊ ಬೇಡವೊ, ಕೊಡುವುದಾದರೆ ಎಷ್ಟು ಕೊಡಬೇಕು ಎಂಬಿತ್ಯಾದಿ ಚರ್ಚೆಯು ಭಾರತಮಂತ್ರಿ ಮತ್ತು ವೈಸರಾಯ ಇವರೊಳಗೆ ನಡೆದಿದೆ. ಈ ಇಬ್ಬರಲ್ಲಿ ನಡೆದಿರುವ ಚರ್ಚೆಯು ಬಹು ಗುಪ್ತವಾಗಿ ಇಡಲ್ಪಟ್ಟಿದೆ. ಈ ಇಬ್ಬರ ಹೊರತು ಇನ್ನು ಯಾರಿಗೂ ಇದರ ಒಂದು ಚೂರು ಕೂಡ ಗೊತ್ತಾಗಿಲ್ಲ. ಇತರ ದೊಡ್ಡ ದೊಡ್ಡ ಅಧಿಕಾರಸ್ಥರಿಗೂ ಸಹ ಇದು ಅವೇದ್ಯವಾಗಿಯೆ ಇದೆ. ಬರ್ಕನ ಹೆಡ್ ಮತ್ತು ರೆಡಿಂಗ್ ಇವರೊಳಗೆ ನಡೆಯುತ್ತಲಿರುವ ಹಿಂದಿ ರಾಜಕಾರಣದ ಚರ್ಚೆಯು ಈ ಮೇರೆಗೆ ಗುಪ್ತವಾಗಿರುವಂತೆ ಜಾಗ್ರತೆಯನ್ನು ಯಾಕೆ ತೆಕ್ಕೊಳ್ಳೋಣಾಗುತ್ತದೆ? ಹಿಂದುಸ್ಥಾನಕ್ಕೆ ನಿಜವಾಗಿ ಏನಾದರೂ ಕೊಡುವದಿದ್ದರೆ ಅದನ್ನು ಇಷ್ಟು ಗುಪ್ತವಾಗಿ ಯಾಕೆ ಇಡುತ್ತಿದ್ದಾರೆ? ಸ್ವರಾಜ್ಯದ ಹಕ್ಕುಗಳನ್ನು ಧಾರಾಳವಾಗಿ ಕೊಡುವದಿದ್ದರೆ, ಅವು ಮುಂಚಿತವಾಗಿ ಬಹಿರಂಗಕ್ಕೆ ಬಂದಲ್ಲಿ ಯಾರಿಂದ ವಿಘ್ನವುಂಟಾದೀತೆಂದು ತಿಳಿದು ಆ ವಿಷಯವು ಇಷ್ಟು ಗುಪ್ತವಾಗಿಡಲ್ಪಡುತ್ತಿದೆ? ಜನತೆಯ ಅಪೇಕ್ಷೆಯ ಮೇರೆಗೆ ಎಲ್ಲ ಹಕ್ಕುಗಳನ್ನು ಕೊಡಲು ಉದ್ಯುಕ್ತವಾದಲ್ಲಿ ಎಂಗ್ಲೊ ಇಂಡಿಯನರಿಂದ ಅಥವಾ ನೋಕರ ಶಾಹಿಯಿಂದ ಪ್ರತಿಬಂಧವುಂಟಾದೀತೆಂದು ತಿಳಿದು ಈ ಚರ್ಚೆಯು ಗುಪ್ತವಾಗಿಡೋಣಾಗಿದೆಯೆ? ಇಂಥ ಅನೇಕ ಪ್ರಶ್ನೆಗಳು ಈ ಸಂದರ್ಭದಲ್ಲಿ ಬರುತ್ತವೆ.

ಈಗ ಈ ಪ್ರಶ್ನೆಗಳಿಗೆ ಉತ್ತರವನ್ನು ಕೊಡಲು ಯತ್ನಿಸೋಣ. ರೆಡಿಂಗ—ಬರ್ಕನ್‌ಹೆಡ್ ಈ ಇಬ್ಬರು ಗುಪ್ತವಾಗಿ ಆಲೋಚಿಸಿ ಸ್ವರಾಜ್ಯದ ಕಂತನ್ನು ಕೊಡಲುದ್ಯುಕ್ತರಾಗುವವರಿದ್ದಾರೆಂದು ನಾವು ತಿಳಿಯುವುದೆ ಮೌಢ್ಯವು. ಸ್ವರಾಜ್ಯವನ್ನು ಕೊಡುವದಿದ್ದರೆ ಅವರ ಆಲೋಚನೆಗೆ ಇಷ್ಟು ಪರದೆಗಳು ಯಾಕೆ? ಯಾರ ಹೆದರಿಕೆಯಿಂದ ಅವರು ತಮ್ಮ ಆಲೋಚನೆಯ ಸುತ್ತಲು ಗುಪ್ತತನದ ಗೋಡೆಗಳನ್ನು ನಿಲ್ಲಿಸುತ್ತಿದ್ದಾರೆ? ಎಂಗ್ಲೋ ಇಂಡಿಯನರ ಹೆದರಿಕೆಯಿಂದಲೆ? ಸರಕಾರವು ಹಿಂದಿಗಳಿಗೆ ಸ್ವರಾಜ್ಯದ ಹಕ್ಕನ್ನು ಕೊಟ್ಟಲ್ಲಿ ಎಂಗ್ಲೊ ಇಂಡಿಯನ್ರಿಗೆ ಮತ್ತು ಅಧಿಕಾರಿ ವರ್ಗಕ್ಕೆ ಹೊಟ್ಟೆನೋವುಂಟಾದೀತೆಂಬುದು ನಿಜ. ಆದರೆ ಅಷ್ಟಕ್ಕಾಗಿ ಈ ಹೊತ್ತಿನ ಚರ್ಚೆಯನ್ನು ಗುಪ್ತವಾಗಿಡಲು ಸಮರ್ಪಕ ತೋರುವುದಿಲ್ಲ. ಈ ಹೊತ್ತು ಗುಪ್ತವಿಟ್ಟರೂ ನಾಳೆ ಹಕ್ಕುಗಳನ್ನು ಕೊಟ್ಟ ಬಳಿಕ ಬಹಿರಂಗವಾದೀತಲ್ಲವೆ? ಆಗ ಅವರ ಭಯವು ಎಲ್ಲಿಗೆ ಹೋದೀತು? ಆಗ ಅವರನ್ನು ಸಮಾಧಾನ ಪಡಿಸುವ ಬಗೆ ಹೇಗೆ? ಅಲ್ಲದೆ, ಸಾರ್ವಭೌಮ ಸರಕಾರವು ಸಾಮ್ರಾಜ್ಯದ ಹಿತ ದೃಷ್ಟಿಯಿಂದ ಸ್ವರಾಜ್ಯದ ಹಕ್ಕುಗಳನ್ನು ಕೊಡಲು ನಿಶ್ಚಯಿಸಿದ ಬಳಿಕ ಎಂಗ್ಲೊ ಇಂಡಿಯನರು ಅಥವಾ ಅಧಿಕಾರಿ ವರ್ಗದವರು ಅಪಶಕುನವನ್ನು ಮಾಡಿಯಾರೆಂದು ನೆನಸುವುದೆ ಅಸ್ವಾಭಾವಿಕವು. ಸರಕಾರದ ಸ್ವಯಂಮನಸ್ಸಿನಲ್ಲಿ ಅಧಿಕಾರವನ್ನು ಕೊಡುವದಿದ್ದರೆ ಇಂಥವರಿಗೆ ಅದು ಉಪ್ಪು ಹಾಕುವುದಿಲ್ಲ. ಎಂದ ಮೇಲೆ ಈ ಗುಪ್ತ ತನದ ಅರ್ಥವೇನು?

ಈ ಪ್ರಶ್ನೆಯು ಮಾರ್ಮಿಕವಾದ್ದು. ಇದೆಲ್ಲ ನಟನೆ ಎಂದು ಇಟ್ಟು ಕೊಂಡರೆ ಈ ಗುಪ್ತತನದ ಅರ್ಥವು ಸ್ಪಷ್ಟವಾಗುವುದು. ಹೆಚ್ಚಿನ ಅಧಿಕಾರವನ್ನು ಕೊಡುವುದು ಮನಸ್ಸಿನಲ್ಲಿಲ್ಲ. ಆದರೆ ಅದನ್ನು ಪಕ್ಕನೆ ಬಹಿರಂಗಪಡಿಸಿದರೆ ಜನತೆಯ ಅಸಂತೋಷಕ್ಕೆ ಪಾತ್ರವಾಗಬೇಕಾಗುತ್ತದೆ. ಅದ್ದರಿಂದ ಒಂದು ಕಮಿಶನನ್ನೊ, ಕಮ್ಮಿಟಿಯನ್ನೊ ನೇಮಿಸಿ, ಅದರ ರಿಪೋರ್ಟನ್ನು ತರಿಸಿ, ಅದರ ಮೇಲೆ ವಾದವಿವಾದಮಾಡಿಸಿ, ಆ ವಾದ ವಿವಾದದ ಸಂಗತಿಯನ್ನು ದೊಡ್ಡ ದೊಡ್ಡ ಮುತ್ಸದಿಗಳು ಆಲೋಚಿಸಲು ಒಟ್ಟುಗೂಡುವುದು—ಇದರ ಅರ್ಥವು ಸ್ವರಾಜ್ಯವನ್ನು ಕೊಡುವುದೊ, ಅಥವಾ ಕಾಲಹರಣವೊ? ಬೀಗದ ಕೈಗಳ ಗೊಂಚಲಿನ ವೃಥಾ ಸಪ್ಪಳಮಾಡಿ ಕೊನೆಗೆ ಸಾಲಗಾರನನ್ನು ನಿರಾಶಗೊಳಿಸುವಂತೆ ಇದು ಧೂರ್ತತನದ ಕಾರ್ಯವಲ್ಲವೆ? ಇದರ ಅರ್ಥವೆ ಹೆಚ್ಚಿನ ಪ್ರಯೋಜನವುಂಟಾಗಲಿಕ್ಕಿಲ್ಲವೆಂದಾಗಿದೆ. ನಮ್ಮ ತರ್ಕವು—ಊಹನೆಯು ಈ ದಾರಿಯಿಂದ ಓಡುತ್ತದಾದರೂ ಪಾರ್ಲಿಮೆಂಟು ಈ ವಿಷಯವಾಗಿ ತನ್ನ ಅಭಿಪ್ರಾಯವನ್ನು ಜಾಹೀರಪಡಿಸುವದಿದೆ ಎಂದು ಹೇಳುತ್ತಾರೆ. ಬ್ರಿಟಿಷ ಪಾರ್ಲಿಮೆಂಟು ಹಿಂದುಸ್ಥಾನಕ್ಕೆ ಹೊಸ ಹಕ್ಕುಗಳನ್ನು ಕೊಡುವದಿದ್ದರೆ, ಎಲ್ಲರ ಅಭಿಪ್ರಾಯಗಳನ್ನು ಬರಮಾಡಿ ಅವುಗಳ ಬಲಾಬಲವನ್ನೂ, ಲೋಕಮತವನ್ನೂ ಸರಿಯಾಗಿ ಪರಿಶೀಲಿಸಬೇಕು. ಇದು ಸರಳವಾದ ಮಾರ್ಗವು. ಇದರ ಬದಲಿಗೆ ಅಧಿಕಾರಿಗಳೆ ಮಾತ್ರ ಒಟ್ಟಿಗೆ ಸೇರಿ ಗುಪ್ತಮಸಲತ್ತನ್ನು ನಡಿಸಿ ಸುಧಾರಣೆ ಹಕ್ಕು ಇತ್ಯಾದಿ ಹೆಸರುಗಳಿಂದ ಏನಾದರೂ ಅಲ್ಪ ಸ್ವಲ್ಪ ಹಕ್ಕುಗಳನ್ನು ಕೊಡುವುದು ವಕ್ರ ಮಾರ್ಗವಾಗಿದೆ. ಇದರಿಂದ ಜನತೆಯಲ್ಲಿರುವ ಅಸಂತೋಷವು ಪರಿಮಾರ್ಜಿತವಾಗುವುದೂ ಇಲ್ಲ. ಮತ್ತು ಈ ಕಾರಣದಿಂದ ಅಧಿಕಾರಿಗಳಲ್ಲಿರುವ ಯೋಚನೆಯೂ ತಪ್ಪುವುದಿಲ್ಲ. ಗೋಪನದ ವಕ್ರ ಪದ್ಧತಿಯನ್ನು ಅವಲಂಬಿಸುವದರಿಂದ ಒಟ್ಟಾರೆ ಯಾರಿಗೂ ಸುಖವಿಲ್ಲ.

ಆದರೆ ಲೊ. ರೆಡಿಂಗ ಮತ್ತು ಲೊ. ಬರ್ಕನಹೆಡ್ಡ ಇವರಿಬ್ಬರೂ ಇಂಗ್ಲಂಡಿನಲ್ಲಿ ನಡಿಸಿರುವ ಆಲೋಚನೆಯು ಇದುವರೆಗೆ ಗುಪ್ತವಾಗಿ ನಡೆಯುತ್ತದಾದರೂ ಜನತೆಯ ಅಂಬೋಣವನ್ನು ಅವರು ಗೋಚರಕ್ಕೆ ತೆಕ್ಕೊಳ್ಳಲಿಲ್ಲವೆಂದು ಮಾತ್ರ ಹೇಳಲಿಕ್ಕಾಗುವುದಿಲ್ಲ. ಕಾರಣ, ಮಡಿಮನ್ ಕಮ್ಮಿಟಿಯಲ್ಲಿ ಆದ ಸಾಕ್ಷಿಗಳ ಮುಖಾಂತರವೂ, ಎಸೆಂಬ್ಲಿ ಮತ್ತು ಇತರ ಕೌನ್ಸಿಲುಗಳಲ್ಲಿ ಆಗಾಗ್ಗೆ ವ್ಯಕ್ತವಾಗುತ್ತಲಿದ್ದ ಲೋಕಮತದ ಮುಖಾಂತರವೂ, ದೇಶದಲ್ಲಿ ಸಾಮಾನ್ಯ ರೂಪದಿಂದ ಹಬ್ಬಿಕೊಂಡಿರುವ ಅಸಹಕಾರ ತತ್ವದ ಮುಖಾಂತರವೂ ಹಿಂದಿ ಜನತೆಯು ಸ್ವರಾಜ್ಯದ ವಿಷಯದಲ್ಲಿ ಎಷ್ಟು ಉತ್ಸುಕವೂ, ಆತುರವುಳ್ಳದ್ದೂ, ಆಗಿದೆಂಬುದು ರೆಡಿಂಗ ಸಾಹೇಬರಿಗಾಗಲೀ, ಬರ್ಕನ ಹೆಡ್ಡರಿಗಾಗಲೀ, ಚನ್ನಾಗಿ ಗೊತ್ತೇ ಇದೆ. ಅದ್ದರಿಂದ ಇಂಗ್ಲಂಡಿನಲ್ಲಿ ಒಟ್ಟುಗೂಡಿದ ರೆಡಿಂಗ ಮತ್ತು ಬರ್ಕನ ಹೆಡ್ಡ ಈ ಮುತ್ಸದಿಗಳು ಹೆಡ್ಡು ಆಲೋಚನೆಯನ್ನು ಅಂಗೀಕರಿಸದೆ ಜನತೆಯ ಆಕಾಂಕ್ಷೆಯನ್ನು ತೃಪ್ತಿಗೊಳಿಸುವಂಥ ಸ್ವರಾಜ್ಯದ ದೊಡ್ಡ ಕಂತನ್ನು ಕೊಡಲು ಮಂತ್ರಿಮಂಡಲಕ್ಕೂ ಪಾರ್ಲಿಮೆಂಟಿಗೂ ಪ್ರೇರಿಸಿಯಾರೆಂದು ಧರವಸೆಪಟ್ಟಿದ್ದೇವೆ.

ಸ್ಫುಟವಿಚಾರಗಳು.

೧. ಮದ್ರಾಸಿನ ಸುಪ್ರಸಿದ್ಧ ಸ್ವರಾಜಿಸ್ಟರಾದ ಶ್ರೀ ಸತ್ಯಮೂರ್ತಿಗಳು ವಿಲಾಯತಿಗೆ ಹೋಗಲು ಹೊರಟಿರುವರು. ಮೊದಲು ವ್ಯವಸ್ಥೆಗೊಳಿಸಿದಂತೆ ರಿಲಿಜಸ್ ಎಂಡೋಮೆಂಟಿನ ವಿಷಯವು ಇವರ ಪ್ರಯಾಣದ ಉದ್ದೇಶಗಳ ಪೈಕಿ ಒಂದಾದರೂ ಸ್ವರಾಜ್ಯ ಚಳವಳಿವೆ ಮುಖ್ಯವಾಗಿದೆ. ಸ್ವರಾಜ್ಯ ಪಕ್ಷದ ವಿಷಯವಾಗಿ ಇಂಗ್ಲಂಡಿನಲ್ಲಿ, ಹಿಂದೂಸ್ಥಾನದ ಸ್ವರಾಜ್ಯದ ಹಿತಶತ್ರುಗಳು ಎಷ್ಟೊ ತಪ್ಪು ತಿಳಿವುಗಳನ್ನು ಹುಟ್ಟಿಸಿದ್ದಾರೆ. ಅವುಗಳನ್ನು ಹೋಗಲಾಡಿಸುವುದು ನಮ್ಮ ಕರ್ತವ್ಯವಾಗಿದೆ. ಈ ಕಾರಣದಿಂದ ಶ್ರೀ. ಸತ್ಯಮೂರ್ತಿಗಳು ವಿಲಾಯತಿಗೆ ಪ್ರಯಾಣ ಬೆಳಿಸಿದ್ದಾರೆ. ಸ್ವತಂತ್ರ ಮಜೂರ ಪಕ್ಷದವರು ಇಂಗ್ಲಂಡಿನಲ್ಲಿ ಮತ್ತು ಐರ್ಲೆಂಡಿನಲ್ಲಿ ಇವರ ಉಪನ್ಯಾಸಗಳ ವ್ಯವಸ್ಥೆಯನ್ನು ಮಾಡಿದ್ದಾರೆ. ಹಿಂದೂಸ್ಥಾನದಲ್ಲಿರುವ ಈಗಿನ ರಾಜಕೀಯ ಪಕ್ಷಗಳ ಪೈಕಿ ಸ್ವರಾಜ್ಯ ಪಕ್ಷವು ಅತ್ಯಂತ ಕ್ರಮವುಳ್ಳದ್ದೂ, ಸುಸಂಘಟಿತವೂ, ಲೋಕಪ್ರಿಯವೂ ಆಗಿದೆ ಎಂಬುದನ್ನು ಅಲ್ಲಿಯ ಜನತೆಯ ಲಕ್ಷ್ಯಕ್ಕೆ ತಂದು ಕೊಡುವುದು ಈಗ ಪ್ರಕೃತವಾಗಿದೆ. ಅಲ್ಲದೆ ಹಿಂದಿ ಸ್ವರಾಜ್ಯದ ದಾರಿಯಲ್ಲಿ ಇನ್ನು ಯಾವ ಅಡ್ಡಿಗಳು ಇರುವವೊ ಅವುಗಳನ್ನು ಕೂಡ ದೂರಪಡಿಸುವದು ಹಿಂದಿ ಚಳವಳಿಗಾರರ ಪ್ರಧಾನ ಕರ್ತವ್ಯವು. ಈ ಕರ್ತವ್ಯವನ್ನು ಸಾಗಿಸಲು ಸತ್ಯಮೂರ್ತಿಯವರು ಯೋಗ್ಯರಿದ್ದಾರೆಂದು ನಾವು ಭರವಸೆ ಪಟ್ಟಿದ್ದೇವೆ. ಕಾರಣ, ಸತ್ಯಮೂರ್ತಿಯವರ ವಕ್ತೃತ್ವವು ಬಹು ಮೋಹಕವಾಗಿದ್ದು, ಪ್ರಸಂಗಾವಧಾನತೆ, ವಾದವಿವಾದ ಕೌಶಲ್ಯ, ಸ್ವಮತ ಪ್ರತಿಪಾದನ ನೈಪುಣ್ಯ ಇತ್ಯಾದಿ ವಕ್ತೃತ್ವದ ಇತರ ಗುಣಗಳಾದರೂ ಅವರಲ್ಲಿ ಧಾರಾಳವಾಗಿವೆ. ಅಲ್ಲದೆ, ಅವರು ಈ ಮೊದಲು ಎಂದರೆ ೧೯೧೯-೧೯೨೦ರಲ್ಲಿ ವಿಲಾಯತಿಯಲ್ಲಿ ಅನೇಕ ಕಡೆಗಳಲ್ಲಿ ಸಂಚರಿಸಿ ಉಪನ್ಯಾಸಗಳನ್ನು ಕೊಟ್ಟಿರುವುದರಿಂದ ಅವರಿಗೆ ಇಂಗ್ಲಂಡಿನ ಅನುಭವವೂ ಸಾಕಷ್ಟಿದೆ. ಅದ್ದರಿಂದ ಅವರ ಈಗಿನ ಪ್ರಯಾಣವು ಚಲೊ ರೀತಿಯಿಂದ ಎಂದರೆ ಸ್ವರಾಜ್ಯ ಪ್ರಾಪ್ತಿಯ ದೃಷ್ಟಿಯಿಂದ ಒಳ್ಳೆದಾಗಿ ಪರಿಣಮಿಸಲೆಂದು ನಾವು ಹೃತ್ಪೂರ್ವಕವಾಗಿ ಇಚ್ಛಿಸುತ್ತೇವೆ.

೨. ಗಾಂಧಿಜಿಯವರು ಕಲಕತ್ತೆಗೆ ಹೋಗುವಾಗ ದಾರಿಯಲ್ಲಿ ಅವರಿಗೆ ನಾಗಪುರದೊಳಗಿನ ರಾಷ್ಟ್ರೀಯ ಸಭೆಯ ಕಾರ್ಯಪದ್ಧತಿಯ ರಿಪೋರ್ಟು ಕೊಡಲ್ಪಟ್ಟಿತ್ತು. ಅದನ್ನು ವಿಮರ್ಶಿಸಿ ಮಹಾತ್ಮಾಜಿಯವರು ಒಂದು ಲೇಖವನ್ನು ಯಂಗ್ ಇಂಡಿಯದಲ್ಲಿ ಪ್ರಕಟಿಸಿರುವರು. ಕೊಂಗ್ರೆಸ್ ಸಭಾಸದತ್ವವು ೪ ಆಣೆಯದಿರುವಾಗ ನಾಗಪುರ ಪಟ್ಟಣದಲ್ಲಿ ೧೧೩೩ ಸಭಾಸದರಿದ್ದರು. ಕಳೆದ ಬೆಳಗಾಂವಿನ ರಾಷ್ಟ್ರೀಯ ಸಭೆಯಲ್ಲಿ ನೂಲಿನ ಮತದಾನ ಪದ್ಧತಿಯ ಠರಾವು ಪಾಸಾದಂದಿನಿಂದ ಅಲ್ಲಿಯ ಸಭಾಸದರ ಸಂಖ್ಯೆಯು ಕಡಿಮೆಯಾಗುತ್ತ ಬಂದು ಕೊನೆಗೆ ಆ ಸಂಖ್ಯೆಯು ೧೦೭ಕ್ಕೆ ಬಂದು ನಿಂತಿದೆ. ಈ ಬಗ್ಗೆ ಗಾಂಧಿಜಿಗಳು ಯಾವ ತರದ ಸಮಾಧಾನವನ್ನು ಮಾಡಿಕೊಳ್ಳುತ್ತಿದ್ದಾರೆ ಅಥವಾ ಲೋಕಕ್ಕೆ ಹೇಳುತ್ತಿದ್ದಾರೆ ಎಂಬುದನ್ನು ಪ್ರತ್ಯೇಕವಾಗಿ ಬರೆಯಬೇಕಾದ ಅಗತ್ಯವಿಲ್ಲ. ಸಭಾಸದರ ಸಂಖ್ಯೆಯು ಹೆಚ್ಚಿರುವದು ರಾಷ್ಟ್ರೀಯ ಸಭೆಯ ಪ್ರಗತಿಗೆ ಸಾಧಕವಲ್ಲ. ನೂಲುವ ಸಭಾಸದರು ಕಡಿಮೆ ಇದ್ದರೂ ಬಾಧಕವಿಲ್ಲ. ಅದು ಯಶಸ್ವಿ ಎಂದೆ ತಿಳಿಯಬೇಕು. ಈ ತರದ ವಿಚಾರ ಸರಣಿಯನ್ನು ಗಾಂಧಿಜಿಯವರು ಇತ್ತ [illegible] ಪ್ರತಿಪಾದಿಸುತ್ತಿರುವ ಕಾರಣ ನಾಗಪುರದ ಈ ಸಂಗತಿಯನ್ನೂ ಅದನ್ನೆ ಅವರು ಅವಲಂಬಿಸಿಯಾರೆಂದು ಸಹಜವಾಗಿಯೆ ಹೇಳಬಹುದು. ಇರಲಿ, ನೂಲಿನ ಮತದಾನವು ಕೊಂಗ್ರೆಸ್ ಸಭಾಸದತ್ವದ ಪಾತ್ರತೆಯ ಸ್ಥಾನವನ್ನು ಪಡೆದಂದಿನಿಂದ ನಾಗಪುರದಲ್ಲಿ ಎಂದಲ್ಲ, ಇತರ ಅನೇಕ ಕಡೆಗಳಲ್ಲೂ, ಸ್ವಂತ ನಮ್ಮ ಕರ್ನಾಟಕದಲ್ಲೂ ಕೂಡ ರಾಷ್ಟ್ರೀಯ ಸಭೆಯ ಸಭಾಸದರ ಸಂಖ್ಯೆಯು ಇಳಿದು ಹೋಗಿದೆಂದು ಕೇಳುತ್ತಿದ್ದೇವೆ. ಕರ್ನಾಟಕವು ಹತ್ತಿ ಬೆಳೆಯುವ ನಾಡು. ಅಂಥ ಕಡೆಯಲ್ಲಿ ಸಹ ನೂಲಿನ ಸಭಾಸದರ ಸಂಖ್ಯೆಗೆ ಇಳಿತ ಬರೋಣವೆಂದರೆ ಅತ್ಯಂತ ಶೋಚನೀಯವಾದ ಮಾತು. ಆದರೆ ಇಷ್ಟರ ಮೇಲಿಂದ ದೇಶೋನ್ನತಿಯ ವಿಷಯವಾಗಿಯಾಗಲಿ ರಾಷ್ಟ್ರೀಯ ಸಭೆಯ ವಿಷಯವಾಗಿಯಾಗಲಿ ಜನರಲ್ಲಿ ಅನಾದರವುಂಟಾಗಿದೆ ಎಂದು ಯಾರಾದರೂ ಒಂದು ಸಿದ್ಧಾಂತವನ್ನು ಹೊರಡಿಸಿದರೆ ಅದು ಮಾತ್ರ ಸರಿಯಾಗಲಾರದು. ಮುಂಚಿನಂತೆ ಹೇಳಬೇಕಿದ್ದರೆ, ದೋಷವು ಕಾರ್ಯಕ್ರಮದಲ್ಲಿಯೂ ಇದೆ. ಇದನ್ನರಿತು ಅದರಲ್ಲಿ ಪುನಃ ಯೋಗ್ಯ ಬದಲಾವಣೆ ಮಾಡುವುದು ಅವಶ್ಯವೆಂದು ಯಾರೂ ಹೇಳದೆ ಇರಲಿಕ್ಕಿಲ್ಲ. ಪ್ರಾಚೀನ ಕಾಲದಲ್ಲಿರುವ ವರ್ಣ ವ್ಯವಸ್ಥೆಯು ಉತ್ತಮವಾದ್ದು, ಮತ್ತು ಅದು ಶ್ರಮವಿಭಾಗ ತತ್ವವನ್ನು ಸರಿಯಾಗಿ ಪೋಷಿಸುತ್ತದೆ ಎಂದು ಯಾವ ಮಹಾತ್ಮಾಜಿಯವರು ಪ್ರತಿಪಾದಿಸುತ್ತಾರೊ ಅವರೆ ಶ್ರಮವಿಭಾಗ ತತ್ವಕ್ಕೆ ಪೆನ್ಶನು ಕೊಟ್ಟು ಕೊಂಗ್ರೆಸ್ ಸಭಾಸದರೆಲ್ಲರೂ ಚರಕ ಹಿಡಿಯಬೇಕೆಂದು ಅಗ್ರಹ ಹಿಡಿಯುವದು ವಿಸಂಗತವಲ್ಲವೆ?

೩. ಪ್ರಾಂತಿಕಾಧಿಪತಿಗಳಿಗೆ ಇತರ ಪರಿವಾರವಿರುವಂತೆ ಬೇಂಡಿನ ಆಡಂಬರವೂ ಇರುತ್ತದೆ. ಅವರಿಗಿರತಕ್ಕ ಬೇಂಡು ಅವರ ಖರ್ಚಿನಿಂದ ಅಲ್ಲ. ಇಡ ಪ್ರಜೆಗಳು ಅವರ ಸಲುವಾಗಿ ತಮ್ಮ ಪೆಟ್ಟಿಗೆಯಿಂದ ಕರವನ್ನು ಕೊಡಬೇಕಾಗುತ್ತದೆ. ಬೇಂಡಿನ ಖರ್ಚು ವಿಶೇಷವಲ್ಲ, ಏನೊ ಅಲ್ಪ ಸ್ವಲ್ಪವಾಗಿದೆ. ಇಂಥ ಅಲ್ಪ ಸ್ವಲ್ಪ ಖರ್ಚಿನಲ್ಲಿ ಸಂಸ್ಥಾನಾಧಿಪತಿಗಳ ಕರ್ಣಾನಂದವನ್ನುಂಟು ಮಾಡಲು ಪ್ರಜೆಗಳು ಯಾಕೆ ಉದ್ಯುಕ್ತರಾಗಬಾರದು? ಅದು ಅವರ ಕರ್ತವ್ಯವಲ್ಲವೆ? ಎಂದು ಮುಂತಾದ ಯುಕ್ತಿವಾದವನ್ನು ಯಾರಾದರೂ ಹೇಳಿಯಾರು! ಆದರೆ ಒಬ್ಬೊಬ್ಬ ಗವರ್ನರರಿಗಿರುವ ಬೇಂಡಿನ ಖರ್ಚಿನ ಅಂಕೆಯನ್ನು ಕೇಳಿದರೆ ಈ ದುಂದುಗಾರಿಕೆ ಇನ್ನೆಷ್ಟು ಸಮಯ ನಡಿಯಬೇಕೆಂಬುದಾಗಿ ಉದ್ವೇಗದಿಂದ ಯಾರೂ ಸವಾಲನ್ನು ಕೇಳದೆ ಬಿಡಲಿಕ್ಕಿಲ್ಲ. ಉದಾಹರಣಾರ್ಥವಾಗಿ ಬಂಗಾಲ ಗವರ್ನರರ ಬೇಂಡಿನ ಇಲಾಖೆಗೆ ೮೨ ಸಾವಿರ ರೂಪಾಯಿ ಖರ್ಚು ತಗಲುವದು! ಇದರ ಅರ್ಥವೇನು, ಆದರೆ ಇದನ್ನು ಯಾರು ಸಹಿಸಿಯಾರು? ಅದ್ದರಿಂದ ಬಂಗಾಲ ಕೌನ್ಸಿಲಿನಲ್ಲಿ ಖರ್ಚಿನ ಹಣಕ್ಕೆ ಮಂಜೂರಾತಿಯನ್ನು ಕೊಡುವ ಸಂದರ್ಭದಲ್ಲಿ ಗವರ್ನರರ ಬೇಂಡಿನ ಇಲಾಖೆಯ ೮೨ ಸಾವಿರದ ಖರ್ಚನ್ನು ಕಡಿಮೆ ಮಾಡಲು ಕೌನ್ಸಿಲು ೪೨ ಸಾವಿರಕ್ಕೆ ಅದನ್ನು ತಂದು ನಿಲ್ಲಿಸಿತು. ಈ ೪೨ ಸಾವಿರದ ಪ್ರಕಾರ ಆರು ತಿಂಗಳಿಗೆ ೨೧ ಸಾವಿರ ಬೀಳುತ್ತದೆ. ಆದರೆ ಗವರ್ನರರು ೬೦ ಸಾವಿರದ ವಾರ್ಷಿಕ ಖರ್ಚನ್ನು ಹಿಡಕೊಂಡು ಅದಕ್ಕನುಸಾರವಾಗಿ ಆ ೨೧ ಸಾವಿರದಲ್ಲಿ ಇನ್ನು ೧೮ ಸಾವಿರ ಹೆಚ್ಚು ಕೂಡಿಸಲು ಸರ್ಟಿಫಿಕೇಶನಿನ ಅಧಿಕಾರವನ್ನು "ಬಜಾಯಿಸಿ ಬಿಟ್ಟರು"! ಇಂಥ ಅನವಶ್ಯಕ ಸಂಗತಿಗಳ ಖರ್ಚನ್ನು ಕೂಡ ಜನತೆಯ ಅಪೇಕ್ಷೆಯ ಮೇರೆಗೆ ಕಡಿಮೆ ಮಾಡಲು ಸರಕಾರವು ತಯಾರಿಲ್ಲ, ಇದರ ಮೇಲಿಂದ ಅಧಿಕಾರಿಗಳ ಅಧಿಕಾರ ಲೋಲುಪತೆ ಮತ್ತು ದುರಭಿಮಾನ ಇವು ಸರಿಯಾಗಿ ಪ್ರತೀತವಾಗುತ್ತವೆ. ಆದರೆ ಈ ದೋಷಗಳು ಹೋದ ಹೊರತು ಅಧಿಕಾರ ಮಂಡಲವು ಶುದ್ಧವಾಗಲಿಕ್ಕಿಲ್ಲ.

೪. ಮ| ಗಾಂಧಿಗಳು ಬಂಗಾಲದಲ್ಲಿ ಸಂಚಾರವನ್ನು ಬೆಳಿಸಿರುವಾಗ ಡೊ. ಮೊರೆನೊ ಎಂಬ ಒಬ್ಬ ಎಂಗ್ಲೊ ಇಂಡಿಯನ್ ಗೃಹಸ್ಥನು ಗಾಂಧಿಗಳ ಭೇಟಿಯನ್ನು ಪಡಕೊಂಡನು. ಈ ಇಬ್ಬರ ಭೇಟಿಯಲ್ಲಿ ನಡೆದ ಸಂವಾದವು ರಮ್ಯವಾಗಿತ್ತು. ಡೊ. ಮೊರೆನೊ ಎಂಬವರಂತೆ ಇತರ ಎಂಗ್ಲೊ ಇಂಡಿಯನ್ ಬಂಧುಗಳು ನೆನಸುವುದಾದರೆ ಹಿಂದಿ ಸ್ವರಾಜ್ಯದ ಭಾವಿ ಕಾರ್ಯವು ಎಷ್ಟೊ ಸುಲಭವಾದೀತೆನ್ನಬಹುದು. ಎಂಗ್ಲೊ ಇಂಡಿಯನರ ಧರ್ಮವು ವಿದೇಶೀಯವಾಗಿದ್ದರೂ, ಮತ್ತು ಅವರ ನಡೆನುಡಿಗಳು ಕೂಡ ಯುರೋಪಿಯನರಂತೆ ಇದ್ದಾಗ್ಯೆಯಾದರೂ ಹಿಂದಿಗಳಂತೆಯೆ ಅವರಿಗೂ ಸ್ವರಾಜ್ಯಾಧಿಕಾರದಲ್ಲಿ ಯೋಗ್ಯವಾದ ಭಾಗವಿರತಕ್ಕದ್ದು ಉಚಿತವಾಗಿದೆ. ದೇಶಬಂಧು ದಾಸರು ಫರಿದಪುರದ ಭಾಷಣದಲ್ಲಿ ಎಂಗ್ಲೊ ಇಂಡಿಯನರಿಗೆ ಸಹ ಸ್ವರಾಜ್ಯದ ಹಕ್ಕುಗಳನ್ನು ಕೊಟ್ಟು ಅವರ ಚಿಕ್ಕ ಸಮಾಜದ ಸಂರಕ್ಷಣದ ಭಾರವನ್ನು ಹಿಂದಿ ಸ್ವರಾಜ್ಯವು ಎತ್ತಬೇಕು ಎಂದು ಹೇಳಿದ್ದರು. ಅವರ ಈ ಮಾತಿನ ಬಗ್ಗೆ ಡೊ. ಮೊರೆನೊ ಇವರು ಮ. ಗಾಂಧಿಗಳೊಡನೆ ತನ್ನ ಸಮಾಧಾನವನ್ನು ವ್ಯಕ್ತಗೊಳಿಸಿದರು. ಕೊನೆಗೆ ಗಾಂಧಿಜಿಯವರು ಎಂಗ್ಲೊ ಇಂಡಿಯನರ ದಾರಿದ್ರ್ಯಕ್ಕೆ "ನೂಲುವದೆ" ಮುಖ್ಯವಾದ ಪ್ರತಿಕಾರವೆಂದು ಒತ್ತಿ ಹೇಳಿದರು. ಇರಲಿ. ಎಂಗ್ಲೊ ಇಂಡಿಯನರು ಇದೇ ಪ್ರಕಾರವಾಗಿ ಹಿಂದಿ ಸ್ವರಾಜ್ಯದ ಪ್ರಶ್ನೆಯ ಕಡೆಗೆ ಸಹಾನುಭೂತಿಯ ದೃಷ್ಟಿಯಿಂದ ನೋಡಿ ತಮ್ಮಿಂದಾಗುವ ಸತ್ ಸಹಾಯವನ್ನು ಕೊಟ್ಟಿದ್ದಾದರೆ ಉದ್ದಿಷ್ಟ ಕಾರ್ಯವು ಬೇಗನೆ ಕೈಗೂಡೀತೆಂದು ಆಶಿಸಬಹುದಾಗಿದೆ.

೫. ನಾಭಾ ಸಂಸ್ಥಾನದೊಳಗಿನ ಜೈಲುಗಳಲ್ಲಿ ಶಿಕ್ಷೆಯನ್ನು ಅನುಭವಿಸುತ್ತಿರುವ ಅಕಾಲಿ ಜನರ ಮೇಲೆ ಅಲ್ಲಿಯ ಜೈಲು ಅಧಿಕಾರಿಗಳು ಅತ್ಯಾಚಾರವನ್ನು ನಡಿಸಿದರೆಂದು ಶಿರೋಮಣಿ ಗುರದ್ವಾರ ಪ್ರಬಂಧಕ ಕಮಿಟಿಯು ಪ್ರಕಟಮಾಡಿತು. ಆಗ ಪಂಡಿತ ಮೋತಿಲಾಲ ನೆಹರು ಮುಂತಾದ ಎಸೆಂಬ್ಲಿಯ ಮೆಂಬರರು ಒಂದು ಸ್ವತಂತ್ರ ಕಮ್ಮಿಟಿಯನ್ನು ಸ್ಥಾಪಿಸಿ ಅಧಿಕಾರಿಗಳ ವರ್ತನವು ಯಾವ ರೀತಿಯಾಗಿತ್ತೆಂಬುದನ್ನು ಸ್ಪಷ್ಟ ಮಾಡಲು ಅದಕ್ಕೆ ಅಧಿಕಾರವನ್ನು ಕೊಡಬೇಕಾಗಿ ಹಿಂದುಸ್ಥಾನ ಸರಕಾರಕ್ಕೆ ಬರಕೊಂಡರು. ಆದರೆ ಸರಕಾರವು ನೆಹರುಗಳ ಹೇಳಿಕೆಗೆ ಸಮ್ಮತಿಯನ್ನು ಕೊಡದೆ ಸ್ವತಃ ತಾನೆ ಒಂದುಪ್ರಕಟನೆಯನ್ನು ಹೊರಡಿಸಿ ಅದರಲ್ಲಿ ಸರಕಾರ ಜೈಲು ಅಧಿಕಾರಿಗಳು ಬೇಕಾಯಿದೆ ರೀತಿಯಿಂದ ನಡಿಯಲಿಲ್ಲವೆಂದು ಹೇಳಿದೆ. ಸರಕಾರದ ಹೇಳಿಕೆಯಲ್ಲಿ ಸತ್ಯಾಂಶವಿದ್ದದಾದರೆ ನೆಹರುಗಳ ಕಮ್ಮಿಟಿಗೆ ವಿಚಾರಮಾಡಲು ಯಾಕೆ ಸಮ್ಮತಿಕೊಡುವುದಿಲ್ಲ. ಸತ್ಯವು ಯಾರಿಂದ ಪರೀಕ್ಷೆಮಾಡಿದರೂ ಸತ್ಯವೆ ಹೊರತು ಇದ್ದ ಸ್ಥಿತಿಯು ಎಂದಿಗೂ ಬದಲಾಯಿಸುವುದಿಲ್ಲ. ಸರಕಾರದ ಈ ಕೃತ್ಯದಿಂದ ಅಲ್ಲಿಯ ಜೈಲುಗಳ ಸ್ಥಿತಿಯು ಸರಿಯಾಗಿಲ್ಲವೆಂದು ಇನ್ನಷ್ಟು ಸ್ಪಷ್ಟವಾಗುತ್ತದೆ. ಅಲ್ಲದೆ ಸರಕಾರದ ಪ್ರಕಟನೆಯಲ್ಲಿಯ ಕೆಲವು ಭಾಗಗಳು ಈ ಸಂಶಯವನ್ನು ಇನ್ನಷ್ಟು ದೃಢಪಡಿಸುತ್ತವೆ. "ಜೈಲುಗಳ ಕಾಯಿದೆಯನ್ನು ಕೆಲವು ಕೈದಿಗಳು ಮುರಿದರು, ಈ ಸಂದರ್ಭದಲ್ಲಿ ವ್ಯವಸ್ಥೆಯನ್ನು ಇಡುವದಕ್ಕಾಗಿಯೆ ಜೈಲ ಅಧಿಕಾರಿಗಳು ಪ್ರಯತ್ನಪಟ್ಟರು. ಆಗ ಇಬ್ಬರಲ್ಲಿಯೂ ಕಲಹ ಉಂಟಾಗಲು ಸರಕಾರದ ಪಕ್ಷಕ್ಕೆನೆ ಹೆಚ್ಚಿನ ಹಾನಿಯಾಯಿತು". ಹೀಗೆ ಆ ಪ್ರಕಟಣೆಯಲ್ಲಿದೆ. ಈ ಮಾತುಗಳು ಎಷ್ಟರ ಮಟ್ಟಿಗೆ ವಿಶ್ವಾಸನೀಯವೆಂದು ತಜ್ಞರೆ ತಿಳಕೊಂಡಾರು. ಮುಖ್ಯವಾಗಿ ಈ ಪ್ರಕರಣದಿಂದ ಸರಕಾರದ ಅನ್ಯಾಯದ ವರ್ತನೆಯು ಬಹಿರಂಗಕ್ಕೆ ಬಂದಿದೆ.

೬. ಕೆಲವು ದಿವಸಗಳ ಹಿಂದೆ ಮೈಸೂರಿನ ದಿವಾನರಾದ ಬೆನರ್ಜಿಯವರನ್ನು ಹಾಗು ಪಾಟ್ನಾದಲ್ಲಿಯ ಕಮಿಶನರಾದ ಸೇನರನ್ನೂ ಪಾಟ್ನಾ ಸ್ಟೇಶನಿನಲ್ಲಿ ಒಬ್ಬ ಯುರೋಪಿಯನನು ಬೈದನೆಂದು ಈ ಮೊದಲು ನಾವು ತಿಳಿಸಿರುವೆವು. ಅವನ ಆ ದುರ್ವರ್ತನೆಯ ಸಂಬಂಧ ಅವನ ಮೇಲೆ ಇಬ್ಬರೂ ಗೃಹಸ್ಥರು ಮಾನನಷ್ಟದ ದಾವೆಯನ್ನು ಮಾಡಿದ್ದರು. ಈ ಪ್ರಕಾರ ಬೆಣ್ಣೆಯು ಬಿಸಿಯಾದ ಕೂಡಲೆ ಯುರೋಪಿಯನನು ಕಣ್‌ತೆರೆದು ಸ್ಮೃತಿಯ ಮೇಲೆ ಬಂದನೆಂದು ತೋರುತ್ತದೆ, ಕಾರಣ ಸದ್ಯದಲ್ಲಿಯೆ ಅವನು ಶ್ರೀಯುತ ಸೇನರಿಗೆ ಒಂದು ಪತ್ರ ಬರೆದು ಅದರಲ್ಲಿ ತಾನು ಬೇಕೆಂದು ಹಾಗೆ ವರ್ತಿಸಿದ್ದಲ್ಲ. ಏನೋ ಮತಿಭ್ರಾಂತಿಯಿಂದ ಹಾಗೆ ನಡೆದೆನು. ಅಲ್ಲದೆ ತಾವು ಯಾರಿದ್ದೀರೆಂದು ನನಗೆ ಆಗ ಗೊತ್ತಿರಲಿಲ್ಲ. ಅದ್ದರಿಂದ ತನ್ನನ್ನು ಕ್ಷಮಿಸಬೇಕಾಗಿ ಬೇಡಿಕೊಂಡನು. ಇದಲ್ಲದೆ ತಾನು ಸ್ವತಃ ಪಾಟ್ನಾಕ್ಕೆ ಬಂದು ತಮ್ಮ ಕ್ಷಮೆ ಬೇಡುತ್ತೇನೆಂದು ಕೂಡ ಅತನು ತಿಳಿಸಿದನು. ಮತ್ತು ಆ ಪ್ರಕಾರ ಸ್ವತಃ ಕ್ಷಮೆ ಕೇಳಿ ತನ್ನ ಮತಿಭ್ರಾಂತಿಗೆ ಪ್ರಾಯಶ್ಚಿತವನ್ನು ತೆಕ್ಕೊಂಡನು. ಎಂಗ್ಲೊ ಇಂಡಿಯನರಾಗಲಿ, ಯುರೋಪಿಯನರಾಗಲಿ ಹಿಂದಿಗಳ ಮೇಲೆ ಹರಿದು ಬೀಳುವುದು ಇದು ಪ್ರಥಮದ ಉದಾಹರಣೆಯಲ್ಲ. ಇಂಥ ಸಂಗತಿಗಳು ರೈಲ್ವೆಯಲ್ಲಿ ಪ್ರತಿದಿವಸವೂ ಎಷ್ಟೋ ನಡಿಯುತ್ತಿವೆ. ಇಂಥ ಪ್ರಸಂಗದಲ್ಲಿ ಹಿಂದಿಗಳು ಅನ್ಯಾಯವನ್ನು ಸಹಿಸಿಕೊಂಡು ಸುಮ್ಮನಿರುವವರು ಸಹ ಇರುವರು. ಇವರು ಹೀಗೆ ಮಾಡದೆ ಅಂಥ ಪುಂಡರನ್ನು ಆಗಾಗ್ಗೆ ಸ್ಮೃತಿಯ ಮೇಲೆ ತರುವುದು ಉತ್ತಮವು. ಹೀಗೆ ಮಾಡಿದರೆ, ಹಿಂದಿಗಳನ್ನು ಯಾವ ಕ್ಷುಲ್ಲಕಭಾವದಿಂದ ಇವರು ನೋಡುತ್ತಾರೊ ಅದೆಲ್ಲವೂ ಹೋದೀತೆಂಬುದರಲ್ಲಿ ಸಂಶಯವಿಲ್ಲ.

ಮಂಗಳೂರು.

ಶ್ರೀಯುತ ವಕೀಲ ಎಮ್. ಮಾಧವರಾವ್ ಬಿ. ಎ. ಬಿ. ಎಲ್.ರವರು ಸನ್ಯಾಸಿಗುಡ್ಡೆಯಲ್ಲಿರುವ ಆರ್ಯಸಮಾಜ ಮಂದಿರದಲ್ಲಿ ಇದೇ ತಿಂಗಳ ತಾ. 17ನೇ ಆದಿತ್ಯವಾರ ಬೆಳಿಗ್ಗೆ ಘಂಟೆ 7-45ಕ್ಕೆ "ವಿಧವಾ ವಿವಾಹ ಸಂಘ"ದ ಕುರಿತು ಸಾರ್ವಜನಿಕ ಭಾಷಣ ಕೊಡುವರು. ಎಲ್ಲರಿಗೂ ಸ್ವಾಗತವಿದೆ.

ಮಂಗಳೂರು ಶಹರ| ಡೊಂಗರ ಕೇರಿಯಲ್ಲಿರುವ ಬ್ರಾಹ್ಮಸಮಾಜದ ಮಂದಿರದಲ್ಲಿ ಇದೇ ತಿಂಗಳ ತಾ. 17ನೇ ಆದಿತ್ಯವಾರ ಬೆಳಿಗ್ಗೆ 7-30ಕ್ಕೆ ಮ| ರಾ| ಕುದ್ಮುಲ ರಂಗರಾಯರು ಕನ್ನಡದಲ್ಲಿ ದೇವಾರಾಧನ ಮತ್ತು ಧರ್ಮಸಾಧನವೆಂಬ ವಿಷಯದಲ್ಲಿ ಉಪನ್ಯಾಸ ಮಾಡುವರು. ಸರ್ವರಿಗೂ ಸುಸ್ವಾಗತವಿದೆ.

ಇದೇ ಕಳೆದ ತಾ. ೮ನೇ ಶುಕ್ರವಾರ ಪೂರ್ವಾಹ್ನಕ್ಕೆ ಇಲ್ಲಿಯ ವೆಬ್ಸ್ಟರ್ ಮಾರ್ಕೆಟು ರಸ್ತೆಯ ಹೊಸ ಕಟ್ಟೋಣದಲ್ಲಿ ಕವಿಭೂಷಣ ಕೆ. ಪಿ. ವೆಂಕಪ್ಪ ಶೆಟ್ರವರ ಶ್ರೀ ಸಿದ್ಧಾರೂಢ ಆಯುರ್ವೇದ ಔಷಧಾಲಯವು ವಕೀಲ ಶ್ರೀ| ಗಂಗೊಳ್ಳಿ ಕೃಷ್ಣರಾಯರವರಿಂದ ತೆರೆಯಲ್ಪಟ್ಟಿತು. ಈ ಸಮಾರಂಭಕ್ಕೆ ಶ್ರೀಗಳಾದ ಮುನ್ಸಿಪಾಲ್ ಚೆಯರ್ಮೆನ್ ಸೆಲ್ಲಿಕಾಯಿ ವೆಂಕಟ್ರಾವ್, ಮಾಜಿ ಜಿಲ್ಲಾ ರಿಜಿಸ್ಟ್ರಾರ್ ಪ. ರಾಮಕೃಷ್ಣಯ್ಯ ರಾವ್‌ಬಹದ್ದೂರ್ ಎ. ರಾಮಯ್ಯಪೂಂಜರು, ರಾವ್‌ಸಾಹೇಬ್ ಬಿ. ಮಹಾಬಲ ಹೆಗಡೇರು, ಅತ್ತಾವರ ಬಾಲಕೃಷ್ಣಶೆಟ್ರು, ಮುಲ್ಕಿ ರಾಮಕೃಷ್ಣಪೂಂಜರು, ಜಿಲ್ಲಾ ಲೇಬರ್ ಆಫೀಸರ್ ಎ. ತಿಮ್ಮಪ್ಪ ಪೂಂಜರು, ಹೈಕೋರ್ಟು ವಕೀಲ್ ಬಿ ಆರ್. ವ್ಯಾಸರಾಯಾಚಾರ್ಯರು ಮೊದಲಾದ ಪ್ರಮುಖ ಮಹನೀಯರುಗಳೂ, ಹಲವು ಮಂದಿ ಡಾಕ್ಟರುಗಳೂ, ವೈದ್ಯರುಗಳೂ ಹಾಜರಿದ್ದರು. ಶ್ರೀ| ರಮಾನಾಥ ರಾಯರ ಮಂಗಲ ಗೀತದೊಡನೆ ಸಭಾರಂಭವಾದ ಬಳಿಕ ಶ್ರೀ. ಪಿ. ರಾಮಕೃಷ್ಣಯ್ಯನವರು, ಶ್ರೀ ವೆಂಕಪ್ಪ ಶೆಟ್ಟರವರು ಸ್ವತಃ ತಯಾರಿಸಿರುವ ಔಷಧಿಗಳ ವಿಶೇಷತೆ ಮತ್ತು ಅವರ ಚಿಕಿತ್ಸಾ ಕೌಶಲವನ್ನು ಸಭಿಕರಿಗೆ ವಿವರಿಸಿ ಹೇಳಿದರು. ನಂತರ ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರಿಗಳೂ, ವಿದ್ಯಾವಾಚಸ್ಪತಿ ಓಷ್ಟಮನೆ ಆತ್ಮಾರಾಮ ಶಾಸ್ತ್ರಿಗಳೂ, ಬ್ರ| ಶ್ರೀ| ಸೀತಾರಾಮಾಚಾರ್ಯರೂ, ಆಯುರ್ವೇದದ ಮಹತ್ವದ ಕುರಿತು ಭಾಷಣಮಾಡಿ, ಶ್ರೀ| ಶೆಟ್ರು ಪ್ರಾರಂಭಿಸಿದ ಕಾರ್ಯವು ಶ್ರೇಯೋಭಿವೃದ್ಧಿಯಾಗಲೆಂದರು. ನಂತರ ನೆರೆದಿದ್ದ ಸಭಿಕರಿಗೆಲ್ಲಾ ಪುಷ್ಪ, ಫಲ, ಪಾನಕ, ತಾಂಬೂಲಾದಿಗಳಿಂದ ಸತ್ಕರಿಸಲಾದ ಬಳಿಕ, ಔಷಧಾಲಯವು ಶ್ರೀ| ಕೃಷ್ಣರಾಯರಿಂದ ತೆರೆಯಲ್ಪಟ್ಟಿತು.

ಇಲ್ಲಿನ ಕೆನರಾ ಕ್ರಿಶ್ಚಿಯನ್ ಸಿವಿಕ್ ಲೀಗಿನವರು ತಮ್ಮದೊಂದು ಸಭೆಯಲ್ಲಿ, ಮಂಗಳೂರು ತಾಲೂಕು ಬೋರ್ಡು ಚುನಾವಣೆಗೆ ಉಮೇದ್ವಾರರಾಗಿ ನಿಂತಿರುವ ವಿ. ಬಿ. ಎಮ್. ಡಿ'ಸೋಜರಿಗೆ ತಾವು ಸಂಪೂರ್ಣ ಸಹಾಯ ಮಾಡಬೇಕೆಂಬ ಠರಾವು ಮಂಜೂರು ಮಾಡಿರುವರು.

ಡಿಸ್ಟ್ರಿಕ್ಟ್ ಬೋರ್ಡಿನ ಸಭೆಯು ಬರುವ ತಾ. ೩೦ನೇ ಶನಿವಾರ ಅಪರಾಹ್ನ ಘಂಟೆ ೨-೩೦ಕ್ಕೆ ಕಲೆಕ್ಟರರ ಆಫೀಸಿನಲ್ಲಿ ಜರಗುವದು.

The Calicut Bank, Ltd.,
ದಿ ಕೆಲಿಕಟ್ ಬೇಂಕ್, ಲಿಮಿಟೆಡ್,
ಹೆಡ್ ಆಫೀಸು — ಕಲ್ಲಿಕೋಟೆ.
ಬ್ರಾಂಚುಗಳು: — ಮುಲ್ಲಸ್‌ಚೇರಿ, ತಲಚೇರಿ, ಕೊಚ್ಚಿ ಮತ್ತು ಪಾಲ್ಘಾಟು.
ರಿಜಿಸ್ಟರ್ಡ್ ಮತ್ತು ಅಧಿಕಾರಗೊಳಿಸಲ್ಪಟ್ಟ ಮೂಲಧನ ರೂ. 5,00,000—0—0.
ರೂಪಾಯಿ 10ರ 50,000 ಪಾಲುಗಳು.
(30—8—1924)ರ ವರೆಗೆ ಮೌಲ್ಯ ಮೂಲಧನ ರೂಪಾಯಿ 1,81,850—0—0.
ಒಂದು ವರುಷದ ಕಾಯಂ ಠೇವಣಾತಿಗೆ ಬಡ್ಡಿ ದರ ಸೇಕಡಾ ರೂ. 7—8—0.
ಕಳೆದ 4 ವರುಷಗಳಲ್ಲಿ ಪಾಲುಗಾರರಿಗೆ ಸೇಕಡಾ 12ರಂತೆ ಬಡ್ಡಿ ಹಂಚಿದೆ.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.
ಸಿ. ಕೃಷ್ಣನ್, ಬಿ. ಎ. ಬಿ. ಎಲ್.,
ಮೆನೇಜಿಂಗ್ ಡ್ಯಾರೆಕ್ಟರ್.
ಡ್ಯಾರೆಕ್ಟರರಲ್ಲಿ ಒಬ್ಬರು—
ಎಮ್. ನಾರಾಯಣ. ಕಾಮತ್, ಬಿ. ಎ.,
ಪ್ಲೀಡರ್, ಕುಂದಾಪುರ.

॥ ಶ್ರೀ ಮಂಜುನಾಥ ಪ್ರಸನ್ನಃ ॥

ಅಯ್ಯಾ,

ಕಳೆದ ಮದ್ರಾಸ್ ನ್ಯಾಯವಿಧಾಯಕ ಸಭೆಯ ಮೆಂಬರಿಕೆ ಚುನಾವಣೆಯಲ್ಲಿ ನೀವುಗಳು ವಾತ್ಸಲ್ಯ, ಪ್ರೇಮ ಮತ್ತು ಶ್ರದ್ಧೆಯಿಂದ ನನಗೆ ತನುಮನಧನಗಳಿಂದ ಸಹಾಯಮಾಡಿದ್ದಕ್ಕಾಗಿ ನಿಮಗೆಲ್ಲ ತುಂಬ ಕೃತಜ್ಞನಾಗಿದ್ದೇನಲ್ಲದೆ ನಿಮ್ಮಗಳ ಉಪಕಾರ ಚಿರಸ್ಮರಣೀಯವಾಗಿದೆ. ಮತ್ತು ಇದಕ್ಕೋಸ್ಕರ ನನ್ನ ಹೃತ್ಪೂರ್ವಕವಾದ ಧನ್ಯವಾದಗಳು ನಿಮಗಿರಲಿ. (2). ಆಸ್ತಿಕರಾದ ನಾವುಗಳೆಲ್ಲ ಶ್ರೀ ದೇವರ ಭಕ್ತಿಯುಳ್ಳವರಾಗಿದ್ದು ಸಕಲತರದ ಭೇದಭಾವನೆಗಳನ್ನು ಮೂಲೆಗೊತ್ತಿಯೂ ಪರಸ್ಪರ ಪ್ರೀತಿಯುಳ್ಳವರಾಗಿಯೂ ಮತ್ತು ಸರಳ ಹೃದಯವುಳ್ಳವರಾಗಿಯೂ ನಮ್ಮ ದೇಶದ ಹಿತಸಾಧನೆಗೆ ಪ್ರವರ್ತಿಸುವಲ್ಲಿ ಆ ಸರ್ವಶಕ್ತನಾದ ಭಗವಂತನು ಸಕಲ ವಿಧಗಳಲ್ಲಿಯೂ ನಮಗೆಲ್ಲಾ ಸಹಾಯಕನಾಗಿ ನಮ್ಮ ಸದುದ್ದೇಶವನ್ನು ನೆರವೇರಿಸಲೆಂದು ನನ್ನ ಪ್ರಾರ್ಥನೆ.

D MANJAYYA HEGGADE.

ಪತ್ರವ್ಯವಹಾರ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ವರಾಜ್ಯಪಕ್ಷದ

— ಭವಿತವ್ಯ. —

ಮೇಲಿನ ಶಿರೋನಾಮದಿಂದ ಶ್ರೀ ಮೂಳ್ಕಿ ವಾಮನ ಕುಡುವರು ಕಳೆದವಾರದ ಸ್ವದೇಶಾಭಿಮಾನಿಯಲ್ಲಿ ಪ್ರಕಟಿಸಿದ ಲೇಖನದಲ್ಲಿ ಶ್ರೀ ಎ. ಬಿ. ಶೆಟ್ಟರ ಮೇಲೆ ನಿರಾಧಾರವಾದ ಹಲವು ಆರೋಪಣೆಗಳನ್ನೂ ಒಂದಕ್ಕೊಂದು ವಿರುದ್ಧವಾದ ಹೇಳಿಕೆಗಳನ್ನೂ ಬರೆದಿರುವರು. ಅವರು ಪ್ರಥಮಕ್ಕೆ, ಶ್ರೀ ಎ. ಬಿ. ಶೆಟ್ಟರು ತನ್ನ ಅಪಜಯಕ್ಕೆ ಸ್ವರಾಜ್ಯಪಕ್ಷವನ್ನು ದೂರುವುದರಲ್ಲಿ ನ್ಯಾಯವಿಲ್ಲವೆಂದು ಹೇಳುತ್ತಾರೆ. ಕೌನ್ಸಿಲು ಚುನಾವಣೆಯ ಕಾಲದಲ್ಲಿ ಇಲ್ಲಿ ಸ್ವರಾಜ್ಯಪಕ್ಷವೆಂಬುದೇ ಇಲ್ಲದಿರುವಾಗ, ಚುನಾವಣೆಯ ಫಲಿತಾಂಶವು ಸ್ವರಾಜ್ಯಪಕ್ಷದಿಂದಲೇ ಉಂಟಾಯಿತೆಂದು ಯಾರಾದರೂ ಹೇಳುವುದು ಹೇಗೆ? ಶ್ರೀ ಶೆಟ್ಟರು ಆ ಪಕ್ಷವನ್ನು ಈ ಸಮ್ಬಂಧವಾಗಿ ದೂರಿದುದಾದರೂ ಎಲ್ಲಿ? ಮತ್ತು ಯಾವಾಗ? ಬಹುಶಃ ಶ್ರೀ ಕುಡುವರು ತಾ. 30—4—'25ನೇ ನವಯುಗದಲ್ಲಿ, "ಮಂಗಳೂರಲ್ಲಿ ಕರ್ನಾಟಕ ಸ್ವರಾಜ್ಯಪಾರ್ಟಿಯನ್ನು ಸ್ಥಾಪಿಸಲಿಕ್ಕೆ ಸಭೆಸೇರಿ, ಅದರ ಪರವಾಗಿ ಪ್ರಕಟಿಸಿದ ಮೆನಿಫೆಸ್ಟೋಗೆ ಸಹಿಹಾಕಿರುವವರ ಪೈಕಿ ಹಲವರು ಕಳೆದ ಚುನಾವಣೆಯಲ್ಲಿ ಯಾವ ರೀತಿ ವರ್ತಿಸಿದ್ದರು? ಅವರು ಯಾವ ಉಮೇದ್ವಾರರಿಗೆ ಯಾವ ಕಾರಣಗಳಿಂದ ಸಹಾಯಮಾಡಿದ್ದರು? ಮತ್ತು ಈ ಸಭೆಗೆ ಅಧ್ಯಕ್ಷರಾದ ಡಾ। ಯು. ರಾಮರಾಯರು ಈ ಚುನಾವಣೆಯಲ್ಲಿ ಏನು ಮಾಡಿದ್ದರು?" ಎಂದು ಬರೆದಿದ್ದುದರ ಮೇಲೆ ಈ ಟೀಕೆಯನ್ನು ಮಾಡಿರುವರೋ ಏನೋ? ಶ್ರೀ ಕುಡುವರಾಗಲಿ, ಅವರ ಪಕ್ಷದ ಇತರ ಗೃಹಸ್ಥರಾಗಲಿ ನವಯುಗದ ಮೇಲಿನ ಪ್ರಶ್ನೆಗಳಿಗೆ ಇನ್ನಾದರೂ ಉತ್ತರ ಕೊಡುವರೋ?

ಶ್ರೀ ಎ. ಬಿ. ಶೆಟ್ರು ತನ್ನ ಸೋಲಿಗೆ ಕೊಂಗ್ರೆಸು ಪಕ್ಷವೇ ಕಾರಣವೆಂದು ಎಲ್ಲಿಯೂ ದೂರಲಿಲ್ಲ. ಚುನಾವಣೆಯಲ್ಲಿ ಜಯಾಪಜಯವನ್ನುಂಟುಮಾಡಲು ನಮ್ಮ ಜಿಲ್ಲೆಯ ಕೊಂಗ್ರೆಸು ಪಾರ್ಟಿಯು ಅಷ್ಟು ಪ್ರಬಲವಾಗಿಯೂ ಇಲ್ಲ. ಅದರ ಮೆಂಬರರೊಳಗೆ ಹೆಚ್ಚಿನ ಐಕ್ಯವೂ ಇಲ್ಲ. ಉಡುಪಿ ತಾಲೂಕಿನಲ್ಲಿ ಇತ್ತೀಚೆಗೆ ನಡೆದ ತಾಲೂಕು ಬೋರ್ಡು ಚುನಾವಣೆಯಲ್ಲಿ ಕೊಂಗ್ರೆಸು ಕಡೆಯಿಂದ ಉಮೇದ್ವಾರರಾಗಿ ನಿಂತವರೆಲ್ಲರೂ ಜಯಪ್ರದರಾದರೆ? ಅಥವಾ ಇತರ ಉಮೇದ್ವಾರರಿಗಿಂತ ಹೆಚ್ಚಿಗೆ ವೋಟುಗಳನ್ನು ಪಡೆದರೆ? ಬ್ರಹ್ಮಾವರ ಸರ್ಕಲಿನಲ್ಲಿ ಗೆದ್ದ ಉಮೇದ್ವಾರರು, ಕೊಂಗ್ರೆಸು ಪಕ್ಷದವರ ಸಹಾಯದಿಂದ ಇಲ್ಲವೆ ಇತರರ ಸಹಾಯದಿಂದ ಜಯಶೀಲರಾದುದೋ? ಮತ್ತು ಕೋಟ ಸರ್ಕಲಿನಲ್ಲಿ ಹೇಗೆ? ಚುನಾವಣೆಯಲ್ಲಿ ಜಯಾಪಜಯಗಳು, ಉಮೇದ್ವಾರರಾಗಿರುವ ಸ್ನೇಹಿತರ ಸಾಮರ್ಥ್ಯ, ಅವರು ವೆಚ್ಚಮಾಡುವ ಹಣ, ಮೊದಲಾದುವುಗಳ ಮೇಲೆಯೇ ಹೆಚ್ಚಿಗೆಯಾಗಿ ಹೊಂದಿರುತ್ತದಲ್ಲದೆ, ಅವರು ಯಾವ ಪಕ್ಷಕ್ಕೆ ಸೇರಿದವರೆಂಬುದರ ಮೇಲೆ ಆಧರಿಸಿಕೊಂಡಿಲ್ಲ.

ವೋಟರರಲ್ಲಿ ಎಷ್ಟೊ ಮಂದಿ ಸಾಕಷ್ಟು ತಿಳುವಳಿಕೆಯಿಲ್ಲದವರೂ, ಜಾತಿ ವೈಷಮ್ಯಗಳಿಗೆ ಒಳಗಾದವರೂ, ಖದ್ದರ್ ಧರಿಸಿ ಕೊಂಗ್ರೆಸುವಾಲರೆಂದು ಹೇಳಿಕೊಳ್ಳುವವರಲ್ಲಿ ಕೂಡ ಅನೇಕರು ಜಾತಿ ವಾತ್ಸಲ್ಯವನ್ನು ಬಿಟ್ಟಿಲ್ಲವೆಂದೂ ನವಯುಗದಲ್ಲಿ ಹೇಳಿರುವುದನ್ನು ಶ್ರೀ ಕುಡುವರು ಅಲ್ಲಗಳೆಯುವರೇ? ಕೊಂಗ್ರೆಸು ಮೆಂಬರರೇ ತಮ್ಮ ಜತೆಮೆಂಬರರನೇಕರು ಕೊಂಗ್ರೆಸಿನ ತತ್ವಗಳಿಗೆ ವಿರೋಧವಾಗಿಯೂ, ಮಾತಿಗೆ ತಪ್ಪಿಯೂ ನಡೆದಿರುವರೆಂದು ಶ್ರೀ ಎ. ಬಿ. ಶೆಟ್ರಿಗೆ ಕಾಗದಗಳನ್ನು ಬರೆದಿರುವರು. ಹೀಗೆ ಮಾಡಿರುವವರು ಕೊಂಗ್ರೆಸು ಪಕ್ಷದವರೆಂದೇ ಅಲ್ಲ. ವಿದ್ಯಾವಂತರೂ, ಸಮಾಜದ ಮುಂದಾಳುಗಳಾಗಿದ್ದವರೂ ಕೂಡ ಹಲವು ಮಂದಿ, ಚುನಾವಣೆಯ ಸಮಯದಲ್ಲಿ ಕೊಟ್ಟ ಮಾತಿಗೆ ತಪ್ಪಿ ನಡೆದಿರುವವರಲ್ಲದೆ ಒಳಗೊಂದು ಹೊರಗೊಂದು ಎಂಬಂತೆ ವರ್ತಿಸಿರುವರು. ಇದು ಉಮೇದ್ವಾರರಿಗೆಲ್ಲರಿಗೂ ತಿಳಿದ ವಿಷಯವಲ್ಲವೇ? ಸುಶಿಕ್ಷಿತರಾದವರು ಕೂಡ ಚುನಾವಣೆಯಲ್ಲಿ ಉಮೇದ್ವಾರರ ರಾಜಕೀಯ ಮತಗಳಿಗೆ ಎಷ್ಟು ಗಮನ ಕೊಡುತ್ತಾರೆಂದು ಬೇರೆ ಹೇಳಬೇಕೆ? ಕಳೆದ ಚುನಾವಣೆಯಲ್ಲಿ ಗೌಡ ಸಾರಸ್ವತರ ಪೈಕಿ ಅಧಿಕಾಂಶದವರು ಶ್ರೀ ಮಂಜಯ್ಯ ಹೆಗಡೆಯವರಿಗೆ ಸಹಾಯಮಾಡಿರುವುದೂ, ಮತ್ತು ದ್ರಾವಿಡ ಬ್ರಾಹ್ಮಣ ವಕೀಲರಲ್ಲಿ ಪ್ರಮುಖರನೇಕರು ಶ್ರೀ ಬಿ. ಮಹಾಬಲ ಹೆಗಡೆಯವರ ಪರವಾಗಿ ಕೆಲಸ ಮಾಡಿದುದೂ, ಯಾವ ರಾಜಕೀಯ ಉದ್ದೇಶದಿಂದ ಎಂದು ಶ್ರೀ ಕುಡುವರು ಹೇಳಬಲ್ಲರೇ? ಉಡುಪಿಯಲ್ಲಿ ನಡೆದ ತಾಲೂಕು ಬೋರ್ಡು ಪ್ರೆಸಿಡೆಂಟರ ಚುನಾವಣೆಯಲ್ಲಿ ನಡೆದ ವಿದ್ಯಮಾನಗಳಿಂದ, ಶ್ರೀ ಕುಡುವರ ಪಕ್ಷದವರು ಕೌನ್ಸಿಲು ಉಮೇದ್ವಾರರಲ್ಲಿ ಇಬ್ಬರನ್ನು ಬಿಟ್ಟು ಇನ್ನೊಬ್ಬರ ಪರವಾಗಿ ಸಹಾಯ ಮಾಡಿದ ಸಂಗತಿ ಶ್ರೀ ಕುಡುವರಿಗೆ ಇಷ್ಟು ಬೇಗ ಮರೆತು ಹೋಯಿತೇ?

"ಶ್ರೀ ಶ್ರೀನಿವಾಸ ಅಯ್ಯಂಗಾರರನ್ನು ಇಲ್ಲಿಗೆ ತರಿಸಿ, ತನ್ನ ಸ್ವಂತ ಖರ್ಚಿನಿಂದ ಸ್ವರಾಜ್ಯಪಕ್ಷದ ಪರಿಷತ್ತನ್ನು ನಡಸಲು ಶ್ರೀ ಶೆಟ್ಟರು ಸಮ್ಮತಿಸಿದ್ದರು" ಎಂದು ಶ್ರೀ ಕುಡುವರು ಹೇಳುವ ಮಾತಿಗೆ ಆಧಾರವೇನು? ಈ ತರದ ಸೂಚನೆಯನ್ನು ಶ್ರೀ ಶೆಟ್ರಿಗೆ ಯಾರು ಮಾಡಿದುದು? ಮತ್ತು ಎಲ್ಲಿ? ಅವರು ಅದಕ್ಕೆ ಒಪ್ಪಿಗೆ ಕೊಟ್ಟುದುದಾದರೂ ಯಾವಾಗ? ಸತ್ಯಾಗ್ರಹಿ ಸಂಪಾದಕರಾಗಿದ್ದ ಶ್ರೀ ಕುಡುವರು ಇಂಥಾ ಮಿಥ್ಯಾಪವಾದವನ್ನು ಹೊರಿಸಿ ಪತ್ರಿಕೆಗಳಲ್ಲಿ ಪ್ರಕಟಿಸುವುದು ಯಾವ ನ್ಯಾಯ? ಶ್ರೀ ಶೆಟ್ಟರು ಏನೋ ಸಂಶಯಮಯವಾದ ತೋರಿಕೆಗಳಿಂದ ಕೊಂಗ್ರೆಸು ಪಕ್ಷವನ್ನು ಒಲಿಸಲು ನೋಡಿದರೆಂದೂ, ಇವರು ಕಾರ್ಕಳ ಪರಿಷತ್ತಿಗೆ ಹೋಗದಿದ್ದುದರಿಂದ, ಸ್ವರಾಜ್ಯಪಕ್ಷದ ಮೇಲೆ ಇವರಿಗೆ ಇರುವ ಭಕ್ತಿಯು ಚುನಾವಣೆಯ ಸಮಯದ ಮಟ್ಟಿಗೆ ಮಾತ್ರವಾಗಿತ್ತೆಂದೂ ಶ್ರೀ ಕುಡುವರ ಇನ್ನೊಂದು ಆರೋಪಣೆ. ಶ್ರೀ ಶೆಟ್ಟರು ಸ್ವರಾಜ್ಯಪಾರ್ಟಿಯ ಪರವಾಗಿ ಉಮೇದ್ವಾರರಾಗಿ ನಿಂತಿರಲಿಲ್ಲ. ಮದ್ರಾಸು ಕೌನ್ಸಿಲಿನಲ್ಲಿ ಸ್ವರಾಜ್ಯ ಪಕ್ಷದ ಮೆಂಬರರು ಅಲ್ಪಸಂಖ್ಯೆಯವರಾಗಿದ್ದುದರಿಂದ ಅವರು ಇತರ ನೇಶನಲಿಸ್ಟರೊಂದಿಗೆ ಕೂಡಿಕೊಂಡು ಯುನೈಟೆಡ್ ನೇಶನಲಿಸ್ಟ್ ಪಾರ್ಟಿ ಎಂಬ ಹೆಸರಿನಿಂದ ಕೌನ್ಸಿಲಿನಲ್ಲಿ ವಿರೋಧಪಕ್ಷವಾಗಿರುತ್ತಾರೆ. ಈ ಯುನೈಟೆಡ್ ನೇಶನಲಿಸ್ಟ್ ಪಾರ್ಟಿಯ ಕೆಲವು ಪ್ರಮುಖ ಮೆಂಬರರ ಸೂಚನೆ ಮೇರೆಗೆ ಶೆಟ್ಟರು ಆ ಪಾರ್ಟಿಯ ಪರವಾಗಿ ಉಮೇದ್ವಾರರಾಗಿದ್ದರೆಂದು ಜಿಲ್ಲೆಯಲ್ಲೆಲ್ಲಾ ಹಂಚಿದ ಪ್ರಕಟಣಾಪತ್ರದಿಂದಲೂ, ನವಯುಗದಲ್ಲಿ ಪ್ರತಿವಾರವೂ ಪ್ರಕಟಿಸಲಾದ ಪ್ರತಿಜ್ಞಾ ಪತ್ರದಿಂದಲೂ, ವ್ಯಕ್ತವಾಗುತ್ತದೆ. ಅವರು ಉಮೇದ್ವಾರರಾಗಿ ನಿಂತುದು ತಿಳಿದ ಕೂಡಲೇ ಮದ್ರಾಸಿನಿಂದ ತಮ್ಮ ಸಹಾನುಭೂತಿಯನ್ನು ತಿಳಿಸುವರ ಪತ್ರ ಬಿಟ್ಟ ಮಹನೀಯರಲ್ಲಿ ಶ್ರೀ ಶ್ರೀನಿವಾಸ ಅಯ್ಯಂಗಾರರೂ ಒಬ್ಬರಾಗಿದ್ದರು. ಶ್ರೀ ಅಯ್ಯಂಗಾರರು ಉಡುಪಿಗೆ ಬಂದಾಗ ಶೆಟ್ರಿಗೆ ಸಹಾಯಮಾಡಬೇಕಾಗಿ ಶ್ರೀ ರೆಡ್ಡಿಯವರು ಇವರನ್ನು ಕೇಳಿಕೊಂಡಿದ್ದರಂತೆ. ಶೆಟ್ರು ಅಯ್ಯಂಗಾರರನ್ನು ಉಡುಪಿಯಲ್ಲಿ ಕಾಣಹೋದಾಗ್ಯೆ ಇವರು ಸ್ವರಾಜ್ಯಪಾರ್ಟಿಗೆ ಸೇರಬೇಕೆಂದು ಅಯ್ಯಂಗಾರರು ಮೊದಲು ಒತ್ತಾಯ ಮಾಡಿದರೂ, ನಂತರ ಶೆಟ್ರು ಹೇಳುವ ಮಾತಿನಿಂದ ಸಮಾಧಾನಪಟ್ಟು ಇವರಿಗೆ ಕೊಂಗ್ರೆಸು ಪಕ್ಷದವರೂ ಮರರವರೂ ಸಹಾಯಮಾಡಬೇಕೆಂದು ಸೂಚಿಸಿದ್ದರು. ಆದರೆ ಇವರ ಮಾತಿಗೆ ಇವರ ಅನುಯಾಯಿಗಳು ಎಷ್ಟು ಮಾನ್ಯತೆ ಕೊಟ್ಟರು?

ಶ್ರೀ ಶೆಟ್ರು ಮೊದಲು ಕೊಂಗ್ರೆಸ್ ಮೆಂಬರರಾಗಿದ್ದುದು ಮಾತ್ರವಲ್ಲದೆ, ಆ ಕಾಲದಲ್ಲಿ ಕೊಂಗ್ರೆಸಿಗಿಂತಲೂ ಮುಂದಾಗಿದ್ದ "ಹೋಮ್ ರೂಲ್" ಚಳವಳದಲ್ಲಿ ಸೇರಿದ್ದುದು ಅನೇಕರಿಗೆ ತಿಳಿದಿರಬಹುದು. ಕೊಂಗ್ರೆಸ್ ಅಸಹಕಾರವನ್ನು ಕೈಕೊಂಡ ಬಳಿಕ ಅವರು ಅದರಿಂದ ದೂರವಾದರೂ, ಕೊಂಗ್ರೆಸು ಅಸಹಕಾರವನ್ನು ನಿಲ್ಲಿಸಿದ ಬಳಿಕ ಅವರಿಗೆ ಪುನಃ ಅದಕ್ಕೆ ಸೇರಲು ಯಾವ ಆತಂಕವೂ ಇರಲಿಲ್ಲ. ಅವರು ಬೆಳಗಾಂವ ಕೊಂಗ್ರೆಸ್ಸಿನ ಸ್ವಾಗತ ಮಂಡಳಿಗೆ ಸೇರಿ, ಆ ಸಭೆಗೆ ಹೋಗಿದ್ದರು. ನಂತರ ಚುನಾವಣೆಯ ಕಾಲದಲ್ಲಿ ಇವರು ಕೊಂಗ್ರೆಸು ಸದಸ್ಯರಾಗಿ ಸೇರಿದ್ದರು. ಕೊಂಗ್ರೆಸು ಪಕ್ಷವನ್ನು ಒಲಿಸಲು ಇವರು ಮಾಡಿದ ಸಂಶಯಮಯವಾದ ತೋರಿಕೆಗಳೆಂದರೆ ಇವೇಯೇನು? ಇವರ ಸಹಪಾಠಿಯೂ, ದೀರ್ಘಕಾಲದ ಸ್ನೇಹಿತರೂ ಆದ ಶ್ರೀ ಕಾರ್ನಾಡ ಸದಾಶಿವರಾಯರಿಗೆ ರಾಜಕೀಯ ವಿಷಯಗಳಲ್ಲಿ ಇವರ ಅಭಿಪ್ರಾಯಗಳೇನೆಂಬುದು ತಿಳಿದಿರುವುದರಿಂದ, ಬೇರೆ ಇಬ್ಬರು ಉಮೇದ್ವಾರರ ಬದಲಿಗೆ ಶೆಟ್ರಿಗೆ ಸಹಾಯಮಾಡುವುದರಲ್ಲಿ ಅಂತಹ ವಿಚಿತ್ರವೇನಿದೆ? "ಕೊಂಗ್ರೆಸು ಪಕ್ಷದವರು ಅವರವರ ದಾಕ್ಷಿಣ್ಯಕ್ಕೆ ಸರಿಯಾಗಿ ಉಮೇದ್ವಾರರಿಗೆ ಸಹಾಯ ಮಾಡಿರುವರೆ"ಂದು ಶ್ರೀ ಕುಡುವರೆ ಒಪ್ಪಿಕೊಳ್ಳುವಾಗ ಶ್ರೀ ಸದಾಶಿವರಾಯರ ಸಹಕಾರವು ಮಾತ್ರ "ವಿಚಿತ್ರವಾಗಿ" ಇವರಿಗೆ ತೋರುವುದು ಹೇಗೆ? ಶ್ರೀ ಸದಾಶಿವರಾಯರು ಸ್ವರಾಜ್ಯಪಾರ್ಟಿಗೆ ಯಾಕೆ ಸೇರಿಲ್ಲವೆಂಬುದಕ್ಕೆ ಸಮರ್ಪಕವಾದ ಉತ್ತರವನ್ನು ಅವರೇ ಕೊಡುವರು. ಸ್ವರಾಜ್ಯಪಾರ್ಟಿಗೆ ಅವರು ಸೇರಲಿಲ್ಲವೆಂಬ ಮಾತ್ರದಿಂದ ಅವರು ದೋಷಿಯೆಂದು ಹೇಳಬರುವುದಿಲ್ಲ. ಇಲ್ಲಿ ನಡೆದು ಬಂದಿರುವ ಕೊಂಗ್ರೆಸು ಚಳವಳಕ್ಕೆ ಅವರ ಮುಂದಾಳುತನವೂ, ಸ್ವಾರ್ಥತ್ಯಾಗವೂ ಮುಖ್ಯಾಧಾರವಾಗಿತ್ತೆಂದು ಯಾರಿಗೆ ತಾನೆ ಗೊತ್ತಿಲ್ಲ? ಇಲ್ಲಿ ಹೊಸದಾಗಿ ಸ್ಥಾಪಿಸಲ್ಪಟ್ಟಿರುವ ಸ್ವರಾಜ್ಯ ಪಾರ್ಟಿಗೆ ಅಂಥಾ ಮುಖಂಡರು ಯಾರಾದರೂ ದೊರೆಯುವರೇ? ಈ ಸ್ವರಾಜ್ಯಪಾರ್ಟಿಗೆ ಸೇರಿರುವ ಮೆಂಬರರಾದರೂ, ತಮ್ಮ ತಮ್ಮ ಜಾತಿವಾತ್ಸಲ್ಯವನ್ನು ಬಿಟ್ಟು, ತಮ್ಮ ಪಾರ್ಟಿಯ ಅಭಿಮಾನದಿಂದಲೆ ಐಕ್ಯವಾಗಿ ನಡಕೊಳ್ಳುವರೇ? ಇದನ್ನು ಪರೀಕ್ಷಿಸುವ ಸಮಯವು ಕೆಟ್ಟು ದೂರವಾಗಿಲ್ಲ.

ಕೊಂಗ್ರೆಸು ಮೆಂಬರರಲ್ಲೊಬ್ಬ.

ಸಂಪಾಜೆಗೆ ಆಸ್ಪತ್ರೆಯೊಂದು ಅಗತ್ಯವೋ?

ಸಂಪಾಜೆ ನಾಡಿನವರ ಸುದೈವದಿಂದ ಈಗ ಎರಡು ವಾರಗಳಿಂದ ಹಂಗಾಮಿಯಾಗಿ ಕೊಡಗಿನವರು ಇಲ್ಲಿ ಒಂದು ಆಸ್ಪತ್ರೆಯನ್ನು ತೆರೆದಿರುವರು. ವಾರದಲ್ಲಿ ಬರೇ ೩ ದಿವಸಗಳು ಮಾತ್ರ ಆಸ್ಪತ್ರೆಯನ್ನು ತೆರೆಯುವರು. ಈ ೩ ದಿವಸಗಳಲ್ಲಿ ದಿವಸಕ್ಕೆ ಸರಾಸರಿ ೧೫೦ ರೋಗಿಗಳು ಔಷಧಿಗಾಗಿ ಬರುತ್ತಾರೆ. ಆದುದರಿಂದ ಬರೇ ೩ ದಿವಸಗಳಲ್ಲಿ ಇಷ್ಟು ರೋಗಿಗಳಿಗೆ ಸರಿಯಾಗಿ ಚಿಕಿತ್ಸೆ ಮಾಡಲಿಕ್ಕೆ ಡಾಕ್ಟರರಿಗೆ ಕಷ್ಟಸಾಧ್ಯವಾದ ಸಂಗತಿ. ಕೊಡಗು ಜಿಲ್ಲೆಯವರು ಸರಿಯಾಗಿ ಕಾಯಂ ಆಸ್ಪತ್ರೆಯೊಂದನ್ನು ಇಡುವಂತೆ ಆಲೋಚಿಸಿ, ಕನ್ನಡ ಜಿಲ್ಲೆಯ ಡಿಸ್ಟ್ರಿಕ್ಟ್ ಬೋರ್ಡಿನವರ ಸಹಾಯವನ್ನು ಕೇಳಿರುವರೆಂದು ತಿಳಿಯುತ್ತೇವೆ. ಅವರು ಕೇಳುವ ಸಂಗತಿಯು ನ್ಯಾಯವಾದುದು. ಇಲ್ಲಿಗೆ ಬರತಕ್ಕ ರೋಗಿಗಳ ಪೈಕಿ ಶೇಕಡಾ ೫೦ರಷ್ಟು ಕನ್ನಡ ಜಿಲ್ಲೆಯ ನಿವಾಸಿಗಳು. ಮತ್ತು ಈ ಆಸ್ಪತ್ರೆಯು ಮಡಿಕೇರಿಗೆ ೧೮ ಮೈಲೂ, ಸುಳ್ಯಕ್ಕೆ ೧೫ ಮೈಲೂ, ದೂರವುಳ್ಳದ್ದಾಗಿದೆ. ಈಗ ಕೊಡಗು ಜಿಲ್ಲೆಯವರು ಕಟ್ಟೋಣ ಮತ್ತು ಡಾಕ್ಟರನ್ನು ಕೊಡುವುದಾದರೆ ಕನ್ನಡ ಜಿಲೆಯ ಡಿಸ್ಟ್ರಿಕ್ಟ್ ಬೋರ್ಡಿನವರು ಔಷಧಿಯ ಖರ್ಚಿಗಾದರೂ ಹಣ ಸಹಾಯಮಾಡುವುದು ವಿಹಿತವಾಗಿದೆ. ಈಗ ಆಸ್ಪತ್ರೆ ತೆರೆದ ಸ್ಥಳ ಕೊಡಗು ಜಿಲ್ಲೆಯಾದರೂ ಕನ್ನಡ ಜಿಲ್ಲೆಯ ಗಡಿಯಿಂದ ½ ಫರ್ಲೋಂಗ್ ಫಾಸಲೆಯಲ್ಲಿರುವುದು.

ಇಲ್ಲಿ ಆಸ್ಪತ್ರೆಯೇನೋ ಆಗಲೇ ಬೇಕು. ಇಲ್ಲಿಯ ನಿವಾಸಿಗಳು ಸದಾ ಮಲೇರಿಯ ಜ್ವರಕ್ಕೆ ತುತ್ತಾಗಿ ಬಹಳ ನರಳುತ್ತಿರುವರು. ಇಲ್ಲಿಗೆ ಬಂದ ಡಾಕ್ಟರು ಜನರನ್ನು ಪರೀಕ್ಷೆಮಾಡಿ ಇಲ್ಲಿ ಜ್ವರಗಡ್ಡೆಯ ಉಪದ್ರವಿಲ್ಲದ ಮನುಷ್ಯನೇ ಯಿಲ್ಲವೆಂಬುದಾಗಿ ಹೇಳುತ್ತಾರೆ. ಹೊರತು ಇಲ್ಲಿಯಷ್ಟು ಅಕಾಲ ಮರಣವು ಮತ್ತೆಲ್ಲಿಯೂ ಇಲ್ಲ. ಜೀವದಿಂದುಳಿದ ಹಲಕೆಲವರು ಹೊಟ್ಟೆ ಬೆಳೆದು ಸದಾ ನಿತ್ರಾಣಿಗಳಾಗಿಯೇ ಇರುವರು. ಈ ಸ್ಥಿತಿಯಲ್ಲಿರುವ ಬಡ ಜನರಿಗೆ ಆಸ್ಪತ್ರೆಯು ಅತ್ಯಗತ್ಯವೆಂಬುದಕ್ಕೆ ಸಂದೇಹವಿಲ್ಲ. ಆದುದರಿಂದ ಕೊಡಗಿನವರು ಕೇಳುವಂತೆ, ಹಣಸಹಾಯವನ್ನು ಕೊಟ್ಟು ಜನರ ಏಳಿಗೆಯನ್ನು ಹಾರೈಸಬೇಕೆಂದು ಮಾನ್ಯ ಡಿಸ್ಟ್ರಿಕ್ಟ ಬೋರ್ಡಿನವರಲ್ಲಿ ಪ್ರಾರ್ಥಿಸುವ,

ದ. ಕ. ಸಂಪಾಜೆ ಗ್ರಾಮದ ರೋಗಿ.

ದಕ್ಷಿಣ ಕನ್ನಡ ದ್ರಾವಿಡ ಬ್ರಾಹ್ಮಣರ ಪರಿಷದದ ಕಡೆಯಿಂದ ಪ್ರಕಟಣೆ.

ದ್ರಾವಿಡ ಬ್ರಾಹ್ಮಣರ ಬಡ ವಿದ್ಯಾರ್ಥಿ ನಿಧಿಯಿಂದ ಸಹಾಯ ಹೊಂದಲು ಅಪೇಕ್ಷಿಸುವ ದ್ರಾವಿಡ ಬ್ರಾಹ್ಮಣ ವಿದ್ಯಾರ್ಥಿಗಳು ತಮ್ಮ ಅರ್ಜಿಗಳನ್ನು ಸ್ಥಾಯಿಕ ಮಂಡಲಿಯವರಿಗೆ ಬರೆದುಕೊಂಡು ತಾರೀಕು ೧೫—೬—'೨೫ರ ವರೆಗೆ ಈ ಕೆಳಗಿನ ವಿಳಾಸಕ್ಕೆ ತಲ್ಪುವಂತೆ ಕಳುಹಿಸಿ ಕೊಡತಕ್ಕದ್ದು.

ಅರ್ಜಿಯಲ್ಲಿ ವಿದ್ಯಾರ್ಥಿಯು ತನ್ನ ತರಗತಿಯನ್ನೂ, ಕಳೆದ ವರುಷದ ವರ್ಷಾಂತ್ಯದ ಯಾ ಇತರ ಪರೀಕ್ಷೆಗಳಲ್ಲಿ ಪಡೆದ ಮಾರ್ಕುಗಳನ್ನೂ ಸ್ಪಷ್ಟವಾಗಿ ವಿವರಿಸತಕ್ಕದ್ದು. ಇದಲ್ಲದೆ ಪ್ರತಿ ಅರ್ಜಿಯು ಕೊನೇಪಕ್ಷಕ್ಕೆ ಎರಡು ಯೋಗ್ಯತಾ ಪತ್ರಗಳೊಂದಿಗೂ ಕೂಡಿರತಕ್ಕದ್ದು.

ಕದ್ರಿರಸ್ತೆ, ಮಂಗಳೂರು,
ತಾ. ೧೨—೫—'೨೫. }
K. R. ACHAR,
ಕಾರ್ಯದರ್ಶಿ,
ಪರಿಷದದ ಸ್ಥಾಯಿಕ ಮಂಡಳಿ.

ದಕ್ಷಿಣ ಕನ್ನಡ ದ್ರಾವಿಡ ಬ್ರಾಹ್ಮಣರ ಪರಿಷದದ ಕಡೆಯಿಂದ

ಪ್ರಕಟಣೆ.

ದಕ್ಷಿಣ ಕನ್ನಡ ದ್ರಾವಿಡ ಬ್ರಾಹ್ಮಣರ ಕಾರ್ಕಳದಲ್ಲಿ ನೆರೆದ ತೃತೀಯ ಪರಿಷತ್ತಿನಲ್ಲಿ ಮಂಜೂರಾದ 2 ಮತ್ತು 5ನೇ ನಿರ್ಣಯಗಳಿಗನುಗುಣವಾಗಿ ದ್ರಾವಿಡ ಬ್ರಾಹ್ಮಣರಿಂದ ನಡಿಸಲ್ಪಡುವ ಸಂಸ್ಕೃತ ವ ಕೃಷಿಕೈಗಾರಿಕೆ ಮುಂತಾದುದನ್ನು ಕಲಿಸುವ ಪಾಠಶಾಲೆಗಳ ಮೆನೇಜರ್ ಮುಂತಾದ ಶಾಲಾ ಅಧಿಕಾರಿಗಳಿಗೆ ಈ ಮೂಲಕ ತಿಳಿಸುವುದೇನೆಂದರೆ:—

ದ್ರಾವಿಡ ಬ್ರಾಹ್ಮಣ ಪರಿಷತ್ತಿನಿಂದ ಸಹಾಯವನ್ನು ಪಡೆಯಲು ಅಪೇಕ್ಷಿಸುವ ಮೇಲಿನ ಸಂಸ್ಥೆಗಳ ಅಧಿಕಾರಿಗಳು ತಮ್ಮ ಸಂಸ್ಥೆಗಳ ಸ್ಥಿತಿಗತಿಗಳ ಕುರಿತು ಒಂದು ವರದಿಯನ್ನು ತಾ. 15—6—'25ರೊಳಗೆ ಕೆಳಗೆ ದಸ್ಕತು ಮಾಡಿದವರ ವಿಳಾಸಕ್ಕೆ ಕಳುಹಿಸಿಕೊಡಬೇಕಾಗಿ ಅಪೇಕ್ಷಿಸೋಣಾಗುತ್ತದೆ.

ಆ ವರದಿಯಲ್ಲಿ ಈ ಕೆಳಗಿನ ವಿಷಯಗಳನ್ನು ಮುಖ್ಯವಾಗಿ ಸ್ತುತಪಡಿಸತಕ್ಕದ್ದು. 1. ಸಂಸ್ಥೆಯು ಪ್ರಾರಂಭವಾದ ವರುಷ, 2. ಅಧ್ಯಾಪಕರ ಸಂಖ್ಯೆ, 3. ವಿದ್ಯಾರ್ಥಿ ವ ವಿದ್ಯಾರ್ಥಿನಿಯರ ಸಂಖ್ಯೆ ಮತ್ತು ತರಗತಿ, 4. ಶಾಲೆಗೆ ಮೂಲ ಬಂಡವಾಳವಿದ್ದರೆ ಎಷ್ಟು?, 5. ಶಾಲೆಯ ಆ ವರುಷದ ಜಮಾ ಖರ್ಚು, 6. ಗ್ರಾಂಟು ಇದ್ದರೆ ಎಷ್ಟು?, 7. ಸಂಸ್ಥೆಗಳಿಗೆ ಸ್ಥಳಿಕ ಪ್ರೋತ್ಸಾಹ ಯಾವ ರೀತಿಯಲ್ಲಿದೆ? 8. ಇತರ ಮುಖ್ಯ ವಿಷಯಗಳಿದ್ದರೆ ಅವು ಸಹ.

ಸೂಚನೆ:—ಮೇಲೆ ಹೇಳಿದ ಅವಧಿ ತರುವಾಯ ಬರಬಹುದಾದ ವರದಿಗಳು ಅಂಗೀಕರಿಸಲ್ಪಡಲಾರವು.

ತಾ. 12—5—'25.
ಕದ್ರಿರಸ್ತೆ, ಮಂಗಳೂರು. }
K. R. Achar,
ಕಾರ್ಯದರ್ಶಿ,
(ಪರಿಷದದ ಪ್ರಮುಖ ಸ್ಥಾಯಿಕ ಮಂಡಳಿ.)

NOTICE.

Is hereby given that plots of land with two decent bungalows and house-sites of an extent of about 27 acres near St. Joseph's Asylum work shops and Sisters of Charity Institutions in Jappina Mogru village of Mangalore town belonging to Mr. John J. Brito absolutely one being sold by public auction on 27—5—'25 and the following days by lots. The place is healthy not crowded and is best suited for residential purposes and extensive factories. It has easy means of communication. Intending purchasers are requested to apply to the following particulars.

MANGALORE,
11—5—1925. }
1. **John J. Brito,**
Land-holder Mangalore.
2. **M. Anantha Shastri**
B. A. B. L.
Vakil Mangalore.

ನೋಟೀಸು.

ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ:—

ಮೂಡಬಿದ್ರೆ ಶ್ರೀ ಗೋಪಾಲಕೃಷ್ಣ ದೇವಸ್ಥಾನದ
— ಸಹಾಯಕ ಫಂಡ್. —

ಈ ಸಂಘದ ನಿಬಂಧನೆಯ (45ನೇ ಕಲಮಿನಲ್ಲಿ ಹೇಳುವ ಮೇರೆಗೆ 7ನೇ ವಾರ್ಷಿಕ ಮಹಾಸಭೆಯು ಮ। ರಾ। ರಾ। ಶ್ರೀ. ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಇದೇ ಮೇ ತಿಂಗಳ ತಾರೀಕು 29ನೇ ಶುಕ್ರವಾರ ಅಪರಾಹ್ನ ಗಂಟೆ 2ರ ಸಮಯ ಮೂಡಬಿದ್ರೆಯಲ್ಲಿರುವ ಸದರಿ ಸಂಘದ ಆಫೀಸಿನಲ್ಲಿ ಜರಗುವ ಸಮಾರಂಭಗಳಿಗೆ ಸದರಿ ಸಂಘದ ಎಲ್ಲಾ ಡೈರೆಕ್ಟರರುಗಳೂ, ಸಂಘದ ಎಲ್ಲಾ ಸದಸ್ಯರುಗಳೂ, ಧರ್ಮ, ಮತ್ತು ವಿದ್ಯಾಭಿಮಾನಿಗಳು, ಕೂಡಾ ಸದರಿ ಧರ್ಮ ಸಂಘದ ಮೇಲೆ ಅಭಿಮಾನವಿಟ್ಟು, ಸರ್ವರು ದಯಮಾಡಿ ಬಂದು ಸದರಿ ಸಂಘವು ಅಭಿವೃದ್ಧಿಯಾಗುವಂಗೆ ಪ್ರೋತ್ಸಾಹಿಸಬೇಕಾಗಿ ಸಾದರದಿಂದ ಅಪೇಕ್ಷಿಸುವ,

[illegible] ಕೃಷ್ಣಯ್ಯ,
ಸದರಿ ಸಂಘದ ಕಾರ್ಯದರ್ಶಿ.

ಆರೋಗ್ಯ ಚಂದ್ರಿಕೆ.

ಮದ್ರಾಸ್.

ಸಂಪಾದಕರು: ಡಾಕ್ಟರ್ ಯು. ರಾಮರಾವ್, ಎಲ್. ಎಮ್. ಸಿ. ಎಫ್. ಎಮ್. ಯು. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವುದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ.

ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ.

ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಯೆ ಪ್ರಕಟವಾಗುವುದು.

'ಹೆಲ್ತ್' ಎಂಬ ನಮ್ಮ ಇಂಗ್ಲಿಷ್ ಮಾಸಪತ್ರಿಕೆಯನ್ನೋದಿ ಸಂತೋಷಿಸಿದ ಅನೇಕ ದೊಡ್ಡ ಮನುಷ್ಯರ ಪ್ರೋತ್ಸಾಹದ ಮೇಲೆ ಈ ಕನ್ನಡ ಪತ್ರಿಕೆಯನ್ನು ಹೊರಪಡಿಸಿದೆ.

ಅದರ ಸಂಪುಟ ೨ ಮತ್ತು ೧೦ನೇಯ ನವಂಬರ ೧೯೨೪ರ ಸಂಚಿಕೆಯಲ್ಲಿ ಕಾಣಿಸಿರುವ ವಿಷಯಗಳು.

ಮುಖಚಿತ್ರ:—ಪರ್ವತವಾಸಿನಿಯಾದ ಒಬ್ಬ ರೂಪವತಿ.
ಶ್ವಾಸಕ್ರಮ ಅಥವಾ ಪ್ರಾಣಾಯಾಮ.
ಹುಣಿಸೇಹಣ್ಣಿನ ಆಹಾರಗುಣಗಳು ಮತ್ತು ಔಷಧಗುಣಗಳು.
ಕಾಲುನಡೆಯೇ, ಉತ್ತಮವಾದ ವ್ಯಾಯಾಮವು
ಜೇನಿನಲ್ಲಿರುವ ಗುಣಗಳು.
ಹಲ್ಲುಗಳ ರಚನೆ, ಪ್ರಯೋಜನ, ಕೆಲಸ ಮುಂತಾದವು.
ಮದಪ್ರಾವಕಗಳಿಂದ ಆರೋಗ್ಯಕ್ಕೆ ಉಂಟಾಗತಕ್ಕ ಹಾನಿ.
ಅಂಗಸಾಧನೆ ಮತ್ತು ಬುದ್ಧಿವ್ಯವಸಾಯ (ವಿದ್ಯಾಭ್ಯಾಸ).
ಗಾಯಗಳು, ಮತ್ತು ಉಳುಕು ಮುಂತಾದವು, ಅವುಗಳ ಚಿಕಿತ್ಸೆ
ನವನಾಗರಿಕ ಪ್ರಪಂಚಕ್ಕೆ ಸಹಜವಾದ ಮೂರು ಕೆಡುಕುಗಳು.
ಒಬ್ಬ ಉಪವಾಸಿಯ ಅನುಭವ.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವುವು. ಆರೋಗ್ಯ ಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ ರೂ. ೧—೮—೦; ಬಿಡುಪತ್ರಿಕೆ ಒಂದಕ್ಕೆ ರೂ. ೦—೩—೦ ಹಿಂದಿನ ಸಂಚಿಕೆಗಳು ಕೂಡ ದೊರೆಯುವವು.

ಚಂದಾದಾರರಾಗುವವರು ವಿ. ಪಿ. ಮೂಲಕವಾಗಿ ತರಿಸಿಕೊಳ್ಳುವುದಕ್ಕಿಂತಲೂ ಹಣವನ್ನು ಮುಂಗಡವಾಗಿ ಕಳುಹಿಸುವುದು ಲಾಭಕರ. ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು 'ಆರೋಗ್ಯ ಚಂದ್ರಿಕೆ'ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು.

ಪತ್ರವ್ಯವಹಾರಕ್ಕೆ: 'ಆರೋಗ್ಯ ಚಂದ್ರಿಕೆ'
೩೨೩ ತಂಬುಚೆಟ್ಟಿ ಬೀದಿ, ಮದ್ರಾಸ್.

ತುಳು ಪಾಡ್ದನಗಳು.

ಬೊಟ್ಟ್ಯರ್, ಕಲ್ಲುರ್ಟಿ-ಕಲ್ಕುಡ, ದೈಯ್ಯೊಂಗುಳು— ಕೋಡದಬ್ಬು, ಮುಂಡತ್ತಾಯ ಪ್ರತಿ ಒಂದಕ್ಕೆ 2 ಆಣೆ. 11½ ಆಣೆ ಟಪ್ಪಾಲು ಚೀಟು ಕಳಹಿಸಿದರೆ 5 ಪುಸ್ತಕಗಳು ಕೂಡಲೇ ಕಳುಹಿಸಲ್ಪಡುವವು.

ವಿಳಾಸ: ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

The Canara Bank, Limited, Magnalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.
Authorised and fully paid up Capital Rs. 300,000—0—0
Reserve and other sinking Funds „ 259,000—0—0

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
ಅಧಿಕಾರಗೊಳಿಸಲ್ಪಟ್ಟ, ಪೂರ್ಣವಾಗಿ ತೆತ್ತ ಮೂಲಧನವು ರೂ. 300,000—0—0
ಕ್ಷೇಮನಿಧಿ ಮತ್ತು ಇತರ ಫಂಡುಗಳು 259,000—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳೋಣಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರಿಟೆರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1925.
K. Venkat Rao,
Secretary

ಪರೀಕ್ಷಾಕಾಲ.

ವಿದ್ಯಾರ್ಥಿಗಳೇ ಇತ್ತ ನೋಡಿರಿ.

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ದೇಹಾಲಸ್ಯವಾಗುತ್ತಿದ್ದರೆ, ಬೆನ್ನಿನ ನರಗಳು ನೋಯುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ.

"ಸಾರಸ್ವತಾಸವ"ವು ಒಳಗಿನ ಮುಖ್ಯಾವಯವಗಳಲ್ಲುಂಟಾಗುವ ವ್ಯತ್ಯಾಸವನ್ನು ಸರಿಪಡಿಸಿ, ಜೀರ್ಣಶಕ್ತಿಯನ್ನು ಹೆಚ್ಚಿಸಿ, ಪಂಕ್ತಿಭ್ರಮಣೆ ತಲೆತಿರುಗು, ನೆತ್ತಿಯುಕಾವು, ಇಂದ್ರಿಯ ದೌರ್ಬಲ್ಯಗಳನ್ನು ಹೋಗಲಾಡಿಸಿ ಶುದ್ಧರಕ್ತವನ್ನು ವೃದ್ಧಿಪಡಿಸುತ್ತದೆ. ಸೀಸೆ 1ಕ್ಕೆ ಬೆಲೆ 1 ರೂಪಾಯಿ, ಪೋಸ್ಟೇಜು ಬೇರೆ,

ಬಾಲಸುಧೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ ಕೈಕಾಲು ಸಣ್ಣಗಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಿಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಧೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ.

ಬೆಲೆ ಸೀಸೆ ೧ಕ್ಕೆ ರೂ. ೦—೧೨—೦.

ಬ್ರಾಂಚ್ ಆಫೀಸ್, ಚಿಕ್ಕಪೇಟೆ, ಬೆಂಗಳೂರು ಸಿಟಿ.
ಹೆಡ್ ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು. }
ಸಾಳ್ವದ ವೆಂಕಟಾಚಲ ಪಂಡಿತರು,
ಏಜಂಟರು:-
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ,
ಮಂಗಳೂರು ಟವನಿಗೆ ಮಾತ್ರ.

ವಿದ್ಯಾವಾಚಸ್ಪತಿ
ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ

"ಸಂಕ್ಷೇಪಗೀತೆ"

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ, ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದೆ ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೦. ಟಪ್ಪಾಲು ಖರ್ಚು ಕೂಡಿ ಆಣೆ ೧೧ನ್ನು ಮನಿಯಾರ್ಡರ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ೩ರಕ್ಕಿಂತ ಜಾಸ್ತಿ ಖರ್ಚು ತಗಲುವುದು. ರಖಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.

ಪುಸ್ತಕ ದೊರಿಯುವ ವಿಳಾಸ:—

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು. ಮತ್ತು
ಕೆನರಿಸ್ ಮಿಶ್ಶನ್ ಬುಕ್ ಎಂಡ್ ಟ್ರೆಕ್ಟ ಡಿಪೋಜಿಟರಿ,
ಮಂಗಳೂರು.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಕಾಶೀ, ಗಯಾ, ಪ್ರಯಾಗ, ಹರಿದ್ವಾರ ಬದ್ರಿನಾರಾಯಣ ದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರ ಕಡೆಯಿಂದಅನುಭವ ತೆಗೆದು ಪ್ರತಿಯೊಂದು ಸಿದ್ಧಮಾಡಿಕೊಂಡು ಬರೆದಿರುವರು. ೧ನೇದು ಮಂತ್ರಪ್ರಕರಣದಲ್ಲಿ ಮಂತ್ರ ಜಪದಿಂದಲೂ, ಮಂತ್ರಪ್ರಯೋಗದಿಂದಲೂ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವವಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವೂ ಇದೆ. ೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳು ಹೊರಡುವಿಕೆ, ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ. ೩ನೇದು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ಸತ್ಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನು ಅನುಭವ ತೆಗೆದುಕೊಂಡು ತಿಳಿಸಿರುವರು. ೪ನೇದು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಛಾಪಾಚಿಗಳ ಚಿತ್ರ ಸಹ, ಇದರಲ್ಲಿ ಉಂಟು, ಇದು ಪ್ರತಿಯೊಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷದ ಮಾಡುವ ಕ್ರಮವನು ಚೆನ್ನಾಗಿ ಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಳಾಸವು ತಿಳಿಸಿರುವರು. ೫ನೇದು ಯಂತ್ರ ಪ್ರಕರಣದಲ್ಲಿ ವಶೀಕರಣ ಗೃಹಪೀಡಾ ನಿವಾರಣ ಭೂತಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು, ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು, ಈ ಗ್ರಂಥವು ಹತ್ತರ ಇದ್ದ ಬಳಿಕ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷಗಳೂ ವೃದ್ಧರೂ ಜೋತಿಷ್ಯರು, ಮಾಂತ್ರಿಕರು ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥ ಗ್ರಂಥವು ಯಾರು ಕಣ್ಣಿಂದ ನೋಡಿರಲಿಕ್ಕಿಲ್ಲಾ. ಪ್ರತಿಯೊಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆ ಸೀರ ಕಡಿಮೆಮಾಡಿ ಇರುವದು. ೨—೮—೦ ಟಪ್ಪಾಲು ಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ ನಾಟಕ ಕಾವ್ಯ, ಕಥೆಗಳು, ಯಕ್ಷಗಾನ, ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ:—

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, [illegible]

ಒಂದು ತಿಂಗಳಿಗ ಮಾತ್ರ.

ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಟೇಬಲ್ ಟೈಂಪೀಸ್ ಬಹುಮಾನವಾಗಿ ಕೊಡುವೆವು.

ರೋಲ್ಡ್ ಗೋಲ್ಡ್ ಭಂಗಾರದ ರೇಡಿಯಂ ರಿಸ್ಟ್ ವಾಚ್.

ಈ ಗಡಿಯಾರಗಳು ಸೀಮೆ ಭಂಗಾರದಲ್ಲಿ, ಬಹು ಬಲಿಷ್ಠವಾದ ಲೀವರ್ ಮೂಮೆಂಟ್ಸ್‌ಗಳಿಂದ (ಸ್ವಿಸ್‌ಮೇಡ್) ಸ್ವಿಜರ್‌ಲ್ಯಾಂಡ್ ದೇಶದಲ್ಲಿ ತಯಾರಿಸಿದ್ದು. ಸ್ವಲ್ಪವೂ ವ್ಯತ್ಯಾಸವಿಲ್ಲದೆ ಗಂಟೆಯನ್ನು ತೋರಿಸುವುದು. ಇದರಲ್ಲಿ ರೇಡಿಯಂ ಎಂಬ ವಿದ್ಯುಚ್ಛಕ್ತಿಯನ್ನು ಇಟ್ಟಿರುವುದರಿಂದ ರಾತ್ರಿಯಲ್ಲಿ ಬಹು ಪ್ರಕಾಶವಾಗಿ ಗಂಟೆಯನ್ನು ತೋರಿಸುವದು. ಕೈಯಲ್ಲಿ ಕಟ್ಟಲು ಬಹು ಚೆನ್ನಾಗಿರುವದು. ಈ ಗಡಿಯಾರವು ಭಂಗಾರಕ್ಕೆ ಸರಿಸಮವಾಗಿರುವದು. ಖಾತ್ರಿಯಾದ 5 ವರುಷ ಗ್ಯಾರಂಟಿ ಕೊಡುವೆವು.

ಕ್ರಯ ಟೇಬಲ್ ಟೈಂಪೀಸ್ ಸಹಿತ	ರೂ. 8—0—0.
ರಿಸ್ಟ್ ವಾಚ್ ಮಾತ್ರ	„ 6—0—0.
ಟೇಬಲ್ ಟೈಂಪೀಸ್ ಮಾತ್ರ	„ 3—4—0.

ವಿಳಾಸ—ಅಮೇರಿಕನ್ ವಾಚ್ ಕಂಪೆನಿ,
ಪಿ. ಬಿ. ನಂ 507, ಪಿ. ಟಿ. ಮದರಾಸು.

The American Watch Co.,
P. B. No. 509, P. T. MADRAS. }
ವಿಳಾಸ: ಅಮೇರಿಕನ್ ವಾಚ್ ಕಂಪೆನಿ,
ಪೋ ಬಾ 509, ಪಿ. ಟಿ. ಮದರಾಸು.

FIRESTONE

TYRES.

(PNEUMATIC & SOLID)

MOST MILES PER RUPEE.

Owing to the increased demand for Firestone Tyres and to give promt service to Motorists and Service Owners of Kanara & Mysore a Service & Distribution Depot is opened at Mangalore.

Fresh Supplies of Solid and Pneumatic Tyres and Tubes could be given from stock.

For particulars apply to:—

FIRESTONE TYRE DISTRIBUTORS,
(KANARA & MYSORE,)
Telegrams:—"FIRESTONE"
Proprietors: **RAO & RAO.**
Maidan Road, MANGALORE.

—ಗೋಡೆಗೆ ತಗಲಿಸುವ
ಹೊಸ ನಮೂನೆಯ—

ಟಿಕ್—ಟಾಕ್

ಎಂಬ ಈ ಗಡಿಯಾರಗಳು ಜರ್ಮನೀ ದೇಶದಲ್ಲಿ ತಯಾರಿಸಿದ್ದು. ಇವು ಕಂತಾರು ಘಂಟೆಯನ್ನು ತೋರಿಸುವವು. ಇವಕ್ಕೆ ಬೀಗ ಕೊಡಬೇಕಾದಿಲ್ಲ. ಇದರಲ್ಲಿ ಕಾಣುತ್ತಿರುವ ಗುಂಡನ್ನು ಮೇಲಕ್ಕೆ ಎಳೆದರೆ ಸಾಕು. ತನ್ನಷ್ಟಕ್ಕೆ ತಾನೇ ಟಿಕ್—ಟಾಕ್ ಎಂಬ ಶಬ್ದವನ್ನು ಮಾಡುತ್ತಾ ಸರಿಯಾದ ಕಾಲವನ್ನು ತೋರಿಸುವದು. ಇದು ನೋಡುವುದಕ್ಕೆ ಬಹು ಲಕ್ಷಣವಾಗಿರುವುದು.

ಕ್ರಯ 1ಕ್ಕೆ ರೂ. 3—0—0

ಪೀಟರ್ ವಾಚ್ ಕಂಪೆನಿ
ಪೋಸ್ಟ್ ಬಾಕ್ಸ ನಂ. 27, ಮದ್ರಾಸ್.

ADVERTISE IN

The Business Directory
OF INDIA, BURMA & CEYLON

A Comprehensive Directory of the various Business-men, Exporters and Importers, Firms, Factories, Mills, Manufacturers, Merchants and Industries of the principal Cities, Ports and Towns of India, Burma and Ceylon.

PUBLISHED ANNUALLY

Rates for Advertisements

¼ Page	Rs.	50.
2 in. Single Column	"	20.
1 in. Single Column	"	15.
Name in Bold Types	"	5.

Price per Copy Rs. 10.

PRINTERS & PUBLISHERS.
Business Directory Co.,
Kanara Press Buildings, MADRAS. E.
Telegrams: "KETHAKI" Phone 540

Just arrived! Look Sharp!

SCREW ELECTRIC TORCH LAMPS &
Pocket Electric Lamps

AVAILABLE

In different varieties, Mother of pearl lamps. Cycle lamps.

NICKEL-PLATED WITH SIDE LANCE.

Hammered Brand, with Powerful Bulls-eye lance.

The Mangalore
Trading Association,
Car Street, MANGALORE.

JUST ARRIVED

Continental Belts.
OF VARIOUS SIZES
Price Re. 1—10—0 each
Mangalore Trading Association,
Car Street, MANGALORE

ಬಂದು ನೋಡಿರಿ! ತಿಂದು ನೋಡಿರಿ!

ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ
ಪದಕವನ್ನು
ಬಹುಮಾನವಾಗಿ ಪಡೆದಿರುವ
ಎಸ್. ಪಿ. ಆಚಾರ್ಯ
ಇವರಿಂದ ತಯಾರಿಸಲ್ಪಟ್ಟ

ಉಪ್ಪಿನಕಾಯಿಗಳನ್ನು

ಬಂದು ನೋಡಿರಿ! ತಿಂದು ನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ, ಶುಂಠಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ಸರಿಯಾಗಿ ಬೇಕಾದ ಉಪಕರಣಗಳನ್ನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ
ಬಂದು ನೋಡಿರಿ! ತಿಂದು ನೋಡಿರಿ!

ಇಂಡಿಯನ್ ಸ್ವೀಟ್‌ಮೀಟ್ ಮಾರ್ಟ್.

ಮನೋಹರ್ [illegible] ಮಾರ್ಕೆಟ್ ರೋಡು, ಮಂಗಳೂರು.	ಅಥವಾ	ಸದಾನಂದ [illegible] ರಥಬೀದಿ, ಮಂಗಳೂರು.

Edited, Printed & Published by V. S. Kamath at the M. T. A. Sharada Press, Mangalore.

Registered: No. M. 498.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2-0-0. ಟಪ್ಪಾಲು ಹಾಸಲು ಸೇರಿ ರೂಪಾಯಿ 2-13-0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ | ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ | ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ | ಗರವ ಮಥಿಸಲು ಸುರರಿಗದರಿಂ | ಹರುಷವಾಯಿತೆ! ಮತ್ತೆ ವಿಶ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ | ಸುಧೆಯನು | ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೯. ಮಂಗಳೂರು, ತಾರೀಕು ೨೨ನೇ ಶುಕ್ರವಾರ ಮೇ ೧೯೨೫. ಸಂಚಿಕೆ ೨೦.

The Canara Banking Corporation, Udipi, Ltd.

Head Office:— Udipi	Branch:— Coondapoor
Paidup Capital	1,66,165—9—11
Reserve etc	64,700—0—0

Season Deposits

Carrying Special rate of 7% up to 15th June 1925 only.

Further Particulars on Application.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಉಡುಪಿ, ಲಿಮಿಟೆಡ್.

ಹೆಡ್ ಆಫೀಸು:—ಉಡುಪಿ	ಶಾಖೆ:—ಕುಂದಾಪುರ.
ವಸೂಲಾದ ಮೂಲಧನ	1,66,165—9—11
ರಿಜರ್ವ ವಗೈರೆ ಫಂಡುಗಳು	64,700—0—0

ತಾ. 15—6—1925ರವರೆಗೆ ಮಾತ್ರ ಸಾಲಿಯಾನ್ ಸೇಕಡಾ 7ರ ದರದ ಬಡ್ಡಿಯ ಮೇಲೆ ಮುಸುಂ ಠೇವಣಾತಿಗಳನ್ನು ಅಂಗೀಕರಿಸೋಣಾಗುತ್ತದೆ.

ಹೆಚ್ಚಿನ ಮಾಹಿತಿಗೆ ಬರಕೊಳ್ಳಿರಿ.

Office of the Corporation, Udipi, 1-9-'25 } N. Ananda Rao, *Secretary*

Wanted Agents
FOR
Every District in South India

For Pushing Sales of Our Calenders, Xmas and New Year Cards, Blotters, Pictures and Picture Post Cards, at wholesale rates. Deposit of Rs. 100—0—0 Essential.

Apply to:—

The South Indian Advertising Agency,
13, Kilary Road,
BANGALORE CITY.

ಶುದ್ಧ ರೋಮದ ಶಾವಳಿಗಳು.

1 ಮಳ ಉದ್ದ 1¼ ಮಳ ಅಗಲ ರೂ. 1¼ರಿಂದ 2 ವರೆಗೆ, 5 ಮಳ ಉದ್ದ 1¼ ಮಳ ಅಗಲ ರೂ. 1¼ ರಿಂದ 5 ವರೆಗೆ, 6 ಮಳ ಉದ್ದ 1¼ ಮಳ ಅಗಲ ರೂ. 2¼ರಿಂದ 6 ವರೆಗೆ, 8 ಮಳ ಉದ್ದ 2 ಮಳ ಅಗಲ ರೂ. 3¼ರಿಂದ 10 ವರೆಗೆ, 12 ಮಳ ಉದ್ದ 2¼ ಮಳ ಅಗಲ ರೂ. 6ರಿಂದ 12 ವರೆಗೆ, 16 ಮಳ ಉದ್ದ 2¼ ಮಳ ಅಗಲ ರೂ. 9 ರಿಂದ 16 ವರೆಗೆ. [illegible]

ವಿಳಾಸ—

[illegible]

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ.

450 ಪುಟಗಳು ಎಮ್. ಗಣಪತಿರಾವ್ ಐಗಳ್ ಇವರಿಂದ ರಚಿತವಾದದ್ದು. ಕ್ರಯ ರೂ. 2-4-0

ಮಾರಾಟಕ್ಕೆ ಸಿದ್ಧವಾಗಿವೆ — ತುಳು ಪಾಡ್ದನಗಳು — ಮಾರಾಟಕ್ಕೆ ಸಿದ್ಧವಾಗಿವೆ.

ದೈಯ್ಯೊಂಗುಳು, ಕಲ್ಲುರ್ಟಿ—ಕಲ್ಕುಡ, ಕಣಂತೂರು ದೈಯ್ಯೊಂಗುಳು, ಮುಂಡತ್ತಾಯ, ದೊಬ್ಬಯರ್.

ಸುಲಭ ದರಗಳು — ಶಾಲಾ ಪುಸ್ತಕಗಳು — ರಖಂ ಕೊಂಡುಕೊಳ್ಳುವವರಿಗೆ ಯೋಗ್ಯ ಡಿಸ್ಕೌಂಟ್.

ಚಿಕ್ಕ ಕಥೆಗಳು:—ಮೂರು ಕರಡಿಗಳು; ಹಿಂಸಕನು ಕಾಗೆ ಬಡವಾಯಿತು; ಅಗಸನ ಮುದ್ದ; ಇಲಿಗಳ ಕಥೆ; ಅಂಗಳ ಮುಗ್ಗು; ಸಿಗಡಿ ಯಾಕೆ ಒಣಗಲಿಲ್ಲ; ಗುಡುಗುಡು ಗುಮ್ಮಟ ದೇವರು; ಮೊಸಳೆಯ ಶಾಲಾಪ್ಪ ಒಡ್ಡನ ಓಟ; ಹೊಸ ಕನ್ನಡ ಪುಸ್ತಕ ಭಾಗ ೧; ಹೊಸ ಕನ್ನಡ ಪುಸ್ತಕ ಭಾಗ ೨; ಕನ್ನಡ ಪದ್ಯಗಳು; ಮುಗ್ಗಿ ಪುಸ್ತಕ; ಅಚಿತಕುರ ೬೨; ಪದ್ಯ ರತ್ನಾವಳಿ, ಎಕ್ಸರ್‌ಸೈಜ್ ಮತ್ತು ನೋಟು ಪುಸ್ತಕಗಳು, ಕಾಪಿ ಪುಸ್ತಕಗಳು, ಡ್ರಾಯಿಂಗ್ ಪುಸ್ತಕಗಳು

ಇತರ ಪುಸ್ತಕಗಳು:—ಸಂಕ್ಷೇಪಗೀತೆ, ಕೇಶಭಂಗ, ಹಿಂದೂ ವ್ರತವಿವೇಕ, ಚಂದ್ರಗುಪ್ತ ಚಕ್ರವರ್ತಿ, ಶ್ರೀ ಕೃಷ್ಣಸಂಧಾನ, ಪದ್ಯಪಾಠಗಳು, ಹರಿಕಥಾ ಮೃತಸಾರ ಹರಿನಾಮಸಂಕೀರ್ತನೆ ಸುದಾಂಮೃತ ಪದ್ಯಗಳು. ಬೆಂಕಿಪೆಟ್ಟಿಗೆ ತಯಾರಿಸುವ ವಿಧಾನ, ಸಾಬೂನು ತಯಾರಿಸುವ ವಿಧಾನ, ಸ್ವರಾಜ್ಯ ಛೆಲ್ಕೋಲ್ಪಾಸ, ಚರಕಗೀತೆ, ಕೊಂಕಣಿ ಭಾಷೆಯಲ್ಲಿ ಚಂದ್ರಹಾಸ ನಾಟಕ, ಪ್ರಹಲ್ಲಾದ ಚರಿತ್ರೆ ನಾಟಕ, ಕನ್ನಡ ಮೃಚ್ಛಕಟಿಕ ನಾಟಕ, ಚಂದ್ರಹಾಸಾಭ್ಯುದಯ ನಾಟಕ, ಕೋವಿಲನ್ ಚರಿತ್ರೆ ನಾಟಕ, ಮಾದರಿ ಉಪನ್ಯಾಸ ಭಾಗ ೧, ೨, ಮತ್ತು ೩.

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಶತ್ರುವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು.

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ತಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 2 ಆಣೆ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ ಟೌನ್, ಮದ್ರಾಸು.

109 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

— ರಥೋತ್ಸವ, ವಿವಾಹ ಉಪನಯನಗಳ ಸಮಯ —
ಸರ್ವರಿಗೂ ಉಡಿಗೆ ತೊಡಿಗೆಗಳು ಬೇಕಾಗುವ ಸಂದರ್ಭ.

ಯಾರು, ಯಾವುದನ್ನು ಎಲ್ಲಿ ಪಡೆಯಬೇಕೆಂಬ ಶಂಕೆಯಿಂದ ವಿಳಂಬ ಮಾಡಬೇಡಿರಿ. ಉಡಿಗೆತೊಡಿಗೆಗಳನ್ನು ಚೆನ್ನಾಯಿತಿ ನಿಮಗೆ ಬೇಕಾದ ಯಥಾರ್ಥ ಮಾಹಿತಿಯನ್ನು ಕಳೆದ ಹತ್ತಿಪ್ಪತ್ತು ವರುಷಗಳಿಂದ ಪಡೆದು ನಮ್ಮಲ್ಲಿಯ ವ್ಯಾಪಾರವು ಗಿರಾಕಿಗಳಿಗೆ ಸರ್ವ ತೃಪ್ತಿಯಿಂದಲೂ ಲಾಭಕರವಾಗಿ ಪರಿಣಮಿಸುವಂತೆ ನಮ್ಮ ಜವಳಿ ಸಂಗ್ರಹವನ್ನು ಮಾಡಿರುತ್ತೇವೆ.

ಗುರ್ಪುರ್‌ಕಾರ್ ಬ್ರದರ್ಸ್, ರಥಬೀದಿ, ಮಂಗಳೂರು.

ಹೆಡ್ ಆಫೀಸು:—ರಥಬೀದಿ—(ಮೊದಲು ಸುಬೇರ ನಾಗಪ್ಪನಾಯಕ್, ಎಂಡ್ ಕೊ. ಇದ್ದಲ್ಲಿ: ಅಜೀಜುದ್ದೀನ್ ರಸ್ತೆಗೆ ತಿರುಗುವಲ್ಲಿ) ಮಂಗಳೂರು.

ಬ್ರೆಂಚ್ ಆಫೀಸು:—ರಥಬೀದಿ—(ಹಳೇ ತಾಲೂಕು ಕಚೇರಿಯ ಪಟಾರಕ್ಕೆ ಸಮೀಪವಿರುವ ಮಳಿಗೆ) ಮಂಗಳೂರು.

ಈ ದೇಶದ ಪ್ರಖ್ಯಾತವಟ್ಟ ನೇಯಿಗೆಯ ಕೇಂದ್ರಸ್ಥಳಗಳಾದ—ಬನಾರಿಸ್, ಪೂನಾ, ಅಹಮ್ಮದಾಬಾದ್, ಸೂರತ್, ಬೆಂಗಳೂರು, ಧರ್ಮಾವರಮ್, ಕಂಜೀವರಮ್, ಕೊಯಮುತ್ತೂರು, ಮಧುರೆ, ತಂಜಾವೂರು, ಕುಂಭಕೋಣ, ಆರ್ಣಿ, ಹುಬ್ಬಳ್ಳಿ, [illegible], ಗದಗ, ಮದ್ರಾಸು ಈ ಪ್ರಾಂತ್ಯಗಳಲ್ಲಿ ತಯ್ಯಾರಾದ

ಖಣಸೀರೆಗಳು, ದುಪ್ಪಟಾ, ಜರಿಶಾಲು, ಪೇಟ್ಯ, ರೇಶ್ಮೆ ಸೀರೆಗಳು, [illegible] ಸೀರೆಗಳು, [illegible] ರೇಶ್ಮೆ ಸೀರೆಗಳು, [illegible] ಸೀರೆಗಳು, [illegible] [illegible] ಕೈರಾಟೆಯಲ್ಲಿ ತಯಾರಿಸಿದ ನೂಲಿನಿಂದ ಮಾಡಿದ—

[illegible]

[illegible]

ಆರ್. ಮಾರ್ಟಿನ್ನರ
ಜ್ವರದ ಗುಳಿಗೆಗಳು.

ಸುಲಭ ಸ್ವೇದನಕಾರಿಯಾದ ಈ ಘುಟಿಕೆಗಳು ಚಳಿಜ್ವರದ ವಿಷದಾರ್ಥಗಳನ್ನು ಪಟ್ಟನೆ ನಿರ್ಮೂಲಪಡಿಸಿ, ವ್ಯಾಧಿಗಳನ್ನು ಸಂಪೂರ್ಣ ನಾಶಪಡಿಸಿ, ಮಲೇರಿಯಾ ಜ್ವರ, ಚಳಿಜ್ವರ, ಬಾರಿಜ್ವರ, ಮತ್ತು ಆಗಾಗ್ಗೆ ಬಿಟ್ಟುಕೊಂಡು ಬರುವ ಇತರ ಜ್ವರಗಳ ಬಾಧೆಯಿಂದ ಗುಣಪಡಿಸುವವು

ಪಟ್ಟನೆ ವಾಸಿಪಡಿಸುವುದಕ್ಕೆ ಹತ್ತೂರುಗಳಲ್ಲಿ ಪ್ರಸಿದ್ಧತೆಯನ್ನು ಹೊಂದಿದ್ದು, ಆಕೆ ಬಿಟ್ಟುಬಿಟ್ಟು ಅನೇಕ ಸಂದರ್ಭಗಳಲ್ಲಿ ಗುಣಪಡಿಸಿದವುಗಳಾಗಿರುತ್ತವೆ.

ಇವುಗಳು ಗಿರಣಿಗಳಲ್ಲಿಯೂ ಕಾರ್ಖಾನೆಗಳಲ್ಲಿಯೂ ವಿಶೇಷವಾಗಿ ಉಪಯೋಗಿಸಲ್ಪಡುವುವು. ಸಾಮಾನ್ಯವಾಗಿ ಹಿಂದೂಸ್ಥಾನದಲ್ಲಿ ಎಲಾ ತೋಟಗಾರರಿಂದ ಉಪಯೋಗಿಸಲ್ಪಡುವುವು. ಅಲ್ಲದೆ ದಿಂಗತ ವಿಶ್ರಾಂತವಾದ ಕೀರ್ತಿಯನ್ನು ಕೂಡ ಸಂಪಾದಿಸಿರುದುವು ಕಠಿಣ ಜ್ವರವು ಪಟ್ಟನೆ ಇಳಿಯಬೇಕಾದರೆ ಆರ್ ಮಾರ್ಟಿನರ ಎಗ್ಯೂ ಮಿಕ್ಚರ್ ಒಡನೆ ಇದನ್ನು ಸೇವಿಸಬೇಕು. ಈ ಇವೆರಡು ಅದ್ಭುತ ಶಕ್ತಿಯುಳ್ಳ ಔಷಧಿಗಳು ಪ್ರತಿಯೊಂದು ಕುಟುಂಬದ ಮನೆಯಲ್ಲಿಟ್ಟುಕೊಳ್ಳಲು ಯೋಗ್ಯ ವಸ್ತುಗಳಾಗಿವೆ ಪ್ರತಿಯೊಂದು ಬಾಟ್ಲಿಯಲ್ಲಿ 40 ಮಾತ್ರೆಗಳು ಇರುವುವು

ಬಾಟ್ಲಿ 1ಕ್ಕೆ ರೂ. 1-8-0.

ಆರ್. ಮಾರ್ಟಿನ್ನರ ಎಗ್ಯೂವಿಕ್ಚರ್.

ಇದು ಜ್ವರ, ಶೀತಜ್ವರ, ಮಲೇರಿಯಾ, ಬಾರಿಜ್ವರ, ಸನ್ನಿಪಾತ ಪಟ್ಟ ವಾಯುವಿನಿಂದುಂಟಾದ ರೋಗ ಇವೇ ಮೊದಲಾದ ಎಲ್ಲಾ ತರದ ಜ್ವರಗಳನ್ನೂ ಕೂಡಲೇ ನಾಶಮಾಡುತ್ತದೆ ಎಲುಬುಗಳಲ್ಲಿ ಹರಡಿಕೊಂಡಿರುವ ಜ್ವರವನ್ನೂ ಸಹ ನಾಶಮಾಡುವುದಲ್ಲದೆ, ಇದು ಸಿಹಿಯಾಗಿರುವುದ್ದರಿಂದ ಸಣ್ಣ ಕೂಸುಗಳು ಸಹ ಕುಡಿಯಲಿಕ್ಕೆ ಇಷ್ಟಪಡುತ್ತವೆ ಅನೇಕ ನಿಜ ವಿದ್ವಾಂಸ ವೈದ್ಯರಿಂದ ಗುಣಮಾಡುವುದಕ್ಕಾಗದ ಜ್ವರವನ್ನು ಈ ಎರಡೇ ಎರಡು ಬಾಟ್ಲಿಗಳ ಸೇವನೆಯಿಂದ ಹುಷಾರಾಗಿದೆ

ಬಾಟ್ಲಿ 1ಕ್ಕೆ ರೂ. 0-13-0

ಆರ್. ಮಾರ್ಟಿನ್ನರ ಮೂಲವ್ಯಾಧಿ ಮಲಾಮು.

ಮನುಷ್ಯನಿಗೆ ಮೂಲವ್ಯಾಧಿ ಆದಾಗ, ಬಹಳ ಸಲ ಮೂತ್ರಶಂಕೆಯಾಗುವಿಕೆ, ಮರ್ಮಸ್ಥಾನದಲ್ಲಿ ಉರಿಯುವುದು, ಮಲಬದ್ಧತೆ ಇವೇ ಮುಂತಾದರಿಂದ ವಹಿಸಡುತ್ತಾನೆ. ಈ ಔಷಧದ ಒಂದೇ ಒಂದು ಬಾಟ್ಲಿಯ ಉಪಯೋಗದಿಂದ, ರಕ್ತ ಸುರಿಯುವ ಮೂಲವ್ಯಾಧಿ, ಕಂಕುಳಲ್ಲಿ ನೋಯುವ ಮೂಲವ್ಯಾಧಿ ಮತ್ತು ಎಂತ ತರಹದ ಕಠಿಣವಾದ ಮೂಲವ್ಯಾಧಿಯ್ಯಾದರದ ಕೂಡಲೇ ವಾಸಿಯಾಗುತ್ತದೆ. ಇದು ಒಳ್ಳೇ ಔಷಧಗಳಿಂದ ತಯಾರಿಸಲ್ಪಟ್ಟು ತೆಗೆದುಕೊಳ್ಳುವವರಿಗೆ ಏನೊಂದೂ ನೋವನ್ನೂ ಕೊಡದೆ ಶಂಪಾಗಿ ಮಾಡುತ್ತದೆ. ಬಾಟ್ಲಿ 1ರ ದರ ರೂ. 1-8-0 ಮಾತ್ರ

ವಿಳಾಸ:—ಆರ್. ಡಿ. ಕಟಿ ಮತ್ತು ಕಂಪೆನಿ,
ನಂಬ್ರ ಬಿ. ಫ್ರಿಯರ್ ರೋಡ್,
ಸಾಂಜ ವರ್ತಮಾನ ಪ್ರೆಸ್,
ಟೋಡಿವಾಲಾ ಬಿಲ್ಡಿಂಗ ಎದುರುಗಡೆ, ಫೋರ್ಟ ಮುಂಬಯಿ.

R. D. Kately & Co.
No. B. Frere Road,
Opposit Sanjvertaman Press,
Todivala Building, FORT BOMBAY

ಡಾಕ್ಟರುಗಳು ಭಿನ್ನಾಭಿಪ್ರಾಯಪಡುವಾಗ್ಯೆ ತೀರ್ಮಾನಿಸುವದು ಯಾರು?

ಅಂಥಾ ಸಂದರ್ಭಗಳಲ್ಲಿ ಡೆಂಗ್ಯು ಮುಂತಾದ ಜ್ವರಗಳನ್ನು ನಿವಾರಿಸುವಂಥಾ "ಬಾಟ್ಲಿವಾಲರ ಏಗ್ಯುಮಿಕ್ಚರ್"ನ್ನು ಸರಾಗವಾಗಿಯೂ, ಮತ್ತು ಜ್ವರಗಳನ್ನು ಖಂಡಿತವಾಗಿ ನಿಲ್ಲಿಸುವಂಥಾದೂ, ಎಲ್ಲಾ ತರದ ಚಳಿನೋವುಗಳನ್ನು ಹೋಗಲಾಡಿಸುವಂಥಾದ್ದೂ ಆದ "ಬಾಟ್ಲಿವಾಲರ ಏಗ್ಯುಪಿಲ್ಸ್" ಇದನ್ನು ಉಪಯೋಗಿಸಿರಿ.

ಐ. ಎಮ್. ಎಸ್. ಡಾಕ್ಟರುಗಳಿಂದ ಶಿಫಾರಸು ಮಾಡಲ್ಪಟ್ಟದ್ದು. ಇದರ ಉಪಯೋಗದಿಂದ ಹೃದಯದ ಮೇಲೆ ಯಾವದೊಂದೂ ಬಾಧಕವಿಲ್ಲ. ಅರ್ಧ ಶತಮಾನದಿಂದ ಹಿಂದೂಸ್ಥಾನ, ಬರ್ಮ, ಸಿಲೋನ್, ಆಫ್ರಿಕಾ ಇವುಗಳಲ್ಲಿ ಪ್ರಖ್ಯಾತಪಟ್ಟದ್ದಾಗಿರುತ್ತದೆ.

ಅನೇಕ ಹಿಂದೀ ಪ್ರದರ್ಶನಗಳಲ್ಲಿ ಬೆಳ್ಳಿ ಮತ್ತು ಬಂಗಾರದ ಪದಕಗಳನ್ನು ಪಡೆದಿರುತ್ತ. ಚಾಲ್ತಿ ಸಾಧ್ಯವಂತಿದ್ದ ಮಾರ್ವಾರಿಗಳೂ ಕೂಡ ಅದರ ಮೇಲೆ ಹಣವನ್ನು ಮುಂಗಡವಾಗಿ ಕೊಡುತ್ತಾರೆ. ಬಡ ಮತ್ತು ಮಧ್ಯಮ ತರಗತಿಯ ಜನರಿಗೆ ವರಪ್ರದಾನವಾಗಿದ್ದು ಸಂಚಾರ, ಪ್ರಯಾಣ, ದೇಶಾಟನೆಗಳ ಸಮಯದಲ್ಲಿ ಹತ್ತಿರದಲ್ಲಿರಿಸಿಕೊಳ್ಳದಾಗಿರುತ್ತದೆ.

ಬಾಟ್ಲಿವಾಲರ ಬಾಲಾಮೃತ ಅಥವಾ ಟೊನಿಕ್ ಸಿರಪ್.

ಕೆಮ್ಮನ್ನು ಹೋಗಲಾಡಿಸಿ, ಎದೆನೋವನ್ನು ಶಾಂತಗೊಳಿಸಿ, ಜ್ವರವನ್ನು ಉಪಶಮನಿಸಿ, ನಿದ್ರಾಭಂಗವನ್ನು ತಡೆದು ಮಾಡಿ ಧಾತುವರ್ಧನವನ್ನು ಮಾಡುವದರಲ್ಲಿ ಅತ್ಯುತ್ತಮವಾಗಿರುತ್ತದೆ ಕಫವನ್ನು ಒಣಗಿಸಿ ಮಾಯವಾಗುವಂತೆ ಮಾಡುವುದಲ್ಲದೆ ಅದೇ ಸಮಯದಲ್ಲಿ ಒಳ್ಳೇ ಜೀರ್ಣವನ್ನೂ ಉಂಟುಮಾಡುವುದು. ದರ ಮೊದಲಾದ ಮಾಹಿತಿಯನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ತಾರಿನಪತ್ತೆ:-CAWASHAPUR, BOMBAY.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.,
ಪಿ. ವಾರ್ಲಿ, ಮುಂಬಯಿ, ನಂಬ್ರ 18.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟ. ಖ. 9 ಆಣೆ.

ನಮ್ಮ ವಿಳಾಸ:— ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಏಜಂಟರು:— ದಿ. ಊಲನ್ ಮಾರ್ಟ, ಮಂಗಳೂರು.

OUR RECENT IMPORT IN WRIST WATCHES

Have you used anyone of these Watches?

SEND YOUR ORDER NOW ALL GUARANTEED.

Fashionable wrist wr.:t Lady's size. Reliable movement Guaranteed.



No. 368.

Handy to wear and looks beautiful. Gives punctual time and with strong movement.

Nickel case Rs. 8—0

High-class Radium dial watch watch with Roman figures.



No. 367.

Can be seen in dark nights, Well fitted with best movement and strong to use. Used by one and all.

Silver case Rs. 9—0.

Radio light wrist watch.



No. 372.

Fitted with the best mechanism and guaranteed to work and keep perfect time for a long time.

Nickel case	Rs. 7—8
Electro rolled-gold „	9—0

(N. B. In addition to the above, we have good number of varieties of fancy wrist watches, pocket watches. Please write for a descriptive catalogue, which will be sent free)

WHOLESALE IMPORTERS

PETER WATCH COY.,
POST BOX 27, MADRAS

ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ಮೂರನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್. ಗಣಪತಿರಾವ್ ಐಗಳ್—ಗ್ರಂಥಕರ್ತರು.

ಮನೋರಂಜಕ ಚಿತ್ರಗಳೂ ಇವೆ.

ಇದರಲ್ಲಿ ಸಾವಿತ್ರಿ, ಶಕುಂತಳಾ, ಕೃಷ್ಣಾಕುಮಾರಿ, ಪದ್ಮಿನಿ, ಜೋನ್ ಒಫ್ ಆರ್ಕ, ಫ್ಲೊರೆನ್ಸನಾಯಿಟಿಂಗೇಲ ಪರಶುರಾಮ, ಭೂತಾಳಪಾಂಡ್ಯ, ಕಾರ್ಕಳ ಗೋಮಟೇಶ್ವರ ಮತ್ತು ಭೈರವರಾಜ, ಮೂಡಬಿದ್ರೆಯ ಚೌಟರು, ನಂದಾವರ ಬಂಗರು, ಕಾರ್ಕಳ ರಾಮಸಮುದ್ರ ಮತ್ತು ರಾಮನಾಥ ಒಡೆಯರ ಅಣೆಕಟ್ಟು, ಗುರುಪುರ ಜಂಗಮ ಮಠ, ಕಲ್ಯಾಣಪ್ಪನ ಕಾಟಕಾಯಿ, ಗುರುವಾಯನಕೆರೆ, ಜಮಾಲಾಬಾದುಕೋಟೆ, ಕುಲ್ಶಾನಬತ್ತೇರಿ, ಈದಗಾಪ್ರಾರ್ಥನಾಮಂದಿರ, ಸೇಂಟಮೇರಿ ದ್ವೀಪಗಳು ಮತ್ತು ದರಿಯಾಬಾದರಗಡ, ಕೊರಗರು, ಕೊಡಗರು, ತೋಡರು, ರಜಪೂತರು, ಕಂದಾರಿಗಳು ಘುರ್ಖಾ ಜನರು, ಅರಬಿಯರು. ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ಮೂರನೇ ದರ್ಜೆಯ ಮಕ್ಕಳಿಗೆ ಉಪಯುಕ್ತವಾಗಿದೆ. ಕ್ರಯ 6 ಆಣೆ.

ಪುಸ್ತಕ ದೊರಕುವ ವಿಳಾಸ:—

ಶಾರದಾ ಛಾಪಖಾನೆ,
ಮಂಗಳೂರು.

ಗಣಪತಿರಾವ್, ಐಗಳ್.
ಮಂಜೇಶ್ವರ.

ಶಾಲಿವಾಹನಶಕ ೧೮೪೭ನೆಯ ಕ್ರೋಧನ ಸಂ|ರದ ಜ್ಯೇಷ್ಠ ಶು| ೧ ಶನಿವಾರದಿಂದ ಕ್ರೋಧನ ಸಂ|ರದ ಜ್ಯೇಷ್ಠ ಶು| ೬ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೫ನೆಯ ವೃಷಭ ದೇಶ.)

ತಾರೀಖು	ವಾರ	ತಿ.	ಘಳಿಗೆ.	ನಕ್ಷತ್ರ.	ಘಳಿಗೆ.	ದಿನಮಾನ	ಸೂರ್ಯ	
							ಉ.	ಅಸ್ತ.
23	ಶನಿ	೧	೪೪.೧	ರೋಹಿಣೀ	೫೩.೨೮	೧೦	6. 6	6 49
24	ರವಿ	೨	೪೬.೫೮	ಮೃಗಶಿರಾ	೫೯.೧೬	೧೧	6. 6	6.49
25	ಸೋಮ	೩	೫೨.೪೮	ಆರ್ದ್ರಾ	೬೦. ೦	೧೨	6 6	6 50
26	ಕುಜ	೪	೫೬.೩೩	ಆರ್ದ್ರಾ	೫.೨೮	೧೩	6 5	6,50
27	ಬುಧ	೫	೬೦. ೦	ಪುನರ್ವಸು	೧೧.೬	೧೪	6. 5	6.51
28	ಗುರು	೫	೨.೨೮	ಪುಷ್ಯ	೧೮.೧೪	೧೫	6. 5	6 51
29	ಶುಕ್ರ	೬	೭. ೧	ಆಶ್ಲೇಷಾ	೨೩.೪೬	೧೬	6 5	6 51

ಮಂಗಳೂರಿನ ವಾಯುಸ್ಥಿತಿ.

Date ತಾರೀಖು	Temperature. ಉಷ್ಣ (ಕಾವು)		Rainfall. ಮಳೆ	
	Maximum ಹೆಚ್ಚಾದದ್ದು	Minimum ಕಡಿಮೆ	ದಿವಸದ ಮಳೆ	ಜುಮಲಾ ಮಳೆ.
15	95—8	84—5	—	—
16	94—6	71—7	0—69	—
17	93—0	74—5	0—05	—
18	92—2	78—8	—	—
19	94—4	78—2	—	—
20	95—1	80—3	—	—
21	95—4	83—4	—	—

ಮಂಗಳೂರಿನ ಪೇಟೆ ಧಾರಣೆ.

ಜೀನಸು		ಇಂದ	ವರೆಗೆ
		ರೂ. ಆ.	ರೂ ಆ
ಹೊಸ ಮಸ್ಸಿ		8—4	8—14
ಹೊಸ ಗುಡ್ಡು	...	7-10	8—2
ಹೊಸ ರಾಶಿ	...	7- 4	7—12
ಅನ್ವರ್ ಬೆಳ್ತಿಗೆ	...	8—4	9—8
ಗುಡ್ಡು ಬೆಳ್ತಿಗೆ	...	7—12	8—4
ರಂಗೂನು ಬೆಳ್ತಿಗೆ ಗೋಣಿ ೧	...	13- 0	13—8
ಗೋಧಿ ಗೋಣಿ ೧ಕ್ಕೆ	...	18- 8	23—0
ಹುರುಳಿಗೋಣಿ ೧ಕ್ಕೆ	...	9- 10	10—8
ಕಡಲೆಗೋಣಿ ೧ಕ್ಕೆ	...	12-0	13—0
ತೊಗರಿಗೋಣಿ ೧ಕ್ಕೆ	...	12-0	13—0
ತೊಗರಿಬೇಳೆ ಗೋಣಿ ೧ಕ್ಕೆ	...	13-8	21- 0
ಉದ್ದುಗೋಣಿ ೧ಕ್ಕೆ	...	14- 0	14—8
ಹೆಸರುಗೋಣಿ ೧ಕ್ಕೆ	...	14—0	15—0
ಊರು ಬೆಲ್ಲ ಖಂಡಿ ೧ಕ್ಕೆ	...	-	85—0
ಉಪ್ಪು ಗೋಣಿ ೧ಕ್ಕೆ	...	4- 4	4-12
ಕೊಬ್ರಿ ಖಂಡಿ ೧ಕ್ಕೆ	...	115-0	120—0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	...	34- 8	35—0
ಎಳ್ಳಿಂಡಿ ಖಂಡಿ ೧ಕ್ಕೆ	...	40—0	42—8
ಕೊಬ್ರಿ ಎಣ್ಣೆ ಮಣ ೧ಕ್ಕೆ	...	8—8	9 - 0
ಎಳ್ಳೆಣ್ಣೆ ಮಣ ೧ಕ್ಕೆ	...	8- 0	11—0
ಚಿಮಿಣಿ ಎಣ್ಣೆ ಪೆಟ್ಟಿಗೆ ೧ಕ್ಕೆ	...	8-15-6	—
ಮೋರಿಸ ಸಕ್ಕರೆ ಮಣ ೧ಕ್ಕೆ	...	6— 0	6 - 2
ಊರ ಮೆಣಸಿನಕಾಯಿ ಮಣ ೧ಕ್ಕೆ	...	7- 0	—
ಸಾಸಿವೆ ಮುಡಿ ೧ಕ್ಕೆ	...	8- 12	—
ಕೊತ್ತಂಬರಿ ಮುಡಿ ೧ಕ್ಕೆ	...	3- 8	8—14
ಅಡಿ ಖಂಡಿ ೧ಕ್ಕೆ	...	335- 0	345—0
ಬೆಳಗೋಡು ಅಡಿಕೆ ಖಂಡಿ ೧ಕ್ಕೆ ಹಳತು	...	235- 0	245—0
„ ಹೊಸ ಅಡಿಕೆ		240—0	240—0
ಕಾಳುಮೆಣಸು ಖಂಡಿ ೧ಕ್ಕೆ	...	155-0	160—0
ಯಾಲಕ್ಕಿ ಮಣ ೧ಕ್ಕೆ	...	80- 0	90—0
ಗೇರುಬೀಜ ಮುಡಿ ೧ಕ್ಕೆ	...	3—5	—
ಕಬ್ಬಿಣ ಖಂಡಿ ೧ಕ್ಕೆ	...	45- 0	65—0
ಹಿಂದ್ಯು ತಗಡು ಮಣ ೧ಕ್ಕೆ	...	17-12	23—0
ತಾಮ್ರ ಪಾತ್ರೆಗಳು ಮಣ ೧ಕ್ಕೆ	...	26- 0	—
ಚೀನಿ ಬೆಳ್ಳಿ ಸೇರು ೧ಕ್ಕೆ	...	22 - 0	
ಹಿತ್ತಾಳೆ ತಗಡು ಮಣ ೧ಕ್ಕೆ	...	18- 8	
ಪವನು		13-12	

The Canara Public Conveyance Co., Ltd, Mangalore.
(ESTABLISHED 1914.)
ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು
- ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡುಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು.
- ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
- ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
- ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.

ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇವರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ—ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary.
The Canara Public Conveyance Co., Ltd, Mangalore. S K.

ಉಚಿತ! ಬಿಟ್ಟಿ!! ಪುಗಸಟ್ಟೆ!!!

ವೈದ್ಯವಿದ್ಯ
PROPRIETOR RAJVAIDYA NAR
NO PRICE NO POSTAGE.

ಎಂಬ ಈ ಪುಸ್ತಕದಲ್ಲಿ ಆಯುರ್ವೇದ ಶಾಸ್ತ್ರದಲ್ಲಿ ಸ್ತ್ರೀಪುರುಷರು ಆರೋಗ್ಯದೃಢಕಾಯರಾಗಿ ಆರೋಗ್ಯದಿಂದ ಕೂಡಿದ ಸಂತಾನಗಳನ್ನು ಪಡೆದು ಸತಿಪತಿಯರು ಅನ್ಯೋನ್ಯವಾಗಿ ಅನುರಾಗವುಳ್ಳವರಾಗಿ ಸುಖದಿಂದಲೂ ಸಂತೋಷದಿಂದಲೂ ಸಂಸಾರಯಾತ್ರೆಯನ್ನು ಮಾಡಲು ಅತ್ಯಂತ ಉಪಯುಕ್ತವಾದ ವಿಷಯಗಳು ಅಲ್ಲಲ್ಲಿ ಹೇಳಲ್ಪಟ್ಟಿರುವುದನ್ನು ಒಂದಾಗಿ ಕ್ರೋಢೀಕರಿಸಿ ಅಜ್ಞಾನದಿಂದಲೂ ಸಂಕಷ್ಟದಿಂದಲೂ ನರಳುತ್ತಿರುವ ಸಂಸಾರಿಗಳನ್ನುದ್ಧಾರಮಾಡುವ ಸಲುವಾಗಿ ಈ ಪುಸ್ತಕವನ್ನು ಕ್ರಯವೂ ಅಂಚೇ ಹಾಸಲೂ ಇಲ್ಲದೆ ಬೇಡಿದವರಿಗೆ ಸರ್ವತ್ರ ಉಚಿತವಾಗಿ ಕಳುಹಿಸುತ್ತೇವೆ. ಹೆಚ್ಚು ಮಾಹಿತಿಗೆ ಪತ್ರ ಬರೆಯಿರಿ.

ರಾಜವೈದ್ಯ ನಾರಾಯಣಜಿ ಕೇಶವಜಿ,
57, ಬಂದರ್ ಸ್ಟ್ರೀಟ್, ಜಿ. ಟಿ. ಮದ್ರಾಸ್

ಸಾರಸ್ವತ.

ಕನ್ನಡ ಮತ್ತು ಕೊಂಕಣಿ ಭಾಷೆಗಳಲ್ಲಿ ಕಳೆದ ವಿಜಯ ದಶಮಿ ದಿನದಿಂದ ಪ್ರತಿ ದಶಮಿಗೆ ಹೊರಡುವ ಪತ್ರಿಕೆ.

ಎ. ಎಸ್. ಕಾಮತ್,
ಮುಲ್ಕಿ ವಾಮನ ಕುಡುವ } ಸಂಪಾದಕರು.

ಮತಸಂಸ್ಥೆ ಮತ್ತು ಸಮಾಜಕ್ಕೆ ಸಂಬಂಧಪಟ್ಟ ಇತರ ಸಂಸ್ಥೆಗಳ ಸುಸಂಘಟನ.

ಸಮಾಜದೊಳಗೆ ಅನ್ಯೋನ್ಯ ಸಾಧನೆ.

ಸ್ತ್ರೀಸಮಾಜಕ್ಕೆ ಉಪಯುಕ್ತವಾದ ವಿಷಯಗಳ ನಿರೂಪಣ

ಮತಭಾವನೆಗಳ ಉಜ್ಜೀವನ ಇತ್ಯಾದಿ ಉದ್ದೇಶಗಳಿಂದ ಈ ಪತ್ರಿಕೆಯು ಹೊರಡಿಸಲ್ಪಡುವುದು. ಸಾರಸ್ವತ ಸಮಾಜವು ಇದಕ್ಕೆ ಪ್ರೋತ್ಸಾಹವನ್ನೀಯಬೇಕಾಗಿ ಪ್ರಾರ್ಥನೆ.

ಚಂದಾಹಣ ಅಂಚೆವೆಚ್ಚ ಕೂಡಾ ರೂ. ೧—೪—೦. ಪೋಷಕರು ರೂ. ೧೦-೦-೦. ಸಹಾಯಕರು ರೂ. ೫-೦-೦. ಮಾದರಿ ಸಂಚಿಕೆಯನ್ನು ಟಪ್ಪಾಲು ಖರ್ಚಿಗಾಗಿ ಅರ್ಧಾಣೆ ಸ್ಟಾಂಪು ಕಳುಹಿಸುವವರಿಗೆ ಉಚಿತವಾಗಿ ಕಳುಹಿಸುವೆವು.

ಕನ್ನಡ ನಾಡಿನಲ್ಲಿ ಪ್ರತಿ ಕಡೆಯಲ್ಲಿಯೂ ಬಾತಮಿದಾರರು ಬೇಕು.

ಎಲ್ಲಾ ಪತ್ರವ್ಯವಹಾರಗಳನ್ನು ಕೆಳಗಿನ ವಿಳಾಸಕ್ಕೆ ನಡೆಸಬೇಕು.

ಯು. ನಾರಾಯಣನಾಯ್ಕ, ಕಾರ್ಯದರ್ಶಿ,
ಸಾರಸ್ವತ, ಉಡುಪಿ.

ಕನ್ನಡಿಗರೆ! **ವಸಂತ.** ಕಣ್ತೆರೆಯಿರಿ!

ಈಗಾಗಲೇ ಎರಡನೇ ಸಂಪುಟವು ಆರಂಭಿಸಲಿದೆ.

ಇತಿಹಾಸನಿಧಿ ಎಂದರೆ	ವಸಂತ
ಸಮಾಜಸುಧಾರಕನೆಂದರೆ	ವಸಂತ
ಕೈಗಾರಿಕೆಯ ಸಾಮ್ರಾಜ್ಯವೆಂದರೆ	ವಸಂತ
ಕರ್ನಾಟಕ ಭಾಷಾಸೇವಕನೆಂದರೆ	ವಸಂತ
ದೇಶವಿದೇಶ ಬಂಧುವೆಂದರೆ	ವಸಂತ
ಕಾದಂಬರಿಗಳ ಭಂಡಾರವೆಂದರೆ	ವಸಂತ
ಚಿತ್ತಾಕರ್ಷ ಚಿತ್ರಶಾಲೆಯೆಂದರೆ	ವಸಂತ
ದೇಶಭಕ್ತನೆಂದರೆ	ವಸಂತ

ಇಂತಹ ವಸಂತನು ಯಾರಿಗೆ ಬೇಕು, ಯಾರಿಗೆ ಬೇಡ?

48 (ಕ್ರೌನ್ ¼ ಪುಟ ಸೈಜಿನ) ಪುಟಗಳನ್ನು ಒಳಗೊಂಡ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3—4—0 ಮಾತ್ರ.

ವ್ಯವಸ್ಥಾಪಕ,
ವಸಂತ ಕಾರ್ಯಾಲಯ,
ಕುಂದಾಪುರ, ದಕ್ಷಿಣ ಕನ್ನಡ

ಕೋಕಶಾಸ್ತ್ರವು.

ಈ ಪುಸ್ತಕದಲ್ಲಿ 72 ಅಧ್ಯಾಯಗಳೂ ಮತ್ತು 112 ಮನೋಹರವಾದ ಚಿತ್ರಗಳೂ ಇವೆ. ಈ ಪುಸ್ತಕದ ಸಾರಾಂಶ, ಹೆಂಗಸರಲ್ಲಿ ನಾಲ್ಕು ಜಾತಿ: (1) ಪದ್ಮಿನಿ, (2) ಚಿತ್ರಣಿ, (8) ಸೌಖನಿ ಮತ್ತು (4) ಹಸ್ತಿನಿ ಇವರ ನಕ್ಷೆಗಳನ್ನು ಕೊಟ್ಟು ವಿವರಿಸಲ್ಪಟ್ಟಿದೆ. ಹಾಗೆಯೇ ನಾಲ್ಕು ಜಾತಿಯ ಮನುಷ್ಯರು. ಹೆಂಗಸರನ್ನು ಮತ್ತು ಗಂಡಸರನ್ನು ನೋಡಿ ಯಾವ ಜಾತಿ ಎಂದು ಕಂಡುಹಿಡಿಯುವ ಕ್ರಮ. ಚಂದ್ರನ ಮತ್ತು ನಕ್ಷತ್ರಗಳ ಸ್ಥಾನಗಳನ್ನು ನೋಡಿ ಶುಭಕಾಲವನ್ನು ಕಂಡುಹಿಡಿಯುವ ಕ್ರಮ. ರಜಸ್ವಲೆಯಾಗುವಿಕೆ. ಇದರ ವಿವರ. ಇದರ ರೋಗಗಳು, ಈ ರೋಗಗಳ ನಿವಾರಣೆ ಕ್ರಮ. ಬಸುರಾಗುವಿಕೆ, ನವಮಾಸದ ಗರ್ಭದ ಬೆಳವಣಿಗೆ (ಇದರ ನಕ್ಷೆಕೊಟ್ಟಲ್ಪಟ್ಟಿದೆ). ಬಸುರಾದ ಕಾಲದಲ್ಲಿ ಹೆಂಗಸರು ನಡೆಯುವ ಕ್ರಮ. ನೋವು ಮತ್ತು ಕಷ್ಟವಿಲ್ಲದೆ ಪ್ರಸವ ಆಗುವ ಕ್ರಮ. ಕಳೆದುಕೊಂಡ ಶಕ್ತಿಯನ್ನು ಹಿಂತಿರುಗಿ ಪಡೆಯುವ ಕ್ರಮ. ತಮ್ಮ ಶಕ್ತ್ಯಾನುಸಾರ ಮಿತ ಸಂತತಿಯನ್ನು ಮಾಡುವ ಕ್ರಮ. ತಮ್ಮ ಇಚ್ಛಾನುಸಾರ ಗಂಡು ಅಥವಾ ಹೆಣ್ಣು ಕೂಸನ್ನು ಪಡೆಯುವ ಕ್ರಮ. ಗರ್ಭಾವಸ್ಥೆಯಲ್ಲಿ ಕೂಸಿನ ಲಿಂಗವನ್ನು ಕಂಡುಹಿಡಿಯುವ ಕ್ರಮ. ಹೆಂಗಸರ ಸೌಂದರ್ಯವನ್ನು ಕಾಪಾಡುವುದು ಹೇಗೆ. ಗೊಡ್ಡುತನವನ್ನು ಹೋಗಲಾಡಿಸುವ ಕ್ರಮ. ಮತ್ತು ಅನೇಕ ಇಲ್ಲಿ ವಿವರಿಸಲಿಕ್ಕೆ ಆಗದ ಸಂಗತಿಗಳು ಸಂಕ್ಷೇಪವಾಗಿ ವಿವರಿಸಲ್ಪಟ್ಟಿವೆ. ಬಹಳ ಪ್ರಾಚೀನಕಾಲದ ರೋಗನಿವಾರಣೆಯ ಔಷದಗಳು ಕೊಡಲ್ಪಟ್ಟಿವೆ.

ಈ ಪುಸ್ತಕಗಳು ಇಂಗ್ಲಿಷಿನಲ್ಲೂ ಮರಾಠಿಯಲ್ಲೂ ದೊರೆಯುತ್ತವೆ.

ಪುಸ್ತಕ ೧ರ ಕ್ರಯ ರೂ. 4—0—0

ಇಂಟರ್‌ನೇಶನಲ್ ಪಬ್ಲಿಷಿಂಗ್ ಕಂಪೆನಿ,
ಇಂಟರ್‌ನೇಶನಲ್ ಬಿಲ್ಡಿಂಗ್,
ಲುಧಿಯಾನಾ, (ಪಂಜಾಬ).

International Publishing Company,
International Building,
Ludhiyana, PUNJAB.

JUST ARRIVED

Continental Belts.

OF VARIOUS SIZES

Price Re. 1—10—0 each

Mangalore Trading Association,

Car Street, MANGALORE

ಬಂದು ನೋಡಿರಿ! ತಿಂದು ನೋಡಿರಿ!

ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ

ಪದಕವನ್ನು

ಬಹುಮಾನವಾಗಿ ಪಡೆದಿರುವ

ಎಸ್. ಪಿ. ಆಚಾರ್ಯ

ಇವರಿಂದ ತಯಾರಿಸಲ್ಪಟ್ಟ

ಉಪ್ಪಿನಕಾಯಿಗಳನ್ನು

ಬಂದು ನೋಡಿರಿ! ತಿಂದು ನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ, ಕುಂಬಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನ್ನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ

ಬಂದು ನೋಡಿರಿ! ತಿಂದು ನೋಡಿರಿ!

ಇಂಡಿಯನ್ ಸ್ವೀಟ್‌ಮೀಟ್ ಮಾರ್ಟ್.

ಮನೋಲ್ಲಾಸಿನಿ ಕಾಫಿ ಕ್ಲಬ್. ಮಾರ್ಕೆಟು ರೋಡು, ಮಂಗಳೂರು. } ಅಥವಾ { ಸದಾನಂದ ಕಾಫಿ ಕ್ಲಬ್ ರಥಬೀದಿ, ಮಂಗಳೂರು.

ದಕ್ಷಿಣ ಕನ್ನಡ ಜಿಲ್ಲೆಯ

ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

WANTED.

For the Haliyal Municipal Dispensary a qualified Midwife knowing also the compounders work on Rs. 40—½—55 p. m. Apply sharp with Testimonials to the undersigned on or before the 5th June 1925.

Haliyal, } Sd. G. L. Hemswadkar,
12th May 1925 } Chairman D. C.
Haliyal Municipality

ಕಾಸರಗೋಡು ಗೋವಳರ ಅಥವಾ ಮಣಿಯಾಣಿ ಸಭೆ.

ಮೊನ್ನೆ ತಾ. ೧೪—೫—೨೫ರಲ್ಲು ಅಡೂರು ವಿದ್ಯಾರಂಭಂಗಿನ ಶಾಲೆಯಲ್ಲಿ, ಮ॥ ರಾ॥ ರಾ॥ ಎ. ಎಸ್. ಆರ್. ಮಣಿಯಾಣಿಯವರ ಅಧ್ಯಕ್ಷತೆಯಲ್ಲಿ ಕೂಡಿದ ಸಭೆಯ ವೃತ್ತಾಂತ:—

ಕುಲೋನ್ನತಿ ಬಗ್ಗೆ ಸಾಧಕರು, ಸುಖಸಂಪತ್ತನ್ನೂ ಮಾನಾಭಿಮಾನಗಳನ್ನೂ ತೊರೆದು ಅನವರತವೂ, ತಮ್ಮ ಜೀವಮಾನಗಳನ್ನು ಈ ವಂಶದೇಳಿಗೆಗಾಗಿ ವ್ಯಯಮಾಡಬೇಕೆಂಬ ಒಂದು ಪ್ರತಿಜ್ಞೆಯನ್ನು ಕೈಕೊಂಡರೆಂಬುದು ಪರಮಾಹ್ಲಾದಕರವಾದ ಒಂದು ಸಂಗತಿಯೇ ಸರಿ. ಆ ಸಭೆಯೊಳಗೆ ಅನೇಕರು ಭಾಷಣರೂಪವಾಗಿಯೂ, ಚೌಪದಿ ಪದ್ಯಗಳ ರೂಪವಾಗಿಯೂ ತಂತಮ್ಮ ಮನೋಗತಗಳನ್ನು ಹೇಳಿಕೊಂಡರು. ಮ॥ ರಾ॥ ರಾ॥ ಎಮ್. ಕುಂಞರಾಮನ್ ಮಣಿಯಾಣಿಯವರ ಚೌಪದಿ ಪದ್ಯವಾಗಿ ಹೇಳಿದ ಭಾಷಣವು ಕುಲೋನ್ನತಿಯ ಮಾರ್ಗವನ್ನೂ, ಕುಲಗಳಿಗೆ ಬರುವ ದೋಷಗಳನ್ನೂ, ಅವುಗಳನ್ನು ನಿವಾರಣೆ ಮಾಡುವ ಮಾರ್ಗಗಳನ್ನೂ ಇನ್ನೂ ಅನೇಕ ಸುಸಂಗತಿಗಳನ್ನೂ ಚೆನ್ನಾಗಿ ಬೋಧಿಸುವದಿತ್ತು. ಆದುದರಿಂದ ಈ ಚೌಪದಿ ಪದ್ಯವನ್ನು ಮಣಿಯಾಣಿಯರಂದಲ್ಲ, ಎಲ್ಲಾ ಸಮಾಜದವರೂ ಕಲಿಯಲು ಇಲ್ಲವೆ, ಕೇಳಿ ಅದರಂತೆ ನಡೆಯಲು ಯೋಗ್ಯ ತರವಾದದ್ದಾಗಿದೆ.

ಮ॥ ರಾ॥ ರಾ॥ ಚೀನಪ್ಪಾಡಿ ವಿಷ್ಣುಪಾಲನ್ ಮಣಿಯಾಣಿಯವರು ನಮ್ಮ ಕುಲದ ಬಾಲ ಬಾಲಕಿಯರ ವಿದ್ಯಾಭಿವೃದ್ಧಿಗಾಗಿಯೂ ಇನ್ನು ಅನೇಕ ಸುಕೃತಗಳಿಗಾಗಿಯೂ ಈಚೆಗೆ ಮೂರು ನಾಲ್ಕು ವರ್ಷಗಳಿಂದ ಪ್ರಯತ್ನಪಟ್ಟು ದೇವಭಜನೆ, ನಾಟಕ, ಜಾತಿ ಕುರಿತಂದು ಇತ್ಯಾದಿಗಳಿಂದ ಜನರ ಮನಸ್ಸನ್ನು ಆಕರ್ಷಿಸಿ ಅವರ ಅನುಮತಿಯಿಂದ ಒಂದು ಸಂಘವನ್ನು ಏರ್ಪಡಿಸಲು ಅವರೆ ಪ್ರಮುಖರಾದರು. ಈಗ ನಡೆದ ಮಹಾಸಭೆಯಲ್ಲಿ ಸಭೆಗೆ ಬೇಕಾದ ಅನೇಕ ಸುಕೃತ್ಯಗಳನ್ನು ಇವರು ಬೋಧಿಸಿದರು.

ಅಧ್ಯಕ್ಷರ ಭಾಷಣದ ಮುಖ್ಯ ತಾತ್ಪರ್ಯವೇನಂದರೆ, ಇನ್ನು ಮುಂದ ಸ್ವಜಾತಿಯ ಬಾಲ, ಬಾಲಕಿಯರ ವಿದ್ಯಾಭಿವೃದ್ಧಿಗೋಸ್ಕರ ಈ ಸಂಘವು ವೃದ್ಧಿಯಾಗುವಂತೆ ಹೆಚ್ಚಿನ ಸಾಧನೆಗಳನ್ನು ಮಾಡಬೇಕು.

ಬಾಲಕ ಬಾಲಕಿಯರಿಗೆ ವಿದ್ಯೆಯನ್ನು ಯಾವ ರೀತಿಯಲ್ಲಿ ಕೊಡಬೇಕು? ಮತ್ತು ಯಾವ ರೀತಿಯಲ್ಲಿ ಬುದ್ಧಿಯನ್ನು ವೃದ್ಧಿಸಿ ಧರ್ಮವನ್ನು ಕಾಪಾಡಿಕೊಳ್ಳಬೇಕೆಂಬುದರ ಕುರಿತು ವಿವರಿಸಿದರು. ತರುವಾಯ ಈಗಿನ ಸ್ತ್ರೀವಿದ್ಯಾಭ್ಯಾಸ ಮತ್ತು ಮಿಶ್ರಬೋಧನೆಯ ಕುರಿತು ವಿವರಿಸಿ ಹೇಳಿದರು.

೩. ಸ್ವಜಾತಿಯವರು ಒಗ್ಗಟ್ಟಿನಿಂದ ಕೆಲಸಮಾಡಬೇಕೆಂಬುದರ ವಿಷಯ, "ಒಗ್ಗಟ್ಟಿನಲ್ಲಿ ಬಲವಿದೆ" ಎಂಬ ಗಾದೆಗನುಸರಿಸಿ ಅನೇಕ ಉದಾಹರಣೆಗಳನ್ನು ಕೊಟ್ಟರು.

೪. ಬಾಲ್ಯವಿವಾಹ, ಪ್ರೌಢವಿವಾಹಗಳ ಕುರಿತು ಹೇಳಿ ಪ್ರೌಢವಿವಾಹವೇ ಉತ್ತಮವೆಂದು ಸಭಾರಂಜಕವಾಗಿ ತೋರ್ಪಡಿಸಿದರು.

೫. ಒಂದು ಜನಾಂಗವನ್ನು ಆಳಲಿಕ್ಕೆ, ಸಾಮ, ದಾನ, ಭೇದ, ದಂಡವೆಂಬ ಚತುರೋಪಾಯಗಳನ್ನು ಉಪಯೋಗಿಸಿ, ಜನಾಂಗವನ್ನು ವೃದ್ಧಿಗೆ ತರಬೇಕೆಂದೂ, ಇನ್ನು ಬರುವ ಮಹಾಸಭೆಯಲ್ಲಿ ಅಧ್ಯಕ್ಷ, ಉಪಾಧ್ಯಕ್ಷ, ಕಾರ್ಯದರ್ಶಿ ಮೊದಲಾದವರ ಚುನಾವಣೆಯು ಮೆಂಬರುಗಳಿಂದಲೇ ಆಗುವುದೆಂದೂ, ಹೇಳಿ ಸಭೆಯನ್ನು ಮುಕ್ತಾಯಗೊಳಿಸಿದರು.

ಬೆಳಗಾಂವಿಯ ೧೧ನೇ ಕನ್ನಡ ಸಾಹಿತ್ಯ ಸಮ್ಮೇಳನವು.

(ಕಳೆದ ಸಂಚಿಕೆಯಿಂದ ಮುಂದುವರಿಸಿದುದು.)

— ಹಲವು ಸಲಹೆಗಳು. —

೧. ಪುರಾತನ ಗ್ರಂಥಸಂಗ್ರಹ—ಪ್ರತಿಯೊಂದು ಭಾಗದ ಕನ್ನಡಿಗರು ಆಯಾಯ ಸರಕಾರಕ್ಕೆ ಒತ್ತಾಯಮಾಡಿ, ಪುರಾತನ ಗ್ರಂಥಗಳನ್ನು ಸಂಗ್ರಹಿಸುವಂತೆ ಮಾಡಬೇಕು. ಈ ಕೆಲಸ ಮಾಡಲು ಮದರಾಸು ಸರಕಾರದವರನ್ನು ಕೇಳಿಕೊಳ್ಳಲು ಪ್ರಯತ್ನಗಳು ನಡೆಯುತ್ತಲಿವೆ. ಇತರರೂ ಹೀಗೆ ಮಾಡಬೇಕು. ಇಲ್ಲವಾದರೆ ಅಮೌಲ್ಯವಾದ ಗ್ರಂಥಗಳು ಹಾಳಾಗುವುದರಲ್ಲಿ ಸಂಶಯವಿಲ್ಲ. ಕಾಲೇಜು ವಿದ್ಯಾರ್ಥಿಗಳೂ, ವಿರಾಮಕಾಲಗಳಲ್ಲಿ ಹಳ್ಳಿಗಳಿಗೆ ಹೋಗಿ, ಕನ್ನಡ ವಾಙ್ಮಯ ವಿಷಯದಲ್ಲಿ ಜನರಲ್ಲಿ ಶ್ರದ್ಧೆಯನ್ನು ಹುಟ್ಟಿಸಬಹುದು. ಗ್ರಂಥ ಸಂಗ್ರಹವನ್ನೂ ಮಾಡಬಹುದು.

೨. ಗ್ರಂಥಪ್ರಕಟನೆ—ಇದು ಮುದ್ರಣದ ವಿಚಾರ, ಎಲ್ಲರಿಂದಲೂ ಸಾಧ್ಯವಿಲ್ಲ. ಮೈಸೂರು ಆರ್ಕಿಯೋಲಾಜಿಕಲ್ ಖಾತೆಯವರೂ ಓರಿಯಂಟಲ್ ಲೈಬ್ರರಿಯವರು; ಹಲವು ಗ್ರಂಥಗಳನ್ನು ಪ್ರಕಟಿಸುತ್ತಿರುವರು. ಮೈಸೂರು ವಿಶ್ವವಿದ್ಯಾನಿಲಯದವರೂ ಕೊಂಚ ಲಕ್ಷ್ಯಕೊಟ್ಟಿರುವರು. ಆದರೆ ಅವರಿಂದಲೇ ಈ ಕೆಲಸವಾಗಲಾರದು. ಸಾಹಿತ್ಯ ಪರಿಷತ್ತು, ಕರ್ನಾಟಕ ವಿದ್ಯಾವರ್ಧಕ ಸಂಘಗಳು ಈ ಕೆಲಸವನ್ನು ಕೈಗೆ ತೆಗೆದುಕೊಳ್ಳಬೇಕು. ಮಂಗಳೂರು ಜಿಲ್ಲೆಯಲ್ಲಿ ಹಲವು ಯುವಕರು ಪ್ರಕಟಣಾಕಾರ್ಯಕ್ಕೆ ಕೈಹಾಕಿರುವರು. ಈ ಸಂದರ್ಭದಲ್ಲಿ 'ವಚನ ಶಾಸ್ತ್ರವನ್ನು ಪ್ರಕಟಿಸಿದ ರಾವಸಾಹೇಬ ಹಳಕಟ್ಟಿಯವರನ್ನೂ, ಸರ್ವಜ್ಞಮೂರ್ತಿಯ ವಚನಗಳನ್ನು ಪ್ರಕಟಿಸಿದ ಶ್ರೀ. ಉತ್ತಂಗಿಯವರನ್ನೂ ನಾವೆಷ್ಟು ಶ್ಲಾಘಿಸಿದರೂ ಅಲ್ಪವೇ ಸರಿ.

ಜೈನರೂ, ಲಿಂಗಾಯತರೂ, ಬ್ರಾಹ್ಮಣರೂ ಬೇರೆ ಬೇರೆ ಗುಂಪುಕೂಡಿ ತಮ್ಮ ತಮ್ಮ ಪಂಗಡದ ಗ್ರಂಥಗಳು ಪ್ರಕಟಿಸಲು ಪ್ರಯತ್ನಪಡಬೇಕು.

ಕನ್ನಡವೂ ಶಿಕ್ಷಣ ಪದ್ಧತಿಯೂ.

ಈ ಬಗ್ಗೆ ಪರಿಶೀಲಿಸಿದರೆ ಮದರಾಸು ಅಧಿಪತ್ಯದಲ್ಲಿ ಪ್ರಾಥಮಿಕ ಶಿಕ್ಷಣವು ಸಾಮಾನ್ಯವಾಗಿ ದೇಶಭಾಷೆಗಳಲ್ಲೇ ಪಾಠ ಹೇಳಲಿಕ್ಕೆ ಅಧ್ಯಾಪಕರಿಗೂ, ದೇಶ ಭಾಷೆಗಳಲ್ಲೇ ಪ್ರಶ್ನೆ ಪತ್ರಿಕೆಗಳಿಗೆ ಉತ್ತರಕೊಡಲು ವಿದ್ಯಾರ್ಥಿಗಳಿಗೂ ಅವಕಾಶವುಂಟು. ಈ ಅವಕಾಶವನ್ನು ಅಧ್ಯಾಪಕರೂ, ವಿದ್ಯಾರ್ಥಿಗಳೂ ಉಪಯೋಗಪಡಿಸಿಕೊಂಡಂತೆ ಕಂಡುಬರುವದಿಲ್ಲ. ವಿಶ್ವವಿದ್ಯಾನಿಲಯದಲ್ಲಿ ದೇಶಭಾಷೆಗಳ ವೃದ್ಧಿವಿಕಾಸಕ್ಕೆ ಹಿಂದಿದ್ದ ಸೌಕರ್ಯಗಳು ಇಂದಿಲ್ಲ. ಮುಂದೆ ಆಗುವದಕ್ಕೆ ಸಾಹಸಪಡುತ್ತಿರುವರು.

ಮೈಸೂರು ಸಂಸ್ಥಾನದಲ್ಲಿ ಕನ್ನಡ ಭಾಷೆಗೆ ಹೆಚ್ಚು ಲಕ್ಷ್ಯವುಂಟು. ಅಲ್ಲಿನ ವಿಶ್ವವಿದ್ಯಾಲಯದ ಪಾಠಪ್ರವಚನದಲ್ಲಿ ಕನ್ನಡಕ್ಕೆ ಶ್ರೇಷ್ಠ ಸ್ಥಾನವನ್ನೇ ಕೊಟ್ಟಿರುತ್ತಾರೆ. ಆ ವಿಶ್ವವಿದ್ಯಾಲಯವನ್ನೇ ಕರ್ನಾಟಕ ಭಾಷೆಯ ಮೂಲಕ ಶಿಕ್ಷಣಕೊಡುವದನ್ನಾಗಿ ಮಾಡುವ ಯೋಚನೆಯು ಸದ್ಯಕ್ಕೆ ಸಾಧ್ಯವಿಲ್ಲ. ಕನ್ನಡ ಲೋವರ್ ಸೆಕೆಂಡರಿ ಪರೀಕ್ಷೆಯನ್ನು ಆ ಸರಕಾರದವರು ತೆಗೆದು ಹಾಕಿದುದು ಕನ್ನಡ ಭಾಷಾಭಿವೃದ್ಧಿಯ ದೃಷ್ಟಿಯಿಂದ ಹಾನಿಕರವಾದುದೆಂದು ಹೇಳಬೇಕಾಗುತ್ತದೆ. ಮುಂಬಯಿ ವಿಶ್ವವಿದ್ಯಾಲಯದವರು ದೇಶಭಾಷೆಗಳ ಕಡೆಗೆ ಹೆಚ್ಚಾಗಿ ಗಮನಕೊಡಲು ಪ್ರಯತ್ನಪಡುತ್ತಿರುವರೆಂದು ಸುದ್ದಿ. ಈ ಸಂದರ್ಭದಲ್ಲಿ ಒಂದು ಸಲಹೆ, ಕನ್ನಡ ನಾಡಿನಲ್ಲೆಲ್ಲ ಅಡ್ಡಿಯಿಲ್ಲದೆ, ಒಮ್ಮುಖವಾಗಿ ಭಾಷಾಭಿವೃದ್ಧಿಯಾಗಬೇಕಾದರೆ ಅಲ್ಲಿನ ಶಿಕ್ಷಣಕ್ರಮವು ಏಕರೂಪವಾಗಿರಬೇಕು. ಈ ಆಶಯವನ್ನು ಸಾಧಿಸಬೇಕಾದರೆ ಮೈಸೂರು, ಮುಂಬಯಿ, ಮದರಾಸು, ಹೈದರಾಬಾದ ವಿಶ್ವವಿದ್ಯಾನಿಲಯಗಳ ಪ್ರತಿನಿಧಿಗಳದೊಂದು ಉಪಸಭೆಯನ್ನು (ಈ ಸಮ್ಮೇಳನ ಅಥವಾ ಪರಿಷತ್ತಿನವರು ರಚಿಸಬೇಕು. ಆ ಉಪಸಭೆಯ ಮೂಲಕ ಎಲ್ಲ ಕನ್ನಡ ನಾಡಿನಲ್ಲೂ ಏಕರೂಪವಾದ ಕನ್ನಡ ಭಾಷಾ ಶಿಕ್ಷಣವನ್ನು ಕೊಡಬಹುದು.

ಹಿಂದೂಸ್ಥಾನದಲ್ಲಿ ವಿಶ್ವವಿದ್ಯಾಲಯಗಳು ವರ್ಷ ವರ್ಷ ಹೆಚ್ಚುತ್ತಿವೆ. ಈಗಾಗಲೇ ೧೬ ಇವೆ. ದಕ್ಷಿಣ ದೇಶದಲ್ಲಿ ಆಂಧ್ರರೂ ಕೇರಳರೂ ಪ್ರತ್ಯೇಕ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲು ಪ್ರಯತ್ನಪಡುತ್ತಿರುವರು. ಸರಕಾರದವರೂ ಅತ್ತ ಕಡೆಗೆ ಲಕ್ಷ್ಯಕೊಟ್ಟಿರುವರು. ಆದರೆ ನಮ್ಮ ದೇಶದ ಗತಿಯೇನು?

ನಮ್ಮ ಪಂಡಿತರಿಗೆ ಈಗ ತಕ್ಕ ಗೌರವವು ಸಲ್ಲುತ್ತಿಲ್ಲ. ಇಂಗ್ಲೀಷು ಕಲಿತ ಮಾತ್ರಕ್ಕೆ ವಿದ್ವಾಂಸರೆಂದೆನಿಸಬಾರದು. ಸಂಸ್ಕೃತ ಅಥವಾ ಕನ್ನಡದಲ್ಲಿ ಪಾಂಡಿತ್ಯ ಸಂಪಾದಿಸಿದ ಮಾತ್ರಕ್ಕೆ ಅವರನ್ನು ನಿಕೃಷ್ಟರಾಗೆಣಿಸಬಾರದು. ಈಗ ಸರಕಾರದಲ್ಲೂ ವಿಶ್ವವಿದ್ಯಾನಿಲಯಗಳಲ್ಲೂ ಇದೇ ಭಾವವೇ ಅಧಿಕಾರಿಗಳಲ್ಲಿ ಬೇರೂರಿದೆ. ಈ ಕೊರತೆಯನ್ನು ನಾವು ಹೋಗಲಾಡಿಸಬೇಕು.

ಸಂಸ್ಕೃತ ಭಾಷಾಭ್ಯಾಸವನ್ನು ಹೆಚ್ಚಿಸಬೇಕು. ಸಂಸ್ಕೃತಕ್ಕೆ ಮೃತಭಾಷೆಯೆಂದು ಹೆಸರಿಟ್ಟು ಅದನ್ನು ಹೂಳುವದು ತರವಲ್ಲ. ಸಂಸ್ಕೃತವು ಮೃತಭಾಷೆಯಲ್ಲ! ಸಂಸ್ಕೃತವು ಆರ್ಯಸಂಸ್ಕೃತಿಯ ಭಾಷೆ! ಭರತಖಂಡದ ಮಾತೃ ಭಾಷೆ ನಮ್ಮ ಸಂಕುಚಿತ ದೃಷ್ಟಿಯನ್ನು ಬಿಟ್ಟು ಸಂಸ್ಕೃತಾಭ್ಯಾಸಕ್ಕೆ ಮೊದಲಿಡಬೇಕು.

ವಿಶ್ವವಿದ್ಯಾನಿಲಯಗಳು ಗ್ರಂಥರಚನೆಗೆ ಪ್ರೋತ್ಸಾಹಕೊಡಬೇಕು. ಮೈಸೂರು ವಿದ್ಯಾನಿಲಯದವರು ಹಾಗೆ ಮಾಡುತ್ತಿದ್ದರು. ದ್ರವ್ಯಾಭಾವದಿಂದೀಗ ನಿಲ್ಲಿಸಿರುವರು. ಮೈಸೂರು ಶಿಕ್ಷಣ ಖಾತೆಯವರು ಈಗ ಪ್ರೋತ್ಸಾಹಕೊಡುತ್ತಿರುವರು. ಧಾರವಾಡದ ವಿದ್ಯಾವರ್ಧಕ ಸಂಘ, ಬೆಂಗಳೂರಿನ ಅಮೇಚೂರು ನಾಟಕ ಮಂಡಲಿ, ಅನಂತಪುರದ ಸರಸ್ವತೀ ಕೇತನ ಮುಂತಾದ ಸಾರ್ವಜನಿಕ ಸಂಸ್ಥೆಗಳೂ ತಕ್ಕಷ್ಟು ಗ್ರಂಥರಚನೆಗೆ ಪ್ರೋತ್ಸಾಹಕೊಡುತ್ತಲಿವೆ. ಮೈಸೂರು ಶ್ರೀಮನ್ಮಹಾರಾಜರವರ ಆಸ್ಥಾನದಲ್ಲಿ ಅನೇಕ ಕವಿಗಳಿರುವರು. ವಿದ್ಯಾಪಕ್ಷಪಾತಿಗಳಾದ ಮಹಾರಾಜರು ಮಂಡಳಿಯನ್ನು ಸೇರಿಸಿ ಸಂಸ್ಕೃತ ಕನ್ನಡಗಳಲ್ಲಿ ಆಶುಕವಿತ್ವವನ್ನು ಹೇಳಿಸಿ, ಈ ಸ್ಪರ್ಧೆಯಲ್ಲಿ ಜಯಶಾಲಿಗಳಾದವರಿಗೆ ಖಿಲ್ಲತ್ತುಗಳನ್ನೂ ಬಿರುದುಗಳನ್ನೂ ಕೊಟ್ಟು ಬಹುಮಾನಿಸುತ್ತಿರುವರು. ಚಿಕ್ಕದೇವರಾಜ ಒಡೆಯರು, ಮುಮ್ಮಡಿ ಕೃಷ್ಣರಾಜ ಒಡೆಯರಂತೆಯೇ ಈ ನಾಲ್ವಡಿ ಶ್ರೀಮತ್ ಕೃಷ್ಣ ಭೂಪತಿಗಳೂ ಕರ್ನಾಟಕ ಭೋಜನಂತೆಯೇ ವಿರಾಜಿಸುತ್ತಿರುವರು. ಕನ್ನಡಿಗರೆಲ್ಲರೂ ಅವರಿಗೆಷ್ಟು ಕೃತಜ್ಞರಾಗಿದ್ದರೂ ಸಾಲದು.

ಸ್ಥೂಲವಾಗಿ ಕನ್ನಡನಾಡಿನ ಪರಿಸ್ಥಿತಿಯನ್ನೂ, ಕನ್ನಡ ವಾಙ್ಮಯದ ಸ್ಥಿತಿಯನ್ನೂ, ವಾಙ್ಮಯದ ಭವಿಷ್ಯವನ್ನು, ಸೂಚಿಸಿದ್ದಾಯಿತು. ಕನ್ನಡಿಗರು ದೇಶಭಾಷೆಯಲ್ಲಿ, ಮಾತೃಭಾಷೆಯಲ್ಲಿ ನಿಶ್ಚಲವಾದ ಅಭಿಮಾನವುಳ್ಳವರೇ ಆದರೆ ಅಲ್ಪಸ್ವಲ್ಪಕಾಲದಲ್ಲೇ ಕರ್ನಾಟಕ ರಾಷ್ಟ್ರವನ್ನು ಬೆಳಗಿಸಬಹುದು. ಕರ್ನಾಟಕಕ್ಕೊಂದು ಕರ್ತವ್ಯವುಂಟೆಂದು ತಿಳಿದು, ಒಂದು

ಸಂದೇಹವುಂಟೆಂದು ಭಾವಿಸಿ ಎಲ್ಲರೂ ಒಂದು ಮನಸ್ಸಿನಿಂದ ಕೆಲಸ ಮಾಡಿದರೆ ಕರ್ನಾಟಕವು ಇತರ ಪ್ರಾಂತಗಳಿಗೆ ಸರಿಸಮಾನವಾಗಿ ನಿಲ್ಲಲಿಕ್ಕೆ ಅಡ್ಡಿಯೇ ಇಲ್ಲ.

ಕನ್ನಡಿಗರಿಗೆ ಈ ಕರ್ತವ್ಯನಿರ್ವಾಹ ಸಂಘದಲ್ಲಿ ಪಂಚಕ್ಕಿನ ಉಪಾಧ್ಯಕ್ಷರಾದ ಶ್ರೀಯುತ ಕಪ್ಪೂರ ಶ್ರೀನಿವಾಸರಾಯರೇ ದಾರಿ ತೋರಿಸಲುಸಿದ್ಧರಾಗಿರುವರು. ಕನ್ನಡಿಗರಿಗೆ ಕರ್ನಾಟಕ ಮಾತೆಯಲ್ಲಿ ಅಂಚಂಚಲವಾದ ಆ ಮಾತೃಭಾವವು ಹುಟ್ಟಿತೆಂದರೆ ಮುಂದಿನ ಮಾರ್ಗವು ಸುಗಮವಾಗುವದು.

ವಿದೇಶ ವರ್ತಮಾನ.

—ಲೋರ್ಡ್ ಮಿಲ್ನರ [illegible] ಮಿಲ್ನರವರು ಇದೇ ತಿಂಗಳ ತಾ. ೧೩ಕ್ಕೆ ಮೃತಪಟ್ಟರು.

—ಲಂಡನ ಪಟ್ಟಣದಲ್ಲಿ ಜರಗಿಸಲ್ಪಟ್ಟಿರುವ ವೆಂಬ್ಲೆ ವಸ್ತುಪ್ರದರ್ಶನಕ್ಕೆ ಚಕ್ರವರ್ತಿನಿಯವರು ಅಕಸ್ಮಾತಾಗಿ ತಾ. ೨೦ನೇ ಬೆಳಗ್ಗೆ(?) ಹೋಗಿ ಸಂದರ್ಶಿಸಿ ಬಂದಿರುವರು. ಸಿಲೋನ್ ದೇಶದ ದೇವಾಲಯ ಮಂಟಪದಲ್ಲಿ ಬಹಳ ಸಮಯ ಇದ್ದುಕೊಂಡು ಆ ದೇಶದ ಕೆಲವು ರತ್ನಗಳನ್ನು ಕ್ರಯಕ್ಕೆ ಪಡೆದು ಅಲ್ಲಿಯ [illegible] ಕೆಲಸವನ್ನು ಬಹಳ ಸೂಕ್ಷ್ಮವಾಗಿ ನೋಡುತ್ತಿದ್ದರು.

—ಜರ್ಮನ ದೇಶದೊಳಗೆ ಪರದೇಶಗಳಿಂದ ಬರತಕ್ಕ ಮೋಟಾರ್ ಕಾರ್ ಇತ್ಯಾದಿ ಸಾಮಗ್ರಿಗಳ ಮೇಲೆ ವಿಶೇಷವಾದ ಸುಂಕವನ್ನು ವಿಧಿಸಿರುತ್ತಾರೆ.

—ಜಪಾನ ದೇಶದಲ್ಲಿ ರೇಷ್ಮೆ ಕೈಗಾರಿಕೆಯು ಮುಖ್ಯಸ್ಥಳವಾದ [illegible] ಎಂಬಲ್ಲಿ ಬೆಂಕಿ ಬಿದ್ದು ಸುಮಾರು ೨೦೦೦ ಮನೆ ಮತ್ತು ಇತರ ಕಟ್ಟಡಗಳು ನಾಶವಾಗಿ ಹೋಗಿರುವವು.

ಒಳದೇಶ ವರ್ತಮಾನ.

—ಮುಂಬಯಿಯಲ್ಲಿ ಗೋರ್ಧನದಾಸ ಸುಂದರದಾಸ ಮೆಡಿಕಲ್ ಕಾಲೇಜು ಮತ್ತು ಎಡ್ವರ್ಡ್ ಆಸ್ಪತ್ರೆ ಇವೆರಡೂ ಮುನ್ಸಿಪಾಲಿಟಿಯವರಿಂದ ವ್ಯವಸ್ಥಾಪಿಸಲ್ಪಟ್ಟು ಇದೇ ಬರುವ ಜೂನ್ ತಿಂಗಳ ತಾ. ೨ರಲ್ಲಿ ತೆರೆಯಲ್ಪಡುವವು. ಮುಂಬಯಿ ಯುನಿವರ್ಸಿಟಿಗೆ ಸಂಯೋಜಿಸಲ್ಪಟ್ಟ ಈ ಕಾಲೇಜು ಬಿನ್ ಸರಕಾರಿಯಾಗಿರುವುದು. ಇಂಟರ್‌ಮಿಡಿಯೆಟ ಪರೀಕ್ಷೆಗಳಲ್ಲಿ ಪಾಸಾದವರಿಗೆ ಈ ಕಾಲೇಜಿನಲ್ಲಿ ಪ್ರವೇಶದೊರಕುವುದು.

—ಮದ್ರಾಸು ಲೆಂಡ್ ರಿಕಾರ್ಡ್ಸ್ ಇಲಾಖೆ—೧೯೨೧-೨೨ನೇ ವರುಷದಲ್ಲಿ ಈ ಇಲಾಖೆಯ ಡಿರೆಕ್ಟರರು, ಅಸಿಸ್ಟಂಟ್ ಡಿರೆಕ್ಟರರು, ಲೆಂಡ್ ರಿಕಾರ್ಡ್ಸ್ ತಹಸೀಲ್ದಾರರು ಮತ್ತು ಈ ಆಫೀಸರರ ಕೈಕೆಳಗಿರುವ ಎಲ್ಲಾ ಸಿಬಂದಿಯನ್ನು ತೆಗೆದುಹಾಕಲಾಯಿತು. ಈ ಸಿಬಂದಿಯು ವಜಾಮಾಡಲ್ಪಟ್ಟ ನಂತರ ಈ ಇಲಾಖೆಯ ಕೆಲಸವು ರೆವಿನ್ಯು ಡಿಪಾರ್ಟ್‌ಮೆಂಟಿನವರಿಂದಲೆ ನಿರ್ವಹಿಸಲ್ಪಡುವ ಏರ್ಪಾಡು ಮಾಡಲಾಗಿತ್ತು. ಆದರೆ ಈ ಏರ್ಪಾಡಿನಿಂದ ಲೆಂಡ ರಿಕಾರ್ಡ್ಸ್ ಇಲಾಖೆಗೆ ಸಂಬಂಧಪಟ್ಟ ಕೆಲಸಗಳನ್ನು ತೃಪ್ತಿಕರವಾದ ರೀತಿಯಲ್ಲಿ ಮಾಡಿಸುವದು ಕಷ್ಟಸಾಧ್ಯವಾದ್ದರಿಂದಲೂ ಮತ್ತು ರೆವಿನ್ಯು ಸಬೋರ್ಡಿನೇಟ ಆಫೀಸರರಿಗೆ ಲೆಂಡ್ ರಿಕಾರ್ಡ್ಸ್ ಇಲಾಖೆಗೆ ಬೇಕಾಗಿರುವ ತರಬೇತಿಯನ್ನು ಕೊಡಲಿಕ್ಕೆ ಇತರ ಯಾವ ವ್ಯವಸ್ಥೆಯು ಇಲ್ಲದೆ ಇರುವುದರಿಂದ ಲೆಂಡ್ ರಿಕಾರ್ಡ್ಸ್ ತಹಸೀಲ್ದಾರರನ್ನು ಪ್ರತಿ ಜಿಲ್ಲೆಗೆ ನೇಮಿಸುವದು ಅಗತ್ಯವೆಂತ ಸರಕಾರದವರು ಅಭಿಪ್ರಾಯಪಟ್ಟಿರುತ್ತಾರೆ. ಮತ್ತು ಹಾಲಿ ವರುಷದಲ್ಲಿ ೧೨ ಜನ ತಹಸೀಲ್ದಾರರನ್ನು ನೇಮಿಸುವರು. ಇಂಥಾ ತಹಸೀಲ್ದಾರರು ಪ್ರತ್ಯೇಕ ನೇಮಿಸಲ್ಪಡುವ ಜಿಲ್ಲೆಗಳು ಯಾವವೆಂದರೆ:—ಗಂಜಾಮು, ಗುಂಟೂರು, ನೆಲ್ಲೂರು, ಚಿತ್ತೂರು, ಕಡಪಾ, ಚೆಂಗಲ್ಪೆಟ್ಟೆ, ಉತ್ತರಕಾರ್ಕಾಡು, ದಕ್ಷಿಣಕಾರ್ಕಾಡು, ತಂಜಾವೂರು, ಕೊಯಮುತ್ತೂರು, ಮಧುರೆ ತಿನ್ನೆವೆಲ್ಲಿ.

—ಬಂಗಾಳ ನ್ಯಾಯವಿಧಾಯಕ ಸಭೆಗೆ ರಿಫೋರ್ಮ ಆಕ್ಟು ಪ್ರಕಾರ ಕೊಟ್ಟ ಕೆಲವು ಅಧಿಕಾರಗಳನ್ನು ತೆಗೆದು ಹಾಕಿ ಅವುಗಳನ್ನು ಗವರ್ನರ ದೊರೆಗಳವಲ್ಲಿಯೇ ಇರಿಸುವ ವಿಷಯ ಇನ್ನು ಸದ್ಯದಲ್ಲಿ ಸರಕಾರದವರ ಹುಕುಮು ಪ್ರಕಟವಾಗುವುದು.

—ಮ॥ ರಾ॥ ದಿವಾನ್ ಬಹದ್ದೂರ್ ಟಿ. ರಾಘವಯ್ಯ ಸಿ. ಯಸ್. ಐ.ಯವರು ಮದ್ರಾಸು ರೆವಿನ್ಯು ಬೋರ್ಡಿನ ಮೂರನೇ ಮೆಂಬರರಾಗಿ ಲೆಂಡ್ ರೆವಿನ್ಯು, ಸೆಟ್ಲ್‌ಮೆಂಟ್ ಮತ್ತು ಇನಾಮು ಕಮಿಷನರರಾಗಿ ನೇಮಿಸಲ್ಪಟ್ಟಿರುವರು.

—ಮೈಸೂರು ಒಕ್ಕಲಿಗರ ಪರಿಷತ್ತು ಇದೇ ತಿಂಗಳ ತಾ. ೩೦ರಲ್ಲು ಚಿಕ್ಕಬಳ್ಳಾಪುರ ತಾಲೂಕಿನ ನಂದಿ ಎಂಬಲ್ಲಿ ಜರಗುವದು.

—ಪೂರ್ವ ಕರಾವಳಿಯಲ್ಲಿ ಬಿರುಗಾಳಿಯ ಅನಾಹುತ—ಮಚಲೀಪಟ್ಟಣದ ಕರಾವಳಿಯಲ್ಲಿ ತಾ. ೧೬ನೇ ರಾತ್ರಿ ವಿಶೇಷವಾಗಿ ಸುಂಟರಗಾಳಿಯು ಪ್ರಾರಂಭವಾಯಿತು. ೬೦ ವರುಷಗಳ ಹಿಂದೆ ನೆರೆ ಬಂದು ಪಟ್ಟಣವು ಮುಳುಗಿಹೋದ ರೀತಿಯಲ್ಲಿಯೇ ಈ ಸರ್ತಿಯು ಸಹ ಮುಳುಗಿಹೋಗುವುದೆಂತ ಮಚಲೀ ಪಟ್ಟಣದ ನಿವಾಸಿಗಳು ಸಾವಿರ ಸಂಖ್ಯೆಯಿಂದ ಪಟ್ಟಣವನ್ನು ಬಿಟ್ಟು ಹೊರಡುತ್ತಿದ್ದರು. ಮಳೆಯು ಬಹಳ ವಿಪರೀತವಾಗಿ ಸುರಿಯುತ್ತಿತ್ತು. ಮಾರ್ಗಗಳು ಸಂಪೂರ್ಣವಾಗಿ ನೀರಿನಲ್ಲಿ ಮುಳುಗಿ ಹೋಗಿದ್ದವು. ಗಾಡಿಗಳಿಗೆ ಸಹ ಅತ್ತಿತ್ತ ಹೋಗಲು ಅಸಾಧ್ಯವಾಗಿತ್ತು. ಮಚಲೀ ಪಟ್ಟಣ ಬೇಜವಾಡ ಲ್ಯಾನಿನಲ್ಲಿ ಅನೇಕ ಜನರು ನೆರೆನೀರಿನ ಮತ್ತು ಸುಂಟರಗಾಳಿಯ ಅಪತ್ತಿಗೆ ಗುರಿಯಾಗಿದ್ದರು. ಅನೇಕ ಮನೆಗಳು ಸಣ್ಣ ಸಣ್ಣ ಗುಡಿಸಲುಗಳು ಕುಸಿದು ಹೋಗಿದ್ದವು. ಹಲವು ಕಟ್ಟಡಗಳ ಮಾಡು ಹಾರಿಹೋಗಿತ್ತು. ಹಾದಿಯಲ್ಲಿ ಮರಗಳು ಬಿದ್ದದ್ದರಿಂದ ಅತ್ತಿತ್ತ ಸಂಚಾರವು ಕಷ್ಟವಾಗಿತ್ತು. ರೈಲ್ವೆ ಸ್ಟೇಶನುಗಳು ಮತ್ತು ರೈಲ್ವೆಯವರ ಅಂಗಳದಲ್ಲಿ ನೀರು ತುಂಬಿಹೋಗಿತ್ತು. ರೈಲ್ವೆ ಕಟ್ಟಡಗಳಲ್ಲಿ ಒಂದಕ್ಕಾದರೂ ಮಾಡು ಇರಲಿಲ್ಲ.

—ಗುಂಟೂರಿನಲ್ಲಿ ತಾ. ೧೫ ರಿಂದ ೪೦ ತಾಸುಗಳ ತನಕ ವಿಪರೀತಗಾಳಿ ಮಳೆ ಬೀಸಿ ರಸ್ತೆಗಳಲ್ಲಿ ನೀರು ತುಂಬಿ ಹೋಗಿ ಅತ್ತಿತ್ತ ಹೋಗುವದು ಅಸಾಧ್ಯವಾಗಿತ್ತು. ಮಾರ್ಗಗಳಲ್ಲಿ ಅಡ್ಡ ಬಿದ್ದ ಮರಗಳಿಗೆ ಲೆಕ್ಕವೇ ಇಲ್ಲ. ಅನೇಕ ಕಟ್ಟಡಗಳಿಂದ ಮಾಡುಗಳು ಹಾರಿ ಹೋಗಿದ್ದವು. ಮೋಟರ್ ಬಸ್ಸುಗಳಿಗೂ ಇತರ ಗಾಡಿಗಳಿಗೂ ಚಲಾವಣೆಯು ಅಸಾಧ್ಯವಾಗಿತ್ತು. ಒಂದು ಬಾಯೊಸ್ಕೋಪು ಮಂಟಪವು ಸಂಪೂರ್ಣವಾಗಿ ಬಿದ್ದುಹೋಗಿತ್ತು. ಪಬ್ಲಿಕ್ ಆಫೀಸುಗಳಲ್ಲಿ ಕೆಲಸ ಮಾಡುವದು ಅಸಾಧ್ಯವಾಗಿತ್ತು. ರೈಲ್ವೆ ಲೈನುಗಳಲ್ಲಿ ಇದ್ದ ವೆಗ್ಗನುಗಳು ಬಿದ್ದು ಹೋಗಿ ರೈಲ್ವೆ ಮಾರ್ಗದಲ್ಲಿ ಬಹಳ ಆತಂಕವಿತ್ತು. ಟೆಲಿಗ್ರಾಫು ಕಂಭಗಳು ಕುಸಿದು ಬಿದ್ದದ್ದರಿಂದ ಟೆಲಿಗ್ರಾಫು ಲೈನು ಇರಲಿಲ್ಲ. ಬೇಜವಾಡದಲ್ಲಿಯೂ ಇದೇ ಸ್ಥಿತಿಯು ಪ್ರಾಪ್ತವಾಗಿತ್ತು. ಹಾಳಾಗದೆ ಹೋದ ಕಟ್ಟಡಗಳು ಬಹಳ ಕಡಿಮೆ. ತಾಲೂಕು ಆಫೀಸಿನಂಥಾ ಕಟ್ಟಡಗಳು ಸಹಾ ಈ ಗಾಳಿ ಮಳೆಯಲ್ಲಿ ಜಖಂ ಹೊಂದಿದ್ದವು. ರಿಕಾರ್ಡುಗಳು [illegible]. ಕುರ್ಚಿ ಮೇಜು ಬೆಂಚುಗಳು ನೀರಿನ [illegible]. ರೈಲ್ವೆ ಕಂಪೆನಿಗೆ ಉಂಟಾದ ನಷ್ಟವನ್ನು ಇನ್ನೂ [illegible]. ಅಕ್ಕಿ ಭಂಡಸಾಲೆಗಳ [illegible] ಇದ್ದ ಭತ್ತ ಮತ್ತು ಅಕ್ಕಿಯು [illegible] ಹೋಗಿತ್ತು. ಈ ಮೂಲಕ ನಷ್ಟ ಎಷ್ಟೆಂತ [illegible]. [illegible] ಒಂದು ದಿನ ರೈಲ್ವೆಯ ಸಂಚಾರ [illegible].

—ಎಲ್ಲೂರಿನಲ್ಲಿಯೂ ಇದೇ ರೀತಿಯ ವೃತ್ತಾಂತವಿದೆ. ಇಲ್ಲಿ ಪಾಂಡುರಂಗ ಸಿನೇಮಾ ಹಾಲಿನಲ್ಲಿ ಮಳೆಯಿಂದ ಆಶ್ರಯಕ್ಕಾಗಿ ಒಳಗೆ ಹೋದ ಜನರಲ್ಲಿ ಈ ಕಟ್ಟಡದ ಗೋಡೆಗಳು ಕುಸಿದು ಬಿದ್ದದ್ದರಿಂದ ೨೭ ಜನರು ಮಡಿದು ಹೋದರೆಂತಲೂ ೧೩ ಜನರಿಗೆ ವಿಶೇಷ ಜಖಂ ಆಗಿಯದೆಂತಲೂ ತಿಳಿದು ಬರುತ್ತದೆ.

—ಮದ್ರಾಸು ಮತ್ತು ಸದರ್ನ ಮರಾಟಾ ರೈಲ್ವೆಗಳ ಏಜಂಟರು ಈ ಕಡೆಗಳಲ್ಲಿ ಈ ತುಫಾನಿನಿಂದ ರೈಲ್ವೆ ಲ್ಯಾನಿಗೆ ಉಂಟಾದ ನಷ್ಟವನ್ನು ನೋಡಿ ಬರಲು ಹೋಗಿದ್ದರು. ಇವರು ಈ ನಷ್ಟದ ವೃತ್ತಾಂತವನ್ನು ಈ ರೀತಿ ಹೇಳುತ್ತಾರೆ. ಈ ತುಫಾನಿನ ಹಾವಳಿಯು ಮದ್ರಾಸಿನಿಂದ ೨೧೬ ಮೈಲುಗಳ ಉತ್ತರಕ್ಕಿರುವ ಸ್ವರ್ಣಪುರಂ ಸ್ಟೇಶನಿನಿಂದ ಕಂಡು ಬರುತ್ತದೆ. ಉತ್ತರಕ್ಕೆ ಹೋದ ಹಾಗೆ ತುಫಾನಿನ ಹಾವಳಿಯು ವಿಶೇಷವಾಗಿ ಕಾಣುವದು. ತೆನಾಲಿ ಸ್ಟೇಶನಿನಲ್ಲಿ ಕೆಲವು ಕಟ್ಟಡಗಳ ಮಾಡುಗಳು ಮುರಿದು ಬಿದ್ದಿರುವವು. ಕೃಷ್ಣಾ ಕೆನಾಲ್ ಸ್ಟೇಶನಿನಲ್ಲಿ ೪೦ ವೆಗ್ಗನ್‌ಗಳು ಕವಚಿ ಬಿದ್ದಿದ್ದವು. ಕಟ್ಟಡಗಳು ಸಂಪೂರ್ಣನಾಶವಾಗಿ ಹೋಗಿವೆ. ಮೇಲೆ ಹೇಳಿದ ವೆಗ್ಗನುಗಳು ಇಲ್ಲದೆ ಇನ್ನು ಮೀಟರ್ ಗೇಜಿನ ದಾಗಿನುಗಳು ತುಂಬಿರುವ ೫೦ ವೆಗ್ಗನುಗಳು ಕವಚಿಹೋಗಿದ್ದವು. ಕಾಡಪಲ್ಲಿಯಲ್ಲಿ ಸಾವಿರಕಟ್ಟಲೆಯಲ್ಲಿ ಇಲಿಗಳು ನೀರಿನಲ್ಲಿ ಬಿದ್ದು ಸತ್ತದ್ದರಿಂದ ಈ ಇಲಿಗಳ ವಾಸನೆಯು ಭಯಂಕರವಾಗಿತ್ತು. ಬೆಜವಾಡ ಸ್ಟೇಶನಿನ ಸ್ಥಿತಿಯೂ ಹಾಳಾಗಿತ್ತು. ಬೆಜವಾಡದಿಂದ ಉತ್ತರಕ್ಕೆ ಇರುವ ರೈಲ್ವೆ ಲ್ಯಾನಿನಲ್ಲಿ ಉಂಟಾದ ಹಾವಳಿಯು ಬಹಳ ವಿಶೇಷವಾಗಿತ್ತು. ರೈಲ್ವೆ ಲ್ಯಾನಿನ ಮೇಲೆ ನೀರು ನಾಲ್ಕಡಿಕ್ಕಿಂತ ಹೆಚ್ಚು ನಿಂತಿತ್ತು. ಕೆಲವು ಕಡೆಗಳಲ್ಲಿ ನೆರೆನೀರಿನ ಸೆಳತದಿಂದ ಲ್ಯಾನು ತುಂಡುತುಂಡಾಗಿ ಹೋಗಿದೆ, ಇದರ ರಿಪೇರಿಗೆ ೧೪ ದಿವಸಗಳಾದರೂ ಬೇಕಾದಾವು. ರೈಲ್ವೆಗೆ ಉಂಟಾದ ನಷ್ಟದ ಅಂದಾಜು ಎರಡು ಲಕ್ಷ ರೂಪಾಯಿಗಳಾಗಲಿಕ್ಕೆ ಸಾಕು.

—ಮದ್ರಾಸು ಯುನಿವರ್ಸಿಟಿಯ ವ್ಹಾಯ್ಸ್‌ಚೆನ್ಸಲರರಾಗಿ ಸರ್. ಆರ್. ವೆಂಕಟರತ್ನಮ್ ನಾಯ್ಡುರವರು ನೇಮಿಸಲ್ಪಡುವರಾಗಿ ತಿಳಿದು ಬರುತ್ತದೆ.

—ಮುಂಬಯಿಯ ಸರ್. ಜೊರಮುಸ್‌ಜಿ ಕೌವಾಸ್ಜಿ ದಿನ್‌ಷಾರವರು ಇತರ ಕೆಲವು ಪಾರ್ಸಿ ಗೃಹಸ್ಥರುಗಳೊಂದಿಗೆ ಪರ್ಷಿಯಾ ದೇಶಕ್ಕೆ ತೆರಳಿರುವರು. ಪಾರ್ಸಿಗಳ ಒಂದು ವಸತಿಯನ್ನು ಪರ್ಷಿಯಾದಲ್ಲಿ ಮಾಡಲು ಆಸ್ಪದವಿರುವದೋ ಎಂಬುದನ್ನು ನೋಡಿ ತಿಳಿಯಲಿಕ್ಕೆ ಇವರು ಅಲ್ಲಿಗೆ ತೆರಳಿರುವರು.

—ಬಾವ್ಲಾ ಕೊಲೆ ಮೊಕದ್ದಮೆಯು ಮುಂಬಯಿ ಹ್ಯಾಕೋರ್ಟಿನಲ್ಲಿ ನಡಿಯುತ್ತಿರುವ ವಿಚಾರಣೆಯ ವೃತ್ತಾಂತಗಳನ್ನು ಓದುವ ಕುತೂಹಲದಿಂದ ಮುಂಬಯಿಯಿಂದ ಇಂದೂರಿಗೆ ಬರುವಂಥಾ ಪ್ರತಿ ರೈಲ್ವೆ ಗಾಡಿಗಳಿಗೆ ವೃತ್ತಪತ್ರಗಳನ್ನು ಪಡಕೊಳ್ಳುವರೆ ಜನರು ಬಹಳವಾಗಿ ಮುತ್ತಿಗೆ ಹಾಕುತ್ತಿರುವರು. ಇಂದೂರು ದಿವಾನರು ಕೆಲವು ಹಿಂದೀ ಮತ್ತು ಮರಾಠಿ ಪತ್ರಗಳು ಇಂದೂರು ಸಂಸ್ಥಾನಕ್ಕೆ ಬರಕೂಡದೆಂತ ಹುಕುಮು ಹೊರಡಿಸಿರುತ್ತಾರೆ.

—ಮದ್ರಾಸು ಸಂಸ್ಥಾನದ ಡೆವೆಲೆಪ್‌ಮೆಂಟ್ ಮಿನಿಸ್ಟರರು ಬರುವ ಜೂನು ತಿಂಗಳಲ್ಲಿ ಈ ರೀತಿ ಸರ್ಕೀಟು ಬೆಳಸುವರು. ಕಬ್ಬು ಸಾಗುವಳಿಯ ಒಂದು ಫಾರ್ಮನ್ನು ವಿಶಾಖಪಟ್ಟಣ ಜಿಲ್ಲೆಯಲ್ಲಿ ಸ್ಥಾಪಿಸಲಿಕ್ಕೆ ವಿಶಾಖ ಪಟ್ಟಣ ಜಿಲ್ಲೆಯನ್ನು ಸಂದರ್ಶಿಸುವರು. ನಂತರ ಮಲಬಾರ ಜಿಲ್ಲೆಯಲ್ಲಿ ಭತ್ತ ಸಾಗುವಳಿ ಫಾರ್ಮನ್ನು ಏರ್ಪಡಿಸಲಿಕ್ಕೆ ಮಲೆಬಾರನ್ನು ಸಂದರ್ಶಿಸುವರು. ಕಲ್ಲಿಕೋಟೆಗೆ ಬಂದು ಅಲ್ಲಿರುವ ಸಾಬೂನು ಕಾರ್ಖಾನೆಯನ್ನು ಸಂದರ್ಶಿಸುವರು. ಈ ಕಾರ್ಖಾನೆಯು ಪ್ರಕೃತ ಒಳ್ಳೇ ಸ್ಥಿತಿಯಲ್ಲಿದ್ದು ಲಾಭ ಉಂಟಾಗುವ ರೀತಿಯಲ್ಲಿ ನಡಿಸಲ್ಪಡುತ್ತದೆ. ಯಾರಾದರೂ ಬಿನ್ ಸರಕಾರಿ ಗೃಹಸ್ಥರು ಈ ಕಾರ್ಖಾನೆಯನ್ನು ಸರಕಾರದವರಿಂದ ಪಡಕೊಳ್ಳುವ ವಿಷಯವನ್ನು ಮಿನಿಸ್ಟರೊಂದಿಗೆ ಈ ಸಂದರ್ಭದಲ್ಲಿ ಪ್ರಸ್ತಾಪಿಸಬಹುದು. ಆಗೋಸ್ತು ತಿಂಗಳಲ್ಲಿ ಮಧುರಾ ಜಿಲ್ಲೆಯನ್ನು ಸಂದರ್ಶಿಸಿ ಉಸಿಲಾಂಪಟ್ಟಿ ಎಂಬಲ್ಲಿ ಒಂದು ಭೂ ವ್ಯವಸಾಯ ಶಾಲೆಯನ್ನು ತೆರಿಯುವರು. ಕಬ್ಬು ಸಾಗುವಳಿಯ ಅಭಿವೃದ್ಧಿಯನ್ನು ಬಳ್ಳಾರಿ ಜಿಲ್ಲೆಯಲ್ಲಿ ಹ್ಯಾಗೆ ಮಾಡಬೇಕೆಂಬುವ ಪ್ರಶ್ನೆಯ ವಿಚಾರಕ್ಕೆ ಜುಲಯಿ ತಿಂಗಳಲ್ಲಿ ಬಳ್ಳಾರಿ ಜಿಲ್ಲೆಯನ್ನು ಸಂದರ್ಶಿಸುವರು.

—ಜಲಪಾತಗಳಿಂದ ವಿದ್ಯುಚ್ಛಕ್ತಿಯನ್ನು ಸಂಗ್ರಹಿಸಿ ಉಪಯೋಗಿಸುವ ಹಂಚಿಕೆಯ ಶೋಧವನ್ನು ಮದ್ರಾಸು ಸರಕಾರದವರು ಎಸ್. ಐ. ಆರ್. ರೈಲ್ವೆ ಕಂಪೆನಿಯೊಂದಿಗೆ ಈ ಸಂಸ್ಥಾನದ ದಕ್ಷಿಣಭಾಗದಲ್ಲಿ ನಡಿಸುವರು. ಇನ್ನು ಎರಡು ಯಾ ಮೂರು ತಿಂಗಳುಗಳೊಳಗಾಗಿ ಈ ಶೋಧನದ ಕಾರ್ಯಕ್ರಮವನ್ನು ಗೊತ್ತುಮಾಡುವರು.

—ಕಾಠ್ಯಾವಾಡಿನಲ್ಲಿ ಖದ್ದರ್ ಪ್ರಚಾರದ ಬಗ್ಗೆ ಗಾಂಧಿಜೀಯವರು ಏರ್ಪಡಿಸಿದ ಹಂಚಿಕೆಗೆ ರೂ. ೨೦,೦೦೦ ಬೇಕಾಗಿತ್ತು. ಈ ಬಗ್ಗೆ ಮಹಾತ್ಮಾಜೀಯವರು ಒಂದು ವಿಜ್ಞಾಪನೆಯನ್ನು ಮಾಡಿದ್ದರು. ಈ ವಿಜ್ಞಾಪನೆಯನ್ನು ಮಾಡಿದ ಕೆಲವು ದಿವಸಗಳಲ್ಲಿಯೇ ರೂ. ೨೦,೦೦೦ ಎಲ್ಲವೂ ಸಂಗ್ರಹಿಸಲ್ಪಟ್ಟಿದೆ. ಒಬ್ಬ ಹತ್ತಿಸಾವುಕಾರರು ರೂ. ೬೦೦೦ವನ್ನು ಈ ಬಗ್ಗೆ ಕೊಟ್ಟು ತನ್ನ ಹೆಸರನ್ನು ಪ್ರಸಿದ್ಧಮಾಡಕೂಡದೆಂದು ವಿಜ್ಞಾಪಿಸಿಕೊಂಡಿರುತ್ತಾರೆ.

ದಕ್ಷಿಣ ಕನ್ನಡ.

ಮುಲ್ಕಿ:—ಈ ವರುಷ ಮಾವಿನ ಫಸಲು ಕಡಿಮೆಯಾಗಿರುವದಾದರೂ ಊರಿನಲ್ಲಿ ಇನ್‌ಫ್ಲುಯೆಂಜಾ ಜ್ವರಕ್ಕೆ ಕಡಿಮೆಯಿಲ್ಲ. ಈ ಜ್ವರದ ಬಾಧೆಯು ಇತ್ತಲಾಗೆ ಸ್ವಲ್ಪ ಕಡಿಮೆಯಾಗುತ್ತ ಬಂದಿದೆ. ಮುಲ್ಕಿಗೆ ತಕ್ಕಂತೆ ಈಗ ಔಷಧಗಳನ್ನು ಕೊಟ್ಟು ಚಿಕಿತ್ಸೆ ನಡಿಸುವ ಇಂಗ್ಲಿಷ ಕ್ರಮದ ವೈದ್ಯರು ಮೂವರು ಇದ್ದಾರೆ. ಲೋಕಲ್ ಫಂಡು ಆಸ್ಪತ್ರೆಯೂ ಇರುವುದು ಮತ್ತು ಇತ್ತಲಾಗೆ ಶ್ರೀ ವೆಂಕಟರಮಣ ದೇವಸ್ಥಾನದಿಂದ ನಡಿಸಿಬರುವ ಶ್ರೀ ರಾಮಕೃಷ್ಣಧರ್ಮವೈದ್ಯಾಶ್ರಮದ ಶಾಖೆಯೂ ಇರುವುದು. ಆದ್ದರಿಂದ ಯಾವ ರೋಗ ಬಂದರೂ ಚಿಕಿತ್ಸೆಗೆ ಕಡಿಮೆಯಿಲ್ಲ.

ಸಬ್ ಇನ್ಸ್‌ಪೆಕ್ಟರರಾಗಿದ್ದ ಗಿರಿಯಪ್ಪನವರ ಸ್ಥಳದಲ್ಲಿ ಇಲ್ಲಿ ಬೇರೊಬ್ಬ ಪೋಲೀಸ್ ಸಬ್ ಇನ್ಸ್‌ಪೆಕ್ಟರರು ಬಂದಿರುತ್ತಾರೆ. ಬಪ್ಪನಾಡು ದೇವಸ್ಥಾನದ ಆಟದ ರಾತ್ರೆ ನಡದ ಗಡಿಬಿಡಿಯು ಎಷ್ಟರ ತನಕ ಹೋಗಿದೆ ಎಂಬುದು ಗೊತ್ತಾಗುವುದಿಲ್ಲ.

ಇಲ್ಲಿಯ ಗೌಡ ಸಾರಸ್ವತ ಬ್ರಾಹ್ಮಣರ ಶ್ರೀ ವೆಂಕಟರಮಣ ದೇವಸ್ಥಾನದ [illegible] ಮಹಾ ಜನರ ಸಭೆಸೇರಿ ಸಂಸ್ಕೃತ ಪಾಠಶಾಲೆಯನ್ನು ಸ್ಥಾಪಿಸುವ ವಿಷಯ ಒಂದು ರಿಪೋರ್ಟನ್ನು ಆಯಾ ವಿದ್ಯಾಮಾನಗಳ [illegible] ಬರೆದು ಮಹಾ ಸಭೆಯ ಮುಂದೆ ಇಡಬೇಕೆಂತ ನಿರ್ಣಯಿಸಿತ್ತು. ಈ ಪ್ರಕಾರ ತಾ. ೧೧ರಲ್ಲಿ [illegible] ರಿಪೋರ್ಟು ಇಟ್ಟಿಲ್ಲ. ಆದ್ದರಿಂದ ಮಹಾಸಭೆಯಲ್ಲಿ ಕೂಡಿದವರು ಹಿಂದು ಮುಂದು ನೋಡದೆ ಜೂನು ಪ್ರಾರಂಭದಲ್ಲಿಯೇ ದೇವಸ್ಥಾನದ ಕಡೆಯಿಂದ ಹೈಸ್ಕೂಲಿಗೆ ಸಂಬಂಧಪಟ್ಟ ನಾಲ್ಕನೇ ಫೋರ್ಮನ್ನು ಇಡಬೇಕೆಂಬ ನಿರ್ಣಯಕ್ಕೆ ದುಡುಕಿ ಬಿಟ್ಟಿರುವರಂತೆ. ಸಂಸ್ಕೃತ ಪಾಠಶಾಲೆಯಲ್ಲಿ? ಹೈಸ್ಕೂಲು ಪಾಠಶಾಲೆಯಲ್ಲಿ? ಮೇ ತಿಂಗಳ ೧೧ನೇ ತಾರೀಕಿನಲ್ಲಿ ನಿಶ್ಚಯಿಸಿ ಜೂನ್ ತಿಂಗಳ ಪ್ರಾರಂಭದಲ್ಲಿ ಹೈಸ್ಕೂಲು ತೆರಿಯುವುದೆಂದರೆ ಏನು ಆಶ್ಚರ್ಯ? ವಿದ್ಯಾ ಪ್ರಸರಣೆಯಲ್ಲಿ ಚೆನ್ನಾಗಿ ಆಲೋಚಿಸದೆ ಒಂದೇತಡವೆ ಮುಂದರಿಸಿ ಹಾರಿಬಿಟ್ಟರೆ ನಂತರದಲ್ಲಿ ಏನೇನು ಕಷ್ಟಗಳು ಸಂಭವಿಸಿ ದೇವರ ಭಂಡಾರದ ದ್ರವ್ಯದ ಸುವಿನಿಯೋಗವು ಆಗುವ ಬದಲಿಗೆ ದುರ್ವಿನಿಯೋಗವೇ ಉಂಟಾಗಬಹುದು. ಆದ್ದರಿಂದ ಹೈಸ್ಕೂಲನ್ನು ತೆರಿಯುವಾಗ ಸ್ವಲ್ಪ ದೂರದೃಷ್ಟಿಯಿಂದ ಆಲೋಚಿಸುವುದು ಅಗತ್ಯವಾಗಿರುವುದು. ಆದರೆ ಈ ವಿಚಾರವು ಯಾರಲ್ಲಿ ತೋರುವುದೋ ತಿಳಿಯದು.

ಭೂಮಿಯ ಅಡಿಯಲ್ಲಿ ದೇವಾಲಯ.

ಕುಂಭಕೋಣಕ್ಕೆ ಸೇರಿದ [illegible] ರೈಲ್ವೆ ಸ್ಟೇಶನಿಗೆ ತಗಲಿ ಮುಕ್ಕಾಲು ಮೈಲು ದೂರದಲ್ಲಿ ಹರಿಶ್ಚಂದ್ರಪುರಮ್ ಎಂಬ ಒಂದು ಹಳ್ಳಿ ಇರುವುದು. ಈ ಹಳ್ಳಿಗೆ ಆ ಹೆಸರು ಬರಲು ಐತಿಹಾಸಿಕ ಕಾರಣವಿರುವದೆಂದು ಕೆಳಗಿನ ಸಂಗತಿಯಿಂದ ವಿಶದವಾಗುತ್ತದೆ. ಮುತ್ತಯ್ಯ ಮೂಪನರೆಂಬೊಬ್ಬ ಜಮೀನುದಾರನು ತನ್ನ [illegible] ಸಮವಾಗಿ ಮಾಡಿಸಿ ಒಂದು ತುದಿಯಲ್ಲಿ ಒಂದು ಬಾವಿಯನ್ನು ತೋಡಿಸಿದನು. ಸುಮಾರು ೧೫ ಫೀಟುಗಳಷ್ಟು ಮಣ್ಣು ತೆಗೆಯಲಾಗಿ ಕಲ್ಲುಗಳ ಒಂದು ಕಟ್ಟೋಣವು ಗೋಚರವಾಯಿತು. ಇನ್ನು ಮುಂದೆ ಬಾವಿಯನ್ನು ತೋಡಲು ಕಲ್ಲಿಂದ ಕಟ್ಟಿದ ಮೆಟ್ಟಲುಗಳು ತೋರುವಿಕೆಗೆ ಬಂತು. ಆ ಸೋಪಾನವು ಕೆಳಕ್ಕೆ ದಿವ್ಯವಾದ ನೀರಿನಿಂದ ಭರಿತವಾದ ಹೊಂಡಕ್ಕೆ ಹಾಯುತ್ತಿತ್ತು. ಆ ಹೊಂಡವು, ಒಂದು ದೊಡ್ಡ ಕೊಳದ ನೈರುತ್ಯದ ಭಾಗ ಮಾತ್ರವಿರುತ್ತದೆ. ಆ ಕೆರೆಯು ಸಾಧಾರಣ ೧೫೦×೧೨೦ ಅಡಿ ವಿಸ್ತಾರ ಇರಬಹುದೆಂದು ಅಂದಾಜುಮಾಡಲಾಗಿಯದೆ. ಆ ಕೆರೆಯಲ್ಲಿ ಸೂರ್ಯದೇವನ [illegible] ಮೂರ್ತಿಯು ದೊರೆತಿರುತ್ತದೆ. ಅದೇ ಕೆರೆಯ ಪಕ್ಕದಲ್ಲಿ ಒಂದು ದಿನ್ನೆಯು ಇರುತ್ತದೆ. ಆ ದಿನ್ನೆಯ ಕೆಳಭಾಗದಲ್ಲಿ ಒಂದು ದೇವಸ್ಥಾನವು ಹುಗಿದು ಇರುತ್ತದೆ ಎಂದು ಹೇಳುತ್ತಾರೆ. ಸತ್ಯ ಹರಿಶ್ಚಂದ್ರನು ತಾನು ಸ್ಮಶಾನ ಕಾಯುವುದು ತೀರಿದ ಬಳಿಕ ಚಂಡಾಲತ್ವದಿಂದ ನಿರ್ಮಲಪಡಿಸಿಕೊಳ್ಳುವದಕ್ಕೆ ಇದೇ ದೇವಸ್ಥಾನಕ್ಕೆ ಬಂದು, ಈ ಕೆರೆಯ ತೀರ್ಥದಲ್ಲಿ ಮಿಂದು ಪವಿತ್ರನಾದನೆಂದು ಹೇಳುತ್ತಾರೆ. ಇಂಥಾ ಪಾವನ ಸ್ಥಳವನ್ನು ಇಂಡಿಯಾ ಸರಕಾರದ ಆರ್ಕಿಯೋಲೊಜಿಕಲ್ ಡಿಪಾರ್ಟ್‌ಮೆಂಟಿನವರು ಇನ್ನೂ ಅಗಿಸಿ ಶೋಧಿಸಿಯಾರೆಂದು ಆ ಹಳ್ಳಿಯವರು ನಿರೀಕ್ಷಿಸುತ್ತಾರೆ. ಪ್ರಕೃತ ಈ ಸ್ಥಳವು ತುಂಬಾ ಯಾತ್ರಸ್ಥರಿಂದ ತುಂಬಿರುತ್ತದೆ.

ದಕ್ಷಿಣ ಕನ್ನಡ ಗೌಡ ವಿದ್ಯಾಸಂಘವೂ, ಗೌಡ ಉಪಾಧ್ಯಾಯರ ಉದಾರ ಹಸ್ತವೂ.

ಈ ಸಂಘವು ರಿಜಿಸ್ಟ್ರಿಯಾಗಿ ಇಂದಿಗೆ ನಾಲ್ಕು ವರುಷಗಳು ಸಂದು ಹೋದರೂ ಸಂಘವು ಇನ್ನೂ ಬಾಲ್ಯಾವಸ್ಥೆಯಲ್ಲೇ ಇರುವುದು. ಸಂಘಕ್ಕೆ ೫ ವರುಷಗಳೊಳಗೆ ಸಲ್ಲಿಸುವಂತೆ ವಾಗ್ದಾನಮಾಡಿದ ಮೊಬಲಗು ೧೬ ಸಾವಿರಕ್ಕಿಂತ ಮಿಕ್ಕಿರುವುದು. ಈ ಪೈಕಿ ಸುಮಾರು ೩ ಸಾವಿರ ರೂಪಾಯಿಗಳಷ್ಟು ಹಳ್ಳಿ ಪ್ರಾಥಮಿಕ ಶಾಲೆಗಳ ಗೌಡ ಜಾತಿಯ ಉಪಾಧ್ಯಾಯರುಗಳದ್ದಾಗಿರುತ್ತದೆ. ವಿದ್ಯಾವಂತರಾದ ಈ ಉಪಾಧ್ಯಾಯರು ಸಂಘದ ಕೆಲಸವು ಸಾಂಗವಾಗಿ ನಡೆಯುವಂತೆ ಟೊಂಕಕಟ್ಟಿ ಪ್ರಯತ್ನಿಸಬೇಕಾಗಿತ್ತು. ಅದಕ್ಕೆ ಬದಲಾಗಿ ಇವರೇ ವಸೂಲು ಕೊಡಲಿಕ್ಕೆ ಹಿಂಜರಿದರೆ ಮಿಕ್ಕಿದವರ ಪಾಡೇನು?

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಮ್ಮ ಜಾತಿಯವರ ಸಂಖ್ಯೆಯು ಕಳೆದ ಖಾನೇಸುಮಾರಿಯ ಪ್ರಕಾರ ೫೦ ಸಾವಿರಕ್ಕಿಂತ ಹೆಚ್ಚಿರುವುದು. ಇಷ್ಟು ಜನರಿದ್ದರೂ, ವಿದ್ಯೆಯಲ್ಲಿ ನಾವು ಬಹಳ ಹಿಂದುಳಿದಿರುವವು. ಹೆಚ್ಚೇಕೆ ಇಷ್ಟು ಜನರಿಗೆ ಒಬ್ಬನಾದರೂ B. A. ಪಾಸಾದ ಮನುಷ್ಯನಿಲ್ಲವೆಂದು ತಿಳಿಯುವುದಕ್ಕೆ ನಾವೆಲ್ಲರೂ ವ್ಯಸನಪಡಬೇಕು. ಹಿಂದೊಂದು ಕಾಲದಲ್ಲಿ ಉಪ್ಪಿನಂಗಡಿ ತಾಲೂಕಿನ ಹೆಚ್ಚಿನ ಭಾಗವು ಗೌಡರ ಸ್ವಾಧೀನದಲ್ಲಿತ್ತು. ಈಗಲಾದರೋ ನಮ್ಮ ಆಸ್ತಿಗಳೆಲ್ಲಾ ಪರರ ಸ್ವಾಧೀನವಾಗಿ ನಾವು ನಿಕೃಷ್ಟ ಸ್ಥಿತಿಗಿಳಿದಿರುವೆವು. ಲೋಕದ ಜನರೆಲ್ಲರೂ ವಿದ್ಯಾವಂತರಾಗಿ ಮೆರೆಯುತ್ತಿರುವಾಗ ನಾವು ಇದ್ದ ಆಸ್ತಿಯನ್ನೂ ಮಾರಿ ವಿದ್ಯಾಹೀನರಾಗಿ ಕಷ್ಟಪಡುವುದು ಯಾರಿಗೂ ಮೆಚ್ಚತಕ್ಕ ಸಂಗತಿಯಲ್ಲ. ಇಂಥ ಸ್ಥಿತಿಯಿಂದ ಮೇಲಕ್ಕೆ ಬರಬೇಕಾದರೆ ವಿದ್ಯೆಯೇ ಮುಖ್ಯಸಾಧನವಾಗಿರುವುದು.

ಆದರೆ ಉಪ್ಪಿನಂಗಡಿ ತಾಲೂಕು ಪ್ರಾಥಮಿಕ ಶಾಲೆಗಳಲ್ಲಿ ಸುಮಾರು ೫೦ ಜನ ಗೌಡ ಜಾತಿಯ ಉಪಾಧ್ಯಾಯರಿರುತ್ತಾರೆಂದು ತಿಳಿಯಲು ಸಂತೋಷವಾಗುವುದು. ಯಾವುದೊಂದು ಜನಾಂಗವಾದರೂ ಪ್ರಾಥಮಿಕ ಪಾಠಶಾಲೆಯ ಉಪಾಧ್ಯಾಯರುಗಳಿಂದಲೇ ವೃದ್ಧಿಯಾಗಬೇಕು. ಹೀಗಿರುತ್ತ ಗೌಡ ಜಾತಿಯ ಉಪಾಧ್ಯಾಯರು ತಮ್ಮ ಆ ಪವಿತ್ರವಾದ ಕರ್ತವ್ಯವನ್ನು ಮರೆತಿರುವಂತೆ ತೋರುತ್ತದೆ. ಹಾಗಲ್ಲದಿದ್ದರೆ ಹೀನ ಸ್ಥಿತಿಯಲ್ಲಿರುವ ಜಾತಿಯವರ ಕಡೆಗೆ ಗಮನವೇ ಕೊಡದಿರುವುದು ಮಾತ್ರವಲ್ಲದೆ ತಾವು ವಾಗ್ದಾನಮಾಡಿದ ಹಣವನ್ನು ವಸೂಲಿ ಕೊಡದೆ ಹಿಂದೆಗೆಯುತ್ತಿದ್ದಿಲ್ಲ. ಇನ್ನಾದರೂ ಇವರು ಚೆನ್ನಾಗಿ ಪ್ರಯತ್ನಪಟ್ಟು ಸಂಘವು ಚಿರಸ್ಥಾಯಿಯಾಗುವಂತೆ ಪ್ರಯತ್ನಪಡುವುದು ಇವರ ಧರ್ಮವಾಗಿದೆ. ಮಹಾನವಮಿ, ದೀಪಾವಳಿ ಹಬ್ಬ ಮೊದಲಾದ ದಿವಸಗಳಲ್ಲಿ ನಮ್ಮ ಜಾತಿಯ ಹುಡುಗರಿಂದ ಹಾಡುಗಳನ್ನು ಹಾಡಿಸಿ ಹಣವನ್ನು ದುಡಿದು ಸಂಘಕ್ಕೆ ತುಂಬಾ ಸಹಾಯ ಮಾಡುವುದಕ್ಕೆ ಅನುಕೂಲವಿದೆ. ಸಂಘದ ಆಡಳಿತಮೆಂಬರರಾದ ರಾ. ಟಿ. ಕರಿಯಪ್ಪ ಮಾಸ್ತರರ ಉದಾಹರಣೆಯನ್ನು ತೆಗೆದುಕೊಂಡರೆ, ಎಲ್ಲವೂ ನೆಟ್ಟಗಾಗುವುದು. ಇವರು ನಿಸ್ವಾರ್ಥತೆಯಿಂದ ಎಡೆಬಿಡದೆ ಸಂಘದ ವಿಷಯದಲ್ಲಿ [illegible] ಪ್ರಯತ್ನಿಸುತ್ತಿರುವರು.

ಇಷ್ಟರ ವರೆಗೆ ಈ ಸಂಘಕ್ಕೆ ಬರೇ ೩ ಸಾವಿರ ರೂಪಾಯಿ ವಸೂಲು ಬಂದಿರುತ್ತದೆ. ಇದೇ ವರ್ಷ ಮಳೆಗಾಲವು ಆರಂಭವಾದೊಡನೆಯೇ ಪುತ್ತೂರಲ್ಲಿ ಒಂದು ವಿದ್ಯಾರ್ಥಿಭವನವನ್ನು ಕಟ್ಟಲಿಕ್ಕಿರುವರು. ಇದಕ್ಕೆ ಹೆಚ್ಚು ಕಡಿಮೆ ಏಳೆಂಟು ಸಾವಿರ ರೂಪಾಯಿ ಬೇಕಾಗುವುದರಿಂದ ಉಳಿದ ಈ ಅಲ್ಪಕಾಲದಲ್ಲಿ ಇನ್ನುಳಿದ ಮೊಬಲಗು ವಸೂಲು ಆಗುವಂತೆ ಪ್ರಯತ್ನ ಮಾಡುವುದು ಜಾತಿಯ ಪ್ರತಿಯೊಬ್ಬನ ಕರ್ತವ್ಯವೆಂದು ಸೂಚಿಸುವುದರಲ್ಲಿಯೇ ಉಪಾಧ್ಯಾಯವರ್ಗದ ಉದಾರ ಹಸ್ತವನ್ನು ಅಪೇಕ್ಷಿಸುವ,

ಅಭಿಮಾನಿ.

ಅನುಕ್ರಮಣಿಕೆ.

ಅಗ್ರಲೇಖ ಪುಟಗಳು.
೧೧ನೆಯ ಕರ್ನಾಟಕ ಸಾಹಿತ್ಯ ಸಮ್ಮೇಲನ „
ಸ್ಫುಟವಿಚಾರಗಳು—
೧–೨. ಸಾತಾರದಲ್ಲಿ ಮಹಾರಾಷ್ಟ್ರ ಪ್ರಾಂತಿಕ ಪರಿಷತ್ತು „
೩. ಪಂಡಿತ ಮದನಮೋಹನ ಮಾಲವೀಯರರಿಗೆ ಹೈದರಾಬಾದ ಸರಕಾರದ ಪ್ರತಿಬಂಧ „
೪–೫. ತಮಿಳುನಾಡಿನ ಶರ್ಮದೇವಿ ಗುರುಕುಲ „
ಮಂಗಳೂರು
ವರ್ತಮಾನಸಂಗ್ರಹಗಳು—
ವಿದೇಶ – ಒಳದೇಶ ವರ್ತಮಾನ ೫
ದಕ್ಷಿಣ ಕನ್ನಡ – ಮುಲ್ಕಿ, „
ಪತ್ರವ್ಯವಹಾರ ೧, ೨, ೩ „
ದಕ್ಷಿಣಕನ್ನಡ ಗೌಡ ವಿದ್ಯಾಸಂಘವೂ, ಗೌಡ ಉಪಾಧ್ಯಾಯರ ಉದಾರ ಹಸ್ತವೂ ೭
ಸಿಡಿಗಲ್ಲಿನಲ್ಲಿ ಗಡಿಬಿಡಿ „
ಕರ್ನಾಟಕದ ೧೧ನೇ ಸಮ್ಮೇಲನ ಬೆಳಗಾಂವಿ ೮
ಕಾಸರಗೋಡು ಗೋವಳರ ಅಥವಾ ಮಣಿಯಾಣಿ ಸಭಾ „
ಧರ್ಮ ಪತಿತೋದ್ಧಾರಕ ಸಭಾ „

ಸ್ವದೇಶಾಭಿಮಾನಿ.

ಶಕ ೧೮೪೭ ವೈಶಾಖ ಬ| ೧೫ವು ಶುಕ್ರವಾರ.

೧೧ನೆಯ ಕರ್ನಾಟಕ ಸಾಹಿತ್ಯ ಸಮ್ಮೇಲನ.

ಬೆಳಗಾವಿನಲ್ಲಿ ಜರಗಿದ ಅಖಿಲ ಕರ್ನಾಟಕದ ಸಾಹಿತ್ಯ ಸಮ್ಮೇಲನದ ಮುಖ್ಯ ಮುಖ್ಯ ಸಂಗತಿಗಳನ್ನು ಕಳೆದ ಮತ್ತು ಈ ಹೊತ್ತಿನ ಸಂಚಿಕೆಯಲ್ಲಿ ಪ್ರಕಟಿಸಿದ್ದೇವೆ. ಸಾಹಿತ್ಯವೆಂಬ ವಿಷಯವೆ ಮೊದಲು ನಿರುಪದ್ರವಿಯಾದ್ದು; ರಸಭಾವಗಳ ಅಸ್ವಾದನೆಯಿಂದಲೂ, ಐತಿಹಾಸಿಕ ಮತ್ತು ಶಾಸ್ತ್ರೀಯ ವಿಷಯಗಳ ಸೇವನೆಯಿಂದಲೂ ಮನಸ್ಸು ರಂಜಿತವಾಗಿ ಹೋಗುತ್ತದೆ. ಅದರಲ್ಲಿ ಪುನಃ ಇಂಥ ಸಾಹಿತ್ಯ ವಿದ್ವಾಂಸರ ಮತ್ತು ಸಾಹಿತ್ಯ ಭಕ್ತರ ಹಾಗು ಸಾಹಿತ್ಯ ಸೇವಿಗಳ ಕೂಟವು ನೆರೆದು ಒಂದೆರಡು ದಿವಸ "ಕಾವ್ಯ ಶಾಸ್ತ್ರ ವಿನೋದ" ನಡೆಯ. ಹತ್ತಿತೆಂದರೆ ಅದರ ಆನಂದವನ್ನೂ, ಭಾಗ್ಯವನ್ನೂ ಪುನಃ ವರ್ಣಿಸಬೇಕೆ? ಇಂಥ ಆನಂದವು ಬೆಳಗಾಂವಕರರಿಗೆ ಲಭಿಸಿದ್ದು ಅವರ ಭಾಗ್ಯೋದಯದ ಫಲವೆ ಸರಿ. ರಾಷ್ಟ್ರೀಯ ಸಭೆಯಂಥ ಸರ್ವ ಹಿಂದುಸ್ಥಾನದ ರಾಜಕಾರಣವನ್ನು ಚರ್ಚಿಸುವ ಮಂಡಲದ ಅಧಿವೇಶನವನ್ನು ಸೇರಿಸಿ ದಣಿದು ಹೋದ ಬೆಳಗಾಂವಕರರ ಪರಿಶ್ರಾಂತವಾದ ಮನಸ್ಸಿಗೆ ಅಖಿಲ ಕರ್ನಾಟಕದ ವಿದ್ವಾಂಸರ ಸರಸಾಲಾಪಗಳಿಂದ ಸಂತೋಷವನ್ನುಂಟುಮಾಡಿ ಅವರ ಮನಸ್ಸಿನ ದಣುವನ್ನು ಹೋಗಲಾಡಿಸದೆ ಇರಲಿಕ್ಕಿಲ್ಲ. ಬೆಳಗಾವಿನವರಲ್ಲಿರುವ ವಿದ್ವತ್ತೆ, ಉತ್ಸಾಹ, ಕಾರ್ಯದಕ್ಷತೆ, ಇತ್ಯಾದಿ ಗುಣಗಳೊಟ್ಟಿಗೆ ಕರ್ನಾಟಕ ಸಾಹಿತ್ಯಪ್ರೇಮವು ಸಮ್ಮಿಳಿತವಾದ್ದರಿಂದ ಸಾಹಿತ್ಯ ಪರಿಷತ್ತಿನ ಸಾಂಗತೆಯ ಯಶಸ್ಸು ದ್ವಿಗುಣಿತವಾಗಿದೆ ಎಂದು ಹೇಳಿದರೆ ಅದು ಅತಿಶಯೋಕ್ತಿಯ ಮಾತಾಗಲಿಕ್ಕಿಲ್ಲ.

ಬೆಳಗಾವಿನಲ್ಲಿ ಜರಗಿದ ಸಾಹಿತ್ಯ ಸಮ್ಮೇಲನವು ಎಂದಿನಂತೆ ಯಶಸ್ವಿಯಾಯಿತೆಂದು ಹೇಳಲು ಸಂತೋಷವಾಗುವುದು. ಈ ಅಧಿವೇಶನದ ಬಗ್ಗೆ ಇತರರಿಗಿಂತ ದಕ್ಷಿಣಕನ್ನಡದವರಾದ ನಮಗೆ ಹೆಚ್ಚಿನ ಅಭಿಮಾನವುಂಟಾಗುವುದು ಸಹಜ. ಕಾರಣ, ನಮ್ಮ ಜಿಲ್ಲೆಯವರಾದ ಶ್ರೀ. ಬಿ. ರಾಮರಾಯರು ಎಮ್. ಎ. ಎಲ್. ಎಲ್. ಬಿ. ಇವರು ಸಮ್ಮೇಲನದ ಅಧ್ಯಕ್ಷರಾಗಿದ್ದರು. ರಾಮರಾಯರು ಸಾಕ್ಷರ ಕನ್ನಡಿಗರಿಗೆ ಅಷ್ಟೊಂದು ಅಪರಿಚಿತರಲ್ಲ. ಅನೇಕ ಪುಸ್ತಕಗಳನ್ನು ಬರೆದು ಅವರು ಕನ್ನಡ ಸಾಹಿತ್ಯದ ಸೇವೆಯನ್ನು ಈ ಮೊದಲೆ ಮಾಡಿರುವರು. ಇವರು ಅಧ್ಯಕ್ಷಸ್ಥಾನದಿಂದ ಮಾಡಿದ ಭಾಷಣವು ಅವರ ಭಾಷಾ ಪರಿಶ್ರಮವನ್ನೂ, ಭಾಷಾ ಪ್ರೇಮವನ್ನೂ ವ್ಯಕ್ತಗೊಳಿಸುತ್ತದೆ. ರಾಮರಾವಜಿಯವರು ಕನ್ನಡ ಭಾಷೋನ್ನತಿಯ ಬಗ್ಗೆ ಕೊಟ್ಟಿರುವ ಎಷ್ಟೊ ಸೂಚನೆಗಳು ಬಹುಮಹತ್ತ್ವದವುಗಳಾಗಿದ್ದವು. ಈ ಸೂಚನೆಗಳು ಪ್ರಾಯಶಃ ಮುಂಚಿನಿಂದಲೆ ಕನ್ನಡ ವಾಙ್ಮಯ ಸೇವಿಗಳ ಮುಂದೆ ಇವೆಯಾದರೂ ರಾಮರಾಯರಂಥ ದೊಡ್ಡ ಹುದ್ದೆಯಲ್ಲಿದ್ದ ಪದವೀಧರರ ಬಾಯಿಂದ ಬಂದಲ್ಲಿ ಅವುಗಳ ಕಡೆಗೆ ಜನತೆಯ ಲಕ್ಷ್ಯವು ಹೆಚ್ಚು ವಿದ್ಯವಾಗುತ್ತದೆ. ಈ ದೃಷ್ಟಿಯಿಂದ ಮ| ರಾ| ರಾಮರಾಯರ ಭಾಷಣದ ಸುಪರಿಣಾಮವುಂಟಾದೀತೆಂದು ನಾವು ಭರವಸೆ ಪಟ್ಟಿದ್ದೇವೆ.

ಸ್ವಾಗತ ಮಂಡಲದ ಮುಖ್ಯರಾದ ಶ್ರೀ. ಚಿಕ್ಕೋಡಿ ತಮ್ಮಣ್ಣಯ್ಯರ ಭಾಷಣವಾದರೂ ಶ್ರಾವ್ಯವಾಗಿಯೂ, ಮನನೀಯವಾಗಿಯೂ ಇತ್ತು. ಬೆಳಗಾವಿನ ಪ್ರಾಚೀನ ಇತಿಹಾಸವನ್ನು ಇವರು ತಮ್ಮ ಭಾಷಣದಲ್ಲಿ ಕೂಡಿದಷ್ಟು ದೀರ್ಘವಾಗಿ ಹೇಳಿರುವರು. ಬೆಳಗಾವಿಯೂ ಅದರ ಸುತ್ತು ಮುತ್ತಲಿನ ಪ್ರದೇಶವೂ ಒಂದು ಕಾಲದಲ್ಲಿ ಕನ್ನಡಿಗರದಾಗಿ ಇತ್ತೆಂಬುದು ಗೊತ್ತಾಗುತ್ತದೆ. ಅಲ್ಲದೆ, ಕನ್ನಡ ಭಾಷೆಯ ಅಭಿವೃದ್ಧಿಯನ್ನು ಮಾಡಬೇಕೆಂಬುದಾಗಿ ಸ್ವಾಗತ ಮಂಡಲದ ಮುಖ್ಯರು ಅಧ್ಯಕ್ಷರಂತೆಯೆ ಏನು ಒತ್ತಿ ಹೇಳಿರುವರೊ ಅದು ಕೂಡ ಇವರ ಭಾಷಣದೊಳಗಿನ ಒಂದು ವಿಶೇಷಾಂಶವಾಗಿದೆ. ಸಾರಾಂಶ ಸ್ವಾಗತಾಧ್ಯಕ್ಷರು ಸಹ ಚಲೋದಾದ ಭಾಷಣವನ್ನೆ ಮಾಡಿರುವರು.

ರೂಢಿಯಂತೆ ಈ ಎರಡು ಕಾರ್ಯಕ್ರಮಗಳು (ಸ್ವಾಗತ ಮಂಡಲ ಮತ್ತು ಪರಿಷತ್ತಿನ ಅಧ್ಯಕ್ಷರುಗಳ ಭಾಷಣಗಳು) ಮುಗಿದ ಬಳಿಕ ಹಲವು ಠರಾವುಗಳನ್ನು ಪಾಸುಮಾಡುವದೂ ಒಂದು ರೂಢಿಯಾಗಿದೆ. ಈ ರೂಢಿಗನುಸಾರವಾಗಿ ಕರ್ನಾಟಕ ಭಾಷೆಯ ಏಕೀಕರಣ ಕರ್ನಾಟಕ ವಿಶ್ವವಿದ್ಯಾಲಯದ ಸಂಸ್ಥಾಪನ, ಕನ್ನಡ ವಿಶ್ವಕೋಶ ಇತ್ಯಾದಿ ಮುಂಚಿನ ಠರಾವುಗಳೆ ಪುನರುಚ್ಚರಿಸಲ್ಪಟ್ಟವು. ಇಂಥ ಠರಾವುಗಳು ಪರಿಷತ್ತಿನ ಆದಿಯಿಂದಲೆ ಪಾಸಾಗುತ್ತಿವೆ. ಎಂದರೆ ಮುಂಚಿನ ಠರಾವುಗಳನ್ನೆ ಅಕ್ಷರಶಃ ಈ ವರ್ಷ ಪಾಸುಮಾಡಿದ್ದಾರೆ; ಅಥವಾ ಈ ವರ್ಷ ಪಾಸಾದ ಠರಾವುಗಳಲ್ಲಿ ಯಾವ ನಾವೀನ್ಯವೂ ಇಲ್ಲವೆಂದು ಮುಂತಾದ ಅಭಿಪ್ರಾಯವನ್ನು ನಾವು ಪ್ರತಿಪಾದಿಸುವದಲ್ಲ. ಈ ವರ್ಷದ ಠರಾವುಗಳೂ ಒಳ್ಳೆಯವೆ, ಅವುಗಳಲ್ಲಿ ನಾವೀನ್ಯವೂ ಇದೆ. ಆದರೆ ಇವು ಕಾರ್ಯರೂಪದಲ್ಲಿ ಬಾರದೆ ಹೋದರೆ ಅವು ನಿರರ್ಥಕವೆ ಸರಿ ಎಂಬುದೆ ನಮ್ಮ ತಾತ್ಪರ್ಯ. ವಿಶ್ವಕೋಶದ ಕಲ್ಪನೆಯು, ಭಾಷಾಭಿವೃದ್ಧಿಯ ಇತರ ಸಂಗತಿಗಳು ಇದೇ ಸಮ್ಮೇಳನದ ವ್ಯಾಸಪೀಠದಿಂದ ವಕ್ತೃಗಳ ಉದ್ದಾಮ ವಕ್ತೃತ್ವದಿಂದ ಪಷ್ಟೀಕರಿಸಲ್ಪಟ್ಟು ಮೊದಲೆಷ್ಟೊ ಸಾರೆ ಪಾಸಾಗಿವೆ. ಅವುಗಳನ್ನೆ ಕಾರ್ಯರೂಪದಲ್ಲಿ ತರಬೇಕೆಂಬ ಹಟ ಹಿಡಿಯುವ ಒಂದೆ ಠರಾವನ್ನು—ಪಾಸುಮಾಡುವದಲ್ಲ.—ಜಾರಿಯಲ್ಲಿ ತಂದರೆ ಪರಿಷತ್ತಿನ ಒಂದು ತಪಸ್ಸು ಸಾರ್ಥಕವಾಗುವಂತಿದೆ.

ಸಾಹಿತ್ಯ ಸಮ್ಮೇಳನವೆ ಎಂದಲ್ಲ, ಈಗಿನ ಕಾಲದಲ್ಲಿ ಯಾವದಾದರೂ ಒಂದು ವಿಧದ ಕೂಟಗಳನ್ನು ಜರಗಿಸುವದು ಚಳವಳದ ಪ್ರಮುಖ ಲಕ್ಷಣವಾಗಿದೆ. ವಸ್ತುತಃ ಈ ಪ್ರವೃತ್ತಿಯು ಶ್ಲಾಘ್ಯವೆ, ತಥಾಪಿ ಬರೆ ಪರಿಷತ್ತಾಗಲಿ, ಸಮ್ಮೇಳನವಾಗಲಿ ಇದೆ ಅಂತ್ಯವಾಗಿರಕೂಡದು. ಇದಕ್ಕಿಂತಲೂ ಬೇರೆ ಕರ್ತವ್ಯವಿದೆ, ಹೀಗೆನ್ನುವದಕ್ಕಿಂತ ನಿಜವಾದ ಕರ್ತವ್ಯವನ್ನು ಅಂಗೀಕರಿಸಲು ಇಂಥ ಪರಿಷತ್ತುಗಳು ಪ್ರಾರಂಭದ ದಾರಿಗಳಾಗಿವೆ ಎಂಬ ದೃಢ ನಂಬಿಕೆಯು ಚಳವಳಗಾರರಲ್ಲಿ ಹುಟ್ಟಿದರೆ ಇಂಥ ಪರಿಷತ್ತುಗಳನ್ನು ಸೇರಿಸಿದುದು ಸಾರ್ಥಕವಾದೀತೆಂಬುದರಲ್ಲಿ ಸಂದೇಹವಿಲ್ಲ. ಇಲ್ಲವಾದರೆ ಆ ಯಾತಾಯಾತ, ಆ ಆಡಂಬರ, ಆ ಗಲಾಟೆ ಇವೆಲ್ಲ ನಿರರ್ಥಕವಾದಾವು.

ಅಂತು ಬೆಳಗಾವಿನ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಕುರಿತು ಕೊನೆಯ ಒಂದು ಮಾತು ಹೇಳುವದಾದರೆ, ಸಮ್ಮೇಳನದ ವೃತ್ತಾಂತವನ್ನು ನೋಡಿದ್ದಲ್ಲಿ ಅದು ಬಹು ಯಶಸ್ವಿಯಾದ ರೀತಿಯಲ್ಲಿ ನಡೆದು ಕೊನೆಗಂಡಿತೆಂದು ಹೇಳಬಹುದಾಗಿದೆ. ಅದರ ಈ ಯಶಸ್ವಿತೆಗೆ ಬೆಳಗಾವಕರರು, ಸ್ವಾಗತಾಧ್ಯಕ್ಷರು, ಮುಖ್ಯ ಅಧ್ಯಕ್ಷರು, ಹಾಗು ಇತರ ಭಾಷಾಪ್ರೇಮಿಗಳು ಭಾಗಿಗಳಾಗಿದ್ದಾರೆಂಬುದನ್ನು ಯಾರೂ ಮರೆಯಕೂಡದೆಂದು ಹೇಳಿ ನಾವು ಈ ಲೇಖವನ್ನು ಮುಗಿಸುವೆವು.

ಸ್ಫುಟವಿಚಾರಗಳು.

೧. ಸಾತಾರದಲ್ಲಿ ಮಹಾರಾಷ್ಟ್ರ ಪ್ರಾಂತಿಕ ಪರಿಷತ್ತು ಸೇರಿತ್ತು. ಫರಿದಪುರದಲ್ಲಿ ಸೇರಿದ ಪರಿಷತ್ತಿನ ಅನಂತರ ಈ ಪರಿಷತ್ತೆ ರಾಜಕಾರಣವನ್ನು ವ್ಯಕ್ತಗೊಳಿಸುವ ದೃಷ್ಟಿಯಿಂದ ಮಹತ್ವದ್ದಾಗಿದೆ ಮಧ್ಯಪ್ರಾಂತದ ಶ್ರೀ. ದೇಶಮುಖರು ಸಭಾಧ್ಯಕ್ಷರಾಗಿದ್ದರು. ಇವರು ತಮ್ಮ ಭಾಷಣದಲ್ಲಿ ಅಸಹಕಾರ ತತ್ವದ ಆದಿಯಿಂದ ಇದು ವರೆಗಿನ ಇತಿಹಾಸವನ್ನು ಹೇಳಿದರು. ಬಾರಡೋಲಿಯ ಕಾಯಿದೆಭಂಗದ ಸಂದರ್ಭವನ್ನು ನಿಲ್ಲಿಸಿದ ಬಳಿಕ ಅಸಹಕಾರ ಚಳವಳವು ನಾಮಶೇಷವಾಗಿ ಬರೆ ಮಾನಸಿಕ ಮತ್ತು ಹೆಚ್ಚೆಂದರೆ ಶಾಬ್ದಿಕ ಸ್ವರೂಪವನ್ನು ತಾಳಿಕೊಂಡಿತು. ಈ ದುರವಸ್ಥೆಯನ್ನು ಹೋಗಲಾಡಿಸಲು ಮತ್ತು ಕ್ರಿಯಾತ್ಮಕವಾದ ಚಳವಳವನ್ನು ಪುನಃ ಪ್ರಾರಂಭಿಸಲು ದೇಶದಮುಖಂಡರು ಮುಸುಕು ಹಿಡಿದ ಆದೆ ಅಸಹಕಾರಕ್ಕೆ ಒಪ್ಪಿಗೆಯನ್ನು ಕೊಡಬೇಕಾಯಿತು. ಆದರೂ ಮಹಾತ್ಮಾ ಗಾಂಧಿಗಳು ರಾಷ್ಟ್ರೀಯ ಸಭೆಯ ಸಭಾಸದತ್ವದ ಪಾತ್ರತೆಯನ್ನು ನೂಲಿನ ವರ್ಗಣಿಯಿಂದ ನಿರ್ಣಯಿಸಬೇಕೆಂದು ನಿಯಮಿಸಿದ್ದಾರೆ; ಇದು ರಾಷ್ಟ್ರೀಯ ಸಭೆಯ ಅಪಕರ್ಷಕ್ಕೆನೆ ಕಾರಣವಾದೀತು. ಆದ್ದರಿಂದ ಇದನ್ನು ಬದಲಾಯಿಸುವುದು ಅವಶ್ಯವಿದೆ ಎಂಬುದಾಗಿ ಶ್ರೀ. ರಾಮರಾವ ದೇಶಮುಖರು ಒತ್ತಿಹೇಳಿದರು. ಸಭೆಯಲ್ಲಿ ಪಾಸಾದ ಠರಾವುಗಳ ಪೈಕಿ ಎರಡು ಠರಾವುಗಳು ಮಹತ್ತ್ವದವುಗಳಾಗಿವೆ. ನೂಲಿನ ಮತದಾನ ಪದ್ಧತಿಯನ್ನು ತೆಗೆಯಲು ಪ್ರಾಂತಿಕ ಪರಿಷತ್ತು ಓಲ್-ಇಂಡಿಯಾ ಕೊಂಗ್ರೆಸ್ ಕಮ್ಮಿಟಿಗೆ ಶಿಫಾರಸು ಮಾಡಿದೆ. ಇನ್ನೊಂದು ಠರಾವಿನಲ್ಲಿ ಮುಂದಿನ ಅಭಿಪ್ರಾಯವು ಬಂದಿರುವದು. ದೇಶದಲ್ಲಿ ಈಗ ರಾಜಕೀಯ ಚಳವಳವು ಮೃತಪ್ರಾಯವಾಗಿದೆ. ಅಮೃತಸರ ಕೊಂಗ್ರೆಸ್ಸಿನ ಸಮಯದಲ್ಲಿ ಅಥವಾ ಅನಂತರ ೧೯೨೧ರಲ್ಲಿ ಯಾವ ಚೇತನವಿತ್ತೊ ಅದು ಈಗ ಶೂನ್ಯವಾಗಿದೆ. ಈ ಶೋಚನೀಯ ಸ್ಥಿತಿಯು ಹೋಗಿ ಎಲ್ಲ ಕಡೆಗಳಲ್ಲಿ ರಾಜಕೀಯ ಚಳವಳವು ಹಬ್ಬುವಂತೆ ಮಾಡಲು ರಾಷ್ಟ್ರೀಯ ಸಭೆಯು ಸ್ವರಾಜ್ಯ ಪಕ್ಷದ ಕಾರ್ಯಕ್ರಮವನ್ನು ಕೈಕೊಂಡು ತಾನೆ ನಡಿಸಬೇಕು. ಈ ಠರಾವು ದೇಶಭಕ್ತ ಕೇಳಕರರಿಂದ ತರಲ್ಪಟ್ಟಿತ್ತು. ಅದು ನಿರಪವಾದವಾಗಿ ಪಾಸಾಯಿತು. ಮಹಾರಾಷ್ಟ್ರ ಪ್ರಾಂತಿಕ ಪರಿಷತ್ತು ಸೂಚಿಸಿದ ಮೇರೆಗೆ ರಾಷ್ಟ್ರೀಯ ಸಭೆಯು ಮುಖ್ಯ ಕಾರ್ಯಕಾರಿ ಸಂಸ್ಥೆಯು ರಾಜಕೀಯ ಚಳವಳವನ್ನು ಕೈಕೊಂಡು ಇತರ ಎಲ್ಲ ಪಕ್ಷಗಳು ಸಹ ಒಟ್ಟಿಗೆ ಸೇರಿ ಸರಕಾರದೊಡನೆ ಪ್ರತಿಭಟಿಸ ಹತ್ತಿದರೆ ಸ್ವರಾಜ್ಯದ ದಾರಿಯು ಅದಷ್ಟು ನಿಷ್ಕಂಟಕವಾದೀತೆಂದು ಭರವಸೆ ಇದೆ.

೨. ಸಾತಾರದಲ್ಲಿ ನಡೆದ ಮ. ಪ್ರಾಂ. ಪರಿಷತ್ತಿನ ವಿಷಯವನ್ನು ಮುಗಿಸಬೇಕಾದರೆ ಮುಂದಿನ ಒಂದೆರಡು ಮಾತುಗಳನ್ನು ವಾಚಕರ ಮುಂದಿಡುವುದು ನಮ್ಮ ಕರ್ತವ್ಯವಾಗಿದೆ. ಪರಿಷತ್ತಿನ ಅಧ್ಯಕ್ಷರಾದ ಶ್ರೀ. ದೇಶಮುಖರು ಮಹಾತ್ಮಾ ಗಾಂಧಿಗಳಿಗೆ ಕೊಂಗ್ರೆಸ್ ಬಿಟ್ಟು ಹೋಗಬೇಕೆಂದು ಹೇಳಿದ ಅಪರಾಧಕ್ಕೆ ದೇಶಮುಖರನ್ನು ಹಲವರು ಬೈಯುತ್ತಿರುವರು. ದೇಶಮುಖರ ಮಟ್ಟಿಗೆ ಹೇಳುವುದಾದರೆ ಈ ಬೈಗಳನ್ನು ಅವರು ಮುಂಚೆಯೇ ನಿರೀಕ್ಷಿಸಿದ್ದಾರೆ. ಆದ್ದರಿಂದ ಅವು ಅವರಿಗೆ ಹೊಸತಲ್ಲ. ಶ್ರೀ. ದಾಸರು ಮೊದಲು ಸಾಂಪ್ರದಾಯವಾದಿಗಳ ತಪ್ಪುಗಳನ್ನು ತೋರಿಸಿಕೊಟ್ಟಾಗ ಅವರಿಗೂ ಕೂಡ ಇದೆ ತರದ ಪುಷ್ಪಾಂಜಲಿಗಳನ್ನು ಅರ್ಪಿಸುತ್ತಿದ್ದರು. ಕೊನೆಗೆ ಮಹಾತ್ಮಾಜಿಯವರೆ ದಾಸರ ಅಭಿಪ್ರಾಯವನ್ನು ಅನುಮೋದಿಸಿದ ಬಳಿಕ ಈ "ವಾಚವೀರ"ರ ಬಾಯಿಗೆ ಕೊಂಚ ಬೀಗ ಬಿತ್ತು. ಈಗ ದೇಶಮುಖರ ಮೇಲೆ ಮುಖಸುಖವನ್ನು ತೆಕ್ಕೊಳ್ಳಹತ್ತಿದ್ದಾರೆ. ಆದರೆ ದೇಶಮುಖರ ಭಾಷಣವನ್ನು ನಿರ್ಮತ್ಸರ ದೃಷ್ಟಿಯಿಂದ ಪರಿಶೀಲಿಸಿದವರಿಗೆ ದೇಶಮುಖರು ಗಾಂಧಿಜಿಗಳಿಗೆ ಎಷ್ಟು ಬಹುಮಾನ ಕೊಡುತ್ತಿದ್ದಾರೆಂಬುದು ಗೊತ್ತಾಗುವುದು. ಮಾತ್ರವಲ್ಲ, ಸ್ವರಾಜಿಸ್ಟರೂ ಅಲ್ಲ, ನೆಶನಲಿಸ್ಟರೂ ಅಲ್ಲ, ಬಿಝುಂಟ ಪಕ್ಷಾನುಯಾಯಿಗಳಾದ ದ್ವಾರಕಾ ದಾಸರು ದೇಶಮುಖರ ಭಾಷಣದ ವಿಷಯದಲ್ಲಿಯಾಗಲಿ ಅಲ್ಲಿಯ ಇತರ ಠರಾವುಗಳ ವಿಷಯದಲ್ಲಿಯಾಗಲಿ ಯಾವ ಅಭಿಪ್ರಾಯವನ್ನು ಬಹಿರಂಗವಾಗಿ ಬಾತಮಿದಾರನೊಡನೆ ಆಡಿತೋರಿಸಿದ್ದರೊ ಅದರಲ್ಲಿ ದ್ವಾರಕಾದಾಸರು ಮ| ಗಾಂಧಿಗಳಿಗೆ ಸಲ್ಲತಕ್ಕಷ್ಟು ವೈಯಕ್ತಿಕ ಬಹುಮಾನವನ್ನು ಅಧ್ಯಕ್ಷರೂ ಇತರರೂ ಸರಿಯಾಗಿ ಕೊಟ್ಟಿದ್ದಾರೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಈ ಮೂರನೆಯವರ ಸಾಕ್ಷಿಯನ್ನಾದರೂ ಮನಸ್ಸಿಗೆ ತರಬಾರದೆ?

೩. ಹೈದರಾಬಾದ ಸರಕಾರವು ಇತ್ತಿತ್ತಲಾಗೆ ಬಹಳೆ ವಿಲಕ್ಷಣ ಪ್ರಕಾರಗಳನ್ನು ನಡಿಸಹತ್ತಿದೆ. ಬಿರಾರ ಪ್ರಕರಣ ಗುಲಬರ್ಗದ ದಂಗೆ ಇತ್ಯಾದಿ ವಿಷಯದಲ್ಲಿ ಹೈದರಾಬಾದದ ನಾಮೋಚ್ಚಾರವು ನಡಿಯುತ್ತಿರುವಾಗಲೆ ಪಿಂಗಲ ರಂಗರಾಯರ ದಹನ-ದಫನ ಚರ್ಚೆಯು ಪ್ರಕಟವಾಯಿತು. ಇದು ಮುಗಿಯುತ್ತದೆ ಮಾತ್ರ, ಅಷ್ಟರೊಳಗೆ ಹೈದರಾಬಾದ ಸರಕಾರದ ಹೆಸರು ಪತ್ರಿಕೆಗಳಲ್ಲಿ ಪುನಃ ಬರಹತ್ತಿದೆ. ನಿಝಾಮರು ಒಂದು ಫರ್ಮಾನನ್ನು ಹೊರಡಿಸಿ ಅದರಿಂದ ಪಂಡಿತ ಮದನಮೋಹನ ಮಾಲವೀಯರನ್ನು ಹೈದರಾಬಾದ ಸಂಸ್ಥಾನದಲ್ಲಿ ಪ್ರವೇಶಿಸಲು ತಡೆ ಹಾಕಿರುವರು! ನಿಝಾಮ ಸಾಹೇಬರು ಪಂಡಿತಜೀಯವರನ್ನು ಪ್ರತಿಬಂಧಿಸಿ ಯಾವ ಅನರ್ಥವನ್ನು ನಿಲ್ಲಿಸಿದರೆಂದು ತಿಳಕೊಳ್ಳಲು ವಾಚಕರಿಗೆ ಕುತೂಹಲವುಂಟಾದೀತು. ಪರಂತು ಈ ಪ್ರಕರಣದ ವಿಷಯಗಳನ್ನಾಲೋಚಿಸುವಾಗ ಹೈದರಾಬಾದ ಸಂಸ್ಥಾನದ ಮೇಲೆ ಅಂಥ ಯಾವ ಪ್ರಸಂಗವೂ ಬಂದದ್ದು ಕಂಡು ಬರುವದಿಲ್ಲ. ಹಿಂದು ಸಭೆಯು ಹೈದರಾಬಾದಿನಲ್ಲಿ ಸೇರುವದಿತ್ತು. ಸಭೆಯು ಅಧಿಕಾರಿ ಮಂಡಲದ ವಿಜ್ಞಾಪನೆಯ ಮೇರೆಗೆ ಪಂಡಿತಜಿಯವರು ಅಧ್ಯಕ್ಷಸ್ಥಾನವನ್ನು ವಹಿಸಲು ಒಪ್ಪಿದ್ದರು. ಅವರನ್ನು ಸ್ವಾಗತೀಕರಿಸಲು ಸ್ವಾಗತ ಮಂಡಲವು ಸಿದ್ಧತೆಯನ್ನು ಪ್ರಾರಂಭಿಸಿತ್ತು. ಈ ಎಲ್ಲ ಸಿದ್ಧತೆಯಾಗುವಷ್ಟರಲ್ಲಿ ನಿಝಾಮರ ಪ್ರತಿಬಂಧಕ ಹುಕುಮು ಹೊರಟಿದೆ. ಹಿಂದು ಸಭೆಯ ಅಧಿವೇಶನಕ್ಕೆ ಪಂಡಿತಜೀಯವರು ಬರುವದರಿಂದ ಶಾಂತತಾಭಂಗವಾಗುತ್ತಿತ್ತೆ? ಪಂಡಿತಜಿಯವರು ಸ್ವಾಭಾವಿಕವಾಗಿಯೆ ಶಾಂತಪಕ್ಷದವರು. ಅದರಲ್ಲಿ ಎಸೆಂಬ್ಲಿಯ ಸಭಾಸದರು. ಇಂಥವರು ಕ್ಷೋಭಕಾರಕ ಭಾಷಣದಿಂದಾಗಲಿ ಅಥವಾ ಕೃತಿಯಿಂದಾಗಲಿ ಶಾಂತತಾಭಂಗವನ್ನುಂಟುಮಾಡ್ಯಾರೆಂದು ಅವಿಕೃತಬುದ್ಧಿಯವರು ಎಂದೂ ನೆನಸಲಿಕ್ಕಿಲ್ಲ. ಹೀಗಿರಲು ಈ ಫರ್ಮಾನವು ಯಾಕೆ ಹೊರಟಿತು? ಇದರ ವಿಮಾಂಸೆಯನ್ನು ಮಾಡುವದಾದರೆ ಹೈದರಾಬಾದ ಸಂಸ್ಥಾನದಲ್ಲಿ ಹಿಂದು ಸಮಾಜಕ್ಕೆ ಘಾತಕವಾದ ಯಾವದಾದರೂ ಒಂದು ಸಂಗತಿಯು ನಡಿಯುತ್ತಿರಬೇಕು, ಎಂದು ಅನುಮಾನಿಸಬಹುದಾಗಿದೆ. ಅದು ಬಹಿರಂಗವಾದೀತೆಂದು ಹಿಂದು ವೇಳೆ ನಿಜಾಮ ಸಾಹೇಬರು ನೆನಸಿದರೊ ಏನೋ! ಇಲ್ಲವಾದರೆ ಈ ಪ್ರತಿಬಂಧವು ಯಾಕೆ? ನಿಷ್ಕಾರಣವಾಗಿ ಪಂಡಿತಜಿಯವರ ಆಗಮನವನ್ನು ಪ್ರತಿಬಂಧಿಸಿ ಮೇಲಿನ ನಮೂನೆಯ ಅನುಮಾನಗಳಿಗೆ, ಅವಕಾಶವನ್ನುಂಟುಮಾಡುವದು ಯೋಗ್ಯವಲ್ಲ. ಹಿಂದು, ಸ್ವರಾಜ್ಯ, ಕೇಸರಿ, ಮರಾಠಾ ಇತ್ಯಾದಿ ಪತ್ರಗಳಿಗೆ ಬಹಿಷ್ಕಾರವನ್ನು ಹಾಕಿ ಹೈದರಾಬಾದ ಸಂಸ್ಥಾನವು ತನ್ನ ಸಂಕುಚಿತ ಮತ್ತು ಕ್ಷುದ್ರ ದೃಷ್ಟಿಯ ಅಳಿಕೆಯ ಜಾಹಿರಾತನ್ನು ಈ ಮೊದಲೆ ಹಚ್ಚಿಕೊಂಡಿದೆ; ಈಗ ಪಂಡಿತಜಿಯವರ ಆಗಮನವನ್ನು ತಡೆಯಿಸಿ ಯಂತೂ ಇಂಥ ಸಂಗತಿಗಳಲ್ಲಿ ತನ್ನ ಪ್ರಸಿದ್ಧಿಯನ್ನು ಇನ್ನಷ್ಟು ಮಾಡಿಕೊಂಡಿದೆನ್ನಬಹುದು.

೪. ಮಹಾತ್ಮಾಜಿಯವರು ಸಾಬರಮತೀ ನದಿಯ ತೀರದಲ್ಲಿ ಸತ್ಯಾಗ್ರಹಾಶ್ರಮವನ್ನು ಸ್ಥಾಪಿಸಿದ ಬಳಿಕ, ಅದರ ಅನುಕರಣಾರ್ಥವಾಗಿ ಹಲವು ಕಡೆಗಳಲ್ಲಿ ಕೊಂಚ ಹೆಚ್ಚು ಕಡಿಮೆ ಅದೆ ಮಾದರಿಯ ಬೇರೆ ಬೇರೆ ಆಶ್ರಮಗಳು ತೆರೆಯಲ್ಪಟ್ಟವೆ. ಇಂಥ ಗುರುಕುಲಗಳಲ್ಲಿ ತಮಿಳುನಾಡಿನಲ್ಲಿರುವ ಶರ್ಮದೇವಿಯ ಗುರುಕುಲವು ಒಂದಾಗಿದೆ. ಉತ್ತಮ ನಡತೆಯ ನೀತಿಪೂರ್ಣರಾದ ಗುರುಗಳು ವಿದ್ಯಾರ್ಥಿಗಳನ್ನು ಶ್ರೇಷ್ಠಪದವಿಗೆ ತರುವದು ಇಂಥ ಗುರುಕುಲಗಳ ಮುಖ್ಯ ಉದ್ದೇಶವಾಗಿದೆ. ಮಹಾತ್ಮಾಜಿಯವರ ಮುಖ್ಯ ಧರ್ಮವು ಅಹಿಂಸಾಪ್ರಸಾರದ್ದಾಗಿದೆ. ಇಂಥವರ ಹೆಸರಿನಿಂದ ಪ್ರಾರಂಭವಾಗಿರುವ ಸಂಸ್ಥೆಯಲ್ಲಿ ಜಗಳ, ಗಲಾಟೆ, ಕ್ರೋಧ, ಈರ್ಷೆ ಇತ್ಯಾದಿ ಪ್ರಕಾರಗಳು ಅವತರಿಸುವದು ದೈವದುರ್ವಿಲಸಿತದ ಒಂದು ಉದಾಹರಣವಾಗಿದೆ ಎಂಬುದನ್ನು ಶರ್ಮದೇವಿ ಗುರುಕುಲದ ಇತ್ತಲಾಗಿನ ಚರಿತ್ರೆಯು ಹೇಗೆ ತಿಳಿಸುತ್ತದೆ ಎಂಬುದನ್ನು ಪತ್ರ ವಾಚಕರಿಗೆ ತಿಳಿಸಬೇಕಾದ ಅಗತ್ಯವಿಲ್ಲ. ಗುರುಕುಲದ ಊಟದ ಒಂದು ನೆವವನ್ನು ಹಿಡಿದುಕೊಂಡು ಡಾ. ನಾಯಡುಗಳು ಬ್ರಹ್ಮದ್ವೇಷದ ಪ್ರಸಾರವನ್ನು ಮಾಡಹತ್ತಿದ್ದಾರೆ! ರಾಷ್ಟ್ರೀಯತೆಯ ವ್ಯಾಪಕದೃಷ್ಟಿಯಿಂದ ಇದು ವರೆಗೆ ಅನೇಕ ತರದ ಸ್ವಾರ್ಥತ್ಯಾಗವನ್ನೂ, ಕರ್ತವ್ಯವನ್ನೂ ಮಾಡಿದ ಡಾ. ನಾಯಡುಗಳು ಈ ಸಂದರ್ಭದಲ್ಲಿ ಇಂಥ ಕ್ಷುದ್ರ ನೆವದಿಂದ ಪಂಗಡಗಳನ್ನು ಹುಟ್ಟಿಸುವದು ನಿಜವಾಗಿ ಲಜ್ಜಾಸ್ಪದವು. ಅಥವಾ ಒಬ್ಬ ರುಷ್ಯನನ್ನು ಕೆರಕಿದರೆ ತಾರ್ತರನು ಹೊರಡುತ್ತಾನೆಂದು ಇಂಗ್ಲಿಷಿನಲ್ಲಿ ಒಂದು ಮಾತಿದ್ದಂತೆ ಇಂಥವರನ್ನು ಕೆರಕಿದರೆ ಕೊನೆಗೆ ಜಾತಿ ದ್ವೇಷರೂಪದಿಂದ ಅವರ ನಿಜಸ್ವರೂಪವು ಹೊರಗೆ ಬರುವದು. ಇರಲಿ, ಡಾ. ನಾಯಡುಗಳು ಪ್ರಾಂ. ರಾಷ್ಟ್ರೀಯ ಕಮಿಟಿಯಲ್ಲಿ ಈ ಸಾಮಾಜಿಕ ಕಲಹವನ್ನು ತಂದು ಹಾಕಿದ್ದರಿಂದ ಅವರನ್ನು ಮತ್ತು ಅವರ ಠರಾವನ್ನು ನಿಷೇಧಿಸುವದಕ್ಕಾಗಿ ತಮಿಳು ಪ್ರಾಂತದಲ್ಲಿ ಮೇಲಿಂದ ಮೇಲೆ ಸಭೆಗಳು ಜರಗುತ್ತಿವೆ. ಸಮತಾವಾದದ ಸೋಗನ್ನು ಹಾಕಿಕೊಂಡ ಈ ನಾಯಡು ಪಕ್ಷೀಯರು ಕೆಲವು ಪಂಚಮರೊಡನೆ ಜಗಳವಾಡಿ ಕೆಲವು ಮಟ್ಟಿನ ಅತ್ಯಾಚಾರವನ್ನು ಕೂಡ ಮಾಡಿದರು! ಆಗ ಈ ಸಮತೆಯ ದೇವಸ್ಥಾನಕ್ಕೆ ಇದು ಸುವರ್ಣದ ಕಲಶವನ್ನು ಏರಿಸುವಂತೆಯಲ್ಲವೆ! ಪಂಚಮರ ಈ ಪ್ರಕರಣವು ಕೋರ್ಟಿನಲ್ಲಿ ನಡೆದಿದೆ. ಸಾರಾಂಶ, ಅನತ್ಯಾಚಾರಾಚಾರ್ಯರ ದೊಡ್ಡ ಹೆಸರಿನಿಂದ ಸಂಸ್ಥಾಪಿತವಾದ ಗುರುಕುಲದ ನಿಮಿತ್ತದಿಂದ ತಮಿಳುನಾಡಿನಲ್ಲಿ ಜಾತಿದ್ವೇಷದ ಅತ್ಯಾಚಾರವು ಹಬ್ಬುತ್ತಲಿದೆ.

೫. ಈ ಸಂದರ್ಭದಲ್ಲಿ ಮಿ| ಉಸ್ಮಾನ್ ಸಾಹೇಬರ ಉಲ್ಲೇಖವನ್ನು ಮಾಡದೆ ನಮ್ಮಿಂದಿರಲಾಗದು. ಗುರುಕುಲದ ಸಾಮಾಜಿಕ ಸ್ಪರ್ಶೆಯನ್ನು ರಾಷ್ಟ್ರೀಯ ಸಭೆಯಂಥ ರಾಜಕಾರಣದ ಸಂಸ್ಥೆಯಲ್ಲಿ ತಂದು ಹಾಕಿ ಜಾತಿ—ಜಾತಿ ವೈರವನ್ನು ಬೆಳಸಲು ಯತ್ನಿಸುವ ನಾಯಡುಗಳ ಪ್ರಯತ್ನವನ್ನು ಕುರಿತು ನಿಷೇಧಿಸುವಾಗ ಮಿ| ಉಸ್ಮಾನ ಸಾಹೇಬರು ವ್ಯಕ್ತಗೊಳಿಸಿದ ವಿಚಾರಗಳು ವ್ಯಾಪಕ ದೃಷ್ಟಿಯವಾಗಿದ್ದು ರಾಷ್ಟ್ರೀಯ ಕರ್ತವ್ಯತೆಯ ಪರಿಜ್ಞಾನವು ತಪ್ಪಿ ಹೋಗಿರುವ ಈ ಸಮಯದಲ್ಲಿ ಎಲ್ಲರಿಗೆ ಮಾರ್ಗದರ್ಶಕವಾಗಿವೆ. ಮಿ| ಉಸ್ಮಾನ ಸಾಹೇಬರು ಬರೆಯುತ್ತಾರೆ—"ನಾನು ಈ ಗುರುಕುಲದ ವಿವಾದದಲ್ಲಿ ಸಂಪೂರ್ಣ ಜವಾಬದಾರಿಯಿಂದ ಪ್ರವೇಶ ಮಾಡಿದ್ದೇನೆ. ಮಿ| ಯಾಕೋಬಹಸನ ಸಾಹೇಬರಿಗೆ—ಈ ವಿವಾದದಲ್ಲಿ ಸೇರುವುದು—ಅದು ರಾಷ್ಟ್ರೀಯ ಸಭೆಯ ಹೊರಗೆ ನಡೆಯುವದಾದರೆ—ಇಷ್ಟವಿರಲಿಲ್ಲ. ಆದರೆ ಡಾ. ನಾಯಡುಗಳು ಈ ಪ್ರಶ್ನೆಯನ್ನು ರಾಷ್ಟ್ರೀಯ ಸಭೆಯ ತಲೆಗೆ ಕಟ್ಟಿದರು. ಮತ್ತು ಪ್ರಾಂ ಕಮಿಟೆಯು ಮೊದಲೆ ಠರಾವನ್ನು ಪಾಸುಮಾಡಿದೆ. ನಾನು ರಾಷ್ಟ್ರೀಯ ಸಭೆಯ ಕಡು ಅನುಯಾಯಿಯಾಗಿರುವುದರಿಂದ ಸ್ವರಾಜ್ಯದ ತತ್ವಕ್ಕೆ ಬಾಧಕವಾಗುವ ಈ ಪ್ರಕಾರಗಳನ್ನು ಸುಮ್ಮನೆ ಕೈ ಕಟ್ಟಿಕೊಂಡು ನೋಡುತ್ತ ಕುಳಿತುಕೊಳ್ಳಲಾರೆನು. ನನಗೆ ಸ್ವರಾಜ್ಯವು ಮಹತ್ವದ್ದು, ಜಾತಿಯು ಗೌಣವಾದ್ದು, ನಾನು ಹಿಂದಿಯಾಗಿ ಹುಟ್ಟಿ, ಹಿಂದಿಯಾಗಿ ಬೆಳೆದು ಹಿಂದಿಯಾಗಿಯೆ ಕೊನೆಗಾಣಬೇಕಾದ್ದು. ನನ್ನ ಈ ಪ್ರವೃತ್ತಿಗೆ ನನ್ನ ಮಹಮ್ಮದೀಯ ಬಂಧುಗಳಿಂದ ಹೆಚ್ಚಿನ ಪುಷ್ಟೀಕರಣವು ಸಿಗುತ್ತಿದೆ ಎಂದು ನಾನು ತಿಳಿಯುತ್ತೇನೆ." ಮಿ| ಉಸ್ಮಾನ ಸಾಹೇಬರ ಈ ಆಲೋಚನೆಯು ಶ್ಲಾಘ್ಯವಾದ್ದು ಎಂದು ಯಾರು ಹೇಳಲಿಕ್ಕಿಲ್ಲ? ಅವರು ಇದೇ ದೃಷ್ಟಿಯನ್ನು ಹಿಂದು ಮಹಮ್ಮದೀಯರ ಕಲಹದಲ್ಲಿಯೂ ಉಪಯೋಗಿಸುವದು ಅಗತ್ಯವೆಂದು ಇತರ ತಮ್ಮ ಬಂಧುಗಳಿಗೆ ಉಪದೇಶಿಸುವದು ಹಿತಾವಹವಾಗಿದೆ.

ಮಂಗಳೂರು.

ಮಂಗಳೂರು ಉಪಾಧ್ಯಾಯರ ಸಹಕಾರ ಸಂಘವೊಂದನ್ನು ಸ್ಥಾಪಿಸುವ ಬಗ್ಗೆ ನೇಮಕವಾದ ಉಪಕಮಿಟಿಯು ತಾ. ೧೬—೫—'೨೫ರಲ್ಲು ಸಾಯಂಕಾಲ ೪-೩೦ ಘಂಟೆಗೆ ಗಣಪತಿ ಹೈಸ್ಕೂಲಿನಲ್ಲಿ ಜರಗಿತು. ಕಮಿಟಿಯ ೬ ಮಂದಿ ಸದಸ್ಯರೂ ಹಾಜರಿದ್ದರು. ಸರಕಾರದ ಮಾದರಿ ಉಪನಿಬಂಧನೆಗಳನ್ನು ಓದಿಕೊಂಡು ಅಲ್ಲಲ್ಲಿ ಬೇಕಾದ ಬದಲಾವಣೆಗಳನ್ನು ಮಾಡಿ ಖಾಲಿ ಇರುವ ಸ್ಥಳವನ್ನು ಯೋಗ್ಯವಾದ ಶಬ್ದ, ಸಂಖ್ಯೆಗಳಿಂದ ತುಂಬಿಸಲಾಯಿತು. ಈ ಉಪನಿಬಂಧನೆಗಳನ್ನು ಜೂನು ತಿಂಗಳ ೨ನೇ ವಾರದಲ್ಲಿ ಉಪಾಧ್ಯಾಯರ ಮಹಾ ಸಭೆಯನ್ನು ಕರೆದು ಆ ಸಭೆಯ ಮುಂದಿಡಲು ನಿರ್ಣಯವಾಗಿದೆ.

ಮಂಗಳೂರು ಶಹರ್ ಕೆನರಾ ಹ್ಯಾಸ್ಕೂಲಿನ ಸಭಾಸದನದಲ್ಲಿ ಇದೇ ತಿಂಗಳ ತಾರೀಖು ೧೭ನೇ ಆದಿತ್ಯವಾರ ದಿನ ಶ್ರೀ ವಕೀಲ ಗಂಗೊಳ್ಳಿ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ನೆರೆದ ಸಭೆಯಲ್ಲಿ ಶ್ರೀ| ವಕೀಲ ಯಮ್. ಮಾಧವ ರಾಯರು ನಮ್ಮ ಜಿಲ್ಲೆಯ ಬಾಲವಿಧವೆಯರ ಸಂಕಷ್ಟಗಳ ಕುರಿತು ಭಾಷಣ ಮಾಡಿ ಮಂಗಳೂರಲ್ಲಿ ವಿಧವಾವಿವಾಹ ಸಹಾಯಕ ಸಭೆಯೆಂಬ ಹೆಸರಿನಿಂದ ಒಂದು ಸಂಘ ಏರ್ಪಡಿಸಬೇಕಾಗಿ ಅಪೇಕ್ಷಿಸಿದರು. ಅಂತಹ ಸಂಘವನ್ನು ಸರ್ವಸಮ್ಮತವಾಗಿ ನಿರ್ಮಿಸೋಣಾಯಿತು. ವಿವಿಧ ಜಾತಿಯ ೧೯ ಮಂದಿ ಗ್ರಹಸ್ಥರು ಕೂಡಲೆ ಮೆಂಬರರಾಗಿ ಕೂಡಿದರು. ಶ್ರೀ| ರಾವ್ ಸಾಹೇಬ ಕುದ್ಮುಲ ರಂಗರಾಯರು ಸದರಿ ಸಂಘದ ಅಧ್ಯಕ್ಷರಾಗಿಯೂ, ಶ್ರೀ| ಯಮ್. ಮಾಧವರಾಯರು ಸೆಕ್ರಿಟರಿಯಾಗಿಯೂ ನೇಮಿಸಲ್ಪಟ್ಟರು. ತದನಂತರ, ಮೆಂಬರರು ವಂತಿಗೆ ಕೊಡುವುದು ಅಗತ್ಯವಿಲ್ಲವೆಂತಲೂ, ಯಾರಾದರೂ ತಮ್ಮ ಆತ್ಮಸಂತೋಷದಿಂದ ಕಿಂಚಿತ್ತಾದರೂ ಧನಸಹಾಯ ಕೊಟ್ಟರೆ ಅದನ್ನು ಸೆಕ್ರಿಟರಿಯು ಸ್ವೀಕರಿಸಬೇಕೆಂತಲೂ, ಸದರಿ ಸಂಘವನ್ನು ಲಾಹೋರಿನ ವಿಧವಾವಿವಾಹ ಸಹಾಯಕ ಸಭೆಯ ಶಾಖೆಯಾಗಿ ಮಾಡಿ ಕಾರ್ಯ ನಿರ್ವಹಿಸಬೇಕೆಂತಲೂ, ನಿರ್ಣಯಗಳು ಮಾಡೋಣಾದವು.

ವಿಟ್ಲರಾಜ ಲಕ್ಷ್ಮೀನಾಥ ಸ್ವಾಮಿಜಿ ಅರಸುಗಳು ಆದಿ ದ್ರಾವಿಡ ಮಕ್ಕಳ ವಿದ್ಯಾಭ್ಯಾಸ ಪ್ರೋತ್ಸಾಹಿಸುವರೆ ವರುಷಂಪ್ರತಿ ರೂಪಾಯಿ ೬೦—೦—೦ ವಂತಿಗೆ ಕೊಡುತ್ತೇನೆಂತ ವಾಗ್ದಾನ ಮಾಡಿ ಪ್ರಥಮ ದಾನವಾಗಿ ರೂಪಾಯಿ ೧೦೦-೦-೦ ಮಂಗಳೂರು ಡಿಪ್ರೆಸ್ಡ್ ಕ್ಲಾಸಸ್ ಮಿಶ್ಶನ್ ಯಾನೆ ನಿರಾಶ್ರಿತ ಜನ ಸಹಾಯಕ ಸಂಘದವರಿಗೆ ಕಳುಹಿಸಿದ್ದಾರೆ. ಈ ಮೊಬಲಗನ್ನು ವಿಟ್ಲರಾಜಾ ಲಕ್ಷ್ಮೀನಾಥ ಸ್ವಾಮಿಜಿ ಫಂಡ. ಎಂಬ ಹೆಸರಿನಿಂದ ಒಂದು ಶಾಶ್ವತ ಫಂಡು ನಿರ್ಮಿಸಿ ಇದರ ವರುಷಾವಧಿ ಬಡ್ಡಿ ಆದಿ ದ್ರಾವಿಡ ವಿದ್ಯಾರ್ಥಿಗಳ ಬಗ್ಗೆ ಉಪಯೋಗಿಸತಕ್ಕದೆಂದು ಸದರಿ ಸಂಘದವರು ನಿರ್ಣಯಿಸಿದ್ದಾರೆ.

ಮಂಗಳೂರು ಆರ್ಯಸಮಾಜದ ಐದನೇ ವಾರ್ಷಿಕೋತ್ಸವದ ಕಾರ್ಯಕ್ರಮವು:—ತಾ. ೨೭ನೇ ಮೇ ಬುಧವಾರ ಪ್ರಾತಃಕಾಲ ೭ ಗಂಟೆಗೆ ಹೋಮ, ಭಜನೆ ಮತ್ತು ಪ್ರಾರ್ಥನೆ. ೭-೪೫ಕ್ಕೆ ವೇದೋಪದೇಶ, ೮-೪೫ಕ್ಕೆ ಕಾರ್ಯ ವಿವರಣದ ಸೂಚನೆ. ಸಾಯಂಕಾಲ ೩-೩೦ ಗಂಟೆಗೆ ಋಷಿ ದಯಾನಂದ ಶತಾಬ್ದಿಯ ಉಪನ್ಯಾಸಗಳು: ಶ್ರೀಯುತ ಯು. ಸಿ. ಕೃಷ್ಣಭಟ್ಟರು ಬಿ. ಎ. ಬಿ ಎಲ್. ಇವರ ಅಧ್ಯಕ್ಷತೆಯಲ್ಲಿ—ಉಪನ್ಯಾಸಕರು ಶ್ರೀಯುತ ಮೋಹನಪ್ಪ ತಿಂಗಳಾಯರು. ಮತ್ತು ಧರ್ಮದೇವ ಸಿದ್ಧಾಂತಾಲಂಕಾರರವರು, ೪-೩೦ಕ್ಕೆ ಭಜನೆ, ೪-೪೦ಕ್ಕೆ ಶ್ರೀಯುತ ಎಮ್. ವಿ. ಶಾಸ್ತ್ರಿಗಳು, ೫-೨೦ಕ್ಕೆ ಕೆ. ರಘುರಾಮ ದಂಡಿಲ್ಲಾಯರು ಎಮ್. ಎ. ಬಿ. ಎಲ್. ವಕೀಲ ಕಾಸರಗೋಡು, ೬ ಗಂಟೆಗೆ ಅಧ್ಯಕ್ಷರ ಭಾಷಣ. ತಾ. ೨೮ನೇ ಮೇ ಗುರುವಾರ ಪ್ರಾತಃಕಾಲ ೭ ಗಂಟೆಗೆ ಹೋಮ, ಭಜನೆ ಮತ್ತು ಪ್ರಾರ್ಥನೆ. ೭-೩೦ಕ್ಕೆ ವೇದೋಪದೇಶ, ೮ಕ್ಕೆ ಶ್ರೀಯುತ ಪಿ. ಎನ್. ರಾಮರಾಯರು ಬಿ. ಎ. ಬಿ. ಎಲ್ ವಕೀಲ ಉಡುಪಿ ಇವರ ಭಾಷಣ. ಸಾಯಂಕಾಲ ಗಂಟೆ ೨ಕ್ಕೆ ಸಮಾಜ ಸದಸ್ಯರ ಸಮ್ಮೇಲನ. ೩ಕ್ಕೆ ರಾವ್ ಸಾಹೇಬ ಕೆ. ರಂಗರಾಯರ ಅಧ್ಯಕ್ಷತೆಯಲ್ಲಿ ಸಮಾಜ ಸುಧಾರಣೆ ಸಮ್ಮೇಲನ, ೪-೩೦ಕ್ಕೆ ಫಲಹಾರ, ೫ಕ್ಕೆ ಶ್ರೀಯುತ ಹರೀಂದ್ರನಾಥ ಚಟೋಪಾಧ್ಯಾಯರ ಅಧ್ಯಕ್ಷತೆಯಲ್ಲಿ ರಾಷ್ಟ್ರ ಭಾಷೆ ಸಮ್ಮೇಲನ ೬ಕ್ಕೆ ಶ್ರೀಯುತ ಎಚ್. ಚಟೋಪಧ್ಯಾಯರ ಮತ್ತು ಇತರರ ಸಂಗೀತ, ೬-೪೦ಕ್ಕೆ ಶ್ರೀಯುತ ಧರ್ಮದೇವ ಸಿದ್ಧಾಂತಾಲಂಕಾರರವರ ಸಮಾಪ್ತಿ ಭಾಷಣ, ೭ಕ್ಕೆ ಭಜನೆ ಮತ್ತು ಶಾಂತಿ ವಚನ. ಎಲ್ಲರೂ ತಮ್ಮ ಸ್ನೇಹಿತರು ಮತ್ತು ಕುಟುಂಬ ಸಮೇತ ಬರಬೇಕಾಗಿ ವಿನಂತಿ.

The Calicut Bank, Ltd.,
ದಿ ಕೆಲಿಕಟ್ ಬೇಂಕ್, ಲಿಮಿಟೆಡ್,

ಹೆಡ್ ಆಫೀಸು — ಕಲ್ಲಿಕೋಟೆ.
ಬ್ರಾಂಚುಗಳು:— ಮುಲ್ಲಸ್‌ಚೇರಿ, ತಲಚೇರಿ, ಕೊಚ್ಚಿ ಮತ್ತು ಪಾಲ್ಘಾಟು.
ರಿಜಿಸ್ಟರ್ಡ್ ಮತ್ತು ಅಧಿಕಾರಗೊಳಿಸಲ್ಪಟ್ಟ ಮೂಲಧನ ರೂ. 5,00,000—0—0.
ರೂಪಾಯಿ 10ರ 50,000 ಪಾಲುಗಳು.
(30—8—1924)ರ ವರೆಗೆ ಮೌಲ್ಯ ಮೂಲಧನ ರೂಪಾಯಿ 1,81,850—0—0.
ಒಂದು ವರುಷದ ಕಾಯಂ ಠೇವಣಾತಿಗೆ ಬಡ್ಡಿ ದರ ಸೇಕಡಾ ರೂ. 7—8—0.
ಕಳೆದ 4 ವರುಷಗಳಲ್ಲಿ ಪಾಲುಗಾರರಿಗೆ ಸೇಕಡಾ 12ರಂತೆ ಬಡ್ಡಿ ಹಂಚಿದೆ.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.
ಸಿ. ಕೃಷ್ಣನ್, ಬಿ. ಎ. ಬಿ. ಎಲ್.,
ಮೆನೇಜಿಂಗ್ ಡ್ಯಾರೆಕ್ಟರ್.
ಡ್ಯಾರೆಕ್ಟರರಲ್ಲಿ ಒಬ್ಬರು—
ಎಮ್. ನಾರಾಯಣ. ಕಾಮತ್, ಬಿ. ಎ.,
ಪ್ಲೀಡರ್, ಕುಂದಾಪುರ.

ಈಗ ಕೆಲವು ದಿವಸಗಳಿಂದ ಮಂಗಳೂರು ಬಂದರದಲ್ಲಿ ಟಪ್ಪಾಲ ಕಾಗದಗಳು ಕಾಲಕ್ಕೆ ಸರಿಯಾಗಿ ಬಟ್ವಾಡೆಯಾಗುತ್ತವೆ. ಇದರಿಂದ ವ್ಯಾಪಾರಸ್ಥರಿಗೆ ಬಹಳ ಅನುಕೂಲವಾಗಿಯದೆ. ಮತ್ತು ಪೋಸ್ಟಾಫೀಸಿಗೆ ಸಮ್ಮಂಧ ಪಟ್ಟ ಕಾರ್ಯಗಳಿಗಾಗಿ ಪೋಸ್ಟಾಫೀಸಿಗೆ ಹೋದರೆ ದ್ವಾರ ಕಾಯುವ ಕೆಲಸವು ಕಡಿಮೆಯಾಗಿ ಹೋದ ಕಾರ್ಯವು ತೀವ್ರವಾಗಿಯೇ ನೆರವೇರುತ್ತದೆ. ಇದೆಲ್ಲವು ಈಗಿನ ಹೊಸ ಪೋಸ್ಟು ಮಾಸ್ತರ್ ಎ ಡಿ. ಐರೋನ್‌ರವರ ಚಾರ್ಜಿಗೆ ಬಂದಂದಿನಿಂದಲೇ ನೆರವೇರುವದು ಬಹಳ ಸಂತೋಷಕರವಾಗಿದೆ. ಇವರೇ ಇಲ್ಲಿಯ ಕಾಯಂ ಪೋಸ್ಟು ಮಾಸ್ತರರಾದರೆ ವ್ಯಾಪಾರ ಸಂಘದವರಿಗೂ ಇತರ ಮಹ ಜನಗಳಿಗೂ ಬಹಳ ಉಪಕಾರವಾದೀತೆಂದು ಹೇಳುವರೆ ಅನುಮಾನವಿಲ್ಲ. ಎಂತ ಒಬ್ಬ ಬಾತ್ಮೀದಾರರು ಬರೆದಿರುವರು.

ಶ್ರೀ| ಧರ್ಮಸ್ಥಳ ಮಂಜಯ್ಯ ಹೆಗಡೆ ಯಮ್. ಎಲ್. ಸಿ. ಇವರು ಕಳೆದ ಕೌನ್ಸಿಲು ಉಪಚುನಾವಣೆಯಲ್ಲಿ ಜಯವಾದುದಕ್ಕೆ ಅವರನ್ನು ಅಭಿನಂದಿಸಲಿಕ್ಕಾಗಿ ಇದೇ ಬರುವ ಜೂನ್ ತಾ. ೧ನೇ ಸೋಮವಾರ ಅಪರಾಹ್ನ ಘಂಟೆ ೪-೩೦ಕ್ಕೆ ಕೆನರಾ ಹೈಸ್ಕೂಲಿನ ಭುವನೇಂದ್ರ ಹೋಲಿನಲ್ಲಿ ಸದರಿ ಶಾಲೆಯ ಹಳೇ ವಿದ್ಯಾರ್ಥಿಗಳ ಒಂದು ಸಭೆ ಜರಗುವುದು, ಶಾಲೆಯ ಎಲ್ಲಾ ಹಳೇ ವಿದ್ಯಾರ್ಥಿಗಳಿಗೂ ಆಮಂತ್ರಣವಿದೆ.

ಪತ್ರವ್ಯವಹಾರ.

ಮಂಗಳೂರಿನ ಮೋಟರ್‌ಬಸ್ಸ್ ಪರ್ಯಟಣ.

ಅಯ್ಯಾ, ಬಂಟವಾಳ, ತಾ. ೧೯-೫-'೨೫.

ಇತ್ತಲಾಗೆ ಕೆಲವು ದಿವಸಗಳಿಂದ ಬಂಟವಾಳಕ್ಕೆ ಅಥವಾ ಬಂಟವಾಳ ಮಾರ್ಗವಾಗಿ ಹೋಗುವ ಎಲ್ಲಾ ಬಸ್ಸುಗಳು ರಥಬೀದಿ ಅತ್ತಕಡೆ ಹೋಗಕೂಡದೆಂಬುವ ಒಂದು ವಿಶೇಷ ನಿರ್ಬಂಧವು ಜ್ಯಾರಿಗೆ ಬಂದು ಪರವೂರಿನವರಿಗೆ ವಿಶೇಷವಾದ ಕಾಟವು ಪ್ರಾರಂಭವಾಗಿಯದೆ. ಮಂಗಳೂರು ಬಸವನಗುಡಿ ರಸ್ತೆಯಲ್ಲಿರುವ ಹೋಟೇಲು ಸಮೀಪದಿಂದ ಕೆಲವು ಸಾಮಾನುಗಳ ಸಹಿತ ಬಂಟವಾಳ ಬಸ್ಸು ಹತ್ತಬೇಕೆಂತ ಹೊರಟುಬಂದವನಿಗೆ ಮಂಗಳೂರಿನಿಂದ ಬಂಟವಾಳಕ್ಕೆ ಹೋಗಲಿಕ್ಕಿರುವ ಬಸ್ಸು ಚಾರ್ಜಿನಕ್ಕಿಂತಲೂ ಹೆಚ್ಚಿಗೆ ಖರ್ಚು ಹಂಪನಕಟ್ಟೆ ಬಸ್ಸುಗಳ ಸ್ಟೇಶನುಗಳ ಹತ್ತರ ಬರಲಿಕ್ಕೆ ತಗಲಿತು. ಇಷ್ಟೇ ಅಲ್ಲ, ಜಟ್ಕಾಗಾಡಿಯಿಂದ ಇಳಿಯುವಷ್ಟರಲ್ಲಿ ನಾಲ್ಕಾರು ಜನರು ಸಾಮಾನು ತುಂಬುವವರು ನಮ್ಮ ಸಾಮಾನುಗಳೆಲ್ಲ ಸುತ್ತು ಹಾಕಿ ಅಲ್ಲಿ ನಿಂತಿರುವ ಮೂರು ಯಾ ನಾಲ್ಕು ಬಸ್ಸುಗಳಲ್ಲಿ ಹಾಕಿ ಬಿಟ್ಟು ಹಣಕ್ಕೆ ಪತ್ತಾಯಪಡಿಸಿದರು, ಟಿಕೇಟುಗಳನ್ನು ಪಡದದ್ದೇ ಇಲ್ಲ. ಸಾಮಾನುಗಳು ಎಲ್ಲೆಲ್ಲಿರುವವೆಂಬುದನ್ನು ಹುಡುಕಿ ತೆಗಿಯುವಷ್ಟರಲ್ಲಿ ಬಸ್ಸುಗಳನ್ನು ಬಿಟ್ಟುಬಿಡುವರೋ ಎಂಬ ಗಾಬರಿಯಿಂದ ಬಹಳ ಬೇಸತ್ತು ಹೇಗೂ ಸಾಮಾನುಗಳನ್ನು ಒಂದುಕಡೆಯಲ್ಲಿ ಸಂಗ್ರಹಿಸಿದೆನು. ಇಷ್ಟರಲ್ಲಿ ಸಾಮಾನುಗಳನ್ನು ಅಲ್ಲಲ್ಲಿ ಹಾಕಿ ಬಂದ ಕೂಲಿಯವರ ಗದ್ದಲ, ಇನ್ನೊಂದು ಕಡೆ ಟಿಕೇಟು ಏಜಂಟರುಗಳು ಈ ಕಂಪೆನಿ ಆ ಕಂಪೆನಿಯೆಂತ ಸುತ್ತು ಸುತ್ತು ಬರುತ್ತಿದ್ದ ಸಾಕೋಸಾಕಾಯಿತು. ಸಣ್ಣ ಮಕ್ಕಳು ಹೆಂಗಸರು ಸಾಮಾನು ಇತ್ಯಾದಿಗಳೊಡನೆ ಬಸ್ಸುಗಳಲ್ಲಿ ಬಂಟವಾಳ ಮಾರ್ಗವಾಗಿ ಹೊರಟುವದೆಂದರೆ ಪುನರ್ಜನ್ಮವೇ ಸರಿ. ಯಾರು ಪುಣ್ಯಾತ್ಮರು ಈ ನಿರ್ಬಂಧಗಳನ್ನು ಹಾಕಿದರು, ಈ ಬಗ್ಗೆ ಯಾರ ಉಪಕಾರಸ್ಮರಣೆಯನ್ನು ಮಾಡಬೇಕೆಂಬುದನ್ನು ಬಸ್ಸಿನಲ್ಲಿ ಹೋಗುವಾಗ್ಗೆ ಚೋಫಿಯರನ ಕೂಡೆ ಕೇಳಿದ್ದಲ್ಲಿ ಪಟ್ಟಣದಲ್ಲಿ ಧೂಳಿಯ ಅನಾಹುತವು ಬಸ್ಸುಗಳಿಂದ ಉಂಟಾಗ್ತಿದೆಂದು ಕೆಲವು ವಕೀಲರು ಬರಕೊಂಡದ್ದರಿಂದ ಈ ಎಲ್ಲಾ ತೊಂದರೆಯು ಪ್ರಾಪ್ತವಾಗಿದೆಂದು ತಿಳಿಯಬಂತು. ಶಹಬಾಸ್, ಒಳ್ಳೇ ಉಪಾಯ, ಈ ವಿಧಾನವನ್ನೆ ಇನ್ನು ಕೆಲವು ಸಂಗತಿಗಳಲ್ಲಿ ಜಾರಿಗೆ ತಂದರೆ ಮುನ್ಸಿಪಾಲಿಟಿಗೂ ಸರಕಾರಕ್ಕೂ ಏನೂ ಖರ್ಚು ಇಲ್ಲದೆ ಮಂಗಳೂರಿನ ಆರೋಗ್ಯಪಾಲನೆಯನ್ನು ಬಹಳ ಸೊಗಸಾಗಿ ನೆರವೇರಿಸಬಹುದಿತ್ತು. ಪರವೂರಿನಿಂದ ಬಹಳ ಜನರು ತಮ್ಮ ಮನೆಮಾರು ಬಿಟ್ಟು ಮಂಗಳೂರು ಪಟ್ಟಣವನ್ನು ಸೇರುತ್ತಲಿರುವುದರಿಂದ ಮಂಗಳೂರಿನ ಜನಸಂಖ್ಯೆಯು ಏರುತ್ತ ಹೋಗಿರುವುದು. ಇದಕ್ಕೆ ತಕ್ಕಂತೆ ಪಾಯಖಾನೆಗಳ ಏರ್ಪಾಡೂ ತೋಟಿಗಳ ವ್ಯವಸ್ಥೆಯೂ ಸರಿಯಾಗಿಲ್ಲದೆ ಮುಖ್ಯವಾಗಿ ಮಾರ್ಕೇಟು ಮತ್ತು ಸೆಂಟ್ರಲ್ ವಾರ್ಡುಗಳ ಹಲವು ರಸ್ತೆಗಳಲ್ಲಿ ಮೂಗು ಹಿಡಿಯದೆ ಹೋಗುವುದೇ ದೊಡ್ಡ ಪ್ರಯಾಸದ ಕೆಲಸ. ಈ ದುರ್ಗಂಧವು ಬಹುಶಃ ಇನ್ನೂ ದೊಡ್ಡ ವಕೀಲರ ಮೂಗುಬಾಯಿಗಳಿಗೆ ಸೇರಿಲ್ಲವೆಂತ ಕಾಣುತ್ತದೆ. ವಕೀಲರು ಕೂಡಿ ಈ ದುರ್ಗಂಧದ ವಿಷಯ ಇನ್ನೊಂದು ಅರ್ಜಿ ಬರಕೊಂಡರೆ ಇದರ ನಿವೃತ್ತಿಯನ್ನು ಕೂಡಲೆ ಮಾಡುವ ವಿಧಾನವು ಈ ಬಸ್ಸುಗಳ ಚಲಾವಣೆ ನಿರ್ಬಂಧದ ಹುಕುಮಿನಿಂದ ಉಪಹಸಿಸಲ್ಪಟ್ಟಿರುವದು. ಅಂದರೆ ತಿಂಗಳಿಗೆ ರೂ. ೫೦ಕ್ಕಿಂತ ಕಡಿಮೆ ಆದಾಯವುಳ್ಳವರು ಮಂಗಳೂರು ಮುನ್ಸಿಪಾಲಿಟಿಯಲ್ಲಿರತಕ್ಕವರು ಮಲವಿಸರ್ಜನೆಯನ್ನು ಹದಿನೈದು ದಿವಸಗಳಿಗೊಮ್ಮೆ ಮಾಡಬೇಕು. ತೋಟಿಗಳ ಸಂಖ್ಯೆ ಸಾಕಷ್ಟು ಇಲ್ಲ. ಪಾಯಖಾನೆಗಳೂ ಕಡಿಮೆ ಇವೆ, ಅದ್ದರಿಂದ ತಿಂಗಳಿಗೆ ರೂ. ೫೦ಕ್ಕೆ ಕಡಿಮೆ ಆದಾಯವುಳ್ಳವರ ಮೇಲೆ ಈ ನಿರ್ಬಂಧವನ್ನು ಹಾಕಿದ್ದಾದರೆ ಏನೂ ಖರ್ಚಿಲ್ಲದೆ ಈ ದುರ್ಗಂಧವನ್ನು ನಿಲ್ಲಿಸಿ ವಕೀಲರಿಗೆ ಬೇಕಾಗಿರುವ ಆರೋಗ್ಯಪಾಲನೆಯನ್ನು ಒದಗಿಸಿಕೊಡಬಹುದು.

ನಮ್ಮ ಜಿಲ್ಲೆಯಲ್ಲಿ ಅದ್ದರಿಂದ ಅದರ ಮುಖ್ಯ ಪಟ್ಟಣವಾದ ಮಂಗಳೂರಿನಲ್ಲಿ ಮನಸ್ಸಿಗೆ ಬಂದ ಕ್ರಮಗಳನ್ನು ಅವು ವಿಧೇಯಕವಿರಲಿ ಅಥವಾ ಇಲ್ಲದೆ ಹೋಗಲಿ ಜ್ಯಾರಿಗೆ ತಂದರೆ ಅಂಥಾ ಕ್ರಮಗಳು ಕಾನೂನಿಗೂ ಅಧಿಕಾರಕ್ಕೂ ಮಿಕ್ಕಿದವು ಎಂತ ಆಡಿ ಬಿಟ್ಟರೆ ಮಹಾ ಪಾಪವೇ ಆಗುವದು. ನಮ್ಮಲ್ಲಿ ಕೊಂಗ್ರೆಸ್‌ಪಾರ್ಟಿ, ಸ್ವರಾಜ್ಯಪಾರ್ಟಿ, ನೆಶನಲಿಸ್ಟ್ ಪಾರ್ಟಿಗಳು ಎಲ್ಲಾ ಇವೆ. ಆದರೆ ಅವರ ದೃಷ್ಟಿಯು ಆಕಾಶದ ವರೆಗೆ ಮುಟ್ಟಿ ಸ್ವರ್ಗತುಲ್ಯವಾದ ಸ್ವರಾಜ್ಯವನ್ನು ಇಂಥಾ ದೃಷ್ಟಿ ಮೂಲಕವೇ ಭೂತಳಕ್ಕೆ ಒಯ್ಯುವ ಸಾಧನದಲ್ಲಿ ಅಂಧವಾಗಿ ಹೋಗಿರುವದರಿಂದ ಈ ಚಿಲ್ಲರೆ ದೋಷಗಳ ನಿವೃತ್ತಿಯು ಅರ್ಜಿ ಬರೆಯಲು ಬಲ್ಲ ವಕೀಲರ ಸಾಧನೆಯಲ್ಲಿರುವದು. ಪಟ್ಟಣದಲ್ಲಿ ಧೂಳಿಯ ಅನಾಹುತವು ಹೆಚ್ಚುತ್ತದಾದರೆ ಈ ಅನಾಹುತವನ್ನು ನಿಲ್ಲಿಸುವಂಥಾದ್ದು ರಸ್ತೆಗಳ ಮೇಲಣ ವೈವಾಟುಗಳನ್ನು ನಿರ್ಬಂಧಪಡಿಸಿ ಅಲ್ಲ. ದಿವಸಕ್ಕೆ ಎಷ್ಟು ಸರ್ತಿ ಬೇಕೋ ಅಷ್ಟು ಸರ್ತಿ ವೈವಾಟುಗಳು ವಿಶೇಷವಿರುವ ರಸ್ತೆಗಳಲ್ಲಿ ಮುನ್ಸಿಪಾಲಿಟಿಯವರು ನೀರು ಹಾಕಿಸುವ ಏರ್ಪಾಡನ್ನು ಮಾಡುವದನ್ನು ಬಿಟ್ಟು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಿಂದ ಈ ನಿರ್ಬಂಧದ ಹುಕುಮಿನ ಜ್ಯಾರಿಯನ್ನು ನಡಿಸುವದೆಂದರೆ ಅದು ಏನೆಂತ ಹೇಳಬಹುದು? ಇದು ವ್ಯವಹಾರ ಕ್ರಮವೋ? ಬಸ್ಸುಗಳಿಂದ ಮುನ್ಸಿಪಾಲಿಟಿಯವರು ಧಾರಾಳವಾದ ತೆರಿಗೆಗಳನ್ನು ವಸೂಲು ಮಾಡುವಾಗ ಒಂದೇ ರಸ್ತೆಯಲ್ಲಿ ಬಸ್ಸುಗಳು ಚಲಿಸಬೇಕಲ್ಲದೆ ಬಾಕಿ ಯಾವ ರಸ್ತೆಯಲ್ಲಾದರೂ ಚಲಿಸಕೂಡದೆಂಬ ಶರ್ತಗಳನ್ನು ಹಾಕಿದ್ದಾರೋ? ಈ ವಿಷಯ ಕೂಡ ವಕೀಲರ ಕೂಡೆ ವಿಚಾರಿಸಿ ಕೇಳಿದ್ದಲ್ಲಿ ಈ ನಿರ್ಬಂಧವನ್ನು ಪ್ರಕೃತ ಹಾಕಿದ ಕ್ರಮವು ಕಾನೂನಿಗೆ ವಿರೋಧವೆಂತ ಹೇಳುತ್ತಾರೆ. ಬಡಪಾಪಿಗಳಾದ ಮೋಟರ ಬಸ್ಸುಗಳ ಮಾಲಿಕರಿಗೆ ಅಧಿಕಾರಿಗಳ ಮುಂದೆ ಸ್ವರವೇ ಬಾರದು. ಪ್ರಯಾಣಿಕರು ಇಂಥಾ ನಿರ್ಬಂಧಗಳಿಂದ ನಷ್ಟಕಷ್ಟಗಳಿಗೆ ವಿಶೇಷವಾಗಿ ಗುರಿಯಾಗುತ್ತಾರಾದರೆ ಆ ವಿಷಯ ಯಾರ ಕಡೆ ಅರ್ಜಿ ಮಾಡಲಿ?

"ನೊಂದವ."

ನಿಡಿಗಲ್ಲಿನಲ್ಲಿ ಗಡಿಬಿಡಿ.

ಸ್ವಾಮಿ,

ಇಲ್ಲಿಯ ಸಂಕದ ರಿಪೇರಿ ಕೆಲಸವು ಅಖೈರು ಆಗುವಷ್ಟರೊಳಗೆ ಮಳೆಯು ಬಂದುಬಿಟ್ಟು ವಿಶೇಷ ಗಡಿಬಿಡಿಯು ಉಂಟಾಗಿದೆ. ಒಂದೆರಡು ಮಳೆಗಳು ಬರುವಷ್ಟರಲ್ಲಿ ನದಿಯಲ್ಲಿ ನೀರು ತುಂಬಿ ಪ್ರವಾಹವು ಬೆಳೆದು ಹೋಗಿದೆ. ನದಿಯಲ್ಲಿ ನೀರಿಲ್ಲದಿದ್ದಾಗ ಗಾಡಿಗಳ ಚಲಾವಣೆ ಬಗ್ಗೆ ಮಾಡಿದ ಚಿಕ್ಕ ಹಂಗಾಮಿ ಕಲ್ವರ್ಟು ಪೂರ್ತಿ ಹಾಳಾಗಿಹೋಗಿಯದೆ. ಗಾಡಿಗಳು ಅತ್ತಿತ್ತ ದಾಟಕೂಡದಷ್ಟು ನೀರು ತುಂಬಿಹೋಗಿಯದೆ. ಅತ್ತಲಾಗಿನ ಗಾಡಿಗಳು ಅತ್ತಲಾಗೆ ಇತ್ತಲಾಗಿನ ಗಾಡಿಗಳು ಇತ್ತಲಾಗೆ ಈ ರೀತಿಯಾಗಿ ಗಾಡಿಯವರಿಗೂ ವೈವಾಟಕ್ಕೂ ಬಹಳ ತೊಂದರೆಯುಂಟಾಗಿರುವುದು. ಸಂಕದ ರಿಪೇರಿ ಕೆಲಸವು ಮುಗಿದಿರುವುದಾದರೂ ಇನ್ನೂ ಒಂದೆರಡು ತಿಂಗಳ ವರೆಗೆ ಈ ಸಂಕವನ್ನು ಉಪಯೋಗಿಸಕೂಡದ್ದರಿಂದ ಗಾಡಿಗಳ ವೈವಾಟಕ್ಕೆ ಗತಿಯೇನೋ ತಿಳಿಯದು. ಹಲವು ಗಾಡಿಯವರು ನಿರುಪಾಯರಾಗಿ ಬಹಳ ಕಳವಳದಲ್ಲಿರುವರು. ಎರಡು ತಿಂಗಳುಗಳ ಮುಂಚೆಯೇ ಸಂಕದ ಕೆಲಸವು ಪೂರ್ತಿಯಾಗುತ್ತಿದ್ದರೆ ಈ ತೊಂದರೆಯು ಪ್ರಾಪ್ತಿಸಲಿಕ್ಕಿಲ್ಲದಿತ್ತು. ಸಂಕದ ಸಮೀಪ ಹೀಗೆ. ಇನ್ನು ಮೇಲೆ ಚಾರ್ಮಾಡಿಗಾಗಿ ಘಟ್ಟದ ಮೇಲೆ ಹೋಗುವ ಅಂದರೆ ಗಟ್ಟದ ಮಾರ್ಗವನ್ನು ವರ್ಣಿಸಲು ಸಾಧ್ಯವಿಲ್ಲ. ಮೈಸೂರು ಗಡಿಯನಂತರ ಮೈಸೂರು ಸಂಸ್ಥಾನದ ರಸ್ತೆಯಲ್ಲಿ ನಡಿಯುವುದು ಸಹಾ ಅಸಾಧ್ಯ. ಮೈಸೂರು ಗಡಿಯ ಈಚೆಯ ರಸ್ತೆಯು ಹೊಂಡಗಳಿಂದ ತುಂಬಿಹೋಗಿರುವುದರಿಂದ ಇದರ ಮೇಲೆ ನಡಿಯುವುದು ಅಥವಾ ಗಾಡಿಗಳನ್ನು ತಕ್ಕೊಂಡುಹೋಗುವುದು ತುಂಬಾ ಅಪಾಯಕರ. ಆದರೆ ಈ ಮಾರ್ಗದ ಮೇಲಿಂದ ಹಾರಿಹೋಗಬಹುದು. ಮಾರ್ಗಗಳ ಸ್ಥಿತಿಯನ್ನು ಇನ್ನೂ ಹೀಗೆಯೇ ಇರಗೊಡಿಸಿದರೆ ಗಾಡಿಎತ್ತುಗಳಿಗೂ ಮನುಷ್ಯರಿಗೂ ಬೇಗನೇ ರೆಕ್ಕೆಗಳು ಹುಟ್ಟಲಿಕ್ಕೆ ಉಂಟು. ನಿಡಿಗಲ್ಲಿನಲ್ಲಿ ಈ ರೆಕ್ಕೆಗಳ ಬಗ್ಗೆ ಗಾಡಿಯವರ, ತಪಸ್ಸಿನಿಂದ ಪ್ರಕೃತ ವಿಶೇಷ ಗಡಿಬಿಡಿ ಉಂಟು. ರೆಕ್ಕೆಗಳು ಹುಟ್ಟಿ ಈ ಗಡಿಬಿಡಿಯು ಶಮನವಾದ ಕೂಡಲೆ ಇನ್ನೊಮ್ಮೆ ಬರಕೊಳ್ಳುತ್ತೇನೆ.

ತಾ. 20-5-'25. ನಿಡಿಗಲ್ ನಿವಾಸಿ.

ಅಯ್ಯಾ,

ನಮ್ಮ ಹೊಸಂಗಡಿಯಲ್ಲಿ 'ಮಡ್ಯಾರು ವೆಂಕಟ್ರಾಯ' ಎಂಬವರು ಬಂದು ಕಳೆದ ೨-೩ ತಿಂಗಳುಗಳಿಂದ ಕಾಫಿ ಅಂಗಡಿಯನ್ನು ಮಾಡಿಕೊಂಡು ಇರುತ್ತಿದ್ದರು. ಈಗ ನಾಲ್ಕೈದು ದಿನಗಳ ಕೆಳಗೆ ಸದರಿಯವರು ಕಾಣೆಯಾಗಿರುವ ಕಾರಣ ಸದರಿಯವರ ಅಂಗಡಿಯ ಬೀಗವನ್ನು ತೆಗಿಸಿ ಗ್ರಾಮದ ಪಟೇಲರು ವ ಪೋಲೀಸನವರು ಸಹಾ ಒಳಹೊಕ್ಕು ನೋಡಿದ್ದಲ್ಲಿ ಸದರಿಯವರ ಹತ್ತರ ಇರುತ್ತಿದ್ದ ಒಂದೇ ಒಂದು ಅಂಗಿ ಟೊಪ್ಪಿ ಸಹಾ ಅಂಗಡಿ ಒಳಗೆ ಇರುತ್ತದನ್ನು ನೋಡಿ ಅನುಮಾನಪಟ್ಟು ಅವರನ್ನು ಇಲ್ಲಿ ಆಸುಪಾಸು ಹುಡುಕುವ ಪಟೇಲರು ಜನಕಳುಹಿಸಿರುವರು. ಇವರು ಸಿಕ್ಕದಿದ್ದರೆ ಇಲ್ಲಿಯ ಕೆಲವು ಜನರಿಗೆ ಬಹಳ ತೊಂದರೆಯೇ ಸರಿ. ಅವರು ಕಾಫಿ ಅಂಗಡಿ ಇಡುವರೇ ಕೆಲವರಿಂದ ಪಾತ್ರೆಗಳನ್ನೂ ಕೆಲವರಿಂದ ಸಾಮಾನುಗಳನ್ನೂ ಪಡೆದಿರುವರು. ಸದರಿ ಪಾತ್ರೆ ವಗೈರೆ ಸಾಮಾನನ್ನು ಪಟೇಲರು ಅಮಾನತು ಮಾಡಿರುತ್ತಾರೆ. ಅವರು ಪತ್ತೆಗೆ ಸಿಕ್ಕದಿದ್ದರೆ ಬಡವರ ಸಾಮಾನು ಬಡವರಿಗೆ ಸಿಕ್ಕಲು ಸ್ವಲ್ಪ ತೊಂದರೆಯೇ ಸರಿ.

ಹೊಸಂಗಡಿ, 20-5-'25. ಗ್ರಾಮಸ್ಥ.

ಧರ್ಮಪತಿತೋದ್ಧಾರಕ ಸಭಾ.

ಐವತ್ತು ಜನರ ಶುದ್ಧಿ ಸಂಸ್ಕಾರ

ಇದೇ ತಿಂಗಳ ತಾ. ೧೨ನೇ ಮಂಗಳವಾರ ದಿವಸ ಈಂದುಬೆಟ್ಟು ಗ್ರಾಮದಲ್ಲಿ ಎರಡು ವರ್ಷಗಳ ಹಿಂದೆ ಕ್ರೈಸ್ತರಾದ ೫೦ ಮಂದಿ ಪಂಚಮಬಂಧುಗಳನ್ನು ಧರ್ಮಪತಿತೋದ್ಧಾರಕ ಸಭೆಯು ಕಡೆಯಿಂದ ಇತ್ತ ಕಡೆ ಬಂದಿದ್ದ ಶ್ರೀಯುತ ಧರ್ಮದೇವ ಸಿದ್ಧಾಂತಾಲಂಕಾರರು ಮತ್ತು ಸನಾತನ ದಾಸಾರ್ಯರು ಶುದ್ಧಿಸಂಸ್ಕಾರ ಮಾಡಿ ಹಿಂದೂ ಧರ್ಮದೀಕ್ಷೆಯನ್ನು ಕೊಟ್ಟು ಮಧ್ಯಪಾನ ಬಿಡುವಂತೆಯೂ, ಮಾಂಸಾಹಾರ ವರ್ಜಿಸುವಂತೆಯೂ ಮತ್ತು ಪ್ರತಿ ದಿನ ಬೆಳಗ್ಗೆ ಸ್ನಾನಮಾಡುವಂತೆಯೂ ಬೋಧಿಸಿದರು. ಮರುದಿವಸವೇ ಕೆಲವು ಪಂಚಮ ಬಂಧುಗಳು ಮಾಂಸಾಹಾರ ಬಿಡುವಂತೆ ಘೋರ ಪ್ರತಿಜ್ಞೆ ಮಾಡಿದಲ್ಲದೆ, ಪ್ರತಿ ದಿನ ಸ್ನಾನಮಾಡಲಿಕ್ಕೆ ತೊಡಗಿರುವರು. ಈ ಧರ್ಮಕಾರ್ಯಕ್ಕೆ ಬಹಳ ಸಹಾಯ ಮಾಡಿದ ಬಂಗಾಡಿ ಶಾಲೆಯ ಉಪಾಧ್ಯಾಯರಾದ ಕೃಷ್ಣಯ್ಯನವರಿಗೆ ಮತ್ತು ಈಂದುಬೆಟ್ಟು ಗ್ರಾಮದ ಪಟೇಲರಾದ ನಾಗರಾಜ ಶೆಟ್ರವರಿಗೆ ಸಭೆಯವರು ಅನೇಕಾನೇಕ ಧನ್ಯವಾದಗಳನ್ನು ಅರ್ಪಿಸುತ್ತಾರೆ.

BUS OWNERS' MEETING.

Proceedings of the meeting of the Bus owners of South Kanara, held as per notice dated 4-5-1925, issued by Mr. V. Srinivas Kamath Managing Director of the C. P. C. Co., Ltd Mangalore at the office of the C. P. C. Co., Ltd. Car street Mangalore. Dated 12-5-'25.

1. Notice convening the meeting was read.

2. M. R. Ry E. Vasudevaiya, B. A. B. L. Karkul, South Kanara was unanimously voted to the chair.

3. The 1st item in the agenda was taken up for discussion; and after full discussion the following resolution was unanimously passed.

"This meeting is strongly of opinion that the restrictions placed by the District Magistrate of South Kanara on the plying of busses, on the Municipal roads of Mangalore in his office D. Dis. No. $\frac{1914}{8-5-1925}$, is entirely ultravires and unwarranted under the existing state of the law and subversive of all principles of natural justice, illegal and highly prejudicial to the existence and working of all motor bus companies and the convenience of the travelling public; and requests the Dt. Magistrate to kindly reconsider and cancel the said proceedings and throw open all the public roads for motor bus traffic as before, as the cause for the said restrictions, viz dust nuisance, has to be remedied by the Mangalore Municipality by fulfilling its obligations to meet the growing conditions of the Mangalore Town".

It is further resolved that a written memorial or representation setting forth the reasons for the said reconsideration of the order and the grievances sufferd by the buss owners and the travelling public, be presented immediately to the Dt. Magistrate of South Kanara and a copy of the same be forwarded to the Chairman of the Mangalore Municipality for the necessary action.

4. The 2nd item in the agenda was then taken up for discussion and the following resolution was unanimously passed.

"This meeting is strongly of opinion that the 'Bus Mile tax', imposed by the Dt. Board of South Kanara, on the Bus companies is quite arbitrary being based neither on any principle nor legal basis and is about to stifle the existing enterprise and Public Conveyance by motor vehicles if this taxtaion is not forth with annulled; and that the provisions and instructions contained in the circular Ref. No. $\frac{405D20}{21-3-'25}$, issued by the Dt. Board, have been conceived in a most unsympathetic spirit and framed without any knowledge of the actual working conditions of motor Bus traffic, as they have been framed without any previous experience of, and consultation about ihe actual working of the bus owning Companies in this District; resolves therefore that a memorial be immediately prepared and presented to the Government of Madras and to the District Board South Kanara to reconsider and revoke the said tax and the said circular.

It is further resolved that the Chairman be authorised to send the following telegram requestingthe Government to suspend consideration of the proposals of the District Board in connection with the increase of the Bus Mile tax in this District: and that copies of the above resolution and the memorial be sent to all the leading newspapers for publication without charge and to the M. L. Cs. and the members of the District Board of South Kanara".

To.

The Secretary to the Government,
(*Local Self Govt-Department*),

Motor Bus owners of South kanara in meeting assembled strongly protest against the principle and quantum of the Bus Mile tax and pray for suspension of consideration and sanction by the Government, of the bylaws forwarded by the District Board till the receipt of their memorial.

E. Vasudevaiya,
Chairman of the meeting

FOR SALE.

One new Harley Davidson Sports Model Motor Cycle used only or 250 miles in perfect running order complete with equipments. Price Rs 1000 or near offer.

For further particulars,
Apply to:—
The Mangalore Trading Association,
Car-Street Mangalore.

ಆರೋಗ್ಯಚಂದ್ರಿಕೆ.

ಮದ್ರಾಸ್.

ಸಂಪಾದಕರು: ಡಾಕ್ಟರ್ ಯು. ರಾಮರಾವ್, ಎಲ್. ಎಮ್. ಸಿ. ಎಫ್. ಎಮ್. ಯು. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವುದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ.

ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ.

ಆರೋಗ್ಯಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವುವು.

'ಹೆಲ್ತ್' ಎಂಬ ನಮ್ಮ ಇಂಗ್ಲಿಷ್ ಮಾಸಪತ್ರಿಕೆಯನ್ನೋದಿ ಸಂತೋಷಿಸಿದ ಅನೇಕ ದೊಡ್ಡ ಮನುಷ್ಯರ ಪ್ರೋತ್ಸಾಹದ ಮೇಲೆ ಈ ಕನ್ನಡ ಪ್ರತಿಯನ್ನು ಹೊರಡಿಸಿದೆ.

ಅದರ ಸಂಪುಟ ೨ ಮತ್ತು ೧೦ನೇಯ ನವಂಬರ ೧೯೨೪ ಸಂಚಿಕೆಯಲ್ಲಿ ಅಡಕಿಸಿರುವ ವಿಷಯಗಳು

ಮುಖಚಿತ್ರ:—ಪರ್ವತವಾಸಿನಿಯಾದ ಒಬ್ಬ ರೂಪವತಿ.
ಶ್ವಾಸಕ್ರಮ ಅಥವಾ ಪ್ರಾಣಾಯಾಮ.
ಹುಣಿಸೇಹಣ್ಣಿನ ಆಹಾರಗುಣಗಳು ಮತ್ತು ಔಷಧಗುಣಗಳು.
ಕಾಲುನಡಿಗೆಯೇ ಉತ್ತಮವಾದ ವ್ಯಾಯಾಮವು
ಜೇನಿನಲ್ಲಿರುವ ಗುಣಗಳು.
ಹಲ್ಲುಗಳ ರಚನೆ, ಪ್ರಯೋಜನ, ಕೆಲಸ ಮುಂತಾದವು.
ಮದ್ಯಪಾನಗಳಿಂದ ಆರೋಗ್ಯಕ್ಕೆ ಉಂಟಾಗತಕ್ಕ ಹಾನಿ.
ಅಂಗಸಾಧನೆ ಮತ್ತು ಬುದ್ಧಿವ್ಯವಸಾಯ (ವಿದ್ಯಾಭ್ಯಾಸ)
ಗಾಯಗಳು, ಮತ್ತು ಉಳುಕು ಮುಂತಾದವು, ಅವುಗಳ ಚಿಕಿ
ನವನಾಗರಿಕ ಪ್ರಪಂಚಕ್ಕೆ ಸಹಜವಾದ ಮೂರು ಕೆಡುಕುಗಳು.
ಒಬ್ಬ ಉಪವಾಸಿಯ ಅನುಭವ.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವುವು. ಆರೋಗ್ಯಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ ರೂ. ೧-೮-೦; ಬಿಡುಪತ್ರಿಕೆ ಒಂದಕ್ಕೆ ರೂ. ೦-೨-೦ ಹಿಂದಿನ ಸಂಚಿಕೆಗಳು ಕೂಡ ದೊರಿಯುವವು.

ಚಂದಾದಾರರಾಗುವವರು ವಿ. ಪಿ. ಮೂಲಕವಾಗಿ ತರಿಸಿಕೊಳ್ಳುವದಕ್ಕಿಂತಲೂ ಹಣವನ್ನು ಮುಂಗಡವಾಗಿ ಕಳುಹಿಸುವುದು ಲಾಭಕರ. ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು 'ಆರೋಗ್ಯ ಚಂದ್ರಿಕೆ'ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು.

ಪತ್ರವ್ಯವಹಾರಕ್ಕೆ: 'ಆರೋಗ್ಯ ಚಂದ್ರಿಕೆ'
೩೨೩ ತಂಬುಚೆಟ್ಟಿ ಬೀದಿ, ಮದ್ರಾಸ್.

ತುಳು ಪಾಡ್ದನಗಳು.

ಬೊಬ್ಬರ್ಯ, ಕಲ್ಲುರ್ಟಿ-ಕಲ್ಕುಡ, ದೈಯ್ಯೊಂಗುಳು—ಕೋಡಕಿನಾರ್, ಮುಂಡಿತ್ತಾಯ ಪ್ರತಿ ಒಂದಕ್ಕೆ 2 ಆಣೆ. 11½ ಆಣೆ ಟಪ್ಪಾಲು ಚೀಟು ಕಳಹಿಸಿದರೆ 5 ಪುಸ್ತಕಗಳು ಕೂಡಲೇ ಕಳುಹಿಸಲ್ಪಡುವವು.

ವಿಳಾಸ: ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.	1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
Authorised and fully paid up Capital Rs. 300,000-0-0	ಅಧಿಕಾರಗೊಳಿಸಲ್ಪಟ್ಟು, ಪೂರ್ಣವಾಗಿ ಕೆತ್ತ ಮೂಲಧನವು ರೂ. 300,000—0—0
Reserve and other sinking Funds „ 259,000-0-0	ಕ್ಷೇಮನಿಧಿ ಮತ್ತು ಇತರ ಫಂಡುಗಳು 259,000—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತದೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1925.

K. Venkat Rao,
Secretary

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧-೦-೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಿಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ ಸೀಸೆ ೧ಕ್ಕೆ ಬೆಲೆ ೦-೧೨-೦, ಪೋಸ್ಟೇಜು ಬೇರೆ.



ಲೋಕಾಪಾಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲೂಯೆನ್ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಟವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗರ್ಭಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೨೫ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ೬ಕ್ಕೆ ೧-೪-೦, ೧೨ ಸೀಸೆಗೆ ೨-೬-೦, ೨೫ ಸೀಸೆಗೆ ೪-೧೦-೦, ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲ ಪಂಡಿತರು,

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್ ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಪ್ಪ, ಸೋಡಾ ಫಾಕ್ಟರಿ,
ಮಂಗಳೂರು ಟವನಿಗೆ ಸಮೀಪ.

ವಿದ್ಯಾವಾಚಸ್ಪತಿ
ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ
"ಸಂಕ್ಷೇಪಗೀತೆ"

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ್ಳ, ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದೆ. ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೦, ಟಪ್ಪಾಲು ಖರ್ಚು ಕೂಡಿ ಆಣೆ ೧೧ನ್ನು ಮನಿಯಾರ್ಡರ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ೨ರಕ್ಕಿಂತ ಜಾಸ್ತಿ ಖರ್ಚು ತಗಲುವುದು. ರಖಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.

ಪುಸ್ತಕ ದೊರಿಯುವ ವಿಳಾಸ:—

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು. ಮತ್ತು
ಕೆನರೀಸ್ ಮಿಶ್ಯನ್ ಬುಕ್ ಎಂಡ್ ಟ್ರೆಕ್ಟ್ ಡಿಪೋಜಿಟರಿ.
ಮಂಗಳೂರು

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀಕಾಶೀ, ಗಯಾ, ಪ್ರಯಾಗ, ಹರಿದ್ವಾರ ಬದ್ರಿನಾರಾಯಣ ದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಮುನಿಗಳೊಡನೆ ಭೇಟಿಯಾಗಿ ಅವರ ಕಡೆಯಿಂದ ಅನುಭವ ತೆಗೆದು ಪ್ರತಿಯೊಂದು ಸಿದ್ಧಮಾಡಿಕೊಂಡು ಬರೆದಿರುವರು. ೧ನೇದು ಮಂತ್ರಪ್ರಕರಣದಲ್ಲಿ ಮಂತ್ರ ಪಠಣದಿಂದಲೂ, ಮಂತ್ರಪ್ರಯೋಗದಿಂದಲೂ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವೂ ಇದೆ. ೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳು ಹೊರಡುವಿಕೆ, ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅವನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ. ೩ನೇದು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು. ೪ನೇದು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾ ಸಹ, ಇದರಲ್ಲಿ ಉಂಟು. ಇದು ಪ್ರತಿಯೊಂದು ಕುಟುಂಬದಲ್ಲಿ ಉಂಟಾಗುವ ಯಾವತ್ತೂ ರೋಗಗಳಿಗೂ ಸುಲಭವಾಗಿ ಔಷದ ಮಾಡುವ ಕ್ರಮವನು ಚೆನ್ನಾಗಿ ಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಳಾಸವು ತಿಳಿಸಿರುವರು. ೫ನೇದು ಯಂತ್ರ ಪ್ರಕರಣದಲ್ಲಿ ವಶೀಕರಣ ಗ್ರಹಪೀಡಾ ನಿವಾರಣ ಭೂತಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು, ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ ಇದ್ದ ಬಳಿಕ ಎಲ್ಲಾ ದೇವಾನು ದೇವತೆಗಳು [illegible] ವೈದ್ಯರೂ ಜೋತಿಷ್ಯರು, ಮಾಂತ್ರಿಕರು ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥ ಗ್ರಂಥವು ಯಾರು ಕಣ್ಣಿನಿಂದ ನೋಡಿರಲಿಕ್ಕಿಲ್ಲ. ಪ್ರತಿಯೊಂದು ತರಿಸಿ ನೋಡಬೇಕೆಂದು ಇದರ ಬೆಲೆ ಬಹಳ ಕಡಿಮೆಮಾಡಿ ಇರುವದು. ೨-೮-೦ ಟಪ್ಪಾಲು ಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ ನಾಟಕ ಕಾವ್ಯ, ಕಥೆಗಳು, ಯಕ್ಷಗಾನ, ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ —

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

ಸ್ಪಿರಿಟ್ ಸ್ಟೋವ್.

ಈ ಸ್ಟೋವುಗಳು ಹಿತ್ತಾಳೆಯಿಂದ ತಯಾರಾದವು ಇದರಲ್ಲಿ ಬಹುಬೇಗನೆ ಅಡಿಗೆ, ಕಾಫಿ, ಟೀ ಮುಂತಾದವುಗಳನ್ನು ಮಾಡಬಹುದು. ಬೇಗನೆ ಕೆಡದು, ಕಪ್ಪಾಗದು. ಕಷ್ಟವಿರುವದಿಲ್ಲ. ಪ್ರಯಾಣಿಕರಿಗೂ ಬಹು ಅನುಕೂಲವಾದದ್ದು. ಕೆಲವು ಮಾತ್ರವೇ ಇರುವುದರಿಂದ ಬೇಗನೆ ಬರೆಯಿರಿ.

ಕ್ರಯ 1ಕ್ಕೆ 3-8-0.

ಹೊಸ ನಮೂನೆಯ ಸೆಲ್ಫ್ ಫಿಲ್ಲಿಂಗ್ ಫೌಂಟನ್ ಪೆನ್ನಾಗಳು.

ಈ ಪೆನ್ನಾಗಳು ವಿಲಾಯತಿಯಲ್ಲಿ ತಯಾರಾದವು. ಇವು ಹೊಸ ನಮೂನೆಯವು. ಇವಕ್ಕೆ ಗಾಜಿನ ನಿಬ್ಬು ಇರುವದು, ಈ ನಿಬ್ಬು ಎಂದಿಗೂ ಕೆಡದು, ಭಾರಿ ಕ್ರಯದ ಭಂಗಾರದ ನಿಬ್ಬುಗಳ ಬರೆಯುವದಕ್ಕಿಂತಲೂ ಬಹು ಚೆನ್ನಾಗಿ ಬರೆಯುವದು ಮತ್ತು ತನ್ನಷ್ಟಕ್ಕೆ ತಾನೇ ಇಂಕಿಯನ್ನು ತುಂಬಿಕೊಳ್ಳುವದು. ಒಂದನ್ನು ತರಿಸಿನೋಡಿರಿ. ಬೇಡವಾದರೆ ಹಣ ವಾಪಾಸು ಕೊಡುವೆವು

ಕ್ರಯ 1ಕ್ಕೆ ರೂ. 1-12-0.

The American Watch Co.,
P. B. No. 509, P. T. MADRAS.

ವಿಳಾಸ:- ಅಮೇರಿಕನ್ ವಾಚ್ ಕಂಪೆನಿ.
ಪೋ ಬಾ 509, ಪಿ. ಟಿ. ಮದರಾಸು.

ಪತ್ರವ್ಯವಹಾರ.

ಮಂಗಳೂರಿನ ಮೋಟರ್‌ಬಸ್ಸ್ ಪರ್ಯಟಣೆ.

ಅಯ್ಯಾ, ಬಂಟವಾಳ, ತಾ. ೧೯—೫—'೨೫.

ಇತ್ತಲಾಗೆ ಕೆಲವು ದಿವಸಗಳಿಂದ ಬಂಟವಾಳಕ್ಕೆ ಅಥವಾ ಬಂಟವಾಳ ಮಾರ್ಗವಾಗಿ ಹೋಗುವ ಎಲ್ಲಾ ಬಸ್ಸುಗಳು ರಥಬೀದಿ ಅತ್ತಕಡೆ ಹೋಗಕೂಡದೆಂಬುವ ಒಂದು ವಿಶೇಷ ನಿರ್ಬಂಧವು ಜ್ಯಾರಿಗೆ ಬಂದು ಪರವೂರಿನವರಿಗೆ ವಿಶೇಷವಾದ ಕಾಟವು ಪ್ರಾರಂಭವಾಗಿಯದೆ. ಮಂಗಳೂರು ಬಸವನಗುಡಿ ರಸ್ತೆಯಲ್ಲಿರುವ ಹೊಟೇಲು ಸಮೀಪದಿಂದ ಕೆಲವು ಸಾಮಾನುಗಳ ಸಹಿತ ಬಂಟವಾಳ ಬಸ್ಸು ಹತ್ತಬೇಕೆಂತ ಹೊರಟುಬಂದವನಿಗೆ ಮಂಗಳೂರಿನಿಂದ ಬಂಟವಾಳಕ್ಕೆ ಹೋಗಲಿಕ್ಕಿರುವ ಬಸ್ಸು ಚಾರ್ಜಿನಕ್ಕಿಂತಲೂ ಹೆಚ್ಚಿಗೆ ಖರ್ಚು ಹಂಪನಕಟ್ಟೆ ಬಸ್ಸುಗಳ ಸ್ಟೇಶನುಗಳ ಹತ್ತರ ಬರಲಿಕ್ಕೆ ತಗಲಿತು. ಇಷ್ಟೇ ಅಲ್ಲ, ಜಟ್ಕಾಗಾಡಿಯಿಂದ ಇಳಿಯುವಷ್ಟರಲ್ಲಿ ನಾಲ್ಕಾರು ಜನರು ಸಾಮಾನು ತುಂಬುವವರು ನಮ್ಮ ಸಾಮಾನುಗಳಿಗೆಲ್ಲ ಸುತ್ತು ಹಾಕಿ ಅಲ್ಲಿ ನಿಂತಿರುವ ಮೂರು ಯಾ ನಾಲ್ಕು ಬಸ್ಸುಗಳಲ್ಲಿ ಹಾಕಿ ಬಿಟ್ಟು ಹಣಕ್ಕೆ ವತ್ತಾಯಪಡಿಸಿದರು, ಟಿಕೇಟುಗಳನ್ನು ಪಡದದ್ದೇ ಇಲ್ಲ. ಸಾಮಾನುಗಳು ಎಲ್ಲೆಲ್ಲಿರುವವೆಂಬುದನ್ನು ಹುಡುಕಿ ತೆಗಿಯುವಷ್ಟರಲ್ಲಿ ಬಸ್ಸುಗಳನ್ನು ಬಿಟ್ಟುಬಿಡುವರೋ ಎಂಬ ಗಾಬರಿಯಿಂದ ಬಹಳ ಬೇಸತ್ತು ಹೇಗೂ ಸಾಮಾನುಗಳನ್ನು ಒಂದುಕಡೆಯಲ್ಲಿ ಸಂಗ್ರಹಿಸಿದೆನು. ಇಷ್ಟರಲ್ಲಿ ಸಾಮಾನುಗಳನ್ನು ಅಲ್ಲಲ್ಲಿ ಹಾಕಿ ಬಂದ ಕೂಲಿಯವರ ಗದ್ದಲ, ಇನ್ನೊಂದು ಕಡೆ ಟಿಕೇಟು ಏಜಂಟರುಗಳು ಈ ಕಂಪೆನಿ ಆ ಕಂಪೆನಿಯೆಂತ ಸುತ್ತು ಸುತ್ತು ಬರುತ್ತಿದ್ದ ಸಾಹೋಸಾಹಾಯಿತು. ಸಣ್ಣ ಮಕ್ಕಳು ಹೆಂಗಸರು ಸಾಮಾನು ಇತ್ಯಾದಿಗಳೊಡನೆ ಬಸ್ಸುಗಳಲ್ಲಿ ಬಂಟವಾಳ ಮಾರ್ಗವಾಗಿ ಹೊರಟವರೆಂದರೆ ಪುನರ್ಜನ್ಮವೇ ಸರಿ. ಯಾರ ಪುಣ್ಯಾತ್ಮರು ಈ ನಿರ್ಬಂಧಗಳನ್ನು ಹಾಕಿದರು, ಈ ಬಗ್ಗೆ ಯಾರ ಉಪಕಾರಸ್ಮರಣೆಯನ್ನು ಮಾಡಬೇಕೆಂಬುದನ್ನು ಬಸ್ಸಿನಲ್ಲಿ ಹೋಗುವಾಗ್ಗೆ ಚೋಫಿಯರನ ಕೂಡೆ ಕೇಳಿದ್ದಲ್ಲಿ ಪಟ್ಟಣದಲ್ಲಿ ಧೂಳಿಯ ಅನಾಹುತವು ಬಸ್ಸುಗಳಿಂದ ಉಂಟಾಗಿದೆಂದು ಕೆಲವು ವಕೀಲರು ಬರಕೊಂಡದ್ದರಿಂದ ಈ ಎಲ್ಲಾ ತೊಂದರೆಯು ಪ್ರಾಪ್ತವಾಗಿದೆಂದು ತಿಳಿಯಬಂತು. ಶಹಬಾಸ್, ಒಳ್ಳೇ ಉಪಾಯ, ಈ ವಿಧಾನವನ್ನೆ ಇನ್ನು ಕೆಲವು ಸಂಗತಿಗಳಲ್ಲಿ ಜಾರಿಗೆ ತಂದರೆ ಮುನ್ಸಿಪಾಲಿಟಿಗೂ ಸರಕಾರಕ್ಕೂ ಏನೂ ಖರ್ಚು ಇಲ್ಲದೆ ಮಂಗಳೂರಿನ ಆರೋಗ್ಯಪಾಲನೆಯನ್ನು ಬಹಳ ಸೊಗಸಾಗಿ ನೆರವೇರಿಸಬಹುದಿತ್ತು. ಪರವೂರಿನಿಂದ ಬಹಳ ಜನರು ತಮ್ಮ ಮನೆಮಾರು ಬಿಟ್ಟು ಮಂಗಳೂರು ಪಟ್ಟಣವನ್ನು ಸೇರುತ್ತಲಿರುವುದರಿಂದ ಮಂಗಳೂರಿನ ಜನಸಂಖ್ಯೆಯು ವಿಪರೀತ ಹೋಗಿರುವುದು. ಇದಕ್ಕೆ ತಕ್ಕಂತೆ ಪಾಯಿಖಾನೆಗಳ ಏರ್ಪಾಡೂ ತೋಟಿಗಳ ವ್ಯವಸ್ಥೆಯೂ ಸರಿಯಾಗಿಲ್ಲದೆ ಮುಖ್ಯವಾಗಿ ಮಾರ್ಕೆಟು ಮತ್ತು ಸೆಂಟ್ರಲ್ ವಾರ್ಡುಗಳ ಹಲವು ರಸ್ತೆಗಳಲ್ಲಿ ಮೂಗು ಹಿಡಿಯದೆ ಹೋಗುವದೇ ದುಸ್ಸಾಧ್ಯ ಪ್ರಯಾಸದ ಕೆಲಸ. ಈ ದುರ್ಗಂಧವು ಬಹುಶ ಇನ್ನೂ ದೊಡ್ಡ ವಕೀಲರ ಮೂಗುಗಳಿಗೆ ಸೇರಿಲ್ಲವೆಂತ ಕಾಣುತ್ತದೆ. ವಕೀಲರು ಕೂಡಿ ಈ ದುರ್ಗಂಧದ ವಿಷಯ ಇನ್ನೊಂದು ಅರ್ಜಿ ಬರಕೊಂಡರೆ ಇದರ ನಿವೃತ್ತಿಯನ್ನು ಕೂಡಲೆ ಮಾಡುವ ವಿಧಾನವು ಈ ಬಸ್ಸುಗಳ ಚಲಾವಣೆ ನಿರ್ಬಂಧದ ಹುಕುಮಿನಿಂದ ಉಪದೇಶಿಸಲ್ಪಟ್ಟಿರುವದು. ಅಂದರೆ ತಿಂಗಳಿಗೆ ರೂ. ೫೦ರಕ್ಕಿಂತ ಕಡಿಮೆ ಆದಾಯವುಳ್ಳವರು ಮಂಗಳೂರು ಮುನ್ಸಿಪಾಲಿಟಿಯಲ್ಲಿರತಕ್ಕವರು ಮಲವಿಸರ್ಜನೆಯನ್ನು ಹದಿನೈದು ದಿವಸಗಳಿಗೊಮ್ಮೆ ಮಾಡಬೇಕು. ತೋಟಿಗಳ ಸಂಖ್ಯೆ ಸಾಕಷ್ಟು ಇಲ್ಲ. ಪಾಯಿಖಾನೆಗಳೂ ಕಡಿಮೆ ಇವೆ, ಅದ್ದರಿಂದ ತಿಂಗಳಿಗೆ ರೂ. ೫೦ಕ್ಕೆ ಕಡಿಮೆ ಯಾವ ಆದಾಯವುಳ್ಳವರ ಮೇಲೆ ಈ ನಿರ್ಬಂಧವನ್ನು ಹಾಕಿದ್ದಾದರೆ ಏನೂ ಖರ್ಚಿಲ್ಲದೆ ಈ ದುರ್ಗಂಧವನ್ನು ನಿಲ್ಲಿಸಿ ವಕೀಲರಿಗೆ ಬೇಕಾಗಿರುವ ಆರೋಗ್ಯಪಾಲನೆಯನ್ನು ಒದಗಿಸಿಕೊಡಬಹುದು.

ನಮ್ಮ ಜಿಲ್ಲೆಯಲ್ಲಿ ಅದ್ದರಿಂದ ಅದರ ಮುಖ್ಯ ಪಟ್ಟಣವಾದ ಮಂಗಳೂರಿನಲ್ಲಿ ಮನಸ್ಸಿಗೆ ಬಂದ ಕ್ರಮಗಳನ್ನು ಅವು ವಿಧೇಯಕವಿರಲಿ ಅಥವಾ ಇಲ್ಲದೆ ಹೋಗಲಿ ಜ್ಯಾರಿಗೆ ತಂದರೆ ಅಂಥಾ ಕ್ರಮಗಳು ಕಾನೂನಿಗೂ ಅಧಿಕಾರಕ್ಕೂ ವಿರುದ್ಧವು ಎಂತ ಆಡಿ ಬಿಟ್ಟರೆ ಮಹಾ ಪಾಪವೇ ಆಗುವದು. ನಮ್ಮಲ್ಲಿ ಕೊಂಗ್ರೆಸ್‌ಪಾರ್ಟಿ, ಸ್ವರಾಜ್ಯಪಾರ್ಟಿ, ನೆಶನಲಿಸ್ಟ್ ಪಾರ್ಟಿಗಳು ಎಲ್ಲಾ ಇವೆ. ಅದರೆ ಅವರ ದೃಷ್ಟಿಯು ಆಕಾಶದ ವರೆಗೆ ಮುಟ್ಟಿ ಸ್ವರ್ಗತುಲ್ಯವಾದ ಸ್ವರಾಜ್ಯವನ್ನು ಇಂಥಾ ದೃಷ್ಟಿ ಮೂಲಕವೇ ಭೂತಳಕ್ಕೆ ಎಳೆಯುವ ಸಾಧನದಲ್ಲಿ ಅಂಧವಾಗಿ ಹೋಗಿರುವದರಿಂದ ಈ ಚಿಲ್ಲರೆ ದೋಷಗಳ ನಿವೃತ್ತಿಯು ಅರ್ಜಿ ಬರೆಯಲು ಬಲ್ಲ ವಕೀಲರ ಸಾಧನೆಯಲ್ಲಿರುವದು. ಪಟ್ಟಣದಲ್ಲಿ ಧೂಳಿಯ ಅನಾಹುತವು ಹೆಚ್ಚಾಗಿದ್ದಾದರೆ ಈ ಅನಾಹುತವನ್ನು ನಿಲ್ಲಿಸುವಂಥಾದ್ದು ರಸ್ತೆಗಳ ಮೇಲಣ ವ್ಯಾಪಾರಗಳನ್ನು ನಿರ್ಬಂಧಪಡಿಸಿ ಅಲ್ಲ. ದಿವಸಕ್ಕೆ ಎಷ್ಟು ಸರ್ತಿ ಬೇಕೋ ಅಷ್ಟು ಸರ್ತಿ ವ್ಯಾಪಾರಗಳು ವಿಶೇಷವಿರುವ ರಸ್ತೆಗಳಲ್ಲಿ ಮುನ್ಸಿಪಾಲಿಟಿಯವರು ನೀರು ಹಾಕಿಸುವ ಏರ್ಪಾಡನ್ನು ಮಾಡುವದನ್ನು ಬಿಟ್ಟು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಿಂದ ಈ ನಿರ್ಬಂಧದ ಹುಕುಮಿನ ಜ್ಯಾರಿಯನ್ನು ನಡಿಸುವದೆಂದರೆ ಅದು ಏನೆಂತ ಹೇಳಬಹುದು? ಇದು ನ್ಯಾಯವಾದ ಕ್ರಮವೋ? ಬಸ್ಸುಗಳಿಂದ ಮುನ್ಸಿಪಾಲಿಟಿಯವರು ಧಾರಾಳವಾದ ತೆರಿಗೆಗಳನ್ನು ವಸೂಲು ಮಾಡುವಾಗ ಒಂದೇ ರಸ್ತೆಯಲ್ಲಿ ಬಸ್ಸುಗಳು ಚಲಿಸಬೇಕಲ್ಲದೆ ಬಾಕಿ ಯಾವ ರಸ್ತೆಯಲ್ಲಾದರೂ ಚಲಿಸಕೂಡದೆಂಬ ಶರ್ತಗಳನ್ನು ಹಾಕಿದ್ದಾರೋ? ಈ ವಿಷಯ ಕೂಡ ವಕೀಲರ ಕೂಡೆ ವಿಚಾರಿಸಿ ಕೇಳಿದ್ದಲ್ಲಿ ಈ ನಿರ್ಬಂಧವನ್ನು ಪ್ರಕೃತ ಹಾಕಿದ ಕ್ರಮವು ಕಾನೂನಿಗೆ ವಿರೋಧವೆಂತ ಹೇಳುತ್ತಾರೆ. ಬಡಪಾಪಿಗಳಾದ ಮೋಟರ ಬಸ್ಸುಗಳ ಮಾಲಿಕರಿಗೆ ಅಧಿಕಾರಿಗಳ ಮುಂದೆ ಸ್ವರವೇ ಬಾರದು. ಪ್ರಯಾಣಿಕರು ಇಂಥಾ ನಿರ್ಬಂಧಗಳಿಂದ ನಷ್ಟಕಷ್ಟಗಳಿಗೆ ವಿಶೇಷವಾಗಿ ಗುರಿಯಾಗುತ್ತಾರಾದರೆ ಆ ವಿಷಯ ಯಾರ ಕಡೆ ಅರ್ಜಿ ಮಾಡಲಿ?

"ನೊಂದವ."

ನಿಡಿಗಲ್ಲಿನಲ್ಲಿ ಗಡಿಬಿಡಿ.

ಸ್ವಾಮಿ,

ಇಲ್ಲಿಯ ಸಂಕದ ರಿಪೇರಿ ಕೆಲಸವು ಆಗ್ಯೆರು ಆಗುವಷ್ಟರೊಳಗೆ ಮಳೆಯು ಬಂದುಬಿಟ್ಟು ವಿಶೇಷ ಗಡಿಬಿಡಿಯು ಉಂಟಾಗಿದೆ. ಒಂದೆರಡು ಮಳೆಗಳು ಬರುವಷ್ಟರಲ್ಲಿ ನದಿಯಲ್ಲಿ ನೀರು ತುಂಬಿ ಪ್ರವಾಹವು ಬೆಳೆದು ಹೋಗಿದೆ. ನದಿಯಲ್ಲಿ ನೀರಿಲ್ಲದಿದ್ದಾಗ ಗಾಡಿಗಳ ಚಲಾವಣೆ ಬಗ್ಗೆ ಮಾಡಿದ ಚಿಕ್ಕ ಹಂಗಾಮಿ ಕಲ್ವರ್ಟು ಪೂರ್ಣ ಹಾಳಾಗಿಹೋಗಿಯದೆ. ಗಾಡಿಗಳು ಅತ್ತಿತ್ತ ದಾಟಕೂಡದಷ್ಟು ನೀರು ತುಂಬಿಹೋಗಿಯದೆ. ಅತ್ತಲಾಗಿನ ಗಾಡಿಗಳು ಅತ್ತಲಾಗೆ ಇತ್ತಲಾಗಿನ ಗಾಡಿಗಳು ಇತ್ತಲಾಗೆ ಈ ರೀತಿಯಾಗಿ ಗಾಡಿಯವರಿಗೂ ವ್ಯಾಪಾರಕ್ಕೂ ಬಹಳ ತೊಂದರೆಯುಂಟಾಗಿರುವುದು. ಸಂಕದ ರಿಪೇರಿ ಕೆಲಸವು ಮುಗಿದಿರುವುದಾದರೂ ಇನ್ನೂ ಒಂದೆರಡು ತಿಂಗಳ ವರೆಗೆ ಈ ಸಂಕವನ್ನು ಉಪಯೋಗಿಸಕೂಡದ್ದರಿಂದ ಗಾಡಿಗಳ ವ್ಯಾಪಾರಕ್ಕೆ ಗತಿಯೇನೋ ತಿಳಿಯದು. ಹಲವು ಗಾಡಿಯವರು ನಿರುಪಾಯರಾಗಿ ಬಹಳ ಕಳವಳದಲ್ಲಿರುವರು. ಎರಡು ತಿಂಗಳುಗಳ ಮುಂಚೆಯೇ ಸಂಕದ ಕೆಲಸವು ಪೂರ್ಣವಾಗುತ್ತಿದ್ದರೆ ಈ ತೊಂದರೆಯು ಪ್ರಾಪ್ತಿಸಲಿಕ್ಕಿಲ್ಲವಿತ್ತು. ಸಂಕದ ಸಮೀಪ ಹೀಗೆ. ಇನ್ನು ಮೇಲೆ ಚಾರ್ಮಾಡಿಗಾಗಿ ಘಟ್ಟದ ಮೇಲೆ ಹೋಗುವ ಅಂದರೆ ಘಟ್ಟದ ಮಾರ್ಗವನ್ನು ವರ್ಣಿಸಲು ಸಾಧ್ಯವಿಲ್ಲ. ಮೈಸೂರು ಗಡಿಯನಂತರ ಮೈಸೂರು ಸಂಸ್ಥಾನದ ರಸ್ತೆಯಲ್ಲಿ ನಡಿಯುವುದು ಸಹಾ ಅಸಾಧ್ಯ. ಮೈಸೂರು ಗಡಿಯ ಈಚೆಯ ರಸ್ತೆಯು ಹೊಂಡಗಳಿಂದ ತುಂಬಿಹೋಗಿರುವುದರಿಂದ ಇದರ ಮೇಲೆ ನಡಿಯುವುದು ಅಥವಾ ಗಾಡಿಗಳನ್ನು ತಕ್ಕೊಂಡುಹೋಗುವುದು ತುಂಬಾ ಅಪಾಯಕರ. ಅದರೆ ಈ ಮಾರ್ಗದ ಮೇಲಿಂದ ಜಾರಿಹೋಗಬಹುದು. ಮಾರ್ಗಗಳ ಸ್ಥಿತಿಯನ್ನು ಇನ್ನೂ ಹೀಗೆಯೇ ಇರಗೊಡಿಸಿದರೆ ಗಾಡಿಎತ್ತುಗಳಿಗೂ ಮನುಷ್ಯರಿಗೂ ಬೇಗನೇ ರೆಕ್ಕೆಗಳು ಹುಟ್ಟಲಿಕ್ಕೆ ಉಂಟು. ನಿಡಿಗಲ್ಲಿನಲ್ಲಿ ಈ ರೆಕ್ಕೆಗಳ ಬಗ್ಗೆ ಗಾಡಿಯವರ, ತಪಸ್ಸಿನಿಂದ ಪ್ರಕೃತ ವಿಶೇಷ ಗಡಿಬಿಡಿ ಉಂಟು. ರೆಕ್ಕೆಗಳು ಹುಟ್ಟಿ ಈ ಗಡಿಬಿಡಿಯು ಶಮನವಾದ ಕೂಡಲೆ ಇನ್ನೊಮ್ಮೆ ಬರಕೊಳ್ಳುತ್ತೆನೆ.

ತಾ. 20—5—'25. ನಿಡಿಗಲ್ ನಿವಾಸಿ.

ಅಯ್ಯಾ,

ನಮ್ಮ ಹೊಸಂಗಡಿಯಲ್ಲಿ 'ಮಡ್ಯಾರು ವೆಂಕಪ್ಪಯ' ಎಂಬವರು ಬಂದು ಕಳೆದ ೨—೩ ತಿಂಗಳುಗಳಿಂದ ಕಾಫಿ ಅಂಗಡಿಯನ್ನು ಮಾಡಿಕೊಂಡು ಇರುತ್ತಿದ್ದರು. ಈಗ ನಾಲ್ಕೈದು ದಿನಗಳ ಕೆಳಗೆ ಸದರಿಯವರು ಕಾಣೆಯಾಗಿರುವ ಕಾರಣ ಸದರಿಯವರ ಅಂಗಡಿಯ ಬೀಗವನ್ನು ತೆಗಿಸಿ ಗ್ರಾಮದ ಪಟೇಲರು, ವ ಪೋಲೀಸಿನವರು ಸಹಾ ಪರಿಶೋಧಿಸಿದ್ದಲ್ಲಿ ಸದರಿಯವರ ಹತ್ತರ ಇರುತ್ತಿದ್ದ ಒಂದೇ ಒಂದು ಅಂಗಿ ಟೊಪ್ಪಿ ಸಹಾ ಅಂಗಡಿ ಒಳಗಡೆ ಇರುತ್ತಿದನ್ನು ನೋಡಿ ಅನುಮಾನಪಟ್ಟು ಅವರನ್ನು ಇಲ್ಲಿ ಆಸುಪಾಸು ಹುಡುಕುವ ಪಟೇಲರು ಜನಕಳುಹಿಸಿರುವರು. ಇವರು ಸಿಕ್ಕದಿದ್ದರೆ ಇಲ್ಲಿಯ ಕೆಲವು ಜನರಿಗೆ ಬಹಳ ತೊಂದರೆಯೇ ಸರಿ. ಅವರು ಕಾಫಿ ಅಂಗಡಿ ಇಡುವರೇ ಕೆಲವರಿಂದ ಪಾತ್ರೆಗಳನ್ನೂ ಕೆಲವರಿಂದ ಸಾಮಾನುಗಳನ್ನೂ ಪಡೆದಿರುವರು. ಸದರಿ ಪಾತ್ರೆ ವಗೈರೆ ಸಾಮಾನನ್ನು ಪಟೇಲರು ಅಮಾನತು ಮಾಡಿರುತ್ತಾರೆ. ಅವರು ಪತ್ತೆಗೆ ಸಿಕ್ಕದಿದ್ದರೆ ಬಡವರ ಸಾಮಾನು ಬಡವರಿಗೆ ಸಿಕ್ಕಲು ಸ್ವಲ್ಪ ತೊಂದರೆಯೇ ಸರಿ.

ಹೊಸಂಗಡಿ, 20-5-'25. ಗ್ರಾಮಸ್ಥ.

ಧರ್ಮಪತಿತೋದ್ಧಾರಕ ಸಭಾ.

ಐವತ್ತು ಜನರ ಶುದ್ಧಿ ಸಂಸ್ಕಾರ

ಇದೇ ತಿಂಗಳ ತಾ. ೧೨ನೇ ಮಂಗಳವಾರ ದಿವಸ ಈಂದುಬೆಟ್ಟು ಗ್ರಾಮದಲ್ಲಿ ಎರಡು ವರ್ಷಗಳ ಹಿಂದೆ ಕ್ರೈಸ್ತರಾದ ೫೦ ಮಂದಿ ಪಂಚಮ ಬಂಧುಗಳನ್ನು ಧರ್ಮಪತಿತೋದ್ಧಾರಕ ಸಭೆಯ ಕಡೆಯಿಂದ ಇತ್ತ ಕಡೆ ಬಂದಿದ್ದ ಶ್ರೀಯುತ ಧರ್ಮದೇವ ಸಿದ್ಧಾಂತಾಲಂಕಾರರು ಮತ್ತು ಸನಾತನ ದಾಸಾರ್ಯರು ಶುದ್ಧಿಸಂಸ್ಕಾರ ಮಾಡಿ ಹಿಂದೂ ಧರ್ಮದೀಕ್ಷೆಯನ್ನು ಕೊಟ್ಟು ಮದ್ಯಪಾನ ಬಿಡುವಂತೆಯೂ, ಮಾಂಸಾಹಾರ ವರ್ಜಿಸುವಂತೆಯೂ ಮತ್ತು ಪ್ರತಿ ದಿನ ಬೆಳಿಗ್ಗೆ ಸ್ನಾನಮಾಡುವಂತೆಯೂ ಬೋಧಿಸಿದರು. ಮರುದಿವಸವೇ ಕೆಲವು ಪಂಚಮ ಬಂಧುಗಳು ಮಾಂಸಾಹಾರ ಬಿಡುವಂತೆ ಘೋರ ಪ್ರತಿಜ್ಞೆ ಮಾಡಿದಲ್ಲದೆ, ಪ್ರತಿ ದಿನ ಸ್ನಾನಮಾಡಲಿಕ್ಕೆ ತೊಡಗಿರುವರು. ಈ ಧರ್ಮಕಾರ್ಯಕ್ಕೆ ಬಹಳ ಸಹಾಯ ಮಾಡಿದ ಬಂಗಾಡಿ ಶಾಲೆಯ ಉಪಾಧ್ಯಾಯರಾದ ಕೃಷ್ಣಯ್ಯನವರಿಗೆ ಮತ್ತು ಈಂದುಬೆಟ್ಟು ಗ್ರಾಮದ ಪಟೇಲರಾದ ನಾಗರಾಜ ಶೆಟ್ಟರವರಿಗೆ ಸಭೆಯವರು ಅನೇಕಾನೇಕ ಧನ್ಯವಾದಗಳನ್ನು ಅರ್ಪಿಸುತ್ತಾರೆ.

BUS OWNERS' MEETING.

Proceedings of the meeting of the Bus owners of South Kanara, held as per notice dated 4—5—1925, issued by Mr. V. Srinivas Kamath Managing Director of the C P. C Co., Ltd Mangalore at the office of the C P. C. Co., Ltd. Car street Mangalore. Dated 12-5-'25.

1. Notice convening the meeting was read.

2. M. R. Ry E. Vasudevaiya, B. A. B. L. Karkul, South Kanara was unanimously voted to the chair.

3. The 1st item in the agenda was taken up for discussion; and after full discussion the following resolution was unanimously passed.

"This meeting is strongly of opinion that the restrictions placed by the District Magistrate of South Kanara on the plying of busses, on the Municipal roads of Mangalore in his office D. Dis. No. $\frac{1914}{8-3-1925}$, is entirely ultra-vires and unwarranted under the existing state of the law and subversive of all principles of natural justice, illegal and highly prejudicial to the existence and working of all motor bus companies and the convenience of the travelling public; and requests the Dt. Magistrate to kindly reconsider and cancel the said proceedings and throw open all the public roads for motor bus traffic as before, as the cause for the said restrictions, viz dust nuisance, has to be remedied by the Mangalore Municipality by fulfilling its obligations to meet the growing conditions of the Mangalore Town".

It is further resolved that a written memorial or representation setting forth the reasons for the said reconsideration of the order and the grievances sufferd by the buss owners and the travelling public, be presented immediately to the Dt. Magistrate of South Kanara and a copy of the same be forwarded to the Chairman of the Mangalore Municipality for the necessary action.

4. The 2nd item in the agenda was then taken up for discussion and the following resolution was unanimously passed.

"This meeting is strongly of opinion that the 'Bus Mile tax', imposed by the Dt. Board of South Kanara, on the Bus companies is quite arbitrary being based neither on any principle nor legal basis and is about to stifle the existing enterprise and Public Conveyance by motor vehicles if this taxtaion is not forth with annulled; and that the provisions and instructions contained in the circular Ref. No. $\frac{495D20}{2-4-25}$, issued by the Dt. Board, have been conceived in a most unsympathetic spirit and framed without any knowledge of the actual working conditions of motor Bus traffic, as they have been framed without any previous experience of, and consultation about ihe actual working of the bus owning Companies in this District; resolves therefore that a memorial be immediately prepared and presented to the Government of Madras and to the District Board South Kanara to reconsider and revoke the said tax and the said circular.

It is further resolved that the Chairman be authorised to send the following telegram requestingthe Government to suspend consideration of the proposals of the District Board in connection with the increase of the Bus Mile tax in this District: and that copies of the above resolution and the memorial be sent to all the leading newspapers for publication without charge and to the M. L. Cs. and the members of the District Board of South Kanara".

To.

The Secretary to the Government,
(*Local Self Govt-Department*),

Motor Bus owners of South kanara in meeting assembled strongly protest against the principle and quantum of the Bus Mile tax and pray for suspension of consideration and sanction by the Government, of the bylaws forwarded by the District Board till the receipt of their memorial.

E. Vasudevaiya,
Chairman of the meeting

FOR SALE.

One new **Harley Davidson sports Model** Motor Cycle used only or 250 miles in perfect running order complete with equipments. Price Rs 1000 or near offer.

For further particulars,
Apply to:—
The Mangalore Trading Association,
Car-Street Mangalore.

ಆರೋಗ್ಯ ಚಂದ್ರಿಕೆ.

ಮದ್ರಾಸ್.

ಸಂಪಾದಕರು: ಡಾಕ್ಟರ್ ಯು. ರಾಮರಾವ್, ಎಲ್. ಎಮ್. ಸಿ. ಎಫ್. ಎಮ್. ಯು. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಚಿಕಿತ್ಸೆಯ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವುದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ.

ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ.

ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವುವು.

'ಹೆಲ್ತ್' ಎಂಬ ನಮ್ಮ ಇಂಗ್ಲಿಷ್ ಮಾಸಪತ್ರಿಕೆಯನ್ನೋದಿ ಸಂತೋಷಿಸಿದ, ಅನೇಕ ದೊಡ್ಡ ಮನುಷ್ಯರ ಪ್ರೋತ್ಸಾಹದ ಮೇಲೆ ಈ ಕನ್ನಡ ಪ್ರತಿಯನ್ನು ಹೊರಡಿಸಿದೆ.

ಅದರ ಸಂಪುಟ ೨ ಮತ್ತು ೧೧ನೇಯ ನವಂಬರ ೧೯೨೪ ಸಂಚಿಕೆಯಲ್ಲಿ ಅಡಗಿರುವ ವಿಷಯಗಳು

ಮುಖಚಿತ್ರ:—ಪರ್ವತವಾಸಿಯಾದ ಒಬ್ಬ ರೂಪವತಿ.
ತ್ಯಾಗಕ್ರಮ ಅಥವಾ ಪ್ರಾಣಾಯಾಮ.
ಹುಣಿಸೇಹಣ್ಣಿನ ಆಹಾರಗುಣಗಳು ಮತ್ತು ಔಷಧಗುಣಗಳು.
ಕಾಲುನಡೆಯೇ ಉತ್ತಮವಾದ ವ್ಯಾಯಾಮವು
ಜೇನಿನಲ್ಲಿರುವ ಗುಣಗಳು.
ಹಲ್ಲುಗಳ ರಚನೆ, ಪ್ರಯೋಜನ, ಕೆಲಸ ಮುಂತಾದವು.
ಮದಪ್ರಾಪಕಗಳಿಂದ ಆರೋಗ್ಯಕ್ಕೆ ಉಂಟಾಗತಕ್ಕ ಹಾನಿ.
ಅಂಗಸಾಧನೆ ಮತ್ತು ಬುದ್ಧಿವ್ಯವಸಾಯ (ವಿದ್ಯಾಭ್ಯಾಸ)
ಗಾಯಗಳು, ಮತ್ತು ಉಳುಕು ಮುಂತಾದವು, ಅವುಗಳ ಚಿಕಿತ್ಸೆ!
ನವನಾಗರಿಕ ಪ್ರಪಂಚಕ್ಕೆ ಸಹಜವಾದ ಮೂರು ಕೆಡುಕುಗಳು.
ಒಬ್ಬ ಉಪವಾಸಿಯ ಅನುಭವ.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವುವು. ಆರೋಗ್ಯಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ ರೂ. ೧—೮—೦; ಬಿಡುಪತ್ರಿಕೆ ಒಂದಕ್ಕೆ ರೂ. ೦—೨—೦ ಹಿಂದಿನ ಸಂಚಿಕೆಗಳು ಕೂಡ ದೊರೆಯುವವು.

ಚಂದಾದಾರರಾಗುವವರು ವಿ. ಪಿ. ಮೂಲಕವಾಗಿ ತರಿಸಿಕೊಳ್ಳುವದಕ್ಕಿಂತಲೂ ಹಣವನ್ನು ಮುಂಗಡವಾಗಿ ಕಳುಹಿಸುವುದು ಲಾಭಕರ. ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು 'ಆರೋಗ್ಯ ಚಂದ್ರಿಕೆ'ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು.

ಪತ್ರವ್ಯವಹಾರಕ್ಕೆ: 'ಆರೋಗ್ಯ ಚಂದ್ರಿಕೆ'
೩೨೩ ತಂಬುಚೆಟ್ಟಿ ಬೀದಿ, ಮದ್ರಾಸ್.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ತೆತ್ತ ಮೂಲಧನವು ರೂ. 300,000—0—0
Reserve and other sinking Funds „ 259,000—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು 259,000—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲ್ಪಡುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1925.

K. Venkat Rao,
Secretary

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ದೇಹಾಂತಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಿಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕೋಪಾಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲೂಯೆನ್ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೩೫ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ಒಕ್ಕೆ ೧—೪—೦, ೧೨ ಸೀಸೆಗೆ ೩—೭—೦, ೨೫ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲ ಪಂಡಿತರು,

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಪ್ಪ, ಸೋಡಾ ಫಾಕ್ಟರಿ,
ಮಂಗಳೂರು ಟವನಿಗೆ ಮಾತ್ರ.

ತುಳು ಪಾಡ್ದನಗಳು.

ಬೊಬ್ಬರ್ಯ, ಕಲ್ಲುರ್ಟಿ—ಕಲ್ಕುಡ, ದೈಯ್ಯೊಂಗುಳು—ಕೋಡಕೆನಾರ್, ಮುಂಡತ್ತಾಯ ಪ್ರತಿ ಒಂದಕ್ಕೆ ೩ ಆಣೆ. 11½ ಆಣೆ ಟಪ್ಪಾಲು ಚೀಟು ಕಳಹಿಸಿದರೆ 5 ಪುಸ್ತಕಗಳು ಕೂಡಲೇ ಕಳುಹಿಸಲ್ಪಡುವವು.

ವಿಳಾಸ: ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ವಿದ್ಯಾವಾಚಸ್ಪತಿ
ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ
"ಸಂಕ್ಷೇಪಗೀತೆ"

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ್ಳ, ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದೆ ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೦, ಟಪ್ಪಾಲು ಖರ್ಚು ಕೂಡಿ ಆಣೆ ೧೧ನ್ನು ಮನಿಯಾರ್ಡರ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ೨ರಕ್ಕಿಂತ ಜಾಸ್ತಿ ಖರ್ಚು ತಗಲುವುದು. ರಖಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು

ಪುಸ್ತಕ ದೊರೆಯುವ ವಿಳಾಸ:—

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು. ಮತ್ತು ಕೆನರಿಸ್ ಮಿತ್ರಸ್ ಬುಕ್ ಎಂಡ್ ಟ್ರಾಕ್ಟ್ ಡಿಪೋಜಿಟರಿ.
ಮಂಗಳೂರು

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀಕಾಶೀ, ಗಯಾ, ಪ್ರಯಾಗ, ಹರಿದ್ವಾರ ಬದ್ರಿನಾರಾಯಣ ದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರ ಕಡೆಯಿಂದಅನುಭವ ತೆಗೆದು ಪ್ರತಿವಂದು ಸಿದ್ಧಮಾಡಿಕೊಂಡು ಬರೆದಿರುವರು. ೧ನೇದು ಮಂತ್ರಪ್ರಕರಣದಲ್ಲಿ ಮಂತ್ರ ಪಠಣದಿಂದಲೂ, ಮಂತ್ರಪ್ರಯೋಗದಿಂದಲೂ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವೂ ಇದೆ. ೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ, ಆಸನದಡಿಯಲ್ಲಿ ರೂಪಾಯಿಗಳು ಹೊರಡುವಿಕೆ, ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅವನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ. ೩ನೇದು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು. ೪ನೇದು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಭಾಷಾಣಗಳ ಚುಟ್ಕಾ ಸಹ, ಇದರಲ್ಲಿ ಉಂಟು. ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತೂ ರೋಗಗಳಿಗೂ ಸುಲಭವಾಗಿ ಔಷಧ ಮಾಡುವ ಕ್ರಮವನು ಚೆನ್ನಾಗಿ ಬರೆದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಳಾಸವು ತಿಳಿಸಿರುವರು. ೫ನೇದು ಯಂತ್ರ ಪ್ರಕರಣದಲ್ಲಿ ವಶೀಕರಣ ಗೃಹಪೀಡಾ ನಿವಾರಣ ಭೂತಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು, ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ ಇದ್ದ ಬಳಿಕ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷಗಳೂ ವೈದ್ಯರೂ ಜೋತಿಷ್ಯರು, ಮಾಂತ್ರಿಕರು ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥ ಗ್ರಂಥವು ಯಾರು ಕಣ್ಣಿಂದ ನೋಡಿರಲಿಕ್ಕಿಲ್ಲಾ. ಪ್ರತಿ ಮಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆ ಹೀಗ ಕಡಿಮೆಮಾಡಿ ಇರುವವು. ೨—೮—೦ ಟಪ್ಪಾಲು ಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ, ನಾಟಕ ಕಾವ್ಯ, ಕಥೆಗಳು, ಯಕ್ಷಗಾನ, ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ —

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ

ಸ್ಪಿರಿಟ್ ಸ್ಟೋವ್.

ಈ ಸ್ಟೋವುಗಳು ಹಿತ್ತಾಳೆಯಿಂದ ತಯಾರಾದವು ಇದರಲ್ಲಿ ಬಹುಬೇಗನೆ ಅಡಿಗೆ, ಕಾಫಿ, ಟೀ ಮುಂತಾದವುಗಳನ್ನು ಮಾಡಬಹುದು. ಬೇಗನೆ ಕೆಡದು, ಕಪ್ಪಾಗದು. ಕಷ್ಟವಿರುವದಿಲ್ಲ. ಪ್ರಯಾಣಿಕರಿಗೂ ಬಹು ಅನುಕೂಲವಾದದ್ದು. ಕೆಲವು ಮಾತ್ರವೇ ಇರುವುದರಿಂದ ಬೇಗನೆ ಬರೆಯಿರಿ.

ಕ್ರಯ 1ಕ್ಕೆ 3—8—0.

ಹೊಸ ನಮೂನೆಯ ಸೆಲ್ಫ್ ಫಿಲ್ಲಿಂಗ್ ಪೌಂಟನ್ ಪೆನ್ನುಗಳು.

ಈ ಪೆನ್ನುಗಳು ವಿಲಾಯಿತಿಯಲ್ಲಿ ತಯಾರಾದವು. ಇವು ಹೊಸ ನಮೂನೆಯವು. ಇವಕ್ಕೆ ಗಾಜಿನ ನಿಬ್ಬು ಇರುವದು. ಈ ನಿಬ್ಬು ಎಂದಿಗೂ ಕೆಡದು. ಭಾರಿ ಕ್ರಯದ ಭಂಗಾರದ ನಿಬ್ಬುಗಳ ಬರೆಯುವದಕ್ಕಿಂತಲು ಬಹು ಚೆನ್ನಾಗಿ ಬರೆಯುವದು. ಮತ್ತು ತನ್ನಷ್ಟಕ್ಕೆ ತಾನೇ ಇಂಕಿಯನ್ನು ತುಂಬಿಕೊಳ್ಳುವದು, ಒಂದನ್ನು ತರಿಸಿನೋಡಿರಿ. ಬೇಡವಾದರೆ ಹಣ ವಾಪಾಸು ಕೊಡುವೆವು

ಕ್ರಯ 1ಕ್ಕೆ ರೂ. 1—12—0.

The American Watch Co.,
P. B. No. 509, P. T. MADRAS.

ವಿಳಾಸ:— ಅಮೇರಿಕನ್ ವಾಚ್ ಕಂಪೆನಿ,
ಪೋ ಬಾ 509, ಪಿ. ಟಿ. ಮದರಾಸು.

Just Arrived OF **Fresh Consignment**

Best English Cycles.



REDUCTION IN PRICES.

Banger Cycles Model M. Made in Birmingham.
WITH DUNLOP OR BATES TYRES & TUBES ... @ Rs. 90—0—0
Rarton Humber on Advance
WITH DUNLOP OR BATES TYRES & TUBES ... @ „ 100—0—0
Senior Royal with B. S. A. Fitting.
WITH DUNLOP OR BATES TYRES & TUBES .. ...@ Rs. 145—0—0
Royal Saxon with B. S. A. Fitting.
WITH DUNLOP OR BATES TYRES & TUBES ... ... @ Rs. 175—0—0
All the above Cycles include pump and tools.
BROOKES PATEERN 90/2 GERMAN SADDLE ... ...@ „ 9—8—0
„ SADDLE 90/2 „ ... ..@ „ 21—0—0
„ „ B/30 „ ... ...@ „ 26—0—0

por further particulars please write to us or call on us:—

All kinds of Cycle Accessories, Dunlop and German Tyres and Tubes
ARE AVAILABLE AT VERY CHEAP RATES.

Special Discount to Traders *Easy Terms Arranged*

APPLY TO:—**The Mangalore Trading Association,**
Wholesale Dealers in Cycles and Cycle Accessories,
Car-Street, MANGALORE.

—ಗೋಡೆಗೆ ತಗಲಿಸುವ
ಹೊಸ ನಮೂನೆಯ—

ಟಿಕ್—ಟಾಕ್

ಎಂಬ ಈ ಗಡಿಯಾರಗಳು ಜರ್ಮನೀ ದೇಶದಲ್ಲಿ ತಯಾರಿಸಿದ್ದು. ಇವು ಕಂಠಾರು ಘಂಟೆಯನ್ನು ತೋರಿಸುವವು. ಇವಕ್ಕೆ ಬೀಗ ಕೊಡಬೇಕಾದಿಲ್ಲ. ಇದರಲ್ಲಿ ಕಾಣುತ್ತಿರುವ ಗುಂಡನ್ನು ಮೇಲಕ್ಕೆ ಎಳೆದರೆ ಸಾಕು. ತನ್ನಷ್ಟಕ್ಕೆ ತಾನೇ ಟಿಕ್—ಟಾಕ್ ಎಂಬ ಶಬ್ದವನ್ನು ಮಾಡುತ್ತಾ ಸರಿಯಾದ ಕಾಲವನ್ನು ತೋರಿಸುವದು. ಇದು ನೋಡುವುದಕ್ಕೆ ಬಹು ಲಕ್ಷಣವಾಗಿರುವುದು.

ಕ್ರಯ ೧ಕ್ಕೆ ರೂ. 8—0—0

ಪೀಟರ್ ವಾಚ್ ಕಂಪೆನಿ
ಪೋಸ್ಟ್ ಬಾಕ್ಸ್ ನಂ. 27, ಮದ್ರಾಸ್.

ADVERTISE IN

The Business Directory
OF INDIA, BURMA & CEYLON

A Comprehensive Directory of the various Business-men, Exporters and Importers, Firms, Factories, Mills, Manufacturers, Merchants and Industries of the principal Cities, Ports and Towns of India, Burma and Ceylon.

PUBLISHED ANNUALLY
Rates for Advertisements

¼ Page	Rs.	50.
2 in. Single Column	"	20.
1 in. Single Column	"	15.
Name in Bold Types	"	5.

Price per Copy Rs. 10.

PRINTERS & PUBLISHERS.
Business Directory Co.,
Kanara Press Buildings, MADRAS.-E.
Telegrams: "KETHAKI" Phone 540

Just arrived! Look Sharp!

SCREW ELECTRIC TORCH LAMPS &

Pocket Electric Lamps

AVAILABLE

In different varieties, Mother of pearl lamps. Cycle lamps.
NICKEL PLATED WITH SIDE LANCE.
Hammered Brand, with Powerful Bulls-eye lance,

The Mangalore Trading Association,
Car Street, MANGALORE

ಪ್ರತಿಯೊಂದು ಕುಟುಂಬಿಗಳ ಮನೆಗಳಲ್ಲಿ ಸೌಖ್ಯವನ್ನು ತೋರಿಸುವುದಕ್ಕೂ ಮತ್ತು ಅವರವರ ಉಪಯೋಗಾರ್ಥವನ್ನು ತಿಳುವಳಿಕೆ ಬಗ್ಗೆ ನಡಿಸುವುದಕ್ಕೂ ಒಂದು ದುರ್ಲಭವಾದ ನಿಘಂಟು ಪುಸ್ತಕವು ಈ ನಮ್ಮ ಹಿಂದೂದೇಶದ ಸಮೂಹದಲ್ಲಿರುವುದು. ಅಂಥಾ ಪುಸ್ತಕವು ಯಾವದೆಂಬುದು

ನೀವುಗಳು ಬಲ್ಲಿರಾ?
(ಅದೇ)
"ಕಾಮಶಾಸ್ತ್ರವೆಂಬುವುದು."

ತಾವುಗಳು ಇನ್ನೂ ಈ ಪುಸ್ತಕದಲ್ಲಿ ಬರೆದಿರುವ ಸಾರಾಂಶವನ್ನು ಓದಿಲ್ಲದಿದ್ದರೆ, ಒಡನೇ ಒಂದು ಪುಸ್ತಕವನ್ನು ಕಳುಹಿಸುವಂತೆ ಒಂದು ಪೋಸ್ಟುಕಾರ್ಡು ಬರಿಯಿರಿ.

ಪುಸ್ತಕವನ್ನು ಇನಾಮಾಗಿ ಕಳುಹಿಸುವೆವು.

ಮುಖ್ಯವಾದ ತಿಳುವಳಿಕೆ.

ತಾವುಗಳು ದೃಢಚಿತ್ತರಾಗಿಯೂ, ನಿಧಾನಸ್ಥರಾಗಿಯೂ, ಸೌಖ್ಯದಾಗಿಯೂ, ಕಷ್ಟವಿಲ್ಲದೆನೇ ವಿಷಯಗಳನ್ನು ಭರಿಸುವ ಮನಸ್ಸನ್ನು ಹೊಂದಬೇಕಾದರೆ ನಮ್ಮ ಅಮೂಲ್ಯವಾದ "ಕಾಮಶಾಸ್ತ್ರವೆಂಬುವ ಪುಸ್ತಕದಲ್ಲಿ ಕಾಣಿಸಿರುವ ಆತಂಕನಿಗ್ರಹ ಮಾತ್ರೆಗಳನ್ನು ಸೇವಿಸಬೇಕು."

ಒಂದು ರೂಪಾಯಿ ಖರ್ಚುಮಾಡಿದರೆ 32ಂ ಮಾತ್ರೆಗಳುಳ್ಳ ಒಂದು ಡಬ್ಬಿಯನ್ನು ತರಿಸಿ ಪ್ರಯತ್ನಿಸಬಹುದು.

ವಿವರವಾಗಿ ಬರೆದಿರುವ ಒಂದು ಕ್ಯಾಟಲಾಗು ಕಳುಹಿಸುವಂತೆ ಈ ದಿನವೇ ಒಂದು ಪೋಸ್ಟುಕಾರ್ಡು ಬರಿಯಿರಿ.

ಆತಂಕನಿಗ್ರಹ ಔಷಧಾಲಯ,
ನಂಬ್ರ 26, ಬ್ರಾಡ್ವೆ, ಮದರಾಸು.

ಹೊಸಗ್ರಂಥಗಳು!! ಬೇಗನೇ ತರಿಸಿಕೊಳ್ಳಿರಿ!!

ಕೋಕ ಶಾಸ್ತ್ರವು.

ರಸಿಕ ವಾಚಕ ಮಹಾಶಯರೇ,

ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ, ಸಂಪಾದಿಸಿ, ಅದರಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನೇ ಶೋಧ ಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿಣಿ, ಸ್ತ್ರೀಯರ ಹಾಗು ಇತರಂತೆ ಪುರುಷರಲ್ಲಿಯು ಭೇದ, ಯಾವಜಾತಿ ಸ್ತ್ರೀಯೇಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ, ಜನನೇಂದ್ರಿಯಾದಿಗಳ ತರ್ಕನೆಯನ್ನೂ, ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ, ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ, ನಪುಂಸಕತ್ವ ಎಂಥಾ ದೋಷಗಳ ಚಿಕಿತ್ಸೆಯನ್ನೂ, ಸ್ತ್ರೀಯರ ಗೂಢ ರಹಸ್ಯವನ್ನೂ, ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನೂ, ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನು ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ.

ಇತರ ಬೆಲೆ ೧—೮—೦, ಟಪ್ಪಾಲು ಹಾಸಲು ೦—೪—೦.

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ
ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ
ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಾಣಿಕ [illegible] ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ಯಾವಂತರೂ ನಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ತಮಾನಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನ್ನು ಕುರಿತ ಲೆಖ್ಖಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ರೈತರುಗಳೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪೋಷಕರಿಗೆ	...	ರೂ. 3—0—0
ಇತರರಿಗೆ, ಪಟ್ಟಣಗಳಿಗೆ, ಪೋಸ್ಟೇಜು ಸೇರಿ		„ 2—8—0.
„ ಕೃಷಿಕರಿಗೆ	...	„ 1—8—0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪತ್ರಿಕೆಯು ಬಳಕೆಯಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಹಾಕಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಈಗಿನ [illegible] ಬರೆದು ತಿಳಿಯಬಹುದು.

ಎಡಿಟರ್,
ಡಿ. ಹನುಮಂತಯ್ಯಗೌಡ,
ಅರ್ಥಸಾಧಕ ಪತ್ರಿಕೆ,
ಅರಳೇ ಪೇಟೆ, ಬೆಂಗಳೂರು.

Edited, Printed & Published by V. S. Kamath at the M. T. A. SHARADA PRESS, MANGALORE.

Registered No. M. 498.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2-0-0. ಟಪ್ಪಾಲು ಹಾಸಲು ಸೇರಿ ರೂಪಾಯಿ 2-13-0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹೆರುಪವಾಯಿತೆ! ಮತ್ತೆ ವಿಶ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ । ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೯. ಮಂಗಳೂರು, ತಾರೀಕು ೨೨ನೇ ಶುಕ್ರವಾರ ಮೇ ೧೯೨೫. ಸಂಚಿಕೆ ೨೨

The Canara Banking Corporation, Udipi, Ltd.

Head Office:— **Udipi** Branch:— **Coondapoor**

Paidup Capital	1,66,165—9—11
Reserve etc	64,700—0—0

Season Deposits

Carrying Special rate of 7% up to 15th June 1925 only.

Further Particulars on Application

ದಿ ಕೆನರಾ ಬ್ಯಾಂಕಿಂಗ್ ಕೋರ್ಪೊರೇಶನ್ ಉಡುಪಿ, ಲಿಮಿಟೆಡ್.

ಹೆಡ್ ಆಫೀಸು:— ಉಡುಪಿ ಶಾಖೆ:— ಕುಂದಾಪುರ

ವಸೂಲಾತ ಮೂಲಧನ	1,66,165—9—11
ರಿಜರ್ವ ವಗೈರೆ ಫಂಡುಗಳು	64,700—0—0

ತಾ. 15—6—1925ರವರೆಗೆ ಮಾತ್ರ ಸಾಲಿಯಾನ್ ಸೇಕಡಾ 7ರ ದರದ ಬಡ್ಡಿಯ ಮೇಲೆ ಮುಸುಂ ಠೇವಣಾತಿಗಳನ್ನು ಅಂಗೀಕರಿಸೋಣಾಗುತ್ತದೆ.
ಹೆಚ್ಚಿನ ಮಾಹಿತಿಗೆ ಬರಕೊಳ್ಳಿರಿ.

Office of the Corporation, Udipi, 1-5-25 } **N. Ananda Rao,** *Secretary.*

Wanted Agents
FOR
Every District in South India

For Pushing Sales of Our Calenders, Xmas and New Year Cards, Blotters, Pictures and Picture Post Cards, at wholesale rates. Deposit of Rs. 100—0—0 Essential.

Apply to:—
The South Indian Advertising Agency,
13, Kilary Road,
BANGALORE CITY.

ಶುದ್ಧ ರೇಷ್ಮೆಯ ಧಾವಳಿಗಳು.

1 ಮೊಳ ಉದ್ದ 1¼ ಮೊಳ ಅಗಲ ರೂ. 1½ರಿಂದ 2 ವರೆಗೆ, 5 ಮೊಳ ಉದ್ದ 1¼ ಮೊಳ ಅಗಲ ರೂ. 1½ರಿಂದ [illegible] ವರೆಗೆ, 6 ಮೊಳ ಉದ್ದ 1¼ ಮೊಳ ಅಗಲ ರೂ. 2½ರಿಂದ 6 ವರೆಗೆ, 8 ಮೊಳ ಉದ್ದ 2 ಮೊಳ ಅಗಲ ರೂ. 3½ರಿಂದ 10 ವರೆಗೆ, 12 ಮೊಳ ಉದ್ದ 2¼ ಮೊಳ ಅಗಲ ರೂ. 6ರಿಂದ 12 ವರೆಗೆ, 16 ಮೊಳ ಉದ್ದ 2¼ ಮೊಳ ಅಗಲ ರೂ. 9ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ [illegible] ರೇಶ್ಮೆ ಮಗುಟಗಳು, ಶಾಲುಗಳು, [illegible] ಪೀತಾಂಬರಗಳು, [illegible] ಶಾಲುಗಳು, ರುದ್ರಾಕ್ಷಿ, [illegible] ಮುಂತಾದ ಸಾಮಾನುಗಳು, [illegible] ಉಂಗುರಗಳು ಮತ್ತು ಇನ್ನೂ ಅನೇಕ ಸಾಮಾನುಗಳು ವಿ. ಪಿ. ಮೂಲಕ ಕಳುಹಿಸಲ್ಪಡುವುವು. ಕ್ಯಾಟಲಾಗ್ ಉಚಿತ.

ವಿಳಾಸ—
ತಿರೋಡಶೆ ಯು. ನಾರಾಯಣಾಚಾರ್ಯ
ಮತ್ತು ಕಂಪೆನಿ, [illegible], ಕಾಶೀ ಕ್ಷೇತ್ರ.

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ.

450 ಪುಟಗಳು ಎಮ್. ಗಣಪತಿರಾವ್ ಐಗಳ್ ಇವರಿಂದ ರಚಿತವಾದದ್ದು. ಕ್ರಯ ರೂ. 2-4-0
ಮಾರಾಟಕ್ಕೆ ಸಿದ್ಧವಾಗಿವೆ — ತುಳು ಪಾಡ್ದನಗಳು — ಮಾರಾಟಕ್ಕೆ ಸಿದ್ಧವಾಗಿವೆ.

ದೈಯೊಂಗುಳು, ಕಲ್ಕುಡ—ಕಲ್ಲುರ್ಟಿ, [illegible] ಪಂಜುರ್ಲಿ ದೈಯೊಂಗುಳು, ಮುಂಡತ್ತಾಯ, ಬೊಬ್ಬರ್ಯ.

ಸುಲಭ ದರಗಳು — ಶಾಲಾ ಪುಸ್ತಕಗಳು — ರಖಂ ಕೊಂಡುಕೊಳ್ಳುವವರಿಗೆ ಯೋಗ್ಯ ಡಿಸ್ಕೌಂಟ್.

ಅಜ್ಜಿಕಥೆಗಳು:—ಮೂರು ಕರಡಿಗಳು; ಹೇಮನಿಗೆ [illegible] ಬಡವಾಯಿತು; ಅರಗಿನ ಮುದ್ದೆ; ಇಲಿಗಳ ಥಕ್ಕ ಥೈ; ಅಂಗಳ ಮುಗ್ಗು; ಹಿಡಿ ಯಾಕೆ ಒಣಗಲಿಲ್ಲ; ಗುಡುಗುಡು ಗುಮ್ಮಟ ದೇವರು; [illegible] ಕಾಳಪ್ಪ; ಬಡ್ಡನ ಓಟ; ಹೊಸ ಕನ್ನಡ ಪುಸ್ತಕ ಭಾಗ ೧; ಹೊಸ ಕನ್ನಡ ಪುಸ್ತಕ ಭಾಗ ೨; ಕನ್ನಡ ಪದ್ಯಗಳು; ಮಗ್ಗಿ ಪುಸ್ತಕ; ಅಚ್ಚಕನ್ನಡ; ಪದ್ಯ ರತ್ನಾವಳಿ, ಎಕ್ಸರ್‌ಸೈಜ್ ಮತ್ತು ನೋಟು ಪುಸ್ತಕಗಳು, ಕಾಪಿ ಪುಸ್ತಕಗಳು, ಡ್ರಾಯಿಂಗ್ ಪುಸ್ತಕಗಳು

ಇತರ ಪುಸ್ತಕಗಳು:—ಸಂಕ್ಷೇಪಗೀತ, ಕೀರ್ತನೆ, [illegible] ಹಿಂದೂ ವ್ರತವಿವೇಕ, ಚಂದ್ರಗುಪ್ತ ಚಕ್ರವರ್ತಿ, ಶ್ರೀ ಕೃಷ್ಣಸಂಧಾನ, ಪದ್ಯಪಾಠಗಳು, ಹರಿಕಥಾ [illegible] ಹನುಮಾನ ಸಂಕೀರ್ತನೆ [illegible] ಪದ್ಯಗಳು. ಬೆಂಕಿಪೆಟ್ಟಿಗೆ ತಯಾರಿಸುವ ವಿಧಾನ, ಸಾಬೂನು ತಯಾರಿಸುವ ವಿಧಾನ, ಸ್ವರಾಜ್ಯ [illegible], ಚರಕಗೀತೆ, ಕೊಂಕಣ [illegible] ಯಲ್ಲಿ ಚಂದ್ರಹಾಸ ನಾಟಕ, ಪ್ರಹ್ಲಾದ ಚರಿತ್ರೆ ನಾಟಕ, ಕನ್ನಡ ಮೃಚ್ಛಕಟಿಕ ನಾಟಕ, ಚಂದ್ರಹಾಸಾಭ್ಯುದಯ ನಾಟಕ, ಕೋವಿಲನ್ ಚರಿತ್ರೆ ನಾಟಕ, ಮಾದರಿ ಉಪನ್ಯಾಸ ಭಾಗ ೧, ೨, ಮತ್ತು ೩.

AMRUTANJAN
Best Indian Pain Balm
Amrutanjan
BOMBAY

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಶತ್ರುವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ತಲೆನೋವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣಾದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು [illegible] ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ ೩ ಆಣೆ.

ಅಮೃತಾಂಜನ ಡಿಪೊ,

೨, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ ಟೌನ್, ಮದ್ರಾಸು.

109 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—[illegible], ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

— ರಥೋತ್ಸವ, ವಿವಾಹ, ಉಪನಯನಗಳ ಸಮಯ —
ಸರ್ವರಿಗೂ ಉಡಿಗೆ ತೊಡಿಗೆಗಳು ಬೇಕಾಗುವ ಸಂದರ್ಭ.

ಯಾರು, ಯಾವುದನ್ನು ಎಲ್ಲಿ [illegible] ಕೊಳ್ಳಬೇಕೆಂಬ [illegible] ತಿಳಿದಿರುವರು. [illegible] ಬೇಕಾದ ಯಥಾರ್ಥ ಮಾಹಿತಿಯನ್ನು [illegible] ವರ್ಷಗಳಿಂದ ಸತತ ನಮ್ಮಲ್ಲಿಯ ವ್ಯಾಪಾರವು [illegible] ಸರ್ವ [illegible] ಲಾಭಕರವಾಗಿ [illegible] ನಮ್ಮ [illegible].

ಗುರ್ಪುರ್‌ಕಾರ್ ಬ್ರದರ್ಸ್, ರಥಬೀದಿ, ಮಂಗಳೂರು.

ಹೆಡ್ ಆಫೀಸು:—ರಥಬೀದಿ—(ಮೊದಲು [illegible] ನಾಗಪ್ಪನಾಯಕ್, ಎಂಡ್ ಕೊ., [illegible] ರಸ್ತೆಗೆ ತಿರುಗುವಲ್ಲಿ) ಮಂಗಳೂರು.

ಬ್ರೆಂಚ್ ಆಫೀಸು:—ರಥಬೀದಿ—([illegible]) ಮಂಗಳೂರು.

ಈ ದೇಶದ ಪ್ರಖ್ಯಾತವಾದ ನೇಯಿಗೆಯ ಕೇಂದ್ರಸ್ಥಳಗಳಾದ—ಬನಾರಸ್, [illegible], ಸೂರತ್, ಬೆಂಗಳೂರು, ಧರ್ಮಾವರಮ್, ಕಂಜೀವರಮ್, ಕೊಯಮುತ್ತೂರು, ಮಧುರೆ, ತಂಜಾವೂರು, ಕುಂಭಕೋಣ, [illegible], ಹುಬ್ಬಳ್ಳಿ, [illegible], ಗದಗ, ಮದ್ರಾಸು ಈ ಪ್ರಾಂತ್ಯಗಳಲ್ಲಿ ತಯಾರಾದ

ಜರಿಸೀರೆಗಳು, ದುಪ್ಪಟ್ಟಾ, ಜರಿಶಾಲು, ರೇಷ್ಮೆ ರೇಷ್ಮೆ ಸೀರೆಗಳು, [illegible] ಸೀರೆಗಳು, [illegible] ಸೀರೆಗಳು, [illegible] ರೇಷ್ಮೆ ಮಗುಟಗಳು, ನಿತ್ಯ ಉಪಯೋಗದ ಸೀರೆಗಳು [illegible], ಕರ್ನಾಟಕ [illegible] ಕೈರಾಟೆಯಲ್ಲಿ ತಯಾರಿಸಿದ ನೂಲಿನಿಂದ ಮಾಡಿದ—

[illegible] ಶರ್ಟಿಂಗ್, [illegible] ಕೋಟಿಂಗ್, [illegible] ಟೋಪಿ, [illegible], ಅಂಗವಸ್ತ್ರ, [illegible]—
ಮುಸಲ್ಮಾನರಿಗೆ ಬೇಕಾದ ನಮೂನೆಯ [illegible]—

ಎಲ್ಲ ಸಂಗ್ರಹವನ್ನೂ, ನಮ್ಮ [illegible] ಸಂಗ್ರಹಿಸಿ ಇಡಲಾಗಿದೆ.

[illegible]—[illegible], ರೂಪಾಯಿ 5ರ [illegible] 6¼% [illegible] ರೂ. 50ರಿಂದ 250ವರೆಗೆ ಸೇಕಡಾ 10%, ರೂ. 250 ರಿಂದ 1000ಕ್ಕೆ 12½% ಈ ದರ [illegible].

ಆರ್. ಮಾರ್ಟಿನ್ನರ ಲಪ್ತಾ ಎಣ್ಣೆ

ಇದರ ಸುವಾಸನೆಯು, (ಪರಿಮಳವು) ಬಹಳ ಅಂದವಾಗಿಯೂ ಇರುವುದಲ್ಲದೆ, ಬಹಳ ಹೊತ್ತಿನ ವರೆಗೂ ಇರುತ್ತದೆ. ಈ ಎಣ್ಣೆಯನ್ನು ತಲೆಗೆ ಹಾಕಿಕೊಳ್ಳುವವರಿಂದ ಕಣ್ಣುಗಳು ತಂಪಾಗಿಯೂ, ಶುಭ್ರವಾಗಿಯೂ, ಆಗುವದಲ್ಲದೆ, ಮೆದುಳು ಚೆನ್ನಾಗಿ ಬೆಳೆಯುತ್ತದೆ. ಇದನ್ನು ಪ್ರತಿದಿವಸವೂ ಉಪಯೋಗಿಸುವುದರಿಂದ ಕೂದಲುಗಳು ಚೆನ್ನಾಗಿ ಹೊಳೆಯುವಂತೆ ಮಾಡುತ್ತದೆ. ಕೂದಲುಗಳಲ್ಲಿರುವ ಹೇನುಗಳು ಮುಂತಾದುವು ನಾಶವಾಗಿ ತಲೆಬುರುಡೆಯನ್ನು ಚೆನ್ನಾಗಿ ಬೆಳೆಯುವಂತೆ ಮಾಡುತ್ತದೆ. ಗಡ್ಡ ಮತ್ತು ಮೀಸೆಗಳು ಸಹ ಬೆಳೆಯುತ್ತವೆ. ಇದನ್ನು ಉಪಯೋಗಿಸಿದ ಜನರು ಇದಕ್ಕಿಂತ ಉತ್ತಮವಾದ ಎಣ್ಣೆಯು ಬೇರೆ ಇಲ್ಲವೆಂದು ಹೇಳಿರುತ್ತಾರೆ.

ಕ್ರಯ ಬಾಟಿ 1ಕ್ಕೆ ರೂ. 1-4-0.

ಆರ್ ಮಾರ್ಟಿನ್ನರ ಗಿಟೋಡಯಿನ್.

ಗಂಡಸರಿಗೂ ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ, ಅಥವಾ ಹೊಸತಾಗಿದ್ದರೂ ಸರಿ. ಬಿಳುಪು ಹೋಗುವುದು ಉರಿಯುವುದು, ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೆ ಉರಿ ಮೂತ್ರವನ್ನು ನಿಲ್ಲಿಸಿ, ಮೂತ್ರವು ಬಿಳುಪಾಗಿ ನಿರ್ಮಲವಾಗುವದಲ್ಲದೆ ರೋಗದ ಪಟ್ಟನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ.

ಬೆಲೆ ಸೀಸೆ 1ಕ್ಕೆ ರೂ. 2—0—0.

ಆರ್. ಮಾರ್ಟಿನ್ನರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮು ಬರಲು ಶ್ವಾಸ, ಶೀತ, ನೆಗಡಿ, ಗಂಟಲುನೋವು, ಎದೆ ನೋವುಗಳನ್ನೂ ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನಮಾಡಿ ಪರೀಕ್ಷಿಸಿ ನೋಡಿರಿ. ಅನಂತರ ಬೇರೆ ಯಾವ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮಲಿಗೂ ರಾಣಿಯಾಗಿಯೂ, ಎದೆಗೆ ಬಲಕೊಟ್ಟು ಮೇಲ್ಪಂಡ ರೋಗಗಳು ತಲೆಯಿಕ್ಕದಂತೆ ಮಾಡುತ್ತದೆ.

60 ಮಾತ್ರೆಗಳ ಸೀಸೆ 1ಕ್ಕೆ ರೂ. 1—4—0.

ವಿಳಾಸ:—ಆರ್. ಡಿ. ಕಟೆ ಮತ್ತು ಕಂಪೆನಿ,
ನಂಬ್ರ ಬಿ. ಫ್ರೆಯರ್ ರೋಡ್,
ಸಾಂಜ ವರ್ತಮಾನ ಪ್ರೆಸ್,
ಟೋದಿವಾಲಾ ಬಿಲ್ಡಿಂಗ ಎದುರುಗಡೆ, ಫೋರ್ಟ ಮುಂಬಯಿ.

R. D. Kately & Co.
No. B. Frere Road,
Opposit Sanjvertaman Press,
Todivala Building, FORT BOMBAY

* * *

ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ಮೂರನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್. ಗಣಪತಿರಾವ್ ಐಗಳ್—ಗ್ರಂಥಕರ್ತರು.

ಮನೋರಂಜಕ ಚಿತ್ರಗಳೂ ಇವೆ.

ಇದರಲ್ಲಿ ಸಾವಿತ್ರಿ, ಶಕುಂತಳಾ, ಕೃಷ್ಣಾಕುಮಾರಿ, ಪದ್ಮಿನಿ, ಜೋನ್ ಒಫ್ ಆರ್ಕ, ಫ್ಲಾರೆನ್ಸನಾಯಿಟಿಂಗೇಲ ಪರಶುರಾಮ, ಧೂತಾಳಪಾಂಡ್ಯ, ಕಾರ್ಕಳ ಗೋಮಟೇಶ್ವರ ಮತ್ತು ಭೈರವರಾಜ, ಮೂಡಬಿದ್ರೆಯ ಚೌಟರು, ಪಂದಾವರ ಬಂಗರು, ಕಾರ್ಕಳ ರಾಮಸಮುದ್ರ ಮತ್ತು ರಾಮನಾಥ ಒಡೆಯರ ಅಹೆಕಟ್ಟು, ಗುರುಪುರ ಜಂಗಮ ಮಠ, ಕಲ್ಯಾಣಪ್ಪನ ಕಾಟಕಾಯಿ, ಗುರುವಾಯನಕೆರೆ, ಜಮಾಲಾಬಾದು ಕೋಟೆ, ಸುಲ್ತಾನಬತ್ತೇರಿ, ಉದಗಾಪ್ರಾರ್ಥನಾಮಂದಿರ, ಸೇಂಟಮೇರಿ ದ್ವೀಪಗಳು ಮತ್ತು ದರಿಯಾಬಹಾದರಗಡ, ಕೊರಗರು, ಕೊಡಗರು, ತೋಡರು, ರಜಪೂತರು, ಕಂದಾರಿಗಳು ಘುರ್ಖಾ ಜನರು, ಅರಬಿಯರು. ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ಮೂರನೇ ದರ್ಜೆಯ ಮಕ್ಕಳಿಗೆ ಉಪಯುಕ್ತವಾಗಿದೆ. ಕ್ರಯ 6 ಆಣೆ.

ಪುಸ್ತಕ ದೊರಕುವ ವಿಳಾಸ—

ಶಾರದಾ ಛಾಪಖಾನೆ, ಮಂಗಳೂರು. | ಗಣಪತಿರಾವ್, ಐಗಳ್. ಮಂಜೇಶ್ವರ.

ಡಾಕ್ಟರುಗಳು ಭಿನ್ನಾಭಿಪ್ರಾಯಪಡುವಾಗ್ಯೆ ತೀರ್ಮಾನಿಸುವದು ಯಾರು?

ಅಂಥಾ ಸಂದರ್ಭಗಳಲ್ಲಿ, ಡೆಂಗ್ಯು ಮುಂತಾದ ಜ್ವರಗಳನ್ನು ನಿವಾರಿಸುವಂಥಾ "ಬಾಟ್ಲಿವಾಲರ ಏಗ್ಯುಮಿಕ್ಸ್ಚರ್"ನ್ನು ಸರಾಗವಾಗಿಯೂ, ಮತ್ತು ಜ್ವರಗಳನ್ನು ಖಂಡಿತವಾಗಿ ನಿಲ್ಲಿಸುವಂಥಾದ್ದೂ, ಎಲ್ಲಾ ತರದ ತಲೆನೋವುಗಳನ್ನು ಹೋಗಲಾಡಿಸುವಂಥಾದ್ದೂ ಆದ "ಬಾಟ್ಲಿವಾಲರ ಏಗ್ಯುಪಿಲ್ಸ್" ಇದನ್ನು ಉಪಯೋಗಿಸಿರಿ.

ಐ. ಎಮ್. ಎಸ್. ಡಾಕ್ಟರುಗಳಿಂದ ಶಿಫಾರಸು ಮಾಡಲ್ಪಟ್ಟಿದ್ದು. ಇದರ ಉಪಯೋಗದಿಂದ ಹೃದಯದ ಮೇಲೆ ಯಾವದೊಂದೂ ಬಾಧಕವಿಲ್ಲ. ಅರ್ಧ ಶತಮಾನದಿಂದ ಹಿಂದೂಸ್ಥಾನ, ಬರ್ಮ, ಸಿಲೋನ್, ಆಫ್ರಿಕಾ ಇವುಗಳಲ್ಲಿ ಪ್ರಖ್ಯಾತಪಟ್ಟದ್ದಾಗಿರುತ್ತದೆ.

ಅನೇಕ ಹಿಂದೀ ಪ್ರದರ್ಶನಗಳಲ್ಲಿ ಬೆಳ್ಳಿ ಮತ್ತು ಬಂಗಾರದ ಪದಕಗಳನ್ನು ಪಡೆದಿರುತ್ತೆ. ಚಾಲ್ತಿ ಸಾಧ್ಯವಿದ್ದು ದೂರದಾರಿಗಳೂ ಕೂಡ ಅದರ ಮೇಲೆ ಹಣವನ್ನು ಮುಂಗಡವಾಗಿ ಕೊಡುತ್ತಾರೆ. ಬಡ ಮತ್ತು ಮಧ್ಯಮ ತರಗತಿಯ ಜನರಿಗೆ ವರಪ್ರದಾನವಾಗಿದ್ದು ಸಂಚಾರ, ಪ್ರಯಾಣ, ದೇಶಾಟನೆಗಳ ಸಮಯದಲ್ಲಿ ಹತ್ತಿರದಲ್ಲಿರಿಸಿಕೊಳ್ಳದಾಗಿರುತ್ತದೆ.

ಬಾಟ್ಲಿವಾಲರ ಬಾಲಾಮೃತ ಅಥವಾ ಟೊನಿಕ್ ಸಿರಪ್.

ಕೆಮ್ಮನ್ನು ಹೋಗಲಾಡಿಸಿ, ಎದೆನೋವನ್ನು ಶಾಂತಗೊಳಿಸಿ, ಜ್ವರವನ್ನು ಉಪಶಮನಿಸಿ, ನಿದ್ರಾಭಂಗವನ್ನು ಕಡಿಮೆ ಮಾಡಿ ಧಾತುವರ್ಧನವನ್ನು ಮಾಡುವದರಲ್ಲಿ ಅತ್ಯುತ್ತಮವಾಗಿರುತ್ತದೆ. ಕಫವನ್ನು ಒಣಗಿಸಿ ಮಾಯವಾಗುವಂತೆ ಮಾಡುವುದಲ್ಲದೆ ಅದೇ ಸಮಯದಲ್ಲಿ ಒಳ್ಳೇ ಜೀರ್ಣವನ್ನೂ ಉಂಟುಮಾಡುವುದು. ದರ ಮೊದಲಾದ ಮಾಹಿತಿಯನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ತಾರಿನಪತ್ತೆ:-CAWASHAPUR, BOMBAY.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ. | ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್., ಪಿ. ವಾರ್ಲಿ, ಮುಂಬಯಿ, ನಂಬ್ರ 18.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟ. ಖ. 9 ಆಣೆ.

ನಮ್ಮ ವಿಳಾಸ:— ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಏಜಂಟರು:— ಡಿ. ಊಲನ್ ಮಾರ್ಟ, ಮಂಗಳೂರು.

OUR RECENT IMPORT IN WRIST WATCHES

Have you used anyone of these Watches?

SEND YOUR ORDER NOW ALL GUARANTEED.

Fashionable wrist wrist Lady's size. Reliable movement Guaranteed.



No. 368.

Handy to wear and looks beautiful. Gives punctual time and with strong movement.

Nickel case Rs. 8—0

High-class Radium dial watch watch with Roman figures.



No. 367.

Can be seen in dark nights, Well fitted with best movement and strong to use. Used by one and all.

Silver case Rs. 9—0.

Radio light wrist watch.



No. 372.

Fitted with the best mechanism and guaranteed to work and keep perfect time for a long time.

Nickel case Rs. 7—8
Electro rolled-gold „ 9—0

(N. B. In addition to the above, we have good number of varieties of fancy wrist watches, pocket watches. Please write for a descriptive catalogue, which will be sent free)

WHOLESALE IMPORTERS

PETER WATCH COY.,
POST BOX 27, MADRAS

ಶಾಲಿವಾಹನಶಕ ೧೮೪೭ನೆಯ ಕ್ರೋಧನ ಸಂ||ರದ ಜ್ಯೇಷ್ಠ ಶು|| ೭ ಶನಿವಾರದಿಂದ ಕ್ರೋಧನ ಸಂ||ರದ ಜ್ಯೇಷ್ಠ ಶು|| ೧೩ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೫ನೆಯ ವೃಷಭ ದೇಶ.)

ತಾರೀಕು	ವಾರ	ತಿ.	ಘಳಿಗೆ	ನಕ್ಷತ್ರ	ಘಳಿಗೆ	ಸೌರಮಾನ	ಸೂರ್ಯ ಉ.	ಸೂರ್ಯ ಅಸ್ತ.
30	ಶನಿ	೭	೧೦.೧೯	ಮಘಾ	೨೮.೩೨	೧೭	6. 5	6.52
31	ರವಿ	೮	೧೨.೩೦	ಪುಬ್ಬಾ	೩೨. ೦	೧೮	6. 5	6.52
1	ಸೋಮ	೯	೧೩.೪೬	ಉತ್ತರಾ	೩೪.೩೨	೧೯	6. 5	6.52
2	ಕುಜ	೧೦	೧೩.೩೨	ಹಸ್ತಾ	೩೫.೩೨	೨೦	6 5	6.52
3	ಬುಧ	೧೧	೧೨. ೫	ಚಿತ್ತಾ	೩೫.೨೮	೨೧	6. 5	6.53
4	ಗುರು	೧೨	೯.೩೨	ಸ್ವಾತಿ	೩೪.೪೦	೨೨	6. 5	6.53
5	ಶುಕ್ರ	೧೩	೫.೪೬	ವಿಶಾಖಾ	೩೨.೩೨	೨೩	6 5	6 53

ಮಂಗಳೂರಿನ ವಾಯುಸ್ಥಿತಿ.

ತಾರೀಕು Date	Temperature. ಉಷ್ಣ (ಕಾವು) Maximum ಹೆಚ್ಚಿನದು	Minimum ಕಡಿಮೆ	Rainfall ಮಳೆ ದಿನದ ಮಳೆ	ಜನುವರಿ ಮಳೆ.
22	95—5	81—7	—	—
23	95—1	80—1	0—04	—
24	94—2	79—6	0—09	—
25	94—3	80—3	0—01	—
26	95—3	75—6	0—35	—
27	93—4	80—0	—	—
28	93—4	75—5	0—44	—

ಮಂಗಳೂರಿನ ಪೇಟೆ ಧಾರಣೆ.

ಜೀನಸು		ಇಂದ ರೂ. ಅ.	ವರೆಗೆ ರೂ ಅ
ಹೊಸ ಮುಸ್ಕತಿ		8 – 4	8 – 14
ಹೊಸ ಗುಡ್ಡು	...	7 -10	8 – 2
ಹೊಸ ರಾಶಿ	...	7- 4	7 – 12
ಅವ್ವಲ್ ಬೆಳ್ತಿಗೆ	...	8--4	9 – 8
ಗುಡ್ಡು ಬೆಳ್ತಿಗೆ	...	7 – 12	8 - 4
ರಂಗೂನು ಬೆಳ್ತಿಗೆ ಗೋಣಿ ೧	...	13- 0	13 8
ಗೋಧಿ ಗೋಣಿ ೧ಕ್ಕೆ	...	18- 8	22 0
ಹುರುಳಿಗೋಣಿ ೧ಕ್ಕೆ	...	9- 10	10 - 8
ಕಡಲೆಗೋಣಿ ೧ಕ್ಕೆ	...	12-0	13 - 0
ತೊಗರಿಗೋಣಿ ೧ಕ್ಕೆ	...	12-8	13 - 0
ತೊಗರಿಬೇಳೆ ಗೋಣಿ ೧ಕ್ಕೆ	...	13-8	21 - 0
ಉದ್ದು ಗೋಣಿ ೧ಕ್ಕೆ	...	14- 0	14 8
ಹೆಸರುಗೋಣಿ ೧ಕ್ಕೆ	...	14 – 0	15 - 0
ಊರು ಬೆಲ್ಲ ಖಂಡಿ ೧ಕ್ಕೆ	...	-	85 - 0
ಉಪ್ಪು ಗೋಣಿ ೧ಕ್ಕೆ	...	4- 4	4–10
ಕೊಬ್ರಿ ಖಂಡಿ ೧ಕ್ಕೆ	...	115–0	120 - 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	...	35- 0	35 – 8
ಎಳ್ಳಿಂಡಿ ಖಂಡಿ ೧ಕ್ಕೆ	...	35 -0	42 – 8
ಕೊಬ್ರಿ ಎಣ್ಣೆ ಮಣ ೧ಕ್ಕೆ	...	8–8	9 – 8
ಎಳ್ಳೆಣ್ಣೆ ಮಣ ೧ಕ್ಕೆ	...	8- 0	11 – 0
ಚಿಮಿಣಿ ಎಣ್ಣೆ ಪೆಟ್ಟಿಗೆ ೧ಕ್ಕೆ	...	8-15-6	-
ಮೋರಿಸ ಸಕ್ಕರೆ ಮಣ ೧ಕ್ಕೆ	...	5– 0	5 - 2
ಊರ ಮೆಣಸಿನಕಾಯಿ ಮಣ ೧ಕ್ಕೆ	...	7- 0	-
ಸಾಸಿವೆ ಮುಡಿ ೧ಕ್ಕೆ	...	8- 12	-
ಕೊತ್ತಂಬರಿ ಮುಡಿ ೧ಕ್ಕೆ	...	3- 8	3 – 14
ಕಾಫಿ ಖಂಡಿ ೧ಕ್ಕೆ	...	335- 0	345--0
ಬಿಳಿಗೋಟು ಅಡಿಕೆ ಖಂಡಿ ೧ಕ್ಕೆ ಹಳತು	...	235- 0	245--0
„ ಹೊಸ ಅಡಿಕೆ		240 – 0	240 – 0
ಕಾಳುಮೆಣಸು ಖಂಡಿ ೧ಕ್ಕೆ	...	155–0	160--0
ಯಾಲಕ್ಕಿ ಮಣ ೧ಕ್ಕೆ	...	80- 0	90 – 0
ಗೇರುಬೀಜ ಮುಡಿ ೧ಕ್ಕೆ	...	3–0	3 2
[illegible] ಖಂಡಿ ೧ಕ್ಕೆ	...	45- 0	65 – 0
ತಾಮ್ರ ತಗಡು ಮಣ ೧ಕ್ಕೆ	...	17-12	23 - 0
ತಾಮ್ರ ಪಾತ್ರೆಗಳು ಮಣ ೧ಕ್ಕೆ	...	26- 0	–
ಚೀನಿ ಬೆಳ್ಳಿ ಸೇರು ೧ಕ್ಕೆ	...	22 – 0	
ಹಿತ್ತಾಳೆ ತಗಡು ಮಣ ೧ಕ್ಕೆ	...	18- 8	
ಸತುವು		13–12	

The Canara Public Conveyance Co., Ltd, Mangalore.
(ESTABLISHED 1914.)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು
- ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು
- ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
- ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
- ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.
- ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇವರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ—ಈ ಪ್ರಾಂತ್ಯಗಳಿಗೆ ಈ ಕಂಪೆನಿಯು ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd., Mangalore. S K.

ಉಚಿತ! ಬಿಟ್ಟಿ!! ಪುಗಸಟ್ಟೆ!!!

ವೈದ್ಯವಿದ್ಯ



NO PRICE NO POSTAGE.

ಎಂಬ ಈ ಪುಸ್ತಕದಲ್ಲಿ ಆಯುರ್ವೇದ ಶಾಸ್ತ್ರದಲ್ಲಿ ಸ್ತ್ರೀಪುರುಷರು ಆರೋಗ್ಯದೃಢಕಾಯರಾಗಿ ಆರೋಗ್ಯದಿಂದ ಕೂಡಿದ ಸಂತಾನಗಳನ್ನು ಪಡೆದು ಸತಿಪತಿಯರು ಅನ್ಯೋನ್ಯವಾಗಿ ಅನುರಾಗವುಳ್ಳವರಾಗಿ ಸುಖದಿಂದಲೂ ಸಂತೋಷದಿಂದಲೂ ಸಂಸಾರಯಾತ್ರೆಯನ್ನು ಮಾಡಲು ಅತ್ಯಂತ ಉಪಯುಕ್ತವಾದ ವಿಷಯಗಳು ಅಲ್ಲಲ್ಲಿ ಹೇಳಲ್ಪಟ್ಟಿರುವುದನ್ನು ಒಂದಾಗಿ ಕ್ರೋಡೀಕರಿಸಿ ಅಜ್ಞಾನದಿಂದಲೂ ಸಂಕಷ್ಟದಿಂದಲೂ ನರಳುತ್ತಿರುವ ಸಂಸಾರಿಗಳನ್ನುದ್ಧಾರಮಾಡುವ ಸಲುವಾಗಿ ಈ ಪುಸ್ತಕವನ್ನು ಕ್ರಯವೂ ಅಂಚೇ ಹಾಸಲೂ ಇಲ್ಲದೆ ಬೇಡಿದವರಿಗೆ ಸರ್ವತ್ರ ಉಚಿತವಾಗಿ ಕಳುಹಿಸುತ್ತೇವೆ. ಹೆಚ್ಚು ಮಾಹಿತಿಗೆ ಪತ್ರ ಬರೆಯಿರಿ.

ರಾಜವೈದ್ಯ ನಾರಾಯಣಜಿ ಕೇಶವಜಿ,
57, ಬಂದರ್ ಸ್ಟ್ರೀಟ್, ಜಿ. ಟಿ. ಮದ್ರಾಸ್

ಸಾರಸ್ವತ.

ಕನ್ನಡ ಮತ್ತು ಕೊಂಕಣಿ ಭಾಷೆಗಳಲ್ಲಿ ಕಳೆದ ವಿಜಯದಶಮಿಯ ದಿನದಿಂದ ಪ್ರತಿ ದಶಮಿಗೆ ಹೊರಡುವ ಪತ್ರಿಕೆ.

ವಿ. ಎಸ್. ಕಾಮತ್,
ಮೂಲ್ಕಿ, ವಾಮನ ಕುಡುವ } ಸಂಪಾದಕರು.

ಮತಸಂಸ್ಥೆ ಮತ್ತು ಸಮಾಜಕ್ಕೆ ಸಂಬಂಧಪಟ್ಟ ಇತರ ಸಂಸ್ಥೆಗಳ ಸುಸಂಘಟನ.

ಸಮಾಜದೊಳಗೆ ಅನ್ಯೋನ್ಯ ಸಾಧನೆ.

ಸ್ತ್ರೀಸಮಾಜಕ್ಕೆ ಉಪಯುಕ್ತವಾದ ವಿಷಯಗಳ ನಿರೂಪಣ

ಮತಭಾವನೆಗಳ ಉಜ್ಜೀವನ ಇತ್ಯಾದಿ ಉದ್ದೇಶಗಳಿಂದ ಈ ಪತ್ರಿಕೆಯು ಹೊರಡಿಸಲ್ಪಡುವುದು. ಸಾರಸ್ವತ ಸಮಾಜವು ಇದಕ್ಕೆ ಪ್ರೋತ್ಸಾಹವನ್ನೀಯಬೇಕಾಗಿ ಪ್ರಾರ್ಥನೆ.

ಚಂದಾಹಣ ಅಂಚೆವೆಚ್ಚ ಕೂಡಾ ರೂ. ೧—೪—೦. ಪೋಷಕರು ರೂ. ೧೦—೦—೦. ಸಹಾಯಕರು ರೂ. ೫—೦—೦. ಮಾದರಿ ಸಂಚಿಕೆಯನ್ನು ಟಪ್ಪಾಲು ಖರ್ಚಿಗಾಗಿ ಅರ್ಧಾಣೆ ಸ್ಟಾಂಪು ಕಳುಹಿಸುವವರಿಗೆ ಉಚಿತವಾಗಿ ಕಳುಹಿಸುವೆವು.

ಕನ್ನಡ ನಾಡಿನಲ್ಲಿ ಪ್ರತಿ ಕಡೆಯಲ್ಲಿಯೂ ಬಾತಮಿದಾರರು ಬೇಕು.

ಎಲ್ಲಾ ಪತ್ರವ್ಯವಹಾರಗಳನ್ನು ಕೆಳಗಿನ ವಿಳಾಸಕ್ಕೆ ನಡೆಸಬೇಕು.

ಯು. ನಾರಾಯಣನಾಯ್ಕ, ಕಾರ್ಯದರ್ಶಿ,
ಸಾರಸ್ವತ, ಉಡುಪಿ.

ಕನ್ನಡಿಗರೆ! **ವಸಂತ.** ಓದುಕರೇ!

ಈಗಾಗಲೇ ಎರಡನೇ ಸಂಪುಟವು ಆರಂಭಿಸಲಿದೆ.

ಇತಿಹಾಸನಿಧಿ ಎಂದರೆ . . . . ವಸಂತ
ಸಮಾಜಸುಧಾರಕನೆಂದರೆ . . . . ವಸಂತ
ಕೈಗಾರಿಕೆಯ ಸಾಮ್ರಾಜ್ಯವೆಂದರೆ . . . . ವಸಂತ
ಕರ್ನಾಟಕ ಭಾಷಾಸೇವಕನೆಂದರೆ . . . . ವಸಂತ
ದೇಶವಿದೇಶ ಬಂಧುವೆಂದರೆ . . . . ವಸಂತ
ಕಾದಂಬರಿಗಳ ಭಂಡಾರವೆಂದರೆ . . . . ವಸಂತ
ಚಿತ್ತಾಕರ್ಷ ಚಿತ್ರಶಾಲೆಯೆಂದರೆ . . . . ವಸಂತ
ದೇಶಭಕ್ತನೆಂದರೆ . . . . ವಸಂತ

ಇಂತಹ ವಸಂತನು ಯಾರಿಗೆ ಬೇಕು, ಯಾರಿಗೆ ಬೇಡ?

48 (ಕ್ರೌನ್ ¼ ಪುಟ ಸ್ಸಾಯಿಜ) ಪುಟಗಳನ್ನು ಒಳ್ಗೊಂಡ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3—4—0 ಮಾತ್ರ.

ವ್ಯವಸ್ಥಾಪಕ,
ವಸಂತ ಕಾರ್ಯಾಲಯ,
ಕುಂದಾಪುರ, ದಕ್ಷಿಣ ಕನ್ನಡ

ದಕ್ಷಿಣ ಕನ್ನಡ ಜಿಲ್ಲೆಯ
ಪ್ರಾಚೀನ ಇತಿಹಾಸ
450 ಪುಟಗಳು ಕ್ರಯ ರೂ. 2—4—0
ಪುಸ್ತಕಗಳು ಸಿಕ್ಕುವ ವಿಳಾಸ:—
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

JUST ARRIVED
Continental Belts.
OF VARIOUS SIZES
Price Re. 1—10—0 each
Mangalore Trading Association,
Car Street, MANGALORE

ಬಂದು ನೋಡಿರಿ! ತಿಂದು ನೋಡಿರಿ!
ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ
ಪದಕವನ್ನು
ಬಹುಮಾನವಾಗಿ ಪಡೆದಿರುವ
ಎಸ್. ಪಿ. ಆಚಾರ್ಯ
ಇವರಿಂದ ತಯಾರಿಸಲ್ಪಟ್ಟ
ಉಪ್ಪಿನ ಕಾಯಿಗಳನ್ನು
ಬಂದು ನೋಡಿರಿ! ತಿಂದು ನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ, ಶುಂಠಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನ್ನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ
ಬಂದು ನೋಡಿರಿ! ತಿಂದು ನೋಡಿರಿ!
ಇಂಡಿಯನ್ ಸ್ವೀಟ್‌ಮೀಟ್ ಮಾರ್ಟ್.
ಮನೋಲ್ಲಾಸಿನಿ ಕಾಫಿ ಕ್ಲಬ್. ಮಾರ್ಕೆಟು ರೋಡು, ಮಂಗಳೂರು. ಅಥವಾ ಸದಾನಂದ ಕಾಫಿ ಕ್ಲಬ್ ರಥಬೀದಿ, ಮಂಗಳೂರು.

ಪ್ರಕಟಣೆ.

ನಾನು ಮತ್ತು ಶಂಬುಲಾಲ್ ರಾಘವಾಚೀ 1, ನಾತಾಲಾಲ್ ಪದಮ್ಸಿ 1 ಕೂಡ 3 ಜನರು ಒಟ್ಟಿನಲ್ಲಿ ಮಂಗಳೂರ ಬಂದರದಲ್ಲಿ ಪಾಲಿನಿಂದ ಶಂಬುಲಾಲ್ ನಾತಾಲಾಲ್ ಎಂಡ್ ಕೊ., ಹೆಸರಲ್ಲಿ ಈ ತಿಂಗಳ ತಾ. 19ರ ವರೆಗೆ ನಡಿಸಿ ಬಂದ ಬಿಳಿ ಅಡಿಕೆ, ಗೋಟು ವಗೈರೆಯ ವ್ಯಾಪಾರದ ಪೂರಾ ವಹಿವಾಟವನ್ನು ನಾನು ಸದರಿ 2 ಜನರಿಗೇನೇ ವಹಿಸಿಕೊಟ್ಟು ಸದರಿ ತಾ. 19ರಲ್ಲು ಡಿಜೊಲ್ಯೆಶನ್ ವಿದ್ (dissolution with release) ರಿಲ್ಲಿಜ್ ರಿಜಿಸ್ತ್ರಿ ನಿಶಿಂ ಬರಕೊಟ್ಟು ಲೆಕ್ಕಪತ್ರ ವಗೈರೆ ಸಮೇತ ಒಪ್ಪಿಸಿ ಬಿಟ್ಟುಕೊಟ್ಟು ಸದರಿ ವ್ಯಾಪಾರದಿಂದ ಅಗಲಿರುತ್ತೇನೆ. ಆದ್ದರಿಂದ ಇನ್ನು ಸದರಿ ವ್ಯಾಪಾರದ ಸಂಬಂಧವಾದ ಯಾವತ್ತು ಲೆಣೆ, ದೇಣೆ ವಗೈರೆಗೆ ಮೇಲ್ಕಂಡ 2 ಜನರೇ ಜವಾಬದಾರರಲ್ಲದೆ ನಾನು ಜವಾಬದಾರನಲ್ಲ ಎಂಬ ಸಂಗತಿ ತಿಳಿದಿರುವುದು.

T. Narsappa.
20—5—'25.

ನೋಟೀಸು.

ಮಂಗಳೂರು ಶಹಾರು ಅತ್ತಾವರ ಗ್ರಾಮದ ಬೋಳಾರ ಎಮ್ಮೆ ಕೆರೆ ಬಳಿಯಲ್ಲಿರುವ ನಾಗಪ್ಪಾಚಾರಿ ಹಿತ್ತಲಲ್ಲಿರುವ ಕೊರಗ ವ ಐತ ಮುಖಾರಿ ಮೊಮ್ಮಕ್ಕಳು ಅಂಗರ ಮುಖಾರಿ 1, ವ ಇವನ ತಮ್ಮಂದಿರು ಬಸ ಮುಖಾರಿ 1, ವ ಗುರುವ ಮುಖಾರಿ 1 ಕೂಡಾ 3 ಜನರು ಈ ಮೂಲಕ ಸರ್ವರಿಗೂ ತಿಳಿಯಪಡಿಸುವುದೇನಂದರೆ—

ನಮ್ಮ ಅಜ್ಜ ಕೊರಗ ಮುಖಾರಿ 1, ಐತ ಮುಖಾರಿ 1 ಕೂಡಾ 2 ಜನರು ತಾ. 23—11—1900ರಲ್ಲು ಮಂಗಳಾದೇವಿ ಅರ್ಚಕ ವೆಂಕಟ್ರಮಣ ಐತಾಳರ ಮಗ ನರಸಿಂಹ ಐತಾಳ ವ ಇವರ ಮಗ ವೆಂಕಟ್ರಮಣ ಐತಾಳ 1 ಕೂಡಾ 2 ಜನರಿಂದ ಖಂಡಿತ ಕ್ರಯಕ್ಕೆ ಪಡದ ಆಸ್ತಿಯೂ ವ ನಾಗಪ್ಪ ಆಚಾರಿಯವರಿಂದ ಮೂಲಗೇಣಿಗೆ ಪಡದ ಆಸ್ತಿಯು ಸಹಾ ಸದರಿ ಮೇಲ್ಕಂಡ ನಮ್ಮ ಅಜ್ಜ ಕೊರಗ ಮುಖಾರಿಯವರು ಈಚೆಗೆ ಮೃತಪಟ್ಟು ಆ ಲಾಗಾಯಿತು ಸದರಿ ಆಸ್ತಿಗಳನ್ನು ಐತ ಮುಖಾರಿ ಎಂಬವನೇ ಅನುಭವಿಸಿಕೊಂಡು ಬರುತ್ತಾನೆ. ಆದರೆ ಸದರಿ ಆಸ್ತಿಗಳನ್ನು ಈಗ ಆತನು ಪರಾಧೀನಮಾಡುವ ಇರಾಧೆಯಲ್ಲಿರುತ್ತಾನೆ ಎಂತ ನಾವು ತಿಳಿದಿರುತ್ತೇವೆ. ಸದರಿ ಮೃತ ಕೊರಗ ಮುಖಾರಿಯ ವಾರಿಸ್ದಾರರು ವ ಸದರಿ ಆಸ್ತಿಗಳ ಹಕ್ಕುದಾರರು ನಾವು ಸಹ ಆಗಿರುತ್ತೇವೆ. ಆದುದರಿಂದ ಸದರಿ ಐತ ಮುಖಾರಿ ಒಬ್ಬನಿಂದಲೇ ಯಾರಾದರೂ ಸದರಿ ಆಸ್ತಿಗಳನ್ನು ಕ್ರಯಕ್ಕೆ ಯಾ ಅಡವು ವಗೈರೆ ಪರಾಧೀನಕ್ಕೆ ನಮ್ಮ ಅನುಮತಿ ಇಲ್ಲದೆ ಪಡದರೆ ಅಂಥಾ ಪರಾಧೀನ ವಗೈರೆ ಎಷ್ಟು ಮಾತ್ರಕ್ಕೂ ಸಿಂಧು ಆಗಲಿಕ್ಕಿಲ್ಲ ಎಂತ ಈ ಮೂಲಕ ತಿಳಿಯಪಡಿಸಿರುತ್ತೇವೆ.

||| ಈ ಮೂರು ಗೆರೆ ಬಸಮುಖಾರಿಯ ರುಜು.

— ಸಿರಿಗನ್ನಡಂಗೆಲ್ಗೆ —
ಶ್ರೀ ಶಂಕರ ಕರ್ನಾಟಕ ಪುಸ್ತಕ ಭಂಡಾರವೂ
ಶ್ರೀ ವಿದ್ಯಾರಣ್ಯ ಪ್ರಕಾಶಕ ಸಂಸ್ಥೆಯೂ,
ಮಾಳಮಡ್ಡಿ, ದಾರವಾಡ.

ಕನ್ನಡಿಗರಿಗೆ ಬೇಕಾಗುವ ಎಲ್ಲಾ ತರದ ಕನ್ನಡ ಪುಸ್ತಕಗಳು ನಮ್ಮಲ್ಲಿ ಯೋಗ್ಯ ಬೆಲೆಗೆ ದೊರೆಯುವವು. ವಿದ್ಯಾರಣ್ಯ ಪುಸ್ತಕ ಮಾಲೆಯ ಕೆಳಗಿನ ೧, ೨, ೩, ಪುಸ್ತಕಗಳು ಚಂದಾದಾರರಾಗುವವರಿಗೆ ಅಂಚೆ ವೆಚ್ಚ ಸೇರಿ ೫ ರೂ. ೬ ಆಣೆಗೆ ದೊರೆಯುವವು. ಮುಂದೆ ಹೊರ ಬೀಳುವ ಮಾಲೆಯ ಪುಸ್ತಕಗಳನ್ನು ಚಂದಾದಾರರಿಗೆ ೧ ರೂಪಾಯಿಗೆ ೨ ಆಣೆಯಂತೆ ಕಡಿಮೆ ಬೆಲೆಗೆ ವಿ. ಪಿ. ಮಾಡುವೆವು. ಭಂಡಾರದ ಬೆಲೆ ಪಟ್ಟಿಗಾಗಿ ೪ ಆಣೆ ಅಂಚೆ ಟಿಕೇಟುಗಳನ್ನು ಕಳುಹಿಸತಕ್ಕದ್ದು.

		ರೂ.	ಆ.	ಪೈ.
೧.	ಕರ್ನಾಟಕ ಸಿಂಹಾಸನ ಸ್ಥಾಪನೆ	೧	೦	೦
೨.	ಕಥೆಗಳನ್ನೊಳಗೊಂಡ ಬೀರಬಲ್ಲ ಚರಿತ್ರ (ಸಚಿತ್ರ)	೧	೬	೦
೩.	ಛತ್ರಪತಿ ಶಿವಾಜಿ ಮಹಾರಾಜ "	೨	೧೨	೦
೪.	ಮಹಾರಾಣಿ ಲಕ್ಷ್ಮೀಬಾಯಿ ಝಾಂಸಿ "	೨	೦	೦
೫.	ಅಕ್ಬರ ಚಕ್ರವರ್ತಿ ಚರಿತ್ರ "	೧	೧	೦
೬.	ಚರಿತ್ರ ಸಂಗ್ರಹ ಭಾಗ ೧. "	೧	೪	೦
೭.	ತಿಲಕರ ಗೀತಾ ರಹಸ್ಯ	೩	೮	೦
೮.	ಶ್ರೀ ದಾಸಬೋಧ ಭಾಗ ೧. ೨. ೩.	೨	೧೪	೦
೯.	ರಾಷ್ಟ್ರಸಭೆಯ ಇತಿಹಾಸ	೨	೮	೦
೧೦.	ವಚನ ಜ್ಞಾನಸಿಂಧು	೪	೦	೦

ಇವಲ್ಲದೆ ನಮ್ಮಲ್ಲಿ ಎಲ್ಲಾ ತರದ ಕಾಯಿದೆ ಶಾಲೋಪಯೋಗಿ ಪುಸ್ತಕಗಳೂ ನಕಾಶೆ ಚಿತ್ರಗಳೂ ಬರವಣಗಳೂ ದೊರೆಯುವವು.

ಶ್ರೀಪಾದ ರಾಮಚಂದ್ರ ದೇಶಪಾಂಡೆ ಬಿ. ಯಸ್. ಸಿ.
ವ್ಯವಸ್ಥಾಪಕ.

ಮದ್ರಾಸು ನ್ಯಾಯವಿಧಾಯಕ ಸಭೆಯ ತಾ. 6-3-'25ರಲ್ಲು ನಡೆದ ಪ್ರೊಸಿಡಿಂಗ್ಸಿನಿಂದ ಮ| ರಾ| ರಘುಚಂದ್ರ ಬಲ್ಲಾಳರು ಆ ಸಮಯ ಮಾಡಿದ ಭಾಷಣದ ಈ ಕೆಳಗಿನ ಸಾರಾಂಶವನ್ನು ಪ್ರಕಟಣೆ ಬಗ್ಗೆ ಕಳುಹಿಸಿಕೊಟ್ಟಿರುವರು:—

ಮಾನ್ಯ ಅಧ್ಯಕ್ಷರೇ,

೧೯೨೫-೨೬ನೇ ಅಫಿಶಿಯಲ್ ವರ್ಷದ ಸರಕಾರಿ ಆದಾಯ ವೆಚ್ಚಗಳ ಅಂದಾಜು ಪಟ್ಟಿಯನ್ನು ನೋಡುವಾಗ್ಯೆ, ಖರ್ಚಿನ ಮೊಬಲಗು ಜಾಸ್ತಿ ತೋರುವದಾದರೂ ಸರಕಾರದವರ ಔದಾರ್ಯದ ವ ಮಾನ್ಯ ಫಿನಾನ್ಸ ಮೆಂಬರರ ದೀರ್ಘದರ್ಶಕತೆಯನ್ನು ಶ್ಲಾಘಿಸದೆ ಇರಲಿಕ್ಕೆ ಸಾಧ್ಯವಿಲ್ಲ.

"ಪರಂತು, ಸರಕಾರದ ಅಂಗಗಳಲ್ಲಿ, ಇಡೀ ಸೀಮೆಗೆ ಗವರ್ನರರು, ಜಿಲ್ಲೆಗೆ ಕಲೆಕ್ಟರರು, ತಾಲೂಕಿಗೆ ತಹಶೀಲ್‌ದಾರರು ಹ್ಯಾಗೆ ಮುಖ್ಯವಾದವರುಗಳೋ ಹಾಗೆಯೇ ಪ್ರತಿ ಒಂದು ಗ್ರಾಮಕ್ಕೆ ಒಬ್ಬೊಬ್ಬ ಪಟೇಲ ಯಾ ಗ್ರಾಮ ಮುಖ್ಯಸ್ಥನು ಅವಶ್ಯಕನಾದವನು. ಈ ಸಂಗತಿಯನ್ನು ಆಲೋಚಿಸಿ ಕಳೆದ ವರ್ಷ ಈ ಸಭೆಯಲ್ಲಿ ಬಹುಮತದಿಂದ ಮಂಜೂರಾದ ಠರಾವನ್ನು ಸರಕಾರದವರು ಅಂಗೀಕರಿಸಿ ಆ ಬಗ್ಗೆ ಬೇಕಾದ ದ್ರವ್ಯ ಸಂಚಯ ಈ ಅಂದಾಜಿ ಪಟ್ಟಿಯಲ್ಲಿ ಒದಗಿಸಿ ಇಡಲಿಲ್ಲ. ಇದು ಆಶ್ಚರ್ಯಕರ. ಇನ್ನಾದರೂ ದುರಸ್ತಿಯಿಂದ ಸಿದ್ಧಪಡಿಸುವ ಪಟ್ಟಿಯಲ್ಲಿ ಈ ಕುರಿತು ಒದಗಿಸುವದು ಅಗತ್ಯ.

"ಪೋಲೀಸ್ ಬಾಬಿನಲ್ಲಿ ಖರ್ಚು ಜಾಸ್ತಿಯಾಗಿ ಬರುವ ಸಂಗತಿಯು ನನ್ನ ಮನಸ್ಸಿಗೆ ಹೆಚ್ಚಾಗಿ ತೋರುತ್ತದೆ. ನಮ್ಮ ದಕ್ಷಿಣ ಕನ್ನಡದಲ್ಲಿ ಕೆಲವು ಪೋಲೀಸು ಸ್ಟೇಶನುಗಳನ್ನು ಇತ್ತಲಾಗೆ ವಜಾ ಮಾಡಿದ್ದಾರೆ. ಆದರೆ ಕಾರ್ಕಳ ಮತ್ತು ಉಪ್ಪಿನಂಗಡಿ ತಾಲೂಕುಗಳಲ್ಲಿ ದಿನೇದಿನೇ ಹೆಚ್ಚಾಗುವ ಕೊಲೆಗಳ ದೆಸೆಯಿಂದ ಪೋಲೀಸು ಫೌಜು ಬರಿಸಬೇಕಿತ್ತು. ಈ ಬಾಬಿನಲ್ಲಿ ನಿಗಾ ಕೊಟ್ಟು ಈಗಿರುವ ಸ್ಟೇಶನುಗಳಲ್ಲಿ ಆದರೂ ಆಫೀಸರರ ಸಂಖ್ಯೆಯನ್ನು ಹೆಚ್ಚಿಸಿ ಖರ್ಚನ್ನು ಪುನಃ ಹಂಚಿ ಹಾಕಬೇಕು.

"ನೆರೆಹಾವಳಿಗಳಿಂದ ಕಳೆದ ೨ ವರ್ಷಗಳಲ್ಲಿ ಉಂಟಾದ ನಷ್ಟದ ಸಂಗತಿ ಆಲೋಚಿಸುವಾಗ್ಯೆ ಮುಂಜಾಗ್ರತೆ ಬಗ್ಗೆ ಸಂಕಷ್ಟ ನಿವಾರಿಸಲಿಕ್ಕೆ ಪ್ರತ್ಯೇಕ ಸಂಚಯ ಒದಗಿಸಬೇಕು. ಅಥವಾ ಗಂಡಾಂತರ ಬಾರದಿದ್ದರೆ ಆ ಮೊಬಲಗು ವ್ಯವಸಾಯಕ ಸಾಲಗಳಿಗೆ ವಿನಿಯೋಗಿಸಲ್ಪಡುವ ಹಾಗೆ ಯೋಜನೆ ಮಾಡಬೇಕು."

"ಬಡಜನರ ಉಪಯೋಗದ ಬಗ್ಗೆ ಗ್ರಾಮ ಗ್ರಾಮಗಳಲ್ಲಿ ಆಯುರ್ವೇದೀಯ ಔಷಧಾಲಯಗಳನ್ನು ಸ್ಥಾಪಿಸಿದರೆ ವೈದ್ಯಬಾಬಿನಲ್ಲಿ ಖರ್ಚು ಕಡಿಮೆ ಆಗಬಹುದಷ್ಟೆ. ಆಯುರ್ವೇದೀಯ ಚಿಕಿತ್ಸಾ ಕ್ರಮಗಳಲ್ಲಿ ಜನರಿಗೆ ತುಂಬಾ ವಿಶ್ವಾಸವಿದೆ. ಔಷಧಗಳಿಗೂ ಖರ್ಚು ಕಮ್ಮಿ. ಅದರ ಪ್ರಚಾರದಿಂದ ಸರಕಾರದವರು ಜನಸಾಮಾನ್ಯತೆಯಲ್ಲಿ ಹೆಚ್ಚಿನ ಶ್ರೇಯ ವ ಪ್ರೇಮವನ್ನು ಸಂಪಾದಿಸ ಬಹುದು."

"ದಕ್ಷಿಣ ಕನ್ನಡದಲ್ಲಿ ನೆರೆಹಾವಳಿಯಿಂದ ನಷ್ಟವಾದ ವ ನಾದುರುಸ್ತಾದ ರಸ್ತೆಗಳನ್ನು ವ ಸಂಕಗಳನ್ನು ಸರಿಪಡಿಸಲಿಕ್ಕೆ ಜಾಸ್ತಿ ಹಣದ ಖರ್ಚಿಗೆ ಯೋಜನೆ ಇಡಲೇ ಬೇಕು. ಅಂಥಾ ನಷ್ಟಗಳಿಂದ ಪೀಡಿತವಾದ ಇತರ ಜಿಲ್ಲೆಗಳ ಮಟ್ಟಿಗೆ ಸಹಾ ಅಂಥ ಏರ್ಪಾಡು ಮಾಡಬೇಕು."

"ಕನ್ನಡಾ ಜಿಲ್ಲೆಯ ಜನರು ಬೇರೆ ಜಿಲ್ಲೆಯವರಿಗಿಂತ ಬಡವರಾದ್ದರಿಂದ ಮಂಗಳೂರಿನಲ್ಲಿ ಕಟ್ಟುವರೆ ಯೋಚಿಸಿದ ಹೆಂಗಸರ ವ ಮಕ್ಕಳ ಆಸ್ಪತ್ರೆಗೆ ಸರಕಾರದವರ ಅತ್ಯಂತ ಉದಾರಾಶ್ರಯ ಅಗತ್ಯ. ಆ ವಿನಹಾ, ಲೋಕಲ್ ಬೋರ್ಡುಗಳಿಗೆ ವ ಮಂಗಳೂರ ಮುನಿಸಿಪಾಲಿಟಿಗೆ ಸಹಾ ಹೆಚ್ಚಿನ ದ್ರವ್ಯ ಸಹಾಯ ಮಾಡಬೇಕು. ಆ ಮುನಿಸಿಪಾಲಿಟಿಯಲ್ಲಿ ನೀರಿನ ನಳ್ಳಿಗಳು ಹಾಕುವರೆ ದ್ರವ್ಯ ಬೇಕು."

"ಮಂಗಳೂರ ಗವರ್ನಮೆಂಟ್ ೨ನೇ ಗ್ರೇಡ ಕೊಲೇಜನ್ನು ೧ನೇ ಗ್ರೇಡಿಗೆ ತರದಿದ್ದರೆ ದಕ್ಷಿಣ ಕನ್ನಡದಿಂದ ಇಂಟರ ಆರ್ಟ್ಸ್ ಪರೀಕ್ಷೆ ತೇರ್ಗಡೆ ಪಟ್ಟ ವಿದಾರ್ಥಿಗಳಿಗೆ ಮುಂದಿನ ಅಭ್ಯಾಸಕ್ಕೆ ಸೆಂಟ್ ಅಲೋಸಿಯಸ್ ಕೊಲೇಜಿನಲ್ಲಿ ಸ್ಥಳಗಳು ಸಿಕ್ಕದೆ ದೂರ ದೂರ ಜಿಲ್ಲೆಗಳಿಗೆ ಹೋಗಬೇಕಾಗುತ್ತದೆ. ಇದೇ ರೀತಿ ತಲಚೇರಿ ವ ಪಾಲಘಾಟ ಕೊಲೇಜುಗಳನ್ನು ೧ನೇ ಗ್ರೇಡಿಗೆ ತಂದರೆ ಮಲಬಾರ ವಿದ್ಯಾರ್ಥಿಗಳಿಗೆ ಹೆಚ್ಚಿನ ನಿವೃತ್ತಿ ಸಿಕ್ಕೀತು."

"ಅಯ್ಯಾ, ನಾನು ಜೈನ ಮತಸ್ಥರ ಪ್ರತಿನಿಧಿಯಾಗಿರುವದರಿಂದ ಅವರ ವರ್ಗದ ಸ್ಥಿತಿ ಮಟ್ಟಿಗೆ ಕೊಂಚ ಪ್ರಸ್ತಾಪ ಎತ್ತದೆ ಇರಲಾರೆ."

"ನಮ್ಮ ಮತಸ್ಥರು ಪ್ರಾಚೀನ ಕಾಲದಿಂದ ಪ್ರಪಂಚದಲ್ಲಿ ಇದ್ದವರಾಗಿ ಹಿಂದಣ ಶತಮಾನಗಳಲ್ಲಿ ನಾಗರಿಕತೆಯ ಶಿಖರವನ್ನೇರಿದವರಾದರೂ, ಈಗಿನ ಸ್ಥಿತಿ ಅತ್ಯಂತ ಶೋಚನೀಯವಾಗಿದೆ. ಇಂಗ್ಲಿಷ್ ವಿದ್ಯೆಯಲ್ಲಿ ಬಹಳ ಹಿಂದುಳಿದವರಾಗಿದ್ದೇವೆ. ಹೀಗಾಗಿ ಈ ವರ್ಗದವರನ್ನು ಮುಂದೆ ತರಲಿಕ್ಕೆ ಅಗತ್ಯವುಳ್ಳ ಏರ್ಪಾಡು ಮಾಡುವುದು ಸರಕಾರದವರ ಮುಖ್ಯ ಕರ್ತವ್ಯ."

"ಜೈನರೆಂದರೆ ಪ್ರತ್ಯೇಕ ಒಂದು ವರ್ಗದವರೆಂತ ಇದೇ ಸಭೆಯಲ್ಲಿ ನಾನು ಕೇಳಿದ ಪ್ರಶ್ನೆಗೆ ಸರಕಾರದವರ ಉತ್ತರವು ಕಳೆದ ಅಗೋಸ್ತು ತಿಂಗಳಲ್ಲಿ ಸಿಕ್ಕಿಯದೆ."

"ಪೋಲೀಸ್ ಇಲಾಖೆಯಲ್ಲಿ ನಮ್ಮವರು ಕೆಲವರಿದ್ದಾರೆ. ಇನ್ಸ್‌ಪೆಕ್ಟರ್‌ರಾದವರಿಗೆ ಸುಪರಿಂಟೆಂಡೆಂಟ ಉದ್ಯೋಗಗಳಿಗೆ ಮತ್ತು ಕಮ್ಮಿ ದರ್ಜೆಯವರಿಗೆ ಇನ್ಸ್‌ಪೆಕ್ಟರ್ ಉದ್ಯೋಗಗಳಿಗೆ ನೇಮಕ ಮಾಡಬೇಕು."

"ಕಮ್ಮಿ ದರ್ಜೆಯ ಪರೀಕ್ಷೆ ಪಾಸಾದವರಿಗೆ ಮತ್ತು ಮರ್ಯಾದಸ್ಥ ಕುಟುಂಬಗಳ ಯುವಕರಿಗೆ ದೊಡ್ಡ ದೊಡ್ಡ ಉದ್ಯೋಗಗಳನ್ನು ಕೊಡಬೇಕು."

"ಈ ಸಭೆಗೆ ಇನ್ನೂ ೩ ಮಂದಿ ಜೈನ ಪ್ರತಿನಿಧಿಗಳನ್ನು ನೇಮಕ ಮಾಡುವದಲ್ಲದೆ, ಡಿಸ್ಟ್ರಿಕ್ಟ್ ವ ತಾಲೂಕು ಬೋರ್ಡುಗಳಿಗೂ ಮುನಿಸಿಪಾಲಿಟಿಗಳಿಗೂ ನೇಮಿಸಬೇಕು. ಆ ವಿನಹಾ ಸ್ಪೆಶಲ್ ಮೆಜಿಸ್ಟ್ರೇಟರಾಗಿ ಸಹಾ ನೇಮಿಸಬೇಕು."

"ಜೈನ ವಿದ್ಯಾರ್ಥಿಗಳಿಗೆ ವಿಲಾಯತಿಗೆ ಹೋಗಿ ಪ್ರೌಢ ವಿದ್ಯಾಭ್ಯಾಸ ಮಾಡುವ ಬಗ್ಗೆ ವ ಇಲ್ಲಿಯ ಗವರ್ನಮೆಂಟ ವಿದ್ಯಾಶಾಲೆಗಳಲ್ಲಿ ಸಹಾ ವೇತನಗಳನ್ನು ಕೊಡಬೇಕು. ಅದಲ್ಲದೆ ಜೈನ ಸಂಸ್ಕೃತ ಪಾಠಶಾಲೆಗಳಿಗೂ ವಿದ್ಯಾರ್ಥಿನಿಲಯಗಳಿಗೂ ಧಾರಾಳವಾಗಿ ದ್ರವ್ಯ ಸಹಾಯ ಕೊಡಬೇಕು."

"ಜೈನ ವಿದ್ಯಾರ್ಥಿಗಳು ಈ ಸೀಮೆಯಲ್ಲಿ ಇಂಗ್ಲೀಷ್ ವಿದ್ಯೆಯನ್ನು ಕಲಿಯಲಿಕ್ಕೆ ಸೌಕರ್ಯಗಳನ್ನು ಕಾಣದೆ ಮೈಸೂರು ಸೀಮೆಯಲ್ಲಿ ವಿದ್ಯೆಯನ್ನು ಸಂಪಾದಿಸುತ್ತಾರೆ. ಮತ್ತು ಪರೀಕ್ಷೆಗಳನ್ನು ಉತ್ತೀರ್ಣರಾಗುತ್ತಾರೆ. ಅಂಥವರು ಅವರ ಈ ಸೀಮೆಗೆ ವಾಪಾಸು ಬರುತ್ತಲೇ ಇಲ್ಲಿ ಪಾಸಾದವರ ಹಾಗೆಯೇ ಸರಕಾರಿ ಉದ್ಯೋಗಗಳನ್ನು ಕೊಡಲಿಕ್ಕೆ ಅಡ್ಡಿ ಮಾಡಬಾರದು."

"ಜೈನ ಮತ ಧರ್ಮವನ್ನು ಪ್ರಚಾರಗೊಳಿಸುವ ಛಾಪಖಾನೆಗಳಿಗೆ ವ ಪತ್ರಿಕೆಗಳಿಗೆ ಸರಕಾರಿ ದ್ರವ್ಯ ಸಹಾಯ ಬೇಕು."

"ಕನ್ನಡ ಪತ್ರಿಕೆಗಳನ್ನು ಈ ಸಭೆಯ ಪುಸ್ತಕ ಭಂಡಾರಗಳಲ್ಲಿಯೂ ವಾಚನಾಲಯದಲ್ಲಿಯೂ ಇರಗೊಳಿಸಬೇಕು."

"ಈ ಚೆನ್ನಪುರಿಯಲ್ಲಿ ಇಂಗ್ಲೀಷಿನಲ್ಲಿ ಪ್ರಕಟವಾಗುವ ಅಖಿಲ ಭಾರತ ದಿಗಂಬರ ಜೈನ ಸಮಾಜದ ಪತ್ರವನ್ನು ಈ ಸಭೆಯ ಪುಸ್ತಕ ಭಂಡಾರದಲ್ಲಿಯೂ ಸರಕಾರಿ ವಿದ್ಯಾಶಾಲೆಗಳಲ್ಲಿಯೂ ಪ್ರಚುರ ಪಡಿಸಬೇಕು".

ವಿದೇಶ ವರ್ತಮಾನ.

— ಜಪಾನಿನಲ್ಲಿ ಭಯಂಕರ ಭೂಕಂಪವು ಒದಗಿ ಬಹಳ ನಾಶವಾಗಿರುವದು. ಅಲ್ಲಿಯ ಒಂದು ಪಟ್ಟಣದಲ್ಲಿ ಭಯಂಕರ ಬೆಂಕಿಯು ಉತ್ಪನ್ನವಾಗಿ ಸಂಪೂರ್ಣ ಸುಟ್ಟಿರುವದು. ಇತ್ತರ ವರೆಗಿನ ವರ್ತಮಾನದ ಮೇರೆಗೆ ೨೩೮ ಜನರು ಮಡಿದಿರುವರು! ರೈಲ್ವೆ ಖಾತೆಯವರಿಗೆ ಅರ್ಧ ಮಿಲಿಯ "ಯೆನ್" ನಷ್ಟವಾಗಿದೆ!

— ಸುಪ್ರಸಿದ್ಧ ಇಂಗ್ಲಿಷ ಕಾದಂಬರಿಕಾರರಾದ ಸರ್. ರಾಯಿಡರ್ ಹೆಗರ್ಡರು ಸ್ವರ್ಗಲೋಕವಾಸಿಯಾದರು.

— ಇಂಗ್ಲಂಡಿನಲ್ಲಿ ಬೊಲಶೇವಿಕರ ವಾಙ್ಮಯವನ್ನು ಹಬ್ಬಗೊಡುವದಿಲ್ಲ. "ಬೊಲಶೇವಿಕ ತತ್ವದ ಪುಸ್ತಕ ವ್ಯಾಪಾರವನ್ನು ಮಾಡುವ ಒಂದು ಅಂಗಡಿಯನ್ನು ಸರಕಾರವು ಮುಚ್ಚಿಸಿರುವದು.

— ಕೃತ್ರಿಮ ರೇಶಿಮೆಯನ್ನು ತಯಾರಿಸುವಂತೆಯೆ ಕೃತ್ರಿಮ ಅಫೀಮನ್ನು ತಯಾರಿಸುವವರಿಗೆ ಮೂರು ಲಕ್ಷ ರೂಪಾಯಿಯ ಇನಾಮನ್ನು ಕೊಡಲು ಒಬ್ಬರು ಪ್ರಕಟಿಸಿರುವರು. ಅಫೀಮುಭಕ್ತರ ಭಾಗ್ಯೋದಯವೇ ಸರಿ!

— ಪ್ರಕೃತ ಇಂಗ್ಲಂಡಿನಲ್ಲಿರುವ ಗ್ವಾಲ್ಹೇರದ ಮಹಾರಾಜರಿಗೆ ಒಪರೇಶನ ಮಾಡಲಾಗಿದೆ. ಅವರ ಪ್ರಕೃತಿಮಾನದ ಬಗ್ಗೆ ಭಯಪಡಬೇಕಾದಿಲ್ಲವೆಂದು ಡಾಕ್ಟರರು ಹೇಳುತ್ತಾರೆ.

— ಉತ್ತರ ಧ್ರುವಕ್ಕಾಗಿ ವಿಮಾನದಲ್ಲಿ ಕೂತುಹೋದ ಕೆ. ಎಮ್ಯನ್ಸನ ಎಂಬವನ ಸುದ್ದಿಯೆ ಇಲ್ಲದಾಗಿದೆ. ಅವನನ್ನು ಹುಡುಕಲು ಹೋದ ಇಬ್ಬರು ಗೃಹಸ್ಥರು ಈಗ ಪ್ರಯಾಣಮಾಡುವದು ಅಸಾಧ್ಯವೆಂದು ತಿರುಗಿ ಬಂದಿರುವರು.

— ಸೈಕಲ್ಲಿನಲ್ಲಿಯೇ ಭೂಮಿಯ ಎಲ್ಲ ಭಾಗಗಳನ್ನು ನೋಡಬೇಕೆಂದು ಹಿಂದುಸ್ಥಾನದ ದಾವರ ಎಂಬವನು ಹೊರಟಿರುವನು. ಸದ್ಯದಲ್ಲಿ ಇವನು ಗೊಥೆನ್‌ಬರ್ಗದಲ್ಲಿ ಬಂದಿರುವನು.

— ಉರುವರಾ ಎಂಬ ಹಿಂದಿ ನಾಯಕನು ಪ್ರಕೃತ ಅಸ್ವಸ್ಥನಾಗಿ ಅಮೇರಿಕದ ನ್ಯೂಯೋರ್ಕ ಪಟ್ಟಣದಲ್ಲಿರುವನು. ಇವನು ಅಸ್ವಸ್ಥದಲ್ಲಿರುವಾಗ ತಾನು ಹಿಂದುಸ್ಥಾನದೊಳಗಿನ ಗಂಗಾನದಿಯ ತೀರದಲ್ಲಿ ನಾನು ಇಹಲೋಕ ಬಿಡಲು ಇಚ್ಛಿಸುತ್ತೇನೆಂದು ತನ್ನ ಸ್ನೇಹಿತರಿಗೂ ಅಧಿಕಾರಿಗಳಿಗೂ ತಿಳಿಸಿದನು. ಮರಣದ ಪೂರ್ವದಲ್ಲಿ ಗಂಗಾನದಿಯ ಪುಣ್ಯತೀರ್ಥದಲ್ಲಿ ಶುದ್ಧನಾಗಬೇಕೆಂದು ಅವನ ಉದ್ದೇಶವಿತ್ತು. ಆದರೆ ಅವನ ಅಸ್ವಸ್ಥೆಯು ಬಹು ಕಠಿಣ ಅವಸ್ಥೆಯಲ್ಲಿರುವುದನ್ನು ನೋಡಿ ಅವನ ಡಾಕ್ಟರರು ಹೋಗಬಿಡಲಿಲ್ಲ!

— ನಿರುದ್ಯೋಗಿಗಳಾಗಿ ತಿರುಗುವವರನ್ನು ಯಾವದಾದರು ಉದ್ಯೋಗಧಂದೆಯನ್ನು ಕೊಡಬೇಕೆಂಬ ಠರಾವನ್ನು ಲೇಬರ ಪಕ್ಷದವರು ಇಂಗ್ಲಂಡದ ಪಾರ್ಲಿಮೆಂಟಿನಲ್ಲಿ ತಂದಿದ್ದರು. ಆದರೆ ಕನ್ಸರವೇಟಿವ್‌ಗಳ ಬಹುಮತದಿಂದ ಅದು ಬಿದ್ದುಹೋಯಿತು.

— ರೀಫ ಮತ್ತು ಫ್ರೆಂಚರಲ್ಲಿ ನಡೆದ ಯುದ್ಧದ ಪ್ರಥಮರಂಗವು ಅಂತ್ಯವಾಗಿ ಅದರಲ್ಲಿ ರೀಫರಿಗೆ ಪರಾಜಯವಾಯಿತು.

— ಮೆಡ್ರಿಡ್‌ದಲ್ಲಿ ಪ್ರೆಸ ಎಕ್ಟಿನ ಉಪಯೋಗವನ್ನು ಭಯಂಕರ ರೀತಿಯಲ್ಲಿ ನಡಿಯುತ್ತಿದೆ. ಹಿಂಡನಬರ್ಗರ ಚಿತ್ರವನ್ನು ಅಲ್ಲಿಯ ಸೆನ್ಸರರಿಗೆ ತೋರಿಸದೆ ಛಾಪಿಸಿದಕ್ಕಾಗಿ ಲಿಬರಲ್ ಪಕ್ಷದ ಒಂದು ಪತ್ರದ ಮಾಲಿಕರಿಗೆ ದಂಡ ಮಾಡಿರುವರು.

— ಸ್ಥಾನಿಕ ಮತ್ತು ಪ್ರಾಂತಿಕ ಚುನಾವಣೆಗೆ ಹೆಂಗಸರಿಗೆ ಮತ ಕೊಡುವ ಅಧಿಕಾರವಿರಬೇಕೆಂಬ ಠರಾವು ಇಟಲಿಯನ್ ಪಾರ್ಲಿಮೆಂಟಿನಲ್ಲಿ ಪಾಸಾಗಿದೆ.

— ಪರಶಿಯದ ಕೊಪ್ಪಲರಾದ ಆಗಾ ಇಸ್ಫೆನಿಯವರು ಕಲಕತ್ತೆಯಲ್ಲಿ ಪ್ರಯಾಣ ಮಾಡುತ್ತಿದ್ದಾಗ ಮೃತ ಪಟ್ಟರು.

— ರಶಿಯದಲ್ಲಿ ಪೌರ್ವಾತ್ಯ ಜನರಿಗೆಂದು ಯುನಿವರ್ಸಿಟಿಯು ಸ್ಥಾಪನೆಯಾಗಿರುವದು.

— ಲಂಡನ ಬೀದಿಗಳಲ್ಲಿ ವ್ಯಾಪಾರ ಮಾಡುತ್ತಿದ್ದ ನೂರಮಹಮ್ಮದನೆಂಬ ಒಬ್ಬ ಹಿಂದಿಯನ್ನು ಅಲ್ಲಿಯವರು ಕೊಂದರಂತೆ. ಸಾಧಾರಣ ೧೦ ಅಪರಾಧಿಗಳನ್ನು ಹಿಡಿದಿರುವರು.

— ಇಂಗ್ಲಂಡದ ಯುವರಾಜರು ಪ್ರಕೃತ ಆಫ್ರಿಕದಲ್ಲಿ ಪ್ರಯಾಣ ಮಾಡುತ್ತಿರುವರು. ಆ ಸಂದರ್ಭದಲ್ಲಿ ಅಲ್ಲಿ ನೇಟಿವ ಜನರಿಗೆ ವಿದ್ಯೆಯನ್ನು ಪಡೆದು ಇತರ ಜನಾಂಗದವರಂತೆ ಮುಂದೆ ಬರಬೇಕೆಂಬ ಸದುಪದೇಶವನ್ನು ಕೊಟ್ಟರು.

— ಹಿಂದುಸ್ಥಾನ ವಿಷಯ ಸದ್ಯದಲ್ಲಿ ಲೋ. ಬರ್ಕನಹೆಡ್ ರೆಡಿಂಗರಲ್ಲಿ ನಡಿಯುತ್ತಿದ್ದ ಆಲೋಚನೆಗಳನ್ನು ಸದ್ಯದಲ್ಲಿಯೆ ಪ್ರಕಟ ಮಾಡುವರೆಂದು ಅಂಡರ ಸೆಕ್ರೆಟರಿಗಳಾದ ವಿಂಟರಟನ್ ಸಾಹೇಬರು ಪಾರ್ಲಿಮೆಂಟಿನಲ್ಲಿ ಒಂದು ಪ್ರಶ್ನೆಗೆ ಉತ್ತರಿಸಿರುವರು.

ಒಳದೇಶ ವರ್ತಮಾನ.

— ಮುಂಬಯಿಯಲ್ಲಿ ನಡಿಯುತ್ತಿದ್ದ ಸುಪ್ರಸಿದ್ಧ ಬಾವಲಾ ಖೂನಿಯ ತನಿಖೆಯು ಕಳೆದ ಸೋಮವಾರ ಅಂತ್ಯವಾಯಿತು. ನ್ಯಾಯಮೂರ್ತಿಗಳು ಅಪರಾಧಿಗಳ ಪೈಕಿ ಇಬ್ಬರನ್ನು ನಿರಪರಾಧಿಗಳನ್ನಾಗಿಯೂ ಮೂವರನ್ನು ಫಾಶಿಶಿಕ್ಷೆಗೂ ಇತರರನ್ನು ಜನ್ಮಟಾಪು ಶಿಕ್ಷೆಗೂ ಒಳಪಡಿಸಿರುವರು.

— ಮಹಾತ್ಮಜಿಯವರು ಪೂರ್ವಬಂಗಾಲದ ತಮ್ಮ ಪ್ರಯಾಣವನ್ನು ಮುಗಿಸಿ ಪಶ್ಚಿಮ ಬಂಗಾಲಕ್ಕೆ ತೆರಳಿರುವರು.

— ಮೈಸೂರು ಸಂಸ್ಥಾನದ ರಾಜಕೀಯ ಪರಿಷತ್ತನ್ನು ಬರುವ ಅಗೋಸ್ತು ತಿಂಗಳಲ್ಲಿ ಸೇರಿಸಬೇಕೆಂದು ಅಲ್ಲಿಯ ಸ್ವರಾಜ್ಯ ಸಂಘವು ನಿಶ್ಚಯಿಸಿಯದೆ. ಈ ಸಮಾರಂಭಕ್ಕೆ ಮ. ಗಾಂಧಿಯವರು ಅಧ್ಯಕ್ಷರಾಗಲು ಒಪ್ಪಿರುವರು.

— ಡೆಕ್ಕನ್ ಸ್ಟೇಟ್ಸ್‌ಗಳೊಳಗಿನ ಪ್ರಜಾಪರಿಷತ್ತು ಕಳೆದವಾರ ಪುಣೆಯಲ್ಲಿ ಶ್ರೀ ಜೀ. ಎಸ್ ಖಾಮಕರ ಅಧ್ಯಕ್ಷತೆಯಲ್ಲಿ ನಡೆದು ಬಂತು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಸಂಸ್ಥಾನಾಧಿಪತಿಗಳು ತಮ್ಮ ಪ್ರಜೆಗಳಿಗೆ ಸ್ವಾತಂತ್ರ್ಯವನ್ನು ಕೊಟ್ಟು ಅವರನ್ನು ಮೇಲಕ್ಕೆ ತರಬೇಕೆಂದು ಸೂಚಿಸಿರುವರು.

— ವರದರಾಜಲು ನಾಯಡುಗಳು ತಮಿಳ ಗುರುಕುಲದಲ್ಲಿ ನಡಿಸಿರುವ ದುರಾಗ್ರಹವನ್ನು ನಿಷೇಧಿಸಿ ಪಂಜಾಬದ ಸನಾತನ ಪ್ರತಿನಿಧಿ ಸಭೆಯ್ ಮಹಾತ್ಮಜಿಯವರಿಗೆ ತಮ್ಮ ಹೇಳಿಕೆಯನ್ನು ತಿಳಿಸಿರುವದು.

— ಹಿಂದಿ ವಿದ್ಯಾರ್ಥಿಗಳಿಗೋಸ್ಕರ ಎರಡು ಮಿಲಿಟರಿ ಶಾಲೆಯನ್ನು ಬರುವ ಸಪ್ಟೆಂಬರದಿಂದ ಸರಕಾರವು ಸ್ಥಾಪಿಸಲಿಕ್ಕಿದೆಂದು ಪ್ರಕಟವಾಗಿದೆ. ಒಂದು ಶಾಲೆಯು ಜೆಹಲಮ್‌ದಲ್ಲಿಯೂ ಇನ್ನೊಂದು ಜಲಂಧರದಲ್ಲಿಯೂ ಸ್ಥಾಪಿಸಲಾದೀತು. ಆದರೆ ದಕ್ಷಿಣ ಹಿಂದುಸ್ಥಾನದಲ್ಲಿ ಮಾತ್ರ ಇಲ್ಲವೆ?

— ಮದ್ರಾಸ ಸಂಸ್ಥಾನದೊಳಗಿನ ಡಿಸ್ಟ್ರಿಕ್ಟ ಕಲೆಕ್ಟರರ ಪರಿಷತ್ತು ನಮ್ಮ ಪ್ರಾಂತಾಧಿಪತಿಗಳಾದ ಗವರ್ನರರ ಅಧ್ಯಕ್ಷತೆಯಲ್ಲಿ ನಡೆಯುತ್ತಿದೆ.

— ಆಸ್ಸಾಮಿನೊಳಗಿನ ಕೌನ್ಸಿಲ ಮೆಂಬರರೊಬ್ಬರು ಪೋಲೀಸ ಸಬ್ ಇನ್ಸಪೆಕ್ಟರನೊಡನೆ ಕೆಲವು ಕಾಗದಗಳನ್ನು ಯಾರೊ ಕಳವು ಮಾಡಿದ್ದಾರೆಂದು ಹೇಳುವಾಗ ಆ ಸಬ್ ಇನ್ಸಪೆಕ್ಟರನು ಉದ್ಧಟ ರೀತಿಯಿಂದ ವರ್ತಿಸಿ ಅವರ ಮೇಲೆ ಬೀಳಹೋದನು. ಆಗ ಅವರು ಆತ್ಮಸಂರಕ್ಷಣೆಮಾಡಲು ಉದ್ಯುಕ್ತರಾದಾಗ ಮೂರು ನಾಲ್ಕು ಪೋಲೀಸ ನೋಕರರು ಬಂದು ಅವರನ್ನು ಕೆಡವಿದರು. ಈ ಎಲ್ಲ ಸಮಾಚಾರವನ್ನು ಆ ಗೃಹಸ್ಥರು ಮೇಲಿನ ಅಧಿಕಾರಿಗಳಿಗೆ ತಿಳಿಸಿರುವರು.

— ಮುಂಬಯಿಯಲ್ಲಿ ಹಿಂದುಸ್ಥಾನದ ಮಾಜಿ ಸೆಕ್ರೆಟರಿ ಮೋಂಟೆಗ್ಯುಗಳ ಪ್ರತಿಮೆಯನ್ನು ನಾಮದಾರ ಶಾಸ್ತ್ರಿಯವರ ಕಡೆಯಿಂದ ಸ್ಥಾಪಿಸಲಾಯಿತು.

— ಲೋಕಮಾನ್ಯ ತಿಲಕರನ್ನು ದಹನ ಮಾಡಿದ ಭೂಮಿಯಲ್ಲಿ ಒಂದು ಸ್ಮಾರಕ ಕಟ್ಟಿಸಲಿಕ್ಕಾಗಿ ಮುಂಬಯಿ ಕೊರ್ಪರೇಶನು ೬೦೬ ರೂಪಾಯಿಗಳನ್ನು ಅರ್ಪಣೆ ಮಾಡಿಯದೆ.

— ಮದ್ರಾಸ ಸಂಸ್ಥಾನದೊಳಗಿನ ಪೋಸ್ಟಮನ್ನರ ಐದನೆ ಪರಿಷತ್ತು ಕಂಜೀವರಮ್‌ದಲ್ಲಿ ರಾಮಸ್ವಾಮಿ ಅಯ್ಯಂಗಾರರ ಅಧ್ಯಕ್ಷತೆಯಲ್ಲಿ ನಡೆದು ಬಂತು.

— ರಾಷ್ಟ್ರದಲ್ಲಿ ಐಕ್ಯವಾಗಬೇಕೆಂದು ರಾಷ್ಟ್ರೀಯ ಸಭೆಯಲ್ಲಿ ಎಲ್ಲ ಸಂಘದವರಿಗೂ ಬದಲಾಗುವಂತೆ ಆದ ವ್ಯವಹಾರ ರಚನೆಯನ್ನು ಬದಲಾಯಿಸಬೇಕಾಗಿ ಹಲವು ಕಡೆಗಳಿಂದ ಪ್ರಯತ್ನ ನಡಿಯುತ್ತಿದೆ. ಶ್ರೀಮತಿ ಸರೋಜಿನಿ ದೇವಿಯವರು, ಎಲ್ಲಾ ಮುಖಂಡರ ಒಂದು ಸಭೆಯನ್ನು ಸೇರಿಸಿ ಐಕ್ಯಮಾಡಲು ಇಚ್ಛಿಸುತ್ತಿದ್ದಾರೆ.

— ರೈಲ್ವೆ ಗಾಡಿಗಳಲ್ಲಿ ಆಗಾಗ್ಗೆ ಕಳವುಗಳು ನಡೆಯುತ್ತಿರುತ್ತವೆ. ಎಷ್ಟೋ ಸಂದರ್ಭಗಳಲ್ಲಿ ಈ ಕಳ್ಳರು ಸಿಗದೆ ಹೋಗುವುದೂ ಉಂಟು. ಸದ್ಯದಲ್ಲಿಯೇ ವೆಂಕಟಗಿರಿಯ ರಾಜರು ಪ್ರಯಾಣಮಾಡುತ್ತಿದ್ದಾಗ ಒಂದು ಗಾಡಿಯಿಂದ ಮತ್ತೊಂದು ಗಾಡಿಗೆ ಹೋಗುವಾಗ ಅವರ ಆಭರಣಗಳಿರುವ ಒಂದು ಪೆಟ್ಟಿಗೆಯನ್ನು ಕಳವು ಮಾಡಿದರು. ಅವನನ್ನು ಬಹು ಪ್ರಯಾಸ ಪಟ್ಟು ಹಿಡಿದರು. ಆ ಕಳ್ಳನೊಟ್ಟಿಗೆ ಇನ್ನೊಬ್ಬನು ಸಹಾಯ್ಯಕನಿದ್ದನೆಂದು ಹೇಳುತ್ತಾರೆ ಆದರೆ ಅವನ ಸುಳಿವೆ ಇಲ್ಲ.

— ಗುಂಟೂರು ತಾಲೂಕು ಬೋರ್ಡು ಪ್ರೆಸಿಡೆಂಟರಾದ ಮಿ| ಶಿವರಾಮಕೃಷ್ಣಯ್ಯ ಹಾಗು ಇನ್ನೂ ಎರಡು ಮೂರು ಜನರನ್ನು ಠಕಾರಿ ನೋಟುಗಳನ್ನು ಮಾಡಿದ ಆರೋಪದ ಮೇಲೆ ಪೋಲೀಸರು ಕೈದುಮಾಡಿರುವರು.

— ಲಾಹೋರಿನಲ್ಲಿಯ ಪ್ರಖ್ಯಾತಿಪಟ್ಟ ಒಂದು ಹೊಟೆಲಿನಲ್ಲಿ ಯಾರಿಗೂ ತಿಳಿಯದಂತೆ, ಲಾಯಸನ್ಸನ್ನು ಕೂಡ ಪಡೆಯದೆ ಕೊಕೇನ ಎಂಬ ಮಾದಕ ಪದಾರ್ಥವನ್ನು ಹೊಟೆಲ ಮಾಲಿಕನು ಮಾರುವದನ್ನು ಪೋಲೀಸರು ಕಂಡುಹಿಡಿದು ಅವನನ್ನು ಕೈದುಮಾಡಿರುವರು.

— ಮುಂಬಯಿ ಮುನ್ಸಿಪಾಲಿಟಿಯು ಗೋವರ್ಧನದಾಸ ಸುಂದರದಾಸ ಮೆಡಿಕಲ್ ಕೊಲೇಜನ್ನು ಬರುವ ಜೂನ ೨ನೇ ತಾರೀಕಿನ ದಿವಸ ತೆರೆಯುವದು. ಸೌಕರ್ಯದ ವಿಷಯವಾಗಿ ಇತರ ಮೆಡಿಕಲ್ ಕೊಲೇಜುಗಳಿಗಿಂತ ಇಲ್ಲಿ ಹೆಚ್ಚಿಗಿರುವದು.

— ನಾಗಪೂರಿನಲ್ಲಿ ಒಂದು ಭಯಂಕರ ಖೂನಿಯು ನಡಿಯಿತು. ಅಲ್ಲಿಯ ತಹಶೀಲದಾರರೊಬ್ಬರು ತಮ್ಮ ಸ್ನೇಹಿತರೊಡನೆ ಸಾಯಂಕಾಲದ ಸಮಯದಲ್ಲಿ ಮಾತಾಡುತ್ತಿರುವಾಗ ಇಬ್ಬರು ದರೋಡೆಖೋರರು ಹಿಂದಿನಿಂದ ಬಂದು ಅವರ ಮೇಲೆ ಬಿದ್ದರು. ಕೂಡಲೆ ಅವರು ಆತ್ಮಸಂರಕ್ಷಣೆಗೆಂದು ಮನೆಯೊಳಗಿಂದ ಕೋವಿಯನ್ನು ತರಲು ಹೊರಟರು. ಅಷ್ಟರಲ್ಲಿ ದರೋಡೆಖೋರರು ತಮ್ಮ ಬಲವೇರಿಸಿಕೊಂಡು ಅವರನ್ನು ಗಾಯಪಡಿಸಿದರು. ತಹಶೀಲದಾರರನ್ನು ಆಸ್ಪತ್ರೆಗೆ ಒಯ್ಯಲಾಯಿತು. ಇಷ್ಟರ ವರೆಗೆ ಮೂವರನ್ನು ಕೈದುಮಾಡಲಾಗಿದೆ.

— ಕಲಕತ್ತೆಯಲ್ಲಿ ಎಕಬಲ್ ಹುಸೇನ ಎಂಬವನು ಲ್ಯಾಸನ್ಸ್ ಇಲ್ಲದೆ ಕೋವಿ ಮತ್ತು ಕೋವಿ ಮದ್ದನ್ನು ಕತ್ತಲೆಯ ಸಮಯದಲ್ಲಿ ಮಾರುವವನನ್ನು ಅಲ್ಲಿಯ ಪೋಲೀಸ ಅಧಿಕಾರಿಗಳು ಕಂಡು ಅವನನ್ನು ಕೈದುಮಾಡಿರುವರು.

— ಜಮಶೇಡಪುರದಲ್ಲಿ ಒಬ್ಬ ಶಾಲಾ ಮಾಸ್ತರರು ರಾತ್ರಿ ೯ ಗಂಟೆ ಸಮಯದಲ್ಲಿ ಮನೆಗೆ ಬರುವಾಗ ಮಾರ್ಗದಲ್ಲಿ ದನಗಳಿಂದ ಓಡಿಸಲ್ಪಟ್ಟರು. ಅವರು ಹೆದರಿ ಓಡುವಾಗ ಸಾಧಾರಣ ೨೦ ದನಗಳು ಅವರನ್ನು ಹಿಂಬಾಲಿಸಿ ಅವರನ್ನು ಕೆಡವಿದವು. ಮತ್ತು ಅವುಗಳಲ್ಲಿ ಒಂದು ಪುಂಡು ದನವು ತನ್ನ ಕೊಂಬುಗಳಿಂದ ಅವರನ್ನು ಎಸೆಯುತ್ತಿತ್ತು. ಅವರು ಬೊಬ್ಬೆಯನ್ನು ಹಾಕಿ ಇತರರ ಸಾಹಾಯ್ಯದಿಂದ ಬದುಕಿಕೊಂಡರು. ದಾರಿಯಲ್ಲಿ, ಅದೂ ರಾತ್ರಿಯ ಸಮಯದಲ್ಲಿ ದನಗಳನ್ನು ಕಟ್ಟದೆ ಬಿಡುವದರಿಂದ ಇಂಥ ಸಂಗತಿಗಳು ಸಂಭವಿಸುತ್ತವೆ. ಆದ್ದರಿಂದ ಮೊದಲೆ ಜಾಗ್ರತೆಯನ್ನು ತಕ್ಕೊಳ್ಳುವದು ಉಚಿತವಲ್ಲವೆ?

— ಲಾಹೋರಿನೊಳಗಿನ ಸರದಾರ ಎಂಬ ಪತ್ರಿಕೆಯಲ್ಲಿ ಅಶ್ಲೀಲ ಚಿತ್ರಗಳನ್ನು ಪ್ರಕಟಿಸಿದ್ದಕ್ಕೆ ಅದರ ಮಾಲಿಕರನ್ನು ಮೆಜಿಸ್ಟ್ರೇಟರು ಕೈದು ಮಾಡಿಸಿರುವರು.

— ಬಂಗಾಲಿನಲ್ಲಿ ಮುಸಲ್ಮಾನರ ಸಮ್ಮೇಲನವು ಮಿ| ಫಜಲುಲ್ ಹಕ್ಕರ ಅಧ್ಯಕ್ಷತೆಯಲ್ಲಿ ನಡೆಯುತ್ತಿದೆ. ಅಧ್ಯಕ್ಷರು ತಾನು ಮುಸಲ್ಮಾನರಿಗೋಸ್ಕರವೇ ಒಂದು ಪತ್ರಿಕೆಯನ್ನು ಹೊರಡಿಸುತ್ತೇನೆಂದು ಆಶ್ವಾಸನ ಕೊಟ್ಟಿದ್ದಾರೆ. ಅಲ್ಲದೆ ಸರ್ವೆಂಟ ಒಫ್ ಇಂಡಿಯಾ ಸೊಸೈಟಿಯ ಮೇರೆಗೆ ಹಾಗೆ ಮುಸಲ್ಮಾನ ತರುಣರಿಗೋಸ್ಕರ ಒಂದು ಸಂಘವನ್ನು ಸ್ಥಾಪಿಸಬೇಕೆಂದು ಹೇಳಿರುವರು. ಇವರ ಪತ್ರಿಕೆಯು "ತಾನಜೀಮ್" ಪತ್ರಿಕೆಯಂತೆಯೇ ಇರುವದಂತೆ. ಅಂದಮೇಲೆ ಹಿಂದುಗಳು ಶುದ್ಧಿ ಚಳವಳದ ಸುದ್ದಿ ಎತ್ತಿದ ಕೂಡಲೆ ಕೆಲವರ ಪಿತ್ತವು ಕಲಿಗೇರುವುದಲ್ಲವೆ?

— ಪೊಂಡಿಚೆರಿಯ ಸಮೀಪದಲ್ಲಿ ಒಬ್ಬ ಮನುಷ್ಯನು ತನ್ನ ಪೆಂಡ್ತಿಯನ್ನು ಖೂನಿಮಾಡಿ, ಪೋಲೀಸಿನವರಿಗೆ ಸಿಕ್ಕದೆ ೧೧ ವರ್ಷಗಳ ಕಾಲ ತಲೆತಪ್ಪಿಸಿಕೊಂಡಿದ್ದನು. ಕೆಲವು ದಿವಸಗಳ ಕೆಳಗೆ ಇವನನ್ನು ಪೋಲೀಸಿನವರು ದಸ್ತಗಿರಿ ಮಾಡಿ, ನ್ಯಾಯವಿಚಾರಣೆಗೆ ಗುರಿಮಾಡಿದರು. ಇವನಿಗೆ ೧೦ ವರ್ಷಗಳ ಕಾಲ ಸಜಾ ವಿಧಿಸಲ್ಪಟ್ಟಿದೆ.

— ತಿರುವಾಂಕೂರಿನ ದಿವಾನರಾಗಿದ್ದ ಮಿ| ರಾಘವಯ್ಯನವರ ಪತ್ನಿಯವರು ಅಲ್ಲಿ ಒಂದು ಸ್ತ್ರೀಯರ ಸಂಘವನ್ನು ಸ್ಥಾಪಿಸಿ, ಸ್ತ್ರೀಯರ ಅಭಿವೃದ್ಧಿಗೆ ಸಾಧಕವಾದ ಕೆಲಸಗಳನ್ನನೇಕವನ್ನು ಮಾಡಿದ್ದರು. ಸಾಮಾಜಿಕ ಪರಿಷ್ಕರಣದ ವಿಷಯಗಳಲ್ಲೂ, ಇವರು ಅಸಾಧಾರಣವಾದ ಮೆಹನತ್ತನ್ನು ತೋರಿಸಿದ್ದರು. ಇವರು ತಿರುವಾಂಕೂರನ್ನು ಬಿಡುವಾಗ ಈ ಸಂಘದವರು ಇವರಿಗೆ ಸತ್ಕಾರವನ್ನು ನಡೆಸಿದರು.

— ಬೆಂಗಳೂರಿನ ಮ್ಯುನಿಸಿಪಲ್ ಮೀಟಿಂಗಿನಲ್ಲಿ ಎರಡು ಮುಖ್ಯವಾದ ಸಲಹೆಗಳು ತರಲ್ಪಡುವವು. ಗೊತ್ತುಗುರಿಯಿಲ್ಲದೆ ಹೆಚ್ಚುತ್ತಲಿರುವ ಹೊಟೇಲುಗಳ ಸಂಖ್ಯೆಯನ್ನು ನಿಲ್ಲಿಸಲು ಸರ್ಕಾರದವರು ಕಾನೂನನ್ನು ಮಾಡಬೇಕೆನ್ನುವುದೊಂದು, ಮ್ಯುನಿಸಿಪಲ್ ಕೌನ್ಸಿಲಿನ ಮೆಂಬರರ ಪದವಿಗೆ ಸ್ತ್ರೀಯರು ಬರಬಹುದೆಂಬುವುದೊಂದು. ಆರೋಗ್ಯ, ಐಶ್ವರ್ಯ ಮತ್ತು ಗುಣಹಾನಿಯನ್ನು ನಿಲ್ಲಿಸಬೇಕೆನ್ನುವುದೇ ಮೊದಲನೆಯ ಸಲಹೆಯನ್ನು ತರಲು ಕಾರಣವಾಗಿರುತ್ತದೆ.

— ಮೇ ೧೫ನೇ ತಾ|| ಹಿಂದೂ ಪತ್ರಿಕೆಯಲ್ಲಿ ಒಂದು ಉರ್ದು ಪೇಪರಿನಿಂದ ತರ್ಜುಮೆಯನ್ನು ಹಾಕಿರುವರು. ಅಫಘಾನಿಸ್ಥಾನದ ಅಮೀರರು ತನ್ನ ರಾಜ್ಯದ ಬಜೆಟ್ಟು ತಯಾರಾಗುತ್ತಿರುವಾಗ ಅಮೀರರ ಸಿವಿಲ್ ಲಿಸ್ಟಿಗಾಗಿ ಬಜೆಟ್ಟಿನಲ್ಲಿ ಎಷ್ಟು ತೋರಿಸಬೇಕೆಂದು ಫೈನಾನ್‌ಶಿಯಲ್ ಸೆಕ್ರೆಟರಿ ಕೇಳಿದ್ದಕ್ಕೆ ತನ್ನ ಸ್ವಂತ ಆಸ್ತಿಯಿಂದ ಬರತಕ್ಕ ಆದಾಯ ತನ್ನ ಖರ್ಚಿಗೆ ಸಾಕೆಂತಲೂ, ಪ್ರಜಾ ವಸೂಲಿಯಿಂದ ಬಂದ ಕಾಸಿನಲ್ಲಿ ತನ್ನ ಖರ್ಚಿಗೆ ಒಂದು ಕಾಸೂ ಬೇಡವೆಂದೂ ಹೇಳಿದರಂತೆ. (ಸಾಧ್ವಿ)

— ಕಲಕತ್ತೆಯಲ್ಲಿ ಕೋರ್ಟು ಕ್ಲಾರ್ಕನು ನೋಟೀಸನ್ನು ಒಂದು ಯುರೋಪಿಯನ್ ಕಂಪೆನಿಯ ಮೆನೆಜರನಿಗೆ ಕೊಡಲಿಕ್ಕೆ ಹೋದಾಗ ಮೆನೆಜರನು ನೋಟೀಸನ್ನು ಓದಿ ಆ ಪತ್ರವನ್ನು ನೆಲಕ್ಕೆ ಎಸೆದು ಕ್ಲಾರ್ಕನಿಗೆ ಬಾಯಿಗೆ ಬಂದಂತೆ ಬೈದನು! ಕ್ಲಾರ್ಕನು ಎಲ್ಲ ಸಂಗತಿಯನ್ನು ಕೋರ್ಟಿನಲ್ಲಿ ತಿಳಿಸಲಾಗಿ ಮೆನೇಜರನು ತಾನು ಏನೂ ಮಾಡಿಲ್ಲವೆಂದು ಹೇಳಿದನು. ಆದರೆ ಸಾಕ್ಷಿಯು ಬಲವತ್ತರವಿದ್ದದರಿಂದ ಕೋರ್ಟಿನ ಅವಮಾನಮಾಡಿದನೆಂಬ ಆರೋಪದ ಮೇಲೆ ಮೆನೇಜರನಿಗೆ ೨೦೦ ರೂಪಾಯಿಗಳ ದಂಡ ಮಾಡಲಾಯಿತು.

— ವಾಯುವ್ಯ ಸರಹದ್ದಿನಲ್ಲಿರುವ ಹಿಂದುಗಳಿಗೆ ಆ ಊರನ್ನು ಬಿಟ್ಟು ಹೋಗಬೇಕೆಂದು ಅಲ್ಲಿಯ ಮುಸಲ್ಮಾನರು ಬಹಳ ಪ್ರಯತ್ನಪಡುತ್ತಿದ್ದಾರೆ. ತರತರದ ಹೆದರಿಕೆಯನ್ನು ಹಾಕುವಂಥ ಕೆಲವು ಪ್ರಕಟನೆಗಳನ್ನು ಹೊರಡಿಸಿ ಅವರ ಬಳಿಗೆ ಕಳುಹಿಸುತ್ತಾರೆ!

— ಸರ್ ವೆಂಕಟರಾಮ ನಾಯಡು ಇವರು ಮದ್ರಾಸ ಯುನಿವರ್ಸಿಟಿಯ ವೈಸ ಚೆನಸಲರಾಗಿ ಆರಿಸಲ್ಪಟ್ಟಿರುವರು.

— ಬ್ರಾಹ್ಮಣೇತರ ಪಕ್ಷದಲ್ಲಿ ಪ್ರಕೃತ ಒಡಕು ಹುಟ್ಟಿ ಎರಡು ತಂಡಗಳು ಆಗಿದ್ದಾವಷ್ಟೆ. ಈ ಯಾದವಿ ಜಗಳವನ್ನು ಜೋಡಿಸಲು ಬಹಳ ಪ್ರಯತ್ನಗಳು ನಡಿಯುತ್ತಿವೆ. ಆದರೆ ಹರಕುಬಟ್ಟೆಯನ್ನು ಜೋಡಿಸಿದರೆ ಎಷ್ಟು ದಿವಸಗಳವರೆಗೆ ಬಾಳೀತು?

— ಕಲಕತ್ತೆಯಲ್ಲಿ ಸನಾತನ ಧರ್ಮದವರ ಸಂಘವು ಸ್ಥಾಪನೆಯಾಗಿದೆ. ಸ್ಥಾಪನೆಯ ಸಮಾರಂಭ ದಿವಸ ಶ್ರೀ ಶಂಕರಾಚಾರ್ಯ ಶಾರದಾಪೀಠ ಇವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಈ ಸಂಘದ ಉದ್ದೇಶವು ಹಿಂದು ಸನಾತನದ ಉಪದೇಶ, ಧರ್ಮಜಾಗ್ರತೆ ಇವೆ ಮೊದಲಾದ್ದಾಗಿವೆ.

— ಮುಂಬಯಿಯ ವಸ್ತ್ರಗಿರಣಿಗಳ ಈಗಿನ ಪರಿಸ್ಥಿತಿಯು ಬಹು ಶೋಚನೀಯ ಸ್ಥಿತಿಯಲ್ಲಿದೆ. ಸಾಧಾರಣ ೭|| ಕೋಟಿ ರೂಪಾಯಿಯ ಬೆಲೆಬಾಳುವ ವಸ್ತ್ರವು ಗಿರಣಿಗಳಲ್ಲಿ ಮಾರಾಟವಾಗದೆ ಇದೆ. ವಿಲಾಯತಿಯಿಂದ ಬರುವ ವಸ್ತ್ರವು ಈಗ ಮೊದಲಿಂದಲೂ ಹೆಚ್ಚು. ಅಂದಮೇಲೆ ಹಿಂದಿಗಳು ಸ್ವದೇಶದಲ್ಲಿ ತಯಾರಾದ ವಸ್ತ್ರಗಳನ್ನು ತಕ್ಕೊಳ್ಳುವುದನ್ನು ಬಿಟ್ಟು ಪರದೇಶದಲ್ಲಿಯದ್ದನ್ನು ಯಾಕೆ ತಕ್ಕೊಳ್ಳಬೇಕು? ಖಾದಿಯಿಂದ ಸಂತೋಷವಾಗದಿದ್ದರೆ ಸ್ವದೇಶಿ ಗಿರಣಿ ಬಟ್ಟೆಯನ್ನು ಉಪಯೋಗಿಸುವುದು ಉಚಿತವಲ್ಲವೆ?

— ಪಶ್ಚಿಮ ಕರಾವಳಿಯ ಬಿರುಗಾಳಿಯ ಹಾವಳಿ!— ಮುಸ್ಲಿಪಟಮ್‌ದಲ್ಲಿ ಕೋತಪೇಟ್ ಎಂಬ ಹಳ್ಳಿಯು ಸಂಪೂರ್ಣವಾಗಿ ನಾಶವಾಗಿರುವುದು. ವೈಶ್ಯನೊಬ್ಬನ ಮೃತ ದೇಹವು ಕಾಲುವೆಯ ದಂಡೆಯ ಮೇಲೆ ಕಂಡುಬಂದಿರುವುದು. ಇನ್ನಿಬ್ಬರು ಮಹಮ್ಮದಿಯರು ಮಾವಿನ ತೋಪಿನಲ್ಲೇ ಪ್ರಾಣಬಿಟ್ಟಿರುವರು. ಬಡಪ್ರಾಣಿಗಳ ಕೊಳೆತ ದೇಹದ ದುರ್ವಾಸನೆಯಿಂದ ಅವನಿಗಡದ ಹವೆಯು ಸಂಪೂರ್ಣವಾಗಿ ಕೆಟ್ಟಿರುವುದು. ತಿಳಿನೀರಿಲ್ಲದೆ ಜನರು ಸಮುದ್ರದ ನೀರನ್ನು ಕುಡಿಯಲುದ್ಯುಕ್ತರಾಗಿರುವರು. ರೈಲುಬಂಡಿಯು ಬೆಜವಾಡದಿಂದ ಮುಸುಲಿಪಟಮಕ್ಕೆ ಸರಾಗವಾಗಿ ಚಲಾವಣೆಯಾಗಲು ಕನಿಷ್ಠಪಕ್ಷಕ್ಕೆ ಹತ್ತು ದಿನಗಳ ಅವಧಿಯು ಬೇಕಾಗ ಬಹುದು.

— ಗೋದಾವರೀ ವೃತ್ತಾಂತ:— ಬಿರುಗಾಳಿ ಮಳೆಗಳ ಬಾಧೆಯಿಂದ ಮನೆ ಮಾಡುಗಳು ಹಾರಿಹೋದವು. ಮರಗಳೆಷ್ಟೊ ಸಂಖ್ಯೆಯಿಲ್ಲದಷ್ಟು ಬಿದ್ದಿರುವುದು. ಬೆಳೆಯೆಲ್ಲವೂ ನಾಶವಾಗಿರುವುದು. ಎಲ್ಲೋರಿನ ಸಿನೆಮದೊಳಗೆ ಆಶ್ರಯಕ್ಕಾಗಿ ಒಳಗೆಹೋಗಿದ್ದ ೨೫ ಮಂದಿ ಜನರು ಗೋಡೆಯು ಕುಸಿದುಬಿದ್ದು ಮರಣಪಟ್ಟರು.

— ಮಹಾತ್ಮಾ ಗಾಂಧಿಯವರಿಗೆ ಮಾನಪತ್ರ:— ಹುಗ್ಲಿಯಲ್ಲಿ ಮಹಾತ್ಮಾ ಗಾಂಧಿಯವರಿಗೆ ಅಲ್ಲಿಯ ಮುನಿಸಿಪಾಲಿಟಿ, ಡಿಸ್ಟ್ರಿಕ್ಟ ಬೋರ್ಡು ಮತ್ತು ಗಾಂಧಿ ರಿಸೆಪ್ಷನ್ ಕಮಿಟಿಯವರು ಒಂದು ಮಾನಪತ್ರವನ್ನು ಅರ್ಪಿಸಿರುವರು.

ಅನುಕ್ರಮಣಿಕೆ.

ಅಗ್ರಲೇಖ	ಪುಟಗಳು.
ಬರ್ಕನಹೆಡ್ಡರ ಪರೋಪದೇಶ ಪಾಂಡಿತ್ಯ	೨
ಸ್ಫುಟವಿಚಾರಗಳು—	
೧-೨. ಮಧ್ಯಪ್ರಾಂತದಲ್ಲಿಯ ಬ್ರಾಹ್ಮಣೇತರರ ಪರಿಷತ್ತು	,,
೩. ಬಂಗಾಲಿನಲ್ಲಿಯ ಕೌನ್ಸಿಲ ಅಧಿಕಾರ	೩
೪. ಕಲೆಕ್ಟರರ ಪರಿಷತ್ತು	,,
೫. ಬಾವಲಾ ಇವರ ಖೂನಿ	,,
೬. "ನನಗೆ ತಿಳಿದ ಹಿಂದುಸ್ಥಾನ!"	,,
ಮಂಗಳೂರು	
ವರ್ತಮಾನಸಂಗ್ರಹಗಳು—	
ವಿದೇಶ – ಒಳದೇಶ ವರ್ತಮಾನ	೪
ದಕ್ಷಿಣ ಕನ್ನಡ – ಪುತ್ತೂರು, ಕಾಸರಗೋಡು	,,
ವಿವಿಧ ವಿಷಯಗಳು	,,
ಪತ್ರವ್ಯವಹಾರ ೧, ೨, ೩	೭
ಮಹಮ್ಮದೀಯ ಸ್ಕೊಲರ್‌ಶಿಪ್ ಫಂಡ್	,,
ಮ। ರಾ। ರಘುಚಂದ್ರ ಬಲ್ಲಾಳರು ಕಳೆದ ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ಮಾಡಿದ ಭಾಷಣದ ಸಾರಾಂಶ	೮

ಸ್ವದೇಶಾಭಿಮಾನಿ.

ಶಕ ೧೮೪೭ ಜ್ಯೇಷ್ಠ ಶು। ೭ವು ಶುಕ್ರವಾರ.

ಬರ್ಕನಹೆಡ್ಡರ ಪರೋಪದೇಶಪಾಂಡಿತ್ಯ.

ನ್ಯಾಯ ತೀರ್ಮಾನದ ಕೆಲಸ ಮತ್ತು ನೀತಿ ಬೋಧನೆಯ ಕೆಲಸ ವಸ್ತುತಃ ಅತ್ಯಂತ ಜವಾಬದಾರಿಯ ಕರ್ತವ್ಯಗಳಾದರೂ, ಲೋಕದಲ್ಲಿ ಅನೇಕರು ಈ ಕೆಲಸಗಳನ್ನು ಬಹು ಸುಲಭವಾಗಿ ಜಾರಿಯಲ್ಲಿ ತರುತ್ತಾರೆ! ತನ್ನ ಕಾಲಿನ ಅಡಿಯಲ್ಲಿ ಕುಂಬಳಕಾಯಿ ಕೊಳತು ಬಿದ್ದರೂ ಉಪದೇಶದ ಅಧಿಕಾರವನ್ನು ಹೊಂದಿದವನು ಅನ್ಯರ ಮನೆಯಲ್ಲಿ ಸಾಸಿವೆ ಕಾಳು ಕೊಳತು ಬಿದ್ದದ್ದನ್ನು ತೋರಿಸಲು ದಕ್ಷನಾಗಿರುವನು. ಅದರಲ್ಲಿ ತಮ್ಮ ಅಥವಾ ತಮ್ಮ ಜನಾಂಗದವರ ಹಿತಸಂಬಂಧಕ್ಕೂ ಬೇರೆಯವರದಕ್ಕೂ ಎಲ್ಲಿ ಕಚ್ಚಾಟವು ಬರುವದೊ ಅಂಥ ಸಂದರ್ಭದಲ್ಲಂತೂ ಈ ಪರೋಪದೇಶಪಾಂಡಿತ್ಯಕ್ಕೆ ಭರತಿಯೆ ಬರುತ್ತದೆ! ಇದು ಸಾಮಾನ್ಯ ಮನುಷ್ಯರ ಸ್ವಭಾವವು. ಮತ್ತು ಈ ಮನುಷ್ಯ ಸ್ವಭಾವಕ್ಕೆ ಭಾರತ ಮಂತ್ರಿಗಳಾದ ಬರ್ಕನಹೆಡ್ಡರೇನಾದರೂ ಅಪವಾದವಲ್ಲ. ಮೇಲಾಗಿ ಹೇಳುವದಾದರೆ ಸ್ವಂತ ಕರ್ತವ್ಯ ಭ್ರಷ್ಟತೆಯನ್ನು ಮುಚ್ಚುವದಕ್ಕಾಗಿ ಪರೋಪದೇಶಪಾಂಡಿತ್ಯವನ್ನು ಪ್ರದರ್ಶಿಸುವದರಲ್ಲಿ ಬರ್ಕನಹೆಡ್ಡರು ಅಗ್ರಗಣ್ಯರಾಗಿದ್ದಾರೆನ್ನಬಹುದು. ಇಂಗ್ಲಂಡಿನಲ್ಲಿ ಆಸಾಮು ಕ್ಲಬ್ಬಿನಲ್ಲಿ ಔತನದ ಸಮಾರಂಭವು ನಡೆಯಿತು. ಈ ಸಮಾರಂಭದಲ್ಲಿ ಬರ್ಕನಹೆಡ್ ಸಾಹೇಬರು ತನ್ನ ಹಳೆ ವಿಚಾರಗಳನ್ನೆ ಇನ್ನೊಮ್ಮೆ ಪ್ರಕಟಿಸಿದರು. ಹಿಂದುಸ್ಥಾನಕ್ಕೆ ಸದ್ಯ ಹೆಚ್ಚಿನ ಹಕ್ಕುಗಳು ಸಿಗಲಿಕ್ಕಿಲ್ಲವೆಂಬುದು ವಿಚಾರವಂತರಿಗೆ ಮೊದಲೆ ಗೊತ್ತಿದೆ. ಈ ಮಾತನ್ನು ಯಾವ ವಿಧದಿಂದ ಪ್ರಕಟಿಸಿದರೂ ಜನರಿಗೆ ಅದರ ಬೆಲೆಯು ಯಾವಾಗಲೆ ಗೊತ್ತಾಗಿದೆ. ಆದ್ದರಿಂದ ಬರ್ಕನಹೆಡ್ಡರ ಮುಖ್ಯ ತಾತ್ಪರ್ಯದಿಂದ ಹೆಚ್ಚಾಗಿ ಯಾರ ಮನಸ್ಸೂ ವಿರಸವಾಗಲಿಕ್ಕಿಲ್ಲ. ಆದರೆ "ನಿಮಗೆ ಸದ್ಯಕ್ಕೆ ಹೆಚ್ಚಿಗೇನೂ ಸಿಗಲಿಕ್ಕಿಲ್ಲ. ಇದ್ದುದರಲ್ಲಿಯೆ ಸಂತುಷ್ಟರಾಗಿರಿ" ಎಂಬುದನ್ನು ಹೇಳುವಾಗ ಒಂದೆರಡು ಯಾವ ಅವಾಂತರ ಸಂಗತಿಗಳನ್ನು ಹಿಂದಿಗಳಿಗೆ ಉಪದೇಶಿಸಿರುವರೊ ಅದು ಮಾತ್ರ ಉದ್ವೇಗಕರವಾಗಿದೆ. ಆದ್ದರಿಂದ ಅವರ ಈ ಪರೋಪದೇಶಪಾಂಡಿತ್ಯವನ್ನು ಕುರಿತು ಒಂದೆರಡು ಮಾತುಗಳನ್ನು ಇಲ್ಲಿ ಚರ್ಚಿಸಬೇಕಾಗುತ್ತದೆ.

ಹಿಂದಿಗಳಿಗೆ ಸ್ವರಾಜ್ಯದ ಹಕ್ಕು ತತ್ಕಾಲಕ್ಕಾದರೂ ದುಷ್ಪ್ರಾಪ್ಯವಾದ್ದೆಂಬುದನ್ನು ಪ್ರಸ್ತಾಪಿಸಬೇಕಾದರೆ ಮೊದಲು ಬರ್ಕನಹೆಡ್ಡರು ರೆಡಿಂಗ ಸಾಹೇಬರನ್ನು ಚಂದವಾಗಿ ಹೊಗಳಿರುವರು. ಈ ಹೊಗಳುವಿಕೆಯಲ್ಲಿ ಭಾರತ ಮಂತ್ರಿಗಳು ಎರಡು ಉದ್ದೇಶಗಳನ್ನು ಇಟ್ಟುಕೊಂಡಿರಬಹುದು. ಬರ್ಕನಹೆಡ್ಡರು ವಿಲಾಯತಿಯಲ್ಲಿರುವವರು. ರೆಡಿಂಗ ಸಾಹೇಬರು ಪ್ರತ್ಯಕ್ಷ ಹಿಂದುಸ್ಥಾನದಲ್ಲಿ ನಿಲ್ಲುವವರು. ಆದ್ದರಿಂದ ಪ್ರತ್ಯಕ್ಷ ಕಾರ್ಯಕ್ಷೇತ್ರದಲ್ಲಿ ನಿಲ್ಲುವವನಿಗೆ ಜವಾಬದಾರಿಯ ಪರಿಜ್ಞಾನವು ಹೆಚ್ಚಾಗಿ ಉಂಟಾಗಿರುವದರಿಂದ ಸಹಜವಾಗಿಯೆ ರೆಡಿಂಗ ಸಾಹೇಬರು ಹಿಂದಿ ಸ್ವರಾಜ್ಯದ ಪ್ರಶ್ನೆಯನ್ನು ಕೊಂಚ ಸಹಾನುಭೂತಿಯ ದೃಷ್ಟಿಯಿಂದ ನೋಡುತ್ತಿದ್ದಾರೆಂದು ಹಲವರಾದರೂ ತಿಳಕೊಳ್ಳುತ್ತಿದ್ದಾರೆ. ಇಂಥವರು ಹಿಂದುಸ್ಥಾನದ ಪಕ್ಷವನ್ನು ತೆಕ್ಕೊಂಡು ಬಂದಿರುವಾಗ ಅವರನ್ನು ವಿಮುಖರನ್ನಾಗಿ ಕಳುಹಿಸುವದಾದರೆ ಒಂದೆರಡು ಸ್ತುತಿಯ ಉಪಚಾರದ ಮಾತುಗಳನ್ನಾದರೂ ಹೇಳುವದು ಶಿಷ್ಟಾಚಾರವೆಂದೆಣಿಸಿ ಭಾರತ ಮಂತ್ರಿಗಳು ರೆಡಿಂಗರ ಸ್ತುತಿಪಾಠವನ್ನು ಮಾಡಿದ್ದಾರೆ. ಇನ್ನೊಂದು ಉದ್ದೇಶವೇನೆಂದರೆ ರೆಡಿಂಗರು ಹಿಂದುಸ್ಥಾನಕ್ಕೆ ಪುನಃ ಬರುವರಾದ್ದರಿಂದ, ರಿಕ್ತಹಸ್ತರಾಗಿ ಬಂದಲ್ಲಿ ಅವರ ಮೇಲಿನ ಜನರ ವಿಶ್ವಾಸವು ಕಡಿಮೆಯಾಗುವ ಯಾವ ಸಂಭವವಿದೆಯೊ ಅದಕ್ಕೆ ಅವಕಾಶವು ಸಿಗಬಾರದು. ಈ ಎರಡು ಉದ್ದೇಶಗಳಿಂದ ಭಾರತಮಂತ್ರಿಗಳು ರೆಡಿಂಗ ಸಾಹೇಬರನ್ನು ಚಂದವಾಗಿ ಹೊಗಳಿದ್ದಾರೆ. ಹಿಂದುಸ್ಥಾನದ ರಾಜಕೀಯ ಪರಿಸ್ಥಿತಿಯು ಬಹಳ ಇಕ್ಕಟ್ಟಿನದಾಗಿರುವಾಗ ರೆಡಿಂಗ ಸಾಹೇಬರು ರಾಜ್ಯದ ಸೂತ್ರಗಳನ್ನು ಕೈಕೊಂಡರು. ಜನತೆಯಲ್ಲಿ ಅಸಂತೋಷವು ಹಬ್ಬಿಕೊಂಡಿರುವಾಗ ರೆಡಿಂಗ ಸಾಹೇಬರು ವೈಸರಾಯರಾಗಿ ಬರಲು ಒಪ್ಪಿದ್ದು ಮತ್ತು ಆ ರೀತಿಯಿಂದ ಬಂದು ಹಿಂದುಸ್ಥಾನದ ಕಾರಭಾರವನ್ನು ಪ್ರಾರಂಭಿಸಿದ್ದು ಸಾಮಾನ್ಯ ಕೆಲಸವಲ್ಲ. ಹಿಂದಿ ಜನತೆಯ ಮತ್ತು ಇಂಗ್ಲಂಡಿನ ಹಿತವು ಏಕಪ್ರಕಾರವಾಗಿಯೆ ಸಾಧ್ಯವಾಗುವಂತೆ ರೆಡಿಂಗ ಸಾಹೇಬರು ಬಹು ಉತ್ತಮ ರೀತಿಯಿಂದ ಕಾರಭಾರವನ್ನು ನಡಿಸುತ್ತಿದ್ದಾರೆ. ಎಂಬಿತ್ಯಾದಿ ರೂಪದಿಂದ ಭಾರತ ಮಂತ್ರಿಗಳು ರೆಡಿಂಗರ ಗುಣಗಳನ್ನು ಕೊಂಡಾಡುತ್ತಿದ್ದಾರೆ. ಅಲ್ಲದೆ ತಮ್ಮಿಬ್ಬರ ಭೇಟಿಯಲ್ಲಿ ಯಾವ ಚರ್ಚೆಯು ನಡೆಯುತ್ತಿದೆಯೊ ಅದರಲ್ಲಿ ಹಿಂದುಸ್ಥಾನದ ಬಗ್ಗೆ ಇವರಿಂದ ಅನೇಕ ಮಾಹಿತಿಯು ತನಗುಂಟಾಗಿದೆ ಎಂದು ಬರ್ಕನ್‌ಹೆಡ್ಡರು ಹೇಳಿರುವರು.

ಬರ್ಕನಹೆಡ್ಡರು ಲೊರ್ಡ ರೆಡಿಂಗರನ್ನು ಬೇಕಷ್ಟು ಹೊಗಳಲಿ, ಲೊರ್ಡ ರೆಡಿಂಗರ ಚಾತುರ್ಯಕ್ಕೆ ಅವರಿಗೆ ಬೇಕಾದ ಪಾರಿತೋಷಕವನ್ನು ಬರ್ಕನಹೆಡ್ಡರು ತಾನು ಸ್ವತಃ ಕೊಡಲಿ, ಇಲ್ಲವೆ ಪಾರ್ಲಿಮೆಂಟಿನಿಂದ ಅಥವಾ ಬಾದಶಹರಿಂದ ಕೊಡಿಸಲಿ, ಈ ಬಗ್ಗೆ ಯಾರ ಆಕ್ಷೇಪವೂ ಇಲ್ಲ. ಗುಣವಂತರ ಗುಣಗಳಿಗೆ ಯೋಗ್ಯವಾದ ಪ್ರತಿಫಲವು ಸಿಕ್ಕಿದ್ದಲ್ಲಿ ಯಾರಿಗೂ ಅಸಂತೋಷವುಂಟಾಗಲಿಕ್ಕಿಲ್ಲ. ಆದ್ದರಿಂದ ಬರ್ಕನಹೆಡ್ಡರು ಈ ಭಾಗದಲ್ಲಿ ಬೇಕಷ್ಟು ಸಾಹಸವನ್ನು ಮಾಡಲಿ, ಅದಕ್ಕೆ ಯಾರಿಂದಲೂ ಅಭ್ಯಂತರವು ಬರಲಿಕ್ಕಿಲ್ಲ. ಪರಂತು ಬರ್ಕನಹೆಡ್ಡ ಸಾಹೇಬರು ಹಿಂದಿ ಜನತೆಗೆ ಈ ಸಂದರ್ಭದಲ್ಲಿ ಉಪದೇಶಿಸುವ ಯಾವ ಪಾಂಡಿತ್ಯವನ್ನು ವ್ಯಕ್ತಗೊಳಿಸಿದ್ದಾರೊ ಅದು ಮಾತ್ರ ಯಾವ ದೃಷ್ಟಿಯಿಂದಲೂ ಉಪಪನ್ನವಾಗುವದಿಲ್ಲ. ಹಿಂದುಸ್ಥಾನದ ಜನರು ತಮ್ಮ ಸರಳತೆಯನ್ನು ತೋರಿಸಬೇಕೆಂಬುದು ರೆಡಿಂಗರ ಉಪದೇಶ. ಈ ಉಪದೇಶವನ್ನು ಮಾಡುವದಕ್ಕಿಂತ ಮುಂಚೆ ಅವರು ಒಂದು ಸಂಗತಿಯ ವಿಷಯವಾಗಿ ಬಹಳ ಗಾಬರಿ ಪಟ್ಟಿರುವಂತೆ ತೋರುತ್ತದೆ. ವಾಯುವ್ಯ ಸರಹದ್ದಿನಿಂದ ಹಿಂದುಸ್ಥಾನದ ಮೇಲೆ ಪರಚಕ್ರದ ಸವಾರಿಯ ಭೀತಿ ಇನ್ನೂ ಇರುವಾಗ ಹಿಂದೂಸ್ಥಾನದ ಸಂರಕ್ಷಣದ ಭಾರವನ್ನು ನಾವು ಹೇಗೆ ತಾನೆ ಈಗಲೆ ಬಿಡಬಹುದು ಎಂಬ ಅವರದೊಂದು ಸವಾಲಿದೆ. ಹಿಂದುಸ್ಥಾನವನ್ನು ಬಿಟ್ಟು ಬಿಡಲು ಬ್ರಿಟಿಷರಿಗೆ ಯಾರು ಹೇಳುತ್ತಿದ್ದಾರೆ? ರಾಷ್ಟ್ರೀಯ ಸಭೆಯು ಸ್ವರಾಜ್ಯ ಎಂಬ ಶಬ್ದವನ್ನು ಮಾತ್ರ ಇಟ್ಟಿದೆ. ಸ್ವತಂತ್ರವಾದ ಸ್ವರಾಜ್ಯವೆಂದು ಹೇಳಲಿಲ್ಲ. ಬಿಝುಂಟ ಬಾಯಿಯವರು ತಯಾರಿಸಿರುವ ಸ್ವರಾಜ್ಯದ ಬೀಲಿನಲ್ಲಿ ಅಂತರ್ಗತ ಸ್ವರಾಜ್ಯವೆಂದೆ ನಿರ್ದಿಷ್ಟವಾಗಿದೆ. ಸಿ. ಆರ್. ದಾಸರಂಥ ಸ್ವರಾಜ್ಯ ವಾದಿಗಳು ಈ ಮತವನ್ನೆ ಅನುಮೋದಿಸಿದ್ದಾರೆ. ಈ ಮೇರೆಗೆ ಸಾಮ್ರಾಜ್ಯಾಂತರ್ಗತ ಸ್ವರಾಜ್ಯವೆ ಹಿಂದುಸ್ಥಾನದ ಈಗಿನ ಲೋಕಮತದ ಧ್ಯೇಯವಾಗಿರುವಾಗ ಬರ್ಕನಹೆಡ್ಡರಿಗೆ ಮಾತ್ರ ಮೇಲಿನ ನಮೂನೆಯ ದುಃಸ್ವಪ್ನವು ಯಾಕೆ ಬೀಳುತ್ತಿದೆ? ಆದರೆ ಇಲ್ಲಿ ಇನ್ನೊಂದು ಸೂಕ್ಷ್ಮವಿಚಾರವನ್ನು ಹೇಳಬೇಕಾಗಿದೆ. ಹಿಂದೂಸ್ಥಾನವು ಬ್ರಿಟಿಷ ಸಾಮ್ರಾಜ್ಯದ ಹೊರಗೆ ಹೋಗಬೇಕೆಂದು ಇಚ್ಛಿಸುವದಿಲ್ಲ, ಎಂಬುದರ ಮೇಲಿಂದ ಅದರ ಸಂರಕ್ಷಣದ ಸಂಪೂರ್ಣ ಭಾರವು ಅನ್ಯರ ಮೇಲೆ ಹೊಂದಿರಬೇಕೆಂದು ವಾದಿಸುವದಾಗಲಿ ಅಥವಾ ಆ ಮೇರೆಗೆ ಪ್ರಯತ್ನಿಸುವದಾಗಲಿ ಘಾತಕವೆ ಸರಿ. ಹಿಂದುಸ್ಥಾನವು ಆತ್ಮಸಂರಕ್ಷಣವನ್ನು ಮಾಡಿಕೊಳ್ಳಲು ಸಮರ್ಥವಾದಲ್ಲಿ ಅದಕ್ಕೂ ಭೂಷಣ ಮತ್ತು ಪುರುಷಾರ್ಥ ಹಾಗು ಇಂಗ್ಲಂಡಿಗೂ ಮತ್ತು ಸಾಮ್ರಾಜ್ಯಕ್ಕೂ ಒಂದು ಸಹಾಯ. ಈ ಪ್ರಕಾರ ಎಲ್ಲರಿಗೂ ಸುಖಪ್ರದವಾದ ಸುವರ್ಣಸಂಧಿಯು ಬರಬೇಕೆಂದು ನೆನಸಿ ಹಿಂದುಸ್ಥಾನವು ಸ್ವಾವಲಂಬಿಯಾಗಬೇಕೆಂದು ಯಾರಾದರೂ ವಾದಿಸಿದ್ದಾದರೆ ಅದರ ಮೇಲೆ ವೃಥಾ ಸಂಶಯ ತಳ್ಕೊಳ್ಳುವುದು ಯಾಕೆ? ವಾಯುವ್ಯ ದಿಕ್ಕಿನಿಂದ ಶತ್ರುಗಳ ಸವಾರಿ ಬಂದೀತೆಂಬೂ ಆಗ ಹಿಂದುಸ್ಥಾನದ ಸಂರಕ್ಷಣವು ತಮ್ಮಿಂದಾಗಬೇಕೆಂದೂ ನೀವು ಯಾವಾಗಲೂ ಇಷ್ಟು ದೂರ ಬಿಡಾರ ಮಾಡಿಕೊಂಡು ಕೂತುಕೊಳ್ಳುವದಕ್ಕಿಂತ ಹಿಂದುಸ್ಥಾನದ ಜನರೆ ಬಲವಂತರಾಗಿ ತಮ್ಮ ಮನೆಯನ್ನು ತಾವು ಕಾಪಾಡುವುದು ಲೇಸಲ್ಲವೆ? ಈ ತಾರತಮ್ಯವನ್ನು ಆಲೋಚಿಸದೆ ಬರ್ಕನಹೆಡ್ಡರು ಮತ್ತು ಇದೆ ನಮೂನೆಯ ಜನರು ಆಗಾಗ್ಗೆ ಇಂಥ ಮಾತುಗಳನ್ನು ಆಡುತ್ತಿರುವದು ಬಹು ಶೋಚನೀಯವಾಗಿದೆ.

ಈ ಮಾತು ಹೇಗೆ ಶೋಚನೀಯವೊ ಹಾಗೆಯೆ ಹಿಂದುಸ್ಥಾನದ ಜನರು ಸರಳರಾಗಿರಬೇಕು, ಪ್ರಾಮಾಣಿಕರಾಗಿರಬೇಕು ಎಂಬಿತ್ಯಾದಿ ಉಪದೇಶಮಾಡುವದೂ ಕೂಡ ಶೋಚನೀಯವೂ, ಅಸ್ಥಾನಿಕವೂ ಆಗಿದೆ. ೧೯೧೯ನೆಯ ಸುಧಾರಣೆಗಳನ್ನು ಉಪರೋಧಿಸದೆ ಜಾರಿಯಲ್ಲಿ ತರಲು ಹಿಂದಿಗಳು ಉದ್ಯುಕ್ತರಾಗಬೇಕು, ತತ್ಪರತೆಯನ್ನು ತೋರಿಸಬೇಕು ಮತ್ತು ಆ ಕಾನೂನನ್ನು ಯಶಸ್ವಿಯನ್ನಾಗಿ ಮಾಡಲು ಸರಳತೆಯನ್ನೂ ಪ್ರಾಮಾಣಿಕತೆಯನ್ನೂ ತೋರಿಸಬೇಕು ಎಂಬುದಾಗಿ ಬರ್ಕನಹೆಡ್ಡರು ಉಪದೇಶಿಸಿರುವರು. ಈ ಉಪದೇಶವು ಮೇಲೆ ಹೇಳಿದಂತೆ ಕೇವಲ ಅನುಪಪನ್ನವೆ ಸರಿ. ಹಿಂದುಸ್ಥಾನವು ನಿಮ್ಮ ಕೈಯಲ್ಲಿ ಈಗ ೧೫೦ ವರ್ಷಗಳಿಂದ ಇದೆ, ಇನ್ನೂ ಅದಕ್ಕೆ ಅದು ಕೇಳುವಂತೆ ಸ್ವರಾಜ್ಯದ ಹಕ್ಕುಗಳನ್ನು ಕೊಡಲು ನೀವು ಸರಳತೆಯನ್ನೂ ಪ್ರಾಮಾಣಿಕತೆಯನ್ನೂ ತೋರಿಸಬಾರದೆ? ಈ ನೂರಐವತ್ತು ವರ್ಷಗಳಲ್ಲಿ ಹಿಂದುಸ್ಥಾನದಿಂದ ನಿಮಗೆ ಯಾವ ಪ್ರಯೋಜನವೂ ಉಂಟಾಗಿರಲಿಲ್ಲವೆ? ಈ ನೂರೈವತ್ತು ವರ್ಷಗಳಲ್ಲಿ ಹಿಂದುಸ್ಥಾನವು ನಿಮ್ಮ ನಷ್ಟಕ್ಕೆನೆ ಕಾರಣವಾಗಿದೆಯೆ? ಹಾಗೆ ನಷ್ಟವುಂಟಾಗುತ್ತದಾದರೆ ಆ ನಷ್ಟದ ವ್ಯಾಪಾರವನ್ನು ಯಾಕೆ ಮಾಡಬೇಕು? ಅದನ್ನು ಬಿಟ್ಟುಬಿಡಬಹುದಲ್ಲವೆ? ಈ ನೂರೈವತ್ತು ವರ್ಷಗಳಲ್ಲಿ ಉಂಟಾಗುವ ಲಾಭದ ಸಂಗತಿ ಬದಿಗಿರಲಿ, ಕಳೆದ ಮಹಾ ಯುದ್ಧದಲ್ಲಿ ಹಿಂದುಸ್ಥಾನವು ನಿಮಗೆ ಯಾವ ಅನುಪಮ ಸಹಾಯ್ಯವನ್ನು ಕೊಟ್ಟಿದೆಯೊ ಆ ಸಹಾಯ್ಯದ ಕೃತಜ್ಞತೆಗಾಗಿಯಾದರೂ ನೀವು ಹಿಂದುಸ್ಥಾನಕ್ಕೆ ಸ್ವರಾಜ್ಯವನ್ನು ಕೊಡುವ ಸರಳತೆಯನ್ನೂ, ಪ್ರಾಮಾಣಿಕತನವನ್ನೂ ತೋರಿಸಬಾರದೆ? ನಿಮ್ಮ ಕರ್ತವ್ಯದಲ್ಲಿ ನೀವು ತಪ್ಪಿ ಬೇರೆಯವರಿಗೆ ಉಪದೇಶವನ್ನು ಮಾಡುವದು ಯಾಕೆ? ಅಲ್ಲದೆ, ೧೯೧೯ನೆಯ ಕಾನೂನು ಸಮರ್ಪಕವಾಗಿಲ್ಲವೆಂದು ನೀವೆ ಒಪ್ಪುತ್ತಿದ್ದೀರಿ. ಇಂಥ ಅಸಮಾಧಾನಕರವಾದ ಸುಧಾರಣೆಗಳನ್ನು ಯಶಸ್ವಿತೆಗೆ ತರಲು ಮನುಷ್ಯರಾದವರು ಯಾರು ಯತ್ನಿಸುವಂತಿದೆ? ಸುಧಾರಣೆಗಳೂ ಅಪೂರ್ಣ, ಬೇಕುಬೇಕಾದ ಸಂದರ್ಭದಲ್ಲಿ ಸಾಕಷ್ಟು ಉಪಕಾರವೂ ಸಿಗುತ್ತಿದೆ, ಹೀಗಿರುವಾಗ ಹಿಂದುಸ್ಥಾನದ ಅದೆ ಜನರನ್ನು "ನೀವು ಇದನ್ನು ಸುಮ್ಮಗೆ ತೆಕ್ಕೊಳ್ಳಿರಿ, ಅದು ಅಪೂರ್ಣವಾದರೂ ಅದನ್ನು ಸಾಧಿಸುವದರಲ್ಲಿ ತತ್ಪರರಾಗಿರಿ, ಪ್ರಾಮಾಣಿಕತೆಯನ್ನು ತೋರಿಸಿರಿ, ಎಂದು ಮುಂತಾದ ಉಪದೇಶವನ್ನು ಮಾಡುವುದು ಅಯುಕ್ತವಾಗಿದೆ. ನಿಜವಾಗಿ ಕೇಳಿದರೆ ಯಾವನು ಸ್ವಯಂಕರ್ತವ್ಯಚ್ಯುತನಾಗಿರುವನೊ ಅವನಿಗೆ ಇತರರನ್ನು ಉಪದೇಶಿಸುವ ಅಧಿಕಾರವೆ ಮೊದಲಾಗಿ ಬರುವದಿಲ್ಲ. ಇದು ನೀತಿಯ ಮಾತು, ಆದರೆ ಒಬ್ಬನು ನೀತಿಯನ್ನು ಬದಿಗಿಟ್ಟು ಏನಾದರೂ ಮಾತಾಡತೊಡಗಿದರೆ ಅದು ಶುಷ್ಕಪಾಂಡಿತ್ಯವೆಂದೆ ಅನ್ನಿಸಿಕೊಂಡೀತಲ್ಲದೆ ಅದಕ್ಕೆ ಬೇರೆ ಹೆಸರು ಸಲ್ಲಲಿಕ್ಕಿಲ್ಲ.

ಸ್ಫುಟವಿಚಾರಗಳು.

೧. ಮಧ್ಯ ಪ್ರಾಂತದಲ್ಲಿ ಅಖಿಲ ಹಿಂದುಸ್ಥಾನದ ಬ್ರಾಹ್ಮಣೇತರರ ಪರಿಷತ್ತು ಸೇರಿತ್ತು. ವಸ್ತುತಃ ಬ್ರಾಹ್ಮಣೇತರರ ಜಗಳವು ಹೆಚ್ಚಾಗಿ ಈ ಸಂಸ್ಥಾನದಲ್ಲಿಯೂ ಹೆಚ್ಚು, ಮುಂಬಯಿ ಸಂಸ್ಥಾನದಲ್ಲಿಯೂ ಅಲ್ಪಸ್ವಲ್ಪ ಉಂಟು. ಇದರದೆ ಒಂದು ಚಿಕ್ಕ ತೆರೆಯು ಈಗ ಮಧ್ಯಪ್ರಾಂತದಲ್ಲಿ ಹೋಗಿತಲಪಿದೆ. ಜಾತಿ ಚಳವಳಗಳು ಆಯಾ ಜಾತಿಯ ಉತ್ಕರ್ಷವನ್ನು ಸಾಧಿಸಲು ಅಸ್ತಿತ್ವದಲ್ಲಿ ಬಂದಿರುವುದು ವಾಸ್ತವವಾದರೂ ಕೊನೆಗೆ ಹಿಂದಿ ಸ್ವರಾಜ್ಯದ ವಿರೋಧಿಯಾದ ನೋಕರಶಾಹಿಯ ಕೈಯೊಳಗಿನ ಗೊಂಬೆಗಳಾಗುತ್ತವೆಂಬುದು ಸುಳ್ಳಲ್ಲ. ಮತ್ತು ಈ ರೀತಿಯಿಂದ ಸರಕಾರದ ಕೈಯೊಳಗಿನ ಗೊಂಬೆಯಾದ ಮೇಲೆ ಎಲ್ಲ ಸ್ವಾರಸ್ಯವು ಕೆಟ್ಟುಹೋಗುತ್ತದೆ. ಸರಕಾರವು ಜಾತ್ಯಭಿಮಾನಾಂಧ ಚಳವಳದವರನ್ನು ಸ್ವರಾಜ್ಯವೃಕ್ಷ ಕಡಿಯುವದರಲ್ಲಿ ಹತ್ಯಾರದಂತೆ ಉಪಯೋಗಿಸಿ ಕೊನೆಗೆ ಆಯಾ ಜಾತಿಯ ಮಹತ್ವಾಕಾಂಕ್ಷೆಯನ್ನು ಸಹ ಸಂಹರಿಸುತ್ತದೆ! ಕೊಡಲಿಯ ಕಾವು ಕುಲಕ್ಕೆ ಕೇಡು ಎಂಬುದು ಇಂಥ ಸಂಗತಿಗಳಲ್ಲಿ ಸ್ಪಷ್ಟವಾಗುವದು. ಪ್ರಕೃತ ಬ್ರಾಹ್ಮಣೇತರರ ಚಳವಳವಾದರೂ ಇದೆ ದಾರಿಯನ್ನು ಹಿಡಕೊಂಡು ಹೋಗುತ್ತಿದೆ. ನೋಕರಶಾಹಿಯು ಧೂರ್ತತನದಿಂದ ಈ ಚಳವಳಗಾರರನ್ನು ಛೂಬಿಡಿದು ರಾಷ್ಟ್ರೀಯ ಚಳವಳದ ಮೇಲೆ ಪ್ರಹಾರಮಾಡುತ್ತಿದೆ. ಮಧ್ಯ ಪ್ರಾಂತದ ಈ ಪರಿಷತ್ತಿನ ಅಧ್ಯಕ್ಷಸ್ಥಾನದಲ್ಲಿ ಮಿ। ಬಾಂಗಡೆಯವರು ಇದ್ದರು. ಇವರ ಭಾಷಣವು ಅತ್ಯಂತ ಹೊಲಸಾಗಿತ್ತು. ಬ್ರಾಹ್ಮಣೇತರ ಉನ್ನತಿಯಿಂದಲೆ ಇವರ ಮನಸ್ಸು ಸಂತುಷ್ಟವಾಗುತ್ತಿರಲಿಲ್ಲ, ಬ್ರಾಹ್ಮಣರ ನಾಶವುಂಟಾದಲ್ಲಿ ಇವರ ಹೃದಯವು ಆನಂದಸಿಂಧುವಿನಲ್ಲಿ ಮುಳುಗಬಹುದೆಂದು ಇವರ ಭಾಷಣದ ಮೇಲಿಂದ ಕಂಡುಬರುತ್ತದೆ. ರಾನಡೇ, ಟಿಳಕ, ಕೇಳಕರ ಮುಂತಾದವರನ್ನು ಈ ಅಧ್ಯಕ್ಷರು ಕಂಡಾಬಟ್ಟೆ ಬೈದು ತನ್ನ ಮನಸ್ಸನ್ನು ಶಾಂತಪಡಿಸಿಕೊಂಡರು. ಪರಂತು ಅಧ್ಯಕ್ಷರಾದ ಬಾಂಗಡೆಯವರು ಬಾಯಿಯ ತುರಿಕೆಯನ್ನು ಹೋಗಲಾಡಿಸಿಕೊಂಡು ತನ್ನ ಮನಸ್ಸನ್ನು ಶಾಂತಪಡಿಸಿಕೊಳ್ಳುವಷ್ಟರಲ್ಲಿ ಅವರ ಈ ಮರುಕ್ತಿಗಳು, ಬ್ರಾಹ್ಮಣರಿಗೆಲ್ಲ, ಸಭೆಯಲ್ಲಿ ನೆರೆದ ನೂರಾರು ಸಮಂಜಸ ಬ್ರಾಹ್ಮಣೇತರ ಬಂಧುಗಳಿಗೆನೆ ಅತ್ಯಂತ ಅಸಹ್ಯವಾಗಿ ತೋರಿಹೋಯಿತು. ಮತ್ತು ಈ ಕಾರಣದಿಂದ ಸಭೆಯಲ್ಲಿ ಗಲಾಟೆಯು ಪ್ರಾರಂಭವಾಗಿ ಈ ಅಧ್ಯಕ್ಷರನ್ನೂ, ಅವರ ಭಾಷಣವನ್ನೂ ಬಹು ಮಂದಿ ನಿಷೇಧಿಸಿದರು.

೨. ಇಂಥ ಅವಿವೇಕದ ಭಾಷಣದಿಂದಲಾದರೂ ಸಭೆಯು ಅಂತ್ಯವಾಯಿತೆ? ಇಲ್ಲ. ಇದರೊಟ್ಟಿಗೆ ಆ ಪರಿಷತ್ತು ಅವಿವೇಕದ ಠರಾವನ್ನು ಕೂಡ ಪಾಸುಮಾಡಿತು. ಲೋಕಲ್ ಬೋರ್ಡುಗಳಲ್ಲಿ ಬ್ರಾಹ್ಮಣೇತರರಿಗೆ ಸಂಪೂರ್ಣ ಅವಕಾಶವನ್ನು ಕೊಡಬೇಕೆಂಬಿತ್ಯಾದಿ ಠರಾವುಗಳೊಡನೆ ಮಧ್ಯಪ್ರಾಂತದಲ್ಲಿ ರಿಲಿಜಸ್ ಎಂಡೌಮೆಂಟ ಬೀಲಿಗೆ ಅವಕಾಶವನ್ನು ಕೊಡಲು ಸರಕಾರಕ್ಕೆ ವಿಜ್ಞಾಪಿಸಿಕೊಳ್ಳುವ ಠರಾವನ್ನು ಸಹ ಪಾಸುಮಾಡಲಾಗಿದೆ. ಪರಸ್ಪರ ದ್ವೇಷದ ಭಾಷಣೆಯಿಂದ ರಿಲಿಜಸ್ ಎಂಡೌಮೆಂಟನಂಥ ಘಾತಕ ಹಾವಿಗೆ ಆಸ್ಪದವನ್ನು ಕೊಡಲು ಬೋಧಿಸುವದು ಪಂಚತಂತ್ರದೊಳಗಿನ ಗಂಗದತ್ತನ ಸುಧಾರಿಸಿದ ವರ್ತನವೆಂದೆ ಎನ್ನಬೇಕು! ಇಂಥ ಬುದ್ಧಿಯು ರಾಷ್ಟ್ರೀಯ ದೃಷ್ಟಿಯಿಂದಲೆ ಅಲ್ಲ, ಯಾವ ದೃಷ್ಟಿಯಿಂದಲೂ ಶ್ಲಾಘ್ಯವಲ್ಲ. ಕೇವಲ ದ್ವೇಷವನ್ನೆ ಪ್ರದರ್ಶಿಸಲು ಒಟ್ಟುಗೂಡಿದ ಬಾಂಗಡೆ ಮುಂತಾದವರ ಈ ಕೂಟವು ಸಾತಾರಾ ಪರಿಷತ್ತಿನ ಅಧ್ಯಕ್ಷರಾದ ಶ್ರೀ. ದೇಶಮುಖರನ್ನು ನಿಷೇಧಿಸಲು ಒಂದು ಠರಾವನ್ನು ತಂದಿತು. ಯಾಕೆ, ಯಾವ ಅಪರಾಧದ ಬಗ್ಗೆ? ಬ್ರಾಹ್ಮಣ-ಬ್ರಾಹ್ಮಣೇತರವೆಂಬ ದ್ವೇಷವನ್ನು ಕಟ್ಟಿಕೊಳ್ಳದೆ ಸರ್ವತ್ರ ಸಮಭಾವದ ದೃಷ್ಟಿಯನ್ನು ಅಂಗೀಕರಿಸಿದ ಯಾವ ಅಪರಾಧವುಂಟೊ ಆ ಅಪರಾಧದ ಬಗ್ಗೆ! ಬಾಂಗಡೆಯ ತಂಡದವರ ಸಂಖ್ಯೆಯು ಹೆಚ್ಚಿಗೆ ಇದ್ದದರಿಂದ ಆ ಠರಾವು ಪಾಸಾಯಿತು! ಸ್ವಮತಜ್ಞರನ್ನೆ ನಿಷೇಧಿಸುವ ಈ ಠರಾವು ಪಾಸಾದ್ದರ ಮೇಲಿಂದ ಪರಿಷತ್ತಿನ ಸ್ವರೂಪವು ವ್ಯಕ್ತವಾಗುತ್ತದೆ! ಬರಲಿ. ಇಂಥ ಜಗಳಗಳು ಒಂದು ಸಾರೆ ಎಲ್ಲ ಹೊರಗೆ ಬರಬೇಕು. ಅನ್ಯಥಾ ಶುದ್ಧವಾಗಲಿಕ್ಕಿಲ್ಲ. ಈ ದೃಷ್ಟಿಯಿಂದ ಮಧ್ಯಪ್ರಾಂತದ ಪರಿಷತ್ತಿನ ಗಲಾಟೆಪ್ರಿಯರನ್ನು ಅಭಿನಂದಿಸುವದು ಅಯುಕ್ತವಲ್ಲ.

೩. ಬಂಗಾಲದಲ್ಲಿ ಕಾಯಿದೆ ಕೌನ್ಸಿಲಿಗೆ ಬಿಟ್ಟಿರುವ ಅಧಿಕಾರಿಗಳನ್ನು ಗವರ್ನರರ ಕಾರ್ಯಕಾರಿ ಮಂಡಲವು ಸ್ವಾಧೀನಪಡಿಸಿಕೊಳ್ಳುವದಿದೆ ಎಂದು ವಾರ್ತೆಯು ಪ್ರಕಟವಾಗಿದೆ. ಬೇರೆ ಮಾತಿನಿಂದ ಹೇಳುವದಾದರೆ, ಬಂಗಾಲದ ದ್ವಿದಲ ರಾಜಪದ್ಧತಿಗೆ ರಜೆಕೊಡಬೇಕೆಂದು ಸರಕಾರದ ಅಭಿಪ್ರಾಯವಿರಬಹುದು. ಸ್ವರಾಜ್ಯಪಕ್ಷದವರು ಕೌನ್ಸಿಲನ್ನು ಆಕ್ರಮಿಸಿದಂದಿನಿಂದ ಬಂಗಾಲದಲ್ಲಿ ಮತ್ತು ಮಧ್ಯಪ್ರಾಂತದಲ್ಲಿ ದ್ವಿದಲ ಪದ್ಧತಿಗೆ ಪಕ್ಷವಾತವೆ ಹಿಡಿದಿದೆ. ಎಂದ ಮೇಲೆ ಬಂಗಾಲದಲ್ಲಿ ಲೊ. ಲಿಟನರು ವಿಭಕ್ತ ಇಲಾಖೆಗಳನ್ನು ತನ್ನ ಕೈಯಲ್ಲಿ ತೆಕ್ಕೊಂಡು ತನ್ನ ಎಡಬಲದಲ್ಲಿರುವ ಕಾರ್ಯಕಾರಿ ಮಂಡಲದ ಸಭಾಸದರ ಅನುಮತಿಯನ್ನು ಪಡಕೊಂಡು ರಾಜ್ಯಯಂತ್ರವನ್ನು ಸಾಗಿಸತೊಡಗಿದರೆ ಅದು ಜನತೆಯ ದೃಷ್ಟಿಯಿಂದ ಒಂದು ಅಪೂರ್ವವಾದ ಸಂಗತಿಯಲ್ಲ, ಎಲ್ಲರೂ ಇಂಥ ಸಂದರ್ಭವನ್ನು ನಿರೀಕ್ಷಿಸುತ್ತಲೆ ಇದ್ದರು. ವಸ್ತುತಃ ಹೇಳುವದಾದರೆ ಬಂಗಾಲದ್ದೆ ಅಲ್ಲ, ಎಲ್ಲ ಪ್ರಾಂತಗಳಲ್ಲಿಯ ಈ ದ್ವಿದಲ ರಾಜ್ಯಪದ್ಧತಿಗೆ ತಿಲಾಂಜಲಿಯನ್ನು ಕೊಡಬೇಕೆಂದೆ ಪ್ರಜಾಪಕ್ಷದ ಹೇಳಿಕೆ ಇದೆ. ಲೋಕಮತದ ಈ ಅಭಿಪ್ರಾಯವನ್ನು ಸರಕಾರವು ಸರಳವಾದ ದಾರಿಯಿಂದ ಅಂಗೀಕರಿಸದೆ ಸರಕಾರವು ಈ ಅಡ್ಡದಾರಿಗಳಿಗೆ ಇಳಿದಿದೆ. ಪ್ರಾಂತಿಕ ಸ್ವಾತಂತ್ರ್ಯವನ್ನು ಕೇಳುವಾಗ ಅದನ್ನು ಕೊಡುವದು ಸರಕಾರದ ಕರ್ತವ್ಯವಾಗಿತ್ತು. ಘಾತುಕವಾದ ದ್ವಿದಲ ಪದ್ಧತಿಯನ್ನು ನಿಲ್ಲಿಸುವದರಲ್ಲಿ—ಪ್ರಾಂತಿಕ ಸ್ವರಾಜ್ಯವನ್ನು ಕೇಳುವದೆ ಜನತೆಯ ಹೇತುವಾಗಿತ್ತು. ಆದರೆ ವರಿಷ್ಠ ಸರಕಾರವು ಲಿಟನ ಸಾಹೇಬರನ್ನು ಮುಂದೆಮಾಡಿ ದ್ವಿದಲ ಪದ್ಧತಿಯ ಅಧಿಕಾರಗಳನ್ನು ಕಿತ್ತುಕೊಳ್ಳುತ್ತಿದೆ. ಉಪರೋಧದ ಅವಲಂಬವನ್ನು ಮಾಡಿದರೆ ಬೇರೆ ಕಡೆಗಳಲ್ಲೂ ಇದೆ ಅವಸ್ಥೆಯಾದೀತೆಂದು ಮುಂಗಡವಾಗಿ ಇದೊಂದು ಪ್ರಕಾರದ ಉದ್‌ಘೋಷಣೆಯನ್ನೆ ಸರಕಾರವು ಮಾಡುತ್ತಿದೆ ಎನ್ನಬೇಕು. ಜನತೆಯಾದರೂ ಈ ಹೊಸ ಆಟಕ್ಕೆ ಪ್ರತಿ ಆಟ ಕೊಡಲು ಸಿದ್ಧವಾಗಿಯೆ ಇದೆ ಎನ್ನಬಹುದು. ನಿಜವಾದ ಹಕ್ಕುಗಳಾಗಲಿ, ಅಧಿಕಾರವಾಗಲಿ ಲಾಭವಾಗಲಿ ಇಲ್ಲದಿರುವಾಗ ವಿಭಕ್ತ ಮಂತ್ರಿಮಂಡಲವೆಂಬ ಗೊಂಬೆಯನ್ನು ನಿಲ್ಲಿಸಿ, ಅದರ ಖರ್ಚಿನ ಹೊರೆಯನ್ನು ಬಡ ಜನತೆಯ ತಲೆಯ ಮೇಲೆ ಹಾಕುವದಕ್ಕಿಂತ ಇದನ್ನು ಪರಿಮಾರ್ಜಿಸುವದೆ ಒಳ್ಳೆಯದಲ್ಲವೆ.

೪. ಊಟಿಯಲ್ಲಿ ಈ ಮದ್ರಾಸ ಸಂಸ್ಥಾನದೊಳಗಿನ ಎಲ್ಲ ಜಿಲ್ಲಾಧಿಪತಿಗಳ ಪರಿಷತ್ತು, ಸಾಧಾರಣವಾಗಿ ಒಂದು ವಾರ ತನಕ ಜರಗತಕ್ಕದಿದೆ. ಇದಕ್ಕೆ ಎಲ್ಲ ಜಿಲ್ಲೆಗಳಿಂದ ಕಲೆಕ್ಟರುಗಳು ಬಂದಿರುವರು. ಇವರ ಪರಿಷತ್ತಿನ ಈ ಮೊದಲನೆಯ ಅಧಿವೇಶನದ ಮೊದಲನೆಯ ಪರದೆಯನ್ನು ತೆರೆಯುವಾಗ ಗವರ್ನರ ಸಾಹೇಬರು ಈ ಪರಿಷತ್ತಿನ ಉಪಯುಕ್ತತೆಯನ್ನು ಸ್ಥಾಪಿಸಿದರು! ಇಂಥ ಪರಿಷತ್ತುಗಳನ್ನು ಸೇರಿಸಿ, ಕಾರ್ಯಕಾರಿ ಮಂಡಲದವರೊಡನೆ ಸಂಗತಿಗಳನ್ನು ಚರ್ಚಿಸುವುದರಿಂದ ಜಿಲ್ಲಾಧಿಕಾರಿಗಳಿಗೆ ರಾಜ್ಯಕಾರಭಾರದ ಹೆಚ್ಚು ಪರಿಚಯವುಂಟಾಗುತ್ತದೆ. ಇವರ ಅಭಿಪ್ರಾಯವನ್ನು ಅವರು ಅವರ ಮನೋಗತವನ್ನು ಇವರು ತಿಳಕೊಳ್ಳುವುದರಿಂದ ಎಂದರೆ ಈ ವಿಚಾರವಿನಿಯಮದಿಂದ ರಾಜ್ಯ ಯಂತ್ರವು ಸರಾಗವಾಗಿ ನಡೆಯಲು ಸಹಾಯವಾಗುತ್ತದೆಂಬುದು ಸುಳ್ಳಲ್ಲ! ಐ. ಸಿ. ಎಸಿನ ಈ ಅಧಿಕಾರಿಗಳು ಮೊದಲೆ ಸ್ವಯಂಮಾನ್ಯರಾಗಿ ವರ್ತಿಸಿಕೊಂಡು ತಾವು ಸ್ವರ್ಗದಿಂದ ಇಳಿದವರೆಂಬುದಾಗಿ ನಂಬುತ್ತಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ ಈ ಪರಿಷತ್ತಿನ ಬೆಂಬಲವು ಸಿಕ್ಕಿದ ಬಳಿಕ ಅವರ ಆ ಅಹಂಮನ್ಯತೆ, ಆ ನಂಬಿಕೆ ಇವೆರಡಕ್ಕೂ ಇನ್ನಷ್ಟು ಬಲವು ಸಿಕ್ಕಿದಂತಾಗುವುದು. ಅಧಿಕಾರಿಗಳು ಪ್ರಜೆಗಳೊಡನೆ ಆಗಾಗ್ಗೆ ಸೇರಿಕೊಂಡು ಅವರ ಕಷ್ಟಸಂಕಷ್ಟಗಳನ್ನು ಪರಿಹರಿಸಲು ಯತ್ನಿಸತಕ್ಕದ್ದು. ಇದು ನ್ಯಾಯವಾದ ಕ್ರಮ. ಆದರೆ ಅದರ ಬದಲಿಗೆ ಅಧಿಕಾರಿಗಳೆ ಒಟ್ಟಿಗೆ ಸೇರಿ ತಮ್ಮ ಸಾಂಘಿಕ ಬಲವನ್ನು ದೃಢಪಡಿಸಿಕೊಳ್ಳಲು ಯಾವಾಗ ಒದ್ದಾಡುವರೊ ಆಗ ಅವರು ಲೋಕಹಿತದ ಕಡೆಗೆ ಎಷ್ಟರ ಮಟ್ಟಿಗೆ ಮನಸ್ಸನ್ನು ಕೊಟ್ಟಾರೆಂಬುದು ಇದರ ಮೇಲಿಂದಲೆ ಗೊತ್ತಾಗುತ್ತದೆ. ಇರಲಿ. ಊಟಿಯಲ್ಲಿ ಸೇರಿದ ಕಲೆಕ್ಟರರ ಪರಿಷತ್ತು ನಾವು ಮೇಲೆ ದಿಗ್‌ದರ್ಶಿಸಿದ ರೀತಿಯಲ್ಲೆ ಪರಿಣಮಿಸೀತು, ಅದರ ಉದ್ದೇಶವು ಲೋಕಹಿತದ್ದಲ್ಲ, ಎಂದು ಮುಂತಾಗಿ ನಾವು ಹೇಳುವುದಿಲ್ಲ. ಪರಿಷತ್ತಿನ ಉದ್ದೇಶ ಕಾರ್ಯಾದಿಗಳು ಒಳ್ಳೆಯವಾಗಿರಬಹುದು. ಆದರೆ ಅವು ಯಾವ ವಿಧದವೆಂಬುದನ್ನು ತಿಳಿದುಕೊಳ್ಳಲು ಜನರು ಉತ್ಸುಕರಾಗಿದ್ದಾರೆ. ಆದ್ದರಿಂದ ಇದರ ಕಾರ್ಯಕ್ರಮವು ಯಾವ ರೀತಿಯಿಂದ ನಡಿದಿದೆ ಎಂಬುದು ಬಹಿರಂಗವಾದ ಬಳಿಕ ನಮ್ಮ ಅಭಿಪ್ರಾಯವನ್ನು ನಾವು ತಿರುಗಿ ವ್ಯಕ್ತಗೊಳಿಸುವೆವು.

೫. ಮುಂಬಯಿಯಲ್ಲಿ ಮೂರು—ನಾಲ್ಕು ತಿಂಗಳ ಮುಂಚೆ ಮುಮತಾಜ ಬೇಗಮ ಎಂಬವಳ ದೆಸೆಯಿಂದ ಬಾವಲಾ ಸಾಹೇಬನ ಖೂನಿಯು ನಡೆದಿತ್ತು; ಇದರ ತನಖಿಯು ಪ್ರಾರಂಭವಾಗಿ ಈ ಪ್ರಕರಣವು ಮುಂಬಯಿ ಹೈಕೋರ್ಟಿನಲ್ಲಿ ಈಗ ಎರಡು ಮೂರು ತಿಂಗಳಿಂದ ನಡಿಯುತಿತ್ತು. ಇದರ ವಿಚಾರಣೆಯು ಮುಗಿದು ನ್ಯಾಯ ಮೂರ್ತಿಗಳು ೧೧ ಮಂದಿ ಅಪರಾಧಿತರಲ್ಲಿ ೯ ಜನರನ್ನು ಶಿಕ್ಷಿಸಿ ಇಬ್ಬರನ್ನು ನಿರ್ದೋಷಿಗಳನ್ನಾಗಿ ಬಿಟ್ಟಿರುವರು. ಈ ಪ್ರಕರಣದ ಪೂರ್ವ ವೃತ್ತಾಂತವು ಮುಂಚೆ ನಮ್ಮ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಮತ್ತು ಈ ಹೊತ್ತು ಇನ್ನೊಂದು ಕಡೆಯಲ್ಲಿ ವಾರ್ತಾ-ಕೊಲಮಿನಲ್ಲಿ ನ್ಯಾಯಮೂರ್ತಿಗಳ ನಿಕಾಲೆಯ ಸುದ್ದಿಯನ್ನು ಹಾಕಿದ್ದೇವೆ. ಬಾವಲಾ ಪ್ರಕರಣದ ನೆವದಿಂದ ಅನೇಕ ಸಂಗತಿಗಳು ಹೊರಗೆ ಬಂದಿದ್ದಾವೆ. ಅವು ಎಷ್ಟರ ಮಟ್ಟಿಗೆ ಸತ್ಯವಾದವುಗಳು, ಈ ಪ್ರಕರಣವು ಇಲ್ಲಿಗೆನೆ ಮುಗಿಯಿತೊ ಅಥವಾ ಇದಕ್ಕೆ ಇನ್ನೂ ಶಾಖೆಗಳು ಒಡೆದು ಅವು ಹಬ್ಬಲಿಕ್ಕಿರುವವೊ ಎಂಬುದು ಇನ್ನೂ ಗೊತ್ತಾಗಿಲ್ಲ. ಈ ವಿಷಯವಾಗಿ ಮುಂಬಯಿಯಲ್ಲಿ ಅನೇಕ ತರ್ಕವಿತರ್ಕಗಳು ನಡೆಯುತ್ತಿವೆ. ಈ ಬಾವಲಾ ಪ್ರಕರಣದಲ್ಲಿ ಫಾಶಿ ಮತ್ತು ಜನ್ಮಟಾಪಿನಂಥ ಕ್ರೂರ ಶಿಕ್ಷೆಗಳು ವಿಧಿಸಲ್ಪಟ್ಟಿದೆಯಾದರೂ, ಅಪರಾಧಿಗಳ ಅಪರಾಧಕ್ಕೆ ಅನುರೂಪವಾದ ಶಿಕ್ಷೆಯಾದೆ ಅನ್ನಬೇಕು. ಮುಂಬಯಿಯ ಲೋಕಮತವಾದರೂ ಹೀಗೆಯೆ ಇದೆ.

೬. ಸರ್. ಶಂಕರನ್ ನಾಯರರ ಮೇಲೆ ಮಾನನಷ್ಟದ ದಾವೆಯನ್ನು ಮಾಡಿ ಅದರಲ್ಲಿ ಜಯಶ್ರೀಯನ್ನು ವರಿಸಿದ ಸರ ಮಾಯಕೇಲ ಓಡ್ವಾಯರರು "ತನಗೆ ತಿಳಿದಿರುವ ಹಿಂದೂಸ್ಥಾನ" ಎಂಬ ಪುಸ್ತಕವನ್ನು ಪ್ರಕಟಿಸಿರುವರು. ನಾಯರರು ಓಡ್ವಾಯರರ ದಾವೆಯಲ್ಲಿ ನ್ಯಾಯಾಧೀಶರು ಈ ಓಡ್ವಾಯರರಿಗೆ ಬೇಕಾದಂತೆ ಕೊಟ್ಟಿರುವ ಯಾವ ನಿರ್ಣಯವಿದೆಯೊ ಅದರಿಂದಲೂ ಅವರು ಸಮಾಧಾನವಾಗದೆ ತನ್ನ ಅಸಮಾಧಾನವನ್ನು ಜಾಹೀರಪಡಿಸಲು ಅವರು ಈ ಪುಸ್ತಕದ ಪುಟಗಳನ್ನು ಖರ್ಚು ಮಾಡಿದ್ದಾರೆ. ತನ್ನ ಮೊಕದ್ದಮೆಯಲ್ಲಿ ಸರಕಾರವು ತನಗೆ ಯಾವ ಸಹಾಯವನ್ನೂ ಮಾಡಿಲ್ಲ, ತನಗೆ ಜಯವು ಸಿಕ್ಕಿ ತನ್ನನ್ನು ನೂರಾರು ಜನರು ಅಭಿನಂದಿಸಿದ್ದಾರೆ, ಆದರೆ ಹಿಂದುಸ್ಥಾನ ಸರಕಾರವು ಸರ್ವಥಾ ಅಭಿನಂದಿಸಲಿಲ್ಲ ಎಂಬಿತ್ಯಾದಿ ಸಂಗತಿಗಳನ್ನು ಬರೆದಿರುತ್ತಾರೆ. ಮತ್ತು ಇದೆ ಪುಸ್ತಕದಲ್ಲಿ ಅಮೃತಸರದ ಅನಾಹುತಗಳ ವಿಷಯವನ್ನೂ ಪ್ರಸ್ತಾಪಿಸುವಾಗ ಎಲ್ಲ ದೋಷಾರೋಪವನ್ನು ಹಿಂದೂಸ್ಥಾನ ಸರಕಾರದ ಮೇಲೆ ಹೊರಿಸಲು ಮತ್ತು ಡಾಯರರನ್ನು ಪುನಃ ಸಮರ್ಥಿಸಲು ಯತ್ನಿಸಿದ್ದಾರೆ. ಇವರ ವಿಚಾರಗಳು ಕೇವಲ ಅಲ್ಪವಾಗಿರುವುದರಿಂದ ಮತ್ತು ಕುತ್ಸಿತವಾಗಿರುವದರಿಂದ ಅವುಗಳನ್ನು ಉಪೇಕ್ಷಿಸುವದೆ ಯುಕ್ತವಾಗಿದೆ.

ಮಂಗಳೂರು.

ಇದೇ ಬರುವ ಜೂನ್ ತಾರೀಕು ೮ಕ್ಕೆ ಮಂಗಳೂರು ತಾಲೂಕು ಬೋರ್ಡಿನ ಮಹಾ ಸಭೆಯು ಸದರಿ ತಾಲೂಕು ಬೋರ್ಡು ಆಫೀಸಿನಲ್ಲಿ ಜರಗುವುದು. ಈ ಸಭೆಯಲ್ಲಿ ಸ್ಟೇಂಡಿಂಗ್ ಕಮಿಟಿ ಮೆಂಬರರ ಚುನಾವಣೆಯು ಆಗುವುದು.

ಹಿಂದುಪುರಂ ರೇಂಜ್ ಕಾಯಂ ಡಿಪ್ಯೂಟಿ ಇನ್ಸ್‌ಪೆಕ್ಟರ್ ಒಫ್ ಸ್ಕೂಲ್ಸ್ ಆಗಿರುವ ರಾ। ಮಂಜೇಶ್ವರ ರಘುನಾಥ ರಾಯರಿಗೆ ಅನಂತಪುರ ಗರ್ಲ್ಸ್ ರೇಂಜ್ ಸಬ್ ಅಸಿಸ್ಟಾಂಟ್ ಇನ್ಸ್‌ಪೆಕ್ಟರರಾಗಿ ವರ್ಗವಾಗಿಯದೆ. ಇವರು ಕುಂದಾಪುರ ಉಡುಪಿ ರೇಂಜಗಳಲ್ಲಿ ೧೨ ವರುಷಗಳ ಹಿಂದೆ ಸುಪರ್‌ವೈಜರಾಗಿದ್ದರು.

The Calicut Bank, Ltd.,

ದಿ ಕೆಲಿಕಟ್ ಬೇಂಕ್, ಲಿಮಿಟೆಡ್,

ಹೆಡ್ ಆಫೀಸು – ಕಲ್ಲಿಕೋಟೆ.

ಬ್ರಾಂಚುಗಳು: – ಮುಲ್ಲಸ್‌ಚೇರಿ, ತಲಚೇರಿ, ಕೊಚ್ಚಿ ಮತ್ತು ಪಾಲ್ಘಾಟು.

ರಿಜಿಸ್ಟರ್ಡ್ ಮತ್ತು ಅಧಿಕಾರಗೊಳಿಸಲ್ಪಟ್ಟ ಮೂಲಧನ ರೂ. 5,00,000—0—0.

ರೂಪಾಯಿ 10ರ 50,000 ಪಾಲುಗಳು.

(30—8—1924)ರ ವರೆಗೆ ಮೌಲ್ಯ ಮೂಲಧನ ರೂಪಾಯಿ 1,81,850—0—0.

ಒಂದು ವರುಷದ ಕಾಯಂ ಠೇವಣಾತಿಗೆ ಬಡ್ಡಿ ದರ ಸೇಕಡಾ ರೂ. 7—8—0.

ಕಳೆದ 4 ವರುಷಗಳಲ್ಲಿ ಪಾಲುಗಾರರಿಗೆ ಸೇಕಡಾ 12ರಂತೆ ಬಡ್ಡಿ ಹಂಚಿದೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಸಿ. ಕೃಷ್ಣನ್, ಬಿ. ಎ. ಬಿ. ಎಲ್.,
ಮೆನೇಜಿಂಗ್ ಡೈರೆಕ್ಟರ್.

ಡೈರೆಕ್ಟರರಲ್ಲಿ ಒಬ್ಬರು—

ಎಮ್. ನಾರಾಯಣ ಕಾಮತ್, ಬಿ. ಎ.,
ಪ್ಲೀಡರ್, ಕುಂದಾಪುರ

ಇಲ್ಲಿಯ ಡಿಪ್ರೆಸ್ಡ್ ಕ್ಲಾಸ್ ಮಿಶನಿನ ವಾರ್ಷಿಕ ವರ್ಧಂತಿ ಉತ್ಸವವು ಇದೇ ಬರುವ ಮೇ ತಾ. ೩೦ಕ್ಕೆ ಕೋರ್ಟು ಗುಡ್ಡೆ ಬಳಿ ಇರುವ ಶಾಲೆಯಲ್ಲಿ ಜರಗುವುದು. ಮೆಂಬರರೂ, ಚಂದಾದಾರರೂ, ಪ್ರೋತ್ಸಾಹಕರೂ ಅಗತ್ಯವಾಗಿ ಹಾಜರಾಗಬೇಕೆಂದು ಮಿಶನಿನ ಜನರಲ್ ಸೆಕ್ರೆಟರಿಯವರ ವಿಜ್ಞಾಪನೆ.

ಮದ್ರಾಸು ಹೈಕೋರ್ಟು ವಕೀಲರಾದ ಕೆ. ಸಂಜೀವ ಕಾಮತ್ ಬಿ. ಎ. ಬಿ. ಎಲ್. ಇವರು ಮದ್ರಾಸು ಯುನಿವರ್ಸಿಟಿ ಸಿನೇಟ ಮೆಂಬರಿಕೆಗೆ ಉಮೇದ್ವಾರರಾಗಿ ನಿಂತಿರುವರು.

ಇಲ್ಲಿಯ ಸೈಂಟ್ ಅಗ್ನೆಸ್ ಕೋಲೇಜಿನಿಂದ ಈ ಸಲದ ಪರೀಕ್ಷೆಗೆ ಕಳುಹಿಸಲ್ಪಟ್ಟ ೧೫ ಮಂದಿ ಬಾಲಿಕೆಯರಲ್ಲಿ ೧೨ ಮಂದಿ ಎರಡು ಭಾಗಗಳಲ್ಲೂ ೩ ಮಂದಿ ಒಂದೊಂದು ಭಾಗದಲ್ಲೂ ತೇರ್ಗಡೆ ಪಟ್ಟಿರುವರು.

ವಿವಿಧ ವಿಷಯಗಳು.

“[illegible]” ಎಂಬ ಹೇಳಿಕೆಯು ನಮ್ಮಲ್ಲಿದೆ. ಮೂವರು ಕೂಡಿ ಯಾವದಾದರು ಒಂದು ಶುಭಕಾರ್ಯಕ್ಕೆ ಹೋಗುವ ಸಂಪ್ರದಾಯವಿಲ್ಲ. ವಿವಾಹ, ಉಪನಯನ ಮುಂತಾದ ಶುಭಕಾರ್ಯಗಳ ಆಮಂತ್ರಣೆಯನ್ನು ಕೊಡುವ ಸಂದರ್ಭದಲ್ಲಿ ಮೂವರು ಹೊರಡುವದಿಲ್ಲ. ಉತ್ತಮವಾದ ಖಾದ್ಯವನ್ನು ಮೂರುಸಲ ಮಾತ್ರ ತಿನ್ನಕೂಡದೆಂಬ ಸಂಪ್ರದಾಯವು ಎಷ್ಟೋ ಕಡೆಯಲ್ಲಿದೆ. ಸಾರಾಂಶ 'ಮೂರು' ಸಂಖ್ಯೆಯು ನಮ್ಮಲ್ಲಿ ಅಷ್ಟೊಂದು ಶುಭಸಂಖ್ಯೆಯಲ್ಲಿ ಗಣನೆಮಾಡಲಾಗುವುದಿಲ್ಲ. ಇದೇ ತರದ ತಿಳುವಳಿಕೆಯು ಪಾಶ್ಚಾತ್ಯರಲ್ಲೂ ಕಂಡುಬರುತ್ತದೆ. ಅವರಲ್ಲಿ ೧೩ನೆ ಸಂಖ್ಯೆಯು ಅಶುಭವೆಂದು ನೆನಿಸಲ್ಪಡುತ್ತದೆ. ಒಂದು ಕೋಣೆಯಲ್ಲಿ ೧೩ ಜನರು ಕೂಡಿದ್ದಾದರೆ, ಏನೂ ಅಪಘಾತವು ಸಂಭವಿಸೀತೆಂದು ಅವರು ಹೆದರಿ ಒಬ್ಬನನ್ನು ಕೂಡಲೆ ಕಳಿಸುವರು. ಊಟಕ್ಕೆ ಕೂತಾಗ ೧೩ ಜನರಿದ್ದರೆ ಇನ್ನೊಬ್ಬನನ್ನು ಹೇಗಾದರು ಮಾಡಿ ತರುವ ಸಂಪ್ರದಾಯ ಉಂಟು. ಅಮೇರಿಕದಲ್ಲಿ ಈ ಭಾವನೆಯು ಇನ್ನೂ ಭಯಂಕರ ರೀತಿಯಲ್ಲಿ ಉಂಟು. ಒಂದು ಹೋಟೇಲಿನಲ್ಲಿ ಕೋಣೆಗಳಿಗೆ ನಂಬರನ್ನು ಹಾಕುವದಿದ್ದರೆ ೧೩ನೇ ಕೋಣೆಯು ಖಾಲಿಯಾದೀತೆಂದು ಮಾಲಿಕನು ಹೆದರುವನು. ನಾಟಕ ಮಂದಿರದಲ್ಲಿ ೧೩ನೇಯ ಖುರ್ಚಿಯು ಯಾವಾಗಲೂ ಖಾಲಿಯಾಗಿಯೆ ಇರುವದು. ಒಂದು ಪ್ರಸಂಗದಲ್ಲಿ ಅಲ್ಲಿಯ ಒಬ್ಬ ಗೃಹಸ್ಥನು ತನ್ನ ಮನೆಗೆ ೧೩ನೇ ನಂಬರನ್ನು ಮುನ್ಸಿಪಾಲಿಟಿಯು ಹಾಕಿದಕ್ಕೆ ಅದರ ವಿರುದ್ಧವಾಗಿ ಮೊಕದ್ದಮೆಯನ್ನು ಮಾಡಿದನು! ಇಂಥ ಭಾವನೆಗಳಿಂದ ಎಷ್ಟು ಕೌತುಕದ ಸಂಗತಿಗಳು ನಡಿಯುತ್ತವೆ!

• • •

ಹಿಂದುಸ್ಥಾನವು ಮಾನವಿ ಸುಧಾರಣೆಗೆ ಎಷ್ಟು ಸಹಾಯ್ಯವನ್ನು ಮಾಡಿಯದೆಂದು ಈಗ ಪ್ರಸಿದ್ಧವಾದ್ದೇ ಸರಿ. ಈ ಭೂಲೋಕದ ಪ್ರಾಚೀನ ಗ್ರಂಥವೆಂದರೆ ಋಗ್ವೇದವೆ ಸರಿ. ಪ್ರೊಫೆಸರ್ ಮೆಕ್ಸಮುಲ್ಲರು ಹೇಳಿರುವಂತೆ ಹಿಂದುಸ್ಥಾನವು ಮನುಷ್ಯೋತ್ಪತ್ತಿಯ ವಿಷಯದಲ್ಲಿ ಹೆಚ್ಚಿನ ಪ್ರಕಾಶವನ್ನು ಹಾಕಿದೆಂಬುದು ವೇದದಿಂದ ಕಂಡುಬರುತ್ತದೆ. ಇರಲಿ. ಇದೇ ಪ್ರಕಾರ ಗಣಿತ ಶಾಸ್ತ್ರದಲ್ಲಿಯೂ ಕೂಡ ಹಿಂದೂಸ್ಥಾನವು ಮೊದಲಿಂದಲೂ ವಿಖ್ಯಾತಿಹೊಂದಿದೆ. ಮುಖ್ಯವಾಗಿ ಅಂಕೆಗಳ ಮೂಲ ಉತ್ಪತ್ತಿಯು ಹಿಂದೂಸ್ಥಾನದಲ್ಲೆ ಇದೆ ಎಂದು ಅನೇಕ ವಿದ್ವಾಂಸರು ಹೇಳುತ್ತಾರೆ. ಹಿಂದೂಸ್ಥಾನದಿಂದ ಇಲ್ಲಿಗೆ ವ್ಯಾಪಾರಕ್ಕಾಗಿ ಬರುತ್ತಿದ್ದ ಅರಬರು ನಮ್ಮ ಅಂಕೆಗಳನ್ನು ಒಯ್ದು ಪಾಶ್ಚಾತ್ಯ ದೇಶಗಳಿಗೆ ಪರಿಚಿತ ಮಾಡಿದರು. ಅಷ್ಟೆ ಅಲ್ಲ, ಎಲ್ಲ ಭಾಷೆಗಳಲ್ಲಿಯೂ ಒಂದೆ ರೀತಿಯಾಗಿ ಬರೆಯುತ್ತಿರುವ ಶೂನ್ಯದ ಚಿನ್ಹೆಯು ಹಿಂದಿಗಳೆ ಕಂಡುಹಿಡಿದಿದ್ದರೆಂದು ಅಮೇರಿಕದ ಒಬ್ಬ ಪ್ರೊಫೆಸರರು ಬರೆಯುತ್ತಾರೆ. ಹೀಗಿದ್ದರೂ ಅಂಕೆಗಳಿಗೆ “Arabic figures” (ಅರೇಬಿ ದೇಶದಿಂದ ಬಂದ ಚಿನ್ಹೆಗಳು) ಎಂದು ಹೇಳುವ ವಾಡಿಕೆ ಇದೆ. ಇದರ ನಿಜವಾದ ಇತ್ಯರ್ಥವನ್ನು ಕಂಡು ಹಿಡಿಯಲು ಅಮೇರಿಕದಲ್ಲಿಯ ಹಿಂದುಸ್ಥಾನ ಎಸೋಸಿಯೇಶನಿನ ಮೆಂಬರರಾದ ಶ್ರೀ. ನಲಿನೀ ರಂಜನ ಚೌಧುರಿಗಳು ಅಂಕೆಗಳ ವಿಷಯವಾಗಿ ಒಂದು ಉತ್ತಮ ತರಗತಿಯ ಪ್ರಬಂಧವನ್ನು ಬರೆದು ಅದರಲ್ಲಿ ಸಾಗ್ರವಾಗಿ ಅವುಗಳ ಉತ್ಪತ್ತಿಯು ಇಂಥ ದೇಶದಲ್ಲಿಯೇ ಆಯಿತೆಂಬ ಊಹನೆಗೆ ಕಾರಣಗಳನ್ನು ತೋರಿಸಿದವರಿಗೆ ಬಂಗಾರದ ಪದಕವನ್ನು ಕೊಡುತ್ತೇನೆಂದು ಪ್ರಕಟಮಾಡಿರುವರು. ಈ ಪದಕದ ಹೆಸರು “ಮಹಾಮಾಯಾ ಪದಕ”. ಪ್ರಬಂಧಕರ್ತರಲ್ಲಿ ಕೆಲವರು ಅರೆಬಿಯೆ ಮೂಲಸ್ಥಾನವೆಂದು ತೋರಿಸುವ ಸಾಧನಗಳನ್ನೂ ಕೆಲವರು ಹಿಂದುಸ್ಥಾನವೆ ಉಗಮಸ್ಥಾನವೆಂದೂ ತೋರಿಸಬೇಕೆಂದು ಚೌಧುರಿಯವರ ಅಭಿಪ್ರಾಯವಿದೆ. ಅಲ್ಲದೆ ಪ್ರಬಂಧಕರ್ತರು ಹಿಂದುಸ್ಥಾನದೊಳಗಿನ ಯುನಿವರ್ಸಿಟಿಯ ಡಿಗ್ರಿಯನ್ನು ಪಡೆದವರಾಗಬೇಕಂತೆ. ಹಿಂದಿಗಳು ಈ ಸುಸಂದರ್ಭವನ್ನು ಬಿಡರೆಂದು ನಾವು ತಿಳಿದಿರುವೆವು.

ದಕ್ಷಿಣ ಕನ್ನಡ.

ಪುತ್ತೂರು:— ಇಲ್ಲಿಯ ಪಂಚಾಯಿತ ಕೋರ್ಟಿಗೆ ನೇಮಕಪಟ್ಟ ಮೆಂಬರ ಮಾ। ರಾ। ಊರಮಲೆ ಕೊರಗಪ್ಪರೈ, ಸೂರಳೆ ಯೆಲ್ಯಣ್ಣನವರು (ತಾಲೂಕು ಬೋರ್ಡ ನೊಮಿನೆಶನ್ ಮೆಂಬರ) ಸಾವ್ಕಾರ ಮ ತಾಲೂಕು ಬೋರ್ಡ ಮೆಂಬರ ಮಂಜೇಶ್ವರ ಜನಾರ್ದನಭಟ್ಟ ಇವರು ೫ ಮಿಟಿಂಗುಗಳಿಗೆ ಹಾಜರು ಆಗಲಿಕ್ಕೆ ತಪ್ಪಿದ್ದರಿಂದ ಅವರ ಮೆಂಬರಿಕೆ ರದ್ದುಪಡಿಸಿ ಮ ವಕೀಲ ಮಾ। ರಾ। ಹೊಸದುರ್ಗ ಗಣಪತಿಸ್ವಾಯರು ಮೆಂಬರಿಕೆಗೆ ರಾಜೀಕೊಟ್ಟಿದ್ದರಿಂದ ಇವರ ಬದಲಿಗೆ ಹೊಸ ಮೆಂಬರರನ್ನು ಇದೇ ತಿಂಗಳ ತಾ. ೨೯ನೇ ಶುಕ್ರವಾರ ದಿವಸ ಇಲ್ಲಿಯ ಪಂಚ್ಯಾತ ಕೋರ್ಟಿನಲ್ಲಿ ಚುನಾವಣೆ ನಡಿಯುವುದಾಗಿ ಡಿವಿಜನಲ್ ಆಫೀಸರರು ನೋಟೀಸುಕೊಟ್ಟಿರುವರು. ಇನ್ನಾದರೂ ಹೊಸ ಮೆಂಬರರನ್ನು ಚುನಾಯಿಸುವರು ಮಿಟಿಂಗುಗಳಿಗೆ ಹಾಜರಾಗಲು ತಪ್ಪದವರನ್ನೇ ಚುನಾಯಿಸುವುದುತ್ತಮವಲ್ಲವೆ.

ಇಲ್ಲಿಯ ಟಪ್ಪಾಲು ಆಫೀಸಿನ ಬಳಿ ಹೊಸತಾಗಿ ಕಟ್ಟುವ ಮನೆ ಕಟ್ಟೋಣದ ಕಾಮಗಾರಿ ಸಂಬಂಧ ಕಲ್ಲುಗಳು ರಾಜರಸ್ತೆಯ ಬದಿಯಲ್ಲಿ ಅಲ್ಲಿಯೆ ಕೆತ್ತುವ ಕೆಲಸ ನಡಿಸುವುದರಿಂದ ರಾಜರಸ್ತೆ (ಮಡಿಕೇರಿ ರಸ್ತೆ) ಅರ್ಧಾಂಶವನ್ನು ನುಂಗಿಬಿಟ್ಟದ್ದರಿಂದ ಮೋಟಾರ ಬಸ್ಸುಗಳು ಅಮದರಫ್ತಾಗುವದರಿಂದ ಜನರು ಅತ್ತಿತ್ತ ಹೋಗುವದು ಬಹಳ ಪ್ರಯಾಸ. ಇದಲ್ಲದೆ ಕೆಲವು ವರುಷಗಳ ಹಿಂದೆ ಟೌನಿನ ಮುಖ್ಯಧರ ಮಹಿಬಾಗಲಿನಿಂದ ಮಂದಿರಕ್ಕಾಗಿ ಹೋಗುವ ರಸ್ತೆ ಕಿನಾರೆ ಇದೇ ರೀತಿ ಕಲ್ಲುಗಳು ಟೌನಿನ ರಸ್ತೆ ಕಿನಾರೆ ಇಟ್ಟು ಕೆತ್ತಿದ್ದರಿಂದ ಮಾ। ರಾ। ಬೆಳ್ತಂಗಡಿ ರಾಘವೇಂದ್ರರಾಯರ ಮೇಲೆ ಕ್ರಿಮಿನಲ ಮೊಹರಣೆ ನಡೆದಿತ್ತು. ಆದರೆ ಬಹಳವಾದ ಗಾಡಿಗಳು ಜನರು ಮೋಟಾರ ಬಸ್ಸುಗಳು ಹಗಲು ರಾತ್ರಿ ಅಮದರಫ್ತಾಗುವ ರಸ್ತೆಯಲ್ಲಿ ಇಂಥಾ ಅಕ್ರಮಣಮಾಡಿದ್ದರಿಂದ ಯಾವ ಅಧಿಕಾರಿಗಳು ಈ ಕಡೆಗೆ ಗಮನಕೊಡುವದಿಲ್ಲವೇಕೆ?

ಕಾಸರಗೋಡು:— ಇಲ್ಲಿಯ ಸುಪ್ರಸಿದ್ಧರೂ, ಮಾನನೀಯರೂ, ವಿದ್ಯಾಪ್ರಿಯರೂ ಆದ ಶ್ರೀ ಕುದ್ದ ಸುಬ್ರಾಯ ಶಾನಭಾಗರು ಸ್ವರ್ಗಸ್ಥರಾದ್ದನ್ನು ತಿಳಿಸಲು ತುಂಬಾ ವ್ಯಸನವಾಗುವದು. ಈಗ ಹಾಲ್ಕಾರು ತಿಂಗಳಿಂದ ಕಾಲಿಗೆ ಒಂದು ವ್ರಣವುಂಟಾಗಿ ಎಷ್ಟೋ ದೇಶ-ವಿದೇಶಿ ಔಷಧೋಪಚಾರಗಳನ್ನು ನಡಿಸಿದ್ದಾಗ್ಯೂ ಅದು ಗುಣವಾಗದೆ ಅದರಿಂದಲೆ ಸುಬ್ರಾಯ ಶಾನಭಾಗರ ಅವಸಾನವುಂಟಾಯಿತು. ಇವರು ಧನಿಕರಾಗಿದ್ದರು. ಸಾಹಿತ್ಯಸಂಗೀತಾದಿ ವಿದ್ಯಾವಿಷಯಗಳಲ್ಲಿ ಹೇಗೆ ಅವರ ಮನಸ್ಸು ಹರಿಬೀತನ್ನು ಹೊಂದಿತ್ತೊ ಹಾಗೆಯೆ ಚಿತ್ರಕಲೆ, ಬಡಗಿಕೆಲಸ, ಚಿನ್ನದಕೆಲಸ, ಇತ್ಯಾದಿ ವಿವಿಧ ಕಲೆಗಳಲ್ಲಿ ಅವರ ಕೈಯು ತರಬೇತನ್ನು ಪಡೆದಿತ್ತು. ದಾತೃತ್ವದಲ್ಲಿ ಇವರಷ್ಟು ಕೀರ್ತಿಯನ್ನು ಪಡೆದವರು ಈ ಭಾಗದಲ್ಲಿ ಇನ್ನಾರೂ ಇಲ್ಲವೆಂದರೆ ಅದು ಅತಿಶಯೋಕ್ತಿಯಾಗಲಿಕ್ಕಿಲ್ಲ. ಅವರು ನಿತ್ಯ ಅನ್ನಸಂತರ್ಪಣವು ನಡೆಯುವಂತೆ ದೇವಸ್ಥಾನಕ್ಕೆ ೧೦೦೦ ಮುಡಿಯ ಉತ್ಪನ್ನವನ್ನು ಬಿಟ್ಟುಕೊಟ್ಟಿರುವರು. ಇವರು ಒನರರಿ ಬೆಂಚ ಮೆಜಿಸ್ಟ್ರೇಟರೂ ಆಗಿದ್ದರು. ಇಂಥ ಗುಣಾಢ್ಯರೂ, ದಾನಶೂರರೂ, ಪರೋಪಕಾರಿಗಳೂ, ಮಹಾತ್ಮರೂ ಆದ ಸುಬ್ರಾಯ ಶಾನಭಾಗರು ಕಾಲವಾದದ್ದನ್ನು ನಮ್ಮ ಕಾಸರಗೋಡಿಗೆ ಒಂದು ದೊಡ್ಡ ಹಾನಿಯೆಂದೆ ತಿಳಿಯಬೇಕು. ಇವರ ಆತ್ಮಕ್ಕೆ ಚಿರಶಾಂತಿಯು ದೊರಕಲಿ.

ಬಪ್ಪನಾಡು ಜಾತ್ರೆಯ ಸಮಯ ನಡಿಸಿದ ವ್ಯವಸಾಯಕ್ಕೆ ಸಮ್ಮಂಧವಾದ ಪ್ರದರ್ಶನೆ ವಿಶಯ ಟಿಪ್ಪಣಿ.

ಇದೇ ಎಪ್ರಿಲ್ ತಿಂಗಳ ತಾ. ೧೫ರಲ್ಲು ಬಪ್ಪನಾಡಿನಲ್ಲಿ ದೊಡ್ಡ ಜಾತ್ರೆಯು ನಡಿಯಿತು. ಅದಕ್ಕೆ ಸುಮಾರು ಹತ್ತು ಸಾವಿರದ ವರೆಗೆ ಜನರು ಕೂಡಿದ್ದರು. ಮೆಸ್ಟನ್‌ಪ್ಲೌ ಎಂಬ ಕಬ್ಬಿಣದ ನೇಗಲನ್ನು ಹೂಡಿ ತೋರಿಸಲ್ಪಟ್ಟಿತು. ಜನರು ಗುಂಪುಗಳಾಗಿ ಬಂದು ಅದನ್ನು ನೋಡಿದರು. ಮತ್ತು ಇದರ ಮ ಊರು ನೇಗಲಿನ ಕುರಿತು ಗುಣಾವಗುಣಗಳನ್ನು ಚರ್ಚಿಸಿದರು. ಇನ್ನೊಂದು ಕಡೆಯಲ್ಲಿ ಜನರು ನೋಡುವ ಬಗ್ಗೆ ಭತ್ತದ ಬೀಜದ ರಕಂಗಳು, ಹಸಿಎಲೆ ಗೊಬ್ಬರದ ಬೀಜಗಳು, ಗೊಬ್ಬರಗಳು ಇತ್ಯಾದಿಗಳನ್ನು ಪ್ರದರ್ಶಿಸಿದವು. ಹುಳಗಳ ನಕ್ಷೆಗಳೂ, ತೆಂಗಿನ ತೋಟದ ನಕ್ಷೆಗಳೂ ತೋರಿಸಲ್ಪಟ್ಟವು. ಇಂಥಾ ಪ್ರದರ್ಶನವನ್ನು ಹಳ್ಳಿಯ ಜನರು ನೋಡುವದರಿಂದ ಅವರ ಜ್ಞಾನಾಭಿವೃದ್ಧಿಗೆ ಕಾರಣವಾಗುತ್ತದೆಂಬುದಕ್ಕೆ ಸಂಶಯವಿಲ್ಲ.

ಬರುವ ಲೆಜಿಸ್ಲೇಟಿವ್ ಕೌನ್ಸಿಲು ಸಭೆಯಲ್ಲಿ ಡಾ। ಯು. ರಾಮರಾಯರು ಈ ಕೆಳಗಣ ಪ್ರಶ್ನೆಗಳನ್ನು ಕೇಳಲಿಕ್ಕಿರುವರು.

ಮಂಗಳೂರು ಸಬೋರ್ಡಿನೇಟ್ ಜಡ್ಜರು ಕಳೆದ ಕೌನ್ಸಿಲ್ ಉಪ ಚುನಾವಣೆಯ ದಿನ ಕೋರ್ಟಿಗೆ ಸೆಕೆ ರಜೆ ಕೊಟ್ಟಿದ್ದರೂ, ಕೋರ್ಟು ನಡಿಸಿ, ಯಾರೂ ಹಾಜರಾಗದುದಕ್ಕಾಗಿ ವ್ಯಾಜ್ಯಗಳನ್ನು ತೆಗೆದು ಹಾಕಿದುದು ನಿಜವೊ? (೨) ಚುನಾವಣೆಯ ದಿನವು ಜಿಲ್ಲೆಯಲ್ಲೆಲ್ಲಾ ಸಾರ್ವಜನಿಕ ರಜಾದಿನವಲ್ಲವೋ? ರಜಾದಿನವಾಗಿದ್ದರೆ, ಸದರಿ ಸಬೋರ್ಡಿನೇಟ್ ಜಡ್ಜರಿಗೆ ಕೋರ್ಟು ಮಾಡಲಿಕ್ಕೆ ಅಧಿಕಾರವಿತ್ತೇ? (೩) ಕೌನ್ಸಿಲ್ ಚುನಾವಣೆಯ ದಿನ ಅಧಿಕಾರಿಗಳು ಕೋರ್ಟು ಮಾಡುವುದನ್ನು ಸರಕಾರದವರು ಸರಿಯೆನ್ನುತ್ತಾರೋ? ಸರಿಯೆನ್ನುವುದಿಲ್ಲವಾದರೆ ಮೇಲೆ ಹೇಳಿದ ಸಬ್ ಜಡ್ಜರು ಹಾಗೆ ಮಾಡಲು ಕಾರಣವೇನೆಂಬುದನ್ನು ಗವರ್ನಮೆಂಟಿನವರು ಕೌನ್ಸಿಲಿನವರಿಗೆ ತಿಳಿಸುವರೊ? (೪) ಸದರಿ ಸಬ್ ಜಡ್ಜರಿಗೆ ಹಲವು ವಕೀಲರುಗಳು ಆ ದಿನ ಚುನಾವಣೆಯ ದಿನವಾದುದರಿಂದ ತಮಗೂ ತಮ್ಮ ಕಕ್ಷಿಗಾರರಿಗೂ ಕೋರ್ಟಿಗೆ ಹಾಜರಿರಲಿಕ್ಕಾಗುವುದಿಲ್ಲವಾದ್ದರಿಂದ ಆ ದಿನ ಕೋರ್ಟು ಮಾಡಬಾರದೆಂದು ಹೇಳಿಕೊಂಡುದು ನಿಜವೇ? (೫) ಕೋರ್ಟುಗಳಿಗೆ ಸೆಕೆ ರಜೆ ಕೊಟ್ಟ ನಂತರ ಮತ್ತು ವಕೀಲರುಗಳಿಗೆ ಕಕ್ಷಿಗಾರರಿಗೆ ಕೋರ್ಟಿಗೆ ಹಾಜರಾಗಲು ಒಪ್ಪಿಗೆಯಿಲ್ಲದಿದ್ದರೂ ಕೂಡ ಜುಡಿಶಿಯಲ್ ಆಫೀಸರುಗಳಿಗೆ ಕೋರ್ಟು ಮಾಡಲು ಅಧಿಕಾರವಿದೆಯೆ? ಹಾಗಿಲ್ಲವಾದರೆ ಸದರಿ ಸಬ್ ಜಡ್ಜರು ಹಾಗೆ ಕೋರ್ಟು ಮಾಡಿದರೇಕೆಂದು ಸರಕಾರದವರು ವಿಚಾರಿಸಿ ತಿಳಿಯುವರೇ? (೬) ಸದರಿ ಜಡ್ಜರು ಹೆಚ್ಚಿನ ವಾದದ ಅರ್ಜಿಗಳನ್ನೂ ಇತರ ಕೆಲಸಗಳನ್ನೂ ಬಹಿರಂಗವಾಗಿ ಕೋರ್ಟಿನಲ್ಲಿ ತೀರ್ಮಾನಿಸದೆ ಚೇಂಬರಿನಲ್ಲಿ ತೀರ್ಮಾನಿಸುವುದು ಸರಕಾರಕ್ಕೆ ಗೊತ್ತಿದೆಯೇ? (೭) ಸದರಿ ಜಡ್ಜರು ಎಕ್ಸಪಾರ್ಟಿ ಡಿಕ್ಲರೇಶನ್ ತನ್ನ ಎದುರಲ್ಲಿ ಮಾಡಿಸದೆ, ತಾನು ಕೋರ್ಟಿಗೆ ಬರುವ ಮೊದಲೇ ಆಯಾಯ ಕ್ಲಾರ್ಕರಿಂದಲೆ ಮಾಡಿಸುವುದು ನಿಜವೇ? (೮) ಸದರಿ ಸಬ್ ಜಡ್ಜರು ದಿನಾಲೂ ಕೋರ್ಟಿಗೆ ಬರುವದು ಮತ್ತು ಹೋಗುವುದು ಎಷ್ಟು ಹೊತ್ತಿಗೆ? (೯) ಅವರು ಕೋರ್ಟಿಗೆ ಬಹಳ ಕ್ರಮತಪ್ಪಿ ಕೆಲವು ವೇಳೆ ಮಧ್ಯಾಹ್ನ ೨ ಯಾ ೩ ಘಂಟೆ ಸಮಯಕ್ಕೂ ಬರುವುದು ನಿಜವೇ?

WANTED

ಏಜಂಟರು ಬೇಕಾಗಿದೆ ತ್ವರೆಮಾಡಿರಿ.

“ದಿ. ಮೈಸೂರು ಅಗ್ರಿಕಲ್ಚರಲ್, ಡ್ಯಾರಿಫಾರ್ಮ ಕಂಪೆನಿ, ಲಿಮಿಟೆಡ” ಇದರ ಒಂದು ಶಾಖೆಯು ದಕ್ಷಿಣ ಕನ್ನಡ ಜಿಲ್ಲೆಯ ಉಡ್ಪಿಯಲ್ಲಿ ಕಳೆದ ತಾ. 7ಕ್ಕೆ ತೆರೆಯಲ್ಪಟ್ಟಿರುತ್ತದೆ. ಈ ಕಂಪೆನಿಯಲ್ಲಿ ಪ್ರತಿ ತಾಲೂಕಿನ ಪ್ರತಿ ಗ್ರಾಮಗಳಲ್ಲಿ ತಿಂಗಳು 10ರ ರೂ. ೩೦/–ತಲದಿನ ಮೇಲೆ ಕೆಲಸ ಮಾಡುವ ಯೋಗ್ಯರಾದ ಏಜಂಟರು ಬೇಕಾಗಿದೆ. ಉಮೇದ್ವಾರರು ಕನ್ನಡ ಯಾ ಇಂಗ್ಲಿಷ್ ಭಾಷೆಯಲ್ಲಿ ಪತ್ರವ್ಯವಹಾರ ನಡಿಸಲು ಸಮರ್ಥರಾಗಿರಬೇಕು. ಸದರಿ ಉಮೇದ್ವಾರರು ತಮ್ಮ ಅರ್ಜಿಗಳಿಗೆ 1 ಆಣೆಯ ಟಪ್ಪಾಲ ಚೀಟಿಯನ್ನು ಅಂಟಿಸಿ, ಆಯಾಯ ತಾಲೋಕು ಇನ್ಸ್‌ಪೆಕ್ಟರ ಬಳಿಗೆ ಬರಕೊಳ್ಳಬೇಕಾಗಿದೆ. ಮತ್ತು ಮಂಗಳೂರು, ಉಪ್ಪಿನಂಗಡಿ ತಾಲೂಕಿನ ಉಮೇದ್ವಾರರು ತಮ್ಮ ಅರ್ಜಿಗಳನ್ನು ಈ ಕೆಳಗಿನ ವಿಳಾಸಕ್ಕೆ ಜೂನ ತಾ. 10ರ ವಳಗೆ ತಲಪುವಂತೆ ಕೂಡಲೆ ಬರಕೊಳ್ಳಬೇಕಾಗಿ ಅಪೇಕ್ಷಿಸೋಣಾಗುತ್ತದೆ. ಅರ್ಜಿಯಲ್ಲಿ ಟಪ್ಪಾಲಚೀಟಿಯನ್ನು ಅಂಟಿಸದ ಸಂಗತಿಯಲ್ಲಿ ಉತ್ತರ ದೊರೆಯಲಾರದು.

Mangalore,
29-5-'25.

M. SITHARAMA RAO,
Taluk Inspector,
Mangalore & Puttur Dn.
M. A. D. F. Co., Ltd.,
S. B. S. LODGE,
Jedigudda, Mangalore S. C.

ಪತ್ರವ್ಯವಹಾರ.

ಅಯ್ಯಾ,

ನಮ್ಮ ಸುಳ್ಯ ಕಸಬೆಯಲ್ಲಿ ಒಂದು ರಿಜಿಸ್ಟ್ರಿ ಆಫೀಸನ್ನು ಸರಕಾರವು ಸ್ಥಾಪಿಸಿ, ಸುಮಾರು ೫೦-೬೦ ವರುಷಗಳಿಂದಲೂ ದಿನೇ ದಿನೇ ರಿಜಿಸ್ಟ್ರಿಗಳು ಜಾಸ್ತಿಯಾಗುತ್ತಾ ಬಂದು ಈಗ ಈಗ ಹೆಚ್ಚಾಗಿಕ್ಕೆ ಸುರುವಾಗಿ [illegible] ದಾಖಲಾಗುವವು. ಕಸಬದಲ್ಲಿ ಒಬ್ಬ ಮನುಷ್ಯನು ೬-೭ ದಿವಸಗಳು ಕಾದುಕೂತುಕೊಳ್ಳಬೇಕಾಗುತ್ತದೆ. ಹಾಗಾದರೆ ದಸ್ತಾವೇಜು ಎಷ್ಟು ದಾಖಲಾಗಬಹುದೆಂತ ಅದರಿಂದಲೇ ಸಮಾಧಾನವಾಗಬಹುದು. ಇದು ಕೆಲವು ಕಾಲದ ರಜೆ ಸಮಯವಾದ್ದರಿಂದ ಈಗ ಬಹಳ ಲೇವಾದೇವಿಯ ಕಾರಣಗಳು ಒದಗಿ ಎಲ್ಲರೂ ಈ ಸಮಯದಲ್ಲಿ ಹೆಚ್ಚು ದಸ್ತಾವೇಜು ಬರಸಿಕೊಳ್ಳುತ್ತಾರೆ, ಯೂ ಬರಕೊಡುತ್ತಾರೆ. ಈ ಸುಳ್ಯ ಸಬ್‌ರಿಜಿಸ್ಟ್ರಿ ಆಫೀಸಿನಲ್ಲಿ ಸಮಾಧಾನದಿಂದ ಬರಿಯುವ ಗುಮಾಸ್ತರಿಂದಲೇನೂ ಕೈಸಾಗುವುದಿಲ್ಲ. ೨ ಜನ ಗುಮಾಸ್ತರೇ ಬೇಕಾಗುವುದೆಂತ ಕಾಣುತ್ತದೆ. ಅದು ಹ್ಯಾಗಿದ್ದರೂ ಇನ್ನೊಂದು ಸಂಗತಿಯಲ್ಲಿ ದೊಡ್ಡ ಅಡಚಣೆ ಉಂಟಾಗಿದೆ ಹೇಳಿದರೆ ಬಡವರಿಗೆ ಉಪದ್ರ. ಹೇಳದಿದ್ದರೆ ಊರಿಗೆ ಉಪದ್ರ. ಬೇರೆ ಯಾವುದೂ ಅಲ್ಲ. ಸ್ಟ್ಯಾಂಪ ಕಾಗದ ಇಲ್ಲವೇ ಇಲ್ಲ. ೨ ಆಣೆ ಕೋಪಿ ಕಾಗದವೇನೊ ಧಾರಾಳವಿರಬಹುದು. ನಾಲ್ಕಾಣೆ ಚಸ್ಸೆಯು ಇರಬಹುದು. ಎಂಟಾಣೆಯ ಚಸ್ಸೆಯು ಸ್ವಲ್ಪ ಸ್ವಲ್ಪ ರೂಪಾಯಿದ್ದು ಇಲ್ಲವೇ ಇಲ್ಲ. ಇದರಿಂದ ಹೆಚ್ಚಿನದು ಕಾಣೇ ಕಾಣೆನು. ಅಷ್ಟೆ ತರಿಸಲಿಕ್ಕೆ ವೆಂಡರರಿಗೆ ಕೈಸಲ್ಲ ಇಲ್ಲವೋ ಏನೊ ಅಥವಾ ಹಣದ ಅಡಚಣೆಯೋ ಏನೋ. ಇದನ್ನು ಯಾರು ಕೇಳುವರು? ಅರ್ಜಿ ಮಾಡಿದರೂ ಮೂಲೆಗೆ ಹಾಕುವರು. ಇದರ ಕಾರಣವೇನೊ ತಿಳಿಯದು. ಈಗ ೮ ದಿವಸದಿಂದ ಚಸ್ಸೆಯೇ ಇಲ್ಲ. ಕೆಲವರು ಪುತ್ತೂರಿಂದ ಚಸ್ಸೆ ತರಿಸಿದರು, ಕೆಲವು ಜನರು ವಾಪಾಸು ಹೋದರು, ಕೆಲವರು ನಾಲ್ಕಾಣೆ ಎಂಟಾಣೆಯ ಕಾಗದ ೧೦-೫೦ ಜೋಡಿಸಿಯಾದರೂ ದಸ್ತಾವೇಜು ಬರೆಯಬೇಕಾಯಿತು. ಈ ಸಂದರ್ಭವನ್ನು ಸಂಬಂಧಪಟ್ಟವರು ಹ್ಯಾಗಾದರು ಸರಿಪಡಿಸಿ ಸುಳ್ಯದಲ್ಲಿ ರಹಿತ ಲೇವಾದೇವಿಯ ಜನರಿಗೆ ಸರಿಯಾಗಿ ಕಾಗದಗಳು ಸಿಕ್ಕುವ ಹಾಗೆ ವಿಲೆವಾರಿ ಮಾಡುತ್ತಿದ್ದರೆ ದೊಡ್ಡ ಉಪಕಾರವಾಗುತ್ತಿತ್ತು. ಇದರಿಂದ ರಿಜಿಸ್ಟ್ರಿ ಆಫೀಸಿಗೆ ಕೊರತೆ, ಜನರಿಗೆ ಕಷ್ಟನಷ್ಟ. ಅಂತು ಇನ್ನಾದರೂ ಸರಿಪಡಿಸಿದ್ದರೆ ನಮ್ಮ ಸುಳ್ಯ ರಹಿತ ಲೇವಾದೇವಿಯ ಜನರಿಗೆ ಬಹಳ ಉಪಕಾರವಾಗುತ್ತಿತ್ತು.

ಸುಳ್ಯ,
ತಾ. 6–5–'25. } ಸುಳ್ಯ ನಿವಾಸಿಕನ ನಮಸ್ಕಾರ.

ಅಯ್ಯಾ,

ಮಂಗಳೂರು ಮಡಿಕೇರಿ ರಸ್ತೆಯ ಮೈಲು ೧೨ನೇ ಫರ್ಲಾಂಗ್ ಬಳಿ ಹುಡುಗಿಯರ ಮ ಎಲಿಮೆಂಟರಿ ಶಾಲೆಗೆ ಹೋಗುವ ರಸ್ತೆಯ ಪಾಡು ಏನೆಂತ ಹೇಳಲಿ. ರಸ್ತೆಯಲ್ಲಿ ಕೆಸರು ಮಣ್ಣು ಕಸ ಸೋಡಾಬಾಟ್ಲಿಗಳ ಒಡೆದ ತುಂಡುಗಳೊ ಟಿನ್ ಕತ್ತರಿಸಿದ ತುಂಡುಗಳೊ ಮುಂತಾದ್ದು ಹಾಕಿ ರಸ್ತೆಯ ಮುಕ್ಕಾಲು ಅಂಶ ಆಕ್ರಮಿಸಿಕೊಂಡದೆ ಆ ರಸ್ತೆಯಿಂದ ಅಮದರಫ್ತಿಗೆ ಅಡ್ಡಂತರ. ಇಂಥಾ ಬಹಿರಂಗವಾದ ಹೆಸಿಕೆಯನ್ನು ಮಾಡಿದರೂ ಕೋಟಿಗಳು ಎಲ್ಲಿಯೊ ಏನೊ ನಮ್ಮ ಟೌನಿನಲ್ಲಿ ತಾಲೂಕು ಬೋರ್ಡು ಪ್ರೆಸಿಡೆಂಟರೊ ತಾಲೂಕು ಬೋರ್ಡು ಮೆಂಬರರೂ ಹೆಲ್ತ ಆಫೀಸರರೊ ಪೋಲೀಸಿನವರೊ ಇರುವರು ಬಹಿರಂಗ ಹೆಸಿಗೆ ಮಾಡಿದರೂ ಪೋಲೀಸಿನವರ ನ್ಯೂಸೆನ್ಸ ಆಕ್ಟು ದಪ್ತರಿನಲ್ಲಿ ಕಟ್ಟಿಯಿಟ್ಟದ್ದೆನೊ, ರಸ್ತೆಬದಿಯಲ್ಲಿ ಹಾಕಿದ ಬಾಟ್ಲಿ ತುಂಡುಗಳು ಈಗ ಶಾಲೆಗೆ ರಜೆಯಿದ್ದದ್ದರಿಂದ ಮಕ್ಕಳು ಹುಡುಗರು ಶಾಲೆಗೆ ಬಾರದ್ದರಿಂದ ಕಾಲಿಗೆ ಅಪಾಯಕ್ಕೆ ಒಳಗಾಗುವುದು ತಪ್ಪಿತ್ತೆಂದನ್ನುವಾ, ಈಗ ಸಮ್ಮಶಾಲೆ ಸುರು ಆಗುತ್ತದೆಯಷ್ಟು ಇನ್ನಾದರೂ ಅಂತಾ ಅಕ್ರಮಣವನ್ನು ಬಹಿರಂಗ ಹೆಸಿಕೆಯನ್ನು ತೆಗಿಯುವ ಏರ್ಪಾಡು ಮಾಡುವುದುತ್ತಮವು. ಟೌನಿನ ಮಸಿದಿಬಳಿಗಾಗಿ ಹೋಗುವ ಇನ್ನೊಂದು ರಸ್ತೆಯ ಪಾಡು ಇದೆ. ಆ ರಸ್ತೆಯ ಕಾಲು ಅಂಶ ಗಲಿಜನಿಂದಲೂ ಸೋಡಾಬಾಟ್ಲಿಗಳ ತುಂಡುಗಳಿಂದ ನುಂಗಿಬಿಟ್ಟದೆ. ಇನ್ನಾದರೂ ಅಧಿಕಾರಿಗಳು ಗಮನಕೊಟ್ಟು ರಸ್ತೆಯಲ್ಲಿ ಸೋಡಾಬಾಟ್ಲಿ ತುಂಡುಗಳು ಮುಂತಾದ್ದರಿಂದ ಆದ ಅಕ್ರಮಣವನ್ನು ತೆಗಿಸಬಾರದೆ.

ಪುತ್ತೂರು;
14—2—1925 } ದಾರಿಗಸ್ತ.

ಮಹಮ್ಮದೀಯ ಸ್ಕೊಲರ್‌ಶಿಪ್ ಫಂಡ್

ಮಂಗಳೂರಲ್ಲಿ ಮಹಮ್ಮದೀಯ ಸ್ಕೊಲರ್‌ಶಿಪ್ ಫಂಡ್ ಎಂಬ ಒಂದು ಸಂಘವು ಮಹಮ್ಮದೀಯರಲ್ಲಿ ಕೇವಲ ಗರೀಬ ವಿದ್ಯಾರ್ಥಿಗಳ ಸಹಾಯಕ್ಕೆಂದು ೧೯೨೨ನೇ ಇಸವಿಯಲ್ಲಿ ಸ್ಥಾಪಿತವಾಯಿತು. ಈ ಸಂಘದವರು IIIನೇ ಫೋರ್ಮ ಪಾಸಾದ IVನೇ ಫೋರ್ಮಿಗೆ ಹೈಸ್ಕೂಲಿಗೆ ಸೇರುವ ಮಹಮ್ಮದೀಯರಲ್ಲಿ ಗರೀಬರಾದ ವಿದ್ಯಾರ್ಥಿಗಳಿಗೆ ಸ್ಕೊಲರ್‌ಶಿಪ್ (ಸಹಾಯ ಧನ) ಕೊಡುತ್ತಾರೆಂಬದು ಬಹಳ ಶ್ಲಾಘನೀಯವಾದ ಕಾರ್ಯವಾಗಿದೆ. ೧೯೨೪ನೇ ಇಸವಿಯಲ್ಲಿ ಮಂಗಳೂರು ಮಹಮ್ಮದನ್ ಹಯರ್ ಎಲಿಮೆಂಟರಿ ಶಾಲೆಯಲ್ಲಿ ಲಸೇ ಕ್ಲಾಸು ಪಾಸಾಗಿ ಕೊಲೇಜಿಗೆ ಸೇರಿದ ಒಬ್ಬ ವಿದ್ಯಾರ್ಥಿಗೂ ಕೆ. ಇ. ಎಮ್. ಹೈಸ್ಕೂಲಿನಲ್ಲಿ ಕಲಿಯುವ ವಿದ್ಯಾರ್ಥಿಗೂ ಕೂಡ ೨ ಜನ ವಿದ್ಯಾರ್ಥಿಗಳಿಗೆ ತಿಂಗಳಿಗೆ ೬ ರೂಪಾಯಿಗಳಂತೆ ಸಹಾಯಧನವೀಯುವುದು ಮಹದುಪಕಾರವಾಗಿ ಮಹ್ಮದೀಯರ ವಿದ್ಯಾಭಿವೃದ್ಧಿಗೊಂದು ಹೆದ್ದಾರಿ ಎಂದನ್ನಲು ಅತಿಶಯೋಕ್ತಿಯಾಗಲಾರದು. ವರುಷಂಪ್ರತಿಯೂ ಅನುಕೂಲವಾದಷ್ಟು ವಿದ್ಯಾರ್ಥಿಗಳಿಗೆ ಸ್ಕೊಲರಶಿಪ್ ಕೊಡಬೇಕೆಂದು ಈ ಸಂಘದವರು ನಿರ್ಧರಿಸಿರುವರಂತೆ. ಮತ್ತು ಈ ಸಹಾಯವು B. A. ಕ್ಲಾಸು ವರೆಗೂ ಸಿಕ್ಕುವದೆಂತ ತಿಳಿದುಬರುತ್ತದೆ.

ಈ ಸಂಘದ ಸಹಾಯಕ್ಕಾಗಿ ಮೊನ್ನೆ ಇತ್ತೆ ಇಲ್ಲಿಗೆ ಬಂದಿದ್ದ ಭಾರತ ರಿಪ್ಪನ್ಸ್ ಸರ್ಕಸಿನವರು ತಾ. ೨೩–೫–೨೫ನೇ ರಾತ್ರೆಯ ಆಟದಲ್ಲಿ ಉತ್ಪನ್ನವಾದ ಹಣದಲ್ಲಿ ಸಮಾ ಅರೆವಾಸಿ ಹಣವನ್ನು ಕೊಟ್ಟಿರುವರು.

ಸಂಘದಿಂದ ಸಹಾಯಧನವನ್ನು ಪಡೆಯಬೇಕು ವಿದ್ಯಾರ್ಥಿಗಳು ಹಾಗೆ ಪಡೆಯಲು ಅರ್ಹತೆ ಎಂಬುದನ್ನು ಮಾತ್ರ ಸಂಘದವರು [illegible] ಸ್ಥಾನಕ್ಕೆ ಯೋಗ್ಯರಾದವರನ್ನೆ ಆರಿಸಿ ಅಂಥವರಿಗೆ ಸಹಾಯವನ್ನು ಕೊಟ್ಟರೆ, ಈ ಸಂಘದಿಂದ ಬಡವಿದ್ಯಾರ್ಥಿಗಳ ವಿದ್ಯಾಭಿವೃದ್ಧಿಯಾಗಿ [illegible] ವಿಖ್ಯಾತರಾಗುವುದರಲ್ಲಿ ಸಂದೇಹವಿರದು. ಮಹಮ್ಮದೀಯರೆಲ್ಲರೂ ಬಡ ವಿದ್ಯಾರ್ಥಿಗಳ ವಿದ್ಯಾಭಿವೃದ್ಧಿ ಸಂಘದ ಅಭ್ಯುದಯಕ್ಕಾಗಿ ತಮ್ಮಗಳ [illegible] ಮನಸ್ಸನ್ನು ಕೊಡುವರೆಂತ ನಂಬಿಕೆ ಇದೆ.

ಸಂಘವು ಚಿರಾಯುವಾಗಿ ಬಾಳಲಿ.

ವಿದ್ಯಾಭಿಮಾನಿ.

ಆರೋಗ್ಯ ಚಂದ್ರಿಕೆ.

ಮದ್ರಾಸ್.

ಸಂಪಾದಕರು: ಡಾಕ್ಟರ್ ಯು. ರಾಮರಾವ್, ಎಲ್. ಎಮ್. ಸಿ. ಎಫ್. ಎಮ್. ಯು. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವುದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ.

ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ.

ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವುದು.

'ಹೆಲ್ತ್' ಎಂಬ ನಮ್ಮ ಇಂಗ್ಲಿಷ್ ಮಾಸಪತ್ರಿಕೆಯನ್ನೋದಿ ಸಂತೋಷಿಸಿದ ಅನೇಕ ದೊಡ್ಡ ಮನುಷ್ಯರ ಪ್ರೋತ್ಸಾಹದ ಮೇರೆ ಈ ಕನ್ನಡ ಪ್ರತಿಕೆಯನ್ನು ಹೊರಪಡಿಸಿದೆ.

ಅದರ ಸಂಪುಟ ೨ ಮತ್ತು ೧೦ನೇಯ ನವಂಬರ ೧೯೨೪ ಸಂಚಿಕೆಯಲ್ಲಿ ಕಾಣಿಸಿರುವ ವಿಷಯಗಳು.

ಮುಖಚಿತ್ರ:—ಪರ್ವತವಾಸಿನಿಯಾದ ಒಬ್ಬ ರೂಪವತಿ.
ಶ್ವಾಸಕ್ರಮ ಅಥವಾ ಪ್ರಾಣಾಯಾಮ.
ಹುಣಿಸೇಹಣ್ಣಿನ ಆಹಾರಗುಣಗಳು ಮತ್ತು ಔಷಧಗುಣಗಳು.
ಕಾಲುನಡೆಯೇ ಉತ್ತಮವಾದ ವ್ಯಾಯಾಮವು
ಜೇನಿನಲ್ಲಿರುವ ಗುಣಗಳು.
ಹಲ್ಲುಗಳ ರಚನೆ, ಪ್ರಯೋಜನ, ಕೆಲಸ ಮುಂತಾದವು.
ಮದಿರಾಪಾನಕಗಳಿಂದ ಆರೋಗ್ಯಕ್ಕೆ ಉಂಟಾಗತಕ್ಕ ಹಾನಿ.
ಅಂಗಸಾಧನೆ ಮತ್ತು ಬುದ್ಧಿವ್ಯವಸಾಯ (ವಿದ್ಯಾಭ್ಯಾಸ).
ಗಾಯಗಳು, ಮತ್ತು ಉಳುಕು ಮುಂತಾದವು, ಅವುಗಳ ಚಿಕಿತ್ಸೆ
ನವನಾಗರಿಕ ಪ್ರಪಂಚಕ್ಕೆ ಸಹಜವಾದ ಮೂರು ಕೆಡುಕುಗಳು.
ಒಬ್ಬ ಉಪವಾಸಿಯ ಅನುಭವ.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವುವು. ಆರೋಗ್ಯಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ ರೂ. ೧—೮—೦; ಬಿಡುಪತ್ರಿಕೆ ಒಂದಕ್ಕೆ ರೂ. ೦—೨—೦. ಹಿಂದಿನ ಸಂಚಿಕೆಗಳು ಕೂಡ ದೊರಿಯುವವು.

ಚಂದಾದಾರರಾಗುವವರು ವಿ. ಪಿ. ಮೂಲಕವಾಗಿ ತರಿಸಿಕೊಳ್ಳುವುದಕ್ಕಿಂತಲೂ ಹಣವನ್ನು ಮುಂಗಡವಾಗಿ ಕಳುಹಿಸುವುದು ಲಾಭಕರ. ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು 'ಆರೋಗ್ಯ ಚಂದ್ರಿಕೆ'ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು.

ಪತ್ರವ್ಯವಹಾರಕ್ಕೆ: 'ಆರೋಗ್ಯ ಚಂದ್ರಿಕೆ'
೩೨೩ ತಂಬುಚೆಟ್ಟಿ ಬೀದಿ, ಮದ್ರಾಸ್.

ತುಳು ಪಾಡ್ದನಗಳು.

ಬೊಬ್ಬರ್ಯ, ಕಲ್ಲುರ್ಟಿ-ಕಲ್ಕುಡ, ದೈಯ್ಯೊಂಗುಳು—ಕೋಡಕಿನಾರ್, ಮುಂಡತ್ತಾಯ ಪ್ರತಿ ಒಂದಕ್ಕೆ 2 ಆಣೆ. 11½ ಆಣೆ ಟಪ್ಪಾಲು ಚೀಟು ಕಳಹಿಸಿದರೆ 5 ಪುಸ್ತಕಗಳು ಕೂಡಲೇ ಕಳುಹಿಸಲ್ಪಡುವವು.

ವಿಳಾಸ: ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.
Authorised and fully paid up Capital Rs. 300,000—0—0
Reserve and other sinking Funds „ 259,000—0—0

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸಾಪಿಸಲ್ಪಟ್ಟಿತು.
ಅಧಿಕಾರಗೊಳಿಸಲ್ಪಟ್ಟು, ಪೂರ್ಣವಾಗಿ ಕೆತ್ತ ಮೂಲಧನವು ರೂ. 300,000—0—0
ಕ್ಷೇಮನಿಧಿ ಮತ್ತು ಇತರ ಫಂಡುಗಳು 259,000—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ ಬೇಂಕ್ ಠೇವಣಾತಿಗಳೂ, ಪಡಕೊಳ್ಳೋಣಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1925.

K. Venkat Rao,
Secretary

‘ಸಾರಸ್ವತಾಸವ.’

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲೂಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೫೦ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ೧ಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೨೫ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲ ಪಂಡಿತರು,

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಪ್ಪ, ಸೋಡಾ ಫಾಕ್ಟರಿ,
ಮಂಗಳೂರು ಟವನಿಗೆ ಮಾತ್ರ.

ವಿದ್ಯಾವಾಚಸ್ಪತಿ
ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ
“ಸಂಕ್ಷೇಪಗೀತೆ”

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ, ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದೆ. ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೦. ಟಪ್ಪಾಲು ಖರ್ಚು ಕೂಡಿ ಆಣೆ ೧೧ನ್ನು ಮನಿಯಾರ್ಡರ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ೩ರಕ್ಕಿಂತ ಜಾಸಿ ಖರ್ಚು ತಗಲುವುದು. [illegible] ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.

ಪುಸ್ತಕ ದೊರಿಯುವ ವಿಳಾಸ:—

ಶಾರದಾ ಛಾಪಖಾನೆ, ರಥವೀದಿ, ಮಂಗಳೂರು. ಮತ್ತು ಕೆನರಿಸ್ ಮಿಶ್ಶನ್ ಬುಕ್ ಎಂಡ್ ಟ್ರಾಕ್ಟ ಡಿಪೋಜಿಟರಿ.
ಮಂಗಳೂರು

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀಕಾಶೀ, ಗಯಾ, ಪ್ರಯಾಗ, ಹರಿದ್ವಾರ ಬದ್ರಿನಾರಾಯಣ ದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರ ಕಡೆಯಿಂದಅನುಭವ ತೆಗೆದು ಪ್ರತಿವಂದು ಸಿದ್ಧಮಾಡಿಕೊಂಡು ಬರೆದಿರುವರು. ೧ನೇದು ಮಂತ್ರಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರಪ್ರಯೋಗದಿಂದಲೂ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವೂ ಇದೆ. ೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ, ಆಸನದಡಿಯಲ್ಲಿ ರೂಪಾಯಿಗಳು ಹೊರಡುವಿಕೆ, ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ಮಾಂತ್ರಿಕ ವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ. ೩ನೇದು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು, ೪ನೇದು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಭಾಷಾಜಗಳ ಚುಟ್ಕಾ ಸಹ, ಇದರಲ್ಲಿ ಉಂಟು, ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತೂ ರೋಗಗಳಿಗೂ ಸುಲಭವಾಗಿ ಔಷದ ಮಾಡುವ ಕ್ರಮವನು ಚೆನ್ನಾಗಿ ಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಳಾಸವು ತಿಳಿಸಿರುವರು. ೫ನೇದು ಯಂತ್ರ ಪ್ರಕರಣದಲ್ಲಿ ವಶೀಕರಣ ಗೃಹಪೀಡಾ ನಿವಾರಣ ಭೂತಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು, ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರದಿರುವರು. ಈ ಗ್ರಂಥವು ಹತ್ತರ ಇದ್ದ ಬಳಿಕ ಎಲ್ಲಾ ದೇವಾನು ದೇವತೆಗಳು ದ್ರವ್ಯಗಳೂ ವೈದ್ಯರೂ ಜೋತಿಷ್ಯರು, ಮಾಂತ್ರಿಕರು ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥ ಗ್ರಂಥವು ಯಾರು ಕಣ್ಣಿಂದ ನೋಡಿರಲಿಕ್ಕಿಲ್ಲಾ. ಪ್ರತಿಯೊಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆ ಕೀರ ಕಡಿಮೆಮಾಡಿ ಇರುವವು. ೨—೮—೦ ಟಪ್ಪಾಲು ಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ ನಾಟಕ ಕಾವ್ಯ, ಕಥೆಗಳು, ಯಕ್ಷಗಾನ, ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ:—

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ

ಒಂದು ತಿಂಗಳಿಗೆ ಮಾತ್ರ.

ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಟೇಬಲ್ ಟೈಂಪೀಸ್ ಬಹುಮಾನವಾಗಿ ಕೊಡುವೆವು.

ರೋಲ್ಡ್ ಗೋಲ್ಡ್ ಭಂಗಾರದ ರೇಡಿಯಮ್ ರಿಸ್ಟ್ ವಾಚ್.

ಈ ಗಡಿಯಾರಗಳು ಸೀಮೆ ಭಂಗಾರದಲ್ಲಿ ಬಹು ಬಲಿಷ್ಟವಾದ ಲೀವರ್ ಮೂವ್‌ಮೆಂಟ್ಸ್‌ಗಳಿಂದ (ಸ್ವಿಸ್‌ಮೇಡ್) ಸ್ವಿಜರ್‌ಲ್ಯಾಂಡ್ ದೇಶದಲ್ಲಿ ತಯಾರಿಸಿದ್ದು. ಸ್ವಲ್ಪವೂ ವ್ಯತ್ಯಾಸವಿಲ್ಲದೆ ಗಂಟೆಯನ್ನು ತೋರಿಸುವುದು. ಇದರಲ್ಲಿ ರೇಡಿಯಂ ಎಂಬ ವಿದ್ಯುಚ್ಛಕ್ತಿಯನ್ನು ಇಟ್ಟಿರುವುದರಿಂದ ರಾತ್ರಿಯಲ್ಲಿ ಬಹು ಪ್ರಕಾಶವಾಗಿ ಗಂಟೆಯನ್ನು ತೋರಿಸುವದು. ಕೈಯ ಪಟ್ಟಿಲು ಬಹು ಚೆನ್ನಾಗಿರುವದು. ಈ ಗಡಿಯಾರವು ಭಂಗಾರಕ್ಕೆ ಸರಿಸಮವಾಗಿರುವದು. ಖಾತ್ರಿಯಾದ 5 ವರುಷ ಗ್ಯಾರಂಟಿ ಕೊಡುವೆವು.

ಕ್ರಯ ಟೇಬಲ್ ಟೈಂಪೀಸ್ ಸಹಿತ	ರೂ. 8-0-0.
ರಿಸ್ಟ್ ವಾಚ್ ಮಾತ್ರ	„ 6-0-0.
ಟೇಬಲ್ ಟೈಂಪೀಸ್ ಮಾತ್ರ	„ 3-4-0.

The American Watch Co.,
P. B. No. 509, P. T. MADRAS.

ವಿಳಾಸ:— ಅಮೇರಿಕನ್ ವಾಚ್ ಕಂಪೆನಿ,
ಪೋ ಬಾ 509, ಪಿ. ಟಿ. ಮದರಾಸು.

Just Arrived **Fresh Consignment**

OF

Best English Cycles.



REDUCTION IN PRICES.

Banger Cycles Model M. Made in Birmingham.
WITH DUNLOP OR BATES TYRES & TUBES ... @ Rs. 90—0—0

Rarton Humber on Advance
WITH DUNLOP OR BATES TYRES & TUBES ... @ „ 100—0—0

Senior Royal with B. S. A. Fitting.
WITH DUNLOP OR BATES TYRES & TUBES .. ...@ Rs. 145—0—0

Royal Saxon with B. S. A. Fitting.
WITH DUNLOP OR BATES TYRES & TUBES ... ... @ Rs. 175—0—0

All the above Cycles include pump and tools.

BROOKES PATEERN 90/2 GERMAN SADDLE ... ...@ „ 9—8—0
„ SADDLE 90/2 „ ... ..@ „ 21—0—0
„ „ B/30 „ ... ...@ „ 26—0—0

For further particulars please write to us or call on us:—

All kinds of Cycle Accessories, Dunlop and German Tyres and Tubes
ARE AVAILABLE AT VERY CHEAP RATES.

Special Discount to Traders *Easy Terms Arranged*

APPLY TO:—**The Mangalore Trading Association,**
Wholesale Dealers in Cycles and Cycle Accessories,
Car-Street, MANGALORE.

—ಗೋಡೆಗೆ ತಗಲಿಸುವ
ಹೊಸ ನಮೂನೆಯ—
ಟಿಕ್—ಟಾಕ್

ಎಂಬ ಈ ಗಡಿಯಾರಗಳು ಜರ್ಮನೀ ದೇಶದಲ್ಲಿ ತಯಾರಿಸಿದ್ದು. ಇವು ಸರಿಯಾಗಿ ಘಂಟೆಯನ್ನು ತೋರಿಸುವವು. ಇವಕ್ಕೆ ಬೀಗ ಕೊಡಬೇಕಾದಿಲ್ಲ. ಇದರಲ್ಲಿ ಕಾಣುತ್ತಿರುವ ಗುಂಡನ್ನು ಮೇಲಕ್ಕೆ ಎಳೆದರೆ ಸಾಕು. ತನ್ನಷ್ಟಕ್ಕೆ ತಾನೇ ಟಿಕ್—ಟಾಕ್ ಎಂಬ ಶಬ್ದವನ್ನು ಮಾಡುತ್ತಾ ಸರಿಯಾದ ಕಾಲವನ್ನು ತೋರಿಸುವದು. ಇದು ನೋಡುವುದಕ್ಕೆ ಬಹು ಲಕ್ಷಣವಾಗಿರುವ್ರ.

ಕ್ರಯ 1ಕ್ಕೆ ರೂ. 3—0—0

ಪೀಟರ್ ವಾಚ್ ಕಂಪೆನಿ
ಪೋಸ್ಟ್ ಬಾಕ್ಸ್ ನಂ 27, ಮದ್ರಾಸ್.

ADVERTISE IN

The Business Directory
OF INDIA, BURMA & CEYLON

A Comprehensive Directory of the various Business-men, Exporters and Importers, Firms, Factories, Mills, Manufacturers, Merchants and Industries of the principal Cities, Ports and Towns of India, Burma and Ceylon.

PUBLISHED ANNUALLY

Rates for Advertisements

¼ Page	Rs.	50.
2 in. Single Column	„	20.
1 in. Single Column	„	15.
Name in Bold Types	„	5.

Price per Copy Rs. 10.

PRINTERS & PUBLISHERS.
Business Directory Co.,
Kanara Press Buildings, MADRAS. E.
Telegrams: KETHARI Phone 540

Just arrived! Look Sharp!

SCREW ELECTRIC TORCH LAMPS &

Pocket Electric Lamps

AVAILABLE

In different varieties, Mother of pearl lamps Cycle lamps,
NICKEL PLATED WITH SIDE LANCE.
Hammered Brand, with Powerful Bulls-eye lance,

The Mangalore Trading Association,
Car Street, MANGALORE

ಪ್ರತಿಯೊಂದು ಕುಟುಂಬಿಗಳ ಮನೆಗಳಲ್ಲಿ ಸೌಖ್ಯವನ್ನು ತೋರಿಸುವುದಕ್ಕೂ ಮತ್ತು ಅವರವರ ಉಪಯೋಗಾರ್ಥವನ್ನು ತಿಳುವಳಿಕೆ ಬಗ್ಗೆ ನಡಿಸುವುದಕ್ಕೂ ಒಂದು ಮಾರ್ಗವಾದ ನಿಘಂಟು ಪುಸ್ತಕವು ಈ ನಮ್ಮ ಹಿಂದೂದೇಶದ ಜನಮೂಹದಲ್ಲಿರುವುದು. ಅಂಥಾ ಪುಸ್ತಕವು ಯಾವುದೆಂದರೆ

ನೀವುಗಳು ಬಲ್ಲಿರಾ?
(ಅದೇ)

"ಕಾಮಶಾಸ್ತ್ರವೆಂಬುವುದು."

ತಾವುಗಳು ಇನ್ನೂ ಈ ಪುಸ್ತಕದಲ್ಲಿ ಬರೆದಿರುವ ಸಾರಾಂಶವನ್ನು ಓದಿಲ್ಲದಿದ್ದರೆ, ಒಡನೇ ಒಂದು ಪುಸ್ತಕವನ್ನು ತರಿಸಿಕೊಳ್ಳುವಂತೆ ಒಂದು ಪೋಸ್ಟುಕಾರ್ಡು ಬರೆಯಿರಿ.

* ಪುಸ್ತಕವನ್ನು ಇನಾಮಾಗಿ ಕಳುಹಿಸುವೆವು.

ಮುಖ್ಯವಾದ ತಿಳುವಳಿಕೆ.

ತಾವುಗಳು ದೃಢಚಿತ್ತರಾಗಿಯೂ, ನಿಧಾನಸ್ಥರಾಗಿಯೂ, ಸೌಖ್ಯವಾಗಿಯೂ, ಕಷ್ಟವಿಲ್ಲದೇ ವಿಷಯಗಳನ್ನು ಭರಿಸುವ ಮನಸ್ಸನ್ನು ಹೊಂದಬೇಕಾದರೆ ನಮ್ಮ ಅಮೂಲ್ಯವಾದ "ಕಾಮಶಾಸ್ತ್ರವೆಂಬುವ ಪುಸ್ತಕದಲ್ಲಿ ಕಾಣಿಸಿರುವ ಆತಂಕನಿಗ್ರಹ ಮಾತ್ರೆಗಳನ್ನು ಸೇವಿಸಬೇಕು."

ಒಂದು ರೂಪಾಯಿ ಖರ್ಚುಮಾಡಿದರೆ 32 ಮಾತ್ರೆಗಳುಳ್ಳ ಒಂದು ಡಬ್ಬಿಯನ್ನು ತರಿಸಿ ಪ್ರಯತ್ನಿಸಬಹುದು.

ವಿವರವಾಗಿ ಬರೆದಿರುವ ಒಂದು ಕ್ಯಾಟಲಾಗು ಕಳುಹಿಸುವಂತೆ ಈ ದಿನವೇ ಒಂದು ಪೋಸ್ಟುಕಾರ್ಡು ಬರೆಯಿರಿ.

ಆತಂಕನಿಗ್ರಹ ಔಷಧಾಲಯ,
ನಂಬ್ರ 26, ಬ್ರಾಡ್ವೆ, ಮದರಾಸು.

ಹೊಸಗ್ರಂಥಗಳು!! ಬೇಗನೇ ತರಿಸಿಕೊಳ್ಳಿರಿ!!

ಕೋಕ ಶಾಸ್ತ್ರವು.

ರಸಿಕ ವಾಚಕ ಮಹಾಶಯರೇ,

ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇವನ್ನು ಅತಿ ಪ್ರಯತ್ನದಿಂದಲೂ ಧನವ್ಯಯದಿಂದಲೂ, ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನೇ ಶೋಧಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ ಚಿತ್ರಿಣಿ ಸ್ತ್ರೀಯರು ಇವರಂತೆ ಪುರುಷರಲ್ಲಿಯ ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬುದನ್ನೂ, ಜನನೇಂದ್ರಿಯಾದಿಗಳ ವರ್ಣನೆಯನ್ನೂ, ರಜೋಧರ್ಮ, ಗರ್ಭಾಧಾನದ ವ್ಯಾಖ್ಯೆಯನ್ನೂ, ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ, ನಪುಂಸಕತ್ವ ವಂಧ್ಯಾದೋಷಗಳ ಚಿಕಿತ್ಸೆಯನ್ನೂ, ಸ್ತ್ರೀಯರ ಗೂಢ ರಹಸ್ಯವನ್ನೂ, ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನೂ ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನು ಒಮ್ಮೆ ಅವಲೋಕಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ.

ಇದರ ಬೆಲೆ ೧—೮—೦, ಟಪ್ಪಾಲು ಹಾಸಲು ೦—೪—೦.

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ
ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ
ವಾರ ಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ಯಾವಂತರೂ ತಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ಗಾವರ್ಗಿಗಳೂ, ಪ್ರಕಟನೆಗಳೂ, ಈ ಪತ್ರಿಕೆಯಲ್ಲಿ ಪ್ರಕಟವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನು ಕುರಿತ ಲೇಖನಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಧನಿಕರೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪೋಷಕರಿಗೆ	...	ರೂ. 3—0—0
ಇತರರಿಗೆ, ಪರಸ್ಥಳಕ್ಕೆ, ಪೋಸ್ಟೇಜು ಸೇರಿ		„ 2-8-0.
„ ಸ್ಥಳೀಕರಿಗೆ	...	„ 1-8-0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪತ್ರಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲವು. ಪ್ರಕಟನೆಯ ದರಗಳನ್ನು ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿಯಬಹುದು.

ಎಡಿಟರ್,
ಬಿ. ಹನುಮಂತಯ್ಯಗೌಡ,
ಅರ್ಥಸಾಧಕ ಪತ್ರಿಕೆ,
ಅಂಚೆ [illegible] ಬೆಂಗಳೂರು ಸಿಟಿ

Edited, Printed & Published by V. S. Kamath at the M. T. A. SHARADA PRESS, MANGALORE.

Registered: No. M. 498.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ನಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿತ್ತವ ಸುಡುತ ಬರುತಿರುವ ॥
ಗರಲಕವರಂಜಿದರೆ ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೯. ಮಂಗಳೂರು, ತಾರೀಕು ೫ನೇ ಶುಕ್ರವಾರ ಜೂನ್ ೧೯೨೫. ಸಂಚಿಕೆ ೨೩

The Canara Banking Corporation, Udipi, Ltd.

Head Office:—	Branch:—
Udipi	Coondapoor
Paidup Capital	1,66,165—9—11
Reserve etc.	64,700—0—0

Season Deposits

Carrying Special rate of 7% up to 15th June 1925 only.

Further Particulars on Application.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಉಡುಪಿ. ಲಿಮಿಟೆಡ್.

ಹೆಡ್ ಆಫೀಸು:— ಉಡುಪಿ.	ಶಾಖೆ – ಕುಂದಾಪುರ.
ವಸೂಲಾದ ಮೂಲಧನ	1,66,165—9—11
ರಿಜರ್ವ ವಗೈರೆ ಫಂಡುಗಳು	64,700—0—0

ತಾ. 15—6—1925ರವರೆಗೆ ಮಾತ್ರ
ಸಾಲಿಯಾನ್ ಸೇಕಡಾ 7ರ ದರದ ಬಡ್ಡಿಯ ಮೇಲೆ
ಮುಸುಂ ಠೇವಣಾತಿಗಳನ್ನು
ಅಂಗೀಕರಿಸೋಣಾಗುತ್ತದೆ.
ಹೆಚ್ಚಿನ ಮಾಹಿತಿಗೆ ಬರೆಕೊಳ್ಳಿರಿ.

Office of the Corporation, Udipi, 1-5-'25 } **N. Ananda Rao,**
Secretary

Wanted Agents

FOR

Every District in South India

For Pushing Sales of Our Calenders, Xmas and New Year Cards, Blotters, Pictures and Picture Post Cards, at wholesale rates. Deposit of Rs. 100—0—0 Essential.

Apply to:—

The South Indian Advertising Agency,
13, Kilary Road,
BANGALORE CITY.

ಶುದ್ಧ ರೇಶಿಮೆಯ ಧಾವಳಿಗಳು.

1 ಮೊಳ ಉದ್ದ 1¼ ಮೊಳ ಅಗಲ ರೂ. 1¼ರಿಂದ 2 ವರೆಗೆ, 5 ಮೊಳ ಉದ್ದ 1½ ಮೊಳ ಅಗಲ ರೂ. 1½ ರಿಂದ 5 ವರೆಗೆ, 6 ಮೊಳ ಉದ್ದ 1¼ ಮೊಳ ಅಗಲ ರೂ. 2½ರಿಂದ 6 ವರೆಗೆ, 8 ಮೊಳ ಉದ್ದ 2 ಮೊಳ ಅಗಲ ರೂ. 3½ರಿಂದ 10 ವರೆಗೆ, 12 ಮೊಳ ಉದ್ದ 2¼ ಮೊಳ ಅಗಲ ರೂ. 6ರಿಂದ 12 ವರೆಗೆ, 16 ಮೊಳ ಉದ್ದ 2¼ ಮೊಳ ಅಗಲ ರೂ. 9 ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಜರ್ಸ್ಮರ್ ರೇಶ್ಮೆ ಶಾಲುಗಳು, ಸಾಮುಗ್ರಿಗಳು, ಶಾಲೀ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, [illegible], [illegible], ಶಾಲ, ಕಾಶ್ಮೀರ್ [illegible], ಹಿತ್ತಾಳೆಯ ಆಟದ ಸಾಮಾನುಗಳು, ಫೋಟೋ ಉಂಗುರಗಳು ಮತ್ತು ಇನ್ನೂ ಅನೇಕ ಸಾಮಾನುಗಳು ವಿ. ಪಿ. ಪಿ. ಮುಖಾಂತರ ಕಳುಹಿಸಲ್ಪಡುವುದು. ಕ್ಯಾಟಲಾಗ್ ಇನಾಂ.

ವಿಳಾಸ—
[illegible]
[illegible]

ಶಾ ರ ದಾ ಛಾ ಪ ಖಾ ನೆ, ರ ಥ ಬೀ ದಿ, ಮಂ ಗ ಳೂ ರು.

ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ.

450 ಪುಟಗಳು ಎಮ್. ಗಣಪತಿರಾವ್ ಐಗಳ್ ಇವರಿಂದ ರಚಿತವಾದದ್ದು. ಕ್ರಯ ರೂ. 2-4-0

ಮಾರಾಟಕ್ಕೆ ಸಿದ್ಧವಾಗಿವೆ — ತುಳು ಪಾಡ್ದನಗಳು — ಮಾರಾಟಕ್ಕೆ ಸಿದ್ಧವಾಗಿವೆ.

ದೈಯ್ಯಂಗುಳು, ಕಲ್ಕುರ್ಟೆ—ಕಲ್ಲುಡ, ಕಡಂದಲೆ. ದೈಯ್ಯಂಗುಳು, ಮುಂಡತ್ತಾಯ, ದೊಬ್ಬಯ್ರ್.

ಸುಲಭ ದರಗಳು — ಶಾಲಾ ಪುಸ್ತಕಗಳು — ರಖಂ ಕೊಂಡುಕೊಳ್ಳುವವರಿಗೆ ಯೋಗ್ಯ ಡಿಸ್ಕೌಂಟ್.

ಚಿಕ್ಕ ಕಥೆಗಳು:—ಮೂರು ಕರಡಿಗಳು; ಹೇನುಸತ್ತು ಕಾಗೆ ಬಡವಾಯಿತು; ಅಗಸನ ಮುದ್ದೆ; ಇಲಿಗಳ ಥಕ್ಕ ಥೈ; ಅಂಗಳ ದುಗ್ಗು; ಸಿಗಡಿ ಯಾಕೆ ಬಾಗಲಿಲ್ಲ; ಗುಡುಗುಡು ಗುಮ್ಮಟ ದೇವರು; ಮುಡಿಸಿನ ಕಾಳಪ್ಪ; ಒಡ್ಡನ ಓಟ; ಹೊಸ ಕನ್ನಡ ಪುಸ್ತಕ ಭಾಗ ೧; ಹೊಸ ಕನ್ನಡ ಪುಸ್ತಕ ಭಾಗ ೨; ಕನ್ನಡ ಪದ್ಯಗಳು; ಮಗ್ಗಿ ಪುಸ್ತಕ; ಅಜಿತಕುಮಾರ; ಪದ್ಯ ರತ್ನಾವಳಿ, ಎಕ್ಸರ್‌ಸೈಜ್ ಮತ್ತು ನೋಟು ಪುಸ್ತಕಗಳು, ಕಾಪಿ ಪುಸ್ತಕಗಳು, ಡ್ರಾಯಿಂಗ್ ಪುಸ್ತಕಗಳು

ಇತರ ಪುಸ್ತಕಗಳು:—ಸಂಕ್ಷೇಪಗೀತ, ಕೇಕುಭಂಗ, ಹಿಂದಿನ ವ್ರತವಿವೇಕ, ಚಂದ್ರಗುಪ್ತ ಚಕ್ರವರ್ತಿ, ಶ್ರೀ ಕೃಷ್ಣಸಂಧಾನ, ಪದ್ಯಪಾಠಗಳು, ಹರಿಕಥಾ ಮೃತಸಾರ ಹರಿನಾಮಸಂಕೀರ್ತನೆ ಸುಧಾಮೃತ ಪದ್ಯಗಳು. ಬೆಂಕಿಪೆಟ್ಟಿಗೆ ತಯಾರಿಸುವ ವಿಧಾನ, ಸಾಬೂನು ತಯಾರಿಸುವ ವಿಧಾನ, ಸ್ವರಾಜ್ಯ ಭಕ್ತೋಲ್ಲಾಸ, ಚರಕಗೀತ, ಕೊಂಕಣಿ ಭಾಷೆಯಲ್ಲಿ ಚಂದ್ರಹಾಸ ನಾಟಕ, ಪ್ರಹಲ್ಲಾದ ಚರಿತ್ರ ನಾಟಕ, ಕನ್ನಡ ಮೃಚ್ಛಕಟಿಕ ನಾಟಕ, ಚಂದ್ರಹಾಸಾಭ್ಯುದಯ ನಾಟಕ, ಕೋವಿಲನ್ ಚರಿತ್ರ ನಾಟಕ, ಮಾದರಿ ಉಪನ್ಯಾಸ ಭಾಗ ೧, ೨, ಮತ್ತು ೩.

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು.

❋ ಅಮೃತಾಂಜನ ❋

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಹಿಂದೆ ಕಡೆಯಲ್ಲಿ ಸಿಲ್ಲದು. ಇದು ಯಾವ ತರದ ಸಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 2 ಆಣೆ.

ಅಮೃತಾಂಜನ ಡಿಪೊ.

5, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ ಟೌನ್, ಮದ್ರಾಸು.

109 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

— ರಥೋತ್ಸವ, ವಿವಾಹ ಉಪನಯನಗಳ ಸಮಯ —

ಸರ್ವರಿಗೂ ಉಡಿಗೆ ತೊಡಿಗೆಗಳು ಬೇಕಾಗುವ ಸಂದರ್ಭ.

ಯಾರು, ಯಾವುದನ್ನು ಎಲ್ಲಿ ಪಡೆಯಬೇಕೆಂಬ ಶಂಕೆಯಿಂದ ವಿಳಂಬ ಮಾಡಬೇಡಿರಿ. ಉಡಿಗೆತೊಡಿಗೆಗಳನ್ನು ಚುನಾಯಿಸಿ ನಿಮಗೆ ಬೇಕಾದ ಯಥಾರ್ಥ ಮಾಹಿತಿಯನ್ನು ಕಳೆದ ಇಪ್ಪತ್ತು ವರುಷಗಳಿಂದ ಪಡೆದು ನಮ್ಮಲ್ಲಿಯ ವ್ಯಾಪಾರವು ಗಿರಾಕಿಗಳಿಗೆ ಸರ್ವ ತೃಪ್ತಿಯಿಂದಲೂ ಲಭ್ಯಕರವಾಗಿ ಪರಿಣಮಿಸುವಂತೆ ನಮ್ಮ ಖರೀ ಸಂಗ್ರಹವನ್ನು ಮಾಡಿರುತ್ತೇವೆ.

ಗುರ್ಪುರ್‌ಕರ್ ಬ್ರದರ್ಸ್, ರಥಬೀದಿ, ಮಂಗಳೂರು.

ಹೆಡ್ ಆಫೀಸು:—ರಥಬೀದಿ—(ನೊದಲು ಸುಜೀರ ನಾಗಪ್ಪನಾಯಕ್, ಎಂಡ್ ಕೊ. ಇದ್ದಲ್ಲಿ; ಅಜೀಜುದ್ದೀನ್ ರಸ್ತೆಗೆ ತಿರುಗುವಲ್ಲಿ) ಮಂಗಳೂರು.

ಬ್ರೇಂಚ್ ಆಫೀಸು:—ರಥಬೀದಿ—(ಹಳೇ ತಾಲೂಕು ಕಛೇರಿಯ ಪಡುಬದಿ ಸಮೀಪವಿರುವ ಮನೆಗೆ) ಮಂಗಳೂರು.

ಈ ದೇಶದ ಪ್ರಖ್ಯಾತಪಟ್ಟ ನೇಯಿಗೆಯ ಕೇಂದ್ರಸ್ಥಳಗಳಾದ—ಬನಾರಸ್, ಪೂನಾ, ಅಹಮ್ಮದಾಬಾದ್, ಸೂರತ್, ಬೆಂಗಳೂರು, ಧರ್ಮಾವರಮ್, ಕಂಜೀವರಮ್, ಕೊಯಮುತ್ತೂರು, ಮಧುರೆ, ತಂಜಾವೂರು, ಕುಂಭಕೋಣ, ಆರ್ಣಿ, ಪಾವಪೇಟೆ, ಹುಬ್ಬಳ್ಳಿ, [illegible], ಗದಗ, ಮದ್ರಾಸು ಈ ಪ್ರಾಂತ್ಯಗಳಲ್ಲಿ ತಯ್ಯಾರಾದ

ಜರಿಸೀರೆಗಳು, ದುಪ್ಪಟ್ಟಾ, ಜರಿಶಾಲು, ಪೇಟ್ಟಾ, ರೇಶ್ಮೆ ಸೀರೆಗಳು, ಅರಳೆಪೇಟೆ ಸೀರೆಗಳು, ಕೊಪ್ಪಾರ್ಡ್ ರೇಶ್ಮೆ ಸೀರೆಗಳು, ಜರಿ ಅಂಚಿನ ಸೀರೆಗಳು, ರೇಶ್ಮೆ ಮುಂಡುಗಳು, ನಿತ್ಯ ಉಪಯೋಗದ ಸೀರೆಗಳು [illegible], ಕರ್ನಾಟಕ [illegible] ಇತರ [illegible] [illegible].

ಕೈರಾಟೆಯಲ್ಲೇ ತಯಾರಿಸಿದ ನೂಲಿನಿಂದ ಮಾಡಿದ—

ಖದ್ದರ್ ಶರ್ಟಿಂಗ್, ಖದ್ದರ್ ಕೋಟಿಂಗ್, ಖದ್ದರ್ ಟೋಪಿ, ಖದ್ದರ್ ಪೇಟ್ಟಾ, ಅಂಗವಸ್ತ್ರ, ಇತ್ಯಾದಿ—

ಮುಸಲ್ಮಾನರಿಗೆ ಬೇಕಾದ ನಮೂನೆಯ ಲುಂಗಿ ಸೊಸಿಗಳು ವಗೈರೆ—

ಎಲ್ಲ ಸಂಗ್ರಹವನ್ನೂ ನಮ್ಮ [illegible] [illegible] [illegible] [illegible] [illegible] [illegible] ಸಂಗ್ರಹಿಸಿ ಇಡಲಾಗಿದ್ದಾರೆ.

[illegible] [illegible] 6143, [illegible] 50ರಿಂದ 250ರವರೆಗೆ [illegible] 10%, ರೂ. 250 ರಿಂದ 1000ಕ್ಕೆ 12½% [illegible]

ಆರ್. ಮಾರ್ಟಿನ್ನರ
ಜ್ವರದ ಗುಳಿಗೆಗಳು.

ಸುಲಭ ಸ್ವೇದನಕಾರಿಯಾದ ಈ ಘುಟಿಕೆಗಳು ಚಳಿಜ್ವರದ ವಿಷ ದಾರ್ಥಗಳನ್ನು ತಟ್ಟನೆ ನಿರ್ಮೂಲಪಡಿಸಿ, ವ್ರಣಗಳನ್ನು ಸಂಪೂರ್ಣ ನಾಶಪಡಿಸಿ, ಮಲೇರಿಯಾ ಜ್ವರ, ಚಳಿಜ್ವರ, ಛಾರಿಜ್ವರ, ಮತ್ತು ಆಗಾಗ್ಗೆ ಬಿಟ್ಟುಕೊಂಡು ಬರುವ ಇತರ ಜ್ವರಗಳ ಬಾಧೆಯಿಂದ ಗುಣಪಡಿಸುವವು.

ತಟ್ಟನೆ ವಾಸಿಪಡಿಸುವುದಕ್ಕೆ ಹತ್ತೂರುಗಳಲ್ಲಿ ಪ್ರಸಿದ್ಧತೆಯನ್ನು ಹೊಂದಿದ್ದು, ಅತಿ ಬಿಟ್ಟುಬಿಟ್ಟ ಅನೇಕ ಸಂದರ್ಭಗಳಲ್ಲಿ ಗುಣಪಡಿಸಿದವುಗಳಾಗಿರುತ್ತವೆ.

ಇವುಗಳು ಗಿರಣಿಗಳಲ್ಲಿಯೂ ಕಾರ್ಖಾನೆಗಳಲ್ಲಿಯೂ ವಿಶೇಷವಾಗಿ ಉಪಯೋಗಿಸಲ್ಪಡುವುವು. ಸಾಮಾನ್ಯವಾಗಿ ಹಿಂದೂಸ್ಥಾನದಲ್ಲಿ ಎಲ್ಲಾ ತೋಟಗಾರರಿಂದ ಉಪಯೋಗಿಸಲ್ಪಡುವುವು. ಅಲ್ಲದೆ ದಿಂಗಿಕ ವಿಶ್ರಾಂತಿದಾವ ಕೀರ್ತಿಯನ್ನು ಕೂಡ ಸಂಪಾದಿಸಿರುವುವು ಕಠಿಣ ಜ್ವರವು ತಟ್ಟನೆ ಇಳಿಯಬೇಕಾದರೆ ಆರ್ ಮಾರ್ಟಿನರ ಎಗ್ಯೂ ಮಿಕ್ಸ್ಚರ್ ಒಡನೆ ಇದನ್ನು ಸೇವಿಸಬೇಕು. ಈ ಇವೆರಡು ಅದ್ಭುತ ಶಕ್ತಿಯುಳ್ಳ ಔಷಧಿಗಳು ಪ್ರತಿಯೊಂದು ಕುಟುಂಬದ ಮನೆಯಲ್ಲಿಟ್ಟುಕೊಳ್ಳಲು ಯೋಗ್ಯ ವಸ್ತುಗಳಾಗಿವೆ ಪ್ರತಿಯೊಂದು ಬಾಟ್ಲಿಯಲ್ಲಿ 40 ಮಾತ್ರೆಗಳು ಇರುವುವು.

ಬಾಟ್ಲಿ 1ಕ್ಕೆ ರೂ. 1–8–0.

ಆರ್. ಮಾರ್ಟಿನ್ನರ ಎಗ್ಯೂವಿಕ್ಚರ್.

ಇದು ಜ್ವರ, ಶೀತಜ್ವರ ಮಲೇರಿಯಾ, ಛಾರಿಜ್ವರ, ಸನ್ನಿಪಾತ ಪಟ್ಟೆ ವಾಯುವಿನಿಂದುಂಟಾದ ರೋಗ ಇವೇ ಮೊದಲಾದ ಎಲ್ಲಾ ತರದ ಜ್ವರಗಳನ್ನೂ ಕೂಡಲೇ ನಾಶಮಾಡುತ್ತದೆ. ಎಲುಬುಗಳಲ್ಲಿ ಹರಡಿಕೊಂಡಿರುವ ಜ್ವರವನ್ನೂ ಸಹ ನಾಶಮಾಡುವುದಲ್ಲದೆ, ಇದು ಸಿಹಿಯಾಗಿರುವುದರಿಂದ ಸಣ್ಣ ಕೂಸುಗಳು ಸಹ ಕುಡಿಯಲಿಕ್ಕೆ ಇಷ್ಟಪಡುತ್ತವೆ. ಅನೇಕ ನಿಜ ವಿದ್ವಾಂಸ ವೈದ್ಯರಿಂದ ಗುಣಮಾಡುವುದಕ್ಕಾಗದ ಜ್ವರವನ್ನು ಈ ಎರಡೇ ಎರಡು ಬಾಟ್ಲಿಗಳ ಸೇವನೆಯಿಂದ ಹುಷಾರಾಗಿದೆ.

ಬಾಟ್ಲಿ 1ಕ್ಕೆ ರೂ. 0–13–0.

ಆರ್. ಮಾರ್ಟಿನ್ನರ ಮೂಲವ್ಯಾಧಿ ಮಲಾಮು.

ಮನುಷ್ಯನಿಗೆ ಮೂಲವ್ಯಾಧಿ ಆದಾಗ, ಬಹಳ ಸಲ ಮೂತ್ರಶಂಕೆಯಾಗುವಿಕೆ, ಮರ್ಮಸ್ಥಾನದಲ್ಲಿ ಉರಿಯುವುದು, ಮಲಬದ್ಧತೆ ಇವೇ ಮುಂತಾದವುಗಳಿಂದ ಪಡುತ್ತಾನೆ. ಈ ಔಷಧದ ಒಂದೇ ಒಂದು ಬಾಟ್ಲಿಯ ಉಪಯೋಗದಿಂದ, ರಕ್ತ ಸುರಿಯುವ ಮೂಲವ್ಯಾಧಿ, ಅಂಕುಳಲ್ಲಿ ನೋಯುವ ಮೂಲವ್ಯಾಧಿ ಮತ್ತು ಎಂಥ ತರಹದ ಕಠಿಣವಾದ ಮೂಲವ್ಯಾಧಿಯಾದರೂ ಕೂಡಲೇ ವಾಸಿಯಾಗುತ್ತದೆ. ಇದು ಒಳ್ಳೇ ಔಷಧಗಳಿಂದ ತಯಾರಿಸಲ್ಪಟ್ಟು ತೆಗೆದುಕೊಳ್ಳುವವರಿಗೆ ಏನೊಂದೂ ನೋವನ್ನೂ ಕೊಡದೆ ತಂಪಾಗಿ ಮಾಡುತ್ತದೆ. ಬಾಟ್ಲಿ 1ರ ದರ ರೂ. 1–8–0 ಮಾತ್ರ.

ವಿಳಾಸ:—ಆರ್. ಡಿ. ಕಟಿ ಮತ್ತು ಕಂಪೆನಿ,
ನಂಬ್ರ ಬಿ. ಫ್ರಿಯರ್ ರೋಡ್,
ಸಾಂಜ ವರ್ತಮಾನ ಪ್ರೆಸ್,
ಟೋಡಿವಾಲಾ ಬಿಲ್ಡಿಂಗ ಎದುರುಗಡೆ, ಫೋರ್ಟ್ ಮುಂಬಯಿ.

R. D. Kately & Co.
No. B. Frere Road,
Opposit Sanjvertaman Press,
Todivala Building, FORT BOMBAY

ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ಮೂರನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್. ಗಣಪತಿರಾವ್ ಐಗಳ್—ಗ್ರಂಥಕರ್ತರು.

ಮನೋರಂಜಕ ಚಿತ್ರಗಳೂ ಇವೆ.

ಇದರಲ್ಲಿ ಸಾವಿತ್ರಿ, ಶಕುಂತಳಾ, ಕೃಷ್ಣಾಕುಮಾರಿ, ಪದ್ಮಿನಿ, ಜೋನ್ ಒಫ್ ಆರ್ಕ, ಫ್ಲೊರೆನ್ಸನಾಯಿಟಿಂಗೇಲ ಪರಶುರಾಮ, ಭೂತಾಳಪಾಂಡ್ಯ, ಕಾರ್ಕಳ ಗೋಮಟೇಶ್ವರ ಮತ್ತು ಭೈರವರಾಜ, ಮೂಡಬಿದ್ರೆಯ ಚೌಟರು, ನಂದಾವರ ಬಂಗರು, ಕಾರ್ಕಳ ರಾಮಸಮುದ್ರ ಮತ್ತು ರಾಮನಾಥ ಒಡೆಯರ ಅಣೆಕಟ್ಟು, ಗುರುಪುರ ಜಂಗಮ ಮಠ, ಕಲ್ಯಾಣಪ್ಪನ ಕಾಟಕಾಯಿ, ಗುರುವಾಯನಕೆರೆ, ಜಮಾಲಾಬಾದುಕೋಟೆ, ಸುಲ್ತಾನಬತ್ತೇರಿ, ಈದಗಾಪ್ರಾರ್ಥನಾಮಂದಿರ, ಸೇಂಟಮೇರಿ ದ್ವೀಪಗಳು ಮತ್ತು ದರಿಯಾಬಾದರಗಡ, ಕೊರಗರು, ಕೊಡಗರು, ತೋಡರು, ರಜಪೂತರು, ಕಂದಾರಿಗಳು ಘುರ್ಖಾ ಜನರು, ಅರಬಿಯರು. ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ಮೂರನೇ ದರ್ಜೆಯ ಮಕ್ಕಳಿಗೆ ಉಪಯುಕ್ತವಾಗಿದೆ. ಕ್ರಯ 6 ಆಣೆ.

ಪುಸ್ತಕ ದೊರಕುವ ವಿಳಾಸ:—

ಶಾರದಾ ಛಾಪಖಾನೆ, ಮಂಗಳೂರು.	ಗಣಪತಿರಾವ್, ಐಗಳ್. ಮಂಜೇಶ್ವರ

ಡಾಕ್ಟರುಗಳು ಭಿನ್ನಾಭಿಪ್ರಾಯಪಡುವಾಗ್ಯೆ ತೀರ್ಮಾನಿಸುವದು ಯಾರು?

ಅಂಥಾ ಸಂದರ್ಭಗಳಲ್ಲಿ ಡೆಂಗ್ಯೂ ಮುಂತಾದ ಜ್ವರಗಳನ್ನು ನಿವಾರಿಸುವಂಥಾ "ಬಾಟ್ಲಿವಾಲರ ಏಗ್ಯೂಮಿಕ್ಸ್ಚರ್"ನ್ನು ಸರಾಗವಾಗಿಯೂ, ಮತ್ತು ಜ್ವರಗಳನ್ನು ಖಂಡಿತವಾಗಿ ನಿಲ್ಲಿಸುವಂಥಾದೂ, ಎಲ್ಲಾ ತರದ ತಲೆನೋವುಗಳನ್ನು ಹೋಗಲಾಡಿಸುವಂಥಾದ್ದೂ ಆದ "ಬಾಟ್ಲಿವಾಲರ ಏಗ್ಯೂಪಿಲ್ಸ್"' ಇದನ್ನು ಉಪಯೋಗಿಸಿರಿ.

ಐ. ಎಮ್. ಎಸ್. ಡಾಕ್ಟರುಗಳಿಂದ ಶಿಫಾರಸು ಮಾಡಲ್ಪಟ್ಟಿದ್ದು. ಇದರ ಉಪಯೋಗದಿಂದ ಹೃದಯದ ಮೇಲೆ ಯಾವದೊಂದೂ ಬಾಧಕವಿಲ್ಲ. ಅರ್ಧ ಶತಮಾನದಿಂದ ಹಿಂದೂಸ್ಥಾನ, ಬರ್ಮಾ, ಸಿಲೋನ್, ಆಫ್ರಿಕಾ ಇವುಗಳಲ್ಲಿ ಪ್ರಖ್ಯಾತಪಟ್ಟದ್ದಾಗಿರುತ್ತದೆ.

ಅನೇಕ ಹಿಂದೀ ಪ್ರದರ್ಶನಗಳಲ್ಲಿ ಬೆಳ್ಳಿ ಮತ್ತು ಬಂಗಾರದ ಪದಕಗಳನ್ನು ಪಡೆದಿರುತ್ತೆ. ಚಾಲ್ತಿ ಸಾಧ್ಯವೆಂತಿದ್ದು ಮಾರ್ವಾರಿಗಳೂ ಕೂಡ ಅದರ ಮೇಲೆ ಹಣವನ್ನು ಮುಂಗಡವಾಗಿ ಕೊಡುತ್ತಾರೆ. ಬಡ ಮತ್ತು ಮಧ್ಯಮ ತರಗತಿಯ ಜನರಿಗೆ ವರಪ್ರದಾನವಾಗಿದ್ದು ಸಂಚಾರ, ಪ್ರಯಾಣ, ದೇಶಾಟನೆಗಳ ಸಮಯದಲ್ಲಿ ಹತ್ತಿರದಲ್ಲಿರಿಸಿಕೊಳ್ಳದಾಗಿರುತ್ತದೆ.

ಬಾಟ್ಲಿವಾಲರ ಬಾಲಾಮೃತ ಅಥವಾ ಟೊನಿಕ್ ಸಿರಪ್.

ಕೆಮ್ಮನ್ನು ಹೋಗಲಾಡಿಸಿ, ಎದೆನೋವನ್ನು ಶಾಂತಗೊಳಿಸಿ, ಜ್ವರವನ್ನು ಉಪಶಮನಿಸಿ, ನಿದ್ರಾಭಂಗವನ್ನು ಕಡಿಮೆ ಮಾಡಿ ಧಾತುವರ್ಧನವನ್ನು ಮಾಡುವದರಲ್ಲಿ ಅತ್ಯುತ್ತಮವಾಗಿರುತ್ತದೆ. ಕಫವನ್ನು ಒಣಗಿಸಿ ಮಾಯವಾಗುವಂತೆ ಮಾಡುವುದಲ್ಲದೆ ಅದೇ ಸಮಯದಲ್ಲಿ ಒಳ್ಳೇ ಜೀರ್ಣವನ್ನೂ ಉಂಟುಮಾಡುವುದು. ದರ ಮೊದಲಾದ ಮಾಹಿತಿಯನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಕಾರಿನಪತ್ತೆ:-CAWASHAPUR, BOMBAY.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ.	ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್., ಪಿ. ವಾರ್ಲಿ, ಮುಂಬಯಿ, ನಂಬ್ರ 18.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟ. ಖ. 9 ಆಣೆ.

ನಮ್ಮ ವಿಳಾಸ:— ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಏಜಂಟರು:— ದಿ. ಊಲನ್ ಮಾರ್ಟ್, ಮಂಗಳೂರು.

OUR RECENT IMPORT IN WRIST WATCHES

Have you used anyone of these Watches?

SEND YOUR ORDER NOW ALL GUARANTEED.

Fashionable wrist wrist Lady's size. Reliable movement Guaranteed.



No. 368.

Handy to wear and looks beautiful. Gives punctual time and with strong movement.

Nickel case Rs. 8—0

High-class Radium dial watch watch with Roman figures.



No. 367.

Can be seen in dark nights. Well fitted with best movement and strong to use. Used by one and all.

Silver case Rs. 9—0.

Radio light wrist watch.



No. 372.

Fitted with the best mechanism and guaranteed to work and keep perfect time for a long time.

Nickel case Rs. 7—8
Electro rolled-gold „ 9—0

(N. B. In addition to the above, we have good number of varieties of fancy wrist watches, pocket watches. Please write for a descriptive catalogue, which will be sent free)

WHOLESALE IMPORTERS

PETER WATCH COY.,
POST BOX 27, MADRAS

ಶಾಲಿವಾಹನಶಕ ೧೮೪೭ನೆಯ ಕ್ರೋಧನ ಸಂವತ್ಸರದ ಜ್ಯೇಷ್ಠ ಶು॥ ೧೫ ಶನಿವಾರದಿಂದ ಕ್ರೋಧನ ಸಂವತ್ಸರದ ಜ್ಯೇಷ್ಠ ಬ॥ ೬ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೫ನೆಯ ವೃಷಭ ದೇಶ.)

ತಾರೀಕು	ವಾರ	ತಿ.	ಘಳಿಗೆ.	ನಕ್ಷತ್ರ	ಘಳಿಗೆ.	ನಾಗಾಣ.	ಸೂರ್ಯ ಉ.	ಸೂರ್ಯ ಅಸ್ತ.
6	ಶನಿ	⊙	೧.೩೧	ಅನುರಾಧಾ	೫೯.೩೧	೨೪	6. 5	6.53
7	ರವಿ	೧	೫೦.೪೮	ಜ್ಯೇಷ್ಠ	೫೬.೧೪	೨೫	6. 5	6.54
8	ಸೋಮ	೨	೪೪.೪೬	ಮೂಲ	೨೨.೧೫	೨೬	6. 5	6.54
9	ಮಂಗಳ	೩	೩೮.೩೫	ಪೂ. ಷಾ.	೧೮.೧೬	೨೭	6. 5	6.54
10	ಬುಧ	೪	೩೨.೩೨	ಉ. ಷಾ.	೧೪.೧೭	೨೮	6. 5	6.54
11	ಗುರು	೫	೨೬.೪೬	ಶ್ರವಣ	೧೦.೨೮	೨೯	6. 5	6.55
12	ಶುಕ್ರ	೬	೨೧.೩೨	ಧನಿಷ್ಠ	೬.೩೨	೩೦	6 5	6 55

ಮಂಗಳೂರಿನ ವಾಯುಸ್ಥಿತಿ.

Date ತಾರೀಕು	Temperature. ಉಷ್ಣ (ಕಾವು) Maximum ಹೆಚ್ಚಾದದ್ದು	Temperature. ಉಷ್ಣ (ಕಾವು) Minimum ಕಡಿಮೆ	Rainfall. ಮಳೆ ದಿನದ ಮಳೆ	Rainfall. ಮಳೆ ಜುಮಲಾ ಮಳೆ.
29	89—8	74—8	0—06	—
30	87—2	75—1	1—46	—
31	85—4	73—3	3—11	—
1	81—2	73—7	3—21	—
2	80—1	71—3	2—78	—
3	85—6	71—4	0—88	—
4	88—2	74—9	0—14	—

ಮಂಗಳೂರಿನ ಪೇಟೆ ಧಾರಣೆ.

ಜಿನಸು	ಇಂದ ರೂ. ಅ.	ವರೆಗೆ ರೂ. ಅ.
ಹೊಸ ಮಸ್ಕತಿ	8—4	8—14
ಹೊಸ ಗುಡ್ಡೆ ...	7-10	8—2
ಹೊಸ ರಾಶಿ ...	7- 4	7—12
ಅಸ್ವರ್ ಬೆಳ್ತಿಗೆ ...	8--4	9 8
ಗುಡ್ಡೆ ಬೆಳ್ತಿಗೆ ...	7—12	8 4
ರಂಗೂನು ಬೆಳ್ತಿಗೆ ಗೋಣಿ ೧ ...	13- 0	13—8
ಗೋಧಿ ಗೋಣಿ ೧ಕ್ಕೆ ...	18- 8	22—0
ಹುರುಳಿಗೋಣಿ ೧ಕ್ಕೆ ...	9- 10	10 12
ಕಡಲೆಗೋಣಿ ೧ಕ್ಕೆ ...	12-0	13—0
ತೊಗರಿಗೋಣಿ ೧ಕ್ಕೆ ...	12-8	13—0
ತೊಗರಿಬೇಳೆ ಗೋಣಿ ೧ಕ್ಕೆ ...	18-8	21—0
ಉದ್ದುಗೋಣಿ ೧ಕ್ಕೆ ...	14- 0	14—8
ಹೆಸರುಗೋಣಿ ೧ಕ್ಕೆ ...	14—0	15—0
ಊರು ಬೆಲ್ಲ ಖಂಡಿ ೧ಕ್ಕೆ ...	-	85—0
ಉಪ್ಪು ಗೋಣಿ ೧ಕ್ಕೆ ...	4- 4	4-10
ಕೊಬ್ರಿ ಖಂಡಿ ೧ಕ್ಕೆ ...	115-0	120—0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	35- 0	36—0
ಎಳ್ಳಿಂಡಿ ಖಂಡಿ ೧ಕ್ಕೆ ...	35 -0	42—8
ಕೊಬ್ರಿ ಎಣ್ಣೆ ಮಣ ೧ಕ್ಕೆ ...	8—8	9—8
ಎಳ್ಳೆಣ್ಣೆ ಮಣ ೧ಕ್ಕೆ ...	8- 0	11—0
ಅವಿಂಡೆ ಎಣ್ಣೆ ಪೆಟ್ಟಿಗೆ ೧ಕ್ಕೆ ...	8-15-6	–
ಪೋರಿನ ಸಕ್ಕರೆ ಮಣ ೧ಕ್ಕೆ ...	5— 0	5—2
ಊರ ಮೆಣಸಿನಕಾಯಿ ಮಣ ೧ಕ್ಕೆ ...	7- 0	–
ಸಾಸಿವೆ ಮುಡಿ ೧ಕ್ಕೆ ...	8- 12	–
ಕೊತ್ತಂಬರಿ ಮುಡಿ ೧ಕ್ಕೆ ...	3- 8	4—4
ಕಾಫಿ ಖಂಡಿ ೧ಕ್ಕೆ ...	345- 0	400--0
ಬೆಳಗೋಟು ಅಡಿಕೆ ಖಂಡಿ ೧ಕ್ಕೆ ಹಳತು ...	235- 0	245--0
,, ಹೊಸ ಅಡಿಕೆ	240—0	240—0
ಕಾಳುಮೆಣಸು ಖಂಡಿ ೧ಕ್ಕೆ ...	155-0	160--0
ಯಾಲಕ್ಕಿ ಮಣ ೧ಕ್ಕೆ ...	80- 0	90-0
ಗೇರುಬೀಜ ಮುಡಿ ೧ಕ್ಕೆ ...	2—10	2 13
ಕಬ್ಬಿಣ ಖಂಡಿ ೧ಕ್ಕೆ ...	45- 0	65—0
ತಾಂಬ್ರ ತಗಡು ಮಣ ೧ಕ್ಕೆ ...	17-12	23—0
ತಾಮ್ರ ಪಾತ್ರೆಗಳು ಮಣ ೧ಕ್ಕೆ ...	26- 0	–
ಚೀನಿ ಬೆಳ್ಳಿ ಸೇರು ೧ಕ್ಕೆ ...	22 - 0	
ಹಿತ್ತಾಳೆ ತಗಡು ಮಣ ೧ಕ್ಕೆ ...	18- 8	
ಪವನು	13-12	

The Canara Public Conveyance Co., Ltd, Mangalore.

(Established 1914.)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು {
ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು
ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.
ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇವರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ—ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd., Mangalore. S K.

ಉಚಿತ! ಬಿಟ್ಟಿ!! ಪುಗಸಟ್ಟೆ!!!

ವೈದ್ಯವಿದ್ಯ
PROPRIETOR RAJVAIDYA NARAYANJI KESHAVJI
NO PRICE NO POSTAGE.

ಎಂಬ ಈ ಪುಸ್ತಕದಲ್ಲಿ ಆಯುರ್ವೇದ ಶಾಸ್ತ್ರದಲ್ಲಿ ಸ್ತ್ರೀಪುರುಷರು ಆರೋಗ್ಯದೃಢಕಾಯರಾಗಿ ಆರೋಗ್ಯದಿಂದ ಕೂಡಿದ ಸಂತಾನಗಳನ್ನು ಪಡೆದು ಸತಿಪತಿಯರು ಅನ್ಯೋನ್ಯವಾಗಿ ಅನುರಾಗವುಳ್ಳವರಾಗಿ ಸುಖದಿಂದಲೂ ಸಂತೋಷದಿಂದಲೂ ಸಂಸಾರಯಾತ್ರೆಯನ್ನು ಮಾಡಲು ಅತ್ಯಂತ ಉಪಯುಕ್ತವಾದ ವಿಷಯಗಳು ಅಲ್ಲಲ್ಲಿ ಹೇಳಲ್ಪಟ್ಟಿರುವುವನ್ನು ಒಂದಾಗಿ ಕ್ರೋಢೀಕರಿಸಿ ಅಜ್ಞಾನದಿಂದಲೂ ಸಂಕಷ್ಟದಿಂದಲೂ ನರಳುತ್ತಿರುವ ಸಂಸಾರಿಗಳನ್ನುದ್ಧಾರಮಾಡುವ ಸಲುವಾಗಿ ಈ ಪುಸ್ತಕವನ್ನು ಕ್ರಯವೂ ಅಂಚೇ ಹಾಸಲೂ ಇಲ್ಲದೆ ಬೇಡಿದವರಿಗೆ ಸರ್ವತ್ರ ಉಚಿತವಾಗಿ ಕಳುಹಿಸುತ್ತೇವೆ. ಹೆಚ್ಚು ಮಾಹಿತಿಗೆ ಪತ್ರ ಬರೆಯಿರಿ.

ರಾಜವೈದ್ಯ ನಾರಾಯಣಜಿ ಕೇಶವಜಿ,
57, ಬಂದರ್ ಸ್ಟ್ರೀಟ್, ಜಿ. ಟಿ. ಮದ್ರಾಸ್

ಸಾರಸ್ವತ.

ಕನ್ನಡ ಮತ್ತು ಕೊಂಕಣಿ ಭಾಷೆಗಳಲ್ಲಿ ಕಳೆದ ವಿಜಯದಶಮಿ ದಿನದಿಂದ ಪ್ರತಿ ದಶಮಿಗೆ ಹೊರಡುವ ಪತ್ರಿಕೆ.

ವಿ. ಎಸ್. ಕಾಮತ್,
ಮೂಲ್ಕಿ ವಾಮನ ಕುಡುವ } ಸಂಪಾದಕರು.

ಮತಸಂಸ್ಥೆ ಮತ್ತು ಸಮಾಜಕ್ಕೆ ಸಂಬಂಧಪಟ್ಟ ಇತರ ಸಂಸ್ಥೆಗಳ ಸುಸಂಘಟನ.

ಸಮಾಜದೊಳಗೆ ಅನ್ಯೋನ್ಯ ಸಾಧನೆ.

ಸ್ತ್ರೀಸಮಾಜಕ್ಕೆ ಉಪಯುಕ್ತವಾದ ವಿಷಯಗಳ ನಿರೂಪಣ

ಮತಭಾವನೆಗಳ ಉಜ್ಜೀವನ ಇತ್ಯಾದಿ ಉದ್ದೇಶಗಳಿಂದ ಈ ಪತ್ರಿಕೆಯು ಹೊರಡಿಸಲ್ಪಡುವುದು. ಸಾರಸ್ವತ ಸಮಾಜವು ಇದಕ್ಕೆ ಪ್ರೋತ್ಸಾಹವನ್ನೀಯಬೇಕಾಗಿ ಪ್ರಾರ್ಥನೆ.

ಚಂದಾಹಣ ಅಂಚೆವೆಚ್ಚ ಕೂಡಾ ರೂ. ೧—೪—೦. ಪೋಷಕರು ರೂ. ೧೦—೦—೦. ಸಹಾಯಕರು ರೂ. ೫—೦—೦. ಮಾದರಿ ಸಂಚಿಕೆಯನ್ನು ಟಪ್ಪಾಲು ಖರ್ಚಿಗಾಗಿ ಅರ್ಧಾಣೆ ಸ್ಟಾಂಪು ಕಳುಹಿಸುವವರಿಗೆ ಉಚಿತವಾಗಿ ಕಳುಹಿಸುವೆವು.

ಕನ್ನಡ ನಾಡಿನಲ್ಲಿ ಪ್ರತಿ ಕಡೆಯಲ್ಲಿಯೂ ಬಾತಮೀದಾರರು ಬೇಕು.

ಎಲ್ಲಾ ಪತ್ರವ್ಯವಹಾರಗಳನ್ನು ಕೆಳಗಿನ ವಿಳಾಸಕ್ಕೆ ನಡೆಸಬೇಕು.

ಯು. ನಾರಾಯಣನಾಯ್ಕ, ಕಾರ್ಯದರ್ಶಿ,
ಸಾರಸ್ವತ, ಉಡುಪಿ.

ಕನ್ನಡಿಗರೇ! **ವಸಂತ.** ಕನ್ನಡಿಗರೇ!

ಈಗಾಗಲೇ ಎರಡನೇ ಸಂಪುಟವು ಆರಂಭಿಸಲಿದೆ.

ಇತಿಹಾಸನಿಧಿ ಎಂದರೆ . . . . ವಸಂತ
ಸಮಾಜಸುಧಾರಕನೆಂದರೆ . . . . ವಸಂತ
ಕೈಗಾರಿಕೆಯ ಸಾಮ್ರಾಜ್ಯವೆಂದರೆ . . . . . . ವಸಂತ
ಕರ್ಣಾಟಕ ಭಾಷಾಸೇವಕನೆಂದರೆ . . . . . . ವಸಂತ
ದೇಶವಿದೇಶ ಬಂಧುವೆಂದರೆ . . . . . . ವಸಂತ
ಕಾದಂಬರಿಗಳ ಭಂಡಾರವೆಂದರೆ . . . . . . ವಸಂತ
ಚಿತ್ತಾಕರ್ಷ ಚಿತ್ರಶಾಲೆಯೆಂದರೆ . . . . . . ವಸಂತ
ದೇಶಭಕ್ತನೆಂದರೆ . . . . ವಸಂತ

ಇಂತಹ ವಸಂತನು ಯಾರಿಗೆ ಬೇಕು,
ಯಾರಿಗೆ ಬೇಡ?

48 (ಕ್ರೌನ್ ¼ ಪುಟ ಸೈಜಿನ) ಪುಟಗಳನ್ನು ಹೊಂದಿದ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3—4—0 ಮಾತ್ರ.

ವ್ಯವಸ್ಥಾಪಕ,
ವಸಂತ ಕಾರ್ಯಾಲಯ,
ಕುಂಬಾಶಿ, ದಕ್ಷಿಣ ಕನ್ನಡ

ಬಂದು ನೋಡಿರಿ! ತಿಂದು ನೋಡಿರಿ!
ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ
ಪದಕವನ್ನು
ಬಹುಮಾನವಾಗಿ ಪಡೆದಿರುವ
ಎಸ್. ಪಿ. ಆಚಾರ್ಯ
ಇವರಿಂದ ತಯಾರಿಸಲ್ಪಟ್ಟ
ಉಪ್ಪಿನಕಾಯಿಗಳನ್ನು
ಬಂದು ನೋಡಿರಿ! ತಿಂದು ನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ, ಶುಂಠಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನ್ನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ
ಬಂದು ನೋಡಿರಿ! ತಿಂದು ನೋಡಿರಿ!

ಇಂಡಿಯನ್ ಸ್ವೀಟ್‌ಮೀಟ್ ಮಾರ್ಟ್.
ಮನೋಲ್ಲಾಸಿನಿ ಕಾಫಿ ಕ್ಲಬ್. ಮಾರ್ಕೆಟು ರೋಡು, ಮಂಗಳೂರು. ಅಥವಾ 'ಸದಾನಂದ ಕಾಫಿ ಕ್ಲಬ್', ರಥಬೀದಿ, ಮಂಗಳೂರು.

ದಕ್ಷಿಣ ಕನ್ನಡ ಜಿಲ್ಲೆಯ
ಪ್ರಾಚೀನ ಇತಿಹಾಸ
450 ಪುಟಗಳು ಕ್ರಯ ರೂ. 2—4—0
ಪುಸ್ತಕಗಳು ಸಿಕ್ಕುವ ವಿಳಾಸ:—
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

— ಸಿರಿಗನ್ನಡಂಗೆಲ್ಗೆ —
ಶ್ರೀ ಶಂಕರ ಕರ್ನಾಟಕ ಪುಸ್ತಕ ಭಂಡಾರವೂ
ಶ್ರೀ ವಿದ್ಯಾರಣ್ಯ ಪ್ರಕಾಶಕ ಸಂಸ್ಥೆಯೂ,
ಮಾಳಮಡ್ಡಿ, ಧಾರವಾಡ.

ಕನ್ನಡಿಗರಿಗೆ ಬೇಕಾಗುವ ಎಲ್ಲಾ ತರದ ಕನ್ನಡ ಪುಸ್ತಕಗಳು ನಮ್ಮಲಿ ಯೋಗ್ಯ ಬೆಲೆಗೆ ದೊರೆಯುವವು. ವಿದ್ಯಾರಣ್ಯ ಪುಸ್ತಕ ಮಾಲೆಯ ಕೆಳಗಿನ ೧, ೨, ೩, ಪುಸ್ತಕಗಳು ಚಂದಾದಾರರಾಗುವವರಿಗೆ ಅಂಚೆ ವೆಚ್ಚ ಸೇರಿ ೫ ರೂ. ೬ ಆಣೆಗೆ ದೊರೆಯುವವು. ಮುಂದೆ ಹೊರ ಬೀಳುವ ಮಾಲೆಯ ಪುಸ್ತಕಗಳನ್ನು ಚಂದಾದಾರರಿಗೆ ೧ ರೂಪಾಯಿಗೆ ೨ ಆಣೆಯಂತೆ ಕಡಿಮೆ ಬೆಲೆಗೆ ವಿ. ಪಿ. ಮಾಡುವೆವು. ಭಂಡಾರದ ಬೆಲೆ ಪಟ್ಟಿಗಾಗಿ ೪ ಆಣೆ ಅಂಚೆ ಟಿಕೇಟುಗಳನ್ನು ಕಳುಹಿಸತಕ್ಕದ್ದು.

			ರೂ. ಆ. ಪೈ.
೧.	ಕರ್ನಾಟಕ ಸಿಂಹಾಸನ ಸ್ಥಾಪನೆ	... ...	೧—೦—೦
೨.	ಕಥೆಗಳನ್ನೊಳಗೊಂಡ ಬೀರಬಲ್ಲ ಚರಿತ್ರೆ (ಸಚಿತ್ರ)		೧—೬—೦
೩.	ಛತ್ರಪತಿ ಶಿವಾಜಿ ಮಹಾರಾಜ	,,	೨—೧೨—೦
೪.	ಮಹಾರಾಣಿ ಲಕ್ಷ್ಮೀಬಾಯಿ ಝಾಂಸಿ	,,	೨—೦—೦
೫.	ಅಕ್ಬರ ಚಕ್ರವರ್ತಿ ಚರಿತ್ರೆ	,,	೧—೧—೦
೬.	ಚರಿತ್ರ ಸಂಗ್ರಹ ಭಾಗ ೧.	,,	೧—೪—೦
೭.	ತಿಲಕರ ಗೀತಾ ರಹಸ್ಯ	... ...	೩—೮—೦
೮.	ಶ್ರೀ ದಾಸಬೋಧ ಭಾಗ ೧. ೨. ೩. ...	...	೨—೧೪—೦
೯.	ರಾಷ್ಟ್ರಸಭೆಯ ಇತಿಹಾಸ	... ...	೨—೮—೦
೧೦.	ವಚನ ಜ್ಞಾನಸಿಂಧು	... ...	೪—೦—೦

ಇವಲ್ಲದೆ ನಮ್ಮಲ್ಲಿ ಎಲ್ಲಾ ತರದ ಕಾಯಿದೆ ಶಾಲೋಪಯೋಗಿ ಪುಸ್ತಕಗಳೂ ನಕಾಶೆ ಚಿತ್ರಗಳೂ ಬರವಣಿಗಳೂ ದೊರೆಯುವವು.

ಶ್ರೀಪಾದ ರಾಮಚಂದ್ರ ದೇಶಪಾಂಡೆ ಬಿ. ಯಸ್. ಸಿ.
ವ್ಯವಸ್ಥಾಪಕ.

ಕ. ಪ್ರಾ. ಕಾಂ. ಕಮಿಟಿಯ ಸಭಾ, ಬೆಳಗಾಂವಿ.

ಇದೇ ಸನ್ ೧೯೨೫ನೇ ಮೇ ತಿಂಗಳ ೧೩ ೧೪ ಮತ್ತು ೧೫ನೇ ತಾರೀಕುಗಳಲ್ಲಿ ಬೆಳಗಾಂವಿಯಲ್ಲಿ ಸೇರಿದ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಸಾಧಾರಣ ಅಧಿವೇಶನದಲ್ಲಿ ನಿರ್ಣಯವಾದ ಠರಾವುಗಳು:—,

ಅಧ್ಯಕ್ಷ:— ಕಾರ್ನಾಡ ಸದಾಶಿವರಾಯರು

ಸದಸ್ಯರ ಸಂಖ್ಯೆ ೩೯.

ಠರಾವುಗಳು.

(೧) ತಾ. ೧—೧೦—೨೩ರಿಂದ ತಾ. ೩೦—೯—೨೪ರ ವರೆಗಿನ ಜಮಾ ಖರ್ಚಿನ ಪಟ್ಟಿಯನ್ನೂ ಲೆಕ್ಕ ಪರಿಶೋಧಕರ ವರದಿಯನ್ನೂ ಓದಿ ಮಂಜೂರಮಾಡಲಾಯಿತು.

(೨) ಕರ್ನಾಟಕ ಪ್ರಾಂತದಲ್ಲಿ ಈಗ ಇರುವ ನಿರುತ್ಸಾಹ ಸ್ಥಿತಿಯನ್ನು ಹೋಗಲಾಡಿಸುವದಕ್ಕೂ, ಮುಖಂಡರು ಪ್ರವಾಸ ಮಾಡಿ ತಕ್ಕ ಪ್ರೋತ್ಸಾಹವನ್ನು ಕೊಡುತ್ತಿರುವದಿಲ್ಲೆಂಬ ಕೆಲವರ ಆಕ್ಷೇಪಗಳನ್ನು ಹೋಗಲಾಡಿಸುವದಕ್ಕೂ ಪುನಃ ಪ್ರಾಂತದಲ್ಲಿ ಉತ್ಸಾಹವನ್ನು ಹುಟ್ಟಿಸುವದಕ್ಕೂ, ಅಧ್ಯಕ್ಷರೂ, ದೇಶಭಕ್ತ ಗಂಗಾಧರ ರಾವ ದೇಶಪಾಂಡೆ ಇವರೂ ಮತ್ತು ದೇಶಭಕ್ತ ಶ್ರೀನಿವಾಸ ರಾವ ಕೌಜಲಗಿಯವರೂ ಕೂಡಿ ಅವರವರ ಅನುಕೂಲ ನೋಡಿಕೊಂಡು ಇಡೀ ಪ್ರಾಂತದಲ್ಲಿ ಪ್ರವಾಸ ಮಾಡಿ ನೂಲಿನ ಸದಸ್ಯತ್ವದ ಪ್ರಚಾರವು ಹೆಚ್ಚಾಗಿ ಉತ್ಸಾಹವುಂಟಾಗುವಂತೆ ಮಾಡತಕ್ಕದೆಂದು ವಿನಂತಿಮಾಡಿಕೊಳ್ಳುವದು.

(೩) ನೂಲಿನ ಕರದ ದೆಸೆಯಿಂದ ಕೆಲಸವು ಪ್ರಾಂತದಲ್ಲಿ ಸಾಕಷ್ಟು ಮುಂದುವರಿದಿಲ್ಲವೆಂದು ಈ ಸಭೆಯು ಖೇದಪಡುವದಲ್ಲದೆ ಬರುವ ಆರು ತಿಂಗಳಲ್ಲಿ ಎಲ್ಲ ಜಿಲ್ಲಾ ಕಾಂಗ್ರೆಸ ಕಮಿಟಿಗಳು ಜೋರಿನಿಂದಲೂ ಏಕಮನಸ್ಸಿನಿಂದಲೂ ಯತ್ನಮಾಡಿ ಈ ಕಾರ್ಯವನ್ನು ಮುಂದರಿಸಬೇಕೆಂದು ಈ ಕಮಿಟಿಯು ಕೇಳಿಕೊಳ್ಳುತ್ತದೆ. ಮತ್ತು ಕಾನಪುರದ ಕಾಂಗ್ರೆಸ್ಸಿನ ಮುಂದೆ ಈ ಪ್ರಾಂತವು ತನ್ನ ಅನುಭವದ ಮೇಲಿಂದ ತನ್ನ ಅಭಿಪ್ರಾಯವನ್ನು ಇಡುವದರ ಸಲುವಾಗಿ ಪ್ರತಿಯೊಂದು ಜಿಲ್ಲಾ ಕಮಿಟಿಯು ನೂಲಿನ ಕರದ ಯೋಗ್ಯತೆಯ ವಿಷಯವಾಗಿ ವರದಿಯನ್ನು ಕಳುಹಿಸತಕ್ಕದ್ದು.

ಈ ಪ್ರಾಂತದಲ್ಲಿ ಸ್ವರಾಜ್ಯ ಪಕ್ಷದ ಅಭಿಪ್ರಾಯವುಳ್ಳ ಕಾಂಗ್ರೆಸು ಸದಸ್ಯರು ತಮ್ಮ ಕಾರ್ಯಕ್ರಮವನ್ನು ಮುಂದರಿಸುವದರ ಜೊತೆಗೆ ಕಾಂಗ್ರೆಸಿನ ವಿಧಾಯಕ ಕಾರ್ಯಕ್ರಮದ ಈ ಭಾಗಕ್ಕೆ (Yarn franchise) ಜಿಲ್ಲಾ ಕಮಿಟಿಗಳಿಗೆ ಸಂಪೂರ್ಣ ಸಹಾಯಮಾಡಬೇಕೆಂದು ಅವರಿಗೆ ಈ ಸಭೆಯು ವಿನಂತಿಮಾಡಿಕೊಳ್ಳುತ್ತದೆ.

(೪) ನೂಲಿನ ವರ್ಗಣಿಯ ವಿಷಯದಲ್ಲಿ ಮಂಗಳೂರದಲ್ಲಿ ತಾ. ೨—೨—೨೫ನೇ ದಿವಸ ಕಾರ್ಯಕಾರಿ ಮಂಡಲದವರು ಮಾಡಿದ ನಿರ್ಣಯಗಳಲ್ಲಿ ಮೂರನೆ ಠರಾವಿನ ನಿಯಮ 'ಖ' ಇದರ ಬದಲಾಗಿ ಮುಂದಿನ ನಿಯಮ ಹಾಕಬೇಕು.

„ ಕಾಂಗ್ರೆಸ ಕಮಿಟಿಗಳು ಕೂಡಿಸುವ ವರ್ಗಣಿಯ ಎಲ್ಲ ನೂಲನ್ನು ಜಿಲ್ಲಾ ಕಮಿಟಿಗೆ ಕಳುಹಿಸತಕ್ಕದ್ದು. ಜಿಲ್ಲಾ ಕಮಿಟಿಯವರು ಆ ನೂಲಿನ ಬೆಲೆಯ ಅರ್ಧವನ್ನು ಆಯಾ ಕಾಂಗ್ರೆಸ ಕಮಿಟಿಗಳಿಗೆ ಕೊಡತಕ್ಕದ್ದು. ಅರ್ಧದಲ್ಲಿ ಒಟ್ಟು ನೂಲಿನ ಬೆಲೆಯ ನೂರಕ್ಕೆ ೨೦ ಪ್ರಾಂತಿಕ ಕಾಂಗ್ರೆಸ ಕಮಿಟಿಗೆ ಕಳುಹಿಸತಕ್ಕದ್ದು. ಇದರ ಅರ್ಧವನ್ನು ಪ್ರಾಂತಿಕ ಕಮಿಟಿಯು ಅ. ಭಾ. ಕಾಂಗ್ರೆಸ ಕಮಿಟಿಗೆ ಕಳುಹಿಸತಕ್ಕದ್ದು.

(೫) ಸನ್ ೧೯೨೪-೨೫ ಸಪ್ಟಂಬರ ತಿಂಗಳ ೩೦ರ ವರೆಗಿನ ಆಯವ್ಯಯದ ಅಂದಾಜು ಪಟ್ಟಿಯನ್ನು ಈ ಕೆಳಗಿನ ಸೂಚನೆಗಳೊಂದಿಗೆ ಮಂಜೂರಮಾಡಲಾಯಿತು

(೧) ಖರ್ಚಿನ ಎರಡನೆ ಬಾಬಿನಲ್ಲಿ (ಆಫೀಸ ಬಾಡಿಗೆ) ಅಸಿಸ್ಟಂಟ ಕಾರ್ಯದರ್ಶಿಗಳಿಗೆ ಮನೆಬಾಡಿಗೆ ಎಂದು ತಿಂಗಳಿಗೆ ೫—೦—೦ ರೂಪಾಯಿ ಕೊಡತಕ್ಕದ್ದು.

(೨) ಆಡಿಟರರು ಕೆಲಸದ ಮೇಲಿದ್ದಾಗ ಅವರ ಪ್ರವಾಸ ಖರ್ಚನ್ನು ಹೊರತುಪಡಿಸಿದ ದಿನಕ್ಕೆ ಒಂದು ರೂಪಾಯಿ. ಭತ್ತೆಯನ್ನೂ, ವರ್ಷಕ್ಕೆ ೧೦೦ ರೂಪಾಯಿ ಸಂಭಾವನೆಯನ್ನೂ ಕೊಡತಕ್ಕದ್ದು.

(೩) ಖಾದೀಹಾಕರರ ಸಲುವಾಗಿ ಖಾದಿ ಮಾರಾಟ ಮಾಡಿದ್ದರಲ್ಲಿ ರೂಪಾಯಿಗೆ ೨ ಬಿಲ್ಲಿ ಕಮಿಷನ್ ಕೊಡುವದರ ಸಲುವಾಗಿ ೧೦೦೦ ರೂಪಾಯಿ ಮಂಜೂರಮಾಡಿದೆ.

(೪) ಶಿಕ್ಷಣ ಸಮಿತಿಯವರು ಎರಡು ತಿಂಗಳು ಅಂದರೆ ಜುಲೈ ೧೫ನೇ ತಾರೀಕಿನ ಒಳಗಾಗಿ ತಾವು ಮುಂದೆ ಬರಿಯುವ ಪುಸ್ತಕಗಳ ಹೆಸರು ವಗೈರೆ ತಪಶೀಲವಾರ ಮಾಹಿತಿ ಮತ್ತು ಅವುಗಳ ಖರ್ಚಿನ ಅಂದಾಜು ಪತ್ರಿಕೆ ಕಳುಹಿಸಿದ ಮೇಲೆ ಕೊಡುವದಕ್ಕೆ ಶಿಕ್ಷಣ ಸಮಿತಿಯ ಬಗ್ಗೆ ಬಜೇಟಿನಲ್ಲಿ ೧೦೦೦ ರೂ. ಹಾಕಿದೆ.

(೫) ಹಿಂದುಸ್ಥಾನೀ ಸೇವಾದಲದ ಶಾಖೆಗಳನ್ನು ಪ್ರಾಂತದಲ್ಲಿ ಏರ್ಪಾಡು ಮಾಡುವ ಕುರಿತು ಪ್ರಾಂತಿಕ ಸೇವಾದಲದ ಖರ್ಚಿಗಾಗಿ ಬಜೇಟಿನಲ್ಲಿ ೧೦೦೦ ರೂ. ಹಾಕಬೇಕು.

(೬) ಈ ಕೆಳಗಿನ ಠರಾವು ಸರ್ವಾನುಮತದಿಂದ ಮಂಜೂರಾಯಿತು:—

(೧) ಸ್ವಾಗತಮಂಡಲದಿಂದ ಬಂದ ಹಣದಲ್ಲಿ ೨೫೦೦೦ ರೂಪಾಯಿ ಮುಂದಿನ ಬಜೇಟದವರೆ ಕಾದಿಟ್ಟ ನಿಧಿ (Reserved fund) ಯಾಗಿ ಪ್ರತ್ಯೇಕವಾಗಿ ಇಡತಕ್ಕದ್ದು.

(೨) ಕರ್ನಾಟಕ ಪ್ರಾಂತದಲ್ಲಿ ನೂಲಿನ ಕರದ ಪ್ರಸಾರವನ್ನು ಮುಖ್ಯತಃ ಮತ್ತು ವಿಧಾಯಕ ಕಾರ್ಯಕ್ರಮದ ಇತರ ಭಾಗಗಳನ್ನು ಜೋರಿನಿಂದ ನವಂಬರದಲ್ಲಿ ಜರಗುವ ಮುಂದಿನ ಸಭೆಯವರೆಗೆ ಮುಂದರಿಸುವುದರ ಸಲುವಾಗಿ ಈ ಕೆಳಗಿನ ಸದಸ್ಯರಿಂದ ಕೂಡಿದ ಕಮಿಟಿಯನ್ನು ನೇಮಿಸಲಾಯಿತು:—

ಸದಸ್ಯರು:—

ಶ್ರೀಯುತರುಗಳಾದ ಕಾರ್ನಾಡ ಸದಾಶಿವರಾವ, ವಿನಾಯಕರಾವ ಜೋಶಿ, ಮಧ್ವರಾವ ಕೆಂಭಾವಿ ಕಾರ್ಯದರ್ಶಿ, ಕೆ. ಗುರುರಾಜರಾವ, ಬಳ್ಳಾರಿ, ಶ್ರೀನಿವಾಸರಾವ ಕೌಜಲಗಿ.

(೩) ಮೇಲಿನ ಕಾರ್ಯಕ್ರಮವನ್ನು ತಮ್ಮ ಅನಿಯಂತ್ರಿತ ಅಭಿಪ್ರಾಯದ ಮೇರೆಗೆ ನಡೆಯಿಸಲು ೬೦೦೦ ರೂಪಾಯಿಗಳನ್ನು ಮಂಜೂರು ಮಾಡಲಾಯಿತು.

(೪) ಕಾಂಗ್ರೆಸ್ ಕಮಿಟಿಗಳಲ್ಲದೆ ಇತರ ಸಂಸ್ಥೆಗಳಿಂದ ಸಹಾಯದ ಕುರಿತು ಬಂದ ಎಲ್ಲ ಅರ್ಜಿಗಳನ್ನು ಪರ್ಯಾಲೋಚಿಸಿ ರಿಪೋರ್ಟ ಮಾಡುವದಕ್ಕಾಗಿ ಮೇಲಿನ ಕಮಿಟಿಗೆ ಕಳುಹಿಸಲಾಯಿತು.

(೫) ಭಾಗ (೨)ರಲ್ಲಿ ಕಾಣಿಸಿದ ಕಾರ್ಯವನ್ನು ೧೯೨೫ನೇ ದಶಂಬರದ ವರೆಗೆ ಮುಂದರಿಸುವುದಕ್ಕೆ ಬರುವ ವರ್ಷದ ಬಜೇಟಿನಲ್ಲಿ ೪೫೦೦ ರೂಪಾಯಿಗಳನ್ನು ಹಾಕತಕ್ಕದ್ದು.

(೭) ಧಾರವಾಡ ಜಿಲ್ಲಾ ಕಮಿಟಿಯವರು ಪ್ರಾಂತಿಕ ಪರಿಷತ್ತನ್ನು ತಾವು ಮಾಡುವದಾಗುವುದಿಲ್ಲೆಂದು ಕಳುಹಿಸಿದ ಅವರ ಠರಾವನ್ನು ಪುನಃ ವಿಚಾರಮಾಡಿ ಪ್ರಾಂತಿಕ ಪರಿಷತ್ತನ್ನು ತಮ್ಮ ಜಿಲ್ಲೆಯಲ್ಲಿ ನೆರವೇರಿಸುವ ಕುರಿತು ಧಾರವಾಡ ಜಿಲ್ಲಾ ಕಾಂಗ್ರೆಸ ಕಮಿಟಿಯವರಿಗೆ ವಿನಂತಿಮಾಡಲಾಯಿತು.

(೮) ಶ್ರೀ. ಬಿ. ಶ್ರೀನಿವಾಸ ಐಯ್ಯಂಗಾರ, ಬೆಂಗಳೂರ ಇವರಿಂದ ಬರತಕ್ಕ ೬೦೦ ರೂ. ಸಾಲವನ್ನು ಕಾಯದೆಪ್ರಕಾರ ವಸೂಲು ಮಾಡುವದಕ್ಕೆ ಕಾರ್ಯದರ್ಶಿಯವರಿಗೆ ಅಧಿಕಾರಕೊಡಲಾಯಿತು.

(೯) ಮೈಸೂರು ಸ್ಟೇಟ ಕಾಂಗ್ರೆಸ ಕಮಿಟಿಯವರು ಸ್ವಾಗತ ಕಮಿಟಿಗೆ ಕೊಡತಕ್ಕ ಹಣವು ಎಷ್ಟಿರುತ್ತದೆಂಬದನ್ನು ಅಲ್ಲಿಯ ಲೆಖ್ಖಪುಸ್ತಕಗಳನ್ನು ತಪಾಸುಮಾಡಿ ಶ್ರೀ. ಕೆ. ಶಾಮಣ್ಣನವರ ಕಡೆಯಿಂದ ಆ ಹಣವನ್ನು ವಸೂಲುಮಾಡುವ ಕುರಿತು ಈ ಪ್ರಾಂತಿಕ ಕಮಿಟಿಯು ಶ್ರೀ. ಉಡುಪಿ ಗೋವಿಂದರಾಯರನ್ನು ನೇಮಿಸಿರುತ್ತದೆ. ಇವರು ಈ ವಿಷಯವಾಗಿ ಜುಲಾಯಿ ತಿಂಗಳ ಅಂತ್ಯದೊಳಗಾಗಿ ರಿಪೋರ್ಟ ಮಾಡತಕ್ಕದ್ದು.

(೧೦) ಮೈಸೂರ ಸ್ಟೇಟ ಕಾಂಗ್ರೆಸ ಕಮಿಟಿಗೂ ಕರ್ನಾಟಕ, ಪ್ರಾಂ. ಕಾಂ. ಕಮಿಟಿಗೂ ಇರತಕ್ಕ ಸಂಬಂಧವನ್ನು ಕುರಿತು ನಿಯಮಗಳನ್ನು ಮಾಡಲಿಕ್ಕೂ, ಅಲ್ಲಿಯ ಕಮಿಟಿಗಳನ್ನು ಸುಸಂಘಟಿತ ಮಾಡಲಿಕ್ಕೂ ಶ್ರೀ. ಶ್ರೀನಿವಾಸ ಕೌಜಲಗಿ, ಶ್ರೀ. ಕೃಷ್ಣರಾವ ಮುದವೇಡಕರ ಮತ್ತು ಶ್ರೀ. ಹಣಮಂತರಾವ ಮೋಹರೆ ಇವರನ್ನೂ ನೇಮಿಸಲಾಯಿತು. ಅವರು ಜುಲಾಯಿ (೧೯೨೫) ಅಂತ್ಯದೊಳಗಾಗಿ ತಮ್ಮ ಕೆಲಸದ ವರದಿಯನ್ನು ಸಾದರಪಡಿಸಬೇಕು.

(೧೧) ಧಾರವಾಡ ಜಿಲ್ಲಾ ಕಮಿಟಿಯವರು ತಾ. ೨೩-೨-'೨೫ ರಲ್ಲಿ ಬರೆದು ಕಳಿಸಿದ ಎರಡನೇ ಠರಾವಿನ ವಿಷಯದಲ್ಲಿ ಈ ಕಮಿಟಿಯು ನಿರ್ಣಯಿಸುವುದೇನೆಂದರೆ, ಕರ್ನಾಟಕದಲ್ಲಿಯ ರಾಜಕೀಯ ನಿಧಿಗಳ ವ್ಯವಸ್ಥೆಯ ವಿಷಯವಾಗಿ ಧಾರವಾಡ ಜಿಲ್ಲಾ ಕಮಿಟಿಯವರ ಠರಾವನ್ನು ನಮೂದಿಸಬೇಕು. ಮತ್ತು ಶ್ರೀ. ಗಂಗಾಧರರಾವ ದೇಶಪಾಂಡೆಯವರು ವಿಷದಪಡಿಸಿದ್ದನ್ನನುಲಕ್ಷಿಸಿ 'ಗಾಂಧಿ ಸೇವಾ ಸಂಘದ ನಿಧಿ'ಯನ್ನು ಹೊರ್ತುಪಡಿಸಿ, ಪ್ರಾಂತದಲ್ಲಿಯ ಉಳಿದ ರಾಜಕೀಯ ನಿಧಿಗಳ ವಿಷಯವಾಗಿ ಅಧ್ಯಕ್ಷರು ವಿಚಾರಮಾಡಿ ಮುಂದಿನ ಸಭೆಯ ಮುಂದೆ ವರದಿಯನ್ನಿಡತಕ್ಕದ್ದು.

(೧೨) ಈ ಕೆಳಗಿನ ಸದಸ್ಯರಿಂದೊಡಗೂಡಿದ ಪ್ರಾಂತಿಕ ಸ್ವಯಂಸೇವಕ ಬೋರ್ಡನ್ನು ಸ್ಥಾಪಿಸಲಾಯಿತು:—

೧ ಶ್ರೀಯುತರುಗಳಾದ ಕಾರ್ನಾಡ ಸದಾಶಿವರಾಯರು, ೨ ಕೌಜಲಗಿ ಹಣಮಂತರಾಯರು, ೩ ಕೆಂಭಾವಿ ಮಧ್ವರಾಯರು, ೪ ಕಬ್ಬೂರ ಮಧ್ವರಾಯರು, ೫ ಶೇವಡೆ ರಾಮರಾಯರು, ೬ ಡಾಕ್ಟರ ನಾ. ಸು. ಹರ್ಡೀಕರರು (ಕಾರ್ಯದರ್ಶಿ.)

(೧೩) ಪ್ರಾಂತಿಕ ಕಮಿಟಿಯ, ಖಾದೀ ಬೋರ್ಡಿನ ಮತ್ತು ಪ್ರಾಂತಿಕ ಕಮಿಟಿಯ ಅಧೀನದಲ್ಲಿರುವ ಎಲ್ಲ ಕಮಿಟಿಗಳ ಕೆಲಸದ ವಿಷಯಕ ಪ್ರತಿ ತಿಂಗಳ ವರದಿಯನ್ನೂ, ಲೆಖ್ಖದ ಜಮಾಖರ್ಚಿನ ಪಟ್ಟಿಯನ್ನೂ, ಪ್ರಾಂತಿಕ ಕಮಿಟಿಯ ಕಾರ್ಯಕಾರಿ ಮಂಡಲದ ಮರು ಸಭೆಯಲ್ಲಿಟ್ಟು ಇಡೀ ವರ್ಷದ ಕೆಲಸದ ವರದಿಯನ್ನೂ, ಲೆಕ್ಕದ ಪಟ್ಟಿಯನ್ನೂ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಮಹಾಸಭೆಯ ಮುಂದಿಡತಕ್ಕದ್ದು.

(೧೪) ಪ್ರಾಂತದಲ್ಲಿರುವ ಯಾವತ್ತು ಖಾದೀ ಅಂಗಡಿಗಳ ಲೆಕ್ಕಪತ್ರಗಳನ್ನು ಪರಿಶೋಧಿಸಿ ಆಡಿಟರರ ವರದಿಯೊಂದಿಗೆ ಆಯವ್ಯಯ ಮತ್ತು ಜಮಾಖರ್ಚಿನ ಪತ್ರಿಕೆಗಳೊಂದಿಗೆ ಪ್ರಾಂತಿಕ ಖಾದೀ ಬೋರ್ಡ ತನ್ನ ವರದಿಯನ್ನು ಮುಂದಿನ ಪ್ರಾಂತಿಕ ಕಮಿಟಿಯ ಸಭೆಯ ಮುಂದೆ ಸಾದರಪಡಿಸತಕ್ಕದ್ದು.

(೧೫) ನಮ್ಮ ಪ್ರಾಂತಿಕ ಖಾದೀ ಅಂಗಡಿಗಳ ಲೆಕ್ಕಗಳನ್ನು ತಪಾಸುಮಾಡುವದಕ್ಕಾಗಿ ಅಖಿಲ ಭಾರತ ಖಾದೀ ಮಂಡಲದವರು ಪರಪ್ರಾಂತದವರನ್ನು ನೇಮಿಸಿದ್ದು ಅವರಿಗೆ ಕನ್ನಡ ಭಾಷೆಯು ತಿಳಿಯುವುದಿಲ್ಲವಾದ್ದರಿಂದ ನಮ್ಮ ಪ್ರಾಂತದೊಳಗಿನ ಕೆಳಗೆ ಹೆಸರು ಕಾಣಿಸಿದ ಮೂವರಲ್ಲಿ ಒಬ್ಬರನ್ನು ನೇಮಿಸಬೇಕಾಗಿ ಅ. ಭಾ. ಖಾದೀ ಮಂಡಲಕ್ಕೆ ಈ ಕಮಿಟಿಯು ವಿನಂತಿ ಮಾಡುತ್ತದೆ.

ಹೆಸರುಗಳು:—

(೧) ಶ್ರೀ ಹಿರಿಯಡ್ಕ ನಾರಾಯಣರಾವ, ಉಡುಪಿ, (೨) ಸಿದ್ದುರಾವ, ಪೂಜಾರಿ, (೩) ಮಧ್ವರಾವ ಕಬ್ಬೂರ, ಧಾರವಾಡ.

(೧೬) ಕ. ಪ್ರಾ. ಕಾ. ಕಮಿಟಿಯ ಮೇಲೆ ಖಾಲಿ ಬಿದ್ದ ಸ್ಥಳಗಳಲ್ಲಿ ಶ್ರೀ ಹಣಮಂತರಾವ ಮೋಹರೆ, ವಿಜಾಪುರ ಮತ್ತು ಶ್ರೀ ಗುಳವಾಡಿ ಇವರನ್ನು ಆರಿಸಿದೆ.

ಬೆಳಗಾಂವಿ,
ತಾ. ೧೫—೫—'೨೫.

(ಸಹಿ) ಕಾರ್ನಾಡ ಸದಾಶಿವರಾವ,
ಅಧ್ಯಕ್ಷ, ಕ, ಪ್ರಾ, ಕಾ, ಕ.

ಪ್ರಕಟಣೆ.

ಮಂಗಳೂರು ತಾಲೂಕು ಕೋಟೆ ಮಠಸ್ಥ ಸರ್ವೇಜನರಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ—

ಮಂಗಳೂರು ತಾಲೂಕು ಕೋಟೆ ಮಠಸ್ಥಾಪನೆಗಳ ಕಮಿಟಿ ಮೆಂಬರ ಕೊಡಮಣ್ಣು ಸುಬ್ರಾಯರು ತಾರೀಕು 14—5—'25ರಲ್ಲು ಮೃತಪಟ್ಟಿರುವದರಿಂದ ಸದರಿ ಸ್ಥಾನವು ಖಾಲಿಯಿದೆ ಉಮೇದ್ವಾರರು ತಾರೀಕು 5—5—'25ರ ಒಳಗೆ ಮೇಗಣ ಆಫೀಸಿಗೆ ಅರ್ಜಿ ಬರಕೊಳ್ಳತಕ್ಕದ್ದು ಆ ಮೇಲೆ ಬರತಕ್ಕ ಅರ್ಜಿಗಳಿಗೆ ನಿಗಾ ಕೊಡಲ್ಪಡಲಾಗಲಾರದು.

ಬೊಕ್ಕಾಂ ಪೂರಲಿ,
ತಾ. 25—5—'25.

B. Parameshwaraya,
ಕಮಿಟಿ ಮೆಂಬರರ ಬಗ್ಗೆ.

ವಿದೇಶ ವರ್ತಮಾನ.

—೩೦೦ ಚೀನಾ ವಿದ್ಯಾರ್ಥಿಗಳು ಶಾಂಘಾಯಿ ಪಟ್ಟಣದ ರಾಜಬೀದಿಗಳಲ್ಲಿ ಅನ್ಯರಾಷ್ಟ್ರಗಳಿಗೆ ವಿರೋಧಿಸುವ ಹಸ್ತಪತ್ರಿಕೆಗಳನ್ನು ಹಂಚುತ್ತ ಮೆರವಣಿಗೆಯಿಂದ ಹೋಗುತ್ತಿದ್ದರು. ಪೋಲೀಸರು ಈ ಮೆರವಣಿಗೆಯನ್ನು ಬಿಟ್ಟು ಚದರಿಸಲು ಅವರಿಗೆ ಹುಕುಂ ಕೊಟ್ಟರು. ವಿದ್ಯಾರ್ಥಿಗಳು ಈ ಹುಕುಮನ್ನು ಮನ್ನಿಸಲಿಲ್ಲ. ಪೋಲೀಸರು ಮುಖ್ಯಸ್ಥರನ್ನು ಕೈದು ಮಾಡಲಾಗಿ ಉಳಿದ ವಿದ್ಯಾರ್ಥಿಗಳು ಪೋಲೀಸರ ಮೈಮೇಲೆ ಬಿದ್ದರು. ಆ ಪೋಲೀಸರು ಗುಂಡುಗಳನ್ನು ಹಾರಿಸಿದ್ದರಲ್ಲಿ ೬ ಜನರು ಮೃತರಾದರು. ಮತ್ತು ೪ ಜನರಿಗೆ ಗಾಯವಾಗಿದೆ.

—ಈ ಚೀನಾ ವಿದ್ಯಾರ್ಥಿಗಳು ಹಂಚಿದ ಹಸ್ತಪತ್ರಿಕೆಗಳಲ್ಲಿ ಬ್ರಿಟಿಷ, ಅಮೇರಿಕನ್, ಫ್ರೆಂಚ ಮತ್ತು ಜಪಾನಿಗಳ ಸಾಮ್ರಾಜ್ಯ ತೃಷ್ಣೆಯನ್ನು ನಿಷೇಧಿಸಿದೆ.

—ತ್ಸಿಂಟ್ಸಿನಾದ ಚೀನಾ ವಿದ್ಯಾರ್ಥಿಗಳು ಸಾವಿರಾರುಗಟ್ಲೆ ಒಟ್ಟಿಗೆ ಸೇರಿ ಸಭೆ ಮಾಡಿದರು. ಸಭೆಯಲ್ಲಿ ಪರದೇಶೀಯ ಬೇಂಕು ಮುಂತಾದವುಗಳನ್ನು ಬಹಿಷ್ಕರಿಸಬೇಕೆಂದು ಹಲವು ಠರಾವುಗಳನ್ನು ಪಾಸುಮಾಡಿದರು.

—ಯುವರಾಜರು ಆಫ್ರಿಕಾ ಖಂಡದಲ್ಲಿ ಪ್ರಯಾಣ ಬೆಳಸಿರುತ್ತಾರೆ. ಅವರಿಗೆ ಅಲ್ಲಿ ಅನೇಕ ಸಂಸ್ಥೆಗಳಿಂದ ಮಾನಪತ್ರಗಳು ದೊರಕುತ್ತಿವೆ.

—ವಿಮಾನದಲ್ಲಿ ೧೪೦ ಜನರನ್ನು ಕುಳ್ಳಿರಿಸಿಕೊಂಡು ೩೫೦೦ ಮೈಲುಗಳ ವರೆಗೆ ತಾಸಿಗೆ ೬೦ ಮೈಲಿನಂತೆ ಪ್ರಯಾಣಮಾಡಬಹುದೆಂದು ವಿಲಾಯತಿಯ ವೈಮಾನಿಕರು ಪ್ರಕಟಿಸಿದ್ದಾರೆ.

—ಗ್ಲಾಸಗೊ ಎಂಬ ಕಡೆಯಲ್ಲಿ ೮ ಹಿಂದಿ ಗೃಹಸ್ಥರು ಊಟಮಾಡುತ್ತಿರುವಾಗ ಒಂದು ಗುಂಪು ಬಂದು ಹಲ್ಲೆಮಾಡಿತು. ಈ ಹಲ್ಲೆಯಲ್ಲಿ ೪ ಜನರಿಗೆ ಅಸಹ್ಯವಾದ ಗಾಯವಾಗಿದೆ. ಒಂಬತ್ತು ಜನ ದಂಗೆಗಾರರನ್ನು ಕೈದುಮಾಡಿದೆ. ಅದರೆ ಅವರ ಪೈಕಿ ೬ ಜನರನ್ನು ಬಿಟ್ಟಿದೆ.

—ಗ್ವಾಲೇರಿನ ಮಹಾರಾಜರ ಮೇಲೆ ಪಾರಿಸಿನಲ್ಲಿ ಶಸ್ತ್ರಪ್ರಯೋಗವು (ಆಪರೇಶನು) ಮಾಡಲ್ಪಟ್ಟಿದೆ. ಈಗ ಅವರಿಗೆ ಕೊಂಚ ಗುಣವಾಗಹತ್ತಿದೆ.

—ಜಾಪಾನಿನಲ್ಲಿ ೧೯೨೩ರಲ್ಲಿ ಆದಂತೆ ಈ ವರ್ಷವೂ ದೊಡ್ಡ ಭೂಕಂಪದ ಪೆಟ್ಟುಗಳು ತಗಲಿ ಮತ್ತು ಅನೇಕ ಕಡೆಗಳಲ್ಲಿ ಬೆಂಕಿಯು ಹತ್ತಿ ಎಷ್ಟೋ ನಷ್ಟವುಂಟಾಗಿದೆ. ಈ ಸಂದರ್ಭದಲ್ಲಿ ಪ್ರಾಣಹಾನಿಯು ಎಷ್ಟಾಗಿದೆ ಎಂಬುದು ಇನ್ನೂ ಗೊತ್ತಾಗಿಲ್ಲ.

—ಜರ್ಮನಿನಲ್ಲಿ ಅಬೆಲ್‌ಕ್ರಿಮ್ ಎಂಬುವನ ಕೈಕೆಳಗೆ ಯುರೋಪಿಯನ್, ಇಂಡಿಯನ್, ಮತ್ತು ಟುನಿಶನ್ ದೇಶದ ಸೈನ್ಯದ ಮಾಹಿತಿಗಾರರಿದ್ದರೆಂಬ ಸುದ್ದಿಯು ಸತ್ಯವಾದ್ದೆಂದು ಫ್ರಾನ್ಸು ಹೇಳುತ್ತದೆ.

—ಬಾಲ್ಡ್ವಿನರು ವ್ಯಾಪಾರವನ್ನೂ, ಉದ್ಯೋಗವನ್ನೂ, ಹೆಚ್ಚಿಸುವಂತೆ ಗೇಯಿಸುವವರೂ ಗೇಯ್ಯುವವರೂ ಸಹಕಾರದಿಂದ ವರ್ತಿಸಬೇಕೆಂದು ಒಂದು ಸಭೆಯಲ್ಲಿ ವಿಜ್ಞಾಪಿಸಿಕೊಂಡರು.

—ಲಂಡನಿನ ಒಂದು ಬೋಟಿಯಲ್ಲಿ ಅಗ್ನಿಪ್ರಲಯವುಂಟಾಗಿ ಹತ್ತಿಯು ಸ್ವಲ್ಪಮಟ್ಟಿಗೆ ಸುಟ್ಟುಹೋಯಿತು. ಬೆಂಕಿಯು ಜಲಯಂತ್ರದ ಸಹಾಯದಿಂದ ನಂದಿಸಲ್ಪಟ್ಟಿತು.

—ಸಾಮ್ರಾಜ್ಯದೊಳಗಿನ ಹತ್ತಿ ಬೆಳವಣಿಗೆಯ ಸಂಸ್ಥೆಯು ಲಂಡನಿನಲ್ಲಿ ರಿಪೋರ್ಟನ್ನು ಪ್ರಕಟಿಸಿ ಬೇಕಾದಷ್ಟು ಹತ್ತಿಯನ್ನು ಬೆಳೆಸಬಹುದೆಂಬುದಾಗಿ ಹೇಳುತ್ತದೆ.

ಒಳದೇಶ ವರ್ತಮಾನ.

—ಮಹಾತ್ಮಾ ಗಾಂಧಿಗಳು ಬಂಗಾಲದಲ್ಲಿ ಸಂಚಾರ ಮಾಡಿ ಟಾಗೋರರವರ ಶಾಂತಿನಿಕೇತನದಲ್ಲಿ ವಿಶ್ರಾಂತಿಯನ್ನು ಪಡೆದು ಈಗ ಬಂಗಾಲದ ಉಳಿದ ಭಾಗದಲ್ಲಿ ಆಸಾಮಿನಲ್ಲಿ ಪುನಃ ಸಂಚಾರಮಾಡಹತ್ತಿದ್ದಾರೆ.

—ಎಂಗ್ಲೋ ಇಂಡಿಯನರ ಪ್ರಮುಖರಾದ ಡಾ. ಮೊರೆನೊ ಇವರು ಮಹಾತ್ಮಾಜಿಗಳ ಎರಡನೆಯ ಸಾರಿ ಭೇಟಿಯನ್ನು ಪಡಕೊಂಡಿರುವರು. ಈ ಭೇಟಿಯಲ್ಲಿ ಗಾಂಧಿಜಿಗಳು ಚರಕದಿಂದಲೆ ಎಂಗ್ಲೋ ಇಂಡಿಯನರ ಭವಿಷ್ಯಕಾಲದ ಉನ್ನತಿಯಾದೀತೆಂದು ಸ್ಪಷ್ಟ ಹೇಳಿದರು.

—ಅಲವಾರ ಸಂಸ್ಥಾನದಲ್ಲಿ ಕೆಲವರು ಗಲಾಟೆಯನ್ನು ಎಬ್ಬಿಸಿ ಅಶಾಂತಿಯನ್ನುಂಟುಮಾಡಿರುವರು. ಅಲವಾರ ಸಂಸ್ಥಾನದಲ್ಲಿ ಜಮೀನ ಸೆಟ್ಲಮೆಂಟಿನ ಕುರಿತು ಈಚೆಗೆ ಕೆಲವು ಕಾನೂನುಗಳಾಗಿದ್ದವು. ಇವು ಕೆಲವು ಜಮೀನುದಾರರಿಗೆ ಬಾಧಕವಾಗಿದ್ದವು. ಅದರಿಂದ ಗಲಾಟೆಯು ಪ್ರಾರಂಭವಾಯಿತು.

—ಈ ಗಲಾಟೆಯಲ್ಲಿ ಬೆಂಕಿಯು ಕೊಡಲ್ಪಟ್ಟ ವಾರ್ತೆಯು ಬಂದು ಸಂಸ್ಥಾನದಿಂದ ಸೈನ್ಯವು ಕಳುಹಿಸೋಣಾಗಿ ಅನಂತರ ಈ ಪ್ರಕರಣವು ಇನ್ನಷ್ಟು ವಿಶೇಷವಾಯಿತು. ಸೈನ್ಯವು ಅನೇಕರನ್ನು ಕೈದುಮಾಡಿದೆ. ಮತ್ತು ವಿಚಾರಣೆಯು ನಡೆದಿದೆ.

—ವಾಯುವ್ಯ ಪ್ರಾಂತದ ರೈಲಿನ ನೌಕರರಲ್ಲಿ ಉಂಟಾದ ಮುಷ್ಕರವು ಇನ್ನೂ ಹಾಗೆಯೇ ಇದೆ. ನೇಮಿಸಲ್ಪಟ್ಟ ಹೊಸ ನೌಕರರು ಕೂಡ ಕೈಬಾಚಿದರೆಂದು ವಾರ್ತೆಯು ಕೇಳಿಸುತ್ತದೆ.

—ಮುಂಬಯಿಯಲ್ಲಿ ಒಂದು ಗುಜರಾಥಿ ಪತ್ರಿಕೆಯ ಸಂಪಾದಕರ ಮೇಲೆ ಮಾನನಷ್ಟದ ಮೊಕದ್ದಮೆ ನಡೆದು ತಪ್ಪು ಸ್ಥಾಪಿತವಾಗಿ ೩೦ ರೂಪಾಯಿಯ ದಂಡವು ವಿಧಿಸೋಣಾಯಿತು.

—ಬಂಗಾಲದಲ್ಲಿ ಮಹಮ್ಮದೀಯ ಸರಕಾರಿ ನೌಕರರಿಗೆ ಶುಕ್ರವಾರ ಮಧ್ಯಾಹ್ನ ಮಸೀದಿಯ ಪ್ರಾರ್ಥನೆಗೋಸ್ಕರ ಕೆಲವು ಸಮಯ ರಜೆಯನ್ನು ಅಲ್ಲಿಯ ಸರಕಾರವು ವಿಧಿಸಿದೆ.

—ಸಕ್ಕರ ಬರೇಜಿನ ಕೆಲಸದ ಮೇಲಿರತಕ್ಕ ಇಂಜಿನಿಯರ ಮಿ| ಮೂರ ಎಂಬವರು ಊಳಿಗದವರ ಮೇಲೆ ಗುಂಡುಹಾರಿಸಿದರು. ಅವರನ್ನು ಕೈದುಮಾಡಿ ವಿಚಾರಣೆಯು ನಡೆದಿದೆ.

—ಮಿ| ಶಾಸ್ತ್ರಿಯವರು ವಿಲಾಯತಿಗೆ ಹೊರಟಿರುವರು.

—ಕಾಶ್ಮೀರ ಮತ್ತು ಪಂಜಾಬ ಪ್ರಾಂತದಲ್ಲಿ ಭಯಂಕರವಾದ ಕಾಲರಾರೋಗವು ಪ್ರಾರಂಭವಾಗಿರುವದು.

—[illegible] ಮಹಮ್ಮದೀಯರು [illegible] ಸಂಸ್ಥಾನದಲ್ಲಿ [illegible] ದೊಡ್ಡ ಸಭೆಯು ಸೇರಿ [illegible].

—ಅದೇ ಮೇರೆಗೆ [illegible] ಪ್ರಜೆಗಳ ಸಭೆ ಸೇರಿ [illegible] ಪ್ರಕಟವಾಯ್ತು.

—ದಕ್ಷಿಣದ ದೇಶೀಯ ಸಂಸ್ಥಾನಗಳ ಪ್ರಜೆಗಳು ಪೂನೆಯಲ್ಲಿ ಸೇರಿ, ತಮ್ಮ ಅಧಿಕಾರ ಅಡಕಿತದ ವಿಚಾರದಲ್ಲಿ ನಾನಾ ನಿರ್ಧಾರಗಳನ್ನು ಮಾಡಿಕೊಂಡರು. ದೇಶೀಯ-ರಾಜ್ಯಗಳ ಪ್ರಜೆಗಳು ತಮ್ಮಲ್ಲಿಯೇ ಇಂಥ ಪರಿಷತ್ತುಗಳನ್ನು ಸೇರಿಸಬಾರದೆಂದಿದೆಯೆ? ಬ್ರಿಟಿಷ ರಾಜ್ಯದಲ್ಲಿ ಬಂದು ಈ ಸಭೆಗಳೇಕೆ ನಡೆವುವು? ಸುಬೋಧವಿಷ್ಟರಾಗಿರುವ ದೇಶೀಯ ರಾಜರು ಈ 'ರಗಳೆ'ಗಳಿಗೆ ಎಡೆಕೊಡುವುದಿಲ್ಲವೆ? ಮಾತಿಗೂ ಬರಹಕ್ಕೂ ಅಲ್ಲಿ ತಡೆ ಇದೆಯೆ.? ಗವರ್ನರರೇ ಮೊದಲಾದವರು ಈ ಸಂಸ್ಥಾನಗಳಲ್ಲಿ ಸಂಚಾರಕ್ಕೆ ಬಂದರೆ ಪ್ರಜೆಗಳು ತಿಳಿಬೇಕಾದ ಹೆಚ್ಚಿಗೆ ನಷ್ಟದ ಕುರಿತು ವಿಮೋಚನೆ ಪ್ರಾರ್ಥಿಸಿ ಇವರು ಠರಾವನ್ನೂ ಬರೆದಿರುವರು. ಎರಡೂ ಬೆಂಕಿಗಳ ಮಧ್ಯೆ ಇವರ ಈ ಠರಾವು ಎಂಥ ದೆವ್ವಗಳನ್ನು ಎಬ್ಬಿಸುವುದೋ!

—ದೇಶೀ ಗಿರಣೀ ಬಟ್ಟೆಗಳು ಕೋಟಿ ಸಂಖ್ಯೆಯಲ್ಲಿ ಮುಂಬಾಯಿಯಲ್ಲಿ ದಾಸ್ತಾನು ಇರುವ ಕಾರಣ, ಇನ್ನು ನಾಲ್ಕು ತಿಂಗಳ ತನಕ ವಿಲಾಯತಿ ಬಟ್ಟೆಗಳನ್ನು ಮುಂಬಾಯಿಗೆ ತರಲಾಗದೆಂತೆ ಮಾರ್ವಾಡಿಗಳು ನಿರ್ಧಾರಮಾಡಿದರು. ಕಲ್ಕತ್ತದಲ್ಲೂ ಇಂಥದೊಂದು ಠರಾವು ಆಗಿದೆ.

—ಬಂಗಲಕ್ಷ್ಮೀ ಗಿರಣಿಯ ಬಟ್ಟೆಗಳು ಮೆಂಚೆಸ್ಟರು ಗಿರಣಿಗಳ ಬಟ್ಟೆಗಳಿಗಿಂತ ಅಗ್ಗವಾಗಿವೆ. ಊರಿನ ಅರಿವೆ ಅಗ್ಗವಾದರೂ ನಮಗೆ ಬೇಡವೇ?

—ಕಾಂಗ್ರೆಸಿನ ಕಾರ್ಯಕಾರೀ ಮಂಡಲವು ಕಲ್ಕತ್ತದಲ್ಲಿ ಮೇ ೨೮ಕ್ಕೆ ಸೇರಿತು. ಡಾ| ಬೆಸೆಂಟಮ್ಮನವರೂ ಅಲ್ಲಿಗೆ ಬಂದಿದ್ದು, ತಮ್ಮ ಕೋಮನ್‌ವೆಲ್ತ ಬಿಲ್ಲನ್ನು ಚರ್ಚಿಸುವರು. ಕೋರಂ ಇಲ್ಲದ್ದರಿಂದ ಸಭೆಯಾಗಲಿಲ್ಲ!

ದಕ್ಷಿಣ ಕನ್ನಡ.

ಬೋಳೂರು:— ದ್ರಾವಿಡ ಬ್ರಾಹ್ಮಣ ಯುವಕರ ಸಂಘದ ದ್ವಿತೀಯ ವಾರ್ಷಿಕೋತ್ಸವವು ಇದೇ ಕಳೆದ ಮೇ ತಾರೀಕು ೩೧ನೇ ಆದಿತ್ಯವಾರ ದಿನ ಬೋಳೂರು ಪಟೇಲರಾದ ಮ| ರಾ| ರಾಮಚಂದ್ರಯ್ಯನವರ ಮನೆಯಲ್ಲಿ ಬ್ರಹ್ಮ ಶ್ರೀ ಓಡ್ಲಮನೆ ಆತ್ಮಾರಾಮ ಶಾಸ್ತ್ರಿ ವಿದ್ಯಾವಾಚಸ್ಪತಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಗ್ರಾಮದ ಮುಖಂಡ ಗೃಹಸ್ಥರೂ, ಸಂಘದ ಹಿತಚಿಂತಕರೂ ಸಭೆಗೆ ಚಿತ್ತಯಿಸಿದ್ದರು. ಭಗವತ್ಪ್ರಾರ್ಥನೆಯನ್ನು ಸಂಸ್ಕೃತದಲ್ಲಿಯೂ ಸ್ವಾಗತ ಪದವನ್ನು ಚೆಲೋ ಕನ್ನಡ ನುಡಿಯಲ್ಲೂ ಹಾಡಿದ ಬಳಿಕ ಅಧ್ಯಕ್ಷ ಮಹಾಶಯರು ತಮ್ಮ ಆಸನವನ್ನು ಸ್ವೀಕರಿಸಿದರು. ಬಳಿಕ ಸಭೆಯ ಕಾರ್ಯದರ್ಶಿಯವರಾದ ಮ| ರಾ| ಕೃಷ್ಣರಾಯರು ಸಭೆಯ ವರದಿಯನ್ನು ಓದಿದ ಬಳಿಕ ಶ್ರೀಯುತ ಯಸ್. ರಂಗಯ್ಯನವರು "ನಮ್ಮ ಧರ್ಮ ಮತ್ತು ಯುವಕರ ಕರ್ತವ್ಯ" ಇದರ ವಿಷಯವೂ ಶ್ರೀಯುತ ಶಂಕರ ನಾರಾಯಣಪ್ಪಯ್ಯ ಪಾವತಿಮಾರು,ರವರು, ಸಂಘದಧ್ಯೇಯ ಮತ್ತು ಕರ್ತವ್ಯ ಸಾಧನೆ''ಯ ವಿಷಯವೂ ಚೆಲೋ ಭಾಷಣವನ್ನು ಗೈದರು. ಬಳಿಕ ಅಧ್ಯಕ್ಷರು ರಸಭರಿತವಾದ ಶೈಲಿಯಿಂದ ಅರ್ಥಪೂರ್ಣವಾದ ಭಾಷಣವನ್ನು ಗೈದ ಬಳಿಕ ಕಳೆದ ಎರಡು ವರ್ಷಗಳಿಂದ ಕಾರ್ಯಕಾರಿ ಸಭೆಯವರಾಗಿದ್ದ ಮಹಾಶಯರ ಅಭಿನಂದನೆಯನ್ನು ಮಾಡಿದ ಬಳಿಕ ಈ ಕೆಳಗಿನವರು ಬಹುಮತದಿಂದ ಕಾರ್ಯಕಾರಿ ಸಭೆಯ ಮೆಂಬರರಾಗಿ ಚುನಾಯಿಸಲ್ಪಟ್ಟರು. ಮ| ರಾ| ಬಿ. ಕೃಷ್ಣಯ್ಯನವರು ಅಧ್ಯಕ್ಷರಾಗಿಯೂ, ಮ| ರಾ| ಪಿ. ಅನಂತಪದ್ಮನಾಭಯ್ಯನವರು ಕಾರ್ಯದರ್ಶಿಯವರಾಗಿಯೂ, ಮ| ರಾ| ರಾ| ಬಿ. ಕೃಷ್ಣರಾವ್, ಬಿ. ಪಿ. ವೆಂಕಟ್ರಾವ್, ಬಿ. ಪದ್ಮನಾಭಯ್ಯ, ಟಿ. ದಾಸಪ್ಪಯ್ಯ ಇವರು ಮೆಂಬರರಾಗಿಯೂ ಚುನಾಯಿಸಲ್ಪಟ್ಟರು. ಬಳಿಕ ಮ| ರಾ| ತಲ್ಪಾಡಿ ಲಕ್ಷ್ಮೀನಾರಾಯಣರು ಶ್ರೀ ಸಮರ್ಥ ರಾಮದಾಸರ ಕುರಿತು ಸುಮಾರು ೨ ತಾಸಿನ ವರೆಗೆ ಹರಿಕಥಾ ಕಾಲಕ್ಷೇಪವನ್ನು ಗೈದು ಸಭಿಕರನ್ನು ಆನಂದಗೊಳಿಸಿದರು. ಇದು ಇವರ ಪ್ರಥಮ ಪ್ರಯತ್ನವಾಗಿದ್ದರೂ ರಸಭರಿತವಾಗಿಯೂ, ಸುಶ್ರಾವ್ಯವಾಗಿಯೂ ಇದ್ದು ಧರ್ಮಬೋಧಕವಾಗಿಯೂ ಇತ್ತು. ಆ ಮೇಲೆ ಫಲಹಾರಪಾನ್ಸುಪಾರಿಗಳಾದ ಬಳಿಕ ಸಭೆಯು ಮುಕ್ತಾಯವಾಯಿತು.

ಕಾಸರಗೋಡು:— ನಮ್ಮ ಊರಲ್ಲಿ ಕ್ಷೌರಿಕರ ಖೂನಿಗಳು ಅತ್ಯಾಧಿಕವಾಗಿವೆ. ಈ ಮುಂಚೆ ಸ್ವಲ್ಪ ಸಮಯದ ಹಿಂದೆ, ಕ್ಷೌರಿಕ ರಾಮನನ್ನು ಯಾರೋ ಚೂರಿಯಿಂದ ತಿವಿದು ಕೊಂದರು. ಮೊನ್ನೆ ೨ ಯಾ ೩ ದಿನಗಳ ಹಿಂದೆ ಕ್ಷೌರಿಕ ಅಪ್ಪು ಎಂಬವನನ್ನು ಯಾರೋ ಕೊಂದು ಅಡ್ಕತ್ತಬೈಲ್ ಗ್ರಾಮದ ಒಂದು ಬಾವಿಯಲ್ಲಿ ಹಾಕಿದ್ದಾರಂತೆ. ಸದರಿ ಹೆಣವನ್ನು ನಿನ್ನೆ ದಿನ ಇಲ್ಲಿ ಪೋಲೀಸ ಕಸ್ಟಡಿಯಲ್ಲಿ ತೆಗಿಸಿರುತ್ತಾರೆ. ಇದೇನು ಸೋಜಿಗ! ಕ್ಷೌರಿಕರ ಸಂಖ್ಯೆಯು ದಿನೇ ದಿನೇ ಕಡಿಮೆಯಾಗುತ್ತಾ ಬಂತಲ್ಲಾ. ಇದೆಲ್ಲಾ ಸುರಾದೇವಿಯ ಪ್ರತಾಪದಿಂದ ಉಂಟಾಗುವದೆಂತ ಜನರು ಆಡಿಕೊಳ್ಳುತ್ತಾರೆ. ಅದರೂ, ಸುರಾದೇವಿಯನ್ನು ಭಜಿಸುವವರ ಮಾತ್ರ ದಿನೇ ದಿನೇ ವೃದ್ಧಿಯಾಗುವುದರ ಕಾರಣವು ಗೊತ್ತಾಗುವುದಿಲ್ಲ. ಹೇಗೆ ಸುರಾದೇವಿಯ ಪ್ರತಾಪದಿಂದ ಕಂಟಕಗಳೂ ಅಪಮೃತ್ಯು ಮರಣಗಳೂ ಉಂಟಾಗುತ್ತವೋ, ಹಾಗೆಯೇ ಸುರಾದೇವಿಯ ಉಪಾಸಕರ ಸಂಖ್ಯೆಯು ವೃದ್ಧಿಯಾಗುತ್ತಿದೆ. ಇದರ ಕಾರಣವನ್ನು ಊಹಿಸಲು ಕೂಡಾ ಸಾಧ್ಯವಿಲ್ಲ.

ತಾ. ೨೮ರಿಂದ ನಿನ್ನೆಯ ವರೆಗೆ ಚೆನ್ನಾಗಿ ಮಳೆ ಬಂದು, ಊರ ಬಾವಿ, ಕೆರೆ, ತೋಡುಗಳು ತುಂಬಿರುತ್ತವೆ. ಬೇಸಾಯಕ್ಕೆ ಬೇಕಾಗುವಷ್ಟು ನೀರು ದೊರಕಿರುವುದರಿಂದ, ಕೃಷಿಯ ಕೆಲಸವು ಜಾಗ್ರತೆಯಾಗಿ ನಡಿಯುತ್ತಿದೆ. ಈ ದಿನ ಮಾತ್ರ ಮಳೆಯ ಸುಳಿವೇ ಇಲ್ಲದಂತಾಗಿ, ಬೇಸಗೆಯಲ್ಲಿ ಬರುವ ನಮೂನೆಯ ಬಿಸಿಲು ಬಿದ್ದಿರುತ್ತದೆ.

ಇಲ್ಲಿಯ ಕೆ. ಯಿ. ಯಮ್. ಸೆಕೆಂಡರಿ ಶಾಲೆಯು ಇದೇ ತಾ. ೧೫ಕ್ಕೆ ತೆರೆಯೋಣಾಗಿರುತ್ತದೆ. ಬೋರ್ಡ ಹೈಸ್ಕೂಲು ತಾ. ೮ಕ್ಕೆ ತೆರೆಯೋಣಾಗುತ್ತದಂತೆ. ಸೆಕೆಯ ರಜೆಯಲ್ಲಿ ಮುಳುಫ್ ಆದ ಮುನ್ಸೀಫ ಕೋರ್ಟು ಇದೇ ತಾ. ೧ಕ್ಕೆ ಪುನಃ ತೆರೆಯೋಣಾಯಿತು.

ಕೆಲದಿನಗಳ ಹಿಂದೆ, ಅಕ್ಕಿ ವ ಭತ್ತದ ಕ್ರಯವು ಕೊಂಚಮಟ್ಟಿಗೆ ಏರಿರುತ್ತದೆ. ಆದರೆ ಇವುಗಳು ಹೆಚ್ಚಾಗಿ ರಫ್ತಾಗದೆ ಇರುವದರಿಂದಲೂ ಮಲಬಾರದಲ್ಲಿ ಹೆಚ್ಚು ಅಕ್ಕಿ ವ ಭತ್ತ ಇರುವದಾಗಿ ತಿಳಿದು ಬರುವುದರಿಂದಲೂ ಇನ್ನೂ ಕ್ರಯ ಕಡಿಮೆಯಾಗುವದೆಂಬ ಭರವಸೆ ಇದೆ. ಮೆಣಸಿನ ಕ್ರಯವೂ ವಿಪರೀತವಾಗಿ ಏರಿದೆ. ಇದರ ಕಾರಣವು ಗೊತ್ತಾಗುವುದಿಲ್ಲ. ಬೆಲ್ಲಕ್ಕಂತೂ ಈಗಲೆ ಮಣಕ್ಕೆ ೬೫ ರೂಪಾಯಿ ಹೇಳುತ್ತಾರೆ.

ರಾ| ಸುಂದರರಾಮರಾಯರು ತಾಲೂಕು ಬೋರ್ಡು ಚಾರ್ಜು ವಹಿಸಿದ ತರುವಾಯ ತಾಲೂಕು ಬೋರ್ಡಿನ ಎಲ್ಲಾ ಕಾರ್ಯಗಳು ಸರಾಗವಾಗಿ ನಡೆಯುತ್ತವೆ. ಊರೊಳಗಿನ ಹೆಚ್ಚಿನ ಮಾರ್ಗಗಳ ದುರುಸ್ತಿ ಕೆಲಸವು ಹೆಚ್ಚಿನ ಜಾಗ್ರತೆಯಿಂದ ನಡಿಯುತ್ತದೆ. ಈಗಾಗಲೆ ಒಂದೆರಡು ಮಾರ್ಗಗಳು ದುರುಸ್ತಿಯಾದವು. ಇದೇ ರೀತಿ ಮಾನ್ಯ ಪ್ರೆಸಿಡೆಂಟರವರು ಲೋಕಲ್ ಫಂಡ ಲಾಟೀನುಗಳನ್ನೂ ಬೇಕಾದಲ್ಲಿ ಹೆಚ್ಚಿಸಿ ಮಾರ್ಗಗಳಲ್ಲಿ ಕತ್ತಲೆಯಾಗದಂತೆ, ಮಾಡಿಸಿದರೆ ಬಡಬಗ್ಗರಿಗೆ ಬಹಳ ಉಪಕಾರವಾಗುತ್ತಿತ್ತು. ಟೌನ್‌ಗಡಿಯೊಳಗೆನೇ ಅನೇಕ ಕಡೆಗಳಲ್ಲಿ ಲಾಟೀನುಗಳು ಅಗತ್ಯವಾಗಿ ಬೇಕಾಗಿರುವವು. ಮಾನ್ಯ ಪ್ರೆಸಿಡೆಂಟರು ಖುದ್ದು ತನ್ನಿಯಿಂದ ಬೇಕಾದಲ್ಲಿ ಲಾಟೀನುಗಳನ್ನು ಇಡಿಸುವರೆ ಹುಕುಂ ಕೊಡುವರಾಗಿ ಕೋರಿಕೆ.

ಪುತ್ತೂರು:— ಇಲ್ಲಿಯ ಪಂಚಾಯತಿ ಕೋರ್ಟಿನ ತಗೆದ ಹಾಕಿದ ವ ರಾಜಿಕೊಟ್ಟ ಮೆಂಬರರ ಬದಲಿಗೆ ಹೊಸ ಮೆಂಬರರನ್ನು ಆರಿಸುವ ಚುನಾವಣೆಯು ಇಲ್ಲಿಯ ತಾಲೂಕು ತಹಶೀಲದಾರರವರಿಂದ ಇದೇ ಕಳೆದ ಮೇ ತಾ. ೨೯ರಲ್ಲು ಇಲ್ಲಿಯ ಪಂಚಾಯತ ಕೋರ್ಟಿನಲ್ಲಿ ನಡೆದು ಮ| ರಾ| ರಾ| ಕಬ್ಬ ಗ್ರಾಮದ ತುಂಗ ಸುಬ್ರಾಯ್, ಚಿಕ್ಕಮುದ್ನೂರು ಗ್ರಾಮದ ಶಿದ್ಯಾಳ (ಬೆಳ್ಳಿಪಾಡಿ) ನರ್ಸಿಂಗ ರೈ (ಹೊನರರಿ ಮೆಜಿಸ್ಟ್ರೇಟ್); ವಕೀಲ ಹೊಸದುರ್ಗ ಗಣಪತಿರಾವ್, ಇವರು ಮುಂಚೆ ಮೆಂಬರಿಕೆಗೆ ರಾಜಿ ಕೊಟ್ಟಿರುವರು). ಮತ್ತು ಬಪ್ಪಳಿಗೆ ಸೀತಾರಾಮಯ್ಯ (ಸಂಘದ ಆಫೀಸು ಕ್ಲಾರ್ಕ್) ಇವರು ಆರಿಸಲ್ಪಟ್ಟಿರುವರು. ಆರಿಯಪ್ಪು ಗ್ರಾಮದ ನಾರಾಯಣ ನ್ಯಾಕರನ್ನು ಚುನಾಯಿಸಿದರಿಂದ ಶಿದ್ಯಾಳ ನರ್ಸಿಂಗ ರೈಗಳ ಸಮ್ಮಂದ ವ ನಾರಾಯಣ ನ್ಯಾಕರಮಧ್ಯ ವಿವಾದ ಕುರಿತು ಸೋತ್ತಿ ತೆಗದಲ್ಲಿ ವೋಟು ನರ್ಸಿಂಗ ರೈಗಳಿಗೆ ಬಂತು.

ಇಲ್ಲಿಯ ರೋಮನ ಕಥೋಲಿಕ್ ಗುರುಗಳಾದ ರೆವೆರೆಂಡ್‌ಫಾದರ ರೊಡ್ರಿಗ್ಸರು ಒಂದು ಕಥೋಲಿಕ ಶಾಲೆಯನ್ನು ಕಳೆದ ವರ್ಷ ಆರಂಭಿಸಿದ್ದರು. ಈ ವರುಷ ಹೊಸ ಶಾಲೆಯ ಕಟ್ಟೋಣವನ್ನು ರೂಪಾ ೨೫೦೦ರ ವರೆಗೆ ಖರ್ಚ ಮಾಡಿ ಪುತ್ತೂರು ಕಸಬಾ ದರ್ಬೆ ಟೋಲ್‌ಗೇಟಿನಿಂದ ಒಂದು ಫರ್ಲಾಂಗಿನ ಒಳಗೆ ಕಟ್ಟಿಸಿ ಇದೇ ತಾ. ೧೮ರಲ್ಲು ಅದರ ಪ್ರವೇಶವಾಯಿತು. ಈ ಸಮಾರಂಭಕ್ಕೆ ಬೆಂದೂರು ಇಗರ್ಜಿಗಳ ರೆವೆರೆಂಡಫಾದರ ಮಸ್ಕರೇನ್ಹಾಸರು ಮತ್ತು ಬರೆಮಾರ ರೆವೆರೆಂಡಫಾದರ ಕುವೇಲರು ಬಂದಿದ್ದರು. ಫಾದರ ಪುಡ್ತಾದರು ಹಾಜರು ಇದ್ದರು. ಗೃಹಪ್ರವೇಶದ ಸೆರೆಮನಿಗಳು ಬರೆಮಾರ ಗುರುಗಳಿಂದ ನಡಿಸಲ್ಪಟ್ಟಿತು. ಅನಂತರ ಹುಡುಗರ ನಾಟಕ ಮುಂತಾದುವು ಆದ ನಂತರ ಬೆಂದೂರು ಇಗರ್ಜ ಗುರುಗಳ ಭಾಷಣವಾಗಿ ಸಭೆ ಮುಕ್ತಾಯವಾಗಿ ಹುಡುಗರಿಗೆ ಬಾಳೆಹಣ್ಣು ಮತ್ತು ಬಿಸ್ಕುಟುಗಳು ಹಂಚಲ್ಪಟ್ಟು ಮಕ್ಕಳನ್ನು ಆನಂದಗೊಳಿಸಿದರು. ಈ ಶಾಲೆಯಲ್ಲಿ ಕಲಿಸ್ಸವರೆ ಮೂರು ಜನ ಸಿಸ್ಟರ್ಸುಗಳು ಬಂದಿರುವರು.

ಉಪ್ಪಿನಂಗಡಿ ತಾಲೂಕು ಹಳೆ ನೇರಂಕಿ ಗ್ರಾಮದ ಬಲ್ಲ ಚೆನ್ನ ಎಂಬವನು ದಾಖಲು ಹಾಕದೆ ಇರುವ ತನ್ನ ೨ ಮಕ್ಕಳನ್ನು ವೆಕ್ಸಿನೇಟರರು ಕೊಟ್ಟ ನೋಟೀಸಿನ ಮೇರೆಗೆ ದಾಖಲು ಹಾಕದೆ ಇದ್ದುದರಿಂದಲೂ ವ ಆ ಕುರಿತು ತಕ್ಕ ಉದಾಹರಣೆಯನ್ನು ಕೊಡಲಿಕ್ಕೆ ತಪ್ಪಿದುದರಿಂದಲೂ ಉಪ್ಪಿನಂಗಡಿ ರೇಂಜ್ ವೆಕ್ಸಿನೇಟರ್ ಮ| ರಾ| ಕೆ. ಪಾಂಡುರಂಗ ಶ್ಯಾನುಭಾಗರು ಸದರಿ ಚೆನ್ನನ ಮೇಲೆ ಲೋಕಲ್ ಬೋರ್ಡ ಎಕ್ಟಿನ ೧೩೬ ವ ೨೦೦ನೇ ಸೆಕ್ಷನ್ ಮೇರೆಗೆ ಪುತ್ತೂರು ಸಬ್ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ನಡಿಸಿದ ಕ್ರಿಮಿನಲ್ ವ್ಯವಹರಣೆಯಲ್ಲಿ ಸದರಿ ಮುದ್ದೆಯಾಲಿ ಚೆನ್ನನಿಗೆ ೧೦ ರೂಪಾಯಿಗಳ ಜುರುಮಾನೆಯೂ ಇದನ್ನು ತೆರಲಿಕ್ಕೆ ತಪ್ಪಿದರೆ ೧೫ ದಿವಸಗಳ ಸಾಜಾ ಸಜೆ ವಿಧಿಸಲ್ಪಟ್ಟಿದ್ದುದಲ್ಲದೆ ಮುದ್ದೈಗೆ ಸದರಿ ವ್ಯವಹರಣೆಯಲ್ಲಿ ಉಂಟಾದ ಖರ್ಚನ್ನು ಮುದ್ದೆಯಾಲಿಯು ತೆರಬೇಕೆಂತ ತಾರೀಕು ೩೦—೫—'೨೫ರಲ್ಲು ವಿಧಿಸಲ್ಪಟ್ಟಿತು. ಮುದ್ದೆಯಾಲಿ ಕಡೆಯಿಂದ ವಕೀಲ್ ಮ| ರಾ| ರಾ| ಬಿ. ಅಚ್ಯುತ ಬಾಳಿಗ ಬಿ. ಎ., ಬಿ. ಎಲ್‌ರವರೂ ಮುದ್ದೈ ಕಡೆಯಿಂದ ಮುದ್ದೈ ಸದರಿ ಮ| ರಾ| ಕೆ. ಪಾಂಡುರಂಗ ಶ್ಯಾನುಭಾಗರು ಸ್ವತಃ ವ್ಯವಹರಿಸಿದರು.

ಆದುದರಿಂದ ಇನ್ನು ಮುಂದೆ ದಾಖಿನ ನೋಟೀಸು ಬಂದೊಡನೆಯೇ ಮಕ್ಕಳ ತಂದೆ ತಾಯಿಗಳು ಯಾ ರಕ್ಷಕರು ಸದರಿ ನೋಟೀಸಿನ ಮೇರೆಗೆ ವರ್ತಿಸುವುದು ಉಚಿತವಾಗಿರುತ್ತದೆ. ಆದರೆ ವಿನಾಕಾರಣವಾಗಿ ನೋಟೀಸುಗಳನ್ನು ಉಲ್ಲಂಘಿಸಿ ವರ್ತಿಸುವುದರಿಂದ ಆ ಕುರಿತು ಉಂಟಾಗುವ ಅನೇಕ ನಷ್ಟ ಕಷ್ಟಗಳಿಗೆ ಗುರಿಯಾಗುವುದಲ್ಲದೆ ಬೇರೇನೂ ಪ್ರಯೋಜನವಿಲ್ಲ.

ಸಂಪಾಜೆ:— ಅಜ್ಜಾವರ ಗ್ರಾಮದ ಕಡ್ಲಪಾಡಿಯಲ್ಲಿರುವ ಪಟೇಲ ಹುಲಿ ಚಿನ್ನಪ್ಪ ಗೌಡರಲ್ಲಿ ತಾ. ೩೦-೫-೨೫ನೇ ಶನಿವಾರ ಹಗಲು ಘಂಟೆ ೨ಕ್ಕೆ ಗೌಡರ ವಿದ್ಯಾವರ್ಧಕ ಸಂಘದ ಆಡಳಿತ ಸಭೆಯನ್ನು ಜರಗಿಸಬೇಕಾಗಿ ನಿರ್ಣಯಿಸಿ ಆಮಂತ್ರಣಪತ್ರಗಳನ್ನು ಆಡಳಿತಮಂಡಲಿಯವರಿಗೆ ಕಳುಹಿಸಿದ್ದಾಗ್ಯೂ, ಕೋರಮ್ ಆಗುವಷ್ಟು ಆಡಳಿತ ಮೆಂಬರರು ಬಾರದ್ದರಿಂದ ಸಭೆ ಜರಗಿಸಲು ಆಗದಿರುವುದು ವಿಷಾದಕರ. ಅಲ್ಲಿಗೆ ಬಂದ ಆಡಳಿತ ಮೆಂಬರರ ಮೂಲಕ ವಸೂಲ್ ಬಂದ ರೂಪಾಯಿ ೫೦ ಐವತ್ತನ್ನು ಪುತ್ತೂರು ವರ್ತಕರ ಸಂಘದಲ್ಲಿ ನಿರಖು ಠೇವಣಾತಿಯಾಗಿ ಇಡುವಂತೆ ಕಾರ್ಯದರ್ಶಿಯವರ ಸ್ವಾಧೀನ ಕೊಡೋಣಾಯಿತು. ಮುಂದಿನ ಆಡಳಿತ ಸಭೆಗಾದರೂ ಆಡಳಿತ ಮಂಡಲಿಯವರು ಸಂಘದ ಮೇಲೆ ಅಭಿಮಾನವಿಟ್ಟು ದಯಮಾಡಿ ಬರಬೇಕಾಗಿ ಕಾರ್ಯದರ್ಶಿಯವರ ವಿನಂತಿ.

ನೋಟೀಸು.

ಈ ಮೂಲಕ ತಿಳಿಸುವುದೇನೆಂದರೆ:—

ಬೊಂಬಾಯಿಯಲ್ಲಿದ್ದ ಮ| ರಾ| ಎಂಟನಿ ಬಿ. ನೊರೆಂಞರು (ಈಗ ಉಡುಪಿಯಲ್ಲಿ ವಾಸವಾಗಿರುವ) ಡಿಸ್ಟ್ರಿಕ್ಟ ಬೋರ್ಡಿನ ಹತ್ತರ ೫ ವರ್ಷದ ವರೆಗೆ ಇಡೀ ದಕ್ಷಿಣಕನ್ನಡ ಜಿಲ್ಲೆಯ ಧೂಪದ ಸಾಲು ಮರಗಳ ಕಾಯಿಯನ್ನು ಕೊಯಿಸುವ ಪೂರ್ಣ ಹಕ್ಕನ್ನು ಪಡೆದಿರುತ್ತಾರೆ. ಬೇರೆ ಯಾರಾದರೂ ಸದರಿಯವರ ಅಪ್ಪಣೆ ವಿನಹಾ ಧೂಪದ ಕಾಯಿಯನ್ನು ಹೆಕ್ಕಿದರೆ ಕೈದುಮಾಡಲ್ಪಡುವರು.

ಇದಲ್ಲದೆ ಸದರಿಯವರು ತಿಳಿಸುವುದೇನೆಂದರೆ, ಯಾರಾದರೂ ಖಾಸಗಿ ಜಾಗೆಗಳಿದ್ದ ಧೂಪ ಮರದ ಕಾಯಿಯನ್ನು ಉಡುಪಿ ತಾಲೂಕು ಕಲ್ಯಾಣಪುರದಲ್ಲಿ ಎಣ್ಣೆ ಕಾರ್ಖಾನೆ ಬಳಿ ಸಾಗಿಸುವರೇ ಒಪ್ಪಿದ್ದಲ್ಲಿ ತಕ್ಕ ಬೆಲೆ ಕೊಟ್ಟು ಪಡಕೊಳ್ಳುವರೇ ಸಿದ್ಧರಾಗಿರುತ್ತಾರೆ. ಬೇಕಾದವರು ಪತ್ರವ್ಯವಹಾರ ನಡಿಸಬಹುದು.

ಎಂಟನಿ ಬಿ. ನೊರೆಂಞ.
ಉಡುಪಿ.

ಅನುಕ್ರಮಣಿಕೆ.

ಪುಟಗಳು.
ಅಗ್ರಲೇಖ
ರಿಲಿಜಸ್ ಎಂಡೌಮೆಂಟ್ ಎಕ್ಟು ಕೈಕಾಲು ಬಿಚ್ಚ ಹತ್ತಿತು. ೬
ಸ್ಫುಟವಿಚಾರಗಳು—
೧. ದ. ಆಫ್ರಿಕದೊಳಗಿನ ಕಲರಬಾರ ಬೀಲು ೬
೨ ಗೂಟಿಯಲ್ಲಿ ಜಾದಾ ಪೊಲೀಸ "
೩ ನೂಲಿನ ಮತದಾನ "
೪. ರೌಂಡ್‌ಟೇಬಲ್ ಕೊನ್ಫರೆನ್ಸು "
ಮಂಗಳೂರು ೭
ವರ್ತಮಾನಸಂಗ್ರಹಗಳು—
ವಿದೇಶ – ಒಳದೇಶ ವರ್ತಮಾನ ೫
ದಕ್ಷಿಣ ಕನ್ನಡ—ಬೋಳೂರು, ಕಾಸರಗೋಡು, ಪುತ್ತೂರು, ಸಂಪಾಜೆ, "
ವಿವಿಧ ವಿಷಯಗಳು "
ಮಂಗಳೂರಲ್ಲಿ ಸ್ವಾಮಿ ದಯಾನಂದ ಸರಸ್ವತಿಯವರ ಜನ್ಮ ಶತಾಬ್ದಿ ಮಹೋತ್ಸವ "
ಮೂಡಬಿದ್ರೆ ಶ್ರೀ ಗೋಪಾಲಕೃಷ್ಣ ದೇವಸ್ಥಾನದ ಸಹಾಯಕ ಫಂಡಿನ ಸಮಸ್ತ ವರ್ಷದ ವರ್ಧಂತಿ ಸಮಾರಂಭವು "
ಕ. ಪ್ರಾ. ಕಾ. ಕಮಿಟಿಯ ಸಭಾ, ಬೆಳಗಾಂವಿ ೪

ಸ್ವದೇಶಾಭಿಮಾನಿ.

ಶಕ ೧೮೪೭ ಜ್ಯೇಷ್ಠ ಶು| ೧೪ವು ಶುಕ್ರವಾರ.

ಎಂಡೌಮೆಂಟು ಎಕ್ಟು ಕೈಕಾಲು ಬಿಚ್ಚ ಹತ್ತಿತು.

೧೯೧೯ನೆಯ ಸುಧಾರಣಾ ಕಾಯಿದೆಯು ಪಾಸಾಗಿ ಆ ಕಾಯಿದೆಯ ಮೂಲಕ ದ್ವಿದಲ ಪದ್ಧತಿಗೆ ಅವಕಾಶವು ದೊರಕಿ ಅದಕ್ಕನುಗುಣವಾಗಿ ಪ್ರಾಂತಿಕ ಸರಕಾರಗಳಲ್ಲಿ ಲೋಕನಿಯುಕ್ತವಾದ ಮಂತ್ರಿಮಂಡಲಗಳು ರಚಿತವಾದವಷ್ಟೆ. ಈ ಸಂಧಿಯನ್ನು ಸಾಧಿಸಿ ನಮ್ಮ ಮದ್ರಾಸ ಸಂಸ್ಥಾನದಲ್ಲಿ ಜಸ್ಟಿಸ್‌ಪಾರ್ಟಿಯು ಅಧಿಕಾರಾರೂಢವಾಯಿತು. ಈ ಪಕ್ಷವು ಅಧಿಕಾರಾರೂಢವಾದ ಬಳಿಕ ಅದು ಯಾವ ಅನೇಕ ಮಹತ್ಕೃತ್ಯಗಳನ್ನು ಸಾಧಿಸಿತೊ ಅವುಗಳಲ್ಲಿ ರಿಲಿಜಸ್ ಎಂಡೌಮೆಂಟು ಬೀಲು ಒಂದಾಗಿತ್ತೆಂಬುದು ಎಲ್ಲರಿಗೆ ವೇದ್ಯವಾದ ಸಂಗತಿಯೆ ಸರಿ. ಪ್ರಥಮ ಕೌನ್ಸಿಲಿನ ಮೊದಲನೆ ಮಂಡಲವು ವಿಸರ್ಜಿತವಾಗಿ ಎರಡನೆಯ ಚುನಾವಣೆಯಲ್ಲಿ, ಸ್ವರಾಜ್ಯಪಕ್ಷವು ಮತ್ತು ಸಾಮಾನ್ಯವಾಗಿ ತತ್ಸಮವಿಚಾರದ ರಾಷ್ಟ್ರೀಯಪಕ್ಷವು ಹಲವು ಸ್ಥಾನಗಳನ್ನು ಕೆಲವು ಮಟ್ಟಿಗೆ ಹೆಚ್ಚು ಆಕ್ರಮಿಸಿ ಮುಂಚಿನ ಜಸ್ಟಿಸ್‌ಪಾರ್ಟಿಯ ಪ್ರಸ್ಥವು ಸ್ವಲ್ಪ ಕಡಿಮೆಯಾದಂತೆ ಕಂಡಾಗ್ಯೂ ಕೌನ್ಸಿಲಿನ ಬಹುಮತವು ಇನ್ನೂ ಅದರ ಕೈಯಲ್ಲಿ ಇದೆ ಎನ್ನಬಹುದು. ಈ ಪರಿಸ್ಥಿತಿಯಲ್ಲಿ ರಿಲಿಜಸ್ ಎಂಡೌಮೆಂಟು ಬೀಲು ಪುನರಾವರ್ತಿಸಲ್ಪಟ್ಟಾಗ್ಯೂ ಮತ್ತು ಅದರ ತೀವ್ರತೆಯು ಮುಂಚಿನದರೊಡನೆ ಹೋಲಿಸಿದ್ದಲ್ಲಿ ಸ್ವಲ್ಪ ತಗ್ಗಿದಂತೆ ತೋರಿದಾಗ್ಯೂ, ಆ ಬೀಲಿನ ಯಾವ ಮುಖ್ಯ ತತ್ವವಿದೆಯೊ ಆ ತಿರುಳು ಈಗಲೂ ಅದೆ ಸ್ಥಿತಿಯಲ್ಲಿದೆ ಎಂದು ಹೇಳಿದರೆ ಅದು ಅವಾಸ್ತವವಾದ ಮಾತಾಗಲಿಕ್ಕಿಲ್ಲ. ಬೇರೆ ಮಾತುಗಳಿಂದ, ಈ ಬೀಲಿನ ತೀವ್ರತೆಯು ಸೌಮ್ಯವಾಗಿದೆ ಎಂದು ಹೇಳಬಹುದಾದರೂ ಅದರ ಮಾರಕತ್ವವು ಮುಂಚಿನಂತೆಯೆ ಇದೆ ಎಂದು ವಿಧಿಸಲು ಯಾವ ಪ್ರತ್ಯವಾಯವೂ ಇಲ್ಲ. ಮತ್ತು ಈ ಕಾರಣದಿಂದಲೆ ನಮ್ಮ ಸಂಸ್ಥಾನದೊಳಗಿನ ಎಲ್ಲ ಜವಾಬದಾರವಾದ ಲೋಕಮತವು ಇದಕ್ಕೆ ಸಂಪೂರ್ಣ ವಿರುದ್ಧವಿದೆ. ಇದರ ಮೂಲತತ್ವವನ್ನು ವಿರೋಧಿಸುವ ಅನೇಕ ಸಭೆಗಳೂ, ಠರಾವುಗಳೂ ಆದಾಗ್ಯೂ ಈ ಪ್ರಕ್ಷುಬ್ಧ ಲೋಕಮತವನ್ನು ಗಣನೆಗೆ ತಾರದೆ ಸರಕಾರವು ಅದಕ್ಕೆ ಸಮ್ಮತಿಯನ್ನು ಕೊಟ್ಟು ಈಗ ಎಕ್ಟಿನ ಸ್ವರೂಪವನ್ನು ಕೊಟ್ಟಿತು.

ರಿಲಿಜಸ್ ಎಂಡೌಮೆಂಟು ಎಕ್ಟಿನ ಈ ಪೂರ್ವಚರಿತ್ರೆಯನ್ನು ಬರೆದು ತೋರಿಸಬೇಕೆಂದಿಲ್ಲ. ಅದು ಎಲ್ಲರ ದೃಷ್ಟಿಯ ಮುಂದೆ ಮೂರ್ತಿಮತ್ತಾಗಿಯೆ ಇದೆ. ಅದನ್ನು ಪರ್ಯಾಲೋಚಿಸಿದಲ್ಲಿ ಈ ರಿಲಿಜಸ್ ಎಂಡೌಮೆಂಟು ಎಕ್ಟು ಇಷ್ಟು ಬೇಗನೆ ತನ್ನ ಕೈಕಾಲುಗಳನ್ನು ಬಿಚ್ಚ ತೊಡಗಿದ್ದಲ್ಲಿ ಆಶ್ಚರ್ಯವೇನೂ ಕಂಡುಬರುವದಿಲ್ಲ. ನೀರುಳ್ಳಿಯಲ್ಲಿ ದೌರ್ಗಂಧ್ಯವು ಸ್ವಾಭಾವಿಕವಾಗಿಯೆ ಇದೆಯಾದರೂ ಅದರ ಎಸಳುಗಳನ್ನು ಸುಲಿದಲ್ಲಿ ಆ ದೌರ್ಗಂಧ್ಯವು ನಾಲ್ಕೂ ದಿಕ್ಕುಗಳಲ್ಲಿ ಹಬ್ಬುವದು. ಆಗ ಅನೇಕರಿಗೆ ಅದರ ಬಗ್ಗೆ ತಿಳುವುಂಟಾಗುವದು ಎಂದರೆ ಅದರ ಗಂಧದ ಪರಿಜ್ಞಾನವಾಗುವದು. ಇದೆ ಪ್ರಕಾರವಾಗಿ ಒಂದು ಘಾತುಕವಾದ ಬೀಲು ಕೌನ್ಸಿಲ್‌ಹಾಲಿನಲ್ಲಿ ಪಾಸಾಗುವಾಗ ಬರೆ ಕಾಯಿದೆ ಜ್ಞಾನವಿದ್ದವರಿಗೆ ಮಾತ್ರ ಅದರ ಸ್ವರೂಪವು ಗೋಚರಕ್ಕೆ ಬರುತ್ತದಲ್ಲದೆ ಹೊರಗಿನವರಿಗೆ ಥಟ್ಟನೆ ಗೊತ್ತಾಗದು; ಆದರೆ ಅದು ಯಾವಾಗ ಜಾರಿಯಲ್ಲಿ ಬರಹತ್ತುವದೊ ಆಗ ಅದರ ಮಾರಕತೆಯು ಅನುಭೂತವಾಗತೊಡಗುವದು. ರಿಲಿಜಸ್ ಎಂಡೌಮೆಂಟು ಎಕ್ಟಿನ ಸಂಗತಿಯಾದರೂ ಸದ್ಯಃ ಹೀಗೆಯೆ ಆಗಿದೆ. ಈ ಬೀಲು ಪಾಸಾಗಿ ಮಂಜೂರಾದ ಬಳಿಕ ಕೂಡಲೆ ಅದರ ಕಾರ್ಯಪ್ರವರ್ತನೆಯು ಪ್ರಾರಂಭವಾಗಿದೆ. ಇದನ್ನು ಜಾರಿಯಲ್ಲಿ ತರಲು, ಅದೆ ಎಕ್ಟಿನಲ್ಲಿ ಹೊಗಳಿದ್ದಂತೆ, ಒಂದು ಬೋರ್ಡು ನೇಮಕಪಟ್ಟಿರುವದು. ಈ ಬೋರ್ಡಿನ ಕಡೆಯಿಂದ ಸಂಸ್ಥಾನದೊಳಗಿನ ಮಠಾಧಿಪತಿಗಳಿಗೆ ನೋಟೀಸುಗಳು ಹೊರಟವೆ ಎಂದು ಕೇಳುತ್ತಿದ್ದೇವೆ. ೧೯೨೫ನೆಯ ಇಸವಿಯಲ್ಲಿ ಪಾಸಾದ ಈ ಎಕ್ಟಿನಲ್ಲಿ ೫೭ರಿಂದ ೬೭ನೆಯ ಕಲಮುಗಳಲ್ಲಿ ಹಿಂದು ಮಠಗಳ ವಿಷಯವುಂಟು. ಆ ಕಲಮುಗಳ ಮೇರೆಗೆ ಮಠಾಧಿಪತಿಗಳಿಗೆ ಬೋರ್ಡು ತನಗೆ ಬೇಕಾಗಿರುವ ಮಾಹಿತಿಗಾಗಿ ನೋಟೀಸುಗಳನ್ನು ಕಳುಹಿಸಿದೆ. ಆದರೂ ಕಾಯಿದೆಯ ಭಾಷೆಯಿಂದಲೆ ಹೇಳುವದಾದರೆ ದೇವಸ್ಥಾನಗಳಿಗಿದ್ದಂತೆ ಮಠಗಳಿಗೆ ಕಮಿಟಿಗಳು ಇದ್ದಿಲ್ಲವಾದ್ದರಿಂದ ಮಠಾಧಿಪತಿಗಳನ್ನು ಈ ಎಕ್ಟಿನ ಹಿಡಿತದಿಂದ ತರಲು ಯತ್ನಿಸುವದು ತೀರಾ ಅನ್ಯಾಯವಾಗಿದೆ. ಅದರಿಂದ ಇಂಥ ಅಧಿಕ ಪ್ರಸಕ್ತಿಯ ನೋಟೀಸುಗಳಿಗೆ ಮಠಾಧಿಪತಿಗಳು ತಮ್ಮ ತಮ್ಮ ವಕೀಲರುಗಳಿಂದ ಆಲೋಚನೆಯನ್ನು ಪಡಕೊಂಡು ಯೋಗ್ಯವಾದ ಉತ್ತರವನ್ನು ಕೊಟ್ಟಾರೆಂಬುದಕ್ಕೆ ಸಂದೇಹವಿಲ್ಲ.

ಸದ್ಯಃ ಕೊಟ್ಟಿರುವ ನೋಟೀಸುಗಳಲ್ಲಿ ಬೋರ್ಡು ಮುಂದಿನ ಮೂರು ಸಂಗತಿಗಳನ್ನು ಕೇಳಿದೆ. (೧) ಮಠದ ಎಲ್ಲ ಸೊತ್ತು ಎಷ್ಟು? (೨) ಮೂರು ವರ್ಷದ ಸಂಸಾರಿ ಉತ್ಪನ್ನವೆಷ್ಟು? (೩) ವಾರ್ಷಿಕ ಉತ್ಪನ್ನದಲ್ಲಿ ಸೇಕಡಾ ೧॥ಯಂತೆ ಸರಕಾರಕ್ಕೆ ಕೊಡಬೇಕು. ಈ ಮಾಹಿತಿಗಳನ್ನು ಕೇಳುವಾಗ ಆ ಪತ್ರಕದಲ್ಲಿ ಬೋರ್ಡು ೮-೯ ಕೊಲಮುಗಳನ್ನು ತೆರೆದು ಚರಸ್ಥಿರ ಆಸ್ತಿ, ಕಾಣಿಕೆ, ವಂತಿಗೆ ಇತ್ಯಾದಿ ರೂಪದಿಂದ ಬರತಕ್ಕ ದ್ರವ್ಯ, ಕಟ್ಟೋಣಗಳಿಂದ ಬರತಕ್ಕ ಉತ್ಪನ್ನ, ಉತ್ಸವ ಕಾಲದಲ್ಲಿ ಶೇಖರಿಸಲ್ಪಡುವ ರಕಮಿನ ವಿವರ ಇ. ಇ. ಅನೇಕ ಸಂಗತಿಗಳನ್ನು ಆ ಕೊಲಮುಗಳಲ್ಲಿ ಕೇಳಿದೆ. ಇರಲಿ. ಮೇಲಿನ ಮೂರು ಸಂಗತಿಗಳಲ್ಲಿ ಮಠಗಳ ಸೊತ್ತು ಎಷ್ಟು ಎಂಬುದು ಮೊದಲನೆಯ ಪ್ರಶ್ನೆಯು. ಮಠಗಳು ರಿಲಿಜಸ್ ಎಂಡೌಮೆಂಟ್ ಎಕ್ಟಿನ ವ್ಯಾಪ್ತಿಯಲ್ಲೆ ಬರುವದಿಲ್ಲವೆಂದಾದ ಬಳಿಕ ಈ ಮಾಹಿತಿಯನ್ನು ಪೂರಯಿಸಲು ಅವರು ನಿಜವಾಗಿ ಬಾಧ್ಯರೆ ಎಂಬ ಪ್ರಶ್ನೆಯು ಬರುತ್ತದೆ. ಸರಕಾರದ ಸಂರಕ್ಷಣೆಯಲ್ಲಿ ಇರುವ ಪ್ರಜಾಜನವು ಸರಕಾರವು ಕೇಳಿಕೇಳಿದಾಗ ತನ್ನ ವಿತ್ತಜೀವಿತದ ಮಾಹಿತಿಯನ್ನು ಅದಕ್ಕೆ ಪೂರಯಿಸಬೇಕೆಂದು ಯಾರಾದರೂ ವಾದಿಸಿದರೆ ಆ ಮಾತಿಗೆ ನಿಜವಾಗಿ ಉತ್ತರವಿಲ್ಲ! ಮತ್ತು ಇದೆ ತರ್ಕಪದ್ಧತಿಯನ್ನು ಕೊಂಚ ಮುಂದರಿಸಿ ಹೇಳಹೊರಟರೆ ಸರ್ವಶಕ್ತವಾದ ಸರಕಾರವು ಬೇಕಾದಾಗ ಬೇಕಾದ ಸಂಗತಿಯನ್ನು ಮಾಡಬಹುದು. ಅದರ ಕೈಯನ್ನು ತಡೆಯಿಸುವವರು ಯಾರು? ಇತರ ವಿಷಯಗಳಂತೆ ಕಾಯಿದೆಯೂ ಒಂದು ಶಾಸ್ತ್ರವಾಗಿದೆ. ಕಾಯಿದೆಯಲ್ಲಿ ತಜ್ಜ್ಞರಾದವರ ಅಭಿಪ್ರಾಯದಂತೆ ಕಾ. ಕೌನ್ಸಿಲಿಗೆ ಇಂಥ ವಿಷಯಗಳಲ್ಲಿ ಕಾರ್ಯಕಾರಿಯಾದ ಅಧಿಕಾರವು ಇಲ್ಲ. ಇದರ ಅರ್ಥವನ್ನು ಒಂದು ದೃಷ್ಟಾಂತದಿಂದ ಸ್ಪಷ್ಟೀಕರಿಸೋಣ. ಬೋರ್ಡಿನಿಂದ ಮಠಾಧಿಪತಿಗಳಿಗೆ ಈ ಮಾಹಿತಿ ಪತ್ರಕದ ಯಾವ ನೋಟೀಸು ಬಂದಿದೆಯೋ ಅವಕ್ಕೆ ಒಬ್ಬ ಮಠಾಧಿಪತಿಗಳು ಯಾವ ಗಮನವನ್ನೂ ಕೊಡದೆ ಎಂದರೆ ಮುಖ್ಯವಾಗಿ ಸೇಕಡಾ ೧॥ಯಂತೆ ಉತ್ಪನ್ನದ ಅಂಶವನ್ನು ಕೊಡುವ ವಿಷಯದಲ್ಲಿ ಲಕ್ಷ್ಯವನ್ನು ಕೊಡದೆ ಸುಮ್ಮಗೆ ಕುಳಿತುಕೊಂಡರು ಎಂದು ನೆನಸೋಣ. ಆ ಸಂದರ್ಭದಲ್ಲಿ ಆ ಮಠಾಧಿಪತಿಗಳಿಂದ ಆ ಉತ್ಪನ್ನವನ್ನು ಹೇಗೆ ತೆಕ್ಕೊಳ್ಳಬೇಕಾಯಿತು? ಆಸ್ತಿಯನ್ನು ಜಪ್ತಿಮಾಡುವ ಕಾರ್ಯಕಾರಿ ಅಧಿಕಾರವು ಬೋರ್ಡಿಗೇನೂ ಇಲ್ಲವೆಂದಮೇಲೆ ಈ ಕೆಲಸಕ್ಕಾಗಿ ಅದು ಹೈಕೋರ್ಟಿಗೆ ಹೋಗಬೇಕಾಯಿತು. ಈ ಮೇರೆಗೆ ಹೈಕೋರ್ಟಿಗೆ ಹೋದ ಬಳಿಕ ಅಲ್ಲಿ ಏನೂ ತೀರ್ಮಾನವಾಗಲಿ, ಆದರೆ ಇದರ ಅರ್ಥವು ಬೋರ್ಡಿಗೆ ಸ್ವಂತ ಸಾಮರ್ಥ್ಯದ ಮೇಲಿಂದ ಕಾರ್ಯನಿರ್ವಹಿಸಿಕೊಳ್ಳುವ ಅಧಿಕಾರವಿಲ್ಲವೆಂದೆ ಆಗಿದೆ. ಈ ವಿಧವಾಗಿ ಅನಧಿಕೃತರಾದವರು ಉತ್ಪನ್ನವೆಷ್ಟು, ಅದೆಷ್ಟು, ಇದೆಷ್ಟೆಂಬುದಾಗಿ ಮಾಹಿತಿಯನ್ನು ಕೇಳುವದು ಯಾಕೆ?

ಇದಾದರೂ ಒಂದುವೇಳೆ ಕ್ಷಮ್ಯವೆನ್ನಬಹುದು. ಆದರೆ ಗತಿಸಿದ ಮೂರು ವರ್ಷದ ಉತ್ಪನ್ನದ ಯಾವ ಮಾಹಿತಿಯನ್ನು ಬೋರ್ಡು ಕೇಳಿದೆಯೊ ಅದಕ್ಕೆ ಉಪರಿನಿರ್ದಿಷ್ಟ ಎಕ್ಟಿನಲ್ಲಿ ಅವಕಾಶವಿಲ್ಲದ್ದರಿಂದ ಹಾಗೆ ಕೇಳಿದ್ದು ಅನ್ಯಾಯವಾಗಿದೆ. ಒಂದು ವರ್ಷದ ಉತ್ಪನ್ನವನ್ನು ಕೇಳಲಾದರೂ ಎಕ್ಟಿನಲ್ಲಿ ಸಂದರ್ಭವು ಕಲ್ಪಿತವಾಗಿದೆ. ಆದರೆ ಮೂರು ವರ್ಷದ ವಿಷಯ ಅದರಲ್ಲಿ ಇಲ್ಲ. ಬೋರ್ಡು ಇಂಥ ಸಾಹಸದ ಪ್ರವೃತ್ತಿಯನ್ನು ಮಾಡುವದೆಂದರೆ ಸುಲ್ತಾನ ಕಾಲದ ಅಥವಾ ಹಾಗಲವಾಡಿ ಸಂಸ್ಥಾನದ ನಮೂನೆಯೆ ಸರಿ ಎಂದು ಬಹು ವಿಷಾದಪಟ್ಟು ಕೇಳಬೇಕಾಗುತ್ತದೆ. ಆದ್ದರಿಂದ ಈ ವಿಷಯವಾಗಿಯೂ ಕೂಡ ಮಠಾಧಿಪತಿಗಳು ಚಾಣಾಕ್ಷರಾದ ವಕೀಲರ ಆಲೋಚನೆಯನ್ನು ಪಡಕೊಂಡು ಬೋರ್ಡಿನ ಕಣ್ಣಿಗೆ ಸಕಾರಣವಾಗಿ ಖರಿಯಾದ ಅಂಜನವನ್ನು ಹಾಕಿಯಾರೆಂದು ನಂಬಿದ್ದೇವೆ.

ಈ ಮೂರು ವರ್ಷದ ಉತ್ಪನ್ನವನ್ನು ಕೇಳಿದ್ದು ಹೇಗೆ ಅನುಚಿತವೊ ಹಾಗೆಯೆ ಮಠಗಳ ಉತ್ಪನ್ನದಲ್ಲಿ ಸೇಕಡಾ ೧॥ ಅಂಶವನ್ನು ಕೇಳಿದ್ದು ಅನೀತಿಯು. ಉತ್ಪನ್ನವು ಇಂತಿಷ್ಟೆಂದು ನಿರ್ಣೀತವಾಗುವ ಮುಂಚೆ ಸೇ. ೧॥ ಹೇಗೆ ಕೊಡೋಣಾದೀತು? ಅಲ್ಲದೆ, ಮಠಾಧಿಪತಿಗಳಿಂದ ಈ ರಕಮನ್ನು ತೆಕ್ಕೊಳ್ಳುವುದು ಎಕ್ಟಿನಲ್ಲಿ ನಿರ್ದಿಷ್ಟವಾದಂತೆ ಆ ಬೋರ್ಡಿನ ಖರ್ಚಿಗಾಗಿ ಇದೆ. ಪರಂತು ಬೋರ್ಡಿಗೆ ಇಂತಿಷ್ಟೆ ಖರ್ಚು ಬೇಕು, ಅದರ ವಿವರವು ಹೀಗೆ ಹೀಗೆ ಇದೆ ಎಂಬಿತ್ಯಾದಿ ರೂಪದ ನಿಯಮಗಳನ್ನು ಬೋರ್ಡು ಯಾವಾಗ ಮಾಡಿದೆ? ಅವು ಎಲ್ಲಿ ಪ್ರಸಿದ್ಧವಾಗಿವೆ? ಒಂದೂ ಇಲ್ಲ. ಎಂದ ಮೇಲೆ ಎಂದರೆ ಬೋರ್ಡಿನ ಥುಕ್ತಾಂಶದ ಸ್ಥಿತಿಯು ಜಾಹೀರ ನಿಯಮಗಳ ಮೂಲಕವಾಗಿ ನಿರ್ಣಯಿಸಲ್ಪಡದೆ ಸೇಕಡಾ ೧॥ಯಂತೆ ಕೇಳುವುದು ಬರೆ ಅನುಚಿತವೆ ಅಲ್ಲ, ಅನ್ಯಾಯವೂ ಆಗಿದೆ. ಸಕಾರಣವಾದ ನಿಯಮಗಳು ಅಗತ್ಯವಿಲ್ಲ. ಬೋರ್ಡಿನ ಲಹರಿಯೆ ಸಾಕು ಎಂದು ಎಂಡೌಮೆಂಟ ಬೀಲಿನ ಪಕ್ಷಪಾತಿಗಳು ಹೇಳುವುದಾದರೆ ಅವರು ಇನ್ನೂ ಇಪ್ಪತ್ತನೆಯ ಶತಮಾನದ ಲೋಕಮತದ ಬೆಳಕನ್ನು ಕಂಡಿಲ್ಲವೆಂದು ಹೇಳಬೇಕಾಗುತ್ತದೆ.

ಸಾರಾಂಶ ಬೋರ್ಡಿನಿಂದ ಹೊರಟಿರುವ ನೋಟಿಸುಗಳನ್ನು ಪರೀಕ್ಷಿಸಿದ್ದಲ್ಲಿ ರಿಲಿಜಸ್ ಎಂಡೌಮೆಂಟ ಎಕ್ಟು ಹೇಗೆ ಕ್ರಮಕ್ರಮವಾಗಿ, ಆದರೂ ಬಹು ಭರದಿಂದ ತನ್ನ ಕೈಕಾಲುಗಳನ್ನು ಪಸರಿಸಹತ್ತಿದೆ, ಅದರ ಲೀಲೆಗಳು ಹೇಗೆ ಪ್ರಾರಂಭವಾಗಿವೆ ಎಂಬುದು ಈಗ ಎಲ್ಲರಿಗೆ ತಿಳಿಯಹತ್ತುವುದು. ಈ ಸಂದರ್ಭದಲ್ಲಿ ಎಲ್ಲ ಮಠಾಧಿಪತಿಗಳಿಗೆ ಒಂದು ಸೂಚನೆಯನ್ನು ಕೊಟ್ಟರೆ ಅದು ಅಪ್ರಾಸಂಗಿಕವಾಗಲಿಕ್ಕಿಲ್ಲ. ಈ ಸಂಸ್ಥಾನದೊಳಗಿನ ಮಠಾಧಿಪತಿಗಳೆಲ್ಲರೂ ತಮ್ಮದೊಂದು ಸಂಘವನ್ನು ಏರ್ಪಡಿಸಿಕೊಂಡು ಇದಕ್ಕೆ ಯಾವ ತರದ ಪ್ರತಿಕಾರವನ್ನು ಮಾಡಬೇಕೆಂಬುದನ್ನು ಕಾಯಿದೆ ಪಂಡಿತರ ಮುಖಾಂತರ ಆಲೋಚಿಸಿ ಅನಂತರ ಸಮಷ್ಟಿರೂಪದಿಂದಲೇ ಇದನ್ನು ಪ್ರತಿಕರಿಸಬೇಕು. ಒಬ್ಬೊಬ್ಬರು ಒಂದೊಂದು ವಿಧವಾಗಿ ಪ್ರವರ್ತಿಸಿದರೆ ಪ್ರತಿ ಪಕ್ಷರ ಕೆಲಸವು ಸುಲಭವಾಗುತ್ತದೆ. ಅಂಥ ಸಂದರ್ಭದಲ್ಲಿ ಅನಧಿಕಾರದಿಂದ ಪ್ರತಿಪಕ್ಷರು ಮಾಡಿದ ಉದ್ದಾಮ ಪ್ರವೃತ್ತಿಯು ಮತ್ತೆ ಹಕ್ಕಿನ ಮತ್ತು ಅಧಿಕಾರದ ಸಾಲಿನಲ್ಲಿ ಅನಾಯಾಸದಿಂದ ಬಂದು ಹೋಗುವ ಸಂಭವವಿರುತ್ತದೆ. ಸಂಭವವು ಯಾಕೆ, ಬಂದುಹೋಗುತ್ತದೆ. ಆದ್ದರಿಂದ ಎಲ್ಲಾ ಮಠಾಧಿಪತಿಗಳು ಸಾಂಘಿಕ ಶಕ್ತಿಯಿಂದಲೆ ಈ ಪ್ರಕರಣದಲ್ಲಿ ವರ್ತಿಸಬೇಕಾಗಿಯೂ ಮತ್ತು ಹೀಗೆ ವರ್ತಿಸಿ ಇದರ ಕೈಕಾಲುಗಳನ್ನು ಸಂಕೋಚಪಡಿಸಬೇಕಾಗಿಯೂ ಹಿಂದುಧರ್ಮಾಭಿಮಾನಿಗಳಾದ ಎಲ್ಲವರ ಪರವಾಗಿ ನಮ್ಮ ಸೂಚನೆಯು ಇದೆ.

ಸ್ಫುಟವಿಚಾರಗಳು.

೧. ದಕ್ಷಿಣ ಆಫ್ರಿಕದಲ್ಲಿ ವರ್ಣದ್ವೇಷವು ಹೆಚ್ಚುತ್ತ ಹೋಗಿ ಇದನ್ನು ನಿದರ್ಶಿಸುವಂತೆ ಅಲ್ಲಿ "ಕಲರಬಾರ ಬೀಲು" ತಯಾರಿಸಲ್ಪಟ್ಟು ಅಲ್ಲಿಯ ಎಸೆಂಬ್ಲಿಯಲ್ಲಿ ಈ ಬೀಲಿನ ಎರಡನೆಯ ವಾಚನವು ಕೂಡ ಮುಗಿದಿದೆ. ದಕ್ಷಿಣ ಆಫ್ರಿಕವು ಬರೆ ಬಿಳೆ ಜನರಿಗಾಗಿ ಮಾತ್ರ ಇರಬೇಕೆಂದು ಈ ಬೀಲು ತರುವವರ ತಾತ್ಪರ್ಯವು. ಏಸಿಯಾಟಿಕ ಜನರು ವ್ಯಾಪಾರ ಮುಂತಾದ್ದನ್ನು ಹೇಗೆ ಮಾಡಕೂಡದೆ ಹಾಗೆಯೆ ಕೂಲಿ, ಮಜೂರಿ ಇತ್ಯಾದಿ ದಿನಚರ್ಯೆಗೆ ಸಾಧನವಾದ ಉದ್ಯೋಗಗಳನ್ನು ಕೂಡ ಮಾಡಬಾರದು. ಏಸಿಯಾಟಿಕರು ಮತ್ತು ವಿಶೇಷವಾಗಿ ಹಿಂದಿಗಳು ಸ್ವಲ್ಪ ದ್ರವ್ಯದಿಂದ ನಿರ್ವಹಿಸುವವರಾದ ಕಾರಣ ಅಂಥವರ ಮಜೂರಿಯು ಹೆಚ್ಚಿಗಿರಲಿಕ್ಕಿಲ್ಲ, ಇದರಿಂದ ಬಿಳೆ ಮಜೂರರ ಹೊಟ್ಟೆಗೆ ಪೆಟ್ಟುಬೀಳುವದೆಂದು ಸಕಾರಣವಾಗಿಯಾಗಲಿ, ಅಥವಾ ನಿಷ್ಕಾರಣವಾಗಿಯಾಗಲಿ ಎಣಿಸಿ ಬಿಳೆ ಜನರಲ್ಲದವರು ಎಂದರೆ ಬಣ್ಣದ ಜನರನ್ನು ಉಪದ್ರವಪಡಿಸುವ ಬೀಲನ್ನು ಅಲ್ಲಿಯ ಸರಕಾರವು ರಚಿಸಿದೆ. ಈ ಬೀಲಿನ ಉದ್ದೇಶವನ್ನು ಹೇಳುವಾಗ ದಕ್ಷಿಣ ಆಫ್ರಿಕದ ಮೂಲನಿವಾಸಿಗಳಾದ ನಿಗ್ರೋ ಜನರ ಹಿತಸಂರಕ್ಷಣಕ್ಕಾಗಿ ಇದನ್ನು ತರಬೇಕಾಗಿದೆ ಎಂದು ಇದುವರೆಗೆ ಹೇಳಲಾಗುತ್ತಿತ್ತು. ಪರಂತು ಈ ಕಲರ್‌ಬಾರಿನ ಬೀಲಿನಿಂದ ಏಸಿಯಾಟಿಕರಿಗೆ ಹೇಗೊ ಹಾಗೆಯೆ ಅಲ್ಲಿಯ ಮೂಲನಿವಾಸಿಗಳಾದ ನಿಗ್ರೋ ಜನರಿಗೆ ಸಹ ಬಾಧೆಯು ತಟ್ಟದೆ ಇರಲಿಕ್ಕಿಲ್ಲವೆಂದು ಸ್ಪಷ್ಟವಾಗಿ ಹೇಳಬಹುದು. ಯಾಕೆಂದರೆ ಈ ಬೀಲಿನ ಎರಡನೆಯ ವಾಚನದ ಚರ್ಚೆಯಲ್ಲಿ ಸರಕಾರದ ಕಡೆಯಿಂದ ದಕ್ಷಿಣ ಆಫ್ರಿಕವು ಕೇವಲ ಬಿಳೆ ಜನರಿಗಾಗಿ ಮಾತ್ರ ಇದೆ, ನಿಗ್ರೋ ಜನರ ಅದು ಮಾತೃಭೂಮಿಯಾದರೂ ಅವರಿಗೂ ಕೂಡ ಹಕ್ಕಿಲ್ಲವೆಂದು ಬಹಿರಂಗವಾಗಿ ಹೇಳೋಣಾಯಿತು. ಎಂದ ಮೇಲೆ ಈ ಬೀಲು ರಚಕರ ಅಂತರಂಗವು ಅವರ ಬಾಯಿಂದ ಬಹಿರಂಗವಾದ ಈ ಶಬ್ದಗಳಿಂದ ಜಗತ್ತಿಗೆ ಗೋಚರವಾಗದೆ ಇರಲಿಕ್ಕಿಲ್ಲ. ಪರರಿಗೆ ಹೇಳುವದು ಶಾಸ್ತ್ರ ತಾನು ಮಾಡುವುದು ಪೂರ್ಣ ಸ್ವಾರ್ಥವೆಂಬುದು ಈ ಗೌರಕಾರ್ಯದವರ ವರ್ತನೆಯಿಂದ ಸ್ಪಷ್ಟವಾಗುತ್ತದೆ. ಹಿಂದುಸ್ಥಾನದಲ್ಲಿ ಮೇಲಿನ ಜಾತಿಯವರಿಗೆ ಅವರು ಚಾಂಡಾಲರನ್ನು ಅಸ್ಪೃಶ್ಯರನ್ನಾಗಿ ಮಾಡಿದಕ್ಕೆ ತತ್ವಜ್ಞಾನದ ಬೆಳಕನ್ನು ಕೊಡುವವರು ಈಗ ಆಫ್ರಿಕದಲ್ಲಿ ಯಾವ ಕರ್ತವ್ಯವನ್ನು ನೆರವೇರಿಸುತ್ತಿದ್ದಾರೆಂಬುದನ್ನು ನೋಡಬಾರದೆ? ಮನುಷ್ಯನು ಯಾವ ದೇಶದಲ್ಲೆ ಇರಲಿ, ಯಾವ ಕಾಲದಲ್ಲೆ ಇರಲಿ, ಸಾಮಾನ್ಯವಾಗಿ ಒಂದೆ ಬಗೆಯವನಿರುತ್ತಾನೆ ಇದೆ ನಿಜ.

೨. ಅನಂತಪುರ ಜಿಲ್ಲೆಯೊಳಗಿನ ಗೂಟಿ ಮತ್ತು ತಾಡಪ್ರತಿ ತಾಲೂಕುಗಳೊಳಗಿನ ಕೆಲವು ಹಳ್ಳಿಗಳಲ್ಲಿ ಸರಕಾರವು ಜಾದಾ ಪೊಲೀಸರನ್ನು ಇಟ್ಟಿದೆ. ಈ ಜಾದಾ ಪೊಲೀಸರ ಖರ್ಚು ಆ ಬಡ ಹಳ್ಳಿಗರ ಮೇಲೆ ಹೊರಿಸೋಣಾಗಿದೆ. ಹಳ್ಳಿಗಳಲ್ಲಿ ಇಂಥಾ ಪೊಲೀಸರನ್ನು ಇಟ್ಟು ಅವರ ಖರ್ಚಿನ ಬ್ರಹ್ಮದಂಡವನ್ನು ಹಳ್ಳಿಗರ ಮೇಲೆ ಹಾಕಬೇಕಾದರೆ ಅಂಥ ಮಹತ್ವದ ಯಾವದಾದರೂ ಕಾರಣವಿರಬೇಕು. ಆದರೆ ಈ ಜಾದಾ ಪೊಲೀಸರ ನೇಮಕದ ವಿಷಯವಾಗಿ ಹೊರಡಿಸಿದ ಜಾಹೀರ ಪತ್ರಕದಲ್ಲಿ ಸರಕಾರವು ಯಾವ ಕಾರಣವನ್ನು ನಿರ್ದೇಶಿಸಿದೆಯೊ ಅದು ಅಷ್ಟೊಂದು ಬಲವತ್ತಾದ್ದಲ್ಲ. ಇಬ್ಬರು ರಡ್ಡಿಗಳಲ್ಲಿ ಮತ್ತು ಅವರ ಪಕ್ಷಗಳಲ್ಲಿ ಈಗ ಎಷ್ಟೊ ಸಮಯದಿಂದ ಜಗಳವು ನಡೆಯುತ್ತಿತ್ತು. ಇದರ ನಿವಾರಣಾರ್ಥವಾಗಿ ಎಲ್ಲ ಹಳ್ಳಿಗಳ ಮೇಲೆ ಈ ಶಿಕ್ಷೆಯನ್ನು ವಿಧಿಸುವದು ವಿಚಿತ್ರ ನ್ಯಾಯವಾಗಿದೆ. ಎರಡು ಕುಟುಂಬಗಳಲ್ಲಿ ಅಥವಾ ಪಕ್ಷಗಳಲ್ಲಿ ಹೋರಾಟವು ನಡೆದಿದ್ದಾದರೆ ಅದನ್ನು ಸರಕಾರವು ಸಂಯಾದ ರೀತಿಯಲ್ಲಿ ನಿಲ್ಲಿಸಬಾರದೆ? ಎಲ್ಲರ ಮೇಲೆ ಜಾದಾ ಪೊಲೀಸರನ್ನು ನೇಮಿಸಬೇಕೆ? ಅಲ್ಲದೆ ಆ ಎರಡು ಪಕ್ಷಗಳಾದರೂ ಅತ್ಯಾಚಾರವನ್ನು ನಡಿಸಿದ್ದು ಸರಕಾರದ ಗೋಚರಕ್ಕೆ ಬಂದಿದೆ ಎಂದು ಹೇಳೋಣವೆಂದರೆ, ಆ ಪ್ರಕಾರ ಅದರ ಗೋಚರಕ್ಕೆ ಬಂದದ್ದೂ ಜಾಹೀರ ಪತ್ರಕದ ಮೇಲಿಂದ ಕಂಡುಬರುವದಿಲ್ಲ. ಹೀಗಿರಲು ಕಠಿಣ ವೃತ್ತಿಯ ಪೊಲೀಸರನ್ನು ಹಳ್ಳಿಗರ ಮೇಲೆ ನೇಮಿಸಿ, ಅವರ ಲೀಲೆಗಳಿಂದ ಹಳ್ಳಿಗರನ್ನು ಸಾಕೊ ಸಾಕಾಗುವಂತೆ ಮಾಡಿ ಒಂದು ವಿಧದಿಂದ ಆ ಬಡ ಹಳ್ಳಿಗರ ಸತ್ವ ಹರಣವನ್ನು ಮಾಡುವದು ಪ್ರಜಾ ವಾತ್ಸಲ್ಯದ ಸರ್ವಥಾ ದ್ಯೋತಕವಲ್ಲ. ಒಂದು ವೇಳೆ ಆ ಎರಡೂ ಪಕ್ಷದವರು ಅತ್ಯಾಚಾರವನ್ನು ನಡಿಸಿದರು ಅಥವಾ ನಡಿಸುವವರಿದ್ದಾರೆ ಎಂದು ಗ್ರಹಿಸಿದರೂ ಅಂಥವರನ್ನು ದಾರಿಗೆ ತರಲು ಪಿನಲ್‌ಕೋಡಿನಲ್ಲಿ ಬೇಕಷ್ಟು ಕ್ರಿಮಿನಲ್ ಲಾವಿನ ಸೆಕ್ಷನುಗಳು ಇದ್ದಾವ. ಸಾರಾಂಶ ಯಾವ ದೃಷ್ಟಿಯಿಂದ ನೋಡಿದರೂ ಸರಕಾರದ ಈ ಜಾದಾ ಪೊಲೀಸ ನೇಮಕದ ಕೃತ್ಯವು ಸಮರ್ಥನೀಯವಾಗುವದಿಲ್ಲ. ಆದ್ದರಿಂದ ಇಂಥ ಅಸಮರ್ಥನೀಯವಾದ ಕೃತ್ಯವನ್ನು ಮಾಡುವದರಲ್ಲಿ ಸರಕಾರವು ಭೂಷಣವನ್ನು ಎಣಿಸಬಾರದೆಂದು ನಾವು ಒತ್ತಿ ಹೇಳುವೆವು.

೩. ನಮ್ಮ ಕರ್ನಾಟಕ ಪ್ರಾಂತದ ಕಾಂಗ್ರೆಸ ಕಮಿಟಿಯ ಅಧಿವೇಶನದಲ್ಲಿ ಪಾಸಾದ ಠರಾವುಗಳನ್ನು ಇನ್ನೊಂದು ಕಡೆಯಲ್ಲಿ ಪ್ರಕಟಿಸಿದ್ದೇವೆ. ಬೆಳಗಾಂವಿನಲ್ಲಿ ನೂಲಿನ ಮತದಾರತನದ ಠರಾವು ಪಾಸಾದ ಬಳಿಕ ಕರ್ನಾಟಕದಲ್ಲಿ ಈ ಠರಾವು ಯಾವ ರೀತಿಯಿಂದ ಪ್ರಚಾರದಲ್ಲಿ ಬಂದಿದೆ ಎಂಬುದನ್ನು ನೋಡಬೇಕಾದರೆ ಈ ಅಧಿವೇಶನದೊಳಗಿನ ಠರಾವುಗಳನ್ನು ನೋಡಬಹುದು. ಮಹಾ ಸಭೆಯಲ್ಲಿ ಠರಾವಾಗಿ ಆರು ತಿಂಗಳು ದಾಟಿದರೂ ಚರಕ ಪ್ರಸಾರವು ಯಾವ ವಿಧದಿಂದಲೂ ಆದದ್ದು ಕಂಡುಬರುವದಿಲ್ಲ. ಆದ್ದರಿಂದಲೆ ಗಂಗಾಧರ ರಾವ, ಶ್ರೀನಿವಾಸ ರಾವ ಕೌಜಲಗಿ, ಕಾರ್ನಾಡ ಸದಾಶಿವರಾವ ಮುಂತಾದ ಮುಖಂಡರು ಸಂಚಾರವನ್ನು ಪ್ರಾರಂಭಿಸಿ ಚರಕ ಪ್ರಸಾರ ಮಾಡಬೇಕೆಂದು ಠರಾಯಿಸೋಣಾಗಿದೆ. ಇದು ಬಹಳ ಒಳ್ಳೇದು. ಕರ್ನಾಟಕ ಪ್ರಾಂತಿಕ ಕಮಿಟಿಯು ಉದ್ದೇಶಿಸುವಂತೆ ಮುಂದಿನ ಆರು ತಿಂಗಳಲ್ಲಾದರೂ ಕರ್ನಾಟಕದಲ್ಲಿ ಚರಕದ ಪ್ರಸಾರವಾಗಿ ಅದರ ಸಗ್ಗಿಯಾಗುವಂತೆ ಮಾಡಿದ್ದನ್ನು ನಾವು ಈ ಕಣ್ಣುಗಳಿಂದ ನೋಡಿದರೆ ಆಗ ನಮ್ಮನ್ನು ನಾವು ಧನ್ಯರೆಂದು ತಿಳಿದುಕೊಳ್ಳುವೆವು! ಆದರೂ ಈ ಗತಿಸಿದ ಆರು ತಿಂಗಳಲ್ಲಿ ಅದು ಯಾಕೆ ಮುಂದರಿಯಲಿಲ್ಲ, ಮಾತ್ರವಲ್ಲ, ಯಾಕೆ ನಿದ್ರಿತವಾಯಿತು ಎಂಬ ಪ್ರಶ್ನೆಯು ನಿರುತ್ತರವಾಗಿಯೆ ನಿಲ್ಲುವದು. ಆರು ತಿಂಗಳ ಸಮಯವು ಚಿಕ್ಕದು ಎಂದು ಯಾರಾದರೂ ಹೇಳಿದರೆ ಅವರ ಈ ಬಾಲಿಶ ಆಕ್ಷೇಪದ ಬಗ್ಗೆ ನಿಜವಾಗಿ ಕನಿಕರಪಡಬೇಕಾಗುತ್ತದೆ. ಕಾರಣ, ಚರಕ, ನೂಲು, ಖಾದಿ ಇವೆಲ್ಲ ೧೯೧೯-೨೦ರಿಂದಲೆ ಹಿಂದುಸ್ಥಾನದ ರಂಗಭೂಮಿಯಲ್ಲಿ ಬಂದದ್ದರಿಂದ ಎಲ್ಲರಿಗೂ ಸುಪರಿಚಿತವಾಗಿದೆ. ಅದಕ್ಕೆ ಮತದಾನದ ವೇಷವನ್ನು ಸದ್ಯಕ್ಕೆ ಕೊಟ್ಟಾಗ್ಯೂ ಅದು ಪುರಾತನವೆ. ಎಂದ ಮೇಲೆ ಇಷ್ಟು ಸುಪರಿಚಿತವೂ, ಪುರಾತನವೂ ಆದ ಚರಕ ಚಳವಳಿಕ್ಕೆ ಗತಿಸಿದ ಆರು ತಿಂಗಳಲ್ಲಿ ಲೋಕಪ್ರಿಯತೆಯು ಬರಲಿಲ್ಲವಾದರೆ ಭವಿಷ್ಯತ್ತಿನ ಆರು ತಿಂಗಳಲ್ಲಾದರೂ ಬಂದೀತೆಂದು ಹೇಗೆ ತಾನೆ ಆಶಿಸಬಹುದು? ಆದರೂ ಆಶಿಸುವದು ನಮ್ಮ ಕರ್ತವ್ಯ. ಫಲವು ಈಶ್ವರಾಧೀನ! ಈ ತತ್ವಜ್ಞಾನದಿಂದ ತತ್ಕಾಲಕ್ಕಾದರೂ ಸಮಾಧಾನವನ್ನು ಪಡೋಣ.

೪. ಶ್ರೀಮತೀ ಸರೋಜಿನೀ ದೇವಿಯವರು ಒಂದು ಸ್ತುತ್ಯವಾದ ಪ್ರಯತ್ನವನ್ನು ಉಪಕ್ರಮಿಸಿದ್ದಾರೆ. ಇದು ತುಂಬಾ ಸಂತೋಷವು. ದೇಶದಲ್ಲಿ ಈಗ ದ್ವಂದ್ವವು ಅಧಿಕವಾಗಿದೆ. ಹಿಂದು-ಮುಸಲ್ಮಾನ, ಬ್ರಾಹ್ಮಣ-ಬ್ರಾಹ್ಮಣೇತರ, ಶಾಂತ-ಉಗ್ರ, ಬೇಕುಬದಲಾವಣೆ-ಬೇಡಬದಲಾವಣೆ ಇತ್ಯಾದಿ ಇತ್ಯಾದಿ ನೂರಾರು ತಂಡಗಳು ಉಂಟಾಗಿ, ಆ ಮೂಲಕ ಒಬ್ಬರ ಮುಖವು ಒಂದು ಕಡೆಗಾದರೆ ಇನ್ನೊಬ್ಬರ ಮುಖವು ಇನ್ನೊಂದು ಕಡೆಗೆ. ಈ ಮುಖ್ಯ ಭೇದಗಳಲ್ಲಿ ಇನ್ನೂ ಒಳಭೇದಗಳು ಸಹಾ ಇದ್ದಾವೆ. ಇಂಥ ಶೋಚನೀಯ ಪರಿಸ್ಥಿತಿಯಲ್ಲಿ ಸರ್ವರ ಐಕ್ಯವುಂಟಾಗಿ ಅವರ ಸಾಂಘಿಕ ಪ್ರಯತ್ನದಿಂದ ಅಧಿಕಾರಿ ವರ್ಗವನ್ನು ಎದುರಿಸುವುದು ಅತ್ಯಗತ್ಯವೂ, ಹಿತಾವಹವೂ ಆಗಿದೆ. ಈ ಉದ್ದೇಶದಿಂದಲೆ ಕಳೆದ ವರ್ಷ ಕೆಲವು ದೇಶಭಕ್ತರು ಎಲ್ಲ ಪಕ್ಷಗಳ ಮುಖಂಡರ ಸಭೆಗಳನ್ನು ಮುಂಬಯಿ ಮತ್ತು ದಿಲ್ಲಿ ಎಂದು ಎರಡು ಕಡೆಗಳಲ್ಲಿ ಸೇರಿಸಿದರು. ಪರಂತು ಆ ಪ್ರಯತ್ನಗಳಿಂದ ತಾದೃಶಫಲವುಂಟಾಗಲಿಲ್ಲ. ಆದರೆ ಈ ಸಾರೆ ಶ್ರೀಮತೀ ಸರೋಜಿನೀ ದೇವಿಯವರು ಈ ಎಲ್ಲರಲ್ಲಿ ಐಕ್ಯವನ್ನು ಸಾಧಿಸಲು ಪುನರಪಿ ಒಂದು ಪ್ರಯತ್ನವನ್ನು ಮಾಡುತ್ತಿದ್ದಾರೆ. ಜೀನಾ, ನೇಹರು, ಮಾಲವೀಯ, ದಾಸ, ಗಾಂಧಿ ಮುಂತಾದವರು ಇದರಲ್ಲಿ ಕಾರ್ಯಭಾಗವನ್ನು ಎತ್ತದೆ ಇರಲಿಕ್ಕಿಲ್ಲ. ಅಂತು ಈ ಪ್ರಯತ್ನವಾದರೂ ಸಫಲವಾಗಲಿ ಎಂದು ಬಯಸುವೆವು.

ಮಂಗಳೂರು.

ಗೋಕರ್ಣಮಠ ಶಾಲೆಯ ವರ್ಧಂತಿ ಉತ್ಸವವು ಇದೇ ತಿಂಗಳ ತಾರೀಖು ೮ನೇ ಸೋಮವಾರ ಇಂಪೀರಿಯಲ್ ಬೇಂಕಿನ ಏಜಂಟರಾದ ಮ| ರಾ| ಯು. ಆನಂದರಾಯರವರ ಅಧ್ಯಕ್ಷತೆಯಲ್ಲಿ ಜರಗುವುದು.

ವಿದ್ಯಾ ಇಲಾಖೆಯಿಂದ ಹೊರಟ ಹೊಸ ಸರ್ಕ್ಯುಲರಿಗೆ ಅನುಸಾರವಾಗಿ ಎಲಿಮೆಂಟರಿ ಲೋವರ್ ಗ್ರೇಡ್ ಸರ್ಟಿಫಿಕೇಟನ್ನು ಹಾಯರ್ ಗ್ರೇಡಾಗಿ ಮಾಡಿಕೊಳ್ಳಲು ಇಚ್ಛಿಸುವ ಉಪಾಧ್ಯಾಯರುಗಳ ಸಲುವಾಗಿ ಹಂಪನ್‌ಕಟ್ಟಾ ರಾತ್ರಿ ಶಾಲೆಯಲ್ಲಿ ಇವರಿಗೋಸ್ಕರ ಹೊಸ ಕ್ಲಾಸನ್ನು ಜೂನ್ ತಾ. ೧೫ರಲ್ಲಿ ತೆರೆಯಲಿಕ್ಕಿದ್ದಾರೆಂಬುದಾಗಿ ತಿಳಿಯುತ್ತೇವೆ. ಬಡ ಉಪಾಧ್ಯಾಯರಿಗೆ ಇದರಿಂದ ನಿಶ್ಚಯವಾಗಿಯೂ ಬಹಳ ಪ್ರಯೋಜನವಾಗುವದೆಂಬುದರಲ್ಲಿ ಸಂದೇಹವಿಲ್ಲ.

ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮದ ರೋಗಿಗಳ ಸಂಖ್ಯೆ:—೧ ಈ ತಿಂಗಳಲ್ಲಿ ಹೊಸ ರೋಗಿಗಳ ಸಂಖ್ಯೆ ೫೦೮, ೨ ಹಳೇ ರೋಗಿಗಳ ಸಂಖ್ಯೆ ೬೮, ೩ ಜುಮ್ಲಾ ಸಂಖ್ಯೆ ೫೭೬, ೪ ಈ ತಿಂಗಳ ಒಟ್ಟಿನ ಹಾಜರಿ ೨೨೨೬, ೫ ದಿನವಹಿಯ ಸಂಸಾರಿ ಹಾಜರಿ ೭೪.

ಇಲ್ಲಿಯ ರೆವೆನ್ಯೂ ಡಿವಿಜನಲ್ ಆಫೀಸರರಾಗಿರುವ ಮೆ| ಎಲ್. ಇ. ಹರ್ಟಸನವರು ಇಲ್ಲಿಯ ಟ್ರೆಜರಿ ಡಿಪ್ಯುಟಿ ಕಲೆಕ್ಟರರಾಗಿ ನೇಮಕಪಟ್ಟದ್ದರಿಂದ ಇವರ ಸ್ಥಾನಕ್ಕೆ ಮೈಸೂರು ದಕ್ಷಿಣ ಕನ್ನಡ ಜಿಲ್ಲಾ ಗಡಿ ನಿರ್ಣಯದ ಕಲಸದ ಮೇಲಿರುವ ಮ| ಎಚ್| ಶಂಕರರಾಯರವರು ನೇಮಕಹೊಂದಿರುತ್ತಾರೆ. ಮ| ಎಚ್. ಶಂಕರರಾಯರವರು ಈ ಕೆಲಸಕ್ಕೆ ಹಾಜರಾಗುವ ತನಕ ಪುತ್ತೂರು ಡಿವಿಜನಲ್ ಆಫೀಸರರಾಗಿರುವ ಮೆ| ಜೊಯಿಕುಟ್ಟಿಯವರು ಇವರ ಕೆಲಸವನ್ನು ನೋಡುವರು. ಮೆ| ಜೊಯಿಕುಟ್ಟಿಯವರು ಜೂನ್ ತಾ. ೧ಕ್ಕೆ ಚಾರ್ಜನ್ನು ವಹಿಸಿಕೊಂಡಿರುವರು. ಟ್ರೆಜರಿ ಡಿಪ್ಯುಟಿ ಕಲೆಕ್ಟರರಾಗಿದ್ದ ಮೆ| ಎಚ್. ಸುಬ್ಬರಾಯರವರು ಪೆನ್ಶನ್ ಪಡಕೊಂಡಿರುತ್ತಾರೆ. ಇವರಿಗೆ ಮೊನ್ನೆ ತಾನೆ ಹಜೂರು ಆಫೀಸಿನಲ್ಲಿ ಟೀಪಾರ್ಟಿ ಸತ್ಕಾರಗಳು ನಡೆದು ಛಾಯಾಚಿತ್ರವನ್ನು ತೆಗೆಯಲಾಯಿತು.

ಡಾಕ್ಟರ್ ಗೋಪಾಲನ್ ನಾಯರ್ ಎಂಬವರು ಇಲ್ಲಿಯ ಮುನ್ಸಿಪಲ್ ಹೆಲ್ತ ಆಫೀಸರರಾಗಿ ನೇಮಿಸಲ್ಪಟ್ಟಿರುವರು.

ಇದೇ ತಾ. ೧ರಲ್ಲಿ ನಡೆದ ಮಂಗಳೂರು ತಾಲೂಕು ಬೋರ್ಡಿನ ಉಪಚುನಾವಣೆಯಲ್ಲಿ ಮಿ. ಬಿ. ಎಮ್. ಡಿ. ಸೋಜರಿಗೆ ೨೮೨ ಓಟುಗಳೂ, ಮ| ರಾ| ತಿಮ್ಮಪ್ಪ ಹೆಗ್ಗಡೆಯವರಿಗೆ ೨೧೪ ಓಟುಗಳೂ, ಮತ್ತು ಮ| ರಾ| ಉಳ್ಳಾಲ ಗೋವಿಂದ ಕಿಣಿಯವರಿಗೆ ೧೭೦ ಓಟುಗಳೂ ಸಿಕ್ಕಿರುವುದರಿಂದ ಮಿ. ಡಿ. ಸೋಜರವರು ಮೆಂಬರರಾಗಿ ಆರಿಸಲ್ಪಟ್ಟಿರುತ್ತಾರೆ.

ಇಲ್ಲಿಯ ಮುನ್ಸಿಪಾಲಿಟಿಯವರು ಅವರ ಕೈಕೆಳಗಿನ ಬುಚ್ಚರ್ಸ್‌ಲೇನ್ ಮುಹಮ್ಮಡನ್ ಹಾಯರ್ ಎಲಿಮೆಂಟರಿ ಶಾಲೆಗೆ ಕಾಸರಗೋಡಿನ ಜೆನಾಬ್ ಮೌಲ್ವಿ ಪಕ್ರುದ್ದೀನ್ ಸಾಹೇಬ್ ಎಂಬವರನ್ನು ಅರಬಿಕ್ ಮುನ್ಸಿಯರನ್ನಾಗಿ ನೇಮಿಸಿರುತ್ತಾರೆ. ಇವರು ಇದೇ ತಾ. ೧ಕ್ಕೆ ಕೆಲಸಕ್ಕೆ ಹಾಜರಾಗಿರುವರು. ಮುನ್ಸಿಪಾಲಿಟಿಯವರು ಮುಹಮ್ಮದೀಯ ವಿದ್ಯಾರ್ಥಿಗಳ ವಿದ್ಯಾಭ್ಯಾಸದ ಕಡೆಗೆ ಹೆಚ್ಚಿನ ಪ್ರೋತ್ಸಾಹವನ್ನಿಡುತ್ತಾರೆಂಬುದಕ್ಕೆ ಇದೊಂದು ಹೆಗ್ಗುರುತಾಗಿರುತ್ತದೆ.

ಇಲ್ಲಿಯ ಮಾಜಿ ಪ್ಲೀಡರರಾದ ಮಿ. ಎ. ಜೆ. ಲೋಬೊ ಇವರಿಗೆ ರಾವಸಾಹೇಬ ಪದವಿಯ ಬಹುಮಾನವು ದೊರತಿದೆ,

ಮದ್ರಾಸ ಗವರ್ನಮೆಂಟ ಸ್ಪೆಶ್ಯಲ್ ಟೆಸ್ಟ್ ಪರೀಕ್ಷೆಯು ಇದೇ ಬರುವ ತಾ. ೮ರಿಂದ ೧೩ರ ವರೆಗೆ ಇಲ್ಲಿನ ಕಲೆಕ್ಟರರ ಆಫೀಸಿನಲ್ಲಿ ನಡೆಯುವದು.

The Calicut Bank, Ltd.,
ದಿ ಕೆಲಿಕಟ್ ಬೇಂಕ್, ಲಿಮಿಟೆಡ್,
ಹೆಡ್ ಆಫೀಸು — ಕಲ್ಲಿ ಕೋಟೆ.
ಬ್ರಾಂಚುಗಳು:— ಮುಲ್ಲಸ್‌ಚೇರಿ, ತಲಚೇರಿ, ಕೊಚ್ಚಿ ಮತ್ತು ಪಾಲ್ಘಾಟು.
ರಿಜಿಸ್ಟರ್ಡ್ ಮತ್ತು ಅಧಿಕಾರಗೊಳಿಸಲ್ಪಟ್ಟ ಮೂಲಧನ ರೂ. 5,00,000—0—0.
ರೂಪಾಯಿ 10ರ 50,000 ಪಾಲುಗಳು.
(30—8—1924)ರ ವರೆಗೆ ಮೌಲ್ಯ ಮೂಲಧನ ರೂಪಾಯಿ 1,81,850—0—0.
ಒಂದು ವರುಷದ ಕಾಯಂ ಠೇವಣಾತಿಗೆ ಬಡ್ಡಿ ದರ ಸೇಕಡಾ ರೂ. 7—8—0.
ಕಳೆದ 4 ವರುಷಗಳಲ್ಲಿ ಪಾಲುಗಾರರಿಗೆ ಸೇಕಡಾ 12ರಂತೆ ಬಡ್ಡಿ ಹಂಚಿದೆ.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.
ಸಿ. ಕೃಷ್ಣನ್, ಬಿ. ಎ. ಬಿ. ಎಲ್.,
ಮೆನೇಜಿಂಗ್ ಡ್ಯಾರೆಕ್ಟರ್.
ಡ್ಯಾರೆಕ್ಟರರಲ್ಲಿ ಒಬ್ಬರು—
ಎಮ್. ನಾರಾಯಣ ಕಾಮತ್, ಬಿ. ಎ.,
ಪ್ಲೀಡರ್, ಕುಂದಾಪುರ.

ನಾವು ಈ ಮೊದಲು ಪ್ರಕಟಿಸಿದಂತೆ ಕಳೆದ ತಾ. ೧ಕ್ಕೆ ಕೆನರಾ ಹೈಸ್ಕೂಲಿನ ಭುವನೇಂದ್ರ ಹೋಲಿನಲ್ಲಿ ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರು ಕಳೆದ ಕೌನ್ಸಿಲು ಉಪಚುನಾವಣೆಯಲ್ಲಿ ಜಯಪ್ರದರಾದುದಕ್ಕೆ ಅವರನ್ನು ಅಭಿನಂದಿಸಲು ಕೆನರಾ ಹೈಸ್ಕೂಲಿನ ಹಳೆ ವಿದ್ಯಾರ್ಥಿಗಳ ಸಭೆಯು ಸದರಿ ಶಾಲೆಯ ಮುಖ್ಯೋಪಾಧ್ಯಾಯರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಭೆಯಲ್ಲಿ ರಾ|ಗಳಾದ ವಕೀಲ ಎಮ್. ಮಾಧವರಾವ್, ಎಮ್. ಎನ್. ಕಿಣಿ, ಯು. ಸಿ. ಸುಬ್ರಹ್ಮಣ್ಯ ಭಟ್, ಕುದ್ಮಿ ವೆಂಕಟ್ರಾವ್, ನಗರ ಶ್ರೀನಿವಾಸರಾವ್ ಮೊದಲಾದವರು ಶ್ರೀ ಹೆಗ್ಗಡೆಯವರ ಗುಣಕಥನವನ್ನು ಮಾಡಿದ್ದಲ್ಲದೆ, ಕೆನರಾ ಹೈಸ್ಕೂಲಿನ ಹಳೆ ವಿದ್ಯಾರ್ಥಿಗಳಲ್ಲಿ ಈ ಗೌರವದ ಪದವಿಯನ್ನು ಪಡೆದವರು ಇವರೊಬ್ಬರೆ ಆಗಿದ್ದು, ಇದು ಶಾಲೆಗೆ ಕೀರ್ತಿಯೂ ಆಯಿತೆಂದರು. ಶ್ರೀ. ಹೆಗ್ಗಡೆಯವರು ತನ್ನ ಭಾಷಣದಲ್ಲಿ ತಾನು ಸಮಾಜದ ಸೇವಕನೆಂದೂ, ಧರ್ಮವನ್ನು ಬಿಟ್ಟು ನಡೆಯುವವನಲ್ಲವೆಂದೂ, ತನ್ನನ್ನು ಚುನಾವಣೆ ಮಾಡಿದುದರಲ್ಲಿ ತೃಪ್ತರಾಗದೆ ತನ್ನ ಕಾರ್ಯನಿರ್ವಾಹದಲ್ಲಿಯೂ ಸಹಾಯಮಾಡಬೇಕೆಂದೂ ಮೊದಲಾಗಿ ಹೇಳಿದರು. ಕಡೆಗೆ ಸಭಿಕರಿಗೆ ಪನ್ನೀರು ಪುಷ್ಪಗಳು ಹಂಚಲ್ಪಟ್ಟು, ಸಭಾಂತ್ಯವಾಯಿತು.

ಕಾರ್ಕಳದ ಶ್ರೀ ಜೈನಧರ್ಮ ಜೀರ್ಣೋದ್ಧಾರಕ ಸಂಘದ ಕಡೆಯಿಂದ ಕಾರ್ಕಳದ ದಾನ್ಸಾಲೆ ಮಠದ ಬಳಿಯಲ್ಲಿ ನೂತನವಾಗಿ ಕಟ್ಟಿಸಿರುವ ಛಾತ್ರನಿಲಯದ ದ್ವಾರೋದ್ಘಾಟನವು ಮಹಾರಾಜಶ್ರೀ ಪುತ್ತೂರು ಕಲ್ಲಿಗೆ ಪುವಣಿ ಹೆಗ್ಗಡೇರ ಕರಕಮಲದಿಂದ ಇದೇ ಜ್ಯೇಷ್ಠ ಶು| ೧೫ಯು (ತಾ. ೬-೬-೧೯೨೫)ನೇ ಶನಿವಾರ ಮಧ್ಯಾಹ್ನ ಕಾರ್ಕಳದಲ್ಲಿ ನೆರವೇರುವುದು.

ಸ್ವೀಕಾರ.

ಇಲ್ಲಿಯ ಗೌಡಸಾರಸ್ವತ ಬ್ರಾಹ್ಮಣ ಕ್ಲಬ್ಬಿನ ವಾರ್ಷಿಕ ವರದಿಯ ರಿಪೋರ್ಟು.

ವಿವಿಧ ವಿಷಯಗಳು.

ಗೋಕರ್ಣ ಕ್ಷೇತ್ರದಲ್ಲಿ ನಡೆದ ಖೂನಿ!

ಕೆಲವು ದಿವಸಗಳ ಮುಂಚೆ ಮುತ್ತು ಹವಳ ಮುಂತಾದ್ದನ್ನು ಮಾರಾಟಮಾಡುವ ಇಬ್ಬರು ಸಂಚಾರಕರ ಖೂನಿಯು ಗೋಕರ್ಣದಲ್ಲಿ ನಡೆದಿತ್ತೆಂದು ವಾರ್ತೆ ಇತ್ತು. ಈ ವಿಷಯವನ್ನು ಕುರಿತು ಕುಮಟೆಯ 'ಕಾನಡಾವೃತ್ತ'ವೆಂಬ ಪತ್ರಿಕೆಯು ತಾ. ೨೫ನೇ ಮೇ ೧೯೨೫ನೆಯ ಸಂಚಿಕೆಯಲ್ಲಿ ಮುಂದಿನಂತೆ ಬರೆಯುತ್ತಿದೆ—

ಶ್ರೀ ಗೋಕರ್ಣ ಕ್ಷೇತ್ರದಲ್ಲಿ ಈ ಮುಂಚೆ ಪಿತೃಶಾಲೇಶ್ವರದ ಸಮೀಪ ನಡೆದ ಖೂನಿಗಳ ವಿಷಯ ಸ್ಥಳಿಕ ಪೋಲೀಸರು ಏನು ವ್ಯವಸ್ಥೆ ಮಾಡಿದರು ಎಂಬುದೇನು ಇನ್ನೂ ತಿಳಿಯುವುದಿಲ್ಲ. ಒಬ್ಬನ ಕುತ್ತಿಗೆಗೆ ಚೂರಿಯ ಪ್ರಹಾರವಾಗಿತ್ತೆಂದು ತಿಳಿಯುತ್ತದೆ. ಚಲೋ ಗಟ್ಟಿಗನಂತೆ! ಇನ್ನೊಬ್ಬನು ಶ್ರೀ ರಾಮತೀರ್ಥದ ಕೆಳಬದಿಗೆ ಸಣ್ಣ ಬೇಲಿಮೇಲೆ ಬಿದ್ದಿದ್ದನು. ಆತನಿಗೆ ಮುಸುಕಿತ್ತಾಗಿಯೂ ತಿಳಿಯುತ್ತದೆ. ಪೋಲೀಸರು ಆತ್ಮಹತ್ಯೆಯ ಸಿದ್ಧಾಂತ ಪ್ರತಿಪಾದನೆ ಮಾಡಿ, ಇಡೀ ಪ್ರಕರಣದ ಗಂಟುಕಟ್ಟಿಟ್ಟರೆಂದು ಸುದ್ದಿ ಹಬ್ಬಿದೆ. ಮೃತಪಟ್ಟವರು ಯಾರು? ಎಲ್ಲಿಂದ ಬಂದರು? ಏತಕ್ಕೆ ಬಂದವರು? ಯಾರಲ್ಲಿ ಬಂದರು? ಅಪರಾತ್ರಿಗೆ ಸಣ್ಣಿಲ್ಲದ ಆತ್ಮಹತ್ಯ ಮಾಡಿಕೊಳ್ಳುವ ಕಾರಣವೇನಿರಬಹುದು? ಎಂಬುದರ ಚೌಕಶಿಯಾದ ಹೊರತು, ಆತ್ಮಹತ್ಯೆಯ ಸಿದ್ಧಾಂತವು ಸ್ವಕಪೋಲಕಲ್ಪಿತವಾಗುವುದು; ಇಂಥ ಭಯಂಕರ ಪ್ರಕರಣಗಳನ್ನು ಮೂಲೆಗಟ್ಟುವುದು ಕಾರ್ಯದಕ್ಷ ಪೋಲೀಸರ ಕರ್ತವ್ಯವಲ್ಲ. ಅಷ್ಟು ಅಪರಾತ್ರಿಗೆ ಅವರೇನು ಹಾರಿಬೀಳಲಿಲ್ಲೆಂದು ಪೋಲೀಸರು ಅರಿಯದ ಮಾತಲ್ಲ. ಯಾರಲ್ಲಿಯಾದರೂ, ಯಾವಾಗಾದರೂ ಬಂದು ಉಳಿದಿರಲೇಬೇಕು. ಯಾರಲ್ಲಿ ಉಳಿದಿದ್ದರು? ಎಷ್ಟು ದಿನ ಉಳಿದಿದ್ದರು? ಅವರ ಮನೋಗತವೇನಿತ್ತು? ಅವರೊಡನೆ ಹಣವಿತ್ತೇನು? ಇದ್ದರೆ ಎಷ್ಟು? ಎಂಬುದೆಲ್ಲ ಚೌಕಶಿಯಾಗಿದ್ದರೆ, ಆತ್ಮಹತ್ಯೆಯೋ? ಕೊಲೆಯೋ? ಎಂದು ಸ್ಪಷ್ಟವಾಗುತ್ತಿತ್ತು. ಪೋಲೀಸರು ಹೆಣಗಳ ಭಾವಚಿತ್ರಗಳನ್ನು ತೆಗೆದು ಪ್ರಕಟಿಸಬೇಕಾಗಿತ್ತು. ಊರೊಳಗೆ ಹರಡಿದ ಲೋಕಪ್ರವಾದಗಳನ್ನು ಕೇಳಿದರೆ ಪೋಲೀಸರು ಕರ್ತವ್ಯಭ್ರಷ್ಟರಾದರೆಂದು ಹೇಳಬೇಕಾಗುತ್ತದೆ. ಶ್ರೀ ಗೋಕರ್ಣ ಕ್ಷೇತ್ರದಲ್ಲಿ ಸಾವಿರಾರು ಪರಸ್ಥಳ ಯಾತ್ರಿಕರು ಬರುತ್ತಿದ್ದು, ಹೀಗೆ ಯಾತ್ರಿಕರ ವ್ಯವಸ್ಥೆಯಾಗಹತ್ತಿದರೆ, ಕ್ಷೇತ್ರದಲ್ಲಿ ಒಟ್ಸೊಂಟಿಗರು ಸಂಚರಿಸುವುದು ಗಂಡಾಂತರಪ್ರದವಾದೀತು. ಬೆತ್ತಕ್ಕೆ ಚಿನ್ನ ಹಚ್ಚಿಕೊಂಡು ಬ್ರಿಟಿಷ ರಾಜ್ಯದಲ್ಲಿ ನಿರ್ಭಯದಿಂದ ಬೇಕಾದಲ್ಲಿ ಅಡ್ಡಾಡಬಹುದೆಂದು ರಾಜ್ಯದ ಕೀರ್ತಿ ಹೇಳಲ್ಪಡುತ್ತಿದೆ. ಆದರಿಂದ ಜಿಲ್ಲಾಧಿಕಾರಿಗಳು ಈ ವಿಷಯ ಗುಪ್ತ ಪೋಲೀಸರನ್ನಾದರೂ ಕರೆದು ಸೂಕ್ಷ್ಮ ಚೌಕಶಿಮಾಡಬೇಕು. ಸ್ಥಳಿಕ ಪೋಲೀಸರು ಈ ಕಾರ್ಯಕ್ಕೆ ಅಪಾತ್ರರಿದ್ದಲ್ಲಿ ಅವರನ್ನೆಲ್ಲ ಸ್ಥಾನಾಂತರ ಮಾಡಿ, ಹೊಸ ಪೋಲೀಸರನ್ನು ನೇಮಿಸಿಕೊಂಡು ಈ ಕೆಲಸ ನಡಿಸಲೇ ಬೇಕು. ಈ ವಿಷಯ ಚೌಕಶಿಯಾಗದಿದ್ದರೆ, ಬ್ರಿಟಿಷ ರಾಜ್ಯದ ಕೀರ್ತಿಗೆ ಕಲಂಕ ತಗಲುವುದೆಂದು ನಾವು ಹೇಳಬೇಕ್ಕೇನು?

* * *

ಮಹಾರಾಷ್ಟ್ರ ಪ್ರಾಂತಿಕ ಪರಿಷತ್ತು.

ಮಹಾರಾಷ್ಟ್ರ ಪ್ರಾಂತಿಕ ಪರಿಷತ್ತು ಮುಗಿದುಹೋದರೂ ಅದರ ಮೇಲಿನ ಟೀಕೆಯ ಪ್ರವಾಹವು ಇನ್ನೂ ಹರಿಯುತ್ತಲೆ ಇದೆ! ಅದರಲ್ಲೂ ನಮ್ಮ ಕರ್ನಾಟಕದಲ್ಲಿ—ನಮ್ಮ ಶ್ರೇಷ್ಠವಾದ ಕರ್ನಾಟಕದಲ್ಲಿ—ಈ ಟೀಕೆಯು ವಿಶೇಷವಾಗಿ ನಡೆಯುತ್ತಿದೆ. ವಾಸ್ತವವಾಗಿ ಇನ್ನೊಂದು ಪ್ರಾಂತದ ಸಂಗತಿಯಲ್ಲಿ ಎಷ್ಟೊ ಅಷ್ಟೆ ತಲೆಹಾಕಬಹುದಲ್ಲದೆ ಹೆಚ್ಚಲ್ಲ. ಅಲ್ಲಲ್ಲಿಯ ರಾಜಕಾರಣವು ಆಯಾ ಪ್ರಾಂತದ ಮಟ್ಟಿಗಾಗಿದೆ. ಈಗ ಇಡಿ ಹಿಂದುಸ್ಥಾನದ ರಾಜಕಾರಣವನ್ನು ಒಂದು ಪ್ರಾಂತವು ಚರ್ಚಿಸಹತ್ತಿದ್ದಲ್ಲಿ ಆ ಬಗ್ಗೆ ಅನ್ಯರಿಗೆ ಒಂದೆರಡು ಮಾತುಗಳನ್ನು ಆಡಬೇಕೆಂದು ತೋರುವುದು ಸಹಜ. ಆದರೆ ಇಂಥ ಮಾತುಗಳಿಗೂ ಒಂದು ಮಿತಿ ಇದೆ. ಸದಭಿರುಚಿಗನುಸಾರವಾಗಿ ಅನುಕೂಲವೊ, ಪ್ರತಿಕೂಲವೊ, ಆದರೂ ಶಿಷ್ಟ ಮರ್ಯಾದೆಯನ್ನು ಉಲ್ಲಂಘಿಸದೆ ಎರಡುಮಾತುಗಳನ್ನು ಯಾರೂ ಬರೆಯಬಹುದು. ಇಂಥ ಮರ್ಯಾದೆಯನ್ನು ಉಲ್ಲಂಘಿಸುವುದು ಶೋಚನೀಯವು. ಅದನ್ನು ಇತರರು ಉಲ್ಲಂಘಿಸಿದರೆ ಅಷ್ಟೊಂದು ಆಶ್ಚರ್ಯವೂ ವ್ಯಸನವೂ ಉಂಟಾಗುವುದಿಲ್ಲ. ಪರಂತು ಮಹಾತ್ಮಾ ಗಾಂಧಿಜಿಗಳ ಕಡುಭಕ್ತರೆನ್ನಿಸಿಕೊಳ್ಳುವ ಚರಕಭಕ್ತರಾದ ಅನತ್ಯಾಚಿರಗಳು "ಪಿತ್ತವು ತಲೆಗೇರಿತು", "ದುರಹಂಕಾರ", "ಕುತ್ಸಿತ" ಇತ್ಯಾದಿ ಮುಕ್ತಾಫಲಗಳನ್ನು ಯಾವಾಗ ಹೊರಚೆಲ್ಲುವರೊ, ಮತ್ತು ವಿಕಾರವಶರಾಗಿ ತಾರತಮ್ಯವನ್ನು ಬಿಟ್ಟು ಏನೇನೊ ಅಸಂಬದ್ಧವನ್ನು ನುಡಿಯತೊಡಗುವರೊ ಆಗ ಇನ್ನೂ ಹೆಚ್ಚು ಆಶ್ಚರ್ಯವೂ, ವ್ಯಸನವೂ, ಉಂಟಾಗದೆ ಇರುವುದಿಲ್ಲ. ತನ್ನ ಭಕ್ತರಲ್ಲಿ ಇಂಥ ನಮೂನೆಯ ಅಭಿಮಾನಿಗಳಿದ್ದಾರೆ, ಬರೆ ಆರಾಧ್ಯ ದೇವತೆಯ ಮಹತ್ವಕ್ಕಾಗಿ ಮಾತ್ರ ಪೇಚಾಡುತ್ತಿದ್ದಾರೆ, ಕರ್ತವ್ಯದಲ್ಲಿ ಮಾತ್ರ ಯಾವುದನ್ನೂ ಮಾಡುವುದಿಲ್ಲವೆಂಬ ಸತ್ಯವನ್ನು ಆ ಸತ್ಯಜೀವಿತರಾದ ಮಹಾತ್ಮಾ ಗಾಂಧಿಗಳು ಯಾವಾಗ ತಿಳಿಯುತ್ತಾರೊ ಆಗ ಪಾಪ! ಕಣ್ಣೀರು ಸುರಿಸುವರು! ಇಂಥ ಪ್ರಸಂಗವು ಅವರ ಮೇಲೆ ಈ ಭಕ್ತಗುಣವು ಆಗಾಗ್ಗೆ ತಂದುಕೊಡುತ್ತಿದೆ! ಇದು ಶೋಚನೀಯವಲ್ಲವೆ? ಕೇಳಕರರಿಗೆ ಪಿತ್ತವು ತಲೆಗೇರಿತೆಂದು ಸತ್ಯವಿಧಾನಮಾಡುವ ಈ ಚಿಕ್ಕ ಮಹಾತ್ಮರಿಗೆ, ಪಿತ್ತವೇರದೇನೆ, ನೂಲಿನ ಠರಾವನ್ನು ಕಿತ್ತುಹಾಕಬೇಕೆಂದು "ಅವರೇ (ಕೇಳಕರರೇ) ಠರಾವು ಮುಂದಿಡುವುದೆಂ"ದು ಹೇಗೆ ತಾನೆ ತೋರೀತು? ಠರಾವು ಮುಂದಿಟ್ಟವರು ಭೋಪಟಕರರು, ಕೇಳಕರರಲ್ಲ. ಶಾಂತಚಿತ್ತದಿಂದ ತಿರುಗೊಮ್ಮೆ ಓದಿರಿ! ಬೆಳಗಾವಿನಲ್ಲಿ ಎರಡೂ ಪಕ್ಷಗಳ ಒಪ್ಪಂದವಾಗಿತ್ತು. ಈ ಒಪ್ಪಂದದಂತೆ ಒಬ್ಬ ಮಹಾತ್ಮಾ ಗಾಂಧಿಗಳಲ್ಲದೆ ಸಾಂಪ್ರದಾಯಕರಲ್ಲಿ ಇನ್ನು ಯಾರು ಸ್ವರಾಜಿಸ್ಟರ ಕಾರ್ಯಕ್ರಮಕ್ಕೆ ಬೆಂಬಲವನ್ನು ಕೊಟ್ಟಿದ್ದಾರೆ? ಬೆಂಬಲವಿರಲಿ, ಅನುಕೂಲ ರೀತಿಯಿಂದ ಅದನ್ನು ಯಾರು ಸಮರ್ಥಿಸಿದ್ದಾರೆ? ಆಗ ಸ್ವರಾಜಿಸ್ಟರು ಮಾತ್ರ ನೂಲಿನ ಶರ್ತವನ್ನು ತೆಗೆಯಬೇಕೆಂದು ಹೇಳಿದ್ದು ಹೇಗೆ "ದ್ರೋಹ"? ಈ ನ್ಯಾಯದ ತಕ್ಕಡಿಯು ನಿಮ್ಮ ಕೈಯಲ್ಲಿ ಇದ್ದ ಇರಬಹುದು, ಇರಲಿ. ಅದರಿಂದ ನಿಮಗೆ ಬೇಕಾದ ರೀತಿಯಲ್ಲಿ ನೀವು ನ್ಯಾಯವನ್ನೂ, ನೀತಿಯನ್ನೂ, ಸತ್ಯವನ್ನೂ ತೂಗಿಸಿಕೊಳ್ಳಿರಿ. ಲೋಕದ ಕೈಯಲ್ಲೂ ಇನ್ನೊಂದು ತಕ್ಕಡಿ ಇದೆ. ಅದರ ಯೋಗ್ಯತೆಯು, ಕೂಡಲೆ ಅಲ್ಲವಾದರೂ ಅನುಭವಾಂತ್ಯದಲ್ಲಿ ಎಲ್ಲರಿಗೂ ಗೋಚರವಾಗುತ್ತದೆ. ಸ್ವಯಂ ಮಹಾತ್ಮರೆ ಕೊನೆಗೆ ಇದನ್ನು ಒಪ್ಪುತ್ತಾರೆ. ಈ ಅನುಭವವು ಮುಂಚಿನದೆ. ಆದ್ದರಿಂದ ಬೆಳಗ್ಗಿನ ೫ ಗಂಟೆಯ ಸಮಯ ಕತ್ತಲೆಯು ಸೂರ್ಯನನ್ನು ಬೈಚಿತ್ತಿದರೆ ಉಪೇಕ್ಷಾಬುದ್ಧಿಯಿಂದಲೆ ಅದರ ಕಡೆಗೆ ಯಾರಾದರೂ ಬೆನ್ನುಹಾಕಿಯಾರು!!

ಮಂಗಳೂರಲ್ಲಿ ಸ್ವಾಮಿ ದಯಾನಂದ ಸರಸ್ವತಿಯವರ — ಜನ್ಮ ಶತಾಬ್ದಿ ಮಹೋತ್ಸವ. —

ಕಳೆದ ಮೇ ತಾ. ೨೭, ೨೮ರಲ್ಲಿ ಸನ್ಯಾಸಿ ಗುಡ್ಡೆಯ ಆರ್ಯ ಸಮಾಜ ಮಂದಿರದಲ್ಲಿ ಜರಗಿತು. ಪ್ರಥಮ ದಿನ ಮುಂಜಾನೆ ಬೃಹತ್ ಹೋಮವಾಗಿ ಪಂಡಿತ ಧರ್ಮದೇವ ಸಿದ್ಧಾಂತಾಲಂಕಾರರು ವೇದೋಪದೇಶ ಮಾಡಿದರು. ಅಂದು ಸಾಯಂಕಾಲ ಶ್ರೀಯುತ ಉ. ಪಾ. ಕೃಷ್ಣಭಟ್ಟ, ಅವರ್ಗಳ್, ಬಿ. ಎ. ಬಿ. ಯಲ್.ರವರ ಅಧ್ಯಕ್ಷತೆಯಲ್ಲಿ ಶತಾಬ್ದಿ ಉತ್ಸವ ಕುರಿತಾದ ಭಾಷಣಗಳು ನಡೆದುವು. ಕಾಸರಗೋಡಿನ ವಕೀಲರಾದ ಶ್ರೀಯುತ ರಘುರಾಮ ದಂಡಿಲ್ಲಯರು ಆರ್ಯಸಮಾಜದ ಮೇಲೆ ಜನರಿಗಿರುವ ತಪ್ಪು ಗ್ರಹಿಕೆಗಳನ್ನು ತಿಳಿಯ ಹೇಳಿ, ಸ್ವಾಮಿಯವರ ಉದ್ದೇಶವು ಆರ್ಯಸಮಾಜದ ಮೂಲಕ ಸಫಲವಾಗಿ ಅದರಿಂದ ದೇಶಕ್ಕೆ ಈ ವರೇಗೆ ಉಂಟಾದ ಈ ಹೊತ್ತು ಇನ್ನು ಮುಂದೆ ಆಗತಕ್ಕ ಮಹಾ ಉಪಕಾರಗಳನ್ನು ವರ್ಣಿಸಿ ಗಂಭೀರವಾದ ಭಾಷಣ ಮಾಡಿದರು. ಹಿಂದೂ ಧರ್ಮಕ್ಕೊದಗಿದ ಭಯಂಕರ ಅವನತಿಯನ್ನು ಅನೇಕ ಪ್ರಮಾಣಗಳಿಂದ ಶ್ರೀಯುತ ಮೋಹನಪ್ಪ ತಿಂಗಳಾಯರು ರುಜುಪಡಿಸಿ, ಹಿಂದೂ ಧರ್ಮೋದ್ಧಾರಕ್ಕಾಗಿ ಋಷಿ ದಯಾನಂದರು ಮಾಡಿದ ತಪೋಬಲದ ಮಹಿಮೆಯನ್ನೂ ಮಥುರೆಯಲ್ಲಿ ಜರಗಿದ ಜನ್ಮ ಶತಾಬ್ದಿ ಉತ್ಸವದಿಂದ ಆರ್ಯ ಜಗತ್ತಿನಲ್ಲಿ ಉಂಟಾದ ಸಂಯುಕ್ತ ಶಕ್ತಿಸಾಮರ್ಥ್ಯವನ್ನೂ ವಿವರಿಸಿದರು. ಆಯುರ್ವೇದ ಭೂಷಣ ಶ್ರೀಯುತ ಯಂ. ವಿ. ಶಾಸ್ತ್ರಿಗಳವರು—ಮತಸ್ಥಾಪಕರಾದ ಇತರ ಎಲ್ಲಾ ಆಚಾರ್ಯರುಗಳಿಗಿಂತಲೂ ಋಷಿ ದಯಾನಂದಾಚಾರ್ಯರು ವೈದಿಕ ಧರ್ಮೋದ್ಧಾರಕ್ಕಾಗಿ ಸನ್ಯಾಸವನ್ನು ಕೈಕೊಂಡು ಮಾಡಿದ ಕಾರ್ಯಗಳೂ ಯೋಜನೆಗಳೂ ಅತ್ಯಂತ ಶ್ರೇಷ್ಠವೂ ಉತ್ತಮ ಫಲದಾಯಕವೂ ಆಗಿರುವುದೆಂದು ತಿಳಿಸಿದರು.

ಮರುದಿನ ತಾ. ೨೮ನೇ ಬೆಳಿಗ್ಗೆ ಬೃಹತ್ ಹೋಮವಾದ ತರುವಾಯ ಬ್ರಹ್ಮಶ್ರೀ ನಿಡ್ಲೋಡಿ ಅನಂತ ಉಪಾಧ್ಯಾಯರು—ವರ್ಣಧರ್ಮ, ದಾನ, ಯಜ್ಞ, ಪರೋಪಕಾರ ಇತ್ಯಾದಿ ವಿಷಯಗಳ ಕುರಿತು ವೇದ ಸೂಕ್ತಗಳ ಉಪದೇಶವನ್ನು ಸರಳ ಮತ್ತು ಓಜಸ್ವಿ ಭಾಷೆಯಿಂದ ವರ್ಣಿಸಿ, ಶ್ರೋತೃ ಸಮುದಾಯದ ಧನ್ಯತೆಗೆ ಪಾತ್ರರಾದರು. ಅಂದು ಸಾಯಂಕಾಲ ಶ್ರೀಯುತ ಕೆ. ರಂಗರಾಯರ ಅಧ್ಯಕ್ಷತೆಯಲ್ಲಿ ಸಮಾಜ ಸುಧಾರಣ ಸಮ್ಮೇಲನವು ಜರಗಿ, ಜಾತಿಭೇದ ನಿವಾರಣೆ, ಅಸ್ಪೃಶ್ಯತಾ ನಿವಾರಣೆ, ಶುದ್ಧಿ, ಬಾಲವಿವಾಹ ನಿಷೇಧ, ಬಾಲ ವಿಧವಾ ವಿವಾಹ ಇತ್ಯಾದಿ ವಿಷಯಗಳು ಸಭೆಯ ಮುಂದೆ ತರಲ್ಪಟ್ಟು ಶ್ರೀಯುತರುಗಳಾದ ಯು. ಗೋಪಾಲನ್ಯಾಕರು ಪಂಡಿತ ಧರ್ಮದೇವಜಿಯವರು, ಶ್ರೀಪಾದ ಶರ್ಮ, ಪ್ರಸನ್ನಕುಮಾರ ಬಿ. ಯೆ. ಅರಿಕೆರೆ ಪುರುಷೋತ್ತಮ ನ್ಯಾಕರು, ಯಸ್. ಯು. ದೇವಪ್ಪ ನ್ಯಾಕರು, ಯಂ. ಮಾಧವರಾವ್ ಬಿ. ಎ. ಬಿ. ಯಲ್. ಮತ್ತು ಬಿ. ಮೋಹನಪ್ಪ ತಿಂಗಳಾಯರು ಮೊದಲಾದವರು ಅನುಭವಪೂರ್ಣವಾದ ಭಾಷಣಗಳಿಂದ ಅನುಮೋದಿಸಿದ ತರುವಾಯ ಎಲ್ಲಾ ಠರಾವುಗಳು ಸರ್ವಾನುಮತಿಯಿಂದ ಸ್ವೀಕರಿಸಲಾಯಿತು.

ತರುವಾಯ ಮೂಡುಬಿದರೆಯ ಶ್ರೀಯುತ ಕರಂಜೆ ಶ್ಯಾಮರಾಯರ ಅಧ್ಯಕ್ಷತೆಯಲ್ಲಿ ಹಿಂದೀ ಆರ್ಯಭಾಷಾ ಸಮ್ಮೇಲನವು ಜರಗಿತು. ಶ್ರೀಯುತ ಯಸ್. ಯು. ರಾಮಚಂದ್ರ ನ್ಯಾಕರು ದೇಶದಲ್ಲೆಲ್ಲಾ ಹಿಂದೀ ಭಾಷಾ ಪ್ರಚಾರವಾಗಬೇಕೆಂಬ ಠರಾವನ್ನು ಮುಂದೆ ತಂದು, ಹಿಂದೀ ಭಾಷೆಯಲ್ಲಿಯೇ ಚಲೋದಾಗಿ ಮಾತಾಡಿದರು. ಶ್ರೀಯುತರುಗಳಾದ ಶ್ರೀಪಾದ ಶರ್ಮರವರೂ, ಬಿ. ಮೋಹನಪ್ಪ ತಿಂಗಳಾಯರೂ ಚಲೋ ಹಿಂದೀ ಭಾಷೆಯಲ್ಲಿಯೇ ಭಾಷಣಮಾಡಿ, ಠರಾವನ್ನು ಸಮರ್ಥಿಸಿದರು. ಅಧ್ಯಕ್ಷರು ಅತ್ಯಂತ ಗಂಭೀರ ಮತ್ತು ಪ್ರೌಢವಾದ ಹಿಂದೀ ಭಾಷೆಯಲ್ಲಿ ಮಾತಾಡಿ ಹಿಂದೀ ಭಾಷಾ ಪ್ರಚಾರವೂ, ಗೊರಕ್ಷಣೆಯೂ ನಮ್ಮ ದೇಶದ ಉದ್ಧಾರಕ್ಕೆ ಅತ್ಯಂತ ಅವಶ್ಯವೆಂದು ತೋರಿಸಿದರು. ಈ ಶತಾಬ್ದಿ ಉತ್ಸವದ ಸಂದರ್ಭದಲ್ಲಿ ಸ್ವಾಮಿ ಶ್ರದ್ಧಾನಂದ ಸನ್ಯಾಸಿಯವರು ಕಳುಹಿಸಿದ ಸಂದೇಶವನ್ನು ಪಂಡಿತ ಧರ್ಮದೇವ ಸಿದ್ಧಾಂತಾಲಂಕಾರರು ಓದಿ ಹೇಳಿದರು. ಅನಂತರ ಶಾಂತಿಪಾಠವಾಗಿ ಶ್ರೋತೃ ಸಮುದಾಯಕ್ಕೆಲ್ಲ ಫಲಾಹಾರ ಪಾನಕಗಳನ್ನು ಹಂಚಿ ಉತ್ಸವವು ಸಮಾಪ್ತಿಗೊಳಿಸಲಾಯಿತು.

ಮಂಗಳೂರು ಆರ್ಯಸಮಾಜದ ಚಾಲ್ತಿ ವರುಷದ ಕಾರ್ಯಕರ್ತರುಗಳಾಗಿ ಈ ಕೆಳಗಿನ ಗೃಹಸ್ಥರು ಆರಿಸಲ್ಪಟ್ಟರು:—

ಶ್ರೀಯುತ ಯಂ. ಮುಕುಂದರಾಯರು ಅಧ್ಯಕ್ಷರು,—ಶ್ರೀಯುತ ಪುತ್ತೂರು ಸಂಜೀವ ಯಂ. ಯೆ. ಬಿ. ಯಲ್, ಉಪಾಧ್ಯಕ್ಷರು,—ಶ್ರೀಯುತರುಗಳಾದ ಯಂ. ಮಾಧವರಾವ್, ಬಿ. ಎ. ಬಿ ಎಲ್, ಮತ್ತು ಬಿ. ಮೋಹನಪ್ಪ ತಿಂಗಳಾಯರು ಸಂಯುಕ್ತ ಕಾರ್ಯದರ್ಶಿಗಳು—ಶ್ರೀಯುತ ಯು. ಲಕ್ಷ್ಮಣ ನ್ಯಾಕರು, ಕೋಶಾಧಿಕಾರಿ.

ಮಂಗಳೂರು ಆರ್ಯಸಮಾಜದ ಐದನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಸ್ವಾಮಿ ಶ್ರದ್ಧಾನಂದಜಿಯವರು ಡಿಲ್ಲಿಯಿಂದ ಕಳುಹಿಸಿದ ಸ್ಫೂರ್ತಿದಾಯಕ ಸಂದೇಶ.

ವಾರ್ಷಿಕೋತ್ಸವಕ್ಕೆ ನೆರೆದಿರುವ ಆರ್ಯ ಭ್ರಾತೃಗಳಿಗೆ ಈ ಪವಿತ್ರವಾದ ದಿವಸದಲ್ಲಿ ವೈದಿಕ ಧರ್ಮವು ಯಾವುದೊಂದು ಸಂಪ್ರದಾಯಕ್ಕೆ ಅಥವಾ ಮತಕ್ಕೆ ಸೇರಿದಲ್ಲವೆಂಬುದನ್ನು ದಯಮಾಡಿ ಮರೆಯಬೇಡಿರಿ. ಅದೊಂದು ಶಾಶ್ವತವಾದ ಧರ್ಮವಾಗಿದೆ. ಅದರ ಹೊರತು ಸಮಾಜ ಧಾರಣವು ಅಸಾಧ್ಯವು. ಅಪರಿಮಿತವಾದ ಆಧ್ಯಾತ್ಮಿಕ ಭಂಡಾರವನ್ನು ಪ್ರಾಚೀನ ಕಾಲದಲ್ಲಿ ಪಡೆದಿರುವ ನಿಮಗೆ ಇಂದು ಕೂಡ ಪೀಡಿತ ಜನರಿಗೆ ಶಾಂತಿಯನ್ನು ಕೊಡುವ ಯೋಗ್ಯತೆಯು ಇರುವುದು. ಆದರೆ ಆರಂಭದಲ್ಲಿ ನೀವು ನಿಮ್ಮಲ್ಲಿರುವ ಎಲ್ಲಾ ಅಪವಿತ್ರತೆಯನ್ನು ಹೋಗಲಾಡಿಸಬೇಕು. ನೀವು ನಿತ್ಯವೂ ಪಂಚಯಜ್ಞಗಳನ್ನು ಮಾಡುವಿರಿ ಎಂಬದಾಗಿಯೂ, ಅಸ್ವಾಭಾವಿಕವಾದ ಜಾತಿಭೇದದ ಬಂಧನವನ್ನು ಮುರಿಯುವಿರಿ ಎಂಬದಾಗಿಯೂ ನಿಮ್ಮ ಜೀವಿತದಲ್ಲಿ ವರ್ಣಾಶ್ರಮ ಧರ್ಮವನ್ನು ನೆಲೆಗೊಳ್ಳುವಿರಿ ಎಂಬದಾಗಿಯೂ, ಅಸ್ಪೃಶ್ಯತೆಯ ಕಲಂಕವನ್ನು ನಿಮ್ಮ ಜನ್ಮಭೂಮಿಯಿಂದ ನಿರ್ಮೂಲಪಡಿಸುವಿರಾಗಿಯೂ, ಆರ್ಯಸಮಾಜದ ಸಾರ್ವಭೌಮಿಕ ಧರ್ಮ ಮಂದಿರದ ಬಾಗಿಲನ್ನು ಸಂಪ್ರದಾಯ, ಜಾತಿ, ವರ್ಣ, ಜನಾಂಗವೆಂಬ ಭೇದವಿಲ್ಲದೆ ಎಲ್ಲಾ ಜನರಿಗೂ ತೆರೆಯುವಿರಿ ಎಂಬದಾಗಿಯೂ ಈ ದಿವಸವೇ ಗಂಭೀರವಾದ ವ್ರತವನ್ನು ಕೈಕೊಳ್ಳಿರಿ. ಪರಮೇಶ್ವರನು ನಿಮ್ಮ ಈ ವ್ರತವನ್ನು ಪೂರೈಸುವಂತೆ ನಿಮಗೆ ಸಹಾಯವನ್ನು ಮಾಡಲಿ; ನೀವು ನಿಮ್ಮ ಕರ್ತವ್ಯವನ್ನು ಮಾಡುವುದರಲ್ಲಿ ಆತನು ನಿಮ್ಮನ್ನು ಪ್ರೇರೇಪಿಸಲಿ, ಮತ್ತು ಈ ಸನ್ಯಾಸಿಯು ತಿರಿಗಿ ನಿಮ್ಮನ್ನು ಸಂದರ್ಶಿಸುವಾಗ್ಗೆ ನೀವು ನಿಮ್ಮ ಧ್ಯೇಯ ಸಾಧನೆಯಲ್ಲಿ ಅಭಿವೃದ್ಧಿಯನ್ನು ಹೊಂದಿರುವ ಚಿನ್ನೆಯನ್ನು ತೋರಿಸುವಂತೆ ಭಗವಂತನು ನಿಮಗೆ ಸಹಾಯವನ್ನು ಮಾಡಲಿ. ನಿಮ್ಮ ಧರ್ಮ ಭ್ರಾತ್,

ಶ್ರದ್ಧಾನಂದ ಸನ್ಯಾಸಿ.

ಮೂಡಬಿದ್ರೆ ಶ್ರೀ ಗೋಪಾಲಕೃಷ್ಣ ದೇವಸ್ಥಾನದ ಸಹಾಯಕ ಫಂಡಿನ ಸಮಸ್ತ ವರ್ಷದ ವರ್ಧಂತಿ ಸಮಾರಂಭವು.

ಮೂಡಬಿದ್ರೆ ಶ್ರೀ ಗೋಪಾಲಕೃಷ್ಣ ದೇವಸ್ಥಾನದ ಸಹಾಯಕ ಫಂಡಿನ ಸಪ್ತಮ ವರ್ಷದ ವರ್ಧಂತಿ ಸಮಾರಂಭವು ಮೊದಲೇ ನಿಯಮಿತವಾಗಿದ್ದಂತೆ ತಾ. ೨೯-೫-'೨೫ನೆಯ ಶುಕ್ರವಾರ ದಿನ ಶ್ರೀ ಧರ್ಮಸ್ಥಳ ಮ॥ ರಾ॥ ಮಂಜಯ್ಯ ಹೆಗಡೆ ಅವರ್ಗಳ್ ಎಮ್. ಎಲ್. ಸಿ. ಇವರ ಅಧ್ಯಕ್ಷತೆಯಲ್ಲಿ ಬಲು ವಿಜೃಂಭಣೆಯಿಂದ ಜರಗಿದ್ದುದಾಯಿತು. ಮ॥ ರಾ॥ ಮದ್ರಾಸು ಹೈ ಕೋರ್ಟ ವಕೀಲರಾದ ಬಿ. ಸೀತಾರಾಮರಾಯರು, ವೇಣೂರು ದೆಕ್ಕಣ ನಾಗರಾಜ ಶೆಟ್ರವರು, ಬಿ. ಎ. ಮು. ನೆಲ್ಲಿಕಾರು ಶಾಲಾ ಮಾಸ್ತರ್ ಕೆ. ಕೃಷ್ಣರಾಯರವರು, ಮೂಡಬಿದ್ರೆ ಅರಮನೆ ಧರ್ಮಸಾಮ್ರಾಜಯ್ಯನವರು, ಪಟೇಲ ಸರ್ವೋತ್ತಮ ಮಲ್ಯರು, ಕಾರಾಡಿ ಕಂಕ್ರಿನಾರಾಯಣಯ್ಯನವರು, ವೆಂಡರು ಪಾಂಡುರಂಗರಾಯರು, ಪ್ರಾಂತ್ಯ ಶ್ರೀ॥ ಸೇಕ್ ಹುಸ್ಸೈನ್ ಸಾಹೇಬರವರು, ಇಮಾಮು ಸಾಹೇಬರವರು ಮುಂತಾದ ಬಹು ಮಂದಿ ಮಾನ್ಯ ಗೃಹಸ್ಥರು ಸಭೆಗೆ ಸೇರಿದ್ದರು.

ಇವರೇ ಮೊದಲಾದ ಅನೇಕ ಮಾನ್ಯ ಸಭ್ಯ ಮಹಾಶಯರಿಂದ ಸಭೆಯು ಅಲಂಕೃತವಾಗಿತ್ತು. ಪ್ರಾರಂಭದಲ್ಲಿ ಸ್ಥಳೀಕ ಮಹಾಶಯರೆಲ್ಲರು ಕೂಡಿ ಅಧ್ಯಕ್ಷ ಮಹಾಶಯರನ್ನು ಬೇಂಡು ವಾಲಗದಿಂದ ಸಭಾಮಂಟಪಕ್ಕೆ ಕರೆದುಕೊಂಡು ಬಂದ ಬಳಿಕ ಸಭಿಕರ ಪರವಾಗಿ ರಾ॥ ವಕೀಲ್ ಇಡ್ಯ ವಾಸುದೇವಯ್ಯನವರು ಮ॥ ರಾ॥ ಶ್ರೀ ಹೆಗಡೆಯವರನ್ನು ಸಭಾಧ್ಯಕ್ಷಸ್ಥಾನವನ್ನಲಂಕರಿಸ ಬೇಕೆಂದು ಪ್ರಾರ್ಥಿಸಿ ಕೊಂಡೊಡನೆಯೇ ಸಮಸ್ತರ ಕರತಾಡನ ಘೋಷದೊಂದಿಗೆ ಅಗ್ರಾಸನಸ್ಥಾನವನ್ನಲಂಕರಿಸಿದರು. ಬಳಿಕ ಕಾರ್ಯದರ್ಶಿಯವರಿಂದ ಸಂಘದ ವರದಿಯನ್ನು ಓದಲಾಯಿತು. ರಾ॥ ಮುನ್ನೂರು ಶಿವರಾಮಯ್ಯನವರು ವರದಿಯಲ್ಲಿ ತೋರುವ ಕೈಗಾರಿಕೆ ಶಿಕ್ಷಣದ ವಿಷಯದಲ್ಲಿ ಸಂಘವು ಮೊದಲು ಯಾವ ಯಾವ ವಿಧದ ಕೈಗಾರಿಕೆ ಶಿಕ್ಷಣವನ್ನು ಕೊಡಬಲ್ಲುದು? ಎಷ್ಟು ಮಂದಿ ಉಪಾಧ್ಯಾಯರನ್ನು ಇಡುವ ಯೋಚನೆಯಲ್ಲಿದೆ? ಎಂಬಿವೇ ಮೊದಲಾದುದನ್ನು ಈಗಲೇ ನಿರ್ಧರಿಸಬೇಕೆಂದು ಸೂಚಿಸಿದುದಕ್ಕೆ ಶ್ರೀ॥ ಇ. ವಾಸುದೇವಯ್ಯನವರು ಇವೆಲ್ಲಾ ನಿರ್ಣಯಗಳನ್ನು ಕಾರ್ಯನಿರ್ವಾಹಕ ಮಂಡಳಿಯವರು ಬೇರೆ ಸಭೆ ಕೂಡಿ ನಿರ್ಧರಿಸುವ ಕೆಲಸವಾಗಿರುತ್ತದೆಂದು ಸೂಚಿಸಿದರು. ತರುವಾಯ ರಾ॥ ಎಸ್. ಆರ್. ಹೆಬ್ಬಾರರು ಸಂಘವು ಇನ್ನು ಮುಂದೆ ಬೇಗದಲ್ಲೇ ಪ್ರಚಾರಕ್ಕೆ ತರಲಿಕ್ಕಿರುವದೆಂಬ ಧಾರ್ಮಿಕ ಶಿಕ್ಷಣದ ಮುಖ್ಯ ತಾತ್ಪರ್ಯವೆಂದರೆ ಈಗ ಎಲ್ಲೆಲ್ಲೂ ಸಂಘ ಸಂಸ್ಥೆಗಳೇ ಕೇಳಬರುತ್ತಲಿವೆ. ಆದರೆ ಸರ್ವರ ಐಕ್ಯವನ್ನು ಅಭಿವೃದ್ಧಿಯನ್ನು ಬಯಸಿ ಹೆಣಗಾಡುತ್ತಿರುವ ಸಂಘವೆಂದರೆ ಇದೊಂದೇಯಾಗಿರುವ ನನ್ನ ಅಭಿಪ್ರಾಯ ಹೇಗಂದರೆ—

ಸಂಘದ ಉದ್ದೇಶಗಳು ಎಲ್ಲಾ ಧರ್ಮದವರಿಗೂ ಅನುಕೂಲವಾಗುವಂತಿವೆ. ತನ್ನ ಉದ್ದೇಶಗಳನ್ನೆಲ್ಲಾ ತನ್ನ ಕೈಲಾದ ಮಟ್ಟಿಗೂ ಕಾರ್ಯರೂಪದಲ್ಲಿ ತರಲು ಪ್ರಯತ್ನಿಸುತ್ತಿರುವುದು ತುಂಬಾ ಸಂತೋಷ. ಅಲ್ಲದೆ ದೇಶದ ಸಂಪತ್ತು ಸಮೃದ್ಧಿಗೂ ಜನಾಂಗದ ಉನ್ನತಿಗೂ ಮೂಲಾಧಾರವಾದ ಧಾರ್ಮಿಕ ಶಿಕ್ಷಣದ ಉದ್ದೇಶದೊಳಗಣ ಈಗಿನ ಕಾಲಕ್ಕನುಗುಣವಾದ ಕೈಗಾರಿಕೆ ಶಿಕ್ಷಣವನ್ನು ಕೊಡುವ ವಿದ್ಯಾಮಂದಿರವನ್ನು ತೆರೆಯಬೇಕೆಂದು ಈಗಾಗಲೇ ಮುಷ್ಟಿ ಫಂಡು ಕೂಡಿಸಿಟ್ಟು ಸಹಾಯಮಾಡುವದು ನೇಯಿಗೆ, ಹೊಲಿಗೆ, ಬಡಗಿ ಇವೆ ಮೊದಲಾದ ಕೈಗಾರಿಕೆಯ ಶಿಕ್ಷಣದ ಮುಖ್ಯ ಶಾಲೆಯೊಂದನ್ನು ತೆರದು ಬಳಿಕ ಒಂದೊಂದು ಹೆಚ್ಚಿಸುತ್ತಾ ಬರಬಹುದೆಂದೂ ಈ ತರದ ಶಿಕ್ಷಣದಿಂದ ಎಲ್ಲಾ ಧರ್ಮದವರಿಗೂ ಪ್ರಯೋಜನವೂ ಸ್ವತಂತ್ರ ಜೀವನಕ್ಕಾಧಾರವೂ ಆಗಿರುವದಲ್ಲದೆ ನಮ್ಮ ದಕ್ಷಿಣ ಕರ್ನಾಟಕಕ್ಕೆ ಭೂಷಣವೆಂದರೆ ಅದೊಂದು ಅತಿಶಯೋಕ್ತಿ ಎನ್ನಿಸದು ಎಂಬಿವೇ ಮೊದಲಾಗಿ ಮಾತನಾಡಿದರು.

ಕೊನೆಗೆ ಅಧ್ಯಕ್ಷ ಮಹಾಶಯರು ತಮ್ಮ ಭಾಷಣದಲ್ಲಿ ಶ್ರೀ ಗೋಪಾಲಕೃಷ್ಣ ದೇವಸ್ಥಾನಕ್ಕೂ ಜಿನ ಬಂಧುಗಳಿಗೂ ಇರುವ ಪೂರ್ವ ಸಮ್ಮಂಧ ಈಗಣ ಸ್ಥಿತಿಗಳನ್ನು ವಿವರಿಸಿ ಕಾರ್ಯದರ್ಶಿಯರ ಸಾಹಸಾದಿಗಳನ್ನು ಶ್ಲಾಘಿಸಿಸುದಲ್ಲದೆ ಮೂರ್ತಿ ಪೂಜೆ, ಧರ್ಮ ಹಾಗೂ ಧಾರ್ಮಿಕ ಶಿಕ್ಷಣದ ಕುರಿತು ಸರಸವಾದ ಭಾಷಣವನ್ನು ಮಾಡಿದರು. ಅವರ ಭಾಷಣದೊಳಗಣ ವಿಷಯಗಳೆಲ್ಲವು ಮಹತ್ವವೂ ಮಾನ್ಯವೂ ಆಗಿದ್ದುವು. ವೇದಧ್ಯಾಯನಾದಿಗಳೇ ಧಾರ್ಮಿಕ ಶಿಕ್ಷಣವೆಂದೂ ಅದನ್ನು ಅತ್ಯಗತ್ಯ ಈ ಸಂಘವು ಕೈಗೊಳ್ಳಬೇಕೆಂದೂ ಹಾಗೂ ಈಗಣ ಕಾಲಕ್ಕೆ ತಕ್ಕುದಾದ ಕೈಗಾರಿಕೆ ಶಾಲೆಯೊಂದನ್ನು ತೆರೆಯುವ ಯೋಚನೆಯಂತು ತುಂಬಾ ಅತ್ಯಗತ್ಯವು ಎಂದುದಲ್ಲದೆ ಮುಷ್ಟಿ ಫಂಡನ್ನು ಪ್ರತಿಯೊಬ್ಬನು ಸಂಗ್ರಹಿಸುವದು ತುಂಬಾ ಶ್ರೇಯಸ್ಕರವೂ ಸುಲಭ ಸಾಧ್ಯವೂ ಎಂದರು—ಬಡವರಿಗೆ ಧರ್ಮಕಾರ್ಯದಲ್ಲಿ ಸಹಭಾಗಿಗಳಾಗಿ ಪುಣ್ಯ ಕೀರ್ತಿಗಳನ್ನು ಸಂಪಾದಿಸಲಿಕ್ಕೆ ಈ ಮುಷ್ಟಿ ಫಂಡಿನ ಸಹಾಯದಷ್ಟು ಉತ್ತಮ ಸುಲಭೋಪಾಯವು ಮತ್ತೊಂದಿರದು ಅದುದರಿಂದ ಸಮಸ್ತ ಕನ್ನಡಿಗರು ಮುಷ್ಟಿ ಫಂಡನ್ನಿತ್ತು ಸಹಾಯಮಾಡಿ ಸಂಘದ ಉದ್ದೇಶಗಳೆಲ್ಲಾ ಕಾರ್ಯರೂಪದಲ್ಲಿ ಬಂದು ಸಂಘವು ಅಭಿವೃದ್ಧಿ ಹೊಂದುವಂತೆ ಪ್ರೋತ್ಸಾಹಿಸುವುದು ಅತ್ಯಗತ್ಯವು ಎಂಬಿತ್ಯಾದಿ ಸೂಚಿಸುವುದಲ್ಲದೆ ಆಗಲೇ ಸಂಘಕ್ಕೆ ಸಹಾಯ ದ್ರವ್ಯವಾಗಿ ರೂ. ೧೦೧ನ್ನು ದಯಪಾಲಿಸಿದರು. ಇದಕ್ಕಾಗಿ ಸಂಘವು ಚಿರ ಕೃತಜ್ಞತೆ ಬದ್ಧವಾಗಿರುವುದು. ಶ್ರೀ ಗೋಪಾಲಕೃಷ್ಣನು ಈ ಧರ್ಮಾತ್ಮರನ್ನು ಉದ್ಧರಿಸಲೆಂದು ಪ್ರಾರ್ಥನೆ.

ರಾ॥ ಶ್ರಿಂಗೇಶ್ವರರಾಯರು ತಮ್ಮ ಮಿತ್ರರ ಸಹಿತ ಮಂಗಳ ಸಂಗೀತಾದಿಗಳಿಂದ ಸಭಿಕರನ್ನು ಆನಂದಗೊಳಿಸಿದ ತರುವಾಯ ಸಂಘದ ಪರವಾಗಿ ಶ್ರೀಯುತ ಇ. ವಾಸುದೇವಯ್ಯನವರು ಅಧ್ಯಕ್ಷ ಮಹಾಶಯರಿಗೂ, ಸಭಿಕರಿಗೂ ಕೃತಜ್ಞತೆ ಪೂರ್ವಕ ಧನ್ಯವಾದಗಳನ್ನರ್ಪಿಸಿದ ಬಳಿಕ ಪುಷ್ಪ ತಾಂಬೂಲ ಖಾದ್ಯಪಲಹಾರಗಳಿಂದ ಸಮಾರಂಭವು ಕೊನೆಗೊಂಡಿತು. ರಾತ್ರಿ ಉಡ್ಪಿಯ ವೇ. ಗುಂಡಾಚಾರ್ಯರ ದಾಮಾಜಿಪಂತ ಹರಿಕಥಾ ಕಾಲಕ್ಷೇಪವು ಬೋಧಪ್ರದವಾಗಿ ಆನಂದದಾಯಕವಾಗಿತ್ತು.

JUST ARRIVED
Continental Belts.
OF VARIOUS SIZES
Price Re. 1-10-0 each
Mangalore Trading Association,
Car Street, MANGALORE.

ಆರೋಗ್ಯ ಚಂದ್ರಿಕೆ.
ಮದ್ರಾಸ್.
ಸಂಪಾದಕರು: ಡಾಕ್ಟರ್ ಯು. ರಾಮರಾವ್, ಎಲ್. ಎಮ್. ಸಿ. ಎಫ್. ಎಮ್. ಯು. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಕುಟುಂಬದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ.

ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ.

ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವುದು.

'ಹೆಲ್ತ್' ಎಂಬ ನಮ್ಮ ಇಂಗ್ಲಿಷ್ ಮಾಸಪತ್ರಿಕೆಯನ್ನೋದಿ ಸಂತೋಷಿಸಿದ ಅನೇಕ ದೊಡ್ಡ ಮನುಷ್ಯರ ಪ್ರೋತ್ಸಾಹದ ಮೇಲೆ ಈ ಕನ್ನಡ ಪತ್ರಿಕೆಯನ್ನು ಹೊರಡಿಸಿದೆ.

ಅದರ ಸಂಪುಟ ೨ ಮತ್ತು ೧೧ನೇಯನ್ನಿನಂಬರ ೧೯೨೫ ಸಂಚಿಕೆಯಲ್ಲಿ ಕಾಣಿಸಿರುವ ವಿಷಯಗಳು.

ಮುಖಚಿತ್ರ:—ಪರ್ವತವಾಸಿನಿಯಾದ ಒಬ್ಬ ರೂಪವತಿ.
ಶ್ವಾಸಕ್ರಮ ಅಥವಾ ಪ್ರಾಣಾಯಾಮ.
ಹುಣಿಸೇಹಣ್ಣಿನ ಆಹಾರಗುಣಗಳು ಮತ್ತು ಔಷಧಗುಣಗಳು.
ಕಾಲುನಡೆಯೇ ಉತ್ತಮವಾದ ವ್ಯಾಯಾಮವು
ಜೇನಿನಲ್ಲಿರುವ ಗುಣಗಳು.
ಹಲ್ಲುಗಳ ರಚನೆ, ಪ್ರಯೋಜನ, ಕೆಲಸ ಮುಂತಾದವು.
ಮದ್ಯಪ್ರಾಶನದಿಂದ ಆರೋಗ್ಯಕ್ಕೆ ಉಂಟಾಗತಕ್ಕ ಹಾನಿ.
ಅಂಗಸಾಧನೆ ಮತ್ತು ಬುದ್ಧಿವ್ಯವಸಾಯ (ವಿದ್ಯಾಭ್ಯಾಸ).
ಗಾಯಗಳು, ಮತ್ತು ಉಳುಕು ಮುಂತಾದವು, ಅವುಗಳ ಚಿಕಿತ್ಸೆ
ನವನಾಗರಿಕ ಪ್ರಪಂಚಕ್ಕೆ ಸಹಜವಾದ ಮೂರು ಕೇಡುಕಗಳು.
ಒಬ್ಬ ಉಪವಾಸಿಯ ಅನುಭವ.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವವು. ಆರೋಗ್ಯಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ ರೂ. ೧—೮—೦; ಬಿಡುಪತ್ರಿಕೆ ಒಂದಕ್ಕೆ ರೂ. ೦—೩—೦. ಹಿಂದಿನ ಸಂಚಿಕೆಗಳು ಕೂಡ ದೊರಿಯುವವು.

ಚಂದಾದಾರರಾಗುವವರು ವಿ. ಪಿ. ಮೂಲಕವಾಗಿ ತರಿಸಿಕೊಳ್ಳುವದಕ್ಕಿಂತಲೂ ಹಣವನ್ನು ಮುಂಗಡವಾಗಿ ಕಳುಹಿಸುವುದು ಲಾಭಕರ. ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು 'ಆರೋಗ್ಯ ಚಂದ್ರಿಕೆ'ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು.

ಪತ್ರವ್ಯವಹಾರಕ್ಕೆ: 'ಆರೋಗ್ಯ ಚಂದ್ರಿಕೆ'
೩೩೩ ತಂಬುಚೆಟ್ಟಿ ಬೀದಿ, ಮದ್ರಾಸ್.

ತುಳು ಪಾಡ್ದನಗಳು.

ಬೊಬ್ಬರ್ಯ, ಕಲ್ಲುರ್ಟಿ-ಕಲ್ಕುಡ, ದೈಯ್ಯೊಂಗುಳು—ಕೋಡಕಿನಾರ್, ಮುಂಡತ್ತಾಯ ಪ್ರತಿ ಒಂದಕ್ಕೆ 2 ಆಣೆ. 11½ ಆಣೆ ಟಪ್ಪಾಲು ಚೀಟು ಕಳಹಿಸಿದರೆ 5 ಪುಸ್ತಕಗಳು ಕೂಡಲೇ ಕಳುಹಿಸಲ್ಪಡುವವು.

ವಿಳಾಸ: ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.	1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
Authorised and fully paid up Capital Rs. 300,000-0-0	ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
Reserve and other sinking Funds „ 259,000-0-0	ಕ್ಷೇಮನಿಧಿ ಮತ್ತು ಇತರ ಫಂಡುಗಳು 259,000—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ ಬೇಂಕ್ ಠೇವಣಾತಿಗಳೂ, ಪಡಕೊಳ್ಳೋಣಾಗುತ್ತವೆ
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗೆ ಬರಕೊಳ್ಳುವದು.
Canara Bank Ltd.,
Mangalore, 9th Feb. 1925.
K. Venkat Rao,
Secretary

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆ ಬಾರದಿದ್ದರೆ ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ಒಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಿಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ಒಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲೂಯನ್ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗರ್ಭಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೫೦ರಿಂದ ೬೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ಒಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೫೦ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲ ಪಂಡಿತರು,
ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್ ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.
ಏಜಂಟರು:—
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ,
ಮಂಗಳೂರು ಟವನಿಗೆ ಮಾತ್ರ.

ವಿದ್ಯಾವಾಚಸ್ಪತಿ
ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ
"ಸಂಕ್ಷೇಪಗೀತೆ"

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ್ಳ, ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದೆ. ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೦. ಟಪ್ಪಾಲು ಖರ್ಚು ಕೂಡಿ ಆಣೆ ೧೧ನ್ನು ಮನಿಯಾರ್ಡರ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಳ್ಳುವಾಗ ಆಣೆ ೨ರಕ್ಕಿಂತ ಜಾಸ್ತಿ ಖರ್ಚು ತಗಲುವುದು. ರಖಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.

ಪುಸ್ತಕ ದೊರಿಯುವ ವಿಳಾಸ:—
ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು. ಮತ್ತು
ಕೆನರಾಸ್ ಮಿಶನ್ ಬುಕ್ ಎಂಡ್ ಟ್ರೆಕ್ಟ ಡಿಪೋಜಿಟರಿ,
ಮಂಗಳೂರು.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀ ಕಾಶೀ, ಗಯಾ, ಪ್ರಯಾಗ, ಹರಿದ್ವಾರ ಬದ್ರಿನಾರಾಯಣ ದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರ ಕಡೆಯಿಂದ ಅನುಭವ ತೆಗೆದು ಪ್ರತಿಯೊಂದು ಸಿದ್ಧಮಾಡಿಕೊಂಡು ಬರೆದಿರುವರು. ೧ನೇದು ಮಂತ್ರಪ್ರಕರಣದಲ್ಲಿ ಮಂತ್ರ ಪಠಣದಿಂದಲೂ, ಮಂತ್ರ ಪ್ರಯೋಗದಿಂದಲೂ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವೂ ಇದೆ. ೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳು ಹೊರಡುವಿಕೆ, ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅದನ್ನು ಸಿದ್ಧಿ ಮಾಡಿಕೊಳ್ಳುವ ವಿವರವೂ ಇದೆ. ೩ನೇದು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು. ೪ನೇದು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾ ಸಹ, ಇದರಲ್ಲಿ ಉಂಟು. ಇದು ಪ್ರತಿನಿತ್ಯ ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷಧ ಮಾಡುವ ಕ್ರಮವನು ಚೆನ್ನಾಗಿ ಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಶಾಸವು ತಿಳಿಸಿರುವರು. ೫ನೇದು ಯಂತ್ರ ಪ್ರಕರಣದಲ್ಲಿ ವಶೀಕರಣ ಗೃಹಪೀಡಾ ನಿವಾರಣ ಭೂತಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು, ಇದಲ್ಲದೆ ಇನ್ನು ಅನೇಕ ವಿಧವಾದ ಅಘೋರ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರದಿರುವರು. ಈ ಗ್ರಂಥವು ಹತ್ತರ ಇದ್ದ ಬಳಿಕ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷಗಳೂ ವೈದ್ಯರೂ ಜೋತಿಷ್ಯರು, ಮಾಂತ್ರಿಕರು ತಾಂತ್ರಿಕರೂ ಮನೆಯೊಳಗೆ ಇದ್ದ ಹಾಗೆ ಆಗುತ್ತದೆ. ಇಂಥ ಗ್ರಂಥವು ಯಾರು ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿಯೊಬರು ತರಿಸಿ ನೋಡಬೇಕೆಂದು ಇದರ ಬೆಲೆ ತೀರ ಕಡಿಮೆಮಾಡಿ ಇರುವವು. ೨—೮—೦ ಟಪ್ಪಾಲು ಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ ನಾಟಕ ಕಾವ್ಯ, ಕಥೆಗಳು, ಯಕ್ಷಗಾನ, ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ:—
ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ

ಸ್ಪಿರಿಟ್ ಸ್ಟೋವ್.

ಈ ಸ್ಟೋವುಗಳು ಹಿತ್ತಾಳೆಯಿಂದ ತಯಾರಾದವು. ಇವರಲ್ಲಿ ಬಹು ಬೇಗನೆ ಅಡಿಗೆ, ಕಾಫಿ, ಟಿ, ಮುಂತಾದವುಗಳನ್ನು ಮಾಡಬಹುದು. ಬೇಗನೆ ಕೆಡದು, ಹೊಗೆ ಏಳದು, ವಾಸನೆ ಬರುವದಿಲ್ಲ. ಪ್ರಯಾಣಿಕರಿಗೂ ಬಹು ಅನುಕೂಲವಾದದ್ದು. ಕೆಲವು ಮಾತ್ರವೇ ಇರುವುದರಿಂದ ಬೇಗನೆ ಬರೆಯಿರಿ.

ಕ್ರಯ 1ಕ್ಕೆ 3—8—0.

ಹೊಸ ನಮೂನೆಯ ಸೆಲ್ಫ್ ಫಿಲ್ಲಿಂಗ್ ಫೌಂಟನ್ ಪೆನ್ನುಗಳು.

ಈ ಪೆನ್ನುಗಳು ವಿಲಾಯಿತಿಯಲ್ಲಿ ತಯಾರಾದವು. ಇವು ಹೊಸ ನಮೂನೆಯವು. ಇದಕ್ಕೆ ಗಾಜಿನ ನಿಬ್ಬು ಇರುವದು. ಈ ನಿಬ್ಬು ಎಂದಿಗೂ ಕೆಡದು. ಭಾರಿ ಕ್ರಯದ ಬಂಗಾರದ ನಿಬ್ಬುಗಳು ಬರೆಯುವದಕ್ಕಿಂತಲು ಬಹು ಚೆನ್ನಾಗಿ ಬರೆಯುವದು. ಮತ್ತು ತನ್ನಷ್ಟಕ್ಕೆ ತಾನೇ ಇಂಕಿಯನ್ನು ತುಂಬಿಕೊಳ್ಳುವದು, ಒಂದನ್ನು ತರಿಸಿನೋಡಿರಿ. ಬೇಡವಾದರೆ ಹಣ ವಾಪಾಸು ಕೊಡುವೆವು.

ಕ್ರಯ 1ಕ್ಕೆ ರೂ. 1—12—0.

The American Watch Co.,
P. B. No. 509. P. T. MADRAS.
ವಿಳಾಸ:— ಅಮೇರಿಕನ್ ವಾಚ್ ಕಂಪನಿ,
ಪೋ ಬಾ 509, ಪಿ. ಟಿ. ಮದರಾಸು.

Just Arrived OF **Fresh Consignment**

Best English Cycles.



REDUCTION IN PRICES.

Banger Cycles Model M. Made in Birmingham.
WITH DUNLOP OR BATES TYRES & TUBES ... @ Rs. 90—0—0
Barton Humber on Advance
WITH DUNLOP OR BATES TYRES & TUBES ... @ ,, 100—0—0
Senior Royal with B. S. A. Fitting.
WITH DUNLOP OR BATES TYRES &TUBES ... ...@ Rs. 145—0—0
Royal Saxon with B. S A. Fitting.
WITH DUNLOP OR BATES TYRES & TUBES ... ... @ Rs. 175—0—0
All the above Cycles include pump and tools.
BROOKES PATEERN 90/2 GERMAN SADDLE ... ...@ ,, 9—8—0
,, SADDLE 90/2 ,, ...@ ,, 21—0—0
,, ,, B/30 ,, ...@ ,, 26—0—0

For further particulars please write to us or call on us:—
All kinds of Cycle Accessories, Dunlop and German Tyres and Tubes
ARE AVAILABLE AT VERY CHEAP RATES.
Special Discount to Traders. *Easy Terms Arranged*
APPLY TO:—**The Mangalore Trading Association,**
Wholesale Dealers in Cycles and Cycle Accessories,
Car-Street, MANGALORE.

—ಗೋಡೆಗೆ ತಗಲಿಸುವ
ಹೊಸ ನಮೂನೆಯ—
ಟಿಕ್—ಟಾಕ್





ಎಂಬ ಈ ಗಡಿಯಾರಗಳು ಜರ್ಮನೀ ದೇಶದಲ್ಲಿ ತಯಾರಿಸಿದ್ದು. ಇವು ಕಂಠಾರು ಘಂಟೆಯನ್ನು ತೋರಿಸುವವು. ಇವಕ್ಕೆ ಬೀಗ ಕೊಡಬೇಕಾದಿಲ್ಲ. ಇದರಲ್ಲಿ ಕಾಣುತ್ತಿರುವ ಗುಂಡನ್ನು ಮೇಲಕ್ಕೆ ಎಳೆದರೆ ಸಾಕು. ತನ್ನಷ್ಟಕ್ಕೆ ತಾನೇ ಟಿಕ್—ಟಾಕ್ ಎಂಬ ಶಬ್ದವನ್ನು ಮಾಡುತ್ತಾ ಸರಿಯಾದ ಕಾಲವನ್ನು ತೋರಿಸುವದು. ಇದು ನೋಡುವುದಕ್ಕೆ ಬಹು ಲಕ್ಷಣವಾಗಿರುವುದು.

ಕ್ರಯ 1ಕ್ಕೆ ರೂ. 3—0—0
ಪೀಟರ್ ವಾಚ್ ಕಂಪೆನಿ
ಪೋಸ್ಟ್ ಬಾಕ್ಸ ನಂ. 27, ಮದ್ರಾಸ್.

ADVERTISE IN
The Business Directory
OF INDIA, BURMA & CEYLON

A Comprehensive Directory of the various Business-men, Exporters and Importers, Firms, Factories, Mills, Manufacturers, Merchants and Industries of the principal Cities, Ports and Towns of India, Burma and Ceylon.

PUBLISHED ANNUALLY
Rates for Advertisements

¼ Page	Rs.	50.
2 in. Single Column	,,	20.
1 in. Single Column	,,	15.
Name in Bold Types	,,	5.

Price per Copy Rs. 10.
PRINTERS & PUBLISHERS.
Business Directory Co.,
Kanava Press Buildings, MADRAS. E.
Telegrams: "KETHAKI" Phone 540

Just arrived! Look Sharp!
SCREW ELECTRIC TORCH LAMPS &
Pocket Electric Lamps
AVAILABLE
In different varieties, Mother of pearl lamps. Cycle lamps.
NICKEL PLATED WITH SIDE LANCE.
Hammered Brand, with Powerful Bulls-eye lance.
The Mangalore Trading Association,
Car Street, MANGALORE

ಪ್ರತಿಯೊಂದು ಕುಟುಂಬಿಗಳ ಮನೆಗಳಲ್ಲಿ ಸೌಖ್ಯವನ್ನು ತೋರಿಸುವುದಕ್ಕೂ ಮತ್ತು ಅವರವರ ಉಪಯೋಗಾರ್ಥವನ್ನು ತಿಳುವಳಿಕೆ ಬಗ್ಗೆ ನಡಿಸುವುದಕ್ಕೂ ಒಂದು ಮರ್ಮವಾದ ನಿಘಂಟು ಪುಸ್ತಕವು ಈ ನಮ್ಮ ಹಿಂದೂದೇಶದ ಸಮೂಹದಲ್ಲಿರುವುದು. ಅಂಥಾ ಪುಸ್ತಕವು ಯಾವದೆಂಬುದು

ನೀವುಗಳು ಬಲ್ಲಿರಾ?
(ಅದೇ)
"ಕಾಮಶಾಸ್ತ್ರವೆಂಬುವುದು."

ತಾವುಗಳು ಇನ್ನೂ ಈ ಪುಸ್ತಕದಲ್ಲಿ ಬರೆದಿರುವ ಸಾರಾಂಶವನ್ನು ಓದಿಲ್ಲದಿದ್ದರೆ, ಒಡನೇ ಒಂದು ಪುಸ್ತಕವನ್ನು ಕಳುಹಿಸುವಂತೆ ಒಂದು ಪೋಸ್ಟುಕಾರ್ಡು ಬರೆಯಿರಿ.

ಪುಸ್ತಕವನ್ನು ಇನಾಮಾಗಿ ಕಳುಹಿಸುವೆವು.

ಮುಖ್ಯವಾದ ತಿಳುವಳಿಕೆ.

ತಾವುಗಳು ಧೃಡಚಿತ್ತರಾಗಿಯೂ, ನಿಧಾನಸ್ಥರಾಗಿಯೂ, ಸೌಖ್ಯವಾಗಿಯೂ, ಕಷ್ಟವಿಲ್ಲದೇ ವಿಷಯಗಳನ್ನು ಧರಿಸುವ ಮನಸ್ಸನ್ನು ಹೊಂದಬೇಕಾದರೆ ನಮ್ಮ ಅಮೂಲ್ಯವಾದ "ಕಾಮಶಾಸ್ತ್ರವೆಂಬುವ ಪುಸ್ತಕದಲ್ಲಿ ಕಾಣಿಸಿರುವ ಆತಂಕನಿಗ್ರಹ ಮಾತ್ರೆಗಳನ್ನು ಸೇವಿಸಬೇಕು."

ಒಂದು ರೂಪಾಯಿ ಖರ್ಚುಮಾಡಿದರೆ 32 ಮಾತ್ರೆಗಳುಳ್ಳ ಒಂದು ಡಬ್ಬಿಯನ್ನು ತರಿಸಿ ಪ್ರಯತ್ನಿಸಬಹುದು.

ವಿವರವಾಗಿ ಬರೆದಿರುವ ಒಂದು ಕ್ಯಾಟಲಾಗು ಕಳುಹಿಸುವಂತೆ ಈ ದಿನವೇ ಒಂದು ಪೋಸ್ಟುಕಾರ್ಡು ಬರೆಯಿರಿ.

ಆತಂಕನಿಗ್ರಹ ಔಷದಾಲಯ,
ನಂಬ್ರ 26, ಬ್ರಾಡ್ವೆ, ಮದರಾಸು.

ಹೊಸಗ್ರಂಥಗಳು!! ಬೇಗನೇ ತರಿಸಿಕೊಳ್ಳಿರಿ!!
ಕೋಕಶಾಸ್ತ್ರವು.

ರಸಿಕ ವಾಚಕ ಮಹಾಶಯರೇ,

ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ, ಸಂಪಾದಿಸಿ, ಅದರಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನಷ್ಟೇ ಶೋಧಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ಲೇಜ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿಣಿ, ಸ್ತ್ರೀಯ ಇದರಂತೆ ಪುರುಷರಲ್ಲಿಯ ಭೇದ, ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ, ಜನನೇಂದ್ರಿಯಾದಿಗಳ ವರ್ಣನೆಯನ್ನೂ, ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ, ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ, ನಪುಂಸಕತ್ವ, ವಂಧ್ಯಾದೋಷಗಳ ಚಿಕಿತ್ಸೆಯನ್ನೂ, ಸ್ತ್ರೀಯರ ಗೂಡ ರಹಸ್ಯವನ್ನೂ, ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮೊದಲಾದ ಉಪಾಯಗಳನ್ನೂ, ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನು ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ.

ಇದರ ಬೆಲೆ ೧–೮–೦, ಟಪ್ಪಾಲು ಹಾಸಲು ೦–೪–೦.

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ
ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ
ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ಯಾವಂತರೂ ತಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ಗಾವರ್ಗಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನು ಕುರಿತ ಲೆಕ್ಕಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಧನಿಕರೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪೋಷಕರಿಗೆ	... ...	ರೂ. 3-0-0
ಇತರರಿಗೆ, ಪರಸ್ಥಳಕ್ಕೆ ಪೋಸ್ಟೇಜು ಸೇರಿ		,, 2-8-0.
,, ಸ್ಥಳೀಕರಿಗೆ	...	,, 1-8-0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪತ್ರಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕಾಗದ ಬರೆದು ತಿಳಿಯಬಹುದು.

ಎಡಿಟರ್,
ಬಿ. ಹನುಮಂತಯ್ಯಗೌಡ,
ಅರ್ಥಸಾಧಕ ಪತ್ರಿಕೆ,
ಅರಳೇಪೇಟೆ, ಬೆಂಗಳೂರು ಸಿಟಿ

Edited, Printed & Published by V. S. Kamath at the M. T. A. Sharada Press, Mangalore.

Registered: No. M. 498.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಶ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೯. ಮಂಗಳೂರು, ತಾರೀಕು ೧೨ನೇ ಶುಕ್ರವಾರ ಜೂನ್ ೧೯೨೫. ಸಂಚಿಕೆ ೨೪

The Canara Banking Corporation, Udipi. Ltd.

[illegible]ad Office:—	Branch:—
Udipi	Coondapoor
Paidup Capital	1,66,165—9—11
Reserve etc	64,700—0—0

Season Deposits
Carrying Special rate of 7% up to 15th June 1925 only.
Further Particulars on Application.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಉಡುಪಿ, ಲಿಮಿಟೆಡ್.

ಹೆಡ್ ಆಫೀಸು:— ಉಡುಪಿ	ಶಾಖೆ:— ಕುಂದಾಪುರ.
ವಸೂಲುತೆತ್ತ ಮೂಲಧನ	1,66,165—9—11
ರಿಜರ್ವ ವಗೈರೆ ಫಂಡುಗಳು	64,700—0—0

ತಾ. 15—6—1925ರವರೆಗೆ ಮಾತ್ರ ಸಾಲಿಯಾನ್ ಸೇಕಡಾ 7ರ ದರದ ಬಡ್ಡಿಯ ಮೇಲೆ ಮುಸುಂ ಠೇವಣಾತಿಗಳನ್ನು ಅಂಗೀಕರಿಸೋಣಾಗುತ್ತದೆ.
ಹೆಚ್ಚಿನ ಮಾಹಿತಿಗೆ ಬರೆಕೊಳ್ಳಿರಿ.

Office of the Corporation, Udipi, 1-3-'25 } **N. Ananda Rao,** *Secretary*

Wanted Agents
FOR
Every District in South India

For Pushing Sales of Our Calenders, Xmas and New Year Cards, Blotters, Pictures and Picture Post Cards, at wholesale rates. Deposit of Rs. 100—0—0 Essential.

Apply to:—
The South Indian Advertising Agency,
13, Kilary Road,
BANGALORR CITY.

ಶುದ್ಧ ರೋಮದ ಧಾವಳಿಗಳು.

1 ಮೊಳ ಉದ್ದ 1¼ ಮೊಳ ಅಗಲ ರೂ. 1¼ರಿಂದ 2 ವರೆಗೆ, 5 ಮೊಳ ಉದ್ದ 1½ ಮೊಳ ಅಗಲ ರೂ. 1½ ರಿಂದ 5 ವರೆಗೆ, 6 ಮೊಳ ಉದ್ದ 1½ ಮೊಳ ಅಗಲ ರೂ. 2¼ರಿಂದ 6 ವರೆಗೆ, 8 ಮೊಳ ಉದ್ದ 2 ಮೊಳ ಅಗಲ ರೂ. 3½ರಿಂದ 10 ವರೆಗೆ, 12 ಮೊಳ ಉದ್ದ 2¼ ಮೊಳ ಅಗಲ ರೂ. 6ರಿಂದ 12 ವರೆಗೆ, 16 ಮೊಳ ಉದ್ದ 2¼ ಮೊಳ ಅಗಲ ರೂ. 9 ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಖದ್ದರ್ ರೇಶ್ಮೆ ಮಡಿಗಳು, ಜಾಮಾರ್ಖಾನಿಗಳು, ಕಾಶೀ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, ಬಾಣಲಿಂಗ, ಜಾಗಂಟೆ, ತಾಳ, ಪನ್ನೀರ್‌ದಾನಿ, ಹಿತ್ತಾಳೆಯ ಆಟದ ಸಾಮಾನುಗಳು, ಫೋಟೋ ಉಂಗುರಗಳು ಮತ್ತು ಇನ್ನೂ ಅನೇಕ ಸಾಮಾನುಗಳು ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುವು. ಕ್ಯಾಟಲಾಗ್ ಇನಾಂ.

ವಿಳಾಸ—
ಶಿರೋಮಣಿ ಯು. ನಾರಾಯಣಾಚಾರ್ಯ
ಮತ್ತು ಕಂಪೆನಿ, ಚೌಕಂಬಾ, ಕಾಶೀ ಕ್ಷೇತ್ರ.

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ.

450 ಪುಟಗಳು ಎಚ್. ಗಣಪತಿರಾವ ಐಗಳ್ ಇವರಿಂದ ರಚಿತವಾದದ್ದು. ಕ್ರಯ ರೂ. 2-4-0

ಮಾರಾಟಕ್ಕೆ ಸಿದ್ಧವಾಗಿವೆ — ತುಳು ಪಾಡ್ದನಗಳು — ಮಾರಾಟಕ್ಕೆ ಸಿದ್ಧವಾಗಿವೆ.

ದೈಯ್ಯೊಂಗುಳು, ಕಲ್ಕುರ್ಟ—ಕಲ್ಲುಡ, ಕಣಂದೂರು ದೈಯ್ಯೊಂಗುಳು, ಮುಂಡತ್ತಾಯ, ಬೊಬ್ಬರ್ಯ.

ಸುಲಭ ದರಗಳು — ಶಾಲಾ ಪುಸ್ತಕಗಳು — ರಖಂ ಕೊಂಡುಕೊಳ್ಳುವವರಿಗೆ ಯೋಗ್ಯ ಡಿಸ್ಕೌಂಟ್.

ಅಜ್ಜಿಕಥೆಗಳು:—ಮೂರು ಕರಡಿಗಳು; ಹೇನುಸತ್ತು ಕಾಗೆ ಬಡವಾಯಿತು; ಅಗಸನ ಮುದ್ದೆ; ಇಲಿಗಳ ಕಥೆ; ಕೈ ಅಂಗಳ ದುಗ್ಗು; ಸಿಗಡಿ ಯಾಕೆ ಒಣಗಲಿಲ್ಲ; ಗುಡುಗುಡು ಗುಮ್ಮಟದ ದೇವರು; ಮುಸುಕಿನ ಕಾಳಪ್ಪ; ಒಡ್ಡನ ಓಟ; ಹೊಸ ಕನ್ನಡ ಪುಸ್ತಕ ಭಾಗ ೧; ಹೊಸ ಕನ್ನಡ ಪುಸ್ತಕ ಭಾಗ ೨; ಕನ್ನಡ ಪದ್ಯಗಳು; ಮಗ್ಗಿ ಪುಸ್ತಕ; ಅಂಕಗಣಿತ; ಪದ್ಯ ರತ್ನಾವಳಿ; ಎಕ್ಸರ್‌ಸೈಜ್ ಮತ್ತು ನೋಟು ಪುಸ್ತಕಗಳು, ಕಾಪಿ ಪುಸ್ತಕಗಳು, ಡ್ರಾಯಿಂಗ್ ಪುಸ್ತಕಗಳು

ಇತರ ಪುಸ್ತಕಗಳು:—ಸಂಕ್ಷೇಪಗೀತೆ, ಕೇಶವಸ್ತವ, ಹಿಂದೂ ವ್ರತವಿವೇಕ, ಚಂದ್ರಗುಪ್ತ ಚಕ್ರವರ್ತಿ, ಶ್ರೀ ಕೃಷ್ಣಸಂಧಾನ ಪದ್ಯಪಾಠಗಳು, ಹರಿಕಥಾ ಮೃತಸಾರ ಹರಿನಾಮಸಂಕೀರ್ತನೆ ಸುಧಾಂಮೃತ ಪದ್ಯಗಳು. ಬೆಂಕಿಪೆಟ್ಟಿಗೆ ತಯಾರಿಸುವ ವಿಧಾನ, ಸಾಬೂನು ತಯಾರಿಸುವ ವಿಧಾನ, ಸ್ವರಾಜ್ಯ ಭಕ್ತಿಲ್ಲಾಸ, ಚರಕಗೀತೆ, ಕೊಂಕಣಿ ಭಾಷೆಯಲ್ಲಿ ಚಂದ್ರಹಾಸ ನಾಟಕ, ಪ್ರಹಲ್ಲಾದ ಚರಿತ್ರೆ ನಾಟಕ, ಕನ್ನಡ ಮೃಚ್ಛಕಟಿಕ ನಾಟಕ, ಚಂದ್ರಹಾಸಾಭ್ಯುದಯ ನಾಟಕ, ಕೋವಿಲನ್ ಚರಿತ್ರೆ ನಾಟಕ, ಮಾಧವಿ ಉಪನ್ಯಾಸ ಭಾಗ ೧, ೨, ಮತ್ತು ೩,

AMRUTANJAN
Best Indian Pain Balm
Amrutanjan
BOMBAY

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು
ಅಮೃತಾಂಜನ
ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೇ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 2 ಆಣೆ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್, ಜೋರ್ಜ ಟೌನ್, ಮದ್ರಾಸು.
109 ಫ್ರೇಯರ್ ರೋಡ್ ಮುಂಬಯಿ.
ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

— ರಥೋತ್ಸವ, ವಿವಾಹ ಉಪನಯನಗಳ ಸಮಯ —
ಸರ್ವರಿಗೂ ಉಡಿಗೆ ತೊಡಿಗೆಗಳು ಬೇಕಾಗುವ ಸಂದರ್ಭ.

ಯಾರು, ಯಾವುದನ್ನು ಎಲ್ಲಿ ಪಡೆಯಬೇಕೆಂಬ ಶಂಕೆಯಿಂದ ವಿಕಂಪ ವಹಿಸಬೇಡಿರಿ. ಉಡಿಗೆತೊಡಿಗೆಗಳನ್ನು ಖರೀದಿಸುವಾಗ ನಿಮಗೆ ಬೇಕಾದ ಯಥಾರ್ಥ ಮಾಹಿತಿಯನ್ನು ಕಳೆದ ಹತ್ತುಹನ್ನೆರಡು ವರುಷಗಳಿಂದ ಪಡೆದು ನಮ್ಮಲ್ಲಿಯ ವ್ಯಾಪಾರವು ಗಿರಾಕಿಗಳಿಗೆ ಸರ್ವ ತೃಪ್ತಿಯಿಂದಲೂ ಲಾಭಕರವಾಗಿ ಪರಿಣಮಿಸುವಂತೆ ನಮ್ಮ ಜವಳಿ ಸಂಗ್ರಹವನ್ನು ಮಾಡಿರುತ್ತೇವೆ.

ಗುರ್ಪುರ್‌ಕಾರ್ ಬ್ರದರ್ಸ್, ರಥಬೀದಿ, ಮಂಗಳೂರು.

ಹೆಡ್ ಆಫೀಸು:—ರಥಬೀದಿ—(ಮೊದಲು ಸುಜೀರ ನಾಗಪ್ಪನಾಯಕ್, ಎಂಡ್ ಕೊ. ಇದ್ದಲ್ಲಿ; ಅಜೀಜುದ್ದೀನ್ ರಸ್ತೆಗೆ ತಿರುಗುವಲ್ಲಿ) ಮಂಗಳೂರು.

ಬ್ರೆಂಚ್ ಆಫೀಸು:—ರಥಬೀದಿ—(ಹಳೇ ತಾಲೂಕು ಕಚೇರಿಯ ಎದುರಕ್ಕೆ ಸಮೀಪವಿರುವ ಮಳಿಗೆ) ಮಂಗಳೂರು.

ಈ ದೇಶದ ಪ್ರಖ್ಯಾತಪಟ್ಟ ನೇಯುಗೆಯ ಕೇಂದ್ರಸ್ಥಳಗಳಾದ—ಬನಾರಿಸ್, ಪೂನಾ, ಅಹಮ್ಮದಾಬಾದ್, ಸೂರತ್, ಬೆಂಗಳೂರು, ಧರ್ಮಾವರಮ್, ಕಂಜೀವರಮ್, ಕೊಯಮುತ್ತೂರು, ಮಧುರೆ, ತಂಜಾವೂರು, ಕುಂಭಕೋಣ, ಆರ್ಣಿ, ಪಾಪಿಸೆಟ್ಟಿ, ಹುಬ್ಬಳ್ಳಿ, ಇಳಕಲ್, ಗದಗ, ಮದ್ರಾಸು ಈ ಪ್ರಾಂತ್ಯಗಳಲ್ಲಿ ತಯ್ಯಾರಾದ

ಜರಿಸೀರೆಗಳು, ದುಪ್ಪಟ್ಟಾ, ಜರಿಕಣ, ಪೇಟ್ಟ, ರೇಶ್ಮೆ ಸೀರೆಗಳು, ಅರಳೇಪೇಟೆ ಸೀರೆಗಳು, ಜಾರ್ಜೆಟ್ ರೇಶ್ಮೆ ಸೀರೆಗಳು, ಜರಿ ಅಂಚಿನ ಸೀರೆಗಳು, ರೇಶ್ಮೆ ಮಡಿಗಳು, ನಿತ್ಯ ಉಪಯೋಗದ ಸೀರೆಗಳು ಬಾಸ್ತಾಸ್, ಕರ್ನಾಟಕ ಮಿಲ್ಲ್‌ಗಳ ವ ಇತರ ಮಿಲ್ಲ್‌ಗಳ ಕೋಟಿಂಗ್ ಶರ್ಟಿಂಗ್.

ಕೈರಾಟೆಯಲ್ಲಿ ತಯಾರಿಸಿದ ನೂಲಿನಿಂದ ಮಾಡಿದ—
ಖದ್ದರ್ ಶರ್ಟಿಂಗ್, ಖದ್ದರ್ ಕೋಟಿಂಗ್, ಖದ್ದರ್ ಜೋಡಿ, ಖದ್ದರ್ ಪೇಷ್ಟಿ, ಅಂಗವಸ್ತ್ರ, ಇತ್ಯಾದಿ—
ಮುಸಲ್ಮಾನರಿಗೆ ಬೇಕಾದ ನಮೂನೆಯ ಲುಂಗಿ ತೊಪಿಗಳು ವಗೈರೆ—

ಎಲ್ಲ ಸಂಗ್ರಹವನ್ನೂ ನಮ್ಮ ಪ್ರೊಪ್ರಾಯಿಟರರಾದ ರಾ। ನಾರಾಯಣ ಪ್ರಭುಗಳು ತಾವೇ ಸ್ವತಃ ಆಯಾ ಊರುಗಳಿಗೆ ಹೋಗಿ ಸಂಗ್ರಹಿಸಿ ತಂದಿರುತ್ತಾರೆ.

ಶರ್ತ:—ನಗದು, ರೂಪಾಯಿ 50ಕ್ಕೆ ಮೀರಿದ ಜವಳಿಯನ್ನು ಖರೀದಿಸುವವರಿಗೆ ಸೇಕಡಾ 6¼ರ, ರೂ. 50ರಿಂದ 250ರವರೆಗೆ ಸೇಕಡಾ 10%, ರೂ. 250 ರಿಂದ 1000ಕ್ಕೆ 12½% ಈ ರೀತಿ ಡಿಸ್ಕೌಂಟು ಕೊಡಲ್ಪಡುವುದು.

ಆರ್. ಮಾರ್ಟಿನ್ನರ ಲಪ್ತಾ ಎಣ್ಣೆ

ಇದರ ಸುವಾಸನೆಯು, (ಪರಿಮಳವು) ಬಹಳ ಅಂದವಾಗಿಯೂ ಇರುವುದಲ್ಲದೆ, ಬಹಳ ಹೊತ್ತಿನ ವರೆಗೂ ಇರುತ್ತದೆ. ಈ ಎಣ್ಣೆಯನ್ನು ತಲೆಗೆ ಹಾಕಿಕೊಳ್ಳುವುದರಿಂದ ಕೂದಲುಗಳು ತಂಪಾಗಿಯೂ, ಕುಳ್ಳದಾಗಿಯೂ, ಕರಿದಾಗಿಯೂ, ಮೃದುವಾಗಿ ಬೆಳೆಯುತ್ತದೆ. ಇದನ್ನು ಪ್ರತಿದಿನ ಉಪಯೋಗಿಸುವುದರಿಂದ ಕೂದಲುಗಳು ಕಪ್ಪಾಗಿ ಹೊಳೆಯುತ್ತ ದಪ್ಪವಾಗುತ್ತವೆ. ಕೂದಲುಗಳಲ್ಲಿರುವ ಹೇನುಗಳು ಮುಂತಾದ್ದು ನಾಶವಾಗಿ ತಲೆಯುರುಪೆಯನ್ನು ಹೆಚ್ಚಾಗಿ ಬೆಳೆಯುವಂತೆ ಮಾಡುತ್ತದೆ. ಗಡ್ಡ ಮತ್ತು ಮೀಸೆಗಳು ಸಹ ಬೆಳೆಯುತ್ತವೆ. ಇದನ್ನು ಉಪಯೋಗಿಸಿದ ಜನರು ಇದಕ್ಕಿಂತ ಉತ್ತಮವಾದ ಎಣ್ಣೆಯು ಬೇರೆ ಇಲ್ಲವೆಂದು ಹೇಳಿರುತ್ತಾರೆ.

ಕ್ರಯ ಬಾಟ್ಲಿ 1ಕ್ಕೆ ರೂ. 1-4-0.

ಆರ್ ಮಾರ್ಟಿನ್ನರ ಗಿಬೋಡಯಿನ್.

ಗಂಡಸರಿಗೂ ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ, ಅಥವಾ ಹೊಸತಾಗಿದ್ದರೂ ಸರಿ. ಬಿಳುಪು ಹೋಗುವುದು ಉರಿಯುವುದು, ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೆ ಉರಿ ಮೂತ್ರವನ್ನು ನಿಲ್ಲಿಸಿ, ಮೂತ್ರವು ಬಿಳುಪಾಗಿ ನಿರ್ಮಲವಾಗುವದಲ್ಲದೆ ರೋಗದ ಪಟ್ಟನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವದಕ್ಕೆ ರುಚಿಯದಾಗಿಯೂ, ನಿರ್ಮಲವಾಗಿಯೂ ಇರುತ್ತೆ.

ಬೆಲೆ ಸೀಸೆ 1ಕ್ಕೆ ರೂ. 2—0—0.

ಆರ್. ಮಾರ್ಟಿನ್ನರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ. ಎಲ್ಲಾ ವಿಧವಾದ ಕೆಮ್ಮು, ಬಾಲು ಶ್ವಾಸ, ಶೀತ, ನೆಗಡಿ, ಗಂಟಲುನೋವು. ಎದೆ ನೋವುಗಳನ್ನೂ ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನಮಾಡಿ ಪರೀಕ್ಷಿಸಿ ನೋಡಿರಿ. ಅನಂತರ ಬೇರೆ ಯಾವ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮಿಗೂ ರಾಣಿಯಾಗಿಯೂ, ಎದೆಗೆ ಬಲಕೊಟ್ಟು, ಮೇಲ್ಪಂಡ ರೋಗಗಳು ತಲೆಯೆತ್ತದಂತೆ ಮಾಡುತ್ತದೆ.

60 ಮಾತ್ರೆಗಳ ಸೀಸೆ 1ಕ್ಕೆ ರೂ 1-4-0.

ವಿಳಾಸ:—ಆರ್. ಡಿ. ಕಟೆ ಮತ್ತು ಕಂಪೆನಿ,
ನಂಬ್ರು ಬಿ. ಫ್ರಿಯರ್ ರೋಡ್,
ಸಾಂಜ ವರ್ತಮಾನ ಪ್ರೆಸ್,
ಟೋದಿವಾಲಾ ಬಿಲ್ಡಿಂಗ ಎದುರುಗಡೆ, ಫೋರ್ಟ ಮುಂಬಯಿ.

R. D. Kately & Co.
No. B Frere Road,
Opposit Sanjvertaman Press,
Todivala Building, FORT BOMBAY

ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ಮೂರನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟದೆ.

ಎಮ್. ಗಣಪತಿರಾವ್ ಐಗಳ್—ಗ್ರಂಥಕರ್ತರು.

ಮನೋರಂಜಕ ಚಿತ್ರಗಳೂ ಇವೆ.

ಇದರಲ್ಲಿ ಸಾವಿತ್ರಿ, ಶಕುಂತಳಾ, ಕೃಷ್ಣಾಕುಮಾರಿ, ಪದ್ಮಿನಿ, ಜೋನ್ ಒಫ್ ಆರ್ಕ, ಫ್ಲೊರೆನ್ಸನಾಯಿಟಿಂಗೇಲ ಪರಶುರಾಮ, ಧೂತಾಳಪಾಂಡ್ಯ, ಕಾರ್ಕಳ ಗೋಮಟೇಶ್ವರ ಮತ್ತು ಭೈರವರಾಜ, ಮೂಡಬಿದ್ರೆಯ ಚೌಟರು, ನಂದಾವರ ಬಂಗರು, ಕಾರ್ಕಳ ರಾಮಸಮುದ್ರ ಮತ್ತು ರಾಮನಾಥ ಒಡೆಯರ ಅಣೆಕಟ್ಟು, ಗುರುಪುರ ಜಂಗಮ ಮಠ, ಕಲ್ಯಾಣಪ್ಪನ ಕಾಟಕಾಯಿ, ಗುರುವಾಯನಕೆರೆ, ಜಮಾಲಾಬಾದುಕೋಟೆ, ಸುಲ್ತಾನಬತ್ತೇರಿ, ಈದಗಾಪ್ರಾರ್ಥನಾಮಂದಿರ, ಸೇಂಟಮೇರಿ ದ್ವೀಪಗಳು ಮತ್ತು ದರಿಯಾಬಾದರಗಡ, ಕೊರಗರು, ಕೊಡಗರು, ತೋಡರು, ರಜಪೂತರು, ಕಂದಾರಿಗಳು ಘುರ್ಜಾ ಜನರು, ಅರಬಿಯರು. ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟದೆ. ಮೂರನೇ ದರ್ಜೆಯ ಮಕ್ಕಳಿಗೆ ಉಪಯುಕ್ತವಾಗಿದೆ. ಕ್ರಯ 6 ಆಣೆ.

ಪುಸ್ತಕ ದೊರಕುವ ವಿಳಾಸ:—

ಶಾರದಾ ಛಾಪಖಾನೆ,
ಮಂಗಳೂರು.

ಗಣಪತಿರಾವ್, ಐಗಳ್.
ಮಂಜೇಶ್ವರ

ಡಾಕ್ಟರುಗಳು ಭಿನ್ನಾಭಿಪ್ರಾಯಪಡುವಾಗ್ಯೆ ತೀರ್ಮಾನಿಸುವದು ಯಾರು?

ಅಂಥಾ ಸಂದರ್ಭಗಳಲ್ಲಿ ಡೆಂಗ್ಯೂ ಮುಂತಾದ ಜ್ವರಗಳನ್ನು ನಿವಾರಿಸುವಂಥಾ "ಬಾಟ್ಲಿವಾಲರ ಏಗ್ಯೂಮಿಕ್ಸ್ಚರ್"ನ್ನು ಸರಾಗವಾಗಿಯೂ, ಮತ್ತು ಜ್ವರಗಳನ್ನು ಖಂಡಿತವಾಗಿ ನಿಲ್ಲಿಸುವಂಥಾದ್ದೂ, ಎಲ್ಲಾ ತರದ ತಲೆನೋವುಗಳನ್ನು ಹೋಗಲಾಡಿಸುವಂಥಾದ್ದೂ ಆದ "ಬಾಟ್ಲಿವಾಲರ ಏಗ್ಯೂಪಿಲ್ಸ್" ಇದನ್ನು ಉಪಯೋಗಿಸಿರಿ.

ಐ. ಎಮ್. ಎಸ್. ಡಾಕ್ಟರುಗಳಿಂದ ಶಿಫಾರಸು ಮಾಡಲ್ಪಟ್ಟಿದ್ದು. ಇದರ ಉಪಯೋಗದಿಂದ ಹೃದಯದ ಮೇಲೆ ಯಾವ ದೋಷವೂ ಬಾಧಕವಿಲ್ಲ. ಅರ್ಧ ಶತಮಾನದಿಂದ ಹಿಂದುಸ್ಥಾನ, ಬರ್ಮಾ, ಸಿಲೋನ್, ಆಫ್ರಿಕಾ ಇವುಗಳಲ್ಲಿ ಪ್ರಖ್ಯಾತಪಟ್ಟಿದ್ದಾಗಿರುತ್ತದೆ.

ಅನೇಕ ಹಿಂದಿನ ಪ್ರದರ್ಶನಗಳಲ್ಲಿ ಬೆಳ್ಳಿ ಮತ್ತು ಬಂಗಾರದ ಪದಕಗಳನ್ನು ಪಡೆದಿರುತ್ತೆ. ಖ್ಯಾತಿ ನಾಮ್ಯದಂತಿದ್ದ ಡಾಕ್ಟರುಗಳೂ ಕೂಡ ಅದರ ಮೇಲೆ ಹಣವನ್ನು ಮುಂಗಡವಾಗಿ ಕೊಡುತ್ತಾರೆ. ಬಡ ಮತ್ತು ಮಧ್ಯಮ ತರಗತಿಯ ಜನರಿಗೆ ವರಪ್ರದಾನವಾಗಿದ್ದು ಸಂಚಾರ, ಪ್ರಯಾಣ, ದೇಶಾಟನೆಗಳ ಸಮಯದಲ್ಲಿ ಹತ್ತಿರದಲ್ಲಿರಿಸಿಕೊಳ್ಳದಾಗಿರುತ್ತದೆ.

ಬಾಟ್ಲಿವಾಲರ ಬಾಲಾಮೃತ ಅಥವಾ ಟೊನಿಕ್ ಸಿರಪ್.

ಕೆಮ್ಮನ್ನು ಹೋಗಲಾಡಿಸಿ, ಎದೆನೋವನ್ನು ಶಾಂತಗೊಳಿಸಿ, ಜ್ವರವನ್ನು ಉಪಶಮನಿಸಿ, ನಿದ್ರಾಭಂಗವನ್ನು ಕಡಿಮೆ ಮಾಡಿ ಧಾತುವರ್ಧನವನ್ನು ಮಾಡುವದರಲ್ಲಿ ಅತ್ಯುತ್ತಮವಾಗಿರುತ್ತದೆ. ಕಫವನ್ನು ಒಡಾಸಿ ಮಡುಮಾಗುವಂತೆ ಮಾಡುವುದಲ್ಲದೆ ಅದೇ ಸಮಯದಲ್ಲಿ ಒಳ್ಳೇ ಜೀರ್ಣವನ್ನೂ ಉಂಟುಮಾಡುವುದು. ಪರ ಪೊವರಾದ ಮಾಹಿತಿಯನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಕಾರಿನಪಕ್ಕೆ:-CAWASHAPUR, BOMBAY.

Dr. H. L. Batliwala & Co., Ltd.,
Sayani Road, P. O. Cadell Road, Bombay. No. 14.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.,
Sayani Road, P. O. Cadell Road, Bombay. No. 14.

ಸಣ್ಣ ಹುಡುಗ'ರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟ. ಖ. 9 ಆಣೆ.

ನಮ್ಮ ವಿಳಾಸ:— ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಏಜಂಟರು:—. ದಿ. ಊಲನ್ ಮಾರ್ಟ, ಮಂಗಳೂರು.

OUR RECENT IMPORT IN WRIST WATCHES

Have you used anyone of these Watches?

SEND YOUR ORDER NOW ALL GUARANTEED.

Fashionable wrist wrist Lady's size. Reliable movement Guaranteed.



[No. 368.

Handy to wear and looks beautiful. Gives punctual time and with strong movement.

Nickel case Rs. 8—0

High-class Radium dial watch watch with Roman figures.



No. 367.

Can be seen in dark nights. Well fitted with best movement and strong to use. Used by one and all

Silver case Rs. 9—0.

Radio light wrist watch.



No. 372.

Fitted with the best mechanism and guaranteed to work and keep perfect time for a long time.

Nickel case Rs. 7—8
Electro rolled-gold „ 9—0

(N. B. In addition to the above, we have good number of varieties of fancy wrist watches, pocket watches. Please write for a descriptive catalogue, which will be sent free)

WHOLESALE IMPORTERS

PETER WATCH COY.,
POST BOX 27, MADRAS

ಶಾಲಿವಾಹನಶಕ ೧೮೪೭ನೆಯ ಕ್ರೋಧನ ಸಂ||ರದ
ಜ್ಯೇಷ್ಠ ಬ|| ೬ ಶನಿವಾರದಿಂದ ಕ್ರೋಧನ ಸಂ||ರದ
ಜ್ಯೇಷ್ಠ ಬ|| ೧೩ ಶುಕ್ರವಾರದ ವರೆಗಿನ ಪಂಚಾಂಗ.
(೧೯೨೫ನೆಯ ವೃಷಭ ದೇಶ.)

ವಾರ	ತಿ.	ಘಳಿಗೆ.	ನಕ್ಷತ್ರ	ಘಳಿಗೆ.	ಸೌರಮಾನ	ಸೂರ್ಯ ಉ.	ಅಸ್ತ.
ಶನಿ	೬	೧೬.೯೬	ಶತಭಿಷಾ	೪. ೨	೩೦	6. 6	6.55
ರವಿ	೭	೧೨.೪೪	ಪೂ. ಭಾ.	೧.೪೬	೩೧	6. 6	6 55
ಸೋಮ	೮	೧೦.೧೬	ಉ. ಭಾ.	೦.೩೫	೧	6 6	6 56
ಕುಜ	೧೦	೮.೩೨	ರೇವತೀ	೦ ೧೩	೨	6. 6	6.56
ಬುಧ	೧೧	೭.೪೬	ಅಶ್ವಿನಿ	೧.೨೮	೩	6. 6	6.56
ಗುರು	೧೨	೮.೨೮	ಭರಣೀ	೩.೪೬	೪	6 6	6 56
ಶುಕ್ರ	೧೩	೧೦.೩೬	ಕೃತ್ತಿಕಾ	೭.೩೨	೫	6 7	6 57

ಮಂಗಳೂರಿನ ವಾಯುಸ್ಥಿತಿ.

ತಾರೀಖು	Temperature. ಉಷ್ಣ (ಕಾವು) Maximum	Minimum	Rainfall ಮಳೆ ದಿನದ ಮಳೆ	ಜುಮಲಾ ಮಳೆ.
5	88—2	74—1	0 - 43	—
6	92—0	73—4	0—64	—
7	91—0	74—2	1—95	—
8	86—2	74—2	0—38	—
9	90—8	77—6	0—04	—
0	91—5	77—7	—	—
1	92—2	78—4	—	—

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ	ವರೆಗೆ
	ರೂ ಆ	ರೂ ಆ
	8—8	9—4
	7-14-9	8—4
	7—4	7—12
ಬೆಳ್ತಿಗೆ	8—4	9 8
ಬೆಳ್ತಿಗೆ	7—12	8—4
ಬೆಳ್ತಿಗೆ ಗೋಣಿ ೧	13—0	13 8
ಗೋಣಿ ೧ಕ್ಕೆ	18—8	22 0
ಗೋಣಿ ೧ಕ್ಕೆ	9—8	10—0
ಣಿ ೧ಕ್ಕೆ	12-0	13—0
ಣಿ ೧ಕ್ಕೆ	12-8	13—0
ಳೆ ಗೋಣಿ ೧ಕ್ಕೆ	13-8	21—0
ಗೋಣಿ ೧ಕ್ಕೆ	14—0	14 8
ಣಿ ೧ಕ್ಕೆ	14—0	15 0
ಲ್ಲ ಖಂಡಿ ೧ಕ್ಕೆ	-	85 0
ಣಿ ೧ಕ್ಕೆ	4—4	4—10
ಖಂಡಿ ೧ಕ್ಕೆ	115—0	120—0
ಹಿಂಡಿ ಖಂಡಿ ೧ಕ್ಕೆ	32—8	36—0
ಖಂಡಿ ೧ಕ್ಕೆ	35—0	42—8
ಲ್ಲ ಮುಡಿ ೧ಕ್ಕೆ	8—8	9—8
ಮುಡಿ ೧ಕ್ಕೆ	8—0	11—0
ಒಲ್ಲ ಪೆಟ್ಟಿಗೆ ೧ಕ್ಕೆ	8-15-6	—
ಸಕ್ಕರೆ ಮುಡಿ ೧ಕ್ಕೆ	6—0	6—2
ಬಿಸಿನಕಾಯಿ ಮುಡಿ ೧ಕ್ಕೆ	7—0	—
ಮುಡಿ ೧ಕ್ಕೆ	8—12	—
ಮುಡಿ ೧ಕ್ಕೆ	3—8	4—4
ಡಿ ೧ಕ್ಕೆ	345—0	400—0
ಅಡಿಕೆ ಖಂಡಿ ೧ಕ್ಕೆ ಹಳತು	235—0	245—0
ಹೊಸ ಅಡಿಕೆ	240—0	240—0
ಸು ಖಂಡಿ ೧ಕ್ಕೆ	155—0	160—0
ಮುಡಿ ೧ಕ್ಕೆ	80—0	90 0
ಮುಡಿ ೧ಕ್ಕೆ	2—10	2 13
ಡಿ ೧ಕ್ಕೆ	45—0	65—0
ಮುಡಿ ೧ಕ್ಕೆ	17—12	23—0
ಗಳು ಮುಡಿ ೧ಕ್ಕೆ	26—0	—
ರು ೧ಕ್ಕೆ	22—0	
ಮುಡಿ ೧ಕ್ಕೆ	18—8	
	13—12	

The Canara Public Conveyance Co., Ltd, Mangalore.

(ESTABLISHED 1914.)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು
- ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು
- ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
- ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
- ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.
- ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ—ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd., Mangalore. S K.

ಉಚಿತ! ಬಿಟ್ಟಿ!! ಪುಗಸಟ್ಟೆ!!!

ವೈದ್ಯವಿದ್ಯ
PROPRIETOR RAJVAIDYA NARAYAN
NO PRICE NO POSTAGE

ಎಂಬ ಈ ಪುಸ್ತಕದಲ್ಲಿ ಆಯುರ್ವೇದ ಶಾಸ್ತ್ರದಲ್ಲಿ ಸ್ತ್ರೀಪುರುಷರು ಆರೋಗ್ಯದೃಢಕಾಯರಾಗಿ ಆರೋಗ್ಯದಿಂದ ಕೂಡಿದ ಸಂತಾನಗಳನ್ನು ಪಡೆದು ಸತಿಪತಿಯರು ಅನ್ಯೋನ್ಯವಾಗಿ ಅನುರಾಗವುಳ್ಳವರಾಗಿ ಸುಖದಿಂದಲೂ ಸಂತೋಷದಿಂದಲೂ ಸಂಸಾರಯಾತ್ರೆಯನ್ನು ಮಾಡಲು ಅತ್ಯಂತ ಉಪಯುಕ್ತವಾದ ವಿಷಯುಗಳು ಅಲ್ಲಲ್ಲಿ ಹೇಳಲ್ಪಟ್ಟಿರುವುದನ್ನು ಒಂದಾಗಿ ಸಂಗ್ರಹೀಕರಿಸಿ ಅಜ್ಞಾನದಿಂದಲೂ ಸಂಕಷ್ಟದಿಂದಲೂ ನರಳುತ್ತಿರುವ ಸಂಸಾರಿಗಳನ್ನುದ್ಧಾರಮಾಡುವ ಸಲುವಾಗಿ ಈ ಪುಸ್ತಕವನ್ನು ಕ್ರಯವೂ ಅಂಚೇ ಹಾಸಲೂ ಇಲ್ಲದೆ ಬೇಡಿದವರಿಗೆ ಸರ್ವತ್ರ ಉಚಿತವಾಗಿ ಕಳುಹಿಸುತ್ತೇವೆ. ಹೆಚ್ಚು ಮಾಹಿತಿಗೆ ಪತ್ರ ಬರೆಯಿರಿ.

ರಾಜವೈದ್ಯ ನಾರಾಯಣಜಿ ಕೇಶವಜಿ,
57, ಬಂದರ್ ಸ್ಟ್ರೀಟ್, ಜಿ. ಟಿ. ಮದ್ರಾಸ್

ಸಾರಸ್ವತ.

ಕನ್ನಡ ಮತ್ತು ಕೊಂಕಣಿ ಭಾಷೆಗಳಲ್ಲಿ ಕಳೆದ ವಿಜಯ ದಶಮಿಯಾ ದಿನದಿಂದ ಪ್ರತಿ ದಶಮಿಗೆ ಹೊರಡುವ ಪತ್ರಿಕೆ.

ವಿ. ಎಸ್. ಕಾಮತ್,
ಮೂಲ್ಕಿ ವಾಮನ ಕುಡುವ } ಸಂಪಾದಕರು.

ಮತಸಂಸ್ಥೆ ಮತ್ತು ಸಮಾಜಕ್ಕೆ ಸಂಬಂಧಪಟ್ಟ ಇತರ ಸಂಸ್ಥೆಗಳ ಸುಸಂಘಟನ.

ಸಮಾಜದೊಳಗೆ ಅನ್ಯೋನ್ಯ ಸಾಧನೆ.

ಸ್ತ್ರೀಸಮಾಜಕ್ಕೆ ಉಪಯುಕ್ತವಾದ ವಿಷಯಗಳ ನಿರೂಪಣ

ಮತಭಾವನೆಗಳ ಉಜ್ಜೀವನ ಇತ್ಯಾದಿ ಉದ್ದೇಶಗಳಿಂದ ಈ ಪತ್ರಿಕೆಯು ಹೊರಡಿಸಲ್ಪಡುವುದು. ಸಾರಸ್ವತ ಸಮಾಜವು ಇದಕ್ಕೆ ಪ್ರೋತ್ಸಾಹವನ್ನೀಯಬೇಕಾಗಿ ಪ್ರಾರ್ಥನೆ.

ಚಂದಾಹಣ ಅಂಚೆವೆಚ್ಚ ಕೂಡಾ ರೂ. ೧—೪—೦.
ಪೋಷಕರು ರೂ. ೧೦-೦-೦. ಸಹಾಯಕರು ರೂ. ೫-೦-೦.
ಮಾದರಿ ಸಂಚಿಕೆಯನ್ನು ಟಪ್ಪಾಲು ಖರ್ಚಿಗಾಗಿ ಅರ್ಧಾಣೆ ಸ್ಟ್ಯಾಂಪು ಕಳುಹಿಸುವವರಿಗೆ ಉಚಿತವಾಗಿ ಕಳುಹಿಸುವೆವು.

ಕನ್ನಡ ನಾಡಿನಲ್ಲಿ ಪ್ರತಿ ಕಡೆಯಲ್ಲಿಯೂ ಖಾತಮಿದಾರರು ಬೇಕು.

ಎಲ್ಲಾ ಪತ್ರವ್ಯವಹಾರಗಳನ್ನು ಕೆಳಗಿನ ವಿಳಾಸಕ್ಕೆ ನಡೆಸಬೇಕು.

ಯು. ನಾರಾಯಣನಾಯ್ಕ, ಕಾರ್ಯದರ್ಶಿ,
ಸಾರಸ್ವತ, ಉಡುಪಿ.

ಕನ್ನಡಿಗರೆ! **ವಸಂತ.** ಕಣ್ತೆರೆಯಿರಿ!

ಈಗಾಗಲೇ ಎರಡನೇ ಸಂಪುಟವು ಆರಂಭಿಸಲಿದೆ.

ಇತಿಹಾಸನಿಧಿ ಎಂದರೆ	ವಸಂತ
ಸಮಾಜಸುಧಾರಕನೆಂದರೆ	ವಸಂತ
ಕೈಗಾರಿಕೆಯ ಸಾಮ್ರಾಜ್ಯವೆಂದರೆ	ವಸಂತ
ಕರ್ನಾಟಕ ಭಾಷಾಸೇವಕನೆಂದರೆ	ವಸಂತ
ದೇಶವಿದೇಶ ಬಂಧುವೆಂದರೆ	ವಸಂತ
ಕಾದಂಬರಿಗಳ ಭಂಡಾರವೆಂದರೆ	ವಸಂತ
ಚಿತ್ತಾಕರ್ಷ ಚಿತ್ರಶಾಲೆಯೆಂದರೆ	ವಸಂತ
ದೇಶಭಕ್ತನೆಂದರೆ	ವಸಂತ

ಇಂತಹ ವಸಂತನು ಯಾರಿಗೆ ಬೇಕು, ಯಾರಿಗೆ ಬೇಡ?

48 (ಕ್ರೌನ್ ¼ ಫುಲ ಸ್ಕ್ಯಾಪ) ಪುಟಗಳನ್ನು ಹೊತ್ತಿದ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3—4—0 ಮಾತ್ರ.

ವ್ಯವಸ್ಥಾಪಕ,
ವಸಂತ ಕಾರ್ಯಾಲಯ,
ಕುಂದಾಪುರ, ದಕ್ಷಿಣ ಕನ್ನಡ

ಬಂದು ನೋಡಿರಿ! ತಿಂದು ನೋಡಿರಿ!
ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ
ಪದಕವನ್ನು
ಬಹುಮಾನವಾಗಿ ಪಡೆದಿರುವ
ಎಸ್. ಪಿ. ಆಚಾರ್ಯ
ಇವರಿಂದ ತಯಾರಿಸಲ್ಪಟ್ಟ
ಉಪ್ಪಿನಕಾಯಿಗಳನ್ನು
ಬಂದು ನೋಡಿರಿ! ತಿಂದು ನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ, ಶುಂಠಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನ್ನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ
ಬಂದು ನೋಡಿರಿ! ತಿಂದು ನೋಡಿರಿ!

ಇಂಡಿಯನ್ ಸ್ವೀಟ್‌ಮೀಟ್ ಮಾರ್ಟ್.

ಮನೋಲ್ಲಾಸಿನಿ ಕಾಫಿ ಕ್ಲಬ್,
ಮಾರ್ಕೆಟು ರೋಡು,
ಮಂಗಳೂರು.
ಅಥವಾ
'ಸದಾನಂದ ಕಾಫಿ ಕ್ಲಬ್',
ರಥಬೀದಿ, ಮಂಗಳೂರು.

ದಕ್ಷಿಣ ಕನ್ನಡ ಜಿಲ್ಲೆಯ
ಪ್ರಾಚೀನ ಇತಿಹಾಸ
450 ಪುಟಗಳು ಕ್ರಯ ರೂ. 2—4—0
ಪುಸ್ತಕಗಳು ಸಿಕ್ಕುವ ವಿಳಾಸ:—
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಕರ್ನಾಟಕ ಸೇವಾಸಂಘ, ಧಾರವಾಡ.

ಹಿಂದುಸ್ಥಾನದ ಪ್ರಕೃತ ಸ್ಥಿತಿಯನ್ನು ಬದಲಾಯಿಸಿ, ದೇಶೋನ್ನತಿಯನ್ನು ಸಾಧಿಸಲು, ಹಲವು ವಿಧವಾದ ಸಂಸ್ಥೆಗಳು ಅನೇಕ ಪ್ರಯತ್ನಗಳನ್ನು ಮಾಡುತ್ತಿರುವವು. ಇದರಿಂದ ಜನತೆಯಲ್ಲಿ ಒಂದು ವಿಧವಾದ ಜಾಗೃತಿಯುಂಟಾಗಿ, ದೇಶೋನ್ನತಿ ಸಾಧನೆಗೆ ಅತ್ಯಾವಶ್ಯಕವಾದ ಹಲವು ಅಭಿಪ್ರಾಯಗಳು ವಿಕಾಸಗೊಳ್ಳುತ್ತಿರುವವು. ಇದಕ್ಕೆ ದೇಶದ ನಾನಾ ಭಾಗಗಳಲ್ಲಿ ಸೇರುತ್ತಿರುವ ಪರಿಷದಾದಿ ಸಾಂಘಿಕ ಪ್ರಯತ್ನಗಳೇ ಸಾಕ್ಷಿಗಳಾಗಿರುವವು. ಆದರೆ ಯಾವುದಾದರೊಂದು ಜನಾಂಗವು ಪೂರ್ಣ ಜಾಗೃತಿ ಹೊಂದಬೇಕಾದರೆ ಅದರ ಪ್ರತಿಯೊಂದು ಅಂಗವೂ ತನ್ನಿಂದ ಸಾಧ್ಯವಾದ ಪ್ರಯತ್ನಮಾಡಿ, ಇಡೀ ಅವಯವದ ಹಿತಸಾಧನೆಯನ್ನು ಮಾಡಬೇಕೆಂಬದು ಸಾಮಾನ್ಯ ನಿಯಮವಾಗಿದೆ. ಈ ನಿಯಮಾನುಸಾರವಾಗಿ ಈಗಣ ಜನಾಂಗ ಜಾಗೃತಿಯ ಕಾರ್ಯದಲ್ಲಿ ಹಿಂದುಸ್ಥಾನದ ಅಂಗವಾದ ಕರ್ನಾಟಕವು ತನ್ನಿಂದ ಸಾಧ್ಯವಿರುವ ಮಟ್ಟಿಗೆ ಸಹಕರಿಸಬೇಕೆಂಬ ಉದ್ದೇಶದಿಂದ, ಪ್ರಕೃತ ಧಾರವಾಡವನ್ನು ಕೇಂದ್ರಸ್ಥಾನವಾಗಿಟ್ಟುಕೊಂಡು, "ಕರ್ನಾಟಕ ಸೇವಾ ಸಂಘವು" ಮುಂದೆ ಹೇಳುವ ಸದುದ್ದೇಶಗಳನ್ನು ಸಾಧನೆಗಾಗಿ ಸ್ಥಾಪಿತವಾಗಿದೆ. ಸೇವಾಸಂಘದ ಉದ್ದೇಶಗಳಾವವೆಂದರೆ:—

(೧) ಕರ್ನಾಟಕ ಸೇವಾಸಂಘವು ದೇಶಹಿತಸಾಧನೆಗಾಗಿ ಕೇವಲ ಧಾರ್ಮಿಕ ಭಾವನೆಯಿಂದ ತಮ್ಮ ಜೀವವನ್ನು ಸವೆಯಿಸುವಂತಹ ಮತ್ತು ನ್ಯಾಯಸಮ್ಮತವೂ ಶಾಂತಿಕರವೂ ಆದ ಎಲ್ಲ ವಿಧದಿಂದ ದೇಶೀಯರ ಉನ್ನತಿಯನ್ನು ಸಾಧಿಸುವ ಪ್ರಯತ್ನಗಳನ್ನು ಮಾಡುವಂತಹ ತರುಣರಿಗೆ ಸರಿಯಾದ ನೈತಿಕ, ಧಾರ್ಮಿಕ ಮತ್ತು ಸಾಮಾಜಿಕ ಶಿಕ್ಷಣವನ್ನು ಕೊಡುವುದು, (೨) ಉಪದೇಶ ಮತ್ತು ತಮ್ಮ ಸ್ವಂತ ಉದಾಹರಣೆಯಿಂದ ಜನರಲ್ಲಿ ದೇಶದ ವಿಚಾರವಾಗಿ ಗಾಢವೂ, ಅತ್ಯುತ್ಕಟವೂ ಆದ ಪ್ರೇಮಭಾವನೆಯಿಂದ ನಿಸ್ವಾರ್ಥಪೂರ್ಣವಾದ ಸೇವೆಯನ್ನು ಮಾಡುವ ಭಾವನೆಯನ್ನುಂಟುಮಾಡುವುದು. (೩) ನಮ್ಮ ಜನಾಂಗದ ಉನ್ನತಿಗೆ ಮೂಲವಾದ ಹಳ್ಳಿಗಳನ್ನು ಸುಧಾರಿಸಿ ಅಲ್ಲಿಯೂ ವಿದ್ಯಾ ಪ್ರಚಾರಣೆಯನ್ನು ಮಾಡಲು ಕೆಲಸಗಾರರನ್ನು ಸಿದ್ಧಗೊಳಿಸಲು ಅವರಿಗೆ ಬೇಕಾದ ಶಿಕ್ಷಣವನ್ನು ಕೊಡುವುದು. ಅವರು ಶಿಕ್ಷಣಹೊಂದಿದನಂತರ ಅವರನ್ನು ಹಳ್ಳಿಗಳಿಗೆ ಕಳುಹಿಸಿ, ಸಂಘದ ಮೇಲ್ವಿಚಾರಣೆಯಲ್ಲಿ, ಅವರಿಂದ ಕೆಲಸಮಾಡಿಸುವುದು. (೪) ಎಲ್ಲಾ ವಿಧವಾದ ವಿದ್ಯಾವಿಷಯಕ ಚಳವಳಗಳಿಗೆ ತನ್ನಿಂದಾಗುವ ಸಹಾಯಮಾಡುವುದು. (೫) ಪ್ರಾಂತದ ಎಲ್ಲ ಜಾತಿಯ ಎಲ್ಲ ವರ್ಗದ ಜನರಲ್ಲಿ ಪರಸ್ಪರ ಪ್ರೇಮಭಾವನೆಯನ್ನು ಬೆಳ್ಳಿಸುವುದು. (೬) ಪ್ರಾಂತದ ಕೈಗಾರಿಕೆಯ ಪ್ರಗತಿಗೆ ಬೇಕಾದ ಸಹಾಯವನ್ನು ಮಾಡತಕ್ಕದ್ದು. (೭) ಹಿಂದುಳಿದ ವರ್ಗದವರ ಉನ್ನತಿಗೆ ಅವಶ್ಯಕವಾದ ನೈತಿಕ, ಧಾರ್ಮಿಕ ಮತ್ತು ಸಾಮಾಜಿಕ ಶಿಕ್ಷಣವನ್ನು ಕೊಡತಕ್ಕದ್ದು. (೮) ಸಂಘದ ಶಾಖೆಯನ್ನು ಪ್ರಾಂತದ ಬೇರೆ ಬೇರೆ ಭಾಗಗಳಲ್ಲಿ ತೆರೆಯುವುದು. (೯) ಈ ಉದ್ದೇಶ ಸಾಧನೆಗಾಗಿ ಅವಶ್ಯಕವಾದರೆ ಒಂದು ಅಥವಾ ಹೆಚ್ಚು ಪತ್ರಿಕೆಗಳನ್ನು ಪ್ರಕಟಿಸುವುದು. ಸಾಕಾದಷ್ಟು ಧನ ಸಹಾಯವು ದೊರೆತರೆ ಸಂಘದ ಆಶ್ರಯದಲ್ಲಿರುವ ವಿದ್ಯಾಲಯಗಳನ್ನೊಳಗೊಂಡ ಕರ್ನಾಟಕ ವಿದ್ಯಾಪೀಠವೊಂದನ್ನು ಸ್ಥಾಪಿಸತಕ್ಕದ್ದು. ಪ್ರಕೃತ ಸಂಘದ ಮುಖ್ಯ ಕಾರ್ಯಾಲಯವು ಧಾರವಾಡದಲ್ಲಿ ಇರುವುದು. ಅದಕ್ಕೆ ಸಂಬಂಧಿಸಿ, ಆಜೀವ ಸದಸ್ಯರಾದ ಕೆಲಸಗಾರರ ವಾಸಸ್ಥಳವೂ, ಸಂಘದ ಕಾರ್ಯಕ್ಕೆ ಸಂಬಂಧಿಸಿದ ವಿಷಯಗಳನ್ನು ತಿಳಿದುಕೊಳ್ಳಲು ಬೇಕಾದ ಗ್ರಂಥಭಂಡಾರವೂ ಇರುವವು. ಸಂಘದ ಕಾರ್ಯಗಳೆಲ್ಲವೂ ಆಜೀವ ಸದಸ್ಯರಾದ ಸಂಘದ ಕಾರ್ಯಕಾರಿ ಮಂಡಳಿಯಿಂದ ನಿರ್ವಹಿಸಲ್ಪಡುವವು.

ಪ್ರಕೃತ ಮೇಲ್ಕಂಡ ಉದ್ದೇಶಗಳನ್ನು ಸಾಧನೆಗೆ ತರಲು, ಕಳೆದ ನಾಲ್ಕು ವರುಷಗಳಿಂದ ಜನರ ಸಹಾಯದಿಂದ ನಡೆಯುತ್ತ, ಎಲ್ಲರ ಪ್ರೇಮಾದರಗಳಿಗೆ ಪಾತ್ರವಾದ ಧಾರವಾಡದ ಕರ್ನಾಟಕ ವಿದ್ಯಾಲಯವನ್ನು ಸಂಘವು ಒಳಪಡಿಸಿಕೊಂಡಿರುವುದು.

ಕರ್ನಾಟಕ ಮಹಾ ವಿದ್ಯಾಲಯ.

ಈ ವಿದ್ಯಾಲಯವು ಚಿಕ್ಕದೊಂದು ಗುರುಕುಲದ ಮಾದರಿಯಲ್ಲಿರುವುದು. ವಿದ್ಯಾರ್ಥಿಗಳೆಲ್ಲರೂ ವಿದ್ಯಾಲಯದ ನಿವೇಶನದಲ್ಲಿ ಮೇಲ್ವಿಚಾರಕರ ಅಧೀನದಲ್ಲಿರುವರು. ವಿದ್ಯಾರ್ಥಿಗಳಿರುವ ಛಾತ್ರಾಲಯವು ರಮ್ಯವೂ, ಆರೋಗ್ಯಕರವೂ ಆದ ಪ್ರದೇಶದಲ್ಲಿರುವುದು. ಬಡ ವಿದ್ಯಾರ್ಥಿಗಳಿಗೆ ಶಿಕ್ಷಣವೂ ಭೋಜನವೂ ಮುಫತ್ತಾಗಿ ಕೊಡಲ್ಪಡುವವು. ಈ ರೀತಿಯಾಗಿ ವಿದ್ಯಾಲಯದಿಂದ ಪೂರ್ಣ ಸಹಾಯಹೊಂದಿದ ವಿದ್ಯಾರ್ಥಿಗಳು ತಮ್ಮ ಮಾಧ್ಯಮಿಕ ಶಿಕ್ಷಣವನ್ನು ಹೊಂದಿದನಂತರ, ವಿದ್ಯಾಲಯವನ್ನು ಬಿಡಬೇಕೆಂದಿದ್ದ ಸಂದರ್ಭದಲ್ಲಿ, ೧ ವರ್ಷವೂ, ಪ್ರೌಢ ಶಿಕ್ಷಣವನ್ನು ಹೊಂದಿದ ನಂತರ ಬಿಡಬೇಕಾದ್ದಲ್ಲಿ ೨ ವರ್ಷವೂ ಗ್ರಾಮ ಸೇವಕ ಶಿಕ್ಷಣವನ್ನು ಮುಗಿಸಿದನಂತರ ಬಿಡಬೇಕಾದ್ದಲ್ಲಿ ೩ ವರ್ಷವೂ ಸಂಘದವರು ನಿಯಮಿಸುವ ಕೆಲಸವನ್ನು, ಯಾವ ವೇತನವೂ ಇಲ್ಲದೆ, ಮಾಡುವುದಕ್ಕೆ ಸಿದ್ಧರಿರಬೇಕು.

ವಿದ್ಯಾಲಯಕ್ಕೆ ಸೇರಲಪೇಕ್ಷಿಸುವ ವಿದ್ಯಾರ್ಥಿಗಳು ಪ್ರಾಥಮಿಕ ಶಿಕ್ಷಣದ ೪ ತರಗತಿಗಳನ್ನು ಮುಗಿಸಿದವರಾಗಿರಬೇಕು. ಇಲ್ಲಿಯ ಶಿಕ್ಷಣ ಕ್ರಮವು (೧) 'ಮಾಧ್ಯಮಿಕ (೨) ಪ್ರೌಢ ಮತ್ತು (೩) ಗ್ರಾಮಸೇವಕ' ವೆಂದು ೩ ಭಾಗಗಳಾಗಿ ವಿಂಗಡಿಸಲ್ಪಟ್ಟಿರುವುದು.

ಮಾಧ್ಯಮಿಕ ಶಿಕ್ಷಣ (೫ ವರ್ಷ)

ಈ ವಿಭಾಗದಲ್ಲಿ (೧) ಕನ್ನಡ (೨) ಸಂಸ್ಕೃತ (೩) ಇಂಗ್ಲೀಷ್ (೪) ಹಿಂದೀ (೫) ಇತಿಹಾಸ ಭೂಗೋಳ (೬) ಲೆಖ್ಖ (೭) ರಾಜ್ಯದಾಡಳಿತ (೮) ಧರ್ಮ ಮತ್ತು ನೈತಿಕ ವಿಚಾರ (೯) ಆರೋಗ್ಯಶಾಸ್ತ್ರ, ಲಲಿತಕಲೆ ಮತ್ತು ಸಂಗೀತ (೧೦) ಶಾರೀರಿಕ ವ್ಯಾಯಾಮ (೧೧) ನೂಲುವುದು (೧೨) ತೋಟದ ಕೆಲಸ ಈ ವಿಷಯಗಳು ಕಲಿಸಲ್ಪಡುವವು. ಅಂಗಸಾಧನೆ, ಪ್ರಾರ್ಥನೆ, ಭಜನೆ ಇತ್ಯಾದಿ ವಿಚಾರಗಳ ಕಡೆಗೆ ಹೆಚ್ಚು ಲಕ್ಷ್ಯಕೊಟ್ಟು ವಿದ್ಯಾರ್ಥಿಗಳು ತಮ್ಮ ಧರ್ಮ ಮತ್ತು ಸಂಸ್ಕೃತಿಗಳ ಕಡೆಗೆ ಗಮನವಿಟ್ಟು ಅದರಂತೆ ಆಚರಿಸಲು ಪ್ರೇರಣೆಯನ್ನುಂಟುಮಾಡಲಾಗುವುದು. ಮೇಲ್ವಿಚಾರಕರು ವಿದ್ಯಾರ್ಥಿಗಳನ್ನು ಉಷಃಕಾಲದಲ್ಲೆಬ್ಬಿಸಿ, ಆಗಿನಿಂದ ರಾತ್ರಿ ಅವರು ಮಲಗಿಕೊಳ್ಳುವವರೆಗೂ ತಮ್ಮ ಮೇಲ್ವಿಚಾರಣೆಯಲ್ಲಿ ವಿದ್ಯಾರ್ಥಿಗಳ ನೈತಿಕ ವಿಚಾರಗಳನ್ನು ಸುಧಾರಿಸುವರು.

ಪ್ರೌಢ ಶಿಕ್ಷಣ (೪ ವರ್ಷಗಳು)

ಈ ವಿಭಾಗದಲ್ಲಿ (೧) ಕನ್ನಡ (೨) ಸಂಸ್ಕೃತ (೩) ಇಂಗ್ಲೀಷು (೪) ಇತಿಹಾಸ (೫) ರಾಜನೀತಿ (೬) ಅರ್ಥಶಾಸ್ತ್ರ (೭) ಸಮಾಜಸೇವಾತತ್ವ (೮) ಒಕ್ಕಲತನ (೯) ನೇಯುವುದು (೧೦) ಆಯುರ್ವೇದ ಇನ್ನು ಮುಂದೆ ಕಲಿಸುವ ಏರ್ಪಾಡನ್ನು ಮಾಡಲಾಗುವುದು. ಇವುಗಳಲ್ಲಿ ಕೆಲವು ಐಚ್ಛಿಕ ವಿಷಯಗಳಾಗಿರುವವು. ಇವಲ್ಲದೆ ವಿದ್ಯಾರ್ಥಿಗಳ ಅಂಗಸಾಧನೆ, ಧಾರ್ಮಿಕ ಭಾವನೆಗಳ ಜಾಗೃತಿ, ಇತ್ಯಾದಿ ವಿಚಾರಗಳ ಕಡೆಗೆ ಹೆಚ್ಚು ಲಕ್ಷ್ಯಕೊಡಲಾಗುವುದು.

ಈ ನಮ್ಮ ವಿದ್ಯಾಲಯದಲ್ಲಿ ಮಾಧ್ಯಮಿಕ ಶಿಕ್ಷಣ ಹೊಂದಿ ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದ ವಿದ್ಯಾರ್ಥಿಗಳು ಕಾಶೀ ವಿದ್ಯಾಪೀಠ, ಗುಜರಾಥ ವಿದ್ಯಾಪೀಠ, ಮೈಸೂರು ಆಯುರ್ವೇದ ಕಾಲೇಜು, ಪುಣೆಯ ತಿಲಕ ವಿದ್ಯಾಪೀಠ, ವಿಶ್ವಭಾರತಿ ಮುಂಬೈಯ ನ್ಯಾಶನಲ್ ಮೆಡಿಕಲ್ ಕಾಲೇಜು, ಮದ್ರಾಸ್ ಸಂಸ್ಕೃತ ಕಾಲೇಜುಗಳಲ್ಲಿ ಕಾಲೇಜು ತರಗತಿಗೆ ಸೇರಿಸಿಕೊಳ್ಳಲ್ಪಡುವರು.

ವಿದ್ಯಾರ್ಥಿಗಳ ನಿತ್ಯಜೀವನ ಕ್ರಮ.

ಬೆಳಿಗ್ಗೆ ೫ರಿಂದ ೭ರ ವರೆಗೆ—ಪ್ರಾರ್ಥನೆ, ತಣ್ಣೀರು ಸ್ನಾನ, ಸಂಧ್ಯಾವಂದನೆ, ಸೂರ್ಯನಮಸ್ಕಾರ, ಉಪಾಹಾರ; ೭–೭-೩೦ ಧಾರ್ಮಿಕ ಅಧ್ಯಯನ ೭-೩೦–೧೧-೩೦ ವಿದ್ಯಾಲಯದಲ್ಲಿ ಪಾಠಗಳು; ೧೧-೩೦–೨-೩೦ ಊಟ, ಅಧ್ಯಯನ; ೨-೩೦–೪-೩೦ ವಿದ್ಯಾಲಯದಲ್ಲಿ ಪಾಠಗಳು; ೪-೩೦–೫-೩೦ ತೋಟದ ಕೆಲಸ, ನೂಲುವುದು ಇತ್ಯಾದಿ; ೫-೩೦–೭ ಆಟ, ಅಂಗಸಾಧನೆಗಳು; ೭–೮ ಸಾಯಂಕಾಲ ಪ್ರಾರ್ಥನೆ, ಸಂಧ್ಯಾವಂದನೆ, ಊಟ ೮–೯-೩೦ ಸ್ವಂತ ಪಾಠಗಳನ್ನು ಓದುವುದು, ಪ್ರಾರ್ಥನೆ. ೯-೩೦–೫ ವಿಶ್ರಾಂತಿ (ನಿದ್ರೆ).

ಸಾಮಾನ್ಯ ನಿಯಮಗಳು.

(೧) ವಿದ್ಯಾಲಯದ ತರಗತಿಗಳು ಯುಗಾದಿ ಪ್ರತಿಪದೆಯಿಂದ ಪ್ರಾರಂಭವಾಗುವವು. ವರ್ಷಕ್ಕೆ ಒಂದು ತಿಂಗಳು (ವೈಶಾಖ ಮಾಸ) ರಜಾ ಸಿಕ್ಕುವುದು. (೨) ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ಕಂಬಳಿ, ಬಟ್ಟಲು, ಪಂಚಪಾತ್ರೆ, ಉಡುಪು, ಹಾಸಿಗೆ, ಪುಸ್ತಕಗಳು ಕಂದೀಲು ಇವುಗಳನ್ನು ತರುವುದಲ್ಲದೆ ಊಟ ವಸತಿಗಳಿಗಾಗಿ ತಿಂಗಳಿಗೆ ೧೨ ರೂಪಾಯಿಗಳನ್ನು ಕೊಡಬೇಕಾಗುವುದು. ಬಡ ಹುಡುಗರಿಗೆ ರಿಯಾಯಿತಿಯನ್ನು (ಸವಲತ್ತು) ತೋರಿಸಲಾಗುವುದು. (೩) ಫಾಲ್ಗುಣ ಮಾಸದ ಅಂತ್ಯಕ್ಕೆ ವಾರ್ಷಿಕ ಪರೀಕ್ಷೆಗಳು ಪ್ರಾರಂಭವಾಗುವವು. ವಾರ್ಷಿಕ ವರ್ಧಂತ್ಯುತ್ಸವವು ಶ್ರೀ ರಾಮನವಮಿಯ ದಿನ ಜರುಗುವುದು. (೪) ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ಶಿಕ್ಷಣವು ಪೂರ್ಣವಾಗುವ ವರೆಗೆ ವಿವಾಹಮಾಡಿಕೊಳ್ಳುವುದಿಲ್ಲವೆಂದು ಪ್ರತಿಜ್ಞಾಬದ್ಧನಾಗಿರಬೇಕು.

ಇಲ್ಲಿಯ ಶಿಕ್ಷಣದ ಮುಖ್ಯ ಲಕ್ಷಣಗಳು.

(೧) ನೈತಿಕ ಮತ್ತು ಧಾರ್ಮಿಕ ಶಿಕ್ಷಣ. ಶೀಲರಚನೆ (೨) ಸ್ವತಂತ್ರ ಜೀವನಮಾರ್ಗ (೩) ಎಲ್ಲ ವಿಷಯಗಳೂ ಕನ್ನಡ ಭಾಷೆಯಲ್ಲಿಯೆ ಕಲಿಸಲ್ಪಡುವವು. ಇದರಿಂದ ವ್ಯರ್ಥ ಕಾಲಾಪವ್ಯಯ ಮತ್ತು ಶಾರೀರಿಕ ಶ್ರಮಗಳು ಕಡಿಮೆಯಾಗುವವು. (೪) ಕನ್ನಡ ಮತ್ತು ಹಿಂದೀ ಭಾಷೆಗಳ ಕಡೆಗೆ ಹೆಚ್ಚು ಲಕ್ಷ್ಯ ಕೊಡತಕ್ಕದು. (೫) ವಿದ್ಯಾಲಯದಲ್ಲಿ ಹೊರಗಣ ಇತರ ವಿದ್ಯಾರ್ಥಿಗಳಿದ್ದರೂ, ಇದು ಮುಖ್ಯವಾಗಿ ಗುರುಕುಲದಂತಿರುವುದು; ವಿದ್ಯಾರ್ಥಿಗಳಿರುವ ಛಾತ್ರಾಲಯವೂ ಇದರ ಪಕ್ಕದಲ್ಲಿಯೇ ಶಿಕ್ಷಕರ ಮೇಲ್ವಿಚಾರಣೆಯಲ್ಲಿರುವುದು. (೬) ವಿದ್ಯಾಲಯಕ್ಕೆ ಸಂಬಂಧಿಸಿರುವ "ಸ್ವಧರ್ಮ"ವೆಂಬ ಮಾಸಪತ್ರಿಕೆಯೊಂದು, ಜನತೆಯಲ್ಲಿ ಜಾಗೃತಿಯನ್ನುಂಟುಮಾಡುವುದಕ್ಕಾಗಿ ಹೊರಡುತ್ತಿರುವುದು. (೮) ಗಳು ಇತರ ರಜೆಯ ಸಮಯದಲ್ಲಿ ಶಿಕ್ಷಕರೊಂದಿಗೆ ಇತಿಹಾಸ, ಪ್ರಸಿದ್ಧ ಸ್ಥಳಗಳಿಗೆ ಹೋಗಿ ನಿಸರ್ಗ ಸೌಂದರ್ಯ ನಿರೀಕ್ಷಣೆ, ಪ್ರ ಭವ ಮುಂತಾದ ಶಿಕ್ಷಣವನ್ನು ಹೊಂದುವರು. (೯) ವಿದ್ಯಾ ದೇಶೀಯ ಅಂಗಸಾಧನೆಗಳ ಕಡೆಗೆ ವಿಶೇಷ ಲಕ್ಷ್ಯ ಕೊಡುವಂ ವುದರಿಂದ, ಇಲ್ಲಿ ಶಿಕ್ಷಣವನ್ನು ಮುಗಿಯಿಸಿದ ವಿದ್ಯಾರ್ಥಿಗಳು ಗಿಯೂ, ಬ್ರಹ್ಮಚರ್ಯ ಪಾಲನೆಯ ಶಕ್ತಿಯುಳ್ಳವರಾಗಿಯೂ ಆ ಬೇಳುವರು.

ಗ್ರಾಮಸೇವಕರ ಶಿಕ್ಷಣ (೨ ವರ್ಷ.)

ಈ ವರ್ಗಕ್ಕೆ ಕ. ರಾ. ಶಿ. ಸಮಿತಿಯ ಪ್ರವೇಶ ಪರೀಕ್ಷೆ ವಿಸಿಲ್ಲವೆಂದರೂ ಕನ್ನಡ ಮುಲ್ಕಿ ಅಥವಾ ಇಂಗ್ಲೀಷು ಐದನೆಯ ಶಿಕ್ಷಣವನ್ನು ಮುಗಿಯಿಸಿ, ೧೮ ವರ್ಷ ವಯಸ್ಸಿಗೆ ಕಡಿಮೆಯಾ ವರನ್ನು ಸೇರಿಸಿಕೊಳ್ಳಲಾಗುವುದು. ಈ ವಿಭಾಗದಲ್ಲಿ ೧ ವರ್ಷ ವಿದ್ಯಾಲಯ ಶಿಕ್ಷಣ, ಮತ್ತೆ ೧ ವರ್ಷ ಸಂಘದವರಿಂದ ತೋರಿ ಹಳ್ಳಿಯಲ್ಲಿ, ಸಂಘದವರ ಮೇಲ್ವಿಚಾರಣೆಯಲ್ಲಿ, ಕೆಲಸ ಮಾ ಈ ರೀತಿಯಾಗಿ ಶಿಕ್ಷಣ ಕ್ರಮವನ್ನು ಏರ್ಪಡಿಸಲಾಗಿದೆ. ವಿ ಶಿಕ್ಷಣ ಕ್ರಮದಲ್ಲಿ (೧) ಕನ್ನಡ, ಹಿಂದಿ (೨) ಇತಿಹಾಸ, ಸ ರಾಜನೀತಿ, ಅರ್ಥಶಾಸ್ತ್ರ, ಪಂಚಾಯತಿಯರಚನೆ, (೩) ಸಮಾ ತತ್ವ (೪) ಆಯುರ್ವೇದದ ಮೂಲತತ್ವ (೫) ಜ್ಯೋತಿಷ, ಪಂ ಹೇಳುವುದು ಇತ್ಯಾದಿ (೬) ಪುರಾಣವನ್ನೋದುವ ಪದ್ಧತಿ (೭) ವುದು, ನೇಯುವುದು (೮) ತೋಟದ ಕೆಲಸ, ಅಗಿಯುವುದು, ಇತ್ಯಾದಿ, ಹಳ್ಳಿಯ ಜೀವನಕ್ಕೂ, ಹಳ್ಳಿಯ ಜನರಿಗೆ ಸಹಾಯ ಲಿಕ್ಕೂ, ಹಳ್ಳಿಯ ಮಕ್ಕಳಿಗೆ ಶಿಕ್ಷಣ ಕೊಡಲಿಕ್ಕೂ ಬೇಕಾದಷ್ಟೆ ಗಳು ಕಲಿಸಲ್ಪಡುವವು ಅನಂತರ ಎರಡನೆಯ ವರ್ಷ ವಿದ್ಯಾ (ಗ್ರಾಮಸೇವಕರಾಗಿ) ಈ ಶಿಕ್ಷಣ ಪ್ರಯೋಗವನ್ನು ಹಳ್ಳಿಯಲ್ಲಿ ತೋರಿಸಿ, ಹಳ್ಳಿಯವರ ಮತ್ತು ಮೇಲ್ವಿಚಾರಕರ ಪ್ರೀತಿ ಪಾತ್ರರಾದರೆ, ವಿದ್ಯಾರ್ಥಿಯು ಗ್ರಾಮ ಸೇವಕರ ಶಿಕ್ಷಣದಲ್ಲಿ ಉ ನಾದನೆಂದು ಪದವೀಪತ್ರವು ಕೊಡಲ್ಪಡುವದು. ಈ ರೀತಿ ಪದ ಪಡೆದವರನ್ನು ಸಂಘದಿಂದ ಯೋಗ್ಯವೇತನ ಕೊಟ್ಟು ಹಳ್ಳಿಗಳಲ್ಲಿ ಮಾಡುವುದಕ್ಕೆ ನೇಮಿಸಲಾಗುವುದು.

ಈ ವಿದ್ಯಾಲಯದೊಂದಿಗೆ ಸಂಬಂಧಿಸಿ ಶ್ರೀ ರಾ. ದ. ವಿ ಬಾಬಾಜಿ ಜೋಶಿ ಬಿ. ಎ., ರಿಟೈರ್ಡ್ ಎಜ್ಯುಕೇಶನಲ್ ಇನ್ಸ್ ಸ. ಶಿ. ದೇಸಾಯಿ ಯಂ. ಎ., ರ. ರಾ. ದಿವಾಕರ ಯಂ. ಎ., ಎಲ್. ಎಲ್. ಬಿ., ಗೊ. ಗ. ಗುತ್ತಲ ಬಿ. ಎ. ಎಲ್ ಎಲ್. ಬಿ., ಕೃ ಭಾರದ್ವಾಜ ವಿದ್ಯಾಭೂಷಣ, ಎಸ್. ಎಸ್. ಪಾನೋಳಕರ (ಎಸ್ ಬಿ. ಎ.), ಮಧುರಾವ್ ಬಿ. ಕಬ್ಬೂರ ಯಂ ಎ., ಎಲ್ ಎಲ್ ಬಿ. ಬುರ್ಲಿ (೩ನೆಯ ವರ್ಷದ ಟ್ರೇನ್ಡ್ ಮಾಸ್ತರರು), ಬಿ. ಆರ್. (ಸ್ಕೂಲ ಫೈನಲ್), ಶ. ಬ. ಜೋಶಿ (ಟ್ರೇನ್ಡ್ ಮಾಸ್ತರರು) ಶ್ರೀನಿ ಚಾರ್ಯ ಪರಪಳಿ (ಮೆಟ್ರಿಕ್) ಪ್ರಭೃತಿ ವಿದ್ವಾಂಸರಿರುವರು.

— ವಿನಂತಿ —

ದೇಶದಲ್ಲಿ ಇಂತಹ ದೇಶ ಹಿತಸಾಧನೆಗಾಗಿ ಟೊಂಕ ಕಟ್ಟಿ ಕೆಲಸ ಮಾಡುತ್ತಿರುವರು. ಹರಿದ್ವಾರದ ಗುರುಕುಲ, ಕಾಶೀ ವಿದ್ಯಾ ವಂಗೀಯ ರಾಷ್ಟ್ರೀಯ ವಿದ್ಯಾಮಂಡಳಿ, ಪುಣೆಯ ಸ್ತ್ರೀ ವಿಶ್ವವಿದ್ಯಾ ಇತ್ಯಾದಿ ಸಂಸ್ಥೆಗಳನ್ನು ಸ್ಥಾಪಿಸಿ ಕೆಲಸ ಮಾಡುತ್ತಿರುವವರು ಅ ಆಯಾ ಸ್ಥಳೀಯ ಮಹನೀಯರಾದ ದೇ. ಭ. ಪಂಜಾಬ ಕೇಸರಿ ಲಜಪತರಾಯರು, ಶಿವಪ್ರಸಾದಗುಪ್ತ, ದಿವಂಗತ ರಾಸ ಬಿಹಾರಿ ಘೋ ಸರ್ ವಿಠ್ಠಲದಾಸ ಥ್ಯಾಕರ್ಸೆ ಮುಂತಾದವರು ಆಯಾ ಸಂ ೧೦ ಲಕ್ಷ ೧೫ ಲಕ್ಷ ೨೫ ಲಕ್ಷ ರುಪಾಯಿಗಳನ್ನು ದಾನಮಾಡಿ ಸಂ ಒಂದು ಸ್ಥಾಯಿಕ ಸ್ವರೂಪವನ್ನಿತ್ತು ಆಯಾ ಪ್ರಾಂತದವರ ತೆಗೂ, ಪ್ರೇಮಕ್ಕೂ ಪಾತ್ರರಾಗಿರುವರು. ಆದರೆ ನಮ್ಮ ಕರ್ನಾಟ ಈ ಬಗೆಯಾದ ಸಂಸ್ಥೆಗಳೇ ಸ್ಥಾಪಿತವಾಗಿರಲಿಲ್ಲ. ಒಂದು ಚಿಕ್ಕ ಸಂಸ್ಥೆಯಾಗಿ ಈಗ್ಗೆ ನಾಲ್ಕು ವರ್ಷಗಳ ಹಿಂದೆ ಧಾರವಾಡದ ಕ ಮಹಾ ವಿದ್ಯಾಲಯವು ಕೇವಲ ಜನಸಹಾಯದಿಂದಲೆ ಸ್ಥಾಪಿತವಾ ವರೆಗೆ ನಡೆದು ಬಂದು ಜನರ ಪ್ರೇಮಾದರಗಳಿಗೆ ಪಾತ್ರವಾಗಿರು ನೋಡಿದಲ್ಲಿ, ಕರ್ನಾಟಕಕ್ಕೆ ಆದರ್ಶಭೂತವಾದೊಂದು ವಿದ್ಯಾ ಸ ಅತ್ಯಾವಶ್ಯಕವಾಗಿದೆಯೆಂದರಿತು, ಕರ್ನಾಟಕದ ವಿದ್ಯಾಲಯಕ್ಕೆ ಹೇಳಿದ ವಿಸ್ತೃತ ಸ್ವರೂಪವನ್ನು ಕೊಡಲಾಗಿದೆ. ಸ್ವರೂಪವನ್ನು ಕೊಡುವುದು ಕರ್ನಾಟಕದವರನ್ನು ಸಹಾಯವು ದೊರೆತಂತೆ ಈ ಸಂಸ್ಥೆಯನ್ನು ಒಂದು ವನ್ನಾಗಿ ಮಾಡಿ ಇದರಿಂದ ಆದರ್ಶಪ್ರಾಯರೂ, ಧ ಗಳೂ, ಸ್ವಾವಲಂಬಿಗಳೂ, ಪರಹಿತಸಾಧಕರೂ, ಅದಂಥ ತರುಣರನ್ನು ಹೊರಗೆಡಹಬೇಕೆಂದು ಸಂಘದ ಉದ್ದೇಶವಾಗಿರುವುದು. ಕರ್ನಾಟ ಉತ್ಸಾಹವನ್ನೂ ಉತ್ತೇಜನವನ್ನು ಕೊಡಲು ಕರ್ನಾ ಲಜಪತರಾಯ, ರಸವಿಹಾರಿ ಘೋಷ, ಶಿವಪ್ರಸಾದ ಉದಾರಹೃದಯರಾದ ಶ್ರೀಮಂತರಿರುವರೆಂದು ಕರ್ನಾ ವಿಶ್ವಾಸವುಳ್ಳದ್ದಾಗಿರುವದು. ಆದುದರಿಂದ ಈ ಹಿತೈಷಿಗಳಾದ ಅಂತಹ ಶ್ರೀಮಂತರೂ, ಇತರರೂ ಭೂದಾನ, ಸುವರ್ಣದಾನಾದಿಗಳನ್ನು ಮಾಡಿ, ವಿ ದೇಶಹಿತಸಾಧನೆಯ ಪುಣ್ಯಕ್ಕೂ ಭಾಗಿಗಳಾಗ ಸೇವಾ ಸಂಘದವರು ಅತಿನಮ್ರತೆಯಿಂದ ಬೇಡಿಕೆ.

ದ. ಕೃ. ಭಾರದ್ವಾಜ
ಕಾರ್ಯದರ್ಶಿ, ಕರ್ನಾಟಕ ಸೇ
(ಕರ್ನಾಟಕ ಮಹಾ ವಿದ್ಯಾಲಯ,)
ಧಾರವಾಡ.

ವಿದೇಶ ವರ್ತಮಾನ.

—ಚೀನಾ ದೇಶದ ಪೈಕಿ ಶಾಂಘಾಯಿಯಲ್ಲಿ ಪ್ರಾರಂಭವಾದ ದಂಗೆಯು ಇನ್ನೂ ಅಂತ್ಯವಾಗಿಲ್ಲ. ದಂಗೆಖೋರರು ಜಪಾನಿನ ಪೋಲೀಸರ ಮೇಲೆ ಹರಿದು ಬಿದ್ದರು. ಆದರೆ ಜಪಾನಿನ ಪೋಲೀಸರು ಈ ದಂಗೆಖೋರರನ್ನು ಹೊಡೆದು ಓಡಿಸಿದರು.

—ಅಷ್ಟರಲ್ಲಿ ಇಟಲಿಯನ್ ಕ್ರೂಯಿಸರಿಂದ ೫೦ ಸಮುದ್ರ ಯುದ್ಧದ ಸೈನಿಕರು ಮತ್ತು ಒಂದು ನಾವಿಕ ಬೋಟಿನಿಂದ ಕೆಲವು ಅಮೇರಿಕನ ಸೈನಿಕರು ಅಲ್ಲಿಯ ದಡದ ಮೇಲೆ ಇಳಿದರು.

—ಇದಲ್ಲದೆ ಪೇಕಿಂಗಿನಿಂದಲೂ ನಾವಿಕ ಸೈನಿಕರನ್ನೂ ಮತ್ತು ಖಲಾಸಿಗಳನ್ನೂ ಒಟ್ಟುಗೂಡಿ ೨೦೦೦ ಜನರನ್ನು ಶಾಂಘಾಯಿಕ್ಕೆ ಕಳುಹಿಸೋಣಾಗಿದೆ.

—ಶಾಂಘಾಯಿದ ದಂಗೆಖೋರರು ಅಮೇರಿಕನ್ ಕುದುರೆ ಸವಾರರ ಮೇಲೂ ಗುಂಡುಗಳನ್ನು ಹಾರಿಸಿದರು. ಈ ಸ್ವಯಂಸೇವಕರು ಒಳನುಗ್ಗಿದ್ದಲ್ಲಿ ದಂಗೇಖೋರರು ಚದರಿಸಲ್ಪಟ್ಟರು.

—ಈ ಮೇರೆಗೆ ಚೀನಾದೊಳಗಿನ ದಂಗೆಯು ಬೇಗ ಬೇಗನೆ ಬೆಳೆಯಹತ್ತಿತು. ಅಲ್ಲಿ ಬಿದ್ದಿರುವ ಮುಷ್ಕರವು ವಿಶೇಷ ಭೀತಿಯನ್ನುಂಟುಮಾಡಹತ್ತಿತು. ಅಮೇರಿಕದಿಂದ ಯುದ್ಧದ ನಾವೆಯು ಬಂದು ಚೀನಕ್ಕೆ ತಲುಪಿತು. ಜಪಾನಿನಿಂದಲೂ ಅದೇ ಮೇರೆಗೆ ಯುದ್ಧ ಹಡಗಗಳು ಹೊರಟವು. ಈ ಪ್ರಕಾರ ಚೀನಾದೇಶವು ಏನಾದರೂ ಅನರ್ಥವನ್ನು ತಂದುಕೊಳ್ಳುತ್ತದೋ ಎಂದು ಭೀತಿಯುಂಟಾಗಿತ್ತು.

—ಅಷ್ಟರಲ್ಲಿ ಮುಷ್ಕರಗಾರರ ಮತ್ತು ದಂಗೆಖೋರರ ಪ್ರವೃತ್ತಿಯು ಬದಲಾಗಿ ಪುನಃ ಕೆಲವು ಮಟ್ಟಿನ ಶಾಂತತೆಯ ಕುರುಹುಗಳು ಕಾಣಹತ್ತಿವೆ. ಎರಡು ದಿವಸಗಳ ಮುಂಚೆ ದಂಗೆಯಿಂದ ತುಂಬಿ ಹೋದ ಪಟ್ಟಣಗಳು ಈಗ ಶಾಂತವಾದಂತೆ ತೋರುತ್ತಿವೆ.

—ನ್ಯೂಯೋರ್ಕದೊಳಗಿನ ಒಬ್ಬ ರೋಗಿಯು ಒಂದು ಸಾವಿರ ಮೈಲು ದೂರದಲ್ಲಿರುವ ಒಬ್ಬ ಡಾಕ್ಟರನಿಗೆ ತಂತಿರಹಿತ ಯಂತ್ರದ ಸಹಾಯದಿಂದ ಆಲೋಚನೆಯನ್ನು ಕೇಳಿದನು. ಎಕ್ಸರೇಸಿನ ಫೋಟೋವನ್ನು ಕಳುಹಿಸಿಕೊಳಲು ಡಾಕ್ಟರನು ಅದೆ ವಿತಂತಿಯಂತ್ರ (ವಾಯರ್ ಲೆಸ್)ದಿಂದ ಕೇಳಿದನು. ಅರ್ಧ ಘಂಟೆಯೊಳಗೆ ಫೋಟೋವು ವಿತಂತಿ ಯಂತ್ರದ ಸಹಾಯ್ಯದಿಂದ ಕಳುಹಿಸಲ್ಪಟ್ಟಿತು. ಡಾಕ್ಟರನು ಕೂಡಲೆ ಔಷಧೋಪಚಾರವನ್ನು ತಿಳಿಸಿದನು.

—ಬಲ್ಗೇರಿಯದ ಸೋಫಿಯಾ ಶಹರದಲ್ಲಿ ಬಾಂಬಿನ ಯಾವ ಅತ್ಯಾಚಾರ ನಡೆದಿತ್ತೊ ಆ ಆರೋಪಿಗಳ ಪೈಕಿ ಮೂವರನ್ನು ಫಾಶಿಗೆ ಕೊಡಲಾಯಿತು. ಫಾಶಿಗೆ ಕೊಡುವ ಕೆಲಸವು ಜಿಪ್ಸಿಜನರಿಂದ ಮಾಡಿಸಲ್ಪಟ್ಟಿತು.

—ಮೊರೊಕ್ಕೊದೊಳಗಿನ ಯುದ್ಧದಲ್ಲಿ ಫ್ರೆಂಚ ೪೦೦ ಜನರು ಮೃತಪಟ್ಟರೆಂದೂ ೧೧೦೦ ಜನರು ಗಾಯಪಟ್ಟಿರುವರೆಂದೂ ಸರಕಾರದಿಂದ ಪ್ರಕಟಿಸೋಣಾಗಿದೆ.

—ಸಿರದಾರನ ಖೂನಿಯ ಖಟ್ಲೆಯು ನಡೆದು ನ್ಯಾಯಾಧೀಶರು ಎಲ್ಲ ಅಪರಾಧಿಗಳಿಗೆ ಫಾಶಿಯ ಶಿಕ್ಷೆಯನ್ನು ವಿಧಿಸಿದರು. ದಂಗೆಖೋರರನ್ನು ದೊರಕ್ಕೆ ಅಟ್ಟಿದ ಒಬ್ಬ ಜವಾನನ್ನು ನಿರ್ದೋಷಪಡಿಸಿದ್ದಾರೆ. ಈ ಖಟ್ಲೆಯು ನಡೆಯುವಾಗ ಕೋರ್ಟಿನಲ್ಲಿ ಜನರು ಹೆಚ್ಚು ಕ್ಷುಬ್ಧರಾಗಿದ್ದರು.

—ರೋಡಸ್-ತೆರಿಗೆಗಳನ್ನು ಕಡಿಮೆಮಾಡಲಿಕ್ಕೂ, ಗ್ರೀಕ ಅಧಿಕಾರವನ್ನು ಮುರಿಯಲಿಕ್ಕೂ ಒಳಭಾಗದಿಂದ ಹೊರಟ ಸೈನ್ಯವು ಸಮೋಸನ್ನು ತಮ್ಮ ಕೈವಶಮಾಡಿಕೊಂಡಿದೆ ಎಂದು ವರ್ತಮಾನವಿದೆ. ಅವರು ತಮ್ಮ ಇಚ್ಛೆಯು ಪೂರ್ಣವಾಗದೆ ಸಮೋಸ್ ಸ್ವಾತಂತ್ರ್ಯವನ್ನು ಕೇಳಬಾರದೆಂದು ಗದರಿಸಿರುವರು.

—ಎಕೆನ್-ಅಧಿಕಾರಿಗಳೂ, ಸೋಲ್ಜರುಗಳೂ ಇನ್ನೂ ಇತರ ಸೈನಿಕರೂ, ಕ್ರೈಯೋಸ್‌ನ ಕಡೆಯ ದ್ವೀಪಕ್ಕೆ ಸಮೋಸಿನಿಂದ ಬಂದು ಇನ್‌ಸರ್ಜೆಂಟರುಗಳ ಸಂಖ್ಯೆಯು ೪೫೦ ಆದೀತೆಂದೂ ಮತ್ತು ಅವರು ಕೋವಿಗಳಿಂದ ತಯಾರಾಗಿದ್ದರೆಂದೂ, ರಿಪೋರ್ಟು ಮಾಡಿದ್ದಾರೆ.

—ಸಮೋಸಿನಲ್ಲಿ ಮಾರ್ಶಲ್ ಲಾ ಜ್ಯಾರಿಯೂ, ವಾಲಿಕರ ಹಾಗೂ ಸೈನ್ಯಗಳ ಆಗಮನವೂ, ಒಳ್ಳೇ ರೀತಿಯಿಂದ ನಿವಾಸಿಗಳಿಂದ ಸ್ವೀಕೃತವಾಗಿರುವುದು. ನಿವಾಸಿಗಳಲ್ಲಿ ಬಹು ಅಲ್ಪ ಮಂದಿ ಇನ್‌ಸರ್ಜೆಂಟುಗಳನ್ನು ಕೂಡಿದ್ದಾರೆ. ಇನ್ ಸರ್ಜೆಂಟರುಗಳ ಲೀಡರ್‌ಗಳು ತಪ್ಪಿಸಿಕೊಂಡು ಹೋದರೆಂದು ಸಮೋಸ್ ಬಂದೋಬಸ್ತು ಮಾಡಲ್ಪಟ್ಟಿದೆ. ಸಮೋಸಿನಲ್ಲಿ ಸೈನಿಕರ ಆಗಮನವನ್ನು ಗಳಿಗೆ ಗಳಿಗೆಯಲ್ಲಿಯೂ ಇದಿರುನೋಡುತ್ತಾರೆ. ಸ್ಥಳ ರೀತಿಯು ಪಕ್ಕನೆ ಬದಲಾವಣೆಯಾಗಲಾರದೆಂದು ಭಾವನೆ ಇದೆ.

—ಲಂಡನ್-ಸಮೋಸಿನಲ್ಲಿ ದಂಗೆಖೋರರ ಮುಖಂಡರು ಮುತ್ತಲ್ಪಟ್ಟರೆಂದು ಗ್ರೀಕ್ ಏಜೆನ್ಸಿಯು ರಿಪೋರ್ಟು ಮಾಡುತ್ತದೆ.

—ಮುನಿಚ್-ಜರ್ಮನ್ ಕೊಲೋನಿಯಲ್ ಸೊಸೈಟಿಯ ವಾರ್ಷಿಕ ಸಭೆಯು ಜರ್ಮನಿಯ ಕೊಲೋನಿಗಳ ಬೇಡಿಕೆಗೆ ಇದಿರಾಗಿ ಬಂದು ಠರಾವನ್ನು ಪಾಸುಮಾಡಿದೆ; ಮತ್ತು ಸರಕಾರದೊಡನೆ ತಮ್ಮ ಹಿಂತಿರುಗುವಿಕೆಗೆ ಅನುಮತಿಯನ್ನು ಕೇಳಿದೆ.

—ಬ್ರಿಟಿಷ ಕೊಲೋನಿಗಳ ಮೇಲೆ ಅಧಿಕಾರಿಸಲ್ಪಟ್ಟ ಜರ್ಮನ್ ನಿಬಂಧನೆಗಳನ್ನು ರದ್ದುಮಾಡಿದ ವಿನಹ ಆಂಗ್ಲೋ-ಜರ್ಮನ್ ವ್ಯಾಪಾರ ಒಪ್ಪಂದವನ್ನು ಅಂಗೀಕರಿಸತಕ್ಕದೆಂದು ರಿಚ್‌ಸ್ಟೆಗ್‌ನ್ನು ಅಪೇಕ್ಷಿಸಿದ್ದಾರೆ.

—ಪೆರಿಸ್-ರಿಫ್ಸ್‌ಗೆ ಹೋದ ಜನಾಂಗಗಳಿಗೂ ಫ್ರೆಂಚರಿಗೂ ಇದ್ದ ಚಳವಳಿಯ ಟ್ರೆಂಚುಗಳಂತೆ ಇದ್ದ ಅನೇಕ ಸ್ತಂಭಗಳನ್ನು ಟೌನ್ ಭಾಗದಲ್ಲಿ ನಾಶಮಾಡಿದ ತರುವಾಯ ಫ್ರೆಂಚ ಸೈನ್ಯವು ಹಿಂದಿರುಗಿದೆ ಎಂದು ಫೆಜ್‌ನಿಂದ ವರ್ತಮಾನವುಂಟು.

—ರಿಫ್ಸಿನವರು ಮೊರೊಕ್ಕೋ ಪ್ರೊಟೆಕ್ಟೊರೇಟಿನಲ್ಲಿ ಅಲ್ಲ, ಆದರೆ ಇಡೀ ನಾರ್ತು ಆಫ್ರಿಕಾ ಕೊಲೋನಿಗಳೇ ಹೋರಾಟದ ಪಾತ್ರಗಳಾಗಿರುತ್ತಾರೆಂದು ನಂಬಿರುತ್ತಾರೆ. ರಿಫ್ಸಿನ ಒತ್ತಾಟವು ಮುಂಭಾಗದ ಹಲವು ಕಡೆಗಳಲ್ಲಿ ಜೋರಿನಿಂದ ನಡೆಯುತ್ತದೆ.

—ಅಬ್ದುಲ್‌ಕ್ರಿಮ್ ಎಂಬವನು ತನ್ನ ಸನ್ನದ ಪ್ರಯತ್ನದ ಕೈಗೂಡಿದರೆ, ಆಫ್ರಿಕಾದಲ್ಲಿ ಎಲ್ಲೆಲ್ಲಿಯೂ ಮುಹಮ್ಮದೀಯರನ್ನು ದಂಗೆಗೆಬ್ಬಿಸುವ ಯತ್ನವನ್ನು ಅಂತರಂಗದಲ್ಲಿ ಮಾಡುತ್ತಿದ್ದಾನೆ.

—ಫ್ರೆಂಚ ಯುದ್ಧನಾವೆಗಳು ಜರ್ಮನ್ ನಾವೆಗಳೆರಡನ್ನು ಮೊರೊಕ್ಕೊ ಕರಾವಳಿಯಲ್ಲಿ ಅಗುದಿರ್ ಎಂಬಲ್ಲಿಗೆ ಸಮೀಪದಲ್ಲಿ ಹಿಡಿದು ಮೊಗಡೋರ್ ಎಂಬಲ್ಲಿಗೆ ಕೊಂಡುಹೋಗಿ ಅಲ್ಲಿ ಇಟ್ಟಿರುತ್ತಾರೆ.

ಒಳದೇಶ ವರ್ತಮಾನ.

—ಪುಣೆಯಲ್ಲಿ ಗಣೇಶ ಪೇಟೆಯೊಳಗಿನ ವಿಷ್ಣು-ಲಕ್ಷ್ಮಿ ದೇವತೆಗಳ ಎರಡು ಮೂರ್ತಿಗಳು ಒಡೆಯಲ್ಪಟ್ಟಿವೆ. ಯಾರು ಒಡೆದಿರುವರೆಂಬುದನ್ನು ಗೊತ್ತು ಹಚ್ಚೋಣಾಗುತ್ತದೆ.

—ಮುಂಬಯಿಯಲ್ಲಿ ದಾದೀಶೇಟಿ ಲೇನಿನಲ್ಲಿ ಬೊಂಬೆ ಗೆರೇಜ್ ವರ್ಕ ಶೋಪಿಗೆ ಬೆಂಕಿ ಹತ್ತಿ ಸುಮಾರು ೧॥ ಲಕ್ಷದ ನಷ್ಟವು ಸಂಭವಿಸಿದೆ.

—ಓಗಲೆಯವರು ಗಾಜಿನ ಕಾರಖಾನೆಯಲ್ಲಿ ಬರುವ ನವರಾತ್ರಿಯಿಂದ ಸಂಪೂರ್ಣ ಸ್ವದೇಶಿ "ಪ್ರಭಾಕರ" ಕಂದೀಲುಗಳನ್ನು ತಯಾರಿಸುವ ಏರ್ಪಾಡಾಗಿದೆ.

—ತ್ರಾವಣಕೋರ ಸಂಸ್ಥಾನದ ಮಹಾರಾಣಿಯವರು ತಮ್ಮ ಸಂಸ್ಥಾನದೊಳಗಿನ ದೇವಾಲಯಗಳಲ್ಲಿ ನಡೆಯುತ್ತಿರುವ ಪ್ರಾಣಿಹಿಂಸೆಯನ್ನು ನಿಲ್ಲಿಸಿರುವರು. ಇದು ಶ್ಲಾಘ್ಯವು.

—ಇಂದೂರಿನಲ್ಲಿ ಕಳೆದ ಎರಡು ವಾರಗಳಲ್ಲಿ ಬೆಂಕಿ ಹತ್ತಿ ದೊಡ್ಡ ದೊಡ್ಡ ಕಟ್ಟೋಣಗಳು ಸುಟ್ಟುಹೋದವು. ಮಹಾರಾಜರು ಸ್ವತಃ ಬೆಂಕಿ ನೊಂದಿಸುತ್ತಿದ್ದರು. ಈ ಬೆಂಕಿಯಿಂದ ೧೦ಲಕ್ಷಕ್ಕಿಂತಲೂ ಹೆಚ್ಚು ನಷ್ಟವು ಸಂಭವಿಸಿದೆ.

—ಗಾಳಿಮಳೆಯ ತುಫಾನಿನಿಂದ ಗುಂಟೂರ ಜಿಲ್ಲೆಯಲ್ಲಿ ತುಂಬಾ ನಷ್ಟವು ಸಂಭವಿಸಿದೆ. ಅಲ್ಲಿಯ ರೆಪಲ್ಲೆ ತಾಲೂಕಿನಲ್ಲಿ ನೆರೆಯಿಂದ ಪ್ರಲಯವುಂಟಾದಂತಾಗಿದೆ. ಈ ಎಲ್ಲ ಪೀಡಿತರಿಗೆ ಮದ್ರಾಸ ಸರಕಾರವು ಒಂದು ಲಕ್ಷ ರೂಪಾಯಿಗಳನ್ನು ಸಾಲವಾಗಿ ಕೊಡಲು ಮಂಜೂರುಮಾಡಿದೆ.

—ಪೊಂಡಿಚೇರಿಯಲ್ಲಿ ಕೆರಲಿ ಮತ್ತು ಮಾಲೆ ಎಂಬ ಇಬ್ಬರು ಯುರೋಪಿಯನರನ್ನು ಕೈದುಮಾಡಿದೆ. ಈ ಆಸಾಮಿಗಳು ಬ್ರಿಟಿಷ ಹಿಂದುಸ್ಥಾನದಲ್ಲಿ ಸುಳ್ಳು ಲೋಟರಿಗಳ ಟಿಕೇಟುಗಳನ್ನು ಮಾರಿ ಸಾವಿರಾರು ರೂಪಾಯಿಗಳನ್ನು ಸಂಪಾದಿಸಿದ್ದರು. ಮುಂಬಯಿಯಲ್ಲಿಯೂ ಇವರು ಪ್ರೆಸಿಡೆನ್ಸಿ ಕ್ಲಬ್ಬಿನ ಮುಖಾಂತರ ಟಿಕೇಟುಗಳನ್ನು ಮಾರಿದ್ದರು.

—ಗುರುದ್ವಾರ ಪ್ರಬಂಧಕ ಬಿಲಿನಲ್ಲಿ ಸಿಖರಿಗೆ ಮತದಾನವಿದ್ದಂತೆಯೆ ಹಿಂದು ಉದಾಸಿ ಮತ್ತು ನಿರ್ಮಳ ಇವರಿಗೂ ಇರಬೇಕೆಂದು ಲಾಹೋರದ ಉದಾಸಿ ಮಂಡಲವು ಕೇಳಿದೆ.

—ಅಖಿಲಭಾರತ ಹಿಂದು ಹಿಂದು ಮಹಾಸಭೆಯ ಒಫೀಸು ಕಾಶಿಯಿಂದ ದಿಲ್ಲಿಗೆ ಒಯ್ಯಲ್ಪಟ್ಟಿದೆ.

—ಕಲ್ಲಿಕೋಟೆಯಲ್ಲಿ ಮೌ। ಮಹಮ್ಮದ ಶಮ್ನಾಡ್ ಎಮ್. ಎಲ್. ಏ. ಯವರ ಅಧ್ಯಕ್ಷತೆಯಲ್ಲಿ 'ಅಂದಮಾನದಲ್ಲಿ ಮಾಪಿಳ್ಳೆಯರಿಗೆ ವಸತಿ ಮಾಡಬಿಡುವುದನ್ನು ನಿಲ್ಲಿಸಿ, ಕಳೆದ ದಂಗೆಯಲ್ಲಿ ಕಾವು ಶಿಕ್ಷೆ ಅನುಭವಿಸುವವರನ್ನು ಇತ್ತ ಕಳಿಸಬೇಕೆಂದು ಬೇಡಿ ನಿರ್ಧಾರಗಳಾಗಿವೆ.

—ತಮಿಳುನಾಡಿನ ವಿ. ವಿ. ಎಸ್. ಐಯ್ಯರರು ತಮ್ಮ ಹದಿನ್ನಾಲ್ಕು ವರ್ಷ ವಯಸ್ಸಿನ ಮಗಳೊಡನೆ ಪಾಪನಾಶಂ ಬೆಟ್ಟಗಳ ಬಳಿಯ ಕಲ್ಯಾಣ ತೀರ್ಥದ ಜೋಗಿಗೆ ಸ್ನಾನಕ್ಕಾಗಿ ಹೋಗಿರಲು, ಮಗಳು ಮುಳುಗುವಂತಾಯಿತೆಂದು ಐಯ್ಯರರೂ ನೀರಲ್ಲಿಳಿದು ಪ್ರಾಣನಷ್ಟವಾಗುವಂತಾಯಿತು. ಮಗಳ ಶವ ದೊರೆತಿದೆ ಅಯ್ಯರರ ಶವವನ್ನು ಹುಡುಕುತ್ತಿದ್ದಾರೆ. ತಮಿಳುನಾಡಿನ ಎಲ್ಲ ಪ್ರಾಂತಗಳಿಂದ ಇದಕ್ಕಾಗಿ ದುಃಖಸೂಚಕ ನಿರ್ಧಾರಗಳಾಗುತ್ತಿವೆ.

—ಮತಸಂಬಂಧವಾದ ದಂಗೆಗಳ ದೆಸೆಯಿಂದ ಪಂಜಾಬಿನಲ್ಲಿ ಜೈಲುವಾಸಿಗಳಾಗಿರುವ ೨೪ ಮಂದಿಯ ಕಾವು ಶಿಕ್ಷೆಯು ಬರೀ ಹತ್ತು ವರ್ಷದ ಜೈಲುವಾಸಕ್ಕೆ ಇಳಿಸಲ್ಪಟ್ಟಿದೆ. ೫೧ ಕೈದಿಗಳಿಗೆ ಇದುವರೆಗೆ ಅನುಭವಿಸದೆ ಬಾಕಿಯಿದ್ದ ದಂಡನೆಯನ್ನು ರದ್ದುಮಾಡಲಾಗಿದೆ. ಈ ರೀತಿ ಸಮಸ್ತ ಇಂಥ ಕೈದಿಗಳಿಗೂ ರಿಯಾಯಿತಿಗಳು ತೋರಿಸಲಾಗಿವೆ. ಪರಂತು, ಪುನಃ ದಂಗೆಗಳಾದಲ್ಲಿ ಇವರು ತಪ್ಪಿತಮಾಡಿದರೆ, ಘೋರ ದಂಡನೆ ಇರುವುದೆಂದು ಎಚ್ಚರಿಸಲಾಗಿದೆ.

—ವಿಜಯ ನಗರದ ಸಿಂಹಾಸನಾಧೀಶ್ವರ ಕೃಷ್ಣದೇವರಾಯರ ವರ್ಧಂತಿಯು ಹಂಪೀನಗರದಲ್ಲಿ ತಾ. ೨೯ರಲ್ಲಿ ಆಚರಿಸಲ್ಪಟ್ಟು ತತ್ಸಂಬಂಧವಾದ ಐತಿಹಾಸಿಕ ಶೋಧಗಳನ್ನು ನಡಿಸಬೇಕಾಗಿಯೂ, ಕೃಷ್ಣರಾಯರ ಪ್ರತಿಮೆಯೊಂದನ್ನು ಇಡಿಸಬೇಕಾಗಿಯೂ, ಹಂಪೀ ವಿರೂಪಾಕ್ಷನ ದೇವಾಲಯವನ್ನು ಜೀರ್ಣೋದ್ಧಾರಗೊಳಿಸಬೇಕಾಗಿಯೂ ನಿರ್ಧಾರಗಳಾಗಿವೆ.

—ಪಂಡಿತ ಮದನಮೋಹನ ಮಾಲವೀಯರವರು ಕಳೆದ ೫೦ ವರ್ಷಗಳಿಂದ ಒಂದೆರಡು ಸಲ ವಿನಾ, ಸರ್ವದಾ ಸ್ವದೇಶಿ ಬಟ್ಟೆಗಳನ್ನೇ ಉಪಯೋಗಿಸುತ್ತಿರುವರು.

—ಗ್ವಾಲಿಯರ್ ಮಹಾರಾಜರು ೬೦ ಸಾವಿರ ರೂಪಾಯಿಗಳನ್ನೂ, ಜಯಪುರದ ಮಹಾರಾಜರು ೧೦ ಸಾವಿರ ರೂಪಾಯಿಗಳನ್ನೂ, ಕುಷ್ಠರೋಗದ ನಿವಾರಣೆಯ ಫಂಡಿಗೆ ಕೊಟ್ಟಿರುವರು.

—ಇಬ್ಬರು ಯುರೋಪಿಯನ್ ಸೋಲ್ಜರುಗಳು ಒಂದು ಬೈಸಿಕಲ್ ಕದ್ದದ್ದಕ್ಕಾಗಿ ಮದರಾಸ್ ಎಗ್ಮೋರ್ ಸ್ಟೇಶನ್ನಿನಲ್ಲಿ ವಿಚಾರಣೆಮಾಡಿ ಇಬ್ಬರಿಗೂ ಸಜಾ ವಿಧಿಸಲ್ಪಟ್ಟಿರುವುದು.

—ಐದು ನಿಮಿಷಗಳಲ್ಲಿ ಒಂದು ಸಾವಿರ ಶಬ್ದಗಳನ್ನು ಬರೆದಿದ್ದಕ್ಕಾಗಿ ಮದ್ರಾಸ ಹೈಕೋರ್ಟಿನ ಷಾರ್ಟ್‌ಹ್ಯಾಂಡು ರಿಪೋರ್ಟರೊಬ್ಬರಿಗೆ ಒಂದು ಚಿನ್ನದ ಪದಕವು ಬಹುಮಾನವಾಗಿ ಕೊಡಲ್ಪಟ್ಟಿರುವುದು.

—ಕಲ್ಕತ್ತೆಯ ಹೈಕೋರ್ಟಿನ ಜಡ್ಜಿಗಳಾಗಿದ್ದ ಅಶುತೋಷ್ ಚೌಧುರಿಯವರು ೪೦ ಸಾವಿರ ರೂಪಾಯಿ ಬೆಲೆ ಬಾಳುವ ೩ ಸಾವಿರ ಪುಸ್ತಕಗಳ ಭಂಡಾರವನ್ನು ಶಾಂತಿ ವಿಶ್ವವಿದ್ಯಾನಿಲಯಕ್ಕೆ ದಾನವಾಗಿ ಕೊಟ್ಟಿರುವರು.

—ಬಂಗಾಳಾ ದೇಶಕ್ಕೆ ಸೇರಿದ ಕಾಮಿಲಾದಲ್ಲಿ ಸುಮಾರು ೧೦೦ ವರ್ಷದ ಚರಕವೊಂದಿರುವುದು. ಇದು ಈಗ ೫೮ ವರ್ಷದ ಮುದುಕಿಯೊಬ್ಬಳ ಹತ್ತಿರವಿದೆ. ಇದನ್ನು ಇವಳಿಗೆ ಇವಳ ಅತ್ತೆಯು ಕೊಟ್ಟಳು. ಈ ಚರಕವು ಈಗಲೂ ಚೆನ್ನಾಗಿ ಕೆಲಸ ಮಾಡುತ್ತಲಿದೆ. ಈ ಚರಕದಿಂದ ತೆಗೆದ ನೂಲಿನಿಂದಾದ ಬಟ್ಟೆಗಳನ್ನೇ ಇವಳೂ ಮತ್ತು ಇವಳ ಕಡೆಯವರೂ ಧರಿಸುತ್ತಿರುವುದು. ಇವಳ ಜನ್ಮದೊಳಗಾಗಿ ಇವಳು ವಿದೇಶೀ ಬಟ್ಟೆಯನ್ನು ಹಾಕಿಲ್ಲವೆಂದು ತಿಳಿಸಲ್ಪಟ್ಟಿದೆ.

೧೯೨೪ನೇ ಇಸವಿಯಲ್ಲಿ ಅಮೇರಿಕಾದಲ್ಲಿ ಮೋಟಾರು ಗಾಡಿಗಳಿಂದ ೧೯ ಸಾವಿರ ಮರಣಗಳು ಸಂಭವಿಸಿರುವುದಲ್ಲದೆ ೪॥ ಲಕ್ಷ ಜನರಿಗೆ ಘಾಯಗಳಾಗಿರುವುವು.

ದಕ್ಷಿಣ ಕನ್ನಡ.

ಕಾಸರಗೋಡು:— ಇದೇ ತಾ. ೮ನೇ ಸೋಮವಾರ ದಿನ ಸಾಯಂಕಾಲ ೫॥ ಘಂಟೆಗೆ ಇಲ್ಲಿಯ ಕೆ. ಯ. ಎಮ್ ಬಿಶನ್ ಸೆಕೆಂಡರಿ ಶಾಲೆಯ ಹಿಂಬದಿ ತೆಕ್ಷನಲ್ಲಿ, ಇಲ್ಲಿಗೆ ಚಿತ್ತಯಿಸಿದ ಎಂಡೌಮೆಂಟ್ ಕಮಿಟಿಯ ಪ್ರೆಸಿಡೆಂಟರೂ, ಮಾಜಿ ಹೈಕೋರ್ಟು ಜಡ್ಜರವರೂ ಆಗಿದ್ದ ರಾ। ಸರ್. ಟಿ. ಸದಾಶಿವ ಅಯ್ಯರರವರು, ಶ್ರೀಮದ್‌ಭಗವತ್‌ಗೀತೆಯ ಕುರಿತು ಒಂದು ಚಲೋ ಭಾಷಣವನ್ನು ಕೊಟ್ಟರು. ಭಾಷಣವು ಸುಲಭ ಶೈಲಿಯ ಇಂಗ್ಲೀಷಿನಲ್ಲಿ ಕೊಡೋಣಾಯಿತಲ್ಲದೆ ಕೇಳುವುದಕ್ಕೆ ಅತಿ ಮಧುರವೂ ಹೃದಯಂಗಮವಾಗಿಯೂ ಇರುತ್ತಿತ್ತು. ಭಾಷಣದಲ್ಲಿ ಶ್ರೀಮದ್‌ಭಗವತ್ ಗೀತೆಯ ಎಲ್ಲಾ ಖಂಡಗಳನ್ನು ಚೆನ್ನಾಗಿ ವಿವರಿಸಿ ಹೇಳಿದ್ದಲ್ಲದೆ, ಅದರಲ್ಲಿರುವ ಮುಖ್ಯ ಮುಖ್ಯವಾದ ಎಲ್ಲಾ ಸಂಗತಿಗಳನ್ನೂ, ಮಾನವರಾದ ನಾವು ನಡೆಕೊಳ್ಳತಕ್ಕ ಧರ್ಮನಿಯಮಗಳನ್ನೂ, ಕುರಿತು ಅತ್ಯುತ್ಕೃಷ್ಟವಾದ ರೀತಿಯಲ್ಲಿ ಬೋಧಿಸಿದರು. ಅಲ್ಲದೆ ತಾನು, ಶ್ರೀಮದ್‌ಭಗವತ್ ಗೀತೆಯನ್ನು ಪ್ರತಿ ದಿವಸವೂ ಪಠಿಸಿ ಅದನ್ನು ಅಂದರೆ ಅದರಲ್ಲಿರುವ ಎಲ್ಲ ಶ್ಲೋಕಗಳನ್ನು ಬಾಯಿಪಾಠ ಮಾಡಿಕೊಂಡಿರುತ್ತೇನಾಗಿಯೂ, ಹೀಗೆ ಅವುಗಳನ್ನು ನಿತ್ಯವೂ ಪಠಿಸಿ ಬಾಯಿಪಾಠ ಮಾಡುವುದರಿಂದ ಪ್ರತಿದಿವಸವೂ ಶ್ರೀ ಭಗವಂತನ ಕುರಿತಾದ ಹೆಚ್ಚಿನ ಅನುಭವಗಳು ಲಭಿಸುವದಲ್ಲದೆ, ಇಡೀ ಹಿಂದುಸ್ಥಾನ ಮಾತ್ರವಲ್ಲ, ಇಡೀ ಭೂಲೋಕದ ಮಾನವಜಾತಿಯನ್ನೂ ಒಂದಾಗಿ ಎಣಿಸುವರೆಯೂ, ಎಲ್ಲರಲ್ಲಿ ಪ್ರೀತಿಯನ್ನು ಸರಿಸಮಾನತ್ವವನ್ನೂ ಬಂಧುಪ್ರೇಮವನ್ನೂ ವೃದ್ಧಿಸುವದೆಂಬದರಲ್ಲಿ ಯಾವ ಸಂದೇಹವೂ ಇರುವುದಿಲ್ಲವಾಗಿ ಕಂಠೋಕ್ತವಾಗಿ ಹೇಳಿದರು. ಅಲ್ಲದೆ ಶ್ರೀಮದ್‌ಭಗವತ್ ಗೀತೆಯನ್ನು ಪರಾಯಣಮಾಡುವುದಕ್ಕೆ ಎಲ್ಲಾ ಪ್ರಾಯ ಜಾತಿ ಮೇಲಿನವರು ಕೀಳಿನವರು ಎಂಬ ಯಾವ ಭೇದವೂ ಇರುವುದಿಲ್ಲವಾಗಿಯೂ ಅಸ್ಪರ್ಶರೆನಿಸಿಕೊಳ್ಳುವವರು ಕೂಡಾ ಇದನ್ನು ನಿತ್ಯ ಪಠನ ಮಾಡಬೇಕೆಂತಲೂ ಬೋಧಿಸಿದರು. ರಾ। ಸರ್. ಟಿ. ಎಸ್ ಐಯ್ಯರರವರು ಭಗವತ್ ಗೀತೆಯ ಪಠನೆಯಿಂದ ತಮಗೆ ಲಭಿಸಿದ ಅನುಭವಾಮೃತವನ್ನು ನೆರೆದ ಎಲ್ಲಾ ಸಭಿಕರಿಗೂ ತಮ್ಮ ಶಕ್ತಿ ಮೀರಿ ಸಾಧಾರಣ ೧॥ ಘಂಟೆಯ ತನಕ ಪಾನಮಾಡಗೊಡಿಸಿದರು. ಅಲ್ಲದೆ ಕಡೆಗೆ ಎಲ್ಲರೂ ಪ್ರತಿನಿತ್ಯ ಯಾವ ಕಾರ್ಯಕ್ಕಿಂತಲೂ ಶ್ರೀಮದ್ ಭಗವತ್‌ಗೀತೆಯ ಪರಾಯಣ ಕಾರ್ಯವನ್ನು ಮುಖ್ಯವಾಗಿಟ್ಟುಕೊಂಡು, ಪ್ರತಿ ದಿನ, ದಿನಕ್ಕೆ ೧೦ರಂತೆಯಾದರೂ ಶ್ಲೋಕಗಳನ್ನು ಪಠನ ಮಾಡಿ, ಕೊನೆಗೆ ಇಡೀ ಗೀತೆಯನ್ನು ಬಾಯಿಪಾಠವನ್ನಾಗಿ ಮಾಡಿಕೊಳ್ಳತಕ್ಕದೆಂತ ಹೇಳಿದರು. ನೆರೆದ ಸಭಿಕರೆಲ್ಲರೂ ಈ ಭಾಷಣ ಕಾಲದಲ್ಲಿ ಜಾತಿ ವೈಷಮ್ಯಗಳನ್ನು ಮರೆತಿರುವಂತೆ ಸ್ತಬ್ಧವಾಗಿ ಕುಳಿತು, ಆನಂದ ಭರಿತರಾಗಿ ಈ ಅನುಭವ ಅಮೃತವನ್ನು ಪಾನಮಾಡುತ್ತಿದ್ದರು. ಮಾನ್ಯರಾದ ಜಸ್ಟಿಸ್‌ರವರೂ, ಈಗಿನ ಎಂಡೌಮೆಂಟ್ ಕಮಿಟಿಯ ಪ್ರೆಸಿಡೆಂಟರವರೂ ಆದ ಸರ್, ಟಿ. ಎಸ್. ಐಯ್ಯರರವರು ನಮ್ಮ ಚಿರನಿದ್ರಾವಸ್ಥೆಯಲ್ಲಿರುವ ಚಿಕ್ಕ ಊರಿಗೆ ಬಂದು ಈ ರೀತಿ, ಶ್ರೀ ಭಗವಂತನೇ ಬೋಧಿಸಿದ, ಈ ಶ್ರೀಮದ್‌ಭಗವತ್ ಗೀತೆಯ ಕುರಿತು ಬೋಧಿಸಿದುದು ನಮ್ಮಗಳ ಭಾಗ್ಯೋದಯವೇ ಸರಿ. ಈ ಬಗ್ಗೆ ನಾವು ಅವರ ಉಪಕಾರವನ್ನು ಎಂದೆಂದಿಗೂ ಮರೆಯಲಾಗದು. ಕೊನೆಗೆ ನೆರೆದಿದ್ದ ಸಭಿಕರಲ್ಲಿ ಆ ದಿನದ ಆ ಭಾಷಣಕ್ಕೆ ಮುಖ್ಯ ಕರ್ತೃವಾದ ವಕೀಲ್ ಮತ್ತು ಆರ್ಯಸಮಾಜದ ಇಲ್ಲಿಯ ಪ್ರೆಸಿಡೆಂಟರಾದ ಕೆ. ಆರ್. ದಂಡಿಲ್ಲಾಯರವರು ಮಾನ್ಯ ಅಯ್ಯರರವರಿಗೂ, ಇವರನ್ನು ಅತಿಥಿಗಳನ್ನಾಗಿಟ್ಟುಕೊಂಡ ಇಲ್ಲಿಯ ಸರ್ವೆ ಡಿಪ್ಯುಟಿ ಡೈರೆಕ್ಟರರಾದ ರಾ। ರಾಮಸ್ವಾಮಿ ಅಯ್ಯರರವರಿಗೂ ಹೂಮಾಲೆಗಳಿಂದ ಸತ್ಕರಿಸಿ, ರಾ। ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚಿತ್ತಾಯರು ಆಗ ತಾನೇ ರಚಿಸಿದ ಮಂಗಲ ಪದವನ್ನು ಹಾಡಿ ಸಭೆಯನ್ನು ಮುಕ್ತಾಯಪಡಿಸಿದರು. ರಾ। ಸರ್. ಟಿ. ಎಸ್. ಅಯ್ಯರರವರಿಗೂ ಭೂಲೋಕದ ಎಲ್ಲಾ ಬಂಧುಗಳಿಗೂ ಶ್ರೀ ಭಗವಂತನು ಸದಾ ಕಾಪಾಡಲಿ!

ಕಳೆದ ಇಡೀ ವಾರದಲ್ಲಿ ಮಳೆಯು ಸುಳಿವೇ ಇಲ್ಲ. ಬಿಸಿಲಿನ ತಾಪದಿಂದ ಮೈಯೆಲ್ಲಾ ಪುನಃ ಬೆವರಿನಿಂದ ಒದ್ದೆಯಾಗ ಹತ್ತಿದೆ. ಸೆಕೆಯೂ ಹೆಚ್ಚಾಗಿರುತ್ತದೆ. ಮುಂದೆ ಯಾವಾಗ ಮಳೆಯು ಬರುವುದೋ ಶ್ರೀ ದೇವರೇ ಬಲ್ಲ.

ಇಲ್ಲಿಯ ಬೋರ್ಡು ಹಾಸ್ಕೂಲು ಇದೇ ತಾ. ೮ಕ್ಕೆ ಪುನಃ ತೆರೆಯೋಣಾಯಿತು.

ಕ್ನಾರಿಕ ಅಪ್ಪು ಎಂಬವನನ್ನು ಕೊಂದ ಆರೋಪದ ಮೇಲೆ ೪ ಜನರನ್ನು ಕೈದು ಮಾಡಿ ಇಲ್ಲಿಯ ರಿಮಾಂಡಿನಲ್ಲಿಟ್ಟಿರುತ್ತಾರೆ.

ಉಪ್ಪಿನಂಗಡಿ ಆಕ್ಟಿಂಗ್ ಸಬ್ ರಿಜಿಸ್ಟ್ರಾರರಾಗಿ ನೇಮಿಸಲ್ಪಟ್ಟು ಇಲ್ಲಿಯ ರಿಜಿಸ್ಟ್ರಿ ಅಫೀಸು ಕ್ಲಾರ್ಕರಾದ ರಾ। ಬಿ. ವೆಂಕಟರಮಣಯ್ಯನವರು, ಸದರಿ ಆಕ್ಟಿಂಗ್ ಕೆಲಸದಿಂದ ನಿವೃತ್ತರಾಗಿ ಇಲ್ಲಿಗೆ ತಿರುಗಿ ಬಂದಿರುತ್ತಾರೆ.

ಬಂಟವಾಳ:— ಜೂನು ತಿಂಗಳ ಆರಂಭದಲ್ಲಿ ಎಡೆಬಿಡದೆ ಮಳೆ ಬಂದು ಹೊಳೆ ತುಂಬಿಸಿ ಬಿಟ್ಟಿತು. ಈ ನಾಲ್ಕು ದಿವಸದಿಂದ ಮಳೆಯ ಹನಿ ಇಲ್ಲ. ಇದರಿಂದ ಹವಾಮಾನ ಕೆಟ್ಟು ಪ್ರತಿಮನೆಯಲ್ಲಿ ರೋಗದಿಂದ ನರಳುವರು. ಆಸ್ಪತ್ರೆಗೆ ಹೋದರೆ ವಯೋವೃದ್ಧರೂ ಜ್ಞಾನವೃದ್ಧರೂ ಆದಂಥಾ ಪುಣ್ಯಾತ್ಮ ಡಾಕ್ಟರರು ಇರುವಾಗ ಇವರಿಗೆ ಊರ ಭಾಷೆ ಗೊತ್ತಿದ್ದರೂ ದಿನವಹಿ ನೂರಾರು ರೋಗಿಷ್ಟರಿಗೆ ಮದ್ದು ಕೊಟ್ಟು ಬೇಸತ್ತು ಕಂಪೌಂಡರ ಸಹಾಯವನ್ನು ಜನರು ಬೇಡುತ್ತಿರುವದು ನೋಡುವಾಗ ವಾಚಕರೇ ಏನು ಅನ್ನಬೇಕು.

ಇಲ್ಲಿಯ ಟೆಂಪ್ಲ್ ಶಾಲೆಯು ಅಡ್ಲೈವಾರ್ ರಾ। ಬಾಬುಕಣ್ಣುಯವರ ಮೆನೆಜಿಮೆಂಟಿನಿಂದ ಊರ್ಜಿತಕ್ಕೆ ಬರುವದರಲ್ಲಿದೆ. ಶಾಲೆಯ ದುರುಸ್ತಿ ಕೆಲಸಕ್ಕೆ ಆರಂಭಿಸಲಾಯಿತು. ಈ ಶಾಲೆಗೆ ಮೊದಲು ಅನುಭವವಿದ್ದ ಎಮ್. ಎ. ಸೆಟ್ಟಿ ಮಾನೂರು ಇದೇ ತಾ. ೧೦ರಿಂದ ಹೆಡ್‌ಮಾಸ್ಟರ್ ಚಾರ್ಜು ವಹಿಸಿಕೊಂಡು ಇವರು ಬಿ. ಎ. ಪಾಸಾಗಿ ಮಂಗಳೂರು ಸೈಂಟ್ ಎಲೋಯಿಸಿಯಸ್ ಕೊಲೇಜಿನಲ್ಲಿ ಉಪಾಧ್ಯಾಯ ವೃತ್ತಿಯಲ್ಲಿದ್ದ ತರುಣರು.

ಬೋಳ್ಯಾರು:— ಈ ಗ್ರಾಮದಲ್ಲಿ ಒಂದು ಶಾಲೆ ಇಲ್ಲದೆ ಶಾಲೆಗೆ ಹೋಗುವ ಪ್ರಾಯದ ಸುಮಾರು ೨೦೦ಕ್ಕಿಂತಲೂ ಹೆಚ್ಚಿನ ಮಕ್ಕಳು ನಿರಕ್ಷರಕುಕ್ಷಿಗಳಾಗಿ ಅಲೆಯಬೇಕಾಗಿದೆ. ಇವರಲ್ಲಿ ಹೆಚ್ಚಿನವರು ಮಹಮ್ಮದೀಯರೇ ಆಗಿರುವರು. ವಿದ್ಯಾಪ್ರಚಾರಕರಾದ ಮಾನ್ಯ ತಾಲೂಕು ಬೋರ್ಡಿನವರು ಮಹಮ್ಮದೀಯರು ಹೆಚ್ಚಾಗಿರುವ ಈ ಗ್ರಾಮಕ್ಕೊಂದು ಮಾಪಿಳ್ಳ ಬೋರ್ಡು ಶಾಲೆಯನ್ನು ಏರ್ಪಡಿಸಿ ಬಡ ವಿದ್ಯಾರ್ಥಿಗಳ ವಿದ್ಯಾಭಿವೃದ್ಧಿಗಾಗಿ ಗಮನಕೊಡಬಾರದೇ?

ಅನುಕ್ರಮಣಿಕೆ.

ಅಗ್ರಲೇಖ ಪುಟಗಳು.
ಸ್ಫುಟವಿಚಾರಗಳು— ೬
೧-೨ ನೊ. ವೆ. ರೈಲುಕಾಮಗಾರರ ಮುಷ್ಕರ 〃
೩. ಸ್ವರಾಜಿಸ್ಟರ ಮೇಲಿನ ಆರೋಪಣೆ ಸುಳ್ಳು! 〃
೪ ರಾಜಕೀಯ ಪಕ್ಷಗಳಲ್ಲಿ ಐಕ್ಯ, 〃
೫. ಲೊ. ರೆಡಿಂಗರ ಆಳಿಕೆಯ ಅವಧಿ ಹೆಚ್ಚಿತು 〃
೬. ಗ್ವಾಲ್ಹೇರ ಮಹಾರಾಜರ ಮೃತ್ಯು 〃
೭. ಲಾಲಾಜಿಯವರ ಅಭಿಪ್ರಾಯ ೭
೮-೯. ನೂಲಿನ ಮತದಾನ 〃
೧೦. ಸಯಾಜಿ ಮಹಾರಾಜರ ಸ್ತುತ್ಯ ಉಪಕ್ರಮ 〃
ಮಂಗಳೂರು
ವರ್ತಮಾನಸಂಗ್ರಹಗಳು—
ವಿದೇಶ – ಒಳದೇಶ ವರ್ತಮಾನ ೫
ದಕ್ಷಿಣ ಕನ್ನಡ – ಕಾಸರಗೋಡು, ಬಂಟವಾಳ, ಬೋಳ್ಯಾರು, 〃
ಹಿಂಸಾ-ಅಹಿಂಸೆಗಳ ಮರ್ಯಾದೆ ೮
ಹಿಂದುಸ್ಥಾನದ ಮಾಹಿತಿ 〃
ಕರ್ನಾಟಕ ಸೇವಾಸಂಘ, ಧಾರವಾಡ ೪

ಸ್ವದೇಶಾಭಿಮಾನಿ.

ಶಕ ೧೮೪೭ ಜ್ಯೇಷ್ಠ ಬ। ೬ಯು ಶುಕ್ರವಾರ.

ಸ್ಫುಟವಿಚಾರಗಳು.

೧. ನೋರ್ಥ ವೆಸ್ಟರ್ನ ರೈಲ್ವೆಯ ಕಾಮಗಾರರು ಮುಷ್ಕರವನ್ನು ಪ್ರಾರಂಭಿಸಿ ಈಗ ಎರಡು ವಾರ ದಾಟಿಹೋದರೂ ಮುಷ್ಕರವು ಅದೆ ರೀತಿಯಲ್ಲಿ ನಡೆದಿದೆ. ಆದರೆ ರೈಲಿನ ಅಧಿಕಾರಿಗಳು ಕಾಮಗಾರರ ಹಾಲುಹವಾಲೆಗಳಿಗೆ ಇನ್ನೂ ಕಿವಿಗೊಟ್ಟಂತೆ ಕಂಡುಬರುವದಿಲ್ಲ. ಮೇಲಾಗಿ ರೈಲು ಅಧಿಕಾರಿಗಳು ರೈಲಿನ ಕೆಲಸವೆಲ್ಲ ವ್ಯವಸ್ಥಿತ ರೀತಿಯಲ್ಲಿ ನಡೆದಿದೆ ಎಂಬ ಅರ್ಥದ ಹಸ್ತಪತ್ರಕಗಳನ್ನು ಪ್ರಕಟಿಸಿ ಮುಷ್ಕರಗಾರರ ಧೈರ್ಯವನ್ನು ತಗ್ಗಿಸಲು ಯತ್ನಿಸಿದ್ದಾರೆ. ಇತ್ತ ಕಾಮಗಾರ ಸಂಘದ ಮುಖ್ಯಸ್ಥರು ಮುಷ್ಕರವು ಸರಿಯಾಗಿ ನಡೆಯುತ್ತಿದ್ದು ಇನ್ನೂ ಹೆಚ್ಚು ಹೆಚ್ಚು ಜನರು ಮುಷ್ಕರದಲ್ಲಿ ಸೇರುತ್ತಿದ್ದಾರೆ ಎಂದು ಪ್ರಕಟಿಸಿ ಮುಷ್ಕರಗಾರರ ನಿಶ್ಚಯವನ್ನು ಜಾಹೀರ ಪಡಿಸಿದ್ದಾರೆ. ನೋರ್ಥ ವೆಸ್ಟರ್ನ ರೇಲ್ವೆಯ ಎಲ್ಲ ಸ್ಟೇಶನುಗಳ ಕೆಲಸವನ್ನು ನಿಲ್ಲಿಸುವಂತೆ ಅವರು ನಿಶ್ಚಯಿಸಿದ್ದಾರೆ. ಹತ್ತು ಸಾವಿರ ಕಾಮಗಾರರ ಪ್ರಚಂಡ ಜನಸಮೂಹದವರು ಒಟ್ಟಿಗೆ ಸೇರಿ ಲಾಹೋರಿನ ಮುಖ್ಯ ಮುಖ್ಯ ಬೀದಿಗಳಲ್ಲಿ ಒಂದು ಮೆರವಣಿಗೆಯನ್ನು ಹೊರಡಿಸಿದರು. ಈ ಮೆರವಣಿಗೆಯ ಮುಂದುಗಡೆಯಲ್ಲಿ ಯಾವ ನಿಶಾಣಿ ಇತ್ತೊ ಅದರ ಮೇಲೆ ಪ್ರತಿಯೊಬ್ಬನು ತನ್ನ ಸ್ವಲ್ಪ ಸ್ವಲ್ಪ ರಕ್ತವನ್ನು ಚಲ್ಲಿದ್ದರಿಂದ ಅದು ಕೆಂಪಗಾಗಿತ್ತು. ಈ ಕಾಮಗಾರ ಸಂಘದ ಕಾರ್ಯದರ್ಶಿಗಳಾದ ಮಿ। ಖಾನ ಎಂಬವರು ತಮ್ಮ ಬೆರಳನ್ನು ಕೊಯಿದು ಅದರ ರಕ್ತದಿಂದ ಆ ಧ್ವಜದ ಮೇಲೆ ತಮ್ಮ ದಸ್ಕತನ್ನು ಹಾಕಿದ್ದರು! ನಮ್ಮ ಕೇಳಿಕೆಗಳನ್ನು ಸಾಧ್ಯಪಡಿಸಿಕೊಳ್ಳಲು ನಾವು ರಕ್ತವನ್ನಾದರೂ ಚಲ್ಲಲು ಸಿದ್ಧರಿದ್ದೇವೆ ಎಂದು ಬಹಿರಂಗಪಡಿಸುವ ಅವರ ಉದ್ದೇಶವಿತ್ತು. ಈ ಮೇರೆಗೆ ಮುಷ್ಕರಗಾರರು ಕಷ್ಟಬದ್ಧರಾಗಿರುವಾಗಲೂ ರೈಲಿನ ಅಧಿಕಾರಿಗಳಾಗಲಿ ಅಥವಾ ಸರಕಾರವಾಗಲಿ ಈ ಪ್ರಕರಣದಲ್ಲಿ ಸೇರಿ ಕಾಮಗಾರರ ಕೇಳಿಕೆಗಳನ್ನು ಪೂರಯಿಸಲು ಮನಸ್ಸು ಮಾಡಿದ್ದು ಕಂಡುಬರುವದಿಲ್ಲ. ಹಾಗೆ ಮಾಡಿದ್ದಲ್ಲಿ ತಮ್ಮ ಭಾರಕ್ಕೆ ಮತ್ತು ಗೌರವಕ್ಕೆ ಕುಂದುಬಂದೀತೆಂದು ರೈಲು ಅಧಿಕಾರಿಗಳು ನೆನಸುವದಾದರೆ ಸರಕಾರವು ಉದಾಸೀನ ಭಾವವನ್ನು ತಾಳಿದೆ ಇರಬಹುದು. ಪರಂತು ಈ ಇಬ್ಬರು ತೋರಿಸಿರುವ ಈ ವೃತ್ತಿಯು ಕೇವಲ ಶೋಚನೀಯವಾಗಿದೆ.

೨. ನೋರ್ಥ ವೆಸ್ಟರ್ನ ರೇಲ್ವೆಯ ಕಾಮಗಾರರು ಹಾಕಿರುವ ಈ ಮುಷ್ಕರಕ್ಕೆ ರೈಲಿನ ಅಧಿಕಾರಿಗಳು ಹೆಚ್ಚಿನ ಮಹತ್ವವನ್ನು ಕೊಡುವದಿಲ್ಲವಾದರೂ ಹಾಗು ಸರಕಾರವು ಈ ವಿಷಯದಲ್ಲಿ ಹೆಚ್ಚಿನ ಗಮನ ಕೊಡುವುದಿಲ್ಲವಾದರೂ ಈ ಇಬ್ಬರಿಂದ ಅವರವರ ಕರ್ತವ್ಯವನ್ನು ಮಾಡಿಸುವಂತೆ ಒತ್ತಾಯಪಡಿಸುವದು ಅಗತ್ಯದ್ದಾಗಿದೆ. ಆದ್ದರಿಂದ ಮುಷ್ಕರ ಹಾಕಿರುವ ಕಾಮಗಾರರ ಸಂಘಟನೆಯು ಭರದಿಂದ ನಡೆದಿದೆ. ನಾಗಪುರದಲ್ಲಿ ಮಿ। ಸಿ. ಎಫ್. ಎಂಡ್ರೂಸರ ಅಧ್ಯಕ್ಷತೆಯಲ್ಲಿ ಕಳೆದವಾರ ಒಂದು ಸಭೆಯು ಜರಗಿ ಆ ಸಭೆಯಲ್ಲಿ ಮಹತ್ವದ ಠರಾವುಗಳು ಪಾಸಾದವು. ಇದು ಓಲ್ ಇಂಡಿಯಾ ಟ್ರೇಡ್ ಯೂನಿಯನ್ನಿನ ಕಾರ್ಯಕಾರಿ ಮಂಡಲದ ಸಭೆಯಾಗಿತ್ತು. ಈ ಯೂನಿಯನ್ನಿನ ಅಧ್ಯಕ್ಷರಾದ ಎಂಡ್ರೂಸರವರು ಸಾಧ್ಯವಿರುವಷ್ಟು ಬೇಗನೆ ಪಂಜಾಬಕ್ಕೆ ಹೋಗಿ ಮುಷ್ಕರದ ಪರಿಸ್ಥಿತಿಯು ಹೇಗಿದೆ ಎಂಬುದನ್ನು ನಿರೀಕ್ಷಿಸಬೇಕೆಂದೂ ಪರಸ್ಪರ ರಾಜಿಯನ್ನು ಮಾಡಲು ಸಾಧ್ಯವಿದ್ದರೆ ಯತ್ನಿಸಬೇಕೆಂದೂ ನಾಗಪುರದಲ್ಲಿ ನೆರೆದ ಸಭೆಯಲ್ಲಿ ಸರ್ವಸಮ್ಮತದಿಂದ ಠರಾವು ಪಾಸಾಗಿದೆ. ಮುಷ್ಕರ ಹಾಕಿರುವವರ ಬಗ್ಗೆ ಸಹಾನುಭೂತಿಯನ್ನೂ, ಯಶಶ್ಚಿಂತನೆಯನ್ನೂ ಸೂಚಿಸಿಕೊಂಡು ಮುಂಬಯಿ ಮುಂತಾದ ಇತರ ಕಡೆಗಳಿಂದಲೂ ಮುಷ್ಕರವಾಲರಿಗೆ ಉತ್ತೇಜನಪರವಾದ ಸಂದೇಶಗಳು ಬರುತ್ತಿವೆ. ಆದರೂ ಸರಕಾರವು ತನ್ನ ಕೌಟಿಲ್ಯವನ್ನು ಬಿಡುವದಿಲ್ಲ. ಇದು ಮಾತ್ರ ವಿಷಾದಕರವು. ಟ್ರೇಡ ಯೂನಿಯನ್ನಿನ ಕಾರ್ಯದರ್ಶಿಗಳು ಸರಕಾರಕ್ಕೆ ಬೇಕಾದ ನ್ಯಾಯ್ಯವಾದ ಸಹಾಯ್ಯವನ್ನು ಕೊಡಲಾದೀತೆಂದೂ ರೈಲಿನ ಅಧಿಕಾರಿಗಳು ಕಾಮಗಾರರ ಕೇಳಿಕೆಗಳನ್ನು ಪೂರಯಿಸಲು ಉದ್ಯುಕ್ತರಾಗಬೇಕೆಂದೂ ತಂತೀ ಮೂಲಕವಾಗಿ ಸರಕಾರಕ್ಕೆ ತಿಳಿಸಿದ್ದಲ್ಲಿ ಅವರಿಗೆ ಪ್ರತ್ಯುತ್ತರವನ್ನು ಕಳುಹಿಸುವಾಗ “ಟ್ರೇಡ ಯೂನಿಯನು ಈ ವಿಷಯದಲ್ಲಿ ಸೇರುವುದು ವಿಹಿತವಲ್ಲ, ಸರಕಾರದ ಮಾನ್ಯತೆ ಇರುವ ಯೂನಿಯನು ಈ ಮುಷ್ಕರವನ್ನು ಸಮ್ಮತಿಸಿರಲಿಲ್ಲ” ಎಂದು ಒಂದು ರೀತಿಯಿಂದ ಟ್ರೇಡ ಯೂನಿಯನ್ನಿಗೆ ಉಪಮರ್ದಕರವಾದ ಉತ್ತರವನ್ನು ಕಳುಹಿಸಿದೆ! ಇದನ್ನೆಲ್ಲ ನೋಡುವಾಗ ಮುಷ್ಕರಗಾರರ ಕಡೆಗೆ ಸರಕಾರವು ಎಷ್ಟರ ಮಟ್ಟಿಗೆ ಸಹಾನುಭೂತಿಪಡುತ್ತಿದೆ ಎಂಬುದು ಗೊತ್ತಾಗುತ್ತದೆ. ಇಂಥ ಪರಿಸ್ಥಿತಿಯಲ್ಲಿ ಇನ್ನೂ ವಿಶೇಷವಾದ ಚಳವಳವು ಅಗತ್ಯವೆಂದು ಯಾರಿಗೂ ತೋರದೆ ಇರಲಿಕ್ಕಿಲ್ಲ.

೩. ಮೂರನೆಯವನೊಡನೆ ಜಗಳವಾಡುವಾಗ ನಮ್ಮೊಬ್ಬರಲ್ಲಿ ಅಭೇದ್ಯವಾದ ಐಕ್ಯವಿರಬೇಕೆಂಬ ತತ್ವವು ಸರ್ವಮಾನ್ಯವಾಗಿದೆಯಾದರೂ ಮತ್ತು ಬಾಯಿಯಿಂದ ಎಲ್ಲರೂ ಈ ತತ್ವವನ್ನು ಪುರಸ್ಕರಿಸುತ್ತಾರಾದರೂ ಹಿಂದಿಗಳು ಕಾರ್ಯದಲ್ಲಿ ಪರಸ್ಪರ ವಿಶ್ವಾಸವನ್ನು ಕಳಕೊಂಡವರಾಗಿ ತಮ್ಮ ತಮ್ಮೊಳಗೆನೆ ಜಗಳವಾಡುತ್ತಿದ್ದಾರೆ. ಹಿಂದುಸ್ಥಾನದ ಲೋಕಪಕ್ಷದ ರಾಜಕಾರಣದ ಈಗಿನ ಸ್ವರೂಪವನ್ನು ಹೇಳುವದಾದರೆ ‘ಅಂತಃಕಲಹ’ವೆಂಬ ಪಂಚಾಕ್ಷರ ಮಂತ್ರದಿಂದ ಅದನ್ನು ನಿರ್ದೇಶಿಸಬಹುದು. ‘ಸ್ವರಾಜ್ಯಪಕ್ಷದವರು ಲಂಚಕೊಟ್ಟು ಮತಗಳನ್ನು ಸಂಪಾದಿಸುತ್ತಿದ್ದಾರೆ, ಅವರು ಅಪ್ರಾಮಾಣಿಕರು’’ ಎಂದು ಮುಂತಾದ ಆರೋಪಣೆಗಳನ್ನು ಅವರ ಮೇಲೆ ನಮ್ಮಲ್ಲಿಯವರೆ ಹಾಕುತ್ತಿದ್ದಾರೆ ಇಂಥ ಅನೇಕ ನಮೂನೆಯ ದೂರುಗಳನ್ನು ಮ. ಗಾಂಧಿಗಳ ಬಳಿಗೆ ಈ ಬಂಧುಗಳು ಕೊಟ್ಟಿದ್ದರಂತೆ. ಬಂಗಾಲದಲ್ಲಿ ಸಂಚರಿಸುವಾಗ ಗಾಂಧಿಗಳು ಬಂಗಾಲದಲ್ಲಿ ಸ್ವರಾಜಿಸ್ಟರ ಮೇಲೆ ಹೊರಿಸಿರುವ ಈ ಆರೋಪಣೆಯ ವಿಷಯವಾಗಿ ದಾಸರೊಡನೆ ಪ್ರಸ್ತಾಪವೆತ್ತಿದ್ದಲ್ಲಿ ಅವರು ‘ಅಂಥ ಯಾವ ಪ್ರಸಕ್ತಿಯೂ ಇಲ್ಲ ಸ್ವರಾಜಿಸ್ಟರ ಚರ್ಯೆಗಳು ಸೂರ್ಯಪ್ರಕಾಶದಷ್ಟು ಬಹಿರಂಗವಾಗಿವೆ’ ಎಂದು ಹೇಳಿದರು. ಅದೂ ಅಲ್ಲದೆ ಸ್ವರಾಜ್ಯ ಪಕ್ಷದ ಆಫೀಸಿನ ಪುಸ್ತಕಗಳನ್ನು ನೀವು ಬೇಕಾದ ರೀತಿಯಲ್ಲಿ ನೋಡಬಹುದು, ವಿಚಾರಣೆ ನಡಿಸಬಹುದು, ಯಾವ ಅಡ್ಡಿಯೂ ಇಲ್ಲವೆಂದು ಸ್ವರಾಜಿಸ್ಟರಾದ ಇತರ ಮುಖಂಡರು ಸಹ ನುಡಿದರು. ಆಗ ವ್ಯಕ್ತಿದ್ವೇಷವಿಲ್ಲದ ಗಾಂಧಿಗಳು ಸ್ವರಾಜಿಸ್ಟರ ನಿಷ್ಕಲಂಕತ್ವದ ಬಗ್ಗೆ ಸಂಪೂರ್ಣ ಮನಗಂಡವರಾಗಿ ತಾನು ವಿಚಾರಣೆ ನಡಿಸುವ ಅಗತ್ಯವಿಲ್ಲ, ಸ್ವರಾಜಿಸ್ಟರ ಮೇಲೆ ಹೊರಿಸಿರುವ ಆರೋಪಣೆಗಳು ನಿರಾಧಾರವಾಗಿವೆ ಎಂದು ಸ್ಪಷ್ಟೋಕ್ತಿಯಿಂದ ವಿಚಾರಣೆ ನಡಿಸುವದನ್ನು ಅಲ್ಲಗಳೆದರು. ಈ ಎಲ್ಲ ಸಂಗತಿಯನ್ನು ಗಾಂಧಿಗಳವರು ಯಂಗ್ ಇಂಡಿಯಾ ಪತ್ರಿಕೆಯಲ್ಲಿ ಬರೆದಿದ್ದಾರೆ, ಈ ವೃತ್ತಾಂತದಿಂದ ಯಾವ ಬೋಧನೆಯನ್ನು ತೆಕ್ಕೊಳ್ಳುವಂತಿದೆ? ನೀವು ವಿಧಾಯಕ ಕಾರ್ಯಕ್ರಮದವರೆನ್ನಿಸಿಕೊಂಡು ರಾಜಕಾರಣವನ್ನು ಬಹಿಷ್ಕರಿಸಿದ್ದೀರಿ. ರಾಜಕಾರಣವನ್ನು ಮಾಡುವವರು ಯಾರಿದ್ದಾರೋ ಅಂಥವರ ಪಂಗಡವನ್ನು ಸಹ ದೂಷಿಸಿ, ಪಕ್ಷಭೇದವನ್ನುಂಟು ಮಾಡಿ, ಆ ಮೂಲಕ ಅವರನ್ನು ದುರ್ಬಲಪಡಿಸಿ ಅವರ ಕಾಲನ್ನು ಸಹ ಹಿಂದಕ್ಕೆ ಎಳೆಯುತ್ತಿದ್ದೀರಿ! ಇದರಿಂದ ನಿಜವಾಗಿ ಸ್ವರಾಜ್ಯವು ಸಾಧ್ಯವೆ? ವ್ಯಕ್ತಿದ್ವೇಷದಿಂದ ನಡೆದಿರುವ ಈ ಅಂತಃಕಲಹವನ್ನು ನೀವು ನಿಲ್ಲಿಸಿಕೊಳ್ಳಬಾರದೆ? ಮ. ಗಾಂಧಿಗಳು ಹೇಳುವದನ್ನಾದರೂ ನೀವು—ಅವರ ಪರಮ ಅನುಯಾಯಿಗಳೆನ್ನಿಸಿಕೊಳ್ಳುವವರಾದ ನೀವು—ಕೇಳಬಾರದೆ? ನಿಮ್ಮೆಲ್ಲರ ಐಕ್ಯದಿಂದ ರಾಷ್ಟ್ರೀಯ ಸಭೆಯು ಸಂಘಟಿತ ಪ್ರಯತ್ನವನ್ನು ಮಾಡತೊಡಗಿದರೆ ಅದನ್ನು ಸುಲಭವಾಗಿ ಯಾರಿಂದ ಅನಾದರಿಸಲಾದೀತು? ಈ ಸಂಗತಿಯನ್ನು ಸಾಂಪ್ರದಾಯಿಕರು ಆಲೋಚಿಸಬಾರದೆ?

೪. ಅಂಥ ಐಕ್ಯದ ದಿವಸಗಳು ಹಿಂದುಸ್ಥಾನದ ರಾಜಕಾರಣದಲ್ಲಿ ಒಂದು ವೇಳೆ ಬೇಗನೆ ಯಾಕೆ ಬರಬಾರದು ಎಂದು ಈಗ ತೋರಹತ್ತಿದೆ. ಬೇಕು-ಬೇಡಬದಲಾವಣೆಯವರೆ ಅಲ್ಲ, ಶಾಂತಪಕ್ಷದವರೂ, ಬಿಝೆಂಟ ಪಕ್ಷದವರೂ ಎಲ್ಲರೂ ರಾಷ್ಟ್ರೀಯ ಸಭೆಗೆ ಬಂದು ಸೇರಬೇಕೆಂದು ಸಿ. ಆರ್. ದಾಸ ಮತ್ತು ಗಾಂಧಿ ಈ ಇಬ್ಬರು ಮಾನ್ಯ ಮುಖಂಡರು ವಿಜ್ಞಾಪನೆ ಪತ್ರಿಕೆಯನ್ನು ಹೊರಪಡಿಸುವವರಿದ್ದಾರೆ. ಇದು ತುಂಬಾ ಸಮಾಧಾನದ ಮತ್ತು ಸಂತೋಷದ ಮಾತಾಗಿದೆ. ಎಲ್ಲರೂ ಒಟ್ಟಿಗೆ ಸೇರುವದೆ ನಿಜವಾಗಿ ಒಂದು ದೊಡ್ಡ ರಾಜಕಾರಣವು. ಇಲ್ಲವಾದರೆ ಯಾವ ಬೆಂಬಲವೂ ಇಲ್ಲದವರು ಮಹತ್ತಾದ ಧ್ಯೇಯವನ್ನು ಬೇಕಷ್ಟು ವಾದಿಸಿದರೂ ನಿರವಧಿಕವಾದ ಆಕಾಶದಲ್ಲಿ ಮನೋರಥದ ಗೋಪುರಗಳನ್ನು ಯಥೇಷ್ಟವಾಗಿ ಎತ್ತರಿಸಿ ಕಟ್ಟಿದರೂ ಕೊನೆಗೆ ನಿರರ್ಥಕವೆ ಸರಿ. ಆದ್ದರಿಂದ ಇಬ್ಬರೂ ಮುಖಂಡರು ಈ ದಿಕ್ಕಿನಿಂದ ಪ್ರಯತ್ನಿಸಿ ಕೈಕೊಂಡ ಚಳವಳಕ್ಕೆ ಜನತೆಯ ಪುಷ್ಟಿಯನ್ನು ಸಂಪಾದಿಸಿ ಕೊಡಲು ಯೋಚಿಸಿರುವ ಸಂಕಲ್ಪವು ಶ್ಲಾಘ್ಯವಾಗಿದೆ ಎಂಬುದಕ್ಕೆ ಸಂದೇಹವಿಲ್ಲ.

೫. ಲೊರ್ಡ ರೆಡಿಂಗರು ವಿಲಾಯತಿಗೆ ಪ್ರಯಾಣವನ್ನು ಬೆಳಸಿದ್ದು ಒಂದು ದೃಷ್ಟಿಯಿಂದ ಅಲ್ಲವಾದರೂ ಇನ್ನೊಂದು ದೃಷ್ಟಿಯಿಂದ ಪ್ರಯೋಜನಕಾರಿಯಾಗಿ ಪರಿಣಮಿಸಿದೆ ಎಂದು ಹೇಳಲು ಯಾವ ಸಂಕೋಚವೂ ಇಲ್ಲ. ಹಿಂದಿ ಸ್ವರಾಜ್ಯದ ಹೆಚ್ಚಿನ ಹಕ್ಕುಗಳು ಜನತೆಗೆ ಬೇಕಾಗಿವೆ, ಈಗಿನ ದ್ವಿದಲ ಪದ್ಧತಿಯು ಅದಕ್ಕೆ ಇಷ್ಟವಿಲ್ಲ, ಹೊಸ ಹಕ್ಕುಗಳನ್ನು ಕೂಡಿರಿ ಎಂದು ಲೊ. ಬರ್ಕನ್‌ಹೆಡ್ಡರ ತಲೆಯಲ್ಲಿ ಹಾಕಿ ಹೊಸ ಕಂತನ್ನು ಕೊಡಿಸಲು ವೈಸರಾಯರು ಇಲ್ಲಿಂದ ಹೋಗಿದ್ದರು. ಇದು ಫಲಿಸುವ ಮುಂಚಿತವಾಗಿಯೆ ರೆಡಿಂಗಸಾಹೇಬರ ಆಳಿಕೆಯ ಅವಧಿಯು ಇನ್ನೊಂದು ವರ್ಷದಿಂದ ಅಧಿಕವಾಗಿದೆ ಎಂಬುದಾಗಿ ಹೇಳೋಣಾಗುತ್ತದೆ. ಇದರ ಭಾವಾರ್ಥವು ಅಗಮ್ಯವಾದ್ದಲ್ಲ. ಹಿಂದುಸ್ಥಾನವನ್ನು ಆಳಲು ರೆಡಿಂಗ ಸಾಹೇಬರು ಬಹು ನಿಪುಣರು, ಅವರ ಆಳಿಕೆಯಲ್ಲಿ ದೇಶಭಕ್ತರನ್ನು ಕೈದುಮಾಡಿ ಜೈಲಿಗೆ ಕಳುಹಿಸುವ ಯಾವ ಸತ್ರವು ನಡೆದಿತ್ತೊ ಅಥವಾ ಇತರ ಯಾವ ಅನೇಕ ಒತ್ತಾಟಗಳು ಪ್ರಾರಂಭವಾಗಿದ್ದವೊ ಅವುಗಳಿಂದ ಇವರ ಆಳಿಕೆಗೆ ಒಂದು ಬಗೆಯ ಲಾಂಛನೆಯು ಹತ್ತಿಕೊಂಡಿತ್ತು. ಇವರ ಆಳಿಕೆಗೆ ಇನ್ನೊಂದು ವರ್ಷ ಆಯುಷ್ಯವನ್ನು ಹೆಚ್ಚಿಗೆ ಕೊಡುವದರಿಂದ ಸರಕಾರದ ದೃಷ್ಟಿಯಿಂದ ಅವರ ಆಳಿಕೆಗೆ ಲಾಂಛನವಲ್ಲ ಭೂಷಣವು ಎಂಬುದಾಗಿ ಸರ್ಟಿಫಿಕೇಟನ್ನೆ ಕೊಟ್ಟಂತಾಗುತ್ತದೆ. ಮತ್ತು ಕಪಟಮೂರ್ಧನ್ಯವಾದ ನೋಕರಶಾಹಿಯು ಇಂಥ ಸಂಗತಿಗಳನ್ನು ಸಾಧಿಸಿ ತಾನು ಧನ್ಯವೆಂಬುದಾಗಿ ನೆನಸುತ್ತಿದೆ, ಇರಲಿ. ಹೊಸ ಹಕ್ಕುಗಳ ಗುರುವು ಉದಯವಾಗುವದರ ಬದಲು ಅವನು ಮೂಢದಲ್ಲಿ ಇದ್ದಾನೆ; ಆದರೆ ಅಷ್ಟರಲ್ಲಿ ದೇಶಭಕ್ತರಿಗೆ ಜೈಲು, ಬಡಿಗನನ್ನು ಇ. ಇ. ಅನೇಕ ಒತ್ತಾಟದ ಕೃತ್ಯಗಳನ್ನು ನಡಿಸಿದ ಆ ಹಳೆ ರೆಡಿಂಗ ಸಾಹೇಬರೆ ಪುನಃ ಮಾರ್ಗಸ್ಥರಾಗಿ ಹಿಂದುಸ್ಥಾನದ ರಾಶಿಗೆ ಇನ್ನೂ ಒಂದು ವರ್ಷ ಅಧಿಕ ಮುದತಿನ ಪುರಸತ್ತನ್ನು ಪಡಕೊಂಡು ಬರುತ್ತಿದ್ದಾರೆ. ಇಲ್ಲಿ ಒಂದ ಮೇಲೆ ಇದ್ದಷ್ಟು ಒತ್ತಾಳಿಕೆಯನ್ನು ನಡಿಸಲು ಅವರು ಉತ್ಸಾಹಿಗಳಾಗದೆ ಇರಲಿಕ್ಕಿಲ್ಲ. ಕಾರಣ, ಮುಂಚಿನ ಕೃತ್ಯಗಳನ್ನು ಮೆಚ್ಚಿ ಇವರು ಬಹು ಸಮರ್ಥರೆಂದು ನೆನಸಿಯೆ ಇವರನ್ನು ಪುನಃ ಆಯುಷ್ಯನ್ನು ಕೊಟ್ಟು ಕಳುಹಿಸಿದ್ದಾರಲ್ಲವೆ? ಅಂತೂ ಲೊರ್ಡ ರೆಡಿಂಗರ ಪ್ರಯಾಣವು ಈ ರೀತಿಯಿಂದ ಅಂಕುರಿಸಹತ್ತಿದೆ!

---

೬. ಗ್ವಾಲ್ಹೇರ ಸಂಸ್ಥಾನದ ಅಧಿಪತಿಗಳಾದ ಮೇಜರ ಜನರಲ್ ಸರ ಮಾಧವರಾವ ಸಿಂಧೆ ಇವರು ಪೆರಿಸಿನಲ್ಲಿ ಕಳೆದ ಶುಕ್ರವಾರ ಮೃತಪಟ್ಟಿರುವುದನ್ನು ತಿಳಿಸಲು ನಾವು ವ್ಯಸನಪಡಬೇಕಾಗಿದೆ. ಮಹಾರಾಜರು ಕಾಯಿಲೆ ಇದ್ದ ಪ್ರಯುಕ್ತ ಅಪರೇಶನಿಗಾಗಿ ಪೆರಿಸಿಗೆ ತೆರಳಿದ್ದರು. ಅಪರೇಶನು ಯಶಸ್ವಿಯಾಗಿ ನಡೆದಿತ್ತು. ಆದರೂ ಆಗಾಗ್ಯೆ ಬರುತ್ತಿರುವ ವಾರ್ತೆಗಳ ಮೇಲಿಂದ ಗ್ವಾಲ್ಹೇರದ ಪ್ರಜಾವರ್ಗವು ಚಿಂತಾಕ್ರಾಂತವಾಗಿತ್ತು. ಕೊನೆಗೆ ಅವರ ಮೃತ್ಯು ವಾರ್ತೆಯು ಬಂದು ತಲ್ಪಿ ಅದರಿಂದ ಅವರ ಇಡೀ ಪ್ರಜಾವರ್ಗವು ದುಃಖದಲ್ಲಿ ಮುಳುಗಿಹೋಗಿದೆ. ಅವರ ಶವಸಂಸ್ಕಾರದ ವಿಧಿಯು ಹಿಂದು ಮತಕ್ಕೆ ಅನುಗುಣವಾಗಿಯೆ ಅಲ್ಲಿ ನಡೆಯಿತು. ಗ್ವಾಲ್ಹೇರ ಮಹಾರಾಜರು ತನ್ನ ಪ್ರಜಾವರ್ಗದ ಶಿಕ್ಷಣ, ಆರೋಗ್ಯ, ಉದ್ಯೋಗ ಇತ್ಯಾದಿಗಳನ್ನು ವೃದ್ಧಿಪಡಿಸಲು ತುಂಬಾ ಯತ್ನಿಸಿದ್ದಾರಾದರೂ ತನ್ನ ರಾಜ್ಯದಲ್ಲಿ ಕಾರಖಾನೆಗಳನ್ನು ತೆರೆದಿಸಿ ಆ ಮೂಲಕ ಕೃಷಿಯಿಂದ ದೇಶದ ಸಮೃದ್ಧಿಯನ್ನು ಸಾಧಿಸಿದ್ದು ಎಲ್ಲಕ್ಕೂ ಮುಖ್ಯವಾದ ಸಂಗತಿಯಾಗಿದೆ. ಇದು ಇವರ ಆಳಿಕೆಯ ಪ್ರಧಾನ ಲಕ್ಷಣ ಮತ್ತು ಪ್ರಧಾನ ಉಪಕಾರವೆಂದು ಹೇಳಬಹುದು. ಇವರ ನಂತರ ಇವರ ಪುತ್ರನು ಗಾದಿಗೆ ಬಾಧ್ಯಸ್ತನಾಗಿದ್ದರಿಂದ ಮಹಾರಾಣಿಯವರು ಆ ಯುವ ರಾಜನ ಹೆಸರಿನಿಂದ ಆಳಿಕೆಯನ್ನು ಸಾಗಿಸುತ್ತಿರುವರು. ಅವಶಿಷ್ಟ ಮಹಾರಾಷ್ಟ್ರ ಸಂಸ್ಥಾನಗಳಲ್ಲಿ ಗ್ವಾಲ್ಹೇರು, ಬರೋಡಾ ಮೊದಲಾದವುಗಳಂತೆ ಮೊದಲನೆಯ ತರಗತಿಯದಾಗಿದೆ. ಶ್ರೀಮಂತ ಮಾಧವರಾವ ಗ್ವಾಲ್ಹೇರಕರ ಮೃತ್ಯುವಿನಿಂದ ಒಬ್ಬ ಪ್ರೌಢ ಮಹಾರಾಷ್ಟ್ರ ಸಂಸ್ಥಾನಿಕನ ನ್ಯೂನತೆಯು ಬಂತೆಂಬುದಕ್ಕೆ ಅಡ್ಡಿ ಇಲ್ಲ. ಮಹಾರಾಜರ ಆತ್ಮಕ್ಕೆ ಸದ್‌ಗತಿಯು ಪ್ರಾಪ್ತವಾಗಲಿ.

---

೭. ಲಾಲಾ ಲಜಪತರಾಯರು ಹಿಂದುಸ್ಥಾನದ ವತ್ಸಲರು. ಹಿಂದುಸ್ಥಾನಕ್ಕೆ ಸ್ವರಾಜ್ಯ ಪ್ರಾಪ್ತಿಯಾಗಬೇಕೆಂದು ಸ್ವಾರ್ಥತ್ಯಾಗಪೂರ್ವಕವಾಗಿ ಅಹರ್ನಿಶ ಹೋರಾಡುವುದರಲ್ಲಿ ಇವರೊಬ್ಬರು ಅಗ್ರಗಣ್ಯರು. ಇವರು ಕೆಲವು ದಿವಸಗಳ ಹಿಂದೆ ರಾವಿ ನದಿಯಿಂದ ಬ್ರಹ್ಮಪುತ್ರದ ವರೆಗೆ ತಿರುಗಾಡಿ ಅಲ್ಲಿಯ ರಾಜಕೀಯ ಪರಿಸ್ಥಿತಿಯ ಅನುಭವವನ್ನು ಕಣ್ಣಾರೆ ಕಂಡಿರುವರು. ತಾವು ಕಂಡಿರುವ ಅನುಭವವನ್ನು ಪತ್ರಿಕೆಗಳಲ್ಲಿ ಅವರು ಪ್ರಕಟಿಸಿದ್ದಾರೆ. ಕೊಂಗ್ರೆಸಿನ ಈಗಿನ ಮುಖ್ಯ ಕೆಲಸವೆಂದರೆ ನೂಲುತೆಗೆಯುವುದು. ಇದು ಈಗ ಅವರು ಸಂದರ್ಶಿಸಿದ ಯಾವ ಕಡೆಯಲ್ಲಿಯೂ ಸರಿಯಾಗಿ ನಡೆಯುವುದಿಲ್ಲ, ಹಿಂದುಗಳಿಗೂ ಮುಸಲ್ಮಾನರಿಗೂ ಆಗಾಗ್ಯೆ ಜಟಾಪಟಿಗಳು ಆಗುತ್ತಲೆ ಇವೆ, ಇಂಥ ಸಂದರ್ಭಗಳು ಒದಗಿದಾಗ ಹಿಂದುಗಳು ಪೆಟ್ಟು ತಿನ್ನುವವರು ಮತ್ತು ಮಹಮ್ಮದೀಯರು ಪೆಟ್ಟುಕೊಡುವವರು ಆಗುತ್ತಾರೆ, ಅಸ್ಪೃಶ್ಯತೆಯ ವಿಷಯವಾಗಿಯೂ ಅಷ್ಟೊಂದು ಸಮಾಧಾನಕರವಾದ ಸುಧಾರಣೆಯು ನಡೆಯುವದಿಲ್ಲ. ಸಾರಾಂಶ ಕೊಂಗ್ರೆಸಿನ ವಿಧಾಯಕ ಕಾರ್ಯಕ್ರಮಗಳಲ್ಲಿ ಒಂದೆಯೊಂದು ಕೂಡ ನಡೆಯುವದಿಲ್ಲ ಎಂಬಿತ್ಯಾದಿ ಅನುಭವವನ್ನು ಲಾಲಾಜಿಯವರು ತಿಳಿಪಡಿಸಿದ್ದಾರೆ. ಇವರ ಅನುಭವದಂತೆ ಹೇಳುವುದಾದರೆ ನೂಲಿಗೆ ಕೊಟ್ಟಿರುವ ಮತದಾನವು ನಿರರ್ಥಕವೆ ಸರಿ. ಹಿಂದು ಮಹಮ್ಮದೀಯರ ಐಕ್ಯದ ವಿಷಯದಲ್ಲಿ ಹಿಂದುಗಳು ಸ್ವಾವಲಂಬಿಗಳಾಗದೆ ಅದು ಸಾಧ್ಯವಾಗಲಿಕ್ಕಿಲ್ಲವೆಂದು ಅವರು ಅಭಿಪ್ರಾಯಪಡುತ್ತಿದ್ದಾರೆ. ಲಾಲಾಜಿಯವರು ಇದೆ ಅಭಿಪ್ರಾಯವನ್ನು ಲಾಹೋರಿನ ಸನಾತನ ಧರ್ಮ ಕೋಲೇಜಿನಲ್ಲಿ ಅಧ್ಯಕ್ಷಸ್ಥಾನದಿಂದ ಮಾತಾಡುವಾಗ ಪುನರಪಿ ವ್ಯಕ್ತಗೊಳಿಸಿದ್ದಾರೆ. ಸ್ವಧರ್ಮ ಸಂರಕ್ಷಣವಾಗದೆ, ಬರೆ ಉದ್ಬುದ್ಧ ತಾತ್ವಿಕ ಮಾತುಗಳನ್ನಾಡಿದ್ದಲ್ಲಿ ಹಿಂದುಸ್ಥಾನಕ್ಕೆ ಸ್ವರಾಜ್ಯವು ಬರಲಿಕ್ಕಿಲ್ಲ. ಹಿಂದುಗಳು ಸ್ವಾವಲಂಬನವನ್ನು ಪಡೆಯಬೇಕು. ಎಂಬುದಾಗಿ ಲಾಲಾ ಲಜಪತರಾಯರು ಒತ್ತಿ ಹೇಳಿರುವರು. ಲಜಪತರಾಯರಂಥ ದೇಶಭಕ್ತರ ಬಾಯಿಂದ ಬಂದಿರುವ ಉಪದೇಶವು ಎಲ್ಲರ ಆದರಕ್ಕೂ ಆಚರಣಕ್ಕೂ ಪಾತ್ರವಾದೀತೆಂದು ನೆನಸಿದರೆ ಅದು ಅಪ್ರಾಸಂಗಿಕವಾದೀತೆ?

೮. ಮಹಾತ್ಮಾ ಗಾಂಧಿಗಳು ಯಂಗ ಇಂಡಿಯದ ಸಂಚಿಕೆಯಲ್ಲಿ ಅ. ಇಂ. ಕೊಂ. ಕಮಿಟಿಯ ಕಡೆಯಿಂದ ಬಂದಿರುವ ಕೊಂಗ್ರೆಸ ಸಭಾಸದರ ಲೆಕ್ಕವನ್ನು ಪ್ರಕಟಿಸುವರು ಅವರು ಕೊಟ್ಟಿರುವ ಸಭಾಸದರ ತಖ್ತೆಯಲ್ಲಿ ಹಿಂದುಸ್ಥಾನದ ಎಲ್ಲ ಪ್ರಾಂತಗಳು ಕೂಡಿ ಕೊಂಗ್ರೆಸಿಗೆ ೧೫, ೩೫೫ ಸಭಾಸದರಿದ್ದಾರೆ. ಇವರ ಪೈಕಿ ೩೪೮೭ ಸಭಾಸದರು ತಾವು ಸ್ವಂತ ತೆಗೆಯುವರೊ ಅಥವಾ ಇತರರಿಂದ ನೂಲನ್ನು ಪಡಕೊಳ್ಳುವರೊ ಗೊತ್ತಿಲ್ಲ. ಉಳಿದ ೧೧೮೬೮ ಸಭಾಸದರಲ್ಲಿ ೬೩೨೫ ಜನರು ಅನ್ಯರಿಂದ ನೂಲು ತೆಕ್ಕೊಂಡು ಕೊಡುವವರು ಮತ್ತು ೫೫೪೩ ಸಭಾಸದರು ಸ್ವಂತ ನೂಲು ತೆಗೆಯುವವರಿದ್ದಾರೆ. ಎಂದರೆ ಅನ್ಯರಿಂದ ನೂಲನ್ನು ತೆಕ್ಕೊಂಡು ಕೊಡುವವರ ಸಂಖ್ಯೆಯೆ ಹೆಚ್ಚಿದೆ. ಬೇರೆ ಬೇರೆ ಪ್ರಾಂತಗಳ ಅಂಕೆಗಳನ್ನು ಸಂಪೂರ್ಣವಾಗಿ ನಂಬಲು ಆಗುವದಿಲ್ಲ. ಒಂದು ವಿವಕ್ಷಿತ ಪ್ರಾಂತದ ಸಂಖ್ಯೆಯು ಅವಿಶ್ವಸನೀಯವಾಗಿದೆ ಎಂದು ಮಹಾತ್ಮಾಜಿಯವರೆ ಹೇಳಿದ್ದಾರೆ. ಹಿಂದಿ ಮಧ್ಯಪ್ರಾಂತದ ಸಂಖ್ಯೆಯಲ್ಲಿ ವರ್ಗವಿಭಾಗವು ಇಲ್ಲ. ಆದ್ದರಿಂದ ನೂಲನ್ನು ಪೂರಯಿಸುವ ವ್ಯವಸ್ಥೆಯನ್ನು ಅಲ್ಲಿಯ ಕೊಂಗ್ರೆಸ ಕಮಿಟಿಯು ಮಾಡಿರಬಹುದೆಂದು ಮ. ಗಾಂಧಿಗಳು ಅಭಿಪ್ರಾಯಪಡುತ್ತಿದ್ದಾರೆ. ಇದೆ ಮೇರೆಗೆ ಇನ್ನೂ ಎಷ್ಟೊ ಸಂಶಯಾಸ್ಪದ ಸಂಗತಿಗಳು ಈ ಪಟ್ಟಿಯಲ್ಲಿ ನಮೂದಾಗಿವೆ. ಈ ಸಂಖ್ಯೆಯ ಮೇಲಿಂದ ಒಂದು ಪಾಠವನ್ನು ಕಲಿಯುವದಿದ್ದರೆ ನೂಲಿನ ಮತದಾನವು ಸರ್ವಥಾ ಯಶಸ್ವಿಯಾಗಲಿಲ್ಲವೆಂದೆ ಹೇಳಬೇಕಾಗುತ್ತದೆ. ಸಭಾಸದರ ಸಂಖ್ಯೆಯು ಕಡಿಮೆ ಕಡಿಮೆಯಾಗುತ್ತ ಹೋಗಿರುವಾಗ ಬೇರೆ ಯಾವ ಸಿದ್ಧಾಂತವನ್ನು ಸ್ಥಾಪಿಸಲು ಸಮರ್ಪಕವಾದ ಮತ್ತು ಸಯುಕ್ತಿಕವಾದ ಕಾರಣವಿದೆ? ಯಾವದೂ ಇಲ್ಲ. ತಥಾಪಿ ಮಹಾತ್ಮಾಜಿಗಳು ಈ ಸಿದ್ಧಾಂತವನ್ನು ಒಪ್ಪುವಂತೆ ಇಲ್ಲ.

೯. ಮೇಲಿನಂತೆ ಇನ್ನೂ ಅನೇಕ ಕಾರಣಗಳಿದ್ದಾಗ್ಯೂ ಮ. ಗಾಂಧಿಗಳು ತಮ್ಮ ಅಂಬೋಣವನ್ನು ಬಿಡುವಂತಿಲ್ಲ. ಆಂಧ್ರಪ್ರಾಂತ, ತಮಿಳು ಪ್ರಾಂತ ಮುಂತಾದ ಕಡೆಗಳಲ್ಲಿಯ ಅಂಕೆಗಳು ‘ಅವಿಶ್ವಸನೀಯವಾಗಿವೆ. ಕೆಲವು ಪ್ರಾಂತಗಳಲ್ಲಿ ಸಭಾಸದರ ಪಟ್ಟಿಯನ್ನೆ ಇಟ್ಟಿಲ್ಲ. ಕೇರಳ ಪ್ರಾಂತವು ಲೆಕ್ಕವನ್ನು ಕಳುಹಿಸಲೆ ಇಲ್ಲ. ಈ ಮೇರೆಗೆ ಕೊಂಗ್ರೆಸಿನ ಕಳೆದ ಎಪ್ರಿಲ್ ವರೆಗಿನ ಪರಿಸ್ಥಿತಿಯನ್ನು ಆಲೋಚಿಸಿದರೆ ಅದು ಯಾವ ದೃಷ್ಟಿಯಿಂದಲೂ ಉತ್ಸಾಹವರ್ಧಕವಲ್ಲ. ಆದರೂ ಮ. ಗಾಂಧಿಗಳು ಅದನ್ನು ಗಮನಿಸುವದಿಲ್ಲ. ಅವರು ಬರೆಯುತ್ತಾರೆ; “ಈ ಪರಿಸ್ಥಿತಿಗೆ ನಾನು ಅಂಜಲಿಕ್ಕಿಲ್ಲ. ನಾನು ದೊಡ್ಡ ಅಪರಾಧಿಯು. ನನ್ನಲ್ಲಿ ಬಹು ಸಾವಕಾಶವಾಗಿ ಸುಧಾರಣೆಯಾಗುತ್ತದೆ. ಈ ನಿರಾಶಾಜನಕ ಚಿತ್ರವನ್ನು ನೋಡಿದ್ದಲ್ಲೂ ಮತದಾನದ ಈ ಪದ್ಧತಿಯನ್ನು ಬದಲಾಯಿಸಬೇಕೆಂದು ನನಗೆ ತೋರದು. ಮೇಲಾಗಿ ಅದನ್ನೆ ಅವಲಂಬಿಸಬೇಕೆಂದು ತೋರುವದು.” ಮ। ಗಾಂಧಿಗಳು ಕೊಂಗ್ರೆಸಿನ ಮತದಾರರ ಲೆಕ್ಕದ ಪಟ್ಟಿಯನ್ನು ನೋಡಿ ಈ ಮೇರೆಗೆ ಯಾವ ನಿಗ್ರಹವನ್ನು ತೋರಿಸುತ್ತಾರೊ ಅದನ್ನೆ ಅವರು ತಮ್ಮ ಪ್ರಯಾಣದಿಂದಲೂ ದೃಢಪಡಿಸುತ್ತಿದ್ದಾರೆ. ಗಾಂಧಿಗಳು ಮಹಾತ್ಮರೆಂಬುದು ತ್ರಿವಾರ ಸತ್ಯ. ಅದರಲ್ಲಿ ಯಾವ ಅತಿಶಯೋಕ್ತಿಯೂ ಇಲ್ಲ. ಆದರೆ ಈ ಕಲಿಯುಗದಲ್ಲಿ ಒಬ್ಬನು ತನ್ನ ಮಾಹಾತ್ಮ್ಯವನ್ನು ಧಾರಾದತ್ತ ಮಾಡಿದ್ದಲ್ಲಿಯಾಗಲಿ ಅಥವಾ ಇದೆ ತರದ ಬೇರೆ ಅಲೌಕಿಕ ಉಪಾಯದಿಂದಾಗಲಿ ಲೌಕಿಕ ಸಮಾಜಕ್ಕೆ ಅಸಾಧ್ಯವಾಗಿರುವ ಸಂಗತಿಯನ್ನು ಸಾಧ್ಯಕೋಟಿಯಲ್ಲಿ ತರಲು ಆಗಲಿಕ್ಕಿಲ್ಲ. ಒಂದು ಕಾಲದಲ್ಲಿ ಕ್ರಿಸ್ತ ಮಹಾತ್ಮನು ರೊಟ್ಟಿಯ ಏಳು ಚೂರುಗಳಿಂದ ನೂರಾರು ಜನರ ಹಸಿವೆಯನ್ನು ಶಾಂತಪಡಿಸಿದ್ದಂತೆ ಈ ಹೊತ್ತು ಅವನಿಗಾದರೂ ಆ ಕೃತ್ಯವು ಸಾಧ್ಯವಾಗುತ್ತಲೆ ಇತ್ತೆಂದು ಹೇಳಲಾಗದು. ಹಾಗಾದ ಮೇಲೆ ಅನ್ಯರಿಗೆ ಬರೆ ಅಂಧವಿಶ್ವಾಸದಿಂದ ಅದು ಹಾಗೆಯೆ ಆದೀತು ಎಂದು ಬರೆ ಹಟಹಿಡಿಯುವುದರಿಂದ ಅಸಾಧ್ಯವಾದ ಸಂಗತಿಯು ಎಂದಾದರೂ ಸಾಧ್ಯವಾದೀತೆ? ಇಡೀ ಈ ಲೋಕವು ಕಾರ್ಯಕಾರಣದ ಸಿದ್ಧಾಂತದ ಮೇಲೆಯೆ ನಿಂತಿದೆ. ಅಕಾರಣವಾಗಿ ಒಂದೆ ಒಂದು ಸಂಗತಿಯು ಈ ಲೋಕದಲ್ಲಿ ಉಂಟಾಗಲಿಕ್ಕಿಲ್ಲ. ಆದ್ದರಿಂದ ಮಹಾತ್ಮರ ಶ್ರದ್ಧೆಯು ಎಷ್ಟೆ ಬಲವತ್ತಾಗಿ ಇದೆಯಾದರೂ ಕಾರ್ಯಕಾರಣತೆಯ ಸಿದ್ಧಾಂತವು ಇನ್ನೂ ಹೆಚ್ಚು ಬಲವತ್ತಾಗಿದೆ ಎಂಬುದನ್ನು ಯಾರೂ ಮರೆಯಕೂಡದು.

೧೦. ಈಗಿನ ಸಂಸ್ಥಾನಿಕರಲ್ಲಿ ವಿದ್ಯಾಪ್ರಿಯರಾದವರು ಯಾರಿರುವರೊ ಅವರಲ್ಲಿ ಬಡೋದೆಯ ಮಹಾರಾಜರಾದ ಶ್ರೀ. ಸಯಾಜಿಯವರೊಬ್ಬರಾಗಿರುವರು. ಸಯಾಜಿ ಮಹಾರಾಜರ ವಿದ್ಯಾಪ್ರೀತಿಯು ಇದು ವರೆಗಿನ ಅನೇಕ ದೃಷ್ಟಾಂತಗಳಿಂದ ಲೋಕಕ್ಕೆ ವ್ಯಕ್ತವಾಗಿದೆ. ಆದರೂ ಇತ್ತೀಚೆಗೆ ಅವರು ಹುಕುಮನ್ನು ಹೊರಡಿಸಿ ಯಾವ ಕೆಲವು ಏರ್ಪಾಡುಗಳನ್ನು ಮಾಡಿರುವರೊ ಅವುಗಳ ಮೇಲಿಂದಂತೂ ಅವರ ಶಿಕ್ಷಣಪ್ರೇಮವು ಇನ್ನಷ್ಟು ದೃಢವಾಗುತ್ತಿದೆ. ಶ್ರೀಮಂತ ಸಯಾಜಿ ಮಹಾರಾಜರು ವಾಙ್ಮಯಕ್ಕೆ ಉತ್ತೇಜನವು ದೊರಕಬೇಕೆಂಬುದರಿಂದ ಕಾವ್ಯ, ವಾಙ್ಮಯ, ಇತಿಹಾಸ, ಶಾಸ್ತ್ರ, ಸಂಶೋಧನ, ಕಲೆ, ಸಮಾಜಸುಧಾರಣೆ, ಸಮಾಜಸೇವೆ ಈ ವಿಷಯಗಳನ್ನು ಕುರಿತು ಪರಿಶ್ರಮಪಡುವವರಿಗೆ ಪಾರಿತೋಷಿಕಗಳನ್ನಿಟ್ಟಿರುವರು. ಪ್ರತಿಯೊಂದು ಪಾರಿತೋಷಿಕವು ಸಾವಿರ ರುಪಾಯಿಯದಿದೆ. ಅದಲ್ಲದೆ ಮುಂದೆ ಐದು ವರ್ಷಗಳ ವರೆಗೆ ಅವ್ಯಾಹತವಾಗಿ ಪಾರಿತೋಷಿಕಗಳನ್ನು ಪಡೆದವನಿಗೆ ಅನಂತರ ಪ್ರತಿ ವರ್ಷ ೧೦೦ ರುಪಾಯಿ ಕೊಡಬೇಕೆಂದು ಅವರು ಹುಕುಮನ್ನು ಹೊರಡಿಸಿರುವರು. ಕಾವ್ಯ ಮತ್ತು ವಾಙ್ಮಯಗಳ ಪಾರಿತೋಷಿಕಗಳು ಅವರ ಇಚ್ಛಾನುಸಾರವಾಗಿ ಮರಾಠಿ ಅಥವಾ ಗುಜರಾಥಿ ಭಾಷೆಗಳ ಲೇಖಕರಿಗೆ ಕೊಡಲ್ಪಟ್ಟವು. ಈ ಪಾರಿತೋಷಿಕಗಳಲ್ಲದೆ ಬೇರೆ ಬೇರೆ ಪದಕಗಳನ್ನು ಕೊಡುವ ವ್ಯವಸ್ಥೆಯು ಕೂಡ ಮಾಡಲ್ಪಟ್ಟಿದೆ. ಈ ಮೇರೆಗೆ ಸಯಾಜಿ ಮಹಾರಾಜರು ತೋರಿಸುತ್ತಿರುವ ವಿದ್ಯಾಪ್ರೀತಿಯನ್ನು ನೋಡುವಾಗ ಮುಂಚಿನ ಕಾಲದ ಭೋಜ ಮಹಾರಾಜನ ನೆನಪು ಯಾವಾತನಿಗೆ ಉಂಟಾಗಲಿಕ್ಕಿಲ್ಲ. ಇತರ ಸಂಸ್ಥಾನಿಕರು ಇವರನ್ನು ಅನುಕರಿಸುವದು ಅತ್ಯಂತ ಅಗತ್ಯವಾಗಿದೆ. ಯಾರ ಅಭಿಪ್ರಾಯವು ಹೇಗೆಯೆ ಇರಲಿ, ಶಿಕ್ಷಣ, ವಾಙ್ಮಯ ಶಾಸ್ತ್ರೀಯ ಸಂಶೋಧನ ಇವು ರಾಷ್ಟ್ರಾಭ್ಯುದಯಕ್ಕೆ ಮುಖ್ಯ ಸಾಧನಗಳು. ಅವುಗಳನ್ನು ಅಭಿವೃದ್ಧಿಗೆ ತರುವದು ಭಾರತಪುತ್ರನ ಕರ್ತವ್ಯವಾಗಿದೆ. ಈ ಕರ್ತವ್ಯವನ್ನು ಸಾಧಿಸಿ ಸಯಾಜಿ ಮಹಾರಾಜರು ಕೃತಾರ್ಥರಾಗಿರುವರು. ಆದ್ದರಿಂದ ಅವರನ್ನು ಅಭಿನಂದಿಸದೆ ನಮ್ಮಿಂದಿರಲಾಗದು.

ಮಂಗಳೂರು.

ಮಂಗಳೂರು ಮುನ್ಸಿಪಲ್ ನಿರೇಶ್ವಾಲ್ಯ ಎಲಿಮೆಂಟರಿ ಶಾಲೆಯನ್ನು ಮಾನ್ಯ ಮುನ್ಸಿಪಾಲಿಟಿಯವರು ಹಾಯರ್ ಎಲಿಮೆಂಟರಿ ಶಾಲೆಯನ್ನಾಗಿ ಮಾಡುತ್ತಾರೆಂಬ ವರ್ತಮಾನವನ್ನು ಕೇಳಿ ಸದರಿ ಶಾಲೆಯಲ್ಲಿ ೫ನೇ ಕ್ಲಾಸು ಪಾಸಾದ ಮಕ್ಕಳೂ ಇನ್ನೂ ಕೆಲವು ಬಡಮಕ್ಕಳೂ ೬ನೇ ಕ್ಲಾಸಿಗೆ ಸೇರಲು ಸಮಯವನ್ನು ಹಾರೈಸುತ್ತಾ ಇರುವರು. ಉದಾರಿಗಳಾದ ಮುನ್ಸಿಪಾಲಿಟಿಯವರು ಬೇಗನೆ ಸದರಿ ಶಾಲೆಯಲ್ಲಿ ೬ನೇ ಕ್ಲಾಸು ತೆರೆಯಲು ಹುಕುಂ ಕೊಡಲಾರರೇ? ಸದರಿ ಶಾಲೆಯ ಹೆಡ್ ಮಾಸ್ತರ್ ಜಿನಾಬ್ ಮುಹಮ್ಮದನವರು ತರ್ಬೇತಿನ ಬಗ್ಗೆ ಟ್ರೈನಿಂಗ್ ಶಾಲೆಗೆ ಹೋಗುತ್ತಾರೆಂತ ವರ್ತಮಾನವಿದೆ. ಅವರು ಟ್ರೈನಿಂಗಿಗೆ ಹೋದರೆ ಅವರ ಸ್ಥಾನಕ್ಕೆ ಒಬ್ಬ ಸೆಕೆಂಡರಿ ಟ್ರೈನ್ಡ್ ಉಪಾಧ್ಯಾಯರನ್ನೇ ವಿದ್ಯಾಪ್ರಚಾರಕ ಮುನ್ಸಿಪಾಲಿಟಿಯವರು ನೇಮಿಸಬೇಕೆಂತ ಗ್ರಾಮನಿವಾಸಿಕರ ಅರಿಕೆ ಇರುವದು.

ಕಳೆದ ಶುಕ್ರವಾರ ಇಲ್ಲಿ ಚಿತ್ತೈಸಿದ್ದ ಸಂ. ಟಿ. ಸದಾಶಿವ ಅಯ್ಯರರು ಇಲ್ಲಿ ಥಿಯೋಸೊಫಿಕಲ್ ಲೋಜಿನಲ್ಲಿ ಶನಿವಾರ ಮತ್ತು ಆದಿತ್ಯವಾರ ಚಲೋದಾದ ಭಾಷಣಗಳನ್ನು ಕೊಟ್ಟರು. ಆದಿತ್ಯವಾರ ಸಾಯಂಕಾಲ ಲೋಜಿನವರ ಕಡೆಯಿಂದ ಒಂದು “ಎಟ್ ಹೋಮ್” ಪಾರ್ಟಿ ಕೊಡಲಾಯಿತು. ಇವರು ಕಾಸರಗೋಡಿಗೆ ಚಿತ್ತೈಸಿದ್ದಾರೆ.

The Calicut Bank, Ltd.,
ದಿ ಕೆಲಿಕಟ್ ಬೇಂಕ್, ಲಿಮಿಟೆಡ್,
ಹೆಡ್ ಆಫೀಸು — ಕಲ್ಲಿಕೋಟೆ.
ಬ್ರಾಂಚುಗಳು:— ಮುಲ್ಲಸ್‌ಚೇರಿ, ತಲಚೇರಿ, ಕೊಚ್ಚಿ ಮತ್ತು ಪಾಲ್ಘಾಟು.
ರಿಜಿಸ್ಟರ್ಡ್ ಮತ್ತು ಅಧಿಕಾರಗೊಳಿಸಲ್ಪಟ್ಟ ಮೂಲಧನ ರೂ. 5,00,000—0—0.
ರೂಪಾಯಿ 10ರ 50,000 ಪಾಲುಗಳು.
(30—8—1924)ರ ವರೆಗೆ ಮೌಲ್ಯ ಮೂಲಧನ ರೂಪಾಯಿ 1,81,850—0—0.
ಒಂದು ವರುಷದ ಕಾಯಂ ಠೇವಣಾತಿಗೆ ಬಡ್ಡಿ ದರ ಸೇಕಡಾ ರೂ. 7—8—0.
ಕಳೆದ 4 ವರುಷಗಳಲ್ಲಿ ಪಾಲುಗಾರರಿಗೆ ಸೇಕಡಾ 12ರಂತೆ ಬಡ್ಡಿ ಹಂಚಿದೆ.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.
ಸಿ. ಕೃಷ್ಣನ್, ಬಿ. ಎ. ಬಿ. ಎಲ್.,
ಮೆನೇಜಿಂಗ್ ಡ್ಯಾರೆಕ್ಟರ್.
ಡ್ಯಾರೆಕ್ಟರರಲ್ಲಿ ಒಬ್ಬರು—
ಎಮ್. ನಾರಾಯಣ. ಕಾಮತ್, ಬಿ. ಎ.,
ಪ್ಲೀಡರ್, ಕುಂದಾಪುರ.

ಇದೇ ಬರುವ ತಾ. ೧೪ನೇ ಆದಿತ್ಯವಾರ ಸಾಯಂಕಾಲ ೪ ಗಂಟೆಗೆ ಮಂಗಳೂರು ತಾಲೂಕು ಸ್ವರಾಜ್ಯ ಪಾರ್ಟಿಯವರ ಒಂದು ಸಭೆಯು ಕೋರ್ಟು ಗುಡ್ಡೆಯಲ್ಲಿರುವ ವಕೀಲ ಮಾಧವರಾಯರ ಆಫೀಸಿನಲ್ಲಿ ಜರಗುವುದು. ಈ ಸಭೆಯಲ್ಲಿ ಕಾರ್ಯಕಾರಿ ಮಂಡಳಿಗೆ ಮೆಂಬರರ ಚುನಾವಣೆಯಾಗುವದರಿಂದ ಸದರಿ ಪಾರ್ಟಿಗೆ ಸೇರುವವರೆಲ್ಲರೂ ಈ ಸಭೆಯ ಮುಂಚಿತವಾಗಿಯೇ ತಿಳಿಸಬೇಕೆಂದು ಶ್ರೀ. ಆರ್. ಕಾರಂತರ ವಿನಂತಿಯಿದೆ.

ನಿನ್ನೆ ದಿವಸ ಪೆಂಟ್‌ಲೆಂಡ್ ಪೇಟೆಯಲ್ಲಿ ಸುಮಾರು ೧೧ ಗಂಟೆ ರಾತ್ರಿ ಸಮಯದಲ್ಲಿ ಯಾರೋ ನಾಲ್ಕೈದು ಜನರು ಸುರಾದೇವಿಯ ಪ್ರತಾಪದಿಂದ ಹೊಡೆದಾಡಿ ಒಬ್ಬರಿಗೊಬ್ಬರು ಚೂರಿಹಾಕಿ ತಿವಿದುಕೊಂಡಿರುವರು. ಇತ್ತಿತ್ತಲಾಗಿ ಈ ಕುಡಿಕರ ಹಾವಳಿಯು ಈ ಕಡೆಯಲ್ಲಿ ಜೋರಾಗುತ್ತಿದೆ. ಈ ವಿಷಯದಲ್ಲಿ ಪೋಲಿಸ್ ಅಧಿಕಾರಿಗಳು ನಿಗಾ ಕೊಡುವುದು ಅಗತ್ಯ.

ಸ್ವೀಕಾರ.

ಬಂಟರ ಯಾನೆ ನಾಡವರ ‘ಸಂಘದ ಹದಿನೇಳನೆಯ ವಾರ್ಷಿಕ ವರದಿಯು ರಿಪೋರ್ಟು.

ಹಿಂಸಾ-ಅಹಿಂಸೆಗಳ ಮರ್ಯಾದೆ.

ಹಿಂಸೆ ಮತ್ತು ಅಹಿಂಸೆ ಇವು ಪರಸ್ಪರ ವಿರುದ್ಧವಾದವುಗಳು. ಹಿಂದುಸ್ಥಾನದಲ್ಲಿ ಆರ್ಯರು ಬಂದು ನೆಲೆಗೊಳಿಸುತ್ತಿರುವ ಅಥವಾ ನೆಲೆಗೊಳಿಸಿದ ಆ ಪ್ರಾಚೀನ ಕಾಲದಲ್ಲಿಯಾಗಲಿ ಅಥವಾ ಅದಕ್ಕಿಂತಲೂ ಮುಂಚಿನ ಎಂದರೆ ಉತ್ತರ ಧ್ರುವದಲ್ಲಿ ವಾಸಿಸಿಕೊಂಡಿರುವ ಕಾಲದಲ್ಲಾಗಲಿ ಅವರು ಹಿಂಸೆಯನ್ನು ಮಾಡುತ್ತಿದ್ದರು. ಈ ವಿಷಯವಾಗಿ ಅನೇಕ ಐತಿಹಾಸಿಕ ಪ್ರಮಾಣಗಳಿವೆ. ಆದರೆ ಜೈನ, ಬೌದ್ಧ ಮುಂತಾದ ಅವೈದಿಕ ಧರ್ಮಗಳು ಹಿಂದೂಸ್ಥಾನದಲ್ಲಿ ಹುಟ್ಟಿ ಯಾವಾಗ ಪ್ರಚುರವಾಗಹತ್ತಿದವೊ ಅಂದಿನಿಂದ ಅಹಿಂಸೆಯ ತತ್ವವು ತಲೆದೋರಿತು. ಪಾಶ್ಚಾತ್ಯ ಸಂಶೋಧಕರು ಬರೆದಿರುವ ಬುದ್ಧನ ಚರಿತ್ರೆಯಲ್ಲಿ ಅವನು ವಾರ್ಧಕ್ಯದಲ್ಲಿ ಹಂದಿಯ ಮಾಂಸವನ್ನು ಸೇವಿಸಿ ಅಜೀರ್ಣವುಂಟಾಗಿ ಮೃತನಾದನು, ಎಂದು ಉಲ್ಲೇಖವಿದೆಯಾದರೂ ಮತ್ತು ಚೀನಾ, ಜಪಾನ, ಸಿಲೋನ ಈ ಬೌದ್ಧಮತೀಯ ಪ್ರದೇಶಗಳು ಹಿಂಸಾಜೀವಿಗಳಾದರೂ ಬೌದ್ಧ ಧರ್ಮದ ಗ್ರಂಥಗಳಲ್ಲಿ ಅನ್ಯ ಸದ್ಗುಣಗಳನ್ನುಪದೇಶಿಸುವಾಗಲಿ ಅಹಿಂಸೆಯ ಉಪದೇಶವೂ ಇದ್ದದರಿಂದ ಬೌದ್ಧಧರ್ಮವು ಅಹಿಂಸಾ ಪ್ರತಿಪಾದಕವೆಂಬ ತಿಳಿವು ರೂಢಮೂಲವಾಗಿದೆ. ವಸ್ತುತಃ ಅಹಿಂಸೆಯ ಪ್ರವರ್ತಕನು ಮಹಾವೀರ ಮುನಿಯು. ಇವನಿಂದ ಪ್ರಣೀತವಾದ ಜೈನಧರ್ಮದಲ್ಲಿ ಅಹಿಂಸೆಗೆ ಪ್ರಾಧಾನ್ಯವಿರುವಷ್ಟು ಇನ್ನಾವ ತತ್ವಕ್ಕೂ ಇಲ್ಲ. ಇದು ಹೇಗೆ ಸತ್ಯವೊ ಹಾಗೆಯೆ ಅಹಿಂಸೆಗೆ ಜೈನಧರ್ಮದಷ್ಟು ಇನ್ನಾವ ಧರ್ಮವೂ ಮಹತ್ವವನ್ನು ಕೊಡುವದಿಲ್ಲವೆಂಬ ಮಾತು ಕೂಡ ಸತ್ಯವಾಗಿದೆ. ಅಹಿಂಸೆಯ ತತ್ವವು ಜಗತ್ತಿಗೆ ಈ ಜೈನಧರ್ಮದಿಂದಲೆ ಪ್ರಾಪ್ತವಾಗಿದೆ ಎಂದು ಹೇಳಲಾಗುವುದಿಲ್ಲ. ಐತಿಹಾಸಿಕ ದೃಷ್ಟಿಯಿಂದ ಜೈನ ಬೌದ್ಧದರ್ಶನಗಳಿಂತಲೂ ಪ್ರಾಚೀನವಾದ ಭಗವದ್‌ಗೀತೆಯಲ್ಲಿ "ಅಹಿಂಸೆ"ಯ ಉಲ್ಲೇಖವು ಒಂದೆರಡು ಕಡೆಗಳಲ್ಲಿ ಬಂದಿರುವದು. ಈ ದೃಷ್ಟಿಯಿಂದ ಅಹಿಂಸೆಯು ಆರ್ಯ ತತ್ವಜ್ಞಾನದಲ್ಲಿ ಸ್ಥಾನಾಪನ್ನವಾಗಿದೆ ಎಂಬುದು ಹೌದು. ತಥಾಪಿ ಆ ತತ್ವವು ಜೈನರದೆ ಎಂದು ಹೇಳುವುದು ವಿಶೇಷ ಸಮಂಜಸವು. ಕಾರಣ, ಒಂದು ತತ್ವವು ಇಂಥವನದೆ ಎಂದು ಹೇಳಿಸಿಕೊಳ್ಳಬೇಕಾದರೆ ಅದಕ್ಕಾಗಿ ಅವನು ಯಾವ ತ್ಯಾಗವನ್ನೂ ಕೂಡ ಮಾಡಿದವನಾಗಿರಬೇಕು, ಆ ತತ್ವದ ಆಚರಣವು ಅವನ ಪ್ರತಿಯೊಂದು ರಕ್ತವಾಹಿನಿಯಲ್ಲಿ ತುಂಬಿಕೊಂಡಿರಬೇಕು. ಆಗ ಮಾತ್ರ ಆ ತತ್ವದ ಯಥಾರ್ಥವಾದ ಜನಕತ್ವವು ಅವನಿಗೆ ಬರುವದು. ಈ ದೃಷ್ಟಿಯಿಂದ ಅಹಿಂಸೆಯು ಜೈನರದೆ ಸೊತ್ತು ಎಂದು ಹೇಳಬೇಕಾಗುತ್ತದೆ. ಭಗವದ್ ಗೀತೆಯಲ್ಲಿ ಮತ್ತು ಮನುಸ್ಮೃತಿಯಲ್ಲಿ ಅಹಿಂಸೆಯ ಉಚ್ಚಾರವಿದೆಯಾದರೂ ಮೇಲೆ ಹೇಳಿದಂತೆ ಪ್ರಾಧಾನ್ಯದಿಂದ ಅಲ್ಲ, ಹತ್ತರೊಟ್ಟಿಗೆ ಹನ್ನೊಂದು ಎಂಬಂತೆ ಸಾಮಾನ್ಯ ರೂಪದಿಂದ ಅಹಿಂಸೆಯ ಮಾತು ಎತ್ತಲ್ಪಟ್ಟಿದೆ. ಆದರೆ ಜೈನಾದಿ ಧರ್ಮಗಳು ಪ್ರಬಲವಾಗಿ ಅವುಗಳ ಪ್ರಭಾವವು ಯಾವಾಗ ವೈದಿಕ ಧರ್ಮದ ಮೇಲೆ ಕೆಲವಂಶದಿಂದುಂಟಾಗಹತ್ತಿತೊ ಆಗ ಅಹಿಂಸೆಯ ತತ್ವವು ಪ್ರಮುಖ ಸ್ಥಾನವನ್ನು ಪಡೆಯಿತು. ಬೌದ್ಧ ಧರ್ಮವು ಉಚ್ಚಾಟಿತವಾಯಿತಾದರೂ ಮತ್ತು ಜೈನಧರ್ಮವು ಹತಬಲವಾಯಿತಾದರೂ ಸನ್ಯಾಸ, ಅಹಿಂಸೆ ಮುಂತಾದ ತತ್ವಗಳ ಮೇಲಿನ ಜನತೆಯ ಶ್ರದ್ಧೆಯು ಅಷ್ಟೊಂದು ಕಡಿಮೆಯಾಗಿರಲಿಲ್ಲ. ಇವು ಉಚ್ಚಧಾರ್ಮಿಕ ಅಂಗಗಳಾದವು. ಈಗಲಂತೂ ಮಹಾತ್ಮಾ ಗಾಂಧಿಗಳು ರಾಜಕಾರಣದ ರಂಗಭೂಮಿಯಲ್ಲಿ ಪ್ರವೇಶಿಸಿದಂದಿನಿಂದ ಅಹಿಂಸೆಗೆ ವಿಶೇಷ ಪ್ರಾಧಾನ್ಯವು ಬಂದು ಹೋಗಿದೆ.

ಈ ಪ್ರಾಧಾನ್ಯವು ಎಷ್ಟರಮಟ್ಟಿಗೆ ಬಂದಿದೆಂದರೆ ಹಿಂದುಸ್ಥಾನದ ಎಲ್ಲ ವಾತಾವರಣವು ಅಹಿಂಸೆಯ ಧ್ವನಿಯಿಂದ ತುಂಬಿಹೋಗಿದೆ ಧರ್ಮ ಸಮಾಜನೀತಿ, ರಾಜನೀತಿ, ಉದ್ಯೋಗವೃತ್ತಿ, ವಾಣಿಜ್ಯವ್ಯವಸಾಯ ಇ. ಇ. ಅನೇಕ ಸಂಗತಿಗಳಲ್ಲಿ ಅಹಿಂಸೆಯ ಮಾತುಗಳು ಕೇಳಬರುತ್ತಿವೆ. ಯಾವ ಕೆಲಸವನ್ನು ಮಾಡುವದಾದರೂ ಹಿಂಸಾಹಿಂಸೆಯ ಸಂಗತಿಗಳನ್ನಾಲೋಚಿಸಿ ಅನಂತರ ಕೆಲಸಕ್ಕೆ ಕೈಹಾಕಬೇಕೆಂದು ಗಾಂಧಿಗಳ ಅಂಬೋಣವಿರುವದರಿಂದ ಅವರ ಅನುಯಾಯಿಗಳೆನ್ನಿಸಿಕೊಳ್ಳುವವರು ಹಿಂಸೆಯ ಭಯದಿಂದ ಕರ್ತವ್ಯವಾದ ಎಷ್ಟೊ ಸಂಗತಿಗಳನ್ನು ತ್ಯಜಿಸಿದ್ದಾರೆ. ಯಾರಾದರೂ ಅನ್ಯಾಯವಾಗಿ ತನ್ನನ್ನು ಹೊಡೆಯಲು ಬಂದರೆ ಅಥವಾ ತನ್ನ ಅಕ್ಕತಂಗಿಯಂದಿರ ಮೇಲೆ ಅತಿಪ್ರಸಂಗವನ್ನು ನಡಿಸಿದರೆ ಆ ಎರಡೂ ಸಂದರ್ಭಗಳಲ್ಲಿ ಅವನು ಅಹಿಂಸಾಚಾರಿಯಾಗಿ ಸುಮ್ಮಗಿರುವದೆ ಈಶ್ವರಪ್ರೀತಿಯೆಂದು ತಿಳಿಯುವ ದಿವಸಗಳು ಈಗ ಬಂದು ಹೋಗಿವೆ. ಅಹಿಂಸೆಯ ಯಥಾವತ್ತಾದ ಸ್ವರೂಪವು ಅತಿ ಪರಿಶುದ್ಧವಾದೆಂಬುದಕ್ಕೆ ಸಂದೇಹವಿಲ್ಲ. ಹಿಂಸೆಯಲ್ಲದ್ದು ಅಹಿಂಸೆಯು. ಹಿಂಸೆಯು ಶರೀರ, ವಾಕ್ಯ, ಮನಸ್ಸು ಈ ತ್ರಿಕರಣಗಳಿಂದ ಸಂಭವಿಸುತ್ತದೆ. ಕೈ, ಕಾಲು ಮುಂತಾದ್ದರಿಂದ ಹೊಡೆಯುವದು, ಬಡೆಯುವುದು ಕಾಯಿಕ ಹಿಂಸೆ. ಬಾಯಿಂದ ಬೈಯುವದು, ಅಪಶಬ್ದಗಳನ್ನು ಉಪಯೋಗಿಸುವದು, ಸುಳ್ಳಾಡುವದು, ಇವೆಲ್ಲ ವಾಚಿಕ ಹಿಂಸೆ. ಅನ್ಯರ ಅನಿಷ್ಟವನ್ನು ಚಿಂತಿಸುವದು ಮಾನಸಿಕ ಅಹಿಂಸೆ

ಹಿಂಸೆ ಎಂದರೆ ಕೊಲ್ಲುವಿಕೆ. ಈ ಕೊಲ್ಲುವಿಕೆಯ ಮುಖ್ಯ ಕ್ರಿಯೆಗೆ ಪೀಡನ, ದ್ರೋಹ, ನೋವು ಇವು ಹತ್ತರಿನ ಕ್ರಿಯೆಗಳು. ಅವುಗಳಿಗೂ ಹಿಂಸೆ ಎಂಬ ಶಬ್ದವನ್ನು ಪ್ರಯೋಗಿಸುತ್ತಾರೆ. ಆದ್ದರಿಂದ ಸಾಕ್ಷಾತ್ತಾಗಿ ಒಬ್ಬನ ವಧೆಯೆ ಉಂಟಾಗಬೇಕೆಂದಿಲ್ಲ. ಒಬ್ಬನ ಮನಸ್ಸಿಗೆ ನೋವುಂಟುಮಾಡುವ ಕೃತ್ಯವು ಸಂಭವಿಸಿದರೂ ಅದು ಹಿಂಸೆಯ ಸಾಲಿನಲ್ಲೆ ಬರುವುದು. ಶರೀರದಿಂದ ಇನ್ನೊಬ್ಬನ ಶರೀರವನ್ನು ನೋಯಿಸುವಂತೆ ಮನಸ್ಸನ್ನು ಕೂಡ ನೋಯಿಸಲಾಗುತ್ತದೆ; ಬಾಯಿಂದ ಹೊರಡುವ ಶಬ್ದಗಳಿಂದಲೂ ಇನ್ನೊಬ್ಬನ ಮನಸ್ಸನ್ನು ನೋಯಿಸಲಾಗುತ್ತದೆ. ಆದರೆ ಒಬ್ಬನ ಮಾನಸಿಕ ವೃತ್ತಿಯಿಂದ ಬೇರೊಬ್ಬನ ಮನಸ್ಸನ್ನು ನೋಯಿಸುವುದು ಹೇಗೆ? ಮಾನಸಿಕ ವೃತ್ತಿಗಳು ಪ್ರಕಾಶಿತವಾಗದೆ ಅನ್ಯರಿಗೆ ಗ್ರಾಹ್ಯವಾಗೋಣವಿಲ್ಲ, ಎಂದ ಮೇಲೆ ಅದರ ಸುಷ್ಟ-ದುಷ್ಟ-ಪರಿಣಾಮಗಳು ಅನ್ಯರಮೇಲುಂಟಾಗುವುದು ಅಸಾಧ್ಯವಲ್ಲವೆ? ಈ ದೃಷ್ಟಿಯಿಂದ ಮಾನಸಿಕ ಹಿಂಸೆಯ ವಿಭಾಗವು ಅನುಪಪನ್ನವೆಂದು ಯಾರಾದರೂ ಹೇಳಬಹುದು. ಪರಂತು ಹಿಂಸೆಯ ವ್ಯಾಖ್ಯೆಯು ಇನ್ನೂ ಸೂಕ್ಷ್ಮವಾಗಿರುವುದರಿಂದ ಮಾನಸಿಕ ಹಿಂಸೆಯ ವಿಭಾಗಕಲ್ಪನೆಯು ನಿರರ್ಥಕವಾಗಲಾರದು. ಒಬ್ಬನು ಮನಸ್ಸಿನಲ್ಲಿ ಅನಿಷ್ಟಚಿಂತನವನ್ನು ಮಾಡುತ್ತಿದ್ದಾನೆ, ಆದರೆ ಅದು ಅನ್ಯರ ತಿಳಿವಿಗೆ ಬರಲಿಲ್ಲವಾದ್ದರಿಂದ ಬೇರೆಯವರ ಮನಸ್ಸು ನೋಯುವುದಿಲ್ಲವೆಂಬುದು ನಿಜ, ಆದರೆ ಯಾವ ಮಾನಸಿಕ ವಿಚಾರವು ಬಹಿರಂಗವಾದ್ದಲ್ಲಿ ಅನ್ಯರಿಗೆ ಪೀಡನೆಯುಂಟಾಗುವುದೊ ಅಂಥ ವಿಚಾರವು ಬಹಿರಂಗವಾಗದಿದ್ದಲ್ಲೂ ಪರಪೀಡಕನ ಸಂಚಿಂತೆಯು ತಿಳಿದು ತುಳಿದರೂ ಸುಡುವುದು, ತಿಳಿಯದೆ ತುಳಿದರೂ ಸುಡುವುದು. ಅಜ್ಞಾನದಿಂದ ವಿಷವನ್ನು ಕುಡಿದರೆ, ಅದರ ಪ್ರಾಣಹರತ್ವ ನಷ್ಟವಾದೀತೆ? ಅಂತೆಯೆ ಅಂತರಂಗದಲ್ಲಿ ಉದ್ಭೂತವಾದ ಪೀಡಾಕರ ವಿಚಾರಗಳು ಗುಪ್ತವಾಗಿ ಇದ್ದರೂ ಅವುಗಳ ಹಿಂಸಕತ್ವವು ಹೋಗುವುದಿಲ್ಲ. ಅನ್ಯರಮೇಲೆ ಪರಿಣಾಮವಾಗಲಿ, ಆಗದಿರಲಿ, ಅದು ಮುಖ್ಯ ಸಂಗತಿಯಲ್ಲ. ಹಿಂಸಾಕರ ಆಚಾರವು, ಹಿಂಸಾಕರ ಉಚ್ಚಾರವು ಮತ್ತು ಹಿಂಸಾಕರ ವಿಚಾರವು ಯಾವ ಅಧಿಕರಣದಲ್ಲಿ ಸಂಬಂಧಿಸುವವೊ ಆ ಅಧಿಕರಣವು ದೋಷಲಿಪ್ತವಾಗುವುದರಿಂದ ಈ ತ್ರಿವಿಧ ಉಪಾಧಿಗಳ ಮೂಲಕ ಹಿಂಸೆಯಲ್ಲಿ ಕೂಡ ತ್ರೈವಿಧ್ಯವನ್ನು ಶಾಸ್ತ್ರಕಾರರು ಉಪದೇಶಿಸಿರುವರು. ಇಂಥ ತ್ರಿವಿಧ ಹಿಂಸೆಯು ಯಾವುದಲ್ಲವೊ ಅದು ಅಹಿಂಸೆಯು. ಅಹಿಂಸೆಯ ಶುದ್ಧ ಸ್ವರೂಪವು ಇದೆ ಸರಿ.

ಈ ಶುದ್ಧ ಸ್ವರೂಪವು ಕೇವಲ ಸತ್ವಗುಣ ಪ್ರಧಾನವಾದ ಸ್ಥಲದಲ್ಲಿ ಅನುಭವಕ್ಕೆ ಬರುವುದಲ್ಲದೆ ಅನ್ಯತ್ರ ಅದಕ್ಕೆ ಅವಕಾಶವಿಲ್ಲ. ಈ ಲೋಕವು ತ್ರಿಗುಣಾತ್ಮಕವಾದ್ದು. ಎಂದಮೇಲೆ ಮಾನವ ಸಮಾಜವೂ ತ್ರಿಗುಣಾತ್ಮಕವಾದುದೆ ಸರಿ. ಅಂಥ ಕಡೆಯಲ್ಲಿ ಅಹಿಂಸೆಯ ಶುದ್ಧ ಸ್ವರೂಪವು ಹೇಗೆ ಗೋಚರವಾದೀತು? ಆದರೂ ಅಹಿಂಸೆಯ ಶುದ್ಧ ಸ್ವರೂಪವನ್ನು ಸ್ಥಾಪಿಸುವ ಅಟ್ಟಹಾಸವು ನಡೆಕೊಂಡಿದೆ ಈ ನಿರರ್ಥಕ ಪ್ರಯತ್ನದಿಂದ ಧ್ಯೇಯವು ಸಾಧ್ಯವಾಗದೆ ಇದ್ದರೂ ಇತರ ಅನೇಕ ಅವ್ಯವಸ್ಥೆಗಳು ಸಮಾಜದಲ್ಲಿ ಬಂದುಹೋಗಿವೆ. ಅಹಿಂಸೆಯ ಅತ್ಯುಕ್ತಿಯೆ ಇದರ ಮೂಲ ಕಾರಣವು. ಆದ್ದರಿಂದ ಹಿಂಸೆಯ ಗಡಿಯು ಯಾವದು ಮತ್ತು ಅಹಿಂಸೆಯ ಗಡಿಯು ಯಾವುದು ಎಂಬುದನ್ನು ಕುರಿತು ಈ ಲೇಖದಲ್ಲಿ ಪ್ರತಿಪಾದಿಸಬೇಕೆಂದಿದ್ದೇನೆ. ಈ ಹೊತ್ತಿನ ಉಪಕ್ರಮದಿಂದಲೆ ಇಷ್ಟು ಸ್ಥಳವನ್ನು ಆಕ್ರಮಿಸಿದ ಕಾರಣ ಮುಂದಿನಸಾರಿ ಮುಖ್ಯ ಚರ್ಚೆಯನ್ನು ಕೈಕೊಳ್ಳಬೇಕಾಗುತ್ತದೆ.

ಆತ್ಮಾರಾಮಶಾಸ್ತ್ರಿ ಓಡ್ಲಮನೆ.

— ಹಿಂದುಸ್ಥಾನದ ಮಾಹಿತಿ. —

ಹಿಂದುಸ್ಥಾನದಲ್ಲಿ ಹೆಚ್ಚಾಗಿ ಅಂದರೆ ೩೧ ಕೋಟಿ ಜನರು ವಾಸಿಸುತ್ತಿದ್ದು ಜನಸಂಖ್ಯೆಯ ಪ್ರಮಾಣದಿಂದ ವ್ಯಾಪಾರದಲ್ಲಿ ಹಿಂದುಸ್ಥಾನದ ನಂಬರವು ಮೇಲೆ ಬಂದಿರುವದಿಲ್ಲವೆಂಬುದು ನಿಜವು. ಆದರೆ ಜಗತ್ತಿನಲ್ಲಿ ಕೊಂಡುಕೊಳ್ಳುವ ವ್ಯವಹಾರದ ಸಲುವಾಗಿ ಯಾವ ಅತ್ಯಂತ ಶ್ರೇಷ್ಠ ದೇಶಗಳಿರುವವೋ ಅವುಗಳಲ್ಲಿ ಹಿಂದುಸ್ಥಾನಕ್ಕೆ ೬ನೇ ನಂಬರವು ಪ್ರಾಪ್ತವಾಗಿದೆ. ಹಿಂದುಸ್ಥಾನದ ಮೇಲೆ ಇಂಗ್ಲಂಡದ ಸ್ವಾಮಿತ್ವವು ಇರುವದರಿಂದ ಅದರ ವ್ಯಾಪಾರವು ಬಹುತರ ಇಂಗ್ಲಂಡದ ಮತ್ತು ಬ್ರಿಟಿಷ ಸಾಮ್ರಾಜ್ಯದೊಡನೆ ನಡೆಯುತ್ತದೆ. ಹೋದ ವರ್ಷದ ವ್ಯಾಪಾರದ ಅಂಕೆಗಳಿಂದ ವಿಚಾರ ಮಾಡಿದರೆ ಹಿಂದುಸ್ಥಾನವು ತಾನು ಕೊಂಡ ಸರಕಿನಲ್ಲಿ ನೂರಕ್ಕೆ ೬೫ ಪಾಲು ಸರಕು, ಬ್ರಿಟಿಷ ಸಾಮ್ರಾಜ್ಯದಲ್ಲಿ ಮತ್ತು ಈ ೬೫ರಲ್ಲಿ ೫೮ ಪಾಲು ಒಂದೇ ಗ್ರೇಟಬ್ರಿಟನದಲ್ಲಿ ಇರುತ್ತದೆ. ಯಾವತ್ತು ಜಗತ್ತಿನಲ್ಲಿ ಹಿಂದೂಸ್ಥಾನವು ೩೪೫ ಕೋಟಿ ರೂಪಾಯಿಗಳ ವ್ಯವಹಾರವನ್ನು ಬ್ರಿಟೀಷ ಸಾಮ್ರಾಜ್ಯದೊಡನೆ ಮಾಡುತ್ತದೆ. ಹತ್ತಿಯನ್ನು ಬೆಳಸುವವರಲ್ಲಿ ಹಿಂದುಸ್ಥಾನವು ೩ನೇ ನಂಬರವನ್ನು ದೊರಕಿಸಿದೆ. ಹಿಂದುಸ್ಥಾನದಷ್ಟು ನಾರು ಪೃಥ್ವಿಯಲ್ಲಿ ಬೇರೆ ಯಾವ ದೇಶಗಳಲ್ಲಿಯೂ ಹುಟ್ಟುವದಿಲ್ಲ. ಹಿಂದುಸ್ಥಾನದಿಂದ ಹೊರಗಿನ ದೇಶಗಳಿಗೆ ಹೋಗುವ ನಾರು ನೂರಕ್ಕೆ ೬೭ ಪಾಲು ಇಂಗ್ಲಂಡ ದೇಶವು ಕೊಳ್ಳುತ್ತದೆ.

• • • • • •

ಇಂಗ್ಲಂಡಕ್ಕೆ ಚಾಸೊಪ್ಪನ್ನು ಹಿಂದುಸ್ಥಾನವೇ ಪೂರೈಸುತ್ತದೆ. ಹಿಂದುಸ್ಥಾನದಲ್ಲಿ ೭೧೦ ೩೦೦ ಎಕರೆ ಭೂಮಿಯು ಚಹದ ತೋಟಗಳಿಂದ ತುಂಬಿದೆ. ಮತ್ತು ಈ ಎಲ್ಲ ತೋಟಗಳು ಇಂಗ್ಲಂಡದವರ ವಶದಲ್ಲಿರುತ್ತವೆ. ಖಾದ್ಯ ಮತ್ತು ಪೇಯ ಪದಾರ್ಥಗಳನ್ನೂ ಕಾರಖಾನೆಗಳಿಗೆ ಉಪಯೋಗಬೀಳುವ ಎಲ್ಲ ತರದ ಕಚ್ಚಾ ಸರಕುಗಳನ್ನೂ ಹಿಂದುಸ್ಥಾನವು ಪೂರೈಸುತ್ತಿದ್ದರೂ ಹಿಂದೂಸ್ಥಾನದ ಅಂಗಡಿಗಳಲ್ಲಿ ಇಂಗ್ಲಂಡದ ಪಕ್ಕಾ ಸರಕೇ ಪ್ರಾಮುಖ್ಯವಾಗಿ ದೃಷ್ಟಿ ಗೋಚರವಾಗುತ್ತವೆ. ಹಿಂದುಸ್ಥಾನದ ರೈಲ್ವೆ ಗಾಡಿಗಳನ್ನು ಇಂಗ್ಲಿಷರೆ ನಡಿಸುತ್ತಿದ್ದು ಅವಕ್ಕೆ ಹತ್ತುವ ಯಂತ್ರ ಮೊದಲಾದವುಗಳನ್ನು ನೂರರಲ್ಲಿ ೯೮ರಂತೆ ಇಂಗ್ಲೀಷರೇ ಪೂರೈಸುವರು. ಗಿರಣಿ ಮತ್ತು ಕಾರಖಾನೆಗಳ ಯಂತ್ರಸಾಮುಗ್ರಿಗಳಲ್ಲಿ ನೂರಕ್ಕೆ ೮೩ ರಂತೆ ಯಂತ್ರಗಳನ್ನು ಬ್ರಿಟಿನರು ಕೊಡುವರು. ಹಿಂದುಸ್ಥಾನಕ್ಕೆ ಬೇಕಾಗುವ ಒಕ್ಕಲತನದನೇಗಿಲು ಮೊದಲಾದ ಸಾಧನೆಗಳು ನೂರಕ್ಕೆ ೮೪ ಅಂಶ ೮೩ ಮತ್ತು ಕಬ್ಬಿಣ ಉಕ್ಕುಗಳು ೬೬-೯ರಂತೆ ಇಂಗ್ಲಂಡವೇ ಪೂರೈಸುತ್ತದೆ

• • •

ಪುರಾಣ ವಸ್ತು ಸಂಶೋಧನ ಶಾಖೆಯ ಡಾಯರೆಕ್ಟರರಾದ ಸರ್ ಜಾನ ಮಾರ್ಶೆಲ್ ಸಾಹೇಬರು ಮುಂಬಯಿ ಕ್ರಾನಿಕಲ್ ಪತ್ರದ ಸುದ್ದಿಗಾರನೊಡನೆ ಮಾತಾಡಿದ್ದು— ಸಿಂಧ ಮತ್ತು ಪಂಜಾಬ ಪ್ರಾಂತಗಳಲ್ಲಿ ನೆಲದೊಳಗೆ ಮುಳುಗಿ ಹೋಗಿದ್ದ ೯ ಪಟ್ಟಣಗಳು ಈಗ ಶೋಧಿಸಿ ತೆಗೆಯಲ್ಪಟ್ಟಿವೆ. ಮತ್ತು ಇನ್ನೂ ಕೆಲವು ಪಟ್ಟಣಗಳು ಸಿಗುವ ಸಂಭವವದೆ. ಈ ಪಟ್ಟಣಗಳ ಅವಶೇಷಗಳಿಂದ ಹಿಂದುಸ್ಥಾನದ ಸುಧಾರಣೆಯ ಕಾಲವು ಬಾಬಿಲೋನ ಪಟ್ಟಣಕ್ಕಿಂತ ಪೂರ್ವದಲ್ಲಿಯೇ ಇತ್ತೆಂದು ಸಿದ್ಧವಾಗುತ್ತದೆ. ಈ ಪಟ್ಟಣಗಳ ಕಾಲವು ಕ್ರಿ. ಶ. ಮುಂಚೆ ೬-೭ ಸಾವಿರ ವರ್ಷದ್ದಾಗಿರಬೇಕು. ಇಷ್ಟು ಹಿಂದಿನ ಕಾಲದ ನಗರ ರಚನೆಯ ಪದ್ಧತಿ ವಿಸ್ತೀರ್ಣ ಮತ್ತು ಸರಳವಾದ ಬೀದಿ, ಪ್ರೇಕ್ಷಣೀಯ ಮತ್ತು ಅಪೂರ್ವವಾದ ಕಟ್ಟಡ, ಇವುಗಳನ್ನು ನೋಡಿ ಅತ್ಯಂತ ಆಶ್ಚರ್ಯವಾಗುತ್ತದೆ. ಹಿಂದೀ ವಿದ್ವಾನರಲ್ಲಿ ಪುರಾಣ ವಸ್ತುಗಳು ಸಂಶೋಧನ ಮಾಡುವವರು ಹಲವರಿರುವರು ಮತ್ತು ಇನ್ನು ಮೇಲೆ ಅಂಥವರ ಸಹಾಯವಿಲ್ಲದೆ ನಮ್ಮ ಈ ಕಾರ್ಯವು ಕೊನೆಮುಟ್ಟಲಾರದು. ಆದ್ದರಿಂದ ನಾವು ಇನ್ನು ಮುಂದೆ ಈ ಕೆಲಸದಲ್ಲಿ ಹಿಂದೀ ತಜ್ಞರನ್ನು ಕೂಡಿಸುತ್ತ ಹೋಗುವೆವು.

ಒಟ್ಟಿನ ಮೇಲೆ ಆರ್ಯ ಸಂಸ್ಕೃತಿಯ ಪ್ರಾಚೀನತ್ವ ಮತ್ತು ಅವುಗಳನ್ನು ಶೋಧಿಸುವ ಕಾರ್ಯದಲ್ಲಿ ಹಿಂದೀ ತಜ್ಞರ ಅವಶ್ಯಕತೆ ಇರುವವರೆಂಬುದು ಈಗ ಸಾಹೇಬರಿಗೆ ಅನಿಸ ಹತ್ತಿದ್ದು ಸುಚಿಹ್ನವೇ ಸರಿ.

ಪ್ರಕಟಣೆ.

ಮಂಗಳೂರು ತಾಲೂಕು ಕೋಟಿ ಮತಸ್ಥಾಪನೆಗಳ ಕಮಿಟಿ ಮೆಂಬರ ಕೊಡಮಣ್ಣು ಸುಬ್ರಾಯರ ಮರಣದಿಂದ ಖಾಲಿಯಾದ ಸ್ಥಾನವನ್ನು ಭರ್ತಿಮಾಡುವರೆ ತಾ. 25--5-25 ರಲ್ಲು ಹುಟ್ಟಿದ ಪ್ರಕಟಣೆಯಂತೆ ಪತ್ತುಮುಡಿ ಅನಂತಯ್ಯನವರ ಮಗ ಮುನ್ನೂರು ಕೃಷ್ಣರಾಯರೊಬ್ಬರೇ ಉಮೇದ್ವಾರರಿರುವ ಕಾರಣ ತಾ. 6-6-25ರಿಂದ ಸದರಿ ಮುನ್ನೂರು ಕೃಷ್ಣರಾಯರನ್ನು ಕಮಿಟಿಮೆಂಬರರಾಗಿ ನೇಮಿಸೋಣಾಗಿಯದೆ.

ನೋಟೀಸು.

ಉಪ್ಪಿನಂಗಡಿ ತಾಲೂಕು ಪೆರಿಯ ಗ್ರಾಮದ ಇಜ್ಜಾವು ವಿಷ್ಣಯ್ಯನವರ ಮಗ ಈ ಸಂಘದ ನಂಬ್ರ 226ನೆ ಮೆಂಬರನಾಗಿರುತ್ತಿದ್ದ ಕುದನೆ ಲಕ್ಷ್ಮೀನಾರಾಯಣಯ್ಯ ಎಂಬವರು ಬದರಿ ಯಾತ್ರೆಗೆ ಹೋದಲ್ಲಿ ಮೃತಪಟ್ಟ ಕಾರಣ ಅವರ ಬಾಬ್ತು ಈ ಸಂಘದಲ್ಲಿರುವ II ಕ್ಲಾಸು ಪಾಲು 2 (ಎರಡು)ನ್ನು ತನ್ನ ಹೆಸರಲ್ಲಿ ವರ್ಗಾಯಿಸಬೇಕಾಗಿ ಅವರ ಖಾಸಾ ತಮ್ಮ ಕುದನೆ ಗಣಪತಿರಾವ್ ಎಂಬವರು ತಾರೀಕು 10—2—1925ರಲ್ಲು ಈ ಸಂಘಕ್ಕೆ ಅರ್ಜಿ ಬರಕೊಂಡಿರುತ್ತಾರೆ.

ಈ ಸಂಗತಿಯನ್ನು ಸ್ವದೇಶಾಭಿಮಾನಿಯಲ್ಲಿ ಒಂದು ತಿಂಗಳ ವಾಯಿದೆಯಿಂದ ನೋಟೀಸು ಫ್ರಾಸ್‌ಮಾಡಿದನಂತರ ವರ್ಗಾಯಿಸಬೇಕಾಗಿ ಈ ಸಂಘದ ಆಡಳಿತೆ ಸಭೆಯಲ್ಲಿ ನಂಬ್ರ $\frac{187}{24.25}$ನೇ ನಿರ್ಣಯವಾಗಿದೆ. ಇದಕ್ಕೆ ಆಕ್ಷೇಪವುಳ್ಳವರು ಈ ನೋಟೀಸು ಫ್ರಾಸ್ ಆದ ಒಂದು ತಿಂಗಳ ಒಳಗೆ ಅವರ ಆಕ್ಷೇಪಗಳನ್ನು ಬರಹಮೂಲಕವಾಗಿ ಕಾರ್ಯದರ್ಶಿಯಾದ ನನಗೆ ಜಾಹೀರುಮಾಡಲಿಕ್ಕೆ ತಪ್ಪಿದರೆ ಮೇಲಿನ ನಿರ್ಣಯದಂತೆ ಸದರಿ II ಕ್ಲಾಸು ಪಾಲುಗಳು 2ನ್ನು ಕುದನೆ ಗಣಪತಿ ರಾಯರ ಹೆಸರಿಗೆ ವರ್ಗಾಯಿಸಲಾದೀತು. ತಿಳಿದಿರಲಿ.

ಹೆಡ್ ಆಫೀಸು
ವಿಟ್ಲ,
ತಾ. 6-6-1925.

N. Shankaranaraina Bhat.
ನಂಬ್ರ 2835ನೇ ದಕ್ಷಿಣ ಕನ್ನಡ ಬಾಗಾಯತು
ಕೃಷಿಕರ ಬಂಡಸಾಲೆಯ ಸಹಕಾರಿ ಸಂಘದ
ಕಾರ್ಯದರ್ಶಿ.

ನೋಟೀಸು.

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ ನಾನು ಈ ವರೆಗೆ ನನ್ನ ದಸ್ಕತನ್ನು M. A. Krishnaraya Kodgi ಎಂತ ಹಾಕುತ್ತಿದ್ದೆನು. ಇನ್ನು ಮುಂದೆ ಹಾಗೆ ಹಾಕದೆ A. Krishnaraya Kodgi ಎಂತ ಹಾಕುವೆನೆಂಬದನ್ನು ಈ ಮೂಲಕ ಜಾಹೀರು ಮಾಡುವೆನು.

A. KRISHNARAYA KODGI,
Amasebail.

7-6-1925.

ಮ|| ರಾ|| ರಾ|| ಎಮ್. ಗಿರಿಯಪ್ಪ ಅವರ್ಗಳ್, ಬಿ. ಎ.
ಅಸಿಸ್ಟಾಂಟು ರಿಜಿಸ್ಟ್ರಾರು.

ಪ್ರಕಟಣೆ.

ದಕ್ಷಿಣ ಕನ್ನಡ ಜಿಲ್ಲಾ ಉಪ್ಪಿನಂಗಡಿ ತಾಲೂಕು ಸವಣಾಲ ಗ್ರಾಮದಲ್ಲಿ ಸ್ಥಾಪಿಸಿರುವ ನಂಬ್ರ 1812ನೇ ಸವಣಾಲ ಸಹಕಾರ ಸಂಘವು ರಜಿಸ್ಟ್ರಿಮಾಡಲ್ಪಟ್ಟದ್ದನ್ನು ರದ್ದುಮಾಡುವುದರಿಂದಲೂ, ಸಂಘದ ಕಾರ್ಯಗಳನ್ನು ವ್ಯವಸ್ಥೆಪಡಿಸುವ ಬಗ್ಗಾಗಿ ತಕ್ಕ ವಿಲೆವಾರಿ ಮಾಡುವುದರಿಂದಲೂ ಸದರಿ ಸಂಘದ ಮೇಲೆ ದಾವೆ ಇರುವ ಎಲ್ಲಾ ಜನರು ತಮ್ಮ ದಾವೆಗಳನ್ನು ಸದರಿ ಸಂಘದ ಲಿಕ್ವಿಡೇಟರರಾದ ಮಂಗಳೂರು ಸೆಕ್ಷನ್ ಸಹಕಾರಿ ಸಂಘಗಳ ಅಸಿಸ್ಟಾಂಟು ರಿಜಿಸ್ಟ್ರಾರರವರ ಮುಂದೆ ಪ್ರಕಟಣೆಯ ತಾರೀಕಿನಿಂದ ಮೂರು ತಿಂಗಳೊಳಗೆ ತರತಕ್ಕದ್ದೆಂತ ಈ ಮೂಲಕ ಪ್ರಕಟಿಸೋಣಾಗುತ್ತದೆ.

M. Giriappa,
Assistant Registrar.

10-6-1925.

— ಸಿರಿಗನ್ನಡಂಗೆಲ್ಗೆ —

ಶ್ರೀ ಶಂಕರ ಕರ್ನಾಟಕ ಪುಸ್ತಕ ಭಂಡಾರವೂ ಶ್ರೀ ವಿದ್ಯಾರಣ್ಯ ಪ್ರಕಾಶಕ ಸಂಸ್ಥೆಯೂ,

ಮಾಳಮಡ್ಡಿ, ಧಾರವಾಡ.

ಕನ್ನಡಿಗರಿಗೆ ಬೇಕಾಗುವ ಎಲ್ಲಾ ತರದ ಕನ್ನಡ ಪುಸ್ತಕಗಳು ನಮ್ಮಲ್ಲಿ ಯೋಗ್ಯ ಬೆಲೆಗೆ ದೊರೆಯುವವು. ವಿದ್ಯಾರಣ್ಯ ಪುಸ್ತಕ ಮಾಲೆಯ ಕೆಳಗಿನ ೧, ೨, ೩, ಪುಸ್ತಕಗಳು ಚಂದಾದಾರರಾಗುವವರಿಗೆ ಅಂಚೆ ವೆಚ್ಚ ಸಹಿತ ೫ ರೂ. ೬ ಆಣೆಗೆ ದೊರೆಯುವವು. ಮುಂದೆ ಹೊರ ಬೀಳುವ ಮಾಲೆಯ ಪುಸ್ತಕಗಳನ್ನು ಚಂದಾದಾರರಿಗೆ ೧ ರೂಪಾಯಿಗೆ ೨ ಆಣೆಯಂತೆ ಕಡಿಮೆ ಬೆಲೆಗೆ ವಿ. ಪಿ. ಮಾಡುವೆವು. ಭಂಡಾರದ ಚೀಟಿ ಪಟ್ಟಿಗಾಗಿ ೪ ಆಣೆ ಅಂಚೆ ಟಿಕೇಟುಗಳನ್ನು ಕಳುಹಿಸತಕ್ಕದ್ದು.

		ರೂ. ಆ. ಪೈ.
೧.	ಕರ್ನಾಟಕ ಸಿಂಹಾಸನ ಸ್ಥಾಪನೆ	೧—೦—೦
೨.	ಕಥೆಗಳನ್ನೊಳಗೊಂಡ ಬೀರಬಲ್ಲ ಚರಿತ್ರ (ಸಚಿತ್ರ)	೧—೬—೦
೩.	ಛತ್ರಪತಿ ಶಿವಾಜಿ ಮಹಾರಾಜ ,,	೨—೧೨—೦
೪.	ಮಹಾರಾಣಿ ಲಕ್ಷ್ಮೀಬಾಯಿ ಝಾಂಸಿ ,,	೨—೦—೦
೫.	ಅಕ್ಬರ ಚಕ್ರವರ್ತಿ ಚರಿತ್ರೆ ,,	೧—೧—೦
೬.	ಚರಿತ್ರ ಸಂಗ್ರಹ ಭಾಗ ೧. ,,	೧—೪—೦
೭.	ತಿಲಕರ ಗೀತಾ ರಹಸ್ಯ	೩—೮—೦
೮.	ಶ್ರೀ ದಾಸಬೋಧ ಭಾಗ ೧ ೨. ೩.	೨—೧೪—೦
೯.	ರಾಷ್ಟ್ರಸಭೆಯ ಇತಿಹಾಸ	೨—೮—೦
೧೦.	ವಚನ ಜ್ಞಾನಸಿಂಧು	೪—೦—೦

ಇವಲ್ಲದೆ ನಮ್ಮಲ್ಲಿ ಎಲ್ಲಾ ತರದ ಕಾಯಿದೆ ಶಾಲೋಪಯೋಗಿ ಪುಸ್ತಕಗಳೂ ನಕಾಶೆ ಚಿತ್ರಗಳೂ ಬಣ್ಣಗಳೂ ದೊರೆಯುವವು.

ಶ್ರೀಪಾದ ರಾಮಚಂದ್ರ ದೇಶಪಾಂಡೆ ಬಿ. ಯಸ್. ಸಿ.,
ವ್ಯವಸ್ಥಾಪಕ.

ಆರೋಗ್ಯ ಚಂದ್ರಿಕೆ.

ಮದ್ರಾಸ್.

ಸಂಪಾದಕರು: ಡಾಕ್ಟರ್ ಯು. ರಾಮರಾವ್, ಎಲ್. ಎಮ್. ಸಿ. ಎಫ್. ಎಮ್. ಯು. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವುದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ.

ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ.

ಆರೋಗ್ಯಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವುವು.

'ಹೆಲ್ತ್' ಎಂಬ ನಮ್ಮ ಇಂಗ್ಲಿಷ್ ಮಾಸಪತ್ರಿಕೆಯನ್ನೋದಿ ಸಂತೋಷಿಸಿದ ಅನೇಕ ದೊಡ್ಡ ಮನುಷ್ಯರ ಪ್ರೋತ್ಸಾಹದ ಮೇಲೆ ಈ ಕನ್ನಡ ಪ್ರತಿಯನ್ನು ಹೊರಡಿಸಿದೆ.

ಇದರ ಸಂಪುಟ ೨ ಮತ್ತು ೧೨ನೇಯದ್ದಿ ನವಂಬರ ೧೯೨೪ರ ಸಂಚಿಕೆಯಲ್ಲಿ ಕಾಣಿಸಿರುವ ವಿಷಯಗಳು.

ಮುಖಚಿತ್ರ:—ಪರ್ವತವಾಸಿಯವಳ ಒಬ್ಬ ರೂಪವತಿ.
ಶ್ವಾಸಕ್ರಮ ಅಥವಾ ಪ್ರಾಣಾಯಾಮ.
ಹುಡೆಸೀಹಣ್ಣಿನ ಆಹಾರಗುಣಗಳು ಮತ್ತು ಔಷಧಗುಣಗಳು.
ಕಾಲುನಡೆಯೇ ಉತ್ತಮವಾದ ವ್ಯಾಯಾಮವು
ಜೇನಿನಲ್ಲಿರುವ ಗುಣಗಳು.
ಹಲ್ಲುಗಳ ರಚನೆ, ಪ್ರಯೋಜನ, ಕೆಲಸ ಮುಂತಾದವು.
ಮದ್ಯಪಾನಗಳಿಂದ ಆರೋಗ್ಯಕ್ಕೆ ಉಂಟಾಗತಕ್ಕ ಹಾನಿ.
ಅಂಗಸಾಧನೆ ಮತ್ತು ಬುದ್ಧಿವ್ಯವಸಾಯ (ವಿದ್ಯಾಭ್ಯಾಸ).
ಗಾಯಗಳು, ಮತ್ತು ಉಳುಕು ಮುಂತಾದವುಗಳಿಗೆ ಅವುಗಳ ಚಿಕಿತ್ಸೆ
ನವನಾಗರಿಕ ಪ್ರಪಂಚಕ್ಕೆ ಸಹಜವಾದ ಮೂರು ಕೆಡುಕುಗಳು.
ಒಬ್ಬ ಉಪವಾಸಿಯ ಅನುಭವ.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವುವು. ಆರೋಗ್ಯಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ ರೂ. ೧—೮—೦; ಬಿಡುಪತ್ರಿಕೆ ಒಂದಕ್ಕೆ ರೂ. ೦—೨—೦ ಹಿಂದಿನ ಸಂಚಿಕೆಗಳು ಕೂಡ ದೊರಿಯುವವು.

ಚಂದಾದಾರರಾಗುವವರು ವಿ. ಪಿ. ಮೂಲಕವಾಗಿ ತರಿಸಿಕೊಳ್ಳುವದಕ್ಕಿಂತಲೂ ಹಣವನ್ನು ಮುಂಗಡವಾಗಿ ಕಳುಹಿಸುವುದು ಲಾಭಕರ. ಮಾಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು 'ಆರೋಗ್ಯ ಚಂದ್ರಿಕೆ'ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು.

ಪತ್ರವ್ಯವಹಾರಕ್ಕೆ: 'ಆರೋಗ್ಯ ಚಂದ್ರಿಕೆ'
೩೨೩ ತಂಬುಚೆಟ್ಟಿ ಬೀದಿ, ಮದ್ರಾಸ್.

ತುಳು ಪಾಡ್ದನಗಳು.

ಬೊಬ್ಬರ್ಯ, ಕಲ್ಲುಟಿ-ಕಲ್ಕುಡ, ದೈಯ್ಯೊಂಗುಳು—ಕೋಡಕಿನಾರ್, ಮುಂಡತ್ತಾಯ ಪ್ರತಿ ಒಂದಕ್ಕೆ 2 ಆಣೆ. 11½ ಆಣೆ ಟಪ್ಪಾಲು ಚೀಟು ಕಳಹಿಸಿದರೆ 5 ಪುಸ್ತಕಗಳು ಕೂಡಲೇ ಕಳುಹಿಸಲ್ಪಡುವವು.

ವಿಳಾಸ: ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.
Authorised and fully paid
up Capital Rs. 300,000—0—0
Reserve and other sinking
Funds „ 259,000—0—0

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ
ಕೆತ್ತ ಮೂಲಧನವು ರೂ. 300,000—0—0
ಕ್ಷೇಮನಿಧಿ ಮತ್ತು ಇತರ ಫಂಡುಗಳು
259,000—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳೋಣಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1925.

K. Venkat Rao,
Secretary

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೨೫ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ೬ಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೨೫ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲ ಪಂಡಿತರು,

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ,
ಮಂಗಳೂರು ಟವನಿಗೆ ಮಾತ್ರ.

ವಿದ್ಯಾವಾಚಸ್ಪತಿ
ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ

"ಸಂಕ್ಷೇಪಗೀತೆ"

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ, ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠ ಸ್ಥಾನವನ್ನು ಹೊಂದಿದೆ ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೦. ಟಪ್ಪಾಲು ಖರ್ಚು ಕೂಡಿ ಆಣೆ ೧೧ನ್ನು ಮನಿಯಾರ್ಡರ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ೨ರಕ್ಕಿಂತ ಜಾಸ್ತಿ ಖರ್ಚು ತಗಲುವುದು. ರಖಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.

ಪುಸ್ತಕ ದೊರಿಯುವ ವಿಳಾಸ:—

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು, ಮತ್ತು ಕೆನರಿಸ್ ಮಿಶ್ಯನ್ ಬುಕ್ ಎಂಡ್ ಟ್ರಕ್ಟ್ ಡಿಪೋಜಿಟರಿ,
ಮಂಗಳೂರು.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀಕಾಶೀ, ಗಯಾ, ಪ್ರಯಾಗ, ಹರಿದ್ವಾರ ಬದ್ರಿನಾರಾಯಣ ದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರ ಕಡೆಯಿಂದಅನುಭವ ತೆಗೆದು ಪ್ರತಿವಂದು ಸಿದ್ಧಮಾಡಿಕೊಂಡು ಬರೆದಿರುವರು. ೧ನೇದು ಮಂತ್ರಪ್ರಕರಣದಲ್ಲಿ ಮಂತ್ರ ಪಠಣದಿಂದಲೂ, ಮಂತ್ರಪ್ರಯೋಗದಿಂದಲೂ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವೂ ಇದೆ. ೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳು ಹೊರಡುವಿಕೆ, ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅವನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ. ೩ನೇದು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅವನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು. ೪ನೇದು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ! ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಧಾತುಗಳ ಭಸ್ಮಾ ಸಹ, ಇವರಲ್ಲಿ ಉಂಟು. ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತೂ ರೋಗಗಳಿಗೂ ಸುಲಭವಾಗಿ ಔಷಧ ಮಾಡುವ ಕ್ರಮವನು ಚೆನ್ನಾಗಿ ಬರೆದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಳಾಸವು ತಿಳಿಸಿರುವರು. ೫ನೇದು ಯಂತ್ರ ಪ್ರಕರಣದಲ್ಲಿ ವಶೀಕರಣ ಗ್ರಹಪೀಡಾ ನಿವಾರಣ ಭೂತಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರದಿರುವರು. ಈ ಗ್ರಂಥವು ಹತ್ತಿರ ಇದ್ದ ಬಳಿಕ ಎಲ್ಲಾ ದೇವಾನು ದೇವತೆಗಳು ದ್ರವ್ಯಗಳೂ ವೈದ್ಯರೂ ಜೋತಿಷ್ಯರು, ಮಾಂತ್ರಿಕರು ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥ ಗ್ರಂಥವು ಯಾರು ಕಣ್ಣಿಂದ ನೋಡಿರಲಿಕ್ಕಿಲ್ಲ. ಪ್ರತಿವಬರು ತರಿಸಿ ನೋಡಬೇಕೆಂದು ಇದರ ಬೆಲೆ ಕೂಡ ಕಡಿಮೆಮಾಡಿ ಇರುವವು. ೨—೮—೦ ಟಪ್ಪಾಲು ಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ ನಾಟಕ ಕಾವ್ಯ, ಕಥೆಗಳು, ಯಕ್ಷಗಾನ, ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ:—

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

ಒಂದು ತಿಂಗಳಿಗೆ ಮಾತ್ರ.

ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಟೇಬಲ್ ಟೈಂಪೀಸ್ ಬಹುಮಾನವಾಗಿ ಕೊಡುವೆವು.

ರೋಲ್ಡ್ ಗೋಲ್ಡ್ ಭಂಗಾರದ ರೇಡಿಯಂ ರಿಸ್ಟ್ ವಾಚ್.

ಈ ಗಡಿಯಾರಗಳು ಸೀಮೆ ಭಂಗಾರದಲ್ಲಿ, ಬಹು ಬಲಿಷ್ಟವಾದ ಲೀವರ್ ಮೂವ್ಮೆಂಟ್ಸ್‌ಗಳಿಂದ (ಸ್ವಿಸ್‌ಮೇಡ್) ಸ್ವಿಜರ್‌ಲ್ಯಾಂಡ್ ದೇಶದಲ್ಲಿ ತಯಾರಿಸಿದ್ದು. ಸ್ವಲ್ಪವೂ ವ್ಯತ್ಯಾಸವಿಲ್ಲದೆ ಗಂಟೆಯನ್ನು ತೋರಿಸುವುದು. ಇದರಲ್ಲಿ ರೇಡಿಯಂ ಎಂಬ ವಿದ್ಯುಚ್ಛಕ್ತಿಯನ್ನು ಇಟ್ಟಿರುವುದರಿಂದ ರಾತ್ರಿಯಲ್ಲಿ ಬಹು ಪ್ರಕಾಶವಾಗಿ ಗಂಟೆಯನ್ನು ತೋರಿಸುವದು. ಕೈಯಲ್ಲಿ ಕಟ್ಟಲು ಬಹು ಚೆನ್ನಾಗಿರುವದು. ಈ ಗಡಿಯಾರವು ಭಂಗಾರಕ್ಕೆ ಸರಿಸಮನಾಗಿರುವದು. ಖಾತ್ರಿಯಾದ 5 ವರುಷ ಗ್ಯಾರಂಟಿ ಕೊಡುವೆವು.

ಕ್ರಯ ಟೇಬಲ್ ಟೈಂಪೀಸ್ ಸಹಿತ	ರೂ. 8—0—0.
ರಿಸ್ಟ್ ವಾಚ್ ಮಾತ್ರ	„ 6—0—0.
ಟೇಬಲ್ ಟೈಂಪೀಸ್ ಮಾತ್ರ	„ 3—4—0.

The American Watch Co.,
P. B. No. 509. *P. T. MADRAS.*

ವಿಳಾಸ:— ಅಮೇರಿಕನ್ ವಾಚ್ ಕಂಪೆನಿ,
ಪೋ ಬಾ 509, ಪಿ. ಟಿ. ಮದ್ರಾಸು.

Just Arrived OF **Fresh Consignment**

Best English Cycles.



REDUCTION IN PRICES.

Banger Cycles Model M. Made in Birmingham. WITH DUNLOP OR BATES TYRES & TUBES	... @	Rs. 90—0—0
Barton Humber on Advance WITH DUNLOP OR BATES TYRES & TUBES	... @	„ 100—0—0
Senior Royal with B. S. A. Fitting. WITH DUNLOP OR BATES TYRES &TUBES ..	...@	Rs. 145—0—0
Royal Saxon with B. S A. Fitting. WITH DUNLOP OR BATES TYRES & TUBES ...	... @	Rs. 175—0—0

All the above Cycles include pump and tools.

BROOKES PATEERN 90/2 GERMAN SADDLE ...	...@	„ 9—8—0
„ SADDLE 90/2 „ ...	..@	„ 21—0—0
„ „ B/30 „ ...	...@	„ 26—0—0

For further particulars please write to us or call on us:—

All kinds of Cycle Accessories, Dunlop and German Tyres and Tubes
ARE AVAILABLE AT VERY CHEAP RATES.

Special Discount to Traders *Easy Terms Arranged*

APPLY TO:—**The Mangalore Trading Association,**
Wholesale Dealers in Cycles and Cycle Accessories,
Car-Street, MANGA ORE.

—ಗೋಡೆಗೆ ತಗಲಿಸುವ
ಹೊಸ ನಮೂನೆಯ—
ಟಿಕ್—ಟಾಕ್

ಎಂಬ ಈ ಗಡಿಯಾರಗಳು ಜರ್ಮನೀ ದೇಶದಲ್ಲಿ ತಯಾರಿಸಿದ್ದು. ಇವು ಕರಾರು ಘಂಟೆಯನ್ನು ತೋರಿಸುವವು. ಇವಕ್ಕೆ ಕೀಗ ಕೊಡಬೇಕಾದಿಲ್ಲ. ಇದರಲ್ಲಿ ಕಾಣುತ್ತಿರುವ ಗುಂಡನ್ನು ಮೇಲಕ್ಕೆ ಎಳೆದರೆ ಸಾಕು. ತನ್ನಷ್ಟಕ್ಕೆ ತಾನೇ ಟಿಕ್—ಟಾಕ್ ಎಂಬ ಶಬ್ದವನ್ನು ಮಾಡುತ್ತಾ ಸರಿಯಾದ ಕಾಲವನ್ನು ತೋರಿಸುವದು. ಇದು ನೋಡುವುದಕ್ಕೆ ಬಹು ಲಕ್ಷಣವಾಗಿರುವುದು.

ಕ್ರಯ 1ಕ್ಕೆ ರೂ. 3—0—0
ಪೀಟರ್ ವಾಚ್ ಕಂಪೆನಿ
ಪೋಸ್ಟ್ ಬಾಕ್ಸ್ ನಂ. 27, ಮದ್ರಾಸ್.

ADVERTISE IN
The Business Directory
OF INDIA, BURMA & CEYLON

A Comprehensive Directory of the various Business-men, Exporters and Importers, Firms, Factories, Mills, Manufacturers, Merchants and Industries of the principal Cities, Ports and Towns of India, Burma and Ceylon.

PUBLISHED ANNUALLY
Rates for Advertisements

¼ Page	Rs.	50.
2 in. Single Column	"	20.
1 in. Single Column	"	15.
Name in Bold Types	"	5.

Price per Copy Rs. 10.
PRINTERS & PUBLISHERS.
Business Directory Co.,
Kanara Press Buildings, MADRAS. E.
Telegrams: "KETHAKI" Phone 540

Just arrived! *Look Sharp!*

SCREW ELECTRIC TORCH LAMPS &
Pocket Electric Lamps
AVAILABLE
In different varieties, Mother of pearl lamps. Cycle lamps.
NICKEL PLATED WITH SIDE LANCE.
Hammered Brand, with Powerful Bulls-eye lance.
The Mangalore Trading Association,
Car Street, MANGALORE

ಮನುಷ್ಯರಿಗೆ ಮತಿಸ್ಥಿತಿಗಿಂತಲೂ ಹೆಚ್ಚಾದ್ದು ಯಾವುದೂ ಇಲ್ಲ.

ಜನ್ಮದಲ್ಲಿ ಕಷ್ಟಸುಖಗಳು ಅನುಭವಿಸುವುದರಲ್ಲಿ ಅಪಜಯವಿಲ್ಲದೇ ಧನ್ಯನಾಗುವುದಕ್ಕೆ ಮುಖ್ಯ ಸಾಧನ ಮತಿಸ್ಥಿತಿಯೇ ಕಾಮಬಾಣವೆಂದು ಹೇಳಬಹುದು.

ಆದರೆ ಪ್ರಸ್ತುತ ನಾವು ಅನುಭವಿಸುವ ಚಪಲಚಿತ್ತದಲ್ಲಿ ಮತಿಸ್ಥಿತಿ ಉಂಟಾಗುವುದು ಸಾಧ್ಯ ಹೇಗೆ? ನಿಮಗೆ ಯಾವವಿಧವಾದ ಚಪಲಚಿತ್ತವಿದ್ದಾಗ್ಯೂ, ನಮ್ಮ ಆತಂಕನಿಗ್ರಹ ಮಾತ್ರೆಗಳನ್ನು ಉಪಯೋಗಿಸಿರಿ. ಈ ಮಾತ್ರೆಗಳೇ ತನ್ನ ಮೆದುಳಲ್ಲಿರುವ ದುರ್ಬಲವನ್ನು ನಿವಾರಿಸಿ, ದೃಢಚಿತ್ತವನ್ನುಂಟುಮಾಡುವುದು.

ಈ 32 ಮಾತ್ರೆಗಳುಳ್ಳ ಡಬ್ಬಿ ಒಂದಕ್ಕೆ ರೂಪಾಯಿ ಒಂದು ಮಾತ್ರ.

ಹಿಂದೂದೇಶದಲ್ಲಿಯೂ ಮತ್ತು ಇತರ ದೇಶಗಳಲ್ಲಿಯೂ ಪ್ರತಿಯೊಂದು ಗೃಹದಲ್ಲಿ ಪ್ರಯೋಜನಕರವಾದ ಒಂದು ಪುಸ್ತಕ ಇರುವುದು. ನಿಮಗೆ ಗೊತ್ತುಂಟೋ? ಆ ಪುಸ್ತಕದ ಹೆಸರೇ

"ಕಾಮಶಾಸ್ತ್ರ"

ನೀವು ಇದುವರೆವಿಗೂ ಆ ಪುಸ್ತಕದಲ್ಲಿ ವಿವರಿಸಿದ ಘನ ವಿಷಯಗಳನ್ನು ನೋಡದೇ ಇದ್ದ ಪಕ್ಷಕ್ಕೆ, ಈ ದಿನ ನಮಗೆ ಒಂದು ಕಾರ್ಡು ಬರೆದರೆ ಪೋಸ್ಟು ಚಾರ್ಜು ನಿಮಗಿಲ್ಲದನೇ, ಆ ಪುಸ್ತಕವನ್ನು ಕಳುಹಿಸುತ್ತೇವೆ.

ಆತಂಕನಿಗ್ರಹ ಔಷಧಾಲಯ,
ನಂಬ್ರ 23, ಬ್ರಾಡ್ವೆ, ಮದರಾಸು.

Agents:—
Messrs RAPHAEL & Co.,
MANGALORE.

ಹೊಸಗ್ರಂಥಗಳು!! ಬೇಗನೇ ತರಿಸಿಕೊಳ್ಳಿರಿ!!

ಕೋಕಶಾಸ್ತ್ರವು.

ರಸಿಕ ವಾಚಕ ಮಹಾಶಯರೇ,

ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ, ಸಂಪಾದಿಸಿ, ಅದರಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನೇ ಶೋಧ ಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ಲೀಷ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿನಿ, ಸ್ತ್ರೀಯು ಇವರಂತೆ ಪುರುಷರಲ್ಲಿಯ ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬುದನ್ನೂ, ಜನನೇಂದ್ರಿಯಾದಿಗಳ ವರ್ಣನೆಯನ್ನೂ, ರಜೋಧರ್ಮ, ಗರ್ಭಾಧಾನದ ವ್ಯಾಖ್ಯೆಯನ್ನೂ, ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ, ವಂಧ್ಯಾದೋಷಗಳ ಚಿಕಿತ್ಸೆಯನ್ನೂ, ಸ್ತ್ರೀಯರ ಗೂಢ ರಹಸ್ಯವನ್ನೂ, ದಂಪತಿ ಜನ್ಮಪರ್ಯಂತವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನೂ, ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನು ಒಮ್ಮೆ ಅವಲೋಕಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ.

ಇದರ ಬೆಲೆ ೧—೮—೦, ಟಪ್ಪಾಲು ಹಾಸಲು ೦—೪—೦.

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ
ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ
ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಗ್ರಾಮಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ಯಾವಂತರೂ ತಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ತಮಾನಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನು ಕುರಿತ ಲೆಕ್ಕಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಅಧಿಕಾರಿಗಳೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪೋಷಕರಿಗೆ	ರೂ. 3-0-0
ಇತರರಿಗೆ, ಪರಸ್ಥಳಕ್ಕೆ, ಪೋಸ್ಟೇಜು ಸೇರಿ	„ 2-8-0.
„ ಸ್ಥಳೀಕರಿಗೆ ...	„ 1-8-0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪತ್ರಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿಯಬಹುದು.

ಎಡಿಟರ್,
ಡಿ. ಹನುಮಂತಯ್ಯಗೌಡ,
ಅರ್ಥಸಾಧಕ ಪತ್ರಿಕೆ,
ಅಕ್ಕೀಪೇಟೆ, ಬೆಂಗಳೂರು ಸಿಟಿ

Edited, Printed & Published by V. S. Kamath at the M. T. A. SHARADA PRESS, MANGALORE.

Registered: No. M. 408.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ | ನ ಭೇಜಿರೇ ಭೀಮವಿಷೇಣ ಭೀತಿಮ್ ‖ ಸುಧಾಂ ವಿನಾ ನ ಪ್ರಯಯುರ್ವಿರಾಮಂ | ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ‖ ೧ ‖
ದೊರೆಯಲನುಪಮರತ್ನಗಳು ಸಾ | ಗರವ ಮಥಿಸಲು ಸುರರಿಗದರಿಂ | ಹರುಷವಾಯಿತೆ! ಮತ್ತೆ ವಿಶ್ವವ ಸುಡುತ ಬರುತಿರುವ ‖
ಗರಲಕವರಂಜಿದರೆ! ಸುಧೆಯನು | ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ‖ ೧ ‖

ಪುಸ್ತಕ ೧೯. ಮಂಗಳೂರು, ತಾರೀಕು ೧೨ನೇ ಶುಕ್ರವಾರ ಜೂನ್ ೧೯೨೫. ಸಂಚಿಕೆ ೨೫

The Canara Banking Corporation, Udipi, Ltd.

Head Office:—	Branch:—
Udipi	Coondapoor
Paidup Capital	1,66,165 – 9 – 11
Reserve etc	64,700 – 0 – 0

Season Deposits

Carrying Special rate of 7% up to 15th June 1925 only.

Further Particulars on Application.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಉಡುಪಿ, ಲಿಮಿಟೆಡ್.

ಹೆಡ್ ಆಫೀಸು:—ಉಡುಪಿ.	ಶಾಖೆ – ಕುಂದಾಪುರ.
ವಸೂಲಾದ ಮೂಲಧನ	1,66,165 – 9 – 11
ರಿಜರ್ವ್ ವಗೈರೆ ಫಂಡುಗಳು	64,700 – 0 – 0

ತಾ. 15—6—1925ರವರೆಗೆ ಮಾತ್ರ
ಸಾಲಿಯಾನ್ ಸೇಕಡಾ 7ರ ದರದ ಬಡ್ಡಿಯ ಮೇಲೆ
ಮುಸುಂ ಠೇವಣಾತಿಗಳನ್ನು
ಅಂಗೀಕರಿಸೋಣಾಗುತ್ತದೆ.
ಹೆಚ್ಚಿನ ಮಾಹಿತಿಗೆ ಬರಕೊಳ್ಳಿರಿ.

Office of the Corporation, Udipi, 1-3-'25 } **M. Ananda Rao,**
Secretary

Wanted Agents
FOR
Every District in South India

For Pushing Sales of Our Calenders, Xmas and New Year Cards, Blotters, Pictures and Picture Post Cards, at wholesale rates. Deposit of Rs. 100—0—0 Essential.

Apply to:—
The South Indian Advertising Agency,
13, Kilary Road,
BANGALORE CITY.

ಶುದ್ಧ ರೋಮದ ಧಾವಳಿಗಳು.

1 ಮಳ ಉದ್ದ 1¼ ಮಳ ಅಗಲ ರೂ. 1½ರಿಂದ 2 ವರೆಗೆ, 5 ಮಳ ಉದ್ದ 1¼ ಮಳ ಅಗಲ ರೂ. 1½ ರಿಂದ 5 ವರೆಗೆ, 6 ಮಳ ಉದ್ದ 1½ ಮಳ ಅಗಲ ರೂ. 2½ರಿಂದ 6 ವರೆಗೆ, 8 ಮಳ ಉದ್ದ 2 ಮಳ ಅಗಲ ರೂ. 3½ರಿಂದ 10 ವರೆಗೆ, 12 ಮಳ ಉದ್ದ 2¼ ಮಳ ಅಗಲ ರೂ. 6ರಿಂದ 12 ವರೆಗೆ, 16 ಮಳ ಉದ್ದ 2¼ ಮಳ ಅಗಲ ರೂ. 9 ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಜರ್ದಾರ್ ರೇಶ್ಮೆ ಮಡಿಗಳು, [illegible] ವಿ. ಪಿ. ಪಿ. ಮೂಲಕ ಕಳುಹಿಸಲಾಗುವುದು. [illegible]

ವಿಳಾಸ—
[illegible]

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ.

450 ಪುಟಗಳು ಎಮ್. ಗಣಪತಿರಾವ್ ಐಗಳ್ ಇವರಿಂದ ರಚಿತವಾದದ್ದು. ಕ್ರಯ ರೂ. 2-4-0

ಮಾರಾಟಕ್ಕೆ ಸಿದ್ಧವಾಗಿವೆ — **ತುಳು ಪಾಡ್ದನಗಳು** — ಮಾರಾಟಕ್ಕೆ ಸಿದ್ಧವಾಗಿವೆ.

ದೈಯ್ಯೊಂಗುಳು, ಕಲ್ಲುರ್ಟಿ—ಕಲ್ಕುಡ, ಕಣಂದೂರು ದೈಯ್ಯೊಂಗುಳು, ಮುಂಡತ್ತಾಯ, ದೊಬ್ಬಯರ್.

ಸುಲಭ ದರಗಳು — **ಶಾಲಾ ಪುಸ್ತಕಗಳು** — ರಖಂ ಕೊಂಡುಕೊಳ್ಳುವವರಿಗೆ ಯೋಗ್ಯ ಡಿಸ್ಕೌಂಟ್.

ಅಜ್ಜಿ ಕಥೆಗಳು:—ಮೂರು ಕರಡಿಗಳು; ಜೇನುಸತ್ತು ಕಾಗೆ ಬಡವಾಯಿತು; ಅರ್ಗಣೆ ಮುದ್ದೆ; ಇಲಿಗಳ ಹಬ್ಬ ಡೈ; ಅಂಗಳ ಮುಗ್ಗು; ಸಿಗಡಿ ಮೀನು ಬಡಗಿಲ್ಲ; ಗುಡುಗುಡು ಗುಮ್ಮಟ ದೇವರು; ಮೊಸಲಿನ ಕಾಳಪ್ಪ; ಒಡ್ಡನ ಓಟ; ಹೊಸ ಕನ್ನಡ ಪುಸ್ತಕ ಭಾಗ ೧; ಹೊಸ ಕನ್ನಡ ಪುಸ್ತಕ ಭಾಗ ೨; ಕನ್ನಡ ಪದ್ಯಗಳು; ಮುಗ್ಗಿ ಪುಸ್ತಕ; ಅಚಿತಕುಮಾರ; ಪದ್ಯ ರತ್ನಾವಳಿ, ಎಕ್ಸರ್‌ಸೈಜ್ ಮತ್ತು ನೋಟು ಪುಸ್ತಕಗಳು, ಕಾಪಿ ಪುಸ್ತಕಗಳು, ಡ್ರಾಯಿಂಗ್ ಪುಸ್ತಕಗಳು.

ಇತರ ಪುಸ್ತಕಗಳು:—ಸಂಕ್ಷೇಪಗೀತೆ, ಕೇತುಭಂಗ, ಹಿಂದೂ ವ್ರತವಿವೇಕ, ಚಂದ್ರಗುಪ್ತ ಚಕ್ರವರ್ತಿ, ಶ್ರೀ ಕೃಷ್ಣಸಂಧಾನ, ಪದ್ಯಪಾಠಗಳು, ಹರಿಕಥಾ ಮೃತಸಾರ ಹರಿನಾಮಸಂಕೀರ್ತನೆ ಸುಧಾಂಮೃತ ಪದ್ಯಗಳು. ಬೆಂಕಿಪೆಟ್ಟಿಗೆ ತಯಾರಿಸುವ ವಿಧಾನ, ಸಾಬೂನು ತಯಾರಿಸುವ ವಿಧಾನ, ಸ್ವರಾಜ್ಯ ಭಕ್ತೋಲ್ಲಾಸ, ಚರಕಗೀತೆ, ಕೊಂಕಣಿ ಭಾಷೆಯಲ್ಲಿ ಚಂದ್ರಹಾಸ ನಾಟಕ, ಪ್ರಹಲ್ಲಾದ ಚರಿತ್ರೆ ನಾಟಕ, ಕನ್ನಡ ಮೃಚ್ಛಕಟಿಕ ನಾಟಕ, ಚಂದ್ರಹಾಸಾಭ್ಯುದಯ ನಾಟಕ, ಕೋವಿಲನ್ ಚರಿತ್ರೆ ನಾಟಕ, ಮಾದರಿ ಉಪನ್ಯಾಸ ಭಾಗ ೧, ೨, ಮತ್ತು ೩.

ತಲೆನೋವುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು.

❁ ಅಮೃತಾಂಜನ ❁

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಸಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಕುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 3 ಆಣೆ.

ಅಮೃತಾಂಜನ ಡಿಪೊ,

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

109 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

— ರಥೋತ್ಸವ, ವಿವಾಹ ಉಪನಯನಗಳ ಸಮಯ —
ಸರ್ವರಿಗೂ ಉಡಿಗೆ ತೊಡಿಗೆಗಳು ಬೇಕಾಗುವ ಸಂದರ್ಭ.

ಯಾರು, ಯಾವುದನ್ನು ಎಲ್ಲಿ ಪಡೆಯಬೇಕೆಂಬ ಶಂಕೆಯಿಂದ ವಿಳಂಬ ಮಾಡಬೇಡಿರಿ. ಉಡಿಗೆತೊಡಿಗೆಗಳನ್ನು ಕೊಳ್ಳಾಯಿಸಿ ನಿಮಗೆ ಬೇಕಾದ ಯಥಾರ್ಥ ಮಾಹಿತಿಯನ್ನು ಕಳೆದ ಹತ್ತಿಪ್ಪತ್ತು ವರುಷಗಳಿಂದ ಪಡೆದು ನಮ್ಮಲ್ಲಿಯ ವ್ಯಾಪಾರವು ಗಿರಾಕಿಗಳಿಗೆ ಸರ್ವ ದೃಷ್ಟಿಯಿಂದಲೂ ಲಾಭಕರವಾಗಿ ಪರಿಣಮಿಸುವಂತೆ ನಮ್ಮ ಜವಳಿ ಸಂಗ್ರಹವನ್ನು ಮಾಡಿರುತ್ತೇವೆ.

ಗುರ್ಪುರ್ಕಾರ್ ಬ್ರದರ್ಸ್, ರಥಬೀದಿ, ಮಂಗಳೂರು.

ಹೆಡ್ ಆಫೀಸು:—ರಥಬೀದಿ—(ಮೊದಲು ಸುಜೀರ ನಾಗಪ್ಪನಾಯಕ್, ಎಂಡ್ ಕೊ, ಇದ್ದಲ್ಲಿ; ಆಜಿಜುದ್ದೀನ್ ರಸ್ತೆಗೆ ತಿರುಗುವಲ್ಲಿ) ಮಂಗಳೂರು.

ಬ್ರೆಂಚ್ ಆಫೀಸು:—ರಥಬೀದಿ—(ಹಳೇ ತಾಲೂಕು ಕಚೇರಿಯ ಪಟಾರಕ್ಕೆ ಸಮೀಪವಿರುವ ಮಳಿಗೆ) ಮಂಗಳೂರು.

ಈ ದೇಶದ ಪ್ರಖ್ಯಾತಪಟ್ಟ ನೇಯಿಗೆಯ ಕೇಂದ್ರಸ್ಥಳಗಳಾದ—ಬನಾರಿಸ್, ಪೂನಾ, ಅಹಮ್ಮದಾಬಾದ್, ಸೂರತ್, ಬೆಂಗಳೂರು, ಧರ್ಮಾವರಮ್, ಕಂಜೀವರಮ್, ಕೊಯಮುತ್ತೂರು, ಮಧುರೆ, ತಂಜಾವೂರು, ಶಂಭುಕೋಣ, ಆರ್ಣಿ, ಪಾಂಡಿಚೆರಿ, ಹುಬ್ಬಳ್ಳಿ, ಇಳ್ಕಲ್, ಗದಗ, ಮದ್ರಾಸು ಈ ಪ್ರಾಂತ್ಯಗಳಲ್ಲಿ ತಯ್ಯಾರಾದ

ಜರಿಸೀರೆಗಳು, ದುಪ್ಪಟ್ಟಾ, ಜರಿಶಾಲು, ಪೇಟ್ಸ್, ರೇಶ್ಮೆ ಸೀರೆಗಳು, ಅರಲಿಪೇಟೆ ಸೀರೆಗಳು, ಜಾರ್ಜೆಟ್ ರೇಶ್ಮೆ ಸೀರೆಗಳು, [illegible] ಸೀರೆಗಳು, ರೇಶ್ಮೆ ಮಡಿಗಳು, ನಿತ್ಯ ಉಪಯೋಗದ ಸೀರೆಗಳು ಟ್ವೀಡ್ಸ್, ಕರ್ನಾಟಕ ಮಿಲ್‌ಗಳ ವ ಇತರ ಮಿಲ್‌ಗಳ ಕೋಟಿಂಗ್ ಶರ್ಟಿಂಗ್.

ಕೈರಾಟೆಯಲ್ಲಿ ತಯಾರಿಸಿದ ನೂಲಿನಿಂದ ಮಾಡಿದ—

ಖದ್ದರ್ ಶರ್ಟಿಂಗ್, ಖದ್ದರ್ ಕೋಟಿಂಗ್, ಖದ್ದರ್ ಟೋಪಿ, ಖದ್ದರ್ ಪೇಟ್ಸ್, ಅಂಗವಸ್ತ್ರ, [illegible]—
ಮುಸಲ್ಮಾನರಿಗೆ ಬೇಕಾದ ನಮೂನೆಯ ಅಂಗಿ ಹೊಲಿಗೆಯ ವಸ್ತ್ರ—

ಎಲ್ಲ ಸಂಗ್ರಹವೂ ನಮ್ಮ ಪ್ರೊಪ್ರೈಟರರಾದ [illegible] ಸಂಗ್ರಹಿಸಿ ತಂದಿರುತ್ತಾರೆ.

ಠೇವು:—ಪ್ರತಿ ರೂಪಾಯಿ 50ಕ್ಕೆ [illegible] 6¼%, ರೂ. 50ರಿಂದ 250ರವರೆಗೆ 10%, ರೂ. 250 ರಿಂದ 1000ಕ್ಕೆ 12½% [illegible]

ಆರ್. ಮಾರ್ಟಿನ್ನರ

ಜ್ವರದ ಗುಳಿಗೆಗಳು.

ಸುಲಭ ಸ್ವೇದನಕಾರಿಯಾದ ಈ ಘುಟಿಕೆಗಳು ಚಳಿಜ್ವರದ ವಿಷ ದಾರ್ಥಗಳನ್ನು ತಟ್ಟನೆ ನಿರ್ಮೂಲಪಡಿಸಿ, ವ್ಯಾಧಿಗಳನ್ನು ಸಂಪೂರ್ಣ ನಾಶಪಡಿಸಿ, ಮಲೇರಿಯಾ ಜ್ವರ, ಚಳಿಜ್ವರ, ಬಾರಿಜ್ವರ, ಮತ್ತು ಆಗಾಗ್ಗೆ ಬಿಟ್ಟುಕೊಂಡು ಬರುವ ಇತರ ಜ್ವರಗಳ ಬಾಧೆಯಿಂದ ಗುಣಪಡಿಸುವವು.

ತಟ್ಟನೆ ವಾಸಿಪಡಿಸುವುದಕ್ಕೆ ಹತ್ತಾರುಗಳಲ್ಲಿ ಪ್ರಸಿದ್ಧತೆಯನ್ನು ಹೊಂದಿವೆ, ಅತಿ ಬಿಟ್ಟುಬಿಟ್ಟ ಅನೇಕ ಸಂದರ್ಭಗಳಲ್ಲಿ ಗುಣಪಡಿಸಿದವುಗಳಾಗಿರುತ್ತವೆ.

ಇವುಗಳು ಗಿರಣಿಗಳಲ್ಲಿಯೂ ಕಾರ್ಖಾನೆಗಳಲ್ಲಿಯೂ ವಿಶೇಷವಾಗಿ ಉಪಯೋಗಿಸಲ್ಪಡುವುವು. ಸಾಮಾನ್ಯವಾಗಿ ಹಿಂದೂಸ್ಥಾನದಲ್ಲಿ ಎಲ್ಲಾ ತೋಟಗಾರರಿಂದ ಉಪಯೋಗಿಸಲ್ಪಡುವುವು. ಅಲ್ಲದೆ ದಿಂಗತ ವಿಶ್ರಾಂತಿ ವಾದ ಕೀರ್ತಿಯನ್ನು ಕೂಡ ಸಂಪಾದಿಸಿರುವುವು ಕಠಿಣ ಜ್ವರವು ತಟ್ಟನೆ ಇಳಿಯಬೇಕಾದರೆ ಆರ್ ಮಾರ್ಟಿನರ ಎಗ್ಯೂ ಮಿಕ್ಸರ್ ಒಡನೆ ಇದನ್ನು ಸೇವಿಸಬೇಕು. ಈ ಇವೆರಡು ಅಮೃತ ಶಕ್ತಿಯುಳ್ಳ ಔಷಧಿಗಳು ಪ್ರತಿಯೊಂದು ಕುಟುಂಬದ ಮನೆಯಲ್ಲಿಟ್ಟುಕೊಳ್ಳಲು ಯೋಗ್ಯ ವಸ್ತುಗಳಾಗಿವೆ ಪ್ರತಿಯೊಂದು ಬಾಟ್ಲಿಯಲ್ಲಿ 40 ಮಾತ್ರೆಗಳಿರುವ ಬಾಟ್ಲಿ 1ಕ್ಕೆ 1-8-0.

100 ಮಾತ್ರೆಗಳಿರುವ ಬಾಟ್ಲಿ 1ಕ್ಕೆ 3-8-0.

ಆರ್. ಮಾರ್ಟಿನ್ನರ ಎಗ್ಯೂಮಿಕ್ಸರ್.

ಇದು ಜ್ವರ, ಶೀತಜ್ವರ ಮಲೇರಿಯಾ, ಬಾರಿಜ್ವರ, ಸನ್ನಿಪಾತ ಪಟ್ಟೆ ವಾಯುವಿನಿಂದುಂಟಾದ ರೋಗ ಇವೇ ಮೊದಲಾದ ಎಲ್ಲಾ ತರದ ಜ್ವರಗಳನ್ನೂ ಕೂಡಲೇ ನಾಶಮಾಡುತ್ತದೆ. ಎಲುಬುಗಳಲ್ಲಿ ಹರಡಿಕೊಂಡಿರುವ ಜ್ವರವನ್ನೂ ಸಹ ನಾಶಮಾಡುವುದಲ್ಲದೆ, ಇದು ಸಿಹಿಯಾಗಿರುವುದ್ದರಿಂದ ಸಣ್ಣ ಕೂಸುಗಳು ಸಹ ಕುಡಿಯಲಿಕ್ಕೆ ಇಷ್ಟಪಡುತ್ತವೆ. ಅನೇಕ ನಜವಿದ್ವಾಂಸ ವೈದ್ಯರಿಂದ ಗುಣಮಾಡುವುದಕ್ಕಾಗದ ಜ್ವರವನ್ನು ಈ ಎರಡೇ ಎರಡು ಬಾಟ್ಲಿಗಳ ಸೇವನೆಯಿಂದ ಹುಷಾರಾಗಿದೆ.

ಬಾಟ್ಲಿ 1ಕ್ಕೆ ರೂ. 0-13-0.

ಆರ್. ಮಾರ್ಟಿನ್ನರ ಮೂಲವ್ಯಾಧಿ ಮುಲಾಮು.

ಮನುಷ್ಯನಿಗೆ ಮೂಲವ್ಯಾಧಿ ಆದಾಗ, ಬಹಳ ಸಲ ಮೂತ್ರಶಂಕೆಯಾಗುವಿಕೆ, ಮರ್ಮಸ್ಥಾನದಲ್ಲಿ ಉರಿಯುವುದು, ಮಲಬದ್ಧತೆ ಇವೇ ಮುಂತಾದರಿಂದ ವಹಿಪಡುತ್ತಾನೆ. ಈ ಔಷಧದ ಒಂದೇ ಒಂದು ಬಾಟ್ಲಿಯ ಉಪಯೋಗದಿಂದ, ರಕ್ತ ಸುರಿಯುವ ಮೂಲವ್ಯಾಧಿ, ಕಂಕುಳಲ್ಲಿ ನೋಯುವ ಮೂಲವ್ಯಾಧಿ ಮತ್ತು ಎಂಥ ತರಹದ ಕಠಿಣವಾದ ಮೂಲವ್ಯಾಧಿಯ್ಯಾದರದ ಕೂಡಲೇ ವಾಸಿಯಾಗುತ್ತದೆ. ಇದು ಒಳ್ಳೇ ಔಷಧಗಳಿಂದ ತಯಾರಿಸಲ್ಪಟ್ಟು ತೆಗೆದುಕೊಳ್ಳುವವರಿಗೆ ಏನೊಂದೂ ನೋವನ್ನೂ ಕೊಡದೆ ತಂಪಾಗಿ ಮಾಡುತ್ತದೆ. ಬಾಟ್ಲಿ 1ರ ದರ ರೂ. 1-8-0 ಮಾತ್ರ.

ವಿಳಾಸ:—ಆರ್. ಡಿ. ಕಟ್ಲೆ ಮತ್ತು ಕಂಪೆನಿ,
ನಂಬ್ರ ಬಿ. ಫ್ರೆಯರ್ ರೋಡ್,
ಸಾಂಜ ವರ್ತಮಾನ ಪ್ರೆಸ್,
ಟೋಡಿವಾಲಾ ಬಿಲ್ಡಿಂಗ ಎದುರುಗಡೆ, ಫೋರ್ಟ ಮುಂಬಯಿ.

R. D. Kately & Co.
No. B. Frere Road,
Opposit Sanjvertaman Press,
Todivala Building, FORT BOMBAY

ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ಮೂರನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್. ಗಣಪತಿರಾವ್ ಐಗಳ್—ಗ್ರಂಥಕರ್ತರು.

ಮನೋರಂಜಕ ಚಿತ್ರಗಳೂ ಇವೆ.

ಇದರಲ್ಲಿ ಸಾವಿತ್ರಿ, ಶಕುಂತಲಾ, ಕೃಷ್ಣಾಕುಮಾರಿ, ಪದ್ಮಿನಿ, ಜೋನ್ ಒಫ್ ಆರ್ಕ, ಫ್ಲೋರೆನ್ಸನಾಯಿಟಿಂಗೇಲ ಪರಶುರಾಮ, ಭೂತಾಳಪಾಂಡ್ಯ, ಕಾರ್ಕಳ ಗೋಮಟೇಶ್ವರ ಮತ್ತು ಭೈರವರಾಜ, ಮೂಡಬಿದ್ರೆಯ ಚೌಟರು, ನಂದಾವರ ಬಂಗರು, ಕಾರ್ಕಳ ರಾಮಸಮುದ್ರ ಮತ್ತು ರಾಮನಾಥ ಒಡೆಯರ ಅಣೆಕಟ್ಟು, ಗುರುಪುರ ಜಂಗಮ ಮಠ, ಕಲ್ಯಾಣಪ್ಪನ ಕಾಟಕಾಯಿ, ಗುರುವಾಯನಕೆರೆ, ಜಮಾಲಾಬಾದುಕೋಟೆ, ಸುಲ್ತಾನಬತ್ತೇರಿ, ಈದಗಾಪ್ರಾರ್ಥನಾಮಂದಿರ, ಸೇಂಟಮೇರಿ ದ್ವೀಪಗಳು ಮತ್ತು ದರಿಯಾಬಾದರಗಡ, ಕೊರಗರು, ಕೊಡಗರು, ತೋಡರು, ರಜಪೂತರು, ಕಂದಾರಿಗಳು ಘುರ್ಖಾ ಜನರು, ಅರಬಿಯರು. ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ಮೂರನೇ ದರ್ಜೆಯ ಮಕ್ಕಳಿಗೆ ಉಪಯುಕ್ತವಾಗಿದೆ. ಕ್ರಯ 6 ಆಣೆ.

ಪುಸ್ತಕ ದೊರಕುವ ವಿಳಾಸ:—

ಶಾರದಾ ಛಾಪಖಾನೆ, ಮಂಗಳೂರು. | ಗಣಪತಿರಾವ್, ಐಗಳ್. ಮಂಜೇಶ್ವರ

ಡಾಕ್ಟರುಗಳು ಭಿನ್ನಾಭಿಪ್ರಾಯಪಡುವಾಗ್ಯೆ ತೀರ್ಮಾನಿಸುವದು ಯಾರು?

ಅಂಥಾ ಸಂದರ್ಭಗಳಲ್ಲಿ ಡೆಂಗ್ಯೂ ಮುಂತಾದ ಜ್ವರಗಳನ್ನು ನಿವಾರಿಸುವಂಥಾ "ಬಾಟ್ಲಿವಾಲರ ಏಗ್ಯೂಮಿಕ್ಸ್ಚರ್"ನ್ನು ಸರಾಗವಾಗಿಯೂ, ಮತ್ತು ಜ್ವರಗಳನ್ನು ಖಂಡಿತವಾಗಿ ನಿಲ್ಲಿಸುವಂಥಾದ್ದೂ, ಎಲ್ಲಾ ತರದ ತಲೆನೋವುಗಳನ್ನು ಹೋಗಲಾಡಿಸುವಂಥಾದ್ದೂ ಆದ "ಬಾಟ್ಲಿವಾಲರ ಏಗ್ಯೂಪಿಲ್ಸ್" ಇದನ್ನು ಉಪಯೋಗಿಸಿರಿ.

ಐ. ಎಮ್. ಎಸ್. ಡಾಕ್ಟರುಗಳಿಂದ ಶಿಫಾರಸು ಮಾಡಲ್ಪಟ್ಟಿದ್ದು. ಇದರ ಉಪಯೋಗದಿಂದ ಹೃದಯದ ಮೇಲೆ ಯಾವದೊಂದೂ ಬಾಧಕವಿಲ್ಲ. ಅರ್ಧ ಶತಮಾನದಿಂದ ಹಿಂದೂಸ್ಥಾನ, ಬರ್ಮಾ, ಸಿಲೋನ್, ಆಫ್ರಿಕಾ ಇವುಗಳಲ್ಲಿ ಪ್ರಖ್ಯಾತಪಟ್ಟಿದ್ದಾಗಿರುತ್ತದೆ.

ಅನೇಕ ಹಿಂದೀ ಪ್ರದರ್ಶನಗಳಲ್ಲಿ ಬೆಳ್ಳಿ ಮತ್ತು ಬಂಗಾರದ ಪದಕಗಳನ್ನು ಪಡೆದಿರುತ್ತೆ. ಚಾಲ್ತಿ ಪಾತ್ಯದಂತಿದ್ದು ಮನಾರ್ರಿಗಳೂ ಕೂಡ ಅವರ ಮೇಲೆ ಹಣವನ್ನು ಮುಂಗಡವಾಗಿ ಕೊಡುತ್ತಾರೆ. ಬಡ ಮತ್ತು ಮಧ್ಯಮ ತರಗತಿಯ ಜನರಿಗೆ ವರಪ್ರದಾನವಾಗಿದ್ದು ಸಂಚಾರ, ಪ್ರಯಾಣ, ದೇಶಾಟನೆಗಳ ಸಮಯದಲ್ಲಿ ಹತ್ತಿರದಲ್ಲಿರಿಸಿಕೊಳ್ಳದಾಗಿರುತ್ತದೆ.

ಬಾಟ್ಲಿವಾಲರ ಬಾಲಾಮೃತ ಅಥವಾ ಟೊನಿಕ್ ಸಿರಪ್.

ಕೆಮ್ಮನ್ನು ಹೋಗಲಾಡಿಸಿ, ಎದೆನೋವನ್ನು ಶಾಂತಗೊಳಿಸಿ, ಜ್ವರವನ್ನು ಉಪಶಮನಿಸಿ, ನಿದ್ರಾಭಂಗವನ್ನು ಕಡಿಮೆ ಮಾಡಿ ಧಾತುವರ್ಧನವನ್ನು ಮಾಡುವದರಲ್ಲಿ ಅತ್ಯುತ್ತಮವಾಗಿರುತ್ತದೆ. ಕಫವನ್ನು ಬೇಗನೆ ಹೊರಬೀಳುವಂತೆ ಮಾಡುವುದಲ್ಲದೆ ಅದೇ ಸಮಯದಲ್ಲಿ ಒಳ್ಳೇ ಜೀರ್ಣವನ್ನೂ ಉಂಟುಮಾಡುವುದು. ದರ ಮೊದಲಾದ ಮಾಹಿತಿಯನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಕಾರಿನಪತ್ತೆ:-CAWASHAPUR, BOMBAY.

Dr. H. L. Batliwala & Co., Ltd.,
Sayani Road, P. O. Cadell Road, Bombay. No. 14.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ. | ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.,
Sayani Road, P. O. Cadell Road, Bombay. No. 14.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ [illegible]ದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟ. ಖ. 9 ಆಣೆ.

ನಮ್ಮ ವಿಳಾಸ:— ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಏಜಂಟರು:— ಡಿ. ಊಲನ್ ಮಾರ್ಟ್, ಮಂಗಳೂರು.

OUR RECENT IMPORT IN WRIST WATCHES | Have you used anyone of these Watches? | **SEND YOUR ORDER NOW ALL GUARANTEED.**

Fashionable wrist wrist Lady's size. Reliable movement Guaranteed.



No. 368.

Handy to wear and looks beautiful. Gives punctual time and with strong movement.

Nickel case Rs. 8—0

High-class Radium dial watch watch with Roman figures.



No. 367.

Can be seen in dark nights. Well fitted with best movement and strong to use. Used by one and all.

Silver case Rs. 9—0.

Radio light wrist watch.



No. 372.

Fitted with the best mechanism and guaranteed to work and keep perfect time for a long time.

Nickel case Rs. 7—8
Electro rolled-gold „ 9—0

(N. B. In addition to the above, we have good number of varieties of fancy wrist watches, pocket watches. Please write for a descriptive catalogue, which will be sent free)

WHOLESALE IMPORTERS

PETER WATCH COY.,
POST BOX 27, MADRAS

ಶಾಲಿವಾಹನಶಕ ೧೮೪೭ನೆಯ ಕ್ರೋಧನ ಸಂವತ್ಸರದ ಜ್ಯೇಷ್ಠ ಬ| ೧೪ ಶನಿವಾರದಿಂದ ಕ್ರೋಧನ ಸಂವತ್ಸರದ ಆಷಾಢ ಶು| ೫ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೫ನೆಯ ವೃಷಭ ಮೇಷ.)

ತಾರೀಖು	ವಾರ	ತಿ.	ಘಳಿಗೆ	ನಕ್ಷತ್ರ	ಘಳಿಗೆ	ಸೌರಮಾಸ	ಸೂರ್ಯ ಉ.	ಸೂರ್ಯ ಅಸ್ತ.
20	ಶನಿ	೧೪	೧೩. ೩೩	ರೋಹಿಣೀ	೧೨	೬	6. 7	6.57
21	ರವಿ	●	೧೬. ೫೮	ಮೃಗಶಿರಾ	೧೭. ೪೭	೭	6. 7	6 57
22	ಸೋಮ	೧	೫೪. ೧೭	ಆರ್ದ್ರಾ	೨೪. ೦	೮	6. 7	6 57
23	ಕುಜ	೨	೨೭. ೦	ಪುನರ್ವಸು	೩೦. ೧೬	೯	6. 7	6.57
24	ಬುಧ	೩	೩೦. ೪೬	ಪುಷ್ಯ	೩೬. ೩೩	೧೦	6. 8	6.58
25	ಗುರು	೪	೩೬. ೦	ಆಶ್ಲೇಷಾ	೪೩. ೧೬	೧೧	6. 8	6.58
26	ಶುಕ್ರ	೫	೪೧. ೩೦	ಮಘಾ	೪೭. ೧೪	೧೨	6. 8	6 58

ಮಂಗಳೂರಿನ ವಾಯುಸ್ಥಿತಿ.

ತಾರೀಖು Date	Temperature. ಉಷ್ಣ (ತಾಪ) Maximum ಹೆಚ್ಚಾದದ್ದು	Minimum ಕಡಿಮೆ	Rainfall. ಮಳೆ ದಿನದ ಮಳೆ	ಒಟ್ಟು ಮಳೆ.
12	92—4	77—5	—	—
13	93—3	76—7	—	—
14	92—1	75—3	0—82	—
15	90—8	74—2	1—16	—
16	89—8	75—3	—	—
17	91—2	76—3	0—04	—
18	89—0	73—2	0—48	—

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ. ಆ.	ವರೆಗೆ ರೂ. ಆ.
ಹೊಸ ಮಸ್ಕತಿ	8—8	9— 4
ಹೊಸ ಗುಡ್ಡು ...	7-14-9	8—4
ಹೊಸ ರಾಶಿ ...	7- 4	7—12
ಅವ್ವಲ್ ಬೆಳ್ತಿಗೆ ...	8—4	9 - 8
ಗುಡ್ಡು ಬೆಳ್ತಿಗೆ ...	7—12	8 - 4
ರಂಗೂನು ಬೆಳ್ತಿಗೆ ಗೋಣಿ ೧ ...	13- 0	13 - 8
ಗೋಧಿ ಗೋಣಿ ೧ಕ್ಕೆ ...	18- 8	22 - 0
ಹುರುಳಿಗೋಣಿ ೧ಕ್ಕೆ ...	9- 8	10 - 0
ತೊಗರಿಗೋಣಿ ೧ಕ್ಕೆ ...	12-0	13 - 0
ಕಡಲೆಗೋಣಿ ೧ಕ್ಕೆ ...	12-8	13 - 0
ತೊಗರಿಬೇಳೆ ಗೋಣಿ ೧ಕ್ಕೆ ...	13-8	21 - 0
ಉದ್ದು ಗೋಣಿ ೧ಕ್ಕೆ ...	14- 0	14 8
ಹೆಸರುಗೋಣಿ ೧ಕ್ಕೆ ...	14 - 0	15 - 0
ಊರು ಬೆಲ್ಲ ಖಂಡಿ ೧ಕ್ಕೆ ...	—	85 - 0
ಉಪ್ಪು ಗೋಣಿ ೧ಕ್ಕೆ ...	4- 4	4-10
ಕೊಬ್ರಿ ಖಂಡಿ ೧ಕ್ಕೆ ...	115-0	120 - 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	32- 8	36 - 0
ಎಳ್ಳಿಂಡಿ ಖಂಡಿ ೧ಕ್ಕೆ ...	35 -0	42 - 8
ಕೊಬ್ರಿ ಎಣ್ಣೆ ಮಣ ೧ಕ್ಕೆ ...	8—8	9 - 8
ಎಳ್ಳೆಣ್ಣೆ ಮಣ ೧ಕ್ಕೆ ...	8- 0	11—0
ಚಿಮಣಿ ಎಣ್ಣೆ ಪೆಟ್ಟಿಗೆ ೧ಕ್ಕೆ ...	8-15-6	—
ಮೋರಿಸ್ ಸಕ್ಕರೆ ಮಣ ೧ಕ್ಕೆ ...	5 - 0	5 - 2
ಊರ ಮೆಣಸಿನಕಾಯಿ ಮಣ ೧ಕ್ಕೆ ...	7- 0	—
ಸಾಸಿವೆ ಮುಡಿ ೧ಕ್ಕೆ ...	8- 12	—
ಕೊತ್ತಂಬರಿ ಮುಡಿ ೧ಕ್ಕೆ ...	3- 8	4—4
ಕಾಫಿ ಖಂಡಿ ೧ಕ್ಕೆ ...	345- 0	400—0
ಬಿಳಿಗೋಟು ಅಡಿಕೆ ಖಂಡಿ ೧ಕ್ಕೆ ಹಳತು ...	235- 0	245—0
„ ಹೊಸ ಅಡಿಕೆ	240 — 0	240 — 0
ಕಾಳುಮೆಣಸು ಖಂಡಿ ೧ಕ್ಕೆ ...	155—0	160—0
ಯಾಲಕ್ಕಿ ಮಣ ೧ಕ್ಕೆ ...	80- 0	90- 0
ಗೇರುಬೀಜ ಮುಡಿ ೧ಕ್ಕೆ ...	2—10	2 13
ಕಬ್ಬಿಣ ಖಂಡಿ ೧ಕ್ಕೆ ...	45- 0	65 — 0
ತಾಮ್ರ ತಗಡು ಮಣ ೧ಕ್ಕೆ ...	17-12	23 — 0
ತಾಮ್ರ ಪಾತ್ರೆಗಳು ಮಣ ೧ಕ್ಕೆ ...	26- 8	—
[illegible] ...	22 - 0	
ಹಿತ್ತಾಳೆ ತಗಡು ಮಣ ೧ಕ್ಕೆ ...	18- 8	
[illegible]	13—12	

The Canara Public Conveyance Co., Ltd, Mangalore.

(ESTABLISHED 1914.)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು
- ಕರಾವಳಿ ಮಾರ್ಗವಾಗಿ — ಮುಲ್ಕಿ — ಉಡ್ಪಿ — ಕುಂದಾಪುರ — ಗಂಗೊಳ್ಳಿ — ಬೈಂದೂರು
- ಬಂಟ್ವಾಳ — ಬೆಳ್ತಂಗಡಿ — ಚಾರ್ಮಾಡಿ.
- ಪಾಣೆಮಂಗಳೂರು — ಪುತ್ತೂರು — ಸುಳ್ಯ — ಮಡಿಕೇರಿ.
- ಪುತ್ತೂರು — ಉಪ್ಪಿನಂಗಡಿ — ಬೆಳ್ತಂಗಡಿ.
- ಮಡಿಕೇರಿ — ಪುತ್ತೂರು — ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರದಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು — ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು — ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ — ಮದ್ರಾಸು — ಕಡೂರು — ಚಿಕ್ಕಮಗಳೂರು — ಚಾರ್ಮಾಡಿ — ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು — ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯೆ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd., Mangalore. S K.

ಉಚಿತ! ಬಿಟ್ಟಿ!! ಪುಗಸಟ್ಟೆ!!!

ವೈದ್ಯವಿದ್ಯ
NO PRICE NO POSTAGE

ಎಂಬ ಈ ಪುಸ್ತಕದಲ್ಲಿ ಆಯುರ್ವೇದ ಶಾಸ್ತ್ರದಲ್ಲಿ ಸ್ತ್ರೀಪುರುಷರು ಆರೋಗ್ಯದೃಢಕಾಯರಾಗಿ ಆರೋಗ್ಯದಿಂದ ಕೂಡಿದ ಸಂತಾನಗಳನ್ನು ಪಡೆದು ಸತಿಪತಿಯರು ಅನ್ಯೋನ್ಯವಾಗಿ ಅನುರಾಗವುಳ್ಳವರಾಗಿ ಸುಖದಿಂದಲೂ ಸಂತೋಷದಿಂದಲೂ ಸಂಸಾರಯಾತ್ರೆಯನ್ನು ಮಾಡಲು ಅತ್ಯಂತ ಉಪಯುಕ್ತವಾದ ವಿಷಯಗಳು ಅಲ್ಲಲ್ಲಿ ಹೇಳಲ್ಪಟ್ಟಿರುವುದನ್ನು ಒಂದಾಗಿ ಕ್ರೋಡೀಕರಿಸಿ ಅಜ್ಞಾನದಿಂದಲೂ ಸಂಕಷ್ಟದಿಂದಲೂ ನರಳುತ್ತಿರುವ ಸಂಸಾರಿಗಳನ್ನುದ್ಧಾರಮಾಡುವ ಸಲುವಾಗಿ ಈ ಪುಸ್ತಕವನ್ನು ಕ್ರಯವೂ ಅಂಚೇ ಹಾಸಲೂ ಇಲ್ಲದೆ ಬೇಡಿದವರಿಗೆ ಸರ್ವತ್ರ ಉಚಿತವಾಗಿ ಕಳುಹಿಸುತ್ತೇವೆ. ಹೆಚ್ಚು ಮಾಹಿತಿಗೆ ಪತ್ರ ಬರೆಯಿರಿ.

ರಾಜವೈದ್ಯ, ನಾರಾಯಣಜಿ ಕೇಶವಜಿ,
57, ಬಂದರ್ ಸ್ಟ್ರೀಟ್, ಜಿ. ಟಿ. ಮದ್ರಾಸ್

ಸಾರಸ್ವತ.

ಕನ್ನಡ ಮತ್ತು ಕೊಂಕಣಿ ಭಾಷೆಗಳಲ್ಲಿ ಕಳೆದ ವಿಜಯದಶಮಿಾ ದಿನದಿಂದ ಪ್ರತಿ ದಶಮಿಗೆ ಹೊರಡುವ ಪತ್ರಿಕೆ.

ವಿ. ಎಸ್. ಕಾಮತ್,
ಮೂಲ್ಕಿ, ವಾಮನ ಕುಡುವ } ಸಂಪಾದಕರು.

ಮತಸಂಸ್ಥೆ ಮತ್ತು ಸಮಾಜಕ್ಕೆ ಸಂಬಂಧಪಟ್ಟ ಇತರ ಸಂಸ್ಥೆಗಳ ಸುಸಂಘಟನ.

ಸಮಾಜದೊಳಗೆ ಅನ್ಯೋನ್ಯ ಸಾಧನೆ.

ಸ್ತ್ರೀಸಮಾಜಕ್ಕೆ ಉಪಯುಕ್ತವಾದ ವಿಷಯಗಳ ನಿರೂಪಣ

ಮತಭಾವನೆಗಳ ಉಜ್ಜೀವನ ಇತ್ಯಾದಿ ಉದ್ದೇಶಗಳಿಂದ ಈ ಪತ್ರಿಕೆಯು ಹೊರಡಿಸಲ್ಪಡುವುದು. ಸಾರಸ್ವತ ಸಮಾಜವು ಇದಕ್ಕೆ ಪ್ರೋತ್ಸಾಹವನ್ನೀಯಬೇಕಾಗಿ ಪ್ರಾರ್ಥನೆ.

ಚಂದಾಹಣ ಅಂಚೆವೆಚ್ಚ ಕೂಡಾ ರೂ. ೧—೪—೦. ಪೋಷಕರು ರೂ. ೧೦—೦—೦. ಸಹಾಯಕರು ರೂ. ೫—೦—೦. ಮಾ|| ಸಂಚಿಕೆಯನ್ನು ಟಪ್ಪಾಲು ಖರ್ಚಿಗಾಗಿ ಅರ್ಧಾಣೆ ಸ್ಟಾಂಪು ಕಳುಹಿಸುವವರಿಗೆ ಉಚಿತವಾಗಿ ಕಳುಹಿಸುವೆವು.

ಕನ್ನಡ ನಾಡಿನಲ್ಲಿ ಪ್ರತಿ ಕಡೆಯಲ್ಲಿಯೂ ಚಾತಮಿದಾರರು ಬೇಕು.

ಎಲ್ಲಾ ಪತ್ರವ್ಯವಹಾರಗಳನ್ನು ಕೆಳಗಿನ ವಿಳಾಸಕ್ಕೆ ನಡೆಸಬೇಕು.

ಯು. ನಾರಾಯಣನಾಯ್ಕ, ಕಾರ್ಯದರ್ಶಿ,
ಸಾರಸ್ವತ, [illegible]

ಕನ್ನಡಿಗರೇ! **ವಸಂತ.** ಕನ್ನಡಿಗರೆ!

ಈಗಾಗಲೇ ಎರಡನೇ ಸಂಪುಟವು ಆರಂಭಿಸಲಿದೆ.

ಇತಿಹಾಸನಿಧಿ ಎಂದರೆ	ವಸಂತ
ಸಮಾಜಸುಧಾರಕನೆಂದರೆ	ವಸಂತ
ಶೃಂಗಾರಿಕೆಯ ಸಾಮ್ರಾಜ್ಯವೆಂದರೆ	ವಸಂತ
ಕರ್ನಾಟಕ ಭಾಷಾಸೇವಕನೆಂದರೆ	ವಸಂತ
ದೇಶವಿದೇಶ ಬಂಧುವೆಂದರೆ	ವಸಂತ
ಕಾದಂಬರಿಗಳ ಭಂಡಾರವೆಂದರೆ	ವಸಂತ
ಚಿತ್ತಾಕರ್ಷ ಚಿತ್ರಶಾಲೆಯೆಂದರೆ	ವಸಂತ
ದೇಶಭಕ್ತನೆಂದರೆ	ವಸಂತ

ಇಂತಹ ವಸಂತನು ಯಾರಿಗೆ ಬೇಕು,
ಯಾರಿಗೆ ಬೇಡ?

48 (ಕ್ರೌನ್ ¼ ಫುಟ ಸ್ಯಾಜಿನ) ಪುಟಗಳನ್ನು ಒಳಗೊಂಡ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3—4—0 ಮಾತ್ರ.

ವ್ಯವಸ್ಥಾಪಕ,
ವಸಂತ ಕಾರ್ಯಾಲಯ,
ಕುಂದಾಪುರ, ದಕ್ಷಿಣ ಕನ್ನಡ

ಬಂದು ನೋಡಿರಿ! ತಿಂದು ನೋಡಿರಿ!
ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ
ಪದಕವನ್ನು
ಬಹುಮಾನವಾಗಿ ಪಡೆದಿರುವ
ಎಸ್. ಪಿ. ಆಚಾರ್ಯ
ಇವರಿಂದ ತಯಾರಿಸಲ್ಪಟ್ಟ
ಉಪ್ಪಿನಕಾಯಿಗಳನ್ನು
ಬಂದು ನೋಡಿರಿ! ತಿಂದು ನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ, ಶುಂಠಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನ್ನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ
ಬಂದು ನೋಡಿರಿ! ತಿಂದು ನೋಡಿರಿ!

ಇಂಡಿಯನ್ ಸ್ವೀಟ್ ಮಾರ್ಟ್.
ಮಸೋಲ್ಸಾಸಿ ಕಾಫಿ ಕ್ಲಬ್. ಮಾರ್ಕೆಟು ರೋಡು, ಮಂಗಳೂರು. ಅಥವಾ 'ಸದಾನಂದ ಕಾಫಿ ಕ್ಲಬ್', ರಥಬೀದಿ, ಮಂಗಳೂರು.

ದಕ್ಷಿಣ ಕನ್ನಡ ಜಿಲ್ಲೆಯ
ಪ್ರಾಚೀನ ಇತಿಹಾಸ
450 ಪುಟಗಳು ಕ್ರಯ ರೂ. 2—4—0
ಪುಸ್ತಕಗಳು ಸಿಕ್ಕುವ ಸ್ಥಾನ:—
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

— ಸಿರಿಗನ್ನಡಂಗೆಲ್ಗೆ —
ಶ್ರೀ ಶಂಕರ ಕರ್ನಾಟಕ ಪುಸ್ತಕ ಭಂಡಾರವೂ
ಶ್ರೀ ವಿದ್ಯಾರಣ್ಯ ಪ್ರಕಾಶಕ ಸಂಸ್ಥೆಯೂ,
ಮಾಳಮಡ್ಡಿ, ಧಾರವಾಡ.

ಕನ್ನಡಿಗರಿಗೆ ಬೇಕಾಗುವ ಎಲ್ಲಾ ತರದ ಕನ್ನಡ ಪುಸ್ತಕಗಳು ನಮ್ಮಲ್ಲಿ ಯೋಗ್ಯ ಬೆಲೆಗೆ ದೊರೆಯುವವು. ವಿದ್ಯಾರಣ್ಯ ಪುಸ್ತಕ ಮಾಲೆಯ ಕೆಳಗಿನ ೧, ೨, ೩, ಪುಸ್ತಕಗಳು ಚಂದಾದಾರರಾಗುವವರಿಗೆ ಅಂಚೆ ವೆಚ್ಚ ಸೇರಿ ೫ ರೂ. ೬ ಆಣೆಗೆ ದೊರೆಯುವವು. ಮುಂದೆ ಹೊರ ಬೀಳುವ ಮಾಲೆಯ ಪುಸ್ತಕಗಳನ್ನು ಚಂದಾದಾರರಿಗೆ ೧ ರೂಪಾಯಿಗೆ ೨ ಆಣೆಯಂತೆ ಕಡಿಮೆ ಬೆಲೆಗೆ ವಿ. ಪಿ. ಮಾಡುವೆವು. ಭಂಡಾರದ ಬೆಲೆ ಪಟ್ಟಿಗಾಗಿ ೪ ಆಣೆ ಅಂಚೆ ಟಿಕೇಟುಗಳನ್ನು ಕಳುಹಿಸತಕ್ಕದ್ದು.

		ರೂ. ಆ. ಪೈ.
೧.	ಕರ್ನಾಟಕ ಸಿಂಹಾಸನ ಸ್ಥಾಪನೆ	೧—೦—೦
೨.	ಕಥೆಗಳನ್ನೊಳಗೊಂಡ ಬೀರಬಲ್ಲ ಚರಿತ್ರೆ (ಸಚಿತ್ರ)	೧—೬—೦
೩.	ಛತ್ರಪತಿ ಶಿವಾಜಿ ಮಹಾರಾಜ „	೨—೧೨—೦
೪.	ಮಹಾರಾಣಿ ಲಕ್ಷ್ಮೀಬಾಯಿ ಝಾಂಸಿ „	೨—೦—೦
೫.	ಅಕ್ಬರ ಚಕ್ರವರ್ತಿ ಚರಿತ್ರೆ „	೧—೧—೦
೬.	ಚರಿತ್ರೆ ಸಂಗ್ರಹ ಭಾಗ ೧. „	೧—೪—೦
೭.	ತಿಲಕರ ಗೀತಾ ರಹಸ್ಯ	೩—೮—೦
೮.	ಶ್ರೀ ದಾಸಬೋಧ ಭಾಗ ೧. ೨. ೩. ...	೨—೧೪—೦
೯.	ರಾಷ್ಟ್ರಸಭೆಯ ಇತಿಹಾಸ	೨—೮—೦
೧೦.	ವಚನ [illegible]	೪—೦—೦

ಇವಲ್ಲದೆ ನಮ್ಮಲ್ಲಿ ಎಲ್ಲಾ ತರದ ಶಾಯಿದ ಶಾಲೋಪಯೋಗಿ ಪುಸ್ತಕಗಳೂ ನಕಾಶೆ ಚಿತ್ರಗಳೂ ಬರವಣಿಗಳೂ ದೊರೆಯುವವು.

ಶ್ರೀಪಾದ ರಾಮಚಂದ್ರ ದೇಶಪಾಂಡೆ ಬಿ. ಯಸ್. ಸಿ.
ವ್ಯವಸ್ಥಾಪಕ.

ಲೋಕಲ್ ಬೋರ್ಡು ಯಾನೆ ಸ್ಥಳೀಯ ಸಂಸ್ಥೆಗಳಲ್ಲಿ — ಕಂಡು ಬಂದ ಅಕ್ರಮಗಳು. —

೧. ಸಾರ್ವಜನಿಕ ಹಣವನ್ನು ಗಂಜಾಮು ಜಿಲ್ಲೆಯಲ್ಲಿ ಶ್ರೀ ಕಾಕುಲ ತಾಲೋಕು ಬೋರ್ಡು ಪ್ರೆಸಿಡೆಂಟರು ಖಾಸಗಿ ಕೆಲಸಗಳಿಗೆ ವಿನಿಯೋಗಿಸಿದರು. ಅದು ಹ್ಯಾಗಂದರೆ—

(೧) ತಾಲೋಕು ಬೋರ್ಡಿನ ಜೇರಳ ಹಣಗಳನ್ನು ತನ್ನ ಸ್ವಂತ ಆಸ್ತಿಗಳಲ್ಲಿ ಕೃತಗಳನ್ನು ಮಾಡಿಸುವ ಬಗ್ಗೆ ಉಪಯೋಗಿಸಿದರು.

(೨) ಕೆಲವು ಕಾಮಗಾರಿಗಳನ್ನು, ಮಾಡಿಸದೇನೆ ಮೆಜರ್‌ಮೆಂಟ್ ಪುಸ್ತಕಗಳಲ್ಲಿ ಪೂರ್ಣಪಡಿಸಿಯದೆ ಎಂತ ಕಾಣಿಸಿ ಆ ಬಗ್ಗೆ ಬೀಲ್‌ಮಾಡಿ ಹಣವನ್ನು ತರಿಸಿ ಉಪಯೋಗಿಸಿದರು.

(೩) ಕೆಲವು ಸಂಗತಿಗಳಲ್ಲಿ ನಿಜವಾಗಿ ಮಾಡಿಸಿದ ಕಾಮಗಾರಿಗಳಿಗಿಂತ ಜಾಸ್ತಿ ಅಳತೆಗಳನ್ನು ತೋರಿಸಿದರು.

(೪) ಇನ್ನು ಕೆಲವು ಸಂಗತಿಗಳಲ್ಲಿ ಒಂದೆ ಕಾಮಗಾರಿಯನ್ನು ಎರಡು ಅಂದಾಜುಪಟ್ಟಿಗಳನ್ನು ತೋರಿಸಿ ಎರಡಾವರ್ತಿ ಬೀಲ್ ಮಾಡಿ ಹಣವನ್ನು ತರಿಸಿದರು.

(೫) ೧೯೨೨ ಯಾ ೨೩ನೇ ಇಸವಿಯ ಬಗ್ಗೆ ಸಾರ್ವಜನಿಕ ಕಾಮಗಾರಿಗಳ ಬಗ್ಗೆ ಆ ತಾಲೋಕು ಬೋರ್ಡಿನವರು ಖರ್ಚು ತೋರಿಸಿದ ಪ್ರಕಾರ ರೂಪಾಯಿ ೪೮೦೪೧—೮—೦ ಪೈಕಿ ಒಬ್ಬನೇ ಕಂಟ್ರಾಕ್ಟರನಿಗೆ ರೂಪಾಯಿ ೨೯೫೪೪—೧೦—೦ ಸಂದಿರುವದಾಗಿ ತೋರುತ್ತದೆ.

(೬) ೧೯೨೦ನೇ ಇಸವಿಯ ಲೋಕಲ್ ಬೋರ್ಡು ಆಕ್ಟು ಜಾರೀಗೆ ಬಂದ ನಂತರ ಮತ್ತು ನೋನ್ ಆಫೀಶಿಯಲ್, ಅಥವಾ ಬಿನ್ ಸರಕಾರಿ ಪ್ರೆಸಿಡೆಂಟರ ಮೊಕ್ಕಾಂಗಳಿಗೆ, ಪ್ರಾರಂಭವಾದ ಲಾಗಾಯತು ಕೆಲವು ಪ್ರೆಸಿಡೆಂಟರು ತಮ್ಮ ಲೋಕಲ್ ಬೋರ್ಡುಗಳ ಮುಖ್ಯ ಸ್ಥಳಗಳನ್ನು ಬಿಟ್ಟು ತಮ್ಮ ವಾಸ್ತವ್ಯಗಳಲ್ಲಿ ಇರುವಾಗ್ಯೆ ಕ್ಲಾರ್ಕರನ್ನು ಹೆಡ್‌ಕ್ವಾಟ್ರಿನಿಂದ ತರಿಸಿ ಕೆಲಸಗಳಿಗೆ ಇಟ್ಟುಕೊಳ್ಳುತ್ತಾರೆ.

ಮತ್ತು ಅಂಥಾ ಕ್ಲಾರ್ಕರಿಗೆ ಬೋರ್ಡಿನ ಲೆಖ್ಖಕ್ಕೆ ಪ್ರಯಾಣ ದರ ಪೋಟಗಿ ಬತ್ತೆಯನ್ನು ಕೊಡಿಸಿದ್ದಾರೆ. ಈ ಖರ್ಚು ಅನವಶ್ಯಕವಾದ್ದು.

(೭) ಕೃಷ್ಣಾಜಿಲ್ಲೆಯ ನರ್ಸಾಪೂರ್ ತಾಲೋಕು ಬೋರ್ಡು ಪ್ರೆಸಿಡೆಂಟರು ಶಾಲೆಗಳಿಗೆ ಬೇಕಾದ ಕುರ್ಚಿ ವಗೈರೆ ಸಾಮಾನುಗಳನ್ನು ತಯಾರುಮಾಡಿಸಿದ ಕಂಟ್ರಾಕ್ಟರನಿಂದ ಆ ಸಾಮಾನು ಬರುವ ಮೊದಲೇ, ಆತಗೆ ರೂಪಾಯಿ ೧೦೬೫—೬—೦ಯನ್ನು ಪಾವತಿ ಮಾಡಿದರು. ಈ ಕುರಿತು ಉದಾಹರಣೆ ಕೇಳಿದ್ದಲ್ಲಿ ಸದರಿ ಸಾಮಾನುಗಳನ್ನು ತಾಲೋಕು ಬೋರ್ಡು ಆಫೀಸಿನಲ್ಲಿ ಇಡುವರೇ ಜಾಗ ಇಲ್ಲದ್ದರಿಂದ ಕಂಟ್ರಾಕ್ಟರನ ವಶವೇ ಇರಗೊಡಿಸಲಿಕ್ಕೆ ಕಾರಣವಾಯಿತು. ಎಂದು ಉದಹರಿಸಿದ್ದಾರೆ.

(೪) ಅನಂತಪುರ ಜಿಲ್ಲೆಯ ಬುಕ್ಕಪಟ್ಟಣದ ಯೂನಿಯನ್ ಬೋರ್ಡಿನ ಪ್ರೆಸಿಡೆಂಟರು ಶಿಬಂದಿಯ ತಲಬುಗಳನ್ನು ೧೯೨೩ನೇ ಇಸವಿ ನವಂಬರ ಅಖೈರ್ ವರೇಗಿನ ತಲಬನ್ನು ನವಂಬರ ೨೪ ಮತ್ತು ೨೬ರಲ್ಲಿ ತರಿಸಿಕೊಂಡಿದ್ದಾರೆ.

(೫) ರಾಮೇಶ್ವರ ಯೂನಿಯನ್ ಬೋರ್ಡಿನ ಪ್ರೆಸಿಡೆಂಟರು ರೂ. ೪೯೮೧—೬—೩ನ್ನು ಹರವಂಚಪಡಿಸಿದ್ದರು. ಈ ಪೈಕಿ ರೂಪಾಯಿ ೨೮೦೨—೧—೦ ಯಾತ್ರಸ್ಥರ ಮೇಲೆ ಹೊಂಡಿಸಿದ ತಿರಿಗೆ ಮೊಬಲಗು, ಮಿಕ್ಕ ರೂಪಾಯಿ ೧೦೦೦ ಖಜಾನೆಯಿಂದ ಎಡ್‌ವಾನ್ಸಿಗೆ ತರಿಸಿಕೊಂಡ ಮೊಬಲಗು ಆಗಿತ್ತು. ಸದರಿ ಪ್ರೆಸಿಡೆಂಟರ ಮೇಲೆ ನಡಿಸಿದ ವ್ಯವಹರಣೆಯಲ್ಲಿ ರೂ. ೧೦೦ ಜುರ್ಮಾನೆಯನ್ನು ಮತ್ತು ಕೋರ್ಟು ಬರ್ಕಾಸ್ತು ವರೇಗೆ ಸಜಾ ವಿಧಿಸಲಾಗಿತ್ತು. ದುರುಪಯೋಗಮಾಡಿದ ಹಣವನ್ನು ಅವರಿಂದ ಬರಮಾಡೋಣಾಗಿತ್ತು.

(೬) ಗೋದಾವರಿ ಜಿಲ್ಲೆಯ ಜಗಪತಿ ನಗರದ ಯೂನಿಯನ್ ಬೋರ್ಡು ಪ್ರೆಸಿಡೆಂಟರು ಮತ್ತು ಮಾಜಿ ಕ್ಲಾರ್ಕರು ಖಜಾನೆಯಿಂದ ರೂಪಾಯಿ ೨೪೯ನ್ನು ತರಿಸಿ ಉಪಯೋಗಿಸಿಕೊಂಡರು. ಈ ಕುರಿತು ಈಗ ಪೋಲೀಸ್ ತನ್ನಿ ನಡಿಯುತ್ತದೆ.

(೭) ೧೯೨೨ನೇ ಇಸವಿಯ ನವಂಬರ ಲಾಗಾಯತು ೧೯೨೩ನೇ ಇಸವಿಯ ಮೇ ವರೇಗಿನ ಮಧ್ಯ ಕಾಲದಲ್ಲಿ ಉಡುಪಿ ತಾಲೂಕು ಬೋರ್ಡಿನ ಬಗ್ಗೆ ಕೊಡವೂರು ಪಟೇಲರು ವಸೂಲುಮಾಡಿದ ವೃತ್ತಿ ತಿರಿಗೆ ರೂಪಾಯಿ ೩೪೨ನ್ನು ೧೯೨೩ನೇ ಇಸವಿ ಜೂನ್ ತಿಂಗಳಲ್ಲಿ ಖಜಾನೆಗೆ ಪಾರ್ಖಾವನ ಮಾಡಿದ ಸಂಬಂಧ ಅವರಿಗೆ ರೂಪಾಯಿ ೨ ಎರಡು ಜುಲ್ಮಾನೆ ವಿಧಿಸಲಾಯಿತು. ಇಂಥಾ ಅಕೃತ್ಯಗಳ ಮೇಲ್ ತನ್ನಿ ಸರಿಯಾಗಿ ಇಲ್ಲದ್ದರಿಂದ ಉಂಟಾಗಲಿಕ್ಕೆ ಕಾರಣವಾಯಿತು.

ಶ್ರೀಯುತ ಕೆ. ರಘುಚಂದ್ರ ಬಲ್ಲಾಳ್, ಅವರ್ಗಳ್, ಎಮ್. ಎಲ್. ಸಿ. ಮೆಂಬರ್, ಮಂಗಳೂರು ತಾಲೂಕು ಬೋರ್ಡು, ಇವರು ಸದರಿ ತಾಲೂಕು ಬೋರ್ಡಿನ ಬರುವ ಸಭೆಯಲ್ಲಿ ಕೆಳಗಣ ಠರಾವುಗಳನ್ನು ಮುಂದಿಡುವರಾಗಿ, ನೋಟೀಸ್ ಕೊಟ್ಟಿದ್ದಾರೆ.

(ಠರಾವುಗಳು)

೧. ಈ ತಾಲೂಕು ಬೋರ್ಡು ಮೆಂಬರರ ಮೆಂಬರಿಕೆ ಅವಧಿ ಮುಗಿಯತ್ತಲೇ ಈ ಬೋರ್ಡು ಆಫೀಸಿಗೆ ಸಾಬೀತಿನಿಂದ ವಾಪಾಸುಮಾಡುವ ತರ್ಜಕ್ಕೊಳಪಡಿಸಿ ಎಲ್ಲಾ ಮೆಂಬರರಿಗೆ — ಹಾಲಿ ಜಾರಿಯಲ್ಲಿರುವ ವ ಇನ್ನು ಮುಂದೆ ಜಾರಿಗೆ ಬರಬಹುದಾದ ಲೋಕಲ್ ಬೋರ್ಡು ಆಕ್ಟನ್ನು ಮತ್ತು ಸದರಿ ಆಕ್ಟಿಗನುಗುಣವಾಗಿ ಏರ್ಪಡಿಸಿದ ರೂಲ್ಸುಗಳನ್ನು ಸಹ ಒದಗಿಸಿ ಕೊಡುವುದು ಅಗತ್ಯವೆಂತ ಈ ಸಭೆಯವರು ಅಭಿಪ್ರಾಯಪಡುತ್ತಾರೆ.

೨. ಈ ತಾಲೂಕು ಬೋರ್ಡು ಆಫೀಸಿನ ಹೆಡ್‌ಕ್ಲಾರ್ಕರ ಉದ್ಯೋಗಪರವಾದ ವಿಷಯದಲ್ಲಿ ಬೋರ್ಡು ಶಾಲಾ ಉಪಾಧ್ಯಾಯ ವಗೈರೆ ನೌಕರರ ಪೈಕಿ ಅನೇಕರು ಅಸಂತುಷ್ಟರಾಗಿಯೂ ಕ್ಷೋಭಿತರಾಗಿಯೂ ಇರುವ ದೆಸೆಯಿಂದ ಅಂಥ ಅಸಂತುಷ್ಟಿಗೆ ವ ಕ್ಷೋಭವಕ್ಕೆ ನಿಜವಾಗಿ ಕಾರಣವಿರುತ್ತದೋ ಎಂಬದನ್ನು ಕ್ರಮದಂತೆ ತನ್ನಿನಡಿಸಿ ಈ ಬೋರ್ಡಿಗೆ ರಿಪೋರ್ಟುಮಾಡುವ ಬಗ್ಗೆ ಈ ಬೋರ್ಡು ಮೆಂಬರರ ಒಂದು ಉಪಕಮಿಟಿಯನ್ನು ಏರ್ಪಡಿಸುವುದು ಅಗತ್ಯವೆಂತ ಈ ಸಭೆಯವರು ಅಭಿಪ್ರಾಯಪಡುತ್ತಾರೆ.

ಮೂಡಬಿದ್ರೆ ಶ್ರೀ ಗೋಪಾಲಕೃಷ್ಣ ದೇವಸ್ಥಾನದ — ಸಹಾಯಕ ಫಂಡ್. —

ಕಳೆದ ಮೇ ತಿಂಗಳಲ್ಲಿ ಸದರಿ ಸಂಘದಲ್ಲಿ ಸದಸ್ಯರಾಗಿ ಸೇರಿ ಧನ ದಾಗ್ದಾನಮಾಡಿದ ಯಾ ಕೊಟ್ಟು ಸೇರಿದ ಮಹನೀಯರ ನಾಮಾವಳಿಗಳು—

ಮ। ರಾ। ರಾ। ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರು ರೂ. ೧೦೧, ಅಳದಂಗಡಿ ಪಂಚ್ಚಂದ್ರರಾಜ ಅಜ್ಜರವರು, ಕುಕ್ಕುಂದೂರು ಪದ್ಮಮುದ್ದರವರು ರೂ. ೨೫ ರಂತೆಯೂ ಅಬ್ಕಾರಿ ಇ. ಕುನ್ನಿನಾಯರವರು, ದೊಂಕಬೆಟ್ಟು ರಾಮರಾಯರವರು ರೂ. ೧೦ರಂತೆಯೂ, ಕಾರ್ಕಳ ಮು। ಕೋರ್ಟು ಕ್ಲಾರ್ಕರು A. S. ವಾಶಳರವರು, ಅಬ್ಕಾರಿ ಇ. C. R. ವೈದ್ಯನಾಥ ಶಾಸ್ತ್ರಿಗಳು, ಮೂಡಾರು ಮಧ್ವರಾಯಭಟ್ಟರವರು, ತಾಲೂಕು ಕ್ಲಾರ್ಕ K. ಪದ್ಮನಾಭಯ್ಯನವರು, ತಾ। ಕ್ಲಾರ್ಕ ವಾದಿರಾಜಯ್ಯನವರು, ತಾ। ಕ್ಲಾರ್ಕ ಬಾಬುರಾವ್, ಬೆಂಗಳೂರು ಕೃಷ್ಣಶಾಸ್ತ್ರಿಗಳು, ಮುಲ್ಕಿ ಬಸ್ತಿ ಚಂದಯ ಇಂದ್ರರು, ಕೊರಗಮೂಲ್ಯ, ಜಾಕೋಬ ಮಿನೇಜಸ್ಸರು, ಮಾರೂರು ವಾಸುದೇವಹೆಬ್ಬಾರರವರು ರೂ. ೫ರಂತೆಯೂ ಕೂಡಾ ರೂ. ೨೩೩ ಆಗಿರುತ್ತದೆ.

ಪೈಕಿ ಮೇ ತಿಂಗಳಲ್ಲಿ ಸದಸ್ಯರಿಂದ ಸಂಘಕ್ಕೆ ವಸೂಲಾದ ರೂಪಾಯಿ ೧೫೨ ಆಗಿರುತ್ತದೆ.

ವೇಣೂರು ಕೃಷ್ಣಯ್ಯ.
ಕಾರ್ಯದರ್ಶಿ.

ನೋಟೀಸು.

ದಕ್ಷಿಣ ಕನ್ನಡಾ ಒಫೀಶಿಯಲ್ ರಿಶೀವರರವರ
ಕೋರ್ಟಿನಲ್ಲಿ.

ದಿವಾಳಿ ಅರ್ಜಿ ನಂಬ್ರ $\frac{28}{1925}$

ಪದ್ಮನಾಭನಾಯ್ಕ ಮಾದಪ್ಪನಾಯ್ಕರ ಮಗ ಮಂಗಳೂರು ಕ್ಯಾಹಾರ ಬೋಳಾರದಲ್ಲಿರುವವ } ಅರ್ಜಿದಾರ.

ಮತ್ತು

1. ಬಿ. ಶಿವಯ್ಯಾ 2. ಬಾಬಣ್ಣನಾಯ್ಕ
3. ಮಾದಪ್ಪೆ 4. ಮುಕುಂದನಾಯ್ಕ } ದೇಣೆದಾರರು
5 ಸೋಮಪ್ಪಾ. . . . . .

ಮೇಲ್ಕಂಡ ಅರ್ಜಿದಾರನು ತನ್ನನ್ನು ದಿವಾಳಿ ಎಂತ ಸ್ಥಾಪನೆಮಾಡಬೇಕಾಗಿ ಮೇಲ್ಕಂಡ ಕೋರ್ಟಿನಲ್ಲಿ ಅರ್ಜಿ ಕೊಟ್ಟಿರುವದರಿಂದ ಸದರಿ ಅರ್ಜಿಯನ್ನು ಇದೇ ತಿಂಗಳ ತಾ. 27ಕ್ಕೆ ತನ್ನಿಗೆ ಇಟ್ಟಿರುತ್ತದೆ. ಆಕ್ಷೇಪ ಹೇಳುವವರು ತಾ. 27—6—1925ನೇ ದಿವಸ ಮಧ್ಯಾಹ್ನ ಹಗಲು ಗಂಟೆ 11ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಜ್ಯಾಹೀರುಮಾಡತಕ್ಕದ್ದು ಎಂತ ಈ ಮೂಲಕ ಪ್ರಕಟಿಸೋಣಾಗಿಯದೆ.

MANGALORE, }
18 6-1925. } Bola Nagesh Rao,
Vakil for petitioner.

ನೋಟೀಸು.

ಉಪ್ಪಿನಂಗಡಿ ತಾಲೂಕು ನೆರಿಯ ಗ್ರಾಮದ ಇಜ್ಜಾವು ವಿಷ್ಣಯ್ಯನವರ ಮಗ ಈ ಸಂಘದ ನಂಬ್ರ 226ನೆ ಮೆಂಬರ ನಾಗಿರುತ್ತಿದ್ದ ಕುದನೆ ಲಕ್ಷ್ಮೀನಾರ್ಣಪ್ಪಯ್ಯ ಎಂಬವರು ಬದರಿ ಯಾತ್ರೆಗೆ ಹೋದಲ್ಲಿ ಮೃತಪಟ್ಟ ಕಾರಣ ಅವರ ಬಾಬ್ತು ಈ ಸಂಘದಲ್ಲಿರುವ II ಕ್ಲಾಸು ಪಾಲು 2 (ಎರಡು)ನ್ನು ತನ್ನ ಹೆಸರಲ್ಲಿ ವರ್ಗಾಯಿಸಬೇಕಾಗಿ ಅವರ ಖಾಸಾ ತಮ್ಮ ಕುದನೆ ಗಣಪತಿರಾವ್ ಎಂಬವರು ತಾರೀಕು 10—2—1925ರಲ್ಲು ಈ ಸಂಘಕ್ಕೆ ಅರ್ಜಿ ಬರಕೊಂಡಿರುತ್ತಾರೆ.

ಈ ಸಂಗತಿಯನ್ನು ಸ್ವದೇಶಾಭಿಮಾನಿಯಲ್ಲಿ ಒಂದು ತಿಂಗಳ ವಾಯಿದೆಯಿಂದ ನೋಟೀಸು ಫ್ಯಾಸ್‌ಮಾಡಿದನಂತರ ವರ್ಗಾಯಿಸಬೇಕಾಗಿ ಈ ಸಂಘದ ಆಡಳಿತೆ ಸಭೆಯಲ್ಲಿ ನಂಬ್ರ $\frac{187}{24.25}$ನೇ ನಿರ್ಣಯವಾಗಿದೆ. ಇದಕ್ಕೆ ಆಕ್ಷೇಪವುಳ್ಳವರು ಈ ನೋಟೀಸು ಫ್ಯಾಸ್ ಆದ ಒಂದು ತಿಂಗಳ ಒಳಗೆ ಅವರ ಆಕ್ಷೇಪಗಳನ್ನು ಬರಹಮೂಲಕವಾಗಿ ಕಾರ್ಯದರ್ಶಿಯಾದ ನನಗೆ ಜಾಹೀರುಮಾಡಲಿಕ್ಕೆ ತಪ್ಪಿದರೆ ಮೇಲಿನ ನಿರ್ಣಯದಂತೆ ಸದರಿ II ಕ್ಲಾಸು ಪಾಲುಗಳು 2ನ್ನು ಕುದನೆ ಗಣಪತಿ ರಾಯರ ಹೆಸರಿಗೆ ವರ್ಗಾಯಿಸಲಾದೀತು. ತಿಳಿದಿರಲಿ.

ಹೆಡ್ ಆಫೀಸು
ವಿಟ್ಲ,
ತಾ. 6-6-1925.
N. Shankaranaraina Bhat,
ನಂಬ್ರ 2835ನೇ ದಕ್ಷಿಣ ಕನ್ನಡ ಬಾಗಾಯತು ಕೃಷಿಕರ ಬಂಡವಾಲೆಯ ಸಹಕಾರಿ ಸಂಘದ ಕಾರ್ಯದರ್ಶಿ.

JUST ARRIVED
Continental Belts.
OF VARIOUS SIZES
Price Re. 1—10—0 each
Mangalore Trading Association,
Car Street, MANGALORE.

ವಿದೇಶವರ್ತಮಾನ.

— ಚೀಣಾದಲ್ಲಿ ಅಲ್ಲಿಯ ಜನಗಳಿಗೂ ಪರದೇಶದ ಸರಕಾರಗಳಿಗೂ ವೈಮನಸ್ಯವುಂಟಾಗಿ ಜಗಳ ಪ್ರಾರಂಭವಾಗಿದೆ.

— ಫ್ರಾನ್ಸ ದೇಶದಲ್ಲಿಯ ವೀರ ಸ್ತ್ರೀಯಾದ ಜೋನ್ ಒಫ್ ಆರ್ಕ ಎಂಬವಳ ಸ್ಮರಣದಿನವನ್ನು ಬಹು ಸಂಭ್ರಮದಿಂದ ಆಚರಿಸಲ್ಪಟ್ಟಿತು. ಮುಖ್ಯ ಮಂತ್ರಿಗಳೂ ಇತರ ಅಧಿಕಾರಿಗಳೂ ಪ್ಯಾರಿಸಿನಲ್ಲಿ ನಡೆದ ಈ ಉತ್ಸವಕ್ಕೆ ಹಾಜರಿದ್ದು ಜೋನ್ ಒಫ್ ಆರ್ಕಳ ಪ್ರತಿಮೆಗೆ ಹೂಮಾಲೆಗಳನ್ನು ಹಾಕಿದರು. ಈ ಸಮಾರಂಭಕ್ಕೆ ಸುಮಾರು ಮೂರು ಲಕ್ಷ ಜನ ಸೇರಿತ್ತು.

— ತುರ್ಕಸ್ಥಾನದ ಗವರ್ನಮೆಂಟು ಅಲ್ಲಿಯ ಹೊಸ ಪಕ್ಷವು ಸರಕಾರಕ್ಕೆ ವಿರೋಧಿಯಾಗಿದೆ ಎಂಬ ಕಾರಣವನ್ನಿಟ್ಟುಕೊಂಡು ಆ ಹೊಸ ಪಕ್ಷದ ಎಲ್ಲ ಶಾಖೆಗಳನ್ನು ನಿಲ್ಲಿಸಲು ಹುಕುಮನ್ನು ಕೊಟ್ಟಿದೆ.

— ಸೋಫಿಯಾ ಎಂಬ ಕಡೆಯಲ್ಲಿ ೪೫೦ ಮತ್ತು ಹ್ಯಾನೋ ಎಂಬಲ್ಲಿ ೧೪೦ ಜನ ಕೊಮ್ಯೂನಿಸ್ಟರನ್ನು ಸೆರೆಹಿಡಿದಿದೆ.

— ಬಲೂಚಿಸ್ಥಾನದ ಜನರು ಇರಾಣದ ಪೂರ್ವ ದಿಕ್ಕಿನ ಗಡಿಯ ಮೇಲೆ ಹಲ್ಲೆಯನ್ನು ಮಾಡಿ ಒಂದು ಮುಖ್ಯವಾದ ರೈಲ್ ಸ್ಟೇಶನನ್ನು ಸ್ವಾಧೀನಪಡಿಸಿಕೊಂಡಿದ್ದಾರೆ. ಒಬ್ಬ ಇರಾಣಿ ಅಧಿಕಾರಿಯು ಬಲೂಚಿಸ್ಥಾನದ ಜನರಿಗೆ ತಮ್ಮ ಗಡ್ಡ ಮತ್ತು ಮೀಸೆ ಬೋಳಿಸಲು ಹೇಳಿದ್ದರಿಂದ ಈ ದಂಗೆ ಉದ್ಭವಿಸಿದ ಎಂದು ಹೇಳೋಣಾಗುತ್ತದೆ.

— ಸ್ಪೇನ ದೇಶದ ಅರಸನ ರೈಲು ಬಂಡಿಯನ್ನು ಬೊಂಬು ಗುಂಡುಗಳಿಂದ ಹಾರಿಸಿಬಿಡುವ ಗುಪ್ತ ಆಲೋಚನೆಯು ಬಹಿರಂಗವಾಗಿ ೧೯ ಜನರನ್ನು ಕೈದುಮಾಡಿದೆ.

— ಅಮೇರಿಕದಲ್ಲಿ ಡಾಯರನು ನಡಿಸಿದ ಕೊಲೆಯ ಜನಿಯ ಸ್ಮರಣ ದಿನವನ್ನು ನ್ಯೂಯಾರ್ಕಿನಲ್ಲಿ ಹಿಂದಿಗಳೂ ಹಾಗು ಅವರ ಮೇಲೆ ಸಹಾನುಭೂತಿಪಡುವ ಅಮೇರಿಕನ ವಿದ್ಯಾರ್ಥಿಗಳೂ ತಾ. ೧೩ರಲ್ಲಿ ಆಚರಿಸಿದರು.

— ಜರ್ಮನಿಯನ್ನು ನಿಶಸ್ತ್ರಗೊಳಿಸಲು ಮಾಡಿದ ಠರಾವಿನ ವಿಷಯದಲ್ಲಿ ಇಂಗ್ಲಂಡು, ಫ್ರಾನ್ಸು, ಬೆಲ್ಜಿಯಮು ಇವುಗಳ ಏಕಮತವಾಗಿದೆ.

— ಸರ ಲೀಸ್ಟೇಕ ಎಂಬವರ ಖೂನಿಯಾದ ಬಗ್ಗೆ ೯ ಜನರ ಮೇಲೆ ಆರೋಪವೆಯು ಸಾಬೀತು ಆಗಿದೆ.

— ಸೋಫಿಯಾ ದೇಶದೊಳಗೆ ಬೊಲ್ಶೆವಿಕ ಅತ್ಯಾಚಾರವು ನಡೆದುದಕ್ಕಾಗಿ ಪ್ರತಿಯೊಂದು ಮನೆಯಲ್ಲಿ ಜಡತಿಯಾಗುತ್ತಿದೆ. ಜನರೆಲ್ಲರು ಕಂಗೆಟ್ಟಿರುವರು.

ಒಳದೇಶ ವರ್ತಮಾನ.

— ದೊಂಡಾ ಈ ಸ್ಟೇಶನಿಗೆ ಸಮೀಪದಲ್ಲಿ ಬಾಬುರಂಗಾರಿ ಎಂಬ ಒಬ್ಬ ದೊಡ್ಡ ಜಟ್ಟಿಯ ಖೂನಿಯುಂಟಾಗಿದೆ. ಅವನ ಕಾಲುಗಳು ಕೊಡಲಿಯಿಂದ ತುಂಡುಮಾಡಲ್ಪಟ್ಟಿವೆ!

— ಕೊಲ್ಹಾಪುರ ಸಂಸ್ಥಾನದ ಮಹಾರಾಜರು ತಂಜಾವೂರಿನ ಶ್ರೀಮಂತ ಮೋಹಿತೆ ಅರಸರ ಕನ್ನಿಕೆಯೊಡನೆ ವಿವಾಹಮಾಡಿಕೊಂಡಿರುವರು.

— ಮದ್ರಾಸ ಸಂಸ್ಥಾನದ ಕೌನ್ಸಿಲ್ ಒಫ್ ಸ್ಟೇಟಿನ ನಾಲ್ಕು ಜಾಗಗಳ ಪೈಕಿ ಒಂದಕ್ಕೆ ಸರ ಶಂಕರನ್ ನಾಯರರು ಉಮೇದುವಾರರಾಗಿ ನಿಂತಿರುವರು.

— ಪಂಜಾಬದಲ್ಲಿ ಮತ್ತು ಸಂಯುಕ್ತ ಪ್ರಾಂತದಲ್ಲಿ ಇಸಲಾಮಿ ಧರ್ಮವನ್ನು ಪ್ರಚುರಪಡಿಸಲು ಹಿಂದಿ ಭಾಷೆಯಲ್ಲಿ ಸಾವಿರಾರು ಹಸ್ತಪತ್ರಕಗಳನ್ನು ಹಸನ ನಿಜಾಮಿ ಎಂಬ ಗೃಹಸ್ಥನು ಪ್ರಕಟಿಸುತ್ತಿದ್ದು "ಇಸ್‌ಲಾಮ ಧರ್ಮವು ಶ್ರೇಷ್ಠವಾದ್ದೆಂದು ಮಹಾತ್ಮಾ ಗಾಂಧಿಯವರು ಜಾಹೀರಪಡಿಸಿದ್ದಾರೆ" ಎಂದು ಆ ಹಸ್ತ ಪತ್ರಕಗಳಿಗೆ ಶಿರೋಲೇಖವನ್ನು ಕೊಟ್ಟಿರುವನು,

— ಬಂಗಾಲದೊಳಗಿನ ರಾಜಶಾಹಿ ಎಂಬಲ್ಲಿ ಪ್ರತಿ ವರ್ಷದಂತೆ ಶಿವಾಜಿಯ ಉತ್ಸವವನ್ನು ಮಾಡಿ ಆ ಉತ್ಸವದಲ್ಲಿ ಶಿವಾಜಿಯ ಮೂರ್ತಿಯ ಮೆರವಣಿಗೆಯನ್ನು ಮಾಡುವಾಗ ಮುಸಲ್ಮಾನರು ಹಲ್ಲೆಮಾಡಿ ಮೂರ್ತಿಯನ್ನು ಒಡೆದರು. ಮುಸಲ್ಮಾನರ ಮೇಲೆ ಫಿರ್ಯಾದು ಮಾಡಲ್ಪಟ್ಟಿದೆ.

— ಶ್ರೀ ಕಾಶೀಕ್ಷೇತ್ರದಲ್ಲಿಯ ಅನ್ನಪೂರ್ಣಾ ದೇವಸ್ಥಾನದಲ್ಲಿ ಸನಾತನ ಮತಾನುಯಾಯಿಗಳಾದ ಶಾಸ್ತ್ರಿ ಮತ್ತು ಪಂಡಿತರ ಸಭೆಗೂಡಿ ಪ್ರಚಲಿತ ಪ್ರಶ್ನೆಗಳನ್ನು ಕುರಿತು ಚರ್ಚೆ ನಡೆಯಿತು. ಹಿಂದಿನ ಕ್ರಮ ಮತ್ತು ಪೂರ್ಣಾಚಾರದಂತೆಯೆ ನಡೆದುಕೊಳ್ಳಲು ಅಲ್ಲಿ ಶಪಥಗಳನ್ನು ತಕ್ಕೊಂಡರು.

— ಈ ವಾರದ ಪಾಲನಪುರ, ಭಾವನಗರ, ಗೊಂಡಲ, ಔಂಧ ಮತ್ತು ಜೋಧಪುರ ಸಂಸ್ಥಾನಗಳಲ್ಲಿ ಮದ್ಯದ ಮಾರಾಟವು ಕಾಯಿದೆಯಿಂದ ನಿಲ್ಲಿಸಲ್ಪಟ್ಟಿರುತ್ತದೆ.

— ಬಂಗಾಲದಲ್ಲಿ ಹೊಸದೊಂದು ರೋಗ ಬಂದಿದೆ. ಮಾನವರು ಇದ್ದಲಿಯ ಹಾಗೆ ಕಪ್ಪಾಗಿ ಸಾಯುತ್ತಾರೆ. ಈ ಬೇನೆಯಿಂದ ಸುಮಾರು ೧ ಕೋಟಿ ಜನರು ಬಳಲುತ್ತಿರುವರು.

ದಕ್ಷಿಣ ಕನ್ನಡ.

ಮುಲ್ಕಿ:— ಇಲ್ಲಿಯ "ಯೂನಿಯನ್ ಕ್ಲಬ್ಬಿನ" ವರ್ಷ ವರ್ಧಂತ್ಯುತ್ಸವವೂ, ದಿವಂಗತ ಡಾಕ್ಟರ್ ಬೋಳ ಶ್ಯಾಮರಾಯರವರ ಸ್ಮಾರಕ ವಿಭಾಗದ [illegible] ಇದೇ ತಾ. ೧೬—೬—೨೫ನೇ ಮಂಗಳವಾರ ಅಪರಾಹ್ನ ಗಂಟೆ ೫ಕ್ಕೆ ಮಂಗಳೂರು ತಾಲೂಕು ಬೋರ್ಡು ಪ್ರೆಸಿಡೆಂಟ್ ಮ। ರಾ। ಎಮ್. ಆರ್. [illegible] ಅವರ್ಗಳವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ನೆರವೇರಿತು. ರಾ। ಇ. ಸಾನಂದರವರು ದಿವಂಗತ ಡಾಕ್ಟರ್ ಶ್ಯಾಮರಾಯರ ಜನ್ಮ ಚರಿತ್ರೆಯನ್ನು ಓದಿದ ಮೇಲೆ ರಾ। ಕೆ. ಉಪೇಂದ್ರ ಪೈ ಬಿ. ಎ. ರವರು ಸದರಿ ಡಾಕ್ಟರ್‌ರವರ ಗುಣಕಥನವನ್ನು ಮಾಡಿದ ಮೇಲೆ [illegible] ಕ್ಲಬ್ಬಿನ ಅಭಿವಂದನವನ್ನು ಮಾಡಿದರು. ತರುವಾಯ ಕ್ಲಬ್ಬಿನ ಗೌ। ಕಾರ್ಯದರ್ಶಿ ರಾ। ಬಿ. ಭೋಜರಾಯರು ಇದೇ ಕಳೆದ ಮೇ ತಾ. ೩೧ಕ್ಕೆ ಅಂತ್ಯವಾದ ವಾರ್ಷಿಕ ವರದಿಯನ್ನು ಓದಿ ಹೇಳಿದರು. ಇದು ಸರ್ವಾನುಮತದಿಂದ ಮಂಜೂರು ಮಾಡಲಾಯಿತು. ರಾ। ಬೋಳ ರಘವರಾಯರೂ, ರಾ। ಟಿ. ನಾರಾಯಣ [illegible] ಕ್ಲಬ್ಬಿನ ವ ಅಯ್ಯರ್ ದಿನೆಯವರ ಕೆಲಸದ [illegible] ವನ್ನು [illegible] ಹೇಳಿದರು. ಆ ಮೇಲೆ ಹೊಸ ವರುಷದ ಆಡಳಿತೆ ಮೆಂಬರರ ಚುನಾವಣೆ, ಪತ್ರಿಕೋದ್ಯಮದ [illegible], [illegible] ಗಳ [illegible] ಮುಂದೆ ಬಂದು ಸರ್ವಾನುಮತದಿಂದ ತೀರ್ಮಾನಿಸಲ್ಪಟ್ಟವು. ಇದಾಗಲು ಸನ್ಮಾನ್ಯ ಅಧ್ಯಕ್ಷರು ಕ್ಲಬ್ಬಿನ ಏಳ್ಗೆಯನ್ನು ಮನಃ ಪೂರ್ವಕವಾಗಿ ಬಯಸಿ, ಅನೇಕ ಸೂಚನೆಗಳ ಸಮೇತ ತಮ್ಮ ಅರ್ಥಗರ್ಭಿತವಾದ ಭಾಷಣವನ್ನು ಸಮಾಪ್ತಿಗೊಳಿಸಿದರು. ಕ್ಲಬ್ಬಿನ ಅಧ್ಯಕ್ಷ ರಾ। ಎಚ್. ವಿಷ್ಣು ಭಟ್ ಬಿ. ಎ. ರವರು ಅಧ್ಯಕ್ಷ ಮಹಾಶಯರಿಗೆ ಹೂವಿನ ಹಾರ ಹಾಕಿ, ಕೂಡಿ ಬಂದ ಎಲ್ಲಾ ಮಹಾಶಯರಿಗೆ ಉಪಚಾರ ಸ್ವರಿಸಲು ಸಭಿಕರನ್ನು ಹೂ, ಪನ್ನೀರು, ಪಾನಸುಪಾರಿ, ಸಕ್ಕರೆ ಇತ್ಯಾದಿಗಳಿಂದ ಸತ್ಕರಿಸಲು ಈ ಸಮಾರಂಭವು ಕೊನೆಗೊಂಡಿತು.

ವಿವಿಧ ವಿಷಯಗಳು.

— ಹಳ್ಳಿ ಸುಧಾರಣೆ. —

ಪ್ರೊ। ನಾಗೇಂದ್ರನಾಥ ಗಂಗೂಳಿ ಎಂಬ ಬಂಗಾಳಿ ಗೃಹಸ್ಥರು ಹಿಂದುಸ್ಥಾನದ ಹಳ್ಳಿಗಳನ್ನು ಉದ್ಧಾರ ಮಾಡಬೇಕೆಂದು ಕೆಲವು ತಿಂಗಳುಗಳಿಂದ ಬೋಧಿಸುತ್ತಾರೆ. ಕೆಲವು ದಿನಗಳ ಹಿಂದೆ ಲಂಡನಿನ ಈಸ್ಟ್ ಇಂಡಿಯಾ ಎಸೋಸಿಯೇಶನಿನವರ ಮುಂದೆ ಅವರು ಬೋಧಪ್ರದವಾದ ಭಾಷಣವನ್ನು ಮಾಡಿದರು. ಅದರಸಾರಾಂಶವೇನಂದರೆ, ಹಿಂದುಸ್ಥಾನದ ಜನರ ಮುಖ್ಯ ವೃತ್ತಿಯಾದ ಬೇಸಾಯವನ್ನು ಉತ್ತಮ ಸ್ಥಿತಿಗೆ ತಾರದೆ ದೇಶದಲ್ಲಿ ಯಾವದೇ ಹಿತಕಾರ್ಯವು ಸಫಲವಾಗದು; ದೇಶದಲ್ಲಿರುವ ಬಡತನದ ನಿಮಿತ್ತವಾಗಿ ನೇಕಡಾ ೬೪-೨ ಜನರಿಗೆ ತಕ್ಕಷ್ಟು ಆಹಾರ ದೊರೆಯುವುದಿಲ್ಲ; ಬೇರೆ ದೇಶಗಳಲ್ಲಿ ಸರಾಸರಿ ಜೀವಮಾನವು ೪೦ ವರ್ಷಗಳಾಗಿರುವಾಗ ಈ ದೇಶದಲ್ಲಿ ಸರಾಸರಿ ಜೀವಮಾನವು ಬರೇ ಇಪ್ಪತ್ತನಾಲ್ಕು ವರ್ಷಗಳು. ಗಂಗೂಳಿಯವರ ಅನುಭವದ ಪ್ರಕಾರ ಇವಕ್ಕೆಲ್ಲ ಕಾರಣವು ಇಲ್ಲಿನವರು ಆಸ್ತಿಯನ್ನು ಚಿಕ್ಕ ಚಿಕ್ಕ ಭಾಗಗಳಾಗಿ ಪಾಲು ಮಾಡಿಕೊಂಡು ಅನೇಕರು ಅನುಭವಿಸುವಂಥಾದ್ದು; ಇಲ್ಲಿನ ಭೂಮಿಗೆ ಸಾಕಷ್ಟು ಗೊಬ್ಬರ ಹಾಕದೆ ಇರುವುದು ಮತ್ತು ಇಲ್ಲಿನ ಸಾಹುಕಾರರು, ಧನಿಗಳು, ವಕೀಲರು ಮತ್ತು ಪುರೋಹಿತರು ಕೂಡಿ ಹೆಡ್ಡರಾದ ಹಳ್ಳಿಯವರ ಹಣವನ್ನು ಸುಲಿಯುವುದು. ಇಂಥ ಸ್ಥಿತಿಯನ್ನು ಹೋಗಲಾಡಿಸಲಿಕ್ಕೆಂದು ಹಳ್ಳಿಗಳ ದುಃಸ್ಥಿತಿಯನ್ನು ರೋಯಲ್ ಕಮಿಶನಿನ ಮೂಲಕ ವಿಚಾರಿಸಿ ಕಂಡುಬಂದ ಕುಂದುಗಳನ್ನು ಸರಕಾರವು ಹೋಗಲಾಡಿಸಬೇಕೆಂದು ಗಂಗೂಳಿಯವರು ಕೇಳಿಕೊಳ್ಳುತ್ತಾರೆ. ಅವರ ಪ್ರಯತ್ನವು ಸ್ತುತ್ಯವಾದದ್ದು. ಆದರೆ ಇಲ್ಲಿನ ವಿದ್ಯಾವಂತರು ರೈತರ ಹಿತವನ್ನು ಗಣಿಸುವುದಿಲ್ಲ, ಇಲ್ಲಿನ ಮುಖಂಡರು ರಾಜಕೀಯ ಚಳವಳವನ್ನು ಬದಿಗಿಟ್ಟು ಆರ್ಥಿಕ ಉನ್ನತಿಯನ್ನೇ ಸಾಧಿಸಬೇಕೆಂದು ಅವರು ಹೇಳಿದ್ದನ್ನು ನಾವು ಮನ್ನಿಸಲಾರೆವು. ರೈತರ ಹಿತಕ್ಕಾಗಿ ಮತ್ತು ಎಲ್ಲಾ ಬಡವರ ಉನ್ನತಿಗಾಗಿ ಕೊಂಗ್ರೆಸು ಮತ್ತು ಕೌನ್ಸಿಲಿನಲ್ಲಿರುವ ಮುಖಂಡರು ಪ್ರಯತ್ನಪಡುತ್ತಿದ್ದಾರೆಂಬುದನ್ನು ಈ ಗೃಹಸ್ಥರು ತಿಳಿಯದಿದ್ದುದು ವಿಚಿತ್ರ. ಬ್ರಿಟಿಷ್ ಕೃಷಿಕರಿಗಾಗಿ ಅಲ್ಲಿನ ಸರಕಾರವೇ ಹೆಚ್ಚು ಕೆಲಸ ಮಾಡುತ್ತದೆ ಎಂದು ಒಪ್ಪಿಕೊಳ್ಳುವ ಗಂಗೂಳಿಯವರು ಹಿಂದುಸ್ಥಾನದ ಸರಕಾರವನ್ನು ವಶಮಾಡಿಕೊಳ್ಳದೆ ಇಲ್ಲಿನವರು ದೇಶದ ಆರ್ಥಿಕ ಉದ್ಧಾರಮಾಡಿಕೊಳ್ಳಬೇಕೆನ್ನುವುದು ಹೇಗೆ?

• • •

ಕಲಿತವರಿಗೇನು ಗತಿ?

"ಕಲಿತವರಿಗೆ ಕೆಲಸವಿಲ್ಲ" ಎಂದು ಹೇಳುವುದು ನಮ್ಮ ಪ್ರಾಂತ್ಯದಲ್ಲಿ ರೂಢಿಯಾಗುತ್ತ ಬಂದದೆ. ಬಂಗಾಳದಲ್ಲಿ ಇಲ್ಲಿಗಿಂತ ಎಷ್ಟೋ ಪಾಲು ಹೆಚ್ಚಿಗೆ ಇದೇ ಸ್ಥಿತಿ ಬೆಳೆದಿದೆ. ಪ್ರೌಢ ವಿದ್ಯಾಭ್ಯಾಸ ಕಲಿತವರ ಬಡತನವನ್ನು ನಿವಾರಿಸಲಿಕ್ಕೆಂದು ಕಲ್ಕತ್ತಾ ಯುನಿವರ್ಸಿಟಿಯವರು ವಿಸ್ತಾರವಾದ ಸ್ಥಳವನ್ನು ಕೊಂಡುಕೊಂಡಿದ್ದಾರೆ. ಅದನ್ನು ಕೃಷಿ, ಗೋಪಾಲನ, ರೇಶ್ಮೆಯ ಉತ್ಪತ್ತಿ ಮಾಡಲಿಕ್ಕೆ ಇಚ್ಛೆಯುಳ್ಳ ವಿದ್ಯಾವಂತರಿಗೆ ಗೇಣಿಗೆ ಕೊಟ್ಟು ಅವರಿಗೆ ಬೇರೆ ಎಲ್ಲ ಸಲಹೆಗಳನ್ನು ಸಹ ಒದಗಿಸಿಕೊಡಬೇಕೆಂದು ಯುನಿವರ್ಸಿಟಿಯವರ ಆಶೆ. ತತ್ಕಾಲಕ್ಕೆ ಎಲ್ಲ ತರದ ಸನ್ನಾಹಗಳು ತಯಾರಾಗುವ ವರೆಗೆ ಸ್ಥಳವನ್ನು ಅಖಿಲ ಭಾರತ ಗೋರಕ್ಷಣಾ ಸಭೆಯವರ ವಶಕ್ಕೆ ಬಿಟ್ಟಿದ್ದಾರೆ. ಮುಂದೆ ಹೇಗೆಲ್ಲ ಆಗುತ್ತದೆಂದು ನೋಡಬೇಕಾಗಿದೆ. ಕಲ್ಕತ್ತೆಯವರ ಸ್ಥಿತಿಯನ್ನಾದರೂ ಕಂಡು ನಮ್ಮ ವಿದ್ಯಾಖಾತೆಯವರು ಕೈಗಾರಿಕೆ, ಕೃಷಿ ಇವುಗಳಿಗೆ ಉತ್ತೇಜನ ಸಿಗುವಂಥಾ ಶಿಕ್ಷಣವನ್ನು ಹೆಚ್ಚಿಸುವುದು ಅಗತ್ಯ. ಹಾಗೆ ಮಾಡದೆ ಈಗಿನ ರೀತಿಯ ಇನ್ನು ಕೆಲವು ಫಸ್ಟ್‌ಗ್ರೇಡ್ ಕಾಲೇಜುಗಳ ಮೇಲೆ ಹಣವನ್ನು ವ್ಯಯಮಾಡುವಂಥಾದ್ದು ಅನಾವಶ್ಯಕ.

• • •

ಪೆನಗಲ್ ರಾಜರ ವೆಂಕಟೇಶ್ವರ ಯುನಿವರ್ಸಿಟಿ!

ಎಂಡೌಮೆಂಟ ಬಿಲ್ಲಿನ ಉತ್ಪಾದಕರಾದ ಪೆನಗಲ್ ರಾಜರು ತಮ್ಮ ಅರ್ವತ್ತೊಂದನೇ ಜನ್ಮದಿವಸದ ಭಾಷಣದಲ್ಲಿ ತಿರುಪತಿಯ ಭಂಡಾರದ ಹಣದಿಂದ ಶ್ರೀ ವೆಂಕಟೇಶ್ವರ ಯುನಿವರ್ಸಿಟಿ ಎಂಬ ವಿಶ್ವವಿದ್ಯಾಲಯವನ್ನು ಕಾಶೀಶ್ರಾಸಿಯ ಹಿಂದೂ ಯೂನಿವರ್ಸಿಟಿಯ ರೀತಿಯಲ್ಲಿ ಸ್ಥಾಪಿಸಬೇಕೆಂದು ಹೇಳಿದರು. ಬೋರ್ಡಿನ ಕಮಿಶನರರಲ್ಲಿ ಒಬ್ಬರಾದ ಚೆಂಗಯ್ಯನವರು ತಿರುಪತಿಗೆ ಹೋಗಿದ್ದರೆಂದೂ, ಯೂನಿವರ್ಸಿಟಿಯನ್ನು ಸ್ಥಾಪಿಸಲಿಕ್ಕೆ ತಕ್ಕ ಸ್ಥಳವನ್ನು ನೋಡಿದ್ದಾರೆಂದೂ ಮದ್ರಾಸ್ ಮೈಲಿನ ಸುದ್ದಿ. ತನ್ನ ಕಾರ್ಯದಲ್ಲಿ ಒಳ್ಳೇ ಫಲವಿದೆ ಎಂದು ತೋರಿಸಲಿಕ್ಕೆ ಹಾ ಗರೆಯುವ ರಾಜರು ಬೇಗನೇ ಇಂಥ ಕೆಲಸಕ್ಕೆ ಕೈಹಾಕಿದ್ದರಲ್ಲಿ ಆಶ್ಚರ್ಯವಿಲ್ಲ. ಬರುವ ತಿಂಗಳೊಳಗಾಗಿ ಹೊಸ ಯುನಿವರ್ಸಿಟಿಯ ಬಿಲ್ಲು ತಯಾರಾಗುತ್ತದಂತೆ. ಈ ವಿಷಯದಲ್ಲಿ ಕೌನ್ಸಿಲಿನಲ್ಲಿ ಚರ್ಚೆ ಮಾಡಬೇಕಾದ್ದು ಅಗತ್ಯ. ತಿರುಪತಿಯ ಭಂಡಾರದಲ್ಲಿ ವರ್ಷಕ್ಕೆ ಕೂಡಿ ಬರುವ ಎಲೆಂಟು ಲಕ್ಷ ರೂಪಾಯಿಗಳು ದೇವಸ್ಥಾನದ ಮತ್ತು ಯಾತ್ರಿಕರ ಸೌಕರ್ಯಕ್ಕೆ ವಿನಿಯೋಗ ಮಾಡಬೇಕಾದ್ದೋ? ಯುನಿವರ್ಸಿಟಿಯನ್ನು ನಡೆಸಲಿಕ್ಕೆ ಏಳೆಂಟು ಲಕ್ಷ ರೂಪಾಯಿಗಳು ಸಾಕಾಗದ್ದರಿಂದ ಬೇರೆ ಯಾವ ದೇವಸ್ಥಾನಗಳ ಹಣವನ್ನು ಅಲ್ಲಿಗೆ ಒಯ್ಯಲಿಕ್ಕಿದ್ದಾರೋ? ಯುನಿವರ್ಸಿಟಿಯ ಅಧಿಕಾರಿಗಳು ಯಾರಾಗಬೇಕು? ಎಂಡೌಮೆಂಟ ಬೋರ್ಡಿನ ಕಮಿಶನರರಂತೆ ಅವರು ಮಿನಿಸ್ಟರರ ಮತ್ತು ಜಸ್ಟಿಸ್ ಪಾರ್ಟಿಯ ಮುಖಂಡರ ಬಂಧುಗಳೇ ಆಗಬೇಕೋ? ಯುನಿವರ್ಸಿಟಿಯಲ್ಲಿ ಹಿಂದೂ ಧರ್ಮ, ಸಂಸ್ಕೃತ ಮತ್ತು ಈಗಿನ ದೇಶಭಾಷೆಗಳ ಸ್ಥಾನವು ಯಾವುದು? ಇವೇ ಮುಂತಾದ ಪ್ರಶ್ನೆಗಳನ್ನು ಚರ್ಚಿಸದೆ ಜಸ್ಟಿಸ್ ಪಂಗಡದ ಕೆಲವರಿಗೆ ಕೆಲಸಕೊಡಲಿಕ್ಕೆಂದೇ ಯುನಿವರ್ಸಿಟಿಯನ್ನು ಸ್ಥಾಪಿಸಲಿಕ್ಕೆ ಬಿಡಕೂಡದು. ಬಂಗಾಳದಲ್ಲಿ ಬರೇ ಇಂಗ್ಲಿಷ್ ಭಾಷಾಜ್ಞಾನ ಇದ್ದವರ ಸ್ಥಿತಿಯನ್ನು ನೋಡಿಯಾದರೂ ನಾವು ಸ್ವಪ್ರಾಂತ್ಯದಲ್ಲಿ ದುಡುಕದೇ ಇರಬೇಕಲ್ಲವೇ? ಶ್ರೀ ವೆಂಕಟೇಶ್ವರ ಯುನಿವರ್ಸಿಟಿಯು ಅವಶ್ಯವೆಂದು ಕಂಡುಬಂದರೆ ಅದರಲ್ಲಿ ಬರೇ ಇಂಗ್ಲಿಷ್ ವಿದ್ಯೆಯನ್ನು ಕೊಡದೆ ಹಿಂದೂಧರ್ಮ, ಸಂಸ್ಕೃತ ಮತ್ತು ದೇಶಭಾಷೆಗಳಿಗೆ ಉಚ್ಚ ಸ್ಥಾನವನ್ನು ಕೊಡುವುದು ಅಗತ್ಯ. ಅದು ಹೊರತು ಕೈಗಾರಿಕೆಗಳಲ್ಲಿ ಹುಡುಗರನ್ನು ತರಬೇತು ಮಾಡಲಿಕ್ಕೆ ಹಣವನ್ನು ಉಪಯೋಗಿಸುವುದು ಹೆಚ್ಚು ಅಗತ್ಯವಿದೆ. ನಮ್ಮ ಜಿಲ್ಲೆಯಿಂದ ಕೌನ್ಸಿಲಿಗೆ ಹೋಗುವ ಮೆಂಬರರು ಇವೆಲ್ಲ ಸಂಗತಿಗಳನ್ನು ಮರೆಯದೆ ಇರಬೇಕೆಂದು ನಮ್ಮ ವಿಜ್ಞಾಪನೆ.

• • •

— ಚೀನಾದೊಳಗೆ ಗಲಾಟೆ. —

ಚೀನಾದೇಶದ ವಿದ್ಯಾರ್ಥಿಗಳು ಶಾಂಘಾಯ ಬಂದರದಲ್ಲಿ ದಂಗೆಯನ್ನು ಪ್ರಾರಂಭಿಸಿರುವ ಸಂಗತಿಯನ್ನು ನಮ್ಮ ಕಳೆದ ಸಂಚಿಕೆಯಲ್ಲಿಯ ವರ್ತಮಾನ ಸಂಗ್ರಹದಿಂದ ವಾಚಕರಿಗೆ ತಿಳಿದುಬಂದಿದೆ. ಅಲ್ಲಿ ವಿದ್ಯಾರ್ಥಿಗಳು ಪ್ರಾರಂಭಿಸಿರುವ ಈ ದಂಗೆಯು ೧೯೦೦ರಲ್ಲಿ ಉಂಟಾದ ಬೋಕ್ಸರ ಜನರ ಬಂಡಿನಲ್ಲಿ ರೂಪಾಂತರವನ್ನು ಹೊಂದುತ್ತದೋ ಏನೊ ಎಂದು ಅನೇಕರ ಊಹೆ ಇದೆ. ಶಾಂಘಾಯ ಪಟ್ಟಣವು ಚೀನದ ವಶದಲ್ಲಿ ಇದೆಯಾದರೂ ಆ ಬಂದರದಲ್ಲಿ ಫ್ರೆಂಚ್, ಅಮೇರಿಕನ್ ಮತ್ತು ಬ್ರಿಟಿಷರ ವಸಾಹತಿನ ಯಾವ ಭಾಗವಿದೆಯೊ ಅದು ಚೀನಾ ಸರಕಾರದ ಆಳಿಕೆಯಲ್ಲಿ ಇಲ್ಲ; ಅಲ್ಲಿ ಒಂದು ಬಗೆಯ ಲೋಕಸತ್ತಾಕ ಸ್ವರಾಜ್ಯವೆ ಇದೆ. ಜಪಾನ, ಫ್ರೆಂಚ, ಬ್ರಿಟಿಷ್, ರುಶ್ಯನ್ ಇತ್ಯಾದಿ ಪರಕೀಯ ಜನರ ವಸತಿಯು ಮುಖ್ಯತಃ ಈ ಲೋಕಸತ್ತಾಕ ಭಾಗದಲ್ಲಿ ಇದ್ದು ಚೀನಾ ಸರಕಾರದ ಆಳಿಕೆಯೊಳಗಿನ ಶಾಂಘಾಯ ಪಟ್ಟಣದ ಶಾಲೆಗಳು ಪರಕೀಯ ವಸಾಹತಿಗೆ ಬಹು ಸಮೀಪದಲ್ಲಿವೆ. ಈ ಶಾಲೆಗಳ ವಿದ್ಯಾರ್ಥಿಗಳೆ ಪ್ರಸ್ತುತದ ದಂಗೆಯನ್ನು ಪ್ರಾರಂಭಿಸಿರುವರೆಂದು ಹೇಳೋಣಾಗುತ್ತದೆ. ಸಿಂಗಟೊ ಬಂದರದಲ್ಲಿ ಇರುವ ಜಪಾನಿ ಗಿರಣಿಗಳಲ್ಲಿ ದಂಗೆಯುಂಟಾದ ಕಾರಣ ಅಲ್ಲಿಯ ಜಪಾನಿ ಅಧಿಕಾರಿಗಳು ಚೀನಿ ಕೂಲಿಗಳನ್ನು ಹೊಡೆದರು. ಇದರ ಮುಯ್ಯಿಯನ್ನು ತೀರಿಸುವದಕ್ಕಾಗಿ ಈ ದಂಗೆಯು ಪ್ರಾರಂಭವಾಗಿದೆ ಎಂದು ಹೇಳುತ್ತಿದ್ದಾರೆ. ದಂಗೆಯ ಪ್ರಾರಂಭದಲ್ಲಿ ಚೀನಿ ವಿದ್ಯಾರ್ಥಿಗಳು ಒಂದು ಮೆರವಣಿಗೆಯನ್ನು ಹೊರಡಿಸಿದರು. ಆ ಮೆರವಣಿಗೆಯಲ್ಲಿ 'ಪರಕೀಯ ಪಿಶಾಚರನ್ನು ಹೊರಡಿಸಿರಿ' ಎಂಬ ಅಭಿಪ್ರಾಯದ ಹಸ್ತಪತ್ರಕಗಳನ್ನು ಅವರು ಹಂಚಿದರು. ಅನಂತರ ಆ ವಿದ್ಯಾರ್ಥಿಗಳು ಪೋಲಿಸರ ಮೇಲೆ ಬಿದ್ದರು. ಪೋಲಿಸರ ಹತ್ಯಾರುಗಳನ್ನು ಕಸುಕೊಳ್ಳಲು ವಿದ್ಯಾರ್ಥಿಗಳು ಪ್ರಯತ್ನಿಸಿದರೆಂದು ಪರಕೀಯರ ಪಕ್ಷದ ಅಂಬೋಣವಿದೆ. ವಿದ್ಯಾರ್ಥಿಗಳ ಈ ಹಲ್ಲೆಯನ್ನು ಹಿಂತಿರುಗಿಸಲು ಪೋಲಿಸರು ಗುಂಡುಗಳನ್ನು ಹಾರಿಸಿದರು. ೬ ಜನರು ಮೃತಪಟ್ಟರು, ೪ ಜನರು ಗಾಯಪಟ್ಟರು. ಗುಂಡುಹಾರಿಸಿದ ಈ ಕೃತ್ಯವು ನಿಷ್ಕಾರಣವಾಗಿ ಮಾಡಲ್ಪಟ್ಟಿತೆಂದು ಚೀನಿ ಕಮಿಶನರರ ಅಂಬೋಣವಿದೆ. ಪೋಲೀಸರು ಆತ್ಮಸಂರಕ್ಷಣಕ್ಕಾಗಿಯೆ ಗುಂಡುಗಳನ್ನು ಹಾರಿಸಿದ್ದಾಗಿದೆ ಎಂದು ಪರಕೀಯ ವಸಾಹತಿನವರ ಪರವಾಗಿ ಇಟೆಲಿಯನ್ ವಕೀಲನು ಕಮಿಶನರರ ಅಂಬೋಣಕ್ಕೆ ಉತ್ತರವನ್ನು ಕೊಟ್ಟು ಮುಂದರಿಸುವುದೇನೆಂದರೆ—ಚೀನಾ ಸರಕಾರವು ವಿದ್ಯಾರ್ಥಿಗಳ ದಂಗೆಯನ್ನು ಶಾಂತಪಡಿಸಿದ್ದಾದರೆ ಪರಕೀಯ ಸರಕಾರಗಳು ಆದುದಕ್ಕೆ ಪ್ರತೀಕಾರವನ್ನು ಮಾಡದೆ ಸ್ನೇಹದಿಂದ ಈ ಪ್ರಕರಣವನ್ನು ತೀರಿಸಬಹುದು. ಚೀನಿ ಕಮಿಶನರ ಮತ್ತು ಇಟೆಲಿಯನ್ ವಕೀಲರೊಳಗಿನ ಉತ್ತರ ಪ್ರತ್ಯುತ್ತರಗಳು ಒಂದೆಡೆಯಲ್ಲಿ ಈ ಮೇರೆಗೆ ನಡೆಯುತ್ತಿರುವಾಗ ಅತ್ತ ವಿದ್ಯಾರ್ಥಿಗಳು ವ್ಯಾಪಾರಿ ಮಂಡಲ ಮತ್ತು ಮುನ್ಸಿಪಲ್ ಕೌನ್ಸಿಲುಗಳಿಂದ ಮುಷ್ಕರವನ್ನು ಹಾಕಿಸಿದರು. ಈ ಮುಷ್ಕರದಲ್ಲಿ ಸುಮಾರು ೨೫ ಸಾವಿರ ಕೂಲಿಗಳು ಸೇರಿದ್ದರು. ಮುಷ್ಕರಗಾರರು ಮುಖ್ಯವಾಗಿ ಜಪಾನ ಮತ್ತು ಬ್ರಿಟಿಷ್ ಜನರ ಮೇಲೆಯೆ ದೃಷ್ಟಿಯನ್ನಿಟ್ಟಿರುವರು. ಇವರಲ್ಲಿ ಒಬ್ಬರಿಬ್ಬರು ಸಿಕ್ಕಿದ್ದಲ್ಲಿ ಮುಷ್ಕರಗಾರರು ಹಲ್ಲೆಯನ್ನು ಮಾಡುವರು. ಪರದೇಶಿ ವಸಾಹತವಾಲರ ಸಂರಕ್ಷಣಕ್ಕಾಗಿ ಬ್ರಿಟಿಷ್, ಅಮೇರಿಕನ್, ಇಟಾಲಿಯನ್ ಮತ್ತು ಜಪಾನ ಹಡಗುಗಳಿಂದ ಖಲಾಸಿಗಳನ್ನು ಕೆಳಗಿಳಿಸಿರುವರು. ಅಲ್ಲದೆ ಜಪಾನಿನಿಂದ ೨೦೦ ಸಿಪಾಯಿಗಳನ್ನು ತೆಕ್ಕೊಂಡು ಒಂದು ಬೋಟು ಬರುತ್ತಿದೆ. ಇಂಗ್ಲಂಡಿನ ಹಡಗವು ಬಂದು ತಲುಪಿದೆ. ಈ ಮೇರೆಗೆ ಪರಕೀಯರು ಆತ್ಮಸಂರಕ್ಷಣದ ಏರ್ಪಾಡನ್ನು ಮಾಡುತ್ತಿದ್ದಾರೆ. ವಿದ್ಯಾರ್ಥಿಗಳು ಮೆರವಣಿಗೆಯನ್ನು ಹೊರಡಿಸಿ ಪರಕೀಯರಿಂದ ಉಂಟಾಗುವ ತೊಂದರೆಯನ್ನು ಜಾಹೀರಪಡಿಸುತ್ತಿದ್ದಾರೆ. ಪರಕೀಯರಿಗೆ ಕೊಮ್ಯೂನಿಸ್ಟರ ಸಹಾಯವಿದ್ದುದರಿಂದ ಅವರನ್ನು ನಿಷೇಧಿಸುವ ಪ್ರಸಂಗಗಳನ್ನು ಪ್ರಾರಂಭಿಸಿರುವರು. ಕ್ಯಾಂಟೊ ಎಂಬಲ್ಲಿಯೂ ದಂಗೆಯು ಪ್ರಸರಿಸಹತ್ತಿದೆ. ಸರಿಯಾದ ಹೊಡೆದಾಟವು ಪ್ರಾರಂಭವಾಗಿದೆ. ಸೈನ್ಯವು ಬಂದು ತಲುಪಿದೆ. ಪೋರ್ತುಗಲಿನಿಂದ ಯುದ್ಧದ ಹಡಗವು ಬಂದಿದೆ. ಬ್ರಿಟಿಷರದು ೪, ಅಮೇರಿಕನ್ ೨, ಜಪಾನಿಯ ೨ ಮತ್ತು ಫ್ರೆಂಚ ೨ ಈ ಮೇರೆಗೆ ತೋಫಿಗಳ ಹಡಗುಗಳು ಥೊಪಲೆ ಸಿದ್ಧವಾಗಿವೆ.

• • •

ಅಲವಾರ ಸಂಸ್ಥಾನದೊಳಗಿನ ಅನರ್ಥ!

ಅಲವಾರದಲ್ಲಿ ಉಂಟಾದ ಗಲಾಟೆಯ ವಿಷಯವು ಈಗ ಸರಿಯಾಗಿ ಬಹಿರಂಗವಾಗಿದೆ. ಅಲವಾರ ಸಂಸ್ಥಾನದ ಪ್ರಜೆಗಳ ಮೇಲೆ ವಿಪರೀತ ಕರವನ್ನು ಹೊರಿಸಿದ್ದರಿಂದ ಅವರಲ್ಲಿ ಅಸಂತೋಷವು ಹುಟ್ಟುವುದು ಸಹಜ. ಅವರು ವಿನಂತಿಗಳನ್ನು ಮಾಡಿಕೊಂಡರು, ಕೇಳಿಕೊಂಡರು, ಬೇಡಿಕೊಂಡರು, ಆದರೂ ಸಂಸ್ಥಾನದ ಕಡೆಯಿಂದ ಇದಕ್ಕೆ ಕಿವಿಗೊಡಲಾಗಲಿಲ್ಲ. ಎಂದರೆ ಪ್ರಜೆಗಳ ಈ ಹ್ವಾಲುಹವಾಲೆಗಳು ರಾಜರ ಕಿವಿತನಕ ಹೋಗಲಿಲ್ಲ. ಆಗ ಅಲ್ಲಿಯ ಪ್ರಜೆಗಳು ಅಲವಾರದಿಂದ ಸುಮಾರು ೩೦-೩೫ ಮೈಲಿನ ದೂರದಲ್ಲಿರುವ ನೀಮುಚಾಣಾ ಎಂಬ ಊರಲ್ಲಿ ಸಭೆ ಸೇರಿಸಿ ಕಂದಾಯವನ್ನು ಹೆಚ್ಚಿಸಿದ್ದಕ್ಕಾಗಿ ಆ ಸಭೆಯಲ್ಲಿ ಜಾಹೀರ ಠರಾವನ್ನು ಮಾಡಿದರು. ಸಂಸ್ಥಾನವು ಈ ಅನ್ಯಾಯವನ್ನು ಪರಿಹರಿಸಬೇಕು, ಹಾಗೆ ಮಾಡದಿದ್ದಲ್ಲಿ ಬ್ರಿಟಿಷ್ ಸರಕಾರವು ಮಧ್ಯಸ್ಥಿಕೆಯನ್ನು ವಹಿಸಿ ಇದನ್ನು ದೂರಪಡಿಸಬೇಕು ಎಂದು ಠರಾವಿನ ಅಂಬೋಣವಿತ್ತು. ಸಂಸ್ಥಾನದ ಕಡೆಯಿಂದ ಜನರ ಹೇಳಿಕೆಯನ್ನು ಕೇಳಿಕೊಳ್ಳಲು ನೀಮುಚಾಣಕ್ಕೆ ಒಂದು ಮಂಡಲವು ಬಂತು. ಇಲ್ಲಿವರೆಗಿನ ಈ ಚರಿತ್ರೆಯು ಸರಿ. ಆದರೆ ಮುಂದಿನ ಕಥೆಯು ಮಾತ್ರ ಲೋಮಹರ್ಷಕವಾಗಿದೆ. ಆ ಊರಲ್ಲಿ ಸಂಸ್ಥಾನದ ಇಂಪೀರಿಯಲ್ ದಂಡಿನ ಪೈಕಿ ೩೦೦ ಕಾಲಾಳು, ೩೦೦ ಕುದುರೆಸವಾರರು ಮತ್ತು ನಾಲ್ಕು ಮಶೀನ ಗನ್ನುಗಳು ಇಷ್ಟನ್ನು ತೆಕ್ಕೊಂಡು ದಂಡಿನ ಅಧಿಕಾರಿಗಳು ಬಂದು ಮೊದಲು ಊರನ್ನು ಮುತ್ತಿದರು! ಊರೊಳಗಿನ ಹಿಂದಿನ ಸ್ಥಳಗಳನ್ನು ಕೈವಶಪಡಿಸಿಕೊಂಡರು! ನೀರಿನ ಕಷ್ಟವು ಬಂದೊದಗಲಿ ಜನರು ಅಸಂತುಷ್ಟರಾದರು. ಊರೊಳಗಿನ ೮—೧೦ ಮುಖಂಡರು ಸ್ವತಃ ಅಧಿಕಾರಿಯ ಬಳಿಗೆ ಹೋದರು. ಅವರು ಹೋದ ಕೂಡಲೆ ಅವರ ಮೇಲೆ ಗುಂಡು ಹಾರಿಸೋಣಾಯಿತು. ಅವರೆಲ್ಲರು ಅಲ್ಲಿಯೆ ಮೃತಪಟ್ಟರು! ಅದೆ ರಾತ್ರಿ ಪೆಟ್ರೋಲಿನ ಮತ್ತು ಸೀಮೆ ಎಣ್ಣೆಯ ಸಹಾಯದಿಂದ ಊರಿಗೆ ಬೆಂಕಿ

(ಇನ್ನೂ ಮುಂದೆ ಮುಂದುವರಿಸುವದು.)

ಅನುಕ್ರಮಣಿಕೆ

ಅಗ್ರಲೇಖ — ಪುಟಗಳು.
ದೇಶಬಂಧು ದಾಸರ ಶೋಚನೀಯ ನಿಧನ. ೬
ಸ್ಫುಟವಿಚಾರಗಳು—
೧. ಚೀನಾದೊಳಗಿನ ದಂಗೆ ,,
೨. ಕಲಕತ್ತೆಯ ಯುರೋಪಿಯನ್ ಎಸೋಸಿಯೇಶನಿನ ವಿಘ್ನಸಂತೋಷ ,,
೩. ಮುಳಶಿಯ ಸತ್ಯಾಗ್ರಹಿಗಳಿಗೆ ಶಿಕ್ಷೆ ,,
೪. ಒ. ಇಂ. ಕೊಂ. ಕಮಿಟಿ ,,
೫. ಬಂಗಾಳದ ದ್ವಿದಲ ಪದ್ಧತಿಯು ಅಸ್ತಮಿಸಿತು.
ಮಂಗಳೂರು
ವರ್ತಮಾನಸಂಗ್ರಹಗಳು—
ವಿದೇಶ — ಒಳದೇಶ ವರ್ತಮಾನ ೫
ದಕ್ಷಿಣ ಕನ್ನಡ — ಮುಲ್ಕಿ ,,
ವಿವಿಧ ವಿಷಯಗಳು ೫-೮
ದೇಶಬಂಧು ದಾಸರ ನಿಧನ ೮

ಸ್ವದೇಶಾಭಿಮಾನಿ

ಶಕ ೧೮೪೭ ಜ್ಯೇಷ್ಠ ಬ|| ೧೩ಯು ಶುಕ್ರವಾರ.

ದೇಶಬಂಧು ದಾಸರ ಶೋಚನೀಯ ನಿಧನ.

ಸಕಲ ಹಿಂದುಸ್ಥಾನದ ಸನ್ಮಾನನೀಯ ಮುಖಂಡರೂ, ಪರಮಸ್ವಾರ್ಥತ್ಯಾಗಿಗಳೂ ಆದ ದೇಶಬಂಧು ದಾಸರವರು ಈ ತಿಂಗಳ ತಾ. ೧೬ರಲ್ಲಿ ಅವರ ದಾರ್ಜಿಲಿಂಗದ ಬಂಗಲೆಯಲ್ಲಿ ಹೃದಯದ ಚಲನೆಯು ಫಕ್ಕನೆ ನಿಂತು ಅದರಿಂದಲೆ ನಿಧನವನ್ನು ಹೊಂದಿದರೆಂಬ ದುಃಖವಾರ್ತೆಯನ್ನು ಕೇಳಿ ಇಡೀ ಹಿಂದುಸ್ಥಾನವು ವಿದ್ಯುಚ್ಛಕ್ತಿಯ ಆಘಾತವು ತಟ್ಟಿದಂತೆ ಸ್ತಂಭಿತವಾಗದೆ ಇರಲಿಕ್ಕಿಲ್ಲ. ಬೆಳಗಾವಿನ ರಾಷ್ಟ್ರೀಯ ಸಭೆಯ ಸಮಯದಲ್ಲಿ ದೇಶಬಂಧು ದಾಸರವರ ಆ ವಿಶಾಲವಾದ ದೇಹಬಂಧದ ಸಂದರ್ಶನವನ್ನು ಹೊಂದಿದ ಕನ್ನಡಿಗರು ಈ ದುರ್ವಾರ್ತೆಯನ್ನು ಮೊದಲು ಮೊದಲು ನಂಬಲಿಕ್ಕೇ ಇಲ್ಲ. ಆದರೆ ಮೃತ್ಯುವು ಬಂದು ಗ್ರಾಸಮಾಡುವಾಗ ವ್ಯಕ್ತಿಯ ಗುಣಗಳನ್ನು ಹೇಗೆ ಅಪೇಕ್ಷಿಸುವದೊ ಹಾಗೆ ಭವ್ಯವಾದ ಶರೀರವನ್ನು ಕೂಡ ಗ್ರಾಸಿಸಲು ಹವಣಿಸುತ್ತಿದೆಯಾಗಿರಬಹುದು. ಬೆಳಗಾವಿನ ರಾಷ್ಟ್ರೀಯ ಸಭೆಯಿಂದ ದಾಸರವರು ಹಿಂತಿರುಗಿ ಬಂಗಾಳಕ್ಕೆ ಹೋದ ಬಳಿಕ ಅವರು ಕೆಲವು ದಿವಸ ಅಸ್ವಸ್ಥದಲ್ಲಿ ಬಿದ್ದಿದ್ದರು. ಮೂತ್ರವ್ಯಾಧಿಯು ಅವರಿಗಿದ್ದ ಕಾರಣ ಆಗಾಗ್ಯೆ ಜ್ವರವು ಬರುತ್ತಿತ್ತು. ಡೊಕ್ಟರುಗಳ ಸಹಾಯದಿಂದ ಅದಕ್ಕೆ ಯೋಗ್ಯವಾದ ಉಪಚಾರವು ನಡೆಯುತ್ತಲೇ ಇತ್ತು. ಶರೀರವು ಕೊಂಚಮಟ್ಟಿಗೆ ಕ್ಷೀಣವಾದಂತೆ ತೋರಿದರೂ ಇಷ್ಟು ಬೇಗನೆ ಇಂಥ ಅನಿಷ್ಟ ಸಂಗತಿಯು ಸಂಭವಿಸೀತೆಂದು ಸ್ವಪ್ನದಲ್ಲಿ ಕೂಡ ಯಾರೂ ನೆನಸಿರಲಿಲ್ಲ.

ಆದರೆ ಹಿಂದುಸ್ಥಾನದ ದುರ್ದೈವವು ಅತ್ಯಂತ ಪ್ರಬಲವಾಗಿದೆ. ಪರವಶವಾದ ಈ ಹಿಂದುಸ್ಥಾನವನ್ನು ಉದ್ಧರಿಸಿ ಅದಕ್ಕೆ ಸ್ವರಾಜ್ಯದ ಮತ್ತು ಸ್ವಾತಂತ್ರ್ಯದ ಪೂರ್ವ ವೈಭವವನ್ನು ಕೊಡಲು ತನ್ಮಯರಾಗಿ ಅಹರ್ನಿಶ ಪ್ರಯತ್ನವನ್ನು ನಡಿಸಲು ಯಾರ್‍ಯಾರು ದೀಕ್ಷಾಬದ್ಧರಾಗಿ ಹೋರಾಡುವರೊ ಅಂಥವರನ್ನೆ ಮೃತ್ಯುವು ಅಕಸ್ಮಾತ್ತಾಗಿ ಈ ಹಿಂದುಸ್ಥಾನದಿಂದ ಒಯ್ಯುತ್ತದೆ. ತನ್ನ ಉದ್ಧಾರಕ್ಕಾಗಿ, ದಾರಿ ತಪ್ಪಿದವರಂತೆ ನಾನಾ ವಿಧದಿಂದ ಮಾರ್ಗ ಹುಡುಕುತ್ತಿರುವ ಈ ಜನಾಂಗಕ್ಕೆ ಲೋಕಮಾನ್ಯ ಟಿಲಕರು ಸ್ವರಾಜ್ಯದ ಮೂಲಮಂತ್ರವನ್ನುಪದೇಶಿಸಿ ಅದರ ಎಲ್ಲ ವಿಧದ ಪ್ರಯತ್ನವು ಈ ಒಂದೆ ಧ್ಯೇಯಸಿದ್ಧಿಗಾಗಿ ನಡೆಯುವಂತೆ ಮುಂದಿನ ಉಪಕ್ರಮವನ್ನು ಮಾಡುತ್ತಿದ್ದರು; ಅಷ್ಟರಲ್ಲಿ ಕಾಲಮೃತ್ಯುವಿನ ಕಠೋರವಾದ ಕೈಯು ಆ ಲೋಕಮಾನ್ಯರ ಮೇಲೆ ಬಿದ್ದು ಅವರನ್ನು ಕೊಂಡುಹೋಯಿತು. ಅವರ ನಂತರ ಅದೇ ಸಂಪ್ರದಾಯವನ್ನನುಸರಿಸಿ ರಾಜಕೀಯ ಚಳವಳದ ಅಸಿಧಾರಾವ್ರತವನ್ನು ಕೈಕೊಂಡು ಚಿತ್ತರಂಜನ ದಾಸರವರು ಸ್ವರಾಜ್ಯ ಯುದ್ಧದ ಈ ರಣಾಂಗಣದಲ್ಲಿ ಮುಖ್ಯಸೇನಾಪತಿಯಾಗಿ ಎದುರು ಕಡೆಯವರಿಗೆ ಸರಿಯಾಗಿ ಪೆಟ್ಟಿಗೆ ಪೆಟ್ಟು ಕೊಟ್ಟು ಅವರ ಬಲವನ್ನು ಕುಗ್ಗಿಸಿ ಅವರ ಪ್ರದೇಶವನ್ನು ಕ್ರಮ ಕ್ರಮವಾಗಿ ಆಕ್ರಮಿಸುತ್ತಿದ್ದಾರೆ. ಅಷ್ಟರಲ್ಲೆ ಅವರ ಮೇಲೂ ಕೂಡ ಕ್ರೂರ ಮೃತ್ಯುವು ತನ್ನ ಪಾಶವನ್ನು ಹಾಕಿ ಇಷ್ಟಾರ್ಥವನ್ನು ಪಡೆಯಿತು. ಇದು ಹಿಂದುಸ್ಥಾನದ ಪ್ರಬಲ ದುರ್ದೈವವಲ್ಲವೆ? ಇಂಥ ಸಮಯದಲ್ಲಿ—ನೋಕರಶಾಹಿಯ ಪ್ರತಿಯೊಂದು ಕುಟಿಲೋಪಾಯಕ್ಕೆ ತಕ್ಕ ಪ್ರತೀಕಾರವನ್ನು ಹೂಡಿ ಅದನ್ನು ಹಿಮ್ಮೆಟ್ಟಿಸುತ್ತ ತಂದ ಈ ಸಮಯದಲ್ಲಿ—ತಥಾಪಿ ಅದೇ ನೋಕರಶಾಹಿಯು ನಿರ್ಲಜ್ಜವಾದ ರೀತಿಯಲ್ಲಿ ಪುನಃ ಕುತಂತ್ರವನ್ನು ಹೂಡಿ ಸ್ವರಾಜ್ಯದ ಮಾರ್ಗದಲ್ಲಿ ಇನ್ನೂ ಹೊಸ ನಮೂನೆಯ ಮುಳ್ಳುಗಳನ್ನು ತಂದೊಡ್ಡಿದ ಈ ಸಮಯದಲ್ಲಿ—ದೇ. ಬಂ. ದಾಸರಂಥ ಮುಖ್ಯಯೋದ್ಧರೆ ಕಾಲವಶವಾಗುವದೆಂದರೆ ದೈವದುರ್ವಿಪಾಕದ ಪರಮಾವಧಿಯೆ ಸರಿ.

ದಾಸರು ವೀರಪುರುಷರು. ದಾಸರವರಿಗೆ ಹೇಗೆ ವಯಸ್ಸು ಹೆಚ್ಚಾಗಿರಲಿಲ್ಲವೊ ಹಾಗೆಯೆ ಅವರು ರಾಜಕಾರಣದಲ್ಲಿ ಪ್ರಾಮುಖ್ಯವನ್ನು ಹೊಂದಿ ಹೆಚ್ಚು ಕಾಲವಾಗಲಿಲ್ಲ. ೧೯೦೮ರಲ್ಲಿ ಶ್ರೀ ಅರವಿಂದಘೋಷರ ಮೇಲಿನ ಖಟ್ಲೆಯಲ್ಲಿ ಅವರ ಕಡೆಯ ವಕಾಲತನ್ನು ವಹಿಸಿ ಅವರನ್ನು ಬಿಡಿಸಿದಂದಿನಿಂದ ದಾಸರವರ ಪ್ರಖ್ಯಾತಿಯುಂಟಾಯಿತು. ಬಂಗಾಲದ ನವಜಾಗೃತಿಯ ಪ್ರಾರಂಭದಲ್ಲಿ ಅರವಿಂದಘೋಷ, ಬಿಪಿನಚಂದ್ರಪಾಲ ಮುಂತಾದವರು ಚಳವಳದ ನುಗವನ್ನು ಹೊತ್ತುಕೊಂಡು ನಡಿಸುತ್ತಿದ್ದರು. ಆದರೆ ಒಂದೊಂದು ಕಾರಣದಿಂದ ಒಬ್ಬೊಬ್ಬರು ದೂರ ದೂರಕ್ಕೆ ತೊಲಗಹತ್ತಿದ ಬಳಿಕ ಅಲ್ಲಿಯ ರಾಷ್ಟ್ರೀಯ ಚಳವಳದ ಧೂರ್ವಹತ್ವವನ್ನು ದಾಸರವರಿಗೆನೆ ಅಂಗೀಕರಿಸಬೇಕಾಗಿ ಬಂತು. ರಾಷ್ಟ್ರೀಯ ಸಭೆಯಲ್ಲಿಯ ಬಿರುಕು ಲಖನೌದಲ್ಲಿ ಹೋಗಲಾಡಿಸಿ ಎಲ್ಲ ಪಕ್ಷಗಳು ಒಟ್ಟಿಗೆ ಸೇರಿದ ಬಳಿಕ ಹಾಗು ಲೋಕಮಾನ್ಯ ಟಿಳಕರ ನೇತೃತ್ವದಲ್ಲಿ ರಾಷ್ಟ್ರೀಯ ಪಕ್ಷವು ಬಲಗೊಂಡ ಬಳಿಕ ಬಂಗಾಲದಲ್ಲಿ ದಾಸರು ಆ ರಾಷ್ಟ್ರೀಯ ಪಕ್ಷದ ಮುಖಂಡರಾದರು. ಹೊಸ ಸುಧಾರಣೆಗಳ ಕಾನೂನು ಪಾಸಾಗಿ ಅವು ಜಾರಿಯಲ್ಲಿ ಬರುವಷ್ಟರೊಳಗೆ ಪಂಜಾಬದ ಅನಾಹುತದ ದೆಸೆಯಿಂದ ಅಸಹಕಾರ ಚಳವಳವು ಅಂಕುರಿಸಿ ಅದು ದೇಶದಲ್ಲಿ ಒಂದು ದೊಡ್ಡ ಅಂದೋಲನವನ್ನು ಮಾಡಿಬಿಟ್ಟಿತು. ಈ ಸಂದರ್ಭದಲ್ಲಿ ದಾಸರವರು ಮತ್ತು ಅವರ ಸಹಕಾರಿಗಳು ಈ ಹೊಸ ಚಳವಳಕ್ಕೆ ತಮ್ಮ ಅಪೂರ್ವವಾದ ಬೆಂಬಲದಿಂದ ಸರಕಾರಕ್ಕೆ ಪರಾಜಯವನ್ನು ಕೊಟ್ಟು ಅದು ತನ್ನ ಮುಖವನ್ನು ತಗ್ಗಿಸುವಂತೆ ಮಾಡಿದರು. ಆಗ ಅಸಹಕಾರದ ಚಳವಳವು ನಿಜವಾದ ಕ್ರಿಯಾಸ್ವರೂಪವನ್ನು ತಾಳಿ ಒಂದು ಕಡೆಯಲ್ಲಿ ಲೋಕಜಾಗೃತಿ, ಇನ್ನೊಂದು ಕಡೆಯಲ್ಲಿ ನೋಕರಶಾಹಿಯ ದರ್ಪಭಂಜನ ಈ ಎರಡು ಕೆಲಸಗಳನ್ನು ಮಾಡುತ್ತಿರುವಾಗ ಈ ಚಿತ್ತರಂಜನ ದಾಸರೆ ಬಂಗಾಲದಲ್ಲಿ ಪ್ರಥಮತಃ ಸರಕಾರದ ರೋಷಕ್ಕೆ ಆಹುತಿಯಾಗಿ ಬಿದ್ದರು. ಯುವರಾಜರು ಬಂದಿರುವ ಸಮಯದಲ್ಲಿ ಕ್ರಿಮಿನಲ್ ಲೊ ಎಮೆಂಡಮೆಂಟ ಎಕ್ಟಿನ ಮೇರೆಗೆ ದಾಸರವರನ್ನು ಸರಕಾರವು ಆರು ತಿಂಗಳು ಕಾರಾಗೃಹಕ್ಕೆ ಕಳುಹಿಸಿತು. ಅವರನ್ನು ಹಿಂಬಾಲಿಸಿ ಬಂಗಾಲದಲ್ಲಿ ಸಾವಿರಾರು ಜನರು ಜೈಲಿಗೆ ಹೋದರು. ಸರಕಾರವು ಲೋಕಮತವನ್ನು ತುಳಿದು ನಿರ್ಲಜ್ಜತನದಿಂದ ಯುವರಾಜರ ಸಮಾರಂಭವನ್ನು ಮಾಡಿಸಿದಾದರೂ ಕಲಕತ್ತೆಯಲ್ಲಿ ಪ್ರಚಂಡವೂ, ಅಭೂತ ಪೂರ್ವವೂ ಆದ ಹರತಾಳವು ಬಿದ್ದು ನೋಕರಶಾಹಿಯ ಸಮಾರಂಭವು ಸಂಪೂರ್ಣ ವಿರಸವಾಗಿ ಹೋಯಿತು. ಇದರ ಎಲ್ಲ ಶ್ರೇಯಸ್ಸು ಶ್ರೀ. ದಾಸರವರಿಗೆನೆ ಹೋಗತಕ್ಕದಾಗಿದೆ. ಯುವರಾಜರ ಆಗಮನದ ಬಹಿಷ್ಕಾರ, ಕೌನ್ಸಿಲ್ ಬಹಿಷ್ಕಾರ, ಕೋರ್ಟು ಬಹಿಷ್ಕಾರ, ಶಿಕ್ಷಣ ಬಹಿಷ್ಕಾರ, ಪರದೇಶಿ ವಸ್ತ್ರ ಬಹಿಷ್ಕಾರ ಇತ್ಯಾದಿ ಇತ್ಯಾದಿ ಅನೇಕ ಬಹಿಷ್ಕಾರಗಳು ಪ್ರಚಾರಕ್ಕೆ ಬಂದಿರುವ ಆ ಸಮಯವು—ಕ್ರಿಯಾರೂಪವಾದ ಆ ಸುವರ್ಣ ಸಮಯವು—ಬಾರ್ಡೋಲಿಯ ಕಾಯಿದೆಭಂಗದ ಚಳವಳವನ್ನು ಪ್ರಾರಂಭಿಸದೆ ನಿಲ್ಲಿಸಿದ್ದರಿಂದ ಹಿಂದಕ್ಕೆ ಬಿತ್ತು. ದೇಶದ ಮೇಲೆಲ್ಲ ಔದಾಸೀನ್ಯವು ಬಂದು ಹೋಯಿತು. ಸುಪ್ತಾವಸ್ಥೆಯು ಬಂದುಬಿಟ್ಟಿತು. ಚಳವಳಕ್ಕೆ ಕ್ರಿಯಾಸ್ವರೂಪವು ಹೋಗಿ ಬರೆ ತತ್ವಜ್ಞಾನದ ಸ್ವರೂಪವು ಬಂದು ಬಿಟ್ಟಿತು. ಅಹಿಂಸಾ, ಅನತ್ಯಾಚಾರ, ಸತ್ಯ, ಪರಮಾರ್ಥ, ಶಾಂತಿ ಇತ್ಯಾದಿ ತತ್ವವಿಚಾರಗಳೆ ಪ್ರಬಲವಾದವು. ಮತ್ತು ಮೇಲೆ ಹೇಳಿದಂತೆ ಕ್ರಿಯಾಲೋಪವು ಬಂದುಹೋಯಿತು. ಇಂಥ ಅಂಧಕಾರದಲ್ಲಿ ಮುಂದಿನ ದಾರಿಯನ್ನು ಹುಡುಕುವ ಮಹತ್ಕಾರ್ಯವು ಹಾಗೆಯೆ ಬಾಕಿ ಉಳಿಯಿತು. ಆದರೆ ದಾಸರವರು ೬ ತಿಂಗಳ ಜೈಲ್‌ವಾಸದಿಂದ ಬಂದ ಕೂಡಲೆ ಪಂಡಿತ ಮೋತಿಲಾಲನೇಹರು ಮುಂತಾದ ಮುಖಂಡರ ಆಲೋಚನೆಯನ್ನು ತಕ್ಕೊಂಡು ಈ ಮುಂದಿನ ಮಾರ್ಗವನ್ನು ಹುಡುಕಿ ತೆಗೆದರು.

ಕೌನ್ಸಿಲ್ ಬಹಿಷ್ಕಾರವು ಪ್ರಯೋಜನವಿಲ್ಲ. ಯೋಗ್ಯರಾದವರು ಒಂದು ಸ್ಥಾನವನ್ನು ಬಿಟ್ಟ ಬಳಿಕ ಅಯೋಗ್ಯರು ಅದನ್ನು ಆಕ್ರಮಿಸುವರು. ಸರಕಾರಕ್ಕೆ ಬೇಕಾದುದು ಇದೆ ಸರಿ. ಆದ್ದರಿಂದ ಕೌನ್ಸಿಲುಗಳನ್ನು ಬಹಿಷ್ಕರಿಸಿ ಛಿದ್ರಾನ್ವೇಷಿಯೂ, ವಿಘ್ನಸಂತೋಷಿಯೂ ಆದ ಸರಕಾರಕ್ಕೆ ಇಷ್ಟಾರ್ಥವನ್ನು ಸಾಧಿಸಿಕೊಡುವುದು ಚಂದವಲ್ಲವೆ, ಇದು ಆತ್ಮಘಾತಕತ್ವದ ಮತ್ತು ರಾಷ್ಟ್ರಘಾತಕತ್ವದ ಲಕ್ಷಣವಾಗಿದೆ ಎಂಬುದನ್ನು ತಿಳಿದು, ಲೋಕಕ್ಕೆ ಬೋಧಿಸಿ ದಾಸರವರು ಕೌನ್ಸಿಲ್‌ಪ್ರವೇಶದ ಚಳವಳವನ್ನು ಪ್ರಾರಂಭಿಸಿದರು. ಅವರು ಪ್ರಾರಂಭಿಸಿರುವ ಈ ಚಳವಳದಲ್ಲಿ ಸ್ವದೇಶೀಯ ಮತ್ತು ವಿದೇಶೀಯ ಜನರಿಂದ ಬೇರೆ ಬೇರೆ ಕಾರಣಗಳಿಂದ ವಿಘ್ನಗಳು ಬರುತ್ತಿದ್ದವಾದರೂ, ಉಪರೋಧವು ತಗಲುತ್ತಿತ್ತಾದರೂ, ಒಂದಕ್ಕೂ ಹಿಂಜರಿಯದೆ ದಾಸರವರು ತಮ್ಮ ಸ್ವಾಭಾವಿಕವಾದ ಚಾತುರ್ಯದಿಂದಲೂ, ದೀರ್ಘ ದೃಷ್ಟಿಯಿಂದಲೂ, ಮುತ್ಸದಿತನದಿಂದಲೂ, ರಾಜಕಾರಣದ ನೈಪುಣ್ಯದಿಂದಲೂ ಮತ್ತು ಎಲ್ಲಕ್ಕೂ ಮುಖ್ಯವಾದ ಸ್ವದೇಶಿಭಕ್ತಿಯ ಅತ್ಯುತ್ಕಟತೆಯಿಂದಲೂ ತಾವು ಕೈಕೊಂಡಿರುವ ಕೌನ್ಸಿಲ್ ಪ್ರವೇಶದ ಚಳವಳವನ್ನು ಸಾಂಗಗೊಳಿಸಿ ಸರಕಾರದ ಅದೆ ಕೌನ್ಸಿಲುಗಳಲ್ಲಿ,—ಉಚ್ಚಾಸನದ ಮೇಲೆ ಗವರ್ನರರೂ, ಅವರ ಎಡಬಲದಲ್ಲಿ ಹೊರೆ ಹೊರೆಯಾಗಿ ಸಂಬಳ ಹೋರುವ ಕಾರ್ಯಕಾರಿ ಮಂತ್ರಿಗಳೂ ವಿರಾಜಮಾನರಾಗಿರುವ ಅದೆ ಕೌನ್ಸಿಲುಗಳಲ್ಲಿ—ಅವರೆದುರು ಅವರ ಕಿವಿಗಳಲ್ಲಿ ಸೀಸದ ಬಿಸಿಯಾದ ರಸದಂತೆ ಅವರ ಅನ್ಯಾಯದ ಪಾತಗಳನ್ನು ಕೇಳಿಸಿದರು. ಉಪರೋಧದಿಂದ ಕೌನ್ಸಿಲುಗಳಿಗೆ ಬಾಗಿಲು ಮುಚ್ಚಿಸಿದರು. ದಾಸರವರು ಸ್ವರಾಜ್ಯ ಚಳವಳದಲ್ಲಿ ತನ್ಮಯರಾಗಿ ಹೋಗಿದ್ದುದರಿಂದ ೧೦೩-೧೦೪ ಡಿಗ್ರಿ ವರೆಗೂ ಜ್ವರವು ಬಂದಿರುವ ಆಪತ್ತಿನ ಆ ಕಠಿಣ ಕಾಲವನ್ನಾಗಲಿ, ಸ್ವಂತ ದೇಹವನ್ನಾಗಲಿ ಗಣನೆಗೆ ತಾರದೆ ೪ ಜನರಿಂದ ತನ್ನನ್ನು ಎತ್ತಿಸಿಕೊಂಡು ಕೌನ್ಸಿಲಿಗೆ ಹೋಗಿ ತನ್ನ ದೀಕ್ಷೆಯನ್ನು ಸಫಲಗೊಳಿಸಿದರು. ದಾಸರವರು ಬಂಗಾಲ ಒರ್ಡಿನನ್ಸನ್ನು ಹೇಗೆ ಹೇಗೆ ಪ್ರತಿಬಂಧಿಸಿದರು, ಮಂತ್ರಿಗಳ ಸಂಬಳದ ಠರಾವನ್ನು ಸರಕಾರವು ಒಂದು, ಎರಡು, ಮೂರು ಸಾರೆ ಈ ಮೇರೆಗೆ ಪುನಃ ಪುನಃ ಕೌನ್ಸಿಲಿನಲ್ಲಿ ತಂದಾಗ ಪ್ರತಿಯೊಂದು ಸಾರೆ ದಾಸರವರು ಅದನ್ನು ಹೇಗೆ ಹೇಗೆ ಉಪರೋಧಿಸಿದರು ಈ ಎಲ್ಲಾ ಸಂಗತಿಗಳು ಅವರ ಇತ್ತಲಾಗಿನ ಚರಿತ್ರೆಯೊಳಗಿನ ಶೂರಕೃತ್ಯಗಳಾದ್ದರಿಂದ ಅವು ಎಲ್ಲರಿಗೆ ತಿಳಿದೆ ಇವೆ. ಅವರು ದೇಶಕ್ಕಾಗಿ ಮಾಡಿದ ಸ್ವಾರ್ಥತ್ಯಾಗವು ಇಡೀ ಲೋಕಕ್ಕೆ ವಿದಿತವಾಗಿದೆ. ಅವರ ಈ ಸ್ವಾರ್ಥತ್ಯಾಗವನ್ನು ನೋಡಿ ಅವರ ಮಿತ್ರರಂತೆಯೆ ಅವರ ಪ್ರತಿ ಸ್ಪರ್ಧಿಗಳು ಕೂಡ ಆಶ್ಚರ್ಯಚಕಿತರಾದರು.

ಈ ಮೇರೆಗೆ ಸರ್ವ ದೃಷ್ಟಿಯಿಂದ ಅತ್ಯುನ್ನತರಾದ ದೇಶಬಂಧು ದಾಸರು ಈ ನಶ್ವರ ಶರೀರವನ್ನು ಬಿಟ್ಟು ಸ್ವರ್ಗವನ್ನೈದಿರುವರು. ಅಲ್ಲಿ ಅವರ ಆತ್ಮಕ್ಕೆ ಚಿರಶಾಂತಿಯು ಲಭಿಸುವಂತೆ ಇಲ್ಲಿ ಅವರು ಮುಂದರಿಸಿದ ಚಳವಳಕ್ಕೆ ಫಲಪ್ರಾಪ್ತಿಯಾಗಲೆಂದು ಪ್ರಾರ್ಥನೆಮಾಡಿ ಈ ಹೊತ್ತಿನ ಶೋಕಜನಕವಾದ ಕರ್ತವ್ಯದಿಂದ ನಮ್ಮ ಲೇಖಣಿಯನ್ನು ಕೆಳಗಿಡುವೆವು.

ಸ್ಫುಟವಿಚಾರಗಳು.

೧. ಚೀನಾದೇಶದಲ್ಲಿ ಉದ್ಭವಿಸಿರುವ ದಂಗೆಯ ವೃತ್ತಾಂತವನ್ನು ಈ ಹೊತ್ತು ಇನ್ನೊಂದು ಕಡೆಯಲ್ಲಿ ಪ್ರತ್ಯೇಕವಾಗಿ ಪ್ರಕಟಿಸಿರುತ್ತೇವೆ. ಪರಕೀಯರು ತಮ್ಮ ಸೈನ್ಯದ ಬಲದಿಂದ ಚೀನಾದೇಶದೊಳಗಿನ ಈ ದಂಗೆಯನ್ನು ಮುರಿದು ಶಾಂತತೆಯನ್ನು ಒಂದು ವೇಳೆ ಸ್ಥಾಪಿಸಬಹುದು. ತಥಾಪಿ ಆ ಶಾಂತತೆಯು ಚಿರಸ್ಥಾಯಿಯಾಗಿ ನಿಲ್ಲಲಿಕ್ಕಿಲ್ಲ. ಅದು ಕ್ಷಣಿಕವಾದುದು. ಚೀನದ ವಿದ್ಯಾರ್ಥಿಗಳಲ್ಲಿ ಸ್ವದೇಶದ ಅಭಿಮಾನವು ಜಾಗೃತವಾಗಿರುವುದರಿಂದ ಪರಕೀಯರು ಚೀನದೇಶವನ್ನು ಬಿಟ್ಟುಹೋಗಬೇಕೆಂದು ಚಳವಳವನ್ನು ಮಾಡುತ್ತಿದ್ದಾರೆ. ಈ ಮಧ್ಯದಲ್ಲಿ ಬೊಲಶೇವಿಕ್ ತತ್ವಗಳ ಪ್ರಸಾರವು ಕೂಡ ಅಲ್ಲಿ ಉಂಟಾಗಿದೆ. ಪರಕೀಯರ ಪೈಕಿ ಬ್ರಿಟಿಷರ ಮೇಲೆಯೆ ವಿಶೇಷವಾಗಿ ಅಲ್ಲಿಯ ಸರಕಾರವು ವಕ್ರದೃಷ್ಟಿಯನ್ನಿಟ್ಟಿರುವುದು. ಈ ಅನರ್ಥಕ್ಕೆ ಅಲ್ಲಿರುವ ಬ್ರಿಟಿಷರೆ ಕಾರಣವಾಗಿದ್ದಾರೆಂದು ಬೊಲ್‌ಶೇವಿಕರ ಮತ್ತು ಬಿರುಸು ತಂಡದವರಾದ ವಿದ್ಯಾರ್ಥಿಗಳ ಮತವನ್ನು ಚೀನದ ಸ್ಥಳಿಕ ಸರಕಾರವು ಅನುವಾದಿಸುತ್ತಿದೆ. ಈ ಅಂದೋಲನವನ್ನು ಅದು ಕಟ್ಟಿಕೊಂಡಿರುವುದರಿಂದ ಬ್ರಿಟಿಷರ ತೀವ್ರ ನಿಷೇಧಪರವಾದ ಅಭಿಪ್ರಾಯವನ್ನು ಕಳುಹಿಸಿಕೊಟ್ಟಿದೆ. ಚೀನಾಸರಕಾರದ ಒಬ್ಬ ಸೇನಾಪತಿಯು ಪ್ರಕಟವಾದ ಅಭಿಪ್ರಾಯವನ್ನು ನೋಡುವಾಗ ಚೀನಾಸರಕಾರವು ಯುದ್ಧಕ್ಕೂ ಕೂಡ ಸಿದ್ಧವಾಗಿದೆ ಎಂದು ಕಂಡುಬರುತ್ತದೆ. ಆತನು ಹೇಳುವುದೇನೆಂದರೆ:—"ಬ್ರಿಟಿಷರೊಡನೆ ವಿರೋಧವು ಪ್ರಾರಂಭವಾದ್ದಲ್ಲಿ ಎಲ್ಲರಿಗಿಂತ ಮುಂಚೆ ನಾನು ರಣಭೂಮಿಯನ್ನು ಪ್ರವೇಶಿಸುವೆನು. ಇಂಗ್ಲಂಡಿನ ಹತ್ತರ ನಾವೆಗಳ ಬಲವು ಅಪರಿಮಿತವಾಗಿದೆ ಎಂಬುದರಿಂದ ಚೀನವು ಅಂಜಬೇಕಾದ ಅಗತ್ಯವಿಲ್ಲ. ಯಾಕೆಂದರೆ, ಅದರ ಹತ್ತರ ಸೈನ್ಯವು ಕಡಿಮೆ". ಈ ಪ್ರಕಾರವಾಗಿ ಒಂದು ಕಡೆಯಲ್ಲಿ ಒಬ್ಬ ಚೀನಾ ಸೇನಾನಾಯಕನು ದರ್ಪೋಕ್ತಿಗಳನ್ನು ಹೊಚ್ಚುವಾಗ ದಂಗೆಕೋರರು ಬ್ರಿಟಿಷರ ಮತ್ತು ಜಪಾನಿಗಳ ಆಫೀಸುಗಳಿಗೆ ಬೆಂಕಿಕೊಡುತ್ತಿರುವರು. ಜಪಾನಿನಿಂದ ವಿನಾಶಕಬೋಟು ಬಂದಿಳಿದೆ. ಈ ಪ್ರಕಾರವಾಗಿ ಚೀನಾದೇಶದಲ್ಲಿ ನಡೆದಿರುವ ಸಂಗತಿಗಳನ್ನು ಆಲೋಚಿಸುವಾಗ ಪರಸ್ಪರ ಯುದ್ಧವು ಪ್ರಾರಂಭವಾಗುತ್ತದೊ ಎಂಬ ಭಯವು ಹುಟ್ಟುತ್ತದೆ. ಲೋಕವು ಮುಂಚಿನ ಮಹಾಯುದ್ಧದ ಕಷ್ಟದಿಂದಲೆ ಇನ್ನೂ ಪಾರಹೊಂದಲಿಲ್ಲ. ಅಷ್ಟರಲ್ಲಿ ಈ ಯುದ್ಧವು ಪುನಃ ಪ್ರಾರಂಭವಾದರೆ ಲೋಕದೊಳಗಿನ ಜನರ ಕಷ್ಟಗಳಿಗೆ ಪಾರವೆ ಇಲ್ಲದಂತಾಗುವುದು. ಆದರೆ ವೀರರ ಸಂಗತಿಯೆ ಬೇರೆ. ಇಂಥ ಸಂದರ್ಭದಲ್ಲಿ ಅವರ ಬಾಹುಗಳು ಸ್ಫುರಿಸುತ್ತಿರುತ್ತವೆ.

೨. ಹಿಂದೂಸ್ಥಾನಕ್ಕೆ ಸದ್ಯದಲ್ಲಿ ಹೆಚ್ಚಿನ ಸುಧಾರಣೆಗಳು ಸಿಗಲಿಕ್ಕಿಲ್ಲವೆಂಬುದು ಬರ್ಕನ್‌ಹೆಡ್ಡರ ಮಾತಿನಿಂದ ನಿಷ್ಪನ್ನವೆ ಆಗಿಹೋಗಿದೆ. ಹೀಗಿರುವಾಗ ಹೊಸ ಸುಧಾರಣೆಗಳು ಇಷ್ಟು ಬೇಗನೆ ಬೇಡ''ವೆಂದು ಹೊರಗಿನವರು ಯಾರೂ ಹೇಳಬೇಕಾದ ಅಗತ್ಯವಿಲ್ಲ. ಆದರೂ ಬಂಗಾಲದ ಯುರೋಪಿಯನ್ ಎಸೋಸಿಯೇಶನು ೧೯೨೯ನೆಯ ಇಸವಿಗಿಂತ ಮುಂಚೆ ಸುಧಾರಣೆಗಳ ತನಖಿಗಾಗಿ ಕಮಿಶನನ್ನು ನೇಮಿಸಬಾರದು ಎಂದು ಸೂಚಿಸಿ ಒಂದು ಠರಾವನ್ನು ತನ್ನ ಸಭೆಯಲ್ಲಿ ಪಾಸುಮಾಡಿ ತನ್ನ ಮತ್ಸರ ಮತ್ತು ವಿಘ್ನ ಸಂತೋಷತ್ವವನ್ನು ಹೊರಚಲ್ಲಿದೆ. ತನಖಿಗಾಗಿ ಕಮಿಶನಿನ ಸುದ್ದಿಯನ್ನೆತ್ತುವ ಈ ಎಸೋಸಿಯೇಶನು ಹಿಂದಿ ಲೋಕಮತದ ವಿಷಯದಲ್ಲಿ ಒಂದೆ ಅಜ್ಞಾನಿಯಾಗಿರಬೇಕು; ಇಲ್ಲವೆ ಬೇಕೆಂದು ಲೋಕಮತವನ್ನಲ್ಲಗಳೆಯುವ ಕುತ್ಸಿತತನವನ್ನು ತೋರಿಸಿರಬೇಕು. ಯಾಕೆಂದರೆ, ಪುನಃ ಕಮಿಶನ್ ನೇಮಕದ ದೀರ್ಘ ಸೂತ್ರತ್ವವನ್ನು ಯಾರೂ—ಸಪ್ರೈತಂಡದವರು ಕೂಡ—ಅನುಮತಿಸುವುದಿಲ್ಲ. ದ್ವಿದಲಪದ್ಧತಿಯನ್ನು ತೆಗೆದು ಪ್ರಾಂತಿಕ ಸ್ವಾತಂತ್ರ್ಯವನ್ನು ಕೊಡಿರಿ ಎಂದು ಈಗ ಎಲ್ಲರೂ ಏಕಪ್ರಕಾರವಾಗಿ ಕೇಳುತ್ತಿದ್ದಾರೆ. ಹೀಗಿರಲು ಬಂಗಾಲದ ಯುರೋಪಿಯನ್ ಎಸೋಸಿಯೇಶನು ಕಣ್ಣಿನ ಮೇಲೆ ಅಜ್ಞಾನದ ಅಥವಾ ಮತ್ಸರದ ಚರ್ಮವನ್ನು ಹೊದ್ದುಕೊಂಡು ಮೇಲಿನಂಥ ಅಪ್ರಾಸಂಗಿಕ ಠರಾವುಗಳನ್ನು ಪಾಸುಮಾಡುವುದೆಂದರೆ ತನ್ನ ಮೂರ್ಖತನವನ್ನು ಪ್ರದರ್ಶಿಸುವುದೆ ಸರಿ; ಇಲ್ಲವೆ ವಿದೂಷಕತ್ವವನ್ನು ತೋರಿಸುವುದಾಗಿದೆ. ವಿಘ್ನಸಂತೋಷಿಗಳಾದ ಇಂಥ ಎಸೋಸಿಯೇಶನುಗಳು ಈ ತರದ ಅಪಕಾರವನ್ನು ಮಾಡುವುದಕ್ಕಾಗಿಯೆ ಅವತಾರವನ್ನೆತ್ತಿವೆಯಲ್ಲದೆ ಬೇರೆ ಯಾವುದಕ್ಕೂ ಅಲ್ಲ.

೩. ಮುಳಶಿಪೇಟೆಯ ಸತ್ಯಾಗ್ರಹದಲ್ಲಿ ಪ್ರಸಿದ್ಧಿಗೆ ಬಂದಿರುವ ಸೇನಾಪತಿ ಬಾಪಟರಿಗೂ ಮತ್ತು ಅವರ ಸಹಕಾರಿಗಳಿಗೂ ಮುಂಬಯಿ ಹೈಕೋರ್ಟು ಕಠಿಣವಾದ ಶಿಕ್ಷೆಯನ್ನು ವಿಧಿಸಿ ತನ್ನ ಕಠೋರತ್ವವನ್ನು ವ್ಯಕ್ತಗೊಳಿಸಿದೆ. ಬಾಪಟರು ಈ ಸತ್ಯಾಗ್ರಹದ ಮುಖ್ಯಸ್ಥರು. ಅವರಿಗೆ ೭ ವರುಷದ ಕಠಿಣ ಶಿಕ್ಷೆಯು ವಿಧಿಸಲ್ಪಟ್ಟಿದೆ. ಇತರರಿಗೆ ಕಡಿಮೆ. ಟಾಟಾ ಪವರ ಕಂಪೆನಿಯು ಮುಳಶಿಯಲ್ಲಿ ಜಲಾಶಯವನ್ನು ಕಟ್ಟಿಸುವುದರಿಂದ ಆ ನೀರಿನಲ್ಲಿ ಅಲ್ಲಿಯ ೧೦ ಸಾವಿರ ಮಾವಳೆ ಜನರ ಜಮೀನುಗಳೂ ಮನೆಮಾರುಗಳೂ ಮುಳುಗಿಹೋಗುತ್ತವೆ. ಅದುಕಾರಣ ಟಾಟಾ ಕಂಪೆನಿಯು ಈ ಅನ್ಯಾಯವನ್ನು ಮಾಡಕೂಡದೆಂದು ಬೇರೆ ಎಲ್ಲ ವಿಧಿಗಳು ಮುಗಿದ ಬಳಿಕ ಸತ್ಯಾಗ್ರಹವು ಪ್ರಾರಂಭವಾಗಿತ್ತು. ಸಾಮಸತ್ಯಾಗ್ರಹಕ್ಕೂ ಕಂಪೆನಿಯು ಬಗ್ಗಲಿಲ್ಲವಾದ್ದರಿಂದ ಸತ್ಯಾಗ್ರಹ ಮಂಡಲದ ಪ್ರಮುಖರಾದ ಶ್ರೀ ಬಾಪಟರು ಇತರ ಸಹಕಾರಿಗಳ ಸಮೇತರಾಗಿ ಕಂಪೆನಿಯ ಮೇಲೆ ಯುದ್ಧವನ್ನು ಜಾಹೀರಪಡಿಸಿ ಕಂಪೆನಿಯ ರೈಲಗಾಡಿಯು ಕಲ್ಲುಗಳನ್ನು ತುಂಬಿಸಿಕೊಂಡು ಮುಳಶಿಗೆ ಹೋಗುವಾಗ ಅದನ್ನು ತಡೆಯಿಸಿ ಯುದ್ಧಮಾಡಿದರು. ಈ ಯುದ್ಧದಲ್ಲಿ ಕಂಪೆನಿಯ ನೋಕರರಿಗೆ ಗಾಯವಾಯಿತು. ಮತ್ತೆ ಪೋಲೀಸರು ಬಂದು ಸತ್ಯಾಗ್ರಹಿಗಳನ್ನು ಕೈದುಮಾಡಿದರು. ಈ ಖಟ್ಲೆಯು ಪುನೆಯ ಸೆಶನ್‌ಕೋರ್ಟಿನಲ್ಲಿ ನಡೆದು ಅದರಲ್ಲಿ ಜ್ಯೂರಿಗಳು ಬಾಪಟರನ್ನು ನಿರ್ದೋಷಪಡಿಸಿದರು. ಪರಂತು ಈ ಅಭಿಪ್ರಾಯಕ್ಕೆ ತೃಪ್ತಿಪಡೆದ ಜಡ್ಜರು ಖಟ್ಲೆಯನ್ನು ಹೈಕೋರ್ಟಿಗೆ ಕಳುಹಿಸಿದರು. ಮುಂಬಯಿ ಹೈಕೋರ್ಟಿನವರು ತಮ್ಮ ಕೈಯಲ್ಲಿರುವ ನ್ಯಾಯದ ತಕ್ಕಡಿಯಿಂದ ಯಾವ ಬಗೆಯ ನ್ಯಾಯವನ್ನು ಕೊಟ್ಟರೆಂಬುದನ್ನು ಮೇಲೆ ಹೇಳಿಯೆ ಇದ್ದೇವೆ. ಇಂಥ ಕ್ರೂರವಾದ ಮತ್ತು ಅನ್ಯಾಯದ ನ್ಯಾಯವು ಹೈಕೋರ್ಟಿನಂಥ ಒಂದನೆಯ ತರಗತಿಯ ನ್ಯಾಯಾಸನಕ್ಕೆ ಹೇಗೆ ಒಪ್ಪುತ್ತದೊ, ನಮಗನಕ ಗೊತ್ತಾಗದು. ಯುದ್ಧವೆಂದು ಹೇಳಿದರೂ ಅವರು ಹೆಚ್ಚಿನ ಅತ್ಯಾಚಾರವನ್ನು ನಡಿಸಿರಲಿಲ್ಲ. ಇಲ್ಲವೆ ಪ್ರಾಣಹಾನಿಯು ಕೂಡ ಆಗಿಲ್ಲ. ಅಂಥ ಸಂದರ್ಭದಲ್ಲಿ ೭ ವರುಷದ ಶಿಕ್ಷೆಯು—ಅದು ಕೂಡ ಎಮ್. ಎ. ಪದವಿ ಪಡೆದಿರುವ ಉಚ್ಚತರ ವಿದ್ವಾಂಸನಿಗೆ—ವಿಧಿಸಲ್ಪಟ್ಟದ್ದು ತುಂಬಾ ವಿಷಾದಕರವಾಗಿದೆ.' ಇದನ್ನು ಯಾರೂ ನಿಷೇಧಿಸದೆ ಇರಲಿಕ್ಕಿಲ್ಲ.

೪. ಕಲಕತ್ತೆಯಲ್ಲಿ ಬರುವ ತಿಂಗಳ ಮೊದಲನೆಯ ಹಪ್ತೆಯಲ್ಲಿ ಕೊಂಗ್ರೆಸ್ಸಿನ ವರ್ಕಿಂಗ್ ಕಮಿಟಿಯ ಸಭೆಯು ಜರಗುವದಿದೆ. ಇದು ಈ ಮೊದಲೆ ಜರಗುವದಿತ್ತು. ಆದರೆ ಮೀಟಿಂಗಿಗೆ ಬೇಕಾಗಿರುವ ಹಾಜರಿಯು ಇದ್ದಿಲ್ಲವಾದ್ದರಿಂದ ಅದು ಮುಂದರಿಸಲ್ಪಟ್ಟಿತ್ತು. ಈಗಲಾದರೂ ಅದು ಸೇರುವದೆಂದು ಭರವಸೆಪಡಬೇಕಾಗಿದೆ. ರಾಜಕೀಯ ವಿಷಯದಲ್ಲಿ ವಿಶೇಷವಾದ ಸಂಗತಿಗಳು ಉಂಟಾಗ ಹತ್ತಿವೆ. ನಮ್ಮ ನಮ್ಮೊಳಗಿನ ಜಗಳದಿಂದ ನಾವೆ ದುರ್ಬಲರಾಗುತ್ತ ಬಂದಿರುವಾಗ ಸರಕಾರವು ಬಂಗಾಳದಂಥ ಕಡೆಯಲ್ಲಿಯ ವಿಭಕ್ತ ಇಲಾಖೆಗಳನ್ನು ತಾನೆ ಕೈವಶಮಾಡಿಕೊಂಡು ಉಚ್ಛೃಂಖಲವಾಗಿ ವರ್ತಿಸಲು ನಿಶ್ಚಯಿಸಿದೆ. ಇಂಥ ಪರಿಸ್ಥಿತಿಯು ಬಂದಿರುವ ಸಮಯದಲ್ಲಿ ರಾಷ್ಟ್ರೀಯ ಸಭೆಯು ಸುಮ್ಮನೆ ಕುಳಿತುಕೊಳ್ಳುವುದು ಅನುಚಿತವು. ಆದ್ದರಿಂದ ಅದರ ಕಾರ್ಯಕಾರಿ ಸಂಸ್ಥೆಯಾದ ಒಲ್ ಇಂಡಿಯಾ ಕೊಂಗ್ರೆಸ್ ಕಮಿಟಿಯ ಅಧಿವೇಶನವನ್ನು ಜರಗಿಸುವುದಕ್ಕಾಗಿ ಮುಂಚೆ ಈ ವರ್ಕಿಂಗ್ ಕಮಿಟಿಯು ಸೇರುವುದು ಅತ್ಯಂತ ಅಗತ್ಯವಾಗಿದೆ

೫. ದುರದೃಷ್ಟವು ಒಮ್ಮೆ ಬೆನ್ನುಹತ್ತಿಕೊಂಡಿತೆಂದರೆ, ಅದರಿಂದ ಬೇಗನೆ ಬಿಡುಗಡೆಯಾಗುವದಿಲ್ಲ. ಬಂಗಾಳದ ಅವಸ್ಥೆಯು ಹೀಗೆಯೇ ಸರಿ. ದೇಶಬಂಧು ದಾಸರು ಅಕಲ್ಪಿತವಾಗಿ ನಿಧನಹೊಂದಿರುವುದರಿಂದ ಬಂಗಾಲದ ಲೋಕಪಕ್ಷವು ಪಕ್ಷವಾತದಿಂದ ಪೀಡಿತವಾದಂತಾಗಿದೆ. ದೇಶಬಂಧು ದಾಸರವರ ಈ ನಿಧನವು ಬಂಗಾಲದಲ್ಲಿ ಸರಕಾರವು ಕೈಕೊಂಡಿರುವ ಪ್ರತಿಗಾಮಿ ಧೋರಣದ ಈ ಸಮಯದಲ್ಲಿ ಇನ್ನಷ್ಟು ವ್ಯಸನಪ್ರದವಾಗಿದೆ. ಬಂಗಾಲದ ಕೌನ್ಸಿಲು ದಾಸರವರ ನಾಯಕತ್ವದ ಕೆಳಗೆ ದ್ವಿದಲ ರಾಜ್ಯಪದ್ಧತಿಗೆ ತಿಲಾಂಜಲಿಯನ್ನು ಕೊಡುವ ಉದ್ದೇಶದಿಂದ ಮಂತ್ರಿಗಳ ಸಂಬಳವನ್ನು ಮಂಜೂರುಮಾಡಿರಲಿಲ್ಲ. ಮೂರು ಸಾರೆ ಸರಕಾರದ ಕಡೆಯಿಂದ ಮಂತ್ರಿಗಳ ಸಂಬಳದ ಪ್ರಶ್ನೆಯು ಇಡಲ್ಪಟ್ಟಾಗ ಪ್ರತಿ ಒಂದು ಸಾರಿ ಸರಕಾರಕ್ಕೆನೆ ಅಪಜಯವು ಬಂದು ಸಂಬಳದ ಠರಾವು ಬಿದ್ದುಹೋಗಿತ್ತು. ಹಿಂದೂಸ್ಥಾನ ಸರಕಾರವು ಭಾರತಮಂತ್ರಿಗಳ ಸಮ್ಮತಿಯನ್ನು ಪಡಕೊಂಡು ಬರುವ ಜನವರಿ ವರೆಗಿನ ವಿಭಕ್ತ ಇಲಾಖೆಗಳನ್ನು ರದ್ದುಪಡಿಸಿದ ಪ್ರಕಟಣೆಯನ್ನು ಜಾಹೀರಪಡಿಸಿದೆ. ದ್ವಿದಲ ಪದ್ಧತಿಯನ್ನು ರದ್ದುಪಡಿಸಿದ್ದಕ್ಕೆ ಯಾರೂ ಆಕ್ಷೇಪವನ್ನು ಎತ್ತುವುದಿಲ್ಲ. ಕಾರಣ, ಅದು ಯಾರಿಗೂ ಇಷ್ಟವಿರಲಿಲ್ಲ. ಆದರೆ ಪ್ರಾಂತಿಕ ಸ್ವರಾಜ್ಯವನ್ನು ಕೊಡಬೇಕೆಂದು ಅದನ್ನು ರದ್ದುಪಡಿಸುವಾಗಲೆ ಲೋಕಪಕ್ಷದ ಯಾವ ಅಂಬೋಣವಿತ್ತೊ ಅದನ್ನು ಮಾತ್ರ ಸರಕಾರವು ಯಾಕೆ ಬಚ್ಚಿಟ್ಟಿದೆ? ಜನರ ಹೇಳಿಕೆಯೊಳಗಿನ ಒಂದು ಅಂಶವನ್ನು ತೆಕ್ಕೊಂಡು ಇನ್ನೊಂದು ಮಹತ್ವದ ಮತ್ತು ಅವಶ್ಯಕವಾದ ಸಂಗತಿಯನ್ನು ಬಿಟ್ಟುಬಿಡುವುದು ಕುಟಿಲನೀತಿಯಲ್ಲವೆ? ಈ ಕುಟಿಲನೀತಿಯು ಎಷ್ಟು ತನಕ ನಡೆದೀತು?

ಮಂಗಳೂರು.

ದೇಶಬಂಧು ದಾಸರವರ ಅಕಾಲದ ಮರಣದ ಬಗ್ಗೆ ತಮ್ಮ ವ್ಯಸನವನ್ನು ಸೂಚಿಸುವುದಕ್ಕಾಗಿ ನಮ್ಮ ಪಟ್ಟಣಿಗರ ಸಭೆಯು ನಿನ್ನೆ ಗುರುವಾರ ಸಂಜೆ ೫|| ಗಂಟೆ ಸಮಯಕ್ಕೆ ಇಲ್ಲಿಯ ನೆಶನಲ್ ಗರ್ಲ್ಸ್‌ಸ್ಕೂಲಿನಲ್ಲಿ ಸೇರಿತು. ಶ್ರೀ ಎಮ್. ಮಾಧವರಾಯರನ್ನು ಅಧ್ಯಕ್ಷಸ್ಥಾನಕ್ಕೆ ಚುನಾಯಿಸಿದ ಬಳಿಕ ಅಧ್ಯಕ್ಷರೆ ದಾಸರವರ ಮರಣದ ಬಗ್ಗೆ ಮಂಗಳೂರು ನಿವಾಸಿಕರಿಗೆ ತುಂಬಾ ದುಃಖವುಂಟಾಗುತ್ತಿದೆ ಎಂಬರ್ಥದ ಠರಾವನ್ನು ಸಭೆಯ ಮುಂದಿಟ್ಟು ದಿವಂಗತರಾದ ಶ್ರೀ ದಾಸರ ಸ್ವಾರ್ಥತ್ಯಾಗ ಬುದ್ಧಿಚಾತುರ್ಯ, ದೇಶಸೇವೆ ಮೊದಲಾದ ಅನೇಕ ಸದ್ಗುಣಗಳನ್ನು ಒತ್ತಿಹೇಳಿದರು. ಪುತ್ತೂರು ಸಾಹೇಬರೂ, ಬಾಲಕೃಷ್ಣ ಶೆಟ್ಟರೂ, ಉಮೇಶರಾಯರೂ, ಆತ್ಮಾರಾಮ ಶಾಸ್ತ್ರಿಗಳೂ, ಈ ಠರಾವಿಗೆ ಸಮ್ಮತಿಯನ್ನು ಕೊಟ್ಟರು. ಸಭಿಕರೆಲ್ಲರು ಎದ್ದುನಿಂತು ಠರಾವನ್ನು ಪಾಸುಮಾಡಿದರು. ಈ ದುಃಖಸೂಚಕ ಠರಾವನ್ನು ದಾಸರವರ ಕುಟುಂಬಕ್ಕೆ ಕಳುಹಿಸೋಣಾಗಿದೆ.

ಇದೇ ಬರುವ ತಾ. ೨೪ನೇ ಬುಧವಾರ ರಾತ್ರಿ ಘಂಟೆ ೯-೩೦ಕ್ಕೆ ಬಾಲಾಭಿನವಾನಂದ ನಾಟಕ ಮಂಡಲಿಯವರು ಇಲ್ಲಿನ ಹಿಂದುಸ್ಥಾನ ಸಿನೆಮಾ ಥಿಯೇಟರಿನಲ್ಲಿ ನವೀನವಾದ "ಸಂಗೀತ ಶಾಕುಂತಲಾ" ಎಂಬ ನಾಟಕವನ್ನು ಅಭಿನಯಿಸಲಿಕ್ಕಿದ್ದು ಇದರಿಂದ ಉತ್ಪನ್ನವಾಗುವ ಧನವನ್ನು ದೇಶಬಂಧು ಚಿತ್ತರಂಜನ ದಾಸರವರ ಪುಣ್ಯ ಸ್ಮರಣಾರ್ಥವಾಗಿ ಅವರು ಸ್ಥಾಪಿಸಿದ 'ಸ್ವರಾಜ್ಯಪಾರ್ಟಿ'ಯ ಮುಖಂಡರಾದ ಪಂಡಿತ ನೆಹರುಗಳ ಸ್ವಾಧೀನಕ್ಕೆ ಕೊಡೋಣಾಗುವುದು. ಆದುದರಿಂದ ದೇಶಾಭಿಮಾನಿಗಳೆಲ್ಲರೂ ಆ ನಾಟಕಕ್ಕೆ ಚಿತ್ತೈಸಿ ಈ ಸತ್ಕಾರ್ಯದಲ್ಲಿ ಪರಿಪೂರ್ಣ ಸಹಾನುಭೂತಿಯನ್ನು ತೋರಿಸಬೇಕಾಗಿ ಸದರಿ ನಾಟಕ ಕಂಪೆನಿಯ ಮೆನೆಜರು ತಿಳಿಸಿರುತ್ತಾರೆ.

ಕಂಕನಾಡಿ ಆಸ್ಪತ್ರೆಯ ಡಾಕ್ಟರ್ ಎಲ್. ಪಿ. ಫೆರ್ನಾಂಡಿಸರಿಗೆ ಯುರೋಪು ಖಂಡಕ್ಕೆ ಮತ್ತು ಅಮೇರಿಕಕ್ಕೆ ಸಹ ಹೋಗಲು ಅವರ ಜುಬಿಲಿ ಜನ್ಮದಿನದಲ್ಲಿ ಕ್ರೈಸ್ತಮತಸ್ಥರು ರೂಪಾಯಿ ೩೦೦೦ ಕೊಟ್ಟಿರುವರು. ಮತ್ತು ಬಿಶೋಪರು ರೂ. ೪೦೦೦ ಕಂಕನಾಡಿ ಆಸ್ಪತ್ರೆ ಫಂಡಿನಿಂದ ಸೆಂಕ್ಷನ್ ಮಾಡಿರುವರು. ಇವರು ಯುರೋಪು ಖಂಡದಲ್ಲಿಯೂ, ಅಮೇರಿಕದಲ್ಲಿಯೂ ಹೋಗಿ ಕ್ಲಿನಿಕಲ್‌ಸರ್ಜರಿ ಮತ್ತು ಉಪಚಾರಕ್ರಮ ಕಲಿಯುವರಂತೆ. ಇವರು ಬೇಗನೆ ರೋಮಿಗೆ ಹೊರಡಲಿರುವರು.

ಈ ವರ್ಷದಲ್ಲಿ ಮಳೆಯು ಬರುವುದನ್ನು ಕುರಿತು ಕರಿಂದಕರ ಎಂಬ ಜೋಯ್ಸರು ಪೂನಾಪಟ್ಟಣದಲ್ಲಿ ಪ್ರಕಟವಾಗುವ ಕೇಸರಿ ಪತ್ರಿಕೆಯಲ್ಲಿ ಈ ರೀತಿಯಾಗಿ ಬರೆದಿರುತ್ತಾರೆ.—ಜೂನು ತಾ. ೪ರಿಂದ ೧೫ರ ವರೆಗೆ ಕೆಲ ಸ್ಥಳಗಳಲ್ಲಿ ಮಳೆಯಾಗುವುದು. ಅಷ್ಟುಮಾತ್ರಕ್ಕೆ ಬೀಜವನ್ನು ಬಿತ್ತಲು ರೈತರು ಆತುರಪಡಬಾರದು. ಸರಿಯಾದ ಮಳೆಯು ಜೂನು ತಾ. ೨೦ರಲ್ಲಿ ಆರಂಭವಾಗಿ ಜುಲ್ಯಾ ತಾ. ೩ರ ವರೆಗೂ ಪ್ರಾಯಶಃ ಸರ್ವತ್ರ ಆಗುವುದು. ಜುಲ್ಯಾ ತಾ. ೭ರಿಂದ ೧೧ರ ವರೆಗೂ, ೧೯ರಿಂದ ೨೩ರ ವರೆಗೂ, ೨೯ರಿಂದ ೩೧ರ ವರೆಗೂ ಪರ್ಜನ್ಯಯೋಗವಿರುತ್ತದೆ. ಆಗೋಸ್ತು ತಾ. ೫ರಿಂದ ೧೧ರ ವರೆಗೂ, ೧೫ರಿಂದ ೧೭ರ ವರೆಗೂ, ೨೪ರಿಂದ ೨೭ರ ವರೆಗೂ ಮಳೆಯ ಯೋಗವು ವಿಶೇಷವಾಗಿದೆ. ಸೆಪ್ಟಂಬರ ತಾ. ೪ರಿಂದ ೧೦ರ ವರೆಗೂ, ೧೪ರಿಂದ ೧೮ರ ವರೆಗೂ, ೨೨ರಿಂದ ೨೭ರ ವರೆಗೂ ಸಾಧಾರಣ ಮಳೆಯಾಗುವುದು. ಸೆಪ್ಟಂಬರ ತಾ. ೧೦, ೧೭ ಮತ್ತು ೨೪ರಲ್ಲಿ ಮಳೆಬರುವ ಯೋಗವಿದೆ. ಮುಖ್ಯವಾಗಿ ಜೂನು ತಿಂಗಳಲ್ಲಿ ಮಳೆಯು ಕಡಿಮೆ; ಜುಲ್ಯಾ ತಿಂಗಳಲ್ಲಿ ಸರ್ವತ್ರ ಮಳೆಯಾಗುವುದು. ಆಗೋಸ್ತು ತಿಂಗಳಲ್ಲಿ ನಿಯಮಕ್ಕಿಂತ ಕಡಿಮೆಯಾಗುವುದು. ಅಕ್ಟೋಬರಿನಲ್ಲಿ ಅಧಿಕ ಮಳೆಯಾಗುವುದು. ನವಂಬರ ತಿಂಗಳಲ್ಲಿ ತಕ್ಕಮಟ್ಟಿಗೆ ಮಳೆ ಬರುವುದು.

The Calicut Bank, Ltd.,
ದಿ ಕೆಲಿಕಟ್ ಬೇಂಕ್, ಲಿಮಿಟೆಡ್,

ಹೆಡ್ ಆಫೀಸು — ಕಲ್ಲಿಕೋಟೆ.
ಬ್ರಾಂಚುಗಳು:— ಮುಲ್ಲಸ್‌ಚೇರಿ, ತಲಚೇರಿ, ಕೊಚ್ಚಿ ಮತ್ತು ಪಾಲ್ಘಾಟು.
ರಿಜಿಸ್ಟರ್ಡ್ ಮತ್ತು ಅಧಿಕಾರಗೊಳಿಸಲ್ಪಟ್ಟ ಮೂಲಧನ ರೂ. 5,00,000—0—0.
ರೂಪಾಯಿ 10ರ 50,000 ಪಾಲುಗಳು.
(30—8—1924)ರ ವರೆಗೆ ಮಾಲ್ಯ ಮೂಲಧನ ರೂಪಾಯಿ 1,81,850—0—0.
ಒಂದು ವರುಷದ ಕಾಯಂ ಠೇವಣಾತಿಗೆ ಬಡ್ಡಿ ದರ ಸೇಕಡಾ ರೂ. 7—8—0.
ಕಳೆದ 4 ವರುಷಗಳಲ್ಲಿ ಪಾಲುಗಾರರಿಗೆ ಸೇಕಡಾ 12ರಂತೆ ಬಡ್ಡಿ ಹಂಚಿದೆ.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.
ಸಿ. ಕೃಷ್ಣನ್, ಬಿ. ಎ. ಬಿ. ಎಲ್.,
ಮೆನೇಜಿಂಗ್ ಡ್ಯಾರೆಕ್ಟರ್.
ಡ್ಯಾರೆಕ್ಟರರಲ್ಲಿ ಒಬ್ಬರು—
ಎಮ್. ನಾರಾಯಣ. ಕಾಮತ್, ಬಿ. ಎ.,
ಪ್ಲೀಡರ್, ಕುಂದಾಪುರ

ಇಲ್ಲಿಯ ಮುನ್ಸಿಪಲ್ ಮುಹಮ್ಮಡನ್ ಹಾಯರ್ ಎಲಿಮೆಂಟರಿ ಶಾಲೆಯ ಒಂದನೇ ಸಹಾಯಕ ಉಪಾಧ್ಯಾಯರಾದ ಜನಾಬ್ ಜಿ. ಮುಹಮ್ಮದ್ ಹಾರೂನ್ ಸಾಹೇಬರವರು ತರ್ಬೇತಿ ಬಗ್ಗೆ ಟ್ರೈನಿಂಗ್ ಶಾಲೆಗೆ ಹೋಗುತ್ತರಾದ್ದರಿಂದ ತಾ. ೧೩ರಲ್ಲು ಈ ಶಾಲೆಯ ಡಿಬೇಟಿಂಗ್ ಸೊಸೈಟಿಯ ಕಡೆಯಿಂದ ವಿದ್ಯಾರ್ಥಿಗಳು ಇವರಿಗೆ ಒಂದು ಮಾನಪತ್ರವನ್ನು ಅರ್ಪಿಸಿ ಟೀಪಾರ್ಟಿಯಿಂದ ಸತ್ಕರಿಸಿ ಛಾಯಾಚಿತ್ರವನ್ನು ತೆಗೆಸಿರುತ್ತಾರೆ.

ಈ ಶಾಲೆಗೆ ಜನಾಬ್ ಹಾಜಿ ಅಹಮ್ಮದ್ ಪಕೀರ್‌ರವರು ಒಂದನೇ ಸಹಾಯಕ ಉಪಾಧ್ಯಾಯರಾಗಿ ನೇಮಕಪಟ್ಟಿರುತ್ತಾರೆ.

ಸ್ವೀಕಾರ.

೧. Second Annual Report of the Presidency College Karnataka Sabha 1924-'25.

೨. ಮೊಗವೀರ ಕ್ಲಾರ್ಕ್ಸ ಯೂನಿಯನ್ನಿನ ೧೯೨೪ನೆ ಇಸವಿಯ ವಾರ್ಷಿಕ ವರದಿ (ಈ ವರದಿಯು ಮುಂಬಯಿಯಲ್ಲಿರುವ ಯೂನಿಯನ್ನಿನದಾಗಿರುತ್ತದೆ) ಈ ಎರಡು ವರದಿಗಳನ್ನು ಬಹು ಆದರದಿಂದ ಸ್ವೀಕರಿಸಿರುವೆವು.

ದೇಶಬಂಧು ದಾಸರ ನಿಧನ.

ದಿವಂಗತ
ಚಿತ್ತರಂಜನಸ್ತವನ.

(ಸ್ವಾಮಿದೇವನೆ ಲೋಕಪಾಲನೆ) ಎಂಬಂತೆ.

ಪೋದನೇ! ಹಾ! । ಭಾರತಾಂಬೆಯ । ಬಾಲದಾಸನು — ಪೋದನೇ! ॥ ಪ ॥
ಪೋದನೇ! ಛೆನ । ಚಿತ್ತರಂಜನ! । ಚಿತ್ತರಂಜನ! — ಪೋದನೇ! ॥ ಅ. ಪ. ॥

ವೃಂಭೀಶ್ವರ । ವಂಗಸಿಂಹನು । ನಡೆದನೇ — ಕೈಲಾಸಕೆ! ।
ಧಾರಿಣೀ[illegible] ವಿಬುಧವರ್ಯನು । ನಡೆದನೇ — ಸ್ವಾರಾಜ್ಯಕೆ ॥ ೧ ॥

ಆ ತಿಲಕನೆಡೆ । ಗೈದಿದನೇ! ಹಾ! । ದಾಸ ಕಣ್ಮರೆಯಾದನೇ! ।
ಕೀರ್ತಿಕಾಯವ । ನುಳಿದು ಧರೆಯಲಿ । ಭಾರತಾರ್ಜುನನಳಿದನೇ! ॥ ೨ ॥

ಶ್ರೀ ವತಂಸಾಪೇಕ್ಷ ಧರಿಸಿದ । ಕಾಲ ಕಲಿಕುಲಮುವಳಿಸಿದೆ! ।
ದೇವನೇ! ಕಿವೇಕೆ ನಿರ್ದಯ । ನಾದೆ! ಕರುಣಾ ವಾರಿಧೇ ॥ ೩ ॥

ಅಕಟಾ! ಧರಿಗೇ । ವಿಧಿಯೇ! ವಿಧಿಯೇ! । ನಮ್ಮ ದಾಸನ ಸೊಯ್ದೆಯಾ! ।
ಸಕಲ ಜನಸುತ । ದೇಶಭಕ್ತನ । ನಮ್ಮ ಬಳಿಯಿಂದೆಳೆದೆಯಾ! ॥ ೪ ॥

ದಾನ ಶೂರನು । ಕುಸುಮ ಹೃದಯನು । ಕಠಿಣ ತಜ್ಞ ಕಠೋರನು ।
ಜ್ಞಾನ ಸೂರ್ಯನು । ಭಾರತೀಯನು । ದೀನ ದಾಸನು — ದಾಸನು ॥ ೫ ॥

ವಿಮಲ ಚರಿತನು । ಸುಗುಣ ಭರಿತನು । ಭುವನ ಮಾನ್ಯನು — ಧನ್ಯನು ।
ಅಮಿತ ವಿಭವಾ । ಸ್ಮಿತನು — ಖ್ಯಾತನು । ಪರಮ ಸಂತನು ಸಂದನು ॥ ೬ ॥

ಘೋಷ ಹಿತಕರ । ಗಾಂಧಿ ಪ್ರಿಯಕರ । ಭರತಖಂಡ ಸುಖಂಕರ ।
ದೇಶಬಾಂಧವ । ದಾಸನಾತ್ಮಕೆ । ಶಾಂತಿಯಾಗಲಿ! ಶಂಕರಾ ॥ ೭ ॥

ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯ,
ಮಂಗಳೂರು.

ದೇಶಬಂಧು ದಾಸರು ಈ ತಿಂಗಳ ತಾ. ೧೬ರಲ್ಲಿ ಸಂಜೆ ೫ ಗಂಟೆಗೆ ಡಾರ್ಜಿಲಿಂಗದ ಅವರ ಬಂಗಲೆಯಲ್ಲಿ ದಿವಂಗತರಾದರು. ಅವರಿಗೆ ಈಗ ಎಷ್ಟೋ ಸಮಯದಿಂದ ಮಧುಮೇಹದ ವಿಕಾರವುಂಟಾಗಿತ್ತು. ಔಷಧೋಪಚಾರವನ್ನು ಸೇವಿಸುವದಕ್ಕಾಗಿಯೂ, ಹವೆಯನ್ನು ಪಲ್ಲಟಿಸುವುದಕ್ಕಾಗಿಯೂ ದಾಸರವರು ಡಾರ್ಜಿಲಿಂಗಕ್ಕೆ ಹೋಗಿದ್ದರು. ಮಧ್ಯ ಮಧ್ಯದಲ್ಲಿ ಜ್ವರವು ಬರುತ್ತಿತ್ತಾದರೂ ಅಷ್ಟೊಂದು ಯೋಚನೆಯು ಇರಲಿಲ್ಲ. ಆದರೆ ಆ ದಿನ ಮಧ್ಯಾಹ್ನ ಅವರು ತನ್ನ ಪತ್ನಿಯರೊಡನೆ ತನಗೆ ಹೆಚ್ಚು ಅಶಕ್ತಿಯುಂಟಾಗಿದೆ ಎಂದು ಹೇಳಿದರು. ಕೂಡಲೆ ಡೊಕ್ಟರರನ್ನು ಕರೆಯಿಸಲಾಯಿತು. ಆದರೆ ಸುಮಾರು ೫ ಗಂಟೆಯ ಸಮಯದಲ್ಲಿ ಹೃದಯದ ಚಲನೆಯು ನಿಂತು ದೇಶಬಂಧುಗಳ ಅಂತ್ಯವಾಯಿತು. ಇವರ ಮರಣದ ಸಮಯದಲ್ಲಿ ಅವರ ಪತ್ನಿಯರೂ ಮತ್ತು ಮಕ್ಕಳೂ ಇದ್ದುದಲ್ಲದೆ ಸ್ನೇಹಿತರೂ ಡೊಕ್ಟರರೂ ಇದ್ದರು. ಅವರ ಮೃತ್ಯುವಾರ್ತೆಯು ಕೂಡಲೆ ಊರಲ್ಲಿ ಹಬ್ಬಿ ಜನಸಮುದಾಯದ ಸಮುದಾಯವೆ ಅವರ ಬಂಗಲೆಗೆ ಬರಹತ್ತಿತು.

ಕೂಡಲೆ ಎಲ್ಲ ಕಡೆಗಳಲ್ಲಿ ತಂತಿಗಳು ಹೋದವು. ಅವರ ಶವವನ್ನು ಡಾರ್ಜಿಲಿಂಗದಿಂದ ಕಲಕತ್ತೆಗೆ ತರುವ ಏರ್ಪಾಡುಮಾಡಲಾಯಿತು. ಈ ಅಸಾಮಾನ್ಯ ದೇಶಭಕ್ತನ ಶವವನ್ನು ಕಲಕತ್ತೆಗೆ ತಂದು ಮೆರವಣಿಗೆಯಿಂದ ಅದರ ಅಂತ್ಯಸಂಸ್ಕಾರವನ್ನು ಮಾಡಲಾಯಿತು. ಈ ಸಂಸ್ಕಾರಕ್ಕೆ ಮ. ಗಾಂಧಿ, ಪಿ. ಸಿ. ರೋಯ್ ಬಿಪಿನ ಚಂದ್ರಪಾಲ, ಚಕ್ರವರ್ತಿ ಮುಂತಾದ ಅನೇಕ ದೊಡ್ಡವರು ಹಾಜರಿದ್ದರು.

ಹಿಂದುಸ್ಥಾನದ ಎಲ್ಲ ಭಾಗಗಳಲ್ಲಿ ದುಃಖಪ್ರದರ್ಶಕ ಸಭೆಗಳಂತೂ ಗುತ್ತಿವೆ. ದೇಶವತ್ಸಲನು ಗತಿಸಿದ್ದರಿಂದ ಎಲ್ಲರೂ ಕಣ್ಣೀರು ಸುರಿಸುತ್ತಿದ್ದಾರೆ.

ಈ ಸಂದರ್ಭದಲ್ಲಿ ದೇಶಬಂಧುಗಳ ಜೀವನ ಚರಿತ್ರದೊಳಗಿನ ಕೆಲವು ಮಹತ್ವದ ಸಂಗತಿಗಳನ್ನು ವಾಚಕರ ಮುಂದಿಡುತ್ತೇವೆ. ಚಿತ್ತರಂಜನ ದಾಸರು ಕಲಕತ್ತೆಯಲ್ಲಿ ೧೮೭೦ನೇ ಇಸವಿ ನವಂಬರ ತಾ. ೫ರಲ್ಲಿ ಜನಿಸಿದರು. ಇವರ ತಂದೆಯವರಾದ ಭಾಬುಭುವನ ಮೋಹನ ದಾಸರು ಬಂಗಾಲಿಯ ಕೆಲವು ಪತ್ರಿಕೆಗಳ ಸಂಪಾದಕರಾಗಿದ್ದರು. ಅವರ ಲೇಖನವು ಬಹು ಸುಲಭವಾಗಿದ್ದಿತು. ಅದು ಜನತೆಯ ಆಕರ್ಷಕ್ಕೆ ಪಾತ್ರವಾಗಿತ್ತು. ಅವರು ತುಂಬಾ ಹಣ ಸಂಪಾದಿಸಿದ್ದರು. ಆದರೆ ಅದನ್ನೆಲ್ಲ ಬಡವರಿಗೆ ಸಹಾಯ ಕೊಡುವದರಲ್ಲಿ ಕಳೆದರು. ಸ್ವಂತ ಅವರಿಗೂ ಸಾಲವಿತ್ತು. ಆಗ ನಿರುಪಾಯದಿಂದ ಅವರು ದಿವಾಳಿ ಅರ್ಜಿಯನ್ನು ಕೊಡಬೇಕಾಯಿತು.

ಚಿತ್ತರಂಜನ ದಾಸರ ಪ್ರಾಥಮಿಕ ಮತ್ತು ಮಧ್ಯಮ ಶಿಕ್ಷಣವೂ ಹಾಗು ಬಿ. ಎ. ವರೆಗಿನ ಉಚ್ಚ ಶಿಕ್ಷಣವು ಕಲಕತ್ತೆಯಲ್ಲಿ ಮುಗಿದ ಬಳಿಕ ಅವರು ಸಿವಿಲ್‌ಸರ್ವಿಸ್ ಪರೀಕ್ಷೆಗಾಗಿ ಇಂಗ್ಲಂಡಿಗೆ ತೆರಳಿದರು. ಅಲ್ಲಿರುವಾಗ ಹಿಂದುಸ್ಥಾನದ ಪರವಾಗಿ ಒಂದು ಉತ್ತಮವಾದ ಭಾಷಣಕೊಟ್ಟಿದ್ದರಿಂದ ಅವರಿಗೆ ಸಿವಿಲ್‌ಸರ್ವಿಸ್ ಪರೀಕ್ಷೆಯಲ್ಲಿ ಜಯ ಸಿಕ್ಕಲಿಲ್ಲವಾದರೂ ಅವರು ಬೇರಿಷ್ಟರ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ಬೆರಿಷ್ಟರರಾಗಿ ಹಿಂದುಸ್ಥಾನಕ್ಕೆ ಬಂದ ಬಳಿಕ ದಾಸರವರು ತಂದೆಯ ಸಾಲವನ್ನು ತೀರಿಸುವ ಕಾರ್ಯವನ್ನು ಕೈಕೊಂಡರು. ದಿವಾಳಿ ಅರ್ಜಿಯನ್ನು ಕೊಟ್ಟ ಕಾರಣ ಕಾನೂನು ಮೇರೆಗೆ ಸಾಲಗಾರರ ಸಾಲವನ್ನು ಪುನಃ ಸಲ್ಲಿಸುವದಿರುವದಿಲ್ಲವಾದರೂ ತಂದೆಯಾಗಲೀ, ತಾನಾಗಲಿ ಅನ್ಯರ ಋಣದಿಂದ ಬದ್ಧನಾಗಿರುವುದು ಚಿತ್ತರಂಜನರ ಚಿತ್ತಕ್ಕೆ ಸರ್ವಥಾ ಉಚಿತವಾಗಿ ತೋರಲಿಲ್ಲ. ಈ ಕಾರಣದಿಂದ ಅವರು ಹಳೆ ಸಾಲವನ್ನು ಸಂಪೂರ್ಣವಾಗಿ ಎಂದರೆ ಒಂದೊಂದು ಪೈಯನ್ನು ಕೂಡಲೆ ಲೆಕ್ಕಮಾಡಿ ನಿವೃತ್ತಿಪಡಿಸಿದರು. ತೇಜಃ ಪುಂಜನಾದ ಸೂರ್ಯನ ಕೋಟಿ ಮೋಡಗಳು ಬಂದು ಅವನ ಪ್ರಭೆಯನ್ನಡಗಿಸುವಂತೆ ಒಬ್ಬನು ಬಿಟ್ಟ ಬಿದ್ದಾಂಗನಾದರೂ, ಕೆಟ್ಟಕೃತ್ಯಕಾರಿಯಾದರೂ ಜನರಿಗೆ ಸಾಲಗಾರನಾದರೆ ಅವನ ಹೆಸರಿಗೆ ಮಸುಕು ಹಿಡಿಯಲಾಗುವುದು. ಅದ್ದರಿಂದ ದಾಸರು ಋಣವಿಮುಕ್ತರಾಗುವ ಸಂಕಲ್ಪವನ್ನು ಮೊದಲಾಗಿ ಸಾಧಿಸಿದರು. ಅವರು ಈ ಮೇರೆಗೆ ಸಾಲ ತೀರಿಸಿದಾಗ ಕಲಕತ್ತೆಯ ನ್ಯಾಯಮೂರ್ತಿಗಳು ದಾಸರವರ ಈ ಪ್ರಾಮಾಣಿಕ ಕರ್ತವ್ಯಕ್ಕೆ ಬೆರಗಾಗಿ "ದಿವಾಳಿ ತೆಗೆದ ಬಳಿಕ ಸಾಲಗಾರರ ಸಾಲವನ್ನು ಪುನಃ ಪರಿಹರಿಸಿದ್ದು ಇದೆ ಮೊದಲನೆಯ ಉದಾಹರಣೆಯಾಗಿದೆ'' ಎಂದು ಹೇಳಿರುವರು. ದಾಸರ ಈ ಪ್ರಾಮಾಣಿಕತನವನ್ನು ಯಾರೂ ಕೊಂಡಾಡುವಂತಿದೆ.

ಶ್ರೀ ಚಿತ್ತರಂಜನರು ವಕಾಲತಿನ ಕೆಲಸದಲ್ಲಿ ಬಹು ನಿಪುಣರಿದ್ದಾಗ್ಯೂ ಶ್ರೀ. ಅರವಿಂದ ಘೋಷರ ಮೇಲಿನ ಖಟ್ಲೆಯ ವರೆಗೆ ಅವರ ಹೆಸರು ಪಸರಿಸಿರಲಿಲ್ಲ; ಅವರಿಗೆ ದ್ರವ್ಯಲಾಭವೂ ಆಗುತ್ತಿರಲಿಲ್ಲ. ಈ ಖಟ್ಲೆಯನ್ನು ಕೈಕೊಂಡು ಇದರಲ್ಲಿ ಬುದ್ಧಿವಂತಿಕೆಯನ್ನು ಖರ್ಚುಮಾಡಿ ಬಹು ಕೌಶಲ್ಯದಿಂದ ಖಟ್ಲೆಯನ್ನು ಜಯಿಸಿದರು. ಮತ್ತು ಅರವಿಂದರನ್ನು ಬಿಡಿಸಿದರು. ಅರವಿಂದರನ್ನು ಬಿಡಿಸಿದ ಕೆಲಸವು ಸಾಮಾನ್ಯವಲ್ಲ. ದ್ರವ್ಯವನ್ನು ಕಳಕೊಳ್ಳದೆ, ಸರಕಾರದ ಎದುರಿಗೆ ನಿಂತು ಅದರ ಹಟವನ್ನು ನಡಿಸಲುಗೊಡದೆ ಅರವಿಂದರಂಥ ದೇಶಭಕ್ತರನ್ನು ಬಿಡಿಸಿದ್ದರಿಂದ ಚಿತ್ತರಂಜನರ ಮೇಲೆ ಜನರ ಪ್ರೇಮವು ಹೆಚ್ಚಾಯಿತು. ಅವರ ಕೀರ್ತಿಯು ಪಸರಿಸಿ ಅವರ ವಕೀಲತನದ ಉದ್ಯೋಗವು ಅಭಿವೃದ್ಧಿಯನ್ನು ಹೊಂದಿತು. ಹಣ ಸಿಕ್ಕಹತ್ತಿತು. ಆಗ ಅವರು ಮೇಲೆ ಹೇಳಿದಂತೆ ತಂದೆಯ ಸಾಲವನ್ನು ತೀರಿಸಿ ತನ್ನ ಯಶಸ್ಸನ್ನು ಉಜ್ವಲಪಡಿಸಿಕೊಂಡರು.

ಅನಂತರವೇ ಶ್ರೀಯುತ ದಾಸರವರ ಸಾರ್ವಜನಿಕ ಜೀವನ ಕ್ರಮಕ್ಕೆ ಪ್ರಾರಂಭವಾಯಿತೆನ್ನಬಹುದು. ದಾದಾಭಾಯಿಯವರ ಅಧ್ಯಕ್ಷತೆಯಲ್ಲಿ ಕಲಕತ್ತೆಯ ವಿಖ್ಯಾತ ಕೊಂಗ್ರೆಸು ಮುಗಿದ ಬಳಿಕ ಮರುವರುಷ ಸುರತದಲ್ಲಿ ರಾಷ್ಟ್ರೀಯ ಸಭೆಯು ಹೋಳಾಗಿ ಹೋಗಲು ಲೋಕಮಾನ್ಯರ ನೇತೃತ್ವದಲ್ಲಿ ರಾಷ್ಟ್ರೀಯ ಪಕ್ಷವು ಜನ್ಮವೆತ್ತಿತು. ಆಗ ಅರವಿಂದ ಘೋಷ, ಬಿಪಿನಚಂದ್ರಪಾಲ ಮುಂತಾದವರು ಬಂಗಾಲದ ಮುಖಂಡರಾಗಿದ್ದರು. ಅನಂತರ ಲೋಕಮಾನ್ಯರಿಗೆ ೬ ವರ್ಷ ಕಾರಾಗೃಹವಾಸವು ಘಟಿಸಿತು. ಆಗ ರಾಷ್ಟ್ರೀಯ ಪಕ್ಷದವರು ಅಲ್ಲಲ್ಲಿ ನಿದ್ರಿತರಾದರು. ಪುನಃ ಟಿಳಕರು ಬಂದ ಬಳಿಕ ಅದೆ ರಾಷ್ಟ್ರೀಯ ಪಕ್ಷದ ಜೀರ್ಣೋದ್ಧಾರವಾಗಿ ಅದರ ಪ್ರಭೆಯು ರಾಷ್ಟ್ರೀಯ ಸಭೆಯ ಮೇಲೆ ಬಿದ್ದು ರಾಷ್ಟ್ರೀಯ ಸಭೆಯು ಈ ಹೊಸ ಪಕ್ಷದ ಕೈವಶವಾಯಿತು. ಆಗ ಬಂಗಾಳದಲ್ಲಿ ಮುಂಚಿನ ರಾಷ್ಟ್ರೀಯರು ರುಚಿಭೇದದಿಂದ ಮತಾಂತರಗೊಳಿಸಿಗೊಂಡಿದ್ದರು. ಆದರೆ ಶ್ರೀಯುತ ದಾಸರೆ ಮೊದಲಾದ ತರುಣ ದೇಶಭಕ್ತರು ಮುಂದೆ ಬಂದು ರಾಷ್ಟ್ರೀಯ ಪಕ್ಷಧ್ವಜವನ್ನು ಬಂಗಾಳದಲ್ಲಿ ಹೂಳಿದರು. ಲಖನೌದಲ್ಲಿ ಒಪ್ಪಂದವಾದಾಗ ಲೋಕಮಾನ್ಯರು ನಡಿಸಿದ ರಾಜಕಾರಣವನ್ನು ದಾಸರು ಅತ್ಯಂತ ಸೂಕ್ಷ್ಮದೃಷ್ಟಿಯಿಂದ ನಿರೀಕ್ಷಿಸಿಕೊಂಡಿದ್ದರು. ದಾಸರ ಮತಗಳು ರಾಜಕಾರಣದಲ್ಲಿ ಸ್ವಭಾವಿಕವಾಗಿಯೆ ಉಗ್ರವಾದವುಗಳಾದರೂ, ಅಮೃತಸರದ ಕೊಂಗ್ರೆಸಿನಲ್ಲಿ ಲೋಕಮಾನ್ಯರ ಮಧ್ಯಸ್ತಿಕೆಗೆ ತಲೆ ಬಗ್ಗಿಸಿ ದಾಸರವರು ಗಾಂಧಿ ಮುಂತಾದವರೊಡನೆ ಏಕ ವಾಕ್ಯತೆಗೆ ಒಪ್ಪಿದರು. ಕಾರಣ, ದಾಸರು ಲೋಕಮಾನ್ಯರನ್ನು ಗುರುಸ್ಥಾನದಲ್ಲಿ ಇಟ್ಟುಕೊಂಡಿದ್ದರು. ಲೋಕಮಾನ್ಯರು ಗತಿಸಿದ ಬಳಿಕ ದಾಸರಿಗೆನೆ ಆ ಭಾರವನ್ನೆತ್ತುವ ಪ್ರಸಂಗವು ಬಂತು.

ಮಧ್ಯದಲ್ಲಿ ಅಸಹಕಾರ ಚಳವಳವು ಪ್ರಾದುರ್ಭವಿಸಿದ್ದರಿಂದ ಪರೀಕ್ಷಾರ್ಥವಾಗಿ ರಾಷ್ಟ್ರೀಯ ಪಕ್ಷದವರು ಅದಕ್ಕೆ ಅವಕಾಶವನ್ನು ಕೊಟ್ಟರು ಇದು ಜಾರಿಯಲ್ಲಿರುವಾಗ ದೇಶ ಬಂಧು ದಾಸರು ಕೋರ್ಟ ಬಹಿಷ್ಕಾರದ ಸೂತ್ರವನ್ನನುಸರಿಸಿ ವಕಾಲತನ್ನು ಬಿಟ್ಟರು. ಆ ಸಮಯದಲ್ಲಿ ಅವರಿಗೆ ವಕಾಲತಿನಿಂದ ತಿಂಗಳ ಒಂದಕ್ಕೆ ೫೦ ಸಾವಿರ ರುಪಾಯಿ ಉತ್ಪನ್ನವಿತ್ತೆಂದು ಹೇಳುತ್ತಾರೆ. ಅದನ್ನು ದೇಶಕ್ಕಾಗಿ ಅವರು ತ್ಯಜಿಸಿದರು. ಯುವರಾಜರು ಬಂದಾಗ ಅವರ ಆಗಮನವನ್ನು ಬಹಿಷ್ಕರಿಸಲು ಇವರು ಚಳವಳ ನಡಿಸಿದ್ದರಿಂದ ಇವರಿಗೆ ಸರಕಾರವು ೬ ತಿಂಗಳ ಶಿಕ್ಷೆಯನ್ನು ವಿಧಿಸಿತು. ಜೈಲಿನಿಂದ ಹೊರಗೆ ಬಂದ ಬಳಿಕ ಫಲಶೂನ್ಯವಾದ ಕೌನ್ಸಿಲ್ ಬಹಿಷ್ಕಾರಕ್ಕೆ ಪೆನ್‌ಶನನ್ನು ಕೊಡುವದೆ ಲೇಸೆಂದೆಣಿಸಿ ದಾಸರವರು ಪಂಡಿತ ಮೋತಿಲಾಲ ನೇಹರುಗಳ ಸಹಾಯದಿಂದ ಕೌನ್ಸಿಲ್ ಪ್ರವೇಶದ ಚಳವಳವನ್ನು ಪ್ರಾರಂಭಿಸಿದರು. ಇದಕ್ಕಿಂತ ಮುಂಚೆ ಅವರ ಸ್ವಾರ್ಥತ್ಯಾಗದ ದೆಸೆಯಿಂದ ಹಿಂದಿ ಜನಾಂಗವು ಅವರನ್ನು ಅಹಮದಾಬಾದದ ರಾಷ್ಟ್ರೀಯ ಸಭೆಯ ಅಧ್ಯಕ್ಷರನ್ನಾಗಿ ಚುನಾಯಿಸಿತ್ತು. ಆಗ ಅವರು ಜೈಲಿನಲ್ಲಿ ಇದ್ದರು. ಮರುವರ್ಷ ಗಯಾದಲ್ಲಿ ಸೇರಿದ ರಾಷ್ಟ್ರೀಯ ಸಭೆಗೆ ಅವರನ್ನೆ ಪುನಃ ಅಧ್ಯಕ್ಷಸ್ಥಾನಕ್ಕೆ ಚುನಾಯಿಸಲಾಯಿತು. ಆ ಸಮಯದಲ್ಲಿ ಅವರು ಕೊಟ್ಟ ಭಾಷಣವು ಬಹು ಉತ್ತಮವಾಗಿತ್ತು. ಆದರೆ ಅಸಹಕಾರಿಪ ಸಂಪ್ರದಾಯವಾದಿಗಳಿಗೆ ಅದು ಹಿಡಿಯಲಿಲ್ಲವಾದ್ದರಿಂದ ಅವರು ಆ ವರುಷ ದಾಸರನ್ನು ಬರೆ ಹೆಸರಿಗೆ ತಕ್ಕ ಅಧ್ಯಕ್ಷರೆಂಬುದಾಗಿ ಮಾಡಿಕೋರಿಸಿದರು! ಸಂಪ್ರದಾಯವಾದಿಗಳ ದುರಾಗ್ರಹವು ಶಿಖರವನ್ನು ಕೂಡ ದಾಟಿ ಮುಂದರಿಸಿತು. ಆಗ ಮೇಲೆ ಸೂಚಿಸಿದ ಮೇರೆಗೆ ಸ್ವರಾಜ್ಯ ಪಕ್ಷವು ಸ್ಥಾಪಿತವಾಯಿತು. ಅದು ಜನಾಂಗದಲ್ಲೆಲ್ಲ ಪ್ರಸಾರಹೊಂದಿತು. ಎಸೆಂಬ್ಲಿಯ ಮತ್ತು ಪ್ರಾಂತಿಕ ಕೌನ್ಸಿಲುಗಳ ಚುನಾವಣೆಯಲ್ಲಿ ಸ್ವರಾಜ್ಯಪಕ್ಷವು ಯಶಸ್ವಿಯಾಗಿ ಚುನಾಯಿಸಿ ಬಂತು.

ಬಂಗಾಳದಲ್ಲಿ ದಾಸರವರು ಬಹುಮತದಿಂದ ಆರಿಸಿ ನಿಂತು ಚುನಾಯಿಸಿ ಬಂದರು. ಅವರ ನಾಯಕತ್ವದಿಂದ ಬಂಗಾಲ ಕೌನ್ಸಿಲು ಯಾವ ಯಾವ ರೀತಿಯಿಂದ ಸರಕಾರವನ್ನು ಅಡಚಣೆಪಡಿಸಿದೆ ಎಂಬುದು ಎಲ್ಲರ ಕಣ್ಣಿನ ಮುಂದಿರುವ ಇತಿಹಾಸವಾದ ಪ್ರಯುಕ್ತ ಅದನ್ನು ಈಗ ವಿಸ್ತಾರವಾಗಿ ಬರೆಯುವ ಅಗತ್ಯವಿಲ್ಲ. ಆದರೂ ಒಂದು ಮಾತು ಹೇಳುವಂತಿದೆ. ಕೌನ್ಸಿಲನ್ನು ನಿಲ್ಲಿಸಲು ಎಂದರೆ ದ್ವಿದಲ ಪದ್ಧತಿಯನ್ನು ಮುರಿಯಲು ಅವರು ಕೌ. ಪ್ರವೇಶದ ಚಳವಳವನ್ನು ಪ್ರಾರಂಭಿಸಿದ್ದು ಬಹುಮಾನಕ್ಕಾಗಿ ಅಥವಾ ವೈಯಕ್ತಿಕ ಲಾಭಕ್ಕಾಗಿ ಅಲ್ಲ. ಅಲ್ಪರಿಂದ ವ್ಯಕ್ತಿಗೆ ಸ್ವರದ ಭಾರ ನಿರಪಾಯಾಗಿ ಅವರು ಕೌನ್ಸಿಲಿಗೆ ಬಂದು ಸರಕಾರಕ್ಕೆ ವಿರುದ್ಧ ಮತಕೊಟ್ಟರು. ಅವರು ವೈಯಕ್ತಿಕ ಲಾಭಕ್ಕಾಗಿ ಕೌನ್ಸಿಲನ್ನು ಆಶ್ರಯಿಸಿದ್ದಲ್ಲ. ಅದ್ದರಿಂದಲೆ ಮಂತ್ರಿತ್ವದ ಸ್ಥಾನವನ್ನು ಅಂಗೀಕರಿಸಲು ಬಂಗಾಲ ಸರಕಾರವು ವಿಜ್ಞಾಪಿಸಿಕೊಂಡಾಗ್ಯೂ ಅವರು ಅದನ್ನು ಅಂಗೀಕರಿಸಲಿಲ್ಲ. ಈ ಮೇರೆಗೆ ಸರಕಾರವು ನಿರುಪಾಯವಾಗಿ ಕೊನೆಗೆ ಬಂಗಾಲದ ದ್ವಿದಳ ಪದ್ಧತಿಗೆನೆ ಮಣ್ಣುಕೊಟ್ಟಿತು. ಈ ಸಂಗತಿಯ ವಾರ್ತೆಯು ಪ್ರಕಟವಾದ ೨ ದಿವಸದೊಳಗಾಗಿಯೆ ದೇಶಬಂಧುಗಳ ದೇಹಾವಸಾನವಾಗುವದು ಇದು ವಿಧಿ ವಿಲಾಸವೆ ಸರಿ!

(೫ನೇ ಪೇಜಿಯಿಂದ ಮುಂದುವರಿದುದು.)

ಕೊಡಲಾಯಿತು. ನೀರಿನಿಂದ ಬೆಂಕಿನೊಂದಿಸಲಾಗುವದೆಂತಲೆ ನೀರಿನ ಬಾಂಬ್‌ಗಳು ಸೈನ್ಯದ ಕೈಯಲ್ಲಿ! ಆಗ ಬೆಂಕಿಯನ್ನು ನೊಂದಿಸುವದು ಹೇಗೆ? ಕೋವಿಗಳಿಂದಲೂ ಮಶೀನುಗನ್ನುಗಳಿಂದಲೂ ಜನರ ಮೇಲೆ ಏಕ ಪ್ರಕಾರವಾಗಿ ಗುಂಡುಹಾಕಲ್ಪಟ್ಟಿತು. ಗುಂಡುಗಳ ಈ ವರ್ಷಣವು ಸುಮಾರು ನಾಲ್ವತ್ತು ನಿಮಿಷ ನಡೆದಿತ್ತೆಂದು ಹೇಳಲಾಗಿದೆ. ನೂರಾರು ಜನರು ಮೃತ್ಯುಮುಖಕ್ಕೆ ಬಿದ್ದರು. ಹಲವು ಹೆಣಗಳನ್ನು ನದಿಯಲ್ಲಿ ಎಸೆದರು. ಹಲವನ್ನು ಕಾಡಿನಲ್ಲಿ ಹೂಳಿಸಿದರು. ರಾತ್ರಿಯ ಅಗ್ನಿಪ್ರಲಯವು ಮುಗಿದ ಕೂಡಲೆ ಲೂಟಿಯಿಂದ ಊರನ್ನು ಉಪದ್ರವಿಸಿದರು. ಈ ಲೂಟಿಯಲ್ಲಿ ೮-೧೦ ಲಕ್ಷ ನಷ್ಟವಾಗಿದೆ ಎಂದು ಪ್ರಕಟವಾಗಿದೆ. ಉಳಿದವರಿಗೆ ಅನ್ನ ವಸ್ತ್ರಕ್ಕೆ ಗತಿ ಇಲ್ಲವಾಗಿದೆ. ಅಲ್ಲಿ ಹೋಗಲು ಬಾಹಿರದವರರನ್ನು ಬಿಡಲಿಲ್ಲ. ಇಂಥ ಬಹು ಭಯಂಕರವಾದ ಅನರ್ಥವು ಅಲವಾರ ಸಂಸ್ಥಾನದಲ್ಲಿ ನಡಕೊಂಡಿದೆಂತೆ. ಬಡ ಜನರ ಗತಿ ಏನು?

• • •

ಪಾಟಲೀಪುತ್ರದೊಳಗಿನ ಅನಾಹುತ!

ಪಾಟಲಿಪುತ್ರದೊಳಗೆ ಮಹಮ್ಮದೀಯರು ಒಂದು ಅಘೋರ ಕೃತ್ಯವನ್ನು ಮಾಡಿದರು. ಪಾಟಲೀಪುತ್ರದಲ್ಲಿ ಬಾಬು ನಾರಾಯಣ ಸಿಂಗರು ಬಹು ಕರ್ತವ್ಯದಕ್ಷರಾಗಿದ್ದರು. ಇವರು ಹಿಂದು ಸಂಘಟನೆ ಮತ್ತು ಶುದ್ಧಿ ಕಾರ್ಯವನ್ನು ತತ್ಪರತೆಯಿಂದ ಸಾಗಿಸುತ್ತಿದ್ದರು. ಗಣೇಶೋತ್ಸವ, ದುರ್ಗಾ ಉತ್ಸವ ಮುಂತಾದ ಹಿಂದು ಹಬ್ಬಗಳನ್ನು ಚೆಲೋರೀತಿಯಿಂದ ಮಾಡುತ್ತಿದ್ದರು. ಪರಧರ್ಮೀಯರಿಂದ ಪೀಡಿತರಾದ ಹಿಂದುಗಳಿಗೆ ಅವರು ಸಹಾಯವನ್ನು ಈಯುತ್ತಿದ್ದರು. ಈ ಎಲ್ಲ ಕಾರಣಗಳಿಂದ ಅವರು ಇತರಧರ್ಮದವರ ಕಣ್ಣಿಗೆ ಕುಟ್ಟುತ್ತಿದ್ದರು. ಮಹಮ್ಮದೀಯರು ಈ ಮುಳ್ಳನ್ನು ಕಿತ್ತು ತೆಗೆಯಬೇಕೆಂದು ಸಮಯ ಸಾಧಿಸಿಕೊಂಡಿದ್ದರು. ಒಂದು ದಿನ ಬಾಬು ನಾರಾಯಣ ಸಿಂಗರು ಮನೆಗೆ ಬರುತ್ತಿರುವಾಗ ೩೦-೪೫ ಮುಸಲ್ಮಾನ ಪುಂಡರು ಕೊಡಲಿ ಮತ್ತು ಕಲ್ಲುಗಳಿಂದ ಅವರ ಮೇಲೆ ಹಲ್ಲೆಮಾಡಿದರು! ಬಾಬು ಮಹಾಶಯರು ಅತ್ಯಂತ ಧೈರ್ಯದಿಂದ ಹೋರಾಡಿದರು. ಆದರೂ ಶಸ್ತ್ರಪಾಣಿಗಳಾದ ಈ ಪುಂಡರ ಪೆಟ್ಟುಗಳೆದುರಿಗೆ ಅವರದೇನೂ ನಡಿಯದೆ ಮೈಯಲ್ಲಿ ಉಂಟಾದ ಗಾಯಗಳಿಂದ ರಕ್ತವು ಹರಿದು ಹೋಗಿ, ನಿತ್ರಾಣದಿಂದ ಬಾಬುಜಿಯವರು ಜೋಥ ತಪ್ಪಿ ಬಿದ್ದರು. ಈ ಸುದ್ದಿ ಹಬ್ಬಿದ ಕೂಡಲೆ ಸುತ್ತುಮುತ್ತಲಿನ ಜನರು ಓಡಿ ಬಂದರು. ಮತ್ತು ಬಾಬುನಾರಾಯಣ ಸಿಂಗರನ್ನು ಆ ಸ್ಥಿತಿಯಲ್ಲಿಯೆ ಎತ್ತಿಕೊಂಡು ಬಾಂಕಿಪುರದ ಆಸ್ಪತ್ರೆಗೆ ಕೊಂಡುಹೋದರು. ಆದರೆ ಮಧ್ಯಮಾರ್ಗದಲ್ಲೆ ಬಾಬುಜಿಯವರ ಪ್ರಾಣೋತ್ಕ್ರಮಣವಾಯಿತು; ಈ ದೆಸೆಯಿಂದ ಪಾಟಲೀಪುತ್ರವು ಕ್ಷುಬ್ಧವಾಗಿದೆ.

ದೇಶಬಾಂಧವರೇ!
ಶ್ರೀಯುತ ಪುಂಡೂರು
ಲಕ್ಷ್ಮೀನಾರಾಯಣ ಪುಣಿಂಚತ್ತಾಯರವರಿಂದ
ರಚಿತವಾದ
ರಾಷ್ಟ್ರಗೀತಾರತ್ನಾಕರ ೦-೮-೦.
ಲೀಲೆ ೦-೧-೦
ಎಂಬ ಗ್ರಂಥರತ್ನಗಳನ್ನು ಒಮ್ಮೆ ನೋಡಿರಿ.
ದೊರೆಯುವ ಸ್ಥಳ:—
ಶಾರದಾ ಛಾಪಖಾನೆ,
ಮಂಗಳೂರು.

— ಮಹಾಜನರಿಗೆ ವಿನಂತಿ. —

ಮಹಾಸಭೆಯವರ ಅಪೇಕ್ಷೆಗೆ ಅನುಸಾರವಾಗಿ ತಿಲಕ ವಿದ್ಯಾಲಯದಲ್ಲಿ ಮೊದಲಿನ ಮೂರು ತರಗತಿಗಳಲ್ಲಿ ಒಂದು ಹೊತ್ತು ಕೈಗಾರಿಕೆ ಮತ್ತೊಂದು ಹೊತ್ತು ಅವಶ್ಯವಾದ ವಿಷಯಗಳನ್ನು ಕಲಿಸುವ ಏರ್ಪಾಡು ಮಾಡಿಯದೆ. ಮೊದಲನೆಯ ಮೂರು ತರಗತಿಯಲ್ಲಿ ಯೋಗ್ಯ ರೀತಿಯಿಂದ ಪ್ರಾಥಮಿಕ ಶಿಕ್ಷಣವನ್ನು ಕೊಡಲಾಗುತ್ತದೆ. ಈ ತರದ ಒಂದು ವಿದ್ಯಾಸಂಸ್ಥೆಯಿಂದ ಬಡ ಜನರು ತಮ್ಮ ಮಕ್ಕಳನ್ನು ಕಳುಹಿಸಿ ಹೆಚ್ಚಿನ ಉಪಯೋಗವನ್ನು ಪಡೆಯಬಹುದೆಂಬುದಾಗಿ ನಂಬಿಕೆ ಇದೆ. ಆರು ವರ್ಷಗಳ ಶಿಕ್ಷಣದೊಳಗೆ ವ್ಯವಹಾರದಲ್ಲಿ ಅಗತ್ಯವಿರುವ ವಿಷಯಗಳ ಜ್ಞಾನವೂ ಬಡಗಿ ಕೆಲಸ ನೇಯುವುದು ಈ ಎರಡರ ಪೂರ್ಣ ಮಾಹಿತಿಯೂ ಕೊಡಲಾಗುವುದು. ಈ ಎರಡು ಕೈಗಾರಿಕೆಗಳು ಮುಖ್ಯವಾದುದರಿಂದ ಅವುಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡಲಾಗಿಯದೆ. ನೂಲುವುದು ಹತ್ತಿ ಹಿಂಜುವುದು, ಟೇಪು ಮತ್ತು ಜಮಖಾನುಗಳನ್ನು ತಯಾರಿಸುವುದು ಕಲಿಸಲಾಗುತ್ತದೆ. ೫ ಉಪಾಧ್ಯಾಯರು ಒಬ್ಬ ಬಡಗಿ ಮತ್ತು ಒಬ್ಬ ನೇಯುವವನು ಈ ಶಾಲೆಯಲ್ಲಿರುವರು. ಕ್ರಮೇಣ ರಂಗು ಹಾಕುವುದೇ ಮೊದಲಾದ ಇತರ ಕೈಗಾರಿಕೆಗಳನ್ನು ಪ್ರಾರಂಭಿಸಲಾಗುವುದು. ವಿದ್ಯೆಯನ್ನು ಧರ್ಮಾರ್ಥವಾಗಿ ಕೊಡಲಾಗುವುದು ಮಾತ್ರವಲ್ಲದೆ ವಿದ್ಯಾರ್ಥಿಗಳ ಕೆಲಸದ ಅರ್ಧ ಮಜೂರಿಯು ಅವರಿಗೆ ಕೊಡಲಾಗುವುದು. ಈ ತರದ ಏರ್ಪಾಡಿನಿಂದ ಪ್ರಯೋಜನವನ್ನು ಹೊಂದಲಿಚ್ಛಿಸುವವರು ತಮ್ಮ ಮಕ್ಕಳನ್ನು ಈ ಶಾಲೆಗೆ ಕಳುಹಿಸಬೇಕಾಗಿ ವಿನಂತಿ.

ವಿ. ಸೂ. — ಎಲ್ಲಾ ತರದ ಮರದ ಸಾಮಾನುಗಳನ್ನು ಹೇಳಿಕೆಯ ಮೇರೆಗೆ ಮಾಡಿಸಿಕೊಡಲಾಗುವುದು. ಈ ವಿಷಯದಲ್ಲಿ ಶ್ರೀಯುತ ಎನ್. ಕಂಸ್ಟೆಂಟೀನ್ 'ಸಾಹೇಬ್', ತಿಲಕ ವಿದ್ಯಾಲಯ ಕೊಡಿಯಾಲ್‌ಬೈಲ್ ಇವರ ಕೂಡೆ ಮಾತಾಡಿದ್ದಲ್ಲಿ ಶೀಘ್ರಸಮಯದಲ್ಲಿ ಸುಲಭ ದರದಲ್ಲಿ ಸಾಮಾನುಗಳನ್ನು ಮಾಡಿಸಿಕೊಡಲಾಗುವುದು.

ತಿಲಕ ವಿದ್ಯಾಲಯ,
ಕೊಡಿಯಾಲ್‌ಬೈಲ್,
ತಾ. ೧೬-೬-'೨೫

ಮೂ. ಉಮೇಶರಾವ್,
ಆಚಾರ್ಯ [illegible],

ಆರೋಗ್ಯ ಚಂದ್ರಿಕೆ.
ಮದ್ರಾಸ್.
ಸಂಪಾದಕರು: ಡಾಕ್ಟರ್ ಯು. ರಾಮರಾವ್, ಎಲ್. ಎಮ್. ಸಿ. ಎಫ್. ಎಮ್. ಯು. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವುದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ.

ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ.

ಆರೋಗ್ಯಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವುದು.

'ಹೆಲ್ತ್' ಎಂಬ ನಮ್ಮ ಇಂಗ್ಲಿಷ್ ಮಾಸಪತ್ರಿಕೆಯನ್ನೋದಿ ಸಂತೋಷಿಸಿದ ಅನೇಕ ದೊಡ್ಡ ಮನುಷ್ಯರ ಪ್ರೋತ್ಸಾಹದ ಮೇಲೆ ಈ ಕನ್ನಡ ಪತ್ರಿಕೆಯನ್ನು ಹೊರಪಡಿಸಿದೆ.

ಅದರ ಸಂಪುಟ ೨ ಮತ್ತು, ೧೧ನೇಯ ನವಂಬರ ೧೯೨೪ ಸಂಚಿಕೆಯಲ್ಲಿ ಕಾಣಿಸಿರುವ ವಿಷಯಗಳು.

ಮುಖಚಿತ್ರ:—ಪರ್ವತವಾಸಿಯಾದ ಒಬ್ಬ ರೂಪವತಿ.
ಶ್ವಾಸಕ್ರಮ ಅಥವಾ ಪ್ರಾಣಾಯಾಮ.
ಹುಣಿಸೇಹಣ್ಣಿನ ಆಹಾರಗುಣಗಳು ಮತ್ತು ಔಷಧಗುಣಗಳು.
ಕಾಲುನಡೆಯೇ ಉತ್ತಮವಾದ ವ್ಯಾಯಾಮವು.
ಜೇನಿನಲ್ಲಿರುವ ಗುಣಗಳು.
ಹಲ್ಲುಗಳ ರಚನೆ, ಪ್ರಯೋಜನ, ಕೆಲಸ ಮುಂತಾದವು.
ಮದವ್ಯಾವಕಗಳಿಂದ ಆರೋಗ್ಯಕ್ಕೆ ಉಂಟಾಗತಕ್ಕ ಹಾನಿ.
ಅಂಗಸಾಧನೆ ಮತ್ತು ಬುದ್ಧಿವ್ಯವಸಾಯ (ವಿದ್ಯಾಭ್ಯಾಸ).
ಗಾಯಗಳು, ಮತ್ತು ಉಳುಕು ಮುಂತಾದವುಗಳಿಗೆ ಅವುಗಳ ಚಿಕಿತ್ಸೆ.
ನವನಾಗರಿಕ ಪ್ರಪಂಚಕ್ಕೆ ಸಹಜವಾದ ಮೂರು ಕೆಡುಕುಗಳು.
ಒಬ್ಬ ಉಪವಾಸಿಯ ಅನುಭವ.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವುವು. ಆರೋಗ್ಯಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ, ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ ರೂ. ೧—೮—೦; ಬಿಡುಪತ್ರಿಕೆ ಒಂದಕ್ಕೆ ರೂ. ೦—೨—೦. ಹಿಂದಿನ ಸಂಚಿಕೆಗಳು ಕೂಡ ದೊರಿಯುವವು.

ಚಂದಾದಾರರಾಗುವವರು ವಿ. ಪಿ. ಮೂಲಕವಾಗಿ ತರಿಸಿಕೊಳ್ಳುವದಕ್ಕಿಂತಲೂ ಹಣವನ್ನು ಮುಂಗಡವಾಗಿ ಕಳುಹಿಸುವುದು ಲಾಭಕರ. ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು 'ಆರೋಗ್ಯ ಚಂದ್ರಿಕೆ'ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು.

ಪತ್ರವ್ಯವಹಾರಕ್ಕೆ: 'ಆರೋಗ್ಯ ಚಂದ್ರಿಕೆ'
೩೨೩ ತಂಬುಚೆಟ್ಟಿ ಬೀದಿ, ಮದ್ರಾಸ್.

ತುಳು ಪಾಡ್ದನಗಳು.

ಬೊಬ್ಬರ್ಯ, ಕಲ್ಲುರ್ಟಿ–ಕಲ್ಕುಡ, ದೈಯ್ಯೊಂಗುಳು—ಕೋಡಕಿನಾರ್, ಮುಂಡತ್ತಾಯ ಪ್ರತಿ ಒಂದಕ್ಕೆ 2 ಆಣೆ. 11½ ಆಣೆ ಟಪ್ಪಾಲು ಚೀಟು ಕಳಹಿಸಿದರೆ 5 ಪುಸ್ತಕಗಳು ಕೂಡಲೇ ಕಳುಹಿಸಲ್ಪಡುವವು.

ವಿಳಾಸ: ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.
Authorised and fully paid
up Capital Rs. 300,000—0—0
Reserve and other sinking
Funds „ 259,000—0—0

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
ಅಧಿಕಾರಗೊಳಿಸಲ್ಪಟ್ಟು, ಪೂರ್ಣವಾಗಿ
ತೆತ್ತ ಮೂಲಧನವು ರೂ. 300,000—0—0
ಕ್ಷೇಮನಿಧಿ ಮತ್ತು ಇತರ ಫಂಡುಗಳು
259,000—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1925.

K. Venkat Rao,
Secretary

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಿಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗರ್ಭಿಣೀಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೩೫ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ಒಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೨೫ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

ವೈದ್ಯ ವೆಂಕಟಾಚಲ ಪಂಡಿತರು,

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಪ್ಪ, ಸೋಡಾ ಫಾಕ್ಟರಿ,
ಮಂಗಳೂರು ಟವನಿಗೆ ಸಮೀಪ.

ವಿದ್ಯಾವಾಚಸ್ಪತಿ
ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ
"ಸಂಕ್ಷೇಪಗೀತೆ"

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ, ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದೆ ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೦, ಟಪ್ಪಾಲು ಖರ್ಚು ಕೂಡಿ ಆಣೆ ೧೧ನ್ನು ಮನಿಯಾರ್ಡರ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ೩ರಕ್ಕಿಂತ ಜಾಸಿ ಖರ್ಚು ತಗಲುವುದು. ರಖಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.

ಪುಸ್ತಕ ದೊರಿಯುವ ವಿಳಾಸ:—
ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು, ಮತ್ತು
ಕೆನರಿಸ್ ಮಿಶ್ಯನ್ ಬುಕ್ ಎಂಡ್ ಟ್ರಾಕ್ಟ್ ಡಿಪೋಜಿಟರಿ
ಮಂಗಳೂರು.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಛೀಮಾವಧೂತರು,

ಶ್ರೀಕಾಶೀ, ಗಯಾ, ಪ್ರಯಾಗ, ಹರಿದ್ವಾರ ಬದ್ರಿನಾರಾಯಣ ದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಮುನಿಗಳೊಡನೆ ಭೆಟ್ಟಿಯಾಗಿ ಅವರ ಕಡೆಯಿಂದಅನುಭವ ತೆಗೆದು ಪ್ರತಿವಂದು ಸಿದ್ಧಮಾಡಿಕೊಂಡು ಬರೆದಿರುವರು. ೧ನೇದು ಮಂತ್ರಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರಪ್ರಯೋಗದಿಂದಲೂ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವವಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವೂ ಇದೆ. ೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳು ಹೊರಡುವಿಕೆ, ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ. ೩ನೇದು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ಸಿದ್ಧಿಯಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು. ೪ನೇದು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದು ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾ ಸಹ, ಇದರಲ್ಲಿ ಉಂಟು. ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷಧ ಮಾಡುವ ಕ್ರಮವನು ಚೆನ್ನಾಗಿ ಬರೆದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಳಾಸವು ತಿಳಿಸಿರುವರು. ೫ನೇದು ಯಂತ್ರ ಪ್ರಕರಣದಲ್ಲಿ ವಶೀಕರಣ ಗ್ರಹಪೀಡಾ ನಿವಾರಣ ಭೂತಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು, ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ ಇದ್ದ ಬಳಿಕ ಎಲ್ಲಾ ದೇವಾನು ದೇವತೆಗಳು ದ್ರವ್ಯಗಳೂ ವೈದ್ಯರೂ ಜೋತಿಷ್ಯರು, ಮಾಂತ್ರಿಕರು ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥ ಗ್ರಂಥವ ಯಾರು ಕಣ್ಣಿಂದ ನೋಡಿರಲಿಕ್ಕಿಲ್ಲಾ. ಪ್ರತಿಯೊಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆ ತೀರ ಕಡಿಮೆಮಾಡಿ ಇರುವವು. ೨—೮—೦ ಟಪ್ಪಾಲು ಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ ನಾಟಕ ಕಾವ್ಯ, ಕಥೆಗಳು, ಯಕ್ಷಗಾನ, ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ:—
ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

ಸ್ಪಿರಿಟ್ ಸ್ಟೋವ್.

ಈ ಸ್ಟೋವುಗಳು ಹಿತ್ತಾಳೆಯಿಂದ ತಯಾರಾದವು. ಇದರಲ್ಲಿ ಬಹುಬೇಗನೆ ಅಡಿಗೆ, ಕಾಫಿ, ಟಿ ಮುಂತಾದವುಗಳನ್ನು ಮಾಡಬಹುದು. ಬೇಗನೆ ಕೆಡದು, ಕಪ್ಪಾಗದು, ಕಷ್ಟವರುವದಿಲ್ಲ. ಪ್ರಯಾಣಿಕರಿಗೂ ಬಹು ಅನುಕೂಲವಾದದ್ದು. ಕೆಲವು ಮಾತ್ರವೇ ಇರುವುದರಿಂದ ಬೇಗನೆ ಬರೆಯಿರಿ.

ಕ್ರಯ 1ಕ್ಕೆ 3—8—0.

ಹೊಸ ನಮೂನೆಯ ಸೆಲ್ಫ್ ಫಿಲ್ಲಿಂಗ್ ಫೌಂಟೆನ್ ಪೆನಾಗಳು.

ಈ ಪೇನಾಗಳು ವಿಲಾಯತಿಯಲ್ಲಿ ತಯಾರಾದವು. ಇವು ಹೊಸ ನಮೂನೆಯವು. ಇವಕ್ಕೆ ಗಾಜಿನ ನಿಬ್ಬು ಇರುವದು, ಈ ನಿಬ್ಬು ಎಂದಿಗೂ ಕೆಡದು. ಭಾರಿ ಕ್ರಯದ ಭಂಗಾರದ ನಿಬ್ಬುಗಳು ಬರೆಯುವದಕ್ಕಿಂತಲು ಬಹು ಚೆನ್ನಾಗಿ ಬರೆಯುವದು. ಮತ್ತು ತನ್ನಷ್ಟಕ್ಕೆ ಶಾಹೀ ಇಂಕಿಯನ್ನು ತುಂಬಿಕೊಳ್ಳುವದು. ಒಂದನ್ನು ತರಿಸಿನೋಡಿರಿ. ಬೇಡವಾದರೆ ಹಣ ವಾಪಾಸು ಕೊಡುವೆವು.

ಕ್ರಯ 1ಕ್ಕೆ ರೂ. 1—12—0.

The American Watch Co.,
P. B. No. 509. P. T. MADRAS.

ವಿಳಾಸ:— ಅಮೇರಿಕನ್ ವಾಚ್ ಕಂಪೆನಿ,
ಪೋ ಬಾ 509, ಪಿ. ಟಿ. ಮದರಾಸು.

ದೇಶಬಂಧು ದಾಸರ ನಿಧನ.

ದಿವಂಗತ ಚಿತ್ತರಂಜನಸ್ತವನ.

(ಸ್ವಾಮಿದೇವನೆ ಲೋಕಪಾಲನೆ) ಎಂಬಂತೆ.

ಪೋದನೇ! ಹಾ। ಭಾರತಾಂಬೆಯ। ಬಾಲದಾಸನು—ಪೋದನೇ! ॥ ಪ ॥
ಪೋದನೇ! ಧನ। ಚಿತ್ತರಂಜನ। ಚಿತ್ತರಂಜನ—ಪೋದನೇ! ॥ ಅ. ಪ. ॥

ವೈಂಭೀಕರ। ವಂಗಸಿಂಹನು। ನಡೆದನೇ—ಕೈಲಾಸಕೆ!।
ಧಾರಿಣೀಜನ। ವಿಬುಧವರ್ಯನು। ನಡೆದನೇ—ಸ್ವಾರಾಜ್ಯಕೆ ॥ ೧ ॥

ಆ ತಿಲಕನೆಡೆ। ಗೈದನೆ! ಹಾ। ದಾಸ ಕನ್ನಡಿಯಾದನೇ!।
ಕೀರ್ತಿಕಾಯದ। ನುಳಿದು ಧರೆಯಲಿ। ಭಾರತಾರ್ಜುನನಳಿದನೇ! ॥ ೨ ॥

ಶ್ರೀ ವಸಂತಾಪೇಂದ್ರ ಧರಿಸಿದ। ಫಾಲ ಕುಂಕುಮವಳಿಸಿದೆ।
ದೇವನೇ! ನೀನೇಕೆ ನಿರ್ದಯ। ನಾದೆ! ಕರುಣಾ ವಾರಿಧೇ ॥ ೩ ॥

ಅಳಬೆ ಧರೆಗೀ। ವಿಧಿಯೇ ವಿಧಿಯೇ। ನಮ್ಮ ದಾಸನ ನೊಯ್ದೆಯಾ।
ಸಕಲ ಜನನುತ। ದೇಶಭಕ್ತನ। ನಮ್ಮ ಬಳಿಯಿಂದಳಿದೆಯಾ! ॥ ೪ ॥

ದಾನ ಶೂರನು। ಕುಸುಮ ಹೃದಯನು। ಕಠಿಣ ವಜ್ರ ಕಠೋರನು।
ಜ್ಞಾನ ಸೂರ್ಯನು। ಭಾರತೀಯನು। ದೀನ ದಾಸನು—ದಾಸನು ॥ ೫ ॥

ವಿಮಲ ಚರಿತನು। ಸುಗುಣ ಭರಿತನು। ಭುವನ ಮಾನ್ಯನು—ಧನ್ಯನು।
ಅಮಿತ ವಿಭವಾ। ಸ್ಮಿತನು—ಖ್ಯಾತನು। ಪರಮ ಸಂತನು ಸಂದನು ॥ ೬ ॥

ಘೋಷ ಹಿತಕರ। ಗಾಂಧಿ ಪ್ರಿಯಕರ। ಭರತಖಂಡ ಸುಖಂಕರ।
ದೇಶಬಾಂಧವ। ದಾಸನಾತ್ಮಕೆ। ಶಾಂತಿಯಾಗಲಿ! ಶಂಕರಾ ॥ ೭ ॥

ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯ,
ಮಂಗಳೂರು.

ದೇಶಬಂಧು ದಾಸರು ಈ ತಿಂಗಳ ತಾ. ೧೬ರಲ್ಲಿ ಸಂಜೆ ೫ ಗಂಟೆಗೆ ದಾರ್ಜಿಲಿಂಗದ ಅವರ ಬಂಗಲೆಯಲ್ಲಿ ದಿವಂಗತರಾದರು. ಇವರಿಗೆ ಈಗ ಎಷ್ಟೋ ಸಮಯದಿಂದ ಮಧುಮೇಹದ ವಿಕಾರವುಂಟಾಗಿತ್ತು. ವಿಶಿಷ್ಟೋಪಚಾರವನ್ನು ಸೇವಿಸುವದಕ್ಕಾಗಿಯೂ, ಹವೆಯನ್ನು ಬದಲಿಸುವದಕ್ಕಾಗಿಯೂ ದಾಸರವರು ದಾರ್ಜಿಲಿಂಗಕ್ಕೆ ಹೋಗಿದ್ದರು. ಮಧ್ಯ ಮಧ್ಯದಲ್ಲಿ ಜ್ವರವು ಬರುತ್ತಿತ್ತಾದರೂ ಅಷ್ಟೊಂದು ಯೋಚನೆಯು ಇರಲಿಲ್ಲ. ಅದರೆ ಆ ದಿನ ಮಧ್ಯಾಹ್ನ ಅವರು ತನ್ನ ಪತ್ನಿಯರೊಡನೆ ತನಗೆ ಹೆಚ್ಚು ಅಶಕ್ತಿಯುಂಟಾಗಿದೆ ಎಂದು ಹೇಳಿದರು. ಕೂಡಲೆ ಡೊಕ್ಟರರನ್ನು ಕರೆಯಿಸಲಾಯಿತು. ಅದರೆ ಸುಮಾರು ೫ ಗಂಟೆಯ ಸಮಯದಲ್ಲಿ ಹೃದಯದ ಚಲನೆಯು ನಿಂತು ದೇಶಬಂಧುಗಳ ಅಂತ್ಯವಾಯಿತು. ಇವರ ಮರಣದ ಸಮಯದಲ್ಲಿ ಅವರ ಪತ್ನಿಯರೂ ಮತ್ತು ಮಕ್ಕಳೂ ಇದ್ದುದಲ್ಲದೆ ಸ್ನೇಹಿತರೂ ಡೊಕ್ಟರರೂ ಇದ್ದರು. ಅವರ ಮೃತ್ಯುವಾರ್ತೆಯು ಕೂಡಲೆ ಊರಲ್ಲಿ ಹಬ್ಬಿ ಜನಸಮುದಾಯದ ಸಮುದಾಯವೆ ಅವರ ಬಂಗಲೆಗೆ ಬರಹತ್ತಿತು.

ಕೂಡಲೆ ಎಲ್ಲ ಕಡೆಗಳಲ್ಲಿ ತಂತಿಗಳು ಹೋದವು. ಅವರ ಶವವನ್ನು ದಾರ್ಜಿಲಿಂಗದಿಂದ ಕಲಕತ್ತೆಗೆ ತರುವ ಏರ್ಪಾಡುಮಾಡಲಾಯಿತು. ಈ ಅಸಾಮಾನ್ಯ ದೇಶಭಕ್ತನ ಶವವನ್ನು ಕಲಕತ್ತೆಗೆ ತಂದು ಮೆರವಣಿಗೆಯಿಂದ ಅವರ ಅಂತ್ಯಸಂಸ್ಕಾರವನ್ನು ಮಾಡಲಾಯಿತು. ಈ ಸಂಸ್ಕಾರಕ್ಕೆ ಮ. ಗಾಂಧಿ, ಪಿ. ಸಿ. ರೋಯ್ ಬಿಪಿನ ಚಂದ್ರಪಾಲ, ಚಕ್ರವರ್ತಿ ಮುಂತಾದ ಅನೇಕ ದೊಡ್ಡವರು ಹಾಜರಿದ್ದರು.

ಹಿಂದುಸ್ಥಾನದ ಎಲ್ಲ ಭಾಗಗಳಲ್ಲಿ ದುಃಖಪ್ರದರ್ಶಕ ಸಭೆಗಳುಂಟಾಗುತ್ತಿವೆ. ದೇಶವತ್ಸಲನು ಗತಿಸಿದ್ದರಿಂದ ಎಲ್ಲರೂ ಕಣ್ಣೀರು ಸುರಿಸುತ್ತಿದ್ದಾರೆ.

ಈ ಸಂದರ್ಭದಲ್ಲಿ ದೇಶಬಂಧುಗಳ ಜೀವನ ಚರಿತ್ರದೊಳಗಿನ ಕೆಲವು ಮಹತ್ವದ ಸಂಗತಿಗಳನ್ನು ವಾಚಕರ ಮುಂದಿಡುತ್ತೇವೆ. ಚಿತ್ತರಂಜನ ದಾಸರು ಕಲಕತ್ತೆಯಲ್ಲಿ ೧೮೭೦ನೇ ಇಸವಿ ನವಂಬರ ತಾ. ೫ರಲ್ಲಿ ಜನಿಸಿದರು. ಇವರ ತಂದೆಯವರಾದ ಭುವನ ಮೋಹನ ದಾಸರು ಬಂಗಾಲಿಯ ಕೆಲವು ಪತ್ರಿಕೆಗಳ ಸಂಪಾದಕರಾಗಿದ್ದರು. ಅವರ ಲೇಖನವು ಬಹು ಸುಲಭವಾಗಿದ್ದಿತು. ಅದು ಜನತೆಯ ಆಕರ್ಷಕ್ಕೆ ಪಾತ್ರವಾಗಿತ್ತು. ಅವರು ತುಂಬಾ ಹಣ ಸಂಪಾದಿಸಿದ್ದರು. ಅದರೆ ಅದನ್ನೆಲ್ಲ ಬಡವರಿಗೆ ಸಹಾಯ ಕೊಡುವದರಲ್ಲಿ ಕಳೆದರು. ಸ್ವಂತ ಅವರಿಗೂ ಸಾಲವಿತ್ತು. ಆಗ ನಿರುಪಾಯದಿಂದ ಅವರು ದಿವಾಳಿ ಅರ್ಜಿಯನ್ನು ಕೊಡಬೇಕಾಯಿತು.

ಚಿತ್ತರಂಜನ ದಾಸರ ಪ್ರಾಥಮಿಕ ಮತ್ತು ಮಧ್ಯಮ ಶಿಕ್ಷಣವೂ ಹಾಗು ಬಿ. ಎ. ವರೆಗಿನ ಉಚ್ಚ ಶಿಕ್ಷಣವು ಕಲಕತ್ತೆಯಲ್ಲಿ ಮುಗಿದ ಬಳಿಕ ಅವರು ಸಿವಿಲ್‌ಸರ್ವಿಸ್ ಪರೀಕ್ಷೆಗಾಗಿ ಇಂಗ್ಲೆಂಡಿಗೆ ತೆರಳಿದರು. ಅಲ್ಲಿರುವಾಗ ಹಿಂದುಸ್ಥಾನದ ಪರವಾಗಿ ಒಂದು ಉತ್ತಮವಾದ ಭಾಷಣಕೊಟ್ಟಿದ್ದರಿಂದ ಅವರಿಗೆ ಸಿವಿಲ್‌ಸರ್ವಿಸ್ ಪರೀಕ್ಷೆಯಲ್ಲಿ ಜಯ ಸಿಕ್ಕಲಿಲ್ಲವಾದರೂ ಅವರು ಬ್ಯಾರಿಸ್ಟರ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ಬ್ಯಾರಿಸ್ಟರರಾಗಿ ಹಿಂದುಸ್ಥಾನಕ್ಕೆ ಬಂದ ಬಳಿಕ ದಾಸರವರು ತಂದೆಯ ಸಾಲವನ್ನು ತೀರಿಸುವ ಕಾರ್ಯವನ್ನು ಕೈಕೊಂಡರು. ದಿವಾಳಿ ಅರ್ಜಿಯನ್ನು ಕೊಟ್ಟ ಕಾರಣ ಕಾನೂನು ಮೇರೆಗೆ ಸಾಲಗಾರರ ಸಾಲವನ್ನು ಪುನಃ ಸಲ್ಲಿಸುವದಿರುವದಿಲ್ಲವಾದರೂ ತಂದೆಯಾಗಲೀ, ತಾನಾಗಲಿ ಅನ್ಯರ ಋಣದಿಂದ ಬದ್ಧನಾಗಿರುವುದು ಚಿತ್ತರಂಜನರ ಚಿತ್ತಕ್ಕೆ ಸರ್ವಥಾ ಉಚಿತವಾಗಿ ತೋರಲಿಲ್ಲ. ಈ ಕಾರಣದಿಂದ ಅವರು ಹಳೆ ಸಾಲವನ್ನು ಸಂಪೂರ್ಣವಾಗಿ ಎಂದರೆ ಒಂದೊಂದು ಪೈಯನ್ನು ಕೂಡಲೆ ಲೆಕ್ಕಮಾಡಿ ನಿವೃತ್ತಿಪಡಿಸಿದರು. ತೇಜ ಪುಂಜನಾದ ಸೂರ್ಯನ ಮೇಲೆ ಮೋಡಗಳು ಬಂದು ಅವನ ಪ್ರಭೆಯನ್ನಡಗಿಸುವಂತೆ ಒಬ್ಬನು ಬಿಟ್ಟ ವಿದ್ಯಾಂಸನವರೂ, ಕೆಟ್ಟ ಸ್ಥಿತಿಯವರೂ ಶರಣಿಗೆ ಸಾಲಗಾರನವರ ಅವನ ತೇಜಸ್ಸಿಗೆ ಮುಸುಕು ಹಾಕುವುದು. ಆದ್ದರಿಂದ ದಾಸರು ಋಣವಿಮುಕ್ತರಾಗುವ ಸಂಕಲ್ಪವನ್ನು ಮೊದಲಾಗಿ ಸಾಧಿಸಿದರು. ಅವರು ಈ ಮೇರೆಗೆ ಸಾಲ ತೀರಿಸಿದಾಗ ಕಲಕತ್ತೆಯ ನ್ಯಾಯಮೂರ್ತಿಗಳು ಈ ದಾಸರವರ ಈ ಪ್ರಾಮಾಣಿಕ ಕರ್ತವ್ಯಕ್ಕೆ ಬೆರಗಾಗಿ "ದಿವಾಳಿ ತೆಗೆದ ಬಳಿಕ ಸಾಲಗಾರರ ಸಾಲವನ್ನು ಪುನಃ ಪರಿಹರಿಸಿದ್ದು ಇದೆ ಮೊದಲನೆಯ ಉದಾಹರಣೆಯಾಗಿದೆ" ಎಂದು ಹೇಳಿರುವರು. ದಾಸರ ಈ ಪ್ರಾಮಾಣಿಕತನವನ್ನು ಯಾರೂ ಕೊಂಡಾಡುವಂತಿದೆ.

ಶ್ರೀ ಚಿತ್ತರಂಜನರು ವಕಾಲತಿನ ಕೆಲಸದಲ್ಲಿ ಬಹು ನಿಪುಣರಿದ್ದಾಗ್ಯೂ ಶ್ರೀ. ಅರವಿಂದ ಘೋಷರ ಮೇಲಿನ ಖಟ್ಲೆಯ ವರೆಗೆ ಅವರ ಹೆಸರು ಪಸರಿಸಿರಲಿಲ್ಲ; ಅವರಿಗೆ ದ್ರವ್ಯಲಾಭವೂ ಆಗುತ್ತಿರಲಿಲ್ಲ. ಈ ಖಟ್ಲೆಯನ್ನು ಕೈಕೊಂಡು ಇದರಲ್ಲಿ ಬುದ್ಧಿವಂತಿಕೆಯನ್ನು ಖರ್ಚುಮಾಡಿ ಬಹು ಕೌಶಲ್ಯದಿಂದ ಖಟ್ಲೆಯನ್ನು ಜಯಿಸಿದರು. ಮತ್ತು ಅರವಿಂದರನ್ನು ಬಿಡಿಸಿದರು. ಅರವಿಂದರನ್ನು ಬಿಡಿಸಿದ ಕೆಲಸವು ಸಾಮಾನ್ಯವಲ್ಲ. ದ್ರವ್ಯವನ್ನು ತಕ್ಕೊಳ್ಳದೆ, ಸರಕಾರದ ಎದುರಿಗೆ ನಿಂತು ಅದರ ಹಟವನ್ನು ನಡಿಸಲುಗೊಡದೆ ಅರವಿಂದರಂಥ ದೇಶಭಕ್ತರನ್ನು ಬಿಡಿಸಿದ್ದರಿಂದ ಚಿತ್ತರಂಜನರ ಮೇಲೆ ಜನರ ಪ್ರೇಮವು ಹೆಚ್ಚಾಯಿತು. ಅವರ ಕೀರ್ತಿಯು ಪಸರಿಸಿ ಅವರ ವಕೀಲತನದ ಉದ್ಯೋಗವು ಅಭಿವೃದ್ಧಿಯನ್ನು ಹೊಂದಿತು. ಹಣ ಸಿಕ್ಕಹತ್ತಿತು. ಆಗ ಅವರು ಮೇಲೆ ಹೇಳಿದಂತೆ ತಂದೆಯ ಸಾಲವನ್ನು ತೀರಿಸಿ ತನ್ನ ಯಶಸ್ಸನ್ನು ಉಜ್ವಲಪಡಿಸಿಕೊಂಡರು.

ಅನಂತರದೆಸೆ ಶ್ರೀಯುತ ದಾಸರವರ ಸಾರ್ವಜನಿಕ ಜೀವನ ಕ್ರಮಕ್ಕೆ ಪ್ರಾರಂಭವಾಯಿತೆನ್ನಬಹುದು. ದಾದಾಭಾಯಿಯವರ ಅಧ್ಯಕ್ಷತೆಯಲ್ಲಿ ಕಲಕತ್ತೆಯ ವಿಖ್ಯಾತ ಕೊಂಗ್ರೆಸು ಮುಗಿದ ಬಳಿಕ ಮರುವರುಷ ಸುರತದಲ್ಲಿ ರಾಷ್ಟ್ರೀಯ ಸಭೆಯು ಹೋಳಾಗಿ ಹೋಗಲು ಲೋಕಮಾನ್ಯರ ನೇತೃತ್ವದಲ್ಲಿ ರಾಷ್ಟ್ರೀಯ ಪಕ್ಷವು ಜನ್ಮವೆತ್ತಿತು. ಆಗ ಅರವಿಂದ ಘೋಷ, ಬಿಪಿನಚಂದ್ರಪಾಲ ಮುಂತಾದವರು ಬಂಗಾಲದ ಮುಖಂಡರಾಗಿದ್ದರು. ಅನಂತರ ಲೋಕಮಾನ್ಯರಿಗೆ ೬ ವರ್ಷ ಕಾರಾಗೃಹವಾಸವು ಘಟಿಸಿತು. ಆಗ ರಾಷ್ಟ್ರೀಯ ಪಕ್ಷದವರು ಅಲ್ಲಲ್ಲಿ ನಿದ್ರಿತರಾದರು. ಪುನಃ ಟಿಳಕರು ಬಂದ ಬಳಿಕ ಅದೆ ರಾಷ್ಟ್ರೀಯ ಪಕ್ಷದ ಜೀರ್ಣೋದ್ಧಾರವಾಗಿ ಅದರ ಪ್ರಭೆಯು ರಾಷ್ಟ್ರೀಯ ಸಭೆಯ ಮೇಲೆ ಬಿದ್ದು ರಾಷ್ಟ್ರೀಯ ಸಭೆಯು ಈ ಹೊಸ ಪಕ್ಷದ ಕೈವಶವಾಯಿತು. ಆಗ ಬಂಗಾಳದಲ್ಲಿ ಮುಂಚಿನ ರಾಷ್ಟ್ರೀಯರು ರುಚಿಭೇದದಿಂದ ಮತಾಂತರಗೊಳಿಸಿಗೊಂಡಿದ್ದರು. ಅದರೆ ಶ್ರೀಯುತ ದಾಸರೆ ಮೊದಲಾದ ತರುಣ ದೇಶಭಕ್ತರು ಮುಂದೆ ಬಂದು ರಾಷ್ಟ್ರೀಯ ಪಕ್ಷಧ್ವಜವನ್ನು ಬಂಗಾಳದಲ್ಲಿ ಹೂಳಿದರು. ಲಖನೌದಲ್ಲಿ ಒಪ್ಪಂದವಾದಾಗ ಲೋಕಮಾನ್ಯರು ನಡಿಸಿದ ರಾಜಕಾರಣವನ್ನು ದಾಸರು ಅತ್ಯಂತ ಸೂಕ್ಷ್ಮದೃಷ್ಟಿಯಿಂದ ನಿರೀಕ್ಷಿಸಿಕೊಂಡಿದ್ದರು. ದಾಸರ ಮತಗಳು ರಾಜಕಾರಣದಲ್ಲಿ ಸ್ವಭಾವಿಕವಾಗಿಯೆ ಉಗ್ರವಾದವುಗಳಾದವು, ಅಮೃತಸರದ ಕೊಂಗ್ರೆಸಿನಲ್ಲಿ ಲೋಕಮಾನ್ಯರ ಮಧ್ಯಸ್ಥಿಕೆಗೆ ತಲೆ ಬಗ್ಗಿಸಿ ದಾಸರವರು ಗಾಂಧಿ ಮುಂತಾದವರೊಡನೆ ಏಕ ವಾಕ್ಯತೆಗೆ ಒಪ್ಪಿದರು. ಕಾರಣ, ದಾಸರು ಲೋಕಮಾನ್ಯರನ್ನು ಗುರುಸ್ಥಾನದಲ್ಲಿ ಇಟ್ಟುಕೊಂಡಿದ್ದರು. ಲೋಕಮಾನ್ಯರು ಗತಿಸಿದ ಬಳಿಕ ದಾಸರಿಗೆಸೆ ಆ ಭಾರವನ್ನೆತ್ತುವ ಪ್ರಸಂಗವು ಬಂತು.

ಮಧ್ಯದಲ್ಲಿ ಅಸಹಕಾರ ಚಳವಳವು ಪ್ರಾದುರ್ಭವಿಸಿದ್ದರಿಂದ ಪರಿಸ್ಪೂರ್ಣವಾಗಿ ರಾಷ್ಟ್ರೀಯ ಪಕ್ಷದವರು ಅದಕ್ಕೆ ಅವಕಾಶವನ್ನು ಕೊಟ್ಟರು ಇದು ಜಾರಿಯಲ್ಲಿರುವಾಗ ದೇಶ ಬಂಧು ದಾಸರು ಕೋರ್ಟ ಬಹಿಷ್ಕಾರದ ಸೂತ್ರವನ್ನನುಸರಿಸಿ ವಕಾಲತನ್ನು ಬಿಟ್ಟರು. ಆ ಸಮಯದಲ್ಲಿ ಅವರಿಗೆ ವಕಾಲತಿನಿಂದ ತಿಂಗಳ ಒಂದಕ್ಕೆ ೫೦ ಸಾವಿರ ರುಪಾಯಿ ಉತ್ಪನ್ನವಿತ್ತೆಂದು ಹೇಳುತ್ತಾರೆ. ಅದನ್ನು ದೇಶಕ್ಕಾಗಿ ಅವರು ತ್ಯಜಿಸಿದರು. ಯುವರಾಜರು ಬಂದಾಗ ಅವರ ಆಗಮನವನ್ನು ಬಹಿಷ್ಕರಿಸಲು ಇವರು ಚಳವಳ ನಡಿಸಿದ್ದರಿಂದ ಇವರಿಗೆ ಸರಕಾರವು ೬ ತಿಂಗಳ ಶಿಕ್ಷೆಯನ್ನು ವಿಧಿಸಿತು. ಜೈಲಿನಿಂದ ಹೊರಗೆ ಬಂದ ಬಳಿಕ ಫಲಶೂನ್ಯವಾದ ಕೌನ್ಸಿಲ್ ಬಹಿಷ್ಕಾರಕ್ಕೆ ವೆನ್ಶನನ್ನು ಕೊಡುವದೆ ಲೇಸೆಂದೆಣಿಸಿ ದಾಸರವರು ಪಂಡಿತ ಮೋತಿಲಾಲ ನೇಹರುಗಳ ಸಹಾಯದಿಂದ ಕೌನ್ಸಿಲ್ ಪ್ರವೇಶದ ಚಳವಳವನ್ನು ಪ್ರಾರಂಭಿಸಿದರು. ಇದಕ್ಕಿಂತ ಮುಂಚೆ ಅವರ ಸ್ವಾರ್ಥತ್ಯಾಗದ ದೆಸೆಯಿಂದ ಹಿಂದಿ ಜನಾಂಗವು ಅವರನ್ನು ಅಹಮದಾಬಾದದ ರಾಷ್ಟ್ರೀಯ ಸಭೆಯ ಅಧ್ಯಕ್ಷರನ್ನಾಗಿ ಚುನಾಯಿಸಿತ್ತು. ಆಗ ಅವರು ಜೈಲಿನಲ್ಲಿ ಇದ್ದರು. ಮರುವರ್ಷ ಗಯಾದಲ್ಲಿ ಸೇರಿದ ರಾಷ್ಟ್ರೀಯ ಸಭೆಗೆ ಅವರನ್ನೆ ಪುನಃ ಅಧ್ಯಕ್ಷಸ್ಥಾನಕ್ಕೆ ಚುನಾಯಿಸಲಾಯಿತು. ಆ ಸಮಯದಲ್ಲಿ ಅವರು ಕೊಟ್ಟ ಭಾಷಣವು ಬಹು ಉತ್ತಮವಾಗಿತ್ತು. ಅದರೆ ಅಸಹಕಾರದ ಸಂಪ್ರದಾಯವಾದಿಗಳಿಗೆ ಅದು ಹಿಡಿಯಲಿಲ್ಲವಾದ್ದರಿಂದ ಅವರು ಆ ವರುಷ ದಾಸರನ್ನು ಬರೆ ಹೆಸರಿಗೆ ತಕ್ಕ ಅಧ್ಯಕ್ಷರೆಂಬುದಾಗಿ ಮಾಡಿಕೊಂಡಿಸಿದರು! ಸಂಪ್ರದಾಯವಾದಿಗಳ ದುರಾಗ್ರಹವು ಶಿಖರವನ್ನು ಕೂಡ ದಾಟಿ ಮುಂದರಿಸಿತು. ಆಗ ಮೇಲೆ ಸೂಚಿಸಿದ ಮೇರೆಗೆ ಸ್ವರಾಜ್ಯ ಪಕ್ಷವು ಸ್ಥಾಪಿತವಾಯಿತು. ಅದು ಜನಾಂಗದಲ್ಲೆಲ್ಲ ಪ್ರಸಾರಹೊಂದಿತು. ಎಸೆಂಬ್ಲಿಯ ಮತ್ತು ಪ್ರಾಂತಿಕ ಕೌನ್ಸಿಲುಗಳ ಚುನಾವಣೆಯಲ್ಲಿ ಸ್ವರಾಜ್ಯಪಕ್ಷವು ಯಶಸ್ವಿಯಾಗಿ ಚುನಾಯಿಸಿ ಬಂತು.

ಬಂಗಾಳದಲ್ಲಿ ದಾಸರವರು ಉಮೇದುವಾರರಾಗಿ ನಿಂತು ಚುನಾಯಿಸಿ ಬಂದರು. ಅವರ ನಾಯಕತ್ವದಿಂದ ಬಂಗಾಲ ಕೌನ್ಸಿಲು ಯಾವ ಯಾವ ರೀತಿಯಿಂದ ಸರಕಾರವನ್ನು ಉಪಕೋಧಿಸಿದೆ ಎಂಬುದು ಎಲ್ಲರ ಕಣ್ಣಿನ ಮುಂದಿರುವ ಇತಿಹಾಸವಾದ ಪ್ರಯುಕ್ತ ಅದನ್ನು ಈಗ ವಿಸ್ತಾರವಾಗಿ ಬರೆಯುವ ಅಗತ್ಯವಿಲ್ಲ. ಅದರೂ ಒಂದು ಮಾತು ಹೇಳುವಂತಿದೆ. ಕೌನ್ಸಿಲನ್ನು ಸಿಲ್ಕಿಸಲು ಎಂದರೆ ದ್ವಿದಲ ಪದ್ಧತಿಯನ್ನು ಮುರಿಯಲು ಅವರು ಕೌ. ಪ್ರವೇಶದ ಚಳವಳವನ್ನು ಪ್ರಾರಂಭಿಸಿದ್ದು ಬಹುಮಾನಕ್ಕಾಗಿ ಅಥವಾ ವೈಯಕ್ತಿಕ ಲಾಭಕ್ಕಾಗಿ ಅಲ್ಲ. ಅತ್ತರಿಂದ ದ್ಯಯಕ್ಕೆ ಪ್ರಬಲ ಭಾರವಿರುವಾಗಲೂ ಅವರು ಕೌನ್ಸಿಲಿಗೆ ಬಂದು ಸರಕಾರಕ್ಕೆ ವಿರುದ್ಧ ಮಾಡಿಕೊಟ್ಟರು. ಅವರು ವೈಯಕ್ತಿಕ ಲಾಭಕ್ಕಾಗಿ ಕೌನ್ಸಿಲನ್ನು ಆಶ್ರಯಿಸಿದ್ದಿಲ್ಲ. ಆದ್ದರಿಂದಲೆ ಮಂತ್ರಿತ್ವದ ಸ್ಥಾನವನ್ನು ಅಂಗೀಕರಿಸಲು ಬಂಗಾಲ ಸರಕಾರವು ವಿಜ್ಞಾಪಿಸಿಕೊಂಡಾಗ್ಯೂ ಅವರು ಅದನ್ನು ಅಂಗೀಕರಿಸಲಿಲ್ಲ. ಈ ಮೇರೆಗೆ ಸರಕಾರವು ನಿರುಪಾಯವಾಗಿ ಕೊನೆಗೆ ಬಂಗಾಲದ ದ್ವಿದಲ ಪದ್ಧತಿಗೆ ಮಣ್ಣುಕೊಟ್ಟಿತು. ಈ ಸಂಗತಿಯ ವಾರ್ತೆಯು ಪ್ರಕಟವಾದ ೨ ದಿವಸದೊಳಗಾಗಿಯೆ ದೇಶಬಂಧುಗಳ ದೇಹಾವಸಾನವಾಗುವದು ಇದು ವಿಧಿವಿಲಾಸವೆ ಸರಿ!

(ಹಿಂದೆ ಪೇಜಿಯಿಂದ ಮುಂದುವರಿದುದು.)

ಕೊಡಲಾಯಿತು. ಸೀರಿನಿಂದ ಬೆಂಕಿಸೊಂದಿಸಿಕೊಳ್ಳುವಂಥ ಸೀರಿನ ಬಾಟ್ಲಿಗಳು ಸೈನ್ಯದ ಕೈಯಲ್ಲಿ! ಆಗ ಬೆಂಕಿಯನ್ನು ಸೊಂದಿಸುವದು ಹೇಗೆ? ಕೋವಿಗಳಿಂದಲೂ ಮಶೀನುಗನ್ನುಗಳಿಂದಲೂ ಜನರ ಮೇಲೆ ಏಕ ಪ್ರಕಾರವಾಗಿ ಗುಂಡುಹಾಕಲ್ಪಟ್ಟಿತು. ಗುಂಡುಗಳ ಈ ವರ್ಷಾವು ಸುಮಾರು ನಾಲ್ಕತ್ತು ನಿಮಿಷ ನಡೆದಿತ್ತೆಂದು ಹೇಳಲಾಗಿದೆ. ನೂರಾರು ಜನರು ಮೃತ್ಯುಮುಖಕ್ಕೆ ಬಿದ್ದರು. ಹಲವು ಹೆಣಗಳನ್ನು ನದಿಯಲ್ಲಿ ಎಸೆದರು. ಹಲವನ್ನು ಕಾಡಿನಲ್ಲಿ ಹೂಳಿಸಿದರು. ರಾತ್ರಿಯ ಅಗ್ನಿಪ್ರಲಯವು ಮುಗಿದ ಕೂಡಲೆ ಲೂಟಿಯಿಂದ ಊರನ್ನು ಉಪದ್ರವಿಸಿದರು. ಈ ಲೂಟಿಯಲ್ಲಿ ೮-೧೦ ಲಕ್ಷ ನಷ್ಟವಾಗಿದೆ ಎಂದು ಪ್ರಕಟವಾಗಿದೆ. ಉಳಿದವರಿಗೆ ಅನ್ನವಸ್ತ್ರಕ್ಕೆ ಗತಿ ಇಲ್ಲವಾಗಿದೆ. ಅಲ್ಲಿ ಹೋಗಲು ಬಾತಮಿದಾರರನ್ನು ಬಿಡಲಿಲ್ಲ. ಇಂಥ ಬಹು ಭಯಂಕರವಾದ ಅನರ್ಥವು ಅಲವಾರ ಸಂಸ್ಥಾನದಲ್ಲಿ ನಡಕೊಂಡಿದಂತೆ. ಬಡ ಜನರ ಗತಿ ಏನು?

• • •

ಪಾಟಲೀಪುತ್ರದೊಳಗಿನ ಅನಾಹುತ!

ಪಾಟಲಿಪುತ್ರದೊಳಗೆ ಮಹಮ್ಮದೀಯರು ಒಂದು ಅಘೋರ ಕೃತ್ಯವನ್ನು ಮಾಡಿದರು. ಪಾಟಲೀಪುತ್ರದಲ್ಲಿ ಬಾಬು ನಾರಾಯಣ ಸಿಂಗರು ಬಹು ಕರ್ತವ್ಯದಕ್ಷರಾಗಿದ್ದರು. ಇವರು ಹಿಂದು ಸಂಘಟನೆ ಮತ್ತು ಶುದ್ಧಿ ಕಾರ್ಯವನ್ನು ತತ್ಪರತೆಯಿಂದ ಸಾಗಿಸುತ್ತಿದ್ದರು. ಗಣೇಶೋತ್ಸವ, ದುರ್ಗಾಉತ್ಸವ ಮುಂತಾದ ಹಿಂದು ಹಬ್ಬಗಳನ್ನು ಚಲೋರೀತಿಯಿಂದ ಮಾಡುತ್ತಿದ್ದರು. ಪರಧರ್ಮಿಯರಿಂದ ಪೀಡಿತರಾದ ಹಿಂದುಗಳಿಗೆ ಅವರು ಸಹಾಯವನ್ನು ಈಯುತ್ತಿದ್ದರು. ಈ ಎಲ್ಲ ಕಾರಣಗಳಿಂದ ಅವರು ಇತರಧರ್ಮದವರ ಕಣ್ಣಿಗೆ ಕುಟುಕುತ್ತಿದ್ದರು. ಮಹಮ್ಮದೀಯರು ಈ ಮುಳ್ಳನ್ನು ಕಿತ್ತು ತೆಗೆಯಬೇಕೆಂದು ಸಮಯ ಸಾಧಿಸಿಕೊಂಡಿದ್ದರು. ಒಂದು ದಿನ ಬಾಬು ನಾರಾಯಣ ಸಿಂಗರು ಮನೆಗೆ ಬರುತ್ತಿರುವಾಗ ೩೦-೩೫ ಮುಸಲ್ಮಾನ ಪುಂಡರು ಕೊಡಲಿ ಮತ್ತು ಕಲ್ಲುಗಳಿಂದ ಅವರು ಮೇಲೆ ಹಲ್ಲೆಮಾಡಿದರು! ಬಾಬು ಮಹಾಶಯರು ಅತ್ಯಂತ ಧೈರ್ಯದಿಂದ ಹೋರಾಡಿದರು. ಆದರೂ ಶಸ್ತ್ರಪಾಣಿಗಳಾದ ಈ ಪುಂಡರ ಪೆಟ್ಟುಗಳೆದುರಿಗೆ ಅವರದೇನೂ ನಡಿಯದೆ ಮೈಯಲ್ಲಿ ಉಂಟಾದ ಗಾಯಗಳಿಂದ ರಕ್ತವು ಹರಿದು ಹೋಗಿ, ನಿತ್ರಾಣದಿಂದ ಬಾಬುಜಿಯವರು ಬೋಧ ತಪ್ಪಿ ಬಿದ್ದರು. ಈ ಸುದ್ದಿ ಹಬ್ಬಿದ ಕೂಡಲೆ ಸುತ್ತುಮುತ್ತಲಿನ ಜನರು ಓಡಿ ಬಂದರು. ಮತ್ತು ಬಾಬುನಾರಾಯಣ ಸಿಂಗರನ್ನು ಆ ಸ್ಥಿತಿಯಲ್ಲಿಯೆ ಎತ್ತಿಕೊಂಡು ಬಾಂಕಿಪುರದ ಆಸ್ಪತ್ರಿಗೆ ಕೊಂಡುಹೋದರು. ಅದರೆ ಮಧ್ಯಮಾರ್ಗದಲ್ಲಿ ಬಾಬು ಜಯವರ ಪ್ರಾಣೋತ್ಕ್ರಮಣವಾಯಿತು; ಈ ದೆಸೆಯಿಂದ ಪಾಟಲೀಪುತ್ರವು ಕ್ಷುಬ್ಧವಾಗಿದೆ.

ದೇಶಬಾಂಧವರೇ!
ಶ್ರೀಯುತ ಪುಂಡೂರು
ಲಕ್ಷ್ಮೀನಾರಾಯಣ ಪುಣಿಂಚತ್ತಾಯರವರಿಂದ
ರಚಿತವಾದ
ಧಾನ್ಯಗೀತಾರತ್ನಾಕರ ೦-೮-೦.
ಲೀಲೆ ೦-೧-೦
ಎಂಬ ಗ್ರಂಥರತ್ನಗಳನ್ನು ಒಮ್ಮೆ ನೋಡಿರಿ.
ದೊರೆಯುವ ಸ್ಥಳ:—
ಶಾರದಾ ಛಾಪಖಾನೆ,
ಮಂಗಳೂರು.

— ಮಹಾಜನರಿಗೆ ವಿನಂತಿ. —

ಮಹಾಸಭೆಯವರ ಅಪೇಕ್ಷೆಗೆ ಅನುಸಾರವಾಗಿ ತಿಲಕ ವಿದ್ಯಾಲಯದಲ್ಲಿ ಮೊದಲಿನ ಮೂರು ತರಗತಿಗಳಲ್ಲಿ ಒಂದು ಹೊತ್ತು ಕೈಗಾರಿಕೆ ಮತ್ತೊಂದು ಹೊತ್ತು ಅವಶ್ಯವಾದ ವಿಷಯಗಳನ್ನು ಕಲಿಸುವ ಏರ್ಪಾಡು ಮಾಡಿಯದೆ. ಮೊದಲನೆಯ ಮೂರು ತರಗತಿಯಲ್ಲಿ ಯೋಗ್ಯ ರೀತಿಯಿಂದ ಪ್ರಾಥಮಿಕ ಶಿಕ್ಷಣವನ್ನು ಕೊಡಲಾಗುತ್ತದೆ. ಈ ತರದ ಒಂದು ವಿದ್ಯಾಸಂಸ್ಥೆಯಿಂದ ಬಡ ಜನರು ತಮ್ಮ ಮಕ್ಕಳನ್ನು ಕಳುಹಿಸಿ ಹೆಚ್ಚಿನ ಉಪಯೋಗವನ್ನು ಪಡೆಯಬಹುದೆಂಬುದಾಗಿ ನಂಬಿಕೆ ಇದೆ. ಆರು ವರ್ಷಗಳ ಶಿಕ್ಷಣದೊಳಗೆ ವ್ಯವಹಾರದಲ್ಲಿ ಅಗತ್ಯವಿರುವ ವಿಷಯಗಳ ಜ್ಞಾನವೂ ಬಡಗಿ ಕೆಲಸ ನೇಯುವುದು ಈ ಎರಡರ ಪೂರ್ಣ ಮಾಹಿತಿಯೂ ಕೊಡಲಾಗುವುದು. ಈ ಎರಡು ಕೈಗಾರಿಕೆಗಳು ಮುಖ್ಯವಾದುದರಿಂದ ಅವುಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡಲಾಗಿಯದೆ. ನೂಲುವುದು ಹತ್ತಿ ಹಿಂಜುವುದು, ಟೇಪು ಮತ್ತು ಜಮಖಾನುಗಳನ್ನು ತಯಾರಿಸುವುದು ಕಲಿಸಲಾಗುತ್ತದೆ ೫ ಉಪಾಧ್ಯಾಯರು ಒಳ್ಳೆ ಬಡಗಿ ಮತ್ತು ಒಳ್ಳೆ ನೇಯುವವರು ಈ ಶಾಲೆಯಲ್ಲಿರುವರು, ಕ್ರಮೇಣ ರಂಗು ಹಾಕುವುದೇ ಮೊದಲಾದ ಇತರ ಕೈಗಾರಿಕೆಗಳನ್ನು ಪ್ರಾರಂಭಿಸಲಾಗುವುದು. ವಿದ್ಯೆಯನ್ನು ಧರ್ಮಾರ್ಥವಾಗಿ ಕೊಡಲಾಗುವುದು ಮಾತ್ರವಲ್ಲದೆ ವಿದ್ಯಾರ್ಥಿಗಳ ಕೆಲಸದ ಅರ್ಧ ಮಜೂರಿಯು ಅವರಿಗೆ ಕೊಡಲಾಗುವುದು. ಈ ತರದ ಏರ್ಪಾಡಿನಿಂದ ಪ್ರಯೋಜನವನ್ನು ಹೊಂದಲಿಚ್ಛಿಸುವವರು ತಮ್ಮ ಮಕ್ಕಳನ್ನು ಈ ಶಾಲೆಗೆ ಕಳುಹಿಸಬೇಕಾಗಿ ವಿನಂತಿ.

ವಿ. ಸೂ.—ಎಲ್ಲಾ ತರದ ಮರದ ಸಾಮಾನುಗಳನ್ನು ಹೇಳಿಕೆಯ ಮೇರೆಗೆ ಮಾಡಿಸಿಕೊಡಲಾಗುವುದು. ಈ ವಿಷಯದಲ್ಲಿ ಶ್ರೀಯುತ ಎಸ್. ಕೆಂಸನ್ಸಿಟ್ 'ಸಾಹೇಬ', ತಿಲಕ ವಿದ್ಯಾಲಯ ಕೊಡಿಯಾಲ್‌ಬೈಲ್ ಇವರ ಕೂಡೆ ಮಾತಾಡಿದ್ದಲ್ಲಿ ಸ್ವಲ್ಪ ಸಮಯದಲ್ಲಿ ಸುಲಭ ದರದಲ್ಲಿ ಸಾಮಾನುಗಳನ್ನು ಮಾಡಿಸಿಕೊಡಲಾಗುವುದು.

ತಿಲಕ ವಿದ್ಯಾಲಯ,
ಕೊಡಿಯಾಲ್‌ಬೈಲ್,
ತಾ. ೧೬-೬-'೨೫

ಮಂ. ಉಮೇಶರಾವ್,
ಕಾರ್ಯದರ್ಶಿ.

ಆರೋಗ್ಯ ಚಂದ್ರಿಕೆ.

ಮದ್ರಾಸ್.

ಸಂಪಾದಕರು: ಡಾಕ್ಟರ್ ಯು. ರಾಮರಾವ್, ಎಲ್. ಎಮ್. ಸಿ. ಎಫ್. ಎಮ್. ಯು. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವುದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ.

ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ.

ಆರೋಗ್ಯಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವುವು.

'ಹೆಲ್ತ್' ಎಂಬ ನಮ್ಮ ಇಂಗ್ಲಿಷ್ ಮಾಸಪತ್ರಿಕೆಯನ್ನೋದಿ ಸಂತೋಷಿಸಿದ ಅನೇಕ ದೊಡ್ಡ ಮನುಷ್ಯರ ಪ್ರೋತ್ಸಾಹದ ಮೇಲೆ ಈ ಕನ್ನಡ ಪತ್ರಿಕೆಯನ್ನು ಹೊರಡಿಸಿದೆ.

ಅದರ ಸಂಪುಟ ೨ ಮತ್ತು ೧೧ನೇಯ ನವಂಬರ ೧೯೨೪ ಸಂಚಿಕೆಯಲ್ಲಿ ಅಡಗಿರುವ ವಿಷಯಗಳು.

ಮುಖಚಿತ್ರ:—ಪರ್ವತವಾಸಿಯಾದ ಒಬ್ಬ ರೂಪವತಿ.
ಶ್ವಾಸಕ್ರಮ ಅಥವಾ ಪ್ರಾಣಾಯಾಮ.
ಹುಣಿಸೇಹಣ್ಣಿನ ಆಹಾರಗುಣಗಳು ಮತ್ತು ಔಷಧಗುಣಗಳು.
ಕಾಲುನಡೆಯೇ ಉತ್ತಮವಾದ ವ್ಯಾಯಾಮವು.
ಜೇನಿನಲ್ಲಿರುವ ಗುಣಗಳು.
ಹಲ್ಲುಗಳ ರಚನೆ, ಪ್ರಯೋಜನ, ಕೆಲಸ ಮುಂತಾದವು.
ಮದ್ಯಪಾನಗಳಿಂದ ಆರೋಗ್ಯಕ್ಕೆ ಉಂಟಾಗತಕ್ಕ ಹಾನಿ.
ಅಂಗಸಾಧನೆ ಮತ್ತು ಬುದ್ಧಿವ್ಯವಸಾಯ (ವಿದ್ಯಾಭ್ಯಾಸ).
ಗಾಯಗಳು, ಮತ್ತು ಉಳುಕು ಮುಂತಾದವುಕ್ಕೆ ಅವುಗಳ ಚಿಕಿತ್ಸೆ.
ನವನಾಗರಿಕ ಪ್ರಪಂಚಕ್ಕೆ ಸಹಜವಾದ ಮೂರು ಕೆಡುಕುಗಳು.
ಒಬ್ಬ ಉಪವಾಸಿಯ ಅನುಭವ.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವುವು. ಆರೋಗ್ಯಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ, ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ ರೂ. ೧-೮-೦; ಬಿಡುಪತ್ರಿಕೆ ಒಂದಕ್ಕೆ ರೂ. ೦-೨-೦. ಹಿಂದಿನ ಸಂಚಿಕೆಗಳು ಕೂಡ ದೊರೆಯುವವು.

ಚಂದಾದಾರರಾಗುವವರು ವಿ. ಪಿ. ಮೂಲಕವಾಗಿ ತರಿಸಿಕೊಳ್ಳುವದಕ್ಕಿಂತಲೂ ಹಣವನ್ನು ಮುಂಗಡವಾಗಿ ಕಳುಹಿಸುವುದು ಲಾಭಕರ. ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು 'ಆರೋಗ್ಯ ಚಂದ್ರಿಕೆ'ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು.

ಪತ್ರವ್ಯವಹಾರಕ್ಕೆ: 'ಆರೋಗ್ಯ ಚಂದ್ರಿಕೆ'
೩೩೩ ತಂಬುಚೆಟ್ಟಿ ಬೀದಿ, ಮದ್ರಾಸ್.

ತುಳು ಪಾಡ್ದನಗಳು.

ಬೊಬ್ಬರ್ಯ, ಕಲ್ಲುರ್ಟಿ-ಕಲ್ಕುಡ, ದೈಯ್ಯೊಂಗುಳು—ಕೋಡಕಿನಾರ್, ಮುಂಡತ್ತಾಯ ಪ್ರತಿ ಒಂದಕ್ಕೆ 2 ಆಣೆ. 1¼ ಆಣೆ ಟಪ್ಪಾಲು ಚೀಟು ಕಳಹಿಸಿದರೆ 5 ಪುಸ್ತಕಗಳು ಕೂಡಲೇ ಕಳುಹಿಸಲ್ಪಡುವವು.

ವಿಳಾಸ: ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.
Authorised and fully paid
up Capital Rs. 300,000—0—0
Reserve and other sinking
Funds „ 259,000—0—0

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ
ಕೆತ್ತ ಮೂಲಧನವು ರೂ. 300,000—0—0
ಕ್ಷೇಮನಿಧಿ ಮತ್ತು ಇತರ ಫಂಡುಗಳು
259,000—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳೂ, ಪಡಕೊಳ್ಳಲ್ಪಡುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1925.

K. Venkat Rao,
Secretary

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಬೋಧಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಿಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಬೋಧಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲೂಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೫೦ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ಒಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೫೦ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

ಆಳ್ಯದ ವೆಂಕಟಾಚಲ ಪಂಡಿತರು,

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್ ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಪ್ಪ, ಸೋಡಾ ಫಾಕ್ಟರಿ,
ಮಂಗಳೂರು ಟವನಿಗೆ ಮಾತ್ರ.

ವಿದ್ಯಾವಾಚಸ್ಪತಿ
ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ

"ಸಂಕ್ಷೇಪಗೀತೆ"

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ್ಳ ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದೆ ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೦. ಟಪ್ಪಾಲು ಖರ್ಚು ಕೂಡಿ ಆಣೆ ೧೧ನ್ನು ಮನಿಯಾರ್ಡರ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ೩ರಕ್ಕಿಂತ ಜಾಸ್ತಿ ಖರ್ಚು ತಗಲುವುದು. ರಖಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.

ಪುಸ್ತಕ ದೊರೆಯುವ ವಿಳಾಸ:—
ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು. ಮತ್ತು
ಕೆನರಾಸ್ ಮಿತ್ರನ್ ಬುಕ್ ಎಂಡ್ ಪ್ರೆಸ್ ಡಿಪೋಜಿಟರಿ,
ಮಂಗಳೂರು.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀಕಾಶೀ, ಗಯಾ, ಪ್ರಯಾಗ, ಹರಿದ್ವಾರ ಬದ್ರಿನಾರಾಯಣ ದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರ ಕಡೆಯಿಂದ ಅನುಭವ ತೆಗೆದು ಪ್ರತಿವಂದು ಸಿದ್ಧಮಾಡಿಕೊಂಡು ಬರೆದಿರುವರು. ೧ನೇದು ಮಂತ್ರಪ್ರಕರಣದಲ್ಲಿ ಮಂತ್ರ ಪಠಣದಿಂದಲೂ, ಮಂತ್ರಪ್ರಯೋಗದಿಂದಲೂ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವೂ ಇದೆ. ೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳು ಹೊರಡುವಿಕೆ, ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅದನ್ನು ಸಿದ್ಧಿ ಮಾಡಿಕೊಳ್ಳುವ ವಿವರವೂ ಇದೆ. ೩ನೇದು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಷ್ಕ ಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು. ೪ನೇದು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಬುಟ್ಟಿ ಸಹ, ಇದರಲ್ಲಿ ಉಂಟು. ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷಧ ಮಾಡುವ ಕ್ರಮವನು ಚೆನ್ನಾಗಿ ಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಶಾಸವು ತಿಳಿಸಿರುವರು. ೫ನೇದು ಯಂತ್ರ ಪ್ರಕರಣದಲ್ಲಿ ವಶೀಕರಣ ಗ್ರಹಪೀಡಾ ನಿವಾರಣ ಭೂತಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು, ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರದಿರುವರು. ಈ ಗ್ರಂಥವು ಹತ್ತರ ಇದ್ದ ಬಳಿಕ ಎಲ್ಲಾ ದೇವಾನು ದೇವತೆಗಳು ದ್ರವ್ಯಗಳೂ ವೈದ್ಯರೂ ಜೋತಿಷ್ಯರು, ಮಾಂತ್ರಿಕರು ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥ ಗ್ರಂಥವು ಯಾರು ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿವರು ತರಿಸಿ ನೋಡಬೇಕೆಂದು ಇದರ ಬೆಲೆ ಕೀರ ಕಡಿಮೆಮಾಡಿ ಇರುವವು. ೨—೮—೦ ಟಪ್ಪಾಲು ಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ ನಾಟಕ ಕಾವ್ಯ, ಕಥೆಗಳು, ಯಕ್ಷಗಾನ, ಅನ್ನು ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ:—
ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

ಸ್ಪಿರಿಟ್ ಸ್ಟೋವ್.

ಈ ಸ್ಟೋವುಗಳು ಹಿತ್ತಾಳೆಯಿಂದ ತಯಾರಾದವು. ಇದರಲ್ಲಿ ಬಹುಬೇಗನೆ ಅಡಿಗೆ, ಕಾಫಿ, ಟಿ ಮುಂತಾದವುಗಳನ್ನು ಮಾಡಬಹುದು. ಬೇಗನೆ ಕೆಡದು, ಕಪ್ಪಾಗದು. ಕಷ್ಟವರುವದಿಲ್ಲ. ಪ್ರಯಾಣಿಕರಿಗೂ ಬಹು ಅನುಕೂಲವಾದದ್ದು. ಕೆಲವು ಮಾತ್ರವೇ ಇರುವುದರಿಂದ ಬೇಗನೆ ಬರೆಯಿರಿ.

ಕ್ರಯ 1ಕ್ಕೆ 3—8—0.

ಹೊಸ ನಮೂನೆಯ ಸೆಲ್ಫ್ ಫಿಲ್ಲಿಂಗ್ ಫೌಂಟನ್ ಪೆನಾಗಳು.



ಈ ಪೇನಾಗಳು ವಿಲಾಯಿತಿಯಲ್ಲಿ ತಯಾರಾದವು. ಇವು ಹೊಸ ನಮೂನೆಯವು. ಇವಕ್ಕೆ ಗಾಜಿನ ನಿಬ್ಬು ಇರುವವು. ಈ ನಿಬ್ಬು ಎಂದಿಗೂ ಕೆಡದು. ಭಾರಿ ಕ್ರಯದ ಭಂಗಾರದ ನಿಬ್ಬುಗಳು ಬರೆಯುವದಕ್ಕಿಂತಲು ಬಹು ಚೆನ್ನಾಗಿ ಬರೆಯುವದು. ಮತ್ತು ತನ್ನಷ್ಟಕ್ಕೆ ತಾನೇ ಇಂಕಿಯನ್ನು ತುಂಬಿಕೊಳ್ಳುವದು, ಒಂದನ್ನು ತರಿಸಿನೋಡಿರಿ. ಬೇಡವಾದರೆ ಹಣ ವಾಪಾಸು ಕೊಡುವೆವು.

ಕ್ರಯ 1ಕ್ಕೆ ರೂ. 1—12—0.

The American Watch Co.,
P. B. No. 509. P. T. MADRAS.

ವಿಳಾಸ:— ಅಮೇರಿಕನ್ ವಾಚ್ ಕಂಪೆನಿ,
ಪೋ ಬಾ 509, ಪಿ. ಟಿ. ಮದರಾಸು.

Just Arrived OF **Fresh Consignment**

Best English Cycles.

REDUCTION IN PRICES.

Banger Cycles Model M. Made in Birmingham. With Dunlop or Bates Tyres & Tubes	... @	Rs. 90—0—0
Rarton Humber on Advance With Dunlop or Bates Tyres & Tubes	... @	„ 100—0—0
Senior Royal with B. S. A. Fitting. With Dunlop or Bates Tyres & Tubes ..	...@	Rs. 145—0—0
Royal Saxon with B. S A. Fitting. With Dunlop or Bates Tyres & Tubes ...	... @	Rs. 175—0—0

All the above Cycles include pump and tools.

Brookes Pateern 90/2 German Saddle ...	...@	„ 9—8—0
„ Saddle 90/2 „ ...	..@	„ 21—0—0
„ „ B/30 „ ...	...@	„ 26—0—0

For further particulars please write to us or call on us:—

All kinds of Cycle Accessories, Dunlop and German Tyres and Tubes
ARE AVAILABLE AT VERY CHEAP RATES.

Special Discount to Traders *Easy Terms Arranged*

APPLY TO:—**The Mangalore Trading Association,**
Wholesale Dealers in Cycles and Cycle Accessories,
Car-Street, MANGALORE.

—ಗೋಡೆಗೆ ತಗಲಿಸುವ
ಹೊಸ ನಮೂನೆಯ—

ಟಿಕ್—ಟಾಕ್

ಎಂಬ ಈ ಗಡಿಯಾರಗಳು ಜರ್ಮನೀ ದೇಶದಲ್ಲಿ ತಯಾರಿಸಿದ್ದು. ಇವು ಕರಾರು ಘಂಟೆಯನ್ನು ತೋರಿಸುವವು. ಇವಕ್ಕೆ ಬೀಗ ಕೊಡಬೇಕಾದಿಲ್ಲ. ಇದರಲ್ಲಿ ಕಾಣುತ್ತಿರುವ ಗುಂಡನ್ನು ಮೇಲಕ್ಕೆ ಎಳೆದರೆ ಸಾಕು. ತನ್ನಷ್ಟಕ್ಕೆ ತಾನೇ ಟಿಕ್—ಟಾಕ್ ಎಂಬ ಶಬ್ದವನ್ನು ಮಾಡುತ್ತಾ ಸರಿಯಾದ ಕಾಲವನ್ನು ತೋರಿಸುವದು. ಇದು ನೋಡುವುದಕ್ಕೆ ಬಹು ಲಕ್ಷಣವಾಗಿರುವುದು.

ಕ್ರಯ 1ಕ್ಕೆ ರೂ. 3—0—0

ಪೀಟರ್ ವಾಚ್ ಕಂಪೆನಿ
ಪೋಸ್ಟ್ ಬಾಕ್ಸ್ ನಂ. 27, ಮದ್ರಾಸ್.

ADVERTISE IN

The Business Directory
OF INDIA, BURMA & CEYLON

A Comprehensive Directory of the various Business-men, Exporters and Importers, Firms, Factories, Mills, Manufacturers, Merchants and Industries of the principal Cities, Ports and Towns of India, Burma and Ceylon.

PUBLISHED ANNUALLY
Rates for Advertisements

¼ Page	Rs.	50.
2 in. Single Column	„	20.
1 in. Single Column	„	15.
Name in Bold Types	„	5.

Price per Copy Rs. 10.

PRINTERS & PUBLISHERS.
Business Directory Co.,
Kanara Press Buildings, MADRAS. E.
Telegrams: "KETHAKI" Phone 540

Just arrived! Look Sharp!

SCREW ELECTRIC TORCH LAMPS &

Pocket Electric Lamps

AVAILABLE

In different varieties, Mother of pearl lamps. Cycle lamps.

NICKEL PLATED WITH SIDE LANCE.

Hammered Brand, with Powerful Bulls-eye lance.

The Mangalore Trading Association,
Car Street, MANGALORE

ಮನುಷ್ಯರಿಗೆ ಮತಿಸ್ಥಿತಿಗಿಂತಲೂ ಹೆಚ್ಚಾದ್ದು ಯಾವುದೂ ಇಲ್ಲ.

ಜನ್ಮದಲ್ಲಿ ಕಷ್ಟಸುಖಗಳು ಅನುಭವಿಸುವುದರಲ್ಲಿ ಅಪಜಯವಿಲ್ಲದೇ ಧನ್ಯನಾಗುವುದಕ್ಕೆ ಮುಖ್ಯ ಸಾಧನ ಮತಿಸ್ಥಿತಿಯೇ ರಾಮಬಾಣವೆಂದು ಹೇಳಬಹುದು.

ಆದರೆ ಪ್ರಸ್ತುತ ನಾವು ಅನುಭವಿಸುವ ಚಪಲಚಿತ್ತದಲ್ಲಿ ಮತಿಸ್ಥಿತಿ ಉಂಟಾಗುವುದು ಸಾಧ್ಯ ಹೇಗೆ? ನಿಮಗೆ ಯಾವವಿಧವಾದ ಚಪಲಚಿತ್ತವಿದ್ದಾಗ್ಯೂ, ನಮ್ಮ ಆತಂಕನಿಗ್ರಹ ಮಾತ್ರೆಗಳನ್ನು ಉಪಯೋಗಿಸಿರಿ. ಈ ಮಾತ್ರೆಗಳೇ ತಮ್ಮ ಮೆದುಳಲ್ಲಿರುವ ದುರ್ಬಲವನ್ನು ನಿವಾರಿಸಿ, ದೃಢಚಿತ್ತವನ್ನುಂಟುಮಾಡುವುವು.

ಈ 32 ಮಾತ್ರೆಗಳುಳ್ಳ ಡಬ್ಬಿ ಒಂದಕ್ಕೆ ರೂಪಾಯಿ ಒಂದು ಮಾತ್ರ.

ಹಿಂದೂದೇಶದಲ್ಲಿಯೂ ಮತ್ತು ಇತರ ದೇಶಗಳಲ್ಲಿಯೂ ಪ್ರತಿಯೊಂದು ಗೃಹದಲ್ಲಿ ಪ್ರಯೋಜನಕರವಾದ ಒಂದು ಪುಸ್ತಕ ಇರುವುದು. ನಿಮಗೆ ಗೊತ್ತುಂಟೋ? ಆ ಪುಸ್ತಕದ ಹೆಸರೇ

"ಕಾಮಶಾಸ್ತ್ರ."

ನೀವು ಇದುವರೆವಿಗೂ ಆ ಪುಸ್ತಕದಲ್ಲಿ ವಿವರಿಸಿದ ಘನ ವಿಷಯಗಳನ್ನು ನೋಡದೇ ಇದ್ದಪಕ್ಷಕ್ಕೆ, ಈ ದಿನ ನಮಗೆ ಒಂದು ಕಾರ್ಡು ಬರೆದರೆ ಪೋಸ್ಟು ಚಾರ್ಜು ನಿಮಗಿಲ್ಲದೇನೇ, ಆ ಪುಸ್ತಕವನ್ನು ಕಳುಹಿಸುತ್ತೇವೆ.

ಆತಂಕನಿಗ್ರಹ ಔಷಧಾಲಯ,
ನಂಬ್ರ 23, ಬ್ರಾಡ್ವೇ, ಮದರಾಸು.

Agents:—
Messrs RAPHAEL & Co.,
MANGALORE.

ಹೊಸಗ್ರಂಥಗಳು!! ಬೇಗನೇ ತರಿಸಿಕೊಳ್ಳಿರಿ!!

ಕೋಕಶಾಸ್ತ್ರವು.

ರಸಿಕ ವಾಚಕ ಮಹಾಶಯರೇ,

ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ, ಸಂಪಾದಿಸಿ, ಅವರಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನಷ್ಟೇ ಶೋಧ ಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ಲೇಜ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ತಿನಿ, ಸ್ತ್ರೀಯ ಇದರಂತೆ ಪುರುಷರಲ್ಲಿಯ ಭೇದ, ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ, ಜನನೇಂದ್ರಿಯಾದಿಗಳ ವರ್ಣನೆಯನ್ನೂ, ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ, ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ, ನಪುಂಸಕತ್ವ, ವಂಧ್ಯಾ ದೋಷಗಳ ಚಿಕಿತ್ಸೆಯನ್ನೂ, ಸ್ತ್ರೀಯರ ಗೂಢ ರಹಸ್ಯವನ್ನೂ, ದಂಪತಿ ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನೂ ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನು ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ.

ಕ್ರಯ ಬೆಲೆ ೧—೮—೦, ಟಪ್ಪಾಲು ಹಾಸಲು ೦—೪—೦.

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ
ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ
ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ವಾಂಸರೂ ನಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ತಮಾನಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವುವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ [illegible] ಕುರಿತ ಲೆಕ್ಕಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಧನಿಕರಿಗೂ, ವರ್ತಕರಿಗೂ, ಸರ್ವರಿಗೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪೋಷಕರಿಗೆ	... ...	ರೂ. 3—0—0
ಇತರರಿಗೆ, ಪರಸ್ಥಳಕ್ಕೆ, ಪೋಸ್ಟೇಜು ಸೇರಿ		„ 2—8—0.
„ ಶಾಲೆಗಳಿಗೆ	...	„ 1—8—0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪತ್ರಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿಯಬಹುದು.

ಎಡಿಟರ್,
ಬಿ. ಹನುಮಂತಯ್ಯಗೌಡ,
ಅರ್ಥಸಾಧಕ ಪತ್ರಿಕೆ,
[illegible]

Edited, Printed & Published by V. S. Kamath at the M. T. A. Sharada Press, Mangalore.

Registered No. M. 498.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಶ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ । ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೯. ಮಂಗಳೂರು, ತಾರೀಕು ೨೬ನೇ ಶುಕ್ರವಾರ ಜೂನ್ ೧೯೨೫ ಸಂಚಿಕೆ ೨೬.

The Canara Banking Corporation, Udipi, Ltd.

Head Office:—	Branch:—
Udipi	Coondapoor
Paidup Capital	1,66,165—9—11
Reserve etc	64,700—0—0

Season Deposits

Carrying Special rate of 7% up to 15th June 1925 only.

Further Particulars on Application.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಉಡುಪಿ, ಲಿಮಿಟೆಡ್.

ಹೆಡ್ ಆಫೀಸು:—ಉಡುಪಿ	ಶಾಖೆ:—ಕುಂದಾಪುರ.
ವಸೂಲಾದ ಮೂಲಧನ	1,66,165—9—11
ರಿಜರ್ವ್ ವಗೈರೆ ಫಂಡುಗಳು	64,700—0—0

ತಾ. 15—6—1925ರವರೆಗೆ ಮಾತ್ರ ಸಾಲಿಯಾನ್ ಸೇಕಡಾ 7ರ ದರದ ಬಡ್ಡಿಯ ಮೇಲೆ ಮುಸುಂ ಠೇವಣಾತಿಗಳನ್ನು ಅಂಗೀಕರಿಸೋಣಾಗುತ್ತದೆ.

ಹೆಚ್ಚಿನ ಮಾಹಿತಿಗೆ ಬರಕೊಳ್ಳಿರಿ.

Office of the Corporation, Udipi, 1-3-'25
N. Ananda Rao,
Secretary

Wanted Agents
FOR
Every District in South India

For Pushing Sales of Our Calenders, Xmas and New Year Cards, Blotters, Pictures and Picture Post Cards, at wholesale rates. Deposit of Rs. 100—0—0 Essential.

Apply to:—
The South Indian Advertising Agency,
13, Kilary Road,
BANGALORE CITY.

ಶುದ್ಧ ರೇಶ್ಮೆಯ ಧಾವಳಿಗಳು.

1 ಮಳ ಉದ್ದ 1¼ ಮಳ ಅಗಲ ರೂ. 1¼ರಿಂದ 2 ವರೆಗೆ, 5 ಮಳ ಉದ್ದ 1¼ ಮಳ ಅಗಲ ರೂ. 1¼ರಿಂದ 5 ವರೆಗೆ, 6 ಮಳ ಉದ್ದ 1¼ ಮಳ ಅಗಲ ರೂ. 2¼ರಿಂದ 6 ವರೆಗೆ, 8 ಮಳ ಉದ್ದ 2 ಮಳ ಅಗಲ ರೂ. 3½ರಿಂದ 10 ವರೆಗೆ, 12 ಮಳ ಉದ್ದ 2¼ ಮಳ ಅಗಲ ರೂ. 6ರಿಂದ 12 ವರೆಗೆ, 16 ಮಳ ಉದ್ದ 2¼ ಮಳ ಅಗಲ ರೂ. 9 ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಜರ್ದ ರೇಶ್ಮೆ ದುಪಟಿಗಳು, ಸಾಮುಗಿಗಳು, ಜರಿ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, [illegible], ಫೋಟೋ ಉಂಗುರಗಳು ಮತ್ತು ಇನ್ನೂ ಅನೇಕ ಸಾಮಾನುಗಳು ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುವು. ಕ್ಯಾಟಲಾಗ್ ಇನಾಂ.

ವಿಳಾಸ—
ಶಿರೋಮಣಿ ಯು. ನಾರಾಯಣಾಚಾರ್ಯ
ಮತ್ತು ಕಂಪೆನಿ, [illegible]

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ.

450 ಪುಟಗಳು ಎಮ್. ಗಣಪತಿರಾವ್ ಐಗಳ್ ಇವರಿಂದ ರಚಿತವಾದದ್ದು. ಕ್ರಯ ರೂ. 2-4-0

ಮಾರಾಟಕ್ಕೆ ಸಿದ್ಧವಾಗಿವೆ **- ತುಳು ಪಾಡ್ದನಗಳು -** ಮಾರಾಟಕ್ಕೆ ಸಿದ್ಧವಾಗಿವೆ.

ದೈಯ್ಯೊಂಗುಳು, ಕಲ್ಲುರ್ಟಿ—ಕಲ್ಕುಡ, ಕಣಂದೂರು ದೈಯ್ಯೊಂಗುಳು, ಮುಂಡತ್ತಾಯ, ದೊಬ್ಬಯ್ಯರ್.

ಸುಲಭ ದರಗಳು **- ಶಾಲಾ ಪುಸ್ತಕಗಳು -** ರಖಂ ಕೊಂಡುಕೊಳ್ಳುವವರಿಗೆ ಯೋಗ್ಯ ಡಿಸ್ಕೌಂಟ್.

ಅಜ್ಜಿಕಥೆಗಳು—ಮೂರು ಕರಡಿಗಳು; ಹೇನುಸತ್ತು ಕಾಗೆ ಬಡವಾಯಿತು; ಅಗಸನ ಮುದ್ದು; ಇಲಿಗಳ [illegible]; ಅಂಗಳ ಮಗ್ಗು; ಸಿಗಡಿ ಯಾಕೆ ಒಣಗಲಿಲ್ಲ; ಗುಡುಗುಡು ಗುಮ್ಮಟ ದೇವರು; [illegible]; ಒಡ್ಡನ ಓಟ; ಹೊಸ ಕನ್ನಡ ಪುಸ್ತಕ ಭಾಗ ೧; ಹೊಸ ಕನ್ನಡ ಪುಸ್ತಕ ಭಾಗ ೨; ಕನ್ನಡ ಪದ್ಯಗಳು; ಮಗ್ಗಿ ಪುಸ್ತಕ; [illegible]; ಪದ್ಯ ರತ್ನಾವಳಿ, ಎಕ್ಸರ್‌ಸೈಜ್ ಮತ್ತು ನೋಟು ಪುಸ್ತಕಗಳು, ಕಾಪಿ ಪುಸ್ತಕಗಳು, ಡ್ರಾಯಿಂಗ್ ಪುಸ್ತಕಗಳು

ಇತರ ಪುಸ್ತಕಗಳು:—ಸಂಕ್ಷೇಪಗೀತೆ, ಸೇತುಭಂಗ, ಹಿಂದೂ ವ್ರತವಿವೇಕ, ಚಂದ್ರಗುಪ್ತ ಚಕ್ರವರ್ತಿ, ಶ್ರೀ ಕೃಷ್ಣಸಂಧಾನ ಪದ್ಯಪಾಠಗಳು, ಹರಿಕಥಾಮೃತಸಾರ ಹರಿನಾಮಸಂಕೀರ್ತನೆ ಸುಧಾಮೃತ ಪದ್ಯಗಳು. ಬೆಂಕಿಪೆಟ್ಟಿಗೆ ತಯಾರಿಸುವ ವಿಧಾನ, ಸಾಬೂನು ತಯಾರಿಸುವ ವಿಧಾನ, ಸ್ವರಾಜ್ಯ ಭಕ್ತೋಲ್ಲಾಸ, ಚರಕಗೀತೆ, ಕೊಂಕಣಿ ಭಾಷೆಯಲ್ಲಿ ಚಂದ್ರಹಾಸ ನಾಟಕ, ಪ್ರಹ್ಲಾದ ಚರಿತ್ರ ನಾಟಕ, ಕನ್ನಡ ಮೃಚ್ಛಕಟಿಕ ನಾಟಕ, ಚಂದ್ರಹಾಸಾಭ್ಯುದಯ ನಾಟಕ, ಕೋವಿಲನ್ ಚರಿತ್ರ ನಾಟಕ, ಮಾಧವಿ ಉಪನ್ಯಾಸ ಭಾಗ ೧, ೨, ಮತ್ತು ೩.

AMRUTANJAN
Best Indian Pain Balm
Amrutanjan
BOMBAY

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಕಾರಣವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು.

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶೀತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ, ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 2 ಆಣೆ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

109 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

— ರಥೋತ್ಸವ, ವಿವಾಹ ಉಪನಯನಗಳ ಸಮಯ —
ಸರ್ವರಿಗೂ ಉಡಿಗೆ ತೊಡಿಗೆಗಳು ಬೇಕಾಗುವ ಸಂದರ್ಭ.

ಯಾರು, ಯಾವುದನ್ನು ಎಲ್ಲಿ ಪಡೆಯಬೇಕೆಂಬ ಶಂಕೆಯಿಂದ ವಿಳಂಬ ಮಾಡಬೇಡಿರಿ. ಉಡಿಗೆತೊಡಿಗೆಗಳನ್ನು [illegible] ನಿಮಗೆ ಬೇಕಾದ ಯಥಾರ್ಥ ಮಾಹಿತಿಯನ್ನು ಕಳೆದ ಹತ್ತಿಪ್ಪತ್ತು ವರುಷಗಳಿಂದ [illegible] ನಮ್ಮಲ್ಲಿಯ ವ್ಯಾಪಾರವು ಗಿರಾಕಿಗಳಿಗೆ ಸರ್ವ ತೃಪ್ತಿಯಿಂದಲೂ ಲಾಭಕರವಾಗಿ ಪರಿಣಮಿಸುವಂತೆ ನಮ್ಮ [illegible] ಸಂಗ್ರಹವನ್ನು ಮಾಡಿರುತ್ತೇವೆ.

ಗುರ್ಪುರ್ಕಾರ್ ಬ್ರದರ್ಸ್, ರಥಬೀದಿ, ಮಂಗಳೂರು.

ಹೆಡ್ ಆಫೀಸು:—ರಥಬೀದಿ—(ಮೊದಲು ಸುಜೀರ ನಾಗಪ್ಪನಾಯಕ್, ಎಂಡ್ ಕೊ, ಇದ್ದಲ್ಲಿ; ಬದ್ರುದ್ದೀನ್ ರಸ್ತೆಗೆ ತಿರುಗುವಲ್ಲಿ) ಮಂಗಳೂರು.

ಬ್ರೆಂಚ್ ಆಫೀಸು:—ರಥಬೀದಿ—(ಹಳೇ ತಾಲೂಕು ಕಚೇರಿಯ ವಠಾರಕ್ಕೆ ಸಮೀಪವಿರುವ ಮಳಿಗೆ) ಮಂಗಳೂರು.

ಈ ದೇಶದ ಪ್ರಖ್ಯಾತಪಟ್ಟ ನೇಯಿಗೆಯ ಕೇಂದ್ರಸ್ಥಳಗಳಾದ—ಬನಾರಸ್, ಪೂನಾ, ಅಹಮ್ಮದಾಬಾದ್, ಸೂರತ್, ಬೆಂಗಳೂರು, ಧರ್ಮಾವರಮ್, ಕಂಜೀವರಮ್, ಕೊಯಮುತ್ತೂರು, ಮಧುರೆ, ತಂಜಾವೂರು, ಕುಂಭಕೋಣ, ಆರ್ಣಿ, [illegible], ಹುಬ್ಬಳ್ಳಿ, ಇಳಕಲ್, ಗದಗ, ಮದ್ರಾಸು ಈ ಪ್ರಾಂತ್ಯಗಳಲ್ಲಿ ತಯ್ಯಾರಾದ

ಜರಿಸೀರೆಗಳು, ದುಪ್ಪಟಾ, ಜರಿಶಾಲು, ಪೇಟ, ರೇಷ್ಮೆ ಸೀರೆಗಳು, [illegible] ಸೀರೆಗಳು, [illegible] ರೇಷ್ಮೆ ಸೀರೆಗಳು, [illegible] ಸೀರೆಗಳು, ರೇಷ್ಮೆ [illegible], [illegible] ಸೀರೆಗಳು [illegible], ಕರ್ನಾಟಕ ಮಿಲ್ಲುಗಳ [illegible] ಇತರ ಮಿಲ್ಲುಗಳ [illegible].
ಕೈರಾಟೆಯಲ್ಲಿ ತಯಾರಿಸಿದ ನೂಲಿನಿಂದ ಮಾಡಿದ—

ಖದ್ದರ್ ಶರ್ಟಿಂಗ್, ಖದ್ದರ್ ಕೋಟಿಂಗ್, ಖದ್ದರ್ ಟೋಪಿ, ಖದ್ದರ್ ಪೇಟ, ಅಂಗವಸ್ತ್ರ, [illegible]—
ಮುಸಲ್ಮಾನರಿಗೆ ಬೇಕಾದ ನಮೂನೆಯ ಲುಂಗಿ [illegible]—
ಎಲ್ಲ ಸಂಗ್ರಹವನ್ನೂ ನಮ್ಮ [illegible] ಸಂಗ್ರಹಿಸಿ [illegible].

[illegible] ರೂಪಾಯಿ 50ಕ್ಕೆ [illegible] 6¼%, ರೂ. 50ರಿಂದ 250ರವರೆಗೆ [illegible] 10%, ರೂ. 250 ರಿಂದ 1000ಕ್ಕೆ 12½% [illegible]

ಆರ್. ಮಾರ್ಟಿನ್ನರ ಲಪ್ತಾ ಎಣ್ಣೆ

ಇದರ ಸುವಾಸನೆಯು, (ಪರಿಮಳವು) ಬಹಳ ಅಂದವಾಗಿಯೂ ಇರುವುದಲ್ಲದೆ, ಬಹಳ ಹೊತ್ತಿನ ವರೆಗೂ ಇರುತ್ತದೆ. ಈ ಎಣ್ಣೆಯನ್ನು ತಲೆಗೆ ಹಾಕಿಕೊಳ್ಳುವುದರಿಂದ ಕಣ್ಣುಗಳು ತಂಪಾಗಿಯೂ, ಶುಭ್ರವಾಗಿಯೂ, ಆಗವುದಲ್ಲದೆ, ಮೆದುಳು ಚೆನ್ನಾಗಿ ಬೆಳೆಯುತ್ತದೆ. ಇದನ್ನು ಪ್ರತಿದಿವಸವೂ ಉಪಯೋಗಿಸುವುದರಿಂದ ಕೂದಲುಗಳು ಕಪ್ಪಾಗಿ ಹೊಳೆಯುವಂತೆ ಮಾಡುತ್ತದೆ. ಕೂದಲುಗಳಲ್ಲಿರುವ ಹೇನುಗಳು ಮುಂತಾದುವು ನಾಶವಾಗಿ ತಲೆಬುರುಡೆಯನ್ನು ಚೆನ್ನಾಗಿ ಬೆಳೆಯುವಂತೆ ಮಾಡುತ್ತದೆ. ಗಡ್ಡ ಮತ್ತು ಮೀಸೆಗಳು ಸಹ ಬೆಳೆಯುತ್ತವೆ. ಇದನ್ನು ಉಪಯೋಗಿಸಿದ ಜನರು ಇದಕ್ಕಿಂತ ಉತ್ತಮವಾದ ಎಣ್ಣೆಯು ಬೇರೆ ಇಲ್ಲವೆಂದು ಹೇಳಿರುತ್ತಾರೆ.

ಕ್ರಯ ಬಾಟಿ 1ಕ್ಕೆ ರೂ. 1-4-0.

ಆರ್ ಮಾರ್ಟಿನ್ನರ ಗಿಟೋಡಯಿನ್.

ಗಂಡಸರಿಗೂ ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ, ಅಥವಾ ಹೊಸತಾಗಿದ್ದರೂ ಸರಿ. ಬಿಳುಪು ಹೋಗುವುದು ಉರಿಯುವುದು, ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕೆ ಉರಿ ಮೂತ್ರವನ್ನು ತಿಳಿಸಿ, ಮೂತ್ರವು ಬಿಳುಪಾಗಿ ನಿರ್ಮಲವಾಗುವುದಲ್ಲದೆ ರೋಗದ ಪಟ್ಟನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ.

ಬೆಲೆ ಸೀಸೆ 1ಕ್ಕೆ ರೂ. 2—0—0.

ಆರ್. ಮಾರ್ಟಿನ್ನರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮು ಉಬ್ಬಲು ಶ್ವಾಸ, ಸೀತ, ನೆಗಡಿ, ಗಂಟಲುನೋವು. ಎದೆ ನೋವುಗಳನ್ನೂ ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನಮಾಡಿ ಪರೀಕ್ಷಿಸಿ ನೋಡಿರಿ. ಅನಂತರ ಬೇರೆ ಯಾವ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮಲಿಗೂ ರಾಣೆಯಾಗಿಯೂ, ಎದೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತಲೆಯಿಕ್ಕದಂತೆ ಮಾಡುತ್ತದೆ.

60 ಮಾತ್ರೆಗಳ ಸೀಸೆ 1ಕ್ಕೆ ರೂ. 1—4—0.

ವಿಳಾಸ:—ಆರ್. ಡಿ. ಕಟ್ಲೆ ಮತ್ತು ಕಂಪೆನಿ,
ನಂಬ್ರ ಬಿ. ಫ್ರಿಯರ್ ರೋಡ್,
ಸಾಂಜ ವರ್ತಮಾನ ಪ್ರೆಸ್,
ತೋದಿವಾಲಾ ಬಿಲ್ಡಿಂಗ ಎದುರುಗಡೆ, ಫೋರ್ಟ ಮುಂಬಯಿ.

R. D. Kately & Co.
No. B. Frere Road,
Opposit Sanjvertaman Press,
Todivala Building, FORT BOMBAY

ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ಮೂರನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್. ಗಣಪತಿರಾವ್ ಐಗಳ್—ಗ್ರಂಥಕರ್ತರು.
ಮನೋರಂಜಕ ಚಿತ್ರಗಳೂ ಇವೆ.

ಇದರಲ್ಲಿ ಸಾವಿತ್ರಿ, ಶಕುಂತಳಾ, ಕೃಷ್ಣಾ ಕುಮಾರಿ ಪದ್ಮಿನಿ, ಜೋನ್ ಒಫ್ ಆರ್ಕ, ಫ್ಲೊರೆನ್ಸನಾಯಿಟಿಂಗೇಲ ಪರಸುರಾಮ, ಭೂತಾಳಪಾಂಡ್ಯ, ಕಾರ್ಕಳ ಗೋಮಟೇಶ್ವರ ಮತ್ತು ಭೈರವರಾಜ, ಮೂಡಬಿದ್ರೆಯ ಚೌಟರು, ನಂದಾವರ ಬಂಗರು, ಕಾರ್ಕಳ ರಾಮಸಮುದ್ರ ಮತ್ತು ರಾಮನಾಥ ಒಡೆಯರ ಅಣೆಕಟ್ಟು, ಗುರುಪುರ ಜಂಗಮ ಮಠ, ಕಲ್ಯಾಣಪ್ಪನ ಕಾಟಕಾಯಿ, ಗುರುವಾಯನಕೆರೆ, ಜಮಾಲಾಬಾದುಕೋಟೆ, ಸುಲ್ತಾನಬತ್ತೇರಿ, ಉದಗಾಪ್ರಾರ್ಥನಾಮಂದಿರ, ಸೇಂಟಮೇರಿ ದ್ವೀಪಗಳು ಮತ್ತು ದರಿಯಾಬಾದರಗಡ, ಕೊರಗರು, ಕೊಡಗರು, ತೋದರು, ರಜಪೂತರು, ಕಂದಾರಿಗಳು ಘುರ್ಖಾ ಜನರು, ಅರಬಿಯರು. ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ಮೂರನೇ ದರ್ಜೆಯ ಮಕ್ಕಳಿಗೆ ಉಪಯುಕ್ತವಾಗಿದೆ. ಕ್ರಯ 6 ಆಣೆ.

ಪುಸ್ತಕ ದೊರಕುವ ವಿಳಾಸ:—

ಶಾರದಾ ಛಾಪಖಾನೆ,
ಮಂಗಳೂರು.

ಗಣಪತಿರಾವ್, ಐಗಳ್.
ಮಂಜೇಶ್ವರ.

ಡಾಕ್ಟರುಗಳು ಭಿನ್ನಾಭಿಪ್ರಾಯಪಡುವಾಗ್ಯೆ ತೀರ್ಮಾನಿಸುವದು ಯಾರು?

ಅಂಥಾ ಸಂದರ್ಭಗಳಲ್ಲಿ ಡೆಂಗ್ಯು ಮುಂತಾದ ಜ್ವರಗಳನ್ನು ನಿವಾರಿಸುವಂಥಾ "ಬಾಟ್ಲಿವಾಲರ ಏಗ್ಯುಮಿಕ್ಸ್ಚರ್"ನ್ನು ಸರಾಗವಾಗಿಯೂ, ಮತ್ತು ಜ್ವರಗಳನ್ನು ಖಂಡಿತವಾಗಿ ತಪ್ಪಿಸುವಂಥಾದ್ದೂ, ಎಲ್ಲಾ ತರದ ತಲೆನೋವುಗಳನ್ನು ಹೋಗಲಾಡಿಸುವಂಥಾದ್ದೂ ಆದ "ಬಾಟ್ಲಿವಾಲರ ಏಗ್ಯುಪಿಲ್ಸ್" ಇದನ್ನು ಉಪಯೋಗಿಸಿರಿ.

ಐ. ಎಮ್. ಎಸ್. ಡಾಕ್ಟರುಗಳಿಂದ ಶಿಫಾರಸು ಮಾಡಲ್ಪಟ್ಟಿದ್ದು. ಇದರ ಉಪಯೋಗದಿಂದ ಹೃದಯದ ಮೇಲೆ ಯಾವದೊಂದೂ ಬಾಧಕವಿಲ್ಲ. ಅರ್ಧ ಶತಮಾನದಿಂದ ಹಿಂದುಸ್ಥಾನ, ಬರ್ಮಾ, ಸಿಲೋನ್, ಆಫ್ರಿಕಾ ಇವುಗಳಲ್ಲಿ ಪ್ರಖ್ಯಾತಪಟ್ಟಿದ್ದಾಗಿರುತ್ತವೆ.

ಅನೇಕ ಹಿಂದೀ ಪ್ರದರ್ಶನಗಳಲ್ಲಿ ಬೆಳ್ಳಿ ಮತ್ತು ಬಂಗಾರದ ಪದಕಗಳನ್ನು ಪಡೆದಿರುತ್ತೆ. ಹಾಲಿ ಸಾಮ್ರಾಜ್ಯದಂತಿದ್ದ ಮಹಾರಾಣಿಗಳೂ ಕೂಡ ಅವರ ಮೇಲೆ ಹಣವನ್ನು ಮುಂಗಡವಾಗಿ ಕೊಡುತ್ತಾರೆ. ಬಡ ಮತ್ತು ಮಧ್ಯಮ ತರಗತಿಯ ಜನರಿಗೆ ವರಪ್ರದಾನವಾಗಿದ್ದು ಸಂಚಾರ, ಪ್ರಯಾಣ, ದೇಶಾಟನೆಗಳ ಸಮಯದಲ್ಲಿ ಹತ್ತಿರದಲ್ಲಿರಿಸಿಕೊಳ್ಳದಾಗಿರುತ್ತದೆ.

ಬಾಟ್ಲಿವಾಲರ ಬಾಲಾಮೃತ ಅಥವಾ ಟೊನಿಕ್ ಸಿರಪ್.

ಕೆಮ್ಮನ್ನು ಹೋಗಲಾಡಿಸಿ, ಎದೆನೋವನ್ನು ಶಾಂತಗೊಳಿಸಿ, ಜ್ವರವನ್ನು ಉಪಶಮನಿಸಿ, ನಿದ್ರಾಭಂಗವನ್ನು ಕಡಿಮೆ ಮಾಡಿ ಧಾತುವರ್ಧನವನ್ನು ಮಾಡುವದರಲ್ಲಿ ಅತ್ಯುತ್ತಮವಾಗಿರುತ್ತದೆ. ಕಫವನ್ನು ಬೇಗನೆ ಮಾಯವಾಗುವಂತೆ ಮಾಡುವುದಲ್ಲದೆ ಅದೇ ಸಮಯದಲ್ಲಿ ಒಳ್ಳೇ ಜೀರ್ಣವನ್ನೂ ಉಂಟುಮಾಡುವುದು. ದರ ಮೊದಲಾದ ಮಾಹಿತಿಯನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಕಾರಿನಪತ್ತೆ:-CAWASHAPUR, BOMBAY.

Dr. H. L. Batliwala & Co., Ltd.,
Sayani Road, P. O. Cadell Road, Bombay. No. 14.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.,
Sayani Road, P. O. Cadell Road, Bombay. No. 14.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟ. ಖ. 9 ಆಣೆ.

ನಮ್ಮ ವಿಳಾಸ:— ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಏಜಂಟರು:— ಡಿ. ಊಲನ್ ಮಾರ್ಟ್, ಮಂಗಳೂರು.

OUR RECENT IMPORT IN WRIST WATCHES

Have you used anyone of these Watches?

SEND YOUR ORDER NOW ALL GUARANTEED.

Fashionable wrist wrist Lady's size. Reliable movement Guaranteed.



No. 368.

Handy to wear and looks beautiful. Gives punctual time and with strong movement.

Nickel case Rs. 8—0

High-class Radium dial watch watch with Roman figures.



No. 367.

Can be seen in dark nights. Well fitted with best movement and strong to use. Used by one and all.

Silver case Rs. 9—0.

Radio light wrist watch.

No. 372.

Fitted with the best mechanism and guaranteed to work and keep perfect time for a long time.

Nickel case Rs. 7—8
Electro rolled-gold „ 9—0

(N. B. In addition to the above, we have good number of varieties of fancy wrist watches, pocket watches. Please write for a descriptive catalogue, which will be sent free)

WHOLESALE IMPORTERS

PETER WATCH COY.,
POST BOX 27, MADRAS

ಶಾಲಿವಾಹನಶಕ ೧೮೪೭ನೆಯ ಕ್ರೋಧನ ಸಂ।ರದ ಜ್ಯೇಷ್ಠ ಬ। ೧೪ ಶನಿವಾರದಿಂದ ಕ್ರೋಧನ ಸಂ।ರದ ಆಷಾಢ ಶು। ೫ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೫ನೆಯ ವೃಷಭ ಬೇಶ.)

ತಾರೀಕು	ವಾರ	ತಿ.	ಘಳಿಗೆ.	ನಕ್ಷತ್ರ.	ಘಳಿಗೆ.	ಸೌರದಿನ.	ಸೂರ್ಯ ಉ.	ಸೂರ್ಯ ಅಸ್ತ.
27	ಶನಿ	೬	೪೨. ೦	ಪುಬ್ಬಾ	೫೧ ೧೪	೧೩	6. 8	6.58
28	ರವಿ	೭	೪೩. ೨	ಉತ್ತರಾ	೫೪. ೨	೧೪	6. 9	6 58
29	ಸೋಮ	೮	೪೨.೫೮	ಹಸ್ತಾ	೫೫.೩೨	೧೫	6. 9	6 58
30	ಕುಜ	೯	೪೧ ೩೧	ಚಿತ್ರಾ	೫೫ ೨೮	೧೬	6 9	6.59
1	ಬುಧ	೧೦	೩೯. ೨	ಸ್ವಾತಿ	೫೪. ೪೬	೧೭	6 9	6.59
2	ಗುರು	೧೧	೩೫.೩೧	ವಿಶಾಖಾ	೫೪.೪೪	೧೮	6.10	6.59
3	ಶುಕ್ರ	೧೨	೩೧. ೨	ಅನುರಾಧಾ	೫೦. ೨	೧೯	6 10	6.59

ಮಂಗಳೂರಿನ ವಾಯುಸ್ಥಿತಿ.

ತಾರೀಕು Date	Temperature. ಉಷ್ಣ (ಕಾವು) Maximum ಹೆಚ್ಚಿನದು	Minimum ಕಡಿಮೆ	Rainfall. ಮಳೆ ದಿನದ ಮಳೆ	ಜುಮಲಾ ಮಳೆ.
19	87—3	71—6	0—40	—
20	86—0	72—2	5—14	—
21	85—3	74—1	3—06	—
22	83—4	73—0	4—40	—
23	84—4	73—6	4—11	—
24	81—5	73—0	4—55	—
25	82—2	71—3	4—85	—

ಮಂಗಳೂರಿನ ಪೇಟೆ ಧಾರಣೆ.

ಜಿನಸು	ಇಂದ	ವರೆಗೆ
	ರೂ. ಆ.	ರೂ. ಆ
ಹೊಸ ಮಸ್ರಿ	8—8	9—4
ಹೊಸ ಗುಡ್ಡು ...	8-0-0	8—10
ಹೊಸ ರಾಶಿ ...	7- 8	7—12
ಅನ್ನಲ್ ಬೆಳ್ತಿಗೆ ...	8--4	9—8
ಗುಡ್ಡು ಬೆಳ್ತಿಗೆ ...	7—12	8—4
ರಂಗೂನು ಬೆಳ್ತಿಗೆ ಗೋಣಿ ೧ ...	13- 0	13 . 8
ಗೋಧಿ ಗೋಣಿ ೧ಕ್ಕೆ ...	18- 8	22 0
ಹುರುಳಿಗೋಣಿ ೧ಕ್ಕೆ ...	9- 8	10—12
ಕಡಲೆಗೋಣಿ ೧ಕ್ಕೆ ...	12-0	13—0
ತೊಗರಿಗೋಣಿ ೧ಕ್ಕೆ ...	12-8	13—0
ತೊಗರಿಬೇಳೆ ಗೋಣಿ ೧ಕ್ಕೆ ...	13-8	21—0
ಉದ್ದುಗೋಣಿ ೧ಕ್ಕೆ ...	14- 0	14 . 8
ಹೆಸರುಗೋಣಿ ೧ಕ್ಕೆ ...	14—0	15 . 0
ಊರು ಬೆಲ್ಲ ಖಂಡಿ ೧ಕ್ಕೆ ...	-	85—0
ಉಪ್ಪು ಗೋಣಿ ೧ಕ್ಕೆ ...	4- 4	4-10
ಕೊಬ್ರಿ ಖಂಡಿ ೧ಕ್ಕೆ ...	115-0	120—0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	32- 8	36—0
ಎಳ್ಳಿಂಡಿ ಖಂಡಿ ೧ಕ್ಕೆ ...	35 -0	42—8
ಕೊಬ್ರಿ ಎಣ್ಣೆ ಮುಡಿ ೧ಕ್ಕೆ ...	8—8	9—8
ಎಳ್ಳೆಣ್ಣೆ ಮುಡಿ ೧ಕ್ಕೆ ...	8- 0	11—0
ಚಿಮಿಣಿ ಎಣ್ಣೆ ಪೆಟ್ಟಿಗೆ ೧ಕ್ಕೆ ...	8-15-6	—
ಮೋರಿಸ ಸಕ್ಕರೆ ಮುಡಿ ೧ಕ್ಕೆ ...	5— 0	5—2
ಊರ ಮೆಣಸಿನಕಾಯಿ ಮುಡಿ ೧ಕ್ಕೆ ...	7- 0	—
ಸಾಸಿವೆ ಮುಡಿ ೧ಕ್ಕೆ ...	8- 12	—
ಕೊತ್ತಂಬರಿ ಮುಡಿ ೧ಕ್ಕೆ ...	3- 8	4—4
ಕಾಫಿ ಖಂಡಿ ೧ಕ್ಕೆ ...	345- 0	400--0
ಬೆಳಗೋಟು ಅಡಿಕೆ ಖಂಡಿ ೧ಕ್ಕೆ ಹಳಸು ...	235- 0	245--0
,, ಹೊಸ ಅಡಿಕೆ	240—0	240—0
ಕಾಳುಮೆಣಸು ಖಂಡಿ ೧ಕ್ಕೆ ...	155-0	160—0
ಯಾಲಕ್ಕಿ ಮುಡಿ ೧ಕ್ಕೆ ...	80- 0	90—0
ಗೇರುಬೀಜ ಮುಡಿ ೧ಕ್ಕೆ ...	2—10	2 13
ಕಬ್ಬಿಣ ಖಂಡಿ ೧ಕ್ಕೆ ...	45- 0	65—0
ತಾಂಬ್ರ ತಗಡು ಮುಡಿ ೧ಕ್ಕೆ ...	17-12	23—0
ತಾಮ್ರ ಪಾತ್ರಗಳು ಮುಡಿ ೧ಕ್ಕೆ ...	26- 0	—
ಚೀನಿ ಬೆಳ್ಳಿ ಸೇರು ೧ಕ್ಕೆ ...	22 - 0	
ಹಿತ್ತಾಳೆ ತಗಡು ಮುಡಿ ೧ಕ್ಕೆ ...	18- 8	
[illegible]	13-12	

The Canara Public Conveyance Co., Ltd, Mangalore.
(ESTABLISHED 1914.)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು
- ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು
- ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
- ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
- ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.
- ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ—ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd., Mangalore. S K

ಉಚಿತ! ಬಿಟ್ಟಿ!! ಪುಗಸಟ್ಟೆ!!!

ವೈದ್ಯವಿದ್ಯ



NO PRICE NO POSTAGE.

ಎಂಬ ಈ ಪುಸ್ತಕದಲ್ಲಿ ಆಯುರ್ವೇದ ಶಾಸ್ತ್ರದಲ್ಲಿ ಸ್ತ್ರೀಪುರುಷರು ಆರೋಗ್ಯದೃಢಕಾಯರಾಗಿ ಆರೋಗ್ಯದಿಂದ ಕೂಡಿದ ಸಂತಾನಗಳನ್ನು ಪಡೆದು ಪತಿಪತಿಯರು ಅನ್ಯೋನ್ಯವಾಗಿ ಅನುರಾಗವುಳ್ಳವರಾಗಿ ಸುಖದಿಂದಲೂ ಸಂತೋಷದಿಂದಲೂ ಸಂಸಾರಯಾತ್ರೆಯನ್ನು ಮಾಡಲು ಅತ್ಯಂತ ಉಪಯುಕ್ತವಾದ ವಿಷಯಗಳು ಅಲ್ಲಲ್ಲಿ ಹೇಳಲ್ಪಟ್ಟಿರುವುದನ್ನು ಒಂದಾಗಿ ಕ್ರೋಡೀಕರಿಸಿ ಅಜ್ಞಾನದಿಂದಲೂ ಸಂಕಷ್ಟದಿಂದಲೂ ನರಳುತ್ತಿರುವ ಸಂಸಾರಿಗಳನ್ನುದ್ಧಾರಮಾಡುವ ಸಲುವಾಗಿ ಈ ಪುಸ್ತಕವನ್ನು ಕ್ರಯವೂ ಅಂಚೇ ಹಾಸಲೂ ಇಲ್ಲದೆ ಬೇಡಿದವರಿಗೆ ಸರ್ವತ್ರ ಉಚಿತವಾಗಿ ಕಳುಹಿಸುತ್ತೇವೆ. ಹೆಚ್ಚು ಮಾಹಿತಿಗೆ ಪತ್ರ ಬರೆಯಿರಿ.

ರಾಜವೈದ್ಯ ನಾರಾಯಣಜಿ ಕೇಶವಜಿ,
57, ಬಂದರ್ ಸ್ಟ್ರೀಟ್, ಜಿ. ಟಿ. ಮದ್ರಾಸ್

ನೋಟೀಸು.

ಉಪ್ಪಿನಂಗಡಿ ತಾಲೂಕು ನೆರಿಯ ಗ್ರಾಮದ ಇಜ್ಜಾವು ವಿಷ್ಣಯ್ಯನವರ ಮಗ ಈ ಸಂಘದ ನಂಬ್ರ 226ನೆ ಮೆಂಬರನಾಗಿರುತ್ತಿದ್ದ ಕುದನೆ ಲಕ್ಷ್ಮೀನಾರ್ಣಪ್ಪಯ್ಯ ಎಂಬವರು ಬದರಿಯಾತ್ರೆಗೆ ಹೋದಲ್ಲಿ ಮೃತಪಟ್ಟ ಕಾರಣ ಅವರ ಬಾಬು ಈ ಸಂಘದಲ್ಲಿರುವ II ಕ್ಲಾಸು ಪಾಲು 2 (ಎರಡು)ನ್ನು ತನ್ನ ಹೆಸರಲ್ಲಿ ವರ್ಗಾಯಿಸಬೇಕಾಗಿ ಅವರ ಖಾಸಾ ತಮ್ಮ ಕುದನೆ ಗಣಪತಿರಾವ್ ಎಂಬವರು ತಾರೀಕು 10—2—1925ರಲ್ಲು ಈ ಸಂಘಕ್ಕೆ ಅರ್ಜಿ ಬರಕೊಂಡಿರುತ್ತಾರೆ.

ಈ ಸಂಗತಿಯನ್ನು ಸ್ವದೇಶಾಭಿಮಾನಿಯಲ್ಲಿ ಒಂದು ತಿಂಗಳ ವಾಯಿದೆಯಿಂದ ನೋಟೀಸು ಪ್ರಾಸ್‌ಮಾಡಿದನಂತರ ವರ್ಗಾಯಿಸಬೇಕಾಗಿ ಈ ಸಂಘದ ಆಡಳಿತೆ ಸಭೆಯಲ್ಲಿ ನಂಬ್ರ $\frac{167}{24\text{-}25}$ನೇ ನಿರ್ಣಯವಾಗಿದೆ. ಇದಕ್ಕೆ ಆಕ್ಷೇಪವುಳ್ಳವರು ಈ ನೋಟೀಸು ಪ್ರಾಸ್ ಆದ ಒಂದು ತಿಂಗಳ ಒಳಗೆ ಅವರ ಆಕ್ಷೇಪಗಳನ್ನು ಬರಹಮೂಲಕವಾಗಿ ಕಾರ್ಯದರ್ಶಿಯಾದ ನನಗೆ ಜಾಹೀರುಮಾಡಲಿಕ್ಕೆ ತಪ್ಪಿದರೆ ಮೇಲಿನ ನಿರ್ಣಯದಂತೆ ಸದರಿ II ಕ್ಲಾಸು ಪಾಲುಗಳು 2ನ್ನು ಕುದನೆ ಗಣಪತಿ ರಾಯರ ಹೆಸರಿಗೆ ವರ್ಗಾಯಿಸಲಾದೀತು. ತಿಳಿದಿರಲಿ.

ಹೆಡ್ ಆಫೀಸು
ವಿಟ್ಲ,
ತಾ. 6-6-1925.

N. Shankaranaraina Bhat.
ನಂಬ್ರ 2835ನೇ ದಕ್ಷಿಣ ಕನ್ನಡ ಬಾಗಾಯತು ಕೃಷಿಕರ ಬಂಡಸಾಲೆಯ ಸಹಕಾರಿ ಸಂಘದ ಕಾರ್ಯದರ್ಶಿ.

JUST ARRIVED

Continental Belts.
OF VARIOUS SIZES
Price Re. 1—10—0 each
Mangalore Trading Association,
Car Street, MANGALORE.

ದಕ್ಷಿಣ ಕನ್ನಡ ಜಿಲ್ಲೆಯ
ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಬಂದು ನೋಡಿರಿ! ತಿಂದು ನೋಡಿರಿ!

ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ

ಪದಕವನ್ನು

ಬಹುಮಾನವಾಗಿ ಪಡೆದಿರುವ

ಎಸ್. ಪಿ. ಆಚಾರ್ಯ

ಇವರಿಂದ ತಯಾರಿಸಲ್ಪಟ್ಟ

ಉಪ್ಪಿನಕಾಯಿಗಳನ್ನು

ಬಂದು ನೋಡಿರಿ! ತಿಂದು ನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ, ಕುಂತಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನ್ನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ

ಬಂದು ನೋಡಿರಿ! ತಿಂದು ನೋಡಿರಿ!

ಇಂಡಿಯನ್ ಸ್ವೀಟ್‌ಮೀಟ್ ಮಾರ್ಟ್.

ಮನೋಲ್ಲಾಸಿನಿ ಕಾಫಿ ಕ್ಲಬ್,
ಮಾರ್ಕೆಟು ರೋಡು,
ಮಂಗಳೂರು.

ಅಥವಾ

ಸದಾನಂದ ಕಾಫಿ ಕ್ಲಬ್,
ರಥಬೀದಿ, ಮಂಗಳೂರು.

— ಸಿರಿಗನ್ನಡಂಗೆಲ್ಗೆ —

ಶ್ರೀ ಶಂಕರ ಕರ್ನಾಟಕ ಪುಸ್ತಕ ಭಂಡಾರವೂ
ಶ್ರೀ ವಿದ್ಯಾರಣ್ಯ ಪ್ರಕಾಶಕ ಸಂಸ್ಥೆಯೂ,
ಮ್ಯಾಳಮಡ್ಡಿ, ದಾರವಾಡ.

ಕನ್ನಡಿಗರಿಗೆ ಬೇಕಾಗುವ ಎಲ್ಲಾ ತರದ ಕನ್ನಡ ಪುಸ್ತಕಗಳು ನಮ್ಮಲ್ಲಿ ಯೋಗ್ಯ ಬೆಲೆಗೆ ದೊರೆಯುವವು. ವಿದ್ಯಾರಣ್ಯ ಪುಸ್ತಕ ಮಾಲೆಯ ಕೆಳಗಿನ ೧, ೨, ೩, ಪುಸ್ತಕಗಳು ಚಂದಾದಾರರಾಗುವವರಿಗೆ ಅಂಚೆ ವೆಚ್ಚ ಸೇರಿ ೫ ರೂ. ೬ ಆನೆಗೆ ದೊರೆಯುವವು. ಮುಂದೆ ಹೊರ ಬೀಳುವ ಮಾಲೆಯ ಪುಸ್ತಕಗಳನ್ನು ಚಂದಾದಾರರಿಗೆ ೧ ರೂಪಾಯಿಗೆ ೨ ಆಣೆಯಂತೆ ಕಡಿಮೆ ಬೆಲೆಗೆ ವಿ. ಪಿ. ಮಾಡುವೆವು. ಭಂಡಾರದ ಬೆಲೆ ಪಟ್ಟಿಗಾಗಿ ೪ ಆಣೆ ಅಂಚೆ ಟಿಕೇಟುಗಳನ್ನು ಕಳುಹಿಸತಕ್ಕದ್ದು.

		ರೂ. ಆ. ಪೈ.
೧.	ಕರ್ನಾಟಕ ಸಿಂಹಾಸನ ಸ್ಥಾಪನೆ	೧— ೦—೦
೨.	ಕಥೆಗಳನ್ನೊಳಗೊಂಡ ಬೀರಬಲ್ಲ ಚರಿತ್ರ (ಸಚಿತ್ರ)	೧— ೬—೦
೩.	ಛತ್ರಪತಿ ಶಿವಾಜಿ ಮಹಾರಾಜ „	೨—೧೨—೦
೪.	ಮಹಾರಾಣಿ ಲಕ್ಷ್ಮೀಬಾಯಿ ಝಾಂಸಿ „	೨— ೦—೦
೫.	ಅಕ್ಬರ ಚಕ್ರವರ್ತಿ ಚರಿತ್ರ „	೧— ೧—೦
೬.	ಚರಿತ್ರ ಸಂಗ್ರಹ ಭಾಗ ೧. „	೧— ೪—೦
೭.	ತಿಲಕರ ಗೀತಾ ರಹಸ್ಯ	೩— ೮—೦
೮.	ಶ್ರೀ ದಾಸಬೋಧ ಭಾಗ ೧ ೨. ೩.	೨—೧೪—೦
೯.	ರಾಷ್ಟ್ರಸಭೆಯ ಇತಿಹಾಸ	೨— ೮—೦
೧೦.	ವಚನ ಜ್ಞಾನಸಿಂಧು	೪— ೦—೦

ಇವಲ್ಲದೆ ನಮ್ಮಲ್ಲಿ ಎಲ್ಲಾ ತರದ ಶಾಲೆಯ ಶಾಲೋಪಯೋಗಿ ಪುಸ್ತಕಗಳೂ ನಕಾಶ ಚಿತ್ರಗಳೂ ಬರವಣಿಗಳೂ ದೊರೆಯುವವು.

ಶ್ರೀಪಾದ ರಾಮಚಂದ್ರ ದೇಶಪಾಂಡೆ ಬಿ. ಯುಸ್. ಸಿ.
ವ್ಯವಸ್ಥಾಪಕ.

ಪ್ರಖ್ಯಾತಿಪಟ್ಟ ಮಂಗಳೂರು ನಸ್ಯ.

ನಮ್ಮಲ್ಲಿ ಉತ್ತಮವಾದ ಹೊಗೆಸೊಪ್ಪಿನಿಂದಲೂ, ಸುಮಾರು ೫೦ ವರ್ಷಗಳ ಅನುಭವದಿಂದಲೂ ತಯಾರಿಸಿದ ನಸ್ಯವು ಯಾವಾಗಲೂ ರಖಂ ಆಗಿಯೂ ಚಿಲ್ಲರೆ ಆಗಿಯೂ ಮಾರಾಟಕ್ಕೆ ದೊರೆಯುತ್ತದೆ.

I ಕ್ಲಾಸ್ ರಾತ್ತಲ ೧ಕ್ಕೆ ರೂ. 3—0—0.
II „ „ „ 2—12—0.

ವಿ. ಪಿ. ಚಾರ್ಜು ಅಲಾಹಿದೆ. ಸ್ಯಾಂಪಲು ಅಪೇಕ್ಷಿಸುವವರು ೨ ಆಣೆ ಸ್ಟಾಂಪು ಕಳುಹಿಸಲಿ.

ವಿಳಾಸ—

ಎಮ್. ಎಸ್. ಬಂಡಾರ್ಕಾರ್ ಎಂಡ್ ಸನ್ಸ್,
ನಸ್ಯ ವ್ಯಾಪಾರಿಗಳು.
ರಥಬೀದಿ, ಮಂಗಳೂರು.

ನೋಟೀಸು.

ದಕ್ಷಿಣ ಕನ್ನಡಾ ಒಫೀಶಿಯಲ್ ರಿಸೀವರರ
ಕೋರ್ಟನಲ್ಲಿ.
I. P. No. 40/1925.

ಮ॥ ಡಿ॥ ಮುನ್ಸಿಫ್ ಕೋರ್ಟು.
I. P. No. 16/1925.

ಡಿ. ಕ್ಯಾಂಪ—ಸೋಮಯ್ಯನ ಮಗ- ಮಂಗಳೂರು ತ್ಯಾಹಾರು ಬೋಳೂರು ಬೊಕ್ಕಪಟ್ಣದಲ್ಲಿರುವವ. } ಅರ್ಜಿದಾರ.

ಮತ್ತು

ಅಲ್ಬರ್ಟ ಪಿಂಟೋ ಕೂಡ— ವೇಣೆದಾರರು (ಕ್ರೆಡಿಟರರು.)

ಮೇಲ್ಕಂಡ ಅರ್ಜಿದಾರನು ತನ್ನನ್ನು ದಿವಾಳಿಯೆಂತ ಸ್ಥಾಪಿಸಬೇಕಾಗಿ ದಾಖಲು ಮಾಡಿದ ಮೇಲಿನ ಅರ್ಜಿಯು ತನ್ನಿ ಬಗ್ಗೆ ತಾ. 18—7—'25ಕ್ಕೆ ಇಟ್ಟಿರುವದರಿಂದ ಆ ಬಗ್ಗೆ ಆಕ್ಷೇಪಣೆಯುಳ್ಳವರು ತಮ್ಮ ಆಕ್ಷೇಪಣೆಗಳನ್ನು ಸದರಿ ಮೇಲ್ಕಂಡ ಕೋರ್ಟಿನ ಮುಂದೆ ಸದರಿ ತಾರೀಕಿನ ದಿವಸ ಪೂರ್ವಾಹ್ನ ಗಂಟೆ 11ಕ್ಕೆ ಜ್ಯಾಹೀರು ಮಾಡತಕ್ಕದ್ದು ಎಂತ ಈ ಮೂಲಕ ತಿಳಿಸೋಣಾಗಿಯದೆ.

ಮಂಗಳೂರು, } P. SANJIVA M. A. B. L.
ತಾ. 22-6-'25. } *Vakil for Petitioner.*

ಮಾರಾಟಕ್ಕೆ ಸಿದ್ಧವಿದೆ.

ಬಂಟವಾಳ ಪೇಟೆಯಿಂದ ಒಂದುವರೆ ಮೈಲು ಹತ್ತಿರ ಅಮ್ಮಾಡಿ ಗ್ರಾಮ ಫನೆಗಲ್ ಪದವಿನಲ್ಲಿರುವ ಮೂರು ಚಲೋದಾದ ಜಾಗೆಗಳು

(1) ಸರ್ವೆ ನಂಬ್ರ $\frac{68}{2}$ 6 ಎಕ್ರೆ 84 ಸೆಂಟ್ಸ ವಿಸ್ತೀರ್ಣ, ಎಸೆಸ್‌ಮೆಂಟ್ ರೂ. 5—2—0.
(2) ಸರ್ವೆ ನಂಬ್ರ $\frac{68}{1}$ 1 ಎಕ್ರೆ 22 ಸೆಂಟ್ಸ ವಿಸ್ತೀರ್ಣ, ಎಸೆಸ್‌ಮೆಂಟ್ ರೂ. 2—7—0.
(3) ಸರ್ವೆ ನಂಬ್ರ $\frac{6}{5}$ 1 ಎಕ್ರೆ 38 ಸೆಂಟ್ಸ ವಿಸ್ತೀರ್ಣ, ಎಸೆಸ್‌ಮೆಂಟ್ ರೂ. 2—12—0.

ನೆರೆಯ ಬಾಧಕ ಏನೂ ಇರುವುದಿಲ್ಲ. ತುಂಬಾ ನೀರು ಇರುವುದು. ಮನೆಗಳು ಸಹ ಇವೆ. ಬಹಳ ಆರೋಗ್ಯಕರವಾದ ಜಾಗೆಗಳು.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಜೆ. ಜೆ. ಸಾಲ್ಡಾನ,
ಮಿಲಾಗ್ರಿ ಇಗರ್ಜಿ ಬಳಿ,
ಮಂಗಳೂರು

ಕುಂದಾಪುರ ಪ್ರಿನ್ಸಿಪಲ ಡಿಸ್ಟ್ರಿಕ್ಟ ಮುನ್ಸಿಫ
ಕೋರ್ಟನಲ್ಲಿ.
O. P. 63/1925.

ಅರ್ಜಿದಾರರು—ಉಮಾಶಂಕರರಾವ ಕೂಡ 4 ಜನ.

ಎದ್ರಿರು—ಇಲ್ಲ.

ಕುಂದಾಪುರ ಕಸಬೆಯಲ್ಲಿ ಇತ್ತಲಾಗೆ ಮೃತಪಟ್ಟ ಬಲ್ಸೆ ರಾಮರಾಯರಿಗೆ ಹೊರಗಿನಿಂದ ಬರತಕ್ಕ ಸಾಲಗಳನ್ನು ವಸೂಲು ಮಾಡುವರೆ ತಾವು ಹಕ್ಕುದಾರರೆಂತಲೂ, ಆ ಬಗ್ಗೆ ತಮ್ಮ ಪೈಕಿ 1ನೇ ಅರ್ಜಿದಾರನ ಹೆಸರಿಗೆ ವಾರಿಸ ಸರ್ಟಿಫಿಕೇಟು ಕೊಡಿಸಬೇಕೆಂತಲೂ ಮೇಲೆ ಕಾಣಿಸಿದ ಅರ್ಜಿದಾರರು ಮೇಲ್ಕಂಡ ಕೋರ್ಟಿಗೆ ಕೊಟ್ಟ ಅರ್ಜಿಯು ತಾ. 13-7-'25ಕ್ಕೆ ತನ್ಕಿಗೆ ಇಡೋಣಾಗಿದೆ. ಆ ಕುರಿತು ಆಕ್ಷೇಪವಿದ್ದವರು ತಾ. 13—7—'25ನೇ ದಿವಸ ಸದರಿ ಕೋರ್ಟ ಮುಂದೆ ಹಾಜರಾಗಿ ಅವರ ಆಕ್ಷೇಪಗಳನ್ನು ಜಾಹೀರುಮಾಡಿಕೊಳ್ಳತಕ್ಕದ್ದು.

ಕುಂದಾಪುರ, } ಬಿ. ಸಂಜೀವರಾವ ಬಿ. ಎ., ಎಲ್. ಎಲ್. ಬಿ.,
ತಾ. 23-6-'25. } ಅರ್ಜಿದಾರರ ವಕೀಲ.

ಚಕ್ಕರೆ ಪಾಟುಗಳಿಗೆ ಗತಿ ಏನು?

ಮದ್ರಾಸು ಸಂಸ್ಥಾನದ ಕೆಲವು ಜಿಲ್ಲೆಗಳಲ್ಲಿ ಊರಿಂದ ಊರು ತಿರುಗಾಡುವ ಜನರ ಗುಂಪುಗಳು ಇವೆ. ಇವರಿಗೆ ಕ್ರಿಮಿನಲ್ ಟ್ರೈಬ್ಸ್ ಎಂಬ ಹೆಸರನ್ನು ಸರಕಾರದವರು ಕೊಟ್ಟಿರುತ್ತಾರೆ. ಇವರು ಊರಿಂದ ಊರಿಗೆ ಹೋಗಿ ಬೇಡುತ್ತಾರೆ. ಒಂದೊಂದು ಸಾರಿ ಕದಿಯುವುದೂ ಉಂಟು. ಇವರನ್ನು ಜನರು ಚಕ್ಕರೆಪಾಟು ಎಂದು ಕರೆಯುತ್ತಾರೆ.

ಕಾದುಸ್ಥಿತಿಯಲ್ಲಿ ಇಲ್ಲದೆ ನಾಗರೀಕತೆಯಲ್ಲಿ ಮುಂದಾದ ಆದಿದ್ರಾವಿಡರನ್ನು ಉದ್ಧರಿಸುವುದಕ್ಕಾಗಿ ಸರಕಾರದವರು ಹೇರಳ ಹಣವನ್ನು ವೆಚ್ಚ ಮಾಡುವಂತೆಯೇ ತಿರುಗಾಡುವ ಈ ಜನರನ್ನು ಎಲ್ಲಿಯಾದರೂ ಕಾಯಂ ಮನೆ ಮಾಡಿಕೊಂಡಿರುವಂತೆ ಮಾಡುವುದಕ್ಕಾಗಿ ಅವರಿಗೆ ಸ್ವಲ್ಪ ಸ್ಥಳವನ್ನು ಸದ್ಯಕ್ಕೆ ಕಂದಾಯವಿಲ್ಲದೆ ಕೊಟ್ಟು ತತ್ಕಾಲ ಸಾಗುವರೆಗೆ ಸ್ವಲ್ಪ ಪ್ರಾಣಸಹಾಯವನ್ನಾದಿ ಅವರನ್ನು ಲೇಬರ ಕಮಿಶನರ ವಶಕ್ಕೆ ಕೊಟ್ಟರೆ ಉತ್ತಮವಿತ್ತು. ಆಲಸ್ಯ ಭರಿತರಾದ ಈ ಜನರನ್ನು ಕೆಲಸಗಾರರಾಗಿ ಮಾಡಬಹುದಿತ್ತು. ಅಥವಾ ಅವರನ್ನು ರಬ್ಬರ, ಚಾ ತೋಟಗಳಲ್ಲಿ ಕೂಲಿಯಾಳುಗಳಾಗಿ ಮಾಡಿದರೂ ಆಗುತಿತ್ತು. ಈ ರೀತಿಮಾಡದವರ ಆಲಸ್ಯದಿಂದ ಭಿಕ್ಷುಕರಾಗಿರುವ ಈ ಜನರನ್ನು ಉದ್ಧಾರಮಾಡಿದ ಕೀರ್ತಿಯು ಸರಕಾರಕ್ಕೆ ಸಿಕ್ಕೀತು.

ದರಕಾಸ್ತಿಗೆಕೊಟ್ಟ ಗುಡ್ಡೆ ಸ್ಥಳಗಳು.

(ಒಬ್ಬ ಲೇಖಕರಿಂದ)

ದಕ್ಷಿಣಕನ್ನಡ ಜಿಲ್ಲೆಯಲ್ಲಿ ದರಕಾಸ್ತಿಗೆ ಕೊಟ್ಟ ಅನೇಕ ಸ್ಥಳಗಳು ಇವೆ. ಈ ಸ್ಥಳಗಳೆಲ್ಲವೂ ದೊಡ್ಡ ದೊಡ್ಡ ಜಮೀನುದಾರರ ಪಟ್ಟೆಗೆ ಸೇರಿಯವೆ. ಇವುಗಳಿಗೆ ಎಕ್ರೆಗೆ ೮ ಆಣೆ ಬೆರೀಜಿನಿಂದ ಸಾಧಾರಣ ರೂ. ೧॥ ವರೆಗೆ ಬೆರೀಜು ಇದೆ. ಮೊದಲನೆ ಸಾರಿ ಸರ್ವೆ ಸೆಟ್ಲಮೆಂಟ ಆಗುವ ಮುಂಚಿನಿಂದಲೇ ಪ್ರತಿ ಒಬ್ಬ ಜಮೀನುದಾರರ ಸ್ವಾಧೀನ ೧೦, ೨೦, ೩೦ ಎಕ್ರೆ ವರೆಗೆ ಖಾಲಿ ಸ್ಥಳಗಳು ಇದ್ದವು. ಭೂಮಿಯನ್ನು ದೇವರು ಸೃಷ್ಟಿಸಿದಂದಿನಿಂದ ಈ ಸ್ಥಳಗಳಲ್ಲಿ ಮುಳಿಹುಲ್ಲು ಬೆಳದುಕೊಂಡಿತ್ತು. ಇವುಗಳು ಜಮೀನುದಾರರ ಸ್ವಾಧೀನ ಬಂದ ಮೇಲೆ ಇವುಗಳಿಗೆ ಸುತ್ತಲೂ ದರೆ ಹಾಕಿಸಿ ಅವುಗಳಲ್ಲಿ ಬೆಳೆದ ಹುಲ್ಲನ್ನು ಬಡವರು ತೆಗೆಯದಂತಾಯಿತು. ದನಕರುಗಳು ತಿನ್ನದಂತಾಯಿತು. ಸರ್ವೆ ಸೆಟ್ಲಮೆಂಟ ಆದ ಮೇಲೆ ಈ ಜಿಲ್ಲೆಯಲ್ಲಿ ಇನ್ನು ಬಾಕಿ ಉಳಿದಿರುವ ಖಾಲಿ ಗುಡ್ಡೆ ಸ್ಥಳಗಳನ್ನು ಪೂರಾ ದರಕಾಸ್ತಿಗೆ ಕೊಟ್ಟು ಅದರಿಂದ ಜಿಲ್ಲೆಯಿಂದ ೭೫ ಸಾವಿರ ರೂಪಾಯಿ ಸರಕಾರಕ್ಕೆ ಕಂದಾಯ ರೂಪದಿಂದ ಸಿಕ್ಕಿತು. ಆ ಸ್ಥಳಗಳಲ್ಲಿ ಸಾವಿರಾರು ಎಕ್ರೆಗಳನ್ನು ಜೆಸುಯಿಟ ಮಿಶನಿನವರೂ, ಬಾಸೆಲ್ ಮಿಶನಿನವರೂ ಡಿಪ್ರೆಸ್ಡ್ ಕ್ಲಾಸ ಮಿಶನಿನವರೂ ತಾವು ಆದಿ ದ್ರಾವಿಡರ ಕಾಲೊನಿ ಮಾಡುತ್ತೇವೆ ಅವರನ್ನು ಉದ್ಧಾರಮಾಡುತ್ತೇವೆ ಎಂಬ ನೆವದಿಂದ ಸ್ವಾಧೀನಪಡಿಸಿಕೊಂಡರು. ಆದರೆ ಆದಿದ್ರಾವಿಡರಿಗೆ ಇದರಿಂದ ಎಳ್ಳಷ್ಟು ಪ್ರಯೋಜನವಾಗಲಿಲ್ಲ. ಆದಿದ್ರಾವಿಡರಲ್ಲಿ ಅನೇಕರನ್ನು ಕ್ರೈಸ್ತರಾಗಿಮಾಡಿ ಅವರನ್ನು ಬೇರೆ ಬೇರೆ ಜಿಲ್ಲೆಗಳಿಗೆ ರಬ್ಬರ, ಚಾ ತೋಟಗಳಿಗೆ ಕಳುಹಿಸಿದ್ದು ಮಾತ್ರವೇ ಕಾಣುತ್ತದಲ್ಲದೆ ಅವರ ಹೆಸರಿನಿಂದ ಪಡೆದ ದರಕಾಸ್ತು ಸ್ಥಳವು ಮುಂಚೆ ಇದ್ದಂತೆ ಇದ್ದು ಅದರಲ್ಲಿ ಯಾವ ತರದ ಬೆಳೆಯನ್ನಾಗಲೀ ಮರಗಳನ್ನಾಗಲೀ ಬೆಳಸಿದ್ದು ಕಂಡುಬರುವುದಿಲ್ಲ. ಆದಿ ದ್ರಾವಿಡರು ಮುಂಚೆ ಹಿಂದೂ ಜಮೀನುದಾರರ ಮೂಲದ ಹೊಲೆಯರಾಗಿದ್ದರು. ಈಗ ಮಿಶನಿನ ಮೂಲದ ಹೊಲೆಯರಾದರು. ಗುಡ್ಡೆಯು ಗುಡ್ಡೆಯೇ ಆಗಿದೆ.

ಇನ್ನು ಇತರ ಜಮೀನುದಾರರಿಗೆ ದರಕಾಸ್ತಿಗೆ ಕೊಟ್ಟ ಸ್ಥಳಗಳ ಅವಸ್ಥೆಯು ಇದೇ ರೀತಿಯಲ್ಲಿದೆ. ಇವುಗಳಿಗೆ ದರೆ ಹಾಕಿದ ಒಂದು ಬದಲಾವಣೆಯಲ್ಲದೆ ಅವುಗಳಲ್ಲಿ ಯಾವ ತರದ ಮರವನ್ನಾಗಲಿ, ಧಾನ್ಯವನ್ನಾಗಲೀ, ಕಾಯಿಪಲ್ಯವನ್ನಾಗಲೀ ಬೆಳಸಿದ್ದು ಕಂಡು ಬರುವುದಿಲ್ಲ. ಮುಳಿ ಹುಲ್ಲಿನ ಕ್ರಯವು ಹೆಚ್ಚಾಗಿಯದೆ. ದನಕರುಗಳಿಗೆ ತಿನ್ನಲಿಕ್ಕೆ ಹುಲ್ಲಿಲ್ಲದೆ ಅವುಗಳು ಬಹಳ ಹೀನಸ್ಥಿತಿಗೆ ಬಂದಿವೆ.

ಇನ್ನು ಬಡವರಿಗೆ ಮನೆ ಕಟ್ಟುವುದಕ್ಕೆಂದು ಕೆಲವು ಸ್ಥಳಗಳನ್ನು ದರಕಾಸ್ತಿಗೆ ಕೊಟ್ಟಿರುತ್ತಾರೆ. ಅವುಗಳಲ್ಲಿ ಅವರು ಬಹಳ ಕಷ್ಟ ಪಟ್ಟು ಮನೆಗಳನ್ನು ಕಟ್ಟಿ, ಬಾವಿಗಳನ್ನು ತೋಡಿ, ಮರಗಿಡಗಳನ್ನು ನೆಟ್ಟು ನಂದನವನದಂತೆ ಮಾಡಿರುತ್ತಾರೆ. ಇವುಗಳನ್ನು ಯಾವ ರೀತಿಯಿಂದಲಾದರೂ ಅವರ ಕೈಯಿಂದ ತಪ್ಪಿಸಿ ತಮ್ಮ ಸ್ವಾಧೀನಪಡಿಸಿಕೊಳ್ಳಬೇಕೆಂದು ಉಪಾಯಗಳನ್ನು ಮಾಡುತ್ತಲೇ ಇದ್ದಾರೆ. ಅನೇಕ ತಳ್ಳಿ ಅರ್ಜಿಗಳು ಬೀಳುತ್ತಲೇ ಇವೆ. ಮಾಗಣೆ ಶ್ಯಾನಭಾಗರೂ, ಮಣೆಗಾರರೂ ತನಖಿ ಮಾಡುತ್ತಲೇ ಇದ್ದಾರೆ. ಹ್ಯಾಗಾದರೂ ಬಡವರ ಬಾಯಿಗೆ ಮಣ್ಣು ಬೀಳುತ್ತಲೇ ಇದೆ. ಈ ಸ್ಥಳಗಳನ್ನು ೧೦ ವರುಷಗಳ ವರೆಗೆ ಪರಸ್ವಾಧೀನಮಾಡಕೂಡದೆಂದು ಕಾಯಿದೆ ಇದೆ. ಆದುದರಿಂದ ಬಡವರಾದ ಈ ಹುಚ್ಚು ಜನರನ್ನು ಐಶ್ವರ್ಯವಂತರ ಬಾಯಿಯಿಂದ ರಕ್ಷಿಸುವುದಕ್ಕಾಗಿ ೨೦ ವರುಷಗಳ ವರೆಗೆ ಈ ಸ್ಥಳಗಳನ್ನು ಪರಸ್ವಾಧೀನಮಾಡಬಾರದೆಂಬ ಕಾನೂನನ್ನು ಮಾಡುವದು ಒಳ್ಳೇಯದು.

ಐಶ್ವರ್ಯವಂತರಾದ ಜಮೀನುದಾರರ ಸ್ವಾಧೀನವಿರುವ ದರಕಾಸ್ತು ಸ್ಥಳಗಳನ್ನು ಅವರು ಎಷ್ಟೋ ವರುಷಗಳಿಂದ ಬಂಜರಾಗಿ ಇಟ್ಟಿರುವುದರಿಂದ ಅವುಗಳನ್ನು ಕೂಡಲೆ ಹೊಲ ಗದ್ದೆಗಳನ್ನಾಗಿ ಮಾಡಬೇಕೆಂದೂ ಅಥವಾ ಅವುಗಳಲ್ಲಿ ಮರಗಳನ್ನು ಬೆಳಸಬೇಕೆಂದೂ ಅಥವಾ ಬೇರೆ ಯಾವ ತರದ ಕೃಷಿಯನ್ನಾದರೂ ಮಾಡಲೇಬೇಕೆಂದು ಸರಕಾರದವರು ಈ ಐಶ್ವರ್ಯವಂತರನ್ನು ವತ್ತಾಯಪಡಿಸಬೇಕು. ಅವರು ಅಪ್ಪಣೆಕೊಟ್ಟ ೬ ತಿಂಗಳಲ್ಲಿ ಅವರು ಈ ಕೆಲಸವನ್ನು ಶುರುಮಾಡದೆ ಹೋದರೆ ಈ ದರಕಾಸ್ತು ಸ್ಥಳಗಳನ್ನು ಐಶ್ವರ್ಯವಂತ ಜಮೀನುದಾರರಿಂದ ಸರಕಾರದವರು ಹಿಂತೆಗೆದು ಪಡೆದು ಅವುಗಳನ್ನು ಆಯಾ ಗ್ರಾಮದ ಬಡ ಜನರಿಗೆ ದರಕಾಸ್ತಿಗೆ ಕೊಡಬೇಕು. ಹೀಗೆ ಮಾಡಿದರೆ ಗುಡ್ಡೆ ಸ್ಥಳಗಳು ಕೆಲವುಬಾಗ್ಯಾತುಗಳಾಗುವುವು. ಕೆಲವು ಹೊಲ ಗದ್ದೆಗಳಾಗುವುವು. ಬಡವರಿಗೆ ಕೆಲಸವು ಸಿಕ್ಕಿ ಅವುಗಳಲ್ಲಿ ಆದ ಉತ್ಪತ್ತಿಯಿಂದ ಬಡವರ ಜೀವನವು ಈಗಿನದಕ್ಕಿಂತ ಒಳ್ಳೇದಾಗುವುದು. ಸರಕಾರಕ್ಕೆ ಈಗ ದರಕಾಸ್ತು ಖಾಲಿ ಸ್ಥಳಗಳಿಂದ ಸಾಧಾರಣ ಒಂದು ಲಕ್ಷ ಕಂದಾಯವು ಸಿಕ್ಕುವುದರ ಬದಲಾಗಿ ಈ ಸ್ಥಳಗಳಿಗೆ ಬಾಗ್ಯಾತು ದರವನ್ನು ಇಟ್ಟರೆ ಸಾಧಾರಣ ೫—೬ ಲಕ್ಷ ರೂಪಾಯಿ ಕಂದಾಯವು ಸಿಕ್ಕುವುದು. ಸರಕಾರವು ಸಾಲವನ್ನು ಎತ್ತುವುದರ ಬದಲಾಗಿ ಸುಲಭ ರೀತಿಯಿಂದ ಸರಕಾರಕ್ಕೆ ಆದಾಯವು ಹೆಚ್ಚಾಗುವದು. ಬರಗಾಲವು ಕಡಿಮೆಯಾಗುವುದು. ಆಲಸ್ಯವೂ ಕಡಿಮೆಯಾಗುವುದು.

ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಕಮಿಟಿ.

ಮೊನ್ನೆ ತಾನೆ ದಿವಂಗತರಾದ ದೇಶಬಂಧು ಚಿತ್ತರಂಜನ ದಾಸರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಪರಮಾತ್ಮನನ್ನು ಪ್ರಾರ್ಥಿಸುವುದಕ್ಕೂ, ಹಿಂದುಸ್ಥಾನದ ಬೇರೆ ಬೇರೆ ಪಂಗಡಗಳಲ್ಲೂ, ಜಾತಿಗಳಲ್ಲೂ ನಿಜವಾದ ಮತ್ತು ಸ್ಥಿರವಾದ ಐಕ್ಯವನ್ನು ಬೆಳೆಯಿಸುವುದಕ್ಕೂ ಬರುವ ಜುಲಾಯಿ ಒಂದನೆ ತಾರೀಕಿನ ದಿವಸ ದೇಶದ ಎಲ್ಲಾ ಕಡೆಗಳಲ್ಲಿಯೂ ಸ್ಟಾಂಡಾರ್ಡ ಗಂಟೆ ೫ಕ್ಕೆ (ಸಾಯಂಕಾಲ) ಸರಿಯಾಗಿ ಸಭೆಗಳನ್ನು ಸೇರಿಸಿ ಯೋಗ್ಯ ನಿರ್ಣಯಗಳನ್ನು ಮಾಡಬೇಕಾಗಿ ಮಹಾತ್ಮಾ ಗಾಂಧಿಯವರು ವಿನಂತಿಮಾಡಿಕೊಂಡಿರುವರು. ಅದೇ ಪ್ರಕಾರ ಜಿಲ್ಲೆಯ ಎಲ್ಲಾ ಭಾಗಗಳಲ್ಲಿಯೂ ಆ ದಿನವನ್ನು ಯೋಗ್ಯ ರೀತಿಯಲ್ಲಿ ಆಚರಿಸಬೇಕೆಂದು ಪ್ರಾಂತಿಕ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕಾರ್ನಾಡ ಸದಾಶಿವರಾಯರು ತಂತೀ ಮೂಲಕ ತಿಳಿಸಿರುವರು. ಜಿಲ್ಲೆಯ ಮಹಾ ಜನರೆಲ್ಲರೂ ಆ ದಿನದ ಆಚರಣೆಯನ್ನು ಯಶಸ್ವಿಗೊಳಿಸಬೇಕೆಂದು ವಿನಂತಿಮಾಡಿಕೊಳ್ಳುತ್ತೇವೆ.

K. PANDURANGA PAI,
ಕಾರ್ಯದರ್ಶಿ.

ವಿದೇಶ ವರ್ತಮಾನ.

—ಮುಂಬಯಿಯ ಸುಪ್ರಸಿದ್ಧ ಕೋಟ್ಯಾಧೀಶರೂ, ರಾಜಕಾರಣಿಗಳೂ ಆದ ಮಿ॥ ಎಸ್. ಆರ್. ಬೊಮ್ಮನಜಿ ಎಂಬ ಪಾರ್ಸಿ ಗೃಹಸ್ಥರು ಫ್ರಾನ್ಸಿನಲ್ಲಿ ಒಬ್ಬ ಫ್ರೆಂಚ ಸ್ತ್ರೀಯನ್ನು ಮದುವೆಮಾಡಿಕೊಂಡಿರುವರು. ಈ ವಿವಾಹ ಸಂಸ್ಕಾರವನ್ನು ಅಲ್ಲಿಯ ಮೇಯರನು ಮಾಡಿರುವನು. ಈ ಸಮಾರಂಭಕ್ಕೆ ಫ್ರಾನ್ಸಿನಲ್ಲಿ ಇದ್ದ ಕೆಲವು ಹಿಂದಿ ಸುಸ್ಥಾನಿಕರು ಹಾಜರಿದ್ದರು. ವಿವಾಹ ಕಾಲದಲ್ಲಿ ಬೊಮ್ಮನಜಿಯವರು ಖಾದಿ ಉಡುಪಿನಲ್ಲಿ ಇದ್ದು ಖಾದಿ ಟೋಪಿಯನ್ನು ಧರಿಸಿದ್ದರು. ಸ್ವಂತ ಕೈಯಿಂದ ತೆಗೆದ ಪವಿತ್ರದಾರವನ್ನು ಅವರು ಧರಿಸಿದ್ದರು. ಎಸ್. ಆರ್. ಬೊಮ್ಮನಜಿಯವರಿಗೆ ಈಗ ೬೦ ವಯಸ್ಸಾಗಿರಬಹುದೆಂದು ಹೇಳುತ್ತಾರೆ.

—ಚೀನಾದೊಳಗಿನ ಗಲಾಟೆಯು ಇನ್ನೂ ಶಾಂತವಾಗಿಲ್ಲ.

—ಈಜಿಪ್ಟದಿಂದ ಚೀನದ ವರೆಗೆ ವಿಮಾನಗಳನ್ನು ಚಾಲೂ ಮಾಡಲು ಸೋವಿಯೆಟ ಸರಕಾರವು ಆಲೋಚಿಸುತ್ತಿದ್ದು ಅಲ್ಲಿಯ ಮೈದಾನುಗಳ ಅನುಭವಪಡೆಕೊಳ್ಳಲು ವಿಮಾನಗಳು ಹೋಗಿವೆ.

—ಸ್ಪೇನಿನ ಅರಸರ ಗಾಡಿಯನ್ನು ಬೊಂಬಿನಿಂದ ಹಾರಿಸಲು ಯತ್ನಿಸಿದ ವಿದ್ಯಾರ್ಥಿಗಳಿಗೆ ೪ರಿಂದ ೧೦ ವರ್ಷಗಳ ವರೆಗಿನ ಶಿಕ್ಷೆಯೂ, ಮುಖಂಡರಿಗೆ ೨೦ ವರ್ಷಗಳ ಶಿಕ್ಷೆಯೂ ವಿಧಿಸಲ್ಪಟ್ಟಿವೆ!

—ಗ್ರೇಟಬ್ರಿಟನ ಮತ್ತು ಅಮೇರಿಕಾದಲ್ಲಿ ಸೆಕೆಯು ವಿಪರೀತಿ ಆಗುತ್ತಿದ್ದು ಅಮೇರಿಕೆಯೊಳಗಿನ ಸೆಕೆಯಿಂದ ೨೫೦ ಜನರು ಮೃತ್ಯುವಿಗೆ ತುತ್ತಾದರು! ನ್ಯೂಯಾರ್ಕಿನಲ್ಲಿ ಉಷ್ಣತೆಯು ೧೦೦ ಅಂಶಗಳ ವರೆಗೆ ಹೋಗಿತ್ತು!

—ಬರ್ಕನಹೆಡ್ ಮತ್ತು ರೆಡಿಂಗರ ಚರ್ಚೆಯಲ್ಲಿ ಏನೂ ಫಲವುಂಟಾಗಲಿಲ್ಲವೆಂದು ಹಲವು ಬಾತಮಿಗಳು ಹೊರಟಿವೆ; ಆದರೆ ಅವು ನಿರಾಧಾರವಾದವುಗಳು, ಬಾದಶಹರ ಮಂತ್ರಿಮಂಡಲದವರು ನಿರ್ಣಯಿಸುವವರೆಗೆ ಈ ವಿಷಯದಲ್ಲಿ ನಿಶ್ಚಯವನ್ನು ಹೇಳಲಾಗುವುದಿಲ್ಲವೆಂದು ವಿಲಾಯತಿಯೊಳಗಿನ ಇಂಡಿಯಾ ಆಫೀಸು ಈಗ ಪ್ರಕಟಿಸಿದೆ.

ಒಳದೇಶ ವರ್ತಮಾನ.

—ವೈಕಮಿನ ಪ್ರತಿಬಂಧವನ್ನು ಇನ್ನೂ ತೆಗೆಯಲಿಲ್ಲ. ಆದರೆ ಸತ್ಯಾಗ್ರಹಿಗಳು ಗಾಂಧಿ-ಪಿಟ್ಸ್‌ರೊಳಗೆ ಉಂಟಾದ ಕರಾರನ್ನು ಮುರಿದು ದೇವಸ್ಥಾನವಿದ್ದಲ್ಲಿಗೆ ಹೋದರು. ಗಾಂಧಿಯ ಅಪ್ಪಣೆಯ ಮೇರೆಗೆ ಅಲ್ಲಿಯ ಸ್ಥಳೀಕ ಮುಖಂಡರು ಸತ್ಯಾಗ್ರಹಿಗಳನ್ನು ತಡೆಯಸಿದ್ದಾಗ್ಯೂ ಕೇಳದೆ ಮುಂದರಿಸಿದರು. ಪೋಲೀಸ ಕಮಿಶನರು ವೈಕಮಿಗೆ ಬಂದಿರುವರು.

—'ಸ್ವರಾಜ್ಯ' ಪತ್ರಿಕೆಯ ಸಂಪಾದಕರಾದ ಶ್ರೀ. ಟಿ. ಪ್ರಕಾಶಂ ಇವರು ಸ್ವರಾಜ್ಯ ಪಾರ್ಟಿಗೆ ಸೇರಿರುತ್ತಾರೆ.

—ದೇ. ಬಂ. ದಾಸರು ಕಾಲವಶರಾದ್ದರಿಂದ ಬಂಗಾಳದ ನಾಯಕತ್ವವನ್ನು ವಹಿಸಿ ದಾಸರವರು ಕೈಕೊಂಡ ಕಾರ್ಯವನ್ನು ಮುಂದುವರಿಸಲು ಶ್ರೀ. ಅರವಿಂದ ಘೋಷರನ್ನು ಮ. ಗಾಂಧಿಗಳು ಕೇಳಿಕೊಂಡಿರುವರು.

—ದೇಶಬಂಧು ದಾಸರವರು ನಡಿಸುತ್ತಿರುವ 'ಫೋರ್ವರ್ಡ' ಪತ್ರಿಕೆಯ ಮುಖ್ಯ ಸಂಪಾದಕತ್ವವು ಅವರ ಪತ್ನಿಯವರಾದ ಶ್ರೀ. ವಸಂತಿ ದೇವಿಯವರಿಗೆ ಕೊಡಲ್ಪಟ್ಟಿದೆ.

—ಕಾಶೀ ಕ್ಷೇತ್ರದಲ್ಲಿ ಪಂಡಿತ ಪಂಚಾನನ ತರ್ಕರತ್ನರವರ ಅಧ್ಯಕ್ಷತೆಯಲ್ಲಿ ಸನಾತನ ಧರ್ಮಾನುಯಾಯಿಗಳಾದ ಸಾಧುಗಳು ಮಹಂತರು, ಪಂಡಿತರು ಇವರ ಸಭೆಗೂಡಿ ಮ. ಗಾಂಧಿಗಳು ಕಲ್ಕತ್ತೆಯ ಸಂಚಾರದಲ್ಲಿ ಹಿಂದು ಧರ್ಮ ಸುಧಾರಣೆಯನ್ನು ಕುರಿತು ಪ್ರದರ್ಶಿಸಿದ ಸುಧಾರಕತ್ವದ ವಿಚಾರಗಳ ಬಗ್ಗೆ ಆ ಸಭೆಯಲ್ಲಿ ಗಾಂಧಿಗಳ ವಿಷಯವಾಗಿ ನಿಷೇಧಪರ ಠರಾವನ್ನು ಪಾಸುಮಾಡಿದರು.

—ಮಹಮ್ಮದೀಯರ ಬಕ್ರೀದಿನ ಸಮಯದಲ್ಲಿ ದಿಲ್ಲಿಯಲ್ಲಿ ಕಳೆದ ವರ್ಷ ಮಹಮ್ಮದೀಯರು ಅತಿ ಕ್ರೂರ ಕೆಲಸವನ್ನು ಮಾಡಿದ್ದರಿಂದ ಈ ವರ್ಷ ಅಲ್ಲಿಯ ಹಿಂದುಗಳು ಮ. ಗಾಂಧಿ ಮುಂತಾದವರಿಗೆ ತಮ್ಮ ವಿಷಯದ ಜಾಗ್ರತೆಯನ್ನು ತಕೊಳ್ಳಲು ವಿಜ್ಞಾಪಿಸಿಕೊಂಡಿರುವರು. ಅಲ್ಲದೆ, ಅಲ್ಲಿಯ ಹಿಂದುಸಭೆಯು ಕೊಲ್ಲತಕ್ಕ ದನಗಳನ್ನು ಬೀದಿಗಳಿಂದ ಕೊಂಡು ಹೋಗಬಾರದೆಂದು ಮಹಮ್ಮದೀಯರನ್ನು ವಿಜ್ಞಾಪಿಸಬೇಕೆಂಬುದಾಗಿ ಒಂದು ಠರಾವನ್ನು ಮಾಡಿದೆ. ಈ ಠರಾವಿಗೆ ಬಹುಮಾನಕೊಡುವದಕ್ಕಾಗಿಯೂ ಹಿಂದುಗಳ ಮನಸ್ಸು ನೋಯಿಸಬಾರದೆಂಬುದಕ್ಕಾಗಿಯೂ ಮಹಮ್ಮದೀಯರು ಬೀದಿಗಳಲ್ಲಿ ಇಂಥ ಕೃತ್ಯವನ್ನು ಮಾಡಲಿಕ್ಕಿಲ್ಲವೆಂದು ಆಶ್ವಾಸನ ಕೊಟ್ಟಿದ್ದಾರೆ.

—ಸಿಂಧ ಪ್ರಾಂತದಲ್ಲಿ ಕೆಲವು ಮಹಮ್ಮದೀಯ ಪುಂಡರು ಸಿಕ್ಕಪುರ ಎಂಬಲ್ಲಿಯ ಒಂದು ಹಿಂದು ಹೆಂಗಸನ್ನು ಓಡಿಸಿಕೊಂಡು ಹೋಗಿ ಅವಳನ್ನು ಒಬ್ಬ ತುರ್ಕನಿಗೆ ಮಾರಿಕೊಡಲು ಯತ್ನಿಸಿದರು. ಈ ವಾರ್ತೆಯನ್ನು ಗೊತ್ತುಹಚ್ಚಿ ಬರೋಡಾ ಸಂಸ್ಥಾನದ ಸಿ. ಆಯ್. ಡಿ. ಇಲಾಖೆಯವರು ಇಬ್ಬರು ಪುಂಡರನ್ನು ಕೈದುಮಾಡಿರುವರು.

—ಮದರಾಸ ಪಟ್ಟಣದ ರೊಯಪೇಟೆಯಲ್ಲಿರುವ ಆಸ್ಪತ್ರೆಯನ್ನು ಬರಿ ಯುರೋಪಿಯನರಿಗಾಗಿ ಮಾತ್ರ ಇಡಬೇಕೆಂದು ಸರಕಾರದ ಉದ್ದೇಶವಿದೆ. ಇದನ್ನು ತಿಳಿದು ಬಂದದ್ದರಿಂದ ಮದ್ರಾಸ ಕಾರ್ಪೊರೇಶನು ಸರಕಾರವನ್ನು ನಿಷೇಧಿಸಿದೆ.

—ನೋರ್ತ ವೆಸ್ಟರ್ನ ರೈಲಿನ ಕಾಮಗಾರರು ಹಾಕಿರುವ ಮುಷ್ಕರ ಅಂತ್ಯವಾಗಿದ್ದು ಮುಷ್ಕರಗಾರರು ಸಾವಿರಜನರಿಂದ ಬಂದು ಪುನಃ ಕೆಲಸವನ್ನು ಕೇಳಿಕೊಳ್ಳುತ್ತಿದ್ದಾರೆ.

—ಪಂಡಿತ ಮದನಮೋಹನ ಮಾಲವೀಯರ ಚಾಲಕತೆಯಲ್ಲಿ ನಡೆಯುವ ದಿಲ್ಲಿಯ "ಹಿಂದುಸ್ಥಾನ ಟೈಮ್ಸು" ಎಂಬ ಪತ್ರಿಕೆಯ ಮೇಲೆ ನಿಝಾಮ ರಾಜ್ಯದಲ್ಲಿ ನಿಝಾಮರ ಪ್ರತಿಬಂಧವು ಬಿದ್ದಿರುವದು.

—ಅಮೃತಸರದಲ್ಲಿ ಒಬ್ಬ ಹೇಂಗಸು ತನ್ನ ಮುಂಚಿನ ವಸತಿಯನ್ನು ಬಿಟ್ಟು ಇನ್ನೊಂದು ಕಡೆಗೆ ಹೋಗಲು ಕೂಲಿಗಳಿಂದ ಸಾಮಾನು ಹೊರಿಸುತ್ತಿದ್ದಳು. ಅವಳ ಮನೆಯಲ್ಲಿ ಕತ್ತಲೆಯ ಒಂದು ಕೋಣೆಯಲ್ಲಿ ಸಾಮಾನು ಎತ್ತಲು ಹೋದ ಕೂಲಿಗೆ ಅವನ ಕೈಗೆ ಹಿಂದು ಬೊಂಬು ತಾಗಿ ಅಪಘಾತವಾಗಿ ಅವನು ಮೃತಪಟ್ಟನು. ಪೋಲೀಸರು ತನಖಿ ನಡಿಸುತ್ತಿದ್ದಾರೆ.

—ಮುಂಬಯಿಯ ವಸ್ತ್ರದ ಗಿರಣಿಗಳಲ್ಲಿ ಗಿರಣಿಗಳ ಸಂಘದ ಕಡೆಯಿಂದ ನೋಟೀಸು ಪ್ರಕಟಿಸೋಣಾಗಿದೆ. ವ್ಯಾಪಾರದ ಸ್ಥಿತಿಯು ಬಹು ಕೆಟ್ಟುಹೋದ್ದರಿಂದ ವಸ್ತ್ರಗಳ ಮಾರಾಟವಾಗದೆ ಹಾಗೆ ಉಳಿದಿವೆ, ಈ ಸ್ಥಿತಿಯು ಇನ್ನು ಮುಂದೆಯೂ ಹಾಗೆಯೇ ನಡೆಯುವ ಸಂದರ್ಭವು ತೋರಿದ್ದರೆ ಕಾಮಗಾರರ ಸಂಬಳವನ್ನು ತಗ್ಗಿಸಬೇಕಾಗಿ ಬರುವದು ಎಂದು ಈ ನೋಟೀಸಿನಲ್ಲಿ ತೋರಿಸಿದೆ.

—ಗಿರಣಿಗಳ ಕಾಮಗಾರರು ಗಿರಣಿಗಳ ಯಜಮಾನರ ಅಭಿಪ್ರಾಯವನ್ನು ತಿಳಿದ ಬಳಿಕ ಇಂಥ ಕಠಿಣ ಸಮಯದಲ್ಲಿ ಕಾಮಗಾರರ ಸಂಬಳವನ್ನು ತಗ್ಗಿಸಕೂಡದೆಂದು ಠರಾವನ್ನು ಮಾಡಿರುವರು.

—ಗಿರಣಿಗಳ ಯಜಮಾನರು ಕಾಮಗಾರರ ಸಂಬಳವನ್ನು ಸೇಕಡಾ ೨೦ರಂತೆ ತಗ್ಗಿಸಲು ನಿಶ್ಚಯಿಸಿದ್ದಾರೆ.

—ಕಳೆದ ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲಿ ಠರಾವು ಪಾಸಾದ ಮೇರೆಗೆ ಲಷ್ಕರಿ ಶಿಕ್ಷಣದ ಕೊಲೇಜನ್ನು ಬೇಗನೆ ಸ್ಥಾಪಿಸಲಾದೀತೆಂಬುದನ್ನು ಸಿಮ್ಲಾದಿಂದ ಹಿಂದುಸ್ಥಾನ ಸರಕಾರವು ಜಾಹೀರುಪಡಿಸಿದೆ.

ಚತುರಂಗ ಆಟದಲ್ಲಿ ಪಂಡಿತನು:—ಜುಗೊಸ್ಲೇವಿಯಾ ದೇಶದ ಮಿ॥ ಬೊರಿಸ್ ಕೊಸ್ಟಿಚ್ ಎಂಬ ಪ್ರವೀಣ ಚೆಸ್ ಆಟದವನು ಇಂಡಿಯಾ ದೇಶಕ್ಕೆ ಬಂದಿದ್ದು, ಚೆಸ್ ಆಡುವವರ ಮನಸ್ಸನ್ನು ಆಕರ್ಷಿಸಿರುವನು. ಇವನು ಇಂಡಿಯಾ ದೇಶದ ಎಲ್ಲಾ ಕಡೆಗಳಿಗೂ ತಿರುಗಲಾರಂಭಿಸಿರುವನು ಪ್ರತಿಕಡೆಯಲ್ಲಿಯೂ ಚೆಸ್ ಆಟದಲ್ಲಿ ಪಂಥಕಟ್ಟಿ ತನ್ನ ನಿಪುಣತೆಯನ್ನು ತೋರಿಸಲಿರುವನು. ಆದರೆ ಇಂಡಿಯಾ ದೇಶವು ಈ ಆಟದಲ್ಲಿ ಕಡಿಮೆ ಇಲ್ಲವೆಂಬ ಭಾವನೆಯನ್ನು ಕೊಂಡುಹೋಗಬೇಕಾಗಿದೆ. ಜೈಲ್ ದೇಶದಲ್ಲಿ ನಡೆದ ಅಲ್ ಇಂಡಿಯಾ ಚೆಸ್ ಪಂದ್ಯಾಟದಲ್ಲಿ ಪೂನಾ ದೇಶದ ಮಿ॥ ಜೋಶಿ ಮೊದಲನೆಯವನಾಗಿಯೂ ಎರಡನೆ ಮಿ॥ ಕೊಸ್ಟಿಚ್, ಪದವಿ ಪಡೆದು ರೂ. ೨೦೦೦ ಮತ್ತು ೧೦೦೦ ಪಡೆದಿರುವರು. (ನವಯುಗ)

ದಕ್ಷಿಣ ಕನ್ನಡ.

ಬ್ರಹ್ಮಾವರ:—ದಿವಂಗತ ದೇಶಬಂಧು ಚಿತ್ತರಂಜನ ದಾಸರ ಅಕಾಲ ಮೃತ್ಯುವಿನ ಕುರಿತಾದ ಶೋಕವನ್ನು ಸೂಚಿಸಲಿಕ್ಕೆ ಇಲ್ಲಿಯ ಸದ್ಗೃಹಸ್ಥರು ಇದೇ ತಾ. ೨೧ ಆದಿತ್ಯವಾರ ಸಾರ್ವಜನಿಕ ಸಂಘದ ಆಫೀಸಿನಲ್ಲಿ ಸಭೆ ಸೇರಿಸಿದ್ದರು. ಕ್ರಮದಂತೆ ದೇಶಬಂಧುಗಳ ಜೀವನ ಚರಿತ್ರೆಯನ್ನೂ, ಅಪ್ರತಿಮ ದೇಶವಾತ್ಸಲ್ಯವನ್ನೂ, ಅಸಾಧಾರಣ ಸ್ವಾರ್ಥತ್ಯಾಗವನ್ನೂ, ಅಲೌಕಿಕ ಧೈರ್ಯವನ್ನು ಕೊಂಡಾಡಿ ಭಾಷಣಗಳಾದ ನಂತರ ದೇಶಬಂಧುಗಳ ನಿಧನದಿಂದಾದ ದುಃಖದಲ್ಲಿ ತಾವು ಸಹಭಾಗಿಗಳಾಗಿದ್ದೇವೆಂದೂ, ಅವರ ಆತ್ಮಕ್ಕೆ ಪರಮಾತ್ಮನು ಶಾಂತಿಯನ್ನೀಯಲೆಂದೂ ಠರಾವುಗಳು ಸರ್ವರೂ ನಿಂತುಕೊಂಡೇ ಮಂಜೂರು ಆದ ನಂತರ ದೇಶಬಂಧುಗಳ ಕುಟುಂಬಕ್ಕುಂಟಾದ ವಿಯೋಗ ದುಃಖದಲ್ಲಿ ತಾವು ಸಹಭಾಗಿಗಳಾಗಿದ್ದೇವೆಂತ ಒಂದು ತಂತಿ ಬಿಟ್ಟರು. ದೇಶಭಕ್ತರ ಒಂದು ಭಾವಚಿತ್ರವನ್ನು ಸಂಘದಲ್ಲಿಡುವ ಏರ್ಪಾಡು ಸಹ ಕೂಡಲೆ ನಡೆಯಿತು.

ಬಂಟವಾಳ:—ಇಲ್ಲಿ ಕಳೆದ ರಾತ್ರೆ ಹೆಬ್ಬಲಸಿನಕಟ್ಟೆ ದೇವಪ್ಪ ಪೈಗಳ ಮನೆಗೆ ಯಾರೋ ಕಳ್ಳರು ನುಗ್ಗಿ ಸ್ವಲ್ಪ ಚಿನ್ನದ ನಗ ಶೀರೆ ಸುಮಾರು ನೂರು ರುಪಾಯಿ ಅಂದಾಜಿನ ವಸ್ತುಗಳನ್ನು ಕಳವುಮಾಡಿರುತ್ತಾರೆ. ಎರಡು ವಾರಗಳ ಹಿಂದೆ ಬಂಟವಾಳದ ಹತ್ತಿರ ಗ್ರಾಮದ ಮೂಡು ಗ್ರಾಮ ರಂಗ್ಗೆ ಎಂಬವರಲ್ಲಿ ಕನ್ನ ಹಾಕಿ ಸುಮಾರು ಕೆಲವು ನೂರು ರುಪಾಯಿಯ ನಗ ನಾಣ್ಯಗಳನ್ನು ಕದ್ದು ಒಯ್ದರು. ಈಗೀಗ ಹೀಗೆಯೇ ಅನೇಕ ಅಲ್ಲಲ್ಲಿ ಕಳವು ನಡೆಯುತ್ತಾ ಉಂಟು.

ಇಲ್ಲಿಯ ಕೆಲವು ಪೋಕರಿಗಳು ಚನ್ನಾಗಿ ಕುಡಿದು ಒಬ್ಬ ತೋಮಿಯ ಗುಸ್ತಿನ್ ಎಂಬವನಿಗೆ ಚೂರಿಯಿಂದ ತಿವಿದು ನೋವಿಂದ ಸ್ಥಿತಿಯಲ್ಲಿರುತ್ತಾನೆ. ಈತನನ್ನು ಮಂಗಳೂರು ಆಸ್ಪತ್ರೆಗೆ ಕೊಂಡುಹೋಗಿರುತ್ತಾರೆ.

ಕಳೆದ ಎರಡು ವರುಷಗಳಲ್ಲಿ ನೆರೆಯಿಂದ ಕಂಗೆಟ್ಟ ಜನರು ಈಗಲೇ ಗಂಟು ಮೂಟೆಗಳನ್ನು ಕಟ್ಟಿಡುತ್ತಿದ್ದಾರೆ. ನದಿಯಲ್ಲಿ ನೀರು ತುಂಬಿತು ಇನ್ನು ರಾತ್ರೆ ನಿದ್ರೆ ಇಲ್ಲ. ಜುಲಾಯಿ ಆಗೋಸ್ತು ವರೆಗೆ ನೀರು ಹೆಚ್ಚಾದೊಡನೆ ಎದೆಯಲ್ಲಿ ಪುಕು ಪುಕು ಹೊರಡುವುದು ಪಟ್ಟಣದವರು ನೀರು ಏರಿ ಪಟ್ಟಣ ತುಂಬುವಾಗ ಕಚೇರಿ ಕಡೆಗೆ ಓಡಿ ಬಂದು ಕಡೆಗೆ ಎತ್ತರ ಇರುವ ಬಂಗಲೆ ಗುಡ್ಡೆಗೆ ಓಡಿಹೋಗಬೇಕು. ಅದು ಕೂಡಾ ಆಸ್ಪತ್ರೆ ಹತ್ತರ ಸುಮಾರು ಹತ್ತು ಮಾರು ಉದ್ದಕ್ಕೆ ನೀರು ತುಂಬಿದರೆ ದಾಟುವುದು ಅಸಾಧ್ಯ. ಈ ಸ್ಥಳವನ್ನು ಈಗಿನ ಕಲೆಕ್ಟರ್ ದೊರೆಗಳು ಸ್ವತಹಾ ಕಣ್ಣಿನಿಂದ ನೋಡಿ ಅನುಭವಪಟ್ಟಿರುತ್ತಾರೆ. ಆದುದರಿಂದ ಬೋರ್ಡಿನವರು ಈ ಹತ್ತು ಮಾರು ಸ್ಥಳವನ್ನು ಎತ್ತರಿಸಿ ಪಟ್ಟಣದ ಜನರಿಗೆ ದಾಟುವ ಹಾಗೆ ಮಾಡಿದರೆ ಅನೇಕ ಜೀವದಾನ ಕೊಟ್ಟಹಾಗೆ ಆಗುತ್ತಿತ್ತು.

ನಿಡ್ಲೆ:—ನಮ್ಮ ನಿಡ್ಲೆ ಗ್ರಾಮದ ಮ॥ ರಾ॥ ಸಾಂಡಿಲು ಪದ್ಮನಾಭಯ್ಯನವರ ಅಡಿಕೆ ತೋಟದಲ್ಲಿ ೨೦ ತುದಿ ಶಿರಿ ಇರುವ ಒಂದು ಅಡಿಕೆಮರ ಇರುವುದು.—೬.ಡದಿಂದ ಸಮಾರು ೩ ಮಾರು ಎತ್ತರದ ನಂತರ ಕೊಂಬೆಗಳು ಬಿಟ್ಟದ್ದು, ೧೬ ಕೊಂಬೆಗಳು, ಅನಂತರ ೧ ಕೋಲು ಮೇಲುಕ್ಕೆ ನಾಲ್ಕು ಕೊಂಬೆಗಳು ಹೋಗಿ ಅದರಲ್ಲಿ ಕೂಡಾ ಕೊಂಬೆಗಳು ಹುಟ್ಟುವುದಕ್ಕೆ ಪ್ರಾರಂಭಿಸಿಯದೆ. ಈ ಮುಂದರಿಸಿ ಹೋದ ಕೊಂಬೆಗಳಲ್ಲಿ ಹಿಂಗಾರಬಿಡುತ್ತದೆ. ಈ ಆಶ್ಚರ್ಯವನ್ನು ನೋಡುವವರು ನಮ್ಮ ನಿಡ್ಲೆ ಗ್ರಾಮಕ್ಕೆ ಬಂದು ಸದರಿಯವರ ತೋಟದಲ್ಲಿ ನೋಡಿದರೆ ಪೂರ್ಣ ಸಮಾಧಾನ ಆಗಬಹುದು.

ಇನ್ನೊಂದು ಆಶ್ಚರ್ಯ ನಿಡ್ಲೆ ಗ್ರಾಮದ ಅಡಿಕೆ ತೋಟದಲ್ಲಿ ಕಾಡು ಹಂದಿಗಳು ಬಂದು ಅಡಿಕೆ ಸಸಿಯನ್ನು ತಿಂದು ನಾಶಪಡಿಸುತ್ತವೆ. ಅದ್ದರಿಂದ ಈ ಅವಸ್ಥೆಯಲ್ಲಿ ಇನ್ನು ಮುಂದಕ್ಕೆ ತೋಟದ ಅವಸ್ಥೆಗಳು ಹ್ಯಾಗೆ ನಿಲ್ಲುವದೆಂಬುದು ಹೇಳುವರೆ ಸಾಧ್ಯವಿಲ್ಲ. ಅದನ್ನು ಗುಂಡಾದರೂ ಹಾಕಿ ಕೆಡಿವಿಕಬಹುದೆಂದರೆ ೧೫ ದಿವಸ ೨೦ ದಿವಸಕ್ಕೆ ೧ ಕಡೆಗೆ ಬೇರೆ ಬೇರೆ ಆಸುಪಾಸಿನ ತೋಟಗಳಿಗೆ ಹೋಗಿ ತಿಂದು ಕೊಂಡು ಬರುವುದಲ್ಲದೆ, ಪಾರ್ಪಿಕಲ್ಲು, ವಾಳ್ಯದಲ್ಲಿಯೂ ಮತ್ತು ಶಿಲ್ಲ ಈ ಪ್ರಾಂತ್ಯಗಳಲ್ಲಿಯೂ ಕೂಡ ಈ ಕಾಡು ಮೃಗಗಳ ಬಾಧೆಯಿಂದ ಈ ಮುಂಚೆ ೨ ವರ್ಷಗಳ ಲಾಗಾಯಿತು ಈ ಕಷ್ಟಅನುಭವಿಸುತ್ತಿದ್ದವರು ಈ ಸಮಾಚಾರವನ್ನು ಈ ವರೆಗೆ ಯಾ \ ಗೋಜಿಗೂ ಹಾಕಲಿಲ್ಲ, ನಮ್ಮೊಳಗೆ ಮಾತ್ರ ಗುಜುಗುಟ್ಟುತ್ತಿದ್ದರು. ಶಿಕಾರಿ ಮಾಡಬಹುದೆಂದರೆ ಜಂಗ್ಲಿ, ಆದರೆ ಇನ್ನು ಮುಂದಕ್ಕೆ ಈ ತೊಂದರೆಯನ್ನು ಜಯಿಪುದು ಸರಕಾರದವರಿಂದಲೂ ಇದು ನಿಜವು ಹುಟ್ಟಿ ಎಂಬುದು ಶಿಬಿಣಿ, ಪಕ್ಕದ್ದ, ಶಿಲ್ಲ, ಪಾರ್ಪಿಕಲ್ಲು ಮತ್ತು ನಿಡ್ಲೆ ಈ ಪ್ರಾಂತ್ಯಗಳಲ್ಲಿ ವಿಚಾರಿಸಿ ತಕ್ಕದಾದ ಶಿಕಾರಿಗಳನ್ನು ಮಾಡಿಸದಿದ್ದರೆ ಮುಂದಕ್ಕೆ ತೋಟದ ಭವಿಷ್ಯ ಹ್ಯಾಗಾಗುವುದೋ ನಮ್ಮೆಲ್ಲರ ಜೀವನ ಹ್ಯಾಗೆ ನಡಿಯುವುದೋ ಶ್ರೀ ದೇವರೆ ಬಲ್ಲ. ವರುಷಂಪ್ರತಿ ಹಾಕಿದ ಗಿಡಗಳೆಲ್ಲಾ ನಾಶವಾಗಿ ಹೋದರೆ ಕೀರ್ತಿ ಸಹಾ ಹ್ಯಾಗೆ ಕೊಡಲೆಂದು ಮನಸ್ಸಿನಲ್ಲಿ ಕಳವಳ ಗೊಳ್ಳುವರು.

ವಿವಿಧ ವಿಷಯಗಳು.

ಬೇರಾರ್ ದೇಶದಲ್ಲಿ ಖಾದಿ ಮತ್ತೊಮ್ಮೆಯನ್ನು ತಯಾರುಮಾಡಲು, ಮಧ್ಯಪ್ರಾಂತ್ಯದ ಸರಕಾರದವರು ಒಂದು ಕಮಿಟಿಯನ್ನು ನಿರ್ಮಿಸಿರುವರು.

• • • •

ಬಾಡಿಗೆಗಾಗಿ ಹೊರಡುವ ಮೋಟಾರು ಬಸ್ಸುಗಳನ್ನು ಅಜಮಾಯಿಸಿ ಮಾಡಲು ಮೆಕ್ಯಾನಿಕ್ಸ್‌ನಲ್ಲಿ ಸಂಪೂರ್ಣಪಾಂಡಿತ್ಯವನ್ನು ಪಡೆದವರನ್ನು ಇನಸ್ಪೆಕ್ಟರುಗಳನ್ನಾಗಿ ನಿಯಮಿಸಬೇಕೆಂದು ಮದ್ರಾಸ್ ಸರಕಾರದವರು ಹುಕುಂ ಮಾಡಿರುವರು

• • • •

ಒಬ್ಬ ಬಾಲವಿಧವೆಯ ಹೃದಯದ್ರಾವಕ ಮೃತ್ಯು.

ವರ್ಧಮಾನ, ತಾ॥ ೭-ಇಲ್ಲಿಯ ಬಿರ್ದೀಚಿಯ ಬ್ರಾಹ್ಮಣ ಸಮಾಜದೊಳಗಿನ ಒಬ್ಬ ಬಾಲವಿಧವೆಯು ಸ್ವತಃಕ್ಕೆ ಕುಟ್ಟಿಕೊಂಡು ಮರಣ ಹೊಂದಿದಳು. ಈ ಹುಡುಗಿಯ ೧೩ನೇ ವರ್ಷಕ್ಕೆ ಒಬ್ಬ ೪೦ ವರ್ಷ ವಯಸ್ಸಿನ ವೃದ್ಧ ಗೃಹಸ್ಥನಗೂಡ ಲಗ್ನವಾಗಿತ್ತು. ಈ ಗೃಹಸ್ಥನು ಕ್ಷಯ ರೋಗಿಯು ಇದ್ದದರಿಂದ ಅವನ ಕಡೆಯಿಂದ ಬಹುದೊಡ್ಡ ರಕಮುಗಳನ್ನು ತಕ್ಕೊಂಡು ಈ ಹುಡುಗಿಯ ತಾಯಿಯು ಆ ವಿವಾಹವನ್ನು ಕೂಡಿಸಿದಳು. ಹುಡುಗಿಯ ದುರ್ದೈವದಿಂದ ಆಕೆಯ ಗಂಡನು ಲಗ್ನವಾದ ಒಂದು ತಿಂಗಳೊಳಗಾಗಿಯೇ ಮರಣಹೊಂದಿದನು. ಆಗ ಆಕೆಯ ತಾಯಿಯು, ಎರಡನೇ ಒಬ್ಬ ೪೫ ವರ್ಷದ ಗೃಹಸ್ಥನೊಡನೆ ಲಾಭದಾಯಕ ಸೌದೆಯನ್ನು ಠರಾಯಿಸಿ ಅವಳ ಪುನರ್ವಿವಾಹವನ್ನು ಮಾಡುವ ಬೇತನ್ನು ಮಾಡಿದರು. ಈ ಬಾಲವಿಧವೆಗೆ ಯಾವಾಗ್ಗೆ ಈ ಸಂಗತಿಯು ತಿಳಿಯಿತು ಆಗ್ಗೆ ಅವಳು ತನ್ನ ಮತವಿರುದ್ಧ ತನ್ನ ಪುನರ್ವಿವಾಹವನ್ನು ಮಾಡುವದರ ತಾಯಿಯ ವಿಚಾರದ ತೀವ್ರ ನಿಷೇಧವನ್ನು ಮಾಡಿದಳು. ಆದರೆ ತನ್ನ ತಾಯಿಯು ಕೇಳುವುದಿಲ್ಲೆಂದು ಯಾವಾಗ್ಗೆ ಆಕೆಗೆ ತಿಳಿಯಿತು ಆಗ್ಗೆ ಅವಳು ತನ್ನ ಅರಿವೆಗಳನ್ನು ಚಿಮಣೇಯೆಣ್ಣೆ ಎಣ್ಣೆ ಬಳಿಕ ಅವನ್ನು ಹೊತ್ತಿಸಿಕೊಂಡು ಆತ್ಮಹತ್ಯೆಯನ್ನು ಮಾಡಿಕೊಂಡಳು. (ರಾಜಹಂಸ)

ದಾಸರವರ ನಿಧನಾನಂತರ!

ದಾರ್ಜಿಲಿಂಗದಲ್ಲಿ ದಾಸರವರು ನಿಧನಪಟ್ಟ ಬಳಿಕ ಅವರ ಶವವನ್ನು ದಾರ್ಜಿಲಿಂಗದಿಂದ ರೈಲ ಗಾಡಿಯಲ್ಲಿ ಹಾಕಿ ಕಲಕತ್ತೆಗೆ ತರಲಾಯಿತು. ದಾರ್ಜಿಲಿಂಗದಲ್ಲಿ ಅವರ ಬಂಗಲೆಯಲ್ಲೂ ರೈಲ್ ಸ್ಟೇಶನಿನಲ್ಲೂ ಎಲ್ಲ ಬಗೆಯ ಜನರು ನೆರೆದಿದ್ದರು. ಕಲಕತ್ತೆಗೆ ಬಂದ ಬಳಿಕ ಸ್ಟೇಶನಿನಿಂದ ಶವವನ್ನು ಮ॥ ಗಾಂಧಿ, ಮೌಲಾನಾ ಅಬುಲ್‌ಕಲಮ ಅಝಾದ, ಹೇಮೇಂದ್ರನಾಥ ದಾಸಗುಪ್ತ, ಪಿ. ಸಿ. ರಾಯ ಮುಂತಾದವರು ಎತ್ತಿ ಗಾಡಿಯಲ್ಲಿಟ್ಟರು. ಶವವನ್ನು ಮೆರವಣಿಗೆಯಿಂದ ಸ್ಮಶಾನಭೂಮಿಗೆ ಒಯ್ಯಲಾಯಿತು. ಈ ಮೆರವಣಿಗೆಯಲ್ಲಿ ನಾಲ್ಕು ಲಕ್ಷಕ್ಕಿಂತಲೂ ಹೆಚ್ಚು ಜನ ಸಮುದಾಯವು ಸೇರಿತ್ತು. ಅದನ್ನು ನೋಡುವಾಗ ಜನರ ಸಮುದ್ರವೆ ಪಸರಿಸಿಕೊಂಡಿತ್ತೋ ಎಂದು ತೋರುತ್ತಿತ್ತು. ಪಟ್ಟಣದಲ್ಲೆಲ್ಲ ಅಂಗಡಿಗಳು ದೇಶಬಂಧುಗಳ ನಿಧನದ ನಿಮಿತ್ತ ದುಃಖ ಪ್ರದರ್ಶನಕ್ಕಾಗಿ ಮುಚ್ಚಲ್ಪಟ್ಟಿದ್ದವು. ಶವದ ಮೆರವಣಿಗೆಯು ಹೋಗುವಾಗ ಮಹಡಿಗಳ ಮೇಲೆ ನಿಂತು ಯುರೋಪಿಯನ್ ಸ್ತ್ರೀಯರು ಕೂಡ ಹೂಗಳನ್ನು ಶವದ ಮೇಲೆ ಚೆಲ್ಲುತ್ತಿದ್ದರು! ಅನೇಕ ಯುರೋಪಿಯನರು ಸಾಲಾಗಿ ನಿಂತಿದ್ದರು. ಇತರ ಎಷ್ಟೋ ಜನರು ಮೆರವಣಿಗೆಯನ್ನು ಹಿಂಬಾಲಿಸಿಕೊಂಡು ಹೋಗಿದ್ದರು.

ಸ್ಟೇಶನಿಂದ ಹೊರಟ ಮೆರವಣಿಗೆಯು ಸುಮಾರು ಎಂಟು ತಾಸಿನ ನಂತರ ಸ್ಮಶಾನ ಭೂಮಿಗೆ ತಲುಪಿತು. ಅಲ್ಲಿಯೂ ಜನ ಸಮೂಹವು ಅಪಾರವಾಗಿತ್ತು. ಒಂದಿಷ್ಟು ಜಾಗೆಯು ಕೂಡ ದುರ್ಲಭವಾಗಿತ್ತು. ಗಾಂಧಿಗಳು ಜನರನ್ನು ದೂರಕ್ಕೆ ಸರಿದು ಜಾಗೆ ಬಿಡಲು ಹೇಳಿದಾಗ್ಯೂ ದೇಶಬಂಧುಗಳ ಮೇಲಿನ ಅಷ್ಟೊಂದು ಪ್ರೀತಿಯಿಂದಲೂ ಕಡೆಯ ದರ್ಶನವನ್ನು ಪಡೆಯಬೇಕೆಂಬ ಆತುರದಿಂದಲೂ ಗಾಂಧಿಗಳ ಮಾತನ್ನು ಕೂಡ ಅವರು ಲಕ್ಷಿಸಲಿಲ್ಲ. ದೇಶಬಂಧುಗಳ ಚಿರಂಜೀವಿಗಳಾದ ಚಿರರಂಜನ ದಾಸರು ಶವಕ್ಕೆ ಅಗ್ನಿ ಸಂಸ್ಕಾರವನ್ನು ಮಾಡಿದರು.

ಚಿತೆಯ ಕೆಳಗಿನ ಮೂರದಲ್ಲಿ ಕುಳಿತು ಅತ್ಯಂತ ದುಃಖಿತರಾದ ಗಾಂಧಿಗಳು "ಫೋರ್ವರ್ಡ" ಪತ್ರಿಕೆಗೆ ಒಂದು ಲೇಖನವನ್ನು ಬರೆದು ಕಳುಹಿಸಿದರು. ದಾಸರವರ ದೇಶಭಕ್ತಿ, ಸ್ವಾರ್ಥತ್ಯಾಗ, ರಾಜಕಾರಣ ಪಟುತ್ವ, ದೂರದರ್ಶಿತ್ವ ಇತ್ಯಾದಿಗಳನ್ನು ಸರಿಯಾಗಿ ವರ್ಣಿಸಿ ಮಹಾತ್ಮಾಜಿಯವರು ತಮ್ಮ ಆ ಲೇಖನದಲ್ಲಿ ದಾಸರವರ ನಿಧನದಿಂದ ಎಷ್ಟು ದೊಡ್ಡ ಆಘಾತವು ದೇಶದ ಮೇಲೆ ಬಂದೊದಗಿದೆ ಎಂಬುದನ್ನು ತೋರಿಸಿಕೊಟ್ಟಿರುವರು. ಮತ್ತು ಲೋಕಪಕ್ಷದೊಳಗಿನ ಎಲ್ಲರೂ ಒಟ್ಟಿಗೆ ಸೇರಿ ದಾಸರವರ ಅವಶಿಷ್ಟ ಕಾರ್ಯವನ್ನು ಸಾಧಿಸಬೇಕೆಂದು ಹೇಳಿರುವರು. ಅವರ ಇದೇ ಲೇಖನದ ತಾತ್ಪರ್ಯವನ್ನು ನೋಡುವಾಗ ಇನ್ನು ಮುಂದೆ ಗಾಂಧಿಜಿಯವರು ಸ್ವರಾಜ್ಯ ಪಕ್ಷಕ್ಕೆ ತಮ್ಮ ಸಂಪೂರ್ಣ ಬೆಂಬಲವನ್ನು ಕೊಡುವವರಿದ್ದಾರೆಂದು ತೋರುತ್ತದೆ. ಇದೇ ಲೇಖದಲ್ಲಿ ಗಾಂಧಿಜಿಯವರು ಬಂಗಾಲದೊಳಗಿನ ರಾಜಕೀಯ ಕೈದಿಗಳನ್ನು ಬಿಟ್ಟು ಸರಕಾರವು ತಾವದ ವಿಷಯದಲ್ಲಿನ್ನ ಬಹುಮಾನವನ್ನು ವ್ಯಕ್ತಗೊಳಿಸಬೇಕೆಂದು ಸೂಚಿಸಿದ್ದಾರೆ.

ಕಲಕತ್ತೆಯಲ್ಲಿ ನಾಗರಿಕರ ದುಃಖಪ್ರದರ್ಶಕ ಸಭೆಯು ಜರಗಿತು. ಅದೇ ರೀತಿಯಿಂದ ಕಾರ್ಪೋರೇಶನಿನಲ್ಲಿಯೂ ಸಭೆ ನಡೆಯಿತು. ಬಂಗಾಳದ ಎಲ್ಲ ಜಿಲ್ಲೆಗಳಲ್ಲೂ, ತಹಸೀಲುಗಳಲ್ಲೂ ದುಃಖದ ಸಭೆಗಳು ಆಗುತ್ತಿವೆ. ಮುಂಬಯಿ ಅಲಹಾಬಾದ, ಲಾಹೋರ, ದಿಲ್ಲಿ, ಆಗ್ರಾ, ಕಾನ್ಪೋರ, ಗುಜರಾಥ, ಕರಾಚಿ, ಪುಣೆ, ಮದ್ರಾಸ, ಪಂಜಾಬ, ಆಂಧ್ರಪ್ರಾಂತ ಮುಂತಾದ ಎಲ್ಲ ಕಡೆಗಳಲ್ಲಿ ದೇಶಬಂಧುಗಳ ನಿಧನವನ್ನು ಕುರಿತು ತಮ್ಮ ದುಃಖ ಸಂತಾಪಗಳನ್ನು ಸೂಚಿಸಲು ಪುರಜನರ ಸಭೆಗಳು ಆಗುತ್ತಿವೆ. ಲಂಡನಿನಲ್ಲೂ, ದ. ಆಫ್ರಿಕದಲ್ಲೂ ಇತರ ಪ್ರದೇಶಗಳಲ್ಲೂ ಇದೇ ಮೇರೆಗೆ ಶೋಕ ತೋರ್ಪಡಿಸಲ್ಪಡುತ್ತಿದೆ. ಅದಲ್ಲದೆ ಎಲ್ಲ ಪತ್ರಿಕೆಗಳು ಶೋಕವನ್ನು ತೋರಿಸಿ, ದಾಸರ ಮರಣದಿಂದಾದ ದುಃಖವನ್ನು ಹೇಳುತ್ತಿವೆ.

ಅವರ ಕಡೆಯವರು ಈ ರೀತಿಯಿಂದ ಶೋಕಿಸುವಂತೆ ಎಲ್ಲಿಂಗ ವೈಸರಾಯರಾದ ಲೋರ್ಡ ಲಿಟನರೂ, ಕಾಯಂ ವೈಸರಾಯರಾದ ಲೊ. ರೆಡಿಂಗರೂ, ಭಾರತ ಮಂತ್ರಿಗಳಾದ ಲೊ. ಬರ್ಕನಹೆಡ್ಡರೂ ದುಃಖ ಸೂಚಕ ಸಂದೇಶಗಳನ್ನು ಪ್ರಕಟಿಸಿದ್ದಾರೆ.

ಬರುವ ಜುಲಾಯಿ ತಾ. ೧ರಲ್ಲಿ ಹಿಂದುಸ್ಥಾನದ ಎಲ್ಲ ಕಡೆಗಳಲ್ಲಿ ದೇಶಬಂಧು ದಾಸರ ಸ್ಮಾರಕದ ಬಗ್ಗೆ ದುಃಖಪ್ರದರ್ಶಕ ಸಭೆಯನ್ನು ಸೇರಿಸಬೇಕೆಂದೂ ಮ. ಗಾಂಧಿಗಳು ಕೇಳಿಕೊಂಡಿರುವರು.

ಅನುಕ್ರಮಣಿಕೆ.

ಅಗ್ರಲೇಖ ಪುಟಗಳು.
ಆಡಂಬರವೆಲ್ಲ ವ್ಯರ್ಥವಾಯಿತು! ೬
ಸ್ಫುಟವಿಚಾರಗಳು—
೧. ರಾಜಕೀಯ ತಂಡಗಳ ಐಕ್ಯ, ೨. ಚೀನಾದೊಳಗಿನ ಗಲಾಟೆ ,,
೩. ದಾಸರ ಸ್ಮಾರಕ, ೪. ಅರವಿಂದರ ರಾಷ್ಟ್ರನಾಯಕತ್ವ, ೭
೫. ವೈಕಮಿನ ಸತ್ಯಾಗ್ರಹ, ೬. ಬ್ರಾಹ್ಮಣರ ವಿಷಯದಲ್ಲಿ ಪಕ್ಷ ,,
ಪಾತ, ೭. ಜರ್ಮನಿಯ ಒಪ್ಪಂದವೂ, ಮಿತ್ರಸಂಘದ ವರ್ತನೆಯೂ.
ಮಂಗಳೂರು
ವರ್ತಮಾನಸಂಗ್ರಹಗಳು—
ವಿದೇಶ—ಒಳದೇಶ ವರ್ತಮಾನ ೫
ದಕ್ಷಿಣ ಕನ್ನಡ—ಬ್ರಹ್ಮಾವರ, ಬಂಟ್ವಾಳ, ಸಿದ್ದೆ ,,
ವಿವಿಧ ವಿಷಯಗಳು ,,
ದಾಸರವರ ನಿಧನಾನಂತರ! ,,
ಪತ್ರವ್ಯವಹಾರ ೧, ೨ ೮
ಹಿಂಸಾ-ಅಹಿಂಸೆಗಳ ಮರ್ಯಾದೆ ,,
ದರಕಾಸ್ತಿಗೆ ಕೊಟ್ಟ ಗುಡ್ಡೆಸ್ಥಳಗಳು ೯

ಸ್ವದೇಶಾಭಿಮಾನಿ.

ಶಕ ೧೮೪೭ ಆಷಾಢ ಶು|| ೫ಯು ಶುಕ್ರವಾರ.

ಆಡಂಬರವೆಲ್ಲ ವ್ಯರ್ಥವಾಯಿತು!

ಬರ್ಕನ ಹೆಡ್-ರೆಡಿಂಗರ ಕೂಟದಿಂದ ಹಿಂದೂಸ್ಥಾನಕ್ಕೆ ಲಾಭವೇನೂ ಉಂಟಾಗಲಿಕ್ಕಿಲ್ಲವೆಂಬುದು ಅನೇಕರಿಗೆ ಮೊದಲೆ ಗೊತ್ತಿತ್ತು. ಕೆಲವರು ಮಾತ್ರ ಆಶಾಪೂರಿತರಾಗಿ ವಿಲಾಯತಿಗೆ ತೆರಳಿದ ರೆಡಿಂಗ ಸಾಹೇಬರು ಸ್ವರಾಜ್ಯದ ಮುಂದಿನ ಹಕ್ಕುಗಳನ್ನು ತಂದುಕೊಟ್ಟಾರು ಎಂದು ಭಾವಿಸಿಕೊಂಡು ಅವರ ಕಡೆಗೆ ಕಣ್ಣಿಕ್ಕಿ ಕುಳಿತ್ತಿದ್ದರು. ಸರ್ವಿಸ್ ಕಮಿಶನು, ಎನ್‌ಕ್ವಾಯರಿ ಕಮಿಟಿ ಮೊದಲಾದ ರೂಪದಿಂದ ನಾಟಕವನ್ನು ಪ್ರಾರಂಭಿಸಿ ಭಾರತ ಮಂತ್ರಿಗಳೆ ಹಿಂದುಸ್ಥಾನಕ್ಕೆ ಬರುವವರಿದ್ದರು. ಆದರೆ ಅವರಿಗೆ ಬರಲು ಸಾಧ್ಯವಿಲ್ಲ, ರೆಡಿಂಗ ಸಾಹೇಬರು ಅಲ್ಲಿಗೆ ಅವರನ್ನು ಕಾಣಬೇಕೆಂಬುದಾಗಿಯೂ, ಅದರಂತೆ ಅವರು ಇಲ್ಲಿಂದ ಹೊರಟು, ಅಲ್ಲಿಗೆ ಹೋಗಿ, ಅವರ ಭೇಟಿ ಪಡಕೊಂಡು ಹಿಂದುಸ್ಥಾನದ ಸ್ವರಾಜ್ಯದ ಪ್ರಶ್ನೆಯನ್ನು ಚರ್ಚಿಸುತ್ತಾರೆ ಎಂಬುದಾಗಿಯೂ ಈ ನಾಟಕದಲ್ಲಿ ಒಂದರ ಮೇಲೊಂದು ಅಂಕಗಳನ್ನು ರಚಿಸಿ ಕೊನೆಗೆ ನುಡಿದ ಭರತ ವಾಕ್ಯವು ಯಾವುದೆಂದು ನೋಡಹೋದರೆ ಅದು ಕೇವಲ ನೀಸಾರವಾದ್ದೆಂಬುದು ಬಹಿರಂಗವಾಗುತ್ತ ಬಂದಿದೆ. ಅದರ ಈ ಸ್ಥಿತಿಯನ್ನು ನಿರೀಕ್ಷಿಸಿದವರು—ಅವರು ಆಶಾವಾದಿಗಳಾಗಿದ್ದರೂ—ಇನ್ನು ಕಣ್ಣು ತೆರೆದಾರೆಂದು ಹೇಳಬಹುದು. ಬರ್ಕನ ಹೆಡ್-ರೆಡಿಂಗರ ಮಂಥನದಿಂದ ಸುಧಾರಣೆಯ ರತ್ನಗಳಾವವೂ ಹೊರಗೆ ಬರಲಿಲ್ಲ. ಮೇಲಾಗಿ ಮಧ್ಯ, ಹಾಲಾಹಲಗಳಂತೆ ಒಂದೆರಡು ಅನಿಷ್ಟಸಂಗತಿಗಳೆ ಸಂಭವಿಸುವ ಸಂಭವವು ತೋರುತ್ತಿದೆ. ವಿಲಾಯತಿಯೊಳಗಿನ ಬಾತಮೀದಾರರೂ ಮತ್ತು ಪತ್ರಿಕೆಗಳ ಲೇಖಕರೂ ಈ ಸುಧಾರಣಾಮಂಥನ ನಾಟಕದ ಪರದೆಯನ್ನು ಮೆಲ್ಲನೆ ಮೇಲಕ್ಕೆ ಎತ್ತಿ ತೋರಿಸುತ್ತಿದ್ದಾರೆ.

ಒಳಗಿನ ದೇಖಾವೆಯು ಕೇವಲ ನಿರಾಶಾಜನಕವಾಗಿದೆ. ಹೊಸ ಸುಧಾರಣೆಯು ಯಾವುದೂ ಇಲ್ಲ. ಮುಂಚಿನ ಕಾಯಿದೆಯಲ್ಲಿ ಹೊಗಳಿದಂತೆ ೧೯೨೯ರ ವರೆಗೆ ಮುಂಚಿನ ಕಾನೂನನ್ನು ತಿದ್ದಲಾಗದು. ಸುಧಾರಣಾ-ವಿಚಾರಣಾ-ಕಮಿಟಿಯ ಬಹುಮತದ ರಿಪೋರ್ಟಿನ ಮೇರೆಗೆ ಕೆಲವು ತಿದ್ದುಪಾಟಗಳು ಪ್ರಕೃತ ಸುಧಾರಣೆಯ ಯೋಜನೆಯಲ್ಲಿ ಉಂಟಾಗಬಹುದು. ಅದರಿಂದ ಸ್ವರಾಜ್ಯದ ಹಕ್ಕುಗಳಿಗೆ ಇನ್ನೂ ಹೆಚ್ಚಿನ ಪಾತ್ರತೆಯನ್ನು ಜನತೆಯು ತೋರಿಸಬಹುದು. ಹೊರತು ಬಂಗಾಲ ಮತ್ತು ಮಧ್ಯಪ್ರಾಂತದಲ್ಲಿ ಅನುಸರಿಸಿದಂತೆ ಉಪರೋಧದಿಂದ ಸರಕಾರದ ಯಂತ್ರವನ್ನು ನಿಲ್ಲಿಸಬಾರದು. ಈ ಮಾತಿನ ಅರ್ಥವೇನೆಂದರೆ, ಜನರು ಉಪರೋಧವನ್ನು ಬಿಟ್ಟು ಸರಕಾರದೊಡನೆ ಸಹಕರಿಸುವದಾದರೆ, ಹೆಚ್ಚಿನ ಹಕ್ಕುಗಳ ಬಗ್ಯೆ ಪಾತ್ರತೆಯನ್ನು ತೋರಿಸಲು ಸಂಪೂರ್ಣವಾದ ಸಂದರ್ಭವನ್ನು ಒದಗಿಸಿಕೊಡುವದಕ್ಕಾಗಿ ಈಗಿನ ಸುಧಾರಣೆಯ ಕಾರಭಾರದ ಯಂತ್ರದಲ್ಲಿ ಕೆಲವು ಹೆಚ್ಚು ಕಡಿಮೆಗಳನ್ನು ಮಾಡಬಹುದು. ಹಿಂದುಸ್ಥಾನದೊಳಗಿನ ಬೇರೆ ಬೇರೆ ರಾಜಕೀಯ ತಂಡಗಳು ಪಾರ್ಲಿಮೆಂಟಿನಲ್ಲಿ ಸ್ವರಾಜ್ಯದ ಹೊಸ ಹೊಸ ಯೋಜನೆಗಳನ್ನು ವಿಚಾರಾರ್ಥವಾಗಿ ತಂದಿಡಬಹುದು. ಬಂಗಾಲದಲ್ಲೂ ಇತರ ಕಡೆಗಳಲ್ಲೂ ಕ್ರಾಂತಿಕಾರಕರ ಚಳವಳವನ್ನು ಮುರಿಯಲು ವೈಸರಾಯರೂ, ಅವರ ಕಾರ್ಯಕಾರಿ ಕಮಿಟಿಯವರೂ ಯಾವ ಯಾವ ಉಪಾಯಗಳನ್ನು ಕೈಕೊಳ್ಳುವರೊ ಅವುಗಳಿಗೆಲ್ಲ ಪಾರ್ಲಿಮೆಂಟಿನ ಸಂಪೂರ್ಣ ಬೆಂಬಲವಿರುವುದು. ಸಿವಿಲ್ ಸರ್ವಿಸಿನಲ್ಲಿರುವ ಇಂಗ್ಲಿಷ ಗೃಹಸ್ಥರ ಅಧಿಕಾರವನ್ನು ತಗ್ಗಿಸಬಾರದು. ಸರ್ವಿಸ ಕಮಿಶನಿನಲ್ಲಿ ಅವರಿಗಾಗಿ ಸೂಚಿಸಿರುವ ಇನ್ನೂ ಯಾವ ಅನುಕೂಲತೆಗಳುಂಟೊ ಅವುಗಳನ್ನು ಅದಷ್ಟು ಬೇಗನೆ ಪೂರೈಸಲಾದೀತು. ಇನ್ನು ಸ್ವಲ್ಪ ಸಮಯದ ವರೆಗಾದರೂ ಸರಕಾರಿ ಇಲಾಖೆಗಳ ಹಿಂದೀಕರಣವು ಒಂದು ವಿವಕ್ಷಿತ ಗಡಿಯನ್ನು ದಾಟಲಾಗುವುದಿಲ್ಲ. ಹಿಂದುಸ್ಥಾನದ ಆರ್ಥಿಕ ಪರಿಸ್ಥಿತಿಯನ್ನು ಪರಿಶೋಧಿಸಿ ಅದರ ಉತ್ಪನ್ನವನ್ನು ಹೆಚ್ಚಿಸುವಂತೆ ಉಪಾಯಗಳನ್ನು ಸೂಚಿಸಲು ಒಂದು ಕಮಿಶನನ್ನು ನೇಮಿಸಬೇಕು.

ಬರ್ಕನ್‌ಹೆಡ್-ರೆಡಿಂಗರ ಕೂಟದಿಂದ ಈ ಮೇಲಿನ ಸಂಗತಿಗಳು ಹೊರಬೀಳತಕ್ಕವುಗಳೆಂದು ಪ್ರಕಟವಾಗಿದೆ. ಇವುಗಳನ್ನು ಪರಿಶೀಲಿಸುವಾಗ ಇವುಗಳಲ್ಲಿ ಯಾವುದು ಹಿಂದುಸ್ಥಾನದ ಜನತೆಯ ಆಕಾಂಕ್ಷೆಗೆ ಅನುಗುಣವಾಗಿದ್ದಾವೆ? ೧೯೨೯ರ ವರೆಗೆ ಹೊಸ ಸುಧಾರಣೆಗಳನ್ನು ಕೊಡಲಾಗುವುದಿಲ್ಲವೆಂದು ಪ್ರಕಟಿಸಲಿಕ್ಕೆ ರೆಡಿಂಗಸಾಹೇಬರು ಇಲ್ಲಿಂದ ವಿಲಾಯತಿಗೆ ಹೋಗಬೇಕಿತ್ತೆ? ಮುಂಚಿನ ಕಾನೂನಿನಿಂದಲೆ ಈ ಅರ್ಥವನ್ನು ಜನರು ತಿಳಕೊಂಡಿರಲಿಲ್ಲವೆ? ಸರಕಾರವು ಹತ್ತು ವರ್ಷದ ವಾಯಿದೆಯನ್ನು ಕೊಟ್ಟದ್ದು ಸಹ್ಯವಾದ್ದಲ್ಲ, ಕೊಡಲ್ಪಟ್ಟ ಸುಧಾರಣೆಗಳು ಸಾರವತ್ತಾದವುಗಳಾದರೆ ಒಂದು ವೇಳೆ ಆ ಹತ್ತು ವರ್ಷದ ಅವಧಿಯನ್ನು ಕಾಯಬಹುದಾಗಿತ್ತು. ಆದರೆ ಆ ಸುಧಾರಣೆಗಳೆ ನೀಸಾರವಾದವುಗಳು, ಕೇವಲ ಟೊಳ್ಳು ಎಂಬುದು ಲೋಕವಿದಿತವಾದ ಸಂಗತಿಯಾದ್ದರಿಂದ ಅಂಥ ನಿರ್ಮಾಲ್ಯಪ್ರಾಯವಾದ ಸುಧಾರಣೆಗಳನ್ನು—ಘಾತಕವಾದ ದ್ವಿದಲ ಪದ್ಧತಿಯನ್ನು ಎತ್ತಿ ಹಿಡಿಯುವ ಆ ನಿರರ್ಥಕ ಸುಧಾರಣೆಗಳನ್ನು—ಪರಿಮಾರ್ಜಿಸಬೇಕೆಂದು ಜನತೆಯ ಹೇಳಿಕೆ ಇರುವಾಗ ಈ ಇಬ್ಬರು ದೊಡ್ಡ ಅಧಿಕಾರಿಗಳು ಒಟ್ಟಿಗೆ ಸೇರಿ ಅವುಗಳನ್ನೆ ಜನರು ಇನ್ನೂ ಮೇಲಕ್ಕೆತ್ತಬೇಕೆಂದು ಹಟಹಿಡಿಯುವುದು ಅನುಚಿತವೇ ಅಲ್ಲ, ಜನತೆಯಲ್ಲಿ ಉದ್ವೇಗವನ್ನು ಹುಟ್ಟಿಸುವದಾಗಿದೆ. ಮುಖ್ಯವಾದ ಸಂಗತಿಯಲ್ಲಿಯೆ ಈ ಮೇರೆಗೆ ಕೌಟಿಲ್ಯ ಮತ್ತು ಕೃಪಣತೆಯನ್ನು ತೋರಿಸಿದ ಬಳಿಕ ಬೇರೆ ವಿಷಯಗಳಲ್ಲಿ ಹೇಗೆ ವ್ಯವಸ್ಥೆಮಾಡಿದರೇನು? ನೀವು ಉಪರೋಧಕಾರ್ಯಕ್ರಮವನ್ನು ಬಿಟ್ಟುಬಿಡಿರಿ. ಆಗ ನಾವು ಎನ್‌ಕ್ವಾಯರಿ ಕಮಿಟಿಯ ಬಹುಮತದ ಸೂಚನೆಯಂತೆ ಕಾರಭಾರದಲ್ಲಿ ಅನುಕೂಲತೆಗಳನ್ನು ಒದಗಿಸಲು ಚಿಂತಿಸುವೆವು ಎಂದು ಹೇಳುವುದು ಧೂರ್ತತನವಲ್ಲವೆ? ಉಪರೋಧವಾಗಲಿ, ಅಸಹಕಾರವಾಗಲಿ ಯಾಕೆ ಬಂದವು? ಇವು ನಿಮ್ಮ ರಾಜ್ಯದ ಆಡಳಿತದ ಮರಗಳ ಫಲಗಳಲ್ಲವೆ? ಜನತೆಯ ಆಕಾಂಕ್ಷೆಗಳಂತೆ ನೀವು ಸ್ವರಾಜ್ಯದ ಹಕ್ಕುಗಳನ್ನು ಬಿಟ್ಟುಕೊಟ್ಟದ್ದಾದರೆ ಅಸಹಕಾರಕ್ಕೂ, ಉಪರೋಧಕ್ಕೂ ಅವಕಾಶವು ಸಿಗುತ್ತಿತ್ತೆ? ನೀವು ಸ್ವರಾಜ್ಯವನ್ನು ಕೊಡುವಾಗಲೂ ನಿಮ್ಮನ್ನು ತಡೆಗಟ್ಟುವ ಬಯಕೆಯು ಜನತೆಯಲ್ಲಿದೆಯೆ? ಇನ್ನು ಮುಂದೆಯಾದರೂ ನೀವೆ ಒಳ್ಳೆ ರೀತಿಯಿಂದ ನಡೆದರೆ ಜನತೆಯೂ ಸದ್‌ಭಾವದಿಂದ ವರ್ತಿಸುವದು ಸಹಜ. ಕಾರಣ, ಧ್ವನಿಗೆ ಪ್ರತಿಧ್ವನಿಯು ಲೋಕಸಿದ್ಧವಾದ ವಿಷಯವು.

ಅಧಿಕಾರಿಗಳಾದ ನಿಮ್ಮ ಪ್ರವೃತ್ತಿಯು ಈ ರೀತಿಯಿಂದ ಕಲ್ಲೆದೆಯ ತೆರದಲ್ಲಿರುವಾಗ "ಸ್ವರಾಜ್ಯದ ಬೇರೆ ಬೇರೆ ಕ್ರಮಗಳನ್ನು ಸೂಚಿಸುವ ಬಿಲುಗಳನ್ನು ನೀವು ಪಾರ್ಲಿಮೆಂಟಿಗೆ ಸಾದರಗೊಳಿಸಬಹುದೆ"ಂದು ಹೇಳುವ ಮಾತು ಜನತೆಯನ್ನು ಹಾಸ್ಯಮಾಡಲು ಅಲ್ಲದೆ ಬೇರೆ ಕಾರಣದಿಂದಲೆ? ಶಾಲಾ ವಿದ್ಯಾರ್ಥಿಗಳು ಯಾವ ರೀತಿಯಿಂದ ಡಿಬೇಟಿಂಗ್ ಸೊಸಾಯಟಿಗಳನ್ನು ಏರ್ಪಡಿಸಿಕೊಂಡು ವಿವಿಧ ವಿಷಯಗಳನ್ನು ಚರ್ಚಿಸುವರೊ, ವಕ್ತೃತ್ವಪೂರ್ಣವಾದ ಭಾಷಣಗಳನ್ನು ಮಾಡುವರೊ ಅಂತೆಯೆ ಹಿಂದಿ ರಾಜಕಾರಣಿಗಳು ಸ್ವರಾಜ್ಯದ ಸ್ವರೂಪವನ್ನು ಕುರಿತು ಬೇಕುಬೇಕಾದ ರೀತಿಯಲ್ಲಿ ಚರ್ಚಿಸಲಿ, ತರ್ಕಿಸಲಿ, ವಿವಾದಿಸಲಿ ಎಂದು ನೀವು ನೆನಸುತ್ತಾ ಇದ್ದೀರೆಂಬುದು ಈಗ ಯಾರಿಗೆ ಗೊತ್ತಿಲ್ಲವೆ? ಹಲವು ತರದ ಬಿಲುಗಳನ್ನು ನಿಮ್ಮ ಮುಂದೆ ಇಟ್ಟು ವೃಥಾ ಕಂಠಶೋಷಮಾಡಿಕೊಳ್ಳುವದರ ಬದಲು ಆ ಸಾಮರ್ಥ್ಯವನ್ನು ಅವರು ಇತರ ಕಾರ್ಯಗಳಲ್ಲಿ ಪ್ರಯೋಗಿಸುವುದು ಲೇಸಲ್ಲವೆ? ಇಷ್ಟು ರೀತಿಯಿಂದ ಹಿಂದೀ ಲೋಕಮತವನ್ನು ಉಪಮರ್ದಿಸಿದ್ದು ಸಾಲದೊ ಎಂಬಂತೆ 'ಸಿವಿಲ್ ಸರ್ವಿಸಿನವರಿಗೆ ಇನ್ನೂ ಅನುಕೂಲತೆಗಳನ್ನು ಒದಗಿಸಿಕೊಟ್ಟು, ಈ ಸಿವಿಲ್' ಸರ್ವೆಂಟ ದೇವತೆಗಳ ಆಸನಗಳನ್ನು ಇನ್ನೂ ಸ್ಥಿರವನ್ನಾಗಿ ಮಾಡಿ ನಿಮ್ಮಿಬ್ಬರ ಈ ಕೂಟವು ಹಿಂದುಸ್ಥಾನದ ದುಡ್ಡನ್ನೂ, ಬಲವನ್ನೂ ಅಪವ್ಯಯ ಪಡಿಸಿದೆ ಎಂದು ಹೇಳಿದರೆ ಅದು ಸರ್ವಥಾ ಅಯಥಾರ್ಥವಾಗಲಿಕ್ಕಿಲ್ಲ. ಹಿಂದುಸ್ಥಾನದಲ್ಲಿ ಸಿವಿಲ್ ಸರ್ವೆಂಟರಿಗೆ ಈಗ ಯಾವ ಯಜಮಾನತ್ವವು ಸಿಕ್ಕಿದೆಯೊ, ದೊಡ್ಡ ಬುದ್ಧಿವಾದ ಹೇಳುವ ಮತ್ತು ನಿರಂಕುಶ ಅಧಿಕಾರ ನಡಿಸುವ ಅತ್ತೆಯಂತೆ ಈ ಸಿವಿಲ್ ಸರ್ವೆಂಟರಿಗೆ ಯಾವ ಹಿರಿತನವು ಬಂದಿದೆಯೊ ಅದೆ ಮೊದಲು ಜನತೆಗೆ ಅಸಹ್ಯವಾಗಿದೆ. ಪುನಃ ಅದನ್ನೆ ಗಟ್ಟಿ ಮಾಡಿ, ಅವರ ಮನೋರಥಗಳನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ನೀವು ಪೂರಯಿಸುವದಾದರೆ ಜನತೆಯು ತನ್ನ ಅರಣ್ಯರುದನಕ್ಕೆ ಪಶ್ಚಾತ್ತಾಪ ಪಡಲಿಕ್ಕಿಲ್ಲ. ಹಿಂದುಸ್ಥಾನದ ಸಾಂಪತ್ತಿಕ ಸ್ಥಿತಿಯನ್ನು ಪರಿಶೋಧಿಸುವುದಕ್ಕಾಗಿ ನೇಮಿಸಲು ನೀವು ಸಂಕಲ್ಪಿಸಿರುವ ಕಮಿಟಿಯ ವಿಷಯವಾಗಿಯಾದರೂ ಜನತೆಯ ಹೇಳಿಕೆಯು ಹೀಗೆಯೆ ಇದೆ. ಇದು ವರೆಗೆ ನೇಮಿಸಲ್ಪಟ್ಟ ಕಮಿಟಿಗಳು ಕಡಿಮೆಯೆ? ಕಮಿಶನುಗಳು ಕಡಿಮೆಯೆ? ಈ ಹೊಸ ಕಮಿಟಿಯು ಏರ್ಪಟ್ಟು ಇನ್ನು ಏನು ಮಾಡಲಿದೆ? ಅದರ ಖರ್ಚಿಗಾಗಿ ಇನ್ನಷ್ಟು ದ್ರವ್ಯದ ದುರ್ವ್ಯಯವೆ ಉಂಟಾದೀತು. ಅದ್ದರಿಂದ ಕಮಿಶನಿನ ಅಥವಾ ಕಮಿಟಿಯ ಬಾಯಿಂದ ನಮ್ಮನ್ನು ಬಿಡಿಸಿರಿ ಎಂದು ಜನರು ಕೇಳಿಕೊಳ್ಳುತ್ತಿದ್ದಾರೆ.

ಸಾರಾಂಶ, ಬರ್ಕನ್‌ಹೆಡ್ಡ್ ರೆಡಿಂಗರ ಕೂಟದಿಂದ ಹಿಂದುಸ್ಥಾನಕ್ಕೆ ಉಪಕಾರವಾಗಲಿಲ್ಲ, ಅಪಕಾರಕವೆ ಆಗಿದೆ ಎನ್ನಬಹುದು. ಇಂಥ ನಿರರ್ಥಕ ಸೂಚನೆಗಳನ್ನು ಸೂಚಿಸಲು ರೆಡಿಂಗರು ಇಲ್ಲಿಂದ ಹೋಗ ಬೇಕಿತ್ತೇ? ಅವರು ಈ ಕಾರ್ಯಕ್ಕೆ ಹಿಂದುಸ್ಥಾನದ ಬಡಜನತೆಯ ಹಣದಿಂದ ವಿಲಾಯತಿಗೆ ಹೋಗಿ ಕೊನೆಗೆ ಮಾಡಿದ್ದೇನು? ಅವರು ತಮ್ಮ ಜನರನ್ನೂ, ಸ್ನೇಹಿತರನ್ನೂ ಕಂಡು ಬರುತ್ತಿದ್ದಾರೆ! ಹವೆಯನ್ನು ಪಲ್ಲಟಿಸಿಕೊಂಡು ಬರುತ್ತಿದ್ದಾರೆ! ತಮ್ಮ ಮುದತನ್ನು ಹೆಚ್ಚಿಸಿಕೊಂಡು ಬರುತ್ತಿದ್ದಾರೆ! ತಮ್ಮ ಒತ್ತಾಳಿಕೆಗೆ ಪಾರ್ಲಿಮೆಂಟಿನ ಬೆಂಬಲವನ್ನು ಪಡಕ್ಕೊಂಡು ಬರುತ್ತಿದ್ದಾರೆ! ಇನ್ನೂ ಖರ್ಚಿನ ಹೊರೆಯು ದೊಡ್ಡದಾಗುವಂತೆ ಮಾಡುತ್ತಿದ್ದಾರೆ! ಇದಕ್ಕಿಂತ ಅವರ ಪ್ರಯಾಣದಿಂದ ಮತ್ತು ಬರ್ಕನಹೆಡ್ಡರ ಸಂಗಡ ನಡಿಸಿದ ಚರ್ಚೆಯಿಂದ ನಿಷ್ಪನ್ನವಾದದ್ದು ಬೇರೆ ಯಾವದು?

ಸ್ಫುಟವಿಚಾರಗಳು.

೧. ಹಿಂದುಸ್ಥಾನದ ರಾಜಕೀಯ ಪಾಳೆಯಗಳಲ್ಲಿ ಪರಸ್ಪರ ಕಚ್ಚಾಟವು ಬಿದ್ದಿರುವುದರಿಂದ ಅನ್ಯರಿಗೆ ಅದರಿಂದ ಲಾಭವುಂಟಾಗುತ್ತಿದೆ. ಇದು ಬಹಳ ಶೋಚನೀಯವು. ರಾಷ್ಟ್ರೀಯ ಸಭೆ ಎಂಬ ಹೆಸರನ್ನು ಹೊಂದಿದ ಬಳಿಕ ಆ ಹೆಸರಿಗೆ ಸರಿಯಾಗಿಯೆ ಅದು ಇರತಕ್ಕದ್ದಲ್ಲದೆ ಹೆಸರು ಲಕ್ಷ್ಮೀ ಅಮ್ಮಯೆಂದಿದ್ದು ಭಿಕ್ಷೆಗೆ ಹೋಗುವುದಾದರೆ ಅದು ಹೇಗೆ ಆ ಹೆಸರಿಗೆ ಅಪಮಾನಕರವೊ ಹಾಗೆಯೆ ರಾಷ್ಟ್ರೀಯ ಸಭೆ ಎಂದು ಹೆಸರಿದ್ದು ಅದು ಏಕದೇಶೀಯವಾಗಿ ಹೋದರೆ, ಅದರಿಂದ ಅನೇಕ ತಂಡಗಳು ಹೊರನಿಂತಲ್ಲಿ ಆ ಹೆಸರು ಕೂಡ ಲಾಂಛನಾಸ್ಪದವೆ ಸರಿ. ಹೆಸರು ಲಾಂಛನಾಸ್ಪದವಾದರೇನು ಗೌರವಾಸ್ಪದವಾದರೇನು? ಇದೇನಾದರೂ ಸಾಹಿತ್ಯದೊಳಗಿನ ಪದ್ಯಕ್ಕೆ ಅರ್ಥ ಹೇಳುವ ಸಂಗತಿಯಲ್ಲ. ಆದ್ದರಿಂದ ಆ ಹೆಸರು ಅನ್ವರ್ಥವಾಗದಿದ್ದರೂ ಬಾಧಕವಿಲ್ಲವೆಂದಿಟ್ಟುಕೊಂಡರೂ ಜನಾಂಗದೊಳಗಿನ ಬಹು ಪಕ್ಷಗಳು ಈ ರಾಷ್ಟ್ರೀಯ ಸಂಸ್ಥೆಯಿಂದ ದೂರಕ್ಕಿರುವ ಕಾರಣ ಆ ರಾಷ್ಟ್ರೀಯ ಸಭೆಯು ಅಂಬೋಣಕ್ಕೆ ಭಾರವಿಲ್ಲದಂತಾಗಿದೆ. ಅಲ್ಲದೆ, ಅದು ಯಾವ ಕಾರ್ಯಕಾರಿ ಸಂಸ್ಥೆಯೂ ಅಲ್ಲವಾಗಿದೆ. ಆದ್ದರಿಂದ ಹಿಂದುಸ್ಥಾನದ ಎಲ್ಲ ಪಕ್ಷಗಳಿಗೆ ಅದರ ಬಾಗಿಲನ್ನು ತೆರೆದು ಕೊಡುವುದು ವಿಹಿತವಾದ ಮಾತು. ಇದು ಮಹಾತ್ಮಾ ಗಾಂಧಿಗಳಿಗೂ ತಿಳಿಯ ಹತ್ತಿದೆ. ಈ ಕಾರಣದಿಂದಲೆ ಅವರು ದೇಶಬಂಧು ದಾಸರೊಡನೆ ಚರ್ಚಿಸಿ ರಾಷ್ಟ್ರೀಯ ಸಭೆಯು ಎಲ್ಲರ ವ್ಯಾಸಪೀಠವಾಗಬೇಕೆಂಬ ಉದ್ದೇಶದಿಂದ ಮುಂಚಿತವಾಗಿ ಬೇರೆ ಬೇರೆ ತಂಡಗಳ ಮುಖ್ಯಸ್ಥರ ಒಂದು ಕೂಟವು ನೆರೆದು ಚರ್ಚೆಯಾಗಬೇಕು, ಈ ಚರ್ಚೆಗನುಸಾರವಾಗಿ ಆದ ನಿರ್ಣಯದಂತೆ ರಾಷ್ಟ್ರೀಯ ಸಭೆಯು ಘಟನೆಯಲ್ಲೂ ಮತ್ತು ಅದರ ಸಭಾಸದತ್ವದ ನಿಯಮಗಳಲ್ಲೂ ಬದಲಾವಣೆಯನ್ನು ಮಾಡಬಹುದು ಎಂದು ಆಲೋಚಿಸಿಕೊಂಡಿದ್ದರು. ಈ ಮಧ್ಯ ದಾಸರು ಪರಲೋಕಗತರಾದ್ದರಿಂದ ಈ ಐಕ್ಯದ ಪ್ರಶ್ನೆಯು ಬದಿಗೆ ಬೀಳುವದೊ ಎಂದು ತೋರಿತ್ತು. ಆದರೆ ಗಾಂಧಿಗಳು ಐಕ್ಯವು ಈ ಸಂದರ್ಭದಲ್ಲಿ ಅತಿಗತ್ಯವೆಂದು ಪ್ರತಿಪಾದಿಸಿದ್ದಾರೆ. ರಾಷ್ಟ್ರೀಯ ಪಕ್ಷದ ಧುರೀಣರಾದ ಜೀನಾ ಸಾಹೇಬರೂ ಸಹ ಐಕ್ಯವು ಅಗತ್ಯವೆಂದು ವಾದಿಸಿದ್ದಾರೆ. ಅವರು ಗಾಂಧಿಗಳ ಮಾತಿಗೆ ಉತ್ತರವನ್ನು ಕೊಡುವಾಗ ಮುಂದಿನಂತೆ ಬರೆಯುತ್ತಾರೆ:— ರಾಷ್ಟ್ರೀಯ ಸಭೆಯಲ್ಲಿ ಬಂದ ಬಳಿಕ ಬಹುಮತವನ್ನು ಸಾಧಿಸಿ ಅದರ ಬಲದಿಂದ ನೂಲಿನ ಮತದ ನಿಯಮವನ್ನು ತೆಗೆಯುವುದು ಸುಲಭವೆಂದು ಹಲವರು ಹೇಳುತ್ತಾರೆ. ಆದರೆ ಆ ನೂಲಿನ ಮತದ ಶರ್ತವಿರುವಾಗ ಹೊರಗಿನವರಾದರೂ ಒಳಗೆ ಬರುವುದು ಹೇಗೆ? ಅದ್ದರಿಂದ ಪ್ರತಿಬಂಧಕವಾದ ಆ ಶರ್ತವನ್ನು ತೆಗೆದು ದಾರಿಬಿಡಿಸಿಕೊಡಿರಿ, ಅನಂತರ ಎಲ್ಲ

ಪಕ್ಷದವರು ಒಟ್ಟಿಗೆ ಸೇರಿ ರಾಷ್ಟ್ರದ ಮುಂದಿನ ರಾಜಕೀಯ ಕಾರ್ಯಕ್ರಮವನ್ನು ನಿರ್ಣಯಿಸ ಬಹುದು. ಜೀನಾ ಸಾಹೇಬರ ಈ ಯುಕ್ತಿವಾದವು ತೀರಾ ಅಭಾಸಮಯವೆಂದು ಹೇಳಲಾಗುವುದಿಲ್ಲ. ಆದ್ದರಿಂದ ಪ್ರತಿಬಂಧಕವಾದ ಶರ್ತಗಳನ್ನು ತೆಗೆದು ಹಾಕಿ ಎಲ್ಲರೂ ಸಮಾನ ವ್ಯಾಸಪೀಠವನ್ನು ಮಾಡಿಕೊಂಡು ನೋಕರಶಾಹಿಯನ್ನು ಎದುರಿಸುವುದು ಅಗತ್ಯವಾಗಿದೆ.

೨. ಚೀನಾದೊಳಗಿನ ಗಲಾಟೆಯು ಇನ್ನೂ ಕಡಿಮೆಯಾಗಿಲ್ಲ. ಬ್ರಿಟಿಷರಿಗೆ ಎದುರಾಗಿ ಯುದ್ಧವನ್ನು ಪ್ರಾರಂಭಿಸಬೇಕೆಂದು ಚೀನಾದ ಯುದ್ಧದ ಮಂತ್ರಿಗೆ ಸೂಚಿಸಿದ್ದಲ್ಲಿ ಯುದ್ಧವನ್ನು ನಾವಾಗಿ ಪ್ರಾರಂಭಿಸುವುದು ಒಳ್ಳೆಯದಲ್ಲ, ಸಾಮೋಪಚಾರದಿಂದ ನಡಕೊಳ್ಳುವುದು ಉತ್ತಮ, ಆದರೆ ಅಂಥ ಸಂದರ್ಭವೆ ಬಂದೊದಗಿದರೆ ನಾವೇನಾದರೂ ಹಿಮ್ಮೆಟ್ಟಲಿಕ್ಕಿಲ್ಲವೆಂದು ಆ ಯುದ್ಧ ಮಂತ್ರಿಯು ಉತ್ತರ ಕೊಟ್ಟಿರುವರು. ಯುದ್ಧದ ಸಂಭವ ತೋರುತ್ತಿದ್ದರೂ ಇನ್ನೂ ಯುದ್ಧವು ಪ್ರಾರಂಭವಾಗಿಲ್ಲ. ಆದರೆ ಅಲ್ಲಿ ಬಿದ್ದಿರುವ ಮುಷ್ಕರವು ದಿನೇ ದಿನೇ ವಿಸ್ತಾರವನ್ನು ಹೊಂದುತ್ತ ಹೋಗಿದೆ. ವಿದ್ಯಾರ್ಥಿ ವರ್ಗದಲ್ಲಿ ಮತ್ತು ಇತರರಲ್ಲಿ ಬ್ರಿಟಿಷ ವಸ್ತುಗಳನ್ನು ಬಹಿಷ್ಕರಿಸುವ ಪ್ರವೃತ್ತಿಯು ಅಧಿಕವಾಗುತ್ತ ಬಂದಿದೆ. ಮತ್ತು ಅದಷ್ಟು ಉತ್ಸಾಹದಿಂದ ಈ ಬಹಿಷ್ಕಾರವನ್ನು ಯಶಸ್ವಿಯನ್ನಾಗಿ ಮಾಡಲು ಅವರು ಪ್ರಯತ್ನಪಡುತ್ತಿದ್ದಾರೆ. ರುಷ್ಯದೊಳಗಿನ ಸೋವಿಯಟ್ ಸರಕಾರದ ಮದತ್ತು ಹೆಚ್ಚಾಗಿ ಈ ಚೀನದವರಿಗೆ ಸಿಗುತ್ತಿದೆಯಾದ್ದರಿಂದ ಇಂಥ ಪ್ರಕಾರಗಳು ನಡೆಯುತ್ತ ಬಂದಿದ್ದಾವೆ ಎಂದು ಹೇಳೋಣಾಗುತ್ತದೆ.

೩. ದೇಶಬಂಧು ದಾಸರ ಚಿರಸ್ಮರಣೀಯವಾದ ಒಂದು ಸ್ಮಾರಕವನ್ನು ಏರ್ಪಡಿಸಬೇಕೆಂಬುದಾಗಿ ಅವರ ಸ್ನೇಹಿತರು ಯೋಚಿಸಿರುವರು. ಈ ಸ್ನೇಹಿತ ವರ್ಗದಲ್ಲಿ ಲೋರ್ಡ್ ಸಿಂಹ, ಎಸ್. ಎನ್. ಸರಕಾರ ಮುಂತಾದ ಪ್ರಮುಖ ಗೃಹಸ್ಥರಿದ್ದಾರೆ. ಸ್ಮಾರಕಕ್ಕೆ ಅದಷ್ಟು ಉಪಯುಕ್ತ ಸ್ವರೂಪವನ್ನು ಕೊಡಬೇಕೆಂಬುದಾಗಿ ನಿರ್ಣಯಿಸಿ ದಾಸರ ಹೆಸರಿನಿಂದ ಕಲಕತ್ತದಲ್ಲಿ ಸ್ತ್ರೀಯರಿಗಾಗಿ ಒಂದು ಆಸ್ಪತ್ರೆಯನ್ನು ಸ್ಥಾಪಿಸಬೇಕೆಂದಿದ್ದಾರೆ. ಈ ಕಾರ್ಯಕ್ಕೆ ಸುಮಾರು ೧೦ ಲಕ್ಷ ರೂಪಾಯಿ ಅಗತ್ಯವೆಂದು ಯೋಚಿಸೋಣಾಗಿಯದೆ. ಕೂಡಲೆ ೨ ಲಕ್ಷ ರೂಪಾಯಿ ಜಮೆಯಾಗಿದೆ ಎಂದು ಪ್ರಕಟವಾಗಿದೆ. ಪರೋಪಕಾರ ದೇಶೋನ್ನತಿ ಇತ್ಯಾದಿ ಕಾರ್ಯಗಳಲ್ಲಿ ಸಂಪೂರ್ಣ ಸ್ವಾರ್ಥತ್ಯಾಗ ಮಾಡಿರುವ ದಾಸರಂಥ ಮಹಾನುಭಾವರ ಸ್ಮಾರಕವು ಬರೆ ಸ್ತ್ರೀಯರ ಆಸ್ಪತ್ರೆಯ ರೂಪದಲ್ಲಿಯಾಗುವುದಕ್ಕಿಂತ ಸ್ವರಾಜ್ಯ ಪ್ರಾಪ್ತಿಯ ಸಾಧನದಲ್ಲಿ ಆಗುತ್ತಿದ್ದರೆ ಇನ್ನೂ ಒಳ್ಳೆಯದಾಗುತ್ತಿತ್ತು. ಕಾರಣ, ಕೊನೆ ಕೊನೆಗೆ ಅವರ ಉಸುರು ಕೂಡ ಸ್ವರಾಜ್ಯಚಿಂತನ ರೂಪವಾಗಿಯೆ ಪರಿಣಮಿಸಿತ್ತು. ಆದರೂ ಪ್ರಕೃತದ ಯೋಜನೆಯಾದರೂ ತೀರಾ ಕಡಿಮೆ ತರಗತಿಯದಲ್ಲ. ಇದಕ್ಕೆ ಬಂಗಾಲದ ಕಡೆಯಿಂದ ಸಂಪೂರ್ಣ ಸಹಾಯ್ಯವಾದೀತೆಂಬುದಕ್ಕೆ ಸಂದೇಹವಿಲ್ಲ. ಲಕ್ಷಾಧೀಶರು ಕೂಡಲೆ ಈ ಹಣವನ್ನು ತುಂಬಿಸ್ಯಾರಾದರೂ ಸಾಮಾನ್ಯ ಜನರಿಂದಲೇ ಈ ರಕಮು ಸೇರುವುದು ಅಗತ್ಯವೆಂದು ಮ. ಗಾಂಧಿಗಳು ಪ್ರಕಟಿಸಿದ್ದಾರೆ. ಗಾಂಧಿಜಿಯವರ ಇಚ್ಛೆಯಂತೆ ಮಧ್ಯಮ ವರ್ಗದಿಂದ ಸಹಾಯವು ಸಿಗದೆ ಇರಲಿಕ್ಕಿಲ್ಲ.

೪. ದೇಶಬಂಧು ದಾಸರವರು ಗತಿಸಿರುವುದರಿಂದ ಬಂಗಾಲಕ್ಕೆ ನಾಯಕನಿಲ್ಲದಂತಾಗಿದೆ. ಅನಾಯಕವಾದ ದೇಶವು ರಾಷ್ಟ್ರಕಾರ್ಯದಲ್ಲಿ ವ್ಯರ್ಥವಾಗುವುದು. ಆದ್ದರಿಂದ ಬಂಗಾಲದ ರಾಷ್ಟ್ರೀಯ ಪಕ್ಷವನ್ನು ಎಂದರೆ ಸ್ವರಾಜ್ಯ ಪಕ್ಷವನ್ನು ಮುಂದೊತ್ತಲು ಸಮರ್ಥರಾದವರು ಯಾರಾದರೂ ಬೇಕು. ಈ ಕಾರ್ಯವನ್ನು ಅಂಗೀಕರಿಸಲು ಶ್ರೀ ಬಾಬು ಅರವಿಂದ ಘೋಷರಿಗೆ ಮ. ಗಾಂಧಿಗಳು ತಂತಿಯಿಂದ ಕೇಳಿಕೊಂಡಿದ್ದಾರೆ. ಅರವಿಂದ ಘೋಷರು ಬಂಗಾಲವನ್ನು ಬಿಟ್ಟು ಪೊಂಡಿಚೇರಿಗೆ ಬಂದು ಈಗ ಸುಮಾರು ೧೫-೨೦ ವರ್ಷಗಳಾಗಿರಬಹುದು. ಇವರು ಪುನಃ ಬಂಗಾಲಕ್ಕೆ ಬಂದು ಈಗಿನ ರಾಜಕೀಯ ಚಳವಳದ ಮುಖ್ಯ ಸೂತ್ರಗಳನ್ನು ಕೈಕೊಳ್ಳಬೇಕೆಂಬುದಾಗಿ ಮಹಾತ್ಮಾ ಗಾಂಧಿಗಳಂತೆ ಇನ್ನೂ ಅನೇಕ ಮುಖಂಡರು ಅಭಿಪ್ರಾಯಪಡುತ್ತಿದ್ದಾರೆ. ಡೊ. ಮುಂಜೆಯವರು ಪತ್ರಿಕೆಯ ಒಬ್ಬ ಪ್ರನಿಧಿಯೊಡನೆ ಮಾತಾಡುವಾಗ ಬರುವ ವರ್ಷದ ರಾಷ್ಟ್ರೀಯ ಸಭೆಯ ಅಧ್ಯಕ್ಷಸ್ಥಾನಕ್ಕೆ ಅರವಿಂದ ಘೋಷರನ್ನೆ ಎಲ್ಲಾ ಪ್ರಾಂತಿಕ ಕಮಿಟಿಗಳು ಚುನಾಯಿಸಬೇಕೆಂಬುದಾಗಿ ಹೇಳಿರುವರು. ಡೊ. ಮುಂಜೆಯವರು ಅಭಿಪ್ರಾಯಪಡುವಂತೆ ರಾಜಕೀಯ ಚಳವಳವನ್ನು ಮುಂದರಿಸುವುದರಲ್ಲಿ ಅರವಿಂದ ಘೋಷರಷ್ಟು ಸಮರ್ಥರು ಇನ್ನಾರೂ ಕಾಣರು. ಬಂಗಾಲದ ಮೊದಲಿನ ನವಜಾಗೃತಿಯ ಸಮಯದಲ್ಲಿ ಇವರು ಅಭೂತ ಪೂರ್ವವಾದ ಚಳವಳವನ್ನು ಮಾಡಿದ್ದರು. ಆದ್ದರಿಂದ ಶ್ರೀ. ಅರವಿಂದರು ಅಜ್ಞಾತವಾಸವನ್ನು ಬಿಟ್ಟು, ದೇಶಕಾರ್ಯಕ್ಕಾಗಿ ಸ್ವರಾಜ್ಯದ ಚಳವಳವನ್ನು ಅಪ್ರತಿಮ ರೀತಿಯಲ್ಲಿ ನಡಿಸಿಯಾರೆಂದು ನಂಬಬಹುದಾಗಿದೆ.

೫. ವೈಕಮಿನ ಸತ್ಯಾಗ್ರಹದ ವಿಷಯವಾಗಿ ಸತ್ಯಾಗ್ರಹಿಗಳು ಗಾಂಧಿಜಿ ಮತ್ತು ಪೋಲೀಸ ಸುಪರಿಂಟೆಂಡೆಂಟ ಇವರೊಳಗೆ ಆದ ಒಪ್ಪಂದವನ್ನು ಮೀರಿ ಮುಂದರಿಸಿದರು ಎಂದು ಎಸೋಸಿಯೇಟೆಡ್ ಪ್ರೆಸ್ಸಿನ ಬಾತಮಿದಾರನು ಪ್ರಕಟಿಸಿದ್ದಲ್ಲಿ ಮರುದಿನ ಈ ವಾರ್ತೆಯು ಸುಳ್ಳು ಎಂಬದಾಗಿ ಮಿ| ಕೇಶವ ಮೇನರರು ಬರೆದು ತಿಳಿಸುವರು. ಆದರೆ ಮೂರು ದಿಕ್ಕುಗಳ ಪೈಕಿ ಒಂದು ಕಡೆಯ ಪ್ರತಿಬಂಧ ಮಾತ್ರವುಂಟು. ಇತರ ಎರಡುಕಡೆಗಳಲ್ಲಿ ಅಸ್ಪೃಶ್ಯರು ನಿಷ್ಪ್ರತಿಬಂಧವಾಗಿ ಹೋಗಿಬರುತ್ತಿದ್ದಾರೆ. ಅಲ್ಲಿಯ ಸತ್ಯಾಗ್ರಹಿಗಳು ಮಹಾತ್ಮಾಜಿಗಳ ಮಾತನ್ನು ಮೀರಿ ನಡಿಯುವದಿಲ್ಲ. ಮತ್ತು ನಡಿಯಕೂಡದೆಂಬುದಾಗಿ ಅದೆ ಕೇಶವಮೇನರು ಬರೆಯುತ್ತಿದ್ದಾರೆ. ಪೋಲೀಸು ಸುಪರಿಂಟೆಂಡೆಂಟರು ಅಲ್ಲಿಗೆ ಬಂದು ನಿಂತಿರುವರು. ಎಲ್ಲ ಸಂಗತಿಗಳು ಶಾಂತರೀತಿಯಲ್ಲಿ ನಡೆಯುತ್ತಿವೆ. ಆದ್ದರಿಂದ ಯಾವ ಪಕ್ಷದವರಿಗೂ ಯೋಚನೆಪಡಬೇಕಾದ್ದಾಗಲೀ ಸಂಶಯ ಪಡುವದಾಗಲಿ ಅಗತ್ಯವಿಲ್ಲ.

೬. ಅಧಿಕಾರಿಗಳ ವರ್ಗವು ಬಾಯಿಂದ ಏನು ಬೇಕಾದರೆ ಹೇಳಲಿ, ಆದರೆ ಕಾರ್ಯದಲ್ಲಿ ಪಕ್ಷಪಾತವನ್ನು ತೋರಿಸದೆ ಇರುವದಿಲ್ಲ. ವರ್ಣಭೇದವೆ ಅಲ್ಲ, ವರ್ಣದ್ವೇಷವು ಕೂಡ ಸಂದರ್ಭಾನುಸಾರ ಪ್ರಕಟಿಸಲ್ಪಡುತ್ತದೆ. ಇದಕ್ಕೆ ಒಂದು ಇತ್ತಲಾಗಿನ ಉದಾಹರಣವನ್ನು ತೋರಿಸಿಕೊಡಬಹುದು. ಯುನಿವರ್ಸಿಟಿ ಟ್ರೈನಿಂಗ್ ಕೋರಿನಲ್ಲಿ ಲಷ್ಕರಿ ಶಿಕ್ಷಣವನು ಸಂಪಾದಿಸಿ ಅದನ್ನು ಕುರಿತು ಎಡ್‌ಜ್ಯೂಟಂಟಿನ ಸರ್ಟಿಫಿಕೇಟನ್ನು ತೆಕ್ಕೊಂಡು ಒಬ್ಬ ಬ್ರಾಹ್ಮಣ ವಿದ್ಯಾರ್ಥಿಯು ಪುಣೆಯಲ್ಲಿ ತನ್ನನ್ನು ಸೈನ್ಯದಲ್ಲಿ ಕೆಲಸಕ್ಕೆ ತೆಕ್ಕೊಳ್ಳಬೇಕೆಂದು ಅರ್ಜಿ ಹಾಕಿದ್ದನು. ಅವನ ಅರ್ಜಿಗೆ ಉತ್ತರ ಕೊಡುವಾಗ "ಬ್ರಾಹ್ಮಣನಿದ್ದ ಕಾರಣ ಕೊಡಲಾಗುವುದಿಲ್ಲ"ವೆಂದು ಅಧಿಕಾರಿಗಳು ಉತ್ತರ ಕೊಟ್ಟಿರುವರು! ಇದು ಎಷ್ಟು ಲಾಂಛನಾಸ್ಪದವೊ ಅಷ್ಟೆ ಪಕ್ಷಪಾತಿತ್ವದ್ದೂ ಆಗಿದೆ. ಎಸೆಂಬ್ಲಿಯಲ್ಲಿ ಮೊದಲು ಪ್ರಶ್ನೆ ಬಂದಾಗ ಯಾವ ಬ್ರಾಹ್ಮಣರಿಗೆ ಸೈನ್ಯದಲ್ಲಿ ಸೇರಲು ಪ್ರತ್ಯವಾಯವಿಲ್ಲವೆಂದು ಹೇಳೋಣಾಗಿತ್ತೊ ಅದೆ ವರ್ಗದ ಬ್ರಾಹ್ಮಣ ಹುಡುಗನು ಅರ್ಜಿ ಹಾಕಿದಾಗ ಅವನ ಬ್ರಾಹ್ಮಣ್ಯವು ಅವನಿಗೆ ಎದುರು ನಿಲ್ಲುವುದು! ಜಾತಿ, ಮತ, ವರ್ಣ ಇತ್ಯಾದಿ ಒಂದೂ ಭೇದವನ್ನು ಎಣಿಸದೆ ಕೇವಲ ಗುಣವನ್ನು ಗ್ರಹಿಸುವ ಈಗಿನ ಸುಧಾರಿಸಿದ ಸರಕಾರದ ಈ ರೀತಿಯು ನಿಜವಾಗಿ ಶ್ಲಾಘ್ಯವಲ್ಲವೆ?

೭. ಮಿತ್ರ ಸಂಘದವರು ಜರ್ಮನಿಯನ್ನು ನೀಶಸ್ತ್ರಗೊಳಿಸಲು ಲಿಖಿತವನ್ನು ಕಳುಹಿಸಿದ್ದರು. ಅದಕ್ಕೆ ಜರ್ಮನಿಯಿಂದ ಉತ್ತರವು ಇನ್ನೂ ದೊರಕಿಲ್ಲ. ಜರ್ಮನಿಯು ಒಪ್ಪಂದದ ಶರ್ತಗಳನ್ನೆಲ್ಲ ಸರಿಯಾಗಿ ಪೂರಯಿಸದ ಹೊರತು ಮಿತ್ರ ಸಂಘದವರು ಕೊಲೊನ ಪ್ರಾಂತವನ್ನು ಬಿಡುವಂತಿಲ್ಲ ಆ ಶರ್ತಗಳನ್ನು ಪೂರಯಿಸಿದ್ದಲ್ಲಿ ಮಿತ್ರಸಂಘದವರಿಗೆ ಅದನು ಬಿಟ್ಟು ಕೊಡಬೇಕಾದೀತು. ಮತ್ತು ಆ ಕೊಲೊನದಿಂದ ಸೈನ್ಯವನ್ನು ಎಬ್ಬಿಸಬೇಕಾದರೆ ಮೊದಲು ಫ್ರಾನ್ಸಿಗೆ ಜರ್ಮನಿಯ ಹಲ್ಲೆಯ ನಿರ್ಭೀತಿಯ ಬಗ್ಗೆ ನಂಬಿಕೆಯನ್ನು ಹುಟ್ಟಿಸಿ ಕೊಡಬೇಕಾದೀತು. ಜರ್ಮನಿಯಿಂದ ಭಯವಿಲ್ಲವೆಂಬುದಾಗಿ ಇಂಗ್ಲಂಡು ಫ್ರಾನ್ಸಿಗೆ ನಂಬಿಕೆಯನ್ನು ಕೊಡಬೇಕಾದ್ದು—ಆ ಮೇರೆಗೆ ಇಂಗ್ಲಂಡು ಅದಕ್ಕೆ ನಂಬಿಕೆಯನ್ನು ಕೊಟ್ಟದೆ ಎಂದು ವಾರ್ತೆಗಳುಂಟು. ಜರ್ಮನ ರಾಷ್ಟ್ರವು ತನ್ನ ಪಶ್ಚಿಮದ ಗಡಿಯನ್ನು ಮೀರಿ ಫ್ರಾನ್ಸಿನ ಮೇಲೆ ದಂಡೆತ್ತಿ ಬಂದರೆ ಆಗ ಇಂಗ್ಲಂಡು ಫ್ರಾನ್ಸಿನ ಸಹಾಯಕ್ಕೆ ಓಡಿ ಅದರ ಸಂರಕ್ಷಣವನ್ನು ಮಾಡತಕ್ಕದ್ದು ಎಂಬುದಾಗಿ ಈ ಎರಡು ರಾಷ್ಟ್ರಗಳಲ್ಲಿ ಕರಾರುಂಟಾಗಿದೆ ಎಂದು ತಿಳಿದ ಕೂಡಲೆ ಪಾರ್ಲಿಮೆಂಟಿನಲ್ಲಿ ಈ ವಿಷಯವಲ್ಲಿ ತುಂಬಾ ಚರ್ಚೆಯು ನಡಿಯಿತು, ಪಾರ್ಲಿಮೆಂಟಿನ ಸಮ್ಮತಿಯನ್ನು ಪಡಕೊಳ್ಳದೆ ಇಂಥ ಕರಾರನ್ನು ಮಂತ್ರಿಮಂಡಲವು ಮಾಡಬಹುದೆ, ವಸಾಹತುಗಳ ಅಭಿಪ್ರಾಯವನ್ನು ಪಡಕೊಳ್ಳದೆ ಇಂಥ ಕರಾರನ್ನು ಮಾಡಿದ್ದಾದರೆ ಅದು ವಸಾಹತುಗಳಿಗೆ ಬಂಧನಕಾರಕವಾದೀತೆ ಎಂಬುದಾಗಿ ಅನೇಕ ಪ್ರಶ್ನೆಗಳು ಪಾರ್ಲಿಮೆಂಟಿನಲ್ಲಿ ಕೇಳಲ್ಪಡುತ್ತಿವೆ. ಮಂತ್ರಿ ಮಂಡಲವು ಈ ಪ್ರಶ್ನೆಗಳಿಗೆ ಉತ್ತರಕೊಡುವಾಗ ಹೇಳಿದ್ದೇನೆಂದರೆ, ಫ್ರಾನ್ಸಿನೊಡನೆ ಇನ್ನೂ ನಿಶ್ಚಿತವಾದ ಕರಾರು ಆಗಿಲ್ಲ, ಈಗ ಬರೆ ಚರ್ಚೆಯು ಮಾತ್ರ ನಡೆಯುತ್ತಿದೆ, ಆ ಚರ್ಚೆಯಲ್ಲಿ ಯಾವ ಸಂಗತಿಯು ಕೊನೆಗೆ ನಿಷ್ಪನ್ನವಾದೀತೊ ಅದನ್ನು ಪಾರ್ಲಿಮೆಂಟಿನ ಸಮ್ಮತಿಯ ಬಗ್ಗೆ ಇಡಲಾದೀತು. ಈ ಮೇರೆಗೆ ಮಂತ್ರಿಮಂಡಲದವರು ಕೊಟ್ಟ ಉತ್ತರದ ಮೇಲಿಂದ ಫ್ರಾನ್ಸಿನ ಸಂರಕ್ಷಣದ ವಿಷಯವು ಆಂದೋಲಾಯಮಾನವಾಗಿ ನಿಂತಿದೆ. ಅದು ಹೇಗೂ ಇದ್ದರೂ ಕೊಲೊನ ಪ್ರಾಂತವನ್ನು ಬಿಟ್ಟು ಇನ್ನೂ ಮಿತ್ರ ಸಂಘದವರು ಹೊರಡಲಿಲ್ಲ ಎಂಬುದು ಮಾತ್ರ ಮುಖ್ಯವಾದ ಸಂಗತಿಯಾಗಿದೆ.

ಮಂಗಳೂರು.

ಇದೇ ಕಳದ ಬುಧವಾರ 'ಅಭಿನವಾನಂದ ನಾಟಕ ಮಂಡಲಿ'ಯವರು 'ಶಕುಂತಲಾ' ನಾಟಕವನ್ನಾಡಿದರು. ಶ್ರೀಯುತ ಲಕ್ಷ್ಮೀನಾರಾಯಣ ಪುಣಿಂಚತ್ತಾಯ ಕವಿಗಳು ರಚಿಸಿದ ಈ ನಾಟಕದ ಹಾಡುಗಳೆಲ್ಲವೂ ಸುಲಲಿತವಾಗಿ ಮನೋಹರವಾಗಿದ್ದವು. ಅವರಿಂದ ರಚಿತವಾದ ದಿವಂಗತ ಚಿತ್ತರಂಜನ ಸ್ತವನವನ್ನು ಹಾಡಿದಾಗ ಸಭಿಕರೆಲ್ಲರೂ ಎದ್ದು ನಿಂತರು. ಅನಂತರ ಶ್ರೀ ಪುಣಿಂಚತ್ತಾಯರು ಆ ದೇಶಬಂಧುವಿನ ಪವಿತ್ರ ಚರಿತ್ರೆಯನ್ನು ಕೊಂಡಾಡಿ ಒಂದು ಸ್ಫೂರ್ತಿದಾಯಕವಾದ ಭಾಷಣವನ್ನು ಮಾಡಿದರು. ಸಭಿಕರ ಅಪೇಕ್ಷೆಯಂತೆ ಈ ನಾಟಕದ ಉತ್ಪತ್ತಿಯನ್ನು ಕೀರ್ತಿಶೇಷ ದಾನಶೂರ ದಾಸರವರ ಪುಣ್ಯಸ್ಮರಣಾರ್ಥವಾಗಿ ಶ್ರೀ. ದಾಸರ ಶ್ರಾದ್ಧ ದಿನವಾದ ತಾ. ೧—೭—'೨೫ರಲ್ಲು ಬಡಬಗ್ಗರಿಗೆ ಹಂಚಬೇಕೆಂದು ಮಂಡಲಿಯವರು ನಿರ್ಧರಿಸಿರುವರು. ದಾನಶೂರ ಚಿತ್ತರಂಜನರ ಆತ್ಮಕ್ಕೆ ಶಾಂತಿಯಾಗಲಿ!

The Calicut Bank, Ltd.,
ದಿ ಕೆಲಿಕಟ್ ಬೇಂಕ್, ಲಿಮಿಟೆಡ್,

ಹೆಡ್ ಆಫೀಸು—ಕಲ್ಲಿಕೋಟೆ.
ಬ್ರಾಂಚುಗಳು:—ಮುಲ್ಲಸ್‌ಚೇರಿ, ತಲಚೇರಿ, ಕೊಚ್ಚಿ ಮತ್ತು ಪಾಲ್ಘಾಟು.
ರಿಜಿಸ್ಟರ್ಡ್ ಮತ್ತು ಅಧಿಕಾರಗೊಳಿಸಲ್ಪಟ್ಟ ಮೂಲಧನ ರೂ. 5,00,000—0—0.
ರೂಪಾಯಿ 10ರ 50,000 ಪಾಲುಗಳು.
(30—8—1924)ರ ವರೆಗೆ ಮೌಲ್ಯ ಮೂಲಧನ ರೂಪಾಯಿ 1,81,850—0—0.
ಒಂದು ವರುಷದ ಕಾಯಂ ಠೇವಣಾತಿಗೆ ಬಡ್ಡಿ ದರ ಸೇಕಡಾ ರೂ. 7—8—0.
ಕಳೆದ 4 ವರುಷಗಳಲ್ಲಿ ಪಾಲುಗಾರರಿಗೆ ಸೇಕಡಾ 12ರಂತೆ ಬಡ್ಡಿ ಹಂಚಿದೆ.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.
ಸಿ. ಕೃಷ್ಣನ್, ಬಿ. ಎ. ಬಿ. ಎಲ್.,
ಮೆನೇಜಿಂಗ್ ಡ್ಯಾರೆಕ್ಟರ್.
ಡ್ಯಾರೆಕ್ಟರರಲ್ಲಿ ಒಬ್ಬರು—
ಎಮ್. ನಾರಾಯಣ. ಕಾಮತ್, ಬಿ. ಎ.,
ಪ್ಲೀಡರ್, ಕುಂದಾಪುರ.

ದಕ್ಷಿಣ ಕನ್ನಡ ಹೆಲ್ತ್ ಎಂಡವೆಲ್ಫೇರ್ ಎಸೋಸಿಯೇಶನ್ ಕಳೆದ 19ನೇ ತಾರೀಕಿನಲ್ಲಿ ಜರಗಿದ ಎಕ್ಸಿಕ್ಯೂಟಿವ್ ಕಮಿಟಿಯ ಪ್ರೊಸೀಡಿಂಗ್ಸ್:—

ಮಂಗಳೂರು ಬಂದರದ ಬದಿಯಲ್ಲಿರುವ ಕಶ್ಮಲವನ್ನು ತೆಗಿಸಬೇಕೆಂದು ಮಂಗಳೂರು ಮುನಿಸಿಪಾಲಿಟಿ ಲೇಂಡಿಂಗ್ ಮತ್ತು ಶಿಪ್ಪಿಂಗ್ ಕಮಿಟಿಗಳಿಗೂ ಕೇಳಿಕೊಳ್ಳಲಾಯಿತು.

ಮಂಗಳೂರು ಮುನಿಸಿಪಾಲಿಟಿಯವರು ಈ ಕೆಳಗಿನ ಕೆಲಸಗಳನ್ನು ಕೈಕೊಳ್ಳಬೇಕೆಂದು ಕೇಳಿಕೊಳ್ಳಲಾಯಿತು.

(೧). ಕಾರಂಬಳ್ಳಿ ಕೆರೆಯಂಥಹ ಹಳೆಯ ಕೆರೆಗಳ ಕೆಸರು ತೆಗೆದು ಸ್ವಚ್ಛವಾಗಿಡುವುದು. (೨). ಇಡೀ ಪಟ್ಟಣವನ್ನು ಮುಖ್ಯವಾಗಿ ಜನಸಂಖ್ಯೆ ಹೆಚ್ಚಿದ್ದ ಸ್ಥಳಗಳಲ್ಲಿ ನಗರ ನಿರ್ಮಾಣದ ರೀತಿಯನ್ನು ಅನುಸರಿಸುವುದು. (೩). ಸೆನಿಟರಿ ನೌಕರರು ಪ್ರತಿಯೊಂದು ಹಿತ್ತಲನ್ನು ಸಂದರ್ಶಿಸುವುದು. (೪). ಗೋಳಿಕಟ್ಟೆ ಸೆಂಟ್ರಲ್ ಮತ್ತು ಮಾರ್ಕೆಟ್ ವಾರ್ಡುಗಳ ಚರಂಡಿಗಳಲ್ಲಿ ಕಸ ಮುಂತಾದ್ದನ್ನು ಜನರು ಬಿಸಾಡದಂತೆ ನೋಡುವುದು. (೫). ಚೊಕ್ಕಟವಾದ ಪಾಯಖಾನೆಗಳನ್ನು ಕಟ್ಟುವಂತೆ ಜನರನ್ನು ಪ್ರೇರೇಪಿಸುವುದು. (೬). ಮಕ್ಕಳ ಆರೈಕೆಗಾಗಿ ನೂರು ರೂಪಾಯಿ ಖರ್ಚಿನಿಂದ ಒಂದು "ಬೇಬಿ ವೆಲ್ಕಮ್ ಹೋಮ್" ಎಂಬುದನ್ನು ಶುರುಮಾಡಿ ತಿಂಗಳೊಂದರ ೫೦ ರೂ. ಖರ್ಚಿನಿಂದ ತತ್ಕಾಲಕ್ಕೆ ಆರು ತಿಂಗಳ ವರೆಗೆ ಅದನ್ನು ನಡಿಸಬೇಕೆಂದು ನಿರ್ಣಯಿಸಲಾಯಿತು.

ಇಂಡಿಯನ್ ರೆಡ್ ಕ್ರೋಸ್ ಸೊಸಾಯಿಟಿಯಿಂದ ಒಂದೊಂದಕ್ಕೆ ೬ ಆಣೆ ಬೆಲೆಯುಳ್ಳ ೫೦ ಮಕ್ಕಳ ಅಂಗಿಗಳನ್ನು ಕೊಂಡುಕೊಳ್ಳಬೇಕೆಂದು ಎಣಿಸಲಾಯಿತು.

ಎಕ್ಸಿಕ್ಯುಟಿವ್ ಕಮಿಟಿಗೆ ಡಾ. ಮಿಸ್ ಡಿಕ್ರೂಜ್, ಅಸಿಸ್ಟಾಂಟ್ ಸರ್ಜನ್, ಡಿಸ್ಟ್ರಿಕ್ಟ್ ಸೆನಿಟರಿ ಒಫಿಸರ್ ಮತ್ತು ಮುನ್ಸಿಪಲ್ ಹೆಲ್ತ್ ಒಫಿಸರ್ ಇವರು ಆರಿಸಲ್ಪಟ್ಟರು.

ಪತ್ರವ್ಯವಹಾರ.

ಅಯ್ಯಾ,

ಮದ್ರಾಸ್ ನ್ಯಾಯವಿಧಾಯಕ ಸಭೆಗೆ ಮ|| ರಾ|| ರಾ|| ಧರ್ಮಸ್ಥಳದ ಮಂಜಯ್ಯ ಹೆಗಡೆಯವರು ಮೆಂಬರರಾಗಿರುವರಷ್ಟೆ. ಅವರಿಗೊಂದು ತಮ್ಮ ಪತ್ರಿಕೆಯ ಮುಂಖಾಂತರ ಒಂದು ಸೂಚನೆ ಬರೆಕೊಳ್ಳುವೆನು.

ಶ್ರೀ ಧರ್ಮಸ್ಥಳವು ಈ ದಕ್ಷಿಣ ಕನ್ನಡ ಜಿಲ್ಲೆಯಿಂದಲ್ಲದೆ ಬೇರೆ ಬೇರೆ ಕಡೆಗಳಿಂದ ಸಹ ಹರಿಕೆಗಳು ತುಂಬ ಬರುವ ಬಹಳ ಕೀರ್ತಿಯ ಮುಖ್ಯಸ್ಥಳವಾಗಿರುತ್ತದೆ. ಆ ಪೈಕಿ ಮೈಸೂರು ಜಿಲ್ಲೆಯಿಂದ ಹೇರಳ ಹರಕೆಯಿಂದ ದ್ರವ್ಯ ಸಂಪಾದನೆಯಾಗುತ್ತದೆ. ಹರಕೆ ತರುವ ಜನರಾದರೊ ಮಾತಾಡುವ ದೇವರೆಂದೇ ಹೆಗಡೆಯವರನ್ನು ಭಾವಿಸಿ ಅಷ್ಟಬಿಷ್ಟ ಡಾಕ್ ತೀರಿಸಿಕೊಂಡು ಅಡ್ಡಬಿದ್ದು ಅಪ್ಪಣೆಪಡೆಯುವ ಸಾಂಪ್ರದಾಯವಿರುವುದು. ಶ್ರೀ ಧರ್ಮಸ್ಥಳದಲ್ಲಿ ಹರಿಕೆ ಬಂದ ಕಾಣಿಕೆಯನ್ನು ಲೆಕ್ಕಕ್ಕೆ ಜಮೆಬರಿಯಕೂಡದು ಖರ್ಚು ಮಾತ್ರ ಬರಿಯುವ ಪೂರ್ವ ಸಾಂಪ್ರದಾಯ — ಅಂಥಾ ಹಣದ ವಿನಿಯೋಗ ನಡಿಸುವ ಹಕ್ಕು ಧರ್ಮಸ್ಥಳದ ಒಬ್ಬ ಹೆಗ್ಗಡೇರಿಗಲ್ಲದೆ ಬೇರೆ ಯಾರಿಗೂ ಇಲ್ಲದೆ ಇದ್ದರೂ ಸದರಿ ಹಣವನ್ನು ದಾನಧರ್ಮಕ್ಕೆ ಮುಂತಾದ ಸದ್ವಿನಿಯೋಗಗಳ ಬಗ್ಗೆ ಉಪಯೋಗಿಸುವುದು ಕೂಡ ಪೂರ್ವಸಾಂಪ್ರದಾಯ ಪ್ರಕಾರ ಮ|| ರಾ|| ಹೆಗ್ಗಡೆಯವರ ಕರ್ತವ್ಯವಾಗಿದೆ. ಇಂಥಾ ಬಹುಮಾನಿಗಳಾದ ಮಂಜಯ್ಯ ಹೆಗಡೇಯವರನ್ನು ಆ ಮದ್ರಾಸು ನ್ಯಾಯವಿಧಾಯಕ ಸಭೆಯ ಮೆಂಬರಿಕೆಗೆ ನಿಲ್ಲುವ ಕುರಿತು ಆ ಮಂಜುನಾಥ ಸ್ವಾಮಿಯ ಸಹಾಯವಿರದೆ ಇರಲಾರದು. ಹಾಗೆ ಆತನ ಸಹಾಯವು ಸದಾ ಅವರ ಮೇಲೆ ಇರುವಂತೆ ಪ್ರಾರ್ಥಿಸುವುದು ಸಹ ನಮ್ಮ ಕರ್ತವ್ಯ.

ಇಂಥಾ ಮಹನೀಯರಗಳು ಆ ಮದ್ರಾಸು ನ್ಯಾಯವಿಧಾಯಕ ಸಭೆಗೆ ಹೋಗಿ ಮಾಡಬೇಕಾದ ಎಷ್ಟೊ ಕೆಲಸಗಳ ಭಾರವು ಇವರ ಮೇಲೆ ಬಿದ್ದಿರುತ್ತದಾದರೂ ಕೃತ್ಯಕ ಮುಖ್ಯಾಂಶಗಳು ಯಾವುವೆಂದರೆ, ಹಳ್ಳಿ ಪ್ರಾಂತ್ಯದ ನಿವಾಸಿಗಳಿಗೆ ಉಪಯೋಗವಾಗುವಂಥ ಗ್ರಾಮರಸ್ತೆಗಳು, ಅಗತ್ಯ ಉಳ್ಳ ಹಳ್ಳಿಗಳಲ್ಲಿ ಶಾಲೆಯ ಏರ್ಪಾಡುಗಳು, ಜಂಗ್ಲಿ ಇಲಾಖೆಯವರು ಹಳ್ಳಿ ನಿವಾಸಿಗಳ ಜಾನುವಾರುಗಳಿಗೆ ಹೊರಿಸುವ ಪಾಸು ಟಿಕೇಟು ದರದ ಬದಲಾವಣೆ, ಬಾಣಾಯಿಸು ಅಡಿಕೆಗೆ ಹಕ್ಕರ ಬಾಧೆ ನಿವಾರಣೆ ಕುರಿತು ರಹದಾರಿ ವಿಷಯ ಮುಂತಾದ್ದಾಗಿರುತ್ತದೆ. ಈ ವಿಷಯಕವಾದ ಮುಖ್ಯ ಮುಖ್ಯ ಕರ್ತವ್ಯಗಳನ್ನು ನಡಿಸುವಾಗ ಶ್ರೀ ಮಂಜುನಾಥ ಸ್ವಾಮಿಯು ಸಹಾಯಮಾಡಲೆಂದು ಪ್ರಾರ್ಥಿಸಿಕೊಳ್ಳುವ,

ಒಬ್ಬ ಹಳ್ಳಿ ನಿವಾಸಿಕ.

ಮದ್ರಾಸು ನ್ಯಾಯವಿಧಾಯಕ ಸಭೆಯ ಮೆಂಬರರಿಗೆ ಒಂದು ಸೂಚನೆ.

(ಒಬ್ಬ ಬಾತ್ಮಿದಾರರಿಂದ)

ನಮ್ಮ ಜಿಲ್ಲೆಯ ಅನೇಕ ಕಡೆಗಳಲ್ಲಿ ಹಳ್ಳಿ ನಾಡಿನ ಜನರು ಪೇಟೆ ಪಟ್ಟಣಗಳಿಗೆ ಕಟ್ಟಿಗೆ ಹೊರೆಗಳನ್ನು ತಂದು ಮಾರಿ ಅದರಿಂದ ಸಿಕ್ಕಿದ ಹಣದಿಂದ ಅಕ್ಕಿ, ಉಪ್ಪು, ಮೆಣಸು ಕೊಂಡುಹೋಗಿ ಜೀವನಮಾಡುವವರು ಸಾವಿರಾರುಜನರಿರುವರು. ಇಂಥಾ ಒಂದು ಹೊರೆ ತರಬೇಕಾದರೆ ಬೆಳಗಿನ ಜಾವದಲ್ಲಿ ಎದ್ದು ಯಾರಾದ್ದಾರು ವರ್ಗದಾರರ ಹತ್ತರ ಬೇಡಿ ಕಟ್ಟಿಗೆ ಕಡಿದು ಸುಮಾರು ಒಂದು ಎರಡು ಗಂಟೆ ಹೊತ್ತಿಗೆ ಪಟ್ಟಣಕ್ಕೆ ಕಟ್ಟಿಗೆ ಹೊರೆ ಹೊತ್ತುಕೊಂಡು ಬರುವರು. ಬರುವಾಗ ಠಾಣೆದಾರನು ಕಾದು ಇರುವನು. ಅವನಿಗೆ ಎರಡು ಪಾವಾಣೆ ಕೊಟ್ಟು ಮುಂದರಿಸಿ ಬಂದು ಪಟ್ಟಣದ ಸುತ್ತು ಸಂಚಾರಮಾಡುವಾಗ ಬೇಕಾದವರು ಒಳ್ಳೇ ಕಟ್ಟಿಗೆ ಅದರೆ ಎರಡು ಮೂರು ಆಣೆಗೆ ತಕೊಳ್ಳುವರು. ಸುಮಾರಾದರೆ ಎರಡಾಣೆಗಿಂತ ಹೆಚ್ಚಿಗೆ ಸಿಕ್ಕಲಾರದು. ಸರಾಸರಿ ಎರಡು ಮೂರು ಆಣೆಗೆ ಅರ್ಧಾಣೆ ಟೋಲ್ ಅಂದರೆ ಇಂಥಾ ತೀರ್ವೆ ಬೇರೆ ಯಾವ ವೃತ್ತಿದಾರರಿಗಾದರೂ ಇರುವುದಿಲ್ಲ. ಆರಂಭದಲ್ಲಿ ಹೊರೆಗೆ ಎರಡು ಪೈ ಇತ್ತು ಆ ಮೇಲೆ ಮೂರು ಪೈ ಆಯಿತು. ಈಗ ಆರು ಪೈ ಆಗಿ ಎರಡು ಮೂರು ವರ್ಷವಾಯಿತು. ಅದರೆ ಕಟ್ಟಿಗೆ ಮಾರುವವರು ಪ್ರತಿ ಒಬ್ಬರು ಪ್ರತಿ ದಿನ ಯಾರು ಈ ಸುಂಕವನ್ನು ಕಡಿಮೆ ಮಾಡುವರಪ್ಪಾ ಎಂದು ಗುಣುಗುಟ್ಟುತ್ತಿರುವರು. ಕಟ್ಟಿಗೆ ತುಂಬಿಸಿದ ಗಾಡಿಗೆ ನಾಲ್ಕಾಣೆ ಎಂಟಾಣೆ ಸುಂಕ ಇದ್ದರೂ, ಅದಕ್ಕಿಂತ ಹೊರೆ ಒಂದಕ್ಕೆ ೬ ಪೈ ಜಾಸ್ತಿ ಆಯಿತು. ತಿಂಗಳಿಗೆ ೫೦ ರೂಪಾಯಿ ಹುಟ್ಟು ಉಳ್ಳವನಿಗೆ ೬ ತಿಂಗಳಿಗೆ ೮ ಆಣೆ ಟೋಲ್ ಅಂದರೆ ಸರಾಸರಿ ಲೆಖ್ಖಮಾಡಿದರೆ ಹೊರೆಗೆ ೬ ಪೈ ಸುಂಕವೆ ಜಾಸ್ತಿ ಆಗುತ್ತದೆ.

ಮತ್ತು ಇನ್ನೊಂದು ಸೂಚನೆ ಅತ್ಯಗತ್ಯವಾದದ್ದು. ನಮ್ಮ ಜಿಲ್ಲೆಯ ಮಂಗಳೂರು ಉಪ್ಪಿನಂಗಡಿ ತಾಲೂಕು ಬಿದಿರಿಗೆ ತವರು ಮನೆಯಾಗಿ ಇಲ್ಲಿಂದ್ಲೆ ಬೇಕಾದ ಕಡೆಗೆ ಹೋಗುತಿತ್ತು. ಬಿದಿರಿನ ಕ್ರಯ ಮುಂಚೆ ನೂರಕ್ಕೆ ೨೦ ರೂಪಾಯಿ ಅಂದಾಜು ಕ್ರಯವಿತ್ತು. ಈಗೀಗ ನೂರಕ್ಕೆ ಎಷ್ಟು ರೂಪಾಯಿ ಆದರೂ ಬಿದಿರೇ ಇಲ್ಲ. ಉಪ್ಪಿನಂಗಡಿ ಅತ್ತಕಡೆಯಲ್ಲಿರುವ ಬಿದಿರಿಗೆ ರಾಜಾಂದಹೋಗಿ ಅಂದರೆ ಹೂಹೋಗಿ ಭತ್ತ ಆದೊಡನೆ ಬಿದಿರು ಎಲ್ಲಾ ನಾಶವಾಗುವುದು, ಬಳಿಗೆ ಅತ್ತಕಡೆ ಬಿದಿರು ನಾಶವಾಗಿ ಅಲ್ಲಿಂದ ಬರುವುದಿಲ್ಲ. ಇಲ್ಲಿ ಅಲ್ಲಲ್ಲಿ ಇದ್ದ ಬಿದಿರುಹಿಂಡಲಿನಿಂದ ದಿನಕ್ಕೆ ನೂರಾರು ಹೊರೆ ಕಳಲೆ ಮಾರಲಿಕ್ಕೆ ತಂದು ಮಂಗಳೂರು ವರೆಗೆ ಹೋಣಿಯಲ್ಲೋ ಮೋಟಾರಿನಲ್ಲೋ ಕೊಂಡುಹೋಗಿ ಲಾಭಕ್ಕೆ ಮಾರುವವರೇ ಕೆಲವು ವ್ಯಾಪಾರಸ್ಥರು ಇದ್ದಾರೆ. ಹೀಗೆ ಪರ್ಮಿಟ್ ಇಲ್ಲದೆ ಕಳಲೆ ತೆಗೆದು ಮಾರುವ ಕ್ರಮವನ್ನು ರದ್ದು ಮಾಡಿ ಪರ್ಮಿಟ್ ಪಡೆದು ಕಳಲೆ ಒಯ್ಯೋಣವಾಗಬೇಕೆಂತ ರೂಲು ಜಾರಿಗೆ ಬರುವಂತೆ ಮಾಡುವುದು ಅಗತ್ಯ. ಹೀಗೆ ಮಾಡದಿದ್ದರೆ ಬಡವರಿಗೆ ಗುಡಿಸಲು ಆದರೂ ಕಟ್ಟುವರೆ ಬಿದಿರಿನ ಸಲಿವು ಸಿಕ್ಕಲಾರದು. ಆದ್ದರಿಂದ ಮಾನ್ಯ ಮೆಂಬರರು ಬಡವರ ಕಡೆಗೆ ತಮ್ಮ ಸಹಾನುಭೂತಿಯನ್ನು ತೋರಿಸಬೇಕಾಗಿ ಕೋರಿಕೆ.

ಹಿಂಸಾ-ಅಹಿಂಸೆಗಳ ಮರ್ಯಾದೆ.

ಹಿಂಸೆ ಎಂದರೇನು, ಅಹಿಂಸೆ ಎಂದರೇನು ಎಂಬುದನ್ನು ಹಿಂದಿನ ಲೇಖದಲ್ಲಿ ತೋರಿಸಿದ್ದಾಯಿತು. ಇವುಗಳಲ್ಲಿ ಯಾವುದಾದರೂ ಒಂದು ಗಡಿ ದಾಟಿದರೆ ಹೇಗೆ ಅನವಸ್ಥೆಯುಂಟಾಗುತ್ತದೆ ಎಂಬುದನ್ನು ಈಗ ಚರ್ಚಿಸಬೇಕಾಗಿದೆ.

ಅಭ್ಯುದಯ ಮತ್ತು ನಿಶ್ರೇಯಸ್ಸು ಇವೆರಡನ್ನು ಸಾಧಿಸುವುದು ಮನುಷ್ಯನ ಕರ್ತವ್ಯವು. ಅಭ್ಯುದಯವೆಂದರೆ ಈ ಲೋಕದ ಸುಖ. ನಿಶ್ರೇಯಸ್ಸುವೆಂದರೆ ಮೋಕ್ಷ. ಈ ಲೋಕದ ಸುಖವನ್ನು ಸಾಧಿಸಿ ಮೋಕ್ಷವನ್ನು ಪಡೆದರೆ ಮಾನವನ ಇತಿಕರ್ತವ್ಯತೆಯು ಸಾಂಗವಾಗಿ ಕೊನೆಗಂಡಿತೆಂದಾಗುವುದು. ಧರ್ಮಪ್ರವರ್ತಕ ಯಾವ ಆಚಾರ್ಯರಾದರೂ ಈ ಎರಡನ್ನೆ ಸಾಧಿಸಲು ಉಪದೇಶಿಸುವರು. ಈ ಎರಡೂ ಕರ್ತವ್ಯಗಳನ್ನು ಸಾಧಿಸುವಾಗ ಧರ್ಮಾನುಯಾಯಿಯಾದ ಮನುಷ್ಯನ ಮುಂದೆ ಹಿಂಸಾಹಿಂಸೆಗಳ ಒಗಟು ಬಂದು ನಿಲ್ಲುವುದು. ಧರ್ಮಾನುಯಾಯಿಯೆಂದ ಮನುಷ್ಯನೆಂದು ಹೇಳುವ ಕಾರಣವೇನೆಂದರೆ, ಧರ್ಮದಲ್ಲಿ ಪ್ರತಿಪಾದಿಸಲ್ಪಟ್ಟ ಪುಣ್ಯ, ಪಾಪ, ಪರಲೋಕ, ಈಶ್ವರ, ಮೋಕ್ಷ ಈ ಐದು ಸಂಗತಿಗಳಲ್ಲಿ ವಿಶ್ವಾಸವಿಲ್ಲದ ನಾಸ್ತಿಕನು ಹಿಂಸಾಹಿಂಸೆಗಳನ್ನಾಗಲಿ, ಸತ್ಯಾಸತ್ಯಗಳನ್ನಾಗಲಿ, ಸ್ತೇಯಾಸ್ತೇಯಗಳನ್ನಾಗಲಿ (ಕದಿಯುವುದು, ಕದಿಯದಿರುವುದು) ಹೆಚ್ಚಿನ ಪಟ್ಟಿಗೆ ಮನ್ನಿಸನು. ಇಂದ್ರಿಯಾತೀತವಾದ ಈಶ್ವರ ಮೋಕ್ಷಾದಿಗಳನು ಅವನು ನಂಬದವನಾದ ಕಾರಣ, ಹಿಂಸೆ, ಅಹಿಂಸೆ ಮುಂತಾದವನ್ನು ಅಷ್ಟೊಂದು ಶ್ರದ್ಧೆಯಿಂದ ಗಮನಿಸನು. ಆದರೂ ಅವನಿಗೆ ಸಮಾಜ ಹಿತ, ರಾಷ್ಟ್ರಹಿತ ಇವುಗಳನ್ನು ಅಲ್ಲಗಳೆಯಲು ಸಾಧ್ಯವಿಲ್ಲವೆಂದು ಹೇಳಬೇಕು. ಕಾರಣ, ಆ ನಾಸ್ತಿಕನು ಕೇವಲ ಸ್ವಾರ್ಥಪರನಾಗಿ ಹಿಂಸೆ, ಅಸತ್ಯ, ಸ್ತೇಯ ಇವುಗಳನ್ನು ಯಾವ ನಿರ್ಬಂಧವೂ ಇಲ್ಲದೆ ಆಚರಿಸಹತ್ತಿದರೆ ಸಮಾಜಘಟಕರಾದ ಇತರರಿಗೆ ಇವನ ಕೃತ್ಯದಿಂದ ಅನರ್ಥಗಳು ಉತ್ಪನ್ನವಿಸುತ್ತವೆ. ಆಗ ಅವರು ಅವನನ್ನು ಪ್ರತಿಕರಿಸಲೆ ಬೇಕಾಗುವುದು. ಎಂದ ಮೇಲೆ ಆ ನಾಸ್ತಿಕನು ಈ ಮೇರೆಗೆ ತನಗಾಗಿ ಅಲ್ಲವಾದರೂ ಪರರಿಗಾಗಿ ಸತ್ಯ, ಅಹಿಂಸಾ, ಅಸ್ತೇಯ ಇತ್ಯಾದಿ ನೀತಿನಿಯಮಗಳನ್ನು ಅನುಸರಿಸಬೇಕಾಗುತ್ತದೆ. ನಾಸ್ತಿಕನಿಗೆ ಸಮಾಜರಕ್ಷಣವು ಈ ರೀತಿಯಿಂದ ಅಪರಿಹಾರ್ಯವಾಗುವದಾದರೆ ಧರ್ಮಾನುಯಾಯಿಗೆ ಸಮಾಜರಕ್ಷಣವೂ ಬೇಕು, ಆತ್ಮೋದ್ಧಾರವೂ ಬೇಕು. ಈ ದೃಷ್ಟಿಯಿಂದ ವಿಚಾರಿಸುವಾಗ ಸಮಾಜರಕ್ಷಣವು ಆಸ್ತಿಕನಾಸ್ತಿಕ ಈ ಉಭಯರಿಗೂ ಅವಶ್ಯವೆಂಬುದನ್ನು ಯಾರೂ ಅಲ್ಲಗಳೆಯಲಿಕ್ಕಿಲ್ಲ.

ಸಮಾಜರಕ್ಷಣವು ವೈಯಕ್ತಿಕ ಅಭ್ಯುದಯದ ಸಮಷ್ಟಿರೂಪವು. ಒಬ್ಬನ, ಇಬ್ಬರ, ಮೂವರ, ಹತ್ತುಜನರ ಅಭ್ಯುದಯವುಂಟಾಗುವದೆಂದರೆನೆ ಸಮಾಜದ ಅಭ್ಯುದಯವು. ಮತ್ತು ಇದೇ ಸಮಾಜದ ಅಭ್ಯುದಯವು ಸಮಷ್ಟಿರೂಪದಿಂದ ಎಂದರೆ ಸಮುದಾಯರೂಪದಿಂದ ಸಮಾಜಸಂರಕ್ಷಣವಾಗಿದೆ. ಈ ಸಮಾಜಸಂರಕ್ಷಣವು ಹಿಂಸೆಯ ಅತ್ಯುತ್ಕಟತೆಯಿಂದಾಗಲಿ ಅಥವಾ ಅಹಿಂಸೆಯ ಶುದ್ಧಸ್ವರೂಪದಿಂದಾಗಲಿ (ಅಹಿಂಸೆಯ ಶುದ್ಧಸ್ವರೂಪವೆಂದರೆ ಹಿಂಸೆಯ ಅತ್ಯಂತ ಅಭಾವವೆಂದು ಮುಂಚಿನ ಲೇಖದಲ್ಲಿ ತೋರಿಸಿದೆ.) ಉಂಟಾಗುವುದಿಲ್ಲ. ಸುತ್ತುಮುತ್ತಲಿನ ಮಾನವಜಾತಿಯನ್ನು ಸಂಹರಿಸಿ ಹಿಂಸಾದೇವಿಯ ಹೊಟ್ಟೆಯನ್ನು ಅಖಂಡವಾಗಿ ತುಂಬಿಸಹತ್ತಿದರೆ ಸಮಾಜಸಂರಕ್ಷಣವು ಹೇಗುಂಟಾದೀತು? ಮಾನವ ಜಾತಿಯ ಸಂಗತಿ ಇರಲಿ, ಕಂಡಕಂಡ ಪಶುಪಕ್ಷಿಗಳನ್ನು ಹಿಂಸಿಸಹತ್ತಿದರಾದರೂ ಮಾನವನ ಅಭ್ಯುದಯವುಂಟಾದೀತೆ? ಮಾನವನ ಧರ್ಮ್ಯವಾದ ಪುರುಷಾರ್ಥಗಳಲ್ಲಿ ಒಂದಾದ ಅಭ್ಯುದಯವು ಮಾನವ ಜಾತಿಯನ್ನು ಹಿಂಸಿಸದೆ ಇರುವುದರ ಮೇಲೆ ಹೇಗೆ ಅವಲಂಬಿಸಿರುವುದೊ ಹಾಗೆಯೆ ಇತರ ಪ್ರಾಣಿಗಳನ್ನು, ಯಾಕೆ ವನಸ್ಪತಿ ಸಸ್ಯಾದಿಗಳನ್ನು ಕೂಡ ಹಿಂಸಿಸದೆ ಇರುವುದರ ಮೇಲೆಯೂ ಆಧರಿಸಿಕೊಂಡಿರುವುದು. ಕಾರಣ, ಈ ಲೋಕದ ಸಂಬಂಧವು ಪರಸ್ಪರರಲ್ಲಿ ನಿಬಿಡವಾಗಿ ಉಂಟು. ಮಾನವನ ಅಭ್ಯುದಯಕ್ಕೆ ಉಳಿದದ್ದರ ಅಭಿವೃದ್ಧಿಯು ಅವಶ್ಯವು. ಉಳಿದದ್ದರ ಅಭಿವೃದ್ಧಿಗೆ ಮಾನವನ ಅಭ್ಯುದಯವು ಅಗತ್ಯವು. ಸಾರಾಂಶ ಹಿಂಸೆಯ ಅತ್ಯುತ್ಕಟತೆಯು ಮನುಷ್ಯನ ಪುರುಷಾರ್ಥಕ್ಕೆ ಸಾಧಕವಲ್ಲ.

ಇದು ಹೇಗೊ ಹಾಗೆಯೆ ಅಹಿಂಸೆಯ ಶುದ್ಧಸ್ವರೂಪವು ಸಹ ಅವನ ಅಭ್ಯುದಯಕ್ಕೆ ಸಾಧಕವಲ್ಲ. ಹೀಗೆನ್ನುವುದಕ್ಕಿಂತ ಯಥಾರ್ಥವಾಗಿ ಹೇಳುವುದಾದರೆ ಅಹಿಂಸೆಯ ಶುದ್ಧಸ್ವರೂಪವೆ ಈ ಲೋಕದಲ್ಲಿ ಸಾಧ್ಯವಿಲ್ಲ. ಆಧುನಿಕ ಶಾಸ್ತ್ರಜ್ಞರ ಸಂಶೋಧನದ ಮೇರೆಗೆ ಇಡಿ ಸೃಷ್ಟಿಯೆ ಹಿಂಸಾಪ್ರಧಾನವಾಗಿದೆ. ಒಂದು ಅಣುಜೀವಿಯು ಇನ್ನೊಂದನ್ನು ತಿಂದು ಬದುಕುತ್ತಿದೆ. ನಮ್ಮ ದೃಷ್ಟಿಗೆ ಅಗೋಚರವಾಗಿರತಕ್ಕ ಸೂಕ್ಷ್ಮತಮವಾದ ಚೈತನ್ಯದ ಅಣುಗಳು ದೊಡ್ಡದೊಡ್ಡ ಹುಲಿಯಂತೆ ಇತರ ಅಣುಗಳನ್ನು ಕೊಲ್ಲುತ್ತ ಜೀವಿಸುತ್ತಿರುವವು! ಪರಿಶುದ್ಧವಾದ ನೀರು ಜೀವರಸವಾಗಿಯೆ ಉಂಟು. ಅವಿರತವಾಗಿ ನಡೆದಿರುವ ಶ್ವಾಸೋಚ್ಛ್ವಾಸಗಳಲ್ಲಿ ಎಷ್ಟೊ ಅಣುಗಳ ಹಿಂಸೆಯಾಗುತ್ತಿದೆ. ಇದನ್ನೆ ನಮ್ಮ ಪ್ರಾಚೀನ ಶಾಸ್ತ್ರಕಾರರು ರೂಪಾಂತರದಿಂದ ಅನುವಾದಿಸಿರುವರು. ಛಾಂದೋಗ್ಯೋಪನಿಷತ್ತಿನಲ್ಲಿ ಪ್ರಾಣನಿಗೂ ಮನೋವಾಗಾದಿ ಇತರ ಇಂದ್ರಿಯಗಳಿಗೂ ನಡೆದಿರುವ ಸಂವಾದದಲ್ಲಿ ಪ್ರಾಣನು ತನಗೆ ಆಹಾರವು ಯಾವುದು ಎಂದು ಅವುಗಳೊಡನೆ ಕೇಳಿದಾಗ ಅವು 'ನಾಯಿ, ಪಕ್ಷಿ ಇತ್ಯಾದಿ ಪ್ರಾಣಿಗಳು ಯಾವ ಅನ್ನವನ್ನು ಸೇವಿಸುತ್ತಿದ್ದಾವೊ ಅದೆ ನಿನ್ನದೂ ಆಗಿದೆ, ಈ ಎಲ್ಲವೂ ನಿನ್ನ ಅನ್ನವೆ' ಎಂದು ಉತ್ತರವನ್ನು ಕೊಟ್ಟಿರುವವು. ಬೃಹದಾರಣ್ಯಕದಲ್ಲಿಯೂ ಇದೆ ಸಂಗತಿಯು ವರ್ಣಿಸಲ್ಪಟ್ಟಿದೆ. ಚತುಷ್ಪಾದ ಪ್ರಾಣಿಗಳನ್ನು ದ್ವಿಪಾದ ಪ್ರಾಣಿಗಳೂ, ಅವುಗಳಲ್ಲಿ ಇಂತಿಂಥವು ಇಂತಿಂಥವುಗಳನ್ನು ತಿಂದು ಜೀವಿಸುತ್ತಿವೆ ಎಂಬ ಉಲ್ಲೇಖವು ಪ್ರಾಚೀನ ಗ್ರಂಥಗಳಲ್ಲಿ ಇದೆ. "ಜೀವೋ ಜೀವಸ್ಯ ಜೀವನಮ್" ಎಂದು ಭಾಗವತದಲ್ಲಿ ಹೇಳಿದುದು ಎಲ್ಲರಿಗೆ ತಿಳಿದ ವಿಷಯವೆ ಸರಿ. ಪ್ರಾಚೀನ ವಾಙ್ಮಯದಲ್ಲಿ ಅಥವಾ ಧರ್ಮಶಾಸ್ತ್ರದಲ್ಲಿ ಈ ರೀತಿಯ ಯಾವ ಉಲ್ಲೇಖಗಳಿವೆಯೊ ಅವು ಕಲ್ಪಿತವಲ್ಲ, ಲೋಕಸ್ವಭಾವದ ಕಥನಗಳಾಗಿವೆ. ಜಗದೀಶ ಚಂದ್ರಬೋಸರ ವನಸ್ಪತಿಯೊಳಗಿನ ಜೀವದ ಪ್ರಯೋಗವು ಯಾವಾಗ ಲೋಕದ ಮುಂದೆ ಸಿದ್ಧವಸ್ತುಗೆ ಬಂತೊ ಆಗ ಶುದ್ಧ ವನಸ್ಪತ್ಯಾಹಾರಿಗೂ ಕೂಡ ತಾನು ಅಹಿಂಸಕನೆಂದು ಅನ್ನಿಸಿಕೊಳ್ಳುವುದು ಸತ್ಯಕ್ಕೆ ದೂರವಾದ್ದೆಂದು ತೋರುತ್ತದೆ! ಅಂತು ಶುದ್ಧ ಅಹಿಂಸೆಯ ಸ್ವರೂಪವು ಅಸಾಧ್ಯವೆ ಸರಿ.

ಶುದ್ಧ ಅಹಿಂಸೆಯು ಅಸಾಧ್ಯವೆಂದಾದ ಮೇಲೆ ನಾವು ಬೇಕಾದಂತೆ ಹಿಂಸೆಯನ್ನು ಯಾಕೆ ಮಾಡಬಾರದು ಎಂದು ಹೇಳಿ ಹಿಂಸೆಯು ದಕ್ಷಿಣ ಧ್ರುವಕ್ಕೆ ಹೋಗಲು ಯೋಗ್ಯವಾದರೂ ಯುಕ್ತಿಸಬಹುದು. ಅದೂ ಕೂಡ ಅನರ್ಥಕರವೆ ಎಂದು ತಿಳಿದು ಶಾಸ್ತ್ರಕಾರರು ಮಾನವನ ಅಭ್ಯುದಯಕ್ಕಾಗಿ ಅಹಿಂಸೆಗೆ ಅಪವಾದವನ್ನು ಹೇಳಿರುವರು. ಯಜ್ಞದೊಳಗಿನ ಪಶುಹಿಂಸೆಯು ಹಿಂಸೆಯಲ್ಲ, ಇಂತಿಂಥ ಐದು ಪಂಚನಖ ಪ್ರಾಣಿಗಳನ್ನು ಸೇವಿಸಬಹುದು, ಆಪತ್ಕಾಲದಲ್ಲಿ ಆತ್ಮ ಸಂರಕ್ಷಣಕ್ಕಾಗಿ ಇಂತಿಂಥ ಹಿಂಸೆಯನ್ನಾದರೂ ಮಾಡಬಹುದು ಎಂಬಿತ್ಯಾದಿ ರೂಪದಿಂದ ಅಹಿಂಸೆಗೆ ಅಪವಾದವನ್ನು ತೋರಿಸಿದ್ದಾರೆ. ಛಾಂದೋಗ್ಯೋಪನಿಷತ್ತಿನಲ್ಲಿ ಅಷ್ಟಮಾಧ್ಯಾಯವನ್ನು ಮುಗಿಸುವಾಗ "ಅಹಿಂಸನ್ ಸರ್ವಾಣಿ ಭೂತಾನಿ ಅನ್ಯತ್ರ ತೀರ್ಥೇಭ್ಯಃ" ಎಂದರೆ ಶಾಸ್ತ್ರದಲ್ಲಿ ಹೇಳಿದ ಸ್ಥಳಗಳನ್ನು ಬಿಟ್ಟು ಬೇರೆ ಕಡೆಗಳಲ್ಲಿ ಹಿಂಸಿಸಕೂಡದು ಎಂದು ವಿಧಿಪೂರ್ವಕವಾದ ಹಿಂಸೆಯನ್ನು ಹಿಂಸೆಯ ಸಾಲಿನಲ್ಲಿ ಇಡಲಿಲ್ಲ.

ಯಾಕೆ ಇಡಲಿಲ್ಲವೆಂದು ಯಾರಾದರೂ ಕೇಳಿದರೆ ಒಂದು, ಶುದ್ಧ ಹಿಂಸೆಯು ಅಶಕ್ಯವು. ಇನ್ನೊಂದು, ಸಮಾಜ ಸಂರಕ್ಷಣವು ಅವಶ್ಯಕವು. ಅದ್ದರಿಂದ ಅಹಿಂಸೆಗೆ ಕೆಲವು ಮಾತ್ರ ಅಪವಾದಗಳನ್ನು ಹೇಳಿ ಅವರು ಇತರ ಸಮೂಹಿಯ ಹಿಂಸೆಯನ್ನು ನಿಷೇಧಿಸಿದ್ದಾರೆ. ಮತ್ತು ಅದ್ದರಿಂದಲೆ ಈ ಹೊತ್ತಿಗಾದರೂ ಸಮಾಜ ಸಂರಕ್ಷಣದ ಉದ್ದೇಶಕ್ಕೆ ಭಂಗ ಬರಬಾರದೆಂಬುದರಿಂದಲೆ ಅಹಿಂಸೋಪದೇಶದಲ್ಲಿ ಅದರ ಶಿಖರವನ್ನು ಮೀರಬಾರದೆಂದು ವಿಚಾರವಂತರು ಹೇಳುತ್ತಿದ್ದಾರೆ. ಅಹಿಂಸೆಯ ಅತ್ಯುತ್ಕಟತೆಯನ್ನು ಉಪದೇಶಿಸಿ ಜನತೆಯಲ್ಲಿರುವ ಪೌರುಷವನ್ನು ಭಂಗಿಸಬಾರದು, ಅದರಿಂದ ಅನವಸ್ಥಾಪ್ರಸಂಗ ಮಾತ್ರವಲ್ಲ, ರಾಷ್ಟ್ರಹಾನಿಯೆ ಬಂದು ಒದಗುವುದು. ಒಬ್ಬನು ದುಷ್ಟತನವನ್ನು ನಡಿಸಿದರೆ, ನಿಷ್ಕಾರಣವಾಗಿ ಬಂದು ಪೀಡಿಸಿದರೆ, ಕೊಲ್ಲಲು ಬಂದರೆ, ಧರ್ಮದ ಮೇಲೂ, ತಂದೆ ತಾಯಿಗಳ ಮೇಲೂ, ಅಕ್ಕತಂಗಿಯಂದಿರ ಮೇಲೂ ಕೈಯಿಕ್ಕಲು ಬಂದರೆ ಅಥವಾ ಸಟೆಯಿಂದ ಇಲ್ಲವೆ ಕಪಟದಿಂದ ವಂಚಿಸಿ ಸರ್ವಸ್ವಾಪಹಾರವನ್ನು ಮಾಡಬಂದರೆ ನೀವು ಅದನ್ನೆಲ್ಲ ಶಾಂತ ರೀತಿಯಿಂದ ಸಹಿಸಿಕೊಂಡು ನಿಮ್ಮ ಈ ಅಹಿಂಸೆಯಿಂದ ಪರಮಾತ್ಮನನ್ನು ಸಂತೋಷಗೊಳಿಸಿರಿ ಎಂಬುದಾಗಿ ಅನೇಕ ವಿಧದಿಂದ ಮಾಡಲ್ಪಡುವ ಅಹಿಂಸೆಯ ಕರ್ಣಮಧುರವಾದ ಮಹೋಪದೇಶವು ಬಹು ಉಚ್ಚ ತರಗತಿಯದ್ದೊ, ಅಧ್ಯಾತ್ಮಿಯದ್ದೊ ಹೌದಾದರೂ ಅಭ್ಯುದಯಾಕಾಂಕ್ಷಿಯಾದ ಸಮಾಜದ ಹಿತಕ್ಕೆ ಘಾತಕವಾಗಿದೆ. ಧರ್ಮ ಶಾಸ್ತ್ರಕಾರರಾಗಲಿ, ನೀತಿಜ್ಞರಾಗಲಿ. ಮೇಲೆ ತೋರಿಸಿದ ಸಂದರ್ಭಗಳಲ್ಲಿ ಅಹಿಂಸಾ, ಅನತ್ಯಾಚಾರ ಮುಂತಾದ ರಬ್ಬರನ್ನು ಉದ್ದಕ್ಕೆ ಎಳೆಯುತ್ತ ಕೂಡ್ರದೆ ಅದಕ್ಕದಕ್ಕೆ ಸರಿಯಾದ ಪ್ರತಿಕಾರವನ್ನು ಮಾಡಬೇಕು ಎಂಬುದಾಗಿ ನಿರ್ಣಯಿಸಿರುವರು. ಮಹಾಭಾರತದ ಶಾಂತಿಪರ್ವದಲ್ಲಿ ಭೀಷ್ಮನು "ಯಸ್ಮಿನ್ ಯಥಾವರ್ತತೇಯೋ ಮನುಷ್ಯಃ ತಸ್ಮಿಂಸ್ತಥಾ ವರ್ತಿತವ್ಯಂ ಸಧರ್ಮಃ ಮಾಯಾಚಾರೋ ಮಾಯಯಾ ಬಾಧಿತವ್ಯಃ" ಎಂಬುದಾಗಿ ಹೇಳಿದ್ದಾನೆ. ಯಾವಾತನು ಯಾವ ರೀತಿಯಿಂದ ನಡಕೊಳ್ಳುವನೊ ಅವನಲ್ಲಿ ಆ ರೀತಿಯಿಂದ ನಡಕೊಳ್ಳುವುದೆ ಧರ್ಮವು; ಕಪಟನನ್ನು ಕಾಪಟ್ಯದಿಂದ ಜಯಿಸಬೇಕು ಎಂಬುದಾಗಿ ಆ ಶ್ಲೋಕದ ತಾತ್ಪರ್ಯವು. ಎಂದ ಮೇಲೆ ಅಹಿಂಸೆಗಾದರೂ ಒಂದು ಗಡಿ ಇದೆ ಎಂಬುದು ಸ್ಪಷ್ಟವಾಗುತ್ತದೆ. ಸಾರಾಂಶ ಅಭ್ಯುದಯ ಮತ್ತು ಸಮಾಜ ಸಂರಕ್ಷಣ ಇವುಗಳಿಗನುಸಾರವಾಗಿ ಹಿಂಸೆ-ಅಹಿಂಸೆಗಳ ಮರ್ಯಾದೆಯನ್ನು ಕಲ್ಪಿಸಿಕೊಳ್ಳಬೇಕಾಗುತ್ತದೆ.

ಆತ್ಮಾರಾಮಶಾಸ್ತ್ರಿ ಒಡ್ಲಮನೆ.

ಶ್ರೀಯುತ
ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯರಿಂದ
ರಚಿತವಾದ

ರಾಷ್ಟ್ರಗೀತಾರತ್ನಾಕರ ೦-೮-೦.
ಲೀಲೆ ೦-೧-೦.

ಅಭಿಪ್ರಾಯಗಳು:—

ಆಧುನಿಕ ಕರ್ಣಾಟಕ ವಾಙ್ಮಯ ಕ್ಷೇತ್ರದಲ್ಲಿ ಭೀಷ್ಮಾಚಾರ್ಯರೆನಿಸಿದ
ಪ್ರಾಕ್ತನ ವಿಮರ್ಶವಿಚಕ್ಷಣ, ರಾವ್ ಬಹದ್ದೂರ್
ಶ್ರೀಮಾನ್ ಆರ್. ನರಸಿಂಹಾಚಾರ್ಯ,
ಎಮ್. ಎ, ಎಮ್. ಆರ್. ಎ. ಎಸ್.
ಬೆಂಗಳೂರು.

ಇವರು ಬರೆಯುತ್ತಾರೆ:—

ಮ|| ರಾ|| ಶ್ರೀಮಾನ್ ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯರವರ ಸನ್ನಿಧಿಯಲ್ಲಿ, ವಿಜ್ಞಾಪನೆಗಳು. ಉಭಯ ಕುಶಲೋಪರಿ.

ತಾವು ಅಭಿಮಾನದೊಡನೆ ಕಳುಹಿಸಿದ ಪುಸ್ತಕಗಳೂ ಪತ್ರವೂ ತಲಪಿದವು. … … … …

ರಾಷ್ಟ್ರಗೀತಾರತ್ನಾಕರ, ಲೀಲೆ ಈ ಗ್ರಂಥಗಳನ್ನು ಓದಿದೆನು. ಮೊದಲನೆಯದು ನಿಮ್ಮ ದೇಶಾಭಿಮಾನವನ್ನು ಘಂಟಾಘೋಷವಾಗಿ ಕನ್ನಡಿಗರಿಗೆ ಪ್ರಕಟಿಸುವುದಲ್ಲದೆ ಅವರಿಗೆ ದೇಶದಲ್ಲಿಯೂ ದೇಶಬಾಂಧವರಲ್ಲಿಯೂ ಆದರವನ್ನು ಹುಟ್ಟಿಸುವುದಕ್ಕೆ ಮುಖ್ಯವಾದ ಉಪಕರಣವಾಗಿದೆ. ಕವಿತೆಯೂ ಸರಲವಾಗಿ ಹೃದಯಂಗಮವಾಗಿದೆ.

ಲೀಲೆಯಲ್ಲಿ ನಿಮ್ಮ ಭಕ್ತಿರಸವು ತುಂಬಿ ತುಳುಕುತ್ತಿರುವುದು. ಗಂಭೀರವಾದ ಭಾವಗಳನ್ನು ಸುಲಭವಾದ ಶೈಲಿಯಲ್ಲಿ ಮನೋರಂಜಕವಾಗುವಂತೆ ತಿಳಿಸುವುದು ಸುಲಭಸಾಧ್ಯವಲ್ಲ. ಈ ಕೆಲಸವನ್ನು ನೀವು ಲೀಲಾಜಾಲವಾಗಿ ಮಾಡಿರುವಿರಿ. ಈ ಸರಸಕವಿತಾಶಕ್ತಿ ಶ್ಲಾಘಾರ್ಹವಾಗಿದೆ.

ಮುಖ್ಯವಾಗಿ ನಿಮ್ಮ ದೈವಭಕ್ತಿ, ದೇಶಾಭಿಮಾನ, ಭಾಷಾಭಿಮಾನ ದೇಶಬಾಂಧವ ಪ್ರೀತಿ, ಇವು ಸ್ತೋತ್ರಾರ್ಹವಾಗಿವೆ.

ಇಂತೀ ವಿಜ್ಞಾಪನೆ.
ರಾ. ನರಸಿಂಹಾಚಾರ್ಯ.

ಮಾತ್ರವಲ್ಲದೆ — ಮೈಸೂರು "ಆಸ್ಥಾನ ಮಹಾ ವಿದ್ವಾನ್" "ಕವಿತಿಲಕ" ಶ್ರೀ ಹೋಸಲೆ ಅಯ್ಯಾಶಾಸ್ತ್ರಿಗಳವರೇ ಮೊದಲಾದ ಅನೇಕಸುಪ್ರಸಿದ್ಧ ವಿದ್ವನ್ಮಣಿಗಳ ಮತ್ತು ಬಿತ್ತ ಕರ್ಣಾಟಕದ ಶ್ರೇಷ್ಠ ಪತ್ರಿಕೆಗಳ ಅತ್ಯುತ್ತಮಾಭಿಪ್ರಾಯಗಳನ್ನು ಪಡೆದಿರುವ ಅದ್ವಿತೀಯವಾದ,

"ರಾಷ್ಟ್ರಗೀತಾರತ್ನಾಕರ," — "ಲೀಲೆ,"

ಎಂಬ ಗ್ರಂಥರತ್ನಗಳನ್ನು ದೇಶಬಂಧುಗಳೆಲ್ಲ — ಓದಿ ಮೆಚ್ಚಿಕೊಳ್ಳಿರಿ.

ಟಿ. ಎಮ್. ದಾಸಪ್ಪಭಟ್ಟ ಎಂಡ್ ಸನ್ಸ್ ಮಂಗಳೂರು. } ಅಥವಾ { ಶಾರದಾ ಛಾಪಖಾನೆ, ಮಂಗಳೂರು.

ಆರೋಗ್ಯ ಚಂದ್ರಿಕೆ.

ಮದ್ರಾಸ್.

ಸಂಪಾದಕರು: ಡಾಕ್ಟರ್ ಯು. ರಾಮರಾವ್, ಎಲ್. ಎಮ್. ಸಿ. ಎಫ್. ಎಮ್. ಯು. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಚಿಕಿತ್ಸದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವುದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ.

ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ.

ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವುದು.

'ಹೆಲ್ತ್' ಎಂಬ ನಮ್ಮ ಇಂಗ್ಲಿಷ್ ಮಾಸಪತ್ರಿಕೆಯನ್ನೋದಿ ಸಂತೋಷಿಸಿದ ಅನೇಕ ದೊಡ್ಡ ಮನುಷ್ಯರ ಪ್ರೋತ್ಸಾಹದ ಮೇಲೆ ಈ ಕನ್ನಡ ಪತ್ರಿಕೆಯನ್ನು ಹೊರಡಿಸಿದೆ.

ಅದರ ಸಂಪುಟ ೨ ಮತ್ತು ೧೧ನೇಯ ನವಂಬರ ೧೯೨೪ ಸಂಚಿಕೆಯಲ್ಲಿ ಕಾಣಿಸಿರುವ ವಿಷಯಗಳು.

ಮುಖಚಿತ್ರ:—ಪರ್ವತವಾಸಿಯಾದ ಒಬ್ಬ ರೂಪವತಿ.
ಶ್ವಾಸಕ್ರಮ ಅಥವಾ ಪ್ರಾಣಾಯಾಮ,
ಹುಣಿಸೇಹಣ್ಣಿನ ಆಹಾರಗುಣಗಳು ಮತ್ತು ಔಷಧಗುಣಗಳು.
ಕಾಲುನಡೆಯೇ ಉತ್ತಮವಾದ ವ್ಯಾಯಾಮವು.
ಜೇನಿನಲ್ಲಿರುವ ಗುಣಗಳು.
ಹಲ್ಲುಗಳ ರಚನೆ, ಪ್ರಯೋಜನ, ಕೆಲಸ ಮುಂತಾದವು.
ಮದಪ್ರಾಶಕಗಳಿಂದ ಆರೋಗ್ಯಕ್ಕೆ ಉಂಟಾಗತಕ್ಕ ಹಾನಿ.
ಅಂಗಸಾಧನೆ ಮತ್ತು ಬುದ್ಧಿವ್ಯವಸಾಯ (ವಿದ್ಯಾಭ್ಯಾಸ).
ಗಾಯಗಳು, ಮತ್ತು ಉಳುಕು ಮುಂತಾದವುಗಳೂ ಅವುಗಳ ಚಿಕಿತ್ಸೆ
ನವನಾಗರಿಕ ಪ್ರಪಂಚಕ್ಕೆ ಸಹಜವಾದ ಮೂರು ಕೆಡುಕುಗಳು.
ಒಬ್ಬ ಉಪವಾಸಿಯ ಅನುಭವ.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವವು. ಆರೋಗ್ಯಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ ರೂ. ೧-೮-೦; ಬಿಡುಪತ್ರಿಕೆ ಒಂದಕ್ಕೆ ರೂ. ೦-೨-೦ ಹಿಂದಿನ ಸಂಚಿಕೆಗಳು ಕೂಡ ದೊರಿಯುವವು.

ಚಂದಾದಾರರಾಗುವವರು ವಿ. ಪಿ. ಮೂಲಕವಾಗಿ ತರಿಸಿಕೊಳ್ಳುವುದಕ್ಕಿಂತಲೂ ಹಣವನ್ನು ಮುಂಗಡವಾಗಿ ಕಳುಹಿಸುವುದು ಲಾಭಕರ. ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು 'ಆರೋಗ್ಯ ಚಂದ್ರಿಕೆ'ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು.

ಪತ್ರವ್ಯವಹಾರಕ್ಕೆ: 'ಆರೋಗ್ಯ ಚಂದ್ರಿಕೆ'
೩೨೩ ತಂಬುಚೆಟ್ಟಿ ಬೀದಿ, ಮದ್ರಾಸ್.

ತುಳು ಪಾಡ್ದನಗಳು.

ದೊಬ್ಬಯರ್, ಕಲ್ಲುರ್ಟಿ-ಕಲ್ಕುಡೆ, ದೈಯ್ಯೊಂಗುಳು—ಕೋಡಕಿನಾರ್, ಮುಂಡತ್ತಾಯ ಪ್ರತಿ ಒಂದಕ್ಕೆ 2 ಆಣೆ. 11½ ಆಣೆ ಟಪ್ಪಾಲು ಚೀಟು ಕಳುಹಿಸಿದರೆ 5 ಪುಸ್ತಕಗಳು ಕೂಡಲೇ ಕಳುಹಿಸಲ್ಪಡುವವು.

ವಿಳಾಸ: ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಸಾರಸ್ವತ.

ಕನ್ನಡ ಮತ್ತು ಕೊಂಕಣಿ ಭಾಷೆಗಳಲ್ಲಿ ಕಳೆದ ವಿಜಯದಶಮೀ ದಿನದಿಂದ ಪ್ರತಿ ದಶಮಿಗೆ ಹೊರಡುವ ಪತ್ರಿಕೆ.

ವಿ. ಎಸ್. ಕಾಮತ್,
ಮೂಲ್ಕಿ, ವಾಮನ ಕುಡುವ } ಸಂಪಾದಕರು.

ಮತಸಂಸ್ಥೆ ಮತ್ತು ಸಮಾಜಕ್ಕೆ ಸಂಬಂಧಪಟ್ಟ ಇತರ ಸಂಸ್ಥೆಗಳ ಸುಸಂಘಟನ.
ಸಮಾಜದೊಳಗೆ ಅನ್ಯೋನ್ಯ ಸಾಧನೆ.
ಸ್ತ್ರೀಸಮಾಜಕ್ಕೆ ಉಪಯುಕ್ತವಾದ ವಿಷಯಗಳ ನಿರೂಪಣ
ಮತಭಾವನೆಗಳ ಉದ್ದೀಪನ ಇತ್ಯಾದಿ ಉದ್ದೇಶಗಳಿಂದ ಈ ಪತ್ರಿಕೆಯು ಹೊರಡಿಸಲ್ಪಡುವುದು. ಸಾರಸ್ವತ ಸಮಾಜವು ಇದಕ್ಕೆ ಪ್ರೋತ್ಸಾಹವನ್ನೀಯಬೇಕಾಗಿ ಪ್ರಾರ್ಥನೆ.

ಚಂದಾಹಣ ಅಂಚೆವೆಚ್ಚ ಕೂಡಾ ರೂ. ೧-೪-೦. ಪೋಷಕರು ರೂ. ೧೦-೦-೦. ಸಹಾಯಕರು ರೂ. ೫-೦-೦. ಮಾದರಿ ಸಂಚಿಕೆಯನ್ನು ಟಪ್ಪಾಲು ಖರ್ಚಿಗಾಗಿ ಅರ್ಧಾಣೆ ಸ್ಟಾಂಪು ಕಳುಹಿಸುವವರಿಗೆ ಉಚಿತವಾಗಿ ಕಳುಹಿಸುವೆವು.

ಕನ್ನಡ ನಾಡಿನಲ್ಲಿ ಪ್ರತಿ ಕಡೆಯಲ್ಲಿಯೂ
ಬಾತಮಿದಾರರು ಬೇಕು.

ಎಲ್ಲಾ ಪತ್ರವ್ಯವಹಾರಗಳನ್ನು ಕೆಳಗಿನ ವಿಳಾಸಕ್ಕೆ ನಡೆಸಬೇಕು.

ಯು. ನಾರಾಯಣನಾಯ್ಕ, ಕಾರ್ಯದರ್ಶಿ,
ಸಾರಸ್ವತ, ಉಡುಪಿ.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.
Authorised and fully paid
up Capital Rs. 300,000-0-0
Reserve and other sinking
Funds „ 259,000-0-0

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
ಅಧಿಕಾರಗೊಳಿಸಲ್ಪಟ್ಟು, ಪೂರ್ಣವಾಗಿ
ಕೊಟ್ಟ ಮೂಲಧನವು ರೂ. 300,000—0—0
ಕ್ಷೇಮನಿಧಿ ಮತ್ತು ಇತರ ಫಂಡುಗಳು
259,000—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳೋಣಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1925.

K. Venkat Rao,
Secretary

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಬೋಧಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಿಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಬೋಧಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೫೦ರಿಂದ ೬೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ೬ಕ್ಕೆ ೧—೪—೦, ೧೨ ಸೀಸೆಗೆ ೨—೬—೦, ೨೫ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲ ಪಂಡಿತರು,

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ,
ಮಂಗಳೂರು ಟಿವಣಿಗೆ ಮಾತ್ರ.

ವಿದ್ಯಾವಾಚಸ್ಪತಿ
ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ

"ಸಂಕ್ಷೇಪಗೀತೆ"

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ, ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದೆ ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೦. ಟಪ್ಪಾಲು ಖರ್ಚು ಕೂಡಿ ಆಣೆ ೧೧ನ್ನು ಮನಿಯಾರ್ಡರಿ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ೫ರಕ್ಕಿಂತ ಜಾಸ್ತಿ ಖರ್ಚು ತಗಲುವುದು. ರಖಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.

ಪುಸ್ತಕ ದೊರಿಯುವ ವಿಳಾಸ:—
ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು. ಮತ್ತು
ಕೆನರಾಸ್ ಮಿಶ್ಯನ್ ಬುಕ್ ಎಂಡ್ ಟ್ರೇಕ್ಟ ಡಿಪೋಜಿಟರಿ,
ಮಂಗಳೂರು.

ಕನ್ನಡಿಗರೆ! **ವಸಂತ.** ಕಣ್ಣೆರೆಯಿರಿ!

ಈಗಾಗಲೇ ಎರಡನೇ ಸಂಪುಟವು ಆರಂಭಿಸಲಿದೆ.

ಇತಿಹಾಸನಿಧಿ ಎಂದರೆ	ವಸಂತ
ಸಮಾಜಸುಧಾರಕನೆಂದರೆ	ವಸಂತ
ಕೈಗಾರಿಕೆಯ ಸಾಮ್ರಾಜ್ಯವೆಂದರೆ	ವಸಂತ
ಕರ್ಣಾಟಕ ಭಾಷಾಸೇವಕನೆಂದರೆ	ವಸಂತ
ದೇಶವಿದೇಶ ಬಂಧುವೆಂದರೆ	ವಸಂತ
ಕಾದಂಬರಿಗಳ ಭಂಡಾರವೆಂದರೆ	ವಸಂತ
ಚಿತ್ರಾಕರ್ಷ ಚಿತ್ರಶಾಲೆಯೆಂದರೆ	ವಸಂತ
ದೇಶಭಕ್ತನೆಂದರೆ	ವಸಂತ

ಇಂತಹ ವಸಂತನು ಯಾರಿಗೆ ಬೇಕು,
ಯಾರಿಗೆ ಬೇಡ?

48 (ಕ್ರೌನ್ ¼ ಘಟ ಸ್ಥಾಜಿನ) ಪುಟಗಳನ್ನು ಒಳ್ಳಿದ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3—4—0 ಮಾತ್ರ.

ವ್ಯವಸ್ಥಾಪಕ,
ವಸಂತ ಕಾರ್ಯಾಲಯ,
ಕುಂದಾಪುರ, ದಕ್ಷಿಣ ಕನ್ನಡ.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀಕಾಶೀ, ಗಯಾ, ಪ್ರಯಾಗ, ಹರಿದ್ವಾರ ಬದ್ರಿನಾರಾಯಣ ದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರ ಕಡೆಯಿಂದಅನುಭವ ತೆಗೆದು ಪ್ರತಿವಂದು ಸಿದ್ಧಮಾಡಿಕೊಂಡು ಬರೆದಿರುವರು. ೧ನೇದು ಮಂತ್ರಪ್ರಕರಣದಲ್ಲಿ ಮಂತ್ರ ಪಠಣದಿಂದಲೂ, ಮಂತ್ರಪ್ರಯೋಗದಿಂದಲೂ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವೂ ಇದೆ. ೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳು ಹೊರಡುವಿಕೆ, ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ. ೩ನೇದು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು. ೪ನೇದು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಟಾ ಸಹ, ಇವರಲ್ಲಿ ಉಂಟು. ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷದ ಮಾಡುವ ಕ್ರಮವನು ಚೆನ್ನಾಗಿ ಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಳಾಸವು ತಿಳಿಸಿರುವರು. ೫ನೇದು ಯಂತ್ರ ಪ್ರಕರಣದಲ್ಲಿ ವಶೀಕರಣ ಗ್ರಹಪೀಡಾ ನಿವಾರಣ ಭೂತಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು, ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರದಿರುವರು. ಈ ಗ್ರಂಥವು ಹತ್ತರ ಇದ್ದ ಬಳಿಕ ಎಲ್ಲಾ ದೇವಾನು ದೇವತೆಗಳು ಪ್ರತ್ಯಗಳೂ ವೈದ್ಯರೂ ಜೋತಿಷ್ಯರು, ಮಾಂತ್ರಿಕರು ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥ ಗ್ರಂಥವು ಯಾರು ಕಣ್ಣಿಂದ ನೋಡಿರಲಿಕ್ಕಿಲ್ಲಾ. ಪ್ರತಿಯಬರು ತರಿಸಿ ನೋಡಬೇಕೆಂದು ಇದರ ಬೆಲೆ ಸಹ ಕಡಿಮೆಮಾಡಿ ಇರುವವು. ೨—೮—೦ ಟಪ್ಪಾಲು ಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ ನಾಟಕ ಕಾವ್ಯ, ಕಥೆಗಳು, ಯಕ್ಷಗಾನ, ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ:—

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಸ್ಟ್ರೀಟ್, ಬಳ್ಳಾರಿ

Just Arrived OF **Fresh Consignment**

Best English Cycles.



REDUCTION IN PRICES.

Banger Cycles Model M. Made in Birmingham.
WITH DUNLOP OR BATES TYRES & TUBES ... @ Rs. 90—0—0
Barton Humber on Advance
WITH DUNLOP OR BATES TYRES & TUBES ... @ " 100—0—0
Senior Royal with B. S. A. Fitting.
WITH DUNLOP OR BATES TYRES & TUBES ... ...@ Rs. 145—0—0
Royal Saxon with B. S A. Fitting.
WITH DUNLOP OR BATES TYRES & TUBES ... ... @ Rs. 175—0—0

All the above Cycles include pump and tools.

BROOKES PATEERN 90/2 GERMAN SADDLE ... ...@ " 9—8—0
" SADDLE 90/2 " ... ..@ " 21—0—0
" " B/30 " ... ...@ " 26—0—0

For further particulars please write to us or call on us:—

All kinds of Cycle Accessories, Dunlop and German Tyres and Tubes
ARE AVAILABLE AT VERY CHEAP RATES.

Special Discount to Traders *Easy Terms Arranged*

APPLY TO:—**The Mangalore Trading Association,**
Wholesale Dealers in Cycles and Cycle Accessories,
Car-Street, MANGALORE.

—ಗೋಡೆಗೆ ತಗಲಿಸುವ
ಹೊಸ ನಮೂನೆಯ—

ಟಿಕ್—ಟಾಕ್

ಎಂಬ ಈ ಗಡಿಯಾರಗಳು ಜರ್ಮನೀ ದೇಶದಲ್ಲಿ ತಯಾರಿಸಿದ್ದು. ಇವು ಸರಿಯಾದ ಘಂಟೆಯನ್ನು ತೋರಿಸುವವು. ಇವಕ್ಕೆ ಬೀಗ ಕೊಡಬೇಕಾದಿಲ್ಲ. ಇದರಲ್ಲಿ ಕಾಣುತ್ತಿರುವ ಗುಂಡನ್ನು ಮೇಲಕ್ಕೆ ಎಳೆದರೆ ಸಾಕು. ತನ್ನಷ್ಟಕ್ಕೆ ತಾನೇ ಟಿಕ್—ಟಾಕ್ ಎಂಬ ಶಬ್ದವನ್ನು ಮಾಡುತ್ತಾ ಸರಿಯಾದ ಕಾಲವನ್ನು ತೋರಿಸುವದು. ಇದು ನೋಡುವುದಕ್ಕೆ ಬಹು ಲಕ್ಷಣವಾಗಿರುವು.

ಕ್ರಯ 1ಕ್ಕೆ ರೂ. 3—0—0

ಪೀಟರ್ ವಾಚ್ ಕಂಪೆನಿ
ಪೋಸ್ಟ್‌ಬಾಕ್ಸ್ ನಂ. 27, ಮದ್ರಾಸ್.

ADVERTISE IN

The Business Directory

OF INDIA, BURMA & CEYLON

A Comprehensive Directory of the various Business-men, Exporters and Importers, Firms, Factories, Mills, Manufacturers, Merchants and Industries of the principal Cities, Ports and Towns of India, Burma and Ceylon.

PUBLISHED ANNUALLY
Rates for Advertisements

¼ Page	Rs.	50.
2 in. Single Column	"	20.
1 in. Single Column	"	15.
Name in Bold Types	"	5.

Price per Copy Rs. 10.

PRINTERS & PUBLISHERS.
Business Directory Co.,
Kanara Press Buildings, MADRAS. E.
Telegrams: "KETHAKI" Phone 540

Just arrived! Look Sharp!

SCREW ELECTRIC TORCH LAMPS & Pocket Electric Lamps

AVAILABLE

In different varieties, Mother of pearl lamps. Cycle lamps.

NICKEL PLATED WITH SIDE LANCE.
Hammered Brand, with Powerful Bulls-eye lance.

The Mangalore Trading Association,
Car Street, MANGALORE

ಮನುಷ್ಯರಿಗೆ ಮತಿಸ್ಥಿತಿಗಿಂತಲೂ ಹೆಚ್ಚಾದ್ದು ಯಾವುದೂ ಇಲ್ಲ.

ಜನ್ಮದಲ್ಲಿ ಕಷ್ಟಸುಖಗಳು ಅನುಭವಿಸುವುದರಲ್ಲಿ ಆಸಕ್ತಿಯಿಲ್ಲದೇ ಧನ್ಯನಾಗುವುದಕ್ಕೆ ಮುಖ್ಯ ಸಾಧನ ಮತಿಸ್ಥಿತಿಯೇ ರಾಮಬಾಣವೆಂದು ಹೇಳಬಹುದು.

ಆದರೆ ಪ್ರಸ್ತುತ ನಾವು ಅನುಭವಿಸುವ ಚಲಚಿತ್ತದಲ್ಲಿ ಮತಿಸ್ಥಿತಿ ಉಂಟಾಗುವುದು ಸಾಧ್ಯ ಹೇಗೆ? ನಿಮಗೆ ಯಾವವಿಧವಾದ ಚಲಚಿತ್ತವಿದ್ದಾಗ್ಯೂ, ನಮ್ಮ ಆತಂಕನಿಗ್ರಹ ಮಾತ್ರೆಗಳನ್ನು ಉಪಯೋಗಿಸಿರಿ. ಈ ಮಾತ್ರೆಗಳೇ ತನ್ನ ಮೆದುಳಲ್ಲಿರುವ ದುರ್ಬಲವನ್ನು ನಿವಾರಿಸಿ, ದೃಢಚಿತ್ತವನ್ನುಂಟುಮಾಡುವುವು.

ಈ 32 ಮಾತ್ರೆಗಳುಳ್ಳ ಡಬ್ಬಿ ಒಂದಕ್ಕೆ ರೂಪಾಯಿ ಒಂದು ಮಾತ್ರ.

ಹಿಂದೂದೇಶದಲ್ಲಿಯೂ ಮತ್ತು ಇತರ ದೇಶಗಳಲ್ಲಿಯೂ ಪ್ರತಿಯೊಂದು ಗೃಹದಲ್ಲಿ ಪ್ರಯೋಜನಕರವಾದ ಒಂದು ಪುಸ್ತಕ ಇರುವುದು. ನಿಮಗೆ ಗೊತ್ತುಂಟೋ? ಆ ಪುಸ್ತಕದ ಹೆಸರೇ

“ಕಾಮಶಾಸ್ತ್ರ.”

ನೀವು ಇದುವರೆಗೂ ಆ ಪುಸ್ತಕದಲ್ಲಿ ವಿವರಿಸಿದ ಘನ ವಿಷಯಗಳನ್ನು ನೋಡದೇ ಇದ್ದಪಕ್ಷಕ್ಕೆ, ಈ ದಿನ ನಮಗೆ ಒಂದು ಕಾರ್ಡು ಬರೆದರೆ ಪೋಸ್ಟು ಚಾರ್ಜು ನಿಮಗಿಲ್ಲದೇನೇ, ಆ ಪುಸ್ತಕವನ್ನು ಕಳುಹಿಸುತ್ತೇವೆ.

ಆತಂಕನಿಗ್ರಹ ಔಷಧಾಲಯ,
ನಂಬ್ರ 23, ಬ್ರಾಡ್ವೆ, ಮದರಾಸು.

Agents:— Messrs RAPHAEL & Co.,
MANGALORE.

ಹೊಸಗ್ರಂಥಗಳು!! ಬೇಗನೇ ತರಿಸಿಕೊಳ್ಳಿರಿ!!

ಕೋಕಶಾಸ್ತ್ರವು.

ರಸಿಕ ವಾಚಕ ಮಹಾಶಯರೇ,

ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ, ಸಂಪಾದಿಸಿ, ಅದರಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನೇ ಶೋಧ ಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ಲೀಷ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿಣಿ, ಸ್ತ್ರೀಯ ಇವರಂತೆ ಪುರುಷರಲ್ಲಿಯ ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಳನದಿಂದ ಸುಖವಾಗುವದೆಂಬದನ್ನೂ, ಜನನೇಂದ್ರಿಯಾದಿಗಳ ವರ್ಣನೆಯನ್ನೂ, ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ, ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ, ನಪುಂಸಕತ್ವ, ವಂಧ್ಯಾ ದೋಷಗಳ ಚಿಕಿತ್ಸೆಯನ್ನೂ, ಸ್ತ್ರೀಯರ ಗೂಢ ರಹಸ್ಯವನ್ನೂ, ದಂಪತಿ ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನೂ, ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಅದ್ದರಿಂದ ಈ ಗ್ರಂಥವನ್ನು ಒಮ್ಮೆ ಅವಲೋಕಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ.

ಇದರ ಬೆಲೆ ೧—೮—೦, ಟಪ್ಪಾಲು ಹಾಸಲು ೦—೪—೦.

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ, ಪ್ರೆಸ್, ಬಳ್ಳಾರಿ.

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ
ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ
ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ವಾಂಸರೂ ಶಾಸ್ತ್ರ ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವುವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ತಮಾನಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವುವು. ಬೆಂಗಳೂರು ನಗರದ ಧಾರಣೆ ದಾಸ್ತಾನುಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನ್ನು ಕುರಿತ ಲೆಕ್ಕಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಧೀಮಂತರೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ,

ಪೋಷಕರಿಗೆ	... ...	ರೂ. 3—0—0
ಇತರರಿಗೆ, ಪರಸ್ಥಳಕ್ಕೆ ಪೋಸ್ಟೇಜು ಸೇರಿ		" 2—8—0,
" ಸ್ಥಳೀಕರಿಗೆ	...	" 1—8—0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪತ್ರಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಅರ್ಜಿ ಬಂದ ಕೂಡಲೆ ಬರೆದು ತಿಳಿಯಬಹುದು.

ಎಡಿಟರ್,
ಬಿ. ಹನುಮಂತಯ್ಯಗೌಡ,
ಅರ್ಥಸಾಧಕ ಪತ್ರಿಕೆ,
ಅರಳೇ ಪೇಟೆ, ಬೆಂಗಳೂರು ಸಿಟಿ.

Edited, Printed & Published by V. S. Kamath at the M. T. A. SHARADA PRESS, MANGALORE.

Registered No. M. 498.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ । ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೯. ಮಂಗಳೂರು, ತಾರೀಕು ೩ನೇ ಶುಕ್ರವಾರ ಜುಲಾಯಿ ೧೯೨೫. ಸಂಚಿಕೆ ೨೭.

The Canara Banking Corporation, Udipi, Ltd.

Head Office:—	Branch:—
Udipi	**Coondapoor**

Paidup Capital	1,66,165—9—11
Reserve etc	64,700—0—0

Season Deposits

Carrying Special rate of 7% up to 15th June 1925 only.

Further Particulars on Application.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಉಡುಪಿ, ಲಿಮಿಟೆಡ್.

ಹೆಡ್ ಆಫೀಸು:—ಉಡುಪಿ.	ಶಾಖೆ:—ಕುಂದಾಪುರ.
ವಸೂಲಾದ ಮೂಲಧನ	1,66,165—9—11
ರಿಜರ್ವ ವಗೈರೆ ಫಂಡುಗಳು	64,700—0—0

ತಾ. 15—6—1925ರವರೆಗೆ ಮಾತ್ರ ಸಾಲಿಯಾನ್ ಸೇಕಡಾ 7ರ ದರದ ಬಡ್ಡಿಯ ಮೇಲೆ ಮುಸುಂ ಠೇವಣಾತಿಗಳನ್ನು ಅಂಗೀಕರಿಸೋಣಾಗುತ್ತದೆ.

ಹೆಚ್ಚಿನ ಮಾಹಿತಿಗೆ ಬರಕೊಳ್ಳಿರಿ.

Office of the Corporation, Udipi, 1-6-25 } **N. Ananda Rao,**
Secretary

Wanted Agents

FOR

Every District in South India

For Pushing Sales of Our Calenders, Xmas and New Year Cards, Blotters, Pictures and Picture Post Cards, at wholesale rates. Deposit of Rs. 100—0—0 Essential.

Apply to:—
The South Indian Advertising Agency,
13, Kilary Road,
BANGALORE CITY.

ಶುದ್ಧ ರೋಮದ ಧಾವಳಿಗಳು.

1 ಮಳ ಉದ್ದ 1¼ ಮಳ ಅಗಲ ರೂ. 1½ರಿಂದ 2 ವರೆಗೆ, 5 ಮಳ ಉದ್ದ 1¼ ಮಳ ಅಗಲ ರೂ. 1¼ ರಿಂದ 5 ವರೆಗೆ, 6 ಮಳ ಉದ್ದ 1¼ ಮಳ ಅಗಲ ರೂ. 2¼ರಿಂದ 6 ವರೆಗೆ, 8 ಮಳ ಉದ್ದ 2 ಮಳ ಅಗಲ ರೂ. 3½ರಿಂದ 10 ವರೆಗೆ, 12 ಮಳ ಉದ್ದ 2¼ ಮಳ ಅಗಲ ರೂ. 6ರಿಂದ 12 ವರೆಗೆ, 16 ಮಳ ಉದ್ದ 2¼ ಮಳ ಅಗಲ ರೂ. 9 ರಿಂದ 16 ವರೆಗೆ. ಇವುಗಳಲ್ಲದೆ ಜಿಲ್ಲ ಜಿಲ್ಲರ್ ರೇಶ್ಮೆ ಮಡಿಗಳು, ಶಾಮರಡಿಗಳು, ಕಾಶಿ ಪೀತಾಂಬರಗಳು, ಕಾಶ್ಮೀರ ಶಾಲುಗಳು, ರುದ್ರಾಕ್ಷಿ, ಪಚ್ಚಲಿಂಗ ಸಾಳಿಗ್ರಾಮ, ಶಂಖ, ಸ್ಫಟಿಕಮಾಲೆ, ಹಿತ್ತಾಳಿಯ ಅಚ್ಚಿನ ಸಾಮಾನುಗಳು, ಪೋಟೋ ಉಂಗುರಗಳು ಮತ್ತು ಇನ್ನೂ ಅನೇಕ ಸಾಮಾನುಗಳು ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುವು. ಕ್ಯಾಟಲಾಗ್ ಇನಾಮ.

ವಿಳಾಸ—
ಶಿರೋಮಣಿ ಯು. ನಾರಾಯಣಾಚಾರ್ಯ
ಮತ್ತು ಕಂಪೆನಿ, ಚೌಕಂಬಾ, ಕಾಶೀ ಕ್ಷೇತ್ರ.

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ.

450 ಪುಟಗಳು ಎಮ್. ಗಣಪತಿರಾವ್ ಐಗಳ್ ಇವರಿಂದ ರಚಿತವಾದದ್ದು. ಕ್ರಯ ರೂ. 2-4-0

ಮಾರಾಟಕ್ಕೆ ಸಿದ್ಧವಾಗಿವೆ — ತುಳು ಪಾಡ್ದನಗಳು — ಮಾರಾಟಕ್ಕೆ ಸಿದ್ಧವಾಗಿವೆ

ದೈಯ್ಯೊಂಗುಳು, ಕಲ್ಲುರ್ಟಿ—ಕಲ್ಕುಡ, ಕಣಂದೂರು ದೈಯ್ಯೊಂಗುಳು, ಮುಂಡತ್ತಾಯ, ಬೊಬ್ಬರ್ಯ.

ಸುಲಭ ದರಗಳು — ಶಾಲಾ ಪುಸ್ತಕಗಳು — ರಖಂ ಕೊಂಡುಕೊಳ್ಳುವವರಿಗೆ ಯೋಗ್ಯ ಡಿಸ್ಕೌಂಟ್.

ಅಜ್ಜಿಕಥೆಗಳು:—ಮೂರು ಕರಡಿಗಳು; ಹೇನುಸತ್ತು ಕಾಗೆ ಬಡವಾಯಿತು; ಅಗಸನ ಮುದ್ದೆ; ಇಲಿಗಳ ಥಕ್ಕ ಥೈ; ಅಂಗಳ ದುಗ್ಗು; ಸಿಗಡಿ ಯಾಕೆ ಒಣಗಲಿಲ್ಲ; ಗುಡುಗುಡು ಗುಮ್ಮಟ ದೇವರು; ಮೊಸಳೆಯ ಕಾಳಪ್ಪ ಒಡ್ಡನ ಓಟ; ಹೊಸ ಕನ್ನಡ ಪುಸ್ತಕ ಭಾಗ ೧; ಹೊಸ ಕನ್ನಡ ಪುಸ್ತಕ ಭಾಗ ೨; ಕನ್ನಡ ಪದ್ಯಗಳು; ಮಗ್ಗಿ ಪುಸ್ತಕ; ಅಚಿತಕುಮಾರ; ಪದ್ಯ ರತ್ನಾವಳಿ, ಎಕ್ಸರ್‌ಸೈಜ್ ಮತ್ತು ನೋಟು ಪುಸ್ತಕಗಳು, ಕಾಪಿ ಪುಸ್ತಕಗಳು, ಡ್ರಾಯಿಂಗ್ ಪುಸ್ತಕಗಳು

ಇತರ ಪುಸ್ತಕಗಳು:—ಸಂಕ್ಷೇಪಗೀತ, ಕೇತುಭಂಗ, ಹಿಂದೂ ವ್ರತವಿವೇಕ, ಚಂದ್ರಗುಪ್ತ ಚಕ್ರವರ್ತಿ, ಶ್ರೀ ಕೃಷ್ಣಸಂಧಾನ, ಸತ್ಯವ್ರತಗಳು, ಹರಿಕಥಾ ಮೃತಸಾರ ಹರಿನಾಮಸಂಕೀರ್ತನೆ ಸುಧಾಮೃತ ಪದ್ಯಗಳು. ಬೆಂಕಿಪೆಟ್ಟಿಗೆ ತಯಾರಿಸುವ ವಿಧಾನ, ಸಾಬೂನು ತಯಾರಿಸುವ ವಿಧಾನ, ಸ್ವರಾಜ್ಯ ಭಕ್ತೋಲ್ಲಾಸ, ಚರಕಗೀತ, ಕೊಂಕಣಿ ಭಾಷೆಯಲ್ಲಿ ಚಂದ್ರಹಾಸ ನಾಟಕ, ಪ್ರಹಲ್ಲಾದ ಚರಿತ್ರೆ ನಾಟಕ, ಕನ್ನಡ ಮೃಚ್ಛಕಟಿಕ ನಾಟಕ, ಚಂದ್ರಹಾಸಾಭ್ಯುದಯ ನಾಟಕ, ಕೋವಿಲನ್ ಚರಿತ್ರೆ ನಾಟಕ, ಮಾದರಿ ಉಪನ್ಯಾಸ ಭಾಗ ೧, ೨, ಮತ್ತು ೩.

AMRUTANJAN
Best Indian Pain Balm
Amrutanjan
BOMBAY

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು

❋ ಅಮೃತಾಂಜನ ❋

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿರಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 2 ಆಣೆ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ ಟೌನ್, ಮದ್ರಾಸು.

109 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

— ರಥೋತ್ಸವ, ವಿವಾಹ ಉಪನಯನಗಳ ಸಮಯ — ಸರ್ವರಿಗೂ ಉಡಿಗೆ ತೊಡಿಗೆಗಳು ಬೇಕಾಗುವ ಸಂದರ್ಭ.

ಯಾರು, ಯಾವುದನ್ನು ಎಲ್ಲಿ ಪಡೆಯಬೇಕೆಂಬ ಶಂಕೆಯಿಂದ ವಿಚಾರ ಮಾಡಬೇಡಿರಿ. ಉಡಿಗೆತೊಡಿಗೆಗಳನ್ನು ಕುರಿತಾಗಿ ನಿಮಗೆ ಬೇಕಾದ ಯಥಾರ್ಥ ಮಾಹಿತಿಯನ್ನು ಕಳೆದ ಹತ್ತಿಪ್ಪತ್ತು ವರುಷಗಳಿಂದ ಪಡೆದು ನಮ್ಮಲ್ಲಿಯ ವ್ಯಾಪಾರವು ಗಿರಾಕಿಗಳಿಗೆ ಸರ್ವ ಸ್ಥಿತಿಯಿಂದಲೂ ಲಾಭಕರವಾಗಿ ಪರಿಣಮಿಸುವಂತೆ ನಮ್ಮ ಉಡಿಗೆ ಸಂಗ್ರಹವನ್ನು ಮಾಡಿರುತ್ತೇವೆ.

ಗುರ್ಪುರ್‌ಕಾರ್ ಬ್ರದರ್ಸ್, ರಥಬೀದಿ, ಮಂಗಳೂರು.

ಹೆಡ್ ಆಫೀಸು:—ರಥಬೀದಿ—(ಮೊದಲು ಸುಜೀರ ನಾಗಪ್ಪನಾಯಕ್, ಎಂಡ್ ಕೊ. ಇದ್ದಲ್ಲಿ; ಅಜಿಜುದ್ದೀನ್ ರಸ್ತೆಗೆ ತಿರುಗುವಲ್ಲಿ) ಮಂಗಳೂರು.

ಬ್ರೆಂಚ್ ಆಫೀಸು:—ರಥಬೀದಿ—(ಹಳೇ ತಾಲೂಕು ಕಚೇರಿಯ ಪಟಾರಕ್ಕೆ ಸಮೀಪವಿರುವ ಮನೆಗೆ) ಮಂಗಳೂರು.

ಈ ದೇಶದ ಪ್ರಖ್ಯಾತಪಟ್ಟ ನೇಯಿಗೆಯ ಕೇಂದ್ರಸ್ಥಳಗಳಾದ—ಬನಾರಸ್, ಪೂನಾ, ಅಹಮ್ಮದಾಬಾದ್, ಸುರತ್, ಬೆಂಗಳೂರು, ಧರ್ಮಾವರಮ್, ಕಂಜೀವರಮ್, ಕೊಯಮುತ್ತೂರು, ಮಧುರೆ, ತಂಜಾವೂರು, ಕುಂಭಕೋಣ, ಆರ್ಣಿ, ಪಾಲಘಾಟ್, ಜಯ್ಪುರ, ಮಣಿಪುರ್, ನಗರ, ಮದ್ರಾಸು ಈ ಪ್ರಾಂತ್ಯಗಳಲ್ಲಿ ತಯ್ಯಾರಾದ

ಜರಿಸೀರೆಗಳು, ದುಪ್ಪಟಾ, ಜರಿಶಾಲು, ಪೇಟ, ರೇಶ್ಮೆ ಸೀರೆಗಳು, ಅರಳಿಪಟ್ಟೆ ಸೀರೆಗಳು, ಜಾರ್ಜೆಟ್ ರೇಶ್ಮೆ ಸೀರೆಗಳು, ಜರಿ ಅಂಚಿನ ಸೀರೆಗಳು, ರೇಶ್ಮೆ ಮಡಿಗಳು, ನಿತ್ಯ ಉಪಯೋಗದ ಸೀರೆಗಳು ಚಾದರ್, ಕರ್ನಾಟಕ ಮಿಲ್ಸ್‌ಗಳ ವ ಇತರ ಮಿಲ್ಸ್‌ಗಳ ಶೂಟಿಂಗ್ ಶರ್ಟಿಂಗ್.

ಕೈರಾಟೆಯಲ್ಲಿ ತಯಾರಿಸಿದ ನೂಲಿನಿಂದ ಮಾಡಿದ—

ಖದ್ದರ್ ಶರ್ಟಿಂಗ್, ಖದ್ದರ್ ಕೋಟಿಂಗ್, ಖದ್ದರ್ ದೋತಿ, ಖದ್ದರ್ ಪೇಟ್ಟಿ, ಅಂಗವಸ್ತ್ರ, ಜಮಖಾನೆ ಮುಸಲ್ಮಾನರಿಗೆ ಬೇಕಾದ ನಮೂನೆಯ ಲುಂಗಿ ಸೀರೆಗಳು ವಗೈರೆ—

ಎಲ್ಲ ಸಂಗ್ರಹವನ್ನೂ ನಮ್ಮ ಪ್ರೊಪ್ರೈಟರರಾದ ರಾ! ನಾರಾಯಣ ಪ್ರಭುಗಳು ಖಾಸ ಸ್ವತಃ ಆಯಾ ಊರುಗಳಿಗೆ ಹೋಗಿ ಸಂಗ್ರಹಿಸಿ ತಂದಿರುತ್ತಾರೆ.

ದರ—ಕಡಿಮೆ, ರೂಪಾಯಿ 50ಕ್ಕೆ ಮೇಲ್ಪಟ್ಟ ಖರೀದಿಯನ್ನು ಮಾಡುವವರಿಗೆ ಸೇಕಡಾ 6¼ರ, ರೂ. 50ರಿಂದ 250ವರೆಗೆ ಸೇಕಡಾ 10%, ರೂ. 250 ರಿಂದ 1000ಕ್ಕೆ 12½%—ಈ ದರ ಡಿಸ್ಕೌಂಟು ಕೊಡಲಾಗುವುದು.

ಆರ್. ಮಾರ್ಟಿನ್ಸರ
ಜ್ವರದ ಗುಳಿಗೆಗಳು.

ಸುಲಭ ಸ್ವೇದನಕಾರಿಯಾದ ಈ ಘುಟಿಕೆಗಳು ಚಳಿಜ್ವರದ ವಿಷ ದ್ರಾರ್ಥಗಳನ್ನು ತಟ್ಟನೆ ನಿರ್ಮೂಲಪಡಿಸಿ, ವ್ರಣಗಳನ್ನು ಸಂಪೂರ್ಣ ನಾಶಪಡಿಸಿ, ಮಲೇರಿಯಾ ಜ್ವರ, ಚಳಿಜ್ವರ, ಬಾರಿಜ್ವರ, ಮತ್ತು ಆಗಾಗ್ಗೆ ಬಿಟ್ಟುಕೊಂಡು ಬರುವ ಇತರ ಜ್ವರಗಳ ಬಾಧೆಯಿಂದ ಗುಣಪಡಿಸುವವು.

ತಟ್ಟನೆ ವಾಸಿಪಡಿಸುವುದಕ್ಕೆ ಹಕ್ಕಾರುಗಳಲ್ಲಿ ಪ್ರಸಿದ್ಧತೆಯನ್ನು ಹೊಂದಿದ್ದು, ಆಕೆ ಬಿಟ್ಟುಬಿಟ್ಟ ಅನೇಕ ಸಂದರ್ಭಗಳಲ್ಲಿ ಗುಣಪಡಿಸಿದವುಗಳಾಗಿರುತ್ತವೆ.

ಇವುಗಳು ಗಿರಣಿಗಳಲ್ಲಿಯೂ ಕಾರ್ಖಾನೆಗಳಲ್ಲಿಯೂ ವಿಶೇಷವಾಗಿ ಉಪಯೋಗಿಸಲ್ಪಡುವುದು. ಸಾಮಾನ್ಯವಾಗಿ ಹಿಂದೂಸ್ಥಾನದಲ್ಲಿ ಎಲ್ಲಾ ತೋಟಗಾರರಿಂದ ಉಪಯೋಗಿಸಲ್ಪಡುವುದು. ಅಲ್ಲದೆ ದಿಂಗತ ವಿಶ್ರಾಂತಿ ಮಾಡ ಕೀರ್ತಿಯನ್ನು ಕೂಡ ಸಂಪಾದಿಸಿರುವುವು ಕಠಿಣ ಜ್ವರವು ತಟ್ಟನೆ, ಇಳಿಯಬೇಕಾದರೆ ಆರ್ ಮಾರ್ಟಿನರ ಎಗ್ಯು ಮಿಕ್ಚರ್ ಒಡನೆ ಇದನ್ನು ಸೇವಿಸಬೇಕು. ಈ ಇವೆರಡು ಅದ್ಭುತ ಶಕ್ತಿಯುಳ್ಳ ಔಷಧಿಗಳು ಪ್ರತಿಯೊಂದು ಕುಟುಂಬದ ಮನೆಯಲ್ಲಿಟ್ಟುಕೊಳ್ಳಲು ಯೋಗ್ಯ ವಸ್ತುಗಳಾಗಿವೆ ಪ್ರತಿಯೊಂದು ಬಾಟ್ಲಿಯಲ್ಲಿ 40 ಮಾತ್ರೆಗಳಿರುವ ಬಾಟ್ಲಿ 1ಕ್ಕೆ 1–8–0.

100 ಮಾತ್ರೆಗಳಿರುವ ಬಾಟ್ಲಿ 1ಕ್ಕೆ 3–8–0.
150 „ „ „ 5–4–0.

ಆರ್. ಮಾರ್ಟಿನ್ಸರ ಎಗ್ಯೂಮಿಕ್ಚ್ಚರ್.

ಇದು ಜ್ವರ, ಶೀತಜ್ವರ ಮಲೇರಿಯಾ, ಬಾರಿಜ್ವರ, ಸನ್ನಿಪಾತ ಪಟ್ಟಿ ವಾಯುವಿನಿಂದುಂಟಾದ ರೋಗ ಇವೇ ಮೊದಲಾದ ಎಲ್ಲಾ ತರದ ಜ್ವರಗಳನ್ನೂ ಕೂಡಲೇ ನಾಶಮಾಡುತ್ತದೆ. ಎಲುಬುಗಳಲ್ಲಿ ಹರಡಿಕೊಂಡಿರುವ ಜ್ವರವನ್ನೂ ಸಹ ನಾಶಮಾಡುವುದಲ್ಲದೆ, ಇದು ಸಿಹಿಯಾಗಿರುವುದ್ದರಿಂದ ಸಣ್ಣ ಕೂಸುಗಳು ಸಹ ಕುಡಿಯಲಿಕ್ಕೆ ಇಷ್ಟಪಡುತ್ತವೆ. ಅನೇಕ ನಿಜ ವಿದ್ವಾಂಸ ವೈದ್ಯರಿಂದ ಗುಣಮಾಡುವುದಕ್ಕಾಗದ ಜ್ವರವನ್ನು ಈ ಎರಡೇ ಎರಡು ಬಾಟ್ಲಿಗಳ ಸೇವನೆಯಿಂದ ಹುಷಾರಾಗಿದೆ.

ಬಾಟ್ಲಿ 1ಕ್ಕೆ ರೂ. 0–13–0.

ಆರ್. ಮಾರ್ಟಿನ್ಸರ ಮೂಲವ್ಯಾಧಿ ಮುಲಾಮು.

ಮನುಷ್ಯನಿಗೆ ಮೂಲವ್ಯಾಧಿ ಆದಾಗ, ಬಹಳ ಸಲ ಮೂತ್ರಶಂಕೆಯಾಗಲಿ, ಮರ್ಮಸ್ಥಾನದಲ್ಲಿ ಉರಿಯುವುದು, ಮಲಬದ್ಧತೆ ಇವೇ ಮುಂತಾದವುಗಳಿಂದ ಪಡುತ್ತಾನೆ. ಈ ಔಷಧದ ಒಂದೇ ಒಂದು ಬಾಟ್ಲಿಯ ಉಪಯೋಗದಿಂದ, ರಕ್ತ ಸುರಿಯುವ ಮೂಲವ್ಯಾಧಿ, ಕಂಕುಳಲ್ಲಿ ನೋಯುವ ಮೂಲವ್ಯಾಧಿ ಮತ್ತು ಎಂತ ತರಹದ ಕಠಿಣವಾದ ಮೂಲವ್ಯಾಧಿಯ್ಯಾದರದ ಕೂಡಲೇ ವಾಸಿಯಾಗುತ್ತದೆ. ಇದು ಒಳ್ಳೇ ಔಷಧಗಳಿಂದ ತಯಾರಿಸಲ್ಪಟ್ಟು ತೆಗೆದುಕೊಳ್ಳುವವರಿಗೆ ಏನೊಂದೂ ನೋವನ್ನು ಕೊಡದೆ ತಂಪಾಗಿ ಮಾಡುತ್ತದೆ. ಬಾಟ್ಲಿ 1ರ ದರ ರೂ. 1–8–0 ಮಾತ್ರ.

ವಿಳಾಸ:—ಆರ್. ಡಿ. ಕಟ್ಲೆ ಮತ್ತು ಕಂಪೆನಿ,
ನಂಬ್ರ ಬಿ. ಫ್ರಿಯರ್ ರೋಡ್,
ಸಾಂಜ ವರ್ತಮಾನ ಪ್ರೆಸ್,
ಟೋದಿವಾಲಾ ಬಿಲ್ಡಿಂಗ ಎದುರುಗಡೆ, ಫೋರ್ಟ ಮುಂಬಯಿ.
R. D. Kately & Co.
No. B. Frere Road,
Opposit Sanjvertaman Press,
Todivala Building, FORT BOMBAY

ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ಮೂರನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್. ಗಣಪತಿರಾವ್ ಐಗಳ್—ಗ್ರಂಥಕರ್ತರು.

ಮನೋರಂಜಕ ಚಿತ್ರಗಳೂ ಇವೆ.

ಇದರಲ್ಲಿ ಸಾವಿತ್ರಿ, ಶಕುಂತಳಾ, ಕೃಷ್ಣಾಕುಮಾರಿ ಪದ್ಮಿನಿ, ಜೋನ್ ಒಫ್ ಆರ್ಕ, ಪ್ಲೊರೆನ್ಸನಾಯಿಟಿಂಗೇಲ ಪರಶುರಾಮ, ಭೂತಾಳಪಾಂಡ್ಯ, ಕಾರ್ಕಳ ಗೋಮಟೇಶ್ವರ ಮತ್ತು ಭೈರವರಾಜ, ಮೂಡಬಿದ್ರೆಯ ಜೌಟರು, ನಂದಾವರ ಬಂಗರು, ಕಾರ್ಕಳ ರಾಮಸಮುದ್ರ ಮತ್ತು ರಾಮನಾಥ ಒಡೆಯರ ಅಹೆಕಟ್ಟು, ಗುರುಪುರ ಜಂಗಮ ಮಠ, ಕಲ್ಯಾಣಪ್ಪನ ಕಾಟಕಾಯಿ, ಗುರುವಾಯನಕೆರೆ, ಜಮಾಲಾಬಾದು ಕೋಟೆ, ಸುಲ್ತಾನಬತ್ತೇರಿ, ಈದಗಾಪ್ರಾರ್ಥನಾಮಂದಿರ, ಸೇಂಟಮೇರಿ ದ್ವೀಪಗಳು ಮತ್ತು ದರಿಯಾಬಾದರಗಡ, ಕೊರಗರು, ಕೊಡಗರು, ತೋಡರು, ರಜಪೂತರು, ಕಂದಾರಿಗಳು ಘುಜಾರ್ ಜನರು, ಅರಬಿಯರು. ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ಮೂರನೇ ದರ್ಜೆಯ ಮಕ್ಕಳಿಗೆ ಉಪಯುಕ್ತವಾಗಿದೆ. ಕ್ರಯ 6 ಆಣೆ.

ಪುಸ್ತಕ ದೊರಕುವ ವಿಳಾಸ:—

ಶಾರದಾ ಛಾಪಖಾನೆ, ಮಂಗಳೂರು. ||| ಗಣಪತಿರಾವ್, ಐಗಳ್. ಮಂಜೇಶ್ವರ.

ಡಾಕ್ಟರುಗಳು ಭಿನ್ನಾಭಿಪ್ರಾಯಪಡುವಾಗ್ಗೆ ತೀರ್ಮಾನಿಸುವದು ಯಾರು?

ಅಂಥಾ ಸಂದರ್ಭಗಳಲ್ಲಿ ಡೆಂಗ್ಯು ಮುಂತಾದ ಜ್ವರಗಳನ್ನು ನಿವಾರಿಸುವಂಥಾ "ಬಾಟ್ಲಿವಾಲರ ಏಗ್ಯುಮಿಕ್ಚರ್"ನ್ನು ಸರಾಗವಾಗಿಯೂ, ಮತ್ತು ಜ್ವರಗಳನ್ನು ಖಂಡಿತವಾಗಿ ನಿಲ್ಲಿಸುವಂಥಾದ್ದೂ, ಎಲ್ಲಾ ತರದ ಚಳಿರೋಗಗಳನ್ನು ಹೋಗಲಾಡಿಸುವಂಥಾದ್ದೂ ಆದ "ಬಾಟ್ಲಿವಾಲರ ಏಗ್ಯುಪಿಲ್ಸ್" ಇದನ್ನು ಉಪಯೋಗಿಸಿರಿ.

ಐ. ಎಮ್. ಎಸ್. ಡಾಕ್ಟರುಗಳಿಂದ ಶಿಫಾರಸು ಮಾಡಲ್ಪಟ್ಟಿದ್ದು. ಇದರ ಉಪಯೋಗದಿಂದ ಹೃದಯದ ಮೇಲೆ ಯಾವದೊಂದೂ ಬಾಧಕವಿಲ್ಲ. ಅರ್ಧ ಶತಮಾನದಿಂದ ಹಿಂದೂಸ್ಥಾನ, ಬರ್ಮಾ, ಸಿಲೋನ್, ಆಫ್ರಿಕಾ ಇವುಗಳಲ್ಲಿ ಪ್ರಖ್ಯಾತಪಟ್ಟಿದ್ದಾಗಿರುತ್ತದೆ.

ಅನೇಕ ಹಿಂದೀ ಪ್ರದರ್ಶನಗಳಲ್ಲಿ ಬೆಳ್ಳಿ ಮತ್ತು ಬಂಗಾರದ ಪದಕಗಳನ್ನು ಪಡೆದಿರುತ್ತೆ. ಚಾಲ್ತಿ ಸಾಮ್ರಾಜ್ಯಂತಿನ್ನ ಮಾರ್ವಾರಿಗಳೂ ಕೂಡ ಅದರ ಮೇಲೆ ಹಣವನ್ನು ಮುಂಗಡವಾಗಿ ಕೊಡುತ್ತಾರೆ. ಬಡ ಮತ್ತು ಮಧ್ಯಮ ತರಗತಿಯ ಜನರಿಗೆ ವರಪ್ರದಾನವಾಗಿದ್ದು ಸಂಚಾರ, ಪ್ರಯಾಣ, ದೇಶಾಟನೆಗಳ ಸಮಯದಲ್ಲಿ ಹತ್ತಿರದಲ್ಲಿ ಇರಿಸಿಕೊಳ್ಳದಾಗಿರುತ್ತದೆ.

ಬಾಟ್ಲಿವಾಲರ ಬಾಲಾಮೃತ ಅಥವಾ ಟೊನಿಕ್ ಸಿರಪ್.

ಕೆಮ್ಮನ್ನು ಹೋಗಲಾಡಿಸಿ, ಎದೆನೋವನ್ನು ಶಾಂತಗೊಳಿಸಿ, ಜ್ವರವನ್ನು ಉಪಶಮನಿಸಿ, ನಿದ್ರಾಭಂಗವನ್ನು ಕಡಿಮೆ ಮಾಡಿ ಧಾತುವರ್ಧನವನ್ನು ಮಾಡುವದರಲ್ಲಿ ಅತ್ಯುತ್ತಮವಾಗಿರುತ್ತದೆ. ಕಫವನ್ನು ಒಣಗಿಸಿ ಮಾಯವಾಗುವಂತೆ ಮಾಡುವುದಲ್ಲದೆ ಅದೇ ಸಮಯದಲ್ಲಿ ಒಳ್ಳೇ ಜೀರ್ಣವನ್ನೂ ಉಂಟುಮಾಡುವುದು. ದರ ಮೊದಲಾದ ಮಾಹಿತಿಯನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಕಾರಿನಪತ್ರ:-CAWASHAPUR, BOMBAY.

Dr. H. L. Batliwala & Co., Ltd.,
Sayani Road, P. O. Cadell Road, Bombay. No. 14.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ. | ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.,
Sayani Road, P. O. Cadell Road, Bombay. No. 14.

ಸಣ್ಣ ಹುಡುಗರ ಸಲುವಾಗಿ
ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟ. ಖ. 9 ಆಣೆ.

ನಮ್ಮ ವಿಳಾಸ:— ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಏಜಂಟರು:— ದಿ. ಊಲನ್ ಮಾರ್ಟ್, ಮಂಗಳೂರು.

OUR RECENT IMPORT IN WRIST WATCHES | Have you used anyone of these Watches? | **SEND YOUR ORDER NOW ALL GUARANTEED.**

Fashionable wrist wrist Lady's size. Reliable movement Guaranteed.



No. 368.

Handy to wear and looks beautiful. Gives punctual time and with strong movement.

Nickel case Rs. 8—0

High-class Radium dial watch watch with Roman figures.



No. 367.

Can be seen in dark nights, Well fitted with best movement and strong to use. Used by one and all.

Silver case Rs. 9—0.

Radio light wrist watch.



No. 372.

Fitted with the best mechanism and guaranteed to work and keep perfect time for a long time.

Nickel case Rs. 7—8
Electro rolled-gold „ 9—0

(N. B. In addition to the above, we have good number of varieties of fancy wrist watches, pocket watches. Please write for a descriptive catalogue, which will be sent free)

WHOLESALE IMPORTERS

PETER WATCH COY.,
POST BOX 27, MADRAS

ಶಾಲಿವಾಹನಶಕ ೧೮೪೭ನೆಯ ಕ್ರೋಧನ ಸಂವತ್ಸರದ ಜ್ಯೇಷ್ಠ ಬ। ೧೪ ಶನಿವಾರದಿಂದ ಕ್ರೋಧನ ಸಂವತ್ಸರದ ಆಷಾಢ ಶು। ೫ ಶುಕ್ರವಾರದ ವರೆಗಿನ ಪಂಚಾಂಗ.
(೧೯೨೫ನೆಯ ವೃಷಭ ವೇಶ.)

ತಾರೀಕು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಯೋಗನಾಡಿ	ಸೂರ್ಯ	
							ಉ.	ಅಸ್ತ.
4	ಶನಿ	೧೩	೨೫.೪೬	ಜ್ಯೇಷ್ಠ	೪೬.೪೬	೨೦	6.10	6.59
5	ರವಿ	೧೪	೨೦.೧೬	ಮೂಲ	೪೩. ೦	೨೧	6.11	6.59
6	ಸೋಮ	○	೧೪.೩೨	ಪೂ. ಷಾ.	೩೯. ೨	೨೨	6.11	6.59
7	ಕುಜ	೧	೮.೧೪	ಉ. ಷಾ.	೩೪.೪೪	೨೩	6.11	6.59
8	ಬುಧ	೨	೨.೧೬	ಶ್ರವಣ	೩೦. ೧	೨೪	6.11	6.59
9	ಗುರು	೪	೫೧. ೨	ಧನಿಷ್ಠಾ	೨೭.೧೬	೨೫	6.12	7. 0
10	ಶುಕ್ರ	೫	೪೬.೧೪	ಶತಭಿಷಾ	೨೪.೧೬	೨೬	6.12	7. 0

ಮಂಗಳೂರಿನ ವಾಯುಸ್ಥಿತಿ.

Date ತಾರೀಕು	Temperature. ಉಷ್ಣ (ಕಾವು)		Rainfall. ಮಳೆ	
	Maximum ಹೆಚ್ಚಾದುದು	Minimum ಅಲ್ಪವಾದುದು	ದಿನದ ಮಳೆ	ಜುಮಲಾ ಮಳೆ.
26	82—1	73—7	1—80	—
27	84—2	76—0	0—43	—
28	89—0	76—1	0—34	—
29	89—7	75—0	0—61	—
30	88—7	74—6	1—50	—
1	89—2	77—5	0—14	—
2	88—1	75—5	0—26	—

ಮಂಗಳೂರಿನ ಪೇಟೆ ಧಾರಣಿ.

ಜೀನಸು	ಇಂದ	ವರೆಗೆ
	ರೂ. ಆ.	ರೂ. ಆ
ಹೊಸ ಮಸ್ತಿ	8–12	9– 4
ಹೊಸ ಗುಡ್ಡು	8-4-0	8–10
ಹೊಸ ರಾಶಿ	7– 12	8–0
ಅಸ್ಸಲ್ ಬೆಳ್ತಿಗೆ	8–4	9- 8
ಗುಡ್ಡು ಬೆಳ್ತಿಗೆ	8–0	8–4
ರಂಗೂನು ಬೆಳ್ತಿಗೆ ಗೋಣಿ ೧	13- 8	14 0
ಗೋದಿ ಗೋಣಿ ೧ಕ್ಕೆ	18- 8	22 0
ಹುರುಳಿಗೋಣಿ ೧ಕ್ಕೆ	9- 4	10 - 0
ಕಡಲೆಗೋಣಿ ೧ಕ್ಕೆ	12-0	13 - 0
ತೊಗರಿಗೋಣಿ ೧ಕ್ಕೆ	12-8	13 - 0
ತೊಗರಿಬೇಳೆ ಗೋಣಿ ೧ಕ್ಕೆ	14-0	21 - 0
ಉದ್ದು ಗೋಣಿ ೧ಕ್ಕೆ	14- 0	14 - 8
ಹೆಸರುಗೋಣಿ ೧ಕ್ಕೆ	14 - 0	15 - 0
ಊರು ಬೆಲ್ಲ ಖಂಡಿ ೧ಕ್ಕೆ	–	85 - 0
ಉಪ್ಪು ಗೋಣಿ ೧ಕ್ಕೆ	4- 4	4-10
ಕೊಬ್ರಿ ಖಂಡಿ ೧ಕ್ಕೆ	115-0	120 – 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	35- 0	36 – 0
ಎಳ್ಳಿಂಡಿ ಖಂಡಿ ೧ಕ್ಕೆ	35 –0	42 – 8
ಕೊಬ್ರಿ ಎಣ್ಣೆ ಮಣ ೧ಕ್ಕೆ	8–8	9 – 8
ಎಳ್ಳೆಣ್ಣೆ ಮಣ ೧ಕ್ಕೆ	8– 0	11 – 0
ಜಾವಿನ ಎಣ್ಣೆ ಪೆಟ್ಟಿಗೆ ೧ಕ್ಕೆ	8-15-6	–
ಚೀನದ ಸಕ್ಕರೆ ಮಣ ೧ಕ್ಕೆ	6– 0	6 – 2
ಊರ ಮೆಣಸಿನಕಾಯಿ ಮಣ ೧ಕ್ಕೆ	7– 0	–
ಸಾಸಿವೆ ಮುಡಿ ೧ಕ್ಕೆ	8- 12	–
ಕೊತ್ತಂಬರಿ ಮುಡಿ ೧ಕ್ಕೆ	3- 8	4 – 4
ಕಾಫಿ ಖಂಡಿ ೧ಕ್ಕೆ	345- 0	400-–0
ಪಟಿಗೋಟು ಅಡಿಕೆ ಖಂಡಿ ೧ಕ್ಕೆ ಹಳತು	245- 0	250 – 0
„ ಹೊಸ ಅಡಿಕೆ	240 – 0	240 – 0
ಕಾಳುಮೆಣಸು ಖಂಡಿ ೧ಕ್ಕೆ	170–0	175-–0
ಯಾಲಕ್ಕಿ ಮಣ ೧ಕ್ಕೆ	80– 0	90 – 0
ಗೇರುಬೀಜ ಮುಡಿ ೧ಕ್ಕೆ	3 – 6	–
ಕಚ್ಚಿಕ ಖಂಡಿ ೧ಕ್ಕೆ	45– 0	65 – 0
ಕಾಂಡ್ಯ ತಗಡು ಮಣ ೧ಕ್ಕೆ	17-12	23 – 0
ಹಾವ್ವ ಬಾಣ್ಣಗಳು ಮಣ ೧ಕ್ಕೆ	26– 0	–
ಜೇನ ಜೆಲ್ಲಿ ಸೇರು ೧ಕ್ಕೆ	22 - 0	
ಹಿತ್ತಾಳೆ ತಗಡು ಮಣ ೧ಕ್ಕೆ	18– 8	
ಪವನು	13–10	

The Canara Public Conveyance Co., Ltd, Mangalore.
(ESTABLISHED 1914.)
ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು
- ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು
- ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
- ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
- ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.
- ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ—ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd., Mangalore. S. K.

— ಸಿರಿಗನ್ನಡಂಗೆಲ್ಗೆ —

ಶ್ರೀ ಶಂಕರ ಕರ್ನಾಟಕ ಪುಸ್ತಕ ಭಂಡಾರವೂ
ಶ್ರೀ ವಿದ್ಯಾರಣ್ಯ ಪ್ರಕಾಶಕ ಸಂಸ್ಥೆಯೂ,

ಮಾಳಮಡ್ಡಿ, ದಾರವಾಡ.

ಕನ್ನಡಿಗರಿಗೆ ಬೇಕಾಗುವ ಎಲ್ಲಾ ತರದ ಕನ್ನಡ ಪುಸ್ತಕಗಳು ನಮ್ಮಲ್ಲಿ ಯೋಗ್ಯ ಬೆಲೆಗೆ ದೊರೆಯುವವು. ವಿದ್ಯಾರಣ್ಯ ಪುಸ್ತಕ ಮಾಲೆಯ ಕೆಳಗಿನ ೧, ೨, ೩, ಪುಸ್ತಕಗಳು ಚಂದಾದಾರರಾಗುವವರಿಗೆ ಅಂಚೆ ವೆಚ್ಚ ಸೇರಿ ೫ ರೂ. ೬ ಆಣೆಗೆ ದೊರೆಯುವವು. ಮುಂದೆ ಹೊರ ಬೀಳುವ ಮಾಲೆಯ ಪುಸ್ತಕಗಳನ್ನು ಚಂದಾದಾರರಿಗೆ ೧ ರೂಪ್ಯಾಗೆ ೨ ಆಣೆಯಂತೆ ಕಡಿಮೆ ಬೆಲೆಗೆ ವಿ. ಪಿ. ಮಾಡುವೆವು. ಭಂಡಾರದ ಬೆಲೆ ಪಟ್ಟಿಗಾಗಿ ೪ ಆಣೆ ಅಂಚೆ ಟಿಕೇಟುಗಳನ್ನು ಕಳುಹಿಸತಕ್ಕದ್ದು.

		ರೂ.	ಆ.	ಪೈ.
೧.	ಕರ್ನಾಟಕ ಸಿಂಹಾಸನ ಸ್ಥಾಪನೆ	೧–	೦–	೦
೨.	ಕಥೆಗಳನ್ನೊಳಗೊಂಡ ಬೀರಬಲ್ಲ ಚರಿತ್ರ (ಸಚಿತ್ರ)	೧–	೬–	೦
೩.	ಛತ್ರಪತಿ ಶಿವಾಜಿ ಮಹಾರಾಜ „	೨–	೧೨–	೦
೪.	ಮಹಾರಾಣಿ ಲಕ್ಷ್ಮೀಬಾಯಿ ಝಾಂಸಿ „	೨–	೦–	೦
೫.	ಅಕ್ಬರ ಚಕ್ರವರ್ತಿ ಚರಿತ್ರ „	೧–	೧–	೦
೬.	ಚರಿತ್ರ ಸಂಗ್ರಹ ಭಾಗ ೧. „	೧–	೪–	೦
೭.	ತಿಲಕರ ಗೀತಾ ರಹಸ್ಯ	೩–	೮–	೦
೮.	ಶ್ರೀ ದಾಸಬೋಧ ಭಾಗ ೧ ೨. ೩. ...	೨–	೧೪–	೦
೯.	ರಾಷ್ಟ್ರಸಭೆಯ ಇತಿಹಾಸ	೨–	೮–	೦
೧೦.	ವಚನ ಜ್ಞಾನಸಿಂಧು	೪–	೦–	೦

ಇವಲ್ಲದೆ ನಮ್ಮಲ್ಲಿ ಎಲ್ಲಾ ತರದ ಕಾಯಿದೆ ಕಾಲೋಪಯೋಗಿ ಪುಸ್ತಕಗಳೂ ನಕಾಶೆ ಚಿತ್ರಗಳೂ ಬರವಣಗಳೂ ದೊರೆಯುವವು.

ಶ್ರೀಪಾದ ರಾಮಚಂದ್ರ ದೇಶಪಾಂಡೆ ಬಿ. ಯಸ್. ಸಿ.
ವ್ಯವಸ್ಥಾಪಕ.

ಪ್ರಖ್ಯಾತಿಪಟ್ಟ ಮಂಗಳೂರು ನಸ್ಯ.

ನಮ್ಮಲ್ಲಿ ಉತ್ತಮವಾದ ಹೊಗೆಸೊಪ್ಪಿನಿಂದಲೂ, ಸುಮಾರು ೫೦ ವರ್ಷಗಳ ಅನುಭವದಿಂದಲೂ ತಯಾರಿಸಿದ ನಸ್ಯವು ಯಾವಾಗಲೂ ರಖಂ ಆಗಿಯೂ ಚಿಲ್ಲರೆ ಆಗಿಯೂ ಮಾರಾಟಕ್ಕೆ ದೊರೆಯುತ್ತದೆ.

I ಕ್ಲಾಸ್ ರಾತ್ಲು 1ಕ್ಕೆ ರೂ. 3—0—0.
II „ „ „ 2—12—0.

ವಿ. ಪಿ. ಚಾರ್ಜು ಅಲಾಹಿದ. ಸ್ಯಾಂಪಲು ಅಪೇಕ್ಷಿಸುವವರು ೨ ಆಣೆ ಸ್ಟಾಂಪು ಕಳುಹಿಸಲಿ.

ವಿಳಾಸ:—

ಎಮ್. ಎಸ್. ಬಂಡಾರ್ಕ್ಯಾರ್ ಎಂಡ್ ಸನ್ಸ್,
ನಸ್ಯ ವ್ಯಾಪಾರಿಗಳು,
ರಥಬೀದಿ, ಮಂಗಳೂರು.

ಬಂದು ನೋಡಿರಿ! ತಿಂದುನೋಡಿರಿ!

ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ
ಪದಕವನ್ನು
ಬಹುಮಾನವಾಗಿ ಪಡೆದಿರುವ
ಎಸ್. ಪಿ. ಆಚಾರ್ಯ
ಇವರಿಂದ ತಯಾರಿಸಲ್ಪಟ್ಟ

ಉಪ್ಪಿನಕಾಯಿಗಳನ್ನು
ಬಂದು ನೋಡಿರಿ! ತಿಂದು ನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ ಕುಂಬಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನ್ನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ
ಬಂದು ನೋಡಿರಿ! ತಿಂದು ನೋಡಿರಿ!

ಇಂಡಿಯನ್ ಸ್ವೀಟ್‌ಮೀಟ್ ಮಾರ್ಟ್.

ಮನೋಲ್ಲಾಸಿನಿ ಕಾಫಿ ಕ್ಲಬ್. ಮಾರ್ಕೆಟು ರೋಡು, ಮಂಗಳೂರು. | ಅಥವಾ | ಸದಾನಂದ ಕಾಫಿ ಕ್ಲಬ್. ರಥಬೀದಿ, ಮಂಗಳೂರು.

ದಕ್ಷಿಣ ಕನ್ನಡ ಜಿಲ್ಲೆಯ
ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಶ್ರೀ ಮುಖ.

ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯರಿಂದ

ರಚಿತವಾದ

ರಾಷ್ಟ್ರಗೀತಾರತ್ನಾಕರ ೦-೮-೦.

ಲೀಲೆ ೦-೧-೦.

ಅಭಿಪ್ರಾಯಗಳು:—

ಆಧುನಿಕ ಕರ್ನಾಟಕ ವಾಙ್ಮಯ ಕ್ಷೇತ್ರದಲ್ಲಿ ಭೀಷ್ಮಾಚಾರ್ಯರೆನಿಸಿದ

ಪ್ರಾಕ್ತನ ವಿಮರ್ಶವಿಚಕ್ಷಣ, ರಾವ್ ಬಹದ್ದೂರ್

ಶ್ರೀಮಾನ್ ಆರ್. ನರಸಿಂಹಾಚಾರ್ಯ,

ಎಮ್. ಎ., ಎಮ್. ಆರ್. ಎ. ಎಸ್.

ಬೆಂಗಳೂರು.

ಇವರು ಬರೆಯುತ್ತಾರೆ:—

ಮ॥ ರಾ॥ ಶ್ರೀಮಾನ್ ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯರವರ ಸನ್ನಿಧಿಯಲ್ಲಿ. ವಿಜ್ಞಾಪನೆಗಳು. ಉಭಯ ಕುಶಲೋಪರಿ

ತಾವು ಅಭಿಮಾನದೊಡನೆ ಕಳುಹಿಸಿದ ಪುಸ್ತಕಗಳೂ ಪತ್ರವೂ ತಲಪಿದವು. ... ...

ರಾಷ್ಟ್ರಗೀತಾರತ್ನಾಕರ, ಲೀಲೆ ಈ ಗ್ರಂಥಗಳನ್ನು ಓದಿದೆನು. ಮೊದಲನೆಯದು ನಿಮ್ಮ ದೇಶಾಭಿಮಾನವನ್ನು ಘಂಟಾಘೋಷವಾಗಿ ಕನ್ನಡಿಗರಿಗೆ ಪ್ರಕಟಿಸುವುದಲ್ಲದೆ ಅವರಿಗೆ ದೇಶದಲ್ಲಿಯೂ ದೇಶಬಾಂಧವರಲ್ಲಿಯೂ ಆದರವನ್ನು ಹುಟ್ಟಿಸುವುದಕ್ಕೆ ಮುಖ್ಯವಾದ ಉಪಕರಣವಾಗಿದೆ. ಕವಿತೆಯೂ ಸರಳವಾಗಿ ಹೃದಯಂಗಮವಾಗಿದೆ.

ಲೀಲೆಯಲ್ಲಿ ನಿಮ್ಮ ಭಕ್ತಿರಸವು ತುಂಬಿ ತುಳುಕುತ್ತಿರುವುದು. ಗಂಭೀರವಾದ ಭಾವಗಳನ್ನು ಸುಲಭವಾದ ಶೈಲಿಯಲ್ಲಿ ಮನೋರಂಜಕವಾಗುವಂತೆ ತಿಳಿಸುವುದು ಸುಲಭಸಾಧ್ಯವಲ್ಲ. ಈ ಕೆಲಸವನ್ನು ನೀವು ಲೀಲಾಜಾಲವಾಗಿ ಮಾಡಿರುವಿರಿ. ಈ ಸರಸಕವಿತಾಶಕ್ತಿ ಶ್ಲಾಘಾರ್ಹವಾಗಿದೆ.

ಮುಖ್ಯವಾಗಿ ನಿಮ್ಮ ದೈವಭಕ್ತಿ, ದೇಶಾಭಿಮಾನ, ಭಾಷಾಭಿಮಾನ, ದೇಶಬಾಂಧವ ಪ್ರೀತಿ, ಇವು ಸ್ತೋತ್ರಾರ್ಹವಾಗಿವೆ.

ಇಂತೀ ವಿಜ್ಞಾಪನೆ.

ಆರ್. ನರಸಿಂಹಾಚಾರ್ಯ.

ಮಾತ್ರವಲ್ಲದೆ — ಮೈಸೂರು "ಆಸ್ಥಾನ ಮಹಾ ವಿದ್ವಾನ್" "ಕವಿತಿಲಕ" ಶ್ರೀ ಹೋಸಲೆ ಅಯ್ಯಾಶಾಸ್ತ್ರಿಗಳವರೇ ಮೊದಲಾದ ಅನೇಕಸುಪ್ರಸಿದ್ಧ ವಿದ್ವನ್ಮಣಿಗಳ ಮತ್ತು ವಿಶಿಷ್ಟ ಕರ್ನಾಟಕದ ಶ್ರೇಷ್ಠ ಪತ್ರಿಕೆಗಳ ಅತ್ಯುತ್ಕೃಷ್ಟಾಭಿಪ್ರಾಯಗಳನ್ನು ಪಡೆದಿರುವ ಅದ್ವಿತೀಯವಾದ,

"ರಾಷ್ಟ್ರಗೀತಾರತ್ನಾಕರ."—"ಲೀಲೆ."

ಎಂಬ ಗ್ರಂಥರತ್ನಗಳನ್ನು ದೇಶಬಂಧುಗಳೇ – ಓದಿ ನೋಡಿರಿ.

ಕೆ. ಎಮ್. ದಾಸಭೃಥು ಎಂಡ್ ಸನ್ಸ್ ಮಂಗಳೂರು. | ಅಥವಾ | ಶಾರದಾ ಛಾಪಖಾನೆ, ಮಂಗಳೂರು.

JUST ARRIVED

Continental Belts.

OF VARIOUS SIZES

Price Re. 1–10–0 each

Mangalore Trading Association,

Car Street, MANGALORE.

ಕುಂದಾಪುರ ಪ್ರಿನ್ಸಿಪಲ್ ಡಿಸ್ಟ್ರಿಕ್ಟ ಮುನ್ಸಿಫ್ ಕೋರ್ಟಿನಲ್ಲಿ.

O. P $\frac{62}{1925}$

ಮ್ಯಾನರ ಬಾಬುರಾಯ ಕೂಡ ರಕ್ಷಕ ತಾಯಿ ಯಮುನಮ್ಮ ವಗೈರೆಯು } ಅರ್ಜಿದಾರರು.

ನಗರ ನರಸಿಂಹ ನ್ಯಾಕ — ಎದ್ರಿ ರೆಸ್ಪೊಂಡೆಂಟ.

1924ನೇ ಇಸವಿ ಅಗೋಸ್ತು ತಿಂಗಳು ತಾ. 24ರಲ್ಲು ಗಂಗೊಳ್ಳಿ ಗ್ರಾಮದಲ್ಲಿ ಮೃತಪಟ್ಟ ನಗರ ಮುಕುಂದ ಲಕ್ಷ್ಮಣ ನ್ಯಾಕರ ಬಾಬ್ತು ಹೊರಗಿನಿಂದ ಬಹಾ ಹಣಗಳನ್ನು ವಸೂಲು ಮಾಡುವರೆ ವಾರಿಸ ಸರ್ಟಿಫಿಕೇಟು ಕೊಡಬೇಕಾಗಿ ಆತನ ಮ್ಯಾನರ ಮಕ್ಕಳ ಕಡೆಯಿಂದ ತಾಯಿ ಯಮುನಮ್ಮನು ಈ ಕೋರ್ಟಿಗೆ ಮೇಲ್ಕಂಡ ಅರ್ಜಿ ದಾಕಲು ಮಾಡಿರುವದರಿಂದ ಯಾರಾದರೂ ಆಕ್ಷೇಪವಿದ್ದರೆ ತಾ. 18-7-'25 ನೇ ದಿವಸ ಈ ಕೋರ್ಟಿನಲ್ಲಿ ಸ್ವತಹಾ ಅಥವಾ ವಕೀಲರ ಮೂಲಕ ಜ್ಯಾಹೀರುಮಾಡಿಕೊಳ್ಳಬಹುದು.

K. L. Bhandari,

Coondapur. *Pleader.*

ಆಯುರ್ವೇದ ಕಾಲೇಜು.

ಮೈಸೂರಿನಲ್ಲಿ ಈ ಕಾಲೇಜಿನ ವಿಷಯಕ್ಕೆ ಗಮನವು ಕೊಡಲ್ಪಡುವುದಕ್ಕೆ ಉಪಕ್ರಮವಾಗಿದೆ. ಕಳೆದ ಪ್ರತಿನಿಧಿ ಸಭೆಯಲ್ಲಿ ಈ ವಿಷಯವು ಪರ್ಯಾಲೋಚನೆಗೆ ತರಲ್ಪಟ್ಟಿತು. ಹಲವು ಕಾಲದಿಂದ ಸರಕಾರದವರು ಎಲ್ಲಾ ವಿಷಯಗಳಲ್ಲೂ, ಹೇಳುವಂತೆ ಈ ಬಾಬಿನಲ್ಲಿಯೂ, ಹೇಳುತ್ತಲಿರುವರು. ಮೆಡಿಕಲ್ ಇಲಾಖೆಗೆ ಸುಮಾರು ಹತ್ತು ಲಕ್ಷ ರೂಪಾಯಿಗಳ ವರೆಗೂ ಬಡ್ಜೆಟ್ಟಿನಲ್ಲಿ ಏರ್ಪಾಡಾಗಿರುವುದು. ರೋಗಿಗಳಿಂದ ಔಷಧದ ಖರ್ಚನ್ನು ತೆಗೆದುಕೊಳ್ಳುವುದಕ್ಕೂ ಕೂಡ ನಮ್ಮ ಗವರ್ನಮೆಂಟಿನವರು ಏರ್ಪಾಡುಮಾಡಿರುವರು. ಈ ಬಾಬಿನಲ್ಲಿಯೂ ಸುಮಾರು ೩೦ ಸಾವಿರ ರೂಪಾಯಿಗಳನ್ನು ವಸೂಲುಮಾಡುವರು. ಈ ನಿರ್ಬಂಧದಿಂದ ಅನೇಕರು ಆಸ್ಪತ್ರೆಯ ಪ್ರಯೋಜನ ಹೊಂದುವುದನ್ನು ಕೂಡ ಉಪೇಕ್ಷಿಸುತ್ತಾರೆ. ಇಂಗ್ಲಿಷ್ ಚಿಕಿತ್ಸೆಗೆ ಗವರ್ನಮೆಂಟಿನವರು ಉದಾರವಾಗಿ ಸಹಾಯಮಾಡುವರು. ಆಯುರ್ವೇದ ಮತ್ತು ಯುನಾನಿ ಚಿಕಿತ್ಸೆಗೆ ಸರಿಯಾದ ಸಹಾಯವನ್ನು ಮಾಡುವುದಿಲ್ಲ. ನಮ್ಮ ದೇಶದ ರೋಗಗಳಿಗೆ ನಮ್ಮ ದೇಶದ ಔಷಧಗಳು ಅಂಟುವವು. ಆದಾಗ್ಯೂ ನಮ್ಮ ದೇಶದ ಔಷಧಗಳನ್ನು ತಯಾರುಮಾಡುವುದಕ್ಕೆ ಪಾಶ್ಚಾತ್ಯ ದೇಶಗಳಲ್ಲಿರುವಂತೆ ಫಾರ್ಮಸಿಗಳೇ ಇಲ್ಲ. ಅನೇಕ ಕೋಟಿ ರುಪಾಯಿಯ ಇಂಗ್ಲಿಷ್ ಔಷಧಗಳು ನಮ್ಮ ದೇಶಕ್ಕೆ ಬರುತ್ತವೆ. ಈ ವಿಷಯಕ್ಕೆ ನೇಟಿವ್ ಸಂಸ್ಥಾನಗಳ ಗವರ್ನಮೆಂಟಿನವರೂ ಕೂಡ ಸರಿಯಾದ ಗಮನವನ್ನು ಕೊಡುವುದಿಲ್ಲ. ಆಯುರ್ವೇದ ಕಾಲೇಜುಗಳನ್ನು ನಮ್ಮ ಗವರ್ನಮೆಂಟಿನವರು ಮಾಡಿರುತ್ತಾರೆ. ಆದರೆ ಪಾಶ್ಚಾತ್ಯ ಆಸ್ಪತ್ರೆಗಳಲ್ಲಿರುವಂತೆ ವಾರ್ಡುಗಳ ಏರ್ಪಾಡಿರುವುದಿಲ್ಲ. ಕೆಮಿಕಲ್ ಏರ್ಪಾಡಿರುವುದಿಲ್ಲ. ಸರ್ಜರಿ ಏರ್ಪಾಡಿರುವುದಿಲ್ಲ. ಆಯುರ್ವೇದದ ಕಾಲೇಜಿನಲ್ಲಿ ವಿಷಯಗಳನ್ನು ತಿಳಿಸುವುದಕ್ಕೆ ಬದಲಾಗಿ ಕಂಠಪಾಠಗಳನ್ನು ಮಾಡಿಸುತ್ತಾರೆ. ಲೆಕ್ಚರುಗಳ ಮೂಲಕವೂ ಡೆಮನ್‌ಸ್ಟ್ರೇಷನ್‌ಗಳ ಮೂಲಕವೂ ತಿಳಿಸಿದ ವಿಷಯಗಳನ್ನು ಮರೆಯುವುದಕ್ಕಾಗುವುದಿಲ್ಲ. ಹಳೇ ಗ್ರಂಥಗಳಲ್ಲಿ ಇರತಕ್ಕ ಶ್ಲೋಕಗಳನ್ನು ಕಂಠಪಾಠಮಾಡಿಸಿ, ಅವರಲ್ಲಿ ತೇರ್ಗಡೆಯಾಗುವ ಏರ್ಪಾಡುಗಳನ್ನು ಮಾಡುತ್ತಾರೆ. ನಿಶ್ಚಿತವಾದ ಜ್ಞಾನವು ಬರುವಂತೆ ಏರ್ಪಾಡುಗಳು ಮಾಡಿಲ್ಲ. ಗ್ರಾಮಾಂತರಗಳಲ್ಲಿ ಚಿಕಿತ್ಸೆ ಇಲ್ಲದೆ ಎಷ್ಟೋ ಜನಗಳು ಸಾಯುವರು. ಎಷ್ಟೋ ಜನರು ರೋಗಗಳಿಂದ ಪೀಡಿತರಾಗಿರುವರು. ಇದನ್ನೆಲ್ಲಾ ತಪ್ಪಿಸುವುದಕ್ಕೆ ಯಾವ ಏರ್ಪಾಡೂ ಮಾಡಲ್ಪಟ್ಟಿಲ್ಲ. ಆಯುರ್ವೇದದ ಕಾಲೇಜಿಗೆ ಪ್ರಾಣ ಪ್ರತಿಷ್ಠೆಯು ಮಾಡಲ್ಪಡಲೆಂದು ಪಂಡಿತ ಗೋಪಾಲಾಚಾರ್ಯರವರು ೩೦,೦೦೦ ರೂಪಾಯಿಯ ವರೆಗೂ ಕೊಟ್ಟರು. ಅದು ಕೂಡ ಅವರ ಉದ್ದೇಶವನ್ನು ನೆರವೇರಿಸುವುದಕ್ಕೆ ಉಪಯೋಗಿಸಲ್ಪಡಲಿಲ್ಲ. ಸರಕಾರದವರು ಈ ವಿಷಯದಲ್ಲಿ ದೀರ್ಘ ನಿದ್ರೆಯನ್ನು ಮಾಡುತ್ತಲಿರುವರು. ಈ ವಿಷಯಕ್ಕೆ ನಮ್ಮ ಪ್ರಜೆಗಳವರ ಗಮನವು ಕೊಡಲ್ಪಡುವುದೆಂದು ನಂಬಿದ್ದೇವೆ.

(ಸಾಧ್ವಿ)

ಕರ್ನಾಟಕಸ್ಥರು ಇತ್ತ ಲಕ್ಷ್ಯಕೊಡಬೇಕು.

ಹಾರನೇರವೆಂಬಲ್ಲಿ ಶಿಕ್ಯಂಥ ವಿಜಯನಗರದ ಪ್ರತಾಪದೇವರಾಯರ ಹೆಸರಿನ ೩೪ ಭಂಗಾರದ ನಾಣ್ಯಗಳು ಮುಂಬಯಿ ಟಂಕಸಾಲೆಯಲ್ಲಿ ರೂ. ೭ಕ್ಕೆ ಒಂದರಂತೆ ಮಾರಲಿಕ್ಕೆ ಇಟ್ಟಿದ್ದಾರಂತೆ ಅವುಗಳನ್ನು ಯಾರಾದರೂ ಕರ್ನಾಟಕಸ್ಥರು ಕೊಳ್ಳುವದೂ ಅವುಗಳನ್ನು ಕಾದಿಡುವದೂ ಯೋಗ್ಯವಾಗಿರುವುದು.

(ಲೋಕಬಂಧು.)

ಪ್ರಾರಂಭ! ಶ್ರೀ ದತ್ತರಾಜ ಸಮರ್ಥ ಪ್ರಾರಂಭ!!

ಭಾದ್ರಪದ ಶುಕ್ಲ ಚೌತಿಯಿಂದ ನವೀನ ಸಚಿತ್ರ

ತಿಳಿಗನ್ನಡದ ಮಾಸಪತ್ರಿಕೆ.

ರಂಗ ಭೂಮಿ.

ಜಗನ್ನಿಯಾಮಕನಾದ ಭಗವಂತನ ಲೀಲೆಯು ಅಗಾಧವಾದುದು. ಆತನು ಈ ವಿಶ್ವವನ್ನೂ ಪ್ರಾಣಿಗಳನ್ನೂ ಸೃಷ್ಟಿಸಿ ಅವುಗಳ ಭೋಗೋಪಭೋಗಗಳಿಗಾಗಿ ಹಲವು ವಿಧವಾದ ವಸ್ತುಗಳನ್ನು ನಿರ್ಮಿಸಿರುವನು. ಮತ್ತೆ ಕ್ಷಣಿಕಸುಖ ಕಾರಣಗಳಾದ ಅವುಗಳನ್ನು ಸನಾತನ ಸುಖವನ್ನೀಯುವ ಇತರ ಸ್ವರ್ಗೀಯ ವಸ್ತುಗಳೊಂದಿಗೆ ಹೋಲಿಸಿ ನೋಡಿ, ಅವುಗಳಲ್ಲಿ ತನಗೆ ಬೇಕಾದುದನ್ನು ಆರಿಸಿಕೊಂಡು, ತನ್ನ ಇಷ್ಟಾರ್ಥಗಳನ್ನು ಪಡೆಯಲು ಹಲವು ಸಾಧನಗಳನ್ನೂ ಕೊಟ್ಟಿರುವನು. ಆ ಸಾಧನಗಳಲ್ಲಿ ಕಾವ್ಯ, ಪುರಾಣ, ಇತಿಹಾಸ, ತತ್ವಜ್ಞಾನ, ನಾಟಕ ಇವುಗಳು ಮುಖ್ಯವಾಗಿವೆ. ಆದರೆ ಇವುಗಳಲ್ಲಿಯೂ ಕೂಡ, ಸಾಮಾನ್ಯ ಜನತೆಯ ಮನಸ್ಸಿನ ಮೇಲೆ ಪರಿಣಾಮವನ್ನುಂಟುಮಾಡಿ, ಜನತೆಗೆ ಬೇಸರಬಾರದಂತೆ ಮೇಲಿಂದ ಮೇಲೆ ತನ್ನ ಶಕ್ತಿಯ ಬಲದಿಂದ ಸಮಾಜವನ್ನು ಜಾಗೃತಿಯ ಮಾರ್ಗದ ಕಡೆಗೆ ತಿರುಗಿಸುವ ಪ್ರಬಲ ಸಾಧನವೆಂದರೆ ನಾಟಕವೇ ಎಂದು ಯಾರು ತಾನೆ ಹೇಳಲಿಕ್ಕಿಲ್ಲ! ನಾಗರಿಕತೆಯ ಸುಳಿವೆ ಇಲ್ಲದ ಅನೇಕ ಹಳ್ಳಿಪಳ್ಳಿಗಳಲ್ಲಿ ಕೂಡ ಪ್ರಚಾರದಲ್ಲಿರುವ ಭಾಗವತರ ಆಟ, ತಾಳಮದ್ದಳೆ, ಯಕ್ಷಗಾನ ಇತ್ಯಾದಿಗಳ ಪ್ರಸಂಗಗಳ ಪ್ರದರ್ಶನವೆ ಇದಕ್ಕೆ ನಿದರ್ಶನವಾಗಿದೆ. ಆದುದರಿಂದಲೆ ಇಂಥ ಪ್ರಸಂಗಗಳಲ್ಲಿ ಹಿಂದಣ ಸಮಯದಲ್ಲಿ ತತ್ವವೇತ್ತರೂ ವಿದ್ವಾಂಸರೂ ಆದಂಥವರು ನೀತಿ ಮತ್ತೆ ಇತರ ಬೋಧಕ ವಿಚಾರಗಳನ್ನು ಮನೋರಂಜಕವೂ, ಪರಿಣಾಮಕಾರಕವೂ ಆದ ರೀತಿಯಲ್ಲಿ ಸಮಾಜಕ್ಕೆ ಬೋಧಿಸಲು ರಂಗಭೂಮಿಯೇ ಯೋಗ್ಯವಾದ ಸಾಧನಕ್ಷೇತ್ರವೆಂದು ತಿಳಿದಿದ್ದರು. ಆದರೆ ಈಗ ಅಂಥ ಪವಿತ್ರವಾದ ಬೋಧಪ್ರದವಾದ ರಂಗಭೂಮಿಯು ಕೇವಲ ಮನೋರಂಜಕ ಸ್ಥಳವೆಂದು ಸಾಮಾನ್ಯ ಭಾವನೆಯು ಹಬ್ಬಿರುವದಕ್ಕೆ ನಮ್ಮ ಕರ್ನಾಟಕದ ರಂಗಭೂಮಿಯು ಕಾಲಕ್ಕನುಸಾರವಾಗಿ ಪ್ರಗತಿಯ ಸಾಧನೆಯನ್ನು ಮಾಡದಿದ್ದುದೇ ಕಾರಣವೆಂದು ತಿಳಿದುಬರುವದು. ಈ ವಿಚಾರದಲ್ಲಿ ಬಂಗಾಳ ಮತ್ತು ಮಹಾರಾಷ್ಟ್ರ ಪ್ರಾಂತದವರು ಹಲವರು ಪ್ರಯತ್ನದಿಂದ ರಂಗಭೂಮಿಯನ್ನು ಸುಧಾರಿಸಿ, ನಟವರ್ಗಕ್ಕೆ ಗೌರವವನ್ನು ತಂದುಕೊಟ್ಟು, ನಾಟ್ಯಕಲಾಸಾಹಿತ್ಯಾಭಿವೃದ್ಧಿಯನ್ನು ಮಾಡುತ್ತಿರುವದನ್ನು ನೋಡಿದರೆ, ರಂಗಭೂಮಿಯಿಂದ ಸಮಾಜದಲ್ಲಿಯೂ ಎಷ್ಟು ಜಾಗೃತಿಯನ್ನುಂಟುಮಾಡಿರಬಹುದೆಂದು ಕೌತುಕವೆನಿಸದಿರಲಾರದು. ಈ ವಿಚಾರದಲ್ಲಿ ನಮ್ಮ ಕರ್ನಾಟಕದಲ್ಲಿಯೂ ಕೆಲವರು ಸ್ವಲ್ಪಮಟ್ಟಿಗೆ ಪ್ರಯತ್ನಗಳನ್ನು ಮಾಡಿರಬಹುದು. ಆದರೆ ಕರ್ನಾಟಕ ರಂಗಭೂಮಿಯು ದುಶ್ಯಕ ಸ್ಥಿತಿಯಿಂದಲೂ, ಈ ವಿಚಾರದಲ್ಲಿ ವೃತ್ತಪತ್ರಕಾರರ ಉದಾಸೀನತೆಯಿಂದಲೂ ಆಗಿಂದಾಗ್ಗೆ ಇಂಥ ಪ್ರಯತ್ನಗಳ ಸುದ್ದಿಯೂ ಕೂಡ ಯಾವುದಾದರೂ ರೀತಿಯಿಂದ ಜನತೆಯಲ್ಲಿ ಹರಡದಿರುವುದಕ್ಕೆ ಕಾರಣವಾಗಿರುವುದು. ಇಂಥಹ ನ್ಯೂನತೆಯೊಂದನ್ನು ಪರಿಹರಿಸಲೆಳಿಸಿ, ಕರ್ನಾಟಕದವರ ಪ್ರೀತ್ಯಾದರಗಳಿಗೆ ಪಾತ್ರವಾಗಿರುವ ಶ್ರೀ ದತ್ತಾತ್ರೇಯ ನಾಟಕ ಮಂಡಳಿ, ಗದಗ ಇವರ ಆಶ್ರಯದಲ್ಲಿ "ಕರ್ನಾಟಕ ರಂಗಭೂಮಿ" ಎಂಬ ಸುಪ್ರಸಿದ್ಧ ಜಯಕರ್ನಾಟಕ ಮಾಸಪತ್ರಿಕೆಯ ಆಕಾರವು, ಅಂದವಾದ ಚಿತ್ರಗಳುಳ್ಳ, ಸುಂದರವಾದ ಮುದ್ರಣದಿಂದ ಶೋಭಿಸುವ, ನವೀನ ಮಾಸಪತ್ರಿಕೆಯೊಂದನ್ನು ಇದೇ ವರ್ಷ ಭಾದ್ರಪದ ಶುಕ್ಲ ಚೌತಿಯಿಂದ ಪ್ರಕಟಿಸಬೇಕೆಂದು ನಿಶ್ಚಯಿಸಲಾಗಿದೆ. ಇದರಲ್ಲಿ ನಮ್ಮ ಪ್ರಾಂತದ ಪ್ರಸಿದ್ಧ ನಟರು, ನಾಟಕಕಾರರು, ಅವರ ಸುಪ್ರಸಿದ್ಧ ಗ್ರಂಥಗಳು, ಕರ್ನಾಟಕ ರಂಗಭೂಮಿಯ ಇತಿಹಾಸ, ಅದರ ಪ್ರಗತಿಯ ವಿಚಾರ, ನಾಟಕಕಲೆ, ವಿವಿಧ ಅಭಿನಯ ವಿಚಾರ, ರಂಗಭೂಮಿಯ ಸುಧಾರಣೆ ಇತ್ಯಾದಿ ಇತ್ಯಾದಿಯಾಗಿ ಹಳ್ಳಿನಾಡಿನ ಅಭಿನಯಕಾರರಿಗೂ, ಬೋಧಪ್ರದವಾದ ಮನೋರಂಜನೆಯನ್ನಪೇಕ್ಷಿಸುವ ಜನಸಾಮಾನ್ಯರೆಲ್ಲರಿಗೂ ಉಪಯುಕ್ತವಾದ ಹಲವು ವಿಚಾರಗಳು ಸಚಿತ್ರವಾಗಿ ಇದರಲ್ಲಿ ಬರುವವು. ಅಲ್ಲದೆ ಬಂಗಾಳ, ಮಹಾರಾಷ್ಟ್ರ, ಕರ್ನಾಟಕ ಮೊದಲಾದ ಪ್ರಾಂತಗಳ ಸುಪ್ರಸಿದ್ಧ ನಟರ ಅಭಿನಯ ಚಿತ್ರಗಳೂ ಬರುವವು. ಇಂಥ ಸರ್ವಾಂಗಸುಂದರವಾದ ಸಚಿತ್ರ ಮಾಸಪತ್ರಿಕೆಯು ಬಡವರು ಬಲ್ಲಿದರೆಂಬ ಭೇದವಿಲ್ಲದೆ ಸರ್ವಸಾಮಾನ್ಯರಿಗೂ ದೊರೆಯಬೇಕೆಂಬ ಉದ್ದೇಶದಿಂದ ಇದರ ವರ್ಗಣಿ (ಚಂದ)ಯನ್ನು ಕೇವಲ ಮೂರೇ ರೂಪಾಯಿ ಇಡಲಾಗಿದೆ. ಇದಕ್ಕೆ ಚಂದಾದಾರರಾಗಲಪೇಕ್ಷಿಸಿ ಹೆಸರನ್ನು ದಾಖಲು ಮಾಡಿಸಿದವರ ಸಂಖ್ಯೆಗಿಂತ ಸ್ವಲ್ಪವೆ ಹೆಚ್ಚು ಪ್ರತಿಗಳನ್ನು ಮುದ್ರಿಸುವುದರಿಂದ ಚಂದಾದಾರರಾಗುವವರು ಈ ದಿನವೆ ತಂತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆದು ಈ ಕೆಳಗಿನ ಯಾವುದಾದರೊಂದು ವಿಳಾಸಕ್ಕೆ ಕೂಡಲೆ ಕಳುಹಿಸಬೇಕು. ಪತ್ರಿಕೆಯು ಹೊರಟ ಕೂಡಲೆ ಪ್ರಥಮ ಸಂಚಿಕೆಯು ಅವರ ಹೆಸರಿಗೆ ವ್ಹಿ. ಪಿ. ಯಾಗಿ ಕಳುಹಿಸಲ್ಪಡುವುದು. ಇಡೀ ಕರ್ನಾಟಕದ ಹಳ್ಳಿಪಳ್ಳಿಗಳಲ್ಲಿ ಕೂಡ ಪ್ರಚಾರವಾಗುವ ಈ ಪತ್ರಿಕೆಯಲ್ಲಿ ಜಾಹೀರಾತಿಗೆ ಎಡೆ ಇದೆ. ದರಗಳಿಗೆ ಬರೆಯಿರಿ.

ವಿಳಾಸ:—

(೧) ಗದಗಿನ ಶ್ರೀ ದತ್ತಾತ್ರಯ ನಾಟಕ ಮಂಡಳಿ, ಮೊ. ಧಾರವಾಡ.

(೨) "ಆನಂದಾಶ್ರಮ" ಬಸವನಗುಡಿ, ಬೆಂಗಳೂರ ಸಿಟಿ.

(೩) ವ್ಯವಸ್ಥಾಪಕ "ಕರ್ನಾಟಕವೃತ್ತ" ಧಾರವಾಡ.

(೪) ವಾಗ್ವಿಲಾಸ ಬುಕ್ ಡಿಪೊ, ಹುಬ್ಬಳ್ಳಿ

ಮುಂಡಾಜೆಯಲ್ಲಿ ವೈದಿಕ ಧರ್ಮ ಪ್ರಚಾರ.

—: ಹದಿನೇಳು ಜನರ ಶುದ್ಧಿ :—

ಧರ್ಮಪತಿತೋದ್ಧಾರ ಸಭೆಯ ಪರವಾಗಿ ಶ್ರೀಯುತ ಪಂಡಿತ ಧರ್ಮದೇವ ಸಿದ್ಧಾಂತಾಲಂಕಾರರೂ, ಶ್ರೀಯುತ ಮೋಹನಪ್ಪ ತಿಂಗಳಾಯರೂ ಉಪ್ಪಿನಂಗಡಿ ತಾಲೂಕು ಮುಂಡಾಜೆ ಚಿತ್‌ಪಾವನ ಬ್ರಾಹ್ಮಣರ ವಾಡೆಗೆ ಕಳೆದ ಜೂನ್ ತಾ. ೩೦ರಲ್ಲಿ ಧರ್ಮಪ್ರಚಾರಕ್ಕಾಗಿ ಹೋಗಿದ್ದರು. ಶ್ರೀಮಾನ್ ಭಿಡೆ ನಾರಾಯಣಭಟ್ಟರು ಮತ್ತು ನರಸಿಂಹ ಕೃಷ್ಣಭಿಡೆಯವರ ಪ್ರೋತ್ಸಾಹದಿಂದ ಇಲ್ಲಿಯ ಗುಂಡಿ ಲಕ್ಷ್ಮೀನಾರಾಯಣ ದೇವಸ್ಥಾನದಲ್ಲಿ ಚಿತ್‌ಪಾವನ ಬ್ರಾಹ್ಮಣರ ಒಂದು ಸಭೆಯು ಜರಗಿತು. ಈ ಸಭೆಯಲ್ಲಿ ಶ್ರೀಯುತ ಧರ್ಮದೇವಜಿಯವರು "ವೈದಿಕ ಸಂದೇಶವೂ, ಬ್ರಾಹ್ಮಣರ ಕರ್ತವ್ಯವೂ" ಎಂಬ ವಿಷಯವಾಗಿ ಸ್ಫೂರ್ತಿದಾಯಕವಾದ ಭಾಷಣ ಮಾಡಿದರು. ಅನಂತರ ಸಭಿಕರಲ್ಲಿ ಕೆಲವು ಜಿಜ್ಞಾಸುಗಳು ಬಾಲವಿವಾಹ, ಚಾತುರ್ವರ್ಣ್ಯ, ಅಸ್ಪೃಶ್ಯತೆ, ವಿಧವಾವಿವಾಹ, ಶುದ್ಧಿ ಸಂಸ್ಕಾರ ಇತ್ಯಾದಿ ವಿಷಯಗಳಲ್ಲಿ ಕೇಳಿದ ಅನೇಕ ಪ್ರಶ್ನೆಗಳಿಗೆ ಶ್ರುತಿ, ಸ್ಮೃತಿ, ಶಾಸ್ತ್ರಗಳ ಆಧಾರದಿಂದ ಸಮಾಧಾನಕರವಾದ ಉತ್ತರಗಳನ್ನು ಕೊಟ್ಟು ಸಂಶಯ ನಿವೃತ್ತಿಮಾಡಿದರು. ತರುವಾಯ "ಹಿಂದೂಧರ್ಮದ ಅಧಃಪತನ"ದ ವಿಷಯವಾಗಿ ಶ್ರೀಯುತ ಮೋಹನಪ್ಪ ತಿಂಗಳಾಯರು ಭಾಷಣಮಾಡಿ ದಿನೇ ದಿನೇ ಕ್ಷೀಣಿಸುತ್ತ ಹೋಗುವ ಹಿಂದೂಧರ್ಮದ ಉದ್ಧಾರಕ್ಕಾಗಿ ಪ್ರತಿ ಒಬ್ಬರೂ ಯತ್ನಿಸಬೇಕಾಗಿ ಪ್ರಾರ್ಥಿಸಿಕೊಂಡರು.

ಜೂನ್ ತಾ. ೩೧ರಲ್ಲಿ ಇಲ್ಲಿಗೆ ಸಮೀಪ ಧುಂಬೆಟ್ಟು ಎಂಬಲ್ಲಿ ಶ್ರೀಯುತ ಮಹಾದೇವ ಹೆಬ್ಬಾರರ ಆಶ್ರಯದಿಂದ ಹದಿನೇಳು ಜನ ಆದಿದ್ರಾವಿಡ ಕ್ರೈಸ್ತರನ್ನು ವೈದಿಕ ಶುದ್ಧಿ ಸಂಸ್ಕಾರದ ಮೂಲಕ ಶುದ್ಧಿಗೊಳಿಸಿ ಹಿಂದೂ ಧರ್ಮ ದೀಕ್ಷೆಯನ್ನು ಕೊಟ್ಟರು. ಧರ್ಮಪತಿತೋದ್ಧಾರಕ ಕಾರ್ಯಕ್ಕಾಗಿ ಶ್ರೀಯುತರುಗಳಾದ ಭಿಡೆ ನಾರಾಯಣ ಭಟ್ಟರು ರೂ. ೫, ಮಹದೇವ ಹೆಬ್ಬಾರರು ರೂ. ೧-೪-೦ ದಾನಕೊಟ್ಟರು.

ಜಾನ್ವಾರಿನ ಮೇಲೆ ಫೀಸು.

ದಕ್ಷಿಣಕನ್ನಡಾ ಜಿಲ್ಲಾ ಉಪ್ಪಿನಂಗಡಿ ತಾಲೂಕು ಸುಬ್ರಮಣ್ಯ ಗ್ರಾಮದ ಕುಲುಗುಂಡದಲ್ಲಿ ವರ್ಷಂಪ್ರತಿ ಆಗುವ ಜಾನ್ವಾರು ಸಂತೆಯು ಈ ವರುಷ ೧೯೨೫ನೇ ಇಸವಿ ಅಕ್ಟೋಬರ ೩ರಿಂದ ನವಂಬರ ೧೫ನೇ ತಾರೀಕು ವರೆಗೆ ಜರಗುವುದು. ಅಂದರೆ ಸಂತೆಯು ಕಾರ್ತಿಕ ಪೂರ್ಣಿಮಾ ದಿವಸ ಪ್ರಾರಂಭವಾಗಿ ಸುಬ್ರಮಣ್ಯ ಅಮವಾಸೆ ದೀಪೋತ್ಸವದ ಪರಿಯಂತ ಜರಗುವುದು. ಸಂತೆಗೆ ತಂದ ಪ್ರತಿ ಒಂದು ಜಾನ್ವಾರಿನ ಮೇಲೆ ಎರಡಾಣೆ ಫೀಸು ವಸೂಲ್ಮಾಡಲಾದೀತು.

ಪುತ್ತೂರು, 12—6—1925. } ಕೆ. ಎಸ್. ಜೋಯಿ ಶೆಟ್ಟಿ, ರೆವಿನ್ಯು ಡಿವಿಜನಲ್ ಆಫೀಸರ.

ವಿದೇಶವರ್ತಮಾನ.

— ಚೀನಾದ ಶೈಕಿ ಶಾಂಘಾಯಿದಲ್ಲಿ ಗಲಾಟೆಯಾಗಿರುವಾಗ ಗುಂಡುಗಳು ಏನು ಹಾರಿಸಲ್ಪಟ್ಟವೊ ಆ ಬಗ್ಗೆ ತನಿಖೆ ಮಾಡಲು ಕಮಿಟಿಯು ನೇಮಕ ಪಟ್ಟಿದೆ. ಶಾಂಘಾಯಿದ ಈಗಿನ ಪರಿಸ್ಥಿತಿಯು ಶಾಂತವಾಗಿದೆ.

— ಬ್ರಿಟಿಷ್ ಸರಕಾರದಿಂದ ಚೀನಾ ಸರಕಾರಕ್ಕೆ ಒಂದು ಲಿಖಿತವು ಕಳುಹಿಸಲ್ಪಟ್ಟಿದೆ. ಚೀನಾದ ಪೋಲಿಸರು ದಂಗೆಯ ಸಮಯದಲ್ಲಿ ಯಾವ ಯಾವ ರೀತಿಯಿಂದ ವರ್ತಿಸಿದರು, ಈ ಕಾರಣದಿಂದ ಎಷ್ಟು ನಷ್ಟವು ಒದಗಿದೆ, ಆ ನಷ್ಟವನ್ನು ಚೀನಾ ಸರಕಾರವು ಭರಾಯಿಸಿಕೊಡುವುದು ಹೇಗೆ ಅಗತ್ಯವಿದೆ ಮುಂತಾದ ಸಂಗತಿಗಳನ್ನು ಆ ಲಿಖಿತದಲ್ಲಿ ಬ್ರಿಟಿಷ್ ಸರಕಾರದವರು ತೋರಿಸಿದ್ದಾರೆ.

— ಚೀನಾದವರನ್ನು ಮದತ್ತು ಮಾಡಲು ರುಶ್ಶನರು ಬಂದಿರುವರು. ಇವರು ಅಲ್ಲಿಯ ಯುದ್ಧದ ಹಡಗುಗಳನ್ನು ದುರುಸ್ತಿ ಮಾಡಲು ನೇಮಿಸಲ್ಪಟ್ಟಿದ್ದಾರೆ.

— ಬೊಲ್‌ಶೆವಿಕರ ಶೈಕಿಯವರಿಗಿರಬೇಕೆಂಬ ಸಂಶಯದಿಂದ ರುಶ್ಶನ್ ದಂಪತಿಯರನ್ನು ಕೈದುಮಾಡಿದ್ದಾರೆ. ಇವರ ಬಳಿಯಲ್ಲಿ ಬೊಲ್‌ಶೆವಿಕ್ ಪಕ್ಷದ ಪ್ರಸಾರಣೆಯನ್ನು ಮಾಡುವ ಕೆಲವು ವಾಙ್ಮಯವು ದೊರಕಿದೆ.

— ಚೀನಾದಲ್ಲಿ ಗಡಿಬಿಡಿಯುಂಟಾದ ಸಂಬಂಧ ಹಿಂದಿ ಮತ್ತು ಬ್ರಿಟಿಷ್ ಸೈನ್ಯಕ್ಕೆ ಸಿದ್ಧವಿರಬೇಕೆಂದು ಹಬ್ಬಿಸಿದ ವಾರ್ತೆಯು ಸುಳ್ಳಾಗಿದೆ ಎಂದು ಈಗ ಸರಕಾರವು ಪ್ರಕಟಪಡಿಸಿದೆ.

— ಹೆಲಿಫಿಕ್ಸಿನಿಂದ ೩೦೦ ಮೈಲು ಪೂರ್ವಕ್ಕೆ ಒಂದು ಹಡಗವು ಮುಳುಗಿ ಕಪ್ತಾನನೂ ಮತ್ತು ೧೩ ಖಲಾಸಿಗಳೂ ಮುಳುಗಿದರು.

— ಜಪಾನಿನಲ್ಲಿ ಪುನಃ ಭೂಕಂಪವಾಗಿ ಬಹಳ ನಷ್ಟವು ಸಂಭವಿಸಿದೆ.

— ಸೋಫಿಯದಲ್ಲಿ ನಡೆದ ಅತ್ಯಾಚಾರಕ್ಕಾಗಿ ಮೂರು ಸಾವಿರ ಜನರು ಜೈಲಿನಲ್ಲಿ ಬಿದ್ದಿರುವರು. ಅನೇಕರಿಗೆ ಫಾಶಿಯ ಶಿಕ್ಷೆಯು ವಿಧಿಸಲ್ಪಟ್ಟಿದೆ.

— ಉತ್ತರ ಧ್ರುವದ ಪ್ರಾಂತದಲ್ಲಿ ಇನ್ನೂ ಅಜ್ಞಾತವಾಗಿ ಇರುವ ಒಂದು ಪ್ರದೇಶವಿದೆ ಎಂಬ ತಿಳುವಳಿಕೆಯಿಂದ ಅಮೇರಿಕದ ಮಿ॥ ಡೊನಾಲ್ಡ ಮೆಕ್‌ಮಿಲನ ಎಂಬವರು ಅಮೇರಿಕನ್ ಸರಕಾರದ ಸಹಾಯದಿಂದ ಸಂಶೋಧನದ ಕೆಲಸವನ್ನು ಪ್ರಾರಂಭಿಸಿರುವರು.

— ಇಟಾಲಿಯ ಅಂಬೋಣಗಳನ್ನು ಅಫಘಾನದ ಸರಕಾರವು ಒಪ್ಪಲಿಲ್ಲವಾದ್ದರಿಂದ ಇಟಲಿಯು ರೇಗಿ ಹೋಗಿ ಅಫಘಾನ ಬೇಂಕಿನೊಳಗಿನ ಠೇವಣಾತಿಗಳನ್ನೂ, ಅಫಘಾನಿಗಾಗಿ ತರಿಸಲು ಬರೆದಿರುವ ಶಸ್ತ್ರಗಳನ್ನೂ ಜಪ್ತಿಮಾಡಿದೆ.

— ಮದ್ರಾಸಿನಿಂದ ಸ್ವರಾಜ್ಯ ಚಳವಳದ ಪ್ರಸಾರಕ್ಕಾಗಿ ಹೊರಟ ಶ್ರೀ. ಸತ್ಯಮೂರ್ತಿಯವರು ವಿಲಾಯತಿಗೆ ತಲಪಿದರು.

— ಲೋರ್ಡ ರೆಡಿಂಗರಿಗೆ ವಿಲಾಯತಿಯಲ್ಲಿ ಔತನಗಳು ನಡೆಯುತ್ತಿದ್ದಾವೆ. ಲಂಡನಿನಲ್ಲಿಯ ಬ್ರಿಟಿಷ್ ಇಂಡಿಯನ್ ಯೂನಿಯನಿನಲ್ಲಿ ಆದ ಔತನಕ್ಕೆ ಡ್ಯೂಕ್ ಒಫ್ ಕೊನಟರೂ, ಬರೋಡಾ ಮಹಾರಾಜರೂ ಜೋಧಪುರದ ಮಹಾರಾಜರೂ, ಒಲಿವಿಯರ ಮುಂತಾದವರು ಹಾಜರಿದ್ದರು.

— ಬಾದಶಹ ಪಂಚಮ ಜೋರ್ಜರು ಹಿಂದುಸ್ಥಾನಕ್ಕೆ ಬರುವವರಿದ್ದಾರೆಂದು ವಿಲಾಯತಿಯ ಬಾತಮಿದಾರನು ಪ್ರಕಟಿಸುವನು.

— ಲೋರ್ಡ ಬರ್ಕನಹೆಡ್ಡರೂ ಕೂಡ ಬಾದಶಹರ ಸಂಗಡ ಬರುವರೆಂದೂ ಪ್ರಕಟವಾಗಿದೆ.

ಒಳದೇಶ ವರ್ತಮಾನ.

— ಪಂಜಾಬದಲ್ಲಿ ಅತಿವೃಷ್ಟಿಯುಂಟಾಯಿತು. ಲಾಹೋರ ಮತ್ತು ಮಧ್ಯಪಂಜಾಬಿನಲ್ಲಿ ಈ ಅತಿವೃಷ್ಟಿಯುಂಟಾಯಿತು. ಈ ಅತಿವೃಷ್ಟಿಯಿಂದ ರೈಲಿನ ಕಂಬಿಗಳು ಕಿತ್ತುಹೋಗಿವೆ. ಲಾಹೋರದ ಉತ್ತರಕ್ಕೆ ೪೩ ಮೈಲು ರೈಲ ರಸ್ತೆಯು ಹಾಳಾಗಿದೆ.

— ದಿಲ್ಲಿಯಲ್ಲಿ ಹಿಂದು ಸಭೆಯವರು ಬಕ್ರೀದಿನ ಸಮಯದಲ್ಲಿ ಕೊಲ್ಲುವ ದನಗಳ ಮೆರವಣಿಗೆಯನ್ನು ತೆಗೆಯಬಾರದೆಂದು ಕೇಳಿಕೊಂಡರೂ ಮುಹಮ್ಮದೀಯರು ಅದನ್ನು ಗಮನಿಸಲಿಲ್ಲ. ಈ ಬಗ್ಗೆ ಹಿಂದುಸಭೆಯವರು ದುಃಖಪ್ರದರ್ಶನವನ್ನು ಮಾಡಿರುವರು.

— ಇದೆ ಸಂದರ್ಭದಲ್ಲಿ ಆರ್ಯಸಮಾಜದ ಮುಖಂಡರಾದ ಶ್ರದ್ಧಾನಂದ ಸ್ವಾಮಿಜಿಯವರು ಒಂದು ವಿಜ್ಞಾಪನೆಯನ್ನು ಹೊರಡಿಸಿರುವರು. ಹಿಂದುಗಳೂ, ಮುಹಮ್ಮದೀಯರೂ ತಮ್ಮತಮ್ಮೊಳಗಿನ ಉದ್ಧಟರನ್ನೂ ಕಲಹಪ್ರಿಯರನ್ನೂ ಶಾಂತಪಡಿಸಿ ಮುಂದೆ ಯಾವ ಬಾಧಕವೂ ಉಂಟಾಗದಂತೆ ಜಾಗ್ರತೆ ತೆಕ್ಕೊಳ್ಳಬೇಕೆಂದು ಆ ವಿಜ್ಞಾಪನೆಯಲ್ಲಿ ಸ್ವಾಮಿಜಿಯವರು ವಿನಂತಿಮಾಡಿಕೊಂಡಿರುವರು.

— ಕಲಕತ್ತೆಯ ಚೀಫ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು "ಛಾತ್ರ ಸಮಾಜದ ಉತ್ಕ್ರಾಂತಿಯೂ, ವಿದ್ಯಾರ್ಥಿ ವರ್ಗವೂ" ಎಂಬ ಹೆಸರಿನ ಒಂದು ಪುಸ್ತಕವನ್ನು ಬರೆದವರಿಗೂ, ಪ್ರಕಟಿಸಿದವರಿಗೂ ಆ ಪುಸ್ತಕವು ರಾಜದ್ರೋಹಕರವಾಗಿದೆ ಎಂದು ಆರೋಪವನ್ನಿಟ್ಟು ಲೇಖಕರಿಗೆ ೬ ತಿಂಗಳೂ ಪ್ರಕಾಶಕರಿಗೆ ೪ ತಿಂಗಳೂ ಕಠಿಣ ಶಿಕ್ಷೆಯನ್ನು ವಿಧಿಸಿದರು.

— ಮಿಸೆಸ್ ಬೆಸೆಂಟಮ್ಮನವರು ವಿಲಾಯತಿಯ ಪಾರ್ಲಿಮೆಂಟಿನಲ್ಲಿ ತರಲಿರುವ "ಕೋಮನ್ ವೆಲ್ತ ಒಫ್ ಇಂಡಿಯಾ" ಎಂಬೀ ಬಿಲಿನ ವಿಷಯವಾಗಿ ಹಿಂದುಸ್ಥಾನದೊಳಗಿನ ಎಲ್ಲ ರಾಜಕೀಯ ಪಕ್ಷದವರಿಂದ ಒಂದು ಅರ್ಜಿಯನ್ನು ಕಳುಹಿಸಲಾಗಿದೆ. ಶ್ರೀನಿವಾಸಶಾಸ್ತ್ರಿ, ಜಯಕರ, ಖಾಪರ್ಡೆ ಮುಂತಾದ ಎಲ್ಲ ಪಕ್ಷದ ಗೃಹಸ್ಥರು ಈ ಅರ್ಜಿಗೆ ದಸ್ತಕತುಗಳನ್ನು ಕೊಟ್ಟಿರುವರು.

— ತ್ರಾವಣಕೋರ ಸಂಸ್ಥಾನದಲ್ಲಿ ನೇಮಿಸಲ್ಪಟ್ಟ ಹೊಸ ಕೌನ್ಸಿಲಿನ ಅಧಿವೇಶನವು ಪ್ರಾರಂಭವಾಗಿದೆ.

— ಹೆರೊಲ್ಡ ಸ್ಮಿಸರ ಎಂಬ ಒಬ್ಬ ಯುರೋಪೀಯನು ಮೋಸದಿಂದಲೂ, ಕಳುವಿನಿಂದಲೂ ಮುಂಬಯಿಯಲ್ಲಿ ಅನೇಕ ಫರ್ಮುಗಳಿಗೆ ನಷ್ಟ ಹಾಕಿದ್ದನು. ಇವನಿಗೆ ಮೆಜಿಸ್ಟ್ರೇಟರು ಮೇಲಿನ ಎರಡೂ ಅಪರಾಧಗಳಿಗೆ ಪ್ರತ್ಯೇಕ ಪ್ರತ್ಯೇಕವಾಗಿ ಕಠಿಣ ಶಿಕ್ಷೆಯನ್ನೂ, ದಂಡವನ್ನೂ ವಿಧಿಸಿರುವರು.

— ಮುಂಬಯಿಯ ಟೈಮ್ಸ ಒಫ್ ಇಂಡಿಯಾ ಪತ್ರಿಕೆಯು ಮ. ಗಾಂಧಿಗಳು ಶ್ರೀ. ಅರವಿಂದ ಘೋಷರನ್ನು ಹಿಂದೂಸ್ಥಾನದ ನಾಯಕತ್ವವನ್ನು ವಹಿಸಲು ಆಮಂತ್ರಿಸಿದ್ದಕ್ಕಾಗಿ ಅರವಿಂದ ಘೋಷರನ್ನು ಯದ್ವಾತದ್ವಾ ಬೈದು ಬರೆದಿತ್ತು. ಈ ಎಂಗ್ಲೊ ಇಂಡಿಯನ್ ಪತ್ರಿಕೆಯ ಈ ಕುತ್ಸಿತ ಲೇಖನವನ್ನು ಅನೇಕ ಪತ್ರಿಕೆಗಳು ನಿಷೇಧಿಸುತ್ತಿದ್ದಾವೆ.

— ಬಂಗಾಳ ಸ್ವರಾಜ್ಯಪಕ್ಷದ ನಾಯಕತ್ವದ ಸ್ಥಾನಕ್ಕೆ ಶ್ರೀಯುತ ಸೇನಗುಪ್ತರನ್ನು ಸಭಾಸದರು ಆರಿಸಿರುವರು.

— ಕರಾಚಿಯಲ್ಲಿಯ ಭಯಂಕರ ಮಳೆಯು — ಕರಾಚಿ ತಾ. ೨೫ ನಿನ್ನೆ ರಾತ್ರಿ ಒಂಭತ್ತು ಘಂಟೆಯ ಸುಮಾರಕ್ಕೆ ಭಯಂಕರ ಬಿರುಗಾಳಿಯು ಸುರವಾಯಿತು. ಮತ್ತು ಆ ಮೇಲೆ ಒಂದು ತಾಸಿನ ವರೆಗೆ ದೊಡ್ಡ ಮಳೆಯು ಬಿತ್ತು. ಮಳೆಗಾಲದ ಕಾಲಕ್ಕೆ ಭಯಂಕರ ಗಾಳಿಯು ಮತ್ತು ಮಿಂಚಿನ ಪ್ರಕಾಶವು ಒಂದೇ ಸಮನೇ ಚಾಲೂ ಇತ್ತು. ಶಹರದ ಅನೇಕ ಭಾಗಗಳಲ್ಲಿ ಸಾಧಾರಣ ಪ್ರಮಾಣದಲ್ಲಿ ಲುಕ್ಸಾನು ಆಗಿರುತ್ತದೆ. ಇನ್ನೂ ಮಳೆಯು ಕಡಿಮೆಯಾಗಿಲ್ಲ.

— ಒರಿಸ್ಸ ದೇಶದಲ್ಲಿ ಮೂರು ದಿನಗಳು ಅವಿಚ್ಛಿನ್ನವಾಗಿ ಮಳೆಸುರಿದುದರಿಂದ ಕಟಕ ಪಟ್ಟಣದ ಬೀದಿಗಳೆಲ್ಲವೂ ಜಲಮಯವಾಗಿ ಅನೇಕ ಮನೆಗಳು ನೆಲಸಮವಾಗಿವೆ. ಊಟವಸತಿಗಳಿಗೆ ಅನಾನುಕೂಲವಾಗಿ ತೊಂದರೆಪಡುತ್ತಿರುವ ಜನರಿಗೆ ಸರಕಾರದವರು ಸಹಾಯವನ್ನು ಒದಗಿಸುತ್ತಿರುವರು.

— ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ಸಿನ ಮುಂದಿನ ಅಧಿವೇಶನವು ಕಾನ್‌ಪುರದ ಮಧ್ಯಭಾಗದಲ್ಲಿರುವ ಫೂಲ್‌ಬಾಗ್ ಎಂಬಲ್ಲಿ ನಡೆಯುವುದರಿಂದ ಈಗಿನಿಂದಲೂ ಸಕಲಸನ್ನಾಹಗಳೂ ನಡೆಯುತ್ತಿವೆ. ಆಮಂತ್ರಣ ಕಮಿಟಿಯ ಅಧ್ಯಕ್ಷರನ್ನೂ ಸೆಕ್ರೆಟರಿಗಳನ್ನೂ ಈ ತಿಂಗಳಲ್ಲಿ ಚುನಾಯಿಸುವವರಾಗಿದ್ದಾರೆ.

— ಕುಚ್‌ಬಿಹಾರದ ಏಕ್ಸ್‌ರ್ ನಿತ್ಯೇಂದ್ರನಾರಾಯಣ ಎಂಬ ರಾಜಕುಮಾರರ ಪತ್ನಿಯಾದ ರಾಜಕುಮಾರಿ ಈಶಾರಾಣಿ ನಿರುಪಮಾ ದೇವಿ ಎಂಬವರು ಗಂಡನಮೇಲೆ ಕಲ್ಕತ್ತೆಯ ಹೈಕೋರ್ಟಿನಲ್ಲಿ ಫಿರ್ಯಾದು ಮಾಡಿ, ಗಂಡನು ವೇಶ್ಯಾಲೋಲನಾಗಿಯೂ, ಕ್ರೂರಿಯಾಗಿಯೂ ಇದ್ದುದರ ದೆಸೆಯಿಂದ ವಿವಾಹಸಂಬಂಧವನ್ನು ಕೋರ್ಟು ಮೂಲಕ ಕಳೆದುಕೊಂಡಿರುತ್ತಾರೆ.

— ಕಲ್ಕತ್ತೆಯ ಕಾರ್ಪೊರೇಷನ್ ಮೇಯರಾಗಿದ್ದು (ಮುನಿಸಿಪಾಲಿಟಿಯ ಅಧ್ಯಕ್ಷರಾಗಿದ್ದು) ದಿವಂಗತರಾದ ದೇಶಬಂಧು ಚಿತ್ತರಂಜನ ದಾಸರವರ ಸ್ಥಾನಕ್ಕೆ ಚುನಾವಣೆ ಹೊಂದಲು ಲಾರ್ಡ ಸಿಂಹರವರು, ಸರ್ ಸುರೇಂದ್ರನಾಥ ಬಾನರ್ಜಿಯರು, ಸರ್ ಪಿ. ಸಿ. ರಾಯ್‌ರವರು, ಸರ್ ನೀಲರತ್ನ ಸರ್ಕಾರ್‌ರವರು, ಮಿ॥ ನಿರ್ಮಲ ಚಂದ್ರರು, ಮಿ॥ ಸುಹ್ರವಾಡಿಯವರು, ಉಮೇದುವಾರರಾಗಿರುತ್ತಾರೆ.

— ಕೇಶವ ಚಂದ್ರಹಲಧರ ಎಂಬ ಬಂಗಾಳಿಯವನು ತನ್ನ ಗದ್ದೆ ಜಮೀನನ್ನು ತನ್ನ ಅತ್ತೆಯು ಒತ್ತಲಿಸುತ್ತಿರುವಳೆಂದು ಕೋಪಾವೇಶದಿಂದ ಮಚ್ಚಿನಿಂದ ಹೊಡೆದು ಅಳೆಯನ್ನು ಕತ್ತರಿಸಿ ಹಾಕಿದ್ದಲ್ಲದೆ ಜತೆಯಲ್ಲಿದ್ದ ಅಳೆಯ ಮಕ್ಕಳಿಬ್ಬರಲ್ಲಿ ಒಬ್ಬಳನ್ನು ಕೊಂದು ಮತ್ತೊಬ್ಬಳಿಗೆ ಗಾಯಪಡಿಸಿದನು. ಗಾಯಪಟ್ಟವಳು ಈಚೆಗೆ ಆಸ್ಪತ್ರೆಯಲ್ಲಿ ಮೃತಳಾದಳು. ಅಪರಾಧಿಯು ತಲೆತಪ್ಪಿಸಿಕೊಂಡು ಹೋಗಿರುತ್ತಾನೆ.

— ಸೋನಪುರದ ಮಹಾರಾಜರಾದ ಸರ್ ಶ್ರೀ ವೀರಮಿತ್ರದೇವ ಸಿಂಗದೇವ್ ಎಂಬವರು ತಮ್ಮ ಸ್ವಂತ ಹಣದಿಂದ ೧೦ ಲಕ್ಷ ರೂಪಾಯಿಗಳನ್ನು ಧರ್ಮಾರ್ಥವಾಗಿ ಕೊಟ್ಟು, ಅದರಿಂದ ಒಂದು ಅನಾಥಾಲಯವನ್ನು, ತರೀ ವ್ಯವಸಾಯವನ್ನು, ಕ್ಷಾಮ ನಿವಾರಣೆಯನ್ನು, ವಿದ್ಯಾಭಿವೃದ್ಧಿಯನ್ನು ಕೈಗೊಳ್ಳಬೇಕೆಂದು ತಿಳಿಸಿರುವರು. ಇದಲ್ಲದೆ ತಮ್ಮ ರಾಜ್ಯದ ಬಾಲಕ ಬಾಲಕಿಯರಿಗೆ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮಾಫಿಯಾಗಿ ಮಾಡಿಸಲು ತಕ್ಕ ಏರ್ಪಾಡು ಮಾಡಿರುವರು. ಇವರ ಪತ್ನಿಯವರೂ ಪತಿಯ ನಡತೆಯನ್ನೇ ಅನುಸರಿಸಿ ಕಟಕದಲ್ಲಿರುವ ರೇವನ್‌ಷಾ ಕಾಲೇಜಿನ ಮೂಲಧನಕ್ಕೆ ೨ ಲಕ್ಷ ರೂಪಾಯಿಗಳನ್ನು ಕೊಟ್ಟಿರುತ್ತಾರೆ.

— ಪುಣೆಯ ಸೆಂಟ್ರಲ್ ಪೋಸ್ಟ ಆಫೀಸಿನಲ್ಲಿ ಕೆಲವು ಸಾವಿರಾರು ರೂಪಾಯಿಗಳ ಟಿಕೇಟು ಮುಂತಾದವುಗಳು ಕಳವು ಹೋಗಿದ್ದವು. ಅಲ್ಲಿಯ ಪೋಸ್ಟು ಮಾಸ್ತರರ ಮೇಲೆ ಖಟ್ಲೆಯು ನಡೆಯುತ್ತಿತ್ತು. ಆರೋಪಿಗಳನ್ನು ಸೆಶ್ಶನಿಗೆ ಕಮಿಟು ಮಾಡಿದ್ದಾರೆ. ಇಂಥ ಇನ್ನೆರಡು ಖಟ್ಲೆಗಳು ಅವರ ಮೇಲೆ ನಡೆಯತಕ್ಕವುಗಳಿವೆ.

— ಸಿಮ್ಲಾದಲ್ಲಿ ಚತ್ರಂಗದ ಪಂದ್ಯಾಟವು ನಡೆಯಿತು. ಈ ಪಂದ್ಯಾಟಕ್ಕೆ ವಿಲಾಯತಿಯಿಂದ ಚತ್ರಂಗ ಪಟುಗಳು ಕೂಡ ಬಂದಿದ್ದರು. ನಾರಾಯಣರಾವ ಜೋಶಿ ಎಂಬವರೂ ಪ್ರೊ. ಅಲೂರಕರರೆಂಬವರೂ ಈ ಪಂದ್ಯಾಟದಲ್ಲಿ ಜಯಶಾಲಿಗಳಾದರು.

— ಸ್ಥಾಪಿಸಲಿಕ್ಕಿರುವ ಶ್ರೀ. ವೆಂಕಟೇಶ್ವರ ಹಿಂದು ವಿಶ್ವವಿದ್ಯಾಲಯದಲ್ಲಿ ಹಿಂದು ತತ್ವಜ್ಞಾನ, ಸಂಸ್ಕೃತಿ ಇವುಗಳ ಅರ್ವಾಚೀನ ಪದ್ಧತಿಯಿಂದ ಅಧ್ಯಯನ, ಹಿಂದೀಕಲಾಕೌಶಲ್ಯ, ಹೆಚ್ಚಾಗಿ ದೇವಸ್ಥಾನಗಳ ಶಿಲ್ಪಶಾಸ್ತ್ರ ಇವುಗಳ ಜ್ಞಾನವು ಹೆಚ್ಚಾಗಿ ಕೊಡಲ್ಪಡುವುದು.

— ಮಲಬಾರದ ಮಾಪಿಳ್ಳೆಯವರ ದಂಗೆಯಲ್ಲಿ ಸರಕಾರವು ಯಾರಿಗೆ ಸಾಲಕೊಟ್ಟಿತೊ ಅದನ್ನು ಮದ್ರಾಸ ಸರಕಾರವು ಈಗ ಮಾಫಿಮಾಡಿದೆ.

— ಕೊಚ್ಚಿ ಬಂದರದ ಯೋಜನೆಗೆ ಹಿಂದುಸ್ಥಾನ ಸರಕಾರವು ಮಾನ್ಯತೆಯನ್ನು ಕೊಟ್ಟಿದ್ದು ಅದಕ್ಕಾಗಿ ೮೮ ಲಕ್ಷ ರೂಪಾಯಿ ಮಂಜೂರು ಮಾಡಿದೆ.

— ಮೈಸೂರ ಸಂಸ್ಥಾನದ ಶೈಕಿ ಸೊರಬ ಎಂಬಲ್ಲಿ ಲೋಕಮಾನ್ಯ ಫ್ರೀ ರೀಡಿಂಗ್ ರೂಮು ಸ್ಥಾಪಿಸಲ್ಪಟ್ಟಿದೆ.

— ಸರ ರಾಮಕೃಷ್ಣ ಭಾಂಡಾರಕರರ ಚಿರಂಜೀವಿಗಳಾದ ಪ್ರಭಾಕರ ಪಂತರು ಜೂನ ತಾ. ೧೫ರಲ್ಲಿ ಮೃತರಾದರು. ಇವರು ಇಂದೂರ ಮಹಾರಾಜರ ಗೃಹಮಂತ್ರಿಗಳಾಗಿದ್ದರು. ಅವರಿಗೆ "ದಿವಾನ-ಈ-ಖಾಸಬಹಾದೂರ" ಎಂಬ ಬಹುಮಾನದ ಪದವಿಯನ್ನು ಮಹಾರಾಜರು ಕೊಟ್ಟಿದ್ದರು. ಮಹಾರಾಜರು ಈ ಮೃತರ ಕಡೆಯ ಮಗನಿಗೆ ಈಗ ವಾರ್ಷಿಕ ಉಂಬಳಿಯನ್ನು ಬಿಟ್ಟುಕೊಟ್ಟಿರುವರು.

— ಚಿತಗಾಂಗಿನಲ್ಲಿ ಹತ್ತಿಯ ಗಿರಣಿಗೆ ಬೆಂಕಿಹತ್ತಿ ೧॥ ಲಕ್ಷ ರೂಪಾಯಿ ನಷ್ಟವುಂಟಾಗಿದೆ.

— ಗಯಾ ಕ್ಷೇತ್ರದಲ್ಲಿ ಶ್ರದ್ಧಾನಂದಜಿಯವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಪರಿಷತ್ತು ಕೂಡಿ ಹಿಂದು ಸಂಘಟನ, ಹಾಗು ಶಿರ್ಯೂಮಿಯ ನಿಷೇಧ, ಹಿಂದುಧರ್ಮದ ಚರ್ಚೆಗೆ ರಾಷ್ಟ್ರೀಯ ಮಂದಿರದ ಸ್ಥಾಪನೆ ಇತ್ಯಾದಿ ಠರಾವುಗಳು ಪಾಸಾದವು.

— ಫ್ರೋಷಾ ಪದ್ಧತಿಯ ದೆಸೆಯಿಂದ ಹೆಂಗಸರಲ್ಲಿ ಕ್ಷಯರೋಗದ ಬೇನೆಯು ಬೆಳೆಯುತ್ತಿದೆ. ಕಲಕತ್ತೆಯಲ್ಲಿ ಇದರ ಹಾವಳಿ ಬಹಳ ನಡೆದಿದೆ. ಮರಣಪಡುವ ಪ್ರತಿಯೊಬ್ಬ ಗಂಡುಮಗನಿಗೆ ಹೆಮ್ಮಕ್ಕಳು ಇರಂತೆ ಮಡಿಯುವರು.

— ಸ್ವಾಮಿ ಶ್ರದ್ಧಾನಂದರು ಮಾತಪಾದಕರೆಂದು ಬಿಹಾರದ ಮ್ಯಾಜಿಸ್ಟ್ರೇಟರು ಬಾಯಿಗೆ ಬೀಗಹಾಕಿದ್ದಾರೆ.

— ನೇಪಾಳದ ಮಹಾರಾಜರಿಗೆ ಪ್ರತಿವರ್ಷ ೧೦ ಲಕ್ಷ ರೂಪಾಯಿ ಇಂಗ್ಲೀಷ ಸರಕಾರದವರು ಕೊಡುತ್ತಿರುವರಾಗಿ ಪಾರ್ಲಿಮೆಂಟಿನಲ್ಲಿ ನಡೆದ ಮಾತುಗಳಿಂದ ತಿಳಿದುಬಂದಿದೆ

— ಸೆಂಟ್ರಲ್ ಕಾಲೇಜಿನಲ್ಲಿ ನಡೆದ ವಿಶ್ವವಿದ್ಯಾನಿಲಯದ ಸೆನೇಟ್ ಸಭೆಯಲ್ಲಿ ತೇರ್ಗಡೆಯಾಗದ ಬಿ. ಎ. ವಿದ್ಯಾರ್ಥಿಗಳ ಸೌಕರ್ಯಕ್ಕಾಗಿ ಈ ವರ್ಷ ಅಕ್ಟೋಬರ್ ತಿಂಗಳಲ್ಲಿ ಮತ್ತೊಂದು ಪರೀಕ್ಷೆಯಾಗಬೇಕೆಂದು ನಿಶ್ಚಯವಾಗಿದೆ.

— ಇಂಡಿಯನ್ ಲೆಜಿಸ್ಲೇಟಿವ್ ಎಸೆಂಬ್ಲಿಯು ಸಿಮ್ಲಾದಲ್ಲಿ ಅಗಸ್ಟು ತಾ. ೨೦ಕ್ಕೆ ಸೇರುವುದು.

ದಕ್ಷಿಣ ಕನ್ನಡ.

ಪುತ್ತೂರು:— ಇಲ್ಲಿಯ ಆದಿದ್ರಾವಿಡರ ಸಹಕಾರ ಸಂಘದಿಂದ ಇದೇ ಕಳೆದ ಜೂನು ತಾ. ೧೮ರಲ್ಲು ರಾತ್ರಿ ಅಕ್ಕಿ ಮುಡಿ ೨೪, ಮೆಣಸು ಗೋಣಿ ೨ ಕಳವಿನ ಸಂಮ್ಬಂಧ ಇಲ್ಲಿಯ ಪೂಡಿಯ ಬ್ಯಾರಿ ಮತ್ತು ಕೃಷ್ಣಗೌಡ ಎಂಬ ಇಬ್ಬರನ್ನು ಕೈದುಮಾಡಿ ರಿಮಾಂಡಿನಲ್ಲಿಟ್ಟಿರುವರು. ಪೋಲಿಸ ಫಿರ್ಯಾದಿಯು ಇಲ್ಲಿಯ ಡಿವಿಜನ್ ಡಿಸ್ಟ್ರಿಕ್ಟ ಮೆಜಿಸ್ಟ್ರೇಟ ಕೋರ್ಟಿನಲ್ಲಿ ಕಳೆದ ಜೂನು ತಾ. ೩೦ರಲ್ಲು ತಕ್ಕಿಗೆ ಇಟ್ಟದ್ದನ್ನು ಜುಲ್ಯಾ ತಾ. ೧೫ಕ್ಕೆ ಮುಂದರಿಸಿಟ್ಟಿರುವರು.

ಇಲ್ಲಿ ತಾ. ೨೦ರ ಲಾಗಾಯತು ಮಳೆ ವಿಶೇಷ ಬಂದಾಗ್ಯೂ ಈಗ ೨-೩ ದಿವಸಗಳಿಂದ ಮಳೆ ಸ್ವಲ್ಪ ಕಡಿಮೆ ಅಕ್ಕಿಗೆ ಬೆಲೆ ಏರಿಯೆ ಹೋಗುತ್ತದೆ. ಅಕ್ಕಿ ಸೇರಿಗೆ ಒಂಭತ್ತುವರೆ ದುಡ್ಡು.

ಸಂಪಾಜೆ:— ಇಲ್ಲಿ ಹುಲಿಗಳ ಹಾವಳಿಯು ಬಹು ಕಠಿಣವಾಗಿರುವುದು. ಕೆಲವು ದಿವಸಗಳ ಹಿಂದೆ ಬಂಟೋಡಿ ಎಂಬಲ್ಲಿ ಒಂದೇ ಸರ್ತಿ ೬ ದನಗಳನ್ನು ಕಡಿದು ಬಿಸಾಡಿರುವುವು. ತಾ. ೧೧ರಲ್ಲು ಕೀಲಾರು ರಾಮಚಂದ್ರಯ್ಯನವರ ಒಂದು ಎಮ್ಮೆಯನ್ನೂ, ಒಂದು ಕರೆಯುವ ದನವನ್ನೂ, ಒಂದು ಎತ್ತನ್ನೂ ಆಹುತಿಗೊಂಡಿರುವುವು. ಅದಾದ ಒಂದೆರಡು ದಿವಸದಲ್ಲಿಯೇ ಬಾಳು ಗದ್ದೆ ಎಂಬಲ್ಲಿ ಒಂದು ದನವನ್ನು ಕೊಲ್ಲಹೊಡೆದಿರುವುದಲ್ಲದೆ ಜೇಡ್ಲ ನರಸಿಂಹ ಭಟ್ಟ ಇವರ ಮೂರು ರಾಸುಗಳನ್ನು ಕೊಂದಿರುವುದು. ಇದೇ ತಿಂಗಳ ೨೩ನೇ ದಿನ ಅವುಗಳ ಪುಂಡಾಟವು ಮಿತಿಮೀರಿರುವುದು. ಆ ದಿನ ೫ ದನಕರುಗಳನ್ನು ಕಡಿದು ಚೆಲ್ಲಿರುವುವು. ಒಂದು ತಿಂಗಳೊಳಗೆ ೧೫ ದನಕರುಗಳನ್ನು ಇಲ್ಲಿಯ ಜನರು ಹುಲಿಗಳಿಗೆ ಆಹುತಿಕೊಟ್ಟಿರುವರು. ಮಳೆಗಾಲವು ಪ್ರಾರಂಭವಾದುದರಿಂದ ಆನೆಗಳು ಅಡಿಕೆ ತೋಟಗಳನ್ನು ಸೂರೆಗೊಳ್ಳುತ್ತಿರುವುವು. ಅಂತು ಸಂಪಾಜೆ ಗ್ರಾಮದವರ ಆಸ್ತಿಯೆಲ್ಲಾ ಕಾಡುಮೃಗಗಳ ದಾಳಿಗಳಿಗೆ ಬಲಿಬೀಳತಕ್ಕವುಗಳಾಗಿವೆ. ಇಂಥಾ ಹಾವಳಿ ಇರುವ ಈ ಮಲೆಪ್ರಾಂತದಲ್ಲಿ ವಾಸಿಸುವ ಪ್ರತಿ ರೈತನಿಗೂ ಕೋವಿ ಲೈಸನ್ಸು ಸರಕಾರವು ಕೊಡುವುದು ಅಗತ್ಯವೆಂತ ಸರ್ವರೂ ಒಪ್ಪಬೇಕಾಗಿದೆ.

ಬೈಂದೂರು:— ಇಲ್ಲಿಯ ಬೋರ್ಡ ಮಿಡ್ಲ ಸ್ಕೂಲ ಹೆಡ್ ಮಾಸ್ತರರಾಗಿದ್ದ ಮ॥ ರಾ॥ ರೊಳ್ಳ ಪೆರ್ನಾಂಡೀಸರಿಗೆ ಉಡುಪಿಗೆ ವರ್ಗವಾದುದರಿಂದ ಈ ಊರ ಜನರು ಒಟ್ಟು ಕೂಡಿ ತಾರೀಕು ೧೧-೬-'೨೫ನೆ ಗುರುವಾರ ಎಡ್ತರೆ ಸಹಕಾರ ಸಂಘದ ಆಫೀಸಿನಲ್ಲಿ ಅವರಿಗೆ ಒಂದು ಸೆಂಡಾಫ್ ಕೊಡಿಸಿದರು. ಸಾಯಂಕಾಲ ೫ ಗಂಟೆಗೆ ಸ್ಥಳೀಯ ಸರಕಾರಿ ಉದ್ಯೋಗಸ್ಥರು ಅನೇಕ ಸದ್‌ಗೃಹಸ್ಥರು ದಯಪಾಲಿಸಿದ್ದರು. ಸಭೆಗೆ ಚಿತ್ತೈಸಿದ ಎಲ್ಲಾ ಗೃಹಸ್ತರನ್ನು ಮ॥ ರಾ॥ ರಾ॥ ಎಚ್ ರಂಗ್ಯೆ ಶೆಟ್ಟಿ ಪ್ರೀತಿ ಪೂರ್ವಕಸ್ವಾಗತೀಕರಿಸಿದ ನಂತರ ಸ್ವಲ್ಪ ಸಮಯ ಸಂಗೀತ ಗೀತಗಳು ಹಾಡಲ್ಪಟ್ಟವು. ತರುವಾಯ ಮ॥ ರಾ॥ ರಾ॥ ಪೆನಶನ್‌ರರಾದ ಲಾಚ್ಛ ವೆಂಕಟರಾಯರ ಸೂಚನೆ ಮತ್ತು ತಾಲೂಕು ಬೋರ್ಡ ಮೆಂಬರ ಮ॥ ರಾ॥ ರಾ॥ ಎಡ್ತರೆ ಸೂರಣ್ಣ ಶೆಟ್ಟರ ಅನುಮೋದನೆಯಂತೆ ಇಲ್ಲಿಯ ಇಗರ್ಜಿ ಪಾದ್ರಿ ಸಾಹೇಬರಾದ ರೆವರೆಂಡ ಎ. ಪಿ. ಡಿ. ಸೋಜರವರು ಅಗ್ರಾಸನವನ್ನು ವಹಿಸಿದ್ದರು. ಮಾನ್ಯ ಅಧ್ಯಕ್ಷರವರು ಲಾಚ್ಛ ವೆಂಕಟರಾಯರು ಮ॥ ರಾ॥ ಬಸ್ರೂರ ಗಣಪತಿರಾಯರು ಮತ್ತು ಶ್ರೀಯುತ ಶಿರೂರ ನಾಗೇಶರಾಯರು ರಾ॥ ಪೆರ್ನಾಂಡಿಸರ ಗುಣಗಳನ್ನು ಕಥನಮಾಡಿ ಅವರಲ್ಲಿರುವ ಪ್ರೀತಿ ವಾತ್ಸಲ್ಯವನ್ನು ನಿರೂಪಿಸಿ ಬಹಳ ಉತ್ತಮವಾದ ಭಾಷಣಮಾಡಿದರು. ರಾ॥ ಪೆರ್ನಾಂಡಿಸರು ಇಲ್ಲಿ ಬಂದ ಒಂದು ವರುಷದೊಳಗೆ ಈ ಶಾಲೆಯ ಹುಡುಗರ ಸಂಖ್ಯೆ ಏರಿಸುವ ಬಗ್ಗೆ ಬಹಳ ಸಾಹಸಪಟ್ಟು ನೆರೆಕೆರೆಯ ಜನರಲ್ಲಿ ಹೋಗಿ ವಿದ್ಯಾಭ್ಯಾಸದ ವಿಷಯ ಅವರಿಗೆ ಪ್ರೋತ್ಸಾಹಕೊಟ್ಟು ಅವರ ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ಮಾಡಿ ಸುಮಾರು ೮೦-೮೫ಕ್ಕೆ ಇರುವ ಸಂಖ್ಯೆಯನ್ನು ಸುಮಾರು ೧೪೦ರ ವರೆಗೆ ತಂದಿರುವದಾಗಿಯೂ ಇನ್ನು ಶಾಲೆಯ ವೃದ್ಧಿಯ ಬಗ್ಗೆ ಮನಸ್ಸು ಪೂರ್ವಕ ಪ್ರಯತ್ನಿಸುತ್ತಿದ್ದರಾಗಿಯೂ ಇಂಥಾ ಆಸಕ್ತಿಯಿಂದ ನಮ್ಮ ಶಾಲೆಯ ವೃದ್ಧಿಯ ಬಗ್ಗೆ ಕಾಪಾಡುತ್ತಿದ್ದ ಮಾಸ್ತರರನ್ನು ಇಲ್ಲಿಯೇ ಇರಗೊಡಿಸಬೇಕಾಗಿ ಅವರ ಮೇಲು ಉದ್ಯೋಗಸ್ಥರಿಗೆ ಇಲ್ಲಿಯ ಪ್ರಮುಖ ಜಮೀನದಾರರು, ತಾಲೂಕು ಬೋರ್ಡ ಮೆಂಬರರು, ಮುಹಮ್ಮದಿ ಮುಕ್ತೇಸರ ಪ್ರಮುಖರು, ಊರ ಜನರು ಅರ್ಜಿ ವ ಅನೇಕ ತಂತಿಗಳನ್ನು ಮಾಡಿದರೂ ವರ್ಗವಾದ ಸ್ಥಳಕ್ಕೆನೇ ಹೋಗಬೇಕಾಗಿ ಹುಕುಂ ಬಂದದರಿಂದ ಎಲ್ಲರಿಗೂ ಬಹಳ ಬೇಜಾರವಾಯಿತು. ಕೂಡಿದ ಸಭೆಯಲ್ಲಿ ಅವರಲ್ಲಿರುವ ನಮ್ಮ ಪ್ರೀತಿಯು ಶಾಶ್ವತವಾಗಿ ನಡಿಯುವಂತೆ ಅವರ ಹೆಸರಿನಲ್ಲಿ ಅಂದರೆ 'ರೊಳ್ಳ ಪೆರ್ನಾಂಡಿಸರ ಬಡ ಮಕ್ಕಳ ಫಂಡ್' ಎಂತ ಬಡ ವಿದ್ಯಾರ್ಥಿಯರಿಗೆ ವರ್ಷಂಪ್ರತಿ ಸಹಾಯ ಸಿಕ್ಕುವ ಹಾಗೆ ಒಂದು ಠೇವಣಿ ಫಂಡು ಸ್ಥಾಪಿಸಬಹುದಾಗಿ ಶ್ರೀಯುತ ಶಿರೂರು ನಾಗೇಶರಾಯರಿಂದ ಸೂಚನೆ ಬಂದದಕ್ಕೆ ಸರ್ವಾನುಮತದಿಂದ ವಂತಿಗೆ ಸಭೆಮಾಡಿದಕ್ಕೆ ರೂ. ೨೦೦ ವಂತಿಗೆ ವಸೂಲಾದದಲ್ಲದೆ ಇನ್ನು ಜುಮ್ಲಾ ರೂ. ೫೦೦ಕ್ಕೆ ಏರುವಂತೆ ಇರುತ್ತದೆ. ರಾ॥ ಪೆರ್ನಾಂಡಿಸರು ವ ಮಾನ್ಯ ಅಧ್ಯಕ್ಷರು ಸಮಯೋಚಿತ ಭಾಷಣಮಾಡಿದ ನಂತರ ಗಾಯನ, ಫೊನೊಗ್ರಾಫ್, ಹಾರ್ಮೋನಿಯಮ್ ಸಂಗೀತಗಳಿಂದಲೂ ಪನ್ನೀರು ಪುಷ್ಪಹಾರ, ಕಾಫಿ ಫಲಹಾರ, [illegible] ಯೋಗ್ಯ ಸತ್ಕರಿಸಿ ರಾತ್ರಿಗೀತ ಹಾಡಿ [illegible] ಮುಗಿಸಲ್ಪಟ್ಟಿತು.

ಅನುಕ್ರಮಣಿಕೆ.

ಅಗ್ರಲೇಖ ಪುಟಗಳು.
ದೇಶಬಂಧುಗಳ ಸ್ಮಾರಕ ೬
ಸ್ಫುಟವಿಚಾರಗಳು—
೧ ಬಾದಶಹರ ಆಗಮನದ ವಾರ್ತೆ ,,
೨ ಬಕ್ರೀದಿನ ಬಗ್ಗೆ ಜಾಗ್ರತೆ ,,
೩ ಸೇನಗುಪ್ತರ ವಾರ್ತೆ ೭
೪ ವರ್ಣದ್ವೇಷದ ಬೀಲು ,,
೫ ಎಂಗ್ಲೋ ಇಂಡಿಯನರ ಡೆಪ್ಯುಟೇಶನು ,,
೬ ಡೊ. ಕಿಚ್ಲುಗಳ ಭಾಷಣ ,,
ಮಂಗಳೂರು
ವರ್ತಮಾನಸಂಗ್ರಹಗಳು—
ವಿದೇಶ — ಒಳದೇಶ ವರ್ತಮಾನ ೫
ಪತ್ರಿಕಾ ಕನ್ನಡ — ಪುತ್ತೂರು, ಸಂಪಾಜೆ, ಬೈಂದೂರು ,,
ಪತ್ರವ್ಯವಹಾರ ೧, ೨ ೮
ವಿವಿಧ ವಿಷಯಗಳು ,,
ಲೋರ್ಡ್ ಕರ್ಜನರವರು ,,
ಆಯುರ್ವೇದ ಕಾಲೇಜು ೪
ರಂಗ ಭೂಮಿ ,,
ಮುಂಡಾಜೆಯಲ್ಲಿ ವೈದಿಕ ಧರ್ಮ ಪ್ರಚಾರ ,,

ಸ್ವದೇಶಾಭಿಮಾನಿ.

ಶಕ ೧೮೪೭ ಆಷಾಢ ಶು| ೧೨ಯು ಶುಕ್ರವಾರ.

ದೇಶಬಂಧುಗಳ ಸ್ಮಾರಕ.

ದೇಶಬಂಧು ದಾಸರು ಮೃತ್ಯುವಶ್ಯರಾದ ಬಳಿಕ ಹಿಂದೂಸ್ಥಾನದ ಜನಾಂಗವು ಕೇವಲ ಸ್ವಯಂಸ್ಫೂರ್ತಿಯಿಂದ ಸರ್ವತ್ರ ತನ್ನ ಸಂತಾಪವನ್ನು ವ್ಯಕ್ತಗೊಳಿಸಿದೆಯಾದರೂ ಮಹಾತ್ಮಾ ಗಾಂಧಿಗಳು ಮೊನ್ನೆಯ ಜುಲಾಯಿ ತಾ. ೧ರಲ್ಲಿ ಎಲ್ಲ ಕಡೆಗಳಲ್ಲಿ ಎಲ್ಲ ಮತದವರು—ರಾಷ್ಟ್ರೀಯರು, ಸಾಂಪ್ರದಾಯಿಕರು, ಸ್ವರಾಜ್ಯ ಪಕ್ಷೀಯರು, ಶಾಂತ ಪಕ್ಷೀಯರು, ಲಿಬರಲ್ಸರು ಈ ಪ್ರಕಾರ ಎಲ್ಲ ತಂಡಗಳ ಅನುಯಾಯಿಗಳು ಸಭೆ ಸೇರಿಸಿ ದಾಸರ ಆತ್ಮಕ್ಕೆ ಶಾಂತಿಪ್ರಾಪ್ತವಾಗಲೆಂದು ಪ್ರಾರ್ಥಿಸಬೇಕೆಂದು ಪ್ರಕಟಣೆಯನ್ನು ಹೊರಡಿಸಿದ ಮೇರೆಗೆ ಮತಭೇದವಿಲ್ಲದೆ ಈ ಸ್ಮಾರಕ ಸಭೆಗಳು ಎಲ್ಲ ಭಾಗಗಳಲ್ಲಿ ಮೊನ್ನೆ ಜರಗದೆ ಸರ್ವಥಾ ಇರಲಿಕ್ಕಿಲ್ಲ. ಸ್ವರಾಜ್ಯದ ಕಾರ್ಯೋತ್ಸಾಹವನ್ನಾಡಿಸುತ್ತಲೆ ಪ್ರಾಣತ್ಯಾಗವನ್ನು ಮಾಡಿದ ಚಿತ್ತರಂಜನ ದಾಸರಂತೆ ಸ್ವಾರ್ಥತ್ಯಾಗಿಗಳಾದ ವೀರರು ಅಕಸ್ಮಾತ್ತಾಗಿ ಪರಲೋಕವನ್ನೈದಿದರೆ ಅವರ ಬಗ್ಗೆ ವ್ಯಸನ ಪಡದ ಇರತಕ್ಕ ಕೃತಘ್ನನು ಯಾವನಾದರೂ ಇರಬಹುದೆ? ಮನೆಯೊಳಗಿನ ಹಿತಕರ್ತನು ತೊಲಗಿದ್ದಾದರೆ ಎಷ್ಟರಮಟ್ಟಿಗೆ ವ್ಯಸನವಾಗುವುದು ಸಹಜವೊ ಅಷ್ಟೆ ದಾಸರಂಥ ನಿಃಸ್ವಾರ್ಥ ದೇಶಭಕ್ತರು ಗತಿಸಿದಾಗ ದುಃಖವೇಗವುಂಟಾಗುವುದು ಸ್ವಭಾವಸಿದ್ಧವಾಗಿದೆ. ಆದ್ದರಿಂದ ಅವರ ಮೃತ್ಯುವಾರ್ತೆಯು ಕಿವಿಗೆ ಬಿದ್ದೊಡನೆ ಅಲ್ಲಲ್ಲಿ ಅವರ ಸ್ಮಾರಕಾರ್ಥ ಸಭೆಗಳು ಸೇರಿದ್ದವಾದರೂ ಒಂದೆ ದಿವಸ ಎಲ್ಲ ಕಡೆಗಳಲ್ಲಿ ಅವರ ನಾಮಸಂಕೀರ್ತನವಾಗುವುದು, ಅವರ ಗುಣಕಥನವಾಗುವುದು ಅವಶ್ಯವಿರುವುದರಿಂದ ಮೊನ್ನೆಯ ದಿವಸವು ನೇಮಿಸಲ್ಪಟ್ಟಿತು. ಆ ಪ್ರಕಾರ ಅವರ ಸ್ಮಾರಕ ಸಭೆಗಳು ಎಲ್ಲ ಕಡೆಗಳಲ್ಲಿ ಆಗಿವೆ.

ಪರಂತು ದೇಶಬಂಧುಗಳ ಸ್ಮಾರಕಾರ್ಥವಾಗಿ ಬರೆ ಸಭೆಗಳನ್ನು ಕೂಡಿಸುವುದಲ್ಲ; ಸತ್ಯ ಹೇಳಬೇಕೆಂದರೆ ಪ್ರೋತ್ಸಾಹಕರವಾದ ರಾಜಕೀಯ ಕಾರ್ಯಗಳನ್ನು ಮುಂದುವರಿಸುವುದು ಅವರ ಸಂಸ್ಕೃತಿಯ ಮುಖ್ಯ ಲಕ್ಷಣವಾಗಿದೆ. ಅದನ್ನು ಬದಿಗಿಟ್ಟು ಈ ಔಪಚಾರಿಕ ಸಂಗತಿಗಳ ಆಡಂಬರವನ್ನು ಮಾಡ ಹೋದರೆ ದಾಸರ ಸ್ಮಾರಕವನ್ನು ಮಾಡಿದಂತೆಯೂ ಆಗುವುದಿಲ್ಲ; ಅವರ ಆತ್ಮಕ್ಕೆ ಶಾಂತಿಯನ್ನು ದೊರಕಿಸಿ ಕೊಟ್ಟಂತೆಯೂ ಆಗುವುದಿಲ್ಲ. ಅಲ್ಲಲ್ಲಿ ಸಭೆಗಳನ್ನು ಕೂಡಿಸಿ ಅವರ ಮೃತ್ಯುವಿನ ಬಗ್ಗೆ ದುಃಖೋದ್ಗಾರಗಳನ್ನು ಹೊರಡಿಸುವುದು ಅಥವಾ ಕಣ್ಣೀರು ಸುರಿಸುವುದು ಇಲ್ಲವೆ ಇದೆ ನಮೂನೆಯ ಅನ್ಯ ಸ್ಮಾರಕಗಳನ್ನು ಮಾಡುವುದು ಅಗತ್ಯವೆ. ಯಾಕೆಂದರೆ, ದಾಸರಂಥ ದೇಶಧುರೀಣನು ಮೃತ್ಯುವಶನಾದಲ್ಲಿ ದುಃಖಿತರಾದವರು ಈ ಮಹಾ ಹಾನಿಯನ್ನು ಕುರಿತು ಶೋಕ ಪಡುವುದು ಸಹಜವಾಗಿದೆ. ಬೇರೆ ಮಾತಿನಿಂದ ಹೇಳುವದಿದ್ದರೆ, ದುಃಖಪ್ರದರ್ಶಕ ಸಭೆ ಮುಂತಾದವುಗಳು ವಿಯುಕ್ತ ನಾಯಕನನ್ನು ಕುರಿತು ತಮ್ಮಲ್ಲಿರುವ ಕೃತಜ್ಞತೆಯ ಸಮರ್ಪಣ ಸೂಚಕವಾದವುಗಳಲ್ಲದೆ ಅವರ ನಿಜವಾದ ಸ್ಮಾರಕಗಳಲ್ಲ. ಕೃತಜ್ಞತೆಯನ್ನು ಸಮರ್ಪಿಸುವುದು ಅತ್ಯಗತ್ಯವೆ. ಆದರೆ ಅಷ್ಟೆ ಕೃತಾರ್ಥತೆಗೆ ಪರ್ಯಾಪ್ತವೆಂದು ಮಾತ್ರ ಯಾರೂ ಊಹಿಸಕೂಡದು.

ರಾಜಕೀಯ ಕಾರ್ಯದ ರಥವನ್ನು ಮುಂದಕ್ಕೆ ನಡಿಸುವುದೆ ಅವರ ಸಜೀವ ಸ್ಮಾರಕವಾಗಿದೆ. ಲೋಕಮಾನ್ಯ ಟಿಳಕರಾಗಲಿ, ದೇಶಬಂಧು ದಾಸರಾಗಲಿ ತಮ್ಮ ಜೀವನದಲ್ಲಿ ಕಡೆಯ ತನಕ ಯಾವ ಉದ್ದೇಶಕ್ಕಾಗಿ ಯಾವ ಸಾಧನಗಳಿಂದ ಅವಿರತ ಪ್ರಯತ್ನಗಳನ್ನು ನಡಿಸಿದ್ದರೊ ಅಂಥ ಮಹಾ ಪುರುಷರ ಸ್ಮಾರಕವು ಬರೆ ಶ್ರದ್ಧಾ ಸಂಕಲ್ಪಗಳಿಂದಾಗಲಿ, ಔಪಚಾರಿಕ್ ಸಭೆಗಳಿಂದಾಗಲಿ, ಸಂಗಮರವರಿ ಶಿಲೆಯ ಮೂರ್ತಿಗಳನ್ನು ಸ್ಥಾಪಿಸುವುದರಿಂದಾಗಲಿ, ಶಾಲೆ ಕೊಲೇಜುಗಳನ್ನೂ, ಆಶ್ರಮ ಮಂದಿರಗಳನ್ನು ಸ್ಥಾಪಿಸುವುದರಿಂದಾಗಲಿ, ಫಂಡುಗಳನ್ನೆತ್ತುವುದರಿಂದಾಗಲಿ, ಆಸ್ಪತ್ರೆಗಳನ್ನು ಕಟ್ಟಿಸುವುದರಿಂದಾಗಲಿ ಇಲ್ಲವೆ ವಿದ್ಯಾರ್ಥಿವೇತನಗಳನ್ನು ಇಡುವುದರಿಂದಾಗಲಿ ನಿಜವಾದ ಸ್ಮಾರಕವುಂಟಾಗುವುದಿಲ್ಲ. ಇವುಗಳೆಲ್ಲ ಜನರು ತಮ್ಮ ತಮ್ಮ ಇಚ್ಛಾನುಸಾರವಾಗಿ ತಮ ತಮಗೆ ಬೇಕಾಗಿರುವ ಸಂಸ್ಥೆಗಳನ್ನು ಏರ್ಪಡಿಸಿಕೊಳ್ಳುವಾಗ ತಮ್ಮ ಅಂತಃಕರಣದಲ್ಲಿರುವ ಮರ್ಯಾದೆಯನ್ನೂ, ಆದರವನ್ನೂ ವ್ಯಕ್ತಪಡಿಸಲು ದೊಡ್ಡ ಮಹನೀಯರ ಹೆಸರುಗಳನ್ನು ಆ ಸಂಸ್ಥೆಗಳಿಗೆ ಕೊಡುವರೆಂಬುದಿಷ್ಟೆ ಅರ್ಥವಲ್ಲದೆ, ಅವು ಮೃತರಾದ ಮಹಾ ಪುರುಷರ ಯಥಾರ್ಥ ಸ್ಮಾರಕಗಳಲ್ಲ. ಎಂದರೆ ಮೇಲೆ ಹೇಳಿದ ಸಂಗತಿಗಳನ್ನು ಜನರು ಮಾಡಕೂಡದು ಎಂಬುದಾಗಿ ನಮ್ಮ ಹೇಳಿಕೆಯಲ್ಲ. ಕಂಡ ಕಂಡಲ್ಲಿ ಅವರ ಸ್ಮರಣವುಂಟಾಗುವಂತೆ ಮೇಲಿನ ಎಲ್ಲ ಸ್ಮಾರಕಗಳು ಅಗತ್ಯವೆ. ಆದರ್ಶಪ್ರಾಯವಾಗಿರುವ ಪುರುಷರು ಅವಸಾನವನ್ನು ಹೊಂದಿದಲ್ಲಿ ಅವರ ಸಂಸ್ಮರಣೆಯು ಪ್ರತಿಯೊಂದು ಕಾರ್ಯದಲ್ಲಿ ಉಂಟಾಗುವಂತೆ ಆಯಾ ಚಿಕ್ಕ ದೊಡ್ಡ ಸಂಸ್ಥೆಗಳಿಗೆ ಅವರ ಹೆಸರುಗಳನ್ನು ಕೊಡುವುದು ಸದಭಿರುಚಿಯ ದೃಷ್ಟಿಯಿಂದಲೂ, ವಿಯುಕ್ತರ ಗೌರವದ ದೃಷ್ಟಿಯಿಂದಲೂ ಅಗತ್ಯವಾದ್ದೆ ಸರಿ. ಆದರೆ ಈ ಔಪಚಾರಿಕ ಸಂಗತಿಗಳಿಂದಲೆ ಸ್ಮಾರಕವು ಅಂತ್ಯವಾಗಬಾರದು. ಯಾರ ಸ್ಮಾರಕವನ್ನು ಮಾಡಲು ನಾವು ಹೊರಟಿರುವೆವೊ ಅವರು ತಮ್ಮ ಜೀವನವನ್ನು ಯಾವ ಕಾರ್ಯದಲ್ಲಿ ಮತ್ತು ಯಾವ ರೀತಿಯಲ್ಲಿ ಕಳೆದಿದ್ದಾರೆಂಬುದನ್ನು ಮೊದಲಾಗಿ ನೋಡಿ ಅದಕ್ಕನುಗುಣವಾಗಿಯೆ ಸ್ಮಾರಕವನ್ನು ರಚಿಸಿದ್ದಾದರೆ ಅದು ಯಥಾರ್ಥವಾದ ಸ್ಮಾರಕವಾದೀತು. ಈ ದೃಷ್ಟಿಯಿಂದ ಲೋಕಮಾನ್ಯರ ಸ್ಮಾರಕವು ಇದು ವರೆಗೆ ನೂರಾರು ಕಡೆಗಳಲ್ಲಿ ಸಾವಿರಾರು ವಿಧದಿಂದ ಉಂಟಾಗಿದೆಯಾದರೂ ದೇಶಬಂಧು ದಾಸರು ಟಿಳಕರ ಪ್ರಾಣಪ್ರಿಯವಾದ ಸ್ವರಾಜ್ಯ ಚಳವಳವನ್ನು ಮುಂದರಿಸಿ ಯಾವ ಕಾರ್ಯವನ್ನು ಮಾಡುತ್ತಿದ್ದರೊ ಅದೆ ಲೋಕಮಾನ್ಯರ ಜಾಜ್ವಲ್ಯವಾದ ಮತ್ತು ಸಜೀವವಾದ ಸ್ಮಾರಕವಾಗಿದೆ. ಅಂತೆಯೆ ದೇಶಬಂಧುಗಳ ಸಜೀವವಾದ ಮತ್ತು ಯಥಾರ್ಥವಾದ ಸ್ಮಾರಕವನ್ನು ಮಾಡುವದಿದ್ದರೆ ಅವರು ಕೈಕೊಂಡಿರುವ ಸ್ವರಾಜ್ಯ ಸಂಪಾದನದ ಅಸಿಧಾರಾವ್ರತದ ದೀಕ್ಷೆಯನ್ನು ವಹಿಸಿ ಸ್ವರಾಜ್ಯ ಸಂಪಾದನಕ್ಕಾಗಿ ಮುಂದೆ ಮುಂದಕ್ಕೆ ಹೆಜ್ಜೆಗಳನ್ನು ಹಾಕುತ್ತ ಹೋಗುವುದೂ, ಈ ಯಾತ್ರೆಯಲ್ಲಿ ಬರತಕ್ಕ ಅನೇಕ ವಿಘ್ನಗಳನ್ನು ಪರಿಹರಿಸುವುದೂ, ಅಲ್ಲಲ್ಲಿ ದಾರಿಯ ಮೇಲೆ ಉಪದ್ರವ ಕೊಡುವ ಕಲ್ಲುಮುಳ್ಳುಗಳನ್ನು ಬದಿಗೆ ಮಾಡಿ ಸ್ವರಾಜ್ಯದ ರಾಜಮಾರ್ಗವನ್ನು ನಿಷ್ಕಂಟಕವನ್ನಾಗಿ ಮಾಡುವುದೂ ದಾಸರವರ ಸತ್ಯ ಸ್ಮಾರಕವಾಗಿದೆ. ದಾಸರು ನೌಕರಶಾಹಿಯೊಡನೆ ಗಂಡಸರಂತೆ ವರ್ತಿಸಿದರು. ಸ್ವರಾಜ್ಯ ಯುದ್ಧದಲ್ಲಿ ವೀರರಂತೆ ಹೋರಾಡಿದರು. ದೇಶದ ಜನತೆಯೊಡನೆ ಋಷಿಗಳಂತೆ ಸಾಮ್ಯದಿಂದ ನಡೆದರು. ಹೊರಗಿನ ಒಳಗಿನ ಪ್ರತಿಸ್ಪರ್ಧಿಗಳೊಡನೆ ತುಲ್ಯನ್ಯಾಯವನ್ನು ಅಂಗೀಕರಿಸಿದರು. ದಾಸರು ಈ ಎಲ್ಲ ವಿಧಗಳನ್ನು ಕೈಕೊಂಡದ್ದು ಬರೆ ಒಂದು ಸ್ವರಾಜ್ಯಕ್ಕಾಗಿ. ಎಂದ ಮೇಲೆ ಅವರ ಸ್ಮಾರಕವನ್ನು ಕಣ್ಣೀರು ಸುರಿಸಿ ಅಲ್ಲ, ಸಭೆಗೂಡಿಸಿ ಅಲ್ಲ, ಅಥವಾ ಬೇರೆ ಯಾವ ವಿಧದಿಂದಲೂ ಅಲ್ಲ, ಸ್ವರಾಜ್ಯ ಸಂಪಾದನದ ಉದ್ಯೋಗದಿಂದಲೆ ಸಾರ್ಥಕಗೊಳಿಸಬೇಕು. ಇದೆ ನಿಜವಾದ ಸ್ಮಾರಕ. ಇದರಿಂದಲೆ ಅವರ ಆತ್ಮಶಾಂತಿಯುಂಟಾದೀತು.

ಸ್ಫುಟ ವಿಚಾರಗಳು.

೧. ನಮ್ಮ ನೌಕರಶಾಹಿಯು ನಿಪುಣವಾದ್ದೆಂಬುದನ್ನು ಯಾರೂ ಒಪ್ಪಿಕೊಳ್ಳಬೇಕಾದ ಸಂಗತಿಯು. ಒಂದು ಉಪಾಯು ಸಾಧ್ಯವಾಗದಿದ್ದರೆ ಇನ್ನೊಂದನ್ನು, ಅದೂ ಸಾಧ್ಯವಾಗದಿದ್ದರೆ ಮತ್ತೊಂದನ್ನು ಈ ಮೇರೆಗೆ ಉಪಾಯಗಳ ಮೇಲೆ ಉಪಾಯಗಳನ್ನು ಅದು ಹುಡುಕುತ್ತಲೆ ಇರುವುದು. ಇವೆಲ್ಲ ಪರಿಶ್ರಮಗಳನ್ನು ಅದು ಯಾಕೆ ತೆಕ್ಕೊಳ್ಳುವುದೆಂದರೆ, ಜನರು ಸ್ವರಾಜ್ಯ ಚಳವಳವನ್ನು ಬಿಟ್ಟುಬಿಡಬೇಕೆಂಬುದೆ ಅದರ ಉದ್ದೇಶವಾಗಿದೆ. ಈ ಉದ್ದೇಶದಿಂದಲೆ ಅದು ನಾನಾ ಯುಕ್ತಿ ಪ್ರಯುಕ್ತಿಗಳನ್ನು ಪ್ರಯೋಗಿಸುತ್ತದೆ. ಇಂಥ ಯುಕ್ತಿಗಳಲ್ಲಿ ಇನ್ನೊಂದು ಹೊಸ ಯುಕ್ತಿಯು ಈಗ ಹೊರಟಿದೆ. ಹಿಂದೂಸ್ಥಾನದ ಬಾದಶಹರಾದ ೫ನೆಯ ಜೋರ್ಜರು ಹಿಂದೂಸ್ಥಾನಕ್ಕೆ ಚಿತ್ತಯಿಸಬೇಕೆಂದೂ, ಅವರೊಟ್ಟಿಗೆ ಭಾರತ ಮಂತ್ರಿಗಳಾದ ಬರ್ಕನಹೆಡ್ ಸಾಹೇಬರು ಬರಬಹುದೆಂದೂ ವಾರ್ತೆಗಳನ್ನು ವಿಲಾಯತಿಯ ಬಾತಮೀದಾರರು ಪ್ರಕಟಿಸುತ್ತಿರುವರು. ಬಾದಶಹರ ದೇಹಾರೋಗ್ಯವು ಜಾಗ್ರತೆ ತೆಕ್ಕೊಳ್ಳಬೇಕಾಗಿರುವ ರೀತಿಯಲ್ಲಿದೆಯಾದರೂ ಹಿಂದೂಸ್ಥಾನದೊಳಗಿನ ಸಂಸ್ಥಾನಿಕರ ಮತ್ತು ಪ್ರಜಾಜನರ ಪರಿಚಯವನ್ನು ಹೆಚ್ಚಿಸಿಕೊಳ್ಳಬೇಕೆಂಬ ಕುತೂಹಲವು ಬಾದಶಹರಲ್ಲಿರುವುದರಿಂದ ಅವರು ಹಿಂದೂಸ್ಥಾನದ ಈ ಪ್ರಯಾಣವನ್ನು ಕೈಕೊಳ್ಳುವವರಿದ್ದಾರೆಂದು ಹೇಳೋಣಾಗುತ್ತದೆ. ನಿಜವಾಗಿ ಹೇಳುವದಾದರೆ, ಬಾದಶಹರು ಹಿಂದೂಸ್ಥಾನದಲ್ಲಿ ಬಂದು ಬಹುಸಮಯ ನಿಲ್ಲಬೇಕೆಂದೆ ಪ್ರಜೆಗಳ ಅಪೇಕ್ಷೆ. ಅವರು ಅಲ್ಲಿ, ಅಧಿಕಾರಿಗಳು ಮತ್ತು ಪ್ರಜೆಗಳು ಇಲ್ಲಿ. ಇದರಿಂದ ಈ ದೇಶದಲ್ಲಿ ಏನು ನಡೆಯುತ್ತದೆ, ಪ್ರಜೆಗಳು ಅಂಥವರು ಇಂಥವರು ಎಂಬುದಾಗಿ ಯಾರಾದರೂ ದುರಭಿಪ್ರಾಯವನ್ನು ಹುಟ್ಟಿಸಿದ್ದು ಎಷ್ಟರಮಟ್ಟಿಗೆ ಸತ್ಯವಾದ್ದು, ಪ್ರಜೆಗಳ ಆಕಾಂಕ್ಷೆಯು ಏನು, ಅವರನ್ನು ಅಧಿಕಾರಿಗಳು ವ್ಯರ್ಥವಾಗಿ ಹೇಗೆ ತಡೆಗಟ್ಟುತ್ತಾರೆ, ಈ ಎಲ್ಲ ಸಂಗತಿಗಳನ್ನು ಬಾದಶಹರು ಪ್ರತ್ಯಕ್ಷ ತಿಳಕೊಳ್ಳಬೇಕಾದರೆ ಅವರು ಇಲ್ಲಿ ಬರುವುದು ಮಾತ್ರವಲ್ಲ, ಇಲ್ಲಿ ನಿಲ್ಲುವುದು ಉತ್ತಮ. ಅದರ ಬದಲಿಗೆ ಇಲ್ಲಿಯ ಅಧಿಕಾರಿಗಳಾಗಲಿ ಅಥವಾ ಅಲ್ಲಿಯ ಮಂತ್ರಿಮಂಡಲದವರಾಗಲಿ ಜನತೆಯ ಕಣ್ಣುಕಟ್ಟಲು ಒಂದೆರಡು ದಿವಸದ ಮಾತಿಗೆ ಅವರನ್ನು ಇಲ್ಲಿಗೆ ತರಲು ಯತ್ನಿಸಿದರೆ ಅದರಿಂದ ಯಾವ ಫಲವುಂಟಾಗುವಂತಿದೆ? ಇಂಥ ಉಪಾಯಗಳಿಗೆ ಮರುಳಾಗುವ ದಿವಸಗಳು ಈಗ ಇಲ್ಲ.

೨ ದಿಲ್ಲಿಯಲ್ಲಿ ಕಳೆದ ವರ್ಷ ಬಕ್ರೀದಿನ ಸಮಯದಲ್ಲಿ ತುಂಬಾ ಗಲಾಟೆಯಾಗಿತ್ತು. ಅಂಥ ಅವಸ್ಥೆಗೆ ಈ ವರ್ಷ ಅವಕಾಶವು ದೊರಕಬಾರದೆಂಬುದರಿಂದ ಹಿಂದುಗಳು ಮುಂಚಿತವಾಗಿಯೆ ಮಹಮ್ಮದೀಯ ಬಂಧುಗಳನ್ನು ವಿನಯದಿಂದ ಕೇಳಿಕೊಂಡಿದ್ದರು. ಇದರ ಪ್ರಯೋಜನವು ಎಷ್ಟರಮಟ್ಟಿಗಾಗಿದೆ ಎಂಬುದನ್ನು ಬಕ್ರೀದು ದಾಟಿಹೋದ ಬಳಿಕವೇ ಹೇಳಬಹುದಲ್ಲದೆ ಮೊದಲು ಊಹಿಸಲು ಸಾಧ್ಯವಿಲ್ಲ. ಕಾರಣ, ದಿಲ್ಲಿಯಲ್ಲಿ ಹಲವರು ಮೇಲಿನಂತೆ ಮುಂಜಾಗ್ರತೆಯನ್ನು ತೆಕ್ಕೊಳ್ಳುತ್ತಿರುವಾಗಲೆ ಕೆಲವು ಗಲಾಟೆಗಳು ಪ್ರಾರಂಭವಾಗಿವೆ ಎಂದು ತಿಳಿದು ಬರುತ್ತದೆ. ಕಳೆದ ವರ್ಷ ದಂಗೆಯಾದ ಪ್ರಯುಕ್ತ ಈ ವರ್ಷ ಇಂಥ ಅನರ್ಥವು ಆಗದಂತೆ ಅಲ್ಲಿಯ ಮೆಜಿಸ್ಟ್ರೇಟರು ಜನರನ್ನು ಕೂಡಿಸಿ ಯೋಗ್ಯವಾದ ಬುದ್ಧಿವಾದಗಳನ್ನು ಅವರಿಗೆ ಕೊಟ್ಟಿರುವರು. ಆದರೂ ಅದು ಫಲಿತವಾದ್ದು ಕಂಡುಬರುವುದಿಲ್ಲ. ದನಗಳನ್ನು ಮೆರವಣಿಗೆಯಿಂದ ಒಯ್ದು ಹಿಂದುಗಳ ಮನಸ್ಸಿಗೆ ನೋವನ್ನುಂಟುಮಾಡಬಾರದೆಂಬುದಾಗಿ ಹಿಂದುಗಳು ಯಾವ ಮಾತನ್ನು ನಡಿಸಿದ್ದರೊ ಅದು ವ್ಯರ್ಥವಾಗಿದೆ. ಈ ಕಾರಣಗಳಿಂದ ಮೆಜಿಸ್ಟ್ರೇಟರು ಕೆಲವು ಹಿಂದುಗಳನ್ನೂ ಇಬ್ಬರು ಮೂವರು ಮಹಮ್ಮದೀಯರನ್ನೂ ಕೈದುಮಾಡಿಸಿರುವರು. ದಿಲ್ಲಿಯಲ್ಲಿ ಈ ಮೇರೆಗೆ ಹೇಗೆ ಬಕ್ರೀದಿಗಿಂತ ಮುಂಚಿತವಾಗಿಯೆ ಅಸ್ವಸ್ಥತೆಯುತ್ಪನ್ನವಾಗಿದೆಯೊ ಹಾಗೆಯೆ ಇನ್ನೂ ಎಷ್ಟೊ ಕಡೆಗಳಲ್ಲಿ ಉಂಟಾಗಿರಬಹುದು. ಅಲಹಾಬಾದದಲ್ಲಿ ಜಿಲ್ಲಾ ಮೆಜಿಸ್ಟ್ರೇಟರು ಒಂದು ನೋಟಿಸನ್ನು ಪ್ರಕಟಿಸಿ ಅದರಲ್ಲಿ ಬಕ್ರೀದಿನ ಸಮಯವು ದಾಟುವ ವರೆಗೆ ಜನಗಳು ಕೈಯಲ್ಲಿ ನಾಲ್ಕು ಫೀಟಿಗಿಂತ ಉದ್ದವಾದ ಬಡಿಗಳನ್ನು ಧರಿಸಿ ತಿರುಗಾಡಬಾರದೆಂತಲೂ ಹತ್ಯಾರುಗಳನ್ನು ಕೂಡ ಹಿಡಕೊಂಡು ತಿರುಗಾಡಬಾರದೆಂತಲೂ ಉಲ್ಲೇಖಿಸಿರುವರು. ಇಂಥ ಸಂಗತಿಗಳನ್ನು ನೋಡುವಾಗ ನಾವು ಹಿಂದು ಮಹಮ್ಮದೀಯರು ಪರಸ್ಪರ ಬಂಧುಭಾವದಿಂದ ವರ್ತಿಸುವುದಿಲ್ಲವೆಂಬುದು ವ್ಯಕ್ತವಾಗುತ್ತದೆ. ಇದು ಅಸಹ್ಯವಾದ ಸಂಗತಿಯು. ಧರ್ಮ, ಮತ, ತತ್ವಜ್ಞಾನ ಇತ್ಯಾದಿಗಳೆಲ್ಲ ಲೋಕದೊಳಗಿನ ಕೆಡುಕುಗಳನ್ನು ನಾಶಪಡಿಸಲು ಅವತರಿಸಿದವುಗಳು. ಹೀಗಿರುತ್ತ ಧರ್ಮಮತ, ಆಚಾರ ಇತ್ಯಾದಿಗಳೆ ಅನ್ಯೋನ್ಯ ದ್ವೇಷಕ್ಕೆ ಕಾರಣವಾಗುವದಾದರೆ ಅವುಗಳು ಅನರ್ಥಕರವೆಂದೆ ಹೇಳಬೇಕಾಗುತ್ತದೆ. ಈ ಸಂಗತಿಗಳನ್ನು ಆಯಾ ಅನುಯಾಯಿಗಳು ಶಾಂತಚಿತ್ತದಿಂದ ಆಲೋಚಿಸುವ ಸಮಯವು ಬಂದೊದಗಿದೆ.

೩. ಬಂಗಾಲ ಸ್ವರಾಜ್ಯ ಪಕ್ಷದ ಅಧ್ವರ್ಯುಗಳಾದ ದೇಶಬಂಧು ದಾಸರು ದೇಹಾವಸಾನ ಪಡೆದ ಬಳಿಕ ಅಲ್ಲಿಯ ಸ್ವರಾಜ್ಯ ಪಕ್ಷವು ನಾಯಕನಿಲ್ಲದ ಪ್ರಯುಕ್ತ ವಿಸ್ಕಳಿತವಾಗಿ ಹೋಗುತ್ತದೊ ಎಂಬ ಭೀತಿಯು ಹುಟ್ಟಿತ್ತು. ಮತ್ತು ಸ್ವರಾಜ್ಯ ಪಕ್ಷದ ಹಿತಶತ್ರುಗಳು ಈ ಸಂದರ್ಭವನ್ನು ತಮ್ಮ ವಿಘ್ನಸಂತೋಷದ ಪೂರಯಿಕೆಯಲ್ಲಿ ಉಪಯೋಗಿಸಿಕೊಳ್ಳಲು ಯತ್ನಿಸಿದ್ದರು. ಆದರೆ ದೂರದರ್ಶಿಗಳಾದ ಅಲ್ಲಿಯ ಅನುಯಾಯಿಗಳು ಪರರಿಗೆ ಛಿದ್ರಾನ್ವೇಷಣಕ್ಕೆ ಅವಕಾಶವನ್ನು ಕೊಡದೆ ಎಲ್ಲರೂ ಒಟ್ಟಿಗೆ ಸೇರಿ ಶ್ರೀಯುತ ಜೇ. ಎಮ್. ಸೇನಗುಪ್ತರನ್ನು ದಾಸರವರ ಸ್ಥಾನಕ್ಕೆ ಆರಿಸಿ ತಮ್ಮ ಐಕಮತ್ಯವನ್ನೂ, ಪಕ್ಷದ ಅಚಲತ್ವವನ್ನೂ ವ್ಯಕ್ತಗೊಳಿಸಿದ್ದಾರೆ. ಇದು ತುಂಬಾ ಸಂತೋಷದ ಮತ್ತು ಸಮಾಧಾನದ ಮಾತಾಗಿದೆ. ಶ್ರೀಯುತ ಸೇನಗುಪ್ತರು ದಾಸರವರ ನಂತರ ಅವರ ಸ್ಥಾನಕ್ಕೆ ಯೋಗ್ಯರೆ ಎಂಬ ವಿಷಯದಲ್ಲಿ ಸಂದೇಹವಿಲ್ಲ. ಹಿಂದು ಕಾಲದಲ್ಲಿ ಸಭಾ ವಕ್ತೃತ್ವ, ಲೇಖನ ಪಟುತ್ವ ಇವೆ ನಾಯಕತ್ವದ ಲಕ್ಷಣಗಳಾಗಿದ್ದವು. ಆದರೆ ಲೋಕಮಾನ್ಯರ ಯುಗವು ಅವತರಿಸಿದಂದಿನಿಂದ ದೇಶಕ್ಕೋಸ್ಕರ ಕಷ್ಟಸಹಿಷ್ಣುತೆ, ಸ್ವಾರ್ಥತ್ಯಾಗ ಮತ್ತು ಕಾರ್ಯತತ್ಪರತೆ ಈ ಗುಣಗಳು ಮುಖಂಡನಲ್ಲಿರಬೇಕಾದ ಮುಖ್ಯ ಲಕ್ಷಣಗಳಾಗಿ ನಿಂತಿವೆ. ದೇಶಬಂಧುಗಳ ತರುವಾಯ ಸೇನಗುಪ್ತರಲ್ಲಿ ಈ ಗುಣಗಳ ಸಮುಚ್ಚಯವು ಧಾರಾಳವಾಗಿದೆ. ದೇಶಕಾರ್ಯದಲ್ಲಿ ಅವರು ತನ್ನ ಲಕ್ಷಗಟ್ಟಲೆಯಾದ ದ್ರವ್ಯವನ್ನು ವಿನಿಯೋಗಿಸಿದ್ದಲ್ಲದೆ ದಾಸರವರ ಕೈಯಲ್ಲಿ ಅವರು ತಯಾರಾದ್ದರಿಂದ ಅವರ ಕಾರ್ಯಪದ್ಧತಿಯನ್ನು ಚೆನ್ನಾಗಿ ತಿಳಿದವರಾಗಿದ್ದಾರೆ. ಈಗಿನ ದಿವಸಗಳಲ್ಲಿ ಬರೆ ಫಕೀರರಾದಲ್ಲಿನೆ ಯಾರಿಂದಲೂ ದೇಶದ ರಾಜಕೀಯ ಕಾರ್ಯವನ್ನು ಮುಂದೊತ್ತಲಾಗಲಿಕ್ಕಿಲ್ಲ. ತ್ಯಾಗದೊಟ್ಟಿಗೆ ರಾಜಕಾರ್ಯ ಪಟುತ್ವವೂ, ಸರ್ವಸಂಗ್ರಾಹಕತೆಯೂ ಅವಶ್ಯವಾಗಿವೆ. ಈ ಗುಣಗಳಲ್ಲಿ ಸೇನಗುಪ್ತರು ದಾಸರವರನ್ನು ಅನುಕರಿಸಿ ಬಂಗಾಳದ ಸ್ವರಾಜ್ಯ ಪಕ್ಷವನ್ನು ಮುಂದರಿಸಿಯಾರೆಂದು ನಂಬಬಹುದಾಗಿದೆ.

೪. ದಕ್ಷಿಣ ಆಫ್ರಿಕದಲ್ಲಿ “ಕಲರಬಾರ ಬೀಲು” ಎಂಬ ಹೆಸರಿನಿಂದ ವರ್ಣದ್ವೇಷವನ್ನು ಸೂಚಿಸುವ ಬೀಲಿನ ಮೂರನೆಯ ವಾಚನವು ಅಲ್ಲಿಯ ಎಸೆಂಬ್ಲಿಯಲ್ಲಿ ಮುಗಿಯಿತೆಂಬ ವ್ಯಸನಕರ ವಾರ್ತೆಯು ಬಂದಿದೆ. ಅಲ್ಲಿಯ ಎಸೆಂಬ್ಲಿಯಲ್ಲಿ ಇದು ಪಾಸಾದೀತೆಂದು ಎಲ್ಲರೂ ಮೊದಲೆ ನಿರೀಕ್ಷಿಸಿದ್ದರು. ಆ ಮೇರೆಗೆ ಅದು ಪಾಸಾಗಿದೆ. ಈ ಬೀಲಿನಿಂದ ಆಫ್ರಿಕದ ಮೂಲ ನಿವಾಸಿಗಳಿಗೂ, ಏಸಿಯದೊಳಗಿನ ಜನರಿಗೂ ಅನ್ಯಾಯವುಂಟಾಗಿದೆ. ಮಾನ್ಯವಾದ ಯಾವ ವೃತ್ತಿಯನ್ನೂ ಈ ಜನರು ಕೈಕೊಳ್ಳ ಕೂಡದು. ನಾತಾಳಿನಲ್ಲಿ ಅವರಿಗೆ ನಿಲ್ಲಲು ಆಸ್ಪದವಿರಕೂಡದು, ಕಡೆಗೆ ಯುರೋಪಿಯನ್ ಕೂಲಿಗಳಿಗೆ ತೊಂದರೆ ಬರಬಾರದೆಂಬುದರಿಂದ ಏಸಿಯದವರಿಗೂ ಆಫ್ರಿಕನರಿಗೂ ಕೂಲಿಕೆಲಸದ ವೃತ್ತಿಗೂ ಅವಕಾಶವಿರಕೂಡದು ಎಂಬಿತ್ಯಾದಿ ಬರೆ ಅವಮಾನಕರವೆ ಅಲ್ಲ, ಹೊಟ್ಟೆಯ ಮೇಲೆ ಕಾಲಿಡುವ ಸ್ವಭಾವದ ಬೀಲನ್ನು ತಂದು, ಅಲ್ಲಿಯ ಮೂಲ ನಿವಾಸಿಗಳ ಮತ್ತು ಏಸಿಯಾಟಿಕರ ಸತತ ವಿರೋಧವಿರುವಾಗಲೂ ಅದನ್ನು ಲಕ್ಷಿಸದೆ ಎಸೆಂಬ್ಲಿಯು ಪಾಸು ಮಾಡುತ್ತದೆ ಎಂಬುದರ ಮೇಲಿಂದ ಅಲ್ಲಿಯ ಸ್ವಾರ್ಥಸಾಧು ಸರಕಾರದ ಹೃದಯವು ಸರಿಯಾಗಿ ಆವಿಷ್ಕೃತವಾಗುವುದಿಲ್ಲವೆ? ಇಂಥ ಘಾತುಕ ಬೀಲು ಪಾಸಾದ್ದನ್ನು ಕೇಳಿ ಸಿ. ಎಫ್. ಎಂಡ್ರೂಸರಂಥ ಸಾಧು ಪುರುಷರು ಕೂಡ ವ್ಯಸನಾಕ್ರಾಂತರಾಗಿರುವರು. ಈ ಬೀಲಿನಲ್ಲಿ ‘ಏಸಿಯಾಟಿಕ್’ ಎಂಬ ಮಾತಿನಿಂದ ಇಡಿ ಏಸಿಯಾಖಂಡದ ಅಂತರ್ಭಾವವಾಗುತ್ತದಾದರೂ ಅಲ್ಲಿ ಇರುವವರು ಹಿಂದಿಗಳೆ ಅಲ್ಲದೆ ಇತರರಲ್ಲ. ಎಂದ ಮೇಲೆ ಹಿಂದಿಗಳನ್ನು ಬಹಿಷ್ಕರಿಸಲು ಮಾತ್ರ ಅಲ್ಲಿಯ ಬಿಳಿ ಜನರು ಈ ಬೀಲಿನ ಶಸ್ತ್ರವನ್ನು ಹೂಡಿದ್ದಾರೆಂಬುದು ಗೊತ್ತಾಗುತ್ತದೆ. ಇಂಥ ದ್ವೇಷಕರವಾದ ಮನೋವೃತ್ತಿಯನ್ನು ತಾಳಿದ ದಕ್ಷಿಣ ಆಫ್ರಿಕದ ಸರಕಾರಕ್ಕೆ ಹಿಂದುಸ್ಥಾನ ಸರಕಾರವು ಬುದ್ಧಿ ಕಲಿಸುವುದನ್ನು ಬಿಟ್ಟು ಮೌನವನ್ನು ತಾಳಿಕೊಂಡು ಕೂತಿದೆ. ಇದು ತುಂಬಾ ಉದ್ವೇಗಕರವಾಗಿದೆ; [illegible] ಸಮಿತಿಯು ತತ್ವಜ್ಞಾನವನ್ನು ಉದ್ದುದ್ದನಾಗಿ ಮಾತಾಡುತ್ತಿದ್ದರು. ಕ್ರಿಯಾರೂಪವಾಗಿ ಯಾವದನ್ನೂ ಮಾಡಿರಲಿಲ್ಲ. ಈ ಬೀಲಿನಲ್ಲಿರುವ “ಏಸಿಯಾಟಿಕ್” ಎಂಬ ಮಾತನ್ನು ತೆಗೆದು ಹಾಕಿ ಹಿಂದಿಗಳ ಮನಸ್ಸಿಗೆ ಉಂಟಾಗುವ ನೋವನ್ನು ಪರಿಹರಿಸೋಣವೆಂದು ಅವರು ಹೇಳುತ್ತಿದ್ದರು. ಈಗ ಅವರ ಮಾತನ್ನು ಪರೀಕ್ಷಿಸುವ ಸಮಯವು ಬಂದೊದಗಿದೆ. ಎಸೆಂಬ್ಲಿಯಲ್ಲಿ ಪಾಸಾದರೂ ಆ ಬೀಲು ಸೀನೆಟಿನ ಸಮ್ಮತಿಗೆ ಹೋಗುವದಿದೆ. ಆ ಕಾಲದಲ್ಲಿ ಸ್ಮಟ್ಸರು ತಮ್ಮ ವಚನವನ್ನು ಸತ್ಯಗೊಳಿಸಿ ಈ ಘಾತುಕ ಬೀಲಿನ ದೋಷವನ್ನು ಪರಿಹರಿಸಿದರೆ ಅದಾದರೂ ಅವರ ಘನತ್ವಕ್ಕೆ ಒಪ್ಪೀತು.

೫. ಎಂಗ್ಲೊ ಇಂಡಿಯನರ ಒಂದು ಡೆಪ್ಯುಟೇಶನು ವಿಲಾಯತಿಗೆ ಹೋಗಲು ಹೊರಟಿದೆ. ವಿಲಾಯತಿಯಲ್ಲಿ ಭಾರತ ಮಂತ್ರಿಗಳನ್ನು ಕಂಡು ಇಲ್ಲಿಯ ಎಂಗ್ಲೊ ಇಂಡಿಯನ್ ಸಮಾಜದ ಹಾಲುಹವಾಲೆಗಳನ್ನು ಹೇಳುವದು ಈ ಡೆಪ್ಯುಟೇಶನಿನ ಉದ್ದೇಶವಾಗಿದೆ. ಈ ಡೆಪ್ಯುಟೇಶನು ಹೊರಡುವಾಗ ಮುಂಬಯಿಯಲ್ಲಿ ಕರ್ನಲ್ ಗಿಡ್ನೆ ಎಂಬವರು ಒಂದು ಭಾಷಣವನ್ನು ಕೊಟ್ಟು ಅದರಲ್ಲಿ ಎಂಗ್ಲೊ ಇಂಡಿಯನ್ ಸಮಾಜದ ಹಾಲುಹವಾಲೆಗಳ ಚಿತ್ರವನ್ನು ಬಿಡಿಸಿದರು. ಹಿಂದುಸ್ಥಾನ ಸರಕಾರವು ರೈಲು ಮುಂತಾದ ಇಲಾಖೆಗಳಲ್ಲಿ ಹಿಂದೀಕರಣದ ತತ್ವವನ್ನು ಅಂಗೀಕರಿಸಿದ್ದರಿಂದ ಎಂಗ್ಲೊ ಇಂಡಿಯನ್ನರಿಗೆ ರೈಲ್ ಇಲಾಖೆಯಲ್ಲಿ ಹೊಸ ನೌಕರಿಗಳು ಸಿಗುವದಿಲ್ಲ, ಮಾತ್ರವಲ್ಲ, ಹಿಂದಿಗಳಿಗೆ ಕೊಡಬೇಕೆಂಬ ಒಂದೇ ಉದ್ದೇಶದಿಂದ ಇದ್ದವರನ್ನು ಕೂಡ ಕೆಲಸದಿಂದ ತೆಗೆದು ಹಾಕಹತ್ತಿದ್ದಾರೆ; ಹೀಗಾದ ಮೇಲೆ ಎಂಗ್ಲೊ ಇಂಡಿಯನರು ಏನು ಮಾಡಬೇಕಾಯಿತು? ಸೈನ್ಯದಲ್ಲಿ ಸೇರಲು ಹೋದರೆ ಅನ್ಯ ದೇಶಗಳಿಗೆ ಹೋಗುವ ಸಂದರ್ಭವು ಬರುತ್ತದೆ. ಸಾಮಾಜಿಕ ತರಗತಿಯ ಪ್ರಶ್ನೆಯು ಬರುವಾಗ ಎಂಗ್ಲೊ ಇಂಡಿಯನರೆಂದೂ, ನೌಕರಿಯ ಪ್ರಶ್ನೆಯು ಬರುವಾಗ ಹಿಂದುಸ್ಥಾನದ ಕಾಯಂ ನಿವಾಸಿಗಳೆಂದೂ ಸಾಮ್ರಾಜ್ಯ ಸಂರಕ್ಷೆಯ ಪ್ರಶ್ನೆಯು ಬರುವಾಗ ಬ್ರಿಟಿಷ್ ಯುರೋಪಿಯನರೆಂದೂ ಈ ಮೇರೆಗೆ ತ್ರಿಮೂರ್ತಿ ಸ್ವರೂಪವು ಎಂಗ್ಲೊ ಇಂಡಿಯನ್ ವರ್ಗಕ್ಕೆ ಬಂದಿರುವದು. ಎಂಬಿತ್ಯಾದಿ ರೂಪದಿಂದ ಕರ್ನಲ್ ಗಿಡ್ನೆ ಸಾಹೇಬರು ತನ್ನ ಸಮಾಜದ ಅನುಕಂಪನೀಯ ಮತ್ತು ವಿಚಿತ್ರವಾದ ಸ್ಥಿತಿಯನ್ನು ವರ್ಣಿಸಿ ವಿಲಾಯತಿಯಲ್ಲಿ ಭಾರತ ಮಂತ್ರಿಗಳನ್ನು ಕಂಡು ತನ್ನ ಸಮಾಜದ ಯಾವದಾದರೂ ಒಂದು ನಿಶ್ಚಿತಸ್ಥಿತಿಯನ್ನು ನಿರ್ಣಯಿಸಬೇಕೆಂದು ಮನಸ್ಸು ಗಟ್ಟಿಮಾಡಿರುವರು! ಭಾರತಮಂತ್ರಿಗಳು ಎಂಗ್ಲೊ ಇಂಡಿಯನ್ ಸಮಾಜಕ್ಕೆ ಸರಿಯಾದ ನಿವೃತ್ತಿಯನ್ನು ಕೊಡದ ಪಕ್ಷದಲ್ಲಿ ಎಂಗ್ಲೊ ಇಂಡಿಯನರು ಹಿಂದಿಗಳೊಟ್ಟಿಗೆ ಸೇರುವದು ಅವಶ್ಯವೆಂದು, ಪಾಪ! ಬಹು ನಿರಾಶೆಯಿಂದ ಈ ಗಿಡ್ನೆಯವರು ನುಡಿದಿರುವರು. ಹಿಂದಿಗಳೊಟ್ಟಿಗೆ ಸೇರಿರುವದರಿಂದ ನಿಜವಾಗಿ ಇವರಿಗೆ ಹಾನಿ ಏನು? ಇವರು ಮಮ ಎಂದು ಯಾಕೆ ಸಾಹೇಬರಿಗೆ ಕೈಹಚ್ಚಬೇಕು? ಹಿಂದಿ ಸ್ವರಾಜ್ಯದ ಚಳವಳದಲ್ಲಿ ಎಂಗ್ಲೊ ಇಂಡಿಯನ್ ವರ್ಗವು ಕೂಡ ಸೇರಿ ತತ್ಪರತೆಯಿಂದ ಚಳವಳವನ್ನು ಮುಂದರಿಸಿದರೆ ಇವರ ವರ್ಗದ ಪ್ರಶ್ನೆಯು ಸುಲಭವಾಗದೆ ಇರಲಿಕ್ಕಿಲ್ಲ.

೬. ವೀರ ಶೈವರು, ವೀರ ವೈಷ್ಣವರು ಇರುವಂತೆ ಡೊ. ಕಿಚ್ಲುಗಳು ವೀರ ಮಹಮ್ಮದಿಗಳು. ಇವರ ವಿಚಾರಗಳು ಇದುವರೆಗೆ ಸರ್ವಶ್ರುತವಾಗಿಯೆ ಇರುವವು. ಇವರ ಮತ್ತು ಇತರ ವೀರ ಮಹಮ್ಮಡನ್‌ರ ನಾಯಕತ್ವದ ಕೆಳಗೆ ಮಹಮ್ಮದೀಯರಲ್ಲಿ ಟೆನ್‌ಝೀಮ್ ಎಂಬ ಚಳವಳವು ಈಗ ಎಷ್ಟೋ ಸಮಯದಿಂದ ನಡೆಯುತ್ತಿದೆ. ಈ ಚಳವಳದ ಇದು ವರೆಗಿನ ಇತಿಹಾಸವು ಹಿಂದು ವರ್ಗಕ್ಕೆ ಪ್ರತಿಕೂಲವಾಗಿಯೆ ಇದೆ. ಹೀಗಿರುವಲ್ಲಿ ಡೊ. ಕಿಚ್ಲು ಸಾಹೇಬರು ಈಗ ಪ್ರಸಿದ್ಧಪಡಿಸುತ್ತಿದ್ದಾರೇನಂದರೆ, ಟೆನ್‌ಝೀಮ್ ಚಳವಳವು ಹಿಂದುಗಳಿಗೆ ವಿರೋಧಕವಲ್ಲ. ಅದು ಮಹಮ್ಮದೀಯರಲ್ಲಿ ಶಕ್ತಿಯ ಅಭಿವೃದ್ಧಿಗೋಸ್ಕರವಾಗಿದೆ. ಇದನ್ನು ಪ್ರಾರಂಭಿಸುವಾಗ ಮಹಾತ್ಮಾ ಗಾಂಧಿಗಳಿಗೆ ತಿಳಿಸಿ ಅವರ ಅನುಮತಿಯನ್ನು ಪಡೆದುಕೊಂಡಿದೆ. ಡೋಕ್ಟರ್ ಕಿಚ್ಲುಗಳ ಈ ಮಾತು ಹೇಗೂ ಇರಲಿ, ಟೆನ್‌ಝೀಮ್ ಚಳವಳವು—ಇತರ ಮತಸ್ಥರನ್ನು ಪರಿವರ್ತನಗೊಳಿಸುವ ಕಾರ್ಯವು—ಒಳ್ಳೆಯದೆಂದಾದರೆ ಹಿಂದೂ ಸಂಘಟನವಾಗಲಿ, ಶುದ್ಧಿ ಚಳವಳವಾಗಲಿ ಇವು ಮಾತ್ರ ಯಾಕೆ ಇವರ ಕಣ್ಣಿಗೆ ಚುಚ್ಚಬೇಕು? ಮಹಾತ್ಮಾ ಗಾಂಧಿಯವರೊಬ್ಬರು ಸಮ್ಮತಿಸಿದ ಕೂಡಲೆ ಸರ್ವ ಹಿಂದು ಸಮಾಜಕ್ಕೆ ಅದು ಸಂಪ್ರತಿಪನ್ನವಾಗಬಹುದೆ? ಇತರರು ತಮ್ಮ ಹಿತಸಂಬಂಧ, ಬುದ್ಧಿಮತ್ತೆ, ಆಲೋಚನೆ, ಮತ್ತು ಮನೋದೇವತೆ ಇವುಗಳನ್ನು ಮಾರಿದ್ದಾರೆಯೆ? ಉತ್ತರ ಹಿಂದುಸ್ಥಾನದಲ್ಲಿ ಟೆನ್‌ಝೀಮಿನಂಥ ಚಳವಳದಿಂದ ಯಾವ ಯಾವ ಅನರ್ಥವುಂಟಾಗುತ್ತದೆ ಎಂಬುದನ್ನು ಅಲ್ಲಿಯವರು ಯಾವ ವರೆಗೆ ತಿಳಿದಿರುವರೊ ಅದು ವರೆಗೆ ಈ ಅಪಲಾಪದಿಂದ ಯಾರೂ ಮೋಸ ಹೋಗಲಿಕ್ಕಿಲ್ಲ.

ಮಂಗಳೂರು.

ಕೈಲಾಸವಾಸಿ ಚಿತ್ತರಂಜನ ದಾಸರವರ ಸ್ಮರಣಾರ್ಥವಾಗಿ ತಾ. ೧ನೇ ಬುಧವಾರ ಇಲ್ಲಿಯ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯಲ್ಲಿ ಮಹಾಜನರ ಸಭೆಯೊಂದು ಜರಗಿತು. ಹ್ಯಾಕೋರ್ಟು ವಕೀಲ್ ಯು. ಸಿ. ಕೃಷ್ಣಭಟ್ಟರವರು ಅಧ್ಯಕ್ಷಸ್ಥಾನವನ್ನಲಂಕರಿಸಿದ್ದರು.

ಶ್ರೀಯುತ ಪುಣಿಂಚಿತ್ತರಾಯರ ಶಾಂತಿಗೀತೆಯಿಂದ ಸಭೆಯು ಪ್ರಾರಂಭವಾಯಿತು. ಅನಂತರ ಮ| ರಾ| ಗಳಾದ ಎ. ಬಿ. ಶೆಟ್ಟಿ, ಎಮ್. ಮಾಧವ ರಾವ್, ಬೇರಿಸ್ಟರ್ ರೋಯ್, ಗಂಗೊಳ್ಳಿ ಕೃಷ್ಣ ರಾವ್, ಅ. ಭೋಜ ರಾವ್ ಮತ್ತು ಶ್ರೀ. ಮನೋರಮಾ ಬಾಯಿಯವರೂ ದಿವಂಗತರ ಗುಣಕಥನವನ್ನು ಮಾಡಿದರು. ಕೊನೆಗೆ ಸಭಾಧ್ಯಕ್ಷರ ಭಾಷಣವಾಗಿ ದೇಶಬಂಧುವಿನ ಆತ್ಮಕ್ಕೆ ಶಾಂತಿಯನ್ನು ಬಯಸಿದ ಮೇಲೆ ಸಭೆಯು ತೀರಿತು.

ಈ ಮೊದಲು ಪ್ರಕಟಿಸಿದಂತೆ “ಅಭಿನವಾನಂದ ನಾಟಕ ಮಂಡಳಿ”ಯವರು ಆಡಿದ ನಾಟಕದ ಉತ್ಪತ್ತಿಯಿಂದ ಶ್ರೀ. ದಾಸರ ಸ್ಮಾರಕವಾಗಿ ಬಡಬಗ್ಗರಿಗೆ ಅಕ್ಕಿಯನ್ನು ಹಂಚಿಸಿದರು.

ಮದ್ರಾಸು ಹ್ಯಾಕೋರ್ಟಿನ ಜಡ್ಜರಾದ ಓನರೇಬಲ್ ಮಿ| ವಿ. ವಿ. ಶ್ರೀನಿವಾಸಯ್ಯಂಗಾರ್ ಬಿ. ಎ. ಬಿ. ಎಲ್ ಇವರು ಕಳೆದ ಶನಿವಾರ ಮೈಲ್‌ನಲ್ಲಿ ಇಲ್ಲಿಗೆ ಬಂದು ಮ| ರಾ| ಅಮ್ಮೆಂಬಳ ಶ್ರೀನಿವಾಸ ಪೈಗಳ ಅತಿಥಿಯಾಗಿದ್ದರು. ಮರುದಿನ ಬೆಳಿಗ್ಗೆ ಕಾರ್ಕಳಕ್ಕೆ ಹೋಗಿ ಸಂಜೆಗೆ ತಿರುಗಿ ಬಂದು ಇಲ್ಲಿಯ ಕೊಸ್ಮೊಪೊಲಿಟನ್ ಕ್ಲಬ್ಬನ್ನು ಸಂದರ್ಶಿಸಿದರು. ಕ್ಲಬ್ಬಿನ ಮೆಂಬರರೊಡನೆ ಅನೇಕ ವಿಷಯಗಳ ಕುರಿತು ಮಾತಾಡಿದ್ದಲ್ಲದೆ, ಮಂಗಳೂರು ಪಟ್ಟಣದಲ್ಲಿ ಒಂದು ಟೌನ್ ಹೋಲು ಮತ್ತು ಅದಕ್ಕೆ ಲಗ್ತಿಕರಿಸಿ ಸರ್ವಾಂಗ ಸಂಪೂರ್ಣವಾದ ಲ್ಯಾಬ್ರರಿಯೊಂದನ್ನು ಏರ್ಪಡಿಸುವ ಅವಶ್ಯಕತೆಯನ್ನು ಒತ್ತಿಹೇಳಿದರು. ಸೋಮವಾರ ದಿವಸ ಸಂಜೆ ಬಾರ್ ಎಸೋಸಿಯೇಶನಿನವರು ಕೋರ್ಟು ರೀಡಿಂಗ್ ರೂಮಿನಲ್ಲಿ ಸತ್ಕರಿಸಿದ್ದರು. ಅನಂತರ ಸಂಜೆ ೬ ಗಂಟೆಗೆ ಗವರ್ನಮೆಂಟ ಕೋಲೇಜಿನಲ್ಲಿ ಒಂದು ಸಾರ್ವಜನಿಕ ಭಾಷಣಮಾಡಿ ಮಂಗಳವಾರ ದಿವಸ ಬೆಳಿಗ್ಗೆ ಮದ್ರಾಸಿಗೆ ಹಿಂತಿರುಗಿರುವರು.

The Calicut Bank, Ltd.,
ದಿ ಕೆಲಿಕಟ್ ಬೇಂಕ್, ಲಿಮಿಟೆಡ್,

ಹೆಡ್ ಆಫೀಸು— ಕಲ್ಲಿಕೋಟೆ.
ಬ್ರಾಂಚುಗಳು:— ಮುಲ್ಲಸ್‌ಚೇರಿ, ತಲಚೇರಿ, ಕೊಚ್ಚಿ ಮತ್ತು ಪಾಲ್ಘಾಟು.
ರಿಜಿಸ್ಟರ್ಡ್ ಮತ್ತು ಅಧಿಕಾರಗೊಳಿಸಲ್ಪಟ್ಟ ಮೂಲಧನ ರೂ. 5,00,000—0—0.
ರೂಪಾಯಿ 10ರ 50,000 ಪಾಲುಗಳು.
(30—8—1924)ರ ವರೆಗೆ [illegible] ಮೂಲಧನ ರೂಪಾಯಿ 1,81,850—0—0.
ಒಂದು ವರುಷದ ಕಾಯಂ ಠೇವಣಾತಿಗೆ ಬಡ್ಡಿ ದರ ಸೇಕಡಾ ರೂ. 7—8—0.
ಕಳೆದ 4 ವರುಷಗಳಲ್ಲಿ ಪಾಲುಗಾರರಿಗೆ ಸೇಕಡಾ 12ರಂತೆ ಬಡ್ಡಿ ಹಂಚಿದೆ.
ಹೆಚ್ಚಿನ ವಿವರಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.
ಸಿ. ಕೃಷ್ಣನ್, ಬಿ. ಎ. ಬಿ. ಎಲ್.,
ಮೆನೇಜಿಂಗ್ ಡ್ಯಾರೆಕ್ಟರ್.
ಡ್ಯಾರೆಕ್ಟರರಲ್ಲಿ ಒಬ್ಬರು—
ಎಮ್. ನಾರಾಯಣ ಕಾಮತ್, ಬಿ. ಎ.,
ಪ್ಲೀಡರ್, ಕುಂದಾಪುರ.

ಇಲ್ಲಿಯ ರಿಜರ್ವ್ ಇನ್ಸ್‌ಪೆಕ್ಟರರಿಗೆ ನೀಲಗಿರಿ ಕೊರ್ಡ್ಯಾಯಿಟ್ ಫೆಕ್ಟರಿಗೆ ವರ್ಗವಾಗಿದೆ.

ರಜೆಯ ಮೇಲಿದ್ದ ಸಬ್ ಇನ್ಸ್‌ಪೆಕ್ಟರ್ ಮ| ರಾ| ಎಸ್. ಲಕ್ಷ್ಮೀನಾರಾಯಣ ರಾಯರಿಗೆ ಮೂರು ತಿಂಗಳ ರಜೆಯು ಹೆಚ್ಚಿಗೆ ಕೊಡಲಾಗಿದೆ.

೧೮೬೦ನೆ ಇಸವಿಯ ೨೧ನೆ ಎಕ್ಟಿನ ಮೇರೆಗೆ ರಿಜಿಸ್ಟರಾದ ಬಾಲಿಕಾ ಶಿಕ್ಷಣ ಸಭೆ, ಕುಂದಾಪುರದಲ್ಲಿರುವ ಈ ಸಭೆಯ ವಾರ್ಷಿಕ ಸರ್ವಸಾಧಾರಣ ಸಭೆಯು ೧೯೨೫ ಜುಲಾಯಿ ತಾ. ೧೨ನೇ ಆದಿತ್ಯವಾರ ಸಂಜೆ ೪-೩೦ಕ್ಕೆ ಬಾಲಿಕಾ ಪಾಠಶಾಲೆಯ ಸಭಾ ಮಂದಿರದಲ್ಲಿ ಜರಗಿ ಮುಂದಿನ ಸಂಗತಿಗಳನ್ನು ಆಲೋಚಿಸುವದಾಗಿ ಗೌರವ ಕಾರ್ಯದರ್ಶಿಯವರು ತಿಳಿಸುತ್ತಾರೆ.

ಪತ್ರವ್ಯವಹಾರ.

ಅಯ್ಯಾ,

ಇದೇ ೧೯೨೪ನೇ ಇಸವಿ ಅಕ್ಟೋಬರ ತಾ. ೧ರ ಲಾಗಾಯ್ತು ಬರುವ ೧೯೨೫ನೇ ಇಸವಿ ನವಂಬರ ತಾ. ೩೦ಕ್ಕೆ ಅಂತ್ಯವಾಗುವ ವರುಷದಲ್ಲಿ ಉಪ್ಪಿನಂಗಡಿ ತಾಲೂಕಿನಲ್ಲಿ ಇಡಲಿಕ್ಕೆ ಆರಿಸಿದ ೧೨೩ ಶೇಂದಿ ಅಂಗಡಿಗಳಲ್ಲಿ ಯಾವ್ಯಾವ ಗ್ರಾಮದ ಶೇಂದಿ ಅಂಗಡಿಗಳನ್ನು ಇಡಬೇಕು ಯಾವ್ಯಾವ ಗ್ರಾಮದಲ್ಲಿ ಅವಶ್ಯವಿಲ್ಲ ಎಂಬ ಕುರಿತು ಜಿಲ್ಲಾ ಕಲೆಕ್ಟರ ದೊರೆಗಳವರು ತಾಲೂಕು ಬೋರ್ಡಿಗೆ ಕೇಳಿಕೊಂಡಿದ್ದಾರಾಗಿಯೂ ಆ ಕುರಿತು ಆಲೋಚಿಸುವ ಬಗ್ಗೆ ತಾಲೂಕು ಬೋರ್ಡಿನ ಎಲ್ಲಾ ಮೆಂಬರರು ಜುಲ್ಯಾ ತಿಂಗಳಲ್ಲಿ ಜರಗುವ ಮೀಟಿಂಗಿಗೆ ಹಾಜರು ಆಗಬೇಕಾಗಿ ತಿಳಿಸಿರುವದಾಗಿ ಕೇಳುತ್ತೇವೆ. ಉಪ್ಪಿನಂಗಡಿ ತಾಲೂಕಿನಲ್ಲಿ ಪುತ್ತೂರ ಟೌನಿನಲ್ಲಿ ಶೇಂದಿ ಅಂಗಡಿ ಇಲ್ಲ. ಟೌನಿನ ಜನರು ಟೌನಿನಿಂದ ಸುಮಾರು ೨ ಮೈಲು ದೂರ ಇರುವ ಬಂಣುದ ಯಾ ಬಲನಾಡ ಗ್ರಾಮಗಳ ಶೇಂದಿ ಅಂಗಡಿಗಳಿಗೆ ಆಗಲಿ ಯಾ ಸುಮಾರು ೧½ ಮೈಲು ದೂರ ಇರುವ ಕೆಂಮಿಂಜೆ ವ ಆರಿಯಾಪ್ಪು ಗ್ರಾಮದ ಶೇಂದಿ ಅಂಗಡಿಗಳಿಗೆ ಹೋಗಬೇಕು. ಹೀಗೆ ಟೌನಿನ ಕುಡಿಕರು ಅಷ್ಟು ದೂರ ಹೋಗುವದರಿಂದ ಒಳ್ಳೇದಂತೆಯೇ ಹೇಳುವದು ಹಾಗಿರಲಿ. ಟೌನಿನಲ್ಲಿ ಶೇಂದಿ ಅಂಗಡಿ ಇಲ್ಲದರಿಂದ ಇತರ ನೆರೆ ಗ್ರಾಮದ ಶೇಂದಿ ಅಂಗಡಿಗಳ ಬಗ್ಗೆ ಮುರ್ತೆ ಮಾಡುವ ಮುರ್ತೆದಾರರು ತಮ್ಮ ಶೇಂದಿಯನ್ನು ದೂರದ ಅಂಗಡಿಗಳಿಗೆ ಒಯ್ಯುವದರ ಬದಲಾಗಿ ತಮ್ಮ ತಮ್ಮ ಮನೆಗಳಲ್ಲಿಯೆ ವಿಕ್ರಿತಮಾಡಿ ಹೊಟ್ಟೆ ತುಂಬಿಸಿಕೊಳ್ಳುವರು. ಗುತ್ತೆದಾರರಿಗೇನು ಅವರಿಗೆ ಹ್ಯಾಗಾದರೂ ತಿಂಗಳುಗಟ್ಲೆ ಕಿಸ್ತು ತೆತ್ತುಬಂದರೆ ಸರಿ. ಗುತ್ತೆದಾರನು ಹ್ಯಾಗೂ ಆಕ್ಷೇಪಿಸುವದೆ ಇಲ್ಲ. ಈಗ ೨-೩ ವರುಷಗಳಿಂದ ಪುತ್ತೂರು ಟೌನಿನ ಸುತ್ತಲು ಶೇಂದಿ ಮಾರಾಟ ಮಾಡುವ ಪದ್ಧತಿಯು ರೂಢಿಗೆ ಬಂದದೆ. ಈ ಸಮ್ಮಂದ ಪತ್ರಿಕೆಗಳಲ್ಲಿ ಅರಿಕೆ ಮಾಡಿಕೊಂಡಾಗ್ಯೂ ಅಬ್ಕಾರಿ ಇಲಾಖೆಯವರು ಬರದವರನ್ನೆ ಹಿಡಿದು ಒಯ್ಯುವವರು. ಈ ಪದ್ಧತಿಯಿಂದ ಕುಡಿಕತನವು ಹೆಚ್ಚುತ್ತಾ ಬಂದದೆ. ಇದಕ್ಕೆ ದೃಷ್ಟಾಂತವೇನೆಂದರೆ ಅಬ್ಕಾರಿ ಇಲಾಖೆಯವರು ಇತ್ತಲಾಗೆ ಹಲವು ಮುರ್ತೆದಾರರ ಮೇಲೆ ನಂಬ್ರ ಮಾಡಿದ್ದೆ ಇದರ ಆಧಾರ ಕೊಡುವದು. ಪುತ್ತೂರು ಕಸಬೆಯಲ್ಲಿ ಮುರ್ತೆಗೆ ತಾಳೆ ಯಾ ತೆಂಗಿನ ಮರಗಳಿಗೆ ಮೊಹರು ಹಾಕಲಿ ಕೊಡದೆಂಬ ನಿಬಂಧನೆ ಜ್ಯಾರಿಗೆ ತರಬೇಕು. ಪುತ್ತೂರು ಕಸಬೆಗೆ ಶೇಂದಿ ಅಂಗಡಿ ಇಡುವದಿಲ್ಲವೆಂತ ಆದರೆ ಕೆಂಮಿಂಜೆ ಗ್ರಾಮದ ಶೇಂದಿ ಅಂಗಡಿಯನ್ನು ಮುಕ್ರುಂಬಾಡಿ ಎಂಬಲ್ಲಿ ತಬ್ದೀಲಿಯಿಂದ ಇಡಬೇಕು. ಆರಿಯಾಪ್ಪು ಗ್ರಾಮದ ವರ್ಲಾಡ್ಕ ಶೇಂದಿ ಅಂಗಡಿಯನ್ನು ಮುಚ್ಚಲ್ಪಡಬೇಕು. ಆರಿಯಾಪ್ಪು ಗ್ರಾಮದ ಜನರಿಗೆ ಕೆಂಮಿಂಜೆ, ವಳಮೊಗ್ರು, ಕುರಿಯ, ಬಲನಾಡ ಶೇಂದಿ ಅಂಗಡಿಗೆ ಅನ್ಕೂಲ. ಅಥವಾ ಕೆಂಮಿಂಜೆ ಶೇಂದಿ ಅಂಗಡಿ ಮುಚ್ಚಿ ಆರಿಯಾಪ್ಪು ಶೇಂದಿ ಅಂಗಡಿಯನ್ನು ಮುಕ್ರುಂಬಾಡಿನಮಿರ ಇಟ್ಟರೆ ಕೆಂಮಿಂಜೆ ಗ್ರಾಮಸ್ಥರಿಗೆ ಆರಿಯಾಪ್ಪು, ಚಿಕ್ಕಮುಡ್ನೂರು, ಈ ಗ್ರಾಮದ ಶೇಂದಿ ಅಂಗಡಿಗಳಿಗೆ ಹೋಗಲಿಕ್ಕೆ ಅನ್ಕೂಲ.

ಬೆಳ್ಳಿಪಾಡಿ ಗ್ರಾಮದಲ್ಲಿ ಶೇಂದಿ ಅಂಗಡಿ ಇರುವದರಿಂದ ಕೊಡಿಂಬಾಡಿ ಗ್ರಾಮದ ಶೇಂದಿ ಅಂಗಡಿ ಅಗತ್ಯವೆ ಇಲ್ಲ. ಕೊಡಿಂಬಾಡಿ ಗ್ರಾಮದ ಶೇಂದಿ ಅಂಗಡಿ ರಸ್ತೆಕಿನಾರೆಯಲ್ಲಿರುವದರಿಂದ ಜನರಿಗೆ ಹೆಚ್ಚಿನ ತೊಂದರೆಯಂತ ಪತ್ರದಲ್ಲಿ ಹಿಂದೊಮ್ಮೆ ನೋಡಿದೆ. ಈ ಸಂಗತಿ ತಾಲೂಕು ಬೋರ್ಡು ಮೆಂಬರರು ಚರ್ಚಿಸಲಿ.

ಪುತ್ತೂರು, } ನಿವಾಸಿಕ.
ತಾ. ೩೦-೬-'೨೫.

ವಿವಿಧ ವಿಷಯಗಳು.

— ಫಜಲುಲ್ ಹಕ್ಕರ ಮತಗಳು. —

ಹಿಂದುಸ್ಥಾನವು ಪ್ರಾರಂಭಿಸಿರುವ ಸ್ವರಾಜ್ಯ ಚಳವಳಿಕ್ಕೆ ಮಹಮ್ಮದೀಯರು ಎಷ್ಟರ ಮಟ್ಟಿಗೆ ತಮ್ಮ ಸಹಾಯವನ್ನೀಯುತ್ತಿರುವರೆಂಬುದು ಈಗ ಎಲ್ಲರಿಗೆ ತಿಳಿಯುತ್ತ ಬಂದಿದೆ. ಖಿಲಾಫತ್ತಿನ ಪ್ರಶ್ನೆಯು ಒಂದು ಬಗೆಯ ವ್ಯವಸ್ಥೆಯನ್ನು ಹೊಂದಿದ ಬಳಿಕ ಮಹಮ್ಮದೀಯರ ಉತ್ಸಾಹವು ಕಡಿಮೆಯಾಗಿದೆ. ಬರೆ ಉತ್ಸಾಹವು ಕಡಿಮೆಯಾದರೂ ಅಡ್ಡಿ ಇಲ್ಲ; ಆದರೆ ವಿರೋಧವಿರಬಾರದು. ಇದು ಮುಖ್ಯ ತತ್ವ. ಉತ್ಸಾಹವಿಲ್ಲದಿದ್ದರೂ, ವಿರೋಧವಿಲ್ಲವೆಂದಾದರೆ ಪುನಃ ಆ ಉತ್ಸಾಹವನ್ನು ಒಂದು ವೇಳೆ ಅವರಿಂದ ನಿರೀಕ್ಷಿಸಬಹುದು. ವಿರೋಧವಿದ್ದರೆ ಮಾತ್ರ ಅಂಥ ಪರಿಸ್ಥಿತಿಯು ನಿರಾಶಾಜನಕವೆ ಸರಿ. ಮತ್ತು ಇಂಥ ನಿರಾಶೆಯನ್ನು ಹುಟ್ಟಿಸುವಂತೆ ಮಹಮ್ಮದೀಯ ಮುಖಂಡರು ತಮ್ಮ ಭಾಷಣಗಳಿಂದಲೂ, ಲೇಖನಗಳಿಂದಲೂ, ಕೃತಿಯಿಂದಲೂ ಮಾಡುತ್ತಿದ್ದಾರೆ ಇದು ವ್ಯಸನಾಸ್ಪದವಲ್ಲವೆ? ಮಹಮ್ಮದೀಯರ ಪ್ರವೃತ್ತಿಯು ಇತ್ತಿತ್ತಲಾಗೆ ಸ್ವರಾಜ್ಯದ ಕಡೆಗೆ ತೀರಾ ಕಡಿಮೆಯಾಗುತ್ತ ಬಂದಿದೆ. ಮಾತ್ರವಲ್ಲ, ಸ್ವರಾಜ್ಯವು ಸಿಗದೆ ಇದ್ದರೂ ಅಡ್ಡಿ ಇಲ್ಲವೆಂಬುದಾಗಿ ಅವರು ನೆನಸಹತ್ತಿದ್ದಾರೆಂದು ತೋರುತ್ತದೆ. ಈ ಮಾತಿಗೆ ಸುಪ್ರಸಿದ್ಧರಾದ ಫಜಲುಲ್ ಹಕ್ಕರ ದೃಷ್ಟಾಂತವನ್ನಿತ್ತು ಹೇಳಬಹುದು. ಹಕ್ ಸಾಹೇಬರು ಒಂದು ಸಭೆಯಲ್ಲಿ ಭಾಷಣಕೊಡುವಾಗ ಮುಂದಿನಂತೆ ತಮ್ಮ ವಿಚಾರಗಳನ್ನು ಹೊರಚೆಲ್ಲಿದರು:—"ಗೋವಧೆಯ ಹಕ್ಕನ್ನು ಕಳಕೊಂಡಲ್ಲಿ ಸ್ವರಾಜ್ಯವು ಸಿಗುವದಾದರೆ ಅದು ನನಗೆ ಬೇಡ. ನಾನು ಮುಸಲ್ಮಾನನಿದ್ದೇನೆ ಎಂಬುದನ್ನು ಮರೆತುಕೊಂಡು ನಾನು ಹಿಂದಿ ಇದ್ದೇನೆ ಎಂಬುದಾಗಿ ಎಂದೂ ಹೇಳಿಕೊಳ್ಳಲಿಕ್ಕಿಲ್ಲ. ನಾನು ಮೊದಲು ಮುಸಲ್ಮಾನನು ಮತ್ತೆ ಹಿಂದಿಯು!" ಫಜಲುಲ್ ಹಕ್ಕರಂಥ ಸುಶಿಕ್ಷಿತ ಗೃಹಸ್ಥರು ಇಂಥ ಮಾತುಗಳನ್ನಾಡಲು ಹತ್ತಿದ ಮೇಲೆ ಶಿಕ್ಷಣವಿಲ್ಲದವರ ಸ್ಥಿತಿಯು ಹೇಗಿರಬೇಕಾಯಿತು? ಅವರ ಧರ್ಮದಲ್ಲಿ ದನದ 'ಕುರುಬಾನಿ'ಯನ್ನು ಮಾಡಲೆಬೇಕೆಂಬುದಾಗಿ ಇಲ್ಲವೆಂದು ಅನೇಕ ಮಹಮ್ಮದೀಯರೆ ಅಭಿಪ್ರಾಯಪಡುತ್ತಾರೆ. ಕಾಬೂಲದ ಅಮೀರರು ಶುದ್ಧ ಮಹಮ್ಮದೀಯರಷ್ಟೆ. ಅವರೆ ಇಲ್ಲಿ ಬಂದಾಗ ಹಿಂದೆ ಬಕ್ರೀದಿನಲ್ಲಿ ಗೋವಧೆಯನ್ನು ಮಾಡುವುದು ಅಗತ್ಯವಿಲ್ಲವೆಂದು ಹೇಳಿದ್ದಾರೆ. ಎಂದ ಮೇಲೆ ಈ ಹಕ್ಕ ಸಾಹೇಬರ ಕೋಲಾಹಲವು ಯಾಕೆ?

— ಗೋವಧೆಯೂ, ಶಿಶುಮೃತ್ಯುವೂ. —

ಹಾಲು ಪುಷ್ಟದ ನ್ಯೂನತೆಯಿಂದ ದೇಶದಲ್ಲಿ ಶಿಶುಗಳ ಮೃತ್ಯು ಸಂಖ್ಯೆಯು ಹೇಗೆ ಏರುತ್ತ ಬಂದಿದೆ ಎಂಬುದು ಗೊತ್ತಾಗುತ್ತದೆ. ಘಾಟಕೋಪರ ಎಂಬ ಕಡೆಯಲ್ಲಿ ಜೀವದಯಾ ಸಂಘದವರು ದನಗಳ ಸಂಹಾರವು ಯಾವ ರೀತಿಯಿಂದ ಉಂಟಾಗುತ್ತಿದೆ ಎಂಬುದನ್ನು ಅದರ ಸಂಖ್ಯೆಯನ್ನು ಕೊಟ್ಟು ಸಿದ್ಧಪಡಿಸಿ ತೋರಿಸಿದ್ದಾರೆ. ಮುಂದಿನ ಸಂಖ್ಯೆಯು ಆಯಾ ಪಟ್ಟಣಗಳಲ್ಲಿ ಕೊಂದ ದನಗಳದೆಂದು ತಿಳಿಯತಕ್ಕದ್ದು. ಮುಂಬಯಿ—[illegible]; ಕಲಕತ್ತೆ [illegible]; ದಿಲ್ಲಿ [illegible]; ಲಾಹೋರ [illegible]; ಲಖನೌ [illegible]; ಕಾನಪುರ [illegible]; ಆಗ್ರಾ [illegible]; ಗೋರಖಪುರ [illegible]; ಸಿಯಾಲಕೋಟ [illegible]; ವಿಹಾರ [illegible]; ಮಧುರಾ [illegible]. ಈ ಸಂಖ್ಯೆಯು ೧೯೨೩-೨೪ನೆಯ ವರ್ಷದ್ದಾಗಿದೆ ಎಂದು ತಿಳಿಯಬೇಕು. ಹಾಲು ಕರೆಯುವ ದನಗಳ ಸಂಹಾರವು ಈ ರೀತಿಯಿಂದುಂಟಾಗುವಾಗ ಶಿಶುಗಳಿಗೆ ಹಾಲಿನ ಪುರವಠೆ ಇಲ್ಲದಂತಾಗಿ ಅವು ಮೃತ್ಯುವಿಗೆ ತುತ್ತಾಗುವದಾದರೆ ಅದರಲ್ಲಾಶ್ಚರ್ಯವಿದೆಯೆ? ಈ ಅಂಕೆಗಳು ಉತ್ತರ ಹಿಂದುಸ್ಥಾನದೊಳಗಿನ ಕೆಲವು ಪಟ್ಟಣಗಳದು ಮಾತ್ರವಾಗಿದೆ. ಇಡಿ ಹಿಂದುಸ್ಥಾನದಲ್ಲಿ ಇದೆ ಪ್ರಮಾಣದಿಂದ ಗೋವಧೆಯು ಹೇಗೆ ಹೇಗೆ ನಡೆಯುತ್ತಿರಬಹುದೆಂಬುದನ್ನು ಊಹಿಸುವುದು ಕೂಡ ಅಸಹ್ಯವಾಗಿದೆ. ಇದು ಧಾರ್ಮಿಕ ಶ್ರದ್ಧೆಯ ಯುಗವಲ್ಲವೆಂಬುದು ನಿಜ. ಉಪಯುಕ್ತತೆಯ ದೃಷ್ಟಿಯಿಂದ ನೋಡಿದಾದರೂ ಇಷ್ಟರ ಮಟ್ಟಿಗೆ ಗೋವಧೆಯನ್ನು ನಡಿಸುವುದು—ಅದು ಕೂಡ ಬರಿ ಮಾಂಸದ ಬೆಸೆಯಿಂದ ನಡಿಸುವದು—ಅತ್ಯಂತ ಉದ್ವೇಗಕರವಾಗಿದೆ. ಈ ಗೋವಧೆಯು ಶಿಶು ಸಂಗೋಪನಕ್ಕೆ ಹೇಗೆ ಅಭ್ಯಂತರವನ್ನುಂಟುಮಾಡುವದೊ ಹಾಗೆಯೆ—ನಮ್ಮ ಈ ಹಿಂದುಸ್ಥಾನವು ಕೃಷಿಪ್ರಧಾನವಾದ ದೇಶವಾದ್ದರಿಂದ ಅದಕ್ಕೂ ಬಾಧಕವಾಗಿ ನಿಲ್ಲುವುದು. ಸಾರಾಂಶ ದೇಶೋದ್ಧಾರ ಮತ್ತು ಮಾನವ ಸಮಾಜದ ರಕ್ಷಣ ಇವುಗಳನ್ನು ಚಿಂತಿಸಿ ಗೋಮಾಂಸ ಭಕ್ಷಕರು ನಿರಪರಾಧಿಗಳಾದ ಗೋವುಗಳ ವಿಷಯವಾಗಿ ದಯಾಪರರಾಗಬೇಕೆಂದು ಪ್ರಾರ್ಥಿಸುವೆವು.

— ಹತ್ತಿ ಬೆಳೆಯೂ, ಪನಾಮಾ ಸರಕಾರವು. —

ಹಿಂದುಸ್ಥಾನದಲ್ಲಿ ವಸ್ತ್ರದ ಗಿರಣಿಗಳು ಹೇಗೆ ಕಡಿಮೆಯಾಗುತ್ತ ಬಂದಿವೆ ಎಂಬುದು ಮುಂಬಯಿಯೊಳಗಿನ ಗಿರಣಿ ಸಮಾಚಾರದ ಮೇಲಿಂದ ಸ್ಪಷ್ಟವಾಗುತ್ತದೆಯಷ್ಟೆ. ಆದರೆ ಸುಧಾರಿಸಿದ ರಾಷ್ಟ್ರಗಳು ವಸ್ತ್ರದ ವ್ಯಾಪಾರವನ್ನು ಕೈವಶಮಾಡಲು ಹಗಲೂ ಇರುಳೂ ಒಂದೆ ಸಮನೆ ಹೋರಾಡುತ್ತಿರುವವು. ಇದಕ್ಕೆ ಎಷ್ಟೊ ದೃಷ್ಟಾಂತಗಳಿವೆ. ಈಜಿಪ್ತಿನಲ್ಲಿ ಉದ್ದವಾಗಿ ನೂಲು ಬರುವ ಉತ್ತಮ ನಮೂನೆಯ ಹತ್ತಿಯು ಬೆಳೆಯುತ್ತಿದೆ. ಹೀಗಿರುವಾಗಲೂ ಸೌಡಾನಿನಲ್ಲಿ ಅದನ್ನು ಹೆಚ್ಚಾಗಿ ಬೆಳಸಲು ಬ್ರಿಟಿಷ್ ಸರಕಾರವು ಪ್ರಯತ್ನಪಡುತ್ತಿದೆ. ಸಿಂಧ ಪ್ರಾಂತದಲ್ಲಿ ಸಕ್ಕರವೆಂಬ ಕಡೆಯಲ್ಲಿ ಸಿಂಧು ನದಿಯ ನೀರನ್ನು ಕಟ್ಟಿ ಹತ್ತಿಯನ್ನು ಬೆಳಸುವ ಆಲೋಚನೆಯನ್ನು ಸರಕಾರವು ಮಾಡುತ್ತಿದೆ. ಆದರೆ ಸಿಂಧದಲ್ಲಿ ಹತ್ತಿ ಬೆಳಸುವಾಗ ರೈತರಿಗೆ ಯಾವ ಅನುಕೂಲತೆಗಳನ್ನಾದರೂ ಒದಗಿಸಿಕೊಡಲು ಯೋಚಿಸಿರುವುದೆ ಇಲ್ಲ. ಬೇರೆ ಕಡೆಗಳಲ್ಲಿ ಇಂಥ ಅನೇಕ ತರದ ಅನುಕೂಲತೆಗಳನ್ನು ಒದಗಿಸಿಕೊಡಲಾಗುತ್ತಿದೆ. ಉದಾಹರಣಾರ್ಥವಾಗಿ, ಪನಾಮಾದೊಳಗಿನ ಸರಕಾರವು ಅಲ್ಲಿ ಹತ್ತಿ ಬೆಳೆಯನ್ನು ಪ್ರಾರಂಭಿಸಿ ಒಕ್ಕಲಿಗರಿಗೆ ಹಲವು ಬಗೆಯಿಂದ ಸಹಾಯವನ್ನೀಯುತ್ತಿದೆ. ಅದು ಪರದೇಶಗಳಲ್ಲಿ ಕಳುಹಿಸಬಹುದಾದ ಉತ್ತಮ ತರಗತಿಯ ಹತ್ತಿಯನ್ನು ಬೆಳಸಲು ಅತಿ ಪ್ರವೀಣರಾದವರ ಒಂದು ಮಂಡಲಿಯನ್ನು ನೇಮಕಪಡಿಸುವದಿದೆ. ಅವರು ಅನುಕೂಲ ಅಭಿಪ್ರಾಯವನ್ನು ಕೊಟ್ಟಲ್ಲಿ ಸರಕಾರವು ರೈತರಿಗೆ ಸಾಲವನ್ನು ಕೊಡಲು ಸಿದ್ಧವಿದೆ. ಹತ್ತಿಯನ್ನು ಬೆಳಸಲಿಚ್ಛಿಸುವವರಿಗೆ ೨½ ಎಕರೆ ಜಮೀನನ್ನು ಧರ್ಮಾರ್ಥವಾಗಿ ಈ ಕೆಲಸಕ್ಕೆ ಅದು ಕೊಡಲಿದೆ. ಉತ್ತಮ ಹತ್ತಿಯನ್ನು ಎಲ್ಲರೂ ನೋಡುವಂತೆ ಹತ್ತಿಯ ಪ್ರದರ್ಶನವನ್ನು ಸರಕಾರವು ತೆರೆಯಲಿದೆ. ಹತ್ತಿಯ ಬೆಳೆಗೆ ಅವಶ್ಯವಿದ್ದ ಯಾವದರ ಮೇಲೂ ಕರವನ್ನು ಹೊರಿಸಲಾಗಲಿಕ್ಕಿಲ್ಲವೆಂದು ಆ ಸರಕಾರವು ಪ್ರಕಟಿಸಿದೆ. ಈ ಮೇರೆಗೆ ಪನಾಮದ ಸರಕಾರವು ಯಾವ ಅನುಕೂಲತೆಗಳನ್ನು ಒದಗಿಸುವದಿದೆಯೋ ಅವುಗಳಲ್ಲಿನ ಒಂದನ್ನಾದರೂ ನಮ್ಮ ಸರಕಾರವು ಇಲ್ಲಿನವರಿಗೆ ಒದಗಿಸಲು ಸಿದ್ಧವಿದೆಯೆ? ಇಂಥ ಪರಿಸ್ಥಿತಿಯಲ್ಲಿ ಮುಂಬಯಿಯ ಗಿರಣಿಗಳಿಗೆ ಕಷ್ಟ ಒದಗುವ ಪಕ್ಷದಲ್ಲಿ ಆಶ್ಚರ್ಯವೇನು?

ವರುಷಕ್ಕೆ ಆರು ಮಕ್ಕಳು!

ಹದಿನೇಳನೆ ಶತಮಾನದಲ್ಲಿ ಜೀವಿಸಿದ್ದ ಒಬ್ಬ 'ಸ್ಕೊಟ' ನೇಯಿಗೆಯವನಿಗೆ ಒಂದೇ ಹೆಂಡತಿಯಲ್ಲಿ ೬೨ ಮಕ್ಕಳಿದ್ದರಂತೆ. ಇತ್ತೀಚಿನ ಕೆಲವು ಕುಟುಂಬಗಳ ವೃದ್ಧಿಯನ್ನು ನೋಡಿದರೆ ಇದು ವಿಪರೀತ ಆಶ್ಚರ್ಯದ್ದಲ್ಲ ಎಂದು ತೋರುತ್ತದೆ. ಕೆನಡದಲ್ಲಿನ ಲಿವಿ ಎಂಬವನಿಗೆ ಮೊದಲನೇ ಹೆಂಡತಿಯಲ್ಲಿ ಆರು, ಎರಡನೆಯವಳಲ್ಲಿ ಇಪ್ಪತ್ತನಾಲ್ಕು ಮತ್ತು ಮೂರನೆಯವಳಲ್ಲಿ ಹನ್ನೊಂದು, ಹೀಗೆ ೪೧ ಮಕ್ಕಳು ಹುಟ್ಟಿದರಂತೆ. ಹೀಗಾಗಿ ತನ್ನ ೬೫ನೇ ವರ್ಷದಲ್ಲಿ ಅವನು ಸಾಯುವಾಗ ಅವನ ಕುಟುಂಬದಲ್ಲಿ ಸುಮಾರು ಇನ್ನೂರು ಜನರಿದ್ದರಂತೆ.

ವಿಂಟ್ಸರ್ಪಿನಲ್ಲಿ ಕೊರ್ಲಿಯರ್ ಎಂಬ ಹೆಂಗಸಿಗೆ ಜನವರಿ ತಿಂಗಳಲ್ಲಿ ಮೂರು ಮತ್ತು ಡಿಸಂಬರದಲ್ಲಿ ಮೂರು, ಹೀಗೆ ಒಂದು ವರ್ಷದಲ್ಲಿ ಆರು ಮಕ್ಕಳು ಹುಟ್ಟಿದರು! ೧೯೨೧ನೇ ಇಸವಿಯಲ್ಲಿ ಚಿಕಾಗೋ ಕೋರ್ಟಿನ ಮುಂದೆ ಜೊಸೆಫೀನ್ ಎಂಬ ಹೆಂಗಸು ತನಗೆ ಏಳು ವರ್ಷದಲ್ಲಿ ಹದಿನಾಲ್ಕು ಮಕ್ಕಳು ಹುಟ್ಟಿದರೆಂದು ಒಪ್ಪಿಕೊಂಡಿದ್ದಾಳೆ.

ಯೋರ್ಕಶಾಯರಿನ ಥ್ಯಾಟಚ್ಚರ್ ಎಂಬಾಕೆಯು ೯೪ ವರ್ಷದ ಮುದುಕಿಯಾಗಿದ್ದಾಗ ಅವಳಿಗೆ ಒಂಬತ್ತು ಮಕ್ಕಳು, ಎಪ್ಪತ್ತೊಂಬತ್ತು ಮೊಮ್ಮಕ್ಕಳು, ಎಪ್ಪತ್ತಮೂರು ಮರಿಮಕ್ಕಳು ಮತ್ತು ಇಬ್ಬರು ಮರಿಮಕ್ಕಳ ಮಕ್ಕಳು ಇದ್ದರಂತೆ. ಶಿವರ್ ಎಂಬವಳು ಸಾಯಬೇಕಾದರೆ ಅವಳ ಕುಟುಂಬದಲ್ಲಿ ನಾಲ್ಕು ತಲೆಗಳಾಗಿ ಹೋಗಿದ್ದವಂತೆ; ಒಟ್ಟು ಜನರು ಮುನ್ನೂರಹತ್ತು ಇದ್ದರು.

ಕೇಂಬರ್ಲೆಂಡಿನ ವೆಬ್ ಎಂಬವನ ಆರು ಮಕ್ಕಳ ಸಂತಾನವು ವೃದ್ಧಿಯಾದದ್ದು ಬಹಳ ಆಶ್ಚರ್ಯ ರೀತಿಯಲ್ಲಿ. ಹಿರಿಯವನಾದ ಜೇಸನನ ಕುಟುಂಬದಲ್ಲಿ ೪೪೪ ಮಂದಿ, ಎರಡನೆಯವನ ಸಂತತಿಯು ೪೦೨, ಮೂರು ಹುಡುಗಿಯರಿಗೆ ಕ್ರಮವಾಗಿ ೨೩೦; ೨೦೪; ೨೦೧ ಹೀಗೆ ಸಂತಾನ, ಕಿರೇಯವನ ಕುಟುಂಬದಲ್ಲಿ ಬರೇ ೧೪೬.

ಮಹಾತ್ಮಾ ಗಾಂಧಿಗಳೂ ದೇಶೀಯ ವೈದ್ಯರೂ.

ಕಲಕತ್ತೆಯಲ್ಲಿ ಆಯುರ್ವೇದ ವಿದ್ಯಾಲಯದ ಶಂಕುಸ್ಥಾಪನೆಯನ್ನು ಮಹಾತ್ಮಾಜಿಯವರ ಕೈಯಿಂದ ಅಲ್ಲಿಯ ಪ್ರಮುಖ ವೈದರು ಮಾಡಿಸಿ ಈಗ ಸುಮಾರು ದಿವಸಗಳು ದಾಟಿಹೋದವು. ಈ ಸಮಾರಂಭದ ಸಮಯದಲ್ಲಿ ಗಾಂಧಿಜಿಗಳು ಒಂದು ಭಾಷಣವನ್ನು ಕೊಟ್ಟು ವೈದ್ಯಶಾಸ್ತ್ರ, ಅದರ ಚಿಕಿತ್ಸಾಪದ್ಧತಿ, ದೇಶೀಯ ವೈದ್ಯರು ಅವರ ಕಸಬು ಇತ್ಯಾದಿ ವಿಷಯಗಳನ್ನು ತಂದು ಈ ಎಲ್ಲರನ್ನು ತನ್ನ ಟೀಕಾಸ್ತ್ರದಿಂದ ಹತಪಡಿಸಿದ್ದರು! ಗಾಂಧಿಜಿಗಳಿಂದ ಗಾಯ ಹೊಂದಿದ ಬಂಗಾಲಿ ವೈದ್ಯರು ಮಹಾತ್ಮಾಜಿಗಳ ಈ ಪ್ರಯತ್ನವು ಆಯುರ್ವೇದದ ಮತ್ತು ತನ್ಮೂಲಕ ದೇಶದ ಪ್ರಗತಿಗೆ ಬಾಧಕವಾಗಿ ನಿಲ್ಲುವ ಸಂಭವವಿರುವದರಿಂದ ಮಹಾತ್ಮಾಜಿಗಳು ತನ್ನ ವಿಧಾನದಲ್ಲಿ ಸೌಮ್ಯತೆಯನ್ನು ತಂದು, ತನ್ನ ಭಾಷಣದ ಕಟಾಕ್ಷವು ಆಯುರ್ವೇದದ ಮೇಲೆ ಯಾಗಲಿ, ಇಡಿ ವೈದ್ಯವರ್ಗದ ಮೇಲೆಯಾಗಲಿ ಇಲ್ಲವೆಂದು ಪ್ರಕಟಿಸಬೇಕೆಂದು ಸೂಚಿಸಿದರು. ಈ ಆಹ್ವಾನವು ಬಂದಕೂಡಲೆ ಮಹಾತ್ಮಾಜಿಗಳು ಇನ್ನೂ ಒಂದು ಹೆಜ್ಜೆ ಮುಂದಕ್ಕೆ ಬಂದು ವೈದ್ಯಶಾಸ್ತ್ರದ ಮತ್ತು ವೈದ್ಯರ ಶ್ರಾದ್ಧವನ್ನು ಮಾಡಿಬಿಟ್ಟಿದ್ದಾರೆ! ಆಯುರ್ವೇದದಲ್ಲಿ ಯಾವ ಸಂಶೋಧನವೂ ನಡೆಯುವದಿಲ್ಲ, ವೈದ್ಯರು ಸರಿಯಾದ ನಿದಾನವನ್ನರಿತವರಲ್ಲ, ನಾಡೀಪರೀಕ್ಷೆಯಿಂದ ಎಂಥ ರೋಗವನ್ನು ಕೂಡ ಗೊತ್ತುಹಿಡಿಯುವ ಜಂಭ ಕೊಚ್ಚುತ್ತಾರೆ, ವಿಷಯಗಳಲ್ಲಿ ಇಂದ್ರಿಯಪ್ರವೃತ್ತಿಯು ಹೆಚ್ಚಾಗುವಂತೆ ಜಾಹೀರಾತುಗಳನ್ನು ಪ್ರಕಟಿಸಿ ಲೋಕಾಭಿರುಚಿಯನ್ನು ಕೆಡಿಸುತ್ತಾರೆ ಎಂದು ಮುಂತಾದ ಸಂಗತಿಗಳನ್ನು ಮಹಾತ್ಮಾಜಿಯವರು ಬರೆಯುತ್ತಿದ್ದಾರೆ. ಮಹಾತ್ಮಾಜಿಗಳು ಹೇಳಿರುವ ಈ ಸಂಗತಿಗಳಲ್ಲಿ ಸುಳ್ಳು ಯಾವುದೂ ಇಲ್ಲ. ಆಯುರ್ವೇದದಲ್ಲಿ ಇತ್ತಲಾಗೆ ಸಂಶೋಧನ ಕಾರ್ಯವು ನಡೆದಿಲ್ಲವೆಂಬುದೂ ಸತ್ಯ. ಹಲವು ವೈದ್ಯರು ನಿಂದ್ಯಜಾಹೀರಾತುಗಳನ್ನು ಪ್ರಕಟಿಸುತ್ತಾರೆಂದೂ ಸತ್ಯ. ಆದರೆ ಇಷ್ಟರ ಮೇಲಿಂದಲೆ ಆಕಸ್ಮವೈದ್ಯರ ಮೇಲೆ ಟೀಕಾಸ್ತ್ರವನ್ನು ಬಿಡುವುದು ಸಮಂಜಸವಾದೀತೆ? ಆಯುರ್ವೇದದ ಸಂಗತಿ ಇರಲಿ; ಗಣಿತ, ಜ್ಯೋತಿಷ, ರಸಾಯನ, ಇ. ಇ. ಯಾವ ಶಾಸ್ತ್ರಗಳಲ್ಲಿ ಹಾಗು ಗಾಯನ, ಚಿತ್ರಕಲೆ ಇತ್ಯಾದಿ ಯಾವ ಕಲೆಗಳಲ್ಲಿ ಇತ್ತಲಾಗೆ ಅಪೂರ್ವ ಶೋಧವುಂಟಾಗಿದೆ? ಮನು, ಯಾಜ್ಞವಲ್ಕ್ಯ, ಪರಾಶರ ಇತ್ಯಾದಿ ಸ್ಮೃತಿ (ಕಾಯಿದೆ) ಕಾರರು ಆಗಿ ಹೋದನಂತರ ಇತ್ತಲಾಗಿನ ಕಾಲದಲ್ಲಿ ಯಾವ ಕಾಯಿದೆ ಪಂಡಿತನು ಅವತರಿಸಿದ್ದಾನೆ? ಇಲ್ಲ. ಆಗ ಹೊಸ ಸಂಶೋಧನದ ಅಭಾವದ ಮಡಿಕೆಯನ್ನು ಆಯುರ್ವೇದದ ತಲೆ ಮೇಲೆ ಮಾತ್ರ ಯಾಕೆ ಒಡೆಯಬೇಕು? ಸ್ವಾತಂತ್ರ್ಯದ ಮಾಗುತಿಯು ಬಿದ್ದು ಹೋದ ಮೇಲೆ ಅದರೊಟ್ಟಿಗೆ ಇತರ ಸೌಭಾಗ್ಯವು ಸಹ ಉತ್ತಾಗುತ್ತದೆ ಎಂಬ ಸಾದಾ ಮಾತು ಮಹಾತ್ಮಾಜಿಗಳಿಗೆ ತಿಳಿಯಬಾರದೆ? ವಾಮಮಾರ್ಗದಿಂದ ಜೀವಿಸುವವರು, ಪಕ್ಷಾಪಕ್ಷ ಮಾಡುವವರು ವೈದ್ಯರಲ್ಲಿರುವಂತೆ ವಕೀಲರಲ್ಲಿಯೂ ಇದ್ದಾರೆ, ವ್ಯಾಪಾರಿಗಳಲ್ಲೂ ಇದ್ದಾರೆ, ಶುದ್ಧವಾದ ಖಾದಿ ಪರಿಧಾನ ಮಾಡಿದವರಲ್ಲೂ ಇದ್ದಾರೆ! ಹೀಗಿರುವಾಗ ವೈದ್ಯರನ್ನು ಮಾತ್ರ ಬೈದು ಏನು ಪ್ರಯೋಜನ?

ಮುಂದೇನು ಗತಿ?

ವೈದ್ಯರು ರಾಷ್ಟ್ರ ಘಾತಕರೆಂದಾಗುವ ಸಂದರ್ಭದಲ್ಲಿ ಅವರ ಈ ದೋಷವು ಯಾವದರಿಂದ ಪರಿಮಾರ್ಜಿಸಲ್ಪಡಬೇಕಾಯಿತು? ವೈದ್ಯರ ಭಾಷೆಯಿಂದಲೆ ಹೇಳುವದಾದರೆ, ವೈದ್ಯರ ಈ ದೋಷಕ್ಕೆ ಯಾವ ಮಾತ್ರೆಯನ್ನು ತೇಯಬೇಕಾಯಿತು? ಅಥವಾ ಯಾವ ಮದ್ದನ್ನು ಅರಿಯಬೇಕಾಯಿತು! ಇದಕ್ಕೆ ಒಂದೆ ಉತ್ತರವು. ಮತ್ತು ಅದು ಕೂಡ ಬಹು ಸುಲಭವಾದ್ದು. ವೈದ್ಯರಲ್ಲಿರುವ ಅಸತ್ಯ, ಭೂತದಯೆಯ ಅಭಾವ, ದ್ರವ್ಯಲೋಲುಪತೆ ಇತ್ಯಾದಿ ಸಮಸ್ತ ದೋಷಗಳು ಹೋಗಬೇಕಾದರೆ ಮತ್ತು ಅವರಲ್ಲಿ ಸಂಶೋಧನದ ಪ್ರವೃತ್ತಿಯುಂಟಾಗಬೇಕಾದರೆ ಅವರು 'ಚರಕ'ವನ್ನು ತಿರುಗಿಸಲು ಆರಂಭಿಸಬೇಕು! ಚರಕವು ದ್ವೇಷವನ್ನು ಪರಿಹರಿಸುವಂತೆ ಈ ದೋಷಗಳನ್ನು ಸಹ ಪರಿಹರಿಸುತ್ತದೆ. ಚರಕವು ಅನತ್ಯಾಚಾರದ ಮೂರ್ತಿಯು; ಅದ್ದರಿಂದ ವೈದ್ಯರು ಮಾತ್ರ ಅದನ್ನು ತಿರುಗಿಸಿದರೆ ಸಾಲದು, ಆ ವೈದ್ಯರ ಬಳಿಗೆ ಔಷಧ ಸೇವನಕ್ಕಾಗಿ ಬರುವ ರೋಗಿಗಳಿಗೂ ಅವರ ಈ ಔಷಧವನ್ನೇ ಕೊಡಬೇಕು, ಎಂದರೆ ಮುಂದಿನ ಗತಿಯು ಒಳ್ಳೆಯದಾಗುವದು! ಮಹಾತ್ಮಾಜಿಯವರು ಶಬ್ದಶಃ ಈ ಉಪದೇಶವನ್ನು ಮಾಡಿಲ್ಲವಾದರೂ ಅವರ ನಿರ್ಣಯಾರ್ಥವು ಹೀಗೆಯೆ ಇರಬೇಕು. ದಿಲ್ಲಿಯಲ್ಲಿ "ಹಿಂದುಸ್ಥಾನ ಟೈಮ್ಸ್" ಪತ್ರವನ್ನು ಪ್ರಾರಂಭಿಸುವಾಗಲೂ ಮಹಾತ್ಮಾಜಿಗಳು "ಯಂಗ್ ಇಂಡಿಯಾ, ನವಜೀವನ ಈ ಪತ್ರಿಕೆಗಳಲ್ಲದೆ ಇನ್ನಾವದಕ್ಕೂ, ನನಗೆ ಅಧಿಕಾರವಿದ್ದರೆ ನಾನು ಅವಕಾಶವನ್ನು ಕೊಡುತ್ತಿರಲಿಲ್ಲ" ಎಂಬ ಅಭಿಪ್ರಾಯವನ್ನು ವ್ಯಕ್ತಗೊಳಿಸಿದ್ದು ಎಲ್ಲರ ಲಕ್ಷ್ಯದಲ್ಲಿ ಇದ್ದೇ ಇದೆ. ಪತ್ರಿಕೆಗಳಲ್ಲಿ ಹೇಗೆ ನವಜೀವನಕ್ಕಿಂತ ಇತರವಿರಬಾರದೊ ಹಾಗೆಯೆ ಮದ್ದುಗಾರರಲ್ಲಿ ಇತರ ಯಾರೂ ಇರಕೂಡದು! ಇದೀಗ ಅನತ್ಯಾಚಾರದ ಮಂಗಲಮಯವಾದ ಸ್ವರೂಪ! ಸಾರಾಂಶ ನಿಜ ಹೇಳುವದಿದ್ದರೆ ಹಿಂದುಸ್ಥಾನದ ಶಾಸ್ತ್ರ, ಕಲೆ, ವಿದ್ಯೆ ಯಾವದೂ ಪ್ರಯೋಜನವಿಲ್ಲ! ಮಹಾತ್ಮಾ ಗಾಂಧಿಗಳ ಸ್ವರಾಜ್ಯವು ಇದೆ ಸರಿ.

ಲಾರ್ಡ ಕರ್ಜನರವರು:

ಲಾರ್ಡ ಕರ್ಜನರವರು ಇಂಡಿಯಾ ದೇಶದ ವಿಷಯ ಬರೆದಿರತಕ್ಕ ಅಭ್ಯಿರು ಪುಸ್ತಕದ ವಿಷಯದಲ್ಲಿ ಲಾರ್ಡ ಬರ್ಕನ್‌ಹೆಡ್‌ರವರು ತಮ್ಮ ಅಭಿಪ್ರಾಯವನ್ನು ಕೊಟ್ಟಿರುವರು. ದೇಶೀಯ ದುರಭಿಮಾನವು ಯಾರಿಗೂ ತಪ್ಪಿದ್ದಲ್ಲ. ಈ ಉಭಯತ್ರರ ಲೇಖನಗಳಲ್ಲಿಯೂ ನಿರ್ದಿಷ್ಟವಾದ ಬ್ರಿಟಿಷ್ ಧರ್ಮದ ಪ್ರಚಾರಕ್ಕೆ ಪ್ರತಿಬಂಧಕವಾದ ವಿಷಯಗಳೆಷ್ಟೊ ಇರುವವು. ಅವುಗಳನ್ನು ತೆಗೆದುಹಾಕಿದರೆ ಲಾರ್ಡ ಕರ್ಜನರವರ ಗ್ರಂಥವೂ, ಲಾರ್ಡ ಬರ್ಕನಹೆಡ್‌ರವರ ರೆವ್ಯೂವೂ ಇವೆರಡೂ ಪರಿಗ್ರಾಹ್ಯಗಳಾಗುತ್ತವೆ. ಲಾರ್ಡ ಕರ್ಜನರವರು ಇಂಡಿಯಾ ದೇಶವನ್ನು ಪ್ರೀತಿಸಿದರೆಂಬುದಾಗಿಯೂ, ಅವರು ದುಂದುಗಾರರಿದ್ದಾರೆಂಬುದಾಗಿಯೂ, ಬರೆಯಲ್ಪಟ್ಟಿದೆ. ಇದು ಸುಳ್ಳಲ್ಲ. ಇಂಡಿಯಾ ದೇಶವನ್ನು ಇವರು ಪ್ರೀತಿಸಿದ್ದು ನಿಜ. ಇದು ಸ್ವಾರ್ಥವಾದ ಪ್ರೀತಿ. ಇಂಡಿಯಾ ದೇಶೀಯರು ಬ್ರಿಟಿಷ್ ಜನಗಳಂತೆ ಸುಖವಾಗಿರಲೆಂದು ಇವರು ಪ್ರೀತಿಸಿದ್ದರೆ ಅದಕ್ಕಾಗಿ ನಾವು ಸಂತೋಷಿಸುತ್ತಿದ್ದೆವು. ಇವರ ಪ್ರೀತಿಯು ಅಂಥಾ ಪ್ರೀತಿಯಾಗಿರಲಿಲ್ಲ. ತಾವೇ ಚಕ್ರವರ್ತಿಗಳೆಂದು ಭಾವಿಸಿಕೊಂಡು ಲಾರ್ಡ ಕರ್ಜನರವರು ವಿಜೃಂಭಿಸಿ ಅದರ ಫಲವನ್ನು ಅನುಭವಿಸಿದರು. ಮಾಡಿದ್ದುಣ್ಣೊ ಮಹಾರಾಯ ಎಂಬ ಗಾದೆಯು ಇವರ ಆಚರಣೆಯಲ್ಲಿರಲಿಲ್ಲ. ಇದು ತುಂಬಾ ಶೋಚನೀಯವಾದದ್ದು. ಧರ್ಮಾಧರ್ಮಗಳನ್ನು ಮಾಡತಕ್ಕವರು ಅವುಗಳ ಫಲಗಳನ್ನು ಅನುಭವಿಸಬೇಕಾಗುತ್ತದೆ. ಜಗದೀಶ್ವರನೂ ಕೂಡ ಅದನ್ನು ತಪ್ಪಿಸಲಾರನು. ಹೀಗಿದ್ದಾಗ್ಯೂ ಅಧಿಕಾರ ಮದದಿಂದ ಪ್ರತಿಬದ್ಧರಾದವರು Every dog is proud on its own dug hill" ಎಂಬ ಇಂಗ್ಲಿಷ್ ಗಾದೆಯು ನಿಜವೆಂದು ಅವರ ಪ್ರದರ್ಶನಗಳಿಂದ ತೋರಿಸಿಕೊಳ್ಳುತ್ತಾರೆ. ಇದು ತುಂಬಾ ಶೋಚನೀಯವಾದ್ದು. (ಸಾಕ್ಷಿ.)

ಲಾರ್ಡ್ ಲೀವರ್ ಹ್ಯೂಂರವರ ಉಯಿಲು.

ಈ ಮಹನೀಯರು ೧೨೦,೦೦,೦೦೦ ಪೌನುಗಳನ್ನು ಧರ್ಮಕ್ಕೋಸ್ಕರ ಬಿಟ್ಟಿರುವರು. ಈ ಮೊಬಲಗಿನಲ್ಲಿ ಸಕಲವಿಧವಾದ ಕೈಗಾರಿಕೆಗಳಿಗೂ, ಕಲೆಗಳಿಗೂ, ಉತ್ತೇಜನವನ್ನು ಕೊಡಬೇಕೆಂದು ಏರ್ಪಾಡು ಮಾಡಿರುವರು. ಈ ಕೈಗಾರಿಕೆಗಳನ್ನೂ, ಕಲೆಗಳನ್ನೂ, ಕಲಿಯತಕ್ಕವರಿಗೆ ಕಲಿಯುವ ಕಾಲದಲ್ಲಿ ವಿದ್ಯಾಭ್ಯಾಸಕ್ಕೆ ಬೇಕಾದ ಸಕಲ ಸೌಲಭ್ಯಗಳೂ ಕಲ್ಪಿಸಲ್ಪಡುವವು. ಆತ್ಮಾವಲಂಬನೆಗೆ ಸಾಧಕವಾದ ಇಂಥಾ ಶಾಶ್ವತವಾದ ಧರ್ಮವು ಧನಪಿಶಾಚಿಗಳಿಂದ ಹಿಂದುಳಿದ ಜನಗಳಿಗೆ ಎಂದಿಗೂ ದೊರೆಯುವದಿಲ್ಲ. (ಸಾಕ್ಷಿ)

ಆರೋಗ್ಯ ಚಂದ್ರಿಕೆ.

ಮದ್ರಾಸ್.

ಸಂಪಾದಕರು: ಡಾಕ್ಟರ್ ಯು. ರಾಮರಾವ್, ಎಲ್. ಎಮ್. ಸಿ. ಎಫ್. ಎಮ್. ಯು. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಧಾರಣ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವುದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ.

ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ.

ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವುದು.

'ಹೆಲ್ತ್' ಎಂಬ ನಮ್ಮ ಇಂಗ್ಲಿಷ್ ಮಾಸಪತ್ರಿಕೆಯನ್ನೋದಿ ಸಂತೋಷಿಸಿದ ಅನೇಕ ದೇಶದ ಮನುಷ್ಯರ ಪ್ರೋತ್ಸಾಹದ ಮೇಲೆ ಈ ಕನ್ನಡ ಪತ್ರಿಕೆಯನ್ನು ಹೊರಪಡಿಸಿದೆ.

ಅದರ ಸಂಪುಟ ೨ ಮತ್ತು ೧೧ನೇಯ ನವಂಬರ ೧೯೨೪ ಸಂಚಿಕೆಯಲ್ಲಿ ಕಾಣಿಸಿರುವ ವಿಷಯಗಳು.

ಮುಖಚಿತ್ರ:—ಪರ್ವತವಾಸಿನಿಯಾದ ಒಬ್ಬ ರೂಪವತಿ.
ಕ್ಷಾಮಕ್ರಮ ಅಥವಾ ಕ್ಷಾಮಾಯಾಮ.
ಹುಣಿಸೇಹಣ್ಣಿನ ಆಹಾರಗುಣಗಳು ಮತ್ತು ಔಷಧಗುಣಗಳು.
ಕಾಲುನಡೆಯೇ ಉತ್ತಮವಾದ ವ್ಯಾಯಾಮವು.
ಜೇನಿನಲ್ಲಿರುವ ಗುಣಗಳು.
ಹಲ್ಲುಗಳ ರಚನೆ, ಪ್ರಯೋಜನ, ಕೆಲಸ ಮುಂತಾದವು.
ಮದವ್ಯಾವಸಗಳಿಂದ ಆರೋಗ್ಯಕ್ಕೆ ಉಂಟಾಗತಕ್ಕ ಹಾನಿ.
ಅಂಗಸಾಧನೆ ಮತ್ತು ಬುದ್ಧಿವ್ಯವಸಾಯ (ವಿದ್ಯಾಭ್ಯಾಸ).
ಗಾಯಗಳು, ಮತ್ತು ಉಳುಕು ಮುಂತಾದವುಗಳು ಅವುಗಳ ಚಿಕಿತ್ಸೆ.
ನವನಾಗರಿಕ ಪ್ರಪಂಚಕ್ಕೆ ಸಹಜವಾದ ಮೂರು ಕೆಡುಕುಗಳು.
ಒಬ್ಬ ಉಪವಾಸಿಯ ಅನುಭವ.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವುವು. ಆರೋಗ್ಯಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮುಂಬಳಗು ವರ್ಷಕ್ಕೆ ರೂ. ೧—೮—೦; ಬಿಡಿಪತ್ರಿಕೆ ಒಂದಕ್ಕೆ ರೂ. ೦—೩—೦ ಹಿಂದಿನ ಸಂಚಿಕೆಗಳು ಕೂಡ ದೊರಿಯುವವು.

ಚಂದಾದಾರರಾಗುವವರು, ವಿ. ಪಿ. ಮೂಲಕವಾಗಿ ತರಿಸಿಕೊಳ್ಳುವದಕ್ಕಿಂತಲೂ ಹಣವನ್ನು ಮುಂಗಡವಾಗಿ ಕಳುಹಿಸುವುದು ಲಾಭಕರ. ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು 'ಆರೋಗ್ಯ ಚಂದ್ರಿಕೆ'ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು.

ಪತ್ರವ್ಯವಹಾರಕ್ಕೆ: 'ಆರೋಗ್ಯ ಚಂದ್ರಿಕೆ'
೩೨೩ ತಂಬುಚೆಟ್ಟಿ ಬೀದಿ, ಮದ್ರಾಸ್.

ತುಳು ಪಾಡ್ದನಗಳು.

ದೊಬ್ಬಯ್ಯ, ಕಲ್ಕುಡೆ-ಕಲ್ಲುರ್ಟಿ, ದೈಯೊಂಗುಳು—ಕೋಡದಬ್ಬು-ಸಿರಿನ್ಹಾ... ಕೋಡಕಿಣಾರ್, ಮುಂಡತ್ತಾಯ ಪ್ರತಿ ಒಂದಕ್ಕೆ 2 ಆಣೆ. 1¼ ಆಣೆ ಟಪ್ಪಾಲು ಚೀಟು ಕಳುಹಿಸಿದರೆ 5 ಪುಸ್ತಕಗಳು ಕೂಡಲೇ ಕಳುಹಿಸಲ್ಪಡುವವು.

ವಿಳಾಸ: ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಸಾರಸ್ವತ.

ಕನ್ನಡ ಮತ್ತು ಕೊಂಕಣಿ ಭಾಷೆಗಳಲ್ಲಿ ಕಳೆದ ವಿಜಯ ದಶಮಿ ದಿನದಿಂದ ಪ್ರತಿ ದಶಮಿಗೆ ಹೊರಡುವ ಪತ್ರಿಕೆ.

ವಿ. ಎಸ್. ಕಾಮತ್, } ಸಂಪಾದಕರು.
ಮೂಲ್ಕಿ ವಾಮನ ಕುಡುವ

ಮತಸಂಸ್ಥೆ ಮತ್ತು ಸಮಾಜಕ್ಕೆ ಸಂಬಂಧಪಟ್ಟ ಇತರ ಸಂಸ್ಥೆಗಳ ಸುಸಂಘಟನ.
ಸಮಾಜದೊಳಗೆ ಅನ್ಯೋನ್ಯ ಸಾಧನೆ.
ಸ್ತ್ರೀಸಮಾಜಕ್ಕೆ ಉಪಯುಕ್ತವಾದ ವಿಷಯಗಳ ನಿರೂಪಣ
ಮತಭಾವನೆಗಳ ಉಜ್ಜೀವನ ಇತ್ಯಾದಿ ಉದ್ದೇಶಗಳಿಂದ ಈ ಪತ್ರಿಕೆಯು ಹೊರಡಿಸಲ್ಪಡುವುದು. ಸಾರಸ್ವತ ಸಮಾಜವು ಇದಕ್ಕೆ ಪ್ರೋತ್ಸಾಹವನ್ನೀಯಬೇಕಾಗಿ ಪ್ರಾರ್ಥನೆ.

ಚಂದಾಹಣ ಅಂಚೆವೆಚ್ಚ ಕೂಡಾ ರೂ. ೧—೮—೦.
ಪೋಷಕರು ರೂ. ೧೦—೦—೦. ಸಹಾಯಕರು ರೂ. ೫—೦—೦; ಮಾದರಿ ಸಂಚಿಕೆಯನ್ನು ಟಪ್ಪಾಲು ಖರ್ಚಿಗಾಗಿ ಅರ್ಧಾಣೆ ಸ್ಟಾಂಪು ಕಳುಹಿಸುವವರಿಗೆ ಉಚಿತವಾಗಿ ಕಳುಹಿಸುವೆವು.

ಕನ್ನಡ ನಾಡಿನಲ್ಲಿ ಪ್ರತಿ ಕಡೆಯಲ್ಲಿಯೂ
ಏಜಂಟರು ಬೇಕು.

ಎಲ್ಲಾ ಪತ್ರವ್ಯವಹಾರಗಳನ್ನು ಕೆಳಗಿನ ವಿಳಾಸಕ್ಕೆ ಕಳುಹಿಸಬೇಕು.

ಯು. ನಾರಾಯಣನಾಯ್ಕ, ಕಾರ್ಯದರ್ಶಿ,
ಸಾರಸ್ವತ, ಉಡುಪಿ.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.
Authorised and fully paid up Capital Rs. 300,000—0—0
Reserve and other sinking Funds „ 259,000—0—0

೧೯೦೬ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
ಅಧಿಕಾರಗೊಳಿಸಲ್ಪಟ್ಟು, ಪೂರ್ಣವಾಗಿ ತೆತ್ತ ಮೂಲಧನವು ರೂ. 300,000—0—0
ಕ್ಷೇಮನಿಧಿ ಮತ್ತು ಇತರ ಫಂಡುಗಳು 259,000—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1925.

K. Venkat Rao,
Secretary

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ಒಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಿಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ಒಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲೂಯನ್ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೩೫ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ಒಕ್ಕೆ ೧—೪—೦, ೧೨ ಸೀಸೆಗೆ ೨—೬—೦, ೨೪ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲ ಪಂಡಿತರು,

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ,
ಮಂಗಳೂರು ಟಿವಣಿಗೆ ಮಾತ್ರ.

ವಿದ್ಯಾವಾಚಸ್ಪತಿ
ಅತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ
"ಸಂಕ್ಷೇಪಗೀತೆ"

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ್ಳ, ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದೆ. ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೦, ಟಪ್ಪಾಲು ಖರ್ಚು ಕೂಡಿ ಆಣೆ ೧೧ನ್ನು ಮನಿಯಾರ್ಡರ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ೩ರಕ್ಕಿಂತ ಜಾಸ್ತಿ ಖರ್ಚು ತಗಲುವುದು. ೨೫ರಿಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.

ಪುಸ್ತಕ ದೊರಿಯುವ ವಿಳಾಸ:—
ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು, ಮತ್ತು
ಕೆನರಾ ಮಿಶ್ಯನ್ ಬುಕ್ ಎಂಡ್ ಟ್ರ್ಯಾಕ್ಟ ಡಿಪೋಜಿಟರಿ,
ಮಂಗಳೂರು.

ಕನ್ನಡಿಗರೆ! **ವಸಂತ.** ಕಣ್ತೆರೆಯಿರಿ!

ಯುಗಾಗಲೇ ಎರಡನೇ ಸಂಪುಟವು ಆರಂಭಿಸಲಿದೆ.

ಇತಿಹಾಸನಿಧಿ ಎಂದರೆ	ವಸಂತ
ಸಮಾಜಸುಧಾರಕನೆಂದರೆ	ವಸಂತ
ಕೈಗಾರಿಕೆಯ ಸಾಮ್ರಾಜ್ಯವೆಂದರೆ	ವಸಂತ
ಕರ್ಣಾಟಕ ಭಾಷಾಸೇವಕನೆಂದರೆ	ವಸಂತ
ದೇಶವಿದೇಶ ಬಂಧುವೆಂದರೆ	ವಸಂತ
ಕಾದಂಬರಿಗಳ ಭಂಡಾರವೆಂದರೆ	ವಸಂತ
ಚಿತ್ರಾಕರ್ಷ ಚಿತ್ರಶಾಲೆಯೆಂದರೆ	ವಸಂತ
ದೇಶಭಕ್ತನೆಂದರೆ	ವಸಂತ

'ಇಂತಹ ವಸಂತನು ಯಾರಿಗೆ ಬೇಕು,
ಯಾರಿಗೆ ಬೇಡ?

48 (ಕ್ರೌನ್ ¼ ಫುಟ ಸ್ಯಾಪ) ಪುಟಗಳನ್ನು ಒಳಗೊಂಡ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3—4—0 ಮಾತ್ರ.

ವ್ಯವಸ್ಥಾಪಕ,
ವಸಂತ ಕಾರ್ಯಾಲಯ,
ಕುಂದಾಪುರ, ದಕ್ಷಿಣ ಕನ್ನಡ.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀಕಾಶೀ, ಗಯಾ, ಪ್ರಯಾಗ, ಹರಿದ್ವಾರ ಬದ್ರಿನಾರಾಯಣ ದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರ ಕಡೆಯಿಂದ ಅನುಭವ ತೆಗೆದು ಪ್ರತಿಯೊಂದು ಸಿದ್ಧಮಾಡಿಕೊಂಡು ಬರೆದಿರುವರು. ೧ನೇದು ಮಂತ್ರಪ್ರಕರಣದಲ್ಲಿ ಮಂತ್ರ ಪಠಣದಿಂದಲೂ, ಮಂತ್ರಪ್ರಯೋಗದಿಂದಲೂ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವೂ ಇದೆ. ೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳು ಹೊರಡುವಿಕೆ, ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ. ೩ನೇದು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ಶ್ರೇಷ್ಠವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು. ೪ನೇದು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಛಾಪಾಚಗಳ ಚುಟ್ಕಾ ಸಹ ಇದರಲ್ಲಿ ಉಂಟು. ಇದು ಪ್ರತಿಯೊಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷಧ ಮಾಡುವ ಕ್ರಮವನು ಚೆನ್ನಾಗಿ ಬರೆದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಳಾಸವು ತಿಳಿಸಿರುವರು. ೫ನೇದು ಯಂತ್ರ ಪ್ರಕರಣದಲ್ಲಿ ವಶೀಕರಣ ಗೃಹಪೀಡಾ ನಿವಾರಣ ಭೂತಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು, ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರದಿರುವರು. ಈ ಗ್ರಂಥವು ಹತ್ತರ ಇದ್ದ ಬಳಿಕ ಎಲ್ಲಾ ದೇವಾನು ದೇವತೆಗಳು ದ್ರವ್ಯಗಳೂ ವೈದ್ಯರೂ ಜೋತಿಷ್ಯರು, ಮಾಂತ್ರಿಕರು ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥ ಗ್ರಂಥವು ಯಾರು ಕಣ್ಣಿಂದ ನೋಡಿರಲಿಕ್ಕಿಲ್ಲಾ. ಪ್ರತಿಯೊಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆ ತೀರ ಕಡಿಮೆಮಾಡಿ ಇರುವವು. ೨—೮—೦ ಟಪ್ಪಾಲು ಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ ನಾಟಕ ಕಾವ್ಯ, ಕಥೆಗಳು, ಯಕ್ಷಗಾನ, ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ:—

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

Just Arrived OF **Fresh Consignment**

Best English Cycles.



REDUCTION IN PRICES.

Banger Cycles Model M. Made in Birmingham.
WITH DUNLOP OR BATES TYRES & TUBES ... @ Rs. 90—0—0
Barton Humber on Advance
WITH DUNLOP OR BATES TYRES & TUBES ... @ „ 100—0—0
Senior Royal with B. S. A. Fitting.
WITH DUNLOP OR BATES TYRES & TUBES ... ...@ Rs. 145—0—0
Royal Saxon with B. S. A. Fitting.
WITH DUNLOP OR BATES TYRES & TUBES ... ... @ Rs. 175—0—0

All the above Cycles include pump and tools.

BROOKES PATEERN 90/2 GERMAN SADDLE ... ...@ „ 9—8—0
„ SADDLE 90/2 „ ... ...@ „ 21—0—0
„ „ B/30 „ ... ...@ „ 26—0—0

For further particulars please write to us or call on us:—

All kinds of Cycle Accessories, Dunlop and German Tyres and Tubes
ARE AVAILABLE AT VERY CHEAP RATES.

Special Discount to Traders. *Easy Terms Arranged*

APPLY TO:—**The Mangalore Trading Association,**
Wholesale Dealers in Cycles and Cycle Accessories,
Car-Street, MANGALORE.

—ಗೋಡೆಗೆ ತಗಲಿಸುವ
ಹೊಸ ನಮೂನೆಯ—

ಟಿಕ್—ಟಾಕ್

ಎಂಬ ಈ ಗಡಿಯಾರಗಳು ಜರ್ಮನೀ ದೇಶದಲ್ಲಿ ತಯಾರಿಸಿದ್ದು. ಇವು ಕರಾರು ಘಂಟೆಯನ್ನು ತೋರಿಸುವವು. ಇವಕ್ಕೆ ಬೀಗ ಕೊಡಬೇಕಾದಿಲ್ಲ. ಇದರಲ್ಲಿ ತೂಗುತ್ತಿರುವ ಗುಂಡನ್ನು ಮೇಲಕ್ಕೆ ಎಳೆದರೆ ಸಾಕು. ತನ್ನಷ್ಟಕ್ಕೆ ತಾನೇ ಟಿಕ್—ಟಾಕ್ ಎಂಬ ಶಬ್ದವನ್ನು ಮಾಡುತ್ತಾ ಸರಿಯಾದ ಕಾಲವನ್ನು ತೋರಿಸುವದು. ಇದು ನೋಡುವುದಕ್ಕೆ ಬಹು ಲಕ್ಷಣವಾಗಿರುವುದು.

ಕ್ರಯ 1ಕ್ಕೆ ರೂ. 3—0—0

ಪೀಟರ್ ವಾಚ್ ಕಂಪೆನಿ
ಪೋಸ್ಟ್ ಬಾಕ್ಸ್ ನಂ. 27, ಮದ್ರಾಸ್.

ADVERTISE IN

The Business Directory
OF INDIA, BURMA & CEYLON

A Comprehensive Directory of the various Business-men, Exporters and Importers, Firms, Factories, Mills, Manufacturers, Merchants and Industries of the principal Cities, Ports and Towns of India, Burma and Ceylon.

PUBLISHED ANNUALLY
Rates for Advertisements

¼ Page	Rs.	50.
2 in. Single Column	„	20.
1 in. Single Column	„	15.
Name in Bold Types	„	5.

Price per Copy Rs. 10.

PRINTERS & PUBLISHERS.
Business Directory Co.,
Kanara Press Buildings, MADRAS. E.
Telegrams: "KETHAKI" Phone 540

Just arrived! Look Sharp!

SCREW ELECTRIC TORCH LAMPS &
Pocket Electric Lamps

AVAILABLE

In different varieties, Mother of pearl lamps. Cycle lamps.

NICKEL PLATED WITH SIDE LANCE.
Hammered Brand, with Powerful Bulls-eye lance,

The Mangalore Trading Association,
Car Street, MANGALORE

ಮನುಷ್ಯರಿಗೆ ಮತಿಸ್ಥಿತಿಗಿಂತಲೂ ಹೆಚ್ಚಾದ್ದು ಯಾವುದೂ ಇಲ್ಲ.

ಜನ್ಮದಲ್ಲಿ ಸಕಲ ಸುಖಗಳ ಅನುಭವಿಸುವುದರಲ್ಲಿ ಅಪಜಯವಿಲ್ಲದೇ ಧನ್ಯನಾಗುವುದಕ್ಕೆ ಮುಖ್ಯ ಸಾಧನ ಮತಿಸ್ಥಿತಿಯೇ ರಾಮಬಾಣವೆಂದು ಹೇಳಬಹುದು.

ಆದರೆ ಪ್ರಸ್ತುತ ನಾವು ಅನುಭವಿಸುವ ಚಪಲಚಿತ್ತದಲ್ಲಿ ಮತಿಸ್ಥಿತಿ ಉಂಟಾಗುವುದು ಸಾಧ್ಯ ಹೇಗೆ? ನಿಮಗೆ ಯಾವವಿಧವಾದ ಚಪಲಚಿತ್ತವಿದ್ದಾಗ್ಯೂ, ನಮ್ಮ ಆತಂಕನಿಗ್ರಹ ಮಾತ್ರೆಗಳನ್ನು ಉಪಯೋಗಿಸಿರಿ. ಈ ಮಾತ್ರೆಗಳೇ ತನ್ನ ಮೆದುಳಲ್ಲಿರುವ ದುರ್ಬಲವನ್ನು ನಿವಾರಿಸಿ, ದೃಢಚಿತ್ತವನ್ನುಂಟುಮಾಡುವುದು.

ಈ 32 ಮಾತ್ರೆಗಳುಳ್ಳ ಡಬ್ಬಿ ಒಂದಕ್ಕೆ ರೂಪಾಯಿ ಒಂದು ಮಾತ್ರ.

ಹಿಂದೂದೇಶದಲ್ಲಿಯೂ ಮತ್ತು ಇತರ ದೇಶಗಳಲ್ಲಿಯೂ ಪ್ರತಿಯೊಂದು ಗೃಹದಲ್ಲಿ ಪ್ರಯೋಜನಕರವಾದ ಒಂದು ಪುಸ್ತಕ ಇರುವುದು. ನಿಮಗೆ ಗೊತ್ತುಂಟೋ? ಆ ಪುಸ್ತಕದ ಹೆಸರೇ

"ಕಾಮಶಾಸ್ತ್ರ."

ನೀವು ಇದುವರೆವಿಗೂ ಆ ಪುಸ್ತಕದಲ್ಲಿ ವಿವರಿಸಿದ ಘನ ವಿಷಯಗಳನ್ನು ನೋಡದೇ ಇದ್ದಪಕ್ಷಕ್ಕೆ, ಈ ದಿನ ನಮಗೆ ಒಂದು ಕಾರ್ಡು ಬರೆದರೆ ಪೋಸ್ಟು ಚಾರ್ಜು ನಿಮಗಿಲ್ಲದನೇ, ಆ ಪುಸ್ತಕವನ್ನು ಕಳುಹಿಸುತ್ತೇವೆ.

ಆತಂಕನಿಗ್ರಹ ಔಷಧಾಲಯ,
ನಂಬ್ರ 23, ಬ್ರಾಡ್ವೆ, ಮದರಾಸು.

Agents:—
Messrs RAPHAEL & Co.,
MANGALORE.

ಹೊಸಗ್ರಂಥಗಳು!! ಬೇಗನೇ ತರಿಸಿಕೊಳ್ಳಿರಿ!!

ಕೋಕಶಾಸ್ತ್ರವು.

ರಸಿಕ ವಾಚಕ ಮಹಾಶಯರೇ,

ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ, ಸಂಪಾದಿಸಿ, ಅದರಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನಷ್ಟೇ ಶೋಧ ಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ಲೀಷ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿಣಿ, ಸ್ತ್ರೀಯರು ಇದರಂತೆ ಪುರುಷರಲ್ಲಿಯು ಭೇದ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ, ಜನನೇಂದ್ರಿಯಾದಿಗಳ ವರ್ಣನೆಯನ್ನೂ, ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ, ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ, ನಪುಂಸಕತ್ವ, ವಂಧ್ಯಾದೋಷಗಳ ಚಿಕಿತ್ಸೆಯನ್ನೂ, ಸ್ತ್ರೀಯರ ಗೂಢ ರಹಸ್ಯವನ್ನೂ, ದಂಪತಿ ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನೂ ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನು ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ.

ಇದರ ಬೆಲೆ ೧—೮—೦, ಟಪಾಲು ಹಾಸಲು ೦—೪—೦.

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ
ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ
ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, [illegible] ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ವಾಂಸರೂ ತಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ಗಾವರ್ಗಿಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನು ಕುರಿತ ಲೆಕ್ಕಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಧನಿಕರೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪೋಷಕರಿಗೆ	ರೂ.	5—0—0
ಇತರರಿಗೆ, ಪರಸ್ಥಳಕ್ಕೆ ಪೋಸ್ಟೇಜು ಸೇರಿ	„	2—8—0
„ ಸ್ಥಳೀಕರಿಗೆ ...	„	1—8—0

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪತ್ರಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕಾಗದ ಬಂದ ಕೂಡಲೆ ತಿಳಿಸಲಾಗುವುದು. [illegible]

ಬಿ. ಹನುಮಂತಯ್ಯಗೌಡ,
ಅರ್ಥಸಾಧಕ ಪತ್ರಿಕೆ,
ಅರಳೇ ಪೇಟೆ, ಬೆಂಗಳೂರು ಸಿಟಿ

Edited, Printed & Published by V. S. Kamath at the M. T. A. SHARADA PRESS, MANGALORE.

Registered No. M. 498.
ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—1[illegible]—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ । ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೯. ಮಂಗಳೂರು, ತಾರೀಕು ೧೦ನೇ ಶುಕ್ರವಾರ ಜುಲಾಯಿ ೧೯೨೫. ಸಂಚಿಕೆ ೨೮.

The Canara Banking Corporation, Udipi, Ltd.

Head Office:— **Udipi**
Branch:— **Coondapoor**

Paidup Capital 1,66,165—9—11
Reserve etc 64,700—0—0

Season Deposits

Carrying Special rate of 7% up to 15th June 1925 only.

Further Particulars on Application.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಉಡುಪಿ, ಲಿಮಿಟೆಡ್.

ಹೆಡ್ ಆಫೀಸು:—ಉಡುಪಿ. ಶಾಖೆ – ಕುಂದಾಪುರ.

ವಸೂಲಾತ ಮೂಲಧನ 1,66,165—9—11
ರಿಜರ್ವ ವಗೈರೆ ಫಂಡುಗಳು 64,700—0—0

ತಾ. 15—6—1925ರವರೆಗೆ ಮಾತ್ರ ಸಾಲಿಯಾನ್ ಸೇಕಡಾ 7ರ ದರದ ಬಡ್ಡಿಯ ಮೇಲೆ ಮುಸುಂ ಠೇವಣಾತಿಗಳನ್ನು ಅಂಗೀಕರಿಸೋಣಾಗುತ್ತದೆ.

ಹೆಚ್ಚಿನ ಮಾಹಿತಿಗೆ ಬರಕೊಳ್ಳಿರಿ.

Office of the Corporation, Udipi, 1-3-'25 } **N. Ananda Rao,**
Secretary

Wanted Agents
FOR
Every District in South India

For Pushing Sales of Our Calenders, Xmas and New Year Cards, Blotters, Pictures and Picture Post Cards, at wholesale rates. Deposit of Rs. 100—0—0 Essential.

Apply to:—

The South Indian Advertising Agency,
13, Kilary Road,
BANGALORE CITY.

ಶುದ್ಧ ರೋಮದ ಧಾವಳಿಗಳು.

1 ಮಳ ಉದ್ದ 1¼ ಮಳ ಅಗಲ ರೂ. 1¼ರಿಂದ 2 ವರೆಗೆ, 5 ಮಳ ಉದ್ದ 1½ ಮಳ ಅಗಲ ರೂ. 1½ ರಿಂದ 5 ವರೆಗೆ, 6 ಮಳ ಉದ್ದ 1½ ಮಳ ಅಗಲ ರೂ. 2¼ರಿಂದ 6 ವರೆಗೆ, 8 ಮಳ ಉದ್ದ 2 ಮಳ ಅಗಲ ರೂ. 3½ರಿಂದ 10 ವರೆಗೆ, 12 ಮಳ ಉದ್ದ 2¼ ಮಳ ಅಗಲ ರೂ. 6ರಿಂದ 12 ವರೆಗೆ, 16 ಮಳ ಉದ್ದ 2¼ ಮಳ ಅಗಲ ರೂ. 9 ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಜಪ್ಪರ್ ರೇಶ್ಮೆ ಮುಡಿಗಳು, [illegible], ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ [illegible] ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುದು. ಕ್ಯಾಟಲಾಗ್ ಇನಾಂ.

ವಿಳಾಸ—
[illegible]
ಮತ್ತು ಕಂಪೆನಿ, [illegible]

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ.

450 ಪುಟಗಳು ಎಮ್. ಗಣಪತಿರಾವ್ ಐಗಳ್ ಇವರಿಂದ ರಚಿತವಾದದ್ದು. ಕ್ರಯ ರೂ. 2-4-0

ಮಾರಾಟಕ್ಕೆ ಸಿದ್ಧವಾಗಿವೆ — **ತುಳು ಪಾಡ್ದನಗಳು** — ಮಾರಾಟಕ್ಕೆ ಸಿದ್ಧವಾಗಿವೆ.

ದೈಯ್ಯೊಂಗುಳು, ಕಲ್ಕುರ್ಟಿ—ಕಲ್ಲುಡ, ಕಣಂಮೂರು ದೈಯ್ಯೊಂಗುಳು, ಮುಂಡತ್ತಾಯ, ಬೊಬ್ಬರ್ಯ.

ಸುಲಭ ದರಗಳು — **ಶಾಲಾ ಪುಸ್ತಕಗಳು** — ರಖಂ ಕೊಂಡುಕೊಳ್ಳುವವರಿಗೆ ಯೋಗ್ಯ ಡಿಸ್ಕೌಂಟ್.

ಅಜ್ಜಿಕಥೆಗಳು:—ಮೂರು ಕರಡಿಗಳು; ಜೇನುಸತ್ತು ಕಾಗೆ ಬಡವಾಯಿತು; ಅರ್ಗಣೆ ಮುದ್ದೆ; ಇಲಿಗಳ ಥಕ್ಕ ಥೈ; ಅಂಗಳ ಮುಗ್ಗು; ಸಿಗಡಿ ಯಾಕೆ ಒಣಗಲಿಲ್ಲ; ಗುಡುಗುಡು ಗುಮ್ಮಟ ದೇವರು; ಮೊಸಳೆ ಕಾಳಪ್ಪ; ಒಡ್ಡನ ಓಟ; ಹೊಸ ಕನ್ನಡ ಪುಸ್ತಕ ಭಾಗ ೧, ಹೊಸ ಕನ್ನಡ ಪುಸ್ತಕ ಭಾಗ ೨; ಕನ್ನಡ ಪದ್ಯಗಳು; ಮಗ್ಗಿ ಪುಸ್ತಕ; ಅಜಿತಕುಮಾರ; ಪದ್ಯ ರತ್ನಾವಳಿ, ಎಕ್ಸರ್‌ಸೈಜ್ ಮತ್ತು ನೋಟು ಪುಸ್ತಕಗಳು, ಕಾಪಿ ಪುಸ್ತಕಗಳು, ಡ್ರಾಯಿಂಗ್ ಪುಸ್ತಕಗಳು

ಇತರ ಪುಸ್ತಕಗಳು:—ಸಂಕ್ಷೇಪಗೀತ, ಕೇತುಭಂಗ, ಹಿಂದೂ ವ್ರತವಿವೇಕ, ಚಂದ್ರಗುಪ್ತ ಚಕ್ರವರ್ತಿ, ಶ್ರೀ ಕೃಷ್ಣಸಂಧಾನ ಪದ್ಯಪಾಠಗಳು, ಹರಿಕಥಾ ಮೃತಸಾರ ಹರಿನಾಮಸಂಕೀರ್ತನೆ ಸುಧಾಂಮೃತ ಪದ್ಯಗಳು. ಬೆಂಕಿಪೆಟ್ಟಿಗೆ ತಯಾರಿಸುವ ವಿಧಾನ, ಸಾಬೂನು ತಯಾರಿಸುವ ವಿಧಾನ, ಸ್ವರಾಜ್ಯ ಭಕ್ತೋಲ್ಲಾಸ, ಚರಕಗೀತ, ಕೊಂಕಣಿ ಭಾಷೆಯಲ್ಲಿ ಚಂದ್ರಹಾಸ ನಾಟಕ, ಪ್ರಹ್ಲಾದ ಚರಿತ್ರ ನಾಟಕ, ಕನ್ನಡ ಮೃಚ್ಛಕಟಿಕ ನಾಟಕ, ಚಂದ್ರಹಾಸಾಭ್ಯುದಯ ನಾಟಕ, ಕೋವಿಲನ್ ಚರಿತ್ರ ನಾಟಕ, ಮಾದರಿ ಉಪನ್ಯಾಸ ಭಾಗ ೧, ೨, ಮತ್ತು ೩.

AMRUTANJAN
Best Indian Pain Balm
Amrutanjan
BOMBAY

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು.

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ತಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 2 ಆಣೆ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

109 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

— ರಥೋತ್ಸವ, ವಿವಾಹ ಉಪನಯನಗಳ ಸಮಯ —
ಸರ್ವರಿಗೂ ಉಡಿಗೆ ತೊಡಿಗೆಗಳು ಬೇಕಾಗುವ ಸಂದರ್ಭ.

ಯಾರು, ಯಾವುದನ್ನು ಎಲ್ಲಿ ಪಡೆಯಬೇಕೆಂಬ ಶಂಕೆಯಿಂದ ವಿಳಂಬ ಮಾಡಬೇಡಿರಿ. ಉಡಿಗೆತೊಡಿಗೆಗಳನ್ನು ಜನಸಾಧಾರಣ ನಿಮಗೆ ಬೇಕಾದ ಯಥಾರ್ಥ ಮಾಹಿತಿಯನ್ನು ಕಳೆದ ಹತ್ತಿಪ್ಪತ್ತು ವರುಷಗಳಿಂದ ಪಡೆದು ನಮ್ಮಲ್ಲಿಯ ವ್ಯಾಪಾರವು ಗಿರಾಕಿಗಳಿಗೆ ಸರ್ವ ದೃಷ್ಟಿಯಿಂದಲೂ ಲಾಭಕರವಾಗಿ ಪರಿಣಮಿಸುವಂತೆ ನಮ್ಮ ಜವಳಿ ಸಂಗ್ರಹವನ್ನು ಮಾಡಿರುತ್ತೇವೆ.

ಗುರ್ಪುರ್‌ಕಾರ್ ಬ್ರದರ್ಸ್, ರಥಬೀದಿ, ಮಂಗಳೂರು.

ಹೆಡ್ ಆಫೀಸು:—ರಥಬೀದಿ—(ಮೊದಲು ಸುಜೀರ ನಾಗಪ್ಪನಾಯಕ್, ಎಂಡ್ ಕೊ., ಇದ್ದಲ್ಲಿ; ಅಜಿಜುದ್ದೀನ್ ರಸ್ತೆಗೆ ತಿರುಗುವಲ್ಲಿ) ಮಂಗಳೂರು.

ಬ್ರೆಂಚ್ ಆಫೀಸು:—ರಥಬೀದಿ—(ಹಳೇ ತಾಲೂಕು ಕಚೇರಿಯ ಪಟಾರಕ್ಕೆ ಸಮೀಪವಿರುವ ಮಳಿಗೆ,) ಮಂಗಳೂರು.

ಈ ದೇಶದ ಪ್ರಖ್ಯಾತವಟ್ಟೆ ನೇಯಿಗೆಯ ಕೇಂದ್ರಸ್ಥಳಗಳಾದ—ಬನಾರಿಸ್, ಪೂನಾ, ಅಹಮ್ಮದಾಬಾದ್, ಸುರತ್, ಬೆಂಗಳೂರು, ಧರ್ಮಾವರಮ್, ಕಂಜೀವರಮ್, ಕೊಯಮುತ್ತೂರು, ಮಧುರೆ, ತಂಜಾವೂರು, ಕುಂಭಕೋಣ, ಆರ್ನಿ, ರಾಣಿಪೇಟೆ, ಹುಬ್ಬಳ್ಳಿ, ಇಳಕಲ್, ಗದಗ, ಮದ್ರಾಸು ಈ ಪ್ರಾಂತ್ಯಗಳಲ್ಲಿ ತಯ್ಯಾರಾದ

ಜರಿಸೀರೆಗಳು, ಮಕ್ಮಲ್, ಜರಿಕಣ, ಪೀತಾಂಬರ, ರೇಶ್ಮೆ ಸೀರೆಗಳು, ಆರಣಿಪೇಟೆ ಸೀರೆಗಳು, ಕೊಳ್ಳೇಗಾಲ್ ರೇಶ್ಮೆ ಸೀರೆಗಳು, ಜರಿ ಅಂಚಿನ ಸೀರೆಗಳು, ರೇಶ್ಮೆ ಮುಡಿಗಳು, ನಿತ್ಯ ಉಪಯೋಗದ ಸೀರೆಗಳು ಬಿನ್ನಿಯ್, ಕರ್ನಾಟಕ ಮಿಲ್ಸ್‌ನ ವ ಇತರ ಮಿಲ್ಸ್‌ನ ಶೂಟಿಂಗ್ ಶರ್ಟಿಂಗ್.

ಕೈರಾಟೆಯಲ್ಲಿ ತಯಾರಿಸಿದ ನೂಲಿನಿಂದ ಮಾಡಿದ—

ಖದ್ದರ್ ಶರ್ಟಿಂಗ್, ಖದ್ದರ್ ಕೋಟಿಂಗ್, ಖದ್ದರ್ ಟೋಪಿ, ಖದ್ದರ್ ಪಂಚೆ, ಅಂಗವಸ್ತ್ರ, ಇತ್ಯಾದಿ—
ಮುಸಲ್ಮಾನರಿಗೆ ಬೇಕಾದ ನಮೂನೆಯ ಲುಂಗಿ [illegible] ವಗೈರೆ—
ಈ ಸಂಗ್ರಹವನ್ನು ನಮ್ಮ [illegible]

[illegible] ರೂ. 50ರಿಂದ 250ವರೆಗೆ [illegible] 10%, ರೂ. 250 ರಿಂದ 1000ಕ್ಕೆ 12½% [illegible]

ಆರ್. ಮಾರ್ಟಿನ್ನರ ಲಸ್ತ್ರಾ ಎಣ್ಣೆ

ಇದರ ಸುವಾಸನೆಯು, (ಪರಿಮಳವು) ಬಹಳ ಅಂದವಾಗಿಯೂ ಇರುವುದಲ್ಲದೆ, ಬಹಳ ಹೊತ್ತಿನ ವರೆಗೂ ಇರತ್ತದೆ. ಈ ಎಣ್ಣೆಯನು ತಲೆಗೆ ಹಾಕಿಕೊಳ್ಳುವುದರಿಂದ ಕಣ್ಣುಗಳು ತಂಪಾಗಿಯೂ, ಶುಭ್ರವಾಗಿಯೂ, ಆಗುವುದಲ್ಲದೆ, ಮಿದುಳು ಚೆನ್ನಾಗಿ ಬೆಳೆಯುತ್ತದೆ. ಇದನು ಪ್ರತಿದಿನವೂ ಉಪಯೋಗಿಸುವುದರಿಂದ ಕೂದಲುಗಳು ಕಪ್ಪಾಗಿ ಹೊಳೆಯುವಂತೆ ಮಾಡುತ್ತದೆ. ಕೂದಲುಗಳಲ್ಲಿರುವ ಹೇನುಗಳು ಮುಂತಾದುವು ನಾಶವಾಗಿ ತಲೆಬುರುಡೆಯನ್ನು ಚೆನ್ನಾಗಿ ಬೆಳೆಯುವಂತೆ ಮಾಡುತ್ತದೆ. ಗಡ್ಡ ಮತ್ತು ಮೀಸೆಗಳು ಸಹ ಬೆಳೆಯುತ್ತವೆ. ಇದನ್ನು ಉಪಯೋಗಿಸಿದ ಜನರು ಇದಕ್ಕಿಂತ ಉತ್ತಮವಾದ ಎಣ್ಣೆಯು ಬೇರೆ ಇಲ್ಲವೆಂದು ಹೇಳಿರುತ್ತಾರೆ.

ಕ್ರಯ ಬಾಟಿ 1ಕ್ಕೆ ರೂ. 1-4-0.

ಆರ್ ಮಾರ್ಟಿನ್ನರ ಗಿಟೋಡಯಿನ್.

ಗಂಡಸರಿಗೂ ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ, ಅಥವಾ ಹೊಸತಾಗಿದ್ದರೂ ಸರಿ. ಬಿಳುಪು ಹೋಗುವುದು ಉರಿಯುವುದು, ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೆ ಉರಿ ಮೂತ್ರವನ್ನು ನಿಲ್ಲಿಸಿ, ಮೂತ್ರವು ಬಿಳುಪಾಗಿ ನಿರ್ಮಲವಾಗುವದಲ್ಲದೆ ರೋಗದ ಪಟ್ಟನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ.

ಬೆಲೆ ಸೀಸೆ 1ಕ್ಕೆ ರೂ. 2—0—0.

ಆರ್. ಮಾರ್ಟಿನ್ನರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮು, ಬರಲು ಶ್ವಾಸ, ಶೀತ, ನೆಗಡಿ, ಗಂಟಲುನೋವು, ಎದೆ ನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನಮಾಡಿ ಪರೀಕ್ಷಿಸಿ ನೋಡಿರಿ. ಅನಂತರ ಬೇರೆ ಯಾವ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮಿಗೂ ರಾಣಿಯಾಗಿಯೂ, ಎದೆಗೆ ಬಲಕೊಟ್ಟು ಮೇಲ್ಗಂಡ ರೋಗಗಳು ತಲೆಯಿಕ್ಕದಂತೆ ಮಾಡುತ್ತದೆ.

60 ಮಾತ್ರೆಗಳ ಸೀಸೆ 1ಕ್ಕೆ ರೂ. 1—4—0.

ವಿಳಾಸ:—ಆರ್. ಡಿ. ಕಟ್ಲೆ ಮತ್ತು ಕಂಪೆನಿ,
ನಂಬ್ರ ಬಿ. ಫ್ರಿಯರ್ ರೋಡ್,
ಸಾಂಜ ವರ್ತಮಾನ ಪ್ರೆಸ್,
ಟೋಡಿವಾಲಾ ಬಿಲ್ಡಿಂಗ ಎದುರುಗಡೆ, ಫೋರ್ಟ್ ಮುಂಬಯಿ.

R. D. Kately & Co.
No. B. Frere Road,
Opposit Sanjvertaman Press,
Todivala Building, FORT BOMBAY

ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ

ಎಲಿಮೆಂಟರಿ ಶಾಲೆಗಳ ಮೂರನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್. ಗಣಪತಿರಾವ್ ಐಗಳ್—ಗ್ರಂಥಕರ್ತರು.

ಮನೋರಂಜಕ ಚಿತ್ರಗಳೂ ಇವೆ.

ಇದರಲ್ಲಿ ಸಾವಿತ್ರಿ, ಶಕುಂತಳಾ, ಕೃಷ್ಣಾಕುಮಾರಿ ಪದ್ಮಿನಿ, ಜೋನ್ ಒಫ್ ಆರ್ಕ, ಫ್ಲಾರೆನ್ಸನಾಯಿಟಿಂಗೇಲ ಪರಸುರಾಮ, ಭೂತಾಳಪಾಂಡ್ಯ, ಕಾರ್ಕಳ ಗೋಮಟೇಶ್ವರ ಮತ್ತು ಭೈರವರಾಜ, ಮೂಡಬಿದ್ರೆಯ ಚೌಟರು, ನಂದಾವರ ಬಂಗರು, ಕಾರ್ಕಳ ರಾಮಸಮುದ್ರ ಮತ್ತು ರಾಮನಾಥ ಒಡೆಯರ ಅಣೆಕಟ್ಟು, ಗುರುಪುರ ಜಂಗಮ ಮಠ, ಕಲ್ಯಾಣಪ್ಪನ ಕಾಟಕಾಯಿ, ಗುರುವಾಯನಕೆರೆ, ಜಮಾಲಾಬಾದು ಕೋಟೆ, ಸುಲ್ತಾನಬತ್ತೇರಿ, ಉಮಾಪ್ರಾರ್ಥನಾಮಂದಿರ, ಸೇಂಟಮೇರಿ ದ್ವೀಪಗಳು ಮತ್ತು ದರಿಯಾಬಾದರಗಡ, ಕೊರಗರು, ಕೊಡಗರು, ತೋಡರು, ರಜಪೂತರು, ಕಂದಾರಿಗಳು ಘುರ್ಖಾ ಜನರು, ಅರಬಿಯರು. ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ಮೂರನೇ ದರ್ಜೆಯ ಮಕ್ಕಳಿಗೆ ಉಪಯುಕ್ತವಾಗಿದೆ. ಕ್ರಯ 6 ಆಣೆ.

ಪುಸ್ತಕ ದೊರಕುವ ವಿಳಾಸ:—

ಶಾರದಾ ಛಾಪಖಾನೆ,
ಮಂಗಳೂರು.

ಗಣಪತಿರಾವ್, ಐಗಳ್.
ಮಂಜೇಶ್ವರ.

ಡಾಕ್ಟರುಗಳು ಭಿನ್ನಾಭಿಪ್ರಾಯಪಡುವಾಗ್ಯೆ ತೀರ್ಮಾನಿಸುವದು ಯಾರು?

ಅಂಥಾ ಸಂದರ್ಭಗಳಲ್ಲಿ ಡೆಂಗ್ಯು ಮುಂತಾದ ಜ್ವರಗಳನ್ನು ನಿವಾರಿಸುವಂಥಾ "ಬಾಟ್ಲಿವಾಲರ ಏಗ್ಯುಮಿಕ್ಸ್ಚರ್"ನ್ನು ಸರಾಗವಾಗಿಯೂ, ಮತ್ತು ಜ್ವರಗಳನ್ನು ಖಂಡಿತವಾಗಿ ನಿಲ್ಲಿಸುವಂಥಾದೂ, ಎಲ್ಲಾ ತರದ ತಲೆನೋವುಗಳನ್ನು ಹೋಗಲಾಡಿಸುವಂಥಾದ್ದೂ ಆದ "ಬಾಟ್ಲಿವಾಲರ ಏಗ್ಯುಪಿಲ್ಸ್" ಇದನ್ನು ಉಪಯೋಗಿಸಿರಿ.

ಐ. ಎಮ್. ಎಸ್. ಡಾಕ್ತರುಗಳಿಂದ ಶಿಫಾರಸು ಮಾಡಲ್ಪಟ್ಟಿವೆ. ಇವರ ಉಪಯೋಗದಿಂದ ಹೃದಯದ ಮೇಲೆ ಯಾವದೊಂದೂ ಬಾಧಕವಿಲ್ಲ. ಅರ್ಧ ಶತಮಾನದಿಂದ ಹಿಂದೂಸ್ಥಾನ, ಬರ್ಮಾ, ಸಿಲೋನ್, ಆಫ್ರಿಕಾ ಇವುಗಳಲ್ಲಿ ಪ್ರಖ್ಯಾತಪಟ್ಟಿದ್ದಾಗಿರುತ್ತದೆ.

ಅನೇಕ ಹಿಂದೀ ಪ್ರದರ್ಶನಗಳಲ್ಲಿ ಬೆಳ್ಳಿ ಮತ್ತು ಬಂಗಾರದ ಪದಕಗಳನ್ನು ಪಡೆದಿರುತ್ತೆ. ಚಾಲ್ತಿ ನಾಟ್ಯದವರಿನ್ನು ಮಾರ್ಗಿಗಳೂ ಕೂಡ ಅವರ ಮೇಲೆ ಹಣವನ್ನು ಮುಂಗಡವಾಗಿ ಕೊಡುತ್ತಾರೆ. ಬಡ ಮತ್ತು ಮಧ್ಯಮ ತರಗತಿಯ ಜನರಿಗೆ ವರಪ್ರದಾನವಾಗಿದ್ದು ಸಂಚಾರ, ಪ್ರಯಾಣ, ದೇಶಾಟನೆಗಳ ಸಮಯದಲ್ಲಿ ಹತ್ತಿರದಲ್ಲಿಟ್ಟುಕೊಳ್ಳದಾಗಿರುತ್ತದೆ.

ಬಾಟ್ಲಿವಾಲರ ಬಾಲಾಮೃತ ಅಥವಾ ಟೊನಿಕ್ ಸಿರಪ್.

ಕೆಮ್ಮನ್ನು ಹೋಗಲಾಡಿಸಿ, ಎದೆನೋವನ್ನು ಶಾಂತಗೊಳಿಸಿ, ಜ್ವರವನ್ನು ಉಪಶಮನಿಸಿ, ನಿದ್ರಾಭಂಗವನ್ನು ಕಡಿಮೆ ಮಾಡಿ ಧಾತುವರ್ಧನವನ್ನು ಮಾಡುವದರಲ್ಲಿ ಅತ್ಯುತ್ತಮವಾಗಿರುತ್ತದೆ. ಕಫವನ್ನು ಒಡೆಸಿ ಮಾಯವಾಗುವಂತೆ ಮಾಡುವುದಲ್ಲದೆ ಅದೇ ಸಮಯದಲ್ಲಿ ಒಳ್ಳೇ ಜೀರ್ಣವನ್ನೂ ಉಂಟುಮಾಡುವುದು. ದರ ಮೊದಲಾದ ಮಾಹಿತಿಯನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಕಾರಖಾನೆ:-GAWASHAPUR, BOMBAY.

Dr. H. L. Batliwala & Co., Ltd.,
Sayani Road, P. O. Cadell Road, Bombay. No. 14.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.,
Sayani Road, P. O. Cadell Road, Bombay. No. 14.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟ. ಖ. 9 ಆಣೆ.

ನಮ್ಮ ವಿಳಾಸ:— ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಏಜಂಟರು:— ಡಿ. ಊಲನ್ ಮಾರ್ಟೀ, ಮಂಗಳೂರು.

OUR RECENT IMPORT IN WRIST WATCHES

Have you used anyone of these Watches?

SEND YOUR ORDER NOW ALL GUARANTEED.

Fashionable wrist wrist Lady's size. Reliable movement Guaranteed.



No. 368.

Handy to wear and looks beautiful. Gives punctual time and with strong movement.

Nickel case Rs. 8—0

High-class Radium dial watch watch with Roman figures.



No. 367.

Can be seen in dark nights, Well fitted with best movement and strong to use. Used by one and all.

Silver case Rs. 9—0.

Radio light wrist watch.



No. 372.

Fitted with the best mechanism and guaranteed to work and keep perfect time for a long time.

Nickel case	Rs. 7—8
Electro rolled-gold	„ 9—0

(N. B. In addition to the above, we have good number of varieties of fancy wrist watches, pocket watches. Please write for a descriptive catalogue, which will be sent free)

WHOLESALE IMPORTERS

PETER WATCH COY.,
POST BOX 27, MADRAS

ಶಾಲಿವಾಹನಶಕ ೧೮೪೭ನೆಯ ಕ್ರೋಧನ ಸಂವತ್ಸರದ ಜ್ಯೇಷ್ಠ ಬ| ೧೪ ಶನಿವಾರದಿಂದ ಕ್ರೋಧನ ಸಂವತ್ಸರದ ಆಷಾಢ ಶು| ೫ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೫ನೆಯ ವೃಷಭ ದೇಶ.)

ತಾರೀಕು	ವಾರ	ತಿ.	ಘಳಿ.	ನಕ್ಷತ್ರ	ಘಳಿ.	ಯೋಗನಾಮ	ಸೂರ್ಯ ಉ.	ಸೂರ್ಯ ಅಸ್ತ.
11	ಶನಿ	೬	೪೨.೧೬	ಪೂ. ಭಾ.	೨೨. ೨	೨೬	6.12	7. 0
12	ರವಿ	೭	೩೯.೧೬	ಉ. ಭಾ.	೨೦.೩೧	೨೮	6.12	7. 0
13	ಸೋಮ	೮	೩೭.೩೨	ರೇವತೀ	೨೦. ೫	೨೯	6.12	7. 0
14	ಕುಜ	೯	೩೬.೪೬	ಅಶ್ವಿನೀ	೨೦ ೪೬	೩೦	6.12	7. 0
15	ಬುಧ	೧೦	೩೭.೧೬	ಭರಣೀ	೨೩. ೧	೩೧	6.12	7. 0
16	ಗುರು	೧೧	೩೯.೧೫	ಕೃತ್ತಿಕಾ	೨೬.೧೬	೧	6.13	7. 0
17	ಶುಕ್ರ	೧೨	೪೨.೧೪	ರೋಹಿಣೀ	೩೦.೩೨	೨	6.13	7. 0

ಮಂಗಳೂರಿನ ವಾಯುಸ್ಥಿತಿ.

Date ತಾರೀಕು	Temperature. ಉಷ್ಣ (ಕಾವು) Maximum ಹೆಚ್ಚಾದದ್ದು	Minimum ಕಡಿಮೆ	Rainfall. ಮಳೆ ದಿನದ ಮಳೆ	ಜುಮಲಾ ಮಳೆ.
3	89—3	79—2	—	—
4	90—8	77—8	—	—
5	89—5	78—9	0—02	—
6	89—0	77—3	—	—
7	89—6	79—8	—	—
8	90—6	76—3	—	—
9	90—0	76—3	0—16	—

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ	ವರೆಗೆ
	ರೂ. ಆ.	ರೂ ಆ
ಹೊಸ ಮಸ್ಕತಿ	8—12	9— 4
ಹೊಸ ಗುಡ್ಡೆ ...	8-4-0	8—10
ಹೊಸ ರಾಶಿ ...	7- 12	8—0
ಅವ್ವಲ್ ಬೆಳ್ತಿಗೆ ...	8--4	9—8
ಗುಡ್ಡೆ ಬೆಳ್ತಿಗೆ ...	8—0	8—4
ರಂಗೂನು ಬೆಳ್ತಿಗೆ ಗೋಣಿ ೧ ...	13- 8	14—0
ಗೋಧಿ ಗೋಣಿ ೧ಕ್ಕೆ ...	18- 8	22 0
ಹುರುಳಿಗೋಣಿ ೧ಕ್ಕೆ ...	9- 4	10—0
ಕಡಲೆಗೋಣಿ ೧ಕ್ಕೆ ...	12-0	13—0
ತೊಗರಿಗೋಣಿ ೧ಕ್ಕೆ ...	12-8	13—0
ತೊಗರಿಬೇಳೆ ಗೋಣಿ ೧ಕ್ಕೆ ...	14-0	21—0
ಉದ್ದುಗೋಣಿ ೧ಕ್ಕೆ ...	14- 0	14—8
ಹೆಸರುಗೋಣಿ ೧ಕ್ಕೆ ...	14—0	15—0
ಊರು ಬೆಲ್ಲ ಖಂಡಿ ೧ಕ್ಕೆ ...	-	85—0
ಉಪ್ಪು ಗೋಣಿ ೧ಕ್ಕೆ ...	4- 4	4—10
ಕೊಬ್ರಿ ಖಂಡಿ ೧ಕ್ಕೆ ...	115-0	120—0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	35- 0	36—0
ಎಳ್ಳಿಂಡಿ ಖಂಡಿ ೧ಕ್ಕೆ ...	35 -0	42—8
ಕೊಬ್ರಿ ಎಣ್ಣೆ ಮಣ ೧ಕ್ಕೆ ...	8—8	9—8
ಎಳ್ಳೆಣ್ಣೆ ಮಣ ೧ಕ್ಕೆ ...	8- 0	11—0
ಚಿಮಿಣಿ ಎಣ್ಣೆ ಪೆಟ್ಟಿಗೆ ೧ಕ್ಕೆ ...	8-15-6	—
ಮೋರಿಸ ಸಕ್ಕರೆ ಮಣ ೧ಕ್ಕೆ ...	4—12	—
ಊರ ಮೆಣಸಿನಕಾಯಿ ಮಣ ೧ಕ್ಕೆ ...	7- 0	—
ಸಾಸಿವೆ ಮುಡಿ ೧ಕ್ಕೆ ...	8- 12	—
ಕೊತ್ತುಂಬರಿ ಮುಡಿ ೧ಕ್ಕೆ ...	3- 8	4—4
ಕಾಫಿ ಖಂಡಿ ೧ಕ್ಕೆ ...	345- 0	400--0
ಬೆಳಗೋಟು ಅಡಿಕೆ ಖಂಡಿ ೧ಕ್ಕೆ ಹಳೆದು ...	245- 0	250--0
„ ಹೊಸ ಅಡಿಕೆ	240—0	240—0
ಕಾಳುಮೆಣಸು ಖಂಡಿ ೧ಕ್ಕೆ ...	170-0	175--0
ಯಾಲಕ್ಕಿ ಮಣ ೧ಕ್ಕೆ ...	80- 0	90—0
ಗೇರುಬೀಜ ಮುಡಿ ೧ಕ್ಕೆ ...	3—6	—
ಕಬ್ಬಿಣ ಖಂಡಿ ೧ಕ್ಕೆ ...	45- 0	65—0
ತಾಂಬ್ರ ತಗಡು ಮಣ ೧ಕ್ಕೆ ...	17-12	23—0
ತಾಮ್ರ ಪಾತ್ರಗಳು ಮಣ ೧ಕ್ಕೆ ...	26- 0.	—
ಚೀನಿ ಬೆಳ್ಳಿ ಸೇರು ೧ಕ್ಕೆ ...	22 - 0	
ಹಿತ್ತಾಳೆ ತಗಡು ಮಣ ೧ಕ್ಕೆ ...	18- 8	
ಜಸದು	13- 7	

The Canara Public Conveyance Co., Ltd, Mangalore.
(ESTABLISHED 1914.)

ಕೆನೆರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು
- ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು
- ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
- ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
- ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.
- ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ—ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd., Mangalore. S. K

— ಸಿರಿಗನ್ನಡಂಗೆಲ್ಗೆ —

ಶ್ರೀ ಶಂಕರ ಕರ್ನಾಟಕ ಪುಸ್ತಕ ಭಂಡಾರವೂ ಶ್ರೀ ವಿದ್ಯಾರಣ್ಯ ಪ್ರಕಾಶಕ ಸಂಸ್ಥೆಯೂ,

ಮಾಳಮಡ್ಡಿ, ಧಾರವಾಡ.

ಕನ್ನಡಿಗರಿಗೆ ಬೇಕಾಗುವ ಎಲ್ಲಾ ತರದ ಕನ್ನಡ ಪುಸ್ತಕಗಳು ನಮ್ಮಲ್ಲಿ ಯೋಗ್ಯ ಬೆಲೆಗೆ ದೊರೆಯುವವು. ವಿದ್ಯಾರಣ್ಯ ಪುಸ್ತಕ ಮಾಲೆಯ ಕೆಳಗಿನ ೧, ೨, ೩, ಪುಸ್ತಕಗಳು ಚಂದಾದಾರರಾಗುವವರಿಗೆ ಅಂಚೆ ವೆಚ್ಚ ಸೇರಿ ೫ ರೂ. ೬ ಆಣೆಗೆ ದೊರೆಯುವವು. ಮುಂದೆ ಹೊರ ಬೀಳುವ ಮಾಲೆಯ ಪುಸ್ತಕಗಳನ್ನು ಚಂದಾದಾರರಿಗೆ ೧ ರೂಪಾಯಿಗೆ ೨ ಆಣೆಯಂತೆ ಕಡಿಮೆ ಬೆಲೆಗೆ ವಿ. ಪಿ. ಮಾಡುವೆವು. ಭಂಡಾರದ ಬೆಲೆ ಪಟ್ಟಿಗಾಗಿ ೪ ಆಣೆ ಅಂಚೆ ಟಿಕೇಟುಗಳನ್ನು ಕಳುಹಿಸತಕ್ಕದ್ದು.

		ರೂ. ಆ. ಪೈ.
೧.	ಕರ್ನಾಟಕ ಸಿಂಹಾಸನ ಸ್ಥಾಪನೆ	೧— ೦—೦
೨.	ಕಥೆಗಳನ್ನೊಳಗೊಂಡ ಬೀರಬಲ್ಲ ಚರಿತ್ರೆ (ಸಚಿತ್ರ)	೧— ೬—೦
೩.	ಛತ್ರಪತಿ ಶಿವಾಜಿ ಮಹಾರಾಜ „	೨—೧೨—೦
೪.	ಮಹಾರಾಣಿ ಲಕ್ಷ್ಮೀಬಾಯಿ ಝಾಂಸಿ „	೨— ೦—೦
೫.	ಅಕ್ಬರ ಚಕ್ರವರ್ತಿ ಚರಿತ್ರೆ „	೧— ೧—೦
೬.	ಚರಿತ್ರೆ ಸಂಗ್ರಹ ಭಾಗ ೧. „	೧— ೪—೦
೭.	ತಿಲಕರ ಗೀತಾ ರಹಸ್ಯ	೩— ೮—೦
೮.	ಶ್ರೀ ದಾಸಬೋಧ ಭಾಗ ೧ ೨. ೩.	೨—೧೪—೦
೯.	ರಾಷ್ಟ್ರಸಭೆಯ ಇತಿಹಾಸ	೨— ೮—೦
೧೦.	ವಚನ ಜ್ಞಾನಸಿಂಧು	೪— ೦—೦

ಇವಲ್ಲದೆ ನಮ್ಮಲ್ಲಿ ಎಲ್ಲಾ ತರದ ಕಾಯಿದೆ ಕಾಲೇಜುಪಯೋಗಿ ಪುಸ್ತಕಗಳೂ ನಕಾಶೆ ಚಿತ್ರಗಳೂ ಬರವಣಿಗಳೂ ದೊರೆಯುವವು.

ಶ್ರೀಪಾದ ರಾಮಚಂದ್ರ ದೇಶಪಾಂಡೆ ಬಿ. ಯಸ್. ಸಿ.
ವ್ಯವಸ್ಥಾಪಕ.

ಪ್ರಖ್ಯಾತಿಪಟ್ಟ ಮಂಗಳೂರು ನಸ್ಯ.

ನಮ್ಮಲ್ಲಿ ಉತ್ತಮವಾದ ಹೊಗೆಸೊಪ್ಪಿನಿಂದಲೂ, ಸುಮಾರು ೫೦ ವರ್ಷಗಳ ಅನುಭವದಿಂದಲೂ ತಯಾರಿಸಿದ ನಸ್ಯವು ಯಾವಾಗಲೂ ರಖಂ ಆಗಿಯೂ ಚಿಲ್ಲರೆ ಆಗಿಯೂ ಮಾರಾಟಕ್ಕೆ ದೊರೆಯುತ್ತದೆ.

I ಕ್ಲಾಸ್ ರಾತ್ಲು 1ಕ್ಕೆ ರೂ. 3—0—0.
II „ „ „ 2—12—0.

ವಿ. ಪಿ. ಚಾರ್ಜು ಅಲಾಹಿದೆ. ಸ್ಯಾಂಪಲು ಅಪೇಕ್ಷಿಸುವವರು ೨ ಆಣೆ ಸ್ಟಾಂಪು ಕಳುಹಿಸಲಿ.

ವಿಳಾಸ—
ಎಮ್. ಎಸ್. ಬಂಡಾರ್ಕಾರ್ ಎಂಡ್ ಸನ್ಸ್,
ನಸ್ಯ ವ್ಯಾಪಾರಿಗಳು,
ರಥಬೀದಿ, ಮಂಗಳೂರು.

ಬಂದು ನೋಡಿರಿ! ತಿಂದುನೋಡಿರಿ!

ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ
ಪದಕವನ್ನು
ಬಹುಮಾನವಾಗಿ ಪಡೆದಿರುವ
ಎಸ್. ಪಿ. ಆಚಾರ್ಯ
ಇವರಿಂದ ತಯಾರಿಸಲ್ಪಟ್ಟ

ಉಪ್ಪಿನಕಾಯಿಗಳನ್ನು

ಬಂದು ನೋಡಿರಿ! ತಿಂದು ನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ ಶುಂಠಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನ್ನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ
ಬಂದು ನೋಡಿರಿ! ತಿಂದು ನೋಡಿರಿ!

ಇಂಡಿಯನ್ ಸ್ವೀಟ್‌ಮೀಟ್ ಮಾರ್ಟ್.

ಮನೋಲ್ಲಾಸಿನಿ ಕಾಫಿ ಕ್ಲಬ್.
ಮಾರ್ಕೇಟು ರೋಡು,
ಮಂಗಳೂರು.

ಅಥವಾ

ಸದಾನಂದ ಕಾಫಿ ಕ್ಲಬ್.
ರಥಬೀದಿ, ಮಂಗಳೂರು

ದಕ್ಷಿಣ ಕನ್ನಡ ಜಿಲ್ಲೆಯ

ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಶ್ರೀಯುತ
ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯರಿಂದ
ರಚಿತವಾದ

ರಾಷ್ಟ್ರಗೀತಾರತ್ನಾಕರ ೦-೮-೦.
ಲೀಲೆ ೦-೧-೦.

ಅಭಿಪ್ರಾಯಗಳು:—

ಆಧುನಿಕ ಕರ್ಣಾಟಕ ವಾಙ್ಮಯ ಕ್ಷೇತ್ರದಲ್ಲಿ ಭೀಷ್ಮಾಚಾರ್ಯರೆನಿಸಿದ
ಪ್ರಾಕ್ತನ ವಿಮರ್ಶವಿಚಕ್ಷಣ, ರಾವ್ ಬಹದ್ದೂರ್
ಶ್ರೀಮಾನ್ ಆರ್. ನರಸಿಂಹಾಚಾರ್ಯ,
ಎಮ್. ಎ, ಎಮ್. ಆರ್. ಎ. ಎಸ್.
ಬೆಂಗಳೂರು.

ಇವರು ಬರೆಯುತ್ತಾರೆ:—

ಮ॥ ರಾ॥ ಶ್ರೀಮಾನ್ ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯರವರ ಸನ್ನಿಧಿಯಲ್ಲಿ. ವಿಜ್ಞಾಪನೆಗಳು. ಉಭಯ ಕುಶಲೋಪರಿ.

ತಾವು ಅಭಿಮಾನದೊಡನೆ ಕಳುಹಿಸಿದ ಪುಸ್ತಕಗಳೂ ಪತ್ರವೂ ತಲಪಿದವು. ... ...

ರಾಷ್ಟ್ರಗೀತಾರತ್ನಾಕರ, ಲೀಲೆ ಈ ಗ್ರಂಥಗಳನ್ನು ಓದಿದೆನು. ಮೊದಲನೆಯದು ನಿಮ್ಮ ದೇಶಾಭಿಮಾನವನ್ನು ಘಂಟಾಘೋಷವಾಗಿ ಕನ್ನಡಿಗರಿಗೆ ಪ್ರಕಟಿಸುವುದಲ್ಲದೆ ಅವರಿಗೆ ದೇಶದಲ್ಲಿಯೂ ದೇಶಬಾಂಧವರಲ್ಲಿಯೂ ಆದರವನ್ನು ಹುಟ್ಟಿಸುವುದಕ್ಕೆ ಮುಖ್ಯವಾದ ಉಪಕರಣವಾಗಿದೆ. ಕವಿತೆಯೂ ಸರಲವಾಗಿ ಹೃದಯಂಗಮವಾಗಿದೆ.

ಲೀಲೆಯಲ್ಲಿ ನಿಮ್ಮ ಭಕ್ತಿರಸವು ತುಂಬಿ ತುಳುಕುತ್ತಿರುವುದು. ಗಂಭೀರವಾದ ಭಾವಗಳನ್ನು ಸುಲಭವಾದ ಶೈಲಿಯಲ್ಲಿ ಮನೋರಂಜಕವಾಗುವಂತೆ ತಿಳಿಸುವುದು ಸುಲಭಸಾಧ್ಯವಲ್ಲ. ಈ ಕೆಲಸವನ್ನು ನೀವು ಲೀಲಾಜಾಲವಾಗಿ ಮಾಡಿರುವಿರಿ. ಈ ಸರಸಕವಿತಾಶಕ್ತಿ ಶ್ಲಾಘಾರ್ಹವಾಗಿದೆ.

ಮುಖ್ಯವಾಗಿ ನಿಮ್ಮ ದೈವಭಕ್ತಿ, ದೇಶಾಭಿಮಾನ, ಭಾಷಾಭಿಮಾನ ದೇಶಬಾಂಧವ ಪ್ರೀತಿ, ಇವು ಸ್ತೋತ್ರಾರ್ಹವಾಗಿವೆ.

ಇಂತೀ ವಿಜ್ಞಾಪನೆ,
ರಾ. ನರಸಿಂಹಾಚಾರ್ಯ.

ಮಾತ್ರವಲ್ಲದೆ—ಮೈಸೂರು "ಆಸ್ಥಾನ ಮಹಾ ವಿದ್ವಾನ್" "ಕವಿತಿಲಕ" ಶ್ರೀ ಸೋಸಲೆ ಅಯ್ಯಾಶಾಸ್ತ್ರಿಗಳವರೇ ಮೊದಲಾದ ಅನೇಕಸುಪ್ರಸಿದ್ಧ ವಿದ್ವನ್ಮಣಿಗಳ ಮತ್ತು ವಿಶಿಷ್ಟ ಕರ್ಣಾಟಕದ ಶ್ರೇಷ್ಠ ಪತ್ರಿಕೆಗಳ ಅತ್ಯುತ್ತಮಾಭಿಪ್ರಾಯಗಳನ್ನು ಪಡೆದಿರುವ ಅದ್ವಿತೀಯವಾದ,

"ರಾಷ್ಟ್ರಗೀತಾರತ್ನಾಕರ."—"ಲೀಲೆ."

ಎಂಬ ಗ್ರಂಥರತ್ನಗಳನ್ನು ದೇಶಬಂಧುಗಳೇ—ಓದಿ ನೋಡಗೊಳ್ಳಿರಿ.

ಕೆ. ಎಮ್. ದಾಸಪ್ರಭು ಎಂಡ್ ಸನ್ಸ್ ಮಂಗಳೂರು. } ಅಥವಾ { ಶಾರದಾ ಛಾಪಖಾನೆ, ಮಂಗಳೂರು

JUST ARRIVED
Continental Belts.
OF VARIOUS SIZES
Price Re. 1—10—0 each
Mangalore Trading Association,
Car Street, MANGALORE

ದಕ್ಷಿಣ ಕನ್ನಡಾ ಒಫಿಶಿಯಲ್ ರಿಸೀವರ್ ಕೋರ್ಟಿನಲ್ಲಿ.

1925ನೇ ಇಸವಿಯ ದಿವಾಳಿ ಅರ್ಜಿ ನಂಬ್ರ 42.

1925ನೇ ಇಸವಿಯ ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ ಕೋರ್ಟ ದಿವಾಳಿ ಅರ್ಜಿ ನಂಬ್ರ 4.

ಬಿ. ಅನಂತ ಬಾಳಿಗ ಪುರುಷೋತ್ತಮ ಬಾಳಿಗರ ಮಗ ಪುತ್ತೂರು ಕಸಬಾ, } ಅರ್ಜಿದಾರ

ಎದ್ರಿರು

ಎಸ್. ಬ್ರಗಾಂಜಾ ಮತ್ತು 2 ಜನರು—ಕ್ರೆಡಿಟರ್ಸ್.

1920ನೇ ಇಸವಿಯ ನಂಬ್ರ 5ನೇ ಆಕ್ಟಿನ ಸೆಕ್ಷನ್ 19(2)ನೇ ಮೇರೆಗೆ ನೋಟೀಸು. ಮೇಲ್ಕಂಡ ಅರ್ಜಿದಾರನು ತನ್ನನ್ನು ದಿವಾಳಿಯೆಂತ ಸ್ಥಾಪಿಸಬೇಕಾಗಿ ಕೊಟ್ಟ ಅರ್ಜಿಯು ಇದೇ ಇಸವಿ ಜುಲಾಯಿ ತಾರೀಕು 18ಕ್ಕೆ ತನ್ಖಿಗೆ ಇಟ್ಟಿದೆ. ಎದ್ರಾಡಲಪೇಕ್ಷಿಸುವ ಕ್ರೆಡಿಟರರು ಖುದ್ದಾಗಲಿ ಅಥವಾ ವಕೀಲ್‌ದ್ವಾರವಾಗಲೀ ಸದರಿ ತಾರೀಕಿನ ಪೂರ್ವಾಹ್ನ 11 ಗಂಟೆಗೆ ಈ ಕೋರ್ಟ ಮುಂದೆ ಹಾಜರಾಗಿ ವ್ಯವಹರಿಸಬಹುದೆಂತ ಈ ಮೂಲಕ ಪ್ರಕಟಿಸೋಣಾಗಿಯದೆ.

ಒಫಿಶಿಯಲ್ ರಿಸೀವರ್ ಕೋರ್ಟ, ಮಂಗಳೂರು. ತಾ. 29—6—1925. } **B. M. Hegde,** ಒಫಿಶಿಯಲ್ ರಿಸೀವರ್.

ಶಾಸ್ತ್ರೀಯ
ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪ್ಯಾ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪ್ಯಾ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವೃಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

ಹೆಚ್ಚಿನ ಮಾಹಿತಿಗೆ "ಆರ್ಯಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರೆಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ದಕ್ಷಿಣ ಕನ್ನಡಾ ಒಫಿಶಿಯಲ್ ರಿಸೀವರ್ ಕೋರ್ಟಿನಲ್ಲಿ.

1925ನೇ ಇಸವಿಯ ದಿವಾಳಿ ಅರ್ಜಿ ನಂಬ್ರ 43.

1925ನೇ ಇಸವಿಯ ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟ ದಿವಾಳಿ ಅರ್ಜಿ ನಂಬ್ರ 5.

ಚರಡಪ್ಪ ಯಾನೆ ರಾಮಚಂದ್ರ ಭಟ್ಟ-ಕುಂಬಳೆ ವಿಟ್ಟಲಭಟ್ಟ ಮಗ-ಪುತ್ತೂರು ಕಸಬಾ. } ಅರ್ಜಿದಾರ

ಎದ್ರಿರು

ಪುತ್ತೂರು ವರ್ತಕರ ಸಹಕಾರ ಸಂಘದ ಪ್ರೆಸಿಡೆಂಟ್ ಕೂಡ 7 ಜನರು. } ಕ್ರೆಡಿಟರ್ಸ್

1920ನೇ ಇಸವಿಯ ನಂಬ್ರ 5ನೇ ಆಕ್ಟಿನ ಸೆಕ್ಷನ್ 19(2)ನೇ ಮೇರೆಗೆ ನೋಟೀಸು. ಮೇಲ್ಕಂಡ ಅರ್ಜಿದಾರನು ತನ್ನನ್ನು ದಿವಾಳಿಯೆಂತ ಸ್ಥಾಪಿಸಬೇಕಾಗಿ ಕೊಟ್ಟ ಅರ್ಜಿಯು ಇದೇ ಇಸವಿ ಜುಲಾಯಿ ತಾ. 18ಕ್ಕೆ ತನ್ಖಿಗೆ ಇಟ್ಟಿದೆ. ಎದ್ರಾಡಲಪೇಕ್ಷಿಸುವ ಕ್ರೆಡಿಟರರು ಖುದ್ದಾಗಿ ಅಥವಾ ವಕೀಲ್ ದ್ವಾರವಾಗಲೀ ಸದರಿ ತಾರೀಕಿನ ಪೂರ್ವಾಹ್ನ 11 ಘಂಟೆಗೆ ಈ ಕೋರ್ಟ ಮುಂದೆ ಹಾಜರಾಗಿ ವ್ಯವಹರಿಸಬಹುದೆಂತ ಈ ಮೂಲಕ ಪ್ರಕಟಿಸೋಣಾಗಿಯದೆ.

ಒಫಿಶಿಯಲ್ ರಿಸೀವರ್ ಕೋರ್ಟ, ಮಂಗಳೂರು ತಾ. 29-6-'25. } **B. M. Hegde.** ಒಫಿಶಿಯಲ್ ರಿಸೀವರ್.

ಪ್ರಪಂಚದೊಳಗೆಲ್ಲಾ ಹೆಚ್ಚು ಕಾಲ ಜೀವಿಸಿದ್ದ

— ಮನುಷ್ಯನು —

ದಕ್ಷಿಣ ಆಫ್ರಿಕದೊಳಗೆ ಪ್ರಚುರವಾಗುವ "ಡೈಮಂಡ್ ಫೀಲ್ಡ್ ಅಡ್ವರ್ಟೈಸರ್" ಎಂಬ ಪತ್ರಿಕೆಯಲ್ಲಿ ಈ ಕೆಳಗಿನ ಸಂಗತಿಯನ್ನು ಹೀಗೆಂದು ಬರೆದಿದೆ.

ಪ್ರಪಂಚದೊಳಗೆಲ್ಲಾ ಹೆಚ್ಚು ಕಾಲ ಜೀವಿಸಿದ್ದ ಈ ಮನುಷ್ಯನು ೧೩೦ ವರ್ಷಗಳ ಕಾಲ ಬದುಕಿದ್ದು, ಕೊನೆಗೆ ಅದೇ ವಯಸ್ಸಿನಲ್ಲಿ "ಕೆಂಬರ್ಲಿ" ಎಂಬ ಸ್ಥಳದಲ್ಲಿ ಸಮಾಧಿಯನ್ನು ಹೊಂದಿದನು. ಇವನು ಬುಷ್‌ಮಾನ್ ಎಂದು ಕರೆಯಲ್ಪಡುವ ಬಹು ಪುರಾತನ ಕಾಲದಿಂದ ಪ್ರಸಿದ್ಧವಾದ ಒಂದು ಸಂಗಡಕ್ಕೆ ಸೇರಿದವನು. ಪ್ರಾಯಶಃ ಈ ಸಂಗಡದವರೆಲ್ಲಾ ಬಹು ಕಾಲ ಬದುಕತಕ್ಕವರೆಂದು ಪ್ರಸಿದ್ಧಿಯುಂಟು. ಇವನಿಗೆ ಜಾಂಟ್‌ಜೀ ಎಂದು ಹೆಸರು. ಸಾಯುವಾಗ ಇವನ ಶರೀರದ ಉದ್ದಳತೆ ನಾಲ್ಕುವರೆ ಅಡಿಗಳಿರಬಹುದು. ವಾಯು ಸಂಬಂಧವಾದ ವ್ಯಾಧಿಯಿಂದ ಅವನಿಗೆ ಕಾಲುಗಳನ್ನು ನೀಡಿ ನೆಟ್ಟಗೆ ನಿಲ್ಲುವುದು ಸಾಧ್ಯವಿಲ್ಲದ್ದರಿಂದ ಅವನ ಶರೀರದ ಸುಮಾರು ಎತ್ತರವನ್ನು ಊಹೆಯಿಂದಲೇ ನಿಶ್ಚಯಿಸಬೇಕಾಯಿತು. ಅವನಿಗೆ ಅಂತ್ಯಕಾಲದ ವರೆಗೆ ಕೂಡ ದೃಷ್ಟಿಪಾಟವವು ಬಹಳ ಚೆನ್ನಾಗಿತ್ತು. ಆದರೆ ಅವನ ಕಣ್ಣುಗಳು ಅರ್ಧ ನಿಮೀಲಿತವಾದಂತೆ (ಮುಚ್ಚಿದಂತೆ) ಇದ್ದುವು. ಅವನ ಮುಖದ ಚರ್ಮವು ಒಣಗಿದ ಚರ್ಮದ ತುಂಡಿನಂತೆ ಸುಕ್ಕುಬಿದ್ದಿತ್ತು.

ಅವನ ಬೆರಳುಗಳು ಮಾತ್ರ ಉದ್ದವಾಗಿ ಕಡ್ಡಿ ಕಡ್ಡಿಯಾಗಿದ್ದುವು. ಅವನ ದೇಹದ ಇತರ ಭಾಗಗಳೆಲ್ಲಾ ತಕ್ಕ ಮಟ್ಟಿಗೆ ಮಾಂಸಪೂರ್ಣವಾಗಿಯೇ ಇದ್ದುವು. ಅವನು ಒಳ್ಳೇ ಆಹಾರವನ್ನು ತಿನ್ನುತ್ತ ತೃಪ್ತಿಯಾಗಿಯೂ ಇದ್ದನು. ಅವನ ಜ್ಞಾಪಕಶಕ್ತಿಯು ಅಸಾಧ್ಯವಾಗಿತ್ತು. ಬಹು ಪುರಾತನಕಾಲದ ತನ್ನ ಜೀವನ ಚರಿತ್ರವನ್ನೆಲ್ಲಾ ತನ್ನನ್ನು ನೋಡ ಬಂದವರೊಡನೆ, ಒಂದು ಪುರಾಣ ಕಥೆಯಾಗಿ ಹೇಳುತ್ತಿರುವನು. ಭೂಮಿಯಲಿ ಈತನೇ ಹೆಚ್ಚು ಕಾಲ ಜೀವಿಸಿದ್ದವನೆಂದು ನಂಬಬೇಕಾಗಿದೆ.

ಆದರೆ ಕೆಲವು ಕಾಲದ ಹಿಂದೆ ಕೆಂಟುಕೀ ಎಂಬ ಊರಿನಲ್ಲಿದ್ದ ಜಾನ್‌ಸೆಲ್ ಎಂಬವನು ೧೬೦ ವರ್ಷಗಳ ಕಾಲ ಜೀವಿಸಿದ್ದನೆಂದು ಕೇಳಿದ್ದರ ಮೇಲೆ ಅವನ ಪೂರ್ವೋತ್ತರಗಳನ್ನು ವಿಚಾರಿಸಿ ನಿಜ ಸ್ಥಿತಿಯನು ಕಂಡುಕೊಳ್ಳುವುದಕ್ಕಾಗಿ ಡಾಕ್ಟರ್ ಪಾಸ್ಕರ್ ಎಂಬ ನ್ಯೂಯೋರ್ಕ ಡಾಕ್ಟರೊಬ್ಬರು ಹೋಗಿ ವಿಚಾರಿಸುವಲ್ಲಿ, ಅವನಿಗೆ ೧೦೦ ವರ್ಷಗಳಿಗಿಂತ ಹೆಚ್ಚಾಗಿರಲಿಲ್ಲವೆಂದೂ, ಆದರೆ ಕಾಣಾಗಿಯೆ ಅವನು ತನಗೆ ೧೬೦ ವಯಸ್ಸೆಂದು ಹೇಳಿಕೊಳ್ಳುತ್ತಿದ್ದರ ಮೇಲೆ ಕೆಲವು ಠಕ್ಕರುಗಳು ಅದನ್ನು ನಂಬಿ, ಅವನನ್ನು ಅಲ್ಲಲ್ಲಿನ ಗ್ರಾಮಗಳ ಸಂತೆಗಳಿಗೆ ನೋಟಕ್ಕಾಗಿ ಕಳುಹಿಸುತಿದ್ದರೆಂದೂ ತಿಳಿದುಬಂದಿತು. (ಆರೋಗ್ಯಚಂದ್ರಿಕೆ.)

ಬಕ್ರೀದಿನಲ್ಲಿ ಕಲಕತ್ತೆಯಲ್ಲಿ ನಡೆದ ಅತ್ಯಾಚಾರ.

ಕಲಕತ್ತೆಯಿಂದ ೫ ಮೈಲು ದೂರದಲ್ಲಿರುವ 'ಗಾರ್ಡನ ರೀಚ್'ನ ಬಳಿ ಮೋತಿಯಾ ಬ್ರುಝು ಎಂಬ ಕಡೆಯಲ್ಲಿ ಗಲಾಟೆಯು ಸಂಭವಿಸಿತು. ಅಲ್ಲಿ ಗಲ್ಲಾಟೆಯ ಸಂಭವದ ಸುದ್ದಿಯು ಬಂದೊಡನೆ ಶ್ರೀ. ಸೇನಗುಪ್ತ ಮುಂತಾದವರು ಅಲ್ಲಿಗೆ ಹೋದರು. ಆಗ ಅಲ್ಲಿ ಶಾಂತತೆ ಇತ್ತು. ಆದರೆ ಅನಂತರ ಹಿಂದುಗಳೂ ಮಹಮ್ಮದೀಯರೂ ಕೈಯಲ್ಲಿ ಲಾಠಿಗಳನ್ನು ಹಿಡಕೊಂಡು ಗುಂಪು ಗುಂಪಾಗಿ ಬಂದರು. ಕೊಂಚ ದೊಂಬಿಯು ನಡೆಯುವಷ್ಟರಲ್ಲಿ ಸೇನಗುಪ್ತರು ಹಿಂದುಗಳನ್ನು ತಡೆದರು. ಅವರು ಕೂಡಲೆ ಪೋಲಿಸರ ಸಹಾಯ ಕೇಳಿದರು. ಮತ್ತು ಮೌಲಾನಾ ಅಝಾದರಿಗೂ, ಮಹಾತ್ಮಾ ಗಾಂಧಿಗಳಿಗೂ ಟೆಲಿಫೋನಿನಿಂದ ಈ ಗಲಾಟೆಯ ಸಂಭವದ ಸುದ್ದಿಯನ್ನು ತಿಳಿಸಿದರು. ಸೇನಗುಪ್ತರು ಮತ್ತು ಅವರ ಸಹಕಾರಿಗಳು ಮಹಮ್ಮದೀಯರ ಕೇರಿಗಳಿಗೆ ಹೋಗಿ ಅವರನ್ನು ಸಮಜಾಯಿಸಲು ಯತ್ನಿಸಿದರು. ಆದರೆ ಅವರು ಕೇಳದೆ ಹಿಂದುಗಳ ಮೇಲೆ ನುಗ್ಗಿಬಂದರು. ಸಂಖ್ಯೆಯಿಂದ ಮಹಮ್ಮದೀಯರು ೩೦೦ ಮತ್ತು ಹಿಂದುಗಳು ೬೦೦ ಇದ್ದರು. ಬಹು ಪ್ರಯತ್ನದಿಂದ ಎರಡೂ ಪಕ್ಷದವರನ್ನು ಸಮಾಧಾನಪಡಿಸಲಾಯಿತು.

ಕೆಲವು ತಾಸಿನ ನಂತರ ಮ. ಗಾಂಧಿಗಳೂ, ಮೌ. ಅಝಾದರೂ ಅಲ್ಲಿಗೆ ಬಂದರು. ಅಝಾದರು ೧೦ ನಿಮಿಷ ಭಾಷಣಮಾಡಿ ಗುಂಪು ಚದರಲು ಉಪದೇಶಿಸಿದರು. ಈ ಗಲಾಟೆಯ ನಿಜಕಾರಣವನ್ನು ಹುಡುಕಿ ಅದನ್ನು ಪರಿಹರಿಸಲಾದೀತೆಂದು ಅವರು ಆಶ್ವಾಸನವನ್ನಿತ್ತರು. ಇತ್ತ ಗಾಂಧಿಗಳು ಹಿಂದು ಜನರನ್ನು ಉಪದೇಶಿಸುವಾಗ ಅಝಾದರು ಕೂಡ ಹಾಜರಿದ್ದರು. ಮ. ಗಾಂಧಿಗಳು ಲಾಠಿಗಳನ್ನು ಬಿಟ್ಟು ಮನಸ್ಸನ್ನು ಶುದ್ಧಪಡಿಸಿಕೊಳ್ಳಲು ಹಿಂದುಗಳಿಗೆ ಉಪದೇಶಿಸಿದರು. "ಹಿಂದು ಜನರ ಕಣ್ಣಿಗೆ ಬೀಳುವಂತೆ ಗೋವಧೆಯು ನಡೆದಿಲ್ಲ, ಹೀಗಿರಲು ಹಿಂದುಗಳು ಮಹಮ್ಮದೀಯರ ಮೇಲೆ ಕೈ ಎತ್ತಿದ್ದು ಅನ್ಯಾಯ. 'ಒಂದು ವೇಳೆ ಮಹಮ್ಮದೀಯರು ಗೋವಧೆಯನ್ನು ಮಾಡಿದಾಗ್ಯೂ, ಮನುಷ್ಯರನ್ನು ಕೊಲ್ಲುವ ಹಕ್ಕು ಹಿಂದಿಗಳಿಗಿಲ್ಲ. ಗೋವಧೆಗಿಂತ ಮನುಷ್ಯವಧೆಯು ದೊಡ್ಡ ಅಪರಾಧವಾಗಿದೆ. ಒಂದು ತಪ್ಪನ್ನು ತಿದ್ದಲು ಇನ್ನೂ ದೊಡ್ಡದಾದ ಅಪರಾಧವನ್ನು ಮಾಡುವುದಕ್ಕೆ ಹಿಂದುಧರ್ಮವು ಹೇಳುವದಾದರೆ ಅಂಥ ಹಿಂದುಧರ್ಮವು ನನಗೆ ಅಗತ್ಯವಿಲ್ಲ" ಎಂಬುದಾಗಿ ಗಾಂಧಿಜಿಗಳು ಉಪದೇಶಿಸಿ, ಯಾವಾತನು ಈ ಅಪರಾಧವನ್ನು ಮಾಡಿರುವನೊ ಅವನು ಮುಂದಕ್ಕೆ ಬಂದು ತನ್ನ ಅಪರಾಧವನ್ನು ಒಪ್ಪಿಕೊಳ್ಳಬೇಕು, ಮಹಮ್ಮದೀಯ ಬಂಧುಗಳ ಕ್ಷಮೆಯನ್ನು ಕೇಳಬೇಕು ಎಂಬುದಾಗಿ ಹೇಳುತ್ತಲೆ ಆ ಗುಂಪಿನಿಂದ ಒಬ್ಬನು ಎದ್ದು 'ಮಹಮ್ಮದೀಯರು ಹಿಂದುಜನಗಳ ಕಣ್ಣಿಗೆ ಬೀಳುವಂತೆ ದನದ ಚರ್ಮವನ್ನು ಎಳ್ಳಿಸಿದರೆಂದು ಹೇಳಿದನು. ಗಾಂಧಿಗಳು ಮತ್ತು ಇತರರು ಅಲ್ಲಿಗೆ ಹೋಗಿ ನೋಡಲು ಅಂಥ ಯಾವ ಚಿಹ್ನೆಯೂ ಇರಲಿಲ್ಲ. ಗಾಂಧಿಜಿಗಳು ಹಿಂದುಗಳಿಗೆ ಚದರಿ ಹೋಗಲು ಹೇಳಿದಾಗ್ಯೂ ಅದು ನಿಷ್ಫಲವಾಯಿತು. ಸೇನಗುಪ್ತ ಮುಂತಾದವರು ಅಲ್ಲಿಂದ ಹಿಂತೆರಳದೆ ಬಳಿಕ ತುಮುಲವಾದ ದಂಗೆಯಾಗಿ ೩೨ ಜನ ಮಹಮ್ಮದೀಯರಿಗೆ ಗಾಯವಾಗಿದೆ. ಮತ್ತು ಒಬ್ಬನು ಮೃತಪಟ್ಟಿರುವನು.

ತಾ. ೩ನೆಯ ದಿವಸವೂ ಪುನಃ ಗಲಾಟೆಯು ಪ್ರಾರಂಭವಾಯಿತು. ಒಬ್ಬ ಪೇಶಾವರದವನು ಮೋಟರುಗಾಡಿಯನ್ನು ಗುದ್ದುಹಾಕಿದನು. ಇದರಿಂದ ಕೂಡಲೆ ಮತದ್ವೇಷದ ಅಗ್ನಿಯು ಉರಿಯಹತ್ತಿತು. ೪೦೦೦ ಜನರು ಅಲ್ಲಿಗೆ ನೆರೆದರು. ಕೆಲವು ತುಂಟರು ಇದೆ ಸಂದರ್ಭದಲ್ಲಿ ಊರಲೆಲ್ಲಾ ಭೀತಿಜನಕವಾದ ವಾರ್ತೆಗಳನ್ನು ಹಬ್ಬಿಸಿದರು. ಚಾರಾಬಝಾರ ಮತ್ತು ಕೆನಿಂಗ ಸ್ಟ್ರೀಟಿನಲ್ಲಿ ಹೆದರಿಕೆಯಿಂದ ಅಂಗಡಿಗಳು ಮುಚ್ಚಲ್ಪಟ್ಟವು. ಪೋಲಿಸರು ಅವರನ್ನು ಅಂಗಡಿಗಳನ್ನು ತೆರೆಯಲು ಸಮಜಾಯಿಸಿದರು. ಪೋಲಿಸರು ಅಲ್ಲಲ್ಲಿ ಜಾಗ್ರತೆಯಿಂದ ಇದ್ದು ಕಾಯುತ್ತಿದ್ದಾರೆ. ಒನರರಿ ಮೆಜಿಸ್ಟ್ರೇಟರು ಸಹ ಬಂದಿರುವರು.

ಕಡೆಗೆ ಬಂದ ಸುದ್ದಿಯ ಪ್ರಕಾರ, ಮುಂಚಿನ ದಿವಸ ನಡೆದ ದಂಗೆಯಲ್ಲಿ ಗಾಯಪಟ್ಟವರ ಸಂಖ್ಯೆಯು ೨೧ ಎಂಬುದಾಗಿ ತಿಳಿದುಬರುತ್ತದೆ.

ಶ್ರೀ. ಸೇನಗುಪ್ತರು ಪ್ರತಿ ಒಂದು ಕಡೆಯಲ್ಲಿ ಜಾಗ್ರತೆಯನ್ನು ತಕ್ಕೊಳ್ಳುತ್ತಿದ್ದಾರೆ. ಬಂಗಾಲದ ಇತರ ಭಾಗಗಳಲ್ಲಿ ಮತದ್ವೇಷವಿಲ್ಲದೆ ಬಕ್ರೀದಿನ ಉತ್ಸವವು ನಡೆಯಿತು.

ವಿದೇಶ ವರ್ತಮಾನ.

—ಲಂಡನಿನಿಂದ ಹಿಂದುಸ್ಥಾನಕ್ಕೆ ವಾಯುವಿಮಾನದ ಮುಖಾಂತರ ಟಪಾಲನ್ನು ತರಲು ಪ್ರಸ್ತಾಪನೆಗಳು ಪಾರ್ಲಿಮೆಂಟಿನ ಕೊಮನ್ಸಿನಲ್ಲಿ ನಡೆಯುತ್ತಿವೆ. ಇದಕ್ಕೆ ಬೇಕಾದ ಯೋಜನೆಯನ್ನು ಪಾರ್ಲಿಮೆಂಟು ಕೇಳಿದೆ.

—ಲೊರ್ಡ ಮತ್ತು ಲೇಡಿ ಬರ್ಕನ್‌ಹೆಡ್ಡರು ಲೋರ್ಡ ರೆಡಿಂಗರಿಗೂ ಅವರ ಪತ್ನಿಗೂ ಬಹುಮಾನ ಕೊಡಲು ಲಂಡನಿನಲ್ಲಿಯ ಇಂಡಿಯಾ ಒಫೀಸಿನಲ್ಲಿ ಒಂದು ಸಮಾರಂಭವನ್ನು ಮಾಡಿದರು, ದೊಡ್ಡ ದೊಡ್ಡವರೆಲ್ಲರೂ ಬಂದಿದ್ದರು. ಇಂಥ ಸಮಾರಂಭವು ಅಲ್ಲಿ ಸದ್ಯಕ್ಕೆ ಆಗಿರಲಿಲ್ಲವೆಂದು ಬಾತಮಿದಾರರು ಬರೆಯುತ್ತಾರೆ.

—ಒಬ್ಬ ಪಾರ್ಸಿ ಗೃಹಸ್ಥನು ಸೈಕಲಿನಿಂದಲೆ ಲೋಕವನ್ನು ತಿರುಗಾಡಲು ಹೊರಟವನು ಹೆಮ್ಮರಫೀಲ್ಡ ಎಂಬಲ್ಲಿಗೆ ಬಂದು ತಲಪಿರುವನು. ಅಲ್ಲಿಯವರು ಅವನನ್ನು ಹೃತ್ಪೂರ್ವಕವಾಗಿ ಸ್ವಾಗತೀಕರಿಸಿದರು.

—ಮೊಸ್ಕೊ ಎಂಬಲ್ಲಿ ಮೂರು ಜನ ಜರ್ಮನ್ ವಿದ್ಯಾರ್ಥಿಗಳನ್ನು ಅವರು ಟ್ರೊಟ್ಸ್ಕಿ ಮತ್ತು ಸ್ಟಾಲಿನ್ ಎಂಬವರನ್ನು ಕೊಲ್ಲಲು ಪ್ರಯತ್ನಿಸಿದ ಆರೋಪಣೆಯಿಂದ ದೇಹಾಂತ ಶಿಕ್ಷೆಗೆ ಗುರಿಮಾಡಲ್ಪಟ್ಟರು.

—ಚೀನಾದೇಶದ ಶಾಂಘಾಯಿಯಲ್ಲಿ ಮುಷ್ಕರವು ಮುಂಚಿನಂತೆಯೆ ಸ್ಥಿರವಾಗಿದೆಯಾದರೂ ವಿಶೇಷವಾದ ಗಲಾಟೆ ಏನೂ ಇಲ್ಲ. ಮಿಂಗ್‌ಪೊ ಎಂಬಲ್ಲಿ ಲಷ್ಕರ ಕಾಯಿದೆ ಜಾರಿಯಲ್ಲಿ ತರಲ್ಪಟ್ಟಿದೆ.

—ಚೀನಾದಲ್ಲಿ ೧೬ ಜನಸಭಾಸದರ ಕಮಿಟಿಯನ್ನು ನೇಮಿಸಿ ರಾಷ್ಟ್ರೀಯ ಸರಕಾರದ ಸಂಸ್ಥೆಯು ಏರ್ಪಡಿಸಲ್ಪಟ್ಟಿದೆ. ಈ ಸಭಾಸದರ ಮಂಡಲದಲ್ಲಿ ಡೊ. ಸನ್ಯಾತ್‌ಸೇನರ ಮಗನೊಬ್ಬನಿರುವನು. ಈ ಮಂಡಲದವರು ದೇಶಭಕ್ತರಾದ ಸನ್ಯಾತ್ಸೇನರ ತತ್ವಕನುಸಾರವಾಗಿಯೆ ರಾಷ್ಟ್ರೀಯ ಸರಕಾರದ ಕಾರಭಾರವನ್ನು ನಡಿಸಲು ನಿಶ್ಚಯಿಸಿರುವರು.

—ಶಾಂಘಾಯಿಯಲ್ಲಿ ವಾಸಿಸಿರುವ ಸಾವಿರಾರು ಬ್ರಿಟಿಷರು ವಿಲಾಯತಿಯ ಮಜೂರ ಪಕ್ಷಕ್ಕೆ ಚೀನಾದೊಳಗಿನ ಗಲಾಟೆಯು ಮಜೂರರದಲ್ಲ, ಬೋಲ್‌ಶೆವಿಕರ ಪ್ರೇರಣೆಯಿಂ ಇದು ಉಂಟಾಗಿದೆ ಎಂದು ತಂತಿ ಮೂಲಕವಾಗಿ ತಿಳಿಸಿರುವರು.

—ಚೀನಾದೊಳಗಿನ ಹತ್ತಿಯ ಚಲಾವಣೆಯು ಈ ಗಲಾಟೆಯ ದೆಸೆಯಿಂದ ನಿಂತು ಹೋಗಿದೆ.

—ಕೆಲಿಫೋರ್ನಿಯಾದಲ್ಲಿ ಭೂಕಂಪದ ಭಯಂಕರವಾದ ಆಘಾತವು ತಟ್ಟಿತು. ಸಮುದ್ರದ ತೀರದಲ್ಲಿ ಈ ಆಘಾತವು ವಿಶೇಷವಾಗಿ ಸಂಭವಿಸಿದ ಕಾರಣ ಅಲ್ಲಿರುವ ಅನೇಕ ಕಟ್ಟೋಣಗಳೂ, ಹೊಟೆಲುಗಳೂ ಬಿದ್ದುಹೋದವು. ಸಮುದ್ರದ ನೀರು ಉಕ್ಕಿ ಬಂದು ಬೀದಿಗಳೆಲ್ಲ ತುಂಬಿಹೋದವು. ಧರಣೀಕಂಪದ ಕಿರಿದಾದ ಜ್ವಾಲೆಗಳೊಡನೆ ಭಯಂಕರವಾದ ತೆರೆಗಳು ಒಳನುಗ್ಗಿದವು ತಂತಿಗಳು ಕಡೆದುಹೋಗಿವೆ. ೬೫ ಜನರು ನಾಶಹೊಂದಿದರೆಂದು ಮೊದಲಿಗೆ ವಾರ್ತೆಬಂದಿತ್ತಾದರೂ ೧೨ ಜನರು ಸತ್ತಿದ್ದಾರೆಂದು ಕೊನೆಗೆ ನಿಶ್ಚಯವಾದ ವರ್ತಮಾನವು ಬಂದಿದೆ. ಈ ಭಯಂಕರವಾದ ಭೂಕಂಪದ ಎಷ್ಟೊ ಕಟ್ಟೋಣಗಳೂ, ದೇವಾಲಯಗಳೂ (ಚರ್ಚಗಳೂ), ಶಾಲೆಗಳೂ ವ್ಯಾಪಾರದ ಬಂಡಸಾಲೆಗಳೂ ಅಳಿದುಹೋಗಿವೆ. ಸಾಮಾನ್ಯವಾಗಿ ೨,೦೦೦ ಜನರು ಮನೆಮಾರುಗಳಿಲ್ಲದೆ ನಿರಾಶ್ರಿತರಾಗಿ ಅಲೆದಾಡುತ್ತಿರುವರು.

ಕೆಲಿಫೋರ್ನಿಯಾದಲ್ಲಿ ಈ ಭೂಕಂಪವು ಸಂಭವಿಸಿದಾಗ ಒಂದು ಹೊಟೆಲಿನ ಹೊರಗಿನ ಗೋಡೆಯು ಮುಲ್ಲಿಗೆ ಬಿದ್ದು ಕಟ್ಟೋಣವು ಕೆಳಗೆ ಇಳಿಯಿತು; ಆದರೆ ಒಳಗೆ ಮಲಗಿರುವ ಜನರ ಮೈಮೇಲೆ ಅದು ಬೀಳಲಿಲ್ಲ. ಈ ವಿಚಿತ್ರ ಸಂಗತಿಯು ಎಲ್ಲರಿಗೆ ಆಶ್ಚರ್ಯಕರವಾಗಿದೆ.

ಈ ಭೂಕಂಪದಿಂದ ಜೈಲ ಗೋಡೆಗಳು ಬಿದ್ದುಹೋಗಿ ಕೈದಿಗಳು ಹೊರಟುಹೋಗಿರುವರು.

ಒಳದೇಶ ವರ್ತಮಾನ.

—'ದೇಶಭಕ್ತರಾದ ದಾಸ ಮೃತ್ಯುವನ್ನು ಕುರಿತು ಮುಂಬಯಿ ಕಾಯಿದೆ ಕೌನ್ಸಿಲು ಅತಿ ದುಃಖಿಸುತ್ತದೆ' ಎಂಬ ಠರಾವನ್ನು ಪಾಸುಮಾಡಿ ದಾಸರ ಕುಟುಂಬಕ್ಕೆ ಅದನ್ನು ಕಳುಹಿಸಬೇಕೆಂದು ಇಬ್ಬರು ಸಭಾಸದರು ಮುಂಬಯಿ ಕೌನ್ಸಿಲಿನ ಅಧ್ಯಕ್ಷರಿಗೆ ಸೂಚನೆಯನ್ನು ಕಳುಹಿಸಿದ್ದಾರೆ.

—ಗ್ವಾಲೇರಿನ ಮೃತಮಹಾರಾಜರ ಕಳೇಬರವು ಪೆರಿಸ್ ಪಟ್ಟಣದಿಂದ ಮುಂಬಯಿಗೆ ತರಲ್ಪಟ್ಟಿತು. ಹಡಗು ಬಂದರಕ್ಕೆ ಬಂದ ಕೂಡಲೇ ಬಹುಮಾನಾರ್ಥವಾಗಿ ೨೧ ಗುಂಡುಗಳು ಮುಂಬಯಿ ಸರಕಾರದಪರವಾಗಿಯೂ, ಹಿಂದುಸ್ಥಾನ ಸರಕಾರದಪರವಾಗಿಯ ಹಾರಿಸಲ್ಪಟ್ಟವು. ಮುಂಬಯಿಯ ಗವರ್ನರರೂ, ಇತರ ೩-೪ ಸಂಸ್ಥಾನಿಕರೂ ಹಾಜರಿದ್ದರು. ಮಹಾರಾಜರ ಕಳೇಬರವು ಮೆರವಣಿಗೆಯಿಂದ ರೈಲ್ವೇಸ್ಟೇಶನಿಗೆ ಒಯ್ಯಲ್ಪಟ್ಟಿತು ಅಲ್ಲಿಂದ ಸ್ಪೆಶಲ್ ಟ್ರೈನ ಮುಖಾಂತರ ಗ್ವಾಲೇರಿಗೆ ಕೊಂಡುಹೋಗಲ್ಪಟ್ಟಿತು.

—ಕೊಂಗ್ರೆಸಿನ ವರ್ಕಿಂಗ ಕಮಿಟಿಯು ಈ ತಿಂಗಳ ತಾ॥ ೧೬ಕ್ಕೆ ಕಲಕತ್ತೆಯಲ್ಲಿ ಸೇರುವದು.

—ಶ್ರೀ ಸುಭಾಷಚಂದ್ರ ಬೋಸರಿಗೆ ಅವರ ಬಿಡುಗಡೆ ಆಗುವ ವರೆಗೆ ಕಲಕತ್ತಾ ಮುನ್ಸಿಪಾಲಿಟಿಯು ರಜೆ ಕೊಟ್ಟಿದೆ.

—ಬೆಳಗಾವಿನಲ್ಲಿ ಸರಕಾರಿ ತಿಜೊರಿಯಲ್ಲಿ ಕಳವುಂಟಾದ ಸುದ್ದಿಯು ಹಬ್ಬಿದೆ. ಮತ್ತು ಪೋಲಿಸರ ತನಿಖೆ ಪ್ರಾರಂಭವಾಗಿದೆ.

—ಕಳೆದ ತಾ॥ ೧ರಲ್ಲಿ ದೇ. ದಾಸರ ಶ್ರಾದ್ಧದಿನ ಸಂಬಂಧವಾಗಿ ಎಲ್ಲ ಕಡೆಗಳಲ್ಲಿ ಪ್ರಾರ್ಥನೆಗಳು ನಡೆದವು.

—ಕಳೆದ ವರ್ಷ ಕಾವೇರಿ ನದಿಯು ಬಂದು ಅನೇಕ ಕಡೆಗಳಲ್ಲಿ ಅಪರಿಮಿತ ನಷ್ಟವುಂಟಾಗಿತ್ತಷ್ಟೆ. ವರ್ಷ ಪ್ರವಾಹದ ನೀರು ತುಂಬಾ ಏರಿಕೊಂಡು ಬಂದದ್ದರಿಂದ ಕಳೆದಬಾರದ ಅನುಭವದಿಂದ, ಅಂಥ ಸಂಕಷ್ಟಗಳುಂಟಾಗದಂತೆ ನದಿಯ [illegible] ಅಧಿಕಾರಿಗಳು ಜಾಗ್ರತೆತಕ್ಕೊಳ್ಳುತ್ತಿದ್ದಾರೆ.

—ಡೊ. ಬೆಸೆಂಟರು ಕೊಮನ್ವೆಲ್ಥಿನ ಸಂಬಂಧ ಮದ್ರಾಸಿನಿಂದ ವಿಲಾಯತಿಗೆ ಪ್ರಯಾಣಬೆಳಸಿರುವರು. ಮುಂಬಯಿಯಲ್ಲಿ ಶ್ರೀ. ಸರೋಜಿನೀ ದೇವಿಯವರ ಅಧ್ಯಕ್ಷತೆಯಲ್ಲಿ ಸಭೆಯು ಎಲ್ಲ ಪಕ್ಷದ ಮುಖಂಡರು ಡೊ. ಬೆಸೆಂಟರನ್ನು ಅವರ ಕಾರ್ಯದಲ್ಲಿ ಜಯಶೀಲರಾಗಲೆಂದು ಅಪೇಕ್ಷಿಸಿರುವರು.

—[illegible] ಸ್ಟೇಶನಲ್ಲಿ ಮುಷ್ಕರದವರಿಗೆ ಸಹಾಯಕ್ಕಾಗಿ ವಿಲಾಯತಿಯಿಂದ [illegible] ಬಳಿಗೆ ಕಳುಹಿಸಿ ಕೊಡೋಣಾಗಿದೆ.

—ಮುಂಬಯಿಯ ಸುಪ್ರಸಿದ್ಧ ಸ್ವರಾಜಿಸ್ಟರಾದ ವಿ. ಜೆ. ಪಟೇಲರೂ, ಶ್ರೀ ಜಮುನಾದಾಸ ಮೇಹ್ತರೂ ಅಹಮದಾಬಾದಿನಲ್ಲಿ ರಾಷ್ಟ್ರೀಯ ಸಭೆಯನ್ನು ಕುರಿತು ಭಾಷಣಮಾಡಿ ನೂಲಿನ ಮತದಾನವನ್ನು ತೆಗೆದುಹಾಕಬೇಕೆಂದು ಹೇಳಿದರು.

—ಕಲಕತ್ತೆಯ ಚೀಫ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು ಪ್ರಿಯನಾಥ ಗಂಗೊಲಿ ಮತ್ತು ಅಶ್ವಿನಿಕುಮಾರಗುಪ್ತ ಇವರನ್ನು ರಾಜದ್ರೋಹದ ಆರೋಪಣೆಯಿಂದ ಶಿಕ್ಷೆ ವಿಧಿಸಿದ್ದರು. ಹೈಕೋರ್ಟಿನಲ್ಲಿ ಇವರಿಬ್ಬರನ್ನು ಈಗ ಜಾಮೀನಿನ ಮೇಲೆ ಬಿಡೋಣಾಗಿದೆ.

—ಮುಂಬಯಿಯಲ್ಲಿ ಫರ್ಗ್ಯುಸನ್ ರೋಡಿನಲ್ಲಿರುವ ಹತ್ತಿ ಗಿರಣಿಯೊಂದರಲ್ಲಿ ಕೆಲವು ಕಾಮಗಾರರು ಮುಷ್ಕರವನ್ನು ಹಾಕಿರುವರು.

—ಸೊಲ್ಲಾಪುರದಲ್ಲಿರುವ ಶ್ರೀ ರೇವಣಸಿದ್ಧೇಶ್ವರ ದೇವಾಲಯದ ಕೆರೆಯ ನೀರನ್ನು ರೈಲ್ವೆ ಕಂಪೆನಿಯವರು ಯಾವ ಹಕ್ಕಿಲ್ಲದೆ ಒಯ್ಯುತ್ತಿದ್ದಾರೆ. ಆದುದರಿಂದ ರೈಲ್ವೆಯವರ ಈ ಕೃತ್ಯದ ನಿಷೇಧಮಾಡಲು ಮತ್ತು ಈಗ ಅವರು ನೀರು ಒಯ್ಯುತ್ತಿರುವದನ್ನು ಪ್ರತಿಬಂಧಿಸಲು ಯೋಗ್ಯ ಉಪಾಯಗಳನ್ನು ಮಾಡುವದಕ್ಕಾಗಿ ಲಿಂಗಾಯತರ ಒಂದು ಸಭೆಯು ಕಳೆದ ತಿಂಗಳಲ್ಲಿ ಸೊಲ್ಲಾಪುರದಲ್ಲಿ ಕೂಡಿತ್ತು. ಬ್ಯಾರಿಸ್ಟರ ಸರದಾರ ಇವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು.

—ಯಾವ ಭಾಗದಲ್ಲಿ ಒಂದು ರೈಲ್ವೆಯು ಹೋಗಿದೆಯೋ, ಆ ಭಾಗದೊಳಗಿನ ದೇಶಿ ಭಾಷೆಗಳಲ್ಲಿ ಆ ರೈಲ್ವೆ ಕಂಪೆನಿಯ ಗಾಯಿಡ್ ಮುದ್ರಿಸಲ್ಪಡಬೇಕು. ಇಲ್ಲವೆ ರೈಲ್ವೆಗಾಯಿಡ್‌ದೊಳಗಿನ ಮಹತ್ವದ ನಿಯಮಗಳನ್ನಾದರೂ ದೇಶಿಭಾಷೆಗಳಲ್ಲಿ ಮುದ್ರಿಸಿ, ಅಲ್ಪ ಬೆಲೆಗೆ ಮಾರಬೇಕು ಎಂದು ಬೆಳಗಾಂವಿಯ ರೈಲ್ವೆ ಮಂಡಳದವರು ಬೇರೆ ಬೇರೆ ರೈಲ್ವೆ ಕಂಪೆನಿಗಳ ಕಡೆಗೆ ಸೂಚನೆ ಮಾಡಿರುವರು.

—ಕಲಕತ್ತೆಯಲ್ಲಿರುವ ಮೆಸರ್ಸ ವಾಲ್‌ಕರ್ಟ್ ಬ್ರದರ್ಸ ಕಂಪೆನಿಯವರು ತಮ್ಮ ಹೈಡ್ರೋಲಿಕ್ ಪ್ರೆಸ್ಸಿನಲ್ಲಿ ಕಾಯಿದೆಯಲ್ಲಿ ಹೇಳಲ್ಪಟ್ಟ ವಯಸ್ಸಿಗಿಂತ ಕಡಿಮೆ ವಯಸ್ಸಿನ ಹುಡುಗರನ್ನು ವಯಸ್ಸಿನ ಅಥವಾ ಶಾರೀರಿಕ ಯೋಗ್ಯತೆಯ ಸರ್ಟಿಫಿಕೇಟ್ ಇಲ್ಲದೆ ಕೆಲಸದ ಮೇಲೆ ತೆಗೆದುಕೊಂಡದ್ದಕ್ಕಾಗಿ ಫ್ಯಾಕ್ಟರಿ ಆಕ್ಟಿನ ೬೧ನೇ ಕಲಮಿನ ಪ್ರಕಾರ ಮ್ಯಾನೇಜರನ ಮೇಲೆ ಖಟ್ಲೆಯಾಗಿ, ೧೫೦ ರೂ. ದಂಡವು ವಿಧಿಸಲ್ಪಟ್ಟಿತು.

—ಕರಾಚಿಯಲ್ಲಿರುವ ಲಂಡನ್ ವಾಚ್ ಕಂಪನಿಯ ಅಂಗಡಿಯಲ್ಲಿ ಬರ್ಕ ಮತ್ತು ಸ್ಮಿತ ಎಂಬ ಇಬ್ಬರು ಸೋಲ್ಜರರು ಒಂದು ಗಡಿಯಾರವನ್ನು ಕೊಳ್ಳಲು ಹೋಗಿದ್ದರು. ಅಂಗಡಿಕಾರನು ಅವರಿಗೆ ಬೇಕಾದ ಗಡಿಯಾರವನ್ನು ಹುಡುಕುತ್ತಿರಲು, ಆ ಸೋಲ್ಜರರು ಕನ್ನಡಿ ಕಪಾಟಿನ ಬಾಗಿಲನ್ನು ಒಡೆದು ಬಂಗಾರ ಬೆಳ್ಳಿಯ ಗಡಿಯಾರಗಳನ್ನು ಕದ್ದರು. ಆ ಕೂಡಲೆ ಗದ್ದಲವನ್ನು ಮಾಡಲು, ಅವರು ಹಿಡಿಯಲ್ಪಟ್ಟರು. ಅವರಿಬ್ಬರ ಮೇಲೂ ಖಟ್ಲೆಯಾಗಿ ಪ್ರತಿಯೊಬ್ಬರಿಗೂ ೮ ತಿಂಗಳ ಕಠಿಣ ಶಿಕ್ಷೆಯು ವಿಧಿಸಲ್ಪಟ್ಟಿತು.

—ಮಂಡಲಾ ಎಂಬಲ್ಲಿ ಮೂಳಚಂದ್ ಎಂಬವನ ಮಗ ಲಕ್ಷ್ಮಣಸಿಂಗನೆಂಬವನು ಅಸ್ವಸ್ಥನಾಗಲು, ಕಾಳಿ ಮಾತೆಗೆ ಬಲಿಕೊಟ್ಟರೆ, ಗುಣವಾಗುವದೆಂದು ಮೂಳಚಂದನ ಸೊಸೆಯಾದ ಜಾನಕಿಯು ಹೇಳಿ, ತನ್ನ ನಾದಿನಿಯಾದ ರುಕ್ಮಿಣಿಯೆಂಬವಳನ್ನು ಕೊಂದು ಹಾಕಿದಳು. ಈ ಅಪರಾಧಕ್ಕಾಗಿ ಜಬ್ಬಲಪುರದ ಸೆ. ಜಡ್ಜರು ಮೂಳಚಂದನಿಗೂ, ಅವನ ಇಬ್ಬರು ಮಕ್ಕಳಿಗೂ ಮರಣ ದಂಡನೆಯನ್ನೂ, ಜಾನಕಿಗೆ ಆಜನ್ಮ ಕಾರಾಗೃಹವಾಸವನ್ನೂ ವಿಧಿಸಿದರು. ಆದರೆ ಅಪೀಲಿನಲ್ಲಿ ನಾಗಪುರದ ಜ್ಯುಡಿಶಿಯಲ್ ಕಮಿಶನರ, ಇಬ್ಬರು ಮಕ್ಕಳು ನಿರ್ದೋಷಿಗಳೆಂದು ನಿರ್ಣಯಿಸಿ ಮೂಳಚಂದನಿಗೂ, ಜಾನಕಿಗೂ ಆಜನ್ಮ ಕಾರಾಗೃಹವಾಸವನ್ನು ವಿಧಿಸಿದರು.

—ದಕ್ಷಿಣ ಮಲಬಾರದೊಳಗಿನ ನೀಲಾಂಬರ ಎಂಬ ಅರಣ್ಯದಲ್ಲಿ ಚೋಲಾ ನಾಯಿಕ ಎಂಬ ಜಾತಿಯ ಜನರು ವಾಸಿಸುತ್ತಾರೆ. ಇತರ ಜಾತಿಯ ಮನುಷ್ಯರನ್ನು ನೋಡಿದಾಕ್ಷಣವೇ ಈ ಜನರು ಗಾಬರಿಗೊಳ್ಳುತ್ತಾರೆ. ಅವರು ಅಡವಿಯೊಳಗೆ ಗಿಡಗಳ ಬುಡುಪಿನಲ್ಲಿ ವಾಸಿಸುತ್ತಾರೆ; ಅದರ ಹೊರಗೆ ಬರುವದೆ ಇಲ್ಲ. ಕಂದ ಮೂಲ, ಫಲಗಳ ಮೇಲೆಯೇ ಅವರ ಉದರ ನಿರ್ವಾಹವು ನಡೆಯುತ್ತದೆ. ಅಡವಿಯಲ್ಲಿ ಬೆಳೆಯುವ ಬಾಳೆಯ ಗಿಡದಂಥ ಒಂದು ವೃಕ್ಷದ ಎಲೆಗಳನ್ನು ಈ ಜನರು ವಸ್ತ್ರಗಳಂತೆ ಉಪಯೋಗಿಸುತ್ತಾರೆ.

—ಪ್ರಾಕ್ತನ ವಿಮರ್ಶ ವಿಚಕ್ಷಣ ರಾವ್ ಬಹದ್ದೂರ್ ನರಸಿಂಹಾಚಾರ್ಯರಿಗೆ ಬಂಗಾಳದ ಅಖಿಲ ಭಾರತ ಸಾಹಿತ್ಯ ಸಂಘದವರು "ಕರ್ಣಾಟಕ ಪ್ರಾಚ್ಯ ವಿದ್ಯಾವೈಭವ" ಎಂಬ ಬಿರುದನ್ನು ಕೊಟ್ಟಿರುವರೆಂದು ವರ್ತಮಾನ. ನಮ್ಮ ನಾಡಿನ ಜನರು ನಮ್ಮ ಜನರನ್ನು ಗೌರವಿಸದಿದ್ದರೂ ಹೊರನಾಡಿನವರಾದರೂ ಅಂತಹವರನ್ನು ಅರಿತು ಅವರನ್ನು ಗೌರವಿಸುವ ಆಚಾರವು ಹೊಸದೇನೂ ಅಲ್ಲ. [ಮೈ. ಕ್ರಾನಿಕಲ್]

—ಕವಿವರ್ಯ ಶ್ರೀಯುತ ಲಕ್ಷ್ಮೀನಾರಾಯಣ ಪುಣಿಂಚತ್ತಾಯರನ್ನೂ, "ಕರ್ಣಾಟಕ ವಾಙ್ಮಯ ಮಹೋದಧಿ"—"ಕರ್ಣಾಟಕ ಕಾವ್ಯ ವಿಶಾರದ"—"ಸಾಹಿತ್ಯ ಸರಸ್ವತಿ"—"ವಿದ್ಯಾವಿನೋದ"—"ಜ್ಞಾನ ಗುಣಾಕರ"—ಎಂಬ ಬಿರುದುಗಳಿಂದ ಅದೇ ಅಖಿಲ ಭಾರತ ಸಾಹಿತ್ಯ ಸಂಘದವರು ಗೌರವಿಸಿರುವುದೂ ಅತಿ ಸಂತೋಷದ ಸುದ್ದಿ.

ದಕ್ಷಿಣ ಕನ್ನಡ.

ಕುಂಬಳೆ:—ತಾಲೂಕು ಬೋರ್ಡ ಮೆಂಬರರಾದ ಮ॥ ರಾ॥ ಬಿ. ವೆಂಕಪ್ಪ ಪೂಂಜರವರ ಇಲ್ಲಿಯ ಧಂಡಸಾಲೆಯಲ್ಲಿ ಪಿ. ಎಂ. ಸಿ, ಮಮ್ಮು ಸಾಹೇಬರವರ ಅಧ್ಯಕ್ಷತೆಯಿಂದ ದಿವಂಗತ ದೇಶಬಂಧು ಚಿತ್ತರಂಜನ ದಾಸರವರ ಸ್ಮಾರಕ ಸಭೆಯು ಇದೇ ತಾ. ೧ನೇ ಬುಧವಾರ ಅಪರಾಹ್ನ ಘಂಟೆ ೫ಕ್ಕೆ [illegible] ಜರಗಿತು. ಪ್ರಥಮತಃ ರಾಷ್ಟ್ರಗೀತಗಳನ್ನು ಹಾಡಿದ ನಂತರ ಅಧ್ಯಕ್ಷರು ತ್ಯಾಗಿಯಾದ ದೇಶಬಂಧುಗಳು ಈ ಭರತ ಖಂಡದ ಸ್ವರಾಜ್ಯಕ್ಕಾಗಿ ಆಚರಿಸಿದ ತನ್ನ ತನುಮನಧನಗಳಿಂದ ಮಾಡಿದ ದೇಶವಾತ್ಸಲ್ಯವನ್ನು ಕೊಂಡಾಡಿದರು. ಸಭೆಯಲ್ಲಿ ದೇಶಬಂಧುಗಳ ಜೀವನ ಚರಿತ್ರೆಯನ್ನು ಓದಿದ ಅನಂತರ ಸ್ವರ್ಗಸ್ಥರಾದ ದೇಶಬಂಧುಗಳ ಆತ್ಮಕ್ಕೆ ಶಾಂತಿಯನ್ನು ಬಯಸಿ ಸಭೆಯು ಮುಕ್ತಾಯವಾಯಿತು.

ಕೆಲವು ದಿವಸಗಳ ಹಿಂದೆ ಇಲ್ಲಿಯ ಮಾರ್ಕೇಟು ಕಟ್ಟೋಣದ ಮೇಲೆ ಆಲದ ಮರವು ಬಿದ್ದು ಮಾಡು [illegible] ವಗೈರೆ ಹಾನಿಯಾಗಿದೆ. ಮಾನ್ಯ ಬೋರ್ಡಿನವರು ಕ್ಷಿಪ್ರ ದುರುಸ್ತಿ ಪಡಿಸದಿದ್ದಲ್ಲಿ ವ್ಯಾಪಾರಸ್ಥರಿಗೆ ಮಳೆಯ ನಿಮಿತ್ತದಿಂದ ಕಷ್ಟವಾಗುವದು.

ಪುತ್ತೂರು:—ಇದೇ ತಿಂಗಳ ತಾ. ೧ನೆ ಬುಧವಾರ ದಿನ ಸಾಯಂಕಾಲ ೫ ಘಂಟೆಗೆ ದಿವಂಗತ ದೇಶಬಂಧು ಚಿತ್ತರಂಜನ ದಾಸರ ಅಕಾಲ ಮೃತ್ಯುವಿನ ವಿಚಾರವಾಗಿ ಶೋಕಪ್ರದರ್ಶಕ ಸಭೆಯೊಂದು ಇಲ್ಲಿನ ಶ್ರೀ ಶಾರದಾ ವಾಚಕ ಮಂದಿರದಲ್ಲಿ ಸೇರಿತ್ತು. ರಾ॥ ಎಸ್. ಎಸ್. ಕೊಳ್ತಾಡಿಯವರು ಸಭೆ ಸೇರಿಸಿದ ಉದ್ದೇಶವನ್ನು ಹೇಳಲು, ರಾ॥ ಪೂವಣಿ ಹೆಗ್ಗಡೆಯವರು ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟರು. ಇಲ್ಲಿನ ಪ್ರಮುಖ ವಕೀಲರಲ್ಲೊಬ್ಬರಾದ ರಾ॥ ಎಚ್. ಗಣಪತಿರಾಯರು ಮನಮುಟ್ಟುವಂತೆ ದಿವಂಗತರ ಗುಣಕಥನ ಮಾಡಿದರು. ರಾ॥ ಜಿ. ಎಸ್. ಲಕ್ಷ್ಮಣ ಪೈಗಳವರು ದಾಸರ ಜೀವನ ಚರಿತ್ರೆಯನ್ನು ವಿವರಿಸಿ ಹೇಳಿ, ದೇಶಬಂಧುಗಳ ಸ್ತುತಿಪರವಾದ ಚಿಕ್ಕದೊಂದು ಪದ್ಯವನ್ನು ಹಾಡಿದರು. ತದನಂತರ ಅಧ್ಯಕ್ಷರು ದಾಸರ ಮರಣದಿಂದ ಇಡೀ ಭರತ ಖಂಡಕ್ಕೇನೆ ಮಹಾ ನಷ್ಟ ಸಂಭವಿಸಿರುವುದೆಂದು ನಾವೆಲ್ಲರೂ ಅವರ ಧ್ಯೇಯವನ್ನರಿತು ಕೊಂಚ ಮಟ್ಟಿಗಾದರೂ ಅನುಕರಿಸುವುದರ ಮೂಲಕ ಧನ್ಯರಾಗಬೇಕೆಂದೂ ವಿವರಿಸಿ ಹೇಳಿದ ನಂತರ ಸಭೆಯು ಮುಕ್ತಾಯಗೊಂಡಿತು.

ಕಾರ್ಕಳ:—ಕಾರ್ಕಳ ತಾಲೂಕು ಬೋರ್ಡಿನಿಂದ ಡಿಸ್ಟ್ರಿಕ್ಟ ಎಜ್ಯುಕೇಶನಲ್ ಕೌನ್ಸಿಲಿನ ಬಗ್ಗೆ ಮೊನ್ನೆ ಕೂಡಿದ ಕಾರ್ಕಳ ತಾಲೂಕು ಬೋರ್ಡ ಮೀಟಿಂಗಿನಲ್ಲಿ ಉಮೇದ್ವಾರರಾಗಿ ನಿಂತ ಮ॥ ರಾ॥ ವಕೀಲ್ ಕೆ. ಪದ್ಮನಾಭ ಕಾಮತ್ ಎಮ್. ಎ. ಬಿ. ಎಲ್. ವಕೀಲ್ ಕೆ. ರಾಮಯ್ಯ ಹೆಗ್ಡೆ, ಕೆದಿಂಜೆ ತಿಮ್ಮಪ್ಪ ಹೆಗ್ಡೆ, ಮೂಡಬಿದ್ರೆ ಧರ್ಮಸಾಮ್ರಾಜ್ಯ ಈ ನಾಲ್ಕು ಜನರ ಪೈಕಿ ಮ॥ ರಾ॥ ವಕೀಲ್ ಕೆ. ರಾಮಯ್ಯ ಹೆಗ್ಡೇರು ಮತ್ತು ಮ॥ ರಾ॥ ತಿಮ್ಮಪ್ಪ ಹೆಗ್ಡೇರು ಈ ಎರಡು ಜನರು ಚುನಾಯಿಸಲ್ಪಟ್ಟಿರುವರು.

ಪಾಣೆಮಂಗಳೂರು:—ಇದೇ ತಾರೀಕು ೧೨—೭—'೨೫ನೇ ಆದಿತ್ಯವಾರ ಇಲ್ಲಿಯ ಸಹಕಾರ ಸಂಘದ ಮಹಾಸಭೆ ಜರಗುವದೆಂದೂ ಅಂದೇ ಮಧ್ಯಾಹ್ನ ೪ ಗಂಟೆಗೆ ಬಂಟ್ವಾಳ ಸಹಕಾರ ಯೂನಿಯನ್ನಿನ ಮಹಾ ಸಭೆ ಸಹಾ ಇಲ್ಲಿ ಇರುತ್ತದೆಂದೂ ಸಮ್ಮಂಧಪಟ್ಟ ಸಹಕಾರಿಗಳು ಭಾಗಿಗಳಾಗಲೆಂದೂ ಸದರಿ ಕೂಟದ ಕಾರ್ಯದರ್ಶಿಯರು ತಿಳಿಸಿರುತ್ತಾರೆ.

ಸಂಪಾಜೆ:—ಇದೇ ಜುಲಾಯಿ ತಿಂಗಳ ತಾ. ೨೫ನೇ ಶನಿವಾರ ಹಗಲು ಗಂಟೆ ೩ಕ್ಕೆ ಅರಂತೋಡು ಗ್ರಾಮದ ಉಳುವಾರು ರಾಮಪ್ಪ ಗೌಡರ ಭವನದಲ್ಲಿ ಈ ಸಂಘದ ಕೆಲವು ನಿರ್ಣಯಗಳ ತಿದ್ದುಪಡಿಗಾಗಿ ಒಂದು ಮಹಾಸಭೆಯನ್ನು ಜರಗಿಸುವುದಾಗಿ ನಿರ್ಣಯಿಸಿದೆ. ಆದುದರಿಂದ ಸಂಘದ ಮೆಂಬರರೂ ಹಿತಚಿಂತಕರೂ ಸರ್ವರೂ ದಯಮಾಡಿ ಬರಬೇಕಾಗಿ ವಿನಂತಿ.

"ಚರ್ಚೆಗಿರುವ ವಿಷಯಗಳು."

(೧) ಈ ಸಂಘದ ೧೭ನೆ ಉಪನಿಬಂಧನೆ ಪ್ರಕಾರ ಆಡಳಿತೆ ಮೆಂಬರರ ಮೆಂಬರಿಕೆಯು ತಾನಾಗಿ ನಿಂತು ಹೋದವರ ಸ್ಥಾನಕ್ಕೆ ಪುನಃ ಮೆಂಬರರನ್ನು ಚುನಾಯಿಸುವುದು. (೨) ಡಿ॥ ಬೋರ್ಡಿನಿಂದ ಸಂಘಕ್ಕೆ ಪಡೆಯುವ ಸ್ಥಳದ ಬಗ್ಗೆ ಬರಕೊಡುವ ಮೂಲಗೇಣಿಚೀಟಿನ ಶರ್ತಗಳನ್ನು ಆಲೋಚಿಸಿ ನಿರ್ಣಯಿಸುವುದು. (೩) ಮೆಂಬರರು ಸಂಘಕ್ಕೆ ಕಂತುಗಳ ಮೂಲಕ ಕೊಡುವುದಾಗಿ ವಾಗ್ದಾನಮಾಡಿದ ಪ್ರಕಾರ ಐವಜು ವಸೂಲಿಕೊಡದೆ ಕಂತು ಬಾಕಿಮಾಡಿದ್ದರಿಂದ ಹಿಂದಿನ ಬಾಕಿ ಕಂತಿನ ಐವಜನ್ನು ವಸೂಲು ಕುರಿತು ವರ್ತಿಸತಕ್ಕ ವಿಧಾನ. (೪) ಅಧ್ಯಕ್ಷರ ಅನುಮತಿಗೊಳಪಟ್ಟ ಇತರ ವಿಷಯಗಳು.

ವಿವಿಧ ವಿಷಯಗಳು.

ಲಂಡನ್ ಟೈಮ್ಸಿನ ಕುತ್ಸಿತ ಪ್ರಯತ್ನ.

ಲಂಡನ ಟೈಮ್ಸ್ ಪತ್ರಿಕೆಯು ಹಿಂದಿ ಸ್ವರಾಜ್ಯಕ್ಕೆ ವಿರೋಧಿ ಎಂಬುದು ಜನಜನಿತವಾದ ವಿಷಯವೆ ಸರಿ. ಆದರೆ ವಿರೋಧವನ್ನು ಪ್ರದರ್ಶಿಸುವಾಗ ಯಾವದಾದರೂ ಒಂದು ಕ್ರಮವಿರುವುದು. ಸತ್ಯಾಪಲಾಪವನ್ನು ಮಾಡದೆ ಅಥವಾ ಅಡ್ಡದಾರಿಗಿಳಿಯದೆ ವಿರೋಧವನ್ನು ಮಾಡಿದರೆ ಅಂಥ ಸಂದರ್ಭದಲ್ಲಿ ಈ ಪ್ರತಿಪಕ್ಷಿಯು ವಿಷಯದಲ್ಲಿ ಯೋಗ್ಯವಾದ ಆದರವಿರುತ್ತದೆ. ಪರಂತು ಟೈಮ್ಸ್ ಪತ್ರಿಕೆಯು ಸತ್ಯವನ್ನು ಬದಿಗಿಟ್ಟು ಹಿಂದುಸ್ಥಾನದ ವಿರೋಧವನ್ನು ಸಾಧಿಸುತ್ತಿದೆ. ಇದು ಮಾತ್ರ ವಿಷಾದಕರವು. ಪೆರಿಸ ಪಟ್ಟಣದಲ್ಲಿ ಫ್ರೆಂಚ್ ಸದ್‌ಗೃಹಸ್ಥರು ಹಿಂದುಸ್ಥಾನದ ರಾಜಕೀಯ ಪ್ರಗತಿಗಾಗಿ "ಕಮಿಟಿ ಪ್ರೊ-ಹಿಂದು" ಎಂಬುದನ್ನು ಸ್ಥಾಪಿಸಿದ್ದಾರೆ. ಈ ವಿಷಯವಾಗಿ ಲಂಡನ್ ಟೈಮ್ಸ್ ಪತ್ರಿಕೆಯು ಮುಂದಿನಂತೆ ಬರೆಯುತ್ತಿದೆ. "ಮನವೇಂದ್ರ ಅಥವಾ ಮಹೇಂದ್ರನಾಥರಾಯ ಇವನು ಬಂಗಾಲಿಯಾಗಿದ್ದು ಇವನ ನಿಜವಾದ ಹೆಸರು ಭಟ್ಟಾಚಾರ್ಯಜಿ ಎಂಬುದಾಗಿದೆ. ಇವನು ಅಮೇರಿಕಾ ಮತ್ತು ಯುರೋಪಿನಲ್ಲಿ ಬ್ರಿಟಿಷರಿಗೆ ವಿರೋಧವಾಗಿ ಗುಪ್ತ ಮುಸಲತ್ತನ್ನು ನಡಿಸುತ್ತಿದ್ದಾನೆ. ಮಹಾ ಯುದ್ಧದ ಸಮಯದಲ್ಲಿ ಈ ಗೃಹಸ್ಥನು ಬರ್ಲಿನನಲ್ಲಿದ್ದನು. ಮಹಾ ಯುದ್ಧದ ಅನಂತರ ಅವನು ಕೊಮ್ಯುನಿಸ್ಟ ಪಂಥಕ್ಕೆ ಸೇರಿದನು. ರುಷ್ಯಕ್ಕೆ ಹೋಗಿ ೧೯೨೧ರಲ್ಲಿ ಅವನು ಥರ್ಡ ಇಂಟರ ನೆಶನಲ್‌ನಿಂದ ಬರ್ಲಿನನಲ್ಲಿ ಇದ್ದು ಹಿಂದುಸ್ಥಾನದೊಳಗೆ ಬೋಲ್‌ಶೆವಿಕ ಚಳವಳವನ್ನು ಮಾಡಲು ನೇಮಿಸಲ್ಪಟ್ಟನು. ಪ್ರೊ-ಹಿಂದು ಕಮಿಟಿಯು ಎಮ್. ಹೆನರಿ ಬಾರಬುಸ್ ಎಂಬ ಫ್ರಾನ್ಸದೇಶೀಯ ಪಂಡಿತನಿಂದ ಸ್ಥಾಪಿಸಲ್ಪಟ್ಟಿತೆಂತ ತೋರಿದರೂ ಮಿಸೆಸ್ ಎಮ್. ಎನ್. ರೋಯ್ (ಭಟ್ಟಾಚಾರ್ಯಜಿ) ಇವನ ಹೆಂಡತಿಯೇ ಆ ಸಂಸ್ಥೆಗೆ ಬೇಕಾದ ಹಣವನ್ನು ಪೂರೈಸುತ್ತಿದ್ದಾಳೆ. ಇವಳು ಅಮೆರಿಕದ ಸ್ತ್ರೀಯು. ಇವಳು ಎಮ್. ಎನ್. ರೋಯನೊಡನೆ ವಿವಾಹಿತಳಾಗಿರುವಳು. ಇವಳ ಮುಂಚಿನ ಹೆಸರು ಎವ್ಲಿನ್ ಟ್ರೆಂಟ ಎಂಬುದಾಗಿದೆ. ಇವಳು ಮೆಕ್ಸಿಕೋದಿಂದ ಪಾಸಪೋರ್ಟ ಪಡೆದುಕೊಂಡು ಎಲ್ಲ ಕಡೆಗಳಲ್ಲಿ ಸಂಚರಿಸುತ್ತಿದ್ದಾಳೆ. ಇವಳು "[illegible]" ಎಂಬ ನಾಮಧೇಯವನ್ನು ಧರಿಸಿ, ಬ್ರಿಟಿಷರಿಗೆ ಪ್ರತಿಕೂಲವಾದ ಮತ್ತು ಬೋಲ್‌ಶೆವಿಕ ತತ್ವಗಳನ್ನು ಹಬ್ಬಿಸುವ ಚಿಕ್ಕ ಚಿಕ್ಕ ಪುಸ್ತಕಗಳನ್ನು ಬರೆಯುತ್ತಾ—

([illegible] ಮುಂದುವರಿಸುವದು.)

ಅನುಕ್ರಮಣಿಕೆ.

ಅಗ್ರಲೇಖ — ಪುಟಗಳು.
ಬಾನು ಕುಸಿದುಬಿದ್ದೀತೆಂದು—! ೬
ಸ್ಫುಟವಿಚಾರಗಳು—
೧ ಲೋ. ಬರ್ಕನ್ಹೆಡ್ಡರ ಭಾಷಣವೂ ಲೋಕಮತವೂ. ೨ ಬಿಝೆಂಟ ಬಾಯಿಯವರ ಸ್ವರಾಜ್ಯ ಬಿಲು. ೩ ಕಲಕತ್ತೆಯ ದಂಗೆ. ೪ ಮದ್ರಾಸ ಮೈಲ್‌ಪತ್ರಿಕೆಯ ಕುತ್ಸಿತ ಟೀಕೆ. ೫ ಪಂಡಿತ ಮೋತಿಲಾಲನೇಹರುಗಳ ಅಸ್ವಸ್ಥ. ೬ ೭
ವರ್ತಮಾನಸಂಗ್ರಹಗಳು—
ವಿದೇಶ — ಸ್ವದೇಶ ವರ್ತಮಾನ ೮
ದಕ್ಷಿಣ ಕನ್ನಡ— ಕುಂಬಳೆ, ಪುತ್ತೂರು, ಕಾರ್ಕಳ, ಬಾಣಮಂಗಳೂರು, [illegible] ,,
ವಿವಿಧ ವಿಷಯಗಳು ,,
[illegible]
ಹಿಂಸಾಹಿಂಸೆಗಳ ಮರ್ಯಾದೆ ೯
ಮಹಾರಾಷ್ಟ್ರದಲ್ಲಿ ಕನ್ನಡ ಹೆಸರಿನ ಊರುಗಳು. ,,
ಪ್ರಪಂಚದೊಳಗೆಲ್ಲ ಹೆಚ್ಚು ಕಾಲ ಜೀವಿಸಿದ್ದ ಮನುಷ್ಯನು ೧೦
ಬಕ್ರೀದಿನಲ್ಲಿ ಕಲಕತ್ತೆಯಲ್ಲಿ ನಡೆದ ಅತ್ಯಾಚಾರ ,,

ಸ್ವದೇಶಾಭಿಮಾನಿ.

ಶಕ ೧೮೪೭ ಆಷಾಢ ಬ. ೫ಯು ಶುಕ್ರವಾರ.

“ಬಾನು ಕುಸಿದುಬಿದ್ದೀತೆಂದು”—!

ಟಿಟ್ಟಿಭ ಪಕ್ಷಿಯು ಆಕಾಶವು ಕುಸಿದುಬಿದ್ದೀತೆಂಬ ಭಯದಿಂದ ಕಾಲು ಮೇಲಕ್ಕೆ ಚಾಚಿ ಮಲಗುತ್ತದೆ. ಆಕಾಶವು ಬಿದ್ದುಬಿಟ್ಟರೆ ಅದರ ಕೆಳಗಿನ ಪ್ರಾಣಿವರ್ಗವೆಲ್ಲ ನಾಶವಾದೀತು, ಲೋಕದಲ್ಲಿ ದೊಡ್ಡ ಅನರ್ಥವು ಸಂಭವಿಸೀತು, ಆದ್ದರಿಂದ ಇವುಗಳಿಗೆ ಅವಕಾಶವು ದೊರಕಬಾರದೆಂಬುದಕ್ಕೆ ಟಿಟ್ಟಿಭ ಪಕ್ಷಿಯು ತನ್ನ ಕಾಲುಗಳ ಆಧಾರವನ್ನು ಕೊಟ್ಟು ಆಕಾಶವನ್ನು ಮೇಲಕ್ಕೆ ಎತ್ತಿಹಿಡಿದಿದೆ! ತಾನು ಈ ರೀತಿಯಿಂದ ಲೋಕೋಪಕಾರವನ್ನು ಮಾಡಿದ್ದೇನೆಂದು ಅದು ಗರ್ವದಿಂದ ತುಂಬಿಕೊಂಡಿರುವುದು. ನಮ್ಮ ಬರ್ಕನಹೆಡ್ಡರಾದರೂ ಇದೆ ಟಿಟ್ಟಿಭ ಪಕ್ಷಿಯನ್ನು ಅನುಕರಿಸಿರುವುದರಿಂದ ಅವರ ಅವಸ್ಥೆಯು ಸಾಕ್ಷಾತ್ ಅದರಂತೆಯೆ ಆಗಿದೆ. ಲಂಡನ ನಗರಿಯಲ್ಲಿಯ ಸೆಂಟ್ರಲ್ ಏಸಿಯಾಟಿಕ್ ಸೊಸಾಯಿಟಿಯಲ್ಲಿ ಒಂದು ಔತಣವು ನಡೆದಾಗ ಬರ್ಕನಹೆಡ್ ಸಾಹೇಬರು ಭಾರತ ಭೂಮಿಯ ಸಂರಕ್ಷಣದ ಯೋಚನೆಯ ಭಾರದಿಂದ ಆಕ್ರಾಂತರಾಗಿ ಹೋದವರಂತೆ ಉಸುರುಗಟ್ಟಿ ಮೆಲ್ಲ ಮೆಲ್ಲನೆ ಒಂದು ಚಿಕ್ಕ ಭಾಷಣವನ್ನು ಕೊಟ್ಟರು. ಇವರ ಭಾಷಣದಲ್ಲಿ ಎಷ್ಟು ಗರ್ವೋಕ್ತಿಯೊ ಅಷ್ಟೆ ಸತ್ಯ ಇತಿಹಾಸದ ಅಪಲಾಪವೂ, ವಸ್ತುಸ್ಥಿತಿಯ ಅಜ್ಞಾನವೂ, ದುರಾಗ್ರಹವೂ ತುಂಬಿಕೊಂಡಿದ್ದುದು ಕಂಡುಬರುವುದು. ರಾಜ್ಯಕರ್ತರು ತಮ್ಮ ವಿಶೇಷವಾದ ಬುದ್ಧಿವಂತಿಕೆಯ ಬಲದಿಂದ ಇದುವರೆಗೆ ಜನತೆಯನ್ನು ಅಜ್ಞಾನದ ಸುಪ್ತಿಯಲ್ಲಿ ಇರಗೊಳಿಸಿ, ಸ್ವರೂಪದ ವಿಸ್ಮೃತಿಯನ್ನುಂಟುಮಾಡಿ, ಪರಕೀಯ ವಿದ್ಯೆ, ಪರಕೀಯ ಕಲೆ ಪರಕೀಯ ಸಂಸ್ಕೃತಿ, ಪರಕೀಯ ಸಂರಕ್ಷಣೆ ಇವುಗಳ ಬೆಡಗಿನ ಸುಖಸ್ವಪ್ನಗಳನ್ನು ತೋರಿಸಿ ಸದಾ ಸರ್ವದಾ ತಮ್ಮ ಅಂಕೆಯಲ್ಲಿಡುತ್ತಿದ್ದರು; ಆದರೆ ಇತ್ತಲಾಗೆ ಅವರ ಶಿಕ್ಷಣದ ಮಹಿಮೆಯಿಂದಲೆ ಜನತೆಯು ಪ್ರಬುದ್ಧಾವಸ್ಥೆಗೆ ಬರಹತ್ತಿ ತನ್ನ ಉನ್ನತಿಯ ಮಾರ್ಗವನ್ನು ತಾನಾಗ ಹುಡುಕಹತ್ತಿತೊ, ಇಂಗ್ಲಂಡು ಇಂಗ್ಲಿಷರಿಗಾಗಿರುವಂತೆ, ಐರ್ಲಂಡು ಐರಿಶರಿಗಾಗಿರುವಂತೆ, ಇತರ ವಸಾಹತುಗಳು ವಸಾಹತಿನವರಿಗಾಗಿರುವಂತೆ ಹಿಂದೂಸ್ಥಾನವು ಹಿಂದಿಗಳಿಗಾಗಿಯೆ ಇದೆ ಎಂಬ ತಿಳಿವು ಜನತೆಯಲ್ಲಿ ಹುಟ್ಟಿ ಸ್ವರಾಜ್ಯಕ್ಕಾಗಿ ಅದು ತಾನಾಗ ಬೇಡಹತ್ತಿತೊ ಆಗ ಅದರ ಕೃತಿಯು ಬರ್ಕನಹೆಡ್ಡರಂಥವರಿಗೆ ಸಹನವಾಗದೆ ಅಂಥವರು ಈ ಅಸಹನೆಯ ಭರದಲ್ಲಿ ಏನಾದರೂ ಯದ್ವಾತದ್ವಾ ಹಾರಿ ಬಿಡುತ್ತಿದ್ದಾರೆ. ಇದುವರೆಗೆ ಎಷ್ಟೊ ಸಾಮ್ರಾಜ್ಯವಾದಿಗಳು ಇಂಥಾ ಮಾತುಗಳನ್ನಾಡಿದ್ದಾರೆ. ಹಾಗೆಯೆ ಬರ್ಕನಹೆಡ್ ಸಾಹೇಬರಾದರೂ ಈಗ ಅಂಥಾ ಮಾತುಗಳನ್ನ ಆಡುತ್ತಿದ್ದಾರೆ. ಇವರು ಸೆಂಟ್ರಲ್ ಏಸಿಯಾಟಿಕ್ ಸೊಸಾಯಿಟಿಯಲ್ಲಿ ಆಡಿದ ವಾಗ್ರತ್ನಗಳಲ್ಲಿ ಕೆಲವನ್ನು ಕೆಳಗೆ ಪ್ರದರ್ಶಿಸುವೆವು.

“ಬ್ರಿಟನು ಹಿಂದೂಸ್ಥಾನದ ಸಂರಕ್ಷಣದ ಸಂಪೂರ್ಣ ಜವಾಬುದಾರಿಯನ್ನು ವಹಿಸಿಕೊಂಡಿರಬೇಕು. ಹಿಂದೂಸ್ಥಾನದಲ್ಲಿ ಈಗ ಅನರ್ಥಕರವಾದ ಯಾವ ವಸ್ತುಸ್ಥಿತಿ ಇರುವುದೊ ಅದರ ಆಚೆಗೆ ನಾವು ಅಪೇಕ್ಷಿಸುವಷ್ಟು ಮಾಡಲಾಗಲಿಕ್ಕಿಲ್ಲ. ಎಷ್ಟೊ ಶತಮಾನಗಳ ಮೊದಲೆ ನಾವು ಹಿಂದೂಸ್ಥಾನಕ್ಕೆ ಹೋಗಿ ಕತ್ತಿಯ ಹದವಾದ ಬಾಯಿಯ ಸಹಾಯದಿಂದ ಅಲ್ಲಿಯ ಭೇದಗಳನ್ನು ತೆಗೆದುಹಾಕಿದೆವು. ಇಲ್ಲವಾದರೆ ಆ ಭೇದಗಳಿಂದ ಹಿಂದೂಸ್ಥಾನದ ಸಂಸ್ಕೃತಿಯು ನಾಶವಾಗಿ ಹೋಗುತ್ತಿದ್ದಿತು. ಅಲ್ಲಿಯ ಭೇದಗಳನ್ನು ಮುರಿಯಲು ಮತ್ತು ಅಲ್ಲಿಯ ಸಂಸ್ಕೃತಿಯನ್ನು ಕಾಪಾಡಲು ನಾವು ಹಿಂದೂಸ್ಥಾನಕ್ಕೆ ಹೋದೆವು. ಮತ್ತು ನಾವು ಈ ಹೊತ್ತಾದರೂ ಅದೆ ಉದ್ದೇಶದಿಂದ ಹಿಂದೂಸ್ಥಾನವನ್ನು ಕಾಪಾಡುತ್ತಿದ್ದೇವೆ. ನಾವು ಹಿಂದೂಸ್ಥಾನವನ್ನು ಬಿಟ್ಟಿದ್ದಾದರೆ ಕ್ಲೈವಿನ ಕಾಲದಲ್ಲುಂಟಾದಂತೆ ಹಿಂದೂಸ್ಥಾನದಲ್ಲಿ ಈ ಹೊತ್ತಾದರೂ ಅದೆ ನಮೂನೆಯ ಅರಾಜಕತೆಯೂ, ಕೊಲೆ ಲೂಟಿಗಳೂ ಉಂಟಾಗುವವು. ಲೇಬರ, ಲಿಬರಲ್ ಅಥವಾ ಕನ್ಸರವೇಟಿವ್ ಇವರ ಪೈಕಿ ಯಾರೆ ಆಗಲಿ, ಅವರು, ಅವರ ಪೂರ್ವಿಕರು ಹಿಂದೂಸ್ಥಾನವನ್ನು ಸಂರಕ್ಷಿಸುವ ಯಾವ ಭಾರವನ್ನು ವಹಿಸಿದ್ದರೊ ಆ ಭಾರವನ್ನು ನಿರ್ವಹಿಸುವ ಜವಾಬುದಾರಿಯನ್ನು ನೆನಪಿಗೆ ತಂದುಕೊಂಡೆ ಮಾತಾಡಬೇಕಲ್ಲದೆ, ಅನ್ಯಥಾ ಮಾತಾಡುವುದು ನಿಷ್ಫಲವಾಗುವುದು”.

ಭಾರತ ಮಂತ್ರಿಗಳಾದ ಲೊರ್ಡ ಬರ್ಕನಹೆಡ್ಡರ ಈ ಉಕ್ತಿಗಳಲ್ಲಿ ನಾವು ಮೇಲೆ ಹೇಳಿದ ಮೇರೆಗೆ ಇತಿಹಾಸದ ವಿಪರ್ಯಾಸ, ವೃಥಾಪ್ರೌಢಿ ಮತ್ತು [illegible] ಇವೆಯಲ್ಲದೆ ವಸ್ತುಸ್ಥಿತಿಯ ಪ್ರದರ್ಶನವಾಗಲಿ, ಉದಾರತ್ವವಾಗಲಿ, ಸರಳಮನಸ್ಕತೆಯಾಗಲಿ ಒಂದೂ ಇಲ್ಲ. ಹಿಂದೂಸ್ಥಾನದಲ್ಲಿ ಈಗ ಅನರ್ಥವುಂಟಾಗುತ್ತಿದೆ, ಅದರ ಕಡೆಗೆ ಬ್ರಿಟಿಷರು ಕಣ್ಮರೆ ಮಾಡಬಾರದೆಂದು ಭಾರತ ಮಂತ್ರಿಗಳು ಹೇಳುತ್ತಿದ್ದಾರಲ್ಲ; ಆದರೆ ಹಿಂದೂಸ್ಥಾನದಲ್ಲಿ ಅಂಥ ಯಾವ ಅನರ್ಥ ನಡೆಯುತ್ತಿದೆ? ಹಿಂದೂಸ್ಥಾನವು ಹಿಂದೂಸ್ಥಾನದವರಿಗಾಗಿ ಇರಬೇಕೆಂದು ವಾದಿಸುವುದು, ಆ ಮೇರೆಗೆ ಯತ್ನಿಸುವುದು ಅನರ್ಥಕರವೆ? ಅಂತಹ ಪ್ರಯತ್ನವು ಅನರ್ಥಕರವೆಂದಾದರೆ ಐರ್ಲಂಡು ಐರಿಶರಿಗಾಗಿ ಇರಬೇಕೆಂದು ಯತ್ನಿಸಿದ್ದು ಅನರ್ಥಕರವೆಂದೆ ಹೇಳಬೇಕಾಯಿತಲ್ಲವೆ? ಸಾಮ್ರಾಜ್ಯದ ದುರಭಿಮಾನಿಗಳು ಅಥವಾ ವಜ್ರಮುಷ್ಟಿಯುವರಾದ ಕನ್ಸರವೇಟಿವರು ಒಂದು ವೇಳೆ ಐರಿಶ್ ಚಳವಳವು ಕೂಡ ರಾಜದ್ರೋಹಕರವೆಂದು ಭಾವಿಸಿ ಅದಕ್ಕೆ ಮಣ್ಣುಕೊಡಲು ಸಿದ್ಧರಾಗಿರಬಹುದು. ಆದ್ದರಿಂದ ಅದನ್ನು ಬಿಟ್ಟರೂ ಇಂಥ ರಾಜದ್ರೋಹದ ಆರೋಪಣೆಯು ಸ್ವಂತ ಬ್ರಿಟಿಷರ ಮೇಲೆಯೆ ಬರುವುದಿಲ್ಲವೆ? ಬ್ರಿಟಿಷರು ರಾಜನನ್ನು ಚ್ಯುತಪಡಿಸಲು ಏನೆಲ್ಲ ಹಾವಳಿಯನ್ನೆಬ್ಬಿಸಿದ್ದರೆಂಬುದು ಇತಿಹಾಸ ಗ್ರಂಥಗಳಲ್ಲಿ ನಮೂದಾಗಿದೆ. ಅವುಗಳನ್ನು ಮರೆಪಡಿಸಲು ಸಾಧ್ಯವಿದೆಯೆ? ಸಾರಾಂಶ ಇಂಗ್ಲಂಡು ಇಂಗ್ಲಿಷರಿಗಾಗಿರುವುದಾದರೆ, ಐರ್ಲಂಡು ಐರಿಶರಿಗಾಗಿರುವುದಾದರೆ, ಹಿಂದೂಸ್ಥಾನವು ಮಾತ್ರ ಹಿಂದಿಗಳಿಗಾಗಿ ಯಾಕಿರಬಾರದು? ಭೀಮನ ಸ್ವಾರ್ಥಕ್ಕೆ ಭಂಗಬರುತ್ತದೆಂಬುದರಿಂದ ರಾಮನ ಸತ್ಯ ಆಕಾಂಕ್ಷೆಗಳಿಗೆ ಕೆಟ್ಟ ಹೆಸರು ಕೊಟ್ಟು ಅವುಗಳನ್ನು ಅಳಿಸಿಬಿಡಲು ಯತ್ನಿಸುವುದು ಶ್ಲಾಘ್ಯವೆ? ಸುಶಿಕ್ಷಿತರ ಚಳವಳದ ಸ್ವರೂಪವನ್ನು ವಿರೂಪವಾಗಿ ಚಿತ್ರಿಸುವ ದುರಭ್ಯಾಸವು ಬರ್ಕನಹೆಡ್ಡರಿಗೆ ಬಿದ್ದಿದೆ ಎಂಬುದು ಅವರ ಇದೆ ಭಾಷಣದ ಉತ್ತರಾರ್ಧದಿಂದಲೂ ಸ್ಪಷ್ಟವಾಗುತ್ತದೆ. “ಚೀನಾದಲ್ಲಿ ಈಗ ಉಂಟಾಗಿರುವ ಅಸ್ವಸ್ಥತೆಯು ವಿದ್ಯಾರ್ಥಿಗಳಿಂದಲೆ ಸಂಭವಿಸಿದ್ದಾಗಿದೆ. ಈ ವಿದ್ಯಾರ್ಥಿಗಳು ಕೊನ್‌ಫ್ಯೂಶಿಯುಸನ ಉಪದೇಶವನ್ನು ಕಲಿಯುವುದು ಬಿಟ್ಟು ಇಂಗ್ಲಿಷ ಪತ್ರಿಕೆಗಳ ಕೋಲಮು ಕೋಲಮುಗಳನ್ನೆ ಓದುತ್ತಿರುವರು. ಚೀನಾದಲ್ಲಾಗಲಿ, ಈಜಿಪ್ತದಲ್ಲಾಗಲಿ ಅಥವಾ ಹಿಂದೂಸ್ಥಾನದಲ್ಲಾಗಲಿ ಮುಖ್ಯವಾಗಿ ಸಾಮ್ರಾಜ್ಯದ ಶತ್ರುಗಳು ವಿದ್ಯಾರ್ಥಿಗಳೆ ಸರಿ” ಎಂಬುದಾಗಿ ಬರ್ಕನಹೆಡ್ಡ ಸಾಹೇಬರು ವಿದ್ಯಾರ್ಥಿ ವರ್ಗದ ವಿಷಯದಲ್ಲಿ ಕಲುಷಿತವಾಗಿರುವ ತನ್ನ ಮನಸ್ಸಿನ ಸ್ವರೂಪವನ್ನು ಈ ನಂಜಿನ ಮಾತುಗಳಿಂದ ಹೊರಪಡಿಸಿರುವರು! ಕೊನ್‌ಫ್ಯೂಶಿಯುಸನ ತತ್ತ್ವೋಪದೇಶವನ್ನು ಕಲಿಯುತ್ತಿರಲು ಈ ಬರ್ಕನಹೆಡ್ಡರು ಉಪದೇಶಿಸುತ್ತಾರಷ್ಟೆ. ಆದರೆ ಕೊನ್‌ಫ್ಯೂಶಿಯುಸನ ಎಲ್ಲ ಮತಗಳು ಇವರಿಗೆ ಮಾನ್ಯವಿರುವವೆ? ಆತನ ರಾಜನೀತಿಯ ಧರ್ಮವು ನಮ್ಮ ಈ ಭಾರತ ಮಂತ್ರಿಗಳಿಗೆ ಮಾನ್ಯವೆ? ಪ್ರಜೆಗಳ ಸಹಕಾರಕ್ಕೆ ಎಂಥಾ ರಾಜಕರ್ತರು ಅರ್ಹರೆಂತ ಈ ನೀತಿ ಪ್ರಕಾರ ಇದೆ? ಇಂಥ ತತ್ವವು ಬಂದ ಕೂಡಲೆ ಆ ತತ್ತ್ವವೂ ಮಾನ್ಯವಿಲ್ಲ, ಆ ತತ್ತ್ವೋಪದೇಶಕನೂ ಮಾನ್ಯವಿಲ್ಲ! ಸಾರಾಂಶ ಸ್ವಾರ್ಥಿಗಳ ಮತದಲ್ಲಿ ಸಾಂಗತ್ಯವನ್ನು ಹುಡುಕುವುದೆ ಅಪ್ರಯೋಜಕವು.

ಭಾರತ ಮಂತ್ರಿಗಳು ಈ ಮೇರೆಗೆ ಹಿಂದೂಸ್ಥಾನದ ಈಗಿನ ಚಳವಳವನ್ನು ಯಾವ ರೀತಿಯಿಂದ ವಿಡಂಬಿಸಿರುವರೊ ಹಾಗೆ ಮುಂಚಿನ ಇತಿಹಾಸವನ್ನು ಕೂಡ ಕೆಡಿಸಲು ಯತ್ನಿಸಿರುವರು. ಹಿಂದೂಸ್ಥಾನದೊಳಗಿನ ಭೇದಗಳನ್ನು ಮುರಿಯಲು, ಹಿಂದೂಸ್ಥಾನದೊಳಗಿನ ಸಂಸ್ಕೃತಿಯನ್ನು ಕಾಪಾಡಲು ಪೂರ್ವಿಕ ಇಂಗ್ಲಿಷರು ಇಲ್ಲಿಗೆ ಬಂದಿರುವರೆಂದು, [illegible] ಎನ್ನುತ್ತಿದ್ದಾರಲ್ಲ, ಅವರ ಈ ವ್ಯಾಖ್ಯಾನವನ್ನು ಕೇಳಿ ಇತಿಹಾಸ ಭಕ್ತರು ಲಜ್ಜೆಯಿಂದ ತಲೆಬಗ್ಗಿಸದೆ ಇರಲಿಕ್ಕಿಲ್ಲ. ಇಂಗ್ಲಿಷರಾಗಲಿ, ಇತರ ಯುರೋಪಿಯನರಾಗಲಿ ಪ್ರಥಮತಃ ಇಲ್ಲಿ ಬರುವಾಗ ಯಾವ ವೇಷದಿಂದ ಬಂದಿದ್ದರೆಂಬುದು ಇತಿಹಾಸಜ್ಞರಿಗೆ ಅವೇದ್ಯವಾದ ಸಂಗತಿಯೆ? ಬೆನ್ನಿನ ಮೇಲೆ ಸರಕುಗಳ ಗೋಣಿಗಳನ್ನು ಹೊತ್ತುಕೊಂಡು ಕೈಯಲ್ಲಿ ತಕ್ಕಡಿಯನ್ನು ಹಿಡಕೊಂಡು ಸಂಚರಿಸುತ್ತಿದ್ದ ಆ ಇಂಗ್ಲಿಷ ವರ್ತಕನನ, ಹಿಂದು ರಾಜರ ಮುಂದೆ ಮತ್ತು ಮೊಗಲ ಬಾದಶಹರ ಮುಂದೆ ಮೊಣಕಾಲೂರಿ ವ್ಯಾಪಾರಕ್ಕಾಗಿ ‘ವಖಾರಿ’ (ಬಂಡಶಾಲೆ)ಗಳನ್ನು ಕಟ್ಟಿಸಲು ವಿಜ್ಞಾಪಿಸಿಕೊಂಡಿದ್ದ ಆ ಇಂಗ್ಲಿಷ್ ವರ್ತಕನ ಚಿತ್ರವು ಮುಂಚಿನ ಇತಿಹಾಸದ ಪುಟಗಳಲ್ಲಿ ಇನ್ನೂ ಕಣ್ಣಿಗೆ ಬೀಳುತ್ತಿದೆ. ತಕ್ಕಡಿಯಿಂದ ಸಂಸ್ಕೃತಿಯನ್ನು ಉದ್ಧರಿಸಲು ಸಾಧ್ಯವಿಲ್ಲ, ಸಂಪತ್ತನ್ನು ಉದ್ಧರಿಸಬಹುದು. ಆದ್ದರಿಂದ ಅಸಂಭವನೀಯ ಮತ್ತು ಅಸತ್ಯವಾದ ಕಾರಣಗಳನ್ನು ಕಲ್ಪಿಸಿ ಮುಂಚಿನ ಇತಿಹಾಸವನ್ನು ಮರೆಪಡಿಸಲು ಯಾರೆ ಬೇಕಷ್ಟು ಯತ್ನಿಸಲಿ, ಆದರೆ ಅದು ಸಾಧ್ಯವಾಗುವಂತಿಲ್ಲ. ಇಂಥ ಪ್ರಯತ್ನದಿಂದ ಪ್ರಯತ್ನಪಡುವವರ ಅಸತ್ಪ್ರಯತ್ನವು ಮಾತ್ರ ಪ್ರತ್ಯಯಕ್ಕೆ ಬರುವುದು.

ಬರ್ಕನಹೆಡ್ ಸಾಹೇಬರು ಸ್ವಾರ್ಥಮಗ್ನರಾದ ಕಾರಣ ಹೇಗೆ ಮುಂಚಿನ ಇತಿಹಾಸದಸ್ವರೂಪವನ್ನು ವಿಪರ್ಯಸ್ತ ಪಡಿಸಲು ಒದ್ದಾಡುತ್ತಿದ್ದಾರೊ ಹಾಗೆಯೆ ಇಂಗ್ಲಿಷರು ಹಿಂದುಸ್ಥಾನವನ್ನು ಬಿಟ್ಟಲ್ಲಿ ಹಿಂದುಸ್ಥಾನದೊಳಗೆ ಅರಾಜಕತ್ವ ಉಂಟಾಗಿ ಭಯಂಕರ ಅನರ್ಥಗಳು ಬಂದೊದಗುವವೆಂದು ನಿಷ್ಕಾರಣವಾಗಿ ಆತ್ಮಶ್ಲಾಘೆಯನ್ನು, ಭೀತಿಯನ್ನೂ ಏಕಕಾಲದಲ್ಲಿ ವ್ಯಕ್ತಗೊಳಿಸುತ್ತಿದ್ದಾರೆ. ಬರ್ಕನಹೆಡ್ಡರ ಈ ಸಮ್ಮಿಶ್ರ ಮನೋಭಾವನೆಯ ಅನುಕಂಪನೀಯವಾದ ಸ್ಥಿತಿಯನ್ನು ಕಂಡು ಯಾರೂ ನಗದೆ ಇರಲಿಕ್ಕಿಲ್ಲ. ಟಿಟ್ಟಿಭವು ಆಕಾಶ ಸಂರಕ್ಷಣದ ಗೌರವವನ್ನು ಹೊತ್ತುಕೊಳ್ಳುವಂತೆ ನಮ್ಮ ಭಾರತ ಮಂತ್ರಿಗಳು ಹಿಂದೂಸ್ಥಾನ ಸಂರಕ್ಷಣದ ಪ್ರೌಢಿಯನ್ನು ಮೆರೆಯುತ್ತಿದ್ದಾರೆ. ಬ್ರಿಟಿಷರನ್ನು ಇಲ್ಲಿಂದ ಹೊರಟುಹೋಗಲು ಯಾರು ತಾನೆ ಹೇಳುತ್ತಿದ್ದರೆ? ಸ್ವಕಪೋಲಕಲ್ಪಿತ ಕಾರಣವನ್ನು ಮುಂದೆ ಮಾಡಿ ಇನ್ನಷ್ಟು ಒತ್ತಾಳಿಕೆಯನ್ನು ಬೆಳಸಲು ಇಂಥ ಅಧಿಕಾರಿಗಳು ಬೇಕೆಂದು ಸುವರ್ಣಸಮಯವನ್ನು ಹುಡುಕುತ್ತಿರುವರು. ಇವರ ಭಾಷಣವಾದರೂ ಇದೆ ವರ್ಗಕ್ಕೆ ಸೇರಿದ್ದಾಗಿದೆ. ಇನ್ನು ಮುಂದೆ ಒತ್ತಾಳಿಕೆಯನ್ನು ಹೆಚ್ಚಿಸಲು ಇದು ಪೂರ್ವ ಸೂಚನೆಯು. ಹಿಂದುಸ್ಥಾನವನ್ನು ಬಿಟ್ಟು ಹೋಗಲು ಇಲ್ಲಿಯ ಜವಾಬುದಾರವಾದ ಯಾವ ಸಂಸ್ಥೆಯು ಕೂಡ ನಿಮಗೆ ಹೇಳಿಲ್ಲ. “ನಿವು ಕತ್ತಿಯ ಹದವಾದ ಬಾಯಿಂದ ಹಿಂದೂಸ್ಥಾನವನ್ನು ಸಂಪಾದಿಸಿದ್ದು” ಎಂದು ಹೇಳುವ ಮಾತು ಹೇಗೆ ಸುಳ್ಳಾಗಿದೆಯೊ ಹಾಗೆಯೆ ಹಿಂದಿಗಳು ತಮ್ಮನ್ನು ಓಡಿಸುತ್ತಿದ್ದಾರೆಂದು ಹೇಳುವದೂ ಸುಳ್ಳಾಗಿದೆ. ಈಗ ಒಂದು ವೇಳೆ ವಾದಕ್ಕಾಗಿ “ನಿಮ್ಮನ್ನು ಹಿಂದುಸ್ಥಾನದಿಂದ ಹೋಗಲು ಹೇಳಿದರೆಂದೂ, ಆ ಪ್ರಕಾರ ನೀವು ಹಿಂದಿಗಳ ರಾಜ್ಯವನ್ನು ಒಪ್ಪಿಸಿ ಹೋದರೆಂದೂ ಭಾವಿಸೋಣ. ಆದರೆ ಅನಂತರ ಇಲ್ಲಿ ಅರಾಜಕತೆ ಬಂದೀತೆಂದು ನೀವು ಯಾಕೆ ಭಯಪಡಬೇಕು? ನೀವು ೧೫೦ ವರ್ಷದ ದೀರ್ಘ ಸಮಯದಲ್ಲಿ ಇಲ್ಲಿಯ ಜನರಿಗೆ ಶಿಕ್ಷಣವನ್ನು ಕೊಡಲಿಲ್ಲ? ಇವರಲ್ಲಿ ಸ್ವಯಂಶಾಸನದ ಪಾತ್ರತೆಯನ್ನು ಹುಟ್ಟಿಸಲಿಲ್ಲವೆ? ಇಲ್ಲವಾದರೆ ಈ ತಪ್ಪು ಯಾರ ಕಡೆಗೆ ಬರುತ್ತದೆ ಎಂಬನ್ನಾದರೂ ಆಲೋಚಿಸದೆ ಹಿಂದುಸ್ಥಾನದ ಕಡೆಯಿಂದ ನಾ ಹೇಳುವದಾದರೆ, ನಿಮ್ಮ ಆ ದೊಡ್ಡಸ್ತಿಕೆಯ ಮಾತು, ಆ ಯೋಚನೆಯು ಇವೆರಡೂ ಟಿಟ್ಟಿಭ ಪಕ್ಷಿಯ ಗರ್ವದಂತೆ ಮತ್ತು ಭಯದಂತೆ ವ್ಯರ್ಥವಾಗಿವೆ. ಕಾಲ್ಪನಿಕ ಭಯವನ್ನು ಬಿಟ್ಟು ಪರೀಕ್ಷಾರ್ಥವಾಗಿಯಾದರೂ ಹಿಂದಿಗಳ ಅಪೇಕ್ಷೆಯು ನಿಮ್ಮ ಮೇಲ್ಪಂಕ್ತಿಯನ್ನಿಟ್ಟು ಅವರ ರಾಜ್ಯಸೂತ್ರಗಳನ್ನು ಅವರ ಕೈಗೆ ಒಪ್ಪಿಸಿಯಾದರೂ ನೋಡಿರಿ. ಅವರು ನಿಮ್ಮ ಯೋಚನೆಯಂತೆ ಅನರ್ಥಕ್ಕೆ ಗುರಿಯಾದ್ದಲ್ಲಿ, ಅನಂತರ ನೀವು ಈ ಪದವನ್ನು ಗಟ್ಟಿಯಾಗಿ ಬಿಗಿಯಬಹುದು. ಅಲ್ಲಿ ವರೆಗಾದರೂ ಈ ಭಯವನ್ನು ಬಿಟ್ಟು ಸುಮ್ಮ ಸ್ವರಾಜ್ಯದ ಹಕ್ಕುಗಳನ್ನು ಬಿಟ್ಟುಬಿಡಿರಿ. ಇದೆ ಹಿಂದುಸ್ಥಾನದ ಹೇಳಿಕೆಯಾಗಿದೆ.

ಸ್ಫುಟವಿಚಾರಗಳು.

೧. ಲೊರ್ಡ ಬರ್ಕನಹೆಡ್ಡರು ಹಿಂದೂಸ್ಥಾನಕ್ಕೆ ಹೊಸ ಹಕ್ಕುಗಳನ್ನು ಕೊಡುವರ ಬದಲಾಗಿ ಕತ್ತಿಯ ಬಾಯಿಯ ಸ್ಮರಣವನ್ನು ಹೇಗೆ ತಂದುಕೊಟ್ಟಿದ್ದಾರೆಂಬುದು ಅಗ್ರಲೇಖದಿಂದ ವಾಚಕರಿಗೆ ಸ್ಪಷ್ಟವಾಗಿದೆ. ಇವರ ಭಾಷಣದಿಂದ ಹಿಂದೂಸ್ಥಾನದಲ್ಲೆಲ್ಲ ಕಡೆಗಳಲ್ಲಿ ಅಸಮಾಧಾನವುಂಟಾಗಿದೆ. ಇದರ ಮನೋಯೋಗ್ಯವಾದ ಪ್ರತಿ ಮಾತು ಕೊಡುವದಿದ್ದರೆ [illegible] ನಿಲ್ಲಿಸುವ ಸಿವಿಲ್ ಡಿಸ್‌ಒಬಿಡಿಯನ್ಸನ್ನು ಪ್ರಾರಂಭಿಸೆಂದು ಶ್ರೀ. ಜಮನಾದಾಸ ಮೇಥರು ಹೇಳುತ್ತಿದ್ದಾರೆ. ಲಾಲಾ ಲಜಪತರಾಯರಂತೂ ಸಿಮ್ಲಾದಲ್ಲಿ ಕೊಟ್ಟ ಒಂದು ಭಾಷಣದಲ್ಲಿ ಬರ್ಕನಹೆಡ್ಡರ ವಿಧಾನಗಳನ್ನು ಸರಿಯಾಗಿ ಖಂಡಿಸಿರುವರು. “ಬರ್ಕನಹೆಡ್ಡರು ಇಂಥ ನುಡಿಗಳನ್ನು ನುಡಿದದ್ದು ಚಲೋದಾಯಿತು. ಏನಾದರೂ ಸಿಕ್ಕಬಹುದೆಂದು ಆಶಾವಾದಿಗಳಾಗಿ ನೋಡುತ್ತಿದ್ದವರ ಭ್ರಮೆಯು ಇನ್ನಾದರೂ ಹೋದೀತೆಂದು ತಿಳಿಯಬಹುದಾಗಿದೆ. ಕತ್ತಿಯಿಂದಲೆ ಹಿಂದೂಸ್ಥಾನವು ಸಂರಕ್ಷಿಸಲ್ಪಡುತ್ತಿದೆ ಎಂದು ಸ್ಪಷ್ಟೋಕ್ತಿಯನ್ನಾಡಿ ಜನರ ಕಣ್ಣನ್ನು ತೆರೆದದ್ದು ಬಹಳ ಚಲೋದು. ಆದರೆ ಹಿಂದುಗಳು ತಮ್ಮ ಸಂಘಟನೆಯನ್ನು ಸರಿಪಡಿಸಿಕೊಂಡು ಬಲವಂತರಾಗುವುದೆ ಬರ್ಕನಹೆಡ್ಡರಿಗೆ ಸಮರ್ಪಕವಾದ ಉತ್ತರವು”. ಇಷ್ಟು ಸಂಗತಿಗಳನ್ನು ಹೇಳಿ ಲಾಲಾಜಿಯವರು ಯುರೋಪದೊಳಗಿನ ಇತಿಹಾಸದ ಆಧಾರದಿಂದಲೂ, ಇಲ್ಲಿನ ಮುಂಚಿನ ಇಂಗ್ಲಿಷರ ಚರಿತ್ರೆಯ ಆಧಾರದಿಂದಲೂ ಬರ್ಕನಹೆಡ್ಡರ ಪ್ರತಿ ಒಂದು ವಿಧಾನವನ್ನು ಅವರ ಸೆರಗಿಗೆ ಕಟ್ಟಿರುವರು. ಬರ್ಕನಹೆಡ್ಡರ ಭಾಷಣವು ರಾಷ್ಟ್ರೀಯ ಪಕ್ಷದವರಿಗಂತಲೆ ಅಲ್ಲ, ಮಾಜಿ ಮಂತ್ರಿಗಳಾದ ಸಿ. ವಾಯ್. ಚಿಂತಾಮಣಿಗಳಂಥ ಶಾಂತಪಕ್ಷದವರಿಗೂ ಕೂಡ ರುಚಿಸಲಿಲ್ಲ. ಅವರು ಬರ್ಕನಹೆಡ್ಡರ ಮಾತು ಅದೂರದರ್ಶಿತೆಯದಾಗಿದೆ ಎಂಬುದಾಗಿ ಅಭಿಪ್ರಾಯ ಪಟ್ಟಿರುವರು. ಈ ಮೇರೆಗೆ ದೇಶದಲ್ಲಿ ಸರ್ವತ್ರ ಭಾರತ ಮಂತ್ರಿಗಳ ಭಾಷಣದಿಂದ ಅಸಮಾಧಾನವುಂಟಾದ ಕಾರಣ ಎಲ್ಲರೂ ಅವರ ಭಾಷಣವನ್ನು ನಿಷೇಧಿಸುತ್ತಿದ್ದಾರೆ. ಇದೆ ಸಂದರ್ಭದಲ್ಲಿ ಲೊರ್ಡ ಮೆಸ್ಟನರು ಮುಂದೆ ಬಂದು ಹಿಂದೂಸ್ಥಾನಕ್ಕೆ ಹೊಸ ಹಕ್ಕುಗಳನ್ನು ಇಷ್ಟು ಬೇಗನೆ ಕೊಡುವುದು ಉಚಿತವಲ್ಲ, ಅಲ್ಲಿ ಪ್ರಾರಂಭಿಸಿರುವ ದ್ವಿದಲಪದ್ಧತಿಗೆ ಸರಿಯಾದ ಅವಕಾಶವನ್ನು ಇನ್ನೂ ಕೊಟ್ಟಿಲ್ಲ, ಅದನ್ನು ಕೊಟ್ಟಲ್ಲಿ ದ್ವಿದಲಪದ್ಧತಿಯು ಎಂದೂ ಅಯಶಸ್ವಿಯಾಗಲಿಕ್ಕಿಲ್ಲವೆಂಬಿತ್ಯಾದಿ ಮತಗಳನ್ನು ಪ್ರಕಟಿಸುತ್ತಿದ್ದಾರೆ. ಬರ್ಕನಹೆಡ್ಡರ ಗದರಿಸುವಿಕೆ, ಮೆಸ್ಟನ್ ಸಾಹೇಬರ ಲೇಖನ ಇತ್ಯಾದಿಗಳನ್ನು ನೋಡುವಾಗ ಹಿಂದೂಸ್ಥಾನಕ್ಕೆ ಹೊಸ ಹಕ್ಕುಗಳು ಸಿಗುವದರ ಬದಲು ಒತ್ತಾಳಿಕೆಯೆ ಪ್ರಾರಂಭವಾದೀತೊ ಎಂದು ತೋರುತ್ತಿದೆ. ಮತ್ತು ಆದ್ದರಿಂದಲೆ ಲಾಲಾ ಲಜಪತರಾಯರಂಥವರು ಜನತೆಗೆ ಧೈರ್ಯಗೊಡಿಸಿ ಉದ್ಯೋಗವಮಾಡಲುಪದೇಶಿಸುತ್ತಿದ್ದಾರೆ.

೨. ಲಾಲಾ ಲಜಪತರಾಯರಂಥ ದೇಶಭಕ್ತರು ಹಿಂದಿ ಜನರಲ್ಲಿ ಐಕ್ಯ, ಸಾಮರ್ಥ್ಯ, ಕಾರ್ಯಪರತೆ ಮುಂತಾದ ರಾಷ್ಟ್ರೀಯತ್ವಕ್ಕೆ ಪೋಷಕಗಳಾದ ಗುಣಗಳನ್ನು ತರಲು ಪ್ರಯತ್ನಿಸುತ್ತಿರುವಾಗ, ವಿ. ಜೆ. ಪಟೇಲ ಜಮನಾದಾಸ ಮೇಥರಂಥವರು ನೂಲಿನ ಮತದಾನದ ಶರ್ತವನ್ನು ತೆಗೆದುಹಾಕಿ ರಾಷ್ಟ್ರೀಯ ಸಭೆಯ ಬಾಗಿಲನ್ನು ಎಲ್ಲರಿಗೆ ತೆರದು ಕೊಡಬೇಕೆಂದು ಚಳವಳವನ್ನು ಮಾಡುತ್ತಿರುವಾಗ ಹಾಗು ಈ ಎಲ್ಲ ಪ್ರಯತ್ನಗಳಿಂದ ಏಕೀಕೃತವಾದ ರಾಷ್ಟ್ರವು ಬರ್ಕನಹೆಡ್ಡರಿಗೆ ಸರಿಯಾದ ಪ್ರತ್ಯುತ್ತರವನ್ನು ಕೊಡಬೇಕೆಂದು ಹಿಂದೂಸ್ಥಾನದಲ್ಲಿ ಜಾಗೃತಿಯನ್ನು ಹುಟ್ಟಿಸುತ್ತಿರುವಾಗ ಮಿಸೆಸ್ ಎನಿಬಿಝೆಂಟರು ಕೊಮನ್‌ವೆಲ್ತ ಬಿಲನ್ನು ಪಾರ್ಲಿಮೆಂಟಿನಲ್ಲಿ ತರಲು ಮತ್ತು ಅಲ್ಲಿಯ ವಾತಾವರಣವನ್ನು ಅನುಕೂಲಿಸಿಕೊಳ್ಳಲು ಕಳೆದ ವಾರ ವಿಲಾಯತಿಗೆ ತೆರಳಿರುವರು. ಹಿಂದೂಸ್ಥಾನದಲ್ಲಿ ಜಾಗೃತಿ, ನಿಶ್ಚಯ, ಅವಿರತ ಪ್ರಯತ್ನ ಇವು ಅವಶ್ಯವಿರುವಂತೆ ವಿಲಾಯತಿಯಲ್ಲಿ ಪ್ರಚಾರಕಾರ್ಯ, ಅಲ್ಲಿಯವರ ಸಹಾನುಭೂತಿ ಮತ್ತು ದೀರ್ಘೋದ್ಯೋಗ ಇವು ಕೂಡ ಅವಶ್ಯವಾಗಿವೆ. ಸ್ವಾವಲಂಬನದ ಶಬ್ದಾರ್ಥವನ್ನು ಅತ್ಯುತ್ಕಟಪಡಿಸಿ ಹಿಂದೂಸ್ಥಾನವು ಇತ್ತಲಾಗೆ ನಾಲ್ಕೈದು ವರ್ಷಗಳಿಂದ ವಿಲಾಯತಿಯೊಳಗಿನ ಮತ್ತು ಇತರ ದೇಶಗಳೊಳಗಿನ ಪ್ರಚಾರ ಕಾರ್ಯಕ್ಕೆ ರಜೆಯನ್ನು ಕೊಟ್ಟಿತ್ತು. ಈ ಔದಾಸೀನ್ಯವು ಆತ್ಮಘಾತಕವಾದುದೆಂದೆನಿಸಿ ಮಿ। ಸತ್ಯಮೂರ್ತಿಯಂಥವರು ಸ್ವರಾಜ್ಯ ಪಕ್ಷದ ಪರವಾಗಿ ವಿಲಾಯತಿಯಲ್ಲಿ ಹಿಂದಿ ಸ್ವರಾಜ್ಯ ಕಾರ್ಯವನ್ನು ಮುಂದುವರಿಯಲು ವಿಲಾಯತಿಗೆ ಹೋಗಿರುವ ಇದೆ ಸಂದರ್ಭದಲ್ಲಿ ಡೊಕ್ಟರ ಬಿಝೆಂಟರು ಕೂಡ ತಮ್ಮ ಬಿಲನ್ನು ಪಾರ್ಲಿಮೆಂಟಿನಲ್ಲಿ ತರುವಂತೆ ಹೋಗುತ್ತಿದ್ದಾರೆ, ಇದು ಸಮಾಧಾನದ ಮಾತಾಗಿದೆ. ಬಿಝೆಂಟಮ್ಮನವರ ಬಿಲಿಗೆ ರಾಷ್ಟ್ರೀಯ ಸಭೆಯು ಹಾಗು ಇತರ ರಾಜಕೀಯ ಸಂಸ್ಥೆಗಳು ತಮ್ಮ ಸಮ್ಮತಿಯ ಮುದ್ರೆಯನ್ನು ಒತ್ತಿದ್ದಾದರೆ ಅದರ ಭಾರವು ಇನ್ನಷ್ಟು ಹೆಚ್ಚಾಗುತ್ತಿದ್ದಿತು. ಆದರೆ ರಾಷ್ಟ್ರೀಯ ಸಭೆಯ ಈಗಿನ ಪರಿಸ್ಥಿತಿಯಲ್ಲಿ ಈ ಅಪೇಕ್ಷೆಗೆ ಆಸ್ಪದವಿಲ್ಲ. ತಥಾಪಿ ರಾಷ್ಟ್ರದೊಳಗಿನ ಮುಖ್ಯ ಮುಖ್ಯ ರಾಜಕೀಯ ತಂಡದೊಳಗಿನ ಎಲ್ಲ ಮುಖಂಡರು ಈ ಬಿಲಿಗೆ ಅನುಮತಿನಿದರ್ಶಕವಾದ ತಮ್ಮ ದಸ್ಕತುಗಳನ್ನು ಕೊಟ್ಟಿದ್ದಾರೆ, ಇದಾದರೂ ಒಂದು ಸಮಾಧಾನಕರವಾದ ವಿಷಯವೆ ಸರಿ. ಡೊ. ಬಿಝೆಂಟ ಬಾಯಿಯವರ ಈ ಪ್ರಯತ್ನವು ಯಶಸ್ವಿಯಾಗಲೆಂದು ನಾವು ಅಂತಃಕರಣಪೂರ್ವಕವಾಗ ಬಯಸುವೆವು.

೩. ಬಕ್ರೀದಿನ ದಿವಸಗಳು ಈಗ ದಾಟಿದವು. ಗತ ವರ್ಷದ ಅನುಭವದಿಂದ ಈ ವರ್ಷವೂ ಪುನರಪಿ ದಿಲ್ಲಿ ಮುಂತಾದ ಕಡೆಗಳಲ್ಲಿ ದಂಗೆಗಳು ಉದ್ಭವಿಸಿಯಾವೊ ಎಂಬುದೊಂದು ಭೀತಿ ಇತ್ತು. ಆದರೆ ದಿಲ್ಲಿ, ಲಾಹೋರ ಇತ್ಯಾದಿ ಕಡೆಗಳಲ್ಲಿ ವಿಶೇಷವಾದ ಗಲಾಟೆಯೊಂದೂ ಆಗದೆ ಶಾಂತರೀತಿಯಿಂದ ಬಕ್ರೀದಿನ ಹಬ್ಬವು ಮುಗಿದಿದೆ. ಆದರೆ ವರನ ಬಾಶಿಂಗಕ್ಕೆ ಮತ್ತು ಇತರ ಅಲಂಕಾರಗಳಿಗೆ ದೃಷ್ಟಿದೋಷವು ತಗಲಬಾರದೆಂದು ಅವನ ಗಲ್ಲದ ಮೇಲೆ ಕಾಡಿಗೆಯ ಒಂದು ಬೊಟ್ಟನ್ನು ಹಚ್ಚುವ ವಾಡಿಕೆಯು ಹೇಗಿದೆಯೊ ಅದರಂತೆಯೆ ಎಲ್ಲ ಕಡೆಗಳಲ್ಲಿ ಇದು ಶಾಂತರೀತಿಯಿಂದ ಮುಗಿದರೆ ದೃಷ್ಟಿಯಾದೀತೆಂದು ತಿಳಿದೊ ಏನಂತೆ ಕಲಕತ್ತೆಯಲ್ಲಿ ಈ ಬಕ್ರೀದಿನ ಸಮಯದಲ್ಲಿ ಅತ್ಯಾಚಾರವು ನಡೆಯಿತು. ಈ ಅತ್ಯಾಚಾರದ ಮೂಲಪ್ರವರ್ತಕರು ಯಾರು, ಹಿಂದು ಮಹಮ್ಮದೀ ಈ ಎರಡು ಪಕ್ಷಗಳ ಪೈಕಿ ಪ್ರಥಮತಃ ಯಾರು ಗಲಾಟೆಯನ್ನು ಪ್ರಾರಂಭಿಸಿದರು ಇತ್ಯಾದಿ ಸತ್ಯ ಸಂಗತಿಗಳು ಸರಿಯಾದ ತನಿಖೆಯ ಮುಖಾಂತರ ಸ್ಪಷ್ಟವಾಗಿ ಹೊರಬೀಳುವ ವರೆಗೆ, ತತ್ಕಾಲಕ್ಕೆ ಉಪಲಬ್ಧವಾದಿರುವ ವೃತ್ತಾಂತದ ಮೇಲಿಂದ ಹಿಂದುಗಳ ಕಡೆಗೆನೆ ದೋಷದ ಅಂಶವು ಬಂದಿದೆ. ಮಹಾತ್ಮಾಜಿಗಳು ಹಿಂದುಗಳಿಗೆ ಇಂಥ ಅಕೃತ್ಯವನ್ನು ಮಾಡಬಾರದೆಂಬುದಕ್ಕಾಗಿ ಸದುಪದೇಶವನ್ನು ಮಾಡಿರುವರು. ತಪ್ಪು ಮಾಡಿದ ಹಿಂದುಗಳು ತಮ್ಮ ತಪ್ಪನ್ನು ಒಪ್ಪಿ ಜೈಲನ್ನೂ ಇತರ ವಿಧದ ಪ್ರಾಯಶ್ಚಿತ್ತವನ್ನೂ ಅನುಭವಿಸುವುದು ಅಗತ್ಯವಾಗಿದೆ ಎಂಬುದಾಗಿ ಮಹಾತ್ಮಾಜಿಗಳು ಒತ್ತಿಹೇಳಿರುವರು. ಕಲಕತ್ತೆಯಲ್ಲಿ ಯಾವ ಯಾವ ರೀತಿಯಿಂದ ಅತ್ಯಾಚಾರವು ನಡೆಯಿತೆಂಬುದನ್ನು ಇನ್ನೊಂದು ಕಡೆಯಲ್ಲಿ ಕೊಟ್ಟಿದ್ದೇವೆ. ಅನಂತರ ಕೈಗೆ ಸೇರಿದ ವರ್ತಮಾನದ ಮೇಲಿಂದ ಪೋಲಿಸರು ಈ ದಂಗೆಯಲ್ಲಿ ಭಾಗವನ್ನೆತ್ತಿದವರ ಪೈಕಿ ಇದು ವರೆಗೆ ೧೧ ಜನರನ್ನು ಕೈದುಮಾಡಿದ್ದಾಗಿ ಕಂಡುಬರುತ್ತದೆ. ಇರಲಿ, ಈ ದಂಗೆಯು ಯಾರಿಂದಲೆ ಉದ್‌ಭವಿಸಿದ್ದಿರಲಿ, ಹಿಂದು ಮಹಮ್ಮದೀಯರ ಐಕ್ಯಕ್ಕೆ ಸ್ವಾರ್ಥತ್ಯಾಗ ಪೂರ್ವಕವಾಗಿ ಸಂಪೂರ್ಣ ಮನಸ್ಸಿನಿಂದ ಪ್ರಯತ್ನಪಟ್ಟ ದೇಶಬಂಧು ದಾಸರು ವಾಸಿಸಿಕೊಂಡಿದ್ದ ಕಲಕತ್ತಾ ಪಟ್ಟಣದಲ್ಲಿ ಅವರು ಕಣ್ಮರೆಯಾದ ಕೂಡಲೆ ಇಂಥ ದಂಗೆಗಳು ಸಂಭವಿಸುವುದು ಅತ್ಯಂತ ಶೋಚನೀಯವಾಗಿವೆ. ತಪ್ಪುಗಾರರಾದ ಹಿಂದುಗಳು ಮಹಾತ್ಮರ ಉಪದೇಶಾನುಸಾರವಾಗಿ ವರ್ತಿಸುವುದು ರಾಷ್ಟ್ರದ ಐಕ್ಯದ ದೃಷ್ಟಿಯಿಂದ ಹಿತಾವಹವಾಗಿದೆ ಎಂಬುದನ್ನು ಯಾವ ಹಿಂದುವೂ ಅಲ್ಲಗಳೆಯಲಿಕ್ಕಿಲ್ಲ.

೪. ಆದರೆ ನಮ್ಮ ಪ್ರಾಂತದಲ್ಲಿ ಎಂಗ್ಲೊ ಇಂಡಿಯನ್ ಮೂರ್ಧನ್ಯವಾದ ಮದ್ರಾಸ ಮೈಲ್‌ಪತ್ರಿಕೆಯು ಕುತ್ಸಿತ ಬುದ್ಧಿಯಿಂದ ಕಲಕತ್ತೆಯ ಈ ದಂಗೆಯ ಸಂಬಂಧವನ್ನು ಲಾಲಾ ಲಜಪತರಾಯರ ಹಿಂದು ಸಂಘಟನೆಗೆ ಜೋಡಿಸಿ ಲಾಲಾಜಿಯವರ ಮೇಲೂ, ಅವರ ಸಹಕಾರಿಗಳ ಮೇಲೂ, ಅವರ ಸಂಘಟನದ ಚಳವಳದ ಮೇಲೂ ಯಥೇಚ್ಛವಾಗಿ ಬೈಗಳನ್ನು ಸುರಿಸ ಹತ್ತಿದೆ. ವಾಸ್ತವವಾಗಿ ಹೇಳುವುದಾದರೆ ಲಾಲಾ ಲಜಪತರಾಯರ ಹಿಂದು ಸಂಘಟನೆಕ್ಕೂ ಕಲಕತ್ತೆಯ ದಂಗೆಗೂ ಯಾವ ಸಂಬಂಧವೂ ಇಲ್ಲ. ಇಷ್ಟು ವರ್ಷಗಳಲ್ಲಿ ಎಲ್ಲಿಯೊ ತಪ್ಪಿ ಕೆಲವು ಹಿಂದುಗಳಿಂದ ಕಲಕತ್ತೆಯಲ್ಲಿ ಈ ಒಂದು ತಪ್ಪು ಸಂಭವಿಸಿತು. ಅಷ್ಟಕ್ಕೆ ಲಾಲಾಜಿಗಳ, ಮತ್ತು ಹಿಂದು ಸಂಘಟನದ ಸಂಬಂಧವನ್ನು ತಂದು ಜೋಡಿಸ ಹತ್ತಿದರೆ ಪ್ರತಿ ವರ್ಷ ಎಷ್ಟೊ ಕಡೆಗಳಲ್ಲಿ ಹಿಂದುಗಳ ಮೇಲೆ ಅತ್ಯಾಚಾರಗಳು ನಡಿಸಲ್ಪಟ್ಟಿರುತ್ತವೆ, ಅವುಗಳಿಗೆ ಜವಾಬುದಾರರು ಯಾರು? ಮದ್ರಾಸ ಮೈಲ್ ಪತ್ರಿಕೆಯವರೊ ಅಥವಾ ಇತರರೊ? ಈ ತಂದ ಬಾದರಾಯಣ ಸಂಬಂಧವನ್ನು ಕಲ್ಪಿಸುವುದು ಎಂಗ್ಲೊ ಇಂಡಿಯನ ಪತ್ರಿಕೆಗಳಿಗೆ ಮಾತ್ರ ಒಪ್ಪುತ್ತದಲ್ಲದೆ ವಿಚಾರವಂತರು ಇದಕ್ಕೆ ಹಾಸ್ಯಮಾಡದೆ ಇರಲಿಕ್ಕಿಲ್ಲ.

೫. ಲೋಕಪ್ರಿಯ ಮುಖಂಡರಾದ ಪಂಡಿತ ಮೋತಿಲಾಲ ನೇಹರುಗಳವರು ಶ್ವಾಸಕಾಸದಿಂದ ಪೀಡಿತರಾದ ಕಾರಣ ಹವೆಯನ್ನು ಬದಲಾಯಿಸಲು ಪಂಜಾಬ ಪ್ರಾಂತಕ್ಕೆ ಹೋದವರು ಈಗ ಅಲಹಾಬಾದಕ್ಕೆ ಹಿಂತಿರುಗಿ ಬರುತ್ತಿದ್ದಾರೆ, ಶ್ವಾಸಕಾಸದೊಟ್ಟಿಗೆನೆ ಇತ್ತಲಾಗೆ ನಿದ್ರಾಭಂಗದ ವಿಕಾರವು ಸಂಭವಿಸಿರುವ ಕಾರಣ ಅವರ ಆರೋಗ್ಯದ ಬಗ್ಗೆ ದೇಶದಲ್ಲಿ [illegible] ಯೋಚನೆಯುಂಟಾಗುವುದು ಸಹಜ. ಪಂಡಿತ ನೇಹರುಗಳವರು [illegible] ಮೇಲಿಂದ ದೇಶಬಂಧುಗಳ ಆಕಸ್ಮಿಕ ನಿಧನದ ವಾರ್ತೆಯಿಂದ ಪಂಡಿತಜಿಯವರಿಗೆ ಮನೋವ್ಯಸನವು ಹೆಚ್ಚಾಗಿ ಆ ಕಾರಣದಿಂದ ನಿದ್ರಾಭಂಗವು ಸಂಭವಿಸಿದೆಂದು ಕಂಡುಬರುತ್ತದೆ. ಈ ಮಧ್ಯದಲ್ಲಿ ಒಂದೆರಡು ದಿವಸ ಅವರಿಗೆ ಜ್ವರವು ಕೂಡ ಬಂದಿತ್ತು. ಆದರೆ ಈಗ ಕೆಲವು ಮಟ್ಟಿಗೆ ಆರೋಗ್ಯವುಂಟಾಗಿರುವುದರಿಂದ ಅವರು ಅಲಹಾಬಾದಿಗೆ ಬರುತ್ತಿದ್ದಾರೆ. ಅಲ್ಲಿಂದ ಅವರು ಸ್ವರಾಜ್ಯಪಕ್ಷದ ಸಭೆಗೆ ಕಲಕತ್ತೆಗೆ ಹೋಗುವವರಿದ್ದಾರೆ. ಪಂಡಿತಜಿಯವರೆಂದರೆ [illegible]ಯೊಳಗಿನ ಸಿಂಹರು, ಸ್ವರಾಜ್ಯ ಪಕ್ಷದ ಪಂಚಪ್ರಾಣಗಳೆನ್ನಬಹುದು. ನೋಕರಶಾಹಿಯನ್ನು ಎದುರಿಸುವ ಮುಖಂಡರು. ಇಂಥವರ ಪ್ರಕೃತಿಗೆ ಆರೋಗ್ಯವುಂಟಾಗಿ ಅವರ ಕೈಯಿಂದ ದೇಶಸೇವೆಯು ನಡೆಯುತ್ತಿರಲೆಂದು ಪ್ರಾರ್ಥಿಸುವೆವು.

೬. ಲೋರ್ಡರ ಸಭೆಯಲ್ಲಿ ಬರ್ಕನ್‌ಹೆಡ್ಡರ ಸುಧಾರಣೆಗಳು ತಮ್ಮ ಮುಖದ ಮೇಲಿನ ಗೋಷವನ್ನು ತೆರೆದು ಎದುರು ಬಂದವು! ಯಾವ ಸುಧಾರಣೆಗಳೂ ಇಲ್ಲ. ಇದು ವರೆಗಿನ ಕೋಲಾಹಲವೆಲ್ಲ ವ್ಯರ್ಥವಾಯಿತು. ಇದು ವರೆಗೆ ಹಾಕಿಕೊಂಡಿರುವ ಮೋಗು ಈಗ ಬೈಲಿಗೆ ಬಿತ್ತು. ಹೊಸ ಹಕ್ಕುಗಳನ್ನು ಕೊಡಲು ಬರ್ಕನಹೆಡ್ಡರಿಗೆ ಮನಸ್ಸೂ ಆಗಲಿಲ್ಲ. ಕೈಯೂ ಬರಲಿಲ್ಲ. ಲೋರ್ಡರ ಸಭೆಯಲ್ಲಿ ಬರ್ಕನಹೆಡ್ಡರು ಮಾಡಿರುವ ಭಾಷಣದ ಫಲಶ್ರುತಿಯನ್ನು ರೂಟರನು ವಿಲಾಯತಿಯಿಂದ ಮೂರು ನಾಲ್ಕು ಮಾತುಗಳಿಂದ ತಿಳಿಸುತಿದ್ದಾನೆ. “೧೯೧೯ನೆಯ ಸುಧಾರಣಾ ಕಾಯಿದೆಯನ್ನು ತಿದ್ದಬೇಕೆಂಬುದು ನಿಜ. ಆದರೆ ದ್ವಿದಲ ಪದ್ಧತಿಯನ್ನು (ಇನ್ನೂ) ಒರೆಗೆ ಹಚ್ಚಬೇಕು. ಈಗಿನ ಸುಧಾರಣೆಗಳನ್ನು ಯಶಸ್ವಿಗಳನ್ನಾಗಿ ಮಾಡಲು ಹಿಂದಿಗಳು ತಮ್ಮ ನಿರ್ವ್ಯಾಜವಾದ ಸಹಕಾರವನ್ನು ಕೊಟ್ಟದ್ದು ನಿದರ್ಶನಕ್ಕೆ ತರದು ತೋರಿಸಿದರೆ ಕೂಡಲೆ ರೋಯಲ್ ಕಮಿಶನನ್ನು ನೇಮಿಸಲಾದೀತು. ಹಿಂದುಸ್ಥಾನದ ವಿಷಯವಾಗಿ ಲೋರ್ಡ ಬರ್ಕನಹೆಡ್ಡರು ಇಷ್ಟು ಸಂಗತಿಗಳನ್ನು ನುಡಿದು ತನ್ನ ಈ ಕಾರ್ಯದಲ್ಲಿ ಸಾಮ್ರಾಜ್ಯಾಂತರ್ಗತ ವಸಾಹತುಗಳ ಸಹಾನುಭೂತಿ ಅನುಕೂಲತೆ ಇತ್ಯಾದಿಗಳನ್ನು ಕೇಳಿಕೊಂಡಿದ್ದಾರೆ. ಇದನ್ನು ಕೇಳಿಕೊಳ್ಳುವಾಗ ಹಿಂದುಸ್ಥಾನದ ಜನಾಂಗವು ದೊಡ್ಡದು, ಆ ಪ್ರಾಚೀನವೂ ಘನವೂ ಅದ ಆ ಜನಾಂಗದ ಮನಸ್ಸಿಗೆ ಯಾವ ತರಹದಲೂ ನೋವುಂಟಾಗದಂತೆ ವಸಾಹತಿನವರು ವರ್ತಿಸಬೇಕೆಂದು ಕೇಳಿ ನುಡಿದಿದ್ದಾರೆ. ಆಯಿತು! ಲೊ. ಬರ್ಕನಹೆಡ್ಡರ “ಸ್ಟೇಟಮೆಂಟು” ಪ್ರಕಾಶಕ್ಕೆ ಬಂದದ್ದಾಯಿತು! ಇದರ ಮೇಲಿಂದ ಇವರಿಂದ ಹಿಂದುಸ್ಥಾನಕ್ಕೆ ಸಿಕ್ಕತಕ್ಕ ಅನುಗ್ರಹವು ಯಾವುದು ಎಂಬುದು ಕೂಡ ಈಗ ಸ್ಪಷ್ಟವಾಗಿ ವೇದ್ಯವಾಯಿತು. ಈಗಿನ ಸುಧಾರಣೆಗಳಲ್ಲಿ ತಿದ್ದುಪಾಟವಾಗಬೇಕೆಂದು ಹೇಳುವಾಗಲೆ ಅವುಗಳನ್ನೆ ಯಶಸ್ವಿಗಳನ್ನಾಗಿ ಮಾಡಿರಿ ಎಂದು ಹೇಳುವದು. ಬರಡು ಬೀಜವನ್ನು ಎಂದರೆ ನಿಸ್ಸಾರವಾದ ಬೀಜವನ್ನು ಕೊಟ್ಟು ಅದನ್ನು ಕೃಷಿ ಮಾಡಲು ಹೇಳುವಹಾಗೆಯೆ ಆಗಿದೆ! ದ್ವಿದಲ ಪದ್ಧತಿಯು ಯಾವಾಗಲೆ ನಿಷ್ಫಲವಾಗಿ ಹೋಗಿರುವಾಗ ಪುನಃ ಅದಕ್ಕೆ ರೆಕ್ಕೆ ಕಟ್ಟಿ ಹಾರಿಸಬೇಕೆಂದು ಬರ್ಕನಹೆಡ್ ಸಾಹೇಬರು ಉಪದೇಶಿಸುತ್ತಿದ್ದಾರೆ. ಎಂದರೆ ಅವರು ದ್ವಿದಲ ಪದ್ಧತಿ ಎಂಬುದು ಒಂದು ಗಾಳಿಪಟವೆಂದು ತಿಳಿಯುತ್ತಾರೊ ಏನೊ? ಒಂದು ಹಗ್ಗ ಕಡಿದು ಹೋದರೆ ಅದಕ್ಕೆ ಇನ್ನೊಂದನ್ನು ಕಟ್ಟಿ ಹುಡುಗರು ಅದನ್ನು ಹಾರಿಸುವುದುಂಟು! ಸಾರಾಂಶ ಬರ್ಕನಹೆಡ್ಡರು ಈ ವಿಷಯದಲ್ಲಿ ಬರೆ ನಾಟಕವನ್ನೆ ಮಾಡಿದ್ದಾರಲ್ಲದೆ ಹೃತ್ಪೂರ್ವಕವಾಗಿ ಸರ್ವಥಾ ಪ್ರವರ್ತಿಸಿದ್ದು ಕಂಡುಬರುವದಿಲ್ಲ. ಸುಧಾರಣೆಗಳನ್ನು ಕೇಳಿರುವ ಸಮಯದಲ್ಲಿ ಅವುಗಳನ್ನು ಕೊಡುವುದರ ಬದಲಾಗಿ ಹಿಂದುಜನಾಂಗದ ಪೂರ್ವಸಂಸ್ಕೃತಿ ಅವರ ಘನತೆ ಇತ್ಯಾದಿಗಳನ್ನು ಹೊಗಳುತ್ತ ಹೋದಲ್ಲಿ ಯಾವ ಪ್ರಯೋಜನವುಂಟಾಗುವಂತಿದೆ? “ವಚನೇಕಾ ದರಿದ್ರತಾ” ಎಂದು ಹೇಳಿದ ಮೇರೆಗೆ ಈ ಶುಷ್ಕೋಪಚಾರದಿಂದ ಯಾರ ಸಮಾಧಾನವೂ ಉಂಟಾಗುವಂತಿಲ್ಲ. ದೀಪದ ಸುದ್ದಿಯಿಂದ ಕತ್ತಲೆಯು ಹೋಗದಂತೆ ಊಟದ ಹೊಗಳಿಕೆಯಿಂದ ಯಾರ ಹೊಟ್ಟೆಯೂ ತುಂಬುವುದಿಲ್ಲ. ಹಾಗೆಯೆ ರಾಜಕೀಯ ಹಕ್ಕುಗಳನ್ನು ಕೊಡುವುದರ ಬದಲು ಒಣಮುಖಸ್ತುತಿಯನ್ನು ಮಾಡುವುದರಿಂದ ಜನರ ಅಸಂತೋಷವು ನಿವಾರಣವಾಗಲಿಕ್ಕಿಲ್ಲ. ಈ ಸತ್ಯವನ್ನರಿಯದೆ ಲೊ. ಬರ್ಕನಹೆಡ್ಡರು ಸುಧಾರಣೆ ಬದಲಿಗೆ ರೋಯಲ್ ಕಮಿಶನನ್ನು ಕೊಡುವವರಿದ್ದಾರೆ! ಅದು ಕೂಡ ಯಾವಾಗ? ಬೇಗನೆ! ಎಂದರೆ ಹಿಂದಿಗಳು ಈಗಿನ ಸುಧಾರಣೆಗಳನ್ನು ಯಶಸ್ವಿಗಳನ್ನಾಗಿ ಮಾತ್ರ ಮಾಡಬೇಕು! ಆದರೆ ಎಸೆಂಬ್ಲಿಯಲ್ಲಿ [illegible] ಇವರು ಮನಸ್ಸಿಗೆ ತಂದದ್ದಾದರೆ ರೋಯಲ್ ಕಮಿಶನಿನ ವಿಷಯವಾಗಿ ಹಿಂದಿಗಳ ಅಭಿಪ್ರಾಯವೇನಿದೆ ಎಂಬುದು ಇವರಿಗೆ ಸಹಜವಾಗಿ ಗೊತ್ತಾಗುತ್ತಿದ್ದಿತು. ನಿಜವಾಗಿ ಹೇಳುವದಾದರೆ ರೋಯಲ್ ಕಮಿಶನಿನ ವಿಷಯವಾಗಿ ಹಿಂದಿಗಳು ಆತುರ ಪಡುವುದಿಲ್ಲ. ಕಮಿಶನು ಮತ್ತು ಕಮಿಟಿಗಳನ್ನು ಹಿಂದಿಗಳು [illegible] ಎಂಬುದು ಬರ್ಕನಹೆಡ್ಡರಿಗೆ ಗೊತ್ತಿಲ್ಲವೆ? ಆದರೆ ಜನರಿಗೆ ಅಪ್ರಿಯವಾದದ್ದನ್ನು ಮಾಡುವುದೆ ಅಧಿಕಾರದ ಲಕ್ಷಣವೆಂದು ನೋಕರಶಾಹಿಯು ತಿಳಕೊಳ್ಳುವ ವಾಡಿಕೆ ಇರುವುದರಿಂದ, ಅವರು ರೋಯಲ್ ಕಮಿಶನನ್ನೆ ನೇಮಿಸಲೆಳಸು! ಎಂದಲ್ಲಿ, ಇವರ [illegible] ಹೃತ್ಪೂರ್ವಕ [illegible] ನಾವು ಪುನಃ ಇದನ್ನು ಧಿಕ್ಕರಿಸುವೆವು.

ಮಂಗಳೂರು.

ಇದೇ ಬರುವ ಆದಿತ್ಯವಾರ ತಾರೀಕು ೧೯—೭—'೨೫ರಲ್ಲಿ ರಾ| ಎಮ್. ಮಾಧವ ರಾವ್ ವಕೀಲ್ ಇವರು ವಾಸವಾಗಿರುವ ಕೋರ್ಟುಗುಡ್ಡೆ ಮನೆಯಲ್ಲಿ ಮಂಗಳೂರು ತಾಲೂಕು ಸ್ವರಾಜ್ಯಪಾರ್ಟಿಯ ಸಭೆಯು ಜರಗುವುದು. ಇದರಲ್ಲಿ ಉಪಾಧಿವಂತರನ್ನು ಚುನಾಯಿಸುವರು. ಸ್ವರಾಜ್ಯ ಪಾರ್ಟಿಗೆ ಸೇರುವ ಇಚ್ಛೆಯುಳ್ಳವರು, ಮೇಲೆ ಕಾಣಿಸಿದ ತಾರೀಕಿನ ಒಳಗೆ ಸೇರಬಹುದು ಎಂದು ತಿಳಿದುಬರುತ್ತದೆ.

ಕೆ. ಆರ್. ಕಾರಾಂತ.

The Calicut Bank, Ltd.,

ದಿ ಕೆಲಿಕಟ್ ಬೇಂಕ್, ಲಿಮಿಟೆಡ್,

ಹೆಡ್ ಆಫೀಸು— ಕಲ್ಲಿಕೋಟೆ.

ಬ್ರಾಂಚುಗಳು:— ಮುಲ್ಲಸ್‌ಚೇರಿ, ತಲಚೇರಿ, ಕೊಚ್ಚಿ ಮತ್ತು ಪಾಲ್ಘಾಟು.

ರಿಜಿಸ್ಟರ್ಡ್ ಮತ್ತು ಅಧಿಕಾರಗೊಳಿಸಲ್ಪಟ್ಟ ಮೂಲಧನ ರೂ. 5,00,000—0—0.

ರೂಪಾಯಿ 10ರ 50,000 ಪಾಲುಗಳು.

(30—8—1924)ರ ವರೆಗೆ ಮೌಲ್ಯ ಮೂಲಧನ ರೂಪಾಯಿ 1,81,850—0—0.

ಒಂದು ವರುಷದ ಕಾಯಂ ಠೇವಣಾತಿಗೆ ಬಡ್ಡಿ ದರ ಸೇಕಡಾ ರೂ. 7—8—0.

ಕಳೆದ 4 ವರುಷಗಳಲ್ಲಿ ಪಾಲುಗಾರರಿಗೆ ಸೇಕಡಾ 12ರಂತೆ ಬಡ್ಡಿ ಹಂಚಿದೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಸಿ. ಕೃಷ್ಣನ್, ಬಿ. ಎ. ಬಿ. ಎಲ್.,
ಮೆನೇಜಿಂಗ್ ಡ್ಯಾರೆಕ್ಟರ್.

ಡ್ಯಾರೆಕ್ಟರರಲ್ಲಿ ಒಬ್ಬರು—

ಎಮ್. ನಾರಾಯಣ. ಕಾಮತ್, ಬಿ. ಎ.,
ಪ್ಲೀಡರ್, ಕುಂದಾಪುರ

ಡೊ. ಎಚ್. ವಿ. ಅಡಪ್ಪರೆಂಬವರು ಅತ್ತಾವರದ ಮುನ್ಸಿಪಲ್ ಎಲಿಮೆಂಟರಿ ಸ್ಕೂಲಿನ ಎದುರು "ಎಲೆಕ್ಟ್ರೊ ಮೆಡಿಕಲ್ ಎಂಡ್ ಸರ್ಜಿಕಲ್ ಹೋಲ್" ಎಂಬ ಹೆಸರಿನಿಂದ ಒಂದು ಆಸ್ಪತ್ರೆಯನ್ನು ತೆರೆದಿರುವರು. ಇವರು ಮದ್ರಾಸಿನ ಸುಪ್ರಸಿದ್ಧ ಡೊ. ಶಂಕರ ನಾರಾಯಣ ಪಿಳ್ಳೆಯವರ ಕೈಕೆಳಗೆ ಅನೇಕ ವರ್ಷಗಳಿದ್ದು ಅವರ ಆಸ್ಪತ್ರೆಯಲ್ಲಿ ಅವರೊಡನೆ ಕೆಲಸಮಾಡಿ, ಅವರು ವಿಲಾಯತಿಗೆ ತೆರಳಿದಾಗ ಅವರ ಆಸ್ಪತ್ರೆಯನ್ನು ನಡಿಸಿ ಈ ರೀತಿಯಿಂದ ಧಾರಾಳವಾದ ಅನುಭವವನ್ನು ಸಂಗ್ರಹಿಸಿರುವರು. ಕಿವಿ, ಕಣ್ಣು, ಮೂಗು, ಗಂಟಲು ಈ ಅಂಗಗಳ ಚಿಕಿತ್ಸೆಯಲ್ಲಿ ಇವರು ಪ್ರಾವೀಣ್ಯವನ್ನು ಪಡೆದಿರುವರು. ಆದ್ದರಿಂದ ಡೊ. ಅಡಪ್ಪರ ಚಿಕಿತ್ಸಾಕ್ರಮವನ್ನು ಪಡಕೊಂಡು ಮಹಾಜನರು ಇವರನ್ನು ಪ್ರೋತ್ಸಾಹಿಸಬೇಕಾಗಿ ಒಬ್ಬ ಬಾತಮೀದಾರರು ತಿಳಿಸುತ್ತಾರೆ.

ದಕ್ಷಿಣ ಕನ್ನಡ ಜಿಲ್ಲಾ ಡಿಸ್ಟ್ರಿಕ್ಟ್ ಬೋರ್ಡಿನ ಜನರಲ್ ಮೀಟಿಂಗು ಇದೇ ಜುಲಾಯಿ ತಿಂಗಳ ತಾ. ೨೫ನೇ ಶನಿವಾರ ಅಪರಾಹ್ನ ಗಂಟೆ ೨-೩೦ಕ್ಕೆ ಕಲೆಕ್ಟರ್ ಆಫೀಸಿನಲ್ಲಿ ಜರಗುವುದು.

(೫ನೇ ಪುಟದಿಂದ ಮುಂದುವರಿದುದು.)

ದ್ದಾಳೆ. ಮಹೇಂದ್ರರಾಯನನ್ನು ಫ್ರಾನ್ಸ ಮತ್ತು ಜರ್ಮನಿಯಿಂದ ಈಗ ಓಡಿಸಿರುವ ಕಾರಣ 'ಪ್ರೊ ಹಿಂದು' ಸಂಸ್ಥೆಯ ಪಕ್ಷಕ್ಕೆ ಬೇಕಾದ ಧನ ಸಹಾಯವನ್ನು ಮಾಡುತ್ತಿದ್ದಾಳೆ". ಲಂಡನ್ ಟೈಮ್ಸು ಪತ್ರಿಕೆಯ ಈ ಲೇಖನಕ್ಕೆ ಎಷ್ಟರ ಮಟ್ಟಿಗೆ ಸತ್ಯದ ಆಧಾರವಿದೆ ಎಂಬುದು ಅವಶ್ಯವಾಗಿ ತಿಳಕೊಳ್ಳಬೇಕಾದ ಸಂಗತಿ. ಸ್ವರಾಜ್ಯದ ಚಳವಳವನ್ನು ಮಾಡುವ ಹಿಂದಿಗಳು ಮತ್ತು ಸಹಾನುಭೂತಿಯಿಂದ ಸಹಾಯವನ್ನೀಯುವ ಅನ್ಯ ದೇಶೀಯರು ಸಾಮ್ರಾಜ್ಯವಾದಿಗಳ ದೃಷ್ಟಿಯಿಂದ ಬೊಲ್‌ಶೆವಿಕರೂ, ಅನ್ಯಾಯಗಾರರೂ ಆದಲ್ಲಿ ಆಶ್ಚರ್ಯವಿಲ್ಲ. ಈ ಒಂದೆ ಕಾರಣದಿಂದ ಲಂಡನ್ ಟೈಮ್ಸು ಅಂಥವರಿಗೆ ಬೊಲ್‌ಶೆವಿಕರೆಂದು ಹೆಸರು ಕೊಡುವದಾದರೆ ಈ ಸ್ವಾರ್ಥಪರಾಯಣರಿಗಾದರೂ ಯಾವ ಹೆಸರನ್ನು ಕೊಡಬೇಕಾಯಿತು?

• • • •

ಚೀನಾದೊಳಗಿನ ಗಲಾಟೆಯು ಕಾರಣ.

ಈಗ ಸಾಧಾರಣ ಒಂದು ತಿಂಗಳಿಂದ ಚೀನಾ ದೇಶದಲ್ಲಿ ದಂಗೆಗಳು ಪ್ರಾರಂಭವಾಗಿ ಮಜೂರ ವರ್ಗದಲ್ಲಿ ಮುಷ್ಕರವು ಬಿದ್ದು ಬಹು ಭರದಿಂದ ಪಸರಿಸುತ್ತಿದೆ. ಈ ಮುಷ್ಕರವು ವಿದ್ಯಾರ್ಥಿಗಳಿಂದ ಪ್ರಾರಂಭವಾಯಿತು. ಬರ ಬರುತ್ತ ಚೀನಿ ಕೂಲಿಗಾರರು ಇದರಲ್ಲಿ ಸೇರಿಕೊಂಡದ್ದರಿಂದ ಈಗ ಈ ಮುಷ್ಕರವು ವ್ಯಾಪಕ ಸ್ವರೂಪವನ್ನು ತಾಳಿದೆ, ಮುಷ್ಕರವು ಶಾಂಘಾಯ ಬಂದರದಲ್ಲಿ ಪ್ರಾರಂಭವಾದದ್ದಾದರೂ ಹೊಂಗ್‌ಕೊಂಗ ದ್ವೀಪದಲ್ಲಿಯೂ, ಪೆಕಿನ್ ಪಟ್ಟಣದ ವರೆಗೂ ಅದು ಹಬ್ಬುತ್ತ ಹೋಗಿದೆ. ಪೆಕಿನದಲ್ಲಿರುವ ಚೀನಿ ಸರಕಾರದ ರಾಯಭಾರಿಯ ಆಫೀಸಿನ ಮೇಲೆ ಹಲ್ಲೆಗಳನ್ನೇರಿಸಿ ಅಲ್ಲಿರತಕ್ಕ ಚೀನಿಯ ಕೂಲಿಗಾರರು ಉಪದ್ರವಪಡಿಸುತ್ತಿದ್ದಾರೆ. ಹಾಂಗ ಕೊಂಗದಲ್ಲಾಗಲಿ, ಪೆಕಿನ ಶಹರದಲ್ಲಾಗಲಿ ಉಂಟಾಗಿರುವ ಈ ಮುಷ್ಕರಗಳು ತೋರಿಕೆಯ ಮಟ್ಟಿಗೆ ಕೂಲಿಗಳ ಅಡಚಣೆಗಳನ್ನು ಪರಿಹರಿಸಿಕೊಳ್ಳಲು ಉಂಟಾಗಿವೆ ಎಂದು ತೋರುತ್ತದಾದರೂ ಮುಷ್ಕರ ಮುಂತಾದ್ದರ ಕಾರಣವು ಬೇರೆಯೆ. ಚೀನಾ ದೇಶದಲ್ಲಿ ಚೀನಿ ಜನರ ರಾಜ್ಯವೆ ಇದೆ. ಆದರೆ ಸಮುದ್ರದ ಕರಾವಳಿಯಲ್ಲಿ ಇಂಗ್ಲಿಷ, ಅಮೇರಿಕನ್, ಜಪಾನಿಯರ್ ವ್ಯಾಪಾರಿಗಳ ಅನೇಕ ಬಂದರಗಳಲ್ಲಿ ವಸತಿಮಾಡಿಕೊಂಡಿದ್ದು ಶಾಂಘಾಯದಂಥ ಮುಖ್ಯ ಬಂದರದಲ್ಲಿ ಈ ಪರದೇಶೀಯರು ಯಾವ ಭಾಗದಲ್ಲಿ ವಾಸಿಸಿಕೊಂಡಿರುವರೊ ಅಲ್ಲಿ ಚೀನಾ ಸರಕಾರದ ಆಳಿಕೆ ಅಲ್ಲ; ಅನ್ಯದೇಶದವರ ಆಳಿಕೆಯೆ ಇದೆ. ಇವರು ಚೀನಾದೇಶದ ವ್ಯಾಪಾರವನ್ನೆಲ್ಲ ಆಕ್ರಮಿಸಿಕೊಂಡಿರುವರು. ಈ ಮೇರೆಗೆ ಪರದೇಶದವರು ವ್ಯಾಪಾರವನ್ನು ಆಕ್ರಮಿಸಿದುದಲ್ಲದೆ ಚೀನಾದೊಳಗಿನ ಜನರಲ್ಲಿ ಮತಭೇದವನ್ನು ಹುಟ್ಟಿಸಿ ಜಗಳವನ್ನು ಹಚ್ಚಿಸಿರುವರು. ಚೀನಾದವರಿಗೆ ಈ ಪರಕೀಯರ ಕುಟಿಲ ಉಪಾಯಗಳನ್ನೂ, ಧೂರ್ತತ್ವದ ಲಕ್ಷಣಗಳನ್ನೂ ಈಗ ಸರಿಯಾಗಿ ತಿಳಿದು ಬಂದಿದೆ. ಈ ಕಾರಣದಿಂದ ಚೀನಾದೊಳಗಿನ ದೇಶಭಕ್ತರು ತಮ್ಮ ಬಂದರಗಳನ್ನಾಕ್ರಮಿಸಿ ಮೆಲ್ಲ ಮೆಲ್ಲನೆ ಇಡಿ ಜನಾಂಗದಲ್ಲಿ ಭೇದ ನೀತಿಯನ್ನು ಬೀರಲು ಹವಣಿಸುವ ಮತ್ತು ಅದಕ್ಕೆ ಬೇಕಾದ ಸಾಹಸವನ್ನು ಮಾಡುತ್ತಿರುವ ಈ ಪರಕೀಯರನ್ನು ಉಪದ್ರವಿಸಲುತಕ್ಕೈಸಿದ್ದಾರೆ. ಚುಟುಕಾಗಿ ಹಿಂದಲೆ ಹೇಳುವದಾದರೆ ಚೀನಾದೊಳಗಿನ ಈ ದಂಗೆಯು ಮತ್ತು ಮುಷ್ಕರವೂ ಸ್ವಂತ ದೇಶದ ಅಭಿಮಾನದಿಂದ ಅಂಕುರಿಸಿದ್ದಾಗಿದ್ದು ಪರಕೀಯರ ಶುಲ್ಕಕಾಷ್ಟವನ್ನು ತಪ್ಪಿಸಲಾಗಿದೆ. ಆದರೆ ಶಾಂಘಾಯದಲ್ಲಿರುವ ಸ್ವಾರ್ಥಪರರಾದ ಪರಕೀಯ ಧೂರ್ತರು ಚೀನಾದ ವಿದ್ಯಾರ್ಥಿಗಳ ಮತ್ತು ಸ್ವತಂತ್ರಪ್ರಿಯ ನಾಗರಿಕರ ಈ ಉಚ್ಚ ಧ್ಯೇಯವನ್ನು ಮರೆಮಾಡಿ ಅವರ ಚಳವಳದ ಸ್ವರೂಪಕ್ಕೆ ಹೊಲಸಾದ ರೂಪವನ್ನು ಕೊಡುವದಕ್ಕಾಗಿ ರುಶ್ಯದ ಬೊಲ್‌ಶೆವಿಕರ ಸಂಬಂಧವನ್ನು ಜೋಡಿಸುತ್ತಿದ್ದಾರೆ. ಲಂಡನಿನೊಳಗಿನ ಸಾಮ್ರಾಜ್ಯವಾದಿಗಳು ಚೀನಾ ಸರಕಾರಕ್ಕೆ ತಕ್ಕ ಶಾಸನವನ್ನು ವಿಧಿಸಬೇಕೆಂದು ಗರ್ಭಿತವಾದ ಸೂಚನೆಗಳನ್ನು ಕೊಡುತ್ತಿದ್ದಾರೆ.

— ಹಿಂಸಾಹಿಂಸೆಗಳ ಮರ್ಯಾದೆ. —

(ಬರೆದು ಬಂದದ್ದು)

ತಮ್ಮ ಪತ್ರಿಕೆಯಲ್ಲಿ ಬ್ರ. ಶ್ರೀ. ಒಡ್ಡಮನೆ ಆತ್ಮಾರಾಮ ಶಾಸ್ತ್ರಿಗಳು ಬರೆದ "ಹಿಂಸಾಹಿಂಸೆಗಳ ಮರ್ಯಾದೆ" ಎಂಬ ಎರಡು ಲೇಖನಗಳನ್ನು ಓದಿನೋಡಿದೆನು. ಇದೆ ವಿಷಯವನ್ನು ಕುರಿತು ನನಗೆ ತೋಚಿದ, ನನ್ನ ಅನುಭವಕ್ಕೆ ಬಂದ ಒಂದೆರಡು ಮಾತುಗಳನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಬೇಕಾಗಿ ಅಪೇಕ್ಷಿಸುವೆನು.

ಹಿಂಸೆಯು ಬಹಳ ಕೆಟ್ಟದಾದರೂ ಅದಿಲ್ಲದೆ ಲೋಕದೊಳಗಿನ ಆರೆಗಳಿಗೆ ಕೂಡ ದಾಟುವುದಿಲ್ಲ. ಸಮುದ್ರದೊಳಗಿನ ಪ್ರಾಣಿಗಳು ಒಂದು ಇನ್ನೊಂದನ್ನು ತಿಂದು ಜೀವಿಸುತ್ತಿವೆ. ಜಲಚರಗಳಲ್ಲಿ ಹೇಗೊ ಸ್ಥಲಚರಗಳಲ್ಲಿಯಾದರೂ ಹಾಗೆಯೆ ಅವುಗಳಲ್ಲಿಯು ಸಬಲವು ದುರ್ಬಲವಾದದ್ದನ್ನು ಆಕ್ರಮಿಸಿ ತನ್ನ ಜೀವನ ಯಾತ್ರೆಯನ್ನು ಸಾಗಿಸುತ್ತದೆ. ಆಕಾಶ ಸಂಚಾರಿಗಳಲ್ಲಿಯೂ ಇದೆ ಕ್ರಮವು. ಆದರೆ ಇವುಗಳೆಲ್ಲ, ಜ್ಞಾನ ಹೀನವಾದ ಪಶುವರ್ಗಕ್ಕೆ ಸೇರಿದವುಗಳಾದ ಕಾರಣ ಅವು ಹಿಂಸೆಯನ್ನು ಮಾಡಿದರೆ ಒಂದು ವೇಳೆ ನಡೆಯಬಹುದು; ಆದರೆ ಜ್ಞಾನವುಳ್ಳ ಮಾನವನು ಕೂಡ ಹಿಂಸೆ ಮಾಡಿದರೆ ಅವನಿಗೂ, ಪಶುವಿಗೂ ವ್ಯತ್ಯಾಸವೇನು? ಜನ್ಮಗಳಲ್ಲಿ ಮನುಷ್ಯ ಜನ್ಮವು ಶ್ರೇಷ್ಠವೆಂಬುದಾಗಿ ಹೇಳಿದೆ. ಏಕೆಂದರೆ, ಜ್ಞಾನದ ಜ್ಯೋತಿಯು ಅವನಲ್ಲಿರುವುದರಿಂದ ಅವನು ಹಿಂಸೆ, ಕ್ರೋಧ ಮುಂತಾದ ಪಶುಗುಣಗಳನ್ನು ಬಿಟ್ಟು ನಡೆದು ತನ್ನ ಉದ್ಧಾರವನ್ನು ಮಾಡಿಕೊಳ್ಳಬೇಕು. ಮತ್ತು ಈ ರೀತಿಯಿಂದ ಅವನು ಆತ್ಮೋದ್ಧಾರವನ್ನು ಮಾಡಿಕೊಳ್ಳುತ್ತಾನೆ. ಆದ್ದರಿಂದ ಅವನು ಹಿಂಸಿಸುವುದು ಚೆಂದವೆ ಎಂಬುದಾಗಿ ಕೇಳಬಹುದು. ಆದರೆ ಬರಿ ಹಿಂಸೆ, ಅಹಿಂಸೆ, ಕ್ರೋಧ, ಅಕ್ರೋಧ ಇಂಥ ಗುಣಗಳ ಇರುವಿಕೆ— ಇಲ್ಲದಿರುವಿಕೆ ಇವುಗಳ ಮೇಲಿಂದಲೆ ಪಶು ಮನುಷ್ಯ ಈ ಭೇದ ಉಂಟಾದುದಲ್ಲ. ಮನುಷ್ಯನಿಗಿಂತಲೂ ಅತಿ ನಿರ್ದೋಷವಾದ ರೀತಿಯಲ್ಲಿ ವನಸ್ಪತಿಗಳನ್ನು ಸೇವಿಸಿ ಜೀವನ ಸಾಗಿಸುವ ಪಶುಗಳೆಷ್ಟೊ ಇವೆ. ಅದು ಯಾವ ಮಾಂಸವನ್ನೂ ಮುಟ್ಟುವುದಿಲ್ಲ, ಅಷ್ಟರಮೇಲಿಂದಲೆ, ಅದು ಜೈನ ಧರ್ಮ ಪ್ರವರ್ತಕನಾದ ಮಹಾವೀರನಿಗಿಂತಲೂ ಶ್ರೇಷ್ಠವಾದ್ದೆಂದು ಹೇಳಬಹುದೆ? ಹಿಂಸೆಯ ಭಯದಿಂದ ಏನನ್ನೂ ಮಾಡದೆ ಒಂದು ಕಲ್ಬಂಡೆಯಂತೆ ಒಂದು ಕಡೆಯಲ್ಲಿ ಬಿದ್ದುಕೊಳ್ಳುವುದರಿಂದ ಅವನು ಎಂದೂ ಮೋಕ್ಷಕ್ಕೆ ಹೋಗಲಾರನು. ಕರ್ತವ್ಯಶೂನ್ಯನಾಗಿ ಜಡಭರತನಂತೆ ಬಿದ್ದುಕೊಂಡರೆ ಅವನ ಕೈಯಿಂದ ಹೊರಗಿನ ಹಿಂಸೆಯಾಗುವದಿಲ್ಲವಾದರೂ, ಆ ಕರ್ತವ್ಯಲೋಪದಿಂದ ಅವನಿಗೆ ಯಾವ ಪಾತಕವು ಸಂಭವಿಸುವುದೊ ಅದು ಅವನು ನೆನಸಿಕೊಂಡಿರುವ ಹಿಂಸೆಗಿಂತ ಹೆಚ್ಚು ಭಯಂಕರವಾಗಿ ನಿಲ್ಲುವುದು. ಒಂದು ವೇಳೆ ಜಡಭರತನಾಗಿ ಬಿದ್ದಲ್ಲಿ ನಿಜವಾಗಿಯಾಗಿಯಾದರೂ ಹಿಂಸೆಯು ತಪ್ಪುವುದೆ? ಹೇಗೆ ತಪ್ಪೀತು? ನಡಿಗೆ ನಡೆಯುವಾಗ ಹೆಜ್ಜೆಯ ತುಳಿತದಿಂದ ಎಷ್ಟೊ ಇರುವೆಗಳು ಕೊಲ್ಲಲ್ಪಡುತ್ತವೆ. ರೆಪ್ಪೆಗಳ ಚಲನೆಯಾಗುವಾಗ ಎಷ್ಟೊ ಜೀವಿಗಳು ತಮ್ಮ ಐಹಿಕಯಾತ್ರೆಯನ್ನು ಮುಗಿಸುತ್ತವೆ. ಶ್ವಾಸೋಚ್ಛ್ವಾಸಕ್ರಿಯೆಯು ನಡೆಯುವಾಗ ಅಸಂಖ್ಯಾತ ಜೀವಿಗಳು ಆಹುತಿಯಾಗಿ ಬೀಳುತ್ತವೆ. ಇವುಗಳನ್ನೆಲ್ಲ ಯಾರು ತಪ್ಪಿಸಿಯಾರು?

ಇದಂತೂ ಯಾಂತ್ರಿಕ ಯುಗ! ಇದು ಹಿಂಸಾಮಯವೊ ಅಹಿಂಸಾಮಯವೊ! ಇದೊಂದು ಒಗಟು. ಏಕೆಂದರೆ, ಗಾಣಕ್ಕೆ ಎತ್ತನ್ನು ಹೂಡಿ ಎಣ್ಣೆ ತೆಗೆಯುತ್ತಿದ್ದರೆ ಎತ್ತಿಗೆ ಹಿಂಸೆ ಕೊಟ್ಟಂತಾಗುತ್ತದೆ; ಅದರ ಬದಲು ಯಂತ್ರವನ್ನು ಉಪಯೋಗಿಸಿದರೆ ಎತ್ತಿಗೆ ತಟ್ಟುವ ಬಾಧೆಯು ತಪ್ಪಿಹೋಗುತ್ತದೆ. ಎತ್ತಿನ ಮತ್ತು ಕುದರೆಯ ಗಾಡಿಗಳಲ್ಲಿ ಕುಳಿತುಕೊಳ್ಳುವುದರಿಂದ ಆ ಮೂಕ ಪ್ರಾಣಿಗಳನ್ನು ದಣಿಸಿದಂತಾಗುತ್ತದೆ. ಅದರ ಬದಲು, ರೈಲು ಮೋಟಾರು ಮೊದಲಾದ ಸಾಧನಗಳನ್ನು ಉಪಯೋಗಿಸಿದರೆ ಎತ್ತು, ಕುದುರೆಗಳಿಗುಂಟಾಗುವ ಹಿಂಸೆಯು ತಪ್ಪುವದು. ಈ ಉದಾಹರಣೆಗಳನ್ನೂ, ಇಂಥ ಇತರ ಉದಾಹರಣೆಗಳನ್ನೂ ಮನಸ್ಸಿಗೆ ತಂದುಕೊಂಡಲ್ಲಿ ಈ ಯಾಂತ್ರಿಕ ಯುಗವು ಅಹಿಂಸಾಮಯವಾದ್ದೆಂದು ಹೇಳಬಹುದು. ಎಂಬುದಾಗಿ ಯಾರಾದರೂ ವಾದಿಸಿದರೆ ಅದು ಬರೆ ಕಲ್ಪ ವಾದವು. ರೈಲಿನ ಪ್ರಯಾಣವಾದಂದಿನಿಂದ, ಮೋಟಾರುಗಳು ಚಲಾವಣೆಯಲ್ಲಿ ಬಂದಂದಿನಿಂದ ಎಷ್ಟು ಪ್ರಾಣಿಗಳ ಹಿಂಸೆಯಾಗುತ್ತಿದೆ ಎಂಬುದರ ಖಾನೆಸುಮಾರಿಯನ್ನು ಯಾರೂ ಇಟ್ಟಿದ್ದು ಕಂಡು ಬರುವದಿಲ್ಲ. ಅದನ್ನು ಇಟ್ಟಿದ್ದಾದರೆ ಈ ಹಿಂಸೆಯ ಭಯಂಕರ ಸ್ವರೂಪವು ಗೊತ್ತಾಗಬಹುದಿತ್ತು. ಒಂದು ಮೋಟಾರಕಾರ ಭರ್ರನೆ ಓಡುವಾಗ ಎಷ್ಟು ಅಣುಜೀವಿಗಳು, ಎಷ್ಟು ಇರುವೆಗಳು, ಹರಿಯುವ ಎಷ್ಟು ಜಂತುಗಳು ಯಮಸದನವನ್ನು ಹೊಂದುತ್ತವೆ? ಮನುಷ್ಯರು, ದನಗಳು, ಬೆಕ್ಕು ನಾಯಿಗಳು ಪಕ್ಕನೆ ಅಪಘಾತಕ್ಕೆ ತುತ್ತಾಗುವದು ಅಪರೂಪವಾಗಿ ನಡೆಯುತಕ್ಕ ಸಂಗತಿಯಲ್ಲ, ಎಷ್ಟೊ ಸಾರಿ ಇಂಥ ಹಿಂಸೆಗಳ ಪುನರಾವೃತ್ತಿಗಳು ಆಗುತ್ತಲೆ ಇರುತ್ತವೆ. ಆದರೂ ಒಬ್ಬನು ಬಹು ಜಾಗ್ರತೆಯಿಂದ ಮೋಟಾರಕಾರನ್ನು ನಡಿಸುತ್ತಾನೆಂದು ಇಟ್ಟುಕೊಂಡರೂ ಮೇಲೆ ಹೇಳಿದ ಇರುವೆ, ಹರಿಯುವ ಇತರ ಜಂತು ಇವುಗಳ ಹಿಂಸೆಯನ್ನು ತಪ್ಪಿಸಲಾಗುವದೆ? ಇಲ್ಲ. ಖಂಡಿತವಿಲ್ಲ. ಮೋಟಾರು ದೊಡ್ಡ ಹಿಂಸಕವು, ಆದರೂ ಅಹಿಂಸಾಪ್ರವರ್ತಕ ಮಹಾತ್ಮರು ಈ ಮೋಟಾರಿನಿಂದಲೆ ಅವಿಚ್ಛಿನ್ನವಾಗಿ ಪ್ರಯಾಣಮಾಡುತ್ತಿದ್ದಾರೆ! ಅಂತು ಹಿಂಸೆಯನ್ನು ತಪ್ಪಿಸಲು ಯಾರಿಂದ ಸಾಧ್ಯ? ಇಂಥ ಸಂಗತಿಗಳು ಅಪರಿಹಾರ್ಯವಾಗಿರುವಲ್ಲಿ, ಈ ಸಮೂಹದ ಹಿಂಸೆಗಳು ದುರ್ನಿವಾರವಾಗಿರುವಲ್ಲಿ ಜನಾಂಗದ ಸಂರಕ್ಷಣೆಕ್ಕೆ ಅಗತ್ಯಬೀಳುವ ವಿಷಯಗಳನ್ನು ಕೈಕೊಳ್ಳುವ ಸಂದರ್ಭವು ಬಂದಾಗ ಮಾತ್ರ ಅಸಂಹಿಸೆಯೆಂಬ ಗೋಡೆಯು ಅಡ್ಡನಿಂತುಕೊಳ್ಳುವುದು ಯುಕ್ತವೆ?

ವೀರವೃತ್ತಿಯು ರಾಷ್ಟ್ರದ ಅನ್ನವು. ಈ ಅನ್ನವನ್ನು ಕಳಕೊಂಡು ಉಪವಾಸ ಬೀಳುವವರನ್ನು ಯಾರು ರಕ್ಷಿಸುವರು? ಅಂಥವರು ಪರರ ಹಂಗಿನಲ್ಲಿ, ಪರರ ಚಾಕರಿಯಲ್ಲಿ ಯಾವಾಗಲೂ ನಿಲ್ಲುವದಾದರೆ ಆಶ್ಚರ್ಯವೇನು? ವೀರವೃತ್ತಿಯನ್ನು ಅವಲಂಬಿಸಹೋದರೆ ಹಿಂಸೆ ಮಾಡಬೇಕಾಗುತ್ತದೆ. ಹಿಂಸೆಯಿಂದ ಸತ್ಯ ಕೆಡುತ್ತದೆ. ಸತ್ಯ ಕೆಟ್ಟಬಳಿಕ ದೇವರು ಅವನಿಗೆ ಸಿಕ್ಕುವದಿಲ್ಲ. ದೇವರು ಸಿಕ್ಕಬೇಕಾದರೆ ಸತ್ಯಬೇಕು, ಸತ್ಯಕ್ಕೆ ಅಹಿಂಸೆಬೇಕು. ಅಹಿಂಸೆಯನ್ನು ಕಾಪಾಡಿಕೊಳ್ಳಲು ವೀರವೃತ್ತಿಯನ್ನು ಬಿಟ್ಟುಬಿಡಬೇಕು! ಇದು ಈಗಿನ ತತ್ವಜ್ಞಾನ! ಆದರೆ ಇದು ಭಗವದ್ಗೀತೆಯನ್ನು ಉಪದೇಶಿಸಿದ ಶ್ರೀ ಕೃಷ್ಣನಿಗೆ ಮಾತ್ರ ಸಮ್ಮತವಿಲ್ಲ. ಅವನಿಂದ ಇಂಥ ಅಹಿಂಸೆಯನ್ನು ಆಚರಿಸಲಾಗಲಿಲ್ಲ. ಶ್ರೀ ಕೃಷ್ಣನು ಯಮುನೆಯ ಪ್ರವಾಹದಲ್ಲಿ ಕಾಲಿಯ ಸರ್ಪವನ್ನು ಕೊಂದನು. ಮಥುರೆಯಲ್ಲಿ ಕಂಸನನ್ನು ಕೊಂದನು. ರಾಜಸೂಯ ಯಜ್ಞದಲ್ಲಿ ಶಿಶುಪಾಲನನ್ನು ಕೊಂದನು; ಕೊನೆಗೆ ಅರ್ಜುನನಿಂದ ಕುರುಕ್ಷೇತ್ರದಲ್ಲಿ ಕೌರವರ ಮತ್ತು ಇತರ ದುಷ್ಟರ ಸಂಹಾರವನ್ನು ಮಾಡಿಸಿದನು. ಭಗವದ್ಗೀತೆಯಲ್ಲಿ ಅವನು ಇದನ್ನೆ ನುಡಿದಿರುವನು. ಹಿಂಸೆಯ ಭಯದಿಂದ ದುಷ್ಟರನ್ನು ಶಿಕ್ಷಿಸದೆ ಬಿಟ್ಟರೆ ಇನ್ನಷ್ಟು ದೊಡ್ಡ ಹಿಂಸೆಗೆ ಸ್ಥಾನವು ದೊರಕುವದು. ಆ ದುಷ್ಟರು ಸಜ್ಜನರನ್ನು ಹಿಂಸಿಸಿ ಬಿಡುವರು. ಆಗ ದೊಡ್ಡ ಹಿಂಸೆಗಿಂತ ಚಿಕ್ಕ ಹಿಂಸೆಯು ಲೇಸಲ್ಲವೆ? ಈ ತಾರತಮ್ಯವನ್ನು ಇಟ್ಟುಕೊಂಡರೂ ಆಗಬಹುದು. ಇಲ್ಲವೆ ದುಷ್ಟರನ್ನು ನಿಗ್ರಹಿಸುವದು ದೇವರ ಕರ್ತವ್ಯವೆಂದು ಇಟ್ಟುಕೊಂಡರೂ ಆಗಬಹುದು. ಕೃಷ್ಣನು ವೀರವೃತ್ತಿಗನುಸಾರವಾಗಿ ದುಷ್ಟ ಶಿಕ್ಷೆ ಮಾಡಿರುವನು. ಶ್ರೀ ರಾಮನಾದರೂ ರಾವಣನನ್ನೂ ಅವನ ಅನುಯಾಯಿಗಳನ್ನೂ, ಅದಕ್ಕಿಂತ ಮುಂಚೆ ಖರದೂಷಣಾದಿಕರನ್ನೂ ಸಂಹರಿಸಿದ್ದು ನ್ಯಾಯ್ಯವಲ್ಲವೆ? ಹಿಂಸೆ-ಅಹಿಂಸೆ ಈ ಪ್ರಶ್ನೆಗಳು ರಾಮನ ಚಿತ್ತವನ್ನು ಸಂಶಯಗ್ರಸ್ತವನ್ನಾಗಿ ಮಾಡಿದುವೆ? ಇಲ್ಲ. ಶ್ರೀ ರಾಮಚರಿತ್ರೆಯಿಂದಲೂ, ಶ್ರೀ ಕೃಷ್ಣ ಚರಿತ್ರೆಯಿಂದಲೂ ವೀರವೃತ್ತಿಯನ್ನು ಕಳಕೊಳ್ಳಬಾರದು, ಸದ್ಧರ್ಮರಕ್ಷಣಕ್ಕಾಗಿ ಮಾಡಲ್ಪಡುವ ಹಿಂಸೆಯು ಕೊಲೆಯಲ್ಲ, ಅದರಿಂದ ಯಾವ ದೋಷವೂ ಬರುವದಿಲ್ಲ ಎಂಬೀ ಸಂಗತಿಗಳು ಖಚಿತವಾಗುತ್ತವೆ. ಆದ್ದರಿಂದಲೆ ಶ್ರೀ ಕೃಷ್ಣನು ಅರ್ಜುನನಿಗೆ "ಹೇಡಿತನವನ್ನಪ್ಪಿಕೊಳ್ಳಬೇಡ, ಹೋರಾಡು, ಕರ್ತವ್ಯ ಮಾಡು" ಎಂದು ಹೇಳಿರುವನು. ಆದರೆ ಅಹಿಂಸಾವಾದಿಗಳು ಗೀತೆಯ ಈ ಮಾತುಗಳಿಗೆ ಬೇರೆ ಅರ್ಥವನ್ನೆ ಕೊಡುತ್ತಾರೊ ಏನೊ! ಈಗಿನ ಕಾಲದಲ್ಲಿ ಬೇರೆ ಬೇರೆ ಅರ್ಥಮಾಡುವ ಎಷ್ಟೋ ಶುದ್ಧ ಪಂಡಿತರಿರುವರು! ಆದ್ದರಿಂದ ಈಗಿನ ಅರ್ಥಕ್ಕೆ ಹಳೆ ನಿಘಂಟುಗಳನ್ನು ಕೆದೆಯಬೇಕೆಂಬ ಅಗತ್ಯವಿಲ್ಲ!!

ಆದರೂ ಕೊನೆಯ ಒಂದು ಮಾತು. ಹೆಂಡತಿಯನ್ನು ಒಯ್ದುದರಿಂದ ರಾಮನು, ತಂಗಿಯಾದ ದ್ರೌಪದಿಯನ್ನು ಮಾನಭಂಗಪಡಿಸಿದರಿಂದ ಕೃಷ್ಣನು ಅಹಿಂಸೆಯ ಮರ್ಯಾದೆಯನ್ನು ಅತಿಕ್ರಮಿಸಿ ಸರಿಯಾದ ಹಿಂಸೆಯನ್ನು ಮಾಡಿದ್ದಾರೆ. ನಿಜವಾಗಿ ಅವರು ಧನ್ಯರು. ಈಗಿನ ತತ್ವಜ್ಞಾನಾನುಸಾರವಾಗಿ ಹೆಂಡತಿಮಕ್ಕಳ ಮತ್ತು ಅಕ್ಕ ತಂಗಿಯಂದಿರ ಮಾನವುಳಿಸುವುದಕ್ಕಾಗಿ ಪ್ರತಿಕಾರಮಾಡಿದವನಿಗೆ ನರಕವು ಪ್ರಾಪ್ತವಾಗುವದಾದರೆ ಆ ನರಕವೆ ಶ್ರೇಷ್ಠ. ಹೆಂಡತಿ ಮಕ್ಕಳ ಮತ್ತು ಅಕ್ಕ ತಂಗಿಯಂದಿರ ಅಪಮಾನಮಾಡುವುದನ್ನು ನೋಡಿ ಹಿಂಸೆಯ ಭೀತಿಯಿಂದ ಪ್ರತಿಕಾರ ಶೂನ್ಯನಾಗಿ ಕುಳಿತ ಅಹಿಂಸಕನಿಗೆ ಸ್ವರ್ಗವೆ ದೊರಕುವುದಾದರೂ ಆ ಸ್ವರ್ಗವು ತ್ಯಾಜ್ಯವೆ ಸರಿ. ಆ ಸ್ವರ್ಗಕ್ಕಿಂತ ಆ ನರಕವೆ ಒಳ್ಳೆದು. ಪ್ರತಿಕಾರ ಶೂನ್ಯರಿರುವ ಸ್ವರ್ಗಕ್ಕಿಂತ ಪ್ರತಿಕಾರಪರರು ಇರುವ ನರಕದಲ್ಲಿ ಆನಂದದಿಂದ ಇರಬಹುದು. ಕರ್ತವ್ಯ ಶೂನ್ಯರಾದ ಅಹಿಂಸಕರ ಸ್ವರ್ಗವನ್ನು ನಾಲ್ಕೂ ವೇದಗಳು ಸಹಸ್ರ ಮಂತ್ರಗಳಿಂದ ಹೊಗಳಿದರೂ ಆ ಸ್ವರ್ಗವು ಬೇಡ! ಅದು ದೂರವಿರಲಿ!

ಮಹಾರಾಷ್ಟ್ರದಲ್ಲಿ ಕನ್ನಡ ಹೆಸರಿನ ಊರುಗಳು.

ಸಾತಾರೆ ಸೋಲಾಪುರ ಜಿಲ್ಲೆಗಳ ಕೆಲವು ಭಾಗಗಳಲ್ಲಿ ಕನ್ನಡನ್ನಾಡುತ್ತಾರೆ. ಅವು ಕರ್ನಾಟಕದೊಳಗಿನವೇ ಇರುತ್ತವೆ. ಆದರೆ ಕನ್ನಡ ಗ್ರಂಥವನ್ನು ಸಹ ಅರಿಯದ ಆ ಜಿಲ್ಲೆಗಳ ಉಳಿದ ಭಾಗಗಳಲ್ಲಿಯೂ ಬೇರೆ ಜಿಲ್ಲೆಗಳಲ್ಲಿಯೂ ಇರುವ ಕೆಲವು ಊರುಗಳ ಹೆಸರುಗಳು ಕನ್ನಡ ಚಿನ್ಹವಿರುತ್ತವೆ. ಅದನ್ನು ನೋಡಿ ಮೊದಲಿನ ಕಾಲದ ಕರ್ನಾಟಕ ಸಾಮ್ರಾಜ್ಯದ ಕಲ್ಪನೆಯು ಬರುತ್ತದೆ. ಈಗ್ಗೆ ಇಂಗ್ಲೀಷ ಸಾಮ್ರಾಜ್ಯದ ಪ್ರಾಬಲ್ಯವಿದ್ದ ಕಾರಣ ಎಲ್ಲೆಲ್ಲಿಯೂ ಇಂಗ್ಲೀಷ ಹೆಸರುಗಳು ಕಂಡುಬರುವಂತೆ ಒಂದು ಕಾಲದಲ್ಲಿ ಮಹಾರಾಷ್ಟ್ರದಲ್ಲಿ ಕನ್ನಡ ಹೆಸರುಗಳನ್ನು ಊರಿಗೆ ಇಡುವ ಸಂಪ್ರದಾಯವಿದ್ದಂತೆ ತೋರುತ್ತದೆ. ಕನ್ನಡ ಹೆಸರಿನ ಊರುಗಳುಳ್ಳ ಪ್ರದೇಶದ ಮೇಲೆ ಕರ್ನಾಟಕದ ಸಾಮ್ರಾಜ್ಯವಿದ್ದೀತೆ ಇತ್ಯೆಂದು ಹೇಳಲಿಕ್ಕೆ ಬಾರದಿದ್ದರೂ ಕರ್ನಾಟಕ ಸಾಮ್ರಾಜ್ಯದ ಪ್ರಾಬಲ್ಯವು ಆ ಕಾಲಕ್ಕೆ ಇತ್ತೆಂದು ನಿರ್ಣಯವಾದ ಮಾತು.

ಊರು— ಶಿವೂರ ನಾಂದೂರ (ಪುಣೆಜಿಲ್ಲಾ) ಕಟ್ಟೆ— ಭುಳಕಟ್ಟೆ (ಸಾತಾರಾ ಜಿಲ್ಲಾ, ಫಲಟಣ ಸಂಸ್ಥಾನ) ಬಾವಿ— ಖುಟಬಾವಿ (ಪುಣೆಜಿಲ್ಲಾ.) ಕುರುಬಾವಿ (ಸೋಲಾಪುರ ಜಿಲ್ಲಾ.)

ಮೇಲೆ ಹೇಳಿದ ಊರುಗಳನ್ನು ನಾನು ಸ್ವತಃ ನೋಡಿದ್ದೇನೆ. ಅವುಗಳ ಹೊರತು ನಾನು ಕೇಳಿದ ಮತ್ತೆ ಕೆಲವು ಊರುಗಳ ಪ್ರಯತ್ನ ಮಾಡಿದರೆ ಮತ್ತೂ ಕೆಲವು ಗೊತ್ತಾಗಬಹುದು. (ಕನ್ನಡಿಗ.)

ದೋಂಡಪುಣೇ ಜಿಲ್ಲಾ. { ಶಾಮಸುಂದರ ನರಸಿಂಹಾಚಾರ್ಯ, ಪುಣೆಕರ (ಕನ್ನಡಿಗ.)

— ಸ್ವೀಕಾರ —

೧ The Congress and The Dal (By N. S. Hardiker.)

೨ ಉತ್ತರ ಭಾರತ (ಪದ್ಯ ಗ್ರಂಥ, ಗ್ರಂಥಕರ್ತರು ಎಮ್. ಎಸ್. ರಾಮಪ್ಪ ಭಟ್ಟ, ಕುಂಬಳೆ, ದ. ಕ.)

೩ ಸ್ವಧರ್ಮ (ಧಾರವಾಡ ಕರ್ನಾಟಕ ಮಹಾವಿದ್ಯಾಲಯದಿಂದ ಪ್ರಕಟಿಸಲ್ಪಡುವ ಮಾಸಪತ್ರಿಕೆ, ಸಂಪಾದಕರು: ಸುರೇಂದ್ರ ರಾವ ದೇಸಾಯಿ ಎಮ್. ಎ.)

ಆರೋಗ್ಯ ಚಂದ್ರಿಕೆ.

ಮದ್ರಾಸ್.

ಸಂಪಾದಕರು: ಡಾಕ್ಟರ್ ಯು. ರಾಮರಾವ್, ಎಲ್. ಎಮ್. ಸಿ. ಎಫ್. ಎಮ್. ಯು. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವುದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ.

ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ.

ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವುದು.

'ಹೆಲ್ತ್' ಎಂಬ ನಮ್ಮ ಇಂಗ್ಲಿಷ್ ಮಾಸಪತ್ರಿಕೆಯನ್ನೋದಿ ಸಂತೋಷಿಸಿದ ಅನೇಕ ದೊಡ್ಡ ಮನುಷ್ಯರ ಪ್ರೋತ್ಸಾಹದ ಮೇಲೆ ಈ ಕನ್ನಡ ಪತ್ರಿಕೆಯನ್ನು ಹೊರಪಡಿಸಿದೆ.

ಅದರ ಸಂಪುಟ ೨ ಮತ್ತು ೧೦ನೇಯ ನವಂಬರ ೧೯೨೪ರ ಸಂಚಿಕೆಯಲ್ಲಿ ಕಾಣಿಸಿರುವ ವಿಷಯಗಳು.

ಮುಖಚಿತ್ರ:— ಪರ್ವತವಾಸಿಯಾದ ಒಬ್ಬ ರೂಪವತಿ.
ಶ್ವಾಸಕ್ರಮ ಅಥವಾ ಪ್ರಾಣಾಯಾಮ.
ಉಣಿಸೇಚಕ್ಕಿನ ಆಹಾರಗುಣಗಳು ಮತ್ತು ಔಷಧಗುಣಗಳು.
ಕಾಲುನಡೆಯೇ ಉತ್ತಮವಾದ ವ್ಯಾಯಾಮವು.
ಜೇನಿನಲ್ಲಿರುವ ಗುಣಗಳು.
ಹಲ್ಲುಗಳ ರಚನೆ, ಪ್ರಯೋಜನ, ಕೆಲಸ ಮುಂತಾದವು.
ಮದಪ್ರಾವಳಗಳಿಂದ ಆರೋಗ್ಯಕ್ಕೆ ಉಂಟಾಗತಕ್ಕ ಹಾನಿ.
ಅಂಗಸಾಧನೆ ಮತ್ತು ಬುದ್ಧಿವ್ಯವಸಾಯ (ವಿದ್ಯಾಭ್ಯಾಸ).
ಗಾಯಗಳು, ಮತ್ತು ಉಳುಕು ಮುಂತಾದವುಗಳಿಗೆ ಅವುಗಳ ಚಿಕಿತ್ಸೆ.
ನವನಾಗರಿಕ ಪ್ರಪಂಚಕ್ಕೆ ಸಹಜವಾದ ಮೂರು ಕೆಡುಕುಗಳು.
ಒಬ್ಬ ಉಪವಾಸಿಯ ಅನುಭವ.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವುದು. ಆರೋಗ್ಯಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ ರೂ. ೧—೮—೦; ಬಿಡುಪತ್ರಿಕೆ ಒಂದಕ್ಕೆ ರೂ. ೦—೨—೦ ಹಿಂದಿನ ಸಂಚಿಕೆಗಳು ಕೂಡ ದೊರಿಯುವವು.

ಚಂದಾದಾರರಾಗುವವರು ವಿ. ಪಿ. ಮೂಲಕವಾಗಿ ತರಿಸಿಕೊಳ್ಳುವುದಕ್ಕಿಂತಲೂ ಹಣವನ್ನು ಮುಂಗಡವಾಗಿ ಕಳುಹಿಸುವುದು ಲಾಭಕರ. ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು 'ಆರೋಗ್ಯ ಚಂದ್ರಿಕೆ'ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು.

ಪತ್ರವ್ಯವಹಾರಕ್ಕೆ: 'ಆರೋಗ್ಯ ಚಂದ್ರಿಕೆ'
೩೨೩ ತಂಬುಚೆಟ್ಟಿ ಬೀದಿ, ಮದ್ರಾಸ್.

ತುಳು ಪಾಡ್ದನಗಳು.

ಬೊಬ್ಬರ್ಯ, ಕಲ್ಕುರ್ಟಿ-ಕಲ್ಲುಡ, ದೈಯ್ಯೊಂಗುಳು— ತೋಡಕಿನಾರ್, ಮುಂಡತ್ತಾಯ ಪ್ರತಿ ಒಂದಕ್ಕೆ 2 ಆಣೆ. 11¼ ಆಣೆ ಟಪ್ಪಾಲು ಚೀಟು ಕಳುಹಿಸಿದರೆ 5 ಪುಸ್ತಕಗಳು ಕೂಡಲೇ ಕಳುಹಿಸಲ್ಪಡುವವು.

ವಿಳಾಸ: ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಸಾರಸ್ವತ.

ಕನ್ನಡ ಮತ್ತು ಕೊಂಕಣಿ ಭಾಷೆಗಳಲ್ಲಿ ಕಳೆದ ವಿಜಯ ದಶಮಿ ದಿನದಿಂದ ಪ್ರತಿ ದಶಮಿಗೆ ಹೊರಡುವ ಪತ್ರಿಕೆ.

ವಿ. ಎಸ್. ಕಾಮತ್,
ಮೂಲ್ಕಿ, ವಾಮನ ಕುಡುವ } ಸಂಪಾದಕರು.

ಮತಸಂಸ್ಥೆ ಮತ್ತು ಸಮಾಜಕ್ಕೆ ಸಂಬಂಧಪಟ್ಟ ಇತರ ಸಂಸ್ಥೆಗಳ ಸುಸಂಘಟನ.

ಸಮಾಜದೊಳಗೆ ಐಕ್ಯ ಸಾಧನೆ.

ಸ್ತ್ರೀಸಮಾಜಕ್ಕೆ ಉಪಯುಕ್ತವಾದ ವಿಷಯಗಳ ನಿರೂಪಣ ಮತಭಾವನೆಗಳ ಉಜ್ಜೀವನ ಇತ್ಯಾದಿ ಉದ್ದೇಶಗಳಿಂದ ಈ ಪತ್ರಿಕೆಯು ಹೊರಡಿಸಲ್ಪಡುವುದು. ಸಾರಸ್ವತ ಸಮಾಜವು ಇದಕ್ಕೆ ಪ್ರೋತ್ಸಾಹವನ್ನೀಯಬೇಕಾಗಿ ಪ್ರಾರ್ಥನೆ.

ಚಂದಾಹಣ ಅಂಚೆವೆಚ್ಚ ಕೂಡಾ ರೂ. ೧—೮—೦.
ಪೋಷಕರು ರೂ. ೧೦—೦—೦. ಸಹಾಯಕರು ರೂ. ೫—೦—೦.
ಮಾದರಿ ಸಂಚಿಕೆಯನ್ನು ಟಪ್ಪಾಲು ಖರ್ಚಿಗಾಗಿ ಅರ್ಧಾಣೆ ಸ್ಟಾಂಪು ಕಳುಹಿಸುವವರಿಗೆ ಉಚಿತವಾಗಿ ಕಳುಹಿಸುವೆವು.

ಕನ್ನಡ ನಾಡಿನಲ್ಲಿ ಪ್ರತಿ ಕಡೆಯಲ್ಲಿಯೂ ಬಾತಮೀದಾರರು ಬೇಕು.

ಎಲ್ಲಾ ಪತ್ರವ್ಯವಹಾರಗಳನ್ನು ಕೆಳಗಿನ ವಿಳಾಸಕ್ಕೆ ನಡೆಸಬೇಕು.

ಯು. ನಾರಾಯಣನಾಯ್ಕ, ಕಾರ್ಯದರ್ಶಿ,
ಸಾರಸ್ವತ, ಉಡುಪಿ.

The Canara Bank, Limited, Mangalore.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.	1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟು, ಪೂರ್ಣವಾಗಿ ಕೆತ್ತ ಮೂಲಧನವು ರೂ. 300,000—0—0
Reserve and other sinking Funds „ 259,000—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು 259,000—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲ್ಪಡುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರಿಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1925.

K. Venkat Rao,
Secretary

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಧೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಿಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಧೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೨೫ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ಒಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೨೫ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲ ಪಂಡಿತರು,

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್ ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಪ್ಪ, ಸೋಡಾ ಫಾಕ್ಟರಿ,
ಮಂಗಳೂರು ಟವನಿಗೆ ಸಮೀಪ.

ವಿದ್ಯಾವಾಚಸ್ಪತಿ
ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ

"ಸಂಕ್ಷೇಪಗೀತೆ"

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ್ಳ, ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದೆ. ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೨, ಟಪ್ಪಾಲು ಖರ್ಚು ಕೂಡಿ ಆಣೆ ೧೪ನ್ನು ಮನಿಯಾರ್ಡರಿ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ೨ರಕ್ಕಿಂತ ಜಾಸ್ತಿ ಖರ್ಚು ತಗಲುವುದು. ರಖಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.

ಪುಸ್ತಕ ದೊರಿಯುವ ವಿಳಾಸ:—

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು. ಮತ್ತು
ಕೆನರಿಸ್ ಮಿಶ್ಶನ್ ಬುಕ್ ಎಂಡ್ ಟ್ರೆಕ್ಟ ಡಿಪೊಜಿಟರಿ,
ಮಂಗಳೂರು.

ಕನ್ನಡಿಗರೆ! **ವಸಂತ.** ಕಚ್ಚರೆಯಿರಿ!

ಈಗಾಗಲೇ ಎರಡನೇ ಸಂಪುಟವು ಆರಂಭಿಸಲಿದೆ.

ಇತಿಹಾಸನಿಧಿ ಎಂದರೆ . . . . ವಸಂತ
ಸಮಾಜಸುಧಾರಕನೆಂದರೆ . . . . ವಸಂತ
ಕೈಗಾರಿಕೆಯ ಸಾಮ್ರಾಜ್ಯವೆಂದರೆ . . . . . . ವಸಂತ
ಕರ್ನಾಟಕ ಭಾಷಾಸೇವಕನೆಂದರೆ . . . . . . ವಸಂತ
ದೇಶವಿದೇಶ ಬಂಧುವೆಂದರೆ . . . . ವಸಂತ
ಕಾದಂಬರಿಗಳ ಭಂಡಾರವೆಂದರೆ . . . . . . ವಸಂತ
ಚಿತ್ರಾಕರ್ಷ ಚಿತ್ರಶಾಲೆಯೆಂದರೆ . . . . . . ವಸಂತ
ದೇಶಭಕ್ತನೆಂದರೆ . . . . ವಸಂತ

ಇಂತಹ ವಸಂತನು ಯಾರಿಗೆ ಬೇಕು, ಯಾರಿಗೆ ಬೇಡ?

48 (ಕ್ರಾನ್ ¼ ಪುಟ ಸ್ಯಾಜಿನ) ಪುಟಗಳನ್ನು ಮುದ್ರಿಸಿದ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3—4—0 ಮಾತ್ರ.

ವ್ಯವಸ್ಥಾಪಕ,
ವಸಂತ ಕಾರ್ಯಾಲಯ,
ಕುಂದಾಪುರ, ದಕ್ಷಿಣ ಕನ್ನಡ.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಶ್ರೀಮಾವಧೂತರು,

ಶ್ರೀಕಾಶೀ, ಗಯಾ, ಪ್ರಯಾಗ, ಹರಿದ್ವಾರ ಬದ್ರಿನಾರಾಯಣ ದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೆಟ್ಟಿಯಾಗಿ ಅವರ ಕಡೆಯಿಂದಅನುಭವ ತೆಗೆದು ಪ್ರತಿಯೊಂದು ಸಿದ್ಧಮಾಡಿಕೊಂಡು ಬರೆದಿರುವರು. ೧ನೇದು ಮಂತ್ರಪ್ರಕರಣದಲ್ಲಿ ಮಂತ್ರ ಸಹಸ್ರದಿಂದಲೂ, ಮಂತ್ರಪ್ರಯೋಗದಿಂದಲೂ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವವರೆಗೆ ಸಿದ್ಧಮಾಡಿಕೊಳ್ಳುವ ಕ್ರಮವೂ ಇದೆ. ೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ, ಅಕಸ್ಮಾತ್ತಿಯಲ್ಲಿ ರೂಪಾಯಿಗಳು ಹೊರಡುವಿಕೆ, ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾಂಪತ್ಯನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ. ೩ನೇದು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು. ೪ನೇದು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಗಳ ಚುಟ್ಕಾ ಸಹ, ಇದರಲ್ಲಿ ಉಂಟು. ಇದು ಪ್ರತಿಯೊಂದು ಕುಟುಂಬದಲ್ಲಿ ಉಂಟಾಗುವ ಯಾವತ್ತೂ ರೋಗಗಳಿಗೂ ಸುಲಭವಾಗಿ ಔಷಧ ಮಾಡುವ ಕ್ರಮವನು ಚೆನ್ನಾಗಿ ಬರೆದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಳಾಸವು ತಿಳಿಸಿರುವರು. ೫ನೇದು ಯಂತ್ರ ಪ್ರಕರಣದಲ್ಲಿ ವಶೀಕರಣ ಗೃಹಪೀಡಾ ನಿವಾರಣ ಭೂತಪ್ರೇತ, ಪಿಶಾಚ, ಬ್ರಹ್ಮ ರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು, ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು, ಈ ಗ್ರಂಥವು ಹತ್ತರ ಇದ್ದ ಬಳಿಕ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷಗಳೂ ಸ್ವಪ್ನದಲ್ಲೂ ತೋರಿಸ್ಯರು, ಮಾಂತ್ರಿಕರು ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥ ಗ್ರಂಥವು ಯಾರು ಇದಕ್ಕಿಂತ ನೋಡಿರಲಿಕ್ಕಿಲ್ಲಾ. ಪ್ರತಿಯವರು ತರಿಸಿ ನೋಡಬೇಕೆಂದು ಇದರ ಬೆಲೆ ಕಡಿಮೆಮಾಡಿ ಇರುವವು. ೨—೮—೦ ಟಪ್ಪಾಲು ಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ ನಾಟಕ ಕಾವ್ಯ, ಕತೆಗಳು, ಯಕ್ಷಗಾನ, ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ:—

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, [illegible]

[illegible] ಮಾರ್ಟಿನ್ನರ ಜ್ವರದ ಗುಳಿಗೆಗಳು.

ಸುಲಭ ಸ್ವೇದನಕಾರಿಯಾದ ಈ ಘುಟಿಕೆಗಳು ಚಳಿಜ್ವರದ ವಿಷ ಪದಾರ್ಥಗಳನ್ನು ತಟ್ಟನೆ ನಿರ್ಮೂಲಪಡಿಸಿ, ವ್ಯಾಧಿಗಳನ್ನು ಸಂಪೂರ್ಣ ನಾಶ ಪಡಿಸಿ, ಮಲೇರಿಯಾ ಜ್ವರ, ಚಳಿಜ್ವರ, ಬಾರಿಜ್ವರ, ಮತ್ತು ಆಗಾಗ್ಗೆ ಬಿಟ್ಟುಕೊಂಡು ಬರುವ ಇತರ ಜ್ವರಗಳ ಬಾಧೆಯಿಂದ ಗುಣಪಡಿಸುವವು.

ತಟ್ಟನೆ ವಾಸಿಪಡಿಸುವುದಕ್ಕೆ ಡಾಕ್ಟರುಗಳಲ್ಲಿ ಪ್ರಸಿದ್ಧಿಯನ್ನು ಹೊಂದಿವೆ, ಅತಿ ಬಿಟ್ಟುಬಿಟ್ಟು ಅನೇಕ ಸಂದರ್ಭಗಳಲ್ಲಿ ಗುಣಪಡಿಸಿದವುಗಳಾಗಿರುತ್ತವೆ.

ಇವುಗಳು ಗಿರಣಿಗಳಲ್ಲಿಯೂ ಕಾರ್ಖಾನೆಗಳಲ್ಲಿಯೂ ವಿಶೇಷವಾಗಿ ಉಪಯೋಗಿಸಲ್ಪಡುವುವು. ಸಾಮಾನ್ಯವಾಗಿ ಹಿಂದೂಸ್ಥಾನದಲ್ಲಿ ಎಲ್ಲಾ ತೋಟಗಾರರಿಂದ ಉಪಯೋಗಿಸಲ್ಪಡುವುದು. ಅಲ್ಲದೆ ದಿಂಗಳ ವಿಶ್ರಾಂತಿ ವಾದ ಕೀರ್ತಿಯನ್ನು ಕೂಡ ಸಂಪಾದಿಸಿರುವುವು ಕಠಿಣ ಜ್ವರವು ತಟ್ಟನೆ, ಇಳಿಯಬೇಕಾದರೆ ಆರ್ ಮಾರ್ಟಿನ್ನರ ಎಗ್ಯೂ ಮಿಕ್ಚರ್ ಒಡನೆ ಇದನ್ನು ಸೇವಿಸಬೇಕು. ಈ ಇವೆರಡು ಅದ್ಭುತ ಶಕ್ತಿಯುಳ್ಳ ಔಷಧಿಗಳು ಪ್ರತಿಯೊಂದು ಕುಟುಂಬದ ಮನೆಯಲ್ಲಿಟ್ಟುಕೊಳ್ಳಲು ಯೋಗ್ಯ ವಸ್ತುಗಳಾಗಿವೆ ಪ್ರತಿಯೊಂದು ಬಾಟ್ಲಿಯಲ್ಲಿ 40 ಮಾತ್ರೆಗಳಿರುವ ಬಾಟ್ಲಿ 1ಕ್ಕೆ 1-8-0.

100 ಮಾತ್ರೆಗಳಿರುವ ಬಾಟ್ಲಿ 1ಕ್ಕೆ 3-8-0.
150 „ „ „ 5-4-0.

ಆರ್. ಮಾರ್ಟಿನ್ನರ ಎಗ್ಯೂಮಿಕ್ಚರ್.

ಇದು. ಜ್ವರ, ಶೀತಜ್ವರ ಮಲೇರಿಯಾ, ಬಾರಿಜ್ವರ, ಸನ್ನಿಪಾತ ಪಟ್ಟ ವಾಯುವಿನಿಂದುಂಟಾದ ರೋಗ ಇವೇ ಮೊದಲಾದ ಎಲ್ಲಾ ತರದ ಜ್ವರಗಳನ್ನೂ ಕೂಡಲೇ ನಾಶಮಾಡುತ್ತದೆ. ಎಲುಬುಗಳಲ್ಲಿ ಹರಡಿಕೊಂಡಿರುವ ಜ್ವರವನ್ನೂ ಸಹ ನಾಶಮಾಡುವುದಲ್ಲದೆ, ಇದು ಸಿಹಿಯಾಗಿರುವುದ್ದರಿಂದ ಸಣ್ಣ ಕೂಸುಗಳು ಸಹ ಕುಡಿಯಲಿಕ್ಕೆ ಇಷ್ಟಪಡುತ್ತವೆ. ಅನೇಕ ನಿಜ ವಿದ್ವಾಂಸ ವೈದ್ಯರಿಂದ ಗುಣಮಾಡುವುದಕ್ಕಾಗದ ಜ್ವರವನ್ನು ಈ ಎರಡೇ ಎರಡು ಬಾಟ್ಲಿಗಳ ಸೇವನೆಯಿಂದ ಹುಷಾರಾಗಿದೆ.

ಬಾಟ್ಲಿ 1ಕ್ಕೆ ರೂ. 0-13-0.

ಆರ್. ಮಾರ್ಟಿನ್ನರ ಮೂಲವ್ಯಾಧಿ ಮುಲಾಮು.

ಮನುಷ್ಯನಿಗೆ ಮೂಲವ್ಯಾಧಿ ಆದಾಗ, ಬಹಳ ಸಲ ಮೂತ್ರಶಂಕೆಯಾಗ ವಿಕೆ, ಮರ್ಮಸ್ಥಾನದಲ್ಲಿ ಉರಿಯುವುದು, ಮಲಬದ್ಧತೆ ಇವೇ ಮುಂತಾದರಿಂದ ಪಡೆಪಡುತ್ತಾನೆ. ಈ ಔಷಧದ ಒಂದೇ ಒಂದು ಬಾಟ್ಲಿಯ ಉಪಯೋಗದಿಂದ, ರಕ್ತ ಸುರಿಯುವ ಮೂಲವ್ಯಾಧಿ, ಕಂಕುಳಲ್ಲಿ ನೋಯುವ ಮೂಲವ್ಯಾಧಿ ಮತ್ತು ಎಂಥ ತರಹದ ಕಠಿಣವಾದ ಮೂಲವ್ಯಾಧಿಯ್ಯಾದರದ ಕೂಡಲೇ ವಾಸಿಯಾಗುತ್ತದೆ. ಇದು ಒಳ್ಳೇ ಔಷಧಗಳಿಂದ ತಯಾರಿಸಲ್ಪಟ್ಟು ತೆಗೆದುಕೊಳ್ಳುವವರಿಗೆ ಏನೊಂದೂ ನೋವನ್ನೂ ಕೊಡದೆ ಶಂಪಾಗಿ ಮಾಡುತ್ತದೆ. ಬಾಟ್ಲಿ 1ರ ದರ ರೂ. 1-8-0 ಮಾತ್ರ.

60 ಮಾತ್ರೆಗಳ ಶೀಸೆ 1ಕ್ಕೆ ರೂ 1-4-0.

ವಿಳಾಸ:—ಆರ್. ಡಿ. ಕಟ್ಲೆ ಮತ್ತು ಕಂಪೆನಿ,
ನಂಬ್ರ ಬಿ. ಫ್ರಿಯರ್ ರೋಡ್,
ಸಾಂಜ ವರ್ತಮಾನ ಪ್ರೆಸ್,
ಟೋದಿವಾಲಾ ಬಿಲ್ಡಿಂಗ ಎದುರುಗಡೆ, ಫೋರ್ಟ್ ಮುಂಬಯಿ.

R. D. Kately & Co.
No. B. Frere Road,
Opposit Sanjvertaman Press,
Todivala Building, FORT BOMBAY

ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ಮೂರನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್. ಗಣಪತಿರಾವ್ ಐಗಳ್—ಗ್ರಂಥಕರ್ತರು.
ಮನೋರಂಜಕ ಚಿತ್ರಗಳೂ ಇವೆ.

ಇದರಲ್ಲಿ ಸಾವಿತ್ರಿ, ಶಕುಂತಲಾ, ಕೃಷ್ಣಾಕುಮಾರಿ ಪದ್ಮಿನಿ, ಜೋನ್ ಒಫ್ ಆರ್ಕ, ಫ್ಲೋರೆನ್ಸ್‌ನಾಯಿಟಿಂಗೇಲ ಪರಶುರಾಮ, ಭೂತಾಳಪಾಂಡ್ಯ, ಕಾರ್ಕಳ ಗೋಮಟೇಶ್ವರ ಮತ್ತು ಭೈರವರಾಜ, ಮೂಡಬಿದ್ರೆಯ ಚೌಟರು, ಬಂದಾವರ ಬಂಗರು, ಕಾರ್ಕಳ ರಾಮಸಮುದ್ರ ಮತ್ತು ರಾಮನಾಥ ಒಡೆಯರ ಅಹೆಳಟ್ಟು, ಗುರುಪುರ ಜಂಗಮ ಮಠ, ಕಲ್ಯಾಣಪ್ಪನ ಕಾಟಕಾಯಿ, ಗುರುವಾಯನಕೆರೆ, ಜಮಾಲಾಬಾದು ಕೋಟೆ, ಸುಲ್ತಾನಬತ್ತೇರಿ, ಈದಗಾಪ್ರಾರ್ಥನಾಮಂದಿರ, ಸೇಂಟಮೇರಿ ದ್ವೀಪಗಳು ಮತ್ತು ದರಿಯಾಬಾದರಗಡ, ಕೊರಗರು, ಕೊಡಗರು, ತೋಡರು, ರಜಪೂತರು, ಕಂದಾರಿಗಳು ಭುಖಾರ ಜನರು, ಅರಬಿಯರು. ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ಮೂರನೇ ದರ್ಜೆಯ ಮಕ್ಕಳಿಗೆ ಉಪಯುಕ್ತವಾಗಿದೆ. ಕ್ರಯ 6 ಆಣೆ.

ಪುಸ್ತಕ ದೊರಕುವ ವಿಳಾಸ—

ಶಾರದಾ ಭಾಷಣಾಲೆ, ಮಂಗಳೂರು. ||| ಗಣಪತಿರಾವ್, ಐಗಳ್. ಮಂಜೇಶ್ವರ.

ಡಾಕ್ಟರುಗಳು ಭಿನ್ನಾಭಿಪ್ರಾಯಪಡುವಾಗ್ಯೆ ತೀರ್ಮಾನಿಸುವದು ಯಾರು?

ಅಂಥಾ ಸಂದರ್ಭಗಳಲ್ಲಿ ಡೆಂಗ್ಯೂ ಮುಂತಾದ ಜ್ವರಗಳನ್ನು ನಿವಾರಿಸುವಂಥಾ "ಬಾಟ್ಲಿವಾಲರ ಎಗ್ಯೂಮಿಕ್ಚರ್"ನ್ನು ಸರಾಗವಾಗಿಯೂ, ಮತ್ತು ಜ್ವರಗಳನ್ನು ಖಂಡಿತವಾಗಿ ನಿಲ್ಲಿಸುವಂಥಾದ್ದೂ, ಎಲ್ಲಾ ತರದ ತಲೆನೋವುಗಳನ್ನು ಹೋಗಲಾಡಿಸುವಂಥಾದ್ದೂ ಆದ "ಬಾಟ್ಲಿವಾಲರ ಎಗ್ಯೂಪಿಲ್ಸ್" ಇದನ್ನು ಉಪಯೋಗಿಸಿರಿ.

ಐ. ಎಮ್. ಎಸ್. ಡಾಕ್ಟರುಗಳಿಂದ ಶಿಫಾರಸು ಮಾಡಲ್ಪಟ್ಟಿದ್ದು. ಇದರ ಉಪಯೋಗದಿಂದ ಹೃದಯದ ಮೇಲೆ ಯಾವದೊಂದೂ ಬಾಧಕವಿಲ್ಲ. ಅರ್ಧ ಶತಮಾನದಿಂದ ಹಿಂದೂಸ್ಥಾನ, ಬರ್ಮಾ, ಸಿಲೋನ್, ಆಫ್ರಿಕಾ ಇವುಗಳಲ್ಲಿ ಪ್ರಖ್ಯಾತಪಟ್ಟಿದ್ದಾಗಿರುತ್ತದೆ.

ಅನೇಕ ಹಿಂದೀ ಪ್ರದರ್ಶನಗಳಲ್ಲಿ ಬೆಳ್ಳಿ ಮತ್ತು ಬಂಗಾರದ ಪದಕಗಳನ್ನು ಪಡೆದಿರುತ್ತೆ. ಚಾಲ್ತಿ ನಾಣ್ಯದಂತಿದ್ದು ವ್ಯಾಪಾರಿಗಳೂ ಕೂಡ ಅದರ ಮೇಲೆ ಹಣವನ್ನು ಮುಂಗಡವಾಗಿ ಕೊಡುತ್ತಾರೆ. ಬಡ ಮತ್ತು ಮಧ್ಯಮ ತರಗತಿಯ ಜನರಿಗೆ ವರಪ್ರದಾನವಾಗಿದ್ದು ಸಂಚಾರ, ಪ್ರಯಾಣ, ದೇಶಾಟನೆಗಳ ಸಮಯದಲ್ಲಿ ಹತ್ತಿರದಲ್ಲಿ ಇಟ್ಟುಕೊಳ್ಳದಾಗಿರುತ್ತದೆ.

ಬಾಟ್ಲಿವಾಲರ ಬಾಲಾಮೃತ ಅಥವಾ ಟೊನಿಕ್ ಸಿರಪ್.

ಕೆಮ್ಮನ್ನು ಹೋಗಲಾಡಿಸಿ, ಎದೆನೋವನ್ನು ಶಾಂತಗೊಳಿಸಿ, ಜ್ವರವನ್ನು ಉಪಶಮಗೊಳಿಸಿ, ವಿದ್ಯಾಭಂಗವನ್ನು ಕಡಿಮೆ ಮಾಡಿ ಧಾತುವರ್ಧನವನ್ನು ಮಾಡುವದರಲ್ಲಿ ಅತ್ಯುತ್ತಮವಾಗಿರುತ್ತದೆ. ಕಫವನ್ನು ಒಣಗಿಸಿ ಮಾಯವಾಗುವಂತೆ ಮಾಡುವುದಲ್ಲದೆ ಅದೇ ಸಮಯದಲ್ಲಿ ಒಳ್ಳೇ ಜೀರ್ಣವನ್ನು ಉಂಟುಮಾಡುವುದು. ದರ ಮೊದಲಾದ ಮಾಹಿತಿಯನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಕಾರಿನಖಾನೆ:-CAWASHAPUR, BOMBAY.

Dr. H. L. Batliwala & Co., Ltd.,
Sayani Road, P. O. Cadell Road, Bombay, No. 14.
ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.,
Sayani Road, P. O. Cadell Road, Bombay. No. 14.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟ. ಖ. 9 ಆಣೆ.

ನಮ್ಮ ವಿಳಾಸ:— ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಏಜಂಟರು:— ಡಿ. ಊಲನ್ ಮಾರ್ಟ್, ಮಂಗಳೂರು.

OUR RECENT IMPORT IN WRIST WATCHES

Have you used anyone of these Watches?

SEND YOUR ORDER NOW ALL GUARANTEED.

Fashionable wrist wrist Lady's size. Reliable movement Guaranteed.



No. 368.

Handy to wear and looks beautiful. Gives punctual time and with strong movement.

Nickel case Rs. 8—0

High-class Radium dial watch watch with Roman figures.



No. 367.

Can be seen in dark nights. Well fitted with best movement and strong to use. Used by one and all.

Silver case Rs. 9—0.

Radio light wrist watch.



No. 372.

Fitted with the best mechanism and guaranteed to work and keep perfect time for a long time.

Nickel case Rs. 7—8
Electro rolled-gold „ 9—0

(N. B. In addition to the above, we have good number of varieties of fancy wrist watches, pocket watches. Please write for a descriptive catalogue, which will be sent free)

WHOLESALE IMPORTERS

PETER WATCH COY.,
POST BOX 27, MADRAS

ಶಾಲಿವಾಹನಶಕ ೧೮೪೭ನೆಯ ಕ್ರೋಧನ ಸಂವತ್ಸರದ ಆಷಾಢ ಬ| ೧೩ ಶನಿವಾರದಿಂದ ಕ್ರೋಧನ ಸಂವತ್ಸರದ ಶ್ರಾವಣ ಶು| ೩ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೫ನೆಯ ವೃಷಭ ದೇಶ.)

ತಾರೀಕು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೌರಮಾನ	ಸೂರ್ಯ ಉ.	ಸೂರ್ಯ ಅಸ್ತ.
18	ಶನಿ	೧೩	೪೬. ೦	ಮೃಗಶಿರಾ	೩೬. ೦	೩	6.14	6.59
19	ರವಿ	೧೪	೫೦,೪೪	ಆರ್ದ್ರಾ	೪೩. ೨	೪	6,14	6.59
20	ಸೋಮ	●	೫೫.೨೮	ಪುನರ್ವಸು	೪೮.೨೮	೫	6.14	6.59
21	ಕುಜ	೧	೬೦. ೦	ಪುಷ್ಯ	೫೪ ೩೦	೬	6 15	6.59
22	ಬುಧ	೧	೦.೧೨	ಆಶ್ಲೇಷಾ	೬೦. ೦	೭	6.15	6.59
23	ಗುರು	೨	೪.೩೧	ಆಶ್ಲೇಷಾ	೦.೩೨	೮	6.15	6.58
24	ಶುಕ್ರ	೩	೭.೪೬	ಮಘಾ	೫.೩೦	೯	6.16	6.58

ಮಂಗಳೂರಿನ ವಾಯುಸ್ಥಿತಿ.

ತಾರೀಕು Date	Temperature. ಉಷ್ಣ (ಕಾವು) Maximum ಹೆಚ್ಚು	Minimum ಕಡಿಮೆ	Rainfall. ಮಳೆ ದಿನದ ಮಳೆ	ಜುಮಲಾ ಮಳೆ.
10	88—8	75—1	0—37	—
11	89—8	73—3	0—95	—
12	87—2	73—5	0—71	—
13	86—6	72—8	1—31	—
14	83—9	72—7	4—97	—
15	85—8	73—7	1—73	—
16	79—6	71—7	6—69	—

ಮಂಗಳೂರಿನ ಪೇಟೆ ಧಾರಣೆ.

ಜೀನಸು.		ಇಂದ ರೂ. ಆ.	ವರೆಗೆ ರೂ ಆ
ಮಸ್ಸೂರಿ		10— 0	—
ಗುಡ್ಡು	...	9— 0	—
ರಾಶಿ	...	8— 8	8—12
ಅವ್ವಲ್ ಬೆಳ್ತಿಗೆ	...	8—4	9—8
ಗುಡ್ಡು ಬೆಳ್ತಿಗೆ	...	8— 0	8— 4
ರಂಗೂನು ಬೆಳ್ತಿಗೆ ಗೋಣಿ ೧	...	13— 8	14— 8
ಗೋದಿ ಗೋಣಿ ೧ಕ್ಕೆ	...	18— 8	22— 0
ಹುರುಳಿಗೋಣಿ ೧ಕ್ಕೆ	...	9— 4	10— 8
ಕಡಲೆಗೋಣಿ ೧ಕ್ಕೆ	...	12— 0	13— 0
ತೊಗರಿಗೋಣಿ ೧ಕ್ಕೆ	...	12— 8	13— 0
ತೊಗರಿಬೇಳೆ ಗೋಣಿ ೧ಕ್ಕೆ	...	14— 0	21— 0
ಉದ್ದುಗೋಣಿ ೧ಕ್ಕೆ	...	14— 0	14— 8
ಹೆಸರುಗೋಣಿ ೧ಕ್ಕೆ	...	14— 0	15— 0
ಊರು ಬೆಲ್ಲ ಖಂಡಿ ೧ಕ್ಕೆ	...	—	85— 0
ಉಪ್ಪು ಗೋಣಿ ೧ಕ್ಕೆ	...	4— 4	4—10
ಕೊಬ್ರಿ ಖಂಡಿ ೧ಕ್ಕೆ	...	115— 0	120— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	...	35— 0	36— 0
ಎಳ್ಳಿಂಡಿ ಖಂಡಿ ೧ಕ್ಕೆ	...	35— 0	42— 8
ಕೊಬ್ರಿ ಎಣ್ಣೆ ಮುಡಿ ೧ಕ್ಕೆ	...	8— 8	9— 8
ಎಳ್ಳೆಣ್ಣೆ ಮುಡಿ ೧ಕ್ಕೆ	...	8— 0	11— 0
ಚಿಮಣಿ ಎಣ್ಣೆ ಪೆಟ್ಟಿಗೆ ೧ಕ್ಕೆ	...	8-15-6	—
ಮೋರಿಸ್ ಸಕ್ಕರೆ ಮುಡಿ ೧ಕ್ಕೆ	...	4—12	—
ಊರ ಮೆಣಸಿನಕಾಯಿ ಮುಡಿ ೧ಕ್ಕೆ	...	7— 0	—
ಸಾಸಿವೆ ಮುಡಿ ೧ಕ್ಕೆ	...	8—12	—
ಕೊತ್ತಂಬರಿ ಮುಡಿ ೧ಕ್ಕೆ	...	3— 8	4— 4
ಕಾಫಿ ಖಂಡಿ ೧ಕ್ಕೆ	...	345— 0	400— 0
ಬೆಳಿಗೋಟು ಅಡಿಕೆ ಖಂಡಿ ೧ಕ್ಕೆ ಹಳತು	...	245— 0	250— 0
„ ಹೊಸ ಅಡಿಕೆ		240— 0	240— 0
ಕಾಳುಮೆಣಸು ಖಂಡಿ ೧ಕ್ಕೆ	...	170— 0	175— 0
ಯಾಲಕ್ಕಿ ಮುಡಿ ೧ಕ್ಕೆ	...	80— 0	90— 0
ಗೇರುಬೀಜ ಮುಡಿ ೧ಕ್ಕೆ	...	3— 6	3—12
ಅರಶಿಣ ಖಂಡಿ ೧ಕ್ಕೆ	...	45— 0	65— 0
ಹುಣಿಸೆ ಹಣ್ಣು ಮುಡಿ ೧ಕ್ಕೆ	...	17-1 2	23— 0
ಹುಣ್ಸೆ ಬೀಜ ಮುಡಿ ೧ಕ್ಕೆ	...	26— 0	—
ಜೋನಿ ಬೆಲ್ಲ ಸೇರು ೧ಕ್ಕೆ	...	22— 0	
ಹಿಪ್ಪೆ ಹಣ್ಣು ಮುಡಿ ೧ಕ್ಕೆ	...	18— 8	
ಹವಿಸು		13— 7	

The Canara Public Conveyance Co., Ltd, Mangalore.

(ESTABLISHED 1914.)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು
- ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು
- ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
- ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
- ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.
- ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ —ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd., Mangalore. S. K

— ಸಿರಿಗನ್ನಡಂಗೆಲ್ಗೆ —

ಶ್ರೀ ಶಂಕರ ಕರ್ನಾಟಕ ಪುಸ್ತಕ ಭಂಡಾರವೂ ಶ್ರೀ ವಿದ್ಯಾರಣ್ಯ ಪ್ರಕಾಶಕ ಸಂಸ್ಥೆಯೂ,

ಮಾಳಮಡ್ಡಿ, ಧಾರವಾಡ.

ಕನ್ನಡಿಗರಿಗೆ ಬೇಕಾಗುವ ಎಲ್ಲಾ ತರದ ಕನ್ನಡ ಪುಸ್ತಕಗಳು ನಮ್ಮಲ್ಲಿ ಯೋಗ್ಯ ಬೆಲೆಗೆ ದೊರೆಯುವವು. ವಿದ್ಯಾರಣ್ಯ ಪುಸ್ತಕ ಮಾಲೆಯ ಕೆಳಗಿನ ೧, ೨, ೩, ಪುಸ್ತಕಗಳು ಚಂದಾದಾರರಾಗುವವರಿಗೆ ಅಂಚೆ ವೆಚ್ಚ ಸೇರಿ ೫ ರೂ. ೬ ಆಣೆಗೆ ದೊರೆಯುವವು. ಮುಂದೆ ಹೊರ ಬೀಳುವ ಮಾಲೆಯ ಪುಸ್ತಕಗಳನ್ನು ಚಂದಾದಾರರಿಗೆ ೧ ರೂಪಾಯಿಗೆ ೨ ಆಣೆಯಂತೆ ಕಡಿಮೆ ಬೆಲೆಗೆ ವಿ. ಪಿ. ಮಾಡುವೆವು. ಭಂಡಾರದ ಬೆಲೆ ಪಟ್ಟಿಗಾಗಿ ೪ ಆಣೆ ಅಂಚೆ ಟಿಕೇಟುಗಳನ್ನು ಕಳುಹಿಸತಕ್ಕದ್ದು.

			ರೂ. ಆ. ಪೈ.
೧.	ಕರ್ನಾಟಕ ಸಿಂಹಾಸನ ಸ್ಥಾಪನೆ	... ...	೧— ೦—೦
೨.	ಕಥೆಗಳನ್ನೊಳಗೊಂಡ ಬೀರಬಲ್ಲ ಚರಿತ್ರೆ (ಸಚಿತ್ರ)		೧— ೬—೦
೩.	ಛತ್ರಪತಿ ಶಿವಾಜಿ ಮಹಾರಾಜ	„	೨—೧೨—೦
೪.	ಮಹಾರಾಣಿ ಲಕ್ಷ್ಮೀಬಾಯಿ ಝಾಂಶಿ	„	೨— ೦—೦
೫.	ಅಕ್ಬರ ಚಕ್ರವರ್ತಿ ಚರಿತ್ರೆ	„	೧— ೧—೦
೬.	ಚರಿತ್ರ ಸಂಗ್ರಹ ಭಾಗ ೧.	„	೧— ೪—೦
೭.	ತಿಲಕರ ಗೀತಾ ರಹಸ್ಯ	... ...	೩— ೮—೦
೮.	ಶ್ರೀ ದಾಸಬೋಧ ಭಾಗ ೧. ೨. ೩. ...	...	೨—೧೪—೦
೯.	ರಾಷ್ಟ್ರಸಭೆಯ ಇತಿಹಾಸ	... ...	೨— ೮—೦
೧೦.	ವಚನ ಜ್ಞಾನಸಿಂಧು	... ...	೪— ೦—೦

ಇವಲ್ಲದೆ ನಮ್ಮಲ್ಲಿ ಎಲ್ಲಾ ತರದ ಕಾಯದೆ ಶಾಲೋಪಯೋಗಿ ಪುಸ್ತಕಗಳೂ ನಕಾಶೆ ಚಿತ್ರಗಳೂ ಬರವಣಗಳೂ ದೊರೆಯುವವು.

ಶ್ರೀಪಾದ ರಾಮಚಂದ್ರ ದೇಶಪಾಂಡೆ ಬಿ. ಯಸ್. ಸಿ.
ವ್ಯವಸ್ಥಾಪಕ.

ಪ್ರಖ್ಯಾತಿಪಟ್ಟ ಮಂಗಳೂರು ನಸ್ಯ.

ನಮ್ಮಲ್ಲಿ ಉತ್ತಮವಾದ ಹೊಗೆಸೊಪ್ಪಿನಿಂದಲೂ, ಸುಮಾರು ೫೦ ವರ್ಷಗಳ ಅನುಭವದಿಂದಲೂ ತಯಾರಿಸಿದ ನಸ್ಯವು ಯಾವಾಗಲೂ ರಖಂ ಆಗಿಯೂ ಚಿಲ್ಲರೆ ಆಗಿಯೂ ಮಾರಾಟಕ್ಕೆ ದೊರೆಯುತ್ತದೆ.

I ಕ್ಲಾಸ್ ರಾತ್ಲು 1ಕ್ಕೆ ರೂ. 3—0—0.
II „ „ „ 2—12—0.

\ ವಿ. ಪಿ. ಚಾರ್ಜು ಅಲಾಹಿದ. ಸ್ಯಾಂಪಲು ಅಪೇಕ್ಷಿಸುವವರು ೨ ಆಣೆ ಸ್ಟಾಂಪು ಕಳುಹಿಸಲಿ.

ವಿಳಾಸ—

ಎಮ್. ಎಸ್. ಬಂಡಾರ್ಕಾರ್ ಎಂಡ್ ಸನ್ಸ್,
ನಸ್ಯ ವ್ಯಾಪಾರಿಗಳು,
ರಥಬೀದಿ, ಮಂಗಳೂರು.

ಬಂದು ನೋಡಿರಿ! ತಿಂದು ನೋಡಿರಿ!

ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲಿ
ಪದಕವನ್ನು
ಬಹುಮಾನವಾಗಿ ಪಡೆದಿರುವ
ಎಸ್. ಪಿ. ಆಚಾರ್ಯ
ಇವರಿಂದ ತಯಾರಿಸಲ್ಪಟ್ಟ

ಉಪ್ಪಿನಕಾಯಿಗಳನ್ನು

ಬಂದು ನೋಡಿರಿ! ತಿಂದು ನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ ಶುಂಠಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ
ಬಂದು ನೋಡಿರಿ! ತಿಂದು ನೋಡಿರಿ!

ಇಂಡಿಯನ್ ಸ್ವೀಟ್‌ಮಿಟ್ ಮಾರ್ಟ್.

ಮನೋರ್ಮಾ ಸಿನಿ ಕಾಫಿ ಕ್ಲಬ್. ಮಾರ್ಕೇಟು ರೋಡು, ಮಂಗಳೂರು. | ಅಥವಾ | ಸದಾನಂದ ಕಾಫಿ ಕ್ಲಬ್ ರಥಬೀದಿ, ಮಂಗಳೂರು.

ದಕ್ಷಿಣ ಕನ್ನಡ ಜಿಲ್ಲೆಯ

ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ—

ಶಾರದಾ ಭಾಷಣಾಲೆ,
ರಥಬೀದಿ, ಮಂಗಳೂರು.

ಶಾಸ್ತ್ರೀಯ
ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು, [illegible] ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ!

ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥೆ (ಬೇನೆ)ಯನ್ನು ತೀವ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

ಹೆಚ್ಚಿನ ಮಾಹಿತಿಗೆ "ಆರೋಗ್ಯಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

JUST ARRIVED

Continental Belts.

OF VARIOUS SIZES

Price Re. 1—10—0 each

Mangalore Trading Association,
Car Street, MANGALORE

ನೋಟೀಸು.

ಮಂಗಳೂರ ಡಿಸ್ಟ್ರಿಕ್ಟ್ ಮುನ್ಸಿಫ ಕೋರ್ಟಿನಲ್ಲಿ

I. P. No $\frac{5}{24}$

I. A $\frac{23}{25}$

ಪಿ. ರಂಗಪ್ಪ ಕಮ್ತಿ ನಾರಾಯಣ ಕಮ್ತಿರ ಮಗ ಬಂಟವಾಳ ಕಸಬಾ } ಅರ್ಜಿದಾರ.

ಮತ್ತು

ವೆಂಕಟ್ರಾಯ ಬಾಳಿಗಾ [illegible] ಕ್ರೆಡಿಟರರು.

ಮೇಲ್ಕಂಡ ಕೋರ್ಟಿನಲ್ಲಿ ಡಿಸ್‌ಚಾರ್ಜಿಗೆ ಅರ್ಜಿ ದಾಖಲುಮಾಡುವರೆ 6 ತಿಂಗಳ ಪುರ್ಸತು ಕೊಡಬೇಕಾಗಿ ಅರ್ಜಿದಾರನು ದಾಖಲುಮಾಡಿದ I. A. $\frac{23}{25}$ನೇ ಅರ್ಜಿ ಮೇಲೆ ತಾರೀಕು 30—9—25ರ ವಳಗೆ ಡಿಸ್‌ಚಾರ್ಜಿಗೆ ಅರ್ಜಿ ದಾಖಲುಮಾಡಬೇಕೆಂತ ತಾ. 10—7—25ರಲ್ಲು ಹುಕುಂ ಆಗಿರುತ್ತದೆ.

Mangalore, 14-7-'25. } M. RAMAKRISHNACHAR,
Vakil for petitioner.

ನೋಟೀಸು.

ಈ ಮೂಲಕ ಸರ್ವರಿಗೂ ತಿಳಿಸುವುದೇನೆಂದರೆ—

ದಕ್ಷಿಣ ಕನ್ನಡಾ ಸಬೋರ್ಡಿನೇಟ್ ಕೋರ್ಟಿನಲ್ಲಿ ಕಾನಕಜೆ ವೆಂಕಟೇಶಭಟ್ಟ ಕೂಡ 5 ಜನರು ಮೇಣ ರಾಮಪ್ಪ ಭಟ್ಟ ವಗೈರೆರ ಮೇಲೆ ದಾಖಲು ಮಾಡಿದ ಕ್ರಮ ನಂಬ್ರ [illegible]ನೇ ವ್ಯಾಜ್ಯದಲ್ಲಿ ಕೋರ್ಟಿನವರು ಕೊಟ್ಟಿರುವ ಡಿಕ್ರಿಗೆ ಅನುಗುಣವಾಗಿ ಮಾಕುಬಾರ್ ಪುತ್ತಿಗೆ ಶ್ರೀ ಸುಬ್ರಾಯದೇವಾ-ಕಿನ್ನಿಮಾಣಿ ದೈವಸ್ಥಾಪನೆಗಳ ಆಡಳ್ತೆ ಬಗ್ಗೆ ಇಷ್ಟರವರೆಗೂ ಮೊಕ್ತೇಸರರು ಯಾನೆ ಆಡಳಿತೆದಾರರು ನೇಮಕವಾಗದೆ ಕಾರ್ಯವನ್ನು ನಾನೇ ಜರಗಿಸಬೇಕಾದರಿಂದ ನನ್ನನ್ನು ಈ ಕೆಲಸದಿಂದ ವಿಮೋಚನೆಪಡಿಸಿಕೊಳ್ಳುವದು ಆಗತ್ಯವಾದ್ದರಿಂದ ಈ ಸಂಗತಿಗಳನ್ನು ವಾದಿ ಪ್ರತಿವಾದಿರಿಗೆ ತಿಳಿಸಿದ್ದಲ್ಲಿ ಮನಸ್ಸು ಕೊಡದೆ ಕಾಲಹರಣಮಾಡುತ್ತಾ ಬಂದು ನಾನೇ ಮಾಡಬೇಕೆಂದು ನನಗೆ ವಾದಿರು ಹೇಳಿದ್ದರಿಂದ ಸದರಿ ಸ್ಥಾಪನೆಗಳಿಗೆ ಮೊಕ್ತೇಸರರಾಗುವರೆ ಕಬೂಲು ಇರುವ ಉಮೇದ್ವಾರರು ಬರುವ ತಾ. 25—7—1925ರ ವಳಗೆ ತಮ್ಮ ಅರ್ಜಿಗಳನ್ನು ನನಗೆ ತಲ್ಪಿಸುವದಲ್ಲದೆ ಸದರಿ ಉಮೇದ್ವಾರರ ಚುನಾವಣೆಯು ತಾ. 10—8—1925ನೇ ದಿವಸ ಸದರಿ ದೇವಸ್ಥಾನದಲ್ಲಿ ಸಾಯಂಕಾಲ 12ರಿಂದ 5 ಘಂಟೆ ವರೆಗೆ ಡಿಕ್ರಿಗನುಸಾರವಾಗಿ ನಡಿಯುವದು, ಎಂತ ಈ ಮೂಲಕ ತಿಳಿಸೋಣಾಗುತ್ತದೆ.

ಸ್ಕೀಮಿನ ರೂಲಿಗನುಗುಣವಾದ ಸದರಿ ಚುನಾವಣೆಯಲ್ಲಿ ವೋಟುಕೊಡುವರೆ ಹಕ್ಕಿರುವ ವೋಟರರ ಪಟ್ಟಿಯನ್ನು ಸಾಧ್ಯವಾದಷ್ಟರಮಟ್ಟಿಗೆ ಆರಿಸಿ ಲಗ್ತಪಡಿಸಿಯದೆ. ಅದಕ್ಕೆ ಆಕ್ಷೇಪಹೇಳುವವರು ವ ಇನ್ನು ಬೇರೆ ರಿಜಿಸ್ಟರ್ ಆಗುವರೆ ಹಕ್ಕು ಇರುವವರು ನನಗೆ ಬರದು ತಾ. 25—7—1925ರ ವಳಗೆ ಸರಿಪಡಿಸಿಕೊಳ್ಳತಕ್ಕದ್ದು.

ಚಕ್ಕಣಿಕೆ, ಅಧಿಕಾರಿ, ಕಾನಕಜೆ, ಮುಂಡಕಾನ ಈ ನಾಲ್ಕು ಮನೆತನದಿಂದ ಒಬ್ಬೊಬ್ಬನೇ ಉಮೇದ್ವಾರನಾಗಿ ಬಂದರೆ ಆ ಬಗ್ಗೆ ಅವರ ಚುನಾವಣೆ ಅವಶ್ಯವಿರುವದಿಲ್ಲ.

ಇದರ ವಿಷಯ ವೋಟರಪಟ್ಟಿ, ಸಬ್‌ಕೋರ್ಟು ಡಿಕ್ರಿ ವಗೈರೆ ಮಾಹಿತಿಗಳನ್ನು ನನ್ನಿಂದ ನನ್ನ ಮನೆಯಲ್ಲಿ ಯಾ ನಾನು ರಿಸೀವರ್ ಆಗಿರುವ ದೇವಸ್ಥಾನದಲ್ಲಿ ಪಡಕೊಳ್ಳಬಹುದು.

ಆರಿಸಲ್ಪಡುವ ಮೊಕ್ತೇಸರರು ತಮ್ಮ ಸಭೆಯನ್ನು ತಾ. 11—8—1925ಕ್ಕೆ ಸದರಿ ದೇವಸ್ಥಾನದಲ್ಲಿ ಸಾಯಂಕಾಲ ಘಂಟೆ 2ಕ್ಕೆ ಜರಗಿಸುವದು.

ಪೊಳ್ಯಂ ಪುತ್ತಿಗೆ } (Sd) CHERA KODLU RAMAPPA BHATTA
ತಾ. 10-7-1925 } *Receiver of Shri Subraya Deva &*
Kinnimani Daiva Bhandarm PUTTIGE.

ಇಲೆಕ್ಟರರ ಪಟ್ಟಿ.

ಜಂಟ್ರಿ ನಂಬ್ರ	ಹೆಸರು.	ತಂದೆ ಯಾ ಕಾರ್ನವನ ಹೆಸರು.
1	ಚಕ್ಕಾಣಿಕೆ ಸುಬ್ರಾಯ ಭಟ್ಟ	ನಾರಾಯಣ ಭಟ್ಟ
2	ಶಂಭಯ್ಯ	ಮಹಾಲಿಂಗಯ್ಯ
3	ಕಾನಕ್ಕಜೆ ವೆಂಕಟೇಶ ಭಟ್ಟ	ಕೃಷ್ಣ ಭಟ್ಟ
4	ಮುಂಡಕ್ಕಾನ ಸುಬ್ರಾಯ ಭಟ್ಟ	ಅಚ್ಯುತ ಭಟ್ಟ
5	ಮುಂಗಿಲ ವೆಂಕಟೇಶ ಭಟ್ಟ	ನಾರಾಯಣ ಭಟ್ಟ
6	ಪರಮೇಶ್ವರ ಹೆಬ್ಬಾರ	ರಂಗಯ್ಯ ಹೆಬ್ಬಾರ
7	ನಾರಾಯಣ ಹೆಬ್ಬಾರ	ಕೇಶವ ಹೆಬ್ಬಾರ
8	ಮುಂಡಕ್ಕಾನ ನಾರಾಯಣ ಭಟ್ಟ	ವಿಷ್ಣು ಭಟ್ಟ
9	ತ್ಯಾಂಪಣ್ಣ ರೈ	ಕುಂಞಣ್ಣ ರೈ
10	ಗೋವಿಂದಭಟ್ಟ	
11	ಗಂಗಮ್ಮ	ವೆಂಕಟಹೆಬ್ಬಾರ
12	ದೂಮಣ್ಣ	
13	ಕಿನ್ಯಕೆ	ಆತ್ಮುಬಂಟ
14	ರಾಮಪ್ಪಭಟ್ಟ	ವೆಂಕಟಭಟ್ಟ
15	ಕೃಷ್ಣಯ್ಯ	ಮಹಾಲಿಂಗಯ್ಯ
16	ಲಕ್ಷ್ಮಿ	
17	ಮಂಜಕ್ಕೆ	ಮುತ್ತೆ

ಮ। ರಾ। ರಾ। ಯಂ. ಗಿರಿಯಪ್ಪ ಅವರ್ಗಳ್, ಬಿ.ಎ.
ಅಸಿಸ್ಟಾಂಟು ರಿಜಿಸ್ಟ್ರಾರು.

ಪ್ರಕಟಣೆ.

ದಕ್ಷಿಣ ಕನ್ನಡಾ ಜಿಲ್ಲಾ, ಉಡುಪಿ ತಾಲೂಕು ಕೊಡವೂರು ಗ್ರಾಮದಲ್ಲಿ ಸ್ಥಾಪಿಸಿರುವ ನಂಬ್ರ 2348ನೇ ಕೊಡವೂರು ಮೊಗೇರರ ಸಹಕಾರ ಸಂಘವು ರಿಜಿಸ್ಟ್ರಿಮಾಡಲ್ಪಟ್ಟದ್ದನ್ನು ರದ್ದುಮಾಡಿರುವದರಿಂದಲೂ, ಸಂಘದ ಕಾರ್ಯಗಳನ್ನು ವ್ಯವಸ್ಥೆಪಡಿಸುವ ಬಗ್ಗಾಗಿ ತಕ್ಕ ವಿಲೆವಾರಿಮಾಡುವುದರಿಂದಲೂ, ಸದರಿ ಸಂಘದ ಮೇಲೆ ದಾವೆ ಇರುವ ಎಲ್ಲಾ ಜನರು ತಮ್ಮ ದಾವೆಗಳನ್ನು ಸದರಿ ಸಂಘದ ಲಿಕ್ವಿಡೇಟರರಾದ ಮಂಗಳೂರು ಸೆಕ್ಷನ್ ಸಹಕಾರಿ ಸಂಘಗಳ ಅಸಿಸ್ಟಾಂಟು ರಿಜಿಸ್ಟ್ರಾರರವರ ಮುಂದೆ ಪ್ರಕಟಣೆಯ ತಾರೀಕಿನಿಂದ ಮೂರು ತಿಂಗಳೊಳಗೆ ತರತಕ್ಕದ್ದೆಂತ ಈ ಮೂಲಕ ಪ್ರಕಟಿಸೋಣಾಗುತ್ತದೆ.

(Sd) M. Giriappa,
Liquidator and Assistant Registrar

NOTICE.

IN THE COURT OF THE DT. MUNSIFF OF MANGALORE.

I. A. No. $\frac{43}{1925}$ in I. P. $\frac{17}{1924}$

Francis B. Castilione son of Gabriel Castilino residing in Kankanady. Mangalore town. } Petitioner.

AND

Messrs Brito Brothers and 2 others. } Creditors.

Notice is hereby given that the abovenamed Petitioner has applied to the above named Court in the above I. A. 43 of 1925 for his absolute discharge and that the same will come on for hearing before the said Court at 11 A. M. on 30th July 1925 on or before which date you may appear in person or by Vakil and contest the same failing which it will be heard and decided in your absence.

Mangalore, 15-7-1925. } **P. D'Souza, & L. C. Pais.**
Vakils for Petitioner.

ಸಾಹಿತ್ಯಸರಸ್ವತಿ—ಲಕ್ಷ್ಮೀನಾರಾಯಣ
ಪುಣಿಂಚತ್ತಾಯ
ಇವರಿಂದ ರಚಿತವಾದ

ರಾಷ್ಟ್ರಗೀತಾರತ್ನಾಕರ ೦—೮—೦.

ಸ್ವರಾಜ್ಯಗೀತೆ ೦—೧—೦ ಲೀಲೆ ೦—೧—೦.

ಅಭಿಪ್ರಾಯ:—

ಕರ್ನಾಟಕದ ಸುಪ್ರಸಿದ್ಧ ವಿದ್ವನ್ಮಣಿಗಳಾದ
"ಹರಿಕಥಾರತ್ನಾಕರ" "ವಿದ್ಯಾನಿಧಿ"
ಕಾ. ಶಿವರಾಮದಾಸ್

ಸಂಪಾದಕ – "ಆನಂದ ಚಂದ್ರಿಕೆ" ಹೊಸೂರು ಇವರು ಬರೆಯುತ್ತಾರೆ-

"ಬ್ರಹ್ಮಶ್ರೀ ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯರ ಸನ್ನಿಧಿಗೆ – ಅನೇಕ ನಮಸ್ಕಾರ ಪೂರ್ವಕ ವಿಜ್ಞಾಪನೆಗಳು. ಉಭಯ ಕುಶಲೋಪರಿ. ॥ ಸಾ ॥

ಶ್ರೀ ಹರಿಗುರುದೇಶಭಕ್ತವರೇಣ್ಯ!

ಸಮುಚಿತ ಪ್ರೇಮದಿಂದ ತಾವು ಕಳುಹಿಸಿಕೊಟ್ಟ ಪತ್ರ ಪುಸ್ತಕಗಳು ತಲಪಿದವು. ನಿನ್ನೆಯ ದಿನ ಮಧ್ಯಾಹ್ನ ಸಮಗ್ರವಾಗಿ ಓದಿ ನೋಡಿದೆನು. ಸಮಧಿಕಾನಂದತುಂದಿಲನಾದೆನು. ಮೊನ್ನೆಯ ದಿನ ಇಲ್ಲಿ ನಡೆದ ಶ್ರೀ ಮಹಾಭಾರತ ಹರಿಕಥಾ ಭಾಗದಲ್ಲಿ "ಪಾಂಚಾಲೀ ಮಾನಸಂರಕ್ಷಣೆ" (ಅಕ್ಷಯವಸ್ತ್ರಪ್ರದಾನ) ಮಂಗಳಾಚರಣೆ ಸುಸಮಯದಲ್ಲಿ ತಮ್ಮಿಂದ ರಚಿತವಾದ "ಸ್ವರಾಜ್ಯ ಸೂರ್ಯೋದಯವಾಗಲಿ" ಎಂಬ ಗೀತವನ್ನು ಬೆಳಗಾವಿಗೆ ಬಂದಿದ್ದ ತಮ್ಮ ಮುಖೇನ ಶ್ರವಣಮಾಡಿದ ನಮ್ಮ ಮಿತ್ರರೊಬ್ಬರು ಗಾನಮಾಡಿದರು. ಸಭಾಸದರೆಲ್ಲರೂ ಆನಂದಪರವಶರಾದರು. ಮೂರನೆಯ ದಿವಸವೇ ತಮ್ಮ ಗ್ರಂಥಗಳೂ ತಲಪಿದವು. ತಮ್ಮ ಅಮೂಲ್ಯ ಗ್ರಂಥಗಳಲ್ಲಿ ದೈವಭಕ್ತಿ, ದೇಶಭಕ್ತಿ, ನೀತಿ, ವಿಜ್ಞಾನಗಳು ಮನೋಹರವಾದ ಶೈಲಿಯಿಂದಲಂಕೃತವಾಗಿ ಶೋಭಿಸುತ್ತಿರುವುವು. "ರಾಷ್ಟ್ರಗೀತಾ ರತ್ನಾಕರ" "ಲೀಲೆ" "ಸ್ವರಾಜ್ಯಗೀತೆ" ಯೆಂಬ ಗ್ರಂಥಗಳು ಮೂರೂ ಕರ್ನಾಟಕ ದೇಶಮಾತೆಯ ಕಂಠಾಭರಣದ ಅಮೂಲ್ಯ ರತ್ನತ್ರಯವೆಂಬದಾಗಿ ಬಿನ್ನವಿಸುತ್ತಿರುವೆನು.

ಮಿತ್ರರೆ! ಶ್ರೀಯಃಪತಿಯು ತಮಗೆ ಸಕಲಾರ್ಥಸಂಪತ್ತುಗಳನ್ನೂ ಅನುಗ್ರಹಿಸಲೆಂದು ಪ್ರೇಮಪೂರ್ವಕವಾಗಿ ಹಾರೈಸುತ್ತಿರುವೆನು.

ಓಂ ತತ್ಸತ್!!!

ಇಂತು
ಭವದೀಯ
ಹರಿಕಥಾರತ್ನಾಕರ ವಿದ್ಯಾನಿಧಿ ಕಾ. ಶಿವರಾಮದಾಸ್."

— ಮಾತ್ರವಲ್ಲದೆ —

ಪ್ರಾಕ್ತನ ವಿಮರ್ಶವಿಚಕ್ಷಣ ರಾವ್‌ಬಹದೂರ್ ಶ್ರೀಮಾನ್ ಆರ್ ನರಸಿಂಹಾಚಾರ್ಯ, ಎಮ್. ಎ., ಎಮ್. ಆರ್. ಎ. ಎಸ್. "ಪ್ರಾಚ್ಯವಿದ್ಯಾವೈಭವ," – ಮೈಸೂರು ಆಸ್ಥಾನ ಮಹಾವಿದ್ವಾನ್ ಶ್ರೀ. ಸೋಸಲೆ ಅಯ್ಯಾಶಾಸ್ತ್ರಿ, "ಕವಿಕುಲ"-ಅವರ ಮೊದಲಾದ ವಿದ್ವಾಂಸೋತ್ತಂಸರ, ಮಹಾರಾಷ್ಟ್ರ "ಕೇಸರಿ"ಯ ಹಾಗೂ ಸಕಲ ಕರ್ನಾಟಕದ ಸಕಲ ಪತ್ರಿಕೆಗಳ ಶ್ಲಾಘನೆಗೆ ಪಾತ್ರವಾದ

ರಾಷ್ಟ್ರಗೀತಾರತ್ನಾಕರ—ಲೀಲೆ—ಸ್ವರಾಜ್ಯಗೀತೆ

ಮೊದಲಾದ ಧನ್ಯ ಕಾವ್ಯಗ್ರಂಥಗಳು ಸಮ್ಮುಖದಲ್ಲಿವೆ. ಕರ್ನಾಟಕ ಬಂಧುಗಳೇ,

— ಓದಿ ನೋಡಬೇಕು —

ಕೆ. ಎಮ್. ದಾಸಪ್ರಭು ಎಂಡ್ ಸನ್ಸ್ ಮಂಗಳೂರು. } ಅಥವಾ { ಶಾರದಾ ಭಾಂಡಾಗಾರ, ರಥಬೀದಿ, ಮಂಗಳೂರು.

ವಿದೇಶ ವರ್ತಮಾನ.

—ಪಾರ್ಲಿಮೆಂಟಿನ ಮೆಂಬರರಾದ ಸಕಲಾತವಾಲರು ಪಾರ್ಲಿಮೆಂಟಿನ ಒಂದು ಚರ್ಚೆಯ ಸಂದರ್ಭದಲ್ಲಿ ಹಿಂದುಸ್ಥಾನ ಸರಕಾರವು ಹಿಂದುಸ್ಥಾನದಲ್ಲಿ ನಡಿಸುತ್ತಿದ್ದ ನಿರಂಕುಶ ಪ್ರಭುತ್ವವನ್ನು ನಿಷೇಧಿಸಿದರು.

—ಚೀನಾದೊಳಗಿನ ಹೋಂಗ್‌ಕಾಂಗದಲ್ಲಿ ಬ್ರಿಟಿಷ್ ಹಡಗುಗಳಿಗೆ ಸಾಮಾನುಗಳನ್ನು ಒದಗಿಸಿಕೊಡುವ ಚೀನಾ [illegible] ಮೇಲೆ ಬಾಂಬು ಬಿಸಾಡಲ್ಪಟ್ಟಿತ್ತು. ಹೆಚ್ಚಿನ ಹಾನಿಯೇನೂ ಆಗಲಿಲ್ಲ.

—ಚೀನಾದಲ್ಲಿಯ ಬ್ರಿಟಿಷ್ ಪ್ರಾಂತದ ಗವರ್ನರರು ಕಾಯಿದೆ ಕೌನ್ಸಿಲಿನಲ್ಲಿ ಭಾಷಣಮಾಡುವಾಗ ಎಲ್ಲ ಗಲಾಟೆಯು ಈಗ ನಿಂತಂತಿರುವುದು, ಹೆಚ್ಚಿನ ಗಾಬರಿಗೆ ಅವಕಾಶವಿಲ್ಲವೆಂಬದಾಗಿ ಹೇಳಿದರು.

—ಚೀನಾದೊಳಗಿನ ಹಂಕೌ, [illegible] ಮೊದಲಾದ ಕಡೆಗಳಲ್ಲಿ ಸಂಭವಿಸಿದ ದಂಗೆಯಲ್ಲಿ ಜಪಾನಿಯರ ಪ್ರಾಣಹಾನಿಯು ಸಂಭವಿಸಿದ್ದರಿಂದಲೂ, ಇತರ ವಿಧ ನಷ್ಟವು ಒದಗಿದ್ದರಿಂದಲೂ ಜಪಾನು ಚೀನಾ ಸರಕಾರದ ಪ್ರತಿಷೇಧವನ್ನು ಮಾಡುತ್ತಿದೆ.

—ಚೀನಾದೊಳಗಿನ [illegible] ಪಟ್ಟಣವನ್ನು ಹಿಡಿಯುವದಕ್ಕಾಗಿ ಚೀನಾದವರ ಆಲೋಚನೆಯು ನಡೆದು ಅದಕ್ಕೆ ಬೇಕಾಗಿರುವ ಯೋಜನೆಯು ಮಾಡಲ್ಪಡುತ್ತಿದೆ.

—ಚೀನಾದಲ್ಲಿರುವ ಫ್ರೆಂಚ ಮಂತ್ರಿಯು ತನ್ನ ಸ್ಥಾನಕ್ಕೆ ರಾಜಿಯನ್ನು ಕೊಟ್ಟಿರುವನು.

—ಬ್ರಹ್ಮದೇಶದಲ್ಲಿ ಯು. ಚಿಟ್ ಹ್ಲೈಂಗ್ ಎಂಬ ಕೌನ್ಸಿಲ್ ಬಹಿಷ್ಕಾರವಾದಿಗಳೊಬ್ಬರನ್ನು ಸರಕಾರವು ಕೈದುಮಾಡಿದೆ. ಒಂದುವರೆ ತಿಂಗಳ ಮುಂಚೆ ಇವರು ಒಂದು ರಾಜದ್ರೋಹಕರ ಭಾಷಣವನ್ನು ಕೊಟ್ಟರೆಂದು ಅವರ ಮೇಲೆ ಆರೋಪವಿದೆ. ಮ್ಯಾಜಿಸ್ಟ್ರೇಟರು ಒಂದೊಂದು ೩ ಸಾವಿರದಂತೆ ಎರಡು ಜಾಮೀನುಗಳ ಮೇಲೆ ಇವರನ್ನು ಬಿಟ್ಟಿರುವರು.

—ಹೌಸ್ ಒಫ್ ಕೊಮನ್ಸಿನಲ್ಲಿ ಸಂಭಾಷಣ ಮಾಡುವಾಗ ಕರ್ನಲ್ ವೆಜ್‌ವುಡ್ ಸಾಹೇಬರು ಬರ್ಕನಹೆಡ್ಡರ ಸ್ಟೇಟ್‌ಮೆಂಟಿನ ವಿಷಯವಾಗಿ ಅದು ನಿರಾಶಾಜನಕವಾಗಿರುವುದರಿಂದ ತೀವ್ರ ನಿಷೇಧವನ್ನು ವ್ಯಕ್ತಗೊಳಿಸಿದರು. ಮತ್ತು ಇದೆ ಭಾಷಣದಲ್ಲಿ ಅವರು ದೇ. ಬಂ. ದಾಸರನ್ನು ಹೊಗಳಿದರು. ದಾಸರ ಧೈರ್ಯವನ್ನು ಕೊಂಡಾಡುವಾಗ ಅಸಹಕಾರದ ಚಳವಳದಲ್ಲಿ ಬಂದಿರುವ ಕೊರತೆಯನ್ನು ಹೋಗಲಾಡಿಸಲು ಅದಕ್ಕೆ ವಿರುದ್ಧವಾಗಿ ದಾಸರು ಮುಂದರಿಸಿದ ಸಂಗತಿಯನ್ನು ಕ. ವೆಜ್‌ವುಡರು ಎತ್ತಿ ಹೇಳಿದರು.

—ಇಂಗ್ಲೆಂಡಿನಲ್ಲಿ ರೈಲ್ವೆಯ ಶತ ಸಾಂವತ್ಸರಿಕ ಉತ್ಸವವು ನಡೆಯಿತು. ಆ ಸಮಯದಲ್ಲಿ ೬ ಮೈಲು ದೂರ ಹಳೆ ಬಂಡಿಗಳಿಂದ [illegible] ಎಂಜಿನುಗಳನ್ನು ಎಳ್ಳಿಸಿ ಮೆರವಣಿಗೆಯು ಮಾಡಲ್ಪಟ್ಟಿತು.

ಒಳದೇಶ ವರ್ತಮಾನ.

—ಜಿ. ಐ. ಪಿ. ರೈಲ್ವೆ ಕಂಪೆನಿಯನ್ನು ಸರಕಾರವು ತನ್ನ ವಶದಲ್ಲಿ ತೆಕ್ಕೊಂಡಿದೆ. ಈ ಕಂಪೆನಿಯು ಈಗ ಸುಮಾರು ೮೦ ವರ್ಷದಿಂದ ನಡಕೊಂಡಿತ್ತು.

—ಮಧ್ಯಪ್ರಾಂತದೊಳಗಿನ ರಾಜಕೀಯ ಪರಿಸ್ಥಿತಿಯನ್ನು ವಿಮರ್ಶಿಸುವದಕ್ಕಾಗಿ ಅಲ್ಲಿಯ ಎಲ್ಲ ಪಕ್ಷಗಳ ಮುಖಂಡರ ರೌಂಡಟೇಬಲ್ ಕೊನ್ಫರೆನ್ಸು ಜರಗುವದಿದೆ.

—ಕೋಹತದ ದಂಗೆಯಲ್ಲಿ ವಿಪರೀತವಾದ ನಷ್ಟವು ಸಂಭವಿಸಿರುವುದರಿಂದ ಕಳೆದ ೧೯೨೪ನೆಯ ಇಸವಿಯ ಲಾಗಾಯತು ೧೦ ವರ್ಷಗಳ ತನಕ ಲಾಭದ ಮೇಲಿನ ಕರವನ್ನು ತಕ್ಕೊಳ್ಳಕೂಡದೆಂಬುದಾಗಿ ಕೋಹತದವರು ಸರಕಾರಕ್ಕೆ ಮನವಿಯನ್ನು ಮಾಡಿಕೊಂಡಿರುವರು.

—ಪೇಶಾವರದಲ್ಲಿ ಅಕಾಲಿ ಜನರು ಒಂದು ದೇವಸ್ಥಾನದೊಳಗಿನ ಮೂರ್ತಿಯನ್ನು ಒಡೆದಿರುವ ಕಾರಣ ಹಿಂದುಗಳಲ್ಲಿ ಭಯವುಂಟಾಗಿದೆ.

—ಬಿಹಾರ ಪ್ರಾಂತದೊಳಗಿನ ಕಟಕದಲ್ಲಿ ಅತಿವೃಷ್ಟಿಯಿಂದ ಅನೇಕ ಮನೆಗಳು ಬಿದ್ದವು. [illegible] ನೀರಿನಡಿ ಮುಳುಗಿಹೋದವು.

—ಮೈಸೂರಿನ ಮಹಾ ದಿವಾನರಾದ ಬಾನರ್ಜಿಯವರನ್ನು ಒಬ್ಬ ಯುರೋಪಿಯನು [illegible] ಸ್ಟೇಶನಿನಲ್ಲಿ ಅಪಮಾನಗೊಳಿಸಿದ್ದಕ್ಕಾಗಿ ಅವನ ಮೇಲೆ ಪಿರ್ಯಾದು ಮಾಡಿದ್ದರು. ಅವನು ದಿವಾನ ಸಾಹೇಬರ ಕ್ಷಮೆಯನ್ನು ಕೇಳಿ ೫೦೦ ರೂಪಾಯಿಯನ್ನು ಕೊಟ್ಟಿರುವನು.

—ನಿಝಾಮ ಸಾಹೇಬರು ಮಝುರುಲ್ ಹಕ್ಕರನ್ನು ಮುಖ್ಯಮಂತ್ರಿ ಸ್ಥಾನಕ್ಕೆ ನೇಮಿಸಿರುವರು.

—ಮೈಸೂರ ಮಹಾರಾಜರು ತಮ್ಮ ಜನ್ಮೋತ್ಸವದ ಬಗೆಯಲ್ಲಿ [illegible] ದೇವಲರಿಗೆ ಒಂದು ಸಾವಿರ ರೂಪಾಯಿ ಬಹುಮಾನ ಕೊಟ್ಟರು.

—ಧಾರವಾಡ ವೈದ್ಯಕ ಮಂಡಲವು ಕಲಕತ್ತೆಯೊಳಗಿನ ಆಯುರ್ವೇದ ವಿದ್ಯಾಲಯದ ಸಭಾರಂಭದಲ್ಲಿ ಮಹಾತ್ಮಾಜಿಯವರು ಮಾಡಿದ ಭಾಷಣವನ್ನು ನಿಷೇಧಿಸುವ ಒಂದು ಠರಾವನ್ನು ಪಾಸುಮಾಡಿ ಅದನ್ನು ಮಹಾತ್ಮಾಜಿಯವರಿಗೆ ಕಳುಹಿಸಿಕೊಟ್ಟಿರುವರು.

—ಧಾರವಾಡದಲ್ಲಿ ದೇಶಬಂಧು ದಾಸರವರ ಸ್ಮಾರಕವನ್ನು ಮಾಡಬೇಕೆಂದು ನಿಶ್ಚಯಿಸಿದೆ. ದಾಸರ ಒಂದು ಓಯಿಲ್ ಪೈಂಟಿಂಗ್ ಚಿತ್ರವನ್ನೂ, ರಾಜಕೀಯ ಗ್ರಂಥಸಂಗ್ರಹಾಲಯವನ್ನೂ ಸ್ಥಾಪಿಸಬೇಕೆಂದು ಹಾಗಾಗಿ ಎಷ್ಟೊ ಹಣವು ಕೂಡ ಒದಗಿದೆ.

—ಝರಿಯಾ ಕೊಂಗ್ರೆಸ್ ಕಮಿಟಿಯ ಸೆಕ್ರೆಟರಿಗಳಾದ ಪಂಡಿತ ಕೃಷ್ಣಗೋಪಾಲ ಶರ್ಮ ಎಂಬವರನ್ನೂ ಮತ್ತು ಅವರೊಬ್ಬರು ಸಹಕಾರಿಗಳನ್ನೂ [illegible] ಮಾಡಲಾಗಿದೆ. ಕೊಂಗ್ರೆಸ್ಸಿನ ಆಫೀಸಿನ ಬಳಿ ಅವರ ಮನೆಯಲ್ಲಿ ಒಂದು ರಿವೊಲ್ವರು ಝಡತಿಯಲ್ಲಿ ಸಿಕ್ಕಿತು. ಆದರೆ ಈ ಝಡತಿಯು ಅವರು ಮನೆಯಲ್ಲಿ ಇಲ್ಲದ ವೇಳೆಯಲ್ಲಿ ಆಗಿತ್ತು. ಗೋಪಾಲಶರ್ಮರು ಝರಿಯಾಗೆ ಬಂದಿರುವ ಟಾಂಗಾದಲ್ಲಿಯೂ ಒಂದು ರಿವೊಲ್ವರು ಸಿಕ್ಕಿತ್ತು.

—ಕೊಯಮುತ್ತೂರಿನಲ್ಲಿ ತಾಲೂಕು ಬೋರ್ಡು ಮೆಂಬರರಾದ [illegible] ಗೌಂಡನ ಎಂಬವರನ್ನೂ ಮತ್ತು ಅವರ ಮಗ ವೆಂಕಟಸಾಮಿ ಗೌಂಡನ ಎಂಬವರನ್ನೂ ಅವರ ಹಳ್ಳಿಯಿಂದ ಊರಿಗೆ ಬರುವಾಗ ಗುಂಡಿನಿಂದ ಕೊಂದರು.

—[illegible] ಸಮಯದಲ್ಲಿ ಸರಕಾರವು [illegible] ಮಾಡಿದ್ದು ಅದಕ್ಕೆ [illegible] ಹೆಚ್ಚಿನ ಖರ್ಚು ಬರಲಿಲ್ಲವೆಂದು ಪ್ರಕಟಿಸಿದೆ.

—ಬಂಗಾಲ ಸಿವಿಲ್ ಸರ್ವಿಸಿನ ಮತ್ತು ಪ್ರೊವಿನ್ಶಿಯಲ್ ಸರ್ವಿಸಿನ ಸಂಬಳವನ್ನು ಕಡಿಮೆಮಾಡಬಹುದೊ ಹೇಗೆ ಎಂಬುದನ್ನು ಆಲೋಚಿಸಲು ಒಂದು ಕಮಿಟಿ ನೇಮಕವಾಗಿತ್ತು. ಈ ಕಮಿಟಿಯ ರಿಪೋರ್ಟು ಪ್ರಕಟವಾದ ಬಳಿಕ ಸರಕಾರವು ಅಲ್ಲಿಯ ಸಿವಿಲ್‌ಸರ್ವೆಂಟರ ಸಂಬಳವನ್ನು ಕಡಿಮೆಮಾಡಬಾರದೆಂದು ಪ್ರಕಟಪಡಿಸಿದೆ.

—ಮುಂಬೆಯಿಯ ಗಿರಣಿಮಾಲಿಕರ ಎಸೋಸಿಯೇಶನವರಿಗೂ ಕೂಲಿ ಪಕ್ಷದ ಮುಖಂಡರಿಗೂ ಪರಸ್ಪರ ಸಭೆ ಸೇರಿ ಅವರ ಕೆಲಸ, ಸಂಬಳ ಇತ್ಯಾದಿ ವಿಷಯವಾಗಿ ಚರ್ಚೆಯು ನಡೆಯುತ್ತ ಇದೆ.

—[illegible] ನಾರಾಯಣ ಪಿಳ್ಳೆ ಸ್ಟ್ರೀಟಿನಲ್ಲಿ ೩೦ ಫೀಟು ಉದ್ದ ಮತ್ತು ೧೫ ಫೀಟ್ ಎತ್ತರದ ಗೋಡೆಯು ಬಿದ್ದು ಈ ಅಪಘಾತದಿಂದ ಅಲ್ಲಿ ಆಡುತ್ತಿದ್ದ ಒಂದು ಆರು ವರ್ಷದ ಹೆಣ್ಣು ಕೂಸು ಮೃತಪಟ್ಟಿತು.

—ಈಗಿನ ಸ್ಕೂಲ್ ಫೈನಲ್ ಪರೀಕ್ಷೆಯ ಕ್ರಮವನ್ನು ಸರಕಾರದವರು [illegible] ಹುಡುಗರಿಗೆ ಅನೇಕ ದೃಷ್ಟಿಯಿಂದ ಹಾನಿಕರವೆಂಬದಾಗಿ ಒಂದು ಠರಾವನ್ನು ಮದುರೆಯ ಟೀಚರ್ಸ್ ಎಸೋಸಿಯೇಶನು ಪಾಸುಮಾಡಿ ಆ ಮೇರೆಗೆ ಒಂದು ಸರಕ್ಯುಲರನ್ನು ಹೊರಡಿಸಿದೆ.

—ಬಳ್ಳಾರಿ ಜಿಲ್ಲೆಯಲ್ಲಿ ಕರ್ನಾಟಕ ಕಾಲೇಜನ್ನು ಸ್ಥಾಪಿಸಬೇಕೆಂತಲೂ, ಅದಿನ್ನು ತತ್ಕಾಲಕ್ಕೆ ಮದ್ರಾಸ ಯುನಿವರ್ಸಿಟಿಗೆ ಸಂಬಂಧಿಸಿಕೊಳ್ಳಬೇಕೆಂತಲೂ, ಆನಂತರ ಕರ್ನಾಟಕ ವಿದ್ಯಾಪೀಠವು ಸ್ಥಾಪಿತವಾದ ಬಳಿಕ ಅದನ್ನು ಆ ವಿದ್ಯಾಪೀಠಕ್ಕೆ ಜೋಡಿಸಬಹುದೆಂತಲೂ ಧಾರವಾಡದಲ್ಲಿ ಸಭೆ ಸೇರಿ ಠರಾವು ಪಾಸಾಗಿದೆ. ಬಳ್ಳಾರಿಯು ಆಂಧ್ರ ಯುನಿವರ್ಸಿಟಿಯ ಕೇಂದ್ರವಾಗಿರಬೇಕೆಂದು ಕೆಲವು ಆಂಧ್ರರು ಪಡುವ ಪೇಚಾಟವನ್ನು ಈ ಸಭೆಯು ನಿಷೇಧಿಸಿದೆ.

—ದೇ. ಬಂಧು ದಾಸರ ಮರಣದಿಂದ ಖಾಲಿಯಾಗಿರುವ ಕಲಕತ್ತೆಯ ಕೋರ್ಪೊರೇಶನಿನ ಸ್ಥಾನಕ್ಕೆ ಸ್ವರಾಜ್ಯಪಾರ್ಟಿಯ ಪರವಾಗಿ ಶ್ರೀ. ಸೇನಗುಪ್ತರ ಉಮೇದುವಾರಿಕೆಯು ಕಳುಹಿಸಲ್ಪಟ್ಟಿದೆ. ಮ. ಗಾಂಧಿಗಳು ಅಲ್ಲಿಯ ಕೊಂಗ್ರೆಸ ಮುಖಂಡರಲ್ಲಿ ಚರ್ಚೆಮಾಡಿ ಸೇನಗುಪ್ತರೆ ಯೋಗ್ಯರೆಂಬುದಾಗಿ ಹೇಳಿ ಕೊಂಗ್ರೆಸಿನವರ ಸಮ್ಮತಿಯಿಂದ ಇವರ ಹೆಸರು ಸೂಚಿಸಲ್ಪಟ್ಟಿದೆ.

—ಮಹಾತ್ಮಾ ಗಾಂಧಿಗಳು ಬಂಗಾಲ ಮತ್ತು ಆಸಾಮು ಸಂಚಾರದ ಉಳಿದ ಅಂಶವನ್ನು ಪುನಃ ಪ್ರಾರಂಭಿಸಿರುವರು.

—ಮಹಾತ್ಮಾ ಗಾಂಧಿಗಳು ಬರ್ಕನ ಹೆಡ್ಡರ ಸ್ಟೇಟಮೆಂಟಿನ ಮೇಲೆ ಯಾವ ಅಭಿಪ್ರಾಯವನ್ನೂ ಕೊಟ್ಟಿಲ್ಲ. ಸೇನಗುಪ್ತರು ಕೂಡ ತಮ್ಮ ಅಭಿಪ್ರಾಯವನ್ನು ಕೊಡಲು ನಿರಾಕರಿಸಿರುವರು.

—ಮದ್ರಾಸಿನ ಸರ ತ್ಯಾಗರಾಜ ಚೆಟ್ಟಿಯವರು ಮೃತವಾದ ಬಳಿಕ ಅವರ ಸ್ಥಾನಕ್ಕೆ ಮುಖಂಡನನ್ನು ಆರಿಸುವುದಾಗಿಯೂ ಸದರಿ ಚೆಟ್ಟಿಯವರ ಸ್ಮಾರಕದ ಸಂಗತಿಯನ್ನು ಆಲೋಚಿಸುವುದಕ್ಕಾಗಿಯೂ, ಆ ತ್ಯಾಗರಾಜ ಚೆಟ್ಟಿಯವರ ಬಂಗಲೆಯಲ್ಲಿ ಬ್ರಾಹ್ಮಣೇತರ ಬಂಧುಗಳ ಸಭೆ ಸೇರಿತ್ತು. ಸಭೆಗೆ ೬೦೦ ಜನರು ಹಾಜರಿದ್ದರು, ಮದ್ರಾಸ ಸಂಸ್ಥಾನದ ಎಲ್ಲ ಭಾಗಗಳಿಂದ ಸಾಮಾನ್ಯವಾಗಿ ಪ್ರತಿನಿಧಿಗಳು ಹಾಜರಿದ್ದರು. ಸಭೆಯವರು ಪನಗಲ್ ರಾಜರನ್ನು ಮುಖಂಡರನ್ನಾಗಿ ಚುನಾಯಿಸಿರುವರು. ಮೃತ ಚೆಟ್ಟಿಯವರ ಸ್ಮಾರಕವನ್ನು ಮಾಡುವದಕ್ಕಾಗಿ ಸಂಸ್ಥಾನದ ಎಲ್ಲ ಭಾಗಗಳಲ್ಲಿ ಸ್ಥಳೀಕ ಮುಖಂಡರನ್ನು ನೇಮಿಸಿರುವರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಫಂಡು ವಸೂಲಿನ ಕೆಲಸವನ್ನು ಮಾಡಲು ಮಿ। ರಘುಚಂದ್ರ ಬಲ್ಲಾಳರನ್ನು ನೇಮಿಸಿರುವರು.

—ದಿಲ್ಲಿಯ ಮುನ್ಸಿಪಾಲಿಟಿಯ ಹದ್ದಿನೊಳಗೆ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯದಿಂದ ಜಾರಿಯಲ್ಲಿ ತರಲು ಅಲ್ಲಿಯ ಮುನ್ಸಿಪಾಲಿಟಿಯು ಒಂದು ಠರಾವನ್ನು ಪಾಸುಮಾಡಿದೆ.

—ದೇ. ಬಂ. ದಾಸರ ಸಹೋದರರಾದ ನ್ಯಾಯಮೂರ್ತಿ ಪಿ. ಆರ್. ದಾಸರವರ ಪ್ರಕೃತಿಯು ಅಸ್ವಸ್ಥವಾಗಿತ್ತು. ಈಗ ಗುಣವಾಗಿ ಅವರು ಬೇಗನೆ ಹೈಕೋರ್ಟಿಗೆ ಹೋಗುವವರಿದ್ದಾರೆ.

ದಕ್ಷಿಣ ಕನ್ನಡ.

ಬಂಟ್ವಾಳ — ಇಲ್ಲಿ ಜುಲಾಯಿ ತಾ. ೧ರಿಂದ ಬಂಟ್ವಾಳ ಶ್ರೀ ತಿರುಮಲ ದೇವಳದ ಎಲಿಮೆಂಟರಿ ಶಾಲೆಯನ್ನು ಶಾಲಾ ಮೆನೆಜಿಂಗ ಕಮಿಟಿಯವರು ಎಲ್ಲ ಜಾತಿ ಮಕ್ಕಳಿಗೆ ಸ್ಕೂಲ್‌ಫೀಸು ಮಾಫಿಯಾಗಿ ವಿದ್ಯಾಭ್ಯಾಸ ಕೊಡಬೇಕೆಂದು ಆಲೋಚಿಸಿ ಅದರಂತೆ ತಾ. ೧ಕ್ಕೆ ಮುಂಚಿನ ಮನೇಜರರು ಈಗಿನ ಮನೇಜರರು ಶಾಲೆಯ ಎಲ್ಲಾ ಮಕ್ಕಳಿಗೆ ಉಚಿತವಾಗಿ ಹೇಳುತ್ತಾರೆ. ಇದರಿಂದ ದೇವಳದ ಕಡೆಯಿಂದ ಮಾಡಿದ ಖರ್ಚು ಸಾರ್ಥಕವಾದದ್ದು.

ಇಲ್ಲಿ ನೆರೆಯು ತಾ. ೧೩ಕ್ಕೆ ವರ್ಷಂಪ್ರತಿ ಬರುವಷ್ಟು ಬಂತು [illegible] ನೀರು ಬಿದ್ದದೆ. ೧೩ ಮೈಲು ಕಲ್ಲಿನ ಸಮೀಪ ದೋಣಿ ಬಿದ್ದದೆ.

ವಿವಿಧ ವಿಷಯಗಳು.

— ಚೀನಾದೊಳಗಿನ ಗಲಾಟೆ. —

ಚೀನಾದೊಳಗಿನ ಶಾಂಘಾಯ, ಹಾಂಕೋ, ಟಿನತ್ಸೀನ, ಕೆಂಟನ ಇತ್ಯಾದಿ ಭಾಗಗಳಲ್ಲಿ ಹಬ್ಬಿಕೊಂಡಿದ್ದ ಅಸಂತೋಷವು ಶಾಂತವಾಗುವ ಸ್ಥಿತಿ ಬರಬೇಕಷ್ಟೆ ಇನ್ನೂ ಕಾಣುವದಿಲ್ಲ. ಈ ದಂಗೆಯಲ್ಲಿ ವಿದ್ಯಾರ್ಥಿಗಳೊಡನೆ ಕೂಲಿಯವರು ಸೇರಿದ್ದು ಕಂಡು ಬರುತ್ತಿದ್ದರೂ, ಈ ಗಲಾಟೆಯು ಮುಖ್ಯವಾಗಿ ವಿದ್ಯಾರ್ಥಿಗಳದಾಗಿಯೆ ಇರುತ್ತದೆಂದು ಶಾಂಘಾಯದಲ್ಲಿರುವ ಬ್ರಿಟಿಷರು ಮಜೂರ ಪಕ್ಷದವರಿಗೆ ತಿಳಿಸಿದ್ದಾರೆ. ಅಲ್ಲದೆ ಈ ವಿದ್ಯಾರ್ಥಿಗಳಿಗೆ ರಶ್ಯದೊಳಗಿನ ಬೋಲ್‌ಸೆವಿಕರ ಗುಪ್ತವಾದ ಪ್ರೋತ್ಸಾಹವುಂಟೆಂಬುದಾಗಿಯೂ ಅವರು ಲೇಬರ ಪಾರ್ಟಿನವರಿಗೆ ತಿಳಿಸಿದ್ದಾರೆ. ಚೀನಾದಲ್ಲಿ ಉದ್ಭವಿಸಿರುವ ಈ ಚಳವಳದ ಮುಖ್ಯ ಧೋರಣವು ಇಂಗ್ಲಂಡ ಮತ್ತು ಜಪಾನ ಇವುಗಳಿಗೆ ವಿರುದ್ಧವಾಗಿದ್ದು ಆ ಎರಡೂ ದೇಶದ ಒಡವೆಗಳ ಮೇಲೆ ಅವರು ಕಡು ಬಹಿಷ್ಕಾರವನ್ನು ಹಾಕಿರುವರು. ಪರಕೀಯ ಒಡವೆಗಳನ್ನು ಬಹಿಷ್ಕರಿಸುವದು, ಮುಷ್ಕರವನ್ನು ಹೂಡುವುದು ಈ ಎರಡು ಸಂಗತಿಗಳನ್ನು ಚಳವಳಿಗಾರರು ಕೈಕೊಂಡಿದ್ದಾರೆ. ಸಮಯೋಚಿತವಾದ ಈ ಎರಡು ಮಾರ್ಗಗಳಿಗಿಂತ ಇತರ ಮಾರ್ಗಗಳನ್ನು ಅವಲಂಬಿಸಿಲ್ಲವಾದರೂ ಚೀನಾದಲ್ಲಿರುವ ಪರಕೀಯರು ಈ ಚಳವಳದ ಸ್ವರೂಪದ ವಿಪರ್ಯಾಸವನ್ನು ಮಾಡಿ ಬೋಲ್‌ಸೆವಿಕರ ಸಾಲಿನಲ್ಲಿ ಅವರನ್ನು ಉಳ್ಳಿರಿಸುವ ಪ್ರಯತ್ನವು ನಡೆದಿದೆ. ಯೋಗ್ಯರೀತಿಯಿಂದ ನಡೆದಿರುವ ಈ ಚಳವಳವು ಬಹುಜನರ ಸೇರುವಿಕೆಯಿಂದ ಕ್ವಚಿತ್ಪ್ರಸಂಗದಲ್ಲಿ ಸ್ವಲ್ಪ ಅತಿಕ್ರಮವುಳ್ಳದಾಗಿತ್ತಾದರೂ ಅದನ್ನು ಕ್ಷಮಿಸುವದರ ಬದಲಾಗಿ ಬ್ರಿಟಿಷರು ಮತ್ತು ಅಮೇರಿಕಾದವರು ಚೀನರ ಮೇಲೆ ಗುಂಡುಗಳನ್ನು ಹಾರಿಸಿ ಅವರನ್ನು ಕೊಲ್ಲುತ್ತಿದ್ದಾರೆ. ಮಾತ್ರವಲ್ಲ, ನೀವು ಹೀಗೆ ಮಾಡಿದ್ದು ತಪ್ಪೆಂದು ಚೀನಿ ಸರಕಾರವು ಹೇಳಿದ್ದಲ್ಲಿ ಆ ಚೀನಿ ಸರಕಾರವನ್ನೇ ಹೆದರಿಸುತ್ತಿದ್ದಾರೆ. ಅಮೇರಿಕಾ ಮುಂತಾದ ಇತರ ರಾಷ್ಟ್ರಗಳವರ ಗುಂಡುಗಳು ತಾಗಿ ಮೃತಪಟ್ಟವರ ಸಂಬಂಧಿಕರ ವಿಷಯವಾಗಿ ಸಹಾನುಭೂತಿಯನ್ನು ಪ್ರದರ್ಶಿಸಲು ಚೀನಿ ವಿದ್ಯಾರ್ಥಿಗಳು ಒಂದು ಸಭೆಯನ್ನು ಮಾಡಿದ್ದರು. ಈ ನೆವನವನ್ನು ಹಿಡಕೊಂಡು ಅಲ್ಲಿಯ ಪರರಾಷ್ಟ್ರದವರು ಚೀನಿ ಸರಕಾರಕ್ಕೆ ಸ್ವಂತ ದೇಶದೊಳಗಿನ ದಂಗೆಯನ್ನು ನಿಲ್ಲಿಸುವ ಸಾಮರ್ಥ್ಯವಿಲ್ಲವೆಂದು ಹೇಳಿ ಅದರ ಸ್ವಾತಂತ್ರ್ಯವನ್ನು ಕಳೆಯುವ ಆಲೋಚನೆಯಲ್ಲಿ ಪರಕೀಯ ರಾಷ್ಟ್ರಗಳು ಇದ್ದಾವೆ. ಈ ಪ್ರಶ್ನೆಯನ್ನು ರಾಷ್ಟ್ರಸಂಘದಲ್ಲಿ ಚರ್ಚಿಸಬೇಕೆಂದು ಮಜೂರ ಪಕ್ಷವು ಹೇಳುತ್ತಿದ್ದರೂ, ಇಂಗ್ಲಂಡ ಮತ್ತು ಅಮೇರಿಕಾ ಇವು ಒಟ್ಟಿಗೆ ಸೇರಿ ಅಂತರ ರಾಷ್ಟ್ರೀಯ ಕಮಿಶನಿನ ಮುಖಾಂತರ ಇದನ್ನು ತೀರ್ಮಾನಿಸುವ ಸಂದರ್ಭದಲ್ಲಿದ್ದಾವೆ. ಆದರೂ ಈ ದಂಗೆಯ ಮೂಲ ಕಾರಣವು ಪರಕೀಯರು ಚೀನದಲ್ಲಿ ಯಾವ ಅಧಿಕಾರಾತಿಕ್ರಮವನ್ನು ನಡಿಸುತ್ತಿದ್ದಾರೊ ಅದೆಯಾಗಿದೆ ಎಂಬುದು ಅಮೇರಿಕಕ್ಕೆ ಗೊತ್ತಾಗಿರುವದರಿಂದ ಈ ಸಂಗತಿಯನ್ನಾದರೂ ಅದು ತನ್ನ ಆಲೋಚನೆಯಲ್ಲಿ ತಕ್ಕೊಂಡಿದೆ. ಪರಕೀಯ ರಾಷ್ಟ್ರಗಳು ಅನ್ಯರ ಪ್ರಾಂತಗಳನ್ನು ಆಕ್ರಮಿಸುವ ಪದ್ಧತಿಯನ್ನು ನಿರ್ಮೂಲಪಡಿಸುವ ವರೆಗೆ ಚೀನಾದೊಳಗಿನ ಗಲಾಟೆಯು ನಿಲ್ಲಲಿಕ್ಕಿಲ್ಲವೆಂದು ಬಲ್ಲಾದವರು ಅಭಿಪ್ರಾಯಪಡುತ್ತಾರೆ.

ದಿಲ್ಲಿಯ ಬಕ್ರೀದೂ ಕಲಕತ್ತೆಯ ದಂಗೆಯೂ.

ಬಕ್ರೀದಿನ ಉತ್ಸವದ ಸಮಯದಲ್ಲಿ ಕಲಕತ್ತೆಯಲ್ಲಿ ಗಲಾಟೆಯಾದ ಸಂಗತಿಯನ್ನು ನಾವು ಕಳೆದ ಸಂಚಿಕೆಯಲ್ಲಿ ವಿವರವಾಗಿ ಕೊಟ್ಟಿದ್ದೇವೆ. ಈ ಹಬ್ಬದ ದಿಲ್ಲಿಯ ವೃತ್ತಾಂತವನ್ನು ಈ ಹೊತ್ತು ವಾಚಕರಿಗೆ ಸಾದರಪಡಿಸಲಿದ್ದೇವೆ. ದಿಲ್ಲಿ ಪಟ್ಟಣದಲ್ಲಿ ಪಹಾರಾ [illegible] ವೆಂಬದೊಂದು ಮುಖ್ಯ ಬೀದಿ ಇದೆ. ಈ ಬೀದಿಯಲ್ಲಿ ಹಿಂದುಗಳ ವಸತಿಯು ಇರುವದು. ಈ ಬೀದಿಯಿಂದ ಕಳೆದ ವರ್ಷ ವಧ್ಯಗೋವನ್ನು ಕೊಂಡುಹೋಗಲು ಯತ್ನಿಸಿದ್ದರಿಂದ ಅದನ್ನು ನಿಲ್ಲಿಸಲು ಮೆಜಿಸ್ಟ್ರೇಟರು ಹುಕುಮನ್ನು ಹೊರಡಿಸಿದ್ದರು. ಆ ಕಾರಣದಿಂದ ಕಳೆದ ವರ್ಷ ದಂಗೆಯಾಗಿತ್ತು. ಈ ವರ್ಷ ಮೆಜಿಸ್ಟ್ರೇಟರು ಈ ಪಹಾರಾ [illegible] ರಸ್ತೆಯಿಂದ ದನವನ್ನು ಕೊಂಡು ಹೋಗಬಹುದೆಂದು ಮೆಜಿಸ್ಟ್ರೇಟರು ಮುಂಚಿತವಾಗಿಯೆ ಹುಕುಮು ಕೊಟ್ಟರು. ದಂಗೆಯಾದೀತೆಂದು ತಿಳಿಪಡಿಸಿದ್ದರೂ ಮೇಲಿನ ಅಧಿಕಾರಿಗಳು ಈ ಕಡೆಗೆ ಗಮನಕೊಡಲಿಲ್ಲ. ಈಗ ೩೦—೪೦ ವರ್ಷಗಳಿಂದೀಚೆ ವಧ್ಯಗೋವನ್ನು ಹಿಂದೂಗಳು ವಾಸಿಸಿರುವ ಈ ರಸ್ತೆಯಿಂದ ಕೊಂಡುಹೋದದಿಲ್ಲವೆಂಬುದಾಗಿ ಹಿಂದುಗಳ ಹೇಳಿಕೆ ಇರುವಾಗಲೂ ಈ ವರ್ಷ ಅದೆ ರಸ್ತೆಯಿಂದ ವಧ್ಯಗೋವು ಒಯ್ಯಲ್ಪಟ್ಟಿತು. ಈ ರಸ್ತೆಯಿಂದ ವಧ್ಯಗೋವನ್ನು ಒಯ್ಯಬಾರದೆಂದು ಹಿಂದುಗಳು ಮಹಮ್ಮದೀಯರನ್ನು ವಿಜ್ಞಾಪಿಸಿಕೊಂಡರು. ಆದರೆ ಮಹಮ್ಮದೀಯರು ಈ ವಿನಂತಿಯನ್ನು ಮನ್ನಿಸದೆ ಅಲ್ಲಿಂದಲೆ ದನದ ಮೆರವಣಿಗೆಯಿಂದ ಒಯ್ದರು! ಆ ಬೀದಿಯಲ್ಲಿರತಕ್ಕ ಹಿಂದುಗಳು ತಮ್ಮ ಅಂಗಡಿಗಳಿಗೆ ಮತ್ತು ಮನೆಗಳಿಗೆ ಬಾಗಿಲು ಹಾಕಿದರು. ಕಳೆದ ವರ್ಷದ ಅದೆ ದನವನ್ನು ಹಿಡಕೊಂಡು ಇಬ್ಬರು ಮಹಮ್ಮದೀಯರು ಆ ರಸ್ತೆಯಿಂದ ಬರಹತ್ತಿದರು. ಚೀಫಕಮಿಶನರರೂ, ಮತ್ತು ಡೆಪ್ಯುಟಿ ಕಮಿಶನರರೂ ಇವರು ಸ್ವತಃ ಈ ಸಮಾರಂಭಕ್ಕೆ ಬಂದು ತಮ್ಮ ಆಗಮನದಿಂದ ಸರಕಾರದ ಸಹಾಯವುಂಟೆಂಬುದನ್ನು ತಿಳಿಸಿಕೊಟ್ಟರು. ಮಾತ್ರವಲ್ಲ, ಕಾಲಾಳುಗಳಿಂದಲೂ, ಕುದುರೆಸವಾರರಿಂದಲೂ ರಸ್ತೆಯು ಸಂರಕ್ಷಿಸಲ್ಪಟ್ಟಿತ್ತು. ತೋಪುಗುಂಡುಗಳ ಗಾಡಿಗಳು ತಯಾರಾಗಿದ್ದವು! ಈ ಮೇರೆಗೆ ಬಂದೋಬಸ್ತನ್ನು ಮಾಡಿ ಮೆರವಣಿಗೆಯಿಂದ ಗೋವು ಒಯ್ಯಲ್ಪಟ್ಟಿತು!

ದಿಲ್ಲಿಯಲ್ಲಿ ನಡೆದ ಈ ಸಂಗತಿಯು ಎಷ್ಟು ಖೇದಜನಕವಾಗಿದೆ! 'ಗೋವುಗಳನ್ನು ಸಂಹರಿಸಿ ಹಿಂದುಗಳ ಮನೋವೃತ್ತಿಯನ್ನು ನೋಯಿಸಿದ್ದು ಯುಕ್ತವಾಗಲಿಲ್ಲ'ವೆಂದು ಯಾರಾದರೂ ಒಬ್ಬ ಮೌಲಾನನಾಗಲಿ, ಮೌಲವಿಯಾಗಲಿ ಈ ದಿಲ್ಲಿಯ ವೃತ್ತಾಂತದ ಬಗ್ಗೆ ನಿಷೇಧಪ್ರದರ್ಶನವನ್ನು ಮಾಡಿದ್ದುಂಟೆ? ಈ ಕೆಲಸವನ್ನು ಯಾರಾದರೂ ಸಾಮಾನ್ಯರು ಮಾಡಿದ್ದಲ್ಲ. ದಿಲ್ಲಿಯಲ್ಲಿಯ ಅಂಜುಮಾನಿ [illegible] ಸಹಾಯವೆ ಇದಕ್ಕುಂಟು! ಆದರೆ ಕಲಕತ್ತೆಯಲ್ಲಿ ಸಂಭವಿಸಿದ ದಂಗೆಯ ಸರ್ವದೋಷವನ್ನು ಹಿಂದುಗಳ ಮೇಲೆ ಹಾಕಿ ಅವರ ಕಿವಿಯನ್ನು ಹಿಂಡುವವರು ಮತ್ತು ಅವರ ಮೂಗನ್ನು ಮುಸಲ್ಮಾನರ ಮುಂದು ಕೊಯಿಸುವವರು ನಮ್ಮಲ್ಲಿ ಸಾಕಷ್ಟಿದ್ದಾರೆ! ಕಲಕತ್ತೆಯ ಸಂಗತಿಯಲ್ಲಿಯಾದರೂ ಕೂಡ ಸಾರ್ವಜನಿಕ ಬಾವಿಯ ಮುಂದೆ ಚರ್ಮಸುಲಿದ ಮತ್ತು ಕಡಿದ ಗೋವು ಇತ್ತು. ವಧೆಯ ಕೃತ್ಯವು ಬೇರೆ ಕಡೆಯಲ್ಲಿ [illegible] ಬಾವಿಯ ಹತ್ತಿರ ಗೋವಿನ ಮಾಂಸಮಯಶರೀರವು ಇತ್ತು. ಆದರೂ ಹಿಂದುಗಳ ತಪ್ಪು! ಹಿಂದುಗಳು ದಂಗೆಯನ್ನು ಮಾಡಿ, ಪರಧರ್ಮೀಯರನ್ನು ಹಿಂಸಿಸಬೇಕೆಂದು ನಮ್ಮ ಅಭಿಪ್ರಾಯವಲ್ಲ. ಪರಂತು ಅವರ ಸಹನಶೀಲತೆಗೆ, ಒಂದು ಗಡಿಯದೆ, ಪ್ರಸಂಗ ವಿಶೇಷದಲ್ಲಿ ಅದು ದಾಟಿಹೋಗುವದು ಸಹಜವು. ನೀವು ಏನೇ ಮಾಡಬಹುದು, ಹಿಂದುಗಳು ಮಾತ್ರ ಅದನ್ನೆಲ್ಲ ಸಹಿಸಿ ಸುಮ್ಮನಿರಬೇಕು ಎಂದು ಹೇಳುವದಕ್ಕಿಂತ "ಹಿಂದುಗಳಿರುವದೆ ತಪ್ಪು! ಅವರು ತಮ್ಮ ಧರ್ಮದಲ್ಲಿ ಶ್ರದ್ಧೆಯನ್ನಿಡುವದೆ ತಪ್ಪು" ಎಂಬುದಾಗಿ ಹೇಳಿದರೆ ಈ ಪುರಾಣವೆಲ್ಲ ಒಂದೆ ಮಾತಿನಿಂದ ತೀರುವದು! ಈ ಅತ್ಯಧಿಕಾರದ ತತ್ವಜ್ಞಾನವು ಕೊನೆಗೆ ಈ ಅರ್ಥದಲ್ಲಿ ಪರಿಸಮಾಪ್ತಿಯಾಗದೆ ಬೇರಿಲ್ಲದೆ ಅನ್ಯದಾರಿ ಇಲ್ಲ.

ಡಾರ್ವಿನನ ಉತ್ಕ್ರಾಂತಿ ತತ್ವವು ಬೈಬಲಿನ ಹೇಳಿಕೆಗೆ ವಿರುದ್ಧವಾದ್ದರಿಂದ ಅದನ್ನು ಶಾಲೆಗಳಲ್ಲಿ ಕಲಿಸಕೂಡದು, ಅದರ ಹೆಸರನ್ನು ಸಹ ಎತ್ತಬಾರದು ಎಂಬದಾಗಿ ಅಮೇರಿಕದ ಒಂದು ಪ್ರಾಂತಿಕ ಸರಕಾರದ ಆಜ್ಞೆ. ಅದನ್ನು ಮೀರಿ ಒಬ್ಬ ಉಪಾಧ್ಯಾಯನು ಉತ್ಕ್ರಾಂತಿ ತತ್ವವನ್ನು ಬೋಧಿಸಿದನೆಂದು ಅವನ ಮೇಲೆ ಮೊಕದ್ದಮೆ ನಡೆಯುತ್ತಿದೆ. ಮೇಲೆ ಹೇಳಿದ ಸರಕಾರದ ಆಜ್ಞೆಯು ಪ್ರಜೆಗಳ ಸ್ವಾತಂತ್ರ್ಯವನ್ನು ಅಡಿಮೆ ಮಾಡುತ್ತದೆಂದೂ, ಅದ ಕಾರಣ ಆ ಶಾಸನವು ಪ್ರಾಂತಿಕ ಸರಕಾರದ ಅಧಿಕಾರದ ಹೊರಗಿನದ್ದೆಂದೂ "ಪ್ರಜಾ ಸ್ವಾತಂತ್ರ್ಯ ಸಭೆ"ಯವರು ವಾದಿಸುತ್ತಾರೆ. ತೀರ್ಮಾನವು ಬೈಬಲ್ ಪಾಷಂಡಿಗಳ [illegible] ಇನ್ನೂ ಅನೇಕ ಪ್ರಾಂತ್ಯಗಳಲ್ಲಿ ಅಂಥ ಕಾಯಿದೆಯು ಒಂದು ಶಾಸ್ತ್ರಶೋಧನಕ್ಕೆ ಪ್ರತಿಬಂಧವಾಗುವುದು.

ಅನುಕ್ರಮಣಿಕೆ.

ಅಗ್ರಲೇಖ ಪುಟಗಳು.
ಎಂಬತ್ತು ನಿಮಿಷಗಳ ದುರುಪಯೋಗ ೬
ಸ್ಫುಟವಿಚಾರಗಳು—
೧ ಬೊಂಬೈಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ, ೨ ಸ್ಕೂಲ್‌ಫೈನಲ್ ಪರೀಕ್ಷಾ ಕ್ರಮ, ೩ ಕರ್ನಾಟಕ ಕೊಲೇಜು, ೪ ಸರ ಬೆಸಿಲ್ ಬ್ಲೆಕೆಟರ ಮುಂಬಯಿಯಲ್ಲಿ ಆಗಮನ ೭
ಮಂಗಳೂರು
ವರ್ತಮಾನಸಂಗ್ರಹಗಳು—
ವಿದೇಶ—ಒಳದೇಶ ವರ್ತಮಾನ ೫
ದಕ್ಷಿಣ ಕನ್ನಡ—ಬಂಟ್ವಾಳ „
ವಿವಿಧ ವಿಷಯಗಳು ೮
ಶ್ರೀ. ವಸಂತಿದೇವಿಯವರಿಗೆ ಶ್ರೀಮತೀ ಸರೋಜಿನೀ ಬಾಯಿಯವರು ಜೂನ್ ೨೫ರಲ್ಲಿ ಹೈದರಾಬಾದಿನಿಂದ ಬರೆದ ಲೇಖ. „
ಸುಗ್ಗಿ ಬೆಳೆಗೆ ಯೋಗ್ಯವಾದ ಹೊಸ ನಮೂನೆಯ ಬೀಜದ ಭತ್ತಗಳು „

ಸ್ವದೇಶಾಭಿಮಾನಿ.

ಶಕ ೧೮೪೭ ಆಷಾಢ ಬ। ೧೨ಯು ಶುಕ್ರವಾರ.

ಎಂಬತ್ತುನಿಮಿಷಗಳ ದುರುಪಯೋಗ!

ಲೊರ್ಡ ಬರ್ಕನಹೆಡ್ಡರು ಲಂಡನ ನಗರದಲ್ಲಿ ರೆಡಿಂಗ ಸಾಹೇಬರೊಡನೆ ನಡಿಸಿದ ಮಂತ್ರಾಲೋಚನೆಯನ್ನು ಕುರಿತು ಪಾರ್ಲಿಮೆಂಟನಲ್ಲಿ ಯಾವ ಸ್ಪಷ್ಟೀಕರಣವನ್ನು ಮಾಡಿರುವರೊ ಅದರ ಸಾರವನ್ನು ಗತ ಸಂಚಿಕೆಯ ಸ್ಫುಟವಿಚಾರದಲ್ಲಿ ಕೊಟ್ಟಿದ್ದೇವೆ. ಆ ವಾರದಲ್ಲಿ ಸೇರಿರುವ ಬರ್ಕನಹೆಡ್ಡರ ಆ ಎರಡು ಮೂರು ವಾಕ್ಯಗಳ ಮೇಲಿಂದಲೆ ಅವರ ಸ್ಟೇಟಮೆಂಟು (ಸ್ಪಷ್ಟೀಕರಣವು) ನಿಸ್ಸಾರವಾದ್ದೆಂಬುದನ್ನು ನಾವು ಆಗಲೆ ಹೇಳಿ ತೀರಿಸಿದ್ದೇವೆ. ಈಗಲಾದರೊ ಅವರು ತನ್ನ ಸ್ಪಷ್ಟೀಕರಣವನ್ನು ಮಾಡುವಾಗ ೮೦ ನಿಮಿಷಗಳ ತನಕ ಮಾಡಿದ ಭಾಷಣದ ವಿಸ್ತೃತ ಭಾಗವು ಬಂದು ಕೈ ಸೇರಿದೆ. ಇದನ್ನು ಪರಿಶೀಲಿಸಿ ಹೇಳುವದಾದರೆ ಈ ಹೊತ್ತಿನ ಶಿರೋಲೇಖದಲ್ಲಿ ಬರೆದಂತೆ ಬರ್ಕನ್‌ಹೆಡ್ಡರ ಆಯುಸ್ಸಿನೊಳಗಿನ ೮೦ ನಿಮಿಷಗಳು ವ್ಯರ್ಥವಾದವೆಂದೆ ಹೇಳಬೇಕಾಗುತ್ತದೆ! ಒಂದೆರಡು ತಿಂಗಳಿಂದ ಇಬ್ಬರು ಲೊರ್ಡರು ಸೇರಿ ಹಿಂದುಸ್ಥಾನದ ಯಾವ ಮಹತ್ಕಾರ್ಯವನ್ನು ಮಾಡಿರುವರು ಎಂಬುದನ್ನು ತಿಳಕೊಳ್ಳಲು ವಿಲಾಯತಿಯಲ್ಲೂ, ಹಿಂದುಸ್ಥಾನದಲ್ಲೂ ಏಕಪ್ರಕಾರವಾಗಿ ಕುತೂಹಲವುಂಟಾಗಿತ್ತು. ಪರಂತು ಈಗ ಆಡಿ ತೋರಿಸಿರುವ ಮಾತುಗಳನ್ನೆ ಆಡುವದು ಇದ್ದದಾದರೆ ಬರ್ಕನಹೆಡ್ಡರು ತಮ್ಮ ಭಾಷಣವಾಗಲಿಕ್ಕಿದೆ ಎಂಬುದಾಗಿ, ‹ಅಪೂರ್ವವಾದ “ಸ್ಪಷ್ಟೀಕರಣ ಇತ್ಯಾದಿ ರೂಪದಿಂದ ಯಾಕೆ ಜಾಹಿರಾತನ್ನು ಹಂಚಿದ್ದರೊ, ತಿಳಿಯದು! ಸಿನೇಮಾದವರು ನಿತ್ಯದಲ್ಲಿ ಜಾಹೀರಾತುಗಳನ್ನು ವಿಧವಿಧದಿಂದ ಹಂಚಿ ಲೋಲುಪರ, ಅಪ್ರಬುದ್ಧರ ಮತ್ತು ಮಕ್ಕಳ ಚಿತ್ತವನ್ನು ಆಕರ್ಷಿಸುತ್ತಿರುವರು. ಈ ಹೊರಗಿನ ಆಕರ್ಷಣದಿಂದ ಎಳೆಯಲ್ಪಟ್ಟು ಒಳಗೆ ಹೋಗಿ ನೋಡಿದ್ದಲ್ಲಿ ನಿನ್ನೆಯ ಆಟವೆ ಈ ಹೊತ್ತು, ಮೊನ್ನೆಯ ನೋಟವೆ ಈ ಹೊತ್ತು! ಸಿನೇಮಾದವರ ಇದೇ ರೀತಿಯ ಜಾಹಿರಾತಿನ ಕ್ರಮವನ್ನು ವಿಲಾಯತಿಯೊಳಗಿನ ರಾಜಕಾರಣಿಗಳು ಅನುಕರಿಸುತ್ತಿರುವರಾದ ಕಾರಣ ಇಂಥವರ ‘‘ಪ್ರೊನಾನ್ಸಮೆಂಟ,” ‘‘ಸ್ಟೇಟಮೆಂಟ” ಇ. ಇ. ಯಾವ ಹೆಸರಿನಿಂದಲೆ ಇರಲಿ ಪ್ರಕಟವಾಗುವ ಸಂಗತಿಗಳಲ್ಲಿ ನೀರಸವಾಗಿಯೂ, ಶುಷ್ಕವಾಗಿಯೂ, ತ್ಯಾಜ್ಯವಾಗಿಯೂ ಇರುವವು! ಲೊರ್ಡ ಬರ್ಕನಹೆಡ್ಡರ ಭಾಷಣದ ಗತಿಯಾದರೂ ಇದೆ ಆಗಿದೆ. ವಾಚಕರ ಅವಗಾಹನದ ಬಗ್ಗೆ ಇವರ ಭಾಷಣದ ಸಾರಾಂಶವನ್ನು ಮುಂದೆ ಕೊಟ್ಟು ನಮ್ಮ ವಿಚಾರಗಳನ್ನು ಪ್ರದರ್ಶಿಸಲಿದ್ದೇವೆ.

“ಗವರ್ನರ ಜನರಲ್‌ರು ಮತ್ತು ನಾನು ಒಟ್ಟಿಗೆ ಕೂಡಿ ಹಿಂದುಸ್ಥಾನದ ವಿಷಯವಾಗಿ ಒಂದು ನಿಶ್ಚಿತವಾದ ಧೋರಣವನ್ನು ಮಾಡಿಟ್ಟಿದ್ದೇವೆಂಬುದಾಗಿ ಅವಾಸ್ತವವಾದ ಸಂಗತಿಯು ಅಲ್ಲಲ್ಲಿ ತುಂಬಿಕೊಂಡಿದೆ. ನಾವೆ ಒಂದು ನಿಶ್ಚಯವನ್ನು ಮಾಡುವದು ಸಾಧ್ಯವಿರಲಿಲ್ಲ. ಮತ್ತು ಆ ಪ್ರಕಾರವಾಗಿ ನಾವು ಮಾಡಿದ್ದೂ ಇಲ್ಲ. ಸುಧಾರಣಾಕಾಯಿದೆಯನ್ನು ಕುರಿತು ಥಟ್ಟನೆ ಒಂದು ವಿಚಾರವನ್ನು ನಿರ್ಣಯಿಸಲು ಶಕ್ಯವಿಲ್ಲ. ನಮ್ಮಿಬ್ಬರಲ್ಲಿ ನಡೆಯುತ್ತಿದ್ದ ಚರ್ಚೆಯ ಸ್ವರೂಪವನ್ನು ಲೊರ್ಡ ಲಿಟನರಿಗೂ ಕೂಡ ನಾವು ಆಗಾಗ್ಯೆ ತಿಳಿಸುತ್ತಿದ್ದೇವು. ಹಿಂದುಸ್ಥಾನ ಸರಕಾರಕ್ಕೂ, ಲೆಜಿಸ್ಲೇಟಿವ್ ಎಸೆಂಬ್ಲಿಗೂ ಕೇಳದೆನೆ ಸುಧಾರಣಾಕಾಯಿದೆಯ ತಿದ್ದುಪಾಟವನ್ನು ನಮ್ಮಷ್ಟಕ್ಕೆನೆ ಹೇಗೆ ತಾನೆ ಮಾಡಲಾದೀತು? ನಿಜಹೇಳುವದಿದ್ದರೆ ನಾನು ಇದು ವರೆಗೆ ಹಿಂದುಸ್ಥಾನದ ಕಾರಭಾರದ ನಿರೀಕ್ಷಣವನ್ನೂ ಪರಿಶೀಲನವನ್ನೂ ಮಾಡುತ್ತಿದ್ದೇನೆ. ಈ ಪರಿಶೀಲದಿಂದ ನಾನು ಯಾವದನ್ನು ತಿಳಕೊಂಡಿರುವೆನೊ ಅದನ್ನು ಪಾರ್ಲಿಮೆಂಟಿಗೆ ಸಾದರಪಡಿಸಲಿದ್ದೇನೆ.

“ಹಿಂದುಸ್ಥಾನದ ಸಾಂಪತ್ತಿಕ, ವ್ಯಾಪಾರ ವಿಷಯಕ ಹಾಗು ರಾಜಕೀಯ ಚಳವಳದ ಪರೀಕ್ಷಣವನ್ನು ನಾನು ಇದು ವರೆಗೆ ತುಂಬಾ ಮಾಡಿದ್ದೇನೆ. ಹಿಂದುಸ್ಥಾನದಲ್ಲಿ ಸೇಕಡಾ ೮೦ರಷ್ಟು ಲೋಕ ಸಂಖ್ಯೆಯು ಒಕ್ಕಲಿಗರದು (ಕೃಷಿಯಿಂದ ಜೀವಿಸತಕ್ಕವರದು) ಇರುವದು. ಇಂಗ್ಲಂಡಿನಲ್ಲಿ ಸೇಕಡಾ ೮೦ ಜನರು ದೊಡ್ಡ ದೊಡ್ಡ ಕಾರಖಾನೆಗಳಲ್ಲಿರುವರು. ಇಂಗ್ಲಂಡಿಗೂ ಹಿಂದುಸ್ಥಾನಕ್ಕೂ ಈ ಮೇರೆಗೆ ಮಹತ್ತಾದ ಭೇದವಿರುವದು. ಹಿಂದುಸ್ಥಾನದಲ್ಲಿ ಕಾಲಿವೆಗಳನ್ನೂ ಹೆಚ್ಚಿಸಿ, ಶಾಸ್ತ್ರೀಯ ಪ್ರಯೋಗವನ್ನುಮಾಡಿ, ಸಾಲ ಕೊಡುವುದನ್ನು ಏರ್ಪಡಿಸಿ ಕೃಷಿಕ ವರ್ಗದವರ ಹಿತದ ಕೆಲಸಗಳನ್ನು ಮಾಡುವದು ಅಗತ್ಯವಾಗಿದೆ. ಈ ಕೆಲಸಗಳನ್ನು ಸರಕಾರವು ಕೈಕೊಳ್ಳುವದು ಅತ್ಯಗತ್ಯವಿದೆ.

“೧೯೧೯ನೆಯ ಇಸವಿಯಲ್ಲಿ ಸುಧಾರಣಾ ಕಾಯಿದೆಯಿಂದ ಸುಧಾರಣೆಗಳ ಮಹತ್ತಾದ ಪ್ರಯೋಗವನ್ನು ಮೊಂಟೆಗ್ಯು ಸಾಹೇಬರು ಮಾಡಿರುವರು. ಈ ಪ್ರಯೋಗವು ಯಶಸ್ವಿಯಾದ್ದಲ್ಲಿ ಅಥವಾ ಆಗದೆ ಇದ್ದಲ್ಲಿ ಅದರ ಶ್ರೇಯಸ್ಸು ಅಥವಾ ಅಶ್ರೇಯಸ್ಸು ಮೊಂಟೆಗ್ಯು ಸಾಹೇಬರಿಗೆನೆ ಸಲ್ಲತಕ್ಕದ್ದು. ಮೊಂಟೆಗ್ಯುಗಳದು ಒಂದು ಪ್ರಯೋಗವೆಂಬುದಕ್ಕೆ ಸಂದೇಹವಿಲ್ಲ. ನಾವು ಇಂಗ್ಲಿಷರು ಹಿಂದುಸ್ಥಾನಕ್ಕೆ ಪ್ರಥಮತಃ ಹೋದಾಗ ಆ ವಿಸ್ತೃತ ದೇಶಕ್ಕೆ ಒಂದು ರಾಷ್ಟ್ರೀಯ ಭವಿಷ್ಯತ್ಕಾಲವು ಇರಲಿಲ್ಲ. ಹಿಂದೂಸ್ಥಾನದಲ್ಲಿ ೩೨ ಕೋಟಿ ಜನ ಸಂಖ್ಯೆ ಇದೆ. ಅವರು ೯ ಧರ್ಮಗಳ ಅನುಯಾಯಿಗಳು. ಅವರು ೧೩೦ ಭಾಷೆಗಳನ್ನಾಡುವರು. ಈ ರೀತಿಯಿಂದ ಛಿನ್ನ ವಿಚ್ಛಿನ್ನವಾಗಿರುವ ಜನಾಂಗದ ಸಂರಕ್ಷಣದ ಜವಾಬದಾರಿಯನ್ನು ಕೊನೆಗಾಣಿಸುವದರಲ್ಲಿ ಯೋಗ್ಯವಾದ ಮತ್ತು ಜಗತ್ತಿಗೆ ಮಾನ್ಯವಾಗಿರುವ ಕ್ರಮವನ್ನೆ ನಾವು ಕೈಕೊಂಡಿರುವೆವು. ಲೋಕದೊಳಗಿನ ಸುಧಾರಿಸಿದ ಕಲ್ಪನೆಗಳ ದೃಷ್ಟಿಯಿಂದ ಹಿಂದುಸ್ಥಾನವು ಹಿಂದೆ ಬೀಳಬಾರದೆಂದು ಪಾರ್ಲಿಮೆಂಟು ಮೊಂಟೆಗ್ಯು ಸುಧಾರಣೆಗಳಿಗೆ ಅಡ್ಡಿಯನ್ನು ತರಲಿಲ್ಲ. ಈಗಲಾದರೂ ಆ ಕಾಯಿದೆಯ ಯಾವ ಮೂಲಭೂತ ತತ್ವಗಳಿವೆಯೊ ಅವುಗಳನ್ನು ಬಿಟ್ಟು ಬಿಡಬೇಕೆಂದು ನಾವು ಎಂದೂ ಹೇಳುವದಿಲ್ಲ.

‘‘ಸುಧಾರಣಾ ಕಾಯಿದೆಯಲ್ಲಿ ಕೆಲವು ಅಲ್ಪ ಸ್ವಲ್ಪ ಬದಲಾವಣೆಯನ್ನು ಮಾಡಲು ಸಾಧ್ಯವಿದೆ. ಆದರೆ ಸುಧಾರಣೆಗಳ ಗತಿಯು ಶೀಘ್ರವಾಗಬೇಕೆಂಬುದರಿಂದ ಬೆದರಿಸಿಯಾಗಲಿ, ದಂಗೆ, ಗಲಾಟೆ ಇತ್ಯಾದಿಗಳನ್ನು ಎಬ್ಬಿಸಿಯಾಗಲಿ, ಇನ್ನೂ ಹೊಸ ಸುಧಾರಣೆಗಳನ್ನು ಪಡೆಯಬಹುದೆಂದು ಯಾರಾದರೂ ಯುಕ್ತಿಸಿದ್ದಾದರೆ ಅದು ವ್ಯರ್ಥವೆ ಸರಿ. ಹಿಂದಿ ಜನರು ಸುಧಾರಣೆಗಳಿಗೆ ಎಷ್ಟರ ಮಟ್ಟಿನ ಬೆಲೆಯನ್ನು ಕೊಟ್ಟಿದ್ದಾರೆಂಬುದನ್ನು ನಾವು ಬಹು ಜಾಗ್ರತೆಯಿಂದ ನೋಡುತ್ತಿದ್ದೇವೆ. ರೊಯಲ್ ಕಮ್ಮಿಶನನ್ನು ನೇಮಿಸಿ ಸುಧಾರಣೆಗಳನ್ನು ಪರೀಕ್ಷಿಸಲು ಕಾಲ ಮರ್ಯಾದೆಯ ಯಾವ ನಿರ್ಬಂಧವು ಹಾಕೋಣಾಗಿದೆಯೊ ಅದೇನಾದರೂ ವಿಶೇಷ ಮಹತ್ವದ್ದಲ್ಲ. ಆದರೆ ಹಿಂದುಸ್ಥಾನದೊಳಗಿನ ಅತಿಸಂಘಟಿತವಾದ ಒಂದು ರಾಜಕೀಯ ಪಕ್ಷವು ಈ ಸುಧಾರಣೆಗಳನ್ನು ಕುರಿತು ಯಾವ ಧೋರಣವನ್ನು ಸ್ವೀಕರಿಸಿತೆಂಬುದನ್ನು ನೀವು (ಪಾರ್ಲಿಮೆಂಟಿನ ಸಭಾಸದರು) ಮನಸ್ಸಿಗೆ ತಂದುಕೊಳ್ಳಿರಿ. ಯಾವ ರಾಜಕೀಯ ಮುಖಂಡನೂ ಕೂಡ ಸುಧಾರಣೆಗಳನ್ನು ಕುರಿತು ಉದಾರಬುದ್ಧಿಯನ್ನು ವಹಿಸಿರಲಿಲ್ಲ.

“ಹಿಂದುಸ್ಥಾನವು ಏಕರಾಷ್ಟ್ರವಾಗಿ ಯಾವಾಗಲೂ ಇರಲಿಲ್ಲ; ಇನ್ನುಮುಂದೆಯಾದರೂ ಅದು ಏಕರಾಷ್ಟ್ರವಾದೀತೊ ಇಲ್ಲವೊ ಎಂಬುದನ್ನು ಈ ಹೊತ್ತು ಹೇಳಲಾಗಲಿಕ್ಕಿಲ್ಲ. ಹಿಂದು ಮಹಮ್ಮದಿಯರಲ್ಲಿ ಸರಿಯಾದ ದ್ವೇಷಬುದ್ಧಿ ಇದೆ. ಹಿಂದುಸ್ಥಾನದ ಗಡಿಯಲ್ಲಿ ದಂಗೆಗಾರರ ದಂಗೆಯ ಭೀತಿಯು ಯಾವಾಗಲೂ ಇದ್ದೆ ಇರುವುದು. ಇಂಥ ಸ್ಥಿತಿಯಲ್ಲಿ ಬ್ರಿಟಿಷರೂ, ಬ್ರಿಟಿಷರ ಸೈನ್ಯವೂ ಹಿಂದುಸ್ಥಾನವನ್ನು ಬಿಟ್ಟುಹೋಗುವದೆಂದರೆ ಹಿಂದುಸ್ಥಾನವನ್ನು ನಾಶಪಡಿಸುವಂತೆಯೆ ಸರಿ. ಇಷ್ಟು ಪ್ರಸ್ತಾವನೆಯನ್ನು ಮಾಡಿದ ಬಳಿಕ ಸುಧಾರಣೆಗಳ ವಿಷಯವಾಗಿ ನನ್ನ ಮತವನ್ನು ನಾನು ವ್ಯಕ್ತಪಡಿಸುವೆನು. ದ್ವಿದಲ ರಾಜ್ಯಪದ್ಧತಿಯನ್ನು ಕುರಿತು ಮೊದಲಿನಿಂದಲೆ ಅವಿಶ್ವಾಸವು ತೋರ್ಪಡಿಸಲ್ಪಟ್ಟಿತು. ಯಾವ ಬುದ್ಧಿಯಿಂದ ಈ ಸುಧಾರಣೆಗಳು ಕೊಡಲ್ಪಟ್ಟಿವೆಯೊ ಅದನ್ನು ಧಿಕ್ಕರಿಸೋಣಾಯಿತು. ಸ್ನೇಹದಿಂದ ಕೆಲಸಮಾಡ ಹತ್ತಿದ್ದಾದರೆ ಮುಂದಿನ ಸುಧಾರಣೆಗಳನ್ನು ಕೊಡಲು ಸಾಧ್ಯವಾಗುತ್ತಿತ್ತು. ಮದ್ರಾಸ ಪ್ರಾಂತವು ದ್ವಿದಲ ರಾಜ್ಯಪದ್ಧತಿಯಂತೆ ಕಾರ್ಯಮಾಡಿ ತನ್ನ ಪಾತ್ರತೆಯನ್ನು ಸಿದ್ಧಪಡಿಸಿದೆ. ಮುಂಬಯಿಯಲ್ಲಿ ಸ್ವರಾಜ್ಯ ಪಕ್ಷಕ್ಕೆ ಬಹುಮತವಿಲ್ಲ. ಮತ್ತು ಅದು ಮಂತ್ರಿತ್ವವನ್ನೂ ಸ್ವೀಕರಿಸುವುದಿಲ್ಲ. ಬಂಗಾಲದಲ್ಲಿ ಸ್ವರಾಜ್ಯ ಮತ್ತು ಸ್ವತಂತ್ರ ಪಕ್ಷಗಳು ಒಂದಾಗಿ ವಿಧ್ವಂಸನದ ಕೆಲಸವನ್ನು ಮಾಡಹತ್ತಿದವು. ಈ ಕಾರಣದಿಂದ ಅಲ್ಲಿ ದ್ವಿದಲ ಪದ್ಧತಿಯನ್ನು ನಿಲ್ಲಿಸಬೇಕಾಯಿತು. ಸರಕಾರವನ್ನೆ ಉಚ್ಛೇದಿಸಲು ಯಾರು ಸೊಂಟಕಟ್ಟಿರುವರೊ ಅಂಥವರಿಗೆ ಕೊಡತಕ್ಕದ್ದು ಏನು ಮತ್ತು ಇದರಿಂದ ಯಾವ ಪ್ರಗತಿಯುಂಟಾದೀತು? ದ್ವಿದಲ ಪದ್ಧತಿಯ ರಚನೆಯು ಯಶಸ್ವಿಯಾಗಿದೆಯೊ ಇಲ್ಲವೊ ಎಂದೀ ಪ್ರಶ್ನೆಗೆ ಏನಾದರೂ ಒಂದೆ ಉತ್ತರವನ್ನು ಕೊಟ್ಟರೆ ಸಾಲದು. ಅದು ಸಂಪೂರ್ಣ ಯಶಸ್ವಿಯೂ ಆಗಲಿಲ್ಲ. ಅಯಶಸ್ವಿಯೂ ಆಗಲಿಲ್ಲ. ೧೦ ವರ್ಷ ದಾಟಿದ ಬಳಿಕ ಸುಧಾರಣಾ ಕಾನನನ್ನು ತಿದ್ದಬೇಕೆಂಬುದಾಗಿ ಮೊದಲೆ ಪಾರ್ಲಿಮೆಂಟು ನಿರ್ಣಯಿಸಿದೆ. ಮತ್ತು ಆ ಮೇರೆಗೆ ಅದರ ವಿಚಾರಣೆಯು ನಡೆದೀತು! ಈ ಪದ್ಧತಿಯ ಯಶಸ್ವಿತೆಯು ಅದರ ಸಂಗತಿಗಳ ಮೇಲಿಂದ ನಿರ್ಣಯಿಸಲ್ಪಡಬೇಕು. ಆದರೂ ರಾಜ್ಯಘಟನೆಯ ಪುನರ್ವಿಚಾರದ ವಿಷಯದಲ್ಲಿ ಪಾರ್ಲಿಮೆಂಟು ಯಾವ ಅಡ್ಡಿಯನ್ನೂ ಮಾಡುವುದಿಲ್ಲ. ಪಾರ್ಲಿಮೆಂಟು ಅವರಿಗೆ ತೆರದೆ ಇರುವುದು. ಪರಂತು ನನ್ನೊಡನೆ ಸಹಕಾರ್ಯವನ್ನು ಮಾಡುವ ಪ್ರಾಮಾಣಿಕ ಇಚ್ಛೆಯು ಅವರಲ್ಲಿ ಕಂಡುಬಾರದೆ ಸುಧಾರಣೆಗಳ ಪುನರ್ವಿಚಾರಣೆಯ ಸಂಗತಿಯನ್ನು ಆಲೋಚಿಸಲಾಗುವುದಿಲ್ಲ.

“ಸ್ವರಾಜ್ಯ ಪಕ್ಷದ ಉತ್ಸಾಹಭರಿತರೂ, ಕುಶಲರೂ ಆದ ಮುಖಂಡರು ಕಾಲವಶರಾಗಿರುವರು. ಅವರ ಉಪದೇಶದ ಅರ್ಥವೆ ತಿರುಗಿಸಲ್ಪಟ್ಟಿದೆ. ಪಾಶ್ಚಾತ್ಯ ದೇಶದಲ್ಲಿ ತಯಾರಾದ ಯಾವ ರಾಜ್ಯರಚನೆಯೂ ಹಿಂದುಸ್ಥಾನಕ್ಕೆ ಸರಿಯಾಗಲಿಕ್ಕಿಲ್ಲವೆಂದು ಸ್ವರಾಜ್ಯ ಪಕ್ಷದವರು ಹೇಳುತ್ತಿದ್ದಾರೆ. ನಾವೆ ರಾಜ್ಯಘಟನೆಯನ್ನು ತಯಾರಿಸಿಕೊಡುತ್ತೇವೆಂದು ಬ್ರಿಟಿಷರು ಹೇಳಿದ್ದಿಲ್ಲ. ಹಿಂದುಸ್ಥಾನಕ್ಕೆ ಒಪ್ಪುವ ಘಟನೆಯನ್ನು ಹಿಂದುಗಳು ಬೇಕಾದರೆ ತಯಾರಿಸಬಹುದು. ಹಿಂದುಸ್ಥಾನ ಸರಕಾರ ಮತ್ತು ಮುಂದಿನ ರೊಯಲ್ ಕಮ್ಮಿಶನು ಅದನ್ನು ಪರೀಕ್ಷಿಸುವವು. ಮುಡಿಮನ ಕಮಿಟಿಯ ರಿಪೋರ್ಟಿನೊಳಗಿನ ಅಲ್ಪ ಸಂಖ್ಯಾಕರ ಅಭಿಪ್ರಾಯವನ್ನು ನಾವು ಮನ್ನಿಸಲಿಕ್ಕಿಲ್ಲ. ಸೈನ್ಯದ ಹಿಂದೀಕರಣದ ಕೇಳಿಕೆಯು ಯೋಗ್ಯವಾಗಿದೆ.

“ಪ್ರಾಚೀನರೂ ಘನವಂತರೂ ಆದ ಹಿಂದಿ ಜನರ ಭಾವನೆಗಳನ್ನು ನೋಯಿಸಬಾರದೆಂಬುದಾಗಿ ಎಲ್ಲರಿಗೆ ನನ್ನ ವಿನಂತಿ ಇದೆ.”

ಇಲ್ಲಿಗೆ ಲೊರ್ಡ ಬರ್ಕನಹೆಡ್ಡರ ವಿಸ್ತೃತ ಭಾಷಣದ ಸಾರಾಂಶವು ಮುಗಿಯಿತು. ಪಾರ್ಲಿಮೆಂಟಿನಲ್ಲಿ ಈ ಬುದ್ಧಿವಂತರು ಯಾವ ಭಾಷಣವನ್ನು ಮಾಡಿದರೆಂಬುದು ವಾಚಕರಿಗೆ ಅವರ ಶಬ್ದಗಳಿಂದಲೆ ತಿಳಿದು ಬರಬೇಕೆಂಬುದರಿಂದ ನಾವು ಮೇಲೆ ಇಷ್ಟು ದೊಡ್ಡ ಸಾರಾಂಶವನ್ನು ಕೊಟ್ಟಿದ್ದೇವೆ. ಒಂದು ರೋಯಲ್ ಕಮ್ಮಿಶನನ್ನು ನೇಮಿಸುವದಲ್ಲದೆ ಬೇರೆ ಯಾವದನ್ನೂ ಕೊಡುವ ಮನಸ್ಸು ಇವರಿಗಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಆದ್ದರಿಂದಲೆ ಇವರ ಶುಷ್ಕಭಾಷಣವು ಹಿಂದುಸ್ಥಾನದೊಳಗಿನ ಪ್ರಚಂಡ ಲೋಕಮತಕ್ಕೆ ವಿರುದ್ಧವಾಗಿ ನಿಂತಿದೆ. ಹಿಂದುಸ್ಥಾನದಲ್ಲಿ ಹೊಸ ಸುಧಾರಣೆಗಳನ್ನು ಕೊಡಬೇಕಿದ್ದರೆ ಹಿಂದುಸ್ಥಾನ ಸರಕಾರ ಮತ್ತು ಲೆ. ಎಸೆಂಬ್ಲಿಗಳನ್ನು ಕೇಳಿಕೊಳ್ಳಬೇಕೆಂದು ಲೊರ್ಡ ಸಾಹೇಬರು ಹೇಳುವರು. ಎಸೆಂಬ್ಲಿಯು ರಾಂಡ್ ಟೇಬಲಿನ ಠರಾವು ಪಾಸುಮಾಡಿ ತನ್ನ ಮತವನ್ನು ಯಾವಾಗಲೆ ಜಾಹೀರಪಡಿಸಿದೆ. ಇಲ್ಲಿಯ ಲೋಕಮತವನ್ನು ಮೀರಿ ಹಿಂದುಸ್ಥಾನ ಸರಕಾರವು ಸ್ವೇಚ್ಛಾನುಸಾರವಾಗಿ ಏನಾದರೂ ಮತವನ್ನು ಕೊಟ್ಟರೆ ಅದರಿಂದ ಇಲ್ಲಿಯ ಅಸಂತೋಷವಾಗಲಿ, ಚಳವಳವಾಗಲಿ ನಷ್ಟವಾಗಲಿಕ್ಕಿಲ್ಲ. ಅದು ಕಾರಣ ಎಸೆಂಬ್ಲಿಯ ಹಾಗು ರಾಜಕೀಯ ಸಂಸ್ಥೆಗಳ ಇದು ವರೆಗೆ ಪ್ರಕಟವಾದ ಅಭಿಪ್ರಾಯದಂತೆ ಸ್ವರಾಜ್ಯದ ಕಂತುಗಳನ್ನು ಕೊಡುವದು ಕರ್ತವ್ಯವಾಗಿದೆ. ಹಿಂದುಸ್ಥಾನದಲ್ಲಿ ಕೃಷಿವರ್ಗದ ಉನ್ನತಿಯ ಬಗ್ಗೆ ಭಾರತ ಮಂತ್ರಿಗಳು ಅಶ್ರುಮೋಕ್ಷಣ ಮಾಡುತ್ತಿದ್ದಾರೆ. ಆದರೆ ಆ ವರ್ಗದ ಉನ್ನತಿಗಾದರೂ ಸ್ವರಾಜ್ಯದಾನದ ಒಂದೆ ಉಪಾಯವಲ್ಲದೆ ಇತರ ಉಪಾಯಗಳು ನಿಷ್ಫಲವಾಗಿವೆ. ಹಿಂದುಸ್ಥಾನದಲ್ಲಿ ಮತಗಳು ೯, ಭಾಷೆಗಳು ೧೩೦ ಎಂದು ಭಾರತ ಮಂತ್ರಿಗಳು ಹೇಳುವರು. ಇಲ್ಲಿ ಎಷ್ಟೆ ಮತಗಳಿರಲಿ, ಭಾಷೆಗಳಿರಲಿ” ಆದರೆ ಅವು ಇವರಿಗೆ ಸ್ವರಾಜ್ಯ ಕೊಡುವದನ್ನು ಬೇಡವೆಂದು ಹೇಳುವದಿಲ್ಲ. ಈ ನಮೂನೆಯ ಭೇದಗಳು ಲೋಕದಲ್ಲಿ ಸರ್ವತ್ರ ಉಂಟು. ಆದ್ದರಿಂದ ಈ ನೆವವು ವ್ಯರ್ಥವಾಗಿದೆ, ದ್ವಿದಲ ಪದ್ಧತಿಯನ್ನು ಹಿಂದಿಗಳು ಪ್ರೀತಿಸಲಿಲ್ಲ ಆದ್ದರಿಂದ ಅದಕ್ಕೆ ಅವಕಾಶವನ್ನು ಕೊಡಬೇಕೆಂದು ಇವರನ್ನುವರು. ದ್ವಿದಲ ಪದ್ಧತಿಯ ಮೇಲೆ ವಿಶ್ವಾಸವಿದ್ದ ಶಾಂತಪಕ್ಷೀಯರು ಮುಂಚಿನ ಮೂರು ವರ್ಷ ಅನುಭವ ಪಡದು ಅವರೆ ಅದು ನಿರರ್ಥಕವೆಂದು ಸಾರಿ ಹೇಳಿರುವರು. ಹೀಗಿರಲು ಬರ್ಕನಹೆಡ್ಡರ ವಾದವು ಸುಳ್ಳಾಗಿದೆ. ಮದ್ರಾಸಿನಲ್ಲಿ ಅದು ಯಶಸ್ವಿಯಾದ್ದಾದರೆ ಅದಕ್ಕಾದರೂ ಸಂಪೂರ್ಣವಾದ ಪ್ರಾಂತಿಕ ಸ್ವರಾಜ್ಯವನ್ನು ಕೊಡಬಾರದೆ? ಮದ್ರಾಸಿನವರು ಬರ್ಕನಹೆಡ್ಡರನ್ನು ಪರೀಕ್ಷಿಸಲು ಇದೆ ಸಮಯವಾಗಿದೆ. ಇದರಲ್ಲಿ ಬರ್ಕನಹೆಡ್ಡರು ಪಾಸಾಗದಿದ್ದರೆ ಅವರು ಹೇಗೆ ತಮ್ಮ ೮೦ ನಿಮಿಷಗಳನ್ನು ವ್ಯರ್ಥಮಾಡಿದರೊ ಹಾಗೆಯೆ ಈ ಮಾತುಗಳನ್ನು ಕೂಡ ವ್ಯರ್ಥಮಾಡಿದರೆಂತಾದೀತು.

ಸ್ಫುಟ ವಿ ಚಾ ರ ಗ ಳು .

೧. ಬೊಂಬೈಸಿಟಿ ಇಂಪ್ರೂವ್‌ಮೆಂಟ ಟ್ರಸ್ಟ ಎಂಬ ಹೆಸರಿನಿಂದ ತನ್ನ ವಶದಲ್ಲಿದ್ದ ನಗರಸುಧಾರಣೆಯ ಹಕ್ಕನ್ನು ಮುಂಬಯಿ ಸರಕಾರವು ಮುಂಬಯಿಯ ಕೊರ್ಪೋರೇಶನಿನ ಸ್ವಾಧೀನತೆಯಲ್ಲಿ ಬಿಟ್ಟುಕೊಡಲು ನಿಶ್ಚಯಿಸಿ ಈ ನಿಶ್ಚಯಾನುರೋಧವಾಗಿ ಒಂದು ಬಿಲನ್ನು ತಯಾರಿಸಿದೆ. ಅಧಿಕಾರದ ಹಸ್ತಾಂತರವು ಸಂಪೂರ್ಣವಾಗಿ ಅಲ್ಲ, ಮತ್ತು ಬೇಕಾದ ಕೆಲಸಕ್ಕೂ ಅಲ್ಲ, ನಗರದ ಸುಧಾರಣೆಗಳಿಗೆ ಮಾತ್ರವೆಂಬುದಾಗಿ ಆ ಬಿಲಿನಲ್ಲಿ ನಿರ್ದಿಷ್ಟವಾಗಿರುವುದು. ಹೇಗೂ ಇರಲಿ, ಮುಂಬಯಿ ಸರಕಾರವು ಕೊನೆಗೆ ಮುಂಬಯಿ ಮುನ್ಸಿಪಾಲಿಟಿಗೆ ಕೆಲವು ಮಟ್ಟಿನ ಅಧಿಕಾರವನ್ನಾದರೂ ಕೊಡಲುದ್ಯುಕ್ತವಾಯಿತು. ಇದು ತುಂಬಾ ಸಮಾಧಾನಕರವಾದ ಮಾತು. ಈ ಸಂಗತಿಗಳು ಯೋಗ್ಯವೆಂದಿರುವ ಪಕ್ಷದಲ್ಲಿ ಇತರ ಸರಕಾರಗಳಾದರೂ ತಮ್ಮ ತಮ್ಮ ಯಜಮಾನತ್ವವಿರುವ ಕಡೆಯಲ್ಲಿ ಮುನ್ಸಿಪಾಲಿಟಿಗೆ ಇದೇ ರೀತಿಯಿಂದ ಸಂವಿಭಾಗವನ್ನೂ ಮಾಡಿಕೊಡುವುದು ಲೇಸಲ್ಲವೆ?

೨. ಹಿಂದುಸ್ಥಾನದಲ್ಲಿ ಶಿಕ್ಷಣವನ್ನು ಪ್ರಾರಂಭಮಾಡಿ ಸರಕಾರದವರು ೧೦೦ ವರ್ಷ ದಾಟಿಹೋದರೂ ಇನ್ನೂ ಅದಕ್ಕೆ ನಿಶ್ಚಿತವಾದ ಸ್ವರೂಪವು ಬಂದಿಲ್ಲ. ಅವರು ಅದಕ್ಕೆ ಪ್ರಯೋಗಾವಸ್ಥೆಯಲ್ಲಿದ್ದಂತೆ ಕೆಲಕೆಲವು ಸಮಯಕ್ಕೆ ಒಂದೊಂದು ಕ್ರಮವನ್ನು ಅದಕ್ಕೆ ಕೊಡುತ್ತಿದ್ದಾರೆ! ಉಚ್ಚತರಗತಿಯ ಶಿಕ್ಷಣದ ಪ್ರಶ್ನೆಯು ತುಸು ಬಿಗುವಾಗಿರುವುದರಿಂದ ಒಂದು ವೇಳೆ ಅದರಲ್ಲಿ ಇನ್ನೂ ಸ್ಥಿರತೆಯು ಬರಲಿಲ್ಲವೆಂದು ಹೇಳಿದರೆ ಅದು ಕ್ಷಮ್ಯವಾದ ಸಂಗತಿ ಎನ್ನಬಹುದು. ಆದರೆ ಮಧ್ಯಮ ಶಿಕ್ಷಣವು ಇನ್ನೂ ಪ್ರಯೋಗಾವಸ್ಥೆಯಲ್ಲಿಯೆ ಇದೆ ಎಂದು ಹೇಳುವದಾದರೆ ಅದು ಬಲು ನಾಚಿಗೆಗೇಡೆಂಬುದಕ್ಕೆ ಅಡ್ಡಿ ಇಲ್ಲ. ಇದಕ್ಕೆ ಸ್ಕೂಲ್‌ಫೈನಲಿನ ಪರೀಕ್ಷೆಯ ಕ್ರಮವೆ ದೃಷ್ಟಾಂತವಾಗಿದೆ. ಒಂದೊಂದು ವರ್ಷ ಒಂದೊಂದು ಕ್ರಮ, ಒಂದು ಕಾಲದಲ್ಲಿ ಎಲ್ಲ ವಿಷಯಗಳಲ್ಲಿ ಇಂತಿಷ್ಟು ಗುಣಾಂಶಗಳನ್ನು ತೆಕ್ಕೊಳ್ಳಬೇಕೆಂಬುದಾಗಿ ಮೆಟ್ರಿಕ್ಯುಲೇಶನಿನ ಕ್ರಮವಿತ್ತು. ಅದು ಹೋಗಿ ಮೋಡರೇಶನಿನ ಕ್ರಮವು ಬಂದು ಕ್ಲಾಸಿನ ಮಾರ್ಕ್ಸ್, ಪರೀಕ್ಷೆ ಮಾರ್ಕ್ಸ್ ಎಂಬುದಾಗಿ ಎಲ್ಲ ಕೂಡಿಸಿ ಅದೊಂದು ಕಲ್ಲು ಮೇಲಾಗರವು ಪ್ರಾರಂಭವಾಯಿತು. ಇದನ್ನನುಸರಿಸಿಕೊಂಡು ಶಿಕ್ಷಕರು ವಿದ್ಯಾರ್ಥಿಗಳನ್ನು ತಯಾರಿಸುತ್ತಿರುವಾಗ ಈಗ ಇನ್ನೊಂದು ಕ್ರಮವು ಬಂದಿದೆ. ಎಲ್ಲ ವಿಷಯಗಳಲ್ಲಿ ೩೫ ಗುಣಾಂಶಗಳನ್ನು ಪಾಸಾಗ ತಕ್ಕ ವಿದ್ಯಾರ್ಥಿಯು ತೆಕ್ಕೊಳ್ಳಬೇಕು ಎಂಬುದಾಗಿ ಈಗಿನ ಕ್ರಮದಲ್ಲಿ ವಿಧಿಸೋಣಾಗಿದೆ. ಈ ಕ್ರಮದಿಂದ ವಿದ್ಯಾರ್ಥಿ ವರ್ಗಕ್ಕೂ ಶಿಕ್ಷಕ ವರ್ಗಕ್ಕೂ ಏಕಪ್ರಕಾರವಾಗಿ ತೊಂದರೆಗಳು ಸಂಭವಿಸುತ್ತಿವೆ. ಮೊಡರೇಶನಿನ ಕ್ರಮವಿರುವಾಗ ವಿದ್ಯಾರ್ಥಿಗಳಿಗೆ ಸಿಕ್ಕತಕ್ಕ ಪ್ರಯೋಜನಗಳು ತಪ್ಪಿಹೋಗಿದ್ದಾವೆ. ಮುಂಚಿನ ನಿಯಮಗಳಿಗನುಸಾರವಾಗಿ ಪಾಸಾಗ ತಕ್ಕ ವಿದ್ಯಾರ್ಥಿಗಳಿಗೆ ಈ ಕ್ರಮದಿಂದ ಹಾನಿಯು ಸಂಭವಿಸಿದೆ, ಇಂಥ ವಿದ್ಯಾರ್ಥಿಗಳನ್ನು ಪಾಸಾದವರ ಲಿಸ್ಟಿನಲ್ಲಿ ಸೇರಿಸಿಕೊಳ್ಳುವುದು, ಇದು ಹೊಸ ವರ್ಷವಾದ್ದರಿಂದ ಉಚಿತವಾಗಿದೆ. ಆದ್ದರಿಂದ ಈ ವಿಷಯವಾಗಿ ಬರುವ ಒಕ್ಟೋಬರಿಗಿಂತ ಮುಂಚಿತವಾಗಿಯೆ ಚಳವಳವನ್ನು ಮಾಡಿ ಇಂಥ ವಿದ್ಯಾರ್ಥಿಗಳನ್ನು ಕೊಲೇಜ ಕ್ಲಾಸಿಗೆ ತೆಕ್ಕೊಳ್ಳುವಂತೆ ಮಾಡಬೇಕಾದ ಕಾರಣ ಎಲ್ಲ ಕಡೆಯ ಶಿಕ್ಷಣ ಸಂಸ್ಥೆಗಳ ಅಧಿಕಾರಿಗಳು ಪ್ರಯತ್ನಪಡಬೇಕೆಂಬುದಾಗಿ ಮದುರಾ ಟೀಚರ್ಸರ ಸಂಘದವರು ತಮ್ಮ ಜಿಲ್ಲೆಯೊಳಗಿನ ಹೈಸ್ಕೂಲುಗಳಿಗೆ ಒಂದು ಸರ್ಕ್ಯುಲರನ್ನು ಹೊರಡಿಸಿರುವರು. ಇವರಂತೆಯೆ ಇತರ ಕಡೆಯವರೂ ಪ್ರಯತ್ನಪಟ್ಟಲ್ಲಿ ಕಷ್ಟಪಟ್ಟಿದ್ದ ಬಡವಿದ್ಯಾರ್ಥಿಗಳಿಗೆ ಒಂದು ಸಹಾಯವು ಸಿಕ್ಕಬಹುದಾಗಿತ್ತು.

೩. ಭಾಷಾನುರೂಪವಾಗಿ ಪ್ರಾಂತಿಕರಚನೆಯಾಗಬೇಕೆಂಬುದು ಸ್ವರಾಜ್ಯದ ಹೋರಾಟದೊಳಗಿನ ಮೊದಲನೆಯ ತತ್ವವೆನ್ನಬಹುದು. ತಮ್ಮ ಪ್ರಾಂತದ ಅಭಿಮಾನವು ಪ್ರತಿಯೊಬ್ಬರಿಗಿರಬೇಕು; ದುರಭಿಮಾನವಿರಬಾರದು. ಈ ದುರಭಿಮಾನವು ಆಂಧ್ರಪ್ರಾಂತದವರಲ್ಲಿ ವಿಶೇಷವಾಗಿದ್ದದ್ದು ಕಂಡುಬರುತ್ತದೆ. ಇದು ಶೋಚನೀಯವಾದ ಸಂಗತಿಯಾಗಿದೆ. ಬಳ್ಳಾರಿ ಜಿಲ್ಲೆಯು ಕರ್ನಾಟಕ ಪ್ರಾಂತಕ್ಕೆ ಸೇರತಕ್ಕದ್ದು. ಅಲ್ಲಿಯ ಜನಸಂಖ್ಯೆಯಲ್ಲಿ ಕನ್ನಡಿಗರೆ ಹೆಚ್ಚಿರುವರು. ಹೀಗಿರುತ್ತ ಆಂಧ್ರಬಂಧುಗಳು ಆಂಧ್ರವಿಶ್ವವಿದ್ಯಾಲಯದ ಪೀಠದಲ್ಲಿ ಬಳ್ಳಾರಿಯನ್ನು ಸೇರಿಸಿಕೊಳ್ಳಲು ಯತ್ನಿಸುತ್ತಿದ್ದಾರೆ. ಇದು ಚಂದವಲ್ಲ. ಆಂಧ್ರಬಂಧುಗಳ ಈ ಪ್ರವೃತ್ತಿಯನ್ನು ನಿಷೇಧಿಸಲು ಧಾರವಾಡದಲ್ಲಿ ಒಂದು ಸಭೆ ಸೇರಿತ್ತು. ಈ ಸಭೆಯ ಅಧ್ಯಕ್ಷರು ಲಿಂಗಾಯತ ಗೃಹಸ್ಥರಾಗಿದ್ದರು. ಎಂದ ಮೇಲೆ ಇದು ಬ್ರಾಹ್ಮಣರ ಚಳವಳವೆಂದು ಹೇಳಲು ಯಾರಿಗೂ ಸಾಧ್ಯವಿಲ್ಲ. ಈ ಸಭೆಯಲ್ಲಿ ಪ್ರಕಟವಾದ ಲೋಕಮತದಿಂದ ಬಳ್ಳಾರಿಯಲ್ಲಿ ಒಂದು ಕರ್ನಾಟಕ ಕೊಲೇಜನ್ನು ಸ್ಥಾಪಿಸುವ ಅಗತ್ಯವಿದೆ ಎಂದು ಕಂಡುಬರುತ್ತದೆ. ಆ ಪ್ರಕಾರವಾಗಿ ಬಳ್ಳಾರಿಯಲ್ಲಿ ಕೊಲೇಜು ಸ್ಥಾಪಿತವಾದದ್ದಾದರೆ ಬಳ್ಳಾರಿ ಜಿಲ್ಲೆಯಲ್ಲಿ ಇರತಕ್ಕ ಕನ್ನಡಿಗರಿಗೆ ಒಂದು ದೊಡ್ಡ ಸಹಾಯವು ಸಿಕ್ಕಿದಂತಾಗುತ್ತದೆ. ಮದ್ರಾಸ ಸರಕಾರದ ವಿದ್ಯಾಮಂತ್ರಿಗಳು ಈ ವಿಷಯವನ್ನು ಗಮನಕ್ಕೆ ತೆಕ್ಕೊಂಡು ಅಲ್ಲಿಯ ಕನ್ನಡಿಗರ ಸಂಕಷ್ಟವನ್ನು ಪರಿಹರಿಸುವರೆಂಬುದಾಗಿ ನಂಬಿದ್ದೇವೆ. ಈ ಸಂದರ್ಭದಲ್ಲಿ ನಮ್ಮ ಆಂಧ್ರಬಂಧುಗಳನ್ನು ಕುರಿತು ಒಂದು ಮಾತು ಹೇಳಬೇಕಾಗಿದೆ. ಭಾಷಾನುರೂಪ ಪ್ರಾಂತರಚನೆಯಲ್ಲಿ ಸ್ವಂತ ಭಾಷೆಯವರನ್ನು ಬಿಟ್ಟುಬಿಡುವುದು ಹೇಗೆ ಯುಕ್ತವಲ್ಲವೊ ಹಾಗೆಯೆ ಅನ್ಯಭಾಷೆಯವರನ್ನು ಒತ್ತಾಯದಿಂದ ಸೇರಿಸಿಕೊಳ್ಳುವುದೂ ಲೇಸಲ್ಲ. ಅನ್ಯಭಾಷೆಯವರನ್ನು, ಅನ್ಯಸಂಸ್ಕೃತಿಯವರನ್ನು ಸೇರಿಸಿಕೊಂಡಲ್ಲಿ ಅವರೊಳಗಿರುವ ಅಸಂತೋಷದಿಂದ ಪುನಃ ಒಡಕು ಹುಟ್ಟುತ್ತದೆ. ಇದಲ್ಲದೆ, ಸ್ವರಾಜ್ಯ ಚಳವಳಕ್ಕಾಗಲಿ, ಲೋಕಸತ್ತೆಗಾಗಲಿ ಮೂಲಭೂತವಾಗಿರುವ ಸ್ವಯಂನಿರ್ಣಯದ ಯಾವ ತತ್ವವಿರುವದೊ ಅದಕ್ಕೆ ಹರಿದಳ ಲೇಪನ ಮಾಡಿದಂತಾಗುತ್ತದೆ! ಆದ್ದರಿಂದ ಆಂಧ್ರಬಂಧುಗಳು ಈ ದುರಾಗ್ರಹವನ್ನು ಬಿಟ್ಟುಬಿಟ್ಟಾರೆಂದು ನಂಬಿದ್ದೇವೆ.

೪ ಹಿಂದುಸ್ಥಾನ ಸರಕಾರದ ಕೋಶ ಮಂತ್ರಿಗಳಾದ ಸರ್‌ಬೆಸಿಲ್‌ಬ್ಲೆಕೆಟರು ಕಳೆದ ವಾರ ಮುಂಬಯಿಗೆ ಬಂದಿರುವಾಗ ಅಲ್ಲಿಯ ಯುರೋಪಿಯನ್ ವ್ಯಾಪಾರಿಗಳ ಸಂಘ, ಗಿರಣಿ ಮ್ಯಾಲಿಕರ ಸಂಘ ಮತ್ತು ಹಿಂದಿ ವ್ಯಾಪಾರಿಗಳ ಸಂಘ ಈ ಮೂರು ಸಂಘದವರ ಭೇಟಿಯನ್ನು ಪಡಕೊಂಡರು. ಹುಂಡಿಚಲನದ ಪುನರ್ವಿಚಾರಕ್ಕಾಗಿ ಒಂದು ಕಮಿಟಿಯನ್ನು ನೇಮಿಸುವದಿದೆ ಎಂದು ಬೆಸಿಲ್‌ಬ್ಲೆಕೆಟರು ತಿಳಿಸಿರುವರು. ಒಂದು ಕಮಿಟಿಯನ್ನು ನೇಮಿಸುವದಿದೆ ಎಂದು ಮಾತ್ರ ಹೇಳಿರುವರಲ್ಲದೆ ಕಮಿಟಿಯಲ್ಲಿ ಯಾರ ಸಮಾವೇಶವುಂಟಾಗುವದಿದೆ ಎಂಬುದನ್ನು ಬಿಚ್ಚಿ ಹೇಳಲಿಲ್ಲ. ಆದರೆ ಹಿಂದಿ ವ್ಯಾಪಾರಿಗಳ ಪ್ರತಿನಿಧಿಗಳನ್ನು ಕಮಿಟಿಯಲ್ಲಿ ಸೇರಿಸಿಕೊಳ್ಳಲಾದೀತೆಂದು ಇಷ್ಟು ಮಾತ್ರ ಹೇಳಿರುವರು. ಹುಂಡಿಚಲನದ ಈಗಿನ ದರವನ್ನು ಬದಲಾಯಿಸಿ ಅದನ್ನು ೧ ಶಿಲಿಂಗ್ ೬ ಪೆನ್ನಿಗೆ ಇಳಿಸಲು ಹಿಂದಿ ವ್ಯಾಪಾರಿಗಳು ಕ್ರಮ ಪ್ರಕಾರ ಕೇಳಿದ್ದಾದರೆ ಆ ಮೇರೆಗೆ ಏರ್ಪಾಡಾಗ ಬಹುದೆಂದು ಕೋಶ ಮಂತ್ರಿಗಳು ಮುಂಚಿತವಾಗಿ ಹೇಳಿದ್ದಾರೆ. ಮುಂಬಯಿಯ ಹಿಂದಿ ವ್ಯಾಪಾರಿಗಳು ಗಿರಣಿಗಳ ಈಗಿನ ಕಷ್ಟಸ್ಥಿತಿಯನ್ನೂ, ಎಕ್ಸಾಯಿಜ ಡ್ಯೂಟಿಯ ವಿಷಯವನ್ನೂ ವಿವರಿಸಿ ಹೇಳಿದಾಗ್ಯೂ ಅವರ ಕಡೆಗೆ ಕೋಶ ಮಂತ್ರಿಗಳು ಗಮನ ಕೊಡಲಿಲ್ಲ. ಗಿರಣಿಯ ಮ್ಯಾಲಿಕರು ಹಿಂದುಸ್ಥಾನ ಮತ್ತು ಜಪಾನ ಇವುಗಳ ತುಲನೆಯ ಸಂಖ್ಯೆಯನ್ನು ಕೋಶ ಮಂತ್ರಿಗಳ ಅವಗಾಹನೆಗೆ ತಂದು ಕೊಟ್ಟರು. ಅದರ ಮೇಲಿಂದ ಜಪಾನಿನ ಪ್ರಗತಿಯು ಬಹು ವೇಗದಿಂದ ನಡದಿದೆ ಎಂಬುದು ಸಿದ್ಧವಾಗುತ್ತದೆ. ಜಪಾನಿನಲ್ಲಿ ಮಗ್ಗಗಳ ಪ್ರಗತಿಯು ಬಹು ಭರದಿಂದ ಉಂಟಾಗ ಹತ್ತಿದೆ. ಅದರ ಪ್ರಗತಿಯ ಕ್ರಮವು ಇದೆ ರೀತಿಯಿಂದ ಮುಂದರಿಸಿದ್ದಾದರೆ, ಹಿಂದುಸ್ಥಾನದ ಗಿರಣಿಗಳು ನಿಂತು ಹೋಗುವವು. ಆದ್ದರಿಂದ ಎಕ್ಸಯಿಜ್‌ಡ್ಯೂಟಿಯನ್ನು ತೆಗೆದು \ ಹಾಕಬೇಕೆಂದು ವ್ಯಾಪಾರಿಗಳು ಕೇಳಿಕೊಂಡರು. ಆದರೆ ಸರ್ ಬೆಸಿಲ್‌ಬ್ಲೇಕಟರು ಈ ವಿಷಯವಾಗಿಯೂ ಮೌನವನ್ನೆ ತಾಳಿದರು. ಇಂಥ ಪರಿಸ್ಥಿತಿಯಲ್ಲಿ ಹಿಂದುಸ್ಥಾನದ ಗಿರಣಿಗಳು ನಡೆಯದಂತಾಗುವ ಪಕ್ಷದಲ್ಲಿ ಆಶ್ಚರ್ಯವೇನು? ಗಿರಣಿಗಳನ್ನು ನಡಿಸಲು ಮ್ಯಾಲಿಕರಿಗೆ ಕಷ್ಟವಾಗುವಾಗ ಅವರು ಕೆಲಸದ ತಾಸುಗಳನ್ನೆ ಕಡಿಮೆಮಾಡಿದ್ದಲ್ಲಿ ಅಥವಾ ಕೆಲವು ಸಮಯ ಮುಚ್ಚಿದ್ದಲ್ಲಿ ಮಜೂರರಿಗೂ ಕಷ್ಟವು ಬಂದೊದಗುವದಲ್ಲವೆ?

ಮಂಗಳೂರು.

ಇದೇ ತಿಂಗಳ ೧ನೇ ತಾರೀಖು ಲಾಗಾಯ್ತು ಮಂಗಳೂರು ಮುನ್ಸಿಪಾಲಿಟಿಯ ಜನನ ಮರಣದ ಸೆಂಟ್ರಲ್ ರಿಜಿಸ್ಟ್ರಾರರ ಆಫೀಸು ಮಂಗಳೂರು ಹಂಪನಕಟ್ಟೆಯಲ್ಲಿರುವ ಮುನ್ಸಿಪಲ್ ಹೆಲ್ತ್ ಆಫೀಸಿಗೆ ಬದಲಾಯಿಸಲ್ಪಟ್ಟಿದೆ. ಜನನ ಮರಣ ಸಂಬಂಧವಾದ ಮಾಹಿತಿಯನ್ನು ರಜೆಯ ದಿವಸಗಳ ಹೊರತು ಇತರ ದಿವಸಗಳಲ್ಲಿ ಮಧ್ಯಾಹ್ನ ೧೨ ಘಂಟೆಯಿಂದ ೪ ಘಂಟೆಯೊಳಗೆ ಪಡಕೊಳ್ಳಬಹುದು.

ಮಂಗಳೂರು ಮುನ್ಸಿಪಾಲಿಟಿಯ ಒಳಗೆ ೧೯೨೫ನೇ ಜೂನ್ ತಿಂಗಳಲ್ಲಿ ಆದ ಜನನ ಮರಣದ ವಿವರಃ—

೬೯ ಗಂಡುಮಕ್ಕಳೂ, ೬೨ ಹೆಣ್ಣುಮಕ್ಕಳೂ ಜನನವಾಗಿಯುವೆ, ೪೨ ಗಂಡುಮಕ್ಕಳೂ, ೩೫ ಹೆಣ್ಣುಮಕ್ಕಳೂ ಮರಣಪಟ್ಟಿಯುವೆ. ೬ ಗಂಡುಮಕ್ಕಳೂ, ೩ ಹೆಣ್ಣುಮಕ್ಕಳೂ ಜನನಕಾಲದಲ್ಲಿ ನಿರ್ಜೀವವಾಗಿಯುವೆ.

ಮಂಗಳೂರು ಕೊ-ಒಪರೇಟಿವ್; ಸೊಸ್ಯಾಟಿಗಳ ಅಸಿಸ್ಟಾಂಟ್ ರಿಜಿಸ್ತ್ರಾರರಾಗಿದ್ದ ಮ। ರಾ। ರಾ। ಎಮ್. ಗಿರಿಯಪ್ಪ ಬಿ. ಎ. ಇವರು ಡಿಪ್ಯುಟಿ ರಿಜಿಸ್ತ್ರಾರರಾಗಿಯೂ, ಚೀಫ್ ಇನ್ಸ್‌ಪೆಕ್ಟರಾಗಿದ್ದ ಮ। ರಾ। ಕಣ್ಣನ್ ನಾಯರರು ಅಸಿಸ್ಟಾಂಟ ರಿಜಿಸ್ತ್ರಾರರಾಗಿಯೂ, ಇನ್ಸ್‌ಪೆಕ್ಟರಾಗಿದ್ದ ಮ। ರಾ। ರಾಮಚಂದ್ರರವರು ಚೀಫ್ ಇನ್ಸ್‌ಪೆಕ್ಟರಾಗಿಯೂ ನೇಮಿಸಲ್ಪಟ್ಟಿರುವರು.

The Calicut Bank, Ltd.,
ದಿ ಕೆಲಿಕಟ್ ಬೇಂಕ್, ಲಿಮಿಟೆಡ್,

ಹೆಡ್ ಆಫೀಸು—ಕಲ್ಲಿ ಕೋಟೆ.
ಬ್ರಾಂಚುಗಳುಃ— ಮುಲ್ಲಸ್‌ಚೇರಿ, ತಲಚೇರಿ, ಕೊಚ್ಚಿ ಮತ್ತು ಪಾಲ್ಘಾಟು.
ರಿಜಿಸ್ಟರ್ಡ್ ಮತ್ತು ಅಧಿಕಾರಗೊಳಿಸಲ್ಪಟ್ಟ ಮೂಲಧನ ರೂ. 5,00,000—0—0.
ರೂಪಾಯಿ 10ರ 50,000 ಪಾಲುಗಳು.
(30—8—1924)ರ ವರೆಗೆ ಮೌಲ್ಯ ಮೂಲಧನ ರೂಪಾಯಿ 1,81,850—0—0.
ಒಂದು ವರುಷದ ಕಾಯಂ ಠೇವಣಾತಿಗೆ ಬಡ್ಡಿ ದರ ಸೇಕಡಾ ರೂ. 7—8—0.
ಕಳೆದ 4 ವರುಷಗಳಲ್ಲಿ ಪಾಲುಗಾರರಿಗೆ ಸೇಕಡಾ 12ರಂತೆ ಬಡ್ಡಿ ಹಂಚಿದೆ.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.
ಸಿ. ಕೃಷ್ಣನ್, ಬಿ. ಎ. ಬಿ. ಎಲ್.,
ಮೆನೇಜಿಂಗ್ ಡ್ಯಾರೆಕ್ಟರ್.
ಡ್ಯಾರೆಕ್ಟರರಲ್ಲಿ ಒಬ್ಬರು—
ಎಮ್. ನಾರಾಯಣ, ಕಾಮತ್, ಬಿ. ಎ.,
ಪ್ಲೀಡರ್, ಕುಂದಾಪುರ.

ಇಲ್ಲಿ ಕಳೆದ ಆದಿತ್ಯವಾರದಿಂದ ಮಳೆಯು ವಿಪರೀತವಾಗಿ ಬರುತ್ತಿದೆ. ನೇತ್ರಾವತಿ ನದಿಯಲ್ಲಿ ನೆರೆಯು ಬಂದಿರುವುದರಿಂದ ಬಂಟ್ವಾಳ ಪಾಣೆಮಂಗಳೂರಿನವರು ನೆರೆಯ ನೀರು ಉಕ್ಕಿಬಂದದನ್ನು ನೋಡಿ ಮುಂಚಿತವಾಗಿಯೇ ಪಟ್ಟಣವನ್ನು ಬಿಟ್ಟು ಹೋದ ವಾರ್ತೆ ಇದೆ. ಮೋಟಾರ ಬಸ್ಸುಗಳ ಚಲಾವಣೆಯು ಕಳೆದ ಸೋಮವಾರದಿಂದ ಸರಿಯಾಗಿಲ್ಲ. ರಸ್ತೆಗಳಲ್ಲಿ ಅಲ್ಲಲ್ಲಿ ನೀರು ತುಂಬಿಕೊಂಡಿರುವುದರಿಂದ ಇನ್ನು ಕೆಲ ದಿವಸಗಳ ವರೆಗೆ ಮೋಟಾರಿನ ಚಲಾವಣೆಯು ಹೇಗೆಂದು ಹೇಳಲು ಸಾಧ್ಯವಿಲ್ಲ. ನಿನ್ನೆ ದಿವಸ ಮಳೆಯು ಸ್ವಲ್ಪ ಮಟ್ಟಿಗೆ ಸಮಾಧಾನ ಸ್ಥಿತಿಯಲ್ಲಿ ಇದ್ದುದರಿಂದ ಅಡ್ಯಾರು ಫರಂಗಿಪೇಟೆ ಮತ್ತು ಇತರ ಕಡೆಗಳಲ್ಲಿ ರಸ್ತೆಯ ಮೇಲೆ ಇದ್ದ ನೀರು ಇಳಿದು ಹೋಗಿದೆಯಾಗಿ ವಾರ್ತೆ ಇದೆ. ಇವತ್ತಿನ ಮಳೆ ಗಾಳಿ ನೋಡುವಾಗ ನೆರೆಯ ಸ್ಥಿತಿ ಹೇಗೆಂದು ಹೇಳಲು ಸಾಧ್ಯವಿಲ್ಲ.

ಉಪಾಕರ್ಮ ನಿರ್ಣಯ.

ಇದೇ ಬರುವ ಶ್ರಾವಣ ಶುಕ್ಲ ೧೫ನೆ ಗ್ರಸ್ತೋದಯ ಚಂದ್ರಗ್ರಹಣ ಇರುವದರಿಂದ ಉಪಾಕರ್ಮವು ಶ್ರಾವಣ ಶುದ್ಧ ೫ ರವಿವಾರ (ತಾ. ೨೬—೭—೧೯೨೫)ಕ್ಕೆ ಆಗಬೇಕಾಗಿರುತ್ತದೆ.

ಸಂಕ್ರಾಂತಿರ್ಗ್ರಹಣಂ ವಾಪಿಯದಿ ಪರ್ವಣಿ ಜಾಯತೇ ।
ಉಪಾಕರ್ಮ ನಕುರ್ವೀತ ನಾರದಸ್ಯ ವಚೋಯಥಾ ॥ ೧ ॥
ಯದಿಸ್ಯಾತ್ ಶ್ರಾವಣಂ ಪರ್ವ ಗ್ರಹಸಂಕ್ರಾಂತಿ ದೂಷಿತಮ್ ॥ ಸ್ಯಾದುಪಾಕರಣಂ ಶುಕ್ಲ ಪಂಚಮ್ಯಾಂ ಶ್ರಾವಣಸ್ಯತು ॥ ೨ ॥

ಪಂಡಿತ ಮಂಗಳೂರು ನಾರಾಯಣಾಚಾರ್ಯ.

“ಹಿಂದುಸ್ಥಾನವನ್ನು ಶಸ್ತ್ರಯುದ್ಧದಿಂದಲೇ ಗೆದ್ದೆವು” ಎಂಬ ಬರ್ಕನ್‌ಹೆಡ್ಡ್ ಸಾಹೇಬರ ಮಾತನ್ನು ಅನುಮೋದಿಸಿ, “ಮೋರ್ನಿಂಗ್ ಪೋಸ್ಟ್” ಪತ್ರವು ಹೀಗೆ ಬರೆದಿತ್ತು — ‘ಹಿಂದುಸ್ಥಾನವನ್ನು ಶಸ್ತ್ರಮುಖದಿಂದ ಪಡೆದ ನಾವು ಶಸ್ತ್ರದಿಂದಲೇ ಅದರ ಅಧಿಕಾರವನ್ನು ಉಳಿಸಿಕೊಳ್ಳಬೇಕು. ಐರ್ಲೆಂಡಿನಂತೆಯೇ ಬೇರೆ ಸ್ಥಾನಗಳಲ್ಲಿ ಮಿನಿಸ್ತರರಿಗೆ ಬಿಟ್ಟುಕೊಟ್ಟ ಜವಾಬ್ದಾರಿಯನ್ನು ಹಿಂದೆ ತೆಗೆದುಕೊಳ್ಳಬೇಕು. ಕಳೆದ ವರ್ಷಗಳ ಅನುಭವವೇನೆಂದರೆ ಹಿಂದುಸ್ಥಾನದ ಮಂತ್ರಿಗಳು ನಡೆಸುವ ಡಿಪಾರ್ಟುಮೆಂಟುಗಳಲ್ಲಿ ನಗೆಗೇಡಿಗೆ ಕಾರಣವಾಗುವ ತಪ್ಪುಗಳಿಗಾಗಿ ಯುರೋಪಿಯನರು ಅವನ್ನು ತಿದ್ದಬೇಕಾಯಿತು.’ ಇದನ್ನು ಓದಿ ಈಗ ಇಂಗ್ಲೆಂಡಿನಲ್ಲಿದ್ದ ರಾಮಸ್ವಾಮಿ ಮುದಲಿಯಾರರು ಉತ್ತರಕೊಟ್ಟದ್ದೇನೆಂದರೆ- “ನಮ್ಮ ದೇಶವನ್ನು ಖಡ್ಗದಿಂದ ನೀವು ಗೆದ್ದಿರೆಂದು ಶಾಲೆಗಳಲ್ಲಿ ನಿಮಗೆ ಕಲಿಸಿರಲಿಕ್ಕೆ ಸಾಕು. ಆದರೆ ಅದು ಸಂಪೂರ್ಣ ಸುಳ್ಳು. ಹಿಂದುಸ್ಥಾನಕ್ಕೆ ಸ್ವಾರಾಜ್ಯ ಕೊಡುತ್ತೇವೆಂದು ಹೇಳುತ್ತ ಕಾರ್ಯದಲ್ಲಿ ವಿರುದ್ಧ ಮಾಡುವವರಿಗಿಂದ ನಿಮ್ಮ ಸತ್ಯದ ಮಾತು ನನಗೆ ಹಿತಕಾಣುತ್ತದೆ. ನಿಮ್ಮಂತೆ ಎಲ್ಲಾ ಬ್ರಿಟಿಷರೂ ತಮ್ಮ ಅಂತರ್ಯವನ್ನು ಸರಿಯಾಗಿ ತೋರಿಸಿದರೆ ನಮ್ಮವರು ಬೇಗ ತಪ್ಪು ತಿಳಿದು ಒಗ್ಗಟ್ಟಾಗಿ ಸ್ವಾತಂತ್ರ್ಯ ಪಡೆಯುವರು.” ಜಸ್ಟಿಸ್ ಪಾರ್ಟಿಯ ಮುಖಂಡರಾದ ಮುದಲಿಯಾರರೇ ಮೊದಲಾಗಿ ಕಣ್ಣುತೆರೆಯುವರೆಂದು ನಮ್ಮ ನಂಬಿಕೆ.

ಶ್ರೀ. ವಸಂತೀ ದೇವಿಯವರಿಗೆ

ಶ್ರೀಮತಿ ಸರೋಜಿನೀದೇವಿಯವರು ಜೂನ್ ತಾ. ೨೫ರಲ್ಲಿ ಹೈದರಾಬಾದಿನಿಂದ ಬರೆದ ಲೇಖ.—

ಪ್ರಿಯ ಸಖಿ ವಸಂತೀದೇವಿ! ಚಿಕ್ಕತನದಲ್ಲಿ ನಾವೆಲ್ಲರೂ ಒಟ್ಟುಗೂಡಿ ಆಡುತ್ತಿದ್ದೆವು. ಈ ದುಃಖಸಮಯದಲ್ಲಿ ನಿನಗೆ ಪರಾಮರ್ಶಲೇಖ ಬರೆಯಬೇಕೆಂದು ಅನೇಕಸಾರಿ ಪ್ರಯತ್ನಿಸಿ ಅನೇಕವೇಳೆ ಬರೆದು ಹರಿದು ಬಿಟ್ಟೆನು. ದುಃಖಶಮನಕರಗಳಾದ ಶಬ್ದಗಳೇ ಗೋಚರಿಸಲಿಲ್ಲವು.

ನಿನ್ನ ಪತಿಯ ಮೃತಿಗೆ ನೀನೊಬ್ಬಳೇ ಚಿಂತಿಸಬೇಕಾದ ದುರವಸ್ಥೆಯು ಪ್ರಾಪ್ತವಾಗಲಿಲ್ಲವು. ನಿನ್ನ ಪತಿಯು ಮಹಾರಾಜನು. ನೀನು ಮಹಾರಾಣಿ. ನಿನ್ನ ಪತಿಯ ಮರಣಕ್ಕಾಗಿ ೩೩ ಕೋಟಿ ಜನ ಭಾರತೀಯರು ದುಃಖದಲ್ಲಿ ಮುಳುಗಿದ್ದವರು. ಅದುಕಾರಣವೇ ನಿನಗೆ ಕೊಂಚ ಸಮಾಧಾನವಾಗಿರುವುದು. ಚಿತೋದಾದಾ (ದಾಸ)ರನ್ನು ನಾನು ಮಹಾರಾಜನೆಂದೇ ಕರೆಯುತ್ತೇನೆ. ಚಿಕ್ಕತನದಿಂದಲೂ ನಾನು ಹಾಗೆಯೇ ಕರೆಯುತ್ತಿದ್ದೆನು. ಸೋದರರನ್ನು ಪ್ರೀತಿಸುವಂತೆ ನಾನು ಪ್ರೀತಿಸುತ್ತಿದ್ದೆನು. ನನ್ನ ಸಂತಾಪವನ್ನು ಪ್ರಪಂಚಕ್ಕೆ ತಿಳುಹಲು ಆಗಲೇ ಒಂದು ಲೇಖವನ್ನು ಪ್ರಕಟಿಸಿರುತ್ತೇನೆ. ಅದನ್ನು ನೀನು ಕೂಡ ನೋಡಿರುತ್ತೀಯೆ. ಆತನ ಸ್ವಭಾವವು ದೇಶಸೇವೆಗಿಂತ ಬಂಧುಮಿತ್ರಸಮಕ್ಷದಲ್ಲೇ ಚೆನ್ನಾಗಿ ವಿದಿತವಾಗಿದ್ದಿತು. ದೇಶಸೇವೆಯಲ್ಲಿ ಆತನು ತೋರಿಸಿದ ಧೈರ್ಯವೂ, ತ್ಯಾಗವೂ ದೇಶಭಕ್ತಿಯೂ ಚರಿತ್ರಾಂಶವಾಗಿರುವುದಲ್ಲದೆ ಚಿರಸ್ಮರಣೀಯವಾಗಿರುವುವು. ಆತನ ಮೃದುಸ್ವಭಾವವೂ, ಆದರಣೆಯೂ, ಔದಾರ್ಯವೂ, ಸೌಜನ್ಯವೂ, ವಾತ್ಸಲ್ಯವೂ, ಸಮಯಸ್ಫೂರ್ತಿಯೂ, ಕವಿತ್ವಸಂಪದವೂ, ಪ್ರಕೃತಿಸೌಂದರ್ಯಪ್ರಿಯತ್ವವೂ, ಆಸ್ತಿಕತೆಯೂ, ಸರ್ವೇಶ್ವರನ ಚರಣಭಕ್ತಿಯೂ ಆತನ ಆಪ್ತರಿಗೆ ವಿನಾ ಇತರರಿಗೆ ಸರಿಯಾಗಿ ತಿಳಿಯಲವಕಾಶವಿಲ್ಲವು. ಅವನ್ನು ಅನುಗ್ರಹಿಸಿಕೊಳ್ಳುವ ಭಾಗ್ಯವು ನನಗೆ ಲಭಿಸಿದ್ದುದರಿಂದಲೇ ಅಂತಹ ಸುಗುಣನಿಧಿಯು ಅಕಾಲಮೃತ್ಯುವಿನ ಪಾಲಾದುದಕ್ಕಾಗಿ ದುಃಖಾಂಬುಧಿಯಲ್ಲಿ ಮುಳುಗಿರುವೆನು. ಕವಿಗೆ ಸಹಜವಾದ ಭಾವನೆಯೂ ಧೀರನಿಗೆ ಸಹಜವಾದ ಕಾರ್ಯನಿರತೆಯೂ, ಕರ್ಮಯೋಗವೂ, ವೈರಾಗ್ಯವೂ ಆತನಲ್ಲಿ ಚೆನ್ನಾಗಿ ವಿಳಿತವಾಗಿದ್ದವು. ಕವಿಗೆ ಸಹಜವಾದ ಧೀಶಕ್ತಿಯು ಕಾರ್ಯಮುಖವಾಗಿದ್ದಿತು. ಧೀಶಕ್ತಿಗೆ ಭಾವನಾಶಕ್ತಿಯೂ, ಧೈರ್ಯಕ್ಕೆ ಕನಿಕರವೂ, ಆತ್ಮವಿಶ್ವಾಸಕ್ಕೆ ದೂರದೃಷ್ಟಿಯೂ ಸಹಕಾರಿಗಳು. ಅಂತಹ ಮಹನೀಯನಿಗೆ ಅರ್ಧಾಂಗಿಯೂ ಸಹಚಾರಿಣಿಯೂ, ಪ್ರೇಮಾಸ್ಪದಮನಸ್ಕಳೂ ಆಗಿದ್ದ ನಿನ್ನ ಪೂರ್ವ ಜನ್ಮದ ಪುಣ್ಯವು ಎಷ್ಟು ಘನವಾದುದು! ಆಪತ್ತಿನಲ್ಲೂ, ಸಂಪತ್ತಿನಲ್ಲೂ, ಭೋಗದಲ್ಲೂ, ತ್ಯಾಗದಲ್ಲೂ ನೀನು ಸಮಭಾಗಿನಿಯಾಗಿದ್ದು, ನಿರಂತರವೂ ಸಮೀಪದಲ್ಲಿದ್ದು, ಸೇವೆಮಾಡಿದೆ ಮತ್ತು ಪತಿಯ ಇಷ್ಟವನ್ನು ಸ್ವಾರ್ಥಕಗೊಳಿಸಿ ಸ್ವಾರ್ಥತ್ಯಾಗವನ್ನಾಡಿ ಅಖಿಲ ಭಾರತಜನವಂದನೀಯಳಾಗಿರುವೆ, ಇಂತಹ ಆಪತ್ಸಮಯದಲ್ಲಿ ಮಹಾತ್ಮರು ನಿನ್ನ ಸಮೀಪದಲ್ಲಿರುವುದೊಂದು ಅದೃಷ್ಟವೇ ಸರಿ. ದಾಸರವರು ಮರಣವನ್ನು ಹೊಂದುವುದಕ್ಕೆ ಕೆಲದಿನಗಳ ಪೂರ್ವ ಮಹಾತ್ಮರು ಡಾರ್ಜಿಲಿಂಗಿನಲ್ಲಿ ನಿಮ್ಮ ಮನೆಯಲ್ಲಿ ಕೆಲದಿವಸಗಳವರೆಗಿದ್ದುದರಿಂದ, ಮಹಾತ್ಮರೂ ದಾಸರವರೂ ಪರಸ್ಪರ ಮನೋಭಾವವನ್ನು ಸರಿಯಾಗಿ ತಿಳಿದುಕೊಳ್ಳಲು ಅವಕಾಶವಾದುದಕ್ಕಾಗಿ ನಾನು ಬಹಳವಾಗಿ ಸಂತೋಷಿಸುತ್ತೇನೆ. ಕೆಲವಿಷಯಗಳಲ್ಲಿ ಮಹಾತ್ಮರು ಮಾತೃಸಮಾನರು. ಸಂತಾಪವನ್ನು ಗ್ರಹಿಸುವಲ್ಲಿ ಸ್ತ್ರೀಯರಿಗಿರುವ ಅದ್ಭುತಶಕ್ತಿಯು ಮಹಾತ್ಮರಿಗೆ ಸಂಪೂರ್ಣವಾಗಿರುವುದು. ಅವರು ದುಃಖೋಪಶಮನವಮಾಡುವ ವಿಧಾನವು ಪ್ರಶಂಸನೀಯವಾದುದು. ಈ ಸಮಯದಲ್ಲಿ ನಿನ್ನ ದುಃಖಶಾಂತಿಯನ್ನು ಮಾಡುವ ಪ್ರಯತ್ನದಲ್ಲಿ ಮಹಾತ್ಮರ ದುಃಖವೂ ಶಾಂತಿಯಾಗುವುದು.

ದೇಹಾಲಸ್ಯದಿಂದ ವಿಶ್ರಾಂತಿಯನ್ನು ಹೊಂದುವುದಕ್ಕಾಗಿ ಇಲ್ಲಿಯ ನನ್ನ ಮನೆಗೆ ಬಂದಿರುವೆನು. ಮತ್ತು ಕೂಡಲೆ ಮುಂಬೆಯಿಗೆ ಹೊರಡುವವಳಾಗಿರುವೆನು. ಅವಕಾಶವಾದಲ್ಲಿ ಅಲ್ಲಿಂದ ಕಲಕತ್ತಾಕ್ಕೆ ಬರಬೇಕೆಂದಿರುವೆನು. ದಾಸರವರು ಮಾಡಬೇಕಾಗಿದ್ದ ಕಾರ್ಯವನ್ನು ನೆರವೇರಿಸುವ ಭಾರವು ನಮಗಳೆಲ್ಲರಮೇಲೂ ಬಿದ್ದುದಾಗಿರುತ್ತದೆ. ಸಾಧ್ಯವಾದಷ್ಟು ಜಾಗ್ರತೆಯಲ್ಲಿ ನಿನ್ನ ದರ್ಶನಕ್ಕೆ ಬರುವವಳಾಗಿರುವೆನು. ನೀನು ನಿರಾಶಳಾಗದೆ ಧೈರ್ಯವಿಶ್ವಾಸಯುಕ್ತಳಾಗಿರುವಿಯೆಂದು ನಂಬುತ್ತೇನೆ. ಮಹಾರಾಜನು ಕಾಲವಶನಾದುದರಿಂದ, ರಾಜ್ಯಭಾರವು ಈಗ ಮಹಾರಾಣಿಯಾದ ನಿನ್ನಮೇಲೆ ಬಿದ್ದುದಾಗಿದೆ. ಪ್ರಜೆಗಳ ಹೃದಯವೇ ನಿನ್ನ ಸಾಮ್ರಾಜ್ಯವು. ನಿನ್ನ ಕುವರ ಕುವರಿಯರನ್ನು ಬಹಳವಾಗಿ ಕೇಳಿದ್ದೇನೆಂದು ಹೇಳುವುದು.

ಇತಿ ಸಖೀ ಸರೋಜಿನೀ.

ಸುಗ್ಗಿ ಬೆಳೆಗೆ ಯೋಗ್ಯವಾದ ಹೊಸ ನಮೂನೆಯ ಬೀಜದ ಭತ್ತಗಳು.

(ಲೇಖಕ:—ಕೆ. ಯಮ್. ರಾಮಣ್ಣರೈ, ಎಗ್ರಿಕಲ್ಚರಲ್ ಡೆಮೋನ್‌ಸ್ಟ್ರೇಟರ್, ಪುತ್ತೂರು.)

ಈಗ ನಮ್ಮ ಜಿಲ್ಹೆಯಲ್ಲಿ ನಾಲ್ಕು ನಮೂನೆಯ ಹೊಸ ಬೀಜದ ಭತ್ತಗಳನ್ನು ಬೆಳೆಸಿನೋಡಿದಲ್ಲಿ, ಅವುಗಳು ಇತರ ಭತ್ತಗಳಿಗಿಂತ ಉತ್ತಮತರವಾದ್ದಾಗಿಯೂ, ಹೆಚ್ಚು ಬೆಳೆ ಕೊಡುವಂಥಾದ್ದಾಗಿಯೂ ಕಂಡುಬಂದಿವೆ. ಆ ಭತ್ತಗಳ ಹೆಸರುಗಳಾವುವೆಂದರೆ:

೧. ಜಿ. ಇ. ಬಿ. ನಂಬ್ರ ೨೪.
೨. ಜಿ. ಇ. ಬಿ. ನಂಬ್ರ ೯೪.
೩. ಸಿ. ಒ. ನಂಬ್ರ ೧.
೪. ಸಿ. ಒ. ನಂಬ್ರ ೨.

ಇವುಗಳನ್ನು ನಾನು ಸ್ವತಃ ಉಪ್ಪಿನಂಗಡಿ ಮತ್ತು ಕಾಪುಗೋಡು ತಾಲೂಕಿನ ಕೆಲವು ಗ್ರಾಮಗಳಲ್ಲಿ ಬೆಳೆಸಲು ಕೊಟ್ಟಿದ್ದೇನೆ. ನಮ್ಮಲ್ಲಿ ರೈತರು ರೂಢಿಯಾಗಿ ಬೆಳೆಸುತ್ತಿರುವ “ಅತಿಕರೆ” ಮತ್ತು “ಉಬಾರ್ ಮುಂಡ” ಎಂಬ ಎರಡು ತರದ ಬೀಜಗಳಿಂದಲೂ ಇವುಗಳಲ್ಲಿ ಹೆಚ್ಚಿಗೆಯಾಗಿ ಕಂಡುಬರುವ ಪ್ರಯೋಜನವು ಈ ಕೆಳಗೆ ವಿವರಿಸಿಯದೆ.

೧. ಒಂದು ಮುಡಿ ಬೀಜವರಿಯ ಜಾಗದಲ್ಲಿ ½ ಮುಡಿಯಷ್ಟು ಮಾತ್ರ ಈ ಬೀಜ ಸಾಕಾಗುತ್ತದೆ. ಅದ್ದರಿಂದ ನೇಜಿಗಳನ್ನು ದೂರದೂರಕ್ಕೆ ಬಿತ್ತಬೇಕಾಗಿದೆ.

೨. ನಮ್ಮ “ಅತಿಕರೆ” ಮತ್ತು “ಉಬಾರು ಮುಂಡ” ಭತ್ತಗಳ ಬೆಳೆಗಿಂತ ಶೇಕಡ ೨೫ರಷ್ಟು ಹೆಚ್ಚಿಗೆ ಬೆಳೆಯು ಜಿ. ಇ. ಬಿ. ನಂಬ್ರ ೨೪ ಮತ್ತು ಜಿ. ಇ. ಬಿ. ನಂಬ್ರ ೯೪ ಈ ಭತ್ತಗಳಿಂದ ಸಿಕ್ಕುತ್ತದೆ. ಸಿ. ಒ. ನಂಬ್ರ ಒಂದು ಸಿ. ಒ. ನಂಬ್ರ ಎರಡು ಈ ಭತ್ತಗಳಿಂದ ಇನ್ನೂ ಹೆಚ್ಚಿಗೆ ಅಂದರೆ ಶೇಕಡಾ ೩೦ರಷ್ಟು ಜಾಸ್ತಿ ಬೆಳೆಯಾಗುತ್ತದೆ.

೩. ಈ ಹೊಸ ಭತ್ತಗಳ ಅಕ್ಕಿಯು ಬಿಳುಪಾಗಿಯೂ ಒಳ್ಳೇ ತರದ್ದಾಗಿಯೂ ಇದೆಯಲ್ಲದೆ ಭತ್ತವನ್ನು ಕುಟ್ಟಿದಾಗ ಅಕ್ಕಿಯ ದಾಮಾಶಯವೂ ಹೆಚ್ಚಿಗೆಯಿರುತ್ತದೆ. ಹೇಗೆಂದರೆ, ಈಗ ಚಾಲ್ತಿಯಲ್ಲಿ ಬೆಳೆಸುವ ೭ ಕಳಸಿಗೆ ಭತ್ತದಿಂದ ಒಂದು ಮುಡಿ ಅಕ್ಕಿಯಾಗುವಾಗ, ಈ ಹೊಸತರದ ೬ ಕಳಸಿಗೆ ಭತ್ತದಿಂದಲೇ ಒಂದು ಮುಡಿ ಅಕ್ಕಿ ಸಿಕ್ಕುತ್ತದೆ.

೪. ಈ ಹೊಸ ಅಕ್ಕಿಯ ಅನ್ನವೂ ದೊಡ್ಡದಾಗುತ್ತದೆ. ಎರಡು ಸೇರು ನಮ್ಮ ಅಕ್ಕಿಬೇಯುವ ಪಾತ್ರದಲ್ಲಿ ಹೊಸ ಅಕ್ಕಿಯನ್ನು ೧½ ಸೇರು ಮಾತ್ರವೇ ಬೇಯಿಸಲಾಗುತ್ತದೆ.

೫. ಈ ಹೊಸತರದ ಅಕ್ಕಿಗೆ ಬೆಲೆ ಸಹಾ ಹೆಚ್ಚು ಸಿಕ್ಕುತ್ತದೆ. ಸುಗ್ಗಿ ಅಕ್ಕಿಗೆ ೮ ರೂಪಾಯಿಗಿಂತ ಹೆಚ್ಚಿಗೆ ಬೆಲೆ ಸಿಕ್ಕದಿರುವಾಗ ಹೊಸ ಅಕ್ಕಿಯನ್ನು ರೂ ೧೨-೮-೦ರ ಪಡದಲ್ಲಿ ಪುತ್ತೂರಲ್ಲಿ ಮಾರಾಟ ಮಾಡಿದ್ದಾರೆ,

೬. ಈ ಹೊಸತರದ ಭತ್ತಗಳಲ್ಲಿ ಜಿ. ಇ. ಬಿ. ನಂಬ್ರ ೨೪ನೇ ಭತ್ತವು, ನೀರಾಶ್ರಯವು ಕಡಿಮೆಯಿದ್ದ ಗದ್ದೆಗಳಲ್ಲಿ ಕೂಡ ಬೆಳೆಸಲಾಗುತ್ತದೆ. ಮತ್ತು ಅದು ೧೫ ದಿನಗಳ ಮುಂಚಿತವಾಗಿಯೇ ಬಲಿತು ಕೊಯ್ಲಿಗೆ ಬರುತ್ತದೆ.

ಈ ಭತ್ತಗಳನ್ನು ಬೆಳೆಸುವ ಕ್ರಮ.

ಏನೆಲುಬೆಳೆ ಕಟಾವಾದಕೂಡಲೇ, ಈ ಭತ್ತದ ನೇಜಿ ಹಾಕತಕ್ಕದ್ದು. ನೇಜಿಯನ್ನು ೨೫ ಯಾ ೩೦ ದಿವಸಗಳಿಗಿಂತ ಹೆಚ್ಚಿಗೆ ಬೆಳೆಯಲು ಬಿಡಬಾರದು. ಒಂದು ಮುಡಿ ಬೀಜವರಿಯ ನೇಜಗದ್ದೆಯಲ್ಲಿ ೨ ಮುಡಿ ಬೀಜಕ್ಕಿಂತ ಹೆಚ್ಚಿಗೆ ಬಿತ್ತಬಾರದು. ನೇಜಿ ಹಾಕುವ ಗದ್ದೆಗೆ ಒಳ್ಳೇ ಗೊಬ್ಬರ ಸಾಕಷ್ಟು ಹಾಕತಕ್ಕದ್ದು.

ಈ ಕುರಿತು ಹೆಚ್ಚಿಗೆ ಮಾಹಿತಿ ಬೇಕಾದವರು ತಮ್ಮ ತಮ್ಮ ಸರ್ಕಲಿನ ಎಗ್ರಿಕಲ್ಚರಲ್ ಆಫೀಸರರಿಂದ ಪಡಿಯಬಹುದು. ಈಗ ಈ ಹೊಸ ಜಾತಿಯ ಭತ್ತದ ಬೀಜಗಳು ಸ್ವಲ್ಪ ಮಾತ್ರವೇ ಇದೆ. ಮುಂದಿನ ವರ್ಷಕ್ಕೆ ಹೆಚ್ಚಿಗೆ ಸಿಕ್ಕಬಹುದು.

— ಕ್ರಿಮಿಕೀಟಗಳೂ ರೋಗಗಳೂ. —

ಬಿ. ಜಿ. ಪ್ರಭು, ಎಲ್. ಯಮ್. ಎಂಡ್ ಯಸ್. ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರ್, ದ. ಕನ್ನಡ.—ಲೇಖಕರು.

ಸಾಮಾನ್ಯವಾ ಅಂಟುರೋಗಗಳಾಗಿರುವ ಮಲೇರಿಯಜ್ವರ, ವಾಂತಿಭೇದಿ, ರಕ್ತಾತಿಸಾರ ಇತ್ಯಾದಿ ಮನುಷ್ಯನಿಗೆ ಪ್ರಾಣಾಪಾಯವನ್ನುಂಟುಮಾಡುವ ರೋಗಗಳನ್ನು ಒಬ್ಬನಿಂದ ಮತ್ತೊಬ್ಬನಿಗೆ ವೈದು, ಹರಡಿಸುವ ಕ್ರಿಮಿಗಳನ್ನು ಕುರಿತು ಎಲ್ಲಾ ಜನರೂ ತಿಳಕೊಳ್ಳುವದು ಅತ್ಯಾವಶ್ಯಕವಾಗಿರುವದು. ಈ ವಿಷದಿಂದ ಮನುಷ್ಯರಿಗೆ ಅಪಾಯವನ್ನುಂಟುಮಾಡುವ ಕ್ರಿಮಿಗಳಲ್ಲಿ ಈ ಜಿಲ್ಹೆಯಲ್ಲಿ ಮುಖ್ಯವಾದುವು ಇವೇ (೧) ಸೊಳ್ಳೆ, (೨) ನೊಣ, (೩) ಚಿಕ್ಕನೊಣ (Flies) (೪) ತಗಣೆ, (೫) ಹೇನು.

— ಸೊಳ್ಳೆ. —

ಮನುಷ್ಯರಿಗೆ ಗಂಡಾಂತರವನ್ನುಂಟುಮಾಡುವ ಮತ್ತು ಇದು ವರೆಗೆ ಗಂಡಾಂತರಕ್ಕೆ ಕಾರಣವೆಂದು ತಿಳಿದು ಬಾರದ ನಾನಾ ಜಾತಿಯ ಸೊಳ್ಳೆಗಳಿವೆ. ಅಪಾಯಕರವಾದುವುಗಳಲ್ಲಿ ಎನೊಫಿಲಿಸ್ ಎಂಬ ಮಲೆಜ್ವರಕಾರಕ ಸೊಳ್ಳೆಗಳು ಆನೆಕಾಲು ರೋಗವನ್ನುಂಟುಮಾಡುವುವಕ್ಯು ಕ್ಯೂಲೆಕ್ಸ್ ಸೊಳ್ಳೆಗಳು ಅರಸಿನ ಜ್ವರಕ್ಕೆ ಕಾರಣವಾದ ಸ್ಟೆಗೊಮಿಯಾ ಅಥವಾ ಹುಲಿ ಸೊಳ್ಳೆಗಳೂ ಮುಖ್ಯವಾಗಿವೆ. ಅವರ ಜೀವನಸಾಗುವ ಕ್ರಮವು ಸಾಧಾರಣವಾಗಿ ನೊಣದಂತೆಯೆ; ನೊಣವು ಗೊಬ್ಬರದ ರಾಶಿಯಲ್ಲಿ ಹುಟ್ಟುವುದು. ಸೊಳ್ಳೆಯು ನೀರಲ್ಲಿ ಹುಟ್ಟುವುದು, ಇಷ್ಟೇ ಭೇದ. ಹೆಣ್ಣು ಸೊಳ್ಳೆಯು ಹುಟ್ಟಿದ ಸ್ವಲ್ಪ ಹೊತ್ತಿನಲ್ಲಿಯೇ ಗರ್ಭ ಧರಿಸಿ, ಮೊಟ್ಟೆ ಇಡಲು ಸಿದ್ಧವಾಗಿರುವುದು. ಆದರೆ ರಕ್ತವನ್ನು ಹೀರುವ ಮೊದಲು ಮೊಟ್ಟೆಗಳನ್ನು ಇಡುವ ಶಕ್ತಿಯೇ ಇದಕ್ಕೆ ಇಲ್ಲವೆನ್ನಬಹುದು. ಮನುಷ್ಯರ ಅಥವಾ ಇತರ ಪ್ರಾಣಿಗಳ ರಕ್ತವನ್ನು ಹೀರಿದ ಮರುದಿನ ಮುಂಜಾನೆಯೇ ಮೊಟ್ಟೆಗಳನ್ನಿಡಲು ಹೆಣ್ಣು ಸೊಳ್ಳೆಯು ಉಪಕ್ರಮಿಸುವುದು. ಮೊಟ್ಟೆಗಳು ನೀರಿನ ಮೇಲ್ಭಾಗದಲ್ಲೇ ತೇಲಲಾಗುವವು. ಕೆಲವು ದೂರ ದೂರ ಹರಡಿ ಬೀಳುವವು. ಇನ್ನು ಕೆಲವು ಚುಕ್ಕೆಯಾಕಾರ, ತ್ರಿಕೋಣಾಕಾರ, ಸಾಲುಸಾಲುಗಳಾಗಿ ಹತ್ತಿರ ಹತ್ತಿರವಾಗಿ ಜೋಡಿಸಲಾಗುವವು. ಪ್ರತಿ ಸಾರಿ ಪ್ರತಿಯೊಂದು ಸೊಳ್ಳೆಯು ನೂರು ನೂರು ಮೊಟ್ಟೆಗಳನ್ನು ನೀರಿನ ಮೇಲೆ ಇಡುವವು. ಈ ಮೊಟ್ಟೆಗಳು ೧-೫ರಿಂದ ೧-೨೦ ಅಂಗುಲ ಉದ್ದವಾಗಿ ಮೇಲೆ ಚಪ್ಪಟೆಯಾಗಿಯೂ, ಕೆಳಗಿನ ಭಾಗವು ಉಬ್ಬಿ ದುಂಡಗಾಗಿಯೂ ಒಂದು ಕೊನೆಯು ಮತ್ತೊಂದಕ್ಕಿಂತ ಅಗಲವಾಗಿಯೂ ಇರುವಂತವು. ಕಾಲಕ್ಕೆ ತಕ್ಕಂತೆ ಸಾಧಾರಣ ಎರಡು ದಿನಗಳಲ್ಲಿ ಮೊಟ್ಟೆಗಳು ಒಡೆದು ಅದರ ಚಪ್ಪಟೆಯು ಚಪ್ಪಟೆಯಾದ ಭಾಗದ ಒಂದು ತೂತದಿಂದ ಎಸ್ತ್ರ ಮರಿಗಳು ಹೊರಬರುವವು. ಈ ಮರಿಗಳು ದನಗವನೆ ಅವಲವಾದೆಯುಂದ ಆಹಾರವನ್ನು ನುಂಗುತ್ತ, ಹೊಟ್ಟೆ ತುಂಬಾ ಸಣ್ಣ ಆಹಾರವನ್ನು ತಿಂದು ಬದುಕುವವು. ಕೆಲವು ನೀರಿನ ತಳದ ಮೇಲೆ ಚಪ್ಪಟೆಯಾಗಿ ಬಿದ್ದುಕೊಳ್ಳುವವು. ಇನ್ನು ಕೆಲವು ಜಾತಿಯ ಮರಿಗಳು ತಲೆ ಕೆಳಗಾಗಿ ನೀರಿನಲ್ಲಿ ತೇಲುವವು. ಮೊದಲನೆ ಜಾತಿಯ ಸೊಳ್ಳೆಯ ಮರಿಗಳು ಮಲೆಜ್ವರವನ್ನು ಹರಡುವ ಸ್ವಭಾವದವುಗಳು ಎರಡನೆಯವು ಆನೆಕಾಲು ರೋಗವನ್ನು ಉಂಟುಮಾಡುವಂಥವು. ನಂತರ ಹತ್ತು ದಿನಗಳ ವರೆಗೆ ಅವು ಬಲು ಚುರುಕು ಆಗುವವು. ಅನಂತರ ಆಲಸ್ಯದಿಂದ ಒದಗೂಡಿ, ಕೋಶಾವಸ್ಥೆಯಲ್ಲಿ ೪೮ ತಾಸುಗಳ ವರೆಗೆ ಬಿದ್ದುಕೊಳ್ಳುವವು. ನಂತರ ಸಂಜೆಯ ಹೊತ್ತಿಗೆ ಇವು ನೀರಿನ ಮೇಲ್ಭಾಗಕ್ಕೆ ಎದ್ದು ಕೋಶವನ್ನು ಒಡೆದು ಅದರಿಂದ ಪ್ರಾಯಕ್ಕೆ ಬಂದ ಸೊಳ್ಳೆಯು ಹೊರ ಬಿದ್ದು ಹಾರುವುದು. ಪ್ರತಿಯೊಂದು ಮೊಟ್ಟೆಯಿಂದ ಒಂದೊಂದು ಸೊಳ್ಳೆಯು ಹುಟ್ಟಿ ಬರಲಾರದು. ಏಕೆಂದರೆ ಸೊಳ್ಳೆಗಳಿಗೆ ನೀರಿನಲ್ಲೇ ವೈರಿಗಳಿದ್ದಾವೆ. ಎಲ್ಲಾ ಬಗೆಯ ಚಿಕ್ಕ ಮೀನುಗಳು ಇವುಗಳ ವೈರಿಗಳು. ಇಂಥಾ ಮೀನುಗಳು ಇಲ್ಲದ ನೀರನ್ನು ಹುಲ್ಲು ಕಡ್ಡಿ ಬೆಳೆದ ಸ್ಥಳವನ್ನು ಆರಿಸಿ, ತಾಯಿ ಮೊಟ್ಟೆಗಳನ್ನು ಇಡುವವು. ಮಲೆಜ್ವರದ ಸೊಳ್ಳೆಯು ಶುದ್ಧವಾದ ನೀರನ್ನೂ, ಸ್ವಲ್ಪ ಹುಲ್ಲು ಕಡ್ಡಿ ಬೆಳೆದಿರುವಲ್ಲಿ ಮೊಟ್ಟೆ ಇಡುವುದು. ಆದ್ದರಿಂದ ಇವುಗಳನ್ನು ಅಂಥಾ ಹುಲ್ಲು ಬೆಳೆದ ಹೊಳೆಯ ಪ್ರವಾಹ ಸ್ಥಳಗಳಲ್ಲೂ, ಹುಲ್ಲು ಕಡ್ಡಿ ಬೆಳೆದ ಕೆರೆಗಳ ದಡಗಳಲ್ಲಿಯೂ, ಹೆಚ್ಚಾಗಿ ಸಿಹಿ ಅಥವಾ ಸವುಳು ನೀರು ನಿಂತ ಚಿಕ್ಕ ಅಥವಾ ದೊಡ್ಡ ಹೊಂಡಗಳಲ್ಲಿಯೂ ಹಸರುಸಸ್ಯ ಪದಾರ್ಥ ಇರುವಲ್ಲೆಲ್ಲಾ ಎಡೆಗಳಲ್ಲಿಯೂ ಕಾಣಬಹುದು. ಮತ್ತೊಂದು ಜಾತಿಯ ಕ್ಯೂಲೆಕ್ಸ್ ಸೊಳ್ಳೆಯು ಸಿಹಿ ಅಥವಾ ಸವುಳು ಶುದ್ಧ ಅಥವಾ ಕೆಟ್ಟ ನೀರಲ್ಲಿ ಎಲ್ಲಿಯಾದರೂ ಮೊಟ್ಟೆಗಳನ್ನು ಇಡುವುದು. ಚಿಕ್ಕ ಮತ್ತು ದೊಡ್ಡ ಬಾವಿಗಳು, ನೀರು ನಿಂತ ಸ್ಥಳಗಳು, ಒಡೆದ ಸೀಸೆಗಳು ಮಡಕೆ ಚಿಪ್ಪು, ಮರದ ಪೊಟರೆ, ಬಿದಿರು ಮಳೆ ಮುಂತಾದವುಗಳಲ್ಲಿ ಕೂಡ ಇರಬಹುದಾದ ನೀರೇ ಇಂಥಾ ಸೊಳ್ಳೆಗಳ ಜನ್ಮಸ್ಥಾನಗಳೆಂದು ಸಾಧಾರಣವಾಗಿ ಹೇಳಬಹುದು.

— ಸೊಳ್ಳೆಗಳಿಂದ ಉಂಟಾಗುವ ರೋಗಗಳು. —

ಎನೊಫಿಲಿಸ್ ಸೊಳ್ಳೆಯಿಂದ ಮಲೇಜ್ವರವೂ, ಕ್ಯೂಲೆಕ್ಸ್ ಸೊಳ್ಳೆಯಿಂದ ಆನೆಕಾಲು ಮುಂತಾದ ರೋಗಗಳೂ, ಡೆಂಗ್ಯೂ ಜ್ವರವೂ, ಸ್ಟೆಗೋಮಿಯಾ ಅಥವಾ ಹುಲಿ ಸೊಳ್ಳೆಯಿಂದ ಅರಸಿನ ಜ್ವರವೂ ಮನುಷ್ಯರಿಗೆ ಉಂಟಾಗುತ್ತವೆ. ಅರಸಿನ ಜ್ವರವು ಮಧ್ಯ ಅಮೇರಿಕ ಖಂಡದಲ್ಲಿಯೂ ಪಶ್ಚಿಮ ಆಫ್ರಿಕದಲ್ಲಿಯೂ ಮಾತ್ರ ಇಷ್ಟರ ವರೆಗೆ ಇದೆ. ಆದರೆ ಇಂಡಿಯಾ ದೇಶದಲ್ಲಿ ಹೆಚ್ಚಾಗಿ ಕರಾವಳಿಯ ಸ್ಥಳಗಳಲ್ಲಿ ತುಂಬಾ ಹುಲಿ ಸೊಳ್ಳೆಗಳು ಇರುವುದರಿಂದಲೂ ಪನಾಮಾ ಕಾಲುವೆಯ ಮಾರ್ಗವಾಗಿ ರೋಗಗಳಿರುವ ಸ್ಥಳಗಳಿಂದ ಹಡಗುಗಳು ಇಂಡಿಯಾ ದೇಶಕ್ಕೆ ಬಹಳ ಸ್ವಲ್ಪ ಸಮಯದಲ್ಲೇ ಬರಲಿಕ್ಕೆ ಸಾಧ್ಯವಿರುವುದರಿಂದಲೂ ಆ ಹಡಗುಗಳಲ್ಲಿ ಅರಸಿನ ಜ್ವರದ ಕ್ರಿಮಿಗಳಿರುವ ಹುಲಿ ಸೊಳ್ಳೆಗಳು ಇದ್ದರೆ ಅವುಗಳ ಮೂಲಕ ಈ ರೋಗವು ಈ ದೇಶದಲ್ಲಿಯೂ ಹಬ್ಬಲಿಕ್ಕೆ ಅನುಕೂಲವಿದೆ.

— ಸೊಳ್ಳೆಗಳನ್ನು ಕಡಿಮೆ ಮಾಡುವ ವಿಧ. —

ಸೊಳ್ಳೆಗಳ ಹುಟ್ಟನ್ನೇ ಅಡಗಿಸಬೇಕೆಂದು ನಾವು ಅಪೇಕ್ಷಿಸುವುದಾದರೆ ಒಡೆದ ಬಾಟಲಿ, ಮಡಕೆ ಮುಂತಾದುವುಗಳನ್ನು ಸಿಕ್ಕ ಸ್ಥಳಗಳಲ್ಲೆಲ್ಲಾ ಬಿಸಾಡಬಾರದು. ಹಾಗೆ ಮಾಡಿದರೆ ಮಳೆಗಾಲದಲ್ಲಿ ಅವುಗಳಲ್ಲಿ ನೀರು ನಿಂತಾಗಲೇ ಸೊಳ್ಳೆಗಳು ಅವುಗಳಲ್ಲಿ ಮೊಟ್ಟೆಗಳನ್ನು ಇಡುವವು. ಕೆರೆಕೊಳಗಳ ಬದಿಯ ಹುಲ್ಲು ಕಡ್ಡಿಗಳನ್ನು ಕಿತ್ತು ಅವುಗಳನ್ನು ಇಳಿಜಾರಾಗುವ ಹಾಗೆ ಮಾಡಿದರೆ, ನೀರು ಸರಿಯಾಗಿ ಹರಿದು ಹೋಗಿ ಸೊಳ್ಳೆಗಳು ಮೊಟ್ಟೆ ಇಡಲು ಅಲ್ಲಿ ಬರಲಾರವು. ಒಂದು ಊರಿನಲ್ಲಿಯೂ ಮನೆಗಳ ಸುತ್ತಲೂ ಹೊಂಡಗಳು ಇಡಲಿಕ್ಕೆ ಬಿಡಬಾರದು. ಅಂಥಾ ಹೊಂಡಗಳು ಇದ್ದರೆ ಅವುಗಳನ್ನು ಮುಚ್ಚಿಸಬೇಕು. ಬಾವಿಗಳನ್ನು ಯಾವಾಗಲೂ ಸ್ವಚ್ಛವಾಗಿ ಇಡಬೇಕು. ನೀರಿನ ಮೇಲೆ ಚಿಮಿಣಿ ಎಣ್ಣೆಯು ಮಿಶ್ರಕವನ್ನು ಚಿಮಕಿಸುವುದರಿಂದ, ಸೊಳ್ಳೆಯ ಮರಿಗಳು ನಾಶವಾಗುವವು. ಆದರೆ ಈ ಉಪಾಯವನ್ನು ಜಾಗ್ರತೆಯಿಂದಲೂ ಹಪ್ತೆಗೆ ಒಂದು ಸರ್ತಿ ಉಪಯೋಗಿಸಬೇಕು. ಈ ವಿಧವು ಹೆಚ್ಚಾಗಿ ನದಿಗಳ ದಡಕ್ಕೆ ಉಪಯೋಗಿಸಲಿಕ್ಕೆ ಯುಕ್ತವಾದಂಥಾದ್ದು. ಕುಡಿಯುವ ನೀರಿನ ಬಾವಿಗೆ ಅಥವಾ ಕೆರೆಗೆ ಈ ಉಪಾಯವನ್ನು ಉಪಯೋಗಿಸಬಾರದು

ಅಂಥಾ ಕಡೆಗಳಲ್ಲಿ ಸೊಳ್ಳೆಯ ಮರಿಗಳನ್ನು ತಿನ್ನುವಂತಾ ಮೀನುಗಳನ್ನು ಕೆರೆಕೊಳಗಳಲ್ಲಿ ಸಾಕಿ ಬೆಳೆಯಿಸುವುದು ಉತ್ಕೃಷ್ಟವಾದ ಸಾಧನವು. ಅದಕ್ಕಾಗಿ ಅರ್ಜಿ ಬರೆದುಕೊಂಡರೆ ಮೀನು (Fisheries) ಇಲಾಖೆಯವರು ಅಂಥಾ ಮೀನನ್ನು ಒದಗಿಸಿಕೊಟ್ಟು ಕೆರೆಗಳಲ್ಲಿ ಅವು ಬೆಳೆದಿರುವ ಹಾಗೆ ನೋಡುವರು.

ಸೊಳ್ಳೆಗಳು ಹರಡುವಂತಾ ರೋಗಗಳಿಂದ ಪೀಡಿಸಲ್ಪಡಬಾರದೆಂದು ಮನಸಿದ್ದರೆ, ಸೊಳ್ಳೆ ಪರದೆಗಳನ್ನು ಕಟ್ಟಿ, ಅವುಗಳ ಕೆಳಗೆ ರಾತ್ರಿ ಸಮಯದಲ್ಲಿ ನಿದ್ದೆ ಹೋಗುವದು ಉತ್ತಮ.

(ಬರುವ ವಾರದಲ್ಲಿ ನೊಣದ ಕುರಿತು ಬರೆಯುತ್ತೇನೆ.)

ನೋಟೀಸು.

ಮಂಗಳೂರು ಡಿಸ್ಟ್ರಿಕ್ಟ ಮುನ್ಸೀಫ ಕೋರ್ಟಿನಲ್ಲಿ

I. P. No. 4/24. I. A. No. 47/25.

ಕೆ. ಸಂಕಪ್ಪಯ್ಯ ಕೃಷ್ಣಯ್ಯನವರ ಮಗ ಮಂಗಳೂರು ಶಹರ, } ಅರ್ಜಿದಾರ.

ಮತ್ತು

ರಾಮಕೃಷ್ಣ ಬಲ್ಲಾಳಾ ಕೂಡಾ — ಕ್ರೆಡಿಟರರು.

ಮೇಲ್ಕಂಡ ಕೋರ್ಟಿನಲ್ಲಿ ತನ್ನನ್ನು ದಿವಾಳಿಯಿಂದ ಡಿಸ್‌ಚಾರ್ಜು ಮಾಡಬೇಕೆಂತ ವಗೈರೆ ಕಾಣಿಸಿ ಅರ್ಜಿದಾರನು ದಾಖಲು ಮಾಡಿದ I. A. 47/25ನೇ ಅರ್ಜಿಯನ್ನು ತಾ. 8—8—1925ನೇ ಪೂರ್ವಾಹ್ನ 11 ಘಂಟೆಗೆ ತನಿಕೆಗೆ ಇಟ್ಟಿದೆ. ಆಕ್ಷೇಪವಿದ್ದವರು ಅವರವರ ಆಕ್ಷೇಪಣೆಗಳನ್ನು ಸದರಿ ತಾರೀಕಿಗೆ ಮೇಲ್ಕಂಡ ಕೋರ್ಟಿನಲ್ಲಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

Mangalore, 15-7-'25. } K. Sankappaya, ಅರ್ಜಿದಾರ

ಆರೋಗ್ಯ ಚಂದ್ರಿಕೆ.
ಮದ್ರಾಸ್.

ಸಂಪಾದಕರು: "ಡಾಕ್ಟರ್ ಯು. ರಾಮರಾವ್, ಎಲ್. ಎಮ್. ಸಿ. ಎಫ್. ಎಮ್. ಯು. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವುದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ.

ಈ ಮಾಸಪತ್ರಿಕೆಯು ‘ಹೆಲ್ತ್’ ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ.

ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವುದು.

‘ಹೆಲ್ತ್’ ಎಂಬ ನಮ್ಮ ಇಂಗ್ಲಿಷ್ ಮಾಸಪತ್ರಿಕೆಯನ್ನೋದಿ ಸಂತೋಷಿಸಿದ ಅನೇಕ ದೊಡ್ಡ ಮನುಷ್ಯರ ಪ್ರೋತ್ಸಾಹದ ಮೇಲೆ ಈ ಕನ್ನಡ ಪ್ರತಿಯನ್ನು ಹೊರಪಡಿಸಿದೆ.

ಅದರ ಸಂಪುಟ ೨ ಮತ್ತು ೧೧ನೇಯ ನವಂಬರ ೧೯೨೪ ಸಂಚಿಕೆಯಲ್ಲಿ ಕಾಣಿಸಿರುವ ವಿಷಯಗಳು.

ಮುಖಚಿತ್ರ:—ಪರ್ವತವಾಸಿನಿಯಾದ ಒಬ್ಬ ರೂಪವತಿ.
ಶ್ವಾಸಕ್ರಮ ಅಥವಾ ಪ್ರಾಣಾಯಾಮ.
ಹುಚ್ಚೆಸೇಹಣ್ಣಿನ ಆಹಾರಗುಣಗಳು ಮತ್ತು ಔಷಧಗುಣಗಳು.
ಕಾಲುನಡೆಯೇ ಉತ್ತಮವಾದ ವ್ಯಾಯಾಮವು.
ಜೇನಿನಲ್ಲಿರುವ ಗುಣಗಳು.
ಹಲ್ಲುಗಳ ರಚನೆ, ಪ್ರಯೋಜನ, ಕೆಲಸ ಮುಂತಾದವು.
ಮದ್ಯಪಾನಕಗಳಿಂದ ಆರೋಗ್ಯಕ್ಕೆ ಉಂಟಾಗತಕ್ಕ ಹಾನಿ.
ಅಂಗಸಾಧನೆ ಮತ್ತು ಬುದ್ಧಿವ್ಯವಸಾಯ (ವಿದ್ಯಾಭ್ಯಾಸ).
ಗಾಯಗಳು ಮತ್ತು ಉಳುಕು ಮುಂತಾದವು; ಅವುಗಳ ಚಿಕಿತ್ಸೆ.
ನವನಾಗರಿಕ ಪ್ರಪಂಚಕ್ಕೆ ಸಹಜವಾದ ಮೂರು ಕೆಡುಕುಗಳು.
ಒಬ್ಬ ಉಪವಾಸಿಯ ಅನುಭವ.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವುವು. ಆರೋಗ್ಯಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ ರೂ. ೧—೮—೦; ಬಿಡುಪತ್ರಿಕೆ ಒಂದಕ್ಕೆ ರೂ. ೦—೨—೦. ಹಿಂದಿನ ಸಂಚಿಕೆಗಳು ಕೂಡ ದೊರಿಯುವವು.

ಚಂದಾದಾರರಾಗುವವರು ವಿ. ಪಿ. ಮೂಲಕವಾಗಿ ತರಿಸಿಕೊಳ್ಳುವುದಕ್ಕಿಂತಲೂ ಹಣವನ್ನು ಮುಂಗಡವಾಗಿ ಕಳುಹಿಸುವುದು ಲಾಭಕರ. ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು ‘ಆರೋಗ್ಯ ಚಂದ್ರಿಕೆ’ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು.

ಪತ್ರವ್ಯವಹಾರಕ್ಕೆ: ‘ಆರೋಗ್ಯ ಚಂದ್ರಿಕೆ’
೩೨೩ ತಂಬುಚೆಟ್ಟಿ ಬೀದಿ, ಮದ್ರಾಸ್.

ತುಳು ಪಾಡ್ದನಗಳು.

ಬೊಬ್ಬರ್ಯ, ಕಲ್ಲುರ್ಟಿ–ಕಲ್ಕುಡ, ದೈಯ್ಯೊಂಗುಳು—ಕೋಡಕಿನಾರ್, ಮುಂಡತ್ತಾಯ ಪ್ರತಿ ಒಂದಕ್ಕೆ 2 ಆಣೆ. 11¼ ಆಣೆ ಟಪ್ಪಾಲು ಚೀಟು ಕಳಹಿಸಿದರೆ 5 ಪುಸ್ತಕಗಳು ಕೂಡಲೇ ಕಳುಹಿಸಲ್ಪಡುವವು.

ವಿಳಾಸ: ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಸಾರಸ್ವತ.

ಕನ್ನಡ ಮತ್ತು ಕೊಂಕಣಿ ಭಾಷೆಗಳಲ್ಲಿ ಕಳೆದ ವಿಜಯ ದಶಮಿ ದಿನದಿಂದ ಪ್ರತಿ ದಶಮಿಗೆ ಹೊರಡುವ ಪತ್ರಿಕೆ.

ವಿ. ಎಸ್. ಕಾಮತ್,
ಮೂಲ್ಕಿ ವಾಮನ ಕುಡುವ } ಸಂಪಾದಕರು.

ಮಠಸಂಸ್ಥೆ ಮತ್ತು ಸಮಾಜಕ್ಕೆ ಸಂಬಂಧಪಟ್ಟ ಇತರ ಸಂಸ್ಥೆಗಳ ಸುಸಂಘಟನ.
ಸಮಾಜದೊಳಗೆ ಅನ್ಯೋನ್ಯ ಸಾಧನೆ.
ಸ್ತ್ರೀಸಮಾಜಕ್ಕೆ ಉಪಯುಕ್ತವಾದ ವಿಷಯಗಳ ನಿರೂಪಣ
ಮತಭಾವನೆಗಳ ಉಜ್ಜೀವನ ಇತ್ಯಾದಿ ಉದ್ದೇಶಗಳಿಂದ ಈ ಪತ್ರಿಕೆಯು ಹೊರಡಿಸಲ್ಪಡುವುದು. ಸಾರಸ್ವತ ಸಮಾಜವು ಇದಕ್ಕೆ ಪ್ರೋತ್ಸಾಹವನ್ನೀಯಬೇಕಾಗಿ ಪ್ರಾರ್ಥನೆ.

ಚಂದಾಹಣ ಅಂಚೆವೆಚ್ಚ ಕೂಡಾ ರೂ. ೧—೪—೦. ಪೋಷಕರು ರೂ. ೧೦—೦—೦. ಸಹಾಯಕರು ರೂ. ೫—೦—೦. ಮಾದರಿ ಸಂಚಿಕೆಯನ್ನು ಟಪ್ಪಾಲು ಖರ್ಚಿಗಾಗಿ ಅರ್ಧಾಣೆ ಸ್ಟ್ಯಾಂಪು ಕಳುಹಿಸುವವರಿಗೆ ಉಚಿತವಾಗಿ ಕಳುಹಿಸುವೆವು.

ಕನ್ನಡ ನಾಡಿನಲ್ಲಿ ಪ್ರತಿ ಕಡೆಯಲ್ಲಿಯೂ ಬಾತಮಿದಾರರು ಬೇಕು.

ಎಲ್ಲಾ ಪತ್ರವ್ಯವಹಾರಗಳನ್ನು ಕೆಳಗಿನ ವಿಳಾಸಕ್ಕೆ ನಡೆಸಬೇಕು.

ಯು. ನಾರಾಯಣನಾಯಕ್ಕ, ಕಾರ್ಯದರ್ಶಿ,
ಸಾರಸ್ವತ, ಉಡುಪಿ.

The Canara Bank Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. | 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
Authorised and fully paid up Capital Rs. 300,000—0—0 | ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ಕೆತ್ತ ಮೂಲಧನವು ರೂ. 300,000—0—0
Reserve and other sinking Funds „ 259,000—0—0 | ಕ್ಷೇಮನಿಧಿ ಮತ್ತು ಇತರ ಫಂಡುಗಳು 259,000—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರಿಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1925.
K. Venkat Rao,
Secretary

‘ಸಾರಸ್ವತಾಸವ.’

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ಒಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ, ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಿಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ಒಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲೂಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೫೦ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ಒಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೨೫ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲ ಪಂಡಿತರು,

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಪ್ಪ, ಸೋಡಾ ಫಾಕ್ಟರಿ,
ಮಂಗಳೂರು ಟವನಿಗೆ ಸಮೀಪ.

ವಿದ್ಯಾವಾಚಸ್ಪತಿ
ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ
“ಸಂಕ್ಷೇಪಗೀತೆ”

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ್ಳ, ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠ ಸ್ಥಾನವನ್ನು ಹೊಂದಿದೆ ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೦. ಟಪ್ಪಾಲು ಖರ್ಚು ಕೂಡಿ ಆಣೆ ೧೧ನ್ನು ಮನಿಯಾರ್ಡರು ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ೨ರಕ್ಕಿಂತ ಜಾಸ್ತಿ ಖರ್ಚು ತಗಲುವುದು. ರಖಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.

ಪುಸ್ತಕ ದೊರಿಯುವ ವಿಳಾಸ:—
ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು. ಮತ್ತು ಕೆನರಿಸ್ ಮಿತ್ರಸ್ ಬುಕ್ ಎಂಡ್ ಟ್ರಾಕ್ಟ ಡಿಪೋಜಿಟರಿ,
ಮಂಗಳೂರು.

ಕನ್ನಡಿಗರೆ! ವಸಂತ. ಕಚ್ಚೆರಿಯಿರಿ!

ಈಗಾಗಲೇ ಎರಡನೇ ಸಂಪುಟವು ಆರಂಭಿಸಲಿದೆ.
ಇತಿಹಾಸನಿಧಿ ಎಂದರೆ . . . . . ವಸಂತ
ಸಮಾಜಸುಧಾರಕನೆಂದರೆ . . . . . ವಸಂತ
ಕೈಗಾರಿಕೆಯ ಸಾಮ್ರಾಜ್ಯವೆಂದರೆ . . . . . ವಸಂತ
ಕರ್ನಾಟಕ ಭಾಷಾಸೇವಕನೆಂದರೆ . . . . . ವಸಂತ
ದೇಶವಿದೇಶ ಬಂಧುವೆಂದರೆ . . . . . ವಸಂತ
ಕಾದಂಬರಿಗಳ ಭಂಡಾರವೆಂದರೆ . . . . . ವಸಂತ
ಚಿತ್ರಾಕರ್ಷಕ ಚಿತ್ರಶಾಲೆಯೆಂದರೆ . . . . . ವಸಂತ
ದೇಶಭಕ್ತನೆಂದರೆ . . . . . ವಸಂತ

ಇಂತಹ ವಸಂತನು ಯಾರಿಗೆ ಬೇಕು,
ಯಾರಿಗೆ ಬೇಡ?

48 (ಕ್ರೌನ್ ¼ ಪತಿ ಸ್ಯಾಜಿನ) ಪುಟಗಳನ್ನು ಒಳಗೊಂಡ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3—4—0 ಮಾತ್ರ,
ವ್ಯವಸ್ಥಾಪಕರು,
ವಸಂತ ಕಾರ್ಯಾಲಯ,
ಕುಂದಾಪುರ, ದಕ್ಷಿಣ ಕನ್ನಡ.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀಕಾಶೀ, ಗಯಾ, ಪ್ರಯಾಗ, ಹರಿದ್ವಾರ ಬದರಿನಾರಾಯಣ ದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೆಟ್ಟಿಯಾಗಿ ಅವರ ಕಡೆಯಿಂದಅನುಭವ ತೆಗೆದು ಪ್ರತಿಯೊಂದು ಸಿದ್ಧಮಾಡಿಕೊಂಡು ಬರೆದಿರುವರು. ೧ನೇದು ಮಂತ್ರಪ್ರಕರಣದಲ್ಲಿ ಮಂತ್ರ ಪಠಣದಿಂದಲೂ, ಮಂತ್ರಪ್ರಯೋಗದಿಂದಲೂ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವೂ ಇದೆ. ೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ, ಆಸನದಡಿಯಲ್ಲಿ ರೂಪಾಯಿಗಳು ಹೊರಡುವಿಕೆ, ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ. ೩ನೇದು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು. ೪ನೇದು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಧಾತುಗಳ ಭಸ್ಮ ಸಹ, ಇದರಲ್ಲಿ ಉಂಟು, ಇದು ಪ್ರತಿಯೊಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷಧ ಮಾಡುವ ಕ್ರಮವನು ಚೆನ್ನಾಗಿ ಬರೆದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಳಾಸವು ತಿಳಿಸಿರುವರು. ೫ನೇದು ಯಂತ್ರ ಪ್ರಕರಣದಲ್ಲಿ ವಶೀಕರಣ ಗ್ರಹಪೀಡಾ ನಿವಾರಣ ಭೂತಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು, ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ ಇದ್ದ ಬಳಿಕ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷರೂ ವೈದ್ಯರೂ ಜೋತಿಷ್ಯರು, ಮಾಂತ್ರಿಕರು ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥ ಗ್ರಂಥವು ಯಾರು ಕಣ್ಣಿಂದ ನೋಡಿರಲಿಕ್ಕಿಲ್ಲ. ಪ್ರತಿಯೊಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆ ಕೂಡ ಕಡಿಮೆಮಾಡಿ ಇರುವವು. ೨—೮—೦ ಟಪ್ಪಾಲು ಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ ನಾಟಕ ಕಾವ್ಯ, ಕಥೆಗಳು, ಯಕ್ಷಗಾನ, ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ:—
ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ

ಜ್ಯೋತಿಷ್ಯ ಸಂಗ್ರಹ.

(1) ಬೃಹಜ್ಜಾತಕ ...
(2) ಉಮಾಮಹೇಶ್ವರ ಸಂವಾದ ಎಂಬ ಜ್ಯೋತಿಷ್ಯ ಕಾಲಚಕ್ರ
(3) ಕೇರಳ ಪ್ರಶ್ನೆ ...
(4) ಪ್ರಶ್ನೋತ್ತರ ರತ್ನಮಾಲಿಕಾ
(5) ನವನೀತಾರಿಷ್ಟವ
(6) ಷಟ್ಪಂಚಾಶತ್ ಗ್ರಂಥ
(7) ನಕ್ಷತ್ರ ಚೂಡಾಮಣಿ ಗ್ರಂಥ
(8) ಮುಹೂರ್ತಪದವೀಗ್ರಂಥ ...
(9) ಅಷ್ಟದಿಕ್ಪಾಲಕ ಮಂಗಲಾಷ್ಟಕಗಳು ...
(10) ಕಾಲನಿರ್ಣಯಭ್ಯೋಯಂ ಗ್ರಂಥ ...
(11) ಸವ್ಯಾಖ್ಯಾನ ಕಾಲಾಮೃತ...

— ಪ್ರಸಂಗದ ಪುಸ್ತಕಗಳು. —

(1) ಸೇತು ಬಂಧನ ...
(2) ವಸಿಷ್ಠ ಪುರಾಣ ...
(3) ಇಂದ್ರಜೀತು ಕಾಳಗ
(4) ಚಂಡಭೀಮ ...
(5) ಮೃದುನರಾಮನ ಚರಿತ್ರೆ ...
(6) ಭಾಮಿನಿ ಷಟ್ಪದಿ ಚೋರ ಕಥೆ
(7) ಕುಮಾರ ರಾಮನ ಕಥೆ ...
(8) ಕೃಷ್ಣದಾನಾಮೃತ
(9) ಶ್ರೀಕೃಷ್ಣ ಸತ್ಯಭಾಮಾ ಸಂವಾದ
(10) ಚಿತ್ರಕೇತು ರಾಜನ ಕಥೆ ...
(11) ಬಕಾಸುರ ವಧೆ ...
(12) ಬಾಣಾಸುರನ ಕಥೆ
(13) ರಂಭಾಶುಕ ಸಂವಾದ
(14) ರುಕ್ಮಿಣೀ ಪರಿಣಯ
(15) ರಾವಣೋದ್ಭವ ಯಕ್ಷಗಾನ
(16) ಸಭಾ ಲಕ್ಷಣವು ...
(17) ಶ್ರೀ ಕೃಷ್ಣದೀಪಾಶ್ವಮೇಧ ಕಥಾ
(18) ಚಂದ್ರಮೌಳಿ ಕಾಳಗ
(19) ಚಿತ್ರವಿಚಿತ್ರ ಕಾಳಗ
(20) ಯಕ್ಷಗಾನ ಸಾರಂಗಧರನ ಕಥೆ
(21) „ ಶನಿದೇವರ ಮಹಾತ್ಮೆ
(22) „ ಹರಿಶ್ಚಂದ್ರನ ಕಥೆ
(23) ಯಕ್ಷಗಾನ [illegible] ಕಥೆ
(24) „ ಚೋರ ಕಥೆ ...
(25) „ [illegible] ಕಥೆ
(26) „ ಗೋವಿನ ಚರಿತ್ರೆ
(27) „ ದುಶ್ಯಾಸನ ಕಥೆ
(28) „ ಸಾನಂದ ಗಣೇಶ್ವರ ಕಥೆ ...
(29) „ ಅಂಗದ ಸಾಧನ ...

— ಭಜನೆಯ ಪುಸ್ತಕಗಳು. —

(1) ಉಡುಪಿಕ್ಷೇತ್ರ ಮಹಾತ್ಮೆ
(2) ಹನುಮದ್ರಾಮಾಯಣ ...
(3) ಅಧ್ಯಾತ್ಮ ವಿಚಾರ ...
(4) ಭಕ್ತಿಮಹಿಮ ...
(5) ಪ್ರಬಂಧ ವಚನಾವಳಿ ...
(1) ಹರಿಕೀರ್ತನಾಮೃತಸಾರ
(2) ಹರಿನಾಮಾಮೃತಂ ...
(3) ರುಕ್ಮಿಣೀ ಕಲ್ಯಾಣ ...
(4) ಮಂಗಳ ಗೌರೀಹಾಡು ...
(5) ಉದ್ವಾಳೀಕನ ಹಾಡು ...
(6) ಯಕ್ಷಗಾನ ಗೀತೀ ಹಾಡು
(7) ಕನಕದಾಸ ಕಬೀರದಾಸರ ಕೀರ್ತನೆಗಳು
(8) ಬೀಗರ ಹಾಡು
(9) ಭಜನೆಯ ಪದಗಳು

— ಶಾಸ್ತ್ರೀಯ ಪುಸ್ತಕಗಳು. —

(1) ಸದಾಚಾರ ವಿವೇಚನೆ ...
(2) ಗೋಪಾಲಕೃಷ್ಣ ಗೋಕಲೆ
(3) ಶ್ರೀಕೃಷ್ಣ ಸೇವಾಮೃತಂ ...
(4) ಪಶ್ಚಾತ್ತಾಪ ಭಾಷ್ಪ ...
(5) ಶ್ರೀ ಶ್ರೀಮಹಾ ಭಾಗವತ
(6) ಉದ್ದಯನ ಚರಿತ್ರೆ ...
(7) ಮಧ್ವಾಚಾರ್ಯರು (ಶ್ರೀಮಾನ್) ...
(8) ಯತಿರಾಜವಂಶತಿ ...
(9) ಪರಮಾರ್ಥಶತಕಂ ...
(10) ಶ್ರೀಕೃಷ್ಣಸೇವಾಮೃತಂ ...
(11) ಭಕ್ತಿಸುಮಾಂಜಲಿ ...
(12) ಸತ್ಯರಾಜ ಪೂರ್ವದೇಶ ಯಾತ್ರೆಗಳು
(13) ಕಾಲನಿರ್ಣಯಾಖ್ಯಾನ ...

ಪುಸ್ತಕಗಳು ದೊರೆಯುವ ಸ್ಥಳ:— **ಶಾರದಾ ಛಾಪಖಾನೆ,**
ರಥ ಬೀದಿ, ಮಂಗಳೂರು.



—ಗೋಡೆಗೆ ತಗಲಿಸುವ
ಹೊಸ ನಮೂನೆಯ—
ಟಿಕ್—ಟಾಕ್

ಎಂಬ ಈ ಗಡಿಯಾರಗಳು ಜರ್ಮನೀ ದೇಶದಲ್ಲಿ ತಯಾರಿಸಿದ್ದು. ಇವು ಕಂಠಾರು ಘಂಟೆಯನ್ನು ತೋರಿಸುವವು. ಇವಕ್ಕೆ ಬೀಗ ಕೊಡಬೇಕಾದಿಲ್ಲ. ಇದರಲ್ಲಿ ಕಾಣುತ್ತಿರುವ ಗುಂಡನ್ನು ಮೇಲಕ್ಕೆ ಎಳೆದರೆ ಸಾಕು. ತನ್ನ ಷ್ಟಕ್ಕೆ ತಾನೇ ಟಿಕ್—ಟಾಕ್ ಎಂಬ ಶಬ್ದವನ್ನು ಮಾಡುತ್ತಾ ಸರಿಯಾದ ಕಾಲವನ್ನು ತೋರಿಸುವದು. ಇದು ನೋಡುವುದಕ್ಕೆ ಬಹು ಲಕ್ಷಣವಾಗಿರುವುದು.

ಕ್ರಯ 1ಕ್ಕೆ ರೂ. 3—0—0

ಪೀಟರ್ ವಾಚ್ ಕಂಪೆನಿ
ಪೋಸ್ಟ್ ಬಾಕ್ಸ್ ನಂ. 27, ಮದ್ರಾಸ್.



ADVERTISE IN
The Business Directory
OF INDIA, BURMA & CEYLON

A Comprehensive Directory of the various Business-men, Exporters and Importers, Firms, Factories, Mills, Manufacturers, Merchants and Industries of the principal Cities, Ports and Towns of India, Burma and Ceylon.

PUBLISHED ANNUALLY
Rates for Advertisements

¼ Page	Rs.	50.
2 in. Single Column	"	20.
1 in. Single Column	"	15.
Name in Bold Types	"	5.

Price per Copy Rs. 10.

PRINTERS & PUBLISHERS.
Business Directory Co.,
Kanara Press Buildings, MADRAS. E.
Telegrams: "KETHAKI" Phone 540

Just arrived! Look Sharp!

SCREW ELECTRIC TORCH LAMPS &
Pocket Electric Lamps
AVAILABLE
In different varieties, Mother of pearl lamps. Cycle lamps.
NICKEL PLATED WITH SIDE LANCE.
Hammered Brand, with Powerful Bulls-eye lance,

The Mangalore
Trading Association,
Car Street, MANGALORE

ಮನುಷ್ಯರಿಗೆ ಮತಿಸ್ಥಿತಿಗಿಂತಲೂ ಹೆಚ್ಚಾದ್ದು ಯಾವುದೂ ಇಲ್ಲ.

ಜನ್ಮದಲ್ಲಿ ಕಷ್ಟಸುಖಗಳು ಅನುಭವಿಸುವುದರಲ್ಲಿ ಅಳಿಜಯವಿಲ್ಲದೇ ಭಸ್ಮಹೋಗುವುದಕ್ಕೆ ಮುಖ್ಯ ಸಾಧನ ಮತಿಸ್ಥಿತಿಯೇ ಕಾರಣವೆಂದು ಹೇಳಬಹುದು.

ಆದರೆ ಪ್ರಸ್ತುತ ಕಾಲದ ಅನುಭವಿಸುವ ಚಪಲಚಿತ್ತದಲ್ಲಿ ಮತಿಸ್ಥಿತಿ ಉಂಟಾಗುವುದು ಸಾಧ್ಯ ಹೇಗೆ? ನಿಮಗೆ ಯಾವವಿಧವಾದ ಚಪಲಚಿತ್ತವಿದ್ದಾಗ್ಯೂ, ನಮ್ಮ ಆತಂಕನಿಗ್ರಹ ಮಾತ್ರೆಗಳನ್ನು ಉಪಯೋಗಿಸಿರಿ. ಈ ಮಾತ್ರೆಗಳೇ ತನ್ನ ಮೆದುಳಲ್ಲಿರುವ ದುರ್ಬಲವನ್ನು ನಿವಾರಿಸಿ, ದೃಢಚಿತ್ತವನ್ನುಂಟುಮಾಡುವುದು.

ಈ 32 ಮಾತ್ರೆಗಳುಳ್ಳ ಡಬ್ಬಿ ಒಂದಕ್ಕೆ ರೂಪಾಯಿ ಒಂದು ಮಾತ್ರ.

ಹಿಂದೂದೇಶದಲ್ಲಿಯೂ ಮತ್ತು ಇತರ ದೇಶಗಳಲ್ಲಿಯೂ ಪ್ರತಿಯೊಂದು ಗೃಹದಲ್ಲಿ ಪ್ರಯೋಜನಕರವಾದ ಒಂದು ಪುಸ್ತಕ ಇರುವುದು. ನಿಮಗೆ ಗೊತ್ತುಂಟೋ? ಆ ಪುಸ್ತಕದ ಹೆಸರೇ

"ಕಾಮಶಾಸ್ತ್ರ."

ನೀವು ಇದುವರೆಗೂ ಆ ಪುಸ್ತಕದಲ್ಲಿ ವಿವರಿಸಿದ ಘನ ವಿಷಯಗಳನ್ನು ನೋಡದೇ ಇದ್ದಪಕ್ಷಕ್ಕೆ, ಈ ದಿನ ನಮಗೆ ಒಂದು ಕಾರ್ಡು ಬರೆದರೆ ಪೋಸ್ಟು ಚಾರ್ಜು ನಿಮಗಿಲ್ಲದೇನೇ, ಆ ಪುಸ್ತಕವನ್ನು ಕಳುಹಿಸುತ್ತೇವೆ.

ಆತಂಕನಿಗ್ರಹ ಔಷಧಾಲಯ,
ನಂಬ್ರ 23, ಬ್ರಾಡ್ವೆ, ಮದರಾಸು.

Agents:—
Messrs RAPHAEL & Co.,
MANGALORE.

ಹೊಸಗ್ರಂಥಗಳು!! ಬೇಗನೇ ತರಿಸಿಕೊಳ್ಳಿರಿ!!

ಕೋಕ ಶಾಸ್ತ್ರವು.

ರಸಿಕ ವಾಚಕ ಮಹಾಶಯರೇ,

ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ, ಸಂಪಾದಿಸಿ, ಅದರಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನಷ್ಟೇ ಶೋಧ ಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿಣಿ, ಸ್ತ್ರೀಯ ಇದರಂತೆ ಪುರುಷರಲ್ಲಿಯ ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನು, ಜನನೇಂದ್ರಿಯಾದಿಗಳ ವರ್ಣನೆಯನ್ನೂ, [illegible], ಗರ್ಭಾಧಾನದ ವ್ಯಾಖ್ಯೆಯನ್ನೂ, ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನು ನಪುಂಸಕತ್ವ ವಂಧ್ಯಾ ದೋಷಗಳ ಚಿಕಿತ್ಸೆಯನ್ನೂ, ಸ್ತ್ರೀಯರ ಗೂಢ ರಹಸ್ಯವನ್ನೂ, ದಂಪತಿ ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನೂ ಇಂಥ ಎಷ್ಟೋ ವಿಧವಾದ ವಿಷಯಗಳನ್ನು ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಅದ್ದರಿಂದ ಈ ಗ್ರಂಥವನ್ನು ಒಮ್ಮೆ ಅರಿತೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ.

ಇದರ ಬೆಲೆ ೧—೮—೦, ಟಪ್ಪಾಲು ಹಾಸಲು ೦—೪—೦.

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ [illegible] ಪ್ರೆಸ್, ಬಳ್ಳಾರಿ

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ
ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ
ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಆರ್ಥಿಕಾಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, [illegible] ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ಯಾವಂತರೂ ತಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. [illegible] ಆಗುವ ಸರಕಾರಿ ಆರ್ಡರುಗಳೂ, [illegible] ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನು [illegible] ಪ್ರತಿ ವಾರವೂ ಪ್ರಕಟಿಸಲ್ಪಡುವುದು. [illegible]

ವಾರ್ಷಿಕ ಚಂದಾ ವಿವರ.

[illegible]	ರೂ. 3—0—0
[illegible], ಟಪ್ಪಾಲು ಹಾಸಲು ಸೇರಿ	„ 2—8—0.
„ [illegible]	„ 1—8—0.

ಸರಕಾರದಲ್ಲಿಯೂ [illegible] ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕಾಗದ ಬರೆದು [illegible]

ಬಿ. ಹನುಮಂತಯ್ಯಗೌಡ,
ಅರ್ಥಸಾಧಕ ಪತ್ರಿಕೆ,
ಅರಳೇ ಪೇಟೆ, ಬೆಂಗಳೂರು ಸಿಟಿ

Edited, Printed & Published by V. S. Kamath at the M. T. A. SHARADA PRESS, MANGALORE.

Registered: No. M. 498.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ | ನ ಭೇಜಿರೇ ಭೀಮವಿಷೇಣ ಭೀತಿಮ್ || ಸುಧಾಂ ವಿನಾ ನ ಪ್ರಯಯುರ್ವಿರಾಮಂ | ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ || ೧ ||
ದೊರೆಯಲನುಪಮರತ್ನಗಳು ಸಾ | ಗರವ ಮಥಿಸಲು ಸುರರಿಗದರಿಂ | ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ||
ಗರಲಕವರಂಜಿದರೆ | ಸುಧೆಯನು | ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು || ೧ ||

ಪುಸ್ತಕ ೧೯. ಮಂಗಳೂರು, ತಾರೀಕು ೧೭ನೇ ಶುಕ್ರವಾರ ಜುಲಾಯಿ ೧೯೨೫. ಸಂಚಿಕೆ ೩೦.

The Canara Banking Corporation, Udipi, Ltd.

Head Office:—	Branch:—
Udipi	Coondapoor
Paidup Capital	1,66,165—9—11
Reserve etc	64,700—0—0

Season Deposits

Carrying Special rate of 7% up to 15th June 1925 only.

Further Particulars on Application.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಉಡುಪಿ. ಲಿಮಿಟೆಡ್.

ಹೆಡ್ ಆಫೀಸು:—ಉಡುಪಿ	ಶಾಖೆ:—ಕುಂದಾಪುರ.
ವಸೂಲಾದ ಮೂಲಧನ	1,66,165—9—11
ರಿಜರ್ವ ವಗೈರೆ ಫಂಡುಗಳು	64,700—0—0

ತಾ. 15—6—1925ರವರೆಗೆ ಮಾತ್ರ ಸಾಲಿಯಾನ್ ಸೇಕಡಾ 7ರ ದರದ ಬಡ್ಡಿಯ ಮೇಲೆ ಮುಸುಂ ಠೇವಣಾತಿಗಳನ್ನು ಅಂಗೀಕರಿಸೋಣಾಗುತ್ತದೆ.

ಹೆಚ್ಚಿನ ಮಾಹಿತಿಗೆ ಬರೆಕೊಳ್ಳಿರಿ.

Office of the Corporation, Udipi, 1-5-'25 } N. Ananda Rao, *Secretary*

Wanted Agents
FOR
Every District in South India

For Pushing Sales of Our Calenders, Xmas and New Year Cards, Blotters, Pictures and Picture Post Cards, at wholesale rates. Deposit of Rs. 100—0—0 Essential.

Apply to:—
The South Indian Advertsing Agency,
13, *Kilary Road,*
BANGALORE CITY.

ಶುದ್ಧ ರೋಮದ ಧಾವಳಿಗಳು.

1 ಮಳ ಉದ್ದ 1¼ ಮಳ ಅಗಲ ರೂ. 1¼ರಿಂದ 2 ವರೆಗೆ, 5 ಮಳ ಉದ್ದ 1½ ಮಳ ಅಗಲ ರೂ. 1½ ರಿಂದ 5 ವರೆಗೆ, 6 ಮಳ ಉದ್ದ 1½ ಮಳ ಅಗಲ ರೂ. 2½ರಿಂದ 6 ವರೆಗೆ, 8 ಮಳ ಉದ್ದ 2 ಮಳ ಅಗಲ ರೂ. 3½ರಿಂದ 10 ವರೆಗೆ, 12 ಮಳ ಉದ್ದ 2½ ಮಳ ಅಗಲ ರೂ. 6ರಿಂದ 12 ವರೆಗೆ, 16 ಮಳ ಉದ್ದ 2½ ಮಳ ಅಗಲ ರೂ. 9 ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಜರ್ದ್ದೋಸ್ ರೇಶ್ಮೆ ಪಂಚೆಗಳು, ಸಾಮುರಿಗಳು, ಜರಿ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, [illegible] ಉತ್ತಮ ಜಾತಿಯ ಅಟಿದ ಸಾಮಾನುಗಳು, [illegible] ಉಂಗುರಗಳು ಮತ್ತು ಇನ್ನು ಅನೇಕ ಸಾಮಾನುಗಳು ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುವು. ಕ್ಯಾಟಲಾಗ್ ಇನಾಂ.

ವಿಳಾಸ—
ಶಿರೋಮಣಿ ಯು. ನಾರಾಯಣಾಚಾರ್ಯ
ಮತ್ತು ಕಂಪೆನಿ, [illegible]

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ.

450 ಪುಟಗಳು ಎಮ್. ಗಣಪತಿರಾವ್ ಐಗಳ್ ಇವರಿಂದ ರಚಿತವಾದದ್ದು. ಕ್ರಯ ರೂ. 2-4-0

ಮಾರಾಟಕ್ಕೆ ಸಿದ್ಧವಾಗಿವೆ — ತುಳು ಪಾಡ್ದನಗಳು — ಮಾರಾಟಕ್ಕೆ ಸಿದ್ಧವಾಗಿವೆ.

ದೈಯ್ಯೊಂಗುಳು, ಕಲ್ಲುರ್ಟಿ—ಕಲ್ಕುಡ, ಕಣಂದೂರು ದೈಯ್ಯೊಂಗುಳು, ಮುಂಡತ್ತಾಯ, ದೊಮ್ಮ ಯರ್.

ಸುಲಭ ದರಗಳು — ಶಾಲಾ ಪುಸ್ತಕಗಳು — ರಖಂ ಕೊಂಡುಕೊಳ್ಳುವವರಿಗೆ ಯೋಗ್ಯ ಡಿಸ್ಕೌಂಟ್.

ಅಜ್ಜಿಕಥೆಗಳು:—ಮೂರು ಕರಡಿಗಳು; ಜೇನುಸತ್ತು ಕಾಗೆ ಬಡವಾಯಿತು; ಅಗಗಣೆ ಮುದ್ದೆ; ಇಲಿಗಳ ಶಕ್ತಿ ಕೈ; ಅಂಗಳ ಮುಗ್ಗು; ಸಿಗದಿ ಯಸಳೆ ಒಡೆಗಲಿಲ್ಲ; ಗುಡುಗುಡು ಗುಮ್ಮಟ ದೇವರು; ಮೆಣಸಿನ ಕಾಳಪ್ಪ; ಒಬ್ಬನ ಓಟ; ಹೊಸ ಕನ್ನಡ ಪುಸ್ತಕ ಭಾಗ ೧; ಹೊಸ ಕನ್ನಡ ಪುಸ್ತಕ ಭಾಗ ೨; ಕನ್ನಡ ಪದ್ಯಗಳು; ಮಗ್ಗಿ ಪುಸ್ತಕ; ಅಜಿತಕುಮಾರ; ಪದ್ಯ ರತ್ನಾವಳಿ. ಎಕ್ಸರ್‌ಸೈಜ್ ಮತ್ತು ನೋಟು ಪುಸ್ತಕಗಳು, ಕಾಪಿ ಪುಸ್ತಕಗಳು, ಡ್ರಾಯಿಂಗ್ ಪುಸ್ತಕಗಳು

ಇತರ ಪುಸ್ತಕಗಳು:—ಸಂಕ್ಷೇಪಗೀತೆ, ಸೇತುಭಂಗ, ಹಿಂದೂ ವ್ರತವಿವೇಕ, ಚಂದ್ರಗುಪ್ತ ಚಕ್ರವರ್ತಿ, ಶ್ರೀ ಕೃಷ್ಣಸಂಧಾನ, ಪದ್ಯಪಾಠಗಳು, ಹರಿಕಥಾ ಮೃತಸಾರ ಹರಿನಾಮಸಂಕೀರ್ತನೆ ಸುಧಾಂಮೃತ ಪದ್ಯಗಳು. ಬೆಂಕಿಪೆಟ್ಟಿಗೆ ತಯಾರಿಸುವ ವಿಧಾನ, ಸಾಬೂನು ತಯಾರಿಸುವ ವಿಧಾನ, ಸ್ವರಾಜ್ಯ ಭಕ್ತೋಲ್ಲಾಸ, ಚತಕಗೀತೆ, ಕೊಂಕಣಿ ಭಾಷೆಯಲ್ಲಿ ಚಂದ್ರಹಾಸ ನಾಟಕ, ಪ್ರಹಲ್ಲಾದ ಚರಿತ್ರೆ ನಾಟಕ, ಕನ್ನಡ ಮೃಚ್ಛಕಟಿಕ ನಾಟಕ, ಚಂದ್ರಹಾಸಾಭ್ಯುದಯ ನಾಟಕ, ಕೋವಿಲನ್ ಚರಿತ್ರೆ ನಾಟಕ, ಮಾದರಿ ಉಪನ್ಯಾಸ ಭಾಗ ೧, ೨, ಮತ್ತು ೩.

Best Indian Pain Balm
Amrutanjan B
BOMBAY.

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು.

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ, ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 2 ಆಣೆ.

ಅಮೃತಾಂಜನ ಡಿಪೊ,

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

109 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

— ರಥೋತ್ಸವ, ವಿವಾಹ ಉಪನಯನಗಳ ಸಮಯ —
ಸರ್ವರಿಗೂ ಉಡಿಗೆ ತೊಡಿಗೆಗಳು ಬೇಕಾಗುವ ಸಂದರ್ಭ.

ಯಾರು, ಯಾವುದನ್ನು ಎಲ್ಲಿ ಪಡೆಯಬೇಕೆಂಬ ಶಂಕೆಯಿಂದ ವಿಳಂಬ ಮಾಡಬೇಡಿರಿ. ಉಡಿಗೆತೊಡಿಗೆಗಳನ್ನು ಜೂನಾಯಿಸಿ ನಿಮಗೆ ಬೇಕಾದ ಯಥಾರ್ಥ ಮಾಹಿತಿಯನ್ನು ಕಳೆದ ಹತ್ತಿಪ್ಪತ್ತು ವರುಷಗಳಿಂದ ಪಡದು ನಮ್ಮಲ್ಲಿಯ ವ್ಯಾಪಾರವು ಗಿರಾಕಿಗಳಿಗೆ ಸರ್ವ ರೀತಿಯಿಂದಲೂ ಲಾಭಕರವಾಗಿ ಪರಿಣಮಿಸುವಂತೆ ನಮ್ಮ ಜವಳಿ ಸಂಗ್ರಹವನ್ನು ಮಾಡಿರುತ್ತೇವೆ.

ಗುರ್ಪುರ್ಕರ್ ಬ್ರದರ್ಸ್, ರಥಬೀದಿ, ಮಂಗಳೂರು.

ಹೆಡ್ ಆಫೀಸು:—ರಥಬೀದಿ—(ಮೊದಲು ಸುಬೇರ ನಾಗಪ್ಪನಾಯಕ್, ಎಂಡ್ ಕೊ, ಇದ್ದಲ್ಲಿ; ಅಜೆಜುದ್ದೀನ್ ರಸ್ತೆಗೆ ತಿರುಗುವಲ್ಲಿ) ಮಂಗಳೂರು.

ಬ್ರೇಂಚ್ ಆಫೀಸು:—ರಥಬೀದಿ—(ಹಳೇ ತಾಲೂಕು ಕಚೇರಿಯ ಪಟಾರಕ್ಕೆ ಸಮೀಪವಿರುವ ಮಳಿಗೆ) ಮಂಗಳೂರು.

ಈ ದೇಶದ ಪ್ರಖ್ಯಾತಪಟ್ಟ ನೇಯಿಗೆಯ ಕೇಂದ್ರಸ್ಥಳಗಳಾದ—ಬನಾರಿಸ್, ಪೂನಾ, ಅಹಮ್ಮದಾಬಾದ್, ಸೂರತ್, ಬೆಂಗಳೂರು, ಧರ್ಮಾವರಮ್, ಕಂಜೀವರಮ್, ಕೊಯಮುತ್ತೂರು, ಮಧುರೆ, ತಂಜಾವೂರು, ಕುಂಭಕೋಣ, ಆರ್ಣಿ, [illegible], ಹುಬ್ಬಳ್ಳಿ, ಇಳಕಲ್, ಗದಗ, ಮದ್ರಾಸು ಈ ಪ್ರಾಂತ್ಯಗಳಲ್ಲಿ ತಯ್ಯಾರಾದ

ಜರಿಸೀರೆಗಳು, ಮದ್ವಸ್ತ್ರ, ಜರಿಶಾಲು, ಪಟ್ಟೆ, ರೇಶ್ಮೆ ಸೀರೆಗಳು, [illegible] ಸೀರೆಗಳು, [illegible] ರೇಶ್ಮೆ ಸೀರೆಗಳು, ಜರಿ [illegible] ಸೀರೆಗಳು, ರೇಶ್ಮೆ ಮುಡಿಗಳು, ನಿತ್ಯ ಉಪಯೋಗದ ಸೀರೆಗಳು [illegible], ಕರ್ನಾಟಕ ಮಿಲ್ಸ್‌ಗಳ ವ ಇತರ ಮಿಲ್ಸ್‌ಗಳ [illegible] ಕೈರಾಟೆಯಲ್ಲಿ ತಯಾರಿಸಿದ ನೂಲಿನಿಂದ ಮಾಡಿದ—

[illegible] ಶರ್ಟಿಂಗ್, [illegible] ಕೋಟಿಂಗ್, [illegible] ಟೋಪಿ, [illegible] ಶಾಲು, ಅಂಗವಸ್ತ್ರ, [illegible]— ಮುಸಲ್ಮಾನರಿಗೆ ಬೇಕಾದ ನಮೂನೆಯ [illegible] ವಗೈರೆ—

ಎಲ್ಲಾ ಸಂಗ್ರಹವನ್ನೂ ನಮ್ಮ [illegible] ಸಂಗ್ರಹಿಸಿ ಇಟ್ಟಿರುತ್ತಾರೆ.

[illegible] ಸೇಕಡಾ 10%, ರೂ. 350 ರಿಂದ 1000ಕ್ಕೆ 12½% [illegible]

ಆರ್. ಮಾರ್ಟಿನ್ನರ ಲಪ್ತಾ ಎಣ್ಣೆ

ಇದರ ಸುವಾಸನೆಯು, (ಪರಿಮಳವು) ಬಹಳ ಅಂದವಾಗಿಯೂ ಇರುವುದಲ್ಲದೆ, ಬಹಳ ಹೊತ್ತಿನ ವರೆಗೂ ಇರತ್ತದೆ. ಈ ಎಣ್ಣೆಯನ್ನು ತಲೆಗೆ ಹಾಕಿಕೊಳ್ಳುವದರಿಂದ ಕಣ್ಣುಗಳು ತಂಪಾಗಿಯೂ, ಶುಭ್ರವಾಗಿಯೂ, ಆಗವುದಲ್ಲದೆ, ತುರುಳು ಚೆನ್ನಾಗಿ ಬೆಳೆಯುತ್ತದೆ. ಇದನ್ನು ಪ್ರತಿದಿವಸವೂ ಉಪಯೋಗಿಸುವುದರಿಂದ ಕೂದಲುಗಳು ಕಪ್ಪಾಗಿ ಹೊಳೆಯುವಂತೆ ಮಾಡುತ್ತದೆ. ಕೂದಲುಗಳಲ್ಲಿರುವ ಹೇನುಗಳು ಮುಂತಾದುವು ನಾಶವಾಗಿ ತಲೆಬುರುಡೆಯನ್ನು ಚೆನ್ನಾಗಿ ಬೆಳೆಯುವಂತೆ ಮಾಡುತ್ತದೆ. ಗಡ್ಡ ಮತ್ತು ಮೀಸೆಗಳು ಸಹ ಬೆಳೆಯುತ್ತವೆ. ಇದನ್ನು ಉಪಯೋಗಿಸಿದ ಜನರು ಇದಕ್ಕಿಂತ ಉತ್ತಮವಾದ ಎಣ್ಣೆಯು ಬೇರೆ ಇಲ್ಲವೆಂದು ಹೇಳಿರುತ್ತಾರೆ.

ಕ್ರಯ ಬಾಟಿ 1ಕ್ಕೆ ರೂ. 1-4-0.

ಆರ್ ಮಾರ್ಟಿನ್ನರ ಗಿಟೋಡಯಿನ್.

ಗಂಡಸರಿಗೂ ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ, ಅಥವಾ ಹೊಸತಾಗಿದ್ದರೂ ಸರಿ. ಬಿಳುಪು ಹೋಗುವುದು ಉರಿಯುವುದು, ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೆ ಉರಿ ಮೂತ್ರವನ್ನು ನಿಲ್ಲಿಸಿ, ಮೂತ್ರವು ಬಿಳುಪಾಗಿ ನಿರ್ಮಲವಾಗುವುದಲ್ಲದೆ ರೋಗದ ಪಟ್ಟನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ.

ಬೆಲೆ ಸೀಸೆ 1ಕ್ಕೆ ರೂ. 2—0—0.

ಆರ್. ಮಾರ್ಟಿನ್ನರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮು ಬಲು ಶ್ವಾಸ, ಸೀತ, ನೆಗಡಿ, ಗಂಟಲುನೋವು. ಎದೆ ನೋವುಗಳನ್ನೂ ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನಮಾಡಿ ಪರೀಕ್ಷಿಸಿ ನೋಡಿರಿ. ಅನಂತರ ಬೇರೆ ಯಾವ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮುಗಳೂ ವಾಸಿಯಾಗಿಯೂ, ಎದೆಗೆ ಬಲಕೊಟ್ಟು, ಮೇಲ್ಕಂಡ ರೋಗಗಳು ತಲೆಯಿಕ್ಕದಂತೆ ಮಾಡುತ್ತದೆ

ವಿಳಾಸ:—ಆರ್. ಡಿ. ಕಟ್ಲೆ ಮತ್ತು ಕಂಪೆನಿ,
ನಂಬ್ರು ಬಿ. ಫ್ರಿಯರ್ ರೋಡ್,
ಸಾಂಜ ವರ್ತಮಾನ ಪ್ರೆಸ್,
ಟೋಡಿವಾಲಾ ಬಿಲ್ಡಿಂಗ ಎದುರುಗಡೆ, ಫೋರ್ಟ ಮುಂಬಯಿ.
R. D. Kately & Co.
No. B. Frere Road,
Opposit Sanjvertaman Press,
Todivala Building, FORT BOMBAY

ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ಮೂರನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್. ಗಣಪತಿರಾವ್ ಐಗಳ್—ಗ್ರಂಥಕರ್ತರು.
ಮನೋರಂಜಕ ಚಿತ್ರಗಳೂ ಇವೆ.

ಇದರಲ್ಲಿ ಸಾವಿತ್ರಿ, ಶಕುಂತಳಾ, ಕೃಷ್ಣಾಕುಮಾರಿ ಪದ್ಮಿನಿ, ಜೋನ್ ಒಫ್ ಆರ್ಕ, ಫ್ಲಾರೆನ್ಸನಾಯಿಟಿಂಗೇಲ ಪರಶುರಾಮ, ಭೂತಾಳಪಾಂಡ್ಯ, ಕಾರ್ಕಳ ಗೋಮಟೇಶ್ವರ ಮತ್ತು ಭೈರವರಾಜ, ಮೂಡಬಿದ್ರೆಯ ಚೌಟರು, ನಂದಾವರ ಬಂಗರು, ಕಾರ್ಕಳ ರಾಮಸಮುದ್ರ ಮತ್ತು ರಾಮನಾಥ ಒಡೆಯರ ಅಕೆಕಟ್ಟು, ಗುರುಪುರ ಜಂಗಮ ಮಠ, ಕಲ್ಯಾಣಪ್ಪನ ಕಾಟಕಾಯಿ, ಗುರುವಾಯನಕೆರೆ, ಜಮಾಲಾಬಾದು ಕೋಟೆ, ಸುಲ್ತಾನಬತ್ತೇರಿ, ಈದಗಾಪ್ರಾರ್ಥನಾಮಂದಿರ, ಸೇಂಟಮೇರಿ ದ್ವೀಪಗಳು ಮತ್ತು ದರಿಯಾಬಾದರಗಡ, ಕೊರಗರು, ಕೊಡಗರು, ತೋಡರು, ರಜಪೂತರು, ಕಂದಾರಿಗಳು ಛುಬಾರ್ ಜನರು, ಅರಬಿಯರು. ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ಮೂರನೇ ದರ್ಜೆಯ ಮಕ್ಕಳಿಗೆ ಉಪಯುಕ್ತವಾಗಿದೆ. ಕ್ರಯ 6 ಆಣೆ.

ಪುಸ್ತಕ ದೊರಕುವ ವಿಳಾಸ:—

ಶಾರದಾ ಛಾಪಖಾನೆ,
ಮಂಗಳೂರು.

ಗಣಪತಿರಾವ್, ಐಗಳ್,
ಮಂಜೇಶ್ವರ.

ಡಾಕ್ಟರುಗಳು ಭಿನ್ನಾಭಿಪ್ರಾಯಪಡುವಾಗ್ಯೆ ತೀರ್ಮಾನಿಸುವದು ಯಾರು?

ಅಂಥಾ ಸಂದರ್ಭಗಳಲ್ಲಿ ಡೆಂಗ್ಯು ಮುಂತಾದ ಜ್ವರಗಳನ್ನು ನಿವಾರಿಸುವಂಥಾ "ಬಾಟ್ಲಿವಾಲರ ಏಗ್ಯುಮಿಕ್ಶ್ಚರ್"ನ್ನು ಸರಾಗವಾಗಿಯೂ, ಮತ್ತು ಜ್ವರಗಳನ್ನು ಖಂಡಿತವಾಗಿ ನಿಲ್ಲಿಸುವಂಥಾದ್ದೂ, ಎಲ್ಲಾ ತರದ ತಲೆನೋವುಗಳನ್ನು ಹೋಗಲಾಡಿಸುವಂಥಾದ್ದೂ ಆದ "ಬಾಟ್ಲಿವಾಲರ ಏಗ್ಯುಪಿಲ್ಸ್" ಇದನ್ನು ಉಪಯೋಗಿಸಿರಿ.

ಐ. ಎಮ್. ಎಸ್. ಡಾಕ್ಟರುಗಳಿಂದ ಶಿಫಾರಸು ಮಾಡಲ್ಪಟ್ಟಿದ್ದು. ಇದರ ಉಪಯೋಗದಿಂದ ಹೃದಯದ ಮೇಲೆ ಯಾವದೊಂದೂ ಬಾಧಕವಿಲ್ಲ. ಅರ್ಧ ಶತಮಾನದಿಂದ ಹಿಂದುಸ್ಥಾನ, ಬರ್ಮಾ, ಸಿಲೋನ್, ಆಫ್ರಿಕಾ ಇವುಗಳಲ್ಲಿ ಪ್ರಖ್ಯಾತಪಟ್ಟಿದ್ದಾಗಿರುತ್ತದೆ.

ಅನೇಕ ಹಿಂದೀ ಪ್ರದರ್ಶನಗಳಲ್ಲಿ ಬೆಳ್ಳಿ ಮತ್ತು ಬಂಗಾರದ ಪದಕಗಳನ್ನು ಪಡೆದಿರುತ್ತೆ. [illegible] ಕೂಡ ಅದರ ಮೇಲೆ ಹಣವನ್ನು ಮುಂಗಡವಾಗಿ ಕೊಡುತ್ತಾರೆ. ಬಡ ಮತ್ತು ಮಧ್ಯಮ ತರಗತಿಯ ಜನರಿಗೆ ವರಪ್ರದಾನವಾಗಿದ್ದು ಸಂಚಾರ, ಪ್ರಯಾಣ, ದೇಶಾಟನೆಗಳ ಸಮಯದಲ್ಲಿ ಹತ್ತಿರದಲ್ಲಿಟ್ಟುಕೊಳ್ಳತಕ್ಕದಾಗಿರುತ್ತದೆ.

ಬಾಟ್ಲಿವಾಲರ ಬಾಲಾಮೃತ ಅಥವಾ ಟೊನಿಕ್ ಸಿರಪ್.

ಕೆಮ್ಮನ್ನು ಹೋಗಲಾಡಿಸಿ, ಎದೆನೋವನ್ನು ಶಾಂತಗೊಳಿಸಿ, ಜ್ವರವನ್ನು ಉಪಶಮನಿಸಿ, ನಿದ್ರಾಭಂಗವನ್ನು ಕಡಿಮೆ ಮಾಡಿ ಧಾತುವರ್ಧನವನ್ನು ಮಾಡುವದರಲ್ಲಿ ಅತ್ಯುತ್ತಮವಾಗಿರುತ್ತದೆ, ಕಫವನ್ನು ಬೇಗನೆ ಹೊರಬೀಳುವಂತೆ ಮಾಡುವುದಲ್ಲದೆ. ಅದೇ ಸಮಯದಲ್ಲಿ ಒಳ್ಳೇ ಜೀರ್ಣವನ್ನು ಉಂಟುಮಾಡುವುದು. [illegible] ಮಾಹಿತಿಯನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಕಾರಖಾನೆ:-CAWASHAPUR, BOMBAY.

Dr. H. L. Batliwala & Co., Ltd.,
Sayani Road, P. O. Cadell Road, Bombay. No. 14.

ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.,
Sayani Road, P. O. Cadell Road, Bombay. No. 14.

ಎಲ್ಲಾ ಕಡೆಗಳಲ್ಲಿ
ಏಜಂಟರು ಬೇಕಾಗಿದ್ದಾರೆ.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟ. ಖ. 9 ಆಣೆ.

ನಮ್ಮ ವಿಳಾಸ:— ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಏಜಂಟರು:— ಡಿ. ಊಲನ್ ಮಾರ್ಟ, ಮಂಗಳೂರು.

OUR RECENT IMPORT IN WRIST WATCHES

Have you used anyone of these Watches?

SEND YOUR ORDER NOW ALL GUARANTEED.

Fashionable wrist wrist Lady's size. Reliable movement Guaranteed.



No. 368.

Handy to wear and looks beautiful. Gives punctual time and with strong movement.

Nickel case Rs. 8—0

High-class Radium dial watch watch with Roman figures.



No. 367.

Can be seen in dark nights, Well fitted with best movement and strong to use. Used by one and all.

Silver case Rs. 9—0.

Radio light wrist watch.



No. 372.

Fitted with the best mechanism and guaranteed to work and keep perfect time for a long time.

Nickel case Rs. 7—8
Electro rolled-gold „ 9—0

(N. B. In addition to the above, we have good number of varieties of fancy wrist watches, pocket watches. Please write for a descriptive catalogue, which will be sent free)

WHOLESALE IMPORTERS

PETER WATCH COY.,
POST BOX 27, MADRAS

ಶಾಲಿವಾಹನಶಕ ೧೮೪೭ನೆಯ ಕ್ರೋಧನ ಸಂವತ್ಸರದ ಶ್ರಾವಣ ಶು ೪ ಶನಿವಾರದಿಂದ ಕ್ರೋಧನ ಸಂವತ್ಸರದ ಶ್ರಾವಣ ಶು ೧೦ ಶುಕ್ರವಾರದ ವರೆಗಿನ ಪಂಚಾಂಗ.
(೧೯೨೫ನೆಯ [illegible])

ತಾರೀಕು	ವಾರ	ತಿ.	ಘಳಿಗೆ.	ನಕ್ಷತ್ರ	ಘಳಿಗೆ.	ಸೌರಮಾನ.	ಸೂರ್ಯ	
							ಉ.	ಅಸ್ತ.
25	ಶನಿ	೪	೧೦.೧೬	ಪುಬ್ಬಾ	೯.೧೬	೧೦	6.16	6.53
26	ರವಿ	೫	೧೧.೩೨	ಉತ್ತರಾ	೧೨.೪೬	೧೧	6.16	6.58
27	ಸೋಮ	೬	೧೧.೨೮	ಹಸ್ತಾ	೧೪.೩೨	೧೨	6.16	6.57
28	ಕುಜ	೭	೧೦.೧೬	ಚಿತ್ತಾ	೧೫.೨	೧೩	6.17	6.57
29	ಬುಧ	೮	೭.೪೪	ಸ್ವಾತೀ	೧೪.೨೦	೧೪	6.17	6.57
30	ಗುರು	೯	೪.೧೬	ವಿಶಾಖಾ	೧೨.೪೬	೧೫	6.17	6.56
31	ಶುಕ್ರ	೧೦	೫೪.೫೦	ಅನುರಾಧಾ	೧೦.೦	೧೬	6.17	6.56

ಮಂಗಳೂರಿನ ವಾಯುಸ್ಥಿತಿ.

Date ತಾರೀಕು	Temperature. ಉಷ್ಣ (ಕಾವು)		Rainfall. ಮಳೆ	
	Maximum ಹೆಚ್ಚಾದದ್ದು	Minimum ಕಡಿಮೆ	ದಿನದ ಮಳೆ	ಜುಮಲಾ ಮಳೆ.
17	77—0	71—2	4—38	—
18	79—2	71—7	2—52	—
19	80—3	70—4	5—10	—
20	79—4	73—3	3—31	—
21	82—2	73—9	0—08	—
22	83—8	74—4	0—32	—
23	80—6	73—1	1—79	—

ಮಂಗಳೂರಿನ ಪೇಟೆ ಧಾರಣೆ.

ಜಿನಸು	ಇಂದ	ವರೆಗೆ
	ರೂ. ಆ.	ರೂ ಆ
ಮಸ್ಕತಿ	9—8	9—12
ಗುಡ್ಡ ...	9—0	9—2
ರಾಶಿ ಸುಗ್ಗಿ ...	8—6	8—12
ಅವ್ವಲ್ ಬೆಳ್ತಿಗೆ ...	8—4	9—8
ಗುಡ್ಡ ಬೆಳ್ತಿಗೆ ...	8—0	8—4
ರಂಗೂನು ಬೆಳ್ತಿಗೆ ಗೋಣಿ ೧ ...	13—8	14—8
ಗೋದಿ ಗೋಣಿ ೧ಕ್ಕೆ ...	18—8	22—0
ಹುರುಳಿಗೋಣಿ ೧ಕ್ಕೆ ...	9—4	10—8
ಅಲಸಂಡೆಗೋಣಿ ೧ಕ್ಕೆ ...	12—0	13—0
ತೊಗರಿಗೋಣಿ ೧ಕ್ಕೆ ...	12—8	13—0
ತೊಗರಿಬೇಳೆ ಗೋಣಿ ೧ಕ್ಕೆ ...	14—0	21—0
ಉದ್ದು ಗೋಣಿ ೧ಕ್ಕೆ ...	14—0	14—8
ಹೆಸರುಗೋಣಿ ೧ಕ್ಕೆ ...	14—0	15—0
ಊರು ಬೆಲ್ಲ ಖಂಡಿ ೧ಕ್ಕೆ ...	—	85—0
ಉಪ್ಪು ಗೋಣಿ ೧ಕ್ಕೆ ...	4—4	4—10
ಕೊಬ್ರಿ ಖಂಡಿ ೧ಕ್ಕೆ ...	115—0	120—0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	42—0	43—0
ಎಳ್ಳಿಂಡಿ ಖಂಡಿ ೧ಕ್ಕೆ ...	42—0	42—8
ಕೊಬ್ರಿ ಎಣ್ಣೆ ಮುಡಿ ೧ಕ್ಕೆ ...	9—0	10—0
ಎಳ್ಳೆಣ್ಣೆ ಮುಡಿ ೧ಕ್ಕೆ ...	8—0	11—0
ಚಿಮಿಣಿ ಎಣ್ಣೆ ಪೆಟ್ಟಿಗೆ ೧ಕ್ಕೆ ...	8-15-6	—
ಮೋರಿಸ ಸಕ್ಕರೆ ಮುಡಿ ೧ಕ್ಕೆ ...	4—12	—
ಊರ ಮೆಣಸಿನಕಾಯಿ ಮುಡಿ ೧ಕ್ಕೆ ...	7—0	—
ಸಾಸಿವೆ ಮುಡಿ ೧ಕ್ಕೆ ...	8—12	—
ಕೊತ್ತಂಬರಿ ಮುಡಿ ೧ಕ್ಕೆ ...	3—8	4—4
ಕಾಫಿ ಖಂಡಿ ೧ಕ್ಕೆ ...	345—0	400—0
ಬೆಳಗೋಟು ಅಡಿಕೆ ಖಂಡಿ ೧ಕ್ಕೆ ಹಳತು ...	245—0	250—0
„ ಹೊಸ ಅಡಿಕೆ	240—0	240—0
ಕಾಳುಮೆಣಸು ಖಂಡಿ ೧ಕ್ಕೆ ...	170—0	175—0
ಯಾಲಕ್ಕಿ ಮುಡಿ ೧ಕ್ಕೆ ...	80—0	90—0
ಗೇರುಬೀಜ ಮುಡಿ ೧ಕ್ಕೆ ...	4—4	—
ಕಬ್ಬಿಣ ಖಂಡಿ ೧ಕ್ಕೆ ...	45—0	65—0
ತಾಮ್ರ ತಗಡು ಮಣ ೧ಕ್ಕೆ ...	17-12	23—0
ತಾಮ್ರ ಪಾತ್ರಗಳು ಮಣ ೧ಕ್ಕೆ ...	26—0	—
ಚೀನಿ ಬೆಳ್ಳಿ ಸೇರು ೧ಕ್ಕೆ ...	22—0	—
ಹಿತ್ತಾಳೆ ತಗಡು ಮಣ ೧ಕ್ಕೆ ...	18—8	—
ಸತುವು	13—7	—

The Canara Public Conveyance Co., Ltd, Mangalore.

(Established 1914.)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು —

ಮಂಗಳೂರು
- ಕರಾವಳಿ ಮಾರ್ಗವಾಗಿ — ಮುಲ್ಕಿ — ಉಡ್ಪಿ — ಕುಂದಾಪುರ — ಗಂಗೊಳ್ಳಿ — ಬ್ಯೆಂದೂರು
- ಬಂಟವಾಳ — ಬೆಳ್ತಂಗಡಿ — ಚಾರ್ಮಾಡಿ.
- ಪಾಣೆಮಂಗಳೂರು — ಪುತ್ತೂರು — ಸುಳ್ಯ — ಮಡಿಕೇರಿ.
- ಪುತ್ತೂರು — ಉಪ್ಪಿನಂಗಡಿ — ಬೆಳ್ತಂಗಡಿ.
- ಮಡಿಕೇರಿ — ಪುತ್ತೂರು — ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು — ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು — ಬ್ಯೆಂದೂರು ಸರ್ವಿಸು ಅನುಕೂಲ.

ಮುಂಬಯಿ — ಮದ್ರಾಸು — ಕಡೂರು — ಚಿಕ್ಕಮಗಳೂರು — ಚಾರ್ಮಾಡಿ — ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು — ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು

Secretary,
The Canara Public Conveyance Co., Ltd, Mangalore. S. K

— ಸಿರಿಗನ್ನಡಂಗೆಲ್ಗೆ —

ಶ್ರೀ ಶಂಕರ ಕರ್ನಾಟಕ ಪುಸ್ತಕ ಭಂಡಾರವೂ ಶ್ರೀ ವಿದ್ಯಾರಣ್ಯ ಪ್ರಕಾಶಕ ಸಂಸ್ಥೆಯೂ,

ಮಾಳಮಡ್ಡಿ, ಧಾರವಾಡ.

ಕನ್ನಡಿಗರಿಗೆ ಬೇಕಾಗುವ ಎಲ್ಲಾ ತರದ ಕನ್ನಡ ಪುಸ್ತಕಗಳು ನಮ್ಮಲ್ಲಿ ಯೋಗ್ಯ ಬೆಲೆಗೆ ದೊರೆಯುವವು. ವಿದ್ಯಾರಣ್ಯ ಪುಸ್ತಕ ಮಾಲೆಯು ಕೆಳಗಿನ ೧, ೨, ೩, ಪುಸ್ತಕಗಳು ಚಂದಾದಾರರಾಗುವವರಿಗೆ ಅಂಚೆ ವೆಚ್ಚ ಸೇರಿ ೫ ರೂ. ೬ ಆಣೆಗೆ ದೊರೆಯುವವು. ಮುಂದೆ ಹೊರ ಬೀಳುವ ಮಾಲೆಯ ಪುಸ್ತಕಗಳನ್ನು ಚಂದಾದಾರರಿಗೆ ೧ ರೂಪಾಯಿಗೆ ೨ ಆಣೆಯಂತೆ ಕಡಿಮೆ ಬೆಲೆಗೆ ವಿ. ಪಿ. ಮಾಡುವೆವು. ಭಂಡಾರದ ಬೆಲೆ ಪಟ್ಟಿಗಾಗಿ ೪ ಆಣೆ ಅಂಚೆ ಟಿಕೇಟುಗಳನ್ನು ಕಳುಹಿಸತಕ್ಕದ್ದು.

		ರೂ.	ಆ.	ಪೈ.
೧.	ಕರ್ನಾಟಕ ಸಿಂಹಾಸನ ಸ್ಥಾಪನೆ	೧	೦	೦
೨.	ಕಥೆಗಳನ್ನೊಳಗೊಂಡ ಬೀರಬಲ್ಲ ಚರಿತ್ರೆ (ಸಚಿತ್ರ)	೧	೬	೦
೩.	ಛತ್ರಪತಿ ಶಿವಾಜಿ ಮಹಾರಾಜ „	೨	೧೨	೦
೪.	ಮಹಾರಾಣಿ ಲಕ್ಷ್ಮೀಬಾಯಿ ಝಾಂಸಿ „	೨	೦	೦
೫.	ಅಕ್ಬರ ಚಕ್ರವರ್ತಿ ಚರಿತ್ರೆ „	೧	೧	೦
೬.	ಚರಿತ್ರೆ ಸಂಗ್ರಹ ಭಾಗ ೧. „	೧	೪	೦
೭.	ತಿಲಕರ ಗೀತಾ ರಹಸ್ಯ	೩	೮	೦
೮.	ಶ್ರೀ ದಾಸಬೋಧ ಭಾಗ ೧ ೨. ೩.	೨	೧೪	೦
೯.	ರಾಷ್ಟ್ರಸಭೆಯ ಇತಿಹಾಸ	೨	೮	೦
೧೦.	ವಚನ ಜ್ಞಾನಸಿಂಧು	೪	೦	೦

ಇವಲ್ಲದೆ ನಮ್ಮಲ್ಲಿ ಎಲ್ಲಾ ತರದ ಕಾಯದೆ ಶಾಲೋಪಯೋಗಿ ಪುಸ್ತಕಗಳೂ ನಕಾಶೆ ಚಿತ್ರಗಳೂ ಉರವಣಿಗಳೂ ದೊರೆಯುವವು.

ಶ್ರೀಪಾದ ರಾಮಚಂದ್ರ ದೇಶಪಾಂಡೆ ಬಿ. ಯಸ್. ಸಿ.
ವ್ಯವಸ್ಥಾಪಕ.

ಪ್ರಖ್ಯಾತಿಪಟ್ಟ ಮಂಗಳೂರು ನಸ್ಯ.

ನಮ್ಮಲ್ಲಿ ಉತ್ತಮವಾದ ಹೊಗೆಸೊಪ್ಪಿನಿಂದಲೂ, ಸುಮಾರು ೫೦ ವರ್ಷಗಳ ಅನುಭವದಿಂದಲೂ ತಯಾರಿಸಿದ ನಸ್ಯವು ಯಾವಾಗಲೂ ರಖಂ ಆಗಿಯೂ ಚಿಲ್ಲರೆ ಆಗಿಯೂ ಮಾರಾಟಕ್ಕೆ ದೊರೆಯುತ್ತದೆ.

I ಕ್ಲಾಸ್ ರಾತ್ಲು 1ಕ್ಕೆ ರೂ. 3—0—0.
II „ „ „ 2—12—0.

ವಿ. ಪಿ. ಚಾರ್ಜು ಅಲಾಹಿದ. ಸ್ಯಾಂಪಲು ಅಪೇಕ್ಷಿಸುವವರು ೨ ಆಣೆ ಸ್ಟಾಂಪು ಕಳುಹಿಸಲಿ.

ವಿಳಾಸ:—

ಎಮ್. ಎಸ್. ಬಂಡಾರ್ಕ್ಯಾರ್ ಎಂಡ್ ಸನ್ಸ್,
ನಸ್ಯೆ ವ್ಯಾಪಾರಿಗಳು,
ರಥಬೀದಿ, ಮಂಗಳೂರು.

ಬಂದು ನೋಡಿರಿ! ತಿಂದುನೋಡಿರಿ!

ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ
ಪದಕವನ್ನು
ಬಹುಮಾನವಾಗಿ ಪಡೆದಿರುವ
ಎಸ್. ಪಿ. ಆಚಾರ್ಯ
ಇವರಿಂದ ತಯಾರಿಸಲ್ಪಟ್ಟ

ಉಪ್ಪಿನಕಾಯಿಗಳನ್ನು

ಬಂದು ನೋಡಿರಿ! ತಿಂದು ನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ ಕುಂತಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನ್ನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ
ಬಂದು ನೋಡಿರಿ! ತಿಂದು ನೋಡಿರಿ!

ಇಂಡಿಯನ್ ಸ್ವೀಟ್‌ಮಿಟ್ ಮಾರ್ಟ್.

ಮನೋರಮಾ ಸಿನಿ ಕಾಫಿ ಕ್ಲಬ್,
ಮಾರ್ಕೆಟು ರೋಡು,
ಮಂಗಳೂರು.

ಅಥವಾ

ಸದಾನಂದ ಕಾಫಿ ಕ್ಲಬ್,
ರಥಬೀದಿ, ಮಂಗಳೂರು.

ದಕ್ಷಿಣ ಕನ್ನಡ ಜಿಲ್ಲೆಯ

ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಶಾಸ್ತ್ರೀಯ
ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟಿದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪ್ಯಾ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪ್ಯಾ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವೃಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.
ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.
ಹೆಚ್ಚಿನ ಮಾಹಿತಿಗೆ "ಆರ್ಷ ಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

JUST ARRIVED
Continental Belts.
OF VARIOUS SIZES
Price Re. 1—10—0 each
Mangalore Trading Association,
Car Street, MANGALORE.

ನೋಟೀಸು.

ಮಂಗಳೂರು ಕೃಹಾರ ಕುದ್ರೋಳಿಯಲ್ಲಿರುವ ತುಕ್ಕಪ್ಪೆ ಹೆಂಗಸಿನ ಮಗಳು ತಿಮ್ಮು ಯಾನೆ ಬಾಮು ಹೆಂಗಸು ಈ ಮೂಲಕ ಸರ್ವ ಜನರಿಗೆ ತಿಳಿಸುವದೇನಂದರೆ ನಾನು ವ ನನ್ನ ಮುಂಚೆ ನನ್ನ ಹಿರಿಯರಾರಭ್ಯ ಸುಮಾರು 80 ವರುಷಗಳಿಂದ ಅನುಭವಿಸಿಕೊಂಡು ಅನೇಕ ಕಷ್ಟ ಕೃತಗಳನ್ನು ಮಾಡಿ ನಾವು ವಾಸವಾಗಿರುವ ಮಂಗಳೂರು ಟೌನ್ ಕುದ್ರೋಳಿ ಮಿಶನ್ ಹಂಚು ಕಾರ್ಖಾನೆಗೆ ಸಮೀಪವಿರುವ ರೆವೆನ್ಯು ಸರ್ವೆ ನಂಬ್ರ 625ಕ್ಕೆ ಸರಿಯಾಗುವ ಕೊಡಿಯಾಲ ಬೈಲು ಮೆಪ್ಪವಾರ್ಡಿನ ಟೌನ ಸರ್ವೆ ನಂಬ್ರ 1479ನೇ ಬಾಗ್ಯಾತು ಅಂದಾಜು ಎಕ್ರೆ 8ಕ್ಕಿನ್ನು ನನ್ನ ಧನಿ ನೆಲ್ಲಿಕಾಯಿ ಗುಂಡರಾಯರ ಮಗ ವ್ಯಾಸರಾಯರು ಇತ್ತಲಾಗೆ ಮಾರಾಟಮಾಡುವರೆ ಯುದ್ಯುಕ್ತರಾಗಿ ನನ್ನ ಕೃತಗಳನ್ನು ಸರಿಯಾಗಿ ತೋರಿಸದೆ ತುಂಡು ತುಂಡುಗಳಾಗಿ ಏಲಂ ಮಾಡುವರಾಗಿ ನನಗೆ ನಿನ್ನೆ ದಿವಸ ತಿಳಿದು ಬಂತು. ಸದರಿ ಬಾಗ್ಯಾತಿನಲ್ಲಿ ಅಂದಾಜು ರೂಪ್ಯಾ 4000/-ರದ ಹಂಚು ಚಾವಣಿ ಕಟ್ಟಡಗಳು ಮತ್ತು ನನ್ನ ಹಿರಿಯರು ವ ನಾನು ಸಹಾ ನಟ್ಟು ಬೆಳಸಿದ ಅಂದಾಜು ರೂ. 2000/-ಕ್ರಯ ಬಾಳುವ ತೆಂಗಿನ ಫಲಮರಗಳು ವ ಸಸಿಗಳು ಇರುವದರಿಂದ ಸದರಿ ಆಸ್ತಿಯನ್ನು ಏಲಂಮಿನಲ್ಲಿ ನಿಂತು ಕ್ರಯಕ್ಕೆ ಪಡಕೊಳ್ಳುವವರಿಗೆ ಅವರವರು ಪಡಕೊಂಡ ಸ್ಥಳದ ದಾಮಾಶಾಯಿ ಪ್ರಕಾರ ಕೃತವು ನನಗೆ ಕೊಡಲಿಕ್ಕೆ ಬದ್ಧರು ಎಂಬ ಸಂಗತಿ ತಿಳಿಸೋಣವಾಗಿದೆ.

ಮಂಗಳೂರು,
ತಾ. 20-7-'25. } ತಿಮ್ಮು ಯಾನೆ ಬಾಮು ರುಜು.

ಸಾಹಿತ್ಯಸರಸ್ವತಿ— ಲಕ್ಷ್ಮೀನಾರಾಯಣ
ಪುಣಿಂಚತ್ತಾಯ
ಇವರಿಂದ ರಚಿತವಾದ

ರಾಷ್ಟ್ರಗೀತಾರತ್ನಾಕರ ೦-೮-೦.
ಸ್ವರಾಜ್ಯಗೀತೆ ೦-೧-೦ ಲೀಲೆ ೦-೧-೦.

ಅಭಿಪ್ರಾಯ:—
ಕರ್ಣಾಟಕದ ಸುಪ್ರಸಿದ್ಧ ವಿದ್ವನ್ಮಣಿಗಳಾದ
"ಹರಿಕಥಾರತ್ನಾಕರ" "ವಿದ್ಯಾನಿಧಿ"
ಕಾ. ಶಿವರಾಮದಾಸ್

ಸಂಪಾದಕ—"ಆನಂದ ಚಂದ್ರಿಕೆ" ಹೊಸೂರು ಇವರು ಬರೆಯುತ್ತಾರೆ-

"ಬೃಹಸ್ಪತಿ ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯರ ಸನ್ನಿಧಿಗೆ—ಅನೇಕ ನಮಸ್ಕಾರ ಪೂರ್ವಕ ವಿಜ್ಞಾಪನೆಗಳು. ಉಭಯ ಕುಶಲೋಪರಿ. ‖ ಸಾ ‖

ಶ್ರೀ ಹರಿಗುರುದೇಶಭಕ್ತ ವರೇಣ್ಯ!

ಸಮಂಚಿತ ಪ್ರೇಮದಿಂದ ತಾವು ಕಳುಹಿಸಿಕೊಟ್ಟ ಪತ್ರ ಪುಸ್ತಕಗಳು ತಲಪಿದವು. ನಿನ್ನೆಯ ದಿನ ಮಧ್ಯಾಹ್ನ ಸಮಗ್ರವಾಗಿ ಓದಿ ನೋಡಿದೆನು. ಸಮಧಿಕಾನಂದತುಂದಿಲನಾದೆನು. ಮೊನ್ನೆಯ ದಿನ ಇಲ್ಲಿ ನಡೆದ ಶ್ರೀ ಮಹಾಭಾರತ ಹರಿಕಥಾ ಭಾಗದಲ್ಲಿ "ಪಾಂಚಾಲೀ ಮಾನಸಂರಕ್ಷಣೆ" (ಅಕ್ಷಯವಸ್ತ್ರಪ್ರದಾನ) ಮಂಗಳಾಚರಣೆ ಸುಸಮಯದಲ್ಲಿ ತಮ್ಮಿಂದ ರಚಿತವಾದ "ಸ್ವರಾಜ್ಯ ಸೂರ್ಯೋದಯವಾಗಲಿ" ಎಂಬ ಗೀತವನ್ನು ಬೆಳಗಾವಿಗೆ ಬಂದಿದ್ದು ತಮ್ಮ ಮುಖೇನ ಶ್ರವಣಮಾಡಿದ ನಮ್ಮ ಮಿತ್ರರೊಬ್ಬರು ಗಾನಮಾಡಿದರು. ಸಭಾಸದರೆಲ್ಲರೂ ಆನಂದಪರವಶರಾದರು. ಮಾರನೆಯ ದಿನವೇ ತಮ್ಮ ಗ್ರಂಥಗಳೂ ತಲಪಿದವು. ತಮ್ಮ ಅಮೂಲ್ಯ ಗ್ರಂಥಗಳಲ್ಲಿ ದೈವಭಕ್ತಿ, ದೇಶಭಕ್ತಿ, ನೀತಿ, ವಿಜ್ಞಾನಗಳು ಮನೋಹರವಾದ ಶೈಲಿಯಿಂದಲಂಕೃತವಾಗಿ ಶೋಭಿಸುತ್ತಿರುವುವು. "ರಾಷ್ಟ್ರಗೀತಾರತ್ನಾಕರ" "ಲೀಲೆ" "ಸ್ವರಾಜ್ಯಗೀತೆ" ಯೆಂಬ ಗ್ರಂಥಗಳು ಮೂರೂ ಕರ್ಣಾಟಕ ದೇಶಮಾತೆಯ ಕಂಠಾಭರಣದ ಅಮೂಲ್ಯ ರತ್ನತ್ರಯವೆಂಬದಾಗಿ ಬಿನ್ನವಿಸುತ್ತಿರುವೆನು.

ಮಿತ್ರರೆ! ಶ್ರಿಯಃಪತಿಯು ತಮಗೆ ಸಕಲಾರ್ಥಸಂಪತ್ತುಗಳನ್ನೂ ಅನುಗ್ರಹಿಸಲೆಂದು ಪ್ರೇಮಪೂರ್ವಕವಾಗಿ ಹಾರೈಸುತ್ತಿರುವೆನು.

ಓಂ ತತ್ಸತ್!!!
ಇಂತು
ಭವದೀಯ
ಹರಿಕಥಾರತ್ನಾಕರ ವಿದ್ಯಾನಿಧಿ ಕಾ ಶಿವರಾಮದಾಸ್."

— ಮಾತ್ರವಲ್ಲದೆ —

ಪ್ರಾಕ್ತನ ವಿಮರ್ಶವಿಚಕ್ಷಣ ರಾವ್‌ಬಹದೂರ್ ಶ್ರೀಮಾನ್ ಆರ್ ನರಸಿಂಹಾಚಾರ್ಯ, ಎಮ್. ಎ., ಎಮ್ ಆರ್. ಎ. ಎಸ್. "ಪ್ರಾಚ್ಯವಿದ್ಯಾವೈಭವ,"—ಮೈಸೂರು ಆಸ್ಥಾನ ಮಹಾವಿದ್ವಾನ್ ಶ್ರೀ. ಸೋಸಲೆ ಅಯ್ಯಾಶಾಸ್ತ್ರಿ, "ಕವಿತಿಲಕ"–ಇವರೇ ಮೊದಲಾದ ವಿದ್ವಾಂಸೋತ್ತಂಸರ, ಮಹಾರಾಷ್ಟ್ರ "ಕೇಸರಿ"ಯ ಹಾಗೂ ನಿಖಿಲ ಕರ್ಣಾಟಕದ ಸಕಲ ಪತ್ರಿಕೆಗಳ ಶ್ಲಾಘನೆಗೆ ಪಾತ್ರವಾದ

ರಾಷ್ಟ್ರಗೀತಾರತ್ನಾಕರ—ಲೀಲೆ—ಸ್ವರಾಜ್ಯಗೀತೆ

ಮೊದಲಾದ ಭವ್ಯ ಕಾವ್ಯಗ್ರಂಥಗಳು ನಮ್ಮಲ್ಲಿವೆ. ಕರ್ಣಾಟಕ ಬಂಧುಗಳೇ,
— ಓದಿ ನೋಡಗೊಳ್ಳಿರಿ —

ಕೆ. ಎಮ್. ದಾಸಪ್ರಭು ಎಂಡ್ ಸನ್ಸ್ ಮಂಗಳೂರು. } ಅಥವಾ { ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

ನೋಟೀಸು.

ದಕ್ಷಿಣ ಕನ್ನಡ ಡಿಸ್ಟ್ರಿಕ್ಟ ಕೋರ್ಟಿನಲ್ಲಿ.

O. P. ನಂಬ್ರ 47/'25.

ಪಾರ್ವತಿ ಅಮ್ಮ . . . . ಅರ್ಜಿದಾರಳು.

ಸದರಿ ಮೇಲ್ಕಂಡ ಅರ್ಜಿಯಲ್ಲಿ ಸದರಿ ಅರ್ಜಿದಾರಳು ತನ್ನ ಗಂಡ ಮೃತ ಉಳ್ಳಾಲ ವೆಂಕಪ್ಪಯ್ಯನವರಿಗೆ ಬರತಕ್ಕ ಹಣ ವಸೂಲಿ ಬಗ್ಗೆ ಸರ್ಟಿಫಿಕೇಟು ಕೊಡಬೇಕಾಗಿ ಕೊಟ್ಟ ಅರ್ಜಿಯು ತಾ. 31—7—1925ಕ್ಕೆ ಇಟ್ಟಿರುತ್ತದೆ. ಆಕ್ಷೇಪವಿದ್ದವರು ಈ ಕೋರ್ಟಿಗೆ ಸದರಿ ತಾರೀಕಿನೊಳಗೆ ತಿಳಿಸತಕ್ಕದ್ದು.

ಮಂಗಳೂರು,
13—7—'25. } U. C. S. BHATT,
Vakil for petitioner.

ಬೇಕಾಗಿದೆ.

ಕೋರ್ಟುಗುಡ್ಡೆ ಪಂಚಮ ಶಾಲೆಯ ಕಾರ್ಪೆಂಟ್ರಿ ಡಿಪಾರ್ಟುಮೆಂಟನ್ನು ನೋಡಿಕೊಳ್ಳುವುದಕ್ಕೂ, ಶಾಲಾ ಮಕ್ಕಳಿಗೆ ಬಡಗಿ ಕೆಲಸವನ್ನು ಕಲಿಸುವುದಕ್ಕೂ ಒಬ್ಬ ಯೋಗ್ಯ ಉಪಾಧ್ಯಾಯನು ಬೇಕಾಗಿದೆ. ಯೋಗ್ಯತೆಗೆ ತಕ್ಕಂತೆ ಸಂಬಳ. ಅಪೇಕ್ಷಕರು ತಮ್ಮ ಅರ್ಜಿಯನ್ನು ಇದೇ ತಿಂಗಳ ತಾ. ೩೧ರ ಒಳಗೆ ಕಳುಹಿಸತಕ್ಕದ್ದು. ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವುದು.

ಕೋರ್ಟುಗುಡ್ಡೆ,
ತಾ. 17-7-'25. } ಗೌರವ ಕಾರ್ಯದರ್ಶಿ,
ಡಿಪ್ರೆಸ್ಡ್ ಕ್ಲಾಸಸ್ ಮಿಶ್ಶನ್, ಮಂಗಳೂರು.

ಮದ್ರಾಸು ನ್ಯಾಯವಿಧಾಯಕ ಸಭೆ.

ಶ್ರೀಯುತ ಕೆ. ರಘುಚಂದ್ರ ಬಲ್ಲಾಳ್ ಎಮ್. ಎಲ್. ಸಿ. ಇವರು ಕೇಳುವುದಾಗಿ ಈ ಮೊದಲು ನೋಟೀಸು ಕೊಟ್ಟ ಪ್ರಶ್ನೆಗಳ ಪೈಕಿ ಕೆಳಗಣ ಪ್ರಶ್ನೆಗಳಿಗೆ ಮೇಲ್ಕಂಡ ಸಭೆಯ ತಾ. ೧೮–೮–೨೫ರ ಅಧಿವೇಶನದಲ್ಲಿ ಉತ್ತರ ದೊರೆಯುವುದಾಗಿ ಸದರಿ ಸಭೆಯ ತಾ. ೩೦–೬–೨೫ರ ನಂಬ್ರ ೩ನೇ ನೋಟೀಸಿನಿಂದ ಕಂಡುಬರುತ್ತದೆ.

೨೧೦ (a) ಕಳೆದ ೩ ವರುಷಗಳಲ್ಲಿ ಮದ್ರಾಸುಸಂಸ್ಥಾನದಲ್ಲಿ ಎಷ್ಟು ಆಯುರ್ವೇದಿಕ್ ಆಸ್ಪತ್ರೆಗಳನ್ನು ಸರಕಾರದವರು ಸ್ಥಾಪಿಸಿದ್ದಾರೆ.

(b) ಅಂಥಾ ಆಸ್ಪತ್ರೆಗಳಿಗೆ ನೇಮಕಮಾಡಲ್ಪಟ್ಟ ವೈದ್ಯ ಉದ್ಯೋಗಸ್ಥರ ಸಂಖ್ಯೆ ಎಷ್ಟು ಮತ್ತು ಅವರ ಯೋಗ್ಯತೆಗಳು ಯಾವುವು.

(c) ಅಂಥಾ ಆಸ್ಪತ್ರೆಗಳಲ್ಲಿ ಚಿಕಿತ್ಸೆಮಾಡಲ್ಪಟ್ಟ ರೋಗಿಗಳ ಸಂಖ್ಯೆ ಎಷ್ಟು.

(d) ಅಂಥಾ ಆಸ್ಪತ್ರೆಗಳ ಪೈಕಿ ಒಳರೋಗಿಗಳಿಗೆ ಚಿಕಿತ್ಸೆ ಮಾಡುವ ಆಸ್ಪತ್ರೆಗಳ ಸಂಖ್ಯೆ ಎಷ್ಟು.

(e) ಅಂಥಾ ಆಸ್ಪತ್ರೆಗಳ ಬಗ್ಗೆ ಒಟ್ಟು ತಗಲುವ ಖರ್ಚು ಎಷ್ಟು.

ಮಂಗಳೂರು ತಾಲೂಕು ಬೋರ್ಡು ಪ್ರೆಸಿಡೆಂಟ್

೨೧೧ ಮಂಗಳೂರು ತಾಲೋಕು ಬೋರ್ಡು ಪ್ರೆಸಿಡೆಂಟರ ಕುರಿತು ಕೇಳಿದ ನನ್ನ ನಂಬ್ರ ೩೨೦ನೇ ಪ್ರಶ್ನೆಗೆ ೧೯೨೫ನೇ ಇಸವಿ ಮಾರ್ಚ ತಾ. ೪ರಲ್ಲು ಕೊಟ್ಟ ಉತ್ತರದ ಬಾಬಿನಲ್ಲಿ ಸದರಿ ರಿಪೋರ್ಟು ಈಗ ತಲ್ಪಿಯದೊ ಮತ್ತು ಸದರಿ ರಿಪೋರ್ಟನ್ನು ಈಗ ಮೇಜಿನ ಮೇಲೆ ಇಡಬಹುದೋ?

ಕಾರ್ಕಳ ತಾಲೋಕಿನಲ್ಲಿ ಕೊಲೆಗಳು.

೨೧೨ ಕಾರ್ಕಳ ತಾಲೂಕಿನಲ್ಲಿ ಗತ ೯ ವರುಷಗಳಲ್ಲಿ ನಡೆದ ಬಹಳ ಕೊಲೆ ಮೊಕದ್ದಮೆಗಳಲ್ಲಿ ಶಿಕ್ಷೆ ವಿಧಿಸಲ್ಪಟ್ಟ ಮೊಕದ್ದಮೆಗಳ ಸಂಖ್ಯೆ ಅತಿ ಕಮ್ಮಿಯಾಗಿರುವ ಸಂಗತಿಯಿಂದ ಆ ಪ್ರಾಂತ್ಯಕ್ಕೆ ಸ್ಪೆಶಲ್ ಪೋಲೀಸ್ ಆಫಿಸರರನ್ನು ಇಟ್ಟು ವಿಶೇಷ ಜಾಗ್ರತೆಕೊಳ್ಳುವರೇ ಸರಕಾರದವರು ಆಲೋಚಿಸಲಿಕ್ಕೆ ಆಕ್ಷೇಪ ಇದೆಯೇ

ಹಿಂದುಮತಸ್ಥಾಪನೆಗಳ ಆಕ್ಟಿನಿಂದ ಹಿಂದು ಅಲ್ಲದ ಸ್ಥಾಪನೆಗಳ ವಿರಹಿತಪಡಿಸೋಣ.

೨೧೩ (a) ೧೯೨೫ನೇ ಇಸವಿ ಮದ್ರಾಸು ಒಂದನೇ ಆಕ್ಟಿನ ವ್ಯಾಪ್ತಿಯಿಂದ ಮಹಮ್ಮಡನ್ ಮತ್ತು ಕ್ರಿಶ್ಚಿಯನ್ ಮತಸ್ಥಾಪನೆಗಳನ್ನು ವಿರಹಿತಪಡಿಸಲಿಕ್ಕೆ ಕಾರಣವೇನು,

(b) ಸದರಿ ಆಕ್ಟನ್ನು ಜೈನ್ ಮತಸ್ಥಾಪನೆಗಳಿಗೆ ಇನ್ನು ಮುಂದೆ ಲಗಾವುಮಾಡಬಹುದಾಗಿ ಸದರಿ ಆಕ್ಟಿನಲ್ಲಿ ನಿಯಮಿಸಲಿಕ್ಕೆ ವಿಶೇಷ ಕಾರಣವೇನು?

(c) ಅಂಥಾ ನಿಯಮವನ್ನು ಹಿಂದುವಲ್ಲದ ಇತರ ಮತಸ್ಥಾಪನೆಗಳ ಕುರಿತು ಯಾಕೆ ಮಾಡಲಿಲ್ಲ.

ದಕ್ಷಿಣ ಕನ್ನಡದಲ್ಲಿ ಜೈನರಿಂದ ಸ್ಥಾಪಿಸಲ್ಪಟ್ಟ ಮತಸ್ಥಾಪನೆಗಳು.

೨೧೪ (a) ದಕ್ಷಿಣ ಕನ್ನಡದಲ್ಲಿ ಶತಮಾನಗಳ ಹಿಂದೆ ಜೈನ್ ಅರಸುಗಳ ಆಳಿಕೆ ಇತ್ತೆಂಬದು ಸರಕಾರದವರ ಗಮನಕ್ಕೆ ಬಂದದೆಯೇ.

(b) ಅಂಥಾ ಅರಸುಗಳ ಈಗಿನ ಸಂತತಿಯವರಿಗೆ ಸರಕಾರದಿಂದ ಪಾಳ್ಯಗಾರಿ ತಸ್ತೀಕು ಸಿಕ್ಕುತ್ತದೆಂಬುದು ನಿಜವೇ.

(c) ಅಂಥಾ ಅರಸುಗಳು ರಾಜ್ಯವಾಳುವ ಸಮಯದಲ್ಲಿ ಅವರವರ ಸೀಮೆಯಲ್ಲಿ ಮಠಸ್ಥಾಪನೆಗಳನ್ನು ಸ್ಥಾಪಿಸಿ ಉಂಬಳಿ ಉತ್ಪಾರುಗಳನ್ನು ಬಿಟ್ಟಿದ್ದೆಂಬದು ಮತ್ತು ಅಂಥಾ ಸ್ಥಾಪನೆಗಳಲ್ಲಿ ಈಗಲೂ ಅವರ ಸಂತತಿಯವರು ಸರ್ವ ಸ್ವಾತಂತ್ರ್ಯ ಆಡಳಿತೆಗಳನ್ನು ನಡಿಸಿ ವಿಶೇಷ ಮಾನಮರ್ಯಾದೆಗಳನ್ನು ಪಡಿಯುತ್ತಾ ಬರುತ್ತಾರೆಂಬುದು ನಿಜವೇ?

ದರ್ಖಾಸ್ತು ಬೇರೇಜು ಅರ್ಜಿದಾರರಿಂದ ಫೀಸು ವಸೂಲಿ ಕುರಿತು.

೨೧೫ (a) ದರ್ಖಾಸ್ತು ಬೇರೇಜಿಗೆ ಸ್ಥಳಗಳನ್ನು ಅಪೇಕ್ಷಿಸುವ ಅರ್ಜಿದಾರರಿಂದ ಸದರಿ ಸ್ಥಳಗಳನ್ನು ಗ್ರಾಮ ಉದ್ಯೋಗಸ್ಥರು ಅಳತೆ ಮಾಡಬೇಕಾದರೆ ರೂಪ್ಯಾ ೨ರಂತೆ ಫೀಸ್ ವಸೂಲು ಮಾಡುವ ಕ್ರಮವನ್ನು ಇತ್ತಲಾಗಿ ಜಾರಿಗೆ ತಂದಿದ್ದಾರೆಂಬುದು ನಿಜವೇ?

(b) ಆ ರೀತಿ ಫೀಸು ವಸೂಲು ಮಾಡುವ ಕ್ರಮವು ಮದ್ರಾಸು ತೀರ್ವೆ ವಸೂಲಿ ಆಕ್ಟಿನ ಪ್ರಕಾರವೋ ಯಾ ಬೇರೆ ಯಾವುದಾದರು ಒಂದು ಕಾನೂನು ಪ್ರಕಾರವೋ?

(c) ಆ ರೀತಿ ವಸೂಲಿಗೆ ಗವರ್ನಮೆಂಟ್ ಸೆಂಕ್ಷನ್ ಇದೆಯೇ?

(d) ಹಾಗಾದರೆ ಅಂಥಾ ಸೆಂಕ್ಷನ್ ಈ ಸಭೆಯಿಂದ ಶಿಫಾರಸು ಮಾಡಲ್ಪಟ್ಟಿದೆಯೇ.?

(e) ಅಂಥಾ ಫೀಸಿನ ಒಂದು ಅಂಶವನ್ನು ಗ್ರಾಮದ ಶ್ಯಾನುಭಾಗನಿಗೆ ಪ್ರತಿಫಲವಾಗಿ ಸಲ್ಲುತ್ತದೆಂಬುದು ನಿಜವೇ?

(f) ಅಂಥಾ ಫೀಸನ್ನು ಎಲ್ಲಾ ಅರ್ಜಿದಾರರಿಂದ ತಾರತಮ್ಯ ಇಲ್ಲದೆ ವಸೂಲು ಮಾಡುವುದು ಅನಾವಶ್ಯಕ ಸಂಕಷ್ಟಕ್ಕೆ ಕಾರಣವಾಗುವುದಿಲ್ಲವೇ?

(g) ಬೇರೆಜಿಗೆ ಕೊಡುವರೆ ನಿಶ್ಚಯಿಸಿದ ಸ್ಥಳಗಳ ಪೈಕಿ ಏನ್ನಾದರೂ ಅಂಶ ಹೊಂದಲಿಕ್ಕೆ ಸೋತು ಹೋದ ಅರ್ಜಿದಾರರಿಗೆ ಅಂಥಾ ಫೀಸನ್ನು ರಿಫಂಡ್ ಯಾ ವಾಪಾಸು ಕೊಡಿಸುವಂತೆ ಹುಕುಂ ಮಾಡುವರೇ ಸರಕಾರದವರಿಗೆ ಆಕ್ಷೇಪಯಿದೆಯೇ.

ದಕ್ಷಿಣ ಕನ್ನಡದಲ್ಲಿ ಪೈರು ನಾಶದ ಕುರಿತು.

೨೧೬ (a) ಕಳೆದ ಫಸಲಿಯಲ್ಲಿ ದಕ್ಷಿಣ ಕನ್ನಡದ ವಳಭಾಗಗಳಲ್ಲಿ ಬತ್ತದ ಪೈರನ್ನು ಬೆಂಬುಚ್ಚಿ ಹುಳ ನಾಶಪಡಿಸಿದ್ದೆಂಬುದು ನಿಜವೇ

(b) ಆ ಸಮ್ಮಂದ ಭೂಮಾಲಿಕರಿಗೆ ಉಂಟಾದ ನಷ್ಟ ಎಷ್ಟೆಂಬುದು ಸರಕಾರದವರು ತಿಳಿಯ ಮಾಡಿಕೊಂಡಿದ್ದಾರೋ?

(c) [illegible]

(d) [illegible]

ವಿದೇಶವರ್ತಮಾನ.

—ಇಲ್ಲಿಂದ ವಿಲಾಯತಿಗೆ ಹೋಗಿದ್ದ ಲೊ. ರೆಡಿಂಗರು ವಿಲಾಯತಿಯಿಂದ ಇಲ್ಲಿ ಬರಲು ೨೪ ತಾರೀಕಿಗೆ ಹೊರಟಿರುವರು.

—ಲೊ, ರೆಡಿಂಗ ಸಾಹೇಬರ ಪ್ರಾಯವೇಟ ಸೆಕ್ರೆಟರಿಗಳಿಗೆ ಏಪೆಂಡಿಸಾಯಿಟಿಸ್ ಎಂಬ ರೋಗವಾದ ಕಾರಣ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಲು ವಿಲಾಯತಿಗೆ ಹೋಗಿದ್ದರು. ಅವರ ಶಸ್ತ್ರಚಿಕಿತ್ಸೆಯು ಯಶಸ್ವಿಯಾಗಿ ನಡೆಯಿತು.

—ಇಲ್ಲಿಂದ ವಿಲಾಯತಿಗೆ ಹೋಗಿದ್ದ ಎಂಗ್ಲೊ ಇಂಡಿಯನ್ನರ ಡೆಪ್ಯುಟೇಶನು ವಿಲಾಯತಿಗೆ ತಲಪಿತು. ಅದರ ಮುಖ್ಯಸ್ಥರಾದ ಮಿ. ಗಿಡನೆಯವರು ಅಲ್ಲಿಯ ಸರಕಾರಿ ಉದ್ಯೋಗಸ್ಥರ ಭೇಟಿ ಪಡಕೊಂಡು ತನ್ನ ಡೆಪ್ಯುಟೇಶನಿನ ಕಾರ್ಯ ಸಾಧಿಸುತ್ತಿದ್ದಾರೆ. ಅಲ್ಲದೆ, ಇಲ್ಲಿಯ ಎಂಗ್ಲೊ ಇಂಡಿಯನ್ ವರ್ಗಕ್ಕೆ ಈಗಿನ ಸುಧಾರಣೆಗಳಲ್ಲಿ ಯಾವ ತರಗತಿ ಇರಬೇಕಾದ್ದೆಂಬುದನ್ನು ನಿಷ್ಕರ್ಷೆಪಡಿಸಿಕೊಳ್ಳಲು ಲೊರ್ಡ ಬರ್ಕನ ಹೆಡ್ಡರಿಗೆ ಒಂದು ಅರ್ಜಿಯನ್ನು ತಯಾರಿಸಿರುವರು.

—ಪೋಲಂಡಿನಲ್ಲಿ ಪೋಲೀಸರು ೩ ಕೊಮ್ಯುನಿಸ್ಟರನ್ನು ಹಿಡಿದಿರುವರು. ಈ ಗಲಾಟೆಯಲ್ಲಿ ೨ ಪೋಲಿಸರು ಮತ್ತು ೧ ಕೊಮ್ಯುನಿಸ್ಟನು ಕೊಲ್ಲಲ್ಪಟ್ಟಿದ್ದು ಹಲವರಿಗೆ ಗಾಯವಾಗಿದೆ.

—ಚೀನಾ ದೇಶದಲ್ಲಿ ಅತ್ಯಧಿಕವಾದ ಮಳೆ ಸುರಿದು ಹಲವು ಮನೆಗಳು ಬಿದ್ದು ಹೋಗಿರುವವು.

—ಇಂಡಿಯಾ ದೇಶದಿಂದ ಹೋದ ಹಾಜಿಯಾತ್ರಿಕರು ಮಕ್ಕಾ ಪಟ್ಟಣವನ್ನು ತಲಪಿ, ಈ ತಿಂಗಳು ಮೊದಲನೆಯ ತಾರೀಕಿನ ದಿವಸ ಯಾತ್ರೆಯನ್ನು ಪೂರೈಸಿದರು.

—ಉಷ್ಣವಲಯದಲ್ಲಿ ಬೆಳೆಯತಕ್ಕ ಬೆಳೆಗಳ ವಿಚಾರವನ್ನು ವಿದ್ಯಾರ್ಥಿಗಳಿಗೆ ಬೋಧಿಸುವುದಕ್ಕಾಗಿ ಒಂದು ಉಷ್ಣವಲಯದ ವ್ಯವಸಾಯದ ಕಾಲೇಜನ್ನು ಸ್ಥಾಪಿಸುವ ವಿಷಯ ಪ್ರಯತ್ನಗಳು ನಡೆಯುತ್ತಲಿವೆ.

—ಚೀನಾ ದೇಶದಲ್ಲಿ ಪಾದ್ರಿಗಳ ಹಾವಳಿಯೇ ಪಾಶ್ಚಾತ್ಯರಿಗೂ, ಪೌರ್ವಾತ್ಯರಿಗೂ ಮನಸ್ತಾಪಕ್ಕೆ ಕಾರಣವಾಗಿದೆಯೆಂದು ಕೆಲವರು ಅಭಿಪ್ರಾಯಪಡುವರು. ಈ ವಿಷಯಕ್ಕೆ ಪಾಶ್ಚಾತ್ಯರ ಗಮನವು ಕೊಡಲ್ಪಡುವುದಾವಶ್ಯಕ.

—ಅಮೇರಿಕಾ ದೇಶದ ಸಂಯುಕ್ತ ಸಂಸ್ಥಾನದಲ್ಲಿರುವ ಮೆಚ್ಚಿಗನ್ ಯೂನಿವರ್ಸಿಟಿಯಲ್ಲಿ ವಿದ್ಯಾಭ್ಯಾಸವನ್ನು ಮಾಡತಕ್ಕಂಥ, ಚೀನಾ, ಜಪಾನ್ ಕೊರಿಯಾ ಮತ್ತು ಇಂಡಿಯಾ ದೇಶದ ಸ್ತ್ರೀಯರಿಗೆ ವೇತನಗಳನ್ನು ಕೊಡಲು ಮಿ। ಲೆವಿ ಬಾರ್‌ಬರ್‌ರವರು ಒಂದು ನಿಧಿಯನ್ನು ಏರ್ಪಡಿಸಿರುವರು. ಇಲ್ಲಿ ವಿದ್ಯಾಭ್ಯಾಸವನ್ನು ಹೊಂದಿದ ಸ್ತ್ರೀಯರು ತಮ್ಮ ಸ್ವದೇಶಕ್ಕೆ ಹಿಂತುರಿಗಿ ಅಲ್ಲಿ ದೇಶಸೇವೆಯನ್ನು ಮಾಡಬೇಕೆಂಬುದೇ ಇದರ ಮುಖ್ಯ ನಿರ್ಣಯವಾಗಿರುತ್ತದೆ.

—ದಕ್ಷಿಣ ಆಫ್ರಿಕದಲ್ಲಿ ವರ್ಣಭೇದದ (ಹಿಂದೀಯರಿಗೆ ವಿರೋಧವಾದ) ಮಸೂದೆಯನ್ನು ಅಲ್ಲಿಯ ಸೆನೆಟಿನವರು ಬಹುಮತದಿಂದ ತಿರಸ್ಕರಿಸಿರುವರು.

—ಜಪಾನಿನಲ್ಲಿ ಕೂಲಿಯವರಿಂದ ಹಗಲು ರಾತ್ರಿ ಕೆಲಸ ಮಾಡಿಸಿ ತಯಾರಿಸಿರುವ ಬಟ್ಟೆಯೊಂದಿಗೆ ಮೇಲಾಟದಲ್ಲಿ ಹಿಂದುಸ್ಥಾನದ ಗಿರಣಿಗಳು ಸೋಲುವುದರಿಂದ, ಇಲ್ಲಿನ ಗಿರಣಿಗಳ ಮೇಲೆ ಹೊರಿಸಿದ ಶೇಕಡಾ ೩॥ ತೆರಿಗೆಯನ್ನು ತೆಗೆಯಬೇಕೆಂದು ಗಿರಣಿ ಮಾಲಿಕರು ಕೇಳಿಕೊಂಡರು. ಹಿಂದುಸ್ಥಾನ ಸರಕಾರದ ಅರ್ಥಸಚಿವರು "ಜಪಾನಿನ ಮೇಲಾಟವೊಂದೇ ಇಲ್ಲಿನ ಗಿರಣಿಗಳ ಕಷ್ಟಕ್ಕೆ ಕಾರಣವಲ್ಲ" ಎಂದರು. ಬೇರೆ ಯಾವ ಕಾರಣಗಳು ಇವೆ ಎಂಬುದನ್ನು ಹೇಳಲಿಕ್ಕೆ ಅವರಿಗೆ ಬಾರದು. ಇಲ್ಲಿನ ಗಿರಣಿಗಳ ಮೇಲೆ ತೆರಿಗೆ ಹೊರಿಸದಿದ್ದರೆ ಲೆಂಕೆಶಯರಿಗೆ ಮೋಸವಾದೀತೂ ಎಂಬುದೇ ಸರಕಾರದ ಯೋಚನೆಯೆಂದು ಹಲವರ ಅಭಿಪ್ರಾಯ.

—ಚೀನಾ ದೇಶದಲ್ಲಿರುವ ಪರದೇಶೀಯರನ್ನು ಹೊರಗೆ ತಳ್ಳಬೇಕೆಂದು ಅಲ್ಲಿನ ಯುವಕರು ಸಾಧಿಸುತ್ತಾರೆ. ಅವರಿಗೆ ರುಶ್ಯದ ಬೊಲ್ಶೆವಿಷ್ಟರು ದುರ್ಬೋಧನೆ ಕೊಡುತ್ತಿದ್ದಾರೆಂದು ಬ್ರಿಟಿಷ್ ಪತ್ರಕರ್ತರು ಪ್ರಕಟಿಸುತ್ತಿದ್ದರು. ಆದರೆ ನಿಜಸ್ಥಿತಿಯು ಬೇರೆ. ಬರ್ಟ್ರೆಂಡ್ ರಸ್ಸೆಲ್ ಎಂಬ ಇಂಗ್ಲೀಷ್ ಮಹಾಶಯನದ ಹೇಳಿಕೆಯೇನೆಂದರೆ—"ಹಿಂದೆ ಯುದ್ಧ ಮಾಡಿ ಬಲಾತ್ಕಾರದಿಂದ ಚೀನದ ಕೆಲವು ಬಂದರುಗಳನ್ನು ಇಂಗ್ಲೀಷರು ವಶಮಾಡಿಕೊಂಡರು. ಅವುಗಳಲ್ಲಿ ಇಂಗ್ಲೀಷ್ ಜನರ ಕಾರಖಾನೆಗಳು ಹಲವು ಇವೆ. ಅವುಗಳಲ್ಲಿ ಚೀನದ ಕೂಲಿಗಳನ್ನು ಹಗಲು ರಾತ್ರಿ ಕೆಲಸ ಮಾಡುವಂತೆ ಒತ್ತಾಯ ಮಾಡುತ್ತಾರೆ. ಅವರು ಸ್ವಲ್ಪ ತಪ್ಪು ಮಾಡಿದರೆ ಚಡಿ ಹೊಡೆಯುವುದೂ, ಗುಂಪಾಗಿ ಬಂದವರನ್ನು ಶಸ್ತ್ರಹೀನರಾದರೂ ಗುಂಡಿನ ಮಳೆಯಿಂದ ಕೊಲ್ಲುತ್ತಾರೆ. ಬ್ರಿಟಿಷ್ ಅಧಿಕಾರಿಗಳು ತಮ್ಮ ಸ್ವಾರ್ಥವೊಂದನ್ನೇ ಸಾಧಿಸದೆ ನ್ಯಾಯ ಮಾರ್ಗವನ್ನು ಅರಿಯಬೇಕು."

ಒಳದೇಶ ವರ್ತಮಾನ.

—ಕಲಕತ್ತೆಯ ಕೊರ್ಪೊರೇಶನಿನ ಮೇಯರ ಸ್ಥಾನಕ್ಕೆ ಸ್ವರಾಜ್ಯ ಪಕ್ಷದ ಮುಖ್ಯಸ್ಥ ರಾ. ಶ್ರೀ. ಸೇನಗುಪ್ತರು ಚುನಾಯಿಸಲ್ಪಟ್ಟಿರುವರು. ಇವರಿಗೆ ೫೨ ಮತಗಳು ಇವರಿಗೆ ಎದುರಾಗಿ ನಿಂತ ಮಿ. ಜೋರ್ಜ ಮೊರ್ಗನೆಂಬವರಿಗೆ ಬರೆ ೧೨ ಮತಗಳು ಬಿದ್ದವು.

—ಕಲಕತ್ತೆಯ ಯುರೋಪಿಯನ್ ಎಸೋಸಿಏಶನಿನ ಸಭೆಗೆ ಮ. ಗಾಂಧಿಗಳು ಹಾಜರಾಗುವವರಿದ್ದು ಅಲ್ಲಿ ಸ್ವರಾಜ್ಯಪಕ್ಷದ ಮುಖಂಡರನ್ನು ಮೇಳವಿಸಿ[illegible]

—ಶಿಂಗಪುರದ ಮುನ್ಸಿಪಾಲಿಟಿಯ ಅಧ್ಯಕ್ಷಸ್ಥಾನಕ್ಕೆ ಡಾ. ಐಹೋಗಿ ಎಂಬವರು ಚುನಾಯಿಸಲ್ಪಟ್ಟರು.

—ಶ್ರೀಮತಿ ಸರೋಜಿನಿಯವರು ಕಲಕತ್ತೆಗೆ ಹೋಗಿರುವಾಗ ಒಬ್ಬ ಬಾತಮೀದಾರನು ಅವರ ಭೇಟಿಯನ್ನು ಪಡೆದನು. ಮುನ್ಸಿಪಾಲಟಿಗಳಲ್ಲಿ ಮತ್ತು ಕಾಯಿದೆ ಕೌನ್ಸಿಲುಗಳಲ್ಲಿ ಸ್ತ್ರೀಯರು ಚುನಾವಣೆಗೆ ನಿಲ್ಲಬೇಕೆಂದೂ [illegible]

—ಅಕಾಲಿಯ ಸೈನಿಕರಲ್ಲಿ ೫೦ ಜನರನ್ನು ಸಾಭಾದಿಂದ ಬಿಡುಗಡೆ ಮಾಡಿದ ಸುದ್ದಿಯು ಬಂದಿದೆ.

—ಗಾಂಧಿಜಿಯವರು ರಾಷ್ಟ್ರೀಯ ಸಭೆಯ ತಮ್ಮ ಅಧ್ಯಕ್ಷಸ್ಥಾನಕ್ಕೆ ರಾಜಿ ಕೊಟ್ಟಿರುವರು. ಆದರೆ ಈ ವಿಚಾರವು ಇನ್ನೂ ತೀರ್ಮಾನವಾಗಲಿಲ್ಲ.

—ಪಂಡಿತ ಮೋತಿಲಾಲನೇಹರುಗಳ ಶ್ವಾಸಕಾಸದ ಅಸ್ವಸ್ಥವು ಅವರು ಕಲಕತ್ತೆಯಲ್ಲಿರುವಾಗ ಒಂದು ದಿನ ವಿಪರೀತವಾಗಿ ಇಡಿ ಒಂದು ರಾತ್ರಿ ನಿದ್ದೆ ಬರಲಿಲ್ಲ. ಅವರು ಕಲಕತ್ತೆಯನ್ನು ಬಿಟ್ಟು ಅಲಹಾಬಾದಕ್ಕೆ ಬಂದಿರುವರು.

—ಅಮೃತಸರದಲ್ಲಿ ಮಹಮ್ಮದೀಯರ ಪರಿಷತ್ತು ಸೇರಿ ಮಹಮ್ಮದೀಯರಿಗೆ ಪ್ರತ್ಯೇಕವಾಗಿ ಪ್ರಾತಿನಿಧ್ಯವು ಅವಶ್ಯವಾದರಿಂದ ಲಖನೌದೊಳಗೆ ರಾಷ್ಟ್ರೀಯ ಸಭೆಯಲ್ಲಿ ಆದ ಒಪ್ಪಂದವನ್ನು ತಿರುಗಿ ಈಗ ಹೊಸ ಪ್ರಾತಿನಿಧ್ಯವು ಬೇಕೆಂದು ಅಭಿಪ್ರಾಯಪಟ್ಟು ಠರಾವು ಮಾಡಿರುವರು.

—ಕಾಲಿಕೋಟೆಯಲ್ಲಿ ಪೂರ್ವಪದ್ಧತಿಗನುಸಾರವಾಗಿ ಆಷಾಢ ಬಹುಳ ೧೧ ದಿನ ವಿಠೋಬ ದೇವರ ಮೆರವಣಿಗೆಯು ಹೊರಟಿತು. ಆಗ ಮಹಮ್ಮದೀಯರು ಮೆರವಣಿಗೆಯ ಮೇಲೆ ಹಲ್ಲೆಯನ್ನು ಮಾಡಿ ೪ ಜನ ಹಿಂದುಗಳನ್ನು ಕೊಂದುಬಿಟ್ಟರು! ಈ ಪ್ರಕಾರ ನಾಲ್ಕು ಜನರನ್ನು ಮರಣಕ್ಕೆ ಗುರಿಪಡಿಸಿ ಹಲವರನ್ನು ಘಾಯಪಡಿಸಿರುವರು.

—ಕುಂಭಕೋಣದಲ್ಲಿಯ ಕಾಮಕೋಟಿ ಪೀಠದ ಶಂಕರಾಚಾರ್ಯ ಪೀಠರವರು ವೇದಾಭ್ಯಾಸಕ್ಕೆ ಉತ್ತೇಜನ ಕೊಡುವದಕ್ಕಾಗಿ ಸ್ಮಾರ್ತ, ವೈಷ್ಣವ, ಮಾಧ್ವ ವಿದ್ಯಾರ್ಥಿಗಳನ್ನು ಪರೀಕ್ಷಿಸಿ ಪಾಸಾದವರಿಗೆ ಪದವಿಗಳನ್ನೂ, ಪಾರಿತೋಷಿಕಗಳನ್ನೂ ಕೊಡುವ ಏರ್ಪಾಡನ್ನು ಮಾಡಿರುವರು.

—ಮಾರನೆಯ ರೆಗ್ಯುಲೇಶನಿನಿಂದ ಹಿಡಿಯಲ್ಪಟ್ಟ ಸಂತೋಷಕುಮಾರ ಮಿತ್ರರೆಂಬವರಿಗೆ ಎಮ್. ಎ. ಪರೀಕ್ಷೆಗೆ ಕೂಡ್ರಲು ಕಲಕತ್ತಾ ಯುನಿವರ್ಸಿಟಿಯು ಅಪ್ಪಣೆಯನ್ನು ಕೊಟ್ಟಿರುವದು.

—ಸತ್ಯಾರ್ಥ ಪ್ರಕಾಶದೊಳಗಿನ ೧೪ನೆಯ ಅಧ್ಯಾಯವು ಕಾಯಿದೆಗೆ ವಿರುದ್ಧವಾಗಿದೆ ಎಂದು ಸರಕಾರವು ನಿರ್ಣಯಿಸಬೇಕೆಂದು ಮುಸಲ್ಮಾನರು ಕೇಳಿಕೊಂಡಿರುವರು. ಆದರೆ ಸರಕಾರವು ಈ ರೀತಿ ವರ್ತಿಸಿದರೆ ಜನಕ್ಷೋಭವುಂಟಾದೀತೆಂದು ಆರ್ಯಸಮಾಜದವರು ಎಚ್ಚರಿಕೆಯನ್ನು ಕೊಟ್ಟಿರುವರು. ಮತ್ತು ಆ ೧೪ನೆಯ ಅಧ್ಯಾಯದ ೫ ಲಕ್ಷ ಪ್ರತಿಗಳನ್ನು ಪುನಃ ಮುದ್ರಿಸಿ ಹಂಚಬೇಕೆಂಬುದಾಗಿ ಠರಾವನ್ನು ಮಾಡಿರುವರು.

—ಬಂಗಾಲದಲ್ಲಿ ಮೈಮನಸಿಂಗದಲ್ಲಿ ಒಂದು ದಿನ ದರೋಡೆಯು ಬಿದ್ದು ಬೊಂಬಿನ ಆಘಾತದಿಂದ ಒಬ್ಬ ಶ್ರೀಮಂತನು ಮೃತನಾದನು.

—ಹಿಂದುಸ್ಥಾನದ ಅಸ್ಪೃಶ್ಯರ ವಿಷಯ ಸಿ. ಎಫ್ ಎಂಡ್ರ್ಯೂಸರವರು 'ಮೆಂಚೆಸ್ಟರ ಗಾರ್ಡಿಯನ' ಪತ್ರದಲ್ಲಿ ಲೇಖಗಳನ್ನು ಪ್ರಕಟಿಸುತ್ತಾರೆ. ಮೊದಲನೆಯ ಲೇಖದಲ್ಲಿ ಮಲಬಾರಿನಲ್ಲಿ 'ನಾಯಡಿ' ಜಾತಿಯವರು ಮೇಲ್ಜಾತಿಯವರನ್ನು ಕಾಣಲಿಕ್ಕೆ ಸಹ ಕೂಡದಿತ್ತು. ಇಂಥವರನ್ನು ಸಹ ಉದ್ಧಾರ ಮಾಡಲಿಕ್ಕೆ ಮಹಾತ್ಮಾ ಗಾಂಧಿಗಳ ಅನುಯಾಯಿಗಳು ಮಾಡುವ ಶ್ರಮವನ್ನು ಚೆನ್ನಾಗಿ ವರ್ಣಿಸಿದ್ದಾರೆ. ಮಹಾತ್ಮರು ಕಳೆದ ಸಲ ಆ ಸ್ವಾಮಿಗೆ ಹೋದ ದೆಶೆಯಿಂದ ಅಲ್ಲಿ ಅಫೀಮು ಸೇದುವುದು ಬಹಳ ಕಡಿಮೆಯಾಗಿದೆಯಂತೆ.

—ತಾರಕೇಶ್ವರದ ಮಹಂತರು ದೇಶಬಂಧು ದಾಸರೊಡನೆ ಒಪ್ಪಂದವನ್ನು ಮಾಡಿ ದೇವಸ್ಥಾನದ ಆಡಳಿತೆಯನ್ನು ಒಂದು ಕಮಿಟಿಯ ವಶ ಬಿಟ್ಟುಕೊಟ್ಟಿದ್ದರು. ಹಾಗೆ ಮಾಡಲಿಕ್ಕೆ ಅವರಿಗೆ ಅಧಿಕಾರವಿಲ್ಲವೆಂದೂ, ದಾಸರ ಪಕ್ಷದವರೇ ಹೆಚ್ಚಾಗಿ ಕಮಿಟಿಯಲ್ಲಿ ಇದ್ದುದರಿಂದ ಅದು ಸಿಂಧುವಲ್ಲ, ಎಂಬ ನೆವದಿಂದ ಸರಕಾರದವರೇ ಒಬ್ಬ ರಿಸೀವರನನ್ನು ನಿಯಮಿಸಿದ್ದಾರೆ. ಮಹಂತರು ಈಗ ಅಪೀಲು ಮಾಡುತ್ತಾರಂತೆ.

—ಕಳೆದ ಸಾರಿ ಎಸ್ಸೆಂಬ್ಲಿಯಲ್ಲಿ ಡಾಕ್ಟರ್ ಗೌರರವರು "ಏಜ್ ಒಫ್ ಕನ್ಸೆಂಟ್ ಬಿಲ್" ಎಂಬ ಬಿಲ್ಲನ್ನು ತಂದಿದ್ದರು; ಆದರೆ ಅದು ಸಾರ್ಥಕವಾಗಲಿಲ್ಲ. ಬರುವ ಸಲ "ಚಿಲ್‌ಡ್ರನ್ಸ್ ಪ್ರೊಟೆಕ್ಷನ್ ಬಿಲ್" (ಮಕ್ಕಳನ್ನು ಕಾಯುವ ಕಾಯಿದೆ) ಎಂಬ ಹೆಸರಿನ್ನುಳ್ಳ ಹೊಸದೊಂದು ಬಿಲ್ ತರಲಿಕ್ಕಿರುವರು. ಅದಕ್ಕೆ ಅನುಮೋದನವು ಸಿಕ್ಕಿದರೆ ಹದಿನಾಲ್ಕು ವರ್ಷಗಳಿಗಿಂತ ಚಿಕ್ಕವಳಾದ ಹುಡುಗಿಗೆ ಗರ್ಭಾಧಾನ ಪ್ರಸ್ತವನ್ನು ಮಾಡಿದರೆ ಅವಳ ಗಂಡನಿಗೆ ಸರಕಾರದವರು ಜುರುಮಾನೆಯನ್ನಾಗಲಿ ಶಿಕ್ಷೆಯನ್ನಾಗಲಿ ವಿಧಿಸಬಹುದು. "ಬಾಲ್ಯವಿವಾಹದ ಮೂಲಕ ಚಿಕ್ಕ ಹುಡುಗಿಯರಲ್ಲಿ ಮಕ್ಕಳು ಹುಟ್ಟಿ ಜನಾಂಗವು ದುರ್ಬಲವಾಗುತ್ತದೆ; ಅದನ್ನು ಸಕಲ ಪ್ರಯತ್ನದಿಂದ ನಿಲ್ಲಿಸಬೇಕು." ಎಂದು ಡಾಕ್ಟರ್ ಗೌರರ ಪ್ರತಿಪಾದನೆ. ಪಂಡಿತ ಮದನ ಮೋಹನ ಮಾಲವೀಯ, ದಿವಾನ್ ಬಹದೂರ್ ರಂಗಾಚಾರಿ ಮತ್ತು ಕೆಲವರು ಈಗ ನಡೆಯುವ ಪದ್ಧತಿಯು ತಪ್ಪಾದರೂ ಸುಧಾರಣೆಗೆ ದೇಶವು ಸಿದ್ಧವಿಲ್ಲವಾದ್ದರಿಂದ ಗೌರರ ಪ್ರಯತ್ನವನ್ನು ವಿರೋಧಿಸುತ್ತಾರೆ.

—ತಾವು ಆಯುರ್ವೇದವನ್ನು ಯಾವ ವಿಧದಲ್ಲೂ ಹೀಯಾಳಿಸಿಲ್ಲವೆಂದೂ, ಸಂಪೂರ್ಣ ಪಾಂಡಿತ್ಯವನ್ನು ಹೊಂದದೆ, ಧನವಿದ್ಯಾಂಸರೆಂದು ಕರೆದುಕೊಳ್ಳತಕ್ಕವರನ್ನು ಮಾತ್ರ ನಿಂದಿಸಿರುವದಾಗಿಯೂ ಆಯುರ್ವೇದದಲ್ಲಿ ಪರಿಶೋಧನೆಯ ಕೆಲಸವನ್ನು ಮಾಡುತ್ತಲಿರುವವರ ಸಂಖ್ಯೆ ಅತ್ಯಲ್ಪವಾಗಿದೆ. ಇಂತಹವರ ಸಂಖ್ಯೆಯು ದಿನಕ್ರಮೇಣ ಹೆಚ್ಚಬೇಕೆಂಬದಾಗಿ ತಾವು ಹೇಳಿರುವದಾಗಿಯೂ, ಮಹಾತ್ಮಾ ಗಾಂಧಿಯವರು ತಿಳಿಸಿರುತ್ತಾರೆ.

—ಈ ತಿಂಗಳು 7 ನೇ ತಾರೀಖಿನಲ್ಲಿ, ಹನ್ನೊಂದುಲಕ್ಷ, ಅರವತ್ತು ಸಾವಿರರೂಪಾಯೀಬೆಲೆಬಾಳುವ ಹತ್ತಿಯು ಕಲ್ಕತ್ತಾ ನಗರದ ಒಂದರಲ್ಲಿಯೇ ಸುಟ್ಟುಹೋಯಿತು.

—ಕಾನಪೂರದಲ್ಲಿ ಕಮ್ಯೂನಿಸ್ಟ ಪಕ್ಷದವರ ಆಫೀಸಿನ ಮೇಲೆ ಪೋಲಿಸರು ದಾಳಿಮಾಡಿ ಬಂದು ನಿರಾಕ್ಷೇಪವಾದ ಕೆಲವು ಗ್ರಂಥಗಳನ್ನು ಜಪ್ತಿಮಾಡಿಕೊಂಡೊಯ್ದರು.

—ಮೈಮನಸಿಂಗ್ ಜಿಲ್ಹೆಯ ಖರಿಯಾ ಎಂಬ ಊರಲ್ಲಿ ವಾಸಿಸುವ ಕೈಲಾಸ ಚಂದ್ರನೆಂಬವನ ಮನೆಯಲ್ಲಿ ದರೋಡೆಯಾಯಿತು. ದರೋಡೆಗಾರರು ಮೈ ಮೇಲೆ ಬಾಂಬನ್ನು ಎಸೆದುದರಿಂದ ಕೈಲಾಸ ಚಂದ್ರನು ಕೂಡಲೆ ಮರಣವನ್ನೈದಿದನು.

—ಶಿಖ ಗುರುದ್ವಾರ ಬಿಲ್ಲು ಪಂಜಾಬ ಕೌನ್ಸಿಲಿನಲ್ಲಿ ಕಳೆದ ವಾರ [illegible] ಪಾಸಾಯಿತು. ಮತ್ತು ಈಗ ಅದು ಗವರ್ನರ [illegible]

—ಮುಂಬಯಿಯಿಂದ [illegible] ಗಳ ಮಧ್ಯದಲ್ಲಿ ಅವಘಾತವಾಗಿ, ಎಂಜಿನ್ ಮತ್ತು ೪ ಡಬ್ಬಿಗಳು ಹಳಿಗೆಯಿಂದ ಕೆಳಗೆ ಬಿದ್ದವು. ಯಾರಿಗೂ ಅಪಾಯವಾಗಲಿಲ್ಲ.

—ಮುಂಬಯಿಯ ಪ್ರಾಂತಿಕ ರಾಷ್ಟ್ರಸಂಘದವರು ಬರುವ ಡಿಸೆಂಬರ ತಿಂಗಳಲ್ಲಿ ಕಾನಪುರದಲ್ಲಿ ನಡೆಯುವ ರಾಷ್ಟ್ರೀಯ ಸಭೆಯ ಅಧ್ಯಕ್ಷಸ್ಥಾನಕ್ಕೆ ಶ್ರೀ ಅರವಿಂದ ಘೋಷ, ಶ್ರೀಮತಿ ಸರೋಜಿನಿ ನಾಯುಡು ಮತ್ತು ಲಾಲಾ ಲಜಪತರಾಯರ ಹೆಸರುಗಳನ್ನು ಸೂಚಿಸಿರುತ್ತಾರೆ.

—ಬಂಗಾಲ ಪ್ರಾಂತಕ್ಕೆ ಸೇರಿದ ಮುನಸಿಗಂಜ ಎಂಬಲ್ಲಿ ಸಾಧು ಎಂಬ ಕಾವಲುಗಾರನು ರಾತ್ರಿ ಕಾವಲು ಮಾಡುವಾಗ ಏಕಾಏಕಿ ಗಾಬರಿಗೊಂಡನು. ಊರೊಳಗಿನ ಜನರು ಬಂದು ನೋಡಿ, ಇವನಿಗೆ ಭೂತ ಹಿಡಿದಿದೆ ಎಂದು ನದಿಗೆ ಒಯ್ದು ನೀರಲ್ಲಿ ಮುಳುಗಿಸಿದರು. ಆಗ ಅವನು ನೀರಲ್ಲಿ ಮುಳುಗಿ ಸತ್ತುಹೋದನು. ಪೋಲಿಸರು ೫ ಜನರನ್ನು ಹಿಡಿದಿರುವರು.

—ಕೆಲವು ಮಾಳಿ ಜನರು ಕೊಟ್ಟಿನಾಣ್ಯಗಳನ್ನೂ, ಅವುಗಳನ್ನು ಮಾಡುವ ಸಾಧನಗಳನ್ನೂ ಇಟ್ಟುಕೊಂಡದ್ದಕ್ಕಾಗಿ ಠಾಣೆಯ ಅ। ಜಜ್ಜ ಕೋರ್ಟಿನಲ್ಲಿ ವಿಚಾರಣೆ ನಡೆಯಿತು. ಒಬ್ಬ ಆರೋಪಿಗೆ ೪ ವರ್ಷ ಕಠಿನ ಶಿಕ್ಷೆಯೂ, ೪ ಜನ ಸ್ತ್ರೀ ಆರೋಪಿಗಳಿಗೆ ಪ್ರತಿಯೊಬ್ಬರಿಗೂ ೩ ವರ್ಷ ಕಠಿಣ ಶಿಕ್ಷೆಯೂ ವಿಧಿಸಲ್ಪಟ್ಟಿತು. ೨ ಜನ ಆರೋಪಿಗಳು ೧೦ ಮತ್ತು ೧೪ ವರ್ಷ ವಯಸ್ಸಿನವರಿರುವದರಿಂದ ಅವರನ್ನು ೩ ವರ್ಷಗಳ ವರೆಗೆ ರಿಫರ್ಮೆಟರಿ ಸ್ಕೂಲಿನಲ್ಲಿ ಇಡಬೇಕೆಂದು ಹುಕುಂ ಆಗಿದೆ.

ದಕ್ಷಿಣ ಕನ್ನಡ.

ಮುಲ್ಕಿ:—ಇಲ್ಲಿಯ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ "ಶ್ರೀಮತ್ ವಿಜಯೇಂದ್ರ ತೀರ್ಥ ಧಾರ್ಮಿಕ ಸಂಸ್ಕೃತ ವಿದ್ಯಾಶಾಲೆ" ಎಂಬ ಒಂದು ವಿದ್ಯಾಶಾಲೆಯನ್ನು ಇದೇ ಕ್ರೋಧನ ಸಂವತ್ಸರದ ಶ್ರಾವಣ ಶುದ್ಧ ೫ಯು ರವಿವಾರ (ತಾ. ೨೬-೭-'೨೫) ಬೆಳಗ್ಗೆ ಗಂಟೆ ೧೧ಕ್ಕೆ ತೆರಿಯಬೇಕಾಗಿ ನಿಶ್ಚಯಿಸಿರುತ್ತದೆ.

ಬಂಟ್ವಾಳ:—ಇಲ್ಲಿ ಇದೇ ತಾ. ೧೩ನೇ ಸೋಮವಾರ ಬಂದ ನೆರೆ ತಾ. ೧೪ಕ್ಕೆ ಇಳಿಯಿತು. ಒಟ್ಟಾರೆ ಹೇಳುವದಾದರೆ ಕಳೆದ ವರ್ಷಕ್ಕಿಂತ ಈ ವರ್ಷ ಸಮ ಅರೆವಾಸಿ ನೆರೆ (ಅಂದರೆ ೨ ಕೋಲು ಕಡಿಮೆ) ಎಂತ ಹೇಳಬಹುದು. ಜನರೆಲ್ಲ ಪಟ್ಟಣಬಿಟ್ಟು ಎತ್ತರ ಸ್ಥಳಕ್ಕೆ ಓಡಿ ಹೋಗಿದ್ದರು. ಈ ನೆರೆ ಇಳಿದು ನೀರು ಹೊಳೆಯ ಒಳಗೆ ನಿಂತದೆ. ಈಗ ಸಾಮಾನ್ಯ ಜನರೂ ಪಟ್ಟಣಕ್ಕೆ ಬರುತ್ತಿದ್ದಾರೆ. ಆದರೆ ಈ ನೆರೆ ನಿಕ್ಕದಲ್ಲಿ ಬರುವದಕ್ಕಿಂತ ಒಂದೆರಡು ಕೋಲು ಹೆಚ್ಚಿತ್ತು. ಇದರಿಂದ ಮೂಡಬಿದ್ರೆಗೆ ಹೋಗುವ ಮಾರ್ಗ ಕೊಟ್ರಮ್ಮನಂಗಡಿ ಎಂಬಲ್ಲಿ ಪೂರಾ ಜರಿದು ಒಂದೆರಡು ಆಳುದ್ದ ಹೊಂಡಬಿದ್ದದೆ ಇದು ಮತ್ತು ಬೆಳ್ತಂಗಡಿಗೆ ಹೋಗುವ ಮಾರ್ಗ ಬದ್ಧೆಕಟ್ಟೆ ಬಳಿ ಸಂಕದ ಹತ್ತಿರ ಪೂರಾ ಕೊರೆದು ಹೊಂಡಬಿದ್ದದೆ. ಇವೆರಡು ಮಾರ್ಗ ಬೇಗನೆ ದುರುಸ್ತಿಮಾಡದಿದ್ದರೆ ಗಾಡಿಗಳಾಗಲಿ ಮೋಟಾರು ಬಸ್ಸುಗಳಾಗಲಿ ಆಡುದುರಷ್ಟು ಮಾಡುವದು ತುಂಬಾ ಕಷ್ಟವಾಗಿದೆ. ಇದೇ ತಾ. ೧೮ಕ್ಕೆ ಜಿಲ್ಲಾ ಕಲೆಕ್ಟರ್ ದೊರೆಗಳು ಸ್ವತಾಹ ಕಣ್ಣಿನಿಂದ ನೋಡಿ ಹೋಗಿರುತ್ತಾರೆ. ಇನ್ನು ನಮ್ಮ ತಾಲೂಕು ಬೋರ್ಡ ಪ್ರೆಸಿಡೆಂಟರ ಆಗಮನವನ್ನು ನಿರೀಕ್ಷಿಸುತ್ತಿದ್ದಾರೆ. ಇಂದಿಗೆ ಮೂರು ವರ್ಷದಿಂದ ಇಲ್ಲಿಯ ನಿವಾಸಿಗಳ ಗತಿ ಇದೇ ಆಯಿತು.

ಕಾಸರಗೋಡು:—ಇದೇ ತಾ. ೧೫ರಲ್ಲು ಇಲ್ಲಿಯ ಸರಕಾರಿ ನೌಕರರ, ಸಹಕಾರಿ ಸಂಘದ ಮಹಾಸಭೆಯೊಂದು, ಸಂಘದ, ಅಧ್ಯಕ್ಷರಾದ. ಇಲ್ಲಿಯ ಮಾನ್ಯ ತಹಸೀಲದಾರ ರಾ। ಟಿ. ಬಿ. ಶಂಕರರಾಯರವರ ಅಧ್ಯಕ್ಷತೆಯಲ್ಲಿ ಸೇರಿ, ಸದರಿ, ಸಂಘವನ್ನು ಮಂಗಳೂರು ಜಿಲ್ಲಾ ಸರಕಾರಿ ನೌಕರರ ಸಂಘದ ಶಾಖೆಯನ್ನಾಗಿ ಮಾಡಬೇಕಾಗಿ ಠರಾವು ಮಾಡಿಯದೆ. ಇದು ಅತಿ ಸಂತೋಷಕರವಾದ ಸಂಗತಿಯಾಗಿರುತ್ತದೆ. ಇದರಿಂದ ಈ ಸಂಘದಲ್ಲಿ ಈ ವರೆಗೆ ಮೆಂಬರರಾಗಿ ಸೇರದ ಸರಕಾರಿ ನೌಕರರು ಇನ್ನಾದರೂ ಸೇರಿ ತಮ್ಮ ಅನುಭವಗಳನ್ನು ಪಂಚಾಯಿಸಿಕೊಳ್ಳುತ್ತಾ ಪ್ರಯೋಜನ ಪಡೆಯಬಹುದು. ಈ ಸಂಘವೂ ಈ ವರೆಗೆ, ಅತೀ ಚಲೋ ರೀತಿಯಲ್ಲಿ ನಡೆಯುತ್ತದಲ್ಲದೆ, ಇದೆಲ್ಲವೂ ಸಂಘದ ಅಧ್ಯಕ್ಷರಾದ, ಇಲ್ಲಿಯ ತಹಶೀಲದಾರರಾದ, ಮ॥ ರಾ॥ ರಾ॥ ಟಿ. ಭವಾನಿಶಂಕರರಾಯರವರ ಹಾಗು ಸೆಕ್ರೆಟರಿಗಳಾದ ಹೆಡ್ ಎಕೌಂಟೆಂಟರಾದ ಮ॥ ರಾ॥ ಬಿ. ಸೋಮಪ್ಪನವರು, ಸ್ವತಹ ತಕ್ಕೊಳ್ಳುವ ಪರಿಶ್ರಮದಿಂದಲೇ ಎಂದರೆ, ಅತಿಶಯೋಕ್ತಿಯಾಗಲಾರದು. ಸಂಘವು ಈ ವರೆಗಿನಂತೆ ಇನ್ನೂ ಹೆಚ್ಚು ಚಲೋ ರೀತಿಯಲ್ಲಿ ನಡೆಯಲೆಂದು ಶ್ರೀ ದೇವರನ್ನು ಪ್ರಾರ್ಥಿಸುತ್ತೇವೆ. ಈ ಸಂಘದ ಲೆಖ್ಖಪತ್ರ ಪರಿಶೋಧಿಸಲಾಗಿ ಯಾವ ದೋಷವೂ ಕಂಡುಬರಲಿಲ್ಲ.

ಇದೇ ತಾ. ೨೦ನೇ ಸಾಯಂಕಾಲ ಇಲ್ಲಿಯ, ಸಹಕಾರ ಯೂನಿಯನ್ ಆಫೀಸಿನಲ್ಲಿ ಶ್ಯಾಮ ೫-೩೦ ಘಂಟೆ ಸಮಯಕ್ಕೆ ನಮ್ಮ ಜಿಲ್ಲೆಯ, ಸಹಕಾರಿ ಸಂಘಗಳ ಅಸಿಸ್ಟಾಂಟ ರಿಜಿಸ್ಟ್ರಾರರಾಗಿರುತ್ತಿದ್ದು ಈಗ ಡಿಪ್ಯುಟಿ ರಿಜಿಸ್ಟ್ರಾರರಾಗಿ ಬಡ್ತಿಹೊಂದಿದ ಮಾನ್ಯ ಮ॥ ರಾ॥ ರಾ॥ ಗಿರಿಯಪ್ಪನವರ, ಸ್ಮರಣಾರ್ಥವಾಗಿ, ಇಲ್ಲಿಯ ಮುನ್ಸೀಫರಾದ, ಮ॥ ರಾ॥ ರಾ॥ ಯು. ರಾಮಪ್ಪನವರು ಅಧ್ಯಕ್ಷತೆಯಲ್ಲಿ ಒಂದು ಟೀಪಾರ್ಟಿ ಸತ್ಕಾರವು ನಡೆಯಿತು. ಕೂಡಿದ ಸಭೆಯವರಲ್ಲಿ ರಾ। ಪಟೇಲ್ ನರಸಿಂಗ ನ್ಯಾಕರವರೂ, ಅಧ್ಯಕ್ಷರೂ, ವ ಇತರರೂ ಕೂಡಿ, ರಾ। ಗಿರಿಯಪ್ಪನವರ ಉದಾರ ಸ್ವಭಾವ, ಮಾನ್ಯ ನಡತೆ ವಗೈರೆಗಳ ಕುರಿತು ಚಲೋ ಭಾಷಣಗಳನ್ನೂ ಕೊಟ್ಟದ್ದಲ್ಲದೆ, ರಾ। ಗಿರಿಯಪ್ಪನವರಿಗೆ ಇನ್ನೂ ಹೆಚ್ಚಿನ ಬಡ್ತಿಯು ಬೇಗನೇ ಸಿಗಲೆಂದು ಪ್ರಾರ್ಥಿಸಿ ಕೊನೆಗೆ, ಗಾಯನ ಸಂಗೀತಗಳಿಂದ ಅವರನ್ನು, ಅಧ್ಯಕ್ಷರನ್ನು ಸತ್ಕರಿಸಿ, ಸಭೆಯು ಮುಕ್ತಾಯವಾಯಿತು. ಮಾನ್ಯ ಡಿಪ್ಯುಟಿ ರಿಜಿಸ್ಟ್ರಾರರು ಚಿರಕಾಲ ಬಾಳಲೆಂದು ನಾವು ಕೋರುತ್ತೇವೆ.

ಇಲ್ಲಿ ಸಾಧಾರಣ ತಾ. ೧೦ ರಿಂದ ೧೮ರ ವರೆಗೆ ಅತಿರೇಕ ಮಳೆಯು ಬಂದಿರುತ್ತದೆ. ಈಗ ೨ ಯಾ ೩ ದಿನಗಳಿಂದ ಸ್ವಲ್ಪ ಕಡಿಮೆಯಾಗಿರುತ್ತದೆ. ಅಕ್ಕಿ ವಗೈರೆ ಜೀನಸುಗಳ ಧಾರಣೆಯು ಅತಿರೇಕವಾಗಿ ಈಗಲೇ ಏರಲಿಕ್ಕೆ ಪ್ರಾರಂಭವಾಗಿಯದೆ, ಇನ್ನು ಮುಂದಿನ ಗತಿ ಏನೋ ನೋಡಲಿಕ್ಕಿದೆ.

ಲೋಕಲ್‌ಫಂಡ್ ಲಾಟೀನುಗಳನ್ನು ಹೆಚ್ಚಿಸುವರೆ ಈ ವರೆಗೆ ಯಾವ ಏರ್ಪಾಡೂ ಆಗದಿರುವುದು ಅತೀ ಶೋಚನೀಯ.—ಕನ್ನಡ, [illegible]

ಅನುಕ್ರಮಣಿಕೆ.

ಅಗ್ರಲೇಖ — ಪುಟಗಳು.
ರಾಜಕಾರಣದ ಯುಗಕ್ಕೆ ಪುನಃ ಪ್ರಾರಂಭ — ೬
ಸ್ಫುಟವಿಚಾರಗಳು—
೧. ೨. ೩. ಕಲಕತ್ತೆಯ ಸಭೆಗಳು — "
೪. ಕಲಕತ್ತೆಯ ದಂಗೆ. — ೭
ಮಂಗಳೂರು
ವರ್ತಮಾನಸಂಗ್ರಹಗಳು—
ವಿದೇಶ—ಒಳದೇಶ ವರ್ತಮಾನ — ೫
ದಕ್ಷಿಣ ಕನ್ನಡ—ಮುಲ್ಕಿ, ಬಂಟವಾಳ, ಕಾಸರಗೋಡು — "
ಪತ್ರವ್ಯವಹಾರ ೧ — ೮
ನೆರೆಯ ಹಾವಳಿ (ಬಂಟವಾಳ) — "
ಕಲಕತ್ತೆಯೊಳಗಿನ ಮುಖಂಡರ ಸಭೆಗಳು — "
ಮದ್ರಾಸು ನ್ಯಾಯವಿಧಾಯಕ ಸಭೆ — ೪

ಸ್ವದೇಶಾಭಿಮಾನಿ.

ಶಕ ೧೮೪೬ ಶ್ರಾವಣ ಶು| ೩ಯು ಶುಕ್ರವಾರ.

ರಾಜಕಾರಣದ ಯುಗಕ್ಕೆ ಪುನಃ ಪ್ರಾರಂಭ.

ಮೇಲಿನ ಶಿರೋಲೇಖವನ್ನು ನೋಡಿ ವಾಚಕರಲ್ಲಿ ಪ್ರಥಮತಃ ಕಿಂಚಿತ್ತಾದರೂ ಆಶ್ಚರ್ಯವುಂಟಾಗದೆ ಇರಲಿಕ್ಕಿಲ್ಲ. ಆದರೆ ಮಹಾತ್ಮಾಗಾಂಧಿ ಮತ್ತು ಪಂಡಿತ ಮೋತಿಲಾಲನೇಹರು ಇವರಿಬ್ಬರೊಳಗೆ ನಡೆದಿರುವ ಪತ್ರವ್ಯವಹಾರದ ಆಶಯವನ್ನು ತಿಳಕೊಂಡಲ್ಲಿ ರಾಜಕಾರಣದ ಯುಗಕ್ಕೆ ಪುನಃ ಪ್ರಾರಂಭವಾಗುವ ಸಮಯವು ಬರಹತ್ತಿದೆ ಎಂಬುದನ್ನು ಅವರೂ ನೆನಸಿಯಾರು. ಕಲಕತ್ತೆಯಲ್ಲಿ ನೆರೆದ ಮುಖಂಡರು ಈಗಿನ ರಾಜಕೀಯ ಪರಿಸ್ಥಿತಿಯನ್ನು ಚರ್ಚಿಸಿದ ಬಳಿಕ ಮಹಾತ್ಮಾ ಗಾಂಧಿಗಳ ಮನಸ್ಸಿನ ಮೇಲೆ ಯಾವ ಪರಿಣಾಮವುಂಟಾಯಿತೊ ಅದನ್ನು ಅವರು ಪಂಡಿತ ಮೋತಿಲಾಲನೇಹರುಗಳಿಗೆ ಪತ್ರದಲ್ಲಿ ಬರೆದು ತಿಳಿಸಿದರು. ಗಾಂಧಿಜಿಗಳ ಪತ್ರಕ್ಕೆ ಪಂಡಿತಜಿಯವರು ಉತ್ತರವನ್ನು ಕೊಟ್ಟಿರುವರು. ಈ ಪತ್ರವ್ಯವಹಾರಗಳು ಈಗ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಗಾಂಧಿಜಿಗಳ ಪತ್ರದ ಮುಖ್ಯಭಿಪ್ರಾಯವೇನೆಂದರೆ, "ದೇಶಬಂಧು ದಾಸರ ಸಂಸ್ಮೃತಿಗೆ ಅನುರೂಪವಾಗುವಂತೆಯೂ, ಬರ್ಕನಹೆಡ್ಡರ ಭಾಷಣದಿಂದ ಉತ್ಪನ್ನವಾಗಿರುವ ಪರಿಸ್ಥಿತಿಯನ್ನು ಎದುರಿಸಲು ಸಮರ್ಪಕವಾಗುವಂತೆಯೂ ಒಂದು ಕಾರ್ಯವನ್ನು ಮಾಡಬೇಕಿದ್ದರೆ, ಸ್ವರಾಜ್ಯ ಪಕ್ಷವನ್ನು ಬೆಳಗಾಂವದ ಒಪ್ಪಂದದ ಬಂಧನದಿಂದ ಬಿಡುಗಡೆ ಪಡಿಸುವುದು ಅವಶ್ಯವಾಗಿದೆ. ಹೀಗೆ ಮಾಡುವುದರಿಂದ ರಾಷ್ಟ್ರೀಯ ಸಭೆಯು ಇನ್ನುಮುಂದೆ ನೂಲು ತೆಗೆಯುವ ಸಂಘವಾಗಿರಲಾರದು. ಬರ್ಕನಹೆಡ್ಡರ ಭಾಷಣಕ್ಕೆ ಸರಿಯಾದ ಉತ್ತರವಾಗಬೇಕಾದರೆ ಸ್ವರಾಜ್ಯ ಪಕ್ಷದ ಬಲವು ಹೆಚ್ಚಾಗಬೇಕು. ಸ್ವರಾಜ್ಯ ಪಕ್ಷದ ಬಲವನ್ನು ಹೆಚ್ಚಿಸುವುದರಲ್ಲಿ ಹಿಂಜರಿಯಹತ್ತಿದ್ದಾದರೆ ಅದು ನನ್ನ ಪ್ರಮಾದವಾದೀತು. ರಾಷ್ಟ್ರೀಯ ಸಭೆಯಲ್ಲಿ ರಾಜಕಾರಣಕ್ಕೆ ಅವಕಾಶವು ದೊರಕಿದ್ದಲ್ಲಿ ಸ್ವರಾಜ್ಯ ಪಕ್ಷದ ಬಲವನ್ನು ಹೆಚ್ಚಿಸಿದಂತಾಗುವುದು. ಬೆಳಗಾಂವಿನ ಒಪ್ಪಂದದ ಪ್ರಕಾರ ರಾಷ್ಟ್ರೀಯ ಸಭೆಯು ಬರೆ ವಿಧಾಯಕ ಕಾರ್ಯಕ್ರಮವನ್ನು ಮಾತ್ರ ಮಾಡಬೇಕಾದ್ದು ಆದರೆ ದೇಶದಲ್ಲಿ ಉತ್ಪನ್ನವಾಗಿರುವ ಪರಿಸ್ಥಿತಿಯನ್ನು ಮನಗಂಡು ಹೇಳುವದಾದರೆ ಬರೆ ವಿಧಾಯಕ ಕಾರ್ಯಕ್ರಮವು ಎಲ್ಲಿಗೂ ಸಾಕಾಗಲಿಕ್ಕಿಲ್ಲ. ದೇಶಹಿತಕ್ಕೆ ಆವಶ್ಯಕವಾದ ಯಾವ ಯಾವ ರಾಜಕೀಯ ವಿಷಯಗಳು ಅವಶ್ಯವಿರುವವೊ ಅವುಗಳನ್ನು ಸರಿಪಡಿಸಿಕೊಳ್ಳಲು ಸ್ವರಾಜ್ಯ ಪಕ್ಷದ ಕೈಯಲ್ಲಿ ರಾಷ್ಟ್ರೀಯ ಸಭೆಯು ಸೇರುವುದು ಅವಶ್ಯವಾಗಿದೆ. ಮತ್ತು ಈ ರೀತಿಯಿಂದ ಅದು ಸೇರುವಂತೆ ನಾನು ಮಾತ್ರವಲ್ಲ, ಓಲ್ ಇಂಡಿಯಾ ಕೊಂಗ್ರೆಸ ಕಮಿಟಿಯವರು ಕೂಡ ಮಾಡಬೇಕಾಗಿದೆ. ಸ್ವರಾಜ್ಯ ಪಕ್ಷಕ್ಕೆ ನನ್ನಿಂದ ಆಗಬೇಕಾದ ಯಾವ ಯೋಗ್ಯ ಸಹಾಯವುಂಟೊ ಅದನ್ನು ಮಾಡಲು ನಾನು ಉದ್ಯುಕ್ತನಾಗಿದ್ದೇನೆ."

ಮಹಾತ್ಮಾ ಗಾಂಧಿಗಳು ಬರೆದ ಈ ಪತ್ರಕ್ಕೆ ಪಂಡಿತಜಿಯವರು ಮುಂದಿನಂತೆ ಉತ್ತರವನ್ನು ಕೊಟ್ಟಿರುವರು.—"ಸ್ವರಾಜ್ಯ ಪಕ್ಷದ ಮುಖ್ಯಸ್ಥರು ದಿವಂಗತರಾಗಿರುವ ಈ ಸಮಯದಲ್ಲಿ ನೀವು ಕೊಟ್ಟಿರುವ ಅಮೂಲ್ಯ ಸಹಾಯದ ಬಗ್ಗೆ ಸ್ವರಾಜ್ಯ ಪಕ್ಷವು ಅತ್ಯಂತ ಕೃತಜ್ಞವಾಗಿದೆ. ಈಗಲಂತೂ ನಿಮ್ಮ ಈ ಪತ್ರದಿಂದ ಅದು ಇನ್ನಷ್ಟು ಉಪಕಾರ ಬದ್ಧವಾಗಿದೆ. ನೀವು ಎರಡು ಕೈಯಿಂದ ಕೊಟ್ಟಿರುವ ಸಹಾಯವನ್ನು ಸ್ವರಾಜ್ಯ ಪಕ್ಷವು ಸಾವಿರ ಕೈಗಳಿಂದ ಅಂಗೀಕರಿಸುವುದೆ ನಿಮ್ಮ ಉಪಕಾರದಿಂದ ನಿರ್ಮುಕ್ತವಾದುದಾಗಿದೆ. ಫರಿದಪುರದಲ್ಲಿ ದಾಸರವರು ಕೊಟ್ಟಿರುವ ಮಾನ್ಯವಾದ ಸಹಕಾರವನ್ನು ಬರ್ಕನಹೆಡ್ಡರು ಅಂಗೀಕರಿಸಿದ್ದಂತೆ ಕಾಣುವುದಿಲ್ಲ. ಈ ಕಾರಣದಿಂದ ಅನಾವಶ್ಯಕವಾದ ಹಲವು ವಿಘ್ನಗಳನ್ನು ನಾವು ಅನುಭವಿಸಬೇಕಾಗಿ ಬಂದೀತೆಂದು ತೋರುತ್ತದೆ. ನಮ್ಮ ಮುಖ್ಯಸ್ಥರಾದ ದಾಸರು ಯಾವ ಮಾರ್ಗವನ್ನು ಹಾಕಿಕೊಟ್ಟಿರುವರೊ ಅದನ್ನು ಅನುಸರಿಸುವುದೆ ಬೇಜವಾಬದಾರರಾದ ಅಧಿಕಾರಿಗಳ ಕೃತ್ಯಕ್ಕೆ ಸಮರ್ಪಕವಾದ ಉತ್ತರವಾಗಿದೆ, 'ನಾವು ಹೋರಾಡೋಣ, ನಿರ್ವಿವಾದವಾಗಿ ಹೋರಾಡೋಣ' ವೆಂಬುದಾಗಿ ದಾಸರು ಫರಿದ ಪುರದ ಭಾಷಣದಲ್ಲಿ ಹೇಳಿದ ಸಂದೇಶವನ್ನು ಪೂರಯಿಸಲು ನೀವು ಈ ಸಂಧಿಯನ್ನು ತಂದು ಕೊಟ್ಟಿರುವಿರಿ. ರಾಷ್ಟ್ರೀಯ ಸಭೆಯ ಬೆಂಬಲವು ನಮಗಿರುವುದರಿಂದ ದಾಸರ ಸಂದೇಶವನ್ನು ಸಾಧಿಸಲು ಅನುಕೂಲವಾದಂತಾಗುವುದು. ಇಂಥ ಪರಿಸ್ಥಿತಿಯಲ್ಲಿ ನಾವು ಯಾವ ತಪ್ಪುಗ್ರಹಿಕೆಗೂ ಪಾತ್ರರಾಗಬಾರದು. ಬೆಳಗಾವಿನಲ್ಲಿ ನಡೆದ ಒಪ್ಪಂದದ ವಿಷಯವಾಗಿ ನಾನು ಒಂದು ಮಾತನ್ನು ಹೇಳಬೇಕೆಂದಿದ್ದೇನೆ. ಒಂದು ವರ್ಷದ ಮುಂಚೆ ನಿಮ್ಮೊಡನೆ ಆದ ಒಪ್ಪಂದವನ್ನು ಮುರಿಯಬೇಕೆಂದು ನಾನಾಗಲಿ, ದಾಸರಾಗಲಿ ಮನಸಾಪಿ ನೆನಸಿದ್ದಿಲ್ಲ. ಕೂಡಿದಷ್ಟು ಅಂತಃಕರಣ ಪೂರ್ವಕವಾದ ಸಹಾಯವನ್ನು ಕೊಟ್ಟು ನೂಲಿನ ವಿಧಾಯಕ ಕಾರ್ಯಕ್ರಮವನ್ನು ಯಶಸ್ವಿಯನ್ನಾಗಿ ಮಾಡಬೇಕೆಂದು ನಾವಿಬ್ಬರೂ ಸಂಕಲ್ಪಿಸಿಕೊಂಡಿದ್ದೆವು. ಆದರೆ ದೇಹದ ಅನಾರೋಗ್ಯದ ದೆಸೆಯಿಂದಲೂ ಮತ್ತು ಮೊದಲಿನಿಂದಲೆ ಪ್ರಾರಂಭಿಸಿಕೊಂಡಿರುವ ಕೆಲವು ಮಹತ್ವದ ಕಾರ್ಯಗಳ ದೆಸೆಯಿಂದಲೂ ಆ ಸಂಕಲ್ಪವನ್ನು ಸರಿಯಾಗಿ ಸಾಧಿಸಲು ಸಾಧ್ಯವಾಗಲಿಲ್ಲ. ಆದರೆ ಈಗ ಉತ್ಪನ್ನವಾಗಿರುವ ಪರಿಸ್ಥಿತಿಯು ಬಹು ನಾಜೂಕಾಗಿದ್ದದರಿಂದ ರಾಷ್ಟ್ರೀಯ ಸಭೆಯು ರಾಜಕಾರಣವನ್ನು ಕೈಕೊಳ್ಳುವದು ಅತ್ಯಗತ್ಯವಿದೆ ಎಂದು ನೀವು ಹೇಳುವ ಯಾವ ಮಾತಿದೆಯೊ ಅದನ್ನು ಒಪ್ಪಕೊಳ್ಳಲೆ ಬೇಕಾಗಿದೆ. ನೀವು ಕೊಡುವ ಈ ಸಹಾಯವನ್ನು ಅಂಗೀಕರಿಸಿದ್ದಲ್ಲಿ ಕೊಂಗ್ರೆಸು ವಿಧಾಯಕ ಕಾರ್ಯವನ್ನು ಬಿಟ್ಟುಬಿಡಬೇಕೆಂದು ಇದರ ಅರ್ಥವಾಗುವದಿಲ್ಲ. ರಾಷ್ಟ್ರೀಯ ಸಂಸ್ಥೆಯ ಬಲವಿಲ್ಲದಿದ್ದರೆ ರಾಜಕಾರಣಕ್ಕೆ ಬೆಲೆ ಇಲ್ಲ. ಆದ್ದರಿಂದ ಇನ್ನು ಮುಂದೆ ಸಂಪೂರ್ಣ ನಂಬಿಕೆಯಿಂದ ನಮ್ಮ ನಮ್ಮ ಕಾರ್ಯಗಳನ್ನು ಭರದಿಂದ ಮಾಡಿಕೊಂಡು ಮುಂದರಿಸೋಣ. ಕೌನ್ಸಿಲಿನ ಹೊರಗೂ, ಕೌನ್ಸಿಲಿನ ಒಳಗೂ ದೇಶಹಿತದ ಯಾವ ಕಾರ್ಯದಲ್ಲೂ ಸ್ವರಾಜ್ಯಪಕ್ಷವು ಸಂಪೂರ್ಣ ಸಹಾಯಮಾಡದೆ ಇರದು."

ಇಬ್ಬರು ಮುಖಂಡರಲ್ಲಿ ನಡೆದಿರುವ ಈ ಪತ್ರವ್ಯವಹಾರವನ್ನು ನೋಡಿದ್ದಲ್ಲಿ ರಾಷ್ಟ್ರೀಯ ಸಭೆಯು ರಾಜಕೀಯ ಕಾರ್ಯಗಳನ್ನು ಪುನಃ ಬೇಗನೆ ತೆಕ್ಕೊಂಡೀತೆಂಬುದು ಕಂಡು ಬರುತ್ತದೆ. ಈ ನಾಲ್ಕು ವರುಷಗಳಿಂದ ರಾಷ್ಟ್ರೀಯ ಸಭೆಯು ಖಾದಿ, ಅಸ್ಪೃಶ್ಯತೆ, ಹಿಂದು ಮಹಮ್ಮದೀಯ-ಐಕ್ಯ ಈ ಪ್ರಶ್ನೆಗಳನ್ನೆ ಕೈಕೊಂಡು ತನ್ನ ಜೀವನಕ್ರಮಕ್ಕೆ ಔದ್ಯೋಗಿಕ ಮತ್ತು ಸಾಮಾಜಿಕ ಸ್ವರೂಪವನ್ನು ಕೊಟ್ಟಿತ್ತಲ್ಲದೆ ರಾಜಕೀಯ ವಿಷಯವನ್ನು ಬಹಿಷ್ಕರಿಸಿತ್ತು. ರಾಷ್ಟ್ರೀಯ ಸಭೆಯ ರಾಜಕಾರಣದ ಈ ಸನ್ಯಾಸದಿಂದ ಕುಯುಕ್ತಿನಿಪುಣವೂ, ಛಿದ್ರಾನ್ವೇಷಿಯೂ ಆದ ನೋಕರಶಾಹಿಗೆ ನಿಜವಾಗಿ ಪುತ್ರೋತ್ಸವವಾಗಿತ್ತು. ಇತ್ತ ರಾಷ್ಟ್ರೀಯ ಸಭೆಯು ರಾಜಕಾರಣದ ಸನ್ಯಾಸವನ್ನು ವಹಿಸಕೂಡದೆಂಬುದಾಗಿ ಎಷ್ಟು ಹೇಳಿದರೂ ಮಹಾತ್ಮಾಜಿಗಳು ಸರ್ವಥಾ ಕೇಳುತ್ತಿರಲಿಲ್ಲ. ಆಗ ದೇಶದ ವಿಚಾರವಂತ ಮುಖಂಡರಿಗೆ ರಾಜಕಾರಣಕ್ಕಾಗಿ ಸ್ವತಂತ್ರಪಕ್ಷವನ್ನು ರಾಷ್ಟ್ರೀಯ ಸಭೆಯ ಛತ್ರದಲ್ಲಿಯೆ ನಿರ್ಮಿಸಬೇಕಾಗಿ ಬಂತು. ಅದರ ಕಾರ್ಯಗಳನ್ನೆಲ್ಲ ನಿರೀಕ್ಷಿಸಿ ಈಗ ಮಹಾತ್ಮಾಜೀಯವರೆ ರಾಷ್ಟ್ರೀಯ ಸಭೆಯು ರಾಜಕಾರಣವನ್ನು ಅಂಗೀಕರಿಸಬೇಕೆಂಬುದಕ್ಕೆ ಐಕ್ಯವನ್ನು ಸಾಧಿಸಲು ಸಂಪೂರ್ಣ ಮನಸ್ಸಿನಿಂದ ಸಿದ್ಧರಾಗಿದ್ದಾರೆ ಇದು ದೇಶದ ಸುದೈವವೇ ಸರಿ. ರಾಜಕಾರಣದ ಯುಗಕ್ಕೆ ಇನ್ನಾದರೂ ಪ್ರಾರಂಭವಾಗಿ ಸ್ವರಾಜ್ಯ ಸಂಪಾದನದ ಕಾಲವು ಸಮೀಪಿಸಲಿ ಎಂದು ನಾವು ಬಯಸುವೆವು.

ಸ್ಫುಟವಿಚಾರಗಳು.

೧. ಕಲಕತ್ತೆಯಲ್ಲಿ ಸ್ವರಾಜ್ಯ ಪಕ್ಷದ ಪ್ರಮುಖರ ಮತ್ತು ಕೊಂಗ್ರೆಸ ವರ್ಕಿಂಗ ಕಮಿಟಿಯ ಸಭಾಸದರ ಸಭೆಯು ಸೇರಿ ಈ ಎರಡೂ ಸಭೆಗಳಲ್ಲಿ ಮುಖ್ಯವಾಗಿ ಯಾವ ಯಾವ ಸಂಗತಿಗಳು ನಿರ್ಣಯಿಸಲ್ಪಟ್ಟವೆ ಎಂಬುದನ್ನು ಬೇರೆ ಕಡೆಯಲ್ಲಿ ಕೊಟ್ಟಿದ್ದೇವೆ. ದೇಶಬಂಧು ದಾಸರು ಸ್ವರಾಜ್ಯ ಪಕ್ಷದ ಅಧ್ಯಕ್ಷರಾಗಿದ್ದರು. ಅವರ ನಂತರ ಅಧ್ಯಕ್ಷರಾಗಲು ಪಂಡಿತ ಮೋತಿಲಾಲಜಿಯವರೆ ಸರ್ವ ದೃಷ್ಟಿಯಿಂದಲೂ ಅರ್ಹರಾಗಿದ್ದದರಿಂದ ಸ್ವರಾಜ್ಯ ಪಕ್ಷದ ಜನರಲ್ ಕೌನ್ಸಿಲಿನವರು ಅವರನ್ನೆ ಚುನಾಯಿಸಿದ್ದು ಅತ್ಯಂತ ಯುಕ್ತವಾಗಿದೆ. ಪಂಡಿತಜಿಯವರು ವಯಸ್ಸಿನಿಂದ ಮಾತ್ರವಲ್ಲ, ಕಾರ್ಯದಕ್ಷತೆಯಿಂದಲೂ ಸ್ವರಾಜ್ಯ ಪಕ್ಷದ ತತ್ವಗಳ ದೃಢಾನುಗಾಮಿತ್ವದಿಂದಲೂ, ಎಸೆಂಬ್ಲಿಯಲ್ಲಿ ಅವರು ನಡಿಸಿದ ಕಾರ್ಯದ ಮೇಲಿಂದಲೂ ಅವರು ಈ ಸ್ಥಾನಕ್ಕೆ ಸಂಪೂರ್ಣ ಪಾತ್ರರಾಗಿದ್ದಾರೆ. ಆದರೆ ಇತ್ತಲಾಗೆ ಪಂಡಿತಜಿಯವರ ಆರೋಗ್ಯವು ಶ್ವಾಸಕೋಶದ ವ್ಯಾಧಿಯಿಂದ ಕೆಟ್ಟುಹೋಗಿರುವ ಕಾರಣ ಅವರು ಈ ಜವಾಬದಾರಿಯ ಸ್ಥಾನವನ್ನು ಬಹು ಎಚ್ಚರದಿಂದ ವಹಿಸಿರುವರು. ಆದರೆ ಈಗ ಸೆಕ್ರೆಟರಿಗಳಾಗಿ ಬಂದ ಶ್ರೀ. ರಂಗಸ್ವಾಮಿ ಅಯ್ಯಂಗಾರರು ಹಾಗು ಇತರರು ಉತ್ಸಾಹದಿಂದ ಎಲ್ಲ ಕಾರ್ಯಗಳನ್ನು ಮಾಡಿ ಪಂಡಿತಜಿಯವರ ಶ್ರಮವನ್ನು ಅವರಿಗಾರೋಗ್ಯವುಂಟಾಗುವ ವರೆಗೆ ಕೆಲವು ಮಟ್ಟಿಗಾದರೂ ಕಡಿಮೆ ಮಾಡದೆ ಇರಲಿಕ್ಕಿಲ್ಲ. ಪಂಡಿತಜಿಯವರು ಆರೋಗ್ಯವಂತರಾಗಿ ಈ ಅಧ್ಯಕ್ಷಸ್ಥಾನದಿಂದ ರಾಜಕೀಯ ಸೂತ್ರಗಳನ್ನು ಕೈಕೊಂಡು ನೋಕರಶಾಹಿಯನ್ನು ಎದುರಿಸುವ ಕಾರ್ಯವನ್ನು ಮಾಡಲಿ ಎಂಬುದಾಗಿ ನಾವು ಬಯಸುವೆವು.

೨. ಕಲಕತ್ತೆಯಲ್ಲಿ ಸೇರಿದ ಸ್ವರಾಜ್ಯ ಪಕ್ಷದ ಈ ಕೌನ್ಸಿಲಿನಲ್ಲಿ ಮೇಲಿನ ಠರಾವು ಪಾಸಾದ್ದಲ್ಲದೆ, ಪ್ರಚಲಿತ ರಾಜಕಾರಣವನ್ನು ಕುರಿತು ಬರ್ಕನಹೆಡ್ಡರು ಮಾಡಿರುವ ಭಾಷಣಕ್ಕೆ ಈ ಕೌನ್ಸಿಲಿನ ಕಡೆಯಿಂದ ಸಮರ್ಪಕವಾದ ಉತ್ತರವನ್ನು ಕೊಡೋಣಾಗಿದೆ. ಜನತೆಯು ಪ್ರಾಮಾಣಿಕ ಬುದ್ಧಿಯಿಂದ ಸಹಕಾರ್ಯವನ್ನು ಕೊಡಬೇಕೆಂದು ಭಾರತ ಮಂತ್ರಿಗಳು ಅಪೇಕ್ಷಿಸಿರುವ ಈ ಸಂದರ್ಭದಲ್ಲಿ ದಿವಂಗತರಾದ ದಾಸರವರ ಅಪೇಕ್ಷೆಯ ಮೇರೆಗೆ ಸಹಕಾರಿತೆಯ ಕೈಯನ್ನು ಸ್ವರಾಜ್ಯ ಪಕ್ಷವು ಮುಂದಕ್ಕೆ ಚಾಚಿದೆ. ಇದೀಗ ಸರಕಾರದ ಪರೀಕ್ಷೆಯನ್ನು ನೋಡುವ ಸಂದರ್ಭವು. ತಾವು ಯಾವದನ್ನೂ ಕೊಡಲಿಕ್ಕಿಲ್ಲ, ಕೊಡುವದಾದರೂ ದೀರ್ಘ ಆಲೋಚನೆಯನ್ನು ನಡಿಸಿ ಸ್ವಲ್ಪ ಸ್ವಲ್ಪ ಕೊಡುವೆವು, ಆದರೆ ಜನತೆಯು ಮಾತ್ರ ಸಂಪೂರ್ಣವಾದ ಸಹಕಾರವನ್ನು ಹೃತ್ಪೂರ್ವಕವಾಗಿ ಕೊಡಬೇಕೆಂದು ಸರಕಾರವು ಹೇಳಲಿಕ್ಕಿರುವದೊ ಅಥವಾ ಉದಾರ ಧೋರಣವನ್ನು ಅಂಗೀಕರಿಸಿ ಜನತೆಯ ಮನಸ್ಸನ್ನು ಸಂತುಷ್ಟಿಗೊಳಿಸುವದೊ ಎಂಬುದು ಈಗ ಬೇಗನೆ ಗೊತ್ತಾದೀತು. ದಾಸರವರು ಫರಿದ ಪುರದಲ್ಲಿ ಸರಕಾರವು ಅಪೇಕ್ಷಿಸುವದಾದರೆ ಸ್ವಾಭಿಮಾನಕರವಾದ ಸಹಕಾರ್ಯವನ್ನು ಕೊಡಲು ಅಡ್ಡಿ ಇಲ್ಲವೆಂದು ನುಡಿದಿದ್ದರಷ್ಟೆ. ಅವರ ಈ ಭಾಷಣದಿಂದ ಹಲವರು ದಾಸರನ್ನುಕುರಿತು ಮೆತ್ತಗಾದರು, ಕೈಚಾಚಿದರೆಂಬುದಾಗಿ ಪ್ರಲಾಪವನ್ನು ಮಾಡಿಕೊಂಡಿದ್ದರು. ಆದರೆ ಇವರು ಸಹಕಾರ್ಯವನ್ನು ಕೊಡುವದಾದರೆ ಸರಕಾರಕ್ಕೆ ಯಾವ ಯಾವ ಶರ್ತಗಳನ್ನು ಅವರು ಹಾಕಿದ್ದರೊ ಅವುಗಳನ್ನು ನೋಡಿರಲಿಲ್ಲವಾಗಿರಬೇಕು. ಇಲ್ಲವೆ ಕುತ್ಸಿತ ಬುದ್ಧಿಯಿಂದ ಬೇಕೆಂದು ದಾಸರವರನ್ನು ತಗ್ಗಿಸಲು ಯತ್ನಿಸಿರಬೇಕು. ಸರಕಾರವು ಬಂಗಾಲದ ರಾಜಕೀಯ ಕೈದಿಗಳನ್ನು ಬಿಡುವದಾದರೆ, ಬಂಗಾಲ ಒರ್ಡಿನನ್ಸನ್ನು ರದ್ದು ಪಡಿಸುವದಾದರೆ, ಮತ್ತು ಪ್ರಾಂತಿಕ ಸ್ವರಾಜ್ಯವನ್ನು ಕೊಡುವದಾದರೆ ಜನತೆಯು ಸಹಕಾರ್ಯವನ್ನು ತೋರಿಸಬಹುದು. ಎಂದು ದಾಸರು ನುಡಿದಿದ್ದರು. ಅವರ ಈ ಮಾತಿನಲ್ಲಿ ಹೇಳಿದ ಶರ್ತಗಳನ್ನು ಬದಿಗಿಟ್ಟು ಸಹಕಾರ್ಯವನ್ನು ಕೊಡಲು ಅಡ್ಡಿ ಇಲ್ಲವೆಂಬ ಒಂದು ಅಂಶವನ್ನು ತೆಕ್ಕೊಂಡು ಮಾತಾಡುವವರು ಸತ್ಯಾಪಲಾಪಿಗಳೆ ಸರಿ. ಮಹಾತ್ಮಾ ಗಾಂಧಿಗಳು ದಾಸರ ಫರಿದ ಪುರದ ಭಾಷಣದ ಸಮಯದಲ್ಲಿಯೆ 'ವೈಸರಾಯರು ಚರಕದ ಕಾರ್ಯಕ್ರಮವನ್ನು ಎತ್ತಿಕೊಳ್ಳುವದಾದರೆ ತಾನು ಸಹಕಾರ್ಯವನ್ನು ಮಾಡಲು ಸಿದ್ಧನಿದ್ದೇನೆ' ಎಂದು ಹೇಳಿದ್ದನ್ನು ಕೆಲವರಿಗಾದರೂ ನೆನಪಿರಬಹುದು. ಈ ಮಾತಿನೊಳಗಿನ ಪೂರ್ವಾರ್ಧವನ್ನು ಬಿಟ್ಟು ಅರ್ಥಮಾಡ ಹೋದರೆ ಅದು ಎಷ್ಟು ಸಮಂಜಸವಾದೀತು? ಕೆಲವರು ಅಂಥ ಶ್ರದ್ಧೆಯಿಂದ ಗಾಂಧಿಗಳ ಇದೆ ವಿಧಾನದಲ್ಲಿ ಗಾಂಧಿಗಳು ಸಹಕಾರ್ಯಕೊಡಲಿಲ್ಲವೆಂದೂ ದಾಸರು ಮಾತ್ರಸಹಕಾರ್ಯಕ್ಕೆ ಸಿದ್ಧರಾಗಿದ್ದಾರೆಂದೂ ವಾದಿಸುತ್ತಿದ್ದರು! ಒಂದೆ ನಮೂನೆಯ ವಿಧಾನಗಳಲ್ಲಿ ಬೇರೆ ಬೇರೆ ಅರ್ಥವನ್ನು ಕಲ್ಪಿಸುವವರ ವಿಕೃತ ಬುದ್ಧಿಗೆ ಔಷಧವಿಲ್ಲ. ಇಂಥವರ ಸಂಗತಿಯನ್ನು ಬಿಟ್ಟುಬಿಡೋಣ. ಇರಲಿ, ಕಲಕತ್ತೆಯಲ್ಲಿ ನೆರೆದ ಸ್ವರಾಜ್ಯ ಪಕ್ಷದ ಕೌನ್ಸಿಲಿನಲ್ಲಿ ದಾಸರವರ ಈ ಮಾತನ್ನೆ ಠರಾವಿನ ರೂಪದಿಂದ ಅಂಗೀಕರಿಸೋಣಾಗಿದೆ. ಮಹಾತ್ಮಾ ಗಾಂಧಿಗಳು ಕೂಡ ಇದಕ್ಕೆ ಸಮ್ಮತಿಯನ್ನು ಕೊಟ್ಟಿರುವರು. ಫರಿದ ಪುರದಲ್ಲಿ ದಾಸರು ಹೇಳಿದ ಮತವನ್ನು ಮಹಾತ್ಮಾಜಿಯವರು ಸಮರ್ಥಿಸಿರುವರು. ಬರ್ಕನಹೆಡ್ಡರು ನಿರುತ್ಸಾಹಜನಕವಾದ ಭಾಷಣವನ್ನು ಮಾಡಿದ್ದಾರೆ. ಇದು ಉಚಿತವಲ್ಲ. ಆದರೂ ನಾವು ನಮ್ಮ ಬಾಗಿಲನ್ನು ಮುಚ್ಚಬಾರದು ಎಂದು ಗಾಂಧಿಗಳು ಹೇಳಿದ್ದಾರೆ. ಸಾರಾಂಶ ೧೯೧೯ನೆಯ ಇಸವಿಯಲ್ಲಿ ಲೋಕಮಾನ್ಯ ಟಿಳಕರು ಅಮೃತಸರದ ಕೊಂಗ್ರೆಸ್ಸಿನಲ್ಲಿ "ಪ್ರತಿಯೋಗಿ ಸಹಕಾರಿತೆ" ಎಂದು ಯಾವುದಕ್ಕೆ ಹೆಸರನ್ನು ಕೊಟ್ಟಿದ್ದಾರೊ ಅದಕ್ಕೂ ಈಗಿನದಕ್ಕೂ ಹೆಚ್ಚು ವ್ಯತ್ಯಾಸವಿಲ್ಲ. ಆ ದಾರಿಗೆನೆ ಈಗ ದೇಶವೆಲ್ಲ ಮೆಲ್ಲ ಮೆಲ್ಲಗೆ ಬರುತ್ತಿದೆ. ರಾಜಕಾರಣದ ಇತಿಹಾಸವನ್ನು ಪರಿಶೀಲಿಸಿದವರು ಅನುಭವವನ್ನು ತೆಕ್ಕೊಳ್ಳುತ್ತಾ ತೆಕ್ಕೊಳ್ಳುತ್ತಾ ಕೊನೆಗೆ ಈ ಮೊಕ್ಕಾಮಿಗೆನೆ ಬಂದು ನಿಲ್ಲಬೇಕಾಗುತ್ತದೆ. ಅದು ಹೇಗೂ ಇರಲಿ, ಸ್ವರಾಜ್ಯ ಪಕ್ಷವು ಎಂದರೆ ಪರ್ಯಾಯದಿಂದ ದೇಶವು ತನ್ನ ಧೋರಣವನ್ನು ಬದಲಾಯಿಸಲು ತಾನು ತಯಾರಿದ್ದ ಸಂಗತಿಯನ್ನು ಸರಕಾರದ ದೃಷ್ಟಿಗೋಚರಕ್ಕೆ ಈಗ ತಂದುಕೊಟ್ಟಿದೆ. ಯಾವ ಕಪಟವನ್ನೂ ಇಟ್ಟುಕೊಳ್ಳದೆ ದೇಶವು ಇದ್ದದನ್ನು ಇದ್ದ ಹಾಗೆ ಹೇಳಿದೆ. ದುರಾಗ್ರಹ, ಧೂರ್ತತೆ, ದುಃಸ್ವಾರ್ಥ ಇವುಗಳಿಗೆ ಬಲಿಬಿದ್ದು ಹಿಂದುಸ್ಥಾನದ ನೋಕರಶಾಹಿಯೂ, ವಿಲಾಯತಿಯ ಮಂತ್ರಿಮಂಡಲವೂ ಹಿಂದುಸ್ಥಾನದವರನ್ನು ಆದರಿಸಲು ಬಂದಿರುವ ಈ ಸುವರ್ಣ ಸಂಧಿಯನ್ನು ದೂಡಿಬಿಡುತ್ತಾವೊ ಅಥವಾ ಅದನ್ನು ಉಪಯೋಗಿಸಿಕೊಂಡು ಜನತೆಯ ಹಿತವನ್ನು ಸಾಧಿಸುತ್ತವೊ ಇದು ಬೇಗನೆ ತಿಳಿಯುವಂತಿದೆ. ವಿಲಾಯತಿಗೆ ತೆರಳಿದ ರೆಡಿಂಗರು ಅಲ್ಲಿಂದ ಬರಹತ್ತಿದ್ದಾರೆ. ಇಲ್ಲಿ ಬಂದ ಮೇಲೆ ಅವರು ಯಾವ ನೀತಿಯನ್ನು ಅನುಸರಿಸುತ್ತಾರೆ ಎಂಬುದು ಗೊತ್ತಾದೀತು. ಆಗ ಸಹಜವಾಗಿಯೆ ಸ್ವರಾಜ್ಯ ಪಕ್ಷಕ್ಕೆ ಆಗಿನ ಕಾಲಕ್ಕನುಸಾರವಾಗಿ ನಡೆದುಕೊಳ್ಳಬೇಕಾಗುವುದು

೩. ಕಲಕತ್ತೆಯಲ್ಲಿ ಸೇರಿದ ಸ್ವರಾಜ್ಯ ಪಕ್ಷದ ಜನರಲ್ ಕೌನ್ಸಿಲಿನಲ್ಲಿ ಈ ರೀತಿಯ ಠರಾವುಗಳು ಪಾಸಾದದಲ್ಲದೆ ಮಹಾತ್ಮರ ಅಧ್ಯಕ್ಷತೆಯಲ್ಲಿ ಜರಗಿದ ವರ್ಕಿಂಗ ಕಮಿಟಿಯಲ್ಲಿ ನೂಲಿನ ಮತದಾನದ ಪ್ರಸ್ತಾಪವು ಬಂದಾಗ ಅದು ಓಲ್ ಇಂಡಿಯಾ ಕೊಂಗ್ರೆಸ ಕಮಿಟಿಯಲ್ಲಿ ನಿರ್ಣಯಿಸಲ್ಪಡಬೇಕೆಂದು ನಿಶ್ಚಯಿಸೋಣಾಯಿತು. ನೂಲಿನ ಮತದಾನದ ಪ್ರಶ್ನೆಯನ್ನು ಚರ್ಚಿಸುವಾಗ ಗಾಂಧಿಜಿಗಳು ಸ್ವರಾಜ್ಯ ಪಕ್ಷದವರೊಡನೆ ಐಕ್ಯವಾಗುವದಾದರೆ ಅದನ್ನು ತೆಗೆಯಬಹುದೆಂದು ಹೇಳಿದ್ದರೂ ಪಂಡಿತಜಿಯವರು ಗಾಂಧಿಜಿಗಳಿಗೆ ಸಮರ್ಪಕವಾದ ಸಮಾಧಾನವನ್ನು ಕೊಟ್ಟರು. "ಸ್ವರಾಜ್ಯ ಪಕ್ಷೀಯರಿಗೆ ಈ ನೂಲಿನ ಮತದಾನದ ಮೇಲೆ ಎಂದರೆ ಅದು ಯಶಸ್ವಿಯಾದೀತೆಂದು ಯಾವಾಗಲೂ ಭರವಸೆ ಇರಲಿಲ್ಲ. ಆದರೆ ಬೆಳಗಾವಿನಲ್ಲಿ ಒಪ್ಪಂದವೆಂಬುದಾಗಿ ಅದನ್ನು ಸ್ವರಾಜ್ಯಪಾರ್ಟಿಯು ಒಪ್ಪಿಕೊಂಡಿದೆ. ವರ್ಷಾಂತ್ಯದಲ್ಲಿ ಈ ಪ್ರಶ್ನೆಯನ್ನು ಪುನಃ ಚರ್ಚಿಸಬೇಕಾಗುವುದು," ಇಷ್ಟು ಸಂಗತಿಯನ್ನು ಹೇಳಿ ಪಂಡಿತಜಿಯವರು ನೂಲಿನ ಶರ್ತವನ್ನು ಎಲ್ಲ ಪಕ್ಷಗಳಿಗೆ ಬದಲಾಯಿಸುವದಿದ್ದರೆ ಮಾತ್ರ ಮಾಡಬೇಕಲ್ಲದೆ ಬರೆ ಸ್ವರಾಜ್ಯಪಕ್ಷಕ್ಕೆ ಬೇಕೆಂಬುದರಿಂದ ಅದು ಕೂಡದು ಎಂಬುದಾಗಿ ಪಂಡಿತಜಿಯವರು ಸ್ಪಷ್ಟವಾಗಿ ಹೇಳಿದರು. ಮಹಾತ್ಮಾ ಗಾಂಧಿಗಳು ಓ. ಇಂ, ಕೊಂ. ಕಮಿಟಿಯನ್ನು ಕರೆದು ಇದನ್ನು ಇತ್ಯರ್ಥಿಸಲು ಒಪ್ಪಿಕೊಂಡಿರುವರು. ಅಲ್ಲದೆ, ಈ ನೂಲಿನ ಮತದಾನಕ್ಕೆ ಎಲ್ಲ ಹಿಂದಿ ಸುಶಿಕ್ಷಿತರು ಪ್ರತಿಕೂಲರಾಗಿದ್ದಾರೆಂದು ಗಾಂಧಿಗಳು ಹೇಳಿದರು. ಇದು ಯಶಸ್ವಿಯಾದೀತೆಂಬುದಕ್ಕೆ ಅವರಿಗೆ ಭರವಸೆ ಇದ್ದರೂ ಅದನ್ನು ಜನತೆಯ ಮೇಲೆ ಒತ್ತಾಯಿಸಲು ಅವರು ಈಗ ಇಚ್ಛಿಸುವದಿಲ್ಲ. ಕಾನಪುರದಲ್ಲಿ ಜರಗಲಿರುವ ಕೊಂಗ್ರೆಸು ಈ ನೂಲಿನ ಪ್ರಶ್ನೆಯನ್ನು ತೆಕ್ಕೊಳ್ಳುವದಕ್ಕಿಂತ ರಾಜಕೀಯ ವಿಷಯವನ್ನೆ ಹೆಚ್ಚಾಗಿ ಕೈಕೊಳ್ಳುವದು ಹಿತಾವಹವಾಗಿದೆ ಎಂದು ಕೂಡ ಹೇಳಿದರು. ಮಹಾತ್ಮಾ ಗಾಂಧಿಗಳಲ್ಲಿ ಈ ರೀತಿಯಿಂದ ಮತಪರಿವರ್ತನವಾಗುತ್ತ ಬಂದದ್ದು ಸಮಾಧಾನಕರವೆ ಸರಿ. ನೂಲಿನ ಮತದಾನವು ಕಾಗದದಲ್ಲಿ ಅಥವಾ ರಾಷ್ಟ್ರೀಯ ಸಭೆಯ ರಿಕಾರ್ಡಿನಲ್ಲಿ ತೋರಿಸಬಹುದಲ್ಲದೆ ಪ್ರತ್ಯಕ್ಷಾನುಭವವು ಇದಕ್ಕೆ ವಿರುದ್ಧವಾಗಿಯೆ ಇರುವದು. ಎಷ್ಟೆ ಗಾಂಧಿಭಕ್ತನಾಗಿರಲಿ, ಎಷ್ಟೆ ಬೇಡಬದಲಾವಣೆಯವನಾಗಿರಲಿ, ವಾದದ ಮಟ್ಟಿಗೆ ನೂಲು ತೆಗೆಯುವ ಆವಶ್ಯಕತೆ, ಚರಕದ ಮಹತ್ವ ಮುಂತಾದ್ದನ್ನು ಹೇಳಿಯಾನಲ್ಲದೆ, ಕಾರ್ಯದಲ್ಲಿ ಆ ತತ್ವವನ್ನು ಆಚರಿಸಲಿಕ್ಕಿಲ್ಲ. ಇಂಥ ಸಾವಿರ ದೃಷ್ಟಾಂತಗಳನ್ನು ನಾವು ಕಣ್ಣಾರೆ ಕಂಡಿದ್ದೇವೆ. ಕ್ಷೇತ್ರಸ್ಥ ಪುರೋಹಿತರಲ್ಲಿ ನಿಜವಾದ ಶ್ರದ್ಧೆಯು ಇಲ್ಲವಾದರೂ ಯಜಮಾನನ ಕೃತ್ಯವನ್ನು ಸಂಪಾದಿಸುವದಕ್ಕಾಗಿ ಆ ಪುರೋಹಿತರಿಗೆ ಕ್ಷೇತ್ರದ ಮಹಾತ್ಮ್ಯೆವನ್ನು ವರ್ಣಿಸುವ ಅಗತ್ಯವು ಬೀಳುವದೊ ಹಾಗೆಯೆ ಬೇಡಬದಲಾವಣೆಯವರ ಅವಸ್ಥೆ ಇದೆ. ಈ ಗುಟ್ಟೆಲ್ಲ ಈಗ ರಟ್ಟಾದ ಕಾರಣ ಮಹಾತ್ಮಾಜಿಗಳು ಇವರ ಸಂಗತಿಯನ್ನು ತಿಳಕೊಂಡಿದ್ದಾರೆ. ಆದ್ದರಿಂದ ನೂಲಿನ ಮತದಾನವನ್ನು ರದ್ದುಪಡಿಸಿ ರಾಜಕಾರಣಕ್ಕೆ ಪ್ರಾಮುಖ್ಯವನ್ನು ಕೊಡಬೇಕೆಂಬ ಸತ್ಯವು ಈಗೀಗ ಮಹಾತ್ಮರ ಗೋಚರಕ್ಕೂ ಬರಹತ್ತಿತು. ಇದು ದೇಶದ ಸುದೈವವೇ ಆಗಿದೆ. ಬರುವ ಒಕ್ಟೋಬರದಲ್ಲಿ ಮುಂಬಯಿಯಲ್ಲಿ ಜರಗಲಿಕ್ಕಿರುವ ಓಲ್ ಇಂಡಿಯಾ ಕೊಂಗ್ರೆಸ್ ಕಮಿಟಿಯು ಈ ಪ್ರಶ್ನೆಯನ್ನು ಚರ್ಚಿಸಿ ದೇಶಕ್ಕೆ ಸರಿಯಾದ ಮಾರ್ಗವನ್ನು ತೋರಿಸಿಕೊಟ್ಟೀತೆಂದು ನೆನಸಿದರೆ ಅದು ಅಸ್ಥಾನಿಕವಾಗಲಿಕ್ಕಿಲ್ಲ.

೪. ಬಕ್ರೀದಿನ ಸಮಯದಲ್ಲಿ ಕಲಕತ್ತೆಯಲ್ಲಿ ಸಂಭವಿಸಿದ ದಂಗೆಯ ಸರ್ವ ದೋಷವನ್ನು ಮಹಾತ್ಮಾ ಗಾಂಧಿಗಳು ಅಲ್ಲಿಯ ಹಿಂದುಗಳ ಮೈಮೇಲೆ ಹಾಕಿದ್ದು ಎಲ್ಲ ವರಿಗೆ ಗೊತ್ತೆ ಇದೆ. ಹಿಂದುಗಳ ತಪ್ಪಿದ್ದರೂ ಅವರೆ ಸರ್ವಾಪರಾಧಿಗಳಲ್ಲವೆಂದು ನಮ್ಮ ಮನೋದೇವತೆಯು ಆಗಲೆ ನಮಗೆ ಎನ್ನುತಿತ್ತು. ಮತ್ತು ಈ ಕಾರಣದಿಂದಲೆ ಹಿಂದಿನ ಒಂದು ಸಂಚಿಕೆಯಲ್ಲಿ "ವಿವಿಧ ವಿಷಯಗಳ"ನ್ನು ಕೊಡುವಾಗ ಮಹಾತ್ಮಾ ಗಾಂಧಿಗಳು ಹಿಂದುಗಳನ್ನು ನಿಷೇಧಿಸಿದ್ದು ಸಮರ್ಪಕವಾಗಲಿಲ್ಲವೆಂದು ಅಭಿಪ್ರಾಯಪಟ್ಟಿದ್ದೆವು. ನಮ್ಮ ಈ ಅಭಿಪ್ರಾಯವು ಹಲವರಿಗೆ ಆಗ ರುಚಿಸಿರಲಿಕ್ಕಿಲ್ಲ. ಆದರೆ ಕಲಕತ್ತೆಯ ಆ ದಂಗೆಯ ಸತ್ಯವು ಈಗ ಮೆಲ್ಲ-ಮೆಲ್ಲಗೆ ಹೊರಬರಹತ್ತಿದೆ. ಗಾಳಿಯಿಂದ ದೂಳು ಮೇಲಕ್ಕೆ ಎದ್ದಾಗ ವಸ್ತುಗಳೆಲ್ಲ ಕಣ್ಣಿಗೆ ಬೀಳಿಸುವುದಿಲ್ಲ. ಆದರೆ ದೂಳು ನೆಲಕ್ಕೆ ಕೂತಿತೆಂದರೆ ಎಲ್ಲ ಸ್ಪಷ್ಟವಾಗಿ ಕಾಣುವುದು. ಅದೆ ರೀತಿಯಲ್ಲಿ ದಂಗೆಯಾದ ಕೂಡಲೆ ಎಲ್ಲ ಗಲಿಬಿಲಿಯು ಬಂದುಹೋಗುವದು. ಕೆಲವು ದಿವಸಗಳು ದಾಟಿದ ಮೇಲೆ ಸತ್ಯವು ಬಹಿರಂಗವಾಗುವ ವಾಡಿಕೆ ಇದೆ. ಕಲಕತ್ತೆಯ ದಂಗೆಯ ಸಂಗತಿಯಾದರೂ ಹೀಗೆಯೆ ಇದೆ. ಬುರಾಬಝಾರ ಹಿಂದು ಸಭೆಯ ಸೆಕ್ರೆಟರಿಗಳೂ, ಆ ಸಭೆಯ ಸಬ್ ಕಮಿಟಿಯವರೂ ಈ ವಿಷಯವನ್ನು ನಿಷ್ಪಕ್ಷಪಾತವಾದ ರೀತಿಯಿಂದ ತನಖಿಸಿ ಮುಂದಿನ ಸಂಗತಿಗಳನ್ನು ಹೊರಪಡಿಸಿರುವರು. ಬಕ್ರೀದಿನ ಕೆಲವು ದಿವಸಗಳ ಮುಂಚೆ ಮುಹಮ್ಮದೀಯರು ಸಭೆಮಾಡಿ ಅದರಲ್ಲಿ ಹಿಂದುಗಳು ಮೆರವಣಿಗೆಯಲ್ಲಿ ಮೂರ್ತಿಗಳನ್ನು ಒಯ್ಯಬಾರದೆಂದೂ, ಈ ಪದ್ಧತಿಯನ್ನು ಮನ್ನಾಪಡಿಸಲು ಕ್ರೈಸ್ತರನ್ನು ಸಹ ತಮ್ಮ ಪಕ್ಷಕ್ಕೆ ತೆಕ್ಕೊಳ್ಳಬೇಕೆಂದೂ ಸರಕಾರದ ಸಹಾಯವನ್ನು ಕೇಳಿಕೊಳ್ಳಬೇಕೆಂದೂ ಠರಾವನ್ನು ಪಾಸುಮಾಡಿದ್ದರು! ಈ ರೀತಿಯಿಂದ ಮೊದಲೆ ಸಿದ್ಧತೆಯಾಗುತ್ತಿತ್ತು. ದಂಗೆಯಾದ ದಿವಸ ದನವು ಎಲ್ಲಿ ಕೊಲ್ಲಲ್ಪಟ್ಟಿತೊ ಆ ಸ್ಥಳವಾದರೂ ಹಿಂದುಗಳ ಕೇರಿಯಲ್ಲಿ ಪ್ರಮುಖವಾದದ್ದಾಗಿದ್ದಿತು. ಈ ಕಾರಣದಿಂದ ಹಿಂದುಗಳಲ್ಲಿ ಕ್ಷೋಭವುಂಟಾಗುವದು ಸಹಜ. ಅಲ್ಲದೆ, ಗೋವಧೆ ನಡೆಯುವಾಗ ಹೊರಗಿನ ಅನೇಕ ಮುಹಮ್ಮದೀಯರು ಬಂದು ಹಿಂದುಗಳನ್ನು ಮೂಲೆಗೆ ಎಷ್ಟರ ಮಟ್ಟಿಗೆ ದೂಡಿದರೆಂದರೆ ಕೊನೆಗೆ ಇದನ್ನು ಪ್ರತಿಕರಿಸದೆ ಹಿಂದುಗಳಿಂದ ಇರಲಾಗಲಿಲ್ಲ. ಗಾಂಧಿಗಳು ಗೋವಧೆಯ ಸ್ಥಾನವನ್ನು ಸಂದರ್ಶಿಸಿದಾಗ ಅಲ್ಲಿ ದನದ ಮಾಂಸಮಯ ಶರೀರವು ಬಿದ್ದುಕೊಂಡಿತ್ತಾದರೂ ರಕ್ತವೇನೂ ಇರಲಿಲ್ಲವೆಂದು ಹೇಳಿದ್ದು ನಿಜ. ಆದರೆ ವಧೆಯಾದ ೨ ತಾಸಿನ ಅನಂತರ ಮಹಾತ್ಮಾಜಿಗಳು ಅಲ್ಲಿಗೆ ಹೋದದ್ದು. ಅದಕ್ಕಿಂತ ಮುಂಚೆ ಮಳೆಯು ಸರಿಯಾಗಿ ಸುರಿದು ಆ ಜಾಗೆಯು ಸ್ವಚ್ಛವಾಗಿತ್ತು. ಈ ಎಲ್ಲ ಸಂಗತಿಗಳು ಈಗ ಬಹಿರಂಗವಾಗಿವೆ. ಇವುಗಳನ್ನು ಪರಿಶೀಲಿಸುವಾಗ ಹಿಂದುಗಳು ಎಷ್ಟರ ಮಟ್ಟಿಗೆ ತಪ್ಪಿಗೆ ಪಾತ್ರರೆಂಬುದು ಸಹಜವಾಗಿ ಗೊತ್ತಾಗುತ್ತದೆ.

ಮಂಗಳೂರು.

ಮದ್ರಾಸಿನ ಸಂಯುಕ್ತ ಗೌಡ ಸಾರಸ್ವತ ಸಭೆಯವರು ಇದೇ ೧೯೨೫-'೨೬ನೇ ವರ್ಷದ ಬಗ್ಗೆ ೧೭ ಜನ ವಿದ್ಯಾರ್ಥಿಗಳಿಗೆ ರೂ. ೫೦ರಿಂದ ೨೦೦ರ ವರೆಗೆ ಜುಮ್ಲಾ ರೂ. ೧೩೫೫ನ್ನು ವಿದ್ಯಾವೇತನವಾಗಿ ಕೊಟ್ಟಿರುವರು. ಇವರ ಪೈಕಿ ಮಂಗಳೂರಿನ ವಿದ್ಯಾರ್ಥಿಗಳು ೧. ರಾ| ಕೆ. ಶಂಕರರಾವ್ ರೂ. ೭೫, ೨. ರಾ| ಎಮ್. ವೆಂಕಟೇಶ ಕಾಮತ್ ರೂ. ೫೦, ೩. ತ್ರಾಸಿ ಗಣೇಶರಾವ್ ರೂ. ೫೦, ೪. ಸೆವಕುರ್ ರಮಾನಾಥ ರಾವ್ ರೂ. ೫೦. ೫. ಬಾಗಡೆ ಭಾಸ್ಕರ ರಾವ್ ರೂ. ೫೦, ೬. ಯು. ಸಂಜೀವರಾಯ ಪ್ರಭು ರೂ. ೫೦, ೭. ಜೆ. ಲಕ್ಷ್ಮಣ ಪ್ರಭು ರೂ. ೫೦, ೮. ಜೆ. ರಘುರಾಮ ರಾವ್ ರೂ. ೫೦. ಇವರಿಗೆ ಈ ರೀತಿಯಿಂದ ವಿದ್ಯಾವೇತನಕ್ಕಾಗಿ ಕೊಟ್ಟಿರುವರು.

ಇಲ್ಲಿ ಮಳೆಯು ಸ್ವಲ್ಪ ಕಡಿಮೆಯಾಗಿದೆ. ಬಂಟವಾಳ ಪಾಣೆಮಂಗಳೂರು ಮೊದಲಾದ ಕಡೆಗಳಲ್ಲಿ ನೆರೆಯು ಸಂಪೂರ್ಣವಾಗಿ ಇಳಿದಿದೆ. ಬಸ್ಸಿನ ಚಲಾವಣೆಯು ಪುನಃ ಪ್ರಾರಂಭವಾಗಿದೆ. ಬಂಟವಾಳದಿಂದ ಬೆಳ್ತಂಗಡಿಗೆ ಹೋಗುವ ಮಾರ್ಗದ ಸ್ಥಿತಿಯು ನೆರೆಯ ಸಂಬಂಧ ಬಹಳ ಕೆಟ್ಟುಹೋದದರಿಂದ ಮೋಟಾರ ಬಸ್ಸುಗಳ ಚಲಾವಣೆಯು ಕಳೆದ ನಾಲ್ಕೈದು ದಿವಸಗಳಿಂದ ಸರಿಯಾಗಿ ಚಲಾವಣೆಯಾಗುವದಿಲ್ಲ. ಪಾಣೆಮಂಗಳೂರು ಸಂಕದ ದುರುಸ್ತಿ ಕೆಲಸವು ಸಂಪೂರ್ಣವಾಗಿ ಮುಗಿದು ಈಗ ಸರಕು ಗಾಡಿಗಳ ಮತ್ತು ಮೋಟಾರ ಬಸ್ಸುಗಳ ಚಲಾವಣೆಗೆ ಬಿಟ್ಟುಕೊಟ್ಟಿದ್ದಾರೆ. ಈ ನೆರೆಯ ಸಮದಲ್ಲಿ ಈ ಸಂಕದ ಕೆಲಸವು ಮುಗಿದಿದ್ದು ಪ್ರಯಾಣಿಕರ ಭಾಗ್ಯವೆ ಎನ್ನಬೇಕು.

ನಮ್ಮ ಜಿಲ್ಲಾ ಎಡ್ಯುಕೇಶನಲ್‌ಕೌನ್ಸಿಲು ಸಭೆಯು ಈ ದಿನ ಮಧ್ಯಾಹ್ನ ೩ ಗಂಟೆಗೆ ಕಲೆಕ್ಟರರ ಆಫೀಸಿನಲ್ಲಿ ಸೇರುವುದು.

The Calicut Bank, Ltd.,

ದಿ ಕೆಲಿಕಟ್ ಬೇಂಕ್, ಲಿಮಿಟೆಡ್,

ಹೆಡ್ ಆಫೀಸು—ಕಲ್ಲಿಕೋಟೆ.

ಬ್ರಾಂಚುಗಳು:— ಮುಲ್ಲಸ್‌ಚೇರಿ, ತಲಚೇರಿ, ಕೊಚ್ಚಿ ಮತ್ತು ಪಾಲ್ಘಾಟು.

ರಿಜಿಸ್ಟರ್ಡ್ ಮತ್ತು ಅಧಿಕಾರಗೊಳಿಸಲ್ಪಟ್ಟ ಮೂಲಧನ ರೂ. 5,00,000—0—0.

ರೂಪಾಯಿ 10ರ 50,000 ಪಾಲುಗಳು.

(30—8—1924)ರ ವರೆಗೆ ಮೌಲ್ಯ ಮೂಲಧನ ರೂಪಾಯಿ 1,81,850—0—0.

ಒಂದು ವರುಷದ ಕಾಯಂ ಠೇವಣಾತಿಗೆ ಬಡ್ಡಿ ದರ ಸೇಕಡಾ ರೂ. 7—8—0.

ಕಳೆದ 4 ವರುಷಗಳಲ್ಲಿ ಪಾಲುಗಾರರಿಗೆ ಸೇಕಡಾ 12ರಂತೆ ಬಡ್ಡಿ ಹಂಚಿದೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಸಿ. ಕೃಷ್ಣನ್, ಬಿ. ಎ. ಬಿ. ಎಲ್.,
ಮೆನೇಜಿಂಗ್ ಡ್ಯಾರೆಕ್ಟರ್.

ಡ್ಯಾರೆಕ್ಟರರಲ್ಲಿ ಒಬ್ಬರು—
ಎಮ್. ನಾರಾಯಣ. ಕಾಮತ್, ಬಿ. ಎ.,
ಪ್ಲೀಡರ್, ಕುಂದಾಪುರ.

ಬರುವ ತಿಂಗಳ ತಾ. ೧ರ ಲಾಗಾಯತು ಕೊಡಿಯಾಲಬೈಲು ಟಪ್ಪಾಲ ಆಫೀಸಿನಿಂದ ಕಾಗದ ಪತ್ರಾದಿಗಳ ಬಟವಾಡೆ ಮಾಡುವುದನ್ನು ನಿಲ್ಲಿಸಲ್ಪಡುವುದೆಂದು ತಿಳಿದುಬರುತ್ತದೆ.

ಕೀರ್ತಿಶೇಷ ಅಮ್ಮೆಂಬಳ ಸುಬ್ರಾಯ ಪೈಗಳ ಸ್ಮಾರಕಾರ್ಥವಾಗಿ ಅವರ ಶ್ವೇತಶಿಲಾ ಪ್ರತಿಮೆಯೊಂದನ್ನು ಮಾಡಿಸಿ ಅದನ್ನು ಮಂಗಳೂರು ಪಟ್ಟಣದ ಒಂದು ಪ್ರಾಮುಖ್ಯ ಸ್ಥಳದಲ್ಲಿ ಇರಿಸಲಿಕ್ಕಾಗಿ, ಒಬ್ಬೊಬ್ಬನಿಂದ ಒಂದೊಂದು ರೂಪಾಯಿಯಂತೆ ೬೦೦೦ ರೂಪಾಯಿಗಳನ್ನು ಸಂಗ್ರಹಿಸಬೇಕೆಂದು ಒಂದು ವಿನಂತಿ ಹೊರಟಿದೆ. ನಮ್ಮ ಪಟ್ಟಣದ ಹಾಗೂ ನಮ್ಮ ಜಿಲ್ಲೆಯ ಪ್ರಸಿದ್ಧ ಪುರುಷರಲ್ಲೊಬ್ಬರಾಗಿರುವ ಶ್ರೀ| ಸುಬ್ರಾಯ ಪೈಗಳ ಸ್ಮಾರಕಾರ್ಥವಾಗಿ ಅಂಥಾ ಪ್ರತಿಮೆಯನ್ನಿರಿಸುವುದು ಅತಿಗತ್ಯವಾದುದರಿಂದ ಈ ಕಾರ್ಯವು ಕೈಸಾಗಲೆಂದು ನಮ್ಮ ಕೋರಿಕೆ

— ಸ್ವೀಕಾರ —

ಕರ್ನಾಟಕ ಪ್ರಬಂಧ ಮುಕ್ತಾವಳಿ ಗ್ರಂಥಕರ್ತ ಪಂಡಿತ ಕೆ. ಹನುಮಂತರಾವ್.

ಗೋಕರ್ಣಮಠ ಶಾಲೆಯ ವಾರ್ಷಿಕ ವರದಿಯ ರಿಪೋರ್ಟು. ಇವುಗಳನ್ನು ನಾವು ಅತ್ಯಾದರದಿಂದ ಸ್ವೀಕರಿಸಿದ್ದೇವೆ.

WANTED

Secondary Grade Trained Teachers for the Sanskrit school to be started in the next week by the Temple. Apply with testimonials and terms of pay to—

The Manager,
Sri Venkatramana Temple,
MOOLKY.

ಪತ್ರವ್ಯವಹಾರ.

— ನಂದಳ್ಕೆ. —

ಚಿಕಿತ್ಸಾ ಪ್ರಸಂಗದಿಂದ ತಾ ೧೪-೭-'೨೫ರಲ್ಲು ಬೆಳಗ್ಗೆ ಸುಮಾರು ೧೦ ಘಂಟೆಗೆ ನಾನು ನಂದಳ್ಕೆಗೆ ಹೋಗಿದ್ದೆನು. ನನ್ನ ಕರ್ತವ್ಯವನ್ನು ಮುಗಿಸಿ ನನಗೆ ಸುಮಾರು ೩ ಗಂಟೆಯ ಸಮಯವು ದೊರೆಯಿತು. ಈ ಸಮಯದಲ್ಲಿ ನಂದಳ್ಕೆಯ ದೇವಸ್ಥಾನ ಮತ್ತು ಚಾವಡಿ ಎಂಬ ಸ್ಥಳವನ್ನು ನೋಡುವ ಕುತೂಹಲದಿಂದ ಮೊದಲಾಗಿ ದೇವಸ್ಥಾನಕ್ಕೆ ಹೋದೆನು. ಈ ದಿವಸ ಏನೋ ಒಂದು ಕಾರಣದಿಂದ ಅರ್ಚಕರು ಮಧ್ಯಾಹ್ನದ ಪೂಜೆಯನ್ನು ಪ್ರಾತಃಕಾಲದಲ್ಲಿಯೇ ಮುಗಿಸಿ ದೇವಲದ ದ್ವಾರವನ್ನು ಮುಚ್ಚಿದ್ದರು. ಕಾರಣ ದೇವಲದ ಅಂತರ್ಭಾಗವನ್ನು ಮತ್ತು ದೇವರನ್ನು ದರ್ಶಿಸುವ ನನ್ನ ಭಾಗ್ಯವು ದೂರವಾಯಿತು. ಈ ದೇವಸ್ಥಾನವು ನಂದಳ್ಕೆ ಗ್ರಾಮದ ಪೂರ್ವದ ಅಂಚಿನಲ್ಲಿದೆ. ಈ ದೇವಾಲಯಕ್ಕೆ ಸಂಬಂಧಪಟ್ಟ ಭೂತಾಲಯಗಳು ಪೂರ್ವ, ದಕ್ಷಿಣ, ಪಶ್ಚಿಮ ದಿಕ್ಕುಗಳಲ್ಲಿವೆ. ಉತ್ತರ ದಿಕ್ಕಿನಲ್ಲಿ ಒಂದು ಕೆರೆ ಇದೆ. ದೇವಾಲಯವು ತಂತ್ರ ಪದ್ಧತಿಗೆ ಸೇರಿದೆಯೋ ಅಥವಾ ಆಗಮ ಪದ್ಧತಿಗೆ ಸೇರಿದೆಯೋ ಎಂಬುದನ್ನು ತಿಳಕೊಳ್ಳಲಿಕ್ಕೆ ತಕ್ಕ ಅವಕಾಶವು ದೊರೆಯಲಿಲ್ಲ. ಈ ದೇವಾಲಯದಿಂದ ಆಗ್ನೇಯ ಮೂಲೆಯಲ್ಲಿ ಹೊರಗಿನ ದಕ್ಷಿಣಾಂಗಣದ ಪೂರ್ವಾಂಶ್ಯದಲ್ಲಿ ಒಂದು ಪ್ರತಿಮಾಶಾಲೆಯು ಇದೆ. ಈ ಶಾಲೆಯಲ್ಲಿ ೨೦ ಮರದ ಮನುಷ್ಯ ವಿಗ್ರಹಗಳು ಇರುತ್ತವೆ. ಈ ವಿಗ್ರಹಗಳಲ್ಲಿ ೧೫ ಹೆಗ್ಗಡೆಯವರ ಪ್ರತಿಮೆಗಳು, ೧ ಹೆಗ್ಗಡ್ತಿಯ ಪ್ರತಿಮೆಯೂ, ೨ ಕ್ಷೌರಿಕರ ಪ್ರತಿಮೆಯೂ, ೨ ತಾಂಬೂಲಿಕರ ಪ್ರತಿಮೆಯಾಗಿಯೂ ಆಗಿರುತ್ತದಂತೆ. ಚಾವಡಿ ಎಂಬ ಅರಮನೆಯಲ್ಲಿ ಪಟ್ಟಾಭಿಷಿಕ್ತರಾಗಿ ಮೃತಪಟ್ಟ ಪ್ರತಿಯೊಂದು ಹೆಗ್ಗಡೆ ಮತ್ತು ಪ್ರತಿಯೊಂದು ಹೆಗ್ಗಡ್ತಿಯರ ಪ್ರತಿಮೆಗಳನ್ನು ಮಾಡಿ ಈ ಚಿತ್ರಶಾಲೆಯಲ್ಲಿ ಇರಿಸಲ್ಪಟ್ಟಿದ್ದೆಂತ ಇಲ್ಲಿಯ ಅನುಭವಸ್ಥರು ಹೇಳಿದರು. ದೇವಾಲಯದ ಪಶ್ಚಿಮ ಅಂಗಣದ ಪಶ್ಚಿಮ ಬಾಗಲಿಗೆ ತಾಗಿ ಒಂದು ನಾಗವನವು ಇದೆ. ಈ ವನದಿಂದ ದಕ್ಷಿಣಕ್ಕೆ ಕೂಡ ಒಂದು ಚಿಕ್ಕ ಚಿತ್ರಶಾಲೆ ಇದೆ. ಇದರಲ್ಲಿಯೂ ಕಿರೀಟಧಾರಿ ಹೆಗ್ಗಡೆಯರ ೨ ಪ್ರತಿಮೆಯೂ, ಹೆಗ್ಗಡ್ತಿಯರ ೨ ಪ್ರತಿಮೆಯೂ ಇರುತ್ತದೆ. ಈ ಚಿತ್ರಶಾಲೆಯು ಬಿದ್ದುಹೋಗಿ ಶಾಲೆಯೂ ಪ್ರತಿಮೆಗಳೂ ಅವ್ಯವಸ್ಥೆಯಿಂದ ಹಾಳು ಸ್ಥಿತಿಯಲ್ಲಿವೆ. ದೇವಸ್ಥಾನದ ಬಹಿರಂಗಣದಲ್ಲಿರುವ ಧ್ವಜಸ್ತಂಭದ ಆಧಾರ ಕಲ್ಲಿನ ಪೂರ್ವ ಪಾರ್ಶ್ವದಲ್ಲಿ ಮುಕ್ಕಾಲು ಕೋಲು ಉದ್ದದ ಒಂದು ಪ್ರತಿಮೆಯು ಕೆತ್ತಲ್ಪಟ್ಟಿದೆ. ಈ ಪ್ರತಿಮೆಯು ನಿಂತುಕೊಂಡು ಎರಡು ಕೈಗಳನ್ನು ಉದ್ದಿಂದ ಚಾಚಿ ಪಟ್ಟಿಗಳಿಂದ ಏನೊ ಹಿಡಕೊಂಡದ್ದಾಗಿ ಕಾಣುತ್ತದೆ. ಇದನ್ನು ವ್ಯಕ್ತವಾಗಿ ನೋಡಲಿಕ್ಕೆ ತಕ್ಕ ಸಾಧನಗಳಿಲ್ಲದಿದ್ದದ್ದರಿಂದ ನನ್ನ ಅನುಭವಕ್ಕೆ ಬರಲಿಲ್ಲ. ಈ ಪ್ರತಿಮೆಗೆ ಟೊಪ್ಪಿಯಾಕೃತಿ ಶಿರಸ್ತ್ರಾಣವಿದೆ. ಎರಡು ಕೈಗಳ ಭುಜಾಗ್ರ ಮತ್ತು ಮಣಿಗಂಟುಗಳಲ್ಲಿ ಕಂಕಣಾಕೃತಿಯೂ, ಕಂಠದಲ್ಲಿ ೯ ರುದ್ರಾಕ್ಷಿಯ ಮಾಲಿಕೆಯು ಕೂಡ ಕೆತ್ತಲ್ಪಟ್ಟಿದೆ. ದೇವಸ್ಥಾನದ ಹೊರಗಿನ ಪೂರ್ವಭಾಗದ ಅಂಗಣದಲ್ಲಿ ಉನ್ನತವಾಗಿಯೂ ಕೆಳಭಾಗದ ಮಧ್ಯದಲ್ಲಿ ವಿಶಾಲವಾದ ದಾರಿಯಿಂದ ಉತ್ತರ ಮತ್ತು ದಕ್ಷಿಣ ಬೈಠಕುಗಳಿಂದ ವಿಭಕ್ತವಾಗಿಯೂ ಅವಿಭಕ್ತವಾದ ಮಾಳಿಗೆಯಿಂದಲೂ ಅಲಂಕೃತವಾದ ಒಂದು ಹೊಸ ಗೋಪುರವಿದೆ. ಜೀರ್ಣ ಗೋಪುರವನ್ನು ಕೆಡವಿ ಅದೇ ಸ್ಥಳದಲ್ಲಿ ಅದೇ ಮರ್ಯಾದೆಯಿಂದ ಕಟ್ಟಿಸಿದ ಈ ಗೋಪುರಕ್ಕೆ ಸುಮಾರು ೪೦ ವರ್ಷಗಳಾಗಬಹುದು. ಇದರ ದಕ್ಷಿಣ ಗೋಪುರದ ಉತ್ತರ ಮತ್ತು ಪೂರ್ವಾಂಶ್ಯದ ಅಂಚಿನಲ್ಲಿ ಒಂದು ಆಸನವಿದೆ. ಪ್ರಕೃತದ ಆಸನವು ಪ್ರಾಚೀನಾಸನದ ಸ್ಥಳದಲ್ಲಿಯೇ ಇರುತ್ತದಂತೆ. ಪ್ರಾಚೀನದಲ್ಲಿ ಈ ಆಸನವು ¾ ಕೋಲು ಅಗಲ ೨¼ ಕೋಲು ಉದ್ದವಾಗಿ ಚಾವಡಿಯ ಹೆಗ್ಗಡೆಯರಿಗೆ ಮತ್ತು ಮೂಡುಮನೆಯ ಪ್ರಧಾನಿಗಳಿಗೆ ಏಕಕಾಲದಲ್ಲಿ ಕೂತುಕೊಳ್ಳುವಷ್ಟು ವಿಶಾಲವಾಗಿತ್ತಂತೆ. ಇದಕ್ಕೆ ಇಲ್ಲಿಯ ಜನರು ಪಿಂಜರವೆಂದು ಹೇಳುತ್ತಾರೆ. ಈ ಪಿಂಜರದಲ್ಲಿ ಹೆಗ್ಗಡೆ ಮತ್ತು ಪ್ರಧಾನಿ ಮನೆತನದವರು ಕೂತು ದೇವಸ್ಥಾನಕ್ಕೆ ಹರಿಕೆಗೆ ಬರುವ ದೈವ ಭಕ್ತರಿಗೆ ಪ್ರಧಾನಿ ಮನೆಯವರು ತೀರ್ಥ ಹಾಕಿಸಬೇಕೆಂತ ಆ ಸ್ಥಳದ ಒಬ್ಬಿಬ್ಬ ವೃದ್ಧರು ಹೇಳಿದರು. ಪ್ರಕೃತದ ಪಿಂಜರವು ಸ್ವಲ್ಪ ಚಿಕ್ಕದ್ದಾಗಿದೆ. ಈಗಲಾದರೂ ಚಿಕ್ಕದ್ದಾಗಿರುವ ಪಿಂಜರದಲ್ಲಿ ಹೆಗ್ಗಡೆ ಮತ್ತು ಪ್ರಧಾನಿಗಳು ಒಟ್ಟಿಗೆ ಕೂತುಕೊಳ್ಳಬೇಕಂತೆ. ಈ ದೇವಸ್ಥಾನದ ಪಶ್ಚಿಮ ಮತ್ತು ಸ್ವಲ್ಪ ಉತ್ತರ ½ ಫರ್ಲಾಂಗು ದೂರದಲ್ಲಿ ಚಾವಡಿ ಎಂಬ ಒಂದು ರಾಜ ಗೃಹವಿದೆ. ಈ ರಾಜಗೃಹವು ಮೊದಲಿನ ರಾಜಮಂದಿರದ ದರ್ಬಾರ ಮಹಾಲ್ ಆಗಿತ್ತೆಂತ ಹೇಳುತ್ತಾರೆ. ಈಗಿನ ಚಾವಡಿಯನ್ನು ಕಟ್ಟಿಸಿ ಸುಮಾರು ೫೦೦ ಸಂವತ್ಸರಗಳಾಗಬಹುದೆಂದು ಹೇಳುತ್ತಾರೆ. ಇದಕ್ಕೆ ಉಪ್ಪರಿಗೆ ಇದೆ. ಕೆಳಗಿನ ಮರಗಳ ಮೂಪುಗಳಲ್ಲಿ ವಿಚಿತ್ರವಾದ ಕಟ್ಟಿ ಕೆಲಸಗಳ ಚಿತ್ರಗಳು ಶೋಭಿಸುತ್ತವೆ. ಈ ಚಾವಡಿಯ ದಕ್ಷಿಣ ಗೋಡೆಗೆ ತಾಗಿ ಉತ್ತರಾಭಿಮುಖವಾಗಿ ಮಧ್ಯ ಭಾಗದಲ್ಲಿ ಬಹಳ ಜೀರ್ಣಸ್ಥಿತಿಯಲ್ಲಿರುವ ಒಂದು ಮರದ ಸಿಂಹಾಸನವು ಇದೆ. ಚಾವಡಿಯ ಪಶ್ಚಿಮ ಗೋಡೆಯ ಮಧ್ಯದಲ್ಲಿ ವಿಶಾಲವಾದ ಬಾಗಲು ಉಂಟು. ಪೂರ್ವಭಾಗದಲ್ಲಿ ಚಾವಡಿಗೆ ತಾಗಿ ಅದೇ ಪಾತ್ತ್ವಿಗೆ ಸಂಬಂಧಿಸಿಕೊಂಡು ತಗ್ಗಾಗಿರುವ ಒಂದು ಅಗಲವಾದ ಜಗಲಿ ಇದೆ. ಪೂರ್ವಭಾಗವು ದೇವಸ್ಥಾನದ ಕಡೆಗೆ ಮುಖಮಾಡಿಕೊಂಡು ಗೋಡೆಗಳಿಲ್ಲದೆ ಬಹಿರಂಗವಾದ ತೆರೆಯಬಳ್ಳದ್ದಾಗಿದೆ. ಪಶ್ಚಿಮ ಬಾಗಲಿನ ಬಡಗು ದಾರಂದಕ್ಕೆ ತಾಗಿ ಪೂರ್ವಾಭಿಮುಖವಾಗಿ ಹೆಗ್ಗಡೆಯರ ಆಸನವೂ, ದಕ್ಷಿಣ ದಾರಂದಕ್ಕೆ ತಾಗಿ ಪೂರ್ವಾಭಿಮುಖವಾಗಿ ಮೂಡುಮನೆ ಪ್ರಧಾನಿಗಳ ಆಸನವೂ ಇರುತ್ತವೆ. ದಕ್ಷಿಣ ಗೋಡೆಗೆ ತಾಗಿರುವ ಆಸನವು ಪಟ್ಟಾಸನವಾಗಿಯೂ, ಪಶ್ಚಿಮ ಗೋಡೆಯ ಬದಿಯಲ್ಲಿರುವ ಆಸನಗಳು ದರ್ಬಾರಿನ ಆಸನಗಳಾಗಿಯೂ ಕಂಡುಬರುತ್ತವೆ. ಅಲ್ಲದೆ ಇಲ್ಲಿ ಸುಮಾರು ೧೫ ಪಟ್ಟದ ಕೈದಿಗಳಿರುತ್ತವಂತೆ. ಇವುಗಳನ್ನು ನೋಡುವಷ್ಟು ನನಗೆ ಅವಕಾಶವಿರಲಿಲ್ಲ. ಹೆಗ್ಗಡೆಯರ ಪಟ್ಟದ ಸಾಂಪ್ರದಾಯವು ವಿಚಾರಣೀಯವಾಗಿದೆ. ನಿಯತವಾದ ಬಂಟರ ಕುಲದಿಂದ ಪಟ್ಟಕ್ಕೆ ಬೇಕಾದವರನ್ನು ತರಬೇಕು. ಈ ಕುಲದವರು ಮಾಂಸ ಆಹಾರಿಗಳು. ಪಟ್ಟಕ್ಕೆ ಬಂದ ನಂತರ ಅವರು ಕೇವಲ ವನಸ್ಪತಿ ಆಹಾರಿಗಳಾಗಬೇಕು. ಮತ್ತು ಇವರಿಗೆ ಅಡಿಗೆಯವರು ಮತ್ತು ಬಡಿಸುವವರು ಸ್ನಾನಮಾಡಿ ಮಡಿಯಿಂದ ಈ ಕೆಲಸಗಳನ್ನು ಮಾಡಬೇಕು. ಪಟ್ಟದ ದಿವಸ ಪಟ್ಟದಾರರಿಗೆ ಉಪನಯನ ಅಂದರೆ ಯಜ್ಞೋಪವೀತವನ್ನು ಹಾಕಿ ಪಟ್ಟಕ್ಕೆ ತರಬೇಕು. ಮೂಡುಮನೆಯ ಪ್ರಧಾನಿ ಮನೆತನದವರು ಇವರಿಗೆ ಯಜ್ಞೋಪವೀತವನ್ನು ಹಾಕಬೇಕು. ಮಧ್ಯ ಕೆಂದಯ್ಯನವರ ಮನೆಯವರು ಪಟ್ಟದಲ್ಲಿ ಕೂತುಕೊಳ್ಳಿಸಬೇಕು. ಸಿದುಂಬದೂರು ಮನೆಯವರು ಹೆಗ್ಗಡೆ ಬಿಂಬ ಕರಾಡಿನಿಂದ ಇರಿಯಬೇಕಂತೆ. ಈ ಕುಲದಲ್ಲಿ ಗಂಡಸರಿಲ್ಲದಿದ್ದರೆ ಹೆಂಗಸರು ಪಟ್ಟಕ್ಕೆ ಬರುವ ಕ್ರಮವಂತೆ. ಈಗಿನ ಚಿತ್ರಶಾಲೆಗಳಲ್ಲಿ ೧೬ ಗಂಡಸರ ಮತ್ತು ೩ ಜನ ಹೆಂಗಸರ ಪಟ್ಟದ ಪ್ರತಿಮೆಗಳು ಇರುತ್ತವೆ. ವರ್ತಮಾನ ಕಾಲದ ಮಾನನೀಯ ಹೆಗ್ಗಡೆಯರು ಉದಾರಸ್ವಭಾವದವರೂ ಇತಿಹಾಸದಲ್ಲಿ ಪ್ರೇಮವುಳ್ಳವರೂ ಆಗಿದ್ದಾರೆ. ತನ್ನ ಅತಿಥಿಗಳಿಗೆ ಸತ್ಕಾರವನ್ನು ಮಾಡುವದರಲ್ಲಿ ಬಹಳ ಆದರಭಾವವುಳ್ಳವರಾಗಿದ್ದಾರೆ. ನನಗಾದರೂ ಕೆಲವು ಅನುಭವಗಳನ್ನು ಕೊಟ್ಟದ್ದರಿಂದ ಆ ಮಹಾಶಯರಿಗೆ ನಾನು ಕೃತಜ್ಞನಾಗಿದ್ದೇನೆ. ನಂದಳ್ಕೆಗೆ ಸಂಬಂಧಪಟ್ಟ ಹೆಚ್ಚಿನ ಸಂಗತಿಗಳನ್ನು ಅಂದರೆ ಇಲ್ಲಿ ಆರ್ಯ ಜನರ ಸಂಸ್ಕೃತಿ ಕಿರೀಟಧಾರಿಗಳ ಕಾಲ, ಜೈನಮತಸ್ಥರ ಪರಿವರ್ತನ, ಜಂತ್ರಗುಡ್ಡೆಯ ಇತಿಹಾಸ, ಪರ್ವತ ದುರ್ಗದ ಸಂಭಾವನೆ, ಶಿರಿಯ ನಿಜವಾದ ಇತಿಹಾಸ, ಜನಾರ್ದನ ದೇವಸ್ಥಾನ, ಮತ್ತು ಮಹಾಲಿಂಗೇಶ್ವರ ದೇವಸ್ಥಾನ ಜೈನ ಬಸದಿ ಮತ್ತು ಭೂತಸ್ಥಾನ ಮೊದಲಾದವುಗಳ ಕಾಲ ಮತ್ತು ಮಹಾತ್ಮೆಯು ಹೊರಗೆ ಬಿದ್ದರೆ ಇತಿಹಾಸಜ್ಞರಿಗೆ ಸಂತೋಷವಾದೀತು. ಇದನ್ನೆಲ್ಲಾ ಕೂಲಂಕಷವಾಗಿ ಬರೆಯುವದು ಈ ಊರಿನ ವಿದ್ವಾಂಸರಿಗೇನೇ ಸಾಧ್ಯವಾಗಿರುತ್ತದೆ.

ಯಮ್. ವಿ. ಶಾಸ್ತ್ರೀ.
ತಾ. ೨೦-೭-'೨೫.

— ನೆರೆಯ ಹಾವಳಿ. —

ಬಂಟ್ವಾಳ:— ಇದೇ ತಿಂಗಳ ತಾ. ೧೩ರ ವರೆಗೆ ಬೇಸಿಗೆಯಲ್ಲಿ ನೇತ್ರಾವತಿ ನದಿಯು ಯಾವ ರೂಪದಲ್ಲಿದ್ದಳೋ ಅದೇ ರೂಪವನ್ನು ತಾಳಿಕೊಂಡಿದ್ದರೂ ಒಂದೇ ಹೊತ್ತಿನಲ್ಲಿ ತಾ. ೧೪ನೇ ದಿನವು ಸಂಪೂರ್ಣವಾಗಬೇಕಾದರೆ ವಿಶೇಷ ಮಳೆ ಬಿದ್ದು ನದಿಯ ಸ್ವರೂಪವು ಮಾರ್ತಾಂಡವಾಗಿ ಬೆಳೆದುಹೋಗಿ ನಡು ಪೇಟೆಯ ವರೆಗೂ ನೀರು ಬಂದಿತ್ತು. ತಾ. ೧೫-೧೬ರ ವಳಗೆ ಈ ನೀರು ನಡು ಪೇಟೆಯಿಂದ ಇಳಿದು ಹೋದರೂ ನೆರೆಯು ಶಾಂತವಾಗಲಿಲ್ಲ. ಕಳೆದ ಆದಿತ್ಯವಾರ ಸಾಯಂಕಾಲದ ವರೆಗೆ ಆಗಿಂದಾಗ್ಗೆ ಮಳೆಯೂ ಸುತ್ತಲಿದ್ದು ನೆರೆಯ ನೀರು ಒಂದೆರಡು ಅಡಿ ಏರುವುದೂ ತಗ್ಗುವುದೂ ಇತ್ತು. ತಾ. ೧೯ನೇ ಸಾಯಂಕಾಲ ಇಳಿದು ಹೋದ ನೀರು ಮರುದಿನ ಅಮಾವಾಸ್ಯೆಯಾದರೂ ಪುನಹ ಏರಲಿಲ್ಲ. ಮಾರ್ಗಗಳಿಂದ ಸಂಪೂರ್ಣವಾಗಿ ಇಳಿದು ಹೋಗಿ ಕೆಲವು ಮಟ್ಟಿಗೆ ಈ ಮಾರ್ಗಗಳ ಕಿನಾರೆಯಲ್ಲಿರುವ ಗದ್ದೆಗಳಿಂದಲೂ ಇಳಿಯ ಹೋಗಿದೆ.

ಸಮೀಪದಲ್ಲಿ ನೀರಿನ ಗಂಡಾಂತರದಿಂದ ದೂರವಿರುವ ಸ್ಥಳಗಳಿಗೆಲ್ಲಾ ತಮ್ಮ ಅಂಗಡಿ, ಭಂಡಸಾಲೆ, ಸಾಮಗ್ರಿಗಳನ್ನು ವೈದುಕೊಂಡಿದ್ದ ಅಂಗಡಿಗಾರರು, ಐದಾರು ದಿನಗಳ ತನಕ ಮುಚ್ಚಿಕೊಂಡಿದ್ದ ಬಾಗಿಲುಗಳನ್ನು ತೆರಿಯುವ ಪ್ರಯತ್ನದಲ್ಲಿರುವರು. ಸಾಮಾಗ್ರಿಗಳನ್ನು ಸ್ವಲ್ಪ ಸ್ವಲ್ಪ ಮಟ್ಟಿಗೆ ಈ ಅಂಗಡಿ ಭಂಡಸಾಲೆಗಳಿಗೆ ತರುತ್ತಲಿದ್ದಾರೆ: ಇನ್ನಾದರೂ ಈ ವರುಷದ ಮಟ್ಟಿಗೆ ಈ ನೀರಿನ ಗಂಡಾಂತರವು ದೂರವಾಗಿರಬಹುದೆಂಬ ಅಂದಾಜನ್ನು ನಾನಾ ವಿಧಗಳಿಂದ ಮಾಡುತ್ತಲಿದ್ದು ತಮ್ಮ ವ್ಯಥಿತ ಮನಸ್ಸನ್ನು ಸಾಮಾಧಾನ ಮಾಡುತ್ತಿದ್ದಾರೆ. ಮಳೆಯ ಗತಿಯು ಹೇಗಿರುವದೋ ನೋಡಲಿಕ್ಕಿದೆ. ಸುಮಾರು ೧೩೦-೧೪೦ ಇಂಚುಗಳ ಮಳೆ ಸರಾಸರಿಯಲ್ಲಿ ೭೫ ಇಂಚುಗಳ ತನಕ ಮಳೆಯು ಬಿದ್ದುಹೋದ್ದರಿಂದ ಇನ್ನು ಬಾಕಿ ಬೀಳಲಿಕ್ಕಿರುವ ಮಳೆಯಿಂದ ನೆರೆನೀರಿನ ಗಂಡಾಂತರದ ಸಂದರ್ಭಗಳು ಅಷ್ಟೊಂದು ಬಂದೊದಗಲಿಕ್ಕಿಲ್ಲವೆಂಬ ಭರವಸೆ ಪಡುತ್ತಿರುವರಾದರೂ ಕಾಲಸ್ಥಿತಿಯು ಯಾವರೀತಿಯಿಂದ ಮಾರ್ಪಡುವದೊ ಎಂಬ ಅಂಜಿಕೆಯು ಒಮ್ಮಿಂದೊಮ್ಮೆ ಇಲ್ಲಿಯ ನಿವಾಸಿಕರೆಲ್ಲರನ್ನೂ ಬಾಧಿಸುತ್ತಿದೆ.

ಬಂಟವಾಳ ಪಟ್ಟಣವನ್ನು ಈ ನೆರೆಯ ಸಮಯದಲ್ಲಿ ನೋಡಲು ಹೋದವರಿಗೆ ಪ್ರತ್ಯಕ್ಷದಲ್ಲಿ ವ್ಯಕ್ತವಾಗಿ ರೂಪುಗೊಂಡಂಥ ನಷ್ಟವು ಪಟ್ಟಣ ನಿವಾಸಿಕರಲ್ಲಿ ಉಂಟಾದ್ದು ಕಂಡುಬರಲಿಕ್ಕಿಲ್ಲ. ಆದರೆ ಕೆಲವು ಸಮಯ ಬಂಟವಾಳ ಕಸಬೆಯಲ್ಲಿ ನಿಂತು ಜನರ ಸ್ಥಿತಿಗತಿಯನ್ನು ವಿಚಾರಿಸಿ ತಿಳಿದರೆ ಈಗ ಮೂರು ವರುಷಗಳಿಂದ ಕ್ರಮಪ್ರಕಾರವಾಗಿ ಬರುವಂಥ ನೆರೆಗಳಿಂದ ನಿವಾಸಿಕರು ಪ್ರತಿವರುಷದಲ್ಲಿ ಯಾವ ಭಾಗ್ಯವೂ ಇಲ್ಲದೆ ಸದಾ ಚಿಂತೆಯಲ್ಲಿಯೇ ಬೆಂದುಹೋಗುತ್ತಿರುವುದು ಎಂಥವನಿಗಾದರೂ ಮನಸ್ಸಿಗೆ ಖಚಿತವಾಗದೆ ಇರಲಾರದು. ಪ್ರಥಮದಲ್ಲಿ ಪೇಟೆಗಳಲ್ಲಿ ಕೂಡಲೆ ನೋಡಸಿಕ್ಕುವ ವ್ಯಾಪಾರಸ್ಥರ ಸ್ಥಿತಿಯೇನೆಂಬುದನ್ನು ತಿಳಿಯುವ.

ಬಂಟವಾಳದಿಂದ-ಮೂಡಬಿದ್ರೆ, ವೇಣೂರು, ಬೆಳ್ತಂಗಡಿ, ಫರಂಗಿಪೇಟೆ ಇವುಗಳ ಮಧ್ಯದಲ್ಲಿರುವ ಎಲ್ಲಾ ಹಳ್ಳಿ ಪ್ರಾಂತ್ಯಗಳಿಗೂ ಮುಖ್ಯವಾದಂಥ ಊರುಗಳಿಗೂ ಬಂಟವಾಳವು ಮಧ್ಯಸ್ಥಳದಲ್ಲಿದ್ದು ಈ ಪ್ರಾಂತ್ಯಗಳ ಮುಖ್ಯ ವ್ಯಾಪಾರ ವೈವಾಟದ ಪಟ್ಟಣವಾಗಿರುವುದು. ಕೊಡೆಕಾಲ್ ಅಥವಾ ಚಾರ್ಮಾಡಿ ಘಾಟಿ ರಸ್ತೆಯು ಈ ಪಟ್ಟಣದಿಂದ ಹಾದುಹೋಗುವದರಿಂದಲೂ ನೇತ್ರಾವತಿ ನದಿ ಮೂಲಕ ಮಂಗಳೂರಿಗೆ ನದಿ ಮಾರ್ಗ ಇರುವ ಸಂಬಂಧವೂ ನಮ್ಮ ಜಿಲ್ಲೆಯ ವ್ಯಾಪಾರ ಸ್ಥಳಗಳಲ್ಲಿ ಒಂದು ಪ್ರಾಮುಖ್ಯ ಸ್ಥಳವಾಗಿರುವದು. ಇಂಥ ಸ್ಥಳದ ಪಾಡು ಇತ್ತಲಾಗೆ ಎರಡು ಮೂರು ವರುಷಗಳಿಂದ ಹೇಗಿದೆ? ಪ್ರತಿ ವರುಷದಲ್ಲಿಯೂ ರಸ್ತೆಗಳ ದುರುಸ್ತಿಯು ಸರಿಯಾಗಿ ಸಾಗದೆ ಇರುವದರಿಂದ ಗಾಡಿಗಳ ವೈವಾಟಕ್ಕೆ ಅತೀಕ ಭಂಗ ಉಂಟಾಗಿ ವ್ಯಾಪಾರಸ್ಥರಿಗೂ ರೈತರಿಗೂ ಬಹಳ ನಷ್ಟಕ್ಕೆ ಕಾರಣಗಳುಂಟಾಗಿದೆ. ಪ್ರತಿ ಮಳೆ ಕಾಲದ ಸಮಯದಲ್ಲಿ ಸಾಧಾರಣ ೫೦ ಅಥವಾ ೬೦ ಸಾವಿರ ಅಕ್ಕಿ ಮುಡಿಗಳ ದಾಸ್ತಾನೂ ಗ್ರಾಮಗಳಿಗೆ ಬೇಕಾಗಿರುವ ಇತರ ಜೀನಸುಗಳ ದಾಸ್ತಾನೂ ಇಡುವಂಥ ಬಂಟವಾಳದಲ್ಲಿ ಈಗ ಮೇ ತಿಂಗಳಿನಿಂದ ಪಟ್ಟಣವು ಖಾಲಿಯಾಗಲು ಪ್ರಾರಂಭವಾಗುವದು. ಜನರೂ ಕಡಿಮೆ, ವ್ಯಾಪಾರ ಜೀನಸುಗಳೂ ಇಲ್ಲ, ಇದೆಲ್ಲ ಸಾಲದೆಂಬಂತೆ ಬಂಟವಾಳಕ್ಕಿರುವ ಎಲ್ಲಾ ಕಡೆಗಳ ಮಾರ್ಗಗಳೂ ಕಡಿದು ಹೋಗಿ ಯಾವ ವೈವಾಟಕ್ಕೂ ಉಪಾಯವಿಲ್ಲದೆ ಜನರೆಲ್ಲರೂ ಬಳಲುತ್ತಿರುವರು. ಮಾರ್ಗಗಳ ಈ ನಾದುರಸ್ತಿಯನ್ನು ಕೂಡಲೆ ಸರಿಪಡಿಸುವ ಜವಾಬ್ದಾರಿಯುಳ್ಳ ಡಿಸ್ಟ್ರಿಕ್ಟಬೋರ್ಡು ಜನರ ಈ ಸಂಕಟವನ್ನು ನಿವಾರಿಸುವ ಅವಸರದಲ್ಲಿಲ್ಲ. ರಿಪೇರಿ ಕೆಲಸವು ನಡಿಯುವದಿಲ್ಲವೆಂತ ಹೇಳಿದರೆ ತಪ್ಪಾಗಬಹುದು. ರಿಪೇರಿ ಕೆಲಸವು ನಡಿಸದೆ ಇದ್ದರೆ ಡಿಸ್ಟ್ರಿಕ್ಟ್ ಬೋರ್ಡಿನ ಬಹಳ ದೊಡ್ಡದಾಗಿರುವ ಇಂಜಿನಿಯರಿಂಗ್ ಫೌಜಿಗೂ ಕಂಟ್ರಾಕ್ಟರರ ರಾಶಿಗೂ ಕೆಲಸವಿರದೇ ಎಂಬುವ ಪ್ರಶ್ನೆಯು ಬಂದು ಒದಗುವುದು. ಕೆಲಸವುಂಟು. ಆದರೆ ಯಾವುದೂ ಸಕಾಲದಲ್ಲಿ ನಡಿಯದೆ ಇರುವದರಿಂದ ಬಹಳ ಮಟ್ಟಿಗೆ ನಿಷ್ಪ್ರಯೋಜಕವಾದ ಖರ್ಚಿನ ಉಪಯೋಗಕ್ಕೆ ಬಾರದ ಕೆಲಸವೂ ನಡಿಯುತ್ತದೆ. ಎಲ್ಲಾ ಕಡೆಗಳಲ್ಲಿಯೂ ಮಾರ್ಗಗಳು ಒಂದಲ್ಲ ಇನ್ನೊಂದು ಕಾರಣದಿಂದ ಕಡಿದು ಹೋಗುವದರಿಂದ ಜನರು ಯಾವ ರೀತಿ ನಷ್ಟಕಷ್ಟಗಳಿಗೆ ಗುರಿಯಾಗುತ್ತಾರೆಂಬುದನ್ನು ಸರಿಯಾಗಿ ಮನಸ್ಸಿಗೆ ತಕ್ಕೊಂಡು ಕಾರ್ಯ ಪ್ರವರ್ತರಾಗುವಂಥ ಪುಣ್ಯಾತ್ಮರ ಸಂಖ್ಯೆಯು ನಮ್ಮ ಲೋಕಲ್ ಬೋರ್ಡುಗಳಲ್ಲಿ ಕಡಿಮೆಯಾಗಿರುವುದರಿಂದ ಕೂಡಲೆ ಬೇಕಾಗಿರುವ ನಿವೃತ್ತಿಯು ಸಿಕ್ಕದೆ ಹೋಗಿ ಜನರ ಸಂಕಷ್ಟವು ಪ್ರತಿ ವರುಷದಲ್ಲಿಯೂ ಅಧಿಕವಾಗುತ್ತ ಹೋಗುತ್ತದೆ.

ಈಗ ಬಂಟವಾಳದಿಂದ ನಾಲ್ಕು ಕಡೆಗಳಲ್ಲಿಯೂ ಇರುವ ಮಾರ್ಗಗಳ ಸ್ಥಿತಿಯನ್ನು ಒಂದೊಂದಾಗಿ ಪರ್ಯಾಲೋಚಿಸುವ. ಬಂಟವಾಳದಿಂದ ಮಂಗಳೂರಿಗೆ ಹೋಗುವಾಗ ಫರಂಗಿಪೇಟೆಯಲ್ಲಿ ಆರನೇ ಮೈಲು ಕಲ್ಲು ದಾಟಿದ ನಂತರವೂ ಮತ್ತು ೧೧ನೇ ಮೈಲು ಕಲ್ಲು ದಾಟಿದ ನಂತರವೂ ಮಾರ್ಗಗಳು ಕಡಿದು ಹೋಗಿ ಎಷ್ಟು ಸಮಯವಾಯಿತು? ಯಾವ ವಿಧಾನಗಳಿಂದ ಇವರ ದುರಸ್ತಿಯನ್ನು ನಡಿಸಿದರು? ದುರಸ್ತಿಯ ಕೆಲಸವು ಮೇ ತಿಂಗಳ ಅಂತ್ಯವಾದರೂ ಪ್ರಾರಂಭವಾಗದೆ ಜೂನು ತಿಂಗಳ ಅಷ್ಟೆರು ವರೆಗಿದ್ದು ವಿಶೇಷ ಹಣದ ರಾಶಿಯನ್ನು ನೀರಿಗೆ ಹಾಕುವ ವ್ಯವಸ್ಥೆಯನ್ನು ನಡಿಸಿದ್ದು ಯಾಕೆ? ಈ ಅನವ್ಯಯಕ್ಕೆ ಜವಾಬ್ದಾರರು ಯಾರು?

ನಂತರ ಬಂಟವಾಳದಿಂದ ಮೂಡಬಿದ್ರೆಗೆ ಹೋಗುವ ಮಾರ್ಗವನ್ನು ನೋಡಿದರೆ ಗಾಡಿಗಳಿಗೆ ಸಹ ಹೋಗಲು ಅಸಾಧ್ಯವಾಗುವಂತೆ ಹಲವು ಕಡೆಗಳಲ್ಲಿ ಮಾರ್ಗವು ಕಡಿದು ಹೋಗಿದೆ. ಇದನ್ನು ನೋಡಿದವರು ಯಾರು? ಎಷ್ಟು ಸರ್ತಿ ಡಿಸ್ಟ್ರಿಕ್ಟ್ ಬೋರ್ಡು ಪ್ರಸಿಡೆಂಟರು ಇದರ ಸಂದರ್ಶನೆಯನ್ನು ಮಾಡಿರುತ್ತಾರೆ. ಇದರ ರಿಪೇರಿ ಬಗ್ಗೆ ಎಷ್ಟು ಹಣವು ವಿನಿಯೋಗಿಸಲ್ಪಟ್ಟಿದೆ? ಈ ಮಾರ್ಗದಲ್ಲಿರುವ ಪುಟ್ಟ ಮೋರಿಗಳು ಸಂಕವು ಕಡಿದು ಹೋಗಿ ಎಷ್ಟು ವರ್ಷಗಳಾದುವು? ಇದನ್ನು ಸರಿಪಡಿಸಲಿಕ್ಕೆ ಯಾವ ಪ್ರಯತ್ನವೂ ಈ ತನಕ ನಡಿಯದೆ ಇರಲು ಕಾರಣವೇನು? ಈ ಮಾರ್ಗದ ಅವ್ಯವಸ್ಥೆಯಿಂದ ಬಂಟವಾಳ ವ್ಯಾಪಾರಸ್ಥರಿಗೂ ಆ ಪ್ರಾಂತ್ಯಗಳ ರೈತರಿಗೂ ಬಹಳ ಕಷ್ಟಕ್ಕೆ ಕಾರಣವಾಗಿದೆ. ಸಾವಿರ ಕಟ್ಟಲೆಯಿಂದ ಹಣವನ್ನೂ, ವ್ಯಾಪಾರವನ್ನೂ ಈ ಪ್ರಾಂತ್ಯದವರಿಗೆ ಸಾಲಕೊಟ್ಟು ವ್ಯಾಪಾರಸ್ಥರು ಅತ್ತಿತ್ತ ಕಡೆ ಹೋಗಲಿಕ್ಕೂ ಅತ್ತಲಾಗಿನಿಂದ ಬರುತ್ತಿದ್ದ ಗಿರಾಕಿಗಳಿಗೆ ತಮ್ಮಲ್ಲಿ ಪೈದಾಸ್ತಾದ ಜೀನಸುಗಳನ್ನು ಬಂಟವಾಳಕ್ಕೆ ಸುಲಭದಿಂದ ಒಯ್ಯಲಿಕ್ಕೂ ಉಪಾಯವಿಲ್ಲದೆ ಬಂಟವಾಳ ವ್ಯಾಪಾರಸ್ಥರ ವ್ಯಾಪಾರವು ಕಡಿಮೆಯಾಗಿ ಹೊರಗಿನಿಂದ ಬರಬೇಕಾಗಿರುವ ಗಂಟು ಮುಳುಗಿ ಹೋಗುವ ಸಂದರ್ಭಗಳು ರಾಶಿ ರಾಶಿಯಾಗಿ ಒದಗುತ್ತಿರುವಾಗ ನಮ್ಮ ಡಿಸ್ಟ್ರಿಕ್ಟ್ ಬೋರ್ಡಿನ ಕಾರ್ಯನಿರ್ವಾಹಕ ಆಫೀಸರರಾದ ಪ್ರೆಸಿಡೆಂಟ ಇತ್ಯಾದಿ ಮಹಾಶಯರು ಯಾವ ಕರ್ತವ್ಯತತ್ಪರತೆಯನ್ನು ತೋರಿಸುತ್ತಿರುವರು? ಇಂಥಾ ಪರಿಸ್ಥಿತಿಯಲ್ಲಿ ವ್ಯಾಪಾರಸ್ಥರ ಪರಿಸ್ಥಿತಿಯನ್ನು ಏನೆಂತ ಹೇಳಬಹುದು? ಇನ್ನು ಬಂಟವಾಳದಿಂದ ಚಾರ್ಮಾಡಿ ಗಟ್ಟಕ್ಕೆ ಹೋಗುವ ರಸ್ತೆಯ ಸ್ಥಿತಿಯನ್ನೂ, ನೆರೆಯ ಹಾವಳಿಯ ಮುಂದಿನ ವಿವರವನ್ನೂ ಇನ್ನೊಮ್ಮೆ ಬರೆಕೊಳ್ಳುವೆನು.

ಕಲಕತ್ತೆಯೊಳಗಿನ ಮುಖಂಡರ ಸಭೆಗಳು.

ಈ ವಾರದ ಪ್ರಥಮ ಭಾಗದಲ್ಲಿ ಕಲಕತ್ತೆಯಲ್ಲಿ ಸ್ವರಾಜ್ಯಪಕ್ಷೀಯ ಮುಖಂಡರ ಮತ್ತು ಓಲ್ ಇಂಡಿಯಾ ಕೊಂಗ್ರೆಸಿನ ವರ್ಕಿಂಗ್ ಕಮಿಟಿಯ ಸಭೆಗಳು ಸೇರಿದವು.

ದೇಶಬಂಧು ದಾಸರು ದಿವಂಗತರಾದ ಪ್ರಯುಕ್ತ ಸ್ವರಾಜ್ಯಪಕ್ಷದ ಅಧ್ಯಕ್ಷಸ್ಥಾನದ ಚುನಾವಣೆ, ಇನ್ನು ಮುಂದಿನ ಧೋರಣ ಇತ್ಯಾದಿ ವಿಷಯಗಳನ್ನು ಚರ್ಚಿಸುವದಕ್ಕಾಗಿ ಸ್ವರಾಜ್ಯಪಕ್ಷದ ಮುಖಂಡರ ಸಭೆ ಸೇರಿತ್ತು. ಪಂಡಿತ ಮೋತಿಲಾಲ ನೇಹರು, ಶ್ರೀ ಕೇಳಕರ, ಜಯಕರ, ಪಟೇಲ, ಮುಂಜೆ, ಅಭ್ಯಂಕರ, ಆನೆ, ಡಾ. ಪೀರ, ಎಸ್. ಶ್ರೀನಿವಾಸ ಅಯ್ಯಂಗಾರ, ರಂಗಸ್ವಾಮಿ ಅಯ್ಯಂಗಾರ, ಮೊದಲಾದ ಪ್ರಮುಖರು ಸೇರಿದ್ದರು. ಸ್ವರಾಜ್ಯ ಪಕ್ಷದ ಜನರಲ್ ಕೌನ್ಸಿಲಿನಲ್ಲಿ ಮುಂದಿನ ಠರಾವುಗಳು ಪಾಸಾಗಿರುವವು. (೧) ದೇಶಬಂಧು ದಾಸರ ಮೃತ್ಯುವನ್ನು ಕುರಿತು ದುಃಖ ಪ್ರದರ್ಶನ, (೨) ಸ್ವರಾಜ್ಯಪಕ್ಷದ ಅಧ್ಯಕ್ಷಸ್ಥಾನದಲ್ಲಿ ಪಂಡಿತ ಮೋತಿಲಾಲ ನೇಹರುಗಳ ಚುನಾವಣೆ, (೩) ಸೆಕ್ರೆಟರಿಗಳ ಸ್ಥಾನಕ್ಕೆ ಮದ್ರಾಸಿನ ಶ್ರೀ ರಂಗಸ್ವಾಮಿ ಅಯ್ಯಂಗಾರರ ಚುನಾವಣೆ (೪) ಸ್ಕೀನ ಮಿಲಿಟರಿ ಕಮಿಟಿಗೆ ಪಂಡಿತ ನೇಹರುಗಳನ್ನು ಸಭಾಸದರಾಗಿ ತಕ್ಕೊಂಡುದಕ್ಕಾಗಿ ಸಮ್ಮತಿ. ಈ ಠರಾವುಗಳು ಪಾಸಾದಲ್ಲದೆ ಬರ್ಕನ ಹೆಡ್ಡರ ಭಾಷಣಕ್ಕೆ ದಾಸರ ಫರಿದಪೂರದ ಭಾಷಣವೆ ಸಮರ್ಪಕವಾದ ಪ್ರತ್ಯುತ್ತರವಾಗಿದೆ ಎಂಬ ಅರ್ಥದ ಠರಾವು ಕೂಡ ಪಾಸಾಯಿತು. ಫರಿದಪೂರದ ಭಾಷಣದಲ್ಲಿ ದೇ. ಬಂ. ದಾಸರವರು ಸರಕಾರವು ರಾಜಕೀಯ ಕೈದಿಗಳನ್ನು ಬಿಟ್ಟುಕೊಟ್ಟು, ಪ್ರಾಂತಿಕ ಸ್ವರಾಜ್ಯವನ್ನು ಕೊಡುವದಾದರೆ ಹಿಂದಿಗಳ ಸ್ವಾಭಿಮಾನಕ್ಕೆ ನ್ಯೂನತೆಯುಂಟಾಗದಂತೆ ಸಹಕಾರವನ್ನು ಮಾಡಬಹುದೆಂಬುದಾಗಿ ಸೂಚಿಸಿದ್ದರು. ಇದೆ ಮಾತನ್ನೆತ್ತಿಕೊಂಡು ಠರಾವಿನ ರೂಪದಲ್ಲಿ ಸ್ವರಾಜ್ಯಪಕ್ಷದ ಜನರಲ್ ಕೌನ್ಸಿಲು ಠರಾವು ಪಾಸುಮಾಡಿದೆ. ಬಿ. ಸೇನಗುಪ್ತರು ಈ ಠರಾವಿನ ಮೇಲೆ ಉತ್ಕೃಷ್ಟವಾದ ಭಾಷಣವನ್ನು ಮಾಡಿದರು. ಸ್ವಾಭಿಮಾನಪೂರ್ವಕವಾಗಿ ಸರಕಾರದೊಡನೆ ಸಹಕಾರ್ಯವನ್ನು ನಡಿಸುವಂತೆ ಬರ್ಕನ ಹೆಡ್ಡರ ಭಾಷಣದಲ್ಲಿ ಹೆಚ್ಚಿನ ಯಾವ ಅಂಶವೂ ಇಲ್ಲವಾದರೂ ಸ್ವರಾಜ್ಯಪಕ್ಷವು ಪರಸ್ಪರ ಚರ್ಚೆಯ ಬಾಗಿಲನ್ನು ಮುಚ್ಚುವದಿಲ್ಲ. ಇನ್ನು ಮುಂದೆ ಸರಕಾರವು ತನ್ನ ಧೋರಣದಲ್ಲಿ ಏನಾದರೂ ಹೆಚ್ಚು ಕಡಿಮೆಯನ್ನು ಮಾಡಿದ್ದಾದರೆ ಸ್ವರಾಜ್ಯಪಕ್ಷವೂ ಕೂಡ ತನ್ನ ಧೋರಣದಲ್ಲಿ ಬದಲಾವಣೆಗಳನ್ನು ಮಾಡೀತು. ಈ ರೀತಿಯ ಠರಾವುಗಳು ಪಾಸಾದವು.

ಮಹಾತ್ಮಾ ಗಾಂಧಿಗಳು ಸ್ವರಾಜ್ಯಪಕ್ಷದ ಸಭೆ ನಡೆಯುತ್ತಿರುವಾಗ ಹಾಜರಿದ್ದರು. ಮಾತ್ರವಲ್ಲ, ಅಲ್ಲಿ ಅವರೊಂದು ಭಾಷಣವನ್ನು ಕೂಡ ಕೊಟ್ಟರು. ರಾಷ್ಟ್ರೀಯ ಸಭೆಯಲ್ಲಿ ಐಕ್ಯವಾಗುವದಾದರೆ ನೂಲಿನ ಮತದಾನದ ಶರ್ತವನ್ನು ರದ್ದುಪಡಿಸಲು ತಾನು ಸಿದ್ಧನಿದ್ದೇನೆಂದು ಗಾಂಧಿಗಳು ಅಭಿಪ್ರಾಯ ಪಟ್ಟರು. ಪಂಡಿತಜಿಯವರು ಗಾಂಧಿಜಿಗಳೊಡನೆ ಬೆಳಗಾಂವಿನಲ್ಲಿ ನೂಲಿನ ಮತದಾನದ ಕುರಿತು ಮಾಡಿದ ಒಪ್ಪಂದವನ್ನು ಒಂದು ವರ್ಷವಾಗುವದಿಂತ ಮುಂಚೆ ಮುರಿಯಲಿಚ್ಛಿಸುವದಿಲ್ಲ, ಈಗ ಅದು ಯಶಸ್ವಿಯಾಗಲಿಲ್ಲವಾದರೂ ಇನ್ನು ಆರು ತಿಂಗಳಲ್ಲಿ ಅದರ ಸ್ಥಿತಿ ಏನಾಗುತ್ತದೆಂಬುದನ್ನು ನೋಡಬಹುದು ಎಂಬುದಾಗಿ ಹೇಳಿದರು.

ಮ. ಗಾಂಧಿಗಳ ಅಧ್ಯಕ್ಷತೆಯಲ್ಲಿ ಸ್ವರಾಜ್ಯಪಕ್ಷದವರ ಮತ್ತು ಬೇಹಬದಲಾವಣೆಯ ಮುಖಂಡರ ಸಭೆ ಸೇರಿ ನೂಲಿನ ಮತದಾನದ ಶರ್ತ ವಿಷಯವು ಚರ್ಚಿಸಲ್ಪಟ್ಟಿತು. ಈಗಿನ ನಿಯಮದ ಪ್ರಕಾರ ರಾಷ್ಟ್ರೀಯ ಸಭೆಗೆ ಸಭಾಸದನಾಗಬೇಕಾದರೆ, ೨೪,೦೦೦ ಯಾರ್ಡು ನೂಲನ್ನು ತೆಗೆಯಬೇಕಾಗಿದೆ. ಇದನ್ನು ಸ್ವತಃ ಅವನೆ ತೆಗೆಯಬಹುದು, ಇಲ್ಲವೆ ಬೇರೆಯವರಿಂದ ಕೊಂಡುಕೊಂಡು ಕೊಡಬಹುದು. ಆದರೆ ಗಾಂಧಿಗಳು ನೂಲನ್ನು ಸ್ವತಃ ಸಭಾಸದನೆ ತೆಗೆಯಬೇಕು ಎಂಬುದಾಗಿ ಅಭಿಪ್ರಾಯಪಟ್ಟರು. ಸಾಧ್ಯವೇ ಇಲ್ಲದವರು ಅದಕ್ಕೆ ಪ್ರತಿಯಾದ ಹಣವನ್ನು ಕೊಟ್ಟು ಕೊಂಗ್ರೆಸ ಮೆಂಬರನಾಗಬಹುದೆಂದು ಅವರು ಹೇಳಿದರು. ಈ ವಿಷಯವು ಚರ್ಚೆ ನಡೆದು ಕೊನೆಗೆ ಈ ಪ್ರಶ್ನೆಯನ್ನು ಇತ್ಯರ್ಥಗೊಳಿಸುವದಕ್ಕಾಗಿ ನೇಹರು, ಶ್ರೀನಿವಾಸ ಅಯ್ಯಂಗಾರ, ಕೇಳಕರ ಇವರ ಒಂದು ಕಮಿಟಿಯು ಏರ್ಪಡಿಸಲ್ಪಟ್ಟಿತು. ಈ ಕಮಿಟಿಯ ಅನುಭವವು ಕೊಂಗ್ರೆಸ ವರ್ಕಿಂಗ್ ಕಮಿಟಿಯ ಮುಂದೆ ಬಂದಲ್ಲಿ ನೂಲಿನ-ಮತದಾನಕ್ಕೆ ಪುರಸ್ಕಾರವಿಲ್ಲದ್ದರಿಂದ ಮಹಾತ್ಮಾ ಗಾಂಧಿಗಳು ತನ್ನ ಅಧ್ಯಕ್ಷಸ್ಥಾನಕ್ಕೆ ರಾಜಿಯನ್ನು ಕೊಟ್ಟು, ಕೊಂಗ್ರೆಸ್ಸಿನಲ್ಲಿ ಸ್ವರಾಜ್ಯಪಕ್ಷದವರ ಮತಾಧಿಕ್ಯವಿರುವದರಿಂದ ಮತ್ತು ಸ್ವರಾಜ್ಯಪಕ್ಷದ ಅಧ್ಯಕ್ಷಸ್ಥಾನದಲ್ಲಿ ಪಂಡಿತ ನೇಹರುಗಳಿರುವದರಿಂದ ಅವರ ಕೊಂಗ್ರೆಸಿಗೂ ಅಧ್ಯಕ್ಷರಾಗಬೇಕೆಂದು ನೇಹರುಗಳಿಗೆ ಬರೆದು ತಿಳಿಸಿದ್ದಾರೆ. ಆದರೆ ಈ ಪ್ರಶ್ನೆಯು ಅ. ಇಂ. ಕೊ. ಕಮಿಟಿಯಲ್ಲಿ ಬರುವದಿದೆ. ಅಲ್ಲಿ ಇದರ ಕೊನೆಯ ನಿರ್ಣಯವಾದೀತು. ಅಷ್ಟರವರೆಗೆ ಮಹಾತ್ಮರು ಅಧ್ಯಕ್ಷರಾಗಿರಬೇಕೆಂದು ಸ್ವರಾಜ್ಯಪಾರ್ಟಿಯವರು ಹೇಳಿರುವರು.

ಆರೋಗ್ಯ ಚಂದ್ರಿಕೆ.

ಮದ್ರಾಸ್.

ಸಂಪಾದಕರು: ಡಾಕ್ಟರ್ ಯು. ರಾಮರಾವ್, ಎಲ್. ಎಮ್. ಸಿ. ಎಫ್. ಎಮ್. ಯು. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವುದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ.

ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ.

ಆರೋಗ್ಯಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವುದು.

'ಹೆಲ್ತ್' ಎಂಬ ನಮ್ಮ ಇಂಗ್ಲಿಷ್ ಮಾಸಪತ್ರಿಕೆಯನ್ನೋದಿ ಸಂತೋಷಿಸಿದ ಅನೇಕ ದೊಡ್ಡ ಮನುಷ್ಯರ ಪ್ರೋತ್ಸಾಹದ ಮೇಲೆ ಈ ಕನ್ನಡ ಪತ್ರಿಕೆಯನ್ನು ಹೊರಪಡಿಸಿದೆ.

ಅದರ ಸಂಪುಟ ೨ ಮತ್ತು ೧೧ನೇಯ ನವಂಬರ ೧೯೨೪ ಸಂಚಿಕೆಯಲ್ಲಿ ಕಾಣಿಸಿರುವ ವಿಷಯಗಳು:

ಮುಖಚಿತ್ರ:— ಕರ್ತವ್ಯವಾಸಿನಿಯಾದ ಒಬ್ಬ ರೂಪವತಿ.
ಶ್ವಾಸಕ್ರಮ ಅಥವಾ ಪ್ರಾಣಾಯಾಮ.
ಹುಣಿಸೇಹಣ್ಣಿನ ಆಹಾರಗುಣಗಳು ಮತ್ತು ಔಷಧಗುಣಗಳು.
ಕಾಲುನಡೆಯೇ ಉತ್ತಮವಾದ ವ್ಯಾಯಾಮವು.
ಜೇನಿನಲ್ಲಿರುವ ಗುಣಗಳು.
ಹಲ್ಲುಗಳ ರಚನೆ, ಪ್ರಯೋಜನ, ಕೆಲಸ ಮುಂತಾದವು.
ಮದದ್ರಾವಕಗಳಿಂದ ಆರೋಗ್ಯಕ್ಕೆ ಉಂಟಾಗತಕ್ಕ ಹಾನಿ.
ಅಂಗಸಾಧನೆ ಮತ್ತು ಬುದ್ಧಿವ್ಯವಸಾಯ (ವಿದ್ಯಾಭ್ಯಾಸ).
ಗಾಯಗಳು, ಮತ್ತು ಉಳುಕು ಮುಂತಾದವು, ಅವುಗಳ ಚಿಕಿತ್ಸೆ.
ನವನಾಗರಿಕ ಪ್ರಪಂಚಕ್ಕೆ ಸಹಜವಾದ ಮೂರು ಕೇಡುಕುಗಳು.
ಒಬ್ಬ ಉಪವಾಸಿಯ ಅನುಭವ.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವುವು. ಆರೋಗ್ಯಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ ರೂ. ೧-೮-೦; ಬಿಡುಪತ್ರಿಕೆ ಒಂದಕ್ಕೆ ರೂ. ೦-೨-೦. ಹಿಂದಿನ ಸಂಚಿಕೆಗಳು ಕೂಡ ದೊರೆಯುವವು.

ಚಂದಾದಾರರಾಗುವವರು ವಿ. ಪಿ. ಮೂಲಕವಾಗಿ ತರಿಸಿಕೊಳ್ಳುವುದಕ್ಕಿಂತಲೂ ಹಣವನ್ನು ಮುಂಗಡವಾಗಿ ಕಳುಹಿಸುವುದು ಲಾಭಕರ. ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು 'ಆರೋಗ್ಯ ಚಂದ್ರಿಕೆ'ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು.

ಪತ್ರವ್ಯವಹಾರಕ್ಕೆ: 'ಆರೋಗ್ಯ ಚಂದ್ರಿಕೆ'
೩೨೩ ತಂಬುಚೆಟ್ಟಿ ಬೀದಿ, ಮದ್ರಾಸ್.

ತುಳು ಪಾಡ್ದನಗಳು.

ಬೊಬ್ಬರ್ಯ, ಕಲ್ಕುರ್ಟ-ಕಲ್ಲುಡ, ದೈಯ್ಯೊಂಗುಳು—ಕೋಡಕಿನಾರ್, ಮುಂಡತ್ತಾಯ ಪ್ರತಿ ಒಂದಕ್ಕೆ 2 ಆಣೆ. 11¼ ಆಣೆ ಟಪ್ಪಾಲು ಚೀಟು ಕಳುಹಿಸಿದರೆ 5 ಪುಸ್ತಕಗಳು ಕೂಡಲೇ ಕಳುಹಿಸಲ್ಪಡುವವು.

ವಿಳಾಸ: ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಸಾರಸ್ವತ.

ಕನ್ನಡ ಮತ್ತು ಕೊಂಕಣಿ ಭಾಷೆಗಳಲ್ಲಿ ಕಳೆದ ವಿಜಯದಶಮಿ ದಿನದಿಂದ ಪ್ರತಿ ದಶಮಿಗೆ ಹೊರಡುವ ಪತ್ರಿಕೆ.

ವಿ. ಎಸ್. ಕಾಮತ್,
ಮೂಲ್ಕಿ ವಾಮನ ಕುಡುವ } ಸಂಪಾದಕರು.

ಮತಸಂಸ್ಥೆ ಮತ್ತು ಸಮಾಜಕ್ಕೆ ಸಂಬಂಧಪಟ್ಟ ಇತರ ಸಂಸ್ಥೆಗಳ ಸುಸಂಘಟನ.
ಸಮಾಜದೊಳಗೆ ಅನ್ಯೋನ್ಯ ಸಾಧನೆ.
ಸ್ತ್ರೀಸಮಾಜಕ್ಕೆ ಉಪಯುಕ್ತವಾದ ವಿಷಯಗಳ ನಿರೂಪಣ
ಮತಭಾವನೆಗಳ ಉಜ್ಜೀವನ ಇತ್ಯಾದಿ ಉದ್ದೇಶಗಳಿಂದ ಈ ಪತ್ರಿಕೆಯು ಹೊರಡಿಸಲ್ಪಡುವುದು. ಸಾರಸ್ವತ ಸಮಾಜವು ಇದಕ್ಕೆ ಪ್ರೋತ್ಸಾಹವನ್ನೀಯಬೇಕಾಗಿ ಪ್ರಾರ್ಥನೆ.

ಚಂದಾಹಣ ಅಂಚೆವೆಚ್ಚ ಕೂಡಾ ರೂ. ೧-೪-೦. ಪೋಷಕರು ರೂ. ೧೦-೦-೦. ಸಹಾಯಕರು ರೂ. ೫-೦-೦. ಮಾದರಿ ಸಂಚಿಕೆಯನ್ನು ಟಪ್ಪಾಲು ಖರ್ಚಿಗಾಗಿ ಅರ್ಧಾಣೆ ಸ್ಟಾಂಪು ಕಳುಹಿಸುವವರಿಗೆ ಉಚಿತವಾಗಿ ಕಳುಹಿಸುವೆವು.

ಕನ್ನಡ ನಾಡಿನಲ್ಲಿ ಪ್ರತಿ ಕಡೆಯಲ್ಲಿಯೂ ಜಾಹಿರಾದಾರರು ಬೇಕು.

ಎಲ್ಲಾ ಪತ್ರವ್ಯವಹಾರಗಳನ್ನು ಕೆಳಗಿನ ವಿಳಾಸಕ್ಕೆ ನಡೆಸಬೇಕು.

ಯು. ನಾರಾಯಣನಾಯ್ಕ, ಕಾರ್ಯದರ್ಶಿ,
ಸಾರಸ್ವತ, ಉಡುಪಿ.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.	1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
Authorised and fully paid up Capital Rs. 300,000-0-0	ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ತೆತ್ತ ಮೂಲಧನವು ರೂ. 300,000—0—0
Reserve and other sinking Funds „ 259,000-0-0	ಕ್ಷೇಮನಿಧಿ ಮತ್ತು ಇತರ ಫಂಡುಗಳು 259,000—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳೋಣಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1925.

K. Venkat Rao,
Secretary

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ಒಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ಒಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲೂಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೨೫೦ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ಒಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೨೫ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲ ಪಂಡಿತರು,

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಪ್ಪ, ಸೋಡಾ ಫಾಕ್ಟರಿ,
ಮಂಗಳೂರು ಟವನಿಗೆ ಮಾತ್ರ.

ವಿದ್ಯಾವಾಚಸ್ಪತಿ
ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ

"ಸಂಕ್ಷೇಪಗೀತೆ"

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ, ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದೆ ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೦. ಟಪ್ಪಾಲು ಖರ್ಚು ಕೂಡಿ ಆಣೆ ೧೧ನ್ನು ಮನಿಯಾರ್ಡರ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ೨ರಕ್ಕಿಂತ ಜಾಸ್ತಿ ಖರ್ಚು ತಗಲುವುದು. ರಖಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.

ಪುಸ್ತಕ ದೊರಿಯುವ ವಿಳಾಸ:—
ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು. ಮತ್ತು
ಕೆನರೀಸ್ ಮಿಶ್ಯನ್ ಬುಕ್ ಎಂಡ್ ಟ್ರೆಕ್ಟ ಡಿಪೋಜಿಟರಿ,
ಮಂಗಳೂರು.

ಕನ್ನಡಿಗರೆ! **ವಸಂತ.** ಕನ್ನಡಿಗರೆ! — ಕತ್ತರೆಯಿರಿ!

ಈಗಾಗಲೇ ಎರಡನೇ ಸಂಪುಟವು ಆರಂಭಿಸಲಿದೆ.

ಇತಿಹಾಸನಿಧಿ ಎಂದರೆ	ವಸಂತ
ಸಮಾಜಸುಧಾರಕನೆಂದರೆ	ವಸಂತ
ಕೈಗಾರಿಕೆಯ ಸಾಮ್ರಾಜ್ಯವೆಂದರೆ	ವಸಂತ
ಕರ್ಣಾಟಕ ಭಾಷಾಸೇವಕನೆಂದರೆ	ವಸಂತ
ದೇಶವಿದೇಶ ಬಂಧುವೆಂದರೆ	ವಸಂತ
ಕಾದಂಬರಿಗಳ ಭಂಡಾರವೆಂದರೆ	ವಸಂತ
ಚಿತ್ರಾಕರ್ಷ ಚಿತ್ರಶಾಲೆಯೆಂದರೆ	ವಸಂತ
ದೇಶಭಕ್ತನೆಂದರೆ	ವಸಂತ

ಇಂತಹ ವಸಂತನು ಯಾರಿಗೆ ಬೇಕು,
ಯಾರಿಗೆ ಬೇಡ?

48 (ಕ್ವಾರ್ಟ್ ½ ಫುಟ ಸ್ಕಾಪ) ಪುಟಗಳನ್ನು ಮೀರಿದ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3—4—0 ಮಾತ್ರ.

ವ್ಯವಸ್ಥಾಪಕ,
ವಸಂತ ಕಾರ್ಯಾಲಯ,
ಕುಂದಾಪುರ, ದಕ್ಷಿಣ ಕನ್ನಡ.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀಕಾಶೀ, ಗಯಾ, ಪ್ರಯಾಗ, ಹರಿದ್ವಾರ ಬದ್ರಿನಾರಾಯಣ ದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರ ಕಡೆಯಿಂದ ಅನುಭವ ತೆಗೆದು ಪ್ರತಿವಂದು ಸಿದ್ಧಮಾಡಿಕೊಂಡು ಬರೆದಿರುವರು. ೧ನೇದು ಮಂತ್ರಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರಪ್ರಯೋಗದಿಂದಲೂ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವೂ ಇದೆ. ೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನಪಡಿಯಲ್ಲಿ ರೂಪಾಯಿಗಳು ಹೊರಡುವಿಕೆ, ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ. ೩ನೇದು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು. ೪ನೇದು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಗಳ ಚುಟ್ಕಾ ಸಹ, ಇದರಲ್ಲಿ ಉಂಟು, ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷಧ ಮಾಡುವ ಕ್ರಮವನು ಚೆನ್ನಾಗಿ ಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಳಾಸವು ತಿಳಿಸಿರುವರು. ೫ನೇದು ಯಂತ್ರ ಪ್ರಕರಣದಲ್ಲಿ ವಶೀಕರಣ ಗ್ರಹಪೀಡಾ ನಿವಾರಣ ಭೂತಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು, ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರದಿರುವರು. ಈ ಗ್ರಂಥವು ಹತ್ತರ ಇದ್ದ ಬಳಿಕ ಎಲ್ಲಾ ದೇವಾನು ದೇವತೆಗಳು ದ್ರವ್ಯಗಳೂ ವೈದ್ಯರೂ ಜೋತಿಷ್ಯರು, ಮಾಂತ್ರಿಕರು ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥ ಗ್ರಂಥವು ಯಾರು ಕಣ್ಣಿಂದ ನೋಡಿರಲಿಕ್ಕಿಲ್ಲ. ಪ್ರತಿವಬರು ತರಿಸಿ ನೋಡಬೇಕೆಂದು ಇದರ ಬೆಲೆ ಸಹ ಕಡಿಮೆಮಾಡಿ ಇರುವವು. ೨—೮—೦ ಟಪ್ಪಾಲು ಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ ನಾಟಕ ಕಾವ್ಯ, ಕಥೆಗಳು, ಯಕ್ಷಗಾನ, ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ:—

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ಣಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

ಜ್ಯೋತಿಷ್ಯ ಸಂಗ್ರಹ.

(1) ಬೃಹಜ್ಜಾತಕ ... ...
(2) ಅನಮಾಮಹೇಶ್ವರ ಸಂವಾದ ಎಂಬ ಜ್ಯೋತಿಷ್ಯ ಶಾಸ್ತ್ರ
(3) ಕೇರಳ ಪ್ರಶ್ನೆ ... ...
(4) ಪ್ರಶ್ನೋತ್ತರ ರತ್ನಮಾಲಿಕಾ ... ...
(5) ನವನೀತಾರಿಷ್ಟ ... ...
(6) ಷಟ್ಪಂಚಾಶಿಕ್ ಗ್ರಂಥ ... ...
(7) ನಕ್ಷತ್ರ ಚೂಡಾಮಣಿ ಗ್ರಂಥ ... ...
(8) ಮುಹೂರ್ತಪದವೀಗ್ರಂಥ ... ...
(9) ಅಷ್ಟದಿಕ್ಪಾಲಕ ಮಂಗಳಾಷ್ಟಕಗಳು ... ...
(10) ಕಾಲನಿರ್ಣಯಾಭ್ಯೋಯಂ ಗ್ರಂಥ ... ...
(11) ಸವ್ಯಾಖ್ಯಾನ ಕಾಲಾಮೃತ... ... ...

— ಪ್ರಸಂಗದ ಪುಸ್ತಕಗಳು. —

(1) ಸೇತು ಬಂಧನ ... ...
(2) ವಸಿಷ್ಠ ಪುರಾಣ ... ...
(3) ಇಂದ್ರಜೀತು ಕಾಳಗ ... ...
(4) ಚಂಡಭೀಮ ... ...
(5) ತ್ರೈಯಂಬಕನ ಚರಿತ್ರೆ ... ...
(6) ಭಾಮಿನಿ ಷಟ್ಪದಿ ಚೋರ ಕಥೆ ... ...
(7) ಕುಮಾರ ರಾಮನ ಕಥೆ ... ...
(8) ಕೃಷ್ಣದಾನಾಮೃತ ... ...
(9) ಶ್ರೀಕೃಷ್ಣ ಸತ್ಯಭಾಮ ಸಂವಾದ ... ...
(10) ಚಿತ್ರಕೇತು ರಾಜನ ಕಥೆ ... ...
(11) ಬಕಾಸುರ ವಧೆ ... ...
(12) ಬಾಣಾಸುರನ ಕಥೆ ... ...
(13) ರಂಭಾಶುಕ ಸಂವಾದ ... ...
(14) ರುಕ್ಮಿಣೀ ಪರಿಣಯ ... ...
(15) ರಾವಣೋದ್ಭವ ಯಕ್ಷಗಾನ ...
(16) ಸಭಾ ಲಕ್ಷಣವು ... ...
(17) ಶ್ರೀ ಕೃಷ್ಣದಿನಾತ್ಯಮೋದ ಕಥಾ ... ...
(18) ಚಂದ್ರಮೌಳಿ ಕಾಳಗ ... ...
(19) ಚಿತ್ರವಿಚಿತ್ರ ಕಾಳಗ ... ...
(20) ಯಕ್ಷಗಾನ ಸಾರಂಗಧರನ ಕಥೆ ... ...
(21) „ ಶನಿದೇವರ ಮಹಾತ್ಮ್ಯೆ ... ...
(22) „ ಹರಿಶ್ಚಂದ್ರನ ಕಥೆ ...
(23) ಯಕ್ಷಗಾನ ಚಂದ್ರಾಂಗದ ಕಥೆ ... ...
(24) „ ಚೋರ ಕಥೆ ... ...
(25) „ ಪಾರ್ವತಿ ಕಾರವಂಶ ಕಥೆ ...
(26) „ ಗೋವಿನ ಚರಿತ್ರೆ ... ...
(27) „ ಮುಕ್ತಾವನ ಕಥೆ ... ...
(28) „ ಸಾನಂದ ಗಣೇಶ್ವರ ಕಥೆ ...
(29) „ ಅಂಗದ ಸಾಧನ ... ...

— ಭಜನೆಯ ಪುಸ್ತಕಗಳು. —

(1) ಉಡುಪಿಕ್ಷೇತ್ರ ಮಹಾತ್ಮೆ ... ...
(2) ಹನುಮದ್ರಾಮಾಯಣ ... ...
(3) ಅಧ್ಯಾತ್ಮ ವಿಚಾರ ... ...
(4) ಭಕ್ತಿಮಹಿಮೆ ... ...
(5) ಪ್ರಬಂಧ ಮುಕ್ತಾವಳಿ ... ...
(1) ಹರಿಕೀರ್ತನಾಮೃತಸಾರ ... ...
(2) ಹರಿನಾಮಾಮೃತಂ. ... ...
(3) ರುಕ್ಮಿಣೀ ಕಲ್ಯಾಣ ... ...
(4) ಮಂಗಳ ಗೌರೀಹಾಡು ... ...
(5) ಉದ್ದಾಳೀಕನ ಹಾಡು ... ...
(6) ಯಕ್ಷಗಾನ ಗಿಳೀ ಹಾಡು ...
(7) ಕನಕದಾಸ ಕಬೀರದಾಸರ ಕೀರ್ತನೆಗಳು ...
(8) ಬೀಗರ ಹಾಡು ... ...
(9) ಭಜನೆಯ ಪದಗಳು ... ...

— ಶಾಸ್ತ್ರೀಯ ಪುಸ್ತಕಗಳು. —

(1) ಸದಾಚಾರ ವಿವೇಚನೆ ... ...
(2) ಗೋಪಾಲಕೃಷ್ಣ ಗೋಕುಲಿ ... ...
(3) ಶ್ರೀಕೃಷ್ಣ ಸೇವಾಮೃತಂ ... ...
(4) ಪಶ್ಚಾತ್ತಾಪ ಭಾಷ್ಯ ... ...
(5) ಶ್ರೀ ಶ್ರೀಮಹಾ ಭಾಗವತ ... ...
(6) ಉದ್ಧವನ ಚರಿತ್ರೆ ... ...
(7) ಮಧ್ವಾಚಾರ್ಯರು (ಶ್ರೀಮಾನ್) ... ...
(8) ಯತಿರಾಜವಂಶತಿ ... ...
(9) ಪರಮಾರ್ಥಶತಕಂ ... ...
(10) ಶ್ರೀಕೃಷ್ಣಸೇವಾಮೃತಂ ... ...
(11) ಭಕ್ತಿಸುಮಾಂಜಲಿ ... ...
(12) ಸತ್ಯರಾಜ ಪೂರ್ವದೇಶ ಯಾತ್ರೆಗಳು ...
(13) ಕಾಲನಿರ್ಣಯಾಖ್ಯಾನ ... ...

ಪುಸ್ತಕಗಳು ದೊರೆಯುವ ಸ್ಥಳ :— **ಶಾರದಾ ಛಾಪಖಾನೆ,**
ರಥ ಬೀದಿ, ಮಂಗಳೂರು.



—ಗೋಡೆಗೆ ತಗಲಿಸುವ
ಹೊಸ ನಮೂನೆಯ—

ಟಿಕ್—ಟಾಕ್

ಎಂಬ ಈ ಗಡಿಯಾರಗಳು ಜರ್ಮನೀ ದೇಶದಲ್ಲಿ ತಯಾರಿಸಿದ್ದು. ಇವು ಕಂಠಾರು ಘಂಟೆಯನ್ನು ತೋರಿಸುವವು. ಇವಕ್ಕೆ ಬೀಗ ಕೊಡಬೇಕಾದಿಲ್ಲ. ಇದರಲ್ಲಿ ಕಾಣುತ್ತಿರುವ ಗುಂಡನ್ನು ಮೇಲಕ್ಕೆ ಎಳೆದರೆ ಸಾಕು. ತನ್ನ ಷ್ಟಕ್ಕೆ ತಾನೇ ಟಿಕ್—ಟಾಕ್ ಎಂಬ ಶಬ್ದ ವನ್ನು ಮಾಡುತ್ತಾ ಸರಿಯಾದ ಕಾಲವನ್ನು ತೋರಿಸುವದು. ಇದು ನೋಡುವುದಕ್ಕೆ ಬಹು ಲಕ್ಷಣವಾಗಿರುವುದು.

ಕ್ರಯ 1ಕ್ಕೆ ರೂ. 3—0—0

ಪೀಟರ್ ವಾಚ್ ಕಂಪೆನಿ
ಪೋಸ್ಟ್ ಬಾಕ್ಸ್ ನಂ. 27, ಮದ್ರಾಸ್.



ADVERTISE IN
The Business Directory
OF INDIA, BURMA & CEYLON

A Comprehensive Directory of the various Business-men, Exporters and Importers, Firms, Factories, Mills, Manufacturers, Merchants and Industries of the principal Cities, Ports and Towns of India, Burma and Ceylon.

PUBLISHED ANNUALLY
Rates for Advertisements

¼ Page	Rs.	50.
2 in. Single Column	"	20.
1 in. Single Column	"	15.
Name in Bold Types	"	5.

Price per Copy Rs. 10.

PRINTERS & PUBLISHERS.
Business Directory Co.,
Kanara Press Buildings, MADRAS. E.
Telegrams: "KETHAKI" Phone 540

Just arrived! Look Sharp!

SCREW ELECTRIC TORCH LAMPS &
Pocket Electric Lamps
AVAILABLE
In different varieties, Mother of pearl lamps. Cycle lamps.
NICKEL PLATED WITH SIDE LANCE.
Hammered Brand, with Powerful Bulls-eye lance,

The Mangalore Trading Association,
Car Street, MANGALORE

Edited, Printed & Published by V. S. Kamath at the M. F. A. SHARADA PRESS, MANGALORE.

ಮನುಷ್ಯರಿಗೆ ಮತಿಸ್ಥಿತಿಗಿಂತಲೂ ಹೆಚ್ಚಾದ್ದು ಯಾವುದೂ ಇಲ್ಲ.

ಜನ್ಮದಲ್ಲಿ ಕಷ್ಟಸುಖಗಳು ಅನುಭವಿಸುವುದರಲ್ಲಿ ಅಪಾಯವಿಲ್ಲದೇ ಧನ್ಯನಾಗುವುದಕ್ಕೆ ಮುಖ್ಯ ಸಾಧನ ಮತಿಸ್ಥಿತಿಯೇ ರಾಮಬಾಣವೆಂದು ಹೇಳಬಹುದು.

ಆದರೆ ಪ್ರಸ್ತುತ ನಾವು ಅನುಭವಿಸುವ ಚಪಲಚಿತ್ತದಲ್ಲಿ ಮತಿಸ್ಥಿತಿ ಉಂಟಾಗುವುದು ಸಾಧ್ಯ ಹೇಗೆ? ನಿಮಗೆ ಯಾವವಿಧವಾದ ಚಪಲಚಿತ್ತವಿದ್ದಾಗ್ಯೂ, ನಮ್ಮ ಆತಂಕನಿಗ್ರಹ ಮಾತ್ರೆಗಳನ್ನು ಉಪಯೋಗಿಸಿರಿ. ಈ ಮಾತ್ರೆಗಳೇ ತನ್ನ ಮೆದುಳಲ್ಲಿರುವ ದುರ್ಬಲವನ್ನು ನಿವಾರಿಸಿ, ದೃಢಚಿತ್ತವನ್ನುಂಟುಮಾಡುವುದು.

ಈ 32 ಮಾತ್ರೆಗಳುಳ್ಳ ಡಬ್ಬಿ ಒಂದಕ್ಕೆ ರೂಪಾಯಿ ಒಂದು ಮಾತ್ರ.

ಹಿಂದೂದೇಶದಲ್ಲಿಯೂ ಮತ್ತು ಇತರ ದೇಶಗಳಲ್ಲಿಯೂ ಪ್ರತಿಯೊಂದು ಗೃಹದಲ್ಲಿ ಪ್ರಯೋಜನಕರವಾದ ಒಂದು ಪುಸ್ತಕ ಇರುವುದು. ನಿಮಗೆ ಗೊತ್ತುಂಟೋ? ಆ ಪುಸ್ತಕದ ಹೆಸರೇ

"ಕಾಮಶಾಸ್ತ್ರ."

ನೀವು ಇದುವರೆವಿಗೂ ಆ ಪುಸ್ತಕದಲ್ಲಿ ವಿವರಿಸಿದ ಘನ ವಿಷಯಗಳನ್ನು ನೋಡದೇ ಇದ್ದ ಪಕ್ಷಕ್ಕೆ, ಈ ದಿನ ನಮಗೆ ಒಂದು ಕಾರ್ಡು ಬರೆದರೆ ಪೋಸ್ಟು ಚಾರ್ಜು ನಿಮಗಿಲ್ಲದೇನೇ, ಆ ಪುಸ್ತಕವನ್ನು ಕಳುಹಿಸುತ್ತೇವೆ.

ಆತಂಕನಿಗ್ರಹ ಔಷಧಾಲಯ,
ನಂಬ್ರ 26, ಬ್ರಾಡ್ವೆ, ಮದರಾಸು.

Agents:—
Messrs RAPHAEL & Co.,
MANGALORE.

ಹೊಸಗ್ರಂಥಗಳು!! ಬೇಗನೇ ತರಿಸಿಕೊಳ್ಳಿರಿ!!

ಕೋಕಶಾಸ್ತ್ರವು.

ರಸಿಕ ವಾಚಕ ಮಹಾಶಯರೇ,

ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ, ಸಂಪಾದಿಸಿ, ಅದರಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನೇ ಶೋಧ ಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿಣಿ, ಸ್ತ್ರೀಯ ಇದರಂತೆ ಪುರುಷರಲ್ಲಿಯ ಬೇಧ ಯಾವಜಾತಿ ಸ್ತ್ರೀಯರಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನೂ ರಜೋಧರ್ಮ, ಗರ್ಭಾಧಾನದ ವ್ಯಾಖ್ಯೆಯನ್ನೂ, ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ ವಗೈರೆ ರೋಗಗಳ ಚಿಕಿತ್ಸೆಯನ್ನೂ, ಸ್ತ್ರೀಯರ ಗೂಢ ರಹಸ್ಯವನ್ನೂ ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನೂ ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ಕೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನು ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ.

ಇದರ ಬೆಲೆ ೧—೮—೦, ಟಪಾಲು ಹಾಸಲು ೦—೪—೦.

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಗ್ರಾಮಸ್ಥಾಪನಾಧಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ಯಾವಂತರೂ ತಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ಗಾವರ್ಗಿಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನು ಕುರಿತ ಲೆಕ್ಕಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಧನಿಕರಿಗೂ, ವರ್ತಕರೂ, ಜನರಿಗೂ ಹಿತಕರವಾದ ಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪೋಷಕರಿಗೆ	ರೂ. 5—0—0
ಇತರರಿಗೆ, ಪರಸ್ಥಳಕ್ಕೆ ಪೋಸ್ಟೇಜು ಸೇರಿ	„ 2—8—0.
„ ಸ್ಥಳೀಕರಿಗೆ ...	„ 1—8—0.

ಸರಕಾರದಲ್ಲಿಯೂ ಸ್ಥಳೀಕರಲ್ಲಿಯೂ ಈ ಪತ್ರಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕಳಗೆ ಕಂಡ ವಿಳಾಸಕ್ಕೆ ಬರೆದು ತಿಳಿಯಬಹುದು.

ವಿ. ಹನುಮಂತಯ್ಯಗೌಡ,
ಅರ್ಥಸಾಧಕ ಪತ್ರಿಕೆ,
ಅರಳೇ ಪೇಟೆ, ಬೆಂಗಳೂರು ಸಿಟಿ

Registered No. M. 498.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಶ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೯. ಮಂಗಳೂರು, ತಾರೀಕು ೩೧ನೇ ಶುಕ್ರವಾರ ಜುಲಾಯಿ ೧೯೨೫. ಸಂಚಿಕೆ ೩೧.

Th Canara Banking Corporation, UDIPI, Ltd.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office: UDIPI — Branch: COONDAPOOR.
ಹೆಡ್ ಆಫೀಸು: ಉಡುಪಿ. — ಶಾಖೆ: ಕುಂದಾಪುರ.

ಚಂದಾ ಸಾಕಿ ಯೆತ್ತಿದ ಮೂಲಧನ	ರೂ. 2,25,000—0—0.
ವಸೂಲಾದ ಮೂಲಧನ	ರೂ. 1,71,875—9—11.
ಕ್ಷೇಮನಿಧಿ ವ ಇತರ ಫಂಡುಗಳು	ರೂ. 64,700—0—0.
ಠೇವಣಾತಿಗಳು	ರೂ. 4,83,945—2—9.

— ವಿನಿಯೋಗ —.

ಗವರ್ನಮೆಂಟು ಪ್ರಾಮಿಸರಿ ನೋಟಿನ ಮೇಲೆ	ರೂ. 35,800—0—0.
ಡಿಮಾಂಡು ನೋಟು ವ ಬಿಲ್ಲುಗಳ ಮೇಲೆ	ರೂ. 5,92,445—9—4.
ಚಿನ್ನಾಭರಣ ಮುಂತಾದ ಭದ್ರತೆಸೊತ್ತುಗಳ ಮೇಲೆ	ರೂ. 1,11,658—8—6

ಈ ಕೆಳಗಿನ ಠೇವಣಾತಿಗಳನ್ನು ಅಂಗೀಕರಿಸುವುದಲ್ಲದೆ ಇತರ ಬ್ಯಾಂಕುಗಳ ಮೇಲಣ ಡ್ರಾಪ್ಟು ಚೆಕ್ಕುಗಳನ್ನೂ, ಸಾಹುಕಾರಿ ಹುಂಡಿಗಳನ್ನೂ ವಸೂಲು ಮಾಡುವ ಮತ್ತು ಇತರ ಎಲ್ಲಾ ತರದ ಬ್ಯಾಂಕಿನ ವಹಿವಾಟುಗಳು ನಡಿಸಲ್ಪಡುವವು.

ಠೇವಣಾತಿಗಳು.

ನಿರಖು ಠೇವಣಾತಿಗಳು:—ಸಾ. ಸೆ. 6½ ರಿಂದ 7½ ವರೆಗಿನ ಬಡ್ಡಿಯನ್ನು ಪ್ರತಿ 3 ತಿಂಗಳಿಗೊಮ್ಮೆ ಕೊಡುವ ಅನುಕೂಲ ವ ಲಾಭದಾಯಕವಾದ ಶರ್ತಗಳ ಮೇಲೆಯೂ

ಕೊಂಚ ಅವಧಿ ಠೇವಣಾತಿಗಳು:—1 ತಿಂಗಳ ನಂತರ 15 ದಿವಸಗಳ ನೋಟೀಸಿಗೊಳಪಟ್ಟು ಹಿಂತೆಗೆಯಬಹುದಾದ ಠೇವಣಾತಿಗಳನ್ನು ಸಾ. ಸೆ. 5ರ ದರದ ಬಡ್ಡಿ ನಡದ ದಿನಗಳಿಗೆ ಕೊಡುವ ಶರ್ತದಿಂದಲೂ

ಚಾಲ್ತಿ ಠೇವಣಾತಿಗಳು:—ದಿನಂಪ್ರತಿ ಇರುವ ಶಿಲ್ಕಿನ ಮೇಲೆ ಸಾ. ಸೆ. 3ರಂತೆ ಬಡ್ಡಿ ಕೊಡುವ ಶರ್ತದ ಮೇಲೂ

ಸೇವಿಂಗ್ಸ್ ಬ್ಯಾಂಕು ಠೇವಣಾತಿಗಳು:—ಸಾ. ಸೆ. 4½ರ ಬಡ್ಡಿಯ ಮೇಲೂ

ಸಂಚಯ ಠೇವಣಾತಿಗಳು:—ಮಕ್ಕಳ ವಿದ್ಯಾಭ್ಯಾಸ, ಉಪನಯನ, ವಿವಾಹ ಮುಂತಾದ ಶುಭಕಾರ್ಯಗಳಿಗೆ ಅನುಕೂಲವಾಗಿ ನಿಶ್ಚಯವಂತೆ ತಿಂಗಳು 1ರ ರೂಪಾಯಿ 1ರಂತೆ 13–24–45–84–132 ತಿಂಗಳುಗಳಿಗೆ ವಸೂಲುಪಡಕೊಂಡು ಕಂತುಗಳ ಅವಧಿ ಮುಗಿದ ಮೂರು ತಿಂಗಳಲ್ಲಿ ಆಯಾಯ ಅವಧಿಮೇರೆಗೆ ರೂ. 13—8—0, ರೂ. 25—8—0, ರೂ. 50, ರೂ. 102—8—0 ಮತ್ತು 182—8—0ನ್ನು ಅದೇ ಮೇರೆಗೆ ತಿಂಗಳು 1ರ ರೂಪಾಯಿ 1ರ ಗುಣವೃದ್ಧಿ ಮೊಬಲಗನ್ನು ಕೆತ್ತಲ್ಲಿ ಆಯಾಯ ಮೊಬಗಿನ ಅದೇ ಗುಣವೃದ್ಧಿ ಮೊಬಲಗನ್ನು ಕೊಡುವ ಶರ್ತದ ಮೇಲೂ ಅಂಗೀಕರಿಸಲ್ಪಡುವವು.

ಹೆಚ್ಚಿನ ಮಾಹಿತಿ ಸೆಕ್ರೆಟರಿಯವರಿಂದ ತಿಳಿಯಬಹುದು.

ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಆಫೀಸು, ಉಡುಪಿ, ತಾ. 30—6—1925. } ನಯಂಪಳ್ಳಿ ಆನಂದ್ರಾವ್, ಸೆಕ್ರೆಟರಿ ಮತ್ತು ಒಫಿಶಿಯೆಟಿಂಗ್ ಮೆನೇಜರ್.

ಮೂರು ದಿವಸಗಳಲ್ಲಿ ಗುಣಸಿಕ್ಕದಿದ್ದರೆ ಔಷಧಿಯ ಕ್ರಯ ವಾಪಾಸು.

ಜೀರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ, ಪರಮಾನಂದ ಮೊದಲಾದ ಸುಖಜೀವನಕ್ಕೆ ಬೇಕಾದ ಆರೋಗ್ಯದಾಯಿನಿ.

ಲೋಕಪ್ರಸಿದ್ಧವಾದದ್ದು! ಅನುಭವಸಿದ್ಧವಾದದ್ದು!!

[ಟ್ರೇಡ್ ಮಾರ್ಕ್] ಅಗಸ್ತ್ಯ [ನೋಡಿ ಕೊಳ್ಳಿರಿ.

ಮನ್ಮಥ ಚಿಂತಾಮಣಿ ಲೇಹ.

(ರಿಜಿಸ್ಟರ್ ಆದದ್ದು)

ಅಬಾಲವೃದ್ಧ ಸ್ತ್ರೀಪುರುಷರ ಅನೇಕ ರೋಗಗಳ ಮೇಲೆ ಗುಣಕಾರಿಯಾದದ್ದು.

ಮೇಹವಿಕಾರವಿದ್ದವರಿಗೂ, ನಿದ್ರೆಇಲ್ಲದವರಿಗೂ, ಸ್ವಪ್ನೇಂದ್ರಿಯವಾಗುವ ಯುವಕರಿಗೂ ಜ್ಞಾನಿಸುಜ್ಞಾನಿಗಳಿಗೂ ಉಪಯೋಗವುಳ್ಳ ಪರಮಾನಂದ ಔಷಧಿ.

1 ಸೇರು ಪಾಲ್ವಕ್ತಂಟು ದಿವಸಕ್ಕೆ ಸೇವಿಸಬಹುದು.

1 ಸೇರು ಡಬ್ಬಿ 1ಕ್ಕೆ 3—0—0. ½ ಸೇರು ಡಬ್ಬಿ 1ಕ್ಕೆ 1—9—0.

ವಿ. ಪಿ. ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿಗೆ ಬರೆಕೊಳ್ಳಿರಿ.

ವಿಳಾಸ:— ದೇವಣ್ಣ ನಾರಾಯಣ ಸೇಟ್,
ಸರಾಫ, ಗೋಳಿಕಟ್ಟ,
ಮಂಗಳೂರು, (ದ. ಕ.)

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ.

450 ಪುಟಗಳು — ಎಮ್. ಗಣಪತಿರಾವ್ ಐಗಳ್ ಇವರಿಂದ ರಚಿತವಾದದ್ದು. ಕ್ರಯ ರೂ. 2-4-0
ಮಾರಾಟಕ್ಕೆ ಸಿದ್ಧವಾಗಿವೆ

— ತುಳು ಪಾಡ್ದನಗಳು —

ಮಾರಾಟಕ್ಕೆ ಸಿದ್ಧವಾಗಿವೆ.

ದೈಯ್ಯೊಂಗುಳು, ಕಲ್ಲುರ್ಟಿ—ಕಲ್ಕುಡ, ಕಣಂದೂರು ದೈಯ್ಯೊಂಗುಳು, ಮುಂಡತ್ತಾಯ, ಬೊಬ್ಬರ್ಯ.

ಸುಲಭ ದರಗಳು

— ಶಾಲಾ ಪುಸ್ತಕಗಳು —

ರಖಂ ಕೊಂಡುಕೊಳ್ಳುವವರಿಗೆ ಯೋಗ್ಯ ಡಿಸ್ಕೌಂಟ್.

ಅಜ್ಜಿಕಥೆಗಳು:—ಮೂರು ಕರಡಿಗಳು; ಜೇನುಸಕ್ಕು ಕಾಗೆ ಬಡವಾಯಿತು; ಅರ್ಗಣೆ ಮುದ್ದೆ; ಇಲಿಗಳ ಪಕ್ಕ ಕೈ; ಅಂಗಳ ದುಗ್ಗ; ಸಿಗಡಿ ಯಾಕೆ ಒಣಗಲಿಲ್ಲ; ಗುಡುಗುಡು ಗುಮ್ಮಟ ದೇವರು; ಮೆಣಸಿನ ಕಾಳಪ್ಪ, ಒಡ್ಡನ ಓಟ; ಹೊಸ ಕನ್ನಡ ಪುಸ್ತಕ ಭಾಗ ೧; ಹೊಸ ಕನ್ನಡ ಪುಸ್ತಕ ಭಾಗ ೨; ಕನ್ನಡ ಪದ್ಯಗಳು; ಮುಗ್ಧಿ ಪುಸ್ತಕ; ಅಜಿತಕುಮಾರ; ಪದ್ಯ ರತ್ನಾವಳಿ. ಎಕ್ಸರ್‌ಸ್ಯಾಜ್ ಮತ್ತು ನೋಟು ಪುಸ್ತಕಗಳು, ಕಾಪಿ ಪುಸ್ತಕಗಳು, ಡ್ರಾಯಿಂಗ್ ಪುಸ್ತಕಗಳು

ಇತರ ಪುಸ್ತಕಗಳು:—ಸಂಕ್ಷೇಪಗೀತೆ, ಕೇತುಭಂಗ, ಹಿಂದೂ ವ್ರತವಿವೇಕ, ಚಂದ್ರಗುಪ್ತ ಚಕ್ರವರ್ತಿ, ಶ್ರೀ ಕೃಷ್ಣಸಂಧಾನ ಪದ್ಯಪಾಠಗಳು, ಹರಿಕಥಾ ಮೃತಸಾರ ಹರಿನಾಮಸಂಕೀರ್ತನೆ ಸುದಾಂಮೃತ ಪದ್ಯಗಳು. ಬೆಂಕಿಪೆಟ್ಟಿಗೆ ತಯಾರಿಸುವ ವಿಧಾನ, ಸಾಬೂನು ತಯಾರಿಸುವ ವಿಧಾನ, ಸ್ವರಾಜ್ಯ ಭಕ್ತಿೋಲ್ಲಾಸ, ಚರಕಗೀತೆ, ಕೊಂಕಣಿ ಭಾಷೆಯಲ್ಲಿ ಚಂದ್ರಹಾಸ ನಾಟಕ, ಪ್ರಹಲ್ಲಾದ ಚರಿತ್ರ ನಾಟಕ, ಕನ್ನಡ ಮೃಚ್ಛಕಟಿಕ ನಾಟಕ, ಚಂದ್ರಹಾಸಾಭ್ಯುದಯ ನಾಟಕ, ಕೋವಿಲನ್ ಚರಿತ್ರ ನಾಟಕ, ಮಾಧವಿ ಉಪನ್ಯಾಸ ಭಾಗ ೧, ೨, ಮತ್ತು ೩.

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಶತ್ರುವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು

❋ ಅಮೃತಾಂಜನ ❋

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಹಿಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣಾಧ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ವಾಸಿವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ, ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ ೩ ಆಣೆ.

ಅಮೃತಾಂಜನ ಡಿಪೋ,

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

109 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

— ರಥೋತ್ಸವ, ವಿವಾಹ ಉಪನಯನಗಳ ಸಮಯ —
ಸರ್ವರಿಗೂ ಉಡಿಗೆ ತೊಡಿಗೆಗಳು ಬೇಕಾಗುವ ಸಂದರ್ಭ.

ಯಾರು, ಯಾವುದನ್ನು ಎಲ್ಲಿ ಪಡೆಯಬೇಕೆಂಬ ಶಂಕೆಯಿಂದ ವಿಳಂಬ ಮಾಡಬೇಡಿರಿ. ಉಡಿಗೆತೊಡಿಗೆಗಳನ್ನು ಚುನಾಯಿಸಿ ನಿಮಗೆ ಬೇಕಾದ ಯಥಾರ್ಥ ಮಾಹಿತಿಯನ್ನು ಕಳೆದ ಹತ್ತಿಪ್ಪತ್ತು ವರುಷಗಳಿಂದ ಪಡದು ನಮ್ಮಲ್ಲಿಯ ವ್ಯಾಪಾರವು ಗಿರಾಕಿಗಳಿಗೆ ಸರ್ವ ದೃಷ್ಟಿಯಿಂದಲೂ ಲಾಭಕರವಾಗಿ ಪರಿಣಮಿಸುವಂತೆ ನಮ್ಮ ಜವಳಿ ಸಂಗ್ರಹವನ್ನು ಮಾಡಿರುತ್ತೇವೆ.

ಗುರ್ಪುರ್‌ಕರ್ ಬ್ರದರ್ಸ್, ರಥಬೀದಿ, ಮಂಗಳೂರು.

ಹೆಡ್ ಆಫೀಸು:—ರಥಬೀದಿ—(ಮೊದಲು ಸುಜೀರ ನಾಗಪ್ಪನಾಯಕ್, ಎಂಡ್ ಕೋ, ಇದ್ದಲ್ಲಿ; ಅಜಿಜುದ್ದೀನ್ ರಸ್ತೆಗೆ ತಿರುಗುವಲ್ಲಿ) ಮಂಗಳೂರು.

ಬ್ರೆಂಚ್ ಆಫೀಸು:—ರಥಬೀದಿ—(ಹಳೇ ತಾಲೂಕು ಕಚೇರಿಯ ಪಟಾರಕ್ಕೆ ಸಮೀಪವಿರುವ ಮಳಿಗೆ) ಮಂಗಳೂರು.

ಈ ದೇಶದ ಪ್ರಖ್ಯಾತಪಟ್ಟ ನೇಯಿಗೆಯ ಕೇಂದ್ರಸ್ಥಳಗಳಾದ—ಬನಾರಿಸ್, ಪೂನಾ, ಅಹಮ್ಮದಾಬಾದ್, ಸೂರತ್, ಬೆಂಗಳೂರು, ಧರ್ಮಾವರಮ್, ಕಂಚೀವರಮ್, ಕೊಯಮುತ್ತೂರು, ಮಧುರೆ, ತಂಜಾವೂರು, ಕುಂಭಕೋಣ, ಇಳಕಲ್, [illegible], ಹುಬ್ಬಳ್ಳಿ, [illegible], ಗದಗ, ಮದ್ರಾಸು ಈ ಪ್ರಾಂತ್ಯಗಳಲ್ಲಿ ತಯ್ಯಾರಾದ

ಜರಿಸೀರೆಗಳು, ದುಪ್ಪಟಾ, ಜರಿಶಾಲು, ಪೇಷ್ಮಿ, ರೇಷ್ಮೆ ಸೀರೆಗಳು, ಅರರೇಶ್ಮೆ ಸೀರೆಗಳು, [illegible] ರೇಷ್ಮೆ ಸೀರೆಗಳು, [illegible] ಸೀರೆಗಳು, ರೇಷ್ಮೆ ಮಡಿಗಳು, ನಿತ್ಯ ಉಪಯೋಗದ ಸೀರೆಗಳು ಬನಿಯನ್, ಕರ್ನಾಟಕ ಮಿಲ್‌ಗಳ ವ ಇತರ ಮಿಲ್‌ಗಳ ಶೆರ್ಟಿಂಗ್ ಕೋಟಿಂಗ್. ಕೈರಾಟೆಯಲ್ಲಿ ತಯಾರಿಸಿದ ನೂಲಿನಿಂದ ಮಾಡಿದ—

[illegible] ಶರ್ಟಿಂಗ್, [illegible] ಕೋಟಿಂಗ್, [illegible], [illegible] ಶೇಪ್ಪಿ, ಅಂಗವಸ್ತ್ರ, ಇತ್ಯಾದಿ—
[illegible]—

ಎಲ್ಲಾ ಸಂಗ್ರಹವನ್ನೂ ನಮ್ಮ [illegible] ಯಾವ [illegible] ಅಂಥಾ [illegible] ಹೋಗಿ ಸಂಗ್ರಹಿಸಿ [illegible].

[illegible]—[illegible] ರೂಪಾಯಿ 50ಕ್ಕೆ [illegible] ರೂ. 50ರಿಂದ 350ವರೆಗೆ [illegible] 10%, ರೂ. 350 [illegible] 1000ಕ್ಕೆ 12½% [illegible]

ಆರ್. ಮಾರ್ಟಿನ್ಸರ ಲಪ್ಪಾ ಎಣ್ಣೆ

ಇದರ ಸುವಾಸನೆಯು, (ಪರಿಮಳವು) ಬಹಳ ಅಂದವಾಗಿಯೂ ಇರುವುದಲ್ಲದೆ, ಬಹಳ ಹೊತ್ತಿನ ವರೆಗೂ ಇರುತ್ತದೆ. ಈ ಎಣ್ಣೆಯನು ತಲೆಗೆ ಹಾಕಿಕೊಳ್ಳುವುದರಿಂದ ಕಣ್ಣುಗಳು ತಂಪಾಗಿಯೂ, ಶುಭ್ರವಾಗಿಯೂ, ಆಗುವುದಲ್ಲದೆ, ತಲೆಗೂದಲು ಚೆನ್ನಾಗಿ ಬೆಳೆಯುತ್ತದೆ. ಇದನ್ನು ಪ್ರತಿದಿವಸವೂ ಉಪಯೋಗಿಸುವುದರಿಂದ ಕೂದಲುಗಳು ಚೆನ್ನಾಗಿ ಹೊಳೆಯುವಂತೆ ಮಾಡುತ್ತದೆ. ಕೂದಲುಗಳಲ್ಲಿರುವ ಹೇನುಗಳು ಮುಂತಾದುವು ನಾಶವಾಗಿ ತಲೆಬುರುಡೆಯನ್ನು ಚೆನ್ನಾಗಿ ಬೆಳೆಯುವಂತೆ ಮಾಡುತ್ತದೆ. ಗಡ್ಡ ಮತ್ತು ಮೀಸೆಗಳು ಸಹ ಬೆಳೆಯುತ್ತವೆ. ಇದನ್ನು ಉಪಯೋಗಿಸಿದ ಜನರು ಇದಕ್ಕಿಂತ ಉತ್ತಮವಾದ ಎಣ್ಣೆಯು ಬೇರೆ ಇಲ್ಲವೆಂದು ಹೇಳಿರುತ್ತಾರೆ.

ಕ್ರಯ ಬಾಟ್ಲಿ 1ಕ್ಕೆ ರೂ. 1-4-0.

ಆರ್ ಮಾರ್ಟಿನ್ಸರ ಗಿಬೋಡುಮಿನ್.

ಗಂಡಸರಿಗೂ ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ, ಅಥವಾ ಹೊಸತಾಗಿದ್ದರೂ ಸರಿ. ಬಿಳುಪು ಹೋಗುವುದು ಉರಿಯುವುದು, ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೆ ಉರಿ ಮೂತ್ರವನ್ನು ಇಳಿಸಿ, ಮೂತ್ರವು ಬಿಳುಪಾಗಿ ನಿರ್ಮಲವಾಗುವುದಲ್ಲದೆ ರೋಗದ ಪತ್ತೆನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ.

ಚೆರಿ ಸೀಸೆ 1ಕ್ಕೆ ರೂ. 2—0—0.

ಆರ್. ಮಾರ್ಟಿನ್ಸರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮು, ಬರಲು ಶ್ವಾಸ, ಶೀತ, ನೆಗಡಿ, ಗಂಟಲುನೋವು, ಎದೆ ನೋವುಗಳನ್ನೂ ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನಮಾಡಿ ಪರೀಕ್ಷಿಸಿ ನೋಡಿರಿ. ಅನಂತರ ಬೇರೆ ಯಾವ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮಲಿಗೂ ರಾಣಿಯಾಗಿಯೂ, ಎದೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತಲೆಯಿಕ್ಕದಂತೆ ಮಾಡುತ್ತದೆ

ವಿಳಾಸ:—ಆರ್. ಡಿ. ಕಟ್ಲೆ ಮತ್ತು ಕಂಪೆನಿ,
ನಂಬ್ರು ಬಿ. ಫ್ರಿಯರ್ ರೋಡ್,
ಸಾಂಜ ವರ್ತಮಾನ ಪ್ರೆಸ್,
ಟೋಡಿವಾಲಾ ಬಿಲ್ಡಿಂಗ ಎದುರುಗಡೆ, ಫೋರ್ಟ ಮುಂಬಯಿ.

R. D. Kately & Co.
No. B Frere Road,
Opposit Sanjvertaman Press,
Todivala Building, FORT BOMBAY

ತ್ವರೆ ಮಾಡಿರಿ! ತಯಾರಾಗಿದೆ!

ನಾಲ್ಕನೇ ದರ್ಜೆಯ
ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ನಾಲ್ಕನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್. ಗಣಪತಿರಾವ್ ಐಗಳ್—ಗ್ರಂಥಕರ್ತರು.

ಮನೋರಂಜಕ ಚಿತ್ರಗಳೂ ಇವೆ.

ಇದರಲ್ಲಿ ಬಾರಕೂರು, ಮಂಗಳೂರು, ಮೂಲಿಕೆ, ಕಾರ್ಕಳ, ಮೂಡಬಿದರೆ, ಸುಬ್ರಮಣ್ಯ, ಉಡುಪಿ, ಬಸರೂರು, ವೇಣೂರು, ಬೈಲಂಗಡಿ, ಧರ್ಮಸ್ಥಳ, ಕೊಲ್ಲೂರು, ಕುಂಬಳೆ, ಜಪಾನದೇಶದ ಜನರು, ಚೀನಾದೇಶದ ಜನರು, ಬರ್ಮಾದೇಶದ ಜನರು, ಯುರೋಪ ಖಂಡದ ಜನರು, ಎಸ್ಕಿಮೊ ಜನರು, ನಿಗ್ರೊ ಜನರು. ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ನಾಲ್ಕನೇ ದರ್ಜೆಯ ಮಕ್ಕಳಿಗೆ ಉಪಯುಕ್ತವಾಗಿದೆ. ಕ್ರಯ 8 ಆಣೆ.

ಪುಸ್ತಕ ದೊರಕುವ ವಿಳಾಸ:—
ಶಾರದಾ ಛಾಪಖಾನೆ,
ಮಂಗಳೂರು.

ಡಾಕ್ಟರುಗಳು ಭಿನ್ನಾಭಿಪ್ರಾಯಪಡುವಾಗ್ಯೆ ತೀರ್ಮಾನಿಸುವದು ಯಾರು?

ಅಂಥಾ ಸಂದರ್ಭಗಳಲ್ಲಿ ಡೆಂಗ್ಯು ಮುಂತಾದ ಜ್ವರಗಳನ್ನು ನಿವಾರಿಸುವಂಥಾ "ಬಾಟ್ಲಿವಾಲರ ಏಗ್ಯುಮಿಕ್ಸ್ಚರ್"ನ್ನು ಸರಾಗವಾಗಿಯೂ, ಮತ್ತು ಜ್ವರಗಳನ್ನು ಖಂಡಿತವಾಗಿ ನಿಲ್ಲಿಸುವಂಥಾದೂ, ಎಲ್ಲಾ ತರದ ತಲೆನೋವುಗಳನ್ನು ಹೋಗಲಾಡಿಸುವಂಥಾದ್ದೂ ಆದ "ಬಾಟ್ಲಿವಾಲರ ಏಗ್ಯುಪಿಲ್ಸ್" ಇದನ್ನು ಉಪಯೋಗಿಸಿರಿ.

ಐ. ಎಮ್. ಎಸ್. ಡಾಕ್ಟರುಗಳಿಂದ ಶಿಫಾರಸು ಮಾಡಲ್ಪಟ್ಟಿದ್ದು. ಇದರ ಉಪಯೋಗದಿಂದ ಹೃದಯದ ಮೇಲೆ ಯಾವದೊಂದೂ ಬಾಧಕವಿಲ್ಲ. ಅರ್ಧ ಶತಮಾನದಿಂದ ಹಿಂದೂಸ್ಥಾನ, ಬರ್ಮಾ, ಸಿಲೋನ್, ಆಫ್ರಿಕಾ ಇವುಗಳಲ್ಲಿ ಪ್ರಖ್ಯಾತಪಟ್ಟಿದ್ದಾಗಿರುತ್ತದೆ.

ಅನೇಕ ಹಿಂದೀ ಪ್ರದರ್ಶನಗಳಲ್ಲಿ ಬೆಳ್ಳಿ ಮತ್ತು ಬಂಗಾರದ ಪದಕಗಳನ್ನು ಪಡೆದಿರುತ್ತೆ. ಚಾಳಿ ಸಾಧ್ಯವಂತಿದ್ದ ಮಾರ್ವಾರಿಗಳೂ ಕೂಡ ಅದರ ಮೇಲೆ ಹಣವನ್ನು ಮುಂಗಡವಾಗಿ ಕೊಡುತ್ತಾರೆ. ಬಡ ಮತ್ತು ಮಧ್ಯಮ ತರಗತಿಯ ಜನರಿಗೆ ವರಪ್ರದಾನವಾಗಿದ್ದು ಸಂಚಾರ, ಪ್ರಯಾಣ, ದೇಶಾಟನೆಗಳ ಸಮಯದಲ್ಲಿ ಹತ್ತಿರದಲ್ಲಿ ಇರಿಸಿಕೊಳ್ಳದಾಗಿರುತ್ತದೆ.

ಬಾಟ್ಲಿವಾಲರ ಬಾಲಾಮೃತ ಅಥವಾ ಟೊನಿಕ್ ಸಿರಪ್.

ಕೆಮ್ಮನ್ನು ಹೋಗಲಾಡಿಸಿ, ಎದೆನೋವನ್ನು ಶಾಂತಗೊಳಿಸಿ, ಜ್ವರವನ್ನು ಉಪಶಮಿಸಿ, ನಿದ್ರಾಭಂಗವನ್ನು ಅಡಿಮೆ ಮಾಡಿ ಧಾತುವರ್ಧನವನ್ನು ಮಾಡುವದರಲ್ಲಿ ಅತ್ಯುತ್ತಮವಾಗಿರುತ್ತದೆ. ಕಫವನ್ನು ಒಡಗಿಸಿ ಮಾಯವಾಗುವಂತೆ ಮಾಡುವುದಲ್ಲದೆ ಅದೇ ಸಮಯದಲ್ಲಿ ಒಳ್ಳೇ ಜೀರ್ಣವನ್ನೂ ಉಂಟುಮಾಡುವುದು. ದರ ಮೊದಲಾದ ಮಾಹಿತಿಯನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಕಾರಿನಸತ್ತಿ:-CAWASHAPUR, BOMBAY.

Dr. H. L. Batliwala & Co., Ltd.,
Sayani Road, P. O. Cadell Road, Bombay. No. 14.
ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.,
Sayani Road, P. O. Cadell Road, Bombay. No. 14.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟಿ. ಖ. 9 ಆಣೆ.

ನಮ್ಮ ವಿಳಾಸ:— ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಏಜಂಟರು:— ಡಿ. ಊಲನ್ ಮಾರ್ಟ್, ಮಂಗಳೂರು.

OUR RECENT IMPORT IN WRIST WATCHES

Have you used anyone of these Watches?

SEND YOUR ORDER NOW ALL GUARANTEED.

Fashionable wrist wrist Lady's size. Reliable movement Guaranteed.



No. 368.

Handy to wear and looks beautiful. Gives punctual time and with strong movement.

Nickel case Rs. 8—0

High-class Radium dial watch watch with Roman figures.



No. 367.

Can be seen in dark nights. Well fitted with best movement and strong to use. Used by one and all.

Silver case Rs. 9—0.

Radio light wrist watch.



No. 372.

Fitted with the best mechanism and guaranteed to work and keep perfect time for a long time.

Nickel case Rs. 7—8
Electro rolled-gold „ 9—0

(N. B. In addition to the above, we have good number of varieties of fancy wrist watches, pocket watches. Please write for a descriptive catalogue, which will be sent free)

WHOLESALE IMPORTERS

PETER WATCH COY.,
POST BOX 27, MADRAS

ಶಾಲಿವಾಹನಶಕ ೧೮೪೭ನೆಯ ಕ್ರೋಧನ ಸಂವರದ ಶ್ರಾವಣ ಶು ೧೨ ಶನಿವಾರದಿಂದ ಕ್ರೋಧನ ಸಂವರದ ಶ್ರಾವಣ ಬ ೩ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೫ನೆಯ ಕರ್ನಾಟಕ ಅಟ.)

ತಾರೀಕು	ವಾರ	ತಿ.	ಘಳಿಗೆ	ನಕ್ಷತ್ರ	ಘಳಿಗೆ	ಯೋಗಾದಿ	ಸೂರ್ಯ ಉ.	ಸೂರ್ಯ ಅಸ್ತ.
1	ಶನಿ	೧೨	೪೯.೧೪	ಜ್ಯೇಷ್ಠ	೬.೪೬	೧೬	6.17	6.55
2	ರವಿ	೧೩	೪೩.೧೬	ಮೂಲ	೩.೦	೧೮	6.18	6.55
3	ಸೋಮ	೧೪	೩೬.೨	ಉ. ಷಾ.	೫೫.೨	೧೯	6.18	6.55
4	ಕುಜ	⊙	೩೧.೫	ಶ್ರವಣ	೫೧.೦	೨೦	6.18	6.54
5	ಬುಧ	೧	೨೫.೫	ಧನಿಷ್ಠ	೪೬.೨	೨೧	6.18	6.54
6	ಗುರು	೨	೧೯.೩೨	ಶತಭಿಷ	೪೩.೫೮	೨೨	6.18	6.54
7	ಶುಕ್ರ	೩	೧೫.೨	ಪೂ. ಭಾ.	೪೧.೩೨	೨೩	6.18	6.53

ಮಂಗಳೂರಿನ ವಾಯುಸ್ಥಿತಿ.

Date. ತಾರೀಕು	Temperature. ಉಷ್ಣ (ಕಾವು) Maximum ಹೆಚ್ಚಿನದು	Minimum ಕಡಿಮೆ	Rainfall. ಮಳೆ ದಿವಸ ಮಳೆ	ಒಟ್ಟು ಮಳೆ.
24	85—1	74—6	0—11	—
25	86—0	73—6	0—08	—
26	87—4	75—3	0—25	—
27	88—8	73—8	0—68	—
28	87—5	74—5	0—21	—
29	87—2	73—2	1—55	—
30	84—4	72—7	1—	—

ಮಂಗಳೂರಿನ ಪೇಟೆ ಧಾರಣೆ

ಜೀನಸು

ಮಸ್ಕತಿ
ಗುಡ್ಡ
ರಾಶಿ ಸುಗ್ಗಿ
ಅವ್ವಲ್ ಬೆಳ್ತಿಗೆ
ಗುಡ್ಡ ಬೆಳ್ತಿಗೆ
ರಂಗೂನು ಬೆಳ್ತಿಗೆ ಗೋಣಿ ೧
ಗೋಡಿ ಗೋಣಿ ಗಳ್ಳೆ
ಹುರುಳಿಗೋಣಿ ಗಳ್ಳೆ
[illegible]ಗೋಣಿ ಗಳ್ಳೆ
ತೊಗರಿಗೋಣಿ ಗಳ್ಳೆ
ತೊಗರಿಬೇಳೆ ಗೋಣಿ ಗಳ್ಳೆ
ಉದ್ದುಗೋಣಿ ಗಳ್ಳೆ
ಹೆಸರುಗೋಣಿ ಗಳ್ಳೆ
ಊರು ಬೆಲ್ಲ ಖಂಡಿ ಗಳ್ಳೆ
ಉಪ್ಪು ಗೋಣಿ ಗಳ್ಳೆ
ಕೊಪ್ರ ಖಂಡಿ ಗಳ್ಳೆ
ಕೊಪ್ರ ಹಿಂಡಿ ಖಂಡಿ ಗಳ್ಳೆ
ಎಳ್ಳಿಂಡಿ ಖಂಡಿ ಗಳ್ಳೆ
ಕೊಪ್ರ ಎಣ್ಣೆ ಮುಡಿ ಗಳ್ಳೆ
ಎಳ್ಳೆಣ್ಣೆ ಮುಡಿ ಗಳ್ಳೆ
ಬಿಳಿ ಎಣ್ಣೆ ಬುಡ್ಡಿಗೆ ಗಳ್ಳೆ
ಜೋನಿ ಸಕ್ಕರೆ ಮುಡಿ ಗಳ್ಳೆ
ಊರ ಮೆಣಸಿನಕಾಯಿ ಮುಡಿ ಗಳ್ಳೆ
ಸಾಸಿವೆ ಮುಡಿ ಗಳ್ಳೆ
ಕೊತ್ತಂಬರಿ ಮುಡಿ ಗಳ್ಳೆ
ಕಾಫಿ ಖಂಡಿ ಗಳ್ಳೆ
ಬೆಳಗೋಡು ಅಡಿಕೆ ಖಂಡಿ ಗಳ್ಳೆ
„ ಹೊಸ ಅಡಿಕೆ
ಕಾಳುಮೆಣಸು ಖಂಡಿ ಗಳ್ಳೆ
ಮೆಂತ್ಯೆ ಮುಡಿ ಗಳ್ಳೆ
ಗೇರುಬೀಜ ಮುಡಿ ಗಳ್ಳೆ
ಅಕ್ಕಿ[illegible] ಖಂಡಿ ಗಳ್ಳೆ
[illegible] ಮುಡಿ ಗಳ್ಳೆ
[illegible] ಮುಡಿ ಗಳ್ಳೆ
[illegible] ಗಳ್ಳೆ
[illegible] ಮುಡಿ ಗಳ್ಳೆ
ದವಸ

ವರೆಗೆ

ರೂ ಅ
9 – 12
8 – 14
8 – 10
9 – 8
8 – 4
14 – 8
22 – 0
10 – 8
13 – 0
13 – 0
21 – 0
14 – 8
15 – 0
85 – 0
4 – 10
20 – 0
13 – 0
12 – 8
0 – 0
1 – 0
—
—
—
—
— 4
— 0
— 0
— 0
—
— 9
— 9
— 0
— 0
—

…ರ್ತಮಾನ.

…ರಲ್ಲಿ ವಿಲಾಯ… …ನ ವಿಕ್ಟೋರಿಯ… …ಬಂದಿದ್ದ ದೊ… …ಬರ್ಗನ್ ಹೆ… …ವಿಮಂತಾದವರು… …ವ್ಯಕ್ತಕೊಳಿಸಿದರು… …ಸ್ವಾತಂತ್ರ್ಯವು… …ನದ್ವರಿಂದ ವಿಲಾ… …ಯುತ್ತಿದೆ. …ಜನರ ಸಲುವಾಗಿ… …ರಿದ್ದಾರೆ.

…ಭಸೇರಿ ಕರ್ನಾಟಕ… ಶ್ರೀ ಕೆಂಭಾವಿ… ಆರಿಸಲ್ಪಟ್ಟಿರುವರು. …ವುಂಕ್ಕೆ ಸೇರಿಸಿಕೊಳ್ಳ… …ಾಗಿದೆ. …ಟಿಯವರು ತಮ್ಮ… …ಕೆಂದು ನಿರ್ಧರಿಸಿರುವ… …ಚಿಕ್ಕಪೇಟೆಯೊಳಗಿ… …ಕೊಡುವರೇ ೩೨೦ ರ… …ಪಂಚವಟಿಯೊಳಗೆ ಶ್ರೀ… …ಲಕರು ಶ್ರೀ ವಿಷ್ಣು… …ಂದ ಈ ಆಶ್ರಮದಲ್ಲಿ… …ನಡಿಸುತ್ತಿದ್ದಾರೆ. ಶ್ರೀ… …ಗೆ ೧೫೦೦ ರೂಪಾಯಿ… …ನ ಸೋನಾಪುರ ಸಂಸ್ಥಾ… …ಳಗಿಂದ ೧೦ ಲಕ್ಷ ರೂ… …ಕು ಕಾಲುವೆಗಳ ಯೋ… …ರೋಜೋಜಯುಕ್ತ… ಇದಲ್ಲದೆ. ಸಂಸ್ಥಾನ… …ದುತ್ತದೆ. ಮಹಾರಾಜ… …ವ್ಯ ೨ ಲಕ್ಷ ರೂಪಾಯಿಗ…

The Cara Public Conveyance Co., Ltd, Mangalore.
(ESTABLISHED 1914.)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ ಸರ್ವಿಸುಗಳು—

ಮಂಗಳೂರು
ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು
ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.
ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರುಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡ ಘಟ್ಟಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ಸರ್ವಿಸು [illegible]ಲ.

ಮುಂಬಯಿ[illegible]ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ—ಈ ಪ್ರಾಂತ್ಯಗಳಿಗೆ ಈ ಕಂಪೆನಿಯ [illegible]—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನ[illegible]ರು ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸು[illegible]ವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಪ್ರತಿನಿತ್ಯ ಎರಡು [illegible]ವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳ [illegible] ಸ್ಟೇಶನುಗಳಿಂದ ಹೊರ[illegible]ಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಆಯ್ದ[illegible] ಕೆಳಗಿನ ವಿಳಾಸಕ್ಕೆ ಬರೆಯ[illegible]

Secretary,
The Canara Public Conveyance Co., Ltd., Mangalore. S. K

— ಸಿರಿಗನ್ನಡಂಗೆಲ್ಗೆ

ಶ್ರೀ ಶಂಕರ ಕರ್ನಾಟಕ ಪುಸ್ತಕಭಂಡಾರವೂ ಶ್ರೀ ವಿದ್ಯಾರಣ್ಯ ಪ್ರಕಾಶಕ ಸಂಘ,

ಮಾಳಮಡ್ಡಿ, ಧಾರವಾಡ.

ಕನ್ನಡಿಗರಿಗೆ ಬೇಕಾಗುವ ಎಲ್ಲಾ ತರದ ಕನ್ನಡ ಪುಸ್ತಕ ನಮ್ಮಲ್ಲಿ ಯೋಗ್ಯ ಬೆಲೆಗೆ ದೊರೆಯುವವು. ವಿದ್ಯಾರಣ್ಯ ಪುಸ್ತಕಮಾಲೆಯ ಕೆಳಗಿನ ೧, ೨, ೩, ಪುಸ್ತಕಗಳು ಚಂದಾದಾರರಾಗುವವರಿಗೆ ಅಂಕಿತ ೫ ರೂ. ೬ ಆಣೆಗೆ ದೊರೆಯುವವು. ಮುಂದೆ ಹೊರಬೀಳುವ ಸೇರಿ ಪುಸ್ತಕಗಳನ್ನು ಚಂದಾದಾರರಿಗೆ ೧ ರೂಪಾಯಿಗೆ ೨ ಆಣೆಯ ಬೆಲೆಯ ಬೆಲೆಗೆ ವಿ. ಪಿ. ಮಾಡುವೆವು. ಭಂಡಾರದ ಬೆಲೆ ಪಟ್ಟಿಗಾಗಿ ೪ ಆಣೆ ಟಿಕೇಟುಗಳನ್ನು ಕಳುಹಿಸತಕ್ಕದ್ದು.

		ರೂ. ಅ.
೧.	ಕರ್ನಾಟಕ ಸಿಂಹಾಸನ ಸ್ಥಾಪನೆ	೧— ೦—
೨.	ಕಥೆಗಳಿನ್ನೊಳಗೊಂಡ ಬೀರಬಲ್ಲ ಚರಿತ್ರ (ಸಚಿತ್ರ)	೧— ೬—
೩.	ಛತ್ರಪತಿ ಶಿವಾಜಿ ಮಹಾರಾಜ	„ ೨—೧೨—೦
೪.	ಮಹಾರಾಣಿ ಲಕ್ಷ್ಮೀಬಾಯಿ ಝಾಂಸಿ	„ ೨— ೦—೦
೫.	ಅಕ್ಬರ ಚಕ್ರವರ್ತಿ ಚರಿತ್ರ	„ ೧— ೧—೦
೬.	ಚರಿತ್ರ ಸಂಗ್ರಹ ಭಾಗ ೧.	„ ೧— ೪—೦
೭.	ತಿಲಕರ ಗೀತಾ ರಹಸ್ಯ	೩— ೮—೦
೮.	ಶ್ರೀ ದಾಸಬೋಧ ಭಾಗ ೧. ೨. ೩. — ...	೨—೧೪—೦
೯.	ರಾಷ್ಟ್ರಸಭೆಯ ಇತಿಹಾಸ	೩— ೮—೦
೧೦.	ವಚನ ಜ್ಞಾನಸಿಂಧು	೪— ೦—೦

ಇವಲ್ಲದೆ ನಮ್ಮಲ್ಲಿ ಎಲ್ಲಾ ತರದ ಕಾಯದೆ ಶಾಲೋಪಯೋಗಿ ಪುಸ್ತಕಗಳೂ ನಕಾಶೆ ಚಿತ್ರಗಳೂ ಬರವಣಿಗೆ ದೊರೆಯುವವು.

ಶ್ರೀಪಾದ ರಾಮಚಂದ್ರ ದೇಶಪಾಂಡೆ ಬಿ. ಯಸ್. ಸಿ.
ವ್ಯವಸ್ಥಾಪಕ.

ಪ್ರಖ್ಯಾತಿಪಟ್ಟ ಮಂಗಳೂರು ನಸ್ಯ.

ನಮ್ಮಲ್ಲಿ ಉತ್ತಮವಾದ ಹೊಗೆಸೊಪ್ಪಿನಿಂದಲೂ, ಸುಮಾರು ೫೦ ವರ್ಷಗಳ ಅನುಭವದಿಂದಲೂ ತಯಾರಿಸಿದ ನಸ್ಯವು ಯಾವಾಗಲೂ ರಖಂ ಆಗಿಯೂ ಚಿಲ್ಲರೆ ಆಗಿಯೂ ಮಾರಾಟಕ್ಕೆ ದೊರೆಯುತ್ತದೆ.

I ಕ್ಲಾಸ್ ರಾತ್ತಲು 1ಕ್ಕೆ ರೂ. 3—0—0.
II „ „ 2—12—0.

ವಿ. ಪಿ. ಖರ್ಚು ಅಲಾಹಿದ. ಸ್ಯಾಂಪಲು ಅಪೇಕ್ಷಿಸುವವರು ೨ ಆಣೆ ಸ್ಟಾಂಪು ಕಳುಹಿಸಬೇಕು.

ವಿಳಾಸ:—
ಎಮ್. ಎಸ್. ಬಂಡಾರ್ಕಾರ್ ಎಂಡ್ ಸನ್ಸ್,
ನಸ್ಯ ವ್ಯಾಪಾರಿಗಳು,
ರಥಬೀದಿ, ಮಂಗಳೂರು.

ಬಂದು ನೋಡಿರಿ! ತಿಂದು ನೋಡಿರಿ!

ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ ಪದಕವನ್ನು ಬಹುಮಾನವಾಗಿ ಪಡೆದಿರುವ

ಎಸ್. ಪಿ. ಆಚಾರ್ಯ
ಇವರಿಂದ ತಯಾರಿಸಲ್ಪಟ್ಟ

ಉಪ್ಪಿನಕಾಯಿಗಳನ್ನು

ಬಂದು ನೋಡಿರಿ! ತಿಂದು ನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವು ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ ಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಅವರ ಇಚ್ಛೆಗೆ ತಕ್ಕಂತೆ ಬೇಕಾದ ಉಪಕರಣಗಳನ್ನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ

ಬಂದು ನೋಡಿ ತಿಂದು ನೋಡಿರಿ!

ಇಂಡಿಯನ್ ಸ್ವೀಟ್ ಮಿಠಾಯಿ ಮಾರ್ಟ್,

ಮಹಾಲಕ್ಷ್ಮಿ ಸಿ. ಕಾಫಿ ಕ್ಲಬ್, ಮಾರ್ಕೇಟು ರೋಡು, ಮಂಗಳೂರು. ಅಥವಾ ಸದಾನಂದ ಕಾಫಿ ಕ್ಲಬ್ ರಥಬೀದಿ, ಮಂಗಳೂರು.

ದಕ್ಷಿಣ ಕನ್ನಡ ಜಿಲ್ಲೆಯ

ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—

ಶಾರದಾ ಛಾಪಖಾನೆ,
ಮಂಗಳೂರು

ಶಾಸ್ತ್ರೀಯ
ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪ್ಯಾ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪ್ಯಾ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.
ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.
ಹೆಚ್ಚಿನ ಮಾಹಿತಿಗೆ "ಆರ್ಷ ಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರೆಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಶುದ್ಧ ರೋಮದ ಧಾವಳಿಗಳು.

1 ಮೊಳ ಉದ್ದ 1¼ ಮೊಳ ಅಗಲ ರೂ. 1¼ರಿಂದ 2 ವರೆಗೆ, 5 ಮೊಳ ಉದ್ದ 1½ ಮೊಳ ಅಗಲ ರೂ. 1½ ರಿಂದ 5 ವರೆಗೆ, 6 ಮೊಳ ಉದ್ದ 1½ ಮೊಳ ಅಗಲ ರೂ. 2¼ರಿಂದ 6 ವರೆಗೆ, 8 ಮೊಳ ಉದ್ದ 2 ಮೊಳ ಅಗಲ ರೂ. 3½ರಿಂದ 1 ವರೆಗೆ, 12 ಮೊಳ ಉದ್ದ 2¼ ಮ ಅಗಲ ರೂ. 6ರಿಂದ 12 ವರೆಗೆ, ಮೊಳ ಉದ್ದ 2¼ ಮೊಳ ಅಗಲ ರ ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಖದ್ದರ್ ರೇಶ್ಮೆ ಮ ಸಾಮಗ್ರಿಗಳು, ಕಾಶೀ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರು ಬಾಣಲಿಂಗ, ಜಾಘಂಟೆ, ತಾಳ, ಪನ್ನೀರ್‌ದಾನಿ, ಹಿತ್ತಾಳೆಯ ಆಟ ಮಗಳು, ಫೋಟೋ ಉಂಗುರಗಳು ಮತ್ತು ಇನ್ನೂ ಅನೇಕ ಸಾ ನುಗಳು ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುವು. ಕ್ಯಾಟಲಾಗ್ ೦.

ವಿಳಾಸ—
ಶಿರೋಮಣಿ ಯು. ನಾರಾಯಣಾಚಾರ್
ಮತ್ತು ಕಂಪೆನಿ, ಚೌಕಂಬಾ ಕಾಶೀ ಕ್ಷೇತ್ರ.

ನೋಟೀಸು

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ೋರ್ಟಿನಲ್ಲಿ,
O. . No. 61/1925.
ಕುಂಬುಳೆ ಮಹರ್ಭಟ್ಟ, ಅರ್ಜಿದಾರ.

ಕಾಸರಗೋಡು ತಾಲೂ ಕುಂಬುಳೆಯಲ್ಲಿರುವ ಕುಂಬುಳೆ ನಾರಾಯಣ ಭಟ್ಟ ಮಗಳು, ಯಾ ವಾಮನ ಭಟ್ಟರ ಹೆಂಡತಿ ಮೃತಳಾದ [illegible] ಯಾನೆ ಸತ್ಯಭಾಮಳ ಮೈನರ ಮಗ ವಿ. ದಾಮೋದರ ಭಟ್ಟನ ದೇಹ ಮತ್ತು ಆಸ್ತಿ ಗಾರ್ಡಿಯನಾಗಿ ತನ್ನನ್ನು ನೇಮಕಮಾಡಬೇಕೆಂತ ಅರ್ಜಿದಾರನು ದಾಖಲು ಮಾಡಿದ ಸದರಿ ಅರ್ಜಿಯು ತಾ. 22—8—'25ಕ್ಕೆ ಸದರಿ ಕೋರ್ಟಿನಲ್ಲಿ ತನಿಖೆಗೆ ಇಟ್ಟಿರುತ್ತದೆ. ಆದುದರಿಂದ ಯಾರಾದರೂ ಆಕ್ಷೇಪವಿರುವವರು ಸದರಿ ದಿವಸ ದಿನ 11 ಗಂಟೆಗೆ ಸದರಿ ಕೋರ್ಟಿನಲ್ಲಿ ತಮ್ಮ ಆಕ್ಷೇಪಣೆಗಳನ್ನು ಹ್ಯಾಜೀರು ಮಾಡಿಕೊಳ್ಳತಕ್ಕದ್ದು.

ಮಂಗಳೂರು, ತಾ. 30-7-'25. } P. Sanjiva, M. A. B. L.
Vakil for petitioner.

ಸಾಹಿತ್ಯಸರಸ್ವತಿ—ಲಕ್ಷ್ಮೀನಾರಾಯಣ
ಪುಣಿಂಚತ್ತಾ
ಇವರಿಂದ ರಚಿತವಾದ

ರಾಷ್ಟ್ರಗೀತಾರತ್ನಾಕರ ೦-೮-೦.
ಸ್ವರಾಜ್ಯಗೀತೆ ೦—೧—೦ ೦—೧—೦.

ಅಭಿಪ್ರಾಯ:—
ಕರ್ನಾಟಕದ ಸುಪ್ರಸಿದ್ಧ ವಿ ರಾದ
"ಹರಿಕಥಾರತ್ನಾಕರ" ಯಾನಿಧಿ"
ಕಾ. ಶಿವರಾಮದಾಸ್

ಸಂಪಾದಕ—"ಆನಂದ ಚಂದ್ರಿಕೆ" ಇವರು ಬರೆಯುತ್ತಾರೆ:—

"ಬ್ರಹ್ಮಶ್ರೀ ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯರ ಸನ್ನಿಧಿಗೆ—ಅನೇಕ ನಮಸ್ಕಾರ ಪೂರ್ವಕ ವಿಜ್ಞಾಪನೆಗಳು. ಉಭಯ ಕುಶಲೋಪರಿ. ॥ ಸಾ ॥

ಶ್ರೀ ಹರಿಗುರುದೇಶಭಕ್ತವರೇಣ್ಯ!

ಸಮಂಚಿತ ಪ್ರೇಮದಿಂದ ತಾವು ಹಿಸಿಕೊಟ್ಟ ಪತ್ರ ಪುಸ್ತಕಗಳು ತಲಪಿದವು. ನಿನ್ನೆಯ ದಿನ ಮಧ್ಯಾಹ್ನ ಗ್ರವಾಗಿ ಓದಿ ನೋಡಿದೆನು. ಸಮಧಿಕಾನಂದತುಂದಿಲನಾದೆನು. ಯ ದಿನ ಇಲ್ಲಿ ನಡೆದ ಶ್ರೀ ಮಹಾಭಾರತ ಹರಿಕಥಾ ಭಾಗದ ಂಚಾಲೀ ಮಾನಸಂರಕ್ಷಣೆ" (ಅಕ್ಷಯವಸ್ತ್ರಪ್ರದಾನ) ಮಂಗಳ ಗಳಿ" ತುಯದಲ್ಲಿ ತಮ್ಮಿಂದ ರಚಿತವಾದ "ಸ್ವರಾಜ್ಯ ಸೂಯ ಶ್ರವಣಮಾಡಿ ಎಂಬ ಗೀತವನ್ನು ಬೆಳಗಾವಿಗೆ ಬಂದಿದ್ದ ತಮ್ಮ ಲ್ಲರೂ ಆನಂದ ದ ನಮ್ಮ ಮಿತ್ರರೊಬ್ಬರು ಗಾನಮಾಡಿದರು. ವಶರಾದರು. ತಲಪಿದವು. ತಮ್ಮ ಮೂರನೆಯ ದಿನವೇ ತಮ್ಮ ನೀತಿ, ವಿಜ್ಞಾನಗಳು ಮ ಅಮೂಲ್ಯ ಗ್ರಂಥಗಳಲ್ಲಿ ದೈವಭಕ್ತಿ, ಭಿಸುತ್ತಿರುವವು. "ರಾಷ್ಟ್ರಗೀ ೋಹರವಾದ ಶೈಲಿಯಿಂದಲಂಕೃತವ ರಾಜ್ಯಗೀತೆ" ಯೆಂಬ ಗ್ರಂಥಗ ರತ್ನಾಕರ" "ಲೀಲೆ" ಕಂಠಾಭರಣದ ಅಮೂಲ್ಯ ರತ್ನತ್ರಯ ಮೂರೂ ಕರ್ನಾಟಕ ದೇ ವೆಂಬದಾಗಿ ಬಿನ್ನವಿಸುತ್ತ ಮಿತ್ರರೇ! ಶ್ರೀ ತಮಗೆ ಸಕಲಾರ್ಥಸಂಪತ್ತುಗಳನ್ನೂ ಅನುಗ್ರಹಿಸಲೆಂದು ವರ್ವಕವಾಗಿ ಹಾರೈಸುತ್ತಿರುವೆನು.

ಓಂ ತತ್ಸತ್!!!

ಇಂತು
ಭವದೀಯ

ಹರಿಕ ಶೇಕರ ವಿದ್ಯಾನಿಧಿ ಕಾ. ಶಿವರಾಮದಾಸ್."

— ಮಾತ್ರವಲ್ಲದೆ —

ವಿಮರ್ಶವಿಚಕ್ಷಣ ರಾವ್‌ಬಹದೂರ್ ಶ್ರೀಮಾನ್ ಆರ್ ನರಸಿಂ ಯರ್, ಎಮ್. ಎ., ಎಮ್. ಆರ್. ಎ. ಎಸ್. "ಪ್ರಾಕ್ ವೈಭವ," – ಮೈಸೂರು ಆಸ್ಥಾನ ಮಹಾವಿದ್ವಾನ್ ಶ್ರೀ. ಸೋ ಅಯ್ಯಾಶಾಸ್ತ್ರಿ, "ಕವಿತಿಲಕ"–ಇವರೇ ಮೊದಲಾದ ವಿದ್ವಾಂಸೊ ರ, ಮಹಾರಾಷ್ಟ್ರ "ಕೇಸರಿ"ಯ ಹಾಗೂ ನಿಖಿಲ ಕರ್ನಾಟಕದ ಸಕಲ ಪತ್ರಿಕೆಗಳ ಶ್ಲಾಘನೆಗೆ ಪಾತ್ರವಾದ

ರಾಷ್ಟ್ರಗೀತಾರತ್ನಾಕರ—ಲೀಲೆ—ಸ್ವರಾಜ್ಯಗೀತೆ

ಲಾದ ಭವ್ಯ ಕಾವ್ಯಗ್ರಂಥಗಳು ಸಮ್ಮಲ್ಲಿವೆ. ಕರ್ನಾಟಕ ಬಂಧುಗಳೇ,

— ಓದಿ ನೋಡಗೊಳ್ಳಿರಿ —

ಕೆ. ಎಮ್. ದಾಸಪ್ರಭು
ಎಂಡ್ ಸನ್ಸ್
ಮಂಗಳೂರು.
} ಅಥವಾ { ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಕರ್ನಾಟಕ ಪ್ರಾಂತಿಕ ವಾಲಂಟಿಯರ್ ಬೋರ್ಡು.

ಡಾ. ನಾರಾಯಣರಾವ್ ಹರಡೀಕರರು ಬರೆಯುತ್ತಾರೆ:—

—ಹುಬ್ಬಳ್ಳಿಯಲ್ಲಿ ಇದೇ ಕಳೆದ ತಾ. 16—7—25ರಲ್ಲು ಕರ್ನಾಟಕ ಪ್ರಾಂತಿಕ ವಾಲಂಟಿಯರರ ಸಭೆಯು ಕೂಡಿ ಈ ಠರಾವನ್ನು ಮಂಜೂರು ಮಾಡಿತು:—

"ಕರ್ನಾಟಕ ಪ್ರಾಂತಿಕ ವಾಲಂಟಿಯರ್ ಬೋರ್ಡಿನ ಶಾಖೆಗಳನ್ನು ಈ ಪ್ರಾಂತದಲ್ಲಿ ಎಷ್ಟು ತೆರೆಯಬಹುದು? ಇಂಥಾ ಶಾಖೆಗಳಿಂದ ಕಾಂಗ್ರೆಸ್ ಕೆಲಸಕ್ಕೆ ಎಷ್ಟು ಅನುಕೂಲ ಉಂಟು? ಎಂಬ ಬಗ್ಗೆ ಈ ಕೆಳಗಿನ ಸಂಸ್ಥೆಗಳನ್ನು ಅಥವಾ ಮಹನೀಯರನ್ನು, ಇಲ್ಲಿ ಕೆಳಗೆ ಕೊಟ್ಟ ಪ್ರಕಾರ ಅವರು ಆದಷ್ಟು ತ್ವರೆಯಾಗಿ ಸೆಕ್ರೆಟರಿಗೆ ಸಾಧ್ಯಂತವಾಗಿ ಸೂಚನೆಕೊಡಬೇಕೆಂದು, ಪ್ರಾರ್ಥಿಸುತ್ತದೆ.

(೧) ನಿಮ್ಮ ಪ್ರಾಂತದಲ್ಲಿ ಎಷ್ಟು ವಾಲಂಟಿಯರರು ಇದ್ದಾರೆ?

(೨) ಎಷ್ಟು ಮಂದಿಗೆ ಪೂರ್ಣಸಮಯದ ವರೆಗೆ ಕೆಲಸಮಾಡಬಹುದು? ಎಷ್ಟು ಮಂದಿಗೆ ಅರ್ಧಸಮಯದ ವರೆಗೆ ಮಾಡಬಹುದು?

(೩) ರಾಷ್ಟ್ರೀಯ ಕೆಲಸವನ್ನು ಪೂರ್ಣಸಮಯಮಾಡುವವರಲ್ಲಿ ಯಾರಾದರೂ ಪ್ರತಿಫಲಾಪೇಕ್ಷೆಮಾಡುತ್ತಾರೋ? (ಸಂಬಳ ಕೇಳುತ್ತಾರೋ).

(೪) ಪೂರ್ಣಸಮಯದ ವರೆಗೆ ಕೆಲಸಮಾಡುವರೆ ತಯಾರಿದ್ದವರ ಹೆಸರುಗಳು. ಅವರು ಎಷ್ಟು ಸಲ (ಸಂಬಳ) ಕೇಳುತ್ತಾರೆ?

(೫) ಅರ್ಧ ಸಮಯ ಕೆಲಸಗಾರರ (ಸ್ವಯಂಸೇವಕರ) ಹೆಸರು ಮತ್ತು ವೃತ್ತಿ. ಅವರಿಗೆ ಎಂಥಾ ರೀತಿಯ ಕೆಲಸಮಾಡುವರೆ ಸಾಧ್ಯವಾದೀತು?

(೬) ಹಳ್ಳಿಗಳಲ್ಲಿ, ಹಳ್ಳಿಯ ಸಂಸ್ಥಾಪಕರಂತೆ, ಕೆಲಸಮಾಡ್ಲು ತಯಾರಾಗಿದ್ದವರ ಹೆಸರುಗಳು?

(೭) ಸ್ವಯಂಸೇವಕರು ಕಾಂಗ್ರೆಸ್ಸಿನ ಪೂರ್ಣ ಪ್ರೋಗ್ರಾಮ ಕೊನೆಗಾಣಿಸುವವರೊ ಅಥವಾ ಭಾಗಮಾತ್ರ ಮಾಡುವವರೋ? ಭಾಗಮಾತ್ರವಾದರೆ ಎಂಥಾ ಯಾವ ಭಾಗ?

ಕಾಂಗ್ರೆಸ್ ಪ್ರೋಗ್ರಾಮ್ ಅಂದರೆ—ಹಿಂದೂ ಮುಸಲ್ಮಾನರ ಐಕ್ಯ, ಅಸ್ಪೃಶ್ಯನಿವಾರಣೆ, ರಾಷ್ಟ್ರೀಯ ವಿದ್ಯಾಭ್ಯಾಸ, ಮದ್ಯಪಾನ ನಿಷೇಧ, ಗ್ರಾಮ ಪಂಚಾಯಿತರು ಮತ್ತು ಖದ್ದರ್ ಇವುಗಳನ್ನು ಕೂಡಿದೆ.

ನಾವು ಕರ್ನಾಟಕದ ಎಲ್ಲಾ ಭಾಗಗಳಿಂದಲೂ ಸೂಚನೆ ಕೇಳಿಕೊಳ್ಳುತ್ತೇವೆ. ಸ್ವಯಂಸೇವಕ ಸಂಸ್ಥೆಯಲ್ಲಿ ಪ್ರೀತಿಯುಳ್ಳವನ ಮೇಲಿನ ಪ್ರಶ್ನೆಗಳ ಉತ್ತರವು ಆದರಪೂರ್ವಕರಾಗಿ ಅಂಗೀಕರಿಸಲ್ಪಡುವುದು, ಪ್ರತ್ಯುತ್ತರವನ್ನು ಸಾಧ್ಯವಿದ್ದಷ್ಟು ಸತ್ವರವಾಗಿಯೂ, ಪೂರ್ಣಾನುಭವವುಳ್ಳದಾಗಿಯೂ ಆಗಬೇಕು.

ಸ್ಥಿರಾಸ್ತಿ ಆಡವಿನ ಮೇಲೆ ಸಾಲಕೊಡುವ ಬೇಂಕುಗಳು.

ಬರೇ ಜಾಮೀನಿನ ಮೇಲೆ ಸಾಲಕೊಡುವ ಸಂಘಗಳಿಂದ ಅತೀ ಬಡ ಜನರ ಸಾಲದ ತಗಾದೆ ಮಾತ್ರ ಪೂರೈಸುತ್ತದಲ್ಲದೆ, ಚಿಕ್ಕ ದೊಡ್ಡ ವರ್ಗದಾರರ ತಗಾದೆಗಳು ಪೂರೈಸುವುದಿಲ್ಲ. ಇದಲ್ಲದೆ ಅಂಥಾ ಚಿಕ್ಕ ದೊಡ್ಡ ವರ್ಗದಾರರು ಅನಿವಾರ್ಯ ಕಾರಣಗಳಿಂದ ಒಮ್ಮೆ ಒಂದು ಅಥವಾ ಎರಡು ಸಾವಿರ ರೂಪಾಯಿ ಸಾಲಮಾಡಿದರೆಂದರೆ ಅದನ್ನು ಏಕ ಗಂಟಿನಿಂದ ತೆತ್ತುಬಿಡುವುದು ಅಪೂರ್ವ. ಹೀಗಾಗಿ ಅನೇಕರು ಸಾಲ ಹೆಚ್ಚಾಗಿ ತಮ್ಮ ಆಸ್ತಿ ಪಾಸ್ತಿಗಳನ್ನು ಕಳೆದುಕೊಳ್ಳುತ್ತಾರೆ. ಅಂಥವರು ಸುಲಭ ಕಂತುಗಳಿಂದ ತಮ್ಮ ಸಾಲನ್ನು ಪೂರೈಸಲಿಕ್ಕೆ ಅನುಕೂಲತೆ ಇದ್ದರೆ, ತಮ್ಮ ಆಸ್ತಿಯನ್ನು ಕಳಕೊಳ್ಳುವ ಸಂದರ್ಭಗಳು ಇಲ್ಲದಂತಾಗುವವು. ಇದಕ್ಕಾಗಿ ಸ್ಥಿರಾಸ್ತಿ ಅಡವುಗಳ ಬೇಂಕುಗಳನ್ನು ಸ್ಥಾಪಿಸಬೇಕೆಂದು ಸಹಕಾರಿಗಳಾದವರು ಕೆಲವು ವರ್ಷದಿಂದ ಈ ಸಂಸ್ಥಾನದಲ್ಲಿ ಚಳವಳ ಎಬ್ಬಿಸುತ್ತಿದ್ದರು. ಪರೀಕ್ಷಾರ್ಥವಾಗಿ ಸರಕಾರದವರು ೮ ಇಂಥ ಬೇಂಕುಗಳನ್ನು ಬೇರೆ ಕಡೆಗಳಲ್ಲಿ ತೆರೆದಿರುವರು. ಆ ೮ರ ಪೈಕಿ ಈ ಜಿಲ್ಲೆಯಲ್ಲಿ ೧ನ್ನು ಏರ್ಪಡಿಸಬೇಕಾಗಿ ಈ ಜಿಲ್ಲೆಯ ಸಹಕಾರಿಗಳು ಇಲಾಖಾ ಅಧಿಕಾರರೊಡನೆ ಕೇಳಿಕೊಂಡದ್ದು ಫಲಿತಕ್ಕೆ ಬರಲಿಲ್ಲ. ಆದರೆ ಈಚೆಗೆ ಇಂಥ ಬೇಂಕಿಗೆ ಅಗತ್ಯವಿರುವ ದ್ರವ್ಯಾನುಕೂಲವನ್ನು ಇಲ್ಲಿ ಒದಗಿಸಲು ಸಾಧ್ಯವಿದೆ ಎಂದು ಇಲ್ಲಿಯ ಸಹಕಾರಿಗಳು ರಿಜಿಸ್ಟ್ರಾರರವರಿಗೆ ಸ್ಪಷ್ಟವಾಗಿ ತಿಳಿಸಿದ್ದರಿಂದ ಇಲ್ಲೊಂದು ಬೇಂಕನ್ನು ಸ್ಥಾಪಿಸಲಿಕ್ಕೆ ಅವರು ಒಪ್ಪಿದ್ದಾರೆ.

ಈ ಬೇಂಕು ಈಗ ಮಂಗಳೂರಲ್ಲಿ ಬೇಗನೆ ಸ್ಥಾಪನೆಯಾಗುವುದು. ಗಳೂರಿನ ಜೋಯಿಂಟ್ ಸಬ್ ರಿಜಿಸ್ಟ್ರಾರರ ಅಧಿಕಾರವು ವ್ಯಾಪಿಸಿರುವ ಗೆ ಇದರ ವ್ಯವಹಾರ ಕ್ಷೇತ್ರವು ವ್ಯಾಪಿಸುವುದು. ಈ ವ್ಯವಹಾರ ಳಗೆ ಇರುವ ಯಾವನೊಬ್ಬ ಸ್ಥಿರಾಸ್ತಿಯುಳ್ಳ ಮನುಷ್ಯನು ತನ್ನ ನ್ನು ಪೂರೈಸಲಿಕ್ಕೆ ಮಾಡಿದ ಅದವನ್ನು ರದ್ದುಪಡಿಸುವದಕ್ಕಾಗಿ ಸ್ಥಿರಾಸ್ತಿಯನ್ನು ರೂಪಿತಮಾಡುವುದಕ್ಕಾಗಿ ಈ ಬೇಂಕಿನಿಂದ ಬಹುದು. ಇದನ್ನು ಪೂರೈಸುವುದಕ್ಕೆ ಆಯಾಯ ಸಂಗತಿ ೨೦ ವರ್ಷದ ವರೆಗಿನ ವಾಯಿದೆ ಸಿಗುವುದು. ಯಾವ ಗೂ ಈಗ ತತ್ಕಾಲಕ್ಕೆ ೫ ಸಾವಿರಕ್ಕೆ ಮಿಕ್ಕಿ ಸಾಲ ಹೊಸ ಆಸ್ತಿಯನ್ನು ಕೊಂಡುಕೊಳ್ಳುವುದಕ್ಕೆ ಸಾಲವು ಮೆಂಬರರಿಗೆ ಮಾತ್ರ ಈ ಬೇಂಕಿನಿಂದ ಸಾಲ ಬರೇ ಹತ್ತು ರೂಪಾಯಿ. ಸಂಘದ ಜವಾಬ್ದಾ ೯ ೧ರಿಂದ ಮೆಂಬರರಾಗಲಿಕ್ಕೆ ಏನೊಂದು ಬಗೆಯ ರಂತೆ ಬಡ್ಡಿಯ ದರವನ್ನು ಇಡುವರು.

ನುಕೂಲವನ್ನು ಡಿಬೆಂಚರ್ ಸಾಲ ಪತ್ರಗಳ ಗುವುದು. ಡಿಬೆಂಚರ್ ಸಾಲಪತ್ರಗಳೆಂದರೆ, ಅವಧಿಗಾಗಿ ಬರೆಕೊಡುವಂಥಾ ಡಿಮಾಂಡ್ ೦, ೧೦೦, ೨೫೦, ೫೦೦, ೧೦೦೦ ಮೌಲ್ಯದ ಂಕು ಮಾರಾಟಕ್ಕೆ ಇಡುವುದು. ಅವರ ೧ ಶ್ರೀಮಂತರೂ, ಜನ ಸಾಮಾನ್ಯರೂ ಈ ಡುಕೊಳ್ಳಬಹುದು. ಅವರಿಗೆ ಆ ಸಾಲ ಪತ್ರದ ಸೇಕಡಾ ೭ರಂತೆ ಬಡ್ಡಿಯು ಸಿಗುವುದು. ಗೆ ಭದ್ರವಾದ ಠೇವಣಾತಿಗಳನ್ನು ಮಾಡ ಬಿದೆ.

ಗಳು ಸಂಕ್ಷನ್ ಆಗಿವೆಯೋ ಅಷ್ಟು ಈ ಸಂಘದ ಆಡಳಿತ ಸಭೆಯವರು ಸಿಸ್ಟಾಂಟ್ ರಿಜಿಸ್ಟ್ರಾರರ ಬಳಿಯಲ್ಲಿ ಸರಿಯಾದ ಡಿಬೆಂಚರ್ ಸಾಲ ಪತ್ರ ಸ್ಟ್ರಾರರು ಮಾರಾಟಕ್ಕೆ ಇಡುವರು; ಹೊರಡಿಸುವರು. ಹಣ ಸಂಚಯ ಸ್ಟಾಂಟ್ ರಿಜಿಸ್ಟ್ರಾರರಿಂದ ತಮ್ಮ ಪತ್ರಗಳನ್ನು ಕೊಂಡುಕೊಳ್ಳಬೇಕು. ು ಸದರಿ ಬೇಂಕಿಗೆ ಒಪ್ಪಿಸಿ, ಆ ಮೆಂಬರರಿಗೆ ಸಿಗುವಂತೆ ಏರ್ಪಡಿಸು ಇದ್ದ ಮನುಷ್ಯನಿಗೂ ಆ ನೋಟು ಂತೆ ಸರಾಗವಾಗಿ ಬಡ್ಡಿ ಸಿಕ್ಕು ಮನು ಪಡಕೊಳ್ಳು ನೋಟುಗಿನ ಸಾಲಸಿಗುವ ಕಾರಣ ನಿಧಾನಯನ್ನು ಉಪಯೋಗಿಸಿಕೊಳ್ಳುವದಕ್ಕೆ

ಬರುವ ಆಗೋಸ್ಟು ತಿಂಗಳಲ್ಲಿ ಸಿನಲ್ಲಿ ಸಭೆಯು ಜರಗಲಿಕ್ಕಿದೆ. ಪ್ರಕಟನೆಯಾಗುವುದು. ವಿಶೇಷ ಕಿನ ಮಂಗಳೂರು ಬ್ರೆಂಚಿನ ಮ್ಯಾನೇಜರವರ ಹತ್ತಿರ ದೊರೆ.

ಬಿ. ಎ. ಎಲ್. ಟಿ.
ಮಂಗಳೂರು

ಮಂ.
ಹಳ್ಳಿಗ
ಕ್ಷೇತ್ರದೊ
ಹಳೇ ಸಾಲ
ಅಥವಾ ತನ್ನ
ಸಾಲಪಡಕೊ
ಯಾನುಸಾ15
ನೊಬ್ಬ
ಕೊಡಲ
ಇದರ
ಸಿಗ.
ರಿ
ಗಾಢ ಇಂದ
ಹಸ್ತೊಲ್ಲ
ದ್ರವ 4
ಮಹಸಲ 8
ಸಂಘವ್ಯಾ
ನೋಕಾ.
ಸಾ ಬೇ
ದ್ವಿತೀಯಾ
ಸಾಗಿಗೆ ಕೊ
ವಾ ಗೆಂಪ್ರತಿ
ಸ್ಪ ಕೊಡ ಈ
ಲಾ ಅನುಕ

ಕ.
ವಿರಣ ಕೈಯೂ,
ಪ್ರೀತಿಯಿಂದ
ನೆ. ಟ. ಖ. 9
ಕಂಪೆನಿ, ಗಿರಗಾ
ಡಿ. ಊಲನ್

sed anyone
Watches?



dial watch
an figures.

ಎಷ್ಟು ಸಾಲ
ಸ್ತ್ರಾವೇಜುಗಳನ್ನು
ಒಪರೇಟಿವ್
ಆ ಮಾಲ್ಯಕ್ಕೆ
ಸಿಸ್ಟಾಂಟ್ ರಿಜ
ಪ್ರಕಟಣೆಯನ್ನು
ವವರು ಸದರಿ ಅ
ಸರಿಯಾದ ಬೆಲೆಯ
ಸ್ಟಂಟ್ ರಿಜಿಸ್ಟ್ರಾರರವ
ಸೆಂಕ್ಷನ್ ಆದ ಮೆ
ಂದ ಸಣ್ಣ ನೋಟುಗ
ವಿನಿಂದ ಸೇಕಡಾ
ಕೊಳ್ಳುವವನಿಗೂ ಅ
ಳ ವಾಯಿದೆಯಿಂದ
ಪೂರೈಸಿ, ತನ್ನ
ಉಪಾಯ.
ಸ್ಥಾಪನೆಯ ಬಗ್ಗೆ
ಬೇಂಕಿನ ಬ್ರೆಂಚ್
ಲದಲ್ಲಿ ಪತ್ರಿಕೆಗಳಲ್ಲಿ
ಸದರಿ ಸೆಂಟ್ರಲ್
ಭಾ ಈ ಕೆಳಗೆ
ತಿಳಕೊಳ್ಳಬಹುದು.

ark nights
movement
Used by
9—0.

nism
and
long

ave good number
ite for a descripti

MPORTERS

ATCH CO
POST BO

ವಿದೇಶವರ್ತಮಾನ.

—ಹಿಂದುಸ್ಥಾನದಲ್ಲಿ ಕಮ್ಯುನಿಸ್ಟ ಪಕ್ಷದವರ ಕಾರಭಾರವು ಬಹಿರಂಗವಾಗಿ ನಡಿಯುತ್ತಿದೆ; ಈ ಚಳವಳಿಕ್ಕೆ ತನಗೆ ಸಂಬಂಧವುಂಟೆಂದು ಪಾರ್ಲಿಮೆಂಟಿನಲ್ಲಿ ಹಿಂದಿ ಸಭಾಸದರಾದ ಮಿ। ಸಕಲಾತವಾಲರು ಹೇಳಿದರು.

—ಆಸ್ತ್ರಿಯಾ ಮತ್ತು ಜರ್ಮನಿ ಇವರಲ್ಲಿ ಐಕ್ಯವುಂಟಾಗುವ ಪ್ರಸ್ತಾಪವು ನಡೆಯುತ್ತಿದ್ದದ್ದು ಯುಗೋಸ್ಲಾವಿಯಕ್ಕೆ ಭಯವುಂಟಾಗಿದೆ.

—ಆಸ್ಟ್ರೇಲಿಯದ ಬಂದರದ ವಖಾರೆಗಳಲ್ಲಿ ಮುಷ್ಕರವು ಬಿದ್ದಿರುವುದು. ಮತ್ತು ಅದು ಎಲ್ಲ ದೇಶಗಳಲ್ಲಿ ಹಬ್ಬುತ್ತ ಇದೆ. ಇದುವರೆಗೆ ೩೦ ಹಡಗಗಳು ಖಾಲಿಬಿದ್ದಿರುವವು

—ಬ್ರಿಟಿಷ್ ಸಾಮ್ರಾಜ್ಯದಲ್ಲಿ ಇಂಗ್ಲಂಡಿನ ಮಾಲಿನ ಪ್ರಸಾರವನ್ನು ಮಾಡುವುದಕ್ಕಾಗಿ ಲಂಡನಿನಲ್ಲಿ ಒಂದು ಸಂಘವು ಸ್ಥಾಪಿತವಾಗಿದೆ. ಲೋರ್ಡ ವಿಲಿಂಗ್‌ಡನ್, ಬರ್ನವುಡ್ ಮುಂತಾದವರು ಈ ಸಂಘದಲ್ಲಿ ಇದ್ದಾರೆ.

—ಬರುವ ಸಪ್ಟಂಬರಿನಲ್ಲಿ ರಾಷ್ಟ್ರಸಂಘದ ಅಧಿವೇಶನವು ಸೇರಲಿರುವುದು. ಅದಕ್ಕೆ ವೈಕೌಂಟ ವಿಲಿಂಗ್‌ಡನ್, ಪಟಿಯಾಳದ ಮಹಾರಾಜರು, ಸರ್ ಅತುಲ ಚಂದ್ರ ಚಟರ್ಜಿ ಇವರು ಹಿಂದುಸ್ಥಾನದ ಕಡೆಯಿಂದ ಪ್ರತಿನಿಧಿಗಳಾಗಿ ನೇಮಕಪಟ್ಟಿರುವರು।

—ಇಜಿಪ್ತಿನಲ್ಲಿಯ ಚಿತ್ರಲಿಪಿಯ ಮಾಹಿತಿಯನ್ನು ಮಾಡಿಕೊಡುವುದಕ್ಕಾಗಿ ಜರ್ಮನ್ ಮತ್ತು ಅಮೇರಿಕನ್ ವಿದ್ವಾಂಸರು ಒಂದು ಕೋಶವನ್ನು ತಯಾರಿಸುವವರಿದ್ದಾರೆ.

—ಮುಖ್ಯ ಮಂತ್ರಿಗಳಾದ ಮಿ। ಬಾಲ್ಡವಿನರು ಒಂದು ಉಪನ್ಯಾಸದಲ್ಲಿ ಜರ್ಮನರು ಒಪ್ಪಂದದ ಶರ್ತಗಳನ್ನು ಪೂರಯಿಸುವುದರಲ್ಲಿ ದ್ವಾರೆಂದೂ ಅವರು ರಾಷ್ಟ್ರಸಂಘಕ್ಕೆ ಸೇರುವುದು ಉಚಿತವೆಂದೂ ಹೇಳಿದರು.

—ಹೊಂಗಕೊಂಗಿನಲ್ಲಿ ಉಂಟಾದ ಮುಷ್ಕರವು ಈಗ ಐದು ವಾರಗಳ ನಂತರ ನಿಷ್ಫಲವೆಂದು ಕಂಡುಬಂದದರಿಂದ ಕೆಲಸದವರು ತಮ್ಮ ತಮ್ಮ ಕೆಲಸಗಳನ್ನು ಕೈಕೊಳ್ಳುತ್ತಿದ್ದಾರೆಂದು ವಾರ್ತೆ ಬಂದಿದೆ.

—ಸಿರಿಯಾದಲ್ಲಿ ಬೋಹಮರಿಯಾ ಎಂಬಲ್ಲಿ ೪೦೦ ಅರಬ ಜನರು ಬಂದು ಆ ಪಟ್ಟಣವನ್ನು ಮುತ್ತಿದರು. ಆದರೆ ಫ್ರೆಂಚ್ ಸೈನ್ಯದವರು ಅವರನ್ನು ಹಿಂದಕ್ಕಟ್ಟಿದರು. ಆದರೂ ದಂಗೆಗಾರರು ಪೇಟೆಯನ್ನೆಲ್ಲ ಸೂರೆ ಮಾಡಿದರು. ಎರಡೂ ಪಕ್ಷಗಳಲ್ಲಿ ಮರಣಗಳು ಸಂಭವಿಸಿವೆ. ಇಬ್ಬರು ಹಿಂದಿ ಕಾರಕೂನರಿಗೆ ಗಾಯವುಂಟಾಗಿದೆ. ಬೇರೆ ಬ್ರಿಟಿಷ್ ಪ್ರಜೆಗೆ ಅಪಾಯ ಸಂಭವಿಸಿಲ್ಲ.

—ಫ್ರಾನ್ಸಿನವರದೂ, ಸ್ಪೇನಿನವರದೂ ನಡೆಯುತ್ತಿರುವ ಆಲೋಚನಾ ಸಭೆಯು ಮುಗಿಯಿತು. ಫ್ರಾನ್ಸ ಮತ್ತು ಸ್ಪೇನ ಇವು ಪ್ರತ್ಯೇಕವಾಗಿಯೆ ಒಪ್ಪಂದವನ್ನು ಮಾಡಲಿಕ್ಕಿಲ್ಲವೆಂದು ನಿರ್ಣಯವಾಗಿದೆ.

—ಲೋರ್ಡ ಒಲಿವಿಯರರು ಒಂದು ಸಂದರ್ಭದಲ್ಲಿ ಸ್ವರಾಜಿಸ್ಟರು ಲಂಚಕೊಡುತ್ತಾರೆಂದು ಆಲೋಚನೆಯನ್ನು ಮಾಡಿದರು. ವಿಲಾಯತಿಗೆ ಹೋಗಿದ್ದ ಚಿಮನಲಾಲರೆಂಬ ಸ್ವರಾಜ್ಯ ಪಕ್ಷದ ಸಭಾಸದರೊಬ್ಬರು ಒಲಿವಿಯರರನ್ನು ಈ ವಿಷಯವನ್ನು ಸಾಕ್ಷಿಪುರಸ್ಸರವಾಗಿ ಸಮರ್ಥಿಸಬೇಕೆಂದು ಕೇಳಿದಲ್ಲಿ ಸಾಕ್ಷಿಯುಂಟು, ಈ ವಿಷಯವನ್ನು ದಾಸರು ಒಪ್ಪಿಕೊಂಡಿದ್ದಾರೆಂದು ದಾಸರ ಸ್ನೇಹಿತರೆ ಹೇಳಿರುವರು, ಆದರೆ ಆ ಸ್ನೇಹಿತರು ಯಾರೆಂಬುದನ್ನು ಮಾತ್ರ ಹೇಳಲಾಗುವುದಿಲ್ಲವೆಂದು ಉತ್ತರಕೊಟ್ಟ ಬಳಿಕ ಪುನಃ ಚಿಮನಲಾಲರು ಒಲಿವಿಯರರನ್ನು ಅವರು ಹೇಳಿದ ಮಾತನ್ನು ಸಮರ್ಥಿಸಲು ಆಹ್ವಾನ ಮಾಡಿರುವರು. ಆದರೆ ಒಲಿವಿಯರರು ಈಗ ತಪ್ಪಿಸಿಕೊಳ್ಳುತ್ತಿದ್ದಾರೆ!

—ಲೋರ್ಡ ರೆಡಿಂಗ ಸಾಹೇಬರು ತಾ. ೨೩ರಲ್ಲಿ ವಿಲಾಯತಿಯಿಂದ ಹೊರಟಿರುವರು. ಇವರು ವಿಲಾಯತಿಯೊಳಗಿನ ವಿಕ್ಟೋರಿಯಾ ಸ್ಟೇಶನನ್ನು ಬಿಡುವಾಗ ಇವರನ್ನು ಕಳುಹಿಸಿಕೊಡಲು ಬಂದಿದ್ದ ದೊಡ್ಡ ದೊಡ್ಡ ಜನರಲ್ಲಿ ಬಾಲ್ಡ್‌ವಿನ್ (ಮುಖ್ಯಮಂತ್ರಿಗಳು), ಅರ್ಲ ಬರ್ಕನ್ ಹೆಡ್ಡ್, ಸರ್ ರೋಬರ್ಟ ಹೋರ್ನ, ಸರ್ ಅತುಲ ಚಾಟರ್ಜಿ ಮುಂತಾದವರು ಇದ್ದರು. ಇವರ ನಿರ್ಗಮನವನ್ನು ಎಲ್ಲರೂ ಸದಿಚ್ಛೆಯಿಂದ ವ್ಯಕ್ತಗೊಳಿಸಿದರು.

—ವ್ಯಾಪಾರ ವಿಷಯಕ ಸಂಪೂರ್ಣ ಸ್ವಾತಂತ್ರ್ಯವು ತನಗಿರಬೇಕೆಂದು ಚೀನಾದೇಶವು ಹೇಳುತ್ತದೆ.

—ರಬ್ಬರಿನ ವ್ಯಾಪಾರವು ತಗ್ಗಿಹೋದದ್ದರಿಂದ ವಿಲಾಯತಿಯ ಪಾರ್ಲಿಮೆಂಟಿನಲ್ಲಿ ಸವಾಲುಜವಾಬುಗಳು ನಡೆಯುತ್ತಿವೆ.

—ದಕ್ಷಿಣ ಆಫ್ರಿಕದಲ್ಲಿ ಏಶಿಯಾಟಿಕ ಜನರ ಸಲುವಾಗಿ ಇನ್ನೊಂದು ಬಿಲನ್ನು ಅಲ್ಲಿಯ ಎಸೆಂಬ್ಲಿಯಲ್ಲಿ ತರುವವರಿದ್ದಾರೆ.

ಒಳದೇಶ ವರ್ತಮಾನ.

—ವಿಜಾಪುರದಲ್ಲಿ ಕನ್ನಡಿಗರ ಸಭೆಸೇರಿ ಕರ್ನಾಟಕ ಏಕೀಕರಣ ದ ಶಾಖೆಯು ಸ್ಥಾಪನೆಯಾಗಿದೆ. ಶ್ರೀ। ಕಂಭಾವಿ ರಾಘವೇಂದ್ರ ರಾಯರು ಶಾಖೆಯ ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವರು. ಸೊಲ್ಲಾಪುರ ಜಿಲ್ಲೆಗೆ ಸೇರಿದ ಕನ್ನಡ ನಾಡನ್ನು ವಿಜಾಪುರಕ್ಕೆ ಸೇರಿಸಿಕೊಳ್ಳುವರೆ ಉಪಾಯ ಯೋಜನೆ ಮಾಡಬೇಕೆಂದು ನಿರ್ಣಯವಾಗಿದೆ.

—ಬೆಂಗಳೂರ ಮುನಿಸಿಪಾಲಿಟಿಯವರು ತಮ್ಮ ಪ್ರಾಥಮಿಕ ಶಾಲೆಗಳಲ್ಲಿ ನೂಲುವ ಶಿಕ್ಷಣ ಕೊಡಬೇಕೆಂದು ನಿರ್ಧರಿಸಿರುವರು. ಸದ್ಯಕ್ಕೆ ಕಿಲಾರಿ ರೋಡಿನ ಶಾಲೆಯಲ್ಲಿಯೂ, ಚಿಕ್ಕಪೇಟೆಯೊಳಗಿನ ಬಾಲಿಕೆಯರ ಶಾಲೆಯಲ್ಲಿಯೂ ನೂಲುವ ಶಿಕ್ಷಣ ಕೊಡುವರೇ ೩೦೦ ರೂಪಾಯಿಗಳನ್ನು ಮಂಜೂರುಮಾಡಿಕೊಂಡಿರುವರು.

—ಶ್ರೀಕ್ಷೇತ್ರ ನಾಸಿಕದಲ್ಲಿ ಪಂಚವಟಿಯೊಳಗೆ ಶ್ರೀ ರಾಮನಾಮಾಧಾರ ಆಶ್ರಮವು ಹೊರಟಿದೆ. ಚಾಲಕರು ಶ್ರೀ ವಿಷ್ಣು ದಿಗಂಬರ ಪಲೂಸ ಕರರವರು; ಕಳೆದ ೩ ವರುಷಗಳಿಂದ ಈ ಆಶ್ರಮದಲ್ಲಿ ಬಡ ಹುಡುಗರು ಶ್ರೀ ರಾಮನಾಮ ಘೋಷವನ್ನು ನಡಿಸುತ್ತಿದ್ದಾರೆ. ಶ್ರೀ ಕಾಶೀಕ್ಷೇತ್ರದ ಸುಶೀಲಾ ದೇವಿಯವರು ಈ ಸಂಸ್ಥೆಗೆ ೧೫೦೦ ರೂಪಾಯಿ ಕೊಟ್ಟಿರುವರು.

—ಬಿಹಾರ ಪ್ರಾಂತದೊಳಗಿನ ಸೋನಾಪುರ ಸಂಸ್ಥಾನದ ಮಹಾರಾಜರು ತಮ್ಮ ಸ್ವಂತ ಬೊಕ್ಕಸದೊಳಗಿಂದ ೧೦ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಒಂದು ಅನಾಥ ಗೃಹ, ನೂಲುವಿಕೆಗಳ ಯೋಜನೆ, ಬರಗಾಲ ನಿವಾರಣೆ, ವಿದ್ಯಾಪ್ರಸಾರ ಮುಂತಾದ ಲೋಕೋಪಯುಕ್ತ ಕಾರ್ಯಗಳನ್ನು ಮಾಡಬೇಕೆಂದು ವಿಧಿಸಿರುವರು. ಇದಲ್ಲದೆ ಸಂಸ್ಥಾನದಲ್ಲಿ ಪ್ರಾಥಮಿಕ ಶಿಕ್ಷಣವು ಒತ್ತಾಯದಿಂದ ಕೊಡಲ್ಪಡುತ್ತದೆ. ಮಹಾರಾಣಿಯವರು ಉಚ್ಚ ಶಿಕ್ಷಣ ಹೊಂದುವವರ ಬಗ್ಗೆ ತಮ್ಮ ೨ ಲಕ್ಷ ರೂಪಾಯಿಗಳನ್ನು ಕೊಟ್ಟಿರುವರು.

—ಕಲಕತ್ತೆಯಲ್ಲಿ ಅಗ್ರವಾಲ ಜಾತಿಯವನೊಬ್ಬನು ತನ್ನ ಮಗಳನ್ನು ಮಾರಿದನು. ಮಗಳ ಕ್ರಯ ರೂಪಾಯಿ ೨,೫೦೦. ಮಾರಿದ್ದು ೪೦ ವರ್ಷ ಮುದುಕನಿಗೆ. ಹುಡುಗಿಯ ಪ್ರಾಯವು ಬರೇ ೧೦ ವರುಷ.

—ಮದ್ರಾಸ ಪ್ರಾಂತದ ಎಲ್ಲೂರು ಗ್ರಾಮದಲ್ಲಿ ಜನುಗಾದ ಖಾದಿ ತಯಾರಾಗಹತ್ತಿದೆ. ಅಲ್ಲಿಯ ಖಾದಿ ಅಮೇರಿಕೆಯ ಒಬ್ಬ ಸ್ತ್ರೀಗೆ ಕಳಿಸಿಕೊಟ್ಟಿತ್ತು. ಅವಳು ಅದರ ನೂಲಿನ ನುಣುಪು, ನೆಯ್ಗೆ, ಸೊಗಸು ನೋಡಿ ಬಹು ಸಂತೋಷಪಟ್ಟಳಂತೆ.

—ಆದ್ಯ ಶ್ರೀ ಶಂಕರಾಚಾರ್ಯರ ಚರಿತ್ರೆಯನ್ನು ಬರೆಯುವವರಿಗೆ ನಾಸಿಕದ ಕರವೀರ ಪೀಠದ ಶ್ರೀ ಶಂಕರಾಚಾರ್ಯರು ಮೂರು ಪಾರಿತೋಷಕಗಳನ್ನಿಟ್ಟಿರುವರು. ಮೊದಲನೇದು ೨॥ ಸಾವಿರ ರೂಪಾಯಿಗಳದ್ದು; ೨ನೇದು ೧॥ ಸಾವಿರದ್ದು; ೩ನೇದು ೧ ಸಾವಿರ ರೂಪಾಯಿಗಳದ್ದು.

—ಧಾರವಾಡದ ಶುಕ್ರವಾರ ಪೇಟೆ ಬಸ್ತಿ ಓಣಿಯ ಹತ್ತರ ಇರುವ ಒಂದು ಮನೆಯಲ್ಲಿ ಕುಂಬಳ ಬಳ್ಳಿಯನ್ನು ನೋಡಲು ಸಾವಿರಾರು ಮಂದಿಗಳು ಹೋಗುತ್ತಿರುವರು. ಈ ಕುಂಬಳ ಬಳ್ಳಿಗೆ ನಾಗರಹಾವಿನ ಹೆಡೆಯಂಥ ಒಂದು ಎಲೆ ಬಿಟ್ಟಿದೆ. ಎಲೆಯ ತಲೆಯಮೇಲಿನ ಕುಸುರುಗಳು ಕಣ್ಣದೆಲಿನಂತೆ ಹೊಳೆಯುತ್ತವೆ, ಬೇಟಿನಲ್ಲಿರುವ ಬಿಳೀ ಗೆರೆಗಳಿಗೆ ಹೆಡೆಯ ಹೊಟ್ಟೆಯಲ್ಲಿರುವ ಗೆರೆಗಳಂತೆ ಹೊಳಪಿದೆ.

—ಲಂಡನಿನಲ್ಲಿ ಹೊಸದೊಂದು ಶೋಧ ನಡೆದದೆ. ಕೃತ್ರಿಮ ಬೆಳದಿಂಗಳನ್ನು ತಯಾರಿಸಿ, ಅವುಗಳಿಂದ ಇರುಳಿನಲ್ಲಿ ಮಾರ್ಗಗಳನ್ನು ಬೆಳಕಿಸುವ ಉಪಾಯ.

—ಗದಗದ ಶ್ರೀ ದತ್ತಾತ್ರಯ ನಾಟಕ ಕಂಪೆನಿಯವರು ಧಾರವಾಡದಲ್ಲಿ 'ಪಾದುಕಾ ಪಟ್ಟಾಭಿಷೇಕ' ಪ್ರಯೋಗಮಾಡಿ ಬಂದ ಉತ್ಪನ್ನವನ್ನೆಲ್ಲ ಅಲ್ಲಿಯ ರಾಷ್ಟ್ರೀಯ ಶಾಲೆಗೆ ಅರ್ಪಿಸಿದರು.

—ಕೋರಿಯಾ ದೇಶದಲ್ಲಿರುವ ಬಿಕಟೋ ನದಿಯಲ್ಲಿ ಪ್ರವಾಹವು ಮಿತಿಮೀರಿ ಬಂದು, ೩೦೦೦ ಜನಗಳ ಪ್ರಾಣಾಪಹಾರವನ್ನು ಮಾಡಿತು.

—ಸಿಲೋನ್ ದೇಶದವರು ತಮ್ಮ ರೇಲ್ವೆಗೋಸ್ಕರವಾಗಿ ಹಿಂದೂಸ್ಥಾನದಿಂದ ಕಲ್ಲಿದ್ದಲ್ಲನ್ನು ಕೊಂಡುಕೊಳ್ಳಬೇಕೆಂದು ನಿರ್ಧರಮಾಡಿಕೊಂಡಿರುವರು.

—ಚೀನಾ ಮಿಲಿಟರಿ ಅಧಿಕಾರಿಗಳು ರಷ್ಯಾ ದೇಶದವರ ಸಹಾಯದಿಂದ ವಿಷದ ಹಬೆಯನ್ನು ತಯಾರು ಮಾಡುವುದಕ್ಕೆ ಉಪಕ್ರಮಿಸಿರುವರೆಂದು ಹೇಳಲ್ಪಟ್ಟಿದೆ.

—ಕೊಕೈನ್ ಎಂಬ ಪದಾರ್ಥಕ್ಕೆ ಬದಲಾಗಿ ಮತ್ತೊಂದು ಹೊಸ ಪದಾರ್ಥವನ್ನು, ಕೇಂಬ್ರಿಡ್ಜಿನ ಡಾಕ್ಟರವರು ಕಂಡು ಹಿಡಿದಿರುವರು. ಈ ನೂತನ ಪದಾರ್ಥದಲ್ಲಿ, ಕೋಕೈನಿನಲ್ಲಿರುವ ಯಾವ ದುರ್ಗುಣವೂ ಇರುವುದಿಲ್ಲ.

—ಚೀನಾ ದೇಶದ ಸೈನ್ಯದ ಇಲಾಖೆಯವರು ವಿಷಗಾಳಿಯನ್ನು ತಯಾರುಮಾಡುವುದಕ್ಕೆ ಒಬ್ಬ ಜರ್ಮನ್ ರಸಾಯನ ಶಾಸ್ತ್ರಜ್ಞನನ್ನು ನೇಮಿಸಿರುವರೆಂದು ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಸರ್ ಲ್ಯಾಮಿಂಗ್ ವರ್ಥಿಂಗ್ಟನ್ ಇವಾನ್ಸರವರು ಹೇಳಿರುವರು.

—ಕಾಥಲಾಲ್ ಎಂಬುದು ಗುಜರಾತಿನಲ್ಲಿ ಒಂದು ಸಣ್ಣ ಗ್ರಾಮ. ಅಸಹಕಾರ ಸ್ಥಾಪನೆಯಾದಾರಭ್ಯದಿಂದ ಇಲ್ಲಿ ಜನಗಳು, ಖಾದಿಯನ್ನು ವೃದ್ಧಿಗೆ ತರಲು ಪ್ರಯತ್ನಪಟ್ಟು, ತಮ್ಮ ಪ್ರಯತ್ನದಲ್ಲಿ ಜಯಶೀಲರಾಗಿರುತ್ತಾರೆ. ಇಲ್ಲಿ ಸಕಲರೂ ಖಾದಿಯನ್ನುಪಯೋಗಿಸುವರು. ಅಲ್ಲದೆ ಅಲ್ಪವಾದ ಬೆಲೆಗೆ ಉತ್ತಮವಾದ ಖಾದಿಯು ದೊರೆಯುವುದು.

—ಬಳ್ಳಾರಿ ಜಿಲ್ಲೆಯಲ್ಲಿ ಉತ್ತಮ ವರ್ಣದವರಿಗೆ ಮಾತ್ರವಿದ್ದ ಒಂದು ಬಾವಿಯಲ್ಲಿ ನೀರನ್ನು ಸೇದಲು ಮಾದಿಗ ಜಾತಿ ಪೋಲೀಸಿನವನು ಹೋದನು. ಸಬ್ ಇನ್ಸ್‌ಪೆಕ್ಟರಾದ ವೀರಪ್ಪಾಜಿಯವರು ಇದನ್ನು ಖಂಡನೆ ಮಾಡಲು, ಇವರನ್ನು ಅವನು ಖೂನಿ ಮಾಡಿದನು. ನ್ಯಾಯವಿಚಾರಣೆಯು ನಡೆದು ಅವನಿಗೆ ೭ ವರ್ಷ ಕಠಿಣ ಸಜಾ ವಿಧಿಸಲ್ಪಟ್ಟಿತು.

—ಕಳೆದ ಘೋರಯುದ್ಧದ ಸಮಾರಂಭದಲ್ಲಿ, ಅನೇಕ ನೂತನ ವಿಷಯಗಳು ಕಂಡು ಹಿಡಿಯಲ್ಪಟ್ಟವು. ಆಕಾಶ ವಿಮಾನಗಳು ಪ್ರಪಂಚಕ್ಕೆ ಬಂದವು. ಅನೇಕ ವಿಧವಾದ ಭೌತಿಕ ವಿಜ್ಞಾನ ವಿಷಯಗಳು ನಿರೂಪಣೆ ಮಾಡಲ್ಪಟ್ಟವು. ಶತ್ರು ಪಕ್ಷದವರ ಕಣ್ಣಿಗೆ ಕಾಣಿಸದ, ಆದರೆ ಕೆಲವು ಸಾಧನಗಳ ಸಹಾಯದಿಂದ ತಮ್ಮ ಪಂಗಡದವರಿಗೆ ಕಾಣಬಹುದಾದ ಒಂದು ವಿಧವಾದ ಬೆಳಕು ಕಂಡುಹಿಡಿಯಲ್ಪಟ್ಟಿತು. ಈ ವಿಷಯಗಳೆಲ್ಲವೂ ಈಗ ಕೈಗಾರಿಕೆಯ ಅಭಿವೃದ್ಧಿಗೆ ಸಾಧಕಗಳಾಗಿರುತ್ತವೆ.

—ಸೋಲಾಪುರದ ಮುನ್ಸಿಪಾಲಿಟಿಯು ಮುಂಬಯಿ ಗವರ್ನರ ಸಾಹೇಬರಿಗೆ ಎರಡು ಸಾವಿರ ರೂಪಾಯಿ ಖರ್ಚುಮಾಡಿ ಮಾನಪತ್ರವನ್ನು ಕೊಡಲು ನಿಶ್ಚಯಿಸಿದೆ.

—ಕಿದರಪೂರ ಕಿಂಗಜೋರ್ಜಡೊಕಿನಲ್ಲಿ ಕೆಲಸಮಾಡುತ್ತಿರುವಾಗ ಎಲ ಜನ ಕೂಲಿಯವರು ಪಕ್ಕನೆ ಮರಣಪಟ್ಟರು. ಇಲೆಕ್ಟ್ರಿಸಿಟಿಯ ಆಘಾತದಿಂದ ಮೃತಪಟ್ಟಿರಬಹುದೆಂದು ಹೇಳುತ್ತಾರೆ. ಈ ಅಪಘಾತವು ಯಾರ ತಪ್ಪಿನಿಂದ ಉಂಟಾಗಿದೆ ಎಂಬುವನ್ನು ಸರಕಾರವು ಜಾಹೀರಪಡಿಸಬೇಕೆಂದು ಪತ್ರಿಕೆಗಳು ಬರೆಯುತ್ತಿವೆ.

—ಟಾಟಾ ಕಂಪೆನಿಯವರು ಸೋಮವಾಡ ಎಂಬ ಸ್ಥಳದಲ್ಲಿ ಇಂದ್ರಿಯಾಣಿ ನದಿಗೆ ಕಟ್ಟಿದ್ದ ಅಣೆಕಟ್ಟು ಮಳೆಯ ರಭಸದಿಂದ ಒಡೆದು ಹೋಗಿ ನದಿಯಲ್ಲಿ ೨೦ ಅಡಿ ನೀರು ತಕ್ಷಣ ಜಾಸ್ತಿಯಾಯಿತೆಂತಲೂ, ಮತ್ತು ಖಂಡಾಲಾ ರೈಲ್ವೆ ಸ್ಟೇಶನ್ ಬಳಿ ರೈಲ್ವೆ ಲೈನಿನ ಮೇಲೆ ೩ ಅಡಿ ನೀರು ನಿಂತಿತ್ತೆಂತಲೂ, ಈ ಕಾರಣದಿಂದ ಬೊಂಬಾಯಿಂದ ಪೂನಾಕ್ಕೆ ಬರುವ ಮೈಲುಗಾಡಿಯು ಒಂದು ಗಂಟೆಗಿಂತ ಹೆಚ್ಚಾಗಿ ಸಾವಕಾಶವಾದಂತೆಯೂ ವರ್ತಮಾನವಿದೆ. ಇದೂ ಅಲ್ಲದೆ ಕೆಲವು ಹೆಂಗಸರೂ, ಮಕ್ಕಳುಗಳಿಗೂ, ದನಕರುಗಳಿಗೂ ಪ್ರಾಣನಷ್ಟವಾದಂತೆಂದೂ ವರ್ತಮಾನವಿದೆ.

ಶ್ರೀ। ಮಂಜಪ್ಪ ಹರ್ಡೇಕರ, ಹನುಮಂತರಾವ್ ಕೌಜಲಗಿ ಮತ್ತು ಟಿ. ಬಿ. ಪುರೋಹಿತರು ಬಿಜಾಪುರ ಜಿಲ್ಲೆಯ ಬೇರೆ ಬೇರೆ ಭಾಗಗಳಲ್ಲಿ ಖಾದಿ ಪ್ರಚಾರಕ್ಕಾಗಿ ಪ್ರವಾಸಮಾಡುತ್ತಿರುವರು.

—ಗುಲ್ಬರ್ಗೆಯಲ್ಲಿ ಪೋಲೀಸರ ಹೆಚ್ಚಿನ ಶಿಬಂದಿಯನ್ನು ಇಟ್ಟ ವಿಚಾರದಲ್ಲಿ ತನಿಖೆ ನಡಿಸಿದ ಕೋರ್ಟಿನ ಸಾಹೇಬರ ವರದಿಯು ಪ್ರಕಟವಾಗಿದೆ. ಚಿಂತಲ್‌ಚೆರುವು ಎಂಬ ಒಂದು ಹಳ್ಳಿಯಲ್ಲಿ ಮಾತ್ರ ಈ ಶಿಬಂದಿಯು ಅಗತ್ಯವಿದೆಯೆಂದು ಅವರು ಅಭಿಪ್ರಾಯವನ್ನು ಸೂಚಿಸಿರುವರು. ಅಲ್ಲಿಯ ಅಶಾಂತಿಗೆ ಅಧಿಕಾರಿಗಳ ಅಶಕ್ತಿಯೇ ಮೂಲ ಕಾರಣವೆಂದು ಅವರ ವರದಿಯಿಂದ ಸ್ಪಷ್ಟವಾಗುವುದರಿಂದ ಹೆಚ್ಚಿನ ಶಿಬಂದಿಯ ಖರ್ಚನ್ನು ಜನರ ಮೇಲೆ ಹೊಂಸುವುದರಲ್ಲಿ ನ್ಯಾಯವಿಲ್ಲ.

—ಮರಾಠೀ ಮಧ್ಯಪ್ರಾಂತ್ಯದ ಕಾಂಗ್ರೆಸ್ ಕಮಿಟಿಯವರು ಕಾನಪುರ ಕಾಂಗ್ರೆಸ್ಸಿನ ಅಧ್ಯಕ್ಷಸ್ಥಾನಕ್ಕೆ ಬಾಬು ಅರವಿಂದಘೋಷ, ಲಾಲಾ ಲಜಪತರಾಯ ಮತ್ತು ಎನ್. ಸಿ. ಕೇಳಕರ ಇವರ ಹೆಸರುಗಳನ್ನು ಸೂಚಿಸಿರುವರು. ಬೇರಾರ ಪ್ರಾಂತಿಕ ಕಮಿಟಿಯು ಶ್ರೀ। ಕೇಳಕರರ ಹೆಸರನ್ನು ಮಾತ್ರ ಸೂಚಿಸಿರುತ್ತದೆ. ಅಲ್ಲದೆ ಮುಂಬಯಿ ಮತ್ತು ಮಹಾರಾಷ್ಟ್ರ ಕಾಂಗ್ರೆಸ ಕಮಿಟಿಗಳು ಈ ಮೂವರ ಹೆಸರುಗಳನ್ನು ಸೂಚಿಸಿವೆ.

—ಕಲ್ಕತ್ತಾ ಕಾರ್ಪೊರೇಶನಿನವರು ದೇಶಬಂಧು ದಾಸರ ಸ್ಮಾರಕಕ್ಕಾಗಿ ಒಂದು ಲಕ್ಷ ರೂಪಾಯಿಗಳನ್ನು ಸೆಂಕ್ಷನ್ ಮಾಡಿರುವರು. ಅದನ್ನು ಯಾವ ರೀತಿಯಲ್ಲಿ ವಿನಿಯೋಗಿಸಬೇಕೆಂದು ನಿರ್ಣಯವಾಗಿಲ್ಲ.

—ತಮಿಳುನಾಡು ಪ್ರಾಂತಿಕ ಪರಿಷತ್ತನ್ನು ಮಹಾತ್ಮಾಜೀಯವರ ಅಧ್ಯಕ್ಷತೆಯಲ್ಲಿ ಜರಗಿಸುವ ಯೋಚನೆ ನಡೆದಿದೆ.

—ರೇಲ್ವೇ ಗಾಯಿಡ್‌ದನ್ನು ದೇಶೀಭಾಷೆಗಳಲ್ಲಿ ಪ್ರಕಟಿಸಬೇಕೆಂಬೀ ವಿಷಯ ಜಿ. ಆಯ್. ಪಿ. ರೈಲಿನ ಆಲೋಚನಾ ಮಂಡಲದಲ್ಲಿ ಚರ್ಚಿಸಿಬಂದು ಈ ಕೆಲಸಕ್ಕಾಗಿ ಖರ್ಚು ಎಷ್ಟು ಬಂದೀತೆಂಬುದನ್ನು ಇತ್ಯರ್ಥಿಸಲು ಒಂದು ಕಮಿಟಿಯು ನೇಮಕಪಟ್ಟಿದೆ.

—ಜಾಮನೇರದಲ್ಲಿ ಸೇರಲಿಕ್ಕಿರುವ ಪೂರ್ವಖಾನದೇಶ ಜಿಲ್ಲಾ ಪರಿಷತ್ತಿಗೆ ಮ. ಗಾಂಧಿಗಳನ್ನು ಅಧ್ಯಕ್ಷರನ್ನಾಗಿ ನೇಮಿಸಿರುವರು.

—ನಾಗಪುರ ಸೆಂಟ್ರಲ್ ಜೈಲಿನಲ್ಲಿ ನಿರಕ್ಷರ ಕೈದಿಗಳನ್ನು ಓದು ಬರಹ ಕಲಿಸಲು ಶ್ರೀ ಮಾಂಡೇ ಎಂಬವರು ಪ್ರಾರಂಭಿಸಿರುವರು.

—ಇಂದೂರ ರೆಸಿಡನ್ಸಿ ಕಾಂಗ್ರೆಸ್ ಕಮಿಟಿಯ ಮಾಜಿ ಸೆಕ್ರೆಟರಿಗಳಾದ ಛೋಟೇಲಾಲಾ ಕೇಶೀರಾಮ ಎಂಬವರು ಧಾರ ಎಂಬಲ್ಲಿ ಧಾರದ ಮಹಾರಾಜರಿಗೆ ಬರೆದ ಬಹಿರಂಗ ಪತ್ರವನ್ನು ಹಂಚುತ್ತಿರುವಾಗ ಅವರನ್ನು ಕೈದುಮಾಡಿದೆ. ಆ ಪತ್ರಕದಲ್ಲಿ ಸಂಸ್ಥಾನದ ಅವ್ಯವಸ್ಥಿತವಾದ ಕಾರಭಾರವನ್ನು ಟೀಕಿಸಿದ್ದಿತು.

—ಮದ್ರಾಸಿನಲ್ಲಿ ನವರೋಜಿ-ಗೋಖಲೇ ಹೋಲಿನಲ್ಲಿ ದೇ. ಬಂ. ದಾಸರವರ ಚಿತ್ರವು ಇಡಲ್ಪಟ್ಟಿದೆ.

ಪ್ರಿಯನಾಥ ಗಂಗುಳಿ ಮತ್ತು ಅಕ್ಷಯ ಕುಮಾರಗುಪ್ತ ಇವರಿಗೆ ರಾಜ್ಯಕ್ರಾಂತಿಯ ಅಭ್ಯಾಸಕವೆಂಬ ಪುಸ್ತಕವನ್ನು ಬರೆದದ್ದಕ್ಕಾಗಿಯೂ, ಪ್ರಕಟಿಸಿದ್ದಕ್ಕಾಗಿಯೂ, ಕ್ರಮವಾಗಿ ಆರು ಮತ್ತು ಮೂರು ತಿಂಗಳ ಕಠಿನ ಶಿಕ್ಷೆಯು ವಿಧಿಸಲ್ಪಟ್ಟಿದೆ.

—ಅಹಮದಾಬಾದಿನಲ್ಲಿ ಹಿಂದೂಮಹಮ್ಮದೀಯರಲ್ಲಿ ಹೊಡೆದಾಟವು ನಡೆಯಿತು. ಒಬ್ಬ ಹಿಂದು ಕೋಲಿಯ ಹುಡುಗನು ಒಂದು ದಿನ ಕಾಣೆಯಾದನು. ಬೋಹಾ (ಮಹಮ್ಮದೀಯರಲ್ಲಿ ಒಂದು ಭೇದ) ಜನರು ಆ ಹುಡುಗನನ್ನು ಬಲಿಕೊಡಲು ಒಯ್ದಿದ್ದಾರೆಂಬ ಸುದ್ದಿಯು ಬಂದದ್ದರಿಂದ ಕೋಲಿಗಳು ಮತ್ತು ಇತರ ಹಿಂದುಗಳು ಬೋಹಾಖಾನೆಯನ್ನು ಶೋಧಿಸಿರಿ ಎಂದು ಕೇಳಿದರು. ಆದರೆ ಅವರಿಗೆ ಬೋಹಾಖಾನೆಗಳು ಶೋಧಿಸಲ್ಪಡಲಿಲ್ಲ. ಈ ಕಾರಣದಿಂದ ಅವರಲ್ಲಿ ಇನ್ನಷ್ಟು ಕ್ಷೋಭವುಂಟಾಯಿತು. ಹಿಂದುಗಳೆಲ್ಲ ಒಟ್ಟಿಗೆ ಸೇರಿ ಬೋಹಾಜನರನ್ನು ಪೆಟ್ಟುಕೊಟ್ಟರು. ಅಷ್ಟರಲ್ಲಿ ಪೋಲಿಸರು ಬಂದು ಈ ಜನರನ್ನು ಚದರಿಸಿದರು. ಆದರೆ ಮಾರನೆ ದಿನ ಆ ಹುಡುಗನ ಪ್ರೇತವು ಆ ಹಳ್ಳಿಯಿಂದ ಒಂದು ಮೈಲು ದೂರದಲ್ಲಿ ಸಿಕ್ಕಿತು. ಆ ಪ್ರೇತದ ಹಣೆಯ ಮೇಲೆ ಮೂರು ಚೂರುಗಳು ಇದ್ದವು!

—ಈ ಗಲಾಟೆಯಾದ ಸ್ಥಳಕ್ಕೆ ಪೋಲಿಸ್ ಡ ಸುಪರಿಂಟೆಂಡೆಂಟ ಖಾನಬಹದೂರವರಿಯಾವಾ ಎಂಬವರು ಹೋಗಿ ಕೆಲವು ಹಿಂದುಗಳನ್ನು ಕೈದುಮಾಡಿದ್ದಾರೆ. ಆದರೆ ಜಾಮೀನಿನ ಮೇಲೆ ಬಿಟ್ಟಿದ್ದಾರೆ, ಪೋಲಿಸರ ತನಿಖೆಯು ನಡೆದಿದೆ. ಆದರೆ ಆ ಊರಿನ ಹಿಂದುಗಳು ಮತ್ತು ನೆರೆ ಹಳ್ಳಿಯವರು ಕೂಡ ಬೋಹಾಜನರ ಮೇಲೆ ಸಾಮಾಜಿಕ ಬಹಿಷ್ಕಾರವನ್ನು ಹಾಕಿರುವರು.

ಮಲಬಾರ್ ಪ್ರಾಂತ್ಯದಲ್ಲಿರುವ ಕುಲ್ ಕಲ್ಲೂರಿನಲ್ಲಿರುವ ಭಗವತೀ ದೇವಿಯ ದೇವಸ್ಥಾನದ ಬಾಗಿಲಿನ ಹತ್ತಿರ ಯಾರೋ ದುರಾತ್ಮರು ಒಂದು ಹಸುವನ್ನು ಕಡಿದು, ಅದರ ಶವವನ್ನು ಆ ದೇವಸ್ಥಾನದ ಪ್ರಾಕಾರದೊಳಗೆ ಬಿಸಾಕಿದ್ದರೆಂದೂ, ಈ ವಿಷಯದಲ್ಲಿ ಪೋಲೀಸಿನವರ ತನಿಖೆಯು ನಡೆಯುತ್ತಿದೆಯೆಂದೂ ಒಬ್ಬ ಬಾತ್ಮೀದಾರರು ಬರೆಯುತ್ತಾರೆ. ಕಳೆದ ಮಲಬಾರ್ ಗಲಾಟೆಯಲ್ಲಿ ಇಲ್ಲಿ ಯಾವ ಜಗಳಗಳೂ ಆಗಿರಲಿಲ್ಲ. ಈಗ ಪೋಲೀಸಿನವರು ಈ ವಿಷಯಕ್ಕೆ ತಮ್ಮ ಪೂರಾ ಗಮನವನ್ನು ಕೊಡುವರೆಂದು ನಂಬಲ್ಪಟ್ಟಿದೆ.

ಸಾಧ್ವಿ.

ದಕ್ಷಿಣ ಕನ್ನಡ.

ಕಾಸರಗೋಡು:—ತಾ. ೨೬-೭-'೨೫ರಲ್ಲು ಬೆಳಿಗ್ಗೆ ಇಲ್ಲಿಯ ರೈಲ್ವೇ ಆಫೀಸಿನ ಪ್ಲೆಟ್‌ಫೋರ್ಮಿನಲ್ಲಿ ಸಹಕಾರ ಸಂಘಗಳ ಡಿಪ್ಯುಟಿ ರಿಜಿಸ್ಟ್ರಾರರಾಗಿ ಕೊಯಮುತ್ತೂರಿಗೆ ಹೋದ ರಾ। ಗಿರಿಯಪ್ಪನವರಿಗೆ ಕೊ-ಒಪರೇಟಿವ್ ಸೆಂಟ್ರಲ್ ಬೇಂಕಿನ ವ ಕಾಸರಗೋಡು ಯೂನಿಯನಿನ ಡೈರೆಕ್ಟರರಾದ ರಾ। ಎಮ್. ಸಿ. ಮಮ್ಮಿಯವರಿಂದ ಯೂನಿಯನಿನ ಪರವಾಗಿ ಒಂದು ಟೀಪಾರ್ಟಿ ಸತ್ಕಾರ ಕೊಡೋಣಾಯಿತು. ಇದಕ್ಕೆ ಯೂನಿಯನಿನ ಪ್ರೆಸಿಡೆಂಟರೂ ಕಾರ್ಯದರ್ಶಿಗಳೂ ಸುಪರ್‌ವೈಸರೂ, ಇನ್ಸ್‌ಪೆಕ್ಟರೂ ಇತರ ಅನೇಕ ಸಹಕಾರಿಗಳೂ ಹಾಜರಿದ್ದರು. ಯೂನಿಯನಿನ ಅಧ್ಯಕ್ಷ ರಾ। ವಕೀಲ್ ಶ್ರೀನಿವಾಸ ಕಮ್ಮಿಯವರು ರಾ। ಗಿರಿಯಪ್ಪನವರಿಗೆ ಹೂಮಾಲೆ ಹಾಕಿ ಟೀಪಾರ್ಟಿ ಆದ ನಂತರ ತಕ್ಕಿಲ್ ಸಂಘದ ಅಧ್ಯಕ್ಷ ರಾ। ಚೆಮ್ನಾಡ್ ಎಮ್. ಎಲ್. ಎ. ರವರು ರಾ। ಗಿರಿಯಪ್ಪನವರ ಗುಣ ಇತ್ಯಾದಿಗಳನ್ನು ಕುರಿತು ಮಾತನಾಡಿ ಸಭೆ ಮುಕ್ತಾಯವಾಯಿತು.

ಅರಂತೋಡು:—ಈ ಗ್ರಾಮದ ಉಳುವಾರಲ್ಲಿ ತಾರೀಕು ೨೫-೭-'೨೫ನೇ ಶನಿವಾರ ಹಗಲು ಗಂಟೆ ೩ಕ್ಕೆ ದಕ್ಷಿಣ ಕನ್ನಡಾ ಗೌಡ ವಿದ್ಯಾವರ್ಧಕ ಸಂಘದ ಮಹಾ ಸಭೆಯು ಜರಗಿತು. ಸಭೆಗೆ ಸಂಘದ ಮೆಂಬರರೂ, ಹಿತಚಿಂತಕರೂ ಕೂಡಾ ೧೦೦ಕ್ಕಿಂತ ಹೆಚ್ಚು ಮಂದಿ ಮಹನೀಯರು ನೆರೆದಿದ್ದರು. ಸಭೆಯಲ್ಲಿ ಮುಖ್ಯವಾಗಿ ಅಗತ್ಯ ಕೆಲವು ನಿರ್ಣಯಗಳ ತಿದ್ದುಪಡಿಯನ್ನು ಮಾಡಿದುದಲ್ಲದೆ ಮೆಂಬರರಿಂದ ಬರತಕ್ಕ ಮಾಸಿಕ ಹೆಚ್ಚು ವಸೂಲಿ ಬಾಕಿ ಇರುವವರಿಂದ ವಸೂಲಿಗೆ ಅನುಕೂಲವಾಗುವ ರೀತಿ ಈಗ ಇರುವ ಆಡಳಿತ ಮೆಂಬರರ ಜೊತೆಯಲ್ಲಿ ವಸೂಲಿ ಪ್ರಯತ್ನ ಕೈಕೊಳ್ಳುವಂತೆ ಪ್ರತಿ ಪ್ರಾಂತ್ಯಕ್ಕೂ ಒಂದೊಂದು ಸಬ್ ಕಮಿಟಿಯನ್ನು ನೇಮಿಸಿದುದಲ್ಲದೆ ಸಂಘಕ್ಕೆ ಮೆಂಬರರಿಂದ ವಸೂಲ್ ಬಂದ ರೂಪಾಯಿ ತೊಂಬತ್ತನ್ನು ಸಹಕಾರ ಸಂಘದಲ್ಲಿ ನಿರಖು ಠೇವಣಾತಿಯಾಗಿ ಇಡುವಂತೆ ನಿರ್ಣಯಿಸಿ ಕಾರ್ಯದರ್ಶಿಯು ಸ್ವಾಧೀನ ಕೊಡೋಣಾಯಿತು ಕಳೆದ ಸಭೆ ಂದ ಬಡ ವಿದ್ಯಾರ್ಥಿ ಫಂಡಿಗೆ ವಸೂಲ್ ಬಂದ ರೂ. ೧೨—೦—ನ್ನು ಧಕ್ಕಾಧಿಲ್ಲಿರುವ ಬಡ ವಿದ್ಯಾರ್ಥಿ ಸಂಘದ ಕಾರ್ಯದರ್ಶಿಯವರಿಗೆ ಕಳುಹಿಸಿಕೊಡುವಂತೆ ನಿರ್ಣಯಿಸಲಾಯಿತು. ಇಲ್ಲಿಗೆ ದೇವರ ಸ್ಮರಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

ಅನುಕ್ರಮಣಿಕೆ.

ಅಗ್ರಲೇಖ ಪುಟಗಳು.
ಲಾಲಾಜಿಯವರ ವಿಚಾರಗಳು ೬
ಸ್ಫುಟವಿಚಾರಗಳು—
೧. ರಾಜಕೀಯ ತಂಡಗಳ ಐಕ್ಯ ,,
೨. ಮ. ಪ್ರಾಂ. ಕೌನ್ಸಿಲಿನ ಸಮಾಚಾರ ,,
೩. ಪಾರ್ಲಿಮೆಂಟಿನಲ್ಲಿ ಸವಾಲುಗಳೂ, ಜವಾಬುಗಳೂ, ೭
೪. ಮ. ಗಾಂಧಿಗಳ ಸರ್ವಮಾನ್ಯತೆ ,,
೫. ಪಂಡಿತ ಮೋತಿಲಾಲರ ಸ್ಕೀನ ಕಮಿಟಿಯಲ್ಲಿ ನೇಮಕ ,,
೬. ಮಂಗಳೂರು ಮುನ್ಸಿಪಾಲಿಟಿಯ ಚುನಾವಣೆ ,,
ಮಂಗಳೂರು
ವರ್ತಮಾನಸಂಗ್ರಹಗಳು—
ವಿದೇಶ — ಒಳದೇಶ ವರ್ತಮಾನ ೫
ದಕ್ಷಿಣ ಕನ್ನಡ — ಕಾಸರಗೋಡು, ಅರಂತೋಡು ,,
ಪತ್ರವ್ಯವಹಾರ — ೧, ೨ ೮
ವಿವಿಧವಿಷಯಗಳು ,,
ಕರ್ನಾಟಕ ಪ್ರಾಂತಿಕ ವಾಲಂಟಿಯರ್ ಬೋರ್ಡು ೪
ಸ್ಥಿರಾಸ್ತಿ ಅಡವಿನ ಮೇಲೆ ಸಾಲಕೊಡುವ ಬೇಂಕುಗಳು ,,

ಸ್ವದೇಶಾಭಿಮಾನಿ.

ಶಕ ೧೮೪೬ ಶ್ರಾವಣ ಶು| ೧೦ಯು ಶುಕ್ರವಾರ.

ಲಾಲಾಜಿಯವರ ವಿಚಾರಗಳು.

ಲಾಲಾ ಲಜಪತರಾಯರು ಲಾಹೋರಿನಲ್ಲಿ 'ಪೀಪಲ್' ಎಂಬ ವಾರಪತ್ರಿಕೆಯನ್ನು ಹೊರಡಿಸಿರುವರು. ಲಾಲಾಜಿಯವರ ರಾಜಕಾರಣದ ಪರಿಚಯವು ಹಿಂದುಸ್ಥಾನದ ಎಲ್ಲ ಮುಖಂಡರಿಗೆ ಮುಂಚಿನಿಂದಲೆ ಗೊತ್ತಿದೆ. ಇವರು ಅಧಿಕಾರಿವರ್ಗದ ಅನುಗ್ರಹವನ್ನು ಅಪೇಕ್ಷಿಸತಕ್ಕವರಲ್ಲ. ಸಪ್ರೈತಂಡಕ್ಕೆ ಸೇರಿದವರಲ್ಲ. ವಿನಂತಿ, ಅರ್ಜಿ, ವಿಜ್ಞಾಪನೆ ಇತ್ಯಾದಿ ಸ್ವಾಭಿಮಾನಾಪಕರ್ಷಕ ಸಾಧನಗಳನ್ನು ಕೈಕೊಳ್ಳುವವರಲ್ಲ. ಅತ್ಯಾಚಾರ ಪ್ರಿಯರಲ್ಲ. ಸನದಶೀರ ಮಾರ್ಗವನ್ನು ಬಿಟ್ಟು ನಡೆಯತಕ್ಕವರಲ್ಲ. ಸಾರಾಂಶ "ನೇತಿ ನೇತಿ" ಎಂಬುದಾಗಿ ನಿಷೇಧರೂಪದಿಂದ ಲಾಲಾಜಿಯವರ ರಾಜಕಾರಣದ ಮಾರ್ಗವನ್ನು ವರ್ಣಿಸುವುದಕ್ಕಿಂತ ಒಂದೆ ಮಾತಿನಿಂದ ಹೇಳಬೇಕಾದರೆ ಮತ್ತು ಅದು ಕೂಡ ವಿಧಿರೂಪದಿಂದ ಹೇಳಬೇಕಾದರೆ ಲಜಪತರಾಯರು ನಿಜವಾದ ರಾಷ್ಟ್ರೀಯ ಪಕ್ಷದವರು. ಇವರ ವಿಚಾರಗಳು ಮನನೀಯವಾಗಿರುತ್ತವೆ. ಇವರು ಮೇಲೆ ಹೇಳಿದ "ಪೀಪಲ" ಎಂಬ ಪತ್ರದಲ್ಲಿ ಹಿಂದುಸ್ಥಾನದ ಈಗಿನ ಮತ್ತು ಮುಂದಿನ ರಾಜಕಾರಣವನ್ನು ಕುರಿತು ತಮ್ಮ ವಿಚಾರಗಳನ್ನು ಪ್ರಕಟಿಸಿದ್ದಾರೆ. ಅವರು ಪ್ರದರ್ಶಿಸಿರುವ ವಿಚಾರಸರಣಿಯನ್ನು ಈ ಹೊತ್ತು ನಮ್ಮ ವಾಚಕರ ಮುಂದಿಡಲು ಯೋಜಿಸಿರುವೆವು.

ಹಿಂದುಸ್ಥಾನದಲ್ಲಿ ಐದು ವರ್ಷದ ಹಿಂದೆ ಅಸಹಕಾರವು ಪ್ರಾರಂಭವಾದ ಬಳಿಕ ಲಾಲಾಜಿಯವರು ಈ ಚಳವಳಕ್ಕೆ ಬಂದು ಸೇರಿದರು. ಈ ವಿಷಯವನ್ನು ಕುರಿತು ಅವರು ಬರೆಯುವುದೇನೆಂದರೆ, ಈ ಅಸಹಕಾರ ಚಳವಳವು ಹಳ್ಳಿಹಳ್ಳಿಗಳಲ್ಲಿ ರಾಜಕೀಯ ಪರಿಸ್ಥಿತಿಯ ಪರಿಚಯವನ್ನು ಮಾಡಿಕೊಡಲು ಒಂದು ಉಪಯುಕ್ತವಾದ ಸಾಧನವೆಂಬುದರಿಂದ ಇದರಲ್ಲಿ ತನಗೆ ಸೇರಬೇಕಾಯಿತು. ಈ ಚಳವಳದಲ್ಲಿ ಅವ್ಯವಹಾರ್ಯವಾದ ಸಂಗತಿಗಳು ಇದ್ದಾವೆಂಬುದು ಆಗಲೆ ಮನಸ್ಸಿಗೆ ಖಚಿತವಾಗಿತ್ತು. ಆದರೂ ಸ್ವಂತ ಸಂಗತಿಯನ್ನು ಯಾವದನ್ನೂ ಆಲೋಚಿಸದೆ ಸಾಧ್ಯವಿದ್ದ ಸಂಪೂರ್ಣ ಪ್ರಯತ್ನವನ್ನು ತಾನು ಮಾಡಿರುವೆನು. ಈ ರೀತಿಯಿಂದ ಉಪಕ್ರಮಿಸಿ ಲಾಲಾಜಿಯವರು ಕಳೆದ ಯುರೋಪ ಪ್ರವಾಸವನ್ನು ಕೈಕೊಂಡಾಗ ಸ್ವಿತ್ಝರಲಂಡಿನಲ್ಲಿ ನಿಂತು ಅಸಹಕಾರ ಚಳವಳವನ್ನು ಕುರಿತು ಒಂದು ಪುಸ್ತಕವನ್ನು ಬರೆಯಬೇಕೆಂದು ನೆನಸಿ ಆ ಮೇರೆಗೆ ಹಲವು ಪ್ರಕರಣಗಳನ್ನು ಹೇಗೆ ತಾನು ಬರೆದಿಟ್ಟಿರುವೆನು ಎಂಬಿತ್ಯಾದಿ ಸಂಗತಿಗಳನ್ನು ಉಲ್ಲೇಖಿಸಿರುವರು. ಅಲ್ಲದೆ ಇವರು ಆ ಪುಸ್ತಕವನ್ನು ಮುಗಿಸಿ ಈ ಚಳವಳದಲ್ಲಿ ಅವರು ಎತ್ತಿದ ಭಾಗ ಮತ್ತು ಈ ಚಳವಳದ ಸ್ಥಿತಿ, ಪರಿಣಾಮ ಇತ್ಯಾದಿ ಸಂಗತಿಗಳನ್ನು ಸಾಧಾರವಾಗಿ ನಿರೂಪಿಸಿ ಆ ಪುಸ್ತಕವನ್ನು ಪ್ರಕಟಿಸುವವರಿದ್ದಾರೆ. ಅದು ಬಹಿರಂಗವಾದ ಬಳಿಕ ಆ ವಿಷಯವನ್ನು ಜನರು ಆಲೋಚಿಸಬಹುದಾದರೂ ಅವರು ಪ್ರಸ್ತುತ ಲೇಖದಲ್ಲಿ ಹೇಳಿರುವ ಮಾತು ವಿಚಾರಣೀಯವಾಗಿದೆ. "ನಾವು ತಪ್ಪುಮಾಡಿದೆವು. ಆದರೆ ಅವುಗಳಿಗಾಗಿ ನಾವು ಕಷ್ಟವನ್ನೂ ಅನುಭವಿಸಿದ್ದೇವೆ. ಈ ಕಷ್ಟಗಳಿಂದ ದೇಶಕ್ಕೆ ಲಾಭವೆ ಉಂಟಾಗಿದೆ," ಲಾಲಾ ಲಜಪತರಾಯರ ಈ ಮಾತಿನ ಅರ್ಥವೇನೆಂದರೆ, ಅಸಹಕಾರದ ಕಾರ್ಯಕ್ರಮವು ನಿರ್ದೋಷವಾಗಿರಲ್ಲವಾದರೂ ಆ ಸಮಯದಲ್ಲಿ ದೇಶವತ್ಸಲರು ಮತ್ತು ಅನುಯಾಯಿಗಳು ಅಮಿತ ಕಷ್ಟವನ್ನು ಅನುಭವಿಸಿದ ಕಾರಣ ದೇಶಕ್ಕೆ ರಾಜಕಾರಣದ ದೃಷ್ಟಿಯಿಂದ ಲಾಭವುಂಟಾಗಿದೆ.

ಅಸಹಕಾರವು ನಿಷ್ಫಲವಾಯಿತೆಂಬುದರಿಂದ ಶಾಂತಪಕ್ಷದವರಿಗೆ ಅಸಹಕಾರಿಗಳನ್ನು ಜರಿಯಲು ಅಥವಾ ಹಾಸ್ಯಮಾಡಲು ಅಧಿಕಾರವಿಲ್ಲ. ಅಸಹಕಾರವಾದರೂ ಯಶಸ್ಸಿನ ಕಕ್ಷದಲ್ಲಿ ಎಷ್ಟರ ಮಟ್ಟಿಗೆ ಬಂದಿರುವದೊ ಅಷ್ಟೇನಾದರೂ ಸಹಕಾರಿಗಳ ಕಾರ್ಯಕ್ರಮವು ಬಂದಿಲ್ಲ.. ಈ ಸಹಕಾರಿಗಳ ಕಾರ್ಯಕ್ರಮವು ಜಾಂಬುವಂತನಂತೆ, ಎಷ್ಟೊ ಸಮಯದಿಂದ ಇದೆಯಾದರೂ ಯಶಸ್ಸಿನ ಒಂದೆಯೊಂದು ಕಿರಣವನ್ನು ಕೂಡ ನೋಡಿಲ್ಲ. ಹೀಗಿರಲು ಸಹಕಾರಿಗಳು ಅಸಹಕಾರಿಗಳನ್ನು ಹಂಗಿಸಲು ಹೊರಡುವುದು ಅನುಚಿತವೆ ಅಲ್ಲ, ಮತಿಭ್ರಷ್ಟತೆಯ ಲಕ್ಷಣವಾದೀತು. ಈ ಸಂಗತಿಗಳನ್ನು ಲಾಲಾಜಿಯವರು ಒತ್ತಿ ಹೇಳಿ ಇನ್ನುಮುಂದಿನ ರಾಜಕಾರಣದ ವಿಷಯದಲ್ಲಿ ಹೇಗೆ ವರ್ತಿಸತಕ್ಕದ್ದು ಎಂಬುದಕ್ಕೆ ಬಹು ಉಪಯುಕ್ತವಾದ ಸೂಚನೆಗಳನ್ನು ಕೊಟ್ಟಿರುವರು. ಸಹಕಾರ, ಅಸಹಕಾರ ಇತ್ಯಾದಿ ಹೆಸರುಗಳ ಮೇಲೆ ಅಥವಾ ಪಕ್ಷಗಳ ಮೇಲೆ ಅವಲಂಬಿಸಿ ಇರಲಾಗುವದಿಲ್ಲ, ಸಹಕಾರ ಮತ್ತು ಅಸಹಕಾರ ಇವೆರಡು ದಕ್ಷಿಣೋತ್ತರ ಧ್ರುವಗಳು. ಇವುಗಳಲ್ಲಿ ಮೊದಲನೆಯದು ಕೇವಲ ಅಪ್ರಯೋಜಕ. ಎರಡನೆಯದು ಕಾರ್ಯಸಾಧಕವಾದರೂ ಅವ್ಯವಹಾರ್ಯವಾದ ಪ್ರಯುಕ್ತ ಸಾಮಾನ್ಯ ಜನಸಮುದಾಯಕ್ಕೆ ಒಗ್ಗತಕ್ಕದ್ದಲ್ಲ. ಇಂಥ ಪರಿಸ್ಥಿತಿಯಲ್ಲಿ ಈ ಎರಡೂ ತುದಿಗಳನ್ನು ಬಿಟ್ಟು ಮಧ್ಯಮಾರ್ಗವನ್ನು ಅವಲಂಬಿಸುವುದೆ ಹಿತಕರವಾಗಿದೆ. ಎಂದರೆ ಪ್ರತಿಯೋಗಿ ಸಹಕಾರವೆ ರಾಷ್ಟ್ರದ ಆಚರಣೆಗೆ ಹೇಳಿದ ಸೂತ್ರವು. ಈ ವಿಷಯವನ್ನು ಎಲ್ಲ ಮುಖಂಡರು ಒಟ್ಟಿಗೆ ಸೇರಿ ಸಮಾಲೋಚನೆ ಮಾಡಿ ಒಂದು ಮಾರ್ಗವನ್ನು ನಿರ್ಣಯಿಸಬೇಕೆಂದು ಹೇಳುವರು.

ಲಾಲಾ ಲಜಪತರಾಯರು ಪ್ರತಿಪಾದಿಸಿರುವ ಈ ಮತಗಳು ಇತರ ಮುಖಂಡರಿಗೂ, ಜನರಿಗೂ ಮೆಲ್ಲ ಮೆಲ್ಲನೆ ಮಾನ್ಯವಾಗುತ್ತ ಬಂದಿವೆ. ಅನತ್ಯಾಚಾರದ ವಿಷಯದಲ್ಲಿಯಂತೂ ಲಾಲಾಜಿಯವರು ಅದರಲ್ಲಿ ತನಗೆ ನಂಬಿಕೆ ಇರಲಿಲ್ಲ. ಈಗಲೂ ಇಲ್ಲವೆಂಬುದಾಗಿ ಸ್ಪಷ್ಟವಾಗಿ ಹೇಳಿರುವರು. ಆದರೆ ಈಗಿನ ಪರಿಸ್ಥಿತಿಯಲ್ಲಿ ಅನತ್ಯಾಚಾರದ ಹೊರತು ರಾಷ್ಟ್ರಕ್ಕೆ ಇತರ ಉಪಾಯವಿಲ್ಲವೆಂಬ ಸಂಗತಿಯನ್ನು ಸಹ ಅವರು ಮರೆಮಾಚದೆ ಹೇಳಿರುವರು. ಪರಿಸ್ಥಿತಿಯ ಮೂಲಕವಾಗಿಯಾಗಲಿ, ಆಪತ್ಕಾಲಕಕ್ಕಾಗಿಯಾಗಲಿ ಒಂದು ಸಂಗತಿಯನ್ನು ಒಬ್ಬನು ಅಂಗೀಕರಿಸಿದ್ದಾದರೆ ಅದು ತ್ರಿಕಾಲಾಬಾಧಿತವಾದ ಸಿದ್ಧಾಂತವೆಂದು ಹೇಳಲಾಗುವುದಿಲ್ಲ. ಈ ದೃಷ್ಟಿಯಿಂದಲೂ ಅನತ್ಯಾಚಾರವು ಸರ್ವದಾ ಸಾಧನೋತ್ತಮವಲ್ಲವೆಂಬುದು ಸ್ಪಷ್ಟವಾಗುತ್ತವೆ. ಅದನ್ನು ಆಪತ್ಕಾಲದ ಧರ್ಮವೆಂಬುದಾಗಿ ಪರಿಗ್ರಹಿಸತಕ್ಕದ್ದಲ್ಲ. ಸಹಜ ಧರ್ಮವನ್ನಾಗಿಯೆ ಇಟ್ಟುಕೊಳ್ಳಬೇಕೆಂದು ಮಹಾತ್ಮಾ ಗಾಂಧಿಗಳು ಹೇಳುವ ರೀತಿಯಂತೂ ಲಜಪತರಾಯರಿಗೆ ಸಮ್ಮತವೆ ಇಲ್ಲ. ಮತ್ತು ನಿಜ ಹೇಳುವದಾದರೆ, ಗಾಂಧಿಗಳ ಮತದ ಪರ್ಯವಸಾನವು ಅನತ್ಯಾಚಾರದಲ್ಲೆ ಆಗುವದಾದ ಮೇಲೆ ಸ್ವರಾಜ್ಯವು ಧ್ಯೇಯದಿಂದ ಚ್ಯುತವಾಗಿ ಬೀಳಬೇಕಾಗುತ್ತದೆ. ಈ ವಿಷಯವು ಈಗ ಸರ್ವರ ಅನುಭವಕ್ಕೆ ಮೆಲ್ಲ ಮೆಲ್ಲನೆ ಬರಹತ್ತಿದ್ದರಿಂದ ವಿಶೇಷವಾದ ಪ್ರತಿಪಾದನವು ಆ ವಿಷಯದಲ್ಲಿ ಅಗತ್ಯವಿಲ್ಲ.

ಲಜಪತರಾಯರ ಇನ್ನೊಂದು ಮಾತು ಕೂಡ ಅರ್ಥಪೂರ್ಣವಾಗಿದೆ. ಬ್ರಿಟಿಷರಿಂದ ಸ್ವರಾಜ್ಯ ತೆಕ್ಕೊಳ್ಳುವುದು ಈಗಿನ ಪ್ರಶ್ನೆಯಲ್ಲ, ಬ್ರಿಟಿಷರನ್ನು ಇಲ್ಲಿಂದ ಸ್ವದೇಶಕ್ಕೆ ಕಳುಹಿಸುವುದು ಪ್ರಶ್ನೆಯಲ್ಲ. ಆದರೆ ಹಿಂದುಸ್ಥಾನದೊಳಗಿನ ವಿಭಿನ್ನ ಧರ್ಮದವರು ತಮ್ಮ ತಮ್ಮ ಭೇದಗಳನ್ನು ಬದಿಗಿಟ್ಟು ರಾಜಕಾರಣದಲ್ಲಿ ಏಕತ್ರ ಸೇರಿ ಆ ರಾಜಕಾರಣಕ್ಕೆ ಅವರಿಂದ ಭದ್ರವಾದ ಸ್ವರೂಪವನ್ನು ತರಿಸುವುದು ಹೇಗೆ ಎಂಬುದೆ ಮುಖ್ಯವಾದ ಪ್ರಶ್ನೆಯಾಗಿದೆ. ಲಜಪತರಾಯರ ಈ ಮಾತು ಎಷ್ಟು ಬೋಧಕವಿದೆಯೊ ಅಷ್ಟೆ ಫಲದಾಯಕವೂ ಇದೆ. ಹಿಂದಿಗಳಲ್ಲಿ ನಿಜವಾದ ಒಕ್ಕಟ್ಟು ನೆಲೆಗೊಳಿಸಹತ್ತಿದರೆ ಆಗ ಸ್ವರಾಜ್ಯ ಯುಗಕ್ಕೆ ಪ್ರಾರಂಭವಾಯಿತೆನ್ನಲು ಅಡ್ಡಿ ಇಲ್ಲ. ಆದರೆ ನಮ್ಮ ದೇಶದ ದುರ್ದೈವದಿಂದ ಈ ಸಂಗತಿಯು ಎಲ್ಲರ ಮನಸ್ಸಿಗೆ ಬರುವುದಿಲ್ಲ. ಅಲ್ಪಸ್ವಲ್ಪ ಸಂಗತಿಗಳನ್ನೆತ್ತಿಕೊಂಡು ಪರಸ್ಪರ ಕಲಹ ಬೆಳಸಿ ಅನ್ಯರಿಗೆ ಆಸ್ಪದವನ್ನು ಕೊಡುವದೆ ಈ ದೇಶದ ಪ್ರಾಚೀನ ಕಾಲದಿಂದ ನಡೆದು ಬಂದ ಧರ್ಮವಾಗಿದೆ. ಅದನ್ನು ಅದು ಹೇಗೆ ಬಿಟ್ಟೀತು?

ಇರಲಿ. ಲಜಪತರಾಯರ ಅಭಿಪ್ರಾಯಗಳು ಸರ್ವಮಾನ್ಯವಾದವುಗಳೆಂಬುದಕ್ಕೆ ಅಡ್ಡಿ ಇಲ್ಲ. ಆದರೂ ಈ ವಿಷಯದಲ್ಲಿ ಹೆಚ್ಚಿನ ವಿಸ್ತಾರವು ಅಗತ್ಯವಿಲ್ಲ.

ಸ್ಫುಟವಿಚಾರಗಳು.

೧. ಹಿಂದುಸ್ಥಾನದೊಳಗಿನ ರಾಜಕೀಯ ತಂಡಗಳಲ್ಲಿ ಐಕ್ಯವುಂಟಾಗಬೇಕೆಂದು ಲಾಲಾ ಲಜಪತರಾಯರು ನೆನಸುವಂತೆ ಇತರರು ಕೂಡ ನೆನಸಬೇಕಾಗಿದೆ. ಪಂಚತಂತ್ರ ಅಥವಾ ಇಸೋಫನ ಕಥೆಗಳಲ್ಲಿ ಹೇಳಿರುವ ಒಕ್ಕಟ್ಟಿನ ಕಥೆಗಳು ಬರೆ ಹುಡುಗರಿಗಾಗಿಯೆ ಇವೆ, ಅಥವಾ ಅವು ಕಥಾರೂಪವಾಗಿರುವಾಗ ಮಾತ್ರ ಒಳ್ಳೆಯವು ಎಂಬುದಾಗಿ ಯಾರಾದರು ನೆನಸುವದಾದರೆ ಅದು ಮೂರ್ಖತನದ ಮಾತಾದೀತು. ಒಕ್ಕಟ್ಟು ವ್ಯವಹಾರದಲ್ಲಿ ಸರ್ವಸಾಧಕವು. ರಾಜಕಾರಣದಲ್ಲಂತೂ ಅದು ಪ್ರಭಾವಶಾಲಿಯಾದುದು. ಆದುದರಿಂದ ಹಿಂದುಸ್ಥಾನದೊಳಗಿನ ರಾಜಕೀಯ ತಂಡಗಳು ಒಟ್ಟಿಗೆ ಸೇರಿ ಸ್ವರಾಜ್ಯದ ಪ್ರಯತ್ನ ನಡಿಸಬೇಕು. ಈ ರೀತಿಯಿಂದ ಎಲ್ಲರೂ ಸಂಯುಕ್ತ ಪ್ರಯತ್ನವನ್ನು ನಡಿಸಬೇಕೆಂದು ವಿಲಾಯತಿಯಿಂದ ಶ್ರೀ. ಸತ್ಯಮೂರ್ತಿಯವರು ಹಿಂದಿ ಜನರಿಗೆ ಸಂದೇಶವನ್ನು ಕಳುಹಿಸಿರುವರು. "ನಿಮ್ಮ ನಿಮ್ಮ ಪಕ್ಷಭೇದಗಳನ್ನು ಬದಿಗೊತ್ತಿರಿ. ಎಲ್ಲರೂ ಒಟ್ಟಿಗೆ ಸೇರಿ ಸಂಯುಕ್ತ ರೀತಿಯಲ್ಲಿ ಸ್ವರಾಜ್ಯವನ್ನು ಕೇಳಿದ್ದಾದರೆ, ಮಂತ್ರಿಮಂಡಲವು ಸ್ವರಾಜಿಸ್ಟರೊಡನೆ ವಿಚಾರ ವಿನಿಮಯ ಮಾಡಲು ಸಿದ್ಧವಾದೀತು. ಬರೆ ವಿಚಾರ ವಿನಿಮಯವೆ ಅಲ್ಲ, ಒಂದು ರೀತಿಯ ತಹನಾಮೆಯನ್ನು ಮಾಡಲು ಅದು ತಯಾರಿದೆ. ಆದುದರಿಂದ ಎಲ್ಲರೂ ಒಟ್ಟಿಗೆ ಸೇರಿ ಬಲವತ್ತಾದ ರೀತಿಯಲ್ಲಿ ಸ್ವರಾಜ್ಯವನ್ನು ಕೇಳಬೇಕು" ಎಂದು ಸತ್ಯಮೂರ್ತಿಯವರು ತಿಳಿಸಿರುವರು. ಶ್ರೀ. ಸತ್ಯಮೂರ್ತಿಯವರ ಸೂಚನೆಯು ಹಿಂದುಸ್ಥಾನದಲ್ಲಿ ಸಕಾಲದಲ್ಲಿ ಬಂದಿದೆ ಎನ್ನಬೇಕು. ಐಕ್ಯವು ಈಗಿನ ದಿವಸಗಳಲ್ಲಿ ಅತ್ಯಂತ ಪಥ್ಯವಾಗಿದೆ. ಹಿಂದುಸ್ಥಾನದಲ್ಲಿ ರಾಜಕೀಯ ತಂಡಗಳು ಎಷ್ಟೆ ಇದ್ದರೂ ಸ್ವರಾಜ್ಯ ಪಕ್ಷದಷ್ಟು ಸುಸಂಘಟಿತವಾದ್ದೂ, ಬಲವತ್ತರವಾದ್ದೂ ಇನ್ನೊಂದಿಲ್ಲ. ಮತ್ತು ಈ ಕಾರಣದಿಂದಲೆ ಮಹಾತ್ಮಾಜಿಯವರು ಕೂಡ ರಾಷ್ಟ್ರೀಯ ಸಭೆಯ ರಾಜಕಾರಣವನ್ನು ಸ್ವರಾಜ್ಯ ಪಕ್ಷದವರ ಮಾರ್ಗಾನುಸಾರವಾಗಿಯೆ ಅವಲಂಬಿಸಬೇಕೆಂಬುದಾಗಿ ಈಗ ಅಭಿಪ್ರಾಯವುಳ್ಳವರಾಗಿದ್ದಾರೆ. ಮಹಾತ್ಮಾಜಿಯವರಲ್ಲಿ ಉಂಟಾದ ಈ ಮತಪರಿವರ್ತನಕ್ಕೆ ಸ್ವರಾಜ್ಯ ಪಕ್ಷದ ಬಲ, ಸಾಮರ್ಥ್ಯ, ದೇಶಹಿತಸಾಧನೆ, ರಾಜಕಾರಣ ನೈಪುಣ್ಯ ಇತ್ಯಾದಿ ಗುಣಗಳೆ ಕಾರಣವಾಗಿವೆ. ಆದುದರಿಂದ ಇತರರು ಸಹ ತಮ್ಮ ತಮ್ಮ ಪಕ್ಷಗಳನ್ನು ಬದಿಗಿಟ್ಟು ಸ್ವರಾಜ್ಯ ಪಕ್ಷವು ಯಾವುದಕ್ಕಾಗಿ ಹೋರಾಡುತ್ತಿರುವುದೊ ಅಂಥ ಸ್ವರಾಜ್ಯವನ್ನು ಸಂಪಾದಿಸಲು ಆ ಸ್ವರಾಜ್ಯ ಪಕ್ಷದೊಡನೆ ಬಂಧುತ್ವವನ್ನು ಬೆಳಸುವುದು ಈ ಹೊತ್ತಿನ ದಿವಸದಲ್ಲಿ ಅಗತ್ಯದ್ದಾಗಿದೆ. ಮತ್ತು ಈ ಕಾರಣದಿಂದಲೆ ಶ್ರಿ. ಸತ್ಯಮೂರ್ತಿಯವರು ಎಲ್ಲರೂ ಐಕ್ಯಮಾಡಿಕೊಂಡು ಸ್ವರಾಜ್ಯದ ಕೇಳಿಕೆಯನ್ನು ಸ್ವಲ್ಪ ಮಾತ್ರವೂ ಹಿಂಜರಿಯದೆ ಕೇಳಬೇಕೆಂದು ಯಾವ ಸೂಚನೆಯನ್ನು ಕೊಟ್ಟಿದ್ದಾರೊ ಅದರ ಸ್ವಾರಸ್ಯವು ವಾಚಕರ ಲಕ್ಷ್ಯದಲ್ಲಿ ಬಾರದೆ ಇರಲಿಕ್ಕಿಲ್ಲ.

೨. ಶುಭದಿವಸಗಳು ದೂರದಲ್ಲಿರುವಾಗ ಮಧ್ಯದಲ್ಲಿ ಎಷ್ಟೊ ಆಪತ್ತುಗಳು ಬರುತ್ತವೆಂಬುದು ಸುಳ್ಳಲ್ಲ. ಆದರೆ ಇಂಥ ಆಪತ್ತುಗಳನ್ನು ಶಕ್ತಿಯಿಂದ, ಶಕ್ತಿಯಿಂದ ಆಗದಿದ್ದರೆ ಯುಕ್ತಿಯಿಂದಲಾದರೂ ದಾಟಬೇಕಾಗುತ್ತದೆ. ಹಿಂದುಸ್ಥಾನದ ಸಂಗತಿಯಾದರೂ ಈಗ ಹೀಗಿಯೆ ಆಗಿದೆ. ಸ್ವರಾಜ್ಯದ ಧ್ಯೇಯಕ್ಕಾಗಿ ಪೇಚಾಡುತ್ತಿರುವ ಸ್ವರಾಜ್ಯಪಾರ್ಟಿಯನ್ನು ಒತ್ತಿಬಿಟ್ಟು ಹಿಂದುಸ್ಥಾನದ ಶುಭದಿವಸಗಳನ್ನು ಕೂಡಿದಷ್ಟು ಮುಂದಕ್ಕೆ ದೂಡೋಣವೆಂದು ವಿಘ್ನಸಂತೋಷಿಯಾದ ನೋಕರಶಾಹಿಯು ಬಯಸಿಕೊಂಡಿರುವಾಗ ಅದರ ಈ ಬಯಕೆಗೆ ನಮ್ಮಲ್ಲಿಯ ಪ್ರತಿಷ್ಠಿತರೂ, ಶಿಷ್ಟರೂ ಆದವರೆ ಸಹಾಯಕರಾಗಿ ಆಪತ್ತುಗಳನ್ನು ಆಗಾಗ್ಗೆ ತರುತ್ತಿರುತ್ತಾರೆ. ಮಧ್ಯಪ್ರಾಂತದೊಳಗಿನ ಕೌನ್ಸಿಲಿನ ಚರಿತ್ರೆಯೆ ಇದಕ್ಕೆ ಸಾಕ್ಷಿಯು. ಅಲ್ಲಿ ಈಗ ಎರಡು ವರ್ಷಗಳಿಂದ ಕೌನ್ಸಿಲಿಗೆ ಬಾಗಿಲು ಹಾಕಿದೆಯಷ್ಟೆ. ನೋಕರಶಾಹಿಯು ಈ ಬಗ್ಗೆ ಇದು ವರೆಗೆ ಎಷ್ಟೊ ಪ್ರಯತ್ನಿಸಿತು. ಆದರೆ ಅದಕ್ಕೆ ಇಷ್ಟಫಲಪ್ರಾಪ್ತಿಯಾಗಲಿಲ್ಲ. ಈಗ ಕಡೆಯದೊಂದು ಪ್ರಯತ್ನವು ಪ್ರಾರಂಭವಾಗಿದೆ. ಮೂಲಪ್ರೇರಕರು ಯಾರೆ ಇರಲಿ, ಶಾಂತರೂ ಮತ್ತು ಸ್ವತಂತ್ರರೂ ಮತದಾರರ ಒಂದು ಸಭೆಯನ್ನು ಕರೆದು ಅವರನ್ನು ತಮ್ಮ ಕಡೆಗೆ ಎಳೆದುಕೊಳ್ಳಲು ಪೇಚಾಡುತ್ತಿದ್ದಾರೆ. ಅಲ್ಲಿಯ ಮಂತ್ರಿಗಳು ಈ ಎರಡು ಪಕ್ಷದವರಾದ ಕಾರಣ ಅವರ ಕಾರಭಾರಕ್ಕೆ ಮತದಾರರ ಸಮ್ಮತಿ ಇದೆ, ಸ್ವರಾಜ್ಯಪಕ್ಷವು ಮತದಾರ ಸಮ್ಮತವಲ್ಲವೆಂದಿತ್ಯಾದಿ ಸಂಗತಿಗಳನ್ನು ಲೋಕಕ್ಕೆ ತೋರಿಸಿಕೊಟ್ಟರೆ ತಾವು ಮುಂಚಿನಂತೆಯೆ ಸ್ಥಾನಾಪನ್ನರಾಗಿ ತಮ್ಮ ಆಟಗಳನ್ನು ಸಾಧಿಸಬಹುದೆಂದು ನೆನಸಿ ಅಲ್ಲಿಯ ಶಾಂತರು ಮತದಾರರ ಸಭೆಯನ್ನು ಕೂಡಿಸಲಿದ್ದಾರೆ. ಆದರೆ ಶ್ರೀ. ಅಭ್ಯಂಕರ ಮತ್ತು ಡೊ. ಖರೆ ಇವರು ಜಾಹೀರ ಪತ್ರಕವನ್ನು ಹೊರಡಿಸಿ ಶಾಂತಪಕ್ಷದವರ ಈ ಅಶ್ಲಾಘ್ಯ ಪ್ರಯತ್ನವನ್ನು ನಿಷೇಧಿಸಿದ್ದಾರೆ. ಶಾಂತಪಕ್ಷದವರು ಕೂಡಿಸಲಿರುವ ಮತದಾರರ ಸಭೆಯಲ್ಲಿ ಎಲ್ಲ ಮತದಾರರಿಗಾದರೂ ಪ್ರವೇಶವಿದೆಯೆ? ಅದೂ ಇಲ್ಲ. ತಮಗೆ ಬೇಕಾದ ನಾಲ್ಕು ಜನ ಮತದಾರರನ್ನು ಸೇರಿಸಿಕೊಂಡು ಅದಕ್ಕೆ ಮತದಾರರ ಸಭೆ ಎಂದು ಭವ್ಯವಾದ ನಾಮಕರಣವನ್ನು ಮಾಡಿ ಏನಾದರೂ ತಮಗೆ ಬೇಕಾದ ಸಂಗತಿಗಳನ್ನು ಅವರಿಂದ ಹೇಳಿಸಲಿರುವ ಈ ನಾಟಕವು ಈಗ ಬಹಿರಂಗವಾಗಿದೆ. ಪರದೆಯೊಳಗಿನ ಸಂಗತಿಗಳು ಈಗ ಹೊರಬಂದಿದ್ದಾವೆ. ಸಾರಾಂಶ ನಾಗಪುರದವರು ದ್ವಿದಲ ರಾಜ್ಯಪದ್ಧತಿಯ ಕಾಗದದ ಗೋಪುರವನ್ನು ಕೆಳಗೆ ಬೀಳಿಸಿದ್ದು ಯಾವುದಿದೆಯೊ ಅದನ್ನು ಪುನಃ ಸಂಸ್ಥಾಪಿಸಲು ಎದುರು ಕಡೆಯವರು ಮಾಡುವ ಈ ಪ್ರಯತ್ನವು ಸಫಲವಾಗುವಂತಿಲ್ಲ.

೩. ಹೌಸ್ ಒಫ್ ಕೊಮನ್ಸಿನಲ್ಲಿ ಹಿಂದಿ ಪ್ರತಿನಿಧಿಗಳಾದ ಮಿ| ಸಕಲಾತವಾಲರು ಮಹತ್ತಾದ ಎರಡು ಪ್ರಶ್ನೆಗಳನ್ನು ಕೇಳಿದರು. ಚೀನಾ ದೇಶದಲ್ಲಿ ಇತ್ತಲಾಗೆ ಸಂಭವಿಸಿರುವ ಗಲಾಟೆಯನ್ನು ಕುರಿತು ಹಿಂದುಸ್ಥಾನದೊಳಗಿನ ಸೇನಾಪತಿಗಳಿಗೆ ಏನಾದರೂ ಸೂಚನೆಗಳನ್ನು ಕಳುಹಿಸಿದ್ದುಂಟೊ ಹೇಗೆ? ಕಳುಹಿಸಿದ್ದಾದರೆ ಅವು ಯಾವವು? ಸಕಲಾತವಾಲರ ಈ ಪ್ರಶ್ನೆಗೆ ಸರಕಾರದ ಕಡೆಯಿಂದ ಉತ್ತರ ಕೊಡುವಾಗ ಅರ್ಲ ಏಂಟರ ಟನ್ನರು ಇಂಥ ಪ್ರಶ್ನೆಯನ್ನು ಉತ್ತರಿಸುವುದು ಸಾರ್ವಜನಿಕ ಹಿತಕ್ಕೆ ವಿರುದ್ಧವಾಗಿದೆ ಎಂದು ಹೇಳಿದರು! ದಕ್ಷಿಣ ಆಫ್ರಿಕದಲ್ಲಿ ಒಂದು ಹೊಸ ಕಾನೂನನ್ನು ಮಾಡಿ ಅದರ ಒತ್ತಾಯದಿಂದ ಅಲ್ಲಿಯ ಹಿಂದಿಗಳ ವಸತಿಯನ್ನು ತಗ್ಗಿಸುವ ಪ್ರಯತ್ನವು ನಡೆದಿರುವುದರಿಂದ ದಕ್ಷಿಣ ಆಫ್ರಿಕದೊಳಗಿನ ಹಿಂದಿಗಳ ಹಿತಕ್ಕೂ, ಹಕ್ಕುಗಳಿಗೂ ಈ ಪ್ರಯತ್ನವು ಬಾಧಕವಾಗಿ ನಿಲ್ಲುವ ಕಾರಣ, ಅಲ್ಲಿಯ ಹಿಂದಿಗಳ ಹಿತಸಂರಕ್ಷಣಕ್ಕಾಗಿ ಸರಕಾರವು ಉದ್ಯೋಗ ನಡಿಸುತ್ತಿದೆಯೊ ಹೇಗೆ ಎಂದು ಸಕಲಾತವಾಲರು ಇನ್ನೊಂದು ಪ್ರಶ್ನೆಯನ್ನು ಕೇಳಿದರು. ಇದನ್ನು ಉತ್ತರಿಸುವಾಗ ಮೇಜರ ಓರ್ಮ್ಸ್ಬೆ ಗೋರರೆಂಬುವರು 'ಈ ಸಂಗತಿಯು ಸರಕಾರಿ ರೀತಿಯಿಂದ ನಮ್ಮ ಕಡೆಗೆ ಬಂದಿಲ್ಲ. ಆದರೆ ದಕ್ಷಿಣ ಆಫ್ರಿಕದ ಮಂತ್ರಿಯ ಭಾಷಣವು ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು ಅದನ್ನು ಮಾತ್ರ ನೋಡಿರುವೆನು' ಎಂದು ಉತ್ತರವನ್ನು ಕೊಟ್ಟರು. ಅಲ್ಲಿಂದ ಸರಕಾರಿ ರೀತಿಯಿಂದ ರಿಪೋರ್ಟನ್ನು ತರಿಸಬಹುದಲ್ಲವೆ" ಎಂದು ಪುನಃ ಕೇಳಿದೊಡನೆ 'ಸ್ವಾಯತ್ತವಾದ ವಸಾಹತ ಸರಕಾರಕ್ಕೆ ಈ ರೀತಿಯಿಂದ ಕೇಳುವುದು ಯುಕ್ತವಲ್ಲ'ವೆಂದು ಅದೆ ಮೇಜರರು ಉತ್ತರಿಸಿದರು! ಮಿ| ಡೇ. ಎಂಬ ಇನ್ನೊಬ್ಬ ಸಭಾಸದರು ದಾಸರವರ ಮರಣದ ಸಂದರ್ಭದಲ್ಲಿ ಮಹಾತ್ಮಾ ಗಾಂಧಿಗಳು ರಾಜಕೀಯ ಕೈದಿಗಳನ್ನು ಬಿಟ್ಟುಬಿಡಬೇಕೆಂಬುದಾಗಿ ಸರಕಾರಕ್ಕೆ ಮಾಡಿರುವ ವಿನಂತಿಯ ಕಡೆಗೆ ಸರಕಾರದ ಲಕ್ಷ್ಯವು ಹೋಗುವಂತೆ ಮಾಡಿದರು. ಆಗ ಅರ್ಲಏಂಟರಟನ್ನರು ಸಹಾನುಭೂತಿ ಪೂರ್ಣವಾದ ಮುಂದಿನ ಉತ್ತರವನ್ನು ಕೊಟ್ಟರು! 'ಹಿಂದುಸ್ಥಾನದಲ್ಲಿಯ ವೈರವನ್ನು ತಗ್ಗಿಸಲು ಬೇಕಾದ ಉಪಾಯಗಳನ್ನು ಆಲೋಚಿಸುವುದು ಲೊರ್ಡ ಬರ್ಕನಹೆಡ್ಡರಿಗೆ ತುಂಬಾ ಸಂತೋಷ. ಆದರೆ ಈ ಸೂಚನೆಯು ಮಾತ್ರ ವ್ಯವಹಾರ್ಯವಾಗಿ ಕಂಡುಬರುವುದಿಲ್ಲ. ಏಂಟರಟನ್ನರು ಕೊಟ್ಟಿರುವ ಈ ಉತ್ತರವು ಎಷ್ಟು ಸಹಾನುಭೂತಿಪೂರ್ಣವಾಗಿದೆ! ಹಿಂದುಸ್ಥಾನದಲ್ಲಿ ರಾಜ್ಯಕರ್ತರಿಗೂ ಪ್ರಜೆಗಳಿಗೂ ಇರುವ ವೈಮನಸ್ಸನ್ನು ಕಡಿಮೆಮಾಡಬೇಕೆಂದು ಬರ್ಕನಹೆಡ್ಡರಿಗೆ ಮನಃಪೂರ್ವಕವಾಗಿ ತೋರುತ್ತದಂತೆ! ಆದರೆ ರಾಜಕೀಯ ಕೈದಿಗಳನ್ನು ಬಿಟ್ಟುಬಿಡುವುದು ಮಾತ್ರ ಅಸಾಧ್ಯ ಸಂಗತಿಯಂತೆ! ಇದೀಗ ಸಹಾನುಭೂತಿಯಲ್ಲವೆ? ವೈರವನ್ನು ತಗ್ಗಿಸಲು ಬೇಕಾದ ಉಪಾಯವನ್ನು ಅವರು ಮಾಡುತ್ತಾರೆ. ಆದರೆ ರಾಜಕೀಯ ಕೈದಿಗಳನ್ನು ಬಿಡುವುದು ಮಾತ್ರ ಸಾಧ್ಯವಿಲ್ಲ. ಸ್ವರಾಜ್ಯವನ್ನು ಕೇಳಿದರೆ ಅದನ್ನು ಕೊಡುವುದು ಮಾತ್ರ ಸಾಧ್ಯವಿಲ್ಲ. ಸಿವಿಲ್‌ಸರ್ವಿಸಿನಲ್ಲಿ ಹಿಂದಿಗಳ ಪ್ರವೇಶವನ್ನು ಮಾಡಿ ಅದರ ಹಿಂದೀಕರವನ್ನು ಕೇಳಿದರೆ ಅದು ಮಾತ್ರ ಸಾಧ್ಯವಿಲ್ಲ. ಸೈನ್ಯದ ಹಿಂದೀಕರಣ? ಅದು ಮಾತ್ರ ಸಾಧ್ಯವಿಲ್ಲ! ಪ್ರಾಂತಿಕ ಸ್ವರಾಜ್ಯ? ಅದು ಮಾತ್ರ ಸಾಧ್ಯವಿಲ್ಲ.' ಈ ಮೇರೆಗೆ ಕೇಳಿದ ಒಂದು ಸಂಗತಿ ಮಾತ್ರ ಸಾಧ್ಯವಿಲ್ಲ. ಆದರೂ ಬರ್ಕನಹೆಡ್ಡರಿಗೆ ಇಲ್ಲಿಯ ವೈರವನ್ನು ತಗ್ಗಿಸುವ ಮನಸ್ಸು ಬಹಳ ಉಂಟು!

೪. ಮಹಾತ್ಮಾಗಾಂಧಿಗಳು ಮಹಾಮಾನ್ಯರೆಂಬುದಕ್ಕೆ ಸಂದೇಹವಿಲ್ಲ. ಹಿಂದುಗಳು ಮ. ಗಾಂಧಿಗಳನ್ನು ಮನ್ನಿಸುವದು ಸಹಜವಾದರೂ ಮಹಮ್ಮದೀಯರು ಸಹ ಅವರನ್ನು ಮನ್ನಿಸುತ್ತಾರೆ. ಇದು ಜಗತ್ತಿಗೆಲ್ಲ ಗೊತ್ತಿದ್ದ ವಿಷಯವೆ. ಹಿಂದುಗಳಿಂದಲೂ, ಮಹಮ್ಮದೀಯರಿಂದಲೂ ಅವರು ಮಾನ್ಯತೆಯನ್ನು ಪಡೆದುದಲ್ಲದೆ ಈಗ ಕ್ರಿಶ್ಚನರಿಂದಲೂ ಮಾನವನ್ನು ಹೊಂದುತ್ತಿದ್ದಾರೆ. ಇದು ನಿಜವಾಗಿ ಸಂತೋಷದ ಮಾತಾಗಿದೆ. ಮ. ಗಾಂಧಿಗಳು ಈಗಿನ ಕಾಲದ ಸತ್ಪುರುಷರಲ್ಲಿ ಅತಿ ಶ್ರೇಷ್ಠರಾದ ಕಾರಣ ಅವರನ್ನು ಎಲ್ಲರೂ ಏಕಪ್ರಕಾರವಾಗಿ ಮನ್ನಿಸುವದಾಗಲಿ, ಬಣ್ಣಿಸುವದಾಗಲಿ ಸ್ವಾಭಾವಿಕವಾಗಿದೆ. ಕಲಕತ್ತೆಯಲ್ಲಿ ಯುರೋಪಿಯನ್ ಎಸೋಸಿಯೇಶನಿನವರು ಇವರನ್ನು ಕರೆದು ಒಂದು ವಾರ ದಾಟುವಷ್ಟರೊಳಗಾಗಿ ಕ್ರಿಶ್ಚನ್', ಮಿಶನರಿ ಕೊನ್‌ಫರೆನ್ಸಿನಲ್ಲೂ ಇವರಿಗೆ ಆಮಂತ್ರಣೆ ಇತ್ತು. ಕಲಕತ್ತೆಯ ಕೊರ್ಪೊರೇಶನಿನ ಮೇಯರ ತನಕ್ಕೆ ಸೇನಗುಪ್ತರು ಬಂದಿರುವರಷ್ಟೆ. ಇದು ಯುರೋಪಿಯನ್ ಎಸೊಸಿಯೇಶನಿನವರಿಗೆ ಒಪ್ಪಿರಲಿಲ್ಲ. ಮ. ಗಾಂಧಿಗಳು ಅವರ ಸಭೆಗೆ ಹೋಗಿ ಸೇನಗುಪ್ತರು ಈ ಸ್ಥಾನಕ್ಕೆ ಯಾಕೆ ಯೋಗ್ಯರು ಎಂಬುದನ್ನು ಸಕಾರಣವಾಗಿ ವಿವರಿಸಿ ಹೇಳಿದರು. ಮ. ಗಾಂಧಿಗಳ ಭಾಷಣದ ಅಥವಾ ಅವರು ಕೊಟ್ಟಿರುವ ಕಾರಣಗಳ ಪರಿಣಾಮವು ಯುರೋಪಿಯನ್ ಎಸೋಸಿಯೇಶನಿನಲ್ಲಿ ನೆರೆದಿದ್ದ ಗೃಹಸ್ಥರ ಮೇಲೆ ಯಾವ ನಮೂನೆಯದೆ ಉಂಟಾದ್ದಿರಲಿ, ಪರಂತು ಮ. ಗಾಂಧಿಗಳ ಸಾಧುತೆಯನ್ನು ಅವರೂ ಮನ್ನಿಸಿರುವರು. ಅಂಥ ಸಾಧುತ್ವವನ್ನು ಅವರು ಮನ್ನಿಸಿದ್ದಿಲ್ಲವಾದರೆ ಅವರು ಗಾಂಧಿಗಳನ್ನು ಆಮಂತ್ರಿಸುತ್ತಲೆ ಇರಲಿಲ್ಲ ಯುರೋಪಿಯನ್ ಎಸೋಸಿಯೇಶನಿನವರು ಮ. ಗಾಂಧಿಗಳ ಈ ಗುಣವನ್ನು ಹೇಗೆ ಮನಗಂಡಿರುವರೊ ಹಾಗೆಯೆ ಕ್ರಿಶ್ಚನ ಮಿಶನರಿ ಕೊನ್‌ಫರೆನ್ಸಿನವರೂ ಒಪ್ಪಿರುವರು. ಇವರ ಈ ಕೊನ್‌ಫರೆನ್ಸಿನಲ್ಲಿ ಹೋದಾಗ ಮ| ಗಾಂಧಿಗಳು ಹೇಳಿದ್ದೇನಂದರೆ, ಹಿಂದುಗಳು ನಾಸ್ತಿಕರಲ್ಲ, ಹಿಂದು ಧರ್ಮವು ಸೈತಾನನಿಂದ ಪ್ರವರ್ತಿತವಾದ್ದಲ್ಲ, ದೇವರಿಂದ ಪ್ರವರ್ತಿತವಾದ್ದು. ಹಿಂದುಗಳ ವಿಷಯವಾಗಿ ಆದರಾಭಿಪ್ರಾಯವನ್ನು ಇಟ್ಟುಕೊಳ್ಳಬೇಕು, ಹಿಂದುಗಳ ಸೇವೆಯನ್ನು ಮಾಡಬೇಕೆಂದಿದ್ದರೆ ಅವರೊಡನೆ ಒಡನಾಡಿಕೊಂಡಿರಬೇಕು. ಅತಿಸಾಮಾನ್ಯ ತರಗತಿಯ ಜನರೊಡನೆ ಕೂಡ ಬೆರೆತಿರಬೇಕು, ಕ್ರಿಸ್ತನಾದರೂ ಸಾಮಾನ್ಯ ಜನರೊಡನೆ ಬೆರತಿರಲಿಲ್ಲವೆ? ಎಂಬಿತ್ಯಾದಿ ಮತಗಳನ್ನು ಮ| ಗಾಂಧಿಗಳು ವ್ಯಕ್ತಗೊಳಿಸಿದರು. ಮ| ಗಾಂಧಿಗಳು ಸಾರ್ವಾತ್ಮ ದೃಷ್ಟಿಯವರಾದ ಕಾರಣ ಅವರಿಗೆ ಎಲ್ಲಿಯೂ ಹೋಗಲು ಪ್ರತಿಬಂಧವಿಲ್ಲ.

೫. ಪಂಡಿತ ಮೋತಿಲಾಲನೇಹರುಗಳನ್ನು ಸ್ಕೀನ ಕಮಿಟಿಯಲ್ಲಿ ಒಬ್ಬ ಮೆಂಬರನನ್ನಾಗಿ ಸರಕಾರವು ತೆಕ್ಕೊಂಡಿದೆ, ಮತ್ತು ಪಂಡಿತಜಿಯವರೂ ಅದನ್ನು ಒಪ್ಪಿಕೊಂಡಿದ್ದಾರೆ. ಪಂಡಿತಜಿಯವರು ಸ್ವರಾಜ್ಯ ಪಕ್ಷದ ಪ್ರಮುಖರಾಗಿ ಸರಕಾರದಿಂದ ನೇಮಕ ಪಟ್ಟಿರುವ ಕಮ್ಮಿಟಿಯಲ್ಲಿ ಸಭಾಸದತ್ವವನ್ನು ವಹಿಸಿದ್ದು ಪ್ರತಿಜ್ಞಾಭಂಗಮಾಡಿದಂತಾಯಿತು ಎಂಬಿತ್ಯಾದಿ ರೂಪದಿಂದ ಹಲವು ರಾಜಕೀಯ ಧೋರಣವನ್ನರಿಯದ ಟೀಕಾಕಾರರು ನೇಹರುಗಳನ್ನು ಟೀಕಿಸುತ್ತಿದ್ದಾರೆ. ಈ ಟೀಕೆಯಲ್ಲಿ ನಿಜವಾಗಿ ಅರ್ಥವಿಲ್ಲ. ಸ್ವರಾಜ್ಯ ಪಕ್ಷದ ನಿಯಮಗಳಿಗನುಸಾರವಾಗಿಯೆ ಪಂಡಿತ ನೇಹರುಗಳು ಈ ಸ್ಥಾನವನ್ನು ಅಂಗೀಕರಿಸಿರುವರಲ್ಲದೆ ಇತರ ಕಾರಣದಿಂದ ಅಲ್ಲ. ಸ್ವರಾಜ್ಯ ಪಕ್ಷದ್ದಾದರೇನು, ಅಥವಾ ಇನ್ನೊಂದು ಪಕ್ಷದ್ದಾದರೇನು, ರಾಜಕಾರಣದ ಆತ್ಯಂತಿಕ ತತ್ವವು ಮತ್ತು ಧ್ಯೇಯವು ಒಂದೆಯಾಗಿದೆಯಾದರೂ ನಡುವಿನ ಸಾಧನಗಳನ್ನು ಎದುರು ಕಡೆಯವರ ಧೋರಣಕ್ಕನುಸಾರವಾಗಿ ಬದಲಾಯಿಸುತ್ತಲೆ ಇರಬೇಕಾಗುತ್ತದೆ. ಸಾಧನಗಳೇನಾದರೂ ಧ್ರುವ ಚಕ್ರಕ್ಕೆ ಸೇರಿದವುಗಳಲ್ಲ. ಈ ಸಂಗತಿಯನ್ನರಿಯದ ಹಲವು ಉಚ್ಛೃಂಖಲ ಟೀಕಾಕಾರರು ಯಥೇಚ್ಛವಾಗಿ ಟೀಕಿಸುತ್ತಿದ್ದರಿಂದ ಒಬ್ಬ ಪ್ರತಿನಿಧಿಯು ಪಂಡಿತ ನೇಹರುಗಳಿದ್ದಲ್ಲಿಗೆ ಹೋಗಿ ಈ ವಿಷಯವನ್ನು ಕೇಳಿದನು. ಪಂಡಿತಜಿಯವರು ಮೇಲಿನ ಸಂಗತಿಗಳನ್ನೆ ಸಮರ್ಪಕವಾಗಿ ಉತ್ತರಿಸಿದ್ದಲ್ಲದೆ, ಮಡಿಮನ ಕಮಿಟಿಯ ರಚನಾ ಸ್ವಭಾವಕ್ಕೂ ಲೀಗಿನ ಕಮಿಟಿಯ ರಚನಾ ಸ್ವಭಾವಕ್ಕೂ ಎಷ್ಟೊ ಅಂತರವಿದೆ ಎಂಬುದನ್ನು ಕೂಡ ಒತ್ತಿ ಹೇಳಿದರು. ಸಾಮಾನ್ಯ ಸುಧಾರಣೆಗಳ ವಿಷಯವು ಬೇರೆ, ವಿಶಿಷ್ಟ ಹಕ್ಕುಗಳ ಮತ್ತು ಸಂದರ್ಭಗಳ ವಿಷಯಗಳು ಬೇರೆ ಎಂಬುದನ್ನು ತಿಳಿಸಿ ಕೊಟ್ಟು ಐದಾರು ಗವರ್ನರರಿಗಿಂತ ಲಕ್ಷರಿನಲ್ಲಿ ಒಬ್ಬ ಹಿಂದಿಯು ಸೇರಿ ದೇಶವನ್ನು ರಕ್ಷಿಸುವುದು ಎಷ್ಟೊ ಶ್ರೇಯಸ್ಕರವಾಗಿದೆ ಎಂಬುದನ್ನು ಕೂಡ ಪಂಡಿತಜಿಯವರು ಪ್ರತಿಪಾದಿಸಿದರು. ಪಂಡಿತಜಿಯವರ ಈ ಸಮರ್ಪಕ ಉತ್ತರದಿಂದ ಎದುರುವಾದಿಗಳು ಸಮಾಧಾನ ಪಟ್ಟಾರೆಂದು ನಂಬಿದ್ದೇವೆ.

೬. ಮಂಗಳೂರ ಮುನ್ಸಿಪಾಲಿಟಿಯ ಚುನಾವಣೆಯ ಸಂದರ್ಭವು ಬರುತ್ತಿರುವಾಗ ಇಲ್ಲಿಯ ಸ್ವರಾಜ್ಯ ಪಕ್ಷದವರು ತಮ್ಮ ಕಡೆಯ ಉಮೇದುವಾರರನ್ನು ನಿಲ್ಲಿಸಲಿದ್ದಾರೆಂದು ಗೊತ್ತಾಗುತ್ತದೆ. ಈಗಿನ ಕಾಯದೆ ಕೌನ್ಸಿಲುಗಳೆ ಅಲ್ಲ, ಸ್ಥಾನಿಕ ಸ್ವರಾಜ್ಯದ ಸಂಸ್ಥೆಗಳಾದ ಮುನ್ಸಿಪಾಲಿಟಿ, ತಾಲೂಕು, ಜಿಲ್ಲಾ ಬೋರ್ಡುಗಳು ಇವೆಲ್ಲ ಬಹು ಮಹತ್ವದವು ಮತ್ತು ಲೋಕ ಶಿಕ್ಷಣಕ್ಕೆ ಹಾಗು ಆರೋಗ್ಯ ಶಿಕ್ಷಣಕ್ಕೆ ಅಂಗಭೂತವಾದ ಸಂಸ್ಥೆಗಳಾದ ಕಾರಣ ಸ್ವರಾಜ್ಯ ಪಕ್ಷದವರು ಪ್ರಥಮತಃ ಇವುಗಳನ್ನು ಆಕ್ರಮಿಸುವುದು ಅತ್ಯಂತ ಹಿತಾವಹವಾಗಿದೆ. ಇಲ್ಲಿಯ ಸ್ವರಾಜ್ಯ ಪಕ್ಷದ ಉಪಕ್ರಮವು ಸ್ತುತ್ಯವಾಗಿದೆ. ಅದು ಯೋಗ್ಯರೂ, ನಿರಲಸರೂ, ನಿಜವಾದ ದೇಶಭಕ್ತಿಯುಳ್ಳವರೂ ಆದ ಉಮೇದುವಾರರನ್ನು ನಿಲ್ಲಿಸಿ ಈ ಕಾರ್ಯದಲ್ಲಿ ಸಂಪೂರ್ಣ ಯಶಸ್ಸನ್ನು ಪಡೆಯಲೆಂದು ನಾವು ಬಯಸುತ್ತೇವೆ.

ಮಂಗಳೂರು.

ಮಂಗಳೂರು ತಾಲೂಕಿನ ಸ್ವರಾಜ್ಯಪಕ್ಷದ ಸಭೆಯು ಕೊಡಿಯಾಲಬೈಲಿನ ಆಫೀಸಿನಲ್ಲಿ ನಾಳೆ ಶನಿವಾರ ಬೆಳಗ್ಗೆ ೮ ಗಂಟೆಗೆ ಜರಗುವದು ಮತ್ತು ಆಗ ಮಂಗಳೂರ ಮುನ್ಸಿಪಾಲಿಟಿಯ ಸಭಾಸದರ ಜಾಗೆಯು ಖಾಲಿಬೀಳುವ ಚುನಾವಣೆಗೆ ಸ್ವರಾಜ್ಯಪಕ್ಷದ ಕಡೆಯಿಂದ ಉಮೇದವಾರರಾಗಿ ನಿಲ್ಲುವವರನ್ನು ಗೊತ್ತುಮಾಡಲಾದೀತು, ಆದ್ದರಿಂದ ಉಮೇದುವಾರರಾಗಿ ನಿಲ್ಲುವವರು ತಮ್ಮ ಹೆಸರುಗಳನ್ನು ತಿಳಿಸಬೇಕೆಂಬುದಾಗಿ ಇಲ್ಲಿಯ ಸ್ವರಾಜ್ಯಪಾರ್ಟಿಯ ಗೌರವ ಕಾರ್ಯದರ್ಶಿಗಳಾದ ಕೆ. ಆರ್. ಕಾರಂತರು ತಿಳಿಸುತ್ತಾರೆ.

ಕಳೆದ ಎಪ್ರೀಲು ಮತ್ತು ಮೇ ತಿಂಗಳುಗಳಲ್ಲಿ ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ ಬೋರ್ಡು ಪ್ರಾಂತ್ಯದಲ್ಲಿ ೬,೫೭೭ ಜನನಗಳೂ ೪,೧೯೯ ಮರಣಗಳೂ ಆಗಿದ್ದವು. ಮರಣಗಳ ಪೈಕಿ ೮೯ ಮರಣಗಳು ಸಿಡುಬು ರೋಗದಿಂದ ಆಗಿದ್ದವು.

The Calicut Bank, Ltd.,
ದಿ ಕೆಲಿಕಟ್ ಬೇಂಕ್, ಲಿಮಿಟೆಡ್,

ಹೆಡ್ ಆಫೀಸು — ಕಲ್ಲಿಕೋಟೆ.

ಬ್ರಾಂಚುಗಳು: — ಮುಲ್ಲಸ್‌ಚೇರಿ, ತಲಚೇರಿ, ಕೊಚ್ಚಿ ಮತ್ತು ಪಾಲ್ಘಾಟು.

ರಿಜಿಸ್ಟರ್ಡ್ ಮತ್ತು ಅಧಿಕಾರಗೊಳಿಸಲ್ಪಟ್ಟ ಮೂಲಧನ ರೂ. 5,00,000—0—0.

ರೂಪಾಯಿ 10ರ 50,000 ಪಾಲುಗಳು.

(30—8—1924)ರ ವರೆಗೆ ಮೌಲ್ಯ ಮೂಲಧನ ರೂಪಾಯಿ 1,81,850—0—0.

ಒಂದು ವರುಷದ ಕಾಯಂ ಠೇವಣಾತಿಗೆ ಬಡ್ಡಿ ದರ ಸೇಕಡಾ ರೂ. 7—8—0.

ಕಳೆದ 4 ವರುಷಗಳಲ್ಲಿ ಪಾಲುಗಾರರಿಗೆ ಸೇಕಡಾ 12ರಂತೆ ಬಡ್ಡಿ ಹಂಚಿದೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಸಿ. ಕೃಷ್ಣನ್, ಬಿ. ಎ. ಬಿ. ಎಲ್.,
ಮೆನೇಜಿಂಗ್ ಡೈರೆಕ್ಟರ್.

ಡೈರೆಕ್ಟರರಲ್ಲಿ ಒಬ್ಬರು —
ಎಮ್. ನಾರಾಯಣ ಕಾಮತ್, ಬಿ. ಎ.,
ಪ್ಲೀಡರ್, ಕುಂದಾಪುರ.

ತಾ. ೧—೮—೧೯೨೪ನೇ ಶನಿವಾರ ಲೋಕಮಾನ್ಯ ತಿಲಕರ ಪುಣ್ಯದಿನವನ್ನು ಆಚರಿಸುವ ಸಲುವಾಗಿ ಆ ದಿವಸ ಅಪರಾಹ್ನ ಗಂಟೆ ೬ಕ್ಕೆ ಕರ್ನಾಟಕ ತಿಲಕ ವಿದ್ಯಾಲಯದಲ್ಲಿ ಜರಗತಕ್ಕ ಮಹಾಸಭೆಗೆ ಸರ್ವರೂ ಬರಬೇಕಾಗಿ ವಿನಂತಿ.

ಇಲ್ಲಿನ ಮಿಸ್ಸೆಸ್ ಲೂಸಿ ಶ್ರೇಷ್ಠರ ಮೋಟಾರ ಡ್ರೈವರ ಜೆಪ್ಪು ಜೋಸೆಫ್ ಅಂಬ್ರೋಜ್ ಎಂಬವನು, ಮಿಸೆಸ್ ಶ್ರೇಷ್ಠರ ಬಾಬ್ತು ಇಂಪೀರಿಯಲ್ ಬೇಂಕಿನಲ್ಲಿ 300 ರೂಪಾಯಿಗಳ ಚೆಕ್ ವಟಾಯಿಸಿ ಆ ಹಣತೆಕ್ಕೊಂಡು ಓಡಿಹೋಗಿರುತ್ತಾನಾಗಿ ತಿಳಿದು ಬರುತ್ತದೆ.

ನಮ್ಮ ಜಿಲ್ಲೆಯವರಾದ ಮದ್ರಾಸು ಹೈಕೋರ್ಟಿನಲ್ಲಿ ಕನ್ನಡ ಟ್ರಾನ್ಸ್‌ಲೇಟರ್ ಮ. ರಾ. ಯನ್. ವೆಂಕಪ್ಪ ನಾಯ್ಕರು ಹಣದ ಅಪಹಾರದ ಸಂಬಂಧ ಸಮುದ್ರದಲ್ಲಿ ಬಿದ್ದು ಆತ್ಮಹತ್ಯ ಮಾಡಿಕೊಂಡಿರುವರು.

ಇಲ್ಲಿಯ ಪೊಲೀಸು ಅಫೀಸು ಎದುರು ಇರುವ ಸ್ಟಾರ್ ಯೂನಿಯನ್ ಕ್ಲಬ್ಬಿನ ವರ್ಧಂತ್ಯುತ್ಸವವೂ ಮತ್ತು ಮ. ರಾ. ಯಮ್. ಗಿರಿಯಪ್ಪ ಬಿ. ಎ. ಡಿಪ್ಯುಟಿ ರಿಜಿಸ್ಟ್ರಾರರಿಗೆ ಕೊಟ್ಟ 'ಎಟ್ ಹೋಮ್' ಪಾರ್ಟಿಯೂ ಇದೇ ಕಳೆದ ತಾ. ೨೪ನೆ ಶುಕ್ರವಾರ ಸಂಜೆ ೭ ಘಂಟೆಗೆ ಮ| ರಾ| ವಕೀಲ್ ಆನಂದ ಕಲ್ಯಾಣ್ ಇವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಲ್ಲಿ ಜರಗಿತು. ಈ ಸಂದರ್ಭದಲ್ಲಿ ಮೆಸ್ಸರ್ಸ್ ವಕೀಲ್ ಸುವರ್ಣ ಡಿಸ್ಟ್ರಿಕ್ಟ್ ಬೋರ್ಡು ಕ್ಲಾರ್ಕ್ ಜಿ. ಮುಕುಂದ ರಾಯರು ಮೊದಲಾದ ಅನೇಕ ಮಂದಿ ಮಹಾಶಯರು ಸಭೆಗೆ ಚಿತ್ತೈಸಿದ್ದರು. ಕ್ಲಬ್ಬಿನ ರಿಪೋರ್ಟು ಓದೋಣ, ಅಂದಿನ ಅತಿಥಿಯಾದ ಮ| ರಾ| ಗಿರಿಯಪ್ಪನವರಿಗೆ ಮಾನಪತ್ರ ಸಮರ್ಪಿಸೋಣ, ಸಭಿಕರ ಯಥೋಚಿತ ಭಾಷಣ, ಕೊನೆಗೆ ಅಧ್ಯಕ್ಷರ ಸ್ಫೂರ್ತಿದಾಯಕವಾದ ಭಾಷಣ ಮೊದಲಾದ ಕಾರ್ಯಕಲಾಪಗಳಾಗಿ ನೆರೆದ ಸಭಿಕರನ್ನು ಯೋಗ್ಯರೀತಿಯಲ್ಲಿ ಹೂ, ಪನ್ನೀರು ಉಪಹಾರಾದಿಗಳಿಂದ ಸತ್ಕರಿಸಿ ಮಂಗಳಗೀತೆಯೊಂದಿಗೆ ಸಭೆಯು ಮುಕ್ತಾಯ ಹೊಂದಿತು.

ಮ| ರಾ| ಯಮ್. ಗಿರಿಯಪ್ಪನವರು ತಾನು ವರ್ಗವಾಗಿ ಕೊಯಂಬುತ್ತೂರಿಗೆ ಹೋಗುತ್ತೇನಾದರೂ ಎಂದಿನಂತೆ ಕ್ಲಬ್ಬಿಗೆ ತನ್ನಿಂದ್ದ ಕೂಡಿದ ಮಟ್ಟಿಗೆ ಸಹಾಯ ಮಾಡುತ್ತೇನೆಂದೂ, ಹಿಂದೂ ಪತ್ರಿಕೆಯನ್ನು ತನ್ನ ಲೆಖ್ಖದಲ್ಲಿ ಕ್ಲಬ್ಬಿಗೆ ಕೊಡುವ ಏಲಿವಾರಿ ಮಾಡುತ್ತೇನೆಂದೂ ಮಾತು ಕೊಟ್ಟಿರುವರು.

ಗೌಡಸಾರಸ್ವತ ಬ್ರಾಹ್ಮಣರ ಮಹಾ ಸಭೆಯ ಸರ್ವಸಾಧಾರಣ ಸಭೆಯು ತಾ. ೯—೮—'೨೫ನೆಯ ಆದಿತ್ಯವಾರ ಸಂಜೆ ೫ ಗಂಟೆಗೆ ಗೌಡಸಾರಸ್ವತ ಬ್ರಾಹ್ಮಣರ ಕ್ಲಬ್ಬಿನಲ್ಲಿ ಮುಂದಿನ ಸಂಗತಿಗಳನ್ನು ಚರ್ಚಿಸುವುದಕ್ಕಾಗಿ ಜರಗುವದು. ೧. ಚಾಲು ವರ್ಷದ ಕಾರ್ಯಕಾರಿ ಜನರ ಚುನಾವಣೆ. ೨. ಸಭೆಯ ಉದ್ದೇಶಗಳನ್ನು ಹೇಗೆ ಕಾರ್ಯರೂಪದಲ್ಲಿ ತರಬಹುದೆಂಬುದರ ವಿಷಯ. ಠರಾವುಗಳನ್ನು ತರಲಿಚ್ಛಿಸುವ ಮೆಂಬರರು ಆಗೋಸ್ತು ತಾ. ೮ರೊಳಗೆ ಸಬ್ ಆಫೀಸು ಸಮ್ಮರ್ ಟವರ್ ಕೊಡಿಯಾಲ ಬೈಲ ಈ ವಿಳಾಸಕ್ಕೆ ತಮ್ಮ ಠರಾವುಗಳನ್ನು ಕಳುಹಿಸಿಕೊಡಬೇಕೆಂದು ಅಧ್ಯಕ್ಷರಾದ ರಾ| ವೆಂಕಟರಾಯ ನಾಯ್ಕರು ತಿಳಿಸುತ್ತಾರೆ.

ಬರುವ ತಿಂಗಳ ತಾ. ೧೩—೮—೧೯೨೫ನೇ ಗುರುವಾರ ಮಧ್ಯಾಹ್ನ ೩ ಗಂಟೆ ಸಮಯಕ್ಕೆ ಇಲ್ಲಿಯ ಮಂಗಳೂರು ತಾಲೂಕು ಬೋರ್ಡು ಮೆಂಬರರ ಸಭೆಯು ತಾಲೂಕು ಬೋರ್ಡ ಆಫೀಸಿನಲ್ಲಿ ಜರಗುವುದು. ಇದರಲ್ಲಿ ಡಿಸ್ಟ್ರಿಕ್ಟ್ ಬೋರ್ಡು ಸಭಾಸದರೊಬ್ಬರನ್ನೂ ತಾಲೂಕು ಬೋರ್ಡಿನ ಉಪಾಧ್ಯಕ್ಷರನ್ನೂ ಮತ್ತು (Standing committe) ಸ್ಟೆಂಡಿಗ ಕಮಿಟಿಯ ಸಭಾಸದರನ್ನು ಚುನಾಯಿಸಲ್ಪಡುವರು.

ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮ ಸಂಘದ ಮೆಂಬರರ ವಾರ್ಷಿಕ ಮಹಾ ಸಭೆಯು ಇದೇ ತಾ. ೮—೮—'೨೫ನೇ ಶನಿವಾರ ಅಪರಾಹ್ನ ಗಂಟೆ ೩-೩೦ಕ್ಕೆ ಸರಿಯಾಗಿ ಡೊಂಗರಕೇರಿಯಲ್ಲಿರುವ ವೈದ್ಯಾಶ್ರಮದ ಉಪ್ಪರಿಗೆಯಲ್ಲಿ ಸೇರಬೇಕೆಂತ ನಿರ್ಣಯಿಸಿರುವುದರಿಂದ ಎಲ್ಲಾ ಮೆಂಬರರೂ ಈ ದಿನ ಸದರಿ ಮಹಾ ಸಭೆಗೆ ದಯಮಾಡಿ ಬರಬೇಕಾಗಿ ಸದರಿ ಸಂಘದ ಸೆಕ್ರೆಟರಿಗಳಾದ ವಿ. ಶ್ರೀನಿವಾಸ ಕಾಮತರು ತಿಳಿಸುತ್ತಾರೆ.

ಪತ್ರವ್ಯವಹಾರ.

ಬೆಳ್ತಂಗಡಿ ಸಹಕಾರ ಸಾಹಿತ್ಯ ಸಮ್ಮೇಳನದ ಜನ್ಮ, ಜ್ಞಾನೋದಯ ಯೂನಿಯನ್ ಕ್ಲಬ್ಬಿನ ಆಕಾಲ ಮರಣ.

ಸ್ವಾಮಿ, ಬೆಳ್ತಂಗಡಿ ತಾ. ೨೫-೭-'೨೫.

ಸುಮಾರು ಎರಡು ವರುಷಗಳ ಹಿಂದೆ ನಮ್ಮ ಬೆಳ್ತಂಗಡಿ ಕಸಬೆಯಲ್ಲಿ ಸಹಕಾರಿ ನೌಕರರೂ ಪಟ್ಟಣದ ನಿವಾಸಿಕರೂ ಸೇರಿ ಪೇಟೆಯಲ್ಲಿ ಒಂದು ವಾಚನಾಲಯವನ್ನು ಸ್ಥಾಪಿಸಿದರು. ಈ ಸಂಸ್ಥೆಯು ಸುಮಾರು ಒಂದು ವರ್ಷದ ಪರಿಯಂತರ ಕ್ರಮದಂತೆ ಅಭಿವೃದ್ಧಿಯನ್ನು ಹೊಂದಿ ಕಾರಣಾಂತರದಿಂದ ಸ್ವಲ್ಪ ಸಮಯದಲ್ಲಿಯೇ ನಿರ್ನಾಮವಾಯಿತು. ಉಪ್ಪಿನಂಗಡಿ, ಕಾಸರಗೋಡು ತಾಲೂಕುಗಳ, ಅದೂರು ಬಾಡೂರು ರಾಮಕುಂಜ ಮುಂತಾದ ಸಹಕಾರ ಸಂಘಗಳ ಉದ್ಧಾರದ ಸಮಯದಲ್ಲಿ ಅಧಿಕಾರಿಗಳ ವರ್ಗಕ್ಕೆ ಸೇರಿದ್ದು ಸಂಘಗಳ ಲೆಖ್ಖಪತ್ರಗಳನ್ನು ತನಖಿ ಮಾಡುತ್ತಲಿದ್ದ ಮಹನೀಯರೊಬ್ಬರು ಇಲ್ಲಿಗೆ ವರ್ಗವಾಗಿ ಬರದ ಕೆಲವು ದಿವಸಗಳಲ್ಲಿಯೇ "ಜ್ಞಾನೋದಯ ಯೂನಿಯನ್ ಕ್ಲಬ್" ಎಂಬ ನಾಮಾಂಕಿತದಿಂದ ಇನ್ನೊಂದು ವಾಚನ ಮಂದಿರವನ್ನು ಸ್ಥಾಪನೆ ಮಾಡಿದರು. ಬರೇ ೬ ತಿಂಗಳೊಳಗಾಗಿಯೇ ಸಂಘಸ್ಥಾಪಕರಾದ ಈ ನಮ್ಮ ಸಹಕಾರ ಬಂಧುಗಳು, ತಮಗೆ ಸಾಕಷ್ಟು "ಸಮಯವಿಲ್ಲವೆಂಬ" ನೆವನದಿಂದ ಕ್ಲಬ್ಬಿನ ಮೆಂಬರರುಗಳಿಗೆ ರಾಜಿ ಅರ್ಜಿಯನ್ನು ಕಳುಹಿಸಿಯೇ ಬಿಟ್ಟರು. ಇವರ ಮಾರ್ಗವನ್ನೇ ಅನುಸರಿಸಿ, ಯೂನಿಯನ್ನಿನ ಸುಪರವೈಸರ್ ಮಹಾಶಯರೂ, ವಿದ್ಯಾವರ್ಗಕ್ಕೆ ಸೇರಿದ ಮಹನೀಯರೊಬ್ಬರು ಅಲ್ಪ ಅವಧಿಯಿಂದ ಕ್ಲಬ್ಬಿನೊಡನೆ ಅಸಹಕಾರವನ್ನು ಕೈಕೊಂಡರು. ಜ್ಞಾನೋದಯದ ರೀಡಿಂಗ್ ರೂಮಿನ ಎಲ್ಲಾ ಮೆಂಬರರಿಗಾಗದೆ ಕೆಲವರಿಗೆ ಮಾತ್ರವೇ ಉಂಟಾಗುವ ಮಾತ್ರ ತೋಚಿಸೀಯ. ಮೊನ್ನೆ ಜುಲಾಯಿ ೬ನೇ ತಾರೀಕಿನ ದಿವಸ ಇಲ್ಲಿ ಜರಗಿದ "ಸಹಕಾರಿ ಜಯಂತಿ"ಯ ಸಮಯದಲ್ಲಿ ಸಹಕಾರ ಸಂಘಗಳ ಇನ್ಸ್‌ಪೆಕ್ಟರವರು "ಸಹಕಾರ"ವೆಂಬದರ ಕುರಿತು ಚೆಲೋ ಉಪನ್ಯಾಸವನ್ನು ಕೊಟ್ಟಿರು. ಆದರೆ ಇವರಲ್ಲಿ ಮಾತ್ರ ಸಹಕಾರದ ತತ್ವವು ಸ್ವಲ್ಪ ಕಡಿಮೆ. ಸಹಕಾರ ಜಯಂತಿ ಎಂಬುದು ಶ್ರೀಕೃಷ್ಣ ಜಯಂತಿಯೋ ಎಂಬಂತೆ ಭಾವಿಸಲಾಯಿತು. ಆದರೆ ಇಷ್ಟು ವಿಜೃಂಭಣೆಯಿಂದ ನೆರವೇರಿದ ಈ ಸಹಕಾರ ಜಯಂತಿಯ ದಿವಸವೇ ನಮ್ಮ ಜ್ಞಾನೋದಯ ಸಮಾಜವು ಮೃತ್ಯುಶಯ್ಯೆಯನ್ನು ಹೊಂದಿತು. ಅಂದು ಸಹಕಾರವನ್ನು ಬೋಧಿಸಿ ಕ್ಲಬ್ಬನ್ನು ಸ್ಥಾಪಿಸುವುದರಲ್ಲಿ ತಮ್ಮ ತನು, ಮನ, ಧರ್ಮಗಳನ್ನು ಅರ್ಪಿಸಿ ಕಡೆಯಲ್ಲಿ ಅದಕ್ಕೆ ತಿಲಾಂಜಲಿಯನ್ನು ಕೊಟ್ಟ ನಮ್ಮ ಸಹಕಾರ ಮತ್ತು ಶಿಕ್ಷಿತ ವರ್ಗದ ಬಂಧುಗಳು ಇಂದು ಬೆಳ್ತಂಗಡಿಯಲ್ಲಿ ಸಹಕಾರ ಜಯಂತಿಯ ಸ್ಮಾರಕವಾಗಿ "ಕೊಓಪರೇಟಿವ್ ಲಿಟರರಿ ಎಸೋಸಿಏಶನ್" ("ಸಹಕಾರ ಸಾಹಿತ್ಯ ಸಮ್ಮೇಲನ") ಎಂಬ ನಾಮಧೇಯದಿಂದ ಒಂದು ಸಾಮಾಜಿಕ ಪುಸ್ತಕ ಭಂಡಾರವನ್ನು ಸ್ಥಾಪಿಸುವುದರಲ್ಲಿ, ನೀವು ಸಹಾಯ ಮಾಡಿರಿ ಎಂಬ ಇವರ ಬೋಧನೆಯು ಎಷ್ಟು ಹೃದಯಂಗಮವಾಗಿದೆ. ನೆರೆದ ಸಭಿಕರಾದರೋ ನಾಲ್ಕಾರು ಹಳ್ಳಿಯ ಸಹಕಾರ ಸಂಘದ ಪ್ರತಿನಿಧಿಗಳು, ಮಾನ್ಯ ಇನ್ಸಪೆಕ್ಟರವರ ದಾಕ್ಷಿಣ್ಯಕ್ಕೆ ಗುರಿಯಾದುದರಿಂದ ಸ್ವಲ್ಪ ಸಹಾಯಮಾಡುತ್ತೇವಾಗಿ ಒಪ್ಪಲೇ ಬೇಕಾಯಿತು. "ಹೆಸರು ಕ್ಷೀರಸಾಗರ ಭಟ್ಟ ನೀರು ಮಜ್ಜಿಗೆಗೆ ತತ್ವಾರ"ವೆಂಬ ಲೋಕೋಕ್ತಿಯಂತೆ ಸಹಕಾರ ಸಾಹಿತ್ಯ ಸಮ್ಮೇಳನ ಎಂಬ ಉದ್ದವಾದ ಹೆಸರಿದ್ದರೂ ಇದರ ಹೆಚ್ಚಿನ ಅಂಶವು ಖಂಡಿತವಾಗಿಯೂ ಅಸಹಕಾರವನ್ನೇ ಸೂಚಿಸುತ್ತದೆ. ಕಾರಣ? ಮುಖ್ಯವಾಗಿ ಬೆಳ್ತಂಗಡಿಯ ಎಲ್ಲಾ ನಿವಾಸಿಕರಿಗೆ ಆಮಂತ್ರಣವೇ ಇರಲಿಲ್ಲ. ಇರಲಿ. ಪಟ್ಟಣದಲ್ಲಿ ಪ್ರಾಮುಖ್ಯವಾದ ಸಹಕಾರ ಸಂಘಕ್ಕಾದರೂ ಆಮಂತ್ರಣವಿತ್ತೆ? ಗುರುವಾಯನ ಕೆರೆ ಯೂನಿಯನ್ನಿನ ಅಧ್ಯಕ್ಷರೂ ಪೇಟೆಯಲ್ಲಿ ಹಾಜರು ಇದ್ದರೂ ಈ ಉತ್ಸವಕ್ಕೆ ಬಾರದಿರಲು ಕಾರಣವೇನು. ಬೆಳ್ತಂಗಡಿಯಿಂದ ೨ ಮೈಲು ದೂರದಲ್ಲಿ ವಾಸವಾಗಿರುವ ಯೂನಿಯನ್ನಿನ ಕಾರ್ಯದರ್ಶಿಯವರನ್ನೂ ಕರೆತರುವರೆ ಯೂನಿಯನ್ನಿನ ಸುಪರವ್ಯಾಜರರು ಸ್ವತಹ ಹೋಗಿರಲು ಪಟ್ಟಣದಲ್ಲಿಯೇ ½ ಮೈಲು ಸಮೀಪದಲ್ಲಿರುವ ಅಧ್ಯಕ್ಷರನ್ನು ಕರತರುವಷ್ಟು ಯೋಗ್ಯತೆಯು ಇವರಲ್ಲಿರಲಿಲ್ಲವೆ? ಸಹಕಾರತತ್ವದಲ್ಲಿ ಎರಡನೇ ಮೊಳಹಳ್ಳಿ ಶಿವರಾಯರೆನ್ನಿಸಿಕೊಳ್ಳುವ ಬಂಗಾಡಿ ಸಂಘದ ಡಿರೆಕ್ಟರವರು ಸ್ವತಹಾ ಹಾಜರಿರುತ್ತಾ ಅಧ್ಯಕ್ಷರ ಅಗತ್ಯ ಇಲ್ಲವೆಂದು ಇವರು ಭಾವಿಸಿದರೇ? ಇದೆಲ್ಲಾ ಕೇವಲ ಸ್ವಾರ್ಥಸಾಧನೆಯಲ್ಲದೆ ಸಹಕಾರೋದ್ಧಾರವೆಂದು ಯಾರು ತಾನೆ ಹೇಳಬಲ್ಲರು.

"ಆಮಂತ್ರಣವಿಲ್ಲದ ಪೇಟೆಯ ಬಡ ಸಹಕಾರಿ".

ಕರ್ಣಾಟಕ ಪ್ರಾಂತದಲ್ಲಿ ಕಾಣದಿರುವ ಚಂದ್ರಗ್ರಹಣ.

ಸ್ವದೇಶಾಭಿಮಾನಿಯ ಪ್ರಿಯ ವಾಚಕರೇ!

ಈ ಕ್ರೋಧನ ಸಂವತ್ಸರದ ಶ್ರಾವಣ ಶುದ್ಧ ಪೌರ್ಣಿಮಿ ದಿನ ಸಂಭವಿಸುವ ಚಂದ್ರಗ್ರಹಣವನ್ನು ಆಧುನಿಕ ನೂತನ ಕರಣ ಗ್ರಂಥದಿಂದ ಗುಣಿಸಿದರೆ ಇದೆ ಆಗೋಸ್ತು ತಾರೀಕು ೪ನೇ ಮಂಗಳವಾರ ಸಾಯಂಕಾಲ ಸ್ಟೆಂಡಾರ್ಡ್ ಘಂಟೆ ೬-೪೭ಕ್ಕೆ ಗ್ರಹಣವು ಅಂತ್ಯವಾಗುವುದೆಂತ ಕಾಣುತ್ತದೆ. ಬೆಂಗಳೂರನ್ನುಳಿದು ಸಮಗ್ರ ಕರ್ಣಾಟಕ ಪ್ರಾಂತದಲ್ಲಿ ಗ್ರಹಣವು ಪೂರ್ಣ ಬಿಡುಗಡೆಯಾದನಂತರವೆ ಚಂದ್ರನುದಯಿಸುವದರಿಂದ ಕರ್ಣಾಟಕದ ಯಾವ ಭಾಗದಲ್ಲಿಯೂ ಈ ಗ್ರಹಣವು ಕಣ್ಣಿಗೆ ಕಾಣಲಿಕ್ಕಿಲ್ಲ. ಪರಂತು ಬೆಂಗಳೂರಲ್ಲಿ ಮಾತ್ರ ಗ್ರಹಣ ಮೋಕ್ಷ ಕಾಲಕ್ಕಿಂತ ಮೂರು ಮಿನಿಟುಗಳ ಮೊದಲು ಚಂದ್ರೋದಯವಾಗುವದರಿಂದ ಗಣಿತ ಶಾಸ್ತ್ರ ಪ್ರಕಾರ ಈ ಗ್ರಹಣವು ಬೆಂಗಳೂರಿಗೆ ದೃಶ್ಯವಿರುವದು. ಗ್ರಹಣವು ಪ್ರತ್ಯಕ್ಷ ಕಾಣದ ಊರುಗಳಲ್ಲಿ ಗ್ರಹಣ ನಿಮಿತ್ತವಾದ ಸ್ನಾನದಾನಾದಿಗಳನ್ನಾಚರಿಸತಕ್ಕದ್ದಿಲ್ಲ. ಅದರಂತೆ ಈ ದಿನ ಉಪಾಕರ್ಮ, ಶ್ರಾದ್ಧ, ಭೋಜನ ವಗೈರೆಗಳಿಗೂ ಯಾವ ದೋಷವೂ ಇರುವುದಿಲ್ಲ. ಇರಲಿ.

ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಕಟವಾದ ಉಡುಪಿಯ ಎರಡು ಪಂಚಾಂಗ, ಮಂಗಳೂರು ಪಂಡಿತ ನಾರಾಯಣಾಚಾರ್ಯರ ಪಂಚಾಂಗ, ಬಾಸೆಲ್ ಮಿಶನಿನವರ ಕನ್ನಡ ಪಂಚಾಂಗ, ಯಮ್ಮಾಳ ಬಸ್ತಿಯ ಇಬ್ರುರು ತಯಾರಿಸಿದ ಪಂಚಾಂಗ, ಇವೆಲ್ಲ ಪಂಚಾಂಗಗಳಲ್ಲಿಯೂ, ಹಲವು ಡೈರಿಗಳಲ್ಲಿಯೂ, ಈ ಗ್ರಹಣವು ನಮ್ಮಲ್ಲಿ "ಗ್ರಸ್ತೋದಯ"ವೆಂದು ಬರೆಯಲ್ಪಟ್ಟಿದೆ. ಇದು ಸರಿಯಲ್ಲ. ಯಾಕಂದರೆ, ಈ ಪಂಚಾಂಗಗಳ ಹಾಗು ಡೈರಿಗಳ ಗಣಿತವು ಈ ಕಾಲಕ್ಕೆ ದೃಕ್ಸಾಮ್ಯವಿಲ್ಲದ ಮೊದಲಿನ ಸ್ಥೂಲಗಣಿತ ಸಿದ್ಧಾಂತದಿಂದ ಮಾಡಲ್ಪಡುತ್ತದೆ. ಅದು ಕಾರಣವೆ ಈ ಪೂರ್ವೋಕ್ತ ಪಂಚಾಂಗಗಳಲ್ಲಿಯೂ, ಡೈರಿಗಳಲ್ಲಿಯೂ, ಬರೆಯಲ್ಪಡುವ ಗ್ರಹಣಾದಿ ಕಾಲಗಳು ತಪ್ಪಿಹೋಗುವುವು. ಕರ್ಣಾಟಕ ಪ್ರಾಂತದ ಕೆಲ ಪಂಚಾಂಗಕರ್ತರಿಗೆ ಮೊದಲಿನ ಗಣಿತಸಿದ್ಧಾಂತಗಳೊಂದೂ ಈಗ ಜುಲಾಬರದೆ ಅವುಗಳಿಂದ ಗುಣಿಸಿದ ಗ್ರಹಣಾದಿಗಳು ಬಹಳ ವ್ಯತ್ಯಾಸವಾಗಿ ಕಾಣುತ್ತವೆಂಬೀ ಸಂಗತಿಯು ಗೊತ್ತಿರುವದು. ಇದಕ್ಕಾಗಿ ಅಂಥವರು ತಮ್ಮ ಪಂಚಾಂಗದ ಗ್ರಹಣವನ್ನಷ್ಟು ಆಧುನಿಕ ಸೂಕ್ಷ್ಮ ದೃಗ್ಗಣಿತದಿಂದಲೆ ಗುಣಿಸಿ ಬರೆದುಬಿಡುವರು. ನಮ್ಮ ಜಿಲ್ಲೆಯ ಪಂಚಾಂಗಗಳ ಪೈಕಿ ಉದ್ಯಾವರ ಮತ್ತು ಚಕ್ರಕೋಡಿ ಪಂಚಾಂಗಗಳೆರಡೂ ಈತರದ್ದಾಗಿವೆ. ಈ ಪಂಚಾಂಗಗಳೆರಡೂ ಪ್ರಾಚೀನ ಸಂಪ್ರದಾಯದ ಗಣಿತದ್ದಾದರೂ ಇದರಲ್ಲಿ ಬರೆಯಲ್ಪಡುವ ಗ್ರಹಣವು ನೂತನ ದೃಗ್ಗಣಿತದ್ದಾಗಿರುವದರಿಂದ ಜನರ ನಿದರ್ಶನಕ್ಕೆ ಸರಿ ಬರುತ್ತದೆ. ಇತರ ಪಂಚಾಂಗಕರ್ತರು ಹೀಗೆ ಮಾಡದಿರುವದರಿಂದಲೆ ಅವರ ಪಂಚಾಂಗದ ಗ್ರಹಣವು ತಪ್ಪಾಗುತ್ತದೆ. ಈಗ ಮಳೆಗಾಲವಾದ್ದ ಪೌರ್ಣಿಮ ದಿನ ಸಾಯಂಕಾಲ ಪರೀಕ್ಷಿಸಲಿಕ್ಕೆ ಅನುಕೂಲವಾಗುವುದು ಸಂದೇಹವಾಗಿ ತೋರುತ್ತದೆ. ನಾವು ಗಣಿತ ಮಾಡಿರುವ ಈ ಸೂಕ್ಷ್ಮ ಕರಣ ಗ್ರಂಥವು ಈ ಕಾಲಕ್ಕೆ ದೃಕ್ಸಾಮ್ಯವಿರುತ್ತದೆಂಬುದನ್ನು ಕಳೆದ ಹನ್ನೆರಡು ವರ್ಷಗಳಿಂದ ಪರೀಕ್ಷಿಸಿ ನಿರ್ಣಯ ಮಾಡಿರುತ್ತೇವೆ. ಪುಣೆಯ ಪಂಚಾಂಗ ಪ್ರವರ್ತಕ ಕಮಿಟಿಯವರಿಂದ ಈ ಕಳೆದ ವರ್ಷ ಪ್ರಕಟಿಸಲ್ಪಟ್ಟ ನೂತನ ಕರಣ ಗ್ರಂಥವಾದ "ಕರಣಕಲ್ಪಲತಾ" ಪ್ರಕಾರವೂ ಈ ಗ್ರಹಣಕಾಲವು ನಾವು ಮೇಲೆ ತೋರಿಸಿದ ಕಾಲಕ್ಕೆ ಸರಿಯಾಗಿ ಬರುತ್ತದೆ. ಇತ್ಯಾದಿ ಕಾರಣಗಳಿಂದ ಈ ಗ್ರಹಣವು ಕರ್ಣಾಟಕದಲ್ಲಿ ಕಾಣುವುದೆಂತ ಯಾರೂ ತಿಳಿಯತಕ್ಕದ್ದಿಲ್ಲ. ಕೆಲವು ಊರಿನಲ್ಲಿ ಗ್ರಹಣದಿನವಾಗುವ ಸೂಕ್ಷ್ಮ ಚಂದ್ರೋದಯ ಕಾಲವನ್ನು ಈ ಕೆಳಗೆ ಸ್ಟೇಂಡಾರ್ಡ್ ಸಮಯಾನುಸಾರ ಬರೆಯುವೆವು.

ಮದ್ರಾಸಿನಲ್ಲಿ ಸಾಯಂಕಾಲ ಘಂಟೆ ೬-೩೪ಕ್ಕೆ ಚಂದ್ರೋದಯ. ಬೆಂಗಳೂರಿನಲ್ಲಿ ೬-೪೪ಕ್ಕೆ, ಮೈಸೂರಿನಲ್ಲಿ ೬-೪೭ಗೆ, ಬಳ್ಳಾರಿಯಲ್ಲಿ ೬-೪೯॥, ಧಾರ್ವಾರಿನಲ್ಲಿ ೬-೫೫, ಮಂಗಳೂರಿನಲ್ಲಿ ೬-೫೫, ಉಡುಪಿಯಲ್ಲಿ ೬-೫೫॥, ಕುಂದಾಪುರದಲ್ಲಿ ೬-೫೬॥, ಗೋಕರ್ಣದಲ್ಲಿ ೬-೫೯॥. ಸಾಯಂಕಾಲ ಘಂಟೆ ೬-೪೭ಕ್ಕೆ ಗ್ರಹಣವು ಬಿಡುವದರಿಂದ ಆ ಮೇಲೆ ಚಂದ್ರೋದಯವಾಗುವ ಊರುಗಳಲ್ಲಿ ಗ್ರಹಣವು ಕಾಣಲಿಕ್ಕೆ ಸರ್ವಥಾ ಅನುಕೂಲವಿಲ್ಲ. ಮದ್ರಾಸಿನಲ್ಲಿ ೧೩ ಮಿನಿಟು ಗ್ರಹಣವು ಕಾಣುವದು.

ಇಂತಿ, ಕನ್ನಡ ವೈಜಯನ್ತೀ ಪಂಚಾಂಗಕರ್ತರು,
ಕೋ. ಭಟ್ಕಳ ಜಿ. ದ. ಕನ್ನಡ.

ವಿವಿಧ ವಿಷಯಗಳು.

ಪಾಟಣಾ ಪಟ್ಟಣದಲ್ಲಿ ಕೆಲವು ದಿವಸಗಳ ಮುಂಚೆ ಮೌಲಾನಾ ಹಸನ ನಿಜಾಮಿ ಇವರ ಅಧ್ಯಕ್ಷತೆಯಲ್ಲಿ ಮಹಮ್ಮದೀಯರ ಒಂದು ಪರಿಷತ್ತು ಸೇರಿತ್ತು. ಈ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಸನಾತನ ಹಿಂದುಗಳಿಗೆ ಮತ್ತು ಸಾಧು ಪಂಡಿತ ಮೊದಲಾದವರಿಗೆ ಉಪದೇಶವನಾಡಿ ಆರ್ಯ ಸಮಾಜವನ್ನು ಹಬ್ಬಲು ಬಿಡಬಾರದು ಎಂಬಿತ್ಯಾದಿ ವಿಧಾನಗಳನ್ನು ಮಾಡಿದ್ದಾರೆ. ಮೌಲಾನಾ ಸಾಹೇಬರು ಸನಾತನ ಹಿಂದುಗಳ ವಿಷಯವಾಗಿ ತೋರಿಸಿದ ಈ ಪ್ರೀತಿಯು ಅಪೂರ್ವವಾಗಿದ್ದರೂ ಇವರ ಇಂಗಿತವನ್ನು ತಿಳಕೊಳ್ಳುವಷ್ಟು ಮೂಢರು ಸನಾತನಿಗಳಲ್ಲವೆಂಬುದನ್ನು ಅವರು ಮರೆಯ ಕೂಡದು. ಹಿಂದು ಧರ್ಮದ ವಿರುದ್ಧವಾಗಿ ಮಹಮ್ಮದೀಯರು ಅತ್ಯಾಚಾರವನ್ನು ನಡಿಸಿದ್ದಾದರೆ ಆರ್ಯಸಮಾಜದ ಸ್ವಯಂಸೇವಕರು ಅವರ ಅತ್ಯಾಚಾರಗಳನ್ನು ನಿಲ್ಲಿಸುತ್ತಾರೆ. ಈ ಸಿಟ್ಟಿನಿಂದ ಮೌಲಾನಾ ಹಸನ ಸಾಹೇಬರು ಆರ್ಯಸಮಾಜೀಯರನ್ನು ಬೈಯುತ್ತಿದ್ದಾರೆ. ಮತ್ತು ಭೇದೋಪಾಯವನ್ನು ಮಾಡುತ್ತಿದ್ದಾರೆ. ಆದರೆ ಸನಾತನ ಹಿಂದುಗಳ ವಿಷಯವಾಗಿ ಅಕ್ಕರ ಪಡತಕ್ಕ ಈ ಮೌಲಾನರು ತಮ್ಮ ಮತ ಬಂಧುಗಳಿಗೆ ಸದುಪದೇಶವನ್ನು ಮಾಡಿದ್ದಾದರೆ ಅದು ನಿಜವಾಗಿ ಸಾರ್ಥಕವಾಗಬಹುದಿತ್ತು.

ನೋಟೀಸು.

ಮಂಜೇಶ್ವರ ಪಾಂಡುರಂಗ ಪ್ರಭುಗಳ ಮಗ ಗಣಪತಿ ಪ್ರಭು ಕೊಡುವ ನೋಟೀಸು. ಬೆಳ್ಳೂರು ಶ್ರೀನಿವಾಸ ಭಟ್ಟರ ಮಗ ನಾರಾಯಣ ಭಟ್ಟರು ಅಧ್ಯಕ್ಷರಾಗಿ ಇಟ್ಟ ರೂಪಾಯಿ 100, ಚಿಟ್ಟಿಫಂಡಿಗೆ ನಾನು ಒಬ್ಬ ಮೆಂಬರನಾಗಿ ಸೇರಿದ್ದೆ. ಸದರಿ ಚಿಟ್ಟಿಫಂಡಿನ ಹಣದ ಬಾಬ್ತು ರೂ. 112½ಕ್ಕೆ ತಾ. 22—3—'23ರಲ್ಲು ನಾನು ಆ ನಾರಾಯಣ ಭಟ್ಟರಿಗೆ ಡಿಮಾಂಡು ಪ್ರೊಮಿಸರಿ ನೋಟು ಬರಕೊಟ್ಟಿದ್ದೆ. ಸದರಿ ನಾರಾಯಣ ಭಟ್ಟರ ಕುರಿಫಂಡ್ಸು ಕ್ರಮವಾಗಿ ಅಂತ್ಯವಾದ ನಂತರ ಸದರಿ ನೋಟು ನಾನು ಪಡದು ಉಗ್ರಾಣ ಮಂಗೇಶರಾಯರ ವಶಾ ನನ್ನ ಇತರ ರಿಕಾರ್ಡು ಕೂಡ ಇಟ್ಟಿದ್ದ ನಂತರ ಸದರಿ ನೋಟು ನಾನು ಕೇಳಿದ್ದಲ್ಲಿ ಕೊಡುತ್ತೇನಾಗಿ ನಿನ್ನೆವರೆಗೆ ಗ್ರಹಸ್ತರ ಮುಂದೆ ಒಪ್ಪಿ, ನನಗೆ ನಂಬಿಸಿ ಸದರಿ ನೋಟು ಕೊಡುತ್ತೇನೆಂದು ನನಗೆ ತೋರಿಸಿ, ಮೇಜಿನ ಮೇಲೆ ಇಟ್ಟರು. ಆಗ್ಯೆ ಸದರಿ ಮಂಗೇಶರಾಯರಿಗೂ ವ ನನ್ನ ಮಾವ ಜನಾರ್ಧನ ಶ್ಯಾನುಭಾಗರಿಗೂ ಇದ್ದ ಲೇವಾದೇವಿ ಸಮ್ಮಂದ ಎರಡು ಮಾತುಗಳು ನಮ್ಮೊಳಗೆ ಅದ್ದಲ್ಲದೆ ನನ್ನಿಂದ ಮಂಗೇಶರಾಯರು ಆಗಾಗ್ಯೆ ಚಿಲ್ಲರೆ ಚಿಲ್ಲರೆಯಿಂದ ಪಡಕೊಂಡ ಬಾಬ್ತು ಇದೇ ಜುಲಾಯಿ ತಾ, 6ರಲ್ಲು ಮೊತ್ತಾ ಲೆಖ್ಖ ಮಾಡಿ ಬ್ಯಾದರೆ ರೂಪಾಯಿ 78ರ ವಿವಾದವು ಉಂಟಾಯಿತು. ಆ ಕೂಡಲೆ ಸದರಿ ನೋಟನ್ನು ತೆಗೆದು ಮಂಗೇಶರಾಯರು, ಒಳಗೆ ಇಟ್ಟರು. ಮತ್ತು ಈ ವಿಷಯದಲ್ಲಿ ಬುದ್ಧಿ ಕಲಿಸುತ್ತೇನಾಗಿಯೂ, ನೋಟು ಕೊಡಲಿಕ್ಕಿಲ್ಲವೆಂತಲೂ ಸದರಿ ನೋಟು ಟ್ರಾನ್ಸ್‌ಫರ್ ಮಾಡಿಸಿ ಕೊಡುತ್ತೇನಾಗಿಯೂ ನನ್ನ ಹತ್ತಿರ ಶಪತಹಾಕಿಕೊಂಡಿರುತ್ತಾರೆ. ಆದೂದರಿಂದ ಸರ್ವ ಜನರಿಗೆ ಈ ಮೂಲಕ ತಿಳಿಸುವದೇನಂದರೆ, ಸದರಿ ನೋಟು ಟ್ರಾನ್ಸ್‌ಫರ್ ಪಡಕೊಂಡರೆ ಅದು ಸಿಂಧುವಲ್ಲ. ಆ ನೋಟು ಚಿಟ್ಟಿಫಂಡಿಗೆ ಸಮ್ಮಂಧಿಸಿದ್ದು ಚಿಟ್ಟಿಫಂಡು ಅಂತ್ಯವಾಗಿಯದೆ. ನನ್ನಿಂದ ಸದರಿ ನೋಟಿನ ಪ್ರಕಾರ ಏನೂ [illegible]ವಂತಾದಿಲ್ಲ. ಈ ನೋಟು ಟ್ರಾನ್ಸ್‌ಫರ್ ಪಡಕೊಂಡರೆ ಸದರಿ ನೋಟಿನ ಟ್ರಾನ್ಸ್‌ಫರ್‌ನಿಂದ ಹುಟ್ಟುವ ನಷ್ಟವನ್ನು ಅವರೇ ಸಹಿಸತಕ್ಕದ್ದು ಎಂತ ಸರ್ವಜನರಿಗೆ ಈ ಮೂಲಕ ತಿಳಿಸಿರುತ್ತೇನೆ.

ತಾ. 25-7-'25,
ಮಂಗಳೂರು. } M. Ganapathi Prabhu.

ಶುದ್ಧವಾದ ನೀಲಗಿರಿ ಎಣ್ಣೆ

ತಲೆನೋವು, ಶೀತ, ಇನ್‌ಪ್ಲುಯಂಜಾಜ್ವರ,
ವಾತ, ಇತ್ಯಾದಿ ಎಲ್ಲಾ ರೋಗಗಳ
ಮೇಲೆ ಸಿದ್ಧೌಷಧ.

1 ಔನ್ಸು ಬಾಟ್ಲಿ 1ರ ಕ್ರಯ 0—4—0.

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು.

ಆರೋಗ್ಯ ಚಂದ್ರಿಕೆ.

ಮದ್ರಾಸ್.

ಸಂಪಾದಕರು: ಡಾಕ್ಟರ್ ಯು. ರಾಮರಾವ್, ಎಲ್. ಎಮ್. ಸಿ. ಎಫ್. ಎಮ್. ಯು. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವುದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ.

ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ.

ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವುವು.

'ಹೆಲ್ತ್' ಎಂಬ ನಮ್ಮ ಇಂಗ್ಲಿಷ್ ಮಾಸಪತ್ರಿಕೆಯನ್ನೋದಿ ಸಂತೋಷಿಸಿದ ಅನೇಕ ದೊಡ್ಡ ಮನುಷ್ಯರ ಪ್ರೋತ್ಸಾಹದ ಮೇಲೆ ಈ ಕನ್ನಡ ಪತ್ರಿಕೆಯನ್ನು ಹೊರಪಡಿಸಿದೆ.

ಅದರ ಸಂಪುಟ ೨ ಮತ್ತು ೧೧ನೇಯ ನವಂಬರ ೧೯೨೪ ಸಂಚಿಕೆಯಲ್ಲಿ ಕಾಣಿಸಿರುವ ವಿಷಯಗಳು.

ಮುಖಚಿತ್ರ:—ಪರ್ವತವಾಸಿನಿಯಾದ ಒಬ್ಬ ರೂಪವತಿ.
ಶ್ವಾಸಕ್ರಮ ಅಥವಾ ಶ್ವಾಸಾಯಾಮ.
ಹುಣಿಸೇಹಣ್ಣಿನ ಆಹಾರಗುಣಗಳು ಮತ್ತು ಔಷಧಗುಣಗಳು.
ಕಾಲುನಡೆಯೇ ಉತ್ತಮವಾದ ವ್ಯಾಯಾಮವು.
ಜೇನಿನಲ್ಲಿರುವ ಗುಣಗಳು.
ಹಲ್ಲುಗಳ ರಚನೆ, ಪ್ರಯೋಜನ, ಕೆಲಸ ಮುಂತಾದವು.
ಮದದ್ರಾವಕಗಳಿಂದ ಆರೋಗ್ಯಕ್ಕೆ ಉಂಟಾಗತಕ್ಕ ಹಾನಿ.
ಅಂಗಸಾಧನೆ ಮತ್ತು ಬುದ್ಧಿವ್ಯವಸಾಯ (ವಿದ್ಯಾಭ್ಯಾಸ).
ಗಾಯಗಳು, ಮತ್ತು ಗುಳುಗಳು ಮುಂತಾದವು, ಅವುಗಳ ಚಿಕಿತ್ಸೆ.
ನವನಾಗರಿಕ ಪ್ರಪಂಚಕ್ಕೆ ಸಹಜವಾದ ಮೂರು ಕೆಡುಕುಗಳು.
ಒಬ್ಬ ಉಪವಾಸಿಯ ಅನುಭವ.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವುವು. ಆರೋಗ್ಯಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ ರೂ. ೧—೮—೦; ಬಿಡಿಪತ್ರಿಕೆ ಒಂದಕ್ಕೆ ರೂ. ೦—೨—೦ ಹಿಂದಿನ ಸಂಚಿಕೆಗಳು ಕೂಡ ದೊರೆಯುವವು.

ಚಂದಾದಾರರಾಗುವವರು ವಿ. ಪಿ. ಮೂಲಕವಾಗಿ ತರಿಸಿಕೊಳ್ಳುವುದಕ್ಕಿಂತಲೂ ಹಣವನ್ನು ಮುಂಗಡವಾಗಿ ಕಳುಹಿಸುವುದು ಲಾಭಕರ ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು 'ಆರೋಗ್ಯ ಚಂದ್ರಿಕೆ'ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು.

ಪತ್ರವ್ಯವಹಾರಕ್ಕೆ: 'ಆರೋಗ್ಯ ಚಂದ್ರಿಕೆ'
೩೨೩ ತಂಬುಚೆಟ್ಟಿ ಬೀದಿ, ಮದ್ರಾಸ್.

ತುಳು ಪಾಡ್ದನಗಳು.

ದೊಬ್ಬಯ್ರ್, ಕಲ್ಲುರ್ಟಿ-ಕಲ್ಕುಡ, ದೈಯ್ಯೊಂಗುಳು—ತೋಡಕಿನಾರ್, ಮುಂಡತ್ತಾಯ ಪ್ರತಿ ಒಂದಕ್ಕೆ 2 ಆಣೆ. 11½ ಆಣೆ ಟಪ್ಪಾಲು ಚೀಟು ಕಳಹಿಸಿದರೆ 5 ಪುಸ್ತಕಗಳು ಕೂಡಲೇ ಕಳುಹಿಸಲ್ಪಡುವವು.

ವಿಳಾಸ: ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಸಾರಸ್ವತ.

ಕನ್ನಡ ಮತ್ತು ಕೊಂಕಣಿ ಭಾಷೆಗಳಲ್ಲಿ ಕಳೆದ ವಿಜಯದಶಮಿ ದಿನದಿಂದ ಪ್ರತಿ ದಶಮಿಗೆ ಹೊರಡುವ ಪತ್ರಿಕೆ.

ವಿ. ಎಸ್. ಕಾಮತ್,
ಮೂಲ್ಕಿ ವಾಮನ ಕುಡುವ } ಸಂಪಾದಕರು.

ಮತಸಂಸ್ಥೆ ಮತ್ತು ಸಮಾಜಕ್ಕೆ ಸಂಬಂಧಪಟ್ಟ ಇತರ ಸಂಸ್ಥೆಗಳ ಸುಸಂಘಟನ.
ಸಮಾಜದೊಳಗೆ ಅನ್ಯೋನ್ಯ ಸಾಧನೆ.
ಸ್ತ್ರೀಸಮಾಜಕ್ಕೆ ಉಪಯುಕ್ತವಾದ ವಿಷಯಗಳ ನಿರೂಪಣ
ಮತಭಾವನೆಗಳ ಉಜ್ಜೀವನ ಇತ್ಯಾದಿ ಉದ್ದೇಶಗಳಿಂದ ಈ ಪತ್ರಿಕೆಯು ಹೊರಡಿಸಲ್ಪಡುವುದು. ಸಾರಸ್ವತ ಸಮಾಜವು ಇದಕ್ಕೆ ಪ್ರೋತ್ಸಾಹವನ್ನೀಯಬೇಕಾಗಿ ಪ್ರಾರ್ಥನೆ.

ಚಂದಾಹಣ ಅಂಚೆವೆಚ್ಚ ಕೂಡಾ ರೂ. ೧—೪—೦.
ಪೋಷಕರು ರೂ. ೧೦—೦—೦. ಸಹಾಯಕರು ರೂ. ೫—೦—೦.
ಮಾದರಿ ಸಂಚಿಕೆಯನ್ನು ಟಪ್ಪಾಲು ಖರ್ಚಿಗಾಗಿ ಅರ್ಧಾಣೆ ಸ್ಟಾಂಪು ಕಳುಹಿಸುವವರಿಗೆ ಉಚಿತವಾಗಿ ಕಳುಹಿಸುವೆವು.

ಕನ್ನಡ ನಾಡಿನಲ್ಲಿ ಪ್ರತಿ ಕಡೆಯಲ್ಲಿಯೂ
ಖಾತೆದಾರರು ಬೇಕು.

ಎಲ್ಲಾ ಪತ್ರವ್ಯವಹಾರಗಳನ್ನು ಕೆಳಗಿನ ವಿಳಾಸಕ್ಕೆ ನಡೆಸಬೇಕು.

ಯು. ನಾರಾಯಣಾಚಾರ್ಯ, ಕಾರ್ಯದರ್ಶಿ,
ಸಾರಸ್ವತ, ಉಡುಪಿ.

The Canara Bank, Limited, Mangalore.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.	1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟು, ಪೂರ್ಣವಾಗಿ ತೆತ್ತ ಮೂಲಧನವು ರೂ. 300,000—0—0
Reserve and other sinking Funds „ 259,000—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು 259,000—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1925.

K. Venkat Rao,
Secretary

"ಸಾರಸ್ವತಾಸವ."

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪನಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಪ್ಲೂಯನ್ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೨೫ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ೬ಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೨೫ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲ ಪಂಡಿತರು,

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್ ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಪ್ಪ, ಸೋಡಾ ಫಾಕ್ಟರಿ,
ಮಂಗಳೂರು ಟವನಿಗೆ ಮಾತ್ರ.

ವಿದ್ಯಾವಾಚಸ್ಪತಿ
ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ

"ಸಂಕ್ಷೇಪಗೀತೆ"

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ, ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದೆ ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೦. ಟಪ್ಪಾಲು ಖರ್ಚು ಕೂಡಿ ಆಣೆ ೧೧ನ್ನು ಮನಿಯಾರ್ಡರ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ೨ರಕ್ಕಿಂತ ಜಾಸ್ತಿ ಖರ್ಚು ತಗಲುವುದು. ರಖಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.

ಪುಸ್ತಕ ದೊರಿಯುವ ವಿಳಾಸ:—
ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು. ಮತ್ತು
ಕೆನರಾ ಮಿಶ್ಶನ್ ಬುಕ್ ಎಂಡ್ ಟ್ರಾಕ್ಟ್ ಡಿಪೋಜಿಟರಿ,
ಮಂಗಳೂರು.

ಕನ್ನಡಿಗರೇ! **ವಸಂತ.** ಕಣ್ತೆರೆಯಿರಿ!

ಯುಗಾದಿಗಲೇ ಎರಡನೇ ಸಂಪುಟವು ಆರಂಭಿಸಲಿದೆ.

ಇತಿಹಾಸನಿಧಿ ಎಂದರೆ . . . . . . ವಸಂತ
ಸಮಾಜಸುಧಾರಕನೆಂದರೆ . . . . . . ವಸಂತ
ಕೈಗಾರಿಕೆಯ ಸಾಮ್ರಾಜ್ಯವೆಂದರೆ . . . . . . ವಸಂತ
ಕರ್ಣಾಟಕ ಭಾಷಾಸೇವಕನೆಂದರೆ . . . . . . ವಸಂತ
ದೇಶವಿದೇಶ ಬಂಧುವೆಂದರೆ . . . . . . ವಸಂತ
ಕಾದಂಬರಿಗಳ ಭಂಡಾರವೆಂದರೆ . . . . . . ವಸಂತ
ಚಿತ್ತಾಕರ್ಷ ಚಿತ್ರಶಾಲೆಯೆಂದರೆ . . . . . . ವಸಂತ
ದೇಶಭಕ್ತನೆಂದರೆ . . . . . . ವಸಂತ

ಇಂತಹ ವಸಂತನು ಯಾರಿಗೆ ಬೇಕು,
ಯಾರಿಗೆ ಬೇಡ?

48 (ಕ್ರೌನ್ ¼ ಫುಟ ಸೈಜಿನ) ಪುಟಗಳನ್ನು ಒಳಗೊಂಡ ಈ ಪತ್ರಿಕೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3—4—0 ಮಾತ್ರ.

[illegible]
ವಸಂತ ಕಾರ್ಯಾಲಯ,
ಕುಂದಾಪುರ, ಜಿಲ್ಲೆ ಕನ್ನಡ.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀಕಾಶಿ, ಗಯಾ, ಪ್ರಯಾಗ, ಹರಿದ್ವಾರ ಬದ್ರಿನಾರಾಯಣ ದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರ ಕಡೆಯಿಂದಅನುಭವ ತೆಗೆದು ಪ್ರತಿಯೊಂದು ಸಿದ್ಧಮಾಡಿಕೊಂಡು ಬರೆದಿರುವರು; ೧ನೇದು ಮಂತ್ರಪ್ರಕರಣದಲ್ಲಿ ಮಂತ್ರ ಪಠಣದಿಂದಲೂ, ಮಂತ್ರಪ್ರಯೋಗದಿಂದಲೂ. ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವೂ ಇದೆ. ೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ, ಆಸನದಡಿಯಲ್ಲಿ ರೂಪಾಯಿಗಳು ಹೊರಡುವಿಕೆ, ಚೇಟಕವನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ. ೩ನೇದು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನು ಅನುಭವ ತೆಗೆದುಕೊಂಡು ತಿಳಿಸಿರುವರು. ೪ನೇದು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಭಾಷಾಭೇದಗಳ ಪಟ್ಟಿ ಸಹ ಇದರಲ್ಲಿ ಉಂಟು. ಇದು ಪ್ರತಿಯೊಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷಧ ಮಾಡುವ ಕ್ರಮವನು ಚೆನ್ನಾಗಿ ಬರೆದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಳಾಸವು ತಿಳಿಸಿರುವರು. ೫ನೇದು ಯಂತ್ರ ಪ್ರಕರಣದಲ್ಲಿ ವಶೀಕರಣ ಗ್ರಹಪೀಡಾ ನಿವಾರಣ ಭೂತಪ್ರೇತ ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣವಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು, ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರದಿರುವರು. ಈ ಗ್ರಂಥವು ಹತ್ತಿರ ಇದ್ದ ಬಳಿಕ ಎಲ್ಲಾ ದೇವಾನು ದೇವತೆಗಳು ಪ್ರಸನ್ನರೂ ವೈದ್ಯರೂ ಜೋತಿಷ್ಯರು, ಮಾಂತ್ರಿಕರು ತಾಂತ್ರಿಕರೂ ಮನೆಯೊಳಗೆ ಇದ್ದ ಹಾಗೆ ಆಗುತ್ತದೆ. ಇಂಥ ಗ್ರಂಥವು ಯಾರು ಕಣ್ಣಿಂದ ನೋಡಿರಲಿಕ್ಕಿಲ್ಲಾ. ಪ್ರತಿಯವರು ತರಿಸಿ ನೋಡಬೇಕೆಂದು ಇದರ ಬೆಲೆ ಕಿರ ಕಡಿಮೆಮಾಡಿ ಇರುವವು. ೨—೮—೦ ಟಪ್ಪಾಲು ಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ ನಾಟಕ ಕಾವ್ಯ, ಕಥೆಗಳು, ಯಕ್ಷಗಾನ, ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ:—
ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
[illegible] ಬಳ್ಳಾರಿ.

ಜ್ಯೋತಿಷ್ಯ ಸಂಗ್ರಹ.

(1) ಬೃಹಜ್ಜಾತಕ ...
(2) ಉಮಾಮಹೇಶ್ವರ ಸಂವಾದ ಎಂಬ ಜ್ಯೋತಿಷ್ಯ ಕಾಲಚಕ್ರ
(3) ಕೇರಳ ಪ್ರಶ್ನೆ ...
(4) ಪ್ರಶ್ನೋತ್ತರ ರತ್ನಮಾಲಿಕಾ
(5) ನವನೀತಾರಿಷ್ಟ
(6) ಷಟ್ಪಂಚಾಶಿಕ ಗ್ರಂಥ
(7) ನಕ್ಷತ್ರ ಚೂಡಾಮಣಿ ಗ್ರಂಥ
(8) ಮುಹೂರ್ತಪದವೀಗ್ರಂಥ
(9) ಅಷ್ಟದಿಕ್ಪಾಲಕ ಮಂಗಳಾಷ್ಟಕಗಳು ...
(10) ಕಾಲನಿರ್ಣಯಾಭ್ಯೋಯಂ ಗ್ರಂಥ ...
(11) ಸದ್ವ್ಯಾಖ್ಯಾನ ಕಾಲಾಮೃತ...

— ಪ್ರಸಂಗದ ಪುಸ್ತಕಗಳು. —

(1) ಸೇತು ಬಂಧನ ...
(2) ವಸಿಷ್ಠ ಪುರಾಣ ...
(3) ಇಂದ್ರಜೀತು ಕಾಳಗ
(4) ಚಂಡಭೀಮ
(5) ಮೃದುನರಾಮನ ಚರಿತ್ರೆ ...
(6) ಭಾಮಿನಿ ಷಟ್ಪದಿ ಚೋರ ಕಥೆ
(7) ಉದಾರ ರಾಮನ ಕಥೆ ...
(8) ಕೃಷ್ಣದಾನಾಮೃತ
(9) ಶ್ರೀಕೃಷ್ಣ ಸತ್ಯಭಾಮ ಸಂವಾದ
(10) ಚಿತ್ರಕೇತು ರಾಜನ ಕಥೆ ...
(11) ಬಕಾಸುರ ವಧೆ ...
(12) ಬಾಣಾಸುರನ ಕಥೆ
(13) ರಂಭಾಶುಕ ಸಂವಾದ
(14) ರುಕ್ಮಿಣೀ ಪರಿಣಯ
(15) ರಾವಣೋದ್ಭವ ಯಕ್ಷಗಾನ
(16) ಸಭಾ ಲಕ್ಷಣವು ...
(17) ಶ್ರೀ ಕೃಷ್ಣದೀನಾಶ್ವಮೇಧ ಕಥಾ
(18) ಚಂದ್ರಮೌಳಿ ಕಾಳಗ
(19) ಚಿತ್ರವಿಚಿತ್ರ ಕಾಳಗ
(20) ಯಕ್ಷಗಾನ ಸಾರಂಗಧರನ ಕಥೆ
(21) ,, ಶನಿದೇವರ ಮಹಾತ್ಮೆ
(22) ,, ಹರಿಶ್ಚಂದ್ರನ ಕಥೆ
(23) ಯಕ್ಷಗಾನ ಅಶ್ವಗ್ರಹ ಕಥೆ
(24) ,, ಚೋರ ಕಥೆ ...
(25) ,, ಪಾರ್ವತಿ ಕಾರವಂಚ ಕಥೆ
(26) ,, ಗೋವಿನ ಚರಿತ್ರೆ
(27) ,, ದುಶ್ಯಾಸನ ಕಥೆ
(28) ,, ಸಾನಂದ ಗಣೇಶ್ವರ ಕಥೆ ...
(29) ,, ಅಂಗದ ಸಾಧನ ...

— ಭಜನೆಯ ಪುಸ್ತಕಗಳು. —

(1) ಉಡುಪಿಕ್ಷೇತ್ರ ಮಹಾತ್ಮೆ
(2) ಹನುಮದ್ರಾಮಾಯಣ ...
(3) ಅಧ್ಯಾತ್ಮ ವಿಚಾರ
(4) ಭಕ್ತಿಮಹಿಮೆ
(5) ಪ್ರಬಂಧ ಮುಕ್ತಾವಳಿ ...
(1) ಹರಿಕೀರ್ತನಾಮೃತಸಾರ
(2) ಹರಿನಾಮಾಮೃತಂ.
(3) ರುಕ್ಮಿಣೀ ಕಲ್ಯಾಣ
(4) ಮಂಗಳ ಗೌರೀಹಾಡು ...
(5) ಉದ್ಯಾಲೀಕನ ಹಾಡು ...
(6) ಯಕ್ಷಗಾನ ಗೀತೀ ಹಾಡು
(7) ಕನಕದಾಸ ಕಬೀರದಾಸರ ಕೀರ್ತನೆಗಳು
(8) ಬೀಗರ ಹಾಡು
(9) ಭಜನೆಯ ಪದಗಳು

— ವಿವಿಧ ಪುಸ್ತಕಗಳು. —

(1) ಸದಾಚಾರ ವಿವೇಚನೆ ...
(2) ಗೋಪಾಲಕೃಷ್ಣ ಗೋಕಲೆ
(3) ಶ್ರೀಕೃಷ್ಣ ಸೇವಾವ್ರತಂ ...
(4) ಪಶ್ಚಾತ್ತಾಪ ಭಾಷ್ಪ
(5) ಶ್ರೀ ಶ್ರೀಮಹಾ ಭಾಗವತ
(6) ಉದ್ದಯನ ಚರಿತ್ರೆ
(7) ಮಧ್ವಾಚಾರ್ಯರು (ಶ್ರೀಮಾನ್)
(8) ಯತಿರಾಜವಂಶತಿ
(9) ಪರಮಾರ್ಥಶತಕಂ
(10) ಭಕ್ತಿಕುಸುಮಾಂಜಲಿ
(11) ಸತ್ಯರಾಜ ಪೂರ್ವದೇಶ ಯಾತ್ರೆಗಳು
(12) ಕಾಲನಿರ್ಣಯಾಖ್ಯಾನ ...
(13) ಅರೇಬಿಯನ್ ನಾಯ್ಟ್ಸ್ 1000 ಪುಟಗಳ ಮೇಲೆ ಇವೆ.

ಪುಸ್ತಕಗಳು ದೊರೆಯುವ ಸ್ಥಳ :— **ಶಾರದಾ ಛಾಪಖಾನೆ,**
ರಥ ಬೀದಿ, ಮಂಗಳೂರು.

ಮನುಷ್ಯರಿಗೆ ಮತಿಸ್ಥಿತಿಗಿಂತಲೂ ಹೆಚ್ಚಾದ್ದು ಯಾವುದೂ ಇಲ್ಲ.

ಜನ್ಮದಲ್ಲಿ ಕಷ್ಟಸುಖಗಳು ಅನುಭವಿಸುವುದರಲ್ಲಿ ಅಸಹಾಯವಿಲ್ಲದೇ ಧನ್ಯನಾಗುವುದಕ್ಕೆ ಮುಖ್ಯ ಸಾಧನ ಮತಿಸ್ಥಿತಿಯೇ ರಾಮಬಾಣವೆಂದು ಹೇಳಬಹುದು.

ಅದರ ಪ್ರಸ್ತುತ ನಾವು ಅನುಭವಿಸುವ ಚಪಲಚಿತ್ತದಲ್ಲಿ ಮತಿಸ್ಥಿತಿ ಉಂಟಾಗುವುದು ಸಾಧ್ಯ ಹೇಗೆ? ನಿಮಗೆ ಯಾವವಿಧವಾದ ಚಪಲಚಿತ್ತವಿದ್ದಾಗ್ಯೂ ನಮ್ಮ ಆತಂಕನಿಗ್ರಹ ಮಾತ್ರೆಗಳನ್ನು ಉಪಯೋಗಿಸಿರಿ. ಈ ಮಾತ್ರೆಗಳೇ ತನ್ನ ಮೆದುಳಲ್ಲಿರುವ ದುರ್ಬಲವನ್ನು ನಿವಾರಿಸಿ, ದೃಢಚಿತ್ತವನ್ನುಂಟುಮಾಡುವುದು.

ಈ 32 ಮಾತ್ರೆಗಳುಳ್ಳ ಡಬ್ಬಿ ಒಂದಕ್ಕೆ ರೂಪಾಯಿ ಒಂದು ಮಾತ್ರ.

ಹಿಂದೂದೇಶದಲ್ಲಿಯೂ ಮತ್ತು ಇತರ ದೇಶಗಳಲ್ಲಿಯೂ ಪ್ರತಿಯೊಂದು ಗೃಹದಲ್ಲಿ ಪ್ರಯೋಜನಕರವಾದ ಒಂದು ಪುಸ್ತಕ ಇರುವುದು. ನಿಮಗೆ ಗೊತ್ತುಂಟೋ? ಆ ಪುಸ್ತಕದ ಹೆಸರೇ

“ಕಾಮಶಾಸ್ತ್ರ.”

ನೀವು ಇದುವರೆವಿಗೂ ಆ ಪುಸ್ತಕದಲ್ಲಿ ವಿವರಿಸಿದ ಭಿನ್ನ ವಿಷಯಗಳನ್ನು ನೋಡದೇ ಇದ್ದಪಕ್ಷಕ್ಕೆ, ಈ ದಿನ ನಮಗೆ ಒಂದು ಕಾರ್ಡು ಬರೆದರೆ ಪೋಸ್ಟು ಚಾರ್ಜು ನಿಮಗಿಲ್ಲದೇನೇ, ಆ ಪುಸ್ತಕವನ್ನು ಕಳುಹಿಸುತ್ತೇವೆ.

ಆತಂಕನಿಗ್ರಹ ಔಷಧಾಲಯ,
ನಂಬ್ರ 26, ಬ್ರಾಡ್ವೆ, ಮದರಾಸು.

Agents:—
Messrs RAPHAEL & Co.,
MANGALORE.

ಹೊಸಗ್ರಂಥಗಳು!! ಬೇಗನೇ ತರಿಸಿಕೊಳ್ಳಿರಿ!!

ಕೋಕಶಾಸ್ತ್ರವು.

ರಸಿಕ ವಾಚಕ ಮಹಾಶಯರೇ,

ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ, ಸಂಪಾದಿಸಿ, ಅದರಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನಷ್ಟೇ ಶೋಧ ಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ಲೀಷ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿಣಿ, ಸ್ತ್ರೀಯ ಇದರಂತೆ ಪುರುಷರಲ್ಲಿಯ ಬೇಧ ಯಾವಜಾತಿ ಸ್ತ್ರೀಯರಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನೂ ರಜೋಧರ್ಮ, ಗರ್ಭಾಧಾನದ ವ್ಯಾಖ್ಯೆಯನ್ನೂ, ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ, ವಂಧ್ಯಾದೋಷಗಳ ಚಿಕಿತ್ಸೆಯನ್ನೂ, ಸ್ತ್ರೀಯರ ಗೂಢ ರಹಸ್ಯವನ್ನೂ, ದಂಪತಿ ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನೂ ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನು ಒಮ್ಮೆ ಅವಶ್ಯವಾಗಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ.

ಇದರ ಬೆಲೆ ೧—೮—೦, ಟಪ್ಪಾಲು ಹಾಸಲು ೦—೪—೦.

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ
ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ
ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಅಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಸಾರಿಗೆಯ ಮುಂತಾದ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ಯಾವಂತರೂ ತಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ತಮಾನಗಳೂ, ಪ್ರಕಟನೆಗಳೂ, ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನು ಕುರಿತ ಲೆಕ್ಕಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಅಧಿಕಾರಿಗಳೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಅಧಿಕಾರಿಗಳಿಗೆ	ರೂ. 3—0—0
ಇತರರಿಗೆ, ಪಠ್ಯಶಾಲೆ ಪೋಸ್ಟೇಜು ಸೇರಿ	„ 2—8—0.
„ [illegible]ಗಳಿಗೆ ...	„ 1—8—0.

ಸರಕಾರದಲ್ಲಿ ಬಹು ವೃತ್ತಿಗಳಲ್ಲಿಯೂ ಈ ಪತ್ರಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿಯಬಹುದು. [illegible]

ಬಿ. ಹನುಮಂತಯ್ಯಗೌಡ,
ಅರ್ಥಸಾಧಕ ಪತ್ರಿಕೆ,
ಅರಳೇ ಪೇಟೆ, ಬೆಂಗಳೂರು ಸಿಟಿ

—ಗೋಡೆಗೆ ತಗಲಿಸುವ
ಹೊಸ ನಮೂನೆಯ—
ಟಿಕ್—ಟಾಕ್

ಎಂಬ ಈ ಗಡಿಯಾರಗಳು ಜರ್ಮನೀ ದೇಶದಲ್ಲಿ ತಯಾರಿಸಿದ್ದು. ಇವು ಸರಿಯಾಗಿ ಘಂಟೆಯನ್ನು ತೋರಿಸುವವು. ಇವಕ್ಕೆ ಬೀಗ ಕೊಡಬೇಕಾದಿಲ್ಲ. ಇದರಲ್ಲಿ ಕಾಣುತ್ತಿರುವ ಗುಂಡನ್ನು ಮೇಲಕ್ಕೆ ಎಳೆದರೆ ಸಾಕು. ತನ್ನಷ್ಟಕ್ಕೆ ತಾನೇ ಟಿಕ್—ಟಾಕ್ ಎಂಬ ಶಬ್ದವನ್ನು ಮಾಡುತ್ತಾ ಸರಿಯಾದ ಕಾಲವನ್ನು ತೋರಿಸುವದು. ಇದು ನೋಡುವುದಕ್ಕೆ ಬಹು ಲಕ್ಷಣವಾಗಿರುವುದು.

ಕ್ರಯ 1ಕ್ಕೆ ರೂ. 3—0—0

ಪೀಟರ್ ವಾಚ್ ಕಂಪೆನಿ
ಪೋಸ್ಟ್ ಬಾಕ್ಸ್ ನಂ. 27, ಮದ್ರಾಸ್.

ADVERTISE IN
The Business Directory
OF INDIA, BURMA & CEYLON

A Comprehensive Directory of the various Business-men, Exporters and Importers, Firms, Factories, Mills, Manufacturers, Merchants and Industries of the principal Cities, Ports and Towns of India, Burma and Ceylon.

PUBLISHED ANNUALLY
Rates for Advertisements

¼ Page	Rs.	50.
2 in. Single Column	„	20.
1 in. Single Column	„	15.
Name in Bold Types	„	5.

Price per Copy Rs. 10.

PRINTERS & PUBLISHERS.
Business Directory Co.,
Kanara Press Buildings, MADRAS. E.
Telegrams: "KETHAKI". Phone 540

Just arrived! Look Sharp!

SCREW ELECTRIC TORCH LAMPS &
Pocket Electric Lamps

AVAILABLE

In different varieties, Mother of pearl lamps. Cycle lamps.
NICKEL PLATED WITH SIDE LANCE.
Hammered Brand, with Powerful Bulls-eye lance.

The Mangalore Trading Association,
Car Street, MANGALORE

Edited, Printed & Published by V. S. Kamath at the M. T. A. Sharada Press, Mangalore.

Registered: No. M. 498.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ । ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೯. ಮಂಗಳೂರು, ತಾರೀಕು ೭ನೇ ಶುಕ್ರವಾರ ಆಗೋಸ್ತು ೧೯೨೫. ಸಂಚಿಕೆ ೩೨.

Th Canara Banking Corporation, UDIPI, Ltd.
ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office: UDIPI ಹೆಡ್ ಆಫೀಸು: ಉಡುಪಿ.	Branch: COONDAPOOR. ಶಾಖೆ: ಕುಂದಾಪುರ.
ಚಂದಾ ಹಾಕಿ ಯಿತ್ತಿದ ಮೂಲಧನ	ರೂ. 2,25,000—0—0.
ಮೌಲ್ಯಕೆತ್ತ ಮೂಲಧನ	ರೂ. 1,71,875—9—11.
ಕ್ಷೇಮನಿಧಿ ವ ಇತರ ಫಂಡುಗಳು	ರೂ. 64,700—0—0.
ಠೇವಣಾತಿಗಳು	ರೂ. 4,83,945—2—9.

— ವಿನಿಯೋಗ —.

ಗವರ್ನಮೆಂಟು ಪ್ರಾಮಿಸರಿ ನೋಟಿನ ಮೇಲೆ	ರೂ. 25,800—0—0.
ಡಿಮಾಂಡು ನೋಟು ವ ಬಿಲ್ಲುಗಳ ಮೇಲೆ	ರೂ. 5,92,445—9—4.
ಚಿನ್ನಾಭರಣ ಮುಂತಾದ ಭದ್ರತೆಸೊತ್ತುಗಳ ಮೇಲೆ	ರೂ. 1,11,658—8—6

ಈ ಕೆಳಗಿನ ಠೇವಣಾತಿಗಳನ್ನು ಅಂಗೀಕರಿಸುವುದಲ್ಲದೆ ಇತರ ಬ್ಯಾಂಕುಗಳ ಮೇಲಣ ಹಾಕ್ಕಿ ಚೆಕ್ಕುಗಳನ್ನೂ ಸಾಹುಕಾರಿ ಹುಂಡಿಗಳನ್ನೂ ವಸೂಲು ಮಾಡುವ ಮತ್ತು ಇತರ ಎಲ್ಲಾ ತರದ ಬ್ಯಾಂಕಿನ ವಹಿವಾಟುಗಳು ನಡಿಸಲ್ಪಡುವವು.

ಠೇವಣಾತಿಗಳು.

ನಿರಖು ಠೇವಣಾತಿಗಳು:—ಸಾ. ಸೆ. 6½ ರಿಂದ 7½ ವರೆಗಿನ ಬಡ್ಡಿಯನ್ನು ಪ್ರತಿ 3 ತಿಂಗಳಿಗೊಮ್ಮೆ ಕೆರುವ ಅನುಕೂಲ ವ ಲಾಭದಾಯಕವಾದ ಶರ್ತಗಳ ಮೇಲೆಯೂ.

ಕೊಂಚ ಅವಧಿ ಠೇವಣಾತಿಗಳು:—1 ತಿಂಗಳ ನಂತರ 15 ದಿವಸಗಳ ನೋಟೀಸಿಗೊಳಪಟ್ಟು ಹಿಂತೆಗೆಯಬಹುದಾದ ಠೇವಣಾತಿಗಳನ್ನು ಸಾ. ಸೆ. 5ರ ದರದ ಬಡ್ಡಿ ನಡೆದ ದಿನಗಳಿಗೆ ಕೊಡುವ ಶರ್ತದಿಂದಲೂ

ಚಾಲ್ತಿ ಠೇವಣಾತಿಗಳು:—ದಿನಂಪ್ರತಿ ಇರುವ ಶಿಲ್ಕಿನ ಮೇಲೆ ಸಾ. ಸೆ. 3ರಂತೆ ಬಡ್ಡಿ ಕೆರುವ ಶರ್ತದ ಮೇಲೂ

ಸೇವಿಂಗ್ಸ್ ಬ್ಯಾಂಕು ಠೇವಣಾತಿಗಳು:—ಸಾ. ಸೆ. 4½ರ ಬಡ್ಡಿಯ ಮೇಲೂ

ಸಂಚಯ ಠೇವಣಾತಿಗಳು:—ಮಕ್ಕಳ ವಿದ್ಯಾಭ್ಯಾಸ, ಉಪನಯನ, ವಿವಾಹ ಮುಂತಾದ ಶುಭಕಾರ್ಯಗಳಿಗೆ ಅನುಕೂಲವಾಗಿ ನಿಶ್ಚಯಂತೆ ತಿಂಗಳು 1ರ ರೂಪಾಯಿ 1ರಂತೆ 13—24—45—84—132 ತಿಂಗಳುಗಳಿಗೆ ವಸೂಲುಪಡಕೊಂಡು ಕಂತುಗಳ ಅವಧಿ ಮುಗಿದ ಮೂರು ತಿಂಗಳಲ್ಲಿ ಆಯಾಯ ಅವಧಿಮೇರೆಗೆ ರೂ. 13—8—0, ರೂ. 25—8—0, ರೂ. 50, ರೂ. 102—8—0 ಮತ್ತು 182—8—0ನ್ನೂ ಅದೇ ಮೇರೆಗೆ ತಿಂಗಳು 1ರ ರೂಪಾಯಿ 1ರ ಗುಣವೃದ್ಧಿ ಮೊಬಲಗನ್ನು ಕೆತ್ತಲ್ಲಿ ಆಯಾಯ ಮೊಬಗಿನ ಅದೇ ಗುಣವೃದ್ಧಿ ಮೊಬಲಗನ್ನು ಕೆರುವ ಶರ್ತದ ಮೇಲೂ ಅಂಗೀಕರಿಸಲ್ಪಡುವವು.

ಹೆಚ್ಚಿನ ಮಾಹಿತಿ ಸೆಕ್ರೆಟರಿಯವರಿಂದ ತಿಳಿಯಬಹುದು.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಹೆಡ್ ಆಫೀಸು, ಉಡುಪಿ, 30—6—1925. } ನಯಂಪಳ್ಳಿ ಆನಂದ್ರಾವ್, ಸೆಕ್ರೆಟರಿ ಮತ್ತು ಒಫಿಶಿಯೆಟಿಂಗ್ ಮೆನೇಜರ್.

ಮೂರು ದಿವಸಗಳಲ್ಲಿ ಗುಣಸಿಕ್ಕದಿದ್ದರೆ ಔಷಧಿಯ ಕ್ರಯ ವಾಪಾಸು.

ಜೀರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ, ಪರಮಾನಂದ ಮೊದಲಾದ ಸುಖಜೀವನಕ್ಕೆ ಬೇಕಾದ ಆರೋಗ್ಯದಾಯಿನಿ.

ಲೋಕಪ್ರಸಿದ್ಧವಾದದ್ದು! ಅನುಭವಸಿದ್ಧವಾದದ್ದು!!

ಟ್ರೇಡ್ ಮಾರ್ಕ್] **ಅಗಸ್ತ್ಯ** [ನೋಡಿ ಕೊಳ್ಳಿರಿ.

ಮನ್ಮಥ ಚಿಂತಾಮಣಿ ಲೇಹ.

(ರಜಿಸ್ಟರ್ ಆದದ್ದು)

ಅಬಾಲವೃದ್ಧ ಸ್ತ್ರೀಪುರುಷರ ಅನೇಕ ರೋಗಗಳ ಮೇಲೆ ಗುಣಕಾರಿಯಾದದ್ದು.

ಮೇಹವಿಕಾರವಿದ್ದವರಿಗೂ, ನಿದ್ರೆ ಇಲ್ಲದವರಿಗೂ, ಸ್ವಪ್ನೇಂದ್ರಿಯವಾಗುವ ಯುವಕರಿಗೂ ಜ್ಞಾನಿಸುಜ್ಞಾನಿಗಳಿಗೂ ಉಪಯೋಗವುಳ್ಳ ಪರಮಾನಂದ ಔಷಧಿ.

1 ಸೇರು ನಾಲ್ವತ್ತೆಂಟು ದಿವಸಕ್ಕೆ ಸೇವಿಸಬಹುದು.
1 ಸೇರು ಡಬ್ಬಿ 1ಕ್ಕೆ 3—0—0. ½ ಸೇರು ಡಬ್ಬಿ 1ಕ್ಕೆ 1-9-0.
ವಿ. ಪಿ. ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿಗೆ ಬರೆಕೊಳ್ಳಿರಿ.

ವಿಳಾಸ:— ದೇವಣ್ಣ ನಾರಾಯಣ ಸೇಟ್,
ಸರಾಫ, ಗೋಳಿಕಟ್ಟಾ,
ಮಂಗಳೂರು, (ದ. ಕ.)

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.
ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ.

450 ಪುಟಗಳು ಎಮ್. ಗಣಪತಿರಾವ್ ಐಗಳ್ ಇವರಿಂದ ರಚಿತವಾದದ್ದು. ಕ್ರಯ ರೂ. 2-4-0

ಮಾರಾಟಕ್ಕೆ ಸಿದ್ಧವಾಗಿವೆ **— ತುಳು ಪಾಡ್ದನಗಳು —** ಮಾರಾಟಕ್ಕೆ ಸಿದ್ಧವಾಗಿವೆ.

ದೈಯ್ಯೊಂಗುಳು, ಕಲ್ಲುರ್ಟಿ—ಕಲ್ಕುಡ, ಕಣಂದೂರು ದೈಯ್ಯೊಂಗುಳು, ಮುಂಡತ್ತಾಯ, ಬೊಬ್ಬರ್ಯ.

ಸುಲಭ ದರಗಳು **— ಶಾಲಾ ಪುಸ್ತಕಗಳು —** ರಖಂ ಕೊಂಡುಕೊಳ್ಳುವವರಿಗೆ ಯೋಗ್ಯ ಡಿಸ್ಕೌಂಟ್.

ಅಜ್ಜಿ ಕಥೆಗಳು:—ಮೂರು ಕರಡಿಗಳು; ಹೇನುಸತ್ತು ಕಾಗೆ ಬಡವಾಯಿತು; ಅಗಸನ ಮುದ್ದೆ; ಇಲಿಗಳ ತಕ್ಕ ಕೈ; ಅಂಗಳ ದುಗ್ಗು; ಸಿಗಡಿ ಯಾಕೆ ಒಣಗಲಿಲ್ಲ; ಗುಡುಗುಡು ಗುಮ್ಮಟ ದೇವರು; ಮೆಣಸಿನ ಕಾಳಪ್ಪ; ಒಡ್ಡನ ಓಟ; ಹೊಸ ಕನ್ನಡ ಪುಸ್ತಕ ಭಾಗ ೧; ಹೊಸ ಕನ್ನಡ ಪುಸ್ತಕ ಭಾಗ ೨; ಕನ್ನಡ ಪದ್ಯಗಳು; ಮುಗ್ಗಿ ಪುಸ್ತಕ; ಅಚಿತಕುಮಾರ; ಪದ್ಯ ರತ್ನಾವಳಿ. ಎಕ್ಸರ್‌ಸೈಜ್ ಮತ್ತು ನೋಟು ಪುಸ್ತಕಗಳು, ಕೋಪಿ ಪುಸ್ತಕಗಳು, ಡ್ರಾಯಿಂಗ್ ಪುಸ್ತಕಗಳು

ಇತರ ಪುಸ್ತಕಗಳು:—ಸಂಕ್ಷೇಪಗೀತೆ, ಸೇತುಭಂಗ, ಹಿಂದೂ ವ್ರತವಿವೇಕ, ಚಂದ್ರಗುಪ್ತ ಚಕ್ರವರ್ತಿ, ಶ್ರೀ ಕೃಷ್ಣಸಂದಾನ್ಯ ಪದ್ಯಪಾಠಗಳು, ಹರಿಕಥಾ ಮೃತಸಾರ ಹರಿನಾಮಸಂಕೀರ್ತನೆ ಸುಧಾಂಮೃತ ಪದ್ಯಗಳು. ಬೆಂಕಿಪೆಟ್ಟಿಗೆ ತಯಾರಿಸುವ ವಿಧಾನ, ಸಾಬೂನು ತಯಾರಿಸುವ ವಿಧಾನ, ಸ್ವರಾಜ್ಯ ಭಕ್ತೋಲ್ಲಾಸ, ಚರಕಗೀತೆ, ಕೊಂಕಣಿ ಭಾಷೆಯಲ್ಲಿ ಚಂದ್ರಹಾಸ ನಾಟಕ, ಪ್ರಹಲ್ಲಾದ ಚರಿತ್ರೆ ನಾಟಕ, ಕನ್ನಡ ಮೃಚ್ಛಕಟಿಕ ನಾಟಕ, ಚಂದ್ರಹಾಸಾಭ್ಯುದಯ ನಾಟಕ, ಕೋವಿಲನ್ ಚರಿತ್ರ ನಾಟಕ, ನೂತನ ಉಪನ್ಯಾಸ ಭಾಗ ೧, ೨, ಮತ್ತು ೩.

AMRUTANJAN
AMRUTANJAN
Best Indian Pain Balm
Amrutanjan
BOMBAY

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಪ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಸಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ತಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 2 ಆಣೆ.

ಅಮೃತಾಂಜನ ಡಿಪೊ,

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ ಟೌನ್, ಮದ್ರಾಸು.

109 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

— ರಥೋತ್ಸವ, ವಿವಾಹ ಉಪನಯನಗಳ ಸಮಯ —
ಸರ್ವರಿಗೂ ಉಡಿಗೆ ತೊಡಿಗೆಗಳು ಬೇಕಾಗುವ ಸಂದರ್ಭ.

ಯಾರು, ಯಾವುದನ್ನು ಎಲ್ಲಿ ಪಡೆಯಬೇಕೆಂಬ ಚಿಂತೆಯಿಂದ ದಿಗಿಲು ಪಡಬೇಡಿರಿ. ಉಡಿಗೆತೊಡಿಗೆಗಳನ್ನು ಚುನಾಯಿಸಿ ನಿಮಗೆ ಬೇಕಾದ ಯಥಾರ್ಥ ಮಾಹಿತಿಯನ್ನು ಕಳೆದ ಇಪ್ಪತ್ತೈದು ವರುಷಗಳಿಂದ ಪಡೆದು ನಮ್ಮಲ್ಲಿಯ ವ್ಯಾಪಾರವು ಗಿರಾಕಿಗಳಿಗೆ ಸರ್ವ ತೃಪ್ತಿಯಿಂದಲೂ ಲಾಭಕರವಾಗಿ ಪರಿಣಮಿಸುವಂತೆ ನಮ್ಮ ಹೊಸ ಸಂಗ್ರಹವನ್ನು ಮಾಡಿರುತ್ತೇವೆ.

ಗುರ್ಪುರ್‌ಕಾರ್ ಬ್ರದರ್ಸ್, ರಥಬೀದಿ, ಮಂಗಳೂರು.

ಹೆಡ್ ಆಫೀಸು:—ರಥಬೀದಿ—(ಮೊದಲು ಸುಜೀರ ನಾಗಪ್ಪನಾಯಕ್, ಎಂಡ್ ಕೋ. ಇದ್ದಲ್ಲಿ; ಅಜೀಜುದ್ದೀನ್ ರಸ್ತೆಗೆ ತಿರುಗುವಲ್ಲಿ) ಮಂಗಳೂರು.

ಬ್ರೆಂಚ್ ಆಫೀಸು:—ರಥಬೀದಿ—(ಹಳೇ ತಾಲೂಕು ಕಚೇರಿಯ ಪಟಾರಕ್ಕೆ ಸಮೀಪವಿರುವ ಸ್ಥಳಕ್ಕೆ) ಮಂಗಳೂರು.

ಈ ದೇಶದ ಪ್ರಖ್ಯಾತಪಟ್ಟ ನೇಯಿಗೆಯ ಕೇಂದ್ರಸ್ಥಳಗಳಾದ—ಬನಾರಸ್, ಪೂನಾ, ಅಹಮ್ಮದಾಬಾದ್, ಸುರತ್, ಬೆಂಗಳೂರು, ಧರ್ಮಾವರಮ್, ಕಂಜೀವರಮ್, ಕೊಯಮುತ್ತೂರು, ಮಧುರೆ, ತಂಜಾವೂರು, ಕುಂಭಕೋಣ, ಅರ್ಣಿ, ಹಾವೇರಿ, ಹುಬ್ಬಳ್ಳಿ, ಇಳಕಲ್, ಗದಗ, ಮದ್ರಾಸು ಈ ಪ್ರಾಂತ್ಯಗಳಲ್ಲಿ ತಯ್ಯಾರಾದ

ಜರಿಸೀರೆಗಳು, ದುಪ್ಪಟಾ, ಜರಿಶಾಲು, ಪೇಟ್ಟಿ, ರೇಷ್ಮೆ ಸೀರೆಗಳು, ಅರಳಪೇಟೆ ಸೀರೆಗಳು, ಕೊಳ್ಳೇಗಾಲ್ ರೇಷ್ಮೆ ಸೀರೆಗಳು, ಜರಿ ಅಂಚಿನ ಸೀರೆಗಳು, ರೇಷ್ಮೆ ಮಡಿಗಳು, ನಿತ್ಯ ಉಪಯೋಗದ ಸೀರೆಗಳು ಬನಿಯನ್ಸ್, ಕರ್ನಾಟಕ ಮಿಲ್ಸ್‌ಗಳ ವ ಇತರ ಮಿಲ್‌ಗಳ ಕೋಟಿಂಗ್ ಶರ್ಟಿಂಗ್. ಕೈರಾಟೆಯಲ್ಲಿ ತಯಾರಿಸಿದ ನೂಲಿನಿಂದ ಮಾಡಿದ—

ಖದ್ದರ್ ಶರ್ಟಿಂಗ್, ಖದ್ದರ್ ಕೋಟಿಂಗ್, ಖದ್ದರ್ ಟೋಪಿ, ಖದ್ದರ್ ಪೇಟ್ಟಿ, ಅಂಗವಸ್ತ್ರ, ಇತ್ಯಾದಿ— ಮದುಮಕ್ಕಳಿಗೆ ಬೇಕಾದ ನಮೂನೆಯು ಚಿನ್ನದ ಸರಿಗೆ ಉಳ್ಳ ಪಟ್ಟೆ—

ಎಲ್ಲ ಸಂಗ್ರಹವನ್ನೂ ನಮ್ಮ ಪ್ರೋಪ್ರೈಟರಾದ ರಾ। ನಾರಾಯಣ ಪ್ರಭುಗಳು ತಾವೇ ಸ್ವತಃ ಆಯಾ ಊರುಗಳಿಗೆ ಹೋಗಿ ಸಂಗ್ರಹಿಸಿ ತರಿಸುತ್ತಾರೆ.

ಸೂಚನೆ—[illegible] ರೂಪಾಯಿ 50ಕ್ಕೆ [illegible] ಕಮಿಶನ್ 6¼%, ರೂ. 50ರಿಂದ 250ವರೆಗೆ ಕಮಿಶನ್ 10%, ರೂ. 250 ರಿಂದ 1000ಕ್ಕೆ 12½% ಈ ದರ [illegible]

ಆರ್. ಮಾರ್ಟಿನ್ನರ
ಜ್ವರದ ಗುಳಿಗೆಗಳು.

ಸುಲಭ ಸ್ವೇದನಕಾರಿಯಾದ ಈ ಘುಟಿಕೆಗಳು ಚಳಿಜ್ವರದ ವಿಷ ಪದಾರ್ಥಗಳನ್ನು ತಟ್ಟನೆ ನಿರ್ಮೂಲಪಡಿಸಿ, ವ್ಯಾಧಿಗಳನ್ನು ಸಂಪೂರ್ಣ ನಾಶ ಪಡಿಸಿ, ಮಲೇರಿಯಾ ಜ್ವರ, ಚಳಿಜ್ವರ, ಛಾರಿಜ್ವರ, ಮತ್ತು ಅಗಾಗ್ಗೆ ಬಿಟ್ಟುಕೊಂಡು ಬರುವ ಇತರ ಜ್ವರಗಳ ಬಾಧೆಯಿಂದ ಗುಣಪಡಿಸುವವು.

ತಟ್ಟನೆ ವಾಸಿಪಡಿಸುವುದಕ್ಕೆ ಹತಜ್ವರಗಳಲ್ಲಿ ಪ್ರಸಿದ್ಧತೆಯನ್ನು ಹೊಂದಿವೆ, ಅತಿ ಬಿಟ್ಟುಬಿಟ್ಟು ಅನೇಕ ಸಂದರ್ಭಗಳಲ್ಲಿ ಗುಣಪಡಿಸಿದವುಗಳಾಗಿರುತ್ತವೆ.

ಇವುಗಳು ಗಿರಣಿಗಳಲ್ಲಿಯೂ ಕಾರ್ಖಾನೆಗಳಲ್ಲಿಯೂ ವಿಶೇಷವಾಗಿ ಉಪಯೋಗಿಸಲ್ಪಡುವುವು. ಸಾಮಾನ್ಯವಾಗಿ ಹಿಂದೂಸ್ಥಾನದಲ್ಲಿ ಎಲಾ ತೋಟಿಗಾರರಿಂದ ಉಪಯೋಗಿಸಲ್ಪಡುವುವು. ಅಲ್ಲದೆ ದಿಂಗತ ವಿಶ್ರಾಂತಿ ವಾದ ಕೀರ್ತಿಯನ್ನು ಕೂಡ ಸಂಪಾದಿಸಿರುವುವು. ಕಠಿಣ ಜ್ವರವು ತಟ್ಟನೆ ಇಳಿಯಬೇಕಾದರೆ ಆರ್ ಮಾರ್ಟಿನರ ಎಗ್ಯೂ ಮಿಕ್ಸ್ಚರ್ ಒಡನೆ ಇದನ್ನು ಸೇವಿಸಬೇಕು. ಈ ಇವೆರಡು ಅದ್ಭುತ ಶಕ್ತಿಯುಳ್ಳ ಔಷಧಿಗಳು ಪ್ರತಿಯೊಂದು ಕುಟುಂಬದ ಮನೆಯಲ್ಲಿಟ್ಟುಕೊಳ್ಳಲು ಯೋಗ್ಯ ವಸ್ತುಗಳಾಗಿವೆ

ಪ್ರತಿಯೊಂದು ಬಾಟ್ಲಿಯಲ್ಲಿ 40 ಮಾತ್ರೆಗಳಿರುವ ಬಾಟ್ಲಿ 1ಕ್ಕೆ 1–8–0.
100 ಮಾತ್ರೆಗಳಿರುವ ಬಾಟ್ಲಿ 1ಕ್ಕೆ 3–8–0.
150 ,, ,, ,, 5–4–0.

ಆರ್. ಮಾರ್ಟಿನ್ನರ ಎಗ್ಯೂಮಿಕ್ಸ್ಚರ್.

ಇದು ಜ್ವರ, ಶೀತಜ್ವರ ಮಲೇರಿಯಾ, ಛಾರಿಜ್ವರ, ಸನ್ನಿಪಾತ ಪಟ್ಟಿ ವಾಯುವಿನಿಂದುಂಟಾದ ರೋಗ ಇವೇ ಮೊದಲಾದ ಎಲ್ಲಾ ತರದ ಜ್ವರಗಳನ್ನೂ ಕೂಡಲೇ ನಾಶಮಾಡುತ್ತದೆ. ಎಲುಬುಗಳಲ್ಲಿ ಹರಡಿಕೊಂಡಿರುವ ಜ್ವರವನ್ನೂ ಸಹ ನಾಶಮಾಡುವುದಲ್ಲದೆ, ಇದು ಸಿಹಿಯಾಗಿರುವುದ್ದರಿಂದ ಸಣ್ಣ ಕೂಸುಗಳು ಸಹ ಕುಡಿಯಲಿಕ್ಕೆ ಇಷ್ಟಪಡುತ್ತವೆ. ಅನೇಕ ನಿಜ ವಿದ್ವಾಂಸ ವೈದ್ಯರಿಂದ ಗುಣಮಾಡುವುದಕ್ಕಾಗದ ಜ್ವರವನ್ನು ಈ ಎರಡೇ ಎರಡು ಬಾಟ್ಲಿಗಳ ಸೇವನೆಯಿಂದ ಹುಷಾರಾಗಿದೆ.

ಬಾಟ್ಲಿ 1ಕ್ಕೆ ರೂ. 0–13–0.

ಆರ್. ಮಾರ್ಟಿನ್ನರ ಮೂಲವ್ಯಾಧಿ ಮುಲಾಮು.

ಮನುಷ್ಯನಿಗೆ ಮೂಲವ್ಯಾಧಿ ಆದಾಗ, ಬಹಳ ಸಲ ಮೂತ್ರಶಂಕೆಯಾಗುವಿಕೆ, ಮರ್ಮಸ್ಥಾನದಲ್ಲಿ ಉರಿಯುವುದು, ಮಲಬದ್ಧತೆ ಇವೇ ಮುಂತಾದರಿಂದ ನರಳಪಡುತ್ತಾನೆ. ಈ ಔಷಧದ ಒಂದೇ ಒಂದು ಬಾಟ್ಲಿಯ ಉಪಯೋಗದಿಂದ ರಕ್ತ ಸುರಿಯುವ ಮೂಲವ್ಯಾಧಿ, ಕಂಕುಳಲ್ಲಿ ನೋಯುವ ಮೂಲವ್ಯಾಧಿ ಮತ್ತು ಎಂತ ತರಹದ ಕಠಿಣವಾದ ಮೂಲವ್ಯಾಧಿಯ್ಯಾದರದ ಕೂಡಲೇ ವಾಸಿಯಾಗುತ್ತದೆ. ಇದು ಒಳ್ಳೇ ಔಷಧಗಳಿಂದ ತಯಾರಿಸಲ್ಪಟ್ಟು, ತಗೆದುಕೊಳ್ಳುವವರಿಗೆ ಏನೊಂದೂ ನೋವನ್ನೂ ಕೊಡದೆ ತಂಪಾಗಿ ಮಾಡುತ್ತದೆ. ಬಾಟ್ಲಿ 1ರ ದರ ರೂ. 1–8–0 ಮಾತ್ರ.

60 ಮಾತ್ರೆಗಳ ಸೀಸೆ 1ಕ್ಕೆ ರೂ 1–4–0.

ವಿಳಾಸ:—ಆರ್. ಡಿ. ಕಟ್ಲೆ ಮತ್ತು ಕಂಪೆನಿ,
ನಂಬ್ರ ಬಿ. ಫ್ರಿಯರ್ ರೋಡ್,
ಸಾಂಜ ವರ್ತಮಾನ ಪ್ರೆಸ್,
ಟೋಡಿವಾಲಾ ಬಿಲ್ಡಿಂಗ ಎದುರುಗಡೆ, ಫೋರ್ಟ ಮುಂಬಯಿ.

R. D. Kately & Co.
No. B. Frere Road,
Opposit Sanjvertaman Press,
Todivala Building, FORT BOMBAY

ತ್ವರೆ ಮಾಡಿರಿ! ತಯಾರಾಗಿದೆ!

ನಾಲ್ಕನೇ ದರ್ಜೆಯ
ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ನಾಲ್ಕನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್. ಗಣಪತಿರಾವ್ ಐಗಳ್—ಗ್ರಂಥಕರ್ತರು.

ಮನೋರಂಜಕ ಚಿತ್ರಗಳೂ ಇವೆ.

ಇದರಲ್ಲಿ ಬಾರಕೂರು, ಮಂಗಳೂರು, ಮೂಲಿಕೆ, ಕಾರ್ಕಳ, ಮೂಡಬಿದರೆ, ಸುಬ್ರಮಣ್ಯ, ಉಡುಪಿ, ಬಸರೂರು, ವೇಣೂರು, ಬೈಲಂಗಡಿ, ಧರ್ಮಸ್ಥಳ, ಕೊಲ್ಲೂರು, ಕುಂಬಳೆ, ಜಪಾನದೇಶದ ಜನರು, ಚೀನಾದೇಶದ ಜನರು, ಬರ್ಮಾದೇಶದ ಜನರು, ಯುರೋಪ ಖಂಡದ ಜನರು, ಎಸ್ಕಿಮೊ ಜನರು, ನಿಗ್ರೊ ಜನರು. ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ನಾಲ್ಕನೇ ದರ್ಜೆಯ ಮಕ್ಕಳ ಬಗ್ಗೆ ಉಪಯುಕ್ತವಾಗಿದೆ. ಕ್ರಯ 8 ಆಣೆ.

ಪುಸ್ತಕ ದೊರಕುವ ವಿಳಾಸ:—
ಶಾರದಾ ಛಾಪಖಾನೆ,
ಮಂಗಳೂರು.

ಡಾಕ್ಟರುಗಳು ಭಿನ್ನಾಭಿಪ್ರಾಯಪಡುವಾಗ್ಗೆ ತೀರ್ಮಾನಿಸುವದು ಯಾರು?

ಅಂಥಾ ಸಂದರ್ಭಗಳಲ್ಲಿ, ಡೆಂಗ್ಯೂ ಮುಂತಾದ ಜ್ವರಗಳನ್ನು ನಿವಾರಿಸುವಂಥಾ "ಬಾಟ್ಲೀವಾಲರ ಎಗ್ಯೂಮಿಕ್ಸ್ಚರ್"ನ್ನು ಸರಾಗವಾಗಿಯೂ, ಮತ್ತು ಜ್ವರಗಳನ್ನು ಖಂಡಿತವಾಗಿ ನಿಲ್ಲಿಸುವಂಥಾದ, ಎಲ್ಲಾ ತರದ ತಲೆನೋವುಗಳನ್ನು ಹೋಗಲಾಡಿಸುವಂಥಾದ್ದೂ ಆದ "ಬಾಟ್ಲೀವಾಲರ ಎಗ್ಯೂಪಿಲ್ಸ್" ಇದನ್ನು ಉಪಯೋಗಿಸಿರಿ.

ಐ. ಎಮ್. ಎಸ್. ಡಾಕ್ಟರುಗಳಿಂದ ಶಿಫಾರಸು ಮಾಡಲ್ಪಟ್ಟಿದ್ದು, ಇದರ ಉಪಯೋಗದಿಂದ ಹೃದಯದ ಮೇಲೆ ಯಾವದೊಂದೂ ಬಾಧಕವಿಲ್ಲ. ಅರ್ಧ ಶತಮಾನದಿಂದ ಹಿಂದೂಸ್ಥಾನ, ಬರ್ಮ, ಸಿಲೋನ್, ಆಫ್ರಿಕಾ ಇವುಗಳಲ್ಲಿ ಪ್ರಖ್ಯಾತಪಟ್ಟದ್ದಾಗಿರುತ್ತದೆ.

ಅನೇಕ ಹಿಂದೀ ಪ್ರದರ್ಶನಗಳಲ್ಲಿ ಬೆಳ್ಳಿ ಮತ್ತು ಬಂಗಾರದ ಪದಕಗಳನ್ನು ಪಡೆದಿರುತ್ತೆ. ಶಾಂತಿ ಸಾಮ್ರಾಜ್ಯದಂತಿದ್ದು ದವಾಖಾನೆಗಳೂ ಕೂಡ ಅವರ ಮೇಲೆ ಹಣವನ್ನು ಮುಂಗಡವಾಗಿ ಕೊಡುತ್ತಾರೆ. ಬಡ ಮತ್ತು ಮಧ್ಯಮ ತರಗತಿಯ ಜನರಿಗೆ ವರಪ್ರದಾನವಾಗಿದ್ದು ಸಂಚಾರ, ಪ್ರಯಾಣ, ದೇಶಾಟನೆಗಳ ಸಮಯದಲ್ಲಿ ಹತ್ತಿರದಲ್ಲಿರಿಸಿಕೊಳ್ಳದಾಗಿರುತ್ತದೆ.

ಬಾಟ್ಲೀವಾಲರ ಬಾಲಾಮೃತ ಅಥವಾ ಟೋನಿಕ್ ಸಿರಪ್.

ಕೆಮ್ಮನ್ನು ಹೋಗಲಾಡಿಸಿ, ಎದೆನೋವನ್ನು ಶಾಂತಗೊಳಿಸಿ, ಜ್ವರವನ್ನು ಉಪಶಮನಿಸಿ, ಅಜೀರ್ಣವನ್ನು ಕಡಿಮೆ ಮಾಡಿ ಧಾತುವರ್ಧನವನ್ನು ಮಾಡುವದರಲ್ಲಿ ಅತ್ಯುತ್ತಮವಾಗಿರುತ್ತದೆ. ಕಫವನ್ನು ಸುಲಭ ಮಾಡುವಂತೆ ಮಾಡುವುದಲ್ಲದೆ ಅದೇ ಸಮಯದಲ್ಲಿ ಒಳ್ಳೇ ಜೀರ್ಣವನ್ನೂ ಉಂಟುಮಾಡುವುದು. ದರ ಮೊದಲಾದ ಮಾಹಿತಿಯನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಕಾರಖಾನೆ:-CAWASHAPUR, BOMBAY.

Dr. H. L. Batliwala & Co., Ltd.,
Sayani Road, P. O. Cadell Road, Bombay. No. 14.

ಡಾ. ಯಚ್. ಎಲ್. ಬಾಟ್ಲೀವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.,
Sayani Road, P. O. Cadell Road, Bombay. No. 14.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟ. ಖ. 9 ಆಣೆ.

ನಮ್ಮ ವಿಳಾಸ:— ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಏಜಂಟರು:— ಡಿ. ಊಲಸ್ ಮಾರ್ಟಿ, ಮಂಗಳೂರು.

OUR RECENT IMPORT IN WRIST WATCHES

Have you used anyone of these Watches?

SEND YOUR ORDER NOW ALL GUARANTEED.

Fashionable wrist wrist Lady's size. Reliable movement Guaranteed.



No. 368.

Handy to wear and looks beautiful. Gives punctual time and with strong movement.

Nickel case Rs. 8—0

High-class Radium dial watch watch with Roman figures.



No. 367.

Can be seen in dark nights. Well fitted with best movement and strong to use. Used by one and all.

Silver case Rs. 9—0.

Radio light wrist watch.



No. 372.

Fitted with the best mechanism and guaranteed to work and keep perfect time for a long time.

Nickel case Rs. 7—8
Electro rolled-gold ,, 9—0

(N. B. In addition to the above, we have good number of varieties of fancy wrist watches, pocket watches. Please write for a descriptive catalogue, which will be sent free)

WHOLESALE IMPORTERS

PETER WATCH COY.,
POST BOX 27, MADRAS

ಶಾಲಿವಾಹನಶಕೆ ೧೮೫೮ನೆಯ ಧಾತೃ ಸಂವತ್ಸರದ ಶ್ರಾವಣ ಬ॥ ೪ ಶನಿವಾರದಿಂದ ಧಾತೃ ಸಂವತ್ಸರದ ಶ್ರಾವಣ ಬ॥ ೧೦ ಶುಕ್ರವಾರದ ವರೆಗಿನ ಪಂಚಾಂಗ.
(೧೯೩೬ನೆಯ ಕರ್ಣಾಟಕ ಆಲ್ಮ)

ತಾರೀಖು	ವಾರ	ತಿ.	ಘಳಿಗೆ	ನಕ್ಷತ್ರ	ಘಳಿಗೆ	ಸೌರಮಾನ	ಸೂರ್ಯ ಉ.	ಸೂರ್ಯ ಅಸ್ತ.
8	ಶನಿ	೪	೧೦.೫೮	ಉ. ಭಾ.	೩೯.೪೬	೨೪	6.18	6.53
9	ರವಿ	೫	೭.೪೬	ರೇವತಿ	೩೯.೧೮	೨೫	6.19	6.53
10	ಸೋಮ	೬	೬.೨	ಅಶ್ವಿನಿ	೩೯.೪೬	೨೬	6.19	6.52
11	ಕುಜ	೭	೫.೧೬	ಭರಣಿ	೪೧.೩೨	೨೭	6.19	6.52
12	ಬುಧ	೮	೫.೪೬	ಕೃತ್ತಿಕಾ	೪೪.೩೦	೨೮	6.19	6.51
13	ಗುರು	೯	೭.೪೪	ರೋಹಿಣೀ	೪೮.೪೨	೨೯	6.19	6.50
14	ಶುಕ್ರ	೧೦	೧೦.೧೬	ಮೃಗಶಿರಾ	೫೩.೪೪	೩೦	6.19	6.49

ಮಂಗಳೂರಿನ ವಾಯುಸ್ಥಿತಿ.

Date ತಾರೀಖು	Temperature. ಉಷ್ಣ (ಕಾವು) Maximum ಹೆಚ್ಚಾದ	Minimum ಕಡಿಮ್ಮೆ	Rainfall. ಮಳೆ ದಿನದ ಮಳೆ	ಜುಮಲಾ ಮಳೆ.
31	83—8	73—8	2—80	—
1	87—3	74—2	0—85	—
2	81—2	71—2	3—61	—
3	83—2	70—5	1—92	—
4	87—3	76—5	0—18	—
5	87—8	73—8	0—27	—
6	87—3	73—4	1—75	—

ಮಂಗಳೂರಿನ ಪೇಟೆ ಧಾರಣಿ.

ಜೀನಸು	ಇಂದ ರೂ. ಆ.	ವರೆಗೆ ರೂ. ಆ.
ಮುಸ್ಕತಿ	9— 0	9— 8
ಗುಜ್ಜು ...	8— 8	8—12
ರಾಶಿ ಸುಗ್ಗಿ ...	8— 0	8—10
ಅನ್ನಲ್ ಬೆಳ್ತಿಗೆ ...	8— 8	10— 0
ಗುಜ್ಜು ಬೆಳ್ತಿಗೆ ...	8— 0	8— 8
ರಂಗೂನು ಬೆಳ್ತಿಗೆ ಗೋಣಿ ೧ ...	13— 8	14— 8
ಗೋಧಿ ಗೋಣಿ ೧ಕ್ಕೆ ...	18— 8	22— 0
ಹುರುಳಿಗೋಣಿ ೧ಕ್ಕೆ ...	9— 4	10— 8
ಕಡಲೆಗೋಣಿ ೧ಕ್ಕೆ ...	12— 0	13— 0
ತೊಗರಿಗೋಣಿ ೧ಕ್ಕೆ ...	12— 8	13— 0
ತೊಗರಿಬೇಳೆ ಗೋಣಿ ೧ಕ್ಕೆ ...	14— 0	21— 0
ಉದ್ದುಗೋಣಿ ೧ಕ್ಕೆ ...	14— 0	14— 8
ಹೆಸರುಗೋಣಿ ೧ಕ್ಕೆ ...	14— 0	15— 0
ಊರು ಬೆಲ್ಲ ಖಂಡಿ ೧ಕ್ಕೆ ...	80—	85— 0
ಉಪ್ಪು ಗೋಣಿ ೧ಕ್ಕೆ ...	4— 4	4—10
ಕೊಪ್ರಿ ಖಂಡಿ ೧ಕ್ಕೆ ...	115— 0	120— 0
ಕೊಬ್ಬರಿ ಹಿಂಡಿ ಖಂಡಿ ೧ಕ್ಕೆ ...	42— 0	43— 0
ಎಳ್ಳಿಂಡಿ ಖಂಡಿ ೧ಕ್ಕೆ ...	42— 0	42— 8
ಕೊಬ್ರಿ ಎಣ್ಣೆ ಮಣ ೧ಕ್ಕೆ ...	9— 0	10— 0
ಎಳ್ಳೆಣ್ಣೆ ಮಣ ೧ಕ್ಕೆ ...	8— 0	11— 0
ಚಿಮಣಿ ಎಣ್ಣೆ ಪೆಟ್ಟಿಗೆ ೧ಕ್ಕೆ ...	8-15-6	—
ಬೋರಿಸ ಸಕ್ಕರೆ ಮಣ ೧ಕ್ಕೆ ...	4—12	—
ಊರ ಮೆಣಸಿನಕಾಯಿ ಮಣ ೧ಕ್ಕೆ ...	7— 0	—
ಸಾಸಿವೆ ಮುಡಿ ೧ಕ್ಕೆ ...	8—12	—
ಕೊತ್ತಂಬರಿ ಮುಡಿ ೧ಕ್ಕೆ ...	3— 8	4— 4
ಕಾಫಿ ಖಂಡಿ ೧ಕ್ಕೆ ...	345— 0	400— 0
ಬೊಗೋಟು ಅಡಿಕೆ ಖಂಡಿ ೧ಕ್ಕೆ ಹಳತು ...	245— 0	250— 0
,, ಹೊಸ ಅಡಿಕೆ	240— 0	240— 0
ಕಾಳುಮೆಣಸು ಖಂಡಿ ೧ಕ್ಕೆ ...	220— 0	—
ಯಾಲಕ್ಕಿ ಮಣ ೧ಕ್ಕೆ ...	100—0	— 0
ಗೇರುಬೀಜ ಮುಡಿ ೧ಕ್ಕೆ ...	4— 8	4— 9
ಅರಶಿನ ಖಂಡಿ ೧ಕ್ಕೆ ...	45— 0	65— 0
ತಾಂಬ್ರ ತಗಡು ಮಣ ೧ಕ್ಕೆ ...	17—12	23— 0
ಹಾಳ್ಯ ಪಾತ್ರಗಳು ಮಣ ೧ಕ್ಕೆ ...	26— 0	—
ಚೀನಿ ಬೆಳ್ಳಿ ಸೇರು ೧ಕ್ಕೆ ...	22— 0	
ಹಿತ್ತಾಳೆ ತಗಡು ಮಣ ೧ಕ್ಕೆ ...	18— 8	
ಪವನು	18— 7	

The Canara Public Conveyance Co., Ltd, Mangalore.
(ESTABLISHED 1914.)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು
- ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು
- ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
- ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
- ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.
- ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ—ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯೆ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd, Mangalore. S. K

— ಸಿರಿಗನ್ನಡಂಗೆಲ್ಗೆ —

ಶ್ರೀ ಶಂಕರ ಕರ್ನಾಟಕ ಪುಸ್ತಕ ಭಂಡಾರವೂ ಶ್ರೀ ವಿದ್ಯಾರಣ್ಯ ಪ್ರಕಾಶಕ ಸಂಸ್ಥೆಯೂ,

ಮಾಳಮಡ್ಡಿ, ದಾರವಾಡ.

ಕನ್ನಡಿಗರಿಗೆ ಬೇಕಾಗುವ ಎಲ್ಲಾ ತರದ ಕನ್ನಡ ಪುಸ್ತಕಗಳು ನಮ್ಮಲ್ಲಿ ಯೋಗ್ಯ ಬೆಲೆಗೆ ದೊರೆಯುವವು. ವಿದ್ಯಾರಣ್ಯ ಪುಸ್ತಕ ಮಾಲೆಯ ಕೆಳಗಿನ ೧, ೨, ೩, ಪುಸ್ತಕಗಳು ಚಂದಾದಾರರಾಗುವವರಿಗೆ ಅಂಚೆ ವೆಚ್ಚ ಸೇರಿ ೫ ರೂ. ೬ ಆಣೆಗೆ ದೊರೆಯುವವು. ಮುಂದೆ ಹೊರ ಬೀಳುವ ಮಾಲೆಯ ಪುಸ್ತಕಗಳನ್ನು ಚಂದಾದಾರರಿಗೆ ೧ ರೂಪಾಯಿಗೆ ೨ ಆಣೆಯಂತೆ ಕಡಿಮೆ ಬೆಲೆಗೆ ವಿ. ಪಿ. ಮಾಡುವೆವು. ಭಂಡಾರದ ಬೆಲೆ ಪಟ್ಟಿಗಾಗಿ ೪ ಆಣೆ ಅಂಚೆ ಟಿಕೇಟುಗಳನ್ನು ಕಳುಹಿಸತಕ್ಕದ್ದು.

			ರೂ. ಆ. ಪೈ.
೧.	ಕರ್ನಾಟಕ ಸಿಂಹಾಸನ ಸ್ಥಾಪನೆ		೧— ೦—೦
೨.	ಕಥೆಗಳನ್ನೊಳಗೊಂಡ ವೀರಬಲ್ಲ ಚರಿತ್ರೆ (ಸಚಿತ್ರ)		೧— ೬—೦
೩.	ಛತ್ರಪತಿ ಶಿವಾಜಿ ಮಹಾರಾಜ	,,	೨—೧೨—೦
೪.	ಮಹಾರಾಣಿ ಲಕ್ಷ್ಮೀಬಾಯಿ ಝಾಂಸಿ	,,	೨— ೦—೦
೫.	ಅಕ್ಬರ ಚಕ್ರವರ್ತಿ ಚರಿತ್ರೆ	,,	೧— ೧—೦
೬.	ಚರಿತ್ರೆ ಸಂಗ್ರಹ ಭಾಗ ೧.	,,	೧— ೪—೦
೭.	ತಿಲಕರ ಗೀತಾ ರಹಸ್ಯ		೩— ೮—೦
೮.	ಶ್ರೀ ದಾಸಬೋಧ ಭಾಗ ೧. ೨. ೩.		೨—೧೪—೦
೯.	ರಾಷ್ಟ್ರಸಭೆಯ ಇತಿಹಾಸ		೩— ೮—೦
೧೦.	ವಚನ ಜ್ಞಾನಸಿಂಧು		೪— ೦—೦

ಇವಲ್ಲದೆ ನಮ್ಮಲ್ಲಿ ಎಲ್ಲಾ ತರದ ಕಾಯಿದೆ ಕಾಲೇಜುಪಯೋಗಿ ಪುಸ್ತಕಗಳೂ ನಕಾಶೆ ಚಿತ್ರಗಳೂ ಬರವಣಿಗಳೂ ದೊರೆಯುವವು.

ಶ್ರೀಪಾದ ರಾಮಚಂದ್ರ ದೇಶಪಾಂಡೆ ಬಿ. ಯಸ್. ಎ.
ವ್ಯವಸ್ಥಾಪಕ.

ಪ್ರಖ್ಯಾತಿಪಟ್ಟ ಮಂಗಳೂರು ನಸ್ಯ.

ನಮ್ಮಲ್ಲಿ ಉತ್ತಮವಾದ ಹೊಗೆಸೊಪ್ಪಿನಿಂದಲೂ, ಸುಮಾರು ೫೦ ವರ್ಷಗಳ ಅನುಭವದಿಂದಲೂ ತಯಾರಿಸಿದ ನಸ್ಯವು ಯಾವಾಗಲೂ ರಖಂ ಆಗಿಯೂ ಚಿಲ್ಲರೆ ಆಗಿಯೂ ಮಾರಾಟಕ್ಕೆ ದೊರೆಯುತ್ತದೆ.

I ಕ್ಲಾಸ್ ರಾತ್ಲು 1ಕ್ಕೆ ರೂ. 3—0—0.
II ,, ,, ,, 2—12—0.

ವಿ. ಪಿ. ಚಾರ್ಜು ಅಲಾಹಿದೆ. ಸ್ಯಾಂಪಲು ಅಪೇಕ್ಷಿಸುವವರು ೨ ಆಣೆ ಸ್ಟಾಂಪು ಕಳುಹಿಸಲಿ.

ವಿಳಾಸ:—
ಎಮ್. ಎಸ್. ಬಂಡಾರ್ಕಾರ್ ಎಂಡ್ ಸನ್ಸ್,
ನಸ್ಯ ವ್ಯಾಪಾರಿಗಳು,
ರಥಬೀದಿ, ಮಂಗಳೂರು.

ಬಂದು ನೋಡಿರಿ! ತಿಂದುನೋಡಿರಿ!

ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ
ಪದಕವನ್ನು
ಬಹುಮಾನವಾಗಿ ಪಡೆದಿರುವ
ಎಸ್. ಪಿ. ಆಚಾರ್ಯ
ಇವರಿಂದ ತಯಾರಿಸಲ್ಪಟ್ಟ

ಉಪ್ಪಿನಕಾಯಿಗಳನ್ನು
ಬಂದು ನೋಡಿರಿ! ತಿಂದು ನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸಲ್ಪಟ್ಟಿದ್ದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ ಶುಂಠಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ
ಬಂದು ನೋಡಿರಿ! ತಿಂದು ನೋಡಿರಿ!

ಇಂಡಿಯನ್ ಸ್ವೀಟ್‌ಮಿಟ್ ಮಾರ್ಟ್.

ಮನೋರ್ಮಾ ಸಿಸಿ ಕಾಫಿ ಕ್ಲಬ್. ಮಾರ್ಕೆಟು ರೋಡು, ಮಂಗಳೂರು. ಅಥವಾ ಸದಾನಂದ ಕಾಫಿ ಕ್ಲಬ್ ರಥಬೀದಿ, ಮಂಗಳೂರು.

ದಕ್ಷಿಣ ಕನ್ನಡ ಜಿಲ್ಲೆಯ
ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪ್ಯಾ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪ್ಯಾ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

ಹೆಚ್ಚಿನ ಮಾಹಿತಿಗೆ "ಆರ್ಷ ಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಶುದ್ಧ ರೋಮದ ಧಾವಳಿಗಳು.

1 ಮಳ ಉದ್ದ 1¼ ಮಳ ಅಗಲ ರೂ. 1½ರಿಂದ 2 ವರೆಗೆ, 5 ಮಳ ಉದ್ದ 1½ ಮಳ ಅಗಲ ರೂ. 1½ ರಿಂದ 5 ವರೆಗೆ, 6 ಮಳ ಉದ್ದ 1½ ಮಳ ಅಗಲ ರೂ. 2½ರಿಂದ 6 ವರೆಗೆ, 8 ಮಳ ಉದ್ದ 2 ಮಳ ಅಗಲ ರೂ. 3½ರಿಂದ 10 ವರೆಗೆ, 12 ಮಳ ಉದ್ದ 2¼ ಮಳ ಅಗಲ ರೂ. 6ರಿಂದ 12 ವರೆಗೆ, 16 ಮಳ ಉದ್ದ 2½ ಮಳ ಅಗಲ ರೂ. 9 ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಖದ್ದರ್ ರೇಶ್ಮೆ ಮಡಿಗಳು, ಜಾಮರ್ಡಿಗಳು, ಕಾಶೀ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, ಬಾಣಲಿಂಗ, ಜಾಘಂಟೆ, ತಾಳ, ಪನ್ನೀರ್‌ದಾನಿ, ಹಿತ್ತಾಳೆಯ ಆಟದ ಸಾಮಾನುಗಳು, ಫೋಟೋ ಉಂಗುರಗಳು ಮತ್ತು ಇನ್ನೂ ಅನೇಕ ಸಾಮಾನುಗಳು ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುದು. ಕ್ಯಾಟಲಾಗ್ ಇನಾಂ.

ವಿಳಾಸ—
ಶಿರೋಮಣಿ ಯು. ನಾರಾಯಣಾಚಾರ್ಯ
ಮತ್ತು ಕಂಪೆನಿ, ಚೌಕಂಬಾ, ಕಾಶೀ ಕ್ಷೇತ್ರ.

ಶುದ್ಧವಾದ ನೀಲಗಿರಿ ಎಣ್ಣೆ

ತಲೆನೋವು, ಶೀತ, ಇನ್ಫ್ಲುಯಂಜಾಜ್ವರ,
ವಾತ, ಇತ್ಯಾದಿ ಎಲ್ಲಾ ರೋಗಗಳ
ಮೇಲೆ ಸಿದ್ಧೌಷಧ.

1 ಔನ್ಸು ಬಾಟ್ಲಿ 1ರ ಕ್ರಯ 0—4—0.

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು.

ಸಾಹಿತ್ಯಸರಸ್ವತಿ—ಲಕ್ಷ್ಮೀನಾರಾಯಣ
ಪುಣಿಂಚತ್ತಾಯ
ಇವರಿಂದ ರಚಿತವಾದ

ರಾಷ್ಟ್ರಗೀತಾರತ್ನಾಕರ ೦-೮-೦.
ಸ್ವರಾಜ್ಯಗೀತೆ ೦-೧-೦ ಲೀಲೆ ೦-೧-೦.

ಅಭಿಪ್ರಾಯ:—
ಕರ್ಣಾಟಕದ ಸುಪ್ರಸಿದ್ಧ ವಿದ್ವನ್ಮಣಿಗಳಾದ
"ಹರಿಕಥಾರತ್ನಾಕರ" "ವಿದ್ಯಾನಿಧಿ"
ಕಾ. ಶಿವರಾಮದಾಸ್

ಸಂಪಾದಕ—"ಆನಂದ ಚಂದ್ರಿಕೆ" ಹೊಸೂರು ಇವರು ಬರೆಯುತ್ತಾರೆ-

"ಬೃಹಚ್ಛ್ರೀ ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯರ ಸನ್ನಿಧಿಗೆ—ಅನೇಕ ನಮಸ್ಕಾರ ಪೂರ್ವಕ ವಿಜ್ಞಾಪನೆಗಳು. ಉಭಯ ಕುಶಲೋಪರಿ. ॥ ಸಾ ॥

ಶ್ರೀ ಹರಿಗುರುದೇಶಭಕ್ತ ವರೇಣ್ಯ!

ಸಮುಚಿತ ಪ್ರೇಮದಿಂದ ತಾವು ಕಳುಹಿಸಿಕೊಟ್ಟ ಪತ್ರ ಪುಸ್ತಕಗಳು ತಲಪಿದವು. ನಿನ್ನೆಯ ದಿನ ಮಧ್ಯಾಹ್ನ ಸಮಗ್ರವಾಗಿ ಓದಿ ನೋಡಿದೆನು, ಸಮಧಿಕಾನಂದತುಂದಿಲನಾದೆನು. ಮೊನ್ನೆಯ ದಿನ ಇಲ್ಲಿ ನಡೆದ ಶ್ರೀ ಮಹಾಭಾರತ ಹರಿಕಥಾ ಭಾಗದಲ್ಲಿ "ಪಾಂಚಾಲೀ ಮಾನಸಂರಕ್ಷಣೆ" (ಅಕ್ಷಯವಸ್ತ್ರಪ್ರದಾನ) ಮಂಗಳಾಚರಣೆ ಸುಸಮಯದಲ್ಲಿ ತಮ್ಮಿಂದ ರಚಿತವಾದ "ಸ್ವರಾಜ್ಯ ಸೂರ್ಯೋದಯವಾಗಲಿ" ಎಂಬ ಗೀತವನ್ನು ಬೆಳಗಾವಿಗೆ ಬಂದಿದ್ದ ತಮ್ಮ ಮುಖೇನ ಶ್ರವಣಮಾಡಿದ ನಮ್ಮ ಮಿತ್ರರೊಬ್ಬರು ಗಾನಮಾಡಿದರು. ಸಭಾಸದರೆಲ್ಲರೂ ಆನಂದಪರವಶರಾದರು. ಮರನೆಯ ದಿನವೇ ತಮ್ಮ ಗ್ರಂಥಗಳೂ ತಲಪಿದವು. ತಮ್ಮ ಅಮೂಲ್ಯ ಗ್ರಂಥಗಳಲ್ಲಿ ದೈವಭಕ್ತಿ, ದೇಶಭಕ್ತಿ, ನೀತಿ, ವಿಜ್ಞಾನಗಳು ಮನೋಹರವಾದ ಶೈಲಿಯಿಂದಲಂಕೃತವಾಗಿ ಶೋಭಿಸುತ್ತಿರುವುವು. "ರಾಷ್ಟ್ರಗೀತಾರತ್ನಾಕರ" "ಲೀಲೆ" "ಸ್ವರಾಜ್ಯಗೀತೆ" ಯೆಂಬ ಗ್ರಂಥಗಳು ಮೂರೂ ಕರ್ಣಾಟಕ ದೇಶಮಾತೆಯ ಕಂಠಾಭರಣದ ಅಮೂಲ್ಯ ರತ್ನತ್ರಯವೆಂಬದಾಗಿ ಬಿನ್ನವಿಸುತ್ತಿರುವೆನು.

ಮಿತ್ರರೇ! ಶ್ರಿಯಃಪತಿಯು ತಮಗೆ ಸಕಲಾರ್ಥಸಂಪತ್ತುಗಳನ್ನೂ ಅನುಗ್ರಹಿಸಲೆಂದು ಪ್ರೇಮಪೂರ್ವಕವಾಗಿ ಹಾರೈಸುತ್ತಿರುವೆನು.

ಓಂ ತತ್ಸತ್!!!
ಇಂತು
ಭವದೀಯ
ಹರಿಕಥಾರತ್ನಾಕರ ವಿದ್ಯಾನಿಧಿ ಕಾ. ಶಿವರಾಮದಾಸ್."

— ಮಾತ್ರವಲ್ಲದೆ —

ಪ್ರಾಚ್ಯನ ವಿಮರ್ಶವಿಚಕ್ಷಣ ರಾವ್‌ಬಹದೂರ್ ಶ್ರೀಮಾನ್ ಆರ್ ನರಸಿಂಹಾಚಾರ್ಯ, ಎಮ್. ಎ., ಎಮ್. ಆರ್. ಎ. ಎಸ್. "ಪ್ರಾಚ್ಯವಿದ್ಯಾವೈಭವ," — ಮೈಸೂರು ಆಸ್ಥಾನ ಮಹಾವಿದ್ವಾನ್ ಶ್ರೀ. ಸೋಸಲೆ ಅಯ್ಯಾಶಾಸ್ತ್ರಿ, "ಕವಿತಿಲಕ"—ಇವರೇ ಮೊದಲಾದ ವಿದ್ವಾಂಸೋತ್ತಂಸರ, ಮಹಾರಾಷ್ಟ್ರ "ಕೇಸರಿ"ಯು ಹಾಗೂ ನಿಖಿಲ ಕರ್ಣಾಟಕದ ಸಕಲ ಪತ್ರಿಕೆಗಳ ಶ್ಲಾಘನೆಗೆ ಪಾತ್ರವಾದ

ರಾಷ್ಟ್ರಗೀತಾರತ್ನಾಕರ—ಲೀಲೆ—ಸ್ವರಾಜ್ಯಗೀತೆ

ಮೊದಲಾದ ಭವ್ಯ ಕಾವ್ಯಗ್ರಂಥಗಳು ನಮ್ಮಲ್ಲಿವೆ. ಕರ್ಣಾಟಕ ಬಂಧುಗಳೇ,

— ಓದಿ ನೋದಗೊಳ್ಳಿರಿ —

ಕೆ. ಎಮ್. ದಾಸಪ್ರಭು ಎಂಡ್ ಸನ್ಸ್, ಮಂಗಳೂರು.
ಅಥವಾ
ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

ಕೌನ್ಸಿಲ್ ಒಫ್ ಸ್ಟೇಟಿನ ಚುನಾವಣಾ.

ಅಯ್ಯಾ ಮತದಾರರೆ ಅಗೋಸ್ತು ತಿಂಗಳಿನ ಅಧಿವೇಶನವು ಮುಗಿದ ಕೂಡಲೇ ಕೌನ್ಸಿಲ್ ಒಫ್ ಸ್ಟೇಟಿನ ಸರ್ವಸಾಧಾರಣ ಚುನಾವಣೆಯು ಬರುತ್ತದೆ. ಮತ್ತು ಸ್ವರಾಜ್ಯ ಪಕ್ಷವು ಈ ಮದ್ರಾಸು ಸಂಸ್ಥಾನದೊಳಗಿನ ಕೌನ್ಸಿಲ್ ಒಫ್ ಸ್ಟೇಟಿನ ಮುಸಲ್ಮಾನರಲ್ಲದ ನಾಲ್ಕು ಜಾಗೆಗಳ ಪೈಕಿ ಒಂದು ಜಾಗೆಗೆ ಉಮೇದ್ವಾರನಾಗಿ ನಿಲ್ಲಲು ನನ್ನನ್ನು ನೇಮಿಸಿಯದೆ.

ನಾನು ೧೯೨೩ರಲ್ಲಿ ಸ್ಥಾಪಿತವಾದ ರಾಷ್ಟ್ರೀಯ ಸಭಾಂತರ್ಗತ ಸ್ವರಾಜ್ಯ ಪಕ್ಷದ ಸಂಪೂರ್ಣ ಅನುಯಾಯಿಯಾಗಿದ್ದು, ಮದ್ರಾಸ್ ಕೌನ್ಸಿಲಿನಲ್ಲಿಯೂ ಹೊರಗೂ ಸ್ವರಾಜ್ಯ ಪಕ್ಷದ ಕಾರ್ಯಕ್ರಮವನ್ನೂ ಧೋರಣವನ್ನೂ ನಂಬಿಕೆಯಿಂದ ಅನುಸರಿಸಿದ್ದೇನೆ. ರಾಜಕೀಯ ಕಾರ್ಯಗಳಲ್ಲಿ ನಾನು ಸಾಮಾನ್ಯ ಇಪ್ಪತ್ತೈದು ವರ್ಷಗಳಾಗಾಯಿತು ಭಾಗವನ್ನು ಎತ್ತುತ್ತಿದ್ದೇನೆ. ಹಳೇ ಮುನ್ಸಿಪಲ್ ಕಾನೂನು ಪ್ರಕಾರ ಮದ್ರಾಸ್ ಕೊರ್ಪೊರೇಶನಿನಲ್ಲಿ ಸಭಾಸದನಾಗಿಯೂ, ಮದ್ರಾಸ್ ಮೆಡಿಕಲ್ ಕೌನ್ಸಿಲ್‌ನಲ್ಲಿ ಮೆಂಬರನಾಗಿಯೂ, ಹಿಂದುಸ್ಥಾನದ ಅನೇಕ ಭಾಗಗಳಲ್ಲಿ ಹಬ್ಬಿಕೊಂಡಿದ್ದಂತಾ ಎಂಟಿಸೆಪ್ಟಿಕ್ ಎಂಬ ವೈದ್ಯಕದ ಮಾಸಿಕ ವಹಿಯ ಸಂಪಾದಕನೂ ಮಾಲಿಕನಾಗಿಯೂ, ಯುದ್ಧದ ಸಮಯದಲ್ಲಿ ಉತ್ತಮ ಕರ್ತವ್ಯವನ್ನು ಮಾಡಿದಂಥಾ ಮದ್ರಾಸ್ ಎಂಬ್ಯುಲೆನ್ಸ್ ಕೋರಿನ ವ್ಯವಸ್ಥಾಪಕನಾಗಿಯೂ, ಹೆಲ್ತ್ ಎಂಬ ಇಂಗ್ಲಿಷ್ ಪತ್ರಿಕೆಯ ಮತ್ತು ಅದರ ಮೂರು ದೇಶಿಯ ಭಾಗಗಳಲ್ಲಿ ಆಗುವ ಪತ್ರಿಕೆಗಳ ಸಂಪಾದಕನಾಗಿಯೂ, ಸಿನೇಟಿನ ಮೆಂಬರನಾಗಿಯೂ, ಕಟ್ಟಕಡೆಗೆ ಸಾಧಾರಣ ಆರು ವರ್ಷದ ವರೆಗೆ ಮದ್ರಾಸ್ ಲೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಿ ಮದ್ರಾಸ್ ಪಟ್ಟಣದ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಪ್ರತಿನಿಧಿಯಾಗಿಯೂ ನಾನು ಯಾವ ಪ್ರಯೋಜನವುಳ್ಳ ಮತ್ತು ನಮ್ರವಾದ ಅಲ್ಪ ಸೇವೆಯನ್ನು ಮಾಡಿರುವೆನೋ ಆ ಬಗ್ಗೆ ನನ್ನ ಉಮೇದ್ವಾರಿಕೆಯು ಜನರ ಮೆಚ್ಚುಗೆಗೆ ಪಾತ್ರವಾದೀತೆಂದು ನಂಬಿದ್ದೇನೆ. ಹಿಂದುಸ್ಥಾನದ ಎಲ್ಲಾ ಕೌನ್ಸಿಲ್‌ಗಳಲ್ಲಿ ವೈದ್ಯಕದ ಪ್ರತಿನಿಧಿತ್ವವು ಏನೂ ಇಲ್ಲವೆಂಬ ಸಂಗತಿಯು ಎಲ್ಲರಿಗೆ ಗೊತ್ತೇ ಇದೆ ಆದುದರಿಂದ ಇದೂ ಕೂಡ ಒಂದು ನನ್ನ ಉಮೇದುವಾರಿಕೆಯ ಪಾತ್ರತೆಗೆ ಕಾರಣವಾಗಿದೆ.

ಚುನಾವಣೆಯು ಒಂದೇಯೊಂದು ಮತವನ್ನು ವರ್ಗಾಯಿಸುವುದರ ಮೇಲೆ ಆಧರಿಸಿರುವ ಸಂಖ್ಯಾನುಸಾರವಾದ ಪ್ರಾತಿನಿಧ್ಯದಿಂದ ಉಂಟಾಗುವದಿದ್ದರಿಂದ ನೀವು [illegible], ನಿಮ್ಮ ಸ್ನೇಹಿತರು ಕೂಡ ನಿಮ್ಮ ಮೊದಲನೆಯ ಮತವನ್ನು ನನಗೆ ಕೊಟ್ಟಲ್ಲಿ ನಾನು ನಿಮ್ಮೆಲ್ಲರಿಗೆ ಅತ್ಯಂತ ಋಣಿಯಾಗಿರುವೆನು.

ನಾನು ಕೌನ್ಸಿಲ್ ಒಫ್ ಸ್ಟೇಟಿಗೆ ಉಮೇದ್ವಾರನಾಗಿ ಚುನಾಯಿಸಿ ಬಂದುದಾದರೆ ದೇಶಸೇವೆಯಲ್ಲಿ ನಾನು ಅಂತಃಕರಣಪೂರ್ವಕವಾಗಿ ನನ್ನನ್ನು ಅರ್ಪಿಸಿಕೊಳ್ಳುವೆನು.

ನಿಮ್ಮ ನಮ್ರ ಮತ್ತು ಕರ್ತವ್ಯಪರನಾದ ಸೇವಕ,
ಯು. ರಾಮರಾವ್, ಎಮ್. ಎಲ್. ಸಿ.,
೩೩೩, ತಂಬುಚೆಟ್ಟಿ ಸ್ಟ್ರೀಟ್, ಮದ್ರಾಸ್.

ಮದ್ರಾಸು ನ್ಯಾಯವಿಧಾಯಕ ಸಭೆ.

ಸದರಿ ಸಭೆಯ ತಾರೀಕು ೨೬-೩-೧೯೨೪ರ ಅಧಿವೇಶನದಲ್ಲಿ ಮುಂದೆ ಬಂದ ಪ್ರಶ್ನೆಗಳ ವ ಉತ್ತರದ ಬಾಬಿನಲ್ಲಿ XXIIIನೇ ಸಂಚಿಕೆಯ ನಂಬ್ರ ೧ನೇ ಪ್ರೊಸಿಡಿಂಗ್ಸಿನ ರಿಪೋರ್ಟಿನಿಂದ ಎತ್ತಿ ಬರಿಯೋಣಾದ್ದು.

ಸಿವಿಲ್ ನ್ಯಾಯ.

ಕೋರ್ಟುಗಳಲ್ಲಿ ಕಕ್ಷಿಗಾರರನ್ನು ವ ಸಾಕ್ಷಿಗಾರರನ್ನು ಕರಿಯುವ ಕ್ರಮ.

೬೫೭. ಸವಾಲು:—ಮಾ। ರಾ। ರಾ। ಕೆ. ರಘುಚಂದ್ರ ಬಲ್ಲಾಳ್ ಬಹುಮಾನಪಟ್ಟ ಲೊ. ಮೆಂಬರರು ದಯವಿಟ್ಟು ಹೇಳ ಬಹುದೇ?

(a) ದಕ್ಷಿಣಕನ್ನಡಾ ಜಿಲ್ಲೆಯ ಸಿವಿಲ್, ಕ್ರಿಮಿನಲ್ ಮತ್ತು ರೆವಿನ್ಯು ಕೋರ್ಟುಗಳಲ್ಲಿ ಕಕ್ಷಿಗಾರರನ್ನು ಮತ್ತು ಸಾಕ್ಷಿಗಾರರನ್ನು ದೇಶಭಾಷೆಯಲ್ಲಿ ಅವರವರ ಹೆಸರುಗಳನ್ನು ಏಕ ವಚನದಿಂದ ಕರಿಯುವಂಥಾದ್ದು ಮತ್ತು ಹಾಗೆ ಕರಿಯುವುದು ಮರ್ಯಾದಿಕರವಲ್ಲವೆಂಬದು ಗವರ್ನಮೆಂಟಿನವರಿಗೆ ಗೊತ್ತಿದೆಯೇ?

(b) ಇಂಥಾ ಪದ್ಧತಿಯನ್ನು ಗವರ್ನಮೆಂಟಿನ ಹುಕುಂ ಮೂಲಕ ನಿಲ್ಲಿಸುವರೆ ಗವರ್ನಮೆಂಟಿನವರ ಏನಾದರೂ ಆಕ್ಷೇಪಗಳು ಇವೆಯೋ?

ಉತ್ತರ:—ಸಾಕ್ಷಿಗಾರರಿಗೆ ಅವರ ಹೆಸರಿನಿಂದ ಮರ್ಯಾದಿ ಹೀನಕರವಾಗಿ ಕರಿಯುವುದರ ಕುರಿತು ಗವರ್ನಮೆಂಟಿನವರಿಗೆ ಇದು ವರೆಗೆ ಏನಾದರೂ ದೂರುಗಳು ಬಂದಿರುವದಿಲ್ಲ.

ಕೋರ್ಟುಗಳ ನ್ಯಾಯಾಧೀಶರುಗಳು ಆಫೀಸರವರ ತಿಳುವಳಿಕೆಗೆ ಅಂಥಾ ಸಂಗತಿಗಳು ಬಂದಲ್ಲಿ ಅವರು ಅಂಥಾ ಸಂಗತಿಗಳನ್ನು ತಕ್ಕ ರೀತಿಯಲ್ಲಿ ಆಲೋಚನೆ ಮಾಡ್ಯಾರು ಎಂಬ ವಿಷಯದಲ್ಲಿ ಗವರ್ನಮೆಂಟಿನವರು ಅನುಮಾನ ಪಡುವದಿಲ್ಲ ಎಂಬ ಉತ್ತರ ಸದರಿ ಸಭೆಯಲ್ಲಿ ಸಿಕ್ಕಿಯದೆ.

ಕನ್ನಡಾ ಜಿಲ್ಲೆಯ ಪಬ್ಲಿಕ್ ಪ್ರೊಸಿಕ್ಯೂಟರವರ ಕುರಿತು.

೬೫೮ ಸವಾಲು:—ಮಾ। ರಾ। ರಾ। ಕೆ. ರಘುಚಂದ್ರ ಬಲ್ಲಾಳ್ ಬಹುಮಾನಪಟ್ಟ ಲೊ. ಮೆಂಬರರು ದಯವಿಟ್ಟು ಹೇಳಬಹುದೇ?

(a) ದಕ್ಷಿಣ ಕನ್ನಡಾ ಜಿಲ್ಲೆಯ ಪಬ್ಲಿಕ್ ಪ್ರೊಸಿಕ್ಯೂಟರ್‌ಶಿಪ್ಪಿನ ಕುರಿತು ಜಿಲ್ಲಾ ಕಲೆಕ್ಟರವರು ಮಾ। ರಾ। ರಾ। ಮಹಾಬಲ ಹೆಗ್ಡೆರವರನ್ನು ಶಿಫಾರಸ್ ಮಾಡಿದ್ದರ ವಿಷಯ ಜಿಲ್ಲಾ ಪೋಲಿಸ್ ಸುಪರಿಂಟೆಂಡೆಂಟ್‌ರವರ ಅಭಿಪ್ರಾಯವನ್ನು ಗವರ್ನಮೆಂಟಿನವರು ತಿಳಕೊಂಡಿದ್ದಾರೋ?

(b) ಸದರಿ ಹುದ್ದೆಯನ್ನು ಮೊಕ್ತ್ಯಾರು ಮಾಡಿದ್ದು ಜಾತಿವಾರು ಕಾರಣಗಳಿಂದಲೋ, ಮತ್ತು.

(c) ಈ ಹುದ್ದೇದಾರರು ಕಳೆದ ೩ ವರ್ಷಗಳಲ್ಲಿ ಸಿವಿಲ್ ಮತ್ತು ಕ್ರಿಮಿನಲ್ ಕೋರ್ಟುಗಳಲ್ಲಿ ಸ್ವತಹಾ ಅಥವಾ ಬೇರೆಯವರ ಜೊತೆಯಲ್ಲಿ ಎಷ್ಟು ವಕಾಲತ್ತುನಾಮೆಗಳನ್ನು ದಾಖಲುಮಾಡಿದ್ದಾರೆ.

ಉತ್ತರ।—(a) ಇಲ್ಲ.

(b) ಇಲ್ಲ, (c) ಗವರ್ನಮೆಂಟಿನವರ ತಿಳುವಳಿಕೆಗೆ ಬಂದಿರುವದಿಲ್ಲ.

ಮಾ। ರಾ। ರಾ। ಎಸ್. ಸತ್ಯಮೂರ್ತಿ:—೩ನೇ ಉತ್ತರದ ಸಂಬಂಧವಾಗಿ ಈ ಗೃಹಸ್ಥರು ವಕೀಲರ ಪೈಕಿ ಪ್ರಮುಖರಾಗಿರುವದರಿಂದ ಅವರನ್ನು ಮೊಕ್ತ್ಯರು ಮಾಡಿದ್ದಾಗಿ ಬಹುಮಾನಪಟ್ಟ ಲೊ. ಮೆಂಬರರು ಹೇಳಿದ್ದು ನನಗೆ ನೆನಪಿರುತ್ತದೆ.

ಎಷ್ಟು ವಕಾಲಾತುನಾಮೆಗಳನ್ನು ದಾಖಲುಮಾಡಿದ ಸಂಗ್ರ್ಯಾನುಸಾರ ಗೊತ್ತಿಲ್ಲದೆಯೆ ಅಭಿಪ್ರಾಯವನ್ನು ಹ್ಯಾಗೆ ಪಟ್ಟರು.

ಬಹುಮಾನಪಟ್ಟ ಸಿ. ಪಿ. ರಾಮಸ್ವಾಮಿ ಅಯ್ಯರ್:—ಅವರು ಪ್ರಮುಖ ವಕೀಲರೆಂಬುದಾಗಿ ಜಿಲ್ಲಾ ಕಲೆಕ್ಟರವರು ಮತ್ತು ಜಿಲ್ಲಾ ಜಡ್ಜರು ತಿಳಿಸಿದ್ದಾಗಿರುತ್ತದೆ.

ಮಾ। ರಾ। ರಾ। ಎಸ್. ಸತ್ಯಮೂರ್ತಿ.—ಹಾಗಾದರೆ ಅದು ಗವರ್ನಮೆಂಟಿನವರಿಗೆ ಗೊತ್ತಿರುವದಲ್ಲ. ಬೇರೆಯವರು ಕೊಟ್ಟ ವರ್ತಮಾನವನ್ನು ಮಾತ್ರ ಅಂಗೀಕರಿಸಿಕೊಂಡದ್ದಾಗಿರುತ್ತದೆ. ಅಲ್ಲವೋ.

ಬಹುಮಾನಪಟ್ಟ ಸಿ. ಪಿ. ರಾಮಸ್ವಾಮಿ ಅಯ್ಯರ್:—ದಾಖಲು ಮಾಡಿದ ವಕಾಲತ್ತು ನಾಮೆಗಳು ಎಷ್ಟೆಂಬದನ್ನು ತಿಳಕೊಳ್ಳುವರೆ ಗವರ್ನಮೆಂಟಿನವರಿಗೆ ಅಸಾಧ್ಯವಾಗಿರುತ್ತದೆ.

ಜಿ. ಒ. ನಂಬ್ರ ೧೬೬೨ (ಜುಡಿಶಿಯಲ್,) ೧೯೨೪. ಪಬ್ಲಿಕ್ ಪ್ರೊಸಿಕ್ಯೂಟರರನ್ನು ಸಿಫಾರಸ್ ಮಾಡುವುದರ ಕುರಿತು.

೬೫೯ ಸವಾಲು:—ಮಾ। ರಾ। ರಾ। ಆರ್. ಶ್ರೀನಿವಾಸ ಅಯ್ಯಂಗಾರ್ ಪಬ್ಲಿಕ್ ಪ್ರೊಸಿಕ್ಯೂಟರನ್ನು ಸಿಫಾರಸ್ಸು ಮಾಡುವ ಸಂಗತಿಯಲ್ಲಿ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು ಮತ್ತು ಸೆಶ್ಶನ್ ಜಡ್ಜರ ತಿಳುವಳಿಕೆ ಬಗ್ಗೆ ಜಿ. ಒ. ನಂಬ್ರ ೧೬೬೨ (ಜ್ಯುಡಿಶಿಯಲ್) ೧೫ ಮೇ ೧೯೨೪ ದನ್ನು ಬಹುಮಾನಪಟ್ಟ ಲೊ. ಮೆಂಬರರು ಮೇಜಿಯ ಮೇಲೆ ಇಡ ಬಹುದೇ?

ಉತ್ತರ:—ಗವರ್ನಮೆಂಟಿನವರು ತಮ್ಮ ಅಫೀಸರರಿಗೆ ಕೊಟ್ಟ ಅನುಜ್ಞೆಗಳನ್ನು ಮೇಜಿಯ ಮೇಲೆ ಇಡುವದು ಅಗತ್ಯವೆಂಬದಾಗಿ ಗವರ್ನಮೆಂಟಿನವರು ಯೋಚಿಸುವದಿಲ್ಲ.

ಮಾ। ರಾ। ರಾ। ಆರ್. ಶ್ರೀನಿವಾಸ ಅಯ್ಯಂಗಾರ್:—ಇದರ ವಿಚಾರದ ಕುರಿತು ಇರುವ ಗವರ್ನಮೆಂಟು ಹುಕುಂ "ಖಾಸಗಿ"ಯೆಂಬುದಾಗಿ ಮಾಡಿದ ಸಂಗತಿಯನ್ನು ಬಹುಮಾನಪಟ್ಟ ಲೊ ಮೆಂಬರರೊಡನೆ ಕೇಳಬಹುದೇ ಬಹುಮಾನಪಟ್ಟ ಸಿ. ಪಿ. ರಾಮಸ್ವಾಮಿ ಅಯ್ಯರ್:—ನಾನು ಹಾಗೆ ನಂಬುತ್ತೇನೆ. ನಾನು ದೃಢಪಡಿಸುತ್ತೇನೆ.

ಮಾ। ರಾ। ರಾ। ಎಸ್. ಸತ್ಯಮೂರ್ತಿ:—ಗವರ್ನಮೆಂಟಿನವರು ತಮ್ಮ ಅಫೀಸರರಿಗೆ ಕೊಟ್ಟ ಅಪ್ಪಣೆಗಳನ್ನು ಮೇಜಿಯ ಮೇಲೆ ಇಡಲಿಕ್ಕೆ ಅನುಕೂಲವಿಲ್ಲವೆಂಬ ಕಾರಣಗಳು ಇದ್ದರೆ ಅವುಗಳನ್ನು ನಾನು ತಿಳಿಯಬಹುದೇ.

ಅದರಿಂದ ಸಾರ್ವಜನರ ಹಿತಕ್ಕೆ ಭಂಗಬಾದೀತೆಂಬುದಾಗಿಯೋ ಅಥವಾ ಅನುಜ್ಞೆಗಳನ್ನು ಬಹಿರಂಗವಾಗಿ [illegible] ಕಾರಣದಿಂದಲೋ.

ಬಹುಮಾನಪಟ್ಟ ಸಿ. ಪಿ. ರಾಮಸ್ವಾಮಿ ಅಯ್ಯರ್:—೩ನೇ ಕಾರಣ ಅಲ್ಲವಯ್ಯ.

ವನ್ನು ಕೇಳುವ ಕುತೂಹಲವು ಜನಗಳಲ್ಲಿ ಸಹಜವಾಗಿಯೆ ಉಂಟಾಗಿತ್ತು. ಗವರ್ನರ ಸಾಹೇಬರು ಕೌನ್ಸಿಲಿನಲ್ಲಿ ಪಾಸಾದ ಅನೇಕ ಠರಾವುಗಳನ್ನು ಸಾಧ್ಯವಿದ್ದ ಮಟ್ಟಿಗೆ ಸರಕಾರವು ಕಾರ್ಯರೂಪದಲ್ಲಿ ಹೇಗೆ ತಂದಿದೆ, ಆಗದಿರುವುದನ್ನು ಹೇಗೆ ಬಿಟ್ಟಿದೆ ಎಂಬಿತ್ಯಾದಿ ಔಪಚಾರಿಕ ವಿಷಯಗಳನ್ನು ಪ್ರಸ್ತಾಪಿಸಿ ಕೊನೆಗೆ ಸ್ವರಾಜಿಸ್ಟರ ವಿಷಯವನ್ನೆತ್ತಿಕೊಂಡು ಈಗಿನ ಸುಧಾರಣೆಗಳನ್ನು ಅನುವರ್ತಿಸಲು ಅವರನ್ನು ಕೇಳಿಕೊಂಡರು. "ಈಗಿನ ಸುಧಾರಣೆಯ ರಚನೆಯು ನೀವು ತಿಳಿಯುವಂತೆ ಅಪೂರ್ಣವಾಗಿ ಇದೆಯಾದರೂ ಅದನ್ನು ಕಾರ್ಯರೂಪಗೊಳಿಸುವದರಲ್ಲಿ ನನ್ನೊಡನೆ ನೀವು ಸಹಕರಿಸಿದ್ದಾದರೆ ನಿಮಗೆ ಹೃತ್ಪೂರ್ವಕವಾದ ಸ್ವಾಗತವು ಸಿಕ್ಕೀತು, ಆದರೆ ನಿಮ್ಮ ಇಚ್ಛೆಗೆ ವಿರುದ್ಧವಾಗಿ ಈ ಸುಧಾರಣೆಗಳನ್ನು ನೀವು ಅಂಗೀಕರಿಸಬೇಕೆಂದಾಗಲಿ, ನಿಮ್ಮ ನಿಮ್ಮ ಪಕ್ಷಗಳನ್ನು ಮುರಿದು ಕೊಳ್ಳಬೇಕೆಂದಾಗಲಿ ನಾನು ಹೇಳುವದಿಲ್ಲ. ನೀವೆಲ್ಲರು ಪ್ರೌಢ ವಯಸ್ಸಿನವರು, ತಿಳುವಳಿಕೆಯುಳ್ಳವರು, ಆದ್ದರಿಂದ ನೀವೆ ನಿಮ್ಮಷ್ಟಕ್ಕೆ ಒಂದು ನಿರ್ಣಯವನ್ನು ಮಾಡುವದು ಉಚಿತವಾಗಿದೆ. ಈಗಿನ ಸಹಕಾರದ ಸಂದರ್ಭವನ್ನು ನಿರಾಕರಿಸುವದರಿಂದ ನಿಮ್ಮ ಮೇಲೆ ಯಾವ ಪ್ರಸಂಗವು ಬರುವದೊ ಅದನ್ನು ಅನುಭವಿಸಲು ನೀವು ಸಿದ್ಧರಾಗಿರುವಿರಿ. ಮತ್ತು ಆಗ ಗುಣಗುಟ್ಟಲು ನಿಮಗೆ ಆಸ್ಪದವು ಇರಲಾರದು. ನಿರ್ಣಯವು ನಿಮ್ಮ ಕೈಯಲ್ಲಿದೆ. ದೀರ್ಘಾಲೋಚನೆಯಿಂದಲೂ, ಈ ಪ್ರಾಂತಕ್ಕೆ ಹಿತಕರವಾಗುವಂತೆಯೂ ನೀವು ಒಂದು ನಿರ್ಣಯವನ್ನು ಮಾಡಿರಿ. ನೀವು ಯಾವ ನಿರ್ಣಯವನ್ನೂ ಮಾಡಬಹುದು, ಆದರೆ ಈ ದೇಶದ ಕ್ಷೇಮವನ್ನು ಮಾಡುವುದು ನಮ್ಮ ಕರ್ತವ್ಯವಾದ್ದರಿಂದ—ಈ ಕೆಲಸವನ್ನು ದೇವರು ನಮಗೆ ಒಪ್ಪಿಸಿಕೊಟ್ಟಿರುವುದರಿಂದ—ನಾನು ಮಾತ್ರ ನನ್ನ ಕೆಲಸವನ್ನು ಅದೆ ರೀತಿಯಿಂದ ಮುಂದರಿಯುವೆನು" ಮಧ್ಯಪ್ರಾಂತದ ಗವರ್ನರರು ಈ ರೀತಿಯಿಂದ ಮಾತಾಡಿರುವರು. ಇವರ ಈ ಮಾತುಗಳಲ್ಲಿ ಅನುನಯಕ್ಕಿಂತ ಭಯವನ್ನು ಹುಟ್ಟಿಸುವ ಮಾತುಗಳೆ ಹೆಚ್ಚಿವೆ. ಇವರು ತಮ್ಮ ಭಾಷಣದಲ್ಲಿ ಇನ್ನೊಂದು ಸಂಗತಿಯನ್ನು ಸಹ ಸೂಚಿಸಿರುವರು. ಡಿಪ್ಯುಟಿ ಕಮಿಶನರರು ಸ್ವರಾಜಿಸ್ಟರ ವಿಷಯವಾಗಿ ಕೆಲವು ವಿಪರೀತ ಸಂಗತಿಗಳನ್ನು ಬೀರುತ್ತಾರೆಂದು ಅವರ ಮೇಲೆ ಆರೋಪಣೆ ಇತ್ತು; ಈ ವಿಷಯವನ್ನು ಸರಕಾರವು ಬಹು ಜಾಗ್ರತೆಯಿಂದ ನೋಡುತ್ತದೆ. ಸ್ವರಾಜ್ಯಪಕ್ಷದ ವಿರುದ್ಧವಾಗಿ ನಡಿಸುವ ಚಳವಳವನ್ನು ಸರಕಾರವು ಹಿಂದಕ್ಕೆ ತೆಕ್ಕೊಂಡಿದೆ ಎಂಬುದಾಗಿಯೂ ತಿಳಿಸೋಣಾಯಿತು. ಅಂತು ಮಧ್ಯಪ್ರಾಂತದ ಗವರ್ನರರು ಉಪಾಯದಿಂದ ಸ್ವರಾಜಿಸ್ಟರನ್ನು ವಶಪಡಿಸಿಕೊಳ್ಳಲು ಹೊರಡುವಾಗಲೆ ಅವರ ಬಾಯಿಂದ ಹಟದ ಮತ್ತು ಆಗ್ರಹದ ಮಾತುಗಳು ಸಹ ಹೊರಬಿದ್ದಿರುವವು. ಇಂಥ ಪರಿಸ್ಥಿತಿಯಲ್ಲಿ ಸ್ವರಾಜಿಸ್ಟರು ಯಾವ ಮಾರ್ಗವನ್ನು ಅನುಸರಿಸುತ್ತಾರೆಂಬುದು ಇನ್ನೂ ಗೊತ್ತಾಗಿಲ್ಲ. ಯಾವ ವರೆಗೆ ಸರಕಾರವು ತನ್ನ ದುರಾಗ್ರಹವನ್ನು ಬಿಡಲಿಕ್ಕಿಲ್ಲವೊ ಆ ವರೆಗೆ ಜನರಾದರೂ ಸರಕಾರವನ್ನು ಹೇಗೆ ಸಹಕರಿಸಿಯಾರು?

೨. ಮೌಲಾನಾ ಮಹಮ್ಮದ ಅಲ್ಲಿಗಳ ಹೆಸರು ಕೆಲವು ಸಮಯದಿಂದ ಪತ್ರಿಕೆಗಳಲ್ಲಿ ಕಾಣುತ್ತಿರಲಿಲ್ಲ. ಇದರ ಕಾರಣ ಅವರು ಸ್ವಲ್ಪ ಸಮಯದಿಂದೀಚೆ ಕಾಯಿಲೆಯಲ್ಲಿ ಇದ್ದರು. ಈಗ ಅವರ ಆರೋಗ್ಯವು ಕೆಲವು ಮಟ್ಟಿಗೆ ಚಲೋದಾಗಿರಬಹುದೆಂದು ತೋರುತ್ತದೆ. ಮುಂಬಯಿಯ ಕ್ರೋನಿಕಲ್ ಪತ್ರಿಕೆಯು ಅಸಹಕಾರ ಚಳವಳ, ರಾಷ್ಟ್ರೀಯ ಸಭೆಯ ಧೋರಣ ಇತ್ಯಾದಿ ಆಧುನಿಕ ವಿಷಯಗಳನ್ನು ಕುರಿತು ಕೆಲವು ಪ್ರಶ್ನೆಗಳನ್ನು ತೆಗೆದು ಆ ಪ್ರಶ್ನೆಗಳನ್ನು ಹಿಂದೂಸ್ಥಾನದೊಳಗಿನ ಗಾಂಧಿ, ಶಾಸ್ತ್ರಿ ಇತ್ಯಾದಿ ಇತ್ಯಾದಿ ಅನೇಕ ಮುಖಂಡರ ಬಳಿಗೆ ಕಳುಹಿಸಿ ಕೊಟ್ಟಿತ್ತು. ಅದೆ ಪ್ರಕಾರವಾಗಿ ಮಹಮ್ಮದ ಅಲ್ಲಿಗಳಿಗೂ ಪ್ರಶ್ನಪತ್ರಿಕವನ್ನು ಕಳುಹಿಸಿಕೊಟ್ಟಿತ್ತು. ಮಹಮ್ಮದ ಅಲ್ಲಿಗಳು ಈ ಪ್ರಶ್ನಗಳನ್ನು ಉತ್ತರಿಸುವಾಗ ಚಮತ್ಕಾರಿಕವಾದ ಒಂದು ವಿಧಾನವನ್ನು ಮಾಡಿದ್ದಾರೆ. ರಾಷ್ಟ್ರೀಯ ಸಭೆಯು ಕ್ರೀಡನ್ನು ಬದಲಾಯಿಸುವುದು ಅಗತ್ಯವಿಲ್ಲವೆಂದು ಅವರು ಹೇಳುತ್ತಾರೆ. ಪ್ರಕೃತದಲ್ಲಿರುವ ವಿಧಾಯಕ ಕಾರ್ಯಕ್ರಮವನ್ನು ಹಾಗೆಯೆ ಇರಗೊಡಬೇಕು, ಅದನ್ನು ಸರ್ವಥಾ ತೆಗೆಯಕೂಡದು, ನಾವು ಕೌನ್ಸಿಲುಗಳ ಹೊರಗೆ ನಿಂತು ನೂಲು ತೆಗೆದು ಸರ್ವಸಾಮಾನ್ಯ ಜನಸಮುದಾಯಕ್ಕೆ ನಾವೆ ನಿಜವಾದ ಸ್ನೇಹಿತರೆಂದು ರುಜು ಪಡಿಸಿಕೊಡಬೇಕು. ಈ ಜನಗಳಿಗೆ ಈ ರೀತಿಯಿಂದ ರುಜು ಪಡಿಸಿಕೊಟ್ಟ ಬಳಿಕ ಅವರ ಸಹಾಯದಿಂದ ಕಾಯಿದೆಭಂಗವನ್ನು ಮಾಡಬೇಕು, ಜನಸಾಮಾನ್ಯರ ಬೆಂಬಲವಿಲ್ಲದೆ ಕಾಯಿದೆ ಭಂಗವು ದುಷ್ಕರವು" ಎಂಬುದಾಗಿ ಮೌಲಾನಾ ಸಾಹೇಬರು ಒತ್ತಿ ಹೇಳಿರುವರು. ಮೌಲಾನಾ ಸಾಹೇಬರ ಈ ಸ್ವಪ್ನೋಕ್ತಿಯ ವಿಚಾರಗಳ ಬಗ್ಗೆ ದೇಶವು ಅವರಿಗೆ ತುಂಬಾ ಋಣಿಯಾಗಿದ್ದೀತೆಂಬುದಕ್ಕೆ ಸಂಶಯವಿಲ್ಲ. ಆದರೆ ಒಂದು ಸಂಗತಿಯಲ್ಲಿ ಮಾತ್ರ ಸಂಶಯವು ಬರುತ್ತದೆ. ವಿಧಾಯಕ ಕಾರ್ಯಕ್ರಮದ ಅದರಲ್ಲೂ ನೂಲುವ ಕರ್ತವ್ಯವನ್ನು ಸ್ವತಃ ಮೌಲಾನಾ ಸಾಹೇಬರು ಎಷ್ಟರ ಮಟ್ಟಿಗೆ ಮಾಡಿರುವರು? ಇವರು ಇದು ವರೆಗೆ ಎಷ್ಟು ನೂಲು ತೆಗೆದಿರುವರು? ತಾವು ಮಾಡದ ಕರ್ತವ್ಯವನ್ನು ಬೇರೆಯವರ ತಲೆಗೆ ಕಟ್ಟುವ ಈ ದೇಶವಾತ್ಸಲ್ಯವು ಯಾವ ಬಗೆಯದು? ಇಲ್ಲವಾದರೆ ದಿಲ್ಲಿಯ ಜಾದಾ ರಾಷ್ಟ್ರೀಯಸಭೆಯಲ್ಲೂ, ಕೊಕೊನಾಡದ ರಾಷ್ಟ್ರೀಯಸಭೆಯಲ್ಲೂ ಯಾವ ಮೌಲಾನಾ ಸಾಹೇಬರು ಐಕ್ಯವನ್ನು ಸಾಧಿಸಲ್ಲ ಮುಖ್ಯ ಪಾತ್ರವನ್ನು ವಹಿಸಿದ್ದರೊ ಅವರೆ ಈಗ ವಿಧಾಯಕ ಕಾರ್ಯಕ್ರಮದ ಮತ್ತು ನೂಲು ತೆಗೆಯುವದರ ಡಂಗುರವನ್ನು ಸಾರಿ ಭೇದದ ಬೀಲಿಯನ್ನು ಭದ್ರಪಡಿಸುವುದು ವಿಚಿತ್ರವಲ್ಲವೆ? ಸ್ವತಃ ಮೌಲಾನಾ ಸಾಹೇಬರಾದರೂ ನೂಲು ತೆಗೆಯುವುದುಂಟೆ? ಆಗ ಈ ರೀತಿಯಿಂದ ಬೇಡಬದಲಾವಣೆಯ ಹಟವನ್ನು ತೋರಿಸುವುದರಲ್ಲಿ ಯಾವ ಹೇತುವಿರಬೇಕು? ಇದನ್ನು ವಾಚಕರೆ ನಿರ್ಣಯಿಸಿಕೊಳ್ಳುವುದು ಯುಕ್ತವಾಗಿದೆ.

೩. ಮೊದಲು ಪತ್ರಿಕೆಗಳಲ್ಲಿ ಪ್ರಕಟವಾದ ಮೇರೆಗೆ ಅಮೃತಸರದಲ್ಲಿ ಸರ್ವಪಕ್ಷೀಯ ಮಹಮ್ಮದೀಯರ ಪರಿಷತ್ತು ಕಳೆದವಾರ ಸೇರಿತು. ಡೊ. ಕಿಚ್ಲುಗಳು ಸ್ವಾಗತಾಧ್ಯಕ್ಷರಾಗಿದ್ದರು. ಬಿ. ಮಹಮ್ಮದ ಇಸ್ಮಾಯಿಲ್‌ಖಾನರು ಸಭಾಧ್ಯಕ್ಷರಾಗಿದ್ದರು ಇಬ್ಬರೂ ಅಧ್ಯಕ್ಷರ ಭಾಷಣಗಳು ನಿರೀಕ್ಷೆಗನುಸಾರವಾಗಿಯೆ ಇವೆ ಎನ್ನಬಹುದು. ಮುಸಲ್ಮಾನರ ಸಂಘಟನವನ್ನು ಮಾಡಿ ಮುಸಲ್ಮಾನರಿಗೆ ರಾಜಕೀಯ ಮಹತ್ವವನ್ನು ತಂದುಕೊಡುವುದು ಸಭೆಯ ಮುಖ್ಯೋದ್ದೇಶವಾಗಿತ್ತು. ಆದರೆ ಆ ಇಬ್ಬರೂ ಅಧ್ಯಕ್ಷರಭಾಷಣಗಳಲ್ಲಿ ಹಿಂದು ಜನರನ್ನೂ, ಅವರ ಶುದ್ಧಿ ಚಳವಳವನ್ನೂ ಯಥೇಚ್ಛವಾಗಿ ಬೈದದ್ದು ಕಂಡುಬರುತ್ತದೆ. ಹಿಂದುಗಳು ಯಾವ ವರೆಗೆ ಸಂಘಟನ ಮತ್ತು ಶುದ್ಧಿ ಚಳವಳಗಳನ್ನು ಬಿಟ್ಟುಬಿಡಲಿಕ್ಕಿಲ್ಲವೊ ಅದು ವರೆಗೆ ಹಿಂದು ಮಹಮದೀಯರಲ್ಲಿ ಐಕ್ಯವುಂಟಾಗಲಿಕ್ಕಿಲ್ಲವೆಂದು ಇಬ್ಬರೂ ಸಾರಿ ಹೇಳಿರುವರು. ಆದರೆ ಇಲ್ಲಿ ಒಂದು ಪ್ರಶ್ನೆಯು ಬರುತ್ತದೆ. ಶುದ್ಧಿ ಚಳವಳದಲ್ಲಿ ಮುಸಲ್ಮಾನನಾಗಿ ಹೋದವನನ್ನು ಬಲಾತ್ಕಾರದಿಂದ ಹಿಂದುಗಳಲ್ಲಿ ಸೇರಿಸಿಕೊಂಡ ಉದಾಹರಣೆಯು ಒಂದಾದರೂ ಉಂಟೆ? ಅಂಥ ಉದಾಹರಣೆಯನ್ನು ಇದ್ದರೆ ಮಹಮ್ಮದೀಯ ಬಂಧುಗಳು ತೋರಿಸಿಕೊಡಬೇಕು. ಅವರಾದರೊ ಬೇಕಾದ ರೀತಿಯಿಂದ ಹಿಂದುಗಳನ್ನು ಧರ್ಮಾಂತರಗೊಳಿಸಬಹುದು, ಹಿಂದುಗಳು ಮಾತ್ರ ಅವನವನ ಸ್ವಂತ ಇಚ್ಛೆಯಿಂದ ಪುನಃ ಸ್ವಧರ್ಮದಲ್ಲಿ ಬಂದು ಸೇರುವವನನ್ನು ತೆಕ್ಕೊಳ್ಳಬಾರದೆಂದು ಹೇಳುವದು ಎಷ್ಟರ ಮಟ್ಟಿಗೆ ಸಮಂಜಸ? ಮತ್ತು ಇದು ಯಾವ ನ್ಯಾಯ? ಸ್ವರಾಜ್ಯವು ಹಿಂದುಗಳಿಗೆ ಮಾತ್ರ ಬೇಕು, ಮಹಮ್ಮದೀಯರಿಗೆ ಬೇಡವೆ? ಅವರು ಈ ದೇಶದಲ್ಲೆ ಇರುವದಾದರೆ ಅವರಿಗೆ ಸ್ವರಾಜ್ಯವು ಅಗತ್ಯವಿಲ್ಲವೆ? ಅಗತ್ಯವಿದ್ದದ್ದಾದರೆ ಪರಸ್ಪರ ಐಕ್ಯವು ಬೇಕಲ್ಲವೆ? ಈ ಐಕ್ಯವುಂಟಾಗಬೇಕಾದರೆ ಹಿಂದುಗಳು ಶುದ್ಧಿ ಚಳವಳವನ್ನು ಬಿಡುವದಕ್ಕಿಂತ ಮುಂಚೆ ಮಹಮ್ಮದೀಯರು ಹಿಂದುಗಳನ್ನು ಧರ್ಮಾಂತರಗೊಳಿಸುವದನ್ನು ಬಿಟ್ಟುಬಿಡಬೇಕಲ್ಲವೆ? ಅವರು ಮಾತ್ರ ಹಿಂದುಗಳಿಗೆ ಮಹಮ್ಮದೀಯ ದೀಕ್ಷೆಯನ್ನು ಕೊಡಬೇಕು ಮತ್ತು ಹಿಂದುಗಳು ಅದನ್ನು ನೋಡುತ್ತ ಸುಮ್ಮಗೆ ಕುಳಿತುಕೊಳ್ಳಬೇಕು ಎಂದು ಹೇಳಿದರೆ ಇದು ಯಾವ ಐಕ್ಯ? ಇಂಥ ಐಕ್ಯವು ಹಿಂದುಗಳಿಗಾದರೂ ಯಾಕೆ? ನಾಳೆಯ ಸ್ವರಾಜ್ಯದ ಆಶೆಯಿಂದ ಈ ಹೊತ್ತು ಹಿಂದುಗಳು ತಮ್ಮ ಧರ್ಮವನ್ನು ತ್ಯಜಿಸಬೇಕೆ? ಈ ತರದ ಐಕ್ಯವು ನಿಜವಾದ ಐಕ್ಯವಲ್ಲ. ಆದ್ದರಿಂದ ಹಿಂದುಗಳನ್ನು ಬೈಯುವದಕ್ಕಿಂತ ಡೊ. ಕಿಚ್ಲು ಸಾಹೇಬರೂ, ಬಿ. ಅಹಮ್ಮದ ಇಸ್ಮಾಯಿಲ್ ಖಾನ ಸಾಹೇಬರೂ ಆತ್ಮ ಸಂಶೋಧನವನ್ನು ಮಾಡಿಕೊಳ್ಳುವದು ಹೆಚ್ಚು ಅಗತ್ಯದ್ದಾಗಿದೆ. ಹಿಂದು ಮಹಮ್ಮದೀಯರಲ್ಲಿ ಐಕ್ಯವಾಗದೆ ಇರಲು ಯಾವ ಹುಳುಕುಂಟು ಎಂಬುದನ್ನು ಸದ್‌ಬುದ್ಧಿಯಿಂದಲೂ, ನಿಃಪಕ್ಷಪಾತದಿಂದಲೂ ವಿಚಾರಿಸಿ ನೋಡಿ ಅದರ ನಿವಾರಣೆಗಾಗಿ ಯತ್ನಿಸಿದರೆ ದೇಶವು ಇವರಿಗೆ ಋಣಿಯಾಗದೆ ಇರಲಿಕ್ಕಿಲ್ಲ. ಒಬ್ಬರನ್ನೊಬ್ಬರು ಬೈಯುವದರಿಂದ ದೇಶ ಸೇವೆ ಮಾಡಿದಂತಾಗುವದಿಲ್ಲ, ಸ್ವರಾಜ್ಯ ಸಂಪಾದನಕ್ಕೆ ಯತ್ನಿಸಿದ್ದಂತಾಗುವದಿಲ್ಲ. ಸಾರಾಂಶ ಇಂಥ ಪ್ರಯತ್ನದಿಂದ ಯಾವ ಪುರುಷಾರ್ಥವೂ ಸಿದ್ಧವಾಗುವದಿಲ್ಲ. ಇದನ್ನು ಯಾರೂ ಮರೆಯಕೂಡದು.

೪ ದಕ್ಷಿಣ ಆಫ್ರಿಕದಲ್ಲಿ ಏಸಿಯಾಟಿಕ ಜನರ ಹಕ್ಕುಗಳನ್ನು ಸಂಹರಿಸುವ ಯಾವ ಬಿಲು ಪಾಸಾಗಿತ್ತೊ ಅದನ್ನು ಸಿನೇಟು ರದ್ದುಪಡಿಸಿದ ಬಳಿಕ ಈಗ ಇನ್ನೊಂದು ಬಿಲು ತಯಾರಾಗಿ ಅಲ್ಲಿಯ ಕಾಯಿದೆ ಸಭೆಯ ಮುಂದೆ ಬರುತ್ತಿದೆ. ಇದರಲ್ಲಿಯೂ ಕೂಡ ಅವೆ ಅನುಧಾರತತ್ವಗಳನ್ನು ಬೇರೆ ಶಬ್ದಗಳಿಂದ ಮತ್ತು ಬೇರೆ ಮಾತುಗಳಿಂದ ಸೇರಿಸಿದ್ದಾರೆ ಎಂದ ಮೇಲೆ ಮುಂಚಿನ ಬಿಲು ಹೋದುದಕ್ಕೆ ಸಂತೋಷಪಡುವದಾಗಲಿ, ಈಗಿನ ಬಿಲು ಬರುತ್ತಿರುವದಕ್ಕೆ ವ್ಯಸನಪಡುವದಾಗಲಿ ಸರ್ವಥಾ ಅಗತ್ಯವಿಲ್ಲ. ಈಗಿನ ಬಿಲನ್ನು ತರುವಾಗ ಅಲ್ಲಿಯ ಸರಕಾರವು ನಮ್ಮ ಹಿಂದುಸ್ಥಾನ ಸರಕಾರದೊಡನೆ ಯಾವ ಆಲೋಚನೆಯನ್ನೂ ಕೇಳಲಿಲ್ಲವಂತೆ. ಬಿಲಿನ ವಿಷಯವಾಗಿ ಬೇಕಾದ ರೀತಿಯಲ್ಲಿ ಚರ್ಚೆಯನ್ನುಮಾಡಲು ಸಂಪೂರ್ಣ ಸಂದರ್ಭವು ಕೊಡಲ್ಪಟ್ಟಿದೆ ಎಂದು ಪ್ರಕಟವಾಗಿದೆ. ಆದರೆ ಒಣಚರ್ಚೆಯಿಂದ ಫಲವೇನು? ವಸಾಹತಿನವರಿಗೆ ಹಿಂದುಸ್ಥಾನ ಸರಕಾರವು ಯಾವ ವರೆಗೆ ಮುಯ್ಯಿಗೆ ಮುಯ್ಯ ತೀರಿಸುವ 'ಯಥಾಯತ್ನ ಸ್ಥಿತಾಬಲಿ' ಈ ಅನ್ಯಾಯವನ್ನು ಅನುಸರಿಸಲಿಲ್ಲವೊ ಅದು ವರೆಗೆ ಹಿಂದುಸ್ಥಾನದ ಜನರ ಕಷ್ಟಗಳನ್ನು ಯಾರು ಕೇಳುವರು? ವಸಾಹತಿನವರ ಸ್ವಾರ್ಥವು ಕಣ್ತೆರೆಯಬೇಕಾದರೆ ಹಿಂದುಸ್ಥಾನ ಸರಕಾರವು ಇಲ್ಲಿಯ ಕಾಯಿದೆಮಂಡಲದ ಸಹಾಯದಿಂದ ಕಠಿಣವಾದ ಕಾನೂನುಗಳನ್ನು ಮಾಡಿ ಆ ವಸಾಹತಿಗಳ ಕಣ್ಣಿನಲ್ಲಿ ಸರಿಯಾದ ಅಂಜನವನ್ನು ಹಾಕಬೇಕು.

೫ ಈ ಹೊತ್ತು ಇನ್ನೊಂದು ಭಾಗದಲ್ಲಿ ಡೊಕ್ಟರ್ ಯು. ರಾಮರಾವ್, ಎಮ್. ಎಲ್. ಸಿ. ಇವರ ವಿನಂತಿ ಪತ್ರಕವನ್ನು ಪ್ರಕಟಿಸಿದ್ದೇವೆ. ಇವರು ಕೌನ್ಸಿಲ್ ಒಫ್ ಸ್ಟೇಟಿಗೆ ಮದ್ರಾಸ ಸಂಸ್ಥಾನದ ನಾಲ್ಕು ಪ್ರತಿನಿಧಿ ಜಾಗೆಗಳ ಪೈಕಿ ಒಂದಕ್ಕೆ ಉಮೇದುವಾರರಾಗಿ ನಿಂತಿದ್ದಾರೆ. ಸ್ವರಾಜ್ಯಪಕ್ಷವು ಇವರ ಉಮೇದುವಾರಿಕೆಯನ್ನು ಮನ್ನಿಸಿದೆ. ಇವರು ಸ್ವರಾಜಿಸ್ಟರಾದ ಕಾರಣ ಹಾಗೂ ಇದುವರೆಗೆ ಇವರ ಕರ್ತವ್ಯದಿಂದ ಎಲ್ಲ ಮತದಾರವರ್ಗಕ್ಕೆ ಸುಪರಿಚಿತರಾಗಿರುವದರಿಂದ ಮತ್ತು ಅವರು ತಮ್ಮ ವಿನಂತಿಪತ್ರದಲ್ಲಿ ಹೇಳಿದ ಮೇರೆಗೆ ಈಗ ೨೫ ವರ್ಷಗಳಿಂದ ಸಾರ್ವಜನಿಕ ಕಾರ್ಯಗಳಲ್ಲಿ ತಮ್ಮ ಆಯುಸ್ಸನ್ನು ಕಳೆದವರಾದ ಕಾರಣ ಇವರು ಈ ಸ್ಥಾನಕ್ಕೆ ಯೋಗ್ಯರೆಂಬುದು ಸ್ಪಷ್ಟವೆ. ಆದ್ದರಿಂದ ಮತದಾರರು ಡೊಕ್ಟರ್ ಯು. ರಾಮರಾಯರನ್ನು ಚುನಾಯಿಸಿ ಕೊಟ್ಟು ಅವರಿಂದ ಇನ್ನೂ ಅಧಿಕವಾದ ದೇಶಸೇವೆಯನ್ನು ಮಾಡಿಸಿಯಾರೆಂದು ನಾವು ನಂಬಿದ್ದೇವೆ.

The Calicut Bank, Ltd.,
ದಿ ಕೆಲಿಕಟ್ ಬೇಂಕ್, ಲಿಮಿಟೆಡ್,

ಹೆಡ್ ಆಫೀಸು — ಕಲ್ಲಿಕೋಟೆ.

ಬ್ರಾಂಚುಗಳು:— ಮುಲ್ಲಸ್‌ಚೇರಿ, ತಲಚೇರಿ, ಕೊಚ್ಚಿ ಮತ್ತು ಪಾಲ್ಘಾಟು.

ರಿಜಿಸ್ಟರ್ಡ್ ಮತ್ತು ಅಧಿಕಾರಗೊಳಿಸಲ್ಪಟ್ಟ ಮೂಲಧನ ರೂ. 5,00,000—0—0.

ರೂಪಾಯಿ 10ರ 50,000 ಪಾಲುಗಳು.

(30—8—1924)ರ ವರೆಗೆ ಮೌಲ್ಯ ಮೂಲಧನ ರೂಪಾಯಿ 1,81,850—0—0.

ಒಂದು ವರುಷದ ಕಾಯಂ ಠೇವಣಾತಿಗೆ ಬಡ್ಡಿ ದರ ಸೇಕಡಾ ರೂ. 7—8—0.

ಕಳೆದ 4 ವರುಷಗಳಲ್ಲಿ ಪಾಲುಗಾರರಿಗೆ ಸೇಕಡಾ 12ರಂತೆ ಬಡ್ಡಿ ಹಂಚಿದೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಸಿ. ಕೃಷ್ಣನ್, ಬಿ. ಎ. ಬಿ. ಎಲ್.,
ಮೆನೇಜಿಂಗ್ ಡ್ಯಾರೆಕ್ಟರ್.

ಡ್ಯಾರೆಕ್ಟರರಲ್ಲಿ ಒಬ್ಬರು—
ಎಮ್. ನಾರಾಯಣ. ಕಾಮತ್, ಬಿ. ಎ.,
ಪ್ಲೀಡರ್, ಕುಂದಾಪುರ.

WANTED

Secondary Grade Trained Teachers for the Sanskrit school to be started in the next week by the Temple. Apply with testimonials and terms of pay to—

The Manager,
Sri Venkatramana Temple,
MOOLKY.

ಮಂಗಳೂರು.

ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮ ಮಂಗಳೂರು ಇದರ ಜುಲ್ಯಾ ತಿಂಗಳ ರಿಪ್ರೋರ್ಟು:—೧. ಈ ತಿಂಗಳಲ್ಲಿ ಹೊಸ ರೋಗಿಗಳ ಸಂಖ್ಯೆ ೫೭೦. ೨. ಹಳೆ ರೋಗಿಗಳ ಸಂಖ್ಯೆ ೭೬. ೩. ಜುಮ್ಲಾ ಸಂಖ್ಯೆ ೬೪೬. ೪. ಒಟ್ಟಿನ ಹಾಜರಿ ೨೬೪೭. ೫. ದಿನವಹಿಯ ಸರಾಸರಿ ಹಾಜರಿ ೮೫. ೬. ಹೆಚ್ಚಾಗಿ ಚಿಕಿತ್ಸೆ ಹೊಂದಿದ ರೋಗ ರಕ್ತಾತೀಸಾರ, ಜ್ವರ, ಕಾಸ, ಶ್ವಾಸ, ಹಲೀಮಕ, ಚರ್ಮರೋಗ.

ಈ ಜಿಲ್ಲೆಯ ಮಾಜಿ ಮಣೀಗಾರ ಜೆ. ಎಮ್. ದೇಸರು ೧ ತಿಂಗಳ ರಜೆಯ ಮೇಲೆ ಹೋಗಿರುವರು. ಅವರ ಚಾರ್ಜನ್ನು ರಾ| ಕೆ. ನಾರಾಯಣರಾಯರು ವಹಿಸಿಕೊಂಡಿರುವರು.

ಮುಲ್ಕಿ ಬೋರ್ಡು ಶಾಲೆಯ ಸ್ಟುಡೆಂಟನಿಗೆ ೪ ಭಂಗಾರದ ಬಳೆಗಳು ಸಿಕ್ಕಿರುತ್ತವೆ. ಅವುಗಳನ್ನು ಶಾಲೆಯ ಹೆಡ್ ಮಿಸ್ಟ್ರೆಸರು ಇಲ್ಲಿಯ ಡಿಪ್ಟಿ ಕಲೆಕ್ಟರರಿಗೆ ಕಳುಹಿಸಿರುವರು. ಯಾರಾದರೂ ಹಕ್ಕುದಾರರು ಇದ್ದರೆ ಮೇಲೆ ಹೆಸರು ಕಾಣಿಸಿದವರಿಗೆ ಬರೆದಲ್ಲಿ ಸಿಗುವವು.

ಬಂಟ್ವಾಳದ ಲೋಕಲ್ ಫಂಡ್ ಆಸ್ಪತ್ರೆಯಲ್ಲಿ ಸೀನಿಯರ್ ಗ್ರೇಡ್ ಸಬ್ ಅಸಿಸ್ಟೆಂಟ್ ಸರ್ಜನರಾಗಿದ್ದ ಡಾ| ಎಸ್. ಸುಬ್ಬರಾಯರು ತಿರುಚಿನಾಪಳ್ಳಿಗೆ ವರ್ಗಾಯಿಸಲ್ಪಟ್ಟಿರುವುದರಿಂದ, ಡಾ| ಕಿಲ್ಪಾಡಿ ಅಮೃತರಾವ್ ಎಮ್. ಬಿ. ಸಿ. ಎಮ್. ಇವರು ಅಲ್ಲಿನ ಆಫೀಸರಂರಾಗಿ ನೇಮಿಸಲ್ಪಟ್ಟಿರುವರು

ಇಲ್ಲಿನ ಬಂದರದಲ್ಲಿ ಹಾಜಿ ಅಬ್ದುಲ್ ರಹಿಮಾನ್ ಬ್ಯಾರಿಗಳ ಒಂದು ಭಂಡಸಾಲೆಯು ಮೇಲಿನ ಉಪ್ಪರಿಗೆ, ಕೆಳಗಿನ ಕಟ್ಟಡ ಕೂಡಾ ಮಗುಚಿಬಿದ್ದಿರುತ್ತದೆ.

ಹಾಲು ಬತ್ತಿಹೋದ ಎಮ್ಮೆ, ದನ, ಕರುಗಳಿಗೆ ಕದ್ರಿ ಪದವಿನಲ್ಲಿ ಚರಾವು ಎಲೆವಾರಿಗೋಸ್ಕರ ಕದ್ರಿ ಶಾಲೆ ಬಳಿಯಲ್ಲಿ ಒಂದು ಗೋಶಾಲೆ ಏರ್ಪಡಿಸುವ ಬಗ್ಗೆ ಪಟ್ಟಣಿಗರ ಮಹಾಸಭೆಯು ಕದ್ರಿ ಸೈಂಟ್ ಕ್ಷೆವಿಯರ್ಸ್ ಶಾಲೆಯಲ್ಲಿ ಇದೇ ತಿಂಗಳ ತಾ. ೯ನೇ ಆದಿತ್ಯವಾರ ಸಾಯಂಕಾಲ ೪ ಘಂಟೆ ಸಮಯಕ್ಕೆ ಜರಗುವುದು. ಈ ಸುಕಾರ್ಯದಲ್ಲಿ ಪ್ರೀತಿ ಇದ್ದ ಮಹನೀಯರೆಲ್ಲರೂ ಈ ಸಭೆಗೆ ಹಾಜರಿದ್ದು ಕೈಕೊಡಬೇಕಾಗಿ ಪಡುಮುನ್ನೂರು ರಾಮಚಂದ್ರರಾಯರ ವಿನಂತಿ.

ವಿವಿಧ ವಿಷಯಗಳು.

(೫ನೇ ಪೇಜಿಯಿಂದ ಮುಂದುವರಿಸಿದದು)

ಉತ್ತರ ಧ್ರುವದ ಸಂಶೋಧನದ ಕಾರ್ಯವನ್ನು ಯಶಸ್ವಿಯಾದ ರೀತಿಯಲ್ಲಿ ಸಾಹಸಿಗಳಾದ ಸಂಶೋಧಕರು ನಡಿಸುತ್ತಿದ್ದಾರೆ. ಇದು ವರೆಗೆ ಅನೇಕರು ಈ ವಿಷಯವಾಗಿ ಪ್ರಯತ್ನಿಸುತಿದ್ದಾರಾದರೂ ಅವರೆಲ್ಲರ ಪ್ರಯತ್ನವು ವ್ಯರ್ಥವಾಗಿತ್ತು. ಆದರೆ ಕೆಪ್ಟನ್ ಕುಕ್ ಎಂಬವನ ಪ್ರಯತ್ನವು ಮುಖ್ಯವೆನಿಸಿಕೊಳ್ಳುತಿತ್ತು. ಉತ್ತರ ಧ್ರುವ ಪ್ರದೇಶದಲ್ಲಿಯ ಸಮುದ್ರವು ಹೆಚ್ಚಾಗಿ ಹಿಮಗಟ್ಟಿರುವುದರಿಂದ ಹೊಗೆ ಹಡಗಗಳು ಅಲ್ಲಲ್ಲಿ ತಾಗಿ ಬೀಳುತಿದ್ದವು ಪ್ರಯಾಣವು ಈ ರೀತಿಯಿಂದ ಮುಂದರಿಯದಿದ್ದ ಕಾರಣ ಉತ್ತರ ಧ್ರುವದ ಶೋಧನದ ಕಾರ್ಯವು ಮುಂದುವರಿಯುತ್ತಿರಲಿಲ್ಲ. ಆದರೆ ವಿಮಾನಗಳ ಸಹಾಯದಿಂದ ಸಂಶೋಧಕರು ಈಗ ಈ ಪ್ರದೇಶದಲ್ಲಿ ಹೋಗಹತ್ತಿದ್ದಾರೆ. ಈಗ ಕೆಪ್ಟನ ಎಮೆಂಡ್‌ಸನ್ ಎಂಬವರು ಈ ತರದ ಪ್ರಯತ್ನಮಾಡಿರುವರು. ಕೆ. ಎಮೆಂಡಸನ್ ಮತ್ತು ೬ ಜನರು ಮೇ ತಾ. ೨೧ರಲ್ಲಿ ನೋರ್ವೆಯೊಳಗಿನ ಸ್ಪಿಟ್ಸಬರ್ಗದಿಂದ ಹೊರಟರು. ಇವರು ವಿಮಾನದಿಂದ ಪ್ರಯಾಣಮಾಡುತ್ತಿದ್ದರು. ಇವರು ಜೂನು ತಾ. ೧೮ರಲ್ಲಿ ತಮ್ಮ ದೇಶಕ್ಕೆ ಹಿಂತಿರುಗಿ ಬಂದಿರುವರು. ಇವರು ತಮ್ಮ ಪ್ರಯಾಣ ವೃತ್ತಾಂತವನ್ನು ಬರೆದಿರುವರು. ಅದರ ಮೇಲಿಂದ ಮುಂದಿನ ಸಂಗತಿಗಳು ಗೊತ್ತಾಗುತ್ತವೆ. ವಾಯುವ್ಯ ದಿಕ್ಕಿನ ಜಲಮಾರ್ಗವನ್ನು ಇವರು ಹುಡುಕಿ ತೆಗೆದಿರುವರು. ದಕ್ಷಿಣ ಧ್ರುವದ ಶೋಧವನ್ನು ಕೂಡ ಇವರೆ ಮಾಡಿರುವರು. ಸ್ಪಿಟ್ಸಬರ್ಗದಿಂದ ಹೊರಟ ಬಳಿಕ ಎಮಂಡಸನರು ೮ ತಾಸುಗಳೊಳಗೆ ೬೨೫ ಮೈಲುಗಳನ್ನು ದಾಟಿದರು. ಇಷ್ಟರೊಳಗೆ ಅವರ ಹತ್ತಿರವಿರುವ ಪೆಟ್ರೋಲಿನ ಪೈಕಿ ಅರ್ಧವು ಖರ್ಚಾಗಿತ್ತು. ಆದ್ದರಿಂದ ಅವರು ತಮ್ಮ ವಿಮಾನವನ್ನು ಬರ್ಫದೊಳಗಿಂದ ಹರಿಯುವ ನೀರಿನ ಮೇಲೆಯೆ ಇಳಿಸಿದರು. ಕಾರಣ, ಅವರಿಗೆ ಗಟ್ಟಿಯಾದ ಬೇರೆ ಜಾಗೆಯು ಇರಲಿಲ್ಲ. ಗಾಳಿಯು ಪ್ರತಿಕೂಲವಾಗದಿದ್ದರೆ ಅವರು ಮುಂದಿನ ೧೫೦ ಮೈಲುಗಳ ಅಂತರವನ್ನು ಕೂಡ ಅತಿಕ್ರಮಿಸುತಿದ್ದರು. ಅಲ್ಲಿಯೆ ನಿಂತು ಸುತ್ತುಮುತ್ತಲಿನ ಪ್ರದೇಶದ ಸಂಗತಿಯನ್ನು ಸೂಕ್ಷ್ಮವಾಗಿ ತಿಳಕೊಳ್ಳಹತ್ತಿದರು. ಅದರ ಮೇಲಿಂದ ಸುಮಾರು ೧ ಲಕ್ಷ ಚೌಕ ಕಿಲೋಮಿಟರಿನ ಆಜುಬಾಜುವಿನಲ್ಲಿ ನೆಲವಿದ್ದುದು ಅವರಿಗೆ ಕಂಡುಬರಲಿಲ್ಲ. ನೋರ್ವೆ ಕಡೆಯಿಂದ ಉತ್ತರ ಧ್ರುವದ ಕಡೆಗೆ ಹೋಗಹತ್ತಿದರೆ ನೆಲವು ಸಿಕ್ಕಲಿಕ್ಕಿಲ್ಲವೆಂದು ಅವರು ಅನುಮಾನಿಸಿರುವರು. ಅವರು ವಿಮಾನವನ್ನಿಳಿಸಿದ್ದಲ್ಲಿಗೆ ಆ ವಿಮಾನವು ೨೪ ದಿವಸ ತನಕ ಬರ್ಫಿನೊಳಗೆ ಗಟ್ಟಿಯಾಗಿದ್ದಿತು. ಬಹು ಪ್ರಯಾಸದಿಂದ ಅವರು ಅದನ್ನು ಅಲ್ಲಿಂದ ತಪ್ಪಿಸಿ ಪುನಃ ಸ್ವದೇಶಕ್ಕೆ ಬಂದು ತಲಪಿರುವರು.

ಕ್ರಿಮಿಕೀಟಗಳೂ ರೋಗಗಳೂ.

ಲೇಖಕರು:—ಬಿ. ಜಿ. ಪ್ರಭು, ಎಲ್. ಎಮ್. ಎಂಡ್ ಎಸ್. ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರ್, ದ. ಕನ್ನಡ.

— ೨. ನೊಣ. —

ನೊಣಗಳಲ್ಲಿ ರಕ್ತಹೀರುವ ಅಥವಾ ಕಚ್ಚುವ ನೊಣಗಳೆಂದೂ, ರಕ್ತಹೀರದ ಅಥವಾ ಕಚ್ಚದ ನೊಣಗಳೆಂದೂ ಎರಡು ವಿಧ ನೊಣಗಳಿದ್ದಾವೆ. ರಕ್ತಹೀರುವ ನೊಣಗಳಲ್ಲಿ ಸುಮಾರು ೨೦೦೦ ಜಾತಿಗಳು ತಿಳಿದುಬಂದಿವೆ; ಅದರೆ, ಇವುಗಳಲ್ಲಿ ಮನುಷ್ಯರಿಗೆ ರೋಗವನ್ನು ಉಂಟುಮಾಡುವ ಮುಖ್ಯವಾದ ಎರಡು ವಿಧಗಳುಂಟು. ಆಫ್ರಿಕಾದಲ್ಲಿ "ನಿದ್ರಾ ರೋಗ" (sleeping sickness) ವನ್ನುಂಟುಮಾಡುವ ತ್ಸೆತ್ಸೆ ನೊಣ (Tsestse fly) ಮದ್ರಾಸಿನಲ್ಲಿ ಮೂರು ದಿವಸಗಳ ಜ್ವರವನ್ನು ಉಂಟುಮಾಡುವ ಮರಳು ನೊಣವು (Sand fly) ಎಂಬ ಎರಡು ವಿಧಗಳೇ ಇವು. ಕಚ್ಚದ ನೊಣಗಳ ಪೈಕಿ, ನಮ್ಮ ಮನೆಗಳಲ್ಲಿರುವ ಸಾಮಾನ್ಯವಾಗಿರುವ ನೊಣವೇ ಹೆಚ್ಚಿನದು. ಇವುಗಳ ಪೈಕಿ, ಮರಳು ನೊಣ ಮತ್ತು ಮನೆ ನೊಣಗಳ ವಿಷಯ ಸಾಮಾನ್ಯ ಪರಿಚಯ ಇರುವುದು ನಮಗೆ ಅಗತ್ಯ.

— ಮರಳು ನೊಣ. —

ಮರಳು ನೊಣಗಳ ಪೈಕಿ ಫ್ಲೆಬೊ ಟೊಮಸ್ ಎಂಬ ಒಂದು ವಿಧವೇ ರೋಗಕ್ಕೆ ಕಾರಣವಾದದ್ದಾಗಿರುತ್ತದೆ. ಇದು ಸಾಮಾನ್ಯ ಸೊಳ್ಳೆಪರದೆಗಳ ಎಡೆಗಳಿಂದ ಅದರೂ ನುಸುಳಬಲ್ಲಷ್ಟು ಚಿಕ್ಕದ್ದಾಗಿರುತ್ತದೆ. ಇದು ರಾತ್ರಿಕಾಲದಲ್ಲೇ ಸುಳಿಯುವುದು. ಹಗಲುಹೊತ್ತಿನಲ್ಲಿ, ಮನೆಗಳಲ್ಲಿದ್ದ ತಂಪು ಮೂಲೆಗಳಲ್ಲಿಯೂ, ಇಟ್ಟಿಗೆಗಳ ಅಡಿಯಲ್ಲಿಯೂ, ಮರಗಳ ಪೊಟರೆಗಳಲ್ಲಿಯೂ, ಬಾಗಿಲು, ಪುಸ್ತಕ ಚಿತ್ರಪಟಗಳ ಹಿಂದೆಯೂ ಅಡಗಿಕೊಳ್ಳುವವು. ಮನುಷ್ಯನು ದೊರೆತಾಗ, ಅವನ ರಕ್ತವನ್ನೂ, ಇಲ್ಲದಿದ್ದರೆ, ಜಾನುವಾರುಗಳು, ನಾಯಿ, ಕಪ್ಪೆ, ಹಲ್ಲಿಗಳ ರಕ್ತವನ್ನೂ ಹೆಣ್ಣು ನೊಣವು ಹೀರಿಕೊಂಡು ತೃಪ್ತಿಹೊಂದುವುದು ಅದು ಹಾರಾಡುವಾಗ ಸದ್ದಿರುವುದಿಲ್ಲ. ಸುಮಾರು ೩೬—೪೦ ಘಂಟೆಗಳಲ್ಲೊಮ್ಮೆ ಅದಕ್ಕೆ ಆಹಾರವು ಬೇಕಾಗುವುದು. ತತ್ತಿಗಳು ಕೊಂಚ ಉದ್ದವಾದವು; ಅಂಡಾಕಾರದವು; ಅವುಗಳ ಉದ್ದಕ್ಕೆ ಕಪ್ಪು ಗುರುತುಗಳಿವೆ. ಇವುಗಳು $1/150$ ಅಂಗುಲದಿಂದ $1/50$ ಅಂಗುಲದ ವರೆಗೆ ಉದ್ದವಾಗಿವೆ. ಇವು ಗೋಡೆಯ ಅಥವಾ ಕಲ್ಲುಗಳ ಬಿರುಕು ಸಂದುಗಳಲ್ಲಿ ಒಂದೊಂದಾಗಿ ಮಡಗಲ್ಪಡುವವು. ಸೆಕೆಕಾಲದಲ್ಲಿ ೪—೬ ದಿನಗಳಲ್ಲಿ ಮೊಟ್ಟೆಗಳು ಒಡೆಯುವವು; ಚಳಿಗಾಲದಲ್ಲಿಯಾದರೆ ೧೪ ದಿನಗಳು ಬೇಕಾಗುವವು ಹುಟ್ಟಿದ ಕ್ರಿಮಿಗಳು ಬಹಳ ಚಿಕ್ಕವಾದ ಕಾರಣ ಕಣ್ಣಿಗೆ ಬೀಳುವುದೇ ಕಡಿಮೆ; ಅವು $1/12$ರಿಂದ $1/6$ ಅಂಗುಲ ಗಾತ್ರದವು. ಕೋಶಾವಸ್ಥೆಯಲ್ಲಿದ್ದಾಗ ಇವುಗಳು ಚಿಕ್ಕವೂ ಚಲಿಸದವೂ ಮಾತ್ರವಲ್ಲದೆ, ಅವು ಅಂಟಿಕೊಳ್ಳುವ ಕಲ್ಲುಗಳ ಹಾಗೆ ಬಣ್ಣವನ್ನೆ ಧರಿಸುವವಾದ ಕಾರಣ, ಕಣ್ಣಿಗೆ ಗೋಚರವಾಗುವುದೇ ಇಲ್ಲ. ಈ ನೊಣವೇ ಮರಳು ನೊಣ ಜ್ವರವೆಂಬ ರೋಗವನ್ನು ಹರಡುವಂಥದ್ದಾಗಿದೆ.

ಇವುಗಳನ್ನು ನಿರ್ಮೂಲಿಸುವದು ಸುಲಭವಲ್ಲ. ಎಲ್ಲಾ ತರದ ಕಸವನ್ನು ಕೂಡಲೇ ಸುಡಬೇಕು ಅಥವಾ ಬೇರೆ ಯಾವ ವಿಧದಿಂದಲಾದರೂ ದೂರಕ್ಕೆ ಒಯ್ಯಬೇಕು. ಹಾಳಾದ ಗೋಡೆಗಳನ್ನು ಇರಗೊಡಿಸಬಾರದು. ಪಾಯಖಾನೆಗಳನ್ನು ಸ್ವಚ್ಛವಾಗಿ ಇಡಬೇಕು ಮತ್ತು ಆಗಾಗ್ಗೆ ಅವುಗಳಲ್ಲಿ ಗಂಧಕದ ಹೊಗೆ ಹಾಕಬೇಕು. ಕತ್ತಲೆಯಾಗಿಯೂ, ತೇವುಳ್ಳದ್ದಾಗಿಯೂ ಇರುವ ಸ್ಥಳಗಳನ್ನು ಒಣಗಿಸಿ, ಅವುಗಳಿಗೆ ಬಿಳೀ ಸುಣ್ಣವನ್ನು ಬಳಸಿ (Whitewash), ಒಳ್ಳೆ ಘಾಳಿ ಬರುವ ಹಾಗೆ ಮಾಡಬೇಕು. ಮರಳು ನೊಣವು ೧೦ ಅಡಿಕ್ಕಿಂತ ಎತ್ತರವಾಗಿ ಹಾರವುದಿಲ್ಲವಾದ ಕಾರಣ ಈ ಜ್ವರವು ಒಂದು ಊರಿನಲ್ಲಿರುವಾಗ ಮಾಳಿಗೆಯಲ್ಲಿ ಮಲಗುವುದು ಉತ್ತಮ. ಮಲಗುವ ಹಾಸಿಗೆಯಲ್ಲಿ ಒಂದು ಬಿಲ್ಲೆ ಕರ್ಪೂರವನ್ನು (Camphor) ಇಟ್ಟುಕೊಂಡರೆ, ಈ ನೊಣಗಳು ಹತ್ತಿರ ಬರುವುದಿಲ್ಲ. ಅವುಗಳು ಅಡಗಿಕೊಂಡಿವೆ ಎಂದು ತಿಳಿದುಬಂದಲ್ಲಿ, ಅಥವಾ ಅವು ತತ್ತಿಗಳನ್ನಿಟ್ಟಿರಬಹುದಾದ ಸ್ಥಳದಲ್ಲಿ, ೧೦೦ಕ್ಕೆ ೧ರಂತೆ ಫೋರ್ಮಲಿನ್ (Formalin) ಬೆರಸಿದ ನೀರನ್ನು ಚಿಮಿಕಿಸುವುದು ಉತ್ತಮ.

— ಮನೆ ನೊಣ. —

ಈ ನೊಣವನ್ನು ಸಾಧಾರಣವಾಗಿ ಎಲ್ಲಾ ಮನೆಗಳಲ್ಲಿಯೂ ಕಾಣಬಹುದು. ಆದರೆ ಈ ಅಲ್ಪ ಜಂತುವಿನಿಂದ ಮನುಷ್ಯರಿಗೆ ಉಂಟಾಗುವ ರೋಗಗಳು ಎಲ್ಲರಿಗೂ ಗೊತ್ತಿದ್ದರೆ ಇದನ್ನು ವರ್ಧಿಸಲಿಕ್ಕೆ ಬಿಡುತ್ತಿದ್ದಿಲ್ಲ.

ಹೆಣ್ಣು ನೊಣವು ೨—೩ ಹಪ್ತೆಗಳ ವರೆಗೆ ಮಾತ್ರ ಬಾಳುವುದು. ಆದರೆ ದಿನಕ್ಕೆ ೧೨೦—೧೫೦ರಂತೆ ತತ್ತಿಗಳನ್ನು ಇಡುವುದು. ತನ್ನ ಜೀವ ಕಾಲದಲ್ಲಿ ಒಂದು ನೊಣವು ನಾಲ್ಕು ಸಾರಿ ತತ್ತಿಗಳನ್ನು ಇಡಬಹುದು. ಒಂದೇ ಒಂದು ಹೆಣ್ಣು ನೊಣವು ಈ ರೀತಿಯಾಗಿ ಒಂದು ತಿಂಗಳೊಳಗೆ ೧೦ ಲಕ್ಷ ನೊಣಗಳನ್ನು ಉಂಟುಮಾಡುತ್ತವೆ. ತತ್ತಿಗಳು ಬಿಳೀ ಬಣ್ಣದ್ದಾಗಿಯೂ, ಒಂದು ಕಡೆ ತುದಿಯುಳ್ಳದ್ದಾಗಿಯೂ, ಸಮಾರು $1/25$ರಿಂದ $1/20$ ಅಂಗುಲದಷ್ಟು ಉದ್ದವಾಗಿಯೂ ಇರುತ್ತವೆ. ತತ್ತಿಗಳೊಡೆದು ಮರಿಗಳು ಹೊರಟಾಗಲೇ, ಅವುಗಳಿಗೆ ಯೋಗ್ಯವಾದ ಆಹಾರವು ಎಲ್ಲಿ ಸಿಕ್ಕುತ್ತದೊ, ಅಂಥಾ ಸ್ಥಳಗಳಲ್ಲೇ ತತ್ತಿಗಳು ಇಡಲ್ಪಡುವವು. ಈ ಮರಿಗಳು ಸಸ್ಯಾಹಾರಿಗಳು, ಅದ್ದರಿಂದ ಕೊಳೆಯುವ ಸಸ್ಯ ಪದಾರ್ಥಗಳಲ್ಲೇ ತಾಯಿಯು ತತ್ತಿಗಳನ್ನು ಇಡುವುದು; ಗೊಬ್ಬರದ ರಾಶಿ, ಕುದುರೆ, ಜಾನುವಾರುಗಳ, ಆಡು, ಕುರಿ, ಕೋಳಿ, ಮನುಷ್ಯ ಮುಂತಾದವರ ಮಲ ಮೂತ್ರಗಳೂ, ಕೊಳೆಯುವ ಪದಾರ್ಥಗಳು, ಕೊಳೆತ ಹಣ್ಣುಹಂಪಲು, ಬಟಾಟೆಯ ಸಿಪ್ಪೆ, ಮಾವು, ಬಾಳೆ ಮುಂತಾದ ಹಣ್ಣುಗಳೂ ಇತ್ಯಾದಿ ಇರುವ ಸ್ಥಳಗಳಲ್ಲಿ ಇವುಗಳು ತತ್ತಿಗಳನ್ನು ಇಡುವವು. ಇವುಗಳ ತತ್ತಿಗಳು ಬೇಸಿಗೆಯಲ್ಲಿ ಅದರೆ ಒಂದೇ ದಿನದಲ್ಲಿಯೂ, ಚಳಿಗಾಲದಲ್ಲಿ ಆದರೆ ಎರಡು ದಿನಗಳಲ್ಲಿಯೂ ಒಡೆದು ಮರಿ ಹೊರಡುವುದು. ಹೊರಟಂಥಾ ಕ್ರಿಮಿಗಳು ಎರಡು ದಿನಗಳೊಳಗೆ ಬೇಕಾದಂತ ಗವಗವನೆತಿಂದು ಬೆಳೆದು, ದೇಹದಲ್ಲಿ ನಾನಾ ಮಾರ್ಪಾಟುಗಳನ್ನು ಹೊಂದಿ, ಮೂರು ನಾಲ್ಕು ದಿನಗಳ ತನಕ ಬೆಳೆದು ಕೋಶಾವಸ್ಥೆಯಲ್ಲಿ ಆಲಸ್ಯವನ್ನು ಹೊಂದಿ ಏನೂ ತಿನ್ನದೆ, ಹಳದಿ ಅಥವಾ ಕಂದು ಬಣ್ಣವನ್ನು ಹೊಂದುತ್ತವೆ. ಸಗಣಿಯ ಅಥವಾ ಗೊಬ್ಬರದ ರಾಶಿಯ ಅಡಿ ಮಗುಚಿದರೆ ಹುಳಗಳಾಗಿ ಕಾಣುವಂಥವು ನೊಣಗಳ ಮರಿಗಳೇ ಅಲ್ಲದೆ ಬೇರೆ ಅಲ್ಲ. ೪—೫ ದಿನದ ನಂತರ ಕೋಶದಿಂದ ನೊಣವು ಹೊರಡುತ್ತವೆ. ಹೊರಟ ನೊಣವು ಮೊದಲು ತಾನು ಹುಟ್ಟಿದ ಮಣ್ಣಿನ ಅಥವಾ ಗೊಬ್ಬರದ ರಾಶಿಯಲ್ಲೇ ಮುಚ್ಚಲ್ಪಟ್ಟು, ಕ್ರಮೇಣ ಮೆಲ್ಲನೆ ಮೇಲಕ್ಕೆ ಬಂದು ಅಲ್ಲಿಂದು ಹಾರಿಹೋಗುವುದು.

ಕೊಳೆತ ಪದಾರ್ಥಗಳನ್ನು ಮಾತ್ರ ನೊಣವು ತಿನ್ನುತ್ತಿದ್ದರೆ, ಅದರಿಂದ ಅಷ್ಟು ಕೇಡು ಉಂಟಾಗುತ್ತಿದ್ದಿಲ್ಲ; ಆದರೆ ವಾಂತಿಭೇದಿ, ಸನ್ನಿಪಾತ ಜ್ವರ, ಆಮಶಂಕೆ, ಅತಿಸಾರ ಮುಂತಾದ ರೋಗಗಳಿಂದ ಪೀಡಿತನಾದ ರೋಗಿಯ ವಾಂತಿ, ಮಲ, ಮುಂತಾದ್ದವುಗಳನ್ನು ತಿನ್ನುತ್ತ, ಪೇಟೆಯಲ್ಲಿ ಸಿಕ್ಕುವ ಮಿಠಾಯಿ ಮೊದಲಾದ ಆಹಾರ ಪದಾರ್ಥಗಳನ್ನು ಇದು ತಿನ್ನುತ್ತಿರುವದಾದ ಕಾರಣವೇ ನೊಣಗಳಿಂದ ಹಾನಿಯುಂಟಾಗುವ ಸಂಭವವು. ಇದರಿಂದ ಒಂದು ಬಗೆಯ ಪದಾರ್ಥದೊಳಗಿಂದ ರೋಗಬೀಜಗಳನ್ನು ಮತ್ತೊಂದು ಬಗೆಯ ಪದಾರ್ಥಕ್ಕೆ ಅದು ಕೊಂಡೊಯ್ಯುವದಾದ ಕಾರಣ, ಜನಗಳಿಗೆ ಇಲ್ಲದ ಹಾವಳಿಯು ಆಗುವುದು. ಯಾವದಾದರೂ ಆಹಾರ ಪದಾರ್ಥದ ಮೇಲೆ ನೊಣವು ಕುಳಿತುಕೊಂಡರೆ ಅದು ತನ್ನ ತಲೆ, ಬಾಯಿ, ಕಾಲು, ರೆಕ್ಕೆಗಳನ್ನು ಶುಚಿಗೊಳಿಸುವುದರಲ್ಲಿಯೇ ಮಗ್ನವಾಗುತ್ತದೆ. ತಾನು ತಿನ್ನಲೆಳಸಿರುವ ಪದಾರ್ಥದ ಮೇಲೆ ತನ್ನ ಬಾಯಿಯಿಂದ ಒಂದು ಹನಿ ರಸವನ್ನು ಅದು ಸುರಿಸಿ, ಅದರಿಂದ ಕರಗಿದ ಆಹಾರ ಪದಾರ್ಥದ ಒಂದು ಅಂಶವನ್ನು ಅದು ಹೀರುವುದು. ಈ ರಸದ ಬಿಂದು ಅದರ ಹೊಟ್ಟೆಯೊಳಗಣ ಮುಂಭಾಗದಿಂದಲೇ ಉಕ್ಕಿ ಬರುವುದು. ಆದ್ದರಿಂದ, ಅದರಲ್ಲಿ ನೊಣವು ಈಗಲೇ ಹಿಂದೆ ತಿಂದಪದಾರ್ಥದಲ್ಲಿರುವ ಕ್ರಿಮಿಗಳು ಇರುವದರಲ್ಲಿ ಸಂದೇಹವಿಲ್ಲ. ಅದ್ದರಿಂದ ಆ ಕ್ರಿಮಿಗಳು ಈ ಪದಾರ್ಥದಲ್ಲಿ ಕೂಡಲೇ ಸೇರಿಕೊಳ್ಳುತ್ತವೆ, ಮತ್ತು ಅಂಥಾ ಪದಾರ್ಥಗಳನ್ನು ತಿನ್ನುವವರಿಗೆ ರೋಗಗಳನ್ನು ಉಂಟುಮಾಡುತ್ತವೆ. ಅದು ಮಾತ್ರವಲ್ಲದೆ, ನೊಣಗಳ ಪಾದದಲ್ಲಿರುವ ಮೃದುವಾದ ಭಾಗವು, ಇಂಥಾ ಹಾನಿಕರವಾದ ಪದಾರ್ಥಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಒಯ್ದು ಅಂಟನ್ನು ಹರಡಿಸುವುದು. ಈ ರೀತಿಯಾಗಿ ಮನೆ ನೊಣವು ಹರಡಿಸುವ ರೋಗಗಳಲ್ಲಿ ಮುಖ್ಯವಾದವು—ಸನ್ನಿಪಾತ ಜ್ವರ, ವಾಂತಿಭೇದಿ. ಅಮಶಂಕೆ, ಅತಿಸಾರ, ಹೊಟ್ಟೆಯಲ್ಲಿರುವ ಹುಳಗಳು, ಕ್ಷಯರೋಗ, ಬಿಗಲುಗೆಯ ಹುಣ್ಣುಗಳು, ಕಣ್ಣಿನ ರೋಗಗಳು ಮತ್ತು ಕುಷ್ಠರೋಗ ದೇಹದ ಮತ್ತು ಊರಿನ ಶುಚಿತ್ವವೇ ನೊಣಗಳು ನಿರ್ಮೂಲಹೊಂದುವಂತೆ ಮಾಡುವ ಸುಲಭವಾದ ಉಪಾಯ. ಶುಚಿತ್ವವಿರುವಲ್ಲಿ ನೊಣಕ್ಕೆ ತತ್ತಿ ಇಟ್ಟು ಮರಿಗಳು ಆಗುವುದಕ್ಕೆ ಅವಕಾಶವೇ ಇರಲಾರದು. ಎಲ್ಲರೂ ಈ ರೀತಿಯಲ್ಲಿ ಶುಚಿತ್ವವನ್ನು ಅಭ್ಯಾಸಮಾಡುವುದಿಲ್ಲವಾದ ಕಾರಣ, ನೊಣಗಳಿಂದ ಉಂಟಾಗುವ ಹಾವಳಿಯನ್ನು ಕಡಿಮೆಮಾಡಲಿಕ್ಕೆ ಬೇರೆ ಉಪಾಯಗಳನ್ನು ಹೇಳುವರು. ಅವುಗಳಲ್ಲಿ ಮುಖ್ಯವಾದವು ಯಾವವೆಂದರೆ:—

(೧) ನೊಣಗಳಿರುವ ಕಾಲದಲ್ಲಿ ಕಿಟಿಕಿ ದ್ವಾರಗಳಿಗೆ ಅಡ್ಡಕಟ್ಟುವುದು. ಕಿಟಿಕಿಗಳಿಗೆ ನೀಲಬಣ್ಣದ ಗಾಜನ್ನು ಇಡುವುದು. ನೊಣವು ನೀಲಬಣ್ಣದ ಬೆಳಕನ್ನು ಮುಟ್ಟುವುದಿಲ್ಲ.

(೨) ಅಲ್ಲಲ್ಲಿ ನೊಣಗಳನ್ನು ಅಂಟಿಸಿಕೊಳ್ಳುವ ಕಾಗದಗಳನ್ನು ಹರಡಿಸಿ ಮಡಗುವುದು.

(೩) ಮನೆಯ ಸಮೀಪದಿಂದ ಗೊಬ್ಬರವನ್ನು ೨೪ ತಾಸುಗಳೊಳ ದೂರಕ್ಕೆ ಒಯ್ಯುವುದು.

(೪) ಮಲ ಮೂತ್ರಗಳನ್ನು ಬೇಗನೇ ದೂರಕ್ಕೆ ಕೊಂಡೊಯ್ಯುವುದು; ಪಾಯಖಾನೆಗಳಲ್ಲಿ ಫಿನೈಲ್ ಮುಂತಾದ ಅಂಟು ನಿವಾರಕ ದ್ರವಗಳನ್ನು ಉಪಯೋಗಿಸುವುದು.

(೫) ತತ್ತಿಗಳು ಇಡಲಾದ ಬಳಿಕ, ಅಂಥಾ ಸ್ಥಳಗಳನ್ನು ಸುಡುವುದು; ಪ್ರತಿ ಮೂರು ದಿನಗಳಿಗೆ ಒಂದುಸಾರಿ ಹೀಗೆ ಸುಡುವುದರಿಂದ, ತತ್ತಿಯೊಡೆದುಂಟಾದ ಮರಿಗಳು ಸಾಯುವವು

(೬) ಮಾರಾಟಕ್ಕೆ ಮಡಗುವ ಅಥವಾ ಆಹಾರಕ್ಕೆ ಉಪಯೋಗಿಸುವ ಪದಾರ್ಥಗಳನ್ನು ಮಸ್ಲಿನಿನಿಂದಾಗಲಿ, ಕನ್ನಡಿಯಿಂದಾಗಲಿ, ಕಬ್ಬಿಣದ ಕಂಬಿಯ ಗಾಜಿನಿಂದಾಗಲಿ ಮುಚ್ಚಿಡುವುದು. ಹಾಗೆಯೇ ಹಾಲಿನ ಮತ್ತು ನೀರಿನ ಪಾತ್ರಗಳನ್ನು ಯಾವಾಗಲೂ ಮುಚ್ಚಿಡುವುದು.

ಪತ್ರವ್ಯವಹಾರ.

ತಾಲೂಕು ಬೋರ್ಡಿನವರ ಪ್ರಸನ್ನತೆ.

ಬಂಟ್ವಾಳ:—ಅಂತೂ, ಇಂತೂ, ಅಕಾಲದಲ್ಲಿ ಗರ್ಭೋತ್ಪತ್ತಿಯಾಯಿತು. ಇಂದೋ, ನಾಳೆಯೋ, ಎಂದು ಪ್ರಸವಕಾಲಕ್ಕೆ ದಿನ ಕಳೆಯಿತು. ನಿನ್ನೆ ತಾನೇ ಜಗಟೆಯ ಶಬ್ದಕ್ಕೆ ಮುಂದಾಯಿತು. ಏನಪ್ಪ ಪ್ರಸವವಾಯಿತು. ಆದೇನು?—ಢನ್, ಢನ್, ಢನ್ "ಮುಲ್ಕಾ ಬೋರ್ಡು ಸರಕಾರದಾಳ್ಲು ಮಿಶಿನಿ ಶಾಲಿಕ್ ಧರ್ಮೊಗು ಶಾಲೆ ದೀತೆರ್, ಸಂಬಳ ಇಜ್ಜ ಜೋಕ್ಲೆನ್ ಕಡಾವುಡುನಾಳ್ಲು ಕಡಾವುಲ್ಲೆ." ಢನ್, ಢನ್, ಢನ್. ಅದಾರು?—ನಮ್ಮ ಗ್ರಾಮದ ಉಗ್ರಾಣಿಗಳಲ್ಲೊಬ್ಬ ಸಾರುತ್ತಿರುವನು.

ವಾರ:—ಮಂಗಳವಾರ. ಕಾಲ:—ಚಂದ್ರಗ್ರಹಣ ದಿನ. ಈ ಸುಮುಹೂರ್ತದಲ್ಲಿ ಬೋರ್ಡುಶಾಲೆಯ ಜನನ. ಜನನದೋಷಗಳಿದ್ದರೆ ಪ್ರೆಸಿಡೆಂಟರು ಧೀಕ್ಷೆಯನ್ನು ಧರಿಸಿ ಶಾಂತಿಮಾಡುವರು. ಅದಿರಲಿ, ಪ್ರಕೃತ ಮಂಗಳೂರು ತಾಲೂಕು ಬೋರ್ಡಿನ ಸ್ಥಿತಿಗತಿಗಳನ್ನು ನೋಡುವಾಗ ಧರ್ಮಾರ್ಥವಾಗಿ ಶಿಕ್ಷಣಕೊಡುವರೆಂಬ ವಾರ್ತೆ ಆಶ್ಚರ್ಯಕರ! ಎಂದಾದ ಮೇಲೆ ಬೋರ್ಡು ಸಭೆಯ ಯಾವ ನಿರ್ಣಯದಂತೆ, ಬೋರ್ಡು ಪ್ರೆಸಿಡೆಂಟರು ಧರ್ಮಾರ್ಥ ಶಿಕ್ಷಣವೆಂಬದಾಗಿ ಟಮ್ಕಿ ಹೊಯಿಸಿದ್ದು? ಅಲ್ಲವೇ—ಇಲ್ಲಿಯ ಬೋರ್ಡು ಮೆಂಬರರು ತಮ್ಮ ಮಾನಸಿಕ ಸಭೆಯಲ್ಲಿ ನಿರ್ಣಯಿಸಿ, ಬೋರ್ಡು ಸಭೆಯ ಆಧಾರವಿಲ್ಲದೆ ಹೊಯಿಸಿದ್ದೊ? ಪ್ರಕೃತ ಹೊಯಿಸಿದ್ದ ಟಮ್ಕಿ ಆಧಾರಭೂತವೊ? ಅಥವಾ ನಿಜತ್ವದ ಅಭಾವವುಳ್ಳದ್ದೊ? ಹಾಗಾದರೆ ಅದನ್ನು ತಿದ್ದುವರಾರು? ಯಾವಾಗ ತಿದ್ದುಪಡಿಯಾದೀತು? ಈ ಟಮ್ಕಿ ಅಬದ್ಧವಾದರೆ ಅಂತಹ ಟಮ್ಕಿಗೆ ಕಾರಣಭೂತರು ಯಾರು? ಅಂಥವರು ಬೋರ್ಡು ಮೆಂಬರರಾಗಿದ್ದರೆ, ಸಾರ್ವಜನಿಕ ಉಪಯೋಗಕ್ಕೆ ಎಷ್ಟರಮಟ್ಟಿಗೆ ಕೆಲಸಮಾಡುವರು. ದೇವಳ ಶಾಲಾ ಮಕ್ಕಳನ್ನು ಸೆಳೆಯಬೇಕೆಂಬ ಉದ್ದೇಶದಿಂದ ಈ ಟಮ್ಕಿ ಹೊಯಿಸಿದ್ದೊ? ಮುಂಚೆ ಯಾವ ಯಾವ ಊರಿನಲ್ಲಿ ಬೋರ್ಡು ಶಾಲೆಗಳನ್ನು ತೆರೆಯುವಾಗ ಟಮ್ಕಿ ಹೊಯಿಸಿದ್ದಾರೆ? ಇಲ್ಲವಾದರೆ, ನೆರೆಯ ದೆಸೆಯಿಂದ ಸಾವಿರಾರು ರೂಪಾಯಿ ನಷ್ಟದ ಏಟನ್ನು ಸಹಿಸಿ ಪುನಃ ತಲೆ ಎತ್ತುತ್ತಿರುವ ದೇವಳ ಶಾಲೆಯನ್ನು ಎದುರಾಯಿಸುವ ಬೋರ್ಡಿನವರ ಹೇತು ಏನಿರಬಹುದು? ನಮ್ಮ ತಾಲೂಕು ಬೋರ್ಡಿನಿಂದ ಎಷ್ಟು ಹಾಯರ್ ಮತ್ತು ಲೋವರ್ ಎಲಿಮೆಂಟರಿ ಶಾಲೆಗಳು ಧರ್ಮಾರ್ಥವಾಗಿ ಇಡಲ್ಪಟ್ಟಿವೆ? ಇಲ್ಲವಾದರೆ ಈ ಹೊಸ ಮಾದರಿಗೆ ಅಗತ್ಯವೇನು? ಟಮ್ಕಿನಿಂದ ಶಾಲೆ ತೆರೆದಾಯಿತು. ಇರಲಿ ಶಾಲೆಗೆ ಹೋಗುವ ಮಾರ್ಗದ ಅವಸ್ಥೆ ಹೇಗಿದೆ? ಇದರ ದುರುಸ್ತಿ ಯಾವ ಬೋರ್ಡಿಗೆ ಸೇರಿದು? ಮಹಾನೆರೆ ಬಂದು ಮನೆಗಳುರುಳಿ ಹಾಳಾದ ಈ ಓಣಿಯನ್ನು ಮೂರು ವರ್ಷಗಳು ಕಳೆದರೂ ಏಕೆ ದುರುಸ್ತಿಮಾಡಲಿಲ್ಲ? ಈ ಓಣಿಯಲ್ಲಿ ದೀಪಸ್ತಂಭವಿರಿಸಿದ ಉದ್ದಿಶ್ಯವೇನು? ಇದು ಹಚ್ಚದೆ ಎಷ್ಟು ತಿಂಗಳಾದವು? ಊರೆಲ್ಲ ನೀರು ತುಂಬಿ ಜನರು ಓಡಾಡುತ್ತಿರುವಾಗ ತಾಲೂಕು ಬೋರ್ಡಿನ ಎಷ್ಟು ದೀಪಗಳು ಉರಿಯುತ್ತಿದ್ದವು? ಉರಿಸದಿರುವ ಕಂಬಗಳಿಗೆ ಕತ್ತಲಲ್ಲಿ ತಗಲಿ ಎಷ್ಟು ಜನರು ಉರುಳಿರಬೇಕು? ಅತ್ಯಗತ್ಯವಾದ ದೀಪ ಹಚ್ಚಿಸಲಿಕ್ಕೂ, ಮಾರ್ಗ ದುರುಸ್ತಿಗೂ, ದಾರಿಕೋರದಾಗ, ಧರ್ಮಾರ್ಥ ಶಾಲೆಯನ್ನಿರಿಸುವ ಸಾಹಸವೇನು? ಪ್ರಕೃತ ನೆರೆ ನೀರು ಸೋಂಕಿ ಹುಟ್ಟಿಯಂತಾದ ಈ ಕಟ್ಟೋಣದಲ್ಲಿ, ಮಂಗಳವಾರ ಗ್ರಹಣ ಕಾಲದಲ್ಲಿ, ಮೊದಲೇ ಸರಕಾರಿ ಗ್ರೇಂಟ್ ಪಡೆಯುವ ಸೆಕೆಂಡರಿ ಶಾಲೆ ಇರುತ್ತಾ, ಶಿಕ್ಷಣಕ್ಕೆ ಮುಂದಾದ ಈ ಬೋರ್ಡಿನವರನ್ನು ಏನೆಂದು ಶ್ಲಾಘಿಸಲಿ? ಬೋರ್ಡು ಪ್ರೆಸಿಡೆಂಟರು ಮಂಗಳೂರಲ್ಲಿದ್ದು ಬಂಟವಾಳದ ಅವಸ್ಥೆಯನ್ನರಿಯದೆ ಅವರವರ ಹಟವನ್ನು ಮಿಗಿಸುವ ಮೆಂಬರರ ಹೇಳಿಕೆ ಮೇರೆಗೆ ಕೈಕೊಳ್ಳುವುದು ತುಂಬಾ ಶೋಚನೀಯ.

ಈ ರೀತಿ ತಮ್ಮ ಹಟಸಾಧನೆಗಾಗಿ ಬರುವ ತಾ. ೧೩ಕ್ಕೆ ಜರಗಲಿಕ್ಕಿರುವ ತಾಲೂಕು ಬೋರ್ಡು ಸಭೆಯಲ್ಲಿ ತಮ್ಮ ಸ್ವಾರ್ಥಬುದ್ಧಿಯಿಂದ ದೇವಳ ಶಾಲೆಯ ಪ್ರತಿಕಕ್ಷಿಯಾಗಿ ದೇಶಹಿತವೆಂಬ ಪ್ರೋತ್ಸಾಹದಿಂದ ಇತರರು ಬಂದು ತಮ್ಮ ಹಟವನ್ನು ಸಾಧಿಸಲು ಮುಂದಾದಾಗ ಇತರ ಮೆಂಬರರೂ ಹಿಂದು ಮುಂದು ಆಲೋಚಿಸದೆ ಒಪ್ಪಿಗೆಗೆ ಉದ್ಯುಕ್ತರಾಗಿ ಕೈ ಎತ್ತಿಕೊಂಡಿರಲಿ.

ಬಂಟವಾಳ ನಿವಾಸಿಕ,

ವಿದೇಶ ವರ್ತಮಾನ.

—ಬ್ರಿಟಿಷ್ ಯುದ್ಧಮಂತ್ರಿಗಳಾದ ಸರ್ ಲೆಮಿಂಗ್ ವರ್ದಿಂಗ್‌ಟನ್ ಇವ್ಯಾನ್ಸ ಎಂಬವರು ಹಿಂದುಸ್ಥಾನದೊಳಗಿನ ಹಿಂದಿ ಸೈನ್ಯವನ್ನು ನಿರೀಕ್ಷಿಸುವುದಕ್ಕಾಗಿ ಹಿಂದುಸ್ಥಾನಕ್ಕೆ ಬರುವವರಿದ್ದಾರೆ.

—ಸುವೇಜ ಕಾಲುವೆಯ ಪೂರ್ವದಡದ ಮೇಲೆ ಪೋರ್ಟ ಸೈಯುದಿನ ಮುಂದೆ ಪೋರ್ಟ ಫೌದ ಎಂಬ ಹೆಸರಿನ ಪಟ್ಟಣವನ್ನು ರಚಿಸುವವರಿದ್ದಾರೆ.

—ರೋಯಲ್ ಕೊಲೇಜ್ ಒಫ್ ಮ್ಯೂಝಿಕಿನ ಪರೀಕ್ಷೆಯು ಬರುವ ಚಳಿಗಾಲದಲ್ಲಿ ಹಿಂದುಸ್ಥಾನದಲ್ಲಾಗಲಿಕ್ಕಿದೆ.

—ಇಲ್ಲಿಂದ ವಿಲಾಯತಿಗೆ ಹೋದ ಎಂಗ್ಲೋ ಇಂಡಿಯನರ ಪ್ರತಿನಿಧಿ ಮಂಡಲವು ವಿಲಾಯತಿಯಲ್ಲಿ ಲೊ. ರೆಡಿಂಗರ ಬೇಟಿಯನ್ನು ಪಡೆಕೊಂಡಿತು. ರೆಡಿಂಗ ಸಾಹೇಬರು ಬರ್ಕನ ಹೆಡ್ಡರಿಗೆ ಈ ವಿಷಯವಾಗಿ ತಮ್ಮ ಅಭಿಪ್ರಾಯವನ್ನು ಹೇಳಿರುವರು.

—ಕಳೆದ ಜುಲಾಯಿ ತಾ. ೩೧ರ ರಾಗಾಯಿತು ವಿಲಾಯತಿಯಲ್ಲಿ ಹೊಟೆಲಿನವರು ಮುಷ್ಕರವನ್ನು ಹಾಕಲು ನಿಶ್ಚಯಿಸಿರುವರು.

—ಇಟೆಲಿಯು ಅಫಘಾನ ಸರಕಾರಕ್ಕೆ ಕಠಿನವಾದ ಒಂದು ಸಂದೇಶವನ್ನು ಕಳುಹಿಸಿಕೊಟ್ಟಿತು. ಅದನ್ನು ಮನ್ನಿಸಲಾಗುವದಿಲ್ಲವೆಂದು ಅಫಘಾನ ಸರಕಾರವು ಉತ್ತರಕೊಟ್ಟಿದೆ.

—ರುಶ್ಯದ ಸೋವಿಯಟ್ ಸರಕಾರವು ತನಗೆ ವಿರೋಧವಾಗಿ ಒಳಸಂಚಿನಿಂದ ಕಟ್ಟವನ್ನು ಮಾಡಿದ ಅಪರಾಧಕ್ಕೆ ೧೮ ಜನರನ್ನು ಫಾಶಿಗೆ ಕೊಟ್ಟಿತು. ಮತ್ತು ೬೦ ಜನರನ್ನು ಗಡಿಪಾರ ಮಾಡಿತು.

—ಹಿಂದುಸ್ಥಾನದೊಳಗಿನ ನವಾನಗರದ ಮಹಾರಾಜರು ಲಂಡನಿನಲ್ಲಿ ಒಂದು ಥಿಯೇಟರಿನಿಂದ ಹೊರಬಂದು ಮೋಟರಕಾರನ್ನು ಹುಡುಕುತ್ತಿರುವಾಗ ಅವರನ್ನು ಲೂಟಿಮಾಡಿರುವರು; ಲೂಟಿಯಲ್ಲಿ ಕೊಂಡುಹೋದ ಅವರ ಪೆಟ್ಟಿಗೆಯಲ್ಲಿ ಕೆಲವು ಕಾಗದ ಪತ್ರಗಳೂ, ಹೇರಳ ಹಣವೂ, ಅವರ ತಂದೆ ತಾಯಿಗಳ ಫೋಟೋಗಳೂ ಇದ್ದವು.

—ಈ ನವಾನಗರದ ಮಹಾರಾಜರು ಕದ್ದುಹೋದ ಫೋಟೋಗಳನ್ನು ಪತ್ತೆಹಚ್ಚಿ ಕೊಟ್ಟವರಿಗೆ ಇನಾಮನ್ನು ಇಟ್ಟಿರುವರು.

—ಬಲ್‌ಗೇರಿಯಲ್ಲಿ ಒಬ್ಬ ಗ್ರೀಕ್ ಜಮೀನುದಾರನನ್ನು ಕೊಂದು ಹಾಕಿದ್ದರಿಂದ ಬಲ್‌ಗೇರಿಯಾ ಮತ್ತು ಗ್ರೀಸ ಇವರೊಳಗೆ ವೈಮನಸ್ಯವುಂಟಾಗಿದೆ.

—ಪಟಿಯಾಲದ ಮಹಾರಾಜರು ವಿಲಾಯತಿಗೆ ತಲಪಿದರು.

—ಕೊಮನ್‌ವೆಲ್ತ ಲೇಬರ ಕೊನ್‌ಫರೆನ್ಸಿನ ಅಧ್ಯಕ್ಷರಾದ ಮಿ| ಜೋಶಿಯವರು ಐಶ್ವರ್ಯವಂತರ ಸ್ವಾರ್ಥವಿರುವ ತನಕ ವಸಾಹತಾಂತರ್ಗತ ಕಷ್ಟಗಳು ಕಡಿಮೆಯಾಗಲಿಕ್ಕಿಲ್ಲವೆಂದು ಹೇಳಿದರು.

ಒಳದೇಶ ವರ್ತಮಾನ.

—ಕಲಕತ್ತೆಯಲ್ಲಿ ಈ ಮೊಹರಮಿನಲ್ಲಿ ಹಿಂದು ಮುಸಲ್ಮಾನರಲ್ಲಿ ಪುನಃ ದಂಗೆಯುಂಟಾಗುವ ಸಂಭವವಿದೆ ಎಂದು ತಿಳಿದು ಹಿಂದು ಮತ್ತು ಮಹಮ್ಮದೀಯ ಮುಖಂಡರು ಒಂದು ಸಂಯುಕ್ತ ವಿಜ್ಞಾಪನೆಯನ್ನು ಪ್ರಕಟಿಸಿ ಅದರಲ್ಲಿ ಪತ್ರಕಾರರು ಮತ್ತು ಇತ್ತಂಡಗಳ ಮುಖ್ಯಸ್ಥರು ಈ ಎರಡೂ ತಂಡಗಳಲ್ಲಿ ಐಕ್ಯವನ್ನೂ ಶಾಂತಿಯನ್ನೂ ಸಾಧಿಸುವಂತೆ ಯತ್ನಿಸಬೇಕೆಂದೂ ಜಾತಿ ವಿರೋಧಜನಕವಾದ ಯಾವ ಸಂಗತಿಯನ್ನೂ ಮಾಡಬಾರದೆಂದೂ ಉಲ್ಲೇಖಿಸಿರುವರು.

—ಮೊಹರಮಿನಲ್ಲಿ ತಾಬೂತುಗಳನ್ನು ಮಾಡುವದು ಧರ್ಮಬಾಹ್ಯವಾದ್ದರಿಂದ ಅಂಥ ಕೆಲಸವನ್ನು ಮಹಮ್ಮದೀಯರು ಮಾಡಬಾರದೆಂದು ಮಲಬಾರಿನೊಳಗಿನ ಮಾಪಿಳ್ಳೆಯ ಮುಖಂಡರು ಪ್ರಕಟನಾ ಪತ್ರಕವನ್ನು ಹೊರಡಿಸಿದ್ದಾರೆ.

—ದಿಲ್ಲಿಯಲ್ಲಿ ಮೊಹರಮಿನ ಸಮಯದಲ್ಲಿ ಗಲಾಟೆಯಾಯಿತು. ಮೊಹರಮಿನ ದಿವಸ ಏನಾದರೂ ಉಪದ್ರವವಾಗಬಾರದೆಂದು ಹಿಂದುಗಳು ಮೊದಲೆ ಅಂಗಡಿಗಳನ್ನು ಮುಚ್ಚಿದ್ದರು. ಆರ್ಯಸಮಾಜದ ಅಧ್ಯಕ್ಷರ ಮೇಲೆ ವಾರಂಟು ಹೊರಟು ಅವರನ್ನು ಕೈದುಮಾಡಲಾಯಿತು. ಈ ವಾರಂಟಿಗೆ ಜಾಮೀನು ಇರಲಿಲ್ಲ. ಆದರೆ ಜಾಮೀನಿಗಾಗಿ ವಿಚಾರಣೆಯು ನಡೆದ ಬಳಿಕ ಹತ್ತುಸಾವಿರ ರೂಪಾಯಿಗಳ ಬೋಂಡು ಕೊಡಲ್ಪಟ್ಟ ಮೇಲೆ ಅವರನ್ನು ಜಾಮೀನಿನ ಮೇಲೆ ಬಿಟ್ಟಿರುತ್ತದೆ. ಆಗೋಸ್ತು ತಾ. ೬ಕ್ಕೆ ಇವರ ತನಖೆಯು ಇಡಲ್ಪಟ್ಟಿದೆ.

—ಮುಲ್ತಾನಿನಲ್ಲಿ ಯಾವ ಗಲಾಟೆಯೂ ಇಲ್ಲದೆ ಮೊಹರಮಿನ ಮೆರವಣಿಗೆಯು ಸಾಗಿತು. ಮುಂಜಾಗ್ರತೆಗಾಗಿ ಮೊದಲೆ ಪಂಜಾಬ ಸೈನ್ಯದ ಎರಡು ರೆಜಿಮೆಂಟುಗಳನ್ನು ನಿಲ್ಲಿಸಿದ್ದರು.

—ಲಖನೌ ಪ್ರಾಂತ್ಯಕ್ಕೆ ಸಂಬಂಧಪಟ್ಟ ಸೀತಾಪುರವೆಂಬಲ್ಲಿ ಮೊಹರಮಿನಲ್ಲಿ ದಂಗೆಯಾದ ಸುದ್ದಿಯು ಹಬ್ಬಿದೆ.

—ಸೀತಾಪುರದಲ್ಲಿ ಹಿಂದುಗಳಿಗೆ ಆಕ್ಷೇಪಕರವಾದ ರಸ್ತೆಯಿಂದ ಮಹಮ್ಮದೀಯರು ಮೊಹರಮಿನ ಮೆರವಣಿಗೆಯನ್ನು ಒಯ್ಯಲು ಯತ್ನಿಸಿದರು. ಹಿಂದು ಮತ್ತು ಮಹಮ್ಮದೀಯರ ಗುಂಪುಗಳು ಒಟ್ಟಿಗೆ ಸೇರಿ ರಸ್ತೆಯ ಎರಡೂ ಕಡೆಗಳಲ್ಲಿ ಅವು ಕಟ್ಟಬ್ಬವಾಗಿ ನಿಂತವು. ಆದರೆ ಡೆಪ್ಯುಟಿ ಕಮಿಶನರರೂ ಮತ್ತು ಪೋಲೀಸ ಸುಪರಿಂಟೆಂಡೆಂಟರೂ ಈ ಗುಂಪುಗಳನ್ನು ಚೆದರಿಸಿದರು. ಇದರಿಂದ ದೊಡ್ಡ ಗಲಾಟೆಯು ನಿಂತಿತು.

—ಮೊಹರಮಿನ ಸಮಯದಲ್ಲಿ ಪಾನಿಪತದಲ್ಲಿ ಹಿಂದು ಮಹಮ್ಮದೀಯರೊಳಗೆ ದಂಗೆಯುಂಟಾದ್ದರಿಂದ ಸುಮಾರು ೩೦೦ ಜನರನ್ನು ಕೈದು ಮಾಡಲಾಗಿದೆ. ಹಳ್ಳಿಗಳಿಂದ ಸುಮಾರು ೧೦೦೦ ಗಟ್ಟಿಯಾಳಾದ ಜಟ್ಟರು ಪಾನಿಪತದಲ್ಲಿ ಬಂದು ಮೊಹರಮಿನ ಮೆರವಣಿಗೆಯನ್ನು ಮೂರು ತಾಸಿನ ವರೆಗೆ ತಡೆದು ನಿಲ್ಲಿಸಿದರು. ಇವರ ಕೈಗಳಲ್ಲಿ ಲಾಟಿಗಳು ಇದ್ದವು. ಇವರ ಗಲಾಟೆಯಲ್ಲಿ ಡೆಪ್ಯುಟಿ ಸುಪರಿಂಟೆಂಡೆಂಟರಿಗೆ ಏಟು ಬಿದ್ದು ನೋವುಂಟಾಗಿದೆ. ಮೆಜಿಸ್ಟ್ರೇಟರ ಹುಕುಮಿನ ಮೇರೆಗೆ ದಂಗೆಗಾರರನ್ನು ಕೈದುಮಾಡಿದ ಮೇಲೆ ಅಲ್ಲಿಯ ಕ್ಷೋಭವು ಈಗ ಶಾಂತವಾಗಿದೆ.

—ಮಧುರಾದಲ್ಲಿ ಹಿಂದುಮಹಮ್ಮದೀಯರು ಬಹು ಐಕ್ಯದಿಂದ ನಡೆದು ಇವರು ಅವರ ಉತ್ಸವಕ್ಕೆ, ಅವರು ಇವರ ಉತ್ಸವಕ್ಕೆ ಸಂತೋಷದಿಂದ ಹೋಗುತ್ತಿದ್ದ ಕಾರಣ ಅಲ್ಲಿಯ ಈ ವರ್ಷದ ಮೊಹರಮು ನಿರ್ವಿಘ್ನವಾಗಿ ಕೊನೆಗಂಡಿತು.

—ಲಾಹೋರ, ಅಮೃತಸರ, ಅಲಹಾಬಾದ, ಮುಂಬಯಿ ಮುಂತಾದ ಕಡೆಗಳಲ್ಲಿಯು ಮೊಹರಮಿನ ಉತ್ಸವವು ಯಾವ ದಂಗೆ ಇಲ್ಲದೆ ಸಾಗಿತೆಂದು ಪ್ರಕಟವಾಗಿದೆ.

[illegible] ಬೇಕೆಂಬೀ [illegible] ಮಹಮ್ಮದೀಯರೊಳಗೆ ಎರಡು ತಂಡಗಳಿವೆ. ಒಬ್ಬರಿ[illegible] ಗೊಬ್ಬರು ಕಲ್ಲುಗಳನ್ನೆಸೆದು [illegible] ಮೆರವಣಿಗೆಯನ್ನು ಕೊಂಡುಹೋಗ ಮಧ್ಯದಲ್ಲಿ ಸೇರಿ ಎರಡೂ ತಂಡದವರಿಗೆ [illegible]ಟೆಯಾಯಿತು.

—ಗುಂಟೂರಿನಲ್ಲಿ ಮುನ್ಸಿಪಾಲಿಟಿಯ ಅಧ್ಯಕ್ಷರು [illegible] ಕೂಡಲೆ ಇವರ ಮನೆಯ ಮದುವೆಯ ಮೆರವಣಿಗೆಯು ದಾರಿಯಿಂದ ಹೋಗ[illegible] ಮಸೀದಿಯ ಬಳಿ ವಾದ್ಯವಾಗಕೂಡದೆಂದು ಮಹಮ್ಮದೀಯರು ಆತಂ[illegible] ಪಡಿಸಿದರು. ಆದರೆ ಮೆಜಿಸ್ಟ್ರೇಟರು ಅದನ್ನು ರದ್ದುಮಾಡಿದರು. ಕೂಡಲೆ ಮೊಹರಮಿನ ದಿವಸಗಳು ಬಂದವು. ಆದರೆ ಮಹಮ್ಮದೀಯರು ಮೊಹರಮನ್ನು ಈ ವರ್ಷ ಮಾಡಲಿಲ್ಲ. ಮುನ್ಸಿಪಾಲಿಟಿ ಕಡೆಯಿಂದ ಇಂಥ ಉತ್ಸವವನ್ನು ಮಾಡಲು ಆತಂಕವಿಲ್ಲವೆಂದು ಸಾರಿಸಿದ್ದಾಗ್ಯೂ ಮಹಮ್ಮದೀಯರು ಈ ಹಬ್ಬವನ್ನು ಆಚರಿಸಲಿಲ್ಲ.

—ಬ್ರಹ್ಮ ದೇಶದಲ್ಲಿ ಅಕ್ಕಿ ಮಾರ್ಕೆಟಿನಲ್ಲಿ ಗುಜರಾತಿ ಹಿಂದುಗಳಿಗೂ, ಮತ್ತು ಮಹಮ್ಮದರಿಗೂ ಜಟಾಪಟಿ ನಡೆಯಿತು. ಪೋಲೀಸರು ಬಂದು ಅಲ್ಲಿ ಶಾಂತಪಡಿಸಿರುವರು.

—'ಸಿಂಧವಾಸಿ' ಮತ್ತು 'ಮುಸಲ್ಮಾನ್' ಈ ಪತ್ರಿಕೆಗಳ ಮೇಲೆ ಜಾತಿವೈರವನ್ನು ಹುಟ್ಟಿಸಿದ ಆರೋಪಣೆಯನ್ನಿಟ್ಟು ಖಟ್ಲೆಗಳಾಗಿವೆ. ಸಿಂಧವಾಸಿ ಪತ್ರಿಕೆಗೆ ೧೦೦ ರೂಪಾಯಿ ದಂಡ ವಿಧಿಸಲಾಯಿತು. ಇನ್ನೊಂದರ ವಿಚಾರಣೆಯು ನಡೆಯುತ್ತಿದೆ.

ಲಾಹೋರಿನಲ್ಲಿ ಹಿಂದುಮಕ್ಕಳನ್ನು ಎಬ್ಬಿಸಿಕೊಂಡು ಹೋಗುವ ಕ್ರಮವು ಈಗ ತುಂಬಾ ಜಾರಿಯಲ್ಲಿ ಇದ್ದ ಕಾರಣ ಇದರ ವಿಚಾರಣೆಯನ್ನು ನಡಿಸಲು ಪೋಲೀಸರಿಗೆ ಸಹಾಯ್ಯ ಕೊಡಲು ಹಿಂದುಗಳ ಒಂದು ಕಮಿಟಿಯು ನೇಮಕಪಟ್ಟಿದೆ.

—ಪೋಲೀಸಿನವರು ಕೆಟ್ಟರೀತಿಯಿಂದ ನಡಿಸಿದ ಕಾರಣ ಧಾರ ಸಂಸ್ಥಾನದಲ್ಲಿ ಭೋಪಲಾಲ ಚಾಂದೇಲರೆಂಬವರು ಅನ್ನವನ್ನು ಬಿಟ್ಟಿದ್ದಾರೆ.

—ಕ್ರಾಂತಿಕಾರಕರಿಗೋಸ್ಕರ ಸುಳ್ಳು ನೋಟುಗಳನ್ನು ತಯಾರಿಸಿದ ಆರೋಪದ ಮೇಲಿಂದ ನಾರಾಯಣ ಗಂಜ ತಾಲೂಕಿನೊಳಗಿನ ಶಿಕ್ಷಪುರಾ ಎಂಬಲ್ಲಿಯ ಪ್ರಬೋಧ ಮತ್ತು ಶಚೀಂದ್ರನಾಥ ದಾಸಗುಪ್ತ ಇವರಿಬ್ಬರಿಗೆ ಐದು ವರ್ಷದ ಕಠಿಣ ಶಿಕ್ಷೆಯಾಗಿದೆ.

—ಮಲಬಾರಿನಲ್ಲಿ ಅಲ್ಫಾನ್ಸೊ ಎಂಬವನೊಬ್ಬ ಟಕ್ಕನು ಯಾವ ಕಂಪನಿಗೂ ಏಜಂಟರನಾಗಿಲ್ಲದಿರುವಾಗ ಮತ್ತು ಅವನು ಹೇಳಿದ ಕಂಪೆನಿಗಳು ಒಂದೂ ಇಲ್ಲದಿರುವಾಗ ಅವನು ಅನೇಕ ಜನರನ್ನು ವಂಚಿಸಿದ್ದರಿಂದ ಕೊಚೀನ್ ಸರಕಾರವು ಅವರ ಮೇಲೆ ಖಟ್ಲೆಯನ್ನು ಮಾಡಿದೆ.

—ಜಿ. ಆಯ್. ಪಿ. ರೈಲಿನ ಒಬ್ಬ ಗಾರ್ಡನು ಮುಂಬಾಯಿಯಲ್ಲಿ ಕ್ರಿಕೆಟ ಆಡುವಾಗ ಬೋಲು ಎದೆಯ ಮರ್ಮಸ್ಥಾನಕ್ಕೆ ತಾಗಿತು. ಇದನ್ನು ಗಣ್ಯಮಾಡದೆ ಆಟವನ್ನು ಮುಂದರಿಸಿದನು. ಆದರೆ ಸ್ವಲ್ಪ ಸಮಯದಲ್ಲಿ ಎದೆಯಲ್ಲಿ ಅಸಹ್ಯವಾದ ನೋವುಂಟಾಗಿ ಕೆಳಗೆ ಬಿದ್ದನು. ಡೊಕ್ಟರನು ಬಂದು ನೋಡುವಾಗ ಆ ಗಾರ್ಡಿನ ಪ್ರಾಣವು ಹೋಗಿತ್ತು

—ಲೋಕಮಾನ್ಯ ಟಿಳಕರ ಐದನೆ ವರ್ಷದ ಶ್ರಾದ್ಧ ದಿನವು ಕಲಕತ್ತಾ ಲಾಹೋರು, ಕರಾಚಿ, ಪೂನಾ, ಮುಂಬಯಿ, ಮೈಸೂರ, ಮದ್ರಾಸ, ನಾಗಪೂರ ಇತ್ಯಾದಿ ಇತ್ಯಾದಿ ಅನೇಕ ಕಡೆಗಳಲ್ಲಿ ಆಚರಿಸಲ್ಪಟ್ಟಿತು.

ಮ. ಗಾಂಧಿಗಳು ಕಲಕತ್ತೆಯ ಯುರೋಪಿಯನ್ ಎಸೋಸಿಯೇಶನಿನ ಸಭೆಗೆ ಹೋಗಿ ಸೇನಗುಪ್ತರ ಮೇಯರತನವನ್ನು ವಿವರಿಸಿ ಹೇಳಿದ್ದರಷ್ಟೆ. ಈ ಭಾಷಣದಲ್ಲಿ ಅವರು ಮಹಮ್ಮದೀಯರಲ್ಲಿ ಈ ಸ್ಥಾನಕ್ಕೆ ಅಷ್ಟು ಸಮರ್ಥನಾದ ಪುರುಷರಿಲ್ಲವೆಂದು ಮೌ. ಅಝುದರು ತನಗೆ ತಿಳಿಸಿದರಿಂದ ಸೇನಗುಪ್ತರೆ ತತ್ಕಾಲಕ್ಕೆ ಯೋಗ್ಯರೆಂದು ತನ್ನ ಅಭಿಪ್ರಾಯವೆಂದ್ದು ಕೂಡ ಆ ಭಾಷಣದಲ್ಲಿ ಗಾಂಧಿಜಿಗಳು ಹೇಳಿದ್ದರು. ಅವರ ಭಾಷಣದ ಈ ಅಂಶವು ಹಲವು ಮಹಮ್ಮದೀಯ ಬಂಧುಗಳಿಗೆ ವಿಷಯವಾಗಿದೆ. ಆದರೆ ಗಾಂಧಿಜಿಗಳು ತನ್ನ ಮುಂಚಿನ ಮಾತನ್ನೆ ಪುನಃ ಸಮರ್ಥಿಸಿದ್ದಾರೆ

—ದೇ. ಬಂ. ದಾಸರ ಮೃತ್ಯುವಿನಿಂದ ಖಾಲಿಯಾದ ಜಾಗೆಗೆ ಬೆರಿಸ್ಟರ ಸಸಮಲರು ಚುನಾಯಿಸಲ್ಪಟ್ಟಿದ್ದಾರೆ.

—ದೇ. ಬಂ. ದಾಸರ ಬಂಗಾಲ ಸ್ಮಾರಕ ದ್ರವ್ಯದ ರಕಮು ೫| ಲಕ್ಷಕ್ಕೂ ಮಿಕ್ಕಿದೆ.

—ಗುಜರಾತ ಕೊಂಗ್ರೆಸ ಕಮಿಟಿಯು ಅಧಿವೇಶನವು ಸೇರಿ ಬರುವ ಕೊಂಗ್ರೆಸಿನ ಅಧ್ಯಕ್ಷಸ್ಥಾನಕ್ಕೆ ಶ್ರೀಮತಿ ಸರೋಜಿನಿಯವರ ಹೆಸರು ಸೂಚಿಸಲ್ಪಟ್ಟಿದೆ.

—ಶೇಟ ದಾಮೋದರ ದಾಸ ಮತ್ತು ಮಗನಲಾಲ ಇಚ್ಛಾರಾಮ ಇವರು ಆಯುರ್ವೇದ ಔಷಧಾಲಯಕ್ಕಾಗಿ ೨೦೦೦೦ ರೂಪಾಯಿಯನ್ನು ದಾನವಾಗಿಕೊಟ್ಟಿರುವರು. ಅಲ್ಲದೆ ಸಾರ್ವಜನಿಕವಾದ ಒಂದು ಗರಡೀ ಮನೆಯನ್ನು ಕಟ್ಟಿಸುವ ಆಲೋಚನೆಯನ್ನು ಕೂಡ ಅವರು ಮಾಡಿರುವರು.

—ಸನಾತನ ಹಿಂದೂ ಮಹಾಸಭೆಯ ಅಧಿವೇಶನವು ಮುಂದರಿಸಲ್ಪಟ್ಟಿದೆ.

—ಕಲಕತ್ತಾ ಯುನಿವರ್ಸಿಟಿಯ ಸೆನೇಟು ಶಾಲೆಗಳಲ್ಲೂ ಮತ್ತು ಕೊಲೇಜುಗಳಲ್ಲೂ ಲಶ್ಕರಿಶಿಕ್ಷಣವನ್ನು ಕೊಡುವ ವಿಷಯದಲ್ಲಿ ಚರ್ಚೆಯನ್ನು ನಡಿಸಿತು. ಯುನಿವರ್ಸಿಟಿಗೆ ಸಂಬಂಧಿಸಿದ ಎಲ್ಲ ಕೊಲೆಜುಗಳಲ್ಲೂ, ಶಾಲೆಗಳಲ್ಲೂ ಒಂದು ಬಗೆಯ ಶಾರೀರಿಕ ಶಿಕ್ಷಣವನ್ನು ಖಡ್ಡಾಯಪಡಿಸಬೇಕೆಂದು ನಿಶ್ಚಯಿಸಲಾಯಿತು.

—ವೈಸರಾಯರು ಕೋಹಟಿನಲ್ಲಿ ಸಂಚರಿಸುತ್ತಿದ್ದಾರೆ.

—ಬಂಗಾಲ, ಬಿಹಾರ ಪ್ರಾಂತದೊಳಗಿನ ಪದ್ಮಾನದಿಗೆ ವಿಪರೀತವಾದ ನೆರೆಯು ಬಂದು ಮುಂಡರಾ ಮತ್ತು ಬನಾರಿ ಎಂಬ ಊರುಗಳು ಪ್ರವಾಹದಿಂದ ಕೊಚ್ಚಿಕೊಂಡುಹೋದವು. ಅಲ್ಲಿಯ ದೊಡ್ಡದಾದ ಮಹಾನದಿಗೆ ಪ್ರವಾಹವೇರಿದ್ದರಿಂದ ಚಿಲ್ಕಾ ಸರೋವರವು ಥಳ್ಳನೆ ತುಂಬಿ ಉಕ್ಕಹತ್ತಿದ್ದರಿಂದ ಪುರೀ ಮತ್ತು ಕಟಕ ಜಿಲ್ಲೆಗಳಲ್ಲಿ ಜನರು ಊರೂರುಗಳನ್ನೆ ಬಿಟ್ಟು ಬೇರೆ ಕಡೆಯಲ್ಲಿ ಹೋಗಹತ್ತಿದ್ದಾರೆ.

—ಯಮುನಾ ನದಿಗೆ ನೆರೆಯು ಬಂದಿದ್ದು ನೀರು ಏರುತ್ತಿದೆ. ಇಲ್ಲಿಯ ಹೊರ ಪ್ರದೇಶದ ಯಮುನಾ ತೀರದ ಘಟ್ಟಗಳೆಲ್ಲ ನೀರಿನಲ್ಲಿ ಮುಳುಗಿದವು. ಜನರ ವಸ್ತಿಯು ಅಲ್ಲಿಂದ ಹೊರಟಿತು.

—ಓರಿಸಾ ಮತ್ತು ಬಿಹಾರ ಪ್ರಾಂತದಲ್ಲಿ ನೆರೆ ಬಂದು ಯಾವ ಅನಾಹುತವಾಗಿತ್ತೊ ಆ ಕುರಿತು ಅಲ್ಲಿಯ ಸರಕಾರವು ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ನಷ್ಟ ಸಂಭವಿಸಿದೆ ಎಂಬುದನ್ನು ಗೊತ್ತುಪಡಿಸಿಕೊಂಡು ಆ ಮಾಹಿತಿಯನ್ನು ಈಗ ಮೆಲ್ಲಮೆಲ್ಲಗೆ ಪ್ರಕಟಪಡಿಸುತ್ತಿದೆ. ಪತ್ರಿಕೆಗಳಲ್ಲಿ ಬಂದಿರುವ ಮಾಹಿತಿಯು ಅತಿಶಯೋಕ್ತಿಯುದೆಂದು ಸರಕಾರವು ಅಭಿಪ್ರಾಯಪಡುತ್ತದೆ.

ಬಂಗಾಲದ ಭೀ[illegible]ಚಾರ್ಯರ ನಿರ್ಯಾಣ!

ಬಂಗಾಲದ ಸುಪ್ರಸಿದ್ಧ ಮುಖಂಡರೂ, [illegible]ನ, ಅನುಭವ, ವಯಸ್ಸು [illegible] ವೃದ್ಧರೂ ಆದ ಬಾಬು ಸುರೇಂದ್ರನಾಥ [illegible]ರ್ಜಿಯವರು ತಮ್ಮ ೭೭ನೆಯ ವಯಸ್ಸಿನಲ್ಲಿ ನಿನ್ನೆ ತಾ. ೬ರಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ನಾವು ತುಂಬಾ ವ್ಯಸನಪಡುತ್ತೇವೆ: ಬಂಗಾಲದ ಮೇಲೆ ಮುಖಂಡರ [illegible]ಣದ ಆಪತ್ತುಗಳು ಒಂದರ ಮೇಲೊಂದು ಬರುತ್ತಿವೆ ಇದು ಬಹಳ ವ್ಯ[illegible]ಕರವಾದ ಸಂಗತಿಯಾಗಿದೆ. ಇವರ ಮರಣದ ವಾರ್ತೆಯು ಈಗ ನಮ್ಮ ಕೈ[illegible]ದ್ದರಿಂದ ಬರುವ ಸಂಚಿಕೆಯಲ್ಲಿ ಇವರ ಮೃತ್ಯುಲೇಖವನ್ನೂ, ಚರಿತ್ರೆಯನ್ನೂ [illegible]ಯುವೆವು.

ದಕ್ಷಿಣ ಕನ್ನಡ.

ಕುಂಬಳೆ:—ನಮ್ಮ ತಾಲೂಕು ಬೋರ್ಡ ಪ್ರೆಸಿಡೆಂಟರಾದ ಶ್ರೀಯುತ ಎಸ್. ಎಸ್. ರಾಮರಾವ್‌ರವರೂ, ಮೆಂಬರರಾದ ಶ್ರೀಯುತ ಕೆ. ನರಸಿಂಗನಾಯಕ್‌ರವರು ಸಹಾ ಇದೇ ತಾ. ೧ರಲ್ಲು ಇಲ್ಲಿಗೆ ಚಿತ್ತಯಿಸಿ (೧) ಇಲ್ಲಿಯ ಯೂನಿಯನ್ ಪಂಚಾಯಿತರಿಗೆ ಮುಂದಿನ ಕೆಲಸದ ಅನುಭವಕೊಟ್ಟು (೨) ಇಲ್ಲಿಯ ಬೋರ್ಡ ಹಾಯರ್ ಎಲಿಮೆಂಟರಿ ವ ಲವರ್ ಎಲಿಮೆಂಟರಿ ಶಾಲಾ ಕಟ್ಟೋಣಗಳನ್ನು ಪರಾಂಬರಿಸಿ ಇವುಗಳನ್ನು ಒಂದಾಗಿ ಮಾಡಿ ಎಲಿಮೆಂಟರಿ ಶಾಲಾ ಕಟ್ಟೋಣಕ್ಕೆ ಒಯ್ಯುವ (೩) ನೂತನವಾಗಿ ಒಂದು ಕಾಯಿಪಲ್ಯ ಮಾರ್ಕೆಟನ್ನು ಏರ್ಪಡಿಸುವ (೪) ಟೌನ್‌ರಸ್ತೆಗಳನ್ನು ಅಲ್ಲಲ್ಲಿ ಅಗಲಪಡಿಸಿ ಅದರ ಡೊಂಕನ್ನು ತಿದ್ದುವ ಮತ್ತು (೫) ಮಾರ್ಕೆಟ ಬಳಿ ರಸ್ತೆ ಕಿನಾರೆಯಲ್ಲಿ ಅಂಗಡಿಗಳನ್ನು ಕಟ್ಟುವರೆ ಸ್ಥಳಕೊಡುವ ಮುಂತಾದ ಏರ್ಪಾಡುಗಳನ್ನು ಕ್ರಯಮಾಡುವರೆ ನಿಶ್ಚಯಿಸಿ ಸಾಯಂಕಾಲ ಕಾಸರಗೋಡಿಗೆ ಹಿಂತೆರಳಿದರು.

ಕೆಲವು ದಿವಸಗಳಿಂದ ಇಲ್ಲಿಯ ಸುಳಿದಾಡುತ್ತಾ, ರಾತ್ರಿ ಅಲ್ಲಲ್ಲಿ ಚಿಲ್ಲರೆ ಕಳವು ಮಾಡುತ್ತಿದ್ದ ಬಾರಿಕಾಡ ಗ್ರಾಮದ ಒಬ್ಬ ಮಾಪಿಳ್ಳೆಯು ಇಲ್ಲಿಯ ಜಾಡ ಕೃಷ್ಣನೆಂಬವನ ಅಂಗಡಿಯಲ್ಲಿ ತಾ. ೩ನೆ ರಾತ್ರಿ ಮಾಲುಗಳ ಸಮೇತ ಸಿಕ್ಕಿದನೆಂದೂ ಆತನನ್ನು ಪೋಲೀಸಿನವರಿಗೊಪ್ಪಿಸಿ ಈಗ ತನ್ನಿಖೆ ನಡೆಯುತ್ತದೆಂತಲೂ ವರ್ತಮಾನವಿದೆ.

ಶಿರಿಯ ಗ್ರಾಮದಲ್ಲಿರುವ ಫಿಶ್ ಕ್ಯೂರಿಂಗ್ ಯಾರ್ಡನ್ನು ಮುಚ್ಚಿ ವ್ಯಾಪಾರಸ್ಥರ ಅಪೇಕ್ಷೆಯಂತೆ ಗವರ್ನಮೆಂಟ ಫಿಶರಿಸ್ ಡಿಪಾರ್ಟಮೆಂಟನವರು ಇಲ್ಲಿಯ ದರ್ಯಾಕಿನಾರೆಯಲ್ಲಿರುವರೆ ಏರ್ಪಾಡಾಗಿಯದೆ.

ಪೋಸ್ಟಲ್ ಸುಪರಿಂಟೆಂಡೆಂಟ್ ಧೊರೆಗಳವರು ಇದೆ ತಾ. ೩ರಲ್ಲು ಇಲ್ಲಿಯ ಪೋಸ್ಟಾಫೀಸನ್ನು ತನ್ಖಿ ನಡಿಸಿ ಸಾಯಂಕಾಲ ಮೋಟರ್ ಟ್ರೈನಿನಲ್ಲಿ ಹೊಸದುರ್ಗಕ್ಕೆ ತೆರಳಿದರು.

ಮುಲ್ಕಿ:—"ಧರ್ಮಸ್ಥಳದ ಸನ್ಮಾನ್ಯ ಸದ್ಗೃಹಸ್ಥರೂ, ಮದ್ರಾಸ್ ಲೆಜಿಸ್ಲೇಟಿವ್ ಕೌನ್ಸಿಲ್ ಮೆಂಬರರೂ ಆದ ಮ| ರಾ| ಡಿ. ಮಂಜಯ್ಯ ಹೆಗ್ಡೆ ಅವರ್ಗಳ್, ಎಮ್. ಎಲ್. ಸಿ. ರವರು ನಮ್ಮ ಯೂನಿಯನ್ ಕ್ಲಬ್ಬಿಗೆ ರೂ ೫೦ನ್ನು ಸಹಾಯದ್ರವ್ಯವಾಗಿ ದಯಪಾಲಿಸಿದನ್ನು ಆಹ್ಲಾದರದಿಂದ ಸ್ವೀಕರಿಸಿರುತ್ತೇವೆ, ಮತ್ತು ಈ ತರದ ಉದಾರತೆಗಾಗಿ ಸದರಿ ಮಹಶೀಯರಿಗೆ ತುಂಬಾ ಅಭಾರಿಯಾಗಿರುತ್ತೇವೆ. ಬಡವರ ಕೊಡುಗೈಯೂ, ಸಾರ್ವಜನಿಕ ಸಂಸ್ಥೆಗಳ ಜನಕನೂ, ಧರ್ಮಾಭಿಮಾನಿಯೂ ಆದ ಇವರು ಧೀರ್ಘಕಾಲ ಅನಂತ ಧರ್ಮ ಕಾರ್ಯವನ್ನು ಮಾಡಿ ಕೀರ್ತಿಶಾಲಿಗಳಾಗುವಂತೆ ಆ ದಯಾಮಯನು ಅನುಗ್ರಹಿಸಲಿ" ಎಂದು ಸದರಿ ಕ್ಲಬ್ಬಿನ ಗೌ| ಕಾರ್ಯದರ್ಶಿಯರಾದ ರಾ| ಬಿ ಭೋಜರಾಯರು ಬರಿಯುತ್ತಾರೆ.

ವಿವಿಧ ವಿಷಯಗಳು.

ಮದ್ರಾಸಿನ ಪ್ರಮುಖ ಸ್ವರಾಜಿಸ್ಟರಾದ ಶ್ರೀ. ಸತ್ಯಮೂರ್ತಿಯವರು ಸ್ವರಾಜ್ಯ ಚಳವಳದ ಕಾರ್ಯಕ್ಕಾಗಿ ವಿಲಾಯತಿಗೆ ಹೋಗಿರುವರಷ್ಟೆ. ಇವರು ಅಲ್ಲಿ ತಲಪಿದ ಬಳಿಕ ಯಾವ ಯಾವ ಕಾರ್ಯಗಳನ್ನು ಮಾಡುತ್ತಿದ್ದಾರೆ ಎಂಬೀ ವಿಷಯದಲ್ಲಿ ಎಷ್ಟೊ ಸಂಗತಿಗಳು ಪ್ರಕಟವಾಗುತ್ತಿದ್ದಾವೆ. ಸತ್ಯಮೂರ್ತಿಯವರು ಕರ್ನಲ್ ವೆಜ್‌ವುಡ್ ಸಾಹೇಬರನ್ನು ಹೌಸ್ ಒಫ್ ಕೊಮನ್ಸಿನಲ್ಲಿ ಕಂಡರು. ಕೂಡಲೆ ಕರ್ನಲ್ ಸಾಹೇಬರು ಸತ್ಯಮೂರ್ತಿಗಳನ್ನು ಮನೆಗೆ ಕರಕೊಂಡು ಹೋಗಿ ಒಂದು ಟಿಪಾರ್ಟಿಯನ್ನು ಕೊಟ್ಟರು. ಈ ಸಂದರ್ಭದಲ್ಲಿ ವೆಜ್‌ವುಡ್ ಸಾಹೇಬರು ಹಿಂದುಸ್ಥಾನದ ವಿಷಯವನ್ನು ಮಾತಾಡುವಾಗ ಮುಂದಿನಂತೆ ತಮ್ಮ ಅಭಿಪ್ರಾಯವನ್ನು ಹೇಳಿದರು. ಲೇಬರ ಪಕ್ಷದವರು ಅಧಿಕಾರಾರೂಢರಾಗಿರುವಾಗ ನಿಮ್ಮ ಹಿಂದುಸ್ಥಾನದಲ್ಲಿ ಎಷ್ಟರ ಮಟ್ಟಿಗೆ ಪಕ್ಷಭೇದಗಳಿದ್ದವೆಂದರೆ, ಹಿಂದುಸ್ಥಾನಕ್ಕೆ ಬೇಕಾದುದು ಯಾವುದೆ ಎಂಬುದೆ ಗೊತ್ತಾಗಲಿಲ್ಲ. ಈ ಕಾರಣದಿಂದ ನಮ್ಮ ಲೇಬರ ಪಾರ್ಟಿಗೆ ನಿಮ್ಮ ಹಿಂದುಸ್ಥಾನದ ಯಾವ ಹಿತವನ್ನು ಮಾಡಲಾಗಲಿಲ್ಲ. ಆ ಉತ್ತಮ ಸಂದರ್ಭವು ವ್ಯರ್ಥವಾಗಿ ಹೋಯಿತು. ಕರ್ನಲ್ ವೆಜ್‌ವುಡ್ ಸಾಹೇಬರ ಈ ಮಾತುಗಳನ್ನು ಕೇಳಿದೊಡನೆಯೆ ಶ್ರೀ. ಸತ್ಯಮೂರ್ತಿಯವರು ಸಮರ್ಪಕವಾದ ಉತ್ತರವನ್ನು ಕೊಟ್ಟರು. 'ನಿಮಗಳಿಗಾದರೂ ಇಂಥದ್ದೆ ಬೇಕೆಂಬುದು ಇತರರಿಗೆ ಹೇಗೆ ಗೊತ್ತಾಗುತ್ತದೆ? ಕನ್‌ಸರವೇಟಿವ್, ಲಿಬರಲ್, ಲೇಬರ ಮುಂತಾದ ಪರಸ್ಪರ ವಿರುದ್ಧವಾದ ಎಷ್ಟೊ ಪಕ್ಷಗಳು ನಿಮ್ಮಲ್ಲಿವೆ. ಆದರೂ ಜರ್ಮನಿ, ಫ್ರಾನ್ಸ ಇತ್ಯಾದಿ ಹೊರಗಿನವರ ರಾಜ್ಯವು ಇಂಗ್ಲಂಡಿನ ಮೇಲೆ ಇರಬಾರದು, ಇಂಗ್ಲಿಷರ ರಾಜ್ಯವೆ ಇರಬೇಕು ಎಂದು ನಿಮ್ಮೆಲ್ಲರಿಗೆ ತೋರುತ್ತದೆಂಬುದು ನಿಜವಲ್ಲವೆ? ಹಾಗೆಯೆ ನಮಗಾದರೂ ಹಿಂದಿಗಳ ಸ್ವರಾಜ್ಯವು ಹಿಂದುಸ್ಥಾನದ ಮೇಲೆ ಇರಬೇಕೆಂದು ತೋರುತ್ತದೆ.' ಸತ್ಯಮೂರ್ತಿಯವರ ಈ ಉತ್ತರದಿಂದ ಕರ್ನಲ್ ಸಾಹೇಬರು ನಿರುತ್ತರರಾದರು. ಈ ಟೀಪಾರ್ಟಿಯ ಸಂದರ್ಭದಲ್ಲಿ ಅಮೇರಿಕದ ಕೆಲವು ಗಂಡಸರು ಹೆಂಗಸರಿದ್ದರು. ಅವರಲ್ಲಿ ಒಬ್ಬಳು ಇತರರಿಗೆ ತಿಳಿಯದಿರುವ ಸಂಗತಿ ಇರಲಿ, "ನಿಮ್ಮ ಇಂಗ್ಲಿಷರಿಗೆಲ್ಲರಿಗಾದರೂ ಇಂಗ್ಲಂಡಿಗೇನು ಬೇಕೆಂಬುದು ಗೊತ್ತಿರುವದೆ?

• • • •

(೮ನೇ ಪೇಜಿಗೆ ಮುಂದುವರಿಸಿದೆ.)

ಅನುಕ್ರಮಣಿಕೆ.

ಪುಟಗಳು.
ಅಗ್ರಲೇಖ
"ಸ್ವರಾಜ್ಯವು ನನ್ನ ಜನ್ಮಸಿದ್ಧವಾದ ಹಕ್ಕು" ೬
ಸ್ಫುಟವಿಚಾರಗಳು—
೧ ಮಧ್ಯಪ್ರಾಂತದ ಗವರ್ನರರ [illegible] "
೨ ವ[illegible] ಅಲ್ಲಿಗಳ ಅಭಿಪ್ರಾಯ ೬
೩ ಅಮ್ಮ[illegible]ದಲ್ಲಿ ಮಹಮ್ಮದೀಯರ ಪರಿಷತ್ತು
೪ ಆ. ಆಫ್ರಿಕದೊಳಗಿನ ಏಸಿಯಾಟಿಕ ಜನರ ಬಗ್ಗೆ ಬಿಲು "
೫ ಡಾ. ಯು. ರಾಮರಾಯರ ಉಮೇದುವಾರಿಕೆ
ವರ್ತಮಾನಸಂಗ್ರಹಗಳು— ೭
ವಿದೇಶ – ಒಳದೇಶ ವರ್ತಮಾನ "
ದಕ್ಷಿಣಕನ್ನಡ— ಕುಂಬಳೆ, ಮೂಲ್ಕಿ "
ವಿವಿಧವಿಷಯಗಳು
ಮಂಗಳೂರು
ಕ್ರಿಮಿಕೀಟಗಳೂ ರೋ[illegible] "
ಪತ್ರವ್ಯವಹಾರ ೮
ಕೌನ್ಸಿಲ್ ಆಫ್ ಸ್ಟೇಟಿನ ಚುನಾವಣೆ ೯
[illegible]ಸು ನ್ಯಾಯವಿಧಾಯಕ ಸಭೆ "

ಸ್ವದೇಶಾಭಿಮಾನಿ.

ಶಕೆ ೧೮೪೭ ಶ್ರಾವಣ ಬ॥ ೩ಯು ಶುಕ್ರವಾರ.

"ಸ್ವರಾಜ್ಯವು ನನ್ನ ಜನ್ಮಸಿದ್ಧವಾದ ಹಕ್ಕು"

ಈ ಮಹಾಮಂತ್ರವನ್ನು ಹಿಂದೂಸ್ಥಾನಕ್ಕೆ ದಯಪಾಲಿಸಿದ ಲೋಕಮಾನ್ಯಟಿಳಕರು ಸ್ವರ್ಗಸ್ಥರಾಗಿ ಐದು ವರ್ಷಗಳಾದವು. ಈ ಐದು ವರ್ಷಗಳ ಅವಧಿಯು ದಾಟಿದರೂ ಹಿಂದೂಸ್ಥಾನವು ಅವರನ್ನು ಮರೆಯಲಿಲ್ಲವೆಂಬುದು ಕಳೆದ ಶನಿವಾರ ಎಂದರೆ ಅಗೋಸ್ತು ತಾ. ೧ರಲ್ಲಿ ಕಲಕತ್ತಾ, ಲಾಹೋರ, ಅಮೃತಸರ, ಕರಾಚಿ, ನಾಗಪುರ, ಲಖನೌ, ಮುಂಬಯಿ, ಹುಬ್ಬಳ್ಳಿ, ಮದರಾಸ, ಮೈಸೂರ ಮುಂತಾದ ಎಲ್ಲ ಪಟ್ಟಣಗಳಲ್ಲಿ ಲೋಕಮಾನ್ಯರ ಪುಣ್ಯಸ್ಮರಣವನ್ನು ಮಾಡಿ ಅವರ ಗುಣಗೌರವನ್ನು ಆಡಿ ತೋರಿಸಿದ ಮೇಲಿಂದ ಸ್ಪಷ್ಟವಾಗುತ್ತದೆ. ಕರಾಚಿಯಲ್ಲಿ ಶ್ವೇತಶಿಲೆಯ ಅವರ ಬಸ್ಟನ್ನು ಶ್ರೀಮತಿ ಸರೋಜನಿಯವರು ಅನಾವೃತಪಡಿಸಿರುವರು. ಪುಣೆಯಲ್ಲಿ ನಾಮ. ಖಾಪರ್ಡೆಯವರು "ತಿಲಕ ಸ್ಮಾರಕಮಂದಿರ"ದ ಅನಾವರಣವನ್ನು ಮಾಡಿರುವರು. ಇನ್ನೆಷ್ಟೊ ಕಡೆಗಳಲ್ಲಿ ಬೇರೆ ಬೇರೆ ನಮೂನೆಯ ಸ್ಮಾರಕಗಳೂ ಆಗಿವೆ. ಆಗುತ್ತಲೂ ಇವೆ. ಉದಾಹರಣಾರ್ಥವಾಗಿ, ನಮ್ಮ ಕರ್ನಾಟಕದ ಪೈಕಿ ಹುಬ್ಬಳಿಯಲ್ಲಿ 'ತಿಲಕ ಗ್ರಂಥಸಂಗ್ರಹ'ವೆಂಬುದು ಸ್ಥಾಪಿತವಾಗಿರುವುದು. ವಿದ್ಯಾಲಯಗಳು, ಪಾಠಶಾಲೆಗಳು ತಿಲಕರ ಹೆಸರಿನಿಂದ ಎಷ್ಟೊ ಕಡೆಗಳಲ್ಲಿ ಸ್ಥಾಪಿತವಾಗಿವೆ. ಈ ಮೇರೆಗೆ ಹಿಂದೀದೇಶವು ತಾನು ಅವರನ್ನು ಮರೆತಿಲ್ಲವೆಂಬುದನ್ನು ಅನೇಕ ದೃಷ್ಟಾಂತಗಳಿಂದ ತೋರಿಸುತ್ತಿದೆ ಎಂಬುದಕ್ಕೆ ಸಂದೇಹವಿಲ್ಲ.

ಮಾತ್ರವಲ್ಲ, ಲೋಕಮಾನ್ಯರು ತಮ್ಮ ಅವಸಾನದ ಸಮಯದಲ್ಲಿ ಸ್ವರಾಜ್ಯದ ಪ್ರಾಪ್ತಿಗಾಗಿ ಯಾವ ಸಾಧನಗಳನ್ನು ಉಪದೇಶಿಸಿದ್ದರೊ, ಯಾವ ಧೋರಣವನ್ನು ಹಾಕಿಕೊಟ್ಟಿದ್ದರೊ ದೇಶವು ಅವೇ ಸಾಧನಗಳನ್ನೂ, ಅದೇ ಧೋರಣವನ್ನೂ ಅನುಸರಿಸಹತ್ತಿದೆ. ಮಧ್ಯದಲ್ಲಿ ಅನೇಕ ಪ್ರಯತ್ನಗಳು ನಡೆದವು. ಆದರೆ 'ಊರೆಲ್ಲ ಸುತ್ತಿ ಕಡೆಗೆ ಚಾವಡಿ ಬಾಗಿಲ ಬಳಿಗೆ ಬಂದು ನಿಂತ ಗೌಡ' ಎಂಬ ಮಾತಿಗನುಸಾರವಾಗಿ ನಮ್ಮ ಚಳವಳವು ರೆಕ್ಕೆ ಕಟ್ಟಿಕೊಂಡು ಪಕ್ಕನೆ ಮೇಲಕ್ಕೆ ಹಾರಿತಾದರೂ ಕಡೆಗೆ ಪ್ರತಿಯೋಗಿ ಸಹಕಾರಿತೆಯ ಮೇಲೆಯೆ ಬಂದು ತಲಪಿದೆ. ರಾಷ್ಟ್ರೀಯಸಭೆಯು ಅಸಹಯೋಗಿಯಾದುದರಿಂದ ಯಾವ ರಾಜಕೀಯ ವಿಷಯವನ್ನೂ ಎತ್ತಕೂಡದು, ಅದು ಆತ್ಮಶುದ್ಧಿಯನ್ನು ಮಾಡಿಕೊಳ್ಳುವುದಕ್ಕಾಗಿ ಸಾಮಾಜಿಕ, ಧಾರ್ಮಿಕಾದಿ ಸ್ವಂತ ಸಂಗತಿಗಳನ್ನೆ ಆಲೋಚಿಸಿಕೊಂಡಿರಬೇಕು, ಪರಾವಲಂಬನವು ಘಾತುಕವಾದುದರಿಂದ ಅನ್ಯದೇಶಗಳಲ್ಲಿ ಚಳವಳವನ್ನು ಮಾಡುವುದು ಯುಕ್ತವಲ್ಲ, ಅದಕ್ಕಿಂತ ಸ್ವಾವಲಂಬನದಿಂದ ಇಲ್ಲಿಯವರಲ್ಲಿ ಜಾಗೃತಿಯನ್ನು ಮಾಡಿದರೆ ಸಾಕೆಂಬಿತ್ಯಾದಿ ವಿಚಿತ್ರಮತಗಳ ಶಿಕ್ಷಣವು ಮಧ್ಯದಲ್ಲಿ ದೇಶ ತುಂಬಾ ಹಬ್ಬಿಹೋದ್ದರಿಂದಲೂ, ಇಂಥ ಉಪದೇಶವೆ ಸರ್ವತ್ರ ಪ್ರಸಾರ ಹೊಂದಿದರಿಂದಲೂ ದೇಶದ ಅಭಿರುಚಿಯೂ, ಪ್ರವೃತ್ತಿಯೂ ಈ ಮಧ್ಯ ಸಮಯದಲ್ಲಿ ವಿಲಕ್ಷಣವಾಗಿ ಹೋದವು. ಅಸಹಕಾರದ ದೆಸೆಯಿಂದ ರಾಜಕೀಯ ಕಾರ್ಯವನ್ನು ದೇಶವು ಬುದ್ಧಿ ಪುರಸ್ಸರವಾಗಿ ಬಿಡಬೇಕಾಯಿತು. ಧಾರ್ಮಿಕ ಸಾಮಾಜಿಕಾದಿ ಚಳವಳಗಳು ಮೊದಲೆ ಅಕಿಂಚಿತ್ಕರ. ಅದರಲ್ಲಿ ತಿರುಗಿ ಯಶಸ್ಸಿಲ್ಲ; ಎಂದ ಮೇಲೆ ಅವೂ ಕುಂಠಿತವಾದವು. ಅಂತು ನಾಶವಾಗಿ ಬಿಟ್ಟದ್ದೊಂದು [illegible] ಹೋದದ್ದು ಇನ್ನೊಂದು! ಈ ಮೇರೆಗೆ ರಾಜಕೀಯ ವಿಷಯಗಳ ಸಾಮಾಜಿಕ ಇತ್ಯಾದಿ ಎಲ್ಲದಕ್ಕೆ ಒಂದು ಬಗೆಯ ಅನಾಯ[illegible] ಐದು ವರ್ಷಗಳ[illegible] ಪ್ರಯೋ[illegible] ಹೋಯಿತು.

ಆದರೆ ಒಳ್ಳೆ ದಿವಸಗಳು ಬರುವದಿದ್ದರೆ ಪೂರ್ವಪುಣ್ಯವು ಕೂಡ ಉದಯಿಸುತ್ತದೆ ಎಂದು ಹೇಳುತ್ತಾರೆ ಈ ಮಾತಿನ ಪ್ರತ್ಯಯವು ನಮ್ಮ ದೇಶದ ರಾಜಕಾರಣದಲ್ಲಿ ಬರಹತ್ತಿದೆ ಎನ್ನಬೇಕು. ಮೂವತ್ತು ಕೋಟಿಯ ಜನಸಂಖ್ಯೆಯಿಂದ ತುಂಬಿಹೋಗಿರುವ ಈ ವಿಶಾಲವಾದ ದೇಶದಲ್ಲಿ ಅಸಹಕಾರವು ಅಶಕ್ಯಪ್ರಾಯವಾದುದು, ಅದಕ್ಕೆ ಬೇಕಾದ ರಾಜಕೀಯ ಶಿಕ್ಷಣವೂ ಸಾಮಾನ್ಯ ಜನಗಳಲ್ಲಿ ಇನ್ನೂ ಹಬ್ಬಿಲ್ಲವಾದ್ದರಿಂದ ಅಸಹಕಾರದಂಥ ಮಹಾಸಾಧನವನ್ನು ಆಚಾರದಲ್ಲಿ ತರಲು ಜನಗಳು ಅಸಮರ್ಥರಾಗಿರುವರು, ಅಲ್ಲದೆ ರಾಜಕೀಯ ವಿಷಯವನ್ನು ಬಹಿಷ್ಕರಿಸಿದಲ್ಲಿ ಇನ್ನಷ್ಟು ಅನರ್ಥಗಳು ಬಂದೊದಗುತ್ತವೆ ಎಂಬಿತ್ಯಾದಿ ಅನುಭವಗಳು ಈ ಐದು ವರ್ಷಗಳಲ್ಲಿ ಬಂದದರಿಂದ ಲೋಕಮಾನ್ಯರು ತೋರಿಸಿಕೊಟ್ಟ ಯಾವ ದಾರಿ ಇದೆಯೊ ಅದನ್ನೆ ಈ ಹೊತ್ತು ರಾಷ್ಟ್ರೀಯ ಸಭೆಯು ಅನುಸರಿಸಬೇಕಾಗಿದೆ. ಇದರ ಮೇಲಿಂದ ಟಿಳಕರು ಸಹಕಾರಿಗಳಾಗಿದ್ದರು ಎಂದು ಮಾತ್ರ ಯಾರೂ ನೆನಸಕೂಡದು. ಅವರಷ್ಟು ದೊಡ್ಡ ಅಸಹಕಾರಿಗಳು ಇದು ವರೆಗೆ ಯಾರೂ ಆಗಿಲ್ಲ. ಶಾಲಾ, ಕೋರ್ಟು, ಕೌನ್ಸಿಲು, ಬ್ರಿಟಿಷ್ ವಸ್ತು ಇ. ಇ. ಯಾವ ಬಹಿಷ್ಕಾರಗಳು ಈ ಮೊನ್ನೆಯ ಚಳವಳದಲ್ಲಿ ಪ್ರಚಾರಕ್ಕೆ ಬಂದಿದ್ದವೊ ಅವುಗಳನ್ನು ಮೊದಲೆ ಅವರು ಸ್ವತಃ ಆಚರಿಸಿಕೊಂಡಿದ್ದರು. ಈ ವಿಷಯಗಳ ವಾಙ್ಮಯವನ್ನು ಅವರು ತಯಾರಿಸಿದ್ದಿಲ್ಲವಾದರೂ ಅವರು ಆಚಾರದಲ್ಲಿ ಅಸಹಕಾರಿಗಳೆ ಆಗಿದ್ದರು. ಮಾತ್ರವಲ್ಲ, ನಮ್ಮ ಕೇಳಿಕೆಯನ್ನು ಮನ್ನಿಸದ ಸರಕಾರಕ್ಕೆ ನಾವು ಕಂದಾಯವನ್ನು ಕೊಡುವುದನ್ನು ಕೂಡಾ ನಿಲ್ಲಿಸಬಹುದೆಂದು ಅವರು ಕಲಕತ್ತಾ ಇತ್ಯಾದಿ ಕಡೆಗಳಲ್ಲಿ ಉಪನ್ಯಾಸದಲ್ಲಿ ಹೇಳಿದ್ದಾರೆ. ಆದರೆ ಅವರು ಸಾಧ್ಯಾಸಾಧ್ಯತೆಯ ವಿಚಾರವನ್ನು ಮಾತ್ರ ಬದಿಗೆ ಒತ್ತುತ್ತಿರಲಿಲ್ಲ. ನಮ್ಮ ಜನಗಳಿಗೆ ಶಿಕ್ಷಣವು ಎಷ್ಟಿದೆ, ಅವರ ಯೋಗ್ಯತೆಯು ಏನು, ಅವರಿಂದ ಯಾವ ಯಾವದು ಸಾಧ್ಯ ಎಂಬುದನ್ನು ಸಂಪೂರ್ಣವಾಗಿ ಆಲೋಚಿಸಿ ಅಂಥ ಸಂಗತಿಗಳನ್ನೆ ಅವರು ರಾಷ್ಟ್ರಕ್ಕೆ ಉಪದೇಶಿಸುತ್ತಿದ್ದರು. ಆದ್ದರಿಂದಲೆ ಸಹಕಾರ, ಅಸಹಕಾರ ಈ ಎರಡೂ ತುದಿಗಳಿಗೆ ಹೋಗದೆ ಅವರು ಪ್ರತಿಯೋಗಿ ಸಹಕಾರವನ್ನು ಉಪದೇಶಿಸಿರುವರು. ಸನದುಶೀರ ರೀತಿಯಿಂದ ರಾಜಕೀಯ ಚಳವಳದ ಹೋರಾಟದಲ್ಲಿ ಪ್ರತಿಯೋಗಿ ಸಹಕಾರವೆ ಕಡೆಯ ಮಾತಾಗಿದೆ. ಸನದುಶೀರವೆಂದ ಕೂಡಲೆ ಯುದ್ಧಕ್ಕೆ ಸರ್ವಥಾ ಅವಕಾಶವಿಲ್ಲ. ಸ್ವಾರ್ಥಪರರೊಡನೆ ಸಹಕಾರಕ್ಕೆ ಫಲವಿಲ್ಲ. ಕಾಯಿದೆಭಂಗದಂಥ ಚಳವಳವು ಇಷ್ಟು ದೊಡ್ಡ ದೇಶದಲ್ಲಿ ಇಷ್ಟು ಬೇಗನೆ ಸಾಧ್ಯವಾಗತಕ್ಕ ಸಂಗತಿಯಲ್ಲ. ಎಂದರೆ ವನ್ಯ ಮೃಗಗಳನ್ನು ಬೆದರಿಸಲು ಕಾಡಿನ ಹೊಲಗಳಲ್ಲಿ ಬೆಚ್ಚುಗಳನ್ನು ಇಡುವಂತೆ ಈ ಸಿವಿಲ್'ಡಿಸ್ ಒಬ್ಬೀಡಿಯನ್ಸಿನ ಬೆದರಿಕೆಯನ್ನು ತೋರಿಸಬಹುದಲ್ಲದೆ ಇದು ಇಷ್ಟು ಬೇಗನೆ ಕಾರ್ಯರೂಪದಲ್ಲಿ ಬರುವುದು ಅಸಾಧ್ಯ. ಈ ಮೇರೆಗೆ ಸಹಕಾರ, ಅಸಹಕಾರಾದಿ ಸಾಧನಗಳು ನಿವೃತ್ತವಾದ ಮೇಲೆ ಪ್ರತಿಯೋಗಿ ಸಹಕಾರಿತೆ ಮಾತ್ರ ಈ ಸನದಶೀರ ಚಳವಳದಲ್ಲಿ ಉಳಿಯುವುದು ಟಿಳಕರ ಮುಂಚಿನ ಮುಖಂಡರು ಸಹಕಾರದ ನೈವೇದ್ಯವನ್ನು ಅರ್ಪಿಸಿ ಅರ್ಪಿಸಿ ದಣಿದು ಹೋದರು, ಆದರೂ ಇಷ್ಟದೇವತೆಯು ಪ್ರಸನ್ನವಾಗಲಿಲ್ಲ. ಅನಂತರದ ಮುಖಂಡರು ಅಸಹಕಾರದ ಮಾತ್ರೆಯನ್ನು ತೇದು ದೇಶಕ್ಕೆ ಅದನ್ನು ಕೊಟ್ಟರು. ಅದು ಒಗ್ಗಲಿಲ್ಲ. ಮಾತ್ರೆಯನ್ನು ತೇದು ತೇದು ಕೈ ಮಾತ್ರ ಸೋತುಹೋಯಿತು. ಪರಂತು ಮೇಲೆ ಹೇಳಿದ ಹಾಗೆ ರಾಜಕೀಯ ಚಳವಳದ ದಕ್ಷಿಣೋತ್ತರ ಧ್ರುವಗಳನ್ನು ಬಿಟ್ಟು ರಾಷ್ಟ್ರವು ಈಗ ಮಧ್ಯ ಮೇರುವಿಗೆ ಬಂದು ತಲಪಿದೆ.

ರಾಷ್ಟ್ರದ ಪ್ರಧಾನ ಮುಖಂಡರಾದ ಮಹಾತ್ಮಾ ಗಾಂಧಿಗಳು ಲೋಕಮಾನ್ಯರ ಕಲಕತ್ತೆಯಲ್ಲಿ ಆದ ಶ್ರಾದ್ಧ ದಿನಾಚರಣದಲ್ಲಿ ಭಾಷಣಮಾಡುವಾಗ ಲೋಕಮಾನ್ಯರ ರಾಜಕಾರಣವನ್ನು ಮುಂದುವರಿದು ಸ್ವರಾಜ್ಯ ಸಂಪಾದನೆ ಮಾಡುವುದು ನಮ್ಮ ಜನಾಂಗದ ಪವಿತ್ರ ಕರ್ತವ್ಯವಾಗಿದೆ ಎಂಬುದನ್ನು ವಿವರಿಸುವಾಗ ಬ್ರಿಟಿಷ ವಸ್ತುಗಳ ಬಹಿಷ್ಕಾರವನ್ನು ಸಹ ಉಪದೇಶಿಸಿದರು. ಮಹಾತ್ಮಾಜಿಯವರು ಬ್ರಿಟಿಷ್ ವಸ್ತುಗಳನ್ನು ಬಹಿಷ್ಕರಿಸುವದು ದ್ವೇಷಕರವಾದ ಸಂಗತಿ ಎಂದು ಮೊದಲು ಹೇಳುತ್ತಿದ್ದರು. ಆದರೆ ಈಗ ಅವರು ಕೂಡ ಕಲಕತ್ತೆಯ ಸಭೆಯಲ್ಲಿ ಇದಕ್ಕೆ ಅನುಮತಿಯನ್ನು ಕೊಟ್ಟಿರುವರು. ಬರ್ಕನಹೆಡ್ಡರು ಯಾವ ತರದ ಸಹಾನುಭೂತಿಯನ್ನೂ ತೋರಿಸದ[illegible]ಳ ಸುಧಾರಣೆಗಳ ಅಂತನ್ನು ಹಿಂದಕ್ಕೆ [illegible]ಗೆ ಇಲ್ಲಿಯ ಜನತೆಯು ಬ್ರಿಟಿಷ್ ವಸ್ತುಗಳನ್ನು ಬಹಿಷ್ಕರಿಸುವ ಚಳವಳವನ್ನು ಕೈಕೊಳ್ಳಬೇಕೆಂದು ಮಹಾತ್ಮಾ ಗಾಂಧಿಗಳು ಕೂಡ ಅನುವಾದಿಸ ಹತ್ತಿದ್ದಾರೆ. ಇದು ತುಂಬಾ ಸಂತೋಷದ ಮಾತಾಗಿದೆ. ರಾಷ್ಟ್ರೀಯ ಸಭೆಯಲ್ಲಿ ರಾಜಕಾರಣವು ಬೇಡ, ಬರೆ ಖಾದಿಯ ಕಾರ್ಯಕ್ರಮ, ವಿದ್ದರೆ ಸಾಕೆಂದು ಮಹಾತ್ಮಾಜಿಗಳು ಇದು ವರೆಗೆ ಪ್ರತಿಪಾದಿಸಿಕೊಂಡು ಬರುತ್ತಿದ್ದರು; ಆದರೆ ಇತ್ತಲಾಗೆ ಅವರ ಮತದಲ್ಲಿ ಪರಿವರ್ತನವುಂಟಾಗಿ ರಾಷ್ಟ್ರೀಯ ಸಭೆಯಲ್ಲಿ ರಾಜಕೀಯ ವಿಷಯಗಳಿಗೆನೆ ಪ್ರಾಧಾನ್ಯಕೊಡಬೇಕೆಂದು ವಾದಿಸುತ್ತಿದ್ದಾರೆ ಇದು ಕೂಡ ಸಮಾಧಾನದ ಸಂಗತಿಯಾಗಿದೆ. ಅವ್ಯವಹಾರ್ಯವಾದ ಬಹಿಷ್ಕಾರಗಳನ್ನೆಲ್ಲ ಅವರೆ ತೆಗೆದಿದ್ದಾರೆ. ಕೌನ್ಸಿಲುಗಳನ್ನು ಆಕ್ರಮಿಸುವವರು ದೇಶದ್ರೋಹಿಗಳಲ್ಲ, ದೇಶವತ್ಸಲರೆ ಹೌದು; ಆದ್ದರಿಂದ ಕೌನ್ಸಿಲುಗಳನ್ನು ಆಕ್ರಮಿಸುವ ಕಾರ್ಯಕ್ರಮವನ್ನು ರಾಷ್ಟ್ರೀಯ ಸಭೆಯು ಇಟ್ಟುಕೊಳ್ಳಬೇಕು ಎಂಬುದಾಗಿಯೂ ಸಹ ಮಹಾತ್ಮಾಜಿಯವರು ಮನಗಂಡಿದ್ದಾರೆ. ಸಾರಾಂಶ, ಒಂದೆ ಮಾತಿನಿಂದ ಮಹಾತ್ಮಾಜಿಯವರ ಈಗಿನ ಮತಗಳು ಐದು ವರ್ಷಗಳ ಮುಂಚಿನ ರಾಜಕೀಯ ಸ್ಥಿತಿಗೆ ಎಂದರೆ ಪ್ರತಿಯೋಗಿ ಸಹಕಾರಿತೆಗೆ ಬಂದು ತಲಪಿವೆ. ಈಗ ಗಾಂಧಿಜಿಗಳು ಪ್ರತಿಯೋಗಿ ಸಹಕಾರಿಗಳೆನ್ನಲ್ಪಡಲು ಅಡ್ಡಿ ಇಲ್ಲ. "ಸ್ವರಾಜ್ಯವು ನನ್ನ ಜನ್ಮಸಿದ್ಧವಾದ ಹಕ್ಕು" ಎಂಬ ಲೋಕಮಾನ್ಯೋಕ್ತಿಯನ್ನು ಮಹಾತ್ಮಾಜಿಗಳು ಅಲ್ಲಲ್ಲಿ ಜನರ ನೆನಪಿಗೆ ತಂದುಕೊಡುತ್ತಿದ್ದಾರೆ. ಇದನ್ನು ಹೇಳುವಾಗ ಲೋಕಮಾನ್ಯರ ಮಾತಿಗೆ ತನ್ನ ಉತ್ತರಾರ್ಧವೆಂದು ಅವರು "ಸ್ವರಾಜ್ಯವು ಚರಕದಿಂದ ಸಾಧ್ಯವಾಗ ತಕ್ಕದ್ದು" ಎಂದು ನುಡಿಯುತ್ತಾ ಇದ್ದಾರಾದರೂ ಈ ಮಾತು "ಆಯುರ್ವೈ ಘೃತಂ" ಎಂದರೆ ತುಪ್ಪವು ಆಯುಸ್ಸೆ ಆಗಿದೆ ಎಂಬಂತೆ ಅರ್ಥವಾದಾತ್ಮಕವಾಗಿದೆ. ನಿಜವಾಗಿ ಚರಕದಿಂದ ಸ್ವರಾಜ್ಯ ಪ್ರಾಪ್ತಿಯಾಗುವ ಸಂಗತಿ ಇರಲಿ, ಹಿಂದೂಸ್ಥಾನದೊಳಗಿನ ೩೦ ಕೋಟಿ ಜನರಿಗೆ ಸಾಕಾಗುವಷ್ಟು ನೂಲಾದರೂ ಸಿಕ್ಕೀತೊ ಇಲ್ಲವೊ ಎಂಬುದೆ ವಿಚಾರಣೀಯವಾದ ವಿಷಯವಾಗಿದೆ. ಇದರ ಮೇಲಿಂದ ನಾವು ಚರಕ ಅಥವಾ ಖಾದಿ ಇತ್ಯಾದಿಗಳಿಗೆ ವಿರೋಧಿಗಳೆಂದು ಯಾರೂ ತಿಳಿಯಬಾರದು. ಖಾದಿಯ ಚಳವಳವೂ ಚರಕದ ಪ್ರಸಾರಣವೂ ಬಹು ಉಪಯುಕ್ತವಾದ ಸಂಗತಿಗಳೆಂಬುದಕ್ಕೆ ಸಂದೇಹವಿಲ್ಲ. ಆದರೆ ಭಕ್ತಿಯ ಭರದಲ್ಲಿ ಅಥವಾ ನಂಬಿಕೆಯ ವೇಗದಲ್ಲಿ ನೀರಿಗೆ ಬೆಂಕಿ ಎಂದು ಭಾವಿಸಲಾಗುವುದಿಲ್ಲ. ಶಾಲಿವಾಹನನು ಮಣ್ಣಿನ ಗೊಂಬೆಗಳಿಂದ ವಿಕ್ರಮನನ್ನು ಜಯಿಸಿದ್ದಂತೆ ಈ ಕಾಲದಲ್ಲಿ ಚರಕದಿಂದ ಸ್ವರಾಜ್ಯವನ್ನು ತರಲಾದೀತೆಂದು ಭಾವಿಸುವುದು ಭಕ್ತಿ ಸಾಮ್ರಾಜ್ಯದಲ್ಲಿ ಮಾತ್ರ ಸಾಧ್ಯವಾದ ಸಂಗತಿಯು. ಇರಲಿ. ಈ ಭ್ರಮಪ್ರಮಾದಗಳು ಹೇಗೂ ಇರಲಿ, ಲೋಕಮಾನ್ಯಟಿಳಕರು ಗತಿಸಿದ ಮೇಲೆ ಹಿಂದೀರಾಷ್ಟ್ರವು ಮಧ್ಯದ ಐದು ವರ್ಷಗಳಲ್ಲಿ ಯಾವ ಯಾವ ಸಾಧನಗಳನ್ನು ಕೈಕೊಂಡಿತೊ ಅವುಗಳ ನಿಜಸ್ಥಿತಿಯು ಈಗ ಸರಿಯಾಗಿ ಜನಗಳಿಗೆ ಗೊತ್ತಾಗಿ ರಾಜಕಾರಣದ ತಿರುಳಾದ ಪ್ರತಿಯೋಗಿ ಸಹಕಾರಿತೆಯ ಕಂಬಿಗಳ ಮೇಲೆಯೆ ಚಳವಳದ ಗಾಡಿಯು ಬಂದು ತಲಪಿದೆ.

ಪುಣೆಯಲ್ಲಿ ಮೊನ್ನೆ ದಿವಸ ತಿಲಕಮಂದಿರವನ್ನು ತೆರೆಯುವಾಗ ನಾಮದಾರ ಖಾಪರ್ಡೆಯವರಾದರೂ ಇದೆ ಸಂಗತಿಯನ್ನು ಒತ್ತಿ ಹೇಳಿರುವರು. ಲೋಕದೊಳಗಿನ ಅಭಿಯುಕ್ತರ ವ್ಯವಹಾರವು ಪ್ರತಿಯೋಗಿ ಸಹಕಾರಾತ್ಮಕವಾಗಿಯೆ ಇದೆ. ಅದು ಸ್ವಾಭಾವಿಕವಾದ ಪ್ರವೃತ್ತಿಯಾಗಿದೆ.

"ತೀಕ್ಷ್ಣಾದುದ್ವಿಜತೇ ಮೃದೌ ಪರಿಭವತ್ರಾಸಾನ್ನ ಸಂತಿಷ್ಠತೇ" ಎಂದರೆ ರಾಜಲಕ್ಷ್ಮಿಯು ಕಠಿಣ ಪುರುಷನಿಂದ ಉದ್ವಿಗ್ನಳಾಗಿ ಹೊರಡುತ್ತಾಳೆ, ಮೆತ್ತಗಾಗಿರುವವನಲ್ಲಿ ಆಗಾಗ್ಗೆ ಪರಾಜಯವು ಬರುವ ಭೀತಿಯಿಂದ ನಿಲ್ಲುವುದಿಲ್ಲವೆಂದು ಮುಂತಾದ ರೀತಿಯಿಂದ ಮುದ್ರಾರಾಕ್ಷಸದಲ್ಲಿ ಹೇಳಿದ ಮೇರೆಗೆ ಸಹಕಾರ ಅಸಹಕಾರ ಇವು ಚಳವಳದ ಸಿದ್ಧಿಗೆ ಆಸ್ಪದವಲ್ಲ. ಮಧ್ಯವರ್ತಿಯಾದ ಪ್ರತಿಯೋಗಿ ಸಹಕಾರವೆ ಕೇಂದ್ರವಾಗಿದೆ. ಆದ್ದರಿಂದ ಹಿಂದೀದೇಶವು ಇನ್ನುಮುಂದೆ ಅದನ್ನೆ ಅನುವರ್ತಿಸಿ ಜನ್ಮಸಿದ್ಧಹಕ್ಕಾದ ಸ್ವರಾಜ್ಯವನ್ನು ಬೇಗನೆ ಪಡೆಯಲೆಂದು ಪ್ರಾರ್ಥಿಸಿ ನಾವು ಈ ಲೇಖವನ್ನು ಮುಗಿಸುವೆವು.

ಸ್ಫುಟವಿಚಾರಗಳು.

೧. ಮಧ್ಯಪ್ರಾಂತದ ಕೌನ್ಸಿಲಿನ ಅಧಿವೇಶನವು ಪ್ರಾರಂಭವಾಗಿದೆ. ಈ ಕೌನ್ಸಿಲಿಗೆ ಈಗ ಮಂತ್ರಿಗಳಿಲ್ಲ. ಅವರ ಸಂಬಳವನ್ನು ನಿರಾಕರಿಸಿದ್ದರಿಂದ ಮಂತ್ರಿಗಳು ನಿವೃತ್ತರಾಗಿದ್ದಾರೆ. ಆದ್ದರಿಂದ ಕೌನ್ಸಿಲು ಮುಚ್ಚಲ್ಪಟ್ಟಿತ್ತು. ಪುನಃ ಅದರ ಅಧಿವೇಶನವು ಈಗ ಪ್ರಾರಂಭವಾಗಿದೆ. ಮಧ್ಯ ಪ್ರಾಂತದ ಗವರ್ನರರಾದ ಸರ್ ಮೊಂಟೆಗ್ಯು ಬಟ್ಲರರ ಪ್ರಾಸ್ತಾವಿಕ ಭಾಷಣ

ಆರೋಗ್ಯ ಚಂದ್ರಿಕೆ.

ಮದ್ರಾಸ್.

ಸಂಪಾದಕರು: ಡಾಕ್ಟರ್ ಯು. ರಾಮರಾವ್, ಎಲ್. ಎಮ್. ಸಿ. ಎಫ್. ಎಮ್. ಯು. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಚಿಕಿತ್ಸೆದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವುದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ.

ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ.

ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವುವು.

'ಹೆಲ್ತ್' ಎಂಬ ನಮ್ಮ ಇಂಗ್ಲಿಷ್ ಮಾಸಪತ್ರಿಕೆಯನ್ನೋದಿ ಸಂತೋಷಿಸಿದ ಅನೇಕ ದೊಡ್ಡ ಮನುಷ್ಯರ ಪ್ರೋತ್ಸಾಹದ ಮೇಲೆ ಈ ಕನ್ನಡ ಪತ್ರಿಕೆಯನ್ನು ಹೊರಡಿಸಿದೆ.

ಅದರ ಸಂಪುಟ ೨ ಮತ್ತು ೧೧ನೇಯ ನವಂಬರ ೧೯೨೪ ಸಂಚಿಕೆಯಲ್ಲಿ ಕಾಣಿಸಿರುವ ವಿಷಯಗಳು.

ಮುಖಚಿತ್ರ:—ಪರ್ವತವಾಸಿನಿಯಾದ ಒಬ್ಬ ರೂಪವತಿ.
ಶ್ವಾಸಕ್ರಮ ಅಥವಾ ಪ್ರಾಣಾಯಾಮವು.
ಹುಣಸೇಹಣ್ಣಿನ ಆಹಾರಗುಣಗಳು ಮತ್ತು ಔಷಧಗುಣಗಳು.
ಕಾಲುನಡೆಯೇ ಉತ್ತಮವಾದ ವ್ಯಾಯಾಮವು.
ಜೇನಿನಲ್ಲಿರುವ ಗುಣಗಳು.
ಹಲ್ಲುಗಳ ರಚನೆ, ಪ್ರಯೋಜನ, ಕೆಲಸ ಮುಂತಾದವು.
ಮದ್ಯಪಾನಕಗಳಿಂದ ಆರೋಗ್ಯಕ್ಕೆ ಉಂಟಾಗತಕ್ಕ ಹಾನಿ.
ಅಂಗಸಾಧನೆ ಮತ್ತು ಬುದ್ಧಿವ್ಯವಸಾಯ (ವಿದ್ಯಾಭ್ಯಾಸ).
ಗಾಯಗಳು, ಮತ್ತು ಉಳುಕು ಮುಂತಾದವು, ಅವುಗಳ ಚಿಕಿತ್ಸೆ.
ನವನಾಗರಿಕ ಪ್ರಪಂಚಕ್ಕೆ ಸಹಜವಾದ ದೂರು ಕೆಡುಕುಗಳು.
ಒಬ್ಬ ಉಪವಾಸಿಯ ಅನುಭವ.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವುವು. ಆರೋಗ್ಯಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ ರೂ. ೧—೮—೦; ಬಿಡುಪತ್ರಿಕೆ ಒಂದಕ್ಕೆ ರೂ. ೦—೨—೦. ಹಿಂದಿನ ಸಂಚಿಕೆಗಳು ಕೂಡ ದೊರಿಯುವವು.

ಚಂದಾದಾರರಾಗುವವರು ವಿ. ಪಿ. ಮೂಲಕವಾಗಿ ತರಿಸಿಕೊಳ್ಳುವದಕ್ಕಿಂತಲೂ ಹಣವನ್ನು ಮುಂಗಡವಾಗಿ ಕಳುಹಿಸುವುದು ಲಾಭಕರ. ಮಾದರಿಗೆ ಪತ್ರಿಕೆಯನ್ನು ಅಪೇಕ್ಷಿಸುವವರು 'ಆರೋಗ್ಯ ಚಂದ್ರಿಕೆ'ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು.

ಪತ್ರವ್ಯವಹಾರಕ್ಕೆ: 'ಆರೋಗ್ಯ ಚಂದ್ರಿಕೆ'
೩೨೩ ತಂಬುಚೆಟ್ಟಿ ಬೀದಿ, ಮದ್ರಾಸ್.

ತುಳು ಪಾಡ್ದನಗಳು.

ಬೊಬ್ಬರ್ಯ, ಕಲ್ಲುರ್ಟಿ-ಕಲ್ಕುಡ, ದೈಯ್ಯೊಂಗುಳು—ಕೋಡಕಿನಾರ್, ಮುಂಡತ್ತಾಯ ಪ್ರತಿ ಒಂದಕ್ಕೆ 2 ಆಣೆ. 11½ ಆಣೆ ಟಪ್ಪಾಲು ಚೀಟು ಕಳುಹಿಸಿದರೆ 5 ಪುಸ್ತಕಗಳು ಕೂಡಲೇ ಕಳುಹಿಸಲ್ಪಡುವವು.

ವಿಳಾಸ: ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಸಾರಸ್ವತ.

ಕನ್ನಡ ಮತ್ತು ಕೊಂಕಣಿ ಭಾಷೆಗಳಲ್ಲಿ ಕಳೆದ ವಿಜಯದಶಮಿ ದಿನದಿಂದ ಪ್ರತಿ ದಶಮಿಗೆ ಹೊರಡುವ ಪತ್ರಿಕೆ.

ವಿ. ಎಸ್. ಕಾಮತ್,
ಮೂಲ್ಕಿ ವಾಮನ ಕುಡುವ } ಸಂಪಾದಕರು.

ಮತಸಂಸ್ಥೆ ಮತ್ತು ಸಮಾಜಕ್ಕೆ ಸಂಬಂಧಪಟ್ಟ ಇತರ ಸಂಸ್ಥೆಗಳ ಸುಸಂಘಟನ.
ಸಮಾಜದೊಳಗೆ ಅನ್ಯೋನ್ಯ ಸಾಧನೆ.
ಸ್ತ್ರೀಸಮಾಜಕ್ಕೆ ಉಪಯುಕ್ತವಾದ ವಿಷಯಗಳ ನಿರೂಪಣ
ಮತಭಾವನೆಗಳ ಉಜ್ಜೀವನ ಇತ್ಯಾದಿ ಉದ್ದೇಶಗಳಿಂದ ಈ ಪತ್ರಿಕೆಯು ಹೊರಡಿಸಲ್ಪಡುವುದು. ಸಾರಸ್ವತ ಸಮಾಜವು ಇದಕ್ಕೆ ಪ್ರೋತ್ಸಾಹವನ್ನೀಯಬೇಕಾಗಿ ಪ್ರಾರ್ಥನೆ.

ಚಂದಾಹಣ ಅಂಚೆವೆಚ್ಚ ಕೂಡಾ ರೂ. ೧—೪—೦. ಪೋಷಕರು ರೂ. ೧೦—೦—೦. ಸಹಾಯಕರು ರೂ. ೫—೦—೦. ಮಾದರಿ ಸಂಚಿಕೆಯನ್ನು ಟಪ್ಪಾಲು ಖರ್ಚಿಗಾಗಿ ಅರ್ಧಾಣೆ ಸ್ಟಾಂಪು ಕಳುಹಿಸುವವರಿಗೆ ಉಚಿತವಾಗಿ ಕಳುಹಿಸುವೆವು.

ಕನ್ನಡ ನಾಡಿನಲ್ಲಿ ಪ್ರತಿ ಕಡೆಯಲ್ಲಿಯೂ ಬಾತಮಿದಾರರು ಬೇಕು.

ಎಲ್ಲಾ ಪತ್ರವ್ಯವಹಾರಗಳನ್ನು ಕೆಳಗಿನ ವಿಳಾಸಕ್ಕೆ ನಡೆಸಬೇಕು.

ಯು. ನಾರಾಯಣರಾಯ್ಕ, ಕಾರ್ಯದರ್ಶಿ,
ಸಾರಸ್ವತ, ಉಡುಪಿ.

The Canara Bank Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.
Authorised and fully paid
up Capital Rs. 300,000—0—0
Reserve and other sinking
Funds ,, 259,000—0—0

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸಾಪಿಸಲ್ಪಟ್ಟಿತು.
ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ
ಕೊಟ್ಟ ಮೂಲಧನವು ರೂ. 300,000—0—0
ಕ್ಷೇಮನಿಧಿ ಮತ್ತು ಇತರ ಫಂಡುಗಳು
259,000—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1925.

K. Venkat Rao,
Secretary

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲೂಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೨೫ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ೬ಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೨೫ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲ ಪಂಡಿತರು,

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಪ್ಪ, ಸೋಡಾ ಫಾಕ್ಟರಿ,
ಮಂಗಳೂರು ಟವನಿಗೆ ಮಾತ್ರ.

ವಿದ್ಯಾವಾಚಸ್ಪತಿ
ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ
"ಸಂಕ್ಷೇಪಗೀತೆ"

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ್ಳ, ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದೆ ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೦. ಟಪ್ಪಾಲು ಖರ್ಚು ಕೂಡಿ ಆಣೆ ೧೧ನ್ನು ಮನಿಯಾರ್ಡರಿ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಅದಕ್ಕಿಂತ ಜಾಸ್ತಿ ಖರ್ಚು ತಗಲುವುದು. ರಖಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.

ಪುಸ್ತಕ ದೊರಿಯುವ ವಿಳಾಸ:—
ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು, ಮತ್ತು
ಕೆನರಾಸ್ ಮಿಶ್ಯನ್ ಬುಕ್ ಎಂಡ್ ಟ್ರಾಕ್ಟ್ ಡಿಪೋಜಿಟರಿ,
ಮಂಗಳೂರು.

ಕನ್ನಡಿಗರೆ! **ವಸಂತ.** ಕಣ್ತೆರೆಯಿರಿ!

ಈಗಾಗಲೇ ಎರಡನೇ ಸಂಪುಟವು ಆರಂಭಿಸಲಿದೆ.

ಇತಿಹಾಸನಿಧಿ ಎಂದರೆ . . . . . ವಸಂತ
ಸಮಾಜಸುಧಾರಕನೆಂದರೆ . . . . ವಸಂತ
ಕೈಗಾರಿಕೆಯ ಸಾಮ್ರಾಜ್ಯವೆಂದರೆ . . . ವಸಂತ
ಕರ್ನಾಟಕ ಭಾಷಾಸೇವಕನೆಂದರೆ . . . ವಸಂತ
ದೇಶವಿದೇಶ ಬಂಧುವೆಂದರೆ . . . . ವಸಂತ
ಆಡಂಬರಿಗಳ ಭಂಡಾರವೆಂದರೆ . . . ವಸಂತ
ಚಿತ್ತಾಕರ್ಷ ಚಿತ್ರಶಾಲೆಯೆಂದರೆ . . . ವಸಂತ
ದೇಶಭಕ್ತನೆಂದರೆ . . . . . ವಸಂತ

"ಇಂತಹ ವಸಂತನು ಯಾರಿಗೆ ಬೇಕು,
ಯಾರಿಗೆ ಬೇಡ?

48 ([illegible]) ಪುಟಗಳನ್ನುಳ್ಳ ಈ ಪತ್ರಿಕೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3—4—0 ಮಾತ್ರ.

ವ್ಯವಸ್ಥಾಪಕ,
ವಸಂತ ಕಾರ್ಯಾಲಯ,
ಕುಂದಾಪುರ, ದಕ್ಷಿಣ ಕನ್ನಡ.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀಕಾಶೀ, ಗಯಾ, ಪ್ರಯಾಗ, ಹರಿದ್ವಾರ ಬದ್ರಿನಾರಾಯಣ ದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರ ಕಡೆಯಿಂದ ಅನುಭವ ತೆಗೆದು ಪ್ರತಿಯೊಂದು ಸಿದ್ಧಮಾಡಿಕೊಂಡು ಬರೆದಿರುವರು. ೧ನೇದು ಮಂತ್ರಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರಪ್ರಯೋಗದಿಂದಲೂ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವು ಇದೆ. ೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳು ಹೊರಡುವಿಕೆ, ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ. ೩ನೇದು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನು ಅನುಭವ ತೆಗೆದುಕೊಂಡು ತಿಳಿಸಿರುವರು. ೪ನೇದು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಬಾವಾಜಿಗಳ ಚುಟ್ಕಾ ಸಹ, ಇದರಲ್ಲಿ ಉಂಟು. ಇದು ಪ್ರತಿಯೊಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷಧ ಮಾಡುವ ಕ್ರಮವನು ಚೆನ್ನಾಗಿ ಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಳಾಸವು ತಿಳಿಸಿರುವರು. ೫ನೇದು ಯಂತ್ರ ಪ್ರಕರಣದಲ್ಲಿ ವಶೀಕರಣ ಗ್ರಹಪೀಡಾ ನಿವಾರಣ ಭೂತಪ್ರೇತ, ಪಿಶಾಚಿ, ಬ್ರಹ್ಮರಾಕ್ಷಸ, ವಗೈರೆ ನಿವಾರಣವಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು, ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರದಿರುವರು. ಈ ಗ್ರಂಥವು ಹತ್ತರ ಇದ್ದ ಬಳಿಕ ಎಲ್ಲಾ ದೇವಾನು ದೇವತೆಗಳು ಭೃತ್ಯಗಳೊ ವೈದ್ಯರೂ ಜೋತಿಷ್ಯರು, ಮಾಂತ್ರಿಕರು ತಾಂತ್ರಿಕರೂ ಮನೆಯೊಳಗೆ ಇದ್ದ ಹಾಗೆ ಆಗುತ್ತದೆ. ಇಂಥ ಗ್ರಂಥವು ಯಾರು ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿಯೊಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆ ಶೀರ ಕಡಿಮೆಮಾಡಿ ಇರುವದು. ೨—೮—೦ ಟಪ್ಪಾಲು ಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ ನಾಟಕ ಕಾವ್ಯ, ಕಥೆಗಳು, ಯಕ್ಷಗಾನ, ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ:—
ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

ಜ್ಯೋತಿಷ್ಯ ಸಂಗ್ರಹ.

(1) ಬೃಹಜ್ಜಾತಕ ... ...
(2) ಉಮಾಮಹೇಶ್ವರ ಸಂವಾದ ಎಂಬ ಜ್ಯೋತಿಷ್ಯ ಕಾಲಚಕ್ರ
(3) ಕೇರಳ ಪ್ರಶ್ನೆ ... ...
(4) ಪ್ರಶ್ನೋತ್ತರ ರತ್ನಮಾಲಿಕಾ ... ...
(5) ನವನೀತಾರಿಷ್ಟವು ... ...
(6) ಷಟ್ಪಂಚಾಶತ್ ಗ್ರಂಥ ... ...
(7) ನಕ್ಷತ್ರ ಚೂಡಾಮಣಿ ಗ್ರಂಥ ... ...
(8) ಮುಹೂರ್ತಪದವೀಗ್ರಂಥ ... ...
(9) ಅಷ್ಟದಿಕ್ಪಾಲಕ ಮಂಗಳಾಷ್ಟಕಗಳು ... ...
(10) ಕಾಲನಿರ್ಣಯಾಭ್ಯೋದಯಂ ಗ್ರಂಥ ... ...
(11) ಸದ್ವ್ಯಾಖ್ಯಾನ ಕಾಲಾಮೃತ... ... ...

— ಪ್ರಸಂಗದ ಪುಸ್ತಕಗಳು. —

(1) ಸೇತು ಬಂಧನ ... ...
(2) ವಸಿಷ್ಠ ಪುರಾಣ ... ...
(3) ಇಂದ್ರಜಿತು ಕಾಳಗ ... ...
(4) ಚಂಡಭೀಮ ... ...
(5) ಮೈದುನರಾಮನ ಚರಿತ್ರೆ ... ...
(6) ಭಾಮಿನಿ ಷಟ್ಪದಿ ಚೋರ ಕಥೆ ... ...
(7) ಕುಮಾರ ರಾಮನ ಕಥೆ ... ...
(8) ಕೃಷ್ಣದಾನಾಮೃತ ... ...
(9) ಶ್ರೀಕೃಷ್ಣ ಸತ್ಯಭಾಮ ಸಂವಾದ ... ...
(10) ಚಿತ್ರಕೇತು ರಾಜನ ಕಥೆ ... ...
(11) ಬಕಾಸುರ ವಧೆ ... ...
(12) ಬಾಣಾಸುರನ ಕಥೆ ... ...
(13) ರಂಭಾಶುಕ ಸಂವಾದ ... ...
(14) ರುಕ್ಮಿಣೀ ಪರಿಣಯ ... ...
(15) ರಾವಣೋದ್ಭವ ಯಕ್ಷಗಾನ ... ...
(16) ಸಭಾ ಲಕ್ಷಣವು ... ...
(17) ಶ್ರೀ ಕೃಷ್ಣ ದೀಪಾಶ್ವಮೇಧ ಕಥಾ ... ...
(18) ಚಂದ್ರಮೌಳಿ ಕಾಳಗ ... ...
(19) ಚಿತ್ರವಿಚಿತ್ರ ಕಾಳಗ ... ...
(20) ಯಕ್ಷಗಾನ ಸಾರಂಗಧರನ ಕಥೆ ... ...
(21) ,, ಶನಿದೇವರ ಮಹಾತ್ಮೆ ... ...
(22) ,, ಹರಿಶ್ಚಂದ್ರನ ಕಥೆ ... ...
(23) ಯಕ್ಷಗಾನ ಲಕ್ಷಾಗೃಹ ಕಥೆ ... ...
(24) ,, ಚೋರ ಕಥೆ ... ...
(25) ,, ಪಾರ್ವತಿ ಕಾರವಂಶ ಕಥೆ ... ...
(26) ,, ಗೋವಿನ ಚರಿತ್ರೆ ... ...
(27) ,, ದುಶ್ಯಾಸನ ಕಥೆ ... ...
(28) ,, ಸಾನಂದ ಗಣೇಶ್ವರ ಕಥೆ ... ...
(29) ,, ಅಂಗದ ಸಾಧನ ... ...

— ಭಜನೆಯ ಪುಸ್ತಕಗಳು. —

(1) ಉಡುಪಿಕ್ಷೇತ್ರ ಮಹಾತ್ಮೆ ... ...
(2) ಹನುಮದ್ರಾಮಾಯಣ ... ...
(3) ಅಧ್ಯಾತ್ಮ ವಿಚಾರ ... ...
(4) ಭಕ್ತಿಮಹಿಮೆ ... ...
(5) ಪ್ರಬಂಧ ಮುಕ್ತಾವಳಿ ... ...
(1) ಹರಿಕೀರ್ತನಾಮೃತಸಾರ ... ...
(2) ಹರಿನಾಮಾಮೃತಂ. ... ...
(3) ರುಕ್ಮಿಣೀ ಕಲ್ಯಾಣ ... ...
(4) ಮಂಗಳ ಗೌರೀಹಾಡು ... ...
(5) ಉದ್ದಾಲೀಕನ ಹಾಡು ... ...
(6) ಯಕ್ಷಗಾನ ಗಿಳೀ ಹಾಡು ... ...
(7) ಕನಕದಾಸ ಕಬೀರದಾಸರ ಕೀರ್ತನೆಗಳು ...
(8) ಬೀಗರ ಹಾಡು ... ...
(9) ಭಜನೆಯ ಪದಗಳು ... ...

— ವಿವಿಧ ಪುಸ್ತಕಗಳು. —

(1) ಸದಾಚಾರ ವಿವೇಚನೆ ... ...
(2) ಗೋಪಾಲಕೃಷ್ಣ ಗೋಖಲೆ ... ...
(3) ಶ್ರೀಕೃಷ್ಣ ಸೇವಾವ್ರತಂ ... ...
(4) ಪಶ್ಚಾತ್ತಾಪ ಭಾಷ್ಯ ... ...
(5) ಶ್ರೀ ಶ್ರೀಮಹಾ ಭಾಗವತ ... ...
(6) ಉದ್ಧವನ ಚರಿತ್ರೆ ... ...
(7) ಮಧ್ವಾಚಾರ್ಯರು (ಶ್ರೀಮಾನ್) ... ...
(8) ಯತಿರಾಜವಿಂಶತಿ ... ...
(9) ಪರಮಾರ್ಥಶತಕಂ ... ...
(10) ಭಕ್ತಿಸುಮಾಂಜಲಿ ... ...
(11) ಸತ್ಯರಾಜ ಪೂರ್ವದೇಶ ಯಾತ್ರೆಗಳು ...
(12) ಕಾಲನಿರ್ಣಯವ್ಯಾಖ್ಯಾನ ... ...
(13) ಅರೇಬಿಯನ್ ನಾಯ್ಟ್ಸ್ 1000 ಪುಟಗಳ ಮೇಲೆ ಇವೆ.

ಪುಸ್ತಕಗಳು ದೊರೆಯುವ ಸ್ಥಳ :— ಶಾರದಾ ಛಾಪಖಾನೆ,
ರಥ ಬೀದಿ, ಮಂಗಳೂರು.

—ಗೋಡೆಗೆ ತಗಲಿಸುವ
ಹೊಸ ನಮೂನೆಯ—
ಟಿಕ್—ಟಾಕ್

ಎಂಬ ಈ ಗಡಿಯಾರಗಳು ಜರ್ಮನೀ ದೇಶದಲ್ಲಿ ತಯಾರಿಸಿದ್ದು. ಇವು ಕರಾರು ಘಂಟೆಯನ್ನು ತೋರಿಸುವವು. ಇವಕ್ಕೆ ಬೀಗ ಕೊಡಬೇಕಾದಿಲ್ಲ. ಇದರಲ್ಲಿ ಕಾಣುತ್ತಿರುವ ಗುಂಡನ್ನು ಮೇಲಕ್ಕೆ ಎಳೆದರೆ ಸಾಕು. ತನ್ನಷ್ಟಕ್ಕೆ ತಾನೇ ಟಿಕ್—ಟಾಕ್ ಎಂಬ ಶಬ್ದವನ್ನು ಮಾಡುತ್ತಾ ಸರಿಯಾದ ಕಾಲವನ್ನು ತೋರಿಸುವದು. ಇದು ನೋಡುವುದಕ್ಕೆ ಬಹು ಲಕ್ಷಣವಾಗಿರುವ್ವು.

ಕ್ರಯ 1ಕ್ಕೆ ರೂ. 3—0—0
ಪೀಟರ್ ವಾಚ್ ಕಂಪೆನಿ
ಪೋಸ್ಟ್ ಬಾಕ್ಸ್ ನಂ. 27, ಮದ್ರಾಸ್.

ADVERTISE IN
The Business Directory
OF INDIA, BURMA & CEYLON

A Comprehensive Directory of the various Business-men, Exporters and Importers, Firms, Factories, Mills, Manufacturers, Merchants and Industries of the principal Cities, Ports and Towns of India, Burma and Ceylon.

PUBLISHED ANNUALLY
Rates for Advertisements

¼ Page	Rs.	50.
2 in. Single Column	,,	20.
1 in. Single Column	,,	15.
Name in Bold Types	,,	5.

Price per Copy Rs. 10.
PRINTERS & PUBLISHERS.
Business Directory Co.,
Kanara Press Buildings, MADRAS. E.
Telegrams: "KETHAKI" Phone 540

Just arrived! Look Sharp!
SCREW ELECTRIC TORCH LAMPS &
Pocket Electric Lamps
AVAILABLE
In different varieties, Mother of pearl lamps. Cycle lamps.
NICKEL PLATED WITH SIDE LANCE.
Hammered Brand, with Powerful Bulls-eye lance.
The Mangalore Trading Association,
Car Street, MANGALORE

ಮನುಷ್ಯರಿಗೆ ಮತಿಸ್ಥಿತಿಗಿಂತಲೂ ಹೆಚ್ಚಾದ್ದು ಯಾವುದೂ ಇಲ್ಲ.

ಜನ್ಮದಲ್ಲಿ ಕಷ್ಟಸುಖಗಳು ಅನುಭವಿಸುವುದರಲ್ಲಿ ಅಪಜಯವಿಲ್ಲದೇ ಧನ್ಯನಾಗುವವನಿಗೆ ಮುಖ್ಯ ಸಾಧನ ಮತಿಸ್ಥಿತಿಯೇ ರಾಮಬಾಣವೆಂದು ಹೇಳಬಹುದು.

ಆದರೆ ಪ್ರಸ್ತುತ ನಾವು ಅನುಭವಿಸುವ ಚಪಲಚಿತ್ತದಲ್ಲಿ ಮತಿಸ್ಥಿತಿ ಉಂಟಾಗುವುದು ಸಾಧ್ಯ ಹೇಗೆ? ನಿಮಗೆ ಯಾವವಿಧವಾದ ಚಪಲಚಿತ್ತವಿದ್ದಾಗ್ಯೂ, ನಮ್ಮ ಆತಂಕನಿಗ್ರಹ ಮಾತ್ರೆಗಳನ್ನು ಉಪಯೋಗಿಸಿರಿ. ಈ ಮಾತ್ರೆಗಳೇ ತನ್ನ ಮೆದುಳಲ್ಲಿರುವ ದುರ್ಬಲವನ್ನು ನಿವಾರಿಸಿ, ದೃಢಚಿತ್ತವನ್ನುಂಟುಮಾಡುವುದು.

ಈ 32 ಮಾತ್ರೆಗಳುಳ್ಳ ಡಬ್ಬಿ ಒಂದಕ್ಕೆ ರೂಪಾಯಿ ಒಂದು ಮಾತ್ರ.

ಹಿಂದೂದೇಶದಲ್ಲಿಯೂ ಮತ್ತು ಇತರ ದೇಶಗಳಲ್ಲಿಯೂ ಪ್ರತಿಯೊಂದು ಗೃಹದಲ್ಲಿ ಪ್ರಯೋಜನಕರವಾದ ಒಂದು ಪುಸ್ತಕ ಇರುವುದು. ನಿಮಗೆ ಗೊತ್ತುಂಟೋ? ಆ ಪುಸ್ತಕದ ಹೆಸರೇ

“ಕಾಮಶಾಸ್ತ್ರ.”

ನೀವು ಇದುವರೆವಿಗೂ ಆ ಪುಸ್ತಕದಲ್ಲಿ ವಿವರಿಸಿದ ಭಿನ್ನ ವಿಷಯಗಳನ್ನು ನೋಡದೇ ಇದ್ದ ಪಕ್ಷಕ್ಕೆ, ಈ ದಿನ ನಮಗೆ ಒಂದು ಕಾರ್ಡು ಬರೆದರೆ ಪೋಸ್ಟು ಚಾರ್ಜು ನಿಮಗಿಲ್ಲದೇನೇ, ಆ ಪುಸ್ತಕವನ್ನು ಕಳುಹಿಸುತ್ತೇವೆ.

ಆತಂಕನಿಗ್ರಹ ಔಷಧಾಲಯ,
ನಂಬ್ರ 26, ಬ್ರಾಡ್ವೆ, ಮದರಾಸು.

Agents:—
Messrs RAPHAEL & Co.,
MANGALORE.

ಹೊಸಗ್ರಂಥಗಳು!! ಬೇಗನೇ ತರಿಸಿಕೊಳ್ಳಿರಿ!!

ಕೋಕ ಶಾಸ್ತ್ರವು.

ರಸಿಕ ವಾಚಕ ಮಹಾಶಯರೇ,

ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ, ಸಂಪಾದಿಸಿ, ಅದರಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನಷ್ಟೇ ಶೋಧ ಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ಲೀಷ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿನಿ, ಸ್ತ್ರೀಯ ಇದರಂತೆ ಪುರುಷರಲ್ಲಿಯು ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬುದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನೂ ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ, ವಂಧ್ಯಾದೋಷಗಳ ಚಿಕಿತ್ಸೆಯನ್ನೂ ಸ್ತ್ರೀಯರ ಗೂಢ ರಹಸ್ಯವನ್ನೂ ದಂಪತಿ ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನೂ ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನು ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ.

ಇದರ ಬೆಲೆ ೧—೮—೦, ಟಪ್ಪಾಲು ಹಾಸಲು ೦—೪—೦.

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್.
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ
ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ
ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ವಾಂಸರೂ ನಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ತಮಾನಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನು ಕುರಿತ ಲೆಕ್ಕಗಳೂ ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಅಧಿಕಾರಿಗಳೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪೋಷಕರಿಗೆ	...	ರೂ. 3—0—0
ಇತರರಿಗೆ. ಪಡಸ್ಸಲ್ಕ್ಕೆ ಪೋಸ್ಟೇಜು ಸೇರಿ		,, 2—8—0.
,, ಸ್ಥಳೀಕರಿಗೆ	...	1—8—0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪತ್ರಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿಯಬಹುದು.

ಎಡಿಟರ್,
ಬಿ. ಹನುಮಂತಯ್ಯಗೌಡ,
ಅರ್ಥಸಾಧಕ ಪತ್ರಿಕೆ,
ಅರಳೇ ಪೇಟೆ, ಬೆಂಗಳೂರು ಸಿಟಿ

Edited, Printed & Published by V. S. Kamath at the M. T. A. SHARADA PRESS, MANGALORE.

Registered No. [illegible]

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಶ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ । ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೯. ಮಂಗಳೂರು, ತಾರೀಕು ೧೪ನೇ ಶುಕ್ರವಾರ ಆಗೋಸ್ತು ೧೯೨೫. ಸಂಚಿಕೆ ೩೩.

Th Canara Banking Corporation, UDIPI, Ltd.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office: UDIPI Branch: COONDAPOOR.
ಹೆಡ್ ಆಫೀಸು: ಉಡುಪಿ. ಶಾಖೆ: ಕುಂದಾಪುರ.

ಚಂದಾ ಹಾಕಿ ಯೆತ್ತಿದ ಮೂಲಧನ	ರೂ. 2,25,000—0—0.
ವಸೂಲಾತ್ತ ಮೂಲಧನ	ರೂ. 1,71,875—9—11.
ಕ್ಷೇಮನಿಧಿ ವ ಇತರ ಫಂಡುಗಳು	ರೂ. 64,700—0—0.
ಠೇವಣಾತಿಗಳು	ರೂ. 4,83,945—2—9.

— ವಿನಿಯೋಗ —.

ಗವರ್ನಮೆಂಟು ಪ್ರಾಮಿಸರಿ ನೋಟಿನ ಮೇಲೆ	ರೂ. 25,800—0—0.
ಡಿಮಾಂಡು ನೋಟು ವ ಬಿಲುಗಳ ಮೇಲೆ	ರೂ. 5,92,445—9—4.
ಚಿನ್ನಾಭರಣ ಮುಂತಾದ ಭದ್ರತೆಸೊತ್ತುಗಳ ಮೇಲೆ	ರೂ. 1,11,658—8—6

ಈ ಕೆಳಗಿನ ಠೇವಣಾತಿಗಳನ್ನು ಅಂಗೀಕರಿಸುವುದಲ್ಲದೆ ಇತರ ಬ್ಯಾಂಕುಗಳ ಮೇಲಣ ಡ್ರಾಫ್ಟ್ ಚೆಕ್ಕುಗಳನ್ನೂ ಸಾಹುಕಾರಿ ಹುಂಡಿಗಳನ್ನೂ ವಸೂಲ್ಮಾಡುವ ಮತ್ತು ಇತರ ಎಲ್ಲಾ ತರದ ಬ್ಯಾಂಕಿನ ವಹಿವಾಟುಗಳು ನಡಿಸಲ್ಪಡುವವು.

ಠೇವಣಾತಿಗಳು.

[illegible] ಠೇವಣಾತಿಗಳು:— ಸಾ. ಸೆ. 6½ರಿಂದ 7½ ವರೆಗಿನ ಬಡ್ಡಿಯನ್ನು ಪ್ರತಿ 3 ತಿಂಗಳಿಗೊಮ್ಮೆ ತೆರುವ ಅನುಕೂಲ ವ ಲಾಭದಾಯಕವಾದ ಶರ್ತಗಳ ಮೇಲೆಯೂ

ಕೊಂಚ ಅವಧಿ ಠೇವಣಾತಿಗಳು:— 1 ತಿಂಗಳ ನಂತರ 15 ದಿವಸಗಳ ನೋಟೀಸಿಗೊಳಪಟ್ಟು ಹಿಂತೆಗೆಯಬಹುದಾದ ಠೇವಣಾತಿಗಳನ್ನು ಸಾ. ಸೆ. 5ರ ದರದ ಬಡ್ಡಿ ನಡೆದ ದಿನಗಳಿಗೆ ಕೊಡುವ ಶರ್ತದಿಂದಲೂ

ಚಾಲ್ತಿ ಠೇವಣಾತಿಗಳು:— ದಿನಂಪ್ರತಿ ಇರುವ ಶಿಲ್ಕಿನ ಮೇಲೆ ಸಾ. ಸೆ. 3ರಂತೆ ಬಡ್ಡಿ ತೆರುವ ಶರ್ತದ ಮೇಲೂ

ಸೇವಿಂಗ್ಸ್ ಬ್ಯಾಂಕು ಠೇವಣಾತಿಗಳು:— ಸಾ. ಸೆ. 4½ರ ಬಡ್ಡಿಯ ಮೇಲೂ

ಸಂಚಯ ಠೇವಣಾತಿಗಳು:— ಮಕ್ಕಳ ವಿದ್ಯಾಭ್ಯಾಸ, ಉಪನಯನ, ವಿವಾಹ ಮುಂತಾದ ಶುಭಕಾರ್ಯಗಳಿಗೆ ಅನುಕೂಲವಾಗಿ ನಿಶ್ಚಯವಂತೆ ತಿಂಗಳು 1ರ ರೂಪಾಯಿ 1ರಂತೆ 13-24-45-84-132 ತಿಂಗಳುಗಳಿಗೆ ವಸೂಲುಪಡಕೊಂಡು ಕಂತುಗಳ ಅವಧಿ ಮುಗಿದ ಮೂರು ತಿಂಗಳಲ್ಲಿ ಆಯಾಯ ಅವಧಿಮೇರೆಗೆ ರೂ. 13-8-0, ರೂ. 25-8-0, ರೂ. 50, ರೂ. 102-8-0 ಮತ್ತು 182-8-0ನ್ನೂ ಅದೇ ಮೇರೆಗೆ ತಿಂಗಳು 1ರ ರೂಪಾಯಿ 1ರ ಗುಣವೃದ್ಧಿ ಮೊಬಲಗನ್ನು ತೆತ್ತಲ್ಲಿ ಆಯಾಯ ಮೊಬಗಿನ ಅದೇ ಗುಣವೃದ್ಧಿ ಮೊಬಲಗನ್ನು ತೆರುವ ಶರ್ತದ ಮೇಲೂ ಅಂಗೀಕರಿಸಲ್ಪಡುವವು.

ಹೆಚ್ಚಿನ ಮಾಹಿತಿ ಸೆಕ್ರೆಟರಿಯವರಿಂದ ತಿಳಿಯಬಹುದು.

ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಆಫೀಸು, ಉಡುಪಿ, ತಾ. 30—6—1925.
ನಯಂಪಳ್ಳಿ ಆನಂದ್ರಾವ್, ಸೆಕ್ರೆಟರಿ ಮತ್ತು ಒಫಿಸಿಯೆಟಿಂಗ್ ಮೆನೇಜರ್.

ಮೂರು ದಿವಸಗಳಲ್ಲಿ ಗುಣಸಿಕ್ಕದಿದ್ದರೆ ಔಷಧಿಯ ಕ್ರಯ ವಾಪಾಸು.

ಜೀರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ, ಪರಮಾನಂದ ಮೊದಲಾದ ಸುಖಜೀವನಕ್ಕೆ ಬೇಕಾದ ಆರೋಗ್ಯದಾಯಿನಿ.

ಲೋಕಪ್ರಸಿದ್ಧವಾದದ್ದು! ಅನುಭವಸಿದ್ಧವಾದದ್ದು!!

ಟ್ರೇಡ್ ಮಾರ್ಕ್] ಅಗಸ್ತ್ಯ [ನೋಡಿ ಕೇಳ್ಕೊಳ್ಳಿರಿ.

ಮನ್ಮಥ ಚಿಂತಾಮಣಿ ಲೇಹ.

(ರಿಜಿಸ್ಟರ್ ಆದದ್ದು)

ಆಬಾಲವೃದ್ಧ ಸ್ತ್ರೀಪುರುಷರ ಅನೇಕ ರೋಗಗಳ ಮೇಲೆ ಗುಣಕಾರಿಯಾದದ್ದು.

ಮೇಹವಿಕಾರವಿದ್ದವರಿಗೂ, ನಿದ್ರೆಇಲ್ಲದವರಿಗೂ, ಸ್ವಪ್ನೇಂದ್ರಿಯವಾಗುವ ಯುವಕರಿಗೂ ಜ್ಞಾನಿಸುಜ್ಞಾನಿಗಳಿಗೂ ಉಪಯೋಗವುಳ್ಳ ಪರಮಾನಂದ ಔಷಧಿ.

1 ಸೇರು [illegible] ದಿವಸಕ್ಕೆ ಸೇವಿಸಬಹುದು.

1 ಸೇರು ಡಬ್ಬಿ 1ಕ್ಕೆ 3-0-0. ½ ಸೇರು ಡಬ್ಬಿ 1ಕ್ಕೆ 1-9-0.

ವಿ. ಪಿ. ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿಗೆ ಬರೆಕೊಳ್ಳಿರಿ.

ವಿಳಾಸ— ದೇವಣ್ಣ ನಾರಾಯಣ ಶೇಟ್,
[illegible]
[illegible] (ದ. ಕ.)

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ.

450 ಪುಟಗಳು ಎಮ್. ಗಣಪತಿರಾವ್ ಐಗಳ್ ಇವರಿಂದ ರಚಿತವಾದದ್ದು. ಕ್ರಯ ರೂ. 2-4-0

ಮಾರಾಟಕ್ಕೆ ಸಿದ್ಧವಾಗಿವೆ — ತುಳು ಪಾಡ್ದನಗಳು — ಮಾರಾಟಕ್ಕೆ ಸಿದ್ಧವಾಗಿವೆ.

ದೈಯ್ಯೊಂಗುಳು, ಕಲ್ಲುರ್ಟಿ—ಕಲ್ಕುಡ, ಕಣಂದೂರು ದೈಯ್ಯೊಂಗುಳು, ಮುಂಡತ್ತಾಯ, ಬೊಬ್ಬರ್ಯ.

ಸುಲಭ ದರಗಳು — ಶಾಲಾ ಪುಸ್ತಕಗಳು — ರಖಂ ಕೊಂಡುಕೊಳ್ಳುವವರಿಗೆ ಯೋಗ್ಯ ಡಿಸ್ಕೌಂಟ್.

ಅಜ್ಜಿಕಥೆಗಳು:—ಮೂರು ಕರಡಿಗಳು; ಹೇನುಸತ್ತು ಕಾಗೆ ಬಡವಾಯಿತು; ಅರ್ಗಣೆ ಮುದ್ದೆ; ಇಲಿಗಳ ಥಕ್ಕ ಥೈ; ಅಂಗಳ ದುಗ್ಗು; ಸಿಗಡಿ ಯಾಕೆ ಒಣಗಲಿಲ್ಲ; ಗುಡುಗುಡು ಗುಮ್ಮಟ ದೇವರು; ಮೆಣಸಿನ ಕಾಳಪ್ಪ; ಒಡ್ಡನ ಓಟ; ಹೊಸ ಕನ್ನಡ ಪುಸ್ತಕ ಭಾಗ ೧; ಹೊಸ ಕನ್ನಡ ಪುಸ್ತಕ ಭಾಗ ೨; ಕನ್ನಡ ಪದ್ಯಗಳು; ಮಗ್ಗಿ ಪುಸ್ತಕ; ಅಜಿತಕುಮಾರ; ಪದ್ಯ ರತ್ನಾವಳಿ, ಎಕ್ಸರ್ಸೈಜ್ ಮತ್ತು ನೋಟು ಪುಸ್ತಕಗಳು, ಕಾಪಿ ಪುಸ್ತಕಗಳು, ಡ್ರಾಯಿಂಗ್ ಪುಸ್ತಕಗಳು

ಇತರ ಪುಸ್ತಕಗಳು:—ಸಂಕ್ಷೇಪಗೀತೆ, ಕೇತುಭಂಗ, ಹಿಂದೂ ವ್ರತವಿವೇಕ, ಚಂದ್ರಗುಪ್ತ ಚಕ್ರವರ್ತಿ, ಶ್ರೀ ಕೃಷ್ಣಸಂಧಾನ, ಪದ್ಯಪಾಠಗಳು, ಹರಿಕಥಾ ಮೃತಸಾರ ಹರಿನಾಮಸಂಕೀರ್ತನೆ ಸುಧಾಂಮೃತ ಪದ್ಯಗಳು. ಬಂಕಿಪೆಟ್ಟಿಗೆ ತಯಾರಿಸುವ ವಿಧಾನ, ಸಾಬೂನು ತಯಾರಿಸುವ ವಿಧಾನ, ಸ್ವರಾಜ್ಯ ಭಕ್ತಿಲ್ಲಾಸ, ಚರಕಗೀತೆ, ಕೊಂಕಣಿ ಭಾಷೆಯಲ್ಲಿ ಚಂದ್ರಹಾಸ ನಾಟಕ, ಪ್ರಹಲ್ಲಾದ ಚರಿತ್ರ ನಾಟಕ, ಕನ್ನಡ ಮೃಚ್ಛಕಟಿಕ ನಾಟಕ, ಚಂದ್ರಹಾಸಾಭ್ಯುದಯ ನಾಟಕ, ಕೋವಿಲನ್ ಚರಿತ್ರ ನಾಟಕ, ಮಾದರಿ ಉಪನ್ಯಾಸ ಭಾಗ ೧, ೨, ಮತ್ತು ೩.

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು.

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಬಂದ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ, ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 2 ಆಣೆ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

109 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

— ರಥೋತ್ಸವ, ವಿವಾಹ ಉಪನಯನಗಳ ಸಮಯ —

ಸರ್ವರಿಗೂ ಉಡಿಗೆ ತೊಡಿಗೆಗಳು ಬೇಕಾಗುವ ಸಂದರ್ಭ.

ಯಾರು, ಯಾವುದನ್ನು ಎಲ್ಲಿ ಪಡೆಯಬೇಕೆಂಬ ಶಂಕೆಯಿಂದ ವಿಳಂಬ ಮಾಡಬೇಡಿರಿ. ಉಡಿಗೆತೊಡಿಗೆಗಳನ್ನು ಚುನಾಯಿಸಿ ನಿಮಗೆ ಬೇಕಾದ ಯಥಾರ್ಥ ಮಾಹಿತಿಯನ್ನು ಕಳೆದ ಹತ್ತಿಪ್ಪತ್ತು ವರುಷಗಳಿಂದ ಪಡೆದು ನಮ್ಮಲ್ಲಿಯ ವ್ಯಾಪಾರವು ಗಿರಾಕಿಗಳಿಗೆ ಸರ್ವ ದೃಷ್ಟಿಯಿಂದಲೂ ಲಾಭಕರವಾಗಿ ಪರಿಣಮಿಸುವಂತೆ ನವ[illegible] ಸಂಗ್ರಹವನ್ನು ಮಾಡಿರುತ್ತೇವೆ.

ಗುರ್ಪುರ್ಕರ್ ಬ್ರದರ್ಸ್, ರಥಬೀದಿ, ಮಂಗಳೂರು.

ಹೆಡ್ ಆಫೀಸು:—ರಥಬೀದಿ—(ಮೊದಲು ಸುಜೀರ ನಾಗಪ್ಪನಾಯಕ್, ಎಂಡ್ ಕೊ, ಇದ್ದಲ್ಲಿ; ಅಜೀಜುದ್ದೀನ್ ರಸ್ತೆಗೆ ತಿರುಗುವಲ್ಲಿ) ಮಂಗಳೂರು.

ಬ್ರಾಂಚ್ ಆಫೀಸು:—ರಥಬೀದಿ—(ಹಳೇ ತಾಲೂಕು ಕಚೇರಿಯ ವಠಾರಕ್ಕೆ ಸಮೀಪವಿರುವ ಮಳಿಗೆ,) ಮಂಗಳೂರು.

ಈ ದೇಶದ ಪ್ರಖ್ಯಾತಪಟ್ಟ ನೇಯಿಗೆಯ ಕೇಂದ್ರಸ್ಥಳಗಳಾದ—ಬನಾರಿಸ್, ಪೂನಾ, ಅಹಮ್ಮದಾಬಾದ್, ಸುರತ್, ಬೆಂಗಳೂರು, ಧರ್ಮಾವರಮ್, ಕಂಜೀವರಮ್, ಕೊಯಮುತ್ತೂರು, ಮಧುರೆ, ತಂಜಾವೂರು, ಕುಂಭಕೋಣ, ಆರ್ಣಿ, ಪಾಡಿಪೇಟೆ, ಹುಬ್ಬಳ್ಳಿ, ಇಳಕಲ್, [illegible], ಮದ್ರಾಸು ಈ ಪ್ರಾಂತ್ಯಗಳಲ್ಲಿ ತಯ್ಯಾರಾದ

ಜರಿಸೀರೆಗಳು, ಮುಪ್ಪಟಾ, ಜರಿಕಣ, ಪೇಟ, ರೇಶ್ಮೆ ಸೀರೆಗಳು, ಅರಳೆಪೇಟೆ ಸೀರೆಗಳು, ಜಾರ್ಜೆಟ್ ರೇಶ್ಮೆ ಸೀರೆಗಳು, ಜರಿ ಅಂಚಿನ ಸೀರೆಗಳು, ರೇಶ್ಮೆ ಮಡಿಗಳು, ನಿತ್ಯ ಉಪಯೋಗದ ಸೀರೆಗಳು ಬನಿಯನ್, ಕರ್ನಾಟಕ ಮಿಲ್ಸ್‌ನ ವ ಇತರ ಮಿಲ್ಸ್‌ನ ಶರ್ಟಿಂಗ್ ಕೋಟಿಂಗ್.

ಕೈರಾಟೆಯಲ್ಲಿ ತಯಾರಿಸಿದ ನೂಲಿನಿಂದ ಮಾಡಿದ—

ಖದ್ದರ್ ಶರ್ಟಿಂಗ್, ಖದ್ದರ್ ಕೋಟಿಂಗ್, ಖದ್ದರ್ ಟೋಪಿ, ಖದ್ದರ್ ಪಂಚೆ, ಅಂಗವಸ್ತ್ರ, ಇತ್ಯಾದಿ—
ಮುಸಲ್ಮಾನರಿಗೆ ಬೇಕಾದ ನಮೂನೆಯ [illegible]—
[illegible]
[illegible]

ಆರ್. ಮಾರ್ಟಿನ್ಸರ ಲಪ್ತಾ ಎಣ್ಣೆ

ಇದರ ಸುವಾಸನೆಯು, (ಪರಿಮಳವು) ಬಹಳ ಅಂದವಾಗಿಯೂ, ಇರುವುದಲ್ಲದೆ, ಬಹಳ ಹೊತ್ತಿನ ವರೆಗೂ ಇರುತ್ತದೆ. ಈ ಎಣ್ಣೆಯನು ತಲೆಗೆ ಹಾಕಿಕೊಳ್ಳುವುದರಿಂದ ಕಣ್ಣುಗಳು ತಂಪಾಗಿಯೂ, ಶುಭ್ರವಾಗಿಯೂ, ಆಗವುದಲದೆ, ಮೆದುಳು ಚೆನ್ನಾಗಿ ಬೆಳೆಯುತ್ತದೆ. ಇದನು ಪ್ರತಿದಿವಸವೂ ಉಪಯೋಗಿಸುವುದರಿಂದ ಕೂದಲುಗಳು ಕಪ್ಪಾಗಿ ಹೊಳೆಯುವಂತೆ ಮಾಡುತ್ತದೆ. ಕೂದಲುಗಳಲ್ಲಿರುವ ಹೇನುಗಳು ಮುಂತಾದುವು ನಾಶವಾಗಿ ತಲೆಬುರುಡೆಯನ್ನು ಚೆನ್ನಾಗಿ ಬೆಳೆಯುವಂತೆ ಮಾಡುತ್ತದೆ. ಗಡ್ಡ ಮತ್ತು ಮೀಸೆಗಳು ಸಹ ಬೆಳೆಯುತ್ತವೆ. ಇದನ್ನು ಉಪಯೋಗಿಸಿದ ಜನರು ಇದಕ್ಕಿಂತ ಉತ್ತಮವಾದ ಎಣ್ಣೆಯು ಬೇರೆ ಇಲ್ಲವೆಂದು ಹೇಳಿರುತ್ತಾರೆ.

ಆರ್. ಮಾರ್ಟಿನ್ಸರ ಗಿಟೋಡಯಿನ್.

ಗಂಡಸರಿಗೂ ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ, ಅಥವಾ ಹೊಸತಾಗಿದ್ದರೂ ಸರಿ. ಬಿಳುಪು ಹೋಗುವುದು ಉರಿಯುವುದು, ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೆ ಉರಿ ಮೂತ್ರವನ್ನು ಇಳಿಸಿ, ಮೂತ್ರವು ಬಿಳುಪಾಗಿ ನಿರ್ಮಲವಾಗುವದಲ್ಲದೆ ರೋಗದ ಪಟ್ಟನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ.

ಬೆಲೆ ಸೀಸೆ 1ಕ್ಕೆ ರೂ. 2—0—0.

ಆರ್. ಮಾರ್ಟಿನ್ಸರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮು, ಬರಲು ಶ್ವಾಸ, ಸೀತ, ನೆಗಡಿ, ಗಂಟಲುನೋವು, ಎದೆ ನೋವುಗಳನ್ನೂ, ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನಮಾಡಿ ಪರೀಕ್ಷಿಸಿ ನೋಡಿರಿ. ಅನಂತರ ಬೇರೆ ಯಾವ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮುಲಿಗೂ ರಾಣಿಯಾಗಿಯೂ, ಎದೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತಲೆಯಿಕ್ಕದಂತೆ ಮಾಡುತ್ತದೆ.

ಕ್ರಯ ಬಾಟಿ 1ಕ್ಕೆ ರೂ. 1-4-0.

ವಿಳಾಸ:—ಆರ್. ಡಿ. ಕಟ್ಲೆ ಮತ್ತು ಕಂಪೆನಿ,
ನಂಬ್ರ ಬಿ. ಫ್ರಿಯರ್ ರೋಡ್,
ಸಾಂಜ ವರ್ತಮಾನ ಪ್ರೆಸ್,
ಟೋಡಿವಾಲಾ ಬಿಲ್ಡಿಂಗ ಎದುರುಗಡೆ, ಫೋರ್ಟ ಮುಂಬಯಿ.
R. D. Kately & Co.
No. B. Frere Road,
Opposit Sanjvertaman Press,
Todivala Building, FORT BOMBAY

ತ್ವರೆ ಮಾಡಿರಿ! ತಯಾರಾಗಿದೆ!

ನಾಲ್ಕನೇ ದರ್ಜೆಯ
ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ನಾಲ್ಕನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್. ಗಣಪತಿರಾವ್ ಐಗಳ್—ಗ್ರಂಥಕರ್ತರು.

ಮನೋರಂಜಕ ಚಿತ್ರಗಳೂ ಇವೆ.

ಇದರಲ್ಲಿ ಬಾರಕೂರು, ಮಂಗಳೂರು, ಮೂಲಿಕೆ, ಕಾರ್ಕಳ, ಮೂಡಬಿದರೆ, ಸುಬ್ರಮಣ್ಯ, ಉಡುಪಿ, ಬಸರೂರು, ವೇಣೂರು, ಬೈಲಂಗಡಿ, ಧರ್ಮಸ್ಥಳ, ಕೊಲ್ಲೂರು, ಕುಂಬಳೆ, ಜಪಾನದೇಶದ ಜನರು, ಚೀನಾದೇಶದ ಜನರು, ಬರ್ಮಾದೇಶದ ಜನರು, ಯುರೋಪ ಖಂಡದ ಜನರು, ಎಸ್ಕಿಮೊ ಜನರು, ನಿಗ್ರೊ ಜನರು. ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ನಾಲ್ಕನೇ ದರ್ಜೆಯ ಮಕ್ಕಳ ಬಗ್ಗೆ ಉಪಯುಕ್ತವಾಗಿದೆ. ಕ್ರಯ 8 ಆಣೆ.

ಪುಸ್ತಕ ದೊರಕುವ ವಿಳಾಸ:—
ಶಾರದಾ ಛಾಪಖಾನೆ,
ಮಂಗಳೂರು.

ಡಾಕ್ಟರುಗಳು ಭಿನ್ನಾಭಿಪ್ರಾಯಪಡುವಾಗ್ಯೆ ತೀರ್ಮಾನಿಸುವದು ಯಾರು?

ಅಂಥಾ ಸಂದರ್ಭಗಳಲ್ಲಿ ಡೆಂಗ್ಯೂ ಮುಂತಾದ ಜ್ವರಗಳನ್ನು ನಿವಾರಿಸುವಂಥಾ "ಬಾಟ್ಲಿವಾಲರ ಏಗ್ಯುಮಿಕ್ಚರ್"ನ್ನು ಸರಾಗವಾಗಿಯೂ, ಮತ್ತು ಜ್ವರಗಳನ್ನು ಖಂಡಿತವಾಗಿ ನಿಲ್ಲಿಸುವಂಥಾದ್ದು, ಎಲ್ಲಾ ತರದ ತಲೆನೋವುಗಳನ್ನು ಹೋಗಲಾಡಿಸುವಂಥಾದ್ದೂ ಆದ "ಬಾಟ್ಲಿವಾಲರ ಏಗ್ಯುಪಿಲ್ಸ್" ಇದನ್ನು ಉಪಯೋಗಿಸಿರಿ.

ಬಿ. ಎಮ್. ಎಸ್. ಡಾಕ್ಟರುಗಳಿಂದ ಶಿಫಾರಸು ಮಾಡಲ್ಪಟ್ಟಿದ್ದು. ಇದರ ಉಪಯೋಗದಿಂದ ಹೃದಯದ ಮೇಲೆ ಯಾವದೊಂದೂ ಬಾಧಕವಿಲ್ಲ. ಅರ್ಧ ಶತಮಾನದಿಂದ ಹಿಂದೂಸ್ಥಾನ, ಬರ್ಮಾ, ಸಿಲೋನ್, ಆಫ್ರಿಕಾ ಇವುಗಳಲ್ಲಿ ಪ್ರಖ್ಯಾತಪಟ್ಟಿದ್ದಾಗಿರುತ್ತವೆ.

ಅನೇಕ ಹಿಂದೀ ಪ್ರದರ್ಶನಗಳಲ್ಲಿ ಬೆಳ್ಳಿ ಮತ್ತು ಬಂಗಾರದ ಪದಕಗಳನ್ನು ಪಡೆದಿರುತ್ತೆ. [illegible] ಕೂಡ ಅವರ ಮೇಲೆ ಹಣವನ್ನು ಮುಂಗಡವಾಗಿ ಕೊಡುತ್ತಾರೆ. ಬಡ ಮತ್ತು ಮಧ್ಯಮ ತರಗತಿಯ ಜನರಿಗೆ ವರಪ್ರದಾನವಾಗಿದ್ದು ಸಂಚಾರ, ಪ್ರಯಾಣ, ದೇಶಾಟನೆಗಳ ಸಮಯದಲ್ಲಿ ಹತ್ತಿರದಲ್ಲಿಟ್ಟುಕೊಳ್ಳತಕ್ಕದ್ದಾಗಿರುತ್ತದೆ.

ಬಾಟ್ಲಿವಾಲರ ಬಾಲಾಮೃತ ಅಥವಾ ಟೋನಿಕ್ ಸಿರಪ್.

ಕೆಮ್ಮನ್ನು ಹೋಗಲಾಡಿಸಿ, ಎದೆನೋವನ್ನು ಶಾಂತಗೊಳಿಸಿ, ಜ್ವರವನ್ನು ಉಪಶಮನಿಸಿ, ನಿದ್ರಾಭಂಗವನ್ನು ಕಡಿಮೆ ಮಾಡಿ ಧಾತುವರ್ಧನವನ್ನು ಮಾಡುವದರಲ್ಲಿ ಅತ್ಯುತ್ತಮವಾಗಿರುತ್ತದೆ. ಕಫವನ್ನು ಒಡೆಸಿ ಮಾಯವಾಗುವಂತೆ ಮಾಡುವದಲ್ಲದೆ ಅದೇ ಸಮಯದಲ್ಲಿ ಒಳ್ಳೇ ಜೀರ್ಣವನ್ನು ಉಂಟುಮಾಡುವುದು. ದರ ಮೊದಲಾದ ಮಾಹಿತಿಯನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಕಾರಿನಪತ್ತೆ:-CAWASHAPUR, BOMBAY.

Dr. H. L. Batliwala & Co., Ltd.,
Sayani Road, P. O. Cadell Road, Bombay. No. 14.
ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.,
Sayani Road, P. O. Cadell Road, Bombay. No. 14.

ಎಲ್ಲಾ ಕಡೆಗಳಲ್ಲಿ
ಏಜಂಟರು ಬೇಕಾಗಿದ್ದಾರೆ.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟ. ಖ. 9 ಆಣೆ.

ನಮ್ಮ ವಿಳಾಸ:— ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಏಜಂಟರು:— ದಿ. ಊಲನ್ ಮಾರ್ಟ್, ಮಂಗಳೂರು.

OUR RECENT IMPORT IN WRIST WATCHES

Have you used anyone of these Watches?

SEND YOUR ORDER NOW ALL GUARANTEED.

Fashionable wrist wrist Lady's size. Reliable movement Guaranteed.



No. 368.

Handy to wear and looks beautiful. Gives punctual time and with strong movement.

Nickel case Rs. 8—0

High-class Radium dial watch watch with Roman figures.



No. 367.

Can be seen in dark nights. Well fitted with best movement and strong to use. Used by one and all.

Silver case Rs. 9—0.

Radio light wrist watch.



No. 372.

Fitted with the best mechanism and guaranteed to work and keep perfect time for a long time.

Nickel case Rs. 7—8
Electro rolled-gold ,, 9—0

(N. B. In addition to the above, we have good number of varieties of fancy wrist watches, pocket watches. Please write for a descriptive catalogue, which will be sent free)

WHOLESALE IMPORTERS

PETER WATCH COY.,
POST BOX 27, MADRAS

ಶಾಲಿವಾಹನಶಕ ೧೮೪೭ನೆಯ ಕ್ರೋಧನ ಸಂ।ರದ ಶ್ರಾವಣ ಬ। ೧೧ ಶನಿವಾರದಿಂದ ಕ್ರೋಧನ ಸಂ।ರದ ಭಾದ್ರಪದ ಶು। ೨ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೫ನೆಯ ಕರ್ನಾಟಕ ಆಟ.)

ತಾರೀಕು	ವಾರ	ತಿ.	ಘಳಿಗೆ.	ನಕ್ಷತ್ರ	ಘಳಿಗೆ.	ಸೌರಮಾನ	ಸೂರ್ಯ ಉ.	ಸೂರ್ಯ ಅಸ್ತ.
15	ಶನಿ	೧೧	೧೪.೪೫	ಆರ್ದ್ರಾ	೫೯.೧೬	೩೧	6.19	6.48
16	ರವಿ	೧೨	೧೯.೩೦	ಪುನರ್ವಸು	೬೦. ೦	೩೨	6.19	6.48
17	ಸೋಮ	೧೩	೨೪.೨೮	ಪುನರ್ವಸು	೬.೧೪	೧	6.19	6.47
18	ಕುಜ	೧೪	೨೯.೧೬	ಪುಷ್ಯ	೧೨.೩೨	೨	6.19	6.47
19	ಬುಧ	●	೩೩.೪೪	ಆಶ್ಲೇಷಾ	೧೮.೩೦	೩	6.20	6.46
20	ಗುರು	೧	೩೭.೧೬	ಮಘಾ	೨೪. ೨	೪	6.20	6.56
21	ಶುಕ್ರ	೨	೪೦. ೧	ಹುಬ್ಬಾ	೨೯.೧೬	೫	6.20	6.45

ಮಂಗಳೂರಿನ ವಾಯುಸ್ಥಿತಿ.

Date ತಾರೀಕು	Temperature. ಉಷ್ಣ (ಕಾವು) Maximum ಹೆಚ್ಚಾದದ್ದು	Temperature. ಉಷ್ಣ (ಕಾವು) Minimum ಕಡಿಮೆದ್ದು	Rainfall. ಮಳೆ ದಿನದ ಮಳೆ	Rainfall. ಮಳೆ ಜುಮಲಾ ಮಳೆ.
7	82—0	74—8	0—50	—
8	87—2	78—2	2—06	—
9	80—5	74—0	0—72	—
10	83—6	72—8	2—21	—
11	78—7	72—8	4—87	—
12	81—8	73—2	1—33	—
13	86—5	73—6	0—54	—

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ. ಆ.	ವರೆಗೆ ರೂ. ಆ
ಮಸ್ಕತಿ ...	8—12	9— 6
ಗುಡ್ಡು ...	8— 8	8—12
ರಾಶಿ ಸುಗ್ಗಿ ...	7—14	8— 6
ಅನ್ವಲ್ ಬೆಲ್ತಿಗೆ ...	8-- 8	10— 0
ಗುಡ್ಡು ಬೆಲ್ತಿಗೆ ...	8— 0	8— 8
ರಂಗೂನು ಬೆಲ್ತಿಗೆ ಗೋಣಿ ೧ ...	13— 8	14 - 8
ಗೋಧಿ ಗೋಣಿ ೧ಕ್ಕೆ ...	18— 8	21— 0
ಹುರುಳಿಗೋಣಿ ೧ಕ್ಕೆ ...	9— 4	10— 0
ಕಡಲೆಗೋಣಿ ೧ಕ್ಕೆ ...	12— 0	13— 0
ತೊಗರಿಗೋಣಿ ೧ಕ್ಕೆ ...	12— 8	13— 0
ತೊಗರಿಬೇಳೆ ಗೋಣಿ ೧ಕ್ಕೆ ...	14— 0	21— 0
ಉದ್ದುಗೋಣಿ ೧ಕ್ಕೆ ...	14— 0	14— 8
ಹೆಸರುಗೋಣಿ ೧ಕ್ಕೆ ...	14— 0	15— 0
ಊರು ಬೆಲ್ಲ ಖಂಡಿ ೧ಕ್ಕೆ ...	80—	85— 0
ಉಪ್ಪು ಗೋಣಿ ೧ಕ್ಕೆ ...	4— 4	4— 8
ಕೊಬ್ರಿ ಖಂಡಿ ೧ಕ್ಕೆ ...	115- 0	120— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	42— 0	46— 0
ಎಳ್ಳಿಂಡಿ ಖಂಡಿ ೧ಕ್ಕೆ ...	40— 0	—
ಕೊಬ್ರಿ ಎಣ್ಣೆ ಮಣ ೧ಕ್ಕೆ ...	9— 0	10— 0
ಎಳ್ಳೆಣ್ಣೆ ಮಣ ೧ಕ್ಕೆ ...	8— 0	11— 0
ಚಿಮಣಿ ಎಣ್ಣೆ ಪೆಟ್ಟಿಗೆ ೧ಕ್ಕೆ ...	8-15-6	—
ಮೋರಿಸ ಸಕ್ಕರೆ ಮಣ ೧ಕ್ಕೆ ...	4—12	—
ಊರ ಮೆಣಸಿನಕಾಯಿ ಮಣ ೧ಕ್ಕೆ ...	7— 0	—
ಸಾಸಿವೆ ಮುಡಿ ೧ಕ್ಕೆ ...	8—12	—
ಕೊತ್ತಂಬರಿ ಮುಡಿ ೧ಕ್ಕೆ ...	3— 8	4— 4
ಕಾಫಿ ಖಂಡಿ ೧ಕ್ಕೆ ...	345- 0	400-- 0
ಬೆಳಗೋಟು ಅಡಿಕೆ ಖಂಡಿ ೧ಕ್ಕೆ ಹಳಸು ...	245— 0	250— 0
,, ಹೊಸ ಅಡಿಕೆ	240— 0	240— 0
ಕಾಳುಮೆಣಸು ಖಂಡಿ ೧ಕ್ಕೆ ...	220— 0	—
ಯಾಲಕ್ಕಿ ಮಣ ೧ಕ್ಕೆ ...	100—0	— 0
ಗೇರುಬೀಜ ಮುಡಿ ೧ಕ್ಕೆ ...	4— 8	4—9
ಕಬ್ಬಿಣ ಖಂಡಿ ೧ಕ್ಕೆ ...	45— 0	65— 0
[illegible] ತಗಡು ಮಣ ೧ಕ್ಕೆ ...	17-1 2	23— 0
ತಾಮ್ರ ಪಾತ್ರೆಗಳು ಮಣ ೧ಕ್ಕೆ ...	26— 0	—
[illegible] ಸೇರು ೧ಕ್ಕೆ ...	22— 0	
ಹಿತ್ತಾಳೆ ತಗಡು ಮಣ ೧ಕ್ಕೆ ...	18— 8	
ಸತುವು	18— 7	

The Canara Public Conveyance Co., Ltd, Mangalore.

(ESTABLISHED 1914.)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ. ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು
- ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು
- ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
- ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
- ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.

ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ—ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳ ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd, Mangalore. S. K

— ಸಿರಿಗನ್ನಡಂಗೆಲ್ಗೆ —

ಶ್ರೀ ಶಂಕರ ಕರ್ನಾಟಕ ಪುಸ್ತಕ ಭಂಡಾರವೂ
ಶ್ರೀ ವಿದ್ಯಾರಣ್ಯ ಪ್ರಕಾಶಕ ಸಂಸ್ಥೆಯೂ,

ಮಾಳಮಡ್ಡಿ, ಧಾರವಾಡ.

ಕನ್ನಡಿಗರಿಗೆ ಬೇಕಾಗುವ ಎಲ್ಲಾ ತರದ ಕನ್ನಡ ಪುಸ್ತಕಗಳು ನಮ್ಮಲ್ಲಿ ಯೋಗ್ಯ ಬೆಲೆಗೆ ದೊರೆಯುವವು. ವಿದ್ಯಾರಣ್ಯ ಪುಸ್ತಕ ಮಾಲೆಯ ಕೆಳಗಿನ ೧, ೨, ೩, ಪುಸ್ತಕಗಳು ಚಂದಾದಾರರಾಗುವವರಿಗೆ ಅಂಚೆ ವೆಚ್ಚ ಸೇರಿ ೫ ರೂ. ೬ ಆಣೆಗೆ ದೊರೆಯುವವು. ಮುಂದೆ ಹೊರ ಬೀಳುವ ಮಾಲೆಯ ಪುಸ್ತಕಗಳನ್ನು ಚಂದಾದಾರರಿಗೆ ೧ ರೂಪಾಯಿಗೆ ೨ ಆಣೆಯಂತೆ ಕಡಿಮೆ ಬೆಲೆಗೆ ವಿ. ಪಿ. ಮಾಡುವೆವು. ಭಂಡಾರದ ಬೆಲೆ ಪಟ್ಟಿಗಾಗಿ ೪ ಆಣೆ ಅಂಚೆ ಟಿಕೇಟುಗಳನ್ನು ಕಳುಹಿಸತಕ್ಕದ್ದು.

		ರೂ. ಆ. ಪೈ.
೧.	ಕರ್ನಾಟಕ ಸಿಂಹಾಸನ ಸ್ಥಾಪನೆ	೧— ೦—೦
೨.	ಕಥೆಗಳನ್ನೊಳಗೊಂಡ ಬೀರಬಲ್ಲ ಚರಿತ್ರೆ (ಸಚಿತ್ರ)	೧— ೬—೦
೩.	ಛತ್ರಪತಿ ಶಿವಾಜಿ ಮಹಾರಾಜ ,,	೨—೧೨—೦
೪.	ಮಹಾರಾಣಿ ಲಕ್ಷ್ಮೀಬಾಯಿ ಝಾಂಸಿ ,,	೨— ೦—೦
೫.	ಅಕ್ಬರ ಚಕ್ರವರ್ತಿ ಚರಿತ್ರೆ ,,	೧— ೧—೦
೬.	ಚರಿತ್ರೆ ಸಂಗ್ರಹ ಭಾಗ ೧. ,,	೧— ೪—೦
೭.	ತಿಲಕರ ಗೀತಾ ರಹಸ್ಯ	೩— ೮—೦
೮.	ಶ್ರೀ ದಾಸಬೋಧ ಭಾಗ ೧. ೨. ೩. — ...	೨—೧೪—೦
೯.	ರಾಷ್ಟ್ರಸಭೆಯ ಇತಿಹಾಸ	೨— ೮—೦
೧೦.	ವಚನ ಜ್ಞಾನಸಿಂಧು	೪— ೦—೦

ಇವಲ್ಲದೆ ನಮ್ಮಲ್ಲಿ ಎಲ್ಲಾ ತರದ ಕಾಯಿದೆ ಶಾಲೋಪಯೋಗಿ ಪುಸ್ತಕಗಳೂ ನಕಾಶೆ ಚಿತ್ರಗಳೂ ಬರವಣಿಗಳೂ ದೊರೆಯುವವು.

ಶ್ರೀಪಾದ ರಾಮಚಂದ್ರ ದೇಶಪಾಂಡೆ ಬಿ. ಯಸ್. ಸಿ.
ವ್ಯವಸ್ಥಾಪಕ.

ಪ್ರಖ್ಯಾತಿಪಟ್ಟ ಮಂಗಳೂರು ನಸ್ಯ.

ನಮ್ಮಲ್ಲಿ ಉತ್ತಮವಾದ ಹೊಗೆಸೊಪ್ಪಿನಿಂದಲೂ, ಸುಮಾರು ೫೦ ವರ್ಷಗಳ ಅನುಭವದಿಂದಲೂ ತಯಾರಿಸಿದ ನಸ್ಯವು ಯಾವಾಗಲೂ ರಖಂ ಆಗಿಯೂ ಚಿಲ್ಲರೆ ಆಗಿಯೂ ಮಾರಾಟಕ್ಕೆ ದೊರೆಯುತ್ತದೆ.

I ಕ್ಲಾಸ್ ರಾತ್ಲು 1ಕ್ಕೆ ರೂ. 3—0—0.
II ,, ,, ,, 2—12—0.

ವಿ. ಪಿ. ಚಾರ್ಜು ಅಲಾಹಿದ. ಸ್ಯಾಂಪಲು ಅಪೇಕ್ಷಿಸುವವರು ೨ ಆಣೆ ಸ್ಟಾಂಪು ಕಳುಹಿಸಲಿ.

ವಿಳಾಸ:—
ಎಮ್. ಎಸ್. ಬಂಡಾರ್ಕಾರ್ ಎಂಡ್ ಸನ್ಸ್,
ನಸ್ಯ ವ್ಯಾಪಾರಿಗಳು,
ರಥಬೀದಿ, ಮಂಗಳೂರು.

ಬಂದು ನೋಡಿರಿ! ತಿಂದುನೋಡಿರಿ!

ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ
ಪದಕವನ್ನು
ಬಹುಮಾನವಾಗಿ ಪಡೆದಿರುವ
ಎಸ್. ಪಿ. ಆಚಾರ್ಯ
ಇವರಿಂದ ತಯಾರಿಸಲ್ಪಟ್ಟ

ಉಪ್ಪಿನಕಾಯಿಗಳನ್ನು
ಬಂದು ನೋಡಿರಿ! ತಿಂದು ನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ ಶುಂಠಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ
ಬಂದು ನೋಡಿರಿ! ತಿಂದು ನೋಡಿರಿ!

ಇಂಡಿಯನ್ ಸ್ವೀಟ್‌ಮೀಟ್ ಮಾರ್ಟ್.

ಮನೋರಮಾ ಸಿ ಕಾಫಿ ಕ್ಲಬ್.
ಮಾರ್ಕೇಟು ರೋಡು,
ಮಂಗಳೂರು.
ಅಥವಾ
ಸದಾನಂದ ಕಾಫಿ ಕ್ಲಬ್
ರಥಬೀದಿ, ಮಂಗಳೂರು.

NOTICE.

Applications are invited from duly qualified Medical Practitioners for the place of Medical Officer for the Rural Dispensary at Adhur in Kasaragode Taluk. The applications should reach the undersigned before the 30th August 1925.

Kasaragode Taluk Board
Office, Kasaragode,
Dated 4th August 1925.

(*Sd*) S. S. Rama Rao,
President.

ನೋಟೀಸು.

ಮಂಗಳೂರು ಡಿ. ಮುನ್ಸಿಫ್ ಕೋರ್ಟಿನಲ್ಲಿ.

I. A. ನಂಬ್ರ 53/1925 in I. P. 35/1924

ಕೊಂಚಾಡಿ ಅಚ್ಯುತ ಶ್ಯಾನುಭಾಗ—ಮಂಜುನಾಥ ಶ್ಯಾನುಭಾಗರ ಮಗ—ಮಂಗಳೂರು ಶಹರು ಮಣ್ಣಗುಡ್ಡೆಯಲ್ಲಿರುವವ } ಅರ್ಜಿದಾರ.

ಮತ್ತು

1 ಮಿಜಾರ ಅಣ್ಣಪ್ಪ ಅನಂತ ಪೈ ಎಂಡ್ ಸಂನ್ಸ್,
2 ಸುಜೀರ ರಾಯಪ್ಪ ನ್ಯಾಕ್ ಎಂಡ್ ಕೊ,
3 ಶ್ರೀ ಕೃಷ್ಣಾ ಮಿಲ್ಸ್ ಕಂಪೆನಿ,
4 ಕಸ್ತೂರಿ ಸುಬ್ರಾಯ ಪೈ ಎಂಡ್ ಕೊ,
5 ಕುಂಬಳೆ ಅನಂತನಾರಾಯಣ ಪ್ರಭು,
6 ಪಸಾರಿ ಅಪ್ಪುಮಲ್ಯ ಎಂಡ್ ಸಂನ್ಸ್,
7 ಕಂದೇಲ್ ವೈಕುಂಟ ಕಮ್ತಿ ಎಂಡ್ ಸಂನ್ಸ್,
8 ಮಹೇಲ್ ಕೃಷ್ಣನ್ಯಾಕ್ ಎಂಡ್ ಸಂನ್ಸ್,
9 ಪಟ್ಟೆಕಾರ್ ಅಬ್ದು ಸ್ಯಾಬ,
10 ಮಿಜಾರ್ ಸರ್ವೋತ್ತುಮ ಪೈ,
11 ತಾಂಬ್ರದ ವ್ಯಾಪಾರಸ್ಥ ಬ್ರಗಾಂಜ,
12 ಮಿಜಾರ್ ಉಪೇಂದ್ರ ಪೈ,
13 ಮುಲ್ಕಿ ವೆಂಕಟೇಶ ಪ್ರಭು,
14 ಸುರತ್ಕಲ್ ದೇವಪ್ಪ ಕಮ್ತಿ,
15 ಹಂಪನ್‌ಕಟ್ಟೆ ವಿಟ್ಟಪ್ಪ ಶ್ಯಾನುಭಾಗ,
16 ಡೊಂಗರಕೇರಿ ಗೋಪಾಳ ಅನಂತ ಭಟ್ಟ,
17 ಕಾರ್ಕಳ ವೆಂಕಟೇಶ ನಾರಾಯಣ ಭಟ್ಟ,
18 ಇಮಾಮ್ ಸಾಬ } ರೆಸ್ಪೊಂಡೆಂಟರು, ಕ್ರೆಡಿಟರರು,

ಸದರಿ ಅರ್ಜಿದಾರನು ತನ್ನನ್ನು ಪ್ರೊವಿನ್ಸಿಯಲ್ ಇನ್ಸೊಲ್ವೆನ್ಸಿ ಆಕ್ಟಿನ 41ನೇ ಸೆಕ್ಷನ್ ಪ್ರಕಾರ ಡಿಸ್ಚಾರ್ಜುಮಾಡಬೇಕಾಗಿ ಮೇಲಿನ ಕೋರ್ಟಿನಲ್ಲಿ ದಾಖಲುಮಾಡಿದ I. A. ನಂಬ್ರ 58/1925ನೇ ಅರ್ಜಿಯು ತಾ. 26—8—1925ನೇ ದಿವಸ 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ತನ್ಕಿಗೆ ಇಟ್ಟಿರುತ್ತದೆ. ಆದುದರಿಂದ ಆಕ್ಷೇಪವುಳ್ಳ ಸದರಿ ಅರ್ಜಿದಾರನ ಕ್ರೆಡಿಟರರು ತಮ್ಮ ಹೇಳಿಕೆಗಳನ್ನು ಆ ದಿವಸ 11 ಗಂಟೆ ಒಳಗೆ ಜ್ಯಾಹೀರುಮಾಡಿಕೊಳ್ಳತಕ್ಕದ್ದು.

ಮಂಗಳೂರು,
ತಾ. 5-8-'25. } B. Vaikunta Baliga,
ಅರ್ಜಿದಾರನ ಕಡೆ ವಕೀಲ.

ದಕ್ಷಿಣ ಕನ್ನಡ ಜಿಲ್ಲಾ ಒಫೀಶಿಯಲ್ ರಿಸೀವರರ ಕೋರ್ಟಿನಲ್ಲಿ.

ದಿವಾಳಿ ಅರ್ಜಿ ನಂಬ್ರ 52/1925.

ತೋಮಸ್ ಡಿ'ಸೋಜ, ಮಿಂಗೆಲ್ ಡಿ'ಸೋಜರ ಮಗ } ಅರ್ಜಿದಾರ (Debtor)

ಮತ್ತು

ಬಸಪ್ಪ ಮೂಲ್ಯ — ರೆಸ್ಪೊಂಡೆಂಟ್ (Creditors)

ಮೇಲ್ಕಂಡ ತೋಮಸ್ ಡಿ'ಸೋಜನು ಕೋರ್ಟಿನಲ್ಲಿ ದಿವಾಳಿ ಅರ್ಜಿ ದಾಖಲುಮಾಡಿದ್ದಾನೆ. ಸದರಿ ಅರ್ಜಿಯು ತಾ. 5—9—1925ರಲ್ಲು ಬೆಳಿಗ್ಗೆ 11 ಗಂಟೆಗೆ ತನ್ಕಿಗೆ ಇಟ್ಟದೆ. ಸದರಿ ಅರ್ಜಿದಾರನ ಯಾವ ಸಾಲಗಾರರಾಗಲಿ, ವ ಇತರರು ಆಗಲಿ ಈ ಅರ್ಜಿಯಲ್ಲಿ ಆಕ್ಷೇಪಹೇಳತಕ್ಕದ್ದಿದ್ದರೆ ತಾ. 5—9—'25ರಲ್ಲು ಬೆಳಿಗ್ಗೆ 11 ಗಂಟೆಗೆ ಸದರಿ ಕೋರ್ಟಿನಲ್ಲಿ ಪ್ಲೀಡರ್ ಮೂಲಕವಾಗಲಿ ಖುದ್ದಾಗಿಯಾಗಲಿ ತಮ್ಮ ಆಕ್ಷೇಪವನ್ನು ದಾಖಲುಮಾಡಬಹುದಾಗಿ ಈ ಮೂಲಕ ತಿಳಿಸೋಣಾಗಿಯದೆ.

Mangalore,
12—8—1925 } P. S. D'Souza,
Vakil for Petitioner.

WANTED

Depot Managers on Rs. 50+30 office allowance per month for our English Dairy Branch which is going to be opened by the end of this month in each and every taluk head quarters of the South Kanara Dt. and also one assistant on Rs. 30 to 50 per month to the Dairy Superintendent at Mangalore. Rs. 200/- cash security is essential. Noble and influential man will be given preference. Apply sharp with one anna stamp to

M. Sitharama Rao,
Taluk Inspector, in charge,
Dairy Superintendent,
The Mysore Ag. Dry. F. Co. Ltd.,
S. B. S. Lodge,
Jedigudde, MANGALORE, S. K.

Station:
MANGALORE,
13—8—1925.

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಳುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು, ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪ್ಯಾ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪ್ಯಾ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

ಹೆಚ್ಚಿನ ಮಾಹಿತಿಗೆ "ಅರ್ಶ ಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರೆಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಲಿವರ್ ಮೂವ್‌ಮೆಂಟ್ ವಾಚ್.

15 ಮಣಿಗಳಿದ್ದು ರೋಲ್ಡಗೋಲ್ಡ ವಾಚ್.

ಈ ಗಡಿಯಾರ ಕೈಗೆ ಕಟ್ಟುವಂಥಾದ್ದಾಗಿ ಸರಿಯಾದ ಸಮಯವನ್ನು ತೋರಿಸಿ ಚಿರಕಾಲ ವರೇಗೆ ಬಾಳುವುದು.

10 ವರುಷದ ವರೆಗೆ ಬಾಳುವ ಗೆರೆಂಟಿ ಇದೆ. ಕ್ರಯ ರೂ. 17—8—0.

11 ಮಣಿಗಳಿದ್ದು ನಿಜವಾದ ರೋಲ್ಡ ಗೋಲ್ಡ, ಬಂಗಾರದಿಂದ ತಯಾರಿಸಲ್ಪಟ್ಟು 5 ವರ್ಷದ ಗೆರೆಂಟಿ ಇರುವ ವಾಚಿಗೆ ಕ್ರಯ ರೂ. 12—8—0.

18 ಕೆರೆಟ್ ಇಲೆಕ್ಟ್ರೊ ರೋಲ್ಡ ಗೋಲ್ಡ ವಾಚ್ ಕ್ರಯ ರೂ. 7—0—0. ಲಿವರ್ ಮೂವ್‌ಮೆಂಟ್ 10 ಮಣಿಗಳಿದ್ದ ಬಂಗಾರ ಗಿಲ್ಟುವಾಚ್ ಕ್ರಯ ರೂ. 13—8—0.

ಎಲಾರ್ಮ ಜರ್ಮನ್ ಟ್ಯಾಮ್‌ಪೀಸ್ ಕ್ರಯ ರೂ. 5-0-0.
ಡಬ್ಬಲ್ ಎ. „ „ „ 6-0-0.
"ಬಿ" ಟ್ಯಾಮ್‌ಪೀಸ್ ಕ್ರಯ ರೂ. 2—4—0
ಟಿಕ್—ಟಾಕ್ ವಾಚ್ 1ರ ಕ್ರಯ „ 2—12—0

ಕಂಬ್ಯಾಂಡ್ ಪೆಪರ್ ಕ್ಲಿಪ್ ಟ್ಯಾಮ್‌ಪೀಸ ಹಿತ್ತಾಳೆ ಅಥವಾ ನಿಕ್ಕಲ್ ಕ್ರಯ ರೂ. 6—0—0. ಇನೆಮಲ್ ರೂ. 7—0—0. ಫ್ರೆಂಚ್ ಬೆಡ್ ಫ್ಲೊಟೋಗಳು ಡಜನ್ 1ರ ಕ್ರಯ ರೂ. 2—4—0.

Emarald Watch Co.,
P. T. MADRAS.

ಭಾರತೀಯ ಗೋಶಾಲೆ, ಕದ್ರಿ, ಮಂಗಳೂರು.

ಪಡುಮುನ್ನೂರು ರಾಮಚಂದ್ರರಾಯರು ಅಪೇಕ್ಷಿಸುವ ಗೋಶಾಲೆ ಸ್ಥಾಪನೆ ವಿಷಯ ಕದ್ರಿ ಸೈಂಟ್‌ಕ್ಸೇವಿಯಸ್ ಶಾಲೆಯಲ್ಲಿ ಇದೇ ೧೯೨೫ನೇ ಇಸವಿ ಅಗೋಸ್ತು ತಾ. ೯ಕ್ಕೆ ಜರುಗಿದ ಮಹಾಸಭೆಯ ಪ್ರೊಸಿಡಿಂಗ್ಸ್.

ಪರೇಡ್ ಮೈದಾನ [illegible] ಮ. ರಾ. ತಿ. ನರ್ಸಪ್ಪಯ್ಯನವರು ಅಧ್ಯಕ್ಷಸ್ಥಾನವನ್ನು [illegible] ಮ. ರಾ. ಮಾಸ್ಟರ ಎ. ಎಮ್. ಡಿ ಸೋಜರು ಮಾಡಿದ ಸೂಚನೆಯನ್ನು ಮ. ರಾ. ಪ. ರಾಮಚಂದ್ರರಾಯರು ಅನುಮೋದಿಸಿದರು.

ಅಧ್ಯಕ್ಷರ ಅಪೇಕ್ಷೆ ಮೇರೆಗೆ ಮ. ರಾ. ಪ. ರಾಮಚಂದ್ರರಾಯರು ಮಂಗಳೂರಲ್ಲಿ ಗೋಶಾಲೆ, ಗೋರಕ್ಷಣೆಗಳ ಅವಶ್ಯಕತೆ, ಪುಣ್ಯ, ವಗೈರೆಗಳ ವಿಷಯ ದೃಷ್ಟಾಂತ ಗರ್ಭಿತವಾದ ಭಾಷಣೆಯನ್ನು ಮಾಡಿ, ಸದರಿ ಬಗ್ಗೆ ಒಂದು ಗೋಶಾಲೆಯನ್ನು ಕೂಡಲೇ ಸ್ಥಾಪಿಸಬೇಕಾಗಿ ಸಭಿಕರನ್ನು ಕೇಳಿಕೊಂಡರು.

ಎರಡನೇದಾಗಿ "ಮೈಸೂರು ಎಗ್ರಿಕಲ್ಚರಲ್ ಡೆಯಿರಿ ಫಾರ್ಮ ಕಂಪೆನಿ ಲಿಮಿಟೆಡ್" ಎಂಬ ಕಂಪೆನಿಯ ಮಂಗಳೂರು ತಾಲೂಕು ಇನ್ಸ್‌ಪೆಕ್ಟರರಾದ ಮ. ರಾ. ಎಮ್. ಸೀತಾರಾಮರಾಯರು ಅಧ್ಯಕ್ಷರ ಅಪ್ಪಣೆ ಮೇರೆಗೆ ಸದರಿ ಕಂಪೆನಿಯ ಪೂರ್ಣ ಮಾಹಿತಿಯನ್ನು ಸಭಿಕರಿಗೆ ಕೊಟ್ಟರು.

ನಂತರ ಅಧ್ಯಕ್ಷರಿಂದ ಸೂಚಿಸಲ್ಪಟ್ಟ ಈ ಕೆಳಗಿನ ಠರಾವು ಸಭಿಕರಿಂದ ಏಕಮತದಿಂದ ಮಂಜೂರು ಮಾಡಲ್ಪಟ್ಟಿತು.

"ಮ. ರಾ. ಪಡುಮುನ್ನೂರು ರಾಮಚಂದ್ರರಾಯರು ಏರ್ಪಡಿಸಬೇಕೆಂದಿರುವ ಗೋಶಾಲೆ ಸ್ಥಾಪನೆಯಲ್ಲಿ "ಮೈಸೂರು ಎಗ್ರಿಕಲ್ಚರಲ್ ಡೆಯಿರಿ ಫಾರ್ಮ ಕಂಪೆನಿ ಲಿಮಿಟೆಡ್" ಎಂಬ ಕಂಪೆನಿಯ ಏಲೆವಾರಿಯು ಎಷ್ಟರ ಮಟ್ಟಿಗೆ ಸಹಾಯಕರವಾಗಬಹುದು ಎಂದು ನಿರ್ಣಯಿಸುವರೆ ಈ ಕೆಳಗೆ ಹೆಸರು ಕಾಣಿಸಿದ ಮಹನೀಯರ ಒಂದು ಹಂಗಾಮಿ ಕಮಿಟಿಯನ್ನು ಏರ್ಪಡಿಸಿ ಆ ಕಮಿಟಿಯು ಅವರ ರಿಪೋರ್ಟನ್ನು ೨ ಹಪ್ತೆಯೊಳಗೆ ಎರಡನೇ ಮಹಾಸಭೆಯನ್ನು ಕರೆಯಿಸಿ ಅದರ ಮುಂದಿಟ್ಟ ನಂತರ ಸದರಿ ಗೋಶಾಲೆ ಸ್ಥಾಪನೆಯ ಏರ್ಪಾಟಿಗೆ ಕೈಹಾಕತಕ್ಕದ್ದು."

ಹಂಗಾಮಿ ಕಮಿಟಿಯ ಮೆಂಬರರು.

ಮ. ರಾ. ಗಳಾದ ಪಡುಮುನ್ನೂರು ರಾಮಚಂದ್ರರಾವ್, (ಅಧ್ಯಕ್ಷ); ಮುಳಿಯ ತಿಮ್ಮಪ್ಪಯ್ಯ, ಟಿ. ನರ್ಸಪ್ಪಯ್ಯ, ಬಿ. ನರಸಿಂಗರಾವ್, ಎಮ್. ಸೀತಾರಾಮರಾವ್, ಅಮ್ಮಣ್ಣ ಮೇಸ್ತ್ರಿ, ಮಾಸ್ಟರ ಎ. ಎಮ್. ಡಿಸೋಜ (ಕಾರ್ಯದರ್ಶಿ)

ಈ ಕಮಿಟಿಯು ತಮ್ಮ ಸಂಖ್ಯೆಗೆ ಅವಶ್ಯವಿದ್ದ ಬೇರೆ ಮಹನೀಯರನ್ನು ಕೂಡಿಸಬಹುದು. ಅಧ್ಯಕ್ಷರು ಅವರ ಕಡೇ ಭಾಷಣದಲ್ಲಿ ಗೋರಕ್ಷಣೆ ಬಗ್ಗೆ ಒಂದು ಫಂಡನ್ನು ಕೂಡಲೆ ಸ್ಥಾಪಿಸಬೇಕೆಂತ ಸೂಚಿಸಿ ಸದರಿ ಫಂಡಿಗೆ ತಾನು ಖಾಸಗಿ ವಂತಿಗೆಯಾಗಿ ರೂ. ೧೦೦—೦—೦ ಕೊಡುತ್ತೆನೆಂತಲೂ ತನ್ನ ಸ್ನೇಹಿತರನ್ನು ಪ್ರೇರೇಪಿಸಿ ರೂ ೫೦೦—೦—೦ ಜಮೆ ಕೂಡಿಸಿ ಕೊಡುತ್ತೇನೆಂತಲೂ ವಾಗ್ದಾನ ಮಾಡಿದರು. ಸದರಿ ಸೂಚನೆಯು ಸಭಿಕರಿಂದ ಅನ್ಯೋನ್ಯವಾಗಿ ಅನುಮೋದಿಸಲ್ಪಟ್ಟು ಸದರಿ ಗೋರಕ್ಷಣಾ ಫಂಡಿನ ವಂತಿಗೆ ಪಟ್ಟಿಯು ಕೂಡಲೆ ಸಭೆಯಲ್ಲಿ ತೆರೆಯೋಣಾಯಿತು. ವಾಗ್ದಾನ ವಂತಿಗೆ ಜಮೆಯು ರೂ. ೧೩೬—೦—೦ಕ್ಕೆ ಬಂತು. ಅದರ ವಿವರ:

ಮ॥ ರಾ॥ ಗಳಾದ ತಳವಾರ ನರ್ಸಪ್ಪಯ್ಯ ರೂ. ೧೦೦, ಮುಳಿಯ ತಿಮ್ಮಪ್ಪಯ್ಯ ರೂ. ೧೦, ಅಮ್ಮಣ್ಣ ಮೇಸ್ತ್ರಿ, ಎಮ್. ನರ್ಸಪ್ಪ, ಎಮ್. ಸೀತಾರಾಮ ರಾವ್, ಎಮ್. ಬಿ. ದೇವರಾಜಯ್ಯ, ಇವರು ರೂ. ೫ರಂತೆ ಸಾಧುರಾಮ ಚರನ್, ಮಾಸ್ಟರ ಎ. ಎಮ್. ಡಿ'ಸೋಜ, ಇವರು ರೂ. ೨ರಂತೆ. ಪಿ. ರಾಮಚಂದ್ರ ರಾವು, ಡಿ. ವಾಸುದೇವ ಕದ್ರಿ, ಇವರು ರೂ. ೧ರಂತೆ ಜುಮ್ಲಾ ರೂ. ೧೩೬—೦—೦.

ಈ ಗೋರಕ್ಷಣಾ ಫಂಡನ್ನು ರಿಜಿಸ್ಟ್ರಿಯಾಗಿರುವ "ಭಾರತ ಸೇವಾ ಸಮಿತಿ"ಯವರು ಸ್ಥಾಪಿಸಿದ ಕದ್ರಿ ಗೋರಕ್ಷಣಾಶ್ರಮದ ಶಾಖೆಯಾಗಿ ಎಣಿಸಿ ಸದರಿ ಆಶ್ರಮದ ಪರವಾಗಿ ಆ ಕಮಿಟಿಯ ಮೆಂಬರರಲ್ಲೊಬ್ಬರಾದ ಮ॥ ರಾ॥ ಮುಳಿಯ ತಿಮ್ಮಪ್ಪಯ್ಯನವರು ಈ ಫಂಡಿನ ಖಜಾಂಚಿಯಾಗಿ ನೇಮಿಸಲ್ಪಟ್ಟರು. ವಸೂಲಾದ ಹಣವನ್ನು ಅವರು ಸೆಂಟ್ರಲ್ ಕೋ-ಒಪರೇಟಿವ್ ಬೇಂಕಿನಲ್ಲಿ ಚಾಲ್ತಿ ಠೇವಣಾತಿಯಾಗಿ ಇಡತಕ್ಕದ್ದಾಗಿ ನಿರ್ಣಯಿಸಲಾಯಿತು.

ಅಧ್ಯಕ್ಷರಾದ ಮ॥ ರಾ॥ ತಳವಾರ್ ನರ್ಸಪ್ಪಯ್ಯನವರು ಗೋರಕ್ಷಣೆಯಲ್ಲಿ ತೋರಿಸಿದ ಉದಾರ ಗುಣಕ್ಕೂ ಆ ಕೆಲಸ ನಡಿಸಲಿಕ್ಕೆ ಉತ್ತೇಜನಕ್ಕಾಗಿ ಮೂಲ ಧನವಾಗಿ ರೂ. ೧೦೦—೦—೦ ಕೊಡುತ್ತೇನೆಂದು ಮಾಡಿದ ವಾಗ್ದಾನಕ್ಕೂ ಮೆಚ್ಚಿ ಈ ಸಭೆಗೆ ದಯಮಾಡಿ ಬಂದಿದ್ದ ಸಾಧು ರಾಮಚರನ್ ಸ್ವಾಮಿಗಳು ತನ್ನ ಕುತ್ತಿಗೆಯಲ್ಲಿದ್ದ ಜಪಮಾಲೆ ಸರವನ್ನು ಅಧ್ಯಕ್ಷರ ಕೊರಳಿಗೆ ಹಾಕಿದರು.

ಅಧ್ಯಕ್ಷರ ಉದಾರ ಭಾವವನ್ನು ಸಭಿಕರು ಶ್ಲಾಘಿಸಿದ ನಂತರ ಸಭೆಯು ಮುಕ್ತಾಯವಾಯಿತು.

(Sd) T. NARSAPPAYYA,
9—8—'25. *President*.

ನೋಟೀಸು.

ದಕ್ಷಿಣಕನ್ನಡಾ ಡಿಸ್ಟ್ರಿಕ್ಟ ಕೋರ್ಟಿನಲ್ಲಿ,

O. P. No. 62/1925.

ಪರೀಥಮ್ಮಾ—ಪೊಡಿಯ ಯಾನೆ ಹುಸೇನ ಬ್ಯಾರಿ ಮಗಳು, ವ. ಜಿ. ಇಸ್ಮಾಲ್ ಅಬ್ದುಲ್‌ಖಾದರ್ ಬ್ಯಾರಿ ಹೆಂಡ್ತಿ, ಮಂಗಳೂರು ಶಹಾರಿನಲ್ಲಿರುವವಳು } ಅರ್ಜಿದಾರಳು.

ಮತ್ತು

ಪಾತುಮ್ಮಾ ಕೂಡಾ 4 ಜನರು — ರೆಸ್ಪೊಂಡೆಂಟರು

ಕಳೆದ 1906ನೇ ಇಸವಿ ಜುಲ್ಯಾ ತಿಂಗಳಲ್ಲಿ ಯಾ ಶುಮಾರು ಆ ಕಾಲದಲ್ಲಿ ಮೃತಪಟ್ಟ ಪೊಡಿಯ ಯಾನೆ ಹುಸೇನ ಬ್ಯಾರಿಗಳವರಿಗೆ ರಾ॥ ಮಂಗಳೂರ ಶಹಾರಿನಲ್ಲಿರುವ ನಗರ ದಾಮೋಧರ ಶ್ಯಾನುಭಾಗರಿಂದ ಸಲ್ಲತಕ್ಕ ದವೇಜಿನ ಪೈಕಿ ತನ್ನ 7/48ನೇ ಹಿಸೆಬಾಬ್ತು ಬಹಾ ಅಸಲು ಬಡ್ಡಿ ದವೇಜನ್ನು ವಸೂಲು ಮಾಡುವ ಕುರಿತು ವಾರೀಸ ಸರ್ಟಿಫಿಕೇಟು ಕೊಡಬೇಕಾಗಿ ಅಪೇಕ್ಷಿಸಿ ಅರ್ಜಿದಾರಳು ದಾಖಲು ಮಾಡಿದ ಮೇಲಿನ ಅರ್ಜಿಯು ತಾ. 29—8—1925ಕ್ಕೆ ತನಿಕೆಗೆ ಇಟ್ಟಿರುವುದರಿಂದ ಆಕ್ಷೇಪ ಇದ್ದವರು ತಮ್ಮ ಆಕ್ಷೇಪಣೆಗಳನ್ನು ಮೇಲ್ಕಾಣಿಸಿದ ಕೋರ್ಟಿನಲ್ಲಿ ಆ ದಿವಸ ಪೂರ್ವಾಹ್ನ 11 ಗಂಟೆಗೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳಬಹುದು.

Mangalore,
10—8—'25. } B. V. Baliga,
Pleader for Petitioner.

ವಿದೇಶ ವರ್ತಮಾನ.

—ಆಸ್ಟ್ರೇಲಿಯನ್ ಖಲಾಸಿಗಳಲ್ಲಿ ಮುಷ್ಕರವು ಬಿದ್ದಿರುವದು. ಈ ಕಾರಣದಿಂದ ಸುಮಾರು ೭೦ಕ್ಕೂ ಮಿಕ್ಕಿ ಹಡಗುಗಳ ಚಲಾವಣೆಯು ನಿಂತಿದೆ.

—ಬ್ರಿಟಿಷ್ ಕೊಮನ್‌ವೆಲ್ತ ಲೇಬರ ಪರಿಷತ್ತು ಸೇರಿ ಅದರಲ್ಲಿ ಹಿಂದುಸ್ಥಾನಕ್ಕೆ ಸ್ವರಾಜ್ಯವನ್ನು ಕೊಡಬೇಕೆಂಬ ಅರ್ಥದ ಠರಾವು ಪಾಸಾಗಿದೆ.

—ಹೊಸ ಕಂದಾಯವನ್ನು ಪ್ರಾರಂಭಿಸುವ ವಿಷಯವಾಗಿ ಮತಭೇದಗಳುಂಟಾದ್ದರಿಂದ ಜಪಾನಿನ ಮಂತ್ರಿ ಮಂಡಳದವರು ರಾಜೀನಾಮೆಯನ್ನು ಕೊಟ್ಟಿರುವರು.

—ಬರುವ ಮೂರು ವರ್ಷದೊಳಗಾಗಿ ಹೊಸ ಕ್ರೂಝುರುಗಳನ್ನೂ, ಯುದ್ಧದ ಇತರ ಸಾಹಿತ್ಯಗಳನ್ನೂ ತಯಾರಿಸುವದಕ್ಕೆ ಇಂಗ್ಲೆಂಡು ೫೭ ಕೋಟಿ ರೂ. ಖರ್ಚುಮಾಡಲು ನಿಶ್ಚಯಿಸಿದೆ.

—ರೂಹರ ಪ್ರಾಂತದಿಂದ ಫ್ರೆಂಚರು ತಮ್ಮ ಸೈನ್ಯವನ್ನು ಸಂಪೂರ್ಣವಾಗಿ ಹಿಂದಕ್ಕೆ ತರಿಸಿಕೊಂಡಿರುವರು.

—ಇಂಗ್ಲೆಂಡಿನ ಯುವರಾಜರು ದಕ್ಷಿಣ ಅಫ್ರಿಕಾದೊಳಗಿನ ಪ್ರಯಾಣವನ್ನು ಮುಗಿಸಿ ದ. ಅಮೇರಿಕಕ್ಕೆ ಹೊರಟಿರುವರು.

—ಪಾರ್ಲಿಮೆಂಟಿನ ಎರಡೂ ಸಭೆಗಳು ಬರುವ ನವಂಬರ ತಾ॥ ೧೬ರ ವರೆಗೆ ಮುಂದರಿಸಲ್ಪಟ್ಟಿರುವವು.

—ಚೀನಾದೇಶದ ವಿದ್ಯಾರ್ಥಿಗಳಲ್ಲಿ ಬ್ರಿಟಿಷ್ ಸ್ಕೂಲುಗಳನ್ನು ಬಹಿಷ್ಕರಿಸುವ ಚಳವಳವು ಪ್ರಮುಖಸ್ಥಾನವನ್ನು ಪಡೆಯುತ್ತಿದೆ.

—ವಿ. ಸತ್ಯಮೂರ್ತಿಯವರು ವಿಲಾಯತಿಯೊಳಗಿನ ತಮ್ಮ ಉಪನ್ಯಾಸಗಳ ಕಾರ್ಯಕ್ರಮವನ್ನು ಯಶಸ್ವಿಯಾದ ರೀತಿಯಲ್ಲಿ ಮುಗಿಸಿರುವರು. ವಿ. ರಾಮಸೆಮೆಕ್‌ಡೊನೆಲ್ಡರ ಭೇಟಿಯನ್ನು ಪಡೆದು ಈಗ ವಿ. ಸತ್ಯಮೂರ್ತಿಯವರು ವಿಲಾಯತಿಯಿಂದ ಹಿಂದುಸ್ಥಾನಕ್ಕೆ ಬರಲು ಹೊರಟಿರುವರು.

—ಚೀನಾದೊಳಗಿನ ಪೆಕಿಂಗಿನಲ್ಲಿ ಕೆಲಸಗಾರರು ಸ್ವದೇಶವಾತ್ಸಲ್ಯದಿಂದ ಪ್ರೇರಿತರಾಗಿ ಮುಷ್ಕರವನ್ನು ಹಾಕಿರುವರು. ಅಲ್ಲದೆ ತಮ್ಮ ಇಡೀ [illegible] ದೇಶಪ್ರೇಮದಿಂದ ತುಂಬಿಹೋಗಬೇಕೆಂದು ಪ್ರತಿಪಾದಿಸುತ್ತಿರುವರು.

ಒಳದೇಶ ವರ್ತಮಾನ.

—ನಾಶಿಕ ಪಂಚವಟಿ ಕ್ಷೇತ್ರದಲ್ಲಿ 'ರಾಮನಾಮ ಆಧಾರಾಶ್ರಮ' ವೆಂಬುದು ಸ್ಥಾಪಿಸಲ್ಪಟ್ಟಿದೆ. ಅದಕ್ಕೆ ಮುಂಬಯಿಯ ಶ್ರೀಮತಿ ಜಸ್ಟೀರಿಬಾಯಿಯವರು ೫೦೦ ರೂಪಾಯಿ ದಾನವಾಗಿ ಕೊಟ್ಟಿರುವರು.

—ಮುಂಬಯಿಯ ಅಪಲೊ ಬಂದರದಲ್ಲಿ ಒಬ್ಬ ಮುಸಲ್ಮಾನ ಗೃಹಸ್ಥನು ಸಮುದ್ರದಲ್ಲಿ ಈಜಾಡುವಾಗ ಮುಳುಗುತ್ತಿದ್ದನು. ಅವನನ್ನು ಕಿಂಗ್ ಎಂಬ ಹೆಸರಿನ ೧೯ ವರ್ಷದ ಯುರೋಪಿಯನನು ಬಹುಸಾಹಸಪಟ್ಟು ಮೇಲಕ್ಕೆ ತೆಗೆದನು.

—ಭಿವಂಡಿ ಮುನ್ಸಿಪಾಲಿಟಿಯ ಸ್ಕೂಲುಗಳಲ್ಲಿಯ ಉಪಾಧ್ಯಾಯರಿಗೆ ಮೂರು ತಿಂಗಳಿಂದ ಸಂಬಳವೆ ಸಿಗಲಿಲ್ಲ!

—ಠಾಣಾ ಎಂಬ ಕಡೆಯಲ್ಲಿ ಕಳೆದ ಒಂದೆ ತಿಂಗಳಲ್ಲಿ ೭೫ ಕಳವುಗಳಾದವು! ಆದರೂ ಪೋಲಿಸರ ಬಂದೋಬಸ್ತು ಇಲ್ಲದ ಕಾರಣ ಅಲ್ಲಿಯ ಜನರೆ ನಗರ ಸಂರಕ್ಷಣದ ಕೆಲಸವನ್ನು ಕೈಕೊಂಡಿರುವರಂತೆ.

—ಬೆಳಗಾಂವದ ಆಯುರ್ವೇದ ಸಮ್ಮೇಲನವು ಸಾವಾರದೊಳಗಿನ ಆಯುರಾಂಗ್ಲ ವೈದ್ಯಶಾಲೆಯ ಸುಪರಿಂಟೆಂಡೆಂಟರಾದ ವೈದ್ಯ ಅಡೇಗಾಂವಕರರು ಬರೆದ 'ಆಯುರಾಂಗ್ಲ ಶಾರೀರ ವಿಜ್ಞಾನ'ವೆಂಬ ಪುಸ್ತಕಕ್ಕೆ ಪ್ರಶಂಸಾ ಪತ್ರವನ್ನೂ ಸುವರ್ಣಪದಕವನ್ನೂ ಕೊಟ್ಟಿತು.

—ರೈಲ್‌ಬಂಡಿಗಳಲ್ಲಿ ಹೆಂಗಸರ ಡಬ್ಬಿಗಳ ಗುರ್ತಿಗಾಗಿ ಹೆಂಗಸಿನ ಚಿತ್ರವನ್ನು ಹಚ್ಚಬೇಕೆಂದು ನಿರ್ಣಯವಾಗಿರುತ್ತ ಇನ್ನೂ ಅಂಥ ಚಿತ್ರವನ್ನು ಯಾಕೆ ಹಚ್ಚಲಿಲ್ಲವೆಂದು ಸರದಾರ ಮುರಾಶಾ ರೈಲಿನ ಅಧಿಕಾರಿಗಳಿಗೆ ಕೇಳಿದ್ದಕ್ಕೆ ಅದರ ಮೆನೇಜರನು ವಿಲಾಯತಿಯಿಂದ ಅಂಥ ಚಿತ್ರಗಳು ಬರಲಿಕ್ಕಿದ್ದಾವೆ, ಬಂದ ಮೇಲೆ ಅವುಗಳನ್ನು ಹಚ್ಚುವೆವೆಂದು ಉತ್ತರ ಕೊಟ್ಟಿರುವನು!

—ಧಾರವಾಡದ ಪ್ರಾ. ದಿವಾಕರರು ಬಂಧಮುಕ್ತರಾಗಿರುವರು.

—ಕೋಲಾರಿನ ಗಣಿಯಲ್ಲಿ ಅಕಸ್ಮಾತ್ತಾಗಿ ಸ್ಫೋಟವಾಗಿ ೮ ಜನರು ಮೃತರಾದರು.

—ಕೊಲ್ಹಾಪುರದ ಮಹಾರಾಜರು "ಕಿರ್ಲೋಸ್ಕರ ನಾಟಕ ಮಂಡಲಿ"ಗೆ ಪ್ರತಿ ವರ್ಷ ೨ ಸಾವಿರ ರೂಪಾಯಿಯನ್ನು ಸಂಸ್ಥಾನದಿಂದ ಉಚಿತವಾಗಿ ಕೊಡುವುದಕ್ಕಾಗಿ ನಿರ್ಣಯಿಸಿರುವರು.

—ಕಡಪ್ಪಾ ಜಿಲ್ಲೆಯ ಒಂದು ಊರಿನಲ್ಲಿ ಮೊಹರಮಿನಲ್ಲಿ ಹಿಂದು-ಮುಸಲ್ಮಾನರ ದಂಗೆಯಾಯಿತು. ಪೋಲಿಸರ ಪ್ರತಿಬಂಧವನ್ನು ಸಹ ಕೇಳದೆ ಮಹಮ್ಮದೀಯರು ಬಂದು ಹಿಂದುಗಳನ್ನು ಸರಿಯಾಗಿ ಹೊಡೆದರು.

—ದಕ್ಷಿಣ ಮಲಬಾರದಲ್ಲಿ ಅತಿ ಪ್ರಾಚೀನ ಕಾಲದ ಹಾಗು ಅತಿ ಸುಂದರವಾದ ಒಂದು ಗುಹೆಯು ಗೋಚರಕ್ಕೆ ಬಂದಿದೆ.

—ಹಿಂದು ರಿಲಿಜಿಯಸ್ ಎಂಡೌಮೆಂಟ ಬಿಲಿಗೆ ಹಿಂದುಸ್ಥಾನದ ಸ್ಟೇಟ ಸೆಕ್ರೆಟರಿಯವರು ಅನುಮತಿಯನ್ನು ಕೊಟ್ಟಿರುವರು.

—ಮಧ್ಯಪ್ರಾಂತ್ಯದಲ್ಲಿ "ಸಾತ" ಎಂಬ ಊರಲ್ಲಿ ಆರ್ಯಸಮಾಜದವರು ಸುಮಾರು ೩೦೦೦ ಅಸ್ಪೃಶ್ಯರನ್ನು ವಿಧಿಪೂರ್ವಕ ಸ್ಪೃಶ್ಯರನ್ನಾಗಿ ಮಾಡಿದರು. ಈಗ ಅವರು ತಾವು ವಹಿಸಿರುವ ಶಪಥದ ಪ್ರಕಾರವಾಗಿ ಮದ್ಯಪಾನ ಮತ್ತು ಗೋಮಾಂಸ ಭಕ್ಷಣ ಇವುಗಳನ್ನು ತ್ಯಜಿಸಿರುವರು.

—ನಾಭಾದ ಜೈಲಿನಿಂದ ೧೦೦೦ ಅಕಾಲಿ ಕೈದಿಗಳನ್ನು ಬಿಟ್ಟಿರುವರು.

—ಮೊಹರಮಿನ ಸಮಯದಲ್ಲಿ ಉಂಟಾದ ಧಾರ್ಮಿಕ ದಂಗೆಯಲ್ಲಿ ಒಬ್ಬ ಹಿಂದು ಹುಡುಗನಿಗೆ ಪೀಡನೆಯನ್ನು ಕೊಟ್ಟದ್ದು ಬಹಿರಂಗವಾಗಿದೆ. ಇದೆ ರೀತಿಯಿಂದ ಅನೇಕರಿಗೆ ಪೀಡನೆಯನ್ನು ಕೊಟ್ಟದ್ದು ಈಗ ಬೆಳಕಿಗೆ ಬಂದಿದೆ.

—ಲೇಡಿ ರೆಡಿಂಗರ ಸಮೇತ ಲೊ. ರೆಡಿಂಗ ಸಾಹೇಬರು ಈ ತಿಂಗಳ ತಾ. ೬ಕ್ಕೆ ಮುಂಬಯಿಗೆ ಬಂದು ತಲಪಿದರು. ಇವರ ಸಂಗಡ ಹೊಸ ಸೇನಾಧಿಪತಿಗಳು ಕೂಡ ಬಂದಿರುವರು.

—ಲೊ. ರೆಡಿಂಗರು ಮುಂಬಯಿಯಿಂದ ಸಿಮ್ಲಕ್ಕೆ ಹೋಗಿ ವೈಸರಾಯಪದದ ಸೂತ್ರಗಳನ್ನು ಪುನಃ ಕೈಕೊಂಡರು.

—ವೈಸರಾಯರ ಸ್ಥಾನಕ್ಕೆ ರೆಡಿಂಗ ಸಾಹೇಬರು ಪುನಃ ಬಂದ ಬಳಿಕ ಲೊ. ಲಿಟನರು ಮುಂಚಿನಂತೆ ಬಂಗಾಳದ ಗವರ್ನರರಾಗಿರುವರು.

—ಮಧ್ಯಪ್ರಾಂತದ ಗವರ್ನರರು ಸ್ವರಾಜ್ಯ ಪಕ್ಷದ ಮುಖಂಡರನ್ನು ಕರೆಯಿಸಿ ಮಂತ್ರಿತ್ವವನ್ನು ಸ್ವೀಕರಿಸಲು ವಿನಂತಿ ಮಾಡಿದರು. ಡಾ. ಮುಂಜೆ ಮುಂತಾದ ಮುಖಂಡರು ತಮ್ಮ ಪಕ್ಷದೊಡನೆ ಆಲೋಚನೆಯನ್ನು ನಡಿಸಿ ಗವರ್ನರರ ವಿನಂತಿಯನ್ನು ನಿರಾಕರಿಸಿರುವರು.

—ಜಬಲಪುರಕ್ಕೆ ಪ್ರತ್ಯೇಕವಾದ ಸ್ವತಂತ್ರ ಯುನಿವರ್ಸಿಟಿಯು ಬೇಕೆಂದು ಚಳವಳವು ಪ್ರಾರಂಭವಾಗಿದೆ.

—ದಕ್ಷಿಣ ಕನ್ನಡ ಜಿಲ್ಲೆಗೆ ಸೇರಿದ ಚಂದ್ರಗಿರಿ ಹೊಳೆಯಿಂದ ಮುಂದಿನ ಪ್ರದೇಶವು ಮಲಿಯಾಳಿಗಳಿಂದಲೆ ತುಂಬಿರುವದರಿಂದ ಕಾಸರಗೋಡ ತಾಲೂಕಿನ ಈ ಭಾಗವನ್ನು ಮಲಬಾರ ಜಿಲ್ಲೆಗೆ ಸೇರಿಸಬೇಕೆಂದು ಹಲವರು ಚಳವಳವನ್ನೆಬ್ಬಿಸಿರುವರು!

—ಸಿಲ್ಹದಲ್ಲಿ ಹಿಂದು ಹಬ್ಬವು ಜರಗಿತು. ಅಲ್ಲಿ ಆಗತಕ್ಕ ಹಬ್ಬಗಳಲ್ಲಿ ಇದರಷ್ಟು ದೊಡ್ಡದಾದ ಇನ್ನೊಂದು ಹಿಂದು ಹಬ್ಬವಿಲ್ಲ. ಸುಮಾರು ೩೦ ಸಾವಿರ ಜನರು ಈ ಉತ್ಸವಕ್ಕೆ ನೆರೆದಿದ್ದರು. ಜಾತಿ ವೈಮನಸ್ಸನ್ನು ಹುಟ್ಟಿಸುವ ಪ್ರಯತ್ನಗಳು ನಡೆದಿದ್ದವು.

—ದೇ. ಬಂಧು ದಾಸರ ಸ್ಮಾರಕಫಂಡು ಈಗ ೬ಲಕ್ಷ ಮಿಕ್ಕಿದೆ.

—ಪಾನಿಪತದಲ್ಲಿ ಮೊಹರಮಿನ ಸಮಯದಲ್ಲಿ ಯಾರಿಂದ ಗಲಾಟೆಯು ಪ್ರಥಮತಃ ಉತ್ಪನ್ನವಾಯಿತೆಂಬುದನ್ನು ಕಂಡುಹಿಡಿಯುವದು ಅಗತ್ಯವಿದೆ, ಹಿಂದುಗಳು ಹಳ್ಳಿಯ ಜನರನ್ನು ಕರತರಿಸಿದ್ದರು ಎಂದು ಮುಂತಾದ ಆರೋಪಣೆಗಳು ನಿರಾಧಾರವಾಗಿದೆ, ಆದ್ದರಿಂದ ಈ ವಿಷಯದಲ್ಲಿ ಸರಿಯಾದ ವಿಚಾರಣೆಯಾಗಬೇಕೆಂದು ಲೆಜಿಸ್ಲೇಟಿವ್ ಎಸೆಂಬ್ಲಿಯ ಸಭಾಸದರಾದ ಲಾಲಾ ಧುನಿಚಂದರು ಪ್ರಕಟಿಸಿರುವರು.

—ಮುಂಬಯಿ ಮುನಿಸಿಪಾಲಿಟಿಯು ಬ್ರಿಟಿಷ್ ಸಾಮ್ರಾಜ್ಯದ ವಸ್ತುಗಳ ಮೇಲೆ ೧೯೨೩ನೆ ಇಸವಿಯ ಮಾರ್ಚ ತಿಂಗಳಲ್ಲಿ ಬಹಿಷ್ಕಾರವನ್ನು ಹಾಕಿತ್ತು. ಮುಂ ಮುನ್ಸಿಪಾಲಿಟಿಯ ಕಮಿಶನರರಾದ ಮಿ. ಕ್ಲೆಟನರು ಬ್ರಿ. ಸಾಮ್ರಾಜ್ಯಾಂತರ್ಗತವಾದ ನ್ಯೂಝಿಲಂಡಿನ ವಸಾಹತಿನ ಮಂತ್ರಿಗಳೊಡನೆ ನಿಮ್ಮ ವಸಾಹತಿನಲ್ಲಿ ಹಿಂದಿಗಳನ್ನು ಯಾವ ರೀತಿಯಿಂದ ನಡಿಸುತ್ತಾರೆ? ಎಂಬುದಾಗಿ ಕೇಳಿದ್ದಲ್ಲಿ ಅಲ್ಲಿಯ ಮಂತ್ರಿಗಳು ನ್ಯೂಝಿಲಂಡ್ ವಸಾಹತಿನ ಪ್ರಜೆಗಳಿಗೆ ಇರುವ ಎಲ್ಲ ಹಕ್ಕುಗಳು ವಾರ್ಧಕ್ಯದಲ್ಲಿ ಸಿಗತಕ್ಕ ಪೆನ್‌ಶನು ಒಂದು ಬಿಟ್ಟು) ಹಿಂದಿಗಳಿಗೂ ಇವೆ ಎಂಬುದಾಗಿ ತಿಳಿಸಿದರು. ಮಿ. ಕ್ಲೇಟನರು ಮುಂ. ಮುನಿಸಿಪಾಲಿಟಿಗೆ ಈ ಸಂಗತಿಯನ್ನು ತಿಳಿಸಿ ಬಹಿಷ್ಕಾರದ ಠರಾವಿನೊಳಗಿಂದ ನ್ಯೂಝಿಲಂಡಿನ ಹೆಸರನ್ನು ತೆಗೆಯಬೇಕೆಂಬುದಾಗಿ ಶಿಫಾರಸನ್ನು ಮಾಡಿರುವರು.

—ಪಾಲಘಾಟಿನಲ್ಲಿ ಎಗ್‌ಝುವರೆಂಬ ಹೆಸರಿನ ಅಸ್ಪೃಶ್ಯರನ್ನು ಕ್ರೈಸ್ತರೂ, ಮಹಮ್ಮದೀಯರೂ, ತಮ್ಮ ತಮ್ಮ ಧರ್ಮಗಳಲ್ಲಿ ಮತಂತರಗೊಳಿಸುತ್ತಿದ್ದಾರೆ. ಇತ್ತಲಾಗೆ ಇವರದೊಂದು ಸಭೆಯು ಪಾಲಘಾಟಿನಲ್ಲಿ ಸೇರಿತು.

—ಮುಂಬಯಿಯಲ್ಲಿ ಕೆಲವು ಸಮಯದ ಮುಂಚೆ ಸಂಭವಿಸಿದ ಸುಪ್ರಸಿದ್ಧ ಬಾಲವಾಖೂನಿಕಟ್ಲೆಯಲ್ಲಿ ಫಾಶಿಯ ಶಿಕ್ಷೆಪಟ್ಟವರ ಪರವಾಗಿ ವಿಲಾಯತಿಯಲ್ಲಿಯ ಪ್ರಿವ್ಹಿ ಕೌನ್ಸಿಲಿನಲ್ಲಿ ಅಪೀಲುದಾಖಲಾಗಲಿಕ್ಕಿರುವದು.

—ಮಹಾತ್ಮಾಜಿಯವರು ಟಾಟಾ ಕಂಪೆನಿಯ ಜಮಶೇಟಪುರಕ್ಕೆ ಬಂದು ಅಲ್ಲಿಯ ಕಾಮಗಾರರ ಹಾಲು ಹವಾಲೆಗಳನ್ನು ಕೇಳುವವರಿದ್ದಾರೆ.

—ಮೊಹರಂ ಕಡೆಯ ದಿನ ಬೆಂಗಳೂರು ಚಿಕ್ಕಪೇಟೆ, ದೊಡ್ಡಪೇಟೆಗಳಲ್ಲಿ ಹುಲಿ ವೇಷಗಳ ಎರಡು ಗುಂಪಿನವರಿಗೆ "ನಾವು ಮುಂದು ತಾವು ಮುಂದು" ಎನ್ನುವ ಜಗಳದಲ್ಲಿ ಮಾರಾಮಾರಿಯಾಯಿತು. ಪೆಟ್ಟುತಿಂದ ನಾಲ್ಕೈದು ಮಂದಿ ಆಸ್ಪತ್ರೆಯಲ್ಲಿದ್ದಾರೆ.

—ಕಳೆದ ಭಾನುವಾರ ಮದರಾಸಿನ ಸರ್. ಕೆ. ಶ್ರೀನಿವಾಸಯ್ಯಂಗಾರ್ಯರ ಮನೆಯ ಹಾಳುಭಾವಿಯಲ್ಲಿ ಹೂಳು ತೆಗೆಯಲು ಒಬ್ಬನು ಮುಳುಗಿದನು. ಅವನು ಮೇಲಕ್ಕೆ ಬರಲಿಲ್ಲ. ಇನ್ನೊಬ್ಬನಿಳಿದ; ಅವನೂ ಬರಲಿಲ್ಲ. ಮತ್ತೊಬ್ಬ ಮುಳುಕಿದ ಅವನ ಸುಳಿವೂ ಇಲ್ಲ. ನಾಲ್ಕನೆಯವನು ಹಗ್ಗ ಹಿಡಿದು ಒಳಗಿಳಿಯಲು, ಅಲ್ಲಿನ ವಿಷಘಾಳಿಯು ಬಲವಾಗಿತ್ತು. ಕೂಡಲೆ ಅವನು ಮೇಲಕ್ಕೆ ಬಂದನು. ಸ್ಮೃತಿ ತಪ್ಪಿತು. ಆಸ್ಪತ್ರೆಗೆ ಅವನನ್ನು ಸಾಗಿಸಿದರು. ಅಂತು ಹಾಳುಭಾವಿಗೆ ಮೂರು ಜನ ತುತ್ತಾದರು.

—ಮುಂದಿನ ಡಿಸೆಂಬರು ತಿಂಗಳಲ್ಲಿ ಕಾನ್‌ಪುರದಲ್ಲಿ ನಡೆಯುವ ರಾಷ್ಟ್ರೀಯ ಮಹಾಸಭೆಯ ಸ್ವಾಗತಮಂಡಲವು ಸ್ಥಾಪಿತವಾಯಿತು. ಶ್ರೀ ಭರೋಚರೇ ಅದಕ್ಕೆ ಅಧ್ಯಕ್ಷರು. ಮುಂದಿನ ಕೆಲಸಗಳು ಚುರುಕಿನಿಂದ ನಡೆಯುತ್ತಿವೆ.

—ಮುಂಬಯಿ ಕಾರ್ಖಾನೆಗಳ ಮುಚ್ಚೋಣವು ಆರಂಭವಾಗಿ ಈಗಾಗಲೇ ೫೦೦೦ ಮಂದಿ ಕೂಲಿಗಾರರು ಕೆಲಸವಿಲ್ಲದೆ ಅಲೆಯುತ್ತಿದ್ದಾರೆ.

—ಮಹಾತ್ಮಜಿಯವರು ಅಕ್ಟೋಬರು ತಿಂಗಳಲ್ಲಿ ಆಂಧ್ರ ದೇಶದಲ್ಲಿ ಸಂಚಾರಮಾಡಲು ನಿಶ್ಚಯಿಸಿರುತ್ತಾರೆ.

—ಬಳ್ಳಾರಿ ಜೈಲಿನಲ್ಲಿರುವವ ಸುಮಾರು ೩೦೦ ಮಂದಿ ಮಾಪಿಳ್ಳೆ ಕೈದಿಗಳು ಅಂದಮಾನ ದ್ವೀಪಕ್ಕೆ ಸಂಸಾರ ಸಮೇತ ಹೋಗಲು ಸಿದ್ಧರಾಗಿರುವರು.

—ಬೀರಾರ್ ಪ್ರಾಂತ್ಯದ ಅಮರಾವತಿ ತಾಲೂಕಿನ ಧಮರಿ ಎಂಬ ಹಳ್ಳಿಯ ಬಳಿ ಹುಡುಗರು ಗುಳಿ ತೆಗೆಯುತ್ತಿರಲು ರಾಷ್ಟ್ರಕೂಟದ ಕೃಷ್ಣರಾಜನ ಕಾಲದ (ಕ್ರಿ. ಶ. ೩-೪ನೇ ಶತಮಾನ) ೧೪೦೧ ಬೆಳ್ಳಿ ನಾಣ್ಯಗಳು ಸಿಕ್ಕಿದವು.

—ಮುಂದಿನ ನವಂಬರು ತಿಂಗಳಿಂದ ಐದು ರೂಪಾಯಿ ನೋಟುಗಳು ಚಲಾವಣೆಗೆ ಬರುತ್ತವೆ.

—ನಾಭಾ ಸಂಸ್ಥಾನದ ಪದಚ್ಯುತ ಮಹಾರಾಜರಿಗೆ ಕೊಡಬೇಕೆಂದು ನಿಶ್ಚಯಿಸಿದ ಮಾಸಿಕ ವೃತ್ತಿಯನ್ನು ಸರಕಾರವು ನಿಲ್ಲಿಸಿದೆ ಎಂದು ಪ್ರಕಟವಾಗಿದೆ.

—ರಿಲಿಜನ್ ಎಂಡೌಮೆಂಟ ಕಾಯಿದೆಯು ಸರಿಯಾದ ಕಾನೂನಲ್ಲ. ಆದ್ದರಿಂದ ಆ ಕಾಯಿದೆಯ ಆಧಾರದ ಮೇಲಿಂದ ನೇಮಕಪಟ್ಟ ಕಮಿಟಿಯು ಅನಧಿಕೃತವಾದ್ದರಿಂದ ಅದನ್ನು ರದ್ದುಪಡಿಸಲು ಹೈಕೋರ್ಟಿನಲ್ಲಿ ವ್ಯಾಜ್ಯ ಮಾಡುವದಕ್ಕಾಗಿ ಶ್ರೀನಿವಾಸ ಐಯಂಗಾರ ಮತ್ತು ಟಿ. ಕುಮಾರ ಸ್ವಾಮಿ ಇವರಿಬ್ಬರ ಸಹಾಯವನ್ನು ಗುಂಟೂರ ಜಿಲ್ಲೆಯೊಳಗಿನ ಪೊನ್ನೂರು ದೇವಸ್ಥಾನದ ವ್ಯವಸ್ಥಾಪಕರು ಪಡಕೊಂಡಿದ್ದಾರೆ.

—ನಂದ್ಯಾಲವೆಂಬಲ್ಲಿ ಸಭೆಸೇರಿ ರಿಲಿಜನ್ ಎಂಡೌಮೆಂಟ ಎಕ್ಟಿನ ತೀವ್ರ ನಿಷೇಧವು ಮಾಡಲ್ಪಟ್ಟಿತು.

ದಕ್ಷಿಣ ಕನ್ನಡ.

ಅಜೆಕಾರ್:—ಎರಡು ವರುಷಗಳ ಹಿಂದೆ ಮುಚ್ಚಲ್ಪಟ್ಟ ಪೋಸ್ಟಾಫೀಸು ಇದೇ ತಿಂಗಳ ತಾ. ೧ಕ್ಕೆ ಪುನಃ ತೆರೆಯಲ್ಪಟ್ಟಿರುತ್ತದೆ. ಇದರ ಸಲುವಾಗಿ ರೂ. ೭೦ನ್ನು [illegible] ಡಿಪೋಜಿಟ್ ಕಟ್ಟಿದ್ದ ಧರ್ಮಿಷ್ಠರಾಗಿರುವ ಮಾನ್ಯ ಗೃಹಸ್ಥ ಧನಿಕ ಮ॥ ರಾ॥ ದೇವರಾಜ ಹೆಗ್ಗಡೆಯವರಿಗೂ, ಪರೋಪಕಾರಿಯಾಗಿರುವ ಮ॥ ರಾ॥ ಗೋಪಾಲಕಮ್ಮಿಯವರಿಗೂ ಗ್ರಾಮಸ್ಥರು ಕೃತಜ್ಞರಾಗಿರುತ್ತಾರೆ. ಅವರ ಅಪೇಕ್ಷೆ ಮೇರೆಗೆ ಹಿಂದೆ ಪೋಸ್ಟುಮಾಸ್ತರರಾಗಿದ್ದ ರಾ॥ ಅಬ್ರಹಾಮ ಮಿನೇಜಸ್ರು ಪೋಸ್ಟುಮಾಸ್ತರಾಗಿ ನಿಯಮಿಸಲ್ಪಟ್ಟದ್ದು ಸಂತೋಷಕರ.

ವಿವಿಧ ವಿಷಯಗಳು.

ಅಸ್ಪೃಶ್ಯರ ವಿಷಯವಾಗಿ ಹಿಂದು ಸಮಾಜದೊಳಗಿನ ಮೇಲ್‌ತರಗತಿಯವರು ಸಹಿಷ್ಣುತೆಯನ್ನು ತೋರಿಸುವುದು ಅವಶ್ಯವಾಗಿದೆ. ಅವರು ಸಹಿಷ್ಣುತೆಯನ್ನು ತೋರಿಸುವ ಕರ್ತವ್ಯದಲ್ಲಿ ಭ್ರಷ್ಟರಾದರಾದರೆ, ನೀರಿಗೆ ಹಾಕಿದ ಕಟ್ಟ ಒಡೆದುಹೋಗಿ ನೀರೆಲ್ಲ ಸಮುದ್ರಪಾಲಾಗಿ ಕೆರೆಯು ಕೊನೆಗೆ ಖಾಲಿಯಾಗುವಂತೆ ಹಿಂದು ಸಮಾಜವು ಮತಾಂತರಗೊಳಿಸುವ ಅನ್ಯ ಮತೀಯರ ಚಳವಳದಿಂದ ಶೂನ್ಯಪ್ರಾಯವಾಗಿ ಹೋದೀತೆಂಬುದಕ್ಕೆ ಸಂದೇಹವಿಲ್ಲ. ಇದರ ಪ್ರತೀತಿಯು ಇದುವರೆಗೆ ಅನೇಕ ಸಾರಿ ಬಂದಿದೆಯಾದರೂ ಪಾಲಘಾಟಿನಲ್ಲಿ ನಡೆಯುವ ಸಂಗತಿಗಳ ಮೇಲಿಂದಲಾದರೂ ಹಿಂದೂ ಸಮಾಜದವರು ಈ ಪ್ರಶ್ನೆಯನ್ನು ಕುರಿತು ಕಣ್‌ತೆರೆಯುವುದು ಹಿತಾವಹವಾಗಿದೆ. ಅಲ್ಲಿಯ ಅಗ್ರಹಾರದಲ್ಲಿ ಎಗ್‌ಝುವಾ ಎಂಬ ಅಸ್ಪೃಶ್ಯರನ್ನು ಬರಲು ಪ್ರತಿಬಂಧಿಸಿದ್ದರಿಂದ ಆ ಅಸ್ಪೃಶ್ಯರಲ್ಲಿ ಬುದ್ಧ, ಕ್ರೈಸ್ತ, ಮಹಮ್ಮದ ಈ ಪ್ರಕಾರ ಇತರ ಧರ್ಮಗಳಲ್ಲಿ ಸೇರುವ ಪ್ರವೃತ್ತಿಯುಂಟಾಗಿದೆ. ಈ ಪರ್ವವನ್ನು ಸಾಧಿಸಿ ಪೂನಾ, ಮುಂಬಯಿ ಅತ್ತಕಡೆಯಿಂದ ಮಹಮ್ಮದೀಯ ಮಿಶನುಗಳು ಬಂದು ಈ ಜನರನ್ನು ಕೈಕೊಡುತ್ತಿವೆ. ಕ್ರೈಸ್ತ ಮಿಶನುಗಳಂತೂ ಮುಂಚಿನಿಂದಲೆ ಇವೆ. ಈ ಎಲ್ಲ ಸಂಸ್ಥೆಗಳು ತಮ್ಮ ತಮ್ಮ ಬಲೆಗಳಲ್ಲಿ ಹಿಂದುಗಳಿಗೆ ಅಸ್ಪೃಶ್ಯರಾಗಿರುವ ಈ ದೀನರನ್ನು ಎಳೆಯುತ್ತಿದ್ದಾರೆ. ಈ ಅಸ್ಪೃಶ್ಯರದೊಂದು ಸಭೆಯು ಪಾಲಘಾಟಿನಲ್ಲಿ ಸೇರಿತ್ತು. ಆ ಸಭೆಗೆ ಮುಂಬಯಿಯಿಂದ ವಿದ್ಯಾಮಂತ್ರಿಗಳ ಸಂದೇಶವು ಬಂದಿರುವುದು. ಆ ಸಂದೇಶದಲ್ಲಿ ವಿದ್ಯಾಮಂತ್ರಿಗಳು ಪಾಲಘಾಟಿನ ಈ ಬಂಧುಗಳಿಗೆ ನೀವು ಮತಾಂತರಗೊಳಿಸಬೇಡಿರಿ, ನಾವು ನಿಮ್ಮನ್ನು ಸ್ವೀಕರಿಸುತ್ತೇವೆ! ಎಂದು ಬರೆದು ತಿಳಿಸಿರುವರು. ಮಂತ್ರಿಗಳು ಕಳುಹಿಸಿದ ಈ ಸಂದೇಶವು ಚಲೋದಾಗಿದೆ. ಅಂತು ಈಗಿನ ಸಮಯದಲ್ಲಿ ಒಕ್ಕಟ್ಟು ಅತ್ಯಗತ್ಯವಿದ್ದದರಿಂದ ಮತ್ತು ಹಿಂದೂ ಸಮಾಜದ ಬಲವು ಗಟ್ಟಿಯಾಗಿರಬೇಕಾದ್ದರಿಂದ ಹಳೆ ಸಂಪ್ರದಾಯಗಳ ತೀವ್ರತೆಯನ್ನು ಆದಷ್ಟು ಕಡಿಮೆ ಮಾಡುವುದು ಯೋಗ್ಯವು.

(ಪಾಲಘಾಟದಲ್ಲಿಯ ಒಬ್ಬ ಕನ್ನಡಿಗ)

* * *

ಒಂದು ಕಡೆಯಲ್ಲಿ ಒಂದು ಸಂಗತಿಯು ಕೆಟ್ಟಪರಿಣಾಮವನ್ನುಂಟುಮಾಡುತ್ತದೆ, ದೇಶಹಿತವುಂಟಾಗುವವರ ಬದಲಿಗೆ ದೇಶದ ಅಹಿತವೆ ಉಂಟಾಗುತ್ತದೆ ಎಂಬುದಾಗಿ ಗೋಚರಕ್ಕೆ ಬಂದರೂ ಅಂಥ ಸಂಗತಿಗಳನ್ನು ಇನ್ನೊಂದು ಕಡೆಯಲ್ಲಿ ಜನರು ಬಹು ಆತುರತೆಯಿಂದ ಮಾಡುತ್ತಾರೆ ಇದು ವಿಚಿತ್ರವೆ ಸರಿ. ಈ ಪ್ರಸ್ತಾಪವನ್ನೆತ್ತಲು ಕಾರಣವೇನೆಂದರೆ ಇಂಗ್ಲಂಡಿನಲ್ಲಿದ್ದಂತೆ ಹಿಂದೂಸ್ಥಾನದಲ್ಲೂ ಒಂದು "ಕನ್‌ಸರವೇಟಿವ್ ಪಾರ್ಟಿ"ಯನ್ನು ಸ್ಥಾಪಿಸಬೇಕೆಂದು ಉತ್ತರ ಹಿಂದೂಸ್ಥಾನದಲ್ಲಿ ಹಲವರು ಪ್ರಯತ್ನಪಡುತ್ತಿದ್ದಾರೆ. ಬಿಹಾರದಲ್ಲಿಯ ರಾಜಾರಘುನಂದನ ಪ್ರಸಾದರೆಂಬ ದೊಡ್ಡ ಮನುಷ್ಯರು ಒಂದು ಜಾಹೀರ ಪತ್ರಕವನ್ನು ಹೊರಡಿಸಿ, ಅದರಲ್ಲಿ ಕನ್‌ಸರ್‌ವೇಟಿವ್ ಪಾರ್ಟಿಯು ಹಿಂದುಸ್ಥಾನಕ್ಕೆ ಅಗತ್ಯವೆಂಬುದಾಗಿ ಉಲ್ಲೇಖಿಸಿರುವರು. ಹಾಗು ಜಮೀನುದಾರರೂ, ಕಾರಖಾನೆಯವರೂ, ಉದ್ಯೋಗಸ್ಥ ಮತ್ತು ವ್ಯಾಪಾರಸ್ಥರೂ, ಸಾಹುಕಾರರೂ ಮತ್ತು ಇತರ ಶ್ರೀಮಂತರೂ ಈ ಚಳವಳಕ್ಕೆ ಪುಷ್ಟೀಕರಣವನ್ನು ಕೊಡಬೇಕೆಂದು ರಾಜಾ ರಘುನಂದನರು ವಿಜ್ಞಾಪಿಸಿಕೊಂಡಿದ್ದಾರೆ. ಕಲಕತ್ತೆಯಲ್ಲಿ ಭಾಷಣಮಾಡುವಾಗ ದರ್ಭಾಂಗದ ಮಹಾರಾಜರೂ ಸಹ ಜಮೀನುದಾರರ ಸಂಘವನ್ನು ಸ್ಥಾಪಿಸಬೇಕೆಂದು ಹೇಳಿರುವರು. ಈ ಇಬ್ಬರು ದೊಡ್ಡ ಮನುಷ್ಯರ ಮತಗಳನ್ನು ಒಟ್ಟಿಗೆ ಸೇರಿಸಿ ಆಲೋಚಿಸುವಾಗ ಕನ್‌ಸರವೇಟಿವ್ ಪಕ್ಷವು ಬೇಗನೆ ಅಸ್ತಿತ್ವದಲ್ಲಿ ಬಂದೀತೆಂದು ತೋರುತ್ತದೆ. ಅವರವರಿಗೆ ಒಂದು ಸಂಸ್ಥೆಯು ಬೇಕೆಂಬುದು ಅವರವರ ಹಿತದ ದೃಷ್ಟಿಯಿಂದ ಯೋಗ್ಯವೆಂದು ಹೇಳಿದರೂ ದೇಶದ ಏಳಿಗೆಯ ಮಟ್ಟಿಗೆ ಇಂಥ ಸಂಸ್ಥೆಗಳು ವಿಘ್ನಕರವಾದವುಗಳೆಂದೆ ಹೇಳಬೇಕಾಗುತ್ತದೆ. ವಿಲಾಯತಿಯಲ್ಲಿ ಕನ್‌ಸರವೇಟಿವ್ ಪಕ್ಷವು ಮುಂಚಿನಿಂದಲೆ ಇದೆಯಾದರೂ ಅದರಿಂದ ಅಲ್ಲಿಯ ಸಾಮಾನ್ಯ ಸಮುದಾಯದ ಹಿತಕ್ಕೆ ಎಳ್ಳಿನಷ್ಟು ಕೂಡ ಸಹಾಯವುಂಟಾಗಿಲ್ಲ. ಮೇಲಾಗಿ ಹೇಳಬಾರದ ತೊಂದರೆಗಳೆ ಈ ಸಂಸ್ಥೆಗಳಿಂದ ಉದ್‌ಭವಿಸುತ್ತಿವೆ. ಯಾವ ದೇಶವೆ ಇರಲಿ, ಅದರಲ್ಲಿ ಶ್ರೀಮಂತರಿಗಿಂತ ಮಧ್ಯಮ ತರಗತಿಯ ಮತ್ತು ಸಾಮಾನ್ಯ ತರದ ಜನರ ಸಂಖ್ಯೆಯೆ ಎಷ್ಟೋ ಪಾಲಿನಿಂದ ಅಧಿಕವಾಗಿರುವುದರಿಂದ ಅಂಥವರ ಹಿತವೆ ದೇಶಹಿತವಲ್ಲದೆ ಕೈಬೆರಳಿನ ಎಣಿಕೆಗೆ ಬರುವಷ್ಟಿರುವ ಬರೆ ಅಲ್ಪ ಸಂಖ್ಯಾಕ ಶ್ರೀಮಂತರ ಹಿತದಿಂದ ದೇಶದ ಉದ್ಧಾರವಾಗುವುದು ಸಾಧ್ಯವಿಲ್ಲ. ದೇಶದ ಮೇಲೆ ಯುದ್ಧದಂಥ ಆಪತ್ತು ಒದಗಿದಾಗಲೂ ಮಧ್ಯಮ ಮತ್ತು ಸಾಮಾನ್ಯ ತರಗತಿಯ ಜನರೆ ದೇಶದ ರಕ್ಷಣೆಕ್ಕಾಗಿ ಪ್ರಾಣಗಳನ್ನು ಕೂಡ ಅರ್ಪಿಸಲು ಮುಂದುವರಿಯುವವರಲ್ಲದೆ ಶ್ರೀಮಂತರಲ್ಲ. ಆದ್ದರಿಂದ ಲಕ್ಷ್ಮೀಪುತ್ರರ ಕನ್‌ಸರವೇಟಿವ್ ಪಕ್ಷವು ಜನಸಾಮಾನ್ಯಕ್ಕೆ ಪ್ರಯೋಜನಕರವಲ್ಲ. ಆದ್ದರಿಂದಲೆ ಇಂಥ ಪಕ್ಷವನ್ನು ಎದುರಿಸಲು ವಿಲಾಯತಿಯಲ್ಲಿ ಅನಂತರ 'ಲಿಬರಲ್ ಪಾರ್ಟಿ' 'ಲೇಬರ ಪಾರ್ಟಿ' ಮುಂತಾದ ಇತರ ಲೋಕಪ್ರಿಯ ಪಕ್ಷಗಳು ಅವತರಿಸಿದವು. ಈ ಇತಿಹಾಸವನ್ನು ಸೂಕ್ಷ್ಮದೃಷ್ಟಿಯಿಂದ ನೋಡಿದ್ದಲ್ಲಿ ವಿಲಾಯತಿಯಲ್ಲಿ ಕನ್‌ಸರವೇಟಿವ್ ಪಕ್ಷದ ಅಪ್ರಿಯತೆಯು ಸ್ಪಷ್ಟವಾಗುವಾಗ ಹಿಂದೂಸ್ಥಾನದಲ್ಲಿ ಅದನ್ನು ಯಾಕೆ ಅನುಕರಿಸೋಣಾಗುತ್ತದೆ ಎಂಬ ಪ್ರಶ್ನೆಯು ಉದ್‌ಭವಿಸದೆ ಇರುವದಿಲ್ಲ ಆದ್ದರಿಂದ ಶ್ರೀಮಂತರು ಈ ಪ್ರಯಾಸದ ಕೆಲಸವನ್ನು ಕೈಕೊಳ್ಳದಿರುವದೆ ಲೇಸೆಂದು ಹೇಳಬೇಕಾಗುತ್ತದೆ.

ಅನುಕ್ರಮಣಿಕೆ.

ಅಗ್ರಲೇಖ — ಪುಟಗಳು.
"ಪುನರಾಗಮನ" ೬
ಸ್ಫುಟವಿಚಾರಗಳು—
೧. ಮುಂಬಯಿ ಕೊರ್ಪೊರೇಶನಿನ ಬಹಿಷ್ಕಾರವೂ ನ್ಯೂಝಿಲಂಡವೂ ,,
೨. ಮದ್ರಾಸ ಕೊರ್ಪೊರೇಶನಿನ ಚುನಾವಣೆ ,,
೩. ಮಂಗಳೂರು ಮುನ್ಸಿಪಾಲಿಟಿಯ ಚುನಾವಣೆ ೭
೪. ದಕ್ಷಿಣಕನ್ನಡದ ವಿಭಾಗ ,,
೫. ಪಾನಿಪತಿನ ಗಲಾಟೆ. ,,
ಮಂಗಳೂರು
ವರ್ತಮಾನಸಂಗ್ರಹಗಳು—
ವಿದೇಶ — ಒಳದೇಶ ವರ್ತಮಾನ ೫
ದಕ್ಷಿಣಕನ್ನಡ — ಅಜ್ಞಾವರ ,,
ವಿವಿಧವಿಷಯಗಳು ,,
ಪತ್ರವ್ಯವಹಾರ — ೧ ೮
ಸರ್ ಸುರೇಂದ್ರನಾಥ ಬಾನರ್ಜಿಯವರ ಮೃತ್ಯು ,,
ಸರ್ ಸುರೇಂದ್ರನಾಥ ಬಾನರ್ಜಿಯವರ ಸಂಕ್ಷಿಪ್ತ ಚರಿತ್ರೆ ,,
ಅಡಿಗೆಯ ಪಾತ್ರೆಗಳ ಮೂಲಕ ಸಂಭವಿಸು ಅಪಾಯಗಳು ,,
ಭಾರತೀಯ ಗೋಶಾಲೆ, ಕದ್ರಿ, ಮಂಗಳೂರು ೪

ಸ್ವದೇಶಾಭಿಮಾನಿ.

ಶಕ ೧೮೪೭ ಶ್ರಾವಣ ಬ|| ೧೦ಯು ಶುಕ್ರವಾರ.

"ಪುನರಾಗಮನ."

ಲೋರ್ಡರೆಡಿಂಗ ಸಾಹೇಬರ ಪುನರಾಗಮನವು ಹಿಂದುಸ್ಥಾನದ ಪ್ರಜಾವರ್ಗಕ್ಕೆ ಹಿತಾವಹವೊ ಅಥವಾ ಅಹಿತಾವಹವೊ ಎಂಬುದನ್ನು ಚರ್ಚಿಸುವದು ಅಗತ್ಯದ್ದಾದರೂ ನಿಷ್ಫಲವಾದ ಸಂಗತಿಯೆ ಸರಿ. ಐದು ವರ್ಷದ ಅವಧಿಯು ದಾಟುತ್ತಲೆ ಹಿಂದುಸ್ಥಾನದಿಂದ ಇದು ವರೆಗೆ ಅನೇಕ ವಾಯ್ಸರಾಯರು ಸ್ವದೇಶಕ್ಕೆ ಹೋದವರು ತಿರುಗಿ ಹಿಂದುಸ್ಥಾನಕ್ಕೆ ಬರಲಿಲ್ಲ. ಆದರೆ ಭಾದ್ರಪದದೊಳಗಿನ ಬೆನಕನ ಚೌತಿಯ ಉತ್ಸವದಲ್ಲಿ ಗಣೇಶಮೂರ್ತಿಯನ್ನು ಹೂಡಿ ಷೋಡಶೋಪಚಾರಗಳಿಂದ ಪಂಚಖಾದ್ಯದ ನೈವೇದ್ಯವನ್ನು ತೋರಿಸಿ ಕೊನೆಗೆ ವಿಸರ್ಜನವನ್ನು ಮಾಡುವಾಗ "ಪುನರಾಗಮನಾಯಚ" ಎಂದು ಹೇಳಿ ಬರುವ ವರ್ಷ ತಿರುಗಿ ಬರಬೇಕೆಂದು ಗಣಪತಿಯ ತಲೆಯ ಮೇಲೆ ಅಕ್ಷತೆಗಳನ್ನು ಹಾಕುವ ವಿಧಿಯು ಇದೆಯಷ್ಟೆ; ಈ ವಿಧಿಗನುಸಾರವಾಗಿ ಭಾದ್ರಪದ ಚೌತಿಯು ಬಂದ ಕೂಡಲೆ ಬೆನಕನು ಪುನಃ ಬಂದು ಹೇಗೆ ನಮ್ಮಿಂದ ಪೂಜೋಪಚಾರಗಳನ್ನು ಸ್ವೀಕರಿಸುತ್ತಾನೊ ಹಾಗೆಯೆ ನಮ್ಮ ವೈಸರಾಯರಾದರೂ ಹಿಂದುಸ್ಥಾನಕ್ಕೆ ತಿರುಗಿ ಚಿತ್ತಯಿಸಿ ಇಲ್ಲಿಯ ಆದರಾತಿಥ್ಯವನ್ನು ಸ್ವೀಕರಿಸುವ ಮತ್ತು ರಾಜ್ಯಸೂತ್ರಗಳನ್ನು ಸ್ವೀಕರಿಸುವ ಅನುಗ್ರಹವನ್ನು ಮಾಡುತ್ತಿದ್ದಾರೆ! ಆವಾಹಿಸಿದ ದೇವತೆಯನ್ನು ವಿಸರ್ಜಿಸುವಾಗ ಅವರ ಪುನರಾಗಮನವನ್ನು ಕೋರುವದು ಭಕ್ತಿಯ ರಾಜ್ಯದಲ್ಲಿ ಸ್ವಾಭಾವಿಕವಾಗಿದೆಯಾದರೂ ಪ್ರಜೆಗಳ ತಾತ್ಕಾಲಿಕ ಸುಖದುಃಖಗಳಿಗೂ, ರಾಷ್ಟ್ರದ ಪ್ರಗತಿ—ಅವನತಿಗಳಿಗೂ ಕಾರಣನಾದ ಅಧಿಕಾರಿಯ ಪುನರಾಗಮನವನ್ನು ಈ ಲೌಕಿಕ ರಾಜ್ಯದಲ್ಲಿ ಪ್ರಜೆಗಳು ಪೂರ್ವಾಪರ ವಿಚಾರವನ್ನು ಮಾಡದೆ ಕೋರುವದಿಲ್ಲ. ಇಂಥ ಅಧಿಕಾರಿಯು ನಮಗೆ ಬೇಕು, ಇಂಥ ಅಧಿಕಾರಿಯು ನಮಗೆ ಅವಶ್ಯವಿಲ್ಲವೆಂದು ಹೇಳುವ ಅಧಿಕಾರವು ಲೋಕಸತ್ತೆಯ ರಾಜ್ಯದಲ್ಲಿ ಮುಖ್ಯವಾಗಿದೆ. ಅಮೇರಿಕಾ ಸ್ವಿತ್ಸರಲ್‌ಲಂಡ್ ಮೊದಲಾದ ಲೋಕಸತ್ತೆಯ ರಾಜ್ಯಗಳಲ್ಲಿ ಅಧ್ಯಕ್ಷನನ್ನು ಆರಿಸಿಕೊಳ್ಳುವಾಗ ಅವನ ಪೂರ್ವಚರಿತ್ರೆ, ರಾಜಕೀಯ ಮತ, ಧೋರಣ ಇತ್ಯಾದಿಗಳನ್ನು ಪರಿಶೀಲಿಸುವ ವಾಡಿಕೆಯುಂಟು. ಪ್ರಜೆಗಳು ಬಯಸತಕ್ಕ ಎಲ್ಲ ಗುಣಗಳಿಂದ ಸಂಪನ್ನನಾದವನನ್ನು ಅವರು ಆರಿಸಿಕೊಳ್ಳುತ್ತಾರೆ; ಆರಿಸಿ ಬಂದ ಅಧ್ಯಕ್ಷನು ಪ್ರಜೆಗಳ ನಿರೀಕ್ಷೆಯಂತೆ ಪ್ರಜಾಹಿತವನ್ನೆ ಸಾಧಿಸುತ್ತಾನೆ. ಅಂಥವನನ್ನೆ ಪ್ರಜೆಗಳು ಪುನಃ ಆರಿಸುವದು ತಪ್ಪಾದೀತೆ? ಈ ದೃಷ್ಟಿಯಿಂದ ವಿಚಾರ ಮಾಡುವಾಗ ಲೋಕಹಿತ ತತ್ಪರನಾದ ಅಧ್ಯಕ್ಷಾದಿ ಅಧಿಕಾರಿಯ ಪುನರಾಗಮನವನ್ನು ಅಲ್ಲಿಯ ಪ್ರಜೆಗಳು ಕೋರುವುದು ಸ್ವಾಭಾವಿಕವಾಗಿಯೂ, ಹಿತಾವಹವಾಗಿಯೂ ಇದೆ. ಹಿಂದೆ ಹೇಳಿದ ಮೇರೆಗೆ ಭಕ್ತಿರಾಜ್ಯದಲ್ಲಿ ಅಲ್ಲ, ಲೌಕಿಕರಾಜ್ಯದಲ್ಲಿಯೂ ಲೋಕಹಿತವನ್ನು ಸಾಧಿಸುವವನ ಪುನರಾಗಮನವು ಪ್ರಜೆಗಳಿಂದ ಕೋರಲ್ಪಡುತ್ತದೆ.

ಆದರೆ ಹಿಂದುಸ್ಥಾನದ ಎಲ್ಲ ಸಂಗತಿಗಳು ಪ್ರಾರಂಭದಿಂದ ಕಡೆಯ ತನಕ ಬಹು ವಿಚಿತ್ರವಾದುವುಗಳು! ಇಲ್ಲಿ ವೈಸರಾಯ, ಗವರ್ನರ ಇತ್ಯಾದಿ ದೊಡ್ಡ ಹುದ್ದೆದಾರರ ನೇಮಕವೆ ಅಲ್ಲದೆ, ಚುನಾವಣೆ ಇಲ್ಲ. ಸರಕಾರವು ಯಾರನ್ನು ಕಳುಹಿಸುವದೊ—ಇಡಿಗೆ ಅವರು ಉದಾರರಿರಲಿ, ಅನುದಾರರಿರಲಿ, ಸ್ವಾತಂತ್ರ್ಯಪ್ರಿಯರಾಗಿರಲಿ ಅಥವಾ ಕಲ್ಲೆದೆಯವರಾಗಿರಲಿ,—ಅವರೆ ಹಿಂದುಸ್ಥಾನದ ಅಳ್ಕರಾಗುವರು. ಹಿಂದುಸ್ಥಾನಕ್ಕೆ ಉತ್ತಮವಾದ ಸುಧಾರಣೆಗಳನ್ನು ಪಾರ್ಲಿಮೆಂಟು ದಯಪಾಲಿಸಿದೆ ಎಂದು ನಾಲ್ಕೂ ಕಡೆಗಳಲ್ಲಿ ಘೋಷಣೆ ನಡೆಯುತ್ತಿದೆಯಷ್ಟೆ. ಆದರೆ ತಮಗೆ ಬೇಕಾದ ವೈಸರಾಯನನ್ನು ಬೇಡಿಕೊಳ್ಳಲಾಗಲಿ, ಬೇಡದವನನ್ನು ಅಲ್ಲಗೆಳೆಯಲಾಗಲಿ ಹಿಂದಿ ಪ್ರಜೆಗೆ ಅಧಿಕಾರವಿದೆಯೆ? ಲೋರ್ಡ ರಿಪನ್, ಲೋರ್ಡ ಹಾರ್ಡಿಂಜರಂಥ ಉದಾರರನ್ನು ಬಯಸಿದರೆ ಹಿಂದಿಗಳ ಆ ಬಯಕೆಯು ಕಾರ್ಯರೂಪದಲ್ಲಿ ಬರುವಂತಿತ್ತೆ? ಅಥವಾ ಈಗಲಾದರೂ ಬರುವಂತಿದೆಯೆ? ಸಾರಾಂಶ ಪ್ರಜೆಗಳಿಗೆ ಬೇಕಾಗಿರುವ ಅಧಿಕಾರಿಯನ್ನು ಚುನಾಯಿಸಿಕೊಳ್ಳಲು ಯಾವ ವರೆಗೆ ಸಂದರ್ಭವಿಲ್ಲವೊ, ಅಥವಾ ಲೋಕಮತವನ್ನು ಉಲ್ಲಂಘಿಸಿ ನಡೆದಿರುವ ಅಧಿಕಾರಿಯು ನಮಗೆ ಬೇಡವೆಂದು ಹೇಳಿದ ಮಾತು ಯಾವ ವರೆಗೆ ನಡೆಯುವುದಿಲ್ಲವೊ ಅದು ವರೆಗೆ ಪ್ರಜಾವಿಪತ್ತು ಕಡಿಮೆಯಾಗುವ ಆಶೆ ಇಲ್ಲ.

ವಸ್ತುತಃ ಹೇಳುವದಾದರೆ ಬೇಕಾದ ಅಧಿಕಾರಿಯನ್ನು ಬರಮಾಡಿಕೊಳ್ಳುವ ಅಧಿಕಾರವು ಸಿಕ್ಕಿದ ಮಾತ್ರಕ್ಕೆ ಅದು ಸ್ವರಾಜ್ಯಕ್ಕೆ ಸಮಾನವಾಗುವದಿಲ್ಲವೆಂಬುದು ನಿಜ. ಇಷ್ಟೆ ಅಲ್ಲ, ವಸಾಹತಿನ ರಾಜ್ಯಪದ್ಧತಿಗನುಸಾರವಾಗಿ ಸ್ವರಾಜ್ಯವನ್ನು ಪಡೆದಲ್ಲಿ ಪ್ರಜೆಗಳ ಅಭಿಮತವನ್ನು ತಿಳಕೊಳ್ಳದೆ ಒಂದು ವೇಳೆ ವರಿಷ್ಠ ಸರಕಾರವು ಯಾವನಾದರೂ ಒಬ್ಬನನ್ನು ಕಳುಹಿಸಿದ್ದಾದರೆ ಅಂಥ ಸಂದರ್ಭದಲ್ಲಿ ಅವನನ್ನು ತಿದ್ದಬಹುದಾಗುತ್ತದೆ; ಇಲ್ಲವೆ ಅವನು ತಿದ್ದುವಿಕೆಗೆ ಒಳಪಡದೆ ಹೋದರೆ ತಾನಾಗಿಯೆ ಅವನಿಗೆ ಹೋಗಬೇಕಾಗುತ್ತದೆ. ಪರಂತು ಹಿಂದೂಸ್ಥಾನಕ್ಕೆ ಈ ಎರಡೂ ಸಾಧನಗಳಿಲ್ಲ! ವಸಾಹತಿಯ ಸ್ವರಾಜ್ಯವೂ ಇಲ್ಲ! ಬೇಡವಾದ ಅಧಿಕಾರಿಯನ್ನು ನಿರಾಕರಿಸುವ ಹಕ್ಕೂ ಇಲ್ಲ! ಇಂಥ ಪರಿಸ್ಥಿತಿಯಲ್ಲಿ ಮನೆಯ ಯಜಮಾನಿತಿಯಾದ ಅತ್ತೆಯು ಹಾಕಿದ ಒಂದಿಷ್ಟು ಕೂಳನ್ನು—ಮತ್ತು ಅದು ಯಾವತರದ್ದೆ ಇರಲಿ.—ತಿಂದುಕೊಂಡು ಸೊಸೆಗೆ ಹೇಗೆ ಕಾಲಕ್ಷೇಪಮಾಡಬೇಕಾಗುತ್ತದೊ ಅದೆ ಹಾಡು ನಮ್ಮ ಹಿಂದುಸ್ಥಾನಕ್ಕೂ ಬಂದಿದೆ.

ಲೋರ್ಡ ರೆಡಿಂಗ ಸಾಹೇಬರು ವ್ಯಕ್ತಿದೃಷ್ಟ್ಯಾ ಕೆಟ್ಟವರಲ್ಲ. ಆದರೆ ಅವರು ಮೊದಲನೆಯ ಸಾರಿ ಇಲ್ಲಿಗೆ ಬಂದು ಹಿಂದೂಸ್ಥಾನದ ಇತಿಹಾಸದ ಪುಟಗಳಲ್ಲಿ ಬರೆದಿಡುವಂತಹ ಯಾವ ಒಳ್ಳೆಯ ಕೆಲಸವನ್ನೂ ಮಾಡಿದ್ದು ಕಂಡು ಬರುವದಿಲ್ಲ. ಒಳ್ಳೆಯ ಕೆಲಸವೆಂದು ಹೇಳಲು ಕಾರಣವೇನೆಂದರೆ, ಲೋರ್ಡ ಸಾಹೇಬರ ಆಳಿಕೆಯನ್ನು ಅನೇಕ ದೇಶಭಕ್ತರ ತುರಂಗವಾಸ, ಒತ್ತಾಳಿಕೆಯ ಕಾಯಿದೆಗಳ ರಚನೆ ಇ. ಇ. ಅನೇಕ ಸಂಗತಿಗಳಿಂದ ವರ್ಣಿಸಿ ಇತಿಹಾಸದ ಪುಟಗಳನ್ನು ತುಂಬಲು ಇತಿಹಾಸಕೃರ್ತರಿಗೆ ಬೇಕಷ್ಟು ವಿಷಯಗಳಿವೆಂಬುದು ನಿಜ. ಆದರೆ ಈ ಕೃತ್ಯಗಳು ಸುಧಾರಿಸಿರುವ ಈ ಇಪ್ಪತ್ತನೆಯ ಶತಮಾನದಲ್ಲಿ ತೀರಾ ಅಪ್ರಶಕ್ತವಾಗಿವೆ.

ಈ ಪೂರ್ವಪರಂಪರೆಯನ್ನು ಸಮಾಲೋಚಿಸುವಾಗ ಲೋರ್ಡ ರೆಡಿಂಗರ ಪುನರಾಗಮನಕ್ಕೆ ಹಿಂದುಸ್ಥಾನವು ಅಷ್ಟೊಂದು ಸಂತೋಷಪಡಲಿಕ್ಕಿಲ್ಲ. ತಥಾಪಿ ನಾವು ಮೇಲೆ ಹೇಳಿದಂತೆ ಲೋರ್ಡ ರೆಡಿಂಗರು ಸ್ವತಃ ಉದಾರ ಭಾವನೆಯ ಪುರುಷರೆಂಬುದೊಂದು; ಇನ್ನೊಂದು, ಹಿಂದುಸ್ಥಾನದ ಲೋಕಮತವನ್ನು ಸ್ವತಃ ಕಾರ್ಯಕ್ಷೇತ್ರದಲ್ಲಿ ನಿಂತು ಅನುಭವಿಸಿ, ಅದನ್ನು ವಿಲಾಯತಿಯವರಿಗೆ ವೇದ್ಯವರಿಸಲು ಹೋಗಿ ಅಲ್ಲಿಂದ ಹಿಂದುಸ್ಥಾನಕ್ಕೆ ನವಯುಗವನ್ನು ತರಲು ಸಂಕಲ್ಪಿಸಿಕೊಂಡು ಅವರು ವಿಲಾಯತಿಗೆ ಹೋಗಿದ್ದರು. ಈ ಎರಡು ಕಾರಣಗಳಿಂದ ಲೋರ್ಡ ಸಾಹೇಬರ ಜೇಬಿನಲ್ಲಿ ಏನಾದರೂ ಅಪೂರ್ವ ವಸ್ತುವು ಇದ್ದೀತೆಂದೂ ಮತ್ತು ಅದನ್ನು ಅವರು ಎಸೆಂಬ್ಲಿಯ ಅಧಿವೇಶನದ ಕಾಲದಲ್ಲಿ ಬಿಚ್ಚಿ ತೋರಿಸುವವರಿದ್ದಾರೆಂದೂ ಬಹು ಕುತೂಹಲದಿಂದ ಅನೇಕರು ಅವರ ಈ ಪುನರಾಗಮನವನ್ನು ಸ್ವಾಗತೀಕರಿಸುತ್ತಿದ್ದಾರೆ. ಲೋರ್ಡ ರೆಡಿಂಗರ ಜೇಬಿನಲ್ಲಿ ಏನಿದೆ ಎಂಬುದನ್ನು ತಿಳಿದುಕೊಳ್ಳುವದು ಕುತೂಹಲಕ್ಕೆ ಕಾರಣಾಸ್ಪದವಾದುದೆಂದು ಕೆಲವರು ಭಾವಿಸುತ್ತಾರಾದರೂ ಕೆಲವು ದಿವಸಗಳ ಮುಂಚೆ ಬರ್ಕನ್‌ಹೆಡ್ ಸಾಹೇಬರು ಪಾರ್ಲಿಮೆಂಟಿನೊಳಗಿನ ಸ್ಪಷ್ಟೀಕರಣದ ನೆವದಿಂದ ರೆಡಿಂಗ ಸಾಹೇಬರ ಜೇಬಿನ ಬಾಯನ್ನೆ ಬಿಡಿಸಿ ತೋರಿಸಿದರೆಂದು ಹೇಳಬಹುದು. ಎಂದ ಮೇಲೆ ಇವರ ಜೇಬು ಬರೆ ಖಾಲಿಯಾಗಿದೆ ಎಂದು ವಿಧಿಸಿದರೆ ಅದು ಸುಳ್ಳಾಗಲಿಕ್ಕಿಲ್ಲ. ಒಂದು ವೇಳೆ ಅದರಲ್ಲಿ ಏನಾದರೂ ಇದೆ ಎಂದು ಗ್ರಹಿಸುವದಾದರೆ ಕಾಗದದಿಂದ ಅಥವಾ ಮರದಿಂದ ಮಾಡಿದ ಆಟದ ಸಾಮಾನುಗಳಲ್ಲದೆ ಇಲ್ಲವೆ ಗಾಜಿನ ಬೊಂಬೆಗಳಲ್ಲದೆ ಬೇರೆ ಏನೂ ಅದರಲ್ಲಿ ಇಲ್ಲವೆಂಬುದು ಖಂಡಿತ. ಅದ್ದರಿಂದ ಕುತೂಹಲಪೂರ್ಣರಾಗಿ ಆಷಾಢಭೂತಿಗಳಂತೆ ಎಸೆಂಬ್ಲಿಯ ಅಧಿವೇಶನದ ವರೆಗೆ ಅವರ ಕಡೆಗೆ ಬಾಯಿ ತೆರೆದು ನೋಡುವವರು ನೋಡಿಕೊಳ್ಳಲಿ. ಆ ಬಗ್ಗೆ ಅಂಥವರನ್ನು ಅಡ್ಡಗಟ್ಟಲಾಗುವದಿಲ್ಲ. ಪರಂತು ವಿಚಾರವಂತರು ಇದರ ಮರ್ಮವನ್ನು ತಿಳಿದೆ ಇದ್ದಾರೆ. ಈ ಮೇರೆಗೆ ಹಿಂದುಸ್ಥಾನಕ್ಕೆ ಲಾಭಕರವಾದ ಯಾವ ಹಕ್ಕನ್ನು ತಾರದೆ ಬರಗೈಯಿಂದ ಹಿಂದೂಸ್ಥಾನಕ್ಕೆ ತಿರುಗಿಬರಲು ಅವರಿಗಾದರೂ ಹೇಗೆ ಪೊರಯಿಸಿತು? ಪ್ರಕೃತದ ಸ್ಥಿತಿಯಲ್ಲಿ ಹಿಂದೂಸ್ಥಾನವು ಸಂತುಷ್ಟವಾಗಿಲ್ಲವೆಂದು ಮನಃಪೂರ್ವಕವಾಗಿ ತಿಳಿದು ಏನಾದರೂ ಹೊಸ ಅಧಿಕಾರಗಳನ್ನು ಸಂಪಾದಿಸಿಕೊಡಬೇಕು, ಕೊನೆಗೆ ಪ್ರಾಂತಿಕ ಸ್ವರಾಜ್ಯವಾದರೂ ಹಿಂದೂಸ್ಥಾನಕ್ಕೆ ಸಿಕ್ಕಬೇಕೆಂದು ಸಂಕಲ್ಪಿಸಿ ಇಲ್ಲಿಂದ ತೆರಳಿದ ವೈಸರಾಯರು ಸಂಕಲ್ಪಿತ ಫಲವನ್ನು ತರುವದರ ಬದಲಿಗೆ ತಾವೆ ಬರ್ಕನಹೆಡ್ಡರ ಬಲೆಯಲ್ಲಿ ಸಿಲುಕಿ ಬಿದ್ದಿರುವರಲ್ಲವೆ? ಎಂದು ಮುಂತಾಗಿ ಈ ಹೊತ್ತು ಯಾವ ಹಲ ಕೆಲವರು ಊಹಿಸಿಕೊಂಡಿದ್ದಾರೊ ಅವರ ಈ ಊಹನೆಯು ಉಳಿದವರಿಗೆ ಈ ಹೊತ್ತು ಸಂಶಯಗ್ರಸ್ತವಾದ ಭವಿಷ್ಯದ್‌ವಾದವಾದರೂ ವೈಸರಾಯರು ಎಸೆಂಬ್ಲಿಯಲ್ಲಿ ಬಾಯಿಬಿಟ್ಟ ಬಳಿಕ, ಜೇಬಿನ ಬಾಯಿಯನ್ನು ಬಿಡಿಸಿ ತೋರಿಸಿದ ಬಳಿಕ ಆಗ ಈ ಮಾತುಗಳು ಇತರರಿಗೂ ಭೂತ ಮತ್ತು ವರ್ತಮಾನ ಸಂಗತಿಗಳೆ ಆದಾವು. ಇರಲಿ. ಅಂತು ಹಿಂದುಸ್ಥಾನದ ಗವರ್ನರ್ ಜನರಲ್‌ರೂ, ವೈಸರಾಯರೂ ಆದ ಲೊ. ರೆಡಿಂಗ್ ದೊರೆಗಳು ಸ್ವದೇಶಕ್ಕೆ ಹೋಗಿ ಅಲ್ಲಿಯ ಮಿತ್ರಮಂಡಲದವರನ್ನೆಲ್ಲ ಕಂಡು ಪುನಃ ಹಿಂದುಸ್ಥಾನಕ್ಕೆ ಬಂದು ರಾಜ್ಯಸೂತ್ರಗಳನ್ನು ಕೈಕೊಂಡಿರುವರು. ಇಷ್ಟು ನಿಜ. ಮುಂದಿನ ಸಂಗತಿ ಮುಂದೆ!

ಸ್ಫುಟವಿಚಾರಗಳು.

೧. ಒಂದು ಒಂದೂವರೆ ವರ್ಷದ ಮುಂಚೆ ಮುಂಬಯಿಯ ಕೊರ್ಪೊರೇಶನು ಬ್ರಿಟಿಷ್ ಸಾಮ್ರಾಜ್ಯದ ವಸ್ತುಗಳ ಮೇಲೆ ಬಹಿಷ್ಕಾರವನ್ನು ಹಾಕಿದ್ದು ವಾಚಕರ ನೆನಪಿನಲ್ಲಿರಬಹುದು. ಈ ಬಹಿಷ್ಕಾರವು ಎಷ್ಟರ ಮಟ್ಟಿಗೆ ಕೆಲಸಮಾಡಹತ್ತಿದೆ ಎಂಬುದು ಮುಂಬಯಿ ಕೊರ್ಪೊರೇಶನಿನ ಕಮಿಶನರರು ಪ್ರಕಟಿಸಿರುವ ಮುಂದಿನ ಸಂಗತಿಯ ಮೇಲಿಂದ ಸ್ಪಷ್ಟವಾಗುತ್ತದೆ. ಮುಂಬಯಿ ಕೊರ್ಪೊರೇಶನು ಬಹಿಷ್ಕಾರವನ್ನು ಹಾಕಿದ ಬಳಿಕ ಅದರ ಕಮಿಶನರರು ನ್ಯೂಝಿಲಂಡದ ವಸಾಹತಿನ ಮಂತ್ರಿಗಳಿಗೆ ಇಲ್ಲಿಯ ಬಹಿಷ್ಕಾರ ಸಂಗತಿಯನ್ನು ಬರೆದು ತಿಳಿಸಿ 'ಹಿಂದಿಗಳನ್ನು ನಿಮ್ಮ ವಸಾಹತಿನಲ್ಲಿ ಯಾವ ರೀತಿಯಿಂದ ನಡಿಸುತ್ತೀರಿ' ಎಂಬುದಾಗಿ ಕೇಳಿದರು. ಅಲ್ಲಿಯ ಮಂತ್ರಿಗಳು ಹಿಂದಿಗಳಿಗೆ ಒಂದು ವರ್ಷ ವಾಸಿಸಿದ ಕೂಡಲೆ ವಸಾಹತದಾರನಿಗೆ ಇರುವ ಹಕ್ಕುಗಳನ್ನೆಲ್ಲ ಕೊಡುತ್ತೇವೆ, ಅವರಿಗೆ ಮತದಾನದ ಹಕ್ಕುಗಳು ಹಾಗು ಕೋರ್ಟುಗಳಲ್ಲಿ ಬೇಕಾಗಿರುವ ಇತರ ತರದ ಹಕ್ಕುಗಳು ಕೂಡ ಕೊಡಲ್ಪಟ್ಟಿವೆ ಎಂಬುದಾಗಿ ಉತ್ತರವನ್ನು ಕೊಟ್ಟಿರುವರು. ನ್ಯೂಝಿಲಂಡಿನ ಮಂತ್ರಿಗಳ ಈ ಉತ್ತರವು ಸಮಾಧಾನಕರವಾಗಿದೆ ಎಂಬುದಕ್ಕೆ ಸಂದೇಹವಿಲ್ಲ. ಬಿಸಿಯಾಗದೆ ಬೆಣ್ಣೆ ಕರಗದು ಎಂಬ ಅನುಭವಕ್ಕನುಸಾರವಾಗಿ ಮುಂಬಯಿ ಕೊರ್ಪೊರೇಶನು ಬಹಿಷ್ಕಾರದ ಸೆಕೆಯಿಂದ ಈ ಬೆಣ್ಣೆಯನ್ನು ಕರಗಿಸಲು ಯತ್ನಿಸಿದ್ದು ಸ್ತುತ್ಯವೆ ಸರಿ. ಹಿಂದಿಗಳಿಗೆ ನಾಗರಿಕತೆಯ ಹಕ್ಕನ್ನು ಕೊಡುವ ಸಂದರ್ಭವು ಬಂದ ಕೂಡಲೆ ಅವರು ಬ್ರಿಟಿಷ್ ಸಾಮ್ರಾಜ್ಯದೊಳಗಿನವರೆಂಬ ಮಾತನ್ನೆ ಮರೆತುಬಿಡುವದು ಅಲ್ಪತೆಯ ಮತ್ತು ಸ್ವಾರ್ಥಾಂಧತೆಯ ಲಕ್ಷಣವಲ್ಲವೆ? ಇತರ ಸಮಯಗಳಲ್ಲಿ ಮಾತ್ರ ಹಿಂದಿಗಳು ಸಾಮ್ರಾಜ್ಯದ ಭಾರವನ್ನೆತ್ತಬೇಕು! ಈ ಕುಟಿಲ ನೀತಿಗೆ ಆ ಸಾಮ್ರಾಜ್ಯದ ಅಭಿಮಾನವನ್ನು ತೊರೆದು ಸಾಮ್ರಾಜ್ಯದ ವಸ್ತುಗಳ ಮೇಲೆ ಸಕ್ರಿಯವಾದ ಬಹಿಷ್ಕಾರವನ್ನು ಹಾಕುವದೆ ಸಮರ್ಪಕವಾದ ಉತ್ತರವಾಗಿದೆ. ನ್ಯೂಝಿಲಂಡ ವಸಾಹತು ಮಾತ್ರ ಈ [illegible]ದಿಂದ ಕಣ್‌ತೆರದಿದೆ. ದಕ್ಷಿಣ ಆಫ್ರಿಕದಂಥವು ಸ್ವಾರ್ಥದ ಗೋಣಿಯಲ್ಲಿ ಅಡಗಿಕೊಂಡಿರುವ ವಸಾಹತುಗಳು, ಇನ್ನೂ ಇವೆ. ಅವುಗಳು ಎಂದು ಕಣ್ಣು ತೆರೆಯುವವೊ, ನೋಡಬೇಕು.

೨ ಮದ್ರಾಸಿನ ಕೊರ್ಪೊರೇಶನಿನ ಸಭಾಸದರ ಖಾಲಿಯಾದ ಜಾಗೆಗಳ ಚುನಾವಣೆಯು ಮುಗಿದು ಆ ಎಲ್ಲ ಜಾಗೆಗಳಲ್ಲಿ ಕೊಂಗ್ರೆಸ ಮತ್ತು ಸ್ವರಾಜ್ಯಪಕ್ಷದ ಸಭಾಸದರೆ ಚುನಾಯಿಸಿ ಬಂದಿರುವರೆಂಬುದನ್ನು ತಿಳಿಸಲು ನಾವು ಸಂತೋಷಪಡುತ್ತೇವೆ. ಮದ್ರಾಸಿನ ಕೊರ್ಪೊರೇಶನಿನಲ್ಲಿ ವರ್ಷವರ್ಷಕ್ಕೆ ೧೦ ಜಾಗೆಗಳು ಖಾಲಿ ಬೀಳುತ್ತವೆ. ಎಂದ ಮೇಲೆ ಈ ವರ್ಷವೆ ಅಲ್ಲಿಯ ಎಲ್ಲ ಚುನಾವಣೆಯ ಪ್ರತಿನಿಧಿಗಳು ರಾಷ್ಟ್ರೀಯ ಸಭೆಯವರಾಗಲು ಸಾಧ್ಯವಿಲ್ಲ. ಈ ಸಾರೆ ರಾಷ್ಟ್ರೀಯ ಸಭೆಯ ಮತ್ತು ಸ್ವರಾಜ್ಯಪಕ್ಷದ ಪರವಾಗಿ ನಿಂತವರೆ ಯಶಸ್ವಿಗಳಾಗಿರುವರು. ಇವರಿಗೆದುರಾಗಿ ಜಸ್ಟಿಸ್ ಪಕ್ಷದವರು ನಿಂತಿದ್ದರು. ಅವರೆಲ್ಲರೂ ಪರಾಜಿತರಾದರು. ಇದು ವರೆಗೆ ಚುನಾಯಿಸಿ ಬಂದ ಸಭಾಸದರ ಸಂಖ್ಯೆಯು ೧೦ ಇರುವದು. ಇಷ್ಟರಿಂದಲೆ ಕೊರ್ಪೊರೇಶನಿನಲ್ಲಿ ರಾಷ್ಟ್ರೀಯ ಸಭಾನುಯಾಯಿಗಳ ಬಹುಮತವುಂಟಾಗುವುದಿಲ್ಲವೆಂಬುದು ಸ್ಪಷ್ಟವು. ಕೊರ್ಪೊರೇಶನಿನಲ್ಲಿ ಎಲ್ಲ ಸಭಾಸದರು ೫೦ ಇರುವುದರಿಂದ ಬಹುಮತವು ಇವರ ಕೈಗೆ ಬರಬೇಕಾದರೆ ಇನ್ನೂ ಒಂದೆರಡು ಚುನಾವಣೆಗಳು ಬರಬೇಕೆಂಬುದು ನಿಜ. ಆದರೂ ಈಗಿನ ಅಲ್ಪಾರಂಭದಲ್ಲಿ ಈ ಮೇರೆಗೆ ಸಿಕ್ಕಿದ ಯಶಸ್ಸು ಇದೇನಾದರೂ ಕಡಿಮೆಯಲ್ಲ. ಮುಂದಿನ ಯಶಸ್ಸಿನ ಇದು ಪೂರ್ವ ಸೂಚನೆಯೆ ತಿಳಿಯಬೇಕು. ಕೊಂಗ್ರೆಸ ಪಕ್ಷದವರು ಮುನ್ಸಿಪಾಲಿಟಿಗಳಲ್ಲಿ ಪ್ರವೇಶಿಸಿದ ಬಳಿಕ ಅಲ್ಲಿ ಅವರು ಯಾವ ಯಾವ ಕಾರ್ಯಗಳನ್ನು ಮಾಡತಕ್ಕದೆಂಬುದನ್ನು ಆ ಪಕ್ಷದವರು ನಿರ್ಣಯಿಸಿರುವುದರಿಂದ ಆ ಪ್ರಕಾರವಾಗಿ ಅವರು ನಡಕೊಂಡಾರೆಂಬುದಕ್ಕೆ ಅಡ್ಡಿ ಇಲ್ಲ. ಆದ್ದರಿಂದ ಆ ಬಗ್ಗೆ ನಾವೇನೂ ಬರೆಯುವುದಿಲ್ಲ. ಮದ್ರಾಸ, ಮುಂಬಯಿ, ಕಲಕತ್ತಾ ಇತ್ಯಾದಿ ಕಡೆಗಳಲ್ಲಿಯ ಸ್ಥಳಿಕ ಸ್ವರಾಜ್ಯ ಸಂಸ್ಥೆಗಳನ್ನು ರಾಷ್ಟ್ರೀಯ ಸಭೆಯವರು ಆಕ್ರಮಿಸಿ ಅವುಗಳನ್ನು ಲೋಕಸತ್ತೆಯ ಸಂಸ್ಥೆಗಳನ್ನಾಗಿಮಾಡಬೇಕೆಂದು ಈಗ ನಿರ್ವಿವಾದ ವಿಷಯವಾಗಿದೆ. ಈ ತತ್ವಕ್ಕನುರೋಧವಾಗಿ ಮದ್ರಾಸಿನ ರಾಷ್ಟ್ರೀಯ ಸಭಾನುಯಾಯಿಗಳು ನಿರಲಸರೀತಿಯಿಂದ ಯತ್ನಿಸಿ ಯಶಸ್ಸನ್ನು ಸಂಪಾದಿಸಿದುದಕ್ಕಾಗಿ ಅವರನ್ನು ಅಭಿನಂದಿಸದೆ ನಮ್ಮಿಂದಿರಲಾಗದು.

೩. ಈ ಸಂದರ್ಭದಲ್ಲಿ ನಮ್ಮ ಮಂಗಳೂರ ಮುನ್ಸಿಪಾಲಿಟಿಯ ಮತದಾರರಿಗೆ ಒಂದು ಮಾತನ್ನು ಹೇಳಲು ಇಚ್ಛಿಸುವೆವು. ಮದ್ರಾಸಿನಲ್ಲಿ, ಮುಂಬಯಿಯಲ್ಲಿ 'ಅಂಥ ಕಡೆಯಲ್ಲಿ ಇಂಥ ಕಡೆಯಲ್ಲಿ' ಎಂಬುದಾಗಿ ಇತರ ಊರುಗಳಲ್ಲಿ ಕೊಂಗ್ರೆಸಿನ ಪರವಾಗಿ ಇಂತಿಂಥ ಕೆಲಸಗಳಾಗಿವೆ ಎಂದು ಮುಂತಾದ ಸುದ್ದಿಗಳನ್ನೆ ಓದಿ ಅಭಿಮಾನಪೂರ್ವಕವಾಗಿ ಸಂತೋಷಪಡತಕ್ಕ ಜನರು ನಮ್ಮಲ್ಲಿ ಅನೇಕರಿದ್ದಾರೆ. ಮದ್ರಾಸಿನ ಕೊರ್ಪೊರೇಶನಿನಲ್ಲಿ ಕೊಂಗ್ರೆಸ್ ಉಮೇದುವಾರರು ಯಶಸ್ವಿಗಳಾಗಿ ಬಂದರೆಂಬ ಸುದ್ದಿಯನ್ನೋದಿ ಕೌತುಕಪಡುವವರು ನಮ್ಮ ಪಟ್ಟಣದಲ್ಲಿ ಧಾರಾಳವಾಗಿದ್ದಾರೆ. ಆದರೆ ಯಾವ ಮತದಾರರು ಬೇರೆ ಕಡೆಯ ಸುದ್ದಿಗಳಿಂದ ಈ ಪ್ರಕಾರವಾಗಿ ಆನಂದಿತರಾಗುವರೊ ಅವರು ತಾವು ಮತಗಳನ್ನು ಕೊಡುವ ಪ್ರಸಂಗವು ಬಂದ ಕೂಡಲೆ ಅದೆಲ್ಲವನ್ನು ಮರೆತು ಬಿಟ್ಟು "ಈ ಉಮೇದುವಾರಿಕೆ ನಮ್ಮೂರಿಗಲ್ಲ, ಅದೆಲ್ಲ ಮದ್ರಾಸಿಗೆ ಚಂದ"ವೆಂದು ಭಾವಿಸಿ ನಮ್ಮ ಪೂರ್ವಿಕರು ನಟ್ಟ ಗೋಳಿ ಮರವೆಂಬ ನ್ಯಾಯದಂತೆ ಅಶೋಕನ ಕಾಲದ ತತ್ವಗಳನ್ನೆ ಅನುಸರಿಸಹತ್ತುತ್ತಾರೆ! ಈ ತರದ ಮನಸ್ಸುಳ್ಳವರು ರಾಷ್ಟ್ರೀಯ ಸಭೆಯ ಅನುಯಾಯಿಗಳೆಂದು ಸರ್ವಥಾ ಹೇಳಲಾಗುವುದಿಲ್ಲ. ಉಮೇದುವಾರನು ಮತವನ್ನು ಕೇಳಲು ಬಂದಾಗ ಅವನ ಪಕ್ಷ, ಉದ್ದೇಶ, ಪ್ರತಿಜ್ಞೆ ಇತ್ಯಾದಿ ಒಂದನ್ನೂ ವಿಚಾರಿಸದೆ ಅವನು ಬರೆ ಇಂತಿಂಥವನಿದ್ದಾನೆ ಎಂದು ಏನಾದರೂ ಭಾವಿಸಿಕೊಂಡು ಮತಗಳನ್ನುಕೊಡುವ ಪದ್ಧತಿಯು ಯಾವ ವರೆಗೆ ಜಾರಿಯಲ್ಲಿರುವದೊ ಆ ವರೆಗೆ ಅವರು ಆ ಸಂಸ್ಥೆಯ ಅಭ್ಯುದಯಾಕಾಂಕ್ಷಿಗಳಾದ ಮತದಾರರೆಂದೆನ್ನಿಸಿಕೊಳ್ಳಲು ಪಾತ್ರರಲ್ಲವೆಂದೆ ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಆದರೆ ಒಂದು ಸಂಗತಿಯನ್ನು ಇಲ್ಲಿ ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಅದಾವುದೆಂದರೆ, ಇದು ವರೆಗೆ ನಮ್ಮ ಪಟ್ಟಣದಲ್ಲಿ ರಾಷ್ಟ್ರೀಯ ಸಭೆಯ ಹೆಸರಿನಿಂದ ಉಮೇದುವಾರರು ನಿಂತಿರಲಿಲ್ಲ. ಆದ್ದರಿಂದ ಮತದಾರರನ್ನು ಟೀಕಿಸಲು ಸಾಧ್ಯವಿಲ್ಲವೆಂಬುದು ನಿಜ. ಆದರೆ ಮತದಾರರ ನಗರಹಿತದ ಬುದ್ಧಿಯನ್ನು ಪರೀಕ್ಷಿಸುವ ಸಂದರ್ಭವು ಬೇಗನೆ ಬರುತ್ತಿದೆ. ನಮ್ಮ ಪಟ್ಟಣದಲ್ಲಿಯ ಮುನ್ಸಿಪಾಲಿಟಿಯ ಕೆಲವು ಜಾಗೆಗಳು ಬೇಗನೆ ಖಾಲಿಯಾಗುವದಿರುವುದರಿಂದ ಇಲ್ಲಿಯ ಸ್ವರಾಜ್ಯಪಾರ್ಟಿ ಮತ್ತು ಕೊಂಗ್ರೆಸ್ ಕಡೆಯವರು ತಮ್ಮ ಪಕ್ಷದ ಉಮೇದುವಾರರನ್ನು ನಿಲ್ಲಿಸಿರುವರೆಂದು ಇನ್ನೊಂದು ಕಡೆಯಲ್ಲಿ ಪ್ರಕಟಿಸಿದ ಶ್ರೀ. ಅ. ಭೋಜರಾಯರ ವಿನಂತಿ ಪತ್ರದಿಂದ ವಾಚಕರಿಗೆ ಕಂಡುಬಂದಿದೆ. ಈ ಉಮೇದುವಾರರ ಪೈಕಿ ಶ್ರೀ. ಕಾರ್ನಾಡ ಸದಾಶಿವರಾಯರೊಬ್ಬರನ್ನು ಬಿಟ್ಟು ಮಿಕ್ಕವರು ಮುನ್ಸಿಪಾಲಿಟಿ ಮಟ್ಟಿಗೆ ಹೊಸಬರೆಂಬುದು ಹೌದಾದರೂ ಆ ಬಗ್ಗೆ ಯಾವ ಮತದಾರನೂ ಸಾಶಂಕನಾಗಲಿ, ಧೈರ್ಯಗೆಟ್ಟವನಾಗಲಿ ಆಗುವದು ಅಗತ್ಯವಿಲ್ಲ. ಕೊಂಗ್ರೆಸ್ ಪಕ್ಷದ ಪರವಾಗಿ ನಿಲ್ಲುವವರಾದ ಕಾರಣ ಇವರ ಕಾರ್ಯಗಳೆಲ್ಲ ಆ ಪಕ್ಷದಿಂದ ನಿಯಮಿಸಿದ ಮೇರೆಗೆ ಆಗುವವು ಅದ್ದರಿಂದ ಮಂಗಳೂರ ಮುನ್ಸಿಪಾಲಿಟಿಯ ಮತದಾರರು ರಾಷ್ಟ್ರೀಯ ಪಕ್ಷದ ಸಭಾಸದರನ್ನೆ ಚುನಾಯಿಸಿಕೊಟ್ಟು ತಮ್ಮ ಸದಭಿರುಚಿಯನ್ನೂ, ದೇಶವತ್ಸಲತೆಯನ್ನೂ, ರಾಷ್ಟ್ರೀಯ ಸಭಾಭಿಮಾನವನ್ನೂ ವ್ಯಕ್ತಗೊಳಿಸಿಯಾರೆಂದು ನಂಬಿದ್ದೇವೆ.

೪. ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಪಟ್ಟ ಕಾಸರಗೋಡ ತಾಲೂಕಿನ ತೆಂಕು ದಿಕ್ಕಿನ ಭಾಗವೆಲ್ಲ ಮಲಿಯಾಳಿಗಳಿಂದ ವ್ಯಾಪಿಸಿರುವದರಿಂದ ಅಷ್ಟು ಭಾಗವನ್ನು ದ. ಕನ್ನಡ ಜಿಲ್ಲೆಯಿಂದ ತೆಗೆದು ಮಲಬಾರ ಜಿಲ್ಲೆಗೆ ಕೂಡಿಸಬೇಕೆಂಬುದಾಗಿ ತಿರಕಾರಪೂರಿನ ಹಲವು ಮಲಬಾರಿ ಗೃಹಸ್ಥರು ಚಳವಳವನ್ನು ಎಬ್ಬಿಸುತ್ತಿದ್ದಾರೆಂಬ ವಾರ್ತೆಯು ನಮ್ಮ ಕಡೆಗೆ ಬಂದಿದೆ. ವಸ್ತುತಃ ಕಾಸರಗೋಡಿನ ಅತ್ತ ಕಡೆಯ ಸೀಮೆಯು ಮಲಬಾರಿಗಳಿಂದ ತುಂಬಿಕೊಂಡಿದೆ ಎಂಬುದು ಸುಳ್ಳಲ್ಲ. ಮೂಲ ವಿದ್ಯಾಭ್ಯಾಸ, ಕೊರ್ಟು ಕಚೇರಿಗಳಲ್ಲಿಯ ಬರಹ, ಮಾತು ಇವೆಲ್ಲ ಅತ್ತ ಕಡೆಗೆ ಮಳಿಯಾಳಿಭಾಷೆಯಿಂದಲೆ ನಡೆಯುತ್ತಿವೆ. ಅತ್ತಲಾಗಿನ ಪ್ರಾಥಮಿಕ ಶಾಲೆಗಳು ಮಲಿಯಾಳವನ್ನು ಕಲಿಸಿಕೊಡುತ್ತವೆ. ಅತ್ತ ಕಡೆಯ ಸಾಕ್ಷಿಯವರ ವಿಚಾರಣೆಯು ಕಾಸರಗೋಡಿನ ಕೋರ್ಟು ಕಚೇರಿಗಳಲ್ಲಿ ಮಲಯಾಳ ಭಾಷೆಯಲ್ಲಿ ನಡೆಯಲು ಪ್ರತಿಬಂಧವಿಲ್ಲ. ಈ ಮೇರೆಗೆ ಮಲಬಾರಿನಲ್ಲಿ ಸೇರಿಸುವದರಿಂದ ಯಾವ ಪ್ರಯೋಜನವು ಸಿಕ್ಕಬೇಕಾಗಿದೆಯೊ ಆ ಪ್ರಯೋಜನಗಳು ಅಲ್ಲಿಯ ಮಲಬಾರಿಗಳಿಗೆ ಮುಂಚಿನಿಂದಲೆ ಸಿಕ್ಕುತ್ತಿವೆ. ಜಿಲ್ಲಾ ಕೋರ್ಟಿನ ಸಲುವಾಗಿಯೂ, ಜಿಲ್ಲಾ ಕಲೆಕ್ಟರರ ಆಫೀಸಿನಲ್ಲಿ ಕೆಲಸವಿದ್ದರೆ ಅದಕ್ಕಾಗಿಯೂ ಅವರಿಗೆ ಮಂಗಳೂರಿಗೆ ಬರಬೇಕಾಗುತ್ತದೆ. ಆಗ ಅವರಿಗೆ ಕೆಲವು ಮಟ್ಟಿಗೆ ಕನ್ನಡವನ್ನು ಪ್ರಯೋಗಿಸಬೇಕಾಗುತ್ತದೆ. ಮತ್ತು ಈ ಕೆಲಸವು ಅವರಿಗೆ ತೊಂದರೆಯದಾಗುತ್ತದೆಂಬುದು ನಿಜ. ಆದರೆ ಇಂಥ ಪ್ರಸಂಗಗಳು ಬಹು ಅಪರೂಪವಾದವುಗಳು. ಈ ವಿಷಯವು ಹೇಗೂ ಇರಲಿ, ಯಾರಿಗೆ ನಮ್ಮೊಟ್ಟಿಗೆ ಇರಲು ಸಂತೋಷವಿಲ್ಲವೊ ಅಂಥವರನ್ನು ಬಿಟ್ಟುಬಿಡುವದು ನಮ್ಮ ಸುಖಕ್ಕೂ, ಅವರ ಹಿತಕ್ಕೂ ಕಾರಣವಾಗುತ್ತದೆ. ಆದ್ದರಿಂದ ಅವರ ಅಂಬೋಣದಂತೆ ಅವರನ್ನು ಬಿಡುವದಾದರೆ ಈ ಜಿಲ್ಲೆಯ ಉಳಿದ ಭಾಗ ಮತ್ತು ಉತ್ತರ ಕನ್ನಡ ಇವೆರಡನ್ನು ಒಟ್ಟಿಗೆ ಸೇರಿಸಿ ಆ ಎರಡನ್ನೂ ಯಾವದಾದರೂ ಒಂದೆ ಸಂಸ್ಥಾನದ ಕೈಕೆಳಗೆ ಇರಗೊಡುವದು ಸಮಂಜಸವೂ ಲಾಭವವೂ ಅಲ್ಲವೆ? ಈ ಪ್ರಶ್ನೆಯನ್ನು ಎಲ್ಲರೂ ಆಲೋಚಿಸುವದು ಅವಶ್ಯವು.

೫. ಪಂಜಾಬದೊಳಗಿನ ಪಾನಿಪತದಲ್ಲಿ ಮೊಹರಮಿನ ಕಾಲದಲ್ಲಿ ಯಾವ ದಂಗೆಯಾಗಿತ್ತೊ ಅದರ ದೋಷವನ್ನೆಲ್ಲ ಹಿಂದುಗಳ ಮೇಲೆ ಮತ್ತು ಹಳ್ಳಿಯವರ ಮೇಲೆ ಹಾಕಿದ್ದರು ಈ ವಿಷಯವಾಗಿ ಆರ್ಯ ಸಮಾಜದ ಮುಖ್ಯಸ್ಥರಾದ ಸ್ವಾಮಿ ಶ್ರದ್ಧಾನಂದಜಿಯವರು ಸ್ವತಃ ಪಾನಿಪತಕ್ಕೆ ಹೋಗಿ ಅಲ್ಲಿ ಉಂಟಾದ ಸ್ಥಿತಿಯನ್ನು ತಿಳಕೊಂಡು ಎಲ್ಲವರ ತಿಳುವಳಿಕೆಯ ಬಗ್ಗೆ ಜಾಹೀರುಪಡಿಸುತ್ತಾರೇನೆಂದರೆ ಹಿಂದುಗಳನ್ನು ತಪ್ಪುಗಾರರನ್ನಾಗಿ ತಿಳಿಯುವುದು ಯುಕ್ತವಲ್ಲ, ಈ ಉಪಕ್ರಮವು ಹಿಂದುಗಳಿಗುಂಟಾದದ್ದಲ್ಲ ಎಂಬಿತ್ಯಾದಿ ಎಲ್ಲ ವಿಷಯಗಳನ್ನು ಆಧಾರಪೂರ್ವಕವಾಗಿ ಬರೆದಿರುವರು. ಎಸೆಂಬ್ಲಿಯ ಸಭಾಸದರಾದ ಲಾಲಾಧುನಿಚಂದರೆಂಬವರಾದರೂ ಇದೇ ಅಭಿಪ್ರಾಯವನ್ನು ವ್ಯಕ್ತಗೊಳಿಸಿದ್ದಾರೆ. ಎಂದಮೇಲೆ ಬಡ ಹಿಂದುಗಳನ್ನು ನಿಷ್ಕಾರಣವಾಗಿ ಕಾಡುವುದು ಉಚಿತವಲ್ಲವೆಂದು ಒಂದು ಚಿಕ್ಕ ಮಗುವಾದರೂ ಹೇಳಬಲ್ಲುದು. ಆದರೂ ಕೆಲವರಿಗೆ ಪೂರ್ವಾಪರ ಸಂಗತಿಯನ್ನಾಗಲಿ, ವಸ್ತುಸ್ಥಿತಿಯನ್ನಾಗಲಿ, ಸಂಭವಾಸಂಭವವನ್ನಾಗಲಿ, ಯಾವದನ್ನೂ ವಿಚಾರಕ್ಕೆ ತೆಕ್ಕೊಳ್ಳದೆ ಹಿಂದುಗಳನ್ನೆ ಬೈದುಬಿಡುವ ಅಭ್ಯಾಸವಿರುವುದು. ಅಂಥವರು ಪಾನಿಪತದ ದಂಗೆಯ ಮಡಿಕೆಯನ್ನು ಹಿಂದುಗಳ ತಲೆಯ ತಲೆಯ ಮೇಲೆಯೆ ಒಡಿಯಲುದ್ಯುಕ್ತರಾಗಿರುತ್ತಾರೆ. ಇಂಥವರ ಸಮಾಧಾನವನ್ನು ಬರ್ತೃಹರಿಯ ಹೇಳಿದಂತೆ "ಬ್ರಹ್ಮಾಪಿತಂ ನರಂ ನರಂಜಯತಿ" ಬ್ರಹ್ಮನು ಕೂಡ ಮಾಡಲಾಪನು. ಆದರೂ ಸತ್ಯವು ಲೋಕಕ್ಕೆ ತಿಳಿದಿರಬೇಕಾದ್ದರಿಂದ ಸತ್ಯಪ್ರಿಯರಿಗಾಗಿ ಈ ಸಂಗತಿಗಳನ್ನು ಬಹಿರಂಗಪಡಿಸುವುದು ಅವಶ್ಯಕ್ತವಾಗಿದೆ. ಕಲಕತ್ತೆಯಲ್ಲಿ ಹಿಂದುಗಳೆ ಆ ದಂಗೆಯ ಕೆಸರುಕಲ್ಲನ್ನು ಹಾಕಿದರೆಂದು ಹೇಗೆ ಪ್ರಥಮತಃ ಅವರ ಮೇಲೆ ಆರೋಪಣೆಯು ಬಂದಿತ್ತೋ ಹಾಗೆಯೇ ಈ ಪಾನಿಪತದ ವಿಷದಲ್ಲೂ ಆಗಿದೆ ಎಂದು ಉತ್ತರ ದೇಶದ ಎಷ್ಟೊ ಪತ್ರಿಕೆಗಳು ಬರೆಯುತ್ತಿದ್ದಾವೆ. ಈ ಎಲ್ಲ ವಿಷಯವನ್ನು ಶಾಂತರೀತಿಯಿಂದ ಆಲೋಚಿಸುವುದು ಅಗತ್ಯ.

ಮಂಗಳೂರು.

ತಾ. ೨೪—೭—'೨೫ರಲ್ಲು ಕಾಯಿಪಲ್ಯ ಮಾರಾಟದ ಜೇಡಿಗುಡ್ಡೆಯಲ್ಲಿ ಪೋಲೀಸಿನವರು ಹಿಡಿದ ಜುಗಾರಿ ಮೊಕದ್ದಮೆಯಲ್ಲಿ ೪ ಜನರಿಗೆ ಪ್ರತಿ ಒಬ್ಬನಿಗೆ ೮ ದಿವಸಗಳ ಸಜೆಯೂ ೪ ಜನರಿಗೆ ಜುಲುಮಾನೆಯೂ ವಿಧಿಸಿಯದೆ.

ಗೋಳಿಕಟ್ಟಾ ಬಜಾರು ಶಂಭುಲಾಲ್ ನಾಥಾಲಾಲ್ ಇವರಲ್ಲಿಂದ ಸಾವಿರ ರೂಪಾಯಿ ಮೌಲ್ಯದ ಚಿನ್ನಾಭರಣ ಸಮೇತ ಪರಾರಿಯಾದ ಇವರ ನೌಕರ ವಾಲಜಿ ಎಂಬವಗೆ ಸೊತ್ತು ಸಮೇತ ಕುಂಬಳೆಯಲ್ಲಿ ಪೋಲೀಸಿನವರು ದಸ್ತಗಿರಿ ಮಾಡಿರುತ್ತಾರೆ.

ಗೌಡಸಾರಸ್ವತ ಬ್ರಾಹ್ಮಣ ಮಹಾ ಸಭೆಯ ವಾರ್ಷಿಕ ಸರ್ವಸಾಧಾರಣ ಸಭೆಯು ೧೯೨೫ನೆ ಅಗೋಸ್ತು ತಾ. ೯ನೆಯ ಆದಿತ್ಯವಾರ ಸೇರಿತು. ಮುಂದಿನ ಗೃಹಸ್ಥರು ಕಾರ್ಯಕಾರಿ ಮಂಡಲದ ಅಧಿಕಾರಿಗಳಾಗಿ ಚುನಾಯಿಸಲ್ಪಟ್ಟಿರುವರು. ಮ|| [illegible]. ವಾಸುದೇವಮಲ್ಯ (ಅಧ್ಯಕ್ಷರು), ಮ|| ರಾ|| ಯುಸ್. [illegible] (ಉಪಾಧ್ಯಕ್ಷರು), ಮ|| ರಾ|| ವಿ. ವೆಂಕಟರಾವ್ (ಕಾರ್ಯದರ್ಶಿಗಳು), ಮ|| ರಾ|| ಯುಮ್. ಯುನ್. ಕಿಣಿ (ಕೋಶಾಧ್ಯಕ್ಷರು). ಇವರಲ್ಲದೆ, ಕಾರ್ಯಕಾರಿ ಮಂಡಲದಲ್ಲಿ ಪ್ರಸಿದ್ಧ ಸದ್‌ಗೃಹಸ್ಥರಿರುವರು. ಈ ನಿರ್ಣಯಗಳಾದುದಲ್ಲದೆ ಸಭೆಯಲ್ಲಿ ಮಹಾ ಸಭೆಯ ಉದ್ದೇಶಗಳನ್ನು ಸಫಲಗೊಳಿಸುವ ರೀತಿಯನ್ನು ಸೂಚಿಸುವ ಅನೇಕ ವಿಷಯಗಳು ಚರ್ಚಿಸಲ್ಪಟ್ಟು ಕಾರ್ಯಕ್ರಮವು ತಯಾರಿಸಲ್ಪಟ್ಟಿದೆ. ಗೌಡಸಾರಸ್ವತ ಮಹಾ ಸಭೆಯ ವಾರ್ಷಿಕ ಸರ್ವಸಾಧಾರಣ ಸಭೆಯು ಇನ್ನು ಮುಂದೆ ಗೌಡಸಾರಸ್ವತ ಬ್ರಾಹ್ಮಣ ಕ್ಲಬ್ಬಿನ ದಿನಾಚರಣೆಯ ದಿವಸವೆ ಸೇರತಕ್ಕದ್ದೆಂಬುದಾಗಿಯೂ ನಿರ್ಣಯಿಸಲ್ಪಟ್ಟಿತೆಂದು ಗೌಡಸಾರಸ್ವತ ಬ್ರಾಹ್ಮಣ ಮಹಾ ಸಭೆಯ ಕಾಯದರ್ಶಿಗಳಾದ ಮ|| ರಾ|| ನಗರ ವೆಂಕಟರಾಯರು ತಿಳಿಸುತ್ತಾರೆ.

ಕಳೆದ ವಾರ ಜರಗಿದ್ದ ಇಲ್ಲಿನ ಸ್ವರಾಜ್ಯ ಪಕ್ಷದವರ ಸಭೆಯಲ್ಲಿ ಬರುವ ಮುನಿಸಿಪಲ್ ಮೆಂಬರರ ಚುನಾವಣೆಯಲ್ಲಿ ತಮ್ಮ ಕಡೆಯಿಂದ ಕೊಡಿಯಾಲ ಬೈಲು ವೆಸ್ಟ್ ವಾರ್ಡಿಗೆ ಶ್ರೀ. ಎಮ್. ಕೆ. ವೈದ್ಯರನ್ನೂ, ಮಾರ್ಕೆಟ್ ವಾರ್ಡಿಗೆ ಶ್ರೀ. ಎಮ್. ಸಂಜೀವರಾಯರನ್ನೂ, ಜಪ್ಪು ವಾರ್ಡಿಗೆ ಶ್ರೀ. ಎಸ್. ಬಿ. ಭಿಡೆಯವರನ್ನೂ, ಕೋರ್ಟುವಾರ್ಡಿಗೆ ಶ್ರೀ. ಯು. ಸಿ. ಸುಬ್ರಹ್ಮಣ್ಯ ಭಟ್ಟರನ್ನೂ ಉಮೇದ್ವಾರರಾಗಿ ನಿಲ್ಲಿಸಬೇಕೆಂದೂ, ಚುನಾವಣೆಯ ಖರ್ಚನ್ನು ಪಾರ್ಟಿಯ ಫಂಡಿನಿಂದಲೇ ಮಾಡಿಕೊಳ್ಳಬೇಕೆಂದೂ, ಸ್ಥಳೀಕ ಕೊಂಗ್ರೆಸ್ ಕಮಿಟಿಯೊಂದಿಗೆ ಕೆಲಸ ನಡಿಸಬೇಕೆಂದೂ, ನಿರ್ಣಯಿಸಲ್ಪಟ್ಟಿದೆ. ಗೋಳಿಕಟ್ಟೆ ವಾರ್ಡಿನಿಂದ ಉಮೇದ್ವಾರರಾಗುವ ಶ್ರೀ. ಕಾರ್ನಾಡು ಸದಾಶಿವರಾಯರಿಗೆ ತಮ್ಮ ಸಹಾಯಕೊಡಬೇಕೆಂದೂ ನಿರ್ಧರಿಸಿರುರೆಂಬುದಾಗಿ ಶ್ರೀ. ಅ. ಭೋಜರಾಯರಿಂದ ಬರೆದುಬಂದಿರುವುದು.

The Calicut Bank, Ltd.,
ದಿ ಕೆಲಿಕಟ್ ಬೇಂಕ್, ಲಿಮಿಟೆಡ್,
ಹೆಡ್ ಆಫೀಸು — ಕಲ್ಲಿಕೋಟೆ.
ಬ್ರಾಂಚುಗಳು:— ಮುಲ್ಲಸ್‌ಚೇರಿ, ತಲಚೇರಿ, ಕೊಚ್ಚಿ ಮತ್ತು ಪಾಲ್ಘಾಟು.
ರಿಜಿಸ್ಟರ್ಡ್ ಮತ್ತು ಅಧಿಕಾರಗೊಳಿಸಲ್ಪಟ್ಟ ಮೂಲಧನ ರೂ. 5,00,000—0—0.
ರೂಪಾಯಿ 10ರ 50,000 ಪಾಲುಗಳು.
(30—8—1924)ರ ವರೆಗೆ ಮೌಲ್ಯ ಮೂಲಧನ ರೂಪಾಯಿ 1,81,850—0—0.
ಒಂದು ವರುಷದ ಕಾಯಂ ಠೇವಣಾತಿಗೆ ಬಡ್ಡಿ ದರ ಸೇಕಡಾ ರೂ. 7—8—0.
ಕಳೆದ 4 ವರುಷಗಳಲ್ಲಿ ಪಾಲುಗಾರರಿಗೆ ಸೇಕಡಾ 12ರಂತೆ ಬಡ್ಡಿ ಹಂಚಿದೆ.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.
ಸಿ. ಕೃಷ್ಣನ್, ಬಿ. ಎ. ಬಿ. ಎಲ್.,
ಮೆನೇಜಿಂಗ್ ಡ್ಯಾರೆಕ್ಟರ್.
ಡ್ಯಾರೆಕ್ಟರರಲ್ಲಿ ಒಬ್ಬರು—
ಎಮ್. ನಾರಾಯಣ ಕಾಮತ್, ಬಿ. ಎ.,
ಪ್ಲೀಡರ್, ಕುಂದಾಪುರ.

ಮುಂಬಯಿ ಸ್ಟೀಮ್ ನೆವಿಗೇಶನ್ ಕಂಪೆನಿಯ ಹಡಗವು ಬರುವ ತಿಂಗಳ ತಾ· ೧೭ಕ್ಕೆ ಮುಂಬಯಿಂದ ಹೊರಟು ತಾರೀಕು ೨೦ಕ್ಕೆ ಇಲ್ಲಿಗೆ ತಲಪುವುದು.

ಕಳೆದ ಐದು ವರ್ಷಗಳಲ್ಲಿ, ಅಗೋಸ್ತು ೧ನೇ ತಾರೀಕಿಗೆ ಅಂತ್ಯವಾಗುವ ಸಪ್ತಾಹದಲ್ಲಿ ಮಂಗಳೂರಲ್ಲಿ ೧೫, ೨೮, ೨೮, ೧೭, ೧೪ ಹೀಗೆ ಮರಣಗಳಿದ್ದುವೆಂದೂ, ಈ ವರ್ಷ ಅದೇ ಸಪ್ತಾಹದಲ್ಲಿ ೨೭ ಮರಣಗಳಿದ್ದುವೆಂದೂ, ಜನನಗಳು ಗಂಡು ೧೮, ಹೆಣ್ಣು ೧೭ ಆಗಿದ್ದುವೆಂದೂ ಲೆಕ್ಕ. ಮಂಗಳೂರು ಜನಸಂಖ್ಯೆ—೫೩,೮೭೭.

ಹಂಪನಕಟ್ಟೆಯಲ್ಲಿ ತೆರೆಯಲ್ಪಟ್ಟ 'ಬೇಬಿವೆಲ್ಫೇರ್ ಹೋಮಿ'ನ ಜುಲೈ ತಿಂಗಳ ರಿಪೋರ್ಟು:—ತಾಯಂದಿರಿಗೆ ಕೊಟ್ಟ ಬಿಸಿನೀರು ಸ್ನಾನ ೧೧, ಮಕ್ಕಳಿಗೆ ೨೦೫; ಚಿಕ್ಕ ಪುಟ್ಟ ಕಾಯಿಲೆಗಳಿಗೆ ಚಿಕಿತ್ಸೆಕೊಟ್ಟ ಸಂಖ್ಯೆ ೫೩; ಹಾಲು ಉಪಚಾರ ೧೯೪; ಆಸ್ಪತ್ರೆಗೆ ಕಳುಹಿಸಿಕೊಟ್ಟ ಮಕ್ಕಳು ೭; ಗಂಜಿಕೊಟ್ಟ ತಾಯಂದಿರು ೧೫; ಮಕ್ಕಳು ೩೪; ಮಕ್ಕಳಿಗೆ ಕೊಟ್ಟ ಪೋಷಕು ೯; ಬೇರೆ ಬೇರೆ ವರ್ಷ ಪ್ರಾಯದ ಮೂವರು ತಾಯಂದಿಯರನ್ನೂ ೫೯ ಮಕ್ಕಳನ್ನೂ ಹೊಸದಾಗಿ ಸೇರಿಸಲಾಗಿದೆ. ಈ ಕಾರ್ಯದಲ್ಲಿ ಮಿಸ್ಸೆಸ್ ಜೆ. ಯಚ್. ಎ. ಸಲ್ಡಾನ ಇವರು ಸ್ವತಃ ಬಂದು ಹೆಚ್ಚಿನ ಮೆಹನತು ತೆಗೆದುಕೊಳ್ಳುತ್ತಿದ್ದಾರೆ.

ಇಲ್ಲಿಯ ಇಂಪೀರಿಯಲ್ ಬೇಂಕಿನ ಮಾಜಿ ಕ್ಯಾಶಿಯರರಾದ ಮ|| ರಾ|| ಬಿ. ನಾರಾಯಣ ಪೈಗಳವರು ತಮ್ಮ ೭೪ನೆಯ ಪ್ರಾಯದಲ್ಲಿ ದಿವಂಗತರಾದರೆಂಬುದನ್ನು ತಿಳಿಸಲು ನಾವು ತುಂಬಾ ವ್ಯಸನಪಡುತ್ತೇವೆ.

ಪತ್ರವ್ಯವಹಾರ.

ಬೆಳ್ತಂಗಡಿಯಲ್ಲಿ ಇನ್ನು ಜ್ಞಾನೋದಯವಿಲ್ಲವೇ?

ಅಯ್ಯಾ ವಾಚಕರೇ, ಬೆಳ್ತಂಗಡಿ ತಾ. ೧೦-೮-೧೯೨೫.

ಬೆಳ್ತಂಗಡಿ ಜ್ಞಾನೋದಯ ಕ್ಲಬ್ ಯಾ ಪ್ರಕೃತದ ಓದುವ ಕೋಣೆಯು ಅಕಾಲ ಮರಣದ ಕುರಿತು ಅದಕ್ಕೆ ಸೇರಿದ ಒಬ್ಬ ಬಡ ಸಹಕಾರಿಯು ಬಹಳವಾಗಿ ರೋಧಿಸಿದಂತೆ ಪತ್ರದಿಂದ ವ್ಯಕ್ತವಾಗುತ್ತದೆ. ಇಷ್ಟೆಲ್ಲಾ ಪತ್ರವ್ಯವಹಾರ ನಡಿಸಿದ ಈ ಪಟ್ಟಣದ ಬಡ ಸಹಕಾರಿಗೆ ಈ ಕ್ಲಬ್ಬಿನ ಅಕಾಲಮರಣವನ್ನು ತಪ್ಪಿಸುವ ಯೋಗ್ಯತೆಯು ಇದ್ದಿಲ್ಲವೇ? ಈ ಜ್ಞಾನೋದಯ ಕ್ಲಬ್ ಇಲ್ಲಿಗೆ ಬಂದ ಇನ್ಸ್‌ಪೆಕ್ಟರ್, ಸುಪರ್‌ವೈಜರ್ ಮಹಾಶಯರಿಂದಲೇ ನಡಿಸಲ್ಪಡುತ್ತಿತ್ತೋ? ಅದೂರು, ಬಾಡೂರು, ರಾಮ ಕುಂಜ ಮುಂತಾದ ಸಂಘಗಳ ಪ್ರಸ್ತಾಪವು ಇಲ್ಲಿ ಏಕೆ? ಇಲ್ಲಿಯ ಪ್ರಮುಖ ಸಂಘವು ಆ ಸಂಘಗಳ ದುಸ್ಥಿತಿಯ ಮಾರ್ಗವನ್ನೇ ಅನುಸರಿಸಲಿಕ್ಕೆ ತೊಡಗಿದೆಯೇ? ಕಳೆದ ಜುಲಾಯಿ ೨೭ನೇ ತಾರೀಕಿನ ದಿವಸ ಜರಗಿದ "ಸಹಕಾರಿ ಹಬ್ಬ"ಕ್ಕೂ "ಬೆಳ್ತಂಗಡಿ ಓದುವ ಕೋಣೆ"ಗೂ ಸಂಬಂಧವೇನು? ಕೇವಲ ಲಕ್ಷ್ಮಿನ ಆಶೆಯಿಂದ ಪೇಟೆಯ ಬಡ ಸಹಕಾರಿಯು ಬೆಳ್ತಂಗಡಿ ನಿವಾಸಿಕರಿಗೆಲ್ಲಾ ಆಮಂತ್ರಣವೇ ಇಲ್ಲವೆಂದು ಒದರುವುದು ಬಹಳ ನಾಚಿಕೆಗೇಡಲ್ಲವೇ! ಇಲ್ಲಿಯ ಸಂಘದ ಪಂಚಾಯಿತರಿಗೆ ಮಾತ್ರ ಆಮಂತ್ರಣ ಕೊಟ್ಟದ್ದೇ ಹೊರತು ಬೆಳ್ತಂಗಡಿ ನಿವಾಸಿಕರಿಗೆಲ್ಲಾ ಆಮಂತ್ರಣ ಕೊಡುವರೆ ಇದೊಂದು ಸಮಾರಾಧನೆಯೇ? ಪಟ್ಟಣದ ಪ್ರಮುಖ ಸಹಕಾರ ಸಂಘಕ್ಕೆ ಕ್ರಮವಾದ ಆಮಂತ್ರಣವಿತ್ತೊ, ಎಂಬುದನ್ನು ಅದರ ಅಧ್ಯಕ್ಷರನ್ನು ಆ ಬಡ ಸಹಕಾರಿಯು ವಿಚಾರಿಸಲಿ. ಮೂರು ಮೈಲು ದೂರದಿಂದ ಯೂನಿಯನ್ ಕಾರ್ಯದರ್ಶಿಯವರು ಬರುತ್ತಾ, ಅರ್ಧ ಮೈಲು ದೂರದಿರುವ ಅಧ್ಯಕ್ಷರನ್ನು ಬಾರದಂತೆ ಮಾಡಿದ್ದು ಈ ಬಡ ಸಹಕಾರಿಯ ಕಲ್ಪಕತಂತ್ರ ಮಹತ್ವವೋ ಏನೋ! ಈ ಬಡ ಸಹಕಾರಿಗೂ ಬಂಗಾಡಿ ಸಂಘದ ಡಿರೆಕ್ಟರರಿಗೂ ಇರುವ ಅಸಹಕಾರದ ಕಾರಣವೇನು? ಸ್ವಾರ್ಥತ್ಯಾಗಿಯೆಂದೆನ್ನಿಸಿಕೊಳ್ಳುವ ಈ ಬಡ ಸಹಕಾರಿಯಿಂದಲೇ ಈ ಜ್ಞಾನೋದಯ ಕ್ಲಬ್ಬಿಗೆ ಅಕಾಲ ಮರಣವಲ್ಲದೆ ಸಹಕಾರ ಹಬ್ಬದ ಆಚರಣೆಯಿಂದಲ್ಲವೆಂದು ಇವನ ಪತ್ರವೇ ವ್ಯಕ್ತಗೊಳಿಸುವುದು. ಸಹಕಾರೋದ್ಧಾರ ಮಾಡುವ ಈ ಬಡ ಸಹಕಾರಿಯ ಸಹಕಾರತತ್ವದ ಪ್ರಭೆಯು ಸ್ವಲ್ಪ ಸಮಯದಲ್ಲೇ ಪ್ರಕಾಶಕ್ಕೆ ಬೀಳುವುದೋ ಏನೋ! ಪ್ರಕೃತ ಈ ಬಡ ಸಹಕಾರಿಯ ಕಾರ್ಯಗಳಲ್ಲಿ ತಾಳ್ಮೆಯಿಂದ ಹೆಚ್ಚಿನ ದೃಷ್ಟಿಯನ್ನು ಇಡೋಣ.

"ಹಾಜರಿದ್ದವನೊಬ್ಬ".

ಸರ್. ಸುರೇಂದ್ರನಾಥ ಬಾನರ್ಜಿಯವರ ಮೃತ್ಯು.

ಬಾಬು ಸುರೇಂದ್ರನಾಥ ಬಾನರ್ಜಿಯವರು ಈ ತಿಂಗಳ ತಾ. ೬ರಲ್ಲಿ ಕೈಲಾಸವಾಸಿಗಳಾದರೆಂದು ಬಂದಿರುವ ದುಃಖಕಾರಕ ವಾರ್ತೆಯನ್ನು ನಾವು ಕಳೆದ ಸಂಚಿಕೆಯಲ್ಲಿಯೇ ವಾಚಕರಿಗೆ ತಿಳಿಸಿದ್ದೇವೆ. ಇವರು ೭೭ ವರ್ಷ ಪ್ರಾಯದ ವೃದ್ಧರಾಗಿದ್ದರೂ ಇಷ್ಟು ಬೇಗನೆ ಇವರ ಮರಣವು ಸಂಭವಿಸೀತೆಂದು ಯಾರೂ ಭಾವಿಸಿರಲಿಲ್ಲ. ಅಂತಹದೊಂದು ಕಠಿಣ ಕಾಯಿಲೆಯೂ ಇರಲಿಲ್ಲ. ಮೂರು ನಾಲ್ಕು ದಿವಸಗಳ ಮುಂಚೆ ಇನ್‌ಫ್ಲುಯೆಂಝಾ ಜ್ವರವು ಇವರಿಗೆ ಪ್ರಾರಂಭವಾಯಿತು. ಜ್ವರವು ಅಷ್ಟೊಂದು ಹೆಚ್ಚಿರಲಿಲ್ಲ. ಬಾಬು ಸುರೇಂದ್ರರು ತಮ್ಮ 'ಬಂಗಾಲಿ' ಪತ್ರಿಕೆಗೆ ಅಗ್ರಲೇಖವನ್ನು ಬರೆಯುವ ನಿತ್ಯವ್ಯವಸಾಯವನ್ನು ಮಾಡುತ್ತಿದ್ದರು. ಪತ್ರಿಕಾಲೇಖನದ ಅವರ ಈ ಉದ್ಯೋಗವು ಕಡೆಯ ತನಕ ನಡೆದಿದೆ.

ಸರ್ ಸುರೇಂದ್ರನಾಥ ಬಾನರ್ಜಿಯವರ ಮೃತ್ಯುವಿನಿಂದ ೫೦-೬೦ ವರ್ಷಗಳ ವರೆಗೆ ಹಿಂದುಸ್ಥಾನದ ಮತ್ತು ವಿಶೇಷತಃ ಬಂಗಾಲದ ರಾಜಕಾರಣದಲ್ಲಿ ಹೋರಾಡುತ್ತಿದ್ದ ಒಬ್ಬ ಅನುಭವಶಾಲಿ ಪುರುಷನ ನ್ಯೂನತೆಯುಂಟಾಗಿದೆ ಎನ್ನಬೇಕು. ಸುರೇಂದ್ರನಾಥರು ದಾದಾಭಾಯಿ ನೌರೋಜಿ, ಹ್ಯೂಮ ಮೊದಲಾದ ರಾಷ್ಟ್ರೀಯ ಸಭಾಸಂಸ್ಥಾಪಕರ ಪೈಕಿ ಒಬ್ಬರು. ಇವರಲ್ಲಿ ವಕ್ತೃತ್ವದ ಗುಣವು ಅಸಾಮಾನ್ಯವಾಗಿ ಇದ್ದದ್ದರಿಂದ ಹೊಸತಾಗಿ ಹೊರಟ ರಾಷ್ಟ್ರೀಯ ಸಭೆಯು ರಾಜಕೀಯ ಸಂಸ್ಥೆಯಾದ್ದರಿಂದ ಅದರ ಮೇಲೆ ಸರಕಾರಿ ಅಧಿಕಾರಿಗಳ ವಕ್ರದೃಷ್ಟಿಯು ಮುಂಚಿನಿಂದಲೆ ಇತ್ತು. ಹಿಂದುಸ್ಥಾನದೊಳಗಿನ ಬೇರೆ ಬೇರೆ ದೇಶೀಯ ರಾಜ್ಯಗಳನ್ನು ಮುರಿದು ಬ್ರಿಟಿಷ್ ಸರಕಾರವು ಏಕಚಕ್ರಾಧಿಪತ್ಯವನ್ನು ಸ್ಥಾಪಿಸಿದ್ದರಿಂದ ಆ ಕ್ರಮ, ಆ ವ್ಯವಸ್ಥೆ, ಅಲ್ಲಲ್ಲಿ ಆಯಾ ಉಪಾಯಗಳ ಯೋಜನೆ ಇತ್ಯಾದಿ ಕಾರಣಗಳಿಂದ ಸರಕಾರಿ ಅಧಿಕಾರಿಗಳ ಹೆದರಿಕೆಯು ಶಿಕ್ಷಿತ-ಅಶಿಕ್ಷಿತ ಸಮಾಜಗಳಲ್ಲಿ ಏಕಪ್ರಕಾರವಾಗಿತ್ತು. ಇಂಥ ಭಯಾನಕ ಅಧಿಕಾರಿಗಳು ಯಾವ ಸಂಸ್ಥೆಯ ವಿಷಯವಾಗಿ ವಕ್ರಭಾವವನ್ನು ತಾಳಿರುವರೊ, ಯಾವುದಕ್ಕೆ ರಾಜದ್ರೋಹಿಯಾದ ಸಂಸ್ಥೆಯೆಂದು ಹೇಳುತ್ತಿದ್ದರೊ ಅಂಥ ರಾಷ್ಟ್ರೀಯ ಸಭೆಯು ಜನರ ಆದರಕ್ಕೆ ಪಾತ್ರವಾಗುವುದೆಂದರೆ ಹೇಗೆ? ಅಶಿಕ್ಷಿತರ ಸಂಗತಿ ಇರಲಿ, ಸುಶಿಕ್ಷಿತರಾದರೂ ಅಧಿಕಾರಿಗಳ ಮೆಚ್ಚುಗೆಗೆ ಪಾತ್ರವಾಗದ ಸಂಸ್ಥೆಯಲ್ಲಿ ಕಾಲಿಟ್ಟದ್ದಿಲ್ಲ. ಅಂಥ ಸಂಸ್ಥೆಗಳಲ್ಲಿ ಕಾಲಿಡುವುದು ಆರನೆಯ ಮಹಾಪಾತಕವೆಂಬ ತಿಳಿವು ಆ ಕಾಲದಲ್ಲಿ ದೇಶವೆಲ್ಲ ಹುದುಗಿಕೊಂಡಿತ್ತು. ಆದ್ದರಿಂದ ರಾಷ್ಟ್ರೀಯ ಸಭೆಯ ಪ್ರಸಾರವು ಹೆಚ್ಚಿರಲಿಲ್ಲ. ಹೀಗಿದ್ದರೂ ಅದರ ವಾರ್ಷಿಕ ಅಧಿವೇಶನಗಳಿಗೆ ಬಾಬು ಸುರೇಂದ್ರರ ವಕ್ತೃತ್ವಪೂರ್ಣವಾದ ಭಾಷಣವನ್ನು ಕೇಳುವುದಕ್ಕಾಗಿಯೇ ಅನೇಕರು ಬರುತ್ತಿದ್ದರು. ಎಂದಮೇಲೆ ಬಾಬುಜಿಯವರ ವಕ್ತೃತ್ವದಲ್ಲಿ ಎಷ್ಟರಮಟ್ಟಿಗೆ ಆಕರ್ಷಕತೆಯೂ, ಮೋಹಕತೆಯೂ ಇದ್ದವೆಂಬುದನ್ನು ವಾಚಕರೆ ತಿಳಕೊಳ್ಳಲಿ. ಸುರೇಂದ್ರನಾಥರು ವಿಲಾಯತಿಯೊಳಗಿನ ಆಯ್. ಸಿ. ಎಸ್‌ನ ವರೆಗಿನ ಶಿಕ್ಷಣವನ್ನು ಪಡೆದವರಾದ ಕಾರಣದಿಂದಲೂ ರಾಷ್ಟ್ರೀಯ ಸಭೆಯನ್ನು ಸ್ಥಾಪಿಸಿದ ಮುಖಂಡರಲ್ಲಿ ಒಬ್ಬರಾದ ಕಾರಣದಿಂದಲೂ ಹಾಗು ಸಾರ್ವಜನಿಕ ವರ್ತಮಾನಪತ್ರಿಕೆಯ ಸಂಪಾದಕರೂ ಸಾಮಾನ್ಯ ಜನಸಮುದಾಯದ ಮೇಲೆ ವರ್ಚಸ್ಸುಳ್ಳ ಮಹನೀಯರೂ ಆದಕಾರಣದಿಂದಲೂ ಇವರು ಕೈಕೊಂಡ ಚಳವಳವನ್ನು ಬೇಕ್ಕಿಸುವದು ಅಧಿಕಾರಿಗಳಿಗೆ ಎಷ್ಟೋ ಸಾರೆ ಅಸಾಧ್ಯವಾಗುತ್ತಿತ್ತು.

ಬಂಗಾಲ ವಿಭಾಗದ ಚಳವಳದ ಇತಿಹಾಸವನ್ನು ಸಮಾಲೋಚಿಸಿದ್ದಲ್ಲಿ ನಮ್ಮ ಈ ಮಾತಿನ ಅನುಭವವು ಬಾರದೆ ಇರುವದಿಲ್ಲ. ಆ ಕಾಲದ ಬಾಣಾಕ್ಷ ಮತ್ತು ಧೂರ್ತರಾದ ಕರ್ಝನ ಸಾಹೇಬರ ತಲೆಯೊಳಗೆ ಕೂಡ ಬರದಂತ ಸೆಕ್ರೆಟರಿ ಯೆಂಬವರೊಳಗಿನ ಸಿವಿಲಿಯನರು ವಂಗಭಂಗವನ್ನು ಮಾಡಿ ವೈಸರಾಯರಾದ ಕರ್ಝನರ ದೌತ್ಯವನ್ನು ಕಳೆದ್ಕೊಂಡು ವಂಗಭಂಗವನ್ನು ದೃಢಪಡಿಸಿದರು. ಮಾತ್ರವಲ್ಲ, ಆಗಿನ ಭಾರತ ಮಂತ್ರಿಗಳ ಮತದಿಂದ ವಂಗಭಂಗವು ವಜ್ರಲೇಪವಾಗಿ ಹೋಗಿತ್ತು. ಸಾರಾಂಶ ನೋಕರಶಾಹಿಯು ಬಂಗಾಲಿಗಳನ್ನು ಪ್ರತ್ಯಕ್ಪ್ರತ್ಯೇಕಿಸಲು ಅಭೇದ್ಯವಾದ ಕೋಟೆಯನ್ನು ತಯಾರಿಸಿಕೊಂಡಿತ್ತು. ಆದರೆ ಸುರೇಂದ್ರನಾಥ ಬಾನರ್ಜಿಯವರು ಬಂಗಾಲದಲ್ಲಿ ಸರ್ವವಿಧದಿಂದಲೂ ಜಾಗ್ರತಿಯನ್ನುಂಟುಮಾಡಿ ವಂಗಭಂಗದ ಚಳವಳವನ್ನು ಎಷ್ಟರಮಟ್ಟಿಗೆ ತೀವ್ರವಾಗಿ ಮಾಡತೊಡಗಿದರೆಂದರೆ ಹಿಂದುಸ್ಥಾನದ ವೈಸರಾಯರೂ, ವಿಲಾಯತಿಯ ಭಾರತ ಮಂತ್ರಿಗಳೂ ಯಾವುದಕ್ಕೆ ವಜ್ರಲೇಪವೆಂಬುದಾಗಿ ಹೆಸರನ್ನು ಕೊಟ್ಟಿದ್ದರೋ ಅದು ಕೊನೆಗೆ ಉಲುಪಿಸಿಯಾಯಿತು! ವಂಗಭಂಗದ ಚಳವಳವು ಯಶಸ್ವಿಯಾಗಲು ಬಾಬು ಅರವಿಂದ, ಬಾಬು ಬಿಪಿನ ಚಂದ್ರ ಇತ್ಯಾದಿ ಇತರ ಮುಖಂಡರ ಮತ್ತು ತರುಣ ಬಂಗಾಲಿಗಳ ಅಮೋಘವಾದ ಸ್ವಾರ್ಥತ್ಯಾಗವೂ ಕಾರಣವಾಗಿತ್ತಾದರೂ ಬಾಬು ಸುರೇಂದ್ರರ ಪ್ರಮುಖತೆಗೂ, ಮುತ್ಸದಿತನಕ್ಕೂ ಮತ್ತು ಅವಿರತ ಪ್ರಯತ್ನಕ್ಕೂ ಆ ಚಳವಳದ ಯಶಸ್ವಿತೆಯ ಕೀರ್ತಿಯು ಸಲ್ಲತಕ್ಕದ್ದಾಗಿದೆ ಎಂಬುದಕ್ಕೆ ಯಾವ ಮತಭೇದವೂ ಇಲ್ಲ. ಬಾಬು ಸುರೇಂದ್ರನಾಥರು ಈಗಿನ ಕಾಲದ ದೃಷ್ಟಿಯಿಂದ ಸಪ್ಪೆತಂಡದವರೆಂದು ಕಂಡುಬಂದಾಗ್ಯೂ ಸ್ವಾಭಿಮಾನಶೂನ್ಯತೆಯ ಕಗ್ಗತ್ತಲೆಯು ಹರಡಿಕೊಂಡಿರುವ ಆ ಮುಂಚಿನ ಸಮಯದಲ್ಲಿ ಬಾಬುಜಿಯವರು ನೋಕರಶಾಹಿಯ ದೃಷ್ಟಿಯಿಂದ ಉಗ್ರಪಕ್ಷದವರೆ ಆಗಿದ್ದರು.

ಕಾಲಕ್ರಮೇಣ ದೇಶವು ಮುಂದುವರಿಯುತ್ತಿರುವಲ್ಲಿ ದೇಶದ ಮುಖಂಡರು ಕೂಡ ಅದರೊಡನೆ ಮುಂದರಿಯುವದು ವಿಹಿತವಾಗಿದ್ದರೂ ಸುರೇಂದ್ರನಾಥ ಬಾನರ್ಜಿಯವರು ತಮ್ಮ ಆಯುಷ್ಯದ ಉತ್ತರಾರ್ಧದಲ್ಲಿ ಈ ನಿಯಮಕ್ಕೆ ಅಪವಾದರಾದರೆಂಬುದು ನಿಜ. ಮೊಂಟೆಗ್ಯು ಸುಧಾರಣೆಗಳು ಜಾರಿಯಲ್ಲಿ ಬಂದ ಮೇಲೆ ಬಾಬುಜಿಯವರು ಸುಧಾರಿಸಿದ ಕೌನ್ಸಿಲಿನಲ್ಲಿ ಮಂತ್ರಿತ್ವವನ್ನು ವಹಿಸಿದರು. ಇದು ಅನೇಕರಿಗೆ ರುಚಿಸಿರಲಿಲ್ಲ. ಯಾವ ಪುರುಷರು ತಮ್ಮ ಸಾರ್ವಜನಿಕ ಆಯುಷ್ಯಕ್ರಮವು ಸುರುವಾದಂದಿನಿಂದ ೩೦-೪೦ ವರ್ಷಗಳ ವರೆಗೆ ಸರಕಾರವನ್ನು ಎದುರಿಸುವದರಲ್ಲಿ ತಮ್ಮ ಜೀವನವನ್ನು ಕಳೆದರೊ ಅವರು ಕೊನೆಗೆ ಮಂತ್ರಿತ್ವವನ್ನು ಸ್ವೀಕರಿಸಿ ಸರಕಾರದ ಅನುಯಾಯಿಗಳಾದದ್ದು ಉಚಿತವಲ್ಲವೆಂದು ಲೋಕಮತವು ಅಭಿಪ್ರಾಯಪಡುತ್ತಿದೆಯಾದರೂ, ಬಾಬುಜಿಗಳ ವಿಷಯವಾಗಿ ಯಾರ ಮನಸ್ಸಿನಲ್ಲೂ ಅನಾದರವುಂಟಾಗಲಿಕ್ಕಿಲ್ಲ. ಇವರ ಮುಂಚಿನ ಚರಿತ್ರ ಮತ್ತು ಕಡೆಗಿನ ಮಂತ್ರಿತ್ವ ಇವುಗಳನ್ನು ಏಕಕಾಲದಲ್ಲಿ ಆಲೋಚಿಸಿದರೆ ಸುರೇಂದ್ರನಾಥ ಬಾನರ್ಜಿಯವರಿಗೆ ನಾವು ಕಳೆದ ಸಂಚಿಕೆಯಲ್ಲಿ 'ಬಂಗಾಲದ ಭೀಷ್ಮಾಚಾರ್ಯ'ರೆಂದು ಹೇಳಿದ್ದು ಅನ್ವರ್ಥವೆಂದೆ ತಿಳಿಯಬೇಕು. ಪಾಂಡವ ಪಕ್ಷಪಾತಿಗಳಾದರೂ ಕೌರವರ ಕಡೆಯಿಂದ ಹೋರಾಡಿದ ಭೀಷ್ಮಾಚಾರ್ಯರಂತೆ ಸುರೇಂದ್ರ ಬಾಬುಗಳು ತೇಜಸ್ವಿಗಳಾಗಿಯೂ, ಜ್ಞಾನವಯೋವೃದ್ಧರಾಗಿಯೂ ಇದ್ದು ಲೋಕಸೇವೆಯನ್ನು ಮಾಡುತ್ತಿರುವಾಗಲೆ ದೇಹಾವಸಾನವನ್ನು ಪಡೆದರು. ದೇಶಬಂಧು ದಾಸರು ಗತಿಸಿ ಕೆಲವು ವಾರಗಳು ದಾಟುವಷ್ಟರೊಳಗಾಗಿಯೇ ಬಂಗಾಲದ ಮೇಲೆ, ಪರ್ಯಾಯದಿಂದ ಇಡಿ ಹಿಂದುಸ್ಥಾನದ ಮೇಲೆ ಇಂಥ ಆಪತ್ತು ಬರುವದು ದೇಶದ ದುರದೃಷ್ಟವೆ ಸರಿ. ಆದರೆ ಭವಿತವ್ಯತೆಯನ್ನು ತಪ್ಪಿಸಲಾಗದು.

ಸುರೇಂದ್ರನಾಥ ಬೆನರ್ಜಿಗಳ ಮರಣವನ್ನು ಕುರಿತು ಇಡಿ ದೇಶವು ಮರುಗುತ್ತಿದೆ. ಎಲ್ಲ ಸಾರ್ವಜನಿಕ ಸಂಸ್ಥೆಗಳೂ, ಪತ್ರಿಕೆಗಳೂ, ಅವರ ಮರಣವನ್ನು ಶೋಕಿಸುತ್ತಿರುವವು. ರಾಜಕಾರಣದ ಬೇರೆ ಬೇರೆ ತಂಡದವರು ಸಹ ಬಾನರ್ಜಿಗಳ ಗುಣಗಳನ್ನೂ, ಕರ್ತೃತ್ವವನ್ನೂ ಹೊಗಳಿ ಅವರಿಗೆ ಧನ್ಯವಾದವನ್ನು ಅರ್ಪಿಸುತ್ತಿರುವರು. ಇರಲಿ. ಸರ್ ಸುರೇಂದ್ರನಾಥರ ಮರಣದಿಂದ ಒಬ್ಬ ಅನುಭವಶಾಲಿಯಾದ ರಾಜಕಾರಣ ಪುರುಷನು ಅಸ್ತಮಿಸಿದನಲ್ಲದೆ, ಫೆರೋಜಶಹಾ ಮೇಥಾ, ಗೋಖಲೆ ಇತ್ಯಾದಿ ಮುಂಚಿನ ಕಾಲದ ಶಾಂತಪಕ್ಷದ ಮುಖಂಡರ ಪರಂಪರೆಯೊಳಗಿನ ಕೊನೆಯ ಗೃಹಸ್ಥನು ಅಂತ್ಯವಾದುದೆಂತಾಯಿತು. ಬಾನರ್ಜಿಯವರ ಆತ್ಮಕ್ಕೆ ಚಿರಶಾಂತಿಯಾಗಲೆಂದು ಪ್ರಾರ್ಥಿಸುವೆವು.

ಸರ್ ಸುರೇಂದ್ರನಾಥ ಬಾನರ್ಜಿಯವರ ಸಂಕ್ಷಿಪ್ತ ಚರಿತ್ರೆ.

ಸುರೇಂದ್ರನಾಥ ಬಾನರ್ಜಿಯವರು ಕಲಕತ್ತೆಯೊಳಗಿನ ಸನ್ಮಾನ್ಯವಾದ ಒಂದು ಬ್ರಾಹ್ಮಣ ಕುಟುಂಬದಲ್ಲಿ ೧೮೪೮ರಲ್ಲಿ ಜನಿಸಿದರು. ಇವರು ಪ್ರಥಮತಃ ಒಂದು ಚಿಕ್ಕ ಪಾಠಶಾಲೆಯಲ್ಲಿ ಮೂಲ ವಿದ್ಯಾಭ್ಯಾಸವನ್ನು ಮಾಡಿದ ಬಳಿಕ ಒಂದು ಎಂಗ್ಲೋ ಇಂಡಿಯನ್ ಕೊಲಿಜಿನಲ್ಲಿ ಮುಂದಿನ ಎಲ್ಲ ವಿದ್ಯಾಭ್ಯಾಸವನ್ನು ಮಾಡಿದರು. ಇವರು ಕೊಲಿಜಿನಲ್ಲಿ ಕಲಿಯುತ್ತಿರುವಾಗ ಇವರ ನೈಪುಣ್ಯವನ್ನು ನೋಡಿ ಎಲ್ಲ ಶಿಕ್ಷಕರು ಬೆರಗಾಗುತ್ತಿದ್ದರು. ಇವರಿಗೆ ಅನೇಕ ಸ್ಕೊಲರಶಿಪ್‌ಗಳು ಸಿಕ್ಕಿದ್ದವು. ಈ ಎಲ್ಲ ಸಂಗತಿಗಳಿಂದ ಇವರ ತಂದೆಯವರು ಇವರನ್ನು ೧೮೬೮ರಲ್ಲಿ ಆಯ್. ಸಿ. ಎಸ್. ಪರೀಕ್ಷೆಗಾಗಿ ವಿಲಾಯತಿಗೆ ಕಳುಹಿಸಿಕೊಟ್ಟರು. ವಿಲಾಯತಿಯಲ್ಲಿ ಸುರೇಂದ್ರರು ಐ. ಸಿ. ಎಸ್. ಪರೀಕ್ಷೆಯಲ್ಲಿ ಪಾಸಾಗಿ ಸಿಲಹತ್ತಿನ ಮಜಿಸ್ಟ್ರೇಟರಾಗಿ ಹಿಂದುಸ್ಥಾನಕ್ಕೆ ಬಂದರು. ಇವರು ಈ ಉದ್ಯೋಗದ ಮೇಲೆ ೨ ವರ್ಷ ಇರುವಷ್ಟರೊಳಗೆ ಸರಕಾರವು ಇವರನ್ನು ಐ. ಸಿ. ಎಸ್. ಇಲಾಖೆಯಿಂದ ಡಿಸ್‌ಮಿಸ್ ಮಾಡಿತು! ಆದರೆ ಬಾಬು ಸುರೇಂದ್ರನಾಥರು ಇದರಿಂದ ಧೈರ್ಯಗುಂದಲಿಲ್ಲ. ಅವರು ಒಂದು ಕೊಲಿಜಿನಲ್ಲಿ ಇಂಗ್ಲಿಷ್ ವಾಙ್ಮಯದ ಪ್ರೊಫೆಸರರಾದರು. ಈ ಹುದ್ದೆಯಲ್ಲಿರುವಾಗಲೆ ಬಾಬುಜಿಯವರು 'ಇಂಡಿಯನ್ ಎಸೋಸಿಯೇಶನ್' ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ೧೮೮೨ರಲ್ಲಿ ಅವರು 'ರಿಪನ್ ಕೊಲೇಜ್' ಎಂಬದೊಂದು ಹೊಸ ವಿದ್ಯಾಸಂಸ್ಥೆಯನ್ನು ಸ್ಥಾಪಿಸಿದರು. ಈ ಕೊಲಿಜಿನಲ್ಲಿ ಅನೇಕ ಹಿಂದಿ ವಿದ್ಯಾರ್ಥಿಗಳು ವಿದ್ಯಾಲಾಭವನ್ನು ಪಡೆಯಹತ್ತಿದರು. ಡಬ್ಲ್ಯು. ಸಿ. ಬಾನರ್ಜಿಯವರು "ಬಂಗಾಲಿ" ಎಂಬ ಇಂಗ್ಲಿಷ್ ಭಾಷೆಯ ಪತ್ರಿಕೆಯನ್ನು ಮೊದಲಿಸ್ಥಾಪಿಸಿದ್ದರು. ಅದರ ಸಂಪಾದಕತ್ವವನ್ನು ಸುರೇಂದ್ರನಾಥರು ಕೈಕೊಂಡರು. ಇವರು ಸುಪ್ರಸಿದ್ಧವಾದ ಇಲ್‌ಬರ್ಟ ಬಿಲನ್ನು ತೀವ್ರವಾಗಿ ನಿಷೇಧಿಸಿದರು. ಬಂಗಾಲದೊಳಗಿನ ಒಬ್ಬ ಜಡ್ಜನು ಕೋರ್ಟಿನಲ್ಲಿ ಶಾಲಿಗ್ರಾಮವನ್ನು ತರಿಸಿದ್ದಕ್ಕಾಗಿ ಸಂಪ್ರದಾಯಾಭಿಮಾನಿಗಳಾದ ಬಾನರ್ಜಿಯವರು ಸದರಿ ಜಡ್ಜನನ್ನು ತೀವ್ರವಾಗಿ ಟೀಕಿಸಿದ್ದಕ್ಕಾಗಿ ಬಾನರ್ಜಿಯವರ ಮೇಲೆ ಕೋರ್ಟ ಅಪಮಾನದ ಖಟ್ಲೆಯನ್ನು ಮಾಡಿ ಅದರಲ್ಲಿ ಬಾನರ್ಜಿಗಳಿಗೆ ಶಿಕ್ಷೆ ವಿಧಿಸಲಾಯಿತು. ಈ ೨ ತಿಂಗಳ ಕಠಿಣ ಶಿಕ್ಷೆಯನ್ನು ಬಾನರ್ಜಿಗಳು ಅನುಭವಿಸಿದರು.

ಬಾನರ್ಜಿಯವರು ಬಂಗಾಲಿ ಪತ್ರಿಕೆಯ ಸಂಪಾದಕತ್ವದ್ದರಿಂದ ಆ ಪತ್ರಿಕೆಯ ಮುಖಾಂತರ ಲೋಕ ಜಾಗ್ರತಿಯ ಕೆಲಸವನ್ನು ಕೈಕೊಂಡದ್ದಲ್ಲದೆ ರಾಷ್ಟ್ರೀಯ ಸಭೆಯ ಸಂಸ್ಥಾಪಕರಲ್ಲಿ ಇವರೂ ಒಬ್ಬರಾಗಿದ್ದರಿಂದ ಅಲ್ಲಿಯೂ ಲೋಕಮತವನ್ನು ತಯಾರಿಸಹತ್ತಿದರು. ಇವರು ಬಂಗಾಲ ಕಾಯದೆ ಕೌನ್ಸಿಲಿನ ಮತ್ತು ವರಿಷ್ಠ ಕೌನ್ಸಿಲಿನ ಸಭಾಸದರಾಗಿದ್ದರು. ಎರಡೂ ಕೌನ್ಸಿಲುಗಳಲ್ಲಿ ಸುರೇಂದ್ರನಾಥರು ಮಾಡಿದ ಲೋಕಸೇವೆಯು ಅಮೂಲ್ಯವಾಗಿದೆ. ಬಂಗಾಲ ಪ್ರಾಂತವನ್ನು ಎರಡು ಪೋಳಾಗಿ ಸರಕಾರವು ವಿಭಾಗಿಸಿದ ಬಳಿಕ ಬಾನರ್ಜಿಯವರು ಅಭೂತಪೂರ್ವವಾದ ಚಳವಳವನ್ನು ಎಬ್ಬಿಸಿ ಕೊನೆಗೆ ಬೆಂಗಾಲಿನ ಗವರ್ನರರಾದ ಸರ್. ಬೆಂಫೀಲ್ಡ ಫುಲ್ಲರ ಇವರಿಗೆ ರಾಜೀನಾಮೆಯನ್ನು ಕೊಡುವಂತೆ ಮಾಡಿದರು.

ಆದರೆ ಬಾನರ್ಜಿ ಮಹಾಶಯರು ಕೊನೆಕೊನೆಗೆ ಮಾತ್ರ ಲೋಕಮತದ ಹಿಂದೆ ಬೀಳಹತ್ತಿದರು. ಅವರ ಸಮಕಾಲೀನ ಮತ್ತು ಸಮಾನ ವಿಚಾರದ ಮುಖಂಡರಾದ ಗೋಖಲೆ, ಫೆರೋಜಶಹಾ ಮೇಥಾ ಮುಂತಾದ ಮುಖಂಡರು ಗತಿಸಿಹೋದ ಕಾರಣ ಬಾನರ್ಜಿಯವರ ವರ್ಚಸ್ಸು ಕೊಂಗ್ರೆಸ್ಸಿನಲ್ಲಿ ಬೀಳದಂತಾಗಿ ಅವರು ಆ ಕೊಂಗ್ರೆಸ್ಸನ್ನೆ ಬಿಟ್ಟು ಹೊರಹೊರಟು ಲಿಬರಲ್ ಪಾರ್ಟಿಯನ್ನು ಸ್ಥಾಪಿಸಿದರು. ಈಗಿನ ಹೊಸ ಸುಧಾರಣೆಗನು ಸಾರವಾಗಿ ಬಂಗಾಲದ ಕಾಯದೆ ಕೌನ್ಸಿಲಿನ ಮೆಂಬರರಾಗಿ ಸುರೇಂದ್ರನಾಥರು ಅಲ್ಲಿಯ ಮಂತ್ರಿತ್ವವನ್ನು ಸ್ವೀಕರಿಸಿದರು. ಆದರೆ ಸ್ವರಾಜ್ಯ ಪಕ್ಷದ ಕೌನ್ಸಿಲ್ ಆಕ್ರಮಣದ ಚಳವಳವು ಜೋರಿನಲ್ಲಿ ಬಂದಬಳಿಕ ಬಾನರ್ಜಿಯವರಿಗೆ ಮತಗಳು ಸಿಗದೆ ನಿವೃತ್ತರಾಗಬೇಕಾಯಿತು. ಮಧ್ಯದಲ್ಲಿ ಅವರು ಬಂಗಾಲಿ ಪತ್ರಿಕೆಯ ಸಂಪಾದಕತ್ವವನ್ನು ಬಿಟ್ಟಿದ್ದರು. ಅದನ್ನು ಪುನಃ ಇತ್ತಲಾಗಿ ಅಂಗೀಕರಿಸಿದ್ದರು. ಈ ರೀತಿಯಿಂದ ಸುರೇಂದ್ರನಾಥ ಬಾನರ್ಜಿಯವರು ತಮ್ಮ ಮನೋದೇವತೆಗೂ, ಶಕ್ತಿಗೂ ಅನುಸಾರವಾಗಿ ದೇಶಸೇವೆಯನ್ನು ಮಾಡಿ ಕೊನೆಗೆ ಕಳೆದ ಗುರುವಾರ ತಮ್ಮ ಐಹಿಕ ಯಾತ್ರೆಯನ್ನು ಮುಗಿಸಿದರು.

ಅಡಿಗೆಯ ಪಾತ್ರೆಗಳ ಮೂಲಕ ಸಂಭವಿಸುವ — ಅಪಾಯಗಳು. —

ನಮ್ಮಲ್ಲಿ ಆರೋಗ್ಯವನ್ನು ಬೋಧಿಸುವ ಉದ್ದೇಶವುಳ್ಳ ಹಲವರು, ಅಡಿಗೆ ಮಾಡುವುದಕ್ಕೂ, ಕರೆಯುವುದಕ್ಕೂ ವಿಧವಿಧವಾದ ಮೃತ್ಪಾತ್ರಗಳೇ ಬಹಳ ಉತ್ತಮವೆಂದು ಹೇಳುವರು. ಆದರೆ, ರಸಾಯನ ಶಾಸ್ತ್ರಶೋಧನೆಗಳಿಂದ ಆ ಒಂದೊಂದು ವಿಧವಾದ ಪಾತ್ರದಲ್ಲಿಯೂ ಆರೋಗ್ಯಕ್ಕೆ ಭಂಗವನ್ನುಂಟುಮಾಡುವ ಅನೇಕ ದೋಷಗಳುಂಟೆಂದು ಸೂಕ್ಷ್ಮದೃಷ್ಟಿಯಿಂದ ತಿಳಿದುಬರುತ್ತಿವೆ. ಎನಾಮಲ್ (ಮಿನಾಯಿ) ಹಾಕಿದ ಪಾತ್ರೆಗಳಲ್ಲಿ ಅಲ್ಲಲ್ಲಿ ಹುಳುಕುಬಿದ್ದ ಅಥವಾ ಕಿತ್ತುಹೋದ ಭಾಗಗಳಿಂದ, ಎನಾಮಲ್ ಚೂರುಗಳು ಆಹಾರ ಪದಾರ್ಥಗಳಲ್ಲಿ ಸೇರಿ ಹೊಟ್ಟೆಯೊಳಕ್ಕೆ ಹೋಗಬಹುದು. ಅದರಂತೆಯೇ ನಿಕ್ಕಲ್ ಗಿಲಿಟು ಹಾಕಿದ ಪಾತ್ರೆಗಳೂ ಕೂಡ, ಅಪಾಯದ ಪಟ್ಟಿಯಲ್ಲಿಯೇ ಸೇರಿಸಲ್ಪಟ್ಟಿವೆ. ಏಕೆಂದರೆ — ಅವು ಸಂಬಂಧವುಳ್ಳ ಪದಾರ್ಥಗಳನ್ನು ಇಡುವುದಕ್ಕೆ ಅವು ಯೋಗ್ಯವಲ್ಲ. ಅಲ್ಯೂಮಿನಮ್ ಮತ್ತು ಸತುವಿನ ಪಾತ್ರೆಗಳೂ ಇತರ ಲೋಹಗಳ ಮಿಶ್ರಣದಿಂದಲೇ ತಯಾರಿಸಲ್ಪಟ್ಟಿರುವುದರಿಂದ, ಅವೂ ಅಡಿಗೆಗೆ ಉಪಯೋಗವಲ್ಲವೆಂದು ನಿಷೇಧಿಸಲ್ಪಟ್ಟಿದೆ. ಉಕ್ಕು ಮತ್ತು ಕಬ್ಬಿಣದ ಪಾತ್ರೆಗಳು ತುಕ್ಕುಹಿಡಿಯುವುದರಿಂದ, ಅವೂ ಆಹಾರಪದಾರ್ಥಗಳನ್ನು ಬೇಯಿಸುವುದಕ್ಕೆ ಯೋಗ್ಯವಲ್ಲ. ಆದುದರಿಂದ ಮೃತ್ಪಾತ್ರೆಗಳೇ ಕೂಡಿದ ಮಟ್ಟಿಗೆ, ಜನಗಳ ಆರೋಗ್ಯಕ್ಕೆ ವಿಶೇಷ ಹಾನಿಕರವಲ್ಲವೆಂದು ಈಗಿನವರೆಗೂ ಜನಗಳ ನಂಬಿಕೆಯುಂಟು. ಆದರೆ ಈಚೆಗೆ "ಮಿನಿಸ್ಟ್ರೀ ಆಫ್ ಹೆಲ್ತ್" ಎಂಬ ಇಲಾಖೆಯವರಿಂದ ಹೊಸದಾಗಿ ಕಳುಹಿಸಲ್ಪಟ್ಟ (ಜನಾರೋಗ್ಯ ಮತ್ತು ವೈದ್ಯಶಾಸ್ತ್ರ ವಿಷಯವಾದ ನಂ. ೨೯ನೇ) ರಿಪೋರ್ಟುಗಳಿಂದ ನಾವು ಮೃತ್ಪಾತ್ರೆಗಳಲ್ಲಿಯೇ ಆಗಲಿ, ಜಾಡಿಗಳಲ್ಲಿಯೇ ಆಗಲಿ, ಆಹಾರ ಪದಾರ್ಥಗಳನ್ನು ಇಡುವುದಕ್ಕೆ ಮೊದಲಾದರೂ, ಆ ಪಾತ್ರೆಗಳ ಉತ್ಪತ್ತಿ ಕ್ರಮ, ತಯಾರಿಸಿದ ಸ್ಥಳ, ಅದಕ್ಕೆ ಮಣ್ಣನ್ನು ಸಂಪಾದಿಸಿದ ಸ್ಥಳ ವಿಶೇಷಗಳು ಇವನ್ನೆಲ್ಲಾ ವಿಚಾರಿಸದೆ ಸಿಕ್ಕಿದ ಕಡೆಯಲ್ಲಿ ದೊರೆತ ಪಾತ್ರೆಗಳನ್ನು ಉಪಯೋಗಿಸಬಾರದೆಂದು ನಿರ್ಧರಿಸಲ್ಪಟ್ಟಿದೆ.

ಈ ರಿಪೋರ್ಟಿನಲ್ಲಿ ಡಾಕ್ಟರ್ G. W. ಮಾನಿಯರ್ ವಿಲಿಯಮ್ಸ್ ಎಂಬವರು, ಮೇಲ್ಕಂಡ ಮೃತ್ಪಾತ್ರೆಗಳಿಗೆ ಹಾಕುವ ಮಿರುಗಿನಲ್ಲಿ ಕೆಲವು ಅಪಾಯಕರವಾದ ವಸ್ತುಗಳು ಐಕ್ಯವಾಗಿರುವುವೆಂದು ಸೂಚಿಸಿರುವರು. ಈ ರಿಪೋರ್ಟಿನಲ್ಲಿ ಸಾಂಕೇತಿಕವಾದ ಅನೇಕ ವಿಷಯಗಳು ಅಡಗಿದ್ದರೂ, ಅವು ರಸವತ್ತಾದ ಉಪಯುಕ್ತಾಂಶಗಳನ್ನು ಸೂಚಿಸುತ್ತಿವೆ. ಲೋಹಪಾತ್ರೆಗಳಿಗೆ ಕಲಾಯಿಮಾಡಿಸುವುದರಿಂದ ಉಂಟಾಗುವ ಸೀಸ ಸಂಬಂಧವಾದ ವಿಷಪದಾರ್ಥಗಳ ವಿಚಾರವನ್ನು ಕುರಿತು, ಇದುವರೆಗೂ ಆಗಿರುವ ಶೋಧನೆಗಳೂ ಇದರಲ್ಲಿ ಅಪಾತವಾಗಿ ಸೂಚಿಸಲ್ಪಟ್ಟಿವೆ. ಮೇಲ್ಕಂಡ ಡಾಕ್ಟರ್ ಮಾನಿಯರ್ ವಿಲಿಯಮ್ಸ್‌ರವರು ತೋರಿಸಿರುವಂತೆ, ಈ ಶೋಧನೆಗಳೆಲ್ಲವೂ ಪಾತ್ರೆಗಳನ್ನು ತಯಾರಿಸುವ ಕೆಲಸಗಾರರಿಗೆ ಆಗಾಗ ಉಂಟಾಗುವ ಉಪಾಧಿಗಳನ್ನು ಪರೀಕ್ಷಿಸುವ ಕಾಲದಲ್ಲಿ ಮಾಡಿದವು. ಕೆಂಪುಸೀಸ, ಮಣ್ಣು, ಪುಡಿಮಾಡಿದ ಬೆಣಚುಕಲ್ಲು ಮತ್ತು ಚೌಳುಪ್ಪು ಇವುಗಳನ್ನು ಒಂದು ಒಲೆಯ ಮೇಲಿಟ್ಟು ಕಾಯಿಸಿ ಸೇರಿಸುವುದೇ ಇವುಗಳನ್ನು ತಯಾರಿಸುವ ಕ್ರಮ. ಇದರಿಂದ ಸೀಸಸಂಬಂಧವಾದ ಒಂದು ಗಟ್ಟಿಯು ತಯಾರಾಗುವುದು. ನಂತರ ಈ ಗಟ್ಟಿಯನ್ನು ಪುಡಿಮಾಡಿ, ಮಿರುಗುಹಾಕಬೇಕಾದ ಪಾತ್ರೆಗಳನ್ನು ಮುಳುಗಿಸಿಟ್ಟ ನೀರಿನ ಪಾತ್ರೆಯಲ್ಲಿ ತೂಗಹಾಕಬೇಕು. ಪಾತ್ರೆಗಳನ್ನು ಹೆಚ್ಚಾದ ಕಾವಿನಲ್ಲಿ ಬೇಯಿಸಬೇಕು. ಈ ವಿಧವಾದ ಮಿರುಗಿನ ಪಾತ್ರದಲ್ಲಿ ಅಮ್ಲದ್ರಾವಕ (ಆಸಿಡ್)ವನ್ನು ಬೇಯಿಸಿದ್ದಲ್ಲಿ ಸೀಸವು ಬೇರೆಯಾಗುವುದೆಂದು ೧೮೭೭ನೇ ಇಸವಿಯಲ್ಲಿಯೇ ಜರ್ಮನರು ಕಂಡುಹಿಡಿದು, ಶೇಕಡ ೪ ಭಾಗ ಅಸೆಟಿಕ್ ಆಸಿಡ್ಡಿನಿಂದ ಕುದಿಸಿದಾಗ ಸೀಸವು ಬೇರೆಯಾಗತಕ್ಕ ಪಾತ್ರೆಗಳನ್ನು ಉಪಯೋಗಿಸಬಾರದೆಂಬ ವಿಧಿಯನ್ನೂ ಆಚರಣೆಗೆ ತಂದರು. ಈ ವಿಷಯಗಳನ್ನೆಲ್ಲಾ ಪುನಃ ಶೋಧಿಸಿ, ಸಾಧಾರಣವಾದ ಅಡಿಗೆಗಳನ್ನು ಮಾಡುವ ಕಾಲದಲ್ಲಿ ಪಾತ್ರೆಗಳ ಮಿರುಗು ಎಷ್ಟು ಶಾಶ್ವತವಾಗಿ ನಿಲ್ಲುವುದು ಎಂಬುದನ್ನು ನಿರ್ಧರಿಸುವುದೇ-ಮಾನಿಯರ್ ವಿಲಿಯಮ್ಸನ ಶೋಧನೆಗಳ ಉದ್ದೇಶವು. ಕೆಲವು ಪಾತ್ರೆಗಳಲ್ಲಿ ಸಾಮಾನ್ಯವಾದ ಅಡಿಗೆಯ ಕಾಲದಲ್ಲಿಯೇ ಸೀಸ, ಆರ್ಸೆನಿಕ್ ಮುಂತಾದ ಪದಾರ್ಥಗಳು ಬೇರೆಯಾಗುವುವೆಂದೂ, ಇವರಿಂದ ಅವು ಅಪಾಯಕರಗಳೆಂದೂ ಒಟ್ಟಿನಲ್ಲಿ ಅವರ ಶೋಧನೆಗಳು ಸೂಚಿಸುತ್ತವೆ. ಕೇವಲ ನಿರುಪಯೋಗವಾದ ಪದಾರ್ಥಗಳು ದೂರ ದೇಶಗಳಿಂದ, ಅಥವಾ ಸಣ್ಣ ಸಣ್ಣ ಆಂಗ್ಲೇಯ ಕಾರ್ಖಾನೆಗಳಿಂದ ಬರುತ್ತವೆಂಬುದನ್ನು ಈ ರಿಪೋರ್ಟಿನಿಂದ ತಿಳಿಯಬಹುದು.

ಆದರೆ, ಯಾವ ವಿಧವಾದ ಪಾತ್ರೆಗಳು ವಾಸ್ತವದಲ್ಲಿ ಸುರಕ್ಷಿತವೆಂದು ಕೇಳಿದರೆ, ಮೇಲ್ಕಂಡ ಅನೇಕ ಪದಾರ್ಥಗಳು ನಿರಪಾಯವಾಗಿಲ್ಲದುದರಿಂದ, ಹೆಚ್ಚು ಬೆಲೆಬಾಳುವ ಪಾಟ್ಲಿನಂ ಎಂಬ ಲೋಹದಿಂದ ಕಲಾಯಿಮಾಡಿದ ಪಾತ್ರೆಗಳು ಸೂಕ್ಷ್ಮದೇಹಿಗಳಾದ ಧನಿಕರಿಗೆ ಮಾತ್ರ ಒಳ್ಳೇ ಅನುಕೂಲವೆಂದು ಹೇಳಬಹುದು. (ಆರೋಗ್ಯ ಚಂದ್ರಿಕೆ.)

ಆರೋಗ್ಯ ಚಂದ್ರಿಕೆ.

ಮದ್ರಾಸ್.

ಸಂಪಾದಕರು: ಡಾಕ್ಟರ್ ಯು. ರಾಮರಾವ್, ಎಲ್. ಎಮ್. ಸಿ. ಎಫ್. ಎಮ್. ಯು. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವುದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ.

ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ.

ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವುವು.

'ಹೆಲ್ತ್' ಎಂಬ ನಮ್ಮ ಇಂಗ್ಲಿಷ್ ಮಾಸಪತ್ರಿಕೆಯು ಸ್ಥಾಪಿಸಿ ಸಂಕೋಚಿಸಿದ ಅನೇಕ ದೊಡ್ಡ ಮನುಷ್ಯರ ಪ್ರೋತ್ಸಾಹದ ಮೇಲೆ ಈ ಕನ್ನಡ ಪತ್ರಿಕೆಯನ್ನು ಹೊರಡಿಸಿದೆ.

ಅದರ ಸಂಪುಟ ೨ ಮತ್ತು ೧೧ನೇಯ ನವಂಬರ ೧೯೨೪ ಸಂಚಿಕೆಯಲ್ಲಿ ಕಾಣಿಸಿರುವ ವಿಷಯಗಳು.

ಮುಖಚಿತ್ರ:—ಪರ್ವತವಾಸಿಯಾದ ಒಬ್ಬ ರೂಪವತಿ.
ಶ್ವಾಸಕ್ರಮ ಅಥವಾ ಪ್ರಾಣಾಯಾಮ,
ಹುಣಿಸೇಹಣ್ಣಿನ ಆಹಾರಗುಣಗಳು ಮತ್ತು ಔಷಧಗುಣಗಳು,
ಕಾಲುನಡೆಯೇ ಉತ್ತಮವಾದ ವ್ಯಾಯಾಮವು.
ಜೇನಿನಲ್ಲಿರುವ ಗುಣಗಳು.
ಹಲ್ಲುಗಳ ರಚನೆ, ಪ್ರಯೋಜನ, ಕೆಲಸ ಮುಂತಾದವು.
ಮದ್ಯಪಾನಗಳಿಂದ ಆರೋಗ್ಯಕ್ಕೆ ಉಂಟಾಗತಕ್ಕ ಹಾನಿ.
ಅಂಗಸಾಧನೆ ಮತ್ತು ಬುದ್ಧಿವ್ಯವಸಾಯ (ವಿದ್ಯಾಭ್ಯಾಸ).
ಗಾಯಗಳು, ಮತ್ತು ಉಳುಕು ಮುಂತಾದವು, ಅವುಗಳ ಚಿಕಿತ್ಸೆ.
ನವನಾಗರಿಕ ಪ್ರಪಂಚಕ್ಕೆ ಸಹಜವಾದ ಮೂರು ಕೇಡುಕುಗಳು.
ಒಬ್ಬ ಉಪವಾಸಿಯ ಅನುಭವ.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವುವು. ಆರೋಗ್ಯ ಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ ರೂ. ೧-೮-೦; ಬಿಡುಪತ್ರಿಕೆ ಒಂದಕ್ಕೆ ರೂ. ೦-೨-೦. ಹಿಂದಿನ ಸಂಚಿಕೆಗಳು ಕೂಡ ದೊರೆಯುವವು.

ಚಂದಾದಾರರಾಗುವವರು ವಿ. ಪಿ. ಮೂಲಕವಾಗಿ ತರಿಸಿಕೊಳ್ಳುವುದಕ್ಕಿಂತಲೂ ಹಣವನ್ನು ಮುಂಗಡವಾಗಿ ಕಳುಹಿಸುವುದು ಲಾಭಕರ. ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು 'ಆರೋಗ್ಯ ಚಂದ್ರಿಕೆ'ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು.

ಪತ್ರವ್ಯವಹಾರಕ್ಕೆ: 'ಆರೋಗ್ಯ ಚಂದ್ರಿಕೆ'
೩೨೩ ತಂಬುಚೆಟ್ಟಿ ಬೀದಿ, ಮದ್ರಾಸ್.

ತುಳು ಪಾಡ್ದನಗಳು.

ದೊಬ್ಬಯರ್, ಕಲ್ಲುರ್ಟಿ-ಕಲ್ಕುಡ, ದೈಯ್ಯೊಂಗುಳು—ಕೋಡಕಿನಾರ್, ಮುಂಡತ್ತಾಯ ಪ್ರತಿ ಒಂದಕ್ಕೆ 2 ಆಣೆ. 11½ ಆಣೆ ಟಪ್ಪಾಲು ಚೀಟು ಕಳಹಿಸಿದರೆ 5 ಪುಸ್ತಕಗಳು ಕೂಡಲೇ ಕಳುಹಿಸಲ್ಪಡುವವು.

ವಿಳಾಸ: ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಸಾರಸ್ವತ.

ಕನ್ನಡ ಮತ್ತು ಕೊಂಕಣಿ ಭಾಷೆಗಳಲ್ಲಿ ಕಳೆದ ವಿಜಯದಶಮಿ ದಿನದಿಂದ ಪ್ರತಿ ದಶಮಿಗೆ ಹೊರಡುವ ಪತ್ರಿಕೆ.

ವಿ. ಎಸ್. ಕಾಮತ್,
ಮೂಲ್ಕಿ, ವಾಮನ ಕುಡುವ } ಸಂಪಾದಕರು.

ಮತಸಂಸ್ಥೆ ಮತ್ತು ಸಮಾಜಕ್ಕೆ ಸಂಬಂಧಪಟ್ಟ ಇತರ ಸಂಸ್ಥೆಗಳ ಸುಸಂಘಟನ.
ಸಮಾಜದೊಳಗೆ ಅನ್ಯೋನ್ಯ ಸಾಧನೆ.
ಸ್ತ್ರೀಸಮಾಜಕ್ಕೆ ಉಪಯುಕ್ತವಾದ ವಿಷಯಗಳ ನಿರೂಪಣ
ಮತಭಾವನೆಗಳ ಉಜ್ಜೀವನ ಇತ್ಯಾದಿ ಉದ್ದೇಶಗಳಿಂದ ಈ ಪತ್ರಿಕೆಯು ಹೊರಡಿಸಲ್ಪಡುವುದು. ಸಾರಸ್ವತ ಸಮಾಜವು ಇದಕ್ಕೆ ಪ್ರೋತ್ಸಾಹವನ್ನೀಯಬೇಕಾಗಿ ಪ್ರಾರ್ಥನೆ.

ಚಂದಾಹಣ ಅಂಚೆವೆಚ್ಚ ಕೂಡಾ ರೂ. ೧-೪-೦. ಪೋಷಕರು ರೂ. ೧೦-೦-೦. ಸಹಾಯಕರು ರೂ. ೫-೦-೦. ಮಾದರಿ ಸಂಚಿಕೆಯನ್ನು ಟಪ್ಪಾಲು ಖರ್ಚಿಗಾಗಿ ಅರ್ಧಾಣೆ ಸ್ಟಾಂಪು ಕಳುಹಿಸುವವರಿಗೆ ಉಚಿತವಾಗಿ ಕಳುಹಿಸುವೆವು.

ಕನ್ನಡ ನಾಡಿನಲ್ಲಿ ಪ್ರತಿ ಕಡೆಯಲ್ಲಿಯೂ
ಖಾತೆದಾರರು ಬೇಕು.

ಎಲ್ಲಾ ಪತ್ರವ್ಯವಹಾರಗಳನ್ನು ಕೆಳಗಿನ ವಿಳಾಸಕ್ಕೆ ನಡೆಸಬೇಕು.

ಯು. ನಾರಾಯಣನಾಯ್ಕ, ಕಾರ್ಯದರ್ಶಿ,
ಸಾರಸ್ವತ, ಉಡುಪಿ.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.
Authorised and fully paid
up Capital Rs. 300,000—0—0
Reserve and other sinking
Funds „ 259,000—0—0

೧೯೦೬ನೇ ಇಸವಿ ಜುಲಾಯಿ ತಿಂಗಳಲ್ಲಿ ಸಾಪಿಸಲ್ಪಟ್ಟಿತು.
ಅಧಿಕಾರಗೊಳಿಸಲ್ಪಟ್ಟು, ಪೂರ್ಣವಾಗಿ
ಕೊಟ್ಟ ಮೂಲಧನವು ರೂ. 300,000—0—0
ಕ್ಷೇಮನಿಧಿ ಮತ್ತು ಇತರ ಫಂಡುಗಳು
259,000—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1925.

K. Venkat Rao,
Secretary

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ದೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ಒಂದಕ್ಕೆ ಬೆಲೆ ೧-೦-೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ, ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಿಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ಒಂದಕ್ಕೆ ಬೆಲೆ ೦-೧೨-೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೨೫ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ಒಕ್ಕೆ ೧-೪-೦, ೧೨ ಸೀಸೆಗೆ ೨-೭-೦, ೨೫ ಸೀಸೆಗೆ ೪-೧೦-೦, ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲ ಪಂಡಿತರು,

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್ ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಪ್ಪ, ಸೋಡಾ ಫಾಕ್ಟರಿ,
ಮಂಗಳೂರು ಟಿವಣಿಗೆ ಸಮೀಪ.

ವಿದ್ಯಾವಾಚಸ್ಪತಿ
ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ
"ಸಂಕ್ಷೇಪಗೀತೆ"

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ, ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದೆ ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೦. ಟಪ್ಪಾಲು ಖರ್ಚು ಕೂಡಿ ಆಣೆ ೧೧ನ್ನು ಮನಿಯಾರ್ಡರ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ೩ರಕ್ಕಿಂತ ಜಾಸ್ತಿ ಖರ್ಚು ತಗಲುವುದು. ರಖಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.

ಪುಸ್ತಕ ದೊರಿಯುವ ವಿಳಾಸ—
ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು. ಮತ್ತು
ಕೆನರಿಸ್ ಮಿಶ್ಯನ್ ಬುಕ್ ಎಂಡ್ ಟ್ರೆಕ್ಟ ಡಿಪೋಜಿಟರಿ,
ಮಂಗಳೂರು.

ಕನ್ನಡಿಗರೆ! ವಸಂತ. ಕಣ್ತೆರೆಯಿರಿ!

ಈಗಾಗಲೇ ಎರಡನೇ ಸಂಪುಟವು ಆರಂಭಿಸಲಿದೆ.

ಇತಿಹಾಸನಿಧಿ ಎಂದರೆ . . . . ವಸಂತ
ಸಮಾಜಸುಧಾರಕನೆಂದರೆ . . . . ವಸಂತ
ಕೈಗಾರಿಕೆಯ ಸಾಮ್ರಾಜ್ಯವೆಂದರೆ . . . . . . ವಸಂತ
ಕರ್ನಾಟಕ ಭಾಷಾಸೇವಕನೆಂದರೆ . . . . . . ವಸಂತ
ದೇಶವಿದೇಶ ಬಂಧುವೆಂದರೆ . . . . ವಸಂತ
ಕಾದಂಬರಿಗಳ ಭಂಡಾರವೆಂದರೆ . . . . . . ವಸಂತ
ಚಿತ್ರಾಕರ್ಷ ಚಿತ್ರಶಾಲೆಯೆಂದರೆ . . . . . . ವಸಂತ
ದೇಶಭಕ್ತನೆಂದರೆ . . . . ವಸಂತ

ಇಂತಹ ವಸಂತನು ಯಾರಿಗೆ ಬೇಕು,
ಯಾರಿಗೆ ಬೇಡ?

48 (ಕ್ರೌನ್ ¼ ಫುಟ ಸ್ಯಾಜಿನ) ಪುಟಗಳನ್ನು ಒಳ್ಳಿದ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3-4-0 ಮಾತ್ರ.

ವ್ಯವಸ್ಥಾಪಕ,
ವಸಂತ ಕಾರ್ಯಾಲಯ,
ಸಂಗಾಪುರ, ಜಿಲ್ಲಾ ಕಲ್ಯಾಣ.

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ
ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ
ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ಯಾವಂತರೂ ಶಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ಗಾವರ್ಗಿಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನು ಕುರಿತ ಲೆಕ್ಕಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಧನಿಕರಿಗೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪೋಷಕರಿಗೆ	... ...	ರೂ. 3-0-0
ಇತರರಿಗೆ, ಪರಸ್ಥಳಕ್ಕೆ, ಪೋಸ್ಟೇಜು ಸೇರಿ		„ 2-8-0.
„ ಸ್ಥಳೀಕರಿಗೆ	...	„ 1-8-0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪ್ರತಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿಯಬಹುದು.

ಎಡಿಟರ್,
ಬಿ. ಹನುಮಂತಯ್ಯಗೌಡ,
ಅರ್ಥಸಾಧಕ ಪತ್ರಿಕೆ,
ಅರಲೇ ಪೇಟೆ, ಬೆಂಗಳೂರು ಸಿಟಿ.

ಶುದ್ಧವಾದ ನೀಲಗಿರಿ ಎಣ್ಣೆ

ತಲೆನೋವು, ಶೀತ, ಇನ್‌ಫ್ಲುಯೆಂಜಾಜ್ವರ,
ವಾತ, ಇತ್ಯಾದಿ ಎಲ್ಲಾ ರೋಗಗಳ
ಮೇಲೆ ಸಿದ್ಧೌಷಧ.

1 ಟಿನ್ನು ಬಾಟ್ಲೆ 1ರ ಕ್ರಯ 0-4-0.

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು.

ಜ್ಯೋತಿಷ್ಯ ಸಂಗ್ರಹ.

(1) ಬೃಹಜ್ಜಾತಕ ... ...
(2) ಉಮಾಮಹೇಶ್ವರ ಸಂವಾದ ಎಂಬ ಜ್ಯೋತಿಷ್ಯ ಕಾಲಚಕ್ರ
(3) ಕೇರಳ ಪ್ರಶ್ನೆ ... ...
(4) ಪ್ರಶ್ನೋತ್ತರ ರತ್ನಮಾಲಿಕಾ ... ...
(5) ನವನೀತಾರಿಷ್ಟ ... ...
(6) ಷಟ್ಪಂಚಾಶಿಕ್ ಗ್ರಂಥ ... ...
(7) ನಕ್ಷತ್ರ ಚೂಡಾಮಣಿ ಗ್ರಂಥ ... ...
(8) ಮುಹೂರ್ತಪದವೀಗ್ರಂಥ ... ...
(9) ಅಷ್ಟದಿಕ್ಪಾಲಕ ಮಂಗಲಾಷ್ಟಕಗಳು ... ...
(10) ಕಾಲನಿರ್ಣಯಾಭ್ಯೋಯಂ ಗ್ರಂಥ ... ...
(11) ಸವ್ಯಾಖ್ಯಾನ ಕಾಲಾಮೃತ... ... ...

— ಪ್ರಸಂಗದ ಪುಸ್ತಕಗಳು. —

(1) ಸೇತು ಬಂಧನ ... ...
(2) ವಸಿಷ್ಠ ಪುರಾಣ ... ...
(3) ಇಂದ್ರಜೀತು ಕಾಳಗ ... ...
(4) ಚಂಡಭೀಮ ... ...
(5) ಮೈದುನರಾಮನ ಚರಿತ್ರೆ ... ...
(6) ಭಾಮಿನಿ ಷಟ್ಪದಿ ಚೋರ ಕಥೆ ... ...
(7) ಕುಮಾರ ರಾಮನ ಕಥೆ ... ...
(8) ಕೃಷ್ಣದಾನಾಮೃತ ... ...
(9) ಶ್ರೀಕೃಷ್ಣ ಸತ್ಯಭಾಮಾ ಸಂವಾದ ... ...
(10) ಚಿತ್ರಕೇತು ರಾಜನ ಕಥೆ ... ...
(11) ಬಕಾಸುರ ವಧೆ ... ...
(12) ಬಾಣಾಸುರನ ಕಥೆ ... ...
(13) ರಂಭಾಶುಕ ಸಂವಾದ ... ...
(14) ರುಕ್ಮಿಣೀ ಪರಿಣಯ ... ...
(15) ರಾವಣೋದ್ಭವ ಯಕ್ಷಗಾನ ... ...
(16) ಸಭಾ ಲಕ್ಷಣವು ... ...
(17) ಶ್ರೀ ಕೃಷ್ಣ [illegible] ಕಥಾ ... ...
(18) ಚಂದ್ರಮೌಳಿ ಕಾಳಗ ... ...
(19) ಚಿತ್ರವಿಚಿತ್ರ ಕಾಳಗ ... ...
(20) ಯಕ್ಷಗಾನ ಸಾರಂಗಧರನ ಕಥೆ ... ...
(21) ,, ಶನಿದೇವರ ಮಹಾತ್ಮೆ ... ...
(22) ,, ಹರಿಶ್ಚಂದ್ರನ ಕಥೆ ... ...
(23) ಯಕ್ಷಗಾನ [illegible] ಕಥೆ ... ...
(24) ,, ಚೋರ ಕಥೆ ... ...
(25) ,, ಪಾರ್ವತಿ [illegible] ಕಥೆ ...
(26) ,, ಗೋವಿನ ಚರಿತ್ರೆ ... ...
(27) ,, ದುಶ್ಶಾಸನ ಕಥೆ ... ...
(28) ,, ಸಾನಂದ ಗಣೇಶ್ವರ ಕಥೆ ... ...
(29) ,, ಅಂಗದ ಸಾಧನ ... ...

— ಭಜನೆಯ ಪುಸ್ತಕಗಳು. —

(1) ಉಡುಪಿಕ್ಷೇತ್ರ ಮಹಾತ್ಮೆ ... ...
(2) ಹನುಮದ್ರಾಮಾಯಣ ... ...
(3) ಅಧ್ಯಾತ್ಮ ವಿಚಾರ ... ...
(4) ಭಕ್ತಿಮಹಿಮೆ ... ...
(5) ಪ್ರಬಂಧ ಮುಕ್ತಾವಳಿ ... ...
(1) ಹರಿಕೀರ್ತನಾಮೃತಸಾರ ... ...
(2) ಹರಿನಾಮಾಮೃತಂ. ... ...
(3) ರುಕ್ಮಿಣೀ ಕಲ್ಯಾಣ ... ...
(4) ಮಂಗಳ ಗೌರೀಹಾಡು ... ...
(5) ಉದ್ವಾಳೀಕನ ಹಾಡು ... ...
(6) ಯಕ್ಷಗಾನ ಗಿಳೀ ಹಾಡು ... ...
(7) ಕನಕದಾಸ ಕಬೀರದಾಸರ ಕೀರ್ತನೆಗಳು ...
(8) ಬೀಗರ ಹಾಡು ... ...
(9) ಭಜನಿಯ ಪದಗಳು ... ...

— ವಿವಿಧ ಪುಸ್ತಕಗಳು. —

(1) ಸದಾಚಾರ ವಿವೇಚನೆ ... ...
(2) ಗೋಪಾಲಕೃಷ್ಣ ಗೋಕಲೆ ... ...
(3) ಶ್ರೀಕೃಷ್ಣ ಸೇವಾವ್ರತಂ ... ...
(4) ಪಶ್ಚಾತ್ತಾಪ ಭಾಷ್ಯ ... ...
(5) ಶ್ರೀ ಶ್ರೀಮಹಾ ಭಾಗವತ ... ...
(6) ಉದ್ಧಯನ ಚರಿತ್ರೆ ... ...
(7) ಮಧ್ವಾಚಾರ್ಯರು (ಶ್ರೀಮಾನ್) ... ...
(8) ಯತಿರಾಜವಂಶತಿ ... ...
(9) ಪರಮಾರ್ಥಶತಕಂ ... ...
(10) ಭಕ್ತಿಸುಮಾಂಜಲಿ ... ...
(11) ಸತ್ಯರಾಜ ಪೂರ್ವದೇಶ ಯಾತ್ರೆಗಳು ...
(12) ಕಾಲನಿರ್ಣಯಾಖ್ಯಾನ ... ...
(13) ಅರೇಬಿಯನ್ ನಾಯ್ಟ್ಸ್ 1000 ಪುಟಗಳ ಮೇಲೆ ಇವೆ.

ಪುಸ್ತಕಗಳು ದೊರೆಯುವ ಸ್ಥಳ :— **ಶಾರದಾ ಛಾಪಖಾನೆ,**
ರಥ ಬೀದಿ, ಮಂಗಳೂರು.

ಮನುಷ್ಯರಿಗೆ ಮತಿಸ್ಥಿತಿಗಿಂತಲೂ ಹೆಚ್ಚಾದ್ದು ಯಾವುದೂ ಇಲ್ಲ.

ಜನ್ಮದಲ್ಲಿ ಅತ್ಯಸುಖಗಳು ಅನುಭವಿಸುವುದರಲ್ಲಿ ಆಶಜಯವಿಲ್ಲದೇ ಧನ್ಯನಾಗುವುದಕ್ಕೆ ಮುಖ್ಯ ಸಾಧನ ಮತಿಸ್ಥಿತಿಯೇ ರಾಮಬಾಣವೆಂದು ಹೇಳಬಹುದು.

ಆದರೆ ಪ್ರಸ್ತುತ ನಾವು ಅನುಭವಿಸುವ ಚಪಲಚಿತ್ತದಲ್ಲಿ ಮತಿಸ್ಥಿತಿ ಉಂಟಾಗುವುದು ಸಾಧ್ಯ ಹೇಗೆ? ನಿಮಗೆ ಯಾವವಿಧವಾದ ಚಪಲಚಿತ್ತವಿದ್ದಾಗ್ಯೂ, ನಮ್ಮ ಆತಂಕನಿಗ್ರಹ ಮಾತ್ರೆಗಳನ್ನು ಉಪಯೋಗಿಸಿರಿ. ಈ ಮಾತ್ರೆಗಳೇ ತನ್ನ ಮೊದಲಲ್ಲಿರುವ ದುರ್ಬಲವನ್ನು ನಿವಾರಿಸಿ, ದೃಢಚಿತ್ತವನ್ನುಂಟುಮಾಡುವುದು.

ಈ 32 ಮಾತ್ರೆಗಳುಳ್ಳ ಡಬ್ಬಿ ಒಂದಕ್ಕೆ ರೂಪಾಯಿ ಒಂದು ಮಾತ್ರ.

ಹಿಂದೂದೇಶದಲ್ಲಿಯೂ ಮತ್ತು ಇತರ ದೇಶಗಳಲ್ಲಿಯೂ ಪ್ರತಿಯೊಂದು ಗೃಹದಲ್ಲಿ ಪ್ರಯೋಜನಕರವಾದ ಒಂದು ಪುಸ್ತಕ ಇರುವುದು. ನಿಮಗೆ ಗೊತ್ತುಂಟೋ? ಆ ಪುಸ್ತಕದ ಹೆಸರೇ

“ಕಾಮ ಶಾಸ್ತ್ರ.”

ನೀವು ಇದುವರಿವಿಗೂ ಆ ಪುಸ್ತಕದಲ್ಲಿ ವಿವರಿಸಿದ ಭಿನ್ನ ವಿಷಯಗಳನ್ನು ನೋಡದೇ ಇದ್ದಪಕ್ಷಕ್ಕೆ, ಈ ದಿನ ನಮಗೆ ಒಂದು ಕಾರ್ಡು ಬರೆದರೆ ಪೋಸ್ಟು ಚಾರ್ಜು ನಿಮಗಿಲ್ಲದೇನೇ, ಆ ಪುಸ್ತಕವನ್ನು ಕಳುಹಿಸುತ್ತೇವೆ.

ಆತಂಕನಿಗ್ರಹ ಔಷದಾಲಯ,
ನಂಬ್ರ 26, ಬ್ರಾಡ್ವೆ, ಮದರಾಸು.

Agents:—
Messrs RAPHAEL & Co.,
MANGALORE.

ದಕ್ಷಿಣ ಕನ್ನಡ ಜಿಲ್ಲೆಯ

ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

—ಗೋಡೆಗೆ ತಗಲಿಸುವ
ಹೊಸ ನಮೂನೆಯ—

ಟಿಕ್—ಟಾಕ್

ಎಂಬ ಈ ಗಡಿಯಾರಗಳು ಜರ್ಮನೀ ದೇಶದಲ್ಲಿ ತಯಾರಿಸಿದ್ದು. ಇವು ಕಂತಾರು ಘಂಟೆಯನ್ನು ತೋರಿಸುವವು. ಇವಕ್ಕೆ ಬೀಗ ಕೊಡಬೇಕಾದಿಲ್ಲ. ಇದರಲ್ಲಿ ಕಾಣುತ್ತಿರುವ ಗುಂಡನ್ನು ಮೇಲಕ್ಕೆ ಎಳೆದರೆ ಸಾಕು. ತನ್ನಷ್ಟಕ್ಕೆ ತಾನೇ ಟಿಕ್—ಟಾಕ್ ಎಂಬ ಶಬ್ದವನ್ನು ಮಾಡುತ್ತಾ ಸರಿಯಾದ ಕಾಲವನ್ನು ತೋರಿಸುವದು. ಇದು ನೋಡುವುದಕ್ಕೆ ಬಹು ಲಕ್ಷಣವಾಗಿರುವು ೨.

ಕ್ರಯ 1ಕ್ಕೆ ರೂ. 3—0—0

ಪೀಟರ್ ವಾಚ್ ಕಂಪೆನಿ
ಪೋಸ್ಟ್ ಬಾಕ್ಸ್ ನಂ. 27, ಮದ್ರಾಸ್.

---

11 ಮಣಿಗಳಿದ್ದು ಬ್ರಿಜ್ ಮ್ಯೂವ್ಮೆಂಟ್.

22 ಕೆರೆಟ್ ರೋಲ್ಡಗೋಲ್ಡ ರಿಸ್ಟ್‌ವಾಚ್

ಈ ವಾಚ್ ಎಂಟಾಣೆ ಪಾವಲಿಯಷ್ಟು ಸಣ್ಣದಾಗಿ ಬಹು ಚಲೋದಾದ ಇನೆಮಲ್ ಡಾಯಲ್ ಇದ್ದು ಬಹು ಉತ್ತಮವಾಗಿದೆ. 5 ವರ್ಷದಗ್ಯಾರಂಟೆ ಇದೆ. ಕ್ರಯ ರೂ. 12/8
18 ಕೆರೆಟು ಇಲೆಕ್ಟ್ರೊ ರೋಲ್ಡಗೋಲ್ಡ ವಾಚ್ ಕ್ರಯ ರೂ. 7—0—0. “ಬಿ” ಟ್ಯಾಮ್‌ಪೀಸ ರೂ. 2-4-0.

9 ಕಾರಾಟ್ 8 ಮಣಿಗಳ ವಾಚ್ 1ರ ಕ್ರಯ 23—0—0.
14 ,, ,, ,, 26—0—0.
14 ,, 15 ಮಣಿ ,, 36—0—0.
9 ,, ,, ,, 32—0—0.

ಚಲೋದಾದ ಲವ್ ಪಕ್ಷಿಗಳು ಡಜನ್ 1ಕ್ಕೆ ರೂ. 2/14.

F. Sambasiva Chetty & Co.
134 NAINEAPPA NAIGKEN ST.
P. T. MADRAS.

ಶುದ್ಧ ರೋಮದ ಧಾವಳಿಗಳು.

1 ಮಳ ಉದ್ದ 1¼ ಮಳ ಅಗಲ ರೂ. 1¼ರಿಂದ 2 ವರೆಗೆ, 5 ಮಳ ಉದ್ದ 1½ ಮಳ ಅಗಲ ರೂ. 1½ ರಿಂದ 5 ವರೆಗೆ, 6 ಮಳ ಉದ್ದ 1½ ಮಳ ಅಗಲ ರೂ. 2½ರಿಂದ 6 ವರೆಗೆ, 8 ಮಳ ಉದ್ದ 2 ಮಳ ಅಗಲ ರೂ. 3½ರಿಂದ 10 ವರೆಗೆ, 12 ಮಳ ಉದ್ದ 2¼ ಮಳ ಅಗಲ ರೂ. 6ರಿಂದ 12 ವರೆಗೆ, 16 ಮಳ ಉದ್ದ 2¼ ಮಳ ಅಗಲ ರೂ. 9 ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಜಿನ್ನರ್ ರೇಶ್ಮೆ ಮಡಿಗಳು, ಪಾವಾಡಗಳು, ಕಾಶೀ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, ಬಾಣಲಿಂಗ, ಸಾಳಗ್ರಾಮ, ಹಾರ, ಪಶ್ಮೀರ್‌ವಾಡಿ, ಶಿಲ್ಪಾಕಿಯ ಆಟದ ಸಾಮಾನುಗಳು, ಪೋಟೋ ಉಂಗುರಗಳು ಮತ್ತು ಇನ್ನೂ ಅನೇಕ ಸಾಮಾನುಗಳು ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುದು. ಕ್ಯಾಟಲಾಗ್ ಇನಾಂ.

ವಿಳಾಸ—
ಶಿರೋಮಣಿ ಮು. ನಾರಾಯಣಾಚಾರ್ಯ
ಮತ್ತು ಕಂಪೆನಿ, ಗೌಳಂಬಾ, ಕಾಶೀ ಕ್ಷೇತ್ರ.

೧,೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು
— ತೆಗೆದುಕೊಳ್ಳಿರಿ. —

REGISTERED
TRADE
MARK

ಇದರ ಸೇವನೆಯಿಂದ ದೀರ್ಘವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಭೋಗಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ದಾರ್ಢ್ಯತೆಯನ್ನೂ ಉಂಟುಮಾಡುವುದು. ಕೈ ಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಾಮಿಸ್ರಿ ಎಂಬುವದು ಕಾಬೂಲ್ ಕಂದಹಾರ ಪ್ರಾಂತ್ಯಗಳಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರಿಕಾ, ಬರ್ಮಾ, ಪಿನಾಂಗ್ ಸಿಂಗಪೂರ್, ಸಿಲೋನ್ ಮತ್ತು ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. ೧ ಡಬ್ಬಿಯನ್ನು ೧೫ ದಿವಸ ಸೇವಿಸಿದಲ್ಲಿ ಗುಣವು ಖಂಡಿತವಾಗಿ ಕೋರಬಹುದು. ೨ ಯಾ ೩ ಡಬ್ಬಿಗಳು ಜನ್ಮಾಂತ್ಯದವರೆಗೂ ಪೂರ್ಣವಾಗಿ ಗುಣವನ್ನು ಮಾಡುವವು. ಅನುಪಾನ ಪತ್ರಿಕೆಯು ಡಬ್ಬಿಯ ಸಂಗಡವೇ ಇರುತ್ತೆ. ಹೆಸರು ವಿಳಾಸಗಳನ್ನು ಚೆನ್ನಾಗಿ ತಿಳಿಯುವ ಹಾಗೆ ವಿವರವಾಗಿ ಬರಿಯಬೇಕು. ಕ್ರಯ ಡಬ್ಬಿ ೧ಕ್ಕೆ ರೂ. ೨—೦—೦.

ಟಪ್ಪಾಲು ಖರ್ಚು ೧ ರಿಂದ ೩ ಡಬ್ಬಿಗಳವರೆಗೆ ೦—೮—೦.

ಏಜಂಟರು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯವಾಗಿ ಬೇಕಾಗಿರುತ್ತೆ. ರೂಲ್ಸ್ ತರಿಸಿ ನೋಡಿಕೊಳ್ಳಬಹುದು.

ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಿರಿ.

ಟೆಲಿಗ್ರಾಫ್ ಅಡ್ರೆಸ್, “ಮಿಸ್ರಿ” ಬೆಂಗಳೂರು ಸಿಟಿ.

ಡಿ. ಮನ್ನಾಲಾಲ್,
ಹಿಂ. ನೇಟಿವ್ ಡಾಕ್ಟರ್.
ಸಾಲಂಮಿಸ್ರಿ ಮುರಬ್ಬಾ ಡಿಪೋ,
ಬೆಂಗಳೂರು ಸಿಟಿ.

Edited, Printed & Published by V. S. Kamath at the M. T. A. Sharada Press, Mangalore.

Registered: No. M. 498.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ನಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ? ಮತ್ತೆ ವಿಶ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ । ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೯. ಮಂಗಳೂರು, ತಾರೀಕು ೨೧ನೇ ಶುಕ್ರವಾರ ಅಗೋಸ್ತು ೧೯೨೫. ಸಂಚಿಕೆ ೩೪.

Th. Canara Banking Corporation, UDIPI, Ltd.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office: UDIPI — Branch: COONDAPOOR.
ಹೆಡ್ ಆಫೀಸು: ಉಡುಪಿ. — ಶಾಖೆ: ಕುಂದಾಪುರ.

ಚಂದಾ ಹಾಕಿ ಎತ್ತಿದ ಮೂಲಧನ	ರೂ. 2,25,000—0—0.
ವಸೂಲಾದ ಮೂಲಧನ	ರೂ. 1,71,875—9—11.
ಕ್ಷೇಮನಿಧಿ ವ ಇತರ ಫಂಡುಗಳು	ರೂ. 64,700—0—0.
ಠೇವಣಾತಿಗಳು	ರೂ. 4,83,945—2—9.

— ವಿನಿಯೋಗ —.

ಗವರ್ನಮೆಂಟು ಪ್ರಾಮಿಸರಿ ನೋಟಿನ ಮೇಲೆ	ರೂ. 25,800—0—0.
ಪ್ರಾಮಿಸರಿ ನೋಟು ವ ಬಿಲ್ಲುಗಳ ಮೇಲೆ	ರೂ. 5,92,445—9—4.
ಚಿನ್ನಾಭರಣ ಮುಂತಾದ ಭದ್ರತೆಸೊತ್ತುಗಳ ಮೇಲೆ	ರೂ. 1,11,658—8—6

ಈ ಕೆಳಗಿನ ಠೇವಣಾತಿಗಳನ್ನು ಅಂಗೀಕರಿಸುವುದಲ್ಲದೆ ಇತರ ಬ್ಯಾಂಕುಗಳ ಮೇಲಣ ಪತ್ರ ಚೆಕ್ಕುಗಳನ್ನೂ ಸಾಹುಕಾರಿ ಹುಂಡಿಗಳನ್ನೂ ವಸೂಲು ಮಾಡುವ ಮತ್ತು ಇತರ ಎಲ್ಲಾ ತರದ ಬ್ಯಾಂಕಿನ ವಹಿವಾಟುಗಳು ನಡಿಸಲ್ಪಡುವವು.

ಠೇವಣಾತಿಗಳು.

ನಿರಖು ಠೇವಣಾತಿಗಳು:—ಸಾ. ಸೆ. 6¼ ರಿಂದ 7½ ವರೆಗಿನ ಬಡ್ಡಿಯನ್ನು ಪ್ರತಿ 3 ತಿಂಗಳಿಗೊಮ್ಮೆ ಕೆರುವ ಅನುಕೂಲ ವ ಲಾಭದಾಯಕವಾದ ಕರ್ತಗಳ ಮೇಲೆಯೂ

ಕೊಂಚ ಅವಧಿ ಠೇವಣಾತಿಗಳು:—1 ತಿಂಗಳ ನಂತರ 15 ದಿವಸಗಳ ನೋಟೀಸಿಗೊಳಪಟ್ಟು ಹಿಂತೆಗೆಯಬಹುದಾದ ಠೇವಣಾತಿಗಳನ್ನು ಸಾ. ಸೆ. 5ರ ದರದ ಬಡ್ಡಿ ನಡದ ದಿನಗಳಿಗೆ ಕೊಡುವ ಕರ್ತದಿಂದಲೂ

ಚಾಲ್ತಿ ಠೇವಣಾತಿಗಳು:—ದಿನಂಪ್ರತಿ ಇರುವ ಶಿಲ್ಕಿನ ಮೇಲೆ ಸಾ. ಸೆ. 3ರಂತೆ ಬಡ್ಡಿ ಕೆರುವ ಕರ್ತದ ಮೇಲೂ

ಸೇವಿಂಗ್ಸ್ ಬ್ಯಾಂಕು ಠೇವಣಾತಿಗಳು:—ಸಾ. ಸೆ. 4½ರ ಬಡ್ಡಿಯ ಮೇಲೂ

ಸಂಚಯ ಠೇವಣಾತಿಗಳು:—ಮಕ್ಕಳ ವಿದ್ಯಾಭ್ಯಾಸ, ಉಪನಯನ, ವಿವಾಹ ಮುಂತಾದ ಶುಭಕಾರ್ಯಗಳಿಗೆ ಅನುಕೂಲವಾಗಿ ಸಿಕ್ಕುವಂತೆ ತಿಂಗಳು 1ರ ರೂಪಾಯಿ 1ರಂತೆ 13-24-45-84-132 ತಿಂಗಳುಗಳ ವರೆಗೆ ಪಾವತಿಸಲ್ಪಟ್ಟವುಗಳ ಅವಧಿ ಮುಗಿದ ಮೂರು ತಿಂಗಳಲ್ಲಿ ಆಯಾಯ ಅವಧಿಮೇರೆಗೆ ರೂ. 13—8—0, ರೂ. 25—8—0, ರೂ. 50, ರೂ. 102—8—0 ಮತ್ತು 182—8—0ನ್ನೂ ಅದೇ ಮೇರೆಗೆ ತಿಂಗಳು 1ರ ರೂಪಾಯಿ 1ರ ಗುಣವೃದ್ಧಿ ಮೊಬಲಗನ್ನು ಕೆತ್ತಲ್ಲಿ ಆಯಾಯ ಮೊಬಲಗಿನ ಅದೇ ಗುಣವೃದ್ಧಿ ಮೊಬಲಗನ್ನು ಕೆರುವ ಕರ್ತದ ಮೇಲೂ ಅಂಗೀಕರಿಸಲ್ಪಡುವವು.

ಹೆಚ್ಚಿನ ಮಾಹಿತಿ ಸೆಕ್ರೆಟರಿಯವರಿಂದ ತಿಳಿಯಬಹುದು.

ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಆಫೀಸು, ಉಡುಪಿ, ತಾ. 30—6—1925.

ನಯಂಪಳ್ಳಿ ಆನಂದ್ರಾವ್,
ಸೆಕ್ರೆಟರಿ ಮತ್ತು ಒಫಿಸಿಯೆಟಿಂಗ್ ಮೆನೇಜರ್.

ಮೂರು ದಿವಸಗಳಲ್ಲಿ ಗುಣಸಿಕ್ಕದಿದ್ದರೆ ಔಷಧಿಯ ಕ್ರಯ ವಾಪಾಸು.

ಜೀರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ, ಪರಮಾನಂದ ಮೊದಲಾದ ಸುಖಜೀವನಕ್ಕೆ ಬೇಕಾದ ಆರೋಗ್ಯದಾಯಿನಿ.

ಲೋಕಪ್ರಸಿದ್ಧವಾದದ್ದು! ಅನುಭವಸಿದ್ಧವಾದದ್ದು!!

ಟ್ರೇಡ್ ಮಾರ್ಕ] ಅಗಸ್ತ್ಯ [ನೋಡಿ ತಕೊಳ್ಳಿರಿ

ಮನ್ಮಥ ಚಿಂತಾಮಣಿ ಲೇಹ.

(ರಿಜಿಸ್ಟರ್ ಆದದ್ದು)

ಆಬಾಲವೃದ್ಧ ಸ್ತ್ರೀಪುರುಷರ ಅನೇಕ ರೋಗಗಳ ಮೇಲೆ ಗುಣಕಾರಿಯಾದದ್ದು,

ಮೋಹವಿಕಾರವಿದ್ದವರಿಗೂ, ನಿದ್ರೆಇಲ್ಲದವರಿಗೂ, ಸ್ವಪ್ನೇಂದ್ರಿಯವಾಗುವ ಯುವಕರಿಗೂ ಜ್ಞಾನಿಸುಜ್ಞಾನಿಗಳಿಗೂ ಉಪಯೋಗವುಳ್ಳ, ಪರಮಾನಂದ ಔಷಧಿ.

1 ಸೇರು ಮಾತ್ರೆಂಟು ದಿವಸಕ್ಕೆ ಸೇವಿಸಬಹುದು.

1 ಸೇರು ಡಬ್ಬಿ 1ಕ್ಕೆ 3-0-0. ½ ಸೇರು ಡಬ್ಬಿ 1ಕ್ಕೆ 1-9-0.

ವಿ. ಪಿ. ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿಗೆ ಬರೆಯಿರಿ.

ವಿಳಾಸ— ದೇವಣ್ಣ ನಾರಾಯಣ ಸೇಟ್,
[illegible]
[illegible] (ದ. ಕ.)

Pandit B. Ramakrishna Baliga's Siddha Ayurvedic medicines of 50 years' reputation.

ಮಹಾ ಮದನಕಾಮೇಶ್ವರಿ ಲೇಹ—ಇದನ್ನು ಭಂಗಾರ, ಅಭ್ರಕಭಸ್ಮ, ರಸಸಿಂಧೂರ, ಕಸ್ತೂರಿ, ಕುಂಕುಮಕೇಸರ ವಗೈರೆ ಅಮೂಲ್ಯವಾದ ರಸಾಯನ ದ್ರವ್ಯಗಳಿಂದ ತಯಾರಿಸಲ್ಪಟ್ಟಿರುತ್ತದೆ. ಇದು ಎಲ್ಲಾ ತರದ ನಪುಂಸಕ ರೋಗಗಳನ್ನೂ ಸ್ವಪ್ನಾವಸ್ಥೆಯಲ್ಲಿ ಧಾತುಪತನೆಯನ್ನೂ ಗುಣಪಡಿಸಿ, ದೇಹಕ್ಕೆ ದಿವ್ಯಕಾಂತಿಯನ್ನೂ, ಪುಷ್ಟಿಯನ್ನೂ, ಪುರುಷತ್ವವನ್ನೂ, ವೀರ್ಯಸ್ತಂಭನವನ್ನೂ ಉಂಟುಮಾಡಿ ಅತ್ಯಾನಂದವನ್ನು ಕೊಡುವುದಲ್ಲದೆ, ಅಜೀರ್ಣ, ಅತಿಸಾರ, ಗ್ರಹಣಿ, ಆಮ್ಲ, ಪಿತ್ತ, ಉದರಶೂಲೆ, ಪ್ರಮೇಹ ವಗೈರೆ ರೋಗಗಳನ್ನು ಗುಣಪಡಿಸುವಲ್ಲಿ ಕೇವಲ ಅಮೃತಸಮಾನವಾಗಿರುವುದು ಇದನ್ನು ಆಬಾಲವೃದ್ಧರೂ ಸೇವಿಸಬಹುದು.

48 ದಿನಗಳ ವರೆಗೆ ಸಾಕಾಗುವ ಲೇಹ ಸೇರು ೧ರ ರೂ. 3—0—0.

ಬ್ರಹತ್ ಶಾರಿವ್ಯಾದಿ ರಸಾಯನ—ಇದು ಶಾಸ್ತ್ರಯುಕ್ತ ರಕ್ತವನ್ನು ಶೋಧಿಸುವ ದಿವ್ಯೌಷಧವಾಗಿರುತ್ತದೆ. ಇದರ ಸೇವನೆಯಿಂದ 20 ತರದ ಪ್ರಮೇಹ ರೋಗಗಳೂ ಎಲ್ಲಾ ತರದ ಫರಂಗಿ ರೋಗಗಳೂ ಅಲ್ಪ ಸಮಯದಲ್ಲಿ ಗುಣಹೊಂದುವವು. ಅದಲ್ಲದೆ ಇದು ಎಲ್ಲಾ ತರದ ಕುಷ್ಠವ್ಯಾಧಿಗಳನ್ನೂ, ತುಜ್ಜಿ, ಕುರು ಮೊದಲಾದ ಸಕಲ ಚರ್ಮವ್ಯಾಧಿಗಳನ್ನೂ, ಪಾದರಸ ಸೇವನೆಯಿಂದ ಉಂಟಾದ ರೋಗಗಳನ್ನೂ ಮತ್ತು ಹೆಂಗಸರ ಪ್ರದರ ರೋಗಗಳನ್ನೂ ಶಾಸ್ತ್ರಯುಕ್ತ ಗುಣಪಡಿಸುವುದು.

8 ಔನ್ಸಿನ ಬಾಟ್ಲಿ ಒಂದರ ಕ್ರಯ ಬರೀ ರೂ. 1—9—0.

ವಿಳಾಸ:— **ಪಂಡಿತ, ಬಿ. ರಾಮಕೃಷ್ಣ ಬಾಳಿಗ, ಬಂಟವಾಳ ದ. ಕ.**

ಮಂಗಳೂರು ಏಜಂಟರು:— **ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,**
ತೇರುಬೀದಿ, ಮಂಗಳೂರು.

AMRUTANJAN
Best Indian Pain Balm
Amrutanjan
BOMBAY

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಶ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು.

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಸಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ತಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ, ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 3 ಆಣೆ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

109 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

— ರಥೋತ್ಸವ, ವಿವಾಹ ಉಪನಯನಗಳ ಸಮಯ — ಸರ್ವರಿಗೂ ಉಡಿಗೆ ತೊಡಿಗೆಗಳು ಬೇಕಾಗುವ ಸಂದರ್ಭ.

ಯಾರು, ಯಾವುದನ್ನು ಎಲ್ಲಿ ಪಡೆಯಬೇಕೆಂಬ ಶಂಕೆಯಿಂದ ವಿಕಂಬ ಮಾಡಬೇಡಿರಿ. ಉಡಿಗೆತೊಡಿಗೆಗಳನ್ನು ಆರಿಸುವಾಗ ನಿಮಗೆ ಬೇಕಾದ ಯಥಾರ್ಥ ಮಾಹಿತಿಯನ್ನು ಕಳೆದ ಹತ್ತಿಪ್ಪತ್ತು ವರುಷಗಳಿಂದ ಪಡೆದು ನಮ್ಮಲ್ಲಿಯ ವ್ಯಾಪಾರವು ಗಿರಾಕಿಗಳಿಗೆ ಸರ್ವ ದೃಷ್ಟಿಯಿಂದಲೂ ಲಾಭಕರವಾಗಿ ಪರಿಣಮಿಸುವಂತೆ ನಿಮ್ಮ ಇವಳಿ ಸಂಗ್ರಹವನ್ನು ಮಾಡಿರುತ್ತೇವೆ.

ಗುರ್ಪುರ್ಕರ್ ಬ್ರದರ್ಸ್, ರಥಬೀದಿ, ಮಂಗಳೂರು.

ಹೆಡ್ ಆಫೀಸು:—ರಥಬೀದಿ—(ಮೊದಲು ಸುಬ್ರಾಯ ನಾಗಪ್ಪನಾಯಕ್, ಎಂಡ್ ಕೊ, ಇದ್ದಲ್ಲಿ; ಅಬಿಯುವಿನ್ ರಸ್ತೆಗೆ ತಿರುಗುವಲ್ಲಿ) ಮಂಗಳೂರು.

ಬ್ರೆಂಚ್ ಆಫೀಸು:—ರಥಬೀದಿ—(ಹಳೇ ತಾಲೂಕು ಕಚೇರಿಯ ವಟಾರಕ್ಕೆ ಸಮೀಪದಲ್ಲಿರುವ ಮಳಿಗೆ) ಮಂಗಳೂರು.

ಈ ದೇಶದ ಪ್ರಖ್ಯಾತಪಟ್ಟ ನೇಯಿಗೆಯ ಕೇಂದ್ರಸ್ಥಳಗಳಾದ—ಬನಾರಿಸ್, ಪೂನಾ, ಅಹಮ್ಮದಾಬಾದ್, ಸುರತ್, ಬೆಂಗಳೂರು, ಧರ್ಮಾವರಮ್, ಕಂಜೀವರಮ್, ಕೊಯಮುತ್ತೂರು, ಮಧುರೆ, ಸೇಲಮ್, ಕುಂಭಕೋಣ, ಅರ್ಣಿ, ಸಾಲಿಪೇಟೆ, ಹುಬ್ಬಳ್ಳಿ, ಇಳಕಲ್, ಗದಗ, ಮದ್ರಾಸು ಈ ಪ್ರಾಂತ್ಯಗಳಲ್ಲಿ ತಯ್ಯಾರಾದ

ಜರಿಸೀರೆಗಳು, ದುಪ್ಪಟಾ, ಜರಿಕಣ, ಪೇಟ್ಗಿ, ರೇಶ್ಮೆ ಸೀರೆಗಳು, ಅರಶಿನಪಟ್ಟೆ ಸೀರೆಗಳು, ಕೊರ್ನಾಡ್ ರೇಶ್ಮೆ ಸೀರೆಗಳು, ಜರಿ ಅಂಚಿನ ಸೀರೆಗಳು, ರೇಶ್ಮೆ ಮಡಿಗಳು, ನಿತ್ಯ ಉಪಯೋಗದ ಸೀರೆಗಳು ಟ್ವಿಲ್ಸ್, ಕಶ್ಮೀರ ಸಿಲ್ಕ್‌ಗಳ ವ ಇತರ ಸಿಲ್ಕ್‌ಗಳ ಕೋಟಿಂಗ್ ಶರ್ಟಿಂಗ್.

ಕೈಮಗ್ಗದಲ್ಲಿ ತಯಾರಿಸಿದ ನೂಲಿನಿಂದ ಮಾಡಿದ—
ಖದ್ದರ್ ಶರ್ಟಿಂಗ್, ಖದ್ದರ್ ಕೋಟಿಂಗ್, ಖದ್ದರ್ ಧೋತಿ, ಖದ್ದರ್ ಸೀರೆ, ಅಂಗವಸ್ತ್ರ, ಇತ್ಯಾದಿ—
ಮುಸಲ್ಮಾನರಿಗೆ ಬೇಕಾದ ನಮೂನೆಯ ಲುಂಗಿ ತಡಿಗಳು ವಗೈರೆ—
ಈ ಸಂಗ್ರಹವನ್ನು ನಮ್ಮ [illegible] ಕ್ರಯಗಳು [illegible]
[illegible]

ಆರ್. ಮಾರ್ಟಿನ್ನರ

ಜ್ವರದ ಗುಳಿಗೆಗಳು.

ಸುಲಭ ಸ್ವೇದನಕಾರಿಯಾದ ಈ ಘುಟಿಕೆಗಳು ಚಳಿಜ್ವರದ ವಿಷ ಪದಾರ್ಥಗಳನ್ನು ತಟ್ಟನೆ ನಿರ್ಮೂಲಪಡಿಸಿ, ವೃಣಗಳನ್ನು ಸಂಪೂರ್ಣ ನಾಶಪಡಿಸಿ, ಮಲೇರಿಯಾ ಜ್ವರ, ಚಳಿಜ್ವರ, ಛಾರಿಜ್ವರ, ಮತ್ತು ಆಗಾಗ್ಗೆ ಬಿಟ್ಟುಕೊಂಡು ಬರುವ ಇತರ ಜ್ವರಗಳ ಬಾಧೆಯಿಂದ ಗುಣಪಡಿಸುವವು.

ತಟ್ಟನೆ ವಾಸಿಪಡಿಸುವುದಕ್ಕೆ ಹತ್ತಾರುಗಳಲ್ಲಿ ಪ್ರಸಿದ್ಧತೆಯನ್ನು ಹೊಂದಿದ್ದು, ಅತಿ ಬಿಟ್ಟುಬಿಟ್ಟ ಅನೇಕ ಸಂದರ್ಭಗಳಲ್ಲಿ ಗುಣಪಡಿಸಿದವುಗಳಾಗಿರುತ್ತವೆ.

ಇವುಗಳು ಗಿರಣಿಗಳಲ್ಲಿಯೂ ಕಾರ್ಖಾನೆಗಳಲ್ಲಿಯೂ ವಿಶೇಷವಾಗಿ ಉಪಯೋಗಿಸಲ್ಪಡುವುದು. ಸಾಮಾನ್ಯವಾಗಿ ಹಿಂದೂಸ್ಥಾನದಲ್ಲಿ ಎಲಾ ತೋಟಗಾರರಿಂದ ಉಪಯೋಗಿಸಲ್ಪಡುವುದು. ಅಲ್ಲದೆ ದಿಂಗತ ವಿಶ್ರಾಂತಿವಾದ ಕೀರ್ತಿಯನ್ನು ಕೂಡ ಸಂಪಾದಿಸಿರುದುವು ಕಠಿಣ ಜ್ವರವು ತಟ್ಟನೆ, ಇಳಿಯಬೇಕಾದರೆ ಆರ್ ಮಾರ್ಟಿನರ ಎಗ್ಯೂ ಮಿಕ್ಚರ್ ಒಡನೆ ಇದನ್ನು ಸೇವಿಸಬೇಕು. ಈ ಇವೆರಡು ಅದ್ಭುತ ಶಕ್ತಿಯುಳ್ಳ ಔಷಧಿಗಳು ಪ್ರತಿಯೊಂದು ಕುಟುಂಬದ ಮನೆಯಲ್ಲಿಟ್ಟುಕೊಳ್ಳಲು ಯೋಗ್ಯ ವಸ್ತುಗಳಾಗಿವೆ ಪ್ರತಿಯೊಂದು ಬಾಟ್ಲಿಯಲ್ಲಿ 40 ಮಾತ್ರೆಗಳಿರುವ ಬಾಟ್ಲಿ 1ಕ್ಕೆ 1-8-0.

100 ಮಾತ್ರೆಗಳಿರುವ ಬಾಟ್ಲಿ 1ಕ್ಕೆ 3-8-0.
150 ,, ,, ,, 5-4-0.

ಆರ್. ಮಾರ್ಟಿನ್ನರ ಎಗ್ಯೂಮಿಕ್ಚ್ಚರ್.

ಇದು ಜ್ವರ, ಸೀತಜ್ವರ ಮಲೇರಿಯಾ, ಚಾರಿಜ್ವರ, ಸನ್ನಿಪಾತ ಪಟ್ಟ ವಾಯುವಿನಿಂದುಂಟಾದ ರೋಗ ಇವೇ ಮೊದಲಾದ ಎಲ್ಲಾ ತರದ ಜ್ವರಗಳನ್ನೂ ಕೂಡಲೇ ನಾಶಮಾಡುತ್ತದೆ. ಎಲುಬುಗಳಲ್ಲಿ ಹರಡಿಕೊಂಡಿರುವ ಜ್ವರವನ್ನೂ ಸಹ ನಾಶಮಾಡುವುದಲ್ಲದೆ, ಇದು ಸಿಹಿಯಾಗಿರುವುದ್ದರಿಂದ ಸಣ್ಣ ಕೂಸುಗಳು ಸಹ ಕುಡಿಯಲಿಕ್ಕೆ ಇಷ್ಟಪಡುತ್ತವೆ. ಅನೇಕ ನಿಜ ವಿದ್ವಾಂಸ ವೈದ್ಯರಿಂದ ಗುಣಮಾಡುವುದಕ್ಕಾಗದ ಜ್ವರವನ್ನು ಈ ಎರಡೇ ಎರಡು ಬಾಟ್ಲಿಗಳ ಸೇವನೆಯಿಂದ ಹುಷಾರಾಗಿದೆ.

ಬಾಟ್ಲಿ 1ಕ್ಕೆ ರೂ. 0-13-0.

ಆರ್. ಮಾರ್ಟಿನ್ನರ ಮೂಲವ್ಯಾಧಿ ಮುಲಾಮು.

ಮನುಷ್ಯನಿಗೆ ಮೂಲವ್ಯಾಧಿ ಆದಾಗ, ಬಹಳ ಸಲ ಮೂತ್ರಶಂಕೆಯಾಗುವಿಕೆ, ಮುರ್ಮಸಾ ನದಲ್ಲಿ ಉರಿಯುವುದು, ಮಲಬದ್ಧತೆ ಇವೇ ಮುಂತಾದರಿಂದ ನರಳುತ್ತಾನೆ. ಈ ಔಷಧದ ಒಂದೇ ಒಂದು ಬಾಟ್ಲಿಯ ಉಪಯೋಗದಿಂದ ರಕ್ತ ಸುರಿಯುವ ಮೂಲವ್ಯಾಧಿ, ಕಂಕುಳಲ್ಲಿ ನೋಯುವ ಮೂಲವ್ಯಾಧಿ ಮತ್ತು ಎಂತ ತರಹದ ಕಠಿಣವಾದ ಮೂಲವ್ಯಾಧಿಯಾದ್ದರದ ಕೂಡಲೇ ವಾಸಿಯಾಗುತ್ತದೆ. ಇದು ಒಳ್ಳೇ ಔಷಧಗಳಿಂದ ತಯಾರಿಸಲ್ಪಟ್ಟು ತೆಗೆದುಕೊಳ್ಳುವವರಿಗೆ ಏನೊಂದೂ ನೋವನ್ನೂ ಕೊಡದೆ ತಂಪಾಗಿ ಮಾಡುತ್ತದೆ. ಬಾಟ್ಲಿ 1ರ ದರ ರೂ. 1-8-0 ಮಾತ್ರ.

60 ಮಾತ್ರೆಗಳ ಸೀಸೆ 1ಕ್ಕೆ ರೂ. 1-4-0.

ವಿಳಾಸ:—ಆರ್. ಡಿ. ಕಟ್ಲೆ ಮತ್ತು ಕಂಪೆನಿ,
ನಂಬ್ರ ಬಿ. ಫ್ರೆಯರ್ ರೋಡ್,
ಸಾಂಜ ವರ್ತಮಾನ ಪ್ರೆಸ್,
ಟೋಡಿವಾಲಾ ಬಿಲ್ಡಿಂಗ ಎದುರುಗಡೆ, ಫೋರ್ಟ ಮುಂಬಯಿ.

R. D. Kately & Co.
No. B. Frere Road,
Opposit Sanjvertaman Press,
Todivala Building, FORT BOMBAY

ಲಿವರ್ ಮೂವ್‌ಮೆಂಟ್ ವಾಚ್.

15 ಮಣಿಗಳಿದ್ದು ರೋಲ್ಡಗೋಲ್ಡ ವಾಚ್.

ಈ ಗಡಿಯಾರ ಕೈಗೆ ಕಟ್ಟುವಂಥಾದ್ದಾಗಿ ಸರಿಯಾದ ಸಮಯವನ್ನು ತೋರಿಸಿ ಚಿರಕಾಲ ವರೇಗೆ ಬಾಳುವುದು.

10 ವರುಷದ ವರೆಗೆ ಬಾಳುವ ಗೆರೆಂಟಿ ಇದೆ. ಕ್ರಯ ರೂ. 17—8—0.

11 ಮಣಿಗಳಿದ್ದು ನಿಜವಾದ ರೋಲ ಗೋಲ್ಡ ಬಂಗಾರದಿಂದ ತಯಾರಿಸಲ್ಪಟ್ಟು 5 ವರ್ಷದ ಗೆರೆಂಟಿ ಇರುವ ವಾಚಿಗೆ ಕ್ರಯ ರೂ. 12—8—0.

18 ಕೆರೆಟ್ ಇಲೆಕ್ಟ್ರೊ ರೋಲ್ಡ ಗೋಲ್ಡ ವಾಚ್ ಕ್ರಯ ರೂ. 7—0—0. ಲಿವರ್ ಮೂವ್‌ಮೆಂಟ್ 10 ಮಣಿಗಳಿದ್ದ ಬಂಗಾರ ಗಿಲ್ಟುವಾಚ್ ಕ್ರಯ ರೂ. 13—8—0.
ಎಲಾರ್ಮ ಜರ್ಮನ್ ಟ್ಯಾಮ್‌ಪೀಸ್ ಕ್ರಯ ರೂ. 5-0-0.
ಡಬ್ಬಲ್ ಎ. ,, ,, ,, 6-0-0.
"ಬಿ" ಟ್ಯಾಮ್‌ಪೀಸ್ ಕ್ರಯ ರೂ. 2—4—0
ಟಿಕ್—ಟಾಕ್ ವಾಚ್ 1ರ ಕ್ರಯ ,, 2—12—0

ಕಂಬೈಂಡ್ ಪೇಪರ್ ಕ್ಲಿಪ್ ಟ್ಯಾಮ್‌ಪೀಸ ಹಿತ್ತಾಳಿ ಅಥವಾ ನಿಕ್ಕಲ್ ಕ್ರಯ ರೂ. 6—0—0. ಇನೆಮಲ್ ರೂ. 7—0—0. ಫ್ರೆಂಚ್ ಬೆಡ್ ಫೋಟೋಗಳು ಡಜನ್ 1ರ ಕ್ರಯ ರೂ. 2—4—0.

Emarald Watch Co.,
P. T. MADRAS.

ಡಾಕ್ಟರುಗಳು ಭಿನ್ನಾಭಿಪ್ರಾಯಪಡುವಾಗ್ಯೆ ತೀರ್ಮಾನಿಸುವದು ಯಾರು?

ಅಂಥಾ ಸಂದರ್ಭಗಳಲ್ಲಿ ಡೆಂಗ್ಯೂ ಮುಂತಾದ ಜ್ವರಗಳನ್ನು ನಿವಾರಿಸುವಂಥಾ "ಬಾಟ್ಲಿವಾಲರ ಏಗ್ಯೂಮಿಕ್ಸ್ಚರ್"ನ್ನು ಸರಾಗವಾಗಿಯೂ, ಮತ್ತು ಜ್ವರಗಳನ್ನು ಖಂಡಿತವಾಗಿ ನಿಲ್ಲಿಸುವಂಥಾದ್ದು, ಎಲ್ಲಾ ತರದ ತಲೆನೋವುಗಳನ್ನು ಹೋಗಲಾಡಿಸುವಂಥಾದ್ದೂ ಆದ "ಬಾಟ್ಲಿವಾಲರ ಏಗ್ಯೂಪಿಲ್ಸ್" ಇದನ್ನು ಉಪಯೋಗಿಸಿರಿ.

ಐ. ಎಮ್. [illegible] ಡಾಕ್ಟರುಗಳಿಂದ ಶಿಫಾರಸು ಮಾಡಲ್ಪಟ್ಟಿದ್ದು. ಇದರ ಉಪಯೋಗದಿಂದ ಹೃದಯದ ಮೇಲೆ ಯಾವದೊಂದೂ ಬಾಧಕವಿಲ್ಲ [illegible] ಅರ್ಧ ಶತಮಾನದಿಂದ ಹಿಂದೂಸ್ಥಾನ, ಬರ್ಮಾ, ಸಿಲೋನ್, ಆಫ್ರಿಕಾ ಇವುಗಳಲ್ಲಿ ಪ್ರಖ್ಯಾತಪಟ್ಟಿದ್ದಾಗಿರುತ್ತದೆ.

ಅನೇಕ ಹಿಂದೀ ಪ್ರದರ್ಶನಗಳಲ್ಲಿ ಬೆಳ್ಳಿ ಮತ್ತು ಬಂಗಾರದ ಪದಕಗಳನ್ನು ಪಡೆದಿರುತ್ತ. ಚಾಲ್ತಿ ಸಾಮ್ಯದಂತಿದ್ದು ಮಾರ್ವಾರಿಗಳೂ ಕೂಡ ಅದರ ಮೇಲೆ ಹಣವನ್ನು ಮುಂಗಡವಾಗಿ ಕೊಡುತ್ತಾರೆ. ಬಡ ಮತ್ತು ಮಧ್ಯಮ ತರಗತಿಯ ಜನರಿಗೆ ವರಪ್ರದಾನವಾಗಿದ್ದು ಸಂಚಾರ, ಪ್ರಯಾಣ, ದೇಶಾಟನೆಗಳ ಸಮಯದಲ್ಲಿ ಹತ್ತಿರದಲ್ಲಿರಿಸಿಕೊಳ್ಳದಾಗಿರುತ್ತದೆ.

ಬಾಟ್ಲಿವಾಲರ ಬಾಲಾಮೃತ ಅಥವಾ ಟೊನಿಕ್ ಸಿರಪ್.

ಕೆಮ್ಮನ್ನು ಹೋಗಲಾಡಿಸಿ, ಎದೆನೋವನ್ನು ಶಾಂತಗೊಳಿಸಿ, ಜ್ವರವನ್ನು ಉಪಶಮನಿಸಿ, ನಿದ್ರಾಭಂಗವನ್ನು ಕಡಿಮೆ ಮಾಡಿ ಧಾತುವರ್ಧನವನ್ನು ಮಾಡುವವರಲ್ಲಿ ಅತ್ಯುತ್ತಮವಾಗಿರುತ್ತದೆ. ಕಫವನ್ನು ಬಹಳ ಮಾಯವಾಗುವಂತೆ ಮಾಡುವುದಲ್ಲದೆ ಅದೇ ಸಮಯದಲ್ಲಿ ಒಳ್ಳೇ ಜೀರ್ಣವನ್ನೂ ಉಂಟುಮಾಡುವುದು. ದರ ಮೊದಲಾದ ಮಾಹಿತಿಯನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ತಾರಿನಪತ್ರ:-CAWASHAPUR, BOMBAY.

Dr. H. L. Batliwala & Co., Ltd.,
Sayani Road, P. O. Cadell Road, Bombay. No. 14.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.,
Sayani Road, P. O. Cadell Road, Bombay. No. 14.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟ. ಖ. 9 ಆಣೆ.

ನಮ್ಮ ವಿಳಾಸ:— ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಏಜಂಟರು:— ದಿ. ಊಲನ್ ಮಾರ್ಟ, ಮಂಗಳೂರು.

OUR RECENT IMPORT IN WRIST WATCHES | Have you used anyone of these Watches? | **SEND YOUR ORDER NOW ALL GUARANTEED.**

Fashionable wrist wrist Lady's size. Reliable movement Guaranteed.



No 368.

Handy to wear and looks beautiful. Gives punctual time and with strong movement.

Nickel case Rs, 8—0

High-class Radium dial watch watch with Roman figures.



No. 367.

Can be seen in dark nights. Well fitted with best movement and strong to use. Used by one and all.

Silver case Rs. 9—0.

Radio light wrist watch.



No. 372.

Fitted with the best mechanism and guaranteed to work and keep perfect time for a long time.

Nickel case Rs. 7—8
Electro rolled-gold ,, 9—0

(N. B. In addition to the above, we have good number of varieties of fancy wrist watches, pocket watches. Please write for a descriptive catalogue, which will be sent free)

WHOLESALE IMPORTERS

PETER WATCH COY.,
POST-BOX 27, MADRAS

ಶಾಲಿವಾಹನಶಕ ೧೮೪೭ನೆಯ ಕ್ರೋಧನ ಸಂ।ರದ ಭಾದ್ರಪದ ಶು ೩ ಶನಿವಾರದಿಂದ ಕ್ರೋಧನ ಸಂ।ರದ ಭಾದ್ರಪದ ಶು ೯ ಶುಕ್ರವಾರದ ವರೆಗಿನ ಪಂಚಾಂಗ.
(೧೯೨೫ನೆಯ ಕರ್ಕಾಟಕ ಆಟಿ)

ತಾರೀಖು	ವಾರ	ತಿ.	ಘಳಿಗೆ	ನಕ್ಷತ್ರ	ಘಳಿಗೆ	ಸೌರಮಾನ	ಸೂರ್ಯ ಉ.	ಸೂರ್ಯ ಅಸ್ತ.
22	ಶನಿ	೩	೪೧.೧೬	ಉತ್ತರಾ	೩೧.೩೨	೬	6.20	6.44
23	ರವಿ	೪	೪೧.೨೮	ಹಸ್ತಾ	೩೩.೪೦	೭	6.20	6.43
24	ಸೋಮ	೫	೪೦. ೦	ಚಿತ್ತಾ	೩೪.೧೬	೮	6.20	6.43
25	ಕುಜ	೬	೩೭.೪೬	ಸ್ವಾತಿ	೩೩.೪೬	೯	6.20	6.42
26	ಬುಧ	೭	೩೪.೨೮	ವಿಶಾಖಾ	೩೨.೩೨	೧೦	6.20	6.41
27	ಗುರು	೮	೩೦. ೦	ಅನುರಾಧಾ	೩೦. ೨	೧೧	6.20	6.41
28	ಶುಕ್ರ	೯	೨೫. ೨	ಜ್ಯೇಷ್ಠಾ	೨೬. ೨	೧೨	6.20	6.40

ಮಂಗಳೂರಿನ ವಾಯುಸ್ಥಿತಿ.

Date ತಾರೀಖು	Temperature. ಉಷ್ಣ (ಕಾವು) Maximum ಹೆಚ್ಚಾದ	Temperature. ಉಷ್ಣ (ಕಾವು) Minimum ಕಡಿಮೆ	Rainfall. ಮಳೆ ದಿನದ ಮಳೆ	Rainfall. ಮಳೆ ಜುಮಲಾ ಮಳೆ.
14	86—0	74—6	0—02	—
15	85—1	75—0	0—06	—
16	85—9	74—8	0—36	—
17	84—2	73—1	0—63	—
18	81—0	74—9	0—47	—
19	87—3	76—6	0—08	—
20	85—8	73—1	1—28	117-93

ಮಂಗಳೂರಿನ ಪೇಟೆ ಧಾರಣಿ.

ಜೀನಸು	ಇಂದ ರೂ. ಆ.	ವರೆಗೆ ರೂ. ಆ.
ಮಸ್ಕತಿ	8—12	9—6
ಗುಡ್ಡು ...	8—4	8—8
ರಾಶಿ ಸುಗ್ಗಿ ...	7—10	8—3
ಅವ್ವಲ್ ಬೆಳ್ತಿಗೆ ...	8—8	10—0
ಗುಡ್ಡು ಬೆಳ್ತಿಗೆ ...	8—0	8—8
ರಂಗೂನು ಬೆಳ್ತಿಗೆ ಗೋಣಿ ೧ ...	13—8	14—8
ಗೋದಿ ಗೋಣಿ ೧ಕ್ಕೆ ...	19—	21—0
ಹುರುಳಿಗೋಣಿ ೧ಕ್ಕೆ ...	9—12	10—0
ಕಡಲೆಗೋಣಿ ೧ಕ್ಕೆ ...	12—0	13—0
ತೊಗರಿಗೋಣಿ ೧ಕ್ಕೆ ...	12—8	13—0
ತೊಗರಿಬೇಳೆ ಗೋಣಿ ೧ಕ್ಕೆ ...	15—0	20—0
ಉದ್ದುಗೋಣಿ ೧ಕ್ಕೆ ...	14—0	14—8
ಹೆಸರುಗೋಣಿ ೧ಕ್ಕೆ ...	14—0	15—0
ಊರು ಬೆಲ್ಲ ಖಂಡಿ ೧ಕ್ಕೆ ...	80—	—
ಉಪ್ಪು ಗೋಣಿ ೧ಕ್ಕೆ ...	4—4	4—8
ಕೊಬ್ರಿ ಖಂಡಿ ೧ಕ್ಕೆ ...	115—0	120—0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	46—0	—
ಎಳ್ಹಿಂಡಿ ಖಂಡಿ ೧ಕ್ಕೆ ...	40—0	—
ಕೊಬ್ರಿ ಎಣ್ಣೆ ಮುಡಿ ೧ಕ್ಕೆ ...	8—14	10—0
ಎಳ್ಳೆಣ್ಣೆ ಮುಡಿ ೧ಕ್ಕೆ ...	8—0	11—0
ಚಿಮಿಣಿ ಎಣ್ಣೆ ಪೆಟ್ಟಿಗೆ ೧ಕ್ಕೆ ...	8-8-0	-
ಮೋರಿಸ ಸಕ್ಕರೆ ಮೂಟೆ ೧ಕ್ಕೆ ...	4—10	-
ಊರ ಮೆಣಸಿನಕಾಯಿ ಮುಡಿ ೧ಕ್ಕೆ ...	7—8	-
ಸಾಸಿವೆ ಮುಡಿ ೧ಕ್ಕೆ ...	9—0	-
ಕೊತ್ತಂಬರಿ ಮುಡಿ ೧ಕ್ಕೆ ...	4—4	4—8
ಕಾಫಿ ಖಂಡಿ ೧ಕ್ಕೆ ...	345—0	400—0
ಬಿಳಿಗೋಟು ಅಡಕೆ ಖಂಡಿ ೧ಕ್ಕೆ ಹಳತು ...	245—0	250—0
,, ಹೊಸ ಅಡಕೆ	240—0	240—0
ಕಾಳುಮೆಣಸು ಖಂಡಿ ೧ಕ್ಕೆ ...	220—0	—
ಯಾಲಕ್ಕಿ ಮಣ ೧ಕ್ಕೆ ...	100—0	—
ಗೇರುಬೀಜ ಮುಡಿ ೧ಕ್ಕೆ ...	4—6	4—8
ಕಬ್ಬಿಣ ಖಂಡಿ ೧ಕ್ಕೆ ...	45—0	65—0
ತಾಮ್ರ ತಗಡು ಮಣ ೧ಕ್ಕೆ ...	17—8	—
ತಾಮ್ರ ಪಾತ್ರೆಗಳು ಮಣ ೧ಕ್ಕೆ ...	24—0	—
ಚೀನಾ ಬೆಳ್ಳಿ ಸೇರು ೧ಕ್ಕೆ ...	18—10	
ಹಿತ್ತಾಳೆ ತಗಡು ಮಣ ೧ಕ್ಕೆ ...	16—8	
ಪವನು	13—7	

The Canara Public Conveyance Co., Ltd, Mangalore.

(ESTABLISHED 1914.)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು
- ಕರಾವಳಿ ಮಾರ್ಗವಾಗಿ — ಮುಲ್ಕಿ — ಉಡ್ಪಿ — ಕುಂದಾಪುರ — ಗಂಗೊಳ್ಳಿ — ಬೈಂದೂರು
- ಬಂಟವಾಳ — ಬೆಳ್ತಂಗಡಿ — ಚಾರ್ಮಾಡಿ.
- ಪಾಣೆಮಂಗಳೂರು — ಪುತ್ತೂರು — ಸುಳ್ಯ — ಮಡಿಕೇರಿ.
- ಪುತ್ತೂರು — ಉಪ್ಪಿನಂಗಡಿ — ಬೆಳ್ತಂಗಡಿ.
- ಮಡಿಕೇರಿ — ಪುತ್ತೂರು — ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತಿರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು — ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು — ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ — ಮದ್ರಾಸು — ಕಡೂರು — ಚಿಕ್ಕಮಗಳೂರು — ಚಾರ್ಮಾಡಿ — ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು — ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd, Mangalore. S. K

— ಸಿರಿಗನ್ನಡಂಗೆಲ್ಗೆ —

ಶ್ರೀ ಶಂಕರ ಕರ್ನಾಟಕ ಪುಸ್ತಕ ಭಂಡಾರವೂ ಶ್ರೀ ವಿದ್ಯಾರಣ್ಯ ಪ್ರಕಾಶಕ ಸಂಸ್ಥೆಯೂ,

ಮಾಳಮಡ್ಡಿ, ಧಾರವಾಡ.

ಕನ್ನಡಿಗರಿಗೆ ಬೇಕಾಗುವ ಎಲ್ಲಾ ತರದ ಕನ್ನಡ ಪುಸ್ತಕಗಳು ನಮ್ಮಲ್ಲಿ ಯೋಗ್ಯ ಬೆಲೆಗೆ ದೊರೆಯುವವು. ವಿದ್ಯಾರಣ್ಯ ಪುಸ್ತಕ ಮಾಲೆಯ ಕೆಳಗಿನ ೧, ೨, ೩, ಪುಸ್ತಕಗಳು ಚಂದಾದಾರರಾಗುವವರಿಗೆ ಅಂಚೆ ವೆಚ್ಚ ಸೇರಿ ೫ ರೂ. ೬ ಆಣೆಗೆ ದೊರೆಯುವವು. ಮುಂದೆ ಹೊರ ಬೀಳುವ ಮಾಲೆಯ ಪುಸ್ತಕಗಳನ್ನು ಚಂದಾದಾರರಿಗೆ ೧ ರೂಪಾಯಿಗೆ ೨ ಆಣೆಯಂತೆ ಕಡಿಮೆ ಬೆಲೆಗೆ ವಿ. ಪಿ. ಮಾಡುವೆವು. ಭಂಡಾರದ ಬೆಲೆ ಪಟ್ಟಿಗಾಗಿ ೪ ಆಣೆ ಅಂಚೆ ಟಿಕೇಟುಗಳನ್ನು ಕಳುಹಿಸತಕ್ಕದ್ದು;

		ರೂ. ಆ. ಪೈ.
೧.	ಕರ್ನಾಟಕ ಸಿಂಹಾಸನ ಸ್ಥಾಪನೆ	೧—೦—೦
೨.	ಕಥೆಗಳನ್ನೊಳಗೊಂಡ ಬೀರಬಲ್ಲ ಚರಿತ್ರೆ (ಸಚಿತ್ರ)	೧—೬—೦
೩.	ಛತ್ರಪತಿ ಶಿವಾಜಿ ಮಹಾರಾಜ ,,	೨—೧೨—೦
೪.	ಮಹಾರಾಣಿ ಲಕ್ಷ್ಮೀಬಾಯಿ ಝಾಂಸಿ ,,	೨—೦—೦
೫.	ಅಕ್ಬರ ಚಕ್ರವರ್ತಿ ಚರಿತ್ರ ,,	೧—೧—೦
೬.	ಚರಿತ್ರ ಸಂಗ್ರಹ ಭಾಗ ೧. ,,	೧—೪—೦
೭.	ತಿಲಕರ ಗೀತಾ ರಹಸ್ಯ	೩—೮—೦
೮.	ಶ್ರೀ ದಾಸಬೋಧ ಭಾಗ ೧. ೨. ೩. ...	೨—೧೪—೦
೯.	ರಾಷ್ಟ್ರಸಭೆಯ ಇತಿಹಾಸ	೨—೮—೦
೧೦.	ವಚನ ಜ್ಞಾನಸಿಂಧು	೪—೦—೦

ಇವಲ್ಲದೆ ನಮ್ಮಲ್ಲಿ ಎಲ್ಲಾ ತರದ ಕಾಯಿದೆ, ಶಾಲೋಪಯೋಗಿ ಪುಸ್ತಕಗಳೂ ನಕಾಶೆ ಚಿತ್ರಗಳೂ ಬರವಣಿಗಳೂ ದೊರೆಯುವವು.

ಶ್ರೀಪಾದ ರಾಮಚಂದ್ರ ದೇಶಪಾಂಡೆ ಬಿ. ಯಸ್. ಸಿ.
ವ್ಯವಸ್ಥಾಪಕ.

ಪ್ರಖ್ಯಾತಿಪಟ್ಟ ಮಂಗಳೂರು ನಸ್ಯ.

ನಮ್ಮಲ್ಲಿ ಉತ್ತಮವಾದ ಹೊಗೆಸೊಪ್ಪಿನಿಂದಲೂ, ಸುಮಾರು ೫೦ ವರ್ಷಗಳ ಅನುಭವದಿಂದಲೂ ತಯಾರಿಸಿದ ನಸ್ಯವು ಯಾವಾಗಲೂ ರಖಂ ಆಗಿಯೂ ಚಿಲ್ಲರೆ ಆಗಿಯೂ ಮಾರಾಟಕ್ಕೆ ದೊರೆಯುತ್ತದೆ.

I ಕ್ಲಾಸ್ ರಾತ್ಲ 1ಕ್ಕೆ ರೂ. 3—0—0.
II ,, ,, ,, 2—12—0.

ವಿ. ಪಿ. ಚಾರ್ಜು ಅಲಾಹಿದ. ಸ್ಯಾಂಪಲು ಅಪೇಕ್ಷಿಸುವವರು ೨ ಆಣೆ ಸ್ಟಾಂಪು ಕಳುಹಿಸಿರಿ.

ವಿಳಾಸ:—
ಎಮ್. ಎಸ್. ಬಂಡಾರ್ಕಾರ್ ಎಂಡ್ ಸನ್ಸ್,
ನಸ್ಯ ವ್ಯಾಪಾರಿಗಳು,
ರಥಬೀದಿ, ಮಂಗಳೂರು.

ಬಂದು ನೋಡಿರಿ! ತಿಂದು ನೋಡಿರಿ!

ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ
ಪದಕವನ್ನು
ಬಹುಮಾನವಾಗಿ ಪಡೆದಿರುವ
ಎಸ್. ಪಿ. ಆಚಾರ್ಯ
ಇವರಿಂದ ತಯಾರಿಸಲ್ಪಟ್ಟ

ಉಪ್ಪಿನಕಾಯಿಗಳನ್ನು

ಬಂದು ನೋಡಿರಿ! ತಿಂದು ನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ ಶುಂಠಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನ್ನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ
ಬಂದು ನೋಡಿರಿ! ತಿಂದು ನೋಡಿರಿ!

ಇಂಡಿಯನ್ ಸ್ವೀಟ್‌ಮಿಟ್ ಮಾರ್ಟ.

ಮನೋರಮಾ ಸಿಸಿ ಕಾಫಿ ಕ್ಲಬ್.
ಮಾರ್ಕೇಟು ರೋಡು,
ಮಂಗಳೂರು.
ಅಥವಾ
ಸದಾನಂದ ಕಾಫಿ ಕ್ಲಬ್
ರಥಬೀದಿ, ಮಂಗಳೂರು.

ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ

"ಸಂಕ್ಷೇಪಗೀತೆ"

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ್ಳ ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದೆ ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೦, ಟಪ್ಪಾಲು ಖರ್ಚು ಕೂಡಿ ಆಣೆ ೧೧ನ್ನು ಮನಿಯಾರ್ಡರು ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ೩ಕ್ಕಿಂತ ಜಾಸ್ತಿ ಖರ್ಚು ತಗಲುವುದು. ಪುಸ್ತಕ ದೊರೆಯುವ ವಿಳಾಸ:—

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು. ಮತ್ತು ಕೆನರಾ ಮಿಶ್ಯನ್ ಬುಕ್ ಎಂಡ್ ಟ್ರೆಕ್ಟ ಡಿಪೋಜಿಟರಿ ಮಂಗಳೂರು.

ಶಾಸ್ತ್ರೀಯ
ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪ್ಯಾ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ, ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪ್ಯಾ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ!
ದಶಮೂಲ ಸುಖಪ್ರದಔಷಧಿ!
ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.
ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.
ಹೆಚ್ಚಿನ ಮಾಹಿತಿಗೆ "ಆರ್ಷಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಏಳೆಮಕ್ಕಳ ಅಪಾಯಕಾರಣಗಳು.

(ಅವುಗಳ ನಿವಾರಣೋಪಾಯಗಳು.)

ಎಳಮಕ್ಕಳಿಗೆ ಬಿಸಿಲಿನ ತಾಪದಿಂದುಂಟಾಗುವ ಅಪಾಯಗಳನ್ನು ನೀಗಿಸಿ ಅವುಗಳನ್ನು ಆರೋಗ್ಯದೊಡನೆ ಇಡಲು ಹೆತ್ತ ತಾಯಿಯರಿಗೆ ಕೆಲವು ಸಲಹೆಗಳು:—ಬೇಸಗೆಯ ಕಾಲವು ಮಕ್ಕಳಿಗೆ ವಿಶೇಷವಾಗಿ ಅಪಾಯಕರವಾದುದು. ಈ ಕಾಲದಲ್ಲಿ ಅದನ್ನು ನಿರಪಾಯವಾಗಿಯೂ, ಆರೋಗ್ಯವಾಗಿಯೂ ಇಡುವ ಸೂಚನೆಗಳೇ ಈ ಲೇಖನದ ಉದ್ದೇಶವು. ಆಗ ಪ್ರತಿದಿವಸದ ೨೪ ಗಂಟೆಯ ಕಾಲದಲ್ಲಿ ಮೊದಲಿಂದ ಕ್ರಮವಾಗಿ ಏನು ಮಾಡಬೇಕೆಂಬುದನ್ನು ಈ ಲೇಖನವು ಸೂಚಿಸುತ್ತದೆ.

ಆಹಾರ:—ಮಗುವಿಗೆ ಎಚ್ಚರವಾಗುವ ಕಾಲದಿಂದಲೇ ಪ್ರಾರಂಭಿಸೋಣ. ಇದೇ ಶುಭವೂ ಅನಂತರವೂ ಆದ ಪ್ರಾತಃಕಾಲವು ನಾವು ಏಳಲು ಸಿದ್ಧವಾಗುವುದಕ್ಕೆ ಪೂರ್ವಭಾವಿಯಾಗಿಯೇ ಅದು ಎದ್ದಿರುವುದು. ಮೊದಲು ನೀವು ಮಾಡಬೇಕಾದುದೇನು? ಅದಕ್ಕೆ ಆಹಾರವನ್ನು ಕೊಡುವುದು. ಪ್ರಥಮಕಾರ್ಯವು. ಪ್ರಕೃತಿಗನುಗುಣವಾಗಿ ಅದಕ್ಕೆ ಆಹಾರವನ್ನು (ಸ್ತನ್ಯವನ್ನು) ಕೊಡಲು ನಿಮಗೆ ಸಾಧ್ಯವಿಲ್ಲದಿದ್ದಲ್ಲಿ, ಸರಿಯಾದ ಹಾಲಿನ ಬುದ್ದಿಯನ್ನು ತಂದು ಉಪಯೋಗಿಸುವ ವಿಷಯಕ್ಕೆ ಗಮನ ಕೊಡಬೇಕು. ಆ ಸೀಸೆಯ ನೈರ್ಮಲ್ಯದ ವಿಷಯದಲ್ಲಿ ನಿಮಗೆ ಎಷ್ಟೇ ನಂಬಿಕೆಯಿದ್ದರೂ, ಹಾಲು ಕುಡಿಸುವುದಕ್ಕೆ ಮೊದಲು ಅದನ್ನು ನೀರಿನಲ್ಲಿ ಹಾಕಿ ಕುದಿಸಬೇಕು. ರಬ್ಬರು ತೊಟ್ಟಿನಲ್ಲಿ ರೋಗಕಾರಣವಾದ ಕ್ರಿಮಿಗಳಿರುವುದರಿಂದ, ಆ ಸೀಸೆಯನ್ನೂ, ಅದಕ್ಕೆ ಜಂಟಿಸುವ ರಬ್ಬರುತೊಟ್ಟನ್ನೂ ಕುದಿಸಲೇ ಬೇಕು.

ಹಾಲು ಹೊಸದಾಗಿಯೂ ಮತ್ತು ರುಚಿಕರವಾಗಿಯೂ ಇರಬೇಕಲ್ಲದೆ, ಹಳೆಯದಾಗಿರಕೂಡದೆಂಬುದನ್ನು ನೆನಪಿನಲ್ಲಿಡಬೇಕು. ಹಾಲು ವಿಶೇಷ ಅಪಾಯಕರವಾದ ಕ್ರಿಮಿಗಳನ್ನು ಹುಟ್ಟಿಸುತ್ತದೆ.

ಮಗುವಿಗೆ ಕ್ಲಪ್ತಕಾಲಗಳಲ್ಲಿ ಆಹಾರವನ್ನು ಕೊಡಬೇಕು. ಅಧಿಕ ಆಹಾರವನ್ನು ಕೊಡದಂತೆಯೂ ನೋಡಿಕೊಳ್ಳಬೇಕು. ಆಹಾರಗಳ ಮಧ್ಯಕಾಲದಲ್ಲಿ ಕುದಿಸಿ ಆರಿದ ನೀರನ್ನು ಕುಡಿಸಲು ಮರೆಯಬಾರದು. ಎಳಮಕ್ಕಳು ಹಾಲಿಗಾಗಿ ಮಾತ್ರವಲ್ಲದೆ ನೀರಿಗಾಗಿಯೂ ಅಡಿಗಡಿಗೆ ಅಳುತ್ತವೆ. ಮಕ್ಕಳಿಗೆ ಕೊಡತಕ್ಕ ಹಾಲನ್ನು ಯಾವಾಗಲೂ ತಣ್ಣಗಿರುವ ಪ್ರದೇಶದಲ್ಲಿ ಮುಚ್ಚಿಟ್ಟಿರಬೇಕು. ಮಂಜುಗೆಡ್ಡೆಯ ಪೆಟ್ಟಿಗೆಯಲ್ಲಿ ಇಡುವುದು ಒಳ್ಳೇಯದು. ಮಂಜುಗೆಡ್ಡೆಯು ಸಿಕ್ಕದಿದ್ದಲ್ಲಿ ಹಾಲನ್ನು ಒಂದು ಸೀಸೆ ಅಥವಾ ಜಾಡಿಯಲ್ಲಿಟ್ಟು ತಣ್ಣೀರಿನಲ್ಲಿ ಇಡಬೇಕು. ಹಾಲನ್ನು ಯಾವಾಗಲೂ ತಣ್ಣಗೇ ಇಟ್ಟಿರಬೇಕು. ಪ್ರತಿಯೊಂದು ಸಲ ಆಹಾರವನ್ನು ಕೊಡುವುದಕ್ಕೆ ಪೂರ್ವಭಾವಿಯಾಗಿ, ಆಹಾರವನ್ನು ಕೊಡುವ ಸೀಸೆಯನ್ನೂ, ರಬ್ಬರು ತೊಟ್ಟನ್ನೂ ಕುದಿಸಲು ಮರೆಯಬಾರದು. ಈ ರೀತಿ ಆಚರಿಸುವುದರಿಂದ ಆ ಮಗುವಿಗೆ ಕರುಳಿನ ಸಂಬಂಧವಾದ ವ್ಯಾಧಿಗಳಾವುವೂ ಬರುವುದಿಲ್ಲ.

ಸೀಸೆಯನ್ನು ಶುದ್ಧವಾಗಿ ಕಾಪಾಡಿಡುವ ಕ್ರಮ.

೧. ಕುಡಿಸಿ ಮಿಕ್ಕ ಹಾಲನ್ನು ಚೆಲ್ಲಿಬಿಡಿರಿ! ೨. ಸಂಪೂರ್ಣವಾಗಿ ಶುದ್ಧವಾಗುವವರೆಗೂ ಸೀಸೆಯನ್ನು ತಣ್ಣೀರಿನಲ್ಲಿ ಜಾಲಿಸಿ ತೊಳೆಯಿರಿ. ೩. ಒಂದು ಚುಟುಕಿ ಸೋಡಾ ಬೈಕಾರ್ಬೋನೇಟಿನಿಂದಲಾಗಲಿ, ಅಥವಾ ಮರದ ಬೂದಿಯಿಂದಲಾಗಲಿ ಬಿಸಿನೀರಿನಲ್ಲಿ ಜಾಲಿಸಿರಿ. ೪. ಇದೇ ರೀತಿಯಲ್ಲಿ ರಬ್ಬರು ತೊಟ್ಟಿನ ಒಳಭಾಗವನ್ನೂ, ಹೊರಭಾಗವನ್ನೂ ಜಾಲಿಸಿಡಬೇಕು. ೫. ಎರಡನ್ನೂ ಪುನಃ ಉಪಯೋಗಿಸುವವರೆಗೂ ಒಂದು ಸೇರು ನೀರಿಗೆ ಒಂದು ಚಮಚಾ ಸೋಡಾ ಬೈಕಾರ್ಬೋನೇಟನ್ನು ಹಾಕಿ ಕುದಿಸಿದ ಪಾತ್ರೆಯಲ್ಲಿ ಮುಳುಗಿಸಿಡಬೇಕು. ೬. ಹೀಗೆ ದಿನಕ್ಕೆ ಒಂದು ಸಲ ಕುದಿಸಬೇಕು.

ಉಡುಪು:—ಮಗುವಿಗೆ ಉಡುಪು ಸಾಧ್ಯವಾದ ಮಟ್ಟಿಗೆ ತಣ್ಣಗೆ ಮತ್ತು ಸಾಧಾರಣವಾಗಿರಬೇಕು. ವಾಯುಗುಣವು ಬಹಳ ತೀಕ್ಷ್ಣವಾಗಿದ್ದಲ್ಲಿ ಎಳೆಯಮಕ್ಕಳಿಗೆ ತೆಳ್ಳಗಿರುವ ಉಣ್ಣೆಯ ಷರ್ಟ ಮತ್ತು ನಾರಿನ ವಸ್ತ್ರವನ್ನು ಮಾತ್ರ ಧರಿಸಬೇಕು ಆ ನಾರಿನ ವಸ್ತ್ರದ ಬಗಿತಕ್ಕೆ ಸೇಫ್ಟೀ ಸೂಜಿಗಳನ್ನು ಚುಚ್ಚಬೇಕು. ಮಕ್ಕಳ ಉಡುಪನ್ನು ಶುಭ್ರವಾಗಿಟ್ಟಿರಬೇಕು. ಕೊಳೆಯಾದ ಉಡುಪನ್ನು ಒಡನೆ ತೆಗೆದುಬಿಡಬೇಕು. ಒದ್ದೆ ಮತ್ತು ಕೊಳೆಯಾದ ನಾರಿನ ಚೌಕವನ್ನು ಬೇಗಬೇಗನೆ ಬಿಸಿನೀರಿನಲ್ಲಿ ಒಗೆಯುತ್ತಿರಬೇಕು. ಒಗೆದ ಮೇಲೆ ಉಪಯೋಗಿಸುವುದಕ್ಕೆ ಮುಂಚೆ ಚೆನ್ನಾಗಿ ಒಣಗಿಸಬೇಕು. ಬಿಗಿಯಾಗಿಯೂ, ಧರಿಸುವುದಕ್ಕೆ ಅನುಕೂಲವಿಲ್ಲದೆಯೂ ಇರುವ ಉಡುಪನ್ನು ಮಕ್ಕಳಿಗೆ ಎಂದಿಗೂ ಧರಿಸಬಾರದು. ಉಡುಪೆಲ್ಲಾ ಕೈಕಾಲುಗಳ ಚಲನಕ್ಕೆ ಅಡ್ಡಿಮಾಡದಂತೆ ಸಡಿಲವಾಗಿರಬೇಕು. ಮಗುವಿನ ಕಾಲನ್ನು ಬೆಚ್ಚಗೂ, ತಲೆಯನ್ನು ತಣ್ಣಗೂ ಇಡಬೇಕು.

ಸ್ನಾನ ಮಾಡಿಸುವುದು:—ಹತ್ತು ದಿನಗಳಾದ ನಂತರ ಅದಕ್ಕೆ ಮೈ ಅಸ್ವಸ್ಥವಾಗಿದ್ದರೆ ವಿನಾ, ದಿನಕೊಂದುಸಾರಿಯಾದರೂ ಕ್ಲಪ್ತಕಾಲದಲ್ಲಿ ಊಟಕ್ಕೆ ಮುಂಚೆ ತೊಟ್ಟಿಯ ಸ್ನಾನವನ್ನು ಮಾಡಿಸಬೇಕು. ಬೇಸಗೆಯಲ್ಲಿ ತೊಟ್ಟಿಯ ಸ್ನಾನದ ಜತೆಗೆ ಒಂದೆರಡು ಸಲ ಸ್ಪಂಜಿನ ಸ್ನಾನವನ್ನು ದಿನಂಪ್ರತಿಯೂ ಮಾಡಿಸಬಹುದು.

ನಿದ್ರೆ:—ಮಕ್ಕಳಿಗೆ ಹೆಚ್ಚು ಕಾಲ ನಿದ್ರೆಯು ಅವಶ್ಯಕವು. ಅವನ್ನು ಶಾಂತವಾಗಿ ಮಲಗಿಸಿಡಬೇಕು. ಬಹಳ ಎಳಮಕ್ಕಳನ್ನು ಸಾಧ್ಯವಾದಷ್ಟು ಅಲ್ಪಕಾಲ ಎತ್ತಿಕೊಳ್ಳಬೇಕು. ಮೂರು ವರ್ಷವಾಗುವವರೆಗೂ ಮಕ್ಕಳು ರಾತ್ರಿಯಲ್ಲಿ ೧೨ ಘಂಟೆಗಳ ಕಾಲ ನಿದ್ರೆಮಾಡಬೇಕು. ಪ್ರಾತಃಕಾಲ ಮಧ್ಯಾಹ್ನಗಳಲ್ಲಿಯೂ, ಸ್ವಲ್ಪ ನಿದ್ರೆಮಾಡಬೇಕು. ವಾಯುಗುಣವು ಶಾಂತವಾಗಿರುವಾಗ, ನೊಣಗಳ ಬಾಧೆಯಿಲ್ಲದೆ ಸಾಧ್ಯವಾದಷ್ಟು ಮಟ್ಟಿಗೆ ಬಯಲಿನಲ್ಲಿಯೇ ಮಲಗಿಸಬೇಕು. ನಿದ್ರೆ ಬರಲು ಮಗುವಿಗೆ ಮಾದಕ ದ್ರಾವಕವನ್ನು ಕೊಡಬಾರದು. ಮತ್ತು ಅಳದ ಹಾಗಿರಿಸುವುದಕ್ಕೆ ಕೃತ್ರಿಮವಾದ ರಬ್ಬರು ಮೊಲೆಗಳನ್ನೂ ಕೊಡಬಾರದು. ಅವು ಕೆಟ್ಟ ಕ್ರಿಮಿಗಳನ್ನು ದೇಹಕ್ಕೆ ಅಂಟಿಸುವವು.

ಅತಿಸಾರ:—ಇದು ಮಗುವಿಗೆ ಕೊಟ್ಟ ಆಹಾರವು ಅದಕ್ಕೆ ಹಿತಕರವಾಗಿಲ್ಲವೆಂಬ ಆಪತ್ತಿನ ಸೂಚನೆ. ಮಲವು ಹಸುರು ಬಣ್ಣವಾಗಿದ್ದರೆ, ಮನೆಯ ವೈದ್ಯರನ್ನಾಗಲಿ, ಸಮೀಪದಲ್ಲಿರುವ ಮಕ್ಕಳ ವೈದ್ಯರನ್ನಾಗಲಿ ಒಡನೆ ಕರೆಸಬೇಕು. ಅತಿಸಾರವು ಕೆಲವುವೇಳೆ ಕೆಟ್ಟ ಆಹಾರದಿಂದಲ್ಲದೆ ಅಧಿಕವಾದ ಆಹಾರದಿಂದಲೂ, ಬರುತ್ತದೆ. ಇದರ ಸೂಚನೆಯನ್ನು ಕಂಡ ಒಡನೆಯೇ, ಅದಕ್ಕೆ ಬಿಸಿನೀರು ಹೊರತು ಇತರ ಆಹಾರ ಯಾವುದನ್ನೂ ಕೊಡದೆ, ಮನೆಯ ವೈದ್ಯರನ್ನಾಗಲಿ, ಅಥವಾ ಮಕ್ಕಳ ವೈದ್ಯರನ್ನಾಗಲಿ ಕರೆಸುವುದೇ ಒಳ್ಳೆ ಉಪಾಯವು. ಇದು ಬಹಳ ಸಾಂಕ್ರಾಮಿಕ ಜಾಡ್ಯವಾದುದರಿಂದ ಮಗುವನ್ನು ಅಲ್ಲಿಗೆ ತೆಗೆದುಕೊಂಡು ಹೋಗಬಾರದು.

ಮಲಬದ್ಧತೆ:—ಮಲಬದ್ಧತೆಗೆ ಕೈಯೆಣ್ಣೆಯನ್ನು ಕೊಡಬೇಡಿರಿ. ನಿಮ್ಮ ವೈದ್ಯರನ್ನು ಕೇಳಿ ಆಹಾರವನ್ನು ಕ್ರಮಪಡಿಸಿರಿ. ಔಷಧಿಯನ್ನು ಕೊಡುವುದಕ್ಕೆ ಮೊದಲು ಒಂದು ಆಹಾರಗಳ ಮಧ್ಯದಲ್ಲಿ ಹೆಚ್ಚು ನೀರನ್ನೂ ಮೂರು ಆಹಾರ ಸೇವನೆಯ ನಂತರ ಅರ್ಧ ಚಮಚಾದಿಂದ ಒಂದು ಚಮಚಾದ ವರೆಗೆ ಆಲಿವ್ ಎಣ್ಣೆ ಅಥವಾ ಯಾವುದಾದರೂ ರುಚಿಯಾದ ಎಣ್ಣೆಯನ್ನೂ ಕೊಟ್ಟು ನೋಡಿರಿ.

ಸ್ವಲ್ಪ ಸಕ್ಕರೆಯನ್ನೂ ನೀರನ್ನೂ ಬೆರಸಿ ಕೊಟ್ಟರೆ, ಮಗುವು ಅದನ್ನು ಆಸೆಯೊಡನೆ ತೆಗೆದುಕೊಳ್ಳುತ್ತದೆ.

ಮಲವು ಸಡಿಲುವುದು:—ದಿನಕ್ಕೆ ಮೂರಾವರ್ತಿ ಮಲವಿಸರ್ಜನೆಯಾಗಬೇಕು. ಮಲವು ಮೃದುವಾಗಿ ಸಾಸಿವೆಯ ಬಣ್ಣಕ್ಕಿದ್ದು ಸುಲಭವಾಗಿ ಜಾರುವಂತಿರಬೇಕು. ಅದರಲ್ಲಿ ಉಂಡೆಗಳಾಗಲಿ, ನೊರೆಯಾಗಲಿ, ಕಫವಾಗಲಿ ಇರಕೂಡದು. ಇಂತಹ ಸ್ವಲ್ಪ ಬದಲಾವಣೆಯಾಗಿದ್ದರೂ ಆಹಾರದಲ್ಲಾಗಲಿ, ಆಹಾರವನ್ನು ಕೊಡುವುದರಲ್ಲಾಗಲಿ ದೋಷವಿದೆ ಎಂದು ತೋರಿಸುತ್ತದೆ.

ವಾಂತಿ:—ಮಗುವು ವಾಂತಿ ಮಾಡಿದಾಗ ಅದಕ್ಕೆ ಬಹಳ ಬಲವಾದ ಕಾಯಿಲೆ ಇದ್ದೇ ಇರುವುದೆಂದು ನಿರ್ಧರಪಡುವುದಿಲ್ಲ. ವಿಶೇಷವಾದ ಆಹಾರಸೇವನೆಯಿಂದಾಗಲಿ, ಬೇಗಬೇಗನೆಯಾಗಿ ಆಹಾರ ಕೊಡುವುದರಿಂದಾಗಲಿ, ಅಥವಾ ದುರಾಹಾರದಿಂದಾಗಲಿ ವಾಂತಿಯಾಗಬಹುದು. ಕೆಲವು ವೇಳೆ ಮಗುವಿಗೆ ಆಹಾರವನ್ನು ಕೊಡುವಾಗ ಸರಿಯಾದ ಸ್ಥಿತಿಯಲ್ಲಿ ಹಿಡಿದುಕೊಳ್ಳದಿರುವುದರಿಂದಲೂ ಮತ್ತು ಆಹಾರವನ್ನು ಕೊಡುವಾಗಲೂ ಕೊಟ್ಟ ನಂತರವೂ ಮಗುವನ್ನು ನಿಶ್ಚಲವಾಗಿಡದಿರುವುದರಿಂದಲೂ ವಾಂತಿಯಾಗುತ್ತದೆ.

ಸಾಧಾರಣ ಸಲಹೆಗಳು:—ಮಗುವಿಗೂ, ಅದರ ಆಹಾರಕ್ಕೂ ನೊಣಗಳು ಮುತ್ತಿಕೊಳ್ಳದಂತೆ ನೋಡಿಕೊಳ್ಳಿ. ಗಟ್ಟಿಯಾದ ನಾರಿನ ಜಾಳದಿಂದ ಭದ್ರವಾಗಿ ಮುಚ್ಚಿದ ಪೆಟ್ಟಿಗೆಯಲ್ಲಿ, ನೊಣಗಳ ಬಾಧೆಯಿಲ್ಲದಂತೆ ಆಹಾರವನ್ನಿಡಬೇಕು. ನಾರಿನ ವಸ್ತ್ರಗಳನ್ನು ಒಗೆದ ತರುವಾಯ ಅವುಗಳನ್ನು ಯಾವಾಗಲೂ ಕುದಿಯಿಸಿರಿ. ಮಗುವಿನ ಬಟ್ಟೆಗಳನ್ನು ಒಗೆಯುವಾಗ ಸೋಪನ್ನು ಉಪಯೋಗಿಸಬೇಡಿರಿ.

ಮಗುವಿನ ಆಹಾರವನ್ನು ತಯಾರಿಸುವುದಕ್ಕೆ ಮೊದಲು ಕೈಗಳನ್ನು ಚೆನ್ನಾಗಿ ತೊಳೆಯಿರಿ. ಬಲವಾದ ವ್ಯಾಧಿಯ ಗುರುತೇನಾದರೂ ಕಂಡುಬಂದಲ್ಲಿ ನಿಮ್ಮ ವೈದ್ಯರನ್ನು ಒಡನೆ ಕರೆಸಬೇಕು.

ಮಗುವು ಎದೆ ಹಾಲು ಕುಡಿಯುವುದನ್ನು ಒಂದೇ ತಡವೆ ತಪ್ಪಿಸಬಾರದು. ಬಿಡಿಸುವುದಕ್ಕೆ ಸರಿಯಾದ ಕಾಲವು ಯಾವುದೆಂಬುದನ್ನು ವೈದ್ಯರಿಂದ ತಿಳಿದು, ಅದರಂತೆ ಆಚರಿಸುವುದೇ ಅತ್ಯುತ್ತಮವಾದುದು.

ಎಳೆಯ ಮಗುವಿಗೆ ಗಟ್ಟಿಯಾದ ಆಹಾರವನ್ನು ಎಂದಿಗೂ ಕೊಡಬೇಡಿರಿ. ಮಿತಿಯಿಲ್ಲದೆ ಆಹಾರವನ್ನು ಕೊಡಬೇಡಿರಿ. ಅಧಿಕವಾದ ಆಹಾರವನ್ನು ಕೊಡುವುದರಿಂದ ಕಡಿಮೆ ಆಹಾರವನ್ನು ಕೊಡುವುದಕ್ಕಿಂತಲೂ ಅಪಾಯ ಹೆಚ್ಚು. (ಇಂಡಿಯದ ರೆಡ್ ಕ್ರಾಸ್ ಸಂಘ.) (ಅ. ಜ.)

ತ್ವರೆ ಮಾಡಿರಿ! ತಯಾರಾಗಿದೆ!

ನಾಲ್ಕನೇ ದರ್ಜೆಯ
ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ನಾಲ್ಕನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್. ಗಣಪತಿರಾವ್ ಐಗಳ್—ಗ್ರಂಥಕರ್ತರು.
ಮನೋರಂಜಕ ಚಿತ್ರಗಳೂ ಇವೆ.

ಇದರಲ್ಲಿ ಬಾರಕೂರು, ಮಂಗಳೂರು, ಮೂಲಿಕ, ಕಾರ್ಕಳ, ಮೂಡಬಿದರೆ, ಸುಬ್ರಮಣ್ಯ, ಉಡುಪಿ, ಬಸರೂರು, ವೇಣೂರು, ಬೈಲಂಗಡಿ, ಧರ್ಮಸ್ಥಳ, ಕೊಲ್ಲೂರು, ಕುಂಬಳೆ, ಜಪಾನದೇಶದ ಜನರು, ಚೀನಾದೇಶದ ಜನರು, ಬರ್ಮಾದೇಶದ ಜನರು, ಯುರೋಪ ಖಂಡದ ಜನರು, ಎಸ್ಕಿಮೊ ಜನರು, ನಿಗ್ರೊ ಜನರು. ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ನಾಲ್ಕನೇ ದರ್ಜೆಯ ಮಕ್ಕಳ ಬಗ್ಗೆ ಉಪಯುಕ್ತವಾಗಿದೆ. ಕ್ರಯ 8 ಆಣೆ.

ಪುಸ್ತಕ ದೊರಕುವ ವಿಳಾಸ:—
ಶಾರದಾ ಛಾಪಖಾನೆ,
ಮಂಗಳೂರು.

ದಕ್ಷಿಣ ಕನ್ನಡ ಜಿಲ್ಲಾ ಒಫೀಶಿಯಲ್ ರಿಸೀವರರ
ಕೋರ್ಟನಲ್ಲಿ.

ದಿವಾಳಿ ಅರ್ಜಿ ನಂಬ್ರ 34/1925.

ತ್ರಾಶಿ ರಾಮಕೃಷ್ಣ ಕ್ಯಾನುಭಾಗ—ಅರ್ಜಿದಾರ.
ಮತ್ತು

1. ಕೋಟ ಶ್ರೀನಿವಾಸ ದಾಸಪ್ಪೈ,
2. ಸುಂಕೇರಿ ವಾಮನ ನ್ಯಾಕ,
3. ಬೆಳ್ತೂರು ಶೇಶಗಿರಿ ಕಮ್ತಿ,
4. ಶಿಲಾನದಿ ತಿಮ್ಮಪ್ಪ ನಾಯ್ಕ,
5. ಉಪ್ಪಿನಕುದ್ರು ಚನ್ನಪ್ಪಮಯ್ಯ,
6. ರಮಾಬ್ಬಾ,
7. ಅಪ್ಪಿಬ್ಬಾ,
8. ಸಾವಿತ್ರಿಅಮ್ಮ,

ಕ್ರೆಡಿಟರು.

ಸದರಿ ದಿವಾಳಿ ಅರ್ಜಿದಾರನು ತನಗೆ ದಿವಾಳಿಯಾಗಿ ಮಾಡಬೇಕೆಂತ ವಗೈರೆ ಅಪೇಕ್ಷಿಸಿ ದಾಖಲು ಮಾಡಿದ ಮೇಲ್ಕಂಡ ದಿವಾಳಿ ಅರ್ಜಿಯನ್ನು ಇದೇ ಅಗೋಸ್ತು ತಾರೀಕು 29ಕ್ಕೆ ತನ್ನಿಗೆ ಇಟ್ಟಿರುವದರಿಂದ ಆ ಕುರಿತು ಆಕ್ಷೇಪ ಇದ್ದವರು ಮೇಲ್ಕಂಡ ತಾರೀಕಿಗೆ ಪೂರ್ವಾಹ್ನ 8 ಗಂಟೆಗೆ ಮೇಲ್ಕಂಡ ಕೋರ್ಟಿಗೆ ಹಾಜರಾಗಿ ತಮ್ಮ ಆಕ್ಷೇಪಗಳನ್ನು ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

Mangalore, } M. Madhava Rau,
15—8—1925 } *Vakil for Petitioner*

ನೋಟೀಸು.

ಪುತ್ತೂರು ಡಿಸ್ಟ್ರಿಕ್ಟ ಮುನ್ಸಿಫ ಕೋರ್ಟಿನಲ್ಲಿ.

O. P. No. 57/25.

ಅರ್ಜಿದಾರ— ಅಯಿತಪ್ಪ ಪೂಜಾರಿ
ಎದ್ರಿರು— ಅಪ್ಪುಚ್ಚಿ ಹೆಂಗ್ಸು ಸಹಾ

ಮೇಲ್ಕಂಡ ಅರ್ಜಿದಾರನು, ಮೃತಪಟ್ಟ ತನ್ನ ಸಹೋದರ ಕರಿಯಪ್ಪ ಪೂಜಾರಿಗೆ ಕರ್ತಪೂಜಾರಿ ಎಂಬವರು ಬರಕೊಟ್ಟ ನೋಟಿನ ಹಣ ವಸೂಲುಮಾಡುವ ಬಗ್ಗೆ ತನಗೆ ವಾರೀಸು ಸರ್ಟಿಫಿಕೇಟು ಕೊಡಿಸಬೇಕೆಂತ ಅರ್ಜಿದಾರನು ಮನವಿಮಾಡಿದ್ದಾನೆ. ಆ ಕುರಿತು ಯಾರಿಗಾದರೂ ಆಕ್ಷೇಪಣೆ ಇದ್ದಲ್ಲಿ—ಅದನ್ನು ಕೋರ್ಟಿಗೆ ತಾರೀಕು 11—9—'25ರಲ್ಲು ಪೂರ್ವಾಹ್ನ ಘಂಟೆ 11ಕ್ಕೆ ಹಾಜರಾಗಿ ಉದಾಹರಣೆ ಕೊಡತಕ್ಕದ್ದು.

ಪುತ್ತೂರು, } ಹೊಸದುರ್ಗ ಪುಂಡರೀಕ ಭಟ್.
17—8—1925 } ಅರ್ಜಿದಾರನ ಪರ ವಕೀಲು.

ವಿದೇಶ ವರ್ತಮಾನ.

—ಜಪಾನಿನಲ್ಲಿ ಪಶ್ಚಿಮ ಕೋರಿಯದಲ್ಲಿ ಭಯಂಕರವಾದ ನೆರೆಯು ಬಂದು ರೈಲಿನ ಕಂಬಿಗಳು ಹರಿದುಹೋದವು, ಸಂಕಗಳು ಕುಸ್ತಿಹೋದವು ಮತ್ತು ೨೧ ಜನರು ಮೃತಪಟ್ಟಿರುವರು.

—ಜಪಾನಿನಲ್ಲಿ ಸಂಭವಿಸಿದ ನೆರೆಹಾವಳಿಯಿಂದ ಅನೇಕ ಕಟ್ಟಡಗಳು ನೀರಿನಲ್ಲಿ ತೇಲಿಹೋದವಲ್ಲದೆ ಇನ್ನೂ ಅನೇಕ ಬಗೆಯ ನಷ್ಟವು ಸಂಭವಿಸಿದೆ, ಮತ್ತು ಇದುವರೆಗೆ ಗೊತ್ತಾದ ನಷ್ಟವು ಸಾಧಾರಣವಾಗಿ ಒಂದು ಕೋಟಿ 'ಯನ್' (ಜಪಾನಿನೊಳಗಿನ ನಾಣ್ಯ)ದಷ್ಟು ಆಗಿದೆ ಎಂದು ತಿಳಿದುಬರುತ್ತದೆ.

—ಚೀನಾದೊಳಗಿನ ಶಾಂಘಾಯಿದಲ್ಲಿ ಉಂಟಾಗಿರುವ ಕೂಲಿಗಳ ಮುಷ್ಕರದ ಸ್ವರೂಪವು ಬರಬರುತ್ತ ಉಗ್ರವಾಗುತ್ತ ನಡೆದಿದೆ. ಸಂಬಳದಲ್ಲಿ ನೇಕಡಾ ೧೦ರಷ್ಟು ಹೆಚ್ಚು ಕೊಡದೆ ಇದ್ದಲ್ಲಿ ಕೆಲಸ ಕೈಕೊಳ್ಳಲಾಗುವುದಿಲ್ಲವೆಂದು ಕೂಲಿಗಳು ಸೂಚಿಸಿರುವರು.

—ಚೀನಾ ದೇಶದ ಈ ಮುಷ್ಕರಗಾರರು ನಿರುದ್ಯೋಗಿಗಳಾಗಿ ತಿರುಗಾಡುತ್ತಾರಾದ ಕಾರಣ ಚೀನಾ ಸರಕಾರದ ಒಬ್ಬ ಗುಪ್ತಪೋಲೀಸನನ್ನು ಆಕ್ರಮಿಸಿ ಅವನ ಮೇಲೆ ಬೆಂಚು, ಕಂಚಿಗಳನ್ನು ಒಗೆದರು, ಕೊನೆಗೆ ಅವನು ತುಬಾಕಿಯನ್ನು ತೆಗೆದು ಗುಂಡು ಹಾರಿಸಿದನು. ಈ ಗುಂಡಿನಿಂದ ಒಬ್ಬನ ಕಾಲಿಗೆ ಗಾಯವಾಯಿತು. ಅಷ್ಟರಲ್ಲಿ ಪೋಲೀಸರು ಅಲ್ಲಿಗೆ ಬಂದು ಶಾಂತಪಡಿಸಿದರು.

—ಈ ಮುಷ್ಕರಗಾರರು ಒಂದು ಜಾಹೀರ ಪ್ರಕಟನೆಯನ್ನು ಪ್ರಸಿದ್ಧಪಡಿಸಿರುವರು. ಅದರಲ್ಲಿ "ನಮ್ಮನ್ನು ದನಗಳಿಗಿಂತಲೂ ನಿಕೃಷ್ಟ ರೀತಿಯಿಂದ ನಡಿಸುತ್ತಾರೆ, ನಮಗೆ ಸಾಕಾಗುವಷ್ಟು ಸಂಬಳ ಕೊಡುವುದಿಲ್ಲ, ನಮ್ಮ ಈ ದೇಶದಲ್ಲಿ ಅನ್ಯ ದೇಶದವರು ಬಂದು ನಮಗಿಂತಲೂ ಅಧಿಕವಾದ ಸಂಬಳವನ್ನು ಕಟ್ಟಿಕೊಂಡು ಹೋಗುತ್ತಾರೆ, ನಮಗೆ ಮಾತ್ರ ಉಪವಾಸ ಬೀಳಬೇಕಾಗಿರುತ್ತದೆ" ಎಂಬುದಾಗಿ ಮುಷ್ಕರಗಾರರು ಉಲ್ಲೇಖಿಸಿರುವರು.

—ಚೀನಾದೇಶದಲ್ಲಿ ಪ್ರಾರಂಭವಾಗಿರುವ ಗಲಾಟೆಯು ಇನ್ನೂ ಮುಗಿದಿಲ್ಲ. ಕೆಲವು ದಿವಸಗಳ ಮುಂಚೆ ಹತ್ತಿಯ ಗಿರಣಿಗಳನ್ನು ಹಾಳುಮಾಡಲು ದಂಗೆಗಾರರು ಬಂದಿದ್ದರು. ಆಗ ಪೋಲೀಸರ ಕಾವಲನ್ನು ಇಟ್ಟದ್ದಾಗಿತ್ತು. ಪೋಲೀಸರ ಕಾವಲನ್ನು ತೆಗೆದ ಬಳಿಕ ದಂಗೆಗಾರರು ಗಿರಣಿಗಳಲ್ಲಿ ನುಗ್ಗಿ ಯಂತ್ರಗಳನ್ನೆಲ್ಲ ಮುರಿದುಹಾಕಿದರು. ಈ ಗಲಾಟೆಯಲ್ಲಿ ಉಂಟಾದ ನಷ್ಟವು ಅಪರಿಮಿತವಾಗಿದೆ. ಒಂದೊಂದು ಗಿರಣಿಗೆ ಆದ ನಷ್ಟವು ೧೦ ಲಕ್ಷ ಡೊಲರುಗಳಾಗಿದೆ. ಚೀನಾ ಸರಕಾರವು ಈ ದಂಗೆಖೋರರನ್ನು ಶಿಕ್ಷಿಸಲು ೮೦೦ ಸಿಫಾಯಿಗಳನ್ನು ಕಳುಹಿಸಲು ೧೦೦೦೦ ದಂಗೆಖೋರರು ಸೈನ್ಯದ ಮೇಲೆ ಕಲ್ಲುಗಳನ್ನೆಸೆದರು ಕೆಸರನ್ನು ಚೆಲ್ಲಿದರು. ೬೦ ಜನರು ಗಾಯಪಟ್ಟಿರುವರು. ೮ ಜನರು ಮೃತಪಟ್ಟಿರುವರು. ಪೋಲೀಸರಿಗೂ ಕೂಡ ಗಾಯಗಳುಂಟಾಗಿವೆ.

—ಚೀನಾದಲ್ಲಿ ಕೂಲಿಗಳು ಮುಷ್ಕರವನ್ನು ಹಾಕಿ ಆಹಾರದ ಅಂಗಡಿಗಳನ್ನು ಲೂಟಿಯಿಸಿದರು. ಒಬ್ಬ ಮನುಷ್ಯನ ಮೇಲೆ ಗುಂಡು ಹಾರಿಸಿದರು.

—ಪತಿಯಾಳದ ಮಹಾರಾಜರು ವಿಲಾಯತಿಗೆ ಹೋಗಿ ತಲಪಿರುವರು. ಅವರು ಅಲ್ಲಿ ಅನೇಕ ಹಿಂದಿಗಳೊಡನೆಯೂ, ಯುರೋಪಿಯನ್ ಮಿತ್ರರೊಡನೆಯೂ ಹಿಂದುಸ್ಥಾನದ ವಿಷಯದಲ್ಲಿ ಸಂಭಾಷಣೆಗಳನ್ನು ನಡಿಸುತ್ತಿರುವರು. ಅಲ್ಲದೆ ಲೋರ್ಡ ಬರ್ಕನಹೆಡ್ಡರ ಬೇಟಿಯನ್ನು ಪಡಕೊಂಡು ಹಿಂದುಸ್ಥಾನದ ಸಂಗತಿಯನ್ನು ಪ್ರಸ್ತಾಪಿಸಿರುವರು. ಪತಿಯಾಳದ ಮಹಾರಾಜರು ಭಾರತಮಂತ್ರಿಗಳಿಗೂ, ಲೋರ್ಡ ಮತ್ತು ಲೇಡಿ ವಿಲಿಂಗಡನರಿಗೂ ಔತಣವನ್ನು ಕೊಟ್ಟಿರುವರು.

—ಬೆಲ್ಜಿಯಮ್ ದೇಶದ ರಾಜರೂ ರಾಣಿಯವರೂ ಮೆಡಿಟರೇನಿಯನ್ ಸಮುದ್ರವನ್ನು ಸಂದರ್ಶಿಸಲು ಬೇಗನೇ ಬರುವವರಿದ್ದಾರೆ. ಅಲ್ಲಿಂದ ಅವರಿಬ್ಬರೂ ಒಂದು ವೇಳೆ ಹಿಂದುಸ್ಥಾನಕ್ಕೂ ಬರಬಹುದೆಂಬ ವಾರ್ತೆ ಇದೆ.

—ಪಾರಿಸ ಪಟ್ಟಣದಲ್ಲಿ ಎರಡು ರೈಲುಬಂಡಿಗಳು ಒಂದಕ್ಕೊಂದು ಅಪ್ಪಳಿಸಿ ಭಯಂಕರವಾದ ಅಪಘಾತವು ಸಂಭವಿಸಿತು. ಇಬ್ಬರು ಮೃತಪಟ್ಟರು. ೫೦ ಜನರು ಗಾಯಹೊಂದಿರುವರು.

—ಅಬ್ದುಲ್ ಕರೀಮ್ ಎಂಬವನು ಸಾವಿರಾರು ಹಸ್ತಪತ್ರಕಗಳನ್ನು ಹಂಚಿಸಿ ಅವರಲ್ಲಿ ಸ್ವತಂತ್ರವಾದ ಮಹಮ್ಮದೀಯ ರಾಜ್ಯವನ್ನು ಸ್ಥಾಪಿಸಬೇಕೆಂದೂ, ಸಂದರ್ಭ ಒದಗಿದ್ದಲ್ಲಿ ಫ್ರೆಂಚರೊಡನೆಯೂ, ಸ್ಪೆನಿಶ್ ಸಂಕಾರದೊಡನೆಯೂ ಯುದ್ಧಮಾಡಬಹುದೆಂದೂ ಬರೆದಿರುವನು.

ಟರ್ಕಿಯಲ್ಲಿ ಸ್ಥಾಪಿತವಾದ ಲೋಕಸತ್ತಾಕ ರಾಜ್ಯಕ್ಕೆ ವಿರುದ್ಧವಾಗಿ ಗುಪ್ತಕಟವನ್ನು ಮಾಡಿದವರನ್ನು ಹಿಡಿದು ಅವರ ತನಖೆಮಾಡಿ ೧೧ ಜನರನ್ನು ಮಹಾ ಅಪರಾಧಿಗಳನ್ನಾಗಿ ನಿರ್ಣಯಿಸಲಾಯಿತು. ಇವರಿಗೆ ಫಾಶಿಯ ಶಿಕ್ಷೆಯು ವಿಧಿಸಲ್ಪಟ್ಟು ಉಳಿದವರಿಗೆ ೭ ವರ್ಷದ ಶಿಕ್ಷೆಯು ಕೊಡಲ್ಪಟ್ಟಿದೆ.

—ಬ್ರಿಟಿಷ್ ಪಾರ್ಲಿಮೆಂಟಿನ ಮುಖ್ಯ ಪ್ರಧಾನರು ಒಂದು ತಿಂಗಳ ರಜೆಯ ಮೇಲೆ ಹೋಗಿರುವರು.

—ಯುವರಾಜರು ದಕ್ಷಿಣ ಅಮೇರಿಕೆಯಲ್ಲಿ ಸಂಚರಿಸುತ್ತಿದ್ದಾರೆ. ಅವರಿಗೆ ಬಹು ಉತ್ಸಾಹಕರವಾದ ಸ್ವಾಗತವು ಕೊಡಲ್ಪಡುತ್ತಿದೆ.

—"ಅರೇಬಿಯನ್ ನಾಯಿಟ್ಸ್" ಎಂಬ ಕಲ್ಪಿತವಾದ ಮನೋರಂಜಕ ಕಥೆಗಳ ವಿಷಯವು ಎಲ್ಲರಿಗೆ ಗೊತ್ತಿರುವುದಷ್ಟೆ. ಇದರ ಮೂಲ ಪ್ರತಿಯು ಈಗ ಬರ್ಲಿನದಲ್ಲಿ ಉಪಲಬ್ಧವಾಗಿದೆ. ಇದರಲ್ಲಿ ಒಂದು ಸಾವಿರದ ಒಂದು ಕಥೆಗಳಿವೆ. ಈ ಪ್ರತಿಯು ೧೮೦೦ ವರ್ಷದ್ದಾಗಿದೆ. ಈ ಮೂಲ ಪ್ರತಿಯು ಪರ್ಶಿಯನ್ ಭಾಷೆಯಲ್ಲಿ ಇರುತ್ತದೆ.

ಪೋರ್ತುಗೀಸ ಹಿಂದುಸ್ಥಾನದಲ್ಲಿ ಎಂದರೆ ಗೋವಾ ಮುಂತಾದ ಕಡೆಗಳಲ್ಲಿ ಸೈನ್ಯದ ಶಿಕ್ಷಣವನ್ನು ಕಡ್ಡಾಯದಿಂದ ಕೊಡಬೇಕಾಗಿ ನಿರ್ಣಯಿಸಿಯದೆ ಎಂದು ವಿಲಾಯತಿಯಿಂದ ತಂತಿಯು ಬಂದಿರುತ್ತದೆ.

ಒಳದೇಶ ವರ್ತಮಾನ.

—ಮಿ। ವಾಯ್. ಸಿ. ಚಿಂತಾಮಣಿಯವರು ಮುಂಬಯಿಯ 'ಡೈಲಿ ಮೈಲ್' ಪತ್ರಿಕೆಯ ಸಂಪಾದಕರಾಗಿದ್ದರು. ಆದರೆ ಮುಂಬಯಿಯ ಕೂಲಿಗಳ ಹಿತವನ್ನು ಕಾಪಾಡುವ ವಿಷಯದಲ್ಲಿ ಮತಭೇದಗಳುಂಟಾಗಿ ಅವರು ಆ ಪತ್ರಿಕೆಯ ಸಂಪಾದಕತ್ವಕ್ಕೆ ರಾಜೀನಾಮೆಯನ್ನು ಕೊಟ್ಟರು. ಅವರು ರಾಜೀನಾಮೆಯನ್ನು ಕೊಟ್ಟ ಬಗ್ಗೆ ಕೂಲಿ ಸಂಘದವರು ಅವರನ್ನು ಅಭಿನಂದಿಸಿದ್ದಾರೆ.

—ಸೋಲಾಪುರದಲ್ಲಿ ಕಳೆದ ಮೊಹರಮಿನ ವೇಳ್ಯದಲ್ಲಿ ಮಹಮ್ಮದೀಯರು ದಂಗೆಯನ್ನು ಎಬ್ಬಿಸಿ ಮಾರುತಿಯ ಮತ್ತು ಸಂಗದೇವರ ಪ್ರತಿಮೆಗಳನ್ನು ಒಡೆದು ೬-೭ ಹಿಂದುಗಳನ್ನು ಗಾಯಪಡಿಸಿರುವರು.

—ಹಿಂದು ಸ್ತ್ರೀಯರನ್ನೂ ಮಕ್ಕಳನ್ನೂ ಮಹಮ್ಮದೀಯರು ಎಬ್ಬಿಸಿಕೊಂಡು ಹೋಗುತ್ತಾರೆ ಎಂಬೀಸಂಗತಿಯು ನಿಜವಾಗಿದ್ದರೆ ಆ ಬಗ್ಗೆ ತಾವು ಯೋಗ್ಯವಾದ ಉಪಾಯವನ್ನು ಮಾಡುತ್ತೇವೆಂಬುದಾಗಿ ಸಿಂಧಪ್ರಾಂತದ ಕಮೀಶನರರು ಆಶ್ವಾಸನವನ್ನು ಕೊಟ್ಟಿರುವರು.

—ಮಧ್ಯಪ್ರಾಂತದೊಳಗಿನ ಕಾರಂಜಾ ಎಂಬಲ್ಲಿ ಮಾಳೀ ಜನರ ಭಜನವು ಮಾರ್ಗದ ಮೇಲಿಂದ ಹಾದುಹೋಗುವಾಗ ಮುಸಲ್ಮಾನರು ಮೈಮೇಲೆ ಬಿದ್ದು ಗುದ್ದಾಡಿದರು.

—ಹಿಂದೀ ಮಧ್ಯಪ್ರಾಂತಕ್ಕಾಗಿ ಒಂದು ಸ್ವತಂತ್ರವಾದ ಯುನಿವರ್ಸಿಟಿಯು ಅಗತ್ಯವಿದೆ ಎಂಬುದಾಗಿ ಜಬಲಪುರದ ಜನರು ಸರಕಾರಕ್ಕೆ ವಿಜ್ಞಾಪಿಸಿಕೊಂಡಿದ್ದಾರೆ.

—ಚಿತಗೊಂಗ ಎಂಬಲ್ಲಿ ಭೂಕಂಪದ ಸ್ವಲ್ಪ ಆಘಾತವು ತಟ್ಟಿತು.

—ಸುಭಾಷಚಂದ್ರ ಮುಂತಾದ ರಾಜಕೀಯ ಕೈದಿಗಳು ದೇ. ಬಂ. ದಾಸರ ಮೃತ್ಯುವನ್ನು ವಿಷಾದಿಸಿ ಶ್ರೀಮತಿ ವಾಸಂತಿದೇವಿಯವರಿಗೆ ತಮ್ಮ ಸಂತಾಪವನ್ನು ಸೂಚಿಸಿ ಬರೆದಿರುವರು.

—ಕಲಕತ್ತೆಯಲ್ಲಿ ಮೊಹರಮಿನ ಸಮಯದಲ್ಲಿ ಆದ ದಂಗೆಯ ಸಂಬಂಧ ೫೦ ಜನರನ್ನು ಕೈದುಮಾಡಿದೆ.

—ಪತಿಯಾಳದ ಮಹಾರಾಜರ ಆಶ್ರಯದಲ್ಲಿ ಬರುವ ಫೆಬ್ರುವರಿ ತಿಂಗಳಲ್ಲಿ ಅಖಿಲ ಭಾರತವರ್ಷದವರ ಚತ್ರಂಗ ಆಟದ ಸ್ಪರ್ಧೆಯು ನಡೆಯಲಿಕ್ಕಿದೆ. ಯುರೋಪಪದ್ಧತಿಯ ಆಟಗಾರರ ಸ್ಪರ್ಧೆಯು ಕೂಡ ಈ ಸಮಯದಲ್ಲಿ ಆಗಲಿಕ್ಕಿದೆ.

—ದಾದಾಭಾಯಿ ನೌರೋಜಿಯವರ ಜನ್ಮದಿನಾಚರಣವು ಮುಂಬಯಿಯಲ್ಲಿ ಪಾರ್ಸಿ ಜನರಿಂದ ಆಚರಿಸಲ್ಪಟ್ಟು ಆದಿನ ಸಾರ್ವಜನಿಕ ಸಭೆ ಸೇರಿ ಭಾಷಣಗಳಾದವು.

—ಅಕ್ಕಲಕೋಟ ಸಂಸ್ಥಾನದಲ್ಲಿ ಹೈಕೋರ್ಟು ಸ್ಥಾಪಿಸಲ್ಪಟ್ಟಿದೆ.

—ಮುಂಬಯಿ ಕೌನ್ಸಿಲಿನಲ್ಲಿ ಸ್ವರಾಜ್ಯಪಕ್ಷದ ಬೇಳುಗಳಿಗೆ ಅವಕಾಶವನ್ನು ಕೊಡದೆ ಇದ್ದುದಕ್ಕಾಗಿ ಆ ಕಾಯಿದೆಕೌನ್ಸಿಲಿನ ಕಾರ್ಯದಲ್ಲಿ ಯಾವ ಭಾಗವನ್ನೂ ಎತ್ತಕೂಡದೆಂದು ಸ್ವರಾಜ್ಯಪಕ್ಷದ ಸಭಾಸದರೂ, ಹಲವು ಸ್ವತಂತ್ರಪಕ್ಷದವರೂ ನಿರ್ಣಯಿಸಿರುವರು.

—ಮುಂಬಯಿ ಕೌನ್ಸಿಲಿನ ಕಾರ್ಯದಲ್ಲಿ ಭಾಗವನ್ನೆತ್ತಕೂಡದೆಂಬ ನಿರ್ಣಯವನ್ನು ಸ್ವರಾಜ್ಯ ಪಕ್ಷದವರು ಮಾಡಿರುವರಲ್ಲದೆ ತಮ್ಮ ತಮ್ಮ ಹೆಸರುಗಳಲ್ಲಿರುವ ಪ್ರಶ್ನೆಗಳನ್ನೂ ಕೇಳಲಿಲ್ಲ, ಠರಾವುಗಳನ್ನು ಕೌನ್ಸಿಲಿನ ಮುಂದೆ ಇಡಲಿಲ್ಲ. ಹಲವು ಬ್ರಾಹ್ಮಣೇತರರು ಕೂಡ ಇವರೊಂದಿಗೆ ಸೇರಿರುವರು.

—ಮೊಹರಮ್ ಸಮಯದಲ್ಲಿ ಪಾಣಿಪತದಲ್ಲಿ ಆದ ದಂಗೆಯನ್ನು ಕುರಿತು ಹಿಂದು ಮುಖಂಡರು ಹೇಳುವ ಮತ್ತು ಪ್ರಕಟಿಸಿರುವ ಸಂಗತಿಗಳೆಲ್ಲ ನಿರಾಧಾರವಾಗಿದ್ದು ಸರಕಾರಿ ಅಧಿಕಾರಿಗಳು ಪ್ರಕಟಿಸಿದ ಸಂಗತಿಗಳು ಸತ್ಯವಾಗಿವೆ ಎಂದು ಎಸೆಂಬ್ಲಿಯ ಒಬ್ಬ ಮಹಮ್ಮದೀಯ ಸಭಾಸದರು ಜಾಹೀರಪಡಿಸಿದ್ದಾರೆ.

—ಸರ್ ಸುರೇಂದ್ರನಾಥ ಬಾನರ್ಜಿಯವರ ಮೃತ್ಯುವನ್ನು ಕುರಿತು ಕಲಕತ್ತೆಯಲ್ಲಿ ದುಃಖಪ್ರದರ್ಶನ ಸಭೆಯು ಸೇರಿ ಅದರಲ್ಲಿ ಬರದ್ವಾನದ ಮಹಾರಾಜರ ಮತ್ತು ಮಹಾತ್ಮಾ ಗಾಂಧಿಜಿಗಳ ಭಾಷಣಗಳಾದವು. ಸೇನಗುಪ್ತ, ಬಿಪಿನ ಚಂದ್ರಪಾಲ, ಸರ್ ಏಲಿಗ್ಝುಂದರ ಮುಂತಾದವರು ಕೂಡ ಈ ಸಂದರ್ಭದಲ್ಲಿ ಭಾಷಣಗಳನ್ನು ಮಾಡಿರುವರು.

—ಕಲಕತ್ತೆಯಲ್ಲಿ ಶಾಂತಪಕ್ಷದವರ ನೆಶನಲ್ ಲಿಬರಲ್ ಫೆಡರೇಶನು ಸೇರಿತ್ತು. ಮುಂಬಯಿ, ಸಂಯುಕ್ತ ಪ್ರಾಂತ, ಮಧ್ಯಪ್ರಾಂತ ಮುಂತಾದ ದೂರ ದೂರದಿಂದಲೂ ಈ ಪಕ್ಷದ ಪ್ರತಿನಿಧಿಗಳು ಬಂದಿದ್ದರು. ಇವರ ಸಭೆಯಲ್ಲಿ ಪಾರ್ಲಿಮೆಂಟಿನೊಳಗಿನ ಲೋರ್ಡ ಬರ್ಕನ ಹೆಡ್ಡರ ಭಾಷಣದ ನಿಷೇಧಪರ ಠರಾವು ಪಾಸಾಯಿತು. ಮುಡಿಮನ ಕಮಿಟಿಯ ಅಲ್ಪ ಸಂಖ್ಯಾಕರ ರಿಪೋರ್ಟಿನಲ್ಲಿ ಸೂಚಿಸಿದ ಮೇರೆಗೆ ಸರಕಾರವು ಸುಧಾರಣೆಗಳನ್ನು ಕೊಡಬೇಕೆಂಬುದಾಗಿಯೂ ಈ ಫೆಡರೇಶನಿನಲ್ಲಿ ಠರಾವು ಮಾಡಲ್ಪಟ್ಟಿತು.

—ಎಸೆಂಬ್ಲಿಯ ಅಧ್ಯಕ್ಷಸ್ಥಾನದಲ್ಲಿ ಶ್ರೀ. ವಿ. ಜೇ. ಪಟೇಲರು ಚುನಾಯಿಸಿ ಬರಬಹುದೆಂಬುದಾಗಿ ಅನೇಕರು ಊಹಿಸುತ್ತಿರುವರು. ಟೈಮ್ಸ್ ಒಫ್ ಇಂಡಿಯದಂಥ ಎಂಗ್ಲೊ ಇಂಡಿಯನ್ ಪತ್ರಿಕೆಗೆ ಪಟೇಲರು ಅಧ್ಯಕ್ಷರಾಗಿ ಚುನಾಯಿಸಿಬರುವುದು ಸಮ್ಮತವಲ್ಲವಾಗಿದೆ.

—ಮಹಾತ್ಮಾ ಗಾಂಧಿಗಳು ಬಿಹಾರ ಪ್ರಾಂತದಲ್ಲಿ ಸಂಚಾರ ಬೆಳೆಸಿರುವರು.

—ಬಾಬು ಅರವಿಂದಘೋಷರು ಕಾನಪುರದ ರಾಷ್ಟ್ರೀಯ ಸಭೆಯ ಸ್ವಾಗತ ಮಂಡಲದ ಕಾರ್ಯದರ್ಶಿಗಳಿಗೆ ಬರೆದು ತಿಳಿಸುತ್ತಾರೇನಂದರೆ, ಬರುವ ರಾಷ್ಟ್ರೀಯ ಸಭೆಗೆ ಹಾಜರಿರಲು ಅಥವಾ ಮುಂದಿನ ಇಡೀ ವರ್ಷ ಅಧ್ಯಕ್ಷನಾಗಿ ಕೆಲಸಮಾಡಲು ತನಗೆ ಸಾಧ್ಯವಿಲ್ಲದ ಕಾರಣ ಅಧ್ಯಕ್ಷ ಹೆಸರುಗಳನ್ನು ಶಿಫಾರಸುಮಾಡಿರುವ ಪಟ್ಟಿಯಿಂದ ತನ್ನ ಹೆಸರನ್ನು ತೆಗೆಯಬೇಕು.

—ಅಲಹಾಬಾದಿನಲ್ಲಿ ಗಂಗಾನದಿಗೆ ನೆರೆಯು ಬರುವ ಭೀತಿಯು ತೋರಿ ಮೆಜಿಸ್ಟ್ರೇಟರು ಅದರಿಂದ ಜನರ ಸಂರಕ್ಷಣೆಗಾಗಿ ಅವಶ್ಯವಿರುವ ಉಪಾಯಗಳನ್ನು ಕೊಳ್ಳುವದರಲ್ಲಿ ನಿರತರಾಗಿದ್ದರು.

—ಅಮೃತಸರದ ಹತ್ತರ ಮೊರಿಗಂಜ ಬಝಾರದಲ್ಲಿ ಒಂದು ಗೋಣಿಚೀಲದೊಳಗೆ ತಲೆ, ತೋಳು, ಕಾಲು ಇವುಗಳಿಲ್ಲದ ಮನುಷ್ಯಶರೀರದ ಮಧ್ಯದ ಭಾಗವು ಇದ್ದದ್ದು ಗೋಚರಕ್ಕೆ ಬಂದದ್ದರಿಂದ ಜನರಲ್ಲಿ ಗಡಬಡಿಯುಂಟಾಗಿದೆ, ಪೋಲೀಸ ತನಖೆಯು ನಡೆದಿದೆ.

—ಮದ್ರಾಸಿನಿಂದ ಕಲಕತ್ತೆಗೆ ಹೋಗುವ ರೈಲಿನ ರಸ್ತೆಯಲ್ಲಿ ಮದ್ರಾಸಿನಿಂದ ಸುಮಾರು ೮೧ ಮೈಲು ದೂರ ಗುಡೂರ ಸ್ಟೇಷನಿನಲ್ಲಿ ಒಬ್ಬ ಯುರೋಪಿಯನನು ದನಗಳಿಗೆ ಮೂರು ಗುಂಡುಗಳನ್ನು ಹೊಡೆದನು. ಅವುಗಳಲ್ಲಿ ಒಂದು ಒಬ್ಬ ಕೂಲಿಗೆ ತಗಲಿ ಗಾಯಪಟ್ಟನು. ಅವನನ್ನು ಆಸ್ಪತ್ರೆಗೆ ಕೊಂಡುಹೋಗಿರುವರು. ಮತ್ತು ಗುಂಡು ಹಾಕಿದ ಆ ಯುರೋಪಿಯನನ್ನು ಕೈದುಮಾಡಿರುವರು.

—ಈ ಸಂದರ್ಭದಲ್ಲಿ ಪೋಲಿಸರ ಸಹಾಯ ಕೇಳಿದಲ್ಲಿ ಪ್ರಥಮತಃ ಸಾಕಷ್ಟು ಪೋಲೀಸರು ಬರಲಿಲ್ಲ. ಕಡಿಮೆ ೭ ಜನ ಪುಂಡುಗಾರರನ್ನು ಕೈದುಮಾಡಿದೆ. ಅನಂತರ ಪೋಲೀಸರ ಸಹಾಯ ಬಂದು ಗಲಾಟೆಯು ನಿಲ್ಲಿಸಲ್ಪಟ್ಟಿತು.

—ಮದ್ರಾಸಿನ ಮುನ್ಸಿಪಾಲಿಟಿಯ ಚುನಾವಣೆಯು ಕೆಲವು ಭಾಗಗಳಲ್ಲಿ ಯಶಸ್ವಿಯಾಗಿ ಬಂದು ಕೊಂಗ್ರೆಸ್ ಪಾರ್ಟಿಯ ಸಭಾಸದರು ಮೆರವಣಿಗೆಯಿಂದ ಹೋಗುತ್ತಿರುವಾಗ ಕೆಲವು ಪುಂಡರು ಥಟ್ಟನೆ ಬಂದು ಮೈಮೇಲೆ ಬಿದ್ದು ಲಾಟಿಗಳಿಂದಲೂ, ಇತರ ಹತ್ಯಾರುಗಳಿಂದಲೂ ಅತ್ಯಾಚಾರವನ್ನು ನಡಿಸಿದರು. ಮೆರವಣಿಗೆಯೊಳಗಿನ ಸುಮಾರು ೩೦ ಜನರು ಗಾಯಪಟ್ಟಿರುವರು. ಇವರ ಪೈಕಿ ಮಿ। ವಿ. ಎಮ್. ಅಭಿಶೇಕವಲು ನಾಯಕರ ಎಂಬ ಕೊಂಗ್ರೆಸ್ ಉಮೇದುವಾರರಿಗೂ ಗಾಯವಾಗಿದೆ.

—ಹಾಜಿ ತಹಿರ ಎಂಬವನು ಮೆಕ್ಕಾದಲ್ಲಿ ಜನ್ಮಿಸಿದನು. ೧೮೧೯ರಲ್ಲಿ ಎಂದರೆ ೧೨ ಅಥವಾ ೧೩ ವರ್ಷ ವಯಸ್ಸಿನಲ್ಲಿ ಅವನು ಪಾಲಿಸ್ತೈನಿಗೆ ಹೋದನು. ಆಗ ನೆಪೋಲಿಯನ್ ಬೊನಾಪಾರ್ಟನನ್ನು ನೋಡಿದ್ದನು. ಈಗ ಅವನಿಗೆ ೧೧೮ ವರ್ಷ ವಯಸ್ಸು. ಇವನು ಸಶಕ್ತನೂ, ಆರೋಗ್ಯಶಾಲಿಯೂ ಆಗಿರುವನು. ಇವನಿಗೆ ಯಾವಾಗಲೂ ಹಸಿವೆಯಾಗುತ್ತದೆ. ತನ್ನ ಆಹಾರವನ್ನು ಚೆನ್ನಾಗಿ ಜಗಿಯಬಲ್ಲನು. ಎಲ್ಲಾ ಹಲ್ಲುಗಳು ಬಿದ್ದಿದ್ದರೂ ಮತ್ತೊಂದಾವೃತ್ತಿ ಹಲ್ಲುಗಳು ಚಿಗಿಯುತ್ತಿವೆ. ಇವನ ೬೦ನೆಯ ವರ್ಷ ವಯಸ್ಸಿನಲ್ಲಿ ಪ್ರಥಮ ವಿವಾಹವಾಯಿತು. ಈಗ ಇವನು ಪುನಃ ಲಗ್ನವಾಗಿರುವನು. ಇವನಷ್ಟು ವಯಸ್ಸಾದ ಮನುಷ್ಯನು ಈಗ ಜಗತ್ತಿನಲ್ಲಿ ಮತ್ತೊಬ್ಬನಿಲ್ಲ ಎಂದು 'ಲೋಕ ಮತ' ವೆಂಬ ಪತ್ರಿಕೆಯಲ್ಲಿ ಪ್ರಕಟವಾಗಿದೆ.

—ಜರ್ಮನ್ನರು ಜಗತ್ತನ್ನೇ ಜಯಿಸಲು ಸಾಹಸ ಮಾಡುವರು. ಕಳೆದ ಮಹಾಯುದ್ಧದಲ್ಲಿ ಇವರು ಸೋತದ್ದರಿಂದ ಇವರ ಅಧಿಭೌತಿಕ ಪ್ರಗತಿಯು ಕುಗ್ಗಿದೆ. ಆದರೆ ಆಧ್ಯಾತ್ಮಿಕ ವಿಚಾರದಲ್ಲಿ ಇವರು ಮುಂದುವರಿಯುತ್ತಿರುವರು. ಈಗ ಅವರು ನಿದ್ರೆಯನ್ನು ತ್ಯಜಿಸಲು ಪ್ರಯತ್ನ ಮಾಡುತ್ತಿರುವರು. ನಿದ್ರೆಯು ಒಂದು ದುಷ್ಟಟೆವಾಗಿದೆ. ಇದು ಇನ್ನು ಮುಂದೆ ಮನುಷ್ಯನಿಗೆ ಅಗತ್ಯವಾಗಿಲ್ಲವು ಎಂದು ಡಾ। ಜೆಲ್ ಎಂಬ ಜರ್ಮನ್ ಶಾಸ್ತ್ರಜ್ಞನು ಹೇಳುತ್ತಾನೆ. ನಿದ್ರೆಯನ್ನು ಪೂರ್ಣವಾಗಿ ತ್ಯಜಿಸಲು ಸದ್ಯಕ್ಕೆ ಸಾಧ್ಯವಿಲ್ಲದಿದ್ದರೂ, ಅದು ಅಗತ್ಯವಾದುದಲ್ಲವೆಂತಲೂ, ದಣಿವನ್ನು ನೀಗಲು ನಿದ್ರೆಯು ಅವಶ್ಯವೆಂಬ ತತ್ವವು ನಿರಾಧಾರವಾದುದೆಂತಲೂ, ನಿದ್ರೆಯ ಕಾಲವು ವಯಸ್ಸಿನಂತೆ ಹೆಚ್ಚುಕಡಿಮೆಯಾಗದೆ, ಸಂಸ್ಕೃತಿಯಂತೆ ಹೆಚ್ಚುಕಡಿಮೆಯಾಗುವದೆಂತಲೂ ಅವರು ಹೇಳುತ್ತಾರೆ. ವಶಿಷ್ಠ ಋಷಿಗಳು ಒಂದು ಪ್ರಹರ ಮಾತ್ರ ಎಂದರೆ ೩ ತಾಸು ಮಲಗುತ್ತಿದ್ದರೆಂದು ಯೋಗವಾಶಿಷ್ಠದಿಂದ ಗೊತ್ತಾಗುತ್ತದೆ. ನೆಪೋಲಿಯನ್ನನೂ ಮೂರೇ ತಾಸು ಮಲಗುತ್ತಿದ್ದನು. ಮತ್ತು ಮೂರು ತಾಸಿನ ನಿದ್ರೆಯು ಮನುಷ್ಯನಿಗೆ ಸಾಕೆಂದು ಹೇಳುತ್ತಿದ್ದನು. (ಲೋಕಮತ)

—ಭಿಕ್ಷುಕರೂ ನಗರಗಳೂ:—೧೯೨೧ನೇ ಜುಲಾಯಿ ೧೫ರಲ್ಲಿ ತೆಗೆದ ಲೆಕ್ಕದಿಂದ ಮದರಾಸಿನಲ್ಲಿ ಒಟ್ಟು ೨,೦೮೭ ಭಿಕ್ಷುಕರಿದ್ದಾರೆ. ಅವರಲ್ಲಿ ೧,೪೧೬ ಮಂದಿ ಹಿಂದುಗಳು; ೫೮೪ ಮಂದಿ ಮಹಮ್ಮದೀಯರು; ೮೭ ಮಂದಿ ಈಸಾಯಿಗಳು; ೧,೪೪೧ ಮಂದಿ ಗಂಡಸರು; ೬೪೬ ಮಂದಿ ಹೆಂಗಸರು. ೧,೨೧೪ ಮಂದಿ ಅಂದರೆ ಸುಮಾರು ಶೇಕಡ ೫೦ ಮಂದಿ ಭಿಕ್ಷುಕರ ಪರಂಪರೆ ಸೇರಿದವರು. ೧೪ ವಯಸ್ಸಿನೊಳಗಿನ ಧೃಢಕಾಯರಾದ ೬೬ ಮಂದಿ ಬಾಲಕರಿಗೂ, ೬೨ ಮಂದಿ ಬಾಲಕಿಯರಿಗೂ, ಭಿಕ್ಷುಕರಾದ ಹಿರಿಯರು ಭಿಕ್ಷಾಟನವೃತ್ತಿಯಲ್ಲಿ ಪ್ರೋತ್ಸಾಹ ಕೊಡುತ್ತಿರುವರು. ಈ ಭಿಕ್ಷುಕರಲ್ಲಿ ದೃಢಕಾಯರಾದ ೮೩೩ ಗಂಡಾಳುಗಳುಂಟು. ೧,೧೧೬ ಮಂದಿ ಅಂಗಾಂಗ ವಿಕಲರುಂಟು. (ಅವರಲ್ಲಿ ೩೨ ಮಂದಿ ಮಕ್ಕಳು.)

—ಕಳೆದ ಶನಿವಾರ ದಿವಸ ಬೆಂಗಳೂರಿನಲ್ಲಿ ಪುಷ್ಪಪ್ರದರ್ಶನವು ಪ್ರಾರಂಭವಾಯಿತು. ಬಹಳ ಅಂದವಾದ ತರಹಾವರಿ ಪುಷ್ಪಗಳು ಮತ್ತು ಗಿಡಗಳು ಪ್ರೇಕ್ಷಕರ ದೃಷ್ಟಿಗೆ ಸೌಂದರ್ಯದ ಸೊಬಗನ್ನೂ, ಮನಸ್ಸಿಗೆ ಆಹ್ಲಾದವನ್ನೂ ಉಂಟುಮಾಡುವ ರೀತಿಯಲ್ಲಿ ಈ ಪ್ರದರ್ಶನಶಾಲೆಯಲ್ಲಿ ಇಡಲ್ಪಟ್ಟಿದ್ದವು.

—ಮೈಸೂರು ದೇಶದ ಡಾ। ಎ. ಸುಬ್ಬರಾವ್ ಎಂಬವರು ಜೂಅಲಾಜೀ ಎಂಬ ಶಾಸ್ತ್ರದಲ್ಲಿ ಪರಿಶೋಧನೆಯನ್ನು ಮಾಡಿ ಅಸಾಧಾರಣವಾದ ಬುದ್ಧಿಯನ್ನು ತೋರಿಸಿರುವರು. ಈಗ ಇವರನ್ನು ಲಂಡನ್ ವಿಶ್ವವಿದ್ಯಾಲಯದಲ್ಲಿ ಡಿ. ಎಸ್. ಸಿ. ಪರೀಕ್ಷೆಗೆ ತೆಗೆದುಕೊಳ್ಳಲ್ಪಟ್ಟಿರುವರು. ಮಾನುಷ ಶಾರೀರ ಶಾಸ್ತ್ರದಲ್ಲಿ ಪರಿಪೂರ್ಣ ಪಾಂಡಿತ್ಯವನ್ನು ಸಂಪಾದಿಸುವಂತೆ ಮೈಸೂರು ಸರಕಾರದವರು ಇವರಿಗೆ ಹೇಳಿರುತ್ತಾರೆ.

—ಬರುವ ಡಿಸೆಂಬರ ತಿಂಗಳಲ್ಲಿ ಬೆಂಗಳೂರಿನಲ್ಲಿ ನಡೆಯುವ ಕರ್ನಾಟಕಆಯುರ್ವೇದ ಸಮ್ಮೇಳನಕ್ಕೆ ಸ್ವಾಗತಮಂಡಲಿಯನ್ನು ಏರ್ಪಡಿಸಲು ಈ ತಿಂಗಳ ತಾ. ೬ನೇ ದಿವಸ ಬೆಂಗಳೂರು ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾಪಾಠಶಾಲೆಯಲ್ಲಿ ವಿದ್ಯಾಭೂಷಣ ಮ। ಕರ್ಪೂರ್ ಶ್ರೀನಿವಾಸರಾಯರವರ ಅಧ್ಯಕ್ಷತೆಯಲ್ಲಿ ಬೆಂಗಳೂರಿನ ಮಹಾಜನಗಳು ಒಂದು ಮೀಟಿಂಗನ್ನು ಮಾಡಿದರು. ರಾಜಸಭಾಭೂಷಣ ಕರ್ಪೂರ್ ಶ್ರೀನಿವಾಸರಾಯರವರ ಅಧ್ಯಕ್ಷತೆಯಲ್ಲಿ ಒಂದು ಸ್ವಾಗತಮಂಡಲಿಯು ಏರ್ಪಾಡಾಯಿತು, ರಾವ್ ಬಹದೂರ್ ಡಾ। ಸಿ. ಬಿ. ರಾಮರಾಯರವರು ವೈಸ್ ಪ್ರೆಸಿಡೆಂಟರಾಗಿ ಚುನಾಯಿಸಲ್ಪಟ್ಟಿರುವರು. ಈ ಸಮ್ಮೇಳನವು ನಡೆಯುವ ಸಂದರ್ಭದಲ್ಲಿ ಆಯುರ್ವೇದ ವಸ್ತುಪ್ರದರ್ಶನವೊಂದು ನಡೆಯುವುದು.

—ಬ್ರಿಟಿಷ್‌ಗೆಯಾನದಿಂದ ೫೦೦ ಜನ ಭಾರತೀಯರು ಪುನಃ ಭರತಖಂಡಕ್ಕೆ ಹಿಂತಿರುಗಿ ಬರುವರು.

—ಮದ್ರಾಸಿನ ಮತಶಾಸನಗಳ ಕಾನೂನಿಗೆ ಇಂಡಿಯಾ ಸ್ಟೇಟ್ ಸೆಕ್ರೆಟರಿಗಳು ತಮ್ಮ ಒಪ್ಪಿಗೆಯನ್ನು ಕೊಟ್ಟಿರುವರು.

—ಬಳ್ಳಾರಿಯಲ್ಲಿ ಕರ್ನಾಟಕ ಏಕೀಕರಣ ಶಾಖೆಯೊಂದು ಹೊಸದಾಗಿ ಸ್ಥಾಪನೆಯಾಗಿದೆ. ಅದಕ್ಕೆ ಶ್ರೀ. ಬಳ ಬಸವಯ್ಯನವರೇ ಅಧ್ಯಕ್ಷರು.

—ಕಳೆದ ಶನಿವಾರ ದಿವಸ ದುರ್ಮಾರ್ಗಪ್ರವರ್ತಕರಾದ ಕೆಲವು ಜನ ಮಹಮ್ಮದೀಯರು ಅಲಹಾಬಾದಿನಲ್ಲಿ ಹಿಂದುಗಳ ಮನೆಗೆ ನುಗ್ಗಿ ದರೋಡೆ ಮಾಡಿ, ಅನೇಕರನ್ನು ಘಾಸಿಪಡಿಸಿದರೆಂದು ತಿಳಿಸಲ್ಪಟ್ಟಿದೆ.

—ಮಹಾತ್ಮಾ ಗಾಂಧಿಯವರು ಬರುವ ಅಕ್ಟೋಬರ ತಿಂಗಳಲ್ಲಿ ಆಂಧ್ರದೇಶಕ್ಕೆ ದಯಮಾಡಿಸುವುದರಿಂದ, ಅಲ್ಲಿನ ವಾಲಂಟಿಯರುಗಳು ಬೇಕಾದ ಏರ್ಪಾಡುಗಳನ್ನು ಮಾಡಲು ಪ್ರಯತ್ನಮಾಡಬೇಕೆಂದು ಆಂಧ್ರ ವಾಲಂಟಿಯರ್ ಬೋರ್ಡಿನ ಸೆಕ್ರೆಟರಿಗಳು ತಿಳಿಸುತ್ತಾರೆ.

—ಆಯುರ್ವೇದ ವೈದ್ಯರ ಸಮೂಹದಲ್ಲಿ ಮುಕ್ಕಾಲು ಮೂರು ವೀಸ ಪಾಲು ಜನರು ವೈದ್ಯದಲ್ಲಿ ಪರಿಪೂರ್ಣ ಪಾಂಡಿತ್ಯವನ್ನು ಹೊಂದಿರುವುದಿಲ್ಲವೆಂದು ಮಹಾತ್ಮಾ ಗಾಂಧಿಯವರು ಹೇಳಿದ್ದು ಅಸಮರ್ಪಕವಾದುದೆಂದು ಅಖಿಲ ಭಾರತೀಯ ಆಯುರ್ವೇದ ಮಹಾಮಂಡಲದವರು ಅಭಿಪ್ರಾಯಪಟ್ಟಿರುತ್ತಾರೆ.

—ಹಿಂದುಗಳ ವಿರುದ್ಧ ಲೇಖನಗಳನ್ನು ಬರೆದು, ಜಾತಿಜಾತಿಗಳಲ್ಲಿ ದ್ವೇಷವನ್ನುಂಟುಮಾಡಿದ ಆರೋಪದ ಮೇಲೆ ಮುಸಲ್ಮಾನ ಪತ್ರಿಕೆಯ ಸಂಪಾದಕನಿಗೆ ೧೦೦ ರೂ.ಗಳ ದಂಡವು ವಿಧಿಸಲ್ಪಟ್ಟಿತು.

ಅನುಕ್ರಮಣಿಕೆ.

ಅಗ್ರಲೇಖ ಪುಟಗಳು.
ಮದ್ರಾಸ ಕೌನ್ಸಿಲಿನ ಅಧಿವೇಶನ ೬
ಸ್ಫುಟವಿಚಾರಗಳು—
೧–೨ ಮುಂಬಯಿ ಕೌನ್ಸಿಲಿನೊಳಗೆ ಬ್ರಾಹ್ಮಣೇತರ ಪಕ್ಷವೂ ಸ್ವರಾಜ್ಯ ಪಕ್ಷವೂ ೭
೩ ಸರ ಸಪ್ರುಗಳ ಅಭಿಪ್ರಾಯ ,,
೪ ಚರಕದ ಅವಶ್ಯಕತೆ ,,
ಮಂಗಳೂರು
ವರ್ತಮಾನಸಂಗ್ರಹಗಳು—
ವಿದೇಶ – ಒಳದೇಶ ವರ್ತಮಾನ ೫
ದಕ್ಷಿಣಕನ್ನಡ – ಬೊಕ್ಕಾಡಿ ಮತ್ತು ಪುತ್ತೂರು ,,
ವಿವಿಧವಿಷಯಗಳು ,,
ಪತ್ರವ್ಯವಹಾರಗಳು – ೧, ೨, ೩, ೪ ೮
ಎಳೆಮಕ್ಕಳ ಅಪಾಯಕಾರಣಗಳು ೪

ಸ್ವದೇಶಾಭಿಮಾನಿ.

ಶಕ ೧೮೪೬ ಭಾದ್ರಪದ ಶು| ೨ಯು ಶುಕ್ರವಾರ.

ಮದ್ರಾಸ ಕೌನ್ಸಿಲಿನ ಅಧಿವೇಶನ.

ಮದ್ರಾಸ ಕೌನ್ಸಿಲಿನ ಅಗೋಸ್ತು ತಿಂಗಳ ಅಧಿವೇಶನವು ಪ್ರಾರಂಭವಾಗಿದೆ. ಈ ಅಧಿವೇಶನವನ್ನು ಪ್ರಾರಂಭಿಸುವಾಗ ಯಥಾಕ್ರಮವಾಗಿ ಇಲಾಖಾಧಿಪತಿಗಳಾದ ಲೊರ್ಡ ಗೋಶ್ಚನ ಸಾಹೇಬರು ಪ್ರಾಥಮಿಕ ಭಾಷಣವನ್ನು ಮಾಡಿದರು. ಸ್ವರಾಜ್ಯ ಪಕ್ಷದ ಉದಯವು ಆದಂದಿನಿಂದ ಹಿಂದುಸ್ಥಾನದೊಳಗಿನ ಇತರ ಕೌನ್ಸಿಲುಗಳಲ್ಲಿ ಪ್ರಾಂತಿಕ ಸರಕಾರಗಳಿಗೆ ಲೋಕಮತದ ಝಳವು ತಟ್ಟುತ್ತಿದೆಯಾದರೂ ಪಂಜಾಬ ಮತ್ತು ಮದ್ರಾಸ ಕೌನ್ಸಿಲುಗಳಲ್ಲಿ ಸ್ವರಾಜ್ಯಪಕ್ಷದ ಪ್ರಾಬಲ್ಯವು ಇಲ್ಲದಿರುವುದರಿಂದ ಕಾರ್ಯಕಾರಿ ಅಧಿಕಾರಿಗಳ ವಿಲಾಸ ವಿಹಾರಕ್ಕೆ ಯಾವ ಬಾಧಕವೂ ಉಂಟಾಗಿಲ್ಲ. ಆದ್ದರಿಂದ ಗವರ್ನರ ಸಾಹೇಬರ ಭಾಷಣದಲ್ಲಿ ಸಂಸ್ಥಾನದ ರಾಜಕೀಯ ಧೋರಣವನ್ನು ವ್ಯಕ್ತಗೊಳಿಸುವ ಮಾತುಗಳಾಗಲಿ, ಖಂಡನೆ ಮಂಡನೆಗಳಾಗಲಿ, ಉಪದೇಶವಾಗಲಿ ಯಾವದೂ ಇರಲಿಲ್ಲ. ಕಳೆದ ವರ್ಷ ಅಧಿವೇಶನವು ಸೇರಿದಂದಿನಿಂದ ಇದುವರೆಗಿನ ಹಲವು ಸಂಗತಿಗಳನ್ನು ಎತ್ತಿಕೊಂಡು ಗವರ್ನರರು ತಮ್ಮ ಭಾಷಣವನ್ನು ಮಾಡಿರುವರು. ಮೈಸೂರ ಪ್ರಾಂತದಿಂದ ಹರಿಯುವ ಕಾವೇರಿ ನದಿಯಿಂದ ಒಂದು ಶಾಖೆಯನ್ನು ಹೊರಡಿಸುವ ವಿಷಯವಾಗಿ ಭಾರತಮಂತ್ರಿಗಳಿಂದ ಅನುಮತಿಯು ಸಿಕ್ಕಿದೆ. ಆ ಶಾಖೆಯನ್ನು ಹೊರಡಿಸುವದರಿಂದ ತ್ರಿಚ್ಚಿ ಮತ್ತು ತಂಜಾವೂರ ಜಿಲ್ಲೆಗಳೊಳಗಿನ ಸುಮಾರು ೩ ಲಕ್ಷ ಎಕ್ರೆ ಸ್ಥಳದ ಉಪಯೋಗಾರ್ಥವಾಗಿ ಈಗ ಇರುವ ಕಾಲಿವೆಯ ಪದ್ಧತಿಗೆ ತುಂಬಾ ಅನುಕೂಲತೆಯುಂಟಾಗುವದು. ಈ ಸಂಕಲ್ಪಿತ ಕಾಲಿವೆಯಿಂದ ಇದುವರೆಗೆ ಬಂಜರು ಬಿದ್ದಿರುವ ಭೂಮಿಗೆ ತುಂಬಾ ಪ್ರಯೋಜನವುಂಟಾದೀತು. ಈ ಕಾಲಿವೆಯು ಹಿಂದುಸ್ಥಾನದೊಳಗಿನ ದೊಡ್ಡ ಕಾಲಿವೆಗಳಲ್ಲಿ ಒಂದಾಗಿದೆ. ಎಂಬುದಾಗಿ ಕಾಲಿವೆಯ ವಿಷಯವನ್ನು ಮುಗಿಸಿ, ಗವರ್ನರರು ಹಾಯಡ್ರೊ ಎಲೆಕ್ಟ್ರಿಕ್ ಸ್ಕೀಮ್, ಡಿಸ್ಟ್ರಿಕ್ಟ್ ಬೋರ್ಡು ರೈಲುಗಳು, ಗೂಟಿಯಲ್ಲಿ ನೇಮಿಸಿದ ಜಾದಾ ಪೋಲಿಸರ ಸಂಗತಿ, ಮದ್ರಾಸ ಹೈಕೋರ್ಟು, ಕಾಲಿವೆ ಬೀಲು ಮುಂತಾದ ಗತಿಸಿದ ವಿಷಯಗಳನ್ನು ಚರ್ಚಿಸಿದರು. ಇವುಗಳ ಪೈಕಿ ಹಾಯಡ್ರೊ ಎಲೆಕ್ಟ್ರಿಕ್ ಸ್ಕೀಮಿನ ವಿಷಯದಲ್ಲಾಗಲಿ, ಡಿಸ್ಟ್ರಿಕ್ಟ್ ಬೋರ್ಡ ರೈಲುಗಳ ವಿಷಯದಲ್ಲಾಗಲಿ ಗವರ್ನರರು ಸವಿನುಡಿಗಳಿಂದ ಆಶ್ವಾಸನವನ್ನು ಮಾತ್ರ ತೋರಿಸಿರುವರಲ್ಲದೆ ಆ ಸ್ಕೀಮಿನ ಅಥವಾ ಡಿ. ಬೋ. ರೈಲಿನ ಕಾರ್ಯಗಳನ್ನೂ ಯೋಜನೆಗಳನ್ನೂ ಯಾವಯಾವ ರೀತಿಯಿಂದ ತಯಾರಿಸತಕ್ಕದ್ದು ಎಂಬುದನ್ನು ವಿಶದಪಡಿಸಿ ಕೌನ್ಸಿಲಿನ ಸಹಾಯವನ್ನು ಕೇಳಿಲ್ಲ. ಸಾರಾಂಶ ಗವರ್ನರರು ಈ ವಿಷಯಗಳ ಹೆಸರುಗಳನ್ನು ಮಾತ್ರ ಎತ್ತಿಹೇಳಿರುವರು. ಅನಂತಪುರ ಜಿಲ್ಲೆಯೊಳಗಿನ ಗೂಟಿ ತಾಲೂಕಿನಲ್ಲಿ ಜಾದಾ ಪೋಲಿಸರನ್ನು ಇಟ್ಟಿರುವ ವಿಷಯವಾಗಿ ಗವರ್ನರರು ಸಮರ್ಥನಪರವಾದ ಯಾವ ಮಾತುಗಳನ್ನಾಡಿರುವರೊ ಅವು ಅಷ್ಟೊಂದು ಸಮಂಜಸವಾದವುಗಳಲ್ಲ. ಆ ತಾಲೂಕಿನಲ್ಲಿ ಯಾರೊ ಒಬ್ಬಿಬ್ಬರು ಶ್ರೀಮಂತರೊಳಗೆ ವೈಮನಸ್ಸು, ಕಲಹ, ದ್ವೇಷ ಇತ್ಯಾದಿ ಇವೆ ಎಂಬುದರಿಂದ ಎಲ್ಲ ಹಳ್ಳಿಗಳ ಮೇಲಾಗಲಿ, ತಾಲೂಕಿನ ಮೇಲಾಗಲಿ ಜಾದಾ ಪೋಲಿಸರ ಬ್ರಹ್ಮದಂಡವನ್ನು ಹೊರಿಸುವದು ನ್ಯಾಯವಲ್ಲ. ಈ ವಿಷಯದಲ್ಲಿ ಲೋಕಮತಕ್ಕನುಸಾರವಾಗಿ ಸರಕಾರವು ಚೌಕಶಿಯನ್ನು ನಡಿಸಿ, ಆ ಮೇರೆಗೆ ಹಲವು ಬದಲಾವಣೆಗಳಿಂದ ನಿವೃತ್ತಿ ಪಡಿಸಿದೆಯಾದರೂ ಆ ಚೌಕಶಿಯು ನಿಃಪಕ್ಷಪಾತವೂ, ನಿರ್ದೋಷವೂ, ಲೋಕಸಮ್ಮತವೂ ಆಗಿಲ್ಲವೆಂದು ಸ್ಪಷ್ಟವಾದ ಲೋಕಮತವಿದೆ. ಆದ್ದರಿಂದ ಗವರ್ನರ ಸಾಹೇಬರು ಈ ವಿಷಯವನ್ನು ಅಲ್ಲಿಂದಲ್ಲಿ ಸ್ತಬ್ಧಪಡಿಸಲು ಯತ್ನಿಸಿದಾಗ್ಯೂ ಕೌನ್ಸಿಲಿನ ಮುಂದೆ ಅದು ಬೇಗನೆ ಬರಲಿಕ್ಕಿದೆ. ಈ ಒಂದೆ ಸಂಗತಿಯಿಂದ ಗವರ್ನರರ ಸ್ಪಷ್ಟೀಕರಣವೂ, ಸಮರ್ಥನವೂ ಯಾವದು ಬೇಕಾದ್ದನ್ನು ಇಟ್ಟುಕೊಳ್ಳಬಹುದು, ಅದು—ಲೋಕಮತಕ್ಕೆ ತೃಪ್ತಿಕರವಾಗಿಲ್ಲವೆಂಬುದು ವ್ಯಕ್ತವಾಗುತ್ತದೆ. ತರುವಾಯ ಗವರ್ನರ ಸಾಹೇಬರು ಇರಿಗೇಶನ್ ಬೀಲಿನ ವಿಷಯವನ್ನು ಗವರ್ನರ ಜನರಲರ ಮುಂದೆ ಇಡುವದರಲ್ಲುಂಟಾದ ದೀರ್ಘ ಸೂತ್ರಿತೆಯನ್ನು ಒಪ್ಪಿಕೊಂಡು ಈಗಿನ ಅಧಿವೇಶನದಲ್ಲಿ ತರಲಿಕ್ಕಿದ್ದ ಬೀಲುಗಳ ವಿಷಯವನ್ನು ಕೊಂಚಮಟ್ಟಿಗೆ ವಿವರಿಸಿದರು. ಅವು ಕೌನ್ಸಿಲಿನ ಮುಂದೆ ಬಂದಾಗಲೆ ಆ ವಿಷಯವನ್ನು ಚರ್ಚಿಸುವದು ವಿಹಿತವಾಗಿದೆ.

ಗವರ್ನರ ಸಾಹೇಬರ ಭಾಷಣದ ಅನಂತರ ಕ್ರಮದಂತೆ ಪ್ರಶ್ನೋತ್ತರಗಳ ವಿಧಿಯು ನಡೆಯಿತು. ಈ ಸಂದರ್ಭದಲ್ಲಿ ಕೌನ್ಸಿಲಿನ ಅಧ್ಯಕ್ಷರು ಕೌನ್ಸಿಲಿಗೆ ಒಂದು ವಿಚಿತ್ರವಾದ ಪಾಠವನ್ನು ಕೊಟ್ಟರೆಂದೆನ್ನಬಹುದು. ಪ್ರಶ್ನೆಗಳನ್ನು ಲೆಕ್ಕವಿಲ್ಲದಷ್ಟು ಕೇಳುವದರಿಂದ ಸಮಯವು ಮಾತ್ರ ಹಾಳಾಗುವ ಕಾರಣ ಬೇಕಷ್ಟೆ ಪ್ರಶ್ನೆಗಳನ್ನು ಕೇಳಬೇಕೆಂದು ಅಧ್ಯಕ್ಷಮಹಾಶಯರು ಅಪ್ಪಣೆ ಕೊಡಿಸಿರುವರು! ಉತ್ತರಿಸಲು ಕೂಡದಾದ ಪ್ರಶ್ನೆಗಳಿಂದ ಸಮಯವು ಹೇಗೆ ಹಾಳಾಗುವುದೊ ಹಾಗೆಯೆ ಕೆಲವು ಕಡೆಗಳಲ್ಲಿ ಅಧಿಕಾರಿಗಳ ಗೌರವವೂ ಕುಂದುವದು! ಈ ಎರಡನೆಯ ಕಾರಣವನ್ನು ಹೇಳದಿದ್ದರೂ ತಿಳಿಯುವಂತೆ ಇದ್ದದರಿಂದ ಅಧ್ಯಕ್ಷರು ಅದನ್ನು ಆಡಿತೋರಿಸಲಿಬೇಕಿಂದಿಲ್ಲ! ಆದರೆ ಸಾರ್ವಜನಿಕ ಹಿತಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ಇಂತಿಷ್ಟೆ ಪ್ರಶ್ನೆಗಳನ್ನು ಕೇಳಬೇಕು, ಇಂತಿಂಥ ಪ್ರಶ್ನೆಗಳನ್ನು ಕೇಳಬೇಕು, ಇಂತಿಷ್ಟು ಸಂಖ್ಯೆಗೆ ಮಿಕ್ಕಿರಬಾರದು ಎಂದು ಮುಂತಾದ ನಿರ್ಬಂಧವನ್ನು ಹಾಕಹೋದರೆ ಮೆಂಬರರಿಗೆ ಪ್ರಶ್ನೆ ಕೇಳುವ ಹಕ್ಕಾದರೂ ಯಾಕೆ? ಒಂದು ಕಡೆಯಿಂದ ಹಕ್ಕು ಕೊಟ್ಟಂತೆ ಮಾಡುವದು, ಇನ್ನೊಂದು ಕಡೆಯಿಂದ ಬಾಯಿಗೆ ಬೀಗ ಹಾಕುವದು, ಇದು ಯಾವ ನ್ಯಾಯವು? ಸಾರಾಂಶ, ಪ್ರಶ್ನೆಗಳ ಸಂಖ್ಯೆಯನ್ನು ಮರ್ಯಾದಿಸಲು ಅಧ್ಯಕ್ಷರು ಕೊಟ್ಟ ವಸ್ತುಪಾಠವು ಶ್ಲಾಘ್ಯವೆ ಅಲ್ಲ, ಸಭಾಸದರಿಗೆ ಇರುವ ಹಕ್ಕಿನ ದೃಷ್ಟಿಯಿಂದ ತ್ಯಾಜ್ಯವಾಗಿದೆ.

ಇದರಂತೆಯೆ ಉದ್ವೇಗಕರವಾದ ಇನ್ನೊಂದು ಸಂಗತಿಯು ಕೂಡ ಸಂಭವಿಸಿದೆ. ಮಿ. ಸಿ. ವಿ. ವೆಂಕಟರಮಣ ಅಯ್ಯಂಗಾರರು—ಪಾರ್ಲಿಮೆಂಟಿನಲ್ಲಿ ಬರ್ಕನ್‌ಹೆಡ್ಡರು ಮಾಡಿರುವ ಭಾಷಣದಿಂದ ಉಂಟಾಗಿರುವ ಪರಿಸ್ಥಿತಿಯನ್ನು ಚರ್ಚಿಸುವದಕ್ಕಾಗಿ ಇತರ ವಿಷಯಗಳನ್ನು ಬದಿಗಿಡಬೇಕೆಂಬುದಾಗಿ ಒಂದು ಠರಾವನ್ನು ತಂದರು. ಪರಂತು ಇವರ ಠರಾವಿಗೆ ಗವರ್ನರರು ಅನುಮತಿಯನ್ನು ಕೊಡಲಿಲ್ಲ. ಸರಕಾರವು ಬರ್ಕನ್‌ಹೆಡ್ಡರ ಪ್ರಶ್ನೆಯನ್ನು ಬದಿಗೆ ತಳ್ಳಿ ಯಾವ ಇಷ್ಟಾರ್ಥವನ್ನು ಸಾಧಿಸಿತೆಂಬುದು ಗೊತ್ತಾಗದು. ಬರ್ಕನ್‌ಹೆಡ್ಡರ ವಿಷಯವು ಸ್ಥಳಿಕ ಸರಕಾರಕ್ಕೆ ಸಂಬಂಧಪಟ್ಟದ್ದಲ್ಲ ಎಂಬ ನೆವವನ್ನು ಗವರ್ನರರು ತೋರಿಸಿದ್ದಾರಾದರೂ, ಬರ್ಕನ್‌ಹೆಡ್ಡರು ಮದ್ರಾಸಿನಲ್ಲಿ ದ್ವಿದಲ ಪದ್ಧತಿಯು ಯಶಸ್ವಿಯಾಗಿದೆ ಎಂಬುದಾಗಿ ಮದ್ರಾಸಿನ ಸಂಬಂಧವನ್ನು ತನ್ನ ಭಾಷಣದಲ್ಲಿ ತಂದಿರುವವರಾದ್ದರಿಂದ ಸಂಬಂಧವಿಲ್ಲದ ಸಂಗತಿಯೆಂದು ಹೇಗೆ ಹೇಳಬಹುದು? ಈ ಚರ್ಚೆಯು ಕೌನ್ಸಿಲಿನಲ್ಲಿ ನಡೆದುದ್ದಾದರೆ ಮದ್ರಾಸ ಸಂಸ್ಥಾನದಲ್ಲಿ ದ್ವಿದಲ ಪದ್ಧತಿಯು ನಿಜವಾಗಿಯೂ ಯಶಸ್ವಿಯಾಗಿದೆಯೊ ಇನ್ನಷ್ಟು ಹಾನಿಯನ್ನುಂಟು ಮಾಡಿದೆಯೊ, ಈ ಸಂಗತಿಯು ಹೊರಗೆ ಬರುತ್ತಿತ್ತು. ಜಾತಿಭೇದಗಳ ವೈಷಮ್ಯದ ಲಾಭವನ್ನು ಪಡೆದು ಮದ್ರಾಸಿನ ನೋಕರಶಾಹಿಯು ತನ್ನ ಹೋಳಿಗೆಯ ಮೇಲೆ ಯಾವಯಾವ ರೀತಿಯಲ್ಲಿ ತುಪ್ಪವನ್ನು ಬಡಿಸಿಕೊಳ್ಳುತ್ತಿದೆ ಎಂಬುದು ಬಹಿರಂಗವಾಗುತ್ತಿತ್ತು. ಇಂಥ ಸಂಗತಿಗಳು ಹೊರಬಂದಲ್ಲಿ ಬರ್ಕನ್‌ಹೆಡ್ಡರ ವಿಧಾನದ ಹೆಡ್ಡತನವು ಲೋಕಕ್ಕೆಲ್ಲ ವ್ಯಕ್ತವಾಗುತ್ತಿತ್ತು. ಈ ಕಾರಣದಿಂದ ಭಾರತಮಂತ್ರಿಗಳಿಗೆ ಲಾಂಛನವು ತಟ್ಟೀತೆಂದು ನೆನಸಿ ಮದ್ರಾಸ ಸರಕಾರವು ಈ ಚರ್ಚೆಗೆ ಅವಸರವನ್ನು ಕೊಡಲಿಲ್ಲವಾಗಿರಬಹುದು. ಸರಕಾರದ ಅಸಮಾಧಾನಕರವಾದ ಈ ವರ್ತನವನ್ನು ನೋಡಿ ಕೌನ್ಸಿಲಿನೊಳಗಿನ ಸಂಯುಕ್ತ ರಾಷ್ಟ್ರೀಯ ಪಕ್ಷದವರು ಸಭೆ ಸೇರಿಸಿ ಸರಕಾರವು ತಾನಿಟ್ಟುಕೊಂಡ ಖಾತೆಗಳಿಗೆ ಹಣವನ್ನು ಕೇಳುವ ಮೊದಲನೆಯ ಠರಾವನ್ನೆ ವಿರೋಧಿಸಬೇಕೆಂದು ನಿಶ್ಚಯಿಸಿರುವರು.

ಮದ್ರಾಸ್ ಕೌನ್ಸಿಲು, ನಾವು ಮೇಲೆ ಹೇಳಿದಂತೆ ವಿವಿಧ ಹೇತುಗಳುಳ್ಳವರ ತಂಡದವರಿಂದ ತುಂಬಿಹೋದ ಕಾರಣ ಮಧ್ಯ ಪ್ರಾಂತದಲ್ಲಿಯಂತೆಯಾಗಲಿ, ಬಂಗಾಲದಲ್ಲಿಯಂತೆಯಾಗಲಿ, ಲೋಕಮತದ ವಿಜಯವು ಅಲ್ಲಿ ಉಂಟಾಗುವುದಿಲ್ಲ, ಈ ಸಂಗತಿಯು ನಿಜ. ಆದರೆ ಅಲ್ಪಸ್ವಲ್ಪ ಸಂಖ್ಯೆಯವರಾದ ಸ್ವರಾಜ್ಯ ಪಕ್ಷದವರ ಅಥವಾ ರಾಷ್ಟ್ರೀಯ ಪಕ್ಷಾನುಯಾಯಿಗಳ ತೀವ್ರತೆಯನ್ನು ಸಹ ಈ ಕೌನ್ಸಿಲಿಗೆ ಸಹಿಸಲಾಗುವುದಿಲ್ಲ. ಎಂದಮೇಲೆ ಸರಕಾರವು ತನ್ನ ಸ್ವಾರ್ಥಸಂರಕ್ಷಣಕ್ಕೆ ಎಷ್ಟರಮಟ್ಟಿಗೆ ಯತ್ನಿಸುತ್ತಿದೆ ಎಂಬುದು ಸ್ಪಷ್ಟವಾಗುತ್ತದೆ. ಪ್ರಶ್ನೆಗಳನ್ನು ಕೇಳಹೊರಟರೆ ಅಲ್ಲಿ ನಿರ್ಬಂಧ, ಠರಾವುಗಳನ್ನು ತರಲು ಬಂದರೆ, ಅದಕ್ಕೆ ತಡೆ, ಬೀಲುಗಳನ್ನು ಮುಂದಿಡಲು ಉದ್ಯುಕ್ತರಾದರೆ ಅದಕ್ಕೂ ವಿಘ್ನ. ಈ ರೀತಿಯಿಂದ ಲೋಕೋಪಕಾರದ ಯಾವ ಕೃತ್ಯಕ್ಕೂ ಆಸ್ಪದವನ್ನು ಕೊಡಕೂಡದೆಂದು ಅಧಿಕಾರಿಗಳು ಕೃತನಿಶ್ಚಯರಾಗಿರುವದಾದರೆ ಇಂಥ ಕೌನ್ಸಿಲುಗಳ ಬಾಗಿಲು ಮುಚ್ಚಿಸುವದೆ ಒಳ್ಳೆಯದು. ಗವರ್ನರ ಜನರಲ್, ಭಾರತ ಮಂತ್ರಿಗಳಂಥ ಮಹಾ ಅಧಿಕಾರಿಗಳು ಜನತೆಯ ಸಹಕಾರವನ್ನು ಅಪೇಕ್ಷಿಸುವಾಗ ತಾವು ಆ ಜನತೆಯ ಇಷ್ಟಾರ್ಥವನ್ನು ಪೂರಯಿಸಬೇಕೆಂಬೀ ಸರಳವಾದ ಮಾತನ್ನು ಕೂಡ ತಿಳಿದಿರಬಾರದೆ? ಆಗ ಸಹಜವಾಗಿ ಜನಗಳಿಗೆ ಉಪರೋಧ ಮತು ಅಸಹಕಾರ ಇವುಗಳನ್ನು ಅವಲಂಬಿಸಬೇಕಾಗುತ್ತದೆ. ಮದ್ರಾಸಿನ ಈ ದೃಷ್ಟಾಂತದಿಂದಾಗಲಿ, ಮುಂಬಯಿಯಲ್ಲಿ ನಡೆದಿರುವ ಇನ್ನೊಂದು ದೃಷ್ಟಾಂತದಿಂದಾಗಲಿ ಜನಗಳನ್ನು ಸರಕಾರದ ಅನುದಾರತೆಯು ಉಗ್ರಮಾರ್ಗದಲ್ಲಿ ತೊಡಗಿಸುತ್ತದೆ ಎಂಬುದು ಸ್ಪಷ್ಟವಾಗಿ ಗೋಚರವಾಗುತ್ತದೆ. ಆದ್ದರಿಂದ ಜನಗಳು ಅಂಥವರು, ಇಂಥವರು ಎಂಬುದಾಗಿ ಅವರನ್ನು ಶಪಿಸುವ ವೃಥಾ ಆಯಾಸವನ್ನು ಯಾರೂ ಪಡಬೇಕಾದ ಅಗತ್ಯವಿಲ್ಲ. ಈ ಮೊದಲು ಇಂಥ ಅನೇಕ ಉದಾಹರಣೆಗಳು ಸಂಭವಿಸಿವೆ, ಆದರೂ ಈ ಒಂದೆ ವಾರದಲ್ಲಿ ಪಶ್ಚಿಮ ಸಮುದ್ರ ತೀರದಲ್ಲಿ, ಮುಂಬಯಿಯಲ್ಲಿ ಮತ್ತು ಪೂರ್ವ ಸಮುದ್ರ ತೀರದಲ್ಲಿ ಮದ್ರಾಸಿನಲ್ಲಿ ಸರಕಾರಿ ಅಧಿಕಾರಿಗಳ ದುರಾಗ್ರಹದ ಮತ್ತು ಸ್ವಾರ್ಥಪರತೆಯ ದುರ್ದೇವತೆಯು ಬೇರೆಬೇರೆ ವೇಷಗಳನ್ನು ಕಟ್ಟಿಕೊಂಡು ಕೌನ್ಸಿಲಿನ ರಂಗಸ್ಥಳದಲ್ಲಿ ಕುಣಿದಿದೆ. ಆದ್ದರಿಂದ ಎರಡೂ ಕಡೆಗಳಲ್ಲಿ ರಾಷ್ಟ್ರೀಯ ಪಕ್ಷದ ಮತ್ತು ಸ್ವರಾಜ್ಯ ಪಕ್ಷದ ಜನಗಳಿಗೆ ಉಪರೋಧದ ಕಾರ್ಯಕ್ರಮವನ್ನು ಅನಿಚ್ಛೆಯಿಂದ ಕೈಕೊಳ್ಳಬೇಕಾಗಿದೆ.

ಸ್ಫುಟವಿಚಾರಗಳು.

೧. ಮುಂಬಯಿಯ ಕಾಯಿದೆ ಕೌನ್ಸಿಲಿನಲ್ಲಿ ಬ್ರಾಹ್ಮಣ ಬ್ರಾಹ್ಮಣೇತರರ ವಾದವು ಶಿಖರಕ್ಕೇರಿ ಕೊನೆಗೆ ಸ್ವರಾಜ್ಯಪಕ್ಷದವರಿಗೆ ಕೌನ್ಸಿಲಿನ ಮುಂದಿನ ಕಾರ್ಯಗಳಲ್ಲಿ ಯಾವ ತರದ ಭಾಗವನ್ನೂ ಎತ್ತದೆ ಸುಮ್ಮಗಿರುವ ಪ್ರಸಂಗವು ಬಂದೊದಗಿದೆ. ಮುಂಬಯಿ ಕೌನ್ಸಿಲಿನಲ್ಲಿ ಸ್ವರಾಜ್ಯಪಕ್ಷದವರ ಬಹುಮತವಿಲ್ಲ. ಇದರ ಪ್ರಯೋಜನವನ್ನು ಸರಕಾರವು ಪಡಕೊಳ್ಳುತ್ತಿದೆ. ಬ್ರಾಹ್ಮಣೇತರ ಪಕ್ಷ, ಸಿಂಧದೇಶದೊಳಗಿನ ಮಹಮ್ಮದೀಯರು, ಬಿನ್ ಸರಕಾರಿ ಯುರೋಪಿಯನ್ ಸಭಾಸದರು ಮತ್ತು ಇವರೊಟ್ಟಿಗೆ ಹಲವು ಸ್ವತಂತ್ರರು, ಇವರೆಲ್ಲರೂ ಒಟ್ಟಿಗೆ ಸೇರುವಾಗ ಸ್ವರಾಜ್ಯಪಕ್ಷವನ್ನು ಎದುರಿಸಲು ಸರಕಾರಕ್ಕೆ ಸಾಕಷ್ಟು ಸಹಾಯವು ಸಿಕ್ಕುತ್ತದೆ. ಎಂದರೆ ಸರಕಾರವು ಈ ವಿವಿಧ ಬಗೆಯ ಸಭಾಸದರನ್ನು ಎಬ್ಬಿಸಿ ಸ್ವಕಾರ್ಯವನ್ನು ಸಾಧಿಸಿಕೊಳ್ಳುತ್ತದೆ. ಇದು ಮುಖ್ಯವಾದ ತತ್ವವು. ಈ ತತ್ವವನ್ನು ಸ್ವರಾಜಿಸ್ಟರು ಮುಂಚಿನಿಂದಲೆ ಅರಿತವರಾಗಿದ್ದರು. ಆದ್ದರಿಂದ ಅವರು ಆದಷ್ಟು ಬಗ್ಗಿ, ಕೆಲವು ಸಂದರ್ಭದಲ್ಲಿ ಸ್ವಪಕ್ಷದ ತತ್ವಗಳನ್ನು ಕೂಡ ಕೊಂಚಮಟ್ಟಿಗೆ ಬದಿಗಿಟ್ಟು ಬ್ರಾಹ್ಮಣೇತರರಿಗೆ, ಸಿಂಧಿ ಸಭಾಸದರಿಗೆ ಸಹಾಯವನ್ನು ಮಾಡಿದ್ದರು. ತನಗೆ ಬೇಕಾದ ಸಂದರ್ಭದಲ್ಲಿ ಸರಕಾರವು ಬ್ರಾಹ್ಮಣೇತರ, ಶಾಂತಪಕ್ಷ ಇತ್ಯಾದಿ ತಂಡದ ಸೀಳುಗಳನ್ನು ಜರಾರಾಕ್ಷಸಿಯಂತೆ ಒಟ್ಟಿಗೆ ಸೇರಿಸಿ ಜರಾಸಂಧನನ್ನು ತಯಾರಿಸುತ್ತದಾದರೂ, ತನಗೆ ಬೇಡವಾದದ ವೇಳೆಯಲ್ಲಿ, ತನ್ನ ಸ್ವಾರ್ಥಕ್ಕೆ ಭಂಗವು ತಟ್ಟುವ ಸಂದರ್ಭದಲ್ಲಿ ಅದೇ ಸರಕಾರವು ಭೀಮನ ಆವೇಶವನ್ನು ತಂದು ಅದೇ ಜರಾಸಂಧನನ್ನು ಸೀಳಿಬಿಡುತ್ತದೆ! ಯಾವ ಸರಕಾರವು ಬ್ರಾಹ್ಮಣೇತರರನ್ನು ಕೈಯೆತ್ತಿ ಸ್ವರಾಜಿಸ್ಟರನ್ನು ಮುರಿಯುತ್ತಿತ್ತೊ ಅದೇ ಸರಕಾರವು ಅದೆ ಬ್ರಾಹ್ಮಣೇತರ ಪಕ್ಷದ ಠರಾವುಗಳನ್ನು ಮುರಿದು ಹಾಕಲು ಹೊರಡುವದು. ಇಂಥ ಅನೇಕ ಪ್ರಸಂಗಗಳಲ್ಲಿ ಸ್ವರಾಜ್ಯಪಕ್ಷದವರು ತಮ್ಮ ಮತಗಳನ್ನು ಬ್ರಾಹ್ಮಣೇತರ ಪಕ್ಷಕ್ಕೆ ಕೊಟ್ಟು ಅವರ ಹಿತವನ್ನು ಸಾಧಿಸಿರುವರು. ಮುಂಬಯಿಯ ಕೌನ್ಸಿಲಿನಲ್ಲಿ ಈ ತರದ ಅನೇಕ ಉದಾಹರಣೆಗಳು ಸಂಭವಿಸಿವೆ. ಸ್ವರಾಜ್ಯಪಕ್ಷದ ಈ ಸೌಜನ್ಯವನ್ನೂ, ನಿರಪೇಕ್ಷತೆಯನ್ನೂ, ಆ ಬ್ರಾಹ್ಮಣೇತರ ಪಕ್ಷವು ಮನಸ್ಸಿಗೆ ತಂದುಕೊಳ್ಳಬೇಕಿತ್ತು. ಆದರೆ ದುರದೃಷ್ಟದ ಮಾತೇನಂದರೆ, ಬ್ರಾಹ್ಮಣೇತರ ಪಕ್ಷದ ದೃಷ್ಟಿಯೂ ವ್ಯಾಪಕವಾಗಿಲ್ಲ, ಅಂತಃಕರಣವೂ ನಿರ್ಮಲವಾಗಿಲ್ಲ. ಈ ಕಾರಣದಿಂದ ಅವರು ಸರಕಾರಿ ಅಧಿಕಾರಿಗಳ ಕುಟಿಲ ನೀತಿಗೆ ಬಲಿಬಿದ್ದು ಅವರ ಕೈಯೊಳಗಿನ ಸೂತ್ರಗೊಂಬೆಗಳಾಗಿ ಅವರು ಆಡಿಸಿದ್ದಂತೆ ಕುಣಿಯುತ್ತಿದ್ದಾರೆ! ಮುಂಬಯಿ ಕೌನ್ಸಿಲಿನಲ್ಲಿ ಸ್ವರಾಜ್ಯಪಕ್ಷದವರು ಲೋಕಹಿತಪರವಾದ ಯಾವ ಬೀಲುಗಳನ್ನು ತರಲು ಯೋಜಿಸಿದ್ದರೊ ಅವುಗಳಿಗೆ ಅನುಮತಿಯೆ ಸಿಕ್ಕಲೊಲ್ಲದು. ಸ್ಥೈರ್ಯದಿಂದ ಅವರು ಎಷ್ಟೊ ತಿಂಗಳ ವರೆಗೆ ನಿರೀಕ್ಷಿಸಿದರು. ಆದರೆ ಮೇಲೆ ಉಲ್ಲೇಖಿಸಿದಂತೆ ಸಿಂಧಿ ಮಹಮ್ಮದೀಯ ಸಭಾಸದರೂ, ಬ್ರಾಹ್ಮಣೇತರರೂ, ಸರಕಾರದ ಕಕ್ಷಪುಟದಲ್ಲಿ ನಿವಿಷ್ಟರಾದ ಕಾರಣ ಸರಕಾರಕ್ಕೆ ಇವರ ಬಲದಿಂದ ಸ್ವರಾಜ್ಯಪಕ್ಷದವರನ್ನು ತಿರಸ್ಕರಿಸಲು ಅವಕಾಶವು ದೊರಕಿತು. ಸರಕಾರಕ್ಕೆ ಈ ರೀತಿಯಿಂದ ಅವಕಾಶವು ದೊರಕಿದ ಕಾರಣ ಅದು ಸ್ವರಾಜ್ಯಪಕ್ಷದವರ ಬೀಲುಗಳಿಗೆ ಎಡೆಯನ್ನು ಕೊಡಲಿಲ್ಲ. ಎಂದ ಮೇಲೆ ಬ್ರಾಹ್ಮಣೇತರ ಪಕ್ಷ ಮತ್ತು ಸಿಂಧಿಮಹಮ್ಮದೀಯ ಪಕ್ಷ ಇವುಗಳೆ ಹೇಗೆ ಈ ತರದ ವಿಘ್ನಕ್ಕೆ ಆಸ್ಪದವನ್ನು ಕೊಟ್ಟಿವೆ ಎಂಬುದು ಸ್ಪಷ್ಟವಾಗುತ್ತದೆ. ಆದ್ದರಿಂದ ಈ ಪಾಪವು ಹೇಗೆ ಸರಕಾರದ ಸೆರಗಿನಲ್ಲಿ ಬೀಳುವುದೊ ಹಾಗೆಯೆ ಬ್ರಾಹ್ಮಣೇತರ ಮತ್ತು ಸಿಂಧಿ ಮಹಮ್ಮದೀಯರ ಸೆರಗಿನಲ್ಲಿಯೂ ಬೀಳುವುದು.

೨. ಆದರೂ ಬ್ರಾಹ್ಮಣೇತರ ಪಕ್ಷದವರು ಒಂದು ಪ್ರಕಟನೆಯನ್ನು ಬಹಿರಂಗಪಡಿಸಿ ಅದರಲ್ಲಿ ಆತ್ಮ ಸಮರ್ಥನವನ್ನು ಮಾಡಲು ಯತ್ನಿಸಿದ್ದಾರೆ. ಆತ್ಮ ಸಮರ್ಥನ ಮಾಡುವ ಈ ಪ್ರಕಟನೆಯಲ್ಲಿ ತಮ್ಮ ಕೃತ್ಯವನ್ನು ಸಮರ್ಥಿಸುವಂತೆ ಸರಿಯಾದ ಕಾರಣಗಳಿರಬೇಕಿತ್ತು. ಅದರ ಬದಲಿಗೆ ಸ್ವರಾಜ್ಯ ಪಕ್ಷದವರನ್ನು ಯಥೇಚ್ಛವಾಗಿ ಬೈದು ನಿಃಸ್ವಾರ್ಥವೂ ದೇಶಹಿತಕರವೂ ಆದ ಅದರ ಕಾರ್ಯಕ್ರಮದ ಸ್ವಚ್ಛವಾದ ಬಟ್ಟೆಯ ಮೇಲೆ ಕೆಡಕು ಹೇತುಗಳ ಕೆಸರನ್ನೆರಚುವ ನಿಂದ್ಯವಾದ ಪ್ರಯತ್ನವನ್ನು ಮಾಡಿದ್ದಾರೆ. ಅವರ ಬೀಲುಗಳಿಗೆ ಸರಕಾರವು ಅವಕಾಶವನ್ನು ಕೊಡದ ಬಳಿಕ ಅವರು ಕೌನ್ಸಿಲಿನಲ್ಲಿ ನಿಂತು ಅಲ್ಲಿಯ ಕಾರ್ಯಗಳನ್ನು ಬಹಿಷ್ಕರಿಸಲು ನಿಶ್ಚಯಿಸಿದ್ದಾದರೆ ಅದರಲ್ಲಿ ತಪ್ಪೇನು? 'ಚುನಾವಣೆಗೆ ನಿಲ್ಲುವಾಗ ದೇಶಹಿತದ ಮತ್ತು ನಿಃಸ್ವಾರ್ಥತೆಯ ಉದಾತ್ತ ಹೇತುಗಳನ್ನು ತೋರಿಸಿ ಮತದಾರರನ್ನು ಮಂಕುಗೊಳಿಸಿ ಇವರು ಚುನಾಯಿಸಿ ಬಂದಿದ್ದಾರೆ' ಎಂಬುದಾಗಿ ಬ್ರಾಹ್ಮಣೇತರ ಪಕ್ಷದ ಈ ಮಹನೀಯರು ತಮ್ಮ ಪ್ರಕಟನೆಯಲ್ಲಿ ಬರೆದಿರುತ್ತಾರೆ. ಅವರ ಈ ಮಾತು ವಸ್ತುಸ್ಥಿತಿಗೆ ಎಷ್ಟರಮಟ್ಟಿಗೆ ವಿರುದ್ಧವಾಗಿದೆ ಎಂಬುದು ಲೋಕವಿದಿತವಾದ ಸಂಗತಿಯಾದ್ದರಿಂದ ಅದನ್ನು ಉತ್ತರಿಸುವ ಅಗತ್ಯವಿಲ್ಲ. ಸ್ವರಾಜ್ಯಪಕ್ಷವು ಅಲ್ಪ ಸಂಖ್ಯಾಕವಾಗಿರಲಿ, ಬಹು ಸಂಖ್ಯಾಕವಾಗಿರಲಿ, ಇದುವರೆಗೆ ಎಲ್ಲಿಯೂ ಸರಕಾರದ ಅನುಗ್ರಹವನ್ನು ಯಾವ ವಿಧದಿಂದಲೂ ಇಚ್ಛಿಸಲಿಲ್ಲ. ಮಾತ್ರವಲ್ಲ, ಇಚ್ಛಿಸಲೂ ಉದ್ಯುಕ್ತವೂ ಆಗಿಲ್ಲ. ಮಂತ್ರಿತ್ವವನ್ನು ಸ್ವೀಕರಿಸಿರಿ ಎಂದು ಸರಕಾರವು ತಿರುತಿರುಗಿ ವಿನಂತಿಮಾಡಿಕೊಂಡಲ್ಲೂ ಅದನ್ನು ಅವರು ಅಂಗೀಕರಿಸಲಿಲ್ಲ. ಹೀಗಿರುತ್ತ ಇವರ ಮೇಲೆ ವಿಸಂಗತ ವರ್ತನದ ಮತ್ತು ಸ್ವಾರ್ಥಪರತೆಯ ಆರೋಪಣೆಯನ್ನು ಮಾಡಿ ತಮ್ಮ ಒಳ್ಳೆತನವನ್ನು ತೋರಿಸುವದು ಶುದ್ಧ ಮೂಢತೆಯ ಲಕ್ಷಣವಾಗಿದೆ. ತನ್ನ ಪಾತಿವ್ರತ್ಯದ ಜಾಹಿರಾತನ್ನು ಹಚ್ಚಬೇಕಾದರೆ ನೆರೆಯವಳ ಮೇಲೆ ವೃಥಾ ಆರೋಪಣೆಯನ್ನು ಹೊರಿಸಬೇಕೆ? ಸಾರಾಂಶ, ಮುಂಬಯಿಯ ಬ್ರಾಹ್ಮಣೇತರರು ಸರಕಾರಿ ಅಧಿಕಾರಿಗಳ ವಶವರ್ತಿಗಳಾಗಿ ನಿಜವಾದ ಲೋಕಹಿತವನ್ನು ಕೆಡಿಸುತ್ತಿದ್ದಾರೆ! ಸರಕಾರವಾದರೂ ಇವರ ಹಿತವನ್ನು ಸಾಧಿಸುವದೆ? ಅದಾದರೂ ಕಹಿಬೇವಿನಂತೆ "ಸರ್ವಸ್ಯ ಕಟುರೇವ ಸಃ" ಎಂದು ಹೇಳಿದ ಹಾಗೆ ಎಲ್ಲರಿಗೂ ಕಹಿ! ಈ ಮರ್ಮವನ್ನು ತಿಳಿದು ಬ್ರಾಹ್ಮಣೇತರರು ಸ್ವರಾಜಿಸ್ಟರೊಡನೆ ಐಕಮತ್ಯದಿಂದ ಕೈಯಲ್ಲಿ ಕೈ ಹಾಕಿಕೊಂಡು ವರ್ತಿಸಬೇಕಿತ್ತು. ಅದರ ಬದಲಿಗೆ ಅವರು ಸ್ವರಾಜಿಸ್ಟರನ್ನು ಹಲವು ವಿಧಗಳಿಂದ ದೂಷಿಸಿ, ಬೈದು, ಕೊನೆಗೆ "ನೀವು ರಾಜಿನಾಮೆಯನ್ನು ಕೊಡಬೇಕು, ಅಗತ್ಯವಿದ್ದರೆ ಪುನಃ ಚುನಾವಣೆಗೆ ನಿಲ್ಲಬೇಕು" ಎಂಬುದಾಗಿ ಹೇಳುತ್ತಿದ್ದಾರೆ! ಮುಂಬಯಿಯಲ್ಲಿಯ ಈ ಪ್ರಕಟನದ ವಿಷಯವೆ ಎಂದಲ್ಲ. ಈ ಹಿಂದುಸ್ಥಾನದೊಳಗಿನ ಎಲ್ಲ ಬಗೆಯ ಒಡಕುಗಳ ವಿಷಯವು ಶೋಚನೀಯವಾಗಿದೆ. ಇಂಥ ಒಡಕುಗಳು ಸರಕಾರದ ಆಸನವನ್ನು ಇನ್ನಷ್ಟು ಗಟ್ಟಿಮಾಡಿ ಸ್ವರಾಜ್ಯವನ್ನು ದೂರಕ್ಕೆ ತೊಲಗುತ್ತವೆ.

೩. ಹಿಂದುಸ್ಥಾನದೊಳಗಿನ ಎಲ್ಲ ರಾಜಕೀಯ ಪಕ್ಷಗಳು ಒಟ್ಟಿಗೆ ಸೇರಿದ್ದಲ್ಲಿ ಮತ್ತೂ ಅದು ಕೂಡ ಕೊಂಗ್ರೆಸಿನ ಛತ್ರದ ಕೆಳಗೆ ಒಟ್ಟಿಗೆ ಸೇರಿದಲ್ಲಿ ಸ್ವರಾಜ್ಯ ಚಳವಳವು ಹೆಚ್ಚು ಕಾರ್ಯಸಾಧಕವಾದೀತೆಂದು ಎಲ್ಲರೂ ಅವರವರಷ್ಟಕ್ಕೆ ಹೇಳುತ್ತಿದ್ದರಾದರೂ ಈ ದಿಕ್ಕಿನಿಂದ ಉಪಕ್ರಮವಾದದ್ದು ಇನ್ನೂ ಕಂಡುಬರುವುದಿಲ್ಲ. ಸ್ವರಾಜ್ಯಪಕ್ಷದವರು, ಗಾಂಧಿಜಿಗಳು, ಜೀನಾ ಸಾಹೇಬರಂಥ ಸ್ವತಂತ್ರರು ಇದುವರೆಗೆ ಐಕ್ಯದ ಇಚ್ಛೆಯನ್ನು ಸೂಚಿಸಿ ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಗೊಳಿಸಿದ್ದಾರೆ. ಶಾಂತಪಕ್ಷದವರು ಈಗ ಪ್ರಾಗತಿಕರೆಂಬ ಹೆಸರನ್ನು ಧರಿಸಿರುವರು. ಈ ಪ್ರಾಗತಿಕರು ಐಕ್ಯದ ವಿಷಯದಲ್ಲಿ ಯಾವ ಅಭಿಪ್ರಾಯವನ್ನು ಪಡುತ್ತಿದ್ದಾರೆಂಬುದು ಇನ್ನೂ ಗೊತ್ತಾಗಿರಲಿಲ್ಲ. ಆದರೆ ಈ ಪಕ್ಷದ ಪ್ರಮುಖ ಗೃಹಸ್ಥರಲ್ಲಿ ಒಬ್ಬರಾದ ಸರ್ ತೇಜಬಹದ್ದೂರು ಸಪ್ರುಗಳು ತಮ್ಮ ವಿಚಾರಗಳನ್ನು ಹೊರಚಲ್ಲಿರುವರು. "ಪ್ರಾಗತಿಕ ಪಕ್ಷದ ಯಾವ ಮತಗಳಿರುವವೊ ಅವುಗಳಿಗೆ ತೊಡಕುಂಟಾಗದಂತೆ ಇತರ ಪಕ್ಷಗಳೊಡನೆ ಐಕ್ಯವನ್ನು ಸಾಧಿಸಿಕೊಳ್ಳಲು ಪ್ರಾಗತಿಕರಿಗೆ ಅಡ್ಡಿ ಇಲ್ಲ"ವೆಂದು ಸರ್ ಸಪ್ರುಗಳು ಹೇಳುತ್ತಿದ್ದಾರೆ. ಆದರೆ ಪ್ರಾಗತಿಕರ ತತ್ವಗಳೆಂದರೆ ಅವು ದೇಶದ ಈಗಿನ ಯುಗದ ಹವಾಮಾನಕ್ಕೆ ಎಷ್ಟರಮಟ್ಟಿಗೆ ಒಗ್ಗುತ್ತವೆ ಎಂಬುದನ್ನು ಯಾರು ಹೇಳಲಾಗುವುದಿಲ್ಲ. ಅಶೋಕನ ಕಾಲದ ಅವರ ರಾಜಕಾರವು ಮುಂದುವರಿದ ಈಗಿನ ಹಿಂದಿರಾಷ್ಟ್ರಕ್ಕೆ ಒಪ್ಪುವುದಿಲ್ಲವೆಂದು ಊಹಿಸಬಹುದಾಗುತ್ತದೆ. ಈ ಊಹನೆಯು ಕೇವಲ ನಿರಾಧಾರವಲ್ಲ. ಯಾಕೆಂದರೆ, ಕನ್‌ವೆನ್ಶನ್, 'ಫೆಡರೇಶನ್' ಇತ್ಯಾದಿ ದೊಡ್ಡ ದೊಡ್ಡ ಹೆಸರುಗಳಿಂದ ಸೇರುವ ಇವರ ಕೂಟಗಳು ಎಷ್ಟು ಸಣ್ಣವಾಗಿರುತ್ತವೆಂಬುದು ಲೋಕಕ್ಕೆ ಗೊತ್ತಿಲ್ಲವೆ? ಲೋಕಮತದ ಆಶ್ರಯವೆ ಇಲ್ಲದ ಮೇಲೆ ಇವರ ಮತಕ್ಕೆ ಅನುಯಾಯಿಗಳೆಲ್ಲಿಂದ? ಸಾರಾಂಶ, ಪ್ರಾಗತಿಕ ಪಕ್ಷವು ಪರಾಗತವಾಗಿದೆ! ಈ ಸಂಗತಿಯು ಸರ್ ಸಾಹೇಬರಿಗೂ ಕೂಡ ತಿಳಿದುಬಂದಿದೆ ಎಂದು ತೋರುತ್ತದೆ. ಕಾರಣ, ಪ್ರಾಗತಿಕ ಪಕ್ಷದ ಈ ವೈಕಲ್ಯವು ಲಕ್ಷ್ಯಕ್ಕೆ ಬಂದಿರುವದರಿಂದಲೆ ಸರ್ ಸಾಹೇಬರು ಆ ಪಕ್ಷದಲ್ಲಿ ಜೀವವನ್ನು ಹುಟ್ಟಿಸುವಂತೆ ಹಲವು ಏರ್ಪಾಡುಗಳನ್ನು ಮಾಡುವವರಿದ್ದೇವೆಂದು ನುಡಿದಿರುವರು. ಆದರೆ ಅದರಲ್ಲಿ ಎಷ್ಟೆ ಜೀವಕಲೆಯನ್ನು ತುಂಬಿದರೂ 'ಭಿಕ್ಷಾಂದೇಹಿ'ಯ ಕಾರ್ಯಕ್ರಮವನ್ನು ಅವರು ಯಾವ ವರೆಗೆ ಕಟ್ಟಿಕೊಂಡಿರುವರೊ ಅದು ವರೆಗೆ ಅವರ ಪಕ್ಷವು ಸಾಮಾನ್ಯ ಜನತೆಯಿಂದ ಪುಷ್ಟೀಕರಿಸಲ್ಪಡಲಿಕ್ಕಿಲ್ಲ. ಇದು ವಸ್ತುಸ್ಥಿತಿಯು. ಅದು ಹೇಗೂ ಇರಲಿ, ಸರ್ ತೇಜಬಹಾದರ ಸಪ್ರುಗಳು ಐಕ್ಯದ ವಿಷಯದಲ್ಲಿ ಪ್ರಾಗತಿಕ ಪಕ್ಷದ ಪರವಾಗಿ ಅದರ ಹೃದ್ಗತವನ್ನು ಬಿಚ್ಚಿ ತೋರಿಸಿದರು, ಮತ್ತು ಐಕ್ಯ ಇಚ್ಛಿಸಿದರು ಇದು ತುಂಬಾ ಶ್ಲಾಘ್ಯವೆ ಸರಿ. ಆದರೆ ಇದೇ ಸಂದರ್ಭದಲ್ಲಿ "ಸ್ವರಾಜ್ಯಪಕ್ಷವು ಬರ್ಕನ್‌ಹೆಡ್ಡರ ಭಾಷಣವನ್ನು ಅತಿ ಉಗ್ರವಾಗಿ ನಿಷೇಧಿಸೀತಾದರೂ ಉಪಯುಕ್ತವಾದ ಯಾವ ಕಾರ್ಯವನ್ನೂ ಮಾಡಲಿಕ್ಕಿಲ್ಲವೆಂದು ಯಾವ ಒಂದು ಮಾತನ್ನು ಹೇಳಿರುವರೊ ಅದನ್ನು ಅವರು ಹೇಳದೆ ಇದ್ದರೂ ಬಾಧಕವಿರಲಿಲ್ಲ. ಸ್ವರಾಜ್ಯಪಕ್ಷದವರು ಕೌನ್ಸಿಲುಗಳಲ್ಲಿ ಉಪಯುಕ್ತವಾದ ಕೆಲಸಗಳನ್ನು ಮಾಡಿದ್ದಾರೊ ಇಲ್ಲವೊ ಎಂಬುದು ಆ ಲೋಕಕ್ಕೂ ಗೊತ್ತಿದೆ; ಸಪ್ರುಬಹಾದರರ ಮನಸ್ಸಿಗೂ ತಿಳಿದಿದೆ. ಆದ್ದರಿಂದ ಅವರ ಈ ವಿಧಾನವು ಉಪೇಕ್ಷಣೀಯವಾಗಿದೆ.

೪ ಮಹಾತ್ಮಾಗಾಂಧಿಜಿಗಳು ಕಲ್ಕತ್ತೆಯಲ್ಲಿ ಯುರೋಪಿಯನ್ ಕ್ಲಬಿನಲ್ಲಿ ಖಾದಿಯ ವಿಷಯವಾಗಿ ಅತ್ಯುತ್ತಮವಾದ ಒಂದು ಉಪನ್ಯಾಸವನ್ನು ಕೊಟ್ಟರು. ಚರಕವು ಔದ್ಯೋಗಿಕ ದೃಷ್ಟಿಯಿಂದಲೂ, ಆಧ್ಯಾತ್ಮಿಕ ದೃಷ್ಟಿಯಿಂದಲೂ ಶ್ರೇಷ್ಠವಾಗಿದೆ ಎಂದು ಗಾಂಧಿಜಿಯವರ ಪ್ರತಿಪಾದನ ಮುಖ್ಯ ವಿಷಯವಾಗಿತ್ತು, ಹಿಂದುಸ್ಥಾನದಲ್ಲಿ ೭ ಲಕ್ಷ ಹಳ್ಳಿಗಳಿದ್ದು ಅಲ್ಲಿ ಎಲ್ಲ ಕಡೆಗಳಲ್ಲಿ ರೈಲಿನ ಅನುಕೂಲತೆಗಳಿಲ್ಲ. ಅಂಥವರಿಗೆ ಚರಕದಿಂದ ಖಾದಿಯನ್ನು ತಯಾರಿಸಿಕೊಳ್ಳುವದು ಒಳ್ಳೆಯದು. ಬೇಸಾಯಗಾರನು ೬ ತಿಂಗಳ ಬೇಸಾಯ ಮಾಡಿದರೆ ಉಳಿದ ೬ ತಿಂಗಳು ನಿರುದ್ಯೋಗಿಯಾಗಿರುವನು. ಆಗ ಅವನು ಚರಕವನ್ನು ಉಪಯೋಗಿಸಿದ್ದಲ್ಲಿ ಅವನ ಸಮಯವೂ ದಾಟುವದಲ್ಲದೆ, ವಾರ್ಷಿಕ ಉತ್ಪನ್ನವೂ ಕೂಡ ಹೆಚ್ಚುವುದು. ಆದುದರಿಂದ ಗಾಂಧಿಜಿಯವರು ಚರಕದ ಮಹತ್ವವುಂಟೆಂದು ತಿಳಿಸಿರುವರು. ಚರಕದ ವಿಷಯವಾಗಿ ಗಾಂಧಿಜಿಯವರ ಅಭಿಪ್ರಾಯವು ಸತ್ಯಪೂರ್ಣವಾಗಿದೆ. ಇತರ ಉದ್ಯೋಗವಿಲ್ಲದವರು ಕೈಬೀಸುತ್ತ ತಿರುಗಾಡುವದಕ್ಕಿಂತ ಅಥವಾ ಆರು ತಿಂಗಳು ಖಾಲಿ ಇರುವದಕ್ಕಿಂತ ತಮ್ಮ ತಮ್ಮ ಮನೆಯವರಿಗೆ ಬೇಕಾದ ಬಟ್ಟೆಗಳನ್ನೂ ಸೀರೆಗಳನ್ನೂ ತಯಾರಿಸಿಕೊಳ್ಳಲು ಚರಕದಿಂದ ನೂಲು ತೆಗೆದು ಖಾದಿಯನ್ನು ಮಾಡತೊಡಗಿದರೆ ಇಲ್ಲಿಯ ಕೃಷಿ ವರ್ಗಕ್ಕೆ ಆರ್ಥಿಕ ದೃಷ್ಟಿಯಿಂದ ಒಂದು ದೊಡ್ಡ ಸಹಾಯವು ದೊರಕಿದಂತಾಗುವದೆಂಬುದಕ್ಕೆ ಸಂದೇಹವಿಲ್ಲ. ಚರಕದ ಮಹಾತ್ಮ್ಯ ವರ್ಣನದ ಅಧ್ಯಾಯಗಳ ಪೈಕಿ ಆಧ್ಯಾತ್ಮಿಕ ಪ್ರಗತಿಯ ಅಧ್ಯಾಯವು ಸತ್ಯವಾಗಿರಲಿ, ಇಲ್ಲವೆ ಮಧ್ಯವಾಗಿರಲಿ ಇತರ ಉದ್ಯೋಗವಿಲ್ಲದವರಿಗೆ ಚರಕವು ಸದುದ್ಯೋಗವೆ ಸರಿ. ಈ ವಿಷಯದಲ್ಲಿ ವಾದವಿಲ್ಲ. ರಾಷ್ಟ್ರೀಯ ಸಭೆಯಿಂದ ಈ ಪ್ರಶ್ನೆಯನ್ನು ವಿಂಗಡಿಸಿದ ಬಳಿಕ ಸರ್ವ ಹಿಂದುಸ್ಥಾನಕ್ಕಾಗಿ ಒಂದು ಖಾದಿ ಸಂಸ್ಥೆಯನ್ನು ಏರ್ಪಡಿಸುವ ವಿಚಾರವು ಗಾಂಧಿಜಿಗಳಲ್ಲಿದೆ ಎಂದು ಈ ಮೊದಲೆ ಪ್ರಕಟವಾಗಿತ್ತು. ಆ ಸಂಸ್ಥೆಯು ನಿರುದ್ಯೋಗಿಗಳಿಗೂ, ಹೆಂಗಸರು ಮಕ್ಕಳುಗಳಿಗೂ ಈ ಚರಕದ ಉದ್ಯೋಗವನ್ನು ಹಚ್ಚುವಂತೆ ಯತ್ನಿಸಿದ್ದಲ್ಲಿ ಅದರಿಂದ ನಿಜವಾದ ಪ್ರಯೋಜನವುಂಟಾದೀತು. ಯಾಂತ್ರಿಕ ಯುಗದಲ್ಲಿ ಕೈ ಕೆಲಸವು ವಿಜಯವನ್ನು ಪಡೆಯುವದು ಕಷ್ಟ ಆದರೂ ಒಂದು ಕಡೆಯಲ್ಲಿ ಉದ್ಯೋಗ, ಇನ್ನೊಂದು ಕಡೆಯಲ್ಲಿ ಸದೇಶದ ವಾತ್ಸಲ್ಯ ಇವೆರಡು ಸಾಹಿತ್ಯಗಳಿದ್ದರೆ ಖಾದಿ ಚಳವಳವೂ ಚರಕದ ಉಪಕ್ರಮವೂ ಯಶಸ್ವಿಯಾಗದೆ ಇರಲಾರವು.

ಮಂಗಳೂರು.

ಶ್ರೀಯುತ ಧರ್ಮಸ್ಥಳದ ಮಂಜಯ್ಯ ಹೆಗ್ಗಡೆಯವರು ಹೆಚ್ಚು ಜನರ ಅಭಿಪ್ರಾಯ ಪ್ರಕಾರ ಹೊಸತಾಗಿ ನ್ಯಾಯವಿಧಾಯಕ ಸಭೆಯಲ್ಲಿ ತರಬೇಕೆಂದಿರುವ ಬೀಲು ಅಳಿಯಸಂತಾನದ ಕಾನೂನನ್ನು ಪೂರಾ ರದ್ದುಪಡಿಸಬೇಕೆಂದಿರುವುದಿಲ್ಲ. ಹಾಗೆ ಮಾಡುವುದು ಬಹಳ ಆಕ್ಷೇಪಕರವಾದದ್ದು ಮಾತ್ರವಲ್ಲ ಅಸಾಧ್ಯ ಕೂಡಾ ಆಗಿದೆ. ಈಗ ಯೋಚಿಸಿರುವ ಬೀಲಿನ ಪ್ರಕಾರ ಒಂದು ಅಳಿಯಸಂತಾನ ಕುಟುಂಬದಲ್ಲಿ ಬೇರೆ ಹಕ್ಕುದಾರರು ಇಲ್ಲದೆ ಒಬ್ಬನೆ ಮೆಂಬರರಾಗಿದ್ದು ತನ್ನ ಪೂರ್ಣ ಹಕ್ಕಿನ ಆಸ್ತಿಯನ್ನು ಯಾವದಾದರೂ ಒಂದು ವ್ಯವಸ್ಥೆ ಪಡಿಸದೆ ಇರುವ ಭಾಗದಲ್ಲಿ ಅವರ ಆಸ್ತಿಗೆ ಮತ್ತು ಸ್ವಂತ ಸಂಪಾದನೆಯ ಆಸ್ತಿಗಳಿಗೆ ಕೂಡಾ "ಮಕ್ಕಳ ಸಂತತಿ" ಕಾನೂನು ಲಗಾವು ಆಗಿ ಅನಂತರ ಹಿಂದೂಲೊ ಪ್ರಕಾರ ಅನುಭವಿಸಿಕೊಂಡು ಬರತಕ್ಕದ್ದೆಂದು ಆಗಿರುತ್ತದೆ.

ಈ ವಿಚಾರದಲ್ಲಿ ಮೊದಲು ಮದ್ರಾಸು ಗವರ್ನರ್ ಧೊರೆಗಳಿಗೆ ಮೆಮೋರಿಯಲ್ ಹೋಗಲು ಅವರು ವಿಚಾರಿಸಿ ತಿಳಿದು ಅಗತ್ಯ ಇರುವ ಸಮೂನೆಯಲ್ಲಿ ಒಂದು ಬೀಲನ್ನು ಕೌನ್ಸಿಲಿನಲ್ಲಿ ತರಬಹುದಾಗಿ ಆಜ್ಞೆ ಕೊಟ್ಟಿರುತ್ತಾರೆ.

ಮಾರ್ಕೇಟು ವಾರ್ಡು ವೋಟರರ ಮತ್ತು ಮಹಾಜನರ ಸಭೆಯು ಇದೇ ಬರುವ ಶನಿವಾರ (ತಾ. ೩೦—೮—೧೯೨೪) ಸಾಯಂಕಾಲ ಗಂಟೆ ೫-೩೦ಕ್ಕೆ ಲೈನು ಮೈದಾನಿನಲ್ಲಿ (ಮಾರ್ಕೆಟಿನ ಹತ್ತಿರ) ಕೂಡಲಿಕ್ಕಿರುವುದು. ಸದರಿ ಸಭೆಯಲ್ಲಿ ಶ್ರೀಯುತರುಗಳಾದ ಯು. ಸಿ. ಕೃಷ್ಣಭಟ್ಟರು, ಮಂಗಳೂರು ಮಾಧವರಾಯರು, ಅರಿಬೈಲು ಭೋಜರಾಯರು ಮುಂತಾದವರು ಭಾಷಣ ಕೊಡಲಿಕ್ಕಿರುವರು.

ಸರ್ಕೀಟಿನ ಮೇಲೆ ಹೋಗಿದ್ದ ನಮ್ಮ ಜಿಲ್ಲಾ ಕಲೆಕ್ಟರರು ತಾ. 19ಕ್ಕೆ ಪುತ್ತೂರಿಂದ ವಿಟ್ಲಕ್ಕೆ ಹೋಗಿ, ಅಲ್ಲಿ ತಾ. 22ರ ತನಕ ಮೊಕ್ಕಾಂಮಾಡಿ ತಾ. 23ಕ್ಕೆ ಫರಂಗಿಪೇಟೆಗೆಬಂದು ತಾ. 27ರ ತನಕ ಅಲ್ಲಿದ್ದು ತಾ. 28ಕ್ಕೆಮಂಗಳೂರಿಗೆ ತಲುಪುವರು.

The Calicut Bank, Ltd.,
ದಿ ಕೆಲಿಕಟ್ ಬೇಂಕ್, ಲಿಮಿಟೆಡ್,

ಹೆಡ್ ಆಫೀಸು— ಕಲ್ಲಿಕೋಟೆ.
ಬ್ರಾಂಚುಗಳು:— ಮುಲ್ಲಸ್‌ಚೇರಿ, ತಲಚೇರಿ, ಕೊಚಿ ಮತ್ತು ಪಾಲ್ಘಾಟು.
ರಿಜಿಸ್ಟರ್ಡ್ ಮತ್ತು ಅಧಿಕಾರಗೊಳಿಸಲ್ಪಟ್ಟ ಮೂಲಧನ ರೂ. 5,00,000—0—0.
ರೂಪಾಯಿ 10ರ 50,000 ಪಾಲುಗಳು.
(30—8—1924)ರ ವರೆಗೆ ಮೌಲ್ಯ ಮೂಲಧನ ರೂಪಾಯಿ 1,81,850—0—0.
ಒಂದು ವರುಷದ ಕಾಯಂ ಠೇವಣಾತಿಗೆ ಬಡ್ಡಿ ದರ ಸೇಕಡಾ ರೂ. 7—8—0.
ಕಳೆದ 4 ವರುಷಗಳಲ್ಲಿ ಪಾಲುಗಾರರಿಗೆ ಸೇಕಡಾ 12ರಂತೆ ಬಡ್ಡಿ ಹಂಚಿದೆ.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.
ಸಿ. ಕೃಷ್ಣನ್, ಬಿ. ಎ. ಬಿ. ಎಲ್.,
ಮೆನೇಜಿಂಗ್ ಡೈರೆಕ್ಟರ್.
ಡೈರೆಕ್ಟರರಲ್ಲಿ ಒಬ್ಬರು—
ಎಮ್. ನಾರಾಯಣ ಕಾಮತ್, ಬಿ. ಎ.,
ಪ್ಲೀಡರ್, ಕುಂದಾಪುರ.

ಮಂಗಳೂರು ತಾಲೂಕು ಕಾಂಗ್ರೆಸು ಮತ್ತು ಸ್ವರಾಜ್ಯ ಪಾರ್ಟಿಗಳ ಕಡೆಯಿಂದ ಬರುವ ಮುನಿಸಿಪಾಲಿಟಿ ಚುನಾವಣೆಯಲ್ಲಿ ಉಮೇದ್ವಾರರಾಗಿ ನಿಲ್ಲಲಿಕ್ಕಿದ್ದವರ ಪೈಕಿ ಮ| ರಾ| ಎಮ್. ಕೆ. ವೈದ್ಯರು ಖಾಸಗಿ ಅನಾನುಕೂಲದ ಕಾರಣದಿಂದ ರಾಜಿಕೊಟ್ಟಿರುತ್ತಾ, ಗೋಳಿಕಟ್ಟೆವಾರ್ಡಿಗೆ ಇನ್ನು ಇಬ್ಬರು ಉಮೇದುವಾರರನ್ನು ಚುನಾಯಿಸಿದ್ದರಿಂದ ಕೂಡಾ ಈಗ ನಿಶ್ಚಿತವಾದ ೭ ಜನ ಉಮೇದುವಾರರ ಹೆಸರುಗಳನ್ನು ಈ ಕೆಳಗೆ ಕೊಟ್ಟಿರುತ್ತದೆ.

ಗೋಳಿಕಟ್ಟೆವಾರ್ಡಿಗೆ—ಶ್ರೀಯುತರುಗಳಾದ ಅಬ್ದುಲ್ ಖಾದರ್ ಅಸಾದಿ ಯಾನೆ ಬಾದಶಹ ಸಾಹೇಬರು, ಎಚ್. ಎಮ್. ಪುತ್ತೂರು ಸಾಹೇಬರು ಮತ್ತು ಕಾರ್ನಾಡು ಸದಾಶಿವರಾಯರು, ಕೊಡಿಯಾಲಬೈಲ್ ವೆಸ್ಟ್‌ವಾರ್ಡಿಗೆ—ಶ್ರೀಯುತ ಕೋಟಿ ರಾಮಕೃಷ್ಣ ಕಾರಂತರು, ಕೋರ್ಟುವಾರ್ಡಿಗೆ—ಶ್ರೀಯುತ ಯು. ಸಿ. ಸುಬ್ರಹ್ಮಣ್ಯ ಭಟ್ಟರು, ಜಪ್ಪುವಾರ್ಡಿಗೆ—ಶ್ರೀಯುತ ಶೇಷಭಟ್ ಫೀಡೆಯವರು ಮತ್ತು ಮಾರ್ಕೇಟು ವಾರ್ಡಿಗೆ—ಶ್ರೀಯುತ ಉಳ್ಳಾಲ ಸಂಜೀವರಾಯರು.

ನಮ್ಮ ದ. ಕ. ಜಿಲ್ಲಾ ಖಾದೀ ಬೋರ್ಡಿನ ಸಭೆಯು ಇದೇ ತಿಂಗಳ ತಾ 29ನೇ ಶನಿವಾರ ಅಪರಾಹ್ನ ಘಂಟೆ 3ಕ್ಕೆ ಖಾದಿ ಬೋರ್ಡು ಕಚೇರಿ ಮಂಗಳೂರಲ್ಲಿ ಜರಗುವುದು. ಸಮ್ಮಂಧಪಟ್ಟ ಸದಸ್ಯರೆಲ್ಲರೂ ತಪ್ಪದೆ ಬರಬೇಕಾಗಿ ವಿನಂತಿ.

ದಕ್ಷಿಣ ಕನ್ನಡ.

ಚೊಕ್ಕಾಡಿ:— ನಮ್ಮ ಚೊಕ್ಕಾಡಿ ಫೈಕಿ ಸಂಕೇಸ ಎಂಬಲ್ಲಿ ಬಂಬುಚ್ಚಿ ಹುಳ ತಮ್ಮ ೧ಗರ ತಿಆರಂತೆ ಕಾಣಬರುತ್ತಿವೆ. ಈ ವರೆಗೆ ಹಿಂದೆ ಅದ ಬೇಸಾಯಕ್ಕೆ ಮಾತ್ರ ಕಾಣಬರುತ್ತಿತ್ತು. ಒಟ್ಟಾರೆ ಮುಂದೆ ಬೇಸಾಯ ಮಾಡಿದ್ದು ಹಿಂದೆ ಅದರೂ ಒಂದು ಪ್ರಯೋಜನವಾಗ್ಯಾತು. ಹೇಗೆಂದರೆ ಈ ವರ್ಷ ಕಾಲ ಅಕಾಲವಾಗಿ ಮಳೆ ಹೊಡೆದು ಬೇಸಾಯ ಸಕಾಲಕ್ಕೆ ಆಗದೆ ಮಾಡಿದ ಎಷ್ಟೋ ಜನರು ಕೂಳು ಇಲ್ಲದೆ ಸಾಯಬೇಕಾಗಿ ಬಂದಿದೆ. ಅಂತೂ ಯಾರಾದರೂ ಹಟಪ್ರಯತ್ನ ಪಟ್ಟು ಬೇಸಾಯ ಮಾಡಿದರೂ ಅದೂ ಕೂಡ ಕೆಟ್ಟು ಹೋದರೆ ಮುಂದೆ ಏನೇನು ವಿಪತ್ತು ಉಂಟಾಗುತ್ತದೊ ದೇವರೇ ಬಲ್ಲ. ಈ ಬಂಬುಚ್ಚಿ ಹುಳದಿಂದ ನಷ್ಟ ಹೊಂದಿದವರ ಕುರಿತು ವಿಚಾರಣೆ ತಕ್ಕೊಳ್ಳುವಂತೆ ಒಂದು ಸಂಸ್ಥೆ ಮಾಡಿ ನಷ್ಟಪಟ್ಟ ವರ್ಗದಾರರಿಗೆ ಏನಾದರೂ ನಮ್ಮನ್ನಾಳುವ ಸಾರ್ವಭೌಮ ರಾಜರಿಗೆ ಮನವಿಮಾಡಿಕೊಳ್ಳುವಂತೆ ದಯಾಳು ಕೌನ್ಸಿಲ್ ಮೆಂಬರರು ಪ್ರಯತ್ನ ತಕ್ಕೊಂಡು ಕೂಳು ಇಲ್ಲದೆ ಸಾಯುವವರನ್ನು ಬಚಾವುಮಾಡಿಸ್ಯಾರಾಗಿ ನಂಬುವ, ಬಡ ವರ್ಗದಾರ.

ಪುತ್ತೂರು:— ಜಿಲ್ಲಾ ಕಲೆಕ್ಟರ್ ದೊರೆಗಳವರು ತಾ. ೧೬ ರಲ್ಲಿ ಇಲ್ಲಿಗೆ ಚಿತ್ತಯಿಸಿರುವರು.

ವಿವಿಧ ವಿಷಯಗಳು.

ಮಹಾತ್ಮಜಿಯವರ ಬರವಣಿಗೆಯಿಂದ

ಮಹಾತ್ಮಾ ಗಾಂಧಿಗಳು ನವಜೀವನವೆಂಬ ತಮ್ಮ ಪತ್ರಿಕೆಯಲ್ಲಿ ಗುಜರಾಥದೊಳಗಿನ ಖಾದಿಭಂಡಾರದ ವಿಚಾರವನ್ನು ಕುರಿತು ಒಂದು ಲೇಖನವನ್ನು ಬರೆದಿರುವರು. ಮಹಾತ್ಮಜಿಯವರು ಈ ಲೇಖನವನ್ನು "ಕಳ್ಳರ ನೀತಿ" ಎಂಬ ಶಿರೋನಾಮೆಯಿಂದ ಪ್ರಾರಂಭಿಸಿರುವರು. ಅವರ ಲೇಖನದ ಅನುವಾದ:— "ಗುಜರಾಥ ಖಾದಿ ಮಂಡಲದ ವಸೂಲಾಗದೆ ಬಾಕಿ ಬಿದ್ದಿರುವ ರಕಮುಗಳನ್ನು ವಸೂಲು ಮಾಡುವದು ಪ್ರಯಾಸದ್ದಾಗಿದೆ; ಕೆಲವು ರಕಮುಗಳನ್ನು ವಸೂಲ ಮಾಡುವದಕ್ಕಾಗಿಯಂತೂ ಕಚೇರಿಯಲ್ಲಿ ಫಿರ್ಯಾದನ್ನೆ ಮಾಡಬೇಕಾಗಿದೆ; ಆದುದರಿಂದ ಪ್ರಾಂತಿಕ ಕಮಿಟಿಯು ಈ ಸಂಗತಿಯನ್ನೆಲ್ಲ ಗಾಂಧಿಜಿಗಳ ಗೋಚರಕ್ಕೆ ತಂದು ಅವರಿಂದ ಉತ್ತರವು ಬಂದ ಮೇಲೆ ಈ ರಕಮುಗಳನ್ನು ವಸೂಲು ಮಾಡಲು ಅವಶ್ಯವಾದ ಮಾರ್ಗವನ್ನು ಅವಲಂಬಿಸಬೇಕು ಎಂಬುದಾಗಿ ಗುಜರಾಥ ಖಾದಿ ಮಂಡಲವು ನಿರ್ಣಯಮಾಡಿದೆ. ಕೊಂಗ್ರೆಸಿನ ಠರಾವುಗಳನ್ನು ಮಾಡಿದ್ದು ಕೊಂಗ್ರೆಸ್ಸಿನ ನಾಶವನ್ನು ಮಾಡಲು ಅಲ್ಲ, ಎಂಬುದಾಗಿ ನನ್ನ ಅಭಿಪ್ರಾಯವನ್ನು ನಾನು ಮೊದಲೆ ಸ್ಪಷ್ಟವಾಗಿ ತಿಳಿಸಿರುವೆನು. ಕೊಂಗ್ರೆಸಿನ ಸಭಾಸದರು ತಮ್ಮ ತಮ್ಮೊಳಗಾದರೂ ಒಬ್ಬರನ್ನೊಬ್ಬರು ವಂಚಿಸಲಿಕ್ಕಿಲ್ಲವೆಂದು ಭಾವಿಸಿದ್ದಾಗಿತ್ತು! ಆದರೆ ಖಾದಿ ಮಂಡಲವು ತನ್ನ ವಿಶ್ವಾಸದ ಕೊಂಗ್ರೆಸ ಸಭಾಸದರಿಗೆ ಕೊಟ್ಟ ರಕಮುಗಳನ್ನು ಅವರೂ ಹಿಂತಿರುಗಿ ಕೊಡಲಿಲ್ಲ, ಅವರಿಗೆ ಜಾಮೀನು ನಿಂತವರೂ ತಮ್ಮ ಮಾತಿನಂತೆ ನಡಕೊಳ್ಳುವದಿಲ್ಲ! ಇಂಥವರ ವಿಷಯದಲ್ಲಿ ಕೋರ್ಟ ಬಹಿಷ್ಕಾರವನ್ನು ಅವಲಂಬಿಸಿದರೆ ಕೊಂಗ್ರೆಸಿನ ದಿವಾಳಿಯಾದೀತು! ಗುಜರಾಥಿ ಜನರಿಗೆ ಕಡೆಪಕ್ಷ ಕಳ್ಳರ ನೀತಿಯಾದರೂ ತಗಲುವದಿಲ್ಲವೆ? ಕಳ್ಳರು ಕಳವನ್ನು ಮಾಡುತ್ತಾರಾದರೂ ತಮ್ಮ ತಮ್ಮೊಳಗೆ ಲೂಟಿ ಮಾಡುವದಿಲ್ಲ ಅವರು ಪರಸ್ಪರ ಕೊಡುವ ತೆಕ್ಕೊಳ್ಳುವ ವ್ಯವಹಾರವನ್ನು ಸರಳರೀತಿಯಿಂದ ನಡಿಸುತ್ತಾರೆ ಈ ನೀತಿಯನ್ನಾದರೂ ಅನುಸರಿಸುವ ಗುಜರಾತಿಗಳಿಲ್ಲವೆ?"

• • • • •

ಮಹಾತ್ಮಾಜಿಯವರ ಈ ಬರವಣಿಗೆಯು ಸ್ಪಷ್ಟವೂ ಸರಳವೂ ಆಗಿರುವದರಿಂದ ಆ ಬಗ್ಗೆ ಹೆಚ್ಚಿಗೆ ಬರೆಯಬೇಕಾದ ಅವಶ್ಯವಿಲ್ಲ. ಕೋರ್ಟ ಬಹಿಷ್ಕಾರದ ನಿಷ್ಪ್ರಯೋಜನತ್ವವು ಗಾಂಧಿಜಿಗಳಿಗೆ ಅವರ ಪಟ್ಟ ಶಿಷ್ಯರಲ್ಲಿ ಮುಖ್ಯಸ್ಥರಾದ ಶ್ರೀ. ಗಂಗಾಧರರಾವ ದೇಶಪಾಂಡೆಯವರಂಥ ಅಗ್ರಗಣ್ಯರ ವರ್ತನದಿಂದ ಮೊದಲೆ ತಿಳಿದು ಬಂದಿದ್ದರೂ ಈ ಗುಜರಾಥ ಖಾದಿ ಮಂಡಲದ ಪ್ರಕರಣದ ಮೇಲಿಂದ ಅವರ ಅನರ್ಥವೂ ತಿಳಿದುಬಂದಿದೆ ಈ ವಿಧವಾಗಿ ಕೋರ್ಟ ಬಹಿಷ್ಕಾರದ ವೈಯರ್ಥ್ಯಕವೂ, ಅನರ್ಥವೂ, ತಿಳಿದು ಬಂದದರಿಂದ ಗಾಂಧಿಜಿಗಳು ಈಗಲಾದರೂ ತನ್ನ ಕಾರ್ಯಕ್ರಮದಲ್ಲಿರುವ ದೋಷಗಳನ್ನು ಎಂದರೆ ಅವ್ಯವಹಾರ್ಯತೆ ಮುಂತಾದ ಕೊರತೆಗಳನ್ನು ತಿಳಕೊಂಡು ಧ್ಯೇಯಸಿದ್ಧಿಗೆ ತಕ್ಕುದಾದ ಕಾರ್ಯಕ್ರಮಗಳನ್ನು ದೇಶಕ್ಕೆ ಹಾಕಿಕೊಟ್ಟಾರೆಂದು ಬಯಸಬೇಕಾಗಿದೆ. ಗುಜರಾತ ಖಾದಿ ಮಂಡಲದಲ್ಲಿ ಮಾತ್ರ ಹಣದ ವಿಷಯವಾಗಿ ಈ ರೀತಿಯ ವಂಚನೆಯುಂಟೆಂದಲ್ಲ, ಟಿಳಕ ಸ್ವರಾಜ್ಯ ಫಂಡ, ಖಿಲಾಫತ್ ಫಂಡ ಇತ್ಯಾದಿ ದ್ರವ್ಯನಿಧಿಗಳ ಸುತ್ತಲು ಮೊದಲು ಎಷ್ಟೋ ಸಾರಿ ವಂಚಕರ ಕೈಗಳು ಬಂದು ಮುತ್ತಿದ್ದವು. ಈ ಎಲ್ಲ ದೃಷ್ಟಾಂತಗಳಿಂದ ದೃಢಪಡುವ ಮಾತು ಯಾವುದೆಂದರೆ, ದ್ರವ್ಯ ರಕ್ಷಣಕ್ಕೂ, ಅದರ ಸದ್ವಿನಿಯೋಗಕ್ಕೂ ಅಂಕುಶವು ಇನ್ನೂ ಬೇಕು. ಅದನ್ನು ತೆಗೆದು ಹಾಕಿದರೆ ಈ ಅವಸ್ಥೆಯೆ ಬರುತ್ತದೆ!

• • • • •

'ಬಾದಶಹರ ಆಗಮನ'!

ಹಿಂದುಸ್ಥಾನಕ್ಕೆ ಸ್ವರಾಜ್ಯವು ಸಿಕ್ಕುವದೋ ಇಲ್ಲವೊ ಎಂಬ ಚರ್ಚೆಯು ನಡೆಯುತ್ತಿರುವಾಗ ಈ ಎರಡೂ ಪ್ರಶ್ನೆಗಳಿಗೆ ಬಾಹಿರವಾಗಿ ಮೂರನೆಯ ಉತ್ತರವೆ ಬರುತ್ತದೆ! ಹಿಂದೂಸ್ಥಾನಕ್ಕೆ ಸ್ವರಾಜ್ಯವು ಬರುವದರ ಬದಲು ಇಂಗ್ಲಂಡದ ರಾಜರು ಬರುವವರಿದ್ದಾರಂತೆ! ಇಂಗ್ಲಂಡದ ರಾಜರೂ ಮತ್ತು ಹಿಂದುಸ್ಥಾನದ ಬಾದಶಹರೂ ಆದ ಐದನೆಯ ಜೋರ್ಜರು ಹಿಂದುಸ್ಥಾನಕ್ಕೆ ಬಂದು ಇಲ್ಲಿ ದರಬಾರಗಳನ್ನು ಸೇರಿಸುವದು ಎಲ್ಲರಿಗೂ ಇಷ್ಟವಿದ್ದ ಸಂಗತಿಯೇ ಸರಿ. ಬಾದಶಹರು ತಮ್ಮ ಆಳಿಕೆ ಒಳಪಟ್ಟಿರುವ ನಾಡಿನಲ್ಲಿ ಯಾಕೆ ಬರುತ್ತಾರೆ ಎಂದು ಯಾರಾದರೂ ಕೇಳುವ ಹಾಗಿದೆಯೆ? ರಾಜ್ಯವ ಅವರದು; ಅದುಕಾರಣ ಅವರು ಅವಶ್ಯವಾಗಿ ಬರಲೇಬೇಕು! ಬಾದಶಹರು ಬಂದ ವೇಳೆ ಅವರ ಆಗಮನವನ್ನು ಪ್ರಜಾವರ್ಗಕ್ಕೆಲ್ಲ ತಿಳಿಪಡಿಸುವದಕ್ಕಾಗಿಯೂ, ಆ ಆಗಮನದ ಸ್ಮರಣಾರ್ಥವಾಗಿಯೂ ದರಬಾರನ್ನು ಕೂಡಿಸಬೇಕಾದ್ದು ಸಹ ಸಹಜ. ಆದರೆ ಈ ಪ್ರಶ್ನೆಯನ್ನು ಒಂದಿಷ್ಟು ಚರ್ಚಿಸುವದು ಅಗತ್ಯವು. ರಾಜರು ಹಿಂದುಸ್ಥಾನಕ್ಕೆ ಬರುತ್ತಿದ್ದಾರೆ ಎಂದು ಕೇಳಿದ ಕೂಡಲೆ ಆ ಮೇರೆಗೆ ಕೇಳುವವನು ರಾಜಭಕ್ತಿ ಇಲ್ಲದ ಶುದ್ಧ ಪಾಷಂಡಿಯು ಎಂಬುದಾಗಿ ಮಾತ್ರ ಯಾರೂ ತಿಳಿಯತಕ್ಕದು. ನಿಜವಾಗಿ ಆ ರೀತಿ ತಿಳಕೊಳ್ಳುವ ದಿವಸಗಳು ಈಗ ಇಲ್ಲ. ಅದ್ದರಿಂದ ಸಂಪೂರ್ಣ ರಾಜಭಕ್ತಿಯಿಂದಲೆ, ಪರಂತು ಜಿಜ್ಞಾಸೆಯಿಂದ ಈ ಪ್ರಶ್ನೆಯನ್ನು ವಿಮರ್ಶಿಸಬೇಕಾಗುತ್ತದೆ. ಬಾದಶಹರು ಸ್ವಂತ ಇಚ್ಛೆಯ ಮೇರೆಗೆ ಹಿಂದುಸ್ಥಾನಕ್ಕೆ ಬರುತ್ತಿದ್ದಪಕ್ಷದಲ್ಲಿ ಅವರ ಆಗಮನವು ನಿಜವಾಗಿ ಸರ್ವಸಂತೋಷಾಸ್ಪದವಾಗುತ್ತಿತ್ತು. ಆದರೆ ಧೂರ್ತವಾದ ನೋಕರಶಾಹಿಯು ಅವರನ್ನು ಇಲ್ಲಿ ತರುವದಿದೆ! ಯಾಕೆ? ಹಿಂದುಸ್ಥಾನದವರು ಸ್ವರಾಜ್ಯವನ್ನು ಕೇಳುತ್ತಿದ್ದಾರೆ, ಅಸಹಕಾರವನ್ನು ಮಾಡುತ್ತಿದ್ದಾರೆ, ಉಪರೋಧವನ್ನು ಮಾಡುತ್ತಿದ್ದಾರೆ; ಆದುದರಿಂದ ಬಾದಶಹರನ್ನು ಇಲ್ಲಿ ತಂದು ದೊಡ್ಡದಾದ ಒಂದೆರಡು ದರಬಾರಗಳನ್ನು ಮಾಡಿಸಿದ್ದಾದರೆ ವೀಜಿನ ದೀಪಗಳ ಚಕಚಕಾಟದಿಂದ ಒಂದುಗಳಿಗೆ ಕಣ್ಣುಕುಕ್ಕಿ ದಿಙ್ಮೂಢನಾಗಿ ಹೇಗೆ ಬೇರೆ ಎಲ್ಲವನ್ನು ಮರೆತು ಬಿಡುವನೋ ಹಾಗೆಯೆ ಆ ದರಬಾರಗಳ ಸಮಾರಂಭದಿಂದ ಪ್ರಜೆಗಳು ಸ್ವರಾಜ್ಯವನ್ನು ಮರೆತುಬಿಟ್ಟಾರು. ನೋಕರಶಾಹಿಯು ಈ ತರದ ಧೂರ್ತತನದ ಆಲೋಚನೆಯನ್ನು ಕಟ್ಟಿಕೊಂಡು ಬಾದಶಹರನ್ನು ಬರಮಾಡುವದರಲ್ಲಿ ಇದೆ. ಬೇರೆ ಮಾತಿನಿಂದ ಇದರ ಅರ್ಥವೇನೆಂದರೆ ಹಿಂದುಸ್ಥಾನಕ್ಕೆ ಸ್ವರಾಜ್ಯವೂ, ಇತರ ಹಕ್ಕುಗಳೂ ಇಲ್ಲ; ಇವುಗಳ ಬದಲಿಗೆ ಬಾದಶಹರು ಇಲ್ಲಿ ಬರುವರು! ಹೆಚ್ಚಿಗೆ ಹಕ್ಕುಗಳನ್ನು ಕೊಡಲಾಗುವದಿಲ್ಲವೆಂದು ಸೂಚಿಸುವದಕ್ಕಾಗಿ ಬಾದಶಹರನ್ನು ಅಲ್ಲಿಂದ ಇಲ್ಲಿಗೆ ತರಬೇಕೆ? ಸ್ವತಃ ನೋಕರಶಾಹಿಯರೆ 'ನಿಮಗೇನೂ ಕೊಡಲಾಗುವದಿಲ್ಲ'ವೆಂದು ಸ್ಪಷ್ಟವಾಗಿ ಹೇಳಿದರೆ ಸಾಲದೆ? ಸಾಕು ಮಾತ್ರವಲ್ಲ, ಹಾಗನ್ನುವದೆ ಚಲೋದು. ಸಾರಾಂಶ ಇವೆಲ್ಲ ರಾಜತಂತ್ರದೊಳಗಿನ ಉಪಾಯಗಳು. ಆದರೆ ಬಾದಶಹರ ಆಗಮನ, ದೊಡ್ಡದೊಡ್ಡ ದರಬಾರುಗಳು ಇತ್ಯಾದಿ ಬರೆ ನಿಷ್ಪ್ರಯೋಜನವಾದ ಆಡಂಬರದ ಕಣ್‌ಕಟ್ಟಿನಿಂದ ಜನರನ್ನು ಮಂಕುಗೊಳಿಸುವ ಯುಗವು ಈಗ ದಾಟಿದೆಂದು ನಂಬಬಹುದಾಗಿದೆ. ರಾಜಕೀಯ ಪತಿವ್ರತಾಧರ್ಮವನ್ನು ಅಕ್ಷರಶಃ ಪಾಲನ ಮಾಡತಕ್ಕವರಾದ ಶಾಂತಪಕ್ಷೀಯ ಜನರು ಸಹ ಇಂಥ ಉಪಾಯಗಳ ಮರ್ಮಗಳನ್ನು ತಿಳಕೊಂಡವರಾಗಿ ಈ ಶುಷ್ಕೋಪಚಾರಗಳನ್ನು ತೀವ್ರವಾಗಿ ನಿಷೇಧಿಸುತ್ತಿದ್ದಾರೆ. ಎಂದ ಮೇಲೆ ಇತರರ ವಿಚಾರವನ್ನು ತಿರುಗಿ ಹೇಳಬೇಕೆ?

• • • • •

— ನಿಷ್ಕಾರಣವಾದ ದ್ವೇಷ. —

ಬ್ರಾಹ್ಮಣ-ಬ್ರಾಹ್ಮಣೇತರ ಚಳವಳದ ಬೀಜವು ಮದ್ರಾಸಿನಲ್ಲಿ ಹುಟ್ಟಿತ್ತಾದರೂ ಮುಂಬಯಿ ಸಂಸ್ಥಾನದಲ್ಲಿ ಈಗ ಪಲ್ಲವಿತವಾಗುತ್ತಿದೆ. ಅದು ಮುಂಬಯಿಯಲ್ಲಿ ಯಾವ ರೀತಿಯಿಂದ ಚಿಗುರಿತ್ತಿದೆ ಎಂಬುದನ್ನು ಇನ್ನೊಂದು ಕಡೆಯಲ್ಲಿ ಸವಿಸ್ತಾರವಾಗಿ ವಿವರಿಸಿರುವ ಸಂಗತಿಗಳ ಮೇಲಿಂದ ವಾಚಕರಿಗೆ ತಿಳಿದುಬಂದೀತು. ಈ ಚಳವಳದ ತಾತ್ವಿಕ ದೃಷ್ಟಿಯಿಂದ ವಿಚಾರಮಾಡಿದರೆ ಇದರ ಇಷ್ಟಾರ್ಥವೆಂಬುದು ಸರಿಯಾಗಿ ಗೊತ್ತಾಗದು. ಸರಕಾರಿ ಉದ್ಯೋಗಗಳು ಬ್ರಾಹ್ಮಣರಿಗೆ ಹೆಚ್ಚಿಗೆ ಇವೆ ಎಂದು ಹೇಳೋಣವೆ, ಇತ್ತಲಾಗೆ ಶಿಕ್ಷಣಾದಿ ಪಾತ್ರತೆಯ ಸಾಧನಗಳು ಅಷ್ಟೊಂದು ಇಲ್ಲವಾದರೂ ಅವರಿಗೆನೆ ಸರಕಾರಿ ಉದ್ಯೋಗಗಳನ್ನು ಕೊಡುವ ವಹಿವಾಟು ಬಿದ್ದಿದೆ. ಆದ್ದರಿಂದ ಆ ಬಗ್ಗೆ ಬ್ರಾಹ್ಮಣೇತರ ಬಂಧುಗಳು ಬ್ರಾಹ್ಮಣರ ಮೇಲೆ ಅಸೂಯೆಪಡಬೇಕಾದ ಅಗತ್ಯವಿಲ್ಲ. ಜಮೀನು, ದ್ರವ್ಯ, ವೈಭವ, ಜನಸಂಖ್ಯೆ ಇತ್ಯಾದಿ ವಿಷಯಗಳನ್ನು ಕುರಿತು ಹೇಳೋಣವೆಂದರೆ ಇವೆಲ್ಲ ಬ್ರಾಹ್ಮಣರಿಗೆ ದೂರದಲ್ಲಿ ಇವೆ. ಬ್ರಾಹ್ಮಣೇತರರಲ್ಲಿ ಭೂಬಲ, ದ್ರವ್ಯಬಲ ಜನಬಲ ಇವು ಬ್ರಾಹ್ಮಣರಿಗಿಂತ ಧಾರಾಳವಾಗಿವೆ. ಎಂದ ಮೇಲೆ ಅವರು ಬ್ರಾಹ್ಮಣರ ವಿಷಯವಾಗಿ ಇನ್ನಾವುದಕ್ಕೆ ನಿಂದೆಯನ್ನು ಮಾಡಬೇಕಾಗಿದೆ? ವಿದ್ಯೆ, ಬುದ್ಧಿ ಇತ್ಯಾದಿಗಳಂತೂ ಯಾರ ಮನೆಯ ಬದುಕುಗಳಲ್ಲ. ಯೋಗ್ಯತೆ ಇರುವವರು ಅವುಗಳನ್ನು ಸ್ವಾಧೀನಪಡಿಸಿಕೊಳ್ಳಬಹುದು. ಸಾರಾಂಶ ಬ್ರಹ್ಮದ್ವೇಷವು ಈಗಲಾದರೂ ಅಷ್ಟೊಂದು ಸಕಾರಣವಾಗಿ ತೋರುವದಿಲ್ಲ. ಆದ್ದರಿಂದ ನಿಷ್ಕಾರಣವಾದ ಈ ದೋಷವನ್ನು ಬಿಟ್ಟುಬಿಡುವದು ದೇಶದ ಹಿತಕ್ಕಾದರೂ ಕಾರಣವಾದೀತು.

ಪತ್ರವ್ಯವಹಾರ.

ಅಯ್ಯಾ ಪತ್ರಿಕಾಕರ್ತರೇ,

ಇಲ್ಲಿಯ ಸೋಮವಾರ ಸಂತೆಯ ಹಿಂದಕಡೆ ಒಂದು ಪಾಯಖಾನೆ ಇರುವದು. ಈ ಪಾಯಖಾನೆ ಸಂತೆಗೆ ಬಂದ ಹೆಂಗಸರಿಗೂ, ಮಕ್ಕಳಿಗೂ ಗಂಡಸರಿಗೂ ಡಿಸ್ಟ್ರಿಕ್ಟ ಮುನ್ಸಿಫ ಕೋರ್ಟಿನ ಕಕ್ಷಿಗಾರರಿಗೂ ಪಂಚ್ಯಾತ ಕೋರ್ಟಿನ ಕಕ್ಷಿಗಾರರಿಗೂ, ಪೇಟೆಯ ಜನರಿಗೂ ಅತಿ ಉಪಯೋಗದ್ದೆಂತಲೆ ಹೇಳಬೇಕು. ಆದರೇನು ಹೇಳುವದು, ಪಾಯಖಾನೆ ಹಿಂದೆಗಡೆ ಮುನ್ಸಿಫ ಕೋರ್ಟ ಹಿತ್ತಲಿನ ಗುಡ್ಡೆ, ಪಾಯಖಾನೆ ಹಿಂದುಗಡೆ ಮುಂದುಗಡೆ ಸ್ಥಳವು ಏಕಪ್ರಕಾರ ಹಿಂದುಗಡೆ ಕೊಳಕ್ಕೆ ಮಳೆನೀರು ಮತ್ತು ಪಾಯಖಾನೆ ಮಲ ಮಟ್ಟು ವಂದಾಗಿ ಪಾಯಖಾನೆಗೆ ಒಳಹೊಕ್ಕುವಲ್ಲಿ ಬಂದು ಸೇರಿನಿಲ್ಲುತ್ತದೆ ಪಾಯಖಾನೆಗೆ ಒಳಹೊಕ್ಕುವದೆಂಬದು ಸಂಕಷ್ಟ. ಒಳಗಿನ ಸ್ಥಿತಿ ಕಂಡರೆಂತು ಪಾಯಖಾನೆ ಗುಡಿಇದ್ದಂತ ಹೇಳಲು ಅಸಾಧ್ಯ. ಇಂತಾ ಹೀನಸ್ಥಿತಿಯಲ್ಲಿರುವ ಈ ಪಾಯಖಾನೆಯನ್ನು ತಾಲೂಕು ಬೋರ್ಡು ಮೆಂಬರರು ಪ್ರೆಸಿಡೆಂಟರು, ವೈದ್ಯಉದ್ಯೋಗಸ್ಥರು ಒಮ್ಮೆ ತನ್ಕಿಮಾಡಿ ನೋಡಬಾರದ್ದಾಕೆ ಸಂತೆಗೆ ಹೆಂಗಸರು ಹೆಚ್ಚಾಗಿ ಬರುವದರಿಂದ ಹೆಂಗಸರ ಬಗ್ಗೆ ಎಂತ ಒಂದು ಭಾಗವನ್ನು ವಿಂಗಡಿಸುವದುತ್ತಮ. ಪಾಯಖಾನೆಗೆ ಹೋಗುವ ಜನರಿಗೆ ರೋಗ ತಗಲದ ಹಾಗೆ ಪಾಯಖಾನೆಯನ್ನು ಒಮ್ಮೆ ದುರುಸ್ತಿಪಡಿಸಿ ಅಗತ್ಯವಾದ ಕೆಲಸ ಮಾಡಿಸುವ ವಿಲೆವಾರಿಯನ್ನು ತಾಲೂಕು ಬೋರ್ಡಿನವರು ಮಾಡುವದು ಉತ್ತಮವಲ್ಲವೆ.

ಪುತ್ತೂರು, ತಾ. ೧೬-೮-'೨೫. } ಸಂತೆಗೆ ಬಂದವ.

ಅಯ್ಯಾ,

ಇಲ್ಲಿಯ ಟೌನಿನ ರಸ್ತೆ ಪಾಡು ಹೇಳತಕ್ಕದ್ದಿಲ್ಲ. ಮಾರ್ಕೇಟಿ ಬಳಿಯಿಂದ ತಾಲೂಕು ಕಚೇರಿಗೆ ಹಾಗಿ ದಾಸಪ್ಪ ಶ್ಯಾನಭಾಗರ ಅಂಗಡಿ ಬಳಿಗಾಗಿ ತಾಲೂಕು ಕಚೇರಿಗೆ ಹೋಗುವ ರಸ್ತೆಯಂತು ಅರ್ಧಫೂಟು ಕ್ಕಿಂತ ಕೆಸ್ರು ಮಣ್ಣಿನಿಂದ ತುಂಬಿರುವದು. ಮಾರ್ಗಗಳಿಂದ ಹಾದು ಹೋಗುವವರು ರಸ್ತೆಯನ್ನು ಬಿಟ್ಟು ಚರಂಡಿಗಳಿಂದ ನಡಿಯಬೇಕು. ರಸ್ತೆಗಳು ಗದ್ದೆಹೂಡಿ ಬಿತ್ತ ಇಕ್ಕೆ ಸಿದ್ಧವಾದಂತಿರುವದು. ರಸ್ತೆಗಳ ಪಾಡು ನೋಡುವಾಗ್ಯೆ ಸ್ವರಾಜ್ಯ ಪ್ರಾಪ್ತವಾಯಿತೆನ್ನಲೇಬೇಕು. ರಸ್ತೆಗಳು ಲೋಕಲ್ ಯೂನಿಯನಿನವರ ಕೈಯಲ್ಲಿ ಸೇರಿದರಿಂದ ರಸ್ತೆಗಳು ಹಾಳಾಗಲಿ, ಗುಂಡಿಗಳಾಗಲಿ ಆ ಸಂಗತಿಯನ್ನು ಮುಂದೊತ್ತಿ ತರುವದ್ಯಾರು. ಲೋಕಲ ಫಂಡ ಓವರಸಿಯರು, ಅಸಿಸ್ಟಾಂಟ ಇಂಜಿನಿಯರು, ತಾಲೂಕು ಬೋರ್ಡಿನವರ ಡಿಸ್ಟ್ರಿಕ್ಟ ಬೋರ್ಡಿನವರ ಕೈವಳಗಿರುವವರು ಮಾತಿತ್ತಿದ್ದರೆ ತಮ್ಮಮೇಲೆ ಜರಿದು ಬೀಳುವರೋ ಎಂಬ ಭೀತಿ. ಇತ್ತಲಾಗೆ ಬಂದ ಅಸಿಸ್ಟಾಂಟ ಇಂಜಿನಿಯರು ರಸ್ತೆಗಳ ಹಾದುನೋಡಿ ರಸ್ತೆಯ ಕೆಸರು ಮಣ್ಣು ತೆಗಿಸಿ ಹೊಸ ಮಣ್ಣು ಹಾಕಿಸುವ ರಷ್ಟೆ. ಡಿಸ್ಟ್ರಿಕ್ಟ ಬೋರ್ಡಿನ ಮಡಿಕೇರಿ ರಸ್ತೆಯಲ್ಲಿ ಎಂತೂ ಅಲ್ಲಲ್ಲಿ ಹೊಂಡಗಳು, ಅವುಗಳು ಮುಚ್ಚಿಸಿದರು. ನಮ್ಮ ಜಿಲ್ಲಾ ಕಲೆಕ್ಟರವರು ಇಲ್ಲಿ ಬಂದವರು ತಾಲೂಕು ಕಚೇರಿಗೆ ಹೋಗುವ ರಸ್ತೆ ಕೆಸರು ತುಂಬಿದರಿಂದ ತಮ್ಮ ಮೋಟರನ್ನು ಡಿವಿಜನಲ್ ಆಫೀಸಿನ ಬಳಿ ಕೊಂಡುಹೋಗಿ ಅಲ್ಲಿಂದಲೆ ವಾಪಸು ತಿರುಗಿಸಬೇಕಾಯಿತು. ಇನ್ನಾದರೂ ತಾಲೂಕು ಬೋರ್ಡಿನವರೂ ಡಿಸ್ಟ್ರಿಕ್ಟ ಬೋರ್ಡಿನವರೂ ರಸ್ತೆಗಳ ಏರ್ಪಾಡು ಸರಿಪಡಿಸ ಬಾರದೆ.

ಪುತ್ತೂರು, ತಾ. ೧೮-೮-'೨೫. } ಟೌನಿನವನೊಬ್ಬ.

— ಸ್ಥಾನಿಕ. —

ಸ್ವದೇಶಾಭಿಮಾನಿಯ ತಾ. ೧೮ನೇ ಮತ್ತು ೨೫ನೇ ಎಪ್ರಿಲ್ ೧೯೨೫ನೇ ಇಸವಿಯ ಸಂಚಿಕೆಗಳಲ್ಲಿ ಸ್ಥಾನಿಕ ಶಬ್ದದ ವಿಮರ್ಶನೆಯನ್ನು ಕುರಿತು ಕೆಲವು ವಿಷಯಗಳನ್ನು ಬರೆದಿದ್ದೆನು. ಅದಕ್ಕೆ ಸಂಬಂಧಪಟ್ಟ ಇನ್ನೂ ಕೆಲವು ವಿಷಯಗಳನ್ನು ಈ ಲೇಖದಲ್ಲಿ ವಿಮರ್ಶಿಸಿದ್ದೇನೆ.

ಅರ್ಥಶಾಸ್ತ್ರದಲ್ಲಿ ಸ್ಥಾನವೆಂಬ ಪಾರಿಭಾಷಿಕ ಶಬ್ದವಿದೆ. ಈ ಶಬ್ದಕ್ಕೆ ಮಹಾಭಾರತದ ಭಾವದೀಪ ವ್ಯಾಖ್ಯಾಕರ್ತರು ಸ್ಥಾನಂ, ಸಾಮ್ಯಂ ವಣಿಜಾಂ ಅಂದರೆ ವರ್ತಕರನ್ನು ಸಮಾನತ್ವದಲ್ಲಿ ಇರಿಸುವದು ಎಂಬ ಅಭಿಪ್ರಾಯವನ್ನು ಬರೆದಿದ್ದಾರೆ. ಭಾನುಜದೀಕ್ಷಿತರು ಅಷ್ಟವರ್ಗಸ್ಯ ಉಪಚಯಾಪಚಯಾ ಭಾವಸ್ಥಾನಂ ಎಂದು ಹೇಳಿದ್ದಾರೆ. ಅಂದರೆ ಕೃಷಿ, ವಾಣಿಜ್ಯ, ದುರ್ಗ, ಸೇತು, ಕುಂಜರ, ಬಂಧನ, ಖನಿ, ಆಕರ ಬಲಾದಾನ ಶೂನ್ಯನಿವೇಶನವೆಂಬ ಎಂಟು ವಿಭಾಗಗಳು ಕ್ಷೀಣವಾಗದೆಯೂ, ವೃದ್ಧಿಯಾಗದೆಯೂ ಏಕರೀತಿಯಲ್ಲಿ ಸ್ಥಾಯಿಯಾಗಿರುವುದಕ್ಕೆ ಹೆಸರು ಎಂಬ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ನೀತಿಶಾಸ್ತ್ರದಲ್ಲಿ ಯಸ್ಮಿನ್ ವಾ ಗುಣೇಸ್ಥಿತಃ ಸ್ವಕರ್ಮ ವೃದ್ಧಿಂಕ್ಷಯಂವಾನಾಭಿಪಶ್ಯೇದ ತತ್‌ಸ್ಥಾನಂ ಯಾವ ಗುಣದಲ್ಲಿ ಇರಲ್ಪಟ್ಟವನು ತನ್ನ ಕರ್ಮಗಳ ಅಂದರೆ ದುರ್ಗ, ಸೇತುಕರ್ಮ, ವಣಿಕ್‌ಪಥ, ಶೂನ್ಯನಿವೇಶ ಖನಿ, ದ್ರವ್ಯಕರ್ಮ, ಹಸ್ತಿಕರ್ಮ, ವನಕರ್ಮಗಳ ವೃದ್ಧಿ ಮತ್ತು ಕ್ಷಯವನ್ನು ನೋಡುವದಿಲ್ಲವೊ? ಅಂಥಾ ಗುಣಕ್ಕೆ ಸ್ಥಾನವೆಂಬ ಹೆಸರು ಎಂಬದಾಗಿ ತಿಳಿಸಿದೆ. ಮನುವು ಹೇಳಿರುವ ಸ್ಥಾನಂ, ಸಮುದಯಂ, ಗುಪ್ತಿಂ, ಲಬ್ಧಪ್ರಶಮನಾನಿಚ ಎಂಬ ಶ್ಲೋಕಕ್ಕೆ ವ್ಯಾಖ್ಯಾನ ಬರೆದ ಕುಲ್ಲೂಕ ಭಟ್ಟರು ತಿಷ್ಠತ್ಯನೇನೇತಿಸ್ಥಾನಂ ದಂಡಕೋಶಪುರ ರಾಷ್ಟ್ರಾತ್ಮಕಂ ಚತುರ್ವಿಧಂ, ಎಂಬುದಾಗಿ ಬರೆದಿದ್ದಾರೆ. ದಂಡ, ಕೋಶ, ಪುರ ರಾಷ್ಟ್ರಗಳಿಂದ ರಾಜ್ಯವು ನಿಲ್ಲುತ್ತದೆ. ಆದ್ದರಿಂದ ದಂಡಾದಿಗಳು ಸ್ಥಾನವೆಂಬದಾಗಿ ಅವರ ಅಭಿಪ್ರಾಯ. ಸಂಧಿ, ವಿಗ್ರಹ, ಯಾನ, ಆಸನ, ದ್ವೈಧೀಭಾವ, ಸಂಶ್ರಯ ಎಂದು ಷಡ್ಗುಣಗಳು. ಈ ಪೈಕಿ ಆಸನವೆಂದರೆ ಸ್ಥಾನವೆಂತ ಅರ್ಥ. ಸ್ಥಾನಂ, ಆಸನಂ, ಉಪೇಕ್ಷಣಂ, ಚೇಷ್ಟಾಸನ ಪರ್ಯಾಯಾಃ ವಿಶೇಷಸ್ತು ಗುಣೈಕದೇಶೆಸ್ಥಾನಂ. ಅಂದರೆ ವಿಶೇಷವಾಗಿ ಸ್ಥಾನಶಬ್ದವು ಗುಣೈಕದೇಶಕ್ಕೆ ವಾಚಕವೆಂಬದಾಗಿ ಅರ್ಥಶಾಸ್ತ್ರದಲ್ಲಿ ಹೇಳಿದೆ. ಷಡ್ಗುಣಗಳೊಳಗಿನ ಸ್ಥಾನಶಬ್ದಕ್ಕೆ ಸೈನ್ಯಕರ್ಮದಲ್ಲಿ ಅಭಿಪ್ರಾಯವಿರುತ್ತದೆ. ಅಂದರೆ ಸ್ಥಾನ, ಯಾನ, ಪ್ರಹರಣ, ವಿನಯನ ಎಂಬದಾಗಿ ನಾಲ್ಕು ಸೈನ್ಯಕರ್ಮಗಳು ಈ ಕರ್ಮಗಳನ್ನು ವ್ಯೂಹರಚನೆ ಸ್ಕಂಧಾವಾರ ಪ್ರವೇಶ ಸ್ಕಂಧಾವಾರಪ್ರಯಾಣ ಮೊದಲಾದ ಸಂದರ್ಭಗಳಲ್ಲಿ ಉಪಯೋಗಿಸುತ್ತಿದ್ದರು.

ತೂರ್ಯಧ್ವಜ ಪತಾಕಾಭಿರ್ವ್ಯೂಹ ಸಂಜ್ಞಾಃ ಪ್ರಕಲ್ಪಯೇತ್ । ಸ್ಥಾನೇಯಾನೇಪ್ರಹರಣೇ ಸೈನ್ಯಾನಾಂ ವಿನಯೇರತಃ । ಅಂದರೆ ಸೈನ್ಯದ ಸ್ಥಾನಾದಿ ಕರ್ಮಗಳಲ್ಲಿ ಆಸಕ್ತನಾಗಿ ಮುರಜಾದಿವಾದ್ಯಧ್ವಜ ಪತಾಕೆಗಳಿಂದ ವ್ಯೂಹಸಂಜ್ಞೆಗಳನ್ನು ಮಾಡಬೇಕು ಎಂಬರ್ಥ. ಇಲ್ಲಿ ಸ್ಥಾನಶಬ್ದವು ವ್ಯೂಹರಚನೆ ಮತ್ತು ಅಭಿಷೇಣನವೆಂಬ ಕ್ರಿಯೆಗೆ ಸಂಬಂಧಪಟದ್ದಾಗಿರುತ್ತದೆ.

ಸ್ಥಾನಾಸನ ಗಮನ ಕಾಲಂಚ ಯಾತ್ರಾಂಯಾಯಾತ್, ಅಂಗವಿಭಾಗೇ ಸಂಘಾತೇ ಸ್ಥಾನೇ ಗಮನೇ ವ್ಯಾವರ್ತನೇ ಪ್ರಹರಣೇಚ, ಎಂಬ ಸೂತ್ರಗಳಲ್ಲಿರುವ ಸ್ಥಾನಶಬ್ದವು ಸ್ಕಂಧಾವಾರ ಪ್ರಯಾಣಕ್ರಿಯೆಗೆ ಸಂಬಂಧಪಟ್ಟದ್ದಾಗಿದೆ. ಅಂದರೆ ನೀತಿಶಾಸ್ತ್ರರೀತ್ಯಾ, ಸ್ಥಾನಶಬ್ದವು ಕ್ಷಯಾದಿ ತ್ರಿವರ್ಗ ದಂಡಾದಿ ಚತುರ್ವರ್ಗ ಸಂಧ್ಯಾದಿ ಷಡ್ಗುಣ ಸ್ಥಾನಾದಿ ಚತುಷ್ಟಯ ಅಂಗ ವಿಭಾಗಾದಿ ಷಟ್ಕ್ರಿಯಾ, ಇವುಗಳ ಮಧ್ಯದಲ್ಲಿ, ದಂಡ ಮತ್ತು ನೀತಿಗೆ ಸಂಬಂಧವಾಗಿ ಪ್ರಯೋಗಿಸಲ್ಪಟ್ಟದ್ದೆಂತ ಹಿಂದಿನ ಪ್ರಮಾಣಗಳಿಂದ ವ್ಯಕ್ತವಾಗುತ್ತದೆ. ಈ ರೀತಿಯ ಸಂದರ್ಭದಲ್ಲಿ ಅರ್ಥಶಾಸ್ತ್ರಕಾರನು ಹೇಳುವ ಸ್ಥಾನಿಕ ಶಬ್ದವು ಅದೇ ಅರ್ಥಶಾಸ್ತ್ರಕಾರನ ಪಾರಿಭಾಷಿಕವಾದ ಸ್ಥಾನಶಬ್ದದಿಂದ ಹುಟ್ಟಿದ್ದಲ್ಲದೆ ಬೇರೆಕಡೆಯಿಂದ ತಕ್ಕೊಂಡದ್ದೆಂತ ಹೇಳುವದು ಯುಕ್ತಿಯುಕ್ತವೂ ಅಲ್ಲ. ಲೋಕನ್ಯಾಯಕ್ಕೆ ಸಮ್ಮತವೂ ಅಲ್ಲ. ಇಲ್ಲಿ ಕಂಡುಬರುವ ಸ್ಥಾನ ಮತ್ತು ಸ್ಥಾನಿಕ ಶಬ್ದಗಳಿಗೆ ಎಷ್ಟರ ಮಟ್ಟಿಗೆ ಸಮೀಪ ಸಂಬಂಧವಿದೆ ಎಂಬದನ್ನು ಸಂದರ್ಭವಶದಿಂದಲೇ ತಿಳಕೊಳ್ಳಬಹುದು. ಈ ಹಿಂದೆ ವರ್ಣಿಸಿದ ದಂಡನೀತಿಯ ವಿವಿಧಾರ್ಥಗಳಲ್ಲಿ ಪ್ರಯೋಗಿಸಲ್ಪಟ್ಟ ಸ್ಥಾನಶಬ್ದದಿಂದ ಥನ್‌ಪ್ರತ್ಯಯ ಮಾಡಿಕೊಂಡರೆ ಸ್ಥಾನಿಕ ಶಬ್ದವು ಸೋಪಪತ್ತಿಕವಾಗಿ ಸಿದ್ಧವಾಗುವದು. ಇದರ ಸರಲ ಮತ್ತು ದೀರ್ಘವಿಚಾರಗಳು ಇನ್ನೊಂದು ಸಂದರ್ಭದಲ್ಲಿ ಬರಿಯಲ್ಪಡುವವು.

ಯಂ. ವಿ. ಶಾಸ್ತ್ರೀ.

ಮದ್ರಾಸು ಲೆಜಿಸ್ಲೇಟಿವ್ ಕೌನ್ಸಿಲು ಉಪಚುನಾವಣೆ.

ಮದ್ರಾಸು ಕೌನ್ಸಿಲಿನಲ್ಲಿ ನಮ್ಮ ಜಿಲ್ಲೆಯಿಂದ ಮೆಂಬರರಾಗಿರುವ ಡಾಕ್ಟರ್ ಯು. ರಾಮರಾಯರು ಕೌನ್ಸಿಲು ಒಫ್ ಸ್ಟೇಟ್ ಸಭಾ ಮೆಂಬರಿಕೆಗೆ ಉಮೇದ್ವಾರರಾಗಿ ನಿಲ್ಲುವ ಕಾರಣ ಅವರು ಕೌನ್ಸಿಲು ಮೆಂಬರಿಕೆಗೆ ರಾಜಿಕೊಡಬೇಕಾಗುತ್ತದೆ. ಆದ್ದರಿಂದ ಕೌನ್ಸಿಲಿನಲ್ಲಿ ಖಾಲಿ ಬಿದ್ದ ಅವರ ಸ್ಥಾನಕ್ಕೆ ನಡೆಯುವ ಉಪಚುನಾವಣೆಗೆ ಕಾರ್ಕಳ ನಾಗಪ್ಪ ಹೆಗಡೇರು ಉಮೇದ್ವಾರರಾಗಿ ನಿಲ್ಲಲಿಚ್ಛಿಸಿರುವರೆಂದು ನನಗೆ ತಿಳಿದು ಬರುತ್ತದೆ. ಶ್ರೀ. ಹೆಗಡೇರು ಕೌನ್ಸಿಲು ಮೆಂಬರಿಕೆಗೆ ಎಲ್ಲಾ ರೀತಿಗಳಿಂದಲೂ ಯೋಗ್ಯರಾಗಿರುವುದರಿಂದ ನಾವೆಲ್ಲರೂ ಅವರಿಗೆ ಸಹಾಯಕೊಡುವುದು ಯೋಗ್ಯವೆಂದು ನಾನು ಅಪೇಕ್ಷಿಸುತ್ತೇನೆ.

17—8—'25.

U. Srinivasa Rao,
Retired Teacher,
Pentland Pets.

ಕನ್ನಡಿಗರೆ! **ವಸಂತ.** ಕಚ್ಚೆರಿಯಿರಿ!

ಈಗಾಗಲೇ ಎರಡನೇ ಸಂಪುಟವು ಆರಂಭಿಸಲಿದೆ.

ಇತಿಹಾಸನಿಧಿ ಎಂದರೆ	ವಸಂತ
ಸಮಾಜಸುಧಾರಕನೆಂದರೆ	ವಸಂತ
ಕೈಗಾರಿಕೆಯ ಸಾಮ್ರಾಜ್ಯವೆಂದರೆ	ವಸಂತ
ಕರ್ನಾಟಕ ಭಾಷಾಸೇವಕನೆಂದರೆ	ವಸಂತ
ದೇಶವಿದೇಶ ಬಂಧುವೆಂದರೆ	ವಸಂತ
ಕಾದಂಬರಿಗಳ ಭಂಡಾರವೆಂದರೆ	ವಸಂತ
ಚಿತ್ತಾಕರ್ಷ ಚಿತ್ರಶಾಲೆಯೆಂದರೆ	ವಸಂತ
ದೇಶಭಕ್ತನೆಂದರೆ	ವಸಂತ

ಇಂತಹ ವಸಂತನು ಯಾರಿಗೆ ಬೇಕು,
ಯಾರಿಗೆ ಬೇಡ?

48 (ಕ್ರಾನ್ ¼ ಫುಟ ಸ್ಯಾಜಿನ) ಘುಟಗಳನ್ನು ಮಿಕ್ಕಿದ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3—4—0 ಮಾತ್ರ.

ವ್ಯವಸ್ಥಾಪಕ,
ವಸಂತ ಕಾರ್ಯಾಲಯ,
ಕುಂದಾಪುರ, ದಕ್ಷಿಣ ಕನ್ನಡ.

ತುಳು ಪಾಡ್ದನಗಳು.

ಬೊಬ್ಬರ್ಯ, ಕಲ್ಕುಡ-ಕಲ್ಲುರ್ಟಿ, ದೈಯ್ಯೊಂಗುಳು—ಕೋಡಕಿನಾರ್, ಮುಂಡತ್ತಾಯ ಪ್ರತಿ ಒಂದಕ್ಕೆ 2 ಆಣೆ. 11¼ ಆಣೆ ಟಪ್ಪಾಲು ಚೀಟು ಕಳುಹಿಸಿದರೆ 5 ಪುಸ್ತಕಗಳು ಕೂಡಲೇ ಕಳುಹಿಸಲ್ಪಡುವವು.

ವಿಳಾಸ: ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಸಾರಸ್ವತ.

ಕನ್ನಡ ಮತ್ತು ಕೊಂಕಣಿ ಭಾಷೆಗಳಲ್ಲಿ ಕಳೆದ ವಿಜಯ ದಶಮಿಯಾ ದಿನದಿಂದ ಪ್ರತಿ ದಶಮಿಗೆ ಹೊರಡುವ ಪತ್ರಿಕೆ.

ವಿ. ಎಸ್. ಕಾಮತ್, } ಸಂಪಾದಕರು.
ಮೂಲ್ಕಿ ವಾಮನ ಕುಡುವ

ಮತಸಂಸ್ಥೆ ಮತ್ತು ಸಮಾಜಕ್ಕೆ ಸಂಬಂಧಪಟ್ಟ ಇತರ ಸಂಸ್ಥೆಗಳ ಸುಸಂಘಟನೆ.

ಸಮಾಜದೊಳಗೆ ಅನ್ಯೋನ್ಯ ಸಾಧನೆ.

ಸ್ತ್ರೀಸಮಾಜಕ್ಕೆ ಉಪಯುಕ್ತವಾದ ವಿಷಯಗಳ ನಿರೂಪಣ

ಮತಭಾವನೆಗಳ ಉಜ್ಜೀವನ ಇತ್ಯಾದಿ ಉದ್ದೇಶಗಳಿಂದ ಈ ಪತ್ರಿಕೆಯು ಹೊರಡಿಸಲ್ಪಡುವುದು. ಸಾರಸ್ವತ ಸಮಾಜವು ಇದಕ್ಕೆ ಪ್ರೋತ್ಸಾಹವನ್ನೀಯಬೇಕಾಗಿ ಪ್ರಾರ್ಥನೆ.

ಚಂದಾಹಣ ಅಂಚೆವೆಚ್ಚ ಕೂಡಾ ರೂ. ೧—೪—೦.

ಪೋಷಕರು ರೂ. ೧೦—೦—೦. ಸಹಾಯಕರು ರೂ. ೫—೦—೦. ಮಾದರಿ ಸಂಚಿಕೆಯನ್ನು ಟಪ್ಪಾಲು ಖರ್ಚಿಗಾಗಿ ಅರ್ಧಾಣೆ ಸ್ಟಾಂಪು ಕಳುಹಿಸುವವರಿಗೆ ಉಚಿತವಾಗಿ ಕಳುಹಿಸುವೆವು.

ಕನ್ನಡ ನಾಡಿನಲ್ಲಿ ಪ್ರತಿ ಕಡೆಯಲ್ಲಿಯೂ ಬಾತಮೀದಾರರು ಬೇಕು.

ಎಲ್ಲಾ ಪತ್ರವ್ಯವಹಾರಗಳನ್ನು ಕೆಳಗಿನ ವಿಳಾಸಕ್ಕೆ ನಡೆಸಬೇಕು.

ಯು. ನಾರಾಯಣನಾಯ್ಕ, ಕಾರ್ಯದರ್ಶಿ,
ಸಾರಸ್ವತ, ಉಡುಪಿ.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.	1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟು, ಪೂರ್ಣವಾಗಿ ತೆತ್ತ ಮೂಲಧನವು ರೂ. 300,000—0—0
Reserve and other sinking Funds „ 259,000—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು 259,000—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರಿಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1925.

K. Venkat Rao,
Secretary.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಿಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೫೦ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ೬ಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೫೦ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲ ಪಂಡಿತರು,

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಪ್ಪ, ಸೋಡಾ ಫಾಕ್ಟರಿ,
ಮಂಗಳೂರು ಟವನಿಗೆ ಮಾತ್ರ.

ಆರೋಗ್ಯ ಚಂದ್ರಿಕೆ.

ಸಂಪಾದಕರು: ಡಾಕ್ಟರ್ ಯು. ರಾಮರಾವ್, ಎಲ್. ಎಮ್. ಸಿ. ಎಫ್. ಎಮ್. ಯು. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವುದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ ರೂ. ೧—೮—೦; ಬಿಡುಪತ್ರಿಕೆ ಒಂದಕ್ಕೆ ರೂ. ೦—೩—೦. ಹಿಂದಿನ ಸಂಚಿಕೆಗಳು ಕೂಡ ದೊರಿಯುವವು.

ಚಂದಾದಾರರಾಗುವವರು ವಿ. ಪಿ. ಮೂಲಕವಾಗಿ ತರಿಸಿಕೊಳ್ಳುವುದಕ್ಕಿಂತಲೂ ಹಣವನ್ನು ಮುಂಗಡವಾಗಿ ಕಳುಹಿಸುವುದು ಲಾಭಕರ. ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು 'ಆರೋಗ್ಯ ಚಂದ್ರಿಕೆ'ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು.

ಪತ್ರವ್ಯವಹಾರಕ್ಕೆ: 'ಆರೋಗ್ಯ ಚಂದ್ರಿಕೆ'
೩೨೩ ತಂಬುಚೆಟ್ಟಿ ಬೀದಿ, ಮದ್ರಾಸ್.

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ

ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ವಾಂಸರೂ ತಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ಮಾರ್ಕೆಟ್ ವರ್ತಮಾನಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನು ಕುರಿತ ಲೆಕ್ಕಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಧನಿಕರಿಗೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪೋಷಕರಿಗೆ	...	...	ರೂ. 3—0—0
ಇತರರಿಗೆ, ಪರಸ್ಥಳಕ್ಕೆ, ಪೋಸ್ಟೇಜು ಸೇರಿ			„ 2—8—0.
„ ಸ್ಥಳೀಕರಿಗೆ	...		„ 1—8—0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪತ್ರಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕಳಗೆ ಕಂಡ ವಿಳಾಸಕ್ಕೆ ಬರೆದು ತಿಳಿಯಬಹುದು.

ಎಡಿಟರ್,
ಬಿ. ಹನುಮಂತಯ್ಯಗೌಡ,
ಅರ್ಥಸಾಧಕ ಪತ್ರಿಕೆ,
ಅರಳೇ ಪೇಟೆ, ಬೆಂಗಳೂರು ಸಿಟಿ.

"ಬಹು ದಿವಸಗಳಿಂದ ಪ್ರಸಿದ್ಧವಾಗುತ್ತಿರುವ ಔಷಧ"!

ರಕ್ತ ಶುದ್ಧಿ

ವಜ್ರಾಂಗ-ಬಿಂದು

ವೀರ್ಯ ವೃದ್ಧಿ ಕಾರಕ

ವಜ್ರಾಂಗಬಿಂದುವೆಂಬ ಈ ಮಹೌಷಧಿಯನ್ನು ಅನೇಕ ಪರ್ವತಗಳಲ್ಲಿ ಉತ್ತಮೋತ್ತಮವಾದ ಮತ್ತು ಅತ್ಯಧಿಕವಾಗಿ ಗುಣ ಕೊಡುವಂತಹ ವನಸ್ಪತಿಗಳ ಅರ್ಕದಿಂದ ಉಪಯುಕ್ತವಾದ ಮತ್ತು ಉಚ್ಚತರದ ಭಸ್ಮಗಳ ಮಿಶ್ರಣಮಾಡಿ ಯಾಂತ್ರಿಕ ಸಹಾಯದಿಂದ ಸಿದ್ಧಪಡಿಸಿರುತ್ತದೆ. ಈ ವಜ್ರಾಂಗಬಿಂದುವಿನ ಸೇವನೆಯಿಂದ ಕೆಳಗೆ ಬರೆದ ರೋಗಗಳು ಗುಣವಾಗಿ ಹೊಸ ಮನುಷ್ಯನಾಗುತ್ತಾನೆಂದರೆ ಅತಿಶಯೋಕ್ತಿಯಾಗಲಾರದು.

ಈ ಮಹೌಷಧಿಯ ಸೇವನೆಯಿಂದ, ವಾತ, ಪಿತ್ತ, ಕಫ ಈ ಮೂರು ದೋಷಗಳಿಂದ ಉತ್ಪನ್ನವಾಗುವ ರೋಗಗಳು ಗುಣವಾಗುವದಲ್ಲದೆ, ಸ್ವಪ್ನಜನ್ಯ, ಧಾತುಪಾತ ನಪುಂಸಕತ್ವ, ಪರಮಾ ಮತ್ತು ಗರಮಿ ಇವುಗಳ ಸಮೂಲ ನಾಶವಾಗುತ್ತದೆ. ಬಹು ದಿವಸದಿಂದ ಮೈಯಲ್ಲಿ ಅಂಟಿಕೊಂಡ ಕೆಡಕಿಯಂತೂ ಒಂದೇ ವಾರದಲ್ಲಿ ಗುಣವಾಗುವದು. ಲಘುವಿಗಿಂತ ಮೊದಲು ಅಥವಾ ಕಡೆಗೆ ಸ್ರಾವದಾಗಿ ಹೋಗುವ ಧಾತು ಬಂದಾಗುತ್ತದೆ. ತಿಂದ ಅನ್ನವು ಜೀರ್ಣವಾಗಿ ಮಲವು ಸರಿಯಾಗಿ ಹೋಗುವದು ಯಾವದೇ ಕಾರಣದಿಂದ ಬಂದ ಅಶಕ್ತತೆಯೂ ಕಣ್ಣಿಗೆ ಕತ್ತಲೆ ಬಂದಂತಾಗಿ ಬರುವದು, ಕೈಕಾಲುಗಳು ಉರಿಯುವದು, ಮುಂತಾದ ಸಕಲ ವಿಕಾರಗಳೂ ನಾಶಹೊಂದುತ್ತವೆ. ವೀರ್ಯವೃದ್ಧಿ, ರಕ್ತಶುದ್ಧಿಗಳಾಗಿ ಮನುಷ್ಯನು ಬಲವಂತನಾಗುತ್ತಾನೆ. ಪೂರ್ಣ ಗುಣ ಬರಬೇಕಾದರೆ ಮೂರು ಬಾಟ್ಲಿಗಳು ಬೇಕು.

೧ ಬಾಟ್ಲಿಗೆ ರೂ. ೧—೪—೦. ೩ ಬಾಟ್ಲಿಗಳಿಗೆ ರೂ. ೩—೪—೦. ೧೨ ಬಾಟ್ಲಿಗಳಿಗೆ ರೂ. ೧೦—೦—೦.

ಇದರ ಜೊತೆಗೆ ಒಂದು ಬಾಟ್ಲಿಯು ಉಚಿತ. ಟಪ್ಪಾಲ ಪ್ಯಾಕಿಂಗ ಖರ್ಚು ಪ್ರತ್ಯೇಕ. ಒಮ್ಮೆಯೇ ಹೆಚ್ಚಿಗೆ ಬಾಟ್ಲಿಗಳನ್ನು ತರಿಸಿಕೊಂಡರೆ ಟಪ್ಪಾಲು ಖರ್ಚು ಹೆಚ್ಚಿಗೆ ಬೀಳಲಾರದು. ಏಜಂಟರಾಗಲಪೇಕ್ಷಿಸುವವರು ಪತ್ರವ್ಯವಹಾರ ನಡಿಸಿ, ಖುಲಾಸೆ ತಿಳಕೊಳ್ಳಬಹುದು.

ಟಪ್ಪಾಲ ಮತ್ತು ಪ್ಯಾಕಿಂಗ ಖರ್ಚು ಬೇರೆ ಬೀಳುವುದು. ಅನುಪಾನ ಪತ್ರವು ಬಾಟ್ಲಿಯ ಸಂಗಡಲೇ ಕಳಿಸಲ್ಪಡುವುದು.

ಪತ್ತೆ, ಮ್ಯಾನೇಜರ, ಕೆ. ಎಮ್. ಹನುಮಾನ ಪ್ರಸಾದಿಕ ಕಂಪೆನಿ,
ಮು. ಪೋ. ಶಿಪ್ಪಾಣೇ, (ಜಿಲ್ಲಾ ಬೆಳಗಾಂವ.)

ಶುದ್ಧವಾದ ನೀಲಗಿರಿ ಎಣ್ಣೆ

ತಲೆನೋವು, ಶೀತ, ಇನ್‌ಪ್ಲುಯೆಂಜಾಜ್ವರ,
ವಾತ, ಇತ್ಯಾದಿ ಎಲ್ಲಾ ರೋಗಗಳ
ಮೇಲೆ ಸಿದ್ಧೌಷಧ

1 ಔನ್ಸು ಬಾಟ್ಲಿ 1ರ ಕ್ರಯ 0—4—0.

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು.

ಜ್ಯೋತಿಷ್ಯ ಸಂಗ್ರಹ.

(1) ಬೃಹಜ್ಜಾತಕ ... ...
(2) ಉಮಾಮಹೇಶ್ವರ ಸಂವಾದ ಎಂಬ ಜ್ಯೋತಿಷ್ಯ ಕಾಲಚಕ್ರ
(3) ಕೇರಳ ಪ್ರಶ್ನೆ ... ...
(4) ಪ್ರಶ್ನೋತ್ತರ ರತ್ನಮಾಲಿಕಾ ... ...
(5) ನವನೀತಾರಿಷ್ಟವು ... ...
(6) ಷಟ್ಪಂಚಾಶತ್ ಗ್ರಂಥ ... ...
(7) ನಕ್ಷತ್ರ ಚೂಡಾಮಣಿ ಗ್ರಂಥ ... ...
(8) ಮುಹೂರ್ತಪದವೀಗ್ರಂಥ ... ...
(9) ಅಷ್ಟದಿಕ್ಪಾಲಕ ಮಂಗಳಾಷ್ಟಕಗಳು ... ...
(10) ಕಾಲನಿರ್ಣಯಾಭ್ಯೋಯಂ ಗ್ರಂಥ ... ...
(11) ಸವ್ಯಾಖ್ಯಾನ ಕಾಲಾಮೃತ... ... ...

— ಪ್ರಸಂಗದ ಪುಸ್ತಕಗಳು. —

(1) ಸೇತು ಬಂಧನ ... ...
(2) ವಸಿಷ್ಠ ಪುರಾಣ ... ...
(3) ಇಂದ್ರಜಿತು ಕಾಳಗ ... ...
(4) ಚಂಡಭೀಮ ... ...
(5) ಮೈರಾವಣನ ಚರಿತ್ರೆ ... ...
(6) ಭಾಮಿನಿ ಷಟ್ಪದಿ ಚೋರ ಕಥೆ ... ...
(7) ಕುವರಾರ ರಾಮನ ಕಥೆ ... ...
(8) ಕೃಷ್ಣದಾಸಾಮೃತ ... ...
(9) ಶ್ರೀಕೃಷ್ಣ ಸತ್ಯಭಾಮಾ ಸಂವಾದ ... ...
(10) ಚಿತ್ರಕೇತು ರಾಜನ ಕಥೆ ... ...
(11) ಬಕಾಸುರ ವಧೆ ... ...
(12) ಬಾಣಾಸುರನ ಕಥೆ ... ...
(13) ರಂಭಾಶುಕ ಸಂವಾದ ... ...
(14) ರುಕ್ಮಿಣೀ ಪರಿಣಯ ... ...
(15) ರಾವಣೋದ್ಭವ ಯಕ್ಷಗಾನ ... ...
(16) ಸಭಾ ಲಕ್ಷಣವು ... ...
(17) ಶ್ರೀ ಕೃಷ್ಣದಿನಾಷ್ಟಮೀದ ಕಥಾ ... ...
(18) ಚಂದ್ರಮೌಳಿ ಕಾಳಗ ... ...
(19) ಚಿತ್ರವಿಚಿತ್ರ ಕಾಳಗ ... ...
(20) ಯಕ್ಷಗಾನ ಸಾರಂಗಧರನ ಕಥೆ ... ...
(21) ,, ಶನಿದೇವರ ಮಹಾತ್ಮೆ ... ...
(22) ,, ಹರಿಶ್ಚಂದ್ರನ ಕಥೆ
(23) ಯಕ್ಷಗಾನ ಲಕ್ಷ್ಮಣನ ಕಥೆ ... ...
(24) ,, ಚೋರ ಕಥೆ ... ...
(25) ,, ಪಾರ್ವತಿ ಕಾರವಂಚ ಕಥೆ ...
(26) ,, ಗೋವಿನ ಚರಿತ್ರೆ ... ...
(27) ,, ದುಶ್ಯಾಸನ ಕಥೆ ... ...
(28) ,, ಸಾನಂದ ಗಣೇಶ್ವರ ಕಥೆ ... ...
(29) ,, ಅಂಗದ ಸಾಧನ ... ...

— ಭಜನೆಯ ಪುಸ್ತಕಗಳು. —

(1) ಉಡುಪಿಕ್ಷೇತ್ರ ಮಹಾತ್ಮೆ ... ...
(2) ಹನುಮದ್ರಾಮಾಯಣ ... ...
(3) ಅಧ್ಯಾತ್ಮ ವಿಚಾರ ... ...
(4) ಭಕ್ತಿಮಹಿಮೆ ... ...
(5) ಪ್ರಬಂಧ ಮಣಿಮಾಲೆ ... ...
(1) ಹರಿಕೀರ್ತನಾಮೃತಸಾರ ... ...
(2) ಹರಿನಾಮಾಮೃತಂ. ... ...
(3) ರುಕ್ಮಿಣೀ ಕಲ್ಯಾಣ ... ...
(4) ಮಂಗಳ ಗೌರೀಹಾಡು ... ...
(5) ಉದ್ವಾಳೀಕನ ಹಾಡು ... ...
(6) ಯಕ್ಷಗಾನ ಗಿಳೀ ಹಾಡು ... ...
(7) ಕನಕದಾಸ ಕಬೀರದಾಸರ ಕೀರ್ತನೆಗಳು ...
(8) ಬೀಗರ ಹಾಡು ... ...
(9) ಭಜನೆಯ ಪದಗಳು ... ...

— ವಿವಿಧ ಪುಸ್ತಕಗಳು. —

(1) ಸದಾಚಾರ ವಿವೇಚನೆ ... ...
(2) ಗೋಪಾಲಕೃಷ್ಣ ಗೋಕಳೆ ... ...
(3) ಶ್ರೀಕೃಷ್ಣ ಸೇವಾವ್ರತಂ ... ...
(4) ಪಕ್ಷಾತ್ತಾಪ ಭಾಷ್ಪ ... ...
(5) ಶ್ರೀ ಶ್ರೀಮಹಾ ಭಾಗವತ ... ...
(6) ಉದ್ಧಯನ ಚರಿತ್ರೆ ... ...
(7) ಮಧ್ವಾಚಾರ್ಯರು (ಶ್ರೀಮಾನ್) ... ...
(8) ಯತಿರಾಜವಿಂಶತಿ ... ...
(9) ಪರಮಾರ್ಥಶತಕಂ ... ...
(10) ಭಕ್ತಿಕುಸುಮಾಂಜಲಿ ... ...
(11) ಸತ್ಯರಾಜ ಪೂರ್ವದೇಶ ಯಾತ್ರೆಗಳು ...
(12) ಕಾಲನಿರ್ಣಯಾಖ್ಯಾನ ... ...
(13) ಅರೇಬಿಯನ್ ನಾಯ್ಟ್ಸ್ 1000 ಪುಟಗಳ ಮೇಲೆ ಇವೆ.

ಪುಸ್ತಕಗಳು ದೊರೆಯುವ ಸ್ಥಳ :— ಶಾರದಾ ಛಾಪಖಾನೆ,
ರಥ ಬೀದಿ, ಮಂಗಳೂರು.

ಮನುಷ್ಯರಿಗೆ ಮತಿಸ್ಥಿತಿಗಿಂತಲೂ ಹೆಚ್ಚಾದ್ದು ಯಾವುದೂ ಇಲ್ಲ.

ಜನ್ಮದಲ್ಲ ಶಕ್ಯಸುಖಗಳು ಅನುಭವಿಸುವುದರಲ್ಲಿ ಅಪಜಯವಿಲ್ಲದೇ ಧನ್ಯನಾಗುವುದಕ್ಕೆ ಮುಖ್ಯ ಸಾಧನ ಮತಿಸ್ಥಿತಿಯೇ ರಾಮಬಾಣವೆಂದು ಹೇಳಬಹುದು.

ಆದರೆ ಪ್ರಸ್ತುತ ನಾವು ಅನುಭವಿಸುವ ಚಪಲಚಿತ್ತದಲ್ಲಿ ಮತಿಸ್ಥಿತಿ ಉಂಟಾಗುವುದು ಸಾಧ್ಯ ಹೇಗೇ ನಿಮಗೆ ಯಾವವಿಧವಾದ ಚಪಲಚಿತ್ತವಿದ್ದಾಗ್ಯೂ, ನಮ್ಮ ಆತಂಕನಿಗ್ರಹ ಮಾತ್ರೆಗಳನ್ನು ಉಪಯೋಗಿಸಿರಿ. ಈ ಮಾತ್ರೆಗಳೇ ತನ್ನ ಮೆದುಳಿನಲ್ಲಿರುವ ದುರ್ಬಲವನ್ನು ನಿವಾರಿಸಿ, ದೃಢಚಿತ್ತವನ್ನುಂಟುಮಾಡುವುದು.

ಈ 32 ಮಾತ್ರೆಗಳುಳ್ಳ ಡಬ್ಬಿ ಒಂದಕ್ಕೆ ರೂಪಾಯಿ ಒಂದು ಮಾತ್ರ.

ಹಿಂದೂದೇಶದಲ್ಲಿಯೂ ಮತ್ತು ಇತರ ದೇಶಗಳಲ್ಲಿಯೂ ಪ್ರತಿಯೊಂದು ಗೃಹದಲ್ಲಿ ಪ್ರಯೋಜನಕರವಾದ ಒಂದು ಪುಸ್ತಕ ಇರುವುದು. ನಿಮಗೆ ಗೊತ್ತುಂಟೋ? ಆ ಪುಸ್ತಕದ ಹೆಸರೇ

“ಕಾಮಶಾಸ್ತ್ರ.”

ನೀವು ಇದುವರೆವಿಗೂ ಆ ಪುಸ್ತಕದಲ್ಲಿ ವಿವರಿಸಿದ ಘನ ವಿಷಯಗಳನ್ನು ನೋಡದೇ ಇದ್ದಪಕ್ಷಕ್ಕೆ, ಈ ದಿನ ನಮಗೆ ಒಂದು ಕಾರ್ಡು ಬರೆದರೆ ಪೋಸ್ಟು ಚಾರ್ಜು ನಿಮಗಿಲ್ಲದೇನೇ, ಆ ಪುಸ್ತಕವನ್ನು ಕಳುಹಿಸುತ್ತೇವೆ.

ಆತಂಕನಿಗ್ರಹ ಔಷಧಾಲಯ,
ನಂಬ್ರ 26, ಬ್ರಾಡ್ವೆ, ಮದರಾಸು.

Agents:—
Messrs RAPHAEL & Co.,
MANGALORE.

ದಕ್ಷಿಣ ಕನ್ನಡ ಜಿಲ್ಲೆಯ
ಪ್ರಾಚೀನ ಇತಿಹಾಸ

450 ಪುಟಗಳು. ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

೧,೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು
— ತೆಗೆದುಕೊಳ್ಳಿರಿ. —

REGISTERED
TRADE
MARK

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ ಸ್ವಪ್ನೇಂದ್ರಿಯ ವಾದರೂ, ಸ್ತ್ರೀ ಸಂಭೋಗಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ದಾರ್ಢ್ಯತೆಯನ್ನೂ ಉಂಟುಮಾಡುವುದು. ಕೈ ಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಾಮಿಸ್ರಿ ಎಂಬುವದು ಕಾಬೂಲ್ ಕಂದಹಾರ ಪ್ರಾಂತ್ಯಗಳಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ಹಾದಾಗಿಯೇ ಅನೇಕ ದೇಶಗಳಿಂದಲೂ ಆಫ್ರಿಕಾ, ಬರ್ಮ, ಪಿನಾಂಗ್ ಸಿಂಗಪೂರ್, ಸಿಲೋನ್ ಮತ್ತು ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. ೧ ಡಬ್ಬಿಯನ್ನು ೧೫ ದಿವಸ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. ೨ ಯಾ ೪ ಡಬ್ಬಿಗಳು ಜನ್ಮಾಂತ್ಯದವರೆಗೂ ಪೂರ್ತಿಯಾಗಿ ಗುಣವನ್ನು ಮಾಡುವವು. ಅನುಪಾನ ಪತ್ರಿಕೆಯು ಡಬ್ಬಿಯ ಸಂಗಡವೇ ಇರುತ್ತೆ. ಹೆಸರು ವಿಳಾಸಗಳನ್ನು ಚೆನ್ನಾಗಿ ತಿಳಿಯುವ ಹಾಗೆ ವಿವರವಾಗಿ ಬರೆಯಬೇಕು. ಕ್ರಯ ಡಬ್ಬಿ ೧ಕ್ಕೆ ರೂ. ೨—೦—೦.

ಟಪ್ಪಾಲು ಖರ್ಚು ೧ ರಿಂದ ೪ ಡಬ್ಬಿಗಳವರೆಗೆ ೦—೮—೦.

ಏಜಂಟರು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯವಾಗಿ ಬೇಕಾಗಿರುತ್ತೆ. ರೂಲ್ಸ್ ತರಿಸಿ ನೋಡಿಕೊಳ್ಳಬಹುದು.

ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಿರಿ.

[illegible] ಅಂಡ್ ಕಂಪೆನಿ,
[illegible] ಮಿಸ್ರಿ
ಬೆಂಗಳೂರು ಸಿಟಿ.

ಡಿ. ಮಹಮ್ಮದ್ ಇಕ್ಬಾಲ್,
[illegible] ಡೀಲರ್,
ಸಾಲಾಮಿಸ್ರಿ ಮುರಬ್ಬ ಡಿಪೋ,
ಬೆಂಗಳೂರು ಸಿಟಿ.



—ಗೋಡೆಗೆ ತಗಲಿಸುವ
ಹೊಸ ನಮೂನೆಯ—

ಟಿಕ್—ಟಾಕ್

ಎಂಬ ಈ ಗಡಿಯಾರಗಳು ಜರ್ಮನೀ ದೇಶದಲ್ಲಿ ತಯಾರಿಸಿದ್ದು. ಇವು ಕಂಠಾರು ಘಂಟೆಯನ್ನು ತೋರಿಸುವವು. ಇವಕ್ಕೆ ಬೀಗ ಕೊಡಬೇಕಾದಿಲ್ಲ. ಇದರಲ್ಲಿ ಕಾಣುತ್ತಿರುವ ಗುಂಡನ್ನು ಮೇಲಕ್ಕೆ ಎಳೆದರೆ ಸಾಕು. ತನ್ನಷ್ಟಕ್ಕೆ ತಾನೇ ಟಿಕ್—ಟಾಕ್ ಎಂಬ ಶಬ್ದವನ್ನು ಮಾಡುತ್ತಾ ಸರಿಯಾದ ಕಾಲವನ್ನು ತೋರಿಸುವದು. ಇದು ನೋಡುವುದಕ್ಕೆ ಬಹು ಲಕ್ಷಣವಾಗಿರುವುದು.

ಕ್ರಯ 1ಕ್ಕೆ ರೂ. 8—0—0

ಪೀಟರ್ ವಾಚ್ ಕಂಪೆನಿ

ಪೋಸ್ಟ್ ಬಾಕ್ಸ್ ನಂ. 27, ಮದ್ರಾಸ್.



---

11 ಮಣಿಗಳಿದ್ದು ಬ್ರಿಜ್ ಮೂವ್ಮೆಂಟ್.

22 ಕೆರೆಟ್ ರೋಲ್ಡ್‌ಗೋಲ್ಡ್ ರಿಸ್ಟ್‌ವಾಚ್

ಈ ವಾಚ್ ಎಂಟಾಣೆ ಪಾವಲಿಯಷ್ಟು ಸಣ್ಣದಾಗಿ ಬಹು ಚಲೋದಾದ ಇನೆಮಲ್ ಡಾಯಲ್ ಇದ್ದು ಬಹು ಉತ್ತಮವಾಗಿದೆ. 5 ವರ್ಷದಗ್ಯಾರಂಟಿ ಇದೆ. ಕ್ರಯ ರೂ. 12/8

18 ಕೆರೆಟು ಇಲೆಕ್ಟ್ರೊ ರೋಲ್ಡ್‌ಗೋಲ್ಡ್ ವಾಚ್ ಕ್ರಯ ರೂ. 7—0—0. “ಬಿ” ಟ್ಯಾಮ್‌ಪೀಸ ರೂ. 2-4-0.

9 ಕಾರಾಟ್ 8 ಮಣಿಗಳ ವಾಚ್ 1ರ ಕ್ರಯ 23—0—0.
14 ,, ,, ,, 26—0—0.
14 ,, 15 ಮಣಿ ,, 36—0—0.
9 ,, ,, ,, 32—0—0.

ಚಲೋದಾದ ಲವ್ ನಕ್ಲೆಸ್‌ಗಳು ಡಜನ್ 1ಕ್ಕೆ ರೂ. 2/14.

P. Sambasiva Chetty & Co.,
134 NAINEAPPA NAICKEN ST.
P. T. MADRAS.

ಶುದ್ಧ ರೋಮದ ಧಾವಳಿಗಳು.

1 ಮಳ ಉದ್ದ 1¼ ಮಳ ಅಗಲ ರೂ. 1½ರಿಂದ 2 ವರೆಗೆ, 5 ಮಳ ಉದ್ದ 1½ ಮಳ ಅಗಲ ರೂ. 1½ ರಿಂದ 5 ವರೆಗೆ, 6 ಮಳ ಉದ್ದ 1½ ಮಳ ಅಗಲ ರೂ. 2½ರಿಂದ 6 ವರೆಗೆ, 8 ಮಳ ಉದ್ದ 2 ಮಳ ಅಗಲ ರೂ. 3½ರಿಂದ 10 ವರೆಗೆ, 12 ಮಳ ಉದ್ದ 2¼ ಮಳ ಅಗಲ ರೂ. 6ರಿಂದ 12 ವರೆಗೆ, 16 ಮಳ ಉದ್ದ 2¼ ಮಳ ಅಗಲ ರೂ. 9 ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಖದ್ದರ್ ರೇಷ್ಮೆ ಮಡಿಗಳು, ಸಾಮಗ್ರಿಗಳು, ಕಾಶೀ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, ಬಾಣಲಿಂಗ, ಜಾಘಂಟೆ, ತಾಳ, ಪಶ್ಮೀರ್‌ದಾಶಿ, ಹಿತ್ತಾಳೆಯ ಆಟದ ಸಾಮಾನುಗಳು, ಫೋಟೋ ಉಂಗುರಗಳು ಮತ್ತು ಇನ್ನೂ ಅನೇಕ ಸಾಮಾನುಗಳು ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುವು. ಕ್ಯಾಟಲಾಗ್ ಇನಾಂ.

ವಿಳಾಸ—
ಶಿರೋಮಣಿ ಮು. ನಾರಾಯಣಾಚಾರ್ಯ
ಮುತ್ತು ಕಂಪೆನಿ, [illegible], [illegible].

Edited, Printed & Published by V. S. Kamath at the M. T. A. Sharada Press, Mangalore.

Registered: No. M. 498.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರದ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷದ ಸುಡುತ ಬರುತಿರುವ ॥
ಗರಲಕವರಂಜಿದರೆ ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೯. ಮಂಗಳೂರು, ತಾರೀಕು ೨೧ನೇ ಶುಕ್ರವಾರ ಆಗೋಸ್ತು ೧೯೨೫. ಸಂಚಿಕೆ ೩೫.

Th Canara Banking Corporation, UDIPI, Ltd.
ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head Office: UDIPI. Branch: COONDAPOOR.
ಹೆಡ್ ಆಫೀಸು: ಉಡುಪಿ. ಶಾಖೆ: ಕುಂದಾಪುರ.

ಚಂದಾ ಹಾಕಿ ಯೆತ್ತಿದ ಮೂಲಧನ	ರೂ. 2,25,000—0—0.
ವಸೂಲ್ಯತೆತ್ತ ಮೂಲಧನ	ರೂ. 1,71,875—9—11.
ಕ್ಷೇಮನಿಧಿ ವ ಇತರ ಫಂಡುಗಳು	ರೂ. 64,700—0—0.
ಠೇವಣಾತಿಗಳು	ರೂ. 4,83,945—2—9.

— ವಿನಿಯೋಗ —

ಗವರ್ನಮೆಂಟು ಪ್ರಾಮಿಸರಿ ನೋಟಿನ ಮೇಲೆ	ರೂ. 25,800—0—0.
ಡಿಮಾಂಡು ನೋಟು ವ ಬೀಲುಗಳ ಮೇಲೆ	ರೂ. 5,92,445—9—4.
ಚಿನ್ನಾಭರಣ ಮುಂತಾದ ಭದ್ರತೆಸೊತ್ತುಗಳ ಮೇಲೆ	ರೂ. 1,11,658—8—6

ಈ ಕೆಳಗಿನ ಠೇವಣಾತಿಗಳನ್ನು ಅಂಗೀಕರಿಸುವುದಲ್ಲದೆ ಇತರ ಬ್ಯಾಂಕುಗಳ ಮೇಲಣ ಹುಂಡಿ ಚೆಕ್ಕುಗಳನ್ನೂ ಸಾಹುಕಾರಿ ಹುಂಡಿಗಳನ್ನೂ ವಟ್ಟಾಯಿಸುವ ಮತ್ತು ಇತರ ಎಲ್ಲಾ ತರದ ಬ್ಯಾಂಕಿನ ವಹಿವಾಟುಗಳು ನಡೆಸಲ್ಪಡುವವು.

ಠೇವಣಾತಿಗಳು.

ನಿರಖು ಠೇವಣಾತಿಗಳು:—ಸಾ. ಸೆ. 6½ ರಿಂದ 7½ ವರೆಗಿನ ಬಡ್ಡಿಯನ್ನು ಪ್ರತಿ 3 ತಿಂಗಳಿಗೊಮ್ಮೆ ತೆರುವ ಅನುಕೂಲ ವ ಲಾಭದಾಯಕವಾದ ಶರ್ತಗಳ ಮೇಲೆಯೂ

ಕೊಂಚ ಅವಧಿ ಠೇವಣಾತಿಗಳು:—1 ತಿಂಗಳ ನಂತರ 15 ದಿವಸಗಳ ನೋಟೀಸಿಗೊಳಪಟ್ಟು ಹಿಂತೆಗೆಯಬಹುದಾದ ಠೇವಣಾತಿಗಳನ್ನು ಸಾ. ಸೆ. 5ರ ದರದ ಬಡ್ಡಿ ನಡದ ದಿನಗಳಿಗೆ ಕೊಡುವ ಶರ್ತದಿಂದಲೂ

ಚಾಲ್ತಿ ಠೇವಣಾತಿಗಳು:—ದಿನಂಪ್ರತಿ ಇರುವ ಶಿಲ್ಕಿನ ಮೇಲೆ ಸಾ. ಸೆ. 3ರಂತೆ ಬಡ್ಡಿ ತೆರುವ ಶರ್ತದ ಮೇಲೂ

ಸೇವಿಂಗ್ಸ್ ಬ್ಯಾಂಕು ಠೇವಣಾತಿಗಳು:—ಸಾ. ಸೆ. 4½ರ ಬಡ್ಡಿಯ ಮೇಲೂ

ಸಂಚಯ ಠೇವಣಾತಿಗಳು:—ಮಕ್ಕಳ ವಿದ್ಯಾಭ್ಯಾಸ, ಉಪನಯನ, ವಿವಾಹ ಮುಂತಾದ ಶುಭಕಾರ್ಯಗಳಿಗೆ ಅನುಕೂಲವಾಗಿ ನಿಶ್ಚಯದಂತೆ ತಿಂಗಳು 1ರ ರೂಪಾಯಿ 1ರಂತೆ 13-24-45-84-132 ತಿಂಗಳುಗಳಿಗೆ ವಸೂಲುಪಡಕೊಂಡು ಕಂತುಗಳ ಅವಧಿ ಮುಗಿದ ಮೂರು ತಿಂಗಳಲ್ಲಿ ಆಯಾಯ ಅವಧಿಮೇರೆಗೆ ರೂ. 13-8-0, ರೂ. 25-8-0, ರೂ. 50, ರೂ. 102-8-0 ಮತ್ತು 182-8-0ನ್ನು ಅದೇ ಮೇರೆಗೆ ತಿಂಗಳು 1ರ ರೂಪಾಯಿ 1ರ ಗುಣವೃದ್ಧಿ ಮೊಬಲಗನ್ನು ತೆತ್ತಲ್ಲಿ ಆಯಾಯ ಮೊಬಗಿನ ಇದೇ ಗುಣವೃದ್ಧಿ ಮೊಬಲಗನ್ನು ತೆರುವ ಶರ್ತದ ಮೇಲೂ ಅಂಗೀಕರಿಸಲ್ಪಡುವವು.

ಹೆಚ್ಚಿನ ಮಾಹಿತಿ ಸೆಕ್ರೆಟರಿಯವರಿಂದ ತಿಳಿಯಬಹುದು.

ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಹೆಡ್ ಆಫೀಸು, ಉಡುಪಿ, ತಾ. 30—6—1925.
ನಯಂಪಳ್ಳಿ ಆನಂದ್ರಾವ್, ಸೆಕ್ರೆಟರಿ ಮತ್ತು ಒಫಿಶಿಯೆಟಿಂಗ್ ಮೆನೇಜರ್.

ಮೂರು ದಿವಸಗಳಲ್ಲಿ ಗುಣಸಿಕ್ಕದಿದ್ದರೆ ಔಷಧಿಯ ಕ್ರಯ ವಾಪಾಸು.

ಜೀರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ, ಪರಮಾನಂದ ಮೊದಲಾದ ಸುಖಜೀವನಕ್ಕೆ ಬೇಕಾದ ಆರೋಗ್ಯದಾಯಿನಿ.

ಲೋಕಪ್ರಸಿದ್ಧವಾದದ್ದು! ಅನುಭವಸಿದ್ಧವಾದದ್ದು!!

[ಟ್ರೇಡ್ ಮಾರ್ಕ್] ಅಗಸ್ತ್ಯ [ನೋಡಿ ತಕೊಳ್ಳಿರಿ

ಮನ್ಮಥ ಚಿಂತಾಮಣಿ ಲೇಹ.

(ರಿಜಿಸ್ಟರ್ ಆದದ್ದು)

ಅಬಾಲವೃದ್ಧ ಸ್ತ್ರೀಪುರುಷರ ಅನೇಕ ರೋಗಗಳ ಮೇಲೆ ಗುಣಕಾರಿಯಾದದ್ದು.

ದೇಹವಿಕಾರವಿದ್ದವರಿಗೂ, ನಿದ್ರೆಯಿಲ್ಲದವರಿಗೂ, ಸ್ವಪ್ನೇಂದ್ರಿಯವಾಗುವ ಯುವಕರಿಗೂ ಜ್ಞಾನಿಸುಜ್ಞಾನಿಗಳಿಗೂ ಉಪಯೋಗವುಳ್ಳ, ಪರಮಾನಂದ ಔಷಧಿ.

1 ಸೇರು ಪಾವ್ಯತ್ತೆಂಟು ದಿನಕ್ಕೆ ಸೇವಿಸಬಹುದು.

ಸೇರು ಡಬ್ಬಿ 1ಕ್ಕೆ 3-0-0. ½ ಸೇರು ಡಬ್ಬಿ 1ಕ್ಕೆ 1-9-0.

ವಿ. ಪಿ. ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿಗೆ ಬರೆಕೊಳ್ಳಿರಿ.

ವಿಳಾಸ:— ದೇವಣ್ಣ ನಾರಾಯಣ ಸೇಟ್,
[illegible]
[illegible]

Pandit B. Ramakrishna Baliga's Siddha Ayurvedic medicines of 50 years' reputation.

ಮಹಾ ಮದನಕಾಮೇಶ್ವರಿ ಲೇಹ—ಇದನ್ನು ಭಂಗಾರ, ಅಭ್ರಕಭಸ್ಮ, ರಸಸಿಂಧೂರ, ಕಸ್ತೂರಿ, ಕುಂಕುಮಕೇಸರ ವಗೈರೆ ಅವಶ್ಯವಾದ ರಸಾಯನ ದ್ರವ್ಯಗಳಿಂದ ತಯಾರಿಸಲ್ಪಟ್ಟಿರುತ್ತದೆ. ಇದು ಎಲ್ಲಾ ತರದ ನಪುಂಸಕ ರೋಗಗಳನ್ನೂ, ಸ್ವಪ್ನಾವಸ್ಥೆಯಲ್ಲಿ ಧಾತುಪತನೆಯನ್ನೂ ಗುಣಪಡಿಸಿ, ದೇಹಕ್ಕೆ ದಿವ್ಯಕಾಂತಿಯನ್ನೂ, ಪುಷ್ಟಿಯನ್ನೂ, ಪುರುಷತ್ವವನ್ನೂ, ವೀರ್ಯಸ್ತಂಭನವನ್ನೂ ಉಂಟುಮಾಡಿ ಅತ್ಯಾನಂದವನ್ನು ಕೊಡುವುದಲ್ಲದೆ, ಅಜೀರ್ಣ, ಅತಿಸಾರ, ಗ್ರಹಣಿ, ಅಮ್ಲ, ಪಿತ್ತ, ಉದರಶೂಲೆ, ಪ್ರಮೇಹ ವಗೈರೆ ರೋಗಗಳನ್ನು ಗುಣಪಡಿಸುವಲ್ಲಿ ಕೇವಲ ಅಮೃತಸಮಾನವಾಗಿರುವುದು. ಇದನ್ನು ಅಬಾಲವೃದ್ಧರೂ ಸೇವಿಸಬಹುದು.

48 ದಿವಸಗಳ ವರೆಗೆ ಸಾಕಾಗುವ ಲೇಹ ಸೇರು ೧ರ ರೂ. 3—0—0.

ಬ್ರಹತ್ ಶಾರಿವ್ಯಾದಿ ರಸಾಯನ—ಇದು ಖಾತ್ರಿಯಿಂದ ರಕ್ತವನ್ನು ಶೋಧಿಸುವ ದಿವ್ಯೌಷಧವಾಗಿರುತ್ತದೆ. ಇದರ ಸೇವನೆಯಿಂದ 20 ತರದ ಪ್ರಮೇಹ ರೋಗಗಳೂ ಎಲ್ಲಾ ತರದ ಫರಂಗಿ ರೋಗಗಳೂ ಅಲ್ಪ ಸಮಯದಲ್ಲಿ ಗುಣಹೊಂದುವವು. ಅದಲ್ಲದೆ ಇದು ಎಲ್ಲಾ ತರದ ಕುಷ್ಠವ್ಯಾಧಿಗಳನ್ನೂ, ಖಜ್ಜಿ, ಉರು ಮೊದಲಾದ ಸಕಲ ಚರ್ಮವ್ಯಾಧಿಗಳನ್ನೂ ಪಾದರಸ ಸೇವನೆಯಿಂದ ಉಂಟಾದ ರೋಗಗಳನ್ನೂ ಮತ್ತು ಹೆಂಗಸರ ಪ್ರದರ ರೋಗಗಳನ್ನೂ ಖಾತ್ರಿಯಿಂದ ಗುಣಪಡಿಸುವುದು.

8 ಔನ್ಸಿನ ಬಾಟ್ಲಿ ಒಂದರ ಕ್ರಯ ಬರೇ ರೂ. 1—9—0.

ವಿಳಾಸ:— ಪಂಡಿತ, ಬಿ. ರಾಮಕೃಷ್ಣ ಬಾಳಿಗ, ಬಂಟವಾಳ ದ. ಕ.

ಮಂಗಳೂರು ಏಜಂಟರು:—— ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ತೇರುಬೀದಿ, ಮಂಗಳೂರು.

AMRUTANJAN B
AMRUTANJAN
Best Indian Pain Balm
Amrutanjan D
BOMBAY

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು.

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 3 ಆಣೆ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

109 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

— ರಥೋತ್ಸವ, ವಿವಾಹ ಉಪನಯನಗಳ ಸಮಯ —
ಸರ್ವರಿಗೂ ಉಡಿಗೆ ತೊಡಿಗೆಗಳು ಬೇಕಾಗುವ ಸಂದರ್ಭ.

ಯಾರು, ಯಾವುದನ್ನು ಎಲ್ಲಿ ಪಡೆಯಬೇಕೆಂಬ ಶಂಕೆಯಿಂದ ವಿಳಂಬ ಮಾಡಬೇಡಿರಿ. ಉಡಿಗೆತೊಡಿಗೆಗಳನ್ನು ಕೊಳ್ಳುವ ನಿಮಗೆ ಬೇಕಾದ ಯಥಾರ್ಥ ಮಾಹಿತಿಯನ್ನು ಕಳೆದ ಹತ್ತುಹತ್ತು ವರುಷಗಳಿಂದ ಪಡೆದು ನಮ್ಮಲ್ಲಿಯ ವ್ಯಾಪಾರವು ಗಿರಾಕಿಗಳಿಗೆ ಸರ್ವ ದೃಷ್ಟಿಯಿಂದಲೂ ಲಾಭಕರವಾಗಿ ಪರಿಣಮಿಸುವಂತೆ ನಮ್ಮ ಜವಳಿ ಸಂಗ್ರಹವನ್ನು ಮಾಡಿರುತ್ತೇವೆ.

ಗುರ್ಪುರ್ಕರ್ ಬ್ರದರ್ಸ್, ರಥಬೀದಿ, ಮಂಗಳೂರು.

ಹೆಡ್ ಆಫೀಸು:—ರಥಬೀದಿ—(ಮೊದಲು ಸುಜೀರ ನಾಗಪ್ಪನಾಯಕ್, ಎಂಡ್ ಕೊ. ಇದ್ದಲ್ಲಿ; ಅದಾಮುದ್ದೀನ್ ರಸ್ತೆಗೆ ತಿರುಗುವಲ್ಲಿ) ಮಂಗಳೂರು.

ಬ್ರೇಂಚ್ ಆಫೀಸು:—ರಥಬೀದಿ—(ಹಳೇ ತಾಲೂಕು ಕಚೇರಿಯ ವಠಾರಕ್ಕೆ ಸಮೀಪವಿರುವ ಮಳಿಗೆ) ಮಂಗಳೂರು.

ಈ ದೇಶದ ಪ್ರಖ್ಯಾತಪಟ್ಟ ನೇಯಿಗೆಯ ಕೇಂದ್ರಸ್ಥಳಗಳಾದ—ಬನಾರಸ್, ಪೂನಾ, ಅಹಮ್ಮದಾಬಾದ್, ಸೂರತ್, ಬೆಂಗಳೂರು, ಧರ್ಮಾವರಮ್, ಕಂಜೀವರಮ್, ಕೊಯಮುತ್ತೂರು, ಮಧುರೆ, ತಂಜಾವೂರು, ಕುಂಭಕೋಣ, ಆರ್ಣಿ, ಪಾಡಿಪೇಟೆ, ಹುಬ್ಬಳ್ಳಿ, ಇಳಕಲ್, ಸಾಲೆಂ, ಮದ್ರಾಸು ಈ ಪ್ರಾಂತ್ಯಗಳಲ್ಲಿ ತಯ್ಯಾರಾದ

ಜರಿಸೀರೆಗಳು, ದುಪ್ಪಟಾ, ಜರಿಶಾಲು, ಪೇಟ್ಯ, ರೇಷ್ಮೆ ಸೀರೆಗಳು, ಅರಲಪೇಟೆ ಸೀರೆಗಳು, ಜಾರ್ಜೆಟ್ ರೇಷ್ಮೆ ಸೀರೆಗಳು, [illegible] ಸೀರೆಗಳು, ರೇಷ್ಮೆ ಮಡಿಗಳು, ನಿತ್ಯ ಉಪಯೋಗದ ಸೀರೆಗಳು ಬನಿಯನ್ಸ್, ಕರ್ನಾಟಕ ಮಿಲ್ಸ್‌ಗಳ ವ ಇತರ ಮಿಲ್ಸ್‌ಗಳ ಶರ್ಟಿಂಗ್ [illegible], ಕೈರಾಟೆಯಲ್ಲಿ ತೆಯಾರಿಸಿದ ನೂಲಿನಿಂದ ಮಾಡಿದ—

ಖದ್ದರ್ ಶರ್ಟಿಂಗ್, ಖದ್ದರ್ ಕೋಟಿಂಗ್, ಖದ್ದರ್ ಟೋಪಿ, ಖದ್ದರ್ ಪೇಟ್ಯ, ಅಂಗವಸ್ತ್ರ, ಇತ್ಯಾದಿ—
ಮುಸಲ್ಮಾನರಿಗೆ ಬೇಕಾದ ನಮೂನೆಯ ಲುಂಗಿ ಸೀರೆಗಳು ವಗೈರೆ—
ಎಲ್ಲಾ ಸಂಗ್ರಹವನ್ನು ನಮ್ಮ ಪ್ರೊಪ್ರೈಟರರ ದಿಟ [illegible] ಸ್ಥಳ ಅವರು ಊರುಗಳಿಗೆ ಹೋಗಿ [illegible]

[illegible] ತ. 6½ ರೂ. 50ರಿಂದ 250ರವರೆಗೆ [illegible] 10% ರೂ. 250 [illegible] 1920 [illegible]

ಆರ್. ಮಾರ್ಟಿನ್ನರ ಲಪ್ತಾ ಎಣ್ಣೆ

ಇದರ ಸುವಾಸನೆಯು, (ಪರಿಮಳವು) ಬಹಳ ಅಂದವಾಗಿಯೂ, ಇರುವುದಲ್ಲದೆ, ಬಹಳ ಹೊತ್ತಿನ ವರೆಗೂ ಇರುತ್ತದೆ. ಈ ಎಣ್ಣೆಯನು ತಲೆಗೆ ಹಾಕಿಕೊಳ್ಳುವುದರಿಂದ ಕಣ್ಣುಗಳು ತಂಪಾಗಿಯೂ, ಶುಭ್ರವಾಗಿಯೂ, ಆಗವುದಲದೆ, ಮೆದುಳು ಚೆನ್ನಾಗಿ ಬೆಳೆಯುತ್ತದೆ. ಇದನು ಪ್ರತಿದಿವಸವೂ ಉಪಯೋಗಿಸುವುದರಿಂದ ಕೂದಲುಗಳು ಕಪ್ಪಾಗಿ ಹೊಳೆಯುವಂತೆ ಮಾಡುತ್ತದೆ. ಕೂದಲುಗಳಲ್ಲಿರುವ ಹೇನುಗಳು ಮುಂತಾದುವು ನಾಶವಾಗಿ ತಲೆಬುರುಡೆಯನ್ನು ಚೆನ್ನಾಗಿ ಬೆಳೆಯುವಂತೆ ಮಾಡುತ್ತದೆ. ಗಡ್ಡ ಮತ್ತು ಮೀಸೆಗಳು ಸಹ ಬೆಳೆಯುತ್ತವೆ. ಇದನ್ನು ಉಪಯೋಗಿಸಿದ ಜನರು ಇದಕ್ಕಿಂತ ಉತ್ತಮವಾದ ಎಣ್ಣೆಯು ಬೇರೆ ಇಲ್ಲವೆಂದು ಹೇಳಿರುತ್ತಾರೆ.

ಆರ್. ಮಾರ್ಟಿನ್ನರ ಗಿಟೋಡಯಿನ್.

ಗಂಡಸರಿಗೂ ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ, ಅಥವಾ ಹೊಸತಾಗಿದ್ದರೂ ಸರಿ. ಬಿಳುಪು ಹೋಗುವುದು ಉರಿಯುವುದು, ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೆ ಉರಿ ಮೂತ್ರವನ್ನು ನಿಲ್ಲಿಸಿ, ಮೂತ್ರವು ಬಿಳುಪಾಗಿ ನಿರ್ಮಲವಾಗುವದಲ್ಲದೆ ರೋಗದ ಪಟ್ಟೆನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ.

ಬೆಲೆ ಸೀಸೆ 1ಕ್ಕೆ ರೂ. 2—0—0.

ಆರ್. ಮಾರ್ಟಿನ್ನರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮು, ಬರಲು ಶ್ವಾಸ, ಶೀತ, ನೆಗಡಿ, ಗಂಟಲುನೋವು, ಎದೆ ನೋವುಗಳನ್ನೂ, ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು ? ಒಂದೇ ಒಂದು ಸೀಸೆಯನ್ನು ತರಿಸಿ ಸೇವನಮಾಡಿ ಪರೀಕ್ಷಿಸಿ ನೋಡಿರಿ. ಅನಂತರ ಬೇರೆ ಯಾವ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮುಗಳಿಗೂ ರಾಣಿಯಾಗಿಯೂ, ಎದೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತಲೆಯಿಕ್ಕದಂತೆ ಮಾಡುತ್ತದೆ.

ಕ್ರಯ ಬಾಟಿ 1ಕ್ಕೆ ರೂ. 1-4-0.

ವಿಳಾಸ:—ಆರ್. ಡಿ. ಕಟ್ಲಿ ಮತ್ತು ಕಂಪೆನಿ,
ನಂಬ್ರ ಬಿ. ಫ್ರಿಯರ್ ರೋಡ್,
ಸಾಂಜ ವರ್ತಮಾನ ಪ್ರೆಸ್,
ಟೋಡಿವಾಲಾ ಬಿಲ್ಡಿಂಗ ಎದುರುಗಡೆ, ಫೋರ್ಟ ಮುಂಬಯಿ.

R. D. Kately & Co.
No. B. Frere Road,
Opposit Sanjvertaman Press,
Todivala Building, FORT BOMBAY

ಲಿವರ್ ಮೂವ್‌ಮೆಂಟ್ ವಾಚ್.

15 ಮಣಿಗಳಿದ್ದು ರೋಲ್ಡಗೋಲ್ಡ ವಾಚ್.

ಈ ಗಡಿಯಾರ ಕೈಗೆ ಕಟ್ಟುವಂಥಾದ್ದಾಗಿ ಸರಿಯಾದ ಸಮಯವನ್ನು ತೋರಿಸಿ ಚಿರಕಾಲ ವರೇಗೆ ಬಾಳುವುದು.

10 ವರುಷದ ವರೆಗೆ ಬಾಳುವ ಗೆರೆಂಟಿ ಇದೆ. ಕ್ರಯ ರೂ. 17—8—0.

11 ಮಣಿಗಳಿದ್ದು ನಿಜವಾದ ರೋಲ ಗೋಲ್ಡ ಬಂಗಾರದಿಂದ ತಯಾರಿಸಲ್ಪಟ್ಟು 5 ವರ್ಷದ ಗೆರೆಂಟಿ ಇರುವ ವಾಚಿಗೆ ಕ್ರಯ ರೂ. 12—8—0.

18 ಕೆರೆಟ್ ಇಲೆಕ್ಟ್ರೊ ರೋಲ್ಡ ಗೋಲ್ಡ ವಾಚ್ ಕ್ರಯ ರೂ. 7—0—0. ಲಿವರ್ ಮೂವ್‌ಮೆಂಟ್ 10 ಮಣಿಗಳಿದ್ದ ಬಂಗಾರ ಗಿಲ್ಟುವಾಚ್ ಕ್ರಯ ರೂ. 13—8—0.
ಎಲಾರ್ಮ ಜರ್ಮನ್ ಟ್ಯಾಮ್‌ಪೀಸ್ ಕ್ರಯ ರೂ. 5-0-0.
ಡಬ್ಬಲ್ ಎ. „ „ „ 6-0-0.
"ಬಿ" ಟ್ಯಾಮ್‌ಪೀಸ್ ಕ್ರಯ ರೂ. 2—4—0
ಟಿಕ್—ಟಾಕ್ ವಾಚ್ 1ರ ಕ್ರಯ „ 2—12—0

ಕಂಬ್ಯಾಂಡ್ ಪೆಪರ್ ಕ್ಲಿಪ್ ಟ್ಯಾಮ್‌ಪೀಸ ಹಿತ್ತಾಳಿ ಅಥವಾ ನಿಕ್ಕಲ್ ಕ್ರಯ ರೂ. 6—0—0. ಇನೆಮಲ್ ರೂ. 7—0—0. ಫ್ರೆಂಚ್ ಬೆಡ್ ಫೋಟೋಗಳು ಡಜನ್ 1ರ ಕ್ರಯ ರೂ. 2—4—0.

Emarald Watch Co.,
P. T. MADRAS.

ಡಾಕ್ಟರುಗಳು ಭಿನ್ನಾಭಿಪ್ರಾಯಪಡುವಾಗ್ಯೆ ತೀರ್ಮಾನಿಸುವದು ಯಾರು?

ಅಂಥಾ ಸಂದರ್ಭಗಳಲ್ಲಿ ಡೆಂಗ್ಯು ಮುಂತಾದ ಜ್ವರಗಳನ್ನು ನಿವಾರಿಸುವಂಥಾ "ಬಾಟ್ಲಿವಾಲರ ಏಗ್ಯುಮಿಕ್ಸ್ಚರ್"ನ್ನು ಸರಾಗವಾಗಿಯೂ, ಮತ್ತು ಜ್ವರಗಳನ್ನು ಖಂಡಿತವಾಗಿ ನಿಲ್ಲಿಸುವಂಥಾದ್ದೂ, ಎಲ್ಲಾ ತರದ ತಲೆನೋವುಗಳನ್ನು ಹೋಗಲಾಡಿಸುವಂಥಾದ್ದೂ ಆದ "ಬಾಟ್ಲಿವಾಲರ ಏಗ್ಯುಪಿಲ್ಸ್" ಇದನ್ನು ಉಪಯೋಗಿಸಿರಿ.

ಐ. ಎಮ್. ಎಸ್. ಡಾಕ್ಟರುಗಳಿಂದ ಶಿಫಾರಸು ಮಾಡಲ್ಪಟ್ಟದ್ದು. ಇದರ ಉಪಯೋಗದಿಂದ ಹೃದಯದ ಮೇಲೆ ಯಾವದೊಂದೂ ಬಾಧಕವಿಲ್ಲ. ಅರ್ಧ ಶತಮಾನದಿಂದ ಹಿಂದೂಸ್ಥಾನ, ಬರ್ಮಾ, ಸಿಲೋನ್, ಆಫ್ರಿಕಾ ಇವುಗಳಲ್ಲಿ ಪ್ರಖ್ಯಾತಪಟ್ಟದ್ದಾಗಿರುತ್ತದೆ.

ಅನೇಕ ಹಿಂದೀ ಪ್ರದರ್ಶನಗಳಲ್ಲಿ ಬೆಳ್ಳಿ ಮತ್ತು ಬಂಗಾರದ ಪದಕಗಳನ್ನು ಪಡೆದಿರುತ್ತೆ. ಚಾಲ್ತಿ ನಾಣ್ಯದಂತಿದ್ದು ಮಾರ್ವಾರಿಗಳೂ ಕೂಡ ಅದರ ಮೇಲೆ ಹಣವನ್ನು ಮುಂಗಡವಾಗಿ ಕೊಡುತ್ತಾರೆ. ಬಡ ಮತ್ತು ಮಧ್ಯಮ ತರಗತಿಯ ಜನರಿಗೆ ವರಪ್ರದಾನವಾಗಿದ್ದು ಸಂಚಾರ, ಪ್ರಯಾಣ, ದೇಶಾಟನೆಗಳ ಸಮಯದಲ್ಲಿ ಹತ್ತಿರದಲ್ಲಿರಿಸಿಕೊಳ್ಳದಾಗಿರುತ್ತದೆ.

ಬಾಟ್ಲಿವಾಲರ ಬಾಲಾಮೃತ ಅಥವಾ ಟೊನಿಕ್ ಸಿರಪ್.

ಕೆಮ್ಮನ್ನು ಹೋಗಲಾಡಿಸಿ, ಎದೆನೋವನ್ನು ಶಾಂತಗೊಳಿಸಿ, ಜ್ವರವನ್ನು ಉಪಶಮನಿಸಿ, ನಿದ್ರಾಭಂಗವನ್ನು ಕಡಿಮೆ ಮಾಡಿ ಧಾತುವರ್ಧನವನ್ನು ಮಾಡುವದರಲ್ಲಿ ಅತ್ಯುತ್ತಮವಾಗಿರುತ್ತದೆ. ಕಫವನ್ನು ಒಣಗಿಸಿ ಮಾಯವಾಗುವಂತೆ ಮಾಡುವುದಲ್ಲದೆ ಅದೇ ಸಮಯದಲ್ಲಿ ಒಳ್ಳೇ ಜೀರ್ಣವನ್ನೂ ಉಂಟುಮಾಡುವುದು. ದರ ಮೊದಲಾದ ಮಾಹಿತಿಯನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಕಾರಿನಪತ್ತೆ:-CAWASHAPUR, BOMBAY.

Dr. H. L. Batliwala & Co., Ltd.,
Sayani Road, P. O. Cadell Road, Bombay. No. 14.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.,
Sayani Road, P. O. Cadell Road, Bombay. No. 14.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟ. ಖ. 9 ಆಣೆ.

ನಮ್ಮ ವಿಳಾಸ:— ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಏಜಂಟರು:— ಡಿ. ಊಲನ್ ಮಾರ್ಟ್, ಮಂಗಳೂರು.

OUR RECENT IMPORT IN WRIST WATCHES

Have you used anyone of these Watches?

SEND YOUR ORDER NOW
ALL GUARANTEED.

Fashionable wrist wrist Lady'sisize. Reliable movement Guaranteed.



No 368.

Handy to wear and looks beautiful. Gives punctual time and with strong movement.

Nickel case Rs. 8—0

High-class Radium dial watch watch with Roman figures.



No. 367.

Can be seen in dark nights. Well fitted with best movement and strong to use. Used by one and all.

Silver case Rs. 9—0.

Radio light wrist watch.



No. 372.

Fitted with the best mechanism and guaranteed to work and keep perfect time for a long time.

Nickel case Rs. 7—8
Electro rolled-gold „ 9—0

(N. B. In addition to the above, we have good number of varieties of fancy wrist watches, pocket watches. Please write for a descriptive catalogue, which will be sent free)

WHOLESALE IMPORTERS

PETER WATCH COY.,
POST BOX 27, MADRAS

ಶಾಲಿವಾಹನಶಕ ೧೮೪೭ನೆಯ ಕ್ರೋಧನ ಸಂ|ರದ ಭಾದ್ರಪದ ಶು|೧೦ ಶನಿವಾರದಿಂದ ಕ್ರೋಧನ ಸಂ|ರದ ಭಾದ್ರಪದ ಬ|೨ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೫ನೆಯ ಸಿಂಹ ಸೋಣ.)

ತಾರೀಖು	ವಾರ	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	ಸೌರದಿನ	ಸೂರ್ಯ. ಉ.	ಸೂರ್ಯ. ಅಸ್ತ.
29	ಶನಿ	೧೦	೧೯.೩೮	ಮೂಲ	೨೩.೧೬	೧೩	6.21	6.39
30	ರವಿ	೧೧	೧೩.೪೬	ಪೂ. ಷಾ.	೧೯.೩೮	೧೪	6.21	6.39
31	ಸೋಮ	೧೨	೬.೪೪	ಉ. ಷಾ.	೧೫.೧೬	೧೫	6.21	6.39
1	ಕುಜ	೧೪	೧.೫೦	ಶ್ರವಣ	೧೧.೧೬	೧೬	6.21	6.38
2	ಬುಧ	○	೫೦.೩೮	ಧನಿಷ್ಠಾ	೭.೩೨	೧೭	6.21	6.38
3	ಗುರು	೧	೪೫.೪೬	ಶತಭಿಷಾಂ	೪.೧೬	೧೮	6.21	6.38
4	ಶುಕ್ರ	೨	೪೧.೪೪	ಪೂ. ಭಾ.	೧.೩೨	೧೯	6.21	6.37

ಮಂಗಳೂರಿನ ವಾಯುಸ್ಥಿತಿ.

ತಾರೀಖು Date	Temperature. ಉಷ್ಣ (ಕಾವು) Maximum ಹೆಚ್ಚಾದದ್ದು	Minimum ಕಡಿಮೆ	Rainfall. ಮಳೆ ಇಂದಿನ ಮಳೆ	ಒಟ್ಟು ಮಳೆ.
21	87—3	78—2	—	—
22	86—8	75—2	—	—
23	88—3	75—7	0—29	—
24	87—6	76—1	0—09	—
25	88—4	74—7	0—54	—
26	86—8	72—4	1—48	—
27	82—3	71—3	0—51	120-84

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ	ವರೆಗೆ
	ರೂ. ಅ.	ರೂ. ಅ
ಮಸ್ಕತಿ ...	8—10	9— 0
ಗುಡ್ಡ ...	8— 4	8— 8
ರಾಶಿ ಸುಗ್ಗಿ ...	7—12	8— 3
ಅವ್ವಲ್ ಬೆಳ್ತಿಗೆ ...	8—12	9— 8
ಗುಡ್ಡ ಬೆಳ್ತಿಗೆ ...	8— 0	8— 8
ರಂಗೂನು ಬೆಳ್ತಿಗೆ ಗೋಣಿ ೧ ...	13— 8	14— 8
ಗೋಧಿ ಗೋಣಿ ೧ಕ್ಕೆ ...	19—	21— 0
ಹುರುಳಿಗೋಣಿ ೧ಕ್ಕೆ ...	9—12	10— 0
ಕಡಲೆಗೋಣಿ ೧ಕ್ಕೆ ...	12— 0	13— 0
ತೊಗರಿಗೋಣಿ ೧ಕ್ಕೆ ...	12— 8	13— 0
ತೊಗರಿಬೇಳೆ ಗೋಣಿ ೧ಕ್ಕೆ ...	15— 0	20— 0
ಉದ್ದುಗೋಣಿ ೧ಕ್ಕೆ ...	14— 0	14— 8
ಹೆಸರುಗೋಣಿ ೧ಕ್ಕೆ ...	14— 0	15— 0
ಊರು ಬೆಲ್ಲ ಖಂಡಿ ೧ಕ್ಕೆ ...	80—	—
ಉಪ್ಪು ಗೋಣಿ ೧ಕ್ಕೆ ...	4— 4	4— 8
ಕೊಬ್ರಿ ಖಂಡಿ ೧ಕ್ಕೆ ...	115— 0	120— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	46— 0	—
ಎಳ್ಳಿಂಡಿ ಖಂಡಿ ೧ಕ್ಕೆ ...	40— 0	—
ಕೊಬ್ರಿ ಎಣ್ಣೆ ಮಣ ೧ಕ್ಕೆ ...	8—14	10— 0
ಎಳ್ಳೆಣ್ಣೆ ಮಣ ೧ಕ್ಕೆ ...	8— 0	11— 0
ಚಿಮಿಣಿ ಎಣ್ಣೆ ಪೆಟ್ಟಿಗೆ ೧ಕ್ಕೆ ...	8-8-0	—
ಮೋರಿಸ ಸಕ್ಕರೆ ಮಣ ೧ಕ್ಕೆ ...	4—10	—
ಊರ ಮೆಣಸಿನಕಾಯಿ ಮಣ ೧ಕ್ಕೆ ...	7— 8	—
ಸಾಸಿವೆ ಮುಡಿ ೧ಕ್ಕೆ ...	9—0	—
ಕೊತ್ತಂಬರಿ ಮುಡಿ ೧ಕ್ಕೆ ...	4— 4	4— 8
ಕಾಫಿ ಖಂಡಿ ೧ಕ್ಕೆ ...	345— 0	400— 0
ಬೆಳಗೋಟು ಅಡಿಕೆ ಖಂಡಿ ೧ಕ್ಕೆ ಹಳತು ...	245— 0	250— 0
„ ಹೊಸ ಅಡಿಕೆ	240— 0	240— 0
ಕಾಳುಮೆಣಸು ಖಂಡಿ ೧ಕ್ಕೆ ...	220— 0	—
[illegible] ಮಣ ೧ಕ್ಕೆ ...	100—0	—
ಗೇರುಬೀಜ ಮುಡಿ ೧ಕ್ಕೆ ...	4— 6	4—8
ಕಬ್ಬಿಣ ಖಂಡಿ ೧ಕ್ಕೆ ...	45— 0	65— 0
ತಾಂಬ್ರ ತಗಡು ಮಣ ೧ಕ್ಕೆ ...	17— 8	—
ತಾಮ್ರ ಪಾತ್ರೆಗಳು ಮಣ ೧ಕ್ಕೆ ...	24— 0	—
ಬೀಳು ಬೆಳ್ಳಿ ಸೇರು ೧ಕ್ಕೆ ...	18—10	
ಹಿತ್ತಾಳೆ ತಗಡು ಮಣ ೧ಕ್ಕೆ ...	16— 8	
ಪವನು	18— 7	

The Canara Public Conveyance Co., Ltd, Mangalore.

(ESTABLISHED 1914.)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು
- ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು
- ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
- ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
- ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.
- ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯು ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ — ಈ ಪ್ರಾಂತ್ಯಗಳಿಗೆ ಈ ಕಂಪೆನಿಯು ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು; ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳ ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd., Mangalore. S. K

ಕನ್ನಡಿಗರೆ! **ವಸಂತ.** ಕಚ್ಚೆರಿಯಿರಿ!

ಈಗಾಗಲೇ ಎರಡನೇ ಸಂಪುಟವು ಆರಂಭಿಸಲಿದೆ.

ಇತಿಹಾಸನಿಧಿ ಎಂದರೆ . . . . ವಸಂತ
ಸಮಾಜಸುಧಾರಕನೆಂದರೆ . . . . ವಸಂತ
ಕೈಗಾರಿಕೆಯ ಸಾಮ್ರಾಜ್ಯವೆಂದರೆ . . . . . ವಸಂತ
ಕರ್ನಾಟಕ ಭಾಷಾಸೇವಕನೆಂದರೆ . . . . . ವಸಂತ
ದೇಶವಿದೇಶ ಬಂಧುವೆಂದರೆ . . . . . . ವಸಂತ
ಕಾದಂಬರಿಗಳ ಭಂಡಾರವೆಂದರೆ . . . . . ವಸಂತ
ಚಿತ್ರಾಕರ್ಷಕ ಚಿತ್ರಶಾಲೆಯೆಂದರೆ . . . . . ವಸಂತ
ದೇಶಭಕ್ತನೆಂದರೆ . . . . ವಸಂತ

ಇಂತಹ ವಸಂತನು ಯಾರಿಗೆ ಬೇಕು,
ಯಾರಿಗೆ ಬೇಡ?

48 (ಕ್ರೌನ್ ¼ ಪುಟ ಸ್ಯಾಜಿನ) ಪುಟಗಳನ್ನು ಮುಕ್ಕಿದ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3—4—0 ಮಾತ್ರ.

ವ್ಯವಸ್ಥಾಪಕ,
ವಸಂತ ಕಾರ್ಯಾಲಯ,
ಕುಂದಾಪುರ, ದಕ್ಷಿಣ ಕನ್ನಡ.

ಸಾರಸ್ವತ.

ಕನ್ನಡ ಮತ್ತು ಕೊಂಕಣಿ ಭಾಷೆಗಳಲ್ಲಿ ಕಳೆದ ವಿಜಯದಶಮಿಾ ದಿನದಿಂದ ಪ್ರತಿ ದಶಮಿಗೆ ಹೊರಡುವ ಪತ್ರಿಕೆ.

ವಿ. ಎಸ್. ಕಾಮತ್,
ಮೂಲ್ಕಿ ವಾಮನ ಕುಡುವ } ಸಂಪಾದಕರು.

ಮತಸಂಸ್ಥೆ ಮತ್ತು ಸಮಾಜಕ್ಕೆ ಸಂಬಂಧಪಟ್ಟ ಇತರ ಸಂಸ್ಥೆಗಳ ಸುಸಂಘಟನ.
ಸಮಾಜದೊಳಗೆ ಅನ್ಯೋನ್ಯ ಸಾಧನೆ.
ಸ್ತ್ರೀಸಮಾಜಕ್ಕೆ ಉಪಯುಕ್ತವಾದ ವಿಷಯಗಳ ನಿರೂಪಣ
ಮತಭಾವನೆಗಳ ಉಜ್ಜೀವನ ಇತ್ಯಾದಿ ಉದ್ದೇಶಗಳಿಂದ ಈ ಪತ್ರಿಕೆಯು ಹೊರಡಿಸಲ್ಪಡುವುದು. ಸಾರಸ್ವತ ಸಮಾಜವು ಇದಕ್ಕೆ ಪ್ರೋತ್ಸಾಹವನ್ನೀಯಬೇಕಾಗಿ ಪ್ರಾರ್ಥನೆ.

ಚಂದಾಹಣ ಅಂಚೆವೆಚ್ಚ ಕೂಡಾ ರೂ. ೧—೪—೦.
ಪೋಷಕರು ರೂ. ೧೦—೦—೦. ಸಹಾಯಕರು ರೂ. ೫—೦—೦.
ಮಾದರಿ ಸಂಚಿಕೆಯನ್ನು ಟಪ್ಪಾಲು ಖರ್ಚಿಗಾಗಿ ಅರ್ಧಾಣೆ ಸ್ಟ್ಯಾಂಪು ಕಳುಹಿಸುವವರಿಗೆ ಉಚಿತವಾಗಿ ಕಳುಹಿಸುವೆವು.

ಕನ್ನಡ ನಾಡಿನಲ್ಲಿ ಪ್ರತಿ ಕಡೆಯಲ್ಲಿಯೂ
ಖಾತೆದಾರರು ಬೇಕು.

ಎಲ್ಲಾ ಪತ್ರವ್ಯವಹಾರಗಳನ್ನು ಕೆಳಗಿನ ವಿಳಾಸಕ್ಕೆ ನಡೆಸಬೇಕು.

ಯು. ನಾರಾಯಣನಾಯ್ಕ, ಕಾರ್ಯದರ್ಶಿ,
ಸಾರಸ್ವತ, ಉಡುಪಿ.

ತುಳು ಪಾಡ್ದನಗಳು.

ದೊಬ್ಬಯ್ಯರ್, ಕಲ್ಲು ರ್ಟಿ-ಕಲ್ಕುಡ, ದೈಯ್ಯೊಂಗುಳು—ಕೋಡಕಿನಾರ್, ಮುಂಡತ್ತಾಯ ಪ್ರತಿ ಒಂದಕ್ಕೆ 2 ಆಣೆ. 11½ ಆಣೆ ಟಪ್ಪಾಲು ಚೀಟು ಕಳುಹಿಸಿದರೆ 5 ಪುಸ್ತಕಗಳು ಕೂಡಲೇ ಕಳುಹಿಸಲ್ಪಡುವವು.

ವಿಳಾಸ: ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ
ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ
ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ಯಾವಂತರೂ ತಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ಗಾವರ್ಗಿಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನು ಕುರಿತ ಲೆಕ್ಕಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಧನಿಕರಿಗಳೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪೋಷಕರಿಗೆ ... ... ರೂ. 3—0—0
ಇತರರಿಗೆ, ಪರಸ್ಪರ ಸಹಾಯಕರಿಗೆ, ಪೋಸ್ಟೇಜು ಸೇರಿ „ 2—8—0.
„ ಸ್ತ್ರೀಯರಿಗೆ ... „ 1—8—0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪತ್ರಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿಯಬಹುದು.

ಎಡಿಟರ್,
ಬಿ. ಹನುಮಂತಯ್ಯಗೌಡ,
ಅರ್ಥಸಾಧಕ ಪತ್ರಿಕೆ,
ಅರಳೇ ಪೇಟೆ,ಬೆಂಗಳೂರು ಸಿಟಿ.

ಶುದ್ಧವಾದ ನೀಲಗಿರಿ ಎಣ್ಣೆ

ತಲೆನೋವು, ಶೀತ, ಇನ್‌ಫ್ಲುಯಂಜಾಜ್ವರ,
ವಾತ, ಇತ್ಯಾದಿ ಎಲ್ಲಾ ರೋಗಗಳ
ಮೇಲೆ ಸಿದ್ಧೌಷಧ.
1 ಔನ್ಸು ಬಾಟ್ಲಿ 1ರ ಕ್ರಯ 0—4—0.
ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು.

ಆಯುರ್ವೇದ ಶಾಸ್ತ್ರಿ ಅಷ್ಟಾವಧಾನಿ,
ಶಾ. ವೇ. ಸುಬ್ಬರಾವ್, ಯಂ. ಜಿ. ಯ. ಅವರ್ಗಳಿಂದ
ತಯಾರಿಸಲ್ಪಟ್ಟಿದ್ದು.
ಒಂದು ಮಾತ್ರೆ! ಒಂದು ಘಂಟೆಯೊಳಗೆ ಗುಣ!

ಕಾಮಾಮೃತ.

ಈ ಔಷಧವು ಧಾತುಪುಷ್ಟಿಗಾಗಿಯೇ ತಯಾರಿಸಲ್ಪಟ್ಟಿದ್ದು. ಒಂದು ಮಾತ್ರೆಯನ್ನು ಸೇವಿಸಿದ ಒಂದು ಘಂಟೆಯೊಳಗೆ ಶಕ್ತಿಯನ್ನು ವೃದ್ಧಿಗೊಳಿಸಿ ಎಷ್ಟು ಬಲಹೀನವುಳ್ಳವರನ್ನೂ ಬಲವಂತರನ್ನಾಗಿ ಮಾಡುವದು. ಯಾವ ರೀತಿಯಿಂದಲಾಗಲಿ ಶುಕ್ಲ ನಷ್ಟವಾದಾಗ್ಯೂ ಅಥವಾ ಸ್ವಪ್ನದಲ್ಲಿ ಇಂದ್ರಿಯ ಸ್ಖಲಿತವಾದಾಗ್ಯೂ ಇಲ್ಲವೆ ಮೂತ್ರದೊಂದಿಗೆ ಕೇರಿಯೋ ವ ಮೂತ್ರಚಲನೆಯ ಹಿಂದೋ ಮುಂದೋ ಹೊರಬೀಳುವ ಧಾತುನಷ್ಟವನ್ನಾದರೂ 5 ದಿವಸಗಳಲ್ಲಿ ಗುಣಪಡಿಸುವದು. ಯಾವ ಬಗೆಯ ನರಗಳ ಬಲಹೀನತೆಯನ್ನಾದರೂ ಹೋಗಲಾಡಿಸುವುದು. ಶಕ್ತಿಯಿಲ್ಲದವರು ಈ ಮದ್ದನ್ನು 20ದಿನ ಸೇವಿಸಿದಲ್ಲಿ ಶಕ್ತಿವಂತರಾಗಿ ಸಂಸಾರ ಸುಖವನ್ನೂ ಸಂತತಿ ಲಾಭವನ್ನೂ ಹೊಂದುವರು; ಇದು ನಿಶ್ಚಯ. ಪತ್ರವ್ಯವಹಾರವು ರಹಸ್ಯವಾಗಿ ನಡಿಸಲ್ಪಡುವದು. ಕ್ರಯ 20 ಮಾತ್ರೆಗಳ ಕುಪ್ಪಿ 1ಕ್ಕೆ ರೂ. 2-0-0. ಪತ್ರವ್ಯವಹಾರವು ಇಂಗ್ಲಿಷಿನಲ್ಲಿ ಮಾಡತಕ್ಕದ್ದು.

ಅಮೃತಾಶ್ರಮ,
28 ಎಲ್ಲೂರು, ಕೃಷ್ಣಾಜಿಲ್ಲಾ.

— ಸಿರಿಗನ್ನಡಂಗೆಲ್ಗೆ —
ಶ್ರೀ ಶಂಕರ ಕರ್ನಾಟಕ ಪುಸ್ತಕ ಭಂಡಾರವೂ
ಶ್ರೀ ವಿದ್ಯಾರಣ್ಯ ಪ್ರಕಾಶಕ ಸಂಸ್ಥೆಯೂ,
ಮಾಳಮಡ್ಡಿ, ಧಾರವಾಡ.

ಕನ್ನಡಿಗರಿಗೆ ಬೇಕಾಗುವ ಎಲ್ಲಾ ತರದ ಕನ್ನಡ ಪುಸ್ತಕಗಳು ನಮ್ಮಲ್ಲಿ ಯೋಗ್ಯ ಬೆಲೆಗೆ ದೊರೆಯುವವು. ವಿದ್ಯಾರಣ್ಯ ಪುಸ್ತಕ ಮಾಲೆಯ ಕೆಳಗಿನ ೧, ೨, ೩, ಪುಸ್ತಕಗಳು ಚಂದಾದಾರರಾಗುವವರಿಗೆ ಅಂಚೆ ವೆಚ್ಚ ಸೇರಿ ೫ ರೂ. ೬ ಆಣೆಗೆ ದೊರೆಯುವವು. ಮುಂದೆ ಹೊರ ಬೀಳುವ ಮಾಲೆಯ ಪುಸ್ತಕಗಳನ್ನು ಚಂದಾದಾರರಿಗೆ ೧ ರೂಪಾಯಿಗೆ ೨ ಆಣೆಯಂತೆ ಕಡಿಮೆ ಬೆಲೆಗೆ ವಿ. ಪಿ. ಮಾಡುವೆವು. ಭಂಡಾರದ ಬೆಲೆ ಪಟ್ಟಿಗಾಗಿ ೪ ಆಣೆ ಅಂಚೆ ಟಿಕೇಟುಗಳನ್ನು ಕಳುಹಿಸತಕ್ಕದ್ದು.

			ರೂ. ಆ. ಪೈ.
೧.	ಕರ್ನಾಟಕ ಸಿಂಹಾಸನ ಸ್ಥಾಪನೆ		೧-೦-೦
೨.	ಕಥೆಗಳನ್ನೊಳಗೊಂಡ ಬೀರಬಲ್ಲ ಚರಿತ್ರೆ (ಸಚಿತ್ರ)		೧-೬-೦
೩.	ಛತ್ರಪತಿ ಶಿವಾಜಿ ಮಹಾರಾಜ	„	೨-೧೨-೦
೪.	ಮಹಾರಾಣಿ ಲಕ್ಷ್ಮೀಬಾಯಿ ಝಾಂಸಿ	„	೨-೦-೦
೫.	ಅಕ್ಬರ ಚಕ್ರವರ್ತಿ ಚರಿತ್ರೆ	„	೧-೧-೦
೬.	ಚರಿತ್ರ ಸಂಗ್ರಹ ಭಾಗ ೧.	„	೧-೪-೦
೭.	ತಿಲಕರ ಗೀತಾ ರಹಸ್ಯ		೩-೮-೦
೮.	ಶ್ರೀ ದಾಸಬೋಧ ಭಾಗ ೧ ೨. ೩. ...	...	೨-೧೪-೦
೯.	ರಾಷ್ಟ್ರಸಭೆಯ ಇತಿಹಾಸ	...	೨-೮-೦
೧೦.	ವಚನ ಜ್ಞಾನಸಿಂಧು	...	೪-೦-೦

ಇವಲ್ಲದೆ ನಮ್ಮಲ್ಲಿ ಎಲ್ಲಾ ತರದ ಕಾಯಿದೆ ಕಾಲೇಜುಪಯೋಗಿ ಪುಸ್ತಕಗಳೂ ನಕಾಶೆ ಚಿತ್ರಗಳೂ ಬರವಣಿಗಳೂ ದೊರೆಯುವವು.

ಶ್ರೀಪಾದ ರಾಮಚಂದ್ರ ದೇಶಪಾಂಡೆ ಬಿ. ಯಸ್. ಸಿ.
ವ್ಯವಸ್ಥಾಪಕ.

ಸರ್ಕ್ಯುಲಾರು.

ಡಿಸ್ಟ್ರಿಕ್ಟ್ ಕೊ-ಒಪರೇಟಿವ್ ಕೌನ್ಸಿಲ್ ಒಫ್ ಸುಪರ್ವಿಜನಿನ ಮಹಾ ಸಭೆಯೂ ಕಾರ್ಯಕಾರಿ ಪರಿಷತ್ತೂ, ಇದೇ ಬರುವ ಒಕ್ಟೋಬರ ತಿಂಗಳ 10ನೆ ಮತ್ತು 11ನೇ ತಾರೀಕುಗಳಲ್ಲಿ ಗವರ್ನಮೆಂಟ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯ ಕಟ್ಟಡದಲ್ಲಿ ಎಂದಿನಂತೆ ಈ ವರ್ಷವೂ ಜರಗುವುದಾಗಿ ನಿಶ್ಚಯಿಸಿಯದೆ. ಇದಕ್ಕೆ ಬರುವ ಯೂನಿಯನ್ ಪ್ರತಿನಿಧಿಗಳು ಆಯಾ ಯೂನಿಯನ್ ಆಡಳಿತೆ ಸಭೆಯಿಂದಾಗಲೀ ಮಹಾಸಭೆಯಿಂದಾಗಲೀ ಈ ವರ್ಷದ ಬಗ್ಗೆ ಆರಿಸಲ್ಪಟ್ಟವರು ಇರಬೇಕು. ಅವರನ್ನು ಆರಿಸಿದ ಠರಾವಿನ ನಕಲನ್ನೂ ಒಬ್ಬೊಬ್ಬ ಪ್ರತಿನಿಧಿಯ ಬಗ್ಗೆ ಒಂದೊಂದು ರೂಪಾಯಿ ವಾರ್ಷಿಕ ವಂತಿಗೆಯನ್ನೂ ಈ ಆಫೀಸಿಗೆ ಕಳುಹಿಸಿಕೊಡಬೇಕಾಗಿಯೂ ಈ ಮಹಾ ಸಭೆಯಲ್ಲಿ ಚರ್ಚಿಸಬೇಕಾಗಿ ತಮಗೆ ತೋರಿದ ವಿಷಯಗಳ ಪಟ್ಟಿಯನ್ನೂ ಈ ಆಫೀಸಿಗೆ ಇದೇ ಬರುವ ಸಪ್ಟಂಬರ 15ನೆ ತಾರೀಕಿನೊಳಗೆ ಕಳುಹಿಸಿಕೊಡಬೇಕಾಗಿಯೂ ಎಲ್ಲಾ ಯೂನಿಯನ್‌ಗಳಿಗೂ ಕೇಳಿಕೊಳ್ಳಲಾಗುತ್ತದೆ. ಈ ಸೂಚನೆಗಳನ್ನು ಸಂಗ್ರಹಿಸಿ ಮುದ್ರಿಸಿ ಅವನ್ನು ಮಹಾ ಸಭೆಯು ಜರಗುವ ದಿನಕ್ಕೆ ಮುಂಚಿತವಾಗಿಯೇ ಆಯಾ ಯೂನಿಯನ್‌ಗಳಿಗೆ ತಲಪಿಸಬೇಕಾದ್ದರಿಂದ ಇಂಥ ಸೂಚನೆಗಳನ್ನು ಆದಷ್ಟು ಬೇಗನೇ ನಮ್ಮ ಬಳಿಗೆ ಕಳುಹಿಸಬೇಕಾಗಿದೆ. ಯೂನಿಯನ್‌ಗಳ ಮೆಂಬರರು ಮಾತ್ರವಲ್ಲ ಇತರ ಸಹಕಾರಿಗಳು ತಮಗೆ ಯುಕ್ತಕಾಣುವ ಸೂಚನೆಗಳನ್ನು ಕಳುಹಿಸಲಿಕ್ಕೆ ಆಕ್ಷೇಪವಿಲ್ಲ.

U. Mangesh Rao.

ನೋಟೀಸು.

ಮಂಗಳೂರು ಡಿಸ್ಟ್ರಿಕ್ಟ ಮುನ್ಸಿಫ ಕೋರ್ಟಿನಲ್ಲಿ.
ಐ. ಪಿ. 84/24, ಐ. ಎ. 62/25.
ಪೆರಾಜೆ ನಾರ್ಯಾಣ ಪೈ—ದಿವಾಳಿ ಅರ್ಜಿದಾರ.
ಮತ್ತು
1 ಬೋಳಂತುರ ಸರ್ವೋತ್ತುಮ ಪ್ರಭು,
2 ಉ. ನರಸಿಂಹ ನಾಯ್ಕ,
3 ಉ. ಗೋಪಾಲಭಟ್ಟ,
4 ಉ. ಕೃಷ್ಣರಾಯ ನಾಯ್ಕ
5 ಉ. ವೈಕುಂಠನಾಯ್ಕ,
6. ದಿ. ಉಪ್ಪಿನಂಗಡಿ ಕುಒಪರೇಟಿವ್ ಕ್ರೆಡಿಟ್ ಸೊಸ್ಯಾಟಿ,
7 ಎಚ್ ಗಣಪತಿರಾವ್,
8 ನಗರ್ ಶ್ರೀನಿವಾಸರಾವ್,
9 ಪೇರ್ಗುಕತ್ತು ಶ್ರೀನಿವಾಸ್ ವೆಂಕಟೇಶಪೈ ಮತ್ತು,
ಶ್ರಿಂಗೇರಿ ದಾಸನಾರಾಯಣಪೈ ಎಂಡ್ ಕೊ.,
10 ವೆಂಕಪ್ಪರೈ,
11 ಪಂಚಮಾಲ್ ನರಸಿಂಹ ಶೇಷಗಿರಿ ಕಾಮತ್ ಎಂಡ ಕೊ.
12 ಸೊಜಿರ್ ನಾಗಪ್ಪ ನಾಯ್ಕ,
13 ಕುಡ್ಲಿ ಚರ್ಡಪ್ಪ ಶ್ಯಾನುಭಾಗ.

ಮೇಲ್ಕಾಣಿಸಿದ ದಿವಾಳಿ ಅರ್ಜಿದಾರನು ತನ್ನನ್ನು ಡಿಸ್ಚಾರ್ಜಿ ಮಾಡಬೇಕಾಗಿ ಮೇಲ್ಕಾಣಿಸಿದ ಕೋರ್ಟಿಗೆ ಮನವಿಮಾಡಿದ್ದಾನೆ. ಆಕ್ಷೇಪಿಸತಕ್ಕ ಕ್ರೆಡಿಟರರು ತಾರೀಕು 23—9—'25ಕ್ಕೆ ತನ್ನಿಗೆ ಇಟ್ಟ ದಿವಸ ತಮ್ಮ ಆಕ್ಷೇಪಗಳನ್ನು ಜಾಹೀರು ಮಾಡತಕ್ಕದ್ದು.

Mangalore,
24-8-1925
A. Madhava Pai,
Vakil for Petitioner.

ನೋಟೀಸು.

ಉಪ್ಪಿನಂಗಡಿ ತಾಲೂಕು ವೀರಕಂಬ ಗ್ರಾಮದ ಮುತ್ತು ಭಟ್ರ ಮಗ ಈ ಸಂಘದ ನಂಬ್ರ 59ನೇ ಮೆಂಬರರಾಗಿರುತಿದ್ದ ಮಾಜಿ ಶಂಕರಭಟ್ಟ ಎಂಬವರು ಮೃತಪಟ್ಟ ಕಾರಣ ಅವರ ಬಾಬ್ತು ಈ ಸಂಘದಲ್ಲಿರುವ 1ನೇ ಕ್ಲಾಸು ಪಾಲುಗಳು 5 (ಪಾಲು ಭಂಡವಾಳ ರೂಪಾಯಿ 250)ನ್ನು ಅವರ ಸ್ಥಿರ ಆಸ್ತಿ ವಗೈರೆಗೆ ಉತ್ತರಾಧಿಕಾರಿಯಾದ ತನ್ನ ಹೆಸರಲ್ಲಿ ವರ್ಗಾಯಿಸಬೇಕಾಗಿ ಅವರ ವಿಧವೆ ಪಾರ್ವತಿ ಅಮ್ಮನವರು ತಾರೀಕು 13—8—'25ರಲ್ಲು ಈ ಸಂಘಕ್ಕೆ ಅರ್ಜಿಬರಕೊಂಡಿರುತ್ತಾರೆ. ಈ ಸಂಗತಿಯನ್ನು ಸ್ವದೇಶಾಭಿಮಾನಿಯಲ್ಲಿ ಒಂದು ತಿಂಗಳ ವ್ಯಾದೆಯಿಂದ ನೋಟೀಸು ಫ್ಯಾಸ್ ಮಾಡಿದ ನಂತರ ವರ್ಗಾಯಿಸುವ ಕುರಿತು ಆಲೋಚಿಸುವ ಬಗ್ಗೆ ಈ ಸಂಘದ ಆಡಳಿತೆ ಸಭೆಯಲ್ಲಿ ನಂಬ್ರ $\frac{48}{15-8-'25}$ನೇ ನಿರ್ಣಯವಾಗಿಯದೆ. ಇದಕ್ಕೆ ಆಕ್ಷೇಪವುಳ್ಳವರು ಈ ನೋಟೀಸು ಫ್ಯಾಸ್ ಆದ ಒಂದು ತಿಂಗಳ ಒಳಗೆ ಅವರ ಆಕ್ಷೇಪಣೆಗಳನ್ನು ಬರಹ ಮೂಲಕವಾಗಿ ಕಾರ್ಯದರ್ಶಿಯಾದ ನನಗೆ ಜ್ಯಾಹೀರು ಮಾಡಲಿಕ್ಕೆ ತಪ್ಪಿದರೆ ಮೇಲಣ ನಿರ್ಣಯದಂತೆ ಸದರಿ 1ನೇ ಕ್ಲಾಸು ಪಾಲುಗಳ 5ನ್ನು ಆ ಪಾರ್ವತಿ ಅಮ್ಮನವರ ಹೆಸರಲ್ಲಿ ವರ್ಗಾಯಿಸಲಾದೀತು; ತಿಳಿದಿರಲಿ.

ನಂಬ್ರ 2835ನೇ ದಕ್ಷಿಣ
ಕನ್ನಡಾ ಬಾಗಾಯತು ಕೃಷಿಕರ
ಬಂಡಸಾಲೆಯ ಸಹಕಾರಿ
ಸಂಘ, ಲಿಮಿಟೆಡ್, ವಿಟ್ಲ
ತಾರೀಕು 20-8-'25.
Shankernarayana Bhatt,
ಕಾರ್ಯದರ್ಶಿ.

ಮಂಗಳೂರು ಮುನ್ಸಿಪಲ್ ಕೌನ್ಸಿಲಿಗೆ ಮೆಂಬರರ — ಚುನಾವಣೆ. —

ಕಾಂಗ್ರೆಸ್ ಮತ್ತು ಸ್ವರಾಜ್ಯಪಾರ್ಟಿ ಕಡೆಯಿಂದ

ವಿನಂತಿ.

ಮಹನೀಯರೇ,

೧. ಮಂಗಳೂರು ಮುನ್ಸಿಪಲ್ ಕೌನ್ಸಿಲಿನಲ್ಲಿ ಸಧ್ಯದಲ್ಲಿ ಖಾಲಿ ಬೀಳಲಿಕ್ಕಿರುವ ೭ ಸ್ಥಾನಗಳಿಗೆ ಈ ಕೆಳಗೆ ನಮೂದಿಸಿರುವ ೭ ಜನ ಕಾಂಗ್ರೆಸ್ ಉಮೇದ್ವಾರರನ್ನು ನಿಲ್ಲಿಸಬೇಕಾಗಿ ಸ್ಥಳಿಕ ಕಾಂಗ್ರೆಸ್ ಮತ್ತು ಸ್ವರಾಜ್ಯ ಪಾರ್ಟಿಯವರು ನಿರ್ಣಯಿಸಿರುತ್ತಾರೆ.

ಉಮೇದ್ವಾರರ ಹೆಸರು.	ವಾರ್ಡು
ಶ್ರೀಯುತ ಅಬ್ದುಲ್ ಖಾದರ್ ಅಸಾದಿ ಯಾನೆ ಬಾದ್‌ಷಹ ಸಾಹೇಬರು,	ಗೋಳಿಕಟ್ಟ.
„ ಎಚ್. ಎಮ್. ಫಕ್ತಾರು ಸಾಹೇಬರು,	„
„ ಕಾರ್ನಾಡು ಸದಾಶಿವರಾಯರು,	„
„ ಉಳ್ಳಾಲ ಸಂಜೀವರಾಯರು,	ಮಾರ್ಕೆಟ್
„ ಕೋಟಿ ರಾಮಕೃಷ್ಣ ಕಾರಂತರು,	ಕೊಡಿಯಾಲಬೈಲ್ ವೆಸ್ಟ್
„ ಯು. ಸಿ. ಸುಬ್ರಹ್ಮಣ್ಯ ಭಟ್ಟರು,	ಕೋರ್ಟ
„ ಕೇಪ್ಟನ್ ಬಿಡೆಯವರು	ಜಪ್ಪು.

೨. ಸ್ಥಳಿಕ ಬೋರ್ಡುಗಳನ್ನು ಮತ್ತು ಮುನ್ಸಿಪಲ್ ಕೌನ್ಸಿಲುಗಳನ್ನು ಕಾಂಗ್ರೆಸ್ ಸದಸ್ಯರು ಪ್ರವೇಶಿಸಿ ಈ ಸಂಸ್ಥೆಗಳನ್ನು ರಾಷ್ಟ್ರೀಯ ಸಂಸ್ಥೆಗಳನ್ನಾಗಿ ಮಾಡಬೇಕೆಂದು ಅಖಿಲ ರಾಷ್ಟ್ರೀಯ ಮಹಾಸಭೆಯು ನಿರ್ಣಯಿಸಿರುವುದೂ, ಈ ಉದ್ದೇಶದಿಂದಲೇ ನಮ್ಮ ದೇಶದ ಮುಖಂಡರುಗಳಾದ ಮಹಾತ್ಮಾಗಾಂಧಿಯವರೇ ಮೊದಲುಗೊಂಡು ದೇಶಬಂಧು ಚಿತ್ತರಂಜನ ದಾಸರೂ, ಶ್ರೀ. ಮೋತಿಲಾಲ ನೆಹರರೂ, ಶ್ರೀ. ಶ್ರೀನಿವಾಸ ಅಯ್ಯಂಗಾರರವರೂ ಇನ್ನೂ ಅನೇಕ ಮಹನೀಯರೂ ದೇಶದ ಎಲ್ಲಾ ಪ್ರಾಂತ್ಯಗಳಲ್ಲಿಯೂ ಪ್ರಯತ್ನಿಸುತ್ತಿರುವುದೂ ಸಾಧಾರಣವಾಗಿ ಎಲ್ಲರಿಗೂ ತಿಳಿದ ವಿಚಾರ. ನಮ್ಮ ದೇಶವು ಏಳಿಗೆಯಾಗಬೇಕಾದರೆ ಎಲ್ಲಾ ಸ್ಥಳಿಕ ಸಂಸ್ಥೆಗಳಿಗೆ ದೇಶಹಿತವನ್ನೇ ಮುಖ್ಯ ಧ್ಯೇಯವನ್ನಾಗಿಟ್ಟುಕೊಂಡು ಕೆಲಸ ಮಾಡುವ ಮೆಂಬರರನ್ನು ಚುನಾಯಿಸುವುದು ಅತ್ಯಂತ ಅಗತ್ಯ. ದೇಶದ ಇತರ ಎಲ್ಲಾ ಪ್ರಾಂತಗಳಲ್ಲಿಯೂ ಈ ಕಾರ್ಯವು ಸಾಗುತ್ತಿರುವಲ್ಲಿ ಮಂಗಳೂರು ಪಟ್ಟಣಿಗರೂ ಕೂಡ ಹಿಂದೆ ಬೀಳಲಿಕ್ಕಿಲ್ಲವೆಂದು ನಾವು ಸಂಪೂರ್ಣ ನಂಬಿದ್ದೇವೆ.

೩. ಇದಲ್ಲದೆ ಯಾವ ಸಂಸ್ಥೆಯಿಂದಾದರೂ ಜನರಿಗೆ ಪ್ರಯೋಜನ ಸಿಕ್ಕಬೇಕಾದರೆ ಸಂಸ್ಥೆಯ ಮೆಂಬರರು ತಮ್ಮ ಕಾರ್ಯಕ್ರಮ ಇಂಥಾದ್ದೇ ಎಂದು ವೋಟರ ಮುಂದಿರಿಸಿ ಸ್ವೇಚ್ಛಾನುಸಾರ ವರ್ತಿಸದೆ ಅಂಥಾ ಕಾರ್ಯಕ್ರಮವನ್ನೇ ಒಗ್ಗಟ್ಟಿನಿಂದ ನಿರ್ಭಯವಾಗಿ ಸಾಧಿಸಬೇಕು. ಹೀಗಿಲ್ಲದೆ ಪ್ರತಿಯೊಬ್ಬ ಮೆಂಬರನು ತನ್ನಷ್ಟಕ್ಕೆ ತಾನೇ ಕೆಲಸಮಾಡಹತ್ತಿದರೆ, ವೋಟರರಿಗೆ ಅವನ ಕಾರ್ಯಕ್ರಮದ ಮೇಲೆ ಯಾವ ಅಧಿಕಾರವೂ ಉಳಿಯುವುದಿಲ್ಲ; ಮಾತ್ರವಲ್ಲ, ಅಂಥಾ ಮೆಂಬರನಿಗೆ ಏಕಧ್ಯೇಯವಿರುವ ಪಾರ್ಟಿಯ ಬೆಂಬಲವಿಲ್ಲದೆ ಯಾವ ಕೆಲಸವನ್ನೂ ಸಾಧಿಸುವರೆಯೂ ಸಾಧ್ಯವಾಗುವದಿಲ್ಲ. ಆದುದರಿಂದಲೇ ಇಂಥಾ ಸಂಸ್ಥೆಗಳಿಗೆ ಕಾರ್ಯಕ್ರಮವನ್ನು ಮುಂದಾಗಿ ನಿರ್ಣಯಿಸಿ ಐಕ್ಯಮತ್ಯದಿಂದ ಕೆಲಸಮಾಡಲು ವಾಗ್ದಾನಕೊಡುವ ಒಂದು ಪಾರ್ಟಿಯ ಮೆಂಬರರನ್ನು ಚುನಾಯಿಸುವುದು ಅವಶ್ಯ.

೪. ಪಾರ್ಟಿಯವರಿಂದ ನಿಲ್ಲಿಸಲ್ಪಟ್ಟ ಮೇಲಿನ ಉಮೇದ್ವಾರರನ್ನು ಮ್ಯುನಿಸಿಪಾಲಿಟಿಯ ಮೆಂಬರರನ್ನಾಗಿ ಚುನಾಯಿಸಿದಲ್ಲಿ, ಪಾರ್ಟಿಯವರು ಈ ಮೊದಲು ನಿರ್ಣಯಿಸಿದ ಈ ಕೆಳಗೆ ಕಾಣುವ ಮತ್ತು ಇನ್ನು ಮುಂದೆ ಆಗಿಂದಾಗ್ಗೆ ನಿಶ್ಚಯಿಸಬಹುದಾದ ಕಾರ್ಯಕ್ರಮವನ್ನು ಜಾರಿಗೆ ತರಲು ತಮ್ಮಿಂದ ಸಾಧ್ಯವಿದ್ದಷ್ಟು ಪ್ರಯತ್ನಮಾಡುತ್ತೇವೆಂದು ಅವರು ಬರಹ ಮೂಲಕ ದೃಢಪತ್ರವನ್ನು ಪಾರ್ಟಿಯವರಿಗೆ ಕೊಟ್ಟಿರುತ್ತಾರೆ.

೫. ಪಾರ್ಟಿಯವರ ಮುನ್ಸಿಪಲ್ ಕಾರ್ಯಕ್ರಮ.

(೧) ಎಲ್ಲಾ ತರದ ಜಾತಿ ವ ಪಕ್ಷಪಾತವನ್ನು ಬಿಟ್ಟು, ಮುನಿಸಿಪಾಲಿಟಿಗೆ ತೆರಿಗೆ ಕೊಡುವವರ ಒಳ್ಳಿತನವನ್ನೇ ಎಲ್ಲಕ್ಕಿಂತಲೂ ಮೇಲಿಟ್ಟು ಕೆಲಸಮಾಡುವುದು.

(೨) ಕಾಂಗ್ರೆಸ್ ರಚನಾಶೀಲ (Constructive Programme) ಕಾರ್ಯಕ್ರಮವನ್ನು ಜಾರಿಗೆ ತರುವುದು (ಅಂದರೆ ಖಾದಿ ಪ್ರಚಾರ, ಎಲ್ಲಾ ಜಾತಿವೈಷಮ್ಯ ಹೋಗಲಾಡಿಸುವುದು, ಅಸ್ಪೃಶ್ಯತೆ ನಿವಾರಣೆ ವಗೈರೆ.)

(೩) ಮುನಿಸಿಪಾಲಿಟಿಗೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನು ಸರಿಯಾಗಿ ಪರಿಶೋಧಿಸಿ ತಿಳಕೊಳ್ಳುವುದು.

(೪) ಮುನಿಸಿಪಾಲಿಟಿಯ ಹಣವನ್ನು ತೆರಿಗೆಕೊಡುವವರ ಹೆಚ್ಚಿನ ಪ್ರಯೋಜನಕ್ಕೆ ಸಿಕ್ಕುವಂತೆ ಮಾಡುವುದು.

(೫) ಆದಷ್ಟು ಬೇಗನೆ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯವಾಗಿ ಮತ್ತು ಧರ್ಮಾರ್ಥವಾಗಿ ಎಲ್ಲರಿಗೂ ಸಿಕ್ಕುವಂತೆ ಮಾಡುವುದು. ಮುನಿಸಿಪಲ್ ಶಾಲೆಗಳಲ್ಲಿ ಹಿಂದಿಯನ್ನು ಕಲಿಸುವರೆ ಉತ್ತೇಜನಕೊಡುವುದು.

(೬) ಮದ್ಯಪಾನವನ್ನು ಸಂಪೂರ್ಣ ಹೋಗಲಾಡಿಸುವಂತೆ ಪ್ರಯತ್ನಿಸುವುದು.

(೭) ಬಡಜನರ ಮನೆಮಾರು ವಗೈರೆ ಸ್ಥಿತಿಗತಿಗಳನ್ನು ಉತ್ತಮ ಸ್ಥಿತಿಗೆ ತರುವುದು.

(೮) ಭಿಕ್ಷುಕರ ವಿಷಯ ಯೋಗ್ಯವಾದ ವ್ಯವಸ್ಥೆಮಾಡುವುದು.

(೯) ಈಗಿರುವ ರಸ್ತೆಗಳನ್ನು ಉತ್ತಮ ಸ್ಥಿತಿಗೆ ತರುವುದು. ಮತ್ತು ಪಟ್ಟಣದ ಎಲ್ಲಾ ಕಡೆಗಳಿಗೆ ಸುಲಭವಾಗಿ ಹೋಗುವಂತೆ ಇನ್ನೂ ಅನೇಕ ರಸ್ತೆಗಳನ್ನು ಹೊಸದಾಗಿ ಮಾಡಿಸುವುದು.

(೧೦) ದೇಶೀಯ ಔಷಧಕೊಡುವ ಆಸ್ಪತ್ರೆಗಳನ್ನು ಪಟ್ಟಣದ ಬೇರೆ ಬೇರೆ ಕಡೆಗಳಲ್ಲಿ ಇರಿಸುವಂತೆ ಪ್ರಯತ್ನಿಸುತ್ತಿರುವುದು.

(೧೧) ಪಟ್ಟಣದ ಆರೋಗ್ಯಸ್ಥಿತಿಯನ್ನು (Health & Sanitation) ಎಲ್ಲಾ ರೀತಿಯಲ್ಲಿಯೂ ಉತ್ತಮಸ್ಥಿತಿಗೆ ತರುವುದು.

(೧೨) ಮುನಿಸಿಪಲ್ ತೆರಿಗೆ ಕೊಡುವವರ ಹಾಲಹವಾಲುಗಳನ್ನು ತಿಳಕೊಳ್ಳುವರೆ ಒಂದು ಕಚೇರಿ ತೆರೆಯುವದು. ಮತ್ತು ಅವುಗಳಿಗೆ ಯೋಗ್ಯ ಏಲಿವಾರಿ ಮಾಡುವರೆ ಪ್ರಯತ್ನಿಸುವುದು.

ಅದ್ದರಿಂದ ಬರುವ ಮುನ್ಸಿಪಲ್ ಕೌನ್ಸಿಲ್ ಚುನಾವಣೆಯಲ್ಲಿ ಆಯಾಯ ವಾರ್ಡಿನ ಮತದಾರರು ಜಾತಿ ಸ್ನೇಹ ವಗೈರೆ ಯಾವ ದಾಕ್ಷಿಣ್ಯವನ್ನೂ ಲಕ್ಷಿಸದೆ, ನಮ್ಮ ದೇಶದ ಮತ್ತು ಪಟ್ಟಣದ ಏಳಿಗೆಯನ್ನು ಎಣಿಸಿ, ತಮ್ಮ ವೋಟುಗಳನ್ನು ಮೇಲಿನ ಉಮೇದ್ವಾರರಿಗೆ ಕೊಡಬೇಕಾಗಿ ಈ ಪಟ್ಟಣದ ನಿವಾಸಿಗಳನ್ನು ನಾವು ದೈನ್ಯದಿಂದ ಬೇಡಿಕೊಳ್ಳುತ್ತೇವೆ.

೧. ಗಂಗೊಳ್ಳಿ ಕೃಷ್ಣರಾವ್,
೨. ಮಂಗಳೂರು ಮಾಧವರಾವ್,
೩. ಅತ್ತಾವರ ಬಾಲಕೃಷ್ಣ ಸೆಟ್ಟಿ,
೪. ಎಮ್. ಎನ್. ಕಿಣಿ.
೫. ಕೋಟಿರಾಮಕೃಷ್ಣ ಕಾರಂತ.
೬. ಉಳ್ಳಾಲ ಸಂಜೀವರಾವ್,
೭. ಕೇಪ್ಟನ್ ಬಿಡೆ,
೮. ರಾಮಚಂದ್ರಾಚಾರ್ಯ,
೯. ಅನಂತರಾಮ ಅದ್ಯಂತಾಯ,
೧೦. ಗುಲಾಮು ಹೈದರ್ ಸಾಹೇಬ್,
೧೧. ಕೆ. ಎಮ್. ದಾಸಪ್ರಭು,
೧೨. ಎಮ್. ಕೊರಗ ಪಂಡಿತ.
೧೩. ಅರಿಬೈಲು ಭೋಜರಾವ್,

ಮಂಗಳೂರು ತಾಲೂಕು ಕಾಂಗ್ರೆಸು ಮತ್ತು ಸ್ವರಾಜ್ಯಕಮಿಟಿಗಳ
ಕಾರ್ಯಕಾರಿ ಮಂಡಲಿಯ ಸದಸ್ಯರು.

ಮಂಗಳೂರು,
ತಾ. ೨೦-೮-'೨೫.

ವಿದೇಶ ವರ್ತಮಾನ.

— ಅಮೇರಿಕದ ಒಂದು ಪತ್ರಿಕೆಯಲ್ಲಿ ಮಂಗನ ಗ್ರಂಥಿರಸವನ್ನು ಶರೀರದಲ್ಲಿ ಸೇರಿಸಿಕೊಳ್ಳುವುದರಿಂದ ಮುದುಕರು ಪ್ರಾಯಸ್ಥರಾಗುವುದಕ್ಕೆ ಪ್ರತಿಯಾಗಿ ಶರೀರವು ಇನ್ನಷ್ಟು ಬೇಗನೇ ಕೆಡುವುದೆಂದೂ ಪ್ರಸಿದ್ಧವಾಗಿರುತ್ತೆ.

— ಗ್ರೀಸ್ ದೇಶಕ್ಕೆ ಹೊಂದಿದ ಥೇರಾ ಅಥವಾ ಸಾನ್‌ಟೋರಿಣಿ ಎಂಬ ದ್ವೀಪದಲ್ಲಿ ಸಿಕ್ಲೆಡೀಸ್ ಎಂಬ ಜ್ವಾಲಾಮುಖಿ ಪರ್ವತವಿದೆ. ಅದು ಈಗ ತೆರೆದು, ತಪ್ತರಸವು ಹೊರಬೀಳುತ್ತಿದೆ. ಇದರಿಂದ ಅಲ್ಲಿಯ ಜನರು ಬಹು ಸಂಕಟಕೀಡಾಗಿರುವರು. ಗ್ರೀಸ ಸರಕಾರವು ಅವರ ಸಹಾಯಕ್ಕೆ ತಕ್ಕ ವ್ಯವಸ್ಥೆ ಮಾಡುತ್ತಿದೆ.

— ಮೋಟಾರ ಗಾಡಿಗಳ ಟಾಯರಗಳ ದರವು ೧೦೦ಕ್ಕೆ ೧೫ರಂತೆಯೂ, ಒಳಗಿನ ಟ್ಯೂಬಿನ ದರವು ೧೦೦ಕ್ಕೆ ೨೦ರಂತೆಯು ಹೆಚ್ಚಿಸಲ್ಪಟ್ಟಿವೆಯೆಂದು ತಾ। ೫ರ ಲಂಡನಿನ್ನ ತಂತಿಯಿಂದ ತಿಳಿಯುತ್ತದೆ.

— ಯುರೋಪ ಖಂಡದ ನೇಪಲ್ಸ ಪಟ್ಟಣದಲ್ಲಿ ಒಂದು ಪ್ರಕಾರದ ಇರುವೆಗಳ ಪಿಡುಗು ಬಂದು ಕೆಲದಿನಗಳ ವರೆಗೆ ಅಂಗಡಿಗಳು ಮುಚ್ಚಿದ್ದವು.

— ಇಂಗ್ಲಂಡ, ದಕ್ಷಿಣ ಆಫ್ರಿಕ ಮೊದಲಾದ ದೇಶಗಳ ವಜ್ರಗಳ ವರ್ತಕರು ಒಂದು ಕಂಪೆನಿ ಮಾಡಿದ್ದು, ಇವರೇ ಜಗತ್ತಿನಲ್ಲಿ ದೊರೆಯುವ ವಜ್ರ ವೈಡೂರ್ಯಗಳನ್ನು ಕೊಂಡು, ತಮಗೆ ವಿಹಿತವಾಗಿ ತೋರುವ ಬೆಲೆಗೆ ಮಾರುವರು.

— ಡಾ। ಲಿನರ್ಡ್ ಹಿಲ್‌ರವರು ಬಿಸಿಲಿನ ಚಿಕಿತ್ಸೆಯೆಂಬದಾಗಿ ಒಂದು ಚಿಕಿತ್ಸೆಯನ್ನು ಕಂಡುಹಿಡಿದಿರುವರು. ಅನೇಕ ರೋಗಗಳಿಗೆ ಒಂದು ತೆಳುವಾದ ರೇಷ್ಮೆ ಬಟ್ಟೆಯನ್ನು ರೋಗಿಗಳಿಗೆ ಹೊದ್ದಿಸಿ, ತಲೆಗೆ ಬಾಳೆಯ ಪಟ್ಟೆಯನ್ನು ಕಟ್ಟಿ, ಬಿಸಿಲಿನಲ್ಲಿ ಮಲಗಿಸುವರು. ಈ ಚಿಕಿತ್ಸೆಯಿಂದ ಅನೇಕ ರೋಗಗಳನ್ನು ವಾಸಿಮಾಡಿರುವರೆಂದು ತಿಳಿಯಬರುತ್ತದೆ.

— ಸಿಲೋನ್ ದ್ವೀಪದ "ಕಟುವುರುಂಡ" ಎಂಬ ಗ್ರಾಮದಲ್ಲಿ ಒಬ್ಬ ಹೆಂಗಸು ಒಂದು ಗಂಡು ಮಗುವನ್ನು ಹೆತ್ತಳು. ಅದಕ್ಕೆ ೩೨ ಹಲ್ಲುಗಳಿದ್ದ[illegible] ಕಣ್ಣುಗಳು ಗುಂಡಗಿದ್ದವು. ಕಿವಿಗಳಲ್ಲಿನ ಕೂದಲುಗಳು ಕತ್ತಿನ ವರೆಗೂ ಬರುತ್ತಿತ್ತು. ಹುಟ್ಟಿದ ಎರಡು ಘಂಟೆಗಳಲ್ಲಿ ಆ ಮಗುವು ಸತ್ತು ಹೋಯಿತು.

— ಡ್ರೂಸರಿಗೂ, ಫ್ರೆಂಚರಿಗೂ ಯುದ್ಧವು ನಡೆದು, ಫ್ರೆಂಚರಿಗೆ ಬಹಳ ನಷ್ಟವು ಪ್ರಾಪ್ತವಾಯಿತು.

— ಮೋಸಲ್ ಪ್ರಾಂತ್ಯವನ್ನು ಫ್ರೆಂಚರು ತಮಗೆ ಸೇರಬೇಕೆಂದೂ, ಮತ್ತು ತುರ್ಕಿಸ್ಥಾನದವರೂ ತಮಗೆ ಸೇರಬೇಕೆಂದೂ ಹೇಳುತ್ತಲಿದ್ದಾರೆ. ಈಗ ಫ್ರೆಂಚರು ಮೋಸಲ್ ಪ್ರಾಂತ್ಯದಲ್ಲಿ ತಮಗಿರುವ ಹಕ್ಕಿನ ವಿಷಯವನ್ನು ಕುರಿತು ೨೫೦ ಪುಟಗಳುಳ್ಳ ಒಂದು ನೋಟನ್ನು ತಯಾರು ಮಾಡುತ್ತಲಿರುವರು. ಇವರು ಇದನ್ನು ಲೀಗ್ ಒಫ್ ನೇಷನ್‌ಸಿಗೆ ಒಪ್ಪಿಸುತ್ತಾರೆ.

— ಮಿ॥ ಸಕಲಾತ್ವಾಲಾರವರನ್ನು ಎಲ್ಲಿಗೋ ಗುಟ್ಟಾಗಿ ಅಪಹರಿಸಿಕೊಂಡು ಹೋಗಬೇಕೆಂದು "ಅಂಟಿರೆಡ್ಸ್" ಪಂಗಡದವರು ಪ್ರಯತ್ನಪಡುತ್ತಲಿರುವರು. ಸುಮಾರು ೨೦೦ ಜನ ಕಮ್ಯೂನಿಸ್ಟುಗಳು ಮಿ॥ ಸಕಲಾತ್ವಾಲರವರ ರಕ್ಷಣೆಗಾಗಿ ಅವರ ಹತ್ತಿರದಲ್ಲಿಯೆ ಇರುತ್ತಾರೆ.

ಒಳದೇಶ ವರ್ತಮಾನ.

— ಪೂನಾ ಪಟ್ಟಣದಲ್ಲಿ ಜರಗಿದ ಮಹಮ್ಮದೀಯ ಶಿಕ್ಷಣ ಪರಿಷತ್ತಿನ ಅಧ್ಯಕ್ಷರಾದ ಖೈರಪುರದ ನವಾಬ ಸಾಹೇಬರು ತಮ್ಮ ಜನಗಳಲ್ಲಿ ಶಿಕ್ಷಣದ ಪ್ರಸಾರಕ್ಕಾಗಿ ೧೫ ಸಾವಿರ ರೂಪಾಯಿಗಳನ್ನು ಉಚಿತವಾಗಿ ಕೊಟ್ಟಿರುವರು.

— ಪಾರೀಸ ಪಟ್ಟಣದಲ್ಲಿ ಸೇರಲಿಕ್ಕಿರುವ ಪರಲೋಕ ವಿದ್ಯಾ ಪರಿಷತ್ತಿಗೆ ಶ್ರೀ. ವಿ. ಡಿ. ಋಷಿಗಳು ಹಿಂದೂಸ್ಥಾನದಿಂದ ಹೋಗಲಿಕ್ಕಿರುವರು. ಅವರನ್ನು ಪುಣೆಯ ನ್ಯೂ ಪೂನಾ ಕೊಲೆಜಿನವರು ಸನ್ಮಾನಿಸಿದರು.

— ಸುಳ್ಳು ಲೋಟರಿಯನ್ನು ಹೊರಡಿಸಿ ಜನಗಳನ್ನು ವಂಚಿಸಿದ ಆರೋಪದ ಮೇಲಿಂದ ಕೊರ್‌ಬೇರಿ ಮತ್ತು ಮಾಲೆ ಎಂಬಿಬ್ಬರನ್ನು ಮುಂಬಯಿಯ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು ಅನುಕ್ರಮವಾಗಿ ೯ ಮತ್ತು ೪ ತಿಂಗಳ ಕಠಿನ ಶಿಕ್ಷೆಯನ್ನೂ ೪೦೦ ರೂ. ಮತ್ತು ೧೫೦ ರೂಪಾಯಿ ದಂಡವನ್ನೂ ವಿಧಿಸಿದರು.

— ಆಗ್ರಾದೊಳಗಿನ ಸಾಧು ಸಮಿತಿಯ ಅಧ್ಯಕ್ಷರಾದ ಶ್ರೀ. ಸ್ವಾಮಿ ಕೃಪಾಲದಾಸ ಇವರನ್ನು ಅಮೇರಿಕದೊಳಗಿನ 'ಇಂಟರ ನೇಶನಲ್-ಲೆಕ್ಚರರ ಸೊಸಾಯಿಟಿಯು ಹಿಂದುಧರ್ಮದ ವಿಷಯವಾಗಿ ಉಪನ್ಯಾಸವನ್ನು ಕೊಡಲು ಆಮಂತ್ರಿಸಿದೆ. ಅವರ ಪ್ರತಿಯೊಂದು ಉಪನ್ಯಾಸಕ್ಕೆ ೪೦೦ ಡೊಲರುಗಳನ್ನು ಎಂದರೆ ೩೦೦ ರೂಪಾಯಿಗಳನ್ನು ಕೊಡಲು ನಿಶ್ಚಯಿಸಿದೆ. ಸ್ವಾಮಿ ಕೃಪಾಲದಾಸರು ೭೦ ಉಪನ್ಯಾಸಗಳನ್ನು ಕೊಡುವವರಿದ್ದಾರೆ. ಇವರ ಈ ೭೦ ಉಪನ್ಯಾಸಗಳಿಗೆ ಬರುವ ಎಲ್ಲ ಹಣದಿಂದ ಹಿಂದುಸ್ಥಾನದಲ್ಲಿ ಸರ್ವ ರಾಷ್ಟ್ರೀಯ ಧರ್ಮ ವಿಶ್ವವಿದ್ಯಾಲಯವನ್ನು ಸ್ಥಾಪಿಸುವದುಂಟು.

— ಲಾಹೋರದಲ್ಲಿ ಮಕ್ಕಳನ್ನು ಹಿಡಿದು ತಿನ್ನುವವರ ಗುಂಪಿನೊಳಗಿನ ಒಬ್ಬ ಪಠಾಣನನ್ನು ಪೋಲೀಸರು ಕೈದುಮಾಡಿದ್ದಾರೆ. ತಾವು ಇದುವರೆಗೆ ಸುಮಾರು ೪೦ ಮಕ್ಕಳನ್ನು ಎಬ್ಬಿಸಿ, ಅವರನ್ನು ಹುರಿದು ತಿಂದಿದ್ದೇವೆ ಎಂದು ಈತನು ಹೇಳಿದ್ದಾನೆ! ಈ ನರಭಕ್ಷರನ್ನು ಕೇಳುವವರಿಲ್ಲವೆ?

— ಕಾನಪುರದಲ್ಲಿ ಬರುವ ಕೊಂಗ್ರೆಸ್ಸಿನ ಸ್ವಾಗತಮಂಡಲದ ಸ್ಥಾಪನೆಯಾಗಿದ್ದು ಡೊ. ಮುರಾರಿಲಾಲ ಇವರನ್ನು ಅಧ್ಯಕ್ಷರನ್ನಾಗಿ ನೇಮಿಸಿದೆ.

— ಔಧ-ರೋಹಿಲಖಂಡ ರೈಲ ರಸ್ತೆಯಿಂದ ಹೋಗುತ್ತಿರುವ ರೈಲಿನ ಮೇಲೆ ದರೋಡೆಗಾರರು ಹಲ್ಲೆಮಾಡಿ ಸುಮಾರು ೧೦ ಸಾವಿರ ರೂಪಾಯಿ ಮಾಲನ್ನು ಎಬ್ಬಿಸಿದರು. ಮತ್ತು ಮೂವರನ್ನು ಕೊಂದರು.

— ಸಿಂಧ ಗುಜರಾಥ ಪ್ರಾಂತದ ಪೈಕಿ ಗಾರ್‍ಹಿಖಾನ ಎಂಬಲ್ಲಿ ಹುಡುಗಿಯರನ್ನು ಕದ್ದೊಯ್ಯು ಮಾರಾಟಮಾಡುವ ಇಬ್ಬರು ಮುಸಲ್ಮಾನರನ್ನು ಪೋಲೀಸರು ಕೈದುಮಾಡಿದ್ದಾರೆ.

— ಅಹಮದಾಬಾದಿನ ವೈದ್ಯಸಭೆಯು ಆಯುರ್ವೇದದ ಶಾಲೆಯನ್ನು ಸ್ಥಾಪಿಸಿ ಬಡ ವಿದ್ಯಾರ್ಥಿಗಳ ಯೋಗ್ಯತೆಯನ್ನು ನೋಡಿ ಅವರಿಗೆ ಊಟದ ಮತ್ತು ವಸತಿಯ ಸಹಾಯವನ್ನೂ, ಶಿಕ್ಷಣವನ್ನೂ ಧರ್ಮಾರ್ಥವಾಗಿ ಕೊಡಲು ಏರ್ಪಾಡುಮಾಡಿದೆ.

— ಮಿ. ಪಟೇಲರೂ ಮಿ. ರಂಗಾಚಾರ್ಯರೂ ಎಸೆಂಬ್ಲಿಗೆ ಅಧ್ಯಕ್ಷಸ್ಥಾನಕ್ಕೆ ಉಮೇದುವಾರರಾಗಿ ನಿಂತಿದ್ದರು. ಇವರ ಪೈಕಿ ಪಟೇಲರು ಚುನಾಯಿಸಲ್ಪಟ್ಟಿರುವರು.

— ಅಹಮದಾಬಾದ ಮುನ್ಸಿಪಾಲಿಟಿಯ ನೌಕರರು ಖಾದಿಯನ್ನು ಉಪಯೋಗಿಸಬೇಕೆಂಬ ಠರಾವಿರುವಾಗ, ಚೀಫ ಆಫೀಸರನು ವಿಲಾಯಿತಿ ವಸ್ತ್ರಗಳನ್ನು ಕೊಂಡುಕೊಂಡನು. ಈ ಕಾರಣದಿಂದ ಅಲ್ಲಿಯ ಸಭಾಸದರಲ್ಲಿ ಅಸಂತೋಷವು ಹರಡಿಕೊಂಡಿದೆ.

— ಸಿಮ್ಲಾದಲ್ಲಿ ಲೆಜಿಸ್ಲೇಟಿವ ಎಸೆಂಬ್ಲಿಯ ಅಧಿವೇಶನವು ಪ್ರಾರಂಭವಾಗಿದೆ.

— ಕೆಲವು ದಿವಸಗಳ ಪೂರ್ವದಲ್ಲಿ ಬೆಂಗಳೂರಲ್ಲಿ ೫ ರೂ. ಗಳ ಕಕಾರಿ ನೋಟುಗಳನ್ನು ಪೇಟೆಯಲ್ಲಿ ಒಬ್ಬ ಮನುಷ್ಯನು ತಂದಿರಲು, ಅವನು ಹಿಡಿಯಲ್ಪಟ್ಟನು. ಈ ಶೋಧದಲ್ಲಿ ೫೦ ಸಾವಿರ ರೂ.ಗಳ ಕಕಾರಿ ನೋಟುಗಳು ಪ್ರಸಾರವಾಗಿವೆಯೆಂದು ಗೊತ್ತಾಯಿತು. ಈ ಕೊಟ್ಟಿ ನೋಟುಗಳನ್ನು ಮಾಡುವವರು ತ್ರಾವಣಕೋರದ ಕಡೆಗೆ ಇದ್ದಾರೆ. ವಿಚಾರಣೆ ನಡೆದಿದೆ.

— ಎಸೆಂಬ್ಲಿಯು ಪ್ರಾರಂಭವಾದ ದಿವಸ ಎಂದರೆ ೨೦ನೇ ತಾರೀಕಿನ ದಿವಸ ಎಸೆಂಬ್ಲಿಯ ಉದ್ಯಾನದಲ್ಲಿ ಮುಖ್ಯ ಸಭಾಸ್ಥಾನಕ್ಕೆ ಹೋಗುವ ರಸ್ತೆಯ ಬದಿಯ ಕಾಲುವೆಯಲ್ಲಿ ಒಂದು ಬೊಂಬು ಸಿಕ್ಕಿತು. ಈ ಬೊಂಬು ಹೆಚ್ಚು ಭಯಂಕರವಾಗಿರಲಿಲ್ಲ. ಆದರೆ ಅದನ್ನು ಕೈಯಲ್ಲಿ ಎತ್ತಿದ ಕೂಡಲೆ ಮಾಲಿಯವನ ಕೈಯಲ್ಲಿ ಒಡೆಯಿತು. ಅದರಿಂದ ಬಟ್ಟೆಯು ಸ್ವಲ್ಪ ಮಟ್ಟಿಗೆ ಸುಟ್ಟಿತು. ಸರಕಾರಿ ಉದ್ಯೋಗಸ್ಥರು ಇದೊಂದು ತಮಾಷೆಯೆಂದೆ ಭಾವಿಸಿರುವರಂತೆ! ಇದು ಯಾವ ವಿಧದ ತಮಾಷೆಯಪ್ಪಾ!

— ಪುಣೆಯಲ್ಲಿ ಸತ್ಯಶೋಧಕವೆಂಬ ಬ್ರಾಹ್ಮಣೇತರ ಪಕ್ಷವು ಕೆಲವು ಚಿಕ್ಕ ಪುಸ್ತಕಗಳನ್ನು ಪ್ರಕಟಿಸಿ ಅದರಲ್ಲಿ ಬ್ರಾಹ್ಮಣ ದ್ವೇಷವನ್ನು ಪ್ರಕಟಿಸಿದ ಕಾರಣ ಅಲ್ಲಿಯ ಗಣಪತಿಯ ಉತ್ಸವದಲ್ಲಿ ಲಾಠಿಗಳನ್ನು ಯಾರೂ ಉಪಯೋಗಿಸಕೂಡದೆಂದೂ, ಸರಕಾರಿ ಕಮಿಟಿಯು ಪಾಸು ಮಾಡಿದ ಪದ್ಯಗಳನ್ನು ಮಾತ್ರ ಹಾಡಬೇಕೆಂದೂ ಡಿ. ಮೆಜಿಸ್ಟ್ರೇಟರು ಜಾಹೀರಪಡಿಸಿದ್ದಾರೆ.

— ಚಿತಗೊಂಗಿನ ಚಾರು ವಿಕಾಸದತ್ತನೆಂಬ ೨೫ ವರ್ಷದ ತರುಣನನ್ನು ಕ್ರಾಂತಿಕಾರಕನೆಂಬ ಆರೋಪದ ಮೇಲೆಗೆ ಸಿ. ಆಯ್. ಡಿ. ಪೋಲೀಸರು ಕೈದುಮಾಡಿದ್ದಾರೆ. ಇವನು ಬಂಗಾಲ ಓರ್ಡಿನನ್ಸಿನ ಮೇರೆಗೆ ಪ್ರತಿಬಂಧಿಸಲ್ಪಟ್ಟಿದ್ದನು. ಆದರೆ ಇವನು ಕಳೆದ ಬುಧವಾರ ರಾತ್ರಿ ಸಿ. ಆಯ್. ಡಿ. ಇಲಾಖೆಯ ಒಬ್ಬ ಇನ್ಸ್‌ಪೆಕ್ಟರನ ಮನೆ ಹತ್ತಿರ ಹೊಂಚುಹಾಕಿಕೊಂಡಿದ್ದದ್ದು ಕಂಡುಬಂತು. ಆಗ ಇವನನ್ನು ಹಿಡಿದು ಢಾಕಾದೊಳಗಿನ ಸೆಂಟ್ರಲ್ ಜೈಲಿನಲ್ಲಿ ಇಡೋಣಾಗಿದೆ.

— ಲಾಹೋರಿನ ಹತ್ತರ ಸಕಲಜ ಕಂದಕದ ರೈಲಿನ ಮಾರ್ಗದಲ್ಲಿ ನದಿಯ ಒಂದು ಕಡೆಯಲ್ಲಿ ಇಬ್ಬರು ಇಂಜಿನಿಯರರು ಇಬ್ಬರು ಕೂಲಿಗಳನ್ನು ತಕ್ಕೊಂಡು ಈಜುತ್ತಿದ್ದರು. ಆದರೆ ನೀರಿನ ಪ್ರವಾಹವು ಬಹು ಬಲವತ್ತಾಗಿ ಬಂದದರಿಂದ ಈಜುವವರಿಗೆ ಬಹು ಪ್ರಯಾಸವಾಯಿತು. ಇಬ್ಬರು ಇಂಜಿನಿಯರ ಪೈಕಿ ಒಬ್ಬನು ಕೂಲಿಯ ಸಹಾಯದಿಂದ ದಡಸೇರಿದನು. ಇನ್ನೊಬ್ಬನು ಮತ್ತು ಕೂಲಿಯು ಮುಳುಗಿದರು.

— ಓಲ್ ಇಂಡಿಯಾ ಕೊಂಗ್ರೆಸ್ ಕಮಿಟಿಯ ಸಭೆಯು ಸಪ್ಟಂಬರ ತಾ. ೨೨ರಲ್ಲಿ ಪಾಟಣಾದಲ್ಲಿ ಸೇರುವದು.

— ತಂಜಾವೂರಿನಲ್ಲಿ ಬ್ರಾಹ್ಮಣೇತರರ ಪರಿಷತ್ತು ಸೇರಿತು. ಇದರಲ್ಲಿ ಎರಡು ತಂಡಗಳಾಗಿರುವುದರಿಂದ ರಾಷ್ಟ್ರೀಯ ಪಕ್ಷದ ಬ್ರಾಹ್ಮಣೇತರ ಬಂಧುಗಳಿಗೆ ಸರಕಾರದ ಕಡೆಯವರು ನಡಿಸುವ ಈ ಕೃತ್ಯವೂ, ಪೆನೆಗಲ್, ಪತ್ರೋ ಮುಂತಾದ ಮಂತ್ರಿಗಳ ಕೃತ್ಯವೂ ಸಮ್ಮತವಿರಲಿಲ್ಲ. ಈ ಪರಿಷತ್ತಿನ ಸಮಯದಲ್ಲಿ ತಂಜಾವೂರದಲ್ಲಿ ಹರತಾಳ ಬಿದ್ದಿತೆಂದು ಪ್ರಕಟವಾಗಿದೆ.

— ಸರ್. ರಾಮಕೃಷ್ಣಗೋಪಾಲ ಭಾಂಡಾರಕರರು ತಮ್ಮ ೮೮ನೆಯ ಪ್ರಾಯದಲ್ಲಿ ಪುಣೆಯಲ್ಲಿ ಮೃತಪಟ್ಟರು। ಇವರು ಸಂಸ್ಕೃತದಲ್ಲಿ ಅತಿ ವಿದ್ವಾಂಸರಾಗಿದ್ದು ಸಂಶೋಧನಾತ್ಮಕವಾದ ಗ್ರಂಥಗಳನ್ನು ಬರೆದಿರುತ್ತಾರೆ.

— ಸಂಯುಕ್ತ ಪ್ರಾಂತದ ಕೌನ್ಸಿಲಿನಲ್ಲಿ ಪ್ರಶ್ನೆಗಳನ್ನು ಕೇಳುವ ಸಮಯದಲ್ಲಿ ಮುಂದಿನ ಮಾಹಿತಿಯು ಬಹಿರಂಗವಾಗಿದೆ. ಬಾದಶಹಾಪುರ ಎಂಬಲ್ಲಿ ಹಿಂದು-ಮಹಮ್ಮದೀಯರಲ್ಲಿ ದಂಗೆಯಾಯಿತು. ಬಕ್ರೀದಿಗಿಂತ ಮುಂಚೆ ಒಬ್ಬ ಮುಸಲ್ಮಾನನು ಕುರಬಾನಿ (ಗೋವಧೆ) ಯನ್ನು ಮಾಡಲು ಅಪ್ಪಣೆಯನ್ನು ಕೇಳಿದ್ದನು. ಆದರೆ ಅದು ಕೊಡಲ್ಪಡಲಿಲ್ಲ. ಈ ಸಂಗತಿಯನ್ನು ಕೆಲವು ದಿವಸಗಳ ತರುವಾಯ ಒಬ್ಬ ಬ್ರಾಹ್ಮಣನು ಆ ಮಹಮ್ಮದೀಯನಿಗೆ ಕೇಳಿದನು. ಅವರಿಬ್ಬರು ಸಿಟ್ಟುಳ್ಳವರಾಗಿ ಜಟಾಪಟಿಮಾಡಿಕೊಂಡರು. ಈ ಗಲಾಟೆಯಲ್ಲಿ ಕತ್ತಿ, ಲಾಟಿ ಮುಂತಾದವುಗಳು ಉಪಯೋಗಿಸಲ್ಪಟ್ಟವು. ೧೨ ಮುಸಲ್ಮಾನರಿಗೆ ಮತ್ತು ೩೪ ಹಿಂದುಗಳಿಗೆ ಗಾಯವಾಯಿತು. ಒಬ್ಬ ಮಹಮ್ಮದೀಯನು ಕಠಿನ ಗಾಯ ಹೊಂದಿದನು. ಅವನು ಈಗ ಹುಶಾರಾಗಿರುವನು. ಪೋಲೀಸ ಅಧಿಕಾರಿಗಳು ಇದರ ತನಖಿ ನಡಿಸಿ ಎಷ್ಟೋ ಜನರನ್ನು ಕೈದುಮಾಡಿದ್ದಾರೆ.

— ಕಲಕತ್ತೆಯಲ್ಲಿ ಹಿಂದುಗಳು ಗಣಪತಿ ಉತ್ಸವವನ್ನು ವಾದ್ಯಸಮೇತವಾಗಿ ಕೊಂಡುಹೋಗುವಾಗ ಒಂದು ಮಸೀದಿಯ ಸಮೀಪ ಮಹಮ್ಮದೀಯರಿಗೂ ಇವರಿಗೂ ದಂಗೆಯಾಗಿ ಈ ದಂಗೆಯಲ್ಲಿ ಅನೇಕರಿಗೆ ಪೆಟ್ಟು, ಗಾಯ ಮುಂತಾದವಾದದ್ದಲ್ಲದೆ ಕೆಲವರು ಮೃತಪಟ್ಟಿರುವರು.

ದಕ್ಷಿಣ ಕನ್ನಡ.

ಬಂಟವಾಳ:— ಇಲ್ಲಿಯ ಟೆಂಪಲ್ ಸೆಕೆಂಡರಿ ಶಾಲೆಯ ಹೊಸ ಕಟ್ಟೋಣದ ಪ್ರವೇಶ ಸಮಾರಂಭವು ಇದೇ ತಿಂಗಳ ತಾ. ೧೩ರಲ್ಲು ಬೆಳಗ್ಗೆ ೯ ಗಂಟೆಗೆ ಬಹಳ ವಿಜೃಂಭಣೆಯಿಂದ ನಡೆಯಿತು.

ಜಿಲ್ಲಾ ಎಜ್ಯುಕೇಶನಲ್ ಆಫೀಸರರಾದ ರಾ। ಶಂಕರ ಮೇನೋನ್‌ರವರು ಇಲ್ಲಿಯ ಟೆಂಪಲ್ ಸೆಕೆಂಡರಿ ಶಾಲೆಯನ್ನು ಸಂದರ್ಶಿಸಿ ನೂತನ ಕಟ್ಟೋಣವನ್ನೂ, ಹೊಸತಾಗಿ ತಯಾರಿಸಿದ ಆಡುವ ಸ್ಥಳವನ್ನೂ, ಬಾವಿಯನ್ನೂ, ಶಾಲಾಸಾಹಿತ್ಯಗಳನ್ನೂ ನೋಡಿ ಬಹಳ ಸಂತೋಷಪಟ್ಟು ಪುತ್ತೂರ ಕಡೆಗೆ ಪ್ರಯಾಣಬೆಳಿಸಿದರು.

ಮಂಗಳೂರು ತಾಲೂಕು ಬೋರ್ಡ ಪ್ರೆಸಿಡೆಂಟರು ಇಲ್ಲಿಗೆ ಬಂದು ಹೊಸತಾಗಿ ತೆರೆದ ಬೋರ್ಡ ಹಾಯರ್ ಎಲಿಮೆಂಟರಿ ಶಾಲೆಯನ್ನು ಸಂದರ್ಶಿಸಿ, ನಂತರ ಊರ ಸದ್‌ಗೃಹಸ್ಥರ ಸಭೆ ಸೇರಿಸಿ ಬಂಟವಾಳದ ವಿದ್ಯಮಾನಗಳನ್ನೆಲ್ಲಾ ತಿಳಕೊಂಡು ಅನಂತರ ಟೆಂಪಲ ಸೆಕೆಂಡರಿ ಶಾಲೆಯನ್ನು ಸಂದರ್ಶಿಸಿ, ಬೋರ್ಡ ಹಾಯರ್ ಎಲಿಮೆಂಟರಿ ಶಾಲೆಯ ಮೂರು ಹಾಯರ್ ಕ್ಲಾಸುಗಳು ಅಗತ್ಯವಿಲ್ಲವೆಂದು ಅಭಿಪ್ರಾಯಪಟ್ಟನು. ಅನಂತರ ಅಯ್ಯನಾಯ್ಕರ ಓಣಿಯನ್ನು ಸಂಕಳ್ಳೆ ಸರಿಯಾಗಿ ಬೇಗನೆ ಬಿಗಿಸಲಿಕ್ಕೆ ಸೆಂಕ್ಷನ್ ಮಾಡಿಸುತ್ತೇನೆಂದೂ ಜನರಿಗೆ ಸಮಾಧಾನಪಡಿಸಿದರು. ಅನಂತರ ಪೇಟೆಯ ಬೇರೆ ಬೇರೆ ಭಾಗಗಳನ್ನು ಸಂದರ್ಶಿಸಿದರು. ಆ ಮೇಲೆ ಆಸ್ಪತ್ರೆಗೆ ಹೋಗಿ ಅದನ್ನು ಸಂದರ್ಶಿಸಿ ಹಾಳಾದ ಬಿದಿ ಲಾಟೀನುಗಳನ್ನು ಬೇಗನೆ ದುರುಸ್ತಿ ಮಾಡಿಸಬೇಕೆಂದು ಡಾಕ್ಟರರಿಗೆ ತಿಳಿಸಿದರು. ನೆರೆಯ ಸಮಯ ಆಸ್ಪತ್ರೆಯಲ್ಲಿರುವ ರೋಗಿಗಳನ್ನು ತತ್ಕಾಲಕ್ಕೆ ಒಯ್ಯುವುದಕ್ಕೆ ಸುಲಭವಾಗುವಂತೆ ಆಸ್ಪತ್ರೆಗೂ ಬಂಗ್ಲೆಗೂ ಮಧ್ಯೆ ಇರುವ ಒಂದು ಸ್ಥಳವನ್ನು ಕ್ರಯಕ್ಕೆ ಬೇಗನೆ ಪಡೆಯಬೇಕೆಂದು ಅಭಿಪ್ರಾಯಪಟ್ಟರು.

ಇಲ್ಲಿಯ ಡಿಪ್ಯುಟಿ ತಹಸೀಲದಾರರಿಗೆ ಉಳುಕೊಳ್ಳುವುದಕ್ಕೆ ಒಂದು ಮನೆಯನ್ನು ಕಟ್ಟುವುದಕ್ಕೆ ಸ್ಥಳಶೋಧನೆ ಬಗ್ಗೆ ಜಿಲ್ಲಾ ಕಲೆಕ್ಟರರು ಬಂದಿದ್ದರು. ಇಲ್ಲಿಯ ಪಳ್ಳಿಗುಡ್ಡೆಯ ಒತ್ತಾಗಿರುವ ಸ್ಥಳವನ್ನು ಚುನಾಯಿಸಿ ಹೋಗಿರುವರು. ಮೆಜಿಸ್ಟ್ರೇಟರ ಮನೆಯು ಪಳ್ಳಿಬಾಗಲಲ್ಲಿರುವದು ಯಾರಿಗಾದರೂ ಸಮಂಜಸವಾಗಿ ತೋರುವುದಿಲ್ಲ. ಇದರ ಬದಲಾಗಿ ತುಂಬೆಯಲ್ಲಿ ಕಲ್ಲುಗುಡ್ಡೆಯಲ್ಲಿ ಕಟ್ಟಿಸಿದರೆ ಆರೋಗ್ಯಕ್ಕೂ ಯೋಗ್ಯವಾಗಿರುವದಲ್ಲದೆ ಮನಕ್ಲೇಶಗಳಿಗೂ ಆಸ್ಪದವಿರಲಿಕ್ಕಿಲ್ಲ.

ಇಲ್ಲಿ ಹುಚ್ಚು ನಾಯಿಗಳ ಕಾಟವು ಬಹಳ ಪ್ರಬಲವಾಗಿದೆ. ಅದ್ದರಿಂದ ತಾಲೂಕು ಬೋರ್ಡು ಮೆಂಬರರು ಇತ್ತ ಗಮನಕೊಟ್ಟರೆ ಪೇಟೆಯಲ್ಲಿ ಅಮುದುರಘ್ನಾಗುವ ಜನರಿಗೆ ಬಹಳ ಉಪಕಾರವಾದೀತು.

ಮುಲ್ಕಿ:— ಮ। ರಾ। ದಿವಂಗತ ಬಿ. ನಾರಾಯಣ ಪೈಗಳು ಮುಲ್ಕಿ ಶ್ರೀ ವೆಂಕಟರಮಣ ದೇವಸ್ಥಾನದ ಲೆಕ್ಕಪತ್ರ ಪರಿಶೋಧನೆ ಕುರಿತು ಹೆಚ್ಚಿನ ಶ್ರಮಪಟ್ಟು ವ ಅವರು ಶ್ರೀ ದೇವರ ಮುಖ್ಯ ಭಜಕರಲ್ಲೊಬ್ಬರು ಎಂಬ ಸಂಗತಿಯನ್ನು ಸಹಾ ಸದರಿ ದೇವಸ್ಥಾನದ ಟ್ರಸ್ಟಿಗಳು ಆಲೋಚಿಸಿ ಸದರಿ ದಿವಂಗತರ ೧೩ನೇ ದಿನದಲ್ಲಿ ಶ್ರೀ ದೇವಸ್ಥಾನದಲ್ಲಿ ಬ್ರಾಹ್ಮಣ ಸಂತರ್ಪಣೆಯನ್ನು ಆಚರಿಸಿ — ಸದರಿ ಪೈಗಳವರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಪ್ರಾರ್ಥಿಸಿ ಅವರ ಕುಟುಂಬಕ್ಕೆ ಉತ್ತರೋತ್ತರ ಚಿರಭಿವೃದ್ಧಿ ದಯಪಾಲಿಸುವಂತೆ ಅಭಯವನ್ನು ಕಳುಹಿಸಿರುತ್ತಾರೆಂಬುದಾಗಿ ತಿಳಿದುಬರುತ್ತದೆ.

ಕಾಸರಗೋಡು:— ಪೆಡಾಲು ಗ್ರಾಮದ ಮಹಾಲಿಂಗ ಭಟ್ಟರ ಹೆಂಡತಿ ಲಕ್ಷ್ಮಿಯೆಂಬವಳ ಮೃತಶರೀರವು ಮೊನ್ನೆ ಆಸ್ಪತ್ರೆಗೆ ಒಯ್ಯೋಣಾಗಿತ್ತು. ಪೋಲೀಸ್ ಅಧಿಕಾರಿಗಳು ಈ ವಿಷಯದಲ್ಲಿ ಕೂಡಲೇ ಸ್ಥಳಕ್ಕೆ ಹೋಗಿ ಸರಿಯಾದ ತನಿಖೆ ನಡಿಸುವುದು ಅತ್ಯವಶ್ಯಕವಿದೆ.

ವಿವಿಧ ವಿಷಯಗಳು.

ಮುಂಬಯಿ ವಿಶ್ವವಿದ್ಯಾಲಯದ ಪದವೀದಾನ ಸಮಾರಂಭವು ಕಳೆದ ವಾರ ನೆರವೇರಿತು. ಈ ಸಮಾರಂಭದಲ್ಲಿ ಯುನಿವರ್ಸಿಟಿಯ ವಾಯ್ಸ ಚೆನ್ಸಲರರಾದ ಸರ ಚಿಮಣಲಾಲ ಸೆಟಲವಾಡರು ಮಾಡಿದ ಭಾಷಣವು ಒಂದೆರಡು ಸಂಗತಿಗಳಲ್ಲಿ ವಿಚಾರಾರ್ಹವಾಗಿದೆ. ಪುಸ್ತಕ ಶಿಕ್ಷಣವು ಜ್ಞಾನದ ದೃಷ್ಟಿಯಿಂದ ಒಳ್ಳೆಯದಾದರೂ ಉದರಂಭರಣದ ಕಾರ್ಯದಲ್ಲಿ ಈಗಿನ ದಿವಸಗಳಲ್ಲಿ ಅಷ್ಟೊಂದು ಪ್ರಯೋಜನಕಾರಿಯಾಗುವದಿಲ್ಲ. ಕಾರಣ ಈಗಿನ ಶಿಕ್ಷಣದಲ್ಲಿ ಸ್ವಾವಲಂಬನದ ಯಾವ ತತ್ವವೂ ಇಲ್ಲ. ಯುನಿವರ್ಸಿಟಿಯ ಪದವೀದರನು ಅನ್ಯರ ಚಾಕರಿಯನ್ನೆ ಮಾಡಿ ಹೊಟ್ಟೆ ತುಂಬಿಸಿಕೊಳ್ಳಬೇಕಲ್ಲದೆ ಉಪಜೀವನಕ್ಕೆ ಸ್ವತಂತ್ರವಾಗಿ ಉದ್ಯೋಗವನ್ನು ನಡಿಸಲಾರನು. ಈ ಸಂಗತಿ ೨೫ ವರ್ಷಗಳ ಮುಂಚೆ ಗೊತ್ತಾಗುತ್ತಿರಲಿಲ್ಲ. ಆದರೆ ಕೈಯಲ್ಲಿ ಅರ್ಜಿಯನ್ನು ಹಿಡಕೊಂಡು ಉಪಜೀವಿಕೆಯನ್ನು ಹುಡುಕುವ ಪದವೀಧರರ ಸಂಖ್ಯೆಯು ಕಾಲಕ್ರಮೇಣ ಹೇಗೆ ಹೆಚ್ಚಾಗಹತ್ತಿತೂ ಆಗ ಜನಗಳಿಗೆ ಈ ಪುಸ್ತಕ - ಶಿಕ್ಷಣದಿಂದ ಪ್ರಯೋಜನವಿಲ್ಲವೆಂಬುದು ಗೊತ್ತಾಗಹತ್ತಿತು. ಸರ ಸೆಟಲವಾಡರ ಮೊನ್ನೆಯ ಭಾಷಣವನ್ನು ಪರ್ಯಾಲೋಚಿಸಿದ್ದಲ್ಲಿ, ಜನಗಳಿಗೆ ಮಾತ್ರವಲ್ಲ, ವಿಶ್ವವಿದ್ಯಾಲಯದ ಅಧಿಕಾರಿಗಳ ಲಕ್ಷ್ಯದಲ್ಲಿ ಕೂಡ ಈಗಿನ ಶಿಕ್ಷಣದಲ್ಲಿರುವ ವೈಗುಣ್ಯವು ಬರಹತ್ತಿದೆ ಎಂದು ಹೇಳಬೇಕಾಗುತ್ತದೆ ಇದು ಸುದೈವವೆಂದೆ ತಿಳಿಯಬೇಕು. ಕಾರಣ ಈಗಿನ ಶಿಕ್ಷಣವು ಜೀವಿಕಾಸಂಪಾದನ ಕ್ಷಮವಾಗಬೇಕಾದರೆ ಅದರಲ್ಲಿ ಯಾವ ಯಾವ ಸುಧಾರಣೆಗಳಾಗಬೇಕೆಂಬುದಾಗಿ ಸೆಟಲವಾಡರು ಸೂಚಿಸಿರುವರೊ ಅವುಗಳ ಪೈಕಿ ಉದ್ಯೋಗಿಕ ಶಿಕ್ಷಣವನ್ನು ಕೊಡುವ ವಿದ್ಯಾಲಯವನ್ನು ಸ್ಥಾಪಿಸಬೇಕೆಂಬ ಸೂಚನೆಯು ಒಂದಾಗಿದೆ. ಸೆಟಲವಾಡರ ಈ ಸೂಚನೆಯು ಬಹುಮಹತ್ವದ್ದಾಗಿದೆ. ಮಿಕೆನಿಕಲ್ ಇಂಜಿನಿಯರಿಂಗ್, ಇಲೆಕ್ಟ್ರಿಕಲ್ ಇಂಜಿನಿಯರಿಂಗ್ ಹಾಗೂ ಬಟ್ಟೆ ನೆಯಿಗೆ ಹೊಲಿಗೆ ಮುಂತಾದ ಉದ್ಯೋಗಗಳನ್ನು ಕಲಿಸುವ ಕ್ರಮವನ್ನು ಈ ವಿದ್ಯಾಲಯದಲ್ಲಿ ಪ್ರಾರಂಭಿಸಬೇಕೆಂಬುದಾಗಿ ಅವರು ಹೇಳಿರುವರು. ಈ ಉಪಕ್ರಮವು ಬಹುಶ್ಲಾಘ್ಯವಾದದ್ದು. ರಸಾಯನ ಶಾಸ್ತ್ರಕ್ಕೆ ವ್ಯಾವಹಾರಿಕ ಸ್ವರೂಪವನ್ನೂ ತರುವಂತೆ ಅದರ ಶಿಕ್ಷಣವನ್ನು ಕೂಡ ಕೊಡಬೇಕೆಂಬುದಾಗಿ ಸರ ಸೆಟಲವಾಡರು ಸೂಚಿಸಿರುವರು. ನಿಜವಾಗಿ ಜರ್ಮನಿ, ಅಮೇರಿಕಾ ಮೊದಲಾದ ದೇಶಗಳಲ್ಲಿಯ ವಿಶ್ವವಿದ್ಯಾಲಯಗಳಿಗೂ ಇಲ್ಲಿಯ ವಿಶ್ವವಿದ್ಯಾಯಗಳಿಗೂ ಅಜಗಜಾಂತರವಿದೆ. ಯಾಕೆ, ಸ್ವಂತ ಇಂಗ್ಲಂಡಿನಲ್ಲಿರುವ ವಿದ್ಯಾಪೀಠಗಳಿಗೂ ಇಲ್ಲಿಯವುಗಳಿಗಾದರೂ ಸಾಮ್ಯವಿದೆಯೆ? ಇಲ್ಲ, ಮೆಕ್ಕೊಲೆ ಸಾಹೇಬರು ಯಾವದೊ ಒಂದು ಉದ್ದೇಶದಿಂದ ಒಂದು ಕ್ರಮವನ್ನು ಹಾಕಿಕೊಟ್ಟು ವಿದ್ಯಾದಾನವನ್ನು ಪ್ರಾರಂಭಮಾಡಿದ್ದರೊ ಅದನ್ನೆ ಈ ಹೊತ್ತು ಅನುಸರಿಸಿಕೊಂಡಿರುವದೆಂದರೆ ಈ ಸಂಪ್ರದಾಯಾಭಿಮಾನಕ್ಕೆ ಮಿತಿಯೆ ಇಲ್ಲವೆನ್ನಬೇಕು! ಹೇಗೂ ಇರಲಿ. ಸೆಟಲವಾಡರು ವಾಯಸ್‌ಚೆನ್‌ಸಲರ ಸ್ಥಾನದಿಂದ ಆಡಿದ ಮಾತುಗಳಿಗೆ ಬೇಗನೆ ಮೂರ್ತಸ್ವರೂಪಬಂದೀತೆಂದು ಬರವಸೆಪಡಬಹುದು. ಅವರ ಭಾಷಣದೊಳಗಿನ ಸೂಚನೆಗಳ ಪೈಕಿ ಪತ್ರಸಂಪಾದಕತ್ವದ ಶಿಕ್ಷಣವನ್ನು ಕೊಡಲು ಒಂದು ವಿದ್ಯಾಲಯವನ್ನು ತೆರೆಯಬೇಕೆಂಬುದಾಗಿ ಹೇಳಿದ ಸೂಚನೆಯು ನಿಜ ಸ್ವಾಗತಕ್ಕೆ ಉಚಿತವಾಗಿದೆ. ಆದರೆ ಸರಕಾರವು ಪತ್ರಸಂಪಾದಕತ್ವದ ಶಿಕ್ಷಣವನ್ನು ಕೊಡಲುದ್ಯುಕ್ತವಾಗುವದೆಂದರೆ ಒಂದು ದೃಷ್ಟಿಯಿಂದ ಲೋಕಾಭಿರುಚಿಯನ್ನು ಕೆಡಿಸಲು ಶ್ರೀ ಗಣೇಶವನ್ನು ಪ್ರಾರಂಭಿಸುವಂತಾಗಿದೆ. ಅದ್ದರಿಂದ ಈ ವಿಷಯವು ಹೇಗೂ ಇರಲಿ, ಇತರ ಉದ್ಯೋಗಿಕ ಶಿಕ್ಷಣವನ್ನು ಪ್ರಾರಂಭಿಸಬೇಕೆಂಬ ಮಾತು ಮಾತ್ರ ನಿರ್ವಿವಾದವಾಗಿದೆ.

• • • • •

ಮಜೂರ ವರ್ಗದ ದುರವಸ್ಥೆ.

ಜಿನೆವಾದಲ್ಲಿ ಸೇರಿದ ಅಂತರ ರಾಷ್ಟ್ರೀಯ ಮಜೂರರ ಪರಿಷತ್ತಿನಲ್ಲಿ ಹಿಂದುಸ್ಥಾನದ ಮಜೂರರ ದುಃಖಗಳ ವಸ್ತುಸ್ಥಿತಿಯ ಚಿತ್ರವನ್ನು ಮುಂದಿಡಲು ಇಲ್ಲಿಂದ ಶ್ರೀ. ಜೋಶಿ ಎಂಬವರು ಹೋಗಿರುವದನ್ನು ನಾವು ಈ ಮೊದಲು ತಿಳಿಸಿದ್ದೇವೆ. ಸದರಿ ಪರಿಷತ್ತಿನಲ್ಲಿ ಜೋಶಿಯವರು ಸರಕಾರಿ ಅಧಿಕಾರಿಗಳ ಅಥವಾ ಬಂಡವಾಳಿಗರ ದಾಕ್ಷಿಣ್ಯಕ್ಕೆ ಒಳಗಾಗದೆ ಕೂಲಿಗಳ ಸಂಕಷ್ಟವನ್ನೆಲ್ಲ ಇದ್ದದ್ದು ಇದ್ದಹಾಗೆ ವಿವರಿಸಿ [illegible]ರು. ಸರಕಾರಿ

(೮ನೇ ಪೇಜಿಗೆ ಮುಂದುವರಿಯುವುದು)

ಅನುಕ್ರಮಣಿಕೆ.

ಅಗ್ರಲೇಖ ಪುಟಗಳು.
ವೈಸರಾಯರ ಭಾಷಣ ೬
ಮಂಗಳೂರು ಮುನ್ಸಿಪಾಲಿಟಿಯ ಚುನಾವಣೆ „
ಸ್ಫುಟವಿಚಾರಗಳು—
೧ ಪಟೇಲರ ಚುನಾವಣೆ, ೨, ಹಳೆ ಮತ್ತು ಹೊಸ ಅಧ್ಯಕ್ಷರು,
೩ ಅಂಡಮಾನದಲ್ಲಿ ಮಾಪಿಳ್ಳೆಯವರ ಸ್ತ್ರೀಯರನ್ನು ಕಳುಹಿಸುವ ಠರಾವು, „
೪ ಡಾ. ಭಾಂಡಾರಕರರ ಮೃತ್ಯು „
ಮಂಗಳೂರು
ವರ್ತಮಾನಸಂಗ್ರಹಗಳು—
ವಿದೇಶ—ಒಳದೇಶ ವರ್ತಮಾನ ೫
ದಕ್ಷಿಣ ಕನ್ನಡ—ಬಂಟವಾಳ, ಮೂಲ್ಕಿ, ಕಾಸರಗೋಡು „
ವಿವಿಧವಿಷಯಗಳು ೮
ಎಸೆಂಬ್ಲಿಯೊಳಗಿನ ವೈಸರಾಯರ ಭಾಷಣ „
ಮಂಗಳೂರು ಮುನ್ಸಿಪಲ್ ಕೌನ್ಸಿಲಿಗೆ ಮೆಂಬರರ ಚುನಾವಣೆ ೪

ಸ್ವದೇಶಾಭಿಮಾನಿ.

ಶಕೆ ೧೮೪೬ ಭಾದ್ರಪದ ಶು| ೧ಯು ಶುಕ್ರವಾರ.

ವೈಸರಾಯರ ಭಾಷಣ.

ವೈಸರಾಯರು ಲೆಜಿಸ್ಲೇಟಿವ್ ಎಸೆಂಬ್ಲಿಯನ್ನು ತೆರೆದರು. ಆದನ್ನು ತೆರೆಯುವಾಗ ಕ್ರಮದಂತೆ ಒಂದು ಭಾಷಣವನ್ನು ಕೊಟ್ಟರು. ಅವರ ಈ ಭಾಷಣವು ಸ್ವರಾಜಿಸ್ಟರಿಗೆ ಮಾನ್ಯವಾಗಿರಲಿಲ್ಲ, ಸ್ವತಂತ್ರರಿಗೆ ರುಚಿಸಿರಲಿಲ್ಲ, ಶಾಂತಪಕ್ಷದವರಿಗೂ ಇಷ್ಟವಾಗಿರಲಿಲ್ಲ. ಎಸೆಂಬ್ಲಿಯೊಳಗಿನ ಈ ಸಭಾಸದರಿಗೆ ಅವರ ಭಾಷಣವು ಹೇಗೆ ಒಪ್ಪಲಿಲ್ಲವೊ ಹಾಗೆಯೆ ಎಸೆಂಬ್ಲಿಯ ಹೊರಗಿನ ಜನತೆಗೂ ಅದು ಒಗ್ಗಲಿಲ್ಲ. ನಿಜವಾಗಿ ರೆಡಿಂಗರ ಆ ಭಾಷಣವು ಹಿಂದಿಗಳ ಮನಸ್ಸಿಗೆ ಒಪ್ಪುವಂತೆಯಾಗಲಿ, ಒಗ್ಗುವಂತೆಯಾಗಲಿ ಇರಲಿಲ್ಲ. ಎಸೆಂಬ್ಲಿಯ ಪೀಠವನ್ನೇರಿ ರೆಡಿಂಗ ಸಾಹೇಬರು ನುಡಿದು ತೋರಿಸುವ ವರೆಗೆ ಆ ಭಾಷಣವು ಅವರ ತುಟಿಯ ಪರದೆಯೊಳಗಿತ್ತಾದರೂ ಅದರ ಸ್ವರೂಪವು ಎಲ್ಲರ ಗೋಚರಕ್ಕೆ ಮುಂಚಿತವಾಗಿಯೆ ಬಂದಿದೆ. ಲೊರ್ಡ ರೆಡಿಂಗರು ಈಗ ಅದಿ ತೋರಿಸಿದ್ದು ಯಾರಿಗೂ ಅನಿರಿಕ್ಷಿತವಲ್ಲ. ಭಾರತ ಮಂತ್ರಿಗಳಾದ ಬರ್ಕನ ಹೆಡ್ಡರು ಪಾರ್ಲಿಮೆಂಟಿನಲ್ಲಿ ತಮ್ಮ ವಿಚಾರಗಳನ್ನು ಹೊರಪಡಿಸಿದಂದಿನಿಂದಲೆ ಹಿಂದೀ ಸುಧಾರಣೆಗಳ ಭವಿತವ್ಯತೆಯು ಇಡಿ ಜಗತ್ತಿನ ಗೋಚರಕ್ಕೆ ಬಂದುಹೋಗಿದೆ. ಆದ್ದರಿಂದ ರೆಡಿಂಗರ ಪುನರುಚ್ಚಾರದಲ್ಲಿ ಯಾವ ಅಪೂರ್ವತ್ವವೂ ಇರಲಿಕ್ಕಿಲ್ಲವೆಂದು ಜಗತ್ತೆಲ್ಲ ಮೊದಲೆ ಬರವಸೆ ಪಟ್ಟಿತ್ತು. ಮತ್ತು ಸಮಾಧಾನದ ಸಂಗತಿಯೇನೆಂದರೆ, ರೆಡಿಂಗ ಸಾಹೇಬರು ಈ ಜಗತ್ತಿನ ಭರವಸೆಯನ್ನು ಹಾಳುಮಾಡಲಿಲ್ಲ.

ಆದರೂ ಬರ್ಕನ ಹೆಡ್ಡರ ಭಾಷಣದ ಅನಂತರ ಹಿಂದುಸ್ಥಾನದೊಳಗಿನ ಕ್ಷುಬ್ಧವಾದ ಲೋಕಮತವನ್ನು ಶಾಂತಪಡಿಸಲು ಈ ಮುತ್ಸದಿಗಳು ಸ್ವಂತ ಆಲೋಚನೆಯಿಂದಾಗಲಿ, ಇಲ್ಲವೆ ವಿಲಾಯತಿಯೊಳಗಿನ ಇತರ ಮುತ್ಸದಿಗಳ ಪ್ರೇರಣೆಯಿಂದಾಗಲಿ ಏನಾದರೂ ಅಪೂರ್ವ ವಿಷಯವನ್ನು ಚೆಲ್ಲುವರೊ ಎಂಬದೊಂದು ಸಂದೇಹವಿತ್ತು. ಆ ಸಂದೇಹವು ಕೂಡ ಇವರ ಉಚ್ಚಾರದಿಂದ ನಿವೃತ್ತವಾಯಿತು. ಹಿಂದುಸ್ಥಾನಕ್ಕೆ ರೆಡಿಂಗರದಾಗಲಿ, ಬರ್ಕನ ಹೆಡ್ಡರದಾಗಲಿ ಭಾಷಣವು ಬೇಕಾಗಿಲ್ಲ ಅದಕ್ಕೆ ಬೇಕಾಗಿರುವದು ಸ್ವರಾಜ್ಯದ ಅಧಿಕಾರಗಳು. ಈ ಮುಖ್ಯ ಸಂಗತಿಯನ್ನು ಲೋಪಿಸಿ ಇತರ ಆಡಂಬರಗಳನ್ನು ಎಷ್ಟು ಬೆಳೆಸಿದರೂ ಅದರಿಂದ ಯಾರಿಗೆ ಸಂತೋಷವಾಗುವಂತಿದೆ? ಸಕ್ಕರೆ ಹಾಕದೆ ಇದ್ದ ಮಿಠಾಯಿಯನ್ನು ಯಾರು ಬಾಯಿಗೆ ಹಾಕಿಯಾರು? ಪ್ರಾಣಜ್ಯೋತಿ ಇಲ್ಲದ ಮೇಲೆ ಆ ಶವವನ್ನು ಸಿಂಗರಿಸಿ ಫಲವೇನು? ಸ್ವರಾಜ್ಯವು ಹಿಂದೂಸ್ಥಾನಕ್ಕೆ ಮಿಠಾಯಿಯೊಳಗಿನ ಸಕ್ಕರೆ! ದೇಹದೊಳಗಿನ ಪ್ರಾಣ. ಅಂಥ ಸ್ವರಾಜ್ಯದ ಹಕ್ಕುಗಳನ್ನು ಕುರಿತು ಅನುದಾರ ಭಾವವನ್ನು ತಾಳಿದ ಬಳಿಕ, ಕಥೆ ಹೇಳುವಾಗ ಮುಂದಿನ ಸಂವಿಧಾನಗಳು ಗೊತ್ತಿಲ್ಲದಾಗ ಕೆಮ್ಮಿನ ನೆವದಿಂದ ಹೊತ್ತು ಕಳೆಯುವ ಹರಿದಾಸನಂತೆ ರೆಡಿಂಗ ಸಾಹೇಬರು ಮತ್ತು ಬರ್ಕನ ಹೆಡ್ಡ ದೊರೆಗಳು ಹಿಂದಿ ಸ್ವರಾಜ್ಯದ ಹಕ್ಕುಗಳ ವಿಷಯವು ಬಂದ ಕೂಡಲೆ ೧೯೨೯ನೆ ಇಸವಿಯ ನೆವವನ್ನು ಹೇಳುವದಾಗಲಿ ಇಲ್ಲವೆ ಯಾವ ವಿಧದಿಂದಲಾದರೂ, ತನ್ನ ಸಿಟ್ಟಿನ ಸಮರ್ಥನವನ್ನು ಮಾಡಲು ಹೊರಟ ಕೋಪಿಷ್ಟನಂತೆ ಕಣ್ಣು ಕೆರಳಿಸುವದಾಗಲಿ ಅಶ್ಲಾಘ್ಯವಲ್ಲವೆಂದು ಯಾರು ತಾನೆ ಹೇಳಿಯಾರು?

ಲೊ. ರೆಡಿಂಗರ ಅವಸ್ಥೆಯು ಹೀಗೆಯೇ ಆಗಿದೆ. ನೀವು ೬-೭ ತಿಂಗಳು ಇಲ್ಲಿಂದ ವಿಲಾಯತಿಗೆ ಹೋಗಿ ಕೊನೆಗೆ ಏನು ಮಾಡಿದಿರೆಂದು ಯಾರಾದರೂ ಕೇಳಿಯಾರೆಂದು ತನ್ನ ಮನಸ್ಸಿನಲ್ಲಿಯೆ ತನಗೆ ತಿಂದಂತಾಗಿ ರೆಡಿಂಗಸಾಹೇಬರು ವಿಲಾಯತಿಯ ಕಥೆಗಳನ್ನು ಹೇಳಲು ಪ್ರಾರಂಭಿಸಿದರು. ಮುದುಕರು ಕಥೆ ಹೇಳುವಾಗ ಚಿಕ್ಕಮಕ್ಕಳು ಹೂಂಗೊಡುವದುಂಟು. ಆದರೆ ಆ ಮುದುಕರ ಕಥೆಯಲ್ಲಿ ಚುರುಕಾದ ಒಂದು ನರಿ, ಕ್ರೂರವಾದ ಒಂದು ಹುಲಿ, ಭಯಂಕರವಾದ ಒಂದು ರಾಕ್ಷಸ, ಇಲ್ಲವೆ ಅದ್ಭುತವಾದ ಒಂದು ಇಂದ್ರಜಾಲ ಇತ್ಯಾದಿ ಯಾವದಾದರೂ ಕೆಲವು ಸಂಗತಿಗಳು ಬರುತ್ತವೆ. ಲೋರ್ಡ ರೆಡಿಂಗರ ವಿಲಾಯತಿಯ ಕಥೆಯಲ್ಲಿ 'ರೆಡಿಂಗರು-ಬರ್ಕನ್ ಹೆಡ್ಡರು' 'ಬರ್ಕನೆ ಹೆಡ್ಡರು-ರೆಡಿಂಗರು' '೧೯೧೯ನೆ ಇಸವಿ' '೧೯೨೯ನೆ ಇಸವಿ' ಈ ಸಂಗತಿಗಳೆ ಅಲ್ಲದೆ ಬೇರೆ ಯಾವವಿಷಯವೂ ಇರಲಿಲ್ಲ. ಇಷ್ಟಾಗಿಯೂ ಲೋರ್ಡ ರೆಡಿಂಗರು ಪುನಃ ಹೇಳುವದೇನೆಂದರೆ, ಬರ್ಕನ್ ಹೆಡ್ಡರು ಪಾರ್ಲಿಮೆಂಟಿನಲ್ಲಿ ಮಾಡಿದ ಭಾಷಣವು ಸಹಾನುಭೂತಿಪೂರ್ಣವಾಗಿದೆ. ೧೯೧೭ನೆಯ ಬ್ರಿಟಿಷ್ ಪಾರ್ಲಿಮೆಂಟಿನ ಜಾಹಿರ ಪ್ರಕಟನೆಯನ್ನು ಅವರು ಒಪ್ಪುತ್ತಿದ್ದಾರೆ. ೧೯೧೯ನೆಯ ಸುಧಾರಣಾ ಕಾಯಿದೆಯ ತತ್ವಗಳನ್ನು ಅವರು ಅನುಮೋದಿಸುತ್ತಿದ್ದಾರೆ. ರೆಡಿಂಗ ಸಾಹೇಬರ ಈ ಮಾತುಗಳನ್ನು ಕೇಳುವಾಗ ಭಾರತ ಮಂತ್ರಿಗಳ ಆ ಶುಷ್ಕಸಹಾನುಭೂತಿ ಯಾಕೆ, ೧೯೧೭ನೆ ಇಸವಿಯ ಪಾರ್ಲಿಮೆಂಟಿನ ಪ್ರಕಟನೆಯಾಗಲಿ, ಅನಂತರದ ಕಾಯಿದೆಯಾಗಲಿ ಅವರಿಂದ ಸಮ್ಮತಿಸಲ್ಪಡಬೇಕಾದರೆ ಸಂಶಯಾಸ್ಪದವಾಗಿದ್ದವೆ, ಈ ಮುಂತಾದ ಅನೇಕ ಪ್ರಶ್ನೆಗಳು ಉದ್ಭವಿಸುತ್ತವೆ. ಈ ಪ್ರಶ್ನೆಗಳನ್ನು ಚರ್ಚಿಸಿಕೊಂಡು ಹೋಗುವಾಗ ರೆಡಿಂಗ ಸಾಹೇಬರ ವಿಧಾನಗಳ ಟೊಳ್ಳುತನವು ಮಾತ್ರ ವ್ಯಕ್ತವಾಗುತ್ತದೆ. ತಾತ್ಪರ್ಯವೇನೆಂದರೆ, ವಿಲಾಯತಿಗೆ ತಾನು ವ್ಯರ್ಥವಾಗಿ ಹೋದೆನೆಂಬ ಭಾವವು ಅವರ ಮನಸ್ಸಿಗೂ ಈಗ ಹೊಳೆಯಹತ್ತಿದೆ. ಅವರ ಸ್ವಂತ ಕೆಲಸಗಳ ಸುದ್ದಿಯನ್ನು ಬದಿಗಿಟ್ಟು, ಹಿಂದುಸ್ಥಾನದ ರಾಜಕಾರಣವನ್ನು ಕುರಿತು ಆಲೋಚಿಸುವಾಗ ರೆಡಿಂಗ ಸಾಹೇಬರ ಪ್ರಯಾಣವು ವ್ಯರ್ಥವೆ ಎಂಬುದಕ್ಕೆ ಸಂದೇಹವಿಲ್ಲ. ಇನ್ನೂ ಬಿಡಿಸಿ ಹೇಳುವದಾದರೆ, ಬರ್ಕನ ಹೆಡ್ಡರ ಪಾರ್ಲಿಮೆಂಟಿನ ಸ್ಪಷ್ಟೀಕರಣವು, ಮೊನ್ನೆ ರೆಡಿಂಗ ಸಾಹೇಬರೆ ಹೇಳಿದಂತೆ, ಅವರೊಡನೆ ನಡಿಸಿದ ಭೇಟಿಯ ಫಲವೆಂದಾದ ಪಕ್ಷದಲ್ಲಿ ಇವರ ಪ್ರವಾಣವು ಇನ್ನಷ್ಟು ಉಪದ್ರವಕ್ಕೆನೆ ಕಾರಣವಾಯಿತೆನ್ನಬೇಕಾಗಿದೆ.

ಸಾರಾಂಶ ರೆಡಿಂಗ ಸಾಹೇಬರ ಭಾಷಣವು ನೀರಸವೂ, ನಿಃಸಹಾನುಭೂತಿಯದೂ ಆಗಿದೆ. ಆದ್ದರಿಂದಲೆ ಅದು ಯಾರ ಆದರಕ್ಕೂ ಪಾತ್ರವಾಗಲಿಲ್ಲ. ಎಲ್ಲರೂ ಅದನ್ನು ನಿಷೇಧಿಸುವರು. ಇಂಥ ಅನಿಷ್ಟ ಪರಿಸ್ಥಿತಿಯನ್ನು ಉತ್ಪನ್ನಮಾಡಿದ್ದು ಒಂದು ದೃಷ್ಟಿಯಿಂದ ಒಳ್ಳೆಯದೆಂದೆ ಎನ್ನಬೇಕು. ಇವರ ಭಾಷಣವನ್ನು ಕೇಳಿ ಎಲ್ಲ ರಾಜಕೀಯ ತಂಡಗಳು ಏಕತ್ರ ಸೇರಿ ನೋಕರಶಾಹಿಗೆ ಸರಿಯಾದ ಪ್ರತಿಕಾರವನ್ನು ಕೈಕೊಂಡಲ್ಲಿ ರೆಡಿಂಗ ಸಾಹೇಬರ ಮತ್ತು ಬರ್ಕನ ಹೆಡ್ಡ ಸಾಹೇಬರ ಭಾಷಣಗಳಿಂದ ಹಿಂದುಸ್ಥಾನದ ಮೇಲೆ ಮಹತ್ತಾದ ಉಪಕಾರವೆ ಉಂಟಾದೀತು.

ಮಂಗಳೂರು ಮುನ್ಸಿಪಾಲಿಟಿಯ ಚುನಾವಣೆ.

ನಮ್ಮ ಮುನ್ಸಿಪಾಲಿಟಿಯ ಸಭಾಸದತ್ವದ ೭ ಸ್ಥಾನಗಳು ಬೇಗನೆ ಖಾಲಿಯಾಗುವವಿವೆ. ಇಲ್ಲಿಯ ಕೊಂಗ್ರೆಸ್ ಮತ್ತು ಸ್ವರಾಜ್ಯಪಕ್ಷದವರು ಆ ಸ್ಥಾನಗಳಿಗೆ ತಮ್ಮ ಪರವಾಗಿ ಉಮೇದುವಾರರನ್ನು ನಿಲ್ಲಿಸಿದ್ದಾರೆ. ಕೊಂಗ್ರೆಸ ಮತ್ತು ಸ್ವರಾಜ್ಯ ಪಕ್ಷದ ಪರವಾಗಿ ಯಾರು ಯಾರು ಉಮೇದುವಾರರು ಯಾವ ಯಾವ ವಾರ್ಡುಗಳಿಗೆ ನಿಂತಿದ್ದಾರೆ, ಕೊಂಗ್ರೆಸ ಮತ್ತು ಸ್ವರಾಜ್ಯಪಕ್ಷದವರ ಉದ್ದೇಶಗಳು ಯಾವವು ಎಂಬೀ ವಿಷಯವು ಇನ್ನೊಂದು ಕಡೆಯಲ್ಲಿ ಪ್ರಕಟಿಸಿದ ಪತ್ರಕದ ಮೇಲಿಂದ ತಿಳಿದುಬಂದೀತು. ಬೆಳಗಾವಿನಲ್ಲಿ ರಾಷ್ಟ್ರೀಯ ಸಭೆಯು ಮುನ್ಸಿಪಾಲಿಟಿ, ಲೋಕಲ್ ಬೋರ್ಡು ಇತ್ಯಾದಿ ಸಂಸ್ಥೆಗಳನ್ನು ರಾಷ್ಟ್ರೀಯ ಸಭಾನುಯಾಯಿಗಳು ಆಕ್ರಮಿಸಬೇಕೆಂಬ ಠರಾವು ಮಾಡಿದಂದಿನಿಂದ ದೇಶದ ಎಲ್ಲ ಕಡೆಗಳಲ್ಲಿ ರಾಷ್ಟ್ರೀಯ ಸಭಾನುಯಾಯಿಗಳು ಈ ಸಂಸ್ಥೆಗಳಲ್ಲಿ ಸೇರುತ್ತಿದ್ದಾರೆ. ಇತರ ಪ್ರಾಂತಗಳ ಸಂಗತಿಯಲ್ಲ, ನಮ್ಮ ಮದ್ರಾಸ ಸಂಸ್ಥಾನದಲ್ಲಿ ಕೂಡ ಶ್ರೀ. ಎಸ್. ಶ್ರೀನಿವಾಸ ಅಯ್ಯಂಗಾರರು ಎಲ್ಲ ಕಡೆಗಳಲ್ಲಿ ಸಂಚರಿಸಿ ಸ್ವರಾಜ್ಯಪಕ್ಷೀಯರು ಈ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಲ್ಲಿ ಸೇರುವಂತೆ ಪ್ರಯತ್ನಪಡುತ್ತಿದ್ದಾರೆ.

ರಾಷ್ಟ್ರೀಯ ಸಭೆಯು ಈ ಸಂಸ್ಥೆಗಳನ್ನು ರಾಷ್ಟ್ರ ಸಭಾನುಯಾಯಿಗಳು ಆಕ್ರಮಿಸಬೇಕೆಂದು ಉಪದೇಶರೂಪವಾದ ಯಾವ ಠರಾವನ್ನು ಪಾಸುಮಾಡಿದೆಯೋ ಅದರ ಮರ್ಮವು ಸಹಜವಾಗಿಯೇ ತಿಳಿಯುವಂತಿದೆ. ಲೋಕಲ್ ಬೋರ್ಡು, ಮುನ್ಸಿಪಾಲಿಟಿ ಇವು ಸ್ವರಾಜ್ಯದ ಮೂಲಸಂಸ್ಥೆಗಳು. ವಿದ್ಯಾಭ್ಯಾಸದಲ್ಲಿ ಅಕ್ಷರ ಪರಿಚಯವು ಹೇಗೆ ಮೊದಲನೆಯ ಕರ್ತವ್ಯವೊ ಹಾಗೆಯೆ ಸ್ವರಾಜ್ಯ ಕಾರಭಾರದಲ್ಲಿ ಈ ಸ್ಥಳೀಕ ಸಂಸ್ಥೆಗಳನ್ನು ನಡಿಸುವದು ಪ್ರಾರಂಭದ ಕರ್ತವ್ಯವಾಗಿದೆ. ನಗರ ಸೇವೆಯನ್ನೂ, ಜಿಲ್ಲಾಸೇವೆಯನ್ನೂ ಸರಿಯಾಗಿ ಮಾಡಲು ತಿಳಿದ ಹೊರತು ಸ್ವರಾಜ್ಯದ ಸೂತ್ರಗಳನ್ನು ನಡಿಸಲು ಅರ್ಹತೆಯು ಬರುವದಿಲ್ಲ. ಈ ಕಾರಣದಿಂದಲೆ ರಾಷ್ಟ್ರೀಯ ಸಭೆಯು ಈ ಪ್ರಾಥಮಿಕ ಸಂಸ್ಥೆಗಳನ್ನು ಆಕ್ರಮಿಸಬೇಕೆಂದು ಹೇಳಿದ್ದಾಗಿದೆ. ಈ ಮರ್ಮವನ್ನರಿಯದೆ ಇಲ್ಲಿಯ ಹಲವು ಲೇಖಕರು ನೀರು, ದೀಪ, ಆರೋಗ್ಯ ಇತ್ಯಾದಿ ಎಲ್ಲರಿಗೂ ಏಕಪ್ರಕಾರವಾಗಿ ಪ್ರಯೋಜನಕ್ಕೆ ಬೀಳುವ ಕಾರ್ಯಗಳನ್ನು ಏರ್ಪಡಿಸಿ ಕೊಡುವ ಸಂಸ್ಥೆಯಲ್ಲಿ ಸ್ವರಾಜ್ಯಪಕ್ಷ, ಶಾಂತಪಕ್ಷ, ಆ ಪಕ್ಷ, ಈ ಪಕ್ಷವೆಂಬುದಾಗಿ ಸ್ಪರ್ಧೆಯನ್ನು ನಡಿಸುವದು ಯೋಗ್ಯವಲ್ಲ, ಇಂಥ ಪ್ರಾಥಮಿಕ ಸಂಸ್ಥೆಗಳಲ್ಲಿ ರಾಜಕೀಯ ಪಕ್ಷೋಪಪಕ್ಷಗಳ ಛಾಯೆಬೀಳುವದು ವಿಹಿತವಲ್ಲವೆಂದಿತ್ಯಾದಿ ಅಭಿಪ್ರಾಯವನ್ನು ಬರೆಯುವರು. ಆದರೆ ಈ ಆಕ್ಷೇಪವು ಸಮಂಜಸವಲ್ಲ. ನಿರುಪದ್ರವವಾದ ಈ ಲೋಕೋಪಯುಕ್ತಕಾರ್ಯಗಳನ್ನು ಮಾಡುವದಕ್ಕೂ ಒಂದು ಕ್ರಮವಿದೆ. ಇವುಗಳನ್ನು ಒಂದು ಸಂಘಟಿತ ಪಕ್ಷದವರು ಕ್ರಮಕ್ಕನುಸಾರವಾಗಿ ನೆರವೇರಿಸುವದು ಹೇಗೆ, ಒಬ್ಬೊಬ್ಬನು ನಿಶ್ಚಿತವಾದ ಮತ್ತು ಧ್ಯೇಯವಾಗಲಿ, ಕಾರ್ಯಕ್ರಮವಾಗಲಿ ಒಂದೂ ಇಲ್ಲದೆ ಸ್ವೇಚ್ಛೆಯಿಂದ ಈ ಕಾರ್ಯಗಳನ್ನು ನಡಿಸುವದು ಹೇಗೆ? ಅಲ್ಲದೆ, ಪ್ರಾಥಮಿಕ ಶಿಕ್ಷಣದಂಥ ಮಹತ್ವದ ವಿಷಯವು ಈ ಸಂಸ್ಥೆಗಳ ಅಧಿಕಾರಕ್ಕೆ ಒಳಪಟ್ಟಿರುವುದು. ಎಂದ ಮೇಲೆ ರಾಷ್ಟ್ರೀಯ ಸಭೆಯಾಗಲಿ, ಇಲ್ಲವೆ ಇತರ ರಾಜಕೀಯ ಸಂಸ್ಥೆಯಾಗಲಿ ಈ ಪ್ರಾಥಮಿಕ ಸಂಸ್ಥೆಗಳನ್ನು ಹೇಗೆ ತಾನೆ ಉಪೇಕ್ಷಿಸಲಾದೀತು? ಈ ಪ್ರಾಥಮಿಕ ಸಂಸ್ಥೆಯ ಹಣಗಳನ್ನು ಇದುವರೆಗೆ ಎಷ್ಟೊ ಕಡೆಗಳಲ್ಲಿ ಗವರ್ನರ ಸಾಹೇಬರಂಥ ದೊಡ್ಡ ದೊಡ್ಡ ಉದ್ಯೋಗಸ್ಥರನ್ನು ಮಾನಪತ್ರ ಕೊಡುವ ಸಮಾರಂಭದಲ್ಲೂ, ಇತರ ದುಂದುಗಾರಿಕೆಯ ಸಮಾರಂಭದಲ್ಲೂ ದುರುಪಯೋಗಿಸಲಿಲ್ಲವೆ? ಇಂಥ ಅನೇಕ ಉದಾಹರಣೆಗಳಿದ್ದಾವೆ. ಆದ್ದರಿಂದ ರಾಷ್ಟ್ರೀಯ ಪಕ್ಷದವರು ಈ ಸಂಸ್ಥೆಗಳ ಆಡಳಿತವನ್ನು ಅಂಗೀಕರಿಸುವದು ವಿಹಿತವಾಗಿದೆ. ಜಿಲ್ಲಾಧಿಕಾರಿಗಳ ಕಂಕುಳದೊಳಗಿನ ಗೃಹಸ್ಥರು ಇಲ್ಲವೆ ಅಧಿಕಾರಿಗಳ ಹಿಂದೆ ಲಾಂಗೂಲಚಾಲನ ಮಾಡುತ್ತ ತಿರುಗಾಡುವ ಗೃಹಸ್ಥರು ಇಂಥ ಸಂಸ್ಥೆಗಳಲ್ಲಿ ತುಂಬಿಕೊಂಡಿರುವಾಗ ಇವುಗಳಿಗೆ ಲೋಕಲ್ ಸೆಲ್ಫ್ ಗವರ್ನಮೆಂಟೆಂಬ ಹೆಸರು ಲಾಂಛನಾಸ್ಪದವಾಗಿದೆ ಎಂಬುದು ಎಲ್ಲರಿಗೆ ತಿಳಿದ ವಿಷಯವಾದ್ದರಿಂದ ಆ ಬಗ್ಗೆ ಪ್ರತ್ಯೇಕವಾಗಿ ಬರೆಯಬೇಕಾದ ಅಗತ್ಯವಿಲ್ಲ.

ಇತರ ಎಲ್ಲ ಪಟ್ಟಣಗಳಲ್ಲಿ ಸ್ವರಾಜ್ಯಪಕ್ಷದ ಉಮೇದುವಾರರಿಗೆನೆ ಹೆಚ್ಚಾಗಿ ಜಯವು ಸಿಕ್ಕಿದೆ. ಅವರಿಗೆ ಎಲ್ಲಿಯಾದರೂ ಒಂದೆರಡು ಕಡೆಗಳಲ್ಲಿ ಅಪಜಯವು ಬಂದಿದ್ದದಾದರೆ ಅದು ಮದ್ರಾಸಿನಂಥ ಜಸ್ಟಿಸಪಾರ್ಟಿಯ ಅನ್ಯಾಯದಿಂದಲೆ ಅಲ್ಲದೆ ಬೇರೆ ಕಾರಣದಿಂದ ಅಲ್ಲ. ನಮ್ಮ ಮಂಗಳೂರಿನ ಮುನ್ಸಿಪಾಲಿಟಿಯ ಮಟ್ಟಿಗೆ ಆಲೋಚನೆಮಾಡಿದರೆ ಬ್ರಾಹ್ಮಣ ಬ್ರಾಹ್ಮಣೇತರವೆಂಬ ಭೇದವು ಇಲ್ಲಿ ಇಲ್ಲ. ಆದ್ದರಿಂದ ಸ್ವರಾಜಿಸ್ಟರಿಗೆ ಅಪಶಕುನಮಾಡುವವರು ಯಾರೂ ಇಲ್ಲವೆಂದು ತಿಳಿಯಬೇಕಾಗಿದೆ. ದೇಶಹಿತದ ಅಪೇಕ್ಷೆಯುಳ್ಳವರು ಸಹಜವಾಗಿಯೆ ಸ್ವರಾಜಿಸ್ಟರಿಗೆ ಎಡೆಯನ್ನು ಕೊಡದೆ ಇರಲಿಕ್ಕಿಲ್ಲ. ರಾಷ್ಟ್ರೀಯ ಸಭೆಯ ಅನುಜ್ಞೆಯ ಮೇರೆಗೆ ಸ್ವರಾಜಿಸ್ಟರು ಚುನಾವಣೆಗೆ ನಿಲ್ಲುತ್ತಾರೆಂದಾದ ಮೇಲೆ ಅವರಿಗೆದುರಾಗಿ ನಿಂತು ಹೋರಾಡುವದೆಂದರೆ ರಾಷ್ಟ್ರೀಯ ಸಭೆಯನ್ನು ಅವಮಾನಪಡಿಸುವದೆ ಸರಿ. ನಿಜವಾಗಿ ಹೇಳುವದಾದರೆ ಇಂಥ ಸಂದರ್ಭದಲ್ಲಿ ಇತರ ಉಮೇದುವಾರರು ಸ್ವರಾಜಿಸ್ಟರಿಗಾಗಿ ಹಿಂದಕ್ಕೆ ಬರುವದು ಉಚಿತವಾಗಿದೆ.

ಒಂದು ವೇಳೆ ರಾಷ್ಟ್ರೀಯ ಸಭೆಗಿಂತಲೂ, ಸ್ವರಾಜ್ಯಪಕ್ಷಕ್ಕಿಂತಲೂ ಆತ್ಮಪ್ರತಿಷ್ಠೆಯನ್ನೆ ಮೆರೆವವರು ಇದ್ದದಾದರೆ ಅಂಥವರಿಗೆ ಮತದಾರರು ತಮ್ಮ ಮತಗಳನ್ನಾದರೂ ಹೇಗೆ ಕೊಟ್ಟಾರು? ಯಾರಿಗೆ ರಾಷ್ಟ್ರೀಯ ಸಭೆಯ ಗಣನೆ ಇಲ್ಲವೊ, ಸ್ವರಾಜ್ಯ ಪಕ್ಷದ ಪರ್ವವಿಲ್ಲವೊ ಅಂಥವರು ನಾಳೆ ಮತದಾರರ ಅಭಿಪ್ರಾಯವನ್ನಾದರೂ ಎಲ್ಲಿಗೆ ಲೆಕ್ಕಿಸುವರು? ಅಲ್ಲ, ಸತ್ಯ ಹೇಳುವದಾದರೆ, ಇಂಥವರು ಇದುವರೆಗಾದರೂ ಮತದಾರರ ಅಭಿಪ್ರಾಯವನ್ನು ಲೆಕ್ಕಿಸಿದ್ದುಂಟೆ? ಮತಕೊಡುವ ವರೆಗೆ ಉಮೇದುವಾರರು ಮತದಾರರನ್ನು ವೆಂಕಟರಮಣನಿಗಿಂತಲೂ ಹೆಚ್ಚಿನ ಭಕ್ತಿಯಿಂದ ಆರಾಧಿಸುವರು! ಮತಗಳು ಸಿಕ್ಕಿ, ಚುನಾಯಿಸಿ ಬಂದ ಮೇಲೆ ಆ ಕೌನ್ಸಿಲರ ಮಹಾಶಯರಿಗೆ ಒಮ್ಮೊಮ್ಮೆ ಮತದಾರರ ಪರಿಚಯವೆ ಉಳಿಯದು! ಇಂಥ ಎಷ್ಟೊ ಉದಾಹರಣೆಗಳಿವೆ!! ಈ ನಮೂನೆಯ ಉಮೇದುವಾರರಿಗೆ ಚುನಾವಣೆಕಾಲದ ಪರಿಚಯವು ಮರೆತುಹೋಗುವದು ಸಹಜವೆ. ಕಾರಣ, ತನ್ನ ಮನೆಯ ಮುಂದೆ ಲಾಟನು, ತನ್ನ ಓಣಿಯ ದುರುಸ್ತಿ, ತನಗೆ ಬೇಕಾದವರಿಗೆ ಚಿಲ್ಲರೆ ಚಿಲ್ಲರೆ ಕೆಲಸಕೊಡಿಸುವ ಏರ್ಪಾಡು, ಯಾವ ಯಾವ ದೊಡ್ಡ ಆಫೀಸರರು ಬರುತ್ತಾರೆ, ಯಾವಾಗ ಬರುತ್ತಾರೆ, ಅವರ ಮರ್ಜಿ ಹೇಗೆ ಇ. ಇ. ಅನೇಕ ಸಂಗತಿಗಳನ್ನು ತಿಳಿದುಕೊಳ್ಳುವ ಮಹತ್ತಾದ ಕಾರ್ಯಕಲಾಪಗಳಿರುವಾಗ ಈ ಮುನ್ಸಿಪಲ್ ಮಹಾಶಯರಿಗೆ ಮುಂಚಿನ ಆ ಮತದಾರರ ಪರಿಚಯುವಿರುವುದು ಹೇಗೆ ಸಂಭವ! ಈ ಸಂಗತಿಗಳೆಲ್ಲ ಮತದಾರರಿಗೆ ಗೊತ್ತಿರುವವುಗಳೆ; ಯಾರಿಗೂ ಹೊಸತಲ್ಲ. ಇಂಥ ಪರಿಸ್ಥಿತಿಯಲ್ಲಿ ಮತದಾರರು ಗಟ್ಟಿ ಮನಸ್ಸು ಮಾಡಿ ಯಾರ ದಾಕ್ಷಿಣ್ಯಕ್ಕೂ ಒಳಗಾಗದೆ ನಗರಹಿತವನ್ನು ಮಾಡಲು ಸಿದ್ಧವಾಗಿರುವ ವ್ಯವಸ್ಥಿತವಾದ ಸ್ವರಾಜ್ಯಪಾರ್ಟಿಯ ಉಮೇದುವಾರರಿಗೆನೆ ತಮ್ಮ ತಮ್ಮ ಮತಗಳನ್ನು ಕೊಡಬೇಕು. ಮು. ಕೌನ್ಸಿಲಿಗೆ ಮತದಾರನು ತಾನೆ ಹೋಗಬೇಕಾದದ್ದು. ಆದರೆ ಅದು ಎಲ್ಲರಿಗೆ ಸಾಧ್ಯವಿಲ್ಲ. ಆದ್ದರಿಂದ ತನ್ನ ಬದಲಿಗೆ ಪ್ರತಿನಿಧಿಯನ್ನು ಕಳುಹಿಸಬೇಕಾಗುತ್ತದೆ. ಈ ಪ್ರತಿನಿಧಿಯು ಹಣವಂತನು, ನಾಲಕೊಟ್ಟವನು, ಇಂಥಿಂಥ ಖಾಸಗಿ ಉಪಕಾರಕ್ಕೆ ಬಿದ್ದಾನು" ಎಂಬಿತ್ಯಾದಿ ಕ್ಷುಲ್ಲಕ ಮತ್ತು ಕೇವಲ ಸ್ವಾರ್ಥಪರವಾದ ಒಂದು ಬಗೆಯ ಲಂಚಿನ ದುರ್ಭಾವನೆಯನ್ನು ಕಟ್ಟಿಕೊಂಡು ಮತದಾರರು ಮತಗಳನ್ನು ಕೊಡಬಾರದು.

ಅದಲ್ಲದೆ, ಇದುವರೆಗೆ ಹಳಬರು ಕೌನ್ಸಿಲಿನ ಕಾರಭಾರವನ್ನು ಸಾಕಷ್ಟು ಕಾಲದಿಂದ ನಡಿಸಿಕೊಂಡು ಬಂದಿದ್ದಾರೆ. ಮತ್ತು ಅವರು ಯಾವ ಯಾವ ಶತಕೃತ್ಯಗಳನ್ನು ಮಾಡಿದ್ದಾರೆಂಬುದು ಲೋಕವಿದಿತವೆ ಸರಿ. ಆದ್ದರಿಂದ ಈ ಹಳಬರನ್ನೇ ಪುನಃ ಪುನಃ ಚುನಾಯಿಸಿಕೊಟ್ಟು ಮುನ್ಸಿಪಾಲಿಟಿಯನ್ನು ನಿರ್ಮಾಲ್ಯ ಹೂವಿನಂತೆ ವ್ಯರ್ಥವನ್ನಾಗಿ ಮಾಡುವುದಕ್ಕಿಂತ ಕೊಂಗ್ರೆಸ ಮತ್ತು ಸ್ವರಾಜ್ಯಪಕ್ಷದ ಹೊಸ ಉಮೇದುವಾರರನ್ನು ಚುನಾಯಿಸಿಕೊಟ್ಟು ಅವರು ಯಾವ ನಮೂನೆಯ ಕಾರಭಾರವನ್ನು ಪ್ರಾರಂಭಿಸಿ ನಗರಕ್ಕೆ ಎಂತಹ ಶ್ರೇಯಸ್ಸನ್ನು ತಂದುಕೊಡುವವರಿದ್ದಾರೆ ಎಂಬುದನ್ನು ಒಂದು ಸಾರಿಯಾದರೂ ನೋಡಬಹುದಲ್ಲವೆ? ಆದ್ದರಿಂದ ಮುನ್ಸಿಪಲ ಮತದಾರರಿಗೆ ಪುನಃ ನಮ್ಮ ಸೂಚನೆಯೇನೆಂದರೆ ಸುಸಂಘಟಿತ ರಾಜಕೀಯ ಪಕ್ಷದ ಸಮರ್ಥರಾದ ಹೊಸ ಉಮೇದುವಾರರಿರುವಾಗ ಆದಾಮ್ ಮತ್ತು ಅವ್ವ ಇವರ ಕಾಲದ ಆ ಹಳಬರನ್ನೆ ಪುನಃ ಪುನಃ ಚುನಾಯಿಸಿಕೊಟ್ಟು ಮತದಾರರು ಆತ್ಮಘಾತವನ್ನು ಮಾಡಿಕೊಳ್ಳದೆ ರಾಷ್ಟ್ರೀಯ ಸಭೆ ಮತ್ತು ಸ್ವರಾಜ್ಯಪಕ್ಷದ ಉಮೇದ್ವಾರರಿಗೆ ೩ ವರ್ಷದ ಒಂದು ಸಂದರ್ಭವನ್ನಾದರೂ ಕೊಡಬೇಕು. ನಮ್ಮ ನಿಃಪಕ್ಷಪಾತವಾದ ಈ ಸೂಚನೆಯು ಮತದಾರರ ಆದರಕ್ಕೆ ಪಾತ್ರವಾದೀತೆಂದು ನಂಬಿದ್ದೇವೆ.

ಸ್ಫುಟವಿಚಾರಗಳು.

೧. ಸಿಮ್ಲಾದಲ್ಲಿ ಎಸೆಂಬ್ಲಿಯ ಅಧಿವೇಶನವು ಪ್ರಾರಂಭವಾಗಿದೆ. ಎಸೆಂಬ್ಲಿಯನ್ನು ಪ್ರಾರಂಭಿಸುವಾಗ ಲೊರ್ಡ ರೆಡಿಂಗರು ಯಾವ ಭಾಷಣವನ್ನು ಕೊಟ್ಟರೊ ಅದನ್ನು ಕುರಿತು ಇಂದಿನ ಅಗ್ರಲೇಖದಲ್ಲಿ ಚರ್ಚಿಸಿದ್ದೇವೆ. ವೈಸರಾಯರ ಭಾಷಣದ ದೃಷ್ಟಿಯಿಂದ ಎಸೆಂಬ್ಲಿಯು ಪ್ರಥಮದಲ್ಲೆ ನಿರ್ಮಾಲ್ಯಪ್ರಾಯವಾದ ಛಾಯೆಯನ್ನು ಧರಿಸಿತಾದರೂ ಅಧ್ಯಕ್ಷರ ಚುನಾವಣೆಯ ಪ್ರಶ್ನೆಯು ವಿಶೇಷವಾದ ಚಳವಳವನ್ನುಂಟುಮಾಡಿತ್ತು. ಎಸೆಂಬ್ಲಿಯು ಸ್ಥಾಪನವಾಗಿ ಐದು ವರ್ಷಗಳಾದವು. ಪ್ರಥಮದ ಅಧ್ಯಕ್ಷನನ್ನು ಸರಕಾರವು ನೇಮಿಸಬೇಕು. ಅನಂತರದವರನ್ನು ಸಭಾಸದರೆ ಚುನಾಯಿಸಬೇಕೆಂದು ಸುಧಾರಣಾ ಕಾನೂನಿನಲ್ಲಿ ನಮೂದಾಗಿದೆ. ಈ ಮೇರೆಗೆ ಸರಕಾರದಿಂದ ನೇಮಕಪಟ್ಟ ಅಧ್ಯಕ್ಷನ ಅವಧಿಯು ಮುಗಿದ ಕಾರಣ ಹೊಸ ಅಧ್ಯಕ್ಷನನ್ನು ಸಭಾಸದರೆ ಚುನಾಯಿಸುವ ವೇಳೆಯು ಬಂತು. ಮುಂಚಿನ ಅಧ್ಯಕ್ಷರು ಯುರೋಪಿಯನರಾಗಿದ್ದರು. ಮದ್ರಾಸಿನ ದಿವಾನ್ ಬಹಾದ್ದೂರ ಟಿ. ರಂಗಾಚಾರ್ಯರು ಡೆಪ್ಯುಟಿ ಪ್ರೆಸಿಡೆಂಟರಾಗಿದ್ದರು. ಈ ಹೊಸ ಚುನಾವಣೆಗೆ ಸ್ವರಾಜ್ಯಪಕ್ಷವು ಶ್ರೀ. ವಿ. ಜೆ. ಪಟೇಲರ ಹೆಸರನ್ನು ಅಧ್ಯಕ್ಷಸ್ಥಾನಕ್ಕೆ ಸೂಚಿಸಿತ್ತು. ಆದರೆ ಟಿ. ರಂಗಾಚಾರ್ಯರು ತಾನೂ ಒಬ್ಬ ಉಮೇದುವಾರನಾಗಿ ನಿಂತರು. ಟಿ. ರಂಗಾಚಾರ್ಯರು ಸ್ವತಂತ್ರಪಕ್ಷದಲ್ಲಿ ಸೇರಿದವರು. ಈ ಮೇರೆಗೆ ಇಬ್ಬರು ಉಮೇದುವಾರರು ಅಧ್ಯಕ್ಷಸ್ಥಾನಕ್ಕೆ ನಿಂತರು. ಸ್ವರಾಜ್ಯಪಕ್ಷದವರೊಡನೆ ಕಳೆದ ಅಧಿವೇಶನವಾದಂದಿನಿಂದ ಸ್ವತಂತ್ರರು ಒಡಕನ್ನು ತಂದುಕೊಂಡು ಸ್ವೇಚ್ಛೆಯಿಂದ ನಡಕೊಳ್ಳುತ್ತಿದ್ದಾರೆ. ಈ ಕಾರಣದಿಂದ ಸ್ವರಾಜ್ಯಪಕ್ಷದ ಉಮೇದುವಾರರನ್ನು ಈ ಪಕ್ಷದವರು ಪುಷ್ಟೀಕರಿಸುವ ಸಂಗತಿಯು ಹೇಗೊ ಎಂದು ಮೊದಲೆ ತೋರಿತ್ತು. ಅದರಲ್ಲಿ ಪುನಃ ರಂಗಾಚಾರ್ಯರು ಒಂದು ಜಾಹೀರ ಪತ್ರಕವನ್ನು ಹೊರಡಿಸಿ ಕೂಡಿದಷ್ಟು ಗಲಾಟೆಯನ್ನು ಎಬ್ಬಿಸಿದ್ದರು. ಸರಕಾರದವರಂತೂ ಸ್ವರಾಜ್ಯಪಕ್ಷದವರ ಮೇಲೆ ಎಷ್ಟೆ ಸೀಗೆಕಾಯಿಯ ಭಾವನೆಯನ್ನು ತಾಳಿದವರು. ಜೀನಾ ಸಾಹೇಬರಂಥ ಸ್ವತಂತ್ರಪಕ್ಷದ ಧುರೀಣರು ದಿವಾನ್ ಬಹಾದ್ದೂರ ಟಿ. ರಂಗಾಚಾರ್ಯರಿಗಲ್ಲವಾದರೂ, ರಾಮಚಂದ್ರರಾಯರೆಂಬ ಇನ್ನೊಬ್ಬ ದಿವಾನ್ ಬಹದ್ದೂರರು ಉಮೆದುವಾರರಾಗಿ ನಿಲ್ಲುವದಾದರೆ ಸರಕಾರದ ಪುಷ್ಟೀಕರಣವನ್ನಾದರೂ ಪಡೆದು ಅವರೆ ಚುನಾಯಿಸಿ ಬರುವಂತೆ ಮಾಡೋಣವೆಂದು ಮುಕ್ತಕಂಠವಾಗಿ ನುಡಿದಿದ್ದರು. ಈ ತರದ ಪರಿಸ್ಥಿತಿಯಲ್ಲಿ ಶ್ರೀ. ಪಟೇಲರು ಚುನಾಯಿಸಿ ಬರುವ ಸಂಭವವು ಕಂಡು ಬಂದಿರಲಿಲ್ಲ. ಆದರೆ ಬಹು ಸಂತೋಷದ ಮಾತೇನೆಂದರೆ ಶ್ರೀ. ಪಟೇಲರೆ ಎರಡು ಹೆಚ್ಚು ಮತಗಳಿಂದ ಚುನಾಯಿಸಿ ಬಂದಿರುವರು. ಇವರು ಮುಂಬಯಿ ಕೊರ್ಪೊರೇಶನಿನಲ್ಲಿ ಅಧ್ಯಕ್ಷರಾಗಿ ಚುನಾಯಿಸಿ ಬಂದಾಗ ನಿಃಪಕ್ಷಪಾತವಾಗಿಯೂ, ಸಮದೃಷ್ಟಿಯಿಂದಲೂ ಲೋಕೋಪಕಾರದ ಎಷ್ಟು ಮಹತ್ತಾದ ಕೆಲಸಗಳನ್ನು ಮಾಡಿದ್ದಾರೆಂಬುದು ಸರ್ವ ವಿದಿತವಾಗಿರುವದರಿಂದ ಈ ಸ್ಥಾನವನ್ನು ಕೂಡ ಉತ್ತಮ ರೀತಿಯಿಂದ ನಿರ್ವಹಿಸಿಯಾರೆಂಬುದಕ್ಕೆ ಸಂದೇಹವಿಲ್ಲ. ಶ್ರೀ. ವಿ. ಜೆ. ಪಟೇಲರನ್ನು ನಾವು ಅವರ ಯಶಸ್ಸಿನ ಬಗ್ಗೆ ಕನ್ನಡಿಗರ ಪರವಾಗಿ ಮನಃಪೂರ್ವಕವಾಗಿ ಅಭಿನಂದಿಸುವೆವು.

೨. ಎಸೆಂಬ್ಲಿಯಲ್ಲಿ ಅದರ ಅಧ್ಯಕ್ಷಸ್ಥಾನಕ್ಕೆ ಶ್ರೀ. ಪಟೇಲರು ಚುನಾಯಿಸಲ್ಪಟ್ಟದ್ದರಿಂದ ಎಲ್ಲ ಪಕ್ಷದವರು ಅವರ ಅಭಿನಂದನವನ್ನು ಮಾಡಿದರು. ಸರ್ ಫ್ರೆಡರಿಕ್ ವಾಯೆಟ್ ಇವರು ಹೋಗುವವರಾದ್ದರಿಂದ ಅವರನ್ನು ಸಹ ಎಲ್ಲ ಪಕ್ಷಗಳ ಸಭಾಸದರು ಮನಃಪೂರ್ವಕವಾಗಿ ಹೊಗಳಿದರು. ಮುಂಚಿನ ಅಧ್ಯಕ್ಷರು ಎಸೆಂಬ್ಲಿಯ ಕಾರ್ಯವನ್ನು ಬಹಳ ಚಲೋ ರೀತಿಯಿಂದಲೂ ಪಕ್ಷಪಾತವಿಲ್ಲದ್ದಾಗಿಯೂ ನಡಿಸಿದ್ದರೆಂಬುದಾಗಿ ಎಲ್ಲ ಪಕ್ಷದವರು ಏಕ ಕಂಠದಿಂದ ಅಭಿಪ್ರಾಯ ವ್ಯಕ್ತಗೊಳಿಸಿದರು. ಸರ್ ಫ್ರೆಡರಿಕ್ ವಾಯೆಟ್‌ರವರ ವಿಸರ್ಜನ ಸಮಾರಂಭವು ಈ ರೀತಿಯಿಂದ ಮುಗಿದ ಬಳಿಕ ಮೇಲೆ ಹೇಳಿದಂತೆ ಅಧ್ಯಕ್ಷರ ಗೌನನ್ನು ಧರಿಸಿ ಪಟೇಲ ಸಾಹೇಬರು ಸ್ಥಾನಾಪನ್ನರಾದರು. ಪಟೇಲರ ಪೂರ್ವ ಚರಿತ್ರವನ್ನು ಎತ್ತಿ ಹೇಳಿ ಅವರು ಈ ಸ್ಥಾನಕ್ಕೆ ಅರ್ಹರೆ ಹೌದೆಂಬುದಾಗಿಯೂ ಪಂಡಿತ ನೇಹರು, ಬಿ. ಜೇನಾ, ರಂಗಾಚಾರ್ಯರ್, ಸರ್ ಹೆನ್ರಿ ಸ್ಟೆನ್ಯಹಾನ್ ಮುಂತಾದ ಎಲ್ಲರೂ ಮುಕ್ತಕಂಠವಾಗಿ ನುಡಿದರು. ಪಟೇಲರು ಇವರ ಅಭಿನಂದನಗಳನ್ನು ಉತ್ತರಿಸುವಾಗ ತಾನು ಇಂಥ ಪಾರ್ಟಿಯವನೆಂಬ ಅಭಿಮಾನವನ್ನು ತಾಳದೆ ನಿಃಪಕ್ಷಪಾತವಾಗಿ ವರ್ತಿಸುವೆನೆಂದು ಹೇಳಿದರು. ಪಟೇಲರ ಈ ಸೌಜನ್ಯವು ಎಲ್ಲರನ್ನು ಸಂತೋಷಗೊಳಿಸಿತು.

೩. ಮೂರು ನಾಲ್ಕು ವರ್ಷಗಳ ಹಿಂದೆ ಮಲಬಾರದಲ್ಲಿ ಸಂಭವಿಸಿದ ದಂಗೆಯದೆಸೆಯಿಂದ ಶಿಕ್ಷಿಸಲ್ಪಟ್ಟ ಮಾಪಳೆಯವರನ್ನು ಅಂದಮಾನಕ್ಕೆ ಕಳುಹಿಸಿದ್ದರು. ಆ ಅಪರಾಧಿಗಳಿದ್ದಲ್ಲಿಗೆ ಅವರವರ ಹೆಂಗಸರನ್ನು ಕಳುಹಿಸಬೇಕೆಂಬ ಅರ್ಥದ ಒಂದು ಠರಾವು ಮದ್ರಾಸ ಕೌನ್ಸಿಲಿನಲ್ಲಿ ಬಂದಿತ್ತು. ಇದಕ್ಕೆ ಹಲವು ಉಪಸೂಚನೆಗಳನ್ನು ಜೋಡಿಸಿ ಕೊನೆಗೆ ಉಪಸೂಚನೆ ಸಮೇತವಾದ ಈ ಠರಾವು ಪಾಸಾಗಿದೆ. ಮಲಬಾರದ ಮಾಪಳೆ ಜನಗಳಿಗೆ ಈ ಠರಾವು ಎಷ್ಟರಮಟ್ಟಿಗೆ ಇಷ್ಟವಿರಬಹುದೆಂಬುದು ಗೊತ್ತಾಗುವದಿಲ್ಲ. ಹೇಗೂ ಇರಲಿ, ಅಂದಮಾನದಲ್ಲಿ ತಮ್ಮ ಉತ್ತರಾಯುಷ್ಯವನ್ನು ಕಳೆಯುವ ಜನಗಳಿಗೆ ಸದುದ್ಯೋಗದಿಂದ ಜೀವಿಸಲು ಅವರವರ ಸಂಸಾರ ಸುಖವಿರುವದೂ ಯೋಗ್ಯವೆ ಸರಿ.

೪. ಡೋಕ್ಟರ್ ಸರ್ ರಾಮಕೃಷ್ಣಗೋಪಾಲ ಭಂಡಾರಕಾರರು ತಮ್ಮ ಪ್ರಾಯದ ೮೮ನೆಯ ವಯಸ್ಸಿನಲ್ಲಿ ಕಳೆದ ಸೋಮವಾರ ಇಹಲೋಕಯಾತ್ರೆಯನ್ನು ಮುಗಿಸಿದರೆಂದು ತಿಳಿಸಲು ನಾವು ತುಂಬಾ ವ್ಯಸನಪಡುತ್ತೇವೆ. ಇವರು ಸಂಸ್ಕೃತದಲ್ಲಿ ಅಸಾಮಾನ್ಯ ಪಂಡಿತರಾಗಿದ್ದರು. ಇವರ ಹೆಸರು ಹಿಂದುಸ್ಥಾನದೊಳಗಿನ ಪಂಡಿತ ವರ್ಗದಲ್ಲಿ ಮಾತ್ರ ವಿರಾಜಮಾನವಾಗುತಿತ್ತೆಂದಲ್ಲ, ಪಾಶ್ಚಾತ್ಯ ದೇಶದೊಳಗಿನ ಸುಪ್ರಸಿದ್ಧ 'ಸಾವಂಟ'ರೆಂಬ ವಿದ್ವತ್ತೆಯ ಅತ್ಯುಚ್ಚ ಪದವಿಯನ್ನು ಹೊಂದಿದ ವಿದ್ವನ್ ಮುಕುಟ ಮಣಿಗಳಲ್ಲೂ ಇವರ ಗಣನೆಯು ಇತ್ತು ಇವರು ಸಂಶೋಧನಾತ್ಮಕವಾದ ಅನೇಕ ಗ್ರಂಥಗಳನ್ನು ಬರೆದಿರುವರು. ದಕ್ಷಿಣದ ಇತಿಹಾಸ, ವೈಷ್ಣವಧರ್ಮ ಇತ್ಯಾದಿ ಗ್ರಂಥಗಳು ಅವರ ಅಗಾಧವಿದ್ವತ್ತೆಯ ಮತ್ತು ತೀವ್ರ ಸಂಶೋಧಕ ಬುದ್ಧಿಯದ್ಯೋತಕಗಳಾಗಿವೆ. ಇವರ ವಿದ್ವತ್ತೆಯ ಸಾಕ್ಷಿಯನ್ನು ತೋರಿಸುವದಾದರೆ ಪುಣೆಯಲ್ಲಿ ಸಂಸ್ಥಾಪಿತವಾದ ಭಾಂಡಾರಕರ ರಿಸರ್ಚ ಇನ್‌ಸ್ಟಿಟ್ಯೂಟ' ಈ ಒಂದೆ ಸಂಸ್ಥೆಯ ನಾಮ ನಿರ್ದೇಶವನ್ನು ಮಾಡಿದರೆ ಸಾಕಾಗಿದೆ. ಇವರು ಪ್ರಾರ್ಥನಾಸಮಾಜಿಸ್ಟರೂ ಸಮಾಜ ಸುಧಾಕರೂ ಆಗಿದ್ದರು. ಇವರ ಇಬ್ಬರು ವಿದ್ವಾಂಸರಾದ ಮಕ್ಕಳು ಮೃತಪಟ್ಟಿದ್ದರಿಂದ ಪುತ್ರಶೋಕವನ್ನು ಅನುಭವಿಸುವ ಪ್ರಸಂಗವು ಅವರ ಮೇಲೆ ಮುಪ್ಪಿನಲ್ಲಿ ಬಂದಿತ್ತು. ಇದು ಮಾತ್ರ ವ್ಯಸನಕರವು. ಆದರೆ ವಿಧಿವಿಲಸಿತವು ತಪ್ಪದೆಂಬ ಮಾತನ್ನು ನೆನಸಿ ಅವರು ಇಂಥ ದುಃಖಪ್ರಸಂಗವನ್ನು ಕೂಡ ಬಹು ಸಮಾಧಾನದಿಂದ ದಾಟಿದ್ದರು. ಡಾ. ಭಾಂಡಾರಕರರ ಮರಣದಿಂದ ಹಿಂದುಸ್ಥಾನದೊಳಗಿನ ಒಬ್ಬ ಅದ್ವಿತೀಯ ಪಂಡಿತನು ಗತಿಸಿದಂತಾಗಿದೆ. ಇವರ ಆತ್ಮಕ್ಕೆ ಚಿರಶಾಂತಿಯು ಲಭಿಸಲೆಂದು ಪ್ರಾರ್ಥಿಸಿ ನಾವು ಈ ಮೃತ್ಯುಲೇಖವನ್ನು ಮುಗಿಸುವೆವು.

ಮಂಗಳೂರು.

ಮದ್ರಾಸಿನ ಲೊರ್ಡ ಬಿಶೋಪಧೊರೆಗಳವರು ಸಪ್ಟಂಬ್ರ ತಾ. ೨೪ಕ್ಕೆ ಮಂಗಳೂರಿಗೆ ಚಿತ್ತೈಸಿ ತಾ. ೪ಕ್ಕೆ ಮದ್ರಾಸಿಗೆ ಹಿಂತೆರಳುವರು.

ಇಲ್ಲಿಯ ಸ್ಟೇಶನ್ ಮಾಸ್ಟರಾಗಿರುವ ಮಿ| ರೊಮಿಯೊರವರಿಗೆ ಬಡ್ತಿಯ ಮೇಲೆ ಇರೋಡು ಸ್ಟೇಶನಿಗೆ ವರ್ಗವಾಗಿದೆ. ಅವರ ಬದಲಿಗೆ ಇಲ್ಲಿಗೆ ಮಿ| ಟೊಹಿಗ್ ಎಂಬವರು ಬಂದಿರುತ್ತಾರೆ. ರೈಲ್ವೇ ಇನ್ಸಪೆಕ್ಟರರಾದ ಮಿ. ಲೀಜರವರ ಬದಲಾಗಿ ಮಿ. ಹೆಕ್ಟರವರು ಬಂದಿರುವರು.

ಮಂಗಳೂರು ಮ್ಯುನಿಸಿಪಾಲಿಟಿಯಲ್ಲಿ ತಾ. ೧೬ಕ್ಕೆ ಅಂತ್ಯವಾಗುವ ವಾರದಲ್ಲಿ ಒಟ್ಟು ಮರಣಗಳು ೨೮, ಜನನಗಳು ೩೧, ಆ ಪೈಕಿ ಗಂಡು ೧೮ ಆಗಿದ್ದವು.

The Calicut Bank, Ltd.,

ದಿ ಕೆಲಿಕಟ್ ಬೇಂಕ್, ಲಿಮಿಟೆಡ್,

ಹೆಡ್ ಆಫೀಸು — ಕಲ್ಲಿಕೋಟೆ.

ಬ್ರಾಂಚುಗಳು:— ಮುಲ್ಲಸ್‌ಚೇರಿ, ತಲಚೇರಿ, ಕೊಚ್ಚಿ ಮತ್ತು ಪಾಲ್ಘಾಟು.

ರಿಜಿಸ್ಟರ್ಡ್ ಮತ್ತು ಅಧಿಕಾರಗೊಳಿಸಲ್ಪಟ್ಟ ಮೂಲಧನ ರೂ. 5,00,000—0—0.

ರೂಪಾಯಿ 10ರ 50,000 ಪಾಲುಗಳು.

(30—8—1924)ರ ವರೆಗೆ ಮೌಲ್ಯ ಮೂಲಧನ ರೂಪಾಯಿ 1,81,850—0—0.

ಒಂದು ವರುಷದ ಕಾಯಂ ಠೇವಣಾತಿಗೆ ಬಡ್ಡಿ ದರ ಸೇಕಡಾ ರೂ. 7—8—0.

ಕಳೆದ 4 ವರುಷಗಳಲ್ಲಿ ಪಾಲುಗಾರರಿಗೆ ಸೇಕಡಾ 12ರಂತೆ ಬಡ್ಡಿ ಹಂಚಿದೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಸಿ. ಕೃಷ್ಣನ್, ಬಿ. ಎ. ಬಿ. ಎಲ್.,
ಮೆನೇಜಿಂಗ್ ಡ್ಯಾರೆಕ್ಟರ್.

ಡ್ಯಾರೆಕ್ಟರರಲ್ಲಿ ಒಬ್ಬರು—
ಎಮ್. ನಾರಾಯಣ ಕಾಮತ್, ಬಿ. ಎ.,
ಪ್ಲೀಡರ್, ಕುಂದಾಪುರ.

ಮುಂಬಾಯಿ ಸ್ಟೀಮ ನೇವಿಗೇಶನ್ ಕಂಪೆನಿಯ ಸ್ಟೀಮರು ಇದೇ ಬರುವ ಸಪ್ಟಂಬರ ತಾ. ೨೦ಕ್ಕೆ ಚಲಾವಣೆಯು ಪ್ರಾರಂಭವಾಗುವುದೆಂತ ನಾವು ಈ ಮೊದಲು ತಿಳಿಸಿದ್ದೇವೆ. ಆದರೆ ಹವೆಯ ಸ್ಥಿತಿಯು ಈಗ ಚೆನ್ನಾಗಿದ್ದದರಿಂದ ತಾ. ೨೦ಕ್ಕೆ ಹೊರಡುವ ಬದಲಾಗಿ ಇದೇ ಬರುವ ಸೆಪ್ಟಂಬರ ತಿಂಗಳ ತಾ. ೧೨ನೇ ಶುಕ್ರವಾರ ಮುಂಬಾಯಿಂದ ಹೊರಟು ತಾ. ೧೫ನೇ ಸೋಮವಾರ ಇಲ್ಲಿಗೆ ತಲಪಿ ಅದೇ ದಿನ ಅಪರಾಹ್ನ ಗಂಟೆ ೪ಕ್ಕೆ ಹಿಂತೆರಳುವುದು.

ನಮ್ಮ ಜಿಲ್ಲೆಯ ಮಾಜಿ ಕಲೆಕ್ಟರಾಗಿದ್ದ ಮತ್ತು ಪ್ರಕೃತ ಲೇಬರ ಕಮಿಶನರಾಗಿದ್ದ ಆರ್. ಎಚ್. ಎಲ್ಲಿಸ್ ಧೊರೆಗಳವರು ತಾ. ೩೦—೮—'೨೪ಕ್ಕೆ ಕಾಸರಗೋಡಿನಲ್ಲಿ ಮೊಕ್ಕಾಂ ಮಾಡಿ, ತಾ. ೧—೯—'೨೪ರಲ್ಲಿ ಅಲ್ಲಿಯ ಆದಿದ್ರಾವಿಡರ ಕೊಲೋನಿಗಳನ್ನು ಸಂದರ್ಶಿಸಿ ತಾ. ೨—೯—೧೯೨೪ಕ್ಕೆ ಮಂಗಳೂರಿಗೆ ಬರುತ್ತಾರೆ. ತಾ. ೩, ೪, ೫—೯—'೨೪ರಲ್ಲಿ ಮಂಗಳೂರಲ್ಲಿ ಮೊಕ್ಕಾಂ ಮಾಡಿ ತಾ. ೬ಕ್ಕೆ ಮದ್ರಾಸಿಗೆ ಹೋಗುವರು.

ಇಲ್ಲಿಯ ಜವಳಿ ಸಾಹುಕಾರರಾದ ರಾ. ಪಿ. ನಾರಾಯಣ ವೈಜಪ್ಪ ಭಂಡಾರಿಯವರು ತನ್ನ ಮೇಲೆ ಇಲ್ಲಿಯ ಮೆಜಿಸ್ಟ್ರೇಟರಾದ ನರ್ಕಾಡಿ ವೆಂಕಟರಾವ್ ಬಿ. ಎ.ಯವರು ತಮ್ಮ ಕಾರ್ಯನಿರ್ವಾಹ ಕಾಲದಲ್ಲಿ ಒಂದು ಅಪ್ಪಣೆ ಕೊಟ್ಟದ್ದರಿಂದ ಮಾನನಷ್ಟವಾಯಿತೆಂದು ೫,೦೦೦ ರೂಪಾಯಿ ನಷ್ಟ ಕೇಳಿ ಸಬ್ ಜಡ್ಜರಲ್ಲಿ ವ್ಯಾಜ್ಯಮಾಡಿದ್ದರು. ವ್ಯಾಜ್ಯವನ್ನು ಸಬ್ ಜಡ್ಜರು ಖರ್ಚುಸಮೇತ ತಳ್ಳಿಹಾಕಿರುವರು.

ಇಲ್ಲಿಯ ಮ್ಯುನಿಸಿಪಾಲ್ ಕೌನ್ಸಿಲಿನಲ್ಲಿ ಖಾಲಿಯಾಗಲಿಕ್ಕಿರುವ ಏಳು ಸ್ಥಾನಗಳಿಗೆ ಸ್ವರಾಜ್ಯಪಕ್ಷದ ಉಮೇದುವಾರರನ್ನೇ ಆರಿಸಬೇಕೆಂದು ತಿಳಿಸಲು ಪಟ್ಟಣದೊಳಗೆ ಅಲ್ಲಲ್ಲಿ ಸಭೆಗಳಾಗುತ್ತಿವೆ. ಶ್ರೀಯುತ ಪುಣಿಂಚಿತ್ತಾಯರ ಮಂಜುಲ ರಾಷ್ಟ್ರಗೀತೆಗಳಿಂದ ಸಭೆಗಳು ಪ್ರಾರಂಭವಾಗುತ್ತಿದ್ದು ಮ| ರಾ| ಗಳಾದ ಡ್ಯಾಕೋರ್ಟ ವಕೀಲ್ ಯು. ಸಿ. ಕೃಷ್ಣಭಟ್,

ಯಂ. ಮಾಧವರಾವ್, ಕೆ. ಆರ್. ಕಾರಂತ, ಕೆ. ಆರ್. ಆಚಾರ್, ಶೇಷಭಟ್ಟ ಭಿಡೆ, ಸುಬ್ರಹ್ಮಣ್ಯಭಟ್, ಎಮ್. ಎನ್. ಕಿಣಿ, ಉಳ್ಳಾಲ ಸಂಜೀವರಾವ್, ಅ. ಭೋಜರಾವ್, ಎಸ್. ಎಫ್. ಸಾಹಿಬ್ ಇವರೇ ಮೊದಲಾದವರು ಪ್ರತಿ ವಾರ್ಡುಗಳ ಓಟರರನ್ನು ಜಾಗ್ರತಿಗೊಳಿಸುತ್ತಿರುವರು. ಈ ಚುನಾವಣೆಯ ಸಂಬಂಧವಾಗಿ ಇದೇ ಆದಿತ್ಯವಾರ ೭ ಗಂಟೆಗೆ ಊರಜನರ ಮೆರವಣಿಗೆಯೊಂದು ಮಣ್ಣಗುಡ್ಡೆಯಿಂದ ಹೊರಡಲಿಕ್ಕಿರುವುದು. ಅದೇ ದಿನ ಸಾಯಂಕಾಲ ಜಪ್ಪುವಾರ್ಡಿನಲ್ಲಿ ಒಂದು ಸಭೆಯೂ ಜರಗಲಿಕ್ಕಿದೆ.

ಗೋಳಿಕಟ್ಟೆವಾರ್ಡು—ಮೆಸ್ಸರ್ಸ ಕೆ. ಸದಾಶಿವರಾವ್, ಯಚ್. ಮಹಮ್ಮದ್, ಪುತ್ತೂರು ಸಾಹೇಬ ಮತ್ತು ಎಮ್. ಮಹಮ್ಮದ್ ಯಾನೆ ಪುತ್ತಬ್ಬ. ಮಾರ್ಕೆಟುವಾರ್ಡು—ಎಮ್. ಅಣ್ಣಪ್ಪನ್ಯಾಕರು, ಕೋರ್ಟುವಾರ್ಡು—ಮಿ। ಪಿ. ಡಿ'ಸೋಜ, ಕೊಡಿಯಾಲಬೈಲು ವೆಸ್ಟ್‌ವಾರ್ಡು—ಮ। ರಾ। ರಾ। ಬಿ. ಸುಬ್ಬಯ್ಯ ಇವರ ಕೌನ್ಸಿಲ್ ಮೆಂಬರಿಕೆ ಸ್ಥಾನವು ಖಾಲಿಬೀಳುವದರಿಂದ ತಿರುಗಿ ಚುನಾವಣೆಯು ನಡಿಯುವುದು. ಉಮೇದ್ವಾರರು ನೋಮಿನೇಶನ್ ಪೇಪರುಗಳನ್ನು ಸಪ್ಟೆಂಬರ ತಾ. ೯ನೆ ಬುಧವಾರ ಅಪರಾಹ್ನ ೩-೪ ಗಂಟೆಯ ಒಳಗೆ ಮುನ್ಸಿಪಾಲ್ ಆಫೀಸಿನಲ್ಲಿ ಕೊಡಬೇಕು. ಈ ಪೇಪರುಗಳನ್ನು ತಾ. ೧೧ನೆ ಶುಕ್ರವಾರ ಅಪರಾಹ್ನ ೩-೩೦ ಗಂಟೆಗೆ ತನಖಿಮಾಡಲಾಗುವದು. ತಾ. ೨೪ನೇ ಸಪ್ಟಂಬರ ಗುರುವಾರ ದಿವಸ ಮುನಿಸಿಪಲ್ ಆಫೀಸು ಮತ್ತು ಬ್ರಾಹ್ಮಣರ ಗರ್ಲ್ಸ ಶಾಲೆಯಲ್ಲಿಯೂ ೨೫ನೆ ಶುಕ್ರವಾರ ಮಿಲಾಗ್ರಿಸ್ ಶಾಲಾ ಕಟ್ಟೋಣ, ಬೋಳಾರ ಮುನ್ಸಿಪಲ್ ಎಲಿಮೆಂಟರಿ ಶಾಲೆಯಲ್ಲಿಯೂ, ೨೮ನೇ ಸೋಮವಾರ ಕಂಡತಪಳ್ಳಿ ಮಾಪಿಳ್ಳೆಯರ ಶಾಲಾ ಕಟ್ಟೋಣದಲ್ಲಿಯೂ ವೋಟು ತೆಗೆಯಲಾಗುವದು. ನೋಮಿನೇಶನ್ ಪೇಪರುಗಳು ಮುನ್ಸಿಪಲ್ ಆಫೀಸಿನಲ್ಲಿ ದೊರೆಯುವುದು.

ಮಂಗಳೂರು ಕೊ-ಒಪರೇಟಿವ್ ಟೌನ್ ಬೇಂಕ್ ಲಿಮಿಟೆಡ್ ಇವರ ಬಗ್ಗೆ ಮಂಗಳೂರು ಹಳೆ ತಾಲೂಕು ಕಚೇರಿಯ ವಠಾರದಲ್ಲಿ ವಿಂಗಡಿಸಿಕೊಟ್ಟ ಸ್ಥಳದಲ್ಲಿ ಕಟ್ಟಿಸೋಣಾದ ಬೇಂಕಿನ ಹೊಸ ಕಟ್ಟೋಣದ ಪ್ರವೇಶ ಸಮಾರಂಭವು ಇದೇ ಬರುವ ಸಪ್ಟಂಬರ ತಿಂಗಳ ತಾ. ೪ನೇ ಶುಕ್ರವಾರ ಶ್ಯಾಮ ಗಂಟೆ ೫॥ಗೆ ಆಚರಿಸಲ್ಪಡುವದು. ಜಿಲ್ಲಾ ಕಲೆಕ್ಟರ ದೊರೆಗಳವರಾದ ಜಿ. ಡಬ್ಲ್ಯು ವೇಲ್ಸ್, ಎಸ್‌ಕ್ವಾಯರ್, ಎಮ್. ಎ., ಐ. ಸಿ. ಎಸ್.ರವರು ದಯಮಾಡಿ ಈ ಸಮಾರಂಭವನ್ನು ನೆರವೇರಿಸಲು ಸಮ್ಮತಿಸಿರುತ್ತಾರೆ.

ದಕ್ಷಿಣ ಕಾನಡಾ ಜಿಲ್ಲಾ ಕಲೆಕ್ಟರರ ಸರ್ಕಿಲಾರು.

೧೯೨೫ನೆ ಇಸವಿ ದಶಂಬರ ತಾ. ೩೧ರಲ್ಲಿ ಯಾರ ಲೈಸನ್ಸ ಅಂತ್ಯವಾಗುವದೊ ಅಂಥ ಕೋವಿ ಮುಂತಾದವುಗಳ ಲೈಸನ್ಸವುಳ್ಳ ಈ ಜಿಲ್ಲೆಯ ಜನರು ತಮ್ಮ ಲೈಸನ್ಸುಗಳನ್ನು ಬೇಗನೆ ಒಪ್ಪಿಸುವದಲ್ಲದೆ ತಿರುಗಿ ಪಡಕೊಳ್ಳಲು ಅರ್ಜಿಗಳನ್ನೂ ಕೂಡ ಆಗಲೆ ಮಾಡಬೇಕು. ಲೈಸನ್ಸು ಮತ್ತು ಅರ್ಜಿಗಳು ಬೇಗನೆ ಬಂದಲ್ಲಿ ೧೯೨೬ನೆ ಇಸವಿ ಜನವರಿ ತಾ. ೧ರೊಳಗೆ ಅವರಿಗೆ ಪುನಃ ಲೈಸನ್ಸು ಸಿಕ್ಕುವಂತೆ ಮಾಡಲಾದೀತು. ೧೯೨೬ನೆ ಇಸವಿ ಜನವರಿ ತಾ. ೧ಕ್ಕಿಂತ ಮುಂಚೆ ಪುನಃ ಲೈಸನ್ಸು ಯಾರು ಪಡೆಯಲಿಕ್ಕಿಲ್ಲವೊ ಮತ್ತು ತಮಗೆ ಸಮೀಪದ ಪೋಲೀಸ ಸ್ಟೇಶನಿನಲ್ಲಿ ತಮ್ಮ ಹತ್ಯಾರುಗಳನ್ನು ತಂದಿಡಲು ಯಾರು ತಪ್ಪುವರೊ ಅಂಥವರ ಮೇಲೆ ತಕ್ಷೀರು ನಡಸಲಾದೀತಲ್ಲದೆ ಅಂಥವರಿಗೆ ಮುಂದೆ ಲೈಸನ್ಸು ಸಿಕ್ಕುವ ಸಂದರ್ಭವು ಇರಲಿಕ್ಕಿಲ್ಲ.

೨. ದೂರದ ಹಳ್ಳಿಗಳಲ್ಲಿ ವಾಸಮಾಡುತ್ತಿದ್ದ ಲೈಸನ್ಸುದಾರರು ತಮ್ಮ ಸರಿಯಾದ ವಿಳಾಸವನ್ನೂ ಹತ್ತರದ ಪೋಸ್ಟಾಪೀಸಿನ ಹೆಸರನ್ನೂ ತಿಳಿಸಿದ್ದಲ್ಲಿ ತಿರುಗಿ ಮಂಜೂರುಮಾಡಿದ ಅವರ ಲೈಸನ್ಸುಗಳನ್ನು ಅಲ್ಲಿಗೆ ಕಳುಹಿಸಬಹುದು.

೩. ಪುನಃ ಲೈಸನ್ಸು ಪಡೆಯಲು ಫೀಸಿನ ವಿವರ. ೭ನೆಯ ಫಾರ್ಮನಲ್ಲಿ ರಿವಾಲ್ವರ ಮತ್ತು ಪಿಸ್ತೂಲುಗಳಿಗೆ ರೂ. ೫ ಹಿಂದಿನಿಂದ ಮದ್ದು ತುಂಬುವ ಗನ್ನುಗಳಿಗೂ ಮತ್ತು ರೈಫಲುಗಳಿಗೂ ರೂ. ೨॥, ಬಾಯಿ ಕಡೆಯಿಂದ ಮದ್ದು ತುಂಬುವ ಗನ್ನುಗಳಿಗೆ ೪ ಆಣೆ ಸ್ಟಾಂಪು ಪೇಪರಿನಲ್ಲಿ ಕಳುಹಿಸಬೇಕು.

(ವಿವಿಧ ವಿಷಯಗಳು.—೫ನೇ ಪೇಜಿಯಿಂದ ಮುಂದುವರಿದುದು)

ಅಧಿಕಾರಿಗಳು ಸಂಚಾರಕ್ಕೆ ಹೋದಾಗ ಬಡಕೂಲಿಗಳನ್ನು ಬಿಟ್ಟಿಗೆ ಹಿಡಿದು ಅವರಿಂದ ಯಾವ ರೀತಿಯಲ್ಲಿ ಧರ್ಮಾರ್ಥವಾಗಿ ಗೆಯ್ಸಿಕೊಳ್ಳುತ್ತಿರುತ್ತಾರೆ ಎಂಬೀ ಸಂಗತಿಯನ್ನು ಶ್ರೀ. ಜೋಶಿಯವರು ಪರಿಷತ್ತಿನಲ್ಲಿ ಕೃತಪಡಿಸಿದರು. ಕೇಣಿಯಾದಲ್ಲಿ ಹಿಂದಿ ಮಜೂರರನ್ನು ಹೇಗೆ ಅಮಾನುಷವಾದ ಕ್ರಮದಿಂದ ನಡಿಸುತ್ತಾರೆ ಎಂಬುದನ್ನು ಸಹ ಜೋಶಿಯವರು ತಿಳಿಸಿ ಹೇಳಿದರು. ಅಲ್ಲದೆ, ಜೋಶಿಯವರು ಮಹತ್ವದ ಇನ್ನೊಂದು ಸಂಗತಿಯನ್ನು ಸಹ ಪರಿಷತ್ತಿನಲ್ಲಿ ಉಲ್ಲೇಖಿಸಿದರು. ಬ್ರಿಟಿಷ್ ಹಿಂದುಸ್ಥಾನಕ್ಕಿಂತಲೂ ಹಿಂದಿ ಸಂಸ್ಥಾನಗಳಲ್ಲಿ ಕೂಲಿಗಳಿಗೆ ಹೆಚ್ಚಿನ ಸಂಕಷ್ಟಗಳೊದಗುತ್ತವೆ. ಅಂತರ ರಾಷ್ಟ್ರೀಯ ಪರಿಷತ್ತು ಪಾಸುಮಾಡಿದ ಠರಾವುಗಳನ್ನು ಬ್ರಿ. ಸರಕಾರವು ಮನಃಪೂರ್ವಕವಲ್ಲವಾದರೂ, ಲೋಕಾಪವಾದಕ್ಕಾಗಿ ಜಾರಿಯಲ್ಲಿ ತರಲು ದೃಕ್ಷರಾಗುತ್ತದೆ. ಆದರೆ ಹಿಂದಿ ಸಂಸ್ಥಾನಗಳಿಗೆ ಇಂಥ ಠರಾವುಗಳ ಸೂತಕವೆ ತಗಲುವದಿಲ್ಲವಾದ ಕಾರಣ ಅಲ್ಲಿ ಸಂಭವಿಸುವ ಕೂಲಿಗಳ ದುರವಸ್ಥೆಗೆ ಅಂತ್ಯವಿಲ್ಲವಾಗಿದೆ. ಹಿಂದಿ ಸಂಸ್ಥಾನಗಳ ಹದ್ದಿನಲ್ಲಿ "ಫೆಕ್ಟರಿ ಎಕ್ಟ" ಲಾಗೂವಾಗುವದಿಲ್ಲವಾದ ಕಾರಣ ಬಂಡವಾಳಿಗರು ಅಂಥ ಕಡೆಯಲ್ಲಿ ಗಿರಣಿಗಳನ್ನು ಸ್ಥಾಪಿಸಿದರೆ ಬೇಕಾದ ರೀತಿಯಲ್ಲಿ ಕೂಲಿಗಳಿಂದ ಕೆಲಸವನ್ನು ತೆಗೆದುಕೊಳ್ಳಬಹುದಾಗುತ್ತದೆ. ಈ ತರದ ಪ್ರಯೋಜನವನ್ನು ಈಗಿನಿಂದಲೆ ಕೆಲವು ಕಡೆಗಳಲ್ಲಿ ತಕ್ಕೊಳ್ಳಲು ಪ್ರಾರಂಭವಾಗಿದೆ, ಅದ್ದರಿಂದ ಹಿಂದಿ ಸಂಸ್ಥಾನಗಳಲ್ಲಿ ಹಿಂದಿ ಮಜೂರರ ಹಿತದ ಸಂರಕ್ಷಣವಾಗತಕ್ಕದ್ದು ಎಂದು ಮುಂತಾದ ರೀತಿಯಲ್ಲಿ ಶ್ರೀ. ಜೋಶಿಯವರು ಮಜೂರರ ವಿಷಯವಾಗಿ ಅವರ ಸಂಕಷ್ಟಗಳನ್ನೆಲ್ಲ ಅಂತರ ರಾಷ್ಟ್ರೀಯ ಪರಿಷತ್ತಿನಲ್ಲಿ ವ್ಯಕ್ತಗೊಳಿಸಿದ್ದಾರೆ. ವಿಲಾಯತಿಯಲ್ಲಿಯ ಅಥವಾ ಯುರೋಪದೊಳಗಿನ ಇತರ ಕಡೆಗಳಲ್ಲಿಯ ಮಜೂರರಿಗೆ ಕಷ್ಟಗಳಿವೆ ಎಂಬುದು ನಿಜ. ಆದರೆ ಹಿಂದಿ ಮಜೂರರ ಕಷ್ಟಗಳನ್ನು ಅವರ ಕಷ್ಟಗಳೊಡನೆ ತುಲನೆ ಮಾಡಿ ನೋಡಿದರೆ ಹಿಂದಿ ಮಜೂರರ ಕಷ್ಟಗಳು ಬಹು ಅಸಹ್ಯಕರವಾಗಿದೆ. ಅವುಗಳನ್ನು ಪರಿಹರಿಸುವದು ಕೂಡ ದುರ್ಘಟಕಾರ್ಯವಾಗಿದೆ.

ಎಸೆಂಬ್ಲಿಯೊಳಗಿನ ವೈಸರಾಯರ ಭಾಷಣ.

“ಎಸೆಂಬ್ಲಿಯ ಸಭಾಸದರಾದ ನಿಮ್ಮಿಂದ ವಿಯುಕ್ತನಾದ ನಾನು ಪುನಃ ನಿಮ್ಮೊಡನೆ ಸೇರಲು ಸಂತೋಷ ಪಡುವೆನು. ವಿಯುಕ್ತನಾಗಿರುವ ಈ ಅವಧಿಯಲ್ಲಿ ಇತರ ಯಾವ ಗಲಾಟೆಗಳೂ ಆಗದೆ ಇದ್ದರೂ ವಿ. ಮೊಂಟೆಗ್ಯು ಲೊರ್ಡಕರ್ಝನ ಸಾಹೇಬರು ವಿಲಾಯತಿಯಲ್ಲಿ, ಶ್ರೀಯುತ ದಾಸ ಮತ್ತು ಸರ್ ಸುರೇಂದ್ರನಾಥ ಬಾನರ್ಜಿ ಈ ಸುಪ್ರಸಿದ್ಧ ದೇಶಭಕ್ತರೂ ಹಿಂದುಸ್ಥಾನದಲ್ಲಿ ಹಾಗು ಗ್ವಾಲ್ಹೇರದ ಮಹಾರಾಜರೂ ಮತ್ತು ಹಿಂದುಸ್ಥಾನದ ಸೇನಾಪತಿಗಳಾದ ಲೊ. ರೋಲಿನ್ಸನರೂ ಮೃತಪಟ್ಟಿರುವದರಿಂದ ಇವರೆಲ್ಲರ ಮರಣದ ವಾರ್ತೆಗಳು ಹಿಂದುಸ್ಥಾನದಲ್ಲೂ, ವಿಲಾಯತಿಯಲ್ಲೂ ವ್ಯಸನವನ್ನುಂಟುಮಾಡುತ್ತಿವೆ. ಗತಿಸಿದ ಸೇನಾನಾಯಕಸ್ಥಾನದ ಮೇಲೆ ಈಗ ಬಂದಿರುವ ಸೇನಾನಾಯಕರು, ಸರ್‌ವಿಲ್ಯಮಬರ್ಡವುಡ ಇವರು ಸಹ ಅತಿ ಯೋಗ್ಯರಾಗಿರುವದರಿಂದ ಅವರನ್ನು ಮನಃಪೂರ್ವಕವಾಗಿ ಅಭಿನಂದನ ಮಾಡಬೇಕಾಗಿದೆ. ಸುಧಾರಣಾ ಕಾನೂನ ಪ್ರಕಾರವಾಗಿ ಮೊದಲನೆಯ ಅಧ್ಯಕ್ಷರ ಸಮಯವು ದಾಟಿದ್ದರಿಂದ ಹೊಸ ಅಧ್ಯಕ್ಷರನ್ನು ಚುನಾಯಿಸುವ ಸಮಯವು ಬಂದಿದೆ. ಎಸೆಂಬ್ಲಿಯಂಥ ಕಾಯಿದೆಯ ಸಂಸ್ಥೆಗೆ ಅಧ್ಯಕ್ಷರನ್ನು ಚುನಾಯಿಸುವಾಗ ಬಹು ಜಾಗ್ರತೆಯನ್ನು ತಕ್ಕೊಳ್ಳಬೇಕು. ಅಧ್ಯಕ್ಷನಾಗಿ ಬರುವವನು ಕಾನೂನು ಪುಸ್ತಕದ ನಿಯಮಗಳನ್ನು ಮಾತ್ರ ಅನುಸರಿಸುವವನಾಗಿದ್ದರಾಯಿತೆಂದಲ್ಲ, ಅವನು ಉದಾರ ಬುದ್ಧಿಯವನೂ, ಎಸೆಂಬ್ಲಿಯಲ್ಲಿಯ ಸುವ್ಯವಸ್ಥೆಯನ್ನು ಕಾಪಾಡುವವನೂ ಎಲ್ಲ ಸಭಾಸದರ ಆದರಕ್ಕೆ ಪಾತ್ರನಾಗಿರುವವನೂ, ತಾನು ಸ್ವತಃ ಸಭಾಸದರನ್ನು ಬಹುಮಾನಿಸಲು ತಿಳಿದವನೂ ಆಗಿರಬೇಕು. ಅದ್ದರಿಂದ ಸಭಾಸದರಾದ ನೀವು ನಿಮ್ಮ ಎಸೆಂಬ್ಲಿಗೆ ಉತ್ತಮರಾದವರನ್ನೆ ಅಧ್ಯಕ್ಷಸ್ಥಾನಕ್ಕೆ ಚುನಾಯಿಸಬೇಕು. ಇದು ವರೆಗಿನ ಅಧ್ಯಕ್ಷರಾದ ಸರ್ ಫ್ರೆಡ್ರಿಕ್‌ವ್ಹಾಯಟರವರು ಅತಿ ಉತ್ತಮವಾದ ಕರ್ತವ್ಯಗಳನ್ನು ಮಾಡಿರುವುದರಿಂದ ಅವರನ್ನು ಪುನಃ ಪೂರ್ವಕವಾಗಿ ಅಭಿನಂದಿಸುವದು ನಮ್ಮೆಲ್ಲರ ಕರ್ತವ್ಯವಾಗಿದೆ.

ಹಿಂದುಸ್ಥಾನದ ಸ್ಥಿತಿಯು ಸಮಾಧಾನಕರವಾಗಿದೆ. ಹಿಂದುಸ್ಥಾನದ ಸುತ್ತುಮುತ್ತಲಿನ ರಾಷ್ಟ್ರಗಳು ಹಿಂದುಸ್ಥಾನದೊಡನೆ ಸಖ್ಯಸಂಬಂಧದಿಂದಲೆ ಇದ್ದಾವೆ. ದಕ್ಷಿಣ ಅಫ್ರಿಕದಲ್ಲಿಯೂ ಹಿಂದಿಗಳ ವಿಷಯಗಳ ವಿಷಯವಾಗಿ ಅಂಥ ಪ್ರತಿಕೂಲ ಸಂಗತಿಯು ಬಂದಿಲ್ಲ. ಹತ್ತಿಯ ಗಿರಣಿಗಾರರಿಗೆ ಹಲವು ಸಂಕಷ್ಟಗಳು ಒದಗಿವೆ. ಅವರಿಗೆ ಭೇಟಿಯನ್ನು ಕೊಡುವದಿದ್ದದರಿಂದ ಆ ಬಗ್ಗೆ ಸದ್ಯ ಹೆಚ್ಚು ಮಾತಾಡಲಾಗುವದಿಲ್ಲ. ಟೆರಿಫ್‌ಬೋರ್ಡಿನ ನಾಲ್ಕು ರಿಪೋರ್ಟುಗಳು ಇದುವರೆಗೆ ಪ್ರಸಿದ್ಧವಾಗಿವೆ; ಹಿಂದುಸ್ಥಾನ ಸರಕಾರವು ಅವುಗಳ ವಿಷಯವಾಗಿ ತನ್ನ ಅಂಬೋಣವನ್ನು ಕೂಡ ಪ್ರಕಟಿಸಿದೆ. ಈಗ ಕಬ್ಬಿಣದ ವಿಷಯವಾಗಿ ರಿಪೋರ್ಟು ಪ್ರಕಟವಾಗಿದೆ. ಆ ವಿಷಯವು ಎಸೆಂಬ್ಲಿಯ ಮುಂದೆ ಬರಲಿಕ್ಕಿದೆ. ಆಗ ಈ ಸಂಗತಿಯ ಚರ್ಚೆಯು ಸಹಜವಾಗಿ ನಡೆದೀತು. ಹಿಂದುಸ್ಥಾನದೊಳಗಿನ ಕೃಷಿಯು ದನಗಳ ಸಮೃದ್ಧಿಯ ಮೇಲೆ ಹೊಂದಿರುವದರಿಂದ ಸಂಖ್ಯೆಯ ದೃಷ್ಟಿಯಿಂದಲೂ, ದೃಢಶರೀರ ದೃಷ್ಟಿಯಿಂದಲೂ ದನಗಳ ಅಭಿವೃದ್ಧಿಯಾಗಬೇಕೆಂಬ ಮಾತು ಸರಿಯಾಗಿದೆ. ಸರ್ವಹಿಂದುಸ್ಥಾನಕ್ಕೆ ಸಂಬಂಧಪಟ್ಟ ಕೃಷಿಗಾಗಿ ಒಂದು ಇಲಾಖೆಯನ್ನು ತೆರೆದು ಹಾಗು ಈ ಮುಖ್ಯ ಇಲಾಖೆಗೆ ಅನುಕೂಲವಾಗಿ ಪ್ರಾಂತ ಪ್ರಾಂತಗಳಲ್ಲಿ ಕೃಷಿಇಲಾಖೆಗಳನ್ನು ಸ್ಥಾಪಿಸುವ ವಿಚಾರವು ಹಿಂದುಸ್ಥಾನ ಸರಕಾರದ ಮನಸ್ಸಿನಲ್ಲಿ ಉಂಟು. ಇದಕ್ಕೆ ಬೇಕಾದ ನಿಯಮಗಳನ್ನೆಲ್ಲ ತಯಾರಿಸಿ ಬೋರ್ಡು ಒಫ್ ಎಗ್ರಿಕಲ್ಚರಿಗೆ ಅವುಗಳನ್ನು ಪರೀಕ್ಷಿಸಲು ಹೇಳುವದುಂಟು. ಆ ಬಳಿಕ ಈ ಸಂಗತಿಯು ಎಸೆಂಬ್ಲಿಯ ಮುಂದೆ ಇಡಲ್ಪಟ್ಟೀತು. ಸಿವಿಲ್‌ಜಸ್ಟಿಸ್ ಕಮಿಟಿಯ ಸಿಫಾರಸುಗಳಲ್ಲಿ ಕೆಲವುಗಳನ್ನು ಪ್ರಾಂತಿಕ ಸರಕಾರದವರು ಜಾರಿಯಲ್ಲಿ ತರಲು ಯತ್ನಿಸಬಹುದು. ಹಿಂದುಸ್ಥಾನದ ನಾಣ್ಯದ ಚಲಾವಣೆಯ ಪರಿಸ್ಥಿತಿಯನ್ನು ವಿಚಾರಿಸಲು ಒಂದು ರೋಯಲ್ ಕಮಿಶನು ನೇಮಕಪಡುವದುಂಟು. ಇದರ ಚರ್ಚೆಯಲ್ಲಿ ಹಿಂದುಸ್ಥಾನದ ಹಿತಕ್ಕೆ ಬೇಕಾಗುವಂಥ ಸಂಗತಿಗಳು ಊಹಾಪೋಹಿಸಲ್ಪಡುವವು. ಬರುವ ಅಕ್ಟೋಬರದಲ್ಲಿ ಈ ಕಮಿಶನಿನ ಕೆಲಸವು ಪ್ರಾರಂಭವಾದೀತು. ಹಿಂದುಸ್ಥಾನದ ತರುಣರಿಗೆ ಲಷ್ಕರಿ ಶಿಕ್ಷಣದ ವಿಷಯವನ್ನು ವಿಮರ್ಶಿಸುವದಕ್ಕಾಗಿ ಏರ್ಪಟ್ಟಿರುವ ಕಮಿಟಿಯಲ್ಲಿ ಹಿಂದುಸ್ಥಾನದ ಲೋಕಮತವು ಪ್ರತಿಬಿಂಬಿತವಾಗುವಂತಿದೆ. ಸ್ವರಾಜ್ಯಪಕ್ಷದ ನಾಯಕರು ಇದರಲ್ಲಿ ಕೆಲಸ ಮಾಡಲು ಒಪ್ಪಿದ್ದು ಸಂತೋಷಕರ. ಆದರೆ ಅವರು ಯಾವ ತರದ ಸಲಹೆಗಳನ್ನು ಕೊಡುವವರಿದ್ದಾರೆಂಬುದು ಅವರ ಉದ್ದೇಶ ಪ್ರಕಟನೆಯ ಮೇಲಿಂದ ಗೊತ್ತಾಗುತ್ತದೆ. ಪಬ್ಲಿಕಸರ್ವಿಸ್ ಕಮಿಶನಿನ ಸಂಸ್ಥಾಪನೆಯ ವಿಷಯವು ಇನ್ನೂ ಹಿಂದುಸ್ಥಾನ ಸರಕಾರಕ್ಕೂ ಭಾರತ ಮಂತ್ರಿಗಳಿಗೂ ಪತ್ರವ್ಯವಹಾರ ರೂಪದಲ್ಲಿ ಇದೆ. ಆದರ ಸಂಪೂರ್ಣ ವಿವರವು ಹಿಂದಿನಿಂದ ಪ್ರಕಟವಾದೀತು.

ಸೀಕ ಜನರ ಧಾರ್ಮಿಕ ಪ್ರಶ್ನೆಯು ಈಗ ತಕ್ಕಮಟ್ಟಿಗೆ ಸುಧಾರಿಸುತ್ತ ಬಂದಿದೆ. ಈ ವಿಷಯದಲ್ಲಿ ಸೀಕರ ಧಾರ್ಮಿಕ ಭಾವನೆಗಳ ರಕ್ಷಣ ಉಂಟಾಗುವ ರೀತಿಯಲ್ಲಿ ಕಾನೂನಿನ ಸಹಾಯವುಂಟಾಗುವಂತೆ ಅವರಿಗೆ ಅನುಕೂಲತೆಯಾದೀತಲ್ಲದೆ, ಈ ಎಸೆಂಬ್ಲಿಯಲ್ಲಿ ಪಂಜಾಬ ಸರಕಾರದ ಕಾಯಿದೆಗೆ ಪ್ರವರ್ತಕವಾಗುವಂತೆ ಒಂದು ಬೀಲು ಬಂದೀತು. ಪಂಜಾಬದ ಪರಿಸ್ಥಿತಿಯು ಸರ್ ಮಾಲ್‌ಕಮ್ ಹೇಲಿಯವರು ಚಾತುರ್ಯದಿಂದ ಚಲೋದಾಗುತ್ತ ನಡೆದಿದೆ.

ನನ್ನ ಈ ಹೊತ್ತಿನ ಮುಖ್ಯ ಭಾಷಣದ ವಿಷಯವು ಇಂಗ್ಲೆಂಡಿನೊಳಗಿನ ನನ್ನ ಪ್ರಯಾಣವಾಗಿದೆ. ಅಲ್ಲಿ ಹೋದ ಬಳಿಕ ಲೋರ್ಡ ಬರ್ಕನ್‌ಹೆಡ್ಡ, ಮಂತ್ರಿ ಮಂಡಲ ಮತ್ತು ಇತರರು ಇವರೊಡನೆ ಹಿಂದುಸ್ಥಾನದ ವಿಷಯವಾಗಿ ಸಂಭಾಷಣಗಳನ್ನು ನಡಿಸಿ ಪಡೆದ ಅನುಭವವನ್ನು ನಿಮ್ಮೆದುರಿನಲ್ಲಿ ಈ ಹೊತ್ತು ನಾನು ಹೇಳಬೇಕಾದ್ದು ಅಗತ್ಯವಾಗಿದೆ. ನನಗೆ ಭಾರತ ಮಂತ್ರಿಗಳೊಡನೆ ಸಂಭಾಷಣದ ಅನೇಕ ಸಂದರ್ಭಗಳು ಒದಗಿದ್ದವು. ಮತ್ತು ಮುಖ್ಯ ಮಂತ್ರಿಗಳೊಡನೆಯೂ ಇತರ ಮಂತ್ರಿಮಂಡಲದೊಡನೆಯೂ ನಾನು ನನಗೆ ತಿಳಿದ ರೀತಿಯಲ್ಲಿ ಹಿಂದುಸ್ಥಾನದ ಸಂಗತಿಗಳನ್ನು ಪ್ರತಿನಿಧೀಕರಿಸಿರುವೆನು. ನನ್ನ ಭೇಟಿಯನ್ನು ಪಡೆದ ಬಳಿಕ ಆ ಭೇಟಿಯ ಅನುಭವವನ್ನು ಸಂಗ್ರಹಿಸಿಕೊಂಡು ಭಾರತ ಮಂತ್ರಿಗಳು ಹೌಸ್ ಒಫ್ ಲೋರ್ಡಿನಲ್ಲಿ ಹಿಂದುಸ್ಥಾನದ ರಾಜ್ಯಕಾರಭಾರವನ್ನು ಕುರಿತು ಮಹತ್ವದ ವಿಷಯವನ್ನು ಪ್ರಕಟಿಸಿರುವರು. ಭಾರತ ಮಂತ್ರಿಗಳ ಈ ಭಾಷಣದಿಂದ ಪಾರ್ಲಿಮೆಂಟಿನಲ್ಲಿ ಮತ್ತು ದೇಶದಲ್ಲಿ ಅಸಾಧಾರಣವಾದ ಜಾಗೃತಿಯು ಉಂಟಾಗಿದೆ. ಲೋರ್ಡ ಬರ್ಕನಹೆಡ್ಡರು ಭಾರತ ಮಂತ್ರಿತ್ವ ಸೂತ್ರಗಳನ್ನು ಕೈಕೊಂಡ ಬಳಿಕ ಅವರು ಹಿಂದುಸ್ಥಾನದ ವಿಷಯದಲ್ಲಿ ಮಾಡಿದ ಭಾಷಣವು ಇದೆಯಾಗಿದೆ. ಲೊ. ಬರ್ಕನಹೆಡ್ಡರ ಭಾಷಣವುಬಹಳ ಜಾಗ್ರತೆಯಿಂದ ಮಾಡಿದ್ದಾಗಿದೆ. ಅವರ ಇಂಥದ್ದೆ ಎಂಬುದಾಗಿ ಯಾವದೂ ಒಂದು ನಿರ್ಧಾರವನ್ನು ಹೇಳಲಿಲ್ಲ. ಆದರೆ ಅವರ ಭಾಷಣದಲ್ಲಿ ಹಿಂದೂಸ್ಥಾನದ ರಾಜಕೀಯ ಉನ್ನತಿಯ ಸಂಗತಿಗಳು ಪ್ರತಿಬಿಂಬಿತವಾಗಿವೆ ಎಂಬುದು ಸುಳ್ಳಲ್ಲ. ನಾನು ನಾಲ್ಕು ವರ್ಷಗಳ ತನಕ ಹಿಂದುಸ್ಥಾನದಲ್ಲಿ ಪ್ರತ್ಯಕ್ಷವಾಗಿ ಯಾವ ಅನುಭವಗಳನ್ನು ಪಡೆದಿದ್ದೆನೊ ಅವುಗಳನ್ನು ಅವರಿಗೆ ನಮ್ಮ ಭೇಟಿಯಲ್ಲಿ ತಿಳಿಸಿದ್ದರಿಂದ, ಅವುಗಳ ಆಧಾರದ ಮೇರೆಗೆ ಅವರು ಹಿಂದುಸ್ಥಾನದ ಪರಿಸ್ಥಿತಿಯನ್ನು ಚೆನ್ನಾಗಿ ಪರಿಶೀಲಿಸಿ ಆ ರೀತಿಯಿಂದ ನುಡಿದಿರುವರು. ಲೋರ್ಡ್ಸರ ಸಭೆಯಲ್ಲಿ ಮತ್ತು ಕೊಮನ್ಸರ ಸಭೆಯಲ್ಲೂ ಅವರ ಭಾಷಣಗಳು ನಡೆದವು. ಅವರ ಭಾಷಣದಲ್ಲಿ ಹಿಂದುಸ್ಥಾನದ ಮೇಲೆ ಸಹಾನುಭೂತಿಯು ಇದ್ದದ್ದು ವ್ಯಕ್ತವಾಗುತ್ತದೆ. ಅವರ ಭಾಷಣದೊಳಗಿನ ಮುಖ್ಯ ಸಂಗತಿಯನು ಪಾರ್ಲಿಮೆಂಟಿನಲ್ಲಿ ಹೆಚ್ಚಾಗಿ ಯಾರೂ ಅನಾದರಿಸಲಿಲ್ಲ. ಆದರೆ ಹಿಂದುಸ್ಥಾನದೊಳಗಿನ ಕೆಲವು ಮುಖಂಡರಿಗೂ, ಪತ್ರಿಕೆಗಳಿಗೂ ಅವರ ಭಾಷಣವು ಮಾನ್ಯವಾಗಲಿಲ್ಲವೆಂದು ಇಲ್ಲಿಯ ವೃತ್ತಾಂತವನ್ನು ನೋಡುವಾಗ ತಿಳಿದುಬರುತ್ತದೆ. ಪರಂತು ಅಂಥವರು ಭಾರತಮಂತ್ರಿಗಳ ಭಾಷಣದ ಮಹತ್ವವನ್ನಾಗಲಿ ಅಥವಾ ಬೆಲೆಯನ್ನಾಗಲಿ ತಿಳಕೊಳ್ಳಲಿಲ್ಲವೆಂದು ಹೇಳಬೇಕಾಗುತ್ತದೆ.

ಭಾರತ ಮಂತ್ರಿಗಳ ಭಾಷಣವು ಹಿಂದುಸ್ಥಾನಕ್ಕೆ ಪ್ರೋತ್ಸಾಹಕರವಾದ ಒಂದು ಸಂದೇಶವೆಂಬುದಾಗಿಯೆ ನಾನು ಭಾವಿಸುತ್ತೇನೆ; ಬ್ರಿಟಿಷ್ ಸಾಮ್ರಾಜ್ಯದೊಳಗೆ ಜವಾಬದಾರವಾದ ಸ್ವರಾಜ್ಯವನ್ನು ಪಡೆಯಲಿಚ್ಛಿಸುವರಾದರೂ ಹೀಗೆಯೆ ನೆನಸುವರು. ೧೯೧೭ನೆ ಇಸವಿಯಲ್ಲಿ ಪ್ರಕಟಪಡಿಸಿದ್ದಂತೆ ಮತ್ತು ೧೯೧೯ನೆಯ ಇಸವಿಯಲ್ಲಿ ಕಾನೂನುಮಾಡಿದ್ದಂತೆ ಇಂಗ್ಲಂಡಿನಲ್ಲಿ ಈಗಲೂ ಎಲ್ಲರೂ ಮುಂಚಿನ ಅದೆ ಅಭಿಪ್ರಾಯವಲ್ಲಿದ್ದಾರಲ್ಲದೆ ಅದನ್ನು ಅನ್ಯಥಾ ಭಾವಿಸುವದಿಲ್ಲ. ದುರಭಿಪ್ರಾಯವನ್ನಾಗಲಿ, ಸಂಶಯವನ್ನಾಗಲಿ ಇಟ್ಟುಕೊಳ್ಳದೆ ಎಲ್ಲರೂ ಸಂಪೂರ್ಣ ಸಹಕಾರವನ್ನು ಕೊಟ್ಟಲ್ಲಿ ಸ್ವರಾಜ್ಯದ ಕಡೆಗೆ ಹಿಂದೂಸ್ಥಾನದ ಪ್ರಗತಿಯುಂಟಾಗದೆ ಇರಲಿಕ್ಕಿಲ್ಲ. ಸಂಶಯದಿಂದ ಮತ್ತು ದುರಭಿಪ್ರಾಯದಿಂದ ದ್ವೇಷವೆ ವೃದ್ಧಿಂಗತವಾಗುವದಲ್ಲದೆ ಅನ್ಯ ಪ್ರಯೋಜನವಿಲ್ಲ. ಪಾರ್ಲಿಮೆಂಟಿನ ಈ ಸುಧಾರಣಾ ಕಾಯಿದೆಯು ಅಸ್ತಿತ್ವದಲ್ಲಿ ಬಂದಂದಿನಿಂದ ಮೊದಲು ಕೌನ್ಸಿಲಿನ ಹೊರಗಿನಿಂದ ಅನಂತರ ಒಳಗಿನಿಂದ ವಿರೋಧವು [illegible]ರುವುದರಿಂದ ಇದರ ಗುಣವೇನೆಂಬುದೆ ಇನ್ನೂ ಯಾರಿಗೂ ತಿಳಿದಿಲ್ಲ. ಈ ಕಾನೂನಿನಲ್ಲಿ ಅನೇಕ ಸ್ಖಲನಗಳಿರಬಹುದು. ಮಾತ್ರವಲ್ಲ ನಿಸ್ಸಂಶಯವಾಗಿ ಆ ಪ್ರಕಾರ ಅನೇಕ ಸ್ಖಲನಗಳೂ ಇದ್ದಾವೆ. ಆದರೆ ಅಂಥ ಪ್ರಮಾದಗಳು ಬೇಕೆಂದು ಸಂಭವಿಸಿದವಲ್ಲ. ಹಿಂದಿ ಜನಾಂಗದ ಮಹತ್ವಾಕಾಂಕ್ಷೆಗಳಿಗೆ ಮೂರ್ತ ಸ್ವರೂಪವನ್ನು ಕೊಡುವ ಆತುರದಲ್ಲಿ ಅಂಥ ಪ್ರಮಾದಗಳು ಸಂಭವಿಸಿ ಬಿಡುತ್ತವೆ. ಹೊರತು ಬೇರೆ ಕಾರಣವಿಂದಲ್ಲ.

ಮಡಿಮನ್ ಕಮಿಟಿಯ ರಿಪೋರ್ಟಿನ ವಿಷಯವು ಈ ಮೊದಲು ಚರ್ಚಿಸಲ್ಪಟ್ಟಿದೆ. ಈ ಸುಧಾರಣೆಯ ಸ್ವರೂಪವನ್ನೆ ಬದಲಾಯಿಸಲು ಅದು ನೇಮಕಪಟ್ಟದ್ದಲ್ಲ. ಆದರೆ ಮುಂಚೆ ಕೆಲವು ಬದಲಾವಣೆಗಳನ್ನು ಮಾಡಲು ಸಾಧ್ಯವೊ ಹೇಗೆ ಎಂಬುದನ್ನು ತಿಳಕೊಳ್ಳಲು ಅದು ನೇಮಕಪಟ್ಟಿತ್ತು. ಅದರ ಅಲ್ಪ ಸಂಖ್ಯಾಕರಾದ ಸಭಾಸದರ ಅಭಿಪ್ರಾಯವು ಉಜ್ಜೀವಿತವಾಗಬಹುದೆ ಎಂದು ಸುಮ್ಮಗೆ ಯಾರೂ ವೃಥಾ ಆಸೆಯನ್ನು ಕಟ್ಟಿಕೊಳ್ಳಬಾರದು. ೧೯೨೯ರಲ್ಲಿ ಮುಂದಿನ ಹಕ್ಕುಗಳಿಗಾಗಿ ಪುನಃ ವಿಚಾರಣೆಯನ್ನು ಮಾಡಬಹುದಲ್ಲ. ಅದಕ್ಕಿಂತ ಮುಂಚೆ ಅಲ್ಲ. ಪ್ರಾಂತಿಕ ಸ್ವರಾಜ್ಯದ ಸುಧಾರಣೆಯು ಬಹು ಜವಾಬದಾರಿಕೆಯ ಮೇಲೆ ಹೊಂದಿಕೊಂಡಿರುವದರಿಂದ ಅದಕ್ಕಿಂತ ಮುಂಚೆ ತನಖಿ ನಡಿಸಲಾಗುವದಿಲ್ಲ. ಎಂಬುದಾಗಿ ಭಾರತ ಮಂತ್ರಿ ಮಂಡಳದ ಮುಖ್ಯಾದಿಗಳ ಅಭಿಪ್ರಾಯವಿರುತ್ತದೆ.

— ಪ್ರಕಟಣೆ. —

ತರಬೇತು ಹೊಂದಿದ ಮತ್ತು ಹೊಂದದ ಅನೇಕ ಉಮೇದ್ವಾರರ ಮನವಿಗಳು ಉಪಾಧ್ಯಾಯರ ಕೆಲಸಕ್ಕೆ ಬರುತ್ತಿವೆ. ತತ್ಕಾಲ ಮತ್ತು ಸ್ವಲ್ಪ ಮುಂದಕ್ಕೆ ಖಾಲಿಬೀಳುವ ಇಸಮುಗಳು ಇರುವುದಿಲ್ಲ.

ವಿದ್ಯಾಪ್ರಚಾರವನ್ನು ಶಾಲೆಗಳು ಇಲ್ಲದ ಗ್ರಾಮಗಳಲ್ಲಿ ಶಾಲೆಗಳನ್ನು ಏರ್ಪಡಿಸಿ ಮುಂದರಿಸುವಂತೆ ಸರಕಾರದವರು ಕೈಕೊಂಡಿರುವರು. ಶಾಲೆಗಳಿಗೆ ಕಟ್ಟೋಣಗಳನ್ನು ಒದಗಿಸಿಕೊಳ್ಳುವುದು ಕಷ್ಟಕಾಣುತ್ತದೆ. ಕಟ್ಟೋಣಗಳನ್ನು ಒದಗಿಸಿಕೊಡುವ ಉಪಾಧ್ಯಾಯರ ಅರ್ಜಿಗಳಿಗೆ ಹೆಚ್ಚಿಗೆ ಗಮನ ಕೊಡುತ್ತಿತ್ತು. ಮುಂದಕ್ಕೂ ಕೂಡಾ ಅದೇ ರೀತಿ ಗಮನಕೊಡಲಾದೀತು.

ಹೊಸ ಶಾಲೆಗಳನ್ನು ಏರ್ಪಡಿಸಿದ್ದರಿಂದ ಹಳೇ ಶಾಲೆಗಳಲ್ಲಿ ಮಕ್ಕಳ ಸಂಖ್ಯೆಯು ಕಡಿಮೆಯಾಗಿದೆ. ಆದಕಾರಣ ಹಳೇ ಶಾಲೆಗಳ ಉಪಾಧ್ಯಾಯರ ಸಂಖ್ಯೆಯು ಜಾಸ್ತಿಯಾಗಿ ಕಂಡುಬರುತ್ತದೆ.

ಅದುದರಿಂದ ಮುಂದಕ್ಕೆ ಹೆಚ್ಚಿನ ಉಪಾಧ್ಯಾಯರು ಬೇಕೆಂತಾದರೆ ಬಂದಿರುವ ಅರ್ಜಿಗಳನ್ನು ಸರಿಯಾಗಿ ಆಲೋಚಿಸಲಾದೀತು. ಆ ತನಕ ಅರ್ಜಿಗಳು ಆಫೀಸಿನಲ್ಲಿ ಫೈಲುಮಾಡಿ ಇಡೋಣವಾದಾವು.

ಇನ್ನು ಮುಂದೆ ತಲ್ಪುವ ಅರ್ಜಿಗಳು ರಿಜಿಸ್ಟ್ರಿಮಾಡಿ ಇಡಲ್ಪಡುವವು ಹೊರತು ಪ್ರತಿಯೊಬ್ಬ ಅರ್ಜಿದಾರಗೆ ಉತ್ತರಕೊಡುವರೇ ಸಾಧ್ಯವಿಲ. ಉತ್ತರ ಅಪೇಕ್ಷಿಸುವದಾದರೆ ಒಂದಾಣೆ ಚೀಟನ್ನು ಅಂಟಿಸಿ ಬರಕೊಳ್ಳತಕ್ಕದ್ದು.

ಇನ್ನೂ, ನಡುಗೋಡು, ಬಾರ್ಯ, ಕಾಡಬೆಟ್ಟು, ಬೋಳಿಯಾರು ಗ್ರಾಮಗಳಲ್ಲಿ ಶಾಲೆಗಳಾಗಬೇಕಾಗಿ ಕಟ್ಟೋಣಗಳು ಒದಗದೇ ಇರುವದರಿಂದ ಅಕ್ಟಿಂಗ್ ಉಪಾಧ್ಯಾಯರಾಗಲಿ ಯಾ ಉಪಾಧ್ಯಾಯ ಕೆಲಸವನ್ನು ಅಪೇಕ್ಷಿಸುವ ಇತರರಾಗಲಿ ಕಟ್ಟೋಣ ಅನುಕೂಲಿಸಿ ಬರಕೊಂಡಲ್ಲಿ ಅವರ ಮನವಿಗೆ ಪ್ರಥಮತಃ ಗಮನಕೊಡಲಾದೀತು.

ಮಂಗಳೂರು,
15—8—'25.

M. R. PUNJA,
President,
Taluk Board, MANGALORE.

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪ್ಯಾ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪ್ಯಾ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ!
ದಶಮೂಲ ಸುಖಪ್ರದಔಷಧಿ!
ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂದೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.
ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.
ಹೆಚ್ಚಿನ ಮಾಹಿತಿಗೆ “ಆರ್ಷ ಚಿಕಿತ್ಸಾರಹಸ್ಯ” ಎಂಬ ಪುಸ್ತಕಕ್ಕೆ ಬರಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದಭೂಷಣ,
ಮಂಗಳೂರು ದ. ಕನ್ನಡ.

ಆರೋಗ್ಯ ಚಂದ್ರಿಕೆ.

ಸಂಪಾದಕರು: ಡಾಕ್ಟರ್ ಯು. ರಾಮರಾವ್, ಎಲ್. ಎಮ್. ಸಿ. ಎಫ್. ಎಮ್. ಯು. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಚಿಕಿತ್ಸದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವುದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ [illegible] ವರ್ಷಕೆ ರೂ. ೧—೮—೦; ಬಿಡುಪತ್ರಿಕೆ ಒಂದಕ್ಕೆ ರೂ. ೦—೨—೦. ಹಿಂದಿನ ಸಂಚಿಕೆಗಳು ಕೂಡ ದೊರಿಯುವವು.

ಚಂದಾದಾರರಾಗುವವರು ವಿ. ಪಿ. ಮೂಲಕವಾಗಿ ತರಿಸಿಕೊಳ್ಳುವುದಕ್ಕಿಂತಲೂ ಹಣವನ್ನು ಮುಂಗಡವಾಗಿ ಕಳುಹಿಸುವುದು ಲಾಭಕರ. ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು ‘ಆರೋಗ್ಯ ಚಂದ್ರಿಕೆ’ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು.

ಪತ್ರವ್ಯವಹಾರಕ್ಕೆ: ‘ಆರೋಗ್ಯ ಚಂದ್ರಿಕೆ’
೩೨೩ ತಂಬುಚೆಟ್ಟಿ ಬೀದಿ, ಮದ್ರಾಸ್.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.
Authorised and fully paid
up Capital Rs. 300,000—0—0
Reserve and other sinking
Funds „ 259,000—0—0

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
ಅಧಿಕಾರಗೊಳಿಸಲ್ಪಟ್ಟ, ಪೂರ್ಣವಾಗಿ
ತೆತ್ತ ಮೂಲಧನವು ರೂ. 300,000—0—0
ಕ್ಷೇಮನಿಧಿ ಮತ್ತು ಇತರ ಫಂಡುಗಳು
259,000—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1925.

K. Venkat Rao,
Secretary.

‘ಸಾರಸ್ವತಾಸವ.’

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ದೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ, ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಪಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೨೫೦ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ೬ಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೨೫ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲ ಪಂಡಿತರು,

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಪ್ಪ, ಸೋಡಾ ಫಾಕ್ಟರಿ,
ಮಂಗಳೂರು ಟವನಿಗೆ ಮಾತ್ರ.

ಪ್ರಖ್ಯಾತಿಪಟ್ಟ ಮಂಗಳೂರು ನಸ್ಯ.

ನಮ್ಮಲ್ಲಿ ಉತ್ತಮವಾದ ಹೊಗೆಸೊಪ್ಪಿನಿಂದಲೂ, ಸುಮಾರು ೫೦ ವರ್ಷಗಳ ಅನುಭವದಿಂದಲೂ ತಯಾರಿಸಿದ ನಸ್ಯವು ಯಾವಾಗಲೂ ರಖಂ ಆಗಿಯೂ ಚಿಲ್ಲರೆ ಆಗಿಯೂ ಮಾರಾಟಕ್ಕೆ ದೊರೆಯುತ್ತದೆ.

I ಕ್ಲಾಸ್ ರಾತ್ಲು 1ಕ್ಕೆ ರೂ. 3—0—0.
II „ „ „ 2—12—0.

ವಿ. ಪಿ. ಚಾರ್ಜು ಅಲಾಹಿದ. ಸ್ಯಾಂಪಲು ಅಪೇಕ್ಷಿಸುವವರು ೨ ಆಣೆ ಸ್ಟಾಂಪು ಕಳುಹಿಸಲಿ.

ವಿಳಾಸ:—
ಎಮ್. ಎಸ್. ಬಂಡಾರ್ಕಾರ್ ಎಂಡ್ ಸನ್ಸ್,
ನಸ್ಯ ವ್ಯಾಪಾರಿಗಳು,
ರಥಬೀದಿ, ಮಂಗಳೂರು.

ಬಂದು ನೋಡಿರಿ! ತಿಂದುನೋಡಿರಿ!
ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ
ಪದಕವನ್ನು
ಬಹುಮಾನವಾಗಿ ಪಡೆದಿರುವ
ಎಸ್. ಪಿ. ಆಚಾರ್ಯ
ಇವರಿಂದ ತಯಾರಿಸಲ್ಪಟ್ಟ
ಉಪ್ಪಿನಕಾಯಿಗಳನ್ನು
ಬಂದು ನೋಡಿರಿ! ತಿಂದು ನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ ಕುಂಭಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ
ಬಂದು ನೋಡಿರಿ! ತಿಂದು ನೋ

‘ಇಂಡಿಯನ್ ಸ್ವೀಟ್‌ಮೀಟ್ ಮಾರ್ಟ್.

ಮನೋಲ್ಲಾಸಿನಿ ಕಾಫಿ ಕ್ಲಬ್, ಮಾರ್ಕೆಟು ರೋಡು, ಮಂಗಳೂರು.
ಅಥವಾ
‘ಸದಾನಂದ ಕಾಫಿ ಕ್ಲಬ್ ರಥಬೀದಿ, ಮಂಗಳೂರು

“ಬಹು ದಿವಸಗಳಿಂದ ಪ್ರಸಿದ್ಧವಾಗುತ್ತಿರುವ ಔಷಧ!”

ರಕ್ತ ಶುದ್ಧಿ
ವಜ್ರಾಂಗ-ಬಿಂದು
ವೀರ್ಯ ವೃದ್ಧಿ ಕಾರಕ

ವಜ್ರಾಂಗಬಿಂದುವೆಂಬ ಈ ಮಹೌಷಧಿಯನ್ನು ಅನೇಕ ಪರ್ವತಗಳಲ್ಲಿ ಉತ್ತಮೋತ್ತಮವಾದ ಮತ್ತು ಅವಶ್ಯವಾಗಿ ಗುಣ ಕೊಡುವಂತಹ ವನಸ್ಪತಿಗಳ ಅರ್ಕದಿಂದ ಉಪಯುಕ್ತವಾದ ಮತ್ತು ಉಚ್ಚತರದ ಭಸ್ಮಗಳ ಮಿಶ್ರಣಮಾಡಿ ಯಾಂತ್ರಿಕ ಸಹಾಯದಿಂದ ಸಿದ್ಧಪಡಿಸಿರುತ್ತದೆ. ಈ ವಜ್ರಾಂಗಬಿಂದುವಿನ ಸೇವನೆಯಿಂದ ಕೆಳಗೆ ಬರೆದ ರೋಗಗಳು ಗುಣವಾಗಿ ಹೊಸ ಮನುಷ್ಯನಾಗುತ್ತಾನೆಂದರೆ ಅತಿಶಯೋಕ್ತಿಯಾಗಲಾರದು.

ಈ ಮಹೌಷಧಿಯ ಸೇವನೆಯಿಂದ, ವಾತ, ಪಿತ್ತ, ಕಫ ಈ ಮೂರು ದೋಷಗಳಿಂದ ಉತ್ಪನ್ನವಾಗುವ ರೋಗಗಳು ಗುಣವಾಗುವದಲ್ಲದೆ, ಸ್ವಪ್ನಜನ್ಯ, ಧಾತುಪಾತ ನಪುಂಸಕತ್ವ, ಪರಮಾ ಮತ್ತು ಗರಮಿ ಇವುಗಳ ಸಮೂಲ ನಾಶವಾಗುತ್ತದೆ. ಬಹು ದಿವಸದಿಂದ ಮೈಯಲ್ಲಿ ಅಂಟಿಕೊಂಡ ಕೆಡಕಿಯಂತಹ ಒಂದೇ ವಾರದಲ್ಲಿ ಗುಣವಾಗುವದು. ಲಘುವಿಗಿಂತ ಮೊದಲು ಅಥವಾ ಕಡೆಗೆ ಸ್ರಾವವಾಗಿ ಹೋಗುವ ಧಾತು ಬಂದಾಗುತ್ತದೆ. ತಿಂದ ಅನ್ನವು ಜೀರ್ಣವಾಗಿ ಮಲವು ಸರಿಯಾಗಿ ಹೋಗುವದು ಯಾವದೇ ಕಾರಣದಿಂದ ಬಂದ ಅಶಕ್ತತೆಯೂ ಕಣ್ಣಿಗೆ ಕತ್ತಲೆ ಬಂದಂತಾಗಿ [illegible] ಬರುವದು, ಕೈಕಾಲುಗಳು ಉರಿಯುವದು, ಮುಂತಾದ ಸಕಲ ವಿಕಾರಗಳೂ ನಾಶಹೊಂದುತ್ತವೆ. ವೀರ್ಯವೃದ್ಧಿ, ರಕ್ತಶುದ್ಧಿಗಳಾಗಿ ಮನುಷ್ಯನು ಬಲವಂತನಾಗುತ್ತಾನೆ. ಪೂರ್ಣ ಗುಣ ಬರಬೇಕಾದರೆ ಮೂರು ಬಾಟ್ಲಿಗಳು ಬೇಕು.

೧ ಬಾಟ್ಲಿಗೆ ರೂ. ೧—೪—೦. ೩ ಬಾಟ್ಲಿಗಳಿಗೆ ರೂ. ೩—೪—೦. ೧೨ ಬಾಟ್ಲಿಗಳಿಗೆ ರೂ. ೧೦—೦—೦.

ಇದರ ಹೊರತು ಒಂದು ಬಾಟ್ಲಿಯು ಉಚಿತ. ಟಪ್ಪಾಲ ಪ್ಯಾಕಿಂಗ ಖರ್ಚು ಪ್ರತ್ಯೇಕ. ಒಮ್ಮೆಯೇ ಹೆಚ್ಚಿಗೆ ಬಾಟ್ಲಿಗಳನ್ನು ತರಿಸಿಕೊಂಡರೆ ಟಪ್ಪಾಲು ಖರ್ಚು ಹೆಚ್ಚಿಗೆ ಬೀಳಲಾರದು. ಏಜಂಟರಾಗಲಪೇಕ್ಷಿಸುವವರು ಪತ್ರವ್ಯವಹಾರ ನಡಿಸಿ, ಖುಲಾಸೆ ತಿಳಕೊಳ್ಳಬಹುದು. ಟಪ್ಪಾಲ ಮತ್ತು ಪ್ಯಾಕಿಂಗ ಖರ್ಚು ಬೇರೆ ಬೀಳುವುದು. ಅನುಪಾನ ಪತ್ರವು ಬಾಟ್ಲಿಯ ಸಂಗಡಲೇ ಕಳಿಸಲ್ಪಡುವುದು.

ಪತ್ತೆ. ಮ್ಯಾನೇಜರ, ಕೆ. ಎಮ್. ಹನುಮಾನ ಪ್ರಸಾದಿಕ ಕಂಪೆನಿ,
ಮು. ಪೋ. [illegible] (ಜಿಲ್ಹಾ ಬೆಳಗಾಂವ.)

ಜ್ಯೋತಿಷ್ಯ ಸಂಗ್ರಹ.

(1) ಬೃಹಜ್ಜಾತಕ ... ...
(2) ಉಮಾಮಹೇಶ್ವರ ಸಂವಾದ ಎಂಬ ಜ್ಯೋತಿಷ್ಯ ಕಾಲಚಕ್ರ
(3) ಕೇರಳ ಪ್ರಶ್ನೆ ... ...
(4) ಪ್ರಶ್ನೋತ್ತರ ರತ್ನಮಾಲಿಕಾ ... ...
(5) ನವನೀತಾರಿಷ್ಟರು ... ...
(6) ಷಟ್ಪಂಚಾಶತ್ ಗ್ರಂಥ ... ...
(7) ನಕ್ಷತ್ರ ಚೂಡಾಮಣಿ ಗ್ರಂಥ ... ...
(8) ಮುಹೂರ್ತಪದವೀಗ್ರಂಥ ... ...
(9) ಅಷ್ಟದಿಕ್ಪಾಲಕ ಮಂಗಳಾಷ್ಟಕಗಳು ... ...
(10) ಕಾಲನಿರ್ಣಯಾಭ್ಯೋಯಂ ಗ್ರಂಥ ... ...
(11) ಸದ್ವ್ಯಾಖ್ಯಾನ ಕಾಲಾಮೃತ... ... ...

— ಪ್ರಸಂಗದ ಪುಸ್ತಕಗಳು. —

(1) ಸೇತು ಬಂಧನ ... ...
(2) ವಸಿಷ್ಠ ಪುರಾಣ ... ...
(3) ಇಂದ್ರಜೀತು ಕಾಳಗ ... ...
(4) ಚಂದಭೀಮ ... ...
(5) ಮೈದುನರಾಮನ ಚರಿತ್ರೆ ... ...
(6) ಭಾಮಿನಿ ಷಟ್ಪದಿ ಚೋರ ಕಥೆ ... ...
(7) ಕುಮಾರ ರಾಮನ ಕಥೆ ... ...
(8) ಕೃಷ್ಣದಾನಾಮೃತ ... ...
(9) ಶ್ರೀಕೃಷ್ಣ ಸತ್ಯಭಾಮ ಸಂವಾದ ... ...
(10) ಚಿತ್ರಕೇತು ರಾಜನ ಕಥೆ ... ...
(11) ಬಕಾಸುರ ವಧೆ ... ...
(12) ಬಾಣಾಸುರನ ಕಥೆ ... ...
(13) ರಂಭಾಶುಕ ಸಂವಾದ ... ...
(14) ರುಕ್ಮಿಣೀ ಪರಿಣಯ ... ...
(15) ರಾವಣೋದ್ಭವ ಯಕ್ಷಗಾನ ... ...
(16) ಸಭಾ ಲಕ್ಷಣವು ... ...
(17) ಶ್ರೀ ಕೃಷ್ಣದೀಕ್ಷಾಸ್ತವೇದ ಕಥಾ ... ...
(18) ಚಂದ್ರಮೌಳಿ ಕಾಳಗ ... ...
(19) ಚಿತ್ರವಿಚಿತ್ರ ಕಾಳಗ ... ...
(20) ಯಕ್ಷಗಾನ ಸಾರಂಗಧರನ ಕಥೆ ... ...
(21) ,, ಶನಿದೇವರ ಮಹಾತ್ಮೆ ... ...
(22) ,, ಹರಿಶ್ಚಂದ್ರನ ಕಥೆ ... ...
(23) ಯಕ್ಷಗಾನ ಲಕ್ಷ್ಮಣ ಕಥೆ ... ...
(24) ,, ಚೋರ ಕಥೆ ... ...
(25) ,, ಪಾರ್ವತಿ ಶಾರದಂಬ ಕಥೆ ... ...
(26) ,, ಗೋವಿನ ಚರಿತ್ರೆ ... ...
(27) ,, ದುಶ್ಯಾಸನ ಕಥೆ ... ...
(28) ,, ಸಾನಂದ ಗಣೇಶ್ವರ ಕಥೆ ... ...
(29) ,, ಅಂಗದ ಸಾಧನ ... ...

— ಭಜನೆಯ ಪುಸ್ತಕಗಳು. —

(1) ಉಡುಪಿಕ್ಷೇತ್ರ ಮಹಾತ್ಮೆ ... ...
(2) ಹನುಮದ್ರಾಮಾಯಣ ... ...
(3) ಅಧ್ಯಾತ್ಮ ವಿಚಾರ ... ...
(4) ಭಕ್ತಿಮಹಿಮೆ ... ...
(5) ಪ್ರಬಂಧ ಮುಕ್ತಾವಳಿ ... ...
(1) ಹರಿಕೀರ್ತನಾಮೃತಸಾರ ... ...
(2) ಹರಿನಾಮಾಮೃತಂ. ... ...
(3) ರುಕ್ಮಿಣೀ ಕಲ್ಯಾಣ ... ...
(4) ಮಂಗಳ ಗೌರೀಹಾಡು ... ...
(5) ಉದ್ವಾಳೀಕನ ಹಾಡು ... ...
(6) ಯಕ್ಷಗಾನ ಗೀಗೀ ಹಾಡು ... ...
(7) ಕನಕದಾಸ ಕಬೀರದಾಸರ ಕೀರ್ತನೆಗಳು ...
(8) ಬೀಗರ ಹಾಡು ... ...
(9) ಭಜನೆಯ ಪದಗಳು ... ...

— ವಿವಿಧ ಪುಸ್ತಕಗಳು. —

(1) ಸದಾಚಾರ ವಿವೇಚನೆ ... ...
(2) ಗೋಪಾಲಕೃಷ್ಣ ಗೋಕಲೆ ... ...
(3) ಶ್ರೀಕೃಷ್ಣ ಸೇವಾವ್ರತಂ ... ...
(4) ಪತ್ಯಾಕ್ಯಾತ ಭಾಷ್ಯ ... ...
(5) ಶ್ರೀ ಶ್ರೀಮಹಾ ಭಾಗವತ ... ...
(6) ಉದ್ಧಯನ ಚರಿತ್ರೆ ... ...
(7) ಮಧ್ವಾಚಾರ್ಯರು (ಶ್ರೀಮಾನ್) ... ...
(8) ಯತಿರಾಜವಂಶತಿ ... ...
(9) ಪರಮಾರ್ಥಶತಕಂ ... ...
(10) ಭಕ್ತಿಸುಮಾಂಜಲಿ ... ...
(11) ಸತ್ಯರಾಜ ಪೂರ್ವದೇಶ ಯಾತ್ರೆಗಳು ...
(12) ಕಾಲನಿರ್ಣಯಾಖ್ಯಾನ ... ...
(13) ಅರೇಬಿಯನ್ ನಾಯ್ಟ್ಸ 1000 ಪುಟಗಳ ಮೇಲೆ ಇವೆ.

ಪುಸ್ತಕಗಳು ದೊರೆಯುವ ಸ್ಥಳ :— ಶಾರದಾ ಛಾಪಖಾನೆ,
ರಥ ಬೀದಿ, ಮಂಗಳೂರು.

ಮನುಷ್ಯರಿಗೆ ಮತಿಸ್ಥಿತಿಗಿಂತಲೂ ಹೆಚ್ಚಾದ್ದು ಯಾವುದೂ ಇಲ್ಲ.

ಜನ್ಮದಲ್ಲಿ ಕಷ್ಟಸುಖಗಳು ಅನುಭವಿಸುವುದರಲ್ಲಿ ಅಪಜಯವಿಲ್ಲದೇ ಧನ್ಯನಾಗುವುದಕ್ಕೆ ಮುಖ್ಯ ಸಾಧನ ಮತಿಸ್ಥಿತಿಯೇ ರಾಮಬಾಣವೆಂದು ಹೇಳಬಹುದು.

ಆದರೆ ಪ್ರಸ್ತುತ ನಾವು ಅನುಭವಿಸುವ ಚಪಲಚಿತ್ತದಲ್ಲಿ ಮತಿಸ್ಥಿತಿ ಉಂಟಾಗುವುದು ಸಾಧ್ಯ ಹೇಗೆ? ನಿಮಗೆ ಯಾವವಿಧವಾದ ಚಪಲಚಿತ್ತವಿದ್ದಾಗ್ಯೂ, ನಮ್ಮ ಆತಂಕನಿಗ್ರಹ ಮಾತ್ರೆಗಳನ್ನು ಉಪಯೋಗಿಸಿರಿ. ಈ ಮಾತ್ರೆಗಳೇ ತನ್ನ ಮೆದುಳಲ್ಲಿರುವ ದುರ್ಬಲವನ್ನು ನಿವಾರಿಸಿ, ದೃಢಚಿತ್ತವನ್ನುಂಟುಮಾಡುವುದು.

ಈ 32 ಮಾತ್ರೆಗಳುಳ್ಳ ಡಬ್ಬಿ ಒಂದಕ್ಕೆ ರೂಪಾಯಿ ಒಂದು ಮಾತ್ರ.

ಹಿಂದೂದೇಶದಲ್ಲಿಯೂ ಮತ್ತು ಇತರ ದೇಶಗಳಲ್ಲಿಯೂ ಪ್ರತಿಯೊಂದು ಗೃಹದಲ್ಲಿ ಪ್ರಯೋಜನಕರವಾದ ಒಂದು ಪುಸ್ತಕ ಇರುವುದು. ನಿಮಗೆ ಗೊತ್ತುಂಟೋ? ಆ ಪುಸ್ತಕದ ಹೆಸರೇ

"ಕಾಮಶಾಸ್ತ್ರ."

ನೀವು ಇದುವರೆವಿಗೂ ಆ ಪುಸ್ತಕದಲ್ಲಿ ವಿವರಿಸಿದ ಘನ ವಿಷಯಗಳನ್ನು ನೋಡದೇ ಇದ್ದಪಕ್ಷಕ್ಕೆ, ಈ ದಿನ ನಮಗೆ ಒಂದು ಕಾರ್ಡು ಬರೆದರೆ ಪೋಸ್ಟು ಚಾರ್ಜು ನಿಮಗಿಲ್ಲದೇನೇ, ಆ ಪುಸ್ತಕವನ್ನು ಕಳುಹಿಸುತ್ತೇವೆ.

ಆತಂಕನಿಗ್ರಹ ಔಷದಾಲಯ,
ನಂಬ್ರ 26, ಬ್ರಾಡ್ವೆ, ಮದರಾಸು.

Agents:—
Messrs RAPHAEL & Co.,
MANGALORE.

ದಕ್ಷಿಣ ಕನ್ನಡ ಜಿಲ್ಲೆಯ

ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

—ಗೋಡೆಗೆ ತಗಲಿಸುವ
ಹೊಸ ನಮೂನೆಯ—



ಟಿಕ್—ಟಾಕ್

ಎಂಬ ಈ ಗಡಿಯಾರಗಳು ಜರ್ಮನೀ ದೇಶದಲ್ಲಿ ತಯಾರಿಸಿದ್ದು. ಇವು ಕಂಠಾರು ಘಂಟೆಯನ್ನು ತೋರಿಸುವವು. ಇವಕ್ಕೆ ಬೀಗ ಕೊಡಬೇಕಾದಿಲ್ಲ. ಇದರಲ್ಲಿ ಕಾಣುತ್ತಿರುವ ಗುಂಡನ್ನು ಮೇಲಕ್ಕೆ ಎಳೆದರೆ ಸಾಕು. ತನ್ನ ಷ್ಟಕ್ಕೆ ತಾನೇ ಟಿಕ್—ಟಾಕ್ ಎಂಬ ಶಬ್ದವನ್ನು ಮಾಡುತ್ತಾ ಸರಿಯಾದ ಕಾಲವನ್ನು ತೋರಿಸುವದು. ಇದು ನೋಡುವುದಕ್ಕೆ ಬಹು ಲಕ್ಷಣವಾಗಿರುವುವು.

ಕ್ರಯ 1ಕ್ಕೆ ರೂ. 3—0—0

ಪೀಟರ್ ವಾಚ್ ಕಂಪೆನಿ
ಪೋಸ್ಟ್ ಬಾಕ್ಸ್ ನಂ. 27, ಮದ್ರಾಸ್.

೧,೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು
— ತೆಗೆದುಕೊಳ್ಳಿರಿ. —

REGISTERED
TRADE
MARK

ಇದರ ಸೇವನೆಯಿಂದ ವೀರ್ಯವು ನೀರಿನಂತೆ, ಅಥವಾ ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಭೋಗಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನು ದಾರ್ಢ್ಯತೆಯನ್ನೂ ಉಂಟುಮಾಡುವುದು. ಕೈಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಾಮಿಸ್ರಿ ಎಂಬುವದು ಕಾಬೂಲ್ ಕಂದಹಾರ ಪ್ರಾಂತ್ಯಗಳಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹಾಶಯರು ತಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರಿಕಾ, ಬರ್ಮ, ಪಿನಾಂಗ್ ಸಿಂಗಪೂರ್, ಸಿಲೋನ್ ಮತ್ತು ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. ೧ ಡಬ್ಬಿಯನ್ನು ೧೫ ದಿವಸ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. ೨ ಯಾ ೩ ಡಬ್ಬಿಗಳು ಜನ್ಮಾಂತ್ಯದವರೆಗೂ ಪೂರ್ಣವಾಗಿ ಗುಣವನ್ನು ಮಾಡುವವು. ಅನುಪಾನ ಪತ್ರಿಕೆಯು ಡಬ್ಬಿಯ ಸಂಗಡವೇ ಇರುತ್ತೆ. ಹೆಸರು ವಿಳಾಸಗಳನ್ನು ಚೆನ್ನಾಗಿ ತಿಳಿಯುವ ಹಾಗೆ ವಿವರವಾಗಿ ಬರೆಯಬೇಕು. ಕ್ರಯ ಡಬ್ಬಿ ೧ಕ್ಕೆ ರೂ. ೨—೦—೦. ಟಪ್ಪಾಲು ಖರ್ಚು ೧ ರಿಂದ ೩ ಡಬ್ಬಿಗಳವರೆಗೆ ೦—೮—೦. ಏಜಂಟರು ಎಲ್ಲಾ ಸ್ಥಳಗಳಲ್ಲಿಯೂ ಆವಶ್ಯವಾಗಿ ಬೇಕಾಗಿರುತ್ತೆ. ರೂಲ್ಸ್ ತರಿಸಿ ನೋಡಿಕೊಳ್ಳಬಹುದು.

ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಿರಿ.

ಟೆಲಿಗ್ರಾಫ್ ಅಡ್ರೆಸ್, "ಮಿಸ್ರಿ" ಮಂಗಳೂರು ಸಿಟಿ. | ಡಿ. ಮನ್ನಾಲಾಲ್, ಡಿಸ್ಟ್ರಿಕ್ಟ್ ಇನ್ಸ್ಪೆಕ್ಟರ್, ಸಾಲಾಮಿಸ್ರಿ ಮುರಬ್ಬ ಡಿಪೋ, ಮಂಗಳೂರು ಸಿಟಿ.

---

11 ಮಣಿಗಳಿದ್ದು ಬ್ರಿಜ್ ಮೂವ್ಮೆಂಟ್.

22 ಕೆರೆಟ್ ರೋಲ್ಡ ಗೋಲ್ಡ ರಿಸ್ಟ್‌ವಾಚ್.

ಈ ವಾಚ್ ಎಂಟಾಣೆ ಪಾವಲಿಯಷ್ಟು ಸಣ್ಣದಾಗಿ ಬಹು ಚಲೋದಾದ ಇನೆಮಲ್ ಡಾಯಲ್ ಇದ್ದು ಬಹು ಉತ್ತಮವಾಗಿದೆ. 5 ವರ್ಷದಗ್ಯಾರಂಟಿ ಇದೆ. ಕ್ರಯ ರೂ. 12/8

18 ಕೆರೆಟು ಇಲೆಕ್ಟ್ರೊ ರೋಲ್ಡ ಗೋಲ್ಡ ವಾಚ್ ಕ್ರಯ ರೂ. 7—0—0. "ದಿ" ಟ್ರ್ಯಾಮ್‌ಪೀಸ ರೂ. 2-4-0.

9 ಕಾರಾಟ್ 8 ಮಣಿಗಳ ವಾಚ್ 1ರ ಕ್ರಯ 23—0—0.
14 ,, ,, ,, 26—0—0.
14 ,, 15 ಮಣಿ ,, 36—0—0.
9 ,, ,, ,, 32—0—0.

ಚಲೋದಾದ ಲವ್ ಸಕ್ಲೆಗಳು ಡಜನ್ 1ಕ್ಕೆ ರೂ. 2/14.

P. Sambasiva Chetty & Co.,
134 NAINEAPPA NAICKEN ST.
P. T. MADRAS.

ಶುದ್ಧ ರೋಮದ ಧಾವಳಿಗಳು.

1 ಮಳ ಉದ್ದ 1¼ ಮಳ ಅಗಲ ರೂ. 1½ರಿಂದ 2 ವರೆಗೆ, 5 ಮಳ ಉದ್ದ 1¼ ಮಳ ಅಗಲ ರೂ. 1½ ರಿಂದ 5 ವರೆಗೆ, 6 ಮಳ ಉದ್ದ 1¼ ಮಳ ಅಗಲ ರೂ. 2½ರಿಂದ 6 ವರೆಗೆ, 8 ಮಳ ಉದ್ದ 2 ಮಳ ಅಗಲ ರೂ. 3½ರಿಂದ 10 ವರೆಗೆ, 12 ಮಳ ಉದ್ದ 2¼ ಮಳ ಅಗಲ ರೂ. 6ರಿಂದ 12 ವರೆಗೆ, 16 ಮಳ ಉದ್ದ 2¼ ಮಳ ಅಗಲ ರೂ. 9 ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಜರ್ಬರ್ ರೇಷ್ಮೆ ಮಡಿಗಳು, ಪಾರ್ಮಡಿಗಳು, ಕಾಶೀ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ ಸಾಲಿಗ್ರಾಮ, ಜಾಘಂಟೆ, ತಾಳ, ಪಕ್ವೀರ್‌ದಾಣಿ, ಹಿತ್ತಾಳೆಯ ಆಚಿನ ಸಾಮಾನುಗಳು, ಫೋಟೋ ಉಂಗುರಗಳು ಮತ್ತು ಇನ್ನೂ ಅನೇಕ ಸಾಮಾನುಗಳು ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುವು. ಕ್ಯಾಟಲಾಗ್ ಇನಾಂ.

ವಿಳಾಸ—
ಶಿರೋಮಣಿ ಯು. ನಾರಾಯಣಾಚಾರ್ಯರು
ಮತ್ತು ಕಂಪೆನಿ, ಅಂಗಡಿ, ಕಾಶೀ ಕ್ಷೇತ್ರ.

Edited, Printed & Published by V. S. Kamath at the M. T. A. Sharada Press, Mangalore.

Registered: No. M. 408.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರದ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷವ ಸುಡುತ ಜರುತಿರುವ ॥
ಗರಲಕವರಂಜಿದರೆ । ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೯. ಮಂಗಳೂರು, ತಾರೀಕು ೪ನೇ ಶುಕ್ರವಾರ ಸಪ್ಟಂಬರ ೧೯೨೫. ಸಂಚಿಕೆ ೩೬.

Th Canara Banking Corporation, UDIPI, Ltd.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office: UDIPI. Branch: COONDAPOOR.
ಹೆಡ್ ಆಫೀಸು: ಉಡುಪಿ. ಶಾಖೆ: ಕುಂದಾಪುರ.

ಚಂದಾ ಹಾಕಿ ಯೆತ್ತಿದ ಮೂಲಧನ	ರೂ. 2,25,000—0—0.
ವಸೂಲಾದ ಮೂಲಧನ	ರೂ. 1,71,875—9—11.
ಕ್ಷೇಮನಿಧಿ ವ ಇತರ ಫಂಡುಗಳು	ರೂ. 64,700—0—0.
ಠೇವಣಾತಿಗಳು	ರೂ. 4,83,945—2—9.

— ವಿನಿಯೋಗ —.

ಗವರ್ನಮೆಂಟು ಪ್ರಾಮಿಸರಿ ನೋಟಿನ ಮೇಲೆ	ರೂ. 25,800—0—0.
ಡಿಮಾಂಡು ನೋಟು ವ ಜಾಲುಗಳ ಮೇಲೆ	ರೂ. 5,92,445—9—4.
ಚಿನ್ನಾಭರಣ ಮುಂತಾದ ಭದ್ರತೆಸೊತ್ತುಗಳ ಮೇಲೆ	ರೂ. 1,11,658—8—6

ಈ ಕೆಳಗಿನ ಠೇವಣಾತಿಗಳನ್ನು ಅಂಗೀಕರಿಸುವುದಲ್ಲದೆ ಇತರ ಬ್ಯಾಂಕುಗಳ ಮೇಲಣ ಹಾಕ್ಕು ಚೆಕ್ಕುಗಳನ್ನೂ ಸಾಹುಕಾರಿ ಹುಂಡಿಗಳನ್ನೂ ವಟ್ಟಾಯಿಸುವ ಮತ್ತು ಇತರ ಎಲ್ಲಾ ತರದ ಬ್ಯಾಂಕಿನ ವಹಿವಾಟುಗಳು ನಡಿಸಲ್ಪಡುವವು.

ಠೇವಣಾತಿಗಳು.

ನಿರಖು ಠೇವಣಾತಿಗಳು:— ಸಾ. ಸೆ. 6¼ ರಿಂದ 7½ ವರೆಗಿನ ಬಡ್ಡಿಯನ್ನು ಪ್ರತಿ 3 ತಿಂಗಳಿಗೊಮ್ಮೆ ತೆರುವ ಅನುಕೂಲ ವ ಲಾಭದಾಯಕವಾದ ಶರ್ತಗಳ ಮೇಲೆಯೂ

ಕೊಂಚ ಅವಧಿ ಠೇವಣಾತಿಗಳು:— 1 ತಿಂಗಳ ನಂತರ 15 ದಿವಸಗಳ ನೋಟೀಸಿಗೊಳಪಟ್ಟು ಹಿಂತೆಗೆಯಬಹುದಾದ ಠೇವಣಾತಿಗಳನ್ನು ಸಾ. ಸೆ. 5ರ ದರದ ಬಡ್ಡಿ ನಡದ ದಿನಗಳಿಗೆ ಕೊಡುವ ಶರ್ತದಿಂದಲೂ

ಚಾಲ್ತಿ ಠೇವಣಾತಿಗಳು:— ದಿನಂಪ್ರತಿ ಇರುವ ಶಿಲ್ಕಿನ ಮೇಲೆ ಸಾ. ಸೆ. 3ರಂತೆ ಬಡ್ಡಿ ತೆರುವ ಶರ್ತದ ಮೇಲೂ

ಸೇವಿಂಗ್ಸ್ ಬ್ಯಾಂಕು ಠೇವಣಾತಿಗಳು:— ಸಾ. ಸೆ. 4½ರ ಬಡ್ಡಿಯ ಮೇಲೂ

ಸಂಚಯ ಠೇವಣಾತಿಗಳು:— ಮಕ್ಕಳ ವಿದ್ಯಾಭ್ಯಾಸ, ಉಪನಯನ, ವಿವಾಹ ಮುಂತಾದ ಶುಭಕಾರ್ಯಗಳಿಗೆ ಅನುಕೂಲವಾಗಿ ಕ್ಲಿಪ್ತವಂತಿ ತಿಂಗಳು 1ರ ರೂಪಾಯಿ 1ರಂತೆ 13-24-45-84-132 ತಿಂಗಳುಗಳಿಗೆ ವಸೂಲುಪಡಕೊಂಡು ಕಂತುಗಳ ಅವಧಿ ಮುಗಿದ ಮೂರು ತಿಂಗಳಲ್ಲಿ ಆಯಾಯ ಅವಧಿಮೇರೆಗೆ ರೂ. 13—8—0, ರೂ. 25—8—0, ರೂ. 50, ರೂ. 102—8—0 ಮತ್ತು 182—8—0ನ್ನು ಅದೇ ಮೇರೆಗೆ ತಿಂಗಳು 1ರ ರೂಪಾಯಿ 1ರ ಗುಣವೃದ್ಧಿ ಮೊಬಲಗನ್ನು ತೆತ್ತಲ್ಲಿ ಆಯಾಯ ಮೊಬಗಿನ ಅದೇ ಗುಣವೃದ್ಧಿ ಮೊಬಲಗನ್ನು ತೆರುವ. ಶರ್ತದ ಮೇಲೂ ಅಂಗೀಕರಿಸಲ್ಪಡುವವು.

ಹೆಚ್ಚಿನ ಮಾಹಿತಿ ಸೆಕ್ರಿಟೆರಿಯವರಿಂದ ತಿಳಿಯಬಹುದು.

ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಆಫೀಸು, ಉಡುಪಿ, ತಾ. 30—6—1925. } ನಯಂಪಳ್ಳಿ ಆನಂದ್ರಾವ್, ಸೆಕ್ರಿಟರಿ ಮತ್ತು ಒಫಿಸಿಯೆಟಿಂಗ್ ಮನೇಜರ್.

ಮೂರು ದಿವಸಗಳಲ್ಲಿ ಗುಣಸಿಕ್ಕದಿದ್ದರೆ ಔಷಧಿಯ ಕ್ರಯ ವಾಪಾಸು.

ಜೀರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ, ಪರಮಾನಂದ ಮೊದಲಾದ ಸುಖಜೀವನಕ್ಕೆ ಬೇಕಾದ ಆರೋಗ್ಯದಾಯಕ.

ಲೋಕಪ್ರಸಿದ್ಧವಾದದ್ದು! ಅನುಭವಸಿದ್ಧವಾದದ್ದು!!

ಟ್ರೇಡ್ ಮಾರ್ಕ್] ಅಗಸ್ತ್ಯ [ನೋಡಿ ತೆಕ್ಕೊಳ್ಳಿರಿ.

ಮನ್ಮಥ ಚಿಂತಾಮಣಿ ಲೇಹ.

(ರಿಜಿಸ್ಟರ್ ಆದದ್ದು)

ಅಬಾಲವೃದ್ಧ ಸ್ತ್ರೀಪುರುಷರ ಅನೇಕ ರೋಗಗಳ ಮೇಲೆ ಗುಣಕಾರಿಯಾದದ್ದು.

ಮೋಹವಿಕಾರವಿದ್ದವರಿಗೂ, ನಿದ್ರೆಇಲ್ಲದವರಿಗೂ, ಸ್ವಪ್ನೇಂದ್ರಿಯವಾಗುವ ಯುವಕರಿಗೂ ಜ್ಞಾನಿಸುಜ್ಞಾನಿಗಳಿಗೂ ಉಪಯೋಗವುಳ್ಳ ಪರಮಾನಂದ ಔಷಧಿ.

1 ಸೇರು ಪಾಟ್ಟೆಂಟು ಡಬ್ಬಿಕ್ಕೆ ಸೇರಿಸಬಹುದು.

1 ಸೇರು ಡಬ್ಬಿ 1ಕ್ಕೆ 3—0—0. ½ ಸೇರು ಡಬ್ಬಿ 1ಕ್ಕೆ 1-9-0.

ವಿ. ಪಿ. ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿಗೆ ಬರೆಯಿರಿ.

ವಿಳಾಸ— ದೇವಣ್ಣ ನಾರಾಯಣ ಸೇಟ್,
ಸಾವ್ಕಾರ್, ಗೋಕರ್ಣ,
ಹೊನ್ನಾವರ, (ಉ. ಕ.)

:ಪಂಡಿತ ಬಿ. ರಾಮಕೃಷ್ಣ ಬಾಳಿಗರ:

50 ವರ್ಷ ಅನುಭವದ ಸಿದ್ಧೌಷಧಗಳು

ಅಶ್ವಗಂಧಿಲೇಹ:— ಇದು ಅಜೀರ್ಣ ಗ್ರಹಣಿ ವಗೈರೆ ರೋಗಗಳನ್ನು ನಾಶಗೊಳಿಸಿ ಹೊಟ್ಟೆ ಹಸಿವನ್ನು ಹೆಚ್ಚಿಸಿ ದೇಹವನ್ನು ಪುಷ್ಟಿಗೊಳಿಸುವುದು. ಮಲಬದ್ಧತೆಯನ್ನೂ ಸರಿಪಡಿಸುವುದು. ಸೇರು 1ರ ರೂ. 2—0—0.

ಕಸ್ತೂರಿಕಲ್ಪ ದಶಮೂಲಾಸವ:— ಇದನ್ನು ಪ್ರತಿಯೊಬ್ಬ ಪ್ರಸೂತ ಸ್ತ್ರೀಯರು ಅಗತ್ಯವಾಗಿ ಸೇವಿಸತಕ್ಕದ್ದು. ಗರ್ಭದ ನಂಜನ್ನು ಹೋಗಲಾಡಿಸಿ, ಬಾಣಂತಿಯರ ಅಜೀರ್ಣ, ಅತಿಸಾರ ಅರುಚಿ ಹೋಗಲಾಡಿಸಿ, ದೇಹಕ್ಕೆ ಪುಷ್ಟಿಯನ್ನೂ ಕಾಂತಿಯನ್ನೂ ಕೊಡುವುದು. 8 ಔನ್ಸು ಬಾಟ್ಳಿ 1ರ ರೂ. 1—0—0.

ಅಶೋಕಾರಿಷ್ಟ:— ಸ್ತ್ರೀಯರ ಎಲ್ಲಾ ಪ್ರದರ ರೋಗಕ್ಕೆ ಸಿದ್ಧೌಷದ. ಬಾಟ್ಳಿ 1ರ ರೂ. 1—0—0.

ಅಮೃತಾರಿಷ್ಟ:— ಮಲೇರಿಯಾ ವಗೈರೆ ಸಕಲ ಜ್ವರಗಳನ್ನು ನಾಶಗೊಳಿಸುವುದು. ಬಾಟ್ಳಿ 1ರ ರೂ. 1—0—0.

ದ್ರಾಕ್ಷಾರಿಷ್ಟ:— ಬಾಟ್ಳಿ 1ರ ರೂ. 1—0—0. ಗೋರೋಚನಾದಿ ಮಾತ್ರೆ, ಮಕ್ಕಳ ಜೆಕ್ಕೆಗೆ ಸಿದ್ಧೌಷದ. ಡಜನ್ 1ರ ಕ್ರಯ 0—8—0. ಕರ್ಪೂರಾದಿ ವಾಯುಮಾತ್ರೆ, ಡಜನ್ 1ರ ಕ್ರಯ 0—6—0.

ಇನ್ನು ಎಲ್ಲಾ ತರದ ಆಯುರ್ವೇದಸಿದ್ಧೌಷದಗಳು ನಮ್ಮಲ್ಲಿ ದೊರಿಯುವವು.

ವಿಳಾಸ:— ಪಂಡಿತ, ಬಿ. ರಾಮಕೃಷ್ಣ ಬಾಳಿಗ, ಬಂಟವಾಳ ದ. ಕ.

ಮಂಗಳೂರು ಏಜಂಟರು:— ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ತೇರುಬೀದಿ, ಮಂಗಳೂರು.

AMRUTANJAN BO
AMRUTAN
Best Indian Pain Balm
Amrutanjan
BOMBAY

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಶತ್ರುವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು.

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಹಿಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:— ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:— ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ, ರಕ್ತ ಜರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 2 ಆಣೆ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

109 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

— ರಥೋತ್ಸವ, ವಿವಾಹ ಉಪನಯನಗಳ ಸಮಯ —
ಸರ್ವರಿಗೂ ಉಡಿಗೆ ತೊಡಿಗೆಗಳು ಬೇಕಾಗುವ ಸಂದರ್ಭ.

ಯಾರು, ಯಾವುದನ್ನು ಎಲ್ಲಿ ಪಡೆಯಬೇಕೆಂಬ ಶಂಕೆಯಿಂದ ವಿಕಲರಾಗಬೇಡಿರಿ. ಉಡಿಗೆತೊಡಿಗೆಗಳನ್ನು ಆರಿಸಿಯಿಸಿ ನಿಮಗೆ ಬೇಕಾದ ಯಥಾರ್ಥ ಮಾಹಿತಿಯನ್ನು ಕಳೆದ ಹತ್ತುಹತ್ತು ವರುಷಗಳಿಂದ ಹಲವು ಸಲ್ಯಗಳಲ್ಲಿಯ ವ್ಯಾಪಾರವು ಗಿರಾಕಿಗಳಿಗೆ ಸರ್ವ ದೃಷ್ಟಿಯಿಂದಲೂ ಲಾಭಕರವಾಗಿ ಪರಿಣಮಿಸುವಂತೆ ನಮ್ಮ ಜವಳಿ ಸಂಗ್ರಹವನ್ನು ಮಾಡಿರುತ್ತೇವೆ.

ಗುರ್ಪುರ್ಕಾರ್ ಬ್ರದರ್ಸ್, ರಥಬೀದಿ, ಮಂಗಳೂರು.

ಹೆಡ್ ಆಫೀಸು:— ರಥಬೀದಿ—(ಮೊದಲು ಸುಜೀರ ನಾಗಪ್ಪನಾಯಕ್, ಎಂಡ್ ಕೊ. ಇದ್ದಲ್ಲಿ; ಅಜಿಜುದ್ದೀನ್ ರಸ್ತೆಗೆ ತಿರುಗುವಲ್ಲಿ) ಮಂಗಳೂರು.

ಬ್ರೆಂಚ್ ಆಫೀಸು:— ರಥಬೀದಿ—(ಹಳೇ ತಾಲೂಕು ಕಚೇರಿಯ ವಠಾರಕ್ಕೆ ಸಮೀಪವಿರುವ ಮಳಿಗೆ) ಮಂಗಳೂರು.

ಈ ದೇಶದ ಪ್ರಖ್ಯಾತಪಟ್ಟ ನೇಯಿಗೆಯ ಕೇಂದ್ರಸ್ಥಳಗಳಾದ—ಬನಾರಸ್, ಪೂನಾ, ಅಹಮ್ಮದಾಬಾದ್, ಸುರತ್, ಬೆಂಗಳೂರು, ಧರ್ಮಾವರಮ್, ಕಂಜೀವರಮ್, ಕೊಯಮುತ್ತೂರು, ಮಧುರೆ, ತಂಜಾವೂರು, ಕುಂಭಕೋಣ, ಆರ್ನಿ, ಪಾಡಿನೇಟ್ಟಿ, ಹುಬ್ಬಳ್ಳಿ, ಇಳಕಲ್, ಗದಗ, ಮದ್ರಾಸು ಈ ಪ್ರಾಂತ್ಯಗಳಲ್ಲಿ ತಯ್ಯಾರಾದ

ಜರಿಸೀರೆಗಳು, ದುಪ್ಪಟಾ, ಜರಿಶಾಲು, ಪೇಟ್ಟ, ರೇಷ್ಮೆ ಸೀರೆಗಳು, ಬಣ್ಣದ ಸೀರೆಗಳು, ಕೋರಾ ರೇಷ್ಮೆ ಸೀರೆಗಳು, [illegible] ಸೀರೆಗಳು, ರೇಷ್ಮೆ ಮಡಿಗಳು, ನಿತ್ಯ ಉಪಯೋಗದ ಸೀರೆಗಳು ಬನಿಯನ್, [illegible] ಇತರ [illegible] ಕೋಟಿಂಗ್ ಶರ್ಟಿಂಗ್.

ಸ್ವರಾಟೆಯಲ್ಲಿ ತಯಾರಿಸಿದ ನೂಲಿನಿಂದ ಮಾಡಿದ—

ಖದ್ದರ್ ಶರ್ಟಿಂಗ್, ಖದ್ದರ್ ಕೋಟಿಂಗ್, ಖದ್ದರ್ ದೋತಿ, ಖದ್ದರ್ ಟೋಪ್ಪಿ, ಅಂಗವಸ್ತ್ರ, [illegible]—
[illegible]

[illegible]

ಸೂಚನೆ—[illegible] 50ಕ್ಕೆ [illegible] 6¼%, ರೂ. 50ರಿಂದ 250ವರೆಗೆ [illegible] 10%, ರೂ. 250 and 1000ಕ್ಕೆ 12½% [illegible]

ಆರ್. ಮಾರ್ಟಿನ್ನರ
ಜ್ವರದ ಗುಳಿಗೆಗಳು.

ಸುಲಭ ಸ್ವೇದನಕಾರಿಯಾದ ಈ ಗುಳಿಗೆಗಳು ಚಳಿಜ್ವರದ ವಿಷ ಪದಾರ್ಥಗಳನ್ನು ತಟ್ಟನೆ ನಿರ್ಮೂಲಪಡಿಸಿ, ವ್ರಣಗಳನ್ನು ಸಂಪೂರ್ಣ ನಾಶಪಡಿಸಿ, ಮಲೇರಿಯಾ ಜ್ವರ, ಚಳಿಜ್ವರ, ಚಾರಿಜ್ವರ, ಮತ್ತು ಆಗಾಗ್ಗೆ ಬಿಟ್ಟುಕೊಂಡು ಬರುವ ಇತರ ಜ್ವರಗಳ ಬಾಧೆಯಿಂದ ಗುಣಪಡಿಸುವವು.

ತಟ್ಟನೆ ವಾಸಿಪಡಿಸುವುದಕ್ಕೆ ಹತ್ತಾರುಗಳಲ್ಲಿ ಪ್ರಸಿದ್ಧತೆಯನ್ನು ಹೊಂದಿದ್ದು, ಆಶೆ ಬಿಟ್ಟುಬಿಟ್ಟ ಅನೇಕ ಸಂದರ್ಭಗಳಲ್ಲಿ ಗುಣಪಡಿಸಿದವುಗಳಾಗಿರುತ್ತವೆ.

ಇವುಗಳು ಗಿರಣಿಗಳಲ್ಲಿಯೂ ಕಾರ್ಖಾನೆಗಳಲ್ಲಿಯೂ ವಿಶೇಷವಾಗಿ ಉಪಯೋಗಿಸಲ್ಪಡುತ್ತವೆ. ಸಾಮಾನ್ಯವಾಗಿ ಹಿಂದೂಸ್ಥಾನದಲ್ಲಿ ಎಲ್ಲಾ ತೋಟಗಾರರಿಂದ ಉಪಯೋಗಿಸಲ್ಪಡುವುದು. ಅಲ್ಲದೆ ದಿಗಂತ ವಿಶ್ರಾಂತವಾದ ಕೀರ್ತಿಯನ್ನು ಕೂಡ ಸಂಪಾದಿಸಿರುವುದು ಕಠಿಣ ಜ್ವರವು ತಟ್ಟನೆ ಇಳಿಯಬೇಕಾದರೆ ಆರ್ ಮಾರ್ಟಿನರ ಎಗ್ಯೂ ಮಿಕ್ಚರ್ ಒಡನೆ ಇದನ್ನು ಸೇವಿಸಬೇಕು. ಈ ಇವೆರಡು ಅದ್ಭುತ ಶಕ್ತಿಯುಳ್ಳ ಔಷಧಿಗಳು ಪ್ರತಿಯೊಂದು ಕುಟುಂಬದ ಮನೆಯಲ್ಲಿಟ್ಟುಕೊಳ್ಳಲು ಯೋಗ್ಯ ವಸ್ತುಗಳಾಗಿವೆ ಪ್ರತಿಯೊಂದು ಬಾಟ್ಲಿಯಲ್ಲಿ 40 ಮಾತ್ರೆಗಳಿರುವ ಬಾಟ್ಲಿ 1ಕ್ಕೆ 1-8-0.

100 ಮಾತ್ರೆಗಳಿರುವ ಬಾಟ್ಲಿ 1ಕ್ಕೆ 3-8-0.
150 „ „ „ 5-4-0.

ಆರ್. ಮಾರ್ಟಿನ್ನರ ಎಗ್ಯೂಮಿಕ್ಚರ್.

ಇದು ಜ್ವರ, ಶೀತಜ್ವರ ಮಲೇರಿಯಾ, ಚಾರಿಜ್ವರ, ಸನ್ನಿಪಾತ ಪಟ್ಟೆ ವಾಯುವಿನಿಂದುಂಟಾದ ರೋಗ ಇವೇ ಮೊದಲಾದ ಎಲ್ಲಾ ತರದ ಜ್ವರಗಳನ್ನೂ ಕೂಡಲೇ ನಾಶಮಾಡುತ್ತದೆ. ಎಲುಬುಗಳಲ್ಲಿ ಹರಡಿಕೊಂಡಿರುವ ಜ್ವರವನ್ನೂ ಸಹ ನಾಶಮಾಡುವುದಲ್ಲದೆ, ಇದು ಸಿಹಿಯಾಗಿರುವುದರಿಂದ ಸಣ್ಣ ಕೂಸುಗಳು ಸಹ ಕುಡಿಯಲಿಕ್ಕೆ ಇಷ್ಟಪಡುತ್ತವೆ. ಅನೇಕ ನಿಜ ವಿದ್ವಾಂಸ ವೈದ್ಯರಿಂದ ಗುಣಮಾಡುವುದಕ್ಕಾಗದ ಜ್ವರವನ್ನು ಈ ಎರಡೇ ಎರಡು ಬಾಟ್ಲಿಗಳ ಸೇವನೆಯಿಂದ ಹುಷಾರಾಗಿದೆ.

ಬಾಟ್ಲಿ 1ಕ್ಕೆ ರೂ. 0-13-0.

ಆರ್. ಮಾರ್ಟಿನ್ನರ ಮೂಲವ್ಯಾಧಿ ಮುಲಾಮು.

ಮನುಷ್ಯನಿಗೆ ಮೂಲವ್ಯಾಧಿ ಆದಾಗ, ಬಹಳ ಸಲ ಮೂತ್ರಶಂಕೆಯಾಗುವಿಕೆ, ಮರ್ಮಸ್ಥಾನದಲ್ಲಿ ಉರಿಯುವುದು, ಮಲಬದ್ಧತೆ ಇವೇ ಮುಂತಾದವುಗಳಿಂದ ವಳೆಪಡುತ್ತಾನೆ. ಈ ಔಷಧದ ಒಂದೇ ಒಂದು ಬಾಟ್ಲಿಯ ಉಪಯೋಗದಿಂದ ರಕ್ತ ಸುರಿಯುವ ಮೂಲವ್ಯಾಧಿ, ಕಂಕುಳಲ್ಲಿ ನೋಯುವ ಮೂಲವ್ಯಾಧಿ ಮತ್ತು ಎಂಥ ತರಹದ ಕಠಿಣವಾದ ಮೂಲವ್ಯಾಧಿಯಾದರೂ ಕೂಡಲೇ ವಾಸಿಯಾಗುತ್ತದೆ. ಇದು ಒಳ್ಳೇ ಔಷಧಗಳಿಂದ ತಯಾರಿಸಲ್ಪಟ್ಟು ಹಚ್ಚಿಕೊಳ್ಳುವವರಿಗೆ ಏನೊಂದೂ ನೋವನ್ನೂ ಕೊಡದೆ ತಂಪಾಗಿ ಮಾಡುತ್ತದೆ. ಬಾಟ್ಲಿ 1ರ ದರ ರೂ. 1-8-0 ಮಾತ್ರ.

60 ಮಾತ್ರೆಗಳ ಸೀಸೆ 1ಕ್ಕೆ ರೂ. 1-4-0.

ವಿಳಾಸ:—ಆರ್. ಡಿ. ಕಟ್ಲೆ ಮತ್ತು ಕಂಪೆನಿ,
ನಂಬ್ರ ಬಿ. ಫ್ರಿಯರ್ ರೋಡ್,
ಸಾಂಜ ವರ್ತಮಾನ ಪ್ರೆಸ್,
ಟೋಡಿವಾಲಾ ಬಿಲ್ಡಿಂಗ ಎದುರುಗಡೆ, ಫೋರ್ಟ ಮುಂಬಯಿ.

R. D. Kately & Co.
No. B. Frere Road,
Opposit Sanjvertaman Press,
Todivala Building, FORT BOMBAY

ಲಿವರ್ ಮೂವ್‌ಮೆಂಟ್ ವಾಚ್.
15 ಮಣಿಗಳಿದ್ದು ರೋಲ್ಡಗೋಲ್ಡ ವಾಚ್.

ಈ ಗಡಿಯಾರ ಕೈಗೆ ಕಟ್ಟುವಂಥಾದ್ದಾಗಿ ಸರಿಯಾದ ಸಮಯವನ್ನು ತೋರಿಸಿ ಚಿರಕಾಲ ವರೇಗೆ ಬಾಳುವುದು. 10 ವರುಷದ ವರೆಗೆ ಬಾಳುವ ಗೆರೆಂಟಿ ಇದೆ. ಕ್ರಯ ರೂ. 17-8-0.

11 ಮಣಿಗಳಿದ್ದು ನಿಜವಾದ ರೋಲಗೋಲ್ಡ ಬಂಗಾರದಿಂದ ತಯಾರಿಸಲ್ಪಟ್ಟು 5 ವರ್ಷದ ಗೆರೆಂಟಿ ಇರುವ ವಾಚಿಗೆ ಕ್ರಯ ರೂ. 12-8-0.

18 ಕೆರೆಟ್ ಇಲೆಕ್ಟ್ರೊ ರೋಲ್ಡ ಗೋಲ್ಡ ವಾಚ್ ಕ್ರಯ ರೂ. 7-0-0. ಲಿವರ್ ಮೂವ್‌ಮೆಂಟ್ 10 ಮಣಿಗಳಿದ್ದ ಬಂಗಾರ ಗಿಲ್ಟುವಾಚ್ ಕ್ರಯ ರೂ. 13-8-0.
ಎಲಾರ್ಮ ಜರ್ಮನ್ ಟ್ಯಾಮ್‌ಪೀಸ್ ಕ್ರಯ ರೂ. 5-0-0.
ಡಬ್ಬಲ್ ಎ. „ „ „ 6-0-0.
"ಬಿ" ಟ್ಯಾಮ್‌ಪೀಸ್ ಕ್ರಯ ರೂ. 2-4-0
ಟಿಕ್—ಟಾಕ್ ವಾಚ್ 1ರ ಕ್ರಯ „ 2-12-0

ಕಂಬ್ಯಾಂಡ್ ಪೇಪರ್ ಕ್ಲಿಪ್ ಟ್ಯಾಮ್‌ಪೀಸ ಹಿತ್ತಾಳೆ ಅಥವಾ ನಿಕ್ಕಲ್ ಕ್ರಯ ರೂ. 6-0-0. ಇನೆಮಲ್ ರೂ. 7-0-0. ಫ್ರೆಂಚ್ ಬೆಡ್ ಫೋಟೋಗಳು ಡಜನ್ 1ರ ಕ್ರಯ ರೂ. 2-4-0.

Emarald Watch Co.,
P. T. MADRAS.

ಡಾಕ್ಟರುಗಳು ಭಿನ್ನಾಭಿಪ್ರಾಯಪಡುವಾಗ್ಯೆ ತೀರ್ಮಾನಿಸುವದು ಯಾರು?

ಅಂಥಾ ಸಂದರ್ಭಗಳಲ್ಲಿ ಡೆಂಗ್ಯು ಮುಂತಾದ ಜ್ವರಗಳನ್ನು ನಿವಾರಿಸುವಂಥಾ "ಬಾಟ್ಲೀವಾಲರ ಏಗ್ಯುಮಿಕ್ಚರ್"ನ್ನು ಸರಾಗವಾಗಿಯೂ, ಮತ್ತು ಜ್ವರಗಳನ್ನು ಖಂಡಿತವಾಗಿ ನಿಲ್ಲಿಸುವಂಥಾದೂ, ಎಲ್ಲಾ ತರದ ತಲೆನೋವುಗಳನ್ನು ಹೋಗಲಾಡಿಸುವಂಥಾದ್ದೂ ಆದ "ಬಾಟ್ಲೀವಾಲರ ಏಗ್ಯುಪಿಲ್ಸ್" ಇದನ್ನು ಉಪಯೋಗಿಸಿರಿ.

ಐ. ಎಮ್. ಎಸ್. ಡಾಕ್ಟರುಗಳಿಂದ ಶಿಫಾರಸು ಮಾಡಲ್ಪಟ್ಟಿದ್ದು. ಇದರ ಉಪಯೋಗದಿಂದ ಹೃದಯದ ಮೇಲೆ ಯಾವದೊಂದೂ ಬಾಧಕವಿಲ್ಲ. ಅರ್ಧ ಶತಮಾನದಿಂದ ಹಿಂದೂಸ್ಥಾನ, ಬರ್ಮ, ಸಿಲೋನ್, ಅಫ್ರಿಕಾ ಇವುಗಳಲ್ಲಿ ಪ್ರಖ್ಯಾತಪಟ್ಟದ್ದಾಗಿರುತ್ತದೆ.

ಅನೇಕ ಹಿಂದೀ ಪ್ರದರ್ಶನಗಳಲ್ಲಿ ಬೆಳ್ಳಿ ಮತ್ತು ಬಂಗಾರದ ಪದಕಗಳನ್ನು ಪಡೆದಿರುತ್ತೆ. ಹಾಲ್ಡಿ ನಾಣ್ಯದಂತಿದ್ದು ಮಾರ್ವಾರಿಗಳೂ ಕೂಡ ಅದರ ಮೇಲೆ ಹೂವನ್ನು ಮುಂಗಡವಾಗಿ ಕೊಡುತ್ತಾರೆ. ಬಡ ಮತ್ತು ಮಧ್ಯಮ ತರಗತಿಯ ಜನರಿಗೆ ವರಪ್ರದಾನವಾಗಿದ್ದು ಸಂಚಾರ, ಪ್ರಯಾಣ, ದೇಶಾಟನೆಗಳ ಸಮಯದಲ್ಲಿ ಹತ್ತಿರದಲ್ಲಿರಿಸಿಕೊಳ್ಳದಾಗಿರುತ್ತದೆ.

ಬಾಟ್ಲೀವಾಲರ ಬಾಲಾಮೃತ ಅಥವಾ ಟೋನಿಕ್ ಸಿರಪ್.

ಕೆಮ್ಮನ್ನು ಹೋಗಲಾಡಿಸಿ, ಎದೆನೋವನ್ನು ಶಾಂತಗೊಳಿಸಿ, ಜ್ವರವನ್ನು ಉಪಶಮನಿಸಿ, ನಿದ್ರಾಭಂಗವನ್ನು ಕಡಿಮೆ ಮಾಡಿ ಧಾತುವರ್ಧನವನ್ನು ಮಾಡುವದರಲ್ಲಿ ಅತ್ಯುತ್ತಮವಾಗಿರುತ್ತದೆ. ಕಫವನ್ನು ಒಣಗಿಸಿ ಮಾಯವಾಗುವಂತೆ ಮಾಡುವುದಲ್ಲದೆ ಅದೇ ಸಮಯದಲ್ಲಿ ಒಳ್ಳೇ ಜೀರ್ಣವನ್ನು ಉಂಟುಮಾಡುವುದು. ದರ ಮೊದಲಾದ ಮಾಹಿತಿಯನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ತಾರಿನಪತ್ತೆ:-CAWASHAPUR, BOMBAY.

Dr. H. L. Batliwala & Co., Ltd.,
Sayani Road, P. O. Cadell Road, Bombay. No. 14.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಡಾ. ಯಚ್. ಎಲ್. ಬಾಟ್ಲೀವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.,
Sayani Road, P. O. Cadell Road, Bombay. No. 14.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟ. ಖ. 9 ಆಣೆ.

ನಮ್ಮ ವಿಳಾಸ:— ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಏಜಂಟರು:— ದಿ. ಊಲನ್ ಮಾರ್ಟ್, ಮಂಗಳೂರು.

OUR RECENT IMPORT IN WRIST WATCHES

Have you used anyone of these Watches?

SEND YOUR ORDER NOW ALL GUARANTEED.

Fashionable wrist wrist Lady's size. Reliable movement Guaranteed.



No 368.

Handy to wear and looks beautiful. Gives punctual time and with strong movement.

Nickel case Rs. 8-0

High-class Radium dial watch watch with Roman figures.



No. 367.

Can be seen in dark nights. Well fitted with best movement and strong to use. Used by one and all.

Silver case Rs. 9-0.

Radio light wrist watch.



No. 372.

Fitted with the best mechanism and guaranteed to work and keep perfect time for a long time.

Nickel case Rs. 7-8
Electro rolled-gold „ 9-0

(N. B. In addition to the above, we have good number of varieties of fancy wrist watches, pocket watches. Please write for a descriptive catalogue, which will be sent free)

WHOLESALE IMPORTERS

PETER WATCH COY.,
POST BOX 27, MADRAS

ಶಾಲಿವಾಹನಶಕ ೧೮೪೭ನೆಯ ಕ್ರೋಧನ ಸಂ॥ರದ ಭಾದ್ರಪದ ಬ॥ ೩ ಶನಿವಾರದಿಂದ ಕ್ರೋಧನ ಸಂ॥ರದ ಭಾದ್ರಪದ ಬ॥ ೯ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೫ನೆಯ ಸಿಂಹ ಸೋಣ.)

ತಾರೀಕು	ವಾರ	ತಿ.	ಘಳಿಗೆ.	ನಕ್ಷತ್ರ	ಘಳಿಗೆ.	ಸೌರಮಾನ	ಸೂರ್ಯ ಉ.	ಸೂರ್ಯ ಅಸ್ತ.
5	ಶನಿ	೩	೩೮.೩೨	ರೇವತೀ	೫೮.೪೦	೨೦	6.21	6.37
6	ರವಿ	೪	೩೬.೩೦	ಅಶ್ವಿನೀ	೫೮.೩೫	೨೧	6.22	6.37
7	ಸೋಮ	೫	೩೫.೪೬	ಭರಣೀ	೬೦. ೦	೨೨	6.22	6.36
8	ಕುಜ	೬	೩೬.೩೧	ಭರಣೀ	೦.೧೪	೨೩	6.22	6.36
9	ಬುಧ	೭	೩೮.೧೬	ಕೃತ್ತಿಕಾ	೨.೪೬	೨೪	6.22	6.36
10	ಗುರು	೮	೪೧.೧೪	ರೋಹಿಣೀ	೬.೪೪	೨೫	6.22	6.35
11	ಶುಕ್ರ	೯	೪೫.೧೬	ಮೃಗಶಿರಾ	೧೧.೪೬	೨೬	6.22	6.35

ಮಂಗಳೂರಿನ ವಾಯುಸ್ಥಿತಿ.

Date ತಾರೀಕು	Temperature. ಉಷ್ಣ (ಕಾವು) Maximum ಹೆಚ್ಚಾದದ್ದು	Minimum ಕಡಿಮೆ	Rainfall. ಮಳೆ ದಿನದ ಮಳೆ	ಜುಮಲಾ ಮಳೆ.
28	87—7	75—1	0—21	—
29	85—9	73—3	1—23	—
30	86—3	74—4	0—52	—
31	86—6	74—0	0—35	—
1	88—3	75—0	0—22	—
2	87—0	74—0	0—43	—
3	87—2	74—0	0—38	120-84

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ. ಅ.	ವರೆಗೆ ರೂ. ಅ.
ಮಸ್ಸಿ ...	8-10	9-0
ಗುಡ್ಡು ...	8-4	8-8
ರಾಶಿ ಸುಗ್ಗಿ ...	7-12	8-3
ಅವ್ವಲ್ ಬೆಳ್ತಿಗೆ ...	8-12	9-8
ಗುಡ್ಡು ಬೆಳ್ತಿಗೆ ...	8-0	8-8
ರಂಗೂನು ಬೆಳ್ತಿಗೆ ಗೋಣಿ ೧ ...	13-8	14-8
ಗೋಧಿ ಗೋಣಿ ೧ಕ್ಕೆ ...	19-	21-0
ಹುರುಳಿಗೋಣಿ ೧ಕ್ಕೆ ...	9-12	10-0
ಕಡಲೆಗೋಣಿ ೧ಕ್ಕೆ ...	12-0	13-0
ತೊಗರಿಗೋಣಿ ೧ಕ್ಕೆ ...	12-8	13-0
ತೊಗರಿಬೇಳೆ ಗೋಣಿ ೧ಕ್ಕೆ ...	15-0	20-0
ಉದ್ದುಗೋಣಿ ೧ಕ್ಕೆ ...	14-0	14-8
ಹೆಸರುಗೋಣಿ ೧ಕ್ಕೆ ...	14-0	15-0
ಊರು ಬೆಲ್ಲ ಖಂಡಿ ೧ಕ್ಕೆ ...	80-	—
ಉಪ್ಪು ಗೋಣಿ ೧ಕ್ಕೆ ...	4-4	4-8
ಕೊಬ್ರಿ ಖಂಡಿ ೧ಕ್ಕೆ ...	115-0	120-0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	46-0	—
ಎಳ್ಳಿಂಡಿ ಖಂಡಿ ೧ಕ್ಕೆ ...	40-0	—
ಕೊಬ್ರಿ ಎಣ್ಣೆ ಮುಡಿ ೧ಕ್ಕೆ ...	8-14	10-0
ಎಳ್ಳೆಣ್ಣೆ ಮುಡಿ ೧ಕ್ಕೆ ...	8-0	11-0
ಹಿಪ್ಪೆ ಎಣ್ಣೆ ಬುದ್ದಿಗೆ ೧ಕ್ಕೆ ...	8-8-0	—
ಮೋರಿಸ ಸಕ್ಕರೆ ಮುಡಿ ೧ಕ್ಕೆ ...	4-10	—
ಊರ ಮೆಣಸಿನಕಾಯಿ ಮುಡಿ ೧ಕ್ಕೆ ...	7-8	—
ಸಾಸಿವೆ ಮುಡಿ ೧ಕ್ಕೆ ...	9-0	—
ಕೊತ್ತಂಬರಿ ಮುಡಿ ೧ಕ್ಕೆ ...	4-4	4-8
ಕಾಫಿ ಖಂಡಿ ೧ಕ್ಕೆ ...	345-0	400-0
ಹಿಂಗೋಟು ಅಡಿಕೆ ಖಂಡಿ ೧ಕ್ಕೆ ಹಳತು ...	245-0	250-0
„ ಹೊಸ ಅಡಿಕೆ	240-0	0-0
ಕಾಳುಮೆಣಸು ಖಂಡಿ ೧ಕ್ಕೆ ...	220-0	—
ಯಾಲಕ್ಕಿ ಮುಡಿ ೧ಕ್ಕೆ ...	100-0	—
ಗೇರುಬೀಜ ಮುಡಿ ೧ಕ್ಕೆ ...	4-8	4-9
ಅಕ್ಕಿ ಖಂಡಿ ೧ಕ್ಕೆ ...	45-0	65-0
[illegible] ಮುಡಿ ೧ಕ್ಕೆ ...	17-8	—
[illegible] ಮುಡಿ ೧ಕ್ಕೆ ...	24-0	—
ಜೀನಿ ಬೆಲ್ಲ ಸೇರು ೧ಕ್ಕೆ ...	18-10	
ಹಿತ್ತಾಳಿ [illegible] ಮುಡಿ ೧ಕ್ಕೆ ...	16-8	
ಸವಸು	13-7	

The Canara Public Conveyance Co., Ltd, Mangalore.
(ESTABLISHED 1914.)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು
- ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು
- ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
- ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
- ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.
- ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ—ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd, Mangalore. S. K

ಕನ್ನಡಿಗರೆ! **ವಸಂತ.** ಕಚ್ಚೆರಿಯಿರಿ!

ಈಗಾಗಲೇ ಎರಡನೇ ಸಂಪುಟವು ಆರಂಭಿಸಲಿದೆ.

ಇತಿಹಾಸನಿಧಿ ಎಂದರೆ	ವಸಂತ
ಸಮಾಜಸುಧಾರಕನೆಂದರೆ	ವಸಂತ
ಕೈಗಾರಿಕೆಯ ಸಾಮ್ರಾಜ್ಯವೆಂದರೆ	ವಸಂತ
ಕರ್ನಾಟಕ ಭಾಷಾಸೇವಕನೆಂದರೆ	ವಸಂತ
ದೇಶವಿದೇಶ ಬಂಧುವೆಂದರೆ	ವಸಂತ
ಕಾದಂಬರಿಗಳ ಭಂಡಾರವೆಂದರೆ	ವಸಂತ
ಚಿತ್ತಾಕರ್ಷ ಚಿತ್ರಶಾಲೆಯೆಂದರೆ	ವಸಂತ
ದೇಶಭಕ್ತನೆಂದರೆ	ವಸಂತ

ಇಂತಹ ವಸಂತನು ಯಾರಿಗೆ ಬೇಕು, ಯಾರಿಗೆ ಬೇಡ?

48 (ಕ್ರೌನ್ ⅛ ಪುಟ ಸ್ಯಾಜಿನ) ಪುಟಗಳನ್ನು ಮೀರಿದ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3-4-0 ಮಾತ್ರ.

ವ್ಯವಸ್ಥಾಪಕ,
ವಸಂತ ಕಾರ್ಯಾಲಯ,
ಕುಂದಾಪುರ, ದಕ್ಷಿಣ ಕನ್ನಡ.

ಸಾರಸ್ವತ.

ಕನ್ನಡ ಮತ್ತು ಕೊಂಕಣಿ ಭಾಷೆಗಳಲ್ಲಿ ಕಳೆದ ವಿಜಯ ದಶಮಿ ದಿನದಿಂದ ಪ್ರತಿ ದಶಮಿಗೆ ಹೊರಡುವ ಪತ್ರಿಕೆ.

ವಿ. ಎಸ್. ಕಾಮತ್,
ಮೂಲ್ಕಿ, ವಾಮನ ಕುಡುವ } ಸಂಪಾದಕರು.

ಮತಸಂಸ್ಥೆ ಮತ್ತು ಸಮಾಜಕ್ಕೆ ಸಂಬಂಧಪಟ್ಟ ಇತರ ಸಂಸ್ಥೆಗಳ ಸುಸಂಘಟನ.
ಸಮಾಜದೊಳಗೆ ಅನ್ಯೋನ್ಯ ಸಾಧನೆ.
ಸ್ತ್ರೀಸಮಾಜಕ್ಕೆ ಉಪಯುಕ್ತವಾದ ವಿಷಯಗಳ ನಿರೂಪಣ
ಮತಭಾವನೆಗಳ ಉಜ್ಜೀವನ ಇತ್ಯಾದಿ ಉದ್ದೇಶಗಳಿಂದ ಈ ಪತ್ರಿಕೆಯು ಹೊರಡಿಸಲ್ಪಡುವುದು. ಸಾರಸ್ವತ ಸಮಾಜವು ಇದಕ್ಕೆ ಪ್ರೋತ್ಸಾಹವನ್ನೀಯಬೇಕಾಗಿ ಪ್ರಾರ್ಥನೆ.

ಚಂದಾಹಣ ಅಂಚೆವೆಚ್ಚ ಕೂಡಾ ರೂ. ೧-೪-೦. ಪೋಷಕರು ರೂ. ೧೦-೦-೦. ಸಹಾಯಕರು ರೂ. ೫-೦-೦. ಮಾದರಿ ಸಂಚಿಕೆಯನ್ನು ಟಪ್ಪಾಲು ಖರ್ಚಿಗಾಗಿ ಅರ್ಧಾಣೆ ಸ್ಟಾಂಪು ಕಳುಹಿಸುವವರಿಗೆ ಉಚಿತವಾಗಿ ಕಳುಹಿಸುವೆವು.

ಕನ್ನಡ ನಾಡಿನಲ್ಲಿ ಪ್ರತಿ ಕಡೆಯಲ್ಲಿಯೂ ಬಾತಮೀದಾರರು ಬೇಕು.

ಎಲ್ಲಾ ಪತ್ರವ್ಯವಹಾರಗಳನ್ನು ಕೆಳಗಿನ ವಿಳಾಸಕ್ಕೆ ನಡೆಸಬೇಕು.

ಯು. ನಾರಾಯಣನಾಯ್ಕ, ಕಾರ್ಯದರ್ಶಿ,
ಸಾರಸ್ವತ, ಉಡುಪಿ.

Free! Free!! Free!!

ಪ್ರಸಿದ್ಧವಾದ

"ಕಾಮಶಾಸ್ತ್ರ"

ಈಗಲೆ ತಯಾರಾಗಿದೆ.

ಜರೂರಾಗಿ ಬರಿಯುವಲ್ಲಿ ಅಂಚೆಯ ಹಾಸಲು ಸಹ ಇಲ್ಲದೆ ಕಳುಹಿಸುವೆವು.

ಆತಂಕನಿಗ್ರಹ ಔಷಧಾಲಯ,
26 ಬ್ರಾಡ್ವೇ, (ಪೋಸ್ಟು ಬಾಕ್ಸ್ 1252),
ಮದ್ರಾಸ್.

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ

ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಜಾನಪದಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ವಾಂಸರೂ ತಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ತಮಾನಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನ್ನು ಕುರಿತ ಲೆಕ್ಕಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಧನಿಕರಿಗೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪೋಷಕರಿಗೆ	ರೂ. 3-0-0
ಇತರರಿಗೆ, ಪರಸ್ಥಳಕ್ಕೆ, ಪೋಸ್ಟೇಜು ಸೇರಿ	„ 2-8-0.
„ ಸ್ಥಳೀಕರಿಗೆ	„ 1-8-0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪತ್ರಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿಯಬಹುದು.

ಎಡಿಟರ್,
ಬಿ. ಹನುಮಂತಯ್ಯಂಗಾರ್,
ಅರ್ಥಸಾಧಕ ಪತ್ರಿಕೆ,
ಅರಳೇ ಪೇಟೆ, ಬೆಂಗಳೂರು ಸಿಟಿ.

ಆಯುರ್ವೇದ ಶಾಸ್ತ್ರಿ ಅಷ್ಟಾವಧಾನಿ,
ಕಾ. ವೇ. ಸುಬ್ಬರಾವ್, ಯಂ. ಜಿ. ಯ. ಅವರ್ಗಳಿಂದ
ತಯಾರಿಸಲ್ಪಟ್ಟದ್ದು.
ಒಂದು ಮಾತ್ರೆ! ಒಂದು ಘಂಟೆಯೊಳಗೆ ಗುಣ!

ಕಾಮಾಮೃತ.

ಈ ಔಷಧವು ಧಾತುಪುಷ್ಟಿಗಾಗಿಯೇ ತಯಾರಿಸಲ್ಪಟ್ಟದ್ದು. ಒಂದು ಮಾತ್ರೆಯನ್ನು ಸೇವಿಸಿದ ಒಂದು ಘಂಟೆಯೊಳಗೆ ಶಕ್ತಿಯನ್ನು ವೃದ್ಧಿಗೊಳಿಸಿ ಎಷ್ಟು ಬಲಹೀನವುಳ್ಳವರನ್ನೂ ಬಲವಂತರನ್ನಾಗಿ ಮಾಡುವದು. ಯಾವ ರೀತಿಯಿಂದಲಾಗಲಿ ಶುಕ್ಲ ನಷ್ಟವಾದಾಗ್ಯೂ ಅಥವಾ ಸ್ವಪ್ನದಲ್ಲಿ ಇಂದ್ರಿಯ ಸ್ಖಲಿತವಾದಾಗ್ಯೂ ಇಲ್ಲವೆ ಮೂತ್ರದೊಂದಿಗೆ ಸೇರಿಯೋ ವ ಮೂತ್ರ ಚಲನೆಯ ಹಿಂದೋ ಮುಂದೋ ಹೊರಬೀಳುವ ಧಾತುನಷ್ಟವನ್ನಾದರೂ 5 ದಿವಸಗಳಲ್ಲಿ ಗುಣಪಡಿಸುವದು. ಯಾವ ಬಗೆಯ ನರಗಳ ಬಲಹೀನತೆಯನ್ನಾದರೂ ಹೋಗಲಾಡಿಸುವುದು. ಶಕ್ತಿಯಿಲ್ಲದವರು ಈ ಮದ್ದನ್ನು 20ದಿನ ಸೇವಿಸಿದಲ್ಲಿ ಶಕ್ತಿವಂತರಾಗಿ ಸಂಸಾರ ಸುಖವನ್ನೂ ಸಂತತಿ ಲಾಭವನ್ನೂ ಹೊಂದುವರು; ಇದು ನಿಶ್ಚಯ. ಪತ್ರವ್ಯವಹಾರವು ರಹಸ್ಯವಾಗಿ ನಡಿಸಲ್ಪಡುವದು. ಕ್ರಯ 20 ಮಾತ್ರೆಗಳ ಕುಪ್ಪಿ 1ಕ್ಕೆ ರೂ. 2-0-0. ಪತ್ರವ್ಯವಹಾರವು ಇಂಗ್ಲಿಷಿನಲ್ಲಿ ಮಾಡತಕ್ಕದ್ದು.

ಅಮೃತಾಶ್ರಮ,
28 ಎಲ್ಲೂರು, ಕೃಷ್ಣಾ ಜಿಲ್ಲಾ.

— ಸಿರಿಗನ್ನಡಂಗೆಲ್ಗೆ —

ಶ್ರೀ ಶಂಕರ ಕರ್ನಾಟಕ ಪುಸ್ತಕ ಭಂಡಾರವೂ
ಶ್ರೀ ವಿದ್ಯಾರಣ್ಯ ಪ್ರಕಾಶಕ ಸಂಸ್ಥೆಯೂ,
ಮಾಳಮಡ್ಡಿ, ಧಾರವಾಡ.

ಕನ್ನಡಿಗರಿಗೆ ಬೇಕಾಗುವ ಎಲ್ಲಾ ತರದ ಕನ್ನಡ ಪುಸ್ತಕಗಳು ನಮ್ಮಲ್ಲಿ ಯೋಗ್ಯ ಬೆಲೆಗೆ ದೊರೆಯುವವು. ವಿದ್ಯಾರಣ್ಯ ಪುಸ್ತಕ ಮಾಲೆಯ ಕೆಳಗಿನ ೧, ೨, ೩, ಪುಸ್ತಕಗಳು ಚಂದಾದಾರರಾಗುವವರಿಗೆ ಅಂಚೆ ವೆಚ್ಚ ಸೇರಿ ೫ ರೂ. ೬ ಆಣೆಗೆ ದೊರೆಯುವವು. ಮುಂದೆ ಹೊರಬೀಳುವ ಮಾಲೆಯ ಪುಸ್ತಕಗಳನ್ನು ಚಂದಾದಾರರಿಗೆ ೧ ರೂಪಾಯಿಗೆ ೨ ಆಣೆಯಂತೆ ಕಡಿಮೆ ಬೆಲೆಗೆ ವಿ. ಪಿ. ಮಾಡುವೆವು. ಭಂಡಾರದ ಬೆಲೆ ಪಟ್ಟಿಗಾಗಿ ೪ ಆಣೆ ಅಂಚೆ ಟಿಕೇಟುಗಳನ್ನು ಕಳುಹಿಸತಕ್ಕದ್ದು.

		ರೂ. ಆ. ಪೈ.
೧.	ಕರ್ನಾಟಕ ಸಿಂಹಾಸನ ಸ್ಥಾಪನೆ	೧— ೦—೦
೨.	ಕಥೆಗಳನ್ನೊಳಗೊಂಡ ಬೀರಬಲ್ಲ ಚರಿತ್ರೆ (ಸಚಿತ್ರ)	೧— ೬—೦
೩.	ಛತ್ರಪತಿ ಶಿವಾಜಿ ಮಹಾರಾಜ „	೨—೧೨—೦
೪.	ಮಹಾರಾಣಿ ಲಕ್ಷ್ಮೀಬಾಯಿ ಝಾಂಸಿ „	೨— ೦—೦
೫.	ಅಕ್ಬರ ಚಕ್ರವರ್ತಿ ಚರಿತ್ರೆ „	೧— ೧—೦
೬.	ಚರಿತ್ರೆ ಸಂಗ್ರಹ ಭಾಗ ೧. „	೧— ೪—೦
೭.	ತಿಲಕರ ಗೀತಾ ರಹಸ್ಯ	೩— ೮—೦
೮.	ಶ್ರೀ ದಾಸಬೋಧ ಭಾಗ ೧ ೨. ೩.	೨—೧೪—೦
೯.	ರಾಷ್ಟ್ರಸಭೆಯ ಇತಿಹಾಸ	೨— ೮—೦
೧೦.	ವಚನ ಜ್ಞಾನಸಿಂಧು	೪— ೦—೦

ಇವಲ್ಲದೆ ನಮ್ಮಲ್ಲಿ ಎಲ್ಲಾ ತರದ ಕಾಯಿದೆ ಕಾಲೇಜಯೋಗಿ ಪುಸ್ತಕಗಳೂ ನಕಾಶೆ ಚಿತ್ರಗಳೂ ಬರವಣಿಗಳೂ ದೊರೆಯುವವು.

ಶ್ರೀಪಾದ ರಾಮಚಂದ್ರ ದೇಶಪಾಂಡೆ ಬಿ. ಯಸ್. ಸಿ.
ವ್ಯವಸ್ಥಾಪಕ.

ತ್ವರೆ ಮಾಡಿರಿ! ತಯಾರಾಗಿದೆ!

ನಾಲ್ಕನೇ ದರ್ಜೆಯ
ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ನಾಲ್ಕನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.
ಎಮ್. ಗಣಪತಿರಾವ್ ಐಗಳ್ — ಗ್ರಂಥಕರ್ತರು.
ಮನೋರಂಜಕ ಚಿತ್ರಗಳೂ ಇವೆ.

ಇದರಲ್ಲಿ ಬಾರಕೂರು, ಮಂಗಳೂರು, ಮೂಲ್ಕಿ, ಕಾರ್ಕಳ, ಮೂಡಬಿದರೆ, ಸುಬ್ರಮಣ್ಯ, ಉಡುಪಿ, ಬಸರೂರು, ವೇಣೂರು, ಬೈಲಂಗಡಿ, ಧರ್ಮಸ್ಥಳ, ಕೊಲ್ಲೂರು, ಕುಂಬಳೆ, ಜಪಾನದೇಶದ ಜನರು, ಚೀನಾದೇಶದ ಜನರು, ಬರ್ಮಾದೇಶದ ಜನರು, ಯುರೋಪ ಖಂಡದ ಜನರು, ಎಸ್ಕಿಮೊ ಜನರು, ನಿಗ್ರೊ ಜನರು. ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ನಾಲ್ಕನೇ ದರ್ಜೆಯ ಮಕ್ಕಳ ಬಗ್ಗೆ ಉಪಯುಕ್ತವಾಗಿದೆ. ಕ್ರಯ 8 ಆಣೆ.
ಪುಸ್ತಕ ದೊರೆಯುವ ವಿಳಾಸ:—

ಶಾರದಾ ಛಾಪಖಾನೆ,
ಮಂಗಳೂರು.

ನೋಟೀಸು.

ಉಪ್ಪಿನಂಗಡಿ ತಾಲೂಕು ವೀರಕಂಬ ಗ್ರಾಮದ ಮುತ್ತು ಭಟ್ರ ಮಗ ಈ ಸಂಘದ ನಂಬ್ರ 59ನೇ ಮೆಂಬರರಾಗಿರುತಿದ್ದ ಮಾಜಿ ಶಂಕರಭಟ್ಟ ಎಂಬವರು ಮೃತಪಟ್ಟ ಕಾರಣ ಅವರ ಬಾಬ್ತು ಈ ಸಂಘದಲ್ಲಿರುವ 1ನೇ ಕ್ಲಾಸು ಪಾಲುಗಳು 5 (ಪಾಲು ಭಂಡವಾಳ ರೂಪಾಯಿ 250)ನ್ನು ಅವರ ಸ್ಥಿರ ಆಸ್ತಿ ವಗೈರೆಗೆ ಉತ್ತರಾಧಿಕಾರಿಯಾದ ತನ್ನ ಹೆಸರಲ್ಲಿ ವರ್ಗಾಯಿಸಬೇಕಾಗಿ ಅವರ ವಿಧವೆ ಪಾರ್ವತಿ ಅಮ್ಮನವರು ತಾರೀಕು 13—8—'25ರಲ್ಲು ಈ ಸಂಘಕ್ಕೆ ಅರ್ಜಿ ಬರಕೊಂಡಿರುತ್ತಾರೆ. ಈ ಸಂಗತಿಯನ್ನು ಸ್ವದೇಶಾಭಿಮಾನಿಯಲ್ಲಿ ಒಂದು ತಿಂಗಳ ವ್ಯಾದೆಯಿಂದ ನೋಟೀಸು ಪ್ಯಾಸ್ ಮಾಡಿದ ನಂತರ ವರ್ಗಾಯಿಸುವ ಕುರಿತು ಆಲೋಚಿಸುವ ಬಗ್ಗೆ ಈ ಸಂಘದ ಆಡಳಿತೆ ಸಭೆಯಲ್ಲಿ ನಂಬ್ರ $\frac{48}{15-8-'25}$ನೇ ನಿರ್ಣಯವಾಗಿಯದೆ. ಇದಕ್ಕೆ ಆಕ್ಷೇಪವುಳ್ಳವರು ಈ ನೋಟೀಸು ಪ್ಯಾಸ್ ಆದ ಒಂದು ತಿಂಗಳ ಒಳಗೆ ಅವರ ಆಕ್ಷೇಪಣೆಗಳನ್ನು ಬರಹ ಮೂಲಕವಾಗಿ ಕಾರ್ಯದರ್ಶಿಯಾದ ನನಗೆ ಜ್ಯಾಹೀರು ಮಾಡಲಿಕ್ಕೆ ತಪ್ಪಿದರೆ ಮೇಲಣ ನಿರ್ಣಯದಂತೆ ಸದರಿ 1ನೇ ಕ್ಲಾಸು ಪಾಲುಗಳ 5ನ್ನು ಆ ಪಾರ್ವತಿ ಅಮ್ಮನವರ ಹೆಸರಲ್ಲಿ ವರ್ಗಾಯಿಸಲಾದೀತು; ತಿಳಿದಿರಲಿ.

ನಂಬ್ರ 2835ನೇ ದಕ್ಷಿಣ
ಕನ್ನಡಾ ಬಾಗ್ಯಾತು ಕೃಷಿಕರ
ಬಂಡಸಾಲೆಯ ಸಹಕಾರಿ
ಸಂಘ, ಲಿಮಿಟೆಡ್, ವಿಟ್ಲ
ತಾರೀಕು 20—8—'25.

Shankernarayana Bhatt,
ಕಾರ್ಯದರ್ಶಿ.

ಪ್ರಕಟಣೆ.

ಕಳೆದ ತಾರೀಕು 23—8—1925ರಲ್ಲು ಜರಗಿದ ಮಹಾಸಭೆಯಲ್ಲಿ ನಮ್ಮ ಶಾಲೆಗೆ ಈ ವರೆಗಿದ್ದ 'ಕುರುಕಾಲು ಹಿಂದೂ ಹಾಯರ್ ಎಲಿಮೆಂಟರಿ ಶಾಲೆ' ಎಂಬ ಹೆಸರನ್ನು ಮಾರ್ಪಡಿಸಿ, "ಕುರುಕಾಲು ಶ್ರೀ ಗಣಪತಿ ಹಾಯರ್ ಎಲಿಮೆಂಟರಿ ಶಾಲೆ" ಎಂಬ ನಾಮಧೇಯವನ್ನು ಇಟ್ಟಿರುವುದರಿಂದ ಇನ್ನು ಮುಂದಕ್ಕೆ ನಮ್ಮ ಶಾಲೆಯ ಯಾವತ್ತು ಪತ್ರವ್ಯವಹಾರಗಳನ್ನು ದಯಮಾಡಿ ಈ ರೀತಿಯಲ್ಲಿ ನಡಿಸಬೇಕಾಗಿ ಅಪೇಕ್ಷಿಸೋಣಾಗುತ್ತದೆ.

KURKAL,
28-8-'25.

K. Ganappaya Shetty,
Manager of
Kurkal Sri Ganapathi Higher
Elementary School.
Post. Katapadi S. K.

ಕುರುಕಾಲು
ಶ್ರೀ ಗಣಪತಿ ಹಾಯರ್ ಎಲಿಮೆಂಟರಿ ಶಾಲೆ.

ಕುರುಕಾಲು ಹಿಂದೂ ಶಾಲೆಯು, ಹಾಯರ್ ಎಲಿಮೆಂಟರಿ ಶಾಲೆಯಾಗಿ ಮಂಜೂರಾತಿಯನ್ನು ಹೊಂದಿದ ಸಂತೋಷಾರ್ಥಕ್ಕಾಗಿ, ಕಳೆದ ತಾ. ೨೩-೮-೧೯೨೫ನೇ ಭಾನುವಾರ 'ಗಣೇಶ ಚತುರ್ಥಿ' ಹಬ್ಬದ ದಿವಸ ಅಪರಾಹ್ಣ ಘಂಟೆ ೩||ಗೆ ಶಾಲಾ ಮಂದಿರದಲ್ಲಿ ಮಣಿಪುರ ಕೆ. ಎಮ್. ಸಭೆಯ ಉಪದೇಶಕರಾದ ಮ|| ರಾ|| ಎಚ್. ಸೋನ್ಸರವರ ಅಧ್ಯಕ್ಷತೆಯಲ್ಲಿ ಗ್ರಾಮಸ್ಥರಿಂದಲೂ, ಉಪಾಧ್ಯಾಯರಿಂದಲೂ, ವಿದ್ಯಾರ್ಥಿಗಳಿಂದಲೂ ಕೂಡಿದ ಒಂದು ಮಹಾ ಸಭೆಯು ಜರಗಿತು. ಸಭಾರಂಭದಲ್ಲಿ ಶಾಲೆಯ ಈಗಿನ ಹೆಡ್ ಮಾಸ್ತರರಾದ ಮ|| ರಾ|| ಪಿ. ಅನಂತ ಶೆಣೈಯವರು ಮರಾಠಿ ಮತ್ತು ಕನ್ನಡ ಭಾಷೆಗಳಿಂದ ಗಣಪತಿ ಕೀರ್ತನೆಯ ಹಾಡುಗಳನ್ನೂ, ಯಕ್ಷಗಾನ ವಿಶಾರದರಾದ ಮ|| ರಾ|| ಬೀಡು ಚೆಂದಯ್ಯ ಭಾಗವತರು, ಶ್ರುತಿ, ತಾಳ, ಮೃದಂಗಗಳಿಂದೊಡಗೂಡಿ ಸಭಾಲಕ್ಷಣದ ಪದ್ಯಗಳನ್ನೂ ಕರ್ಣಾನಂದವಾಗಿ ಹಾಡಿದರು.

ತರುವಾಯ ಶಾಲಾ ಮೆನೇಜರರಾದ ಕೆ. ಗಣಪ್ಪಯ್ಯ ಸೆಟ್ರು ತನ್ನ ಭಾಷಣದಲ್ಲಿ "ವಿದ್ಯೆಯಲ್ಲಿ ತುಂಬಾ ಹಿಂದೆ ಬಿದ್ದಿರುವ ಈ ಬಡ ಹಳ್ಳಿಯಲ್ಲಿ ಈ ಶಾಲೆಯು ತಾ. ೫-೭-'೧೮ರಲ್ಲಿ 'ಕುರುಕಾಲು ಹಿಂದೂ ಲೋವರ್ ಎಲಿಮೆಂಟರಿ ಶಾಲೆ' ಎಂಬ ನಾಮಧೇಯದಿಂದ ಜನ್ಮವೆತ್ತಿ ತನ್ನ ೭ ವರುಷದ ಕೌಮಾರ ಅವಸ್ಥೆಯನ್ನು ದಾಟಿ ೮ನೇ ವರುಷಕ್ಕೆ ಈಗ ತಾನೆ ಹೆಜ್ಜೆಯನ್ನಿಟ್ಟಿರುತ್ತದೆ. ತನ್ನ ಶಿಶು ಪ್ರಾಯದ ಪುಟ್ಟ ಹೆಜ್ಜೆಗಳಿಗೆ ಸಮುದ್ರದ ತೆರೆಗಳೋಪಾದಿಯಲ್ಲಿ ಆಗಾಗ್ಗೆ ವಿಘ್ನ ಪರಂಪರೆಗಳು ಸುತ್ತುಗಟ್ಟುತ್ತಿದ್ದರೂ, ಅವುಗಳೊಂದನ್ನೂ ಲಕ್ಷಿಸದೆ, ಎಳ್ಳಷ್ಟೂ ಎದೆಗುಂದದೆ ತನ್ನ ಕರ್ತವ್ಯ ಭಾರದ ಒಂದೇ ಸ್ಥಿರ ಮನಸ್ಸಿನಿಂದ ಅಪ್ರತಿಮ ಶಕ್ತಿಯನ್ನು ಹೊಂದಿ ವಿಘ್ನಲತೆಗಳನ್ನು ಅಲ್ಲಲ್ಲೇ ಕತ್ತರಿಸಿಕೊಂಡು ಶುಕ್ಲ ಪಕ್ಷದ ಚಂದ್ರನಂತೆ ಮುಂದರಿಯುತ್ತಾ ಜಿಲ್ಲೆಯೊಳಗಣ ಅನೇಕ ವಿದ್ಯಾಭಿಮಾನಿಗಳ ದೃಷ್ಟಿಯನ್ನು ತನ್ನ ಕಡೆಗೆ ತಿರುಗಿಸಿಕೊಳ್ಳುವಷ್ಟು ಕರ್ತವ್ಯದಕ್ಷತೆಯಲ್ಲಿದ್ದು ಎಲ್ಲರ ಆದರಾತಿಥ್ಯಗಳಿಗೆ ಪಾತ್ರವಾಯಿತು. ಒಟ್ಟಾರೆ ಅಲ್ಪ ಕಾಲದಲ್ಲಿ ಬಾಲ್ಯ ವಿದ್ಯಾಭ್ಯಾಸದ ಪ್ರಥಮ ಅಂಕದಲ್ಲಿ ಕೃತಕೃತ್ಯನಾಗಿ ದ್ವಿತೀಯ ಅಂಕದ ಮಜಲಿಗೆ ಗೆಜ್ಜೆ ಕಟ್ಟಲಿಕ್ಕೆ ಹಾರೈಸುತ್ತಿರುವುದನ್ನು ಜಿಲ್ಲಾ ಎಜ್ಯುಕೇಶನಲ್ ಕೌನ್ಸಿಲಿನವರು ತಿಳಿದು ಈ ಶಾಲೆಯನ್ನು ಹಾಯರ್ ಎಲಿಮೆಂಟರಿ ಮಾಡುವುದಕ್ಕಾಗಿ ತಾ. ೨೪-೬-'೨೫ರ ಮೀಟಿಂಗಿನಲ್ಲಿ VIನೇ ದರ್ಜೆಯ ಮಂಜೂರಾತಿಯನ್ನು ಮಾಡಿ ಇದನ್ನು ಸತ್ಕರಿಸಿದರು. ಹೀಗೆ ೭ ವರುಷದ ಬಾಲಕನು ಲೋವರ್ ಎಲಿಮೆಂಟರಿ ವಿದ್ಯಾಭ್ಯಾಸದಲ್ಲಿ ಪರಮಾವಧಿಯನ್ನು ಹೊಂದಿ ೮ನೇ ವರುಷದ ಆರಂಭದಲ್ಲಿ ಹಾಯರ್ ಎಲಿಮೆಂಟರಿ ವಿದ್ಯಾಭ್ಯಾಸಕ್ಕೆ ಪ್ರವೃತ್ತನಾಗಲಿಕ್ಕೆ ನಮ್ಮ ಗ್ರಾಮ ದೇವತೆಯಾಗಿದ್ದು ಸಮೀಪದ ಕುಂಜಾರು ಗಿರಿಯ ಮೇಲೆ ಪ್ರತಿಷ್ಠಿತಳಾದ 'ಶ್ರೀ ದುರ್ಗಾಪರಮೇಶ್ವರೀ ದೇವಿಯ' ಕೃಪಾಕಟಾಕ್ಷವೇ ಕಾರಣವಲ್ಲದೆ ಬೇರೆಯಲ್ಲ. ಶ್ರೀ ಗಿರಿಜೆಯ ಕೃಪೆಯಿಂದ ಜನನಕ್ಕೆ ಬಂದಿರುವ ಈ ಬಾಲಕನಿಗೆ ಈತನ ಜೀವನ ಜ್ಯೋತಿಯ ಬದಲಾವಣೆಯ ಕಾಲದಲ್ಲಿ, ಈ ವರೆಗೆ ಇರುವ 'ಹಿಂದೂ' ಎಂಬ ಸಾಮಾನ್ಯ ನಾಮವನ್ನು ಬದಲಾಯಿಸಿ, ಹಿಂದೂ ಭಕ್ತಿ ಭಾವಾರ್ಥವೂ ಅರ್ಥಗರ್ಭಿತವೂ ಆದ ಒಂದು ಅಂಕಿತ ನಾಮಕರಣವನ್ನು ಮಾಡುವುದು ಅತಿ ಅಗತ್ಯವೂ ಸರ್ವಸಮ್ಮತವೂ ಆಗಿರುತ್ತದೆ. ಆದ್ದರಿಂದ ಅಂಥಾ ಅರ್ಥಗರ್ಭಿತವಾದ ಹೊಸ ನಾಮವನ್ನು ನಾವು ಪರ್ಯಾಲೋಚಿಸಿದರೆ:—ಶ್ರೀ ಪಾರ್ವತಿ ದೇವಿಯ ಕೃಪೆಯಿಂದ ಜನನಕ್ಕೆ ಬಂದವನೂ, ತನ್ನ ಸಪ್ತ ವಾರ್ಷಿಕ ಜೀವನ ಯಾತ್ರೆಯಲ್ಲಿ ನಿರ್ವಿಘ್ನಕಾರಿಯಾದವನೂ, ವಿದ್ಯೆಯಲ್ಲಿ ಪ್ರಥಮ ಪೂಜಾರ್ಹನೂ, ಇಂದಿನ ಹಬ್ಬದ ದಿವಸ ನಮ್ಮೆಲ್ಲರನ್ನೂ ಇಲ್ಲಿ ಕೂಡುವಂತೆ ಪ್ರೇರೇಪಿಸಿದವನೂ ಯಾರೆಂದರೆ 'ಶ್ರೀ ಗಣಪತಿಯೇ' ಎಂದು ಸ್ಪಷ್ಟವಾಗುವುದು. ಒಟ್ಟಾರೆ ನಮ್ಮ ಶಾಲೆಯ ೭ವರುಷದ ಜಾತಕವನ್ನು ಸ್ಫುಟ ಮಾಡಿ, ಇಂದಿನ ಹಾಯರ್ ಎಲಿಮೆಂಟರಿ ಕುಮಾರನಿಗೆ "ಶ್ರೀ ಗಣಪತಿ" ಎಂಬ ನಾಮಕರಣವನ್ನು ಮಾಡುವಷ್ಟು ಚಲೋ ಅರ್ಥ ಗರ್ಭಿತವಾದ ಹೆಸರು ಬೇರೊಂದಿರಲಾರದೆಂದರೆ ಅತಿಶಯೋಕ್ತಿಯಾಗಲಾರದು. ಶ್ರೀ ವಿಘ್ನೇಶ್ವರನ ನಾಮಧೇಯವು ಹೃದಯ ಕ್ಷೇತ್ರದಲ್ಲಿ ಅಂಕುರಿಸುತ್ತಿರುವಾಗಲೆಲ್ಲಾ ನಮ್ಮ ಶಾಲೆಯ ಭವಿಷದಭಿವೃದ್ಧಿಯ ಭರವಸೆಯ ಫಲವೂ ಕರಗತವಾಗುವುದೆಂಬುದರಲ್ಲಿ ಸಂದೇಹವೇ ಇಲ್ಲ. ಆದ್ದರಿಂದ ನೀವೆಲ್ಲರೂ ಈ ಪವಿತ್ರನಾಮವನ್ನು ಅನುಮೋದಿಸುವುದಾದರೆ ನಮ್ಮ ಶಾಲೆಗೆ ಇಂದಿನಿಂದ 'ಕುರುಕಾಲು ಶ್ರೀ ಗಣಪತಿ ಹಾಯರ್ ಎಲಿಮೆಂಟರಿ ಶಾಲೆ' ಎಂಬ ನಾಮಕರಣವನ್ನು ಮಾಡುವೆನು." ಎಂದು ಹೇಳಿ ತನ್ನ ಭಾಷಣವನ್ನು ಮುಕ್ತಾಯಗೊಳಿಸಿದರು.

ನಂತರ ಸಭಿಕರ ಪೈಕಿ ಬೀಡು ಚೆಂದಯ್ಯ ಭಾಗವತರು ರಾ| ಕೆ. ರಾಮಯ್ಯ ಸೆಟ್ರು ವಗೈರೆರಿಂದ ಶಾಲೆಗೆ 'ಶ್ರೀ ಗಣಪತಿ' ಎಂಬ ನಾಮವನ್ನಿಡುವುದರ ಯೋಗ್ಯತೆಯ ಕುರಿತು ಇನ್ನಿತರ ಉದಾಹರಣೆಗಳಿಂದ ಪುಷ್ಟೀಕರಿಸುವ ಭಾಷಣಗಳಾಗಲು, ಹಿಂದೂ ತತ್ವಜ್ಞರಾದ ಅಧ್ಯಕ್ಷ ಮಹಾಶಯರು ಶಾಲೆಯ ಅಭಿವೃದ್ಧಿಯನ್ನು ಶ್ಲಾಘಿಸಿ, ಶಾಲಾ ಮೆನೇಜರರ ಪ್ರಯತ್ನದಲ್ಲಿ ಗ್ರಾಮಸ್ಥರು ಸಹಭಾಗಿಗಳಾಗಿರಬೇಕೆಂತಲೂ, ಭಗವಂತನು ಈ ಶಾಲೆಯನ್ನು ಉತ್ತರೋತ್ತರ ಅಭಿವೃದ್ಧಿಪಡಿಸಲಿ ಎಂತಲೂ, ಇತ್ಯಾದಿ ಕಾಲೋಚಿತ ಭಾಷಣವನ್ನು ಮಾಡಿದರು.

ಬಳಿಕ 'ಶ್ರೀ ಗಣಪತಿಯ' ಅನುಗ್ರಹವನ್ನು ಪ್ರಾರ್ಥಿಸಿ, ಕೀರ್ತನೆಗಳನ್ನೂ, ಗಾಯನಗಳನ್ನೂ ಹಾಡಿ, ವಿದ್ಯಾರ್ಥಿಗಳನ್ನೂ, ಸಭಿಕರನ್ನೂ ಪಂಚಕಜ್ಜಾಯ ತಾಂಬೂಲಗಳಿಂದ ಉಪಚರಿಸಲು, ಎಲ್ಲರೂ ಏಕಕಂಠರಾಗಿ "ಕುರುಕಾಲು ಶ್ರೀ ಗಣಪತಿ ಹಾಯರ್ ಎಲಿಮೆಂಟರಿ ಶಾಲೆ" ಎಂದು ಆನಂದಾತಿಶಯದಿಂದ ನಾಮಕರಣವನ್ನುಮಾಡಿ ಸಂಜೆ ೫||ಗೆ ಸಭಾ ಮುಕ್ತಾಯಗೊಳಿಸಿದರು.

ಕುರುಕಾಲು,
೨೬—೮—'೨೫.

ಪ್ರತ್ಯಕ್ಷದರ್ಶಿ.

ಟ್ಯಾಪ್‌ರ್ಯಾಟಿಂಗ್ ಮತ್ತು ಶೋರ್ಟ್‌ಹೇಂಡ್,
ಕಲಿಯಲಪೇಕ್ಷಿಸುವ ವಿದ್ಯಾರ್ಥಿಗಳಿಗೆ ಒಳ್ಳೆ ಸಂದರ್ಭ.

ಮಹನೀಯರೇ,

ಕಾರ್ಕಳದಲ್ಲಿ ಕೋರ್ಟು, ತಾಲೂಕು ಕಚೇರಿ, ಹ್ಯಾಸ್ಕೂಲು ಮುಂತಾದ ಸಂಸ್ಥೆಗಳಿದ್ದು ಸರ್ವರಿಗೂ ಅಗತ್ಯವಾದ ಟ್ಯಾಪ್‌ರ್ಯಾಟಿಂಗ್ ಕೆಲಸಮಾಡುವ ಹಾಗೂ ವಿದ್ಯಾರ್ಥಿಗಳಿಗೆ ಟ್ಯಾಪ್‌ರ್ಯಾಟಿಂಗ್ ಮತ್ತು ಶೋರ್ಟ್‌ಹೇಂಡ್ (ಸಂಕ್ಷಿಪ್ತಲಿಪಿ) ಕಲಿಸಿಕೊಡುವ ಏರ್ಪಾಡು ಇಷ್ಟು ವರೆಗೆ ಇಲ್ಲದಿರುವ ಪ್ರಯುಕ್ತ ಕೆಲ ಮಹನೀಯರ ಸೂಚನೆ ಮೇರೆಗೆ ಈ ದಿವಸ ನಾನು "ದಿ ಶೋರ್ಟ್‌ಹೇಂಡ್ ಎಂಡ್ ಟ್ಯಾಪ್‌ರ್ಯಾಟಿಂಗ್ ಇನ್ಸ್‌ಟಿಟ್ಯೂಶನ್" ಎನ್ನುವ ಹೆಸರನ್ನಿಟ್ಟು ಒಂದು ಆಫೀಸನ್ನು ಕಾರ್ಕಳ ಪೇಟೆಯ ಮಧ್ಯ ಸ್ಥಳದಲ್ಲಿ ತೆರೆದಿದ್ದೇನೆ. ತಾವೆಲ್ಲರೂ ಉದಾರ ಮನಸ್ಸಿನಿಂದ ನಾನು ಹೊಸತಾಗಿ ಕೈಕೊಂಡ ಈ ಕಾರ್ಯಕ್ಕೆ ಸಹಾಯಮಾಡಿದರೆ, ದೈವಾನುಗ್ರಹದಿಂದಲೂ, ತಮ್ಮೆಲ್ಲರ ಪ್ರೋತ್ಸಾಹದಿಂದಲೂ, ಕೋರ್ಟು, ಕಚೇರಿ ಮುಂತಾದ ಸರಕಾರಿ ಸಂಸ್ಥೆಗಳಿಗೆ ಕಳುಹಿಸುವ ತಮ್ಮ ಅರ್ಜಿ, ಅಪೀಲು ಪ್ಲೆಂಟು, ಸ್ಟೇಟ್‌ಮೆಂಟ್ ಮುಂತಾದವುಗಳನ್ನು ಯೋಗ್ಯರೀತಿಯಿಂದ ಟ್ಯಾಪ್ ಮಾಡಿಕೊಡುವದಲ್ಲದೆ, ವಿದ್ಯಾರ್ಥಿಗಳಿಗೂ ಕೆಲವೇ ತಿಂಗಳೊಳಗೆ ತಕ್ಕ ಸಮಯದಲ್ಲಿ ಟ್ಯಾಪ್‌ರ್ಯಾಟಿಂಗ್ ಮತ್ತು ಶೋರ್ಟ್‌ಹೇಂಡ್ ಕಲಿಸಿಕೊಡುವೆನು, ನ್ಯಾಯವಾದ ಫೀಸು.

ತಾ. ೨-೯-'೨೫.

ಕೆ. ಶ್ರೀನಿವಾಸ ಶೆಣೈ,
ಮಾಲಕ:—ದಿ ಶೋರ್ಟ್‌ಹೇಂಡ್ ಎಂಡ್
ಟ್ಯಾಪ್‌ರ್ಯಾಟಿಂಗ್ ಇನ್ಸ್‌ಟಿಟ್ಯೂಶನ್, ಕಾರ್ಕಳ.

— ಸ್ವೀಕಾರ. —

ಮುಲ್ಕಿ ಯೂನಿಯನ್ ಕ್ಲಬ್ಬಿನ ವಾರ್ಷಿಕ ವರದಿಯ ರಿಪೋರ್ಟು.

ಚರಿತ್ರೆ ಮತ್ತು ಕಥೆಗಳು, ಗ್ರಂಥಕರ್ತರು ಕೆ. ಶ್ರೀನಿವಾಸಶೆಣೈ ಬೋರ್ಡು ಹ್ಯಾಸ್ಕೂಲ್ ಕಾರ್ಕಳ ಮತ್ತು ಉ. ಮಂಗೇಶರಾವ್ ಬೋರ್ಡ್ ಹ್ಯಾಸ್ಕೂಲ್ ಪುತ್ತೂರು. ಪ್ರಕಾಶಕ ಕೆ. ಶ್ರೀನಿವಾಸ ಶೆಣೈ ಬೆಲೆ ೦-೫-೦.

ವಸಂತ—ಚಿತ್ರರಂಜನ ಅಂಕ, ಸಂಪಾದಕ ಕೋಟ ಶಿವರಾಮ ಕಾರಂತ. ಕ್ರಯ ೦—೬—೦. ದೇಶಬಂಧು ಚಿತ್ರರಂಜನ ದಾಸರ ಮತ್ತು ಅವರ ಕುಟುಂಬದ ವಿವಿಧ ಚಿತ್ರಗಳಿಂದ ಮನೋಹರವಾದ ಭವ್ಯ ಸಂಚಿಕೆ. ವಿಮರ್ಶೆ ಹಿಂದಿನಿಂದ.

ರಂಗಭೂಮಿ:—(ಶ್ರೀ ದತ್ತಾತ್ರೇಯ ಸಂಗೀತ ನಾಟಕ ಮಂಡಳಿ ಗದಗ ಇವರ ಆಶ್ರಯದಿಂದ ನಡೆಯುವ ಸಚಿತ್ರ ಮಾಸಪತ್ರಿಕೆ. ಸಂಪಾದಕ ದ. ಕೆ. ಭಾರದ್ವಾಜ, ವಾರ್ಷಿಕ ಚಂದ ೩-೦-೦, ವಿಳಾಸ:—ವ್ಯವಸ್ಥಾಪಕ "ರಂಗಭೂಮಿ" ಕಾರ್ಯಾಲಯ, ಬಸವನಗುಡಿ, ಬೆಂಗಳೂರು ಸಿಟಿ) ಈ ಮಾಸಪತ್ರಿಕೆಯಲ್ಲಿ, ರಂಗಭೂಮಿಯ ವಿಷಯಕವಾದ ಲೇಖಗಳೆ ಪ್ರಧಾನವಾಗಿ ಬರುವವೆಂಬುದು ಅದರ ಹೆಸರಿನಿಂದಲೆ ಸ್ಪಷ್ಟವಾಗುತ್ತದೆ. ಈ ಸಂಚಿಕೆಯಲ್ಲಿ ಸಂಪಾದಕರ ಅಭ್ಯನಿವೇದನವಲ್ಲದೆ ಆರು ಪ್ರಸಿದ್ಧ ಲೇಖಕ ಲೇಖಕಿಯರ ಲೇಖಗಳು ಬಂದಿವೆ. ಹಾಗು ಪ್ರಸಿದ್ಧ ನಟರ ಮನೋಹರವಾದ ಚಿತ್ರಗಳು ಕೂಡ ಇದರಲ್ಲಿ ಮುದ್ರಿತವಾಗಿವೆ. ಲೇಖಗಳು ನಾಟಕಕಲೆಯನ್ನು ಪರಿಶೀಲಿಸಿದವರ ಕೈಯಿಂದ ಹೊರಬಿದ್ದವಾದ ಕಾರಣ ಅವು ಯೋಗ್ಯವಾಗಿಯೇ ಇವೆ ಎಂದು ಪೃಥಕ್ಕರಿಸಿ ಹೇಳಬೇಕಾದ ಅಗತ್ಯವಿಲ್ಲ. ಮುದ್ರಣವು ರಂಜಕವಾಗಿದೆ. ಸಾರಾಂಶ ಈ ಪತ್ರಿಕೆಯು ಸರ್ವಾಂಗಸುಂದರವಾಗಿದೆ. ಕನ್ನಡದಲ್ಲಿ ಇಂಥ ಒಂದೆ ವಿಷಯಕ್ಕಾಗಿ ಅರ್ಪಿಸಿಕೊಂಡ ಪತ್ರಿಕೆಯು ಅಗತ್ಯವಿತ್ತು. ಅದನ್ನು ಶ್ರೀಯುತರು ಪೂರಯಿಸಿದುದಕ್ಕಾಗಿ ಅವರನ್ನು ಕನ್ನಡಿಗರಪರವಾಗಿ ಅಭಿನಂದಿಸುವುದು ನಮ್ಮ ಕರ್ತವ್ಯವಾಗಿದೆ. ಈ ಹೊಸ ಪತ್ರಿಕೆಯು ಚಿರಾಯುವಾಗಲಿ ಎಂದು ನಾವು ಬಯಸುತ್ತೇವೆ.

ವಿದೇಶ ವರ್ತಮಾನ.

— ಮೊರೊಕ್ಕೊದೊಳಗಿನ ಸ್ಥಿತಿಗತಿಗಳನ್ನು ತಿಳಿದುಕೊಳ್ಳಲು ಫ್ರೆಂಚ ಕೊಮಿಸಿನರು ಒಂದು ಡೆಪ್ಯುಟೇಶನು ಕಳುಹಿಸಿದ್ದರು. ಆದರೆ ಅದನ್ನು ದಂಡೆಯ ಮೇಲೆ ಇಳಿಯಲು ಬಿಡಲಿಲ್ಲ.

— ಝ್ಯಾಂಗನಿಗೆ ಎದುರಾಗಿ ಸ್ಪಿಯಸ್ಸಾದಲ್ಲಿ ರಾಜತಂತ್ರಗಾರರು ಗುಪ್ತಕೂಟವನ್ನು ಮಾಡಿದ್ದರು. ಅದು ಬಹಿರಂಗವಾದ್ದರಿಂದ ಈಗ ೧೫೦ ಜನರನ್ನು ಕೈದು ಮಾಡಲಾಗಿದೆ.

— ಬಲ್ಗೇರಿಯದ ಅಧ್ಯಕ್ಷರು ಪೆರಿಸ ಪಟ್ಟಣಕ್ಕೆ ಹೋಗುವಾಗ ಬಲ್ಗೇರಿಯನ್ ಕೊಮಿನಿಸ್ಟರು ಅವರ ಮೇಲೆ ಹಲ್ಲೆ ಮಾಡಿದರು. ಇಬ್ಬರನ್ನು ಕೈದುಮಾಡಿದೆ.

— ಬಸರಾದಲ್ಲಿ ಬೆಂಕಿ ಹತ್ತಿ ಸುಮಾರು ೮೦ ಸಾವಿರ ಪೌಂಡಿನ ನಷ್ಟವು ಸಂಭವಿಸಿದೆ. ಹಲವು ಜನರು ಕೂಡ ಮೃತಪಟ್ಟಿರುವರು.

— ಚೀನಾದಲ್ಲಿ ೯ ಜನ ಕ್ರಿಸ್ತೀಯೋಪದೇಶಕರನ್ನು ಓಡಿಸಿದರು.

— ಶಾಂಘಾಯಿಯ ಪೋಷ್ಟು ಬಟವಾಡೆಯವರು ಮುಷ್ಕರವನ್ನು ಹಾಕಿದ್ದು ಸಂಬಳವನ್ನು ಹೆಚ್ಚಿಸಬೇಕೆಂದೂ, ಕೆಲಸದ ಸಮಯ, ಹೆಚ್ಚಿನ ಕೆಲಸಕ್ಕೆ ಬತ್ತೆ, ಪ್ರತಿ ಹತ್ತು ವರ್ಷಕ್ಕೆ ಒಂದು ವರ್ಷದ ಸಂಬಳವನ್ನು ಹೆಚ್ಚು ಕೊಡುವುದು ಪರಕೀಯರನ್ನು ಕೆಲಸಕ್ಕೆ ಇಡಕೂಡದೆಂದೂ ಕೇಳಿಕೊಂಡಿದ್ದಾರೆ.

— ಅಫಘಾನ ಸರಕಾರವು ಇಟಾಲಿಯನ್ ಪಿಪೆರ್ನೊ ಎಂಬವನನ್ನು ಫಾಶಿಗೆ ಕೊಟ್ಟಿತ್ತು. ಈ ಪ್ರಕರಣದಲ್ಲಿ ಈಗ ಅಫಘಾನ ಸರಕಾರವು ಇಟಲಿಯ ಕ್ಷಮೆಯನ್ನು ಕೇಳಿ ಅದಕ್ಕೆ ೬೦೦೦ ಪೌಂಡನ್ನು ದಂಡನೆಯಾಗಿ ಕೊಟ್ಟಿದೆ.

— ಚೀನ ಅಧಿಕಾರಿಗಳು ಇಂಗ್ಲಂಡ ಮತ್ತು ಜಪಾನದೇಶಗಳ ಹಡಗುಗಳನ್ನು ಚೀನಕ್ಕೆ ಬರಲು ಪ್ರತಿಬಂಧಿಸಿದ್ದಾರೆ. ಇತರ ಹಡಗುಗಳನ್ನು ಒಳಗೆ ಬಿಡುವಾಗ ಜಪ್ತಿಮಾಡುತ್ತಾರೆ. ಚೀನಾದೊಳಗಿನ ಅನ್ನ ಸಾಮಾನು ಮತ್ತು ದೊರಗು ಸರಕುಗಳನ್ನು ಹೊರಗೆ ಒಯ್ಯಲು ಬಿಡುವುದಿಲ್ಲ. ಈ ಸಂಬಂಧವಾಗಿ ಬ್ರಿಟಿಷ ರಾಯಭಾರಿಯು ತಕ್ರಾರುಮಾಡಿರುವರು.

— ಯುದ್ಧದ ಸಮಯದಲ್ಲಿ ಬೆಲ್ಜಿಯಮು ಅಮೇರಿಕೆಯಿಂದ ೪೧೭ ದಶಲಕ್ಷ ಡೊಲ್ಲರುಗಳನ್ನು ಸಾಲ ತಕ್ಕೊಂಡು ಅದನ್ನು ೬೨ ವರ್ಷಗಳಲ್ಲಿ ಸಲಾಯಿಸತಕ್ಕದ್ದಾಗಿದೆ.

— ಆಸ್ಟ್ರೇಲಿಯಾ ಖಂಡದ ಪಾಪ್ವಾ ದೇಶದಲ್ಲಿ ಭೂಮಿಯಲ್ಲಿ ಎಣ್ಣೆಯು ದೊರೆಯುತ್ತದೆಂಬದಾಗಿಯೂ ಅದನ್ನು ರೂಢಿಸುವ ಏರ್ಪಾಡು ನಡೆಯುತ್ತಲಿದೆಯೆಂಬದಾಗಿಯೂ ತಿಳಿಯಬರುತ್ತದೆ.

— ಮರಾಕೋ ಯುದ್ಧದಲ್ಲಿ ಸ್ಪೇನಿಶರಿಗೂ ಮತ್ತು ಫ್ರೆಂಚರಿಗೂ ಜಯವುಂಟಾಗುತ್ತಲಿದೆಯೆಂದೂ, ಸೌಲ್ ಪ್ರಾಂತ್ಯದ ಜನಗಳವರು ಫ್ರೆಂಚರಿಗೆ ಅಧೀನವಾಗುತ್ತಲಿರುವರೆಂದೂ ತಿಳಿಸಲ್ಪಟ್ಟಿದೆ.

— ಜರ್ಮನಿ ದೇಶದಲ್ಲಿ ಪದಾರ್ಥಗಳ ಬೆಲೆಯು ಹೆಚ್ಚಿಹೋಗಿ, ಕೂಲಿಯವರಿಗೆ ಬಹಳ ತೊಂದರೆಯಾಗಿರುತ್ತದೆ. ತಮ್ಮಗಳ ಕೂಲಿಯು ಹೆಚ್ಚಿಸಲ್ಪಡಲು ಪ್ರಯತ್ನಪಡುತ್ತಲಿದ್ದಾರೆ.

— ಆಫ್ರಿಕದಲ್ಲಿ ಖಲಾಶಿಗಳು ಮುಷ್ಕರವನ್ನು ಹಾಕಿರುವರು. ಟ್ರಾನ್ಸವಾಲ ಲೇಬರ ಕೊನ್ಫರೆನ್ಸಿನವರು ಅವರ ಮುಷ್ಕರವನ್ನು ಸಮರ್ಥಿಸಿ ಅದನ್ನು ಪ್ರೋತ್ಸಾಹಿಸುವಂಥ ಠರಾವುಗಳನ್ನು ಪಾಸುಮಾಡಿರುವರು.

ಒಳದೇಶ ವರ್ತಮಾನ.

— ಬೆಳಗಾವಿನ ಮಹಿಲಾ ವಿದ್ಯಾಲಯಕ್ಕೆ ೫೦೦ ರೂ. ಗ್ರೆಂಟನ್ನು ಜಿಲ್ಲಾ ಲೋಕಲ್ ಬೋರ್ಡಿನಿಂದ ಕೊಡೋಣಾಗಿದೆ.

— ಮಾಪಿಳೆ ಕೈದಿಗಳ ಪೈಕಿ ಬಳ್ಳಾರಿ ಜೈಲಿನೊಳಗಿನ ೨೭೮ ಜನರು, ಮದ್ರಾಸ ಜೈಲಿನೊಳಗಿನ ೫೨ ಜನರು ಹಾಗು ತ್ರಿಚನಾಪಳ್ಳಿ ಜೈಲಿನೊಳಗಿನ ೮೦ ಜನರು ಅಂದಮಾನ ದ್ವೀಪದಲ್ಲಿ ಹೋಗಿ ಅಲ್ಲಿಯ ವಸಾಹತು ಮಾಡಲು ಒಪ್ಪಿಕೊಂಡದ್ದರಿಂದ ಸರಕಾರವು ಅವರನ್ನು ಕಳುಹಿಸುವ ವಿಲೆವಾರಿ ಮಾಡುವದಿದೆ.

— ತ್ರಾವಣಕೋರ ಸರಕಾರವು ತನ್ನ ಸಂಸ್ಥಾನದೊಳಗಿನ ಸರಕಾರಿ ಬಾವಿಗಳನ್ನೂ, ಕೆರೆಗಳನ್ನೂ ಎಲ್ಲ ಸಮಾಜದವರು ಉಪಯೋಗಿಸಬಹುದೆಂದು ಹುಕುಮು ಹೊರಡಿಸಿದೆ.

— ಪೂನೆಯಲ್ಲಿ ತಿಲಕ ಮಹಾವಿದ್ಯಾಲಯದ ಕಡೆಯಿಂದ ಗಣೇಶ ಚತುರ್ಥಿಯ ಉತ್ಸವದ ವೇಳೆಯಲ್ಲಿ ಸ್ವದೇಶಿ ವಸ್ತುಗಳ ಪ್ರದರ್ಶನವು ತೆರೆಯಲ್ಪಟ್ಟಿತು. ಈ ವರ್ಷದ ಈ ಪ್ರದರ್ಶನಕ್ಕಾಗಿ ಎಲ್ಲ ಕಡೆಗಳಿಂದ ಉತ್ತಮೋತ್ತಮವಾದ ದೇಶೀಯ ವಸ್ತುಗಳು ಬಂದಿರುವವು.

— ಪೂನೆಯ ಜನರಲ್ ಪೋಸ್ಟಿನ ಮಾಜಿ ಹೆಡ್‌ಮಾಸ್ತರರ ಮೇಲೆ ಹಣದ ವಂಚನೆಯ ಆರೋಪದಿಂದ ಖಟ್ಲೆಯಾಗಿತ್ತು. ಜ್ಯೂರಿಗಳು ಅವರನ್ನು ನಿರ್ದೋಷಿಗಳನ್ನಾಗಿ ಮಾಡಿದ್ದರಿಂದ ಅವರ ಬಿಡುಗಡೆಯಾಗಿದೆ. ಆದರೂ ಅವರ ಮೇಲೆ ಬೇರೊಂದು ಖಟ್ಲೆಯು ನಡೆಯುವದಿದೆ.

— ಮುಂಬಯಿ ಶಹರದೊಳಗಿನ ಬೋರಿಬಂದರ ಸ್ಟೇಶನಿನ ಸುಧಾರಣೆ ಆಗತಕ್ಕದಿದ್ದು ಇದಕ್ಕಾಗಿ ಸ್ಟೇಟ ಸೆಕ್ರೆಟರಿಗಳು ೮೮ ಲಕ್ಷ ೮೦ ಸಾವಿರ ರೂಪಾಯಿಯನ್ನು ಮಂಜೂರುಮಾಡಿರುವರು. ಹಾಗು ಬೋರ ಘಾಟಿನ ರಿವ್ಹರ್ಸಿಂಗ ಸ್ಟೇಶನನ್ನು ತೆಗೆದು ಹಾಕಲು ಸುಮಾರು ೬೭ ಲಕ್ಷ ರೂ. ಸೆಂಕ್ಷನಾಗಿದೆ.

— ನಗರ ಜಿಲ್ಲೆಯಲ್ಲಿ ಸರಕಾರಿ ಅಧಿಕಾರಿಗಳು ಹೊಲೆಯರನ್ನು ಸಂಬಳವಿಲ್ಲದೆ ಬಿಟ್ಟಿಗೆ ಹಿಡಿದು ಅವರಿಂದ ಬೇಕಾದಂತೆ ಕೆಲಸತೆಕ್ಕೊಳ್ಳುತ್ತಿದ್ದರು. ಆದರೆ ಸಂಬಳ ಕೊಡದೆನೆ ಯಾರಿಂದಲೂ ಕೆಲಸ ಮಾಡಿಸಬಾರದೆಂಬುದಾಗಿ ಅಲ್ಲಿನ ಕಲೆಕ್ಟರ ಸಾಹೇಬರು ಹುಕುಮನ್ನು ಹೊರಡಿಸಿದ್ದಾರೆ.

— ಗುಜರಾಥದ ಪೈಕಿ ಕಡಿ ಎಂಬ ಪ್ರಾಂತದೊಳಗಿನ ಬೋರಜ ಎಂಬ ಊರಲ್ಲಿ ನೆಲದೊಳಗೆ ಜೈನತೀರ್ಥಂಕರರ ಅತಿ ಪ್ರಾಚೀನ ಕಾಲದ ಎರಡು ಮೂರ್ತಿಗಳು ಸಿಕ್ಕಿದ್ದಾವೆ.

— ನರೇಂದ್ರ ಮಂಡಲದ ಅಧಿವೇಶನವು ದಿಲ್ಲಿಯಲ್ಲಿ ನವಂಬರ ತಾ. ೯ರಿಂದ ೧೪ರ ವರೆಗೆ ನೆರೆಯತಕ್ಕದಿದೆ.

— ಝಾಂಸಿಯ ಕೊಂಗ್ರೆಸ ಕಮಿಟಿಯ ಕಾರ್ಯದರ್ಶಿಗಳಾದ ಕೃಷ್ಣಗೋಪಾಲ ಶರ್ಮಾ ಎಂಬವರ ಮೇಲೆ ಹತ್ಯಾರು ಕಾಯಿದೆಯ ಮೇರೆಗೆ ಖಟ್ಲೆಯಾಗಿತ್ತು. ಈ ಖಟ್ಲೆಯಲ್ಲಿ ಅವರು ನಿರ್ದೋಷಿಗಳೆಂದು ಅಸೆಸರರು ಅಭಿಪ್ರಾಯವನ್ನು ಕೊಟ್ಟಾಗ್ಯೂ ಸೆಶನ ಜಡ್ಜರು ಅವರ ಮೇಲೆ ಎರಡು ಕಲಮುಗಳನ್ನು ಹೊರಿಸಿ ಮೂರು ವರ್ಷ ಮತ್ತು ೧೮ ತಿಂಗಳು ಎಂದರೆ ೪|| ವರ್ಷ ಕಠಿಣ ಶಿಕ್ಷೆಯನ್ನು ವಿಧಿಸಿರುವರು.

— ಸಾರಣ ಜಿಲ್ಲೆಯಲ್ಲಿ ವಿಜರಗಂಜ ಎಂಬ ಕಡೆಯಲ್ಲಿ ಹಿಂದುಗಳ ಮೆರವಣಿಗೆ ಹೊರಟಾಗ ದಂಗೆಯಾಗಿ ಆ ದಂಗೆಯಲ್ಲಿ ಸಾಧಾರಣ ೫೦ ಜನರು ಜಖಂಪಟ್ಟಿರುವರು.

— ಬಂಗಾಲ ಕೌನ್ಸಿಲು ಕೌನ್ಸಿಲ್‌ಚುನಾವಣೆಗೆ ಸ್ತ್ರೀಯರು ಮತ ಕೊಡಬಹುದೆಂಬ ಠರಾವನ್ನು ಪಾಸುಮಾಡಿದೆ.

— ಕಲಕತ್ತೆಯ 'ಕುಕ್ ಎಂಡ್ ಕೆಲ್ವೆ' ಎಂಬ ರತ್ನವ್ಯಾಪಾರಿಗಳ ಅಂಗಡಿಗೆ ಮೂವರು ಠಕ್ಕರು ಬಂದು ವಜ್ರದ ಉಂಗುರಗಳನ್ನು ನೋಡಬೇಕೆಂಬುದಾಗಿ ಹೇಳಿದರು. ಅವರಿಗೆ ದೊಡ್ಡ ಪೆಟ್ಟಿಗೆಯನ್ನು ತೆರೆದು ತೋರಿಸಹತ್ತಿದ್ದಲ್ಲಿ ಆ ಮೂವರ ಪೈಕಿ ಒಬ್ಬನು ತಾನು ತೆಕ್ಕೊಳ್ಳುವ ನೆವದಿಂದ ಪೆಟ್ಟಿಗೆಯಲ್ಲಿ ಬಲಾತ್ಕಾರದಿಂದ ಕೈಹಾಕಿದನು. ಮಾಲು ತೋರಿಸತಕ್ಕವನು ಕೈ ಹಿಂತೆಗಿಯಲು ಅವನಿಗೆ ಹೇಳಿದನು. ಆ ಪೆಟ್ಟಿಗೆಯನ್ನು ನೋಡುವಾಗ ಐದು ವಜ್ರಗಳುಳ್ಳ ೧೬೦೦ ಕ್ರಯಬಾಳುವ ಒಂದುಂಗುರವು ಕಾಣೆಯಾಗಿದೆ. ಕೂಡಲೆ ಪೋಲೀಸರನ್ನು ಕರೆಯಿಸಿ ಇವರನ್ನು ಬಹು ಸೂಕ್ಷ್ಮ ರೀತಿಯಿಂದ ಜಡ್ತಿಮಾಡಿದಲ್ಲೂ ಕಾಣೆಯಾದ ಉಂಗುರವು ಪತ್ತೆಯಾಗಲಿಲ್ಲ. ಆಗ ಅವರನ್ನು ಜಾಮೀನುಗಳ ಮೇಲೆ ಬಿಡುವ ಸಂದರ್ಭ ಒದಗಿತು. ಅಷ್ಟರಲ್ಲಿ ಆ ಅಂಗಡಿಯ ಕೆಲಸದವರಪೈಕಿ ಒಬ್ಬನು ಹೇಳಿದ್ದೇನೆಂದರೆ, ಈ ಮೂವರಲ್ಲಿ ಇಂಥವನು ಬಾಯಿಯ ಹತ್ತಿರ ಎರಡು ಮೂರು ಸಾರಿ ಕೈ ಒಯಿದು ಬಹು ಪ್ರಯಾಸದಿಂದ ಏನೋ ನುಂಗಿದಂತೆ ಮಾಡಿದ್ದನು. ಕೆಲಸದವನ ಈ ಮಾತು ಕೇಳಿದ ಕೂಡಲೆ ಪೋಲೀಸರ ಮುಖಾಂತರ ಆ ಆರೋಪಿತ ಇಸಮನ್ನು ಎಕ್ಸ್‌ರೇಸ (ಕ್ಷಕಿರಣ) ಎಂಬ ಯಂತ್ರದ ಸಹಾಯದಿಂದ ಅವನ ಹೊಟ್ಟೆಯನ್ನು ಪರೀಕ್ಷಿಸಿದ್ದಲ್ಲಿ ಒಳಗೆ ಉಂಗುರವಿದ್ದದ್ದು ಕಂಡುಬಂತು. ಈ ಮೇರೆಗೆ ಉಂಗುರದ ಪತ್ತೆಯಾಯಿತು.

— ಪೂನೆಯಲ್ಲಿ ಪ್ರತಿವರ್ಷದಂತೆ ಈ ವರ್ಷವೂ ಗಣಪತಿ ಮಹೋತ್ಸವವು ೧೦ ದಿವಸ ನಡೆಯುತ್ತಿದೆ. ಆದರೆ ಈ ವರ್ಷ ಡಿ ಮೆಜಿಸ್ಟ್ರೇಟರು ೧೪೪ನೆಯ ಕಲಮಿನ ಆಧಾರದಿಂದ ನೋಟೀಸನ್ನು ಹೊರಡಿಸಿ ಡಿ. ಮೆಜಿಸ್ಟ್ರೇಟರೂ, ಪೊ. ಸುಪರಿಂಟೆಂಡೆಂಟರೂ ಬಹು ಜಾಗ್ರತೆಯನ್ನು ತೆಕ್ಕೊಳ್ಳುತ್ತಿದ್ದಾರೆ. ಸಾರ್ವಜನಿಕ ಗಣಪತಿ ಇದ್ದಲ್ಲಿಗೆ, ಉಪನ್ಯಾಸವಾಗುವ ಕಡೆಗೆ, ಮೇಳವು ಹೊರಡುವಾಗ್ಗೆ ಅಶಸ್ತ್ರ ಮತ್ತು ಸಶಸ್ತ್ರ ಪೋಲೀಸರು ಇದ್ದೆ ಇರುವರು! ಇದು ಸತ್ಯಸಮಾಜಿಷ್ಟರ ಪ್ರೇರಣೆಯ ಪ್ರಭಾವವೆಂದು ಅತ್ತಕಡೆಯ ಪತ್ರಿಕೆಗಳು ಹೇಳುತ್ತಿದ್ದಾವೆ.

— ಮದೀನದ ಮೇಲೆ ವಹಾಬಿಯರು ಬೊಂಬುಗಳನ್ನು ಹಾಕಿ ಅತ್ಯಾಚಾರ ನಡಿಸಿದ್ದಕ್ಕಾಗಿ ನಿಷೇಧಪ್ರದರ್ಶನವನ್ನು ಮಾಡಲು ಮುಂಬಯಿಯ ಮಹಮ್ಮದೀಯರು ಹರತಾಳವನ್ನು ಹಾಕಿದರು.

— ಕಲಕತ್ತಾ ಹೈಕೋರ್ಟಿನ ಜಡ್ಜರಾದ ಪೇಗಡಿ ಎಂಬವರ ಮೇಲೆ ಅಲ್ಲಿಯ ಕೊರ್ಪೊರೇಶನಿನ ಒಬ್ಬ ನೋಕರರು ತನ್ನನ್ನು ಜಡ್ಜರು ಬೈದರೆಂಬ ಆರೋಪಣೆಯಿಂದ ಫಿರ್ಯಾದನ್ನು ಮಾಡಿರುವರು.

— ಮಹಾತ್ಮಾಜಿಯವರ ಹಿಂದಿ ಭಾಷೆಯ 'ನವಜೀವನ' ಪತ್ರಿಕೆ ದಿನೇ ದಿನೇ ಲೋಕಾಶ್ರಯವು ಕಡಿಮೆಯಾಗುತ್ತ ಬಂದಿದೆ ಎಂದು ಶ್ರೀ ಬಜಾಜರು ವ್ಯಸನಪಡುತ್ತಿರುವರು.

— ಲಾಲಾಲಜಪತರಾಯರ ಆರೋಗ್ಯವು ಪುನಃ ಕೆಟ್ಟಿದೆ ಎಂಬುದಾಗಿ ವಾರ್ತೆಯು ಬಂದಿರುವುದು. ಅವರಿಗೆ ತಿರುಗಿ ಜ್ವರವು ಪ್ರಾರಂಭವಾಗಿ ಲಿವರಿನಲ್ಲಿ ನೋವುಂಟಾಗಿದೆ. ಈ ಕಾರಣದಿಂದ ಅವರು ಲಾಹೋರಿಗೆ ಬೇಗನೇ ಹೋಗುವವರಿದ್ದಾರೆ.

ಶ್ರೀಮತಿ ಸರೋಜನೀ ದೇವಿಯವರಿಗೆ ಬರುವ ಕೊನ್‌ಪುರದ ಕೊಂಗ್ರೆಸಿನ ಅಧ್ಯಕ್ಷಸ್ಥಾನದ ಚುನಾವಣೆಯಲ್ಲಿ ೧೨ ಪ್ರಾಂತಿಕ ಕಮಿಟಿಗಳ ಮತಗಳು ಸಿಕ್ಕಿವೆ. ಶ್ರೀ. ಅರವಿಂದ ಘೋಷ ಮತ್ತು ದೇಶಭಕ್ತ ಕೇಳಕರರವರಿಗೆ ೧೦-೧೦ ಮತಗಳು ಸಿಕ್ಕಿವೆ. ಲಾಲಾಲಜಪತರಾಯರಿಗೆ ೪, ಡೊ. ಅನಸಾರಿಗಳಿಗೆ ೩, ಮಿ| ವಲ್ಲಭಭಾಯಿ ಪಟೇಲ ಮತ್ತು ಮಿ| ಎಸ್. ಶ್ರೀನಿವಾಸ ಐಯಂಗಾರ ಇವರಿಗೆ ೪, ಶ್ರೀ. ಕೊಂಡಾ ವೆಂಕಟಪ್ಪಯ್ಯ ೨, ಸೇಟ ಜಮನಾಲಾಲ ಬಜಾಜ ಹಾಗು ಮೌಲಾನಾ ಅಬುಲ್ ಕಲಮ ಆಝಾದ, ಮಿ| ಮಝರುಲ್‌ಹಕ್, ಮಿ| ಬ್ರಿಜ್ ಕಿಶೋರ, ಶ್ರೀಯುತ ಚಕ್ರವರ್ತಿ ರಾಜಗೋಪಾಲಾಚಾರ್ಯ, ಪಂ. ಮೋತಿಲಾಲ ನೇಹರು, ಪಂಡಿತ ಮದನ ಮೋಹನ ಮಾಲವೀಯ, ಡೊ. ಪಿ. ಸಿ. ರೋಯ, ಮಿ| ರಾಜೇಂದ್ರ ಪ್ರಸಾದ, ಶ್ರೀ. ಗಂಗಾಧರ ರಾಯ ದೇಶಪಾಂಡೇ, ಬಾಬು ಶ್ಯಾಮಸುಂದರ ಚಕ್ರವರ್ತಿಯವರಿಗೆ ಒಂದೊಂದು ಮತವುಸಿಕ್ಕಿದೆ.

— ಆಕಾಶಮಾರ್ಗವಾಗಿ ವಿಮಾನಗಳ ಮೂಲಕವಾದ ಸಂಚಾರವು ಪಾಶ್ಚಾತ್ಯ ದೇಶಗಳಲ್ಲಿ ವಿಶೇಷವಾಗಿ ರೂಢಿಗೆ ಬರುತ್ತಲಿರುವುದು. ಇನ್ನು ಕೆಲವು ದಿವಸಗಳಲ್ಲಿಯೇ ಭೂಮಿಯ ಮೇಲಿನ ಪ್ರಯಾಣವು ಕಡಿಮೆಯಾಗುವುದು ಮುಂದಿನ ಯುದ್ಧಗಳೂ ಕೂಡ ವಿಮಾನಗಳ ಮೇಲೆ ನಡೆಯುವ ಸಂಭವವೂ ಬರುವುದು.

— ಜಸ್ಟಿಸ್ ಪಂಗಡಕ್ಕೆ ಸೇರಿದ ಬ್ರಾಹ್ಮಣೇತರರ ಕಾನ್‌ಫರೆನ್ಸು ಈ ತಿಂಗಳು ೨೧ನೆಯ ತಾರೀಕಿನ ದಿವಸ ನಡೆಯಿತು. ಇದರ ಪ್ರೆಸಿಡೆಂಟರವರೂ ಮತ್ತು ಮದ್ರಾಸು ಸರಕಾರದಲ್ಲಿ ಮಂತ್ರಿಗಳಾಗಿರುವ ಜಸ್ಟಿಸ್ ಪಾರ್ಟಿಯವರೂ ಅದೇ ದಿವಸ ಮದ್ರಾಸಿನಿಂದ ತಂಜಾವೂರಿಗೆ ದಯಮಾಡಿಸಿದರೆಂಬದಾಗಿಯೂ, ಇವರುಗಳನ್ನು ಮೆರವಣಿಗೆ ಮಾಡಿಕೊಂಡು ಹೋಗಲು ಪ್ರಯತ್ನಗಳು ಮಾಡಲ್ಪಟ್ಟಿದ್ದು ಇವರ ಮೆರವಣಿಗೆಯು ಹೊರಟಾಗ ಅಂಗಡಿ ಮತ್ತು ಕ್ಲಬ್ಬುಗಳ ಬಾಗಿಲು ಹಾಕಲ್ಪಟ್ಟವೆಂಬದಾಗಿಯೂ, ಮೆರವಣಿಗೆಗೆ ಜನಗಳ್ಯಾರೂ ಸೇರಲಿಲ್ಲವೆಂಬದಾಗಿಯೂ, ಮತ್ತು ಅಲಂಕಾರಹೀನವಾಗಿ ಅಸಮಾಧಾನವನ್ನು ಸೂಚಿಸುವ ಕಪ್ಪು ಬಾವಟೆಗಳು ಏರಿಸಲ್ಪಟ್ಟಿದ್ದವೆಂಬದಾಗಿಯೂ, ಮಾರನೇ ದಿವಸ ರಾಷ್ಟ್ರೀಯಪಕ್ಷದ ಬ್ರಾಹ್ಮಣೇತರರ ಕಾನ್‌ಫರೆನ್ಸು ನಡೆದು ಸದರಿ ಕಾನ್‌ಫರೆನ್ಸಿನ ಪ್ರೆಸಿಡೆಂಟರೇ ಮೊದಲಾದವರು ಬಂದಾಗ, ಅವರನ್ನು ಅಲ್ಲಿನ ಜನಗಳು ಬಹಳ ಆದರದಿಂದ ಎದುರುಗೊಂಡರೆಂಬದಾಗಿಯೂ ತಿಳಿಯಬರುತ್ತದೆ.

— ಮದ್ರಾಸ್ ಕಾಸ್ಮಾಪೊಲಿಟನ್ ಕ್ಲಬ್ಬಿನವರು, ತಮ್ಮ ಕ್ಲಬ್ಬಿನ ಪ್ರದೇಶದಲ್ಲಿ ಮಾದಕಪದಾರ್ಥಗಳ ಮಾರಾಟಕ್ಕೆ ಅವಕಾಶವನ್ನು ಕೊಡಕೂಡದೆಂದು ಒಂದು ಠರಾವನ್ನು ಮಾಡಿದರು ಈ ಠರಾವನ್ನು ರದ್ದುಮಾಡುವ ಉದ್ದೇಶ್ಯ ಸದರಿ ಕ್ಲಬ್ಬಿನವರೇ ಈ ತಿಂಗಳ ತಾ. ೨೨ನೆಯ ದಿವಸ ಒಂದು ಮೀಟಿಂಗನ್ನು ಮಾಡಬೇಕೆಂದು ನಿರ್ಣಯಮಾಡಿದರು.

— ಇಂಡಿಯಾದೇಶದ ಯುದ್ಧದ ಇಲಾಖೆಗೆ ಬೇಕಾಗುವ ಪದಾರ್ಥಗಳನೆಲ್ಲಾ ಸದರಿ ಇಲಾಖೆಯವರು ಇನ್ನು ಮುಂದೆ ಇಂಡಿಯಾ ದೇಶದಲ್ಲೇ ಕೊಂಡುಕೊಳ್ಳಲು ನಿರ್ಣಯ ಮಾಡಿರುತ್ತಾರೆ. ಆದರೆ ಸದರಿ ಪದಾರ್ಥಗಳು ಇಲ್ಲಿ ಸಿಕ್ಕದಿದ್ದರೆ ಆಗ ಅವನ್ನು ವಿದೇಶಗಳಿಂದ ತರಿಸಿಕೊಳ್ಳುವರು.

— ಜಪಾನ್ ದೇಶದ ವಿದ್ಯಾಭ್ಯಾಸದ ಕ್ರಮವನ್ನು ತಿಳಿದುಕೊಂಡು ಬರುವುದಕ್ಕಾಗಿ ಹೈದರಾಬಾದ್ ಸಂಸ್ಥಾನದ ವಿದ್ಯಾಭ್ಯಾಸದ ಇಲಾಖಾ ಮುಖ್ಯಾಧಿಕಾರಿಗಳಾದ ನವಾಬ್ ಎಸ್. ಆರ್. ಮಸೂರದವರು ಜಪಾನಿಗೆ ದಯಮಾಡಿಸಿದ್ದರು. ಇವರು ಅಲ್ಲಿನ ವಿದ್ಯಾಭ್ಯಾಸದ ಕ್ರಮವನ್ನು ಚೆನ್ನಾಗಿ ತಿಳಿದುಕೊಂಡು ವಾಪಸು ಇಂಡಿಯಾದೇಶಕ್ಕೆ ಬಂದಿರುತ್ತಾರೆ.

— ವಿಲಾಯತಿಯಲ್ಲಿ ವಿದ್ಯಾಭ್ಯಾಸವನ್ನು ಮಾಡುವುದಕ್ಕಾಗಿ ಟಾಟಾ ಎಜ್ಯುಕೇಶನ್ ಸ್ಕೀಮ್ ಕಮಿಟಿಯವರು ಮುಂಬಯಿಯ ಗರ್ಲ್ಸ್ ಹೈಸ್ಕೂಲಿನ ಪ್ರಿನ್ಸಿಪಾಲರಾದ ಮಿಸೆಸ್ ಎಸ್. ಇ. ಸೇನವರನ್ನು, ಕಲ್ಕತ್ತಾ ವಿಶ್ವವಿದ್ಯಾಲಯದ ಮಿ| ಸತ್ಯೇಂದ್ರನಾಥರವರನ್ನೂ ಮತ್ತು ಮಿಸ್ ತರಣ ಚಕ್ರವರ್ತಿಯವರನ್ನೂ ಚುನಾಯಿಸಿರುತ್ತಾರೆ.

ದಕ್ಷಿಣ ಕನ್ನಡ.

ಬಂಟ್ವಾಳ:— ಇಲ್ಲಿಂದ ತುಂಬೆ ಗುಡ್ಡೆಗೆ ಹೋಗುವ ಮೂಡಬಿದ್ರೆ ಮಾರ್ಗ ಕಳೆದ ನೆರೆ ಸಮಯದಲ್ಲಿ ಸುಮಾರು ಒಂದು ಫರ್ಲಾಂಗ್ ಮಾರ್ಗ ಕಡದು ಹೋದದ್ದು ಹಾಗೆಯೇ ಇದೆ. ಹಳ್ಳಿಗಳಿಂದ ಬರುವ ಅಕ್ಕಿ ಗಾಡಿಗಳು ಪೇಟೆಗೆ ಬರಲಿಕ್ಕೂ ಬಂಟ್ವಾಳದಲ್ಲಿ ಬಿದ್ದುಹೋದ ಮನೆ ಅಂಗಡಿ ಮತ್ತು ಭಂಡಸಾಲೆಗಳನ್ನು ಕಟ್ಟಿಸುವದಕ್ಕೆ ಪನ್ನಂಗಿಲ ಪದವಿನಿಂದ ಮುರದ ಕಲ್ಲುಗಳನ್ನು ತರುವದಕ್ಕೆ ಅಡ್ಡಂತರವಾಗಿದೆ. ಈಗ ತುಂಬೆ ಮತ್ತು ಕಲ್ಲು ಗುಡ್ಡೆಯಲ್ಲಿ ಪೇಟೆಯವರು ಅನೇಕ ಮನೆಗಳನ್ನು ಕಟ್ಟಿಸಿ ವಾಸಮಾಡಿಕೊಂಡಿರುತ್ತಾರೆ. ಇವರು ಹಗಲಿಲ್ಲಾ ಪೇಟೆಯಲ್ಲಿದ್ದು ರಾತ್ರೆಯಲ್ಲಿ ಮನೆಗೆ ಹೋಗುವಾಗ ಬಹಳ ಕಷ್ಟಪಡುತ್ತಿದ್ದಾರೆ. ಬಂಟ್ವಾಳ ಪೇಟೆಯಲ್ಲಿರುವ ಜನರ ದನಕರುಗಳನ್ನು ಮೇಯಿಸಲಿಕ್ಕೆ ಕೊಂಡುಹೋಗುವದಕ್ಕೆ ಸಹ ತೊಂದರೆಯಾಗಿದೆ. ಇಲ್ಲಿ ಬೇರೆ ಯಾವ ಕಡೆಯಲ್ಲಿಯೂ ಹುಲ್ಲುಗಾವಲು ಇಲ್ಲ. ಮತ್ತು ಇಲ್ಲಿ ಆಸ್ಪತ್ರೆಯಲ್ಲಿಯೂ ಪೇಟೆಯಲ್ಲಿಯೂ ಸತ್ತವರ ಹೆಣಗಳನ್ನು ಹುಗಿಯಲಿಕ್ಕೆ ಇದೇ ದಾರಿಯಾಗಿ ಕೊಂಡುಹೋಗಬೇಕಾಗಿದೆ. ಈ ಮಾರ್ಗ ಹಾಳಾಗಿ ಸುಮಾರು ಎರಡು ತಿಂಗಳಾದಾಗ್ಯೂ ಸರಿಮಾಡದೆ ಇದ್ದದರಿಂದ ಜನರು ಪಡುವ ಕಷ್ಟ ಸಹಿಸಲಾರದಷ್ಟಾಗಿದೆ. ಆದುದರಿಂದ ಮಾನ್ಯ ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರವರು ಇದನ್ನೂ ಬೇಗನೆ ದುರುಸ್ತಿಮಾಡಿಸುವರಾಗಿ ನಂಬಲಾಗಿದೆ.

ಬಂಟವಾಳದಲ್ಲಿ ೧೯೨೨ನೇ ಇಸವಿಯ ಆಗೋಸ್ತು ೫ನೇ ತಾರೀಕು ವರೆಗೆ ೧೨ ಲಾಟಿನ ಕಂಬಗಳು ಸಾರ್ವಜನಿಕ ಉಪಯೋಗಾರ್ಥವಾಗಿ ಉರಿಯುತ್ತಿದ್ದವು. ತಾ| ೬-೭ಕ್ಕೆ ಮಹಾ ದೊಡ್ಡ ನೆರೆ ಬಂದಿತು. ಮಹಾ ದೊಡ್ಡ ನೆರೆ ಬಂದ ಈವತ್ತಿನ ಹೊತ್ತಿಗೆ ಮೂರು ವರ್ಷಗಳಾಗುತ್ತ ಬಂತು. ಅಂಥಾ ಹನ್ನೆರಡು ಲಾಟಿನಕಂಬಗಳಲ್ಲಿ ಈಗ ಮೂರು ವರ್ಷಗಳಿಂದ ಸಾರ್ವಜನಿಕ ಉಪಯೋಗಾರ್ಥವಾಗಿ ಎಷ್ಟು ಲಾಟಿನುಕಂಬಗಳಲ್ಲಿ ದೀಪವು ಉರಿಯುತ್ತಿವೆ? ಮತ್ತು ಅಮವಾಸ್ಯೆಯಾಗುವ ಮಾರ್ಗದ ಸಾರ್ವಜನಿಕ ಉಪಯೋಗಕ್ಕೆ ಇಲ್ಲದೆ ಎಷ್ಟು ಲಾಟಿನುಕಂಬಗಳು ನಿದ್ರೆಯಲ್ಲಿವೆ? ಮತ್ತು ಎಷ್ಟು ಉರಿಯುವ ಲಾಟಿನುಕಂಬಗಳು ಬೀಟ ಪೋಲೀಸರ ಕೆಲಸವನ್ನು ಕೈಕೊಂಡಿವೆ? ಇದು ನಮ್ಮ ತಾಲೂಕು ಬೋರ್ಡು ಮೆಂಬರರ ತಪ್ಪು ಇಲ್ಲದಿರುವದು ನಮ್ಮ ದುರಾದೃಷ್ಟವೆಂದು ಹೇಳಬೇಕು, ಆಹಾ ಬಂಟ್ವಾಳದ ಎಂತಾ ದುರ್ದೈವವೇ!

ಇಲ್ಲಿ ಆಸ್ಪಾಸು ಗದ್ದೆ ತೋಟ ಮುಂತಾದ ಸ್ಥಳಗಳಲ್ಲಿರುವ ಬೆಳೆಯನ್ನು ತಿಂದು ನಾಶಮಾಡುವ ಜಾನುವಾರುಗಳನ್ನು ಕಟ್ಟುವ ದೊಡ್ಡಿಯು ಬಿದ್ದುಹೋಗಿ ಸುಮಾರು ಮೂರು ವರ್ಷವಾಯಿತು. ದೊಡ್ಡಿ ಇಲ್ಲದೆ ಜನರು ತಮ್ಮ ಕಷ್ಟ ನಷ್ಟವನ್ನು ಸಹಿಸಿಕೊಂಡು ತೊಂದರೆ ಪಡುತ್ತಿದ್ದಾರೆ. ಆದುದರಿಂದ ದೊಡ್ಡಿಯನ್ನು ಬೇಗನೇ ಕಟ್ಟಿಸಬೇಕಾಗಿ ವಿನಂತಿ.

ಪುಂಜಾಲಕಟ್ಟೆ:— ಇಲ್ಲಿಯ ಹೊಸ ಆಸ್ಪತ್ರೆಯಲ್ಲಿ ಜನರು ದಿನೆ ದಿನೆ ಔಷದೋಪಚಾರಪಡುತ್ತಿದ್ದಾರೆ. ಇಲ್ಲಿಯ ಡಾಕ್ಟರವರು ಬಹಳ ಜನ ಪ್ರೀತಿಯಾಗಿದ್ದಾರೆ. ಇಲ್ಲಿ ಒಂದು ಹಾಯರ್ ಎಲಿಮೆಂಟರಿ ಶಾಲೆಯನ್ನು ಅಗತ್ಯವಾಗಿ ತೆರದರೆ ಇಲ್ಲಿಯ ಜನರಿಗೆ ಬಹಳ ಉಪಕಾರವಾದೀತು.

ಮಂಜೇಶ್ವರ:— ಇಲ್ಲಿಯ ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯನ್ನು ಮುಚ್ಚಿದ್ದರಿಂದ ಇಲ್ಲಿಯ ಹೊಸಬೆಟ್ಟು ಬೋರ್ಡು ಮಾಪಿಳಾ ಎಲಿಮೆಂಟರಿ ಶಾಲೆಯನ್ನು ಒಂದು ಸಂಪೂರ್ಣ ಹಾಯರ್ ಎಲಿಮೆಂಟರಿ ಶಾಲೆಮಾಡುವ ಉದ್ದೇಶ್ಯದಿಂದ ಇದೇ ತಿಂಗಳಲ್ಲಿ ಐದನೆ ದರ್ಜೆಯನ್ನು ತೆರೆಯುವದಕ್ಕಾಗಿ ಕಳೆದ ತಾರೀಕು ಬೋರ್ಡು ಮೀಟಿಂಗಿನಲ್ಲಿ ಸೆಂಕ್ಷನ್ ಮಾಡಿರುತ್ತಾರೆ.

ಹೊಸದುರ್ಗ:— ಇಲ್ಲಿಯ ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಏಳನೆ ದರ್ಜೆಯನ್ನು ಕೂಡಲೆ ತೆರೆಯಬೇಕೆಂದು ಬೋರ್ಡು ಮೀಟಿಂಗಿನಲ್ಲಿ ಸೆಂಕ್ಷನಾಗಿದೆ.

ಪುಚ್ಚಮೊಗರು:— ಇಲ್ಲಿಯ ಸಂಕವು ನೆರೆಯಿಂದ ಮುರಿದು ಹೋದದ್ದು ದುರುಸ್ತಿಯಾಗದೆ ಪ್ರಯಾಣಿಕರಿಗೂ ಗಾಡಿವ್ಯಾಪಾರಕ್ಕೂ ಬಹಳ ಅಡಚಣೆಯಾಗಿದೆ.

ಪಡುಬಿದ್ರೆ:— ನಮ್ಮಲ್ಲಿ ಒಂದು ಒಂಬತ್ತು ವರುಷಗಳ ಹಿಂದೆ ಮೊಗವೀರ ಸಮಾಜದ ಶ್ರೀ ಮುಕ್ತಾನಂದ ತೀರ್ಥಸ್ವಾಮಿ ಎಂಬವರು ಸಂತೆಕಟ್ಟೆಯ ಬಡಗು ದಿಕ್ಕಿನಲ್ಲಿ ಶ್ರೀ ಕಾಳಿಕಾಂಬಾ ದೇವರನ್ನು ಪ್ರತಿಷ್ಠಾಪನೆ ಗೈದು ಪ್ರತಿ ಶುಕ್ರವಾರ, ಮಂಗಳವಾರ ಶ್ರೀ ದೇವಿಯ ದರ್ಶನ ವಗೈರೆ ಅನೇಕ ವಿನಿಯೋಗ ದಿನಗಳನ್ನು ನಡಿಸಿ ದೇವಿಯ ಭಕ್ತರಿಗೆ ಮನಶ್ಶಾಂತಿಯನ್ನು ಸಲಿಸಿ ಅನೇಕ ಹವ್ಯವನ್ನುಮಾಡಿ ಸದರಿ ದೇವರಿಗೆ ಶ್ರೀ ದೇವಿಯ ಸ್ಥಳದಲ್ಲಿಯೇ ಅಂದವಾದ ಕಟ್ಟೋಣ, ಕೆರೆ, ಬಾವಿ, ವಗೈರೆ ಕಟ್ಟಿಸಬೇಕೆಂಬ ಉದ್ದೇಶ್ಯದಿಂದ ಪ್ರಾರಂಭಿಸಿದ್ದಲ್ಲಿ ಅದು ಸಾಧ್ಯವಾಗದೆ ಇದ್ದ ಸಂಗತಿಯು ಎಲ್ಲರಿಗೂ ತಿಳಿದೆ ಇದೆ.

ತತ್ಸಂಬಂಧ ಸಾಲಗಳು ಹೆಚ್ಚಿ ಸಾಲಗಾರರ ಪೈಕಿ ಒಬ್ಬರಾದ ಶ್ರೀ ಪಾದೆಬೆಟ್ಟು ವೆಂಕಟರಮಣಾಚಾರ್ಯರೆಂಬವರು ಸದರಿ ದೇವಿಯ ಸ್ಥಳವನ್ನು ಕಳೆದ ತಾ. ೧-೮-೨೫ರಲ್ಲು ಕೋರ್ಟು ಮುಖಾಂತರ ಬಿಡಿಸಿಕೊಂಡು ಸ್ವಾಧೀನಗಾರರಾಗಿ ಅನುಭವಿಸುವಲ್ಲಿ ಪುನಹ ಇದೇ ಕಳೆದ ತಾ. ೧೮-೮-೨೫ನೇ ಮಂಗಳವಾರ ಆಗಾಯುತು ಪ್ರತಿ ಮಂಗಳವಾರ ಮಾತ್ರ ದೇವಿಯ ದರ್ಶನವು ಮುಂಚಿನಂತೆಯೇ ಪ್ರಾರಂಭವಾಗಿದೆ. ಆದ್ದರಿಂದ ಮಹಾಜನ ಭಕ್ತಾಭಿಮಾನಿಗಳು ಮುಂಚಿನಂತೆಯೇ ಬಂದು ಪ್ರೋತ್ಸಾಹಿಸಿ ಶ್ರೀ ದೇವಿಯ ಕೃಪಾಕಟಾಕ್ಷಕ್ಕೆ ಪಾತ್ರರಾಗಿ ಶ್ರೀ ಗಂಧಪುಷ್ಪಪ್ರಸಾದವನ್ನು ಸ್ವೀಕರಿಸಬೇಕಾಗಿ ಅಪೇಕ್ಷಿಸುತ್ತೇವೆ.

ಅನುಕ್ರಮಣಿಕೆ.

ಅಗ್ರಲೇಖ ಪುಟಗಳು.
ಬೇಡಬದಲಾವಣೆಯುವರೂ ಮ. ಗಾಂಧಿಗಳೂ. ೬
ಸ್ಫುಟವಿಚಾರಗಳು—
೧. ಬೇಡಬದಲಾವಣೆಗಳ ವ್ಯಥಾ ಉಪದೇಶ ,,
೨-೩. ಮಡಿಮನ ಕಮಿಟಿಯ ರಿಪೋರ್ಟು ೭
೪. ಪ್ರಾಗತಿಕರ ಪರಿಷತ್ತು ,,
೫. ಮದ್ರಾಸ್ ಸರಕಾರದ ಪಕ್ಷಪಾತ ,,
ಮಂಗಳೂರು
ವರ್ತಮಾನಸಂಗ್ರಹಗಳು—
ವಿದೇಶ - ಒಳದೇಶ ವರ್ತಮಾನ ೫
ದಕ್ಷಿಣ ಕನ್ನಡ— ಬಂಟವಾಳ, ಪುಂಜಾಲಕಟ್ಟೆ, ಮಂಜೇಶ್ವರ, ಹೊಸದುರ್ಗ, ಪಡುಬಿದ್ರೆ ,,
ವಿವಿಧವಿಷಯಗಳು ೮
ಆಯುರ್ವೇದದ ಪ್ರಾಚೀನತ್ವ ,,
ಕುಂದಾಪುರದಲ್ಲಿ — ಸಮಾಜೋದ್ಧರಣ ಕಾರ್ಯಾರಂಭ ,,
ಕುರುಕಾಲು ಶ್ರೀ ಗಣಪತಿ ಹಾಯರ್ ಎಲಿಮೆಂಟರಿ ಶಾಲೆ ೮
ಸ್ವೀಕಾರ ೧, ೨, ೩, ೪. ,,

ಸ್ವದೇಶಾಭಿಮಾನಿ.

ಶಕ ೧೮೪೬ ಭಾದ್ರಪದ ಬ| ೨ಯು ಶುಕ್ರವಾರ.

ಬೇಡಬದಲಾವಣೆಯುವರೂ ಮ. ಗಾಂಧಿಗಳೂ.

ಮೂರು ನಾಲ್ಕು ತಿಂಗಳ ಮುಂಚೆ ನಾಗಪುರದ ಶ್ರೀ. ರಾಮರಾವ ದೇಶಮುಖರು ಸಾತಾರದಲ್ಲಿ ಮಹಾರಾಷ್ಟ್ರ ಪ್ರಾಂತಿಕ ಪರಿಷತ್ತಿನ ಅಧ್ಯಕ್ಷರಾಗಿ ಭಾಷಣಮಾಡುವಾಗ ರಾಷ್ಟ್ರೀಯ ಸಭೆಯು ರಾಜಕೀಯ ಸಂಸ್ಥೆಯಾಗಿರುವುದರಿಂದ ಅದರ ಕಾರ್ಯಗಳೆಲ್ಲ ರಾಜಕೀಯವಾಗಿರಬೇಕು, ಖಾದಿಯ ಮತ್ತು ಚರಕದ ಕಾರ್ಯಕ್ರಮಕ್ಕೆ ಪ್ರಾಧಾನ್ಯವನ್ನು ಕೊಟ್ಟರೆ ಆ ಸಂಸ್ಥೆಯ ವೈಶಿಷ್ಟ್ಯವನ್ನು ಕೊಂದಂತಾಗುವದು, ಮಾತ್ರವಲ್ಲ ಆ ಸಂಸ್ಥೆಯು ನಿರುಪಯುಕ್ತವಾಗುವದು, ಆದ್ದರಿಂದ ಮ. ಗಾಂಧಿಗಳಿಗೆ ಚರಕ ಮತ್ತು ಖಾದಿ ಇವೆರಡರ ಹೊರತು ಇನ್ನಾವದೂ ತೋಚುವದಿಲ್ಲವಾದರೆ ಅವರು ರಾಷ್ಟ್ರೀಯ ಸಭೆಯನ್ನು ಬಿಟ್ಟು ಹೋಗುವದು ಲೇಸೆಂಬುದಾಗಿ ಅತಿ ವಿನಯದಿಂದ ವಿಜ್ಞಾಪಿಸಿಕೊಂಡಿದ್ದರು. ರಾಷ್ಟ್ರೀಯ ಸಭೆಗೆ ನೂಲಿನ ಹೊರತು ಬೇರೆ ಆಹಾರವನ್ನು ಕೊಡಲು ನಿಮ್ಮ ಕೈಯಲ್ಲಿ ಇಲ್ಲವಾದರೆ ನೀವು ಅದನ್ನು ಬಿಟ್ಟುಬಿಡುವದು ಒಳ್ಳೇಯದೆಂದು ನುಡಿದ ಈ ಅಪರಾಧಕ್ಕೆ ದೇಶಮುಖರನ್ನು ಬೇಡಬದಲಾವಣೆ ಬಂಧುಗಳು ಸರಿಯಾಗಿ ಶಾಪವನ್ನು ಕೊಟ್ಟಿದ್ದರು. ಅಪಶಬ್ದಗಳಿಂದ ಬೈದಿದ್ದರು. ಗಾಂಧಿಗಳನ್ನು ರಾಷ್ಟ್ರೀಯ ಸಭೆಯಿಂದ ಹೊರಗೆ ಬನ್ನಿರಿ ಎಂದು ಹೇಳಿದ್ದು ಸೃಷ್ಟಿ ಕರ್ತನಾದ ಬ್ರಹ್ಮನನ್ನೆ ಬೈದಂತಾಗಿದೆ, ಆದ್ದರಿಂದ ಈ ದೇಶಮುಖರನ್ನು ಏನುಮಾಡಬೇಕು, ಈ ದ್ರೋಹಕ್ಕಾಗಿ ಅವರನ್ನು ಗಡಿಪಾರುಮಾಡಿಬೇಕೊ ಅಥವಾ ಬೇರೆ ಪ್ರಾಯಶ್ಚಿತ್ತವನ್ನು ವಿಧಿಸಬೇಕೊ ಎಂಬುದಾಗಿ ಅಹಿಂಸಾಭಕ್ತರಾದ ಬೇಡಬದಲಾವಣೆಗಳು ಆಲೋಚಿಸುತ್ತಿದ್ದರು. ವಿದ್ಯುಲ್ಲತೆಯ ಆಘಾತವು ತಟ್ಟಿದರೆ ಎಷ್ಟು ಗಲಾಟೆಯಾಗುವದೊ ಅಷ್ಟು ರಾಮರಾವಜಿ ದೇಶಮುಖರ ಒಂದೆ ಮಾತಿನಿಂದ ನಮ್ಮ ಅಹಿಂಸಾವಾದಿ ಬಂಧುಗಳಲ್ಲಿ ಉಂಟಾಗಿತ್ತು.

ಪರಂತು ಕಾಲಮಹಿಮೆಯು ಅಗಮ್ಯವಾದ್ದೆಂದು ಹೇಳಬೇಕಾಗುತ್ತದೆ! ಶ್ರೀ. ದೇಶಮುಖರ ಭಾಷಣದ ಬೇಸಿಗೆಯ ಕಾಲವು ದಾಟಿತು. ಮಳೆಗಾಲವು ಪ್ರಾರಂಭವಾಯಿತು. ಋತುಮಾನದಲ್ಲಿ ಇಷ್ಟು ವ್ಯತ್ಯಾಸವು ಬಂದ ಕೂಡಲೆ ನಮ್ಮ ಬೇಡಬದಲಾವಣೆ ಬಂಧುಗಳಲ್ಲಿ ಕೂಡ ಪೂರ್ವ ಪಶ್ಚಿಮದ ವ್ಯತ್ಯಾಸವುಂಟಾಗಿದೆ "ನೀವು ಕೊಂಗ್ರೆಸನ್ನು ಬಿಟ್ಟುಬಿಡಿರಿ" ಎಂದು ಗಾಂಧಿಜಿಗಳನ್ನು ವಿನಯಪೂರ್ವವಾಗಿ ಕೇಳಿಕೊಂಡ ದೇಶಮುಖರನ್ನು ಯಥೇಚ್ಛವಾಗಿ ಬೈದಿರುವ ಈ ಬಂಧುಗಳೆ ಮಹಾತ್ಮಾಜಿಗಳಿಗೆ ಖಾಸಗಿ ಪತ್ರಗಳನ್ನು ಬರೆದು ಕೊಂಗ್ರೆಸನ್ನು ಬಿಟ್ಟುಬಿಡಲು ಆಗ್ರಹಿಸುತ್ತಿದ್ದಾರೆ! ಇದು ವಿಚಿತ್ರವಲ್ಲವೆ? ದೇಶಮುಖರು ಹೇಳುವಾಗ ಆ ಮಾತುಗಳಿಗೆ ಕುತ್ಸಿತ ಅರ್ಥ! ನೀವು ಅವೆ ಮಾತುಗಳನ್ನು ಹೇಳುವಾಗ ಅವುಗಳಿಗೆ ಸ್ತುತ್ಯರ್ಥ! ಇದರ ಮೀಮಾಂಸೆಯು ಸಾಮಾನ್ಯರ ಬುದ್ಧಿಗೆ ಅಗಮ್ಯವಾಗಿದೆ ಎಂಬುದು ಸುಳ್ಳಲ್ಲ. ಈ ಬೇಡಬದಲಾವಣೆಗಳು ಮಹಾತ್ಮಾಜಿಯವರಿಗೆ ಬರೆದ ಪತ್ರಗಳೊಳಗಿನ ಅಭಿಪ್ರಾಯವಾದರೊ ಶ್ರಾವ್ಯವಾಗಿದೆ! "ನೀವು (ಮ. ಗಾಂಧಿಗಳು) ಸ್ವರಾಜ್ಯವಾದಿಗಳೊಡನೆ ಒಪ್ಪಂದವನ್ನು ಮಾಡಿದಿರಿ, ಅದು ನಮಗೆ ಸಮ್ಮತವಿರಲಿಲ್ಲ. ಆದರೂ ಅದನ್ನು ನಾವು ಎದುರಿಸಲಿಲ್ಲ. ಸ್ವರಾಜಿಸ್ಟರು ಆ ಒಪ್ಪಂದವನ್ನು ಬೆಳಗಾವಿನಲ್ಲಿ ಮುರಿಯಲಿಲ್ಲವೆ? ಅವರಿಗೆ ಖಾದಿಯ ಮೇಲೆ ಭಕ್ತಿ ಇಲ್ಲ. ಚರಕದ ಮೇಲೆ ಭಾರವಿಲ್ಲ. ಇಂಥವರೊಡನೆ ಒಪ್ಪಂದವು ಯಾಕೆ? ಮತ್ತು ಆ ಒಪ್ಪಂದವಾದರೂ ನಡೆದೀತು, ಹೇಗೆ? ರಾಷ್ಟ್ರೀಯ ಸಭೆಯು ಕಾರ್ಯನಿರ್ವಾಹಕ ಸಂಸ್ಥೆಯಾಗಿ ಏರ್ಪಾಟಿದ್ದು ಅವರಿಗೆ ಸಮ್ಮತವಿಲ್ಲ. ಅದು ಮುಂಚಿನಂತೆ ಬರೆ ವಕ್ತೃತ್ವದ ಸಂಘವಾಗಿರಬೇಕೆಂದೆ ಅವರ ತಾತ್ಪರ್ಯ. ಆದ್ದರಿಂದ ನೀವು ಅದನ್ನು ಬಿಟ್ಟು ಹೊರಗೆ ಬರುವದೆ ಉತ್ತಮ. ಇಡಿ ಹಿಂದುಸ್ಥಾನದ ಪ್ರಯೋಜನಾರ್ಥವಾಗಿ ಖಾದಿ ಸಂಸ್ಥೆಯನ್ನು ನಾವು ಸ್ಥಾಪಿಸೋಣ. ರಾಷ್ಟ್ರೀಯ ಸಭೆಯ ಗೋಜಿ ನಮಗೆ ಬೇಡ." ಎಂದೀ ಅರ್ಥವನ್ನು ಧ್ವನಿಸುವಂತೆ ಮಹಾತ್ಮಾಜಿಗಳಿಗೆ ಪತ್ರಗಳನ್ನು ಅನೇಕ ಬೇಡಬದಲಾವಣೆಯುವರು ಬರೆದಿರುವರು.

ದೇಶಮುಖರ ಭಾಷಣ ಮತ್ತು ಇವರ ಲೇಖನ ಇವೆರಡರ ತಾತ್ಪರ್ಯವು ಒಂದೆ, ಯಾವದೆಂದರೆ, ಗಾಂಧಿಗಳು ರಾಷ್ಟ್ರೀಯ ಸಭೆಯಿಂದ ಹೊರಗೆ ಬರಬೇಕು. ಆಗ ದೇಶಮುಖರನ್ನು ಮಾತ್ರ ಬೈದದ್ದು ಯಾಕೆ? ಈ ಪ್ರಶ್ನೆಯ ಉತ್ತರವು ಕಠಿನವಿಲ್ಲ. ದೇಶಮುಖರು ಸ್ವರಾಜ್ಯಪಾರ್ಟಿಯಲ್ಲಿ ಸೇರಿದವರಾದ ಕಾರಣ ಅವರ ಮಾತುಗಳೆಲ್ಲ ದೂಷಿತವಾದವುಗಳು! ಅವರ ಅರ್ಥವೆಲ್ಲ ಕುತ್ಸಿತವಾದ್ದು! ತಮ್ಮ ಮಾತಾದರೆ, ತಮ್ಮ ಅರ್ಥವಾದರೆ ಗಂಗಾಜಲದಂತೆ ನಿರ್ಮಲವಾಗಿದೆ! ಆಗಲಿ; ಇವರ ಮಾತುಗಳು ಹಾಗೂ ಇವರ ಅರ್ಥಗಳು ನಿರ್ಮಲವೆ ಆಗಿದ್ದುಕೊಳ್ಳಲಿ. ಪರಂತು ಮಹಾತ್ಮಾಜಿಗಳು ಇವರ ಅಂತರ್ಗತ ಅಭಿಪ್ರಾಯವನ್ನು ಮಾತ್ರ ಸಮ್ಮತಿಸಲಿಲ್ಲ. ತಮ್ಮ ಅಭಿಪ್ರಾಯವು ಶುದ್ಧವೆಂಬುದಾಗಿ ಇವರು ತಿಳಕೊಳ್ಳುವದಾದರೂ ಗಾಂಧಿಜಿಗಳು ಅದರ ಮರ್ಮವನ್ನು ತಿಳಿದು ಇವರಿಗೆ ಸಮರ್ಪಕವಾದ ಉತ್ತರವನ್ನೆ ಕೊಟ್ಟಿದ್ದಾರೆ. ರಾಷ್ಟ್ರೀಯ ಸಭೆಯು ಅನೇಕ ಸಂಕಟಗಳನ್ನು ಸಹಿಸಿ ಅವುಗಳಿಂದ ಪಾರಾಗಿ ಬದುಕಿ ಉಳಿದ ಸಂಸ್ಥೆ. ಅದರ ಯೋಗಕ್ಷೇಮಕ್ಕೂ, ಶ್ರೇಯಸ್ಸಿಗೂ ಭಾಗಿಗಳಾದವರು ಅನೇಕರಿದ್ದಾರೆ. ರಾಜಕಾರಣದ ವ್ಯವಸಾಯವನ್ನು ಮಾಡಲು ಅಸ್ತಿತ್ವದಲ್ಲಿ ಬಂದಿರುವ ಸಂಸ್ಥೆಯನ್ನು ರೂಪಾಂತರಗೊಳಿಸುವದು ವಿಹಿತವಲ್ಲ. ಅದಕ್ಕೆ ರಾಜಕಾರಣದ ಆಹಾರವನ್ನೆ ಕೊಡಬೇಕೆಂದು ಪ್ರಾಮಾಣಿಕವಾಗಿ ತಿಳಕೊಳ್ಳುವ ಸುಶಿಕ್ಷಿತರ ಲೋಕಮತವಿದೆ. ಇಂಥ ಸುಶಿಕ್ಷಿತರ ಲೋಕಮತವನ್ನು ಉಪೇಕ್ಷಿಸುವದು ಸಮವಲ್ಲ. ರಾಷ್ಟ್ರೀಯ ಸಭೆಯು ರಾಜಕಾರಣವನ್ನು ಮಾಡುವಾಗಲೆ ವಿಧಾಯಕ ಕಾರ್ಯಕ್ರಮವನ್ನು ಕೂಡ ಮಾಡಬಹುದು. ರಾಷ್ಟ್ರೀಯ ಸಭೆಯ ಛತ್ರದಲ್ಲೆ ಖಾದಿಯ ಕಾರ್ಯಕ್ರಮವನ್ನು ನಡಿಸಬೇಕಾದ್ದು ಉತ್ತಮ ಪಕ್ಷವು. ಎಂಬ ಅಭಿಪ್ರಾಯವನ್ನು ಮ. ಗಾಂಧಿಗಳು ತಮ್ಮ ಉತ್ತರದಲ್ಲಿ ಸೂಚಿಸಿದ್ದಾರೆ. ಮಹಾತ್ಮಜಿಗಳ ಈ ಅಂಬೋಣವು ಸಮಾಂಜಸವಾಗಿದೆ.

ಆದರೆ ಇದರ ಮೇಲಿಂದ ಒಂದು ಸಂಗತಿಯನ್ನು ಊಹಿಸಬಹುದಾಗುತ್ತದೆ. ಏನೆಂದರೆ ಈ ಪಕ್ಷದವರು ಬರುವ ಓಲ್ ಇಂಡಿಯಾ ಕೊಂಗ್ರೆಸ ಕಮಿಟಿಯಲ್ಲಿ ಪರಸ್ಪರ ಐಕ್ಯವನ್ನು ಎದುರಿಸುವ ಆಲೋಚನೆಯಲ್ಲಿರಬಹುದು. ಇವರನ್ನುತ್ತರಿಸುವಾಗ ಗಾಂಧಿಜಿಗಳಾದರೂ ಓ. ಇಂ ಕೊ. ಕಮಿಟಿಯ ಸಭೆಗೆ ಎಲ್ಲರು ಬಂದು ತಮ್ಮ ತಮ್ಮ ಪಕ್ಷಗಳನ್ನು ಸಮರ್ಥಿಸಬೇಕೆಂಬುದಾಗಿ ಹೇಳಿರುವರು. ಎಂದ ಮೇಲೆ ಬರುವ ಅಧಿವೇಶನದಲ್ಲಿ ಈ ವಿಷಯವಾಗಿ ತಿರುಗಿ ಕಾದಾಟವು ನಡೆಯುವದೆಂಬುದು ಸ್ಪಷ್ಟವಾಗುತ್ತದೆ. ಆದ್ದರಿಂದ ಸ್ವರಾಜ್ಯ ಪಕ್ಷಾನುಯಾಯಿಗಳಾದ ಪ್ರತಿನಿಧಿಗಳು ಕೂಡಾ ಆ ಸಭೆಗೆ ಹಾಜರಿದ್ದು ಸ್ವಪಕ್ಷವನ್ನು ಸಮರ್ಥಿಸುವದು ಅವಶ್ಯವಾಗಿದೆ. ಮ. ಗಾಂಧಿಜಿಗಳಿಗೆ ಬರೆದುಕೊಂಡ ಬೇಡಬದಲಾವಣೆಯುವರ ಪತ್ರದೊಳಗಿನ ಅಭಿಪ್ರಾಯವು ಹೇಗೂ ಇರಲಿ; ಕಾರಣ, ರಾಷ್ಟ್ರೀಯ ಸಭೆಯು ಮುಂಚೆ ಏನೂ ಮಾಡಿರಲಿಲ್ಲ, ಈಗ ಅದು ಕಾರ್ಯನಿರ್ವಾಹಕ ಸಂಸ್ಥೆಯಾಗಿದೆ ಎಂದು ಮುಂತಾಗಿರುವ ವಿಧಾನಗಳು ಬರೆ ಸ್ವಪಕ್ಷದ ದುರಭಿಮಾನವನ್ನು ಪ್ರಕಟಿಸುವವುಗಳೆ ಅಲ್ಲ, ವಸ್ತುಸ್ಥಿತಿಯನ್ನು ಮರೆಪಡಿಸುವವುಗಳೂ ಆಗಿವೆ. ರಾಷ್ಟ್ರೀಯ ಸಭೆಯ ಹೋರಾಟದಿಂದಲೆ ಹಿಂದುಸ್ಥಾನದ ಪ್ರಜಾವರ್ಗದಲ್ಲಿ ಜಾಗೃತಿಯುಂಟಾದ್ದಲ್ಲದೆ, ಮೋರ್ಲೆ-ಮಿಂಟೊ ಸುಧಾರಣೆಗಳಾಗಲಿ, ಮೊಂಟೆಗ್ಯು ಸುಧಾರಣೆಗಳಾಗಲಿ-ಅವು ಅಲ್ಪ ಯೋಗ್ಯತೆಯವುಗಳಾಗಿವೆಯಾದರೂ—ಹಿಂದುಸ್ಥಾನಕ್ಕೆ ಲಭಿಸಿವೆ. ಆದರೆ ಅಮೃತಸರ ಕೊಂಗ್ರೆಸ ನಂತರ ಕಾರ್ಯಕಾರಿ ಸಂಸ್ಥೆಯಾಗಿ ಮಾರ್ಪಟ್ಟ ನಿಮ್ಮ ಕೊಂಗ್ರೆಸು ಚಿರಸ್ಥಾಯಿಯಾದ ಯಾವ ಕಾರ್ಯವನ್ನು ಮಾಡಿದೆ? ಈ ಪ್ರಶ್ನೆಯು ನಿರುತ್ತರವಾದ್ದು. ಆದ್ದರಿಂದ ಬೇಡಬದಲಾವಣೆಗಳ ಅಭಿಪ್ರಾಯವನ್ನು ಪರೀಕ್ಷಿಸಿದ್ದಷ್ಟಕ್ಕೆ ಅದು ಮಳಲಿನ ಬಾವಿಯಂತೆ ಹೆಚ್ಚು ಹೆಚ್ಚು ಕುಸಿದುದೀಳುತ್ತಿದೆ. ಆದ್ದರಿಂದ ಅವರ ಪತ್ರದೊಳಗಿನ ಅಭಿಪ್ರಾಯವು ಹೇಗೂ ಇರಲಿ, ರಾಷ್ಟ್ರೀಯ ಸಭೆಯನ್ನು ಪುನಃ ಅಮೃತಸರಕ್ಕೆ ತಂದುಬಿಡುವದು ಅವಶ್ಯವಾಗಿದೆ. ಈಗ ಹಿಂದುಸ್ಥಾನದ ರಾಜಕಾರಣವು ಕೊಳೆತುಹೋಗಿದೆ, ನೀವು ರಾಷ್ಟ್ರೀಯ ಸಭೆಯನ್ನು ಆವರಿಸಿಕೊಂಡಿರುವಿರಿ, ಆದರೆ ಸ್ವತಃ ನೀವೂ ರಾಜಕಾರಣವನ್ನು ಮಾಡುವುದಿಲ್ಲ. ಅದರ ಸಹಾಯದಿಂದ ರಾಜಕಾರಣವನ್ನು ಮಾಡಲು ಅನ್ಯರನ್ನೂ ಬಿಡುವದಿಲ್ಲ. ಇದು ಒಳ್ಳೆಯದಲ್ಲ. ನಿಮಗೆ ವಿಧಾಯಕ ಕಾರ್ಯಕ್ರಮದ ಮೇಲೆ ನಿಜವಾಗಿ ಮನಃಪೂರ್ವಕ ಶ್ರದ್ಧೆಯು ಇದ್ದದಾದರೆ ಗಂಗಾಯಮುನಾ ಈ ನದಿಗಳು ಪ್ರತ್ಯೇಕ ಪ್ರತ್ಯೇಕವಾಗಿ ಹರಿದು ತಮ್ಮ ತಮ್ಮ ವೈಶಿಷ್ಟ್ಯವನ್ನು ತೋರಿಸಿ ದೇಶಭೂಮಿಯ ಪ್ರಯೋಜನಕ್ಕೆ ಬೀಳುವಂತೆ ನೀವಾದರೂ ನಿಮ್ಮ ವಿಧಾಯಕ ಕಾರ್ಯಕ್ರಮದಿಂದ ಹಾಗು ಸ್ವರಾಜ್ಯಪಕ್ಷೀಯರು ರಾಷ್ಟ್ರೀಯ ಸಭೆಯ ರಾಜಕಾರಣದ ಕಾರ್ಯಕ್ರಮದಿಂದ ದೇಶದ ಉಪಯೋಗಕ್ಕೆ ಪ್ರತ್ಯೇಕ ಪ್ರತ್ಯೇಕವಾಗಿ ಬಿದ್ದಲ್ಲಿ ಸ್ವರಾಜ್ಯವು ಸಮೀಪಿಸೀತು. ಈ ಸುವಿಚಾರಗಳು ನಮ್ಮ ಬೇಡಬದಲಾವಣೆಗೆ ಬಂಧುಗಳಲ್ಲಿ ಮೂಡಲೆಂದು ನಾವು ಬಯಸುವೆವು.

ಸ್ಫುಟವಿಚಾರಗಳು.

೧. ಲೊರ್ಡ ರೆಡಿಂಗರು ಎಸೆಂಬ್ಲಿಯಲ್ಲಿ ಅನುದಾರತನದ ಭಾಷಣವನ್ನು ಮಾಡಿದ ಬಳಿಕ ಇದು ವರೆಗೆ ಮಾಯವಾಗಿದ್ದ ಬೇಡಬದಲಾವಣೆಯುವರು ಮುಂದೆ ಬಂದು ವಿಧಾಯಕ ಕಾರ್ಯಕ್ರಮದ ಘೋಷಣೆಯನ್ನು ಮಾಡತೊಡಗಿದ್ದಾರೆ. ಈ ಬೇಡಬದಲಾವಣೆಗಳು ವಿಧಾಯಕ ಕಾರ್ಯಕ್ರಮದ ಪ್ರಶಂಸೆಯನ್ನು ಮಾಡಿ ಅದನ್ನು ಅವಲಂಬಿಸಬೇಕೆಂದು ಹೇಳಿದ್ದಲ್ಲಿ ಅವರ ಅಭಿಪ್ರಾಯವನ್ನು ಖಂಡಿಸುವ ಅಗತ್ಯವಿದ್ದಿಲ್ಲ. ಆದರೆ ಸ್ವರಾಜ್ಯ ಪಕ್ಷದವರು ಸರಕಾರದೊಡನೆ ಸಹಕಾರಕ್ಕೆ ಸಿದ್ಧರಾಗುವಷ್ಟು ತಮ್ಮನ್ನು ತಗ್ಗಿಸಿಕೊಂಡಿರುವರೆಂದೂ, ಅವರಿಗೆ ರೆಡಿಂಗರಿಂದ ಸ್ಪಷ್ಟವಾದ ಉತ್ತರವು ಸಿಕ್ಕಿತೆಂದೂ ನೆನೆಸಿ, ಹೀಗೆ ಇವರು ರಾಜಕೀಯ ಕಾರ್ಯಗಳನ್ನೆಲ್ಲ ಬಿಟ್ಟುಬಿಡಬೇಕೆಂದು ಯಾವ ಉಪದೇಶವನ್ನು ಮಾಡತೊಡಗಿದ್ದಾರೊ ಆ ಬಗ್ಗೆ ಜನತೆಗಾಗಿ ಎಚ್ಚರದ ಒಂದೆರಡು ಮಾತುಗಳನ್ನು ಬರೆಯದೆ ನಿವೃತ್ತಿ ಇಲ್ಲವಾಗಿದೆ. ರಾಜಕೀಯ ಕಾರ್ಯಗಳನ್ನು ನಡಿಸುವವರಿಗೆ ಆಯಾ ಸಂದರ್ಭಗಳಿಗನುಸಾರವಾಗಿ ಸಹಕಾರ, ಅಸಹಕಾರ, ಪ್ರತಿಯೋಗಿ ಸಹಕಾರ ಮುಂತಾದ ಸಾಧನಗಳನ್ನು ಕೈಕೊಳ್ಳಬೇಕಾಗುತ್ತದೆ. ರೋಗಿಯನ್ನು ಚಿಕಿತ್ಸಿಸಲು ಹೊರಟ ವೈದ್ಯನು ರೋಗದ ಪರಿಸ್ಥಿತಿಗನುಸಾರವಾಗಿಯೆ ತನ್ನ ಚಿಕಿತ್ಸಾಕ್ರಮಗಳನ್ನು ಬದಲಾಯಿಸುತ್ತಾನೆ. ಯುದ್ಧರಂಗದಲ್ಲಿ ಸೇನಾಪತಿಯಾದರೂ ಎದುರುಗಡೆಯವರ ಸಂಚಲನಾನುರೋಧದಿಂದಲೆ ಪ್ರತಿಯುದ್ಧಗಳನ್ನು ರಚಿಸಿಕೊಂಡಿರುತ್ತಾನೆ. ಇದೆ ರೀತಿಯಿಂದ ರಾಜಕಾರಣಿಗಳಾದರೂ ಸಂದರ್ಭಾನುಸಾರವಾಗಿ ಬೇರೆ ಬೇರೆ ಸಾಧನಗಳನ್ನು ಕೈಕೊಳ್ಳಬೇಕಾಗುತ್ತದೆ. ಆದ್ದರಿಂದ ಕೈ. ವಾ. ದೇ. ಬಂಧು ದಾಸರು ಫರಿದಪುರದ ಭಾಷಣದಲ್ಲಿ ಸೂಚಿಸಿದ್ದಂತೆ ಸ್ವಾಭಿಮಾನಕ್ಕೆ ಕುಂದುಬಾರದ ಶರ್ತಗಳನ್ನು ಮುಂದಿಮಾಡಿ ಸ್ವರಾಜ್ಯಪಕ್ಷವು ತನ್ನ ಸಹಕಾರವನ್ನು ಕೊಡಲು ಸಿದ್ಧವಾದಾದರೆ ಅದರಿಂದ ಅದು ತನ್ನನ್ನು ತಗ್ಗಿಸಿಕೊಂಡಿತು, ಮೆತ್ತಗಾಯಿತು ಎಂಬುದಾಗಿ ನೆನಸುವದು ರಾಜಕಾರಣದೊಳಗಿನ ಮರ್ಮದ ಅಜ್ಞಾನವನ್ನು ಪ್ರದರ್ಶಿಸುವದಾಗಿದೆ. ಪ್ರತಿಪಕ್ಷಿಯ ಸಂಗಡವೆ ನಿಂತುಕೊಳ್ಳುವುದರಿಂದ ಒಮ್ಮೆ ಅವನನ್ನು ಸಹಕರಿಸಲೂ ಬಹುದು, ಇನ್ನೊಮ್ಮೆ ಅವನನ್ನು ಎಳೆಯಲೂ ಬಹುದು, ಅವನ ಗತಿಯನ್ನು ತಡಿಸಲೂ ಬಹುದು. ಈ ದೃಷ್ಟಿಯಿಂದ ನೋಡುವಾಗ ರಾಜಕಾರಣದ ಸಂಪೂರ್ಣ ವಾರ್ತೆಯನ್ನೆ ಬಿಟ್ಟು ಬಿಟ್ಟು ನೋಕರಶಾಹಿಗೆ ಬೇಕಾದಂತೆ ಕ್ರೀಡಿಸಲು ಸಂದರ್ಭವನ್ನು ಒದಗಿಸಿ ಕೊಡುವುದಕ್ಕಿಂತ ಮೇಲಿನ ನಮೂನೆಯ ಸಹಕಾರವಾದರೂ ವಾಸಿಯಲ್ಲವೆ? ಹೆಸರಿಗಿಂತ ಕ್ರಿಯೆ ಮೇಲು. ಅಸಹಕಾರನೆಂದು ಹೆಸರಿಟ್ಟುಕೊಂಡು ಪ್ರತಿಕಾರಶೂನ್ಯರಾಗಿ ನೋಕರಶಾಹಿಯ ದಾರಿಯನ್ನು ಹೆಚ್ಚು ಅನುಕೂಲಿಸಿಕೊಡುವುದು ಒಳ್ಳೆಯದೊ ಅಥವಾ ಹೆಸರು ಯಾವದೆ ಇದ್ದರೂ ಅದರ ಗತಿಯನ್ನು ನಿಲ್ಲಿಸುವದು ಒಳ್ಳೆಯದೊ ಈ ಪ್ರಶ್ನೆಯನ್ನು ವಾಚಕರೆ ಆಲೋಚಿಸಿ ನೋಡಬೇಕು. ವಿಧಾಯಕ ಕಾರ್ಯಕ್ರಮವು ತನ್ನ ಮಟ್ಟಿಗೆ ಸರ್ವೋತ್ತಮವಾದರೂ ಸ್ವರಾಜ್ಯ ಸಂಪಾದನಕ್ಕೆ ಅನರ್ಹವೆ ಸರಿ. ಚೂರಿಯು ಹರಿತವಾದ್ದರಿಂದ ಲೆಕ್ಕಣಿಕೆ ಕೆತ್ತಲು ಉತ್ತಮವಾಗಿದೆಯಾದರೂ ಬಾವಿಯಿಂದ ನೀರು ಸೇದುವ ಕೆಲಸಕ್ಕೆ ಬೀಳಲಾರದೆಂಬುದನ್ನು ಯಾರೂ ಮರೆಯಕೂಡದು ಈ ಲೋಕಾನುಭವವು ವಿಧಾಯಕ ಕಾರ್ಯಕ್ರಮದ ಮೇಲಿನ ಭಕ್ತ್ಯತಿಶಯದಿಂದ ಯಾರಿಗೆ ಮಾನ್ಯವಾಗಲಿಕ್ಕಿಲ್ಲವೊ ಅಂಥವರು ಅಗತ್ಯವಾಗಿ ವಿಧಾಯ ಕಾರ್ಯಕ್ರಮವನ್ನು ಮಾಡಲಿ. ಈ ಕಾರ್ಯಕ್ರಮವನ್ನು ಮಾಡುವಾಗಲೆ ಅವರು ಸ್ವರಾಜ್ಯ ಪಕ್ಷದವರ ರಾಜಕಾರ್ಯಗಳಿಗೆ ತಮ್ಮ ಸಹಾಯ್ಯವನ್ನು ಕೊಡಬಾರದೆಂದಿಲ್ಲ. ಆ ಮೇರೆಗೆ ಅವರು ಸಹಾಯವನ್ನು ಕೊಟ್ಟಲ್ಲಿ ಕಾಯಿದೆ ಭಂಗದ ಪ್ರಸಂಗವು ಅಗತ್ಯಬೀಳದೆನೆ ಸ್ವರಾಜ್ಯವು ಹಸ್ತಗತವಾದೀತು. ಸಾರ್ವತ್ರಿಕ ಕಾಯಿದೆಭಂಗವು ಈಗಿನ ಪರಿಸ್ಥಿತಿಯಲ್ಲಿ ಸಾಧ್ಯವಿಲ್ಲವೆಂದು ಮ. ಗಾಂಧಿಗಳೆ ಹೇಳಿರುತ್ತಾರೆ. ಆದ್ದರಿಂದ ಅಶಕ್ಯಸಾಧನದ ಸುಖಸ್ವಪ್ನದಿಂದ ಅಕಾಮೋದಕಗಳನ್ನು ಚರ್ಚಿಸುವದರಲ್ಲಿ ರಾಷ್ಟ್ರದ ಲಾಭವಿಲ್ಲ. ಈ ಕಾರಣದಿಂದ ಬೇಡ ಬದಲಾವಣೆ ಬಂಧುಗಳು ತಮ್ಮ ಕ್ರಿಯಾಶೂನ್ಯತೆಯನ್ನು ಬಿಟ್ಟು ಸ್ವರಾಜ್ಯಪಕ್ಷದವರ ಬೆಂಬಲಕ್ಕೆ ಬಂದು ಸ್ವರಾಜ್ಯ ಚಳವಳದ ರಥವನ್ನು ಮುಂದೊತ್ತಬೇಕಲ್ಲದೆ ಸಿಟ್ಟಿನಿಂದ ದೂರಸ್ಥ ಕುಳಿತು ಬರೆ ಶಾಪಗಳನ್ನು ಕೊಡುವುದರಲ್ಲಿ ಪುರುಷಾರ್ಥವಿಲ್ಲ. ಕಡೆಗೆ ಒಂದು ಮಾತು. ಲೊ. ಬರ್ಕನ್‌ಹೆಡ್ಡ್, ಲೊ. ರೆಡಿಂಗ್ ಮುಂತಾದ ಒಬ್ಬರಿಬ್ಬರೆ ಅಲ್ಲ, ಸಮಸ್ತ ಅಧಿಕಾರಿ ಮಕುಟಮಣಿಗಳೆ ಎಷ್ಟೆಷ್ಟು ಕಠಿನೋಕ್ತಿಗಳನ್ನಾಡುವರೊ, ಕಲ್ಲೆದೆಯನ್ನು ತೋರ್ಪಡಿಸುವರೊ, ವಜ್ರಮುಷ್ಟಿಯನ್ನು ಧರಿಸುವರೊ ಅಷ್ಟಷ್ಟು ಹಿಂದಿ ಸ್ವರಾಜ್ಯ ಚಳವಳದ ಅಡಿಗಟ್ಟು ಗಟ್ಟಿಯಾಗುವದು. ಆದರಿಂದ ಯಾರೂ ಧೈರ್ಯಗುಂದಿ ಹೋಗಲಿಕ್ಕಿಲ್ಲ. ಇನ್ನಷ್ಟು ಉತ್ಸಾಹವನ್ನೆ ತಾಳುವರು, ಆದ್ದರಿಂದ ರೆಡಿಂಗ ಸಾಹೇಬರ ಭಾಷಣದ ಟೀಕೆಯ ನೆವದಿಂದ ಸ್ವರಾಜ್ಯಪಕ್ಷೀಯರನ್ನು ಹೀಯಾಳಿಸಲುದ್ಯುಕ್ತರಾಗುವ ಆಗ್ರಹಿಗಳು ಕೊಂಚ ಶಾಂತತೆಯನ್ನೂ ದೂರದೃಷ್ಟಿಯನ್ನೂ ವಹಿಸಬೇಕಾಗಿ ನಮ್ಮ ಸೂಚನೆ,

೨. ಲೆಜಿಸ್ಲೆಟಿವ ಎಸೆಂಬ್ಲಿಯಲ್ಲಿ ಮಡಿಮನ ಕಮಿಟಿಯ ರಿಪೋರ್ಟಿನ ವಿಷಯವನ್ನು ಸರಕಾರವು ಠರಾವಿನ ರೂಪದಿಂದ ತರಲಿಕ್ಕಿರುವದು. ಈ ವಿಷಯದಲ್ಲಿ ಸರಕಾರವು ಯಾವ ಮಾರ್ಗವನ್ನು ಅವಲಂಬಿಸೀತೆಂಬುದು ಗೊತ್ತಿರಲಿಲ್ಲ. ಆದರೆ ಈ ತಿಂಗಳ ತಾರೀಕು ೬-೮ರಲ್ಲಿ ಸರ ಅಲೆಗ್‌ಝಾಂಡರ ಮಡಿಮನರು ಈ ವಿಷಯದ ಠರಾವನ್ನು ತರುವವರಿದ್ದಾರೆ. ಅವರು ತರಲಿಕ್ಕಿರುವ ಠರಾವಿನ ಮುಖ್ಯಾಭಿಪ್ರಾಯವೇನೆಂದರೆ, ಮಡಿಮನ ರಿಪೋರ್ಟಿನ ಪೈಕಿ ಬಹುಮತದವರ ಅಭಿಪ್ರಾಯಗಳನ್ನು ಜಾರಿಯಲ್ಲಿ ತರಲು ಯತ್ನಿಸಬೇಕು" ಬೇರೆ ಶಬ್ದಗಳಿಂದ ಇದರ ಅಭಿಪ್ರಾಯವನ್ನು ಹೇಳುವದಾದರೆ ಅಲ್ಪ ಸಂಖ್ಯಾಕರು ಶಿಫಾರಸುಮಾಡಿರುವ ಯಾವ ಸುಧಾರಣೆಗಳನ್ನೂ ಕೊಡಲಿಕ್ಕಿಲ್ಲ. ಬಹುಮತದವರು ಪ್ರತಿಗಾಮಿ ಧೋರಣದ ಯಾವ ಯಾವ ಸಂಗತಿಗಳನ್ನು ಹೇಳಿರುವರೊ ಅವುಗಳನ್ನು ಒಂದು ಸಾರಿ ಜಾರಿಯಲ್ಲಿ ತಂದರೆ ಸಾಕೆಂಬುದಾಗಿ ನೋಕರಶಾಹಿಯ ಬಯಕೆ! ಈ ಬಯಕೆಯನ್ನು ಪೂರಯಿಸಿಕೊಳ್ಳುವುದಕ್ಕಾಗಿ ಅದು ಬಹುಮತದ ರಿಪೋರ್ಟನ್ನು ಎತ್ತಿ ಹಿಡಿಯಲು ಪ್ರಯತ್ನಿಸುತ್ತಿದೆ. ಆದರೆ ಯಾವ ರೂಪದಿಂದಲೆ ಆಗಲಿ, ಈ ರಿಪೋರ್ಟಿನ ಚರ್ಚೆಯು ಎಸೆಂಬ್ಲಿಯಲ್ಲಿ ಉಂಟಾಗಲಿಕ್ಕಿರುವುದರಿಂದ ಲೋಕಮತವು ಅದರಲ್ಲಿ ಪ್ರಕಟವಾಗದೆ ಇರಲಿಕ್ಕಿಲ್ಲ. ಸ್ವತಂತ್ರರ ಮನಃಪ್ರವೃತ್ತಿಯು ಹೇಗಿರಬಹುದೆಂಬುದು ಇನ್ನೂ ಗೊತ್ತಾಗಿಲ್ಲ. ಆದರೂ ಅವರಿಗೂ ಕೂಡ ಸರಕಾರದ ಈ ಪ್ರತಿಗಾಮಿ ಧೋರಣವು ಮಾನ್ಯವಾಗಿರಲಿಕ್ಕಿಲ್ಲ. ಕಾರಣ, ಮಡಿಮನ್ ಕಮಿಟಿಯ ಮುಂದೆ ಸಾಕ್ಷಿಗಳನ್ನು ಕೊಟ್ಟವರೆಲ್ಲ ಶಾಂತಪಕ್ಷದವರು. ಸ್ವತಂತ್ರರೂ ಕಮಿಟಿಯಲ್ಲಿ ಘಟಕರಾಗಿದ್ದಾರೆ. ಎಂದ ಮೇಲೆ ಅಲ್ಪ ಸಂಖ್ಯಾಕರ ಮತವೆ ಸ್ವತಂತ್ರರಿಗೆ ಮಾನ್ಯವಲ್ಲದೆ ಬಹು ಸಂಖ್ಯಾಕರ ಮತವಲ್ಲ. ಅದು ಅವರಿಗೆ ತ್ಯಾಜ್ಯವಾಗಿದೆ. ಅದನ್ನು ಅವರು ಖಂಡಿಸಿರುವರು. ಎಂದ ಮೇಲೆ ಸ್ವತಂತ್ರರಾದರೂ ಸರಕಾರದ ಠರಾವನ್ನು ಹಾಗೆಯೆ ಪಾಸುಮಾಡಲು ಬಿಡಲಿಕ್ಕಿಲ್ಲ.

೩. ಸ್ವರಾಜ್ಯಪಕ್ಷದವರಾದರೊ ಸರಕಾರದ ಈ ಠರಾವಿಗೆ ಉಪಸೂಚನೆಗಳನ್ನು ತರುವವರಿದ್ದಾರೆಂದು ಗೊತ್ತಾಗುತ್ತದೆ. ಹಿಂದೂಸ್ಥಾನದಲ್ಲಿ ಅತಿ ಬೇಗನೆ ಸ್ವರಾಜ್ಯ ಸಂಸ್ಥಾಪನೆಯಾಗುವದು ಅಗತ್ಯವಾಗಿದೆ. ಸರಕಾರಿ ಆಡಳಿತದಲ್ಲಿರುವ ದೋಷಗಳನ್ನು ಪರಿಹರಿಸುವ ಮಾತ್ರದಿಂದ ಜನತೆಯಲ್ಲಿ ಸಂತೋಷವುಂಟಾಗಲಿಕ್ಕಿಲ್ಲ, ಈಗಿನ ರಾಜ್ಯಪದ್ಧತಿಯ ಮೂಲಭೂತವಾದ ತತ್ವವನ್ನೆ ಬದಲಾಯಿಸುವದು ಅಗತ್ಯವಿದೆ, ದ್ವಿದಲ ಪದ್ಧತಿಯು ನಿಷ್ಫಲವಾದ್ದರಿಂದ ಅದನ್ನು ನಿರ್ಮೂಲಿಸಿ ಪ್ರಾಂತಿಕ ಸ್ವಾಯತ್ತತೆಯನ್ನು ಕೊಡಬೇಕು ಎಂದು ಮುಂತಾದ ಉಪಸೂಚನೆಗಳನ್ನು ತರಲು ಸ್ವರಾಜ್ಯಪಕ್ಷದ ಆಲೋಚನೆಯು ನಡೆಯುತ್ತಿದೆ. ಇಂಥ ಸಂದರ್ಭದಲ್ಲಿ ಸ್ವತಂತ್ರರು ಸ್ವರಾಜಿಸ್ಟರೊಡನೆ ಸೇರಿ ಏಕ ಮತದಿಂದ ತಮ್ಮ ಅಂಬೋಣವನ್ನು ಸ್ಥಾಪಿಸುವದು ವಿಹಿತವು. ದ್ವಿದಲ ಪದ್ಧತಿಯು ಸದೋಷವೆಂದು ಸ್ಪಷ್ಟವಾದ ಬಳಿಕ ಅದನ್ನೆ ಪುನರುಜ್ಜೀವಿಸಲು ಹಟಹಿಡಿಯುವದು ಸ್ವಾರ್ಥಪರತೆಯಲ್ಲವೆ? ಸ್ವರಾಜ್ಯಪಕ್ಷದವರನ್ನು ಬೈಯುವಾಗ ನೋಕರಶಾಹಿಯುವರು ಯಾವ ಸಪ್ರೆತಂಡದವರನ್ನು ಹೊಗಳುವರೊ, ಅವರು ದೂರದರ್ಶಿಗಳೂ, ಸರಿಯಾದ ಲೋಕಮತವನ್ನು ಪ್ರದರ್ಶಿಸುವವರೂ ಎಂಬುದಾಗಿ ಹೇಳುವರೊ ಅಂಥ ಶಾಂತಪಕ್ಷದವರೆ ದ್ವಿದಲ ಪದ್ಧತಿಯನ್ನು ಕುರಿತು ಏನೆನ್ನುತ್ತಿದ್ದಾರೆ? ದ್ವಿದಲ ಪದ್ಧತಿಯು ದಿವಾಳಿಯಾಯಿತೆಂದು ಮುಂಚಿನ ಪ್ರತಿಯೊಬ್ಬ ಮಂತ್ರಿಯು ನುಡಿದಿರುವನು, ಹೀಗಿರುವಲ್ಲಿ ಅದನ್ನೆ ಪುನಃ ಎತ್ತಿ ಹಿಡಿಯಲು ನಮ್ಮ ನೋಕರಶಾಹಿಯು ಉನ್ಮುಖವಾಗಿದೆ, ಅದರ ಈ ಸಾಹಸವನ್ನು ನೋಡುವಾಗ ಅದರ ಕೌತುಕವನ್ನೆ ಮಾಡಬೇಕೆಂದು ತೋರುವುದು.

೪. ಶಾಂತಪಕ್ಷದವರಿಗೆ ಸರಕಾರದ ಈ ಕೃತಿಯು ಸಮ್ಮತವಿಲ್ಲವೆಂಬುದಕ್ಕೆ ಕಳೆದ ವಾರ ಪುಣೆಯಲ್ಲಿ ಜರಗಿದ ಅವರ ಸಭೆಯ ವೃತ್ತಾಂತವೆ ಸಾಕ್ಷಿಯಾಗಿದೆ. ಶಾಂತಪಕ್ಷದ ಪೂರ್ವ ಪರಂಪರೆಗನುಸಾರವಾಗಿ ಮಧ್ಯ ಮಧ್ಯದಲ್ಲಿ ಅಪ್ರಯೋಜಕ ಮತ್ತು ದುರ್ಬಲತೆಯ ಒಂದೆರಡು ಮಾತುಗಳನ್ನು ಆಡಿದ್ದಾರಾದರೂ ಅವರ ಅಭಿಪ್ರಾಯದಂತೆ ಈ ದ್ವಿದಲ ಪದ್ಧತಿಯ ಸುಧಾರಣೆಗಳನ್ನು ಕಿತ್ತುಹಾಕಬೇಕೆಂಬುದೆ ಮುಖ್ಯ ತಾತ್ಪರ್ಯವಾಗಿದೆ. ಪುಣೆಯ "ಪ್ರಾಗತಿಕರ ಪರಿಷತ್ತಿನ" ಅಧ್ಯಕ್ಷರಾದ ಶ್ರೀಯುತ ಬಿ. ಎಸ್. ಕಾಮತ್‌ರಾಗಲಿ, ಸಭಾಧ್ಯಕ್ಷರಾದ ಶ್ರೀಯುತ ಚಿಂತಾಮಣಿಗಳಾಗಲಿ ಇಬ್ಬರು ದ್ವಿದಲ ಪದ್ಧತಿಯನ್ನು ತೆಗೆದುಹಾಕಬೇಕೆಂದು ಸಾರಿ ಸಾರಿ ಕೇಳಿದ್ದಾರೆ. ಹಾಸಿಗೆಯ ಮೇಲೆ ಬಿದ್ದವನ ಕಣ್ಣಿಗೆ ಯಮನ ಸುಳಿದಾಟವು ಬೀಳುವಂತೆ ಸ್ವರಾಜಿಸ್ಟರ್ ಪ್ರಾಗತಿಕರ ಕಣ್ಣುಗಳಿಗೆ ಹೊಳೆಯುತ್ತಿದ್ದಾರೆ. ಸ್ವರಾಜ್ಯ ಪಕ್ಷದವರು ಉಪರೋಧದ ಕಾರ್ಯಕ್ರಮವನ್ನು ಅಂಗೀಕರಿಸಿದ್ದರಿಂದ ನೋಕರಶಾಹಿಗೆ ಕೆಲವು ಬಿಸಿ ಹುಟ್ಟಿದೆಯಾದರೂ ಲೋಕವು ನಿರೀಕ್ಷಿಸಿದಷ್ಟು ಕಾರ್ಯವು ಆಗಲಿಲ್ಲ ಎಂಬುದಾಗಿ ಅವರು ಹೇಳುತ್ತಿರುವರು. ಪ್ರತಿಯೋಗಿ ಸಹಕಾರಿತೆಯನ್ನು ಮಾಡುವದು ಎಲ್ಲಕ್ಕೂ ಮಿಗಿಲು ಎಂದು ಈ ಶಾಂತಾಗ್ರಣಿಗಳ ಹೇಳಿಕೆಯಾಗಿದೆ. ಪ್ರತಿಯೋಗಿ ಸಹಕಾರಿತೆಯು ರಾಜಕೀಯ ಹಕ್ಕು ಸಂಪಾದನೆಯ ಕಾದಾಟದಲ್ಲಿ ಕೊನೆಯ ಮಾತೆಂಬುದಕ್ಕೆ ಅಡ್ಡಿ ಇಲ್ಲ, ಮತ್ತು ಇದೆ ಕಾರಣದಿಂದ ಲೋಕಮಾನ್ಯ ತಿಲಕರಾದರೂ ಪ್ರತಿಯೋಗಿ ಸಹಕಾರಿತೆಯನ್ನೆ ಉಪದೇಶಿಸಿದ್ದಾರೆ ಎಂಬ ಮಾತೂ ಹೌದು. ಆದರೆ ಈ ಹೊತ್ತು ಮೇಲಿನ ಒಂದು ಸ್ಫುಟವಿಚಾರದಲ್ಲಿ ನಿರ್ದೇಶಿಸಿದ ಮೇರೆಗೆ ಪರಿಸ್ಥಿತಿಗನುಸಾರವಾಗಿ ನಡಕೊಳ್ಳುವದು ಚಾಣಾಕ್ಷರಾದ ಮುತ್ಸದಿಗಳ ಕರ್ತವ್ಯವಾದ್ದರಿಂದ ಶಾಂತಪಕ್ಷೀಯರು ಈ ಉಪದೇಶದ ಪರಿಶ್ರಮವನ್ನು ಪಡುವದು ಅವಶ್ಯವಿಲ್ಲ. ಸ್ವರಾಜಿಸ್ಟರಿಗೆ ಅದು ಗೊತ್ತೆ ಇದೆ. ಆದರೆ ಅವರಾದರೂ ಕಾಲ ನಿರೀಕ್ಷಣದಲ್ಲಿದ್ದಾರೆ, ಅಷ್ಟರ ವರೆಗೆ ಅಸಹಕಾರ, ಉಪರೋಧ ಇವುಗಳ ಯೋಗ್ಯತೆಯು ಮತ್ತು ಕಾರ್ಯಕಾರಿತ್ವವು ಲೋಕಕ್ಕೆ ಸಹಜವಾಗಿ ವ್ಯಕ್ತವಾಗುತ್ತದೆಯಷ್ಟೆ. ಈ ಎಲ್ಲ ಸಂಗತಿಗಳನ್ನು ಸಮಾಲೋಚಿಸುವಾಗ ಪ್ರಾಗತಿಕರು ಪರೋಪದೇಶ ಪಾಂಡಿತ್ಯವನ್ನು ಇಷ್ಟು ಬೇಗನೆ ಪ್ರದರ್ಶಿಸುವದು ನ್ಯಾಯವಲ್ಲ. ಇರಲಿ, ಆದರೆ ಶಾಂತವಾದಿಗಳಿಗೂ ಸರಕಾರದ ಈ ಕುಟಿಲ ರೀತಿಯು ಸರ್ವಥಾ ಮಾನ್ಯವಿಲ್ಲವೆಂದು ಅವರ ಸಭೆಯ ವೃತ್ತಾಂತವನ್ನು ನೋಡುವಾಗ ತಿಳಿದುಬರುತ್ತದೆ.

೫. ಸರಕಾರವು ಪಕ್ಷಪಾತವನ್ನು ಮಾಡುವುದರಲ್ಲಿ ಎಷ್ಟರ ಮಟ್ಟಿಗೆ ದಕ್ಷವಾಗಿರುತ್ತದೆಂಬುದು ಅನೇಕ ಸಾರಿ ವ್ಯಕ್ತವಾಗಿದೆಯಾದರೂ ನಮ್ಮ ಮದ್ರಾಸ ಕೌನ್ಸಿಲಿನೊಳಗಿನ ಒಂದು ಪ್ರಶ್ನೋತ್ತರದ ಮೇಲಿಂದ ಈ ವಿಷಯವು ಇನ್ನಷ್ಟು ಬಹಿರಂಗವಾಗಿದೆ. ಇಷ್ಟೆ ಅಲ್ಲ, ಸರಕಾರವು ನಡಿಸಿಕೊಂಡಿರುವ ಈ ಪಕ್ಷಪಾತದ ಗಿಡವನ್ನು ಬೆಳೆಸುವದರ ಶ್ರೇಯಸ್ಸಿಗೆ ಕೌನ್ಸಿಲಿನ ಮಂತ್ರಿಗಳು ಕೂಡ ಕಾರಣೀಭೂತರಾಗಿದ್ದಾರೆಂಬುದು ಸಹ ಸ್ಪಷ್ಟವಾಗುತ್ತದೆ. ರಾಷ್ಟ್ರೀಯ ಪಕ್ಷದ ಪತ್ರಗಳಿಗೆ ಸರಕಾರಿ ಜಾಹಿರಾತುಗಳನ್ನು ಪೂರಯಿಸಕೂಡದೆಂಬ ಕಟ್ಟು ಮಂತ್ರಿಗಳು ಮತ್ತು ಸರಕಾರದವರು ಮಾಡಿರುವರೆಂಬುದಾಗಿ ಅಲ್ಲಿ ನಡೆದ ಪ್ರಶ್ನೋತ್ತರಗಳ ಮೇಲಿಂದ ಕಂಡುಬರುತ್ತದೆ. ಸರ್ವ ಸಮ್ಮತವಾದ ಸರಕಾರವು ಬಹಿಷ್ಕಾರ ಅಸಹಕಾರದಂಥ ಶಸ್ತ್ರಗಳನ್ನು ರಾಷ್ಟ್ರೀಯ ಪಕ್ಷದ ಪತ್ರಕಾರರ ಮೇಲೆ ನಡಿಸುವದಾದರೆ ಅಶಸ್ತ್ರ ಜನತೆಯು ಅವುಗಳನ್ನು ಕೈಕೊಳ್ಳುವದು ವಿಸ್ಮಯಕರವೆ? ಅಸಹಕಾರದ ಸಮಯದಲ್ಲಿ ಅಸಹಕಾರದ ಚಳವಳವನ್ನು ಪ್ರತಿಪಾದಿಸಿದ ಪತ್ರಿಕೆಗಳ ಮೇಲೂ, ಅಂಥ ವಾಙ್ಮಯವನ್ನು ಮುದ್ರಿಸಿದ ಮುದ್ರಣಾಲಯಗಳ ಮೇಲೂ ಸರಕಾರವು ಇದೆ ಬಗೆಯ ಬಹಿಷ್ಕಾರಾಸ್ತ್ರವನ್ನು ಕೈಕೊಂಡಿತ್ತು. ನಿಜವಾಗಿ ಹೇಳುವದಾದರೆ ಸರಕಾರಿ ಆಶ್ರಯದ ದಾಕ್ಷಿಣ್ಯಕ್ಕೆ ಒಳಗಾಗುವುದಕ್ಕಿಂತ ರಾಷ್ಟ್ರೀಯ ವಿಚಾರದವರು ಅವರ ಆಶ್ರಯವನ್ನು ಬಿಡುವುದೆ ಉತ್ತಮ. ಈ ಮಾತು ನೂರು ಸಾರಿ ಹೇಳಿದರೂ ಕಡಿಮೆಯೆ ಸರಿ. ಆದರೆ ತಾನು ನಿಃಪಕ್ಷಪಾತಿ, ಸ್ವಾತಂತ್ರ್ಯದ ಭೋಕ್ತ ಎಂಬಿತ್ಯಾದಿ ಅಭಿಮಾನದ ಜರತಾರಿ ಕೋಟನ್ನು ತೊಟ್ಟುಕೊಂಡ ಸರಕಾರಕ್ಕೆ ಈ ರೀತಿಯಿಂದ ಪಕ್ಷಪಾತಮಾಡುವದು ಲಾಂಛನಾಸ್ಪದವಲ್ಲವೆ?

ಮಂಗಳೂರು.

ಶ್ರೀ. ಕಾರ್ನಾಡ ಸದಾಶಿವರಾಯರು ಬರುವ ಮುನಿಸಿಪಲ್ ಕೌನ್ಸಿಲ್ ಚುನಾವಣೆಗೆ ಉಮೇದುವಾರರಾಗಿ ನಿಲ್ಲುವುದಿಲ್ಲವೆಂದು ತಿಳಿದುಬರುತ್ತದೆ. ಇವರ ಬದಲಿಗೆ ಕೊಂಗ್ರೆಸಿನವರು ಶ್ರೀ. ಎಮ್. ಮಾಧವರಾಯರನ್ನು ಚುನಾಯಿಸಿದ್ದಾರೆ.

ಉಡುಪಿ ತಾಲೂಕು ಅಮ್ಮಪಾಡಿ ಗ್ರಾಮದ, ನಾಗ ಸೆಟ್ಟಿಗಾರನೆಂಬ ೨೦ ವರುಷದ ತರುಣನೊಬ್ಬನು, ತನ್ನ ಎಳೆ ಪ್ರಾಯದ ಹೆಂಡತಿಯನ್ನು, ಕಳೆದ ಜುಲ್ಯಾ ೩ರಲ್ಲಿ ಕೊಂದಿದ್ದ ನಂಬ್ರದ ವಿಚಾರವು ಸೆಶ್ಶನ್ಸ್ ಕೋರ್ಟಿನಲ್ಲಿ ನಡೆದು, ಆಪಾದಿತನಿಗೆ ೬ ತಿಂಗಳು ಕಠಿಣ ಸಜೆಯಾಯಿತು. ತನ್ನ ಹೆಂಡತಿಯ ವ್ಯಭಿಚಾರವನ್ನು ತಡೆಯಲಾರದೆ ತಾನು ಅವಳನ್ನು ಕೊಂದಿರುವೆನೆಂಬ ಆಪಾದಿತನ ವಾಜ್ಮೂಲವೇ ಇಷ್ಟೊಂದು ಕಡಿಮೆಯ ಶಿಕ್ಷೆಗೆ ಕಾರಣವಾಗಿದೆ.

ದಿ ಬೊಂಬೈ ಸ್ಟೀಮ್ ನೆವಿಗೇಶನ್ ಕಂಪೆನಿಯುವರ, ಕಾರ್ಗೋ ಮತ್ತು ಪಾಸೆಂಜರ್ ಸ್ಟೀಮರು ಇದೇ ತಿಂಗಳ ೧೯ನೇ ಶುಕ್ರವಾರ ಬೊಂಬಾಯಿಂದ ಹೊರಟು ಮಂಗಳೂರಿಗೆ ಬಂದು ೧೬ನೇ ತಾರೀಕು ಸೋಮವಾರ ದಿನ ಹಿಂದೆ ಹೋಗುವುದು,

ಇಲ್ಲಿಯ ಇನ್‌ಕಮ್ ಟೆಕ್ಸ ಆಫೀಸರರು ಇದೇ ತಾ. ೨೦ಕ್ಕೆ ಇಲ್ಲಿಂದ ಪುತ್ತೂರಿಗೆ ಸರ್ಕೀಟಿನ ಮೇಲೆ ಹೋಗಲಿಕ್ಕಿರುವರು. ತಾ. ೨೧ರಿಂದ ೨೫ರ ವರೆಗೆ ಪುತ್ತೂರಲ್ಲಿ ಉಳಕೊಂಡು ತಾ. ೨೬ಕ್ಕೆ ವಾಪಸು ಮಂಗಳೂರಿಗೆ ಹಿಂತಿರಳುವರು.

ಮಂಗಳೂರು ಮುನಿಸಿಪಾಲಿಟಿಯಲ್ಲಿ ಕಳೆದ ತಾ. ೨೯ನೆ ಅಂತ್ಯವಾಗುವ ವಾರದಲ್ಲಿ ೩೬ ಮರಣಗಳೂ, ೪೫ ಜನನಗಳು, ಆ ಪೈಕಿ ಗಂಡು ೨೫ ಆಗಿದ್ದವು.

ದ. ಕ. ಜಿಲ್ಲಾ ಖಾದೀ ಬೋರ್ಡಿನ ಸಭೆಯು ಕಳೆದ ತಾ. ೨೫ಕ್ಕೆ ನಿಶ್ಚೈಸಿದ ಪ್ರಕಾರ ಜರಗಿ ಇದೇ ಬರುವ ತಾ. ೧೯ನೇ ಶನಿವಾರ ಅಪರಾಹ್ನ ಘಂಟೆ ೩ಕ್ಕೆ ಮುಂದರಿಸಿಡಲಾಯಿತು. ಮಹತ್ವದ ಪ್ರಶ್ನೆಗಳೆಲ್ಲಾ ಇತ್ಯರ್ಥಿಸಲಿಕ್ಕಿರುವುದರಿಂದ ಸಂಬಂಧಪಟ್ಟ ಮೆಂಬರರೆಲ್ಲರೂ ತಪ್ಪದೆ ಹಾಜರಾಗಬೇಕಾಗಿ ಕಾರ್ಯದರ್ಶಿಗಳಾದ ಗುಲಾಂ ಹೈದರ್‌ಸಾಹೇಬರ ಸವಿನಯ ವಿನಂತಿ.

ಇದೇ ಕಳೆದ ಆದಿತ್ಯವಾರ ಬೆಳಿಗ್ಗೆ ಸ್ವರಾಜ್ಯಪಕ್ಷದವರ ಒಂದು ಮೆರವಣಿಗೆಯು ರಾಷ್ಟ್ರಗೀತೆಗಳನ್ನು ಹಾಡುತ್ತ ಪಟ್ಟಣದ ಹೆದ್ದಾರಿಗಳಲ್ಲಿ ಹಾದುಹೋಯಿತು. ಸಾಯಂಕಾಲ ಜಪ್ಪುವಾರ್ಡಿನಲ್ಲಿ ಮುನ್ಸಿಪಲ್ ಇಲೆಕ್ಷನ್ ಸಂಬಂಧವಾದ ಒಂದು ಸಭೆಯು ಜರಗಿತು. ಶ್ರೀ. ಎಮ್. ಎನ್. ಕಿಣಿಯವರು ಅಧ್ಯಕ್ಷಸ್ಥಾನವನ್ನು ವಹಿಸಿದರು. ಶ್ರೀ ಪುಣಿಂಚತ್ತಾಯರು ರಾಷ್ಟ್ರಗೀತೆಯನ್ನು ಹಾಡಿದರು. ಅನಂತರ ಮ| ರಾ| ಗಳಾದ ಯಂ. ಮಾಧವ ರಾವ್, ಶೇಷಭಟ್ಟ ಭಿಡೆ, ಅ. ಭೋಜರಾವ್, ಕೆ. ಆರ್. ಆಚಾರ್, ಪುಣಿಂಚತ್ತಾಯರು ಇವರೇ ಮೊದಲಾದವರ ಭಾಷಣಗಳಾಗಿ ಅಂದಿನ ಸಭೆಯು ಸಮಾಪ್ತಿಯಾಯಿತು.

The Calicut Bank, Ltd.,
ದಿ ಕೆಲಿಕಟ್ ಬೇಂಕ್, ಲಿಮಿಟೆಡ್,
ಹೆಡ್ ಆಫೀಸು— ಕಲ್ಲಿಕೋಟೆ.
ಬ್ರಾಂಚುಗಳು:— ಮುಲ್ಲಸ್‌ಚೇರಿ, ತಲಚೇರಿ, ಕೊಚಿ ಮತ್ತು ಪಾಲ್ಘಾಟು.
ರಿಜಿಸ್ಟರ್ಡ್ ಮತ್ತು ಅಧಿಕಾರಗೊಳಿಸಲ್ಪಟ್ಟ ಮೂಲಧನ ರೂ. 5,00,000—0—0.
ರೂಪಾಯಿ 10ರ 50,000 ಪಾಲುಗಳು.
(30—8—1924)ರ ವರೆಗೆ ಮೌಲ್ಯ ಮೂಲಧನ ರೂಪಾಯಿ 1,81,850—0—0.
ಒಂದು ವರುಷದ ಕಾಯಂ ಠೇವಣಾತಿಗೆ ಬಡ್ಡಿ ದರ, ಸೇಕಡಾ ರೂ. 7—8—0.
ಕಳೆದ 4 ವರುಷಗಳಲ್ಲಿ ಪಾಲುಗಾರರಿಗೆ ಸೇಕಡಾ 12ರಂತೆ ಬಡ್ಡಿ ಹಂಚಿದೆ.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.
ಸಿ. ಕೃಷ್ಣನ್, ಬಿ. ಎ. ಬಿ. ಎಲ್.,
ಮೆನೇಜಿಂಗ್ ಡ್ಯಾರೆಕ್ಟರ್.
ಡ್ಯಾರೆಕ್ಟರರಲ್ಲಿ ಒಬ್ಬರು—
ಎಮ್. ನಾರಾಯಣ. ಕಾಮತ್, ಬಿ. ಎ.,
ಪ್ಲೀಡರ್, ಕುಂದಾಪುರ.

ಬುಧವಾರ ಸಾಯಂಕಾಲ ಲೈಸುಮೈದಾನಿನಲ್ಲಿ ಶ್ರೀ. ಉಳ್ಳಾಲ ರಾಮರಾವ್ ಬಿ. ಎ. ಬಿ. ಎಲ್. ಇವರ ಅಧ್ಯಕ್ಷತೆಯಲ್ಲಿಯೂ ಒಂದು ಮಹಾ ಜನರ ಸಭೆಯು ಜರಗಿತು.

ನಾಳೆ ಶನಿವಾರ ೫ ಘಂಟೆಗೆ ಕುದ್ರೋಳಿಯಲ್ಲಿ, ಆದಿತ್ಯವಾರ ೩ ಘಂಟೆಗೆ ಚಕ್ರಪಾಣಿಯಲ್ಲಿ ಸಾಯಂಕಾಲ ೫-೩೦ಕ್ಕೆ ಮಹಿಳಾಸಭೆಯ ಬಳಿಯಲ್ಲಿ, ಸೋಮವಾರ ೪-೩೦ಕ್ಕೆ ಬೋಳೂರು ಬಚ್ಚೇರಿಯ ಬಳಿಯಲ್ಲಿ ಈ ಪ್ರಕಾರ ಆಯಾ ವಾರ್ಡಿನ ಮತದಾರರ ಮತ್ತು ಮಹಾ ಜನರ ಸಭೆಗಳು ಸೇರಲಿಕ್ಕಿವೆ.

ಇಲ್ಲಿಯ ಹಂಪನಕಟ್ಟೆಯಲ್ಲಿರುವ ಕೊಸ್ಮೊಪೊಲಿಟನ್ ಕ್ಲಬ್ಬಿನಲ್ಲಿ ಪ್ಲೇಗಿನ ಇಲಿ ಬಿದ್ದಿರುವದಾಗಿ ವಾರ್ತೆ ಇದೆ. ಇತ್ತಿತ್ತಲಾಗೆ ಹಂಪನಕಟ್ಟೆಯತ್ತಕಡೆ ಪ್ಲೇಗಿನ ಹಾವಳಿಯು ಜೋರಾಗುತ್ತಿದೆ.

ಆಗೋಸ್ತು ತಾ. ೩೧ರಿಂದ ಮೈಲ್‌ಟ್ರೈನ್ ಬೆಳಗ್ಗೆ ೮|| ಗಂಟೆಗೆ ಹೊರಡುವ ಬದಲಿಗೆ ೮ ಗಂಟೆಗೆ ಹೊರಡುವುದು.

ಮಂಗಳೂರು ಮತ್ತು ಕಾರ್ಕಳ ತಾಲೂಕು ಬೋರ್ಡುಗಳನ್ನು ಒಂದಾಗಿ ಮಾಡುವರೆಂದು ತಿಳಿಯುತ್ತೇವೆ.

ಕಳೆದ ತಾ. ೧೨ನೇ ಶುಕ್ರವಾರ ಇಲ್ಲಿಯ ಸೈಂಟ್ ಎಲೋಸಿಯಸ್ ಕೊಲೇಜಿನಲ್ಲಿ ಮಾಜಿ ಗವರ್ನಮೆಂಟ್ ವಕೀಲರಾದ ಎ. ಲೋಬೊರವರ ಅಧ್ಯಕ್ಷತೆಯಲ್ಲಿ ಕೊಲೇಜಿನ ವಿದ್ಯಾರ್ಥಿಗಳಲ್ಲೊಬ್ಬರಾದ ಶ್ರೀಯುತ ಶ್ರೀ ಪಾವಶರ್ಮರಿಂದ ತಯಾರಿಸಲ್ಪಟ್ಟ ದಿವಂಗತ ಚಿತ್ತರಂಜನ ದಾಸರ ಭಾವಚಿತ್ರದ ಅನಾವರಣ ಸಮಾರಂಭವು ಜರಗಿತು.

ವಿವಿಧ ವಿಷಯಗಳು.

ಮದ್ರಾಸ ಕೌನ್ಸಿಲಿನ ಅನುದಾರತೆ.

ಮದ್ರಾಸ ಕೌನ್ಸಿಲಿನ ಕ್ರಮವೆಲ್ಲ ವಿಪರೀತವಾದ್ದು. ಬಂಗಾಲ ಮಧ್ಯಪ್ರಾಂತ ಮುಂತಾದ ಕೌನ್ಸಿಲುಗಳಲ್ಲಿ ಲೋಕಪಕ್ಷವು ಪ್ರಧಾನವಾಗಿದ್ದದಾದರೆ ನಮ್ಮ ಮದ್ರಾಸ ಕೌನ್ಸಿಲಿನಲ್ಲಿ ಸರಕಾರದ ಬಲವಾದ ಮರವು ಬೆಳೆದು ಗಟ್ಟಿಯಾಗಿದೆ. ಈ ಕೌನ್ಸಿಲಿನ ಸರಿಯಾದ ಸ್ವರೂಪವನ್ನು ವಿವರಿಸ ಹೋದರೆ ಈ ಮೀಮಾಂಸೆಯೂ ಸಾಲದು. ಕಾರಣ, 'ಬಿಸಿಲಿನಿಂದ ಕಾದ ಮಳಲು ಸೂರ್ಯನಿಗಿಂತಲೂ ಹೆಚ್ಚು ದುಃಸಹವಾಗಿರುವದೆ'ಂದು ಒಬ್ಬ ಸುಭಾಷಿತಕಾರನು ಹೇಳಿದಂತೆ ಸಾಕ್ಷಾತ್ ಸರಕಾರಿ ಪಕ್ಷಕ್ಕಿಂತಲೂ ಅದರ ಬೆಂಬಲಕ್ಕಿರುವ ಇತರ ಪಕ್ಷಗಳೆ ಕೆಲಕೆಲವು ಸಂದರ್ಭದಲ್ಲಿ ತೀವ್ರವಾದ ತಾಪವನ್ನುಂಟುಮಾಡುತ್ತವೆ. ಇಂಥ ಪಕ್ಷ-ಉಪಪಕ್ಷಗಳು ಬೆಂಬಲಕ್ಕಿರುವಾಗ ಸರಕಾರಕ್ಕೆ ಮತ್ತು ಕಾರ್ಯಕಾರಿ ಮಂಡಲಕ್ಕೆ ಹೆದರಿಕೆಯೇ? ಅಥವಾ ಲೋಕಮತದ ಪರ್ವವಿರುವದೆ? ಈ ಮಾತಿಗೆ ದೇ. ಬಂ. ದಾಸರ ಮರಣವನ್ನು ಕುರಿತು ದುಃಖಸೂಚಕ ಠರಾವನ್ನು ತರಲು ಮದ್ರಾಸ ಕೌನ್ಸಿಲು ಬಿಡದಿದ್ದದ್ದೆ ಒಂದು ದೃಷ್ಟಾಂತವಾಗಿದೆ. ಶ್ರೀ. ನರಸಿಂಹರಾಜುಲುಗಳು ದೇಶಬಂಧು ದಾಸರ ಮರಣವನ್ನು ಕುರಿತು ದುಃಖಸೂಚಕ ಠರಾವನ್ನು ತರಲು ನೋಟೀಸು ಕೊಟ್ಟಿದ್ದರು. ಕೌನ್ಸಿಲಿನ ಅಧ್ಯಕ್ಷರು ಇಂಥ ಠರಾವನ್ನು ತರಲು ಸಾಧ್ಯವಿಲ್ಲವೆಂದು ನಿರಾಕರಿಸಿದರು. ಕೌನ್ಸಿಲ್ ಪ್ರೆಸಿಡೆಂಟರು ಈ ಠರಾವನ್ನು ನಿರಾಕರಿಸುವಾಗ ತೋರಿಸಿದ ಕಾರಣಗಳಾದರೂ ಬಹು ಚಮತ್ಕಾರವಾದವುಗಳಾಗಿವೆ. 'ದಾಸರು ಆ ಕೌನ್ಸಿಲಿನ ಸಭಾಸದರಾಗಿ ಇರಲಿಲ್ಲ, ಅವರ ವಿಷಯವಾಗಿ ತರಲಿರುವ ಈ ಠರಾವೂ ಸರ್ವಮಾನ್ಯವಾಗಿಯೂ ಇಲ್ಲ'. ಅಧ್ಯಕ್ಷರು ಕೊಟ್ಟ ಈ ಎರಡೂ ಕಾರಣಗಳು ವ್ಯರ್ಥವಾಗಿವೆ. ಇದೆ ಮದ್ರಾಸ್ ಕೌನ್ಸಿಲು ಅದರ ಸಭಾಸದರಲ್ಲದವರ ಮರಣವನ್ನು ಕುರಿತು ಈ ಮೊದಲು ಕಣ್ಣೀರು ಸುರಿಸಿದಿಲ್ಲವೆ? ಹಿಂದು ಪತ್ರಿಕೆಯು ಸರಿಯಾಗಿ ಸವಾಲು ಹಾಕಿಕೇಳುವಂತೆ ಮಿ॥ ಮೊಂಟೆಗ್ಯುಗಳ ಮರಣವನ್ನು ಈ ಕೌನ್ಸಿಲು ಶೋಕಿಸಿದ್ದಿಲ್ಲವೆ? ಠರಾವು ಸರ್ವಸಮ್ಮತವಲ್ಲವೆಂದು ಹೇಳಬೇಕಾದರೆ ಅಧ್ಯಕ್ಷರು ಯಾವ ಅನುಭವದಿಂದ ಹೇಳುತ್ತಾರೆ? ಸಾರಾಂಶ ಲೋಕಪಕ್ಷದ ಮುಖಂಡರನ್ನು ತುಚ್ಛತಾಬುದ್ಧಿಯಿಂದ ನೋಡುವ ಸಂಪ್ರದಾಯವನ್ನು ಮದ್ರಾಸ ಸರಕಾರವು ಇನ್ನೂ ಬಿಟ್ಟಿಲ್ಲವೆಂದು ಹೇಳಬೇಕಾಗುತ್ತದೆ. ಮಧ್ಯಪ್ರಾಂತ, ಮುಂಬಯಿ ಇತ್ಯಾದಿ ಇತರ ಪ್ರಾಂತಿಕ ಕೌನ್ಸಿಲುಗಳಲ್ಲಿಯೂ, ಎಸೆಂಬ್ಲಿಯಲ್ಲಿಯೂ ಈ ವಿಷಯವು ಬರಬಹುದು, ಮದ್ರಾಸಿನಲ್ಲಿ ಮಾತ್ರ ಅದಕ್ಕೆ ಪ್ರತಿಬಂಧವು ಬರುತ್ತದೆ. ಇದು ದೇಶಮಹಾತ್ಮ್ಯವೆ ಸರಿ!

* * * * *

ನಿಜಾಮರ ಗೊಂದಲ

ನಿಜಾಮ ರಾಜ್ಯದಲ್ಲಿ ಗಡವಾಲವೆಂಬುದೊಂದು ಸಂಸ್ಥಾನವಿದೆ. ಈ ಸಂಸ್ಥಾನದ ಅಧಿಪತಿಗಳು ಮೃತಪಟ್ಟು ಕೆಲವು ತಿಂಗಳುಗಳಾದವು. ಅವರು ಪುತ್ರ ಸಂತತಿ ಇಲ್ಲದೆ ಮೃತಪಟ್ಟಿದ್ದರು. ಅವರ ತರುವಾಯ ಮಹಾರಾಣಿಯವರು ದತ್ತಸ್ವೀಕಾರ ಮಾಡಿ ರಾಜ್ಯವನ್ನು ನಡಿಸಲು ಆತಂಕವಿರಲಿಲ್ಲ. ಆದರೆ ನಿಜಾಮರು ಹಿಂದುಧರ್ಮಶಾಸ್ತ್ರಕ್ಕೆ ವಿರುದ್ಧವೂ ಅನೀತಿಯದೂ ಆದ ಫರ್ಮಾನನ್ನು ಹೊರಡಿಸಿ ಮೃತಪಟ್ಟರಾಜರ ಅಲ್ಪವಯಸ್ಕಳಾದ ಮಗಳಿಗೆ ವಿವಾಹವಾಗಿ ಅವಳಲ್ಲಿ ಪುತ್ರ ಸಂತತಿಯಾಗಿ ಅವನು ವಯಸ್ಕನಾದ ಮೇಲೆ ಅವನ ವಶದಲ್ಲಿ ಸಂಸ್ಥಾನವನ್ನು ಬಿಟ್ಟುಕೊಡಲಾದೀತು, ಅದುವರೆಗೆ ಸಂಸ್ಥಾನವು ಕೋರ್ಟ ಒಫ್ ವಾರ್ಡ್ಸರ ವಶದಲ್ಲಿರಬೇಕೆಂದು ಆ ಫರ್ಮಾನಿನಲ್ಲಿ ಬರೆದಿದ್ದಾರೆ. ಇದು ನ್ಯಾಯವೆಂದು ಯಾರು ಹೇಳುವಂತಿದೆ? ಈಗಿನ ಚಿಕ್ಕ ಹುಡುಗಿಯು ಪ್ರಾಯಸಮರ್ಥಳಾಗಿ ಅವಳಲ್ಲಿ ಪುತ್ರನು ಜನಿಸಿ, ಅವನು ವಯಸ್ಕನಾಗುವ ವರೆಗಿನ ಕಾಲವೇದ ಮೇಲೆ ಇದು ಪರ್ಯಾಯದಿಂದ ಸಂಸ್ಥಾನವನ್ನು ವಶಪಡಿಸುವದೆ ಆಗಿದೆ! ಈ ಕಾಲವು ಇಂತಿಷ್ಟೆ ಎಂದು ಯಾರು ಹೇಳಿಯಾರು? ಈ ಅನ್ಯಾಯವನ್ನು ಪರಿಮಾರ್ಜಿಸಲು ಮಹಾರಾಣಿಯವರೂ, ಸಂಸ್ಥಾನದ ಹೊರಗಿನವರೂ ನಿಜಾಮರಿಗೆ ಇದು ವರೆಗೆ ಅನೇಕ ಅರ್ಜಿಗಳನ್ನೂ, ವಿಜ್ಞಾಪನೆಗಳನ್ನೂ ಮಾಡಿದ್ದಾಯಿತು. ಆದರೆ ಈ ಪ್ರಯತ್ನಗಳಿಗೆ ಫಲವು ಬರಲಿಲ್ಲ. ಈಗ ಮದ್ರಾಸ ಸಂಸ್ಥಾನದೊಳಗಿನ ದೊಡ್ಡ ದೊಡ್ಡ ಮನೆತನದ ಸುಪ್ರತಿಷ್ಠಿತ ಸ್ತ್ರೀಯರು ಮಹಾರಾಣಿಗಳ ಪರವಾಗಿ ಅದೆ ನಿಜಾಮ ಸಾಹೇಬರಿಗೆ ಒಂದು ಅರ್ಜಿಯನ್ನು ಕಳುಹಿಸಿಕೊಟ್ಟಿರುವರು. ಮಹಾರಾಣಿಯವರಿಗೆ ಅವರ ಪತಿಯ ಇಚ್ಛೆಯಂತೆ ದತ್ತಕವನ್ನು ತೆಕ್ಕೊಳ್ಳಲು ಅಪ್ಪಣೆಯನ್ನು ಕೊಡಬೇಕೆಂದು ಆ ಅರ್ಜಿಯಲ್ಲಿ ಬರೆಯಲ್ಪಟ್ಟಿದೆ. ನಿಜಾಮ ಸಾಹೇಬರು ಈ ಲೋಕಮತವನ್ನು ಈಗಲಾದರೂ ಮನ್ನಿಸುತ್ತಾರೊ ಹೇಗೆಂಬುದನ್ನು ನೋಡಬೇಕು. ಪತಿಯು ಮೃತನಾದ ಬಳಿಕ ಅವನ ಸ್ತ್ರೀಯು ಪಟ್ಟವೇರಿ ರಾಜ್ಯವನ್ನು ನಡಿಸುವದು ತಪ್ಪಲ್ಲ. ಈ ಗಡವಾಲ ಸಂಸ್ಥಾನದಲ್ಲಿ ಈ ಮೊದಲು ಈ ಕ್ರಮವು ಎಷ್ಟೋ ಸಾರೆ ನಡೆದಿದೆ. ಅದನ್ನು ನಿಜಾಮಸರಕಾರವು ಮುಂಚೆ ಮಾನ್ಯಮಾಡಿದೆ, ಹೀಗಿರುತ್ತ ಈಗ ಮಾತ್ರ ಇಂಥ ವರ್ತನವು ಯಾಕೆ?

* * * * * *

ಅಮಾನುಷ ಕ್ರಮ!

"ಭೋಪಾಳ ಸಂಸ್ಥಾನದಲ್ಲಿಯಂತೂ ಇನ್ನೂ ವಿಲಕ್ಷಣವಾದ ಸಂಗತಿಗಳು ನಡಿಯುತ್ತಿದ್ದ ವಾರ್ತೆಗಳು ಬರುತ್ತವೆ. ಇದು ಮಹಮ್ಮದೀಯ ಸಂಸ್ಥಾನವು. ಹಿಂದು ಸ್ತ್ರೀಯರನ್ನು ಬಲಾತ್ಕಾರದಿಂದ ಮತಾಂತರಗೊಳಿಸಿ ಕೆಡಿಸುವ ಕ್ರಮವು ಬಹು ವೇಗದಿಂದ ನಡೆದಿದೆ. ಹಿಂದುಗಳ ಮೊರೆಯನ್ನು ಕೇಳುವವರು ಯಾರಿಲ್ಲ. ಶಹರದಲ್ಲಿ ಮುಸಲ್ಮಾನರು ಗುಂಪುಗುಂಪು ಕಟ್ಟಿಕೊಂಡು ತಿರುಗಾಡುತ್ತಿರುತ್ತಾರೆ. ಒಬ್ಬ ಹಿಂದುವನ್ನು ಒತ್ತಾಯದಿಂದ ಮಹಮ್ಮದೀಯ ಧರ್ಮಕ್ಕೆ ತಂದರೆ ಅವನು ಪುನಃ ಹಿಂದುವಾಗಲು ಅಲ್ಲಿಯ ಕಾಯಿದೆಯ ಮೇರೆಗೆ ಸಾಧ್ಯವಿಲ್ಲ! ಹಿಂದುಗಳ ಮೇಲೆ ಎಲ್ಲ ವಿಧದಿಂದ ಆಪತ್ತುಗಳು ಒದಗುತ್ತಿವೆ. ಆದರೆ ಅಲ್ಲಿಯ ಕಾಯಿದೆಯ ದೆಸೆಯಿಂದ ಚಳವಳವನ್ನು ಮಾಡುವದು ಸಹ ಅಸಾಧ್ಯವಾಗಿದೆ" (ಕೇಸರಿ)

ಈ ವೃತ್ತಾಂತವನ್ನೋದಿ ಯಾವ ಹಿಂದುವಿಗೆ ರೋಮಾಂಚವಾಗದೆ ಇದ್ದೀತು? ಅವರವರಿಗೆ ತಮ್ಮ ತಮ್ಮ ಧರ್ಮವು ಎಷ್ಟೆ ಶ್ರೇಷ್ಠವಾಗಿರಲಿ, ಅದರ ಅನ್ಯರನ್ನು ಬಲಾತ್ಕಾರದಿಂದ ಬಾಟಾಯಿಸುವ ಪದ್ಧತಿಯು ಈಗಿನ ೨೦ನೆಯ ಶತಮಾನದಲ್ಲಿ ಪುನರಪಿ ತಲೆ ಎತ್ತಲಿಕ್ಕಿಲ್ಲವೆಂದು ನಾವು ತಿಳಿದಿದ್ದೆವು. ಆದರೆ ಇತ್ತಲಾಗಿನ ಇಂಥ ಅನೇಕ ಸಂಗತಿಗಳನ್ನು ಕೇಳುವಾಗ ನಮ್ಮ ಅಭಿಪ್ರಾಯವು ತಪ್ಪಾದ್ದೆಂದು ನಿರಭಿಮಾನವಾಗಿ ಒಪ್ಪಿಕೊಳ್ಳಬೇಕಾಗುತ್ತದೆ! ಸ್ತ್ರೀಯರನ್ನು ಎಬ್ಬಿಸಿಕೊಂಡು ಹೋಗುವದು, ಅವರನ್ನು ಕೆಡಿಸುವದು, ಮತಸ್ವೀಕಾರಕ್ಕಾಗಿ ಭಯವನ್ನು ಹಾಕುವದು ಈ ಎಲ್ಲ ಸಂಗತಿಗಳು ಹಿಂದಿನ ಇತಿಹಾಸದ ಪುಟಗಳನ್ನು ಮಾತ್ರ ಕಲಂಕಿಸುತ್ತವೆ ಎಂದು ಇತಿಹಾಸ ವಾಚಕರು ಇದು ವರೆಗೆ ಏನು ಹೇಳಿಕೊಂಡಿದ್ದರೊ ಅದು ಕೂಡಾ ವ್ಯರ್ಥವಾಗಿ ವರ್ತಮಾನ ಕಾಲದ — ವಿಚಾರ ಸ್ವಾತಂತ್ರ್ಯ, ಧರ್ಮ ಸ್ವಾತಂತ್ರ್ಯವಿರುವ ಈ ವರ್ತಮಾನ ಕಾಲದ — ಚರಿತ್ರಪಟದ ಮೇಲೂ ಇಂಥ ಸಂಗತಿಗಳು ಮಸಿಯ ಹನಿಗಳನ್ನು ಚೆಲ್ಲುತ್ತವೆ! ಇದು ಲೋಕದ ಸಚರಿತ್ರಕ್ಕೆ ಭೂಷಣವೊ ದೂಷಣವೊ? - ಲೋಕದ ಪ್ರಗತಿಗೆ ಸಾಧಕವೊ, ಬಾಧಕವೊ? ಅದರೆ ಈ ತಾತ್ವಿಕ ಪ್ರಶ್ನೆಗಳು ಬದಿಗಿರಲಿ. ಸದ್ಯ ಎಲ್ಲ ರೀತಿಯಿಂದಲೂ ಐಹಿಕ ದುರ್ಬಲತೆಯನ್ನು ಹೊಂದಿದ್ದ ಈ ಹಿಂದುಸಮಾಜವು ಇಂಥ ಆಪತ್ತುಗಳಿಂದ ಆತ್ಮರಕ್ಷಣೆಯನ್ನು ಮಾಡಿಕೊಳ್ಳಬೇಕಾದ್ದು ಹೇಗೆ ಎಂಬುದನ್ನು ಮಾತ್ರ ಎಲ್ಲ ಹಿಂದುಗಳು ಆಲೋಚಿಸಬೇಕಾದ ಸಂಗತಿಯಾಗಿದೆ. ಹಿಂದುಗಳು ಹಿಂದು ಸಂಘಟನೆಯನ್ನು ಮಾಡಕೂಡದು, ಶುದ್ಧಿಚಳವಳವನ್ನು ಪ್ರಾರಂಭಿಸಕೂಡದು, ಖಿಲಾಫತ್ತಿನ ಚಳವಳವನ್ನು ಎತ್ತಿಹಿಡಿಯಬೇಕು ಹೀಗೆಲ್ಲ ಹೇಳುವದೆಂದರೆ ಇದರ ಮೇಲಿಂದ ಹಿಂದುಗಳು ತಮ್ಮ ಹಿಂದುತ್ವವನ್ನು ಕಳಕೊಳ್ಳಬೇಕೆಂಬುದೆ ನಿಷ್ಪನ್ನವಾಗುತ್ತದೆ. ಆದರೆ ಈ ಎಲ್ಲ ಸಂಗತಿಗಳ ಪ್ರತಿಕಾರವನ್ನು ಮಾಡಲು ಹೊರಟರೆ ಹಿಂದುಸ್ಥಾನದ ಸ್ವರಾಜ್ಯವು ದೂರವಾಗುತ್ತದಂತೆ! ಮತ್ತು ಇದು ಹೌದಾದರೆ ಭಾವಿ ಸ್ವರಾಜ್ಯಕ್ಕೋಸ್ಕರ ಸನಾತನ ಕಾಲದ ಹಿಂದುಧರ್ಮವನ್ನು ಕಳಕೊಳ್ಳುವದು ಉಚಿತವೆ? ಈ ವಿಷಯವನ್ನು ಹಿಂದು ಧರ್ಮಾಭಿಮಾನಿಗಳು ಅಗತ್ಯವಾಗಿ ಆಲೋಚಿಸಬೇಕಾಗಿದೆ.

ಆಯುರ್ವೇದದ ಪ್ರಾಚೀನತ್ವ.

(ಆಯುರ್ವೇದದ ವಿಷಯವಾಗಿ ಮೈಸೂರ ಗವರ್ನಮೆಂಟ ಆಯುರ್ವೇದಿಕ ಕೊಲೆಜಿನಲ್ಲಿ ಮ. ಗುರುನಾಥರಾವ್ ಎಂಬವರು ಓದಿದ ಒಂದು ಪ್ರಬಂಧದೊಳಗಿನ ಕೆಲವು ಭಾಗಗಳು ಕೆಳಗೆ ಕೊಡಲ್ಪಟ್ಟಿವೆ.)

ಐತಿಹಾಸಿಕ ದೃಷ್ಟಿಯಿಂದ ನೋಡಿದರೂ ಕೂಡ ನಮ್ಮ ಆಯುರ್ವೇದವು ಪ್ರಾಚೀನಕಾಲದಿಂದಲೂ ಬಂದಿರುತ್ತದೆಂದು ಗೊತ್ತಾಗುತ್ತದೆ. ಹೇಗೆಂದರೆ:— ನಮ್ಮ ಭರತಖಂಡದ ಇತಿಹಾಸವನ್ನು ವೇದಗಳ ಕಾಲ, ಉಪನಿಷತ್ ಮತ್ತು ಪುರಾಣಗಳ ಕಾಲ, ಬೌದ್ಧರ ಕಾಲ, ಮುಸಲ್ಮಾನರ ಕಾಲ ಮತ್ತು ಇಂಗ್ಲೀಷರ ಕಾಲವೆಂದುಐದು ಭಾಗಗಳನ್ನಾಗಿ ಮಾಡಬಹುದು.

ವೇದಗಳ ಕಾಲದಲ್ಲಿ ಪ್ರಸಿದ್ಧವಾಗಿರುವ ಅಥರ್ವಣವೇದದಲ್ಲಿ ಇಂದ್ರಜಾಲ, ಮಹೇಂದ್ರಜಾಲ, ವಿಷಯಗಳೂ ನಾನಾ ಪ್ರಕಾರಗಳಾದ ಗಿಡಮೂಲಿಕೆಗಳ ವರ್ಣನೆಯೂ ಗುಣದೋಷಗಳೂ ಮತ್ತು ಖನಿಜಗಳ ಪದಾರ್ಥಜ್ಞಾನವೂ ತಿಳಿಸಲ್ಪಟ್ಟಿದೆ. ಇದೂ ಅಲ್ಲದೇ ಋಗ್ವೇದದಲ್ಲಿ ಆಯುರ್ವೇದ ಶಾಸ್ತ್ರಕ್ಕೆ ಸಂಬಂಧಪಟ್ಟ ಎಷ್ಟೋ ಸೂಕ್ತಗಳು ಹೇಳಲ್ಪಟ್ಟಿವೆ.

ಉಪನಿಷತ್‌ಗಳ ಕಾಲದಲ್ಲಿ ಪ್ರಸಿದ್ಧವಿರುವ ಐತರೇಯ ಬ್ರಾಹ್ಮಣ ಉಪನಿಷತ್‌ನಲ್ಲಿ ಸೋಮರಸದಿಂದ ಆಸವಾರಿಷ್ಟಗಳನ್ನು ಮಾಡುತ್ತಿದ್ದರೆಂದೂ ಅದರಲ್ಲಿ ನೊರೆಯು ಬರುತ್ತಿದ್ದಿಲ್ಲವೆಂತಲೂ ಹೇಳಲ್ಪಟ್ಟಿದೆ. ಇದೂ ಅಲ್ಲದೆ ಈ ರೀತಿಯಾಗಿ ತಯಾರು ಮಾಡುವ ವೈದ್ಯರುಗಳ ಪ್ರಶಂಸೆಯೂ ಕೂಡ ಇರುತ್ತದೆ.

ಇನ್ನು ಪುರಾಣ ಕಾಲದಲ್ಲಿರುವ ಮಹಾಭಾರತ ಪುರಾಣದಲ್ಲಿ ಸೈನ್ಯದಲ್ಲಿದ್ದ ಯಾವತ್ತೂ ಶಲ್ಯವೈದ್ಯರುಗಳಿಗೆಲ್ಲಾ ಅವರುಗಳ ಶಸ್ತ್ರ ಚಿಕಿತ್ಸೆಗೆ ಅವಶ್ಯ ಬೇಕುವ ಸಮಸ್ತ ಸಲಕರಣೆಗಳನ್ನೂ ಒದಗಿಸುತ್ತಿದ್ದರೆಂದೂ, ಬಾಣಗಳಿಂದ ಚುಚ್ಚಲ್ಪಟ್ಟಿದ್ದರೆ ಅವುಗಳನ್ನು ಉಪಾಯದಿಂದ ಹೊರಕ್ಕೆ ಕಿತ್ತುತೆಗೆದು ಔಷಧಗಳ ಲೇಪದಿಂದ ಆ ಘಾಯಗಳನ್ನು ಗುಣಪಡಿಸುತ್ತಿದ್ದರೆಂದೂ ಇದೇ ರೀತಿಯಾಗಿ ಕೌರವರ ಅಧಿಪತಿಯಾದ ದುರ್ಯೋಧನನು ಬಾಣಗಳಿಂದ ಚುಚ್ಚಲ್ಪಟ್ಟವನಾದಾಗ್ಯೆ ಅವನ ಶರೀರದಲ್ಲಿರುವ ಬಾಣಗಳನ್ನೆಲ್ಲಾ ಬಹು ಯುಕ್ತಿಯಿಂದ ಕಿತ್ತುತೆಗೆದು ಅವನನ್ನು ಔಷಧ ಹಾಕಿ ಇಟ್ಟಂಥ ನೀರಿನ ಪಾತ್ರೆಯಲ್ಲಿ ಕೂಡಿಸಿ, ಗುಣಪಡಿಸಿದರೆಂದೂ ಹೇಳಲ್ಪಟ್ಟಿದೆ. (ಭೀಷ್ಮಪರ್ವದಲ್ಲಿ ನೋಡಿರಿ)

ಇನ್ನು ಬುದ್ಧನ ಕಾಲದಲ್ಲಿ ನೋಡಿದರೆ, ಆ ಕಾಲದಲ್ಲಿ ಎರಡು ದೊಡ್ಡ ವಿಶ್ವವಿದ್ಯಾಲಯಗಳಿದ್ದವೆಂದೂ, ಅವುಗಳಲ್ಲಿ ವೈದ್ಯಶಾಸ್ತ್ರವೇ ಮೊದಲಾದ ಸಮಸ್ತ ಶಾಸ್ತ್ರಗಳನ್ನೂ ಕಲಿಸುತ್ತಿದ್ದರೆಂದೂ ತಿಳಿಯುತ್ತದೆ. ಆ ವಿಶ್ವವಿದ್ಯಾಲಯಗಳು ಯಾವುದೆಂದರೆ:— ಪೂರ್ವದಿಕ್ಕಿನಲ್ಲಿ ಒಂದು ಕಾಶಿ, ಪಶ್ಚಿಮ ದಿಕ್ಕಿನಲ್ಲಿ ಮತ್ತೊಂದು ತಕ್ಷಶಿಲಾ ಗೌತಮ-ಬುದ್ಧನ ಕಾಲದಲ್ಲಿಯೇ ಇದ್ದ ಜೀವಕನೆಂಬವನು ತಕ್ಷಶಿಲಾ ವಿಶ್ವವಿದ್ಯಾಲಯದಲ್ಲಿ ಆತ್ರೇಯ ಪಂಡಿತರ ಕೈಯಲ್ಲಿ ಆಯುರ್ವೇದ ಶಾಸ್ತ್ರಾಭ್ಯಾಸಮಾಡಿದನೆಂದು ರಾಕೆಲ್ ಸಾಹೇಬನು ಬರೆದ ಬುದ್ಧನ ಚರಿತ್ರೆಯಿಂದ ತಿಳಿದುಬರುತ್ತದೆ.

ಇನ್ನು ಮುಸಲ್ಮಾನರ ಕಾಲದಲ್ಲಿಯೂ ಆಯುರ್ವೇದವು ಸ್ಥಿರಪ್ರಚಾರದಲ್ಲಿತ್ತೆಂಬ ವಿಷಯವನ್ನು ನಾನೇನು ಬೇರೆ ಹೇಳಬೇಕಾಗಿಲ್ಲ. ಏಕೆಂದರೆ ಮುಸಲ್ಮಾನರ ರಾಜರು ತಮ್ಮ ದೊಡ್ಡ ದೊಡ್ಡ ಪಂಡಿತರಿಂದ ನಮ್ಮ ಚರಕ ಮತ್ತು ಸುಶ್ರುತ ಗ್ರಂಥಗಳನ್ನು ಭಾಷಾಂತರ ಮಾಡಿಸಿ, ಪ್ರಸಿದ್ಧಮಾಡಿಸಿದ್ದರ ಮೇಲಿಂದಲೆ ಇದು ಗೊತ್ತಾಗುತ್ತದೆ. • • •

ಇನ್ನು ನಮ್ಮ ಆಯುರ್ವೇದ ಶಾಸ್ತ್ರದಿಂದ ಪರದೇಶಗಳಿಗೆ ಯಾವ ಯಾವ ರೀತಿಯಾಗಿ ಲಾಭವು ದೊರೆತ್ತಿರುತ್ತದೆಯೆಂಬ ವಿಷಯವನ್ನು ಸಂಕ್ಷಿಪ್ತದಲ್ಲಿ ಹೇಳುತ್ತೇನೆ.

ಪ್ರಥಮದಲ್ಲಿ ಗ್ರೀಸ್ ದೇಶದವರು ನಮ್ಮ ಭರತಭೂಮಿಗೆ ಬಂದು ನಮ್ಮಗಳ ವೇದಾಂತವನ್ನೂ, ಆಯುರ್ವೇದವನ್ನೂ ಅಭ್ಯಾಸಮಾಡಿ, ತಮ್ಮ ದೇಶಕ್ಕೆ ಹೋಗಿ ಅಲ್ಲಿ ಪ್ರಚಾರಮಾಡಿದರು. ಇವರು ತಮ್ಮ ದೇಶಕ್ಕೆ ಹೋಗುವಾಗ್ಯೆ ಈಜಿಪ್ತ ಮಾರ್ಗವಾಗಿ ಹೋದದ್ದರಿಂದ ಈಜಿಪ್ತ ದೇಶದಲ್ಲಿಯೂ ಆಯುರ್ವೇದವು ಪ್ರಚಾರದಲ್ಲಿ ಬಂದಿತು. ಗ್ರೀಸ್ ದೇಶದಲ್ಲಿ ವೈದ್ಯತತ್ವಗಳನ್ನು ಪ್ರಾರಂಭದಲ್ಲಿ ಕಂಡು ಹಿಡಿದಂಥಾ ಹಿಪೋಕ್ರೇಟ್ಸ್ ಎಂಬ ಪಂಗಡದವರು ನಮ್ಮ ಆಯುರ್ವೇದವನ್ನು ಸಾನಂದದಿಂದ ಸ್ವೀಕಾರ ಮಾಡಿ, ಇದರಲ್ಲಿ ಎಷ್ಟೋ ಮುಖ್ಯಾಂಶಗಳನ್ನು ತಮ್ಮ ತತ್ವಗಳಿಗೆ ಸೇರಿಸಿಕೊಂಡರು. ಹಿಪೋಕ್ರೇಟ್ಸ್ ಎಂಬವರ ವೈದ್ಯಕೀಯ ತತ್ವಗಳಿಗಿಂತಲೂ ನಮ್ಮ ತ್ರಿದೋಷಗಳ ಪದ್ಧತಿಯು ಬಹಳ ಪುರಾತನ ಕಾಲದ್ದೆಂದೂ ಮತ್ತು ಪ್ರಪಂಚದಲ್ಲಿಯ ಎಲ್ಲಾ ವೈದ್ಯಶಾಸ್ತ್ರಗಳಲ್ಲಿ ಇದೇ ಮೊದಲನೇದೆಂದೂ ಇದರಿಂದಲೇ ಉಳಿದ ಶಾಸ್ತ್ರಗಳು ಪುಷ್ಟಿಯನ್ನು ಹೊಂದಿ, ಪ್ರಚಾರದಲ್ಲಿ ಬಂದಿರುತ್ತವೆಯೆಂದೂ ಠಾಕೂರು ಸಾಹೇಬರು ಬರೆದ ಹಿಸ್ಟರಿ ಒಫ್ ಆರ್ಯನ್ ಮೆಡಿಕಲ್ ಸೈನ್ಸ್ ಎಂಬುವ ಪುಸ್ತಕದ ಮೇಲಿಂದ ಗೊತ್ತಾಗುತ್ತದೆ.

ಅರಬ್ಬಿ ವೈದ್ಯಶಾಸ್ತ್ರವೆಂದರೆ ಯೂನಾನೀ ವೈದ್ಯಶಾಸ್ತ್ರವು. ಈ ಶಾಸ್ತ್ರವು ಗ್ರೀಕ್ ಮತ್ತು ಆಯುರ್ವೇದ ಶಾಸ್ತ್ರಾಧಾರಗಳಿಂದಲೆ ಹುಟ್ಟಿರುತ್ತದೆಂದು ತಿಳಿದುಬರುತ್ತದೆ.

ಕಲೀಫ್ ಅಲ್‌ಮನ್‌ಸೂರ್ ಎಂಬುವ ಮುಸಲ್ಮಾನ ರಾಜರು ನಮ್ಮ ಚರಕ ಮತ್ತು ಸುಶ್ರುತ ಗ್ರಂಥಗಳನ್ನು ಅರಬ್ಬೀ ಭಾಷೆಯಲ್ಲಿ ಭಾಷಾಂತರ ಮಾಡಿಸಿದ್ದಾನೆ. ಸುಶ್ರುತ ಗ್ರಂಥಕ್ಕೆ ಕೆಲಾಲಿ ಕ್ಯಾನ್‌ಸೂರ್ ಅಲ್‌ಹಿಂದಿ ಎಂದು ಅರಬ್ಬೀ ಹೆಸರನ್ನೂ ಕೂಡ ಕೊಟ್ಟಿರುತ್ತಾನೆ. ಇವೆರಡಲ್ಲದೆ ಇನ್ನೂ ಎಷ್ಟೋ ಗ್ರಂಥಗಳನ್ನು ಭಾಷಾಂತರಿಸಿ, ತಮ್ಮ ಭಾಷೆಯ ಹೆಸರುಗಳನ್ನು ಕೊಟ್ಟಿರುತ್ತಾರೆ. ಅರಬ್ಬೀ ಜನರ ಮುಖ್ಯ ವಿಶ್ವವಿದ್ಯಾಲಯವಾಗಿದ್ದ ಬ್ಯಾಗದಾದ್ ಪಟ್ಟಣದಲ್ಲಿ ನಮ್ಮ ಆಯುರ್ವೇದ ಪಂಡಿತರನ್ನು ಪಾಠ ಹೇಳುವುದಕ್ಕೆ ಇಟ್ಟಿದ್ದರು. ಇದೂ ಅಲ್ಲದೆ ಆಯುರ್ವೇದ ಪಂಡಿತರನ್ನು ದೊಡ್ಡ ದೊಡ್ಡ ಆಸ್ಪತ್ರೆಗಳಲ್ಲಿ ವೈದ್ಯಾಧಿಪತಿಗಳನ್ನಾಗಿ (ಚೀಫ್ ಮೆಡಿಕಲ್ ಆಫೀಸರ್ಸ್) ಮಾಡಿದ್ದರು. ೫೩೧-೫೭೩ ಇಸವಿಗಳಲ್ಲಿ ಗಾವ ಷಿರ್ವಾನ್ ಎಂಬ ರಾಜನು ಭರತಖಂಡದಲ್ಲಿಯ ವೈದ್ಯವಿದ್ಯೆಯನ್ನೂ, ಮೂಲಿಕೆಗಳ ಜ್ಞಾನವನ್ನೂ ಮತ್ತು ವೈದ್ಯ ಗ್ರಂಥಗಳನ್ನೂ ಸಂಪಾದನೆ ಮಾಡುವುದಕ್ಕೋಸ್ಕರ ಎರಡು ಪ್ರವಾಸಗಳನ್ನು ಮಾಡಿದರು. ಸುಶ್ರುತ ಗ್ರಂಥಕ್ಕೆ ಕಿತಾಬ್ ಸುಶ್ರುತ್ ಎಂಬ ಎರಡನೇ ಹೆಸರೂ ಇರುತ್ತದೆ. ಇದೂ ಅಲ್ಲದೆ ಹಿಂದೂಸ್ಥಾನದಿಂದ ಶುಂಠಿ, ತೆಂಗು, ಅಡಿಕೆ, ಶ್ರೀಗಂಧ, ಎಳ್ಳು ಇವೇ ಮೊದಲಾದ ಎಷ್ಟೋ ಸಾಮಾನುಗಳು ಅರಬ್ಬಿಸ್ಥಾನಕ್ಕೆ ಹೋಗುತ್ತಿದ್ದವೆಂದು ಬಲವಾದ ಆಧಾರಗಳು ಸಿಕ್ಕುತ್ತವೆ. ಆಯುರ್ವೇದಾಧಾರದಿಂದಲೆ ಹುಟ್ಟಿದ ಅರಬ್ಬೀ ವೈದ್ಯವು ೧೭ನೆಯ ಇಸವಿಯ ವರೆಗೂ ಅಂದರೆ ಈ ಸುಮಾರು ಇನ್ನೂರು ವರ್ಷಗಳ ಹಿಂದೆಯೂ ಕೂಡ ಯುರೋಪ್ ಖಂಡದಲ್ಲೆಲ್ಲಾ ಬಹಳ ಪ್ರಚಾರದಲ್ಲಿತ್ತು. ಇದರ ಆಧಾರದಿಂದಲೇ ಇಂಗ್ಲೀಷ್ ವೈದ್ಯ ಪದ್ಧತಿಯು ಹುಟ್ಟಿರಬಹುದೆಂದು ಊಹಿಸಲ್ಪಟ್ಟಿದೆ. ಆಯುರ್ವೇದ ಆಧಾರದಿಂದ ಹುಟ್ಟಿದ್ದು ಅರಬ್ಬೀ ವೈದ್ಯವು, ಅರಬ್ಬೀ ವೈದ್ಯಾಧಾರದಿಂದ ಹುಟ್ಟಿದ್ದು ಇಂಗ್ಲೀಷ್ ವೈದ್ಯವು ಅಂದ ಮೇಲೆ ಇಂಗ್ಲೀಷ್ ವೈದ್ಯಕ್ಕೆ ನಮ್ಮ ಆಯುರ್ವೇದವು ಪರ್ಯಾಯದಿಂದ ಅಜ್ಜಯಾದಂತಾಯಿತು. ಆಯುರ್ವೇದದ ಎಷ್ಟೋ ಗ್ರಂಥಗಳು ಲ್ಯಾಟಿನ್ ಭಾಷೆಯಲ್ಲಿಯೂ, ಜರ್ಮನ್ ಭಾಷೆಯಲ್ಲಿಯೂ ಭಾಷಾಂತರಿಸಲ್ಪಟ್ಟಿವೆ. ಇವುಗಳಲ್ಲಿ ಚರಕಕ್ಕೆ ಸರಕ್‌ವೆಂತಲೂ, ಸುಶ್ರುತಕ್ಕೆ ಸುಸ್ರುದ್‌ವೆಂತಲೂ, ನಿದಾನಕ್ಕೆ ಬದಾನ್‌ವೆಂತಲೂ ಅಷ್ಟಾಂಗಕ್ಕೆ ಅಸಂಕರವೆಂತಲೂ ಕರೆಯುತ್ತಾರೆ. ಸುಶ್ರುತ ಗ್ರಂಥವನ್ನು ಮಿ॥ ಹೆಲ್ಪರ್ ಎಂಬುವವನು ಲ್ಯಾಟಿನ್ ಭಾಷೆಯಲ್ಲಿಯೂ, ಮಿ॥ ವಲ್ಲರ್ ಎಂಬುವವನು ಜರ್ಮನೀ ಭಾಷೆಯಲ್ಲಿಯೂ ಭಾಷಾಂತರಿಸಿದ್ದಾರೆ. ಹೀಗೆ ಪ್ರಪಂಚದಲ್ಲಿಯ ಎಲ್ಲಾ ವೈದ್ಯಶಾಸ್ತ್ರಗಳಿಗಿಂತಲೂ ಪುರಾತನವಾದ ನಮ್ಮ ಆಯುರ್ವೇದವು ಅಪೌರುಷೇಯವಾದದ್ದೆಂದು ಹೇಳಲಿಕ್ಕೆ ನನಗೆ ಯಾವ ಸಂದೇಹಗಳೂ ತೋರುವುದಿಲ್ಲ. ಏಕೆಂದರೆ ನಮ್ಮ ಶಾಸ್ತ್ರದ ದೃಷ್ಟಿಯಿಂದಲೂ, ಲೌಕಿಕ ದೃಷ್ಟಿಯಿಂದಲೂ ನೋಡಿದರೂ ಕೂಡ ನಮಗೆ ಬಲವಾದ ಆಧಾರಗಳೇ ಸಿಕ್ಕುತ್ತವೆ. ಇದೂ ಅಲ್ಲದೆ ನಮ್ಮ ಆಯುರ್ವೇದವು ಪ್ರಾರಂಭ ಕಾಲದಿಂದಲೂ ಪೂರ್ವವಾಗಿರುತ್ತದೆಂದು ಈ ಕೆಳಗಿನ ದೃಷ್ಟಾಂತದಿಂದ ಗೊತ್ತಾಗುತ್ತದೆ. ಹಿಂದಕ್ಕೆ ಗ್ರೀಸ್ ದೇಶದ ಅಧಿಪತಿಯಾದ ಅಲೇಕ್ಝಾಂಡರನು ಹಿಂದೂಸ್ಥಾನದ ಮೇಲೆ ದಂಡೆತ್ತಿ ಬಂದಾಗ್ಯೆ ಅವನ ಜೊತೆಯಲ್ಲಿ ಎಷ್ಟೋ ಜನರೂ, ಸೈನ್ಯವೂ ಹಿಪೋಕ್ರೇಟ್ಸ್ ಎಂಬ ವೈದ್ಯರುಗಳೂ ಬಂದಿದ್ದರು. ಆ ಸಮಯದಲ್ಲಿ ಅಲೇಕ್ಝಾಂಡರನು ಸೈನ್ಯದವರಲ್ಲಿ ಕೆಲವರಿಗೆ ಸರ್ಪ ಕಚ್ಚಿತಂತೆ ಆ ಸಮಯದಲ್ಲಿ ಹಿಪೋಕ್ರೇಟ್ಸ್ ಎಂಬುವ ವೈದ್ಯರನ್ನು ಕರೆದು ಏನು ಮಾಡಬೇಕೆಂದು ಕೇಳಲಾಗಿ ಅವರು ತಮಗೆ ಅದರ ಚಿಕಿತ್ಸೆ ಗೊತ್ತಿಲ್ಲವೆಂದು ಹೇಳಿದರಂತೆ. ಆ ಮೇಲೆ ಆಯುರ್ವೇದ ಪಂಡಿತರನ್ನು ಕರೆದು ಕೇಳಲಾಗಿ ಅವರು ಯಾವುದೊ ಒಂದು ಗಿಡಮೂಲಿಕೆಯ ಪ್ರಯೋಗಮಾಡಿ ಅವರನ್ನು ಬದುಕಿಸಿದರಂತೆ. ಇದನ್ನು ನೋಡಿಕೊಂಡು ಹಿಪೋಕ್ರೇಟ್ಸ್ ಎಂಬುವ ವೈದ್ಯರು ಆಶ್ಚರ್ಯಚಕಿತರಾಗಿ ಇಲ್ಲಿಯೇ ಎಷ್ಟೊ ವರ್ಷಗಳ ವರೆಗೆ ನಿಂತು ಆಯುರ್ವೇದವನ್ನು ತಿಳಿದುಕೊಂಡು ತಮ್ಮ ಹಿಪೋಕ್ರೇಟ್ಸ್ ವೈದ್ಯತತ್ವಕ್ಕೆ ಇವುಗಳನ್ನು ಸೇರಿಸಿ, ಅಭಿವೃದ್ಧಿ ಹೊಂದಿಸಿದರೆಂದು ಆರಿಯನ್ಸ್ ಇಂಡಿಯನ್ ಹಿಸ್ಟ್ರಿಯಿಂದ ಗೊತ್ತಾಗುತ್ತದೆ.

ಕುಂದಾಪುರದಲ್ಲಿ — ಸಮಾಜೋದ್ಧರಣ ಕಾರ್ಯಾರಂಭಃ—

ಇದೇ ತಿಂಗಳ ತಾರೀಕು ೨೭ನೇ ಸಂಜೆ ಪೂರ್ವ ನಿಶ್ಚಿತವಿದ್ದಂತೆ ಇಲ್ಲಿಯ 'ಪರಿಷನ್ಮಂದಿರ'ದಲ್ಲಿ ಯಾವತ್ತೂ ಹಿಂದೀ ಸಮಾಜದವರ ಮಹಾಸಭೆಯೊಂದು, ಆರ್ಯಸಮಾಜದ ಪರವಾಗಿ, ಇಲ್ಲಿಯ ಹೈಸ್ಕೂಲಿನ ಮಾಜಿ ಹೆಡ್ಮಾಸ್ತರಾದ ಶ್ರೀಯುತ ಬಿ ರಘುನಾಥರಾವ್ ಬಿ. ಎ. ಎಲ್. ಟಿ. ಇವರ ಅಧ್ಯಕ್ಷತೆಯಲ್ಲಿ ಜರುಗಿಸಲ್ಪಟ್ಟಿತು. ಡಿಸ್ಟ್ರಿಕ್ಟ್ ಬೋರ್ಡ ಮೆಂಬರರೂ, ತಾಲೂಕು ಬೋರ್ಡು ಪ್ರೆಸಿಡೆಂಟರೂ, ಹಾಗೂ, ಸ್ಥಳೀಕ ಸುಪ್ರಸಿದ್ಧ ಜಮೀನುದಾರರೂ ಆದ ಶ್ರೀಮಂತ ನರಸಿಂಹ ಕಾರಂತರೂ, ಡಿಸ್ಟ್ರಿಕ್ಟ್ ಬೋರ್ಡು ಮೆಂಬರರಾದ ಶ್ರೀಯುತ ಕೊಡಿಯವರು ಮತ್ತು ಇತರ ಹಲವು ಮಂದಿ ವಕೀಲರುಗಳೂ ನೆರೆದಿದ್ದರು. ಸಭಾರಂಭದಲ್ಲಿ ಶ್ರೀಯುತ, ಗೋಪಾಲನಾಯ್ಕರು, ಅಸ್ಪೃಶ್ಯೋದ್ಧಾರದ ಕುರಿತು—ಅವರ ಏಳಿಗೆಯನ್ನು ಹೇಗೆ ಮಾಡಬಹುದು? ಅವರನ್ನು ಸಮಾಜದಿಂದ ದೂರೀಕರಿಸಿದ್ದರಿಂದ ಆದ ಹಾನಿ ಮುಂತಾದ ವಿಷಯಗಳನ್ನು—ಸ್ಫೂರ್ತಿದಾಯಕವಾಗಿ ಭಾಷಣ ಮಾಡಿದರು. ತರುವಾಯ, ಕೂಡಿದ ಸಭಿಕರ ವಿವಿಧಾಭಿಪ್ರಾಯಗಳು ಸೂಚಿಸಲ್ಪಟ್ಟ ಮೇಲೆ, ಪತಿತರಿಗೆ, ಈಗಿರುವ ತಾಲೂಕು ಹಾಗೂ ಡಿಸ್ಟ್ರಿಕ್ಟ ಬೋರ್ಡುಗಳ ವಳಗಿನ ಶಾಲೆಗಳಲ್ಲಿ, ಎಡ್ಮಿಶನ್‌ಕೊಡುವುದು ಮೇಲೆಂದೂ, ಹಾಗೆ ಮಾಡುವುದಕ್ಕೆ ಮುಂಚೆ, ಪಂಚಮ ಬಾಲಕರನ್ನು ಶುಚಿತ್ವದಲ್ಲಿ ಮುಂದರಿಯುವಂತೆ, ಒಂದು ಸಂಸ್ಥೆಯನ್ನೂ, ಎಲ್ಲಾ ಹಿಂದೂ ಬಾಲಕರಿಗೂ, ಅನಾಥಲಯವನ್ನೂ ಸ್ಥಾಪಿಸಬೇಕೆಂದು ಠರಾಯಿಸಲಾಯಿತು. ಮತ್ತು ತದ್ಕಾರ್ಯವು ತೀವ್ರವೇ ನಡೆಯಬೇಕೆಂಬ ಲವಲವಿಕೆಯಿಂದ ಒಂದು ಕಮಿಟಿಯನ್ನು—ಕೆಳಗೆ ಹೆಸರು ಕಾಣಿಸಿದವರಿಂದ ಕೂಡಿದ—ಸರ್ವಾನುಮತದಿಂದ ಸ್ಥಾಪಿಸಲಾಯಿತು.

ಮ॥ ರಾ॥ ರಾ॥ ಶ್ರೀ॥ ರಘುನಾಥರಾವ್ B. A. L. T. (ಪ್ರೆಸಿಡೆಂಟ್)
" " ಮಹಾಬಲೇಶ್ವರ ಹೊಳ್ಳರು B. A. B. L.
High Court Vakil (ಕಾರ್ಯದರ್ಶಿ)
" " ನಾರಾಯಣ ಕಾಮತ್ ವಕೀಲ (ಜತೆ ಕಾರ್ಯದರ್ಶಿ)
" " ಎಸ್. ಎ. ಉಡುಪ B. A. B. L.
High Court Vakil, (ಖಜಾಂಚಿ)

ತರುವಾಯ, ಅನಾಥಾಲಯ ಸ್ಥಾಪನೆಯ ಸಲುವಾಗಿ ಎಲ್ಲರೂ ಧನದಾನಮಾಡುವಂತೆ ವಿನಂತಿಸಿ, ಪ್ರೆಸಿಡೆಂಟರಿಗೂ, ಇತರ ಮಹನೀಯರುಗಳಿಗೂ ಧನ್ಯವಾದಗಳನ್ನರ್ಪಿಸಿ ಸಭಾವಿಸರ್ಜನೆಮಾಡಲ್ಪಟ್ಟಿತು.

ವಿ. ಸೂ:— ಧನಸಹಾಯಮಾಡಿದವರ ಹೆಸರುಗಳು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲ್ಪಡುವುವು.

ಶಾಂ॥ ಗಣಪತಿರಾವ್, (ಬ್ರಹ್ಮಾವರ)

ಶಾಸ್ತ್ರೀಯ
ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪ್ಯಾ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪ್ಯಾ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.
ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.
ಹೆಚ್ಚಿನ ಮಾಹಿತಿಗೆ "ಆರೋಗ್ಯ ಶಾಸ್ತ್ರರಹಸ್ಯ" ಎಂಬ ಪುಸ್ತಕಕ್ಕೆ ಬರೆಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದಭೂಷಣ,
ಮಂಗಳೂರು ದ. ಕನ್ನಡ.

ಶುದ್ಧವಾದ ನೀಲಗಿರಿ ಎಣ್ಣೆ

ತಲೆನೋವು, ಶೀತ, ಇನ್‌ಫ್ಲುಯಂಜಾಜ್ವರ,
ವಾತ, ಇತ್ಯಾದಿ ಎಲ್ಲಾ ರೋಗಗಳ
ಮೇಲೆ ಸಿದ್ಧೌಷಧ.
1 ಔನ್ಸ್ ಬಾಟ್ಲಿ 1ರ ಕ್ರಯ 0—4—0.
ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.
Authorised and fully paid
up Capital Rs. 300,000—0—0
Reserve and other sinking
Funds „ 259,000—0—0

1906ನೇ ಇಸವಿ ಜುಲಾಯಿತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
ಅಧಿಕಾರಗೊಳಿಸಲ್ಪಟ್ಟ, ಪೂರ್ಣವಾಗಿ
ತೆತ್ತ ಮೂಲಧನವು ರೂ. 300,000—0—0
ಕ್ಷೇಮನಿಧಿ ಮತ್ತು ಇತರ ಫಂಡುಗಳು
259,000—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳೂ, ಪಡಕೊಳ್ಳೋಣಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1925.
K. Venkat Rao,
Secretary.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೫೦ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ೧ಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೨೪ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲ ಪಂಡಿತರು,

ಬ್ರ್ಯಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ,
ಮಂಗಳೂರು ಟವನಿಗೆ ಮಾತ್ರ.

ಆರೋಗ್ಯ ಚಂದ್ರಿಕೆ.

ಸಂಪಾದಕರು: ಡಾಕ್ಟರ್ ಯು. ರಾಮರಾವ್, ಎಲ್. ಎಮ್
ಸಿ. ಎಫ್. ಎಮ್. ಯು. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವುದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕೆ ರೂ. ೧—೮—೦; ಬಿಡುಪತ್ರಿಕೆ ಒಂದಕ್ಕೆ ರೂ. ೦—೩—೦. ಹಿಂದಿನ ಸಂಚಿಕೆಗಳು ಕೂಡ ದೊರೆಯುವವು.

ಚಂದಾದಾರರಾಗುವವರು ವಿ. ಪಿ. ಮೂಲಕವಾಗಿ ತರಿಸಿಕೊಳ್ಳುವುದಕ್ಕಿಂತಲೂ ಹಣವನ್ನು ಮುಂಗಡವಾಗಿ ಕಳುಹಿಸುವುದು ಲಾಭಕರ. ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು 'ಆರೋಗ್ಯ ಚಂದ್ರಿಕೆ'ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು.

ಪತ್ರವ್ಯವಹಾರಕ್ಕೆ: 'ಆರೋಗ್ಯ ಚಂದ್ರಿಕೆ'
೩೨೩ ತಂಬುಚೆಟ್ಟಿ ಬೀದಿ, ಮದ್ರಾಸ್

ಬಂದು ನೋಡಿರಿ! ತಿಂದುನೋಡಿರಿ!
ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ
ಪದಕವನ್ನು
ಬಹುಮಾನವಾಗಿ ಪಡೆದಿರುವ
ಎಸ್. ಪಿ. ಆಚಾರ್ಯ
ಇವರಿಂದ ತಯಾರಿಸಲ್ಪಟ್ಟ
ಉಪ್ಪಿನಕಾಯಿಗಳನ್ನು
ಬಂದು ನೋಡಿರಿ! ತಿಂದು ನೋಡಿರಿ!

ದೇಶಬಂಧುಗಳೇ,
ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ ಶುಂಠಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.
ಅವುಗಳನ್ನು ನಮ್ಮಲ್ಲಿಗೆ
ಬಂದು ನೋಡಿರಿ! ತಿಂದು ನೋಡಿರಿ!

ಇಂಡಿಯನ್ ಸ್ಟೋರ್ ವಿಕ್ಟರ್ ಮಾರ್ಕೆಟ್

ಮಣೋಹರ ಕಾಫಿ ಕ್ಲಬ್, ಮಾರ್ಕೆಟ್ ರೋಡು, ಮಂಗಳೂರು. | ಅಥವಾ | 'ಸದಾನಂದ ಕಾಫಿ ಕ್ಲಬ್' ರಥಬೀದಿ, ಮಂಗಳೂರು.

"ಬಹು ದಿವಸಗಳಿಂದ ಪ್ರಸಿದ್ಧವಾಗುತ್ತಿರುವ ಔಷಧ!"

ರಕ್ತ ಶುದ್ಧಿ | ವಜ್ರಾಂಗ-ಬಿಂದು | ವೀರ್ಯ ವೃದ್ಧಿಕಾರಕ

ವಜ್ರಾಂಗಬಿಂದುವೆಂಬ ಈ ಮಹೌಷಧಿಯನ್ನು ಅನೇಕ ಪರ್ವತಗಳಲ್ಲಿ ಉತ್ತಮೋತ್ತಮವಾದ ಮತ್ತು ಅವಶ್ಯವಾಗಿ ಗುಣ ಕೊಡುವಂತಹ ವನಸ್ಪತಿಗಳ ಅರ್ಕದಿಂದ ಉಪಯುಕ್ತವಾದ ಮತ್ತು ಉಚ್ಚತರದ ಭಸ್ಮಗಳ ಮಿಶ್ರಣಮಾಡಿ ಯಾಂತ್ರಿಕ ಸಹಾಯದಿಂದ ಸಿದ್ಧಪಡಿಸಿರುತ್ತದೆ. ಈ ವಜ್ರಾಂಗಬಿಂದುವಿನ ಸೇವನೆಯಿಂದ ಕೆಳಗೆ ಬರೆದ ರೋಗಗಳು ಗುಣವಾಗಿ ಹೊಸ ಮನುಷ್ಯನಾಗುತ್ತಾನೆಂದರೆ ಅತಿಶಯೋಕ್ತಿಯಾಗಲಾರದು.

ಈ ಮಹೌಷಧಿಯ ಸೇವನೆಯಿಂದ, ವಾತ, ಪಿತ್ತ, ಕಫ ಈ ಮೂರು ದೋಷಗಳಿಂದ ಉತ್ಪನ್ನವಾಗುವ ರೋಗಗಳು ಗುಣವಾಗುವದಲ್ಲದೆ, ಸ್ವಪ್ನದೋಷ, ಧಾತುಪಾತ ನಪುಂಸಕತ್ವ, ಪರಮಾ ಮತ್ತು ಗರಮಿ ಇವುಗಳ ಸಮೂಲ ನಾಶವಾಗುತ್ತದೆ. ಬಹು ದಿವಸದಿಂದ ಮೈಯಲ್ಲಿ ಅಂಟಿಕೊಂಡ ಕೆಡಕಿಯಂತಹ ಒಂದೇ ರೋಗವನ್ನು ಗುಣವಾಗುವದು, ಲಘುವಿಗಿಂತ ಮೊದಲು ಅಥವಾ ಕಡೆಗೆ ಸ್ವಾಭಾವಿಕವಾಗಿ ಹೋಗುವ ಧಾತು ಬಂದಾಗುತ್ತದೆ. ತಿಂದ ಅನ್ನವು ಜೀರ್ಣವಾಗಿ ಮಲವು ಸರಿಯಾಗಿ ಹೋಗುವದು ಯಾವದೇ ಕಾರಣದಿಂದ ಬಂದ ಅಶಕ್ತತೆಯೂ ಕಣ್ಣಿಗೆ ಕತ್ತಲೆ ಬಂದಂತಾಗಿ ಘುಮ ಬರುವದು, ಕೈಕಾಲುಗಳು ಉಂಡಿಯುವದು, ಮುಂತಾದ ಸಕಲ ವಿಕಾರಗಳೂ ನಾಶಹೊಂದುತ್ತವೆ. ವೀರ್ಯವೃದ್ಧಿ, ರಕ್ತಶುದ್ಧಿಗಳಾಗಿ ಮನುಷ್ಯನು ಬಲವಂತನಾಗುತ್ತಾನೆ. ಪೂರ್ಣ ಗುಣ ಬರಬೇಕಾದರೆ ಮೂರು ಬಾಟ್ಲಿಗಳು ಬೇಕು.

೧ ಬಾಟ್ಲಿಗೆ ರೂ. ೧—೪—೦. ೩ ಬಾಟ್ಲಿಗಳಿಗೆ ರೂ. ೩—೪—೦. ೧೨ ಬಾಟ್ಲಿಗಳಿಗೆ ರೂ. ೧೦—೦—೦.

ಇದರ ಜೊತೆಗೆ ಒಂದು ಬಾಟ್ಲಿಯು ಉಚಿತ. ಟಪ್ಪಾಲ ಪ್ಯಾಕಿಂಗ ಖರ್ಚು ಪ್ರತ್ಯೇಕ. ಒಮ್ಮೆಯೇ ಹೆಚ್ಚಿಗೆ ಬಾಟ್ಲಿಗಳನ್ನು ತರಿಸಿಕೊಂಡರೆ ಟಪ್ಪಾಲ ಖರ್ಚು ಹೆಚ್ಚಿಗೆ ಬೀಳಲಾರದು. ಏಜಂಟರಾಗಲಪೇಕ್ಷಿಸುವವರು ಪತ್ರವ್ಯವಹಾರ ನಡಿಸಿ, ಖುಲಾಸೆ ತಿಳಕೊಳ್ಳಬಹುದು. ಟಪ್ಪಾಲ ಮತ್ತು ಪ್ಯಾಕಿಂಗ ಖರ್ಚು ಬೇರೆ ಬೀಳುವುದು. ಅನುಪಾನ ಪತ್ರವು ಬಾಟ್ಲಿಯ ಸಂಗಡಲೇ ಕಳಿಸಲ್ಪಡುವುದು.

ಪತ್ತೆ. ಮ್ಯಾನೇಜರ, ಕೆ. ಎಮ್. ಹನುಮಾನ ಪ್ರಸಾದಿಕ ಕಂಪೆನಿ,
ಮು. ಪೊ. ಚಿಕ್ಕೋಡಿ, (ಜಿಲ್ಲಾ ಬೆಳಗಾಂವ)

ಜ್ಯೋತಿಷ್ಯ ಸಂಗ್ರಹ.

(1) ಬೃಹಜ್ಜಾತಕ ... ...
(2) ಉಮಾಮಹೇಶ್ವರ ಸಂವಾದ ಎಂಬ ಜ್ಯೋತಿಷ್ಯ ಕಾಲಚಕ್ರ
(3) ಕೇರಳ ಪ್ರಶ್ನೆ ... ...
(4) ಪ್ರಶ್ನೋತ್ತರ ರತ್ನಮಾಲಿಕಾ ... ...
(5) ನವನೀತಾರಿಷ್ಟವು ... ...
(6) ಷಟ್ಪಂಚಾಶತ್ ಗ್ರಂಥ ... ...
(7) ನಕ್ಷತ್ರ ಚೂಡಾಮಣಿ ಗ್ರಂಥ ... ...
(8) ಮುಹೂರ್ತಪದವೀಗ್ರಂಥ ... ...
(9) ಅಷ್ಟದಿಕ್ಪಾಲಕ ಮಂಗಳಾಷ್ಟಕಗಳು ... ...
(10) ಕಾಲನಿರ್ಣಯಾಭ್ಯೋಯಂ ಗ್ರಂಥ ... ...
(11) ಸವ್ಯಾಖ್ಯಾನ ಕಾಲಾಮೃತ... ... ...

— ಪ್ರಸಂಗದ ಪುಸ್ತಕಗಳು. —

(1) ಸೇತು ಬಂಧನ ... ...
(2) ವಸಿಷ್ಠ ಪುರಾಣ ... ...
(3) ಇಂದ್ರಜೀತು ಕಾಳಗ ... ...
(4) ಚಂಡಭೀಮ ... ...
(5) ಮೈದುನರಾಮನ ಚರಿತ್ರೆ ... ...
(6) ಭಾಮಿನಿ ಷಟ್ಪದಿ ಚೋರ ಕಥೆ ... ...
(7) ಕುಮಾರ ರಾಮನ ಕಥೆ ... ...
(8) ಕೃಷ್ಣದಾನಾಮೃತ ... ...
(9) ಶ್ರೀಕೃಷ್ಣ ಸತ್ಯಭಾಮ ಸಂವಾದ ... ...
(10) ಚಿತ್ರಕೇತು ರಾಜನ ಕಥೆ ... ...
(11) ಬಕಾಸುರ ವಧೆ ... ...
(12) ಬಾಣಾಸುರನ ಕಥೆ ... ...
(13) ರಂಭಾಶುಕ ಸಂವಾದ ... ...
(14) ರುಕ್ಮಿಣೀ ಪರಿಣಯ ... ...
(15) ರಾವಣೋದ್ಭವ ಯಕ್ಷಗಾನ ... ...
(16) ಸಭಾ ಲಕ್ಷಣವು ... ...
(17) ಶ್ರೀ ಕೃಷ್ಣದೀನಾಶ್ವಮೇಧ ಕಥಾ ... ...
(18) ಚಂದ್ರಮೌಳೀ ಕಾಳಗ ... ...
(19) ಚಿತ್ರವಿಚಿತ್ರ ಕಾಳಗ ... ...
(20) ಯಕ್ಷಗಾನ ಸಾರಂಗಧರನ ಕಥೆ ... ...
(21) ,, ಶನಿದೇವರ ಮಹಾತ್ಮೆ ... ...
(22) ,, ಹರಿಶ್ಚಂದ್ರನ ಕಥೆ ... ...
(23) ಯಕ್ಷಗಾನ [illegible] ಕಥೆ ... ...
(24) ,, ಚೋರ ಕಥೆ ... ...
(25) ,, ಪಾರ್ವತಿ ಕಾರವಂಚ ಕಥೆ ...
(26) ,, ಗೋವಿನ ಚರಿತ್ರೆ ... ...
(27) ,, ದುಶ್ಶಾಸನ ಕಥೆ ... ...
(28) ,, ಸಾನಂದ ಗಣೇಶ್ವರ ಕಥೆ ... ...
(29) ,, ಅಂಗದ ಸಾಧನ ... ...

— ಭಜನೆಯ ಪುಸ್ತಕಗಳು. —

(1) ಉಡುಪಿಕ್ಷೇತ್ರ ಮಹಾತ್ಮೆ ... ...
(2) ಹನುಮದ್ರಾಮಾಯಣ ... ...
(3) ಅಧ್ಯಾತ್ಮ ವಿಚಾರ ... ...
(4) ಭಕ್ತಿಮಹಿಮೆ ... ...
(5) ಪ್ರಬಂಧ ಮುಕ್ತಾವಳಿ ... ...
(1) ಹರಿಕೀರ್ತನಾಮೃತಸಾರ ... ...
(2) ಹರಿನಾಮಾಮೃತಂ. ... ...
(3) ರುಕ್ಮಿಣೀ ಕಲ್ಯಾಣ ... ...
(4) ಮಂಗಳ ಗೌರೀಹಾಡು ... ...
(5) ಉದ್ದಾಳೀಕನ ಹಾಡು ... ...
(6) ಯಕ್ಷಗಾನ ಗಿಳೀ ಹಾಡು ... ...
(7) ಕನಕದಾಸ ಕಬೀರದಾಸರ ಕೀರ್ತನೆಗಳು ...
(8) ಬೀಗರ ಹಾಡು ... ...
(9) ಭಜನೆಯ ಪದಗಳು ... ...

— ವಿವಿಧ ಪುಸ್ತಕಗಳು. —

(1) ಸದಾಚಾರ ವಿವೇಚನೆ ... ...
(2) ಗೋಪಾಲಕೃಷ್ಣ ಗೋಕಲೆ ... ...
(3) ಶ್ರೀಕೃಷ್ಣ ಸೇವಾವ್ರತಂ ... ...
(4) ಪಶ್ಚಾತ್ತಾಪ ಭಾಷ್ಪ ... ...
(5) ಶ್ರೀ ಶ್ರೀಮಹಾ ಭಾಗವತ ... ...
(6) ಉದ್ಧಯನ ಚರಿತ್ರೆ ... ...
(7) ಮಧ್ವಾಚಾರ್ಯರು (ಶ್ರೀಮಾನ್) ... ...
(8) ಯತಿರಾಜವಂಶತಿ ... ...
(9) ಪರಮಾರ್ಥಶತಕಂ ... ...
(10) ಭಕ್ತಿಸುಮಾಂಜಲಿ ... ...
(11) ಸತ್ಯರಾಜ ಪೂರ್ವದೇಶ ಯಾತ್ರೆಗಳು ...
(12) ಕಾಲನಿರ್ಣಯಾಖ್ಯಾನ ... ...
(13) ಅರೇಬಿಯನ್ ನಾಯ್ಟ್ಸ 1000 ಪುಟಗಳ ಮೇಲೆ ಇವೆ.

ಪುಸ್ತಕಗಳು ದೊರೆಯುವ ಸ್ಥಳ :— **ಶಾರದಾ ಛಾಪಖಾನೆ,**
ರಥ ಬೀದಿ, ಮಂಗಳೂರು.



—ಗೋಡೆಗೆ ತಗಲಿಸುವ
ಹೊಸ ನಮೂನೆಯ—

ಟಿಕ್—ಟಾಕ್

ಎಂಬ ಈ ಗಡಿಯಾರಗಳು ಜರ್ಮನೀ ದೇಶದಲ್ಲಿ ತಯಾರಿಸಿದ್ದು. ಇವು ಕಲಾರು ಘಂಟೆಯನ್ನು ತೋರಿಸುವವು. ಇವಕ್ಕೆ ಬೀಗ ಕೊಡಬೇಕಾದಿಲ್ಲ. ಇದರಲ್ಲಿ ಕಾಣುತ್ತಿರುವ ಗುಂಡನ್ನು ಮೇಲಕ್ಕೆ ಎಳೆದರೆ ಸಾಕು. ತನ್ನಷ್ಟಕ್ಕೆ ತಾನೇ ಟಿಕ್—ಟಾಕ್ ಎಂಬ ಶಬ್ದವನ್ನು ಮಾಡುತ್ತಾ ಸರಿಯಾದ ಕಾಲವನ್ನು ತೋರಿಸುವದು. ಇದು ನೋಡುವುದಕ್ಕೆ ಬಹು ಲಕ್ಷಣವಾಗಿರುವುದು.

ಕ್ರಯ 1ಕ್ಕೆ ರೂ. 3—0—0

ಪೀಟರ್ ವಾಚ್ ಕಂಪೆನಿ
ಪೋಸ್ಟ್ ಬಾಕ್ಸ ನಂ. 27, ಮದ್ರಾಸ್.



11 ಮಣಿಗಳಿದ್ದ ಬ್ರಿಜ್ ಮ್ಯೂವ್ಮೆಂಟ್.

22 ಕೆರೆಟ್ ರೋಲ್ಡ ಗೋಲ್ಡ ರಿಸ್ಟ್ವಾಚ್.

12
1
2
3
4
5
6
7
8
9
10
11

ಈ ವಾಚ್ ಎಂಟಾಣೆ ಪಾವಲಿಯಷ್ಟು ಸಣ್ಣದಾಗಿ ಬಹು ಚಲೋದಾದ ಇನೆಮಲ್ ಡಾಯಿಲ್ ಇದ್ದು ಬಹು ಉತ್ತಮವಾಗಿದೆ. 5 ವರ್ಷದಗ್ಯಾರಂಟಿ ಇದೆ. ಕ್ರಯ ರೂ. 12/8
18 ಕೆರೆಟು ಇಲೆಕ್ಟ್ರೊ ರೋಲ್ಡ ಗೋಲ್ಡ ವಾಚ್ ಕ್ರಯ ರೂ. 7—0—0. “ಬಿ” ಟ್ಯಾಮ್ಪೀಸ ರೂ. 2-4-0.
9 ಕಾರಾಟ್ 8 ಮಣಿಗಳ ವಾಚ್ 1ರ ಕ್ರಯ 23—0—0.
14 ,, ,, ,, 26—0—0.
14 ,, 15 ಮಣಿ ,, 36—0—0.
9 ,, ,, ,, 32—0—0.
ಚಲೋದಾದ ಲವ್ ಸಕ್ಲೆಗಳು ಡಜನ್ 1ಕ್ಕೆ ರೂ. 3/4.

P. Sambasiva Chetty & Co.
134 NAINEAPPA NAICKEN ST.
P. T. MADRAS.

ಶುದ್ಧ ರೋಮದ ಧಾವಳಿಗಳು.

1 ಮಳ ಉದ್ದ 1¼ ಮಳ ಅಗಲ ರೂ. 1½ರಿಂದ 2 ವರೆಗೆ, 5 ಮಳ ಉದ್ದ 1½ ಮಳ ಅಗಲ ರೂ. 1½ ರಿಂದ 5 ವರೆಗೆ, 6 ಮಳ ಉದ್ದ 1½ ಮಳ ಅಗಲ ರೂ. 2½ರಿಂದ 6 ವರೆಗೆ, 8 ಮಳ ಉದ್ದ 2 ಮಳ ಅಗಲ ರೂ. 3½ರಿಂದ 10 ವರೆಗೆ, 12 ಮಳ ಉದ್ದ 2¼ ಮಳ ಅಗಲ ರೂ. 6ರಿಂದ 12 ವರೆಗೆ, 16 ಮಳ ಉದ್ದ 2¼ ಮಳ ಅಗಲ ರೂ. 9 ರಿಂದ 18 ವರೆಗೆ. ಇವುಗಳಲ್ಲದೆ ಶುದ್ಧ [illegible] ರೇಷ್ಮೆ ಮಡಿಗಳು, [illegible]ಗಳು, ಕಾಶೀ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ [illegible], [illegible], ಶಾಲ್, [illegible], ಹಿತ್ತಾಳೆಯ ಆಟದ ಸಾಮಾನುಗಳು, [illegible] ಅಂಗುಲಿಗಳು ಮತ್ತು ಇನ್ನೂ ಅನೇಕ ಸಾಮಾನುಗಳು ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುವು. ‘ಕ್ಯಾಟಲಾಗ್’ ಇನಾಂ.

ವಿಳಾಸ—
ಶಿರೋಮಣಿ ಯು. ನಾರಾಯಣಾಚಾರ್ಯ
ಮತ್ತು ಕಂಪೆನಿ, [illegible], [illegible].

ಮನುಷ್ಯರಿಗೆ ಮತಿಸ್ಥಿತಿಗಿಂತಲೂ ಹೆಚ್ಚಾದ್ದು ಯಾವುದೂ ಇಲ್ಲ.

ಜನ್ಮದಲ್ಲಿ ಕಷ್ಟಸುಖಗಳು ಅನುಭವಿಸುತ್ತದರಲ್ಲಿ ಅಪಜಯವಿಲ್ಲದೇ ಧನ್ಯನಾಗುವುದಕ್ಕೆ ಮುಖ್ಯ ಸಾಧನ ಮತಿಸ್ಥಿತಿಯೇ ರಾಮಬಾಣವೆಂದು ಹೇಳಬಹುದು.

ಆದರೆ ಪ್ರಸ್ತುತ ನಾವು ಅನುಭವಿಸುವ ಚಪಲಚಿತ್ತದಲ್ಲಿ ಮತಿಸ್ಥಿತಿ ಉಂಟಾಗುವುದು ಸಾಧ್ಯ ಹೇಗೆ? ನಿಮಗೆ ಯಾವರಿಧವಾದ ಚಪಲಚಿತ್ತವಿದ್ದಾಗ್ಯೂ, ನಮ್ಮ ಆತಂಕನಿಗ್ರಹ ಮಾತ್ರೆಗಳನ್ನು ಉಪಯೋಗಿಸಿರಿ. ಈ ಮಾತ್ರೆಗಳೇ ತನ್ನ ಮೆದುಳಲ್ಲಿರುವ ದುರ್ಬಲವನ್ನು ನಿವಾರಿಸಿ, ದೃಢಚಿತ್ತವನ್ನುಂಟುಮಾಡುವುದು.

ಈ 32 ಮಾತ್ರೆಗಳುಳ್ಳ ಡಬ್ಬಿ ಒಂದಕ್ಕೆ ರೂಪಾಯಿ ಒಂದು ಮಾತ್ರ.

ಹಿಂದೂದೇಶದಲ್ಲಿಯೂ ಮತ್ತು ಇತರ ದೇಶಗಳಲ್ಲಿಯೂ ಪ್ರತಿಯೊಂದು ಗೃಹದಲ್ಲಿ ಪ್ರಯೋಜನಕರವಾದ ಒಂದು ಪುಸ್ತಕ ಇರುವುದು. ನಿಮಗೆ ಗೊತ್ತುಂಟೋ? ಆ ಪುಸ್ತಕದ ಹೆಸರೇ

“ಕಾಮಶಾಸ್ತ್ರ.”

ನೀವು ಇದುವರೆವಿಗೂ ಆ ಪುಸ್ತಕದಲ್ಲಿ ವಿವರಿಸಿದ್ದ ಘನ ವಿಷಯಗಳನ್ನು ನೋಡದೇ ಇದ್ದ ಪಕ್ಷಕ್ಕೆ, ಈ ದಿನ ನಮಗೆ ಒಂದು ಕಾರ್ಡು ಬರೆದರೆ ಪೋಸ್ಟು ಚಾರ್ಜು ನಿಮಗಿಲ್ಲದೇನೇ, ಆ ಪುಸ್ತಕವನ್ನು ಕಳುಹಿಸುತ್ತೇವೆ.

ಆತಂಕನಿಗ್ರಹ ಔಷದಾಲಯ,
ನಂಬ್ರ 26, ಬ್ರಾಡ್ವೆ, ಮದರಾಸು.

Agents:—
Messrs RAPHAEL & Co.,
MANGALORE.

ದಕ್ಷಿಣ ಕನ್ನಡ ಜಿಲ್ಲೆಯ
ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

೧,೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು
— ತೆಗೆದುಕೊಳ್ಳಿರಿ. —

REGISTERED
TRADE
MARK

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಭೋಗಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ, ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ, ದಾರ್ಢ್ಯತೆಯನ್ನೂ ಉಂಟುಮಾಡುವುದು. ಕೈ ಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಾಮಿಸ್ರಿ ಎಂಬುವದು ಕಾಬೂಲ್ ಕಂದಹಾರ ಪ್ರಾಂತ್ಯಗಳಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ ಅಫ್ರಿಕಾ, ಬರ್ಮ, ಪಿನಾಂಗ್ ಸಿಂಗಪೂರ್, ಸಿಲೋನ್ ಮತ್ತು ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. ೧ ಡಬ್ಬಿಯನ್ನು ೧೫ ದಿವಸ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. ೨ ಯಾ ೩ ಡಬ್ಬಿಗಳು ಜನ್ಮಾಂತ್ಯದವರೆಗೂ ಪೂರ್ಣವಾಗಿ ಗುಣವನ್ನು ಮಾಡುವವು. ಅನುಪಾನ ಪತ್ರಿಕೆಯು ಡಬ್ಬಿಯ ಸಂಗಡವೇ ಇರುತ್ತೆ. ಹೆಸರು ವಿಳಾಸಗಳನ್ನು ಚನ್ನಾಗಿ ತಿಳಿಯುವ ಹಾಗೆ ವಿವರವಾಗಿ ಬರಿಯಬೇಕು. ಕ್ರಯ ಡಬ್ಬಿ ೧ಕ್ಕೆ ರೂ. ೩—೦—೦. ಟಪ್ಪಾಲು ಖರ್ಚು ೧ ರಿಂದ ೩ ಡಬ್ಬಿಗಳವರೆಗೆ ೦—೫—೦. ಏಜಂಟರು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯವಾಗಿ ಬೇಕಾಗಿರುತ್ತೆ. ರೂಲ್ಸ್ ತರಿಸಿ ನೋಡಿಕೊಳ್ಳಬಹುದು.

ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಿರಿ.

ಟೆಲಿಗ್ರಾಫ್ ಅಡ್ರೆಸ್,
“ಮಿಸ್ರಿ”
ಬೆಂಗಳೂರು ಸಿಟಿ.

ಡಿ. ಮುನ್ನಾಲಾಲ್,
ಮಿಲ್ಟರಿ ಮೆಡಿಕಲ್ ಡಾಕ್ಟರ್,
ಸಾಲಾಮಿಸ್ರಿ ಮುರಬ್ಬಾ ಡಿಪೋ,
ಬೆಂಗಳೂರು ಸಿಟಿ.

Edited, Printed & Published by V. S. Kamath at the M. T. A. Sharada Press, Mangalore.

Registered: No. M. 498.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ | ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ | ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ | ಗರವ ಮಥಿಸಲು ಸುರರಿಗದರಿಂ | ತುರುಷವಾಯಿತೆ! ಮತ್ತೆ ವಿಶ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ ! ಸುಧೆಯನು | ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೯. ಮಂಗಳೂರು, ತಾರೀಕು ೧೧ನೇ ಶುಕ್ರವಾರ ಸಪ್ಟಂಬರ ೧೯೨೫. ಸಂಚಿಕೆ ೩೭.

Th Canara Ba king Corporation,
UDIPI, Ltd.
ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್,
ಉಡುಪಿ, ಲಿಮಿಟೆಡ್.

Head office: UDIPI ಹೆಡ್ ಆಫೀಸು: ಉಡುಪಿ.	Branch: COONDAPOOR. ಶಾಖೆ: ಕುಂದಾಪುರ.
ಚಂದಾ ಹಾಕಿ ಯೆತ್ತಿದ ಮೂಲಧನ	ರೂ. 2,25,000—0—0.
ಮೌಲ್ಯಕೆತ್ತ ಮೂಲಧನ	ರೂ. 1,71,875—9—11.
ಕ್ಷೇಮನಿಧಿ ವ ಇತರ ಫಂಡುಗಳು	ರೂ. 64,700—0—0.
ಠೇವಣಾತಿಗಳು	ರೂ. 4,83,945—2—9.

— ವಿನಿಯೋಗ —.

ಗವರ್ನಮೆಂಟು ಪ್ರಾಮಿಸರಿ ನೋಟಿನ ಮೇಲೆ	ರೂ. 25,800—0—0.
ಡಿಮಾಂಡು ನೋಟು ವ ಬಿಲ್ಲುಗಳ ಮೇಲೆ	ರೂ. 5,92,445—9—4.
ಚಿನ್ನಾಭರಣ ಮುಂತಾದ ಭದ್ರತೆಸೊತ್ತುಗಳ ಮೇಲೆ	ರೂ. 1,11,658—8—6

ಈ ಕೆಳಗಿನ ಠೇವಣಾತಿಗಳನ್ನು ಅಂಗೀಕರಿಸುವುದಲ್ಲದೆ ಇತರ ಬ್ಯಾಂಕುಗಳ ಮೇಲಣ ಖಾತ್ರಿ ಚೆಕ್ಕುಗಳನ್ನೂ, ಸಾಹುಕಾರಿ ಹುಂಡಿಗಳನ್ನೂ ವಸೂಲುಮಾಡುವ ಮತ್ತು ಇತರ ಎಲ್ಲಾ ತರದ ಬ್ಯಾಂಕಿನ ವಹಿವಾಟ್ಟುಗಳು ನಡಿಸಲ್ಪಡುವವು.

ಠೇವಣಾತಿಗಳು.

ನಿರಖು ಠೇವಣಾತಿಗಳು:—ಸಾ. ಸೆ. 6½ ರಿಂದ 7½ ವರೆಗಿನ ಬಡ್ಡಿಯನ್ನು ಪ್ರತಿ 3 ತಿಂಗಳಿಗೊಮ್ಮೆ ತೆರುವ ಅನುಕೂಲ ವ ಲಾಭದಾಯಕವಾದ ಶರ್ತಗಳ ಮೇಲೆಯೂ

ಕೊಂಚ ಅವಧಿ ಠೇವಣಾತಿಗಳು:—1 ತಿಂಗಳ ನಂತರ 15 ದಿವಸಗಳ ನೋಟೀಸಿಗೊಳಪಟ್ಟು ಹಿಂತೆಗೆಯಬಹುದಾದ ಠೇವಣಾತಿಗಳನ್ನು ಸಾ. ಸೆ. 5ರ ದರದ ಬಡ್ಡಿ ನಡೆದ ದಿನಗಳಿಗೆ ಕೊಡುವ ಶರ್ತದಿಂದಲೂ

ಚಾಲ್ತಿ ಠೇವಣಾತಿಗಳು:—ದಿನಂಪ್ರತಿ ಇರುವ ಶಿಲ್ಕಿನ ಮೇಲೆ ಸಾ. ಸೆ. 3ರಂತೆ ಬಡ್ಡಿ ತೆರುವ ಶರ್ತದ ಮೇಲೂ

ಸೇವಿಂಗ್ಸ್ ಬ್ಯಾಂಕು ಠೇವಣಾತಿಗಳು:—ಸಾ. ಸೆ. 4½ರ ಬಡ್ಡಿಯ ಮೇಲೂ

ಸಂಚಯ ಠೇವಣಾತಿಗಳು:—ಮಕ್ಕಳ ವಿದ್ಯಾಭ್ಯಾಸ, ಉಪನಯನ, ವಿವಾಹ ಮುಂತಾದ ಶುಭಕಾರ್ಯಗಳಿಗೆ ಅನುಕೂಲವಾಗಿ ನಿಶ್ಚಯವಂತೆ ತಿಂಗಳು 1ರ ರೂಪಾಯಿ 1ರಂತೆ 13-24-45-84-132 ತಿಂಗಳುಗಳಿಗೆ ವಸೂಲುಪಡೆಕೊಂಡು ಕಂತುಗಳ ಅವಧಿ ಮುಗಿದ ಮೂರು ತಿಂಗಳಲ್ಲಿ ಆಯಾಯ ಅವಧಿಮೇರೆಗೆ ರೂ. 13—8—0, ರೂ. 25—8—0, ರೂ. 50, ರೂ. 102—8—0 ಮತ್ತು 182—8—0ನ್ನು ಅದೇ ಮೇರೆಗೆ ತಿಂಗಳು 1ರ ರೂಪಾಯಿ 1ರ ಗುಣವೃದ್ಧಿ ಮೊಬಲಗನ್ನು ತೆತ್ತಲ್ಲಿ ಆಯಾಯ ಮೊಬಗಿನ ಅದೇ ಗುಣವೃದ್ಧಿ ಮೊಬಲಗನ್ನು ತೆರುವ ಶರ್ತದ ಮೇಲೂ ಅಂಗೀಕರಿಸಲ್ಪಡುವವು.

ಹೆಚ್ಚಿನ ಮಾಹಿತಿ ಸೆಕ್ರೆಟರಿಯವರಿಂದ ತಿಳಿಯಬಹುದು.

ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಆಫೀಸು, ಉಡುಪಿ,
ತಾ. 30—6—1925.

ನಯಂಪಳ್ಳಿ ಆನಂದ್ರಾವ್,
ಸೆಕ್ರೆಟರಿ ಮತ್ತು ಒಫಿಶಿಯೆಟಿಂಗ್ ಮೆನೇಜರ್.

ಮೂರು ದಿವಸಗಳಲ್ಲಿ ಗುಣಸಿಕ್ಕದಿದ್ದರೆ ಔಷಧಿಯ ಕ್ರಯ ವಾಪಾಸು.

[illegible], ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ, ಪರಮಾನಂದ ಮೊದಲಾದ ಸುಖಜೀವನಕ್ಕೆ ಬೇಕಾದ ಆರೋಗ್ಯದಾಯಿನಿ.

ಲೋಕಪ್ರಸಿದ್ಧವಾದದ್ದು! ಅನುಭವಸಿದ್ಧವಾದದ್ದು!!

ಟ್ರೇಡ್ ಮಾರ್ಕ] **ಅಗಸ್ತ್ಯ** [ನೋಡಿ ತೆಗೆದುಕೊಳ್ಳಿರಿ.

ಮನ್ಮಥ ಚಿಂತಾಮಣಿ ಲೇಹ.

(ರಜಿ [illegible] ಅವಸ್ಥೆ)

ಅಬಾಲವೃದ್ಧ ಸ್ತ್ರೀಪುರುಷರ ಅನೇಕ ರೋಗಗಳ ಮೇಲೆ ಗುಣಕಾರಿಯಾದದ್ದು.

ಮೋಹವಿಕಾರವಿದ್ದವರಿಗೂ, ನಿದ್ರೆಇಲ್ಲದವರಿಗೂ, ಸ್ವಪ್ನೇಂದ್ರಿಯವಾಗುವ ಯುವಕರಿಗೂ ಜ್ಞಾನಿಸುಜ್ಞಾನಿಗಳಿಗೂ ಉಪಯೋಗವುಳ್ಳ ಪರಮಾನಂದ ಔಷಧಿ.

1 ಸೇರು ಎಪ್ಪತ್ತೆಂಟು ದಿವಸಕ್ಕೆ ಸೇವಿಸಬಹುದು.

1 ಸೇರು ಡಬ್ಬಿ 1ಕ್ಕೆ 3-0-0. ½ ಸೇರು ಡಬ್ಬಿ 1ಕ್ಕೆ 1-9-0.

ವಿ. ಪಿ. [illegible] [illegible] [illegible] ಬರೆಕೊಳ್ಳಿರಿ.

ವಿಳಾಸ:— ದೇವನ್ [illegible] [illegible],
[illegible], [illegible],
[illegible] (ದ. ಕ.)

:ಪಂಡಿತ ಬಿ. ರಾಮಕೃಷ್ಣ ಬಾಳಿಗರ:

50 ವರ್ಷ ಅನುಭವದ ಸಿದ್ಧೌಷಧಗಳು

ಅಶ್ವಗಂಧಿಲೇಹ:—ಇದು ಅಜೀರ್ಣ ಗ್ರಹಣಿ ವಗೈರೆ ರೋಗಗಳನ್ನು ನಾಶಗೊಳಿಸಿ ಹೊಟ್ಟೆ ಹಸಿವನ್ನು ಹೆಚ್ಚಿಸಿ ದೇಹವನ್ನು ಪುಷ್ಟಿಗೊಳಿಸುವುದು. ಮಲಬದ್ಧತೆಯನ್ನೂ ಸರಿಪಡಿಸುವುದು. ಸೇರು 1ರ ರೂ. 2—0—0.

ಕಸ್ತೂರಿಕಲ್ಪ ದಶಮೂಲಾಸವ:—ಇದನ್ನು ಪ್ರತಿಯೊಬ್ಬ ಪ್ರಸೂತ ಸ್ತ್ರೀಯರು ಅಗತ್ಯವಾಗಿ ಸೇವಿಸತಕ್ಕದ್ದು. ಗರ್ಭದ ನಂಜನ್ನು ಹೋಗಲಾಡಿಸಿ, ಬಾಣಂತಿಯರ ಅಜೀರ್ಣ, ಅತಿಸಾರ ಅರುಚಿ ಹೋಗಲಾಡಿಸಿ, ದೇಹಕ್ಕೆ ಪುಷ್ಟಿಯನ್ನೂ ಕಾಂತಿಯನ್ನೂ ಕೊಡುವುದು. 8 ಔನ್ಸು ಬಾಟ್ಲಿ 1ರ ರೂ. 1—0—0.

ಅಶೋಕಾರಿಷ್ಟ:—ಸ್ತ್ರೀಯರ ಎಲ್ಲಾ ಪ್ರದರ ರೋಗಕ್ಕೆ ಸಿದ್ಧೌಷಧ. ಬಾಟ್ಲಿ 1ರ ರೂ. 1—0—0.

ಅಮೃತಾರಿಷ್ಟ:—ಮಲೇರಿಯಾ ವಗೈರೆ ಸಕಲ ಜ್ವರಗಳನ್ನು ನಾಶಗೊಳಿಸುವುದು. ಬಾಟ್ಲಿ 1ರ ರೂ. 1—0—0.

ದ್ರಾಕ್ಷಾರಿಷ್ಟ:—ಬಾಟ್ಲಿ 1ರ ರೂ. 1—0—0. ಗೋರೋಚನಾದಿ ಮಾತ್ರೆ, ಮಕ್ಕಳ ಚಿಕಿತ್ಸೆಗೆ ಸಿದ್ಧೌಷಧ. ಡಜನ್ 1ರ ಕ್ರಯ 0—8—0. ಕರ್ಪೂರಾದಿ ವಾಯುಮಾತ್ರೆ, ಡಜನ್ 1ರ ಕ್ರಯ 0—6—0.

ಇನ್ನು ಎಲ್ಲಾ ತರದ ಆಯುರ್ವೇದ ಸಿದ್ಧೌಷಧಗಳು ನಮ್ಮಲ್ಲಿ ದೊರಿಯುವವು.

ವಿಳಾಸ:— ಪಂಡಿತ, ಬಿ. ರಾಮಕೃಷ್ಣ ಬಾಳಿಗ, ಬಂಟವಾಳ ದ. ಕ.

ಮಂಗಳೂರು ಏಜಂಟರು:— **ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,**
ತೇರುಬೀದಿ, ಮಂಗಳೂರು.

AMRUTANJAN B
AMRUTANJ
Best Indian
Pain Balm
Amrutanjan D
BOMBAY

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಶತ್ರುವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು.

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಥಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 2 ಆಣೆ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ ಟೌನ್, ಮದ್ರಾಸು.

109 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

— ರಥೋತ್ಸವ, ವಿವಾಹ ಉಪನಯನಗಳ ಸಮಯ —
ಸರ್ವರಿಗೂ ಉಡಿಗೆ ತೊಡಿಗೆಗಳು ಬೇಕಾಗುವ ಸಂದರ್ಭ.

ಯಾರು, ಯಾವುದನ್ನು ಎಲ್ಲಿ ಪಡೆಯಬೇಕೆಂಬ ಶಂಕೆಯಿಂದ ವಿಳಂಬ ಮಾಡಬೇಡಿರಿ. ಉಡಿಗೆತೊಡಿಗೆಗಳನ್ನು [illegible] ನಿಮಗೆ ಬೇಕಾದ ಯಥಾರ್ಥ ಮಾಹಿತಿಯನ್ನು ಕಳೆದ ಹತ್ತಿಪ್ಪತ್ತು ವರುಷಗಳಿಂದ ನಡದು ನಮ್ಮಲ್ಲಿಯ ವ್ಯಾಪಾರವು ಗಿರಾಕಿಗಳಿಗೆ ಸರ್ವ ತೃಪ್ತಿಯಿಂದಲೂ ಲಾಭಕರವಾಗಿ ಪರಿಣಮಿಸುವಂತೆ ಸರ್ವ ಸವಿ ಸಂಗ್ರಹವನ್ನು ಮಾಡಿರುತ್ತೇವೆ.

ಗುರ್ಪುರ್ಕಾರ್ ಬ್ರದರ್ಸ್, ರಥಬೀದಿ, ಮಂಗಳೂರು.

ಹೆಡ್ ಆಫೀಸು:—ರಥಬೀದಿ—(ಮೊದಲು ಸುಜೀರ ನಾಗಪ್ಪನಾಯಕ್, ಎಂಡ್ ಕೊ, ಇದ್ದಲ್ಲಿ; ಅಜೀಜುದ್ದೀನ್ ರಸ್ತೆಗೆ ತಿರುಗುವಲ್ಲಿ) ಮಂಗಳೂರು.

ಬ್ರೆಂಚ್ ಆಫೀಸು:—ರಥಬೀದಿ—(ಹಳೇ ತಾಲೂಕು ಕಚೇರಿಯ [illegible] ಸಮೀಪವಿರುವ ಮಳಿಗೆ) ಮಂಗಳೂರು.

ಈ ದೇಶದ ಪ್ರಖ್ಯಾತಪಟ್ಟ ನೇಯಿಗೆಯ ಕೇಂದ್ರಸ್ಥಳಗಳಾದ—ಬನಾರಿಸ್, ಪೂನಾ, ಅಹಮ್ಮದಾಬಾದ್, ಸೂರತ್, ಬೆಂಗಳೂರು, [illegible], ಗದಗ, ಧರ್ಮಾವರಮ್, ಕಂಜೀವರಮ್, ಕೊಯಮುತ್ತೂರು, ಮಧುರೆ, ತಂಜಾವೂರು, ಕುಂಭಕೋಣ, ಅರ್ನಿ, ಬಾಡಿಪೇಟೆ, ಹುಬ್ಬಳ್ಳಿ, ಇಳಕಲ್, [illegible], ಮದ್ರಾಸು ಈ ಪ್ರಾಂತ್ಯಗಳಲ್ಲಿ ತಯ್ಯಾರಾದ

ಜರಿಸೀರೆಗಳು, ದುಪ್ಪಟಾ, ಜರಿಶಾಲು, [illegible], ರೇಷ್ಮೆ ಸೀರೆಗಳು, ಅರಳಿಪೇಟೆ ಸೀರೆಗಳು, [illegible] ರೇಷ್ಮೆ ಸೀರೆಗಳು, [illegible] ಸೀರೆಗಳು, ರೇಷ್ಮೆ ಮಡಿಗಳು, ನಿತ್ಯ ಉಪಯೋಗದ ಸೀರೆಗಳು ಬನಿಯನ್ಸ್, ಕರ್ನಾಟಕ ಮಿಲ್ಸ್‌ಗಳ ವ ಇತರ ಮಿಲ್ಸ್‌ಗಳ [illegible] [illegible].

ಕೈರಾಟೆಯಲ್ಲಿ ತಯಾರಿಸಿದ ನೂಲಿನಿಂದ ಮಾಡಿದ—
ಖದ್ದರ್ ಶರ್ಟಿಂಗ್, ಖದ್ದರ್ ಕೋಟಿಂಗ್, ಖದ್ದರ್ ಟೋಪಿ, ಖದ್ದರ್ [illegible], [illegible], ಇತ್ಯಾದಿ—
ಮುಸಲ್ಮಾನರಿಗೆ ಬೇಕಾದ ನಮೂನೆಯ ಲುಂಗಿ [illegible] ವಗೈರೆ—
[illegible] ಸಂಗ್ರಹವನ್ನು [illegible] [illegible]
ಸಂಗ್ರಹಿಸಿ ತಂದಿರುತ್ತಾರೆ.
[illegible] ರೂ. 50ರಿಂದ [illegible]
[illegible]

ಆರ್. ಮಾರ್ಟಿನ್ನರ ಲಪ್ಪಾ ಎಣ್ಣೆ

ಇದರ ಸುವಾಸನೆಯು, (ಪರಿಮಳವು) ಬಹಳ ಅಂದವಾಗಿಯೂ ಇರುವದಲ್ಲದೆ, ಬಹಳ ಹೊತ್ತಿನ ವರೆಗೂ ಇರುತ್ತದೆ. ಈ ಎಣ್ಣೆಯನು ತಲೆಗೆ ಹಾಕಿಕೊಳ್ಳುವುದರಿಂದ ಕಣ್ಣುಗಳು ತಂಪಾಗಿಯೂ, ಶುಭ್ರವಾಗಿಯೂ, ಆಗವುದಲ್ಲದೆ, ತಲೆಗೂದಲು ಚೆನ್ನಾಗಿ ಬೆಳೆಯುತ್ತದೆ. ಇದನ್ನು ಪ್ರತಿದಿವಸವೂ ಉಪಯೋಗಿಸುವುದರಿಂದ ಕೂದಲುಗಳು ಕಪ್ಪಾಗಿ ಹೊಳೆಯುವಂತೆ ಮಾಡುತ್ತದೆ. ಕೂದಲುಗಳಲ್ಲಿರುವ ಹೇನುಗಳು ಮುಂತಾದುವು ನಾಶವಾಗಿ ತಲೆಬುರುಡೆಯನ್ನು ಚೆನ್ನಾಗಿ ಬೆಳೆಯುವಂತೆ ಮಾಡುತ್ತದೆ. ಗಡ್ಡ ಮತ್ತು ಮೀಸೆಗಳು ಸಹ ಬೆಳೆಯುತ್ತವೆ. ಇದನ್ನು ಉಪಯೋಗಿಸಿದ ಜನರು ಇದಕ್ಕಿಂತ ಉತ್ಕೃಷ್ಟವಾದ ಎಣ್ಣೆಯು ಬೇರೆ ಇಲ್ಲವೆಂದು ಹೇಳಿರುತ್ತಾರೆ.

ಆರ್. ಮಾರ್ಟಿನ್ನರ ಗಿಟೋಡಯಿನ್.

ಗಂಡಸರಿಗೂ ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ, ಅಥವಾ ಹೊಸತಾಗಿದ್ದರೂ ಸರಿ. ಬಿಳುಪು ಹೋಗುವುದು ಉರಿಯುವುದು, ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೆ ಉರಿ ಮೂತ್ರವನ್ನು ನಿಲ್ಲಿಸಿ, ಮೂತ್ರವು ಬಿಳುಪಾಗಿ ನಿರ್ಮಲವಾಗುವದಲ್ಲದೆ ರೋಗದ ಪಟ್ಟನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ.

ಬೆಲೆ ಸೀಸೆ 1ಕ್ಕೆ ರೂ. 2—0—0.

ಆರ್. ಮಾರ್ಟಿನ್ನರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮು, ಉಬ್ಬಸ ಶ್ವಾಸ, ಶೀತ, ನೆಗಡಿ, ಗಂಟಲುನೋವು, ಎದೆ ನೋವುಗಳನ್ನೂ ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನಮಾಡಿ ಪರೀಕ್ಷಿಸಿ ನೋಡಿರಿ. ಅನಂತರ ಬೇರೆ ಯಾವ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮಿಗೂ ರಾಣಿಯಾಗಿಯೂ, ಎದೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತಲೆಯಿಕ್ಕದಂತೆ ಮಾಡುತ್ತದೆ.

ಕ್ರಯ ಬಾಟಿ 1ಕ್ಕೆ ರೂ. 1-4-0.

ವಿಳಾಸ:—ಆರ್. ಡಿ. ಕಟ್ಲೆ ಮತ್ತು ಕಂಪೆನಿ,
ನಂಬ್ರ ಬಿ. ಫ್ರಿಯರ್ ರೋಡ್,
ಸಾಂಜ ವರ್ತಮಾನ ಪ್ರೆಸ್,
ಟೋಡಿವಾಲಾ ಬಿಲ್ಡಿಂಗ ಎದುರುಗಡೆ, ಫೋರ್ಟ ಮುಂಬಯಿ.

R. D. Kately & Co.
No. B. Frere Road,
Opposit Sanjvertaman Press,
Todivala Building, FORT BOMBAY

ಲಿವರ್ ಮೂವ್‌ಮೆಂಟ್ ವಾಚ್.

15 ಮಣಿಗಳಿದ್ದು ರೋಲ್ಡಗೋಲ್ಡ ವಾಚ್.

ಈ ಗಡಿಯಾರ ಕೈಗೆ ಕಟ್ಟುವಂಥಾದ್ದಾಗಿ ಸರಿಯಾದ ಸಮಯವನ್ನು ತೋರಿಸಿ ಚಿರಕಾಲ ವರೇಗೆ ಬಾಳುವುದು. 10 ವರುಷದ ವರೆಗೆ ಬಾಳುವ ಗಿರೆಂಟಿ ಇದೆ. ಕ್ರಯ ರೂ. 17—8—0.

11 ಮಣಿಗಳಿದ್ದು ನಿಜವಾದ ರೋಲ್ಡಗೋಲ್ಡ ಬಂಗಾರದಿಂದ ತಯಾರಿಸಲ್ಪಟ್ಟ 5 ವರ್ಷದ ಗಿರೆಂಟಿ ಇರುವ ವಾಚಿಗೆ ಕ್ರಯ ರೂ. 12—8—0.

18 ಕೆರೆಟ್ ಇಲೆಕ್ಟ್ರೊ ರೋಲ್ಡ ಗೋಲ್ಡ ವಾಚ್ ಕ್ರಯ ರೂ. 7—0—0. ಲಿವರ್ ಮೂವ್‌ಮೆಂಟ್ 10 ಮಣಿಗಳಿದ್ದ ಬಂಗಾರ ಗಿಲ್ಟುವಾಚ್ ಕ್ರಯ ರೂ. 13—8—0.
ಎಲಿರ್ಮಾ ಜರ್ಮನ್ ಟೈಮ್‌ಪೀಸ್ ಕ್ರಯ ರೂ. 5-0-0
ಡಬ್ಬಲ್ ಎ. „ „ „ 6-0-0.
"ಬಿ" ಟೈಮ್‌ಪೀಸ್ ಕ್ರಯ ರೂ 2—4—0
ಟಿಕ್—ಟಾಕ್ ವಾಚ್ 1ರ ಕ್ರಯ „ 2—12—0

ಕಂಬ್ಯಾಂಡ್ ಪೆಪರ್ ಕ್ಲಿಪ್ ಟೈಮ್‌ಪೀಸ ಹಿತ್ತಾಳಿ ಅಥವಾ ನಿಕ್ಕಲ್ ಕ್ರಯ ರೂ. 6—0—0. ಇನೆಮಲ್ ರೂ. 7—0—0. ಫ್ರೆಂಚ್ ಬೆಡ್ ಫೋಟೋಗಳು, ಡಜನ್ 1ರ ಕ್ರಯ ರೂ. 2—4—0.

Emarald Watch Co.,
P. T. MADRAS.

ಡಾಕ್ಟರುಗಳು ಭಿನ್ನಾಭಿಪ್ರಾಯಪಡುವಾಗ್ಯೆ ತೀರ್ಮಾನಿಸುವದು ಯಾರು?

ಅಂಥಾ ಸಂದರ್ಭಗಳಲ್ಲಿ ಡೆಂಗ್ಯೂ, ಮುಂತಾದ ಜ್ವರಗಳನ್ನು ನಿವಾರಿಸುವಂಥಾ "ಬಾಟ್ಲಿವಾಲರ ಏಗ್ಯುಮಿಕ್ಸ್ಚರ್"ನ್ನು ಸತ್ಯಾಗವಾಗಿಯೂ, ಮತ್ತು ಜ್ವರಗಳನ್ನು ಖಂಡಿತವಾಗಿ ನಿಲ್ಲಿಸುವಂಥಾದ್ದೂ, ಎಲ್ಲಾ ತರದ ತಲೆನೋವುಗಳನ್ನು ಹೋಗಲಾಡಿಸುವಂಥಾದ್ದೂ ಆದ "ಬಾಟ್ಲಿವಾಲರ ಏಗ್ಯುಪಿಲ್ಸ್" ಇದನ್ನು ಉಪಯೋಗಿಸಿರಿ.

ಐ. ಎಮ್. ಎಸ್. ಡಾಕ್ಟರುಗಳಿಂದ ಶಿಫಾರಸು ಮಾಡಲ್ಪಟ್ಟದ್ದು. ಇದರ ಉಪಯೋಗದಿಂದ ಹೃದಯದ ಮೇಲೆ ಯಾವ ದೊಂದೂ ಬಾಧಕವಿಲ್ಲ. ಅರ್ಧ ಶತಮಾನದಿಂದ ಹಿಂದೂಸ್ಥಾನ, ಬರ್ಮಾ, ಸಿಲೋನ್, ಆಫ್ರಿಕಾ ಇವುಗಳಲ್ಲಿ ಪ್ರಖ್ಯಾತಪಟ್ಟಿದ್ದಾಗಿರುತ್ತದೆ.

ಅನೇಕ ಹಿಂದೀ ಪ್ರದರ್ಶನಗಳಲ್ಲಿ ಬೆಳ್ಳಿ ಮತ್ತು ಬಂಗಾರದ ಪದಕಗಳನ್ನು ಪಡೆದಿರುತ್ತೆ. ಚಾಲ್ತಿ ಸಾಮ್ಯದಂತಿದ್ದ ವ್ಯಾಪಾರಿಗಳೂ ಕೂಡ ಅದರ ಮೇಲೆ ಹಣವನ್ನು ಮುಂಗಡವಾಗಿ ಕೊಡುತ್ತಾರೆ. ಬಡ ಮತ್ತು ಮಧ್ಯಮ ತರಗತಿಯ ಜನರಿಗೆ ವರಪ್ರದಾನವಾಗಿದ್ದು ಸಂಚಾರ, ಪ್ರಯಾಣ, ದೇಶಾಟನೆಗಳ ಸಮಯದಲ್ಲಿ ಹತ್ತಿರದಲ್ಲಿ ರಿಸಿಕೊಳ್ಳದಾಗಿರುತ್ತದೆ.

ಬಾಟ್ಲಿವಾಲರ ಬಾಲಾಮೃತ ಅಥವಾ ಟೊನಿಕ್ ಸಿರಪ್.

ಕೆಮ್ಮನ್ನು ಹೋಗಲಾಡಿಸಿ, ಎದೆನೋವನ್ನು ಶಾಂತಗೊಳಿಸಿ, ಜ್ವರವನ್ನು ಉಪಶಮನಿಸಿ, ನಿದ್ರಾಭಂಗವನ್ನು ಕಡಿಮೆ ಮಾಡಿ ಧಾತುವರ್ಧನವನ್ನು ಮಾಡುವದರಲ್ಲಿ ಅತ್ಯುತ್ತಮವಾಗಿರುತ್ತದೆ. ಕಫವನ್ನು ಒಣಗಿಸಿ ಮಾಯವಾಗುವಂತೆ ಮಾಡುವುದಲ್ಲದೆ ಅದೇ ಸಮಯದಲ್ಲಿ ಒಳ್ಳೇ ಜೀರ್ಣವನ್ನು ಉಂಟುಮಾಡುವುದು. ದರ ಮೊದಲಾದ ಮಾಹಿತಿಯನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಕಾರಿನಪತ್ರ:-CAWASHAPUR, BOMBAY.

Dr. H. L. Batliwala & Co., Ltd.,
Sayani Road, P. O. Cadell Road, Bombay. No. 14.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.,
Sayani Road, P. O. Cadell Road, Bombay. No. 14.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟ. ಖ. 9 ಆಣೆ.

ನಮ್ಮ ವಿಳಾಸ:— ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಏಜಂಟರು:— ಡಿ. ಊಲನ್ ಮಾರ್ಟ್, ಮಂಗಳೂರು.

OUR RECENT IMPORT IN WRIST WATCHES | Have you used anyone of these Watches? | **SEND YOUR ORDER NOW ALL GUARANTEED.**

Fashionable wrist wrist Lady's size. Reliable movement Guaranteed.

No. 368.

Handy to wear and looks beautiful. Gives punctual time and with strong movement.

Nickel case Rs. 8—0

High-class Radium dial watch watch with Roman figures.

No. 367.

Can be seen in dark nights. Well fitted with best movement and strong to use. Used by one and all.

Silver case Rs. 9—0.

Radio light wrist watch.

No. 372.

Fitted with the best mechanism and guaranteed to work and keep perfect time for a long time.

Nickel case Rs. 7—8
Electro rolled-gold „ 9—0

(N. B. In addition to the above, we have good number of varieties of fancy wrist watches, pocket watches. Please write for a descriptive catalogue, which will be sent free)

WHOLESALE IMPORTERS

PETER WATCH COY.,
POST BOX 27, MADRAS

ಶಾಲಿವಾಹನಶಕ ೧೮೪೭ನೆಯ ಕ್ರೋಧನ ಸಂವತ್ಸರದ ಭಾದ್ರಪದ ಬ|| ೧೦ ಶನಿವಾರದಿಂದ ಕ್ರೋಧನ ಸಂವತ್ಸರದ ಭಾದ್ರಪದ ಬ|| ೧೫ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೫ನೆಯ ಸಿಂಹ ಸೋಣ.)

ತಾರೀಕು	ವಾರ	ತಿ.	ಘಳಿಗೆ.	ನಕ್ಷತ್ರ	ಘಳಿಗೆ.	ಸೌರಮಾನ	ಸೂರ್ಯ ಉ.	ಸೂರ್ಯ ಅಸ್ತ.
12	ಶನಿ	೧೦	೪೯.೪೬	ಆರ್ದ್ರಾ	೧೬.೩೨	೨೭	6.22	6 34
13	ರವಿ	೧೧	೫೪.೪೪	ಪುನರ್ವಸು	೨೩.೪೬	೨೮	6 22	6 33
14	ಸೋಮ	೧೨	೫೯.೪೬	ಪುಷ್ಯ	೩೦.೧೪	೨೯	6 22	6.33
15	ಕುಜ	೧೩	೬೦.೦	ಆಶ್ಲೇಷಾ	೩೬.೧೬	೩೦	6 22	6.32
16	ಬುಧ	೧೩	೪.೧೬	ಮ.ಘಾ	೪೧.೪೬	೩೧	6 22	6.31
17	ಗುರು	೧೪	೮. ೨	ಪೂ.ಫಾ	೪೬.೩೨	೧	6,22	6.31
18	ಶುಕ್ರ	●	೧೦.೪೬	ಉತ್ತರಾ	೫೦.೧೬	೨	6 22	6 30

ಮಂಗಳೂರಿನ ವಾಯುಸ್ಥಿತಿ.

Date ತಾರೀಕು	Temperature. ಉಷ್ಣ (ಕಾವು) Maximum	Temperature. ಉಷ್ಣ (ಕಾವು) Minimum	Rainfall. ಮಳೆ ದಿನದ ಮಳೆ	Rainfall. ಮಳೆ ಜುಮಲಾ ಮಳೆ.
4	86—9	75—2	0—05	—
5	86—3	74—1	0—17	—
6	84—5	73—0	0—11	—
7	85—2	73—2	0—02	—
8	86—7	73—9	—	—
9	87—2	74—2	0—03	—
10	88—8	74—5	—	123-56

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ. ಆ.	ವರೆಗೆ ರೂ. ಆ
ಮುಸ್ಕತಿ	8—10	9— 0
ಗುಡ್ಡು ...	8— 4	8— 8
ರಾಶಿ ಸುಗ್ಗಿ ...	7—10	8— 3
ಅನ್ನಲ್ ಬೆಳ್ತಿಗೆ ...	8—12	9— 8
ಗುಡ್ಡು ಬೆಳ್ತಿಗೆ ...	8— 0	8— 8
ರಂಗೂನು ಬೆಳ್ತಿಗೆ ಗೋಣಿ ೧ ...	13— 8	14— 8
ಗೋಧಿ ಗೋಣಿ ೧ಕ್ಕೆ ...	19—	21— 0
ಹುರುಳಿಗೋಣಿ ೧ಕ್ಕೆ ...	9—12	10— 0
ಕಡಲೆಗೋಣಿ ೧ಕ್ಕೆ ...	12— 0	13— 0
ತೊಗರಿಗೋಣಿ ೧ಕ್ಕೆ ...	12— 8	13— 0
ತೊಗರಿಬೇಳೆ ಗೋಣಿ ೧ಕ್ಕೆ ...	15— 0	20— 0
ಉದ್ದುಗೋಣಿ ೧ಕ್ಕೆ ...	14— 0	14— 8
ಹೆಸರುಗೋಣಿ ೧ಕ್ಕೆ ...	14— 0	15— 0
ಊರು ಬೆಲ್ಲ ಖಂಡಿ ೧ಕ್ಕೆ ...	80—	75— 0
ಉಪ್ಪು ಗೋಣಿ ೧ಕ್ಕೆ ...	4— 4	4— 8
ಕೊಬ್ರಿ ಖಂಡಿ ೧ಕ್ಕೆ ...	115— 0	120— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	46— 0	48— 0
ಎಳ್ಳಿಂಡಿ ಖಂಡಿ ೧ಕ್ಕೆ ...	40— 0	—
ಕೊಬ್ರಿ ಎಣ್ಣೆ ಮಣ ೧ಕ್ಕೆ ...	8—14	10— 0
ಎಳ್ಳೆಣ್ಣೆ ಮಣ ೧ಕ್ಕೆ ...	8— 0	11— 0
ಚಿಮಣಿ ಎಣ್ಣೆ ಪೆಟ್ಟಿಗೆ ೧ಕ್ಕೆ ...	8-8-0	—
ಮೋರಿಸ ಸಕ್ಕರೆ ಮಣ ೧ಕ್ಕೆ ...	4—10	—
ಊರ ಮೆಣಸಿನಕಾಯಿ ಮಣ ೧ಕ್ಕೆ ...	7— 8	—
ಸಾಸಿವೆ ಮುಡಿ ೧ಕ್ಕೆ ...	9—0	—
ಕೊತ್ತುಂಬರಿ ಮುಡಿ ೧ಕ್ಕೆ ...	4— 4	4— 8
ಕಾಫಿ ಖಂಡಿ ೧ಕ್ಕೆ ...	345— 0	400— 0
ಬಿಳಿಗೋಟು ಅಡಿಕೆ ಖಂಡಿ ೧ಕ್ಕೆ ಹಳೆತು ...	245— 0	250— 0
„ ಹೊಸ ಅಡಿಕೆ	240— 0	0— 0
ಕಾಳುಮೆಣಸು ಖಂಡಿ ೧ಕ್ಕೆ ...	220— 0	—
ಯಾಲಕ್ಕಿ ಮಣ ೧ಕ್ಕೆ ...	100—0	—
ಗೇರುಬೀಜ ಮುಡಿ ೧ಕ್ಕೆ ...	4— 5	4— 6
[illegible] ಖಂಡಿ ೧ಕ್ಕೆ ...	45— 0	65— 0
ತಾಂಬ್ರ ತಗಡು ಮಣ ೧ಕ್ಕೆ ...	17— 8	—
ತಾಮ್ರ ಪಾತ್ರೆಗಳು ಮಣ ೧ಕ್ಕೆ ...	24— 0	—
ಚೀನಿ ಬೆಳ್ಳಿ ಸೇರು ೧ಕ್ಕೆ ...	18—10	
ಹಿತ್ತಾಳೆ ತಗಡು ಮಣ ೧ಕ್ಕೆ ...	16— 8	
[illegible]	13— 7	

The Canara Public Conveyance Co., Ltd, Mangalore.

(ESTABLISHED 1914.)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು
ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು
ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.
ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯು ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ — ಈ ಪ್ರಾಂತ್ಯಗಳಿಗೆ ಈ ಕಂಪೆನಿಯು ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯು ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd, Mangalore. S. K

ಕನ್ನಡಿಗರೆ! **ವಸಂತ.** ಕಣ್ತೆರೆಯಿರಿ!

ಈಗಾಗಲೇ ಎರಡನೇ ಸಂಪುಟವು ಆರಂಭಿಸಲಿದೆ.

ಇತಿಹಾಸನಿಧಿ ಎಂದರೆ	ವಸಂತ
ಸಮಾಜಸುಧಾರಕನೆಂದರೆ	ವಸಂತ
ಕೈಗಾರಿಕೆಯ ಸಾಮ್ರಾಜ್ಯವೆಂದರೆ	ವಸಂತ
ಕರ್ನಾಟಕ ಭಾಷಾಸೇವಕನೆಂದರೆ	ವಸಂತ
ದೇಶವಿದೇಶ ಬಂಧುವೆಂದರೆ	ವಸಂತ
ಕಾದಂಬರಿಗಳ ಭಂಡಾರವೆಂದರೆ	ವಸಂತ
ಚಿತ್ರಾಕರ್ಷ ಚಿತ್ರಶಾಲೆಯೆಂದರೆ	ವಸಂತ
ದೇಶಭಕ್ತನೆಂದರೆ	ವಸಂತ

ಇಂತಹ ವಸಂತನು ಯಾರಿಗೆ ಬೇಕು,
ಯಾರಿಗೆ ಬೇಡ?

48 (ಕ್ರೌನ್ ¼ ಪುಟ ಸ್ಯಾಜಿನ) ಪುಟಗಳನ್ನು ಮಿಕ್ಕಿದ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3—4—0 ಮಾತ್ರ.

ವ್ಯವಸ್ಥಾಪಕ,
ವಸಂತ ಕಾರ್ಯಾಲಯ,
ಕುಂದಾಪುರ, ದಕ್ಷಿಣ ಕನ್ನಡ.

— ಸಿರಿಗನ್ನಡಂಗೆಲ್ಗೆ —

ಶ್ರೀ ಶಂಕರ ಕರ್ನಾಟಕ ಪುಸ್ತಕ ಭಂಡಾರವೂ ಶ್ರೀ ವಿದ್ಯಾರಣ್ಯ ಪ್ರಕಾಶಕ ಸಂಸ್ಥೆಯೂ,

ಮಾಳಮಡ್ಡಿ, ದಾರವಾಡ,

ಕನ್ನಡಿಗರಿಗೆ ಬೇಕಾಗುವ ಎಲ್ಲಾ ತರದ ಕನ್ನಡ ಪುಸ್ತಕಗಳು ನಮ್ಮಲ್ಲಿ ಯೋಗ್ಯ ಬೆಲೆಗೆ ದೊರೆಯುವವು. ವಿದ್ಯಾರಣ್ಯ ಪುಸ್ತಕ ಮಾಲೆಯು ಕೆಳಗಿನ ೧, ೨, ೩, ಪುಸ್ತಕಗಳು ಚಂದಾದಾರರಾಗುವವರಿಗೆ ಅಂಚೆ ವೆಚ್ಚ ಸೇರಿ ೫ ರೂ. ೬ ಆಣೆಗೆ ದೊರೆಯುವವು. ಮುಂದೆ ಹೊರ ಬೀಳುವ ಮಾಲೆಯ ಪುಸ್ತಕಗಳನ್ನು ಚಂದಾದಾರರಿಗೆ ೧ ರೂಪಾಯಿಗೆ ೨ ಆಣೆಯಂತೆ ಕಡಿಮೆ ಬೆಲೆಗೆ ವಿ. ಪಿ. ಮಾಡುವೆವು. ಭಂಡಾರದ ಬೆಲೆ ಪಟ್ಟಿಗಾಗಿ ೪ ಆಣೆ ಅಂಚೆ ಟಿಕೇಟುಗಳನ್ನು ಕಳುಹಿಸತಕ್ಕದ್ದು.

			ರೂ. ಆ. ಪೈ.
೧.	ಕರ್ನಾಟಕ ಸಿಂಹಾಸನ ಸ್ಥಾಪನೆ		೧— ೦—೦
೨.	ಕಥೆಗಳನ್ನೊಳಗೊಂಡ ಬೀರಬಲ್ಲ ಚರಿತ್ರೆ (ಸಚಿತ್ರ)		೧— ೬—೦
೩.	ಛತ್ರಪತಿ ಶಿವಾಜಿ ಮಹಾರಾಜ		೨—೧೨—೦
೪.	ಮಹಾರಾಣಿ ಲಕ್ಷ್ಮೀಬಾಯಿ ಝಾಂಸಿ	„	೨— ೦—೦
೫.	ಅಕ್ಬರ ಚಕ್ರವರ್ತಿ ಚರಿತ್ರೆ	„	೧— ೧—೦
೬.	ಚರಿತ್ರೆ ಸಂಗ್ರಹ ಭಾಗ ೧.	„	೧— ೪—೦
೭.	ತಿಲಕರ ಗೀತಾ ರಹಸ್ಯ	„	೩— ೮—೦
೮.	ಶ್ರೀ ದಾಸಬೋಧ ಭಾಗ ೧. ೨. ೩. ...	...	೨—೧೪—೦
೯.	ರಾಷ್ಟ್ರಸಭೆಯ ಇತಿಹಾಸ	...	೨— ೮—೦
೧೦.	ವಚನ ಜ್ಞಾನಸಿಂಧು	...	೪— ೦—೦

ಇವಲ್ಲದೆ ನಮ್ಮಲ್ಲಿ ಎಲ್ಲಾ ತರದ ಕಾಯಿದೆ ಶಾಲೋಪಯೋಗಿ ಪುಸ್ತಕಗಳೂ ನಕಾಶೆ ಚಿತ್ರಗಳೂ ಬರವಣಿಗಳೂ ದೊರೆಯುವವು.

ಶ್ರೀಪಾದ ರಾಮಚಂದ್ರ ದೇಶಪಾಂಡೆ ಬಿ. ಯಸ್. ಸಿ
ವ್ಯವಸ್ಥಾಪಕ.

ಸಾರಸ್ವತ.

ಕನ್ನಡ ಮತ್ತು ಕೊಂಕಣಿ ಭಾಷೆಗಳಲ್ಲಿ ಕಳೆದ ವಿಜಯ ದಶಮಿಯ ದಿನದಿಂದ ಪ್ರತಿ ದಶಮಿಗೆ ಹೊರಡುವ ಪತ್ರಿಕೆ.

ವಿ. ಎಸ್. ಕಾಮತ್,
ಮೂಲ್ಕಿ ವಾಮನ ಕುಡುವ { ಸಂಪಾದಕರು.

ಮತಸಂಸ್ಥೆ ಮತ್ತು ಸಮಾಜಕ್ಕೆ ಸಂಬಂಧಪಟ್ಟ ಇತರ ಸಂಸ್ಥೆಗಳ ಸುಸಂಘಟನ.

ಸಮಾಜದೊಳಗೆ ಅನ್ಯೋನ್ಯ ಸಾಧನೆ.

ಸ್ತ್ರೀಸಮಾಜಕ್ಕೆ ಉಪಯುಕ್ತವಾದ ವಿಷಯಗಳ ನಿರೂಪಣ ಮತಭಾವನೆಗಳ ಉಜ್ಜೀವನ ಇತ್ಯಾದಿ ಉದ್ದೇಶಗಳಿಂದ ಈ ಪತ್ರಿಕೆಯು ಹೊರಡಿಸಲ್ಪಡುವುದು. ಸಾರಸ್ವತ ಸಮಾಜವು ಇದಕ್ಕೆ ಪ್ರೋತ್ಸಾಹವನ್ನೀಯಬೇಕಾಗಿ ಪ್ರಾರ್ಥನೆ.

ಚಂದಾಹಣ ಅಂಚೆವೆಚ್ಚ ಕೂಡಾ ರೂ. ೧—೪—೦. ಪೋಷಕರು ರೂ. ೧೦—೦—೦. ಸಹಾಯಕರು ರೂ. ೫—೦—೦. ಮಾದರಿ ಸಂಚಿಕೆಯನ್ನು ಟಪ್ಪಾಲು ಖರ್ಚಿಗಾಗಿ ಅರ್ಧಾಣೆ ಸ್ಟ್ಯಾಂಪು ಕಳುಹಿಸುವವರಿಗೆ ಉಚಿತವಾಗಿ ಕಳುಹಿಸುವೆವು.

ಕನ್ನಡ ನಾಡಿನಲ್ಲಿ ಪ್ರತಿ ಕಡೆಯಲ್ಲಿಯೂ ಬಾತಮಿದಾರರು ಬೇಕು.

ಎಲ್ಲಾ ಪತ್ರವ್ಯವಹಾರಗಳನ್ನು ಕೆಳಗಿನ ವಿಳಾಸಕ್ಕೆ ನಡೆಸಬೇಕು.

ಯು. ನಾರಾಯಣನಾಯ್ಕ, ಕಾರ್ಯದರ್ಶಿ,
ಸಾರಸ್ವತ, ಉಡುಪಿ.

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ

ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು, ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ಯಾವಂತರೂ ತಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ತಮಾನಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳು, ಸಂಸ್ಥಾನದ ಆರೋಗ್ಯಸ್ಥಿತಿಯು ಮುಂತಾ ಲೆಕ್ಕಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ರೈತರಿಗೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪೋಷಕರಿಗೆ ... ... ರೂ. 3—0—0
ಇತರರಿಗೆ, ಪರಸ್ಪರ ಸಹಾಯ ಸಂಘಗಳಿಗೆ ... „ 2—8—0.
„ ರೈತರಿಗೆ ... „ 1—8—0.

ಸರಕಾರದವರಿಂದ ಪ್ರತಿಗಳಿಂದಲೂ ಈ ಪತ್ರಿಕೆಯು ವಿಶೇಷವಾಗಿ ಪ್ರಚಾರವಾಗಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಹಾಕಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕಚೇರಿ ಚಂದ ಬರೆದು ತಿಳಿಯಬಹುದು.

ಎಡಿಟರ್,
ಡಿ. ವೆಂಕಟರಾಮಯ್ಯಗೌಡ,
ಅರ್ಥಸಾಧಕ ಪತ್ರಿಕೆ,
[illegible]

Free! Free!! Free!!
ಪ್ರಸಿದ್ಧವಾದ
"ಕಾಮಶಾಸ್ತ್ರ"
ಈಗಲೆ ತಯಾರಾಗಿದೆ.
ಜರೂರಾಗಿ ಬರಿಯುವಲ್ಲಿ ಅಂಚೆಯ ಹಾಸಲು
ಸಹ ಇಲ್ಲದೆ ಕಳುಹಿಸುವೆವು.
ಆತಂಕನಿಗ್ರಹ ಔಷಧಾಲಯ,
26 ಬ್ರಾಡ್ವೇ, (ಪೋಸ್ಟು ಬಾಕ್ಸ್ 1252),
ಮದ್ರಾಸ್.

Fresh Arrivals

Pear's Solid Brilliantine, Evans Lime-juice Glycerine, Tooth powders, Rose water, Syrups of all sorts for drinks, Denatured Spirits, etc., etc.

The Mangalore Trading Association,
Car-Street, MANGALORE.

ಪ್ರೆಸಿಡೆನ್ಸಿ ಕಾಲೇಜ್ ಕರ್ಣಾಟಕ ಸಭಾ.

ಗ್ರೇಜುವೇಟ್ಸ್ ಸತ್ಕಾರ.

ಪ್ರೆಸಿಡೆನ್ಸಿ ಕಾಲೇಜು ಕರ್ಣಾಟಕ ಸಭೆಯು ಹುಟ್ಟಿ ಈಗ್ಗೆ ಮೂರು ವರುಷಗಳಾದುವು. ಈ ವರ್ಷ ಸಭೆಯು ಹೊಸತಾಗಿ ಡಿಗ್ರಿ ಪಡೆದ ಗ್ರೇಜುವೇಟ್ಸರಿಗೆ ನಾಜೂಕಾದ ರಿಸೆಪ್ಷನ್ ಕೊಟ್ಟಿತು. ಆಗೋಸ್ತು ತಾ. ೨೮ರಲ್ಲಿ ಶ್ಯಾಮು ಗಂಟೆ ೪—೩ರೊಳಗೆ ಸಭೆಯು ಜರಗಿತು. ಸಭಾಸದರಲ್ಲದೆ, ಕ್ವೀನ್ ಮೇರೀಸ್ ಕಾಲೇಜು ಹಿಸ್ಟ್ರಿ ಪ್ರೊಫೆಸರರಾದ ಮಿಸ್. ಕೆ. ಎಸ್. ರಂಗರಾವ್, ಎಮ್. ಎ., ಮಂಗಳೂರು ನೇಶನಲ್ ಗರ್ಲ್ಸ್ ಸ್ಕೂಲಿನ ಮುಖ್ಯೋಪಾಧ್ಯಾಯಿನಿಯರಾದ ಮಿಸಸ್. ಎಚ್. ಮನೋರಮಾಬಾಯಿ, ಬಿ. ಎ., ಮದ್ರಾಸು ಗವರ್ನಮೆಂಟ ಕನ್ನಡ ಟ್ರಾನ್ಸ್‌ಲೇಟರರಾದ ಶ್ರೀಯುತ ಬಿ. ರಾಮರಾವ್, ಎಮ್. ಎ. ಎಲ್. ಎಲ್. ಬಿ, ಮದ್ರಾಸ್ ಕ್ರಿಶ್ಚನ್ ಕಾಲೇಜಿನ ಕನ್ನಡ ಪಂಡಿತರಾದ ಶ್ರೀಯುತ ಕೆ. ನರಸಿಂಗರಾವ್, ಬಿ. ಎ. ಅಸಿಸ್ಟಾಂಟ್ ಎಕೌಂಟೆಂಟ್ ಜನರಲರಾದ ಶ್ರೀಯುತ ಸಿ. ಸುಂದರರಾಮರಾವ್, ಶ್ರೀಯುತ ಬಿ. ಸೀತಾರಾಮರಾವ್, ಬಿ. ಎ. ಬಿ. ಎಲ್., ಶ್ರೀಯುತ ಕೆ. ವೈ. ಅಡಿಗ ಬಿ. ಎ. ಬಿ. ಎಲ್., ಓರಿಯಂಟಲ್ ಮೆನ್ಯುಸ್ಕ್ರಿಪ್ಟ್ ಲೈಬ್ರೇರಿಯ ಶ್ರೀಯುತ ಪಾಣ್ಯಂ ಸುಂದರ ಶಾಸ್ತ್ರಿ ಮೊದಲಾದ ಮಹನೀಯರು ನೆರೆದಿದ್ದರು. ಕಾಲೇಜು ಶಿಕ್ಷಣ ಇಲಾಖೆಯ ಕಡೆಯಿಂದ, ಡಾ। ಎಸ್. ಆರ್. ಯು. ಸವೂರ, ಬಿ. ಎ. (ಕೆಂಟೇಬ), ಡಿ. ಎಸ್. ಸಿ, ಐ. ಇ. ಎಸ್., ಪ್ರೊಫೆಸರ್ ಎಸ್. ಇ. ರಂಗನಾಥನ್, ಎಮ್. ಎ., ಐ. ಇ. ಎಸ್. ಶ್ರೀಯುತರು ಎ. ನರಸಿಂಗರಾವ್, ಎಮ್. ಎ., ಯು. ಕಣ್ಣಪ್ಪ ಎಮ್. ಎ., ಯು. ಮೂಡ್ನಗಿರಿ ನಾಯಕ, ಎಮ್. ಎ., ಪಂಡಿತ ದೇವಶಿಖಾಮಣಿ ಅಳಸಿಂಗರಾಚಾರ್ಯರು, ಎಸ್. ಪಿ. ಬಾಳಿಗ, ಬಿ. ಎ. (ಓನರ್ಸ್) ದಯಮಾಡಿಸಿದ್ದರು ಹೊಸ ವರ್ಷದ ಗ್ರೇಜುವೇಟ್ಸರಲ್ಲನೇಕರು ಸೇರಿದ್ದರು. ಪ್ರೆಸಿಡೆನ್ಸಿ ಕಾಲೇಜ ರಿಟಾಯರ್ಡ್ ಜಿಯೋಲಜಿ ಪ್ರೊಫೆಸರರಾದ ಮಾ। ರಾ। ಎಚ್. ನಾರಾಯಣರಾಯರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು.

ಉಪಾಹಾರದ ಬಳಿಕ, ಕೆ. ನರಸಿಂಗ ರಾಯರು ಒಂದೆರಡು ಪದ್ಯಗಳನ್ನು ಹಾಡಿದ್ದಾಯಿತು. ಪಂಡಿತ ಅಳಸಿಂಗರಾಚಾರ್ಯರು ಒಂದು ಚಿಕ್ಕ ಭಾಷಣದಿಂದ ಆಗತಾನೇ ಯುನಿವರ್ಸಿಟಿಯಿಂದ ಪುರಸ್ಕೃತರಾದ ಗ್ರೇಜುವೇಟ್ಸರಿಗೆ ಸುಸ್ವಾಗತವನ್ನಿತ್ತರು. ಗ್ರೇಜುವೇಟ್ಸರು ಯುನಿವರ್ಸಿಟಿಯಲ್ಲಿ ಉತ್ತೀರ್ಣರಾದುದಕ್ಕಾಗಿ ಪಂಡಿತರು ಸಭೆಯ ಆನಂದವನ್ನು ಸೂಚಿಸಿ, ಕನ್ನಡ ಭಾಷೆಯು ಸದ್ಯದ ಶೋಚನೀಯ ಸ್ಥಿತಿಯನ್ನು ಹೋಗಲಾಡಿಸಲು ಸರ್ವರೂ ಯತ್ನಿಸುತ್ತಿರಬೇಕೆಂದೂ, ಕನ್ನಡ ಭಾಷಾಸಾಹಿತ್ಯಗಳಿಗೆ ಸ್ವದದಲ್ಲೇ ಪ್ರಾಮುಖ್ಯವನ್ನೈದಿಸಬೇಕೆಂದೂ ಭಾಷಿಸಿದರು. ಕನ್ನಡವು ಸಂಕುಚಿತವಾಗಿರಲು ಆಧುನಿಕ ವಿದ್ಯೆಯೇ ಕಾರಣವು. ಪ್ರಾಚೀನ ಕರ್ನಾಟಕದ ಹೆಗ್ಗಳಿಕೆಯು ಹಿಂತಿರುಗಿ ಬರಬೇಕಾದರೆ, ಕನ್ನಡಿಗರು ಕರ್ತವ್ಯವನ್ನೇ ಮುಂದಿಟ್ಟು ವಾತ್ಸಲ್ಯದಿಂದ ಕನ್ನಡಕ್ಕಾಗಿ ಯತ್ನ ವಿಶೇಷಗಳನ್ನು ಮಾಡುತ್ತಿರಬೇಕು. ಹೀಗೆಂದು ಶ್ರೀಯುತ ಅಳಸಿಂಗರಾಚಾರ್ಯರು ತಮ್ಮ ಅಭಿಪ್ರಾಯವನ್ನು ಸೂಚಿಸಿದರು.

ಗ್ರೇಜುವೇಟ್ಸರ ಕಡೆಯಿಂದ ಶ್ರೀಯುತರು ಬಿ. ವಾಸುದೇವರಾವ್, ಬಿ. ಎ., ಐ. ಸಿ. ಸುಬ್ಬಯ್ಯ, ಬಿ. ಎ. (ಓನರ್ಸ್), ಎಮ್. ಶ್ರೀನಿವಾಸ ರಾವ್, ಬಿ. ಎ. (ಓನರ್ಸ್), ಪಂಜೆ ಗೋಪಾಲ ರಾವ್, ಬಿ. ಎ. ಯವರು ತಕ್ಕುದಾದ ಮಾತುಗಳಿಂದ ಧನ್ಯವಾದಗಳನ್ನು ಹೇಳಿದರು.

ತರುವಾಯ ಬಿ. ರಾಮರಾವ್, ಕೆ. ನರಸಿಂಗ ರಾವ್, ಪಾಣ್ಯಂ ಸುಂದರ ಶಾಸ್ತ್ರಿ ಇವರು ಪ್ರತ್ಯೇಕ ಪ್ರತ್ಯೇಕ ಭಾಷಣಗಳಿಂದ ಸಭಿಕರನ್ನು ರಂಜಿಸಿ ಮಾತನಾಡಿದ್ದರು. ಕನ್ನಡ ಭಾಷಾಸೇವಕರು ಸಭೆಯವರಿಗೆ ಹೇಳಿದುದರ — ಪ್ರೆಸಿಡೆನ್ಸಿ ಕಾಲೇಜು ಕರ್ಣಾಟಕ ಸಭೆಯು ಅಂಗೆದದೆ ತನ್ನ ಕರ್ತವ್ಯವನ್ನು ನಡೆಸುತ್ತಿರಬೇಕು. ಕನ್ನಡ ಸೇವೆಯಾಗಬೇಕಾದರೆ ಸಭೆಯು ಇನ್ನೂ ಅನೇಕ ಕಾರ್ಯಗಳನ್ನು ಕೈಕೊಳ್ಳಬೇಕು. ಸಭೆಯವರು ನಾಟಕಗಳನ್ನು ಆಡುವುದು; ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಹೊಸತಾಗಿ ಕನ್ನಡ ಲೈಬ್ರೇರಿಯನ್ನು ತೆರೆಯುವುದು; ಕಾಲೇಜು ಬಿಟ್ಟ ವಿದ್ಯಾರ್ಥಿಗಳ ಸಮ್ಮೇಳನಗಳನ್ನು (Old Boys' Association) ಕರೆಯುವುದು, ಕನ್ನಡ ಮಾಸಪತ್ರಿಕೆಯೊಂದನ್ನು ಪ್ರಕಟಿಸಿ ಸಭೆಯ ಗತಕಾಲದ ಮೆಂಬರರು ಹಾಗೂ ಹಿತಚಿಂತಕರು ಸಭೆಯವರೊಂದಿಗೆ ಇದಿರು ಪದುಳ ಬರುವಂತೆ ಮಾಡುವುದು; ಇವೇ ಮೊದಲಾದ ವಿಧಾನಗಳನ್ನು ಕಲ್ಪಿಸಿಕೊಳ್ಳಬೇಕು.

ಅಧ್ಯಕ್ಷರ ಭಾಷಣವು ಚಿಕ್ಕದಾಗಿದ್ದರೂ ಸಭೆಯವರನ್ನು ಹುರಿದುಂಬಿಸುವುದಾಗಿದ್ದಿತು. ತರುವಾಯ ಶ್ರೀಯುತ ಎಮ್. ಲಕ್ಷ್ಮೀನಾರಾಯಣರು (ಸೀನಿಯರ್ ಬಿ. ಎ. ವಿದ್ಯಾರ್ಥಿ ಮತ್ತು ಪ್ರಮುಖ ಸಭಾಸದ) ಸ್ವಲ್ಪ ಗಾಯನವನ್ನು ಮಾಡಿದ ಬಳಿಕ ನಿಯಮಾನುಸಾರ ಅಧ್ಯಕ್ಷರಿಗೆ ಅಭಾರವನ್ನು ಸೂಚಿಸಿ, ಸುಮಾರು ೬—೩೦ ಗಂಟೆಗೆ ಸಭೆಯು ಕೊನೆಗೊಂಡಿತು.

ಅನಾರೋಗ್ಯದ ವಿಚಿತ್ರ ಪರಿಣಾಮಗಳು.

(ಚೈನಾದೇಶದ ಒಬ್ಬ ಹುಡುಗನ ಕಥೆ).

ಚೈನಾದೇಶದಲ್ಲಿರುವ ಸೂಚಾನಗರದ ಒಂದಾನೊಂದು ಪಾಠಶಾಲೆಯ ಉಪಾಧ್ಯಾಯರುಗಳು, ತಮ್ಮ ವಿದ್ಯಾರ್ಥಿಗಳಲ್ಲಿ ಒಬ್ಬನು ಸರಿಯಾಗಿ ವ್ಯಾಸಂಗಮಾಡುತ್ತಲಿಲ್ಲವೆಂದು ಅವನನ್ನು ಆಗಾಗ ಬಹಳವಾಗಿ ಚಿತ್ರಹಿಂಸೆಮಾಡಿ ದಂಡಿಸುತ್ತಿದ್ದರು. ಅವನನ್ನು ಶಾಲೆಯಿಂದ ಹೊರಕ್ಕೂ ನೂಕಿಸಿದರು. ಅವನಿಗೆ ವಿದ್ಯೆಕಲಿಯಬೇಕೆಂಬ ಅಭಿಲಾಷೆಯೇನೋ ಅಧಿಕವಾಗಿದ್ದುದರಿಂದ, ಮೇಲಿಮೇಲೆ ಶ್ರಮಪಟ್ಟು ವ್ಯಾಸಂಗಮಾಡುತ್ತಲೂ ಬಂದನು. ಆತನ ತಂದೆಗೆ ಅವನೇ ಹಿರಿಯಮಗನಾಗಿದ್ದುದರಿಂದ, ಅವನ ಇತರ ಸಹೋದರ ಸಹೋದರಿಯರಿಗಿಂತಲೂ ವಿದ್ಯಾಭ್ಯಾಸ ಸೌಕರ್ಯಗಳು ಅವನಿಗೆ ಹೆಚ್ಚಾಗಿದ್ದುವು. ಇಷ್ಟೊಂದು ಸೌಕರ್ಯಗಳಿದ್ದು ಶ್ರಮಪಟ್ಟರೂ ಆತನು ಅಭಿವೃದ್ಧಿಗೆ ಬರಲಿಲ್ಲ.

ಒಂದು ದಿನ ಅವನಿಗೆ ಅಪರಿಚಿತರಾದ ಇಬ್ಬರು ಡಾಕ್ಟರುಗಳು ಪಾಠಶಾಲೆಗೆ ಬಂದರು. ಅವರು ಷಾಂಘಾಯಿನಗರದ ಆರೋಗ್ಯಶಿಕ್ಷಣ ಸಮಿತಿಯ ಪ್ರತಿನಿಧಿಗಳು. ಶಾಲೆಯ ವಿದ್ಯಾರ್ಥಿಗಳ ದೇಹದಾರ್ಢ್ಯವನ್ನೂ, ಆರೋಗ್ಯವನ್ನೂ ಪರೀಕ್ಷಿಸಲು, ಅಲ್ಲಿಯ ಉಪಾಧ್ಯಾಯರುಗಳ ಆಹ್ವಾನದ ಮೇಲೆ ಅವರು ಅಲ್ಲಿಗೆ ಬಂದಿದ್ದರು. ಕ್ರಮೇಣ ಈ ಹುಡುಗನನ್ನು ಪರೀಕ್ಷಿಸಿದರು. ವಿದ್ಯಾಶಕ್ತಿಯಿಲ್ಲದವನೆಂದೂ, ಬುದ್ಧಿಹೀನನೆಂದೂ, ಸೋಮಾರಿಯೆಂದೂ ಉಪಾಧ್ಯಾಯರುಗಳು ಭಾವಿಸಿದ್ದ ಈ ಹುಡುಗನು, ತನ್ನ ವಿದ್ಯೆಯಲ್ಲಿ ಹಿಂದೆ ಬಿದ್ದಿರುವುದಕ್ಕೆ ನಿಜವಾದ ಕಾರಣವು ಅವರಿಗೆ ಗೊತ್ತಾಯಿತು. ದೃಷ್ಟಿಸೂಕ್ಷ್ಮವನ್ನು ಪರಿಶೋಧಿಸುವ ಯಂತ್ರದ ಸಹಾಯದಿಂದ ಪರೀಕ್ಷಿಸಿದ್ದರಲ್ಲಿ, ಆತನ ಎರಡು ಕಣ್ಣುಗಳೂ ಊನವಾಗಿದ್ದುವು. ದೃಷ್ಟಿಪಾಟವವು ಅರ್ಧಭಾಗ ಮಾತ್ರ ಇತ್ತು. ಇದನ್ನು ಸರಿಪಡಿಸಿಕೊಳ್ಳುವುದಕ್ಕಾಗಿ ಒಂದು ಜತೆಯ ಕನ್ನಡಕಗಳನ್ನು ಹಾಕಿಕೊಳ್ಳುವಂತೆ ಸೂಚಿಸಿದರು.

ಆತನ ಹಲ್ಲುಗಳ ಪರಿಶೋಧನೆಯಲ್ಲಿಯೂ, ಅವುಗಳಲ್ಲಿ ಬಹಳ ಕೊಳೆ ಸೇರಿದ್ದುವೆಂದೂ, ನಾಲ್ಕು ಹಲ್ಲುಗಳಲ್ಲಿ ರಂಧ್ರವಿದ್ದುವೆಂದೂ ತಿಳಿದು ಬಂದಿತು. ತನಗೆ ಆಡಿಗಡಿಗೆ ಹಲ್ಲುಬೇನೆಯು ಬರುತ್ತಿರುವುದಾಗಿಯೂ ಆಹಾರವನ್ನು ಚೆನ್ನಾಗಿ ಅಗಿಯುವುದಕ್ಕಾಗುವುದಿಲ್ಲವೆಂದೂ ಅವನು ಹೇಳಿದನು. ಹಲ್ಲುಗಳನ್ನು ಸಂಪೂರ್ಣವಾಗಿ ಶುದ್ಧಮಾಡಿಸಿಕೊಂಡು, ದಿನಂಪ್ರತಿಯೂ ಬ್ರಷಿನಲ್ಲಿ ಹಲ್ಲನ್ನುಜ್ಜಿಕೊಳ್ಳುವುದಲ್ಲದೆ ಆಗಾಗ ದಂತವೈದ್ಯರಿಗೆ ತೋರಿಸಿ ಅವರ ಸೂಚನೆಯನ್ನು ಪಡೆಯಬೇಕೆಂದು ಡಾಕ್ಟರುಗಳು ಹೇಳಿದರು. ಈತನ ತೂಕವು ತನ್ನ ಸಮ ವಯಸ್ಕರಿಗಿಂತ ೧೦ ಪೌಂಡಿನಷ್ಟು ಕಡಿಮೆಯಾಗಿದ್ದಿತು. ಅವನಿಗೆ ಆಹಾರವನ್ನು ಚೆನ್ನಾಗಿ ಅಗಿಯುವಂತೆಯೂ, ಆಹಾರಸೇವನೆಯಲ್ಲಿ ಜಾಗರೂಕನಾಗಿರುವಂತೆಯೂ ವ್ಯಾಯಾಮವನ್ನು ಕ್ರಮವಾಗಿ ತೆಗೆದುಕೊಳ್ಳುವಂತೆಯೂ ಎಚ್ಚರಿಸಿದರು.

ಮೂರು ತಿಂಗಳಲ್ಲಿ ಆತನ ದೃಷ್ಟಿಯು ಕ್ರಮವಾಯಿತು. ತನ್ನ ಹಲ್ಲುಗಳ ವಿಚಾರದಲ್ಲಿ ಶ್ರದ್ಧೆ, ಸಕಾಲದಲ್ಲಿ ಭೋಜನಮಾಡುವ ಪದ್ಧತಿ, ಕಿಟಕಿಯ ಬಾಗಿಲುಗಳನ್ನು ತೆರೆದು ಮಲಗುವುದು, ಸೂರ್ಯರಶ್ಮಿಯಲ್ಲಿಯೂ ಮೈದಾನದಲ್ಲಿಯೂ ಆಟವಾಡುವುದು ಮುಂತಾದುವುಗಳನ್ನು ಆಚರಿಸುತ್ತ ಬಂದನು. ಈ ಆಚರಣೆಗಳಿಂದ ಅವನ ಗುರುಗಳಿಗೂ ತಂದೆತಾಯಿಗಳಿಗೂ ಆಶ್ಚರ್ಯವಾಗುವಷ್ಟು ಮಟ್ಟಿಗೆ ಅವನ ದೇಹಪ್ರಕೃತಿಯಲ್ಲಿ ಬದಲಾವಣೆಗಳು ಕಾಣುತ್ತ ಬಂದುವು. ವಾಸ್ತವದಲ್ಲಿ ಆತನು ತನಗೊದಗಿದ ಸೌಕರ್ಯಗಳನ್ನು ಲಕ್ಷ್ಯಕ್ಕೆ ತಾರದಿರಲಿಲ್ಲ. ಆತನು ದಡ್ಡನೂ ಅಲ್ಲ. ಸೋಮಾರಿಯೂ ಅಲ್ಲ. ತನಗೂ ಗೋಚರವಿಲ್ಲದ ಶರೀರಾಯಾಸವು ಇದುವರೆಗೆ ಅವನ ಅಭಿವೃದ್ಧಿಗೆ ಅಡ್ಡಿಯಾಗಿತ್ತು. ಆತನ ದೇಹಸ್ಥಿತಿಯನ್ನು ನೋಡಿದರೆ, ಆತನು ಯಾವ ರೋಗಗಳಿಂದಲೂ ನರಳುತ್ತಿರುವುದಾಗಿ ಸ್ಪಷ್ಟವಾಗಿ ಕಂಡುಬಾರದಿದ್ದರೂ, ಅವನು ಬಹು ರೋಗಿಯೆಂಬುದು ಮಾತ್ರ ಸುಳ್ಳಲ್ಲ. ತನ್ನ ಕೆಲಸವು ಇತರರಿಗೆ ಅತೃಪ್ತಿಕರವಾಗಿ, ತನಗೂ ಶ್ರಮವನ್ನು ಕೊಡುವಂತೆ ಮಾಡಲು ಆ ವ್ಯಾಧಿಗಳಲ್ಲಿ ಒಂದೊಂದೇ ಸಾಕಾಗಿದ್ದು. ತನ್ನ ಅಭಿವೃದ್ಧಿಗೆ ಕುಂದುಕಗಳಾದ ಕಾರಣಗಳು ತಿಳಿದೊಡನೆ, ಬಹಳ ಕಾಲ ಗಾಢಾಂಧಕಾರದಲ್ಲಿದ್ದ ತಾನು ಬೆಳಕ್ಕಿರುವ ಪ್ರದೇಶಕ್ಕೆ ಬಂದಂತಾಯಿತು. ಇದರಿಂದ ಆತನು ಅಧಿಕ ಸಂತೋಷವನ್ನು ಹೊಂದಿದನು. ತನ್ನ ಜೀವವು ಉತ್ಸಾಹದಿಂದಲೂ, ಪುರೋವೃದ್ಧಿಯಿಂದಲೂ ತುಂಬಿರುವ ಆನಂದದಾಯಕಗಳಾದ ವಿನೋದವೆಂಬ ಭಾವನೆಯು ಬಂದಿತು. ಈ ಉದಾಹರಣೆಯಲ್ಲಿ ಒಳ್ಳೆಯ ಆರೋಗ್ಯವು ಅಧಿಕಲಾಭವನ್ನು ಕೊಡಲಿಲ್ಲವೆಂದು ಹೇಳಲು ಸಾಧ್ಯವೆ?

(ಒಂದಾನೊಂದು ಪ್ರಖ್ಯಾತವಾದ ಆರೋಗ್ಯ ಪತ್ರಿಕೆಯಲ್ಲಿ ಡಾಕ್ಟರ್ ಪೀಟರ್, ಮತ್ತು ಎಸ್. ಎಮ್. ಟೋಟೀ ಎಂಬವರು ಪ್ರಚುರಪಡಿಸಿದುದು.)

(ಆರೋಗ್ಯ ಚಂದ್ರಿಕೆ.)

ಸ್ವೀಕಾರ ಮತ್ತು ವಿಮರ್ಶೆ.

ರಾಮಕೋಟಿ "ಶ್ರೀ ವೈಕುಂಠ ನಿರೂಪಣವು."

ಹೊಸೂರಿನ ಶ್ರೀ। ಹರಿಕಥಾರತ್ನಾಕರ ವಿದ್ಯಾನಿಧಿ ಶಾ। ಶಿವರಾಮದಾಸರ ವೈದುಷ್ಯಪೂರ್ಣವಾದ ರಾಮಕೋಟಿಯ ಈ ಭವ್ಯ ಸಂಚಿಕೆಯಲ್ಲಿ ಮನನೀಯವಾದ ಅನೇಕ ಸಂಗತಿಗಳು ಸಂಗ್ರಹಿಸಲ್ಪಟ್ಟಿವೆ. ಪರಮಪಾವನಪದ ಶ್ರೀ ವೈಕುಂಠ ವರ್ಣನೆಗೆ ಪರಿಪೋಷಕವಾಗಿ ಬ್ರಹ್ಮಾಂಡದೊಳಗಣ ಹದಿನಾಲ್ಕು ಲೋಕಗಳೂ, ಸೂರ್ಯ ಚಂದ್ರಾದಿ ಗ್ರಹಗಳ ನಾಮರೂಪ ಸ್ಥಾನ ಭೇದಗಳೂ, ಅಷ್ಟದಿಕ್ಪಾಲಕರ ವಿಚಾರಗಳೂ, ಗ್ರಹಮಂಡಲಗಳ ಸ್ಥಿತಿಗತಿಗಳ ವಿಷಯದಲ್ಲಿ ಪ್ರಾಚೀನ ಅರ್ವಾಚೀನ ಮತಭೇದಗಳೂ, ಭೂಲೋಕೋತ್ಪತ್ತಿ, ಲೋಕದ ಅಸ್ತಿತ್ವದಲ್ಲಿ ಆಧುನಿಕ ಪಾಶ್ಚಾತ್ಯ ಗ್ರಂಥಗಳ ಸಮ್ಮತಿಯೂ, ಮುಂತಾದ ಅತ್ಯಮೂಲ್ಯ ವಿಷಯಗಳು ಸಯುಕ್ತಿಕವಾಗಿ ಶಾಸ್ತ್ರೀಯ ರೀತಿಯಿಂದ ವರ್ಣಿಸಲ್ಪಟ್ಟಿವೆ. ಅನೇಕ ಚಿತ್ರಗಳನ್ನೊಳಗೊಂಡ ಬ್ರಹ್ಮಾಂಡಕ್ಕೂ ಪಿಂಡಾಂಡಕ್ಕೂ ಮಾಡಿರುವ ತುಲನೆಯು ಬಹಳ ಹೃದಯಂಗಮವಾಗಿರುವುದು. ಮುಖ್ಯವಾಗಿ ನಮ್ಮ ವೇದ ಶಾಸ್ತ್ರ ಪುರಾಣಗಳಲ್ಲಿ ಅಡಗಿಕೊಂಡಿರುವ ಉತ್ಕೃಷ್ಟ ತತ್ವರಹಸ್ಯಗಳನ್ನು ತಿಳಿಸುವ ಆಯಾ ವಾಕ್ಯಗಳ ಅರ್ಥವಿಸ್ತಾರದ ಉದಾಹರಣೆಯೊಡನೆ ಮನೋರಂಜಕವಾಗಿ ಏವಂ ತಿರುವುದರಿಂದ ಸಾಮಾನ್ಯ ಜನರ ಹೃದಯದಲ್ಲಿಯೂ ಈ ಗಂಭೀರ ಭಾವನೆಗಳು ಚೆನ್ನಾಗಿ ಪ್ರತಿಬಿಂಬಿಸುವುದಕ್ಕೆ ಅನುಕೂಲವಾಗಿದೆ. ಅತ್ಯಪೂರ್ವವೂ ಅನನ್ಯಸಾಮಾನ್ಯವೂ ಆಗಿರುವ ಈ ಗ್ರಂಥವನ್ನು ಆಸ್ತಿಕನಾದ ಪ್ರತಿಯೊಬ್ಬನೂ ಓದಲೇಬೇಕೆಂದು ನಮ್ಮ ಆಗ್ರಹಪೂರ್ವಕವಾದ ವಿನಂತಿ.

ಬಾಲವಿಧವಾ ದುಃಖನಿವಾರಣಾ ಸಂಘ.

ಪ್ರಿಯ ಭ್ರಾತೃ ಭಗಿನಿಗಳಿರಾ,

ದೇಶೋದ್ಧಾರಕರೂ, ಸಮಾಜೋದ್ಧಾರಕರೂ, ಧರ್ಮೋಪದೇಶಕರೂ, ದಿನೇ ದಿನೇ ಹೆಚ್ಚಾಗಿ ತಮ್ಮ ಚಾತುರ್ಯಗಳನ್ನೆಲ್ಲಾ ವಾಗಾಡಂಬರಗಳಲ್ಲಿ ವಿನಿಯೋಗಿಸಿ ನಾವು ಅಂಥವರು ನಮ್ಮ ಪೂರ್ವಜರು ಇಂಥವರು ನಮ್ಮ ಗತವೈಭವವು ಅಷ್ಟಿಷ್ಟೆಂದು ಹೇಳಲಸಾಧ್ಯ, ನಾವು ಯಾವದರಲ್ಲೂ ಕಡಿಮೆಯವರಲ್ಲ ಹಾಗಲ್ಲ ಹೀಗಲ್ಲ ಎಂದು ಉದ್ಗಾರಗಳನ್ನು ತೆಗೆಯುತ್ತ ದಿನಹರಣೆಯನ್ನು ಮಾಡುವುದಲ್ಲದೆ ಯಾವಾತನಾದರೂ ತನ್ನ ಮನೆಯಲ್ಲಿ ಅಳುತ್ತಿರುವ ಹಸುಗೂಸು ವೈಧವ್ಯವನ್ನು ಅನುಭವಿಸಿ ಆ ಮರಣ ಪರಿಯಂತರ ಈಶನಿಗೂ ಗೆಲಲಸಾಧ್ಯವಾದ ಮದನನನ್ನು ಗೆದ್ದು ತನ್ನ ಪಾತಿವ್ರತ್ಯವನ್ನು ಹೇಗೆ ಕಾಯ್ದುಕೊಳ್ಳುವಳು? ಎಂಬ ಪ್ರಶ್ನೆಯನ್ನು ಒಮ್ಮೆಯಾದರೂ ವಿಚಾರಿಸುವನೇ. ಒಮ್ಮೆ ವಿಚಾರಿಸಿದರೂ ಅದನ್ನು ಹೇಗೆ ನಿವಾರಣೆ ಮಾಡಲಿ ಎಂತ ಆಲೋಚಿಸಿರುವನೇ. ಒಂದು ವೇಳೆ ಹಾಗೆ ಆಲೋಚಿಸಿದರೂ ಅವರ ದುರಾದೃಷ್ಟ ನಾವೇನು ಮಾಡಲಿ ಎಂತ ತಮ್ಮ ಕರ್ತವ್ಯ ಲೋಪದ ಪರಿಣಾಮವನ್ನು ಆ ನಿರ್ದೋಷ ಬಾಲೆಯ ಮೇಲೆ ಹೊರಿಸಿ ಉಸ್ ಎಂದು ಉಸುರ್ಗರೆದು ದಯಾಳುವಾದರೆ ಒಂದೆರಡು ಹನಿ ಕಣ್ಣೀರನ್ನು ಮಾತ್ರ ಸುರಿಸಿ ಅಲ್ಲಿಗೆ ಮುಗಿತು ತಮ್ಮ ಕೆಲಸವೆಂದು ಸುಮ್ಮನೆ ಕುಳಿತುಕೊಳ್ಳುವುದಲ್ಲದೆ (ನಾನು ಈ ನಿರ್ದೋಷ ಬಾಲೆಯರ ದುಃಖನಿವಾರಣೆಯನ್ನು ಮಾಡುವೆನು. ಇಲ್ಲವೆ ಆ ಕಾರ್ಯದಲ್ಲಿ ಪ್ರಾಣವನ್ನು ಬಿಡುವೆನು) ಎಂದು ಸೊಂಟಕಟ್ಟುವವರಾದರೂ ಎಷ್ಟು ಮಂದಿ ಇರುವರು? ಅಲ್ಲಲ್ಲಿ ಒಬ್ಬಿಬ್ಬರು ಹಾಗೆ ಮುಂದೆ ಬಂದರೆ ಅಂಥವರಿಗೆ ನಮ್ಮ ಸಮಾಜವು ಎಷ್ಟರ ಮಟ್ಟಿಗೆ ಪ್ರೋತ್ಸಾಹವನ್ನು ಕೊಟ್ಟಿರುವದು? ಹೇ ಜಗದೀಶ್ವರಾ! ಯಾವಾತನು ಪರೋಪಕಾರಕ್ಕಾಗಿ ತನ್ನ ದೇಹದೊಳಗಿನ ಅಸ್ಥಿಯನ್ನಾದರೂ ಕೊಡಲು ಒಪ್ಪಿಕೊಂಡಿರುವನೋ, ಯಾವಾತನು ತನಗೆ ಮರೆಹೊಕ್ಕ ಒಂದು ಪಾರಿವಾಳದ ರಕ್ಷಣೆಗಾಗಿ ತನ್ನ ದೇಹದೊಳಗಿನ ಮಾಂಸವನ್ನಾದರೂ ಕೊಯ್ದುಕೊಟ್ಟಿರುವನೋ ಅಂಥವರ ವಂಶಜರೆನಿಸುವ ನಮಗೆ ತಮ್ಮ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳ ರೋಧನವು ಸಹ ಕೇಳದೆ ಹೋಯಿತಲ್ಲಾ! ಇಂಥ ನಿರ್ದಯರಾದ ನಮಗೆ ದೈವಸಹಾಯವಾದರೂ ಹೇಗಾದೀತು? ಸಹೋದರರೇ! ನಮ್ಮ ಮನೆಯ ಅಲ್ಲ, ಮಕ್ಕಳ ದುಃಖನಿವಾರಣೆಮಾಡಲು ಅಶಕ್ಯರಾದ ನಾವು ದೇಶದ ಪಾರತಂತ್ರವನ್ನಾದರೂ ಕಡಿಯುವುದು ಹೇಗೆ? ಇನ್ನಾದರೂ ಮನಸ್ಸಿಗೆ ಸರಿಯಾಗಿ ಕಂಡ ಕೆಲಸವನ್ನು ಬರೇ ಸಮಾಜದ ಭ್ರಾಂತಿಭೀತಿಗಾಗಿ ಮಾಡದೆ ಬಿಡಬೇಡಿರಿ. ಅಳುತ್ತಿರುವ ಬಾಲವಿಧವೆಯರ ಕಣ್ಣೀರನ್ನು ವರಿಸಿ (ಹುಟ್ಟಿದ್ದಕ್ಕೆ ಒಂದು ಪ್ರಾಣಿಗಾದರೂ ಸುಖಕೊಟ್ಟೆನು) ಎಂಬ ತೃಪ್ತಿಯನ್ನಾದರೂ ಪಡೆಯಿರಿ. ಶ್ರೀದೇವರು ಈ ಕಾರ್ಯದಲ್ಲಿ ಮುಂದರಿಯುವಷ್ಟು ಧೈರ್ಯವನ್ನು ಕೊಡಲೆಂದು ಪ್ರಾರ್ಥಿಸಿ ತಮ್ಮ ಸಂಸ್ಥೆಯ ನಿರ್ಣಯಗಳನ್ನು ತಮ್ಮ ಮುಂದಿಡುವೆವು.

೧. ಈ ಸಂಸ್ಥೆಗೆ ಬಾಲವಿಧವೆಯರ ದುಃಖನಿವಾರಣಾ ಸಂಘವೆಂದು ಹೆಸರು.

೨. ಈ ಸಂಸ್ಥೆಗೆ ೧೮ ವರ್ಷಕ್ಕೆ ಮಿಕ್ಕಿದ ಯಾವ ಒಬ್ಬನೂ (ಹೆಣ್ಣಾಗಲಿ ಗಂಡಾಗಲಿ) ಮೆಂಬರನಾಗಿ ಸೇರಲು ಅರ್ಹನಾಗಿರುತ್ತಾನೆ.

೩. (*a*) ಹಾಗೆ ಮೆಂಬರರಾಗಿ ಸೇರುವವರು ರೂಪಾಯಿ ೫ ಪ್ರವೇಶಹಾಸಲು ಮತ್ತು ವರ್ಷ ಒಂದರ ರೂಪಾಯಿ ೩ರಂತೆ ವಾರ್ಷಿಕ ವಂತಿಗೆಯನ್ನು ಕೊಡಲೇ ಬೇಕು.

(*b*) ಮೆಂಬರರಾಗಿ ಸೇರುವವರು ಈ ಕೆಳಗಿನ ವಿಳಾಸಕ್ಕೆ ಬರಕೊಂಡಲ್ಲಿ ಪ್ರವೇಶ ಅರ್ಜಿ ಫೋರ್ಮನ್ನು ಮುಫತ್ತಾಗಿ ಕಳುಹಿಸಲಾಗುವುದು.

೪. ಪುನರ್ವಿವಾಹದಿಂದ ತಮ್ಮ ಮಕ್ಕಳ ವೈಧವ್ಯವನ್ನು ನಿವಾರಿಸಲು ಇಚ್ಛೆಯುಳ್ಳವರು, ಸಮಾಜೋದ್ಧಾರಕ್ಕಾಗಿ ಅಂಥಾ ಬಾಲವಿಧವೆಗಳನ್ನು ಉದ್ಧರಿಸಲು ಇಚ್ಛೆಯುಳ್ಳ ಯುವಕರು ಸಂಘದ ಅಧ್ಯಕ್ಷರಿಗಾಗಲಿ ಕಾರ್ಯದರ್ಶಿಗಳಿಗಾಗಲಿ ಪತ್ರವ್ಯವಹಾರ ನಡೆಸತಕ್ಕದ್ದು. ಅಂತಹ ಪತ್ರವ್ಯವಹಾರಗಳನ್ನು ಗುಪ್ತದಲ್ಲಿ ಇಡಲಾಗುವುದು.

೫. ಕುಲಗೋತ್ರಗಳಿಗೆ ವಿರುದ್ಧವಾಗದಂತೆ ವಿಶೇಷ ಗಮನಕ್ಕೆ ಕೊಡಲಾಗುವುದು.

೬. ಸಂಸ್ಥೆಯ ಸಹಾಯವನ್ನು ಹೊಂದತಕ್ಕವರು ಸಂಸ್ಥೆಯ ಮೆಂಬರರಾಗಿ ಸೇರಲಿಕ್ಕೇ ಬೇಕು.

೭. ಪುನರ್ವಿವಾಹವಾಗತಕ್ಕ ಹುಡುಗಿಯರು ರಜಸ್ವಲೆಯಾಗದವರಾಗಿರಬೇಕು.

೮. ಬಾಲವಿಧವೆಯರನ್ನು ಲಗ್ನಮಾಡಿಕೊಳ್ಳಲಪೇಕ್ಷಿಸುವ ಯುವಕರು ಸ್ವತಂತ್ರ ಜೀವನಮಾಡಿಕೊಳ್ಳಲು ಶಕ್ತರಾಗಿರಬೇಕು.

೯. ಈ ಸಂಸ್ಥೆಯು ಪುನರ್ವಿವಾಹವಾಗತಕ್ಕ ಬಾಲವಿಧವೆಯರಿಗೆ ತಕ್ಕ ವರರನ್ನು ಮತ್ತು ವಿವಾಹಮಾಡಲಪೇಕ್ಷಿಸುವರಿಗೆ ತಕ್ಕ ಹುಡುಗಿಯರನ್ನೂ, ಕುಲಗೋತ್ರ ಯೋಗ್ಯತೆಗೆ ಅನುಸರಿಸಿ ದಗಿಸಿಕೊಡುವುದು.

೧೦. ವಿಶೇಷ ಮಾಹಿತಿ ಬಗ್ಗೆ ಅಧ್ಯಕ್ಷರಿಗಾಗಲಿ ಕಾರ್ಯದರ್ಶಿಯರಿಗಾಗಲಿ ಬರಕೊಂಡಲ್ಲಿ ತಿಳಿಸಲಾಗುವುದು.

ಕಾರ್ಯದರ್ಶಿ:— ಕೆ. ಎ. ಕಾರಂತ,
ಜಮೀನ್‌ದಾರ, ಕೋಟೆ,
ಕುಂದಾಪುರ ಪೋಸ್ಟು, ದ. ಕ.

ಅಧ್ಯಕ್ಷ:— ಕೃಷ್ಣರಾಯ ಕೊಡ್ಗಿ,
ಜಮೀನ್‌ದಾರ, ಅಮಾಸೆಬೈಲು,
ಪೋಷು ಶಂಕರನಾರಾಯಣ, ಕುಂದಾಪುರ, ದ. ಕ.

ತುಳು ಪಾಡ್ದನಗಳು.

ಬೊಬ್ಬರ್ಯ, ಕಲ್ಕುಡ-ಕಲ್ಲುರ್ಟಿ, ದೈಯ್ಯೊಂಗುಳು— ಕೋಡಿಕಿನ್ನಾರ್, ಮುಂಡತ್ತಾಯ ಪ್ರತಿ ಒಂದಕ್ಕೆ 2 ಆಣೆ. 1½ ಆಣೆ ಟಪ್ಪಾಲು ಚೀಟು ಕಳುಹಿಸಿದರೆ 5 ಪುಸ್ತಕಗಳು ಕೂಡಲೇ ಕಳುಹಿಸಲ್ಪಡುವವು.

ವಿಳಾಸ: ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ವಿದೇಶ ವರ್ತಮಾನ.

— ಕಳೆದ ಮೇ ತಿಂಗಳಲ್ಲಿ ಗ್ಲಾಸ್ಗೋದಲ್ಲಿ ಹಲವು ಪುಂಡಾಟಿಕರು (ಅಲ್ಲಿಯ ಬಿಳಿ ಜನರು) ಎಂಟು ಹಿಂದಿಗಳ ಮೇಲೆ ಅನ್ಯಾಯದಿಂದ ಬಂದು ಅವರನ್ನು ಹೊಡೆಯಹತ್ತಿದರು. ಈ ಎಂಟರ ಪೈಕಿ ಒಬ್ಬನು ಸತ್ತನು. ಉಳಿದವರಿಗೆ ಗಾಯವಾಯಿತು. ಹಿಂದಿಗಳು ಈ ವಿಷಯದಲ್ಲಿ ಫಿರ್ಯಾದಿ ಮಾಡಿದರು. ಜಡ್ಜರು ಒಬ್ಬನನ್ನು ಫಾಶಿ ಶಿಕ್ಷೆಯನ್ನು, ಇನ್ನೊಬ್ಬನನ್ನು ೬ ವರ್ಷದ ಶಿಕ್ಷೆಯನ್ನೂ, ಇನ್ನೊಬ್ಬನನ್ನು ೯ ತಿಂಗಳ ಶಿಕ್ಷೆಯನ್ನು ವಿಧಿಸಿದರು.

— ಬ್ರಿಟಿಷ ಹಡಗುಗಳಲ್ಲಿ ಮುಷ್ಕರವು ಬಿದ್ದಿದೆ.

— ಮದೀನದ ಬೊಂಬಿನ ವಾರ್ತೆಯು ಸುಳ್ಳು ಎಂಬುದಾಗಿ ತಿಳಿದು ಬರುತ್ತದೆ.

— ಟೋಕಿಯೋದಲ್ಲಿ ನೆರೆಯಿಂದ ಜಲಪ್ರಲಯವಾಗಿ ಸುಮಾರು ೨೫ ಸಾವಿರ ಮನೆಗಳು ಬಿಳಿದುಹೋದವು. ಯೊಕೋಹಾಮ ಮುಂತಾದ ಪಟ್ಟಣಗಳಲ್ಲಿಯೂ ಇದೆ ತರದ ಅನರ್ಥ ಒದಗಿರುವುದು.

— ರುಶ್ಯದಲ್ಲಿ ಸೈನ್ಯವನ್ನು ಕೊಂಡುಹೋಗುವ ರೈಲುಬಂಡಿಯನ್ನು ಹಾರಿಸಿ ಡ್ಯಾನ್‌ಮೆಟ್‌ನಿಂದ ಹೆಚ್ಚು ಮನುಷ್ಯಹಾನಿಯು ಸಂಭವಿಸಿದೆ.

— ಈಜಿಪ್ಟಿನ ಮಾಜಿ ಹೈಕಮಿಶನರನ್ನು ಕೊಂದ ಅಪರಾಧಕ್ಕಾಗಿ ಏಳು ಜನರನ್ನು ಫಾಶಿಗೆ ಕೊಡಲಾಯಿತು.

— ಫ್ರೆಂಚ ಸೀರಿಯಾದಲ್ಲಿ ಡ್ರೂಸ ಜನರ ದಂಗೆಯು ಇನ್ನೂ ಹೆಚ್ಚುತ್ತ ನಡೆದದೆ. ಡ್ರೂಸ ಜನರು ಒಂದೆರಡು ಕಡೆಗಳಲ್ಲಿ ಫ್ರೆಂಚರನ್ನು ಪರಾಜಯಗೊಳಿಸಿದರು.

— ಇಂಗ್ಲಂಡಿನಲ್ಲಿ ೧೨೯೮೦೦೦ ಕೂಲಿಗಳು ನಿರುದ್ಯೋಗಿಗಳಾಗಿದ್ದಾರೆ.

— ಅಮೇರಿಕದ ಬೈಬಲ ಸೊಸೈಟಿಯು ಪ್ರತಿವರ್ಷ ೬೭ ಲಕ್ಷ ಬೈಬಲ ಪ್ರತಿಗಳನ್ನು ಧರ್ಮಾರ್ಥವಾಗಿ ಹಂಚುತ್ತದೆ.

— ಫ್ರೆಂಚ ರಸಾಯನ ಶಾಸ್ತ್ರಜ್ಞನೊಬ್ಬನು ಇರೋಲಿನ್ ಎಂಬ ದ್ರವವನ್ನು ತಯಾರಿಸಿ ಇರುವನು. ಇದನ್ನು ಪೆಟ್ರೋಲಿಗೆ ಬದಲಾಗಿ ಮೋಟಾರುಗಳಿಗೆ ಉಪಯೋಗಿಸಿದರೆ, ತೀರ ಅಲ್ಪ ಖರ್ಚಾಗುತ್ತದಂತೆ.

— ಗ್ರೀಸ ದೇಶದ ಸಮುದ್ರತೀರದೊಳಗಿನ ತೈರ ಎಂಬ ಪರ್ವತದ ಸ್ಫೋಟವಾಗಿ ಲಾವಾರಸವು ಹೊರಬೀಳುತ್ತದೆ. ೧೫ ಸಾವಿರ ಪ್ರಜೆಗಳು ನಿರಾಶ್ರಿತರಾಗಿರುವರು. ಅವರನ್ನು ಸುರಕ್ಷಿತ ಸ್ಥಳಕ್ಕೊಯ್ಯಲು ಅಲ್ಲಿಯ ಸರಕಾರದವರು ಹಡಗುಗಳನ್ನೇರ್ಪಡಿಸಿರುವರು. ಈ ಸ್ಫೋಟದ ಮೂಲಕ ಅಲ್ಲಿಯೇ ಮತ್ತೊಂದು ದ್ವೀಪವು ಹುಟ್ಟಿರುವುದು.

— ರಾಮಾನ್‌ಡಿಜೀ ಪ್ರಾಂತ್ಯದ ಕಡೆಯಿಂದ ಮೋಸಲ್ಲಿಗೆ ಬಂದ ಸುಮಾರು ೫೦೦ ಜನ ಡಕಾಯಿತರು ಶೀಘ್ರದಲ್ಲಿಯೇ ಹಿಂದಕ್ಕೆ ತಳ್ಳಲ್ಪಟ್ಟರು. ಮೋಸಲ್ ಪ್ರಾಂತ್ಯಕ್ಕೆ ಇನ್ನು ಈ ವಿಧವಾದ ತೊಂದರೆಗಳು ಪ್ರಾಪ್ತವಾಗದಂತೆ ನೋಡಿಕೊಳ್ಳಲು ತುರ್ಕಿಸ್ಥಾನದವರು ಅಲ್ಲಿ ಹೆಚ್ಚಾದ ಸೈನ್ಯವನ್ನಿಡುವುದು ಅವಶ್ಯಕವೆಂದು ತಿಳಿದುಕೊಂಡಿರುವರು. ಈ ವಿಷಯವನ್ನು ಇವರು ಲೀಗ್ ಒಫ್ ನೇಷನ್ಸ್ ಸಭೆಯಲ್ಲಿ ಚರ್ಚೆಮಾಡುವರೆಂದು ಕಾಣಬರುತ್ತದೆ.

— ಏಷ್ಯಾ ಮತ್ತು ಅಫ್ರಿಕಾಗಳಲ್ಲಿ ಪರದೇಶಗಳ ಅಧೀನದಲ್ಲಿರುವ ರಾಜ್ಯಗಳ ಸ್ವಾತಂತ್ರ್ಯಕ್ಕಾಗಿ ಸೋಷಿಯಲಿಸ್ಟರೆಲ್ಲರೂ ಪ್ರಯತ್ನಪಡಬೇಕೆಂದು ಕಳೆದ ತಿಂಗಳ ತಾ. ೨೬ನೆಯ ದಿನ ಮಾರ್ಸೇಲ್ಸಿನಲ್ಲಿ ನಡೆದ ಇಂಟರ್ ನ್ಯಾಶನಲ್ ಸೋಷಲಿಸ್ಟ ಕಾನ್‌ಫರೆನ್ಸಿನಲ್ಲಿ ತೀರ್ಮಾನವಾಯಿತು.

— ಮರಾಕೋದಲ್ಲಿ ೪೮ ಗಂಟೆಗಳಕಾಲ ಬಲವಾದ ಯುದ್ಧವು ನಡೆದು ಫ್ರೆಂಚರು ಬ್ಯಾನೀಸ್ ಪ್ರಾಂತ್ಯವನ್ನು ಆಕ್ರಮಿಸಿರುವರು. ರಿಫ್ಸರು ಸೇಷುವಾನ್ ಡಿಸ್ಟ್ರಿಕ್ಟಿನಲ್ಲಿ ಬಹಳವಾಗಿ ಕೆಲಸಮಾಡುತ್ತಾ, ವಜ್ರಾನ್ ಪ್ರಾಂತ್ಯವನ್ನು ಬಲಪಡಿಸಿಕೊಂಡಿರುವರು.

ಒಳದೇಶ ವರ್ತಮಾನ.

— ಸೊಲಾಪುರದಲ್ಲಿ ಹುಡುಗರನ್ನು ಕಳವುಮಾಡುವ ಕ್ರಮವು ಪ್ರಾರಂಭವಾಗಿದ್ದು ಇಬ್ಬರು ಹುಡುಗರು ಕಾಣೆಯಾಗಿರುವರು.

— ಹಳ್ಳಿಗಳಲ್ಲಿಯ ಜನರ ಆರೋಗ್ಯಕ್ಕಾಗಿ ಮತ್ತು ಔಷಧಕ್ಕಾಗಿ ರಾಜಕೋಟ ಸಂಸ್ಥಾನದಲ್ಲಿ ತಿರುಗಾಡಿಸುವ ಔಷಧಾಲಯಗಳನ್ನು ಪ್ರಾರಂಭಿಸಿರುವರು.

— ಸಿಂಧ ಪ್ರಾಂತದ ಒಂದು ಹಳ್ಳಿಯಲ್ಲಿ ಒಬ್ಬ ಹಿಂದುವಿನ ಮನೆಗೆ ದರೋಡೆಯನ್ನು ಹಾಕಿದರು. ರಾತ್ರಿಸಮಯದಲ್ಲಿ ಈ ದರೋಡೆಯು ಬಿದ್ದದರಿಂದ ಮನೆಯವರಿಗೆ ಬಹಳ ಹೆದರಿಕೆ ಆಯಿತು. ಆದರೂ ಅವರು ದರೋಡೆಕೋರರೊಡನೆ ಹೋರಾಡಿ ಒಬ್ಬ ಕಳ್ಳನನ್ನು ಹಿಡಿದಿರುವರು. ಈ ಹಳ್ಳಿಯಲ್ಲಿ ಹಿಂದುಗಳ ಮನೆಗಳು ಬರೆ ಮೂರೆ ಇರುವವು. ಈ ಮನೆಗಳಲ್ಲಿಯ ಗಂಡಸರೆಲ್ಲರು ಈ ಕಳ್ಳರೊಡನೆ ಹೋರಾಡಿದರು.

— ಪಂಜಾಬ ಪ್ರಾಂತದ ರಾವ್‌ಸಾಹೇಬ ವಿಶ್ವೇಶ್ವರನಾಥರ ಮೇಲೆ ಹಲ್ಲೆ ಮಾಡಿದ್ದಕ್ಕಾಗಿ ಇಬ್ಬರು ಅಮೇರಿಕನರಿಗೆ ಶಿಕ್ಷೆಯಾಗಿತ್ತು. ಅವರು ಅಪೀಲು ಮಾಡಿದ್ದಲ್ಲಿ ಜಾಮೀನಿನ ಮೇಲೆ ಅವರ ಬಿಡುಗಡೆಯಾಗಿತ್ತು. ಅವರು ಮುಂಬಯಿಯಿಂದ ಜಿನೋವಾ ಬೋಟಿನಿಂದ ಪರಾರಿಯಾಗಿದ್ದಾರಂತೆ.

— ಕಲಕತ್ತಾ ಪೋಲೀಸರು ಜುಗಾರಿ ಆಟದ ಮಂಡಗಳ ಮೇಲೆ ದಾಳಿಮಾಡಿ ಸುಮಾರು ೨೦೦ ಜುಗಾರಿಕೋರರನ್ನು ಕೈದುಮಾಡಿರುವರು.

— ಆರ್ಡಿನೆನ್ಸಿನ ಮೇರೆಗೆ ಕೈದುಮಾಡಲ್ಪಟ್ಟ ಬಂಗಾಲದ ಕೌನ್ಸಿಲರಾದ ಶ್ರೀ. ಅನಿಲಬರಣರಾಯ್ ಮತ್ತು ಸತ್ಯೇಂದ್ರಮಿತ್ರ ಇವರಿಬ್ಬರನ್ನು ರಾಜನೀತಿಯ ಶಪಥಕ್ಕಾಗಿ ಕೌನ್ಸಿಲಿನಲ್ಲಿ ತರಬೇಕೆಂದು ಬಂಗಾಲ ಕೌನ್ಸಿಲು ಠರಾವನ್ನು ಪಾಸುಮಾಡಿದೆ.

— ಕಲಕತ್ತೆಯ ಸಮೀಪ ಟಿಟಾಘರ ಎಂಬಲ್ಲಿ ಗಣಪತಿ ಉತ್ಸವದಲ್ಲಿ, ಗಣಪತಿಯ ಮೆರವಣಿಗೆಯು ಹೊರಟಾಗ ಮುಸಲ್ಮಾನರು ಹಿಂದುಗಳೊಡನೆ ಹೊಡೆದಾಡಿದರು, ೨೧ ಜನರು ಜಖಮುಪಟ್ಟಿದ್ದಾರೆ.

— ದಾಸ-ಸ್ಮಾರಕ ನಿಧಿಯು ೭ ಲಕ್ಷಕ್ಕೆ ಹೋಗಿದೆ.

— ಬಾರಿಸಾಲದಲ್ಲಿ ಸ್ವರಾಜ್ಯ ಸಂಘದ ಅಧಿವೇಶನವು ಜರಗಿ ಅದರಲ್ಲಿ ಪರದೇಶೀಯ ವಸ್ತ್ರ ಮತ್ತು ಮದ್ಯ ಇವುಗಳ ಬಹಿಷ್ಕಾರದ ಚಳವಳವನ್ನು ಪ್ರಾರಂಭಿಸುವ ಠರಾವುಗಳು ಪಾಸಾಗಿವೆ.

— ಲಾಲಾಲಜಪತರಾಯರ ಆರೋಗ್ಯವು ಈಗ ಚೆಲೋದಾಗುತ್ತ ಬಂದಿದೆ ಎಂದು ವಾರ್ತೆಯುಂಟು.

— ಎಸೆಂಬ್ಲಿಯಲ್ಲಿ ಮದ್ಯದ ಉತ್ಪತ್ತಿ, ಬೆಳವಣಿಗೆ ಮಾರಾಟ ಇವುಗಳನ್ನು ಮಾಡಕೂಡದೆಂಬುದಾಗಿ ಠರಾವು ಪಾಸಾಗಿರುವುದು.

— ಆಯ್. ಎಮ್. ಎಸ್. ಪರೀಕ್ಷೆಗೆ ಉಮೇದುವಾರರನ್ನು ಇಂಗ್ಲಂಡಿನಲ್ಲೂ ಹಿಂದುಸ್ಥಾನದಲ್ಲೂ ಏಕಕಾಲದಲ್ಲಿ ಪರೀಕ್ಷೆಯನ್ನು ಮಾಡಬಹುದೆಂಬುದಾಗಿ ಎಸೆಂಬ್ಲಿಯಲ್ಲಿ ಒಂದು ಠರಾವು ಪಾಸಾಗಿದೆ.

— ವಿಠ್ಠಲಭಾಯಿ ಪಟೇಲರು ಅಧ್ಯಕ್ಷರಾದುದಕ್ಕೆ ಎಸೆಂಬ್ಲಿಯ ಸಭಾಸದರಾದ ಮಿ। ಗೋಸಾಮಿಯವರು ಅವರಿಗೆ ಔತಣವನ್ನು ಕೊಟ್ಟರು. ಈ ಸಮಾರಂಭಕ್ಕೆ ಎಲ್ಲ ಸಭಾಸದರು ಹಾಜರಿದ್ದರು.

— ಪಾಟಣಾದಲ್ಲಿ ಜರಗುವ ಅ. ಇಂ. ಕಾ. ಕಮಿಟಿಯು ಬರುವ ಅಧಿವೇಶನಕ್ಕೆ ಎಲ್ಲ ಸಭಾಸದರು ಅವಶ್ಯವಾಗಿ ಬಂದು ತಮ್ಮ ತಮ್ಮ ಮತಗಳನ್ನು ನಿರ್ದಾಕ್ಷಿಣ್ಯವಾಗಿ ತಿಳಿಪಡಿಸಬೇಕೆಂದು ಗಾಂಧಿಗಳು ಬರೆದಿರುತ್ತಾರೆ.

— ಅ. ಇಂ. ಕಾಂ. ಕಮಿಟಿಗೆ ಸಭಾಸದರು ಬಂದಾಗ ಅವರ ಆಲೋಚನೆಯ ಮೇರೆಗೆ ಇಡಿ ಹಿಂದುಸ್ಥಾನಕ್ಕಾಗಿ ನೂಲುವವರ ಒಂದು ಸಂಘವನ್ನು ಸ್ಥಾಪಿಸುವ ಇರಾದೆಯು ಮಹಾತ್ಮಾ ಗಾಂಧಿಗಳಲ್ಲಿ ಇದ್ದು ಅವರು ಪಾಟಣಾದಲ್ಲಿ ಆ ಮೇರೆಗೆ ಯತ್ನಿಸುವವರಿದ್ದಾರೆ. ಈ ಪ್ರಯತ್ನವು ಚೆಲೋದಾಗಿದೆ.

— ಶ್ರೀ. ಸತ್ಯಮೂರ್ತಿ ಮತ್ತು ಮಿ। ಚಮನಲಾಲರು ವಿಲಾಯತಿಯಿಂದ ಹಿಂತಿರುಗಿ ಬಂದಿರುವರು. ಇವರು ತಮ್ಮ ಪ್ರಯಾಣದ ಮತ್ತು ಸಂಚಾರದ ಅನುಭವಗಳನ್ನು ತೋರ್ಪಡಿಸಿ ಒಂದು ಪ್ರಕಟನೆಯನ್ನು ಹೊರಡಿಸಿರುವರು.

— ಕರಾಚಿಯಲ್ಲಿ ಗಜಾನನ ಸದಾಶಿವ ಜೋಶಿ (ಎಕ್ಸಿಕ್ಯುಟಿವ್ ಇಂಜಿನಿಯರ) ಅವರ ಮಗ ಮಿ। ಹೀರ್ಲೆಕರ (ಪಬ್ಲಿಕ್ ವರ್ಕ ಡಿಪಾರ್ಟ್‌ಮೆಂಟಿನ ಎಕೌಂಟಂಟ) ಅಭ್ಯಂಕರ (ಪಬ್ಲಿಕ್ ಹೆಲ್ತ ಲಿಬೊರೆಟರಿಯಲ್ಲಿ ನೇಮಕಪಟ್ಟವರು) ಈ ಮೇರೆಗೆ ನಾಲ್ಕು ಜನರು ಕಳೆದ ಗಣಪತಿಯ ಉತ್ಸವದಲ್ಲಿ ಗಣಪತಿಯನ್ನು ವಿಸರ್ಜಿಸಲು ದೋಣಿಯು ಕುಳಿತು ಸಮುದ್ರಕ್ಕೆ ಹೋದಾಗ ಅಕಸ್ಮಾತ್ತಾಗಿ ದೊಡ್ಡದೊಂದು ತೆರೆಬಂದು ಅದರಿಂದ ಮುಳುಗಿಹೋದರು!

— ಮಹರ್ಷಿ ದಾದಾಭಾಯಿಯವರ ಶತಸಾಂವತ್ಸರಿಕ ಜನ್ಮದಿನಾಚರಣದ ಸ್ಮಾರಕಕ್ಕಾಗಿ ಬೊಂಬೈ ಕ್ರೋನಿಕಲ್ ಪತ್ರಿಕೆಯಲ್ಲಿ ಗಾಂಧಿ, ಲಜಪತರಾಯ, ಸರೋಜಿನಿ ನಾಯ್ಡು ಮುಂತಾದವರು ದಾದಾಭಾಯಿಯವರ ಗುಣಾನುವಾದಗಳನ್ನು ಮಾಡಿರುವರು.

— ಪಂಜಾಬಿನಲ್ಲಿ ರಾವಿ ನದಿಯ ಪ್ರವಾಹದಿಂದ ಲಾಹೋರ್ ಮುನ್ಸಿಪಾಲಿಟಿಯ ವಾಟರ್ ವರ್ಕ್ಸ್ ಮುಚ್ಚಿ ಐದು ದಿನಗಳ ವರೆಗೆ ನೀರಿಲ್ಲದೆ ಲಾಹೋರ್ ಪಟ್ಟಣದಲ್ಲಿ ಕಷ್ಟಪಡುತ್ತಿದ್ದರು. ಈಗ ಪ್ರವಾಹ ಕಮ್ಮಿಯಾಗಿದೆ ನೀರು ಸರಿಯಾಗಿ ತಲುಪುತ್ತಿದೆ.

— ಬಿಹಾರಿನ ಝುರಿಯಾ ಎಂಬ ಗ್ರಾಮದಲ್ಲಿ ಒಂದು ದನವು ಈದಿದೆ. ಕರುವಿಗೆ ಎರಡು ತಲೆ ನಾಲ್ಕು ಕಿವಿ, ನಾಲ್ಕು ಕಣ್ಣು. ಕರುವು ಸತ್ತುಬಿದ್ದಿತ್ತು.

— ಬಳ್ಳಾರಿ ಜಿಲ್ಲೆಯಿಂದ ೨,೧೪೬ ಜನರೂ, ಅನಂತಪುರದ ಜಿಲ್ಲೆಯಿಂದ ೧,೩೯೯ ಜನರೂ ಈ ವರ್ಷ ಅಸ್ಸಾಮಿಗೆ ಕೂಲಿಗಾಗಿ ಹೋಗಿದ್ದಾರೆ.

— ೩೦ ಮೈಲಿಗಳ ದೂರ ಈಜುವ ಪಂಥವೊಂದನ್ನು ಕಲಕತ್ತಾ ನಗರದ ಅಹೀರಿತೊಲಾ ಕ್ಲಬ್ಬಿನವರು ಇದೇ ತಿಂಗಳ ತಾ. ೨೩ನೆಯ ದಿವಸ ನಡೆಸುವರು. ಈ ಪಂಥಕ್ಕೆ ಯಾರು ಬೇಕಾದರೂ ಹೋಗಬಹುದು. ಆದರೆ ಇದಕ್ಕೆ ಹೋಗುವವರು ಈ ತಿಂಗಳ ತಾ. ೧೨ರೊಳಗಾಗಿ ೧೨ ರೂಪಾಯಿ ಪ್ರವೇಶಧನವನ್ನು ಕೊಡಬೇಕು. ಈ ಪಂಥವು ಪ್ರಾತಃಕಾಲ ೬ ಗಂಟೆಗೆ ಹೂಗ್ಲೀ ಹತ್ತಿರವಿರುವ ಡಯಮಂಡ್-ಜೂಬಿಲೀ ಸೇತುವೆಯ ಹತ್ತಿರ ಪ್ರಾರಂಭವಾಗುವುದು.

— ಅಖಿಲಭಾರತೀಯ ಕವಿಸಮ್ಮೇಳನವನ್ನು ಬರುವ ಕಾಂಗ್ರೆಸ ಮಹಾಸಭೆಯ ಸಂಬಂಧದಲ್ಲಿ ನಡೆಸಬೇಕೆಂದು ಕಾನ್‌ಪುರದ ಸಾಹಿತ್ಯಪರಿಷತ್ತಿನವರು ನಿರ್ಣಯಮಾಡಿರುವರು. ಈ ಸಮ್ಮೇಳನವು ನಡೆಯುವುದು ಇದೇ ಮೊದಲನೆಯ ಸಲ. ಭರತಖಂಡದ ಸಕಲ ಭಾಷೆಗಳ ಕವಿಗಳೂ ಇದಕ್ಕೆ ದಯಮಾಡಿಸುವರೆಂದು ವರ್ತಮಾನವಿರುತ್ತದೆ.

— ಬಂದೂಕವೇ ಮೊದಲಾದವುಗಳನ್ನು ಇಟ್ಟುಕೊಳ್ಳುವ ವಿಚಾರದಲ್ಲಿ ಮಿ। ಟಿ. ರಂಗಾಚಾರ್ಯರವರು ತಂದ ಬಿಲ್ಲು ಒಂದು ಸಿಲೆಕ್ಟ ಕಮಿಟಿಯಲ್ಲಿ ಚರ್ಚಿಸಲ್ಪಟ್ಟಿತು. ಹೋಂ ಮೆಂಬರರವರೂ ಮತ್ತು ಇನ್ನೂ ಕೆಲವು ಜನ ಯುರೋಪಿಯನರೂ ಈ ಬಿಲ್ಲಿನ ಅನೇಕ ನಿಬಂಧನೆಗಳನ್ನು ಒಪ್ಪಿರುವುದಿಲ್ಲ.

— ಶ್ರೀ ಸುಭಾಸ್‌ಚಂದ್ರಬೋಸರವರು ಕೈದಿನಿಂದ ಬಿಡಲ್ಪಡುವವರೆಗೂ ಅವರು ರಜೆಯ ಮೇಲೆ ಇರಬಹುದೆಂದು ಕಲಕತ್ತೆಯ ಮುನ್ಸಿಪಾಲಿಟಿಯವರು ಮಾಡಿರುವ ಸಲಹೆಯನ್ನು ಬಂಗಾಳದ ಗೌವರ್ನಮೆಂಟಿನವರು ಒಪ್ಪಿರುತ್ತಾರೆ.

— ಚಾವಲಾ ಖೂನಿ ಮೊಕದ್ದಮೆಯಲ್ಲಿ ಅಪರಾಧಿಗಳನ್ನು ಹಿಡಿಯಲು ಪ್ರಯತ್ನಪಟ್ಟ ಪತ್ತೇದಾರಿ ಆಫೀಸರುಗಳಿಗೆ ಇನಾಮನ್ನು ಕೊಡಲು ಮುಂಬಯಿ ಸರಕಾರದವರು ೧೦,೦೦೦ ರೂಪಾಯಿಗಳನ್ನು ಮಂಜೂರುಮಾಡಿರುತ್ತಾರೆ.

ದಕ್ಷಿಣ ಕನ್ನಡ.

ಕಾಸರಗೋಡು:— ಕೆಲವು ದಿನಗಳಿಂದ ಮಳೆಯು ಸ್ವಲ್ಪ ಕಡಿಮೆಯಾಗಿಯದೆ. ಹೊಲಗಳಲ್ಲಿಯ ಪೈರು ಚೆಲೋ ರೀತಿಯಲ್ಲಿ ಇದೆ. ಇನ್ನಾದರೂ ಅಕ್ಕಿ ಮತ್ತು ಇತರ ದವಸಗಳ ಕ್ರಯ ಕಡಿಮೆ ಮಾಡಬಾರದೆ? ಹಾಗೆ ಮಾಡಿದರೆ ಬಡವರು ಹ್ಯಾಗಾದರೂ ಬದುಕಬಹುದಿತ್ತು. ಹೊಸ ಭತ್ತವೂ ಕೂಡ ಬರುವದಕ್ಕೆ ಪ್ರಾರಂಭವಾಗಿಯದೆ.

ಇಲ್ಲಿಯ ಮುನ್ಸೀಫ್ ಕೋರ್ಟ ಬಾರ್ ಎಸೋಸಿಯೇಶನ್ ಕ್ಲಬ್ಬಿನಲ್ಲಿ ಪ್ರತಿ ಮಂಗಳವಾರ ಮತ್ತು ಶುಕ್ರವಾರ ದಿನ ಸಾಯಂಕಾಲಕ್ಕೆ ಶ್ರೀ ಭಗವತ್ ಗೀತಾ ಕ್ಲಾಸುಗಳು ಇಲ್ಲಿಯ ರಾ। ಕೆ. ಪಿ. ಪದ್ಮನಾಭಯ್ಯನವರಿಂದ ನಡಿಸಲ್ಪಡುತ್ತವೆ. ಹೆಚ್ಚಿನ ಸರಕಾರಿ ಉದ್ಯೋಗಸ್ಥರು ಈ ಕ್ಲಾಸಿಗೆ ಸದರಿ ದಿವಸಗಳಲ್ಲಿ ಹಾಜರಿರುತ್ತಾರೆ. ಇದು ಸಂತೋಷಕರವಾದ ವಾರ್ತೆಯಲ್ಲವೆ?

ಇಲ್ಲಿ ಒಂದು ಫ್ರೀ ರೀಡಿಂಗ್ ರೂಮ್ ಎಂಬ ಒಂದು ವಾಚನಾಮಂದಿರವು ಹೊಸದಾಗಿ ಸ್ಥಾಪಿತವಾಗಿದೆ. ಇಲ್ಲಿಯ ಮಾನ್ಯ ವಕೀಲ ರಾ। ಕೃಷ್ಣ ರಘುರಾಮ ದಂಡಿಲ್ಲಾಯರವರು ಇದರ ಅಧ್ಯಕ್ಷರಾಗಿ ಅದನ್ನು ಚೆಲೋ ರೀತಿಯಲ್ಲಿ ನಡಿಸುತ್ತಿದ್ದಾರೆ. ಅದರಲ್ಲಿ ಇನ್ನೂ ಹೆಚ್ಚಿನ ಶ್ರದ್ಧೆಯಿಟ್ಟು ಎಲ್ಲಾ ಮೆಂಬರರು ವ ಇತರರು ಅದನ್ನು ಇನ್ನೂ ಹೆಚ್ಚಿನ ಉನ್ನತಿಗೆ ತರಲೆಂದು ಕೋರುತ್ತೇವೆ.

ಕಾಸರಗೋಡು ತಾಲೂಕಿನ ಚಂದ್ರಗಿರಿ ಹೊಳೆಯಿಂದ, ತೆಂಕುಪಾರ್ಶ್ವದಲ್ಲಿರುವ ಗ್ರಾಮಗಳನ್ನು ಮಲಬಾರು ಜಿಲ್ಲೆಗೆ ಸೇರಿಸುವದರ ಕುರಿತು ಹೆಚ್ಚಿನ ಪ್ರಯತ್ನಗಳು ನಡೆಯುತ್ತದಾಗಿ ಇತ್ತೀಚೆಗೆ ತಿಳಿದುಬರುತ್ತದೆ. ಇದರ ಸಂಪೂರ್ಣ ನಿಜಸ್ಥಿತಿ ಇನ್ನೂ ಹೊರಬೀಳಲಿಲ್ಲ.

ಕುಂಬಳೆ:— ಒಂದೆರಡು ದಿನಗಳ ಹಿಂದೆ ಬೇಳ ಗ್ರಾಮದ ಬೊಳಂಬು ಪರಮೇಶ್ವರ ಭಟ್ಟ ಎಂಬವರು ಮನೆಯಲ್ಲಿಲ್ಲದಿರುವ ಸಮಯ ಸಾಧಿಸಿ ಅವರ ಕುಮಾರು ೫ ಮತ್ತು ೭ ವರ್ಷ ಪ್ರಾಯದ ಗಂಡು ಮಕ್ಕಳಿಬ್ಬರನ್ನು ಸದರಿಯವರಲ್ಲಿ ಕೆಲಸಕ್ಕಿದ್ದ ಮರಾಟಿ ಜಾತಿಯ ಹೆಂಗಸೊಬ್ಬಳು ಗುಡ್ಡೆಗೆ ಕರಕೊಂಡೋಗಿ ನೀರಿನ ಹೊಂಡಕ್ಕೆ ದೂಡಿ ಕೊಂದುಹಾಕಿದ್ದಾಗಿಯೂ ಇದನ್ನೆಲ್ಲ ನೋಡುತ್ತಲಿದ್ದ ಸದರಿಯವರ ೫ ವರ್ಷದ ಮಗುವಿನಿಂದ ಸತ್ಯಸ್ಥ ಬಯಲಾಗಿ ಮೃತ ಮಕ್ಕಳನ್ನು ಕಾಸರಗೋಡು ಆಸ್ಪತ್ರೆಗೆ ಪೋಸ್ಟ್ ಮಾರ್ಟಮಿನ ಬಗ್ಗೆ ಕೊಂಡೋಗಿದ್ದು ಪ್ರಸ್ತುತ ಇದರ ತನಿಖೆ ನಡೆಯುವದಾಗಿ ವರ್ತಮಾನವಿದೆ.

ಇಲ್ಲಿಯ ಮೀನು ಮಾರ್ಕೆಟಿನ ಬಳಿ ಕಾಯಿಪಲ್ಯದ ಪ್ರತ್ಯೇಕ ಒಂದು ಮಾರ್ಕೆಟನ್ನು ಇದುವರೆ ಇಲ್ಲಿಯ ಯೂನಿಯನ್ ಬೋರ್ಡಿನವರು ತೀರ್ಮಾನಿಸಿರುವರು.

ಬಂಟ್ವಾಳ:— ಕಳೆದ ವಾರ ಮಂಗಳೂರು ರೇಂಜಿನ ಶಾಲಾ ಡಿಪ್ಯುಟಿ ಇನ್ಸಪೆಕ್ಟರರವರು ಇಲ್ಲಿಯ ಎಸ್ ವಿ ಎಸ್ ಟೆಂಪಲ್ ಫ್ರಿ ಎಲಿಮೆಂಟರಿ ಶಾಲೆಯ ವರ್ಷಾವಧಿ ಪರೀಕ್ಷೆಯನ್ನು ಮುಗಿಸಿ ಮಂಗಳೂರತ್ತ ಕಡೆಗೆ ಹೋದರು.

ಇಲ್ಲಿಯ ಮಧ್ಯಪೇಟೆಯ ಮಾರ್ಗವನ್ನು ಅಗಲಮಾಡುವುದಕ್ಕಾಗಿ ಸ್ಥಳವನ್ನು ಎಕ್ವಾಯರ್ ಮಾಡಲಿಕ್ಕೆ ಮಂಗಳೂರು ಡಿವಿಜನಲ್ ಅಫೀಸರರನ್ನು ಸರಕಾರದವರು ನಿಯಮಿಸಿರುತ್ತಾರೆಂದು ದಕ್ಷಿಣ ಕನ್ನಡಾ ಜಿಲ್ಲಾ ಗಜೇಟಿನಲ್ಲಿ ಫಾಯಿಸ್ ಆಗಿಯದೆ.

ಇಲ್ಲಿಯ ತಾಲೂಕು ಬೋರ್ಡ ಮಿಡವೈಫಿಗೆ ಬಂಟವಾಳ ಊರಿನಲ್ಲಿ ಬಿಡಾರ ಸಿಕ್ಕದೆ ಊರ ಹೊರಗೆ ಇರಬೇಕಾಗಿದೆ. ಆದುದರಿಂದ ಮಾನ್ಯ ತಾಲೂಕು ಬೋರ್ಡಿನವರು ಬೇಗನೆ ಒಂದು ಮನೆಯನ್ನು ಬಂಟವಾಳ ಪೇಟೆಯಲ್ಲಿಯೇ ಕಟ್ಟಿಸಿಕೊಟ್ಟರೆ ಬಹಳ ಉಪಕಾರವಾಗುತ್ತಿತ್ತು. ಬಿಡಾರ ಕಟ್ಟಿಸಲಿಕ್ಕೆ ತಾಲೂಕು ಬೋರ್ಡಿನಲ್ಲಿ ಹಣದ ಅಡಚಣಿಯಿದ್ದರೆ ಮನೆಯ ಬಾಡಿಗೆಯನ್ನಾದರೂ ಬೋರ್ಡಿನವರು ಸೆಂಕ್ಷನ್ ಮಾಡಿಸಿದರಾಗುತ್ತಿತ್ತು.

ನಾವೂರು ಅಗ್ರಹಾರ:— ಇಲ್ಲಿ ಸರ್ಪಾಡಿಗೆ ಹೋಗುವ ಮಾರ್ಗದಲ್ಲಿ ಸುಮಾರು ೩೦ ಅಡಿ ಅಗಲವಾದ ತೋಡು ಇದೆ. ಮಳೆಗಾಲದಲ್ಲಿ ಇದನ್ನು ದಾಟುವದು ಅಸಾಧ್ಯವಾಗಿದೆ. ಪಾಣೆಮಂಗಳೂರು ಸಂಕದ ಕೆಲಸ ಮುಗಿಸಿ ಉಳಿದ ಅನೇಕ ಕಬ್ಬಿಣದ ಅಡ್ಡಗಳು ಅಲ್ಲಿಯೇ ಇವೆ. ಇವುಗಳಲ್ಲಿ ಎರಡು ಅಡ್ಡಗಳನ್ನು ಉಪಯೋಗಿಸಿ ಇದಕ್ಕೆ ಒಂದು ಸಣ್ಣ ಸಂಕವನ್ನು ತಾಲೂಕು ಬೋರ್ಡಿನವರೂ ಕಟ್ಟಿಸಿದರೆ ಸಾವಿರಾರು ಹಳ್ಳಿ ಜನರಿಗೆ ಮಹದುಪಕಾರವಾಗುತ್ತಿತ್ತು.

ಪಾಣೆಮಂಗಳೂರು:— ಇಲ್ಲಿಯ ಶ್ರೀ ವಿಠಲಸ್ವಾಮಿ ಎಲಿಮೆಂಟರಿ ಶಾಲೆಯ ವರುಷಾವಧಿ ಪರೀಕ್ಷೆಯು ಇದೇ ವಾರ ಡಿಪ್ಯುಟಿ ಇನ್ಸ್‌ಪೆಕ್ಟರವರಿಂದ ನಡಿಸಲ್ಪಟ್ಟಿತು.

ಈ ಶಾಲೆಯು ಆಡಳಿತೆಯ ವಿಷಯ ಬಹಳ ಅಡಚಣೆಯು ಇದ್ದು ಉಪಾಧ್ಯಾಯರು ಹೊರಕೊಳ್ಳದಷ್ಟು ಸಹ ಕಷ್ಟದಲ್ಲಿರುವದರಿಂದ ತಾಲೂಕು ಬೋರ್ಡಿನವರು ಕಳ್ಳಿಡ್ಕದಿಂದ ಬಂಟವಾಳಕ್ಕೆ ಟ್ರೆನ್ಸ್‌ಫರ ಮಾಡಿದ ಹಾಯರ್ ಎಲಿಮೆಂಟರಿ ಶಾಲೆಯನ್ನು ಇಲ್ಲಿಗೆ ವರ್ಗಾಯಿಸಿ ಈ ಶಾಲೆಯನ್ನು ಬೋರ್ಡಿಗೆ ಪಡಕೊಂಡರೆ ಬೋರ್ಡಿನವರ ಕೆಲಸವು ಸಾರ್ಥಕವಾದೀತು. ಇಲ್ಲಿಯ ತಾಲೂಕು ಬೋರ್ಡು ಮೆಂಬರರಾದ ರಾ। ನರಿಕೊಂಬು ರಾಮರಾಯರವರು ಈ ಸಂಗತಿಯನ್ನು ಬೋರ್ಡಿನ ಮುಂದೆ ತರುವರಾಗಿ ಭರವಸೆ ಇಟ್ಟಿರುತ್ತದೆ.

ವಿವಿಧ ವಿಷಯಗಳು.

ಬಿಸಿಲು ಸಿಹಿಯಾಗ ಹತ್ತಿತು!

ಕಬ್ಬು, ಬೀಟ್, ಗೆಣಸು ಮುಂತಾದ ವನಸ್ಪತಿಗಳಿಂದ ಸಕ್ಕರೆಯು ಹೇಗೆ ಉತ್ಪನ್ನವಾಗುತ್ತದೆಂಬುದು ಶಾಸ್ತ್ರಜ್ಞರಿಗೆ ಒಂದು ಗೂಢವಾದ ವಿಷಯವಾಗಿದೆ. ಈ ವನಸ್ಪತಿಗಳಲ್ಲಿ ಎಷ್ಟೊ ವಿಧದ ದ್ರವ್ಯಗಳಿವೆ. ಅವುಗಳ ಪೈಕಿ ಹಲವು ದ್ರವ್ಯಗಳು ಸಕ್ಕರೆ ರೂಪದಲ್ಲಿ ಪರಿಣಮಿಸಬೇಕಾದರೆ ಸೂರ್ಯಪ್ರಕಾಶವು ಅವಶ್ಯವಾಗಿದೆ ಎಂಬುದು ಸರ್ವರಿಗೂ ಮಾನ್ಯವಾದ ವಿಷಯವು. ಸೂರ್ಯಪ್ರಕಾಶದ ಈ ಅವಶ್ಯಕತೆಯನ್ನು ಆಲೋಚಿಸಿ ಲಿವ್ಹರಪೂಲಿನಲ್ಲಿಯ ಪ್ರೊ. ಬೇಲಿ ಎಂಬವರು ಶಾಸ್ತ್ರೀಯ ಪ್ರಯೋಗದಿಂದ ಕೃತ್ರಿಮ ಸಕ್ಕರೆಯನ್ನು ತಯಾರಿಸಿರುವರು. ಸಿನೆಮಾದೊಳಗಿನ ಇಲೆಕ್ಟ್ರಿಕ್ ದೀಪದ ಜ್ಯೋತಿಯು ಕಾರ್ಬೋಲಿಕ್ ಎಸಿಡ್ ಗೇಸಿನ ಮೇಲೆ ತಪ್ಪದೆ ಬೀಳುವಂತೆ ಮಾಡಿದ್ದರಿಂದ ಇದರಿಂದ ಪ್ರತ್ಯೇಕವಾದ ಇನ್ನೊಂದು ಗೆಸು ತಯಾರಾಯಿತು. ಅದನ್ನು ನೀರಿನಲ್ಲಿ ಕರಗಿಸಿದೊಡನೆ ಅದರಿಂದ ಸಕ್ಕರೆ ಉಂಟಾಯಿತು. ಈ ಪ್ರಯೋಗದಿಂದ ಉಂಟಾದ ಸಕ್ಕರೆಯು ಬಹು ಸ್ವಲ್ಪವಿತ್ತು. ಯಾಕೆಂದರೆ, ವಿದ್ಯುತ್ ಪ್ರವಾಹವನ್ನು ಬಿಟ್ಟಾಗ ಅದರ ಹಲವು ಕಿರಣಗಳು ಪ್ರಯೋಜನಕಾರಿಗಳಾಗುತ್ತವೆ; ಹಲವು ವ್ಯರ್ಥವಾಗುತ್ತವೆ. ಇದನ್ನು ನೋಡಿ ಆ ಶಾಸ್ತ್ರಜ್ಞರು ನೀರಿನಲ್ಲಿ ಸುಣ್ಣ (ಚೋಕ್)ದ ಪುಡಿಯನ್ನು ಹಾಕಲು ಕಿರಣಗಳೊಂದೂ ನಿರರ್ಥಕವಾಗದೆ ಸಕ್ಕರೆಯು ಹೆಚ್ಚು ಸಿಕ್ಕಿತು!

* * *

ಹಣ್ಣು ಹಂಪಲಗಳ ಶ್ವಾಸೋಚ್ಛ್ವಾಸ!

ದೊಡ್ಡ ದೊಡ್ಡ ಹಡಗುಗಳ ಕೊಟ್ಟಡಿಗಳಲ್ಲಿ ಎಷ್ಟೊ ತರದ ಹಣ್ಣು ಹಂಪಲಗಳನ್ನು ತುಂಬಿಡುವ ಕ್ರಮವಿದೆ. ಅಲ್ಲಿ ಒಂದು ಬಗೆಯ ದುರ್ಗಂಧವು ಹೊರಡುವದು. ಈ ದುರ್ಗಂಧವು ಎಂದರೆ ವಿಷದ ಗಾಳಿಯು ಹೇಗೆ ಹೊರಡುತ್ತದೆ ಇದನ್ನು ಪರೀಕ್ಷಿಸಲು ಕೆಂಬ್ರಿಜ್ ಯುನಿವರ್ಸಿಟಿಯ ಶಾಸ್ತ್ರಜ್ಞರು ಒಂದು ಯಂತ್ರವನ್ನು ತಯಾರಿಸಿರುವರು. ಕಿತ್ತಳೆ ಹಣ್ಣುಗಳು ಮನುಷ್ಯರಂತೆಯೆ ಉಸುರಾಡುತ್ತವೆಂಬುದಾಗಿ ಮಿ. ಕಿಯರ್ಲ್ (ಫ್ರೂಟ್ ಎಕ್ಸ್‌ಪರ್ಟ ಓವ್ಹರಸೀಸ್ ಫೌರ್ಮರ ಕೋ ಒಪರೇಟಿವ್ ಫೆಡರೇಶನ್) ಎಂಬವರು ಬರೆದಿರುವರು. ಕಿತ್ತಳೆಗಳು ಆಕ್ಸಿಜನನ್ನು ಸ್ವೀಕರಿಸಿ ಕಾರ್ಬನ್ ವಾಯುವನ್ನು ಬಿಡುತ್ತವೆ. ಅವುಗಳನ್ನಿಟ್ಟ ಕೋಟ್ಟಾರದಲ್ಲಿ ಸಾಕಷ್ಟು ಹವೆಯು ಇಲ್ಲದಿದ್ದರೆ ಅವುಗಳಿಗೆ ಬ್ಲ್ಯಾಕ ಹಾರ್ಟ ಎಂಬ ಹೆಸರಿನ ರೋಗವುಂಟಾಗಿ ಅವು ಸಾಯುತ್ತವೆ. ಈ ಶೋಧೆಯುಂಟಾದ್ದರಿಂದಲೂ, ಫಳಗಳ ವಿಷಯವನ್ನು ತಿಳಿಸಿಕೊಡುವ ಯಂತ್ರಗಳು ತಯಾರಿಸಲ್ಪಟ್ಟದ್ದರಿಂದಲೂ ಹಣ್ಣು ಹಂಪಲ ಮಾರಾಟಗಾರರಿಗೆ ಅನುಕೂಲವಾಗಿದೆ. ಹಣ್ಣುಗಳಿಗೆ ಸ್ವಚ್ಛವಾದ ಮತ್ತು ಶೀತವಾದ ಹವೆಯು ಎಷ್ಟು ಬೇಕು ಎಂಬ ಸಂಗತಿಯನ್ನು ಈ ಯಂತ್ರವು ತಿಳಿಸಿಕೊಡುತ್ತದೆ. ಯಂತ್ರವು ತಿಳಿಸಿಕೊಟ್ಟ ಮೇರೆಗೆ ಬೇಕು ಬೇಕಷ್ಟು ಹವೆಯನ್ನು ಪೂರಯಿಸಿಕೊಡಲಾಗುತ್ತದೆ.

ಅನುಕ್ರಮಣಿಕೆ.

ಸ್ಫುಟವಿಚಾರಗಳು— ಪುಟಗಳು.
೧ ಲೇಬರ ಪಾರ್ಟಿಯವರ ಸಂದೇಶ. ೬
೨ ಪುಣೆಯ ಮುನ್ಸಿಪಾಲಿಟಿ ,,
೩-೪-೫-೬-೭-೮—ಎಸೆಂಬ್ಲಿಯ ಪ್ರಸ್ತಾಪಗಳು ೬-೭
೯ ನ್ಯೂಝಿಲಂಡಿನ ನೀಚಸ್ಥಿತಿ ,,
೧೦ ಶ್ರೀ. ನಗರ ಗಣಪತಿರಾಯರ ಮರಣ ,,
ಮಂಗಳೂರು
ವರ್ತಮಾನಸಂಗ್ರಹಗಳು—
ವಿದೇಶ – ಒಳದೇಶ ವರ್ತಮಾನ ೫
ದಕ್ಷಿಣ ಕನ್ನಡ—ಕಾಸರಗೋಡು, ಕುಂಬಳೆ, ಬಂಟ್ವಾಳ, ನಾವೂರು ಅಗ್ರಹಾರ, ಪಾಣೆಮಂಗಳೂರು ,,
ವಿವಿಧವಿಷಯಗಳು ,,
ಪತ್ರವ್ಯವಹಾರ ೧ ೮
ಇಂಗ್ಲಂಡಿನೊಳಗಿನ ಅನುಭವದ ಮೇಲಿಂದ ,,
ಪ್ರೆಸಿಡೆನ್ಸಿ ಕಾಲೇಜ್ ಕರ್ನಾಟಕ ಸಭಾ. ೯
ಅನಾರೋಗ್ಯದ ವಿಚಿತ್ರ ಪರಿಣಾಮಗಳು ,,
ಬಾಲವಿಧವಾ ದುಃಖನಿವಾರಣಾ ಸಂಘ ,,
ಸ್ವೀಕಾರ ಮತ್ತು ವಿಮರ್ಶೆ ,,

ಸ್ವದೇಶಾಭಿಮಾನಿ.

ಶಕ ೧೮೪೭ ಭಾದ್ರಪದ ಬ॥ ೯ಯು ಶುಕ್ರವಾರ.

ಸ್ಫುಟವಿಚಾರಗಳು.

೧. ಇನ್ನೊಂದು ಕಡೆಯಲ್ಲಿ ಶ್ರೀ. ಸತ್ಯಮೂರ್ತಿ ಮತ್ತು ಶ್ರೀ. ಚಮಣಲಾಲ ಇವರ ಪ್ರಕಟನೆಯನ್ನು ಪ್ರಸಿದ್ಧಗೊಳಿಸಿದ್ದೇವೆ. ಅಲ್ಲದೆ ಅವರು ವಿಲಾಯತಿಯಿಂದ ಬರುವಾಗ ಅಲ್ಲಿಯ ಸ್ವತಂತ್ರ ಮಜೂರ ಸಂಘವು ಅವರೊಡನೆ ಕಳುಹಿಸಿದ ಸಂದೇಶವನ್ನೂ ಪ್ರಕಟಿಸಿದ್ದೇವೆ. ಇವುಗಳನ್ನು ಪರಿಶೀಲಿಸಿದ್ದಲ್ಲಿ ವಾಚಕರಿಗೆ ಸ್ವರಾಜ್ಯಪಕ್ಷದ ಉಪಯುಕ್ತತೆಯು ಕಂಡು ಬಂದೀತು. ಇಲ್ಲಿಯ ಜನರ ನ್ಯಾಯ್ಯವಾದ ಆಕಾಂಕ್ಷೆಗಳನ್ನು ಒತ್ತಿ ಬಿಟ್ಟು ನಿರಂಕುಶ ರೀತಿಯಿಂದ ಪ್ರವರ್ತಿಸಲು ಬ್ರಿಟಿಷರಿಗೆ ಅಧಿಕಾರವಿಲ್ಲವೆಂಬುದನ್ನು ಮಾತ್ರ ಹೇಳಿ ಮಜೂರ ಸಂಘದವರು ಸುಮ್ಮಗಿರದೆ ಸ್ವರಾಜ್ಯಪಕ್ಷದವರ ಚಳವಳದಲ್ಲಿ ತಮ್ಮ ಸಂಪೂರ್ಣ ಸಹಾನುಭೂತಿಯುಂಟೆಂಬುದನ್ನೂ ವಿಶದಪಡಿಸಿದ್ದಾರೆ. ವಿಲಾಯತಿಯ ಜನರು ಸವಿಯಾದ ಆಶ್ವಾಸನೆಗಳನ್ನು ಕೊಡುವುದರಲ್ಲಾಗಲಿ, ಶುಷ್ಕ ಸಹಾನುಭೂತಿಯನ್ನು ತೋರ್ಪಡಿಸುವದರಲ್ಲಾಗಲಿ ಹಿಂಜರಿಯತಕ್ಕವರಲ್ಲವೆಂಬುದು ಆ ಜನಗಳ ಈಗ ೧೫೦ ವರ್ಷಗಳ ದೀರ್ಘಕಾಲಿಕ ಸಹವಾಸದಿಂದ ಹಿಂದಿಗಳಿಗೆ ಗೊತ್ತೆ ಆಗಿದೆ. ಅದ್ದರಿಂದಲೆ ಸತ್ಯಮೂರ್ತಿಗಳು ಮತ್ತು ಚಮಣಲಾಲರು ಹೊರಡಿಸಿದ ಪ್ರಕಟನೆಯಲ್ಲಿ ಹಿಂದಿಗಳು ಸ್ವಾವಲಂಬನದ ಮಾರ್ಗವನ್ನೆ ಕೈಕೊಳ್ಳಬೇಕೆಂದು ಒತ್ತಿಹೇಳಿದ್ದಾರೆ. ಆದರೆ ಹಿಂದಿ ಸ್ವರಾಜ್ಯದ ವಿರೋಧಿಗಳು ಹಿಂದುಸ್ಥಾನದ ಹೊರಗಿನ ದೇಶಗಳಲ್ಲಿ ಹಿಂದುಸ್ಥಾನವನ್ನು ಕುರಿತು ಅಬದ್ಧವಾದ ಹಾಗು ದುರಭಿಪ್ರಾಯವನ್ನು ಹುಟ್ಟಿಸುವ ಸಂಗತಿಗಳನ್ನು ಬೀರುತ್ತಿರುವದರಿಂದ ಅಲ್ಲಲ್ಲಿ ಹೋಗಿ ನಮ್ಮ ವಸ್ತುಸ್ಥಿತಿಯನ್ನು ತಿಳಿಸಿ, ಬ್ರಿಟಿಷರ ಸ್ವಾರ್ಥಪರತೆಯನ್ನು ಬಹಿರಂಗಪಡಿಸುವ ಮಹದುದ್ಯೋಗವನ್ನು ಮಾಡಬೇಕು. ಇಂಥ ಕಾರ್ಯದಲ್ಲಿ ವಿಲಾಯತಿಯೊಳಗಿನ ಲೇಬರಪಾರ್ಟಿಯ ಶುಭವಚನವು ಅವಶ್ಯವಿರುತ್ತದೆ. ಬೇರೆ ಮಾತಿನಿಂದ ಹೇಳುವದಾದರೆ, ಹಿಂದಿ ಸ್ವರಾಜ್ಯ ವಿರೋಧಿಗಳು ಹಿಂದಿಗಳನ್ನು ಕುರಿತು ಕಲುಷಿತ ಅಭಿಪ್ರಾಯವನ್ನು ಹುಟ್ಟಿಸುವಾಗ ಲೇಬರಪಾರ್ಟಿಯ ಈ ತರದ ಸಹಾನುಭೂತಿಯು ಅಗತ್ಯವಾಗಿರುತ್ತದೆ. ಈ ದೃಷ್ಟಿಯಿಂದ ನೋಡಿದ್ದಲ್ಲಿ ಅವರ ಸಹಾನುಭೂತಿಯ ಸಂದೇಶವು ಎಷ್ಟೋ ಕಾರ್ಯಕಾರಿಯಾಗಿದೆ ಎನ್ನಬೇಕಾಗುತ್ತದೆ. ಸತ್ಯಮೂರ್ತಿಯವರ ಪ್ರಕಟನೆಯಲ್ಲಿ ಸೂಚಿಸಿರುವ ವಿಷಯಗಳು ಶ್ಲಾಘ್ಯವಾಗಿದ್ದು ಅವುಗಳ ಕಡೆಗೆ ದೇಶದೊಳಗಿನ ಮುಖಂಡರು ತಮ್ಮ ಗಮನವನ್ನು ಕೊಡದೆ ಇರಲಿಕ್ಕಿಲ್ಲ.

೨. ಪುಣೆಯ ಮುನ್ಸಿಪಾಲಿಟಿಯಲ್ಲಿ ಕಳೆದ ವಾರ ನಡೆದ ಒಂದು ಸಂಗತಿಯು ಅನೇಕ ದೃಷ್ಟಿಯಿಂದ ಬೋಧಪ್ರದವಾಗಿದೆ. ಸುಮಾರು ೩೦ ವರ್ಷಗಳ ಮುಂಚೆ ಪುಣೆಯಲ್ಲಿ ಜೋತಿಬಾ ಫುಲೆ ಎಂಬ ಒಬ್ಬ ಬ್ರಾಹ್ಮಣೇತರ ಗೃಹಸ್ಥರಿದ್ದರು. ಇವರು 'ಸತ್ಯಶೋಧಕ ಸಮಾಜ'ವನ್ನು ಸ್ಥಾಪಿಸಿದ್ದರು. ಈ ಸಮಾಜಕ್ಕೆ ಹೆಚ್ಚಿನ ಅನುಯಾಯಿಗಳಿಲ್ಲ. ಆದರೂ ಬ್ರಾಹ್ಮಣ ನಿಂದೆ, ಬ್ರಾಹ್ಮಣರ ಮೇಲೆ ಬೀಳುವದು, ಹಳ್ಳಿಗಳಲ್ಲಿ ಬ್ರಾಹ್ಮಣರ ಮನೆಗಳಿಗೆ ಬೆಂಕಿಕೊಡುವದು ಇತ್ಯಾದಿ ಕೃತ್ಯಗಳನ್ನು ಈ ಸಮಾಜಾನುಯಾಯಿಗಳು ಮಾಡಿಕೊಂಡು ಬರುತ್ತಿದ್ದಾರೆ. ಇವರದೊಂದು ಪತ್ರಿಕೆ ಇದೆ. ಆ ಪತ್ರಿಕೆಯಲ್ಲಿ ಬ್ರಾಹ್ಮಣ-ವೇದ-ಶಾಸ್ತ್ರ, ಇವುಗಳ ನಿಂದೆಯು ನಿತ್ಯ ಬರುತ್ತಲಿದೆ. ಸತ್ಯಸಮಾಜ ಸ್ಥಾಪಕರಾದ ಜೋತಿಬಾ ಫುಲೆ ಇವರು ಮೃತಪಟ್ಟು ೨೫ ವರ್ಷಕ್ಕಿಂತಲೂ ಹೆಚ್ಚಿನ ಸಮಯವಾಯಿತು. ಆದರೆ ಈಗ ಪುಣೆಯಲ್ಲಿ ಮುನ್ಸಿಪಾಲಿಟಿಯ ಕಡೆಯಿಂದ ಅವರ ಶ್ವೇತ ಶಿಲಾಪ್ರತಿಮೆಯನ್ನು ನಿಲ್ಲಿಸಬೇಕೆಂಬುದಾಗಿ ಕೌನ್ಸಿಲ್ ಸಭಾಸದರಾದ ಮಿ। ಜೇಧೇ ಎಂಬ ಬ್ರಾಹ್ಮಣೇತರ ಸಭಾಸದರು ಒಂದು ಠರಾವನ್ನು ತಂದರು. ಆ ಮುನ್ಸಿಪಲ್ ಕೌನ್ಸಿಲಿನಲ್ಲಿ ಬ್ರಾಹ್ಮಣೇತರ ಸಭಾಸದರೆ ಬಹು ಸಂಖ್ಯಾಕರಿದ್ದಾರೆ. ಮಿ। ಜೇಧೇಯವರು ಈ ಠರಾವನ್ನು ತರುವಾಗ ಪ್ರಥಮತಃ ಬ್ರಾಹ್ಮಣರನ್ನು ಯದ್ವಾತದ್ವಾ ಬೈದರು. ಅವರ ಬಾಯಿಂದ ಹೊರಟ ಮಾತುಗಳು ಅನ್ಯರ ಬಾಯಿಂದ ಹೊರಡಲಾರವು, ಆ ನಮೂನೆಯ ಮಾತುಗಳಿದ್ದವು. ಅಧ್ಯಕ್ಷರು ಅನವಶ್ಯಕವಾದ ಈ ಮಾತುಗಳನ್ನು ಹಿಂತೆಗೆಯಲು ಮಿ। ಜೇಧೇಯವರಿಗೆ ಹೇಳಿದರು. ಆದರೆ ಜೇಧೆಯವರು ಕೇಳಲೊಲ್ಲರು. ಆಗ ಅಧ್ಯಕ್ಷರು "ನೀವು ಈ ಮಾತುಗಳನ್ನು ಹಿಂದಕ್ಕೆ ತೆಕ್ಕೊಳ್ಳುವದಿಲ್ಲವಾದರೆ ನಿಮ್ಮ ಸಭಾಸದತ್ವವನ್ನು ರದ್ದುಪಡಿಸಬೇಕಾದೀತು." ಎಂಬುದಾಗಿ ಎಚ್ಚರವನ್ನು ಹುಟ್ಟಿಸಿದರು. ಆಗ ಮಿ। ಜೇಧೇಯವರು ತನ್ನ ವಿಧಾನವನ್ನು ಹಿಂತೆಗೆದರು. ಪರಂತು ಇನ್ನು ಒಂದೆರಡು ಮಾತುಗಳನ್ನು ಅದೆ ವಿಧವಾಗಿ ಆಡಿದರು. ಆಗ ಸರಿಯಾಗಿ ಮಾತಾಡಲು ಪುನಃ ಎಚ್ಚರಿಕೆ ಕೊಡಲಾಯಿತು. ಅಂತು ಮಿ। ಜೇಧೇಯವರು ಮು. ಕೌ. ಹೊಲ್‌ನ್ನು ಬಿಟ್ಟುಹೋದರು. ಈ ಠರಾವಿಗೆ ದಸ್ಕತನ್ನು ಕೊಟ್ಟ ಇತರ ಬ್ರಾಹ್ಮಣೇತರ ಗೃಹಸ್ಥರು ಈ ಠರಾವನ್ನು ಮುಂದೆ ಚರ್ಚಿಸಿದರು. ಚರ್ಚಾಂತ್ಯದಲ್ಲಿ ಮತವನ್ನು ತೆಕ್ಕೊಳ್ಳುವಾಗ ಸದರಿ ಠರಾವು ಪ್ರಚಂಡ ಬಹುಮತದಿಂದ ಬಿದ್ದುಹೋಯಿತು. ಬರೆ ಮೂರು ನಾಲ್ಕು ಜನರು ಮಾತ್ರ ಅನುಕೂಲ ಮತಗಳನ್ನು ಕೊಟ್ಟರು. ಸಾರಾಂಶ ಬಹುಮತವು ಬ್ರಾಹ್ಮಣೇತರರದೆ ಇರುವಾಗ ಅವರ ಬಹುಮತದಿಂದಲೆ ಸದರಿ ಠರಾವು ಬಿದ್ದುಹೋಯಿತು. ಮಾತ್ರವಲ್ಲ, ಇನ್ನೊಬ್ಬ ಬ್ರಾಹ್ಮಣೇತರ ಸಭಾಸದರು ಮಿ। ಜೇಧೇಯವರ ಮೇಲೆ ನಿಂದ್ಯಾವ್ಯಂಜಕ ಠರಾವನ್ನು ತಂದು ಜೇಧೇಯವರಿಗೆ ಈ ನಿಂದ್ಯಾವ್ಯಂಜಕ ಠರಾವಿನ ಮೂಲಕ ಇನಾಮನ್ನು ಕೊಟ್ಟರು! ಇರಲಿ. ಪುಣೆಯ ಮುನ್ಸಿಪಾಲಿಟಿಯಲ್ಲಿ ನಡೆದ ಈ ವೃತ್ತಾಂತವನ್ನು ಓದಿದರೆನೆ ಸಾಕಾಗಿದೆ. ಅದಕ್ಕೆ ಪ್ರತ್ಯೇಕವಾದ ಟೀಕೆಯು ಅಗತ್ಯವಿಲ್ಲ. ಈ ಸಂಗತಿಯು ಅಷ್ಟು ಕೊಳಕುಂಟು.

೩. ಸಿಮ್ಲಾದಲ್ಲಿ ಜರಗುತ್ತಿದ್ದ ಎಸೆಂಬ್ಲಿಯಲ್ಲಿ ಎರಡು ಮೂರು ಮಹತ್ವಾದ ಸಂಗತಿಗಳು ನಡೆದವು. ಮದ್ಯಪಾನದ ವಿಷಯದಲ್ಲಿ ಎಸೆಂಬ್ಲಿಯಲ್ಲಿ ಒಂದು ಠರಾವು ಬಂದಾಗ ದೇ. ಭ. ಕೇಳಕರರು ಅದಕ್ಕೆ ಅತಿ ಮಹತ್ವಾದ ಒಂದು ಉಪಸೂಚನೆಯನ್ನು ಜೋಡಿಸಿದರು. ಔಷಧ ಮತ್ತು ಶಾಸ್ತ್ರೀಯ ಸಂಶೋಧನ ವಿಷಯ ಈ ಎರಡು ಸಂಗತಿಗಳಲ್ಲಿ ಅಲ್ಲದೆ ಮಾದಕ ದ್ರಾವಕಗಳ ಉತ್ಪತ್ತಿಯನ್ನು ನಿಲ್ಲಿಸಬೇಕು. ಸರಕಾರದ ಅಂತಿಮಧ್ಯೇಯವು ಇದೆಯಾಗಿರಬೇಕೆಂಬುದಾಗಿ ಶ್ರೀ. ಕೇಳಕರ ಉಪಸೂಚನೆಯ ಇತ್ಯರ್ಥವಾಗಿತ್ತು. ಈ ಉಪಸೂಚನೆಯನ್ನು ಸಮರ್ಥಿಸುವಾಗ ದೇ. ಭ. ಕೇಳಕರರು ವಿಲಾಯತಿಯವರಿಗೆ ಮತ್ತು ಕ್ರೈಸ್ತರಿಗೆ ಮದ್ಯವು ನಿಷಿದ್ಧವಾದ ಪಾನವಲ್ಲ, ಬೈಬಲಿನಲ್ಲಿ ಈ ವಿಷಯ ಉಲ್ಲೇಖಗಳಿರುವುದರಿಂದ ಅವರಿಗೆ ಅದು ಗ್ರಾಹ್ಯವಾದ ವಸ್ತುವೆ ಆಗಿದೆ ಎಂಬುದು ಹೌದಾದರೂ ಹಿಂದುಗಳಿಗೂ ಮಹಮ್ಮದೀಯರಿಗೂ ಅದು ಧರ್ಮ ಪ್ರಕಾರ ನಿಷಿದ್ಧವಾದ ಕ್ರಿಯವಾಗಿದೆ, ಆದುದರಿಂದ ಹಿಂದುಸ್ಥಾನದಲ್ಲಿ ಮದ್ಯದ ಉತ್ಪತ್ತಿ, ಪ್ರಚಾರ, ವ್ಯಾಪಾರ ಇವುಗಳನ್ನು ನಿಲ್ಲಿಸಿದ್ದಲ್ಲಿ ಯಾರ ಮನಸ್ಸಿಗೂ ನೋವುಂಟಾಗಲಿಕ್ಕಿಲ್ಲ ಎಂಬಿತ್ಯಾದಿ ರೀತಿಯಿಂದ ವಿನೋಧ ಪೂರ್ಣವಾಗಿ ಭಾಷಣವನ್ನು ಮಾಡಿದರು. ಇವರ ಉಪಸೂಚನೆಯನ್ನು ಇತರ ಅನೇಕರು ಅನುಮೋದಿಸಿದರು. ಆದರೂ ಸರಕಾರದ ಕಡೆಯಿಂದ ಉಪರೋಧಿಸುವಾಗ ಕೇಳಕರರ ಸೂಚನೆಯನ್ನು ಸರ್ವಥಾ ಅಂಗೀಕರಿಸಕೂಡದು, ಅದನ್ನು ತಳ್ಳಬೇಕೆಂಬುದಾಗಿ ಸಾರಿ ಸಾರಿ ಹೇಳೋಣಾಯಿತಾದರೂ ಬಹುಮತದಿಂದ ಅವರ ಉಪಸೂಚನೆಯೆ ಪಾಸಾಯಿತು. ಎಸೆಂಬ್ಲಿಯು ಮದ್ಯದ ಉತ್ಪತ್ತಿಯನ್ನು ಮತ್ತು ಪ್ರಚಾರವನ್ನು ನಿಲ್ಲಿಸಬೇಕೆಂದು ಠರಾವು ಪಾಸಾಗಿ ಸರಕಾರಕ್ಕೆ ಯಾವ ಅಪಜಯವು ಬಂದು ತಟ್ಟಿತೊ ಅದರ ಪರಿಮಾರ್ಜನವನ್ನು ಯಾವ ವಿಧದಿಂದ ಮಾಡಬೇಕೆಂಬುದಾಗಿ ಸರಕಾರವು ಆಲೋಚಿಸುತ್ತಿರಬಹುದು. ಯಾವ ವಸ್ತುವು ದೇಹದ ಆರೋಗ್ಯಕ್ಕೂ ಬುದ್ಧಿಯ ಸ್ವಾಸ್ಥ್ಯಕ್ಕೂ ಬಾಧಕವಾಗುವದೊ, ಮಾತ್ರವಲ್ಲ, ಧರ್ಮಕ್ಕೂ ವಿರುದ್ಧವಾಗಿರುವುದೊ ಅದನ್ನು ಉತ್ಪನ್ನ ಮಾಡಿ ಮಾರಾಟಮಾಡುವದರಿಂದ ಸರಕಾರದ ಜೇಬಿನಲ್ಲಿ ಎರಡು ದುಡ್ಡುಗಳು ಹೆಚ್ಚಿಗೆ ಬೀಳಬಹುದು. ಆದರೆ ಜನತೆಗೆ ದುರ್ವ್ಯಸನವನ್ನು ಹಚ್ಚಿ ಸಂಪಾದಿಸಿದ ದ್ರವ್ಯವು ಒಳ್ಳೆಯದಲ್ಲ. ಈ ಸಂಗತಿಯನ್ನು ಸರಕಾರವು ತಿಳಿದ್ದಿರಬೇಕು. ಅಂತು ಮದ್ಯದ ವಿಷಯದಲ್ಲಿ ಸರಕಾರಕ್ಕೆ ಅಪಜಯವು ಬಂದಿದೆ.

೪. ಸರಕಾರಕ್ಕೆ ಬರೆ ಇದರಲ್ಲಿ ಮಾತ್ರ ಅಪಜಯವು ಬಂದಿದೆ ಎಂದಲ್ಲ ಡೊ. ಲೋಹೋಕರೆಯವರು ತಂದ ಠರಾವಿನ ಸಂದರ್ಭದಲ್ಲೂ ಸರಕಾರಕ್ಕೆ ಅಪಜಯವು ಬಂದು ತಟ್ಟಿತು. ಐ. ಎಮ್. ಎಸ್. ಪರೀಕ್ಷೆಯನ್ನು ಕಲಿಯಲು ಹೋಗುವವರ ಪ್ರವೇಶ ಪರೀಕ್ಷೆಯು ವಿಲಾಯತಿಯಲ್ಲಿ ಮಾತ್ರ ನಡೆಯುತ್ತಿತ್ತು. ಅವರೆ ಡೊ. ಲೋಹೋಕರೆಯವರು ಇಂಥ ಪ್ರವೇಶ ಪರೀಕ್ಷೆಯು ಹಿಂದುಸ್ಥಾನದಲ್ಲೂ ಆಗಬೇಕೆಂಬುದಾಗಿ ಠರಾವನ್ನು ತಂದರು. ಡೊ. ಲೋಹೋಕರೆಯವರ ನಿರುಪದ್ರವವಾದ ಈ ಸೂಚನೆಯಾದರೂ ನಿರುಪರೋಧವಾಗಿ ಪಾಸಾಗಿರಬಹುದೆಂದು ಯಾರಾದರೂ ನೆನಸಿದರೆ ಅದು ಸಮವಲ್ಲ., ಕಾರಣ, ಅದಕ್ಕೂ ಕೂಡ ಉಪರೋಧವಿತ್ತು. ಆದರೂ ಡೊ. ಲೋಹೋಕರೆಯವರ ಈ ಠರಾವು ಕೂಡ ಬಹುಮತದಿಂದ ಪಾಸಾಗಿ ಸರಕಾರಕ್ಕೆ ಅಪಜಯವು ತಟ್ಟಿತು.

೫. ಪರಂತು ಸರಕಾರವು ಇಂಥ ಚಿಲ್ಲರೆ ಅಪಜಯಗಳಿಂದ ಸೋತುಹೋಗುವುದಿಲ್ಲ. ಇಂಥ ಎಲ್ಲ ಅಪಜಯಗಳ ವಾಸಿಯನ್ನು ಅದು ಬೇರೊಂದು ವಿಧದಿಂದಲೆ ಪಡಕೊಳ್ಳುತ್ತದೆ. ವ್ಯಾಪಾರಸ್ಥನಿಗೆ ಕಾಫಿಯಲ್ಲಿ ನಷ್ಟವಾದರೆ ಅಡಿಕೆಯಲ್ಲಿ ಅದರ ಎರಡಷ್ಟು ಲಾಭ ಬರುತ್ತದೆ, ಇದೆ ಕ್ರಮವು ಸರಕಾರದ ಕಾಯಿದೆಕಾನೂನುಗಳಲ್ಲಿಯೂ ಸಂಬಂಧಿಸುವುದು. ಎಸೆಂಬ್ಲಿಯೊಳಗಿನ ದೃಷ್ಟಾಂತಗಳನ್ನೆ ನೋಡಬಹುದು. ಸರಕಾರಕ್ಕೆ ಹಲವು ಠರಾವುಗಳಲ್ಲಿ ಅಪಜಯವು ಬಂದು ತಟ್ಟುತ್ತಿದೆಯಾದರೂ ಗಿಂಡಿಯೊಳಗಿಂದ ಸುರಿದುಹೋದರೂ ಕಡಾಯಿಯಿಂದ ತುಂಬಿ ತೆಕ್ಕೊಳ್ಳುವಂತೆ ಹಿಂದುಸ್ಥಾನ ಸರಕಾರವು ಮಡಿಮನ್ ಕಮಿಟಿಯ ರಿಪೋರ್ಟಿನ ವಿಷಯದಲ್ಲಿ ತಂದಿರುವ ಠರಾವಿನಿಂದ ಈ ಎಲ್ಲ ಅಪಜಯಗಳ ನಷ್ಟವನ್ನು ತುಂಬಿಸಿಕೊಳ್ಳಲು ನಿಶ್ಚಯಿಸಿದೆ. ನೀವು ಕೊಟ್ಟಿರುವ ಈ ಸುಧಾರಣೆಗಳು ಬಹು ಅಲ್ಪ ಯೋಗ್ಯತೆಯವು, ಅವುಗಳಿಂದ ಯಾರಿಗೂ ತೃಪ್ತಿಯಿಲ್ಲವೆಂಬುದಾಗಿ ಜನತೆಯು ಈಗ ೫ ವರ್ಷಗಳಿಂದ ಒಂದೆ ಸಮನೆ ಹೇಳುತ್ತ ಬಂದಿದೆಯಾದರೂ ಸರಕಾರವು ಅದಕ್ಕೆ ಒಂದು ಎಳ್ಳಷ್ಟಿನ ಬೆಲೆಯನ್ನು ಕೊಡುವುದಿಲ್ಲ. ಇಂಥ ಸ್ಪಷ್ಟವಾದ ಲೋಕಮತವನ್ನು ಶಾಂತಪಡಿಸಲು ಮಡಿಮನ್ ಕಮಿಟಿಯ ಹಿಂದಿ ಸಭಾಸದರು ಬರೆದಿರುವ ರಿಪೋರ್ಟಿನ ಅಂಬೋಣವನ್ನಾದರೂ ಜಾರಿಯಲ್ಲಿ ತರುವ ಶುಭಾಕಾಂಕ್ಷೆಯನ್ನು ಸರಕಾರವು ಇಟ್ಟುಕೊಳ್ಳಬೇಕಿತ್ತು. ಆದರೆ ಅಷ್ಟು ಸುಲಭವಾಗಿ ಹಕ್ಕುಗಳನ್ನು ಕೊಟ್ಟರೆ ಅವುಗಳ ಬೆಲೆಯು ಹಿಂದಿಗಳಿಗೆ ಗೊತ್ತಾಗಲಿಕ್ಕಿಲ್ಲವೆಂದು ಎಣಿಸಿಯೊ ಅಥವಾ ಪಂಡಿತಜಿಯವರು ಮುಂದಿನ ವಾದವಿವಾದದಲ್ಲಿ ಪ್ರಶ್ನೆಯನ್ನು ಹಾಕಿದ್ದಂತೆ ಅತ್ಯ ಸಂತೋಷದಿಂದ ಕೊಡುವದಕ್ಕಿಂತ ಹಿಂದಿಗಳು ಕೈಯಿಂದ ಕಸಕೊಳ್ಳುವದನ್ನು ನೋಡುವದಕ್ಕಾಗಿಯೊ, ಯಾವ ಕಾರಣದಿಂದಲೆ ಆಗಲಿ ಮಡಿಮನ ಕಮಿಟಿಯ ಬಹುಮತದ ರಿಪೋರ್ಟು ಮತ್ತು ಶಿಫಾರಸುಗಳನ್ನು ಮಂಜೂರುಮಾಡಲು ಸರ ಎಲಿಗ್ ಝುಂಡರರು ಒಂದು ಠರಾವನ್ನು ತಂದರು. ಭಾರತ ಮಂತ್ರಿಗಳಾದ ಬರ್ಕನಹೆಡ್ ಸಾಹೇಬರೂ, ಲೊರ್ಡ ರೆಡಿಂಗರೂ ೧೯೨೯ಕ್ಕಿಂತ ಮುಂಚೆ ಹಿಂದುಸ್ಥಾನಕ್ಕೆ ಹೆಚ್ಚಿನ ಹಕ್ಕುಗಳ ಪ್ರಸ್ತಾಪವನ್ನೆತ್ತಲು ಸಾಧ್ಯವಿಲ್ಲವೆಂಬುದಾಗಿ ಅಪ್ಪಣೆ ಕೊಡಿಸಿದ ಕಾರಣ ಸರ ಎಲಿಗ್ ಝುಂಡರರು ಸರಕಾರದ ಕಡೆಯಿಂದ ಮಡಿಮನ ಕಮಿಟಿಯ ನಿರ್ಮಾಲ್ಯಪ್ರಾಯವಾದ ಬಹುಮತದ ರಿಪೋರ್ಟನ್ನೆ ಸಮರ್ಥಿಸಿಯಾರೆಂಬದು ಪೂರ್ವದಲ್ಲೆ ಗೊತ್ತಾಗಿತ್ತು. ಎಲ್ಲವರ ಈ ಊಹನೆಯಂತೆಯೆ ಕಟ್ಟಕಡೆಗೆ ಮಡಿಮನ ಸಾಹೇಬರು ಬಹುಮತದ ರಿಪೋರ್ಟನ್ನು ಆದರಿಸುವ ಠರಾವನ್ನು ತಂದು ಅದನ್ನು ಆದರಿಸಬೇಕೆಂದು ಎಸೆಂಬ್ಲಿಗೆ ಕೇಳಿಕೊಂಡರು.

೬. ಎಸೆಂಬ್ಲಿಯಲ್ಲಿ ಸರ ಎಲಿಗ್‌ಝುಂಡರರು ಇದನ್ನು ಸಮರ್ಥಿಸುವಾಗ ಯಾವದಾದರೂ ಸಯುಕ್ತಿಕವಾದ ಕಾರಣವನ್ನು ಕೊಟ್ಟಿರುವರೋ, ಇಲ್ಲ. ಸಯುಕ್ತಿಕವಾದ ಕಾರಣವಿಲ್ಲದ ಸಂದರ್ಭದಲ್ಲಿ ಮನುಷ್ಯನು ಸಿಟ್ಟುಬಂದವನಾದರೆ, ಅನ್ಯರನ್ನು ಬೈದುಬಿಡುವನು, ಸಂತೋಷದಲ್ಲಿದ್ದವನಾದರೆ ಆತ್ಮಸ್ತುತಿಯನ್ನು ಮಾಡಿಕೊಳ್ಳುವನು. ಸರ ಎಲಿಗ್‌ಝುಂಡರು ಈ ಎರಡನೆಯ ಮಾರ್ಗವನ್ನು ಅವಲಂಬಿಸಿರುವರು. ಬಹುಮತದ ರಿಪೋರ್ಟನ್ನು ಎಸೆಂಬ್ಲಿಯು ಯಾಕೆ ಪರಿಗ್ರಹಿಸಬೇಕೆಂಬುದಕ್ಕೆ ಅವರ ಹತ್ತರ ಸಮರ್ಪಕವಾದ ಯಾವ ಕಾರಣಗಳೂ ಇರಲಿಲ್ಲ. ಅದರ ಬದಲಿಗೆ ಮೈಸರಾಯರ್ದ ಸ್ತುತಿ ಪರವಾದ ಮಾತುಗಳನ್ನಾಡಿದರು. ಬಹುಮತದ ರಿಪೋರ್ಟನ್ನು ಹಿಂದುಸ್ಥಾನವು ಅಂಗೀಕರಿಸಬೇಕು. ಯಾಕೆ? ಇಡಿ ಬ್ರಿಟಿಷ್ ಸಾಮ್ರಾಜ್ಯದಲ್ಲಿರುವ ಘನವಾದ ರಾಜಕಾರಣರಲ್ಲಿ ಲೊರ್ಡ ರೆಡಿಂಗರಷ್ಟು ಜಾಣರು ಬೇರೆ ಯಾರೂ ಇಲ್ಲ; ಅಂಥವರು ಹೇಳುವದೆಲ್ಲ ಹಿತ! ಅದ್ದರಿಂದ ಅದನ್ನು ಸ್ವೀಕರಿಸಬೇಕು. ಇದು ಅಲಿಗ್‌ಝುಂಡರ ಮಡಿಮನನರ ಯುಕ್ತಿವಾದ! ರೆಡಿಂಗ್ ಸಾಹೇಬರ ರಾಜಕಾರಣ ಪಾಂಡಿತ್ಯವ ಅವರ ಹಸ್ತಕರೆ ಈ ರೀತಿಯಿಂದ ವರ್ಣಿಸಬೇಕಲ್ಲದೆ ಇನ್ನು ಯಾರು ವರ್ಣಿಸಿಯಾರು? ಆದರೆ ದೊಡ್ಡ ಮನುಷ್ಯರ ಮಾತಿನ ಮೇಲಿಂದ ಲೋಕದಲ್ಲಿ ಬದಲಾವಣೆ ಆಗುವ ಅಥವಾ ವಸ್ತುಸ್ಥಿತಿಯಲ್ಲಿ ರೂಪಾಂತರ ಹೊಂದುವ ಸಂದರ್ಭವಿದ್ದುದಾದರೆ ಇದುವರೆಗೆ ದೊಡ್ಡವರ ಮಾತಿನಿಂದ ಎಷ್ಟೊ ಕತ್ತೆಗಳು ಕುದುರೆಗಳಾಗುತ್ತಿದ್ದವು! ಅದ್ದರಿಂದ ರೆಡಿಂಗರ ಹಸ್ತಕರಾದ ಸರ ಮಡಿಮನರು ಸರಿಯಾಗಿ ತಿಳಿದಿರಬೇಕೇನೆಂದರೆ, ರೆಡಿಂಗರೆ ಅಲ್ಲ, ಅವರಿಗಿಂತಲೂ ಇನ್ನೂ ದೊಡ್ಡವರೂ ಬಂದು ಹೇಳಿದರೂ, ನಿರ್ಮಾಲ್ಯಪ್ರಾಯವಾದ ಬಹುಮತದ ಆ ರಿಪೋರ್ಟು ನಿರ್ಗಂಧವೆ ಸರಿ! ಅಲ್ಲಿ ಯಾವ ಪರಿಮಳವೂ ಇಲ್ಲ! ಅದನ್ನು ಯಾರು ಹೇಗೆ ಸ್ವೀಕರಿಸ್ಯಾರು?

೭. ಆದುದರಿಂದಲೆ ಪಂಡಿತ ಮೋತಿಲಾಲನೇಹರುಗಳು ಮಡಿಮನರ ಈ ಠರಾವಿಗೆ ಉಪಸೂಚನೆಯನ್ನು ತಂದಿದ್ದಾರೆ. ಕಳೆದ ಸಾರಿ ಪಾಸಾದ ರೌಂಡ್ ಟೇಬಲ್ ಕೊನ್ಫರೆನ್ಸಿನ ಠರಾವಿನಲ್ಲಿ ಸೂಚಿಸಿದ್ದಂತೆ ಸರಕಾರವು ಮುಂದಿನ ಕಂತುಗಳನ್ನು ಕೂಡಲೆ ಕೊಡಬೇಕೆಂಬುದಾಗಿಯೂ, ಇತರ ಹಲವು ಸೂಚನೆಗಳನ್ನು ಸೂಚಿಸಿಯೂ ಪಂಡಿತಜಿಯವರು ಉಪಸೂಚನೆಯನ್ನು ತಂದಿದ್ದಾರೆ. ಈ ಉಪಸೂಚನೆಯನ್ನು ಸಮರ್ಥಿಸುವಾಗ ಪಂಡಿತ ಮೋತಿಲಾಲನೇಹರುಗಳು ಮಾಡಿದ ಭಾಷಣವು ಸ್ವರಾಜ್ಯಪಕ್ಷದವರಿಗೆ ಮಾತ್ರವಲ್ಲ, ಶಾಂತ ಮತ್ತು ಸ್ವತಂತ್ರ ಪಕ್ಷದವರಿಗೂ ಮಾನ್ಯವಾಗಿ ಅವರು ಕೂಡ ಈ ಉಪಸೂಚನೆಯನ್ನು ಪುಷ್ಟೀಕರಿಸಿರುವರು. ಅಧಿಕಾರಿಗಳಾದ ನೀವು ಸಹಕಾರವನ್ನು ಅಪೇಕ್ಷಿಸಿರುವ ಸಮಯದಲ್ಲಿ ಪ್ರಜೆಗಳು ಈ ರೀತಿಯಿಂದ ಕೈ ಮುಂದಕ್ಕೆ ಚಾಚಿರುವಾಗ ನೀವು ಅದನ್ನು ಪರಿಗ್ರಹಿಸದೆ ಬಿಟ್ಟದ್ದಾದರೆ, ಜನರು ಕೇಳುವ ಆಕಾಂಕ್ಷೆಗಳನ್ನು ನೀವು ಪೂರಯಿಸುವದಿಲ್ಲವಾದರೆ ಜನಗಳು ನಿಮ್ಮ ಕೈಯಿಂದ ಅಧಿಕಾರಗಳನ್ನು ಕಸುಕೊಳ್ಳುವರು ಇದನ್ನು ಅಧಿಕಾರಿಗಳು ಮರೆಯಕೂಡದು. ಪಂಡಿತಜಿಯವರ ಈ ಮಾತು ಮೇಲೆ ಹೇಳಿದಂತೆ ಶಾಂತಪಕ್ಷದವರಲ್ಲಿ ಪ್ರತಿಫಲಿಸಿತು. ಶಾಂತಪಕ್ಷದ ಧುರೀಣರಾದ ಸರ ಸದಾಶಿವ ಅಯ್ಯರರಂಥವರು ಸಹ ಸರಕಾರದ ಈ ದುರಭ್ಯಾಸವನ್ನು ಹೇಳಿದರು. ರಂಗಯ್ಯರರು ಪಂಡಿತಜಿಯವರ ಸೂಚನೆಯನ್ನು ಹಲವು ವಿಧದಿಂದ ಸಮರ್ಥಿಸಿದರು. ಜೀನಾ ಮೊದಲಾದವರು ಈ ಸಂಧರ್ಭದಲ್ಲಿ ಮಾಡಿದ ಭಾಷಣವು ಬಹು ಸಮರ್ಪಕವಾಗಿತ್ತು. ಪಂಡಿತ ಮದನಮೋಹನ ಮಾಲವೀಯರು ಕೂಡ ವಕ್ತೃತ್ವ ಪೂರ್ಣವಾದ ಭಾಷಣದಿಂದ ಪಂಡಿತಜಿಯವರ ಉಪಸೂಚನೆಯನ್ನು ಪುಷ್ಟೀಕರಿಸಿದರು. ಈ ಮೇರೆಗೆ ಲೋಕಪಕ್ಷದ ಎಲ್ಲ ಮತದವರಿಂದಲೂ ಸಮರ್ಥಿಸಲ್ಪಟ್ಟ ಉಪಸೂಚನೆಯು ಬಹು ದೊಡ್ಡ ಬಹುಮತದಿಂದ ಪಾಸಾಯಿತು. ಪಂಡಿತಜಿಯವರ ಠರಾವಿಗೆ ಅನುಕೂಲವಾಗಿ ಬಿದ್ದ ಮತಗಳು ೭೨ ಮತ್ತು ಪ್ರತಿಕೂಲವಾಗಿ ಬಿದ್ದ ಮತಗಳು ೪೫. ಸರಕಾರವು ಈ ಸಂದರ್ಭದಲ್ಲಿಯೂ ಪರಾಜಿತವಾಯಿತು. ಸರಕಾರಕ್ಕೆ ಮಡಿಮನ ಕಮಿಟಿಯ ಬಹುಮತದ ಪ್ರತಿಗಾಮಿ ಧೋರಣದ ಸೂಚನೆಗಳಿಗೆ ಮೂರ್ತ ಸ್ವರೂಪವನ್ನು ಕೊಡಬೇಕೆಂದು ಅಪೇಕ್ಷೆ ಇತ್ತು. ಹಾಗು ಅಲ್ಪ ಸಂಖ್ಯಾಕರ ಮತಗಳನ್ನು ತಳ್ಳಬೇಕೆಂಬುದಾಗಿಯೂ ಅಪೇಕ್ಷೆ ಇತ್ತು. ಪರಂತು ಪಂಡಿತಜಿಯವರ ಉಪಸೂಚನೆಯು ಪಾಸಾದ್ದರಿಂದ ಅದರ ಇಷ್ಟಾರ್ಥವು ಸಾಧ್ಯವಾಗಲಿಲ್ಲ. ಇನ್ನು ಮುಂದೆ ಸರಕಾರವು ಯಾವ ಮಾರ್ಗವನ್ನು ಕೈಕೊಳ್ಳುತ್ತದೆ ಎಂಬುದನ್ನು ನೋಡಬೇಕು.

೮. ವಸ್ತುತಃ ಪಂಡಿತಜಿಯವರು ತಮ್ಮ ಉಪಸೂಚನೆಯಲ್ಲಿ ಯಾವ ಕೇಳಿಕೆಯನ್ನು ಕೇಳುವರೊ ಅದು ತೀರಾ ಸ್ವಲ್ಪವಾದ ಕೇಳಿಕೆಯು. ಎಲ್ಲ ಮತದವರಿಗೆ ಉದಾಹರಣಾರ್ಥವಾಗಿ, ಸ್ವತಂತ್ರರಿಗೆ ಮತ್ತು ಶಾಂತರಿಗೆ ಸರಿಬೀಳುವಂತೆ ಪಂಡಿತಜಿಯವರು ಸ್ವರಾಜ್ಯದ ಚಿಕ್ಕದೊಂದು ಕಂತನ್ನು ಮುಂದೆ ಇಟ್ಟಿರುವರು. ಎಲ್ಲರೂ ಅದನ್ನು ಪುಷ್ಟೀಕರಿಸಿರುವದರ ಮೇಲಿಂದ ರಾಷ್ಟ್ರವು ಸ್ವರಾಜ್ಯ ಪ್ರಾಪ್ತಿಯ ವಿಷಯದಲ್ಲಿ ಎಷ್ಟರಮಟ್ಟಿಗೆ ಉತ್ಸುಕವಾಗಿದೆ, ಸ್ವರಾಜ್ಯಕ್ಕಾಗಿ ಅದರ ಜೀವವು ಎಷ್ಟರಮಟ್ಟಿಗೆ ತಲ್ಲಣಿಸುತ್ತಿದೆ ಎಂಬೀ ವಿಷಯವು ವ್ಯಕ್ತವಾಗುತ್ತದೆ. ಇದನ್ನು ಆಲೋಚಿಸಿಯಾದರೂ ರೆಡಿಂಗ ಸಾಹೇಬರೂ, ಬರ್ಕನಹೆಡ್ಡ್ ಸಾಹೇಬರೂ ಹಿಂದೀ ಆಕಾಂಕ್ಷೆಯ ವಿಷಯದಲ್ಲಿ ಇನ್ನು ಮುಂದೆ ತಾತ್ಕಾರ ಬುದ್ಧಿಯನ್ನಾಗಲಿ, ಉದಾಸೀನ ಬುದ್ಧಿಯನ್ನಾಗಲಿ ತಾಳುವದು ಯೋಗ್ಯವಲ್ಲ. ಹಸ್ತಕರಾದ ಸರ ಎಲಿಗ್‌ಝುಂಡರ ಮಡಿಮನರು ತನ್ನ ಪ್ರಧಾನಾಲಯದ ಒಳಗಿನ ಅಧಿದೇವತೆಯಾದ ಯಾವ ರೆಡಿಂಗ ಸಾಹೇಬರಿಗೆ ರಾಜಕಾರಣ ಪಟುಗಳಲ್ಲಿ ಜಾಣರಾದವರು ಎಂಬೀ ಉಪಪದವನ್ನು ಅರ್ಪಿಸಿರುವರೊ ಆ ರೆಡಿಂಗ ಸಾಹೇಬರು ನಿಜವಾಗಿ ಮುತ್ಸದ್ದಿಗಳಾದ್ದಾದರೆ ಹಿಂದೂಸ್ಥಾನದ ಅಪೇಕ್ಷೆಯನ್ನು ಪೂರಯಿಸದೆ ಇರಲಿಕ್ಕಿಲ್ಲ. ಇದರ ಪ್ರತ್ಯಂತರವು ಬೇಗನೆ ಬರುವದಿದ್ದರಿಂದ ಮಡಿಮನರ ಸ್ತುತಿವಾಕ್ಯದ ನಿಜಸ್ವರೂಪವು ತನ್ನಷ್ಟಕ್ಕೆನೆ ಬೈಲಿಗೆ ಬೀಳುವದು. ಆದುದರಿಂದ ಅದಕ್ಕಿಂತ ಮುಂಚೆ ನಮ್ಮ ಟೀಕೆಯು ಅಗತ್ಯವಿಲ್ಲ.

೯. ನ್ಯೂಝಿಲಂಡಿನವರು ಏಸಿಯಾದೊಳಗಿನ, ವಿಶೇಷತಃ ಹಿಂದುಸ್ಥಾನದೊಳಗಿನವರ ವಿಷಯದಲ್ಲಿ ಅನ್ಯಾಯದ 'ಯಾವ ಕಾನೂನುಗಳನ್ನೂ ಮಾಡಿಲ್ಲ, ಅಲ್ಲಿಯ ಬಿಳಿಯವರಿಗಿರುವ ಹಕ್ಕುಗಳು ಹಿಂದಿಗಳಿಗೂ ಉಂಟು ಎಂದು ಮುಂಬಯಿಯ ಕೊರ್ಪೊರೇಶನ ಕಮಿಶನರಿಗೆ ಉತ್ತರಕೊಡುವಾಗ ಬರೆದದ್ದನ್ನು ವಾಚಕರು ಇಷ್ಟು ಬೇಗನೆ ಮರೆತಿರಲಾರರು. ಆದರೆ ಈ ವಿಷಯದಲ್ಲಿ ಮಿ। ಸಿ. ಎಫ್. ಎಂಡ್ರೂಸರವರು ಒಂದೆರಡು ಮಹತ್ವಾದ ಸಂಗತಿಗಳನ್ನು ವ್ಯಕ್ತಗೊಳಿಸಿದ್ದಾರೆ. ಮಹಾಯುದ್ಧದಂದಿನಿಂದ ನೂಝಿಲಂಡಿನವರು ಏಸಿಯಾ ಖಂಡದವರ ವಿರುದ್ಧವಾಗಿ ಇಮಿಗ್ರೇಶನ ಎಕ್ಟನ್ನು ಪಾಸುಮಾಡಿದ್ದಲ್ಲದೆ ಅವರ ದ್ವೀಪದಲ್ಲಿ ಪ್ರವೇಶವುಂಟಾಗಬೇಕಾದರೆ ಇಮಿಗ್ರೇಶನಿನ ಜನರಲ್ ಏಜಂಟನ ಸಮ್ಮತಿಯು ಅವಶ್ಯವಾಗಿರುವದು. ೧೯೧೧ರಿಂದ ೧೯೨೦ರ ವರೆಗಿನ ಮತ್ತು ೧೯೨೦ರಿಂದ ೧೯೨೫ರ ವರೆಗಿನ ಬೇರೆ ಬೇರೆ ಐದು ವರ್ಷಗಳಲ್ಲಿ ಹಿಂದುಸ್ಥಾನದಿಂದ ವಸಾಹತುಗಳಲ್ಲಿ ಹೋದವರ ಸಂಖ್ಯೆಯನ್ನು ತುಲನೆಮಾಡಿದರೆ ವಸಾಹತಿನವರ ಅಂತರಂಗವು ತಿಳಿದುಬರುವದು. ಮಿ। ಸಿ. ಎಫ್. ಎಂಡ್ರೂಸರವರ ಬರವಣಿಗೆಯ ಮುಖ್ಯ ತಾತ್ಪರ್ಯವೇನೆಂದರೆ, ಮುಂಬಯಿಯ ಕೊರ್ಪೊರೇಶನಿನ ಕಮಿಶನರಿಗೆ ಬರೆದದ್ದು ಕಣ್ಣುಕಟ್ಟು, ವಸಾಹತಿನವರ ಧೋರಣವನ್ನು ಅವರ ಕೃತ್ಯಗಳ ಮೇಲಿಂದ ತಿಳಿಯಬೇಕಲ್ಲದೆ ವಾಚನಿಕ ವಿಧಾನಗಳ ಮೇಲಿಂದ ಅಲ್ಲ. ಮಿ। ಎಂಡ್ರೂಸರವರ ಅಭಿಪ್ರಾಯವು ಗ್ರಾಹ್ಯವಾಗಿದೆ. ವಸಾಹತಿನವರ ಔಧತ್ಯವನ್ನು ಇಳಿಸಬೇಕಾದರೆ ವಸ್ತುಬಹಿಷ್ಕಾರವೆ ಸರಿಯಾದ ಉಪಾಯವಾದ್ದರಿಂದ ಅದನ್ನೆ ಹಿಂದಿಗಳು ಅನುಸರಿಸದೆ ಇರಲಿಕ್ಕಿಲ್ಲ. ಈ ಬಹಿಷ್ಕಾರವು ಎಷ್ಟೆಷ್ಟು ತೀವ್ರವಾಗುವದೊ ಅಷ್ಟಷ್ಟು ಅದು ಕಾರ್ಯನಿರ್ವಾಹಕವಾಗುವದು. ಅದ್ದರಿಂದ ಬಹಿಷ್ಕಾರವನ್ನು ಸರಿಯಾಗಿ ಅವಲಂಬಿಸಬೇಕು.

---

೧೦. ಮಂಗಳೂರ ಪಟ್ಟಣದ ನಾಗರಿಕರಾದ ವಕೀಲ ಶ್ರೀ. ನಗರ ಗಣಪತರಾವ್ ಬಿ. ಎ. ಬಿ. ಎಲ್. ಇವರು ಗುರುವಾರ ಬೆಳಿಗ್ಗೆ ಕೆನರಾ ಹೈಸ್ಕೂಲಿನ ಬಳಿಯಲ್ಲಿದ್ದ ತನ್ನ ಮನೆಯ ಎದುರುಗಡೆಯ ಬಾವಿಯಲ್ಲಿ ಹಾರಿ ಪ್ರಾಣತ್ಯಾಗವನ್ನು ಮಾಡಿಕೊಂಡರೆಂಬುದನ್ನು ತಿಳಿಸಲು ನಾವು ತುಂಬಾ ವ್ಯಸನಪಡುತ್ತೇವೆ. ನಗರ ಗಣಪತರಾಯರಿಗೆ ದೇವತಾನುಗ್ರಹದಿಂದ ವಿದ್ಯೆ, ಸಂತತಿ, ಸಂಪತ್ತಿ ಇವುಗಳ ಅನುಕೂಲ್ಯವು ಯಥೇಚ್ಛವಾಗಿ ಇತ್ತಾದರೂ ಕೊನೆಗೆ ಯಾವ ದೂರದ ಸಂಗತಿಯು ಅವರ ಮನೋವ್ಯಥೆಗೆ ಕಾರಣವಾಗಿ ಪ್ರಾಣತ್ಯಾಗವನ್ನು ಮಾಡಿಸಿತೊ ಅದು ನಿಜವಾಗಿ ದೈವ ದುರ್ವಿಲಸಿತವೆಂದೆ ತಿಳಿಯಬೇಕು. ಶ್ರೀ. ಗಣಪತರಾಯರು ಬಿ. ಎ. ಬಿ. ಎಲ್. ವರೆಗಿನ ವಿಶ್ವವಿದ್ಯಾಲಯದ ಅಭ್ಯಾಸವನ್ನು ಮಾಡಿ ವಕಾಲತನ್ನು ಪ್ರಾರಂಭಿಸಿ ಹೆಸರುವಾಸಿಯಾಗಿದ್ದರು. ಇವರು ಈಗ ಎಷ್ಟೊಕಾಲದಿಂದ ಇಲ್ಲಿಯ ಮುನ್ಸಿಪಾಲಿಟಿಯ ಸಭಾಸದರಾಗಿದ್ದರು. ಇವರು ಸ್ವಭಾವದಿಂದ ಸಭ್ಯರೂ, ಶಾಂತರೂ ಆಗಿದ್ದು ಲೋಕಪ್ರಿಯರಾಗಿದ್ದರು. ಇವರಿಗೆ ಈಗ ಸಾಧಾರಣ ೫೪ ವರ್ಷ ಪ್ರಾಯವಾಗಿರಬಹುದು. ಇವರ ಮಕ್ಕಳು ಸುಪ್ರೌಢರಾಗಿದ್ದು ವ್ಯಾಪಾರಾದಿ ಉದ್ಯೋಗಗಳನ್ನು ಚಲೋ ರೀತಿಯಿಂದ ಮಾಡುತ್ತಿದ್ದಾರೆ. ಶ್ರೀ. ಗಣಪತರಾಯರ ಮರಣದಿಂದ ಅವರ ಮಕ್ಕಳಿಗೂ ಕುಟುಂಬದವರಿಗೂ ಇತರ ಮಿತ್ರವರ್ಗಕ್ಕೂ ವ್ಯಸನವಾಗದೆ ಇರಲಿಕ್ಕಿಲ್ಲ. ಆದರೂ ವಿಧಿವಿಲಸಿತವನ್ನು ಮೀರಲಾಗುವದಿಲ್ಲವೆಂದು ನೆನಸಿ ಶ್ರೀ. ಗಣಪತರಾಯರ ಚಿರಂಜೀವಂದಿರು ಪಿತೃ ಶೋಕವನ್ನು ಆದಷ್ಟು ಮರೆಯಲು ಯತ್ನಿಸುವರೆಂದು ನಾವು ಭಾವಿಸಿದ್ದೇವೆ. ಮೃತರ ಆತ್ಮಕ್ಕೆ ಚಿರಶಾಂತಿಯು ಲಭಿಸಲಿ.

ಮಂಗಳೂರು.

ಸಪ್ಟಂಬರ ತಾ. ೧೧ಕ್ಕೆ ಅಂತ್ಯವಾಗುವ ವಾರದಲ್ಲಿ ೩೫ ಮರಣಗಳೂ, ೩೪ ಜನನಗಳೂ ಅವುಗಳ ಪೈಕಿ ೧೭ ಗಂಡುಗಳಾಗಿದ್ದವು. ಈ ವಾರದಲ್ಲಿ ಒಂದು ಪ್ಲೇಗು ಮರಣವಿತ್ತು.

ಬ್ರಿಟಿಷ್ ಸಾಮ್ರಾಜ್ಯದ ಕುಷ್ಠರೋಗ ನಿವಾರಣಾ ಸಂಘದ ಸಹಾಯಾರ್ಥವಾಗಿ ಇದೇ ಬರುವ ತಾ. ೧೨ನೇ ಶನಿವಾರ ಘಂಟೆ ೫ ಮತ್ತು ೭ಕ್ಕೆ ಹಿಂದುಸ್ಥಾನ ಸಿನೇಮಾ ಥಿಯೇಟರಿನಲ್ಲಿ ಜಿಲ್ಲಾ ಕಲೆಕ್ಟರರ ಮತ್ತು ಸರ್ಜನರ ಆಶ್ರಯದಿಂದ ಎರಡು ಪರ್ಫೋರ್ಮೆನ್ಸುಗಳು ನಡೆಯಲಿರುವವು. ಇದಕ್ಕೆ ಸರ್ವರೂ ಬಂದು ಉದಾರ ಸಹಾಯವನ್ನೀಯಬೇಕಾಗಿ ಕಲೆಕ್ಟರರ ವಿನಂತಿಯಾಗಿದೆ.

ಮಂಗಳೂರು ರೇಂಜಿನ ಹೆಲ್ತ್ ಇನ್ಸ್‌ಪೆಕ್ಟರರಾಗಿದ್ದ ಮಿ। ಐ. ಕೃಷ್ಣರಾಯರು ಇಲ್ಲಿಂದ ಕೊಯಮುತ್ತೂರಿನ ಕೊಲೆಗಾಲ್ ತಾಲೂಕಿಗೆ ವರ್ಗಾಯಿಸಲ್ಪಟ್ಟಿರುವರು. ಇವರು ಕಳೆದ ೮ ವರುಷಗಳಿಂದ ಅತೀ ಉತ್ಸಾಹದಿಂದ ಕೆಲಸಮಾಡಿದ್ದುಕೊಂಡು ಸಕಲರ ಪ್ರೀತಿಗೆ ಪಾತ್ರರಾಗಿರುವರು.

ಮುನ್ಸಿಪಲ್ ಚುನಾವಣೆಯ ಸಂಬಂಧವಾಗಿ ಸ್ವರಾಜ್ಯಪಕ್ಷದವರ ಚಳವಳಿಯು ಉತ್ಸಾಹದಿಂದ ನಡೆಯುತ್ತಿದೆ. ಈ ವಾರದಲ್ಲಿ ಅಲ್ಲಲ್ಲಿ ಮತದಾರರ ಹಾಗೂ ಮಹಾಜನರ ಸಭೆಗಳಾದವು. ಶ್ರೀ. ಪುಣಿಂಚತ್ತಾಯರ ರಾಷ್ಟ್ರಗೀತೆಗಳಿಂದ ಸಭಾರಂಭವಾಗಿ ಶ್ರೀ. ಮಾಧವರಾವ್, ಯು. ಸಿ. ಕೃಷ್ಣ ಭಟ್, ಕೆ. ಆರ್. ಆಚಾರ್, ಕೆ. ಆರ್. ಕಾರಂತ, ಭೋಜರಾವ್, ಶೇಷಭಟ್ಟ ಭಿಡೆ ಇವರೆ ಮೊದಲಾದವರ ಭಾಷಣಗಳಾದವು. ನಾಳೆ ಶನಿವಾರ ಈ ಪಕ್ಷದವರ ಕಡೆಯಿಂದ ಪಟ್ಟಣಿಗರ ಒಂದು ಮೆರವಣಿಗೆಯೂ ಜರಗಲಿಕ್ಕಿದೆ.

ಇದೇ ತಿಂಗಳ ತಾ. ೧೦ನೇ ಗುರುವಾರ ಅಪರಾಹ್ನ ಗಂಟೆ ೪-೩೦ಕ್ಕೆ ನಮ್ಮ ಬಿ. ಸಿ. ಮಿಶ್ಯನ್ ಕೋರ್ಟುಗುಡ್ಡೆ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಕೃಷ್ಣ ಜಯಂತಿಯ ಗೌರವಾರ್ಥವಾಗಿ ಶಾಲಾಮಕ್ಕಳ ಒಂದು ಸಣ್ಣವಸ್ತು ಪ್ರದರ್ಶನವೂ ಮಕ್ಕಳಿಂದಲೇ ಅಭಿನಯಿಸಲ್ಪಡುವ ,ಒಂದೆರಡು ನಟನೆಗಳೂ ಜರಗಿದವು.

ಸ್ವರಾಜ್ಯಪಾರ್ಟಿಯ ಮುನ್ಸಿಪಲ್ ಚುನಾವಣೆಯು ತಾ. ೧೧ನೇ ಸಾಯಂಕಾಲ ೫-೩೦ ಗಂಟೆಗೆ ಲೈನು ಮೈದಾನಿನಲ್ಲಿ ಸಭೆಯೂ, ತಾ. ೧೩ನೇ ಬೆಳಿಗ್ಗೆ ೯ ಗಂಟೆಗೆ ನಂದಿಗುಡ್ಡೆಯಲ್ಲಿ ಪಂಚಮರ ಸಭೆಯೂ, ಸಾಯಂಕಾಲ ೫-೩೦ಕ್ಕೆ ಮೈದಾನಿನ ಮಟ್ಟಿನ Barreth ವ ಹತ್ತಿರದಿಂದ ಹೊರಟು ಜಪ್ಪು ವಾರ್ಡಿನ ವರೆಗೆ ಮೆರವಣಿಗೆಯು ಹೊರಡುವದು. ಕಳದ ತಾ. ೯ನೇ ಸಾಯಂಕಾಲ ಜ್ಞಾನೋದಯ ಸಮಾಜದ ಕಟ್ಟೋಣದಲ್ಲಿ ಸಭೆಯು ಜರಗಿತ್ತು. ಸುಮಾರು ನೂರು ಜನರು ಹಾಜರಿದ್ದರು.

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮದ ಅಗೋಸ್ತು ತಿಂಗಳ ರಿಪೋರ್ಟು:—ಹೊಸ ರೋಗಿಗಳ ಸಂಖ್ಯೆ ೫೨೦. ಹಳೆ ರೋಗಿಗಳ ಸಂಖ್ಯೆ ೭೪. ಜುಮ್ಲಾ ರೋಗಿಗಳ ಸಂಖ್ಯೆ ೫೯೪. ಮತ್ತು ರೋಗಿಗಳ ಹಾಜರಿ ೨೩೧೮ ದಿನವಹಿಸರಾಸರಿ ಹಾಜರಿ ೭೭. ಎಂಬುದಾಗಿ ಈ ವರದಿಯನ್ನು ಆಯುರ್ವೇದ ವಿದ್ವಾನ್ ಕೆ. ಗೋಪಾಳಾಚಾರ್ಯರು ತಿಳಿಸುವರು.

ಇಲ್ಲಿಯ ತಹಸೀಲದಾರರಾಗಿರುವ ಮ। ರಾ। ರಾ। ಎಮ್. ಗಣೇಶರಾಯರನ್ನು ಇಲ್ಲಿಂದ ಪುತ್ತೂರಿಗೆ ವರ್ಗಾಯಿಸಲ್ಪಟ್ಟು ಇಲ್ಲಿ ಇವರ ಬದಲಿಗೆ ಪುತ್ತೂರ ತಹಸೀಲದಾರರಾಗಿರುವ ಮ। ರಾ। ಎಸ್. ಬಾಬುರಾಯರನ್ನು ಇಲ್ಲಿಗೆ ವರ್ಗಾಯಿಸಲ್ಪಟ್ಟಿದ್ದಾರೆ.

ಇತ್ತಲಾಗೆ ಕೆಲವು ಸಮಯದಿಂದ ರಜೆಯಲ್ಲಿರುವ ಮ। ರಾ। ರಾ। ಎಮ್. ರಾಘವೇಂದ್ರರಾಯರನ್ನು ಕಾರ್ಕಳಕ್ಕೆ ಸಬ್ ಸ್ಪೇಶನರಿ ಮೆಜಿಸ್ಟ್ರೇಟರಾಗಿ ವರ್ಗಾಯಿಸಲ್ಪಟ್ಟಿದ್ದಾರೆ. ಮತ್ತು ಕಾರ್ಕಳ ಸಬ್ ಸ್ಪೇಶನಿನ ಮೆಜಿಸ್ಟ್ರೇಟರಾಗಿರುವ ಮ। ರಾ। ರಾ। ದಾತ್ತಾತ್ರೇಯ ರಾಯರನ್ನು ಮಂಗಳೂರಿಗೆ ವರ್ಗಾಯಿಸಿದ್ದಾರೆ.

ಇಲ್ಲಿಯ ಸಬ್ ಸ್ಪೇಶನರಿ ಮೆಜಿಸ್ಟ್ರೇಟರಾಗಿರುವ ಮ। ರಾ। ರಾ। ವರ್ಕಾಡಿ ವೆಂಕಟ್ರಾವ್, ಇವರನ್ನು ಪುತ್ತೂರಿಗೂ ಮತ್ತು ಪುತ್ತೂರಲ್ಲಿರುವ ಸಬ್ ಮೆಜಿಸ್ಟ್ರೇಟರಾಗಿರುವ ಮ। ರಾ। ರಾ। ಎಸ್. ಡಿ. ಸೋಜರವರಿಗೆ ಕುಂದಾಪುರಕ್ಕೂ ವರ್ಗಾಯಿಸಿದ್ದಾರೆ

ಕುಂದಾಪುರ ಸಬ್ ಸ್ಪೇಶನರಿ ಮೆಜಿಸ್ಟ್ರೇಟರಾಗಿರುವ ಮ। ರಾ। ರಾ। ಪಿ. ಆನಂದರಾಯರನ್ನು ಬಂಟವಾಳಕ್ಕೆ ಡಿಪ್ಯುಟಿ ತಹಸೀಲದಾರರಾಗಿ ವರ್ಗಾಯಿಸಿದ್ದಾರೆ.

ಬಂಟವಾಳ ಡಿಪ್ಯುಟಿ ತಹಸಿಲ್‌ದಾರರಾಗುವ ಮ। ರಾ। ರಾ। ವಿಕ್ಟರ್ ಸಲ್ಡಾನರವರಿಗೆ ಬಂಟವಾಳದಿಂದ ಬೆಳ್ತಂಗಡಿಗೆ ವರ್ಗಾಯಿಸಿದ್ದಾರೆ. ಮತ್ತು ಬೆಳ್ತಂಗಡಿಯಲ್ಲಿರುವ ಮ। ರಾ। ರಾ। ಕೆ. ಶಿವರಾಯರು ತಮ್ಮ ಕೆಲಸದಿಂದ ರಿಟಾಯರ್ ಆಗಲಿಕ್ಕಿರುವರು.

ಹಿಂದೀಯರಿಗೆ ಇಂಡಿಪೆಂಡೆಂಟ್ ಲೇಬರ್ ಪಾರ್ಟಿಯವರ ಸಂದೇಶ.

ಸ್ವರಾಜ್ಯಪಕ್ಷೀಯರಿಗೆ ಬೆಂಬಲ.

ಇಂಡಿಪೆಂಡೆಂಟ್ ಮಜೂರ ಪಕ್ಷದ ಅಧ್ಯಕ್ಷರಾದ ಮಿ| ಕ್ಲಿಫರ್ಡ್ ಎಲ್ಲನ್ ಸಾಹೇಬರು, ಮಿ| ಎಸ್. ಸತ್ಯಮೂರ್ತಿ ಎನ್. ಎಲ್. ಸಿ. ಮತ್ತು ದಿವಾನ್ ಚಮನ್‌ಲಾಲ್ ಯಮ್. ಯಲ್. ಎ. ಯವರ ಮುಖಾಂತರ ಈ ಕೆಳಗಣ ಸಂದೇಶವನ್ನು ಕಳುಹಿಸಿರುತ್ತಾರೆ.

“ಹಿಂದೀಯರ ರಾಜಕೀಯ ಮತ್ತು ಸಾಂಪತ್ತಿಕ ಸ್ವಾತಂತ್ರ್ಯಗಳ ಸಾಧನೆಯಲ್ಲಿ ಪೂರ್ವೋಕ್ತ ಪಾರ್ಟಿಯವರ ಪೂರ್ಣ ಸಹಾನುಭೂತಿಯೂ ಬೆಂಬಲವೂ ಇವೆ. ಅನೇಕ ಶತಮಾನಗಳಿಂದಲೂ ಈ ಎರಡು ಹಕ್ಕುಗಳು ಹಿಂದೀಯರಿಂದ ಅಪಹೃತವಾಗಿವೆಯೆಂದೂ ಆ ಪಾರ್ಟಿಗೆ ಗೊತ್ತಿದೆ. ಬ್ರಿಟಿಷರಿಗೆ ಹಿಂದೂದೇಶದಲ್ಲಿ ಅಧಿಕಾರ ನಡಿಸುವರೆ ನ್ಯಾಯವಾಗಿ ಯಾವುದೊಂದೂ ಹಕ್ಕೂ ಇರುವುದಿಲ್ಲವೆಂದೆ ಆ ಪಾರ್ಟಿಯವರ ನಿಶ್ಚಯ. ಮತ್ತು ಹಿಂದೂಸ್ಥಾನದಲ್ಲಿ ಇತ್ತೀಚೆಗೆ ಅಂಥಾ ಸರಕಾರದಿಂದ ನಡೆದ ಅತ್ಯಾಚಾರದ ವಿಷಯವನ್ನು ಬಹು ನಾಚಿಕೆಯಿಂದ ಕಾಣುತ್ತದೆ. ಹಿಂದೀಯರ ಧ್ಯೇಯ ಸಾಧನೆಯ ದೃಷ್ಟಿಯಲ್ಲೂ ಬ್ರಿಟಿಷ ಸಾಮ್ರಾಜ್ಯದ ಐಹಿಕ ಏಳ್ಗೆಯ ದೃಷ್ಟಿಯಲ್ಲೂ ಹಿಂದೂಸ್ಥಾನದಲ್ಲಿ ಪರಸ್ಪರ ಪ್ರೀತಿಯುಕ್ತವಾದ ಸ್ವತಂತ್ರ ರೀತಿಯ ರಾಜಕ್ರಮವನ್ನು ಕೈಕೊಳ್ಳುವುದೇ ಶ್ರೇಯಸ್ಕರವೆಂದು ಲೇಬರ ಪಾರ್ಟಿಯು ಖಂಡಿತವಾಗಿ ತಿಳಕೊಂಡಿದೆ. ಹಿಂದೂಸ್ಥಾನದಲ್ಲಿ ಸ್ವರಾಜ್ಯ ಪಾರ್ಟಿ ಮತ್ತು ಮಜೂರಪಕ್ಷವು ಬಲಹೊಂದುತ್ತಿದೆ ಎಂದು ಸಂತೋಷಪಡುವುದಲ್ಲದೆ, ಹಿಂದೀಯರ ಉದ್ದೇಶ ಸಾಧನೆಯು ಅವರ ಸ್ವಪ್ರಯತ್ನಗಳಿಂದಲೇ ಕೊನೆಗಾಣಬೇಕಾಗುವುದಾದರೂ, ಹಿಂದುಸ್ಥಾನದಲ್ಲಿ ಸ್ವರಾಜ್ಯ ಸ್ಥಾಪನೆಯನ್ನು ತ್ವರೆಗೊಳಿಸುವರೆ ಪೂರ್ಣಸಹಾಯವನ್ನೀವುದೆಂದೂ, ಭರವಸೆಕೊಡುವುದು. ಹಿಂದೀಯರೂ ಬ್ರಿಟಿಷರೂ ಏಕಮನಸ್ಕರಾಗಿ ಸರಿಸಮಾನರಂತೆ, ಸಹಕರಿಸುವ ಕಾಲವು ಎಂದಿಗೆ ಬರುವುದೋ ಎಂದು ಹಾತೊರೆಯುವುದು. ಮತ್ತು ಆ ತೆರನೆ ಸಹಕರಣದಿಂದ ಹಿಂದೀಯರ ವ ಬ್ರಿಟಿಷರ ಹಿತವುಂಟಾಗುವುದು ಮಾತ್ರವೇ ಅಲ್ಲದೆ ಇಡೀ ಜಗತ್ತಿನ ಹಿತವೇ ಉದಯಿಸಿದಂತಾಗುವುದೆಂದು ಈ ಪಾಟಿಯ ಭಾವನೆ. ಹಿಂದೀಯರಿಗೆ ಯೋಗ್ಯವಾದೊಂದು ರಾಜ್ಯಕ್ರಮವನ್ನು ನಿಯೋಗಿಸುವರೆ ಹಿಂದೀ ಮುಖಂಡರ ಮತವನ್ನು ಕೇಳಿ ಯುಕ್ತರೀತಿಯ ಪರಿಷದವನ್ನು ಜರಗಿಸುವಂತೆ ಬ್ರಿಟಿಷ ಸರಕಾರದಲ್ಲೂ, ಬ್ರಿಟಿಷ ಸಮಾಜದಲ್ಲೂ ಹಿಂದೀಯರ ಆಕಾಂಕ್ಷೆಯನ್ನು ಮುಂದಿಟ್ಟು ಒತ್ತಾಯಪಡಿಸುವುದೆಂದು ಪುನರಪಿ ವಚನವನ್ನೀವುದು.

ಪತ್ರವ್ಯವಹಾರ.

ಬಂಟ್ವಾಳ ಬೋರ್ಡು ಶಾಲೆಯೂ, ದೇವಳ ಶಾಲೆಯೂ,

ಕಳೆದ ಸಪ್ಟಂಬರ ೩ನೇ ತಾರೀಕಿನ ನವಯುಗದ ೧ನೇ ಸಂಚಿಕೆಯಲ್ಲಿ ಪ್ರಕಟವಾದ ಬಂಟ್ವಾಳದ ಬಡವರೂ ಶಾಲೆಗಳೂ ಎಂಬ ಶಿರೋಲೇಖನದ ಪತ್ರವ್ಯವಹಾರವನ್ನು ಓದಿನೋಡಿ ವಿಸ್ಮಯವಾಯಿತು. ಟೆಂಪಲ್ ಸೆಕೆಂಡರಿ ಎಂಬ ಹೆಸರಿನ ಶಾಲೆಯನ್ನು ತೆರದದ್ದು ಗವರ್ನಮೆಂಟಿನವರ ಗ್ರಾಂಟು ಪಡಿಯುವ ಉದ್ದಿಶ್ಯ ಎಂಬ ಓರ್ವ ಬಂಟ್ವಾಳ ನಿವಾಸಿಕರು ಬರೆದಿರುತ್ತಾರೆ. ಮದ್ರಾಸು ವಿದ್ಯಾ ಇಲಾಖೆಯ ರೂಲ್ಸಿಗನುಸಾರವಾಗಿ ಶಾಲೆ ನಡಿಸದಿದ್ದರೆ ಗ್ರಾಂಟಿನ ಹಣ ಗವರ್ನಮೆಂಟಿನವರು ಚೆಲ್ಲಿ ಬಿಡುವರೇ, ಶಾಲೆ ಅಂದರೇನು? ಒಂದು ವ್ಯಾಪಾರವೋ ದೇವಳದ ಶಾಲೆಯು ಬಂಟ್ವಾಳ ಬೋರ್ಡು ಶಾಲೆ ತೆರೆದ ಮೇಲೆ ಸ್ಪರ್ದೆಗೋಸ್ಕರ ತೆರದದ್ದಲ್ಲ. ಈ ಸಂಗತಿ ಬಾತ್ಮಿದಾರನು ಖಂಡಿತ ತಿಳಕೊಳ್ಳಲಿ. ದೇವಳದ ಶಾಲೆಯು ೧೮೯೧ನೇ ಇಸವಿಯಲ್ಲಿ ಮೊದಲು ಎಲಿಮೆಂಟರಿಯಾಗಿ ತೆರದು ಹತ್ತು ವರ್ಷದ ನಂತರ ಅದನ್ನು ಸೆಕೆಂಡರಿಯಾಗಿ ಮಾಡಿದರು ಈ ಶಾಲೆ ತೆರದು ಇವತ್ತಿಗೆ ಸುಮಾರು ೩೪ ವರ್ಷವಾಯಿತು. ಈ ಶಾಲೆಯಲ್ಲಿ ಕಲಿತು ವಿಲಾಯತಿಗೆ ಹೋಗಿ ಐ. ಸಿ. ಎಸ್. ಮತ್ತು ಐ. ಎಮ್. ಎಸ್. ಎಂಬ ಡಿಗ್ರಿ ಪಡೆದು ಬಂದರು. ಇನ್ನೊಬ್ಬಿಬ್ಬರು ಲೆಕ್ಚರಂಟರಾಗಿ ಬಂದಿರುತ್ತಾರೆ. ಬಾತ್ಮಿದಾರರ ಇನ್ನೊಂದು ಅಭಿಪ್ರಾಯವೇನೆಂದರೆ ಅತ್ಯಧಿಕವಾದ ಸ್ಕೂಲು ಫೀಸು ಪಡೆದು ಲಾಭ ಪಡೆಯುತ್ತಾರೆಂಬುದು. ಈ ಮಾತಿಗೆ ಏನೂ ಆಧಾರವಿಲ್ಲ. ಯಾಕಂದರೆ ಎಲ್ಲಾ ಊರಿನ ಶಾಲೆಗಳಂತೆ ಇಲಾಖೆಯ ರೂಲ್ಸಿಗನುಸಾರವಾಗಿ ಮೊದಲನೇ ದರ್ಜೆಯಿಂದ III ಫೋರ್ಮು ವರೆಗೆ ಸಂಬಳ ವಸೂಲಿ ಮಾಡಿ ಹೆಡ್ ಮಾಸ್ತರ ದಸ್ಕತಿನೊಡನೆ ಛಾಪಾ ಫೋರ್ಮಿನ ರಶೀದಿ ಇಂದಿನ ವರೆಗೆ ಕೊಡುತ್ತಾ ಬರುತ್ತದೆ. ಇಂಥ ರಶೀದಿಯಲ್ಲಿ ಅತ್ಯಧಿಕ ಫೀಸಿನ ಒಂದೇ ಒಂದು ರಶೀದಿಯನ್ನು ಮುಂದಕ್ಕೆ ತಂದು ಬಾತ್ಮಿದಾರರು ರುಜುಪಡಿಸಲಿ, ಅದಲ್ಲದೆ ಮೇಲಿನ ಕ್ಲಾಸಿನಲ್ಲಿ ಇಡೀ ಶಾಲೆಯಲ್ಲಿ $\frac{2}{3}$ ಅಂಶ ಮಾಫಿಯ ಹುಡುಗರಿದ್ದಾರೆಂಬುದು ಆಗಾಗ್ಗೆ ಸರಕಾರಕ್ಕೆ ಹೋಗುವ ಶಾಲಾ ರಿಪೋರ್ಟಿನಿಂದ ತಿಳಿದುಬರುವದು.

ಈ ಶಾಲೆ ದೇಶೋದ್ಧಾರಕ್ಕಾಗಿ ತೆರದಿದ್ದೇವೆ ಎಂಬ ನೆವನದಿಂದ ರಿಲಿಜಿಯಸ್ ಎಂಡೌಮೆಂಟ ಬೋರ್ಡಿನವರ ಕಣ್ಣುಕಟ್ಟುವ ಪ್ರಯುಕ್ತ ಆಗಿರಬಹುದೆಂಬ ಬಂಟ್ವಾಳ ನಿವಾಸಿಕರ ತಪ್ಪು ಅಭಿಪ್ರಾಯಕ್ಕೆ ಯಾವ ಉತ್ತರಕೊಡಲಿ? ಆದರೆ ದೇವಳದವರ ಮುಖ್ಯ ಉದ್ದಿಶ್ಯಗಳಲ್ಲಿ ಇದು ಒಂದಾಗಿದೆ. ನಿಜವಾಗಿ ಇಂದಿನ ವರೆಗೆ ದೇಶ ಉದ್ಧಾರಕ್ಕಾಗಿ ಶಾಲೆ ನಡದಿದೆ. ಈ ಶಾಲೆಯಲ್ಲಿ ಬ್ರಾಹ್ಮಣರು ಶೂದ್ರರು ಮಾಪಿಳೆಯರು, ಕ್ರಿಶ್ಚನರು ಅರ್ಧ ಸಂಬಳದಲ್ಲಿಯೂ, ಪೂರಾ ಸಂಬಳ ಮಾಫಿಯಾಗಿಯೂ ಕಲಿಯುವ ಹುಡುಗರು ಯಾವ ಭೇದವಿಲ್ಲದೆ ಇದ್ದಾರೆ. ಈ ಊರಿಗೆ ನೆರೆ ಬಂದು ಮೂರಾವರ್ತಿ ಪಟ್ಟಣ ಹಾಳಾದರೂ ಶಾಲೆಯನ್ನು ಮುಚ್ಚದೆ ದೇವಸ್ಥಾನಕ್ಕೆ ಸಾವಿರಗಟ್ಲೆ ರೂಪಾಯಿ ನಷ್ಟವಾದರೂ ಅದನ್ನು ಲಕ್ಷಿಸದೆ ಅಂಥಾ ಕಾಲದಲ್ಲಿ ಅಲ್ಪ ಸ್ವಲ್ಪ ಮಕ್ಕಳನ್ನು ಹಿಡಕೊಂಡು ಕಲಿಸುತ್ತಿದ್ದ ಉಪಾಧ್ಯಾಯರಿಗೆ ದೇವಳದ ಕಡೆಯಿಂದ ಸಂಬಳ ಕೊಡಲಿಲ್ಲವೇ ಶಾಲಾ ಕಟ್ಟೋಣ ಬಿದ್ದು ಹೋದಾಗ ದೇವಳದ ಗೋಪುರದಲ್ಲಿ ಶಾಲೆ ಇಡುವರೆ ಸ್ಥಳ ಕೊಡಲಿಲ್ಲವೇ. ಅದಲ್ಲದೆ ನೆರೆಯ ಮುಂಚೆ ಬಂಟ್ವಾಳದಲ್ಲಿ ಗವರ್ನಮೆಂಟಿನವರಂತೆ ನಡಿಸುತ್ತಿದ್ದ ಮಿಶ್ಯನ ಶಾಲೆ ಸಹ ನೆರೆಯ ನಂತರ ಅವರಿಗೆ ಪೂರೈಸದೆ ಮುಚ್ಚಿಯೇ ಬಿಟ್ಟರು. ದೇವಳದ ಶಾಲೆ ದೇಶೋದ್ಧಾರಕ್ಕಾಗಿ ಕಷ್ಟನಷ್ಟ ಬಂದರೂ ಇತ್ತಲಾಗಿ ಶಾಲಾ ಕಟ್ಟೋಣಕ್ಕಾಗಿ ಐದಾರುಸಾವಿರ ರೂಪಾಯಿ ಖರ್ಚು ತಗಲಿಸಿ ಕಟ್ಟಿಸಿದ ಶಾಲೆಯ ಪ್ರವೇಶವು ಆಗೋಸ್ತು ತಾ. ೧೩ಕ್ಕೆ ನಡೆಯಿತು. ಈ ಶಾಲೆಯನ್ನು ಇತ್ತಲಾಗಿ ಕಣ್ಣಾರೆಕಂಡ ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಆಫೀಸರವರೂ ಪ್ರತ್ಯಕ್ಷ ಮಂಗಳೂರು ತಾಲೂಕು ಬೋರ್ಡು ಮಾನ್ಯ ಪ್ರೆಸಿಡೆಂಟರವರೇ ಸಾಕ್ಷಿ. ರಿಲಿಜಸ್ ಎಂಡೌಮೆಂಟ ಬೋರ್ಡಿನವರ ಕಣ್ಣುಕಟ್ಟುವ ಪ್ರಯುಕ್ತ ದೇವಳದ ಶಾಲೆಯು ಉದ್ದಿಶ್ಯ ಎಂಬುದು ಇನ್ನೊಂದು ಕಾರಣ ಬಾತ್ಮಿದಾರರ ಅಭಿಪ್ರಾಯವಾಗಿದೆ. ಅದು ಹೇಗೆ? ಈ ಜಿಲ್ಲೆಯಲ್ಲಿ ಯಾವ ದೇವಳದವರಾದರೂ ಶಾಲೆ ಇಡುವ ಮುಂಚೆ ಬಂಟ್ವಾಳ ಶ್ರೀ ವೆಂಕಟರಮಣ ಸ್ವಾಮಿ ಟೆಂಪ್ಲ ಶಾಲೆ ಎಂಬ ನಾಮಧೇಯದಿಂದ ಇಡಲ್ಪಟ್ಟು ಸರ್ಕಾರ ಅಂಗೀಕಾರಕ್ಕೆ ಒಳಪಟ್ಟಿರುತ್ತದೆ ಎಂಬುದು ಬಾತ್ಮೀದಾರರಿಗೆ ಯಾಕೆ ತಿಳಿಯಲಿಲ್ಲ. ಹಾಗಾದರೆ ಈ ಬಾತ್ಮಿದಾರನು ಬಂಟ್ವಾಳ ನಿವಾಸಿಕನೆಂತ ನಂಬಲಿಕ್ಕೆ ಅನುಮಾನವಾಗುತ್ತದೆ. ಇನ್ನೊಂದು ಅಭಿಪ್ರಾಯ ಏನಂದರೆ ಬಂಟ್ವಾಳ ಬೋರ್ಡು ಶಾಲೆ ತೆರದ ನಂತರ ದೇವಳದ ಶಾಲೆಗೆ ಮಾಫಿ ಎಂಬ ನೋಟೀಸು ಹೊರಟಿತು ಎಂತ ಸ್ಪಷ್ಟ ಬರೆದಿರುತ್ತಾರೆ. ಈ ಮಾತು ಎಷ್ಟು ಮಾತ್ರಕ್ಕೂ ನಂಬತಕ್ಕದ್ದಲ್ಲ, ಯಾಕಂದರೆ ಬಂಟ್ವಾಳ ಬೋರ್ಡು ಶಾಲೆ ತೆರದ ನೋಟೀಸು ಆಗೋಸ್ತು ತಾ. ೩ಕ್ಕೆ ಹೊರಟಿತು. ದೇವಳದ ಶಾಲೆಗೆ ಮಾಫಿ ಮಾಡಿದ್ದು ಜುಲಾಯಿ ತಿಂಗಳ ಆರಂಭದಿಂದ ಆಗಿದೆ. ಇದೇ ವಾರ್ತೆ ಜುಲಾಯಿ ತಿಂಗಳ ಮೊದಲನೇ ವಾರದ ಸ್ವದೇಶಾಭಿಮಾನಿಯಲ್ಲಿಯೂ, ಕಂಠೀರವದಲ್ಲಿಯೂ ಪ್ರಕಟವಾಗಿತ್ತು. ಹೀಗಿರುತ್ತ ವಾಚಕರೇ ನಿವೇ ಬಂಟ್ವಾಳ ನಿವಾಸಿಕನ ಬಾತ್ಮಿಗೆ ಬೆಲೆಕಟ್ಟಿರಿ.

ಮೊಕ್ತೇಸರರ ಕಡೆ ಸಂಬಳ ಅರ್ಧಮಾಫಿ ಮಾಡಬೇಕೆಂತ ಗರಿಬರು ಪದೆ ಪದೆ ಮೊರೆ ಇಟ್ಟರೂ ಅಂಥವರನ್ನು ಓರೆ ದೃಷ್ಟಿಯಿಂದ ನೋಡಿ ಮುಖ ತಿರುಗಿಸುತ್ತಿದ್ದರು, ಎಂಬ ವಾರ್ತೆ ಸಹ ಬಂಟ್ವಾಳ ನಿವಾಸಿಕರ ಬನಾವಣೆ ಮಾತಾಗಿದೆ. ದೇವಳ ಶಾಲೆಯಲ್ಲಿ ಮುಂಚಿನಿಂದ ಯಾವನೊಬ್ಬ ಮೊಕ್ತೇಸರರಿಗೆ ಸ್ಕೂಲು ಫೀಸು ಮಾಫು ಮಾಡುವ ಅಧಿಕಾರವಿಲ್ಲ, ಅದಲ್ಲದೆ ಶಾಲೆಯ ಮೆನೆಜರರು ಸಹ ಅಂಥಾ ಅಧಿಕಾರ ಇಟ್ಟುಕೊಳ್ಳಲಿಲ್ಲ. ಯಾರಿಗಾದರೂ ಸಂಬಳ ಮಾಫು ಮಾಡಬೇಕೆಂತಿದ್ದರೆ ಬರಹ ಮೂಲಕ ಅರ್ಜಿ ಬಂದರೆ ಟ್ರಸ್ಟಿಯವರು ವೋಟಿಂಗು ಮಾಡಿ, ವೋಟಿಂಗಿನಲ್ಲಿ ಪಾಸುಮಾಡುವರು. ಬೆಕ್‌ವರ್ಡ್ ಜಾತಿಯವರಿಗೆ ಅರ್ಧ ಸಂಬಳ ಎಂತ ಕಾನೂನು ಇದ್ದರೂ ಅರ್ಧಕ್ಕಿಂತ ಕಡಿಮೆ ಸಂಬಳವೂ, ಬಡವರ ಮಕ್ಕಳಿಗೆ ಪೂರಾ ಮಾಫಿಯಾಗಿಯೂ ಈಗಲೂ ಶಾಲೆಯಲ್ಲಿ ಕಲಿಯುವ ಮಕ್ಕಳು ಇರುತ್ತಾರೆ ಅಂದರೆ ಸೆಕೆಂಡರಿ ಶಾಲೆಯಲ್ಲಿ ಎಲಿಮೆಂಟರಿ ಶಾಲೆಯಲ್ಲಿ ಅಲ್ಲ. ಎಲಿಮೆಂಟರಿ ಶಾಲೆ ಮಾತ್ರ ಫ್ರೀಯಾಗಿದೆ.

ಮೊಕ್ತೇಸರರು ಮಕ್ಕಳಿಗೋಸ್ಕರ ಮನೆ ಮನೆಗೆ ಹೋಗಿ ಅವರು ಹೊರಡಲಿಕ್ಕೆ ಸಿದ್ಧರಾಗುವ ವರೆಗೂ ಕಾದು ಅವರನ್ನು ಶಾಲೆಗೆ ಕರಕೊಂಡು ಹೋಗುವರು ಎಂತ ಸಹ ಓರ್ವ ಬಂಟ್ವಾಳ ನಿವಾಸಿಕರ ವಾರ್ತೆ, ಇದು ನಿಜವೇ. ಅಂಥಾ ದರಿದ್ರ ಮೊಕ್ತೇಸರರು ಈ ದೇವಳಕ್ಕೆ ಇರುವದೇ ಇಲ್ಲ. ಎಲ್ಲಾ ಮೊಕ್ತೇಸರರು ಮಹಾನುಭಾವರೂ, ಧನಿಕರೂ, ಬಲಾಢ್ಯರೂ ಆಗಿರುವಂಥವರೇ, ಇವರು ಯಾತಕ್ಕೆ ಹೋಗಬೇಕು? ಯಾಕಂದರೆ ಶಾಲೆಗೆ ಒಬ್ಬ ಕಾಯಂ ಪೇದೆ ಇದ್ದಾನಲ್ಲ, ಅದಲ್ಲದೆ ದೇವಳದ ಶಾಲೆಗೆ ಮಕ್ಕಳೇನೂ ಕಡಿಮೆ ಇಲ್ಲ. ಒಂದೆರಡು ಕ್ಲಾಸುಗಳಲ್ಲಿ ಡಿವಿಜನುಗಳಿವೆ. ಅದಲ್ಲದೆ ದೇವಳಕ್ಕೆ ಅನೇಕ ನೌಕರರು ಇರುತ್ತಾರೆ. ಇಷ್ಟು ಮಾಸ್ತರುಗಳು ಇರುತ್ತ, ಮಾಸ್ತರುಗಳಾಗಲಿ, ನೌಕರರಾಗಲಿ ಮಕ್ಕಳನ್ನು ಕರೆಯಲಿಕ್ಕೆ ಹೋಗದೆ ಮೊಕ್ತೇಸರರು ಯಾಕೆ ಹೋಗುವರು. ಬೋರ್ಡು ಶಾಲೆಯ ಮಾಸ್ತರಾದರೋ ಮಕ್ಕಳಿಗೋಸ್ಕರ ಮನೆಮನೆಗೂ ಹೋಗಿ ಹೆತ್ತವರಿಗೆ ಬೋಧೆಕೊಟ್ಟು, ಮಕ್ಕಳನ್ನು ಕರಕೊಂಡು ಹೋಗುವದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ.

“ಬೋರ್ಡು ಶಾಲೆಗೆ ಕಳುಹಿಸಿದರೆ ದೇವಳದವರಿಗೆ ನಷ್ಟವಾದೀತಾದ್ದರಿಂದ ನಮ್ಮಲ್ಲಿಗೆ ಕಳುಹಿಸಬೇಕೆಂದು ವತ್ತಾಯದಿಂದ ನಮಗೆ ಸಮಾಧಾನ ಹೇಳುವದೂ ಪ್ರಕೃತ ನಡಿಯುವ ಸಾಧಾರಣ ವಾಡಿಕೆ” ಎಂತ ಬಾತ್ಮಿದಾರರ ಅಧಿಕ ಪ್ರಸಂಗಕ್ಕೆ ಆದಿಯೂ ಇಲ್ಲ, ಅಂತ್ಯವೂ ಇಲ್ಲ. ಈ ಅರ್ಥ ಇಲ್ಲದ ಮಾತಿಗೆ ಯಾವ ಉತ್ತರ ಕೊಡಲಿ? ಈ ತನಕ ಸೆಕೆಂಡರಿ ಶಾಲೆ ಇಟ್ಟವರು ವರ್ಷ ವರ್ಷ ನಷ್ಟ ಪಡುವದಲ್ಲದೆ ಲಾಭ ಪಟ್ಟವರು ನನ್ನ ತಿಳುವಳಿಕೆಗೆ ಬರಲಿಲ್ಲ. ಬಡ ಮಕ್ಕಳ ಸಂಬಳದಿಂದ ಎಷ್ಟು ನಷ್ಟ ಭರ್ತಿಯಾದೀತು? ಇದೆಲ್ಲಾ ವಾಚಕರೇ ಊಹಿಸಲಿ.

ಬಂಟ್ವಾಳ ಶ್ರೀ ವೆಂಕಟರಮಣ ಸ್ವಾಮಿ ದೇವಳವು ಗವರ್ನಮೆಂಟಿನಿಂದ ತಸ್ತೀಕು ವಗೈರೆ ಈ ತನಕ ಪಡಕೊಳ್ಳದೆ ಸ್ವತಂತ್ರವಾಗಿ ನಡಿಯುವ ದೇವಳವಾಗಿದೆ. ಬರೇ ಒಂದು ಶಾಲೆಗಾಗಿಯೇ ಪ್ರತಿ ವರ್ಷ ಮೂರು ನಾಲ್ಕು ಸಾವಿರ ನಷ್ಟವಾಗುವದನ್ನು ಈ ತನಕ ಯಾರು ಭರ್ತಿ ಕೊಡುತ್ತಿದ್ದರು? ನೆರೆಯ ಮುಂಚೆ ಶಾಲೆಯ ಕಟ್ಟೋಣಕ್ಕು ಶಾಲೆಯ ಸಾಮಾನಿಗೂ ಸುಮಾರು ೨೩ ಸಾವಿರ ರೂಪಾಯಿ ಖರ್ಚಾಗಿತ್ತು. ಇದೆಲ್ಲಾ ನಷ್ಟವಾದ ಸಂಗತಿ ನೆರೆಯ ಹಾವಳಿ ಕುರಿತು ಬಂಟವಾಳ ದೇವಳದ ಶಾಲೆಯನ್ನು ಸಂದರ್ಶಿಸಲಿಕ್ಕೆ ಮದ್ರಾಸು ವಿದ್ಯಾ ಇಲಾಖೆಯ ಡೈರೆಕ್ಟರ್ ದೊರೆಗಳವರ ಹತ್ತರ ಅಂಕೆಯಾಗಿತ್ತಷ್ಟೆ. ಇದನ್ನಾದರೂ ಓರ್ವ ಬಂಟ್ವಾಳ ನಿವಾಸಿಕರು ನಂಬುವರೇ, ಈ ನಷ್ಟವಲ್ಲದೆ ದೇವಳದ ಭೂಮಿಗೆ ಹೊಯ್ಗೆ ಬಿದ್ದು ಬೆಳೆ ಹಾಳಾಗಿ ಎರಡು ಮೂರು ಸಾವಿರ ರೂಪಾಯಿ ನಷ್ಟವನ್ನು ಯಾವದರಿಂದ ಭರ್ತಿಮಾಡಿದರು?

ಬಂಟ್ವಾಳ ಬೋರ್ಡುಶಾಲೆಗೆ ಟೆಂಪಲ್ ಶಾಲೆಯು ಮಾಫಿ ಶಿಕ್ಷಣಕ್ಕೆ ಸ್ಪರ್ದೆಯಾಗಿ ನಿಂತಿತು ಎಂತ ಬಂಟವಾಳ ನಿವಾಸಿಕರ ಅಭಿಪ್ರಾಯವಿದೆಯಷ್ಟೆ. ಈ ಮೇಲಿನ ಸವಾಲಿಗೆ ಆಧಾರಪೂರ್ವಕವಾದ ಉತ್ತರವು ಇದೇ ಲೇಖನದ ಆರಂಭದಲ್ಲಿದೆ. ನೆರೆಯ ಮುಂಚೆ ಇದ್ದ ಬಾಸೆಲ್ ಮಿಶನ್ ಶಾಲೆಗೆ ದೇವಳದವರು ಸ್ಪರ್ದೆಗೆ ನಿಂತು ಮಿಶ್ಯನಿನವರಿಗೆ ನಷ್ಟಪಡಿಸಿ ದೇವಳದವರು ಲಾಭ ಪಡದಿದ್ದಾರೋ. ಲಭ್ಯಕ್ಕಾಗಿ ದೇವಳವು ಯಾವ ವ್ಯಾಪಾರವನ್ನೂ ಈ ತನಕ ಮಾಡಿದ್ದಿಲ್ಲ. ಇನ್ನು ಓರ್ವ ಬಂಟ್ವಾಳ ನಿವಾಸಿಕರಿಗೆ ದೇವಳದ ಒಳಗಿನ ಗುಟ್ಟು ತಿಳಿಯಪಡಿಸುವದು ಬಾಕಿ ಇದೆ. ಏನೆಂದರೆ ಈ ದೇವಳವು ಗವರ್ನಮೆಂಟಿನ ಇಲಾಖೆ ಕೆಲಸಗಳಂತೆ ಗಂಟೆ ಪ್ರಕಾರ ನಡಿಯುವದು ಲೇಣೆದಾರರಿಗೂ, ದೇಣೆದಾರರಿಗೂ ಛಾಪಾ ರಶೀದಿ ಕೊಡಲ್ಪಡುವದು. ರಾತ್ರಿ ಹಗಲು ಮಂಗಳೂರು ಪೋಲೀಸು ಟವನಿನಲ್ಲಿ ಮತ್ತು ಸರ್ಕಾರಿ ಕಟ್ಟೋಣಗಳಲ್ಲಿ ಗಂಟೆ ಬಡಿಯುವಂತೆ ಇಲ್ಲಿ ಸಹ ಬಡಿಯುವರು. ಕಾರ್ತಿಕ ದ್ವಾದಶಿ ದಿನ ವರ್ಷದ ಆದಾಯ ವೆಚ್ಚದ ರಿಪೋರ್ಟನ್ನು ಊರಿನ ಮಹಾ ಸಭೆಯ ಮುಂದೆ ಓದಿ ಹೇಳಬೇಕು. ಈ ದೇವಳಕ್ಕೆ ಇರುವ ಚಿನ್ನಾಬರಣ ನಗಾಣ್ಯಗಳಲ್ಲದೆ ಮತ್ತು ನಗದಿಯಲ್ಲದೆ ಸುಮಾರು ವರ್ಷಕ್ಕೆ ಎರಡುವರೆ ಸಾವಿರ ಮುಡಿ ಅಕ್ಕಿ ಹುಟ್ಟುವಳಿ ಉಂಟಂತೆ. ದೇವಸ್ಥಾನದಲ್ಲಿ ತಿಂಗಳುಗಟ್ಲೆ ಸಂಬಳ ಸಲ್ಲುವ ಒಬ್ಬ ಪಾರುಪತ್ಯಗಾರರೂ, ಎರಡು ಮೂರು ಜನ ಕ್ಲಾರ್ಕರೂ, ಎರಡು ಮೂರು ಜನ ಉಗ್ರಾಣಿಗಳೂ, ಒಬ್ಬ ಜಾಡಮಾಲಿಯೂ, ಏಳೆಂಟು ಜನ ವಾಲಗದವರೂ, ಎರಡು ಮೂರು ಜನ ಕಾಯಂ ಕೆಲಸದ ಬಡಗಿಯರೂ ಇನ್ನೂ ಕೆಲವು ಸಿಬಂದಿಯರೂ ಇರುತ್ತಾರೆ. ಇಂಥಾ ಕಾರುಬಾರು ನಡಿಯುವ ದೇವಳದ ಮೊಕ್ತೇಸರು ಮಕ್ಕಳಿಗೋಸ್ಕರ ಮನೆ ಕಾಯುತ್ತಾರೆಂಬುದು ಅಲ್ಲಸಲ್ಲದ ಮಾತು ಎಂಥಾ ಅಬದ್ಧ! ಎಂಥಾ ಅವಮರ್ಯಾದೆ!! ಎಂಬುದು ಬಂಟ್ವಾಳ ನಿವಾಸಿಕರಿಗೆ ತಿಳಿಯದೆ ಹೋದದ್ದು ತುಂಬಾ ವಿಷಾದಕರವಾಗಿದೆ.

ಉಪಾಧ್ಯಾಯರಲ್ಲೊಬ್ಬ.

ಇಂಗ್ಲಂಡಿನೊಳಗಿನ ಅನುಭವದ ಮೇಲಿಂದ

ಹಿಂದಿ ಸ್ವರಾಜ್ಯದ ಪ್ರಶ್ನೆಯ ವಿಷಯವಾಗಿ ವಿಲಾಯತಿಯೊಳಗಿನ ಲೋಕಮತವನ್ನು ಜಾಗ್ರತಗೊಳಿಸಲು ಇಲ್ಲಿಂದ ವಿಲಾಯತಿಗೆ ಹೋಗಿದ್ದ ಡಿ. ಚಮನಲಾಲರೂ, ಎಸ್. ಸತ್ಯಮೂರ್ತಿಯವರೂ ವಿಲಾಯತಿಯಿಂದ ತಿರುಗಿ ಬಂದು ತಮ್ಮ ಅನುಭವವನ್ನೂ, ಮುಂದೆ ಮಾಡಬೇಕಾದ ಕರ್ತವ್ಯವನ್ನೂ, ಎಲ್ಲರಿಗೆ ತಿಳಿಯುವಂತೆ ಪ್ರಕಟಿಸಿರುವರು. ಅದರ ಮುಖ್ಯಸಾರವನ್ನು ಕೆಳಗೆ ಕೊಡುತ್ತೇವೆ.

ಪ್ರಥಮತಃ ದೇಶಬಂಧು ದಾಸರ ಮರಣವನ್ನೂ, ಅದರಿಂದುಂಟಾದ ದೇಶದ ಹಾನಿಯನ್ನೂ ನಿರ್ದೇಶಿಸಬೇಕಾಗಿದೆ. ಲೋಕಮಾನ್ಯ ಟಿಳಕರಂತೆಯೇ ದೇಶಬಂಧುಗಳೂ ಕೂಡ ರಾಜಕಾರಣ ಮುತ್ಸದ್ದಿಗಳಾದುದರಿಂದಲೂ, ಬಡವರ ಪಕ್ಷಪಾತಿಗಳಾದ್ದರಿಂದಲೂ, ಸಾಮ್ರಾಜ್ಯ ತೃಷ್ಣೆಯನ್ನು ವಿರೋಧಿಸುವವರಾದ್ದರಿಂದಲೂ ಲೋಕಮಾನ್ಯರಂತೆ ಇವರದೂ ಸಹ ಹಿಂದುಸ್ಥಾನದೊಳಗಿನ ಎಲ್ಲ ಪಟ್ಟಣಗಳಲ್ಲಿ ಸ್ಮಾರಕಗಳಾಗುವದು ಅಗತ್ಯವಾಗಿದೆ.

ಹಿಂದುಸ್ಥಾನವನ್ನು ಕುರಿತು ಬ್ರಿಟಿಷರು, ಇತರ ಯುರೋಪಿಯನರು ಹಾಗು ಬೇರೆ ಜನಾಂಗಗಳು ಏನು ಅಭಿಪ್ರಾಯ ಪಡುತ್ತಾರೆಂಬುದನ್ನು ಈ ಕೆಲವು ತಿಂಗಳುಗಳಲ್ಲಿ ತಿಳಿದು ಬಂದದ್ದರಿಂದ ಒಂದು ಸಂಗತಿಯನ್ನು ಹೇಳಬಹುದು. ಏನೆಂದರೆ, ಇಂಗ್ಲಂಡ, ಯುರೋಪ, ಅಮೇರಿಕಾ, ಜಪಾನ ಮತ್ತು ಚೀನಾ ಈ ದೇಶಗಳಲ್ಲಿ ಪತ್ರಿಕಾಲೇಖನಗಳ ಮತ್ತು ಉಪನ್ಯಾಸಗಳ ಮುಖಾಂತರ ಹಿಂದುಸ್ಥಾನದ ವಿಷಯವಾಗಿ ಚಳವಳವನ್ನು ಎಬ್ಬಿಸುವದು ಅಗತ್ಯವು. ಸ್ವಾತಂತ್ರ್ಯಕ್ಕಾಗಿ ಪ್ರಾರಂಭಿಸಿದ ಈ ಜಗಳದಲ್ಲಿ ಹಿಂದುಸ್ಥಾನವು ಪ್ರತ್ಯೇಕವಾಗಿ ನಿಂತುಕೊಳ್ಳುವದು ಉಚಿತವಲ್ಲ. ಹಿಂದುಸ್ಥಾನದ ಎದುರುಗಡೆಯವರು ಮೇಲೆ ಹೇಳಿದ ದೇಶಗಳಲ್ಲಿ ಹಿಂದುಸ್ಥಾನಕ್ಕೆ ವಿರುದ್ಧವಾಗಿ ಚಳವಳವನ್ನು ಮಾಡುತ್ತಿದ್ದಾರೆ. ಹಿಂದುಸ್ಥಾನದ ರಾಜಕೀಯ ಮ[illegible] ಆರ್ಥಿಕ ವಿಷಯಗಳಿಗೂ, ಸ್ವಾತಂತ್ರ್ಯದ ಪ್ರಶ್ನೆಗೂ ಅಂತರ ರಾಷ್ಟ್ರೀಯತ್ವದ ಸ್ವರೂಪವನ್ನು ಕೊಟ್ಟು ಅವುಗಳಿಗೆ ಅನ್ನೊಂದು ಮಹತ್ವವನ್ನು ತರಬೇಕೆಂಬುದು ಸಹಜವು. ಬ್ರಿಟಿಷ್ ಸಾಮ್ರಾಜ್ಯದ ಕಾರಭಾರವನ್ನು ಸದ್ಯಃ ನಡಿಸತಕ್ಕವರಾದ ಸಾಮ್ರಾಜ್ಯವಾದಿಗಳು ಹಿಂದುಸ್ಥಾನದ ಆಕಾಂಕ್ಷೆಯನ್ನು ಮನ್ನಿಸದೆ ವೈಸರಾಯರ ಬಾಯಿಯಿಂದ ಅನುದಾರ ಮಾತುಗಳನ್ನು ಹೊರಡಿಸಿದ ಕಾರಣ ಮುಂದಿನ ಕೆಲವು ನಿಶ್ಚಿತವಾದ ಸಂಗತಿಗಳನ್ನು ಕೈಕೊಳ್ಳಬೇಕಾಗಿದೆ.

ನಾವು ನಮ್ಮ ಧ್ಯೇಯಕ್ಕೆ ನಿಶ್ಚಿತವಾದ ಸ್ವರೂಪವನ್ನು ಕೊಡಬೇಕು. ವಸಾಹತಿನ ರಾಜ್ಯಪದ್ಧತಿಯು ಸಾಕಾಗಿದೆ. ವಸಾಹತಿನ ರಾಜ್ಯಪದ್ಧತಿ ಎಂಬುದರ ಅರ್ಥವನ್ನು ಸ್ವರಾಜ್ಯಪಕ್ಷದವರು ನಿಶ್ಚಯಿಸಿಕೊಳ್ಳುವದು ಒಳ್ಳೆದು. ಇತರ ವಸಾಹತುಗಳು ಇಂಗ್ಲಂಡಿಗೆ ಸ್ಪಷ್ಟವಾಗಿ ತಿಳಿಸಿರುವದೇನೆಂದರೆ, ಅವುಗಳಿಗೆ ಸಮ್ಮತಿಯಿಲ್ಲದೆ ಹೋದರೆ ಅವು ಇನ್ನು ಮುಂದಿನ ಬ್ರಿಟಿಷನ ಯುದ್ಧದಲ್ಲಿ ಭಾಗವಹಿಸತಕ್ಕದ್ದಿಲ್ಲ. ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ಚೀನಾದೇಶದವರೊಡನೆ ಹೋರಾಡುವದಕ್ಕಾಗಿ ಹಿಂದೀ ಸೈನಿಕರನ್ನು ಒತ್ತಾಯದಿಂದ ಕಳುಹಿಸುವದಾದರೆ ಅದು ಎಂತಹ ವಸಾಹತಿನ ಸ್ವರಾಜ್ಯ! ಇಂಥ ವಸಾಹತು ಪದ್ಧತಿಯು ನಮಗೆ ಅಗತ್ಯವಿಲ್ಲ.

ಸ್ವರಾಜ್ಯವೆಂಬುದು ಅಲ್ಪಸಂಖ್ಯಾಕರಾದ ಸುಶಿಕ್ಷಿತರಿಗೆ ಮಾತ್ರವಲ್ಲ, ಸೇಕಡಾ ೯೮ರಂತಿರುವ ಸಾಮಾನ್ಯ ಜನಸಮುದಾಯದ ಯೋಗಕ್ಷೇಮವು ಅದರಿಂದ ಮುಖ್ಯವಾಗಿ ಉಂಟಾಗಬೇಕು.

ಅನತ್ಯಾಚಾರದ ಅರ್ಥವನ್ನು ಕೂಡ ನಾವು ನಿರ್ಣಯಿಸಿಕೊಳ್ಳಬೇಕಾಗಿದೆ, ಗುಪ್ತಕಟಕಗಳನ್ನು ನಿರ್ಮಿಸಿ ಖೂನಿಗಳನ್ನು ಮಾಡುವದಾಗಲಿ, ಬೊಂಬುಗಳನ್ನು ಪ್ರಯೋಗಿಸುವದಾಗಲಿ ಅತ್ಯಾಚಾರದ ಸಂಗತಿಗಳೇ ಹೌದು, ಮತ್ತು ಇವುಗಳನ್ನು ಅವಶ್ಯವಾಗಿ ಬಿಡಬೇಕಾದುದು ನ್ಯಾಯ ಆದರೆ ಅನತ್ಯಾಚಾರ ಶಾಟಿಯನ್ನು ಹೊದ್ದುಕೊಂಡು ಸ್ವತೇಜಸ್ಸನ್ನು ಕಳಕೊಳ್ಳುವದು ಮತ್ತು ಆಕಾರಣದಿಂದ ಸ್ವಸಂರಕ್ಷಣವನ್ನು ಮಾಡಲಸಮರ್ಥವಾಗುವದಾದರೆ ಇಂಥ ಅನತ್ಯಾಚಾರವು ದೂರದಲ್ಲಿರುವದು ಒಳ್ಳೆಯದು. ನಮ್ಮ ಕೃತ್ಯಗಳಿಂದ ಸುಧಾರಿಸಿದ ಜನಾಂಗದ ಮನಸ್ಸನ್ನು ನಮ್ಮ ಕಡೆ ಆಕರ್ಷಿಸಿಕೊಳ್ಳಬೇಕು: ನಮ್ಮ ದೇಶವನ್ನು ಸಂರಕ್ಷಿಸಿಕೊಳ್ಳಲು ನಮ್ಮ ಕೈಯಲ್ಲಿ ಸೈನ್ಯವಿದ್ದರೆ ನಮ್ಮನ್ನು ಸುಶಿಕ್ಷಿತ ಲೋಕವು ಆಶೀರ್ವದಿಸುತ್ತಿತು. ಈ ರೀತಿಯಿಂದ ಸುಶಿಕ್ಷಿತ ಜಗತ್ತಿನ ಮನಸ್ಸನ್ನು ಎಳೆಯುವದೆ ಬರ್ಕನಹೆಡ್ಡರಿಗೆ ಸರಿಯಾದ ಉತ್ತರವಾಗಿದೆ. ಹತ್ಯಾರುಗಳ ಕಾಯಿದೆಯನ್ನು ತೆಗೆದುಹಾಕುವಂತೆ ನಾವು ಮಾಡಬೇಕು. ಸೈನ್ಯದಲ್ಲಿರುವ ಬ್ರಿಟಿಷ್ ಆಫೀಸರರ ಬದಲಿಗೆ ಹಿಂದಿ ಆಫೀಸರರನ್ನು ನೇಮಿಸುವಂತೆ ಪ್ರಯತ್ನಗಳು ನಡೆಯಬೇಕು. ಎಲ್ಲ ಯುನಿವರ್ಸಿಟಿಗಳಲ್ಲಿ ಸೈನ್ಯಶಿಕ್ಷಣವು ಜಾರಿಯಾಗುವಂತೆ ನಾವು ಯತ್ನಿಸಬೇಕು.

ರಾಜಕೀಯ ಕಾರ್ಯಗಳನ್ನು ಇನ್ನೂ ಬಲವಾದ ರೀತಿಯಿಂದ ಸ್ವರಾಜ್ಯಪಕ್ಷವು ಮುಂದರಿಸಬೇಕು. ಸ್ವರಾಜ್ಯಪಕ್ಷದ ಕಾರ್ಯಕ್ರಮಕ್ಕೆ ದೇಶದ ಜನರ ಬೆಂಬಲವು ಇನ್ನೂ ಅಧಿಕವಾಗಿ ಬೇಕಾಗಿದೆ. ಪ್ರಾಂತಾಧಿಪತ್ಯಗಳಲ್ಲಿ ಕೊಟ್ಟ ದ್ವಿದಲಪದ್ಧತಿಯನ್ನು ನಾಶಗೊಳಿಸಬೇಕು. ಗ್ರಾಮ ಪಂಚಾಯತಿ ಮೊದಲುಮಾಡಿ ಕೌನ್ಸಿಲ್ ಒಫ್ ಸ್ಟೇಟಿನ ವರೆಗಿನ ಎಲ್ಲ ಪ್ರಾತಿನಿಧಿಕ ಸಂಸ್ಥೆಗಳನ್ನು ಸ್ವರಾಜ್ಯಪಕ್ಷದವರು ವಶಪಡಿಸಿಕೊಳ್ಳಬೇಕು.

ಜಾತಿಗಳ ಐಕ್ಯವನ್ನು ಸಾಧಿಸಬೇಕು. ಸ್ವರಾಜ್ಯದ ಕಾಲದಲ್ಲಿ ಸಾರ್ವಜನಿಕ ಸೇವೆಯನ್ನು ಮಾಡುವಾಗ ಯಾವ ಜಾತಿಭೇದವನ್ನೂ ಎಣಿಸಕೂಡದು. ಜಾತಿ ಮೂಲಕ ಪ್ರಾತಿನಿಧ್ಯವು ಘಾತಕವಾಗಿರುವದರಿಂದ ಅದನ್ನು ತೆಗೆದುಹಾಕಬೇಕು. ಇಂಥ ಪ್ರಾತಿನಿಧ್ಯದಿಂದ ಇನ್ನಷ್ಟು ಹಾನಿಗಳು ಬಂದು ಪರಸ್ಪರ ಭೇದಗಳು ಅಧಿಕವಾಗುತ್ತ ಹೋಗುತ್ತವೆ. ಜಾತಿ ಮತ್ತು ಮತಗಳ ದೆಸೆಯಿಂದ ಎಲ್ಲಿಯಾದರೂ ಗಲಾಟೆ ಎದ್ದರೆ ಅಂಥ ಕಡೆಯಲ್ಲಿ ಕೊಂಗ್ರೆಸ ಮತ್ತು ಸ್ವರಾಜ್ಯಪಕ್ಷದವರು ಹಿಂದು ಮಹಮ್ಮದೀಯರಿಂದ ಸ್ವಯಂಸೇವಕರನ್ನು ತಂದು ಶಾಂತತೆಯನ್ನು ರಕ್ಷಿಸಬೇಕೆಂದು ಪಂಡಿತ ಮೋತಿಲಾಲಜಿಯವರು ಕೊಟ್ಟ ಸೂಚನೆಯು ಮಹತ್ವದ್ದಾಗಿದೆ.

ಒಕ್ಕಲಿಗರೂ, ಅಶಿಕ್ಷಿತರೂ, ಇತರ ಸಾಮಾನ್ಯ ಜನರೂ ಈ ದೇಶದಲ್ಲಿ ಅಧಿಕವಾಗಿರುವದರಿಂದ ಅಂಥವರನ್ನು ಸೇರಿಕೊಂಡು ನಮ್ಮ ಚಳವಳವನ್ನು ಮುಂದರಿಸಬೇಕು. ಅವರನ್ನು ಬಿಟ್ಟರಾಗದು.

ಈ ರೀತಿಯಿಂದ ಸ್ವರಾಜ್ಯಪಕ್ಷದ ಕಾರ್ಯಕ್ರಮವನ್ನು ರಚಿಸಿಕೊಂಡು ಲಾ. ಬರ್ಕನಹೆಡ್ಡ ಆಹ್ವಾನಕ್ಕೆ [illegible] ಪ್ರತ್ಯುತ್ತರವನ್ನು ಕೊಡುವದು ಅವಶ್ಯವಾಗಿದೆ.

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪ್ಯಾ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪ್ಯಾ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ!
ದಶಮೂಲ ಸುಖಪ್ರದಔಷಧಿ!
ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಭಗ್ನ ಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.
ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.
ಹೆಚ್ಚಿನ ಮಾಹಿತಿಗೆ “ಆರ್ಷಚಿಕಿತ್ಸಾರಹಸ್ಯ” ಎಂಬ ಪುಸ್ತಕಕ್ಕೆ ಬರಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಶುದ್ಧವಾದ ನೀಲಗಿರಿ ಎಣ್ಣೆ

ತಲೆನೋವು, ಶೀತ, ಇನ್‌ಫ್ಲುಯೆಂಜಾಜ್ವರ,
ವಾತ, ಇತ್ಯಾದಿ ಎಲ್ಲಾ ರೋಗಗಳ
ಮೇಲೆ ಸಿದ್ಧೌಷಧ.
1 ಔನ್ಸು ಬಾಟ್ಲಿ 1ರ ಕ್ರಯ 0—4—0.
ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.	1906ನೇ ಇಸವಿ ಜುಲಾಯಿತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ತೆತ್ತ ಮೂಲಧನವು ರೂ. 300,000—0—0
Reserve and other sinking Funds „ 259,000—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು 259,000—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1925.

K. Venkat Rao,
Secretary.

‘ಸಾರಸ್ವತಾಸವ.’

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಬೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಬೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲುಯೆನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೨೫ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ೬ಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೨೪ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲ ಪಂಡಿತರು,

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್ ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ,
ಮಂಗಳೂರು ಟವನಿಗೆ ಮಾತ್ರ.

ಆರೋಗ್ಯ ಚಂದ್ರಿಕೆ.

ಸಂಪಾದಕರು: ಡಾಕ್ಟರ್ ಯು. ರಾಮರಾವ್, ಎಲ್. ಎಮ್. ಸಿ. ಎಫ್. ಎಮ್. ಯು. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವುದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ ರೂ. ೧—೮—೦; ಬಿಡುಪತ್ರಿಕೆ ಒಂದಕ್ಕೆ ರೂ. ೦—೩—೦. ಹಿಂದಿನ ಸಂಚಿಕೆಗಳು ಕೂಡ ದೊರಿಯುವವು.

ಚಂದಾದಾರರಾಗುವವರು ವಿ. ಪಿ. ಮೂಲಕವಾಗಿ ತರಿಸಿಕೊಳ್ಳುವುದಕ್ಕಿಂತಲೂ ಹಣವನ್ನು ಮುಂಗಡವಾಗಿ ಕಳುಹಿಸುವುದು ಲಾಭಕರ. ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು ‘ಆರೋಗ್ಯ ಚಂದ್ರಿಕೆ’ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು.

ಪತ್ರವ್ಯವಹಾರಕ್ಕೆ: ‘ಆರೋಗ್ಯ ಚಂದ್ರಿಕೆ’
೩೩೩ ತಂಬುಚೆಟ್ಟಿ ಬೀದಿ, ಮದ್ರಾಸ್.

ಬಂದು ನೋಡಿರಿ! ತಿಂದು ನೋಡಿರಿ!

ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ
ಪದಕವನ್ನು
ಬಹುಮಾನವಾಗಿ ಪಡೆದಿರುವ
ಎಸ್. ಪಿ. ಆಚಾರ್ಯ
ಇವರಿಂದ ತಯಾರಿಸಲ್ಪಟ್ಟ
ಉಪ್ಪಿನಕಾಯಿಗಳನ್ನು
ಬಂದು ನೋಡಿರಿ! ತಿಂದು ನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸಲಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ ಕುಂತಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ
ಬಂದು ನೋಡಿರಿ! ತಿಂದು ನೋಡಿರಿ!

‘ಇಂಡಿಯನ್ ಸ್ವೀಟ್‌ಮಿಟ್ ಮಾರ್ಟ್ಸ್.’

ಮಹೋಲ್ಲಾಸಿತ ಕಾಫಿ ಕ್ಲಬ್, ಮಾರ್ಕೆಟು ರೋಡು, ಮಂಗಳೂರು. ಅಥವಾ ಸದಾನಂದ ಕಾಫಿ ಕ್ಲಬ್, ರಥಬೀದಿ, ಮಂಗಳೂರು.

“ಬಹು ದಿವಸಗಳಿಂದ ಪ್ರಸಿದ್ಧವಾಗುತ್ತಿರುವ ಔಷಧ!”

ರಕ್ತ ಶುದ್ಧಿ

ವಜ್ರಾಂಗ-ಬಿಂದು

ವೀರ್ಯ ವೃದ್ಧಿ ಕಾರಕ

ವಜ್ರಾಂಗಬಿಂದುವೆಂಬ ಈ ಮಹೌಷಧಿಯನ್ನು ಅನೇಕ ಪರ್ವತಗಳಲ್ಲಿ ಉತ್ತಮೋತ್ತಮವಾದ ಮತ್ತು ಅವಶ್ಯವಾಗಿ ಗುಣ ಕೊಡುವಂತಹ ವನಸ್ಪತಿಗಳ ಅರ್ಕದಿಂದ ಉಪಯುಕ್ತವಾದ ಮತ್ತು ಉಚ್ಚತರದ ಭಸ್ಮಗಳ ಮಿಶ್ರಣಮಾಡಿ ಯಾಂತ್ರಿಕ ಸಹಾಯದಿಂದ ಸಿದ್ಧಪಡಿಸಿರುತ್ತದೆ. ಈ ವಜ್ರಾಂಗಬಿಂದುವಿನ ಸೇವನೆಯಿಂದ ಕೆಳಗೆ ಬರೆದ ರೋಗಗಳು ಗುಣವಾಗಿ ಹೊಸ ಮನುಷ್ಯನಾಗುತ್ತಾನೆಂದರೆ ಅತಿಶಯೋಕ್ತಿಯಾಗಲಾರದು.

ಈ ಮಹೌಷಧಿಯ ಸೇವನೆಯಿಂದ, ವಾತ, ಪಿತ್ತ, ಕಫ ಈ ಮೂರು ದೋಷಗಳಿಂದ ಉತ್ಪನ್ನವಾಗುವ ರೋಗಗಳು ಗುಣವಾಗುವದಲ್ಲದೆ, ಸ್ವಪ್ನಜನ್ಯ, ಧಾತುಪಾತ ನಪುಂಸಕತ್ವ, ಪರಮಾ ಮತ್ತು ಗರಮಿ ಇವುಗಳ ಸಮೂಲ ನಾಶವಾಗುತ್ತದೆ. ಬಹು ದಿವಸದಿಂದ ಮೈಯಲ್ಲಿ ಅಂಟಿಕೊಂಡ ಕೆಡಕಿಯಂತಹ ಒಂದೇ ವಾರದಲ್ಲಿ ಗುಣವಾಗುವದು. ಲಘುವಿಗಿಂತ ಮೊದಲು ಅಥವಾ ಕಡೆಗೆ ಸ್ರಾವವಾಗಿ ಹೋಗುವ ಧಾತು ಬಂದಾಗುತ್ತದೆ. ತಿಂದ ಅನ್ನವು ಜೀರ್ಣವಾಗಿ ಮಲವು ಸರಿಯಾಗಿ ಹೋಗುವದು ಯಾವದೇ ಕಾರಣದಿಂದ ಬಂದ ಅಶಕ್ತತೆಯೂ ಕಣ್ಣಿಗೆ ಕತ್ತಲೆ ಬಂದಂತಾಗಿ ಬವಳಿ ಬರುವದು, ಕೈಕಾಲುಗಳು ಜುಂಯಿಯುವದು, ಮುಂತಾದ ಸಕಲ ವಿಕಾರಗಳೂ ನಾಶಹೊಂದುತ್ತವೆ. ವೀರ್ಯವೃದ್ಧಿ, ರಕ್ತಶುದ್ಧಿಗಳಾಗಿ ಮನುಷ್ಯನು ಬಲವಂತನಾಗುತ್ತಾನೆ. ಪೂರ್ಣ ಗುಣ ಬರಬೇಕಾದರೆ ಮೂರು ಬಾಟ್ಲಿಗಳು ಬೇಕು.

೧ ಬಾಟ್ಲಿಗೆ ರೂ. ೧—೪—೦. ೩ ಬಾಟ್ಲಿಗಳಿಗೆ ರೂ. ೩—೪—೦. ೧೨ ಬಾಟ್ಲಿಗಳಿಗೆ ರೂ. ೧೦—೦—೦.

ಇದರ ಜೊತೆಗೆ ಒಂದು ಬಾಟ್ಲಿಯು ಉಚಿತ. ಟಪ್ಪಾಲ ಪ್ಯಾಕಿಂಗ ಖರ್ಚು ಪ್ರತ್ಯೇಕ. ಒಮ್ಮೆಯೇ ಹೆಚ್ಚಿಗೆ ಬಾಟ್ಲಿಗಳನ್ನು ತರಿಸಿಕೊಂಡರೆ ಟಪ್ಪಾಲು ಖರ್ಚು ಹೆಚ್ಚಿಗೆ ಬೀಳಲಾರದು. ಏಜಂಟರಾಗಲಪೇಕ್ಷಿಸುವವರು ಪತ್ರವ್ಯವಹಾರ ನಡಿಸಿ, ಖುಲಾಸೆ ತಿಳಕೊಳ್ಳಬಹುದು.
ಟಪ್ಪಾಲ ಮತ್ತು ಪ್ಯಾಕಿಂಗ ಖರ್ಚು ಬೇರೆ ಬೀಳುವುದು. ಅನುಪಾನ ಪತ್ರವು ಬಾಟ್ಲಿಯ ಸಂಗಡಲೇ ಕಳಿಸಲ್ಪಡುವುದು.

ಪತ್ತೆ. ಮ್ಯಾನೇಜರ, ಕೆ. ಎಮ್. ಹನುಮಾನ ಪ್ರಸಾದಿಕ ಕಂಪೆನಿ,
ಮು. ಪೋ. [illegible], (ಜಿಲ್ಲಾ ಬೆಳಗಾಂವ.)

ಜ್ಯೋತಿಷ್ಯ ಸಂಗ್ರಹ.

(1) ಬೃಹಜ್ಜಾತಕ ...
(2) ಉಮಾಮಹೇಶ್ವರ ಸಂವಾದ ಎಂಬ ಜ್ಯೋತಿಷ್ಯ ಕಾಲಚಕ್ರ
(3) ಕೇರಳ ಪ್ರಶ್ನೆ ...
(4) ಪ್ರಶ್ನೋತ್ತರ ರತ್ನಮಾಲಿಕಾ ...
(5) ನವನೀತಾರಿಷ್ಟ ...
(6) ಷಟ್ಪಂಚಾಶತ್ ಗ್ರಂಥ ...
(7) ನಕ್ಷತ್ರ ಚೂಡಾಮಣಿ ಗ್ರಂಥ ...
(8) ಮುಹೂರ್ತಪದವೀಗ್ರಂಥ ...
(9) ಅಷ್ಟದಿಕ್ಪಾಲಕ ಮಂಗಲಾಷ್ಟಕಗಳು ...
(10) ಕಾಲನಿರ್ಣಯಾಭ್ಯೋಯಂ ಗ್ರಂಥ ...
(11) ಸವ್ಯಾಖ್ಯಾನ ಕಾಲಾಮೃತ...

— ಪ್ರಸಂಗದ ಪುಸ್ತಕಗಳು. —

(1) ಸೇತು ಬಂಧನ ...
(2) ವಸಿಷ್ಠ ಪುರಾಣ ...
(3) ಇಂದ್ರಜಿತು ಕಾಳಗ ...
(4) ಚಂಡಭೀಮ ...
(5) ಮೈದುನರಾಮನ ಚರಿತ್ರೆ ...
(6) ಭಾಮಿನಿ ಷಟ್ಪದಿ ಚೋರ ಕಥೆ ...
(7) ಕುಮಾರ ರಾಮನ ಕಥೆ ...
(8) ಕೃಷ್ಣದಾನಾಮೃತ ...
(9) ಶ್ರೀಕೃಷ್ಣ ಸತ್ಯಭಾಮ ಸಂವಾದ ...
(10) ಚಿತ್ರಕೇತು ರಾಜನ ಕಥೆ ...
(11) ಬಕಾಸುರ ವಧೆ ...
(12) ಬಾಣಾಸುರನ ಕಥೆ ...
(13) ರಂಭಾಶುಕ ಸಂವಾದ ...
(14) ರುಕ್ಮಿಣೀ ಪರಿಣಯ ...
(15) ರಾವಣೋದ್ಭವ ಯಕ್ಷಗಾನ ...
(16) ಸಭಾ ಲಕ್ಷಣವು ...
(17) ಶ್ರೀ ಕೃಷ್ಣಲೀಲಾಶ್ವಮೇಧ ಕಥಾ ...
(18) ಚಂದ್ರಮೌಳಿ ಕಾಳಗ ...
(19) ಚಿತ್ರವಿಚಿತ್ರ ಕಾಳಗ ...
(20) ಯಕ್ಷಗಾನ ಸಾರಂಗಧರನ ಕಥೆ ...
(21) ,, ಶನಿದೇವರ ಮಹಾತ್ಮೆ ...
(22) ,, ಹರಿಶ್ಚಂದ್ರನ ಕಥೆ ...
(23) ಯಕ್ಷಗಾನ ಲಕ್ಷ್ಮಾಗ್ರಹ ಕಥೆ ...
(24) ,, ಚೋರ ಕಥೆ ...
(25) ,, ಪಾರ್ವತಿ ಕಾರವಂಜ ಕಥೆ ...
(26) ,, ಗೋವಿನ ಚರಿತ್ರೆ ...
(27) ,, ದುಶ್ಯಾಸನ ಕಥೆ ...
(28) ,, ಸಾನಂದ ಗಣೇಶ್ವರ ಕಥೆ ...
(29) ,, ಅಂಗದ ಸಾಧನ ...

— ಭಜನೆಯ ಪುಸ್ತಕಗಳು. —

(1) ಉಡುಪಿಕ್ಷೇತ್ರ ಮಹಾತ್ಮೆ ...
(2) ಹನುಮದ್ರಾಮಾಯಣ ...
(3) ಅಧ್ಯಾತ್ಮ ವಿಚಾರ ...
(4) ಭಕ್ತಿಮಹಿಮೆ ...
(5) ಪ್ರಬಂಧ ಮುಕ್ತಾವಳಿ ...
(1) ಹರಿಕೀರ್ತನಾಮೃತಸಾರ ...
(2) ಹರಿನಾಮಾಮೃತಂ. ...
(3) ರುಕ್ಮಿಣೀ ಕಲ್ಯಾಣ ...
(4) ಮಂಗಳ ಗೌರೀಹಾಡು ...
(5) ಉದ್ಯಾಳೀಕನ ಹಾಡು ...
(6) ಯಕ್ಷಗಾನ ಗಿಳೀ ಹಾಡು ...
(7) ಕನಕದಾಸ ಕಬೀರದಾಸರ ಕೀರ್ತನೆಗಳು
(8) ಬೀಗರ ಹಾಡು ...
(9) ಭಜನೆಯ ಪದಗಳು ...

— ವಿವಿಧ ಪುಸ್ತಕಗಳು. —

(1) ಸದಾಚಾರ ವಿವೇಚನೆ ...
(2) ಗೋಪಾಲಕೃಷ್ಣ ಗೋಕಲೆ ...
(3) ಶ್ರೀಕೃಷ್ಣ ಸೇವಾವ್ರತಂ ...
(4) ಪಶ್ಚಾತ್ತಾಪ ಭಾಷ್ಪ ...
(5) ಶ್ರೀ ಶ್ರೀಮಹಾ ಭಾಗವತ ...
(6) ಉದ್ಧವನ ಚರಿತ್ರೆ ...
(7) ಮಧ್ವಾಚಾರ್ಯರು (ಶ್ರೀಮಾನ್) ...
(8) ಯತಿರಾಜವಿಂಶತಿ ...
(9) ಪರಮಾರ್ಥಶತಕಂ ...
(10) ಭಕ್ತಿಸುಮಾಂಜಲಿ ...
(11) ಸತ್ಯರಾಜ ಪೂರ್ವದೇಶ ಯಾತ್ರೆಗಳು ...
(12) ಕಾಲನಿರ್ಣಯಾಖ್ಯಾನ ...
(13) ಅರೇಬಿಯನ್ ನಾಯ್ಟ್ಸ್ 1000 ಪುಟಗಳ ಮೇಲೆ ಇವೆ.

ಪುಸ್ತಕಗಳು ದೊರೆಯುವ ಸ್ಥಳ :— ಶಾರದಾ ಛಾಪಖಾನೆ,
ರಥ ಬೀದಿ, ಮಂಗಳೂರು.

ಆಯುರ್ವೇದ ಶಾಸ್ತ್ರಿ ಅಷ್ಟಾವಧಾನಿ,
ಕಾ. ವೇ. ಸುಬ್ಬರಾವ್, ಯಂ. ಜಿ. ಯ. ಅವರ್ಗಳಿಂದ
ತಯಾರಿಸಲ್ಪಟ್ಟದ್ದು.

ಒಂದು ಮಾತ್ರೆ! ಒಂದು ಘಂಟೆಯೊಳಗೆ ಗುಣ!

ಕಾಮಾಮೃತ.

ಈ ಔಷಧವು ಧಾತುಪುಷ್ಟಿಗಾಗಿಯೇ ತಯಾರಿಸಲ್ಪಟ್ಟದ್ದು. ಒಂದು ಮಾತ್ರೆಯನ್ನು ಸೇವಿಸಿದ ಒಂದು ಘಂಟೆಯೊಳಗೆ ಶಕ್ತಿಯನ್ನು ವೃದ್ಧಿಗೊಳಿಸಿ ಎಷ್ಟು ಬಲಹೀನವುಳ್ಳವರನ್ನೂ ಬಲವಂತರನ್ನಾಗಿ ಮಾಡುವದು. ಯಾವ ರೀತಿಯಿಂದಲಾಗಲಿ ಶುಕ್ಲ ನಷ್ಟವಾದಾಗ್ಯೂ ಅಥವಾ ಸ್ವಪ್ನದಲ್ಲಿ ಇಂದ್ರಿಯ ಸ್ಖಲಿತವಾದಾಗ್ಯೂ ಇಲ್ಲವೆ ಮೂತ್ರದೊಂದಿಗೆ ಸೇರಿಯೋ ವ ಮೂತ್ರಚಲನೆಯ ಹಿಂದೋ ಮುಂದೋ ಹೊರಬೀಳುವ ಧಾತುನಷ್ಟವನ್ನಾದರೂ 5 ದಿವಸಗಳಲ್ಲಿ ಗುಣಪಡಿಸುವದು. ಯಾವ ಬಗೆಯ ನರಗಳ ಬಲಹೀನತೆಯನ್ನಾದರೂ ಹೋಗಲಾಡಿಸುವುದು. ಶಕ್ತಿಯಿಲ್ಲದವರು ಈ ಮದ್ದನ್ನು 20 ದಿನ ಸೇವಿಸಿದಲ್ಲಿ ಶಕ್ತಿವಂತರಾಗಿ ಸಂಸಾರ ಸುಖವನ್ನೂ ಸಂತತಿ ಲಾಭವನ್ನೂ ಹೊಂದುವರು; ಇದು ನಿಶ್ಚಯ. ಪತ್ರವ್ಯವಹಾರವು ರಹಸ್ಯವಾಗಿ ನಡೆಸಲ್ಪಡುವದು. ಕ್ರಯ 20 ಮಾತ್ರೆಗಳ ಕುಪ್ಪಿ 1ಕ್ಕೆ ರೂ. 2—0—0. ಪತ್ರವ್ಯವಹಾರವು ಇಂಗ್ಲಿಷಿನಲ್ಲಿ ಮಾಡತಕ್ಕದ್ದು.

ಅಮೃತಾಶ್ರಮ,
28 ಎಲ್ಲೂರು, ಕೃಷ್ಣಾಜಿಲ್ಲಾ.

ದಕ್ಷಿಣ ಕನ್ನಡ ಜಿಲ್ಲೆಯ

ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

—ಗೋಡೆಗೆ ತಗಲಿಸುವ
ಹೊಸ ನಮೂನೆಯ—

ಟಿಕ್—ಟಾಕ್

ಎಂಬ ಈ ಗಡಿಯಾರಗಳು ಜರ್ಮನೀ ದೇಶದಲ್ಲಿ ತಯಾರಿಸಿದ್ದು. ಇವು ಕಂಠಾರು ಘಂಟೆಯನ್ನು ತೋರಿಸುವವು. ಇವಕ್ಕೆ ಬೀಗ ಕೊಡಬೇಕಾದಿಲ್ಲ. ಇದರಲ್ಲಿ ಕಾಣುತ್ತಿರುವ ಗುಂಡನ್ನು ಮೇಲಕ್ಕೆ ಎಳೆದರೆ ಸಾಕು. ತನ್ನಷ್ಟಕ್ಕೆ ತಾನೇ ಟಿಕ್—ಟಾಕ್ ಎಂಬ ಶಬ್ದವನ್ನು ಮಾಡುತ್ತಾ ಸರಿಯಾದ ಕಾಲವನ್ನು ತೋರಿಸುವದು. ಇದು ನೋಡುವುದಕ್ಕೆ ಬಹು ಲಕ್ಷಣವಾಗಿರುವುದು.

ಕ್ರಯ 1ಕ್ಕೆ ರೂ. 3—0—0

ಪೀಟರ್ ವಾಚ್ ಕಂಪೆನಿ
ಪೋಸ್ಟ್ ಬಾಕ್ಸ್ ನಂ. 27, ಮದ್ರಾಸ್.

11 ಮಣಿಗಳಿದ್ದು ಬ್ರಿಜ್ ಮ್ಯೂಮೆಂಟ್.

22 ಕೆರೆಟ್ ರೋಲ್ಡಗೋಲ್ಡ ರಿಸ್ಟ್‌ವಾಚ್.

ಈ ವಾಚ್ ಎಂಟಾಣೆ ಪಾವಲಿಯಷ್ಟು ಸಣ್ಣದಾಗಿ ಬಹು ಚಲೋದಾದ ಇನೆಮಲ್ ಡಾಯಲ್ ಇದ್ದು ಬಹು ಉತ್ತಮವಾಗಿದೆ. 5 ವರ್ಷದಗ್ಯಾರಂಟಿ ಇದೆ. ಕ್ರಯ ರೂ. 12/8
18 ಕೆರೆಟು ಇಲೆಕ್ಟ್ರೊ ರೋಲ್ಡಗೋಲ್ಡ ವಾಚ್ ಕ್ರಯ ರೂ. 7—0—0. "ಧಿ" ಟ್ಯಾಮ್‌ಪೀಸ ರೂ. 2-4-0.
9 ಕಾರಾಟ್ 8 ಮಣಿಗಳ ವಾಚ್ 1ರ ಕ್ರಯ 23—0—0.
14 ,, ,, ,, 26—0—0.
14 ,, 15 ಮಣಿ ,, 36—0—0.
9 ,, ,, ,, 32—0—0.

ಚಲೋದಾದ ಲವ್ ನಕ್ಲೆಗಳು ಡಜನ್ 1ಕ್ಕೆ ರೂ. 2/4.

P. Sambasiva Chetty & Co.,
194 NAINEAPPA NAICKEN ST.
P. T. MADRAS.

ಶುದ್ಧ ರೋಮದ ಧಾವಳಿಗಳು.

1 ಮಳ ಉದ್ದ 1¼ ಮಳ ಅಗಲ ರೂ. 1¼ರಿಂದ 2 ವರೆಗೆ, 5 ಮಳ ಉದ್ದ 1¼ ಮಳ ಅಗಲ ರೂ. 1¼ ರಿಂದ 5 ವರೆಗೆ, 6 ಮಳ ಉದ್ದ 1¼ ಮಳ ಅಗಲ ರೂ. 2¼ರಿಂದ 6 ವರೆಗೆ, 8 ಮಳ ಉದ್ದ 2 ಮಳ ಅಗಲ ರೂ. 3½ರಿಂದ 10 ವರೆಗೆ, 12 ಮಳ ಉದ್ದ 2¼ ಮಳ ಅಗಲ ರೂ. 6ರಿಂದ 12 ವರೆಗೆ, 16 ಮಳ ಉದ್ದ 2¼ ಮಳ ಅಗಲ ರೂ. 9 ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಜನ್ನರ್ ರೇಷ್ಮೆ ಮಡಿಗಳು, ಜಾರ್ಮಡಿಗಳು, ಕಾಶೀ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, ಬಾಣಲಿಂಗ, ಜಾಘಂಟೆ, ತಾಳ, ಪನ್ನೀರ್‌ದಾನಿ, ಹಿತ್ತಾಳೆಯ ಆಟದ ಸಾಮಾನುಗಳು, ಫೋಟೋ ಉಂಗುರಗಳು ಮತ್ತು ಇನ್ನೂ ಅನೇಕ ಸಾಮಾನುಗಳು ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುವು. ಕ್ಯಾಟಲಾಗ್ ಇನಾಂ.

ವಿಳಾಸ—
ಶಿರೋಮಣಿ ಯು. ನಾರಾಯಣಾಚಾರ್ಯ
ಮತ್ತು ಕಂಪೆನಿ, ಚೌಕಂಬಾ, ಕಾಶೀ ಕ್ಷೇತ್ರ.

೧,೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ
ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು
— ತೆಗೆದುಕೊಳ್ಳಿರಿ. —

REGISTERED
TRADE
MARK

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಭೋಗಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ದಾರ್ಢ್ಯತೆಯನ್ನೂ ಉಂಟುಮಾಡುವುದು. ಕೈ ಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಾಮಿಸ್ರಿ ಎಂಬುವದು ಕಾಬೂಲ್ ಕಂದಹಾರ ಪ್ರಾಂತ್ಯಗಳಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರಿಕಾ, ಬರ್ಮಾ, ಪಿನಾಂಗ್ ಸಿಂಗಪೂರ್, ಸಿಲೋನ್ ಮತ್ತು ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. ೧ ಡಬ್ಬಿಯನ್ನು ೧೫ ದಿವಸ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. ೩ ಯಾ ೪ ಡಬ್ಬಿಗಳು ಜನ್ಮಾಂತ್ಯದವರೆಗೂ ಪೂರ್ಣವಾಗಿ ಗುಣವನ್ನು ಮಾಡುವವು. ಅನುಪಾನ ಪತ್ರಿಕೆಯು ಡಬ್ಬಿಯ ಸಂಗಡವೇ ಇರುತ್ತೆ. ಹೆಸರು ವಿಳಾಸಗಳನ್ನು ಚೆನ್ನಾಗಿ ತಿಳಿಯುವ ಹಾಗೆ ವಿವರವಾಗಿ ಬರೆಯಬೇಕು. ಕ್ರಯ ಡಬ್ಬಿ ೧ಕ್ಕೆ ರೂ. ೨—೦—೦. ಟಪ್ಪಾಲು ಖರ್ಚು ೧ ರಿಂದ ೩ ಡಬ್ಬಿಗಳವರೆಗೆ ೦—೮—೦. ಏಜಂಟರು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯವಾಗಿ ಬೇಕಾಗಿರುತ್ತೆ. ರೂಲ್ಸ್ ತರಿಸಿ ನೋಡಿಕೊಳ್ಳಬಹುದು.

ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಿರಿ.

ಟೆಲಿಗ್ರಾಫ್ ಅಡ್ರೆಸ್,
"ಮಿಸ್ರಿ"
ಬೆಂಗಳೂರು ಸಿಟಿ.

ಡಿ. ಮನ್ನಾಲಾಲ್,
ಡಿಸ್ಟ್ರಿಕ್ಟ್ ಸೇಟ್ ಡಾಕ್ಟರ್.
ಸಾಲಂಮಿಸ್ರಿ ಮುರಬ್ಬ ಡಿಪೋ,
ಬೆಂಗಳೂರು ಸಿಟಿ.

Edited, Printed & Published by V. S. Kamath at the M. T. A. Sharada Press, Mangalore.

Registered: No. M. 498.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ ೩—೦—೦. ಟಪ್ಪಾಲು ಹಾಸಲು ಸೇರಿ ರೂಪಾಯಿ ೩—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ | ನ ಭೇಜಿರೇ ಭೀಮವಿಷೇಣ ಭೀತಿಮ್ ‖ ಸುಧಾಂ ವಿನಾ ನ ಪ್ರಯಯುರ್ವಿರಾಮಂ | ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ‖ ೧ ‖
ದೊರೆಯಲನುಪಮರತ್ನಗಳು ನಾ | ಗರವ ಮಥಿಸಲು ಸುರರಿಗದರಿಂ | ಹರುಷವಾಯಿತೆ ಮತ್ತೆ ವಿಶ್ವವ ಸುಡುತ ಬರುತಿರುವ ‖
ಗರಲಕವರಂಜಿದರೆ ! ಸುಧೆಯನು | ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ‖ ೧ ‖

ಪುಸ್ತಕ ೧೯. ಮಂಗಳೂರು, ತಾರೀಕು ೧೮ನೇ ಶುಕ್ರವಾರ ಸಪ್ತಂಬರ ೧೯೨೫. ಸಂಚಿಕೆ ೩೮.

Th Canara Banking Corporation, UDIPI, Ltd.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್,
ಉಡುಪಿ, ಲಿಮಿಟೆಡ್.

Head office: UDIPI Branch: COONDAPOOR.
ಹೆಡ್ ಆಫೀಸು: ಉಡುಪಿ. ಶಾಖೆ: ಕುಂದಾಪುರ.

ಚಂದಾ ಹಾಕಿ ಯೆತ್ತಿದ ಮೂಲಧನ	ರೂ. 2,25,000—0—0.
ವಸೂಲ್ಕೆತ್ತಿ ಮೂಲಧನ	ರೂ. 1,71,875—9—11.
ಕ್ಷೇಮನಿಧಿ ವ ಇತರ ಫಂಡುಗಳು	ರೂ. 64,700—0—0.
ಠೇವಣಾತಿಗಳು	ರೂ. 4,83,945—2—9.

— ವಿನಿಯೋಗ —.

ಗವರ್ನಮೆಂಟು ಪ್ರೋನೋಟು ಸೆಕ್ಯೂರಿಟಿನ ಮೇಲೆ	ರೂ. 25,800—0—0.
ದಿವಾಂಡು ನೋಟು ವ ಬಿಲ್ಲುಗಳ ಮೇಲೆ	ರೂ. 5,92,445—9—4.
ಚಿನ್ನಾಭರಣ ಮುಂತಾದ [illegible]ಗಳ ಮೇಲೆ	ರೂ. 1,11,658—8—6

ಈ ಕೆಳಗಿನ [illegible]ವನ್ನು ಅಂಗೀಕರಿಸುವುದಲ್ಲದೆ ಇತರ ಬ್ಯಾಂಕುಗಳ ಮೇಲಣ [illegible]ಗಳನ್ನೂ ಸಾಹುಕಾರಿ ಹುಂಡಿಗಳನ್ನೂ ವಟ್ಟಾಯಿಸುವ ಮತ್ತು ಇತರ [illegible] ತರದ ಬ್ಯಾಂಕಿನ ವಹಿವಾಟುಗಳು ನಡಿಸಲ್ಪಡುವವು.

ಠೇವಣಾತಿಗಳು.

ನಿರಖು ಠೇವಣಾತಿಗಳು:— ಸಾ. ಸೆ. 6¼ ರಿಂದ 7¼ ವರೆಗಿನ ಬಡ್ಡಿಯನ್ನು ಪ್ರತಿ 3 ತಿಂಗಳಿಗೊಮ್ಮೆ ತರುವ ಅನುಕೂಲ ವ ಲಾಭದಾಯಕವಾದ ಶರ್ತಗಳ ಮೇಲೆಯೂ

ಕೊಂಚ ಅವಧಿ ಠೇವಣಾತಿಗಳು:—1 ತಿಂಗಳ ನಂತರ 15 ದಿವಸಗಳ ನೋಟೀಸಿಗೊಳಪಟ್ಟು ಹಿಂತೆಗೆಯಬಹುದಾದ ಠೇವಣಾತಿಗಳನ್ನು ಸಾ. ಸೆ 5ರ ದರದ ಬಡ್ಡಿ ನಡುವ ದಿನಗಳಿಗೆ ಕೊಡುವ ಶರ್ತದಿಂದಲೂ

ಚಾಲ್ತಿ ಠೇವಣಾತಿಗಳು:—ದಿನಂಪ್ರತಿ ಇರುವ ಶಿಲ್ಕಿನ ಮೇಲೆ ಸಾ. ಸೆ. 3ರಂತೆ ಬಡ್ಡಿ ತರುವ ಶರ್ತದ ಮೇಲೂ

ಸೇವಿಂಗ್ಸ್ ಬ್ಯಾಂಕು ಠೇವಣಾತಿಗಳು:—ಸಾ. ಸೆ. 4½ರ ಬಡ್ಡಿಯ ಮೇಲೂ

ಸಂಚಯ ಠೇವಣಾತಿಗಳು:—ಮಕ್ಕಳ ವಿದ್ಯಾಭ್ಯಾಸ, ಉಪನಯನ, ವಿವಾಹ ಮುಂತಾದ ಶುಭಕಾರ್ಯಗಳಿಗೆ ಅನುಕೂಲವಾಗಿ ಸಿಕ್ಕುವಂತೆ ತಿಂಗಳು 1ರ ರೂಪಾಯಿ 1ರಂತೆ 13—24—45—84—132 ತಿಂಗಳುಗಳಿಗೆ ವಸೂಲುಪಡಕೊಂಡು ಕಂತುಗಳ ಅವಧಿ ಮುಗಿದ ಮೂರು ತಿಂಗಳಲ್ಲಿ ಆಯಾಯ ಅವಧಿಮೇರೆಗೆ ರೂ. 13—8—0, ರೂ. 25—8—0, ರೂ. 50, ರೂ. 102—8—0 ಮತ್ತು 182—8—0ನ್ನೂ ಅದೇ ಮೇರೆಗೆ ತಿಂಗಳು 1ರ ರೂಪಾಯಿ 1ರ ಗುಣವೃದ್ಧಿ ಮೊಬಲಗನ್ನು ತೆತ್ತಲ್ಲಿ ಆಯಾಯ ಮೊಬಗಿನ ಅದೇ ಗುಣವೃದ್ಧಿ ಮೊಬಲಗನ್ನು ತರುವ ಶರ್ತದ ಮೇಲೂ ಅಂಗೀಕರಿಸಲ್ಪಡುವವು.

ಹೆಚ್ಚಿನ ಮಾಹಿತಿ ಸೆಕ್ರೆಟರಿಯವರಿಂದ ತಿಳಿಯಬಹುದು.

ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಆಫೀಸು, ಉಡುಪಿ, ತಾ 30—6—1925.

ನಯಂಪಳ್ಳಿ ಅನಂತ್ರಾವ್,
ಸೆಕ್ರೆಟರಿ ಮತ್ತು ಒಫಿಸಿಯೇಟಿಂಗ್ ಮೆನೇಜರ್.

:ಪಂಡಿತ ಬಿ. ರಾಮಕೃಷ್ಣ ಬಾಳಿಗರ:

50 ವರ್ಷ ಅನುಭವದ ಸಿದ್ಧೌಷಧಗಳು

ಬ್ರಹತ್ ಶಾರಿವ್ಯಾದಿ ರಸಾಯನ—ಇದು ಖಾತ್ರಿಯಿಂದ ರಕ್ತವನ್ನು ಶೋಧಿಸುವ ದಿವ್ಯೌಷಧವಾಗಿರುತ್ತದೆ. ಇದರ ಸೇವನೆಯಿಂದ 20 ತರದ ಪ್ರಮೇಹ ರೋಗಗಳೂ ಎಲ್ಲಾ ತರದ ಫರಂಗಿ ರೋಗಗಳೂ ಅಲ್ಪ ಸಮಯದಲಿ ಗುಣಹೊಂದುವವು. ಅದಲ್ಲದೆ ಇದು ಎಲಾ ತರದ ಕುಷ್ಠವ್ಯಾಧಿಗಳನ್ನೂ, ಖಜ್ಜಿ, ಕುರು ಮೊದಲಾದ ಸಕಲ ಚರ್ಮವ್ಯಾಧಿಗಳನ್ನೂ, ಪಾದರಸ ಸೇವನೆಯಿಂದ ಉಂಟಾದ ರೋಗಗಳನ್ನೂ ಮತ್ತು ಹೆಂಗಸರ ಪ್ರದರ ರೋಗಗಳನ್ನೂ ಖಾತ್ರಿಯಿಂದ ಗುಣಪಡಿಸುವುದು.

8 ಔನ್ಸಿನ ಬಾಟ್ಲಿ ಒಂದರ ಕ್ರಯ ಬರೇ ರೂ. 1—0—0.

ಅಶೋಕಾರಿಷ್ಟ:—ಸ್ತ್ರೀಯರ ಎಲ್ಲಾ ಪ್ರದರ ರೋಗಕ್ಕೆ ಸಿದ್ಧೌಷಧ. ಬಾಟ್ಲಿ 1ರ ರೂ. 1—0—0.
ಅಮೃತಾರಿಷ್ಟ:—ಮಲೇರಿಯಾ ವಗೈರೆ ಸಕಲ ಜ್ವರಗಳನ್ನು ನಾಶಗೊಳಿಸುವುದು. ಬಾಟ್ಲಿ 1ರ ರೂ. 1—0—0.
ದ್ರಾಕ್ಷಾರಿಷ್ಟ:—ಬಾಟ್ಲಿ 1ರ ರೂ. 1—0—0. ಗೋರೋಚನಾದಿ ಮಾತ್ರೆ, ಮಕ್ಕಳ ಜೀಕ್ಕಿಗೆ ಸಿದ್ಧೌಷಧ. ಡಜನ್ 1ರ ಕ್ರಯ 0—8—0. ಕರ್ಪೂರಾದಿ ವಾಯುಮಾತ್ರೆ ಡಜನ್ 1ರ ಕ್ರಯ 0—6—0.

ಇನ್ನು ಎಲ್ಲಾ ತರದ ಆಯುರ್ವೇದ ಸಿದ್ಧೌಷಧಗಳು ನಮ್ಮಲ್ಲಿ ದೊರೆಯುವವು.

ವಿಳಾಸ:— ಪಂಡಿತ, ಬಿ. ರಾಮಕೃಷ್ಣ ಬಾಳಿಗ, ಬಂಟವಾಳ ದ. ಕ.

ಮಂಗಳೂರು ಏಜಂಟರು:— ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ತೇರುಬೀದಿ, ಮಂಗಳೂರು.

AMRUTANJAN
Best Indian Pain Balm
Amrutanjan
BOMBAY

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಪ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು.

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೆ ಕ್ಷಣದಲ್ಲಿ ನಿಲ್ಲದು. ಇದು ಯಾವ ತರದ ಶಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಅಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಶ್ರಾವ್ಯವಾಗಿರುತ್ತದೆ. ಡಬ್ಬಿ 1ರ ಕ್ರಯ ೩ ಅಣೆ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ ಟೌನ್, ಮದ್ರಾಸು.

109 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಮೂರು ದಿವಸಗಳಲ್ಲಿ ಗುಣಸಿಕ್ಕದಿದ್ದರೆ
ಔಷಧಿಯ ಕ್ರಯ ವಾಪಾಸು.

ಜೀರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ, ಪರಮಾನಂದ ಮೊದಲಾದ ಸುಖಜೀವನಕ್ಕೆ ಬೇಕಾದ ಆರೋಗ್ಯದಾಯಿ.

ಲೋಕಪ್ರಸಿದ್ಧವಾದದ್ದು! ಅನುಭವಸಿದ್ಧವಾದದ್ದು!!

ಟ್ರೇಡ್ ಮಾರ್ಕ್] ಅಗಸ್ತ್ಯ [ನೋಡಿ ತೆಕ್ಕೊಳ್ಳಿರಿ

ಮನ್ಮಥ ಚಿಂತಾಮಣಿ ಲೇಹ.

(ರಜಿಸ್ಟರ್ ಆದದ್ದು)

ಅಬಾಲವೃದ್ಧ ಸ್ತ್ರೀಪುರುಷರ ಅನೇಕ ರೋಗಗಳ [illegible]ಲ್ಲಿ ಗುಣಕಾರಿಯಾದದ್ದು.

ಮೇಹವಿಕಾರವಿದ್ದವರಿಗೂ, ನ[illegible] [illegible]ಇಲ್ಲದವರಿಗೂ, ಸ್ವಪ್ನೇಂದ್ರಿಯವಾಗುವ [illegible] [illegible]ವರಿಗೂ ಜ್ಞಾನಿಸುಜ್ಞಾನಿಗಳಿಗೂ ಉಪಯೋಗವುಳ್ಳ, ಪರಮಾನಂದ ಔಷಧಿ.

1 ಸೇರು ಶಾಲ್ವತ್ರಂಟು ದಿವಸಕ್ಕೆ ಸೇವಿಸಬಹುದು.

1 ಸೇರು ಡಬ್ಬಿ 1ಕ್ಕೆ 3—0—0. ½ ಸೇರು ಡಬ್ಬಿ 1ಕ್ಕೆ 1—9—0.

[illegible]

ವಿಳಾಸ:— ದೇವಣ್ಣ ನಾರಾಯಣ ಸೇಟ್,
[illegible]
[illegible] (ದ. ಕ.)

— ರಥೋತ್ಸವ, ವಿವಾಹ ಉಪನಯನಗಳ ಸಮಯ —
ಸರ್ವರಿಗೂ ಉಡಿಗೆ ತೊಡಿಗೆಗಳು ಬೇಕಾಗುವ ಸಂದರ್ಭ.

ಯಾರು, ಯಾವುದನ್ನು ಎಲ್ಲಿ ಪಡೆಯಬೇಕೆಂಬ ಶಂಕೆಯಿಂದ ವಿಳಂಬ ಮಾಡಬೇಡಿರಿ. ಉಡಿಗೆತೊಡಿಗೆಗಳನ್ನು ಕೊಂಡುಕೊಂಡು ನಿಮಗೆ ಬೇಕಾದ ಯಥಾರ್ಥ ಮಾಹಿತಿಯನ್ನು ಕಳೆದ ಇಪ್ಪತ್ತೈದು ವರುಷಗಳಿಂದ ಕೊಡುತ್ತ ನಮ್ಮಲ್ಲಿಯ ವ್ಯಾಪಾರವು ಗಿರಾಕಿಗಳಿಗೆ ಸರ್ವ ತೃಪ್ತಿಯಿಂದ ಲಾಭಕರವಾಗಿ ನಡೆಯುತ್ತಿದೆ. ಒಂದು ಸಾರಿ ನಮ್ಮ ಅಂಗಡಿ ಸಂದರ್ಶನವನ್ನು ಮಾಡಿರಿ.

ಗುರ್ಪುರ್ ಕಾಮತ್ ಬ್ರದರ್ಸ್, ರಥಬೀದಿ, ಮಂಗಳೂರು.

ಹೆಡ್ ಆಫೀಸು:—ರಥಬೀದಿ—(ಮೊದಲು ಬುಡ್ಡೇರ ನಾಗಪ್ಪನಾಯಕ್, ಎಂಡ್ ಕೊ. ಇದ್ದಲ್ಲಿ; ಅಜಿಜುದ್ದೀನ್ ರಸ್ತೆಗೆ ತಿರುಗುವಲ್ಲಿ) ಮಂಗಳೂರು.

ಬ್ರಾಂಚ್ ಆಫೀಸು:—ರಥಬೀದಿ—(ಹಳೇ ತಾಲೂಕು ಕಚೇರಿಯ ಪಟಾರಕ್ಕೆ ಸಮೀಪದಲ್ಲಿ) ಮಂಗಳೂರು.

ಈ ದೇಶದ ಪ್ರಖ್ಯಾತ ನೇಯುಗೆಯ ಕೇಂದ್ರಸ್ಥಳಗಳಾದ—ಬನಾರಸ್, ಪೂನಾ, ಅಹಮ್ಮದಾಬಾದ್, ಸೂರತ್, ಬೆಂಗಳೂರು, ಧರ್ಮವರಮ್, ಕಾಂಜೀವರಮ್, ಕೊಯಮುತ್ತೂರು, ಮಧುರೆ, ಸೇಲಂ, [illegible], ಹುಬ್ಬಳ್ಳಿ, [illegible], ಮುದ್ರಾಸು ಈ ಪ್ರಾಂತ್ಯಗಳಲ್ಲಿ ತಯ್ಯಾರಾದ

ಜರಿಸೀರೆಗಳು, ದುಪ್ಪಟಾ, ಜರಿಶಾಲು, [illegible], ರೇಷ್ಮೆ ಸೀರೆಗಳು, [illegible], [illegible] ಸೀರೆಗಳು, ಇನ್ನು ಅನೇಕ ಸೀರೆಗಳು, ರೇಷ್ಮೆ ಮಡಿಗಳು, ಸಕ್ಕ ಉಪಯೋಗದ ಸೀರೆಗಳು, [illegible] [illegible]

ಕೈರಾಟಿಯಲ್ಲಿ ತಯಾರಿಸಿದ ನೂಲಿನಿಂದ ಮಾಡಿದ—
[illegible]
[illegible]
[illegible]

ಆರ್. ಮಾರ್ಟಿನ್ಸರ
ಜ್ವರದ ಗುಳಿಗೆಗಳು.

ಸುಲಭ ಸ್ವೇದನಕಾರಿಯಾದ ಈ ಘುಟಿಕೆಗಳು ಚಳಿಜ್ವರದ ವಿಷ ಪದಾರ್ಥಗಳನ್ನು ತಟ್ಟನೆ ನಿರ್ಮೂಲಪಡಿಸಿ, ವ್ರಣಗಳನ್ನು ಸಂಪೂರ್ಣ ನಾಶಪಡಿಸಿ, ಮಲೇರಿಯಾ ಜ್ವರ, ಚಳಿಜ್ವರ, ಛಾರಿಜ್ವರ, ಮತ್ತು ಆಗಾಗೆ, ಬಿಟ್ಟುಕೊಂಡು ಬರುವ ಇತರ ಜ್ವರಗಳ ಬಾಧೆಯಿಂದ ಗುಣಪಡಿಸುವವು.

ತಟ್ಟನೆ ವಾಸಿಪಡಿಸುವುದಕ್ಕೆ ಹಕ್ಕೀಮರುಗಳಲ್ಲಿ ಪ್ರಸಿದ್ಧತೆಯನ್ನು ಹೊಂದಿದ್ದು, ಅತಿ ಬಿಟ್ಟುಬಿಟ್ಟು ಅನೇಕ ಸಂದರ್ಭಗಳಲ್ಲಿ ಗುಣಪಡಿಸಿದ ವುಗಳಾಗಿರುತ್ತವೆ.

ಇವುಗಳು ಗಿರಣಿಗಳಲ್ಲಿಯೂ ಕಾರ್ಖಾನೆಗಳಲ್ಲಿಯೂ ವಿಶೇಷವಾಗಿ ಉಪಯೋಗಿಸಲ್ಪಡುತ್ತವೆ. ಸಾಮಾನ್ಯವಾಗಿ ಹಿಂದೂಸ್ಥಾನದಲ್ಲಿ ಎಲಾ ತೋಟಗಾರರಿಂದ ಉಪಯೋಗಿಸಲ್ಪಡುವುದು. ಅಲ್ಲದೆ ದಿಂಗಕ ವಿಶ್ರಾಂತಿವಾದ ಕೀರ್ತಿಯನ್ನು ಕೂಡ ಸಂಪಾದಿಸಿರುವುದು ಕಠಿಣ ಜ್ವರವು ತಟ್ಟನೆ ಇಳಿಯಬೇಕಾದರೆ ಆರ್ ಮಾರ್ಟಿನರ ಎಗ್ಯೂ ಮಿಕ್ಚರ್ ಒಡನೆ ಇದನ್ನು ಸೇವಿಸಬೇಕು. ಈ ಇವೆರಡು ಅದ್ಭುತ ಶಕ್ತಿಯುಳ್ಳ ಔಷಧಿಗಳು ಪ್ರತಿಯೊಂದು ಕುಟುಂಬದ ಮನೆಯಲ್ಲಿಟ್ಟುಕೊಳ್ಳಲು ಯೋಗ್ಯ ವಸ್ತುಗಳಾಗಿವೆ ಪ್ರತಿಯೊಂದು ಬಾಟ್ಲಿಯಲ್ಲಿ 40 ಮಾತ್ರೆಗಳಿರುವ ಬಾಟ್ಲಿ 1ಕ್ಕೆ 1-8-0.

100 ಮಾತ್ರೆಗಳಿರುವ ಬಾಟ್ಲಿ 1ಕ್ಕೆ 3-8-0.
150 " " " 5-4-0.

ಆರ್. ಮಾರ್ಟಿನ್ಸರ ಎಗ್ಯೂಮಿಕ್ಸ್ಚರ್.

ಇದು ಜ್ವರ, ಶೀತಜ್ವರ ಮಲೇರಿಯಾ, ಛಾರಿಜ್ವರ, ಸನ್ನಿಪಾತ ಪಟ್ಟೆ ವಾಯುವಿನಿಂದುಂಟಾದ ರೋಗ ಇವೇ ಮೊದಲಾದ ಎಲ್ಲಾ ತರದ ಜ್ವರಗಳನ್ನೂ ಕೂಡಲೇ ನಾಶಮಾಡುತ್ತದೆ. ಎಲುಬುಗಳಲ್ಲಿ ಹರಡಿಕೊಂಡಿರುವ ಜ್ವರವನ್ನೂ ಸಹ ನಾಶಮಾಡುವುದಲ್ಲದೆ, ಇದು ಸಿಹಿಯಾಗಿರುವುದರಿಂದ ಸಣ್ಣ ಕೂಸುಗಳು ಸಹ ಕುಡಿಯಲಿಕ್ಕೆ ಇಷ್ಟಪಡುತ್ತವೆ. ಅನೇಕ ನಜವಿದ್ವಾಂಸ ವೈದ್ಯರಿಂದ ಗುಣಮಾಡುವುದಕ್ಕಾಗದ ಜ್ವರವನ್ನು ಈ ಎರಡೇ ಎರಡು ಬಾಟ್ಲಿಗಳ ಸೇವನೆಯಿಂದ ಹುಷಾರಾಗಿದೆ.

ಬಾಟ್ಲಿ 1ಕ್ಕೆ ರೂ. 0-13-0.

ಆರ್. ಮಾರ್ಟಿನ್ಸರ ಮೂಲವ್ಯಾಧಿ ಮುಲಾಮು.

ಮನುಷ್ಯನಿಗೆ ಮೂಲವ್ಯಾದಿ ಆದಾಗ, ಬಹಳ ಸಲ ಮೂತ್ರಶಂಕೆಯಾಗುವಿಕೆ, ಮರ್ಮಸ್ಥಾನದಲ್ಲಿ ಉರಿಯುವುದು, ಮಲಬದ್ಧತೆ ಇವೇ ಮುಂತಾದವುಗಳಿಂದ ವಶೆಪಡುತ್ತಾನೆ. ಈ ಔಷಧದ ಒಂದೇ ಒಂದು ಬಾಟ್ಲಿಯ ಉಪಯೋಗದಿಂದ ರಕ್ತ ಸುರಿಯುವ ಮೂಲವ್ಯಾಧಿ, ಕಂಕುಳಲ್ಲಿ ನೋಯುವ ಮೂಲವ್ಯಾಧಿ ಮತ್ತು ಎಂಥ ತರಹದ ಕಠಿಣವಾದ ಮೂಲವ್ಯಾಧಿಯ್ಯಾದರದ ಕೂಡಲೇ ವಾಸಿಯಾಗುತ್ತದೆ. ಇದು ಒಳ್ಳೇ ಔಷಧಗಳಿಂದ ತಯಾರಿಸಲ್ಪಟ್ಟು ತೆಗೆದುಕೊಳ್ಳುವವರಿಗೆ ಏನೊಂದೂ ನೋವನ್ನೂ ಕೊಡದೆ ತಂಪಾಗಿ ಮಾಡುತ್ತದೆ. ಬಾಟ್ಲಿ 1ರ ದರ ರೂ. 1-8-0 ಮಾತ್ರ.

60 ಮಾತ್ರೆಗಳ ಶೀಸೆ 1ಕ್ಕೆ ರೂ. 1-4-0.

ವಿಳಾಸ:—ಆರ್. ಡಿ. ಕಟ್ಲೆ ಮತ್ತು ಕಂಪೆನಿ,
ನಂಬ್ರ ಬಿ. ಫ್ರಿಯರ್ ರೋಡ್,
ಸಾಂಜ ವರ್ತಮಾನ ಪ್ರೆಸ್,
ಟೋಡಿವಾಲಾ ಬಿಲ್ಡಿಂಗ ಎದುರುಗಡೆ, ಫೋರ್ಟ ಮುಂಬಯಿ.

R. D. Kately & Co.
No. B. Frere Road,
Opposit Sanjvertaman Press,
Todivala Building, FORT BOMBAY

ಲಿವರ್ ಮೂವ್‌ಮೆಂಟ್ ವಾಚ್.
15 ಮಣಿಗಳಿದ್ದು ರೋಲ್ಡಗೋಲ್ಡ ವಾಚ್.

ಈ ಗಡಿಯಾರ ಕೈಗೆ ಕಟ್ಟುವಂಥಾದ್ದಾಗಿ ಸರಿಯಾದ ಸಮಯವನ್ನು ತೋರಿಸಿ ಚಿರಕಾಲ ವರೇಗೆ ಬಾಳುವುದು. 10 ವರುಷದ ವರೆಗೆ ಬಾಳುವ ಗೆರೆಂಟಿ ಇದೆ. ಕ್ರಯ ರೂ. 17-8-0.

11 ಮಣಿಗಳಿದ್ದು ನಿಜವಾದ ರೋಲ ಗೋಲ್ಡ ಬಂಗಾರದಿಂದ ತಯಾರಿಸಲ್ಪಟ್ಟು 5 ವರ್ಷದ ಗೆರೆಂಟಿ ಇರುವ ವಾಚಿಗೆ ಕ್ರಯ ರೂ. 12-8-0.

18 ಕೆರೆಟ್ ಇಲೆಕ್ಟ್ರೊ ರೋಲ್ಡ ಗೋಲ್ಡ ವಾಚ್ ಕ್ರಯ ರೂ. 7-0-0. ಲಿವರ್ ಮೂವ್‌ಮೆಂಟ್ 10 ಮಣಿಗಳಿದ್ದ ಬಂಗಾರ ಗಿಲ್ಟುವಾಚ್ ಕ್ರಯ ರೂ. 13-8-0.
ಎಲಾರ್ಮ ಜರ್ಮನ್ ಟ್ಯಾಮ್‌ಪೀಸ್ ಕ್ರಯ ರೂ. 5-0-0.
ಡಬ್ಬಲ್ ಎ. " " " 6-0-0.
"ಬಿ" ಟ್ಯಾಮ್‌ಪೀಸ್ ಕ್ರಯ ರೂ. 2-4-0
ಟಿಕ್—ಟಾಕ್ ವಾಚ್ 1ರ ಕ್ರಯ " 2-12-0

ಕಂಬ್ಯಾಂಡ್ ಪೇಪರ್ ಕ್ಲಿಪ್ ಟ್ಯಾಮ್‌ಪೀಸ ಹಿತ್ತಾಳಿ ಅಥವಾ ನಿಕ್ಕಲ್ ಕ್ರಯ ರೂ. 6-0-0. ಇನೆಮಲ್ ರೂ. 7-0-0. ಫ್ರೆಂಚ್ ಬೆಡ್ ಫೊಟೋಗಳು ಡಜನ್ 1ರ ಕ್ರಯ ರೂ. 2-4-0.

Emarald Watch Co.,
P. T. MADRAS.

ಡಾಕ್ಟರುಗಳು ಭಿನ್ನಾಭಿಪ್ರಾಯಪಡುವಾಗ್ಯೆ ತೀರ್ಮಾನಿಸುವದು ಯಾರು?

ಅಂಥಾ ಸಂದರ್ಭಗಳಲ್ಲಿ ಡೆಂಗ್ಯೂ ಮುಂತಾದ ಜ್ವರಗಳನ್ನು ನಿವಾರಿಸುವಂಥಾ "ಬಾಟ್ಲಿವಾಲರ ಏಗ್ಯೂಮಿಕ್ಸ್ಚರ್"ನ್ನು ಸರಾಗವಾಗಿಯೂ, ಮತ್ತು ಜ್ವರಗಳನ್ನು ಖಂಡಿತವಾಗಿ ನಿಲ್ಲಿಸುವಂಥಾದ್ದೂ, ಎಲ್ಲಾ ತರದ ತಲೆನೋವುಗಳನ್ನು ಹೋಗಲಾಡಿಸುವಂಥಾದ್ದೂ ಆದ "ಬಾಟ್ಲಿವಾಲರ ಏಗ್ಯೂಪಿಲ್ಸ್" ಇವನ್ನು ಉಪಯೋಗಿಸಿರಿ.

ಐ. ಎಮ್. ಎಸ್. ಡಾಕ್ಟರುಗಳಿಂದ ಶಿಫಾರಸು ಮಾಡಲ್ಪಟ್ಟಿದ್ದು. ಇವರ ಉಪಯೋಗದಿಂದ ಹೃದಯದ ಮೇಲೆ ಯಾವದೊಂದೂ ಬಾಧಕವಿಲ್ಲ. ಅರ್ಧ ಶತಮಾನದಿಂದ ಹಿಂದೂಸ್ಥಾನ, ಬರ್ಮಾ, ಸಿಲೋನ್, ಆಫ್ರಿಕಾ ಇವುಗಳಲ್ಲಿ ಪ್ರಖ್ಯಾತಪಟ್ಟದ್ದಾಗಿರುತ್ತದೆ.

ಅನೇಕ ಹಿಂದೀ ಪ್ರದರ್ಶನಗಳಲ್ಲಿ ಬೆಳ್ಳಿ ಮತ್ತು ಬಂಗಾರದ ಪದಕಗಳನ್ನು ಪಡೆದಿರುತ್ತೆ. ಛಾಲ್ತಿ ನಾಣ್ಯದಂತಿದ್ದು ಮಾರ್ವಾರಿಗಳೂ ಕೂಡ ಅದರ ಮೇಲೆ ಹಣವನ್ನು ಮುಂಗಡವಾಗಿ ಕೊಡುತ್ತಾರೆ. ಬಡ ಮತ್ತು ಮಧ್ಯಮ ತರಗತಿಯ ಜನರಿಗೆ ವರಪ್ರದಾನವಾಗಿದ್ದು ಸಂಚಾರ, ಪ್ರಯಾಣ, ದೇಶಾಟನೆಗಳ ಸಮಯದಲ್ಲಿ ಹತ್ತಿರದಲ್ಲಿರಿಸಿಕೊಳ್ಳದಾಗಿರುತ್ತದೆ.

ಬಾಟ್ಲಿವಾಲರ ಬಾಲಾಮೃತ ಅಥವಾ ಟೋನಿಕ್ ಸಿರಪ್.

ಕೆಮ್ಮನ್ನು ಹೋಗಲಾಡಿಸಿ, ಎದೆನೋವನ್ನು ಶಾಂತಗೊಳಿಸಿ, ಜ್ವರವನ್ನು ಉಪಶಮನಿಸಿ, ನಿದ್ರಾಭಂಗವನ್ನು ಕಡಿಮೆ ಮಾಡಿ ಧಾತುವರ್ಧನವನ್ನು ಮಾಡುವದರಲ್ಲಿ ಅತ್ಯುತ್ಕೃಷ್ಟವಾಗಿರುತ್ತದೆ. ಕಫವನ್ನು ಒಣಗಿಸಿ ಮಾಯುವಾಗುವಂತೆ ಮಾಡುವುದಲ್ಲದೆ ಅದೇ ಸಮಯದಲ್ಲಿ ಒಳ್ಳೇ ಜೀರ್ಣವನ್ನು ಉಂಟುಮಾಡುವುದು. ದರ ಮೊದಲಾದ ಮಾಹಿತಿಯನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಕಾರಿನಪತ್ರ:-CAWASHAPUR, BOMBAY.

Dr. H. L. Batliwala & Co., Ltd.,
Sayani Road, P. O. Cadell Road, Bombay. No. 14.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ.	ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್., Sayani Road, P. O. Cadell Road, Bombay. No. 14.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟ. ಖ. 9 ಆಣೆ.

ನಮ್ಮ ವಿಳಾಸ:— ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಏಜಂಟರು:— ಡಿ. ಊಲಸ್ ಮಾರ್ಟಿ, ಮಂಗಳೂರು.

OUR RECENT IMPORT IN WRIST WATCHES | Have you used anyone of these Watches? | **SEND YOUR ORDER NOW ALL GUARANTEED.**

Fashionable wrist wrist Lady's size. Reliable movement Guaranteed.

No 368.
Handy to wear and looks beautiful. Gives punctual time and with strong movement.
Nickel case Rs. 8—0

High-class Radium dial watch watch with Roman figures.

No. 367.
Can be seen in dark nights. Well fitted with best movement and strong to use. Used by one and all.
Silver case Rs. 9—0.

Radio light wrist watch.

No. 372.
Fitted with the best mechanism and guaranteed to work and keep perfect time for a long time.
Nickel case Rs. 7—8
Electro rolled-gold " 9—0

(N. B. In addition to the above, we have good number of varieties of fancy wrist watches, pocket watches. Please write for a descriptive catalogue, which will be sent free)

WHOLESALE IMPORTERS

PETER WATCH COY.,
POST BOX 27, MADRAS

ಶಾಲಿವಾಹನಶಕ ೧೮೪೭ನೆಯ ಕ್ರೋಧನ ಸಂ||ರದ ಭಾದ್ರಪದ ಶು|| ೧ ಶನಿವಾರದಿಂದ ಕ್ರೋಧನ ಸಂ||ರದ ಭಾದ್ರಪದ ಶು|| ೭ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೫ನೆಯ ಕನ್ಯಾ ನಿರ್ಗಲ.)

ತಾರೀಕು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಕನ್ಯಾದಿನ	ಸೂರ್ಯ ಉ.	ಸೂರ್ಯ ಅಸ್ತ.
19	ಶನಿ	೧	೧೨.೧೬	ಹಸ್ತಾ	೫೨.೩೨	೩	6.22	6.29
20	ರವಿ	೨	೧೨.೩೨	ಚಿತ್ರಾ	೫೩.೩೨	೪	6.22	6.28
21	ಸೋಮ	೩	೧೧.೩೧	ಸ್ವಾತೀ	೫೩.೧೬	೫	6.22	6.27
22	ಕುಜ	೪	೯.೧೬	ವಿಶಾಖಾ	೫೨.೦	೬	6.22	6.27
23	ಬುಧ	೫	೬.೨	ಅನುರಾಧಾ	೫೦.೧	೭	6.22	6.26
24	ಗುರು	೬	೨.೧	ಜ್ಯೇಷ್ಠ	೪೬.೧೪	೮	6.22	6.25
25	ಶುಕ್ರ	೭	೫೧.೩೨	ಮೂಲ	೪೩.೩೨	೯	6.22	6.24

ಮಂಗಳೂರಿನ ವಾಯುಸ್ಥಿತಿ.

Date ತಾರೀಕು	Temperature. ಉಷ್ಣ (ಕಾವು) Maximum ಹೆಚ್ಚು ಕಾವು	Minimum ಕಡಿಮೆ	Rainfall. ಮಳೆ ದಿವಸದ ಮಳೆ	ಜುಮಲಾ ಮಳೆ.
11	89—3	74—3	—	—
12	89—0	74—5	—	—
13	88—3	72—6	—	—
14	89—3	73—2	0—02	—
15	87—5	72—9	—	—
16	87—8	73—1	—	—
17	88—9	74—8	—	123-58

ಮಂಗಳೂರಿನ ಪೇಟೆ ಧಾರಣಿ.

ಜೀನಸು		ಇಂದ ರೂ. ಆ.	ವರೆಗೆ ರೂ. ಆ.
ಮಸ್ಕತಿ		8—10	9—0
ಗುಡ್ಡು	...	8—4	8—8
ರಾಶಿ ಸುಗ್ಗಿ	...	7—10	8—3
ಅವ್ವಲ್ ಬೆಳ್ತಿಗೆ	...	8—12	9—8
ಗುಡ್ಡು ಬೆಳ್ತಿಗೆ	...	8—0	8—8
ರಂಗೂನು ಬೆಳ್ತಿಗೆ ಗೋಣಿ ೧	...	13—8	14—8
ಗೋದಿ ಗೋಣಿ ಗಳ್ಳೆ	...	17—8	19—0
ಹುರುಳಿಗೋಣಿ ಗಳ್ಳೆ	...	9—8	9—8
ಕಡಲೆಗೋಣಿ ಗಳ್ಳೆ	...	12—0	13—0
ತೊಗರಿಗೋಣಿ ಗಳ್ಳೆ	...	12—8	13—0
ತೊಗರಿಬೇಳೆ ಗೋಣಿ ಗಳ್ಳೆ	...	15—0	20—0
ಉದ್ದುಗೋಣಿ ಗಳ್ಳೆ	...	14—0	14—8
ಹೆಸರುಗೋಣಿ ಗಳ್ಳೆ	...	14—0	15—0
ಊರು ಬೆಲ್ಲ ಖಂಡಿ ಗಳ್ಳೆ	...	80—	75—0
ಉಪ್ಪು ಗೋಣಿ ಗಳ್ಳೆ	...	4—4	4—8
ಕೊಬ್ರಿ ಖಂಡಿ ಗಳ್ಳೆ	...	115—0	120—0
ಕೊಬ್ರಿ ಹಿಂಡಿ ಖಂಡಿ ಗಳ್ಳೆ	...	46—0	48—0
ಎಳ್ಳಿಂಡಿ ಖಂಡಿ ಗಳ್ಳೆ	...	40—0	—
ಕೊಬ್ರಿ ಎಣ್ಣೆ ಮುಡಿ ಗಳ್ಳೆ	...	8—14	10—0
ಎಳ್ಳೆಣ್ಣೆ ಮುಡಿ ಗಳ್ಳೆ	...	8—0	11—0
ಚಿಮಣಿ ಎಣ್ಣೆ ಪೆಟ್ಟಿಗೆ ಗಳ್ಳೆ	...	8-8-0	—
ಮಾರಿಶ ಸಕ್ಕರೆ ಮುಡಿ ಗಳ್ಳೆ	...	4—6	—
ಊರ ಮೆಣಸಿನಕಾಯಿ ಮುಡಿ ಗಳ್ಳೆ	...	7—8	—
ಸಾಸಿವೆ ಮುಡಿ ಗಳ್ಳೆ	...	8—12	—
ಕೊತ್ತಂಬರಿ ಮುಡಿ ಗಳ್ಳೆ	...	3—14	4—0
ಕಾಫಿ ಖಂಡಿ ಗಳ್ಳೆ	...	345—0	400—0
ಬೆಳಗೋಡು-ಅಡಿಕೆ ಖಂಡಿ ಗಳ್ಳೆ ಹಳತು	...	245—0	250—0
" ಹೊಸ ಅಡಿಕೆ		240—0	0—0
ಕಾಳುಮೆಣಸು ಖಂಡಿ ಗಳ್ಳೆ	...	220—0	—
ಯಾಲಕ್ಕಿ ಮುಡಿ ಗಳ್ಳೆ	...	100—0	—
ಗೇರುಬೀಜ ಮುಡಿ ಗಳ್ಳೆ	...	4—5	4—6
ಕಬ್ಬಿಣ ಖಂಡಿ ಗಳ್ಳೆ	...	45—0	65—0
ಶಾಂಬ್ರ ತಗಡು ಮುಡಿ ಗಳ್ಳೆ	...	17—8	—
ತಾಮ್ರ ಪಾತ್ರೆಗಳು ಮುಡಿ ಗಳ್ಳೆ	...	24—0	—
ಚೀನಿ ಬೆಳ್ಳಿ ಸೇರು ಗಳ್ಳೆ	...	18—10	
ಹಿತ್ತಾಳೆ ತಗಡು ಮುಡಿ ಗಳ್ಳೆ	...	16—8	
ಶಿಸ		15—7	

The Canara Public Conveyance Co., Ltd, Mangalore.
(ESTABLISHED 1914.)
ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು.—

ಮಂಗಳೂರು
- ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು
- ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
- ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
- ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.
- ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇವರ ಹತ್ತರದಲ್ಲಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ—ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd, Mangalore. S. K

ಕನ್ನಡಿಗರೇ! **ವಸಂತ.** ಕಣ್ತೆರೆಯಿರಿ!

ಈಗಾಗಲೇ ಎರಡನೇ ಸಂಪುಟವು ಆರಂಭಿಸಲಿದೆ.

ಇತಿಹಾಸನಿಧಿ ಎಂದರೆ	ವಸಂತ
ಸಮಾಜಸುಧಾರಕನೆಂದರೆ	ವಸಂತ
ಕೈಗಾರಿಕೆಯ ಸಾಮ್ರಾಜ್ಯವೆಂದರೆ	ವಸಂತ
ಕರ್ನಾಟಕ ಭಾಷಾಸೇವಕನೆಂದರೆ	ವಸಂತ
ದೇಶವಿದೇಶ ಬಂಧುವೆಂದರೆ	ವಸಂತ
ಕಾದಂಬರಿಗಳ ಭಂಡಾರವೆಂದರೆ	ವಸಂತ
ಚಿತ್ರಾಕರ್ಷ ಚಿತ್ರಶಾಲೆಯೆಂದರೆ	ವಸಂತ
ದೇಶಭಕ್ತನೆಂದರೆ	ವಸಂತ

ಇಂತಹ ವಸಂತನು ಯಾರಿಗೆ ಬೇಕು, ಯಾರಿಗೆ ಬೇಡ?

48 (ಕ್ರೌನ್ ¼ ಪುಟ ಸೈಜಿನ) ಪುಟಗಳನ್ನು ಒಳಗೊಂಡ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3-4-0 ಮಾತ್ರ.

ವ್ಯವಸ್ಥಾಪಕ,
ವಸಂತ ಕಾರ್ಯಾಲಯ,
ಕುಂದಾಪುರ, ದಕ್ಷಿಣ ಕನ್ನಡ.

ಸಾರಸ್ವತ.

ಕನ್ನಡ ಮತ್ತು ಕೊಂಕಣಿ ಭಾಷೆಗಳಲ್ಲಿ ಕಳೆದ ವಿಜಯದಶಮಿಯ ದಿನದಿಂದ ಪ್ರತಿ ದಶಮಿಗೆ ಹೊರಡುವ ಪತ್ರಿಕೆ.

ವಿ. ಎಸ್. ಕಾಮತ್,
ಮುಲ್ಕಿ ವಾಮನ ಕುಡುವ } ಸಂಪಾದಕರು.

ಮತಸಂಸ್ಥೆ ಮತ್ತು ಸಮಾಜಕ್ಕೆ ಸಂಬಂಧಪಟ್ಟ ಇತರ ಸಂಸ್ಥೆಗಳ ಸುಸಂಘಟನ.
ಸಮಾಜದೊಳಗೆ ಅನ್ಯೋನ್ಯ ಸಾಧನೆ.
ಸ್ತ್ರೀಸಮಾಜಕ್ಕೆ ಉಪಯುಕ್ತವಾದ ವಿಷಯಗಳ ನಿರೂಪಣ ಮತಭಾವನೆಗಳ ಉಜ್ಜೀವನ ಇತ್ಯಾದಿ ಉದ್ದೇಶಗಳಿಂದ ಈ ಪತ್ರಿಕೆಯು ಹೊರಡಿಸಲ್ಪಡುವುದು. ಸಾರಸ್ವತ ಸಮಾಜವು ಇದಕ್ಕೆ ಪ್ರೋತ್ಸಾಹವನ್ನೀಯಬೇಕಾಗಿ ಪ್ರಾರ್ಥನೆ.

ಚಂದಾಹಣ ಅಂಚೆವೆಚ್ಚ ಕೂಡಾ ರೂ. ೧-೪-೦.
ಪೋಷಕರು ರೂ. ೧೦-೦-೦. ಸಹಾಯಕರು ರೂ. ೫-೦-೦.
ಮಾದರಿ ಸಂಚಿಕೆಯನ್ನು ಟಪ್ಪಾಲು ಖರ್ಚಿಗಾಗಿ ಅರ್ಧಾಣೆ ಸ್ಟ್ಯಾಂಪು ಕಳುಹಿಸುವವರಿಗೆ ಉಚಿತವಾಗಿ ಕಳುಹಿಸುವೆವು.

ಕನ್ನಡ ನಾಡಿನಲ್ಲಿ ಪ್ರತಿ ಕಡೆಯಲ್ಲಿಯೂ ವಾತಮಿದಾರರು ಬೇಕು.
ಎಲ್ಲಾ ಪತ್ರವ್ಯವಹಾರಗಳನ್ನು ಕೆಳಗಿನ ವಿಳಾಸಕ್ಕೆ ನಡೆಸಬೇಕು.

ಯು. ನಾರಾಯಣನಾಯ್ಕ, ಕಾರ್ಯದರ್ಶಿ,
ಸಾರಸ್ವತ, ಉಡುಪಿ.

ತುಳು ಪಾಡ್ದನಗಳು.

ಕೊಬ್ಬಯ್ಯ, ಕಲ್ಲುರ್ಟಿ-ಕಲ್ಕುಡ, ದೈಯ್ಯೊಂಗುಳು—ಕೋಡದಬ್ಬುನಾಲ್, ಮುಂಡತ್ತಾಯ ಪ್ರತಿ ಒಂದಕ್ಕೆ 2 ಆಣೆ. 1¼ ಆಣೆ ಟಪ್ಪಾಲು ಚೀಟು ಕಳುಹಿಸಿದರೆ 5 ಪುಸ್ತಕಗಳು ಕೂಡಲೇ ಕಳುಹಿಸಲ್ಪಡುವವು.

ವಿಳಾಸ: ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

Fresh Arrivals

Pear's Solid Brilliantine, Evans Lime-juice Glycerine, Tooth powders, Rose water, Syrups of all sorts for drinks, Denatured Spirits, etc., etc.

The Mangalore Trading Association,
Car-Street, MANGALORE.

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ
ವಾರಪತ್ರಿಕೆ.

ಇದರಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ಯಾವಂತರೂ ತಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲಿ ಆಗುವ ಸರಕಾರಿ ಆರ್ಡರುಗಳೂ, ವರ್ಗಾವರ್ಗಿಗಳೂ, ಪ್ರಕಟನೆಗಳೂ ಈ ಪತ್ರಿಕೆಯಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನ್ನು ಕುರಿತ ಲೆಕ್ಕಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಧನಿಕರಿಗೆಳೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪೋಷಕರಿಗೆ ... ... ರೂ. 3-0-0
ಇತರರಿಗೆ, ಪರಸ್ಥಳಕ್ಕೆ ಪೋಸ್ಟೇಜು ಸೇರಿ " 2-8-0.
" ಸ್ಥಳೀಕರಿಗೆ ... " 1-8-0.

ಸರಕಾರದವರಿಂದಲೂ ಪ್ರಜೆಗಳಿಂದಲೂ ಈ ಪತ್ರಿಕೆಯು ವಿಶೇಷವಾಗಿ ಪ್ರಚಾರವಲಿರುವುದರಿಂದ, ಇದರಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು, ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿಯಬಹುದು.

ಎಡಿಟರ್,
ಬಿ. ಹನುಮಂತಯ್ಯಗೌಡ,
ಅರ್ಥಸಾಧಕ ಪತ್ರಿಕೆ,

— ಸಿರಿಗನ್ನಡಂಗೆಲ್ಗೆ —

ಶ್ರೀ ಶಂಕರ ಕರ್ನಾಟಕ ಪುಸ್ತಕ ಭಂಡಾರವೂ
ಶ್ರೀ ವಿದ್ಯಾರಣ್ಯ ಪ್ರಕಾಶಕ ಸಂಸ್ಥೆಯೂ,
ಮಾಳಮಡ್ಡಿ, ಧಾರವಾಡ.

ಕನ್ನಡಿಗರಿಗೆ ಬೇಕಾಗುವ ಎಲ್ಲಾ ತರದ ಕನ್ನಡ ಪುಸ್ತಕಗಳು ನಮ್ಮಲ್ಲಿ ಯೋಗ್ಯ ಬೆಲೆಗೆ ದೊರೆಯುವವು. ವಿದ್ಯಾರಣ್ಯ ಪುಸ್ತಕ ಮಾಲೆಯ ಕೆಳಗಿನ ೧, ೨, ೩, ಪುಸ್ತಕಗಳು ಚಂದಾದಾರರಾಗುವವರಿಗೆ ಅಂಚೆ ವೆಚ್ಚ ಸೇರಿ ೫ ರೂ. ೬ ಆಣೆಗೆ ದೊರೆಯುವವು. ಮುಂದೆ ಹೊರ ಬೀಳುವ ಮಾಲೆಯ ಪುಸ್ತಕಗಳನ್ನು ಚಂದಾದಾರರಿಗೆ ೧ ರೂಪಾಯಿಗೆ ೨ ಆಣೆಯಂತೆ ಕಡಿಮೆ ಬೆಲೆಗೆ ವಿ. ಪಿ. ಮಾಡುವೆವು. ಭಂಡಾರದ ಬೆಲೆ ಪಟ್ಟಿಗಾಗಿ ೪ ಆಣೆ ಅಂಚೆ ಟಿಕೇಟುಗಳನ್ನು ಕಳುಹಿಸತಕ್ಕದ್ದು.

		ರೂ.	ಆ.	ಪೈ.
೧.	ಕರ್ನಾಟಕ ಸಿಂಹಾಸನ ಸ್ಥಾಪನೆ	೧	೦	೦
೨.	ಕಥೆಗಳನ್ನೊಳಗೊಂಡ ಬೀರಬಲ್ಲ ಚರಿತ್ರೆ (ಸಚಿತ್ರ)	೧	೬	೦
೩.	ಛತ್ರಪತಿ ಶಿವಾಜಿ ಮಹಾರಾಜ ,,	೨	೧೨	೦
೪.	ಮಹಾರಾಣಿ ಲಕ್ಷ್ಮೀಬಾಯಿ ಝಾಂಸಿ ,,	೨	೦	೦
೫.	ಅಕ್ಬರ ಚಕ್ರವರ್ತಿ ಚರಿತ್ರೆ ,,	೧	೧	೦
೬.	ಚರಿತ್ರೆ ಸಂಗ್ರಹ ಭಾಗ ೧. ,,	೧	೪	೦
೭.	ತಿಲಕರ ಗೀತಾ ರಹಸ್ಯ	೩	೮	೦
೮.	ಶ್ರೀ ದಾಸಬೋಧ ಭಾಗ ೧ ೨. ೩.	೨	೧೪	೦
೯.	ರಾಷ್ಟ್ರಸಭೆಯ ಇತಿಹಾಸ	೨	೮	೦
೧೦.	ವಚನ ಜ್ಞಾನಸಿಂಧು	೪	೦	೦

ಇವಲ್ಲದೆ ನಮ್ಮಲ್ಲಿ ಎಲ್ಲಾ ತರದ ಕಾಯಿದೆ ಕಾಲೋಪಯೋಗಿ ಪುಸ್ತಕಗಳೂ ನಕಾಶೆ ಚಿತ್ರಗಳೂ ಬರವಣಿಗಳೂ ದೊರೆಯುವವು.

ಶ್ರೀಪಾದ ರಾಮಚಂದ್ರ ದೇಶಪಾಂಡೆ ಬಿ. ಯಸ್. ಸಿ.
ವ್ಯವಸ್ಥಾಪಕ.

The Canara Bank Ltd., Mangalore.
ದಿ ಕೆನರಾ ಬ್ಯಾಂಕು ಲಿಮಿಟೆಡ್., ಮಂಗಳೂರು.

ಈ ಕೆಳಗೆ ಹೆಸರು ಕಾಣಿಸಿದವರು ಸದರಿ ಬ್ಯಾಂಕಿನಿಂದ ಆಭರಣಗಳ ಈಡಿನ ಮೇಲೆ ಪಡೆದ ಮೊಬಲಗುಗಳನ್ನು ವಾಯಿದೆಗೆ ಕೊಡದೆ ಇದ್ದದರಿಂದ ಸದರಿಯವರಿಗೆ ರಿಜಿಸ್ಟ್ರಿ ನೋಟೀಸು ಮೂಲಕ ಅಸ್ಲು ಬಡ್ಡಿ ಐವೇಜುಗಳನ್ನು ಕೊಡಬೇಕಾಗಿ ತಿಳಿಸಿದ್ದಲ್ಲಿ ಕೂಡಾ ಆ ರೀತಿ ಅವರು ಕೊಡದೆ ಇದ್ದದರಿಂದ ಸಹಾ ಇದೇ ಸಪ್ಟಂಬರ ತಿಂಗಳ ತಾರೀಖು 30ನೇ ಬುಧವಾರದ ವಳಗೆ ಬ್ಯಾಂಕಿಗೆ ಸಲ್ಲತಕ್ಕ ಐವೇಜು ಕೊಟ್ಟು ಅಡವಿಟ್ಟ ನಗಗಳನ್ನು ಬಿಡಿಸದೆ ಇದ್ದರೆ ಅವುಗಳನ್ನು ಇದೇ 1925ನೇ ಇಸವಿ ಒಕ್ಟೋಬರ ತಿಂಗಳ ತಾರೀಖು 6ನೇ ಮಂಗಳವಾರ ಮಧ್ಯಾಹ್ನ 12 ಗಂಟೆಗೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು.

ಹೆಸರು.	ಅಡವಿಟ್ಟ ತಾರೀಖು.	ಸಾಲದ ಮೊಬಲಗು.	ಏಲಮಿಗೆ ನಿಶ್ಚಯಿಸಿದ ತಾ. ವರೆಗೆ ಬಹಾಬಡ್ಡಿ.
ಇಸ್ಮಾಯಿಲ್ ಬ್ಯಾರಿ	24-12-'23.	ರೂ 40.	ರೂ. 3-3-10.
ಕೊರಗ ಶೆಟ್ಟಿ	2-6-'24.	ರೂ. 75.	ರೂ. 4-8-1.
ಸುಬ್ಬಯ್ಯ	14-10-'24.	ರೂ. 100.	ರೂ. 4-11-4.
ಹಮ್ಮದೆ ಬ್ಯಾರಿ	6-11-'23.	ರೂ. 40.	ರೂ. 3-4-6.
ಬಿ. ವೆಂಕಟಪ್ಪಯ್ಯ	6-5-'22	ರೂ 200.	ರೂ. 11-14-3.

ಮತ್ತು ಚೀಟು ನೋಟೀಸಿನ ಖರ್ಚು.

ಕೆನರಾ ಬ್ಯಾಂಕು ಲಿಮಿಟೆಡ್ ಮಂಗಳೂರು. 14-9-1925. } **K. Venkat Rao,** ಸೆಕ್ರೆಟೇರಿ.

ತ್ವರೆ ಮಾಡಿರಿ! ತಯಾರಾಗಿದೆ!

ನಾಲ್ಕನೇ ದರ್ಜೆಯ
ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ನಾಲ್ಕನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್. ಗಣಪತಿರಾವ್ ಐಗಳ್ — ಗ್ರಂಥಕರ್ತರು.
ಮನೋರಂಜಕ ಚಿತ್ರಗಳೂ ಇವೆ.

ಇದರಲ್ಲಿ ಬಾರಕೂರು, ಮಂಗಳೂರು, ಮೂಲಿಕೆ, ಕಾರ್ಕಳ, ಮೂಡಬಿದರೆ, ಸುಬ್ರಮಣ್ಯ, ಉಡುಪಿ, ಬಸರೂರು, ವೇಣೂರು, ಬೈಲಂಗಡಿ, ಧರ್ಮಸ್ಥಳ, ಕೊಲ್ಲೂರು; ಕುಂಬಳೆ, ಜಪಾನ ದೇಶದ ಜನರು, ಚೀನಾದೇಶದ ಜನರು, ಬರ್ಮದೇಶದ ಜನರು, ಯುರೋಪ ಖಂಡದ ಜನರು, ಎಸ್ಕಿಮೊ ಜನರು, ನಿಗ್ರೋ ಜನರು. ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ನಾಲ್ಕನೇ ದರ್ಜೆಯ ಮಕ್ಕಳ ಬಗ್ಗೆ ಉಪಯುಕ್ತವಾಗಿದೆ. ಕ್ರಯ 8 ಆಣೆ.

ಪುಸ್ತಕ ದೊರಕುವ ವಿಳಾಸ:—
ಶಾರದಾ ಛಾಪಖಾನೆ,
ಮಂಗಳೂರು.

ಆರೋಗ್ಯ ಚಂದ್ರಿಕೆ.

ಸಂಪಾದಕರು: ಡಾಕ್ಟರ್ ಯು. ರಾಮರಾವ್, ಎಲ್. ಎಮ್. ಸಿ. ಎಫ್. ಎಮ್. ಯು. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವುದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ ರೂ. ೧—೮—೦; ಬಿಡುಪತ್ರಿಕೆ ಒಂದಕ್ಕೆ ರೂ. ೦—೩—೦. ಹಿಂದಿನ ಸಂಚಿಕೆಗಳು ಕೂಡ ದೊರಿಯುವವು.

ಚಂದಾದಾರರಾಗುವವರು ವಿ. ಪಿ. ಮೂಲಕವಾಗಿ ತರಿಸಿಕೊಳ್ಳುವುದಕ್ಕಿಂತಲೂ ಹಣವನ್ನು ಮುಂಗಡವಾಗಿ ಕಳುಹಿಸುವುದು ಲಾಭಕರ. ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು 'ಆರೋಗ್ಯ ಚಂದ್ರಿಕೆ'ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು.

ಪತ್ರವ್ಯವಹಾರಕ್ಕೆ: 'ಆರೋಗ್ಯ ಚಂದ್ರಿಕೆ'
೩೨೩ ತಂಬುಚೆಟ್ಟಿ ಬೀದಿ, ಮ ದ್ರಾ ಸ್.

ಬೇಕಾಗಿದ್ದಾರೆ!

ಒಳ್ಳೇ ದೃಢತೆಯುಳ್ಳ ಭದ್ರವಾದ ಇನ್ಶೂರೆನ್ಸ್ ಕಂಪೆನಿಯಲ್ಲಿ ಜೀವವಿಮೆ, ಫ್ಯಾರ್‌ವಿಮೆ, ಮೆರೀನವಿಮೆ ಯಾವತ್ತು ವಿಮೆ ಕೆಲಸಗಳನ್ನು ಶೇಖರಿಸಿ ಕೊಡಲು ದಕ್ಷಿಣಕನ್ನಡಾ ಜಿಲ್ಲೆಯಲ್ಲಿ ಯೋಗ್ಯ ಸಬ್-ಏಜಂಟರುಗಳು ಕೂಡಲೆ ಬೇಕಾಗಿದೆ. ಪ್ರತಿಫಲವೆಷ್ಟು ಎಂಬುದನ್ನೂ ಹಿಂದಣ ಅನುಭವವನ್ನೂ ಕುರಿತಾಗಿ ಕೂಡಲೆ ಬರೆದುಕೊಳ್ಳಿರಿ:—

ಮೆಸರ್ಸ್ —
ಜೆ. ಡಿ. ವಾಯೆಡಾ ಎಂಡ್ ಸನ್
ಪೋರ್ಟ್ ರೋಡ್, ಮಂಗಳೂರು.

ಮುಂಬಯಿಯಲ್ಲಿರುವ,
ಮೊಗವೀರ ವ್ಯವಸ್ಥಾಪಕ ಮಂಡಳಿ
— ಮತ್ತು —
ಮೊಗವೀರ ಕ್ಲಾರ್ಕ್ಸ್ ಯೂನಿಯನಿನ ಮಹಾ ಸಭೆ.

ಈ ಮೇಲೆ ಹೆಸರು ಕಾಣಿಸಿರುವ ಸಂಘದ ೧೯೨೪ನೇ ಇಸವಿಯ ವರದಿಯನ್ನು ಮಂಜೂರು ಮಾಡಲಿಕ್ಕೂ ಇತರ ಕಾರ್ಯಗಳನ್ನು ನಿರ್ವಹಿಸಲಿಕ್ಕೂ ತಾ. ೨೧—೬—೧೯೨೫ರಲ್ಲಿ ಸಂಘದ ಮಹಾ ಸಭೆಯು ಮುಂಬಯಿ ಕೋಟೆಯೊಳಗಣ ದಲಾಲ್ ರಸ್ತೆಯಲ್ಲಿರುವ ಶೆಹಾರ್ ಬಜಾರಿನ ಕಟ್ಟಡದಲ್ಲಿ ನೆರೆದು ಬಂದಾಗ ವರದಿಯಲ್ಲಿ ಕಾಣಿಸಿರುವ ಆದಾಯ ಖರ್ಚುಗಳ ಮತ್ತು ಆಸ್ತಿ ವ ಮೂಲಧನದ ಲೆಕ್ಕ ಸಂಬಂಧವಾಗಿ ಚರ್ಚೆಗಳು ಹುಟ್ಟಿ ಅಂದಿನ ಕಾರ್ಯಗಳನ್ನು ನೆರವೇರಿಸಲಸಾಧ್ಯವಾಗಿ ಕಂಡು ಬಂದುದರಿಂದ ಸಭೆಯು ವಿಸರ್ಜಿಸೋಣಾಗಿತ್ತು. ಮೆಂಬರರೆಲ್ಲರಿಗೂ ಅಲ್ಲದೆ ಸಂಘದ ಏಳಿಗೆಯನ್ನು ಬಯಸಿ ಧನಸಹಾಯಮಾಡಿದ್ದ ಸರ್ವ ಗೃಹಸ್ಥರಿಗೂ ಸಂಪೂರ್ಣವಾಗಿ ತೃಪ್ತಿಯಾಗುವಂತೆ ೧೯೨೪ನೇ ಇಸವಿಯ ಎಲ್ಲಾ ಲೆಕ್ಕಪತ್ರ ಪುಸ್ತಕಗಳನ್ನು ವಿಲಾಯತಿಯಲ್ಲಿ ಯೋಗ್ಯತಾಪತ್ರವನ್ನು ಪಡೆದಿರುವ ಇನ್‌ಕೊರ್ಪೊರೇಟೆಡ್ ಎಕೌಂಟೆಂಟ್ಸರೂ, ಆಡಿಟರರೂ ಆಗಿರುವ ಮೆಸರ್ಸ್ ಪೂರ್ದಾವಾಲಾ ಎಂಡ್ ಕಂಪೆನಿ ಇವರಿಂದ ಚೆಕಾಯಿಸಿ, ಅವರು ಆ ಬಗ್ಗೆ ಕೊಟ್ಟಿರುವ ಸರ್ಟಿಫಿಕೇಟಿನ ಯಥಾ ಪ್ರತಿಯನ್ನು ಪ್ರಕಟಿಸಿ ತಾ. ೩೦—೮—೧೯೨೫ರಲ್ಲಿ ಪುನಃ ಮಹಾ ಸಭೆಯನ್ನು ಕರೆಯಲು ಸಂಕಲ್ಪಿಸಿ ಸಂಘದ ಸರ್ವ ಮೆಂಬರರಿಗೂ, ಆಶ್ರಯದಾತರಿಗೂ ತಾ. ೧೯—೮—೧೯೨೫ರ ಆಮಂತ್ರಣ ಪತ್ರಗಳನ್ನು ಕಳುಹಿಸೋಣಾಯಿತು. ಸದರಿ ಆಮಂತ್ರಣ ಪತ್ರದ ಪ್ರಕಾರ ಮಹಾ ಸಭೆಯು ಇದೇ ಕಳೆದ ತಾ. ೩೦—೮—೧೯೨೫ನೇ ರವಿವಾರ ಅಪರಾಹ್ನ ಘಂಟೆ ೨ಕ್ಕೆ ಶೆಹಾರ್ ಬಜಾರಿನ ಕಟ್ಟಡದಲ್ಲಿ ಬಹು ವಿಜೃಂಭಣೆಯಿಂದ ಜರಗಿತು. ಮೆಂಬರರು, ಆಶ್ರಯದಾತರು ಮತ್ತು ಇತರ ಗೃಹಸ್ಥರು ಕೂಡಿ ಒಟ್ಟು ಸುಮಾರು ೪೦೦ ಮಂದಿ ನೆರೆದಿದ್ದರು. ದೇವತಾ ಪ್ರಾರ್ಥನೆಯಿಂದಲೂ ಸಭಿಕರ ಮತ್ತು ಅಧ್ಯಕ್ಷರ ಸ್ವಾಗತಪದಗಳಿಂದಲೂ ಸಭಾಕಾರ್ಯವು ಆರಂಭಿಸಿತು. ತರುವಾಯ ಸಭೆಗೆ ಅಧ್ಯಕ್ಷರಾಗಿ ನೇಮಿಸಲ್ಪಟ್ಟಿದ್ದ ಮ। ರಾ। ರಾ। ಕಾಡಿಪಟ್ಣ ಚಂದು ಎ. ಮಾಸ್ತರರನ್ನು ಅಧ್ಯಕ್ಷಸ್ಥಾನವನ್ನಲಂಕರಿಸುವರೆ ಕಾರ್ಯದರ್ಶಿಯವರು ವಿನಂತಿಸಿಕೊಂಡ ಮೇರೆಗೆ ಸದರಿ ಮ। ರಾ। ರಾ। ಚಂದುಮಾಸ್ತರರು ಅಗ್ರಾಸನವನ್ನು ಸ್ವೀಕರಿಸಿದರು. ಅಧ್ಯಕ್ಷರು ತನ್ನ ಭಾಷಣದಲ್ಲಿ ಕಳೆದ ಸಾರಿ ನೆರೆದ ಮಹಾ ಸಭೆಯು ವಿಸರ್ಜಿಸೋಣಾದ ಕಾರಣ ವಗೈರೆಯನ್ನು ಸಭೆಗೆ ಗೊತ್ತುಪಡಿಸಿ, ಸಂಘವು ಸ್ಥಾಪಿತವಾದಂದಿನಿಂದ ಈ ವರೆಗಿನ ಅದರ ಸಂಕ್ಷಿಪ್ತ ಚರಿತ್ರೆಯನ್ನು ವಿವರಿಸಿ ಪುನಃ ಜರಗಿರುವ ಅಂದಿನ ಮಹಾ ಸಭೆಯ ಕಾರ್ಯಗಳು ಕ್ರಮವಾಗಿ ನಡೆಯುವಂತೆ ಕೂಡಿರುವ ಸರ್ವ ಸಭಾಸದರು ಶಾಂತಿಯಿಂದ ವರ್ತಿಸಬೇಕಾಗಿ ವಿಜ್ಞಾಪಿಸಿಕೊಂಡರು. ಆ ಮೇಲೆ ಸಂಘದವರು ಹೊರಪಡಿಸಿದ್ದ ತಾ. ೧೯—೮—೧೯೨೫ರ ಪ್ರಸಿದ್ಧ ಪತ್ರದಲ್ಲಿ ಕಾಣಿಸಿದ್ದಂತೆ ಲೆಕ್ಕದ ಸಂಬಂಧ ತಮಗೆ ತೃಪ್ತಿ ಇಲ್ಲದಿರುವದರಿಂದ ವರದಿಯನ್ನು ಮಂಜೂರು ಮಾಡಲು ತಮ್ಮ ಆಕ್ಷೇಪಣೆ ಇದೆ ಎಂದು ೩೩ ಮಂದಿ ಮೆಂಬರರು ದಸ್ಕತು ಮಾಡಿ ತಾ. ೨೮—೮—೧೯೨೫ರಲ್ಲಿ ಸಂಘಕ್ಕೆ ಬರೆದಿರುವ ಕಾಗದವನ್ನು ಕಾರ್ಯದರ್ಶಿಯವರು ಅಂದಿನ ಸಭೆಯ ಆಲೋಚನೆಗಾಗಿ ಇಟ್ಟಿರುತ್ತಾರೆಂದು ಅಧ್ಯಕ್ಷರು ಹೇಳಿ ಸಭೆಯ ಅನುಮತಿಯಂತೆ ಸದರಿ ಕಾಗದವನ್ನು ಕಾರ್ಯದರ್ಶಿಯವರು ಸಭೆಗೆ ಓದಿ ಹೇಳಿದರು. ಈ ಕಾಗದದ ಕುರಿತು ಸಭೆಯ ಅಭಿಪ್ರಾಯ ಕೇಳಲು ರಾ। ವೆಂಕಪ್ಪ ಎ. ಶ್ರೀಯಾನರು ಎದ್ದು ತಾವು ಕಳೆದ ಸಾರಿ ನೆರೆದ ಮಹಾ ಸಭೆಯಲ್ಲಿ ಲೆಕ್ಕದ ಸಂಬಂಧವಾಗಿ ಪ್ರಶ್ನಿಸಿದ್ದ ವಿಷಯವೂ ನಂತರ ಸಂಘದವರ ಸಂಗತಿಗಳ ಕುರಿತು ಮಾಡಿದ ಠರಾವಿನ [illegible] ಪ್ರಸಿದ್ಧಪತ್ರವನ್ನು ತಯಾರಿಸಿ ತಂದಿರುವೆನೆಂದು ತಿಳಿಸಿ ಅದರ ಪ್ರತಿಗಳನ್ನು ಸಭೆಗೆ ಹಂಚುವುದಕ್ಕೆ ಅಪ್ಪಣೆ ಕೇಳಿದರು. ಇತರ ಮೆಂಬರರ್‍ಯಾರಾದರೂ ಮಾತಾಡುವವರಿದ್ದರೆ ಅವರ ಅಭಿಪ್ರಾಯಗಳನ್ನು ತಿಳಿದು ನಂತರ ಆ ಪ್ರಸಿದ್ಧ ಪತ್ರದ ಪ್ರತಿಗಳನ್ನು ಹಂಚುವ ಸಂಬಂಧ ತಿಳಿಸುವೆನೆಂದು ಅಧ್ಯಕ್ಷರ ಸೂಚನೆಯಾಯಿತು. ವರದಿಯನ್ನು ಮಂಜೂರುಮಾಡಲಿಕ್ಕೆ ಆಕ್ಷೇಪಿಸಿ ಬರೆದ ಕೆಲವು ಮೆಂಬರರ ದಸ್ಕತುಗಳ ಕಾಗದವನ್ನು ಓದಿ ಹೇಳಿದಾಗ ತನ್ನ ಹೆಸರೂ ಅದರಲ್ಲಿ ಉಂಟೆಂದು ತಿಳಿದು ರಾ। ಪೊಲಿಸು ವೆಂಕಪ್ಪಗುರಿಕಾರರು ಎದ್ದು ವರದಿಯನ್ನು ಮಂಜೂರುಮಾಡಲು ತನ್ನ ಆಕ್ಷೇಪಣೆ ಇದೆ ಎಂದು ತಾನು ಸೂಚಿಸಿದ್ದಲ್ಲವೆಂದೂ ತಾನು ದಸ್ಕತು ಮಾಡಲಿಲ್ಲವೆಂದೂ ಹೇಳಿದರು. ಅನಂತರ ರಾ। ವೆಂಕಪ್ಪ ಶ್ರೀಯಾನರ ಪ್ರಸಿದ್ಧಪತ್ರದ ಪ್ರತಿಗಳನ್ನು ಹಂಚಬಹುದೆಂದು ಸಭೆಯ ಅನುಮತಿಯಂತೆ ಅಧ್ಯಕ್ಷರು ಸೂಚಿಸಿದರು. ಈ ಪತ್ರದಲ್ಲಿ ಪಿಟಿಟ್ ಆಫೀಸಿನಲ್ಲಿ ಜರಗಿದ ಒಂದು ಸಭೆಯಲ್ಲಿ ಮಂಜೂರಾಗಿದ್ದ ಠರಾವಿನ ಯಥಾ ಪ್ರತಿಯೆಂಬದಾಗಿ ಸೂಚಿಸಿ ವರದಿಯಲ್ಲಿ ಕಾಣಿಸದೆ ಇದ್ದದ್ದೆಂಬ ಕೆಲವು ಲೆಕ್ಕಗಳು ಇದರಲ್ಲಿ ಕೊಡಲ್ಪಟ್ಟಿದ್ದವು. ವರದಿಯಲ್ಲಿ ಕಾಣಿಸದೆ ಇದ್ದದ್ದೆಂದು ಸೂಚಿಸಲು ಕಾರಣವೇನೆಂದೂ ಆ ಲೆಕ್ಕಗಳ ಕುರಿತು ಆಕ್ಷೇಪಿಸುವವರು ತಕ್ಕದಾದ ಉತ್ತರಗಳನ್ನು ಕೊಡಬೇಕೆಂದೂ ರಾ। ಮುಲ್ಕಿ ಕೊರಗಪ್ಪ ದೊಮನವರು ಕೇಳಿದರು. ಆ ಪ್ರಕಾರ ಕಾರ್ಯದರ್ಶಿಯವರು ಎದ್ದು ಪಿಟಿಟ್ ಆಫೀಸಿನಲ್ಲಿ ಮಂಜೂರಾಗಿದ್ದ ಮೂಲ ಠರಾವನ್ನು ಸಭೆಯ ಮುಂದಿಟ್ಟು, ಅದರ ಯಥಾ ಪ್ರತಿಯೆಂಬದಾಗಿ ಸೂಚಿಸಿ ವರದಿಯಲ್ಲಿ ಕಾಣಿಸದೆ ಇದ್ದದ್ದೆಂದು ರಾ। ಶ್ರೀಯಾನರು ತೋರಿಸಿರುವ ಲೆಕ್ಕಗಳು ಮೂಲ ಠರಾವಿನಲ್ಲಿ ಇಲ್ಲವೆಂಬದಾಗಿ ತಿಳಿಸಿದರು. ಅಂತೆಯೇ ಕೋಶಾಧಿಕಾರಿಯವರು ಲೆಕ್ಕ ಸಂಬಂಧವಾದ ವಿವರಣೆಗಳನ್ನು ಕೊಟ್ಟು ಪಿಟಿಟ್ ಆಫೀಸಿನಲ್ಲಿ ಮಂಜೂರಾದ ಠರಾವಿಗೂ ಅದರ ಯಥಾ ಪ್ರತಿ ಎಂಬದಾಗಿ ರಾ। ಶ್ರೀಯಾನರು ಪ್ರಕಟಿಸಿರುವ ಪತ್ರದಲ್ಲಿ, ಕಾಣಿಸಿರುವ ದಕ್ಕೂ ಬಹಳ ವ್ಯತ್ಯಾಸವಿದೆಯೆಂದು ಹೇಳಿದರು. ಪಿಟಿಟ್ ಆಫೀಸಿನಲ್ಲಾದ ಸಭೆಯ ಅಧ್ಯಕ್ಷರ ಹೇಳಿಕೆಯಂತೆ ಠರಾವನ್ನು ತನ್ನ ಸ್ವಂತ ಕೈಬರಹದಿಂದ ಬರೆದವರಾದ ಶ್ರೀಯುತ ಬಿ. ವಾಮನರಾಯರು ರಾ। ವೆಂಕಪ್ಪ ಶ್ರೀಯಾನರು ಹಂಚಿದ ಪತ್ರದಲ್ಲಿ ಕಾಣುವ 'ಠರಾವಿನ ಪ್ರತಿಯಲ್ಲಿ' ವರದಿಯಲ್ಲಿ ಕಾಣಿಸದೆ ಇದ್ದದ್ದೆಂದು ಕೊಡಲ್ಪಟ್ಟಿರುವ ಲೆಕ್ಕಗಳು ಮೂಲ ಠರಾವಿನಲ್ಲಿ ಇಲ್ಲವೆಂದೂ ಬಾಕಿ ಸಂಗತಿಗಳೆಲ್ಲಾ ಮೂಲ ಠರಾವಿನಂತಿದೆ ಎಂದೂ ಹೇಳಿದರು. ಆ ಮೇಲೆ ಅಧ್ಯಕ್ಷರು ವರದಿಯಲ್ಲಿ ತೋರುವ ಲೆಕ್ಕಗಳು ಪುನಃ ಲೆಕ್ಕ ಪರಿಶೋಧಕರಿಂದ ಚೆಕಾಯಿಸಲ್ಪಟ್ಟಿರುವದರಿಂದ, ವರದಿಯನ್ನು ಮಂಜೂರು ಮಾಡಬೇಕೆಂತಾದರೆ ಸಭೆಯಲ್ಲಿದ್ದ ಮೆಂಬರರು ತಮ್ಮ ಮತಗಳನ್ನು ಆ ಪ್ರಕಾರ ಕೊಡಬಹುದೆಂದೂ ಮಂಜೂರು ಮಾಡಬಾರದೆಂತಾದರೆ ಮತಗಳನ್ನು ಹಾಗೆ ಕೊಡಬಹುದೆಂದೂ ಸೂಚಿಸಿ ಹೇಳಲು ರಾ। ಮುಲ್ಕಿ ಕೊರಗಪ್ಪ ದೊಮನವರು ವರದಿಯನ್ನು ಮಂಜೂರುಮಾಡಬಹುದೆಂಬ ಸೂಚನೆಯಿತ್ತರು. ಸೂಚನೆಯನ್ನು ರಾ। ಪಲಿಮಾರು ಚೆನ್ನಪ್ಪಗುರಿಕಾರರು ಅನುಮೋದಿಸಿ ರಾ। ಬೈಕಂಪಾಡಿ ಮನ್ನಗುರಿಕಾರರು ಸಮರ್ಥಿಸಿದ ನಂತರ ಓಟು ತೆಗೆದಾಗ ಹಾಜರಿದ್ದ ೧೭೭ ಮಂದಿ ಮೆಂಬರರ ಪೈಕಿ ೧೧೬ ಮಂದಿ ಅನುಕೂಲ ಮತಗಳನ್ನಿತ್ತರು. ಯಾರದಾದರೂ ಪ್ರತಿಕೂಲ ಮತವಿದೆಯೋ ಎಂದು ವಿಚಾರಿಸಿದಾಗ ಯಾರದೂ ಕಂಡು ಬರಲಿಲ್ಲ. ಹೀಗೆ ವರದಿಯು ಬಹುಮತದಂತೆ ಮಂಜೂರುಮಾಡಲ್ಪಡಲಾಯಿತು. ಇದಾದ ಮೇಲೆ ಉಳಿದ ಕಾರ್ಯಗಳನ್ನು ನಿರ್ವಹಿಸಿ ಕೆಲವು ಮುಖ್ಯ ಠರಾವುಗಳನ್ನು ಮಂಜೂರು ಮಾಡಿದ ನಂತರ ಸಭೆಯು ಸತ್ಕರಿಸಲ್ಪಟ್ಟು ಕೊನೆಗೊಂಡಿತು.

— ಯಕ್ಷಗಾನೋಜ್ಜೀವಿನೀ ಸಭಾ. —

ತಾಳಮದ್ದಳೆಯನ್ನು ಪ್ರೋತ್ಸಾಹಿಸುವ ಸಂಸ್ಥೆಯು ನಮ್ಮ ಮಂಗಳೂರಲ್ಲಿ ಸ್ಥಾಪಿತವಾಗಿದೆ. ಇದು ತುಂಬಾ ಸಂತೋಷದ ಸಂಗತಿಯಾಗಿದೆ. ಈ ಸಂಸ್ಥೆಯನ್ನು ಕ್ರಮವಾಗಿ ನಡಿಸಿ ಅದರ ಮುಖಾಂತರ ಇಲ್ಲಿಯ ಪ್ರಾಚೀನ ಕಲೆಯಾದ ತಾಳಮದ್ದಳೆಯ ಉಜ್ಜೀವನ್ನು ಮಾಡುವುದು ಶ್ಲಾಘ್ಯವಾಗಿರುವುದು. ಸುಶಿಕ್ಷಿತರ ಮನೋರಂಜಕ, ಜ್ಞಾನಾಭಿವೃದ್ಧಿಗೂ ಅನೇಕ ಸಾಧನೆಗಳಿವೆ. ಆದರೆ ಅಶಿಕ್ಷಿತ ವರ್ಗಕ್ಕೆ ಅಂಥ ಸಾಧನಗಳು ಬಹು ಕಡಿಮೆ; ಬೈಲಾಟಗಳಿಂದ ಭಾರತ ರಾಮಾಯಣಾದಿ ರಾಷ್ಟ್ರೀಯ ಗ್ರಂಥಗಳಲ್ಲಿ ಗ್ರಥಿಸಿದ ವೀರ ಪುರುಷರ ಚರಿತ್ರದ ಪರಿಚಯವು ಅಶಿಕ್ಷಿತ ಸಮಾಜದಲ್ಲಿ ಉಂಟಾದ್ದರಿಂದ ಅವರಿಗೆ ಧರ್ಮದ ಮೇಲಿದ್ದ ದೃಢವಾದ ಶ್ರದ್ಧೆಯನ್ನು ತಾಳಲು ಕಾರಣವಾಗಿದೆ. ಮತ್ತು ಈ ಕಥೆಗಳಲ್ಲಿ ಪ್ರತಿಪಾದಿಸಿದ ಧರ್ಮ, ನೀತಿ ಇತ್ಯಾದಿ ತತ್ವಗಳು ಕೆಳಗಿನ ತರಗತಿಯವರ ಉನ್ನತಿಯನ್ನು ಸಾಧಿಸಿ ಕೊಡುವವು. ಈ ಪ್ರಕಾರ ಮಹೋಪಕಾರಕವಾದ ತಾಳಮದ್ದಳೆಯ ಕಲೆಯನ್ನು ಪುನರುಜ್ಜೀವಿಸುವುದು ಅವಶ್ಯವಾಗಿದೆ. ಇಲ್ಲಿಯ ಎಲಿಮೆಂಟರಿ ಟ್ರೈನಿಂಗ್ ಶಾಲೆಯ ಮುಖ್ಯ ಅಧ್ಯಾಪಕರಾದ ಶ್ರೀಯುತ ಉಳ್ಳಾಲ ಮಂಗೇಶರಾಯರ ಅಧ್ಯಕ್ಷತೆಯಲ್ಲಿ ಸ್ಥಾಪಿತವಾದ ಈ ಸಂಸ್ಥೆಯು ತನ್ನ ಉದ್ದೇಶಗಳನ್ನು ಕೈಗೂಡಿಸೀತೆಂಬುದಕ್ಕೆ ಸಂದೇಹವಿಲ್ಲ. ಮುಂಬಿನ ಪ್ರಸಂಗಗಳನ್ನು ಶುದ್ಧವಾಗಿ ತಿದ್ದುವುದೂ, ಐತಿಹಾಸಿಕ ಕಾಲದ ಹೊಸ ಪ್ರಸಂಗಗಳನ್ನು ರಚಿಸುವುದೂ, ಇದರ ವಾಙ್ಮಯವನ್ನು ಅಭಿವೃದ್ಧಿಗೊಳಿಸಿ ಎಲ್ಲ ಕಡೆಯಲ್ಲಿ ಪ್ರಚಾರ ಪಡಿಸುವುದೂ, ಇತ್ಯಾದಿ ವಿಷಯಗಳು ಈ ಸಂಸ್ಥೆಯ ಉದ್ದೇಶವಾಗಿವೆ. ಪ್ರಸಂಗಗಳನ್ನು ಕಲಿಸುವ ಮತ್ತು ಮದ್ದಳೆಯನ್ನು ಬಾರಿಸಲು ಕಲಿಸುವ ಕ್ಲಾಸು ತೆರೆಯಲ್ಪಟ್ಟಿದೆ ಹಾಗು ವರ್ಷಕ್ಕೆ ೪—೮ ಸಾರಿಯಾದರೂ ತಾಳಮದ್ದಳೆಯ ಪ್ರದರ್ಶನವನ್ನು ಮಾಡಿಸಿ ಅದನ್ನು ಲೋಕಪ್ರಿಯವನ್ನಾಗಿ ಮಾಡುವುದು ಕೂಡ ಅದರ ಒಂದು ಉದ್ದೇಶವಾಗಿದೆ.

ಈ ಉದ್ದೇಶಕ್ಕನುಸಾರವಾಗಿ ಇಲ್ಲಿ ಕಳೆದ ತಿಂಗಳ ಎರಡು ಸಾರಿ ತಾಳಮದ್ದಳೆಯ ಜಲಸೆಗಳಾದವು. ಇಲ್ಲಿಯವರೂ, ಕುಂದಾಪುರದ ಕಡೆಯವರೂ ಈ ಜಲಸೆಗಳಲ್ಲಿ ಭಾಗವನ್ನು ವಹಿಸಿದ್ದರು. ಈ ಎರಡೂ ಸಂದರ್ಭಗಳಲ್ಲಿ ಭಾಗವಹಿಸಿದ ಗೃಹಸ್ಥರು ತಮ್ಮ ಈ ಕಲೆಯಲ್ಲಿ ನೈಪುಣ್ಯವನ್ನು ಪಡೆದವರೂ ಹೆಸರುವಾಸಿಯಾದವರೂ ಆಗಿದ್ದಾರೆ. ವಿಶೇಷವಾಗಿ ಕುಂದಾಪುರದತ್ತ ಕಡೆಯಿಂದ ಬಂದ ಅರ್ಥಗಾರರು ಉಚಿತಾನುಚಿತತ್ವವನ್ನು ನೋಡಿ ಬೇಕಷ್ಟೆ ನುಡಿಸುತ್ತಾರೆ. ಅವರ ಈ ಕ್ರಮವು ಅನುಕರಣೀಯವಾಗಿದೆ.

ಈ ಸಂಸ್ಥೆಯ ಪರವಾಗಿ ಬರುವ ನವರಾತ್ರಿಯಲ್ಲಿ ತಾಳಮದ್ದಳೆಯ ಸಪ್ತಾಹವು ನಡೆಯಲಿಕ್ಕಿರುವುದೆಂದು ತಿಳಿದುಬರುತ್ತದೆ. ವಾಙ್ಮಯ ಸೇವೆಯನ್ನು ಮಾಡಲು ಹೊರಟ ಈ ಸಂಸ್ಥೆಯು ಚಿರಂಜೀವಿಯಾಗಲೆಂದು ನಾವು ಬಯಸುವೆವು.

ವಿದೇಶ ವರ್ತಮಾನ.

— ಐರ್ಲಂಡಿನಲ್ಲಿ ಗಂಡಸರಿಗೆ ಅವಿವಾಹಿತರನ್ನಾಗಿ ಇರಲು ಬಿಡುವದಿಲ್ಲ. ಕಾನೂನಿನಿಂದ ಅವರನ್ನು ಮದುವೆ ಮಾಡಿಸುತ್ತಿರುವರು. ಸ್ಪಾರ್ಟ ದೇಶದಲ್ಲಿಯೂ ಮುಂಚೆ ಇದೇ ಕ್ರಮವಿತ್ತು. ತುರ್ಕಸ್ಥಾನದಲ್ಲಿ ೨೫ನೆ ವಯಸ್ಸಿನಲ್ಲಿ ಮದುವೆಮಾಡಿಕೊಳ್ಳಲು ಒತ್ತಾಯವಿದೆ. ಹಾಗೆ ಮಾಡಿಕೊಳ್ಳದಿದ್ದರೆ ಅವರಿಗೆ ಶಿಕ್ಷೆಯುಂಟು. ೧೯೧೫ನೆಯ ಇಸವಿಯಲ್ಲಿ ಇಂಗ್ಲಂಡಿನಲ್ಲಿಯಾದರೆ ಅವಿವಾಹಿತರ ಮೇಲೆ ತೆರಿಗೆಯನ್ನು ಹಾಕಿದ್ದರು. ಇದರ ಉದ್ದೇಶವು ಫ್ರಾನ್ಸಿನ ವಿರುದ್ಧ ನಡೆದಿರುವ ಯುದ್ಧಕ್ಕೆ ಹಣ ಸಂಗ್ರಹಿಸುವದಾಗಿತ್ತು.

— ಒಂದು ಜಾತಿಯ ಗಿಡದಿಂದ ಉಣ್ಣೆಯನ್ನು ಮಾಡುವದನ್ನು ಶೋಧಿಸಿ ತೆಗೆದಿರುವರು. ಈ ಗಿಡದ ಉಣ್ಣೆಯು ಕುರಿಯ ಉಣ್ಣೆಯಂತೆ ಮೃದುವಾಗಿದ್ದು, ಎಲ್ಲಾ ತರದ ಉಪಯೋಗಕ್ಕೂ ಬರುತ್ತದೆ.

— ಅಮೇರಿಕದಲ್ಲಿ ಕಲ್ಲಿದ್ದಲ್ಲಿಯ ಗಣಿಗಳ ಕೂಲಿಗಳು ಮಜೂರಿಯ ವಿಷಯವಾಗಿ ತಕ್ರಾರನ್ನು ಮಾಡಿರುವರು. ೮೨೮ ಗಣಿಗಳ ಕೂಲಿಗಳು ಮುಷ್ಕರವನ್ನು ಹಾಕಿರುವರು. ಮುಷ್ಕರ ಹಾಕಿದ ಕೂಲಿಗಳ ಸಂಖ್ಯೆಯು ಒಂದುವರೆ ಲಕ್ಷ ಇರುವದು.

— ರೀಫ ಜನರ ಮೇಲೆ ದಂಡೆತ್ತಿ ಹೊರಟ ಒಂದು ಸ್ಪೆನಿಶ್ ಹಡಗವು ಜಲಸಮಾಧಿಯನ್ನು ಹೊಂದಿತು.

— ಬೆಸ್ ಅರೆಬಿಯದ ಗಡಿಯಲ್ಲಿ ಸೋವಿಯಟ್ ಸರಕಾರದ ಅಧಿ ರಾಜ್ಯದ ಕೆಳಗೆ ಲೋಕಸತ್ತಾಕ ರಾಜ್ಯವು ಸ್ಥಾಪಿತವಾಗಿದ್ದು ಬಲ್‌ಗೇರಿಯದೊಳಗಿನ ಕೊಮ್ಯುನಿಸ್ಟರಿಗೆ ಅಲ್ಲಿ ವಸಾಹತನ್ನು ಮಾಡಲು ಅಪ್ಪಣೆಯನ್ನು ಕೊಟ್ಟಿದೆ.

— ಡೋಸ್ ಯೋಜನೆಯ ಪ್ರಕಾರ ಜರ್ಮನಿಯು ನಷ್ಟಭರತಿಯ ಒಂದನೆಯ ಕಂತನ್ನು ಕೊಟ್ಟಿದೆ.

— ಇಂಗ್ಲಂಡು ೧೨ ಕೋಟಿ ರೂಪಾಯಿ ಖರ್ಚಿನಿಂದ ಕಟ್ಟಿಸಿದ ಯುದ್ಧದ ಹಡಗನ್ನು ಇತ್ತಲಾಗೆ ನೀರಿನಲ್ಲಿ ಬಿಟ್ಟಿದೆ. ಇದು ೩೫ ಟನ್ನು ಭಾರವುಂಟು. ಇದಕ್ಕೆ ನೆಲ್ಸನವೆಂಬುದಾಗಿ ಹೆಸರು ಕೊಡಲ್ಪಟ್ಟಿದೆ.

— ಲಂಡನಿನಲ್ಲಿಯ ಗಿರಣಿಗಳಲ್ಲಿ ಮುಷ್ಕರಗಳು ಬೀಳುತ್ತಿವೆ.

— ರುಷ್ಯದ ಪರರಾಷ್ಟ್ರೀಯ ಮಂತ್ರಿಗಳು ಅಸ್ವಸ್ಥವಿದ್ದುದರಿಂದ ಅವರ ಸ್ಥಾನಕ್ಕೆ ಚೀನಾದೊಳಗಿನ ರಾಯಭಾರಿ ಕಾರಖಾನೆ ಇವರ ನೇಮಕವಾಗಿದೆ.

ಒಳದೇಶ ವರ್ತಮಾನ.

— ಬೆಲ್‌ಜಿಯಮಿನ ರಾಜರೂ ರಾಣಿಯವರೂ ತಮ್ಮ ಪರಿವಾರದೊಂದಿಗೆ ಈ ತಿಂಗಳ ತಾ. ೧೧ನೆಯ ಬೆಳಿಗ್ಗೆ ರಣಪುರವೆಂಬ ಹೆಸರಿನ ಬೋಟಿನಿಂದ ಮುಂಬಯಿಗೆ ಇಳಿದರು. ಅವರನ್ನು ಎದುರುಗೊಳ್ಳಲು ಮುಂಬಯಿಯ ಗವರ್ನರರು ತಮ್ಮ ಪತ್ನಿ ಮತ್ತು ಇತರ ಪರಿವಾರ ಸಮೇತರಾಗಿ ಬೋಟಿನ ಮೇಲೆ ಹೋಗಿದ್ದರು. ಬೆಲ್‌ಜಿಯಮಿನ ರಾಜರು ಮುಂಬಯಿಯ ಕೊರ್ಪೊರೇಶನಿನ ಅಧ್ಯಕ್ಷರಾದ ಮಿ। ಬೆಪ್ಟಿಸ್ಟರ ಪರಿಚಯವನ್ನು ಗವರ್ನರರು ಮಾಡಿಸಿದರು. ಪರಸ್ಪರ ಹಸ್ತಾಂದೋಲನವಾದ ಬಳಿಕ ಭಾರತ ವರ್ಷದ ಪ್ರವೇಶ ದ್ವಾರದ ಪಾಲಕರೆಂಬುದಾಗಿ ವಿನೋದಪರವಾದ ಸಂಭಾಷಣೆಗಳು ನಡೆದ ನಂತರ ರಾಜರು ಪ್ರೆಸಿಡೆಂಟರೊಡನೆ ಹಿಂದುಸ್ಥಾನದ ಸೈನ್ಯದ ವಿಷಯವಾಗಿ ಮುಂದಿನಂತೆ ಕೃತಜ್ಞತೆಯನ್ನು ವ್ಯಕ್ತಗೊಳಿಸಿದರು. "ಮುಂಬಯಿ ಕೊರ್ಪೊರೇಶನಿನ ಅಧ್ಯಕ್ಷರಾದ ನಿಮ್ಮನ್ನು ಕಂಡು ನನಗೆ ತುಂಬಾ ಸಂತೋಷವಾಯಿತು. ಮಹಾಯುದ್ಧವು ನಡೆಯುವಾಗ ತಕ್ಕ ಸಮಯದಲ್ಲಿ ಹಿಂದುಸ್ಥಾನದ ಸೈನ್ಯವು ನಮ್ಮಲ್ಲಿಗೆ (ಬೆಲ್‌ಜಿಯಮಿಗೆ) ತಲುಪಿ ಅದು ಯಾವ ಸೇವೆಯನ್ನು ಮಾಡಿತೋ ಅದನ್ನು ನಾವು ಎಂದೂ ಮರೆಯುವಂತಿಲ್ಲ." ಬೆಲ್‌ಜಿಯಮಿನ ರಾಜರಿಗೆ ಮುಂಬಯಿ ಪಟ್ಟಣವು ತನ್ನ ಹೆಸರಿಗೆ ತಕ್ಕಂತೆ ಸ್ವಾಗತ ಸನ್ಮಾನವನ್ನು ಮಾಡಿತು. ರಾಜರು ಗವರ್ನರರ ಸಮೇತ ಮುಂಬಯಿ ಪಟ್ಟಣದ ಮುಖ್ಯ ಮುಖ್ಯ ಬೀದಿಗಳಿಂದ ಸಂಚರಿಸಿ ಕೊನೆಗೆ ಗವರ್ನಮೆಂಟ್ ಹೌಸಿಗೆ ಹೋದರು. ಅಲ್ಲಿಂದ ರಾಜರ ಪಾರ್ಟಿಯು ಪುಣೆಗೆ ಹೋಗಲು ಹೊರಟಿತು.

— ಪುಣೆಯಲ್ಲಿ ಗೋಖಲೇ — ಮಂದಿರದ ಶಂಕುಸ್ಥಾಪನೆಯ ಸಮಾರಂಭವು ನಡೆಯಿತು. ದಿವಾನ್ ಬಹದ್ದೂರ್ ಗೋಡ ಬೋಲೆಯವರು ಸ್ವಾಗತಪರ ಭಾಷಣಮಾಡಿದರು. ಕಾರ್ಯದರ್ಶಿಗಳಾದ ಅಂಬೇಕರರು ಸ್ಮಾರಕ ಮಂದಿರದ ವೃತ್ತಾಂತವನ್ನು ಓದಿದರು. ಒಂದು ದೊಡ್ಡದಾದ ಮಂದಿರವನ್ನು ಕಟ್ಟಲು ಸುಮಾರು ಒಂದುವರೆ ಲಕ್ಷ ರೂ. ರಕಮು ಅವಶ್ಯವಿದೆ, ಇದುವರೆಗೆ ೮೫ ಸಾವಿರ ರೂ. ಕೂಡಿದೆ. ಬಾಕಿ ಬೇಕಾಗುವ ರಕಮನ್ನು ಜನತೆಯು ಉದಾರಹಸ್ತದಿಂದ ಕೂಡಿಸಿಕೊಡಬೇಕು ಎಂಬುದಾಗಿ ಶ್ರೀ. ಅಂಬೇಕರರು ಪ್ರಾರ್ಥಿಸಿಕೊಂಡರು. ಶ್ರೀ. ಶ್ರೀನಿವಾಸ ಶಾಸ್ತ್ರಿಗಳು ವಿಜ್ಞಾಪಿಸಿಕೊಂಡ ಮೇರೆಗೆ ಶ್ರೀ. ಲಲ್ಲುಭಾಯಿ ಸಾಮಳದಾಸರು ದಿವಂಗತ ಗೋಖಲೆಯವರ ರಾಜಕಾರಣದ ವಿಷಯವನ್ನು ಗೌರವಪೂರ್ವಕವಾಗಿ ಉಲ್ಲೇಖಿಸಿ ಸ್ಮಾರಕಮಂದಿರದ ಶಂಕುಸ್ಥಾಪನೆಯನ್ನು ಮಾಡಿದರು. ಈ ಸಮಾರಂಭಕ್ಕೆ ಸರಕಾರಿ ಉದ್ಯೋಗಸ್ಥರೂ, ಇತರ ಅನೇಕ ದೊಡ್ಡ ಮನುಷ್ಯರೂ ಹಾಜರಿದ್ದರು.

— ಹೈಸ್ಕೂಲಿನ ವಿದ್ಯಾರ್ಥಿಗಳಿಗೆ ಖಡ್ಡಾಯದಿಂದ ಸೈನ್ಯಶಿಕ್ಷಣವನ್ನು ಕೊಡಬೇಕೆಂಬುದಾಗಿ ಮಧ್ಯಪ್ರಾಂತದ ಕೌನ್ಸಿಲಿನಲ್ಲಿ ಸ್ವರಾಜ್ಯಪಕ್ಷದ ಮುಖಂಡರಾದ ಡಾ. ಮುಂಜೇಯವರು ಒಂದು ಠರಾವನ್ನು ತರಲಿಕ್ಕಿದ್ದರು. ಆದರೆ ವೈಸರಾಯರು ಮಧ್ಯವರ್ತಿಸರಕಾರಕ್ಕೆ ಸಂಬಂಧಪಟ್ಟ ಸಂಗತಿಗಳ ಕಾನೂನನ್ನು ಪ್ರಾಂತಿಕ ಕೌನ್ಸಿಲುಗಳಲ್ಲಿ ತರಲಾಗದೆಂಬ ಕಾರಣವನ್ನು ತೋರಿಸಿ ಡಾ. ಮುಂಜೇಯವರ ಬಿಲ್ಲನ್ನು ಮುಂದೆ ತರಲು ಬಿಡಲಿಲ್ಲ.

— ಕಲಕತ್ತಾ ಕೊರ್ಪೊರೇಶನಿನ ಒಬ್ಬ ನೌಕರರಿಗೆ ಕಲಕತ್ತಾ ಹೈಕೋರ್ಟಿನ ಜಡ್ಜರಾದ ಪೇಗ ಎಂಬವರು ಒದ್ದಿದ ಆರೋಪದ ಮೇಲಿಂದ ಖಟ್ಲೆಯು ನಡೆಯುತ್ತಿದೆಯಷ್ಟೆ. ಮಜಿಸ್ಟ್ರೇಟರು ತನಖಿಗಾಗಿ ಜಡ್ಜರ ಮನೆಗೆ ಹೋಗಿ ಅಲ್ಲಿಯ ಬಟ್ಲರನ ಸಾಕ್ಷಿಯನ್ನು ತೆಗೆದುಕೊಂಡರು. ಬಟ್ಲರನ ಸಾಕ್ಷಿಯಲ್ಲಿ ಜಡ್ಜರು ಒದ್ದಿದ್ದಿಲ್ಲ, ಮುನ್ಸಿಪಾಲಿಟಿಯ ಆ ನೌಕರರು ಅತಿವೇಗದಿಂದ ಗಾಡಿ ಬಿಡುವದಕ್ಕಾಗಿ ಜಡ್ಜರು ಅವರನ್ನು ದೂರಮಾಡಿದರು ಎಂಬುದಾಗಿ ಹೇಳಿದ್ದಾನೆ. ಮಜಿಸ್ಟ್ರೇಟರು ಎರಡು ಪಕ್ಷಗಳನ್ನೂ ಕೇಳಿ ನಿರ್ಣಯವನ್ನು ಕೊಡುವವರಿದ್ದಾರೆ.

— ಬಾನಿಸದ ಪ್ರಕರಣದಲ್ಲಿ ವಿಚಾರಣಾ ಕಮಿಟಿಯನ್ನು ನೇಮಿಸಲು ಸರಕಾರವು ನಿರಾಕರಿಸಿತು.

— ಲಾಲಾ ಲಜಪತರಾಯರ ದೇಹ ಪ್ರಕೃತಿಯು ಪುನಃ ಕೆಟ್ಟಿದೆ ಎಂಬುದಾಗಿ ವಾರ್ತೆಯುಂಟು. ಸಬಾತಿನಿಂದ ಅವರು ಲಾಹೋರಕ್ಕೆ ಆರೋಗ್ಯಕ್ಕಾಗಿಯೆ ಬಂದಿದ್ದರು. ಆದರೆ ಅಲ್ಲಿ ಪುನಃ ಅವರಿಗೆ ಜ್ವರವು ಪ್ರಾರಂಭವಾಗಿದೆ. ಹೊಟ್ಟೆಯಲ್ಲಿ ಸ್ವಲ್ಪ ನೋವು ಮತ್ತು ಮೂರ್ಛೆ ಇವು ಪ್ರಾರಂಭವಾಗಿದೆ ಎಂಬುದಾಗಿ ತಿಳಿದು ಬರುತ್ತದೆ.

— ನಾಮದಾರ ವಿಠಲಭಾಯಿ ಪಟೇಲರು ಎಸೆಂಬ್ಲಿಯ ಮುಂಚಿನ ಅಧ್ಯಕ್ಷರಾದ ಸರ್ ಹ್ವೈಟರಿಗೆ ಒಂದು ಔತಣವನ್ನು ಕೊಟ್ಟರು. ಸ್ವರಾಜ್ಯ ಪಕ್ಷದ ಹಾಗು ಇತರ ಲೋಕಪಕ್ಷದ ಸಭಾಸದರು ಹಾಜರಿದ್ದರು, ಕಾರ್ಯಕಾರಿ ಮಂಡಳದವರೂ ಹಾಜರಿದ್ದರು.

— ಮುಂಬಯಿಯಲ್ಲಿ ಹತ್ತಿಗಿರಣಿಗಳು ದಿನೇ ದಿನೇ ಮುಚ್ಚಲ್ಪಡುತ್ತಿದ್ದಾವೆ. ಶಾಪುರಜಿಭರುಚಾ ಮಿಲ್ಲಿನವರು ತಮ್ಮ ಗಿರಣಿಯನ್ನು ಮುಚ್ಚಲಿದ್ದಾರೆ. ಇವರ ಗಿರಣಿಯಲ್ಲಿ ಸುಮಾರು ೪೦೦೦ ಕೂಲಿಗಳಿದ್ದಾರೆ. ಇವರಿಗೆ ಗಿರಣಿಯವರು ನೋಟೀಸು ಕೊಟ್ಟಿರುವರು. ಈ ಗಿರಣಿಯು ಅಕ್ಟೋಬರ ೧ರಿಂದ ಮುಚ್ಚಲ್ಪಡುವದು.

— ಅಲಹಾಬಾದಿನಲ್ಲಿ ಅನಾಥಗೃಹದ ಒಬ್ಬ ಹುಡುಗನು ಇನ್ನೊಬ್ಬ ಹುಡುಗನ ಮಸಿಕುಪ್ಪಿಯನ್ನು ಒಡೆದು ಹಾಕಿದಕ್ಕೆ ಅವನಿಗೆ ಹೆದರಿಕೆ ಹಾಕಿದ್ದರಿಂದ ಅವನು ಕಾಣೆಯಾದನು. ಅನಂತರ ಡೊ. ಝಾ ಎಂಬವರು ಅವನನ್ನು ಹುಡುಕಿದರು. ಅಲಹಾಬಾದಿನಲ್ಲಿ ಇನ್ನೊಬ್ಬ ಹುಡುಗಿಯನ್ನು ಓಡಿಸಿದರು. ಅವಳು ಅಲ್ಲಿಂದ ತಪ್ಪಿಸಿಕೊಂಡು ಚರ್ಚಿನ ಹಿತ್ತಿಲಲ್ಲಿ ಬಂದಳು. ಈ ಎರಡೂ ವಿಷಯಗಳನ್ನು ಪೋಲೀಸರು ತನಖಿ ಮಾಡುತ್ತಿರುವರು.

— ನಿಕಲ್ ೮ ಆಣೆ ನಾಣ್ಯಗಳು ಯಾರಲ್ಲಾದರೂ ಇದ್ದರೆ, ಈ ತಿಂಗಳಾಂತ್ಯದಲ್ಲಿ ಸರಕಾರಿ ಖಜಾನೆಗೆ ತಿರುಗಿ ಕೊಡಬೇಕು. ಆ ಮೇಲೆ ತೆಗೆದುಕೊಳ್ಳುವದಿಲ್ಲ.

— ಕುಂಭಕೋಣದಲ್ಲಿ ಒಬ್ಬ ಆಯುರ್ವೇದ ವೈದ್ಯರು ಒಂದು ಶಸ್ತ್ರಕ್ರಿಯೆಯನ್ನು ಮಾಡಿದ್ದರು. ಅದನ್ನು ಮಾಡುವಾಗ ಪರಾಮೋಸೆಯಿಂದ ಶಸ್ತ್ರವು ಇನ್ನೊಂದು ಕಡೆಯಲ್ಲಿ ತಾಗಿ ಗಾಯವಾಯಿತು. ಆಗ ಅವನನ್ನು ವೈದ್ಯರು ಕೂಡಲೆ ಆಸ್ಪತ್ರಿಗೆ ಕಳುಹಿಸಿದರು. ಆದರೆ ಅಲ್ಲಿ ಆ ರೋಗಿಯು ಮೃತಪಟ್ಟನು. ಬಳಿಕ ಸರ್ಜನರು ಶಸ್ತ್ರ ಕ್ರಿಯೆಯನ್ನು ನಡಿಸಿದ ವೈದ್ಯರ ಮೇಲೆ ಫಿರ್ಯಾದೆಯನ್ನು ಮಾಡಿದ್ದಲ್ಲಿ ಆ ಫಿರ್ಯಾದೆಯ ತನಖಿ ಮಾಡಿ ಕುಂಭಕೋಣದ ಜೊಯಿಂಟ್ ಮೆಜಿಸ್ಟ್ರೇಟರಾದ ಮಿ। ಐ. ಗ್ರೀನ ಐ. ಸಿ. ಯಸ್. ಇವರು ಸದರಿ ವೈದ್ಯರನ್ನು ನಿರ್ದೋಷಿಗಳನ್ನಾಗಿ ಮಾಡಿಬಿಟ್ಟಿರುವರು. ಮೆಜಿಸ್ಟ್ರೇಟರು ತಮ್ಮ ತೀರ್ಪಿನಲ್ಲಿ ಮುಂದಿನಂತೆ ಕೆಲವು ಸಂಗತಿಗಳನ್ನು ಬರೆದಿರುವರು. ಸದರಿ ಆಯುರ್ವೇದ ವೈದ್ಯರಿಗೆ ಶಸ್ತ್ರ ಕ್ರಿಯೆಯ ಚಿಕಿತ್ಸೆಯನ್ನು ನಡಿಸಲು ಸರ್ಟಿಫಿಕೇಟು ಇಲ್ಲವೆಂಬುದು ನಿಜ. ಆದರೆ ಈ ಸಂಗತಿಯನ್ನು ವಿಚಾರದಲ್ಲಿ ತೆಕ್ಕೊಳ್ಳುವುದೂ ಅಗತ್ಯವಿಲ್ಲ. ಅವರಿಗೆ ಶಸ್ತ್ರಕ್ರಿಯೆಯ ಸರ್ಟಿಫಿಕೇಟು ಇಲ್ಲವೆಂಬೀ ಸಂಗತಿ ಮೇಲಿಂದ ಅವರು ಈ ಶಸ್ತ್ರಪ್ರಯೋಗವನ್ನು ಅಸಡ್ಡೆಯಿಂದಾಗಲಿ, ನಾಜೂಕುತನವಿಲ್ಲದೆಯಾಗಲಿ ಮಾಡಿದ್ದಾರೆಂದು ಹೇಳಲಾಗುವದಿಲ್ಲ. ಅವರ ಪರವಾಗಿ ಬಂದ ಸಾಕ್ಷಿಗಳ ಮೇಲಿಂದ ಅವರು ಶಸ್ತ್ರಕ್ರಿಯೆ ಆದ ಕೂಡಲೆ ರೋಗಿಯನ್ನು ಅವನ ಆರಯಿಕೆಯ ಬಗ್ಗೆ ಆಸ್ಪತ್ರಿಗೆ ಕಳುಹಿಸಿ ಕೊಟ್ಟರು. ಆರೋಪಿತರು ಮತ್ತು ಅವರ ಕಡೆಯ ಸಾಕ್ಷಿಯವರು ಹೇಳಿದ ಸಂಗತಿಗಳ ಮೇಲಿಂದ ಸಬ್ ಅಸಿಸ್ಟೆಂಟ್ ಸರ್ಜನರು ರೋಗಿಯಿಂದ ಧಾರಾಳವಾದ ಹಣವನ್ನು ಕೇಳಿದ್ದರೆಂದೂ, ಅದನ್ನು ಕೊಡದೆ ಇದ್ದ ಕಾರಣ ಅವರು ರೋಗಿಗೆ ಉಪಚಾರವನ್ನು ನಡಿಸಲಿಲ್ಲವೆಂದೂ ಗೊತ್ತಾಗುತ್ತದೆ. ಆರೋಪಿತರು ಹೇಳುವಂತೆ ಸಬ್ ಅಸಿಸ್ಟಂಟ ಸರ್ಜನರ ಮೇಲೆ ಸಂಪೂರ್ಣ ದೋಷವನ್ನು ಹಾಕಲು ಆಗುವದಿಲ್ಲ. ಆದರೂ ಆರೋಪಿಗಳ ಕಡೆಯಿಂದ ಬಂದ ಸಾಕ್ಷಿಗಾರರ ಅಂಬೋಣವು ಸುಳ್ಳೆಂಬುದಾಗಿ ಸಹ ಪ್ರತಿಪಾದಿಸಲು ಸಾಧ್ಯವಿಲ್ಲ. ಕಾರಣ, ಅವರ ಕಡೆಯ ಸಾಕ್ಷಿದಾರರಲ್ಲಿ ಬೇರೆ ಬೇರೆ ಜಾತಿಯವರೂ, ಮತದವರೂ ಇದ್ದಾರಲ್ಲದೆ ಬ್ರಾಹ್ಮಣರು ಸಹ ಇದ್ದಾರೆ. ಇವರೆಲ್ಲರೂ ಸುಳ್ಳಾಡುತ್ತಾರೆಂದು ತಿಳಿಯುವದು ಯುಕ್ತವಲ್ಲ. ಈ ವೈದ್ಯರ ವಿಷಯದಲ್ಲಿ ಅನೇಕರೊಳಗೆ ಸದಭಿಪ್ರಾಯವಿದ್ದು ಅವರೆಲ್ಲರೂ ವೈದ್ಯರನ್ನು ಸಹಾಯ್ಯ ಮಾಡುತ್ತಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ ಅವರು ದೋಷಿಗಳೆಂದು ಹೇಳಲಾಗುವದಿಲ್ಲ. ಇವರು ಈ ಮೊದಲು ಎಷ್ಟೋ ಶಸ್ತ್ರಕ್ರಿಯೆಗಳನ್ನು ಬಹು ಯಶಸ್ವಿಯಾದ ರೀತಿಯಲ್ಲಿ ಮಾಡಿರುವ ಸಂಗತಿಯು ಸಹ ಬೈಲಾಗಿದೆ. ಆದ್ದರಿಂದ ಇವರನ್ನು ನಿರ್ದೋಷಿಗಳನ್ನಾಗಿ ಬಿಟ್ಟಿರುತ್ತದೆ.

— ಲಖನೌ ಸಮೀಪದ ಭಲಾಮಣವೆಂಬ ಊರಿನಲ್ಲಿ ಹಿಂದುಗಳು ಮೆರವಣಿಗೆಯನ್ನು ಹೊರಡಿಸಿದಾಗ ಮುಸಲ್ಮಾನರು ಗುದ್ದಾಟವನ್ನು ಮಾಡಿದರು. ಬಾರಾಬಾಂಕಿ ಎಂಬ ಜಿಲ್ಲೆಯಲ್ಲಿಯೂ ಕೂಡ ಇದೆ ಕ್ರಮವು ನಡೆಯಿತು. ಈ ಎರಡೂ ಕಡೆಗಳಲ್ಲಿ ಅನೇಕರಿಗೆ ಜಖಮು ತಗಲಿದೆ.

— ಕಲಕತ್ತೆಯ ಇಂಡಿಯನ್ ಲ್ಯಾಫ್ ಸೇವಿಂಗ್ ಸೊಸೈಟಿಯ ಪರವಾಗಿ ಈಜಾಡುವ ಪಂದ್ಯಾಟಗಳು ನಡೆದವು. ೨೨ ಮೈಲು ಈಜಾಡುವ ಪಂದ್ಯಾಟದಲ್ಲಿ ಮನರಂಜನ ಬೋಸರೆಂಬವರು ಈ ಅಂತರವನ್ನು ೪ ತಾಸು ೨೬ ಮಿನಿಟಿನಲ್ಲಿ ಕಡಿದರು. ಮತ್ತು ಅವರೆ ಪ್ರಥಮಸ್ಥಾನವನ್ನು ಪಡೆದರು. ಇನ್ನಿಬ್ಬರು ಬಂಗಾಲಿಗಳು ಎರಡನೆಯ ಮೂರನೆಯ ಸ್ಥಾನಗಳನ್ನು ಹೊಂದಿದ್ದಾರೆ. ಯುರೋಪಿಯನರಿಬ್ಬರು ೭ನೆಯ ಮತ್ತು ೭ನೆಯ ಸ್ಥಾನಕ್ಕೆ ಬಂದಿದ್ದಾರೆ. ಇವರೆಲ್ಲರಿಗೆ ಇನಾಮುಗಳು ಹಂಚಲ್ಪಟ್ಟವು.

ದಕ್ಷಿಣ ಕನ್ನಡ.

ಕೊಲ್ಲೂರು:— ಶ್ರೀ ಕ್ಷೇತ್ರ ಕೊಲಾಪುರ (ಕೊಲ್ಲೂರು) ಮೂಕಾಂಬಿಕಾ ದೇವಸ್ಥಾನದ ಹೊರಪ್ರಾಕಾರದೊಳಗೆ ಮಹಾನವಮಿ ದೀಪೋತ್ಸವ ಮುಂತಾದ ವಿಶೇಷ ಕಾಲಗಳಲ್ಲಿಯೂ ಭಕ್ತ ಜನರು ಸೇವಾರ್ಥವಾಗಿ ಆಗಾಗ ಮಾಡಿಸತಕ್ಕ ಇತರ ಕಾಲಗಳಲ್ಲಿಯೂ ಎಳೆಯತಕ್ಕ ಹೂವಿನ ತೇರು ಮುಂಚೆ ಇದ್ದದ್ದು ಜೀರ್ಣವಾದ್ದರಿಂದ ಅದನ್ನು ಮ। ರಾ। ಬೈಂದೂರು ಎತ್ತರೆ ಅಣ್ಣಪ್ಪ ಶೆಟ್ಟರವರು ಈಗ ಭದ್ರವಾಗಿಯೂ ಸುಂದರವಾಗಿಯೂ ಕಟ್ಟಿಸಿ ಇದೇ ನವರಾತ್ರಿ ಮಹಾನವಮಿ ತಾ. ೨೬—೯—'೨೫ ಸ್ಥಿರವಾರ ಶ್ರೀ ದೇವಿಯನ್ನು ಆರೋಹಿಸಿ ಸದರಿ ನೂತನ ಪುಷ್ಪ ರಥೋತ್ಸವವನ್ನು ಜರಗಿಸಲಿಕ್ಕೆ ನಿಶ್ಚಯಿಸಿರುತ್ತಾರೆ. ಇಂಥಾ ಮಹಾಪುಣ್ಯಾಸ್ಪದಕರವಾದ ಸಂದರ್ಭವೂ ದಿಶ್ಯವೂ ಒಂದಾಗಿ ಒದಗುವುದು ಈ ಕಾಲದಲ್ಲಿ ಅತ್ಯಂತ ದುರ್ಲಭವೆಂತ ತಿಳಿಯಬೇಕಾಗುತ್ತದೆ.

ಉಡ್ಪಿ:— ಉಡ್ಪಿ ಇಂಟರ್‌ಸ್ಕೂಲ್ ಜಿಂಖಾನದವರು ತಾ. ೪ ರಲ್ಲಿ ಸೇರಿದ ಸಭೆಯಲ್ಲಿ—ಕ್ರಿಕೆಟ್ ಪಂದ್ಯಾಟಗಳು ತಾ. ೨೧ ರಿಂದ ಪ್ರಾರಂಭವಾಗಬೇಕಾಗಿಯೂ, ನಿಶ್ಚಯಿಸಿರುವರು. ತಾ. ೧೧ರೊಳಗೆ ಹೆಸರುಕೊಡಬೇಕಾಗಿಯೂ, ಟೂರ್ನಮೆಂಟನ್ನು ಮುಕ್ತ ದರ್ಬಾರ್ ಕಡೇ ದಿನ ಜರುಗಿಸಬೇಕಾಗಿಯೂ ಪುರುಷ ಆಡುವ ದಿವ ಯೂವನ ಪ್ರಾಯವು ೧೫ ವರ್ಷಗಳಲ್ಲಿ ಮಿರುವುದಿಲ್ಲವೊ, ಮತ್ತು ಯಾವನು III ಫೋರ್ಮ ತರಗತಿಯಲ್ಲಿ ಕಲಿಯುತ್ತಿರುವನೊ ಅಂತವನೇ ಜೂನಿಯರನೆಂದೂ ನಿರ್ಣಯಿಸಲಾಯಿತು.

ಫರಂಗಿಪೇಟೆ:— ಕಸ್ತೂರಿ ಮೊದಲಾದವುಗಳನ್ನು ಮಾರುವವನೊಬ್ಬನು ಫರಂಗಿಪೇಟೆಯ ಅಂಗಡಿ ಸಾಹುಕಾರ ಐದ್ರೋಸು ಬ್ಯಾರಿಯ ಬಳಿಗೆ ಬಂದು ಬಂಗಾರದ್ದೆಂದೇ ತೋರುವ ಹುರಿಗಳಿರುವ ಸರಿಗೆಯೊಂದನ್ನು ವಿಕ್ರಯಕ್ಕೆ ತರಲು ಅವರು ಸುಮಾರು ಅರ್ಧಸೇರು ಭಾರವಿರುವ ಅದನ್ನು ಪರೀಕ್ಷಿಸಿ ಬಂಗಾರದ್ದೆಂದು ನೆನಸಿ ೩೨ ರೂ. ಕೊಟ್ಟು ಬಾಕಿ ಹಣ ನಾಳೆ ಕೊಡುವೆನೆಂದು ತೆಗೆದುಕೊಂಡರು. ಆದರೆ ಅಕ್ಕಸಾಲಿಯೊಡನೆ ಪರೀಕ್ಷೆ ಮಾಡಿಸಿದಾಗ ಅದು ಬರೀ ಹಿತ್ತಾಳೆಯೆಂದು ಕಂಡುಬಂದಿತು. ಕೂಡಲೇ ಸರಿಗೆ ಕೊಟ್ಟ ಆಸಾಮಿಯನ್ನು ಹುಡುಕಲು ಅವನ ಪತ್ತೆಯೇ ಇಲ್ಲ, ಎಂದೊಂದು ಬಾತ್ಮಿ.

ವಿವಿಧ ವಿಷಯಗಳು.

— ಮೋಸಲ ಪ್ರಾಂತದ ವಾರ್ತೆ. —

ಮಿತ್ರ ರಾಷ್ಟ್ರಗಳಿಗೂ ತುರ್ಕಸ್ಥಾನಕ್ಕೂ ಒಪ್ಪಂದವಾಗಿ ಎರಡು ವರ್ಷಗಳಾದವು. ಆದರೂ ಅದರ ಲವಲೇಶವು ಇನ್ನೂ ಮುಗಿದಿಲ್ಲ. ತುರ್ಕಸ್ಥಾನಕ್ಕೂ ಇರಾಕಕ್ಕೂ ನಡುವೆ ಮೋಸಲವೆಂಬ ಪ್ರಾಂತವಿದ್ದು ಇದನ್ನು ತುರ್ಕಸ್ಥಾನಕ್ಕೆ ಕೊಡಬೇಕೊ ಅಥವಾ ಇರಾಕಕ್ಕೊ ಎಂಬೀ ವಿವಾದವು ಇಂಗ್ಲಂಡ ಮತ್ತು ತುರ್ಕಸ್ಥಾನ ಇವುಗಳೊಳಗೆ ನಡೆಯುತ್ತಿತ್ತು. ಅದು ಲೋಸನ್ ಪರಿಷತ್ತಿನಲ್ಲಿ ಸಹ ನಿರ್ಣೀತವಾಗಿರಲಿಲ್ಲ. ಈ ಪ್ರಶ್ನೆಯು ರಾಷ್ಟ್ರಸಂಘದ ಕಡೆಗೆ ನಿರ್ಣಯಾರ್ಥವಾಗಿ ಒಪ್ಪಿಸಲ್ಪಟ್ಟಿತು. ರಾಷ್ಟ್ರಸಂಘವು ಕಮಿಶನನ್ನು ನೇಮಿಸಿ ಚೌಕಶಿಯನ್ನು ಮಾಡಿಸಿತು. ಕಮಿಶನಿನ ರಚನೆಯು ಸದೋಷವಾಗಿತ್ತು. ಈ ಕಮಿಶನಿನಲ್ಲಿ ಮೂವರು ಅಧಿಕಾರಸ್ಥರು, ಅವರೆಲ್ಲ ಬಿಳಿ ಜನರು. ಇಂಥವರಿಂದ ತುರ್ಕರಿಗೆ ಗುಣವು ಸಿಕ್ಕುವುದು ಹೇಗೆ? ಮಹಾ ಯುದ್ಧಕ್ಕಿಂತ ಮುಂಚೆ ಈ ಮೋಸಲ ಪ್ರಾಂತವು ತುರ್ಕಸ್ಥಾನಕ್ಕೆ ಸೇರಿತ್ತು. ಕುರ್ದಿಸ್ಥಾನದ ಪೈಕಿ ಈ ಮೋಸಲ ಪ್ರಾಂತವು ಈ ಮೇರೆಗೆ ತುರ್ಕಸ್ಥಾನದ ಸಾಮ್ರಾಜ್ಯದೊಳಗೆ ಸೇರಿರುವಾಗ ಅದು ತುರ್ಕರದೊ, ಅರಬರದೊ ಎಂಬುದನ್ನು ನಿರ್ಣಯಿಸುವುದು ಹೇಗೆ? ಕುರ್ದ ಜನರನ್ನೆ ವಿಚಾರಿಸಿ ಅವರ ಬಹುಮತದಂತೆ ನಿರ್ಣಯವನ್ನು ಮಾಡಬೇಕೆಂದು ತುರ್ಕರು ಅಭಿಪ್ರಾಯಪಡುತ್ತಾರೆ. ಆದರೆ ರಾಷ್ಟ್ರಸಂಘದ ಕಮಿಶನು ವಿಲಕ್ಷಣವಾದ ನಿರ್ಣಯವನ್ನು ಕೊಟ್ಟಿತು. ಮೋಸಲ ಪ್ರಾಂತದಲ್ಲಿ ಕುರ್ದರ ಪ್ರಾಧಾನ್ಯವಿದೆ ಮತ್ತು ಬಗದಾದ ಶಹರವು ಮೋಸಲಿಗೆ ಹತ್ತರದ ಪೇಟೆಯೂ, ಭೂಗೋಲ ದೃಷ್ಟಿಯಿಂದಲೂ ಅನುಕೂಲವಾದ್ದು, ಆದ್ದರಿಂದ ಮೋಸಲನ್ನು ಇರಾಕಕ್ಕೆ ಜೋಡಿಸಬೇಕೆಂದು ನಿರ್ಣಯವನ್ನು ಕಮಿಶನು ಕೊಟ್ಟಿತು. ತುರ್ಕಸ್ಥಾನವು ಇರಾಕಕ್ಕಿಂತ ಪ್ರಬಲ ರಾಷ್ಟ್ರವು. ಇರಾಕವು ಮೋಸಲ ಪ್ರಾಂತವನ್ನು ಸೇರಿಸಿಕೊಂಡರೆ ಅದಕ್ಕೆ ತುರ್ಕಸ್ಥಾನವು ಉಪದ್ರವನ್ನು ಕೊಟ್ಟೀತು. ಆದ್ದರಿಂದ ಇಂಗ್ಲೆಂಡು ಇರಾಕದ ಮೇಲೆ ತನ್ನ ಛತ್ರವನ್ನು ಇಪ್ಪತ್ತೈದು ವರ್ಷಗಳ ವರೆಗೆ ಇಡಬೇಕು ಈ ಪ್ರಕಾರ ಕಮಿಶನು ಶಿಫಾರಸನ್ನು ಮಾಡಿದೆ. ಇಂಗ್ಲಂಡವು ಐದೆ ವರ್ಷದ ಕರಾರನ್ನು ಮಾಡಿತ್ತು. ಆದರೆ ಈ ಕಮಿಶನು ೨೫ ವರ್ಷದ ಸಂಗತಿಯನ್ನು ಸೂಚಿಸಿದೆ. ರಾಷ್ಟ್ರಸಂಘದ ನಿರ್ಣಯವೇನಾಗುತ್ತದೊ ನೋಡಬೇಕು.

∴ ∴ ∴ ∴

— ಡ್ರೂಸರೂ ಫ್ರೆಂಚರೂ. —

ಇಂಗ್ಲಿಷ ಜನರಂತೆ ಫ್ರೆಂಚರು ಕೂಡ ರೀಫರ ಬೆನ್ನುಹತ್ತಿದ್ದಾರೆ. ಈ ಫ್ರೆಂಚರಿಗೆ ಇಂಗ್ಲಿಷರಂತೆಯೆ ತಮ್ಮ ಸಾಮ್ರಾಜ್ಯವು ಹಬ್ಬಬೇಕೆಂಬ ಮಹತ್ವಾಕಾಂಕ್ಷೆಯುಂಟು. ರೀಫ ಜನರ ಬೆನ್ನುಹತ್ತಿದಂತೆ ಇವರು ಸೀರಿಯ ಜನರನ್ನು ಉಪದ್ರವಿಸಹತ್ತಿದ್ದಾರೆ. ಸೀರಿಯಾ ಪ್ರಾಂತವು ೧೯೧೮ರಲ್ಲಿ ಫ್ರೆಂಚರ ಕೈಸೇರಿತು. ೧೯೧೯ರಲ್ಲಿ ಸೀರಿಯಾ ಪ್ರಾಂತದವರು ಮೊದಲನೆ ಬಂಡನ್ನು ಎಬ್ಬಿಸಿದರು. ಆಗ ಫ್ರೆಂಚರು ಆ ಬಂಡನ್ನು ಬಹು ಪ್ರಯತ್ನದಿಂದ ಮುರಿದರು, ಆದರೂ ಯುದ್ಧಪ್ರಿಯ ಜನಾಂಗವಾದ ಸೀರಿಯಾ ದೇಶದವರ ಸ್ವಭಾವವು ಹಲ್ಲಟವಾಗುವದು ಅಸಾಧ್ಯವಾದ ಕಾರಣ ಇದುವರೆಗೆ ಅಲ್ಲಿ ಏಳು ದಂಗೆಗಳು ಆದುವು. ಇವುಗಳಲ್ಲಿ ಅಲ್ಲಿಯ ಡ್ರೂಸರು ಮಾಡಿದ ದಂಗೆಯು ಅತ್ಯಂತ ಭಯಂಕರವಾಗಿದೆ. ಸೀರಿಯಾ ದೇಶದ ಭಾಗಗಳನ್ನು ಮಾಡಿ ಫ್ರೆಂಚರ ಡ್ರೂಸ ಸಂಸ್ಥಾನವನ್ನು ನಿರ್ಮಿಸಿದ್ದರು. ಅವರಿಗೆ ಒಂದು ಕೌನ್ಸಿಲು, ಒಬ್ಬ ಡ್ರೂಸ್ ಗವರ್ನರ ಮತ್ತು ಒಬ್ಬ ಫ್ರೆಂಚ ಮಂತ್ರಿ ಈ ಕ್ರಮವನ್ನು ಏರ್ಪಡಿಸಿ ಹೊಸ ಸಂಸ್ಥಾನದ ನಿರ್ಮಾಣವಾಯಿತು; ಪ್ರಥಮದಲ್ಲಿ ಅವರಿಗೆ ಈ ರಾಜ್ಯಪದ್ಧತಿಯು ಚಲೋದಾಗಿಯೇ ತೋರಿತು. ಆದರೆ ಡ್ರೂಸ ಗವರ್ನರನು ಸತ್ತುಹೋಗಿ ಫ್ರೆಂಚ ಗವರ್ನರನು ನೇಮಕಪಟ್ಟ ಬಳಿಕ ಆಗ ಅವರು ಕಣ್ಣು ತೆರೆದರು. ಮತ್ತು ಅವರ ಪಿತ್ತವು ತಲೆಗೇರಿತು. ಈ ಫ್ರೆಂಚ ಗವರ್ನರನು ಮುಂಚೆ ಆಫ್ರಿಕದೊಳಗಿನ ನಿಗ್ರೋ ಜನರ ಮೇಲೆ ನಿರಂಕುಶ ಪ್ರಭುತ್ವವನ್ನು ನಡಿಸುವುದರಲ್ಲಿ ಸೊಕ್ಕಿಹೋದ ಕಾರಣ ಇವರ ಮೇಲೆ ಅದೇ ಕ್ರಮವನ್ನು ಜಾರಿಯಲ್ಲಿ ತರಲಾರಂಭಿಸಿದನು. ಆಗ ಕಾರಬಿಲೆಟ್ ಎಂಬ ಹೆಸರಿನ ಈ ಹೊಸ ಗವರ್ನರನೂ ಬೇಡ ರಾಜ್ಯಪದ್ಧತಿಯೂ ಬೇಡವೆಂಬುದನ್ನು ತಿಳಿಸಲು ಒಂದು ಪ್ರತಿನಿಧಿ ಮಂಡಳವು ಫ್ರೆಂಚ ಸೇನಾಪತಿ ಇದ್ದಲ್ಲಿಗೆ ಹೋಯಿತು. ಆದರೆ ಆ ಸೇನಾಪತಿಯ ಪ್ರತಿನಿಧಿಗಳಿಗೆ ಭೇಟಿಯನ್ನು ಕೊಡಲು ಒಪ್ಪಲಿಲ್ಲ. ಇದೆ ಸಮಯದಲ್ಲಿ ಡ್ರೂಸರು ಒಂದು ಪರಿಷತ್ತನ್ನು ಸೇರಿಸಿದರು. ಫ್ರೆಂಚರು ರಾಜಕೀಯವೆಂಬ ಹೆಸರಿನಿಂದ ಆ ಪರಿಷತ್ತನ್ನು ಸೈನ್ಯದ ಬಲದಿಂದ ನಿಲ್ಲಿಸಿಬಿಟ್ಟರು. ಈ ಗಲಾಟೆಯಲ್ಲಿ ಡ್ರೂಸರಿಗೂ ಫ್ರೆಂಚರಿಗೂ ಯುದ್ಧವಾಗಿ ಅನೇಕರು ಮೃತರಾದರು. ಗವರ್ನರನು ಡ್ರೂಸರ ಮುಖಂಡರನ್ನು ಕೈದುಮಾಡಿ ಪಾಮಿರಕ್ಕೆ ಕಳುಹಿಸಿದನು. ಹರೂಸದ ಸುಲ್ತಾನ ಬಾದಶಹರನ್ನು ಕೈದುಮಾಡಲು ಫ್ರೆಂಚರು ಯತ್ನಿಸಿದರು. ಇದಕ್ಕಾಗಿ ಅವರು ಆ ಬಾದಶಹನ ಹಳ್ಳಿಯ ಮೇಲೆ ಬೊಂಬ ಹಾಕಿದರು. ಆದರೆ ಸುಲ್ತಾನ ಬಾದಶಹನು ಫ್ರೆಂಚ ಗವರ್ನರನನ್ನೂ ಇನ್ನೂರು ದಾಳಿನ ಸೈನ್ಯವನ್ನು ಕೈದುಮಾಡಿಸಿದನು. ಫ್ರೆಂಚರು ತಮ್ಮ ಗವರ್ನರನ ಮುಕ್ತ ಇತರರ ಸಂರಕ್ಷಣದ ಬಗ್ಗೆ ೩೦೦ ಸಿಪಾಯಿಗಳ ಸೈನ್ಯವನ್ನು ಕಳುಹಿಸಿದರು. ಡ್ರೂಸರು ಅದನ್ನು ಕೂಡ ಸದ್ದೆ ಸೈರಸಕೆ ಕೊಯ್ದು ತೆಗೆದರು! ಅಲ್ಲದೆ ನಾನ್ನೂರು ಫ್ರೆಂಚ ಸಿಪಾಯಿಗಳ ತುಕಡಿಯನ್ನು ಮುತ್ತಿ ಅವರನ್ನು ಓಡಿಸಿದರು. ಆಗ ಫ್ರೆಂಚರು ಇನ್ನಷ್ಟು ಉಗ್ರಸ್ವರೂಪವನ್ನು ಧರಿಸಿ ಡ್ರೂಸರ ಎಲ್ಲ ಹಳ್ಳಿಗಳ ಮೇಲೆ ವಿಮಾನಗಳಿಂದ ಬೊಂಬುಗಳ ಮಳೆಯನ್ನು ಸುರಿಸಿದರು. ಅದರಿಂದ ಡ್ರೂಸ ಸ್ತ್ರೀಯರು ಮಕ್ಕಳು ಅಸಂಖ್ಯ

(ಆನೇ ಪೇಜಿಗೆ ಮುಂದುವರಿಸಿಯದೆ.)

ಸೂಚನೆ:— ಪ್ರತಿ ವರ್ಷದಂತೆ ನವರಾತ್ರಿಯ ದೆಸೆಯಿಂದ ಬರುವ ವಾರ ಸ್ವದೇಶಾಭಿಮಾನಿಯ ಸಂಚಿಕೆಯು ಪ್ರಕಟವಾಗುವುದಿಲ್ಲ.

ಮೆನೇಜರ್.

ಅನುಕ್ರಮಣಿಕೆ.

ಅಗ್ರಲೇಖ— ಪುಟಗಳು.
ಮುನ್ಸಿಪಾಲಿಟಿಯ ಚುನಾವಣೆ ೬
ಸ್ಫುಟವಿಚಾರಗಳು—
೧ ಕೌನ್ಸಿಲ್ ಒಫ್ ಸ್ಟೇಟಿನ ಸ್ವರಾಜ್ಯದ ಠರಾವು ,,
೨ ಕರ್ನಾಟಕದ ಏಕೀಕರಣ ೭
೩ ಕಾಸರಗೋಡಿನ ಮಲಯಾಳ ಭಾಗ ,,
೪ ಎಸೆಂಬ್ಲಿಯ ವರ್ತಮಾನ ,,
೫ ಕೊಂಗ್ರೆಸ್ಸಿನ ಸ್ವಾಮಂಡಲ ,,
ಮಂಗಳೂರು
ವರ್ತಮಾನಸಂಗ್ರಹಗಳು—
ವಿದೇಶ — ಒಳದೇಶ ವರ್ತಮಾನ ೫
ದಕ್ಷಿಣ ಕನ್ನಡ — ಕೊಲ್ಲೂರು, ಉಡುಪಿ, ಫರಂಗಿಪೇಟೆ ,,
ವಿವಿಧವಿಷಯಗಳು ೫–೮
ಪತ್ರವ್ಯವಹಾರ ೧, ೨, ೩. ,,

ಸ್ವದೇಶಾಭಿಮಾನಿ.

ಶಕ ೧೮೪೭ ಭಾದ್ರಪದ ಬ||೩೦ಯು ಶುಕ್ರವಾರ.

ಮುನ್ಸಿಪಾಲಿಟಿಯ ಚುನಾವಣೆ.

ಸ್ವರಾಜ್ಯಪಕ್ಷದ ಉಮೇದುವಾರರಿಗೆ ಮತಕೊಡಿರಿ.

ನಮ್ಮ ಮಂಗಳೂರು ಮುನ್ಸಿಪಾಲಿಟಿಯ ಚುನಾವಣೆಯ ವಿಷಯವಾಗಿ ನಮ್ಮ ಈ ಹೊತ್ತಿನ ಲೇಖನವು ಮೂರನೆಯ ಸಾರಿಯದಾಗಿದೆ. ಈ ಅಗ್ರಲೇಖವಲ್ಲದೆ ಇದೆ ವಿಷಯವಾಗಿ ಈ ಹೊತ್ತು ಇನ್ನೊಂದು ಕಡೆಯಲ್ಲಿ ಒಂದು ಚಿಕ್ಕ ಪತ್ರವೂ ಕೂಡ ಪ್ರಕಟವಾಗಿದೆ. ಈ ಚುನಾವಣೆಯನ್ನು ಕುರಿತು ನಾವು ನಮ್ಮ ಪತ್ರದ ಇಷ್ಟೊಂದು ಜಾಗೆಯನ್ನು ಯಾಕೆ ಖರ್ಚುಮಾಡುತ್ತಿದ್ದೇವೆಂಬುದಾಗಿ ಹಲವರು ಒಂದು ವೇಳೆ ಪ್ರಶ್ನೆಮಾಡಬಹುದು. ಅಂಥವರ ಸಮಾಧಾನಕ್ಕಾಗಿ ಎರಡು ಮಾತುಗಳನ್ನು ಮೊದಲು ಬರೆಯಬೇಕಾಗಿದೆ. ಮುನ್ಸಿಪಾಲಿಟಿಯು ನಾಗರಿಕ ಸಂಸ್ಥೆಯಾಗಿರುವದರಿಂದ, ಅದರ ಚುನಾವಣೆಯ ದಿವಸಗಳು ಹತ್ತರ ಬಂದ ಹಾಗೆ ಸ್ಥಳಿಕ ಪತ್ರಿಕೆಗಳಿಗೆ ಈ ವಿಷಯವು ಮಹತ್ವಪೂರ್ಣವಾಗಿಯೆ ತೋರಬೇಕಾದ್ದು ನ್ಯಾಯ. ಸ್ವಂತ ನಮ್ಮ ಪಟ್ಟಣದಲ್ಲಿ ಮು. ಚುನಾವಣೆಯ ಸಮಯವು ಬಂದಿರುವಾಗ, ಮತ್ತು ಚುನಾವಣೆಯಲ್ಲಿ ಉಮೇದುವಾರರಾಗಿ ಕೊಂಗ್ರೆಸ ಪಕ್ಷದಂಥ ಸರ್ವಮಾನ್ಯವಾದ ಉಚ್ಚ ತರಗತಿಯ ರಾಜಕೀಯ ಪಕ್ಷವು ತನ್ನ ಕಡೆಯಿಂದ ಉಮೇದುವಾರರನ್ನು ನಿಲ್ಲಿಸಿದ್ದಲ್ಲಿ ಅವರನ್ನು ಪ್ರತಿಭಟಿಸಲು ಇತರರು ನಿಂತಿರುವಾಗ ಕೊಂಗ್ರೆಸಿನ ಮತ್ತು ಸ್ವರಾಜ್ಯಪಕ್ಷದ ರಾಜಕೀಯ ತತ್ವಗಳೆ ವಿಜಯಿಯಾಗಬೇಕೆಂದು ಮನಃಪೂರ್ವಕವಾಗಿ ಬಯಸತಕ್ಕವರಾದ ನಾವು ಪತ್ರಿಕಾಕರ್ತರು ಇಂಥ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ಸತ್ಪಕ್ಷದ ಬೆಂಬಲಕ್ಕಾಗಿ ಮೂರಲ್ಲ, ಹತ್ತು ಸಾರೆಯಾದರೂ ನಮ್ಮ ಜಾಗೆಯನ್ನು ಖರ್ಚುಮಾಡುವದು ಅವಶ್ಯವಾಗಿದೆ. ಕೊಂಗ್ರೆಸ್ ಮತ್ತು ಸ್ವರಾಜ್ಯಪಕ್ಷದ ರಾಜಕೀಯ ತತ್ವಗಳ ವಿಷಯವಾಗಿ ಒಂದಿಷ್ಟು ಆದರ, ಪ್ರೇಮ ಮತ್ತು ಅಭಿಮಾನ ಈ ಉದಾತ್ತ ಮನೋವೃತ್ತಿಗಳು ನಮ್ಮಲ್ಲಿ ಇರಬೇಕೆಂಬುದಾಗಿ ನಾವು ನೆನಸುವದಾದರೆ ಈ ಚುನಾವಣೆಯ ವಿಷಯವಾಗಿ ಬರೆಯುವದು ಮೇಲೆ ಹೇಳಿದಂತೆ ಬರೆ ಅವಶ್ಯವಾದ್ದೆ ಅಲ್ಲ, ನಮ್ಮ ಪವಿತ್ರ ಕರ್ತವ್ಯವೂ ಆಗಿದೆ.

ಆದುದರಿಂದಲೆ ನಾವು ಸ್ವರಾಜ್ಯಪಕ್ಷದ ಉಮೇದುವಾರರಿಗೆನೆ ಮತದಾರರು ತಮ್ಮ ತಮ್ಮ ಮತಗಳನ್ನು ಕೊಡಬೇಕೆಂಬುದಾಗಿ ಮುಂಚಿನಿಂದಲೆ ಪ್ರತಿಪಾದಿಸುತ್ತ ಬಂದಿದ್ದೇವೆ. ಎರಡು ಮೂರು ನಮೂನೆಯ ರಾಜಕೀಯ ಪಕ್ಷಗಳ ಉಮೇದುವಾರರು ಚುನಾವಣೆಗಾಗಿ ನಿಂತಲ್ಲಿ ಯಾವ ಪಕ್ಷದವರಿಗೆ ಮತಕೊಡುವದು ಒಳ್ಳೆದೆಂಬುದಾಗಿ ಮತದಾರನಿಗೆ ಒಂದು ಆಲೋಚನೆ ಹುಟ್ಟುವದು ಸಹಜವು. ಉದಾಹರಣಾರ್ಥವಾಗಿ ಪ್ರಾಂತಿಕ ಕೌನ್ಸಿಲುಗಳಿಗಾಗಲಿ, ಮುಂಬಯಿಯಂಥ ಕೊರ್ಪೊರೇಶನಿಗಾಗಲಿ ಶಾಂತ, ಉಗ್ರ, ಲಿಬರಲ್, ರಾಷ್ಟ್ರೀಯ ಇ. ಇ. ಬೇರೆ ತಂಡದವರು ಉಮೇದುವಾರರಾಗಿ ಮುಂದೆ ಬಂದ ಪಕ್ಷದಲ್ಲಿ ಮತದಾರನಿಗೆ 'ಯಾರಿಗೆ ಮತಕೊಡಬೇಕೆ'ಂದು ಸಹಜವಾಗಿಯೆ ಜಿಜ್ಞಾಸೆ ಹುಟ್ಟುತ್ತದೆ. ಮತ್ತು ಆಗ ಅವನು ತನ್ನ ರುಚಿಗನುಸಾರವಾಗಿ ಬೇಕು ಬೇಕಾದವನಿಗೆ ತನ್ನತನ್ನ ಮತವನ್ನು ಕೊಡುತ್ತಾನೆ. ಎಂದರೆ ಮತದಾರನು ರಾಷ್ಟ್ರೀಯ ಪಕ್ಷದ ಮತಗಳನ್ನು ಪುರಸ್ಕರಿಸುವವನಿದ್ದರೆ ರಾಷ್ಟ್ರೀಯ ಪಕ್ಷದವನಿಗೆ, ಶಾಂತಪಕ್ಷದ ಅನುಯಾಯಿಯಾಗಿದ್ದರೆ ಶಾಂತ ಉಮೇದುವಾರನಿಗೆ, ಉಗ್ರನಿದ್ದರೆ ಉಗ್ರನಿಗೆ ಈ ರೀತಿಯಿಂದ ಮತವನ್ನು ಕೊಡುವನು. ಆದರೆ ಇಲ್ಲಿಯ ಬರುವ ಚುನಾವಣೆಯ ಮಟ್ಟಿಗೆ ಇಂಥ ಜಿಜ್ಞಾಸೆಗೆ ಅವಕಾಶವೆ ಇಲ್ಲ. ಕಾರಣ, ಒಂದು ಕೊಂಗ್ರೆಸ ಪಕ್ಷದವರಲ್ಲದೆ ಇತರ ಯಾವ ಪಕ್ಷದವರೂ ಇಲ್ಲಿ ನಿಂತಿಲ್ಲ. ಇತರ ಯಾರು ಯಾರು ನಿಂತಿರುವರೊ ಅವರು ಬರೆ ತಮ್ಮ ತಮ್ಮ ವ್ಯಕ್ತಿಯ ಮಹಾತ್ಮ್ಯದಿಂದಲೆ ನಿಂತಿರುವರಲ್ಲದೆ ಅಂಥವರು ಯಾವ ರಾಜಕೀಯ ತಂಡಕ್ಕೂ ಸೇರಿದವರಲ್ಲವಾದ ಕಾರಣ ಅವರಿಗೆ ಯಾವ ನಿರ್ಬಂಧವೂ ಇರದು. ಈ ಮಾತನ್ನು ವಾಚಕರ ಮುಂದೆ ಸುಲಭ ಶೈಲಿಯಲ್ಲಿ ಇಡುವದಾದರೆ, ಬರುವ ಚುನಾವಣೆಯಲ್ಲಿ ಕೊಂಗ್ರೆಸಿನ ಒಂದೇ ರಾಜಕೀಯ ಪಕ್ಷದವರು ಉಮೇದುವಾರರಾಗಿ ನಿಂತಿದ್ದಾರೆ. ಇನ್ನೊಂದು ಯಾವ ರಾಜಕೀಯ ಪಕ್ಷವೂ ಇಲ್ಲ. ಆದ್ದರಿಂದ ಯಾರಿಗೆ ಮತಕೊಡಲಿ, ಎಂಬುದಾಗಿ ಮತದಾರರಿಗೆ ಜಿಜ್ಞಾಸೆ ಹುಟ್ಟಲು ಕಾರಣವೆ ಇಲ್ಲ. ಈ ಕಾರಣ ಮತದಾರರು ಏಕವಿಚಾರದಿಂದ ರಾಷ್ಟ್ರೀಯ ಸಭೆಯ ಮತ್ತು ಸ್ವರಾಜ್ಯಪಕ್ಷದ ಪರವಾಗಿ ನಿಂತ ಉಮೇದುವಾರರಿಗೆನೆ ಮತಗಳನ್ನು ಕೊಟ್ಟು ಚುನಾಯಿಸಬೇಕು.

ಈ ಮಾತನ್ನು ನಾವು ಮೊದಲೂ ಹೇಳಿದ್ದೇವೆ, ಈ ಹೊತ್ತೂ ಹೇಳುತ್ತಿದ್ದೇವೆ. ನಗರದ ಹಿತವಾಗಬೇಕೆಂದಿದ್ದರೆ ನಗರ ಸಂಸ್ಥೆಯು ಸುಸಂಘಟಿತವಾದ ರಾಜಕೀಯ ಪಕ್ಷದವರ ಕೈಗೆ ಹೋಗಬೇಕೆ ಹೊರತು ಯಾವ ಧ್ಯೇಯವನ್ನೂ ಇಟ್ಟುಕೊಳ್ಳದೆ ಇದ್ದ ಮತ್ತು ಯಾವ ಪಕ್ಷಕ್ಕೂ ಸೇರದೆ ಇದ್ದವರ ಕೈಗೆ ಒಪ್ಪಿಸಿ ಫಲವಿಲ್ಲ. ಯಾವದಾದರೂ ಒಂದು ರಾಜಕೀಯ ಪಕ್ಷವು ಮುಂದೆ ಬರಲಿಲ್ಲವಾಗಿದ್ದದಾದರೆ ನಿಂತ ಉಮೇದುವಾರರಲ್ಲಿ ವ್ಯಕ್ತಿಯ ದೃಷ್ಟಿಯಿಂದ ಪಾತ್ರತೆಯನ್ನು ಪರೀಕ್ಷಿಸಿ ಯೋಗ್ಯನಾದವನಿಗೆ ಮತವನ್ನು ಕೊಡುವದು ಉಚಿತವೆಂಬುದಕ್ಕೆ ಅಡ್ಡಿ ಇಲ್ಲ. ಪರಂತು ಇಂತಿಂಥ ಕಾರ್ಯಗಳನ್ನು ಮಾಡಿ ಇಂತಿಂಥ ಧ್ಯೇಯಗಳನ್ನು ಸಂಪಾದಿಸುವ ದೃಢನಿಶ್ಚಯದಿಂದ ಒಂದು ಪಕ್ಷವು ಮುಂದೆ ಬಂದ ಬಳಿಕ ಆ ಪಕ್ಷವನ್ನು ಬಿಟ್ಟು ಯಾವ ಪಕ್ಷವೂ ಇಲ್ಲದವರಿಗೆ ಮತಕೊಡುವದು ಹಿತಾವಹವಾಗಲಿಕ್ಕಿಲ್ಲ. ನಾಮ|| ವಿ. ಜೆ. ಪಟೇಲ, ಬಿ. ಬಾಪ್ಟಿಸ್ಟಾ ಇಂಥವರಿಗೆನೆ ಮುಂಬಯಿ ಕೊರ್ಪೊರೇಶನಿನ ಅಧ್ಯಕ್ಷಸ್ಥಾನದ ಚುನಾವಣೆಯಲ್ಲಿ ಮತ್ತು ಎಸೆಂಬ್ಲಿಯ ಅಧ್ಯಕ್ಷಸ್ಥಾನದ ಚುನಾವಣೆಯಲ್ಲಿ ಯಾಕೆ ಯಶಸ್ಸು ಸಿಕ್ಕಿತು? ಬರೆ ಇವರ ವ್ಯಕ್ತಿಮಹಾತ್ಮ್ಯಕ್ಕಲ್ಲ. ಇವರು ಒಂದೊಂದು ರಾಜಕೀಯ ಪಕ್ಷಕ್ಕೆ ಸೇರಿದವರು. ಇದೆ ಅವರ ಯಶಸ್ಸಿನ ಕಾರಣವು. ಇಂಥ ಅನೇಕ ದೃಷ್ಟಾಂತಗಳನ್ನು ಎತ್ತಿ ಹೇಳಬಹುದು. ಈ ಎಲ್ಲ ದೃಷ್ಟಾಂತಗಳ ಮೇಲಿಂದ ಮತದಾರರು ಕಲಿಯತಕ್ಕ ಪಾಠವು ಒಂದೆ ಆಗಿದೆ. ಅದು ಯಾವುದೆಂದರೆ, ಸುಸಂಘಟಿತವಾದ ಮತ್ತು ಕಾರ್ಯವನ್ನು ಮಾಡಲು ಸಮರ್ಥವಾದ ರಾಜಕೀಯ ಪಕ್ಷವು ಒಂದು ಕಡೆಯಲ್ಲಿ ಮತ್ತು ಇನ್ನೊಂದು ಕಡೆಯಲ್ಲಿ ಧ್ಯೇಯ, ಕಾರ್ಯಕ್ರಮ, ಬಂಧನ, ಪಕ್ಷ ಇತ್ಯಾದಿ ಒಂದೂ ಇಲ್ಲದ ಜನರು ಇದ್ದಾಗ ಇವರ ಪೈಕಿ ರಾಜಕೀಯ ಪಕ್ಷದವರನ್ನೆ ಚುನಾಯಿಸುವುದು ಅಗತ್ಯವು. ರಾಜಕೀಯಪಕ್ಷದವರನ್ನೆ ಚುನಾಯಿಸಿಕೊಡುವ ಈ ಅಗತ್ಯಕಾರ್ಯವನ್ನು ಮಾಡಲು ಮುಂದರಿಸುವಾಗ ಮತದಾರರ ಮನಸ್ಸನ್ನು ಮರುಳುಗೊಳಿಸಲು ಹಲವರು ಹಲವು ವಿಧದ ಮಾತುಗಳನ್ನಾದಿ ವಿಘ್ನಗಳನ್ನು ತಂದೊಡ್ಡಬಹುದು. 'ತಾವು ವ್ಯಕ್ತಿಯಾಗಿ ನಿಂತರೂ ಮುನ್ಸಿಪಾಲಿಟಿಯಲ್ಲಿ ಅನೇಕ ಸುಧಾರಣೆಗಳನ್ನು ಮಾಡಲಿದ್ದೇವೆ, ನಗರಹಿತವನ್ನು ಸಾಧಿಸುವವರಿದ್ದೇವೆ, ಆದ್ದರಿಂದ ತಮಗೆನೆ ಮತಗಳನ್ನು ಕೊಡಿರಿ' ಎಂಬುದಾಗಿ ಹೇಳಿ ಯಾರು ಮರುಳುಗೊಳಿಸುವರೊ ಅಂಥವರಿಗೆ ಮತದಾರರು ಮುಂದಿನ ಸವಾಲುಗಳನ್ನು ಅವಶ್ಯವಾಗಿ ಕೇಳಬೇಕು. ನೀವು ಮುನ್ಸಿಪಾಲಿಟಿಯಲ್ಲಿ ಅನೇಕ ಸುಧಾರಣೆಗಳನ್ನು ಮಾಡಲು ಸಂಕಲ್ಪಿಸಿದ್ದೀರಿ. ನಗರಹಿತವನ್ನು ಮಾಡಲು ಹೊರಟಿದ್ದೀರಿ. ಆದರೆ ಇದುವರೆಗೆ ನೀವು ಸಭಾಸದರಾಗಿದ್ದು ಯಾವ ಯಾವ ಸುಧಾರಣೆಗಳನ್ನು ಮಾಡಿದಿರಿ? ನಗರಕ್ಕೆ ಆರೋಗ್ಯ, ಶಿಕ್ಷಣ, ಮಾರ್ಗಗಳ ಅನುಕೂಲತೆ ಇತ್ಯಾದಿ ಯಾವ ಯಾವ ಕಾರ್ಯಗಳನ್ನು ಮಾಡಿದಿರಿ? ಇದುವರೆಗೆ ಮಾಡಲಿಲ್ಲವಾದರೂ ಇನ್ನು ಮುಂದೆ ಅಂಥ ಕಾರ್ಯಗಳನ್ನು ಮಾಡಿ ನಗರಹಿತವನ್ನು ಸಾಧಿಸಬೇಕು, ಮುನ್ಸಿಪಾಲಿಟಿಯ ತೆರಿಗೆಯನ್ನು ಕೊಡುವವರಿಗೆ ಅವರ ಕೊಡುವ ತೆರಿಗೆಗೆ ಸರಿಯಾದ ಪ್ರತಿಫಲವು ಸಿಕ್ಕಬೇಕೆಂಬುದಾಗಿ ನೀವು ನಿಜವಾಗಿ ನೆನಸುವದಾದರೆ ನೀವು ಏಕಾಂಗಿಯಾಗಿ ಇರುವದಕ್ಕಿಂತ ಕೊಂಗ್ರೆಸ್ಸಿನಂಥ ಬಲಿಷ್ಠವಾದ ರಾಜಕೀಯ ಪಕ್ಷಕ್ಕೆ ಯಾಕೆ ಸೇರುವುದಿಲ್ಲ? ಅದರಲ್ಲಿ ಸೇರಿ ಕೆಲಸಮಾಡುವುದು ನಿಮ್ಮಂಥವರಿಗೆ ಇನ್ನೂ ಒಳ್ಳೆಯದಲ್ಲವೆ? ನೀವು ಒಂದು ಪಕ್ಷದವರಾಗಿ ಕೆಲಸಮಾಡುವಾಗ ನಿಮ್ಮ ಮಾತಿಗೂ, ನೀವು ಕೈಕೊಂಡ ಕೆಲಸಕ್ಕೂ ಹೆಚ್ಚಿನ ಭಾರವೂ, ಬೆಲೆಯೂ ಬರುವುದಿಲ್ಲವೆ? ಹೀಗಿರಲು ನೀವು ಕೊಂಗ್ರೆಸ್ಸಿಗಾಗಲಿ, ಸ್ವರಾಜ್ಯ ಪಕ್ಷಕ್ಕಾಗಲಿ ಯಾಕೆ ಸೇರುವುದಿಲ್ಲ? ಅವುಗಳ ಮತವು ನಿಮಗೆ ಮಾನ್ಯವಲ್ಲವೆ? ಅವುಗಳ ಕಾರ್ಯಕ್ರಮವು ನಿಮಗೆ ಒಪ್ಪುವುದಿಲ್ಲವೆ? ಅಥವಾ ಅವುಗಳ ತತ್ವವೂ ಕಾರ್ಯಕ್ರಮವೂ ಮನಸ್ಸಿನಲ್ಲಿ ಮಾನ್ಯವಾಗಿದ್ದು ಬಹಿರಂಗವಾಗಿ ಅವುಗಳಲ್ಲಿ ಸೇರಲು ನಿಮಗೆ ಧೈರ್ಯವಿಲ್ಲವೆ? ಈ ರೀತಿಯಿಂದ ಧೈರ್ಯವಿಲ್ಲವಾದರೆ ಅಂಥ ನಿಮಗೆ ನಾವಾದರೂ ಯಾಕೆ ಮತಕೊಡಬೇಕು? ಇನ್ನೊಂದು ಪಕ್ಷದಲ್ಲಿ ಮುಖ್ಯ ಸಂಸ್ಥೆಗಳಾದ ಕೊಂಗ್ರೆಸ್ಸಿನ ಮತ್ತು ಸ್ವರಾಜ್ಯ ಪಕ್ಷದ ತತ್ವಗಳೆ ನಿಮಗೆ ಮಾನ್ಯವಿಲ್ಲವೆಂದಾದರೆ, ನೀವು ನಮ್ಮಂಥವರ ಪ್ರತಿನಿಧಿಗಳಾದರೂ ಹೇಗೆ ಆಗುವಿರಿ? ರಾಜಕೀಯ ಪಕ್ಷವು ನಿಮಗೆ ಬೇಡವಾದರೆ ನಮ್ಮ ಮತದಾರರ ಪಕ್ಷವಾದರೂ ನಿಮಗೆ ಯಾಕೆ? ಸ್ಪಷ್ಟವಾಗಿ ಹೇಳುವುದಾದರೆ, ಯಾವ ಪಕ್ಷದಲ್ಲೂ ಸೇರದವರೂ, ಯಾವ ಮತವೂ ಇಲ್ಲದವರೂ ಆದ ನಿಮಗೆ ಈ ಒಣ ಉಸಾಬರಿಯ ಮುನ್ಸಿಪಾಲಿಟಿಯ ಕೆಲಸವಾದರೂ ಯಾಕೆ? ಇಂಥ ಸಾರ್ವಜನಿಕ ಕೆಲಸಗಳನ್ನು ಕೈಕೊಳ್ಳುವವರು ದೇಶದೊಳಗಿನ ರಾಜಕೀಯ ಪಕ್ಷಗಳನ್ನು ಅವಲಂಬಿಸಿದವರೆ ಆಗಿರಬೇಕು. ಈ ಸಾಮಾನ್ಯ ಸಂಗತಿಯನ್ನು ಕೂಡ ಅರಿಯದ ನೀವು ಮುನ್ಸಿಪಾಲಿಟಿಯ ಕುರ್ಚಿಗಳನ್ನಾಕ್ರಮಿಸಿ ಏನುಮಾಡುವವರಿದ್ದೀರಿ? ಆದ್ದರಿಂದ ನಿಮಗೆ ಮತಗಳನ್ನು ಯಾಕೆ ಕೊಡಬೇಕು?

ಈ ಮೇಲಿನ ಸವಾಲುಗಳನ್ನು ರಾಜಕೀಯ ಪಕ್ಷದಲ್ಲಿ ಸೇರದೆ ಇದ್ದ ಉಮೇದುವಾರರಿಗೆ ಮತದಾರರು ಕೇಳಬೇಕು. ಇವೆ ಎಂದಲ್ಲ, ಇಂಥ ಅನೇಕ ಸಮರ್ಪಕ ಸವಾಲುಗಳನ್ನು ಮಾಡುವದರಿಂದ ಅವರು ಯಾವ ಯುಕ್ತಿವಾದದಿಂದ ಮತದಾರರನ್ನು ಮರಳುಗೊಳಿಸಲುಬಂದಿದ್ದರೂ ಅದರ ನಿಜಸ್ವರೂಪವು ಆಗ ಸರಿಯಾಗಿ ಹೊರಗೆ ಬರುತ್ತದೆ. ಅಲ್ಲದೆ ತಾವು ನಗರದ ಹಿತಕಾರಿಗಳೆಂಬ ಟಕ್ಕಿನ ವೇಷವನ್ನು ಅವರಿಗೆ ಬಿಟ್ಟುಬಿಡಬೇಕಾಗುತ್ತದೆ. ಆದರೂ ಚುನಾವಣೆಯ ಸಂದರ್ಭದಲ್ಲಿ ಈ ಸ್ವತಂತ್ರ ಉಮೇದುವಾರರ ಬತ್ತಳಿಗೆಯಲ್ಲಿ ಇನ್ನೂ ಅನೇಕ ಬಾಣಗಳು ಇರುತ್ತವೆ. ಅನೇಕ ಅಸ್ತ್ರಗಳಿರುತ್ತವೆ. ಇವುಗಳಲ್ಲಿ ಮೋಹನಾಸ್ತ್ರವು ಎಲ್ಲಕ್ಕೂ ಮಿಗಿಲು. ಆದರೆ ಲೋಭಪರವಶನಾಗಿ ತನ್ನ ಮತವನ್ನು ಏಲಮಿಗೆ ಇಡುವ ಮತದಾರನು ಮಹಾತ್ಮಾಗಾಂಧಿಗಳ ಸದುಪದೇಶದ ಈಗಿನ ಕಾಲದಲ್ಲಿ ಯಾದರೂ ಯಾರೂ ಇರಲಿಕ್ಕಿಲ್ಲವೆಂದು ನಾವು ತಿಳಿಯುತ್ತೇವೆ. ಇದೆ ಮೇರೆಗೆ ಸ್ವಾರ್ಥಪರವಾದ ಇತರ ಉಪಕಾರಗಳ ಮತ್ತು ದಾಕ್ಷಿಣ್ಯದ ಬಲೆಯಲ್ಲಿ ಸಿಕ್ಕಿಬೀಳುವ ಮತದಾರರೂ ಕೂಡ ಯಾರೂ ಇರಲಿಕ್ಕಿಲ್ಲವೆಂದು ನಾವು ಭಾವಿಸುತ್ತೇವೆ. ಅಂಥವರು ಇರುವದಾದರೆ ನಗರದ ದುರ್ದೈವವೆ ಸರಿ. ಆದರೆ ಒಳ್ಳೆ ಭಾವನೆಯನ್ನು ಮಾಡಬೇಕು, ಒಳ್ಳೆ ಇಚ್ಛೆಯನ್ನು ತಾಳಬೇಕೆಂದು ನೀತಿ ಇರುವುದರಿಂದ ಅಂಥವರು ಯಾರೂ ಇರಲಿಕ್ಕಿಲ್ಲವೆಂದೆ ನಮ್ಮ ಭಾವನೆ. ಆದ್ದರಿಂದ ನಮ್ಮ ಮಂಗಳೂರಿನ ಎಲ್ಲ ಮತದಾರರು ಬರುವ ಮುನ್ಸಿಪಲ್ ಚುನಾವಣೆಯಲ್ಲಿ ಕೊಂಗ್ರೆಸ ಮತ್ತು ಸ್ವರಾಜ್ಯ ಪಕ್ಷದ ಉಮೇದುವಾರರನ್ನೆ ಚುನಾಯಿಸಿಕೊಟ್ಟಾರೆಂದು ದೃಢವಾಗಿ ನಂಬಿದ್ದೇವೆ.

ಸ್ಫುಟವಿಚಾರಗಳು.

೧. ಕೌನ್ಸಿಲ್ ಒಫ್ ಸ್ಟೇಟಿನ ರಚನೆಯೆ ಪ್ರಥಮತಃ ಸರಕಾರಕ್ಕೆ ಹೇಗೆ ಬೇಕೊ ಹಾಗೆಯೆ ಇದೆ. ಚುನಾಯಿಸಿದವರಿಗಿಂತ ನೇಮಕಪಟ್ಟ ಸಭಾಸದರೆ ಅಲ್ಲಿ ಅಧಿಕವಾಗಿರುವುದರಿಂದ ಸರಕಾರಿ ಪಕ್ಷವೆ ಯಾವಾಗಲು ಅಲ್ಲಿ ಯಶಸ್ವಿಯಾಗುತ್ತದೆ. ಅದರ ಪರಿಸ್ಥಿತಿಯು ಹೀಗಿರುವುದರಿಂದ ಅಂಥ ಕೌನ್ಸಿಲ್ ಒಫ್ ಸ್ಟೇಟಿನಲ್ಲಿ ಮಡಿಮನ್ ಕಮಿಟಿಯ ರಿಪೋರ್ಟಿನ ಬಹುಮತದ ಅಂಶವು ಪಾಸಾದ್ದಾಗಲಿ ಅಥವಾ ಅದಕ್ಕೆ ಉಪಸೂಚನೆಯ ರೂಪದಿಂದ ತಂದ ಸ್ವರಾಜ್ಯದ ಕೇಳಿಕೆಯು ಬಿದ್ದುಹೋದದ್ದಾಗಲಿ ಆಶ್ಚರ್ಯಕರವಾದ್ದಲ್ಲ. ಕಾರಣ, ಅಲ್ಲಿಯವರೆಲ್ಲ ದೊಡ್ಡ ಮನುಷ್ಯರು! ಮತ್ತು ಈ ದೊಡ್ಡ ಮನುಷ್ಯರು ಸರಕಾರದ ಹಿಂದೆ ಲಾಂಗೂಲಚಾಲನಮಾಡಿ ತಿರುಗಾಡುವ ಪ್ರಾಣಿಗಳು!! ಎಂದ ಮೇಲೆ ಇಂಥವರು ದೇಶದ ಹಿತವನ್ನು ನೋಡಬೇಕೊ ಅಥವಾ ಸ್ವಂತ ಹೊಟ್ಟೆಯ ಭಕ್ಕರಿ ಚೂರುಗಳನ್ನು ನೋಡಬೇಕೊ? ತಾತ್ಪರ್ಯ, ಕೌನ್ಸಿಲ್ ಒಫ್ ಸ್ಟೇಟಿನ ನೇಮಕಪಟ್ಟ ಸಭಾಸದರು ಲೋಕಪಕ್ಷವನ್ನು ಉಪರೋಧಿಸುವಂತೆಯೂ, ನೌಕರಶಾಹಿಯ ಇಷ್ಟಾರ್ಥವನ್ನು ಸಾಧಿಸುವಂತೆಯೂ ಮತಗಳನ್ನು ಕೊಡುತ್ತಾರೆಂಬುದು ಒಂದು ಚಿಕ್ಕ ಮಗುವಿಗೂ ಸಹ ಗೊತ್ತಿದ್ದ ಸಂಗತಿ. ಆದ್ದರಿಂದ ಮುಡಿಮನ್ ಕಮಿಟಿಯ ಆ ರಿಪೋರ್ಟಿನ ಸರಕಾರಿ ಠರಾವಿನ ಸಂದರ್ಭದಲ್ಲಿ ಅವರು ಸರಕಾರದ ಕಚ್ಚೆಯನ್ನು ಅವಲಂಬಿಸಿದ್ದಾದರೆ ಅದರಲ್ಲಿ ಯಾವ ಆಶ್ಚರ್ಯವೂ ಇಲ್ಲ. ಆದರೆ ಹಲವು ಲೋಕನಿಯುಕ್ತ ಸಭಾಸದರು ಜಾತಿಕಟ್ಟಿ ಸರಕಾರಿ ಸಭಾಸದರೊಡನೆ ಏನು ಸೇರಿದರೊ ಅದು ಮಾತ್ರ ಆಶ್ಚರ್ಯಕರವು! ಸರಕಾರದ ಕಡೆಯಿಂದ ಬಹುಮತದ ರಿಪೋರ್ಟಿಗೆ ಕಾರ್ಯಸ್ವರೂಪವನ್ನು ಕೊಡಬೇಕೆಂಬುದಾಗಿ ಠರಾವು ಬಂತು. ಬಹುಮತದ ರಿಪೋರ್ಟಿಗೆ ಕಾರ್ಯಸ್ವರೂಪವನ್ನು ಕೊಡುವದೆಂದರೆ, ಇನ್ನಷ್ಟು ಖರ್ಚಿನ ಭಾರಗಳನ್ನು ಈ ದೇಶದ ತಲೆಯ ಮೇಲೆ ಹೊರಿಸುವದಾಗಿದೆ. ಈ ಪ್ರತಿಗಾಮಿ ಧೋರಣದ ಅಂಶವನ್ನು ಎಸೆಂಬ್ಲಿಯಲ್ಲಿ ಯಾವ ರೀತಿಯಿಂದ ಪಂಡಿತ ಮೋತಿಲಾಲಜಿಯವರು ವಿರೋಧಿಸಿ ಸ್ವರಾಜ್ಯದ ಹಕ್ಕುಗಳನ್ನು ಕೊಡಬೇಕೆಂಬುದಾಗಿ ಠರಾವನ್ನು ತಂದಿದ್ದರೊ ಅದೆ ಠರಾವನ್ನು ಇಲ್ಲಿಯೂ ಹಲವು ಲೋಕಪಕ್ಷದ ಸಭಾಸದರು ತಂದರು. ಮತ್ತು ಹಲವರು ಕಮಿಶನನ್ನು ನೇಮಿಸಬೇಕೆಂದು ವಾದಿಸಿದರು. ಆದರೆ ಪುನಃಪುನಃ ಕಮಿಶನುಗಳನ್ನು ನೇಮಿಸುತ್ತ ಕೂಡ್ರುವ ಪದ್ಧತಿಯು ಹಗಲಿರುಳುಗಳ ಚಕ್ರದಂತೆ ಅದೆ ಅದೆ ಪರಿಣಾಮವನ್ನುಂಟು ಮಾಡುತ್ತದಾದ್ದರಿಂದ ನಿರರ್ಥಕವೆಂದು ಹಲವರು ನಿಷೇಧಿಸಿದ್ದರಿಂದ ಆ ಉಪಸೂಚನೆಗಳು ಹಿಂದಕ್ಕೆಳೆಯಲ್ಪಟ್ಟವು. ಆದರೆ ರೇಝೂಅಲ್ಲಿಯವರು ಅಲ್ಪಸಂಖ್ಯಾಕರ ರಿಪೋರ್ಟಿಗೆ ಕಾರ್ಯಸ್ವರೂಪವನ್ನು ಕೊಡಬೇಕೆಂಬುದಾಗಿ ಉಪಸೂಚನೆಯನ್ನು ತಂದರು. ಆದರೆ ಲೋಕಪಕ್ಷದ ಹಲವು ಸಭಾಸದರು ಕೂಡ ಇದಕ್ಕೆ ಪ್ರತಿಕೂಲ ಮತವನ್ನು ಕೊಟ್ಟರು! ಇದು ಬಹು ದುಃಖದ ವಿಷಯವಾಗಿದೆ. ಇಂಥವರು ಕೌನ್ಸಿಲಿನ ಸ್ಥಾನಗಳನ್ನು ಇನ್ನೆಷ್ಟು ಸಮಯದ ವರೆಗೆ ಆಕ್ರಮಿಸುತ್ತಾರೆ ನೋಡಬೇಕು. ಈ ಮೇರೆಗೆ ಸ್ವರಾಜ್ಯದ ಕೇಳಿಕೆಯ ಠರಾವು ಬಿದ್ದುಹೋಯಿತು.

೨. ಕರ್ನಾಟಕದ ಏಕೀಕರಣದ ವಿಷಯವಾಗಿ ಧಾರವಾಡ, ಬಾಗಲಕೋಟೆ ಮುಂತಾದ ಕಡೆಗಳಲ್ಲಿ ಪ್ರಯತ್ನಗಳು ನಡೆಯುತ್ತಿವೆ. ಇದು ಬಹು ಸ್ತುತ್ಯವಾದ ಸಂಗತಿಯು. ಉತ್ತರ ಕರ್ನಾಟಕದಲ್ಲಿ ಈ ವಿಷಯವಾಗಿ ಎಷ್ಟರ ಮಟ್ಟಿಗೆ ಜಾಗೃತಿ ಇರುವದೊ ಅಷ್ಟು ನಮ್ಮ ದಕ್ಷಿಣಕನ್ನಡದಲ್ಲಾಗಲಿ ಉತ್ತರಕನ್ನಡ ಜಿಲ್ಲೆಯಲ್ಲಾಗಲಿ, ಸ್ವಯಂ ಬಳ್ಳಾರಿಯಲ್ಲಾಗಲಿ ಇದ್ದದ್ದು ಕಂಡುಬರುವದಿಲ್ಲ. ಕರ್ನಾಟಕದ ಏಕೀಕರಣದ ಪ್ರಯತ್ನವನ್ನು ನಡಿಸಲು ಸ್ಥಾಪಿತವಾದ ಸಂಘದವರು ಕರ್ನಾಟಕ ಯೂನಿವರ್ಸಿಟಿಯನ್ನು ಸ್ಥಾಪಿಸಬೇಕೆಂದು ಚಳವಳವನ್ನು ಮಾಡುತ್ತಿದ್ದಾರೆ. ಅವರು ನಡಿಸತಕ್ಕ ಈ ಚಳವಳವು ಸಹ ಶ್ಲಾಘ್ಯವಾಗಿದೆ. ಇದಕ್ಕೆ ಇಲ್ಲಿಯ ಮುಖಂಡರು ತಮ್ಮ ಬೆಂಬಲವನ್ನು ಕೊಟ್ಟಾರೆಂದು ನಾವು ಭಾವಿಸುತ್ತೇವೆ. ಮೊನ್ನೆ ಬಾಗಲಕೋಟೆದಲ್ಲಿ ಸಭೆ ಸೇರಿ ಮುಧೋಳ ಜಮಖಂಡಿ ಮುಂತಾದ ಸಂಸ್ಥಾನಗಳ ಭಾಗಗಳು ಕನ್ನಡವಾಗಿರುವದರಿಂದ ಅವು ಕರ್ನಾಟಕ ಯುನಿವರ್ಸಿಟಿಯಲ್ಲಿ ಅಂತರ್ಭವಿಸಬೇಕಾಗಿವೆ, ಇತರ ಯುನಿವರ್ಸಿಟಿಗಳಲ್ಲಿ ಅವುಗಳನ್ನು ಸೇರಿಸಕೂಡದು ಎಂಬುದಾಗಿ ಆ ಸಭೆಯಲ್ಲಿ ಠರಾವು ಪಾಸಾಗಿದೆ. ಕೇವಲ ನಿಷೇಧಾತ್ಮಕ ಠರಾವನ್ನಾಗಲಿ, ಅಥವಾ ಬರೆ ಆವೇಶಯುಕ್ತ ಭಾಷಣಗಳನ್ನಾಗಲಿ ಮಾಡುವುದರಿಂದ ಒಂದು ಸಂಘವು ಕೃತಾರ್ಥವೂ ಆಗಲಾರದು, ಸಂಕಲ್ಪಿತ ಕಾರ್ಯವೂ ನೆರವೇರಲಾರದು. ಕಾರ್ಯ ಸಾಧಕವಾದ ಪ್ರಯತ್ನಗಳು ಅತ್ಯಾವಶ್ಯಕವಾಗಿವೆ. ಈ ಸಂಗತಿಯನ್ನು ಮನಗಂಡು ಪ್ರಯತ್ನದ ದಿಕ್ಕನ್ನು ನಿರ್ಣಯಿಸಬೇಕೆಂದು ಉತ್ತರ ಕರ್ನಾಟಕಸ್ಥರಿಗೆ ನಮ್ಮ ವಿನಂತಿ. ಅಲ್ಲದೆ, ಅವರ ಚಳವಳಕ್ಕೆ ಕರ್ನಾಟಕದ ಮಿಕ್ಕ ಭಾಗದವರು ಬೆಂಬಲವನ್ನು ಕೊಟ್ಟು ಅವರು ಪ್ರಾರಂಭಿಸಿರುವ ಏಕೀಕರಣ, ವಿಶ್ವವಿದ್ಯಾಲಯ ಸ್ಥಾಪನೆ ಇತ್ಯಾದಿ ಕಾರ್ಯಗಳನ್ನು ದೃಶ್ಯರೂಪದಲ್ಲಿ ತರಲು ಕೈಕೊಡಬೇಕಾಗಿ ನಮ್ಮ ಸೂಚನೆ. ಮೇಲಿನ ವಿನಂತಿಯೂ, ಈ ಸೂಚನೆಯು ಇವೆರಡು ವ್ಯರ್ಥವಾಗಲಿಕ್ಕಿಲ್ಲವೆಂದು ನಾವು ನಂಬಿದ್ದೇವೆ.

೩. ಇದೆ ಸಂದರ್ಭದಲ್ಲಿ ನಮ್ಮ ಕಾಸರಗೋಡಿನ ವಿಷಯವಾಗಿ ನಾವು ಮುಂಚೆ ಬರೆದ ಸಂಗತಿಯನ್ನೆ ಇನ್ನೊಮ್ಮೆ ವಾಚಕ ವರ್ಗದ ಸ್ಮರಣಕ್ಕೆ ತಂದುಕೊಡಬೇಕಾಗುತ್ತದೆ. ಕಾಸರಗೋಡ ತಾಲೂಕಿನ ಮಳೆಯಾಳ ಭಾಗವನ್ನು ಮಲಬಾರಿನವರು ಅಪೇಕ್ಷಿಸುತ್ತಿದ್ದಾರೆ, ಅಲ್ಲಿಯವರಿಗೂ ತಾವು ಇತರ ಮಲಬಾರಿಗಳೊಡನೆ ಸೇರಬೇಕೆಂಬುದಾಗಿ ಪ್ರಬಲ ಇಚ್ಛೆ ಇರುತ್ತದೆ. ಇಂಥ ಪರಿಸ್ಥಿತಿಯಲ್ಲಿ ಕೊಂಗ್ರೆಸಿನ ಭಾಷಾನುರೂಪ ಪ್ರಾಂತವಿಭಾಗತತ್ವಕ್ಕನುಸಾರವಾಗಿ ಅಷ್ಟು ಭಾಗವನ್ನು ಮಲಬಾರಕ್ಕೆ ಸೇರಿಸಬಹುದು ಎಂಬುದಾಗಿ ನಮ್ಮ ಅನುಮತಿಯನ್ನು ನಾವು ಈ ಮೊದಲು ವ್ಯಕ್ತಗೊಳಿಸಿದ್ದೆವು. ಇದುವರೆಗೆ ಕಾಸರಗೋಡಿನ ಮಲಬಾರ ಬಂಧುಗಳು ನಮ್ಮೊಡನೆ ಇದ್ದ ಕಾರಣ ಆ ಬಾಂಧವ್ಯವನ್ನು ಪಕ್ಕನೆ ಹರಿದುಕೊಳ್ಳುವದು ಯುಕ್ತವಲ್ಲ, ಆದರೆ ಬರೆ ಸಹ ವಸತಿಯ ಈ ಬಾಂಧವ್ಯಕ್ಕಾಗಿ ಅನ್ಯ ಭಾಷೆಯವರೊಡನೆ ಇದ್ದು ತಮ್ಮ ಭಾಷೆ, ಸಂಸ್ಕೃತಿ ಮುಂತಾದವುಗಳಿಗೆ ತಿಲಾಂಜಲಿಯನ್ನು ಕೊಡುವದು ಎಂದೂ ಕ್ಷಮ್ಯವಾಗಲಾರದು, ಅಲ್ಲದೆ ಸ್ವಯಂ ನಿರ್ಣಯದ ಯಾವ ತತ್ವವುಂಟೊ ಅದಕ್ಕಂತೂ ಈ ಕ್ರಮವು ತುಂಬಾ ವಿರುದ್ಧವಾದ್ದು, ಆದ್ದರಿಂದ ನಾವು ಮೇಲಿನಂತೆ ನಮ್ಮ ಅಭಿಪ್ರಾಯವನ್ನು ವ್ಯಕ್ತಗೊಳಿಸಿದ್ದಾಗಿತ್ತು. ಯಾವ ವಿಚಾರವಂತರೂ ಇದರಲ್ಲಿ ಅನ್ಯಥಾಭಿಪ್ರಾಯವನ್ನು ಗ್ರಹಿಸಲು ಕಾರಣವಿಲ್ಲ. ಇದೆ ಪ್ರಶ್ನೆಯನ್ನು ಇನ್ನೊಂದು ದೃಷ್ಟಿಯಿಂದ ವಿಚಾರಮಾಡಿದರೆ ಕಾಸರಗೋಡಿನ ಮಲಬಾರ ಭಾಗವನ್ನು ನಮ್ಮ ಜಿಲ್ಲೆಯಿಂದ ವಿಂಗಡಿಸುವದು ನಮ್ಮ ಜಿಲ್ಲೆಯ ಹಿತದ ದೃಷ್ಟಿಯಿಂದ ಇನ್ನಷ್ಟು ಯುಕ್ತವೆಂದೆ ಹೇಳಬೇಕು. ಕಾಸರಗೋಡಿನ ಮಲಬಾರ ಭಾಗವು ಈ ಜಿಲ್ಲೆಗೆ ಸೇರಿಸಿರುವದರಿಂದ ಡಿವಿಜನಲ್ ಒಫೀಸರ ಮುಂತಾದವರಿಗೆ ಕನ್ನಡ, ಮಲಯಾಳ ಈ ಎರಡೂ ಭಾಷೆಗಳ ಪರಿಶ್ರಮವನ್ನು ಸಂಪಾದಿಸಬೇಕಾಗುತ್ತದೆ! ಈ ಪ್ರಕಾರ ಈ ಉಭಯ ಕೂಟವು ಏಕತ್ರ ಸೇರಿಸಿರುವದರ ಪರಿಣಾಮವು ಒಮ್ಮೊಮ್ಮೆ ಏನಾಗುತ್ತದೆಂದರೆ ಆಫೀಸರರನೇಕರು ಮಳಿಯಾಳಿಗಳೆ ಇಲ್ಲಿಗೆ ಬರುತ್ತಾರೆ! ಅಂಥವರಿಗೆ ಕನ್ನಡದ ಗಂಧವು ಕೂಡ ಇರುವದಿಲ್ಲ! ಈ ಅನುಭವವು ಇಲ್ಲಿಯವರಿಗೆ ಚನ್ನಾಗಿರುವದರಿಂದ ಇದನ್ನು ಪುನಃ ವಿವರಿಸುವ ಅಗತ್ಯವಿಲ್ಲ. ಇರಲಿ. ಈ ಎಲ್ಲ ಕಾರಣಗಳಿಂದ ನಾವು ಕಾಸರಗೋಡಿನ ಮಲಬಾರ ಭಾಗವನ್ನು ನಮ್ಮ ಜಿಲ್ಲೆಯಿಂದ ವಿಂಗಡಿಸಬಹುದು ಎಂಬುದಾಗಿ ಮುಂಚೆ ಬರೆದಿದ್ದೆವು. ಈ ಸೂಚನೆಯ ಸಂಗಡವೆ ಇನ್ನೊಂದು ವ್ಯವಹಾರ್ಯವಾದ ಸೂಚನೆಯನ್ನು ಸಹ ಕೊಟ್ಟಿದ್ದೆವು. ಉತ್ತರ ಕನ್ನಡ ಮತ್ತು ನಮ್ಮ ಜಿಲ್ಲೆ ಇವೆರಡನ್ನು ಒಂದೆ ಪ್ರಾಂತಾಧಿಪತ್ಯಕ್ಕೆ ಸೇರಿಸುವದು ಅತ್ಯಗತ್ಯ. ಎಲ್ಲ ಕರ್ನಾಟಕವು ಏಕೀಕೃತವಾಗುವದಾದರೆ ಈ ಎರಡೂ ಜಿಲ್ಲೆಗಳು ಸಹಜವಾಗಿಯೆ ಒಟ್ಟಿಗೆ ಬರುತ್ತವೆ. ಅದಾಗುವ ತನಕ ಒಂದೆ ಕರಾವಳಿಯಲ್ಲಿದ್ದು, ಒಂದೆ ಭಾಷೆಯ, ಒಂದೆ ಸಂಸ್ಕೃತಿಯ ಜನಾಂಗಗಳಲ್ಲಿ ಹಲವರು ಮುಂಬಯಿಗೆ ಓಡಬೇಕು, ಹಲವರು ಮದ್ರಾಸಿಗೆ ಓಡಬೇಕು, ಇದು ಚಂದವಲ್ಲವೆಂದು ಯಾರೂ ಹೇಳುವಂತಿದೆ. ಆದ್ದರಿಂದ ಈ ಎರಡು ಜಿಲ್ಲೆಗಳಾದರೂ ಒಂದೆ ಪ್ರಾಂತಾಧಿಪತ್ಯಕ್ಕೆ ಸೇರಿಸಲ್ಪಡಬೇಕೆಂದು ನಮ್ಮ ಅಂಬೋಣವಾಗಿತ್ತು. ಮೇಲಿನ ಈ ಎಲ್ಲ ಕಾರಣಗಳನ್ನು ಸಮಾಲೋಚಿಸಿ ನೋಡಿದ್ದಲ್ಲಿ ನಮ್ಮ ಎರಡೂ ಸೂಚನೆಗಳಲ್ಲಿ ಅಯುಕ್ತತೆಯಾಗಲಿ, ಅಸಾಮಂಜಸ್ಯವಾಗಲಿ ಯಾರಿಗೂ ಕಂಡುಬರಲಿಕ್ಕಿಲ್ಲ. ಆದರೆ ಕುಮಟೆಯ ನಮ್ಮೊಬ್ಬ ಬಂಧುವಿಗೆ ಇದರಲ್ಲಿ 'ಮುದಿ ಭ್ರಾಂತಿಯು' ವಿಕಾರವಾದ್ದಾಗಿ ಕಂಡುಬರುತ್ತದೆ! ಒಂಟೆಯ ಮೇಲೆ ಕುಳಿತು ಕುರಿಗಳನ್ನು ಮೇಯಿಸುವದು ಎಷ್ಟು ಸುಸಂಗತವೊ ಅಷ್ಟೆ ನಮ್ಮ ಬಂಧುವಿನ ಈ ಬರವಣಿಗೆಯು ಸುಸಂಗತವಾದ್ದರಿಂದ ಅದನ್ನು ಉಪೇಕ್ಷಿಸುವದೆ ವಿಹಿತವಾಗಿದೆ.

೪. ಸಿಮ್ಲಾದೊಳಗಿನ ಎಸೆಂಬ್ಲಿಯಲ್ಲಿ ಎರಡು ಮೂರು ಮಹತ್ವಾದ ಪ್ರಸ್ತಾಪಗಳು ಬಂದಿದ್ದವು. ಕಾಗದ ಕೈಗಾರಿಕೆಯ ಠರಾವು ಸರಕಾರದ ಕಡೆಯಿಂದ ತರಲ್ಪಟ್ಟಿತು. ಇದಕ್ಕೆ ಎರಡು ಉಪಸೂಚನೆಗಳು ಮಾಡಲ್ಪಟ್ಟವು. ಆ ಉಪಸೂಚನೆಗಳು ಬಿದ್ದು ಹೋಗಿ ಸರಕಾರದ ಮೂಲ ಠರಾವು ಪಾಸಾಯಿತು. ಅದಲ್ಲದೆ ಬಿದಿರಿನಿಂದ ಕಾಗದವನ್ನು ತಯಾರಿಸುವ ಇನ್ನೊಂದು ಬಿಲನ್ನು ಸರಕಾರ ಸಭಾಸದರು ತಂದಿದ್ದರು. ಇದು ಕೂಡ ಪಾಸಾದ್ದರಿಂದ ಈ ಹೊಸ ಕೈಗಾರಿಕೆಯು ಹಿಂದುಸ್ಥಾನದಲ್ಲಿ ಬೇಗನೆ ಪ್ರಾರಂಭವಾದೀತೆಂದು ಸಂತೋಷಪಡಬೇಕಾಗಿದೆ. ಎಸೆಂಬ್ಲಿಯಲ್ಲಿ ಸರಕಾರಕ್ಕೆ ಇತ್ತಲಾಗೆ ಒಂದು ಅಪಜಯವು ತಟ್ಟಿತು. ಕ್ರಿಮಿನಲ್ ಪ್ರೊಸೀಜರ ಕೂಡ ಎಮೆಂಡ್‌ಮೆಂಟ ಎಕ್ಟಿನಲ್ಲಿ ಮೆಜಿಸ್ಟ್ರೇಟರಿಗೆ ಒಂದು ವಿಶೇಷವಾದ ಹಕ್ಕನ್ನು ಕೊಡುವದಕ್ಕಾಗಿ ಗೃಹಮಂತ್ರಿಗಳು ಒಂದು ಸೂಚನೆಯನ್ನು ತಂದಿದ್ದರು. ಆ ಸೂಚನೆಯು ಬಹುಮತದಿಂದ ಬಿದ್ದುಹೋಯಿತು. ಇದರಿಂದ ಮೆಜಿಸ್ಟ್ರೇಟರ ಕೈಯಲ್ಲಿ ಒಂದು ಹೊಸ ಬೆಂಕಿಕೊಳ್ಳಿಯನ್ನು ಕೊಡುವದು ನಿಲ್ಲಿಸಲ್ಪಟ್ಟಂತಾಗಿದೆ ಇದು ಸಂತೋಷದ ಮಾತು. ಈ ಮೇರೆಗೆ ಎಸೆಂಬ್ಲಿಯಲ್ಲಿ ಸರಕಾರಕ್ಕೆ ಅಪಜಯಗಳು ಬರುತ್ತಿವೆ. ಆದರೂ ಸರಕಾರವು ನಾವು ಕಳೆದ ಸಾರೆ ಹೇಳಿದ ಮೇರೆಗೆ ಒಂದರಲ್ಲಿ ಅಪಜಯವು ಬಂದ ಕೂಡಲೆ ಇನ್ನೊಂದರಲ್ಲಿ ಅದರ ವಾಸೆಯನ್ನು ತೆಗೆಯಲು ಹೊರಡುತ್ತದೆ.

೫. ಕಾನಪುರದಲ್ಲಿ ಜರಗತಕ್ಕ ಬರುವ ರಾಷ್ಟ್ರೀಯ ಸಭೆಯ ಸ್ವಾಗತದ ಕಾರ್ಯಗಳು ಬಹು ಉತ್ಸಾಹದಿಂದಲೂ ವ್ಯವಸ್ಥಿತವಾಗಿಯೂ ನಡೆಯುತ್ತಿವೆಯೆಂಬದನ್ನು ತಿಳಿಸಲು ನಮಗೆ ಸಂತೋಷವಾಗುವದು. ಬೇರೆ ಬೇರೆ ಪ್ರಾಂತಿಕ ಕಮಿಟಿಗಳು ಅಧ್ಯಕ್ಷಸ್ಥಾನದ ವಿಷಯದಲ್ಲಿ ಕೊಟ್ಟಿರುವ ಮತಗಳ ಮೇಲಿಂದ ಶ್ರೀಮತಿ ಸರೋಜನೀ ದೇವಿಯವರೆ ಅಧ್ಯಕ್ಷಸ್ಥಾನಕ್ಕೆ ಬಂದಾರೆಂದು ತೋರುತ್ತದೆ. ಸ್ವಾಗತ ಮಂಡಲದವರು ಬೇರೆ ಪ್ರಾಂತಿಕ ಮತಗಳನ್ನು ಒಟ್ಟು ಕೂಡಿಸಿ ತಮ್ಮ ಕೊನೆಯ ಮತವನ್ನು ಶ್ರೀ. ಸರೋಜಿನಿಯವರಿಗೆನೆ ಕೊಡಲಿಕ್ಕೆ ಸಾಕು. ಸರೋಜಿನೀ ದೇವಿಯವರು ಮಧ್ಯವರ್ತಿನಿಯವರಾದ್ದರಿಂದ ಅವರು ಈಗಿನ ದಿವಸಗಳಲ್ಲಿ ಈ ಸ್ಥಾನಕ್ಕೆ ಅರ್ಹರೆ ಸರಿ. ಈ ವಿಷಯವು ನಿಶ್ಚಿತವಾದ ಮೇಲೆ ನಮ್ಮ ಹೆಚ್ಚಿನ ಅಭಿಪ್ರಾಯವನ್ನು ಬರೆಯುವೆವು.

ಮಂಗಳೂರು.

ಇದೇ ತಿಂಗಳ ತಾ. ೧೯ನೇ ಶನಿವಾರ ದಿನ ಪ್ರಾರಂಭಿಸಿ ತಾ. ೨೭ನೇ ಆದಿತ್ಯವಾರ ವರೆಗಿನ ೯ ದಿನಗಳಲ್ಲಿ ಶ್ರೀ ಗೋಕರ್ಣನಾಥ ಕ್ಷೇತ್ರದಲ್ಲಿ ಆಚರಿಸುವ ನವರಾತ್ರಿ ಮಹೋತ್ಸವಕ್ಕೆ ಬಿಲ್ಲವ ಜಾತಿ ಬಂಧುಗಳೆಲ್ಲರೂ ಬರಬೇಕಾಗಿಯೂ, ಉತ್ಸವಕ್ಕೆ ಹೆಚ್ಚಿನ ಧನ ಸಂಗ್ರಹವು ಅಗತ್ಯವಿರುವದರಿಂದ ಕಳೆದ ವರ್ಷಗಳಂತೆ ಈ ವರ್ಷವೂ ಭಜಕರೆಲ್ಲರೂ ತಮ್ಮ ತಮ್ಮ ಗ್ರಾಮಗಳಿಂದ ಒಟ್ಟಾಗಿ ಧನ ಸಂಗ್ರಹಮಾಡಿಯೂ, ಅನುಕೂಲವಂತರು ತಮ್ಮ ತಮ್ಮ ಶಕ್ತ್ಯಾನುಸಾರವಾಗಿಯೂ ಧನ ಸಹಾಯವನ್ನಿತ್ತು ನವರಾತ್ರಿಯ ಉತ್ಸವವು ಸಂಭ್ರಮದಿಂದ ನೆರವೇರುವಂತೆ ಪ್ರೋತ್ಸಾಹಕೊಟ್ಟು ಪ್ರಸಾದವನ್ನು ಸ್ವೀಕರಿಸಿ ಶ್ರೀಮದನ್ನಪೂರ್ಣೇಶ್ವರಿಯ ಪರಮಾನುಗ್ರಹಕ್ಕೆ ಪಾತ್ರರಾಗಬೇಕಾಗಿಯೂ ಜಿಲ್ಲಾ ಬಿಲ್ಲವರ ಯೂನಿಯನ್ನಿನ ಅಧ್ಯಕ್ಷರಾದ ಎಚ್. ಕೊರಗಪ್ಪನವರ ಸವಿನಯ ವಿನಂತಿ.

ದಕ್ಷಿಣಕನ್ನಡ ಜಿಲ್ಲಾ ಬೋರ್ಡಿನ ಮುಂದಿನ ಅಧಿವೇಶನವು ಬರುವ ತಾ. ೨೩ನೇ ಬುಧವಾರ ಜಿಲ್ಲಾ ಕಲೆಕ್ಟರವರ ಆಫೀಸಿನಲ್ಲಿ ಮಧ್ಯಾಹ್ನ ೨–೩೦ ಗಂಟೆಗೆ ಕೂಡಿಬರುವದು. ಲೋಕಲ್ ಬೋರ್ಡುಗಳ ೧೯೨೪-೨೫ನೇ ವರ್ಷದ ಎಡ್ಮಿನಿಸ್ಟ್ರೇಶನ್ ರಿಪೋರ್ಟು ಅಂದಿನ ಸಭೆಯ ಮುಂದಿಡಲ್ಪಡುವದು.

ಮಂಗಳೂರು ಬ್ರಹ್ಮಸಮಾಜದ ೫೬ನೆ ವಾರ್ಷಿಕೋತ್ಸವವು ತಾ. ೨೦ನೆ ಸಪ್ಟಂಬರದಿಂದ ತಾ. ೨೭ರ ತನಕ ಜರಗುವುದು. ಪ್ರತಿ ದಿನ ನಗರಸಂಕೀರ್ತನೆ, ಉಷಃ ಸಂಕೀರ್ತನೆ, ದೇವಾರಾಧನೆ, ವ್ಯಕ್ತಿಪ್ರಾರ್ಥನೆ ಮೊದಲಾದವುಗಳಲ್ಲೊಂದೂ, ತಾ. ೨೦ರಲ್ಲಿ ರಾವ್ ಸಾಹೇಬ ಕೆ. ರಂಗರಾವ್ ಇವರ ಸಾಂವತ್ಸರಿಕ ಉಪನ್ಯಾಸವೂ, ೨೧ರಲ್ಲಿ ರೆವರೆಂಡ್ ಕೆ. ಸುಬ್ಬುಕೃಷ್ಣಯ್ಯ, ತಾ. ೨೨ರಲ್ಲಿ ಮೆ|| ಎಮ್. ಬಾಬು, ೨೫ರಲ್ಲಿ ಮೆ|| ಜೆ. ಕೃಷ್ಣರಾಯರ ದೇವಾರಾಧನೋಪನ್ಯಾಸಗಳೂ ಆಗುವವು. ಸಾಯಂಕಾಲಗಳಲ್ಲಿ ತಾ. ೨೦ರಲ್ಲಿ ರೆವರೆಂಡ ಮ. ಸುಬ್ಬುಕೃಷ್ಣಯ್ಯನವರೂ, ತಾ. ೨೫ರಲ್ಲಿ ಮ|| ಕೆ. ಲಕ್ಷ್ಮಣ, ತಾ. ೨೬ರಲ್ಲಿ ರೆವರೆಂಡ್ ಸುಬ್ಬುಕೃಷ್ಣಯ್ಯನವರೂ, ೨೬ರಲ್ಲಿ ಮ|| ಎಮ್. ಬಾಬು ಇವರೇ ಮೊದಲಾದವರ ಭಾಷಣಗಳು ಇವೆ. ತಾ. ೨೩ರಲ್ಲಿ ಸಂಗತ್ಸಭೆಯ ಮಹೋತ್ಸವ, ತಾ. ೨೪ರಲ್ಲಿ ಕುಲಸ್ತ್ರೀಯರ ಸಭೆ, ತಾ. ೨೬ರಲ್ಲಿ ವಿದ್ಯಾರ್ಥಿಗಳ ಸಭೆ, ತಾ. ೨೭ರಲ್ಲಿ ರಾಮಮೋಹನರಾಯರ ವರ್ಧಂತ್ಯುತ್ಸವ ಹಾಗೂ ಆದಿತ್ಯವಾರ ಶಾಲೆಯ ಮಹೋತ್ಸವೂ ಇವೆ. ಎಲ್ಲರಿಗೂ ಸುಸ್ವಾಗತವು.

ಮಂಗಳೂರು ಟೌನಿನಲ್ಲಿ ಇದೇ ಸಪ್ಟಂಬರ ತಿಂಗಳ ತಾ. ೧೨ರಿಂದ ತಾ. ೧೮ರ ವರೆಗೆ ೪೦ ಜನನಗಳೂ ೩೦ ಮರಣಗಳೂ ಆಗಿದ್ದವು. ಜನನಗಳ ಪೈಕಿ ೧೮ ಗಂಡೂ ೨೨ ಹೆಣ್ಣೂ ಆಗಿತ್ತು. ಪ್ಲೇಗು ಮರಣಗಳು ೨ ಆಗಿದ್ದವು.

ಮಂಗಳೂರು ಮುನ್ಸಿಪಾಲಿಟಿ ಚುನಾವಣೆ.

ಸ್ವರಾಜ್ಯಪಾರ್ಟಿಯ ಕಡೆಯಿಂದ ಉಮೇದುವಾರರು.

ಉಳ್ಳಾಲ ಸಂಜೀವರಾವ್ — ಮಾರ್ಕೆಟುವಾರ್ಡು — ೨೪ನೇ ಸಪ್ಟಂಬರ ಗುರುವಾರ, ಸ್ಥಳ — ಬ್ರಾಹ್ಮಣರ ಹುಡುಗಿಯರ ಶಾಲೆ

ಮಂಗಳೂರು ಮಾಧವರಾವ್, ಮಹಮ್ಮದ ಫಕೀರು ಸಾಹೇಬ್, ಅಬ್ದುಲ್ ಖಾದರ್ ಆಸಾದಿ — ಗೋಕರ್ಣಪಟ್ಟ ವಾರ್ಡು — ೨೪ನೇ ಸಪ್ಟಂಬರ ಗುರುವಾರ, ಸ್ಥಳ — ಮುನ್ಸಿಪಲ್ ಆಫೀಸ್.

ಯು. ಶಿ. ಸುಬ್ರಹ್ಮಣ್ಯಭಟ್ಟ — ಕೋರ್ಟುವಾರ್ಡು — ೨೫ನೇ ಸಪ್ಟಂಬರ ಶುಕ್ರವಾರ, ಸ್ಥಳ — ಮಿಲಾಗ್ರಿಸ್ ಶಾಲೆ.

ಕೋಟೆಭಟ್ಟ ಬೀಡೆ — ಅತ್ತಾವರ ವಾರ್ಡು — ೨೫ನೇ ಸಪ್ಟಂಬರ ಶುಕ್ರವಾರ, ಸ್ಥಳ — ಬೋಳಾರ ಮುನ್ಸಿಪಲ್ ಶಾಲೆ.

ಕೋಟೆ ರಾಮಕೃಷ್ಣ ಕಾರಂತ — ಕೊಡಿಯಾಲಬೈಲು ವೆಸ್ಟ ವಾರ್ಡು ೨೮ನೇ ಸಪ್ಟಂಬರ ಸೋಮವಾರ, ಸ್ಥಳ — ಕಂಡತ್ಪಳ್ಳಿ ಮಾಪಿಳ್ಳಾ ಶಾಲೆ.

ಇದೇ ಬರುವ ೨೩ನೇ ಬುಧವಾರ ಸಾಯಂಕಾಲ ಗಂಟೆ ೫–೩೦ಕ್ಕೆ ಮೈದಾನಿನಲ್ಲಿ ಮುನ್ಸಿಪಲ್ ಚುನಾವಣೆ ವಿಷಯ ಒಂದು [illegible] ಸಭೆಯೂ ಮತ್ತು ಅದೇ ದಿವಸ ೬–೩೦ಕ್ಕೆ ಒಂದು ಮೆರವಣಿಗೆಯು [illegible] ಮುಖ್ಯಬೀದಿಗಳಿಂದ ಸಾಗುವುದು. ಎಲ್ಲರೂ ಬರಬೇಕಾಗಿ ಸ್ವರಾಜ್ಯಪಾರ್ಟಿ ಕಡೆಯಿಂದ ವಿನಂತಿ.

ಸ್ವರಾಜ್ಯಪಕ್ಷದ ಕಾರ್ಯದರ್ಶಿ.

(ವಿವಿಧ ವಿಷಯಗಳು:— ೨ನೇ ಪೇಜಿಯಿಂದ ಮುಂದುವರಿಸಿದುದು.)

ದಾಗಿ ಮೃತಪಟ್ಟರು. ಡ್ರೂಸರಲ್ಲಿ ಇದರಿಂದ ಪ್ರಚಂಡವಾದ ಕ್ಷೋಭವುಂಟಾಗಿ ಅವರಿಗೆ ಅರಬೀ ಜನರು ಬಂದು ಸೇರುತ್ತಿದ್ದಾರೆ. ಡ್ರೂಸರ ಹತ್ತಿರ ಸ್ವಲ್ಪಮಟ್ಟಿಗೆ ಹಣಸಾಹಿತ್ಯವಿದೆ. ಇಷ್ಟೆ ಸಹಾಯದಿಂದ ಅವರು ಫ್ರೆಂಚರ ೬ ವಿಮಾನಗಳನ್ನು ಕೆಡವಿದರು. ಇವರ ಸಾಹಸವು ಅವರ್ಣನೀಯವಾಗಿದೆ. ಆದರೂ ಫ್ರೆಂಚರ ರಾಕ್ಷಸಿ ಬಲದ ಮುಂದೆ ಡ್ರೂಸರ ಈ ಅಲ್ಪ ಬಲವು ಕೊನೆಗೆ ನಿಲ್ಲಲಿಕ್ಕಿಲ್ಲವೆಂದು ಅನೇಕ ಜನರು ತರ್ಕಿಸುತ್ತಿದ್ದಾರೆ.

— ರೀಫರ ಸ್ವಾತಂತ್ರ್ಯ —

ಸ್ವಾತಂತ್ರ್ಯ ದೇವಿಯ ಮಂದಿರಕ್ಕೆ ಗೋಪುರವನ್ನು ಏರಿಸಿ ಆ ದೇವಿಯ ಮಂಗಳಗೀತಗಳನ್ನು ಹಾಡುವ ಪಾಶ್ಚಾತ್ಯರು ಸ್ವಾರ್ಥಸಾಧನಕ್ಕೆ ಕೊಂಚ ಅಭ್ಯಂತರವು ಬಂದ ಕೂಡಲೆ ಅದೆ ಸ್ವಾತಂತ್ರ್ಯಾರಾಧಕರನ್ನು ನಾಸ್ತಿಕರೆಂದೂ ಪಾಷಂಡಿಗಳೆಂದೂ ಹೆಸರುಕೊಟ್ಟು ಹೊಡೆದು ಬಡೆದು-ಅಂಥವರು ಹೆಸರು ಕೂಡ ಉಳಿಯದ ಹಾಗೆ ಹೇಗೆ ಪ್ರಯತ್ನಿಸುತ್ತಾರೆಂಬುದು ಲೋಕಕ್ಕೆ ಗೊತ್ತಿದ್ದ ಸಂಗತಿಯೇ ಸರಿ. ಕಳೆದ ಮಹಾಯುದ್ಧವನ್ನು ಪ್ರಾರಂಭಿಸುವಾಗ ಫ್ರೆಂಚರು ಈ ಸ್ವಾತಂತ್ರ್ಯದ ನಾಮೋಚ್ಚಾರಣವನ್ನು ಮಾಡಿ ಸಂಕಲ್ಪೋದಕವನ್ನು ಬಿಟ್ಟಿದ್ದರಷ್ಟೆ. 'ನಾವು ಬಡ ಜನಾಂಗಗಳ ಸ್ವಾತಂತ್ರ್ಯಕ್ಕಾಗಿ ಯುದ್ಧದೀಕ್ಷೆಯನ್ನು ವಹಿಸಿದ್ದೇವೆ' ಎಂಬುದಾಗಿ ಉದಾತ್ತ ವಚನಗಳಿಂದ ಲೋಕದ ಮನಸ್ಸನ್ನು ಆಕರ್ಷಿಸಿ ಫ್ರೆಂಚರು ಮತ್ತು ಅವರ ಸಹಕಾರಿಗಳು ಮಹಾಯುದ್ಧವನ್ನು ನಡಿಸಿದ್ದರು. ಅದೆ ಫ್ರೆಂಚರು ಈಗ ಮಾಡುವ ಸಂಗತಿಗಳನ್ನಾಲೋಚಿಸಿದರೆ ಲೋಕವೆ ವ್ಯತ್ಯಸ್ತವಾದಂತೆ ತೋರುತ್ತದೆ. ರಿಫಜನರ ಮುಖಂಡನಾದ ಅಬ್ದುಲ್ಲ ಕರೀಮನು ತನ್ನ ಜನರ ಸ್ವಾತಂತ್ರ್ಯ ರಕ್ಷಣಕ್ಕಾಗಿ ಸಿದ್ಧನಾದ ಕೂಡಲೆ ಅವನನ್ನು ಇದೆ ಫ್ರೆಂಚರು 'ದಂಗೆಖೋರ'ನೆಂಬ ಹೆಸರನ್ನು ಕೊಟ್ಟು ರೀಫಜನರ ನಾಶವನ್ನು ಮಾಡಲು ತಯಾರಾಗಿದ್ದಾರೆ! ತಾವು ಮಾಡುವದೆಲ್ಲ ನ್ಯಾಯಾನುಸಾರವಾದ್ದು, ಅನ್ಯರು ಮಾಡುವುದು ಅನ್ಯಾಯದ್ದು ಎಂಬುದೆ ಇಂಥವರ ತತ್ವಜ್ಞಾನವು. ಇದುವರೆಗೆ ಸ್ವಾತಂತ್ರ್ಯಕ್ಕಾಗಿ ಹೋರಾಡಿದವರನ್ನು ಮೊತ್ತಮೊದಲು ಹೀಯಾಳಿಸಿದವರಿರಲಿಲ್ಲವೆ? ಮತ್ತೆ ಅವರಿಗೆ ಜಯವು ಬಂತೆಂದುದಾದರೆ ಅಂಥವರನ್ನು ಸ್ವಾತಂತ್ರ್ಯ ವೀರರನ್ನಾಗಿ ಕರೆಯುವರು. ಈಗಿನ ಸಂದರ್ಭದಲ್ಲಿ ಅಬ್ದುಲ ಕರೀಮನು ವಿಷಯದಲ್ಲಾದರೂ ಫ್ರೆಂಚರು ಇದೆ ಕ್ರಮವನ್ನು ಅನುಕರಿಸಿದ್ದಾರೆ. ರೀಫರ ಈ ದೇಶವು ಫ್ರೆಂಚರ ಆಕ್ರಮಣಕ್ಕೆ ಅವರಲ್ಲಿರುವ ಖನಿಜ ಸಂಪತ್ತಿಯೆ ಕಾರಣವಾಗಿದೆ. ರೀಫರ ದೇಶವು ಗುಡ್ಡಗಾಡು ನಮೂನೆಯಾದರೂ ಕಬ್ಬಿಣ ಮತ್ತು ತಾಮ್ರಗಳಿಂದ ತುಂಬಿದ ಗಣಿಗಳು ಅಲ್ಲಿ ಬೇಕಷ್ಟಿವೆ, ಈ ಕಾರಣದಿಂದ ಫ್ರೆಂಚರಲ್ಲಿ ಲೋಭವು ಪ್ರಬಲವಾಗಿ ಅವರು ಈ ಅಪಕೃತ್ಯವನ್ನು ಮಾಡಲು ಸಿದ್ಧರಾಗಿದ್ದಾರೆ. ಸ್ವಾರ್ಥದ ಸಂಬಂಧವು ಬಂದ ಕೂಡಲೆ ಉಚ್ಚ ತತ್ವಜ್ಞಾನವು ಮೂಲೆಗೆ ಬೀಳುತ್ತದೆ. ಆದ್ದರಿಂದ ಫ್ರೆಂಚರು ಸ್ವಾತಂತ್ರ್ಯದ ವೃಥಾ ಸ್ತೋತ್ರಗಳನ್ನು ಆಡುವುದು ಬಿಟ್ಟುಬಿಡಬೇಕು.

ಪತ್ರವ್ಯವಹಾರ.

ಪ್ರತ್ಯುತ್ತರ.

ಕಳೆದ ೧೧ನೇ ತಾರೀಕಿನ ಸ್ವದೇಶಾಭಿಮಾನಿಯಲ್ಲಿ ಉಪಾಧ್ಯಾಯರಲ್ಲೊಬ್ಬರು ಬರದ ಲೇಖನವನ್ನು ಚೆನ್ನಾಗಿ ವಾಚಿಸಿದೆನು. ಇವರ ಅಧಿಕ ಪ್ರಸಂಗದ ಜವಾಬನ್ನು ವಾಚಕರು ಓದಿ ನೋಡುವಾಗ ಇವರ ಕ್ಷಿಪ್ರದಲ್ಲಿಯೇ ಬಡ್ತಿ ಪಡಿಯುವ ಆಸೆಯಿಂದಲೇ ಬರೆದದ್ದು ವಿನಹಾ ನಿಷ್ಪಕ್ಷಪಾತದಿಂದ ಬರೆದದ್ದಲ್ಲವಾಗಿ ವ್ಯಕ್ತವಾಗುತ್ತದೆ.

ಟೆಂಪಲ್ ಶಾಲೆಯನ್ನು ಗವರ್ನಮೆಂಟಿನವರ ಗ್ರಾಂಟು ಪಡಿಯುವ ಉದ್ದಿಶ್ಯ ತೆರೆದದ್ದಲ್ಲವಾಗಿಯೂ ಬೇರೆಲ್ಲಾ ಶಾಲೆಗಳಂತೆ ಇದನ್ನೂ ರೂಲ್ಸಿಗನುಸಾರವಾಗಿ ಕ್ರಮ ಪ್ರಕಾರ ನಡಿಸುತ್ತಾರಾಗಿಯೂ ಎಂತ ವಗೈರೆ ಸದರಿ ಉಪಾಧ್ಯಾಯರು ಆಡುವರು.

ಪ್ರಾಯಶಃ ದೇವಾಲಯಗಳೂ ಮಸೀದಿಗಳೂ ಇಗರ್ಜಿಗಳೂ ಆಯಾ ಜಾತಿ ಮತಸ್ಥರ ವಂತಿಗೆಯಿಂದ ಸ್ಥಾಪಿಸಲ್ಪಟ್ಟು ಹೆಚ್ಚಾಗಿ ಬಡವರಿಗೆ ಪ್ರಯೋಜನವಾಗುವ ಸಾರ್ವಜನಿಕ ಸಂಸ್ಥೆಗಳನ್ನು ಏರ್ಪಡಿಸುವ ಬಗೆ ಸ್ಥಾಪಿಸಿದವುಗಳಾದ್ದರಿಂದ ದೇವಳ ಶಾಲೆಯನ್ನು ಬೇರೆ ಖಾಸಗಿ ಶಾಲೆಗಳಿಗೆ ಸರಿಹೋಲಿಸುವಂಥಾದ್ದು ಸಮಂಜಸ ಕಾಣುವದಿಲ್ಲ. ಇರಲಿ, ಖಾಸಗಿ ಶಾಲೆಗಳೂ ಕೂಡ ಸರಕಾರದಿಂದ ಗ್ರಾಂಟು ಪಡೆದರೂ ಕೂಡ ವರ್ಷಂಪ್ರತಿ ನಷ್ಟ ಹೊಂದಿ ಅವಸಾನಕ್ಕೆ ಬೋರ್ಡಿನವರಿಗೆ ಆಗಲಿ ಯಾ ಇತರರಿಗಾಗಲಿ ಬಿಟ್ಟು ಕೊಟ್ಟ ಅನೇಕ ಉದಾಹರಣೆಗಳು ಉಪಾಧ್ಯಾಯರಿಗೆ ಗೊತ್ತಿರಬಹುದು. ಆದರೆ ಇತ್ತಲಾಗೆ ದೇವಳ ಶಾಲೆಗೆ ಒಂದು ವರ್ಷವಾದರೂ ಶಾಲಾ ಫೀಸಿನಿಂದ ವ ಗ್ರಾಂಟಿನಿಂದ ಮುನಾಫೆ ಉಳಿಯಲಿಲ್ಲವಾಗಿ ಉಪಾಧ್ಯಾಯರು ಮನಸಾ ಖಂಡಿತ ಹೇಳಬಲ್ಲರೋ? ಅನುಮಾನವಿದ್ದಲ್ಲಿ ದೇವಳ ಆಡಳಿತೆದಾರರ ಕೊಡೆಯಾದರೂ ವಿಚಾರಿಸಿ ಸಮಾಧಾನ ಮಾಡಿಕೊಳ್ಳಲಿ.

ಹೀಗೆ ಇಷ್ಟು ಹೇರಳ ಆಸ್ತಿ ವಗೈರೆ ಇರುವ ಸಂಸ್ಥೆಯಿಂದ ಈ ನಮೂನೆಯಲ್ಲಿ ಶಾಲೆ ನಡಿಯುವಾಗ ಅದಕ್ಕೇನಂತ ಬರಿಯಬೇಕು?

ದೇಶೋದ್ಧಾರಕ್ಕಾಗಿಯೇ ಒಂದು ಸಂಸ್ಥೆಯು ತೆರದಿದ್ದರೆ ಅದರಲ್ಲಿ ಏನೊಂದೂ ವಿಧದ ಜಾತಿ ಮತ ಭೇದಗಳೂ ಲೋಪವಾಗಿರಬೇಕೆಂದು ಉಪಾಧ್ಯಾಯರಿಗೆ ಮನೋಗತವಾಗಿರಬೇಕು. ದೇವಳ ಶಾಲಾ ಸ್ಥಾಪನೆಯಾಗಿ ೩೪ ವರ್ಷಗಳ ಲಾಗಾಯತು ಎಷ್ಟು ಬಿಲ್ಲವರೂ, ದಾಖಲ್ಮಾಡಲ್ಪಟ್ಟಿದ್ದಾರೆ. ಇವರ ಪೈಕಿ ಎಷ್ಟು ಜನರಿಗೆ ಮಾಫಿ ಶಿಕ್ಷಣವು ಕೊಡಲ್ಪಟ್ಟಿದೆ. ಈಗಲೂ ಕೂಡ ಅಂಥವರು ಸೇರುವದಾದರೆ ಆಕ್ಷೇಪವಿದೆಯೋ ಇಲ್ಲವೋ? ಎಂಬಿತ್ಯಾದಿ ಪ್ರಶ್ನೆಗಳಿಗೆ ದಯಮಾಡಿ ಉತ್ತರವನ್ನೀವರೋ?

ರಿಲಿಜಿಯಸ್ ಎಂಡೋಮೆಂಟ್ ಬೋರ್ಡಿನವರ ಕಣ್ಣುಕಟ್ಟುವ ಪ್ರಯುಕ್ತ ಎಂಬುದಕ್ಕೆ ಸದರಿ ಬಿಲು ಖಂಡಿತ ಜ್ಯಾರಿಗೆ ಬರುತ್ತದೆ ಎಂಬ ವರ್ತಮಾನ ಹಬ್ಬಿದೊಡನೆ ನಮ್ಮ ಜಿಲ್ಲೆಯೊಳಗಿನ ಅಷ್ಟೇಕೆ, ಇಡೀ ಭಾರತವರ್ಷದೊಳಗಿನ ಅನೇಕ ಮಠ ಸಂಸ್ಥೆಗಳೂ, ದೇವಸ್ಥಾನಗಳೂ ಒಂದನ್ನೊಂದನುಸರಿಸಿ ಏಕ ಕಾಲದಲ್ಲೇ ಫ್ರೀ ಎಲಿಮೆಂಟರಿ ಶಾಲೆಗಳನ್ನೋ ಸಂಸ್ಕೃತ ಶಾಲೆಗಳನ್ನೋ ದೊಡ್ಡ ದೊಡ್ಡ ಕಟ್ಟೋಣಗಳನ್ನೋ ಶುರುಮಾಡುವಷ್ಟರಲ್ಲಿ ೩೪ ವರುಷವಷ್ಟು ದೀರ್ಘಕಾಲ ಸಂಬಳ ಮಾಫಿಯಿಲ್ಲದ ದೇವಳ ಶಾಲೆಯೂ ಕೂಡ 'ಹುಚ್ಚರ ಕೂಡೆ ಹನ್ನೊಂದು, ಪರಿಷೆಯ ಕೂಡೆ ಗೋವಿಂದಾ' ಎಂಬಂತೆ ಅದೇ ಸಮಯ ಫ್ರೀ ಸಂಬಳ ಮಾಡುವಾಗ ಯಾವ ಇರಾದೆಯಿಂದ ಮಾಡಿದ್ದೆಂಬುದು ನಿಸ್ಸಂದೇಹವಾಗಿ ವಾಚಕರಿಗೆ ವೇದ್ಯವಾಗದಿರಲಿಕ್ಕೆ ಕಾರಣವಿಲ್ಲ.

ಬಂಟ್ವಾಳ ಬೋರ್ಡು ಶಾಲೆಯು ತೆರೆಯುವ ಪೂರ್ವದಲ್ಲಿಯೇ ದೇವಳ ಶಾಲೆಯವರು ಮಾಫಿ ಸಂಬಳ ಮಾಡಿದ್ದು—ಎಂಬುದಕ್ಕೆ ಬೋರ್ಡು ಶಾಲೆಯು ಆಗೋಸ್ತು ತಾ. ೩ಕ್ಕೆ ತೆರೆದದ್ದು. ದೇವಳ ಶಾಲೆಯಲ್ಲಿ ಸಂಬಳ ಮಾಫಿ ಮಾಡಿದ್ದು ಜುಲೈ ತಿಂಗಳ ಆರಂಭದಿಂದ ಎಂತ ಬರಿಯುತ್ತಾರೆ. ಇರಲಿ ಬೋರ್ಡು ಶಾಲೆಯು ೧೯೨೪ನೇ ಇಸವಿ ನವಂಬರ ತಿಂಗಳಲ್ಲಿ ಸೆಂಕ್ಷನ್ ಆಗಿ ಹಳೇ ಮಿಶ್ಯನ್ ಶಾಲಾ ಕಟ್ಟೋಣವನ್ನು ಇದೇ ಕಳದ ಎಪ್ರಿಲ್ ತಿಂಗಳಲ್ಲಿ ದುರುಸ್ತಿಗೆ ಹಿಡಿದು ಜೂನು ತಿಂಗಳಲ್ಲಿ ಕೆಲಸ ಮುಗಿಸಿ, ಶಾಲೆ ಪ್ರಾರಂಭಿಸುವ ವಾರ್ತೆ ಹಬ್ಬಿರುತ್ತಾ ದೇವಳ ಶಾಲೆಯವರು ಜುಲಾಯಿ ಆರಂಭದಿಂದ ಸ್ವಾರ್ಥತ್ಯಾಗದಿಂದ ಸಂಬಳ ಮಾಫಿ ಮಾಡಿದ್ದೋ ಯಾ ಬೋರ್ಡುಶಾಲೆಯನ್ನು ಮುಚ್ಚಿಸುವ ಆಲೋಚನೆಯಿಂದಲೊ ಎಂತ ವಾಚಕರೇ ಊಹಿಸಿ ಸಮಾಧಾನ ಮಾಡಿಕೊಳ್ಳಲಿ.

ಅಲ್ಲದೆ ಮೊನ್ನೆ ವರೆಗೆ ದೇವಳ ಶಾಲೆಯ ಹಾಲಿ ಇರುವ ಅರ್ಧಕ್ಕೆ ಮಿಕ್ಕಿದ ಉಪಾಧ್ಯಾಯರುಗಳು ತಮಗೆ ಬೋರ್ಡು ಶಾಲೆಯಲ್ಲಿ ಕೆಲಸ ಕೊಡಬೇಕಾಗಿ ಬರೆದುಕೊಂಡ ಅರ್ಜಿಗಳೆ ಸಾಕ್ಷಿ—ಈ ಅರ್ಜಿಗಳ ಪೈಕಿ ಈ ಉಪಾಧ್ಯಾಯರಲ್ಲೊಬ್ಬರದು ಕೂಡಾ ಇದ್ದು ಕಡೆಗೆ ನಿರಾಶರಾಗಿ ಸೇಡು ತೀರಿಸಿಕೊಳ್ಳುವ ಬಗ್ಗೆ ಹೀಗೆ ಬರಿಯುತ್ತಾರೋ ಎಂಬ ಬಲವತ್ತರವಾದ ಅನುಮಾನವು ನಮಗುಂಟಾಗಿರುವುದು.

ಈ ಮುಂಚೆ ಮೊಕ್ತೇಸರರಿಗೆ ಸಂಬಳ ಮಾಫಿಮಾಡುವ ಅಧಿಕಾರ ಇಲ್ಲದಾಗಿ ಉಪಾಧ್ಯಾಯರು ನುಡಿಯುತ್ತಾರೆ. ಇರಲಿ, ಟ್ರಸ್ಟ್ ಕಮಿಟಿಯಲ್ಲಿ ಹೆಚ್ಚಿನವರು ಮೊಕ್ತೇಸರರೇ ಆಗಿದ್ದು ಈಗ ಅವರು ಕೂಡಾ ಸಂಪೂರ್ಣ ಅಧಿಕಾರವನ್ನು ಮೊಕ್ತೇಸರ ಅಡಳ್ತೆದಾರರಿಗೆ ಬಿಟ್ಟು ಕೊಟ್ಟ ನಂತರ ಫ್ರೀ ಎಲಿಮೆಂಟರಿ ಶಾಲೆ ಇಟ್ಟದ್ದು ನಿಜವೋ ಸುಳ್ಳೋ ಎಂತ ಉಪಾಧ್ಯಾಯರು ದಯವಿಟ್ಟು ಪ್ರಕಟಿಸಲಿ.

ಬೋರ್ಡು ಶಾಲೆಯ ಉಪಾಧ್ಯಾಯರುಗಳು ಮನೆಮನೆಗೆಹೋಗಿ ಹೆತ್ತವರಿಗೆ ಬೋಧೆ ಕೊಟ್ಟು ಮಕ್ಕಳನ್ನು ಕರಕೊಂಡು ಹೋಗುವರೋ ಯಾ ದೇವಳದ ಮೊಕ್ತೇಸರರು ವ ಅವರ ಕಡೆಯವರು ಕರಕೊಂಡು ಹೋಗುವರೋ ಎಂಬುದನ್ನು ನಿಶ್ಚೈಸುವರೆ ತಮ್ಮ ಶಾಲೆಯಲ್ಲಿ ಕೆಲವು ಕ್ಲಾಸುಗಳಲ್ಲಿ ಹುಡುಗರ ಸಂಖ್ಯೆ ಹೆಚ್ಚಾದ ಸಂಬಂಧ ಡಿವಿಜನುಗಳನ್ನು ಮಾಡಿದ್ದೇವೆ ಎಂಬ ಮಾತಿನಿಂದಲೂ ಬೋರ್ಡು ಶಾಲೆಯಲ್ಲಿ ಇಷ್ಟರ ವರೆಗೆ ಹುಡುಗರ್ಯಾರೂ ಕಾಣುವದಿಲ್ಲವೆಂಬದಾಗಿ ಕಂಠೀರವನಲ್ಲಿ ಪ್ರಕಟಿಸಿದ ವಾರ್ತೆ ವಿನಹಾ ಕಣ್ಣಾರೆ ಪರಾಂಬರಿಸಿ ನಿಜಸ್ಥಿತಿ ತಿಳಕೊಂಡಲ್ಲಿ ವಾಚಕರಿಗೆ ಸಮಾಧಾನವಾದೀತು.

ಬಡ ಮಕ್ಕಳ ಸಂಬಳದಿಂದ ಎಷ್ಟು ನಷ್ಟ ಭರ್ತಿಯಾದೀತು ಎಂಬ ಪ್ರಶ್ನೆಗೆ ಕಳೆದ ಸರ್ತಿ ಬಂಟ್ವಾಳಕ್ಕೆ ಚಿತ್ತೈಸಿದ ಪ್ರಸಿಡೆಂಟರ ಕೂಡೆ ದೇವಳ ಮೊಕ್ತೇಸರರು ಹೇಳಿದ ಜವಾಬೇ ಉತ್ತರವು—ಅಂದರೆ ಸಣ್ಣ ಕ್ಲಾಸುಗಳಲ್ಲಿ ಆರಂಭದಿಂದ ಕಲಿತ ಹುಡುಗರು ಸ್ವಭಾವಿಕವಾಗಿ ಅದೇ ಶಾಲೆಯಲ್ಲಿ ಅಪ್ಪರ ವರೆಗೆ ಕಲಿಯುವದರಿಂದ ತಮಗೆ ಸೆಕೆಂಡರಿ ಕ್ಲಾಸುಗಳಲ್ಲಿ ಹುಡುಗರ ಸಂಖ್ಯೆ ಕಮ್ಮಿಯಾದರೆ ಹೇರಳ ನಷ್ಟವಾಗುತ್ತದೆ. ಎಂಬ ಮಾತುಗಳೇ ಇದಕ್ಕೆ ಉತ್ತರವು.

“ಓರ್ವ ಬಂಟವಾಳ ನಿವಾಸಿಕ”

ಮಂಗಳೂರು ಮುನ್ಸಿಪಾಲಿಟಿಯ ಚುನಾವಣೆ.

ಅಯ್ಯಾ ಪತ್ರಿಕಾಕರ್ತರೆ,

ನನ್ನ ಎರಡು ಮಾತುಗಳಿಗೆ ತಮ್ಮ ಪತ್ರಿಕೆಯಲ್ಲಿ ಒಂದಿಷ್ಟು ಜಾಗೆಯನ್ನು ಕೊಡಬೇಕಾಗಿ ವಿನಂತಿಮಾಡಿಕೊಳ್ಳುವೆನು.

ನಮ್ಮ ಮಂಗಳೂರು ಮುನ್ಸಿಪಾಲಿಟಿಯ ಹಲವು ಜಾಗೆಗಳ ಚುನಾವಣೆಯು ಬೇಗನೆ ಬರುವದಾಗಿ ತಿಳಿದುಬರುತ್ತದೆ. ಈ ಚುನಾವಣೆಗೆ ಕೊಂಗ್ರೆಸ್‌ಪಕ್ಷದ ಮತ್ತು ಸ್ವರಾಜ್ಯಪಾರ್ಟಿಯ ಕಡೆಯವರು ಉಮೇದುವಾರರಾಗಿ ನಿಂತಿರುವರೆಂದು ಇಲ್ಲಿಯ ಪತ್ರಿಕೆಗಳ ಲೇಖನದ ಮೇಲಿಂದಲೂ, ಈ ಪಟ್ಟಣದ ಬೇರೆ ಬೇರೆ ಭಾಗಗಳಲ್ಲಿ ಪ್ರತಿ ವಾರ ನಡೆಯತಕ್ಕ ಸಭೆಗಳ ಮೇಲಿಂದಲೂ ತಿಳಿದುಬರುತ್ತದೆ. ಈ ಪಕ್ಷದವರು ಜಾಹೀರುಪಡಿಸಿರುವ ಉದ್ದೇಶಗಳ ಮೇಲಿಂದ ಮುನ್ಸಿಪಾಲಿಟಿಯಂಥ ಲೋಕಲ್ ಸೆಲ್ಫ ಗವರ್ನಮೆಂಟ ಸಂಸ್ಥೆಯನ್ನು ಸರಿಪಡಿಸಿ ಅದರಿಂದ ನಗರಕ್ಕೆ ಸರಿಯಾದ ಪ್ರಯೋಜನವನ್ನು ತಂದುಕೊಡಬೇಕೆಂಬ ದೃಢ ಉದ್ದೇಶವನ್ನು ಇವರು ಇಟ್ಟುಕೊಂಡಿದ್ದಾರೆಂಬುದು ಗೊತ್ತಾಗುತ್ತದೆ. ಕೊಂಗ್ರೆಸ ಸ್ವರಾಜ್ಯಪಾರ್ಟಿಯು ನಮ್ಮ ಮಂಗಳೂರಲ್ಲಿ ಮಾತ್ರ ಈ ವಿಧವಾಗಿ ಯತ್ನಿಸುತ್ತಿದೆ ಎಂದಲ್ಲ, ಇತರ ಎಲ್ಲಾ ಕಡೆಗಳಲ್ಲಿ ಈ ಬಗೆಯ ಪ್ರಯತ್ನಗಳು ಪ್ರಾರಂಭವಾಗಿವೆ. ಎಂದಮೇಲೆ ಅಲ್ಲಿಂದ ಇಲ್ಲಿ ವರೆಗೆ ಹಿಂದೂಸ್ಥಾನದಲ್ಲಿ ಪಸರಿಸಿಕೊಂಡಿದ್ದ ಈ ಪಾರ್ಟಿಯ ಉದ್ದೇಶಗಳಲ್ಲಿಯಾಗಲಿ, ಕಾರ್ಯಕಲಾಪಗಳಲ್ಲಿಯಾಗಲಿ ಒಂದೇ ಬಗೆಯ ಸೂತ್ರವಿರುತ್ತದೆಂದೂ, ಹಾಗೆಯೆ ಇರಬೇಕಾದ್ದೆಂದೂ, ವ್ಯಕ್ತಿಪರವಾದ ಸ್ವಾರ್ಥಸಾಧನೆಗೆ ಆಸ್ಪದವಿಲ್ಲವೆಂದೂ ತಿಳಕೊಳ್ಳುವದು ವಿನಾ ಕಷ್ಟವಲ್ಲ. ಆದ್ದರಿಂದ ನನ್ನಂತಹ ವೋಟರನು ಈ ಸಂದರ್ಭದಲ್ಲಿ ಇವರನ್ನೆ ಚುನಾಯಿಸಿಕೊಡಬೇಕಲ್ಲದೆ ಇತರರನ್ನಲ್ಲ.

ಈ ಪಾರ್ಟಿಯವರು ಸರಿದಾರಿಯಿಂದ ಮುಂದುವರಿಯುವವರಾದ ಕಾರಣ ನನ್ನ ವೋಟಿಗೆ ಮಾರ್ಕೆಟ ಬೆಲೆಯು ಬರಲಿಕ್ಕಿಲ್ಲವೆಂಬುದೂ ನಿಜ! ನನಗೆ ಹೋಗಬರಲು ಕುದುರೆ ಗಾಡಿಯು ಅಥವಾ ಮೋಟಾರ ಕಾರಿನ ಏರ್ಪಾಟಿರಲಿಕ್ಕಿಲ್ಲವೆಂಬುದೂ ಸತ್ಯ! ಇಲ್ಲವೆ, ಸೋಡಾವೋಟರಿನ ಕುಪ್ಪಿ, ಕಾಫಿಯ ಕಪ್ಪು ನನ್ನ ಸ್ವಾಗತಕ್ಕೆ ಸಿದ್ಧವಾಗಿರಲಿಕ್ಕಿಲ್ಲವೆಂಬುದೂ ಹೌದು! ಆದರೆ ಇವಾಗಲಿ, ಇನ್ನು ಅನೇಕ ವಿಧದ ಲಾಭಪ್ರಯೋಜನಗಳಾಗಲಿ, ಇಲ್ಲವೆ ಮಾನಸನ್ಮಾನಗಳಾಗಲಿ ನನಗಿಲ್ಲವಾದರೂ ಕೊಂಗ್ರೆಸ ಸ್ವರಾಜ್ಯ ಪಾರ್ಟಿಯವರಿಗೆನೆ ನನ್ನ ವೋಟು ಸಲ್ಲಬೇಕಾದ್ದು ಯೋಗ್ಯವು. ನನ್ನ ವೋಟು ಅವರಿಗೆ ಸಂದರೆ ಆ ವೋಟಿಗೆ ಬರುವ ಬೆಲೆ ಇತರ ೧೦-೨೦ ರೂಪಾಯಿಗಳಿಗಿಂತಲೂ ಅಧಿಕವಾಗಿದೆ. ಆದ್ದರಿಂದ ನನ್ನ ವೋಟು ಅವರಿಗೆ ಸಂದರೆ ಅದೆ ನನಗೆ ಮಾರ್ಕೆಟ ಬೆಲೆ, ಅದೆ ನನಗೆ ಗಾಡಿ ಮತ್ತು ಮೋಟಾರು, ಅದೆ ನನಗೆ ಉತ್ತಮವಾದ ಕಾಫಿ! ಯಾವ ವಿಧದ ಸ್ವಾರ್ಥವನ್ನೂ ಬಗೆಯದೆ ಒಂದು ಸೂತ್ರವನ್ನನುಸರಿಸಿ ನಗರ ಹಿತವನ್ನು ಮಾಡಿ ಲೋಕಲ್ ಸೆಲ್ಫ ಗವರ್ನಮೆಂಟಿನ ಸಂಸ್ಥೆಯನ್ನು ಮುಂದಿನ ಸ್ವರಾಜ್ಯದ ಕಟ್ಟೋಣಕ್ಕೆ ಅಡಿಪಾಯವನ್ನು ಹಾಕಲು ಮುಂದೆ ಬಂದಿರುವ ಕೊಂಗ್ರೆಸ ಸ್ವರಾಜ್ಯಪಾರ್ಟಿಯವರನ್ನು ಪುರಸ್ಕರಿಸಲು ನಾನಾಗಲಿ, ನನ್ನಂತೆ ಇತರ ಮತದಾರರಾಗಲಿ ತಪ್ಪಿದ್ದಾದರೆ ಅವರು ಮುನ್ಸಿಪಾಲಿಟಿಯ 'ವೋಟರ'ರಲ್ಲ 'ಹೇಟರ'ರೆ ಸರಿ!

ಇಂತಿ ನಗರ ಹಿತಾಕಾಂಕ್ಷಿಯಾದ,

ಒಬ್ಬ ವೋಟರನು.

ವಸ್ತುತ ವಿಷಯಗಳು.

ಪಡುಬಿದ್ರೆ, ತಾ. ೧೧-೯-'೨೫.

ಅಯ್ಯಾ,

(೧) ಪಡುಬಿದ್ರೆ ಸೀಮೆಗೆ ಸೇರಿದ ಮುಂಡಾಲ ಹೊಲೆಯರ ಪೈಕಿ ಪಡುಬಿದ್ರೆ ಬೀಡಿನ ಒಕ್ಕಲಾಗಿದ್ದ ಬಬ್ಬು ಎಂಬವನ ಮನೆಯಲ್ಲಿ ಸುಮಾರು ೧೨ ಮಂದಿ ಕಳೆದ ೧೯೨೪ನೇ ಇಸವಿ ಜೂನ್ ತಿಂಗಳಲ್ಲಿ ಆತನ ತಂಗಿಯೂ ಅವಳ ಮಗುವೂ ಗ್ರಹಚಾರವಶವಾಗಿ ತೀರಿಹೋದ ನೆವದಿಂದ ತನ್ನ ಆ ಮತವನ್ನು ಬಿಟ್ಟು, ಮಿಶನರಿ ಮತಕ್ಕೆ ಹೋದಲ್ಲಿಯಾದರೂ ತನ್ನ ಕುಟುಂಬ ಅಭಿವೃದ್ಧಿಯಾಗುವದೆಂಬ ಭರವಸೆಯಿಂದ ಮಿಶನ್ ಮತಕ್ಕೆ ಕೆಲವು ಮಂದಿ ಬೇಕಾಗಿ ಸೇರಿದ್ದರು. ಇವರು ಹಾಗೆ ಆ ಮತಕ್ಕೆ ಸೇರುವರೆಂಬ ಅನುಮಾನವು ಜನರಿಗೆ ತೋರಲು ಇವನ ಜಾತಿಯವರು ಆತನಿಗೆ ತನ್ನ ಮತವನ್ನು ಬದಲಾಯಿಸಲಾಗದೆಂದು ಅನೇಕ ತರವಾದ ನೀತಿಗಳನ್ನು ಬುದ್ಧಿ ಹೇಳಿದರು. ಅವರ ಬುದ್ಧಿವಾದಗಳು ವ್ಯರ್ಥವಾಗಲು, ಅದನ್ನು ಕಂಡು ತಮ್ಮ ಸೀಮೆಯ ಅರಸುಗಳಾದ ಮಾ| ರಾ| ಪಡುಬಿದ್ರಿ ಬೀಡು ಅಧಿರಾಜ ಅರಸ ಕಿನ್ನಿಕ್ಕ ಬಲ್ಲಾಳರವರಿಂದ ಬುದ್ಧಿವಾದ ಹೇಳಿಸಲು ಅದೂ ನಿಷ್ಪ್ರಯೋಜಕವಾಯಿತು. ಆತನು ತನ್ನ ಕುಟುಂಬಿಕರೊಡನೆ ಮಿಶನ್ ಮತಕ್ಕೆ ಸೇರಿದನು.

(೨) ಇದೇ ಈಗ ನಡೆಯುತ್ತಿರುವ ೧೯೨೫ನೇ ಇಸವಿ ಆಗೋಸ್ತು ತಾ. ೨೩ನೇ ರವಿವಾರ, ದೈವ ಪ್ರೇರಣೆಯಿಂದಲೋ, ಮತಾಭಿಮಾನದಿಂದಲೋ ಸದರಿ ಪಡುಬಿದ್ರೆಗೆ ಸೇರಿದ ಒಂದು ಗ್ರಾಮದವರು ಅವರ ಜಾತಿ ಕಟ್ಟಲೆಯಂತೆ ತಮ್ಮಗಳ ದೈವಸ್ಥಳದಲ್ಲಿ ಅಂದು ಗಣೇಶ ಚತುರ್ಥಿಯಾಗಿದ್ದುದರಿಂದ ಜನರು ಸೇರಿದ್ದರು. ಆ ಸಮಯದಲ್ಲಿ ಬಬ್ಬು ಎಂಬವನು ಅವರ ಬಳಿಗೆ ಹೋಗಿ ತಾನು ಕೂಡಿ ಆರು ಮಂದಿ ಮಿಶನ್ ಜಾತಿಯಿಂದ ಪುನಹ ಹಿಂದಿನಂತೆ ಹೊಲೆಯ ಮತಕ್ಕೆ ಬರುತ್ತೇವೆಂತ ಹೇಳಿದರು.

ಆದರೆ ಅಲ್ಲಿ ನೆರದು ಇದ್ದ ಸಮಸ್ತರೂ ಆತನ ಮಾತಿಗೆ ಯಾವ ಉತ್ತರವನ್ನೂ ತತ್ಕಾಲಕ್ಕೆ ಕೊಡಲು ಅನುಕೂಲವಿಲ್ಲಯೆಂತಲೂ ಪಡುಬಿದ್ರೆ ಸೀಮೆಗೆ ಸೇರಿದ ತಮ್ಮ ಜಾತಿಯವರು ಒಟ್ಟಿಗೆ ಸೇರಿದಲ್ಲಿ, ಆತನು ಬಂದದ್ದಾದರೆ ಆತನಿಗೆ ತಕ್ಕ ತೀರ್ಮಾನವನ್ನು ಕೊಡಬಹುದೆಂತಲೂ ಹೇಳಿದರು. ಮತ್ತು ಆ ಸಭೆಯು ಆಗೋಸ್ತು ತಿಂಗಳ ತಾ. ೨೬ಕ್ಕೆ ಪಡುಬಿದ್ರೆ ಬಲ್ಲಾಳರವರ ಅರಮನೆಯ ಬಳಿ ಕೂಡುವದೆಂಬದಾಗಿ ನಿಶ್ಚೈಸಿದರು. ನಿಶ್ಚಿತ ದಿವಸದಲ್ಲಿ ಸಭೆಯು ಸದರಿ ಅರಮನೆಯ ಬಳಿ ಸೇರಿತು.

(೩) ಸಭೆಯಲ್ಲಿ ಚರ್ಚಿತವಾದ ವಿಷಯಗಳಿಷ್ಟೆ. ಪುರಾತನದಿಂದಲೂ ಈ ತರನ ನಡೆದುದಿಲ್ಲ. ಮಿಶನ್ ಮತದಿಂದ ನಮ್ಮ ಮತಕ್ಕೊ ಯಾರೂ ಸೇರುವ ಸಂಪ್ರದಾಯವಿಲ್ಲ. ಮತ್ತು ಯಾವದೊಂದು ಸಂಪರ್ಕವೂ ಇಲ್ಲ. ಅಲ್ಲದೆ ಈ ಸಭೆಯಿಂದ ನಿನಗೆ ಸರಿಯಾದ ಉತ್ತರ ಸಿಗುವಂತಿಲ್ಲ ಎಂಬುದಾಗಿ ಆತಗೆ ತಿಳಿಸಿ ಆತನಿಗೆ ಸರಿಯಾದ ತೀರ್ಮಾನವನ್ನು ಹೊಂದಿಸುವರೇ ತಮ್ಮ ಜಾತಿಯ ೬೦ ಗ್ರಾಮಗಳ ಸೇರುವಿಕೆಯಿಂದ ಆಗತಕ್ಕ ಮಹಾಸಭೆಯನ್ನು ಕರೆಯಬೇಕೆಂದು ಆಲೋಚಿಸಿದರು.

(೪) ಆ ಮಹಾಸಭೆಯು ಇದೇ ಕಳೆದ ೬ನೇ ತಾರೀಕು ರವಿವಾರ ಸೇರುವದರಿಂದ ಆ ದಿನ ಪ್ರತಿ ಒಬ್ಬನೂ ತಪ್ಪದೆ ಹಾಜರಿರಬೇಕೆಂದು ಅರಸುಗಳ ಮುಖಾರಿಯ ಮುಖಾಂತರ ಪತ್ರಗಳನ್ನು ಎಲ್ಲಾ ಗ್ರಾಮಗಳಿಗೂ ಕಳುಹಿಸಿದರು. ಆ ಮೇರೆಗೆ ಪುನಃ ಅರಮನೆಯ ಬಳಿ ಸಭೆ ಸೇರಿತು.

(೫) ಈ ಮಹಾ ಸಭೆಯಲ್ಲಿ ಈ ಸಂಗತಿಗಾಗಿ ಎಲ್ಲರೂ ಆಶ್ಚರ್ಯಪಟ್ಟು ಕೊನೆಗೆ ಆತನಿಗೆ ತಕ್ಕ ಪ್ರಾಯಶ್ಚಿತ್ತವನ್ನು ಮಾಡಿ ಬಬ್ಬು ಆದಿಯಾಗಿ ಆರು ಮಂದಿಯನ್ನು ಪುನಃ ತಮ್ಮ ಜಾತಿಗೆ ಸೇರಿಸಿಕೊಳ್ಳುವದೆಂದು ತೀರ್ಮಾನಿಸಿ ಸಭೆಯನ್ನು ಅಂತ್ಯಗೊಳಿಸಿದರು.

(೬) ಇದನ್ನಬೇಕು ಮತಾಭಿಮಾನ ನೋಡಿರಿ ಹೊಲೆಯರಿಗಾದರೂ ತಮ್ಮ ಜಾತಿ ನೀತಿಗಳ ವಿಷಯ ಎಷ್ಟೊಂದು ಚಿಂತೆಯಿದೆ, ಪರಜಾತಿಯ ಮೇಲೆ ಅದೆಷ್ಟೊಂದು ಜಿಗುಪ್ಸೆ, ನಮಗಾದರೋ ಅವು ಒಂದೂ ಇಲ್ಲ. ಬ್ರಾಹ್ಮಣರೆನಿಸಿವವರಿಗೂ ಹೊಲೆಯರಿಗೂ ಸಹಪಂಕ್ತಿಭೋಜನ ಅವರ ಜೊತೆಯಲ್ಲಿ ವಿದ್ಯೆ, ಮತಾಭಿಮಾನಗಳು ಒಂದಿಲ್ಲದೆ ಜನಾಂಗವು ನಾಶವಾಗಲು ಹತ್ತಿದೆ.

ಇಂತಿ,

ಗ್ರಾಮನಿವಾಸಿಕ.

ಮಾರಾಟಕ್ಕೆ ಸಿದ್ಧವಿದೆ.

ಅಮುಲ್ದಾರಿ, ವಕಾಲತು, ನಕಲಿನ ಬಗ್ಗೆ ನೋಟು, ಲೋಜಮೆಂಟ ಸ್ಕೆಡ್ಯೂಲ, ಪೇಮೆಂಟ್ ಸ್ಕೆಡ್ಯೂಲ, ಬತ್ತಾ ನೋಟು, ಮೆಮೊ ಒಪ್ ಕೊಸ್ಟ್ಸ್, ಮೆಮೊರಂಡಮ್ ಒಪ್ ಎಪ್ಪಿಯರೆನ್ಸ್, ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರು, ವಗೈರೆ ಎಲ್ಲಾ ಫೋರ್ಮುಗಳು ನಮ್ಮಲ್ಲಿ ದೊರೆಯುತ್ತವೆ.

100 ಫೋರ್ಮುಗಳ ಕ್ರಯ 0—12—0,
ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರು
1ರ ಕ್ರಯ 0—2—0.

ಶಾರದಾ ಛಾಪಖಾನೆ,
ತೇರು ಬೀದಿ, ಮಂಗಳೂರು.

ನೋಟೀಸು.

ಈ ಕೆಳಗೆ ಹೆಸರು ನಮೂದಿಸಿದವನು ಸರ್ವ ಜನರಿಗೆ ತಿಳಿಸುವದೇನಂದರೆ ನನ್ನ ದ್ವಿತೀಯ ಪುತ್ರನು ಬೇರೆಯವರ ಹೇಳಿಕೆ ಪ್ರಕಾರ ನಮ್ಮ ಮಾತಿಗೆ ವಿರುದ್ಧವಾಗಿ ನಡೆದು ಕೆಲವು ಜನರ ಸಾಲವನ್ನು ತಾನು ಸಲಾಯಿಸುತ್ತೇನೆಂತ ಅವರಿಗೆ ನಂಬಿಸಿ ನಮ್ಮ ಮನೆಯಿಂದ ಪೆಟ್ಟಿಗೆಯಲ್ಲಿ ಇಟ್ಟ ಹಣವನ್ನು ಜುಲುಮಿನಿಂದ ಕೊಂಡುಹೋಗಿ ಪರೋಪಕಾರ ಮಾಡುತ್ತಾನೆ ಮತ್ತು ನಾವು ಹಣವನ್ನು ಕೊಡದೆ ಇದ್ದಲ್ಲಿ ಬೇರೆಯವರಿಂದ ಕೈ ಕಡಾ ತೆಗೆದುಕೊಳ್ಳುವ ಇರಾದೆಯಲ್ಲಿ ಇದ್ದಾನೆ ಆದ್ದರಿಂದ ಆತನಿಗೆ ಯಾರಾದರೂ ಕಡ ವಗೈರೆ ಕೊಡಕೂಡದು. ಆ ರೀತಿ ಕೊಟ್ಟಲ್ಲಿ ಸದರಿ ಹಣವನ್ನು ಕೊಡುವರೇ ನಾನಾಗಲಿ ನನ್ನ ಸ್ಥಿರಾಸ್ತಿ ಚರಸೊತ್ತುಗಳು ಜವಾಬುದಾರ ಆಗಲಿಕ್ಕಿಲ್ಲ. ತಿಳಿದಿರುವುದು.

ಶ್ರೀನಿವಾಸ ಶ್ಯಾನುಭಾಗನ ರುಜು

ಶಾಸ್ತ್ರೀಯ
ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾ 1—4—0, ಅಂಚೆಯ ವೆಚ್ಚ ಬೇರೆ,

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ!
ದಶಮೂಲ ಸುಖಪ್ರದಔಷಧಿ!
ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.
ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.
ಹೆಚ್ಚಿನ ಮಾಹಿತಿಗೆ “ಆರ್ಷ ಚಿಕಿತ್ಸಾರಹಸ್ಯ” ಎಂಬ ಪುಸ್ತಕಕ್ಕೆ ಬರಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಶುದ್ಧವಾದ ನೀಲಗಿರಿ ಎಣ್ಣೆ
ತಲೆನೋವು, ಶೀತ, ಇನ್‌ಫ್ಲುಯೆಂಜಾಜ್ವರ,
ವಾತ, ಇತ್ಯಾದಿ ಎಲ್ಲಾ ರೋಗಗಳ
ಮೇಲೆ ಸಿದ್ಧೌಷಧ.
1 ಔನ್ಸು ಬಾಟ್ಲಿ 1ರ ಕ್ರಯ 0—4—0.
ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು.

“ಬಹು ದಿವಸಗಳಿಂದ ಪ್ರಸಿದ್ಧವಾಗುತ್ತಿರುವ ಔಷಧ!”

ರಕ್ತ ಶುದ್ಧಿ
ವಜ್ರಾಂಗ-ಬಿಂದು
ವೀರ್ಯ ವೃದ್ಧಿ ಕಾರಕ

ವಜ್ರಾಂಗಬಿಂದುವೆಂಬ ಈ ಮಹೌಷಧಿಯನ್ನು ಅನೇಕ ಪರ್ವತಗಳಲ್ಲಿ ಉತ್ತಮೋತ್ತಮವಾದ ಮತ್ತು ಅವಶ್ಯವಾಗಿ ಗುಣ ಕೊಡುವಂತಹ ವನಸ್ಪತಿಗಳ ಅರ್ಕದಿಂದ ಉಪಯುಕ್ತವಾದ ಮತ್ತು ಉಚ್ಚತರದ ಭಸ್ಮಗಳ ಮಿಶ್ರಣಮಾಡಿ ಯಾಂತ್ರಿಕ ಸಹಾಯದಿಂ! ಸಿದ್ಧಪಡಿಸಿರುತ್ತದೆ. ಈ ವಜ್ರಾಂಗಬಿಂದುವಿನ ಸೇವನೆಯಿಂದ ಕೆಳಗೆ ಬರೆದ ರೋಗಗಳು ಗುಣವಾಗಿ ಹೊಸ ಮನುಷ್ಯನಾಗುತ್ತಾನೆಂದರೆ ಅತಿಶಯೋಕ್ತಿಯಾಗಲಾರದು.

ಈ ಮಹೌಷಧಿಯ ಸೇವನೆಯಿಂದ, ವಾತ, ಪಿತ್ತ, ಕಫ ಈ ಮೂರು ದೋಷಗಳಿಂದ ಉತ್ಪನ್ನವಾಗುವ ರೋಗಗಳು ಗುಣವಾಗುವದಲ್ಲದೆ, ಸ್ವಪ್ನದೋಷ, ಧಾತುಪಾತ ನಪುಂಸಕತ್ವ, ಪರಮಾ ಮತ್ತು ಗರಮಿ ಇವುಗಳ ಸಮೂಲ ನಾಶವಾಗುತ್ತದೆ. ಬಹು ದಿವಸದಿಂದ ಮೈಯಲ್ಲಿ ಅಂಟಿಕೊಂಡ ಕೆಡಕಿಯಂತಹ ಒಂದೇ ವಾರದಲ್ಲಿ ಗುಣವಾಗುವದು. ಲಘುವಿಗಿಂತ ಮೊದಲು ಅಥವಾ ಕಡೆಗೆ ಸ್ರಾವವಾಗಿ ಹೋಗುವ ಧಾತು ಬಂದಾಗುತ್ತದೆ. ತಿಂದ ಅನ್ನವು ಜೀರ್ಣವಾಗಿ ಮಲವು ಸರಿಯಾಗಿ ಹೋಗುವದು ಯಾವದೇ ಕಾರಣದಿಂದ ಬಂದ ಅಶಕ್ತತೆಯೂ ಕಣ್ಣಿಗೆ ಕತ್ತಲೆ ಬಂದಂತಾಗಿ ಘವಳಿ ಬರುವದು, ಕೈಕಾಲುಗಳು ಉರಿಯುವದು, ಮುಂತಾದ ಸಕಲ ವಿಕಾರಗಳೂ ನಾಶಹೊಂದುತ್ತವೆ. ವೀರ್ಯವೃದ್ಧಿ, ರಕ್ತಶುದ್ಧಿಗಳಾಗಿ ಮನುಷ್ಯನು ಬಲವಂತನಾಗುತ್ತಾನೆ. ಪೂರ್ಣ ಗುಣ ಬರಬೇಕಾದರೆ ಮೂರು ಬಾಟ್ಲಿಗಳು ಬೇಕು.

೧ ಬಾಟ್ಲಿಗೆ ರೂ. ೧—೪—೦. ೩ ಬಾಟ್ಲಿಗಳಿಗೆ ರೂ. ೩—೪—೦. ೧೨ ಬಾಟ್ಲಿಗಳಿಗೆ ರೂ. ೧೦—೦—೦.

ಇದರ ಹೊರತು ಒಂದು ಬಾಟ್ಲಿಯು ಉಚಿತ. ಟಪ್ಪಾಲ ಪ್ಯಾಕಿಂಗ ಖರ್ಚು ಪ್ರತ್ಯೇಕ. ಒಮ್ಮೆಯೇ ಹೆಚ್ಚಿಗೆ ಬಾಟ್ಲಿಗಳನ್ನು ತರಿಸಿಕೊಂಡರೆ ಟಪ್ಪಾಲು ಖರ್ಚು ಹೆಚ್ಚಿಗೆ ಬೀಳಲಾರದು. ಏಜಂಟರಾಗಲಪೇಕ್ಷಿಸುವವರು ಪತ್ರವ್ಯವಹಾರ ನಡಿಸಿ, ಖುಲಾಸೆ ತಿಳಕೊಳ್ಳಬಹುದು.
ಟಪ್ಪಾಲ ಮತ್ತು ಪ್ಯಾಕಿಂಗ ಖರ್ಚು ಬೇರೆ ಬೀಳುವುದು. ಅನುಪಾನ ಪತ್ರವು ಬಾಟ್ಲಿಯ ಸಂಗಡಲೇ ಕಳಿಸಲ್ಪಡುವುದು.

ಪತ್ತೆ. ಮ್ಯಾನೇಜರ, ಕೆ. ಎಮ್. ಹನುಮಾನ ಪ್ರಸಾದಿಕ ಕಂಪೆನಿ,
ಮು. ಪೋ. ನಿಪ್ಪಾಣಿ, (ಜಿಲ್ಹಾ ಬೆಳಗಾಂವ.)

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.	1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟು, ಪೂರ್ಣವಾಗಿ ತೆತ್ತ ಮೂಲಧನವು ರೂ. 300,000—0—0
Reserve and other sinking Funds „ 259,000—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು 259,000—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳೋಣಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1925.

K. Venkat Rao,
Secretary.

‘ಸಾರಸ್ವತಾಸವ.’

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೨೫ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಅಣೆ, ೬ಕ್ಕೆ ೧—೪—೦, ೧೨ ಸೀಸೆಗೆ ೨—೬—೦, ೨೫ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲ ಪಂಡಿತರು,

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಪ್ಪ, ಸೋಡಾ ಫಾಕ್ಟರಿ,
ಮಂಗಳೂರು ಟವನಿಗೆ ಮಾತ್ರ.

Free! Free!! Free!!
ಪ್ರಸಿದ್ಧವಾದ
“ಕಾಮಶಾಸ್ತ್ರ”
ಈಗಲೆ ತಯಾರಾಗಿದೆ.
ಜರೂರಾಗಿ ಬರಿಯುವಲ್ಲಿ ಅಂಚೆಯ ಹಾಸಲು ಸಹ ಇಲ್ಲದೆ ಕಳುಹಿಸುವೆವು.
ಆತಂಕನಿಗ್ರಹ ಔಷಧಾಲಯ,
26 ಬ್ರಾಡ್ವೇ, (ಪೋಸ್ಟ್ ಬಾಕ್ಸ್ 1252),
ಮದ್ರಾಸ್.

ಬಂದು ನೋಡಿರಿ! ತಿಂದು ನೋಡಿರಿ!
ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ
ಪದಕವನ್ನು
ಬಹುಮಾನವಾಗಿ ಪಡೆದಿರುವ
ಎಸ್. ಪಿ. ಆಚಾರ್ಯ
ಇವರಿಂದ ತಯಾರಿಸಲ್ಪಟ್ಟ
ಉಪ್ಪಿನಕಾಯಿಗಳನ್ನು
ಬಂದು ನೋಡಿರಿ! ತಿಂದು ನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ, ಕುಂಬಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನ್ನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ
ಬಂದು ನೋಡಿರಿ! ತಿಂದು ನೋಡಿರಿ!

ಇಂಡಿಯನ್ ಸ್ವೀಟ್‌ಮೀಟ್ ಮಾರ್ಟ್.

ಮನೋಲ್ಲಾಸಿನಿ ಕಾಫಿ ಕ್ಲಬ್, ಮಾರ್ಕೇಟು ರೋಡು, ಮಂಗಳೂರು. ಅಥವಾ ಸದಾನಂದ ಕಾಫಿ ಕ್ಲಬ್, ರಥಬೀದಿ, ಮಂಗಳೂರು.

ಜ್ಯೋತಿಷ್ಯ ಸಂಗ್ರಹ.

(1) ಬೃಹಜ್ಜಾತಕ
(2) ಉಮಾಮಹೇಶ್ವರ ಸಂವಾದ ಎಂಬ ಜ್ಯೋತಿಷ್ಯ ಕಾಲಚಕ್ರ
(3) ಕೇರಳ ಪ್ರಶ್ನೆ
(4) ಪ್ರಶ್ನೋತ್ತರ ರತ್ನಮಾಲಿಕಾ
(5) ನವನೀತಾರಿಷ್ಟವು
(6) ಷಟ್ಪಂಚಾಶತ್ ಗ್ರಂಥ
(7) ನಕ್ಷತ್ರ ಚೂಡಾಮಣಿ ಗ್ರಂಥ
(8) ಮುಹೂರ್ತಪದವೀಗ್ರಂಥ
(9) ಅಷ್ಟದಿಕ್ಪಾಲಕ ಮಂಗಲಾಷ್ಟಕಗಳು
(10) ಕಾಲನಿರ್ಣಯಾಭ್ಯೋಯಂ ಗ್ರಂಥ
(11) ಸವ್ಯಾಖ್ಯಾನ ಕಾಲಾಮೃತ

— ಪ್ರಸಂಗದ ಪುಸ್ತಕಗಳು. —

(1) ಸೇತು ಬಂಧನ
(2) ವಸಿಷ್ಠ ಪುರಾಣ
(3) ಇಂದ್ರಜಿತು ಕಾಳಗ
(4) ಚಂಡಭೀಮ
(5) ಮೈದುನರಾಮನ ಚರಿತ್ರೆ
(6) ಭಾಮಿನಿ ಷಟ್ಪದಿ ಚೋರ ಕಥೆ
(7) ಕುಮಾರ ರಾಮನ ಕಥೆ
(8) ಕೃಷ್ಣದಾನಾಮೃತ
(9) ಶ್ರೀಕೃಷ್ಣ ಸತ್ಯಭಾಮಾ ಸಂವಾದ
(10) ಚಿತ್ರಕೇತು ರಾಜನ ಕಥೆ
(11) ಬಕಾಸುರ ವಧೆ
(12) ಬಾಣಾಸುರನ ಕಥೆ
(13) ರಂಭಾಶುಕ ಸಂವಾದ
(14) ರುಕ್ಮಿಣೀ ಪರಿಣಯ
(15) ರಾವಣೋದ್ಭವ ಯಕ್ಷಗಾನ
(16) ಸಭಾ ಲಕ್ಷಣವು
(17) ಶ್ರೀ ಕೃಷ್ಣಲೀಲಾಶ್ವಮೇಧ ಕಥಾ
(18) ಚಂದ್ರಮೌಳಿ ಕಾಳಗ
(19) ಚಿತ್ರವಿಚಿತ್ರ ಕಾಳಗ
(20) ಯಕ್ಷಗಾನ ಸಾರಂಗಧರನ ಕಥೆ
(21) ,, ಶನಿದೇವರ ಮಹಾತ್ಮೆ
(22) ,, ಹರಿಶ್ಚಂದ್ರನ ಕಥೆ
(23) ಯಕ್ಷಗಾನ ಲಕ್ಷಾಗೃಹ ಕಥೆ
(24) ,, ಚೋರ ಕಥೆ
(25) ,, ಪಾರ್ವತಿ ಕಾರವಂಚ ಕಥೆ
(26) ,, ಗೋವಿನ ಚರಿತ್ರೆ
(27) ,, ದುಶ್ಶಾಸನ ಕಥೆ
(28) ,, ಸಾನಂದ ಗಣೇಶ್ವರ ಕಥೆ
(29) ,, ಅಂಗದ ಸಾಧನ

— ಭಜನೆಯ ಪುಸ್ತಕಗಳು. —

(1) ಉಡುಪಿಕ್ಷೇತ್ರ ಮಹಾತ್ಮೆ
(2) ಹನುಮದ್ರಾಮಾಯಣ
(3) ಅಧ್ಯಾತ್ಮ ವಿಚಾರ
(4) ಭಕ್ತಿಮಹಿಮೆ
(5) ಪ್ರಬಂಧ ಮುಕ್ತಾವಳಿ
(1) ಹರಿಕೀರ್ತನಾಮೃತಸಾರ
(2) ಹರಿನಾಮಾಮೃತಂ.
(3) ರುಕ್ಮಿಣೀ ಕಲ್ಯಾಣ
(4) ಮಂಗಳ ಗೌರೀಹಾಡು
(5) ಉದ್ವಾಳೀಕನ ಹಾಡು
(6) ಯಕ್ಷಗಾನ ಗಿಳೀ ಹಾಡು
(7) ಕನಕದಾಸ ಕಬೀರದಾಸರ ಕೀರ್ತನೆಗಳು
(8) ಬೀಗರ ಹಾಡು
(9) ಭಜನೆಯ ಪದಗಳು

— ವಿವಿಧ ಪುಸ್ತಕಗಳು. —

(1) ಸದಾಹಾರ ವಿವೇಚನೆ
(2) ಗೋಪಾಲಕೃಷ್ಣ ಗೋಕಲೆ
(3) ಶ್ರೀಕೃಷ್ಣ ಸೇವಾವ್ರತಂ
(4) ಪಶ್ಚಾತ್ತಾಪ ಭಾಷ್ಪ
(5) ಶ್ರೀ ಶ್ರೀಮಹಾ ಭಾಗವತ
(6) ಉದ್ದ್ಯಯನ ಚರಿತ್ರೆ
(7) ಮಧ್ವಾಚಾರ್ಯರು (ಶ್ರೀಮಾನ್)
(8) ಯತಿರಾಜವಂಶತಿ
(9) ಪರಮಾರ್ಥಶತಕಂ
(10) ಭಕ್ತಿಸುಮಾಂಜಲಿ
(11) ಸತ್ಯರಾಜ ಪೂರ್ವದೇಶ ಯಾತ್ರೆಗಳು
(12) ಕಾಲನಿರ್ಣಯಾಖ್ಯಾನ
(13) ಅರೇಬಿಯನ್ ನಾಯ್ಟ್ಸ್ 1000 ಪುಟಗಳ ಮೇಲೆ ಇವೆ.

ಪುಸ್ತಕಗಳು ದೊರೆಯುವ ಸ್ಥಳ :— ಶಾರದಾ ಛಾಪಖಾನೆ,
ರಥ ಬೀದಿ, ಮಂಗಳೂರು.

—ಗೋಡೆಗೆ ತಗಲಿಸುವ
ಹೊಸ ನಮೂನೆಯ—

ಟಿಕ್—ಟಾಕ್

ಎಂಬ ಈ ಗಡಿಯಾರಗಳು ಜರ್ಮನೀ ದೇಶದಲ್ಲಿ ತಯಾರಿಸಿದ್ದು. ಇವು ಕಂಠಾಗು ಘಂಟೆಯನ್ನು ತೋರಿಸುವವು. ಇವಕ್ಕೆ ಬೀಗ ಕೊಡಬೇಕಾದಿಲ್ಲ. ಇದರಲ್ಲಿ ಕಾಣುತ್ತಿರುವ ಗುಂಡನ್ನು ಮೇಲಕ್ಕೆ ಎಳೆದರೆ ಸಾಕು. ತನ್ನಷ್ಟಕ್ಕೆ ತಾನೇ ಟಿಕ್—ಟಾಕ್ ಎಂಬ ಶಬ್ದವನ್ನು ಮಾಡುತ್ತಾ ಸರಿಯಾದ ಕಾಲವನ್ನು ತೋರಿಸುವದು. ಇದು ನೋಡುವುದಕ್ಕೆ ಬಹು ಲಕ್ಷಣವಾಗಿರುವುವು.

ಕ್ರಯ 1ಕ್ಕೆ ರೂ. 3—0—0

ಪೀಟರ್ ವಾಚ್ ಕಂಪೆನಿ
ಪೋಸ್ಟ್ ಬಾಕ್ಸ್ ನಂ. 27, ಮದ್ರಾಸ್.

---

11 ಮಣಿಗಳಿದ್ದು ಬ್ರಿಜ್ ಮೂವ್ಮೆಂಟ್.

22 ಕೆರೆಟ್ ರೋಲ್ಡಗೋಲ್ಡ ರಿಸ್ಟ್ ವಾಚ್.

ಈ ವಾಚ್ ಎಂಟಾಣೆ ಪಾವಲಿಯಷ್ಟು ಸಣ್ಣದಾಗಿ ಬಹು ಚಲೋದಾದ ಇನೆಮಲ್ ಡಾಯಲ್ ಇದ್ದು ಬಹು ಉತ್ತಮವಾಗಿದೆ. 5 ವರ್ಷದಗ್ಯಾರಂಟಿ ಇದೆ. ಕ್ರಯ ರೂ. 12/8

18 ಕೆರೆಟು ಇಲೆಕ್ಟ್ರೊ ರೋಲ್ಡಗೋಲ್ಡ ವಾಚ್ ಕ್ರಯ ರೂ. 7—0—0. "ಬಿ" ಟ್ಯಾಮ್‌ಪೀಸ ರೂ. 2-4-0.

9 ಕಾರಾಟ್ 8 ಮಣಿಗಳ ವಾಚ್ 1ರ ಕ್ರಯ 23—0—0.
14 ,, ,, ,, 26—0—0.
14 ,, 15 ಮಣಿ ,, 36—0—0.
9 ,, ,, ,, 32—0—0.

ಚಲೋದಾದ ಲವ್ ನಕ್ಸೆಗಳು ಡಜನ್ 1ಕ್ಕೆ ರೂ. 2/4.

P. Sambasiva Chetty & Co.,
134 NAINEAPPA NAICKEN ST.
P. T. MADRAS.

ಶುದ್ಧ ರೋಮದ ಧಾವಳಿಗಳು.

1 ಮಳ ಉದ್ದ 1¼ ಮಳ ಅಗಲ ರೂ. 1¼ರಿಂದ 2 ವರೆಗೆ, 5 ಮಳ ಉದ್ದ 1½ ಮಳ ಅಗಲ ರೂ. 1¼ ರಿಂದ 5 ವರೆಗೆ, 6 ಮಳ ಉದ್ದ 1½ ಮಳ ಅಗಲ ರೂ. 2¼ರಿಂದ 6 ವರೆಗೆ, 8 ಮಳ ಉದ್ದ 2 ಮಳ ಅಗಲ ರೂ. 3½ರಿಂದ 10 ವರೆಗೆ, 12 ಮಳ ಉದ್ದ 2¼ ಮಳ ಅಗಲ ರೂ. 6ರಿಂದ 12 ವರೆಗೆ, 16 ಮಳ ಉದ್ದ 2¼ ಮಳ ಅಗಲ ರೂ. 9 ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಜನ್ನರ್ ರೇಶ್ಮೆ ಮಡಿಗಳು, ಜಾವುಡಿಗಳು, ಕಾಶೀ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, ಬಾಣಲಿಂಗ, ಜಾಘಂಟೆ, ತಾಳ, ಪನ್ನೀರ್ ದಾನಿ, ಹಿತ್ತಾಳೆಯ ಆಟದ ಸಾಮಾನುಗಳು, ಫೋಟೋ ಉಂಗುರಗಳು ಮತ್ತು ಇನ್ನೂ ಅನೇಕ ಸಾಮಾನುಗಳು ವಿ. ಪಿ. ಪಿ ಮೂಲಕ ಕಳುಹಿಸಲ್ಪಡುವುವು. ಕ್ಯಾಟಲಾಗ್ ಇನಾಂ.

ವಿಳಾಸ—
ಶಿರೋಮಣಿ ಯು. ಸಾರ್ವಭೌಮಾಚಾರ್ಯ
ಮತ್ತು ಕಂಪೆನಿ, ಚೌಕಂಬಾ, ಕಾಶೀ ಕ್ಷೇತ್ರ.

ಆಯುರ್ವೇದ ಶಾಸ್ತ್ರಿ ಅಷ್ಟಾವಧಾನಿ,
ರಾ. ವೇ. ಸುಬ್ಬರಾವ್, ಯಂ. ಬಿ. ಯು. ಅವರ್ಗಳಿಂದ
ತಯಾರಿಸಲ್ಪಟ್ಟದ್ದು.

ಒಂದು ಮಾತ್ರೆ! ಒಂದು ಘಂಟೆಯೊಳಗೆ ಗುಣ!

ಕಾಮಾಮೃತ.

ಈ ಔಷಧವು ಧಾತುಪುಷ್ಟಿಗಾಗಿಯೇ ತಯಾರಿಸಲ್ಪಟ್ಟದ್ದು. ಒಂದು ಮಾತ್ರೆಯನ್ನು ಸೇವಿಸಿದ ಒಂದು ಘಂಟೆಯೊಳಗೆ ಶಕ್ತಿಯನ್ನು ವೃದ್ಧಿಗೊಳಿಸಿ ಎಷ್ಟು ಬಲಹೀನವುಳ್ಳವರನ್ನೂ ಬಲವಂತರನ್ನಾಗಿ ಮಾಡುವದು. ಯಾವ ರೀತಿಯಿಂದರಾಗಲಿ ಶುಕ್ಲ ನಷ್ಟವಾದಾಗ್ಯೂ ಅಥವಾ ಸ್ವಪ್ನದಲ್ಲಿ ಇಂದ್ರಿಯ ಸ್ಖಲಿತವಾದಾಗ್ಯೂ ಇಲ್ಲವೆ ಮೂತ್ರದೊಂದಿಗೆ ಸೇರಿಯೋ ವ ಮೂತ್ರಚಲನೆಯ ಹಿಂದೋ ಮುಂದೋ ಹೊರಬೀಳುವ ಧಾತುನಷ್ಟವನ್ನಾದರೂ ೭ ದಿವಸಗಳಲ್ಲಿ ಗುಣಪಡಿಸುವದು. ಯಾವ ಬಗೆಯ ನರಗಳ ಬಲಹೀನತೆಯನ್ನೂ ದೂರ ಹೋಗಲಾಡಿಸುವುದು. ಶಕ್ತಿಯಿಲ್ಲದವರು ಈ ಮದ್ದನ್ನು 20 ದಿನ ಸೇವಿಸಿದಲ್ಲಿ ಶಕ್ತಿವಂತರಾಗಿ ಸಂಸಾರ ಸುಖವನ್ನೂ, ಸಂತತಿ ಲಾಭವನ್ನೂ ಹೊಂದುವರು; ಇದು ನಿಶ್ಚಯ. ಪತ್ರವ್ಯವಹಾರವು ರಹಸ್ಯವಾಗಿ ನಡಿಸಲ್ಪಡುವದು. ಕ್ರಯ 20 ಮಾತ್ರೆಗಳ ಕುಪ್ಪಿ 1ಕ್ಕೆ ರೂ. 2—0—0. ಪತ್ರವ್ಯವಹಾರವು ಇಂಗ್ಲಿಷಿನಲ್ಲಿ ಮಾಡತಕ್ಕದ್ದು.

ಅಮೃತಾಶ್ರಮ,
28 ಎಲ್ಲೂರು, ಕೃಷ್ಣಾಜಿಲ್ಲಾ.

ದಕ್ಷಿಣ ಕನ್ನಡ ಜಿಲ್ಲೆಯ

ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

೧,೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ
ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು
— ತೆಗೆದುಕೊಳ್ಳಿರಿ. —

REGISTERED
TRADE
MARK

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಭೋಗಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ದಾರ್ಢ್ಯತೆಯನ್ನೂ ಉಂಟುಮಾಡುವುದು. ಕೈ ಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಾಮಿಸ್ರಿ ಎಂಬುವದು ಕಾಬೂಲ್ ಕಂದಹಾರ ಪ್ರಾಂತ್ಯಗಳಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರಿಕಾ, ಬರ್ಮಾ, ಪಿನಾಂಗ್ ಸಿಂಗಪೂರ್, ಸಿಲೋನ್ ಮತ್ತು ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರೂ ಬರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. ೧ ಡಬ್ಬಿಯನ್ನು ೧೫ ದಿವಸ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. ೩ ಯಾ ೪ ಡಬ್ಬಿಗಳು ಜನ್ಮಾಂತ್ರದವರೆಗೂ ಪೂರ್ಣವಾಗಿ ಗುಣವನ್ನು ಮಾಡುವವು. ಅನುಪಾನ ಪತ್ರಿಕೆಯು ಡಬ್ಬಿಯ ಸಂಗಡವೇ ಇರುತ್ತೆ. ಹೆಸರು ವಿಳಾಸಗಳನ್ನು ಚೆನ್ನಾಗಿ ತಿಳಿಯುವ ಹಾಗೆ ವಿವರವಾಗಿ ಬರಿಯಬೇಕು. ಕ್ರಯ ಡಬ್ಬಿ ೧ಕ್ಕೆ ರೂ. ೩—೦—೦.

ಟಪ್ಪಾಲು ಖರ್ಚು ೧ ರಿಂದ ೪ ಡಬ್ಬಿಗಳವರೆಗೆ ೦—೮—೦.
ಏಜಂಟರು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯವಾಗಿ ಬೇಕಾಗಿರುತ್ತೆ.
ರೂಲ್ಸ್ ಬರಿಸಿ ನೋಡಿಕೊಳ್ಳಬಹುದು.

ಅರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ
ಹೆಸರನ್ನು ಬರೆಯಿರಿ.

ಟೆಲಿಗ್ರಾಫ್ ಅಡ್ರೆಸ್,
"ಮಿಸ್ರಿ"
ಬೆಂಗಳೂರು ಸಿಟಿ.

ಡಿ. ಮನ್ನಾಲಾಲ್,
ಡಿಲ್ಲಿ ನೇಟಿವ್ ಡಾಕ್ಟರ್.
ಸಾಲಂಮಿಸ್ರಿ ಮುರಬ್ಬ ಡಿಪೋ,
ಬೆಂಗಳೂರು ಸಿಟಿ.

Edited, Printed & Published by V. S. Kamath at the M. T. A. Sharada Press, Mangalore.

Registered: No. M. 498.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಶ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೯. ಮಂಗಳೂರು, ತಾರೀಕು ೨ನೇ ಶುಕ್ರವಾರ ಒಕ್ಟೋಬರ ೧೯೨೫. ಸಂಚಿಕೆ ೪೦.

Th Canara Banking Corporation, UDIPI, Ltd.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office: UDIPI	Branch: COONDAPOOR.
ಹೆಡ್ ಆಫೀಸು: ಉಡುಪಿ.	ಶಾಖೆ: ಕುಂದಾಪುರ.
ಚಂದಾ ಹಾಕಿ ಯೆತ್ತಿದ ಮೂಲಧನ	ರೂ. 2,25,000—0—0.
ವಸೂಲಾದ ಮೂಲಧನ	ರೂ. 1,71,875—9—11.
ಕ್ಷೇಮನಿಧಿ ವ ಇತರ ಫಂಡುಗಳು	ರೂ. 64,700—0—0.
ಠೇವಣಾತಿಗಳು	ರೂ. 4,83,945—2—9.

— ವಿನಿಯೋಗ —.

ಗವರ್ನಮೆಂಟು ಪ್ರಾಮಿಸರಿ ನೋಟಿನ ಮೇಲೆ	ರೂ. 25,800—0—0.
ಡಿಮಾಂಡು ನೋಟು ವ ಬಿಲ್ಲುಗಳ ಮೇಲೆ	ರೂ. 5,92,445—9—4.
ಚಿನ್ನಾಭರಣ ಮುಂತಾದ ಭದ್ರತೆಸೊತ್ತುಗಳ ಮೇಲೆ	ರೂ. 1,11,658—8—6

ಈ ಕೆಳಗಿನ ಠೇವಣಾತಿಗಳನ್ನು ಅಂಗೀಕರಿಸುವುದಲ್ಲದೆ ಇತರ ಬ್ಯಾಂಕುಗಳ ಮೇಲಣ ಹಾತ್ರಿ ಚೆಕ್ಕುಗಳನ್ನೂ ಸಾಹುಕಾರಿ ಹುಂಡಿಗಳನ್ನೂ ವಟ್ಯಾಸುವ ಮತ್ತು ಇತರ ಎಲ್ಲಾ ತರದ ಬ್ಯಾಂಕಿನ ವಹಿವಾಟುಗಳು ನಡಿಸಲ್ಪಡುವವು.

ಠೇವಣಾತಿಗಳು.

ನಿರಖು ಠೇವಣಾತಿಗಳು:—ಸಾ. ಸೆ. 5½ ರಿಂದ 7½ ವರೆಗಿನ ಬಡ್ಡಿಯನ್ನು ಪ್ರತಿ 3 ತಿಂಗಳಿಗೊಮ್ಮೆ ತೆರುವ ಅನುಕೂಲ ವ ಲಾಭದಾಯಕವಾದ ಶರ್ತಗಳ ಮೇಲೆಯೂ

ಕೊಂಚ ಅವಧಿ ಠೇವಣಾತಿಗಳು:—1 ತಿಂಗಳ ನಂತರ 15 ದಿವಸಗಳ ನೋಟೀಸಿಗೊಳಪಟ್ಟು ಹಿಂತೆಗೆಯಬಹುದಾದ ಠೇವಣಾತಿಗಳನ್ನು ಸಾ. ಸೆ. 5ರ ದರದ ಬಡ್ಡಿ ನಡವ ದಿನಗಳ [illegible] ಶರ್ತದಿಂದಲೂ

ಚಾಲ್ತಿ ಠೇವಣಾತಿಗಳ [illegible] ರುವ ಶಿಲ್ಕಿನ ಮೇಲೆ ಸಾ. ಸೆ. 3ರಂತೆ ಬಡ್ಡಿ ತೆರುವ ಶರ್ತದ ಮೇಲೆಯೂ

ಸೇವಿಂಗ್ಸ್ ಬ್ಯಾಂಕು ಠೇವಣಾತಿಗಳು:—ಸಾ. ಸೆ. 4½ರ ಬಡ್ಡಿಯ ಮೇಲೂ

ಸಂಚಯ ಠೇವಣಾತಿಗಳು:—ಮಕ್ಕಳ ವಿದ್ಯಾಭ್ಯಾಸ, ಉಪನಯನ, ವಿವಾಹ ಮುಂತಾದ ಶುಭಕಾರ್ಯಗಳಿಗೆ ಅನುಕೂಲವಾಗಿ ಸಿಕ್ಕುವಂತೆ ತಿಂಗಳು 1ರ ರೂಪಾಯಿ 1ರಂತೆ 13—24—45—84—132 ತಿಂಗಳುಗಳಿಗೆ ವಸೂಲುಪಡಕೊಂಡು ಕಂತುಗಳ ಅವಧಿ ಮುಗಿದ ಮೂರು ತಿಂಗಳಲ್ಲಿ ಆಯಾಯ ಅವಧಿಮೇರೆಗೆ ರೂ. 13—8—0, ರೂ. 25—8—0, ರೂ. 50, ರೂ. 102—8—0 ಮತ್ತು 182—8—0ನ್ನು ಅದೇ ಮೇರೆಗೆ ತಿಂಗಳು 1ರ ರೂಪಾಯಿ 1ರ ಗುಣವೃದ್ಧಿ ಮೊಬಲಗನ್ನು ತೆತ್ತಲ್ಲಿ ಆಯಾಯ ಮೊಬಗಿನ ಅದೇ ಗುಣವೃದ್ಧಿ ಮೊಬಲಗನ್ನು ತೆರುವ ಶರ್ತದ ಮೇಲೂ ಅಂಗೀಕರಿಸಲ್ಪಡುವವು.

ಹೆಚ್ಚಿನ ಮಾಹಿತಿ ಸೆಕ್ರಿಟರಿಯವರಿಂದ ತಿಳಿಯಬಹುದು.

ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಆಫೀಸು, ಉಡುಪಿ,
ತಾ. 30—6—1925.

ನಯಂಪಳ್ಳಿ, ಆನಂದ್ರಾವ್,
ಸೆಕ್ರಿಟರಿ ಮತ್ತು ಒಫಿಶಿಯೆಟಿಂಗ್ ಮೆನೇಜರ್.

ಮೂರು ದಿವಸಗಳಲ್ಲಿ ಗುಣಸಿಕ್ಕದಿದ್ದರೆ ಔಷಧಿಯ ಕ್ರಯ ವಾಪಾಸು.

ಜೀರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ, ಪರಮಾನಂದ ಮೊದಲಾದ ಸುಖಜೀವನಕ್ಕೆ ಬೇಕಾದ ಆರೋಗ್ಯದಾಯಿನಿ.

ಲೋಕಪ್ರಸಿದ್ಧವಾದದ್ದು! ಅನುಭವಸಿದ್ಧವಾದದ್ದು!!

ಟ್ರೇಡ್ ಮಾರ್ಕ] ಅಗಸ್ತ್ಯ [ನೋಡಿ ಕೊಳ್ಳಿರಿ.

ಮನ್ಮಥ ಚಿಂತಾಮಣಿ ಲೇಹ.

(ರಿಜಿಸ್ಟರ್ ಆದದ್ದು)

ಆಬಾಲವೃದ್ಧ ಸ್ತ್ರೀಪುರುಷರ ಅನೇಕ ರೋಗಗಳ ಮೇಲೆ ಗುಣಕಾರಿಯಾದದ್ದು.

ಮೋಹವಿಕಾರವಿದ್ದವರಿಗೂ, ನಿದ್ರೆ ಇಲ್ಲದವರಿಗೂ, ಸ್ವಪ್ನೇಂದ್ರಿಯವಾಗುವ ಯುವಕರಿಗೂ ಜ್ಞಾನಿಸುಜ್ಞಾನಿಗಳಿಗೂ ಉಪಯೋಗವುಳ್ಳ ಪರಮಾನಂದ ಔಷಧಿ.

1 ಸೇರು ನಾಲ್ವತ್ತೆಂಟು ದಿವಸಕ್ಕೆ ಸೇವಿಸಬಹುದು.
1 ಸೇರು ಡಬ್ಬಿ 1ಕ್ಕೆ 3—0—0. ½ ಸೇರು ಡಬ್ಬಿ 1ಕ್ಕೆ 1-9-0.
ವಿ. ಪಿ. ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿಗೆ ಬರೆಯಿರಿ.

ವಿಳಾಸ— ಸೇವಣ್ಣ ನಾರಾಯಣ ಸೇಟ್,
[illegible] ಸರಾಫ, [illegible]
ಮಂಗಳೂರು. (ದ. ಕ.)

:ಪಂಡಿತ ಬಿ. ರಾಮಕೃಷ್ಣ ಬಾಳಿಗರ:

50 ವರ್ಷ ಅನುಭವದ ಸಿದ್ಧೌಷಧಗಳು

ಮಹಾ ಮದನಕಾಮೇಶ್ವರಿ ಲೇಹ—ಇದನ್ನು ಭಂಗಾರ, ಅಭ್ರಕಭಸ್ಮ, ರಸಸಿಂಧೂರ, ಕಸ್ತೂರಿ, ಕುಂಕುಮಕೇಸರ ವಗೈರೆ ಅಮೂಲ್ಯವಾದ ರಸಾಯನ ದ್ರವ್ಯಗಳಿಂದ ತಯಾರಿಸಲ್ಪಟ್ಟಿರುತ್ತದೆ. ಇದು ಎಲ್ಲಾ ತರದ ನಪುಂಸಕ ರೋಗಗಳನ್ನೂ, ಸ್ವಪ್ನಾವಸ್ಥೆಯಲ್ಲಿ ಧಾತುಪತನೆಯನ್ನೂ, ಗುಣಪಡಿಸಿ, ದೇಹಕ್ಕೆ ದಿವ್ಯಕಾಂತಿಯನ್ನೂ, ಪುಷ್ಟಿಯನ್ನೂ, ಪುರುಷತ್ವವನ್ನೂ, ವೀರ್ಯಸ್ತಂಭನವನ್ನೂ ಉಂಟುಮಾಡಿ ಅತ್ಯಾನಂದವನ್ನು ಕೊಡುವುದಲ್ಲದೆ, ಅಜೀರ್ಣ, ಅತಿಸಾರ, ಗ್ರಹಣಿ, ಅಮ್ಲ, ಪಿತ್ತ, ಉದರಶೂಲೆ, ಪ್ರಮೇಹ ವಗೈರೆ ರೋಗಗಳನ್ನು ಗುಣಪಡಿಸುವಲ್ಲಿ ಕೇವಲ ಅಮೃತಸಮಾನವಾಗಿರುವುದು. ಇದನ್ನು ಆಬಾಲವೃದ್ಧರೂ ಸೇವಿಸಬಹುದು.

48 ದಿನಗಳ ವರೆಗೆ ಸಾಕಾಗುವ ಲೇಹ ಸೇರು ೧ರ ರೂ. 3—0—0.

ಅಮೃತಾರಿಷ್ಟ:—ಮಲೇರಿಯಾ ವಗೈರೆ ಸಕಲ ಜ್ವರಗಳನ್ನು ನಾಶಗೊಳಿಸುವುದು. ಬಾಟ್ಲಿ 1ರ ರೂ. 1—0—0.
ದ್ರಾಕ್ಷಾರಿಷ್ಟ:—ಬಾಟ್ಲಿ 1ರ ರೂ. 1—0—0. ಗೋರೋಚನಾದಿ ಮಾತ್ರೆ, ಮಕ್ಕಳ ಚಿಕಿತ್ಸೆಗೆ ಸಿದ್ಧೌಷಧ. ಡಜನ್ 1ರ ಕ್ರಯ 0—8—0. ಕರ್ಪೂರಾದಿ ವಾಯುಮಾತ್ರೆ, ಡಜನ್ 1ರ ಕ್ರಯ 0—6—0.

ಇನ್ನು ಎಲ್ಲಾ ತರದ ಆಯುರ್ವೇದ ಸಿದ್ಧೌಷಧಗಳು ನಮ್ಮಲ್ಲಿ ದೊರೆಯುವವು.

ವಿಳಾಸ:— ಪಂಡಿತ, ಬಿ. ರಾಮಕೃಷ್ಣ ಬಾಳಿಗ, ಬಂಟವಾಳ ದ. ಕ.
ಮಂಗಳೂರು ಏಜಂಟರು:—— ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ತೇರುಬೀದಿ, ಮಂಗಳೂರು.

AMRUTANJAN B
AMRUTAN
Best Indian Pain Balm
Amrutanjan
BOMBAY

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಪ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು.

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಸಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಉತ್ಕೃಷ್ಟವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 2 ಆಣೆ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ ಟೌನ್, ಮದ್ರಾಸು.

109 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

— ರಥೋತ್ಸವ, ವಿವಾಹ ಉಪನಯನಗಳ ಸಮಯ —

ಸರ್ವರಿಗೂ ಉಡಿಗೆ ತೊಡಿಗೆಗಳು ಬೇಕಾಗುವ ಸಂದರ್ಭ.

ಯಾರು, ಯಾವುದನ್ನು ಎಲ್ಲಿ ಪಡೆಯಬೇಕೆಂಬ ಶಂಕೆಯಿಂದ ವಿಳಂಬ ಮಾಡಬೇಡಿರಿ. ಉಡಿಗೆತೊಡಿಗೆಗಳನ್ನು ಜಿನಸಾಯಿತ ನಿಮಗೆ ಬೇಕಾದ ಯಥಾರ್ಥ ಮಾಹಿತಿಯನ್ನು ಕಳೆದ ಹತ್ತಿಪ್ಪತ್ತು ವರುಷಗಳಿಂದ ಪಡದು ನಮ್ಮಲ್ಲಿಯ ವ್ಯಾಪಾರವು ಗಿರಾಕಿಗಳಿಗೆ ಸರ್ವ ತೃಪ್ತಿಯಿಂದಲೂ ಲಾಭಕರವಾಗಿ ಪರಿಣಮಿಸುವಂತೆ ನಮ್ಮ ಜವಳಿ ಸಂಗ್ರಹವನ್ನು ಮಾಡಿರುತ್ತೇವೆ.

ಗುರ್ಪುರ್ಕರ್ ಬ್ರದರ್ಸ್, ರಥಬೀದಿ, ಮಂಗಳೂರು.

ಹೆಡ್ ಆಫೀಸು:—ರಥಬೀದಿ—(ಮೊದಲು ಸುಜೀರ ನಾಗಪ್ಪನಾಯಕ್, ಎಂಡ್ ಕೊ, ಇದ್ದಲ್ಲಿ; ಅಜಿಜುದ್ದೀನ್ ರಸ್ತೆಗೆ ತಿರುಗುವಲ್ಲಿ) ಮಂಗಳೂರು.

ಬ್ರೇಂಚ್ ಆಫೀಸು:—ರಥಬೀದಿ—(ಹಳೇ ತಾಲೂಕು ಕಚೇರಿಯ ಪಟಾರಕ್ಕ ಸಮೀಪವಿರುವ ಮಳಿಗೆ) ಮಂಗಳೂರು.

ಈ ದೇಶದ ಪ್ರಖ್ಯಾತವಟ್ಟೆ ನೇಯುಗೆಯ ಕೇಂದ್ರಸ್ಥಳಗಳಾದ—ಬನಾರಿಸ್, ಪೂನಾ, ಅಹಮ್ಮದಾಬಾದ್, ಸೂರತ್, ಬೆಂಗಳೂರು, ಧರ್ಮಾವರಮ್, ಕಂಜೀವರಮ್, ಕೊಯಮುತ್ತೂರು, ಮಧುರೆ, ತಂಜಾವೂರು, ಕುಂಭಕೋಣ, ಅರ್ನಿ, ಸಾಡಿಪೇಟೆ, ಹುಬ್ಬಳ್ಳಿ, ಇಳಕಲ್, ಗದಗ, ಮದ್ರಾಸು ಈ ಪ್ರಾಂತ್ಯಗಳಲ್ಲಿ ತಯ್ಯಾರಾದ

ಜರಿಸೀರೆಗಳು, ದುಪ್ಪಟ್ಟಾ, ಜರಿಶಾಲು, ಪೇಷ್ಟಿ, ರೇಶ್ಮೆ ಸೀರೆಗಳು, ಅರಕಪೇಟೆ ಸೀರೆಗಳು, [illegible] ರೇಶ್ಮೆ ಸೀರೆಗಳು, [illegible] ಸೀರೆಗಳು, ರೇಶ್ಮೆ ಮಡಿಗಳು, [illegible] ಸೀರೆಗಳು [illegible], [illegible].

ಕೈರಾಟೆಯಲ್ಲಿ ತಯಾರಿಸಿದ ನೂಲಿನಿಂದ ಮಾಡಿದ—

ಖದ್ದರ್ ಶರ್ಟಿಂಗ್, ಖದ್ದರ್ ಕೋಟಿಂಗ್, ಖದ್ದರ್ ಟೋಪಿ, ಖದ್ದರ್ ಚೌಕ, ಅಂಗವಸ್ತ್ರ, ಇತ್ಯಾದಿ—
ಮುಸಲ್ಮಾನರಿಗೆ ಬೇಕಾದ ನಮೂನೆಯ ಲುಂಗಿ ಸೂಟಿಗೆಗಳ ವಗೈರೆ—

[illegible]

ತ್ವರೆ ಮಾಡಿರಿ ತಯಾರಾಗಿದೆ

ನಾಲ್ಕನೇ ದರ್ಜೆಯ

ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ನಾಲ್ಕನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್. ಗಣಪತಿರಾವ್ ಐಗಳ್ — ಗ್ರಂಥಕರ್ತರು.

ಮನೋರಂಜಕ ಚಿತ್ರಗಳೂ ಇವೆ.

ಇದರಲ್ಲಿ ಬಾರಕೂರು, ಮಂಗಳೂರು, ಮೂಲಿಕ, ಕಾರ್ಕಳ, ಮೂಡಬಿದರೆ, ಸುಬ್ರಮಣ್ಯ, ಉಡುಪಿ, ಬಸರೂರು, ವೇಣೂರು, ಬೈಲಂಗಡಿ, ಧರ್ಮಸ್ಥಳ, ಕೊಲ್ಲೂರು, ಕುಂಬಳೆ, ಜಪಾನ ದೇಶದ ಜನರು, ಚೀನಾದೇಶದ ಜನರು, ಬರ್ಮದೇಶದ ಜನರು, ಯುರೋಪ ಖಂಡದ ಜನರು, ಎಸ್ಕಿಮೊ ಜನರು, ನಿಗ್ರೊ ಜನರು. ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ನಾಲ್ಕನೇ ದರ್ಜೆಯ ಮಕ್ಕಳ ಬಗ್ಗೆ ಉಪಯುಕ್ತವಾಗಿದೆ. ಕ್ರಯ 8 ಆಣೆ.

ಪುಸ್ತಕ ದೊರಕುವ ವಿಳಾಸ: —

ಶಾರದಾ ಛಾಪಖಾನೆ,
ಮಂಗಳೂರು

ಲಿವರ್ ಮೂವ್‌ಮೆಂಟ್ ವಾಚ್.

15 ಮಣಿಗಳಿದ್ದು ರೋಲ್ಡಗೋಲ್ಡ ವಾಚ್.

ಈ ಗಡಿಯಾರ ಕೈಗೆ ಕಟ್ಟುವಂಥಾ ದ್ದಾಗಿ ಸರಿಯಾದ ಸಮಯವನ್ನು ತೋರಿಸಿ ಚಿರಕಾಲ ವರೇಗೆ ಬಾಳುವುದು.

10 ವರುಷದ ವರೆಗೆ ಬಾಳುವ ಗೆರೆಂಟಿ ಇದೆ. ಕ್ರಯ ರೂ. 17—8—0.

11 ಮಣಿಗಳಿದ್ದ ನಿಜವಾದ ರೋಲ ಗೋಲ್ಡ ಬಂಗಾರದಿಂದ ತಯಾರಿಸಲ್ಪಟ್ಟ 5 ವರ್ಷದ ಗೆರೆಂಟಿ ಇರುವ ವಾಚಿಗೆ ಕ್ರಯ ರೂ. 12—8—0.

18 ಕೆರೆಟ್ ಇಲೆಕ್ಟ್ರೊ ರೋಲ್ಡ ಗೋಲ್ಡ ವಾಚ್ ಕ್ರಯ ರೂ. 7—0—0. ಲಿವರ್ ಮೂವ್‌ಮೆಂಟ್ 10 ಮಣಿಗಳಿದ್ದ ಬಂಗಾರ ಗಿಲ್ಟುವಾಚ್ ಕ್ರಯ ರೂ. 13—8—0.

ಎಲಾರ್ಮ ಜರ್ಮನ್ ಟ್ಯಾಮ್‌ಪೀಸ್ ಕ್ರಯ ರೂ. 5-0-0.
ಡಬ್ಬಲ್ ಎ. „ „ „ 6-0-0.

"ಬಿ" ಟ್ಯಾಮ್‌ಪೀಸ್ ಕ್ರಯ ರೂ 2—4—0

ಟಿಕ್—ಟಾಕ್ ವಾಚ್ 1ರ ಕ್ರಯ „ 2—12—0

ಕಂಬ್ಯಾಂಡ್ ಪೆಪರ್ ಕ್ಲಿಪ್ ಟ್ಯಾಮ್‌ಪೀಸ ಹಿತ್ತಾಳಿ ಅಥವಾ ನಿಕ್ಕಲ್ ಕ್ರಯ ರೂ. 6—0—0 ಇನೆಮಲ್ ರೂ. 7—0—0. ಫ್ರೆಂಚ್ ಬೆಡ್ ಫೊಟೋಗಳು ಡಜನ್ 1ರ ಕ್ರಯ ರೂ. 2—4—0.

Emarald Watch Co.,
P. T. MADRAS.

ಸಾರಸ್ವತ.

ಕನ್ನಡ ಮತ್ತು ಕೊಂಕಣಿ ಭಾಷೆಗಳಲ್ಲಿ ಕಳೆದ ವಿಜಯ ದಶಮಿಾ ದಿನದಿಂದ ಪ್ರತಿ ದಶಮಿಗೆ ಹೊರಡುವ ಪತ್ರಿಕೆ.

ವಿ. ಎಸ್. ಕಾಮತ್,
ಮೂಲ್ಕಿ ವಾಮನ ಕುಡುವ } ಸಂಪಾದಕರು.

ಮತಸಂಸ್ಥೆ ಮತ್ತು ಸಮಾಜಕ್ಕೆ ಸಂಬಂಧಪಟ್ಟ ಇತರ ಸಂಸ್ಥೆಗಳ ಸುಸಂಘಟನ.

ಸಮಾಜದೊಳಗೆ ಅನ್ಯೋನ್ಯ ಸಾಧನೆ.

ಸ್ತ್ರೀಸಮಾಜಕ್ಕೆ ಉಪಯುಕ್ತವಾದ ವಿಷಯಗಳ ನಿರೂಪಣ

ಮತಭಾವನೆಗಳ ಉಜ್ಜೀವನ ಇತ್ಯಾದಿ ಉದ್ದೇಶಗಳಿಂದ ಈ ಪತ್ರಿಕೆಯು ಹೊರಡಿಸಲ್ಪಡುವುದು. ಸಾರಸ್ವತ ಸಮಾಜವು ಇದಕ್ಕೆ ಪ್ರೋತ್ಸಾಹವನ್ನೀಯಬೇಕಾಗಿ ಪ್ರಾರ್ಥನೆ.

ಚಂದಾಹಣ ಅಂಚೆವೆಚ್ಚ ಕೂಡಾ ರೂ. ೧—೪—೦. ಪೋಷಕರು ರೂ. ೧೦—೦—೦. ಸಹಾಯಕರು ರೂ. ೫—೦—೦. ಮಾದರಿ ಸಂಚಿಕೆಯನ್ನು ಟಪ್ಪಾಲು ಖರ್ಚಿಗಾಗಿ ಅರ್ಧಾಣೆ ಸ್ಟಾಂಪು ಕಳುಹಿಸುವವರಿಗೆ ಉಚಿತವಾಗಿ ಕಳುಹಿಸುವೆವು.

ಕನ್ನಡ ನಾಡಿನಲ್ಲಿ ಪ್ರತಿ ಕಡೆಯಲ್ಲಿಯೂ ಬಾತ್ಮಿದಾರರು ಬೇಕು.

ಎಲ್ಲಾ ಪತ್ರವ್ಯವಹಾರಗಳನ್ನು ಕೆಳಗಿನ ವಿಳಾಸಕ್ಕೆ ನಡೆಸಬೇಕು.

ಯು ನಾರಾಯಣನಾಯ್ಕ, ಕಾರ್ಯದರ್ಶಿ,
ಸಾರಸ್ವತ, ಉಡುಪಿ.

ಡಾಕ್ಟರುಗಳು ಭಿನ್ನಾಭಿಪ್ರಾಯಪಡುವಾಗ್ಯೆ ತೀರ್ಮಾನಿಸುವದು ಯಾರು?

ಅಂಥಾ ಸಂದರ್ಭಗಳಲ್ಲಿ ಡೆಂಗ್ಯು ಮಲೇರಿಯ ಜ್ವರಗಳನ್ನು ನಿವಾರಿಸುವಂಥಾ "ಬಾಟ್ಲಿವಾಲರ ಏಗ್ಯುಮಿಕ್ಸ್ಚರ"ನ್ನು ಸರಾಗವಾಗಿಯೂ, ಮತ್ತು ಜ್ವರಗಳನ್ನು ಖಂಡಿತವಾಗಿ ನಿಲ್ಲಿಸುವಂಥಾದ್ದೂ, ಎಲ್ಲಾ ತರದ ತಲೆನೋವುಗಳನ್ನು ಹೋಗಲಾಡಿಸುವಂಥಾದ್ದೂ ಆದ "ಬಾಟ್ಲಿವಾಲರ ಏಗ್ಯುಪಿಲ್ಸ್" ಇದನ್ನು ಉಪಯೋಗಿಸಿರಿ.

ಐ. ಎಮ್. ಎಸ್. ಡಾಕ್ಟರುಗಳಿಂದ ಶಿಫಾರಸು ಮಾಡಲ್ಪಟ್ಟಿದ್ದು. ಇದರ ಉಪಯೋಗದಿಂದ ಹೃದಯದ ಮೇಲೆ ಯಾವ ದೋಷದ ಬಾಧಕವಿಲ್ಲ. ಅರ್ಧ ಶತಮಾನದಿಂದ ಹಿಂದುಸ್ಥಾನ, ಬರ್ಮಾ, ಸಿಲೋನ್, ಅಫ್ರಿಕಾ ಇತ್ಯಾದಿಗಳಲ್ಲಿ ಪ್ರಖ್ಯಾತಪಟ್ಟಿದ್ದಾಗಿರುತ್ತದೆ.

ಅನೇಕ ಹಿಂದೀ ಪ್ರದರ್ಶನಗಳಲ್ಲಿ ಬೆಳ್ಳಿ ಮತ್ತು ಬಂಗಾರದ ಪದಕಗಳನ್ನು ಪಡೆದಿರುತ್ತೆ. ಚಾಲ್ತಿ ಸಾಕ್ಷಿದಂತಿದ್ದ ಮಾರಾಟಗಾರರಿಗಳೂ ಕೂಡ ಅವರ ಮೇಲೆ ಹಣವನ್ನು ಮುಂಗಡವಾಗಿ ಕೊಡುತ್ತಾರೆ. ಬಡ ಮತ್ತು ಮಧ್ಯದ ತರಗತಿಯ ಜನರಿಗೆ ವರಪ್ರದಾನವಾಗಿದ್ದು ಸಂಚಾರ, ಪ್ರಯಾಣ, ದೇಶಾಟನೆಗಳ ಸಮಯದಲ್ಲಿ ಹತ್ತಿರದಲ್ಲಿರಿಸಿಕೊಳ್ಳದಾಗಿರುತ್ತದೆ.

ಬಾಟ್ಲಿವಾಲರ ಬಾಲಾಮೃತ ಅಥವಾ ಟೊನಿಕ್ ಸಿರಪ್.

ಕೆಮ್ಮನ್ನು ಹೋಗಲಾಡಿಸಿ, ಎದೆನೋವನ್ನು ಶಾಂತಗೊಳಿಸಿ, ಜ್ವರವನ್ನು ಉಪಶಮನಿಸಿ, ನಿದ್ರಾಭಂಗವನ್ನು ಕಡಿಮೆ ಮಾಡಿ ಧಾತುವರ್ಧನವನ್ನು ಮಾಡುವದರಲ್ಲಿ ಅತ್ಯುತ್ತಮವಾಗಿರುತ್ತದೆ. ಕಫವನ್ನು ಒಣಗಿಸಿ ಮಾಯವಾಗುವಂತೆ ಮಾಡುವುದಲ್ಲದೆ ಅದೇ ಸಮಯದಲ್ಲಿ ಒಳ್ಳೇ ಜೀರ್ಣವನ್ನು ಉಂಟುಮಾಡುವುದು. ದರ ಮೊದಲಾದ ಮಾಹಿತಿಯನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಕಾರಿಖಾನೆ:-CAWASHAPUR, BOMBAY.

Dr. H. L. Batliwala & Co., Ltd.,
Sayani Road, P. O. Cadell Road, Bombay. No. 14:

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.,
Sayani Road, P. O. Cadell Road, Bombay. No. 14.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟ. ಖ. 9 ಆಣೆ.

ನಮ್ಮ ವಿಳಾಸ: — ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.

ಏಜಂಟರು:— ದಿ. ಊಲನ್ ಮಾರ್ಟ್, ಮಂಗಳೂರು.

ಸಾಂಟೋಲ್ ಕಾಂಪೌಂಡ್.

ಎಲ್ಲಾ ವಿಧದ ಮೇಹಗಳಿಗೂ ರಾಮಬಾಣ.

ಸ್ತ್ರೀ ಪುರುಷರಿಗೆ ರೋಗವು ಸಂಭವಿಸಿದಂದಿನಿಂದಲೂ ಮೇಹ ಜಾಡ್ಯವು ಉಂಟಾಗಿದೆಯೆಂದು ಹೇಳಬಹುದು. ಮೇಹಗಳಲ್ಲಿ ಹಲವು ವಿಧಗಳುಂಟು. ಇವುಗಳಲ್ಲಿ ಸಾಧಾರಣವಾದುದು ಒಂದು ವಿಧವಾದ ಸಾಂಕ್ರಾಮಿಕ ಕ್ರಿಮಿಯಿಂದುತ್ಪನ್ನವಾಗುವುದು. ಇದು ನೋಡಲು ಮರ್ಮದ ಸ್ಥಾನದಲ್ಲಿ ಚರ್ಮದ ಪೊರೆಯನ್ನಾಶ್ರಯಿಸಿ, ಆ ಮೇಲೆ ಅಲ್ಲಿ ಬಾವು, ಬಿಗಿತ, ನೋವು ಉಂಟಾಗಬಹುದು. ಅವರವರ ದೇಹಸ್ಥಿತಿಯನ್ನು ಅವಲಂಬಿಸಿ ಕ್ರಮೇಣ ಅಥವಾ ಶೀಘ್ರದಲ್ಲಿ ವೃದ್ಧಿ ಹೊಂದಬಹುದು. ಇದರಿಂದ ಥಕ್ಕನೆ ತೊಡೆ ಸಂದುಗಳಲ್ಲಿ ತೊಡೆವಾಳವೆಂಬ ಕುರುವೂ ಏಳಬಹುದು. ಇದೇ ಮೇಹದ ವಿಷವು ಶರೀರದಲ್ಲಿ ಹರಡಲೆತ್ನಿಸಿದುದರ ಚಿಹ್ನೆಯೆಂದು ತಿಳಿಯಬೇಕು. ಇದು ಕಣ್ಣುರೆಪ್ಪೆಯ ಒಳಭಾಗದ ನರಗಳಿಗೇನಾದರೂ ಏರಿದರೆ, ಆಗ ಮೇಹನಯನವೆಂದರೆ 'ಗೊನೊರಿಯಲ್ ಅಪ್ಥಾಲ್ ಅಮೇಯಿಯಾ' ಎಂಬ ರೋಗವು ಉತ್ಪನ್ನವಾಗುವುದು. ಈ ರೋಗದಿಂದ ಗಾಯದಿಂದ ಹೊರಬೀಳುವ ದ್ರವವು ಅನೇಕ ವಿಧದ ಬಣ್ಣವುಳ್ಳದ್ದಾಗಿರುವುದು. ಹೆಂಗಸರಲ್ಲಿ ಈ ರೋಗವು ಮೂತ್ರದ್ವಾರದಲ್ಲಿಯೂ, ಗರ್ಭಾಶ್ರಯದಲ್ಲಿಯೂ ನೆಲೆಗೊಂಡಿರಬಹುದು.

ಈ ರೋಗದಂಥ ದುಷ್ಪರಿಣಾಮಕಾರಿಯಾದ ಕೆಟ್ಟರೋಗವು ಮತ್ತೊಂದಿಲ್ಲವೆಂದು ಹೇಳಬಹುದು. ಇದನ್ನು ಹೆಚ್ಚು ಕಾಲ ಹಾಗೆಯೇ ಬಿಟ್ಟರೆ, ಪುರುಷರ ಮೂತ್ರದ್ವಾರದ ಒಳಶಕ್ತಿಯನ್ನು ಹದಗೆಡಿಸಿ ವ್ರಣಬಂಧವನ್ನುಂಟುಮಾಡಿ, ಮೂತ್ರದ್ವಾರವನ್ನು ಕಟ್ಟುವುದು. ಆದ್ದರಿಂದ ಇದಕ್ಕೆ ಕೂಡಲೆ ಔಷಧವನ್ನು ಸೇವಿಸಿ, ಅದರ ಮೂಲೋತ್ಪಾಟನೆ ಮಾಡುವುದುತ್ತಮ. ಹಲವು ವರ್ಷಗಳ ವೈದ್ಯಕೀಯ ಅನುಭವದಿಂದ ಈ "ಸಾಂಟೋಲ್ ಕಾಂಪೌಂಡ್" ಎಂಬ ಔಷಧಿಯನ್ನು ಕಂಡು ಹಿಡಿದಿದ್ದೇವೆ. ಇದರಲ್ಲಿ ಯಾವ ಅಪಾಯಕರವಾದ ಔಷಧಿ ಸಾಮಗ್ರಿಗಳೂ ಇಲ್ಲ. ಇದು ಎಲ್ಲ ಶರೀರಗಳಿಗೂ ಅನುಗುಣವಾಗಿದೆ. ಇದರ ಸೇವನೆಯಿಂದ ರೋಗವು ಗುಣವಾಗುವುದೆಂಬುದರಲ್ಲಿ ಯಾವ ಸಂಶಯವೂ ಬೇಡ. ರೋಗವು ಯಾವ ಸ್ಥಿತಿಯಲ್ಲೇ ಇರಲಿ, ಎಷ್ಟು ಹಳೆಯದೇ ಆಗಿರಲಿ ಅದನ್ನು ವಾಸಿಮಾಡುವುದೇ ಇದರ ಗುಣವು. ಈ ರೋಗವು ಸ್ತ್ರೀ ಪುರುಷರಿರುವೆಡೆಗಳಲ್ಲಿ ಸಾಮಾನ್ಯವಾಗಿರುವುದರಿಂದ ಇದು ಎಲ್ಲರಿಗೂ ಸುಲಭ ದರದಲ್ಲಿ ಸಿಗಬೇಕೆಂದು ಇದರ ಬೆಲೆಯನ್ನು ಕೇವಲ ರೂ. ೨ ಮಾತ್ರ ಇಟ್ಟಿರುವೆವು. ಪ್ಯಾಕಿಂಗ್ ಮತ್ತು ಪೋಸ್ಟು ಖರ್ಚು ಪ್ರತ್ಯೇಕ. ದಿನಕ್ಕೆ ಎರಡು ಸಲ ೧ ಟೀ ಚಮಚೆ ನೀರಿನಲ್ಲಿ ಯಾ ಹಾಲಿನಲ್ಲಿ ಊಟದ ನಂತರ ತೆಕ್ಕೊಳ್ಳುವುದು. ಪತ್ರವ್ಯವಹಾರಗಳೆಲ್ಲ ಗುಪ್ತವಾಗಿರುವುವು. ವಿಶ್ವಾಸರ್ಹರಾದ ಏಜಂಟರು ಬೇಕಾಗಿರುವರು. ಹೆಚ್ಚಿನ ಮಾಹಿತಿಗೆ ಬರೆಯಿರಿ.

ದಿ. ಊಲನ್ ಮಾರ್ಟ್,
ಸೋಲ್ ಏಜೆಂಟ್ಸ್,
ಮಂಗಳೂರು, ದಕ್ಷಿಣ ಕನ್ನಡ.

ಶಾಲಿವಾಹನಶಕ ೧೮೪೭ನೆಯ ಕ್ರೋಧನ ಸಂ|ರದ ಆಶ್ವೀಜ ಬ| ೧ ಶನಿವಾರದಿಂದ ಕ್ರೋಧನ ಸಂ|ರದ ಆಶ್ವೀಜ ಬ| ೭ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೫ನೆಯ ಕನ್ಯಾ [illegible])

ತಾರೀಕು	ವಾರ	ತಿ.	ಘಳಿಗೆ	ನಕ್ಷತ್ರ	ಘಳಿಗೆ	ಸೌರಮಾನ	ಸೂರ್ಯ ಉ.	ಸೂರ್ಯ ಅಸ್ತ.
3	ಶನಿ	೧	೧೦.೪೬	ರೇವತೀ	೧೮. ೨	೧೭	6.22	6.19
4	ರವಿ	೨	೮.೪೪	ಅಶ್ವಿನಿ	೧೭.೪೬	೧೮	6.22	6.19
5	ಸೋಮ	೩	೮.೧೬	ಭರಣೀ	೧೯. ೧	೧೯	6.22	6.18
6	ಕುಜ	೪	೮.೪೫	ಕೃತ್ತಿಕಾ	೨೧ ೩೨	೨೦	6.22	6.18
7	ಬುಧ	೫	೧೦.೩೨	ರೋಹಿಣೀ	೨೫. ೧	೨೧	6 22	6.17
8	ಗುರು	೬	೧೨.೪೬	ಮೃಗಶಿರಾ	೨೮.೪೪	೨೨	6.22	6.16
9	ಶುಕ್ರ	೭	೧೬.೪೪	ಆರ್ದ್ರಾ	೩೩.೧೬	೨೩	6.22	6.15

ಮಂಗಳೂರಿನ ವಾಯುಸ್ಥಿತಿ.

Date ತಾರೀಕು	Temperature. ಉಷ್ಣ (ಕಾವು) Maximum [illegible]	Temperature. ಉಷ್ಣ (ಕಾವು) Minimum [illegible]	Rainfall. ಮಳೆ ದಿನದ ಮಳೆ	Rainfall. ಮಳೆ ಜುಮಲಾ ಮಳೆ.
25	89—2	74—8	0—17	—
26	88—0	73—5	0—07	—
27	89—1	78—0	0—02	—
28	88—7	76—3	—	—
29	89—9	72—7	0—24	—
30	86—5	74—1	0—05	—
1	87—8	74—5	0—01	124-18

ಮಂಗಳೂರಿನ ಪೇಟೆ ಧಾರಣೆ.

ಜೀನಸು		ಇಂದ ರೂ. ಆ	ವರೆಗೆ ರೂ. ಆ
ಮುಸ್ಕಿ		8—10	9—0
ಗುಡ್ಡು	...	8—4	8—8
ರಾಶಿ ಸುಗ್ಗಿ	...	7—10	8—3
ಅನ್ನಘಟ್ಟ ಬೆಳ್ತಿಗೆ	...	8--12	9—8
ಗುಡ್ಡು ಬೆಳ್ತಿಗೆ	...	8—0	8—8
ರಂಗೂನು ಬೆಳ್ತಿಗೆ ಗೋಣಿ ೧	...	13—8	14—8
ಗೋಧಿ ಗೋಣಿ ೧ಕ್ಕೆ	...	17—8	19—0
ಹುರುಳಿಗೋಣಿ ೧ಕ್ಕೆ	...	9—8	9—8
ಕಡಲೆಗೋಣಿ ೧ಕ್ಕೆ	...	12—0	13—0
ತೊಗರಿಗೋಣಿ ೧ಕ್ಕೆ	...	12—8	13—0
ತೊಗರಿಬೇಳೆ ಗೋಣಿ ೧ಕ್ಕೆ	...	15—0	20—0
ಉದ್ದುಗೋಣಿ ೧ಕ್ಕೆ	...	14—0	14—8
ಹೆಸರುಗೋಣಿ ೧ಕ್ಕೆ	...	14—0	15—0
ಊರು ಬೆಲ್ಲ ಖಂಡಿ ೧ಕ್ಕೆ	...	80—	75—0
ಉಪ್ಪು ಗೋಣಿ ೧ಕ್ಕೆ	...	4—4	4—8
ಕೊಬ್ರಿ ಖಂಡಿ ೧ಕ್ಕೆ	...	115—0	120—0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	...	46—0	48—0
ಎಳ್ಳಿಂಡಿ ಖಂಡಿ ೧ಕ್ಕೆ	...	40—0	—
ಕೊಬ್ರಿ ಎಣ್ಣೆ ಮಣ ೧ಕ್ಕೆ	...	8—14	10—0
ಎಳ್ಳೆಣ್ಣೆ ಮಣ ೧ಕ್ಕೆ	...	8—0	11—0
[illegible] ಎಣ್ಣೆ ಡಬ್ಬಿಗೆ ೧ಕ್ಕೆ	...	8-8-0	—
[illegible] ಸಕ್ಕರೆ ಮಣ ೧ಕ್ಕೆ	...	4—4	—
ಊರ ಮೆಣಸಿನಕಾಯಿ ಮಣ ೧ಕ್ಕೆ	...	6—8	—
ಸಾಸಿವೆ ಮುಡಿ ೧ಕ್ಕೆ	...	8—12	—
ಕೊತ್ತುಂಬರಿ ಮುಡಿ ೧ಕ್ಕೆ	...	3—14	4—0
ಕಾಫಿ ಖಂಡಿ ೧ಕ್ಕೆ	...	345—0	400—0
ಬಿಳಿಗೋಟು ಅಡಿಕೆ ಖಂಡಿ ೧ಕ್ಕೆ ಹಳತು	...	245—0	250—0
„ ಹೊಸ ಅಡಿಕೆ		240—0	0—0
ಕಾಳುಮೆಣಸು ಖಂಡಿ ೧ಕ್ಕೆ	...	220—0	—
[illegible] ಮಣ ೧ಕ್ಕೆ	...	100—0	—
ಗೇರುಬೀಜ ಮುಡಿ ೧ಕ್ಕೆ	...	4—5	4—6
[illegible] ಖಂಡಿ ೧ಕ್ಕೆ	...	45—0	65—0
[illegible] ಮಣ ೧ಕ್ಕೆ	...	17—8	—
[illegible] ಮಣ ೧ಕ್ಕೆ	...	24—0	—
[illegible] ೧ಕ್ಕೆ	...	18—10	
[illegible] ಮಣ ೧ಕ್ಕೆ	...	16—8	
[illegible]		13—7	

The Canara Public Conveyance Co., Ltd, Mangalore.

(ESTABLISHED 1914.)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು {
- ಕರಾವಳಿ ಮಾರ್ಗವಾಗಿ — ಮುಲ್ಕಿ — ಉಡ್ಪಿ — ಕುಂದಾಪುರ — ಗಂಗೊಳ್ಳಿ — ಬೈಂದೂರು
- ಬಂಟವಾಳ — ಬೆಳ್ತಂಗಡಿ — ಚಾರ್ಮಾಡಿ.
- ಪಾಣೆಮಂಗಳೂರು — ಪುತ್ತೂರು — ಸುಳ್ಯ — ಮಡಿಕೇರಿ.
- ಪುತ್ತೂರು — ಉಪ್ಪಿನಂಗಡಿ — ಬೆಳ್ತಂಗಡಿ.
- ಮಡಿಕೇರಿ — ಪುತ್ತೂರು — ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು — ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು — ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ — ಮದ್ರಾಸು — ಕಡೂರು — ಚಿಕ್ಕಮಗಳೂರು — ಚಾರ್ಮಾಡಿ — ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು — ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd, Mangalore. S. K

ಕನ್ನಡಿಗರೇ! **ವಸಂತ.** ಕಣ್ದೆರೆಯಿರಿ!

ಈಗಾಗಲೇ ಎರಡನೇ ಸಂಪುಟವು ಆರಂಭಿಸಲಿದೆ.

ಇತಿಹಾಸನಿಧಿ ಎಂದರೆ	ವಸಂತ
ಸಮಾಜಸುಧಾರಕನೆಂದರೆ	ವಸಂತ
ಕೈಗಾರಿಕೆಯ ಸಾಮ್ರಾಜ್ಯವೆಂದರೆ	ವಸಂತ
ಕರ್ಣಾಟಕ ಭಾಷಾಸೇವಕನೆಂದರೆ	ವಸಂತ
ದೇಶವಿದೇಶ ಬಂಧುವೆಂದರೆ	ವಸಂತ
ಕಾದಂಬರಿಗಳ ಭಂಡಾರವೆಂದರೆ	ವಸಂತ
ಚಿತ್ರಾಕರ್ಷ ಚಿತ್ರಶಾಲೆಯೆಂದರೆ	ವಸಂತ
ದೇಶಭಕ್ತನೆಂದರೆ	ವಸಂತ

ಇಂತಹ ವಸಂತನು ಯಾರಿಗೆ ಬೇಕು,
ಯಾರಿಗೆ ಬೇಡ?

48 (ಕ್ರೌನ್ ¼ ಫುಟ ಸ್ಯಾಜಿನ) ಪುಟಗಳನ್ನು ಒಳ್ಳೆದ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3—4—0 ಮಾತ್ರ.

ವ್ಯವಸ್ಥಾಪಕ,
ವಸಂತ ಕಾರ್ಯಾಲಯ,
ಕುಂದಾಪುರ, ದಕ್ಷಿಣ ಕನ್ನಡ.

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ

ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ಯಾವಂತರೂ ತಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ಗಾವರ್ಗಿಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನ್ನು ಕುರಿತ ಲೇಖನಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಅಧಿಕಾರಿಗಳೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪೋಷಕರಿಗೆ	... ...	ರೂ. 3—0—0
ಇತರರಿಗೆ, ಪಡಕ್ಕಳಕ್ಕೆ, ಪೋಸ್ಟೇಜು ಸೇರಿ		„ 2—8—0.
„ ವ್ಯಕ್ತಿಗಳಿಗೆ	...	„ 1—8—0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪತ್ರಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿಯಬಹುದು.

ಎಡಿಟರ್,
ಬಿ. ಹನುಮಂತಯ್ಯಗೌಡ,
ಅರ್ಥಸಾಧಕ ಪತ್ರಿಕೆ,
[illegible]

ಬೇಕಾಗಿದ್ದಾರೆ!

ಒಳ್ಳೇ ದೃಢತೆಯುಳ್ಳ ಭದ್ರವಾದ ಇನ್ಶೂರೆನ್ಸ್ ಕಂಪೆನಿಯಲ್ಲಿ ಜೀವವಿಮೆ, ಫ್ಯಾರ್‌ವಿಮೆ, ಮೆರೀನವಿಮೆ ಯಾವತು ವಿಮೆ ಕೆಲಸಗಳನ್ನು ಶೇಖರಿಸಿ ಕೊಡಲು ದಕ್ಷಿಣಕನ್ನಡಾ ಜಿಲ್ಲೆಯಲ್ಲಿ ಯೋಗ್ಯ ಸಬ್-ಏಜಂಟರುಗಳು ಕೂಡಲೆ ಬೇಕಾಗಿದೆ. ಪ್ರತಿಫಲವೆಷ್ಟು ಎಂಬುದನ್ನೂ ಹಿಂದಣ ಅನುಭವವನ್ನೂ ಕುರಿತಾಗಿ ಕೂಡಲೆ ಬರೆದುಕೊಳ್ಳಿರಿ:—

ಮೆಸರ್ಸ್ —

ಜೆ. ಡಿ. ವಾಯಿಡಾ ಎಂಡ್ ಸನ್
ಪೋರ್ಟ ರೋಡ್, ಮಂಗಳೂರು.

Fresh Arrivals

Pear's Solid Brilliantine, Evans Lime-juice Glycerine, Tooth powders, Rose water, Syrups of all sorts for drinks, Denatured Spirits, etc., etc.

The Mangalore Trading Association,
Car-Street, MANGALORE

---

11 ಮಣಿಗಳಿದ್ದು ಬ್ರಿಜ್ ಮ್ಯೂವ್ಮೆಂಟ್.

22 ಕೆರೆಟ್ ರೋಲ್ಡಗೋಲ್ಡ ರಿಸ್ಟ್‌ವಾಚ್.

ಈ ವಾಚ್ ಎಂಟಾಣೆ ಪಾವಲಿಯಷ್ಟು ಸಣ್ಣದಾಗಿ ಬಹು ಚಲೋದಾದ ಇನೆಮಲ್ ಡಾಯಲ್ ಇದ್ದು ಬಹು ಉತ್ತಮವಾಗಿದೆ. 5 ವರ್ಷದಗ್ಯಾರಂಟಿ ಇದೆ. ಕ್ರಯ ರೂ. 12/8

18 ಕೆರೆಟು ಇಲೆಕ್ಟ್ರೊ ರೋಲ್ಡಗೋಲ್ಡ ವಾಚ್ ಕ್ರಯ ರೂ. 7—0—0. "ಬಿ" ಟ್ಯಾಮ್‌ಪೀಸ ರೂ. 2-4-0.

9 ಕಾರಾಟ್ 8 ಮಣಿಗಳ ವಾಚ್ 1ರ ಕ್ರಯ 23—0—0.
14 „ „ „ 26—0—0.
14 „ 15 ಮಣಿ „ 36—0—0.
9 „ „ „ 32—0—0.

ಚಲೋದಾದ ಲವ್ ನಕ್ಷೆಗಳು ಡಜನ್ 1ಕ್ಕೆ ರೂ. 2/4.

P. Sambasiva Chetty & Co.,
134 NAINIAPPA NAICKEN ST.
P. T. MADRAS.

ಪ್ರಸಿದ್ಧ ಪತ್ರಿಕೆ.

ಹೊಸ ಬೀಜಗಳು! ಖಾತರಿಯಾದವು!!

೧೨ ಪ್ಯಾಕೆಟ್ ಉತ್ತಮ ಜಾತಿಯ ವಿದೇಶಿ ತರಕಾರಿ ಬೀಜಗಳು ೧೨ ರಕಂ ... ... ೨-೮-೦.

೧೨ ಪ್ಯಾಕೆಟ್ ನಾಟಿ ತರಕಾರಿ ಬೀಜಗಳು ೧೨ ರಕಂ ... ... ೧-೧೨-೦.

೧೨ ಪ್ಯಾಕೆಟ್ ದೇವರ ಪೂಜೆಗೂ ಮತ್ತು ಅಲಂಕಾರಕ್ಕೆ ಯೋಗ್ಯವಾದ ಹೂ ಬಿಡತಕ್ಕ ಉತ್ತಮವಾದ ೧೨ ರಕಂಗಳ ಬೀಜಗಳು ... ... ೨-೦-೦.

ಈ ಮೇಲ್ಕಂಡ ಬೀಜಗಳನ್ನು ಈ ತಿಂಗಳೊಳಗಾಗಿ ತರಿಸಿಕೊಂಡರೆ, ಪೋಸ್ಟೇಜು ಮತ್ತು ಇತರ ಎಲ್ಲಾ ಚಾರ್ಜುಗಳು ಸೇರಿ, ಮೇಲೆ ನಮೂದಿಸಿರುವ ಮೊಬಲಗಿಗೆ, ವಿ. ಪಿ. ಯಿಂದ ಕಳುಹಿಸುತ್ತೇವೆ. ಅಲ್ಲದೆ ಇದರ ಸಂಗಡ ಚಿತ್ರಗಳಿಂದ ಕೂಡಿರುವ ನಮ್ಮ ದೊಡ್ಡ ಕ್ಯಾಟಲಾಗನ್ನು ಕಳುಹಿಸಿ ಕೊಡುತ್ತೇವೆ. ನಮ್ಮಲ್ಲಿ ದೊರಕುವ ಬೀಜಗಳು, ಉತ್ತಮ ತರಹವುಳ್ಳವು. ಮತ್ತು ಖಾತರಿಯಾದವು, ಹುಟ್ಟದೆ ಹೋದರೆ, ಬೇರೆ ಬೀಜಗಳನ್ನು ಬದಲಾಯಿಸಿ ಕೊಡುತ್ತೇವೆ.

ದಿ. ಮೆಜೆಸ್ಟಿಕ್ ನರ್‌ಸರಿ (ತೋಟ)
ಲಾಲ್‌ಬಾಗ್ (ಕೋಟೆ) ರೋಡ್,
ಬೆಂಗಳೂರು ಸಿಟಿ.

ಮ|| ರಾ|| ರಾ|| ಸಿ. ಕಂಣನ್ ನಾಯರ್ ಅವರ್ಗಳ್,
ಅಸಿಸ್ಟೆಂಟು ರಿಜಿಸ್ಟ್ರಾರರು ವ ಲಿಕ್ವಿಡೇಟರ್.

ಪ್ರಕಟಣೆ.

ದಕ್ಷಿಣ ಕನ್ನಡ ಜಿಲ್ಲಾ ಕಾಸರಗೋಡು ತಾಲೂಕು ತಳಂಗರೆ ಗ್ರಾಮದಲ್ಲಿ ಸ್ಥಾಪಿಸಿರುವ ನಂಬ್ರ 7347ನೇ ಅಯರ್ಕಾತ್ತಾಯಿನಿ ಸಹಕಾರಿ ಸಂಘವು ರಿಜಿಸ್ಟ್ರಿ ಮಾಡಲ್ಪಟ್ಟಿರುವುದನ್ನು ರದ್ದುಮಾಡಿರುವುದರಿಂದಲೂ, ಸಂಘದ ಕಾರ್ಯಗಳನ್ನು ವ್ಯವಸ್ಥೆಪಡಿಸುವ ಬಗ್ಗಾಗಿ ತಕ್ಕ ವಿಲೆವಾರಿ ಮಾಡುವುದರಿಂದಲೂ ಸದರಿ ಸಂಘದ ಮೇಲೆ ದಾವೆ ಇರುವ ಎಲ್ಲಾ ಜನರು ತಮ್ಮ ದಾವೆಗಳನ್ನು ಸದರಿ ಸಂಘದ ಲಿಕ್ವಿಡೇಟರರಾದ ಮಂಗಳೂರು ಸೆಕ್ಷನ್ ಸಹಕಾರಿ ಸಂಘಗಳ ಅಸಿಸ್ಟೆಂಟು ರಿಜಿಸ್ಟ್ರಾರರವರ ಮುಂದೆ ಪ್ರಕಟನೆಯ ತಾರೀಕಿನಿಂದ ಮೂರು ತಿಂಗಳೊಳಗೆ ತರತಕ್ಕದೆಂತ ಈ ಮೂಲಕ ಪ್ರಕಟಿಸೋಹಾಗುತ್ತದೆ.

15-9-1925. C. KANNAN NAIR,
Assistant Registrar,

ವಿಷಮಜ್ವರದ ಅಸ್ಥಿಜ್ವರವು ಶಹರಿನಲ್ಲಿರುವದರಿಂದ ಈ ಕೆಳಗಿನ ವಿಷಯಗಳನ್ನು ಸರ್ವರ ತಿಳುವಳಿಕೆ ಬಗ್ಗೆ ಪ್ರಚುರ ಪಡಿಸುವರೆ ಅಪೇಕ್ಷಿಸುತ್ತೇನೆ—

ವಿಷಮ ಜ್ವರ ವ ಅಸ್ಥಿಜ್ವರವೆಂಬುವುದು ವಿಷಮಜ್ವರ ಕ್ರಿಮಿಗಳ ಸೋಂಕಿನಿಂದ ಉತ್ಪನ್ನವಾಗುವುದು ಈ ಕ್ರಿಮಿಗಳು ಆಹಾರ, ಹಾಲು, ನೀರು, ಧೂಳು ಮೊದಲಾದ ಸಾಧನಗಳ ಮೂಲಕವಾಗಿಯೂ, ರೋಗಿಗಳ ಮತ್ತು ರೋಗ ಗುಣವಾದವರ ಸಂಪರ್ಕದಲ್ಲಿರುವವರಿಂದ ಅಂಥವರ ಮಲಮೂತ್ರಾದಿಗಳ ಮೂಲಕವಾಗಿಯೂ ದೇಹದೊಳಗೆ ಸೇರುವುದು, ಕೊಳಕು ನೀರಿನಿಂದಲೂ ನೊಣಗಳಿಂದಲೂ ಮಿಶ್ರವಾದ ವ ಹೊಲೆಯಾದ ಆಹಾರ ತಿಂಡಿಗಳ ಮೂಲಕವಾಗಿ ವಿಷಮಜ್ವರವು ಅನೇಕ ಸರ್ತಿ ಬಹಳವಾಗಿ ಹಬ್ಬುವರೆ ಅಸ್ಪದವಿರುತ್ತದೆ. ರೋಗದ ಸೋಂಕು ರೋಗಿಯ ಮಲದಲ್ಲಿಯೂ, ಮೂತ್ರದಲ್ಲಿಯೂ ಹೊರಮಾಡುತ್ತದೆ. ಮೂತ್ರವಲ್ಲದೆ ಗುಣವಾಗಿ ಕೆಲವು ಹಪ್ತೆಗಳ ಪರಿಯಂತರ ಮೂತ್ರದಲ್ಲಿ ಕಂಡುಬರುವುದುಂಟು. ಕೆಲವು ಸಂದರ್ಭಗಳಲ್ಲಿ ವಿಷಮಜ್ವರ ಪೀಡಿತರಾಗಿ ಗುಣಹೊಂದಿದವರ ಮಲಮೂತ್ರವನ್ನು ಪರೀಕ್ಷಿಸಿದಲ್ಲಿ ಹಲವು ತಿಂಗಳುಗಳ ವರೆಗೂ ಸೋಂಕಿನ ಕ್ರಿಮಿಗಳು ಪಸಾರಾಗುವದಾಗಿ ತಿಳಿದುಬಂದಿದೆ. ಈ ಸೋಂಕಿನ ಕ್ರಿಮಿಗಳು ಸೋಂಕು ತಗಲಿದ ಕೈ ಮತ್ತು ಬಟ್ಟೆ ಇತ್ಯಾದಿಗಳ ಮೂಲಕವಾಗಿಯೂ ಆಹಾರ, ಹಾಲು ಇತ್ಯಾದಿ ವಾಹನಗಳ ಮೂಲಕವಾಗಿಯೂ ಹಬ್ಬುವವು.

— ನಿವಾರಣಾ ಬಗೆ —

ಕುಡಿಯುವ ನೀರನ್ನು ಚೆನ್ನಾಗಿ ಬಿಸಿಮಾಡಿ ಕುಡಿಯತಕ್ಕದ್ದು. ಆಹಾರವನ್ನು ಬಿಸಿ ಇರುವಾಗಲೇ ಉಣ್ಣುವುದು. ಆಹಾರಪದಾರ್ಥಗಳ ಮೇಲೆ ನೊಣಗಳು ಕೂಡುಕೊಳ್ಳದಂತೆ ಮುಚ್ಚಿಡುವುದು. ತಿನ್ನುವ ವ ಕುಡಿಯುವ ಪದಾರ್ಥಗಳ ಶುದ್ಧತ್ವದ ಬಗ್ಗೆಯೂ ಮನೆ ಮತ್ತು ವಠಾರದ ಶುಚಿತ್ವದ ಬಗ್ಗೆಯೂ ಸಾಮಾನ್ಯ ಆರೋಗ್ಯ ಸೂತ್ರಗಳನ್ನು ತಪ್ಪದೆ ಕೈಕೊಳ್ಳುವುದು ಅಗತ್ಯ. ಪಾಯಖಾನೆಗಳನ್ನು ನಿತ್ಯವೂ ಶುಚಿಯಿರಿಸಿ ಲೋಶನ್ ವ ಕರ್ಬೋಲಿಕ್ ದ್ರಾವಕ ಬೆರಸಿದ ನೀರನ್ನು ಚಿಮುಕಿಸುವುದು ಉತ್ತಮ. ರೋಗಿಯ ಮಲಮೂತ್ರವನ್ನು ಈ ದ್ರಾವಕ ನೀರು ಹಾಕಿದ ಪಾತ್ರೆಯಲ್ಲಿರಿಸುವುದು ವ ಗರಗಸದ ಹುಡಿ ಹಾಕಿದ ಪಾತ್ರೆಯಲ್ಲಿರಿಸಿ ಸುಡುವುದು ಉತ್ತಮ. ರೋಗಿಯ ಎಲ್ಲಾ ಕೊಳಕು ವಸ್ತ್ರಗಳನ್ನು ಕುದ್ದ ಕುದಿಯುವ ನೀರಿನಲ್ಲಿ ಹಾಕತಕ್ಕದ್ದು. ರೋಗಿಯ ಕೋಣೆಯ ನೆಲಕ್ಕೂ ಗೋಡೆಗೂ ಮೇಲೆ ಹೇಳಿದ ದ್ರಾವಕ ಬೆರಸಿದ ನೀರನ್ನು ಧಾರಾಳವಾಗಿ ಚಿಮುಕಿಸುತ್ತಿರುವುದು ಉತ್ತಮ. ರೋಗಿಯ ಶುಶ್ರೂಷೆ ಮಾಡುವವರು ರೋಗದ ಸೋಂಕು ತಗಲದಂತೆ ಬಹು ಜಾಗರೂಕತೆಯಲ್ಲಿರುವದಲ್ಲದೆ ಏನಾದರೂ ತಿನ್ನುವ ಕುಡಿಯುವ ಮೊದಲು ತಮ್ಮ ಕೈಗಳನ್ನು ತೊಳೆದುಕೊಳ್ಳತಕ್ಕದ್ದು.

ರೋಗದ ಹೆಚ್ಚಿನ ಹಬ್ಬುವಿಕೆಯನ್ನು ನಿವಾರಿಸಿ ತಡೆಗಟ್ಟುವರೆ ವಿಷಮ ಜ್ವರ ತೊಡಗಿದ ಮನೆಯವರು ಸದರಿ ವಾರ್ತೆಯನ್ನು ಮುನ್ಸಿಪಲ್ ಹೆಲ್ತ್ ಆಫೀಸರರಿಗಾಗಲಿ ಸೆನಿಟರಿ ಇನ್ಸ್‌ಪೆಕ್ಟರರಿಗಾಗಲಿ ತಿಳಿಸಬೇಕಾಗಿ ವಿಜ್ಞಾಪನೆ.

ಮುನ್ಸಿಪಾಲ್ ಹೆಲ್ತ್ ಆಫೀಸು. } Dr. P. G. NAIR,
ಮುನ್ಸಿಪಲ್ ಹೆಲ್ತ್ ಆಫೀಸರ್.

ಸ್ವರ್ಗಾರೋಹಿಯಾದ ಜೋನ್ಸನನು.

ಜೋನ್ಸನನು ಬಹು ಒಳ್ಳೇಯ ಮನುಷ್ಯನು. ಇವನು ಯಾವ ಅನ್ಯಾಯ ಕೃತ್ಯಗಳನ್ನೂ ಮಾಡಲಿಲ್ಲ. ಅದುದರಿಂದ ಮರಣದ ನಂತರ ಈತನು ಸ್ವರ್ಗಕ್ಕೆ ಹೋದನು. ಸ್ವರ್ಗಲೋಕದಲ್ಲಿ ರಾಜನು ಸಿಂಹಾಸನದಲ್ಲಿ ಕೂತುಕೊಂಡಿದ್ದನು. ಸುತ್ತಲೂ ಪ್ರಜೆಗಳು ಬಹು ನಮ್ರವಾಗಿ ನಿಂತುಕೊಂಡಿದ್ದರು. ಇದನ್ನು ನೋಡಿ ಜೋನ್ಸನಗೆ ಬಹಳ ವಿಸ್ಮಯವಾಯಿತು. ತನ್ನ ಬಳಿ ಇದ್ದ ಒಬ್ಬ ದೇವದೂತನ ಹತ್ತಿರ ಕೇಳುತ್ತಾನೆ. "ಇದೇನು ಆಶ್ಚರ್ಯ! ಇಲ್ಲಿ (monarchy) ರಾಜಾಧಿಕಾರವೆ? ನೀವು ನಾಗರಿಕತೆಯಲ್ಲಿ ೩೦೦ ವರ್ಷಕ್ಕೆ ಹಿಂದೆ ಇದ್ದೀರಿ. ನಮ್ಮಲ್ಲಿ (Democracy) ಪ್ರಜಾಧಿಕಾರವೇ ಪ್ರಬಲ. ನೀವು ಸ್ವರಾಜ್ಯಕ್ಕೆ ಚಳವಳ ಮಾಡುವುದಿಲ್ಲವೆ?"

ದೇವದೂತನು ನಕ್ಕನು. "ನಮಗೆ ಅದಾವುದೂ ಬೇಡ" ಎಂದು ಹೇಳಿದನು.

ಜೋನ್ಸನ:—"ನನಗೆ ಒಂದು Morning News-paper) ವರ್ತಮಾನ ಪತ್ರಿಕೆ ಕೊಡುವುದಿಲ್ಲವೆ? ಪತ್ರಿಕೆಯನ್ನು ಓದದೆ ಮನಸ್ಸು ಸಮಾಧಾನವಿಲ್ಲ.'

ದೇವದೂತ:—"ಇಲ್ಲಿ ವರ್ತಮಾನ ಪತ್ರಿಕೆಗಳಿಲ್ಲ, ಎಲ್ಲಾ ಸಂಗತಿಗಳು ನಮಗೆ ತಾವಾಗಿಯೇ ತಿಳಿಯುವವು."

ಜೋನ್ಸನ:—"ಹಾಗಾದರೆ ಇಲ್ಲಿ ಒಂದು (Press) ಛಾಪಖಾನೆ ತುಂಬಾ ಅಗತ್ಯವಿದೆ. ಅದರಲ್ಲಿ ಒಂದು ವರ್ತಮಾನ ಪತ್ರಿಕೆಯನ್ನು ಹೊರಡಿಸಬಹುದು."

ದೇವದೂತ:—ಜೋನ್ಸನಿಗೆ, "ಅಮೃತವನ್ನು ಕುಡಿಯುವಿಯೋ" ಎಂದು ಕೇಳಿದನು

ಜೋನ್ಸನ:—ಅದನ್ನು ಪಡೆಯದೆ "ಮತ್ತೇನು ಇಲ್ಲಿ ವಿಶೇಷ? ಇಲ್ಲಿ ರಬ್ಬರ್ ವ್ಯಾಪಾರಕ್ಕೆ ಎಡೆ ಇಲ್ಲವೆ?" ಎಂದು ಕೇಳಿದನು.

ದೇವದೂತ:—"ಇಲ್ಲ. ಇಲ್ಲಿ ಯಾವ ಕೈಗಾರಿಕೆಯೂ ಇಲ್ಲ, ಅವುಗಳ ಅಗತ್ಯವೂ ನಮಗಿಲ್ಲ. ನಮಗೇನೂ ಕೆಲಸ ಮಾಡಬೇಕೆಂತಿಲ್ಲ. ನಮಗೆ ಅಮೃತವೇ ಜೀವನ. ಇಕೋ ಇದನ್ನು ಕುಡಿ" ಎಂದು ಹೇಳಿದನು.

ಜೋನ್ಸನನು:—ಅಮೃತವನ್ನು ಪಡೆಯದೆ, ತುಂಬಾ ದೇಜಾರಪಟ್ಟು; "ಇದೇನು ಮತ್ತೂ ಆಶ್ಚರ್ಯ! ನಮ್ಮಲ್ಲಿ ಅತ್ಯಾಶ್ಚರ್ಯಕರವಾದ ವೈಜ್ಞಾನಿಕ ವಿದ್ಯೆಯು ಇರುವಾಗ, ಇಲ್ಲಿ ಒಂದೇ ಒಂದು ಕೈಗಾರಿಗೆ ಇಲ್ಲವೆ? ನಮ್ಮಲ್ಲಿ (Electricity) ವಿದ್ಯುಚ್ಛಕ್ತಿ ಇವುಗಳೇ ಮೊದಲಾದವುಗಳಿಂದ ನಡೆಯುವ (Factories) ಕಾರ್ಖಾನೆಗಳನ್ನು ನೋಡಿದರೆ ನಿಮಗೆ ಆಶ್ಚರ್ಯವಾಗುವದು".

ದೇವದೂತನು "ಸುಮ್ಮನೆ ನಿಂತನು. ಪ್ರತ್ಯುತ್ತರ ಏನೂ ಕೊಡಲಿಲ್ಲ. ಪುನಃ ಅಮೃತವನ್ನು ಕುಡಿಯುವದಿಲ್ಲವೆ?" ಎಂದು ಕೇಳಿದನು.

ಜೋನ್ಸನನು ಅದನ್ನು ಬಿಟ್ಟು ಬಿಟ್ಟು, ಸ್ವರ್ಗದಲ್ಲಿ ತಿರುಗಾಡಲಿಕ್ಕೆ ತೆರಳಿದನು. ಮಧ್ಯದಲ್ಲಿ ಸ್ವರ್ಗಲೋಕದಲ್ಲಿ ದೇವತೆಗಳು ಬಹು ಚಲೋದಾದ ಗಾಯನದಿಂದ ಕೂಡಿದ ನಾಟ್ಯವನ್ನು ಮಾಡುತ್ತಿದ್ದರು. ಜೋನ್ಸನಿಗೆ ರೋಮಾಂಚವಾಯಿತು ಅಲ್ಲಿಯೇ ನಿಂತನು. "ಇದಾದರೋ ತುಂಬಾ ರಸಭರಿತವಾಗಿರುವುದು. ಇದರ (Film) ನಕ್ಷೆಗಳನ್ನು ತೆಗೆದು ಕೊಂಡು ಹೋದರೆ, ಭೂಮಿಯಲ್ಲಿ (operas) ಸಿನೆಮಾ ಥಿಯೇಟರುಗಳಲ್ಲಿ ಲೆಖ್ಖಮಿತಿ ಇಲ್ಲದ ಜನಸಮೂಹವು ನೋಡಲಿಕ್ಕೆ ಬರುವದು," ಎಂದು ಮನಸ್ಸಿನಲ್ಲಿ ಆಲೋಚಿಸಿದನು. ಆದರೂ ಜೋನ್ಸನನಿಗೆ ಮನಸ್ಸಿನೊ ಸಮಾಧಾನವಾಗಲಿಲ್ಲ. "ಸ್ವರ್ಗದಲ್ಲಿ ಯಾವ ಕೈಗಾರಿಕೆಯೂ ಇಲ್ಲ! ಇಲ್ಲಿ ಕೆಲಸ ಮಾಡುವುದಕ್ಕೂ ಇಲ್ಲ! ಸ್ವಾತಂತ್ರ್ಯವೂ ಇಲ್ಲ!" ಎಂದು ಸುಮ್ಮನೆ ನಿಂತುಕೊಂಡು ಆಲೋಚಿಸುತ್ತಿದ್ದನು. ಆಗ—

ದೇವದೂತನು ಇನ್ನೊಂದು ಸಲ "ಅಮೃತವನ್ನು ಕುಡಿಯುವುದಿಲ್ಲವೇ? ಇದರಿಂದ ಮನುಷ್ಯನು ಸ್ಥಿರಂಜೀವಿಯಾಗುವನು. ಯಾವ ಸಂಕಷ್ಟಗಳಲ್ಲಿಯೂ ಒಳಗಾಗಲಾರನು" ಎಂದು ಹೇಳಿದನು. ಆಗ—

ಜೋನ್ಸನನು—ಬಹಳ ತೊಂದರೆಪಟ್ಟು "ನಿನ್ನ ಅಮೃತವೂ ಬೇಡ, ನಿನ್ನ ಸ್ವರ್ಗವೂ ಬೇಡ ಇಲ್ಲಿ ರಾಜಾಧಿಕಾರದ ಸರ್ಗದಲ್ಲಿ ಎಂದಿಗೂ ಜೀವಿಸಲಾರೆನು. ನನಗೆ ನರಕದ ದಾರಿಯನ್ನು ತೋರಿಸು!" ಎಂದು ರೇಗಿದನು.

ಮಾಸಿಕಪತ್ರಿ ಪ್ರಬುದ್ಧ ವಿದ್ಯಾರ್ಥಿಯ ಪುತ್ತೂರು ಬೋರ್ಡು ಸ್ಕೂಲಿನಲ್ಲಿ ವೃತ್ತಾಂತ ಮತ್ತು ೨ನೇ ವರ್ಷದ ವರ್ಧಂತಿ.

ಇಂದು ಎಲ್ಲೆಲ್ಲಿಯೂ ವಿದ್ಯಾಪಕ್ಷವಿಡಿ ಸಂಬಂಧವಾದ ಸರಸ್ವತೀ ಪೂಜೆಯ ಸಮಾರಂಭ. ಅಂತೇ ಇಲ್ಲಿಯ ಬೋರ್ಡು ಹೈಸ್ಕೂಲಿನಲ್ಲಿಯೂ ಇದ್ದಿತು. ಈ ಸಮಾರಂಭವನ್ನು ಕುರಿತು ಹೇಳುವುದಕ್ಕಿಂತ ಮುಂಚೆ ಯಾವ ಕುರಿತು ಮತ್ತು ಅದರ ಪೂರ್ವ ವೃತ್ತಾಂತವನ್ನು ಸಹ ಸ್ವಲ್ಪ ಹೇಳುವೆನು. ಈ ದಿವಸವು ಇಲ್ಲಿನ ಮಾಸಿಕಪತ್ರಿ 'ಪ್ರಬುದ್ಧ ವಿದ್ಯಾರ್ಥಿ'ಯ ಜನ್ಮದಿವಸ. ಈಗ್ಗೆ ೨ ವರ್ಷಗಳಿಗೆ ಮುಂಚೆ ಆಗಿನ ೬ನೇ ಫಾರ್ಮು ಮತ್ತು ೫ನೇ ಫಾರ್ಮಿನಲ್ಲಿ ಕಲಿಯುತ್ತಿದ್ದ ಕನ್ನಡ ಕವಿತೆಗಳಲ್ಲಿ ನಿಪುಣರಾದ ಜಿ. ಎನ್. ಲಕ್ಷ್ಮಣ ಪೈ, ಎನ್. ವೆಂಕಟ್ರಮಣಯ್ಯ, ಕ. ಕ. ವೆ. ಶರ್ಮ ಮೊದಲಾದವರೆಲ್ಲರೂ ಕೂಡಿ ಒಂದು ಮಾಸಿಕ ಪತ್ರಿಯನ್ನು ಸ್ಥಾಪಿದರು. ಆದರೆ ಅದು ಬಹಳ ಬಡಸ್ಥಿತಿಯಲ್ಲಿದ್ದುದರಿಂದ ಕೈಯಿಂದಲೇ ಬರೆದು ಹುಡುಗರಲ್ಲಿ ಓದುವುದಕ್ಕೆ ಕೊಡುವ ವಿಧಾನವನ್ನು ಕಲ್ಪಿಸಿದ್ದರು.

ಪ್ರಬುದ್ಧನು ಶುರುವಿನ ವರ್ಷದಲ್ಲಿ ಅತ್ಯಂತ ಉತ್ಸಾಹದಿಂದಲೂ, ದೃಢ ನಿಶ್ಚಯದಿಂದಲೂ ಏಳಿಗೆಯನ್ನು ಹೊಂದಲು ಪ್ರಾರಂಭಿಸಿದನು. ಎಲ್ಲ ಹುಡುಗರಲ್ಲಿಯೂ ಉತ್ಸಾಹವೂ, ತಮ್ಮ ಪತ್ರಿಕೆಯು ಮೇಲೆಯನ್ನು ಹೊಂದಬೇಕೆಂಬ ಕಾಂಕ್ಷೆಯೂ ಇದ್ದದರಿಂದ ಪತ್ರಿಕೆಗಳು ಸರಿಯಾಗಿ ಶುದ್ಧ ದಶಮಿಗೆ ಹೊರಡಲು ಅನನುಕೂಲವಾಗಲಿಲ್ಲ. ಸಾಧಾರಣ ಫೆಬ್ರವರಿಯಲ್ಲಿ ಪೈಗಳ ಸಂಪಾದಕತ್ವದಿಂದ ಶರ್ಮರ ಸಂಪಾದಕತ್ವಕ್ಕೆ ಬಂದಿತು. ಪೈಗಳನ್ನು ಆ ವರ್ಷ S. S. L. C. ಸರಕಾರಿ ಪರೀಕ್ಷೆಗೆ ಕಳುಹಿಸದಿದ್ದುದೇ ಇದಕ್ಕೆ ಕಾರಣ. ಕ. ಕ. ವೆ. ಶರ್ಮರ ಕಾಲದಲ್ಲಿಯೂ ಕೂಡ ಯಾವ ನಿರಾತಂಕವೂ ಇಲ್ಲದೆ ನಡಿಯತೊಡಗಿತು. ಒಂದೆರಡು ಸಲ ಲೇಖಗಳ ಅಭಾವದಿಂದ ಸಂಯುಕ್ತ ಸಂಚಿಕೆಯಾಗಿ ಮಾಡಬೇಕಾಗಿ ಬಂದಿತು. ಈಗಲೇ ಸ್ವಲ್ಪ ಹುಡುಗರ ಮಂಡಳಿಯಲ್ಲಿ ಉದಾಸೀನವು ಮಾಡತೊಡಗಿತ್ತು. ಆಗಾಗ ಪತ್ರಿಕೆಯಲ್ಲಿ ಹುಡುಗರ ಉದಾಸೀನ ವಿಷಯವಾಗಿ ಲೇಖನಗಳನ್ನು ಕೊಡಬೇಕೆಂಬ ಉತ್ತೇಜಕ ವಾಕ್ಯಗಳೂ ಬರುತ್ತಿದ್ದರೂ ಹುಡುಗರು ಅಷ್ಟು ಉತ್ಸಾಹವನ್ನು ತೋರಿಸಲಿಲ್ಲ. ಮತ್ತು ಸ್ವಲ್ಪ ಸಂಪಾದಕ ಮಂಡಳಿಯಲ್ಲೂ, ಉಪಾಧ್ಯಾಯ ಮಂಡಳಿಯಲ್ಲೂ ಅಷ್ಟು ಉತ್ಸಾಹವಿರಲಿಲ್ಲ.

ಶರ್ಮರ ಅನಂತರ ಮಾಧವಬಟ್ ಜಯವರು ಸಂಪಾದಕರಾದರು. ಪ್ರಬುದ್ಧನ ಮೊದಲಿನ ವರ್ಷವು ಮುಗಿದು ಎರಡನೆ ವರ್ಷವು ಶುರು ಆಗಿತ್ತು. ಈ ವರ್ಷದಲ್ಲಿ ಎಷ್ಟೋ ಸಾರಿ ಸಂಯುಕ್ತ ಸಂಚಿಕೆಗಳಾಗಿ ಮಾಡಬೇಕಾಗಿ ಬಂದಿತ್ತು. ಏಕೆಂದರೆ ಹುಡುಗರಲ್ಲಿ ಉದಾಸೀನತೆಯು, ವಾತ್ಸಲ್ಯವು ಎಲ್ಲ ಸೂರ್ಯನ ಎದುರಿನ ಹಿಮದಂತೆ ಆಗಿತ್ತು. ಈ ವರ್ಷದಲ್ಲಿ ಈ ಶಾಲೆಯ ಕನ್ನಡ ಪಂಡಿತರಾದ ಶಿರೋಮಣಿ ಬಿರುದಾಂಕಿತ ಕೆ. ಶಂಭು ಶರ್ಮರು ಹುಡುಗರು ಬರೆದ ಲೇಖನಗಳನ್ನು ತಿದ್ದುವ ಕೆಲಸವನ್ನು ಕೈಕೊಂಡದ್ದು ಬಹಳ ಶ್ಲಾಘನೀಯವಾಗಿದೆ.

ಈ ಸಾರಿ ಬಹಳ ಕಷ್ಟದಿಂದ ಪತ್ರಿಕೆಯ ೬೮ ಪುಟಗಳನ್ನು ತುಂಬಿಸಿದರು. ಅಂತೂ ಸಮಾರಂಭದ ದಿವಸವೂ ಬಂದಿತು. ಆಮಂತ್ರಣಕಾರ್ಡವೂ ಪಟ್ಟಣದ ಎಲ್ಲಾ ಮಹನೀಯರಿಗೂ ಆಮಂತ್ರಣವೂ ಆಗಿತ್ತು. ಪ್ರಾರಂಭದಲ್ಲಿ ಮಹೋಪಾಧ್ಯಾಯ ಪರಮೇಶ್ವರ ಶಾಸ್ತ್ರಿಗಳಿಂದ ಸರಸ್ವತಿ ಪೂಜೆಯೂ ಮಂಗಳಾರತಿಯೂ ಆದವು. ಅನಂತರ ಪ್ರಸಾದವು ಹಂಚಲ್ಪಟ್ಟಿತು. ಹಾರ್ಮೋನಿಯಮ್ ಮೊದಲಾದ ಸಂಗೀತ ವಾದ್ಯಗಳು ಭೋರ್ಗರೆಯುತ್ತಿದ್ದುವು. ಹೆಚ್ಚಾದ ಮಹನೀಯರೆಲ್ಲರೂ ಬಂದಿದ್ದರು. ಬಂದವರಲ್ಲಿ ತಾಲೂಕು ಬೋರ್ಡು ಪ್ರೆಸಿಡೆಂಟ್ ಮೊಳಹಳ್ಳಿ ಶಿವರಾವ್, ಬೇಂಕಿನ ಕಾರ್ಯದರ್ಶಿ ಎಮ್. ಅನಂತರಾವ್, ವೆಟರ್ನರಿ ಸರ್ಜನ್ ಕೆ. ಸುಕುಮಾರ ರಾವ್, ಅಸಿಸ್ಟೆಂಟ್ ಸರ್ಜನ್ ಕೆಪ್ಟನ್ ಯು. ಅನಂತಯ್ಯ ಮೊದಲಾದವರು, ಉಪಾಧ್ಯಾಯರುಗಳು ಸಹ ನೆರೆದಿದ್ದರು. ಆದರೆ ಪತ್ರಿಕೆಯ ಸಂಪಾದಕ ಮಂಡಳಿಯ ಅಧ್ಯಕ್ಷರಾದ ಮ|| ರಾ|| ರಾಮನ್ ನಂಬಿಯಾರ್ ಬಿ. ಎ. ಎಲ್. ಟಿ. ಯವರು ಕಲ್ಲಿಕೋಟೆಗೆ ಹೋದವರು ಬರಲಿಲ್ಲ.

ಸಂಪಾದಕರ ಭಾಷಣದಿಂದ ಬೇರೆ ಬೋರ್ಡು ಶಾಲೆಗಳ ಸಹಾಯವು ಪ್ರಬುದ್ಧನಿಗೆ ತಗೆದುಕೊಂಡು ಅನಂತರ ಅಚ್ಚುಹಾಕಿಸುವ ಆಲೋಚನೆ ಇದೆಯೆಂದು ತಿಳಿಯಿತು. ಆದರೆ ಅದು ಅಷ್ಟು ಯೋಗ್ಯವಲ್ಲವೆಂದೂ ಇನ್ನು ಮುಂದಾದರೂ ಹುಡುಗರು ಲೇಖನಗಳನ್ನು ಕೊಡುವರೆಂದು ಹೇಳಿ ಬಾಲಕರಿಗೆಲ್ಲಾ ಆಶೀರ್ವಚನವನ್ನು ರಾ|| ಮೊಳಹಳ್ಳಿ ಶಿವರಾಯರು ಹೇಳಿದ ನಂತರ ಸಭೆಯು ಮುಕ್ತಾಯವಾಯಿತು. ಅದುದರಿಂದ ವಾಚಕ ಮಹಾಶಯಾ—ಇನ್ನು ಮುಂದಾದರೂ ಆ ಸೃಷ್ಟಿಕರ್ತನ ದಯೆಯಿಂದ ಈ ಪತ್ರಿಕೆಯು ನಿರಾತಂಕದಿಂದ ನಡೆಯಲೆಂದೂ, ಬಾಲಕರಿಗೆಲ್ಲಾ ಲೇಖನಗಳನ್ನು ಬರೆಯಲು ಉತ್ಸಾಹವೂ ಬುದ್ಧಿಯೂ ಹುಟ್ಟಲೆಂದೂ ಆ ಪರಮಾತ್ಮನನ್ನು ಬೇಡುತ್ತಾ ನಮ್ಮ ಈ ತೊದಲ್ನುಡಿಗಳನ್ನು ಮುಕ್ತಾಯಗೊಳಿಸುವೆವು.

(ಒಬ್ಬ ವಿದ್ಯಾರ್ಥಿ.)

NOTICE.

In the Court of the District Munsif of Kasaragod.

O. P. No 140 of 1925.

Kudlu Venkatesha Shanbhaga .. *Petitioner*

Notice is here by given that the above-named Petitioner has applied for the grant to him of a Certificate under Act VII of 1889 authorising him to recover Rs. 3,039—4—0 from the Oriental Government Security Life Assurance Company due under the Policy of the deceased Kudlu Subraya Shanbhaga and the petition stands posted to 15-10-1925.

Kasaragod, } K. P. Keshava Row,
Dated 22—9—1925. *Vakil for Petitioner.*

ವಿದೇಶ ವರ್ತಮಾನ.

—ಮೊರೋಕ್ಕೊದಲ್ಲಿಯ ಸ್ಥಿತಿಯು ಇನ್ನೂ ಶಾಂತತೆಹೊಂದಲಿಲ್ಲ. ಅಲ್ಲಿಯ ಸುಲ್ತಾನರು ಅಬ್ದುಲ್ ಕರೀಮು ಅಥವಾ ಅವನ ಸಹೋದರನನ್ನು ಜೀವಂತವಾಗಲಿ, ಮೃತಸ್ಥಿತಿಯಲ್ಲಿ ತನ್ನೆದುರು ತಂದರೆ ೫ ಲಕ್ಷ ಫ್ರೆಂಕ್ಸು ಇನಾಮವನ್ನಾಗಿ ಕೊಡುತ್ತೇನೆಂದು ಪ್ರಕಟಿಸಿರುವರು.

—ಇರಾಕದೊಳಗಿನ ಕ್ರಿಶ್ಚನರನ್ನು ತುರ್ಕರು ಹದ್ದುಪಾರು ಮಾಡಿದ ಸಂಗತಿಯು ವಿಚಾರವನ್ನು ಅರಿಯಲು ಲೀಗ್ ಒಫ್ ನೇಶನ್ಸು ಒಂದು ಕಮಿಶನನ್ನು ನೇಮಿಸಿಯದೆ.

—ಒಂದು ಜಲಾಂತರ್ಗತ ನಾವೆಯು ಅಮೇರಿಕದ ಧಡದಲ್ಲಿ ಒಂದು ದೊಡ್ಡ ಹಡಗಕ್ಕೆ ಅಪ್ಪಳಿಸಿ ಜಖಂಹೊಂದಿತು. ಅಲ್ಲದೆ ಅದರಲ್ಲಿದ್ದ ಮೂವತ್ತೇಳು ಜನರು ಮುಳುಗಿ ಜಲಸಮಾಧಿಹೊಂದಿದರು.

—ಗ್ಲೇಸ್‌ಗೋದ ಮೆಜಿಸ್ಟ್ರೇಟರು ಸಕಲಾತವಾಲರ ಮೇಲೆ ಭಾಷಣ ಬಂದಿಯ ಹುಕುಮನ್ನು ಕೊಟ್ಟಿದ್ದರಿಂದ ಲೇಬರ ಮೆಂಬರರು ಸರಕಾರಿ ತರ್ಫೆಯಿಂದ ನಡೆದ ಮುಖ್ಯ ಮಂತ್ರಿಗಳ ಸನ್ಮಾನದ ಸಮಾರಂಭಕ್ಕೆ ಬಹಿಷ್ಕಾರ ಹಾಕಲು ನಿಶ್ಚಯಿಸಿರುವರು.

—ಮುಂಬಯಿಯಲ್ಲಿ ಯಾವ ಪ್ರಕಾರ ಮಜೂರರ ಮುಷ್ಕರವು ನಡೆಯುತ್ತಿದೆಯೋ ಅದೇ ಮೇರೆಗೆ ಚೀನದೇಶದೊಳಗಿನ ಹತ್ತಿ ಕಾರಖಾನೆಯೊಳಗಿನ ಕೂಲಿಗಳು ಸಹ ಮುಷ್ಕರ ಹಿಡಿದು ನಾನಾ ತರದ ಪುಂಡಾಟವನ್ನು ಮಾಡಹತ್ತಿರುವರು. ಇಂಥ ಒಂದು ಪ್ರಸಂಗದಲ್ಲಿ ಪೂಟೆಂಗ್ ಎಂಬಲ್ಲಿ ಪೋಲೀಸರು ಮುಷ್ಕರ ಹಾಕಿದವರ ಮೇಲೆ ಗೋಲಿ ಹಾರಿಸಿದರು.

—ಪೆಕಿಂಗದಲ್ಲಿ ಅಲ್ಲಿಯ ಯೆಲ್ಲೋ ರೀವರ್ ಎಂಬ ನದಿಯು ನೆರೆಯಿಂದ ಅಪರಿಮಿತವಾಗಿ ಏರುತ್ತ ಬಂದು ಸುತ್ತಲೂ ಸಾಧಾರಣ ಒಂದು ವರೆ ಸಾವಿರ ಚೌರಸ ಮೈಲುಗಳ ತನಕ ನಷ್ಟಮಾಡಿರುವದಾಗಿ ತಿಳಿಯುತ್ತದೆ. ೧೮೮೭ನೇ ಇಸವಿಯ ನಂತರ ಇಂಥ ಪ್ರವಾಹವು ಅಲ್ಲಿ ಒದಗಲಿಲ್ಲವೆಂದು ಹಲವರು ಅಭಿಪ್ರಾಯಪಡುತ್ತಾರೆ.

—ಮಿ, ಸಕಲಾತವಾಲರು ಇಂಟರ ಪಾರ್ಲಿಮೆಂಟ ಸಭೆಯಗೋಸ್ಕರ ಅಮೇರಿಕಕ್ಕೆ ಹೋಗಲಿದ್ದರು. ಆದರೆ ಅಲ್ಲಿಯ ಸರಕಾರವು ಇವರು ಉಗ್ರ ಭಾಷಣಿಗರೆಂಬ ನೆವದ ಕೆಳಗೆ ಬರಲಿಕ್ಕೆ ಅಪ್ಪಣೆಕೊಡಲಿಲ್ಲ.

—ಬೊಲಿವ್ಹಿಯಾ ಎಂಬಲ್ಲಿ ರಾಜಕ್ರಾಂತಿಯ ಚಳವಳವು ಪ್ರಾರಂಭವಾಗಿದ್ದರಿಂದ ಅಲ್ಲಿಯ ಸರಕಾರವು ಮಾರ್ಶಲ್ ಲೋ ಎಂಬ ಕಾಯಿದೆಯನ್ನು ಚಲಾವಣೆ ಮಾಡಿರುವರು. ಈಗಿನ ೨೦ನೆಯ ಶತಮಾನದ ಸುಧಾರಣೆಯ ಯುಗದಲ್ಲಿ ಸರಕಾರವು ಮಾರ್ಶಲ ಲೋ ಎಂಬ ಭೀಕರ ರೂಪದ ಕಾಯಿದೆಯನ್ನು ತನ್ನ ಸಂಪೂರ್ಣ ರಾಜ್ಯದಲ್ಲಿ ನಡಿಸುವದೆಂದರೆ ನಿಜವಾಗಿಯೂ ಆಶ್ಚರವೇ ಸರಿ.

—ಇಂಗ್ಲಂಡದ ಯುವರಾಜರಾದ ಪ್ರಿನ್‌ಸಿಫ್‌ವೇಲ್ಸರು ಅರ್ಜಂಟಿನಾದೊಳಗಿನ ಪ್ರಯಾಣವನ್ನು ಮುಗಿಸಿ ಹೊರಟರು. ಆ ಸಂದರ್ಭದಲ್ಲಿ ಅಲ್ಲಿಯ ನಿವಾಸಿಗಳು ಅವರಿಗೆ ಬಹು ಸತ್ಕಾರಮಾಡಿದರು.

—ಪರಶಿಯಾದೊಳಗಿನ ದಂಗೆಯು ಇನ್ನೂ ನಡೆಯುತ್ತದಾದ್ದರಿಂದ ಅಲ್ಲಿಯ ಪಾರ್ಲಿಮೆಂಟಿನ ಅಧಿವೇಶನವು ನಡೆಯಲಿಲ್ಲ.

—ಕಾಶ್ಮೀರದ ಮಹಾರಾಜರು ದಿವಂಗತರಾದ ಬಗ್ಗೆ ಇಂಡಿಯಾ ಆಫೀಸಿನಿಂದ ಸಹಾನುಭೂತಿಯ ಸಂದೇಶವನ್ನು ಕಳಿಸಿರುವರು.

—ಬೆಲ್ಜಿಯಮ್‌ದ ರಾಜಾರಾಣಿಯವರು ಸಧ್ಯದಲ್ಲಿ ಹಿಂದೂಸ್ಥಾನದಲ್ಲಿ ಪ್ರಯಾಣಮಾಡುತ್ತಾರಷ್ಟೆ. ಅವರು ೩ನೇ ತಾರೀಕಿಗೆ ಸಿಮಲಾ ಪಟ್ಟಣವನ್ನು ಸಂದರ್ಶಿಸುವರಿದ್ದಾರೆ.

ಒಳದೇಶ ವರ್ತಮಾನ.

—ಪೂನಾ, ಬೆಂಗಳೂರ, ರೈಲುಗಾಡಿಯ ಮೂರನೆ ಕ್ಲಾಸಿನ ಸ್ತ್ರೀ ಪ್ರಯಾಣಿಕರ ಡಬ್ಬಿಗಳ ಮೇಲೆ "ಲೇಡಿಸ್" ಎಂಬುದಾಗಿ ಬರೆಯುವುದರ ಬದಲು "ವಿಮೆನ್" ಎಂದು ಯಾಕೆ ಬರೆದಿದೆ ಎಂದು ಬೆಳಗಾಂವ ರೈಲ್ವೆ ಕಮಿಟಿಯು ಮ. ಸ. ಮ. ರೈಲಿನ ಮನೆಜರರಿಗೆ ಕೇಳಿದೆ,

—ಕಳೆದ ವಿಜಯದಶಮಿ ದಿನ ಶ್ರೀಮಧ್ವಾಚಾರ್ಯರ ಜಯಂತ್ಯುತ್ಸವವು ರಾಣಿಬೆನ್ನೂರಿನಲ್ಲಿ ಜರಗಿತು.

—ಮುಂಬಯಿಯಲ್ಲಿಯ ಸುಪ್ರಸಿದ್ಧ ಚಿತ್ರಕಾರರೂ ಆರ್ಟಸ್ಕೂಲಿನ ಶಿಕ್ಷಕರೂ ಆದ ಮ|| ರಾ|| ಶಿಂಕಾರಾಮ ಪುರುಷೋತ್ತಮ ಅಗಾಸ್ಕರ ಇವರು ಮರಣ ಪಟ್ಟರು. ಇವರಿಗೆ ಚಿತ್ರಕಲೆಯ ನೈಪುಣ್ಯದ ಬಗ್ಗೆ ಅನೇಕ ಪದಕಗಳೂ, ಇನಾಮುಗಳೂ, ದೊರಕಿದ್ದವು. ಇವರ ಮರಣಕ್ಕಾಗಿ ಅನೇಕರು ವ್ಯಸನಪಡುತ್ತಿದ್ದಾರೆ.

—ಮುಂಬಯಿಗೆ ಸಯ್ಯದ್ ಮಹಮ್ಮದ್ ಎಫಂಡಿ ಎಂಬ ಹೆಸರಿನ ಒಬ್ಬ ತುರ್ಕಿ ಪಟ್ಟಿಯು ಬಂದಿರುವನು. ಇವನು ತನ್ನ ಎದೆಯ ಮೇಲೆ ಎಂಟು ಇಂಚು ದಪ್ಪದ ಕಬ್ಬಿಣ ಕಂಬಿಯನ್ನು ಇಟ್ಟುಕೊಂಡು ಸುತ್ತಿಗೆಯಿಂದ ಅದನ್ನು ತುಂಡುಮಾಡಿಸಿಕೊಳ್ಳುತ್ತಿದ್ದನೆ.

—ಮುಂಬಯಿಗೆ ಸ್ವೀಡನಿಯೊಳಗಿನ ಉಪ್ಸಾಲಾ ಯುನಿವರ್ಸಿಟಿಯ ಮಾನಸ ಶಾಸ್ತ್ರದ ಒಬ್ಬ ಪ್ರೊಫೆಸರರು ಬಂದಿರುವರು. ಇವರು ಇತರರ ಮನಸ್ಸಿನೊಳಗಿನ ಆಲೋಚನೆಗಳನ್ನು ಕಂಡುಹಿಡಿದು ಅವರು ಬಚ್ಚಿಟ್ಟ ವಸ್ತುಗಳನ್ನು ಏನೂ ತಪ್ಪದೆ ಹುಡುಕಿ ಕೊಡುತ್ತಾರೆ.

—ಸಾತಾರಾ ಜಿಲ್ಲೆಯೊಳಗಿನ ಮಾ. ಈ ಕ್ಷೇತ್ರದಲ್ಲಿ ಬ್ರಾಹ್ಮಣ ಸಂರಕ್ಷಕ ಸಭೆಯು ಮೂರನೆ ಅಧಿವೇಶನವು ಜರಗತಕ್ಕದಿದೆ.

—ಮುಂಬಯಿ ಗವರ್ನರರು ಬಂದಾಗ ಅವರಿಗೆ ಮಾನಪತ್ರ ಕೊಡಬಾರದೆಂದು ಅಹಮದಾಬಾದ ಮುನ್ಸಿಪಾಲಿಟಿಯು ಒಂದು ಠರಾವನ್ನು ಮಾಡಿದೆ.

—ಅಸ್ಸಾಮ ಪರ್ವತದಲ್ಲಿ ಗುಲಾಮಗಿರಿ ಅವಸ್ಥೆಯಲ್ಲಿರುವ ಮುಖಂಡರು ಮೂರು ಸಾವಿರ ಜನರನ್ನು ತಮ್ಮ ಗುಲಾಮರನ್ನಾಗಿ ಮಾಡಿ ಇಟ್ಟಿರುವರು. ಸರಕಾರದ ಕಡೆಯಿಂದ ಯೋಗ್ಯವಾದ ಕ್ರಯವನ್ನು ತೆಕ್ಕೊಂಡು ಇವರನ್ನು ಬಿಟ್ಟುಬಿಡಲು ಒಪ್ಪಿದ್ದಾರೆ. ಈ ಮೇರೆಗೆ ಬಿಡುಗಡೆ ಹೊಂದಿದ್ದ ಗುಲಾಮರು ಸರಕಾರದ ಹಣವನ್ನು ಕಂತು ಪ್ರಕಾರ ಸಲಾಯಿಸತಕ್ಕದ್ದು.

—ಒಕ್ಟೋಬರ ಎರಡನೆಯ ವಾರದಲ್ಲಿ ಬೆಂಗಳೂರಿನಲ್ಲಿ ಡೋಕ್ಟರ್ ವರದರಾಜಲು ನಾಯುಡು ಇವರ ಅಧ್ಯಕ್ಷತೆಯಿಂದ ಅಸ್ಪೃಶ್ಯತಾನಿವಾರಕ ಪರಿಷತ್ತಿನ ಒಂದನೆಯ ಅಧಿವೇಶನವು ಜರಗತಕ್ಕದಿದೆ.

—ಅಕ್ಕಲಕೋಟೆ ಸಂಸ್ಥಾನದಲ್ಲಿ ಮೂರು ತಿಂಗಳಿಂದ ಕಳ್ಳರ ಗಲಾಟೆಯು ಪ್ರಾರಂಭವಾಗಿದೆ. ಈ ಗಲಾಟೆಯಲ್ಲಿ ಮುನ್ಸೀಪರಿಗೂ ಪೆಟ್ಟು ಬಿದ್ದಿತು. ಅಂಗಡಿಗಳನ್ನು ಲೂಟಾಯಿಸುತ್ತಿದ್ದಾರೆ ಮನೆಗಳ ಮೇಲೆ ರಾತ್ರಿ ಕಲ್ಲು ಒಗೆಯುತ್ತಿದ್ದಾರೆ ಎಂಬ ವಾರ್ತೆ ಪ್ರಕಟವಾಗಿದೆ.

—ಆಂಧ್ರ ಯುನಿವರ್ಸಿಟಿಯಾದಂತೆ ತಮಿಳ ಯುನಿವರ್ಸಿಟಿಯನ್ನು ಕೂಡಾ ಸ್ಥಾಪಿಸಬೇಕೆಂಬುದಕ್ಕೆ ಪ್ರಯತ್ನಗಳು ನಡೆಯುತ್ತವೆ.

—ಕಾನಪೂರದಲ್ಲಿ ಬರುವ ರಾಷ್ಟ್ರೀಯ ಸಭೆಯ ಸಮಯದಲ್ಲಿ ಕೊಮಿನಿಸ್ಟರ ಒಂದು ಪರಿಷತ್ತನ್ನು ಸೇರಿಸಬೇಕೆಂದು ನಿರ್ಣಯವಾಗಿ ಪಾರ್ಲಿಮೆಂಟಿನ ಮೆಂಬರರಾದ ಸಕಲಾತವಾಲರನ್ನು ಅದರ ಅಧ್ಯಕ್ಷರನ್ನಾಗಿ ಚುನಾಯಿಸಿದೆ.

—ಕಾನ್‌ಪುರದ ಕೊಮಿನಿಸ್ಟರ ಖಟ್ಲೆಯಲ್ಲಿ ಆರೋಪಿತರಾಗಿದ್ದವರೊಬ್ಬರು ಅಸ್ವಸ್ಥ ಬಿದ್ದಿರುವದರಿಂದ ಅವರನ್ನು ಬಿಡುಗಡೆ ಮಾಡಲಾಯಿತು.

—ದಿಲ್ಲಿಯಲ್ಲಿ ಬರುವ ವರ್ಷ ಫೆಬ್ರವರಿಯಲ್ಲಿ ಹಿಂದು ಮಹಾಸಭೆಯ ಅಧಿವೇಶನವು ಜರಗಲಿಕ್ಕಿದೆ.

—ಹಿಂದು ದೇವಾಲಯಗಳನ್ನೂ, ತೀರ್ಥಸ್ಥಾನಗಳನ್ನೂ, ಕ್ಷೇತ್ರಗಳನ್ನೂ, ಮಠಛತ್ರಗಳನ್ನೂ ಇವುಗಳ ಉನ್ನತಿಯನ್ನು ಮಾಡಲು ಹೃಷೀಕೇಶವೆಂಬ ಸ್ವಾಮಿ ಸಚ್ಚಿದಾನಂದರ ಅಧ್ಯಕ್ಷತೆಯಿಂದ ಒಂದು ಸಭೆಯು ಸೇರಿತು. ಈ ಕೆಲಸಕ್ಕಾಗಿ ಒಂದು ಸತ್ಯಾಗ್ರಹ ಕಮಿಟಿಯು ಸ್ಥಾಪಿತವಾಗಿದೆ.

—ಅಲಾಯನ್ಸ ಬೇಂಕಿನಲ್ಲಿ ಠೇವಣಾತಿದಾರರಿಗೆ ರುಪಾಯಿಗೆ ಒಂದು ಆಣೆಯಂತೆ ಕೊಡಲು ಏರ್ಪಾಡಾಗಿದೆ!

—ಬೆಲ್‌ಜಿಯಮಿನ ರಾಜಾರಾಣಿಯವರು ರಾಮಕೃಷ್ಣ ಪರಮಹಂಸರ ಬೇಲೂರಿನಲ್ಲಿರುವ ಮಠಕ್ಕೆ ಭೇಟಿಯನ್ನು ಕೊಟ್ಟರು.

—ಮಧ್ಯಪ್ರಾಂತದ ಗವರ್ನರರಾದ ಸರ್ ಬಟ್ಲೆರರವರು ಅಲ್ಲಿಯ ಕೌನ್ಸಿಲಿನ ಪ್ರೆಸಿಡೆಂಟರನ್ನು ಕರಿಸಿ ಕೌನ್ಸಿಲಿನ ಪುನಃ ಅಧಿವೇಶನವನ್ನು ಸೇರಿಸಬೇಕೋ ಎಂಬುದಾಗಿ ಆಲೋಚಿಸಿದ್ದಾರಂತೆ.

—ಆಂಧ್ರಾ ಯುನಿವರ್ಸಿಟಿ ಬಿಲ್ಲಿನ ವಿಚಾರಣೆಗೋಸ್ಕರ ನೇಮಿಸಿದ ಸಿಲೆಕ್ಟ ಕಮಿಟಿಯ ಮೀಟಿಂಗು ಈ ವಾರದಲ್ಲಿ ಮದ್ರಾಸಿನಲ್ಲಿ ಸೇರುತ್ತದೆ.

—ರಾಜಮಹೇಂದ್ರಿಯ ಒಂದು ಪ್ರಚಂಡ ಸಭೆಯನ್ನು ಸೇರಿಸಿ ಶ್ರೀ. ಎಸ್. ಶ್ರೀನಿವಾಸ ಐಯ್ಯಂಗಾರರು ಸ್ವರಾಜಿಸ್ಟರ ಧೋರಣವನ್ನು ಕುರಿತು ಭಾಷಣವನ್ನು ಮಾಡಿದರು. ಆ ಸಮಯದಲ್ಲಿ ಮಿ. ಟಿ. ಪ್ರಕಾಶಮ್‌ರವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು.

—ರಾಷ್ಟ್ರದಲ್ಲಿ ಐಕ್ಯವನ್ನು ಸಾಧಿಸಬೇಕೆಂದೂ ರಾಜಕೀಯ ಧ್ಯೇಯವನ್ನು ಪ್ರಚಾರದಲ್ಲಿ ತರಬೇಕೆಂದೂ ಹಲವರು ಪ್ರಯತ್ನಿಸುತ್ತಿರುವಾಗ ಕೊಂಗ್ರೆಸ್ಸಿನಲ್ಲಿಯೆ ಹಲವು ರಾಷ್ಟ್ರದ್ರೋಹಿಗಳು ಇದ್ದಾರೆಂದು ಹೇಳಲು ತುಂಬಾ ವಿಷಾದವಾಗುತ್ತದೆ. ತಿರಪೂರದಲ್ಲಿ ಕೊಂಗ್ರೆಸ್ ಕಮಿಟಿಯ ಸಭೆಯನ್ನು ಸೇರಿಸಿ ಅಲ್ಲಿಯ ಕೊಂಗ್ರೆಸ್‌ವಾಲರಲ್ಲಿ ಕೆಲವರು ಪಾಟ್ನಾದಲ್ಲಿ ನಡೆದ ಅ. ಇಂ. ಕೊಂಗ್ರೆಸ್ ಕಮಿಟಿಯ ಠರಾವಿನ ವಿರುದ್ಧವಾಗಿ ಭಾಷಣ ಮಾಡಿ ಆ ಅರ್ಥದ ಠರಾವನ್ನು ಸಹ ಪಾಸುಮಾಡಿರುವರು.

—ಲೋಹಾವಳದೊಳಗಿನ ಪೋಲೀಸ್ ಸಾರ್ಜಂಟನು ರೈಲ್ವೆಯೊಳಗೆ ಕಳವುಮಾಡಿದನು. ಆ ಆರೋಪದ ಮೇಲೆ ಅವನನ್ನು ಕೋರ್ಟಿನಲ್ಲಿ ವಿಚಾರಣೆ ಮಾಡಿ ಶಿಕ್ಷಿಸಲಾಯಿತು.

—ಕಳವು ಮತ್ತು ದರೋಡೆ ಮಾಡಿದ ಆರೋಪದ ಮೇಲೆ ಬನಾರಿಸಿನೊಳಗೆ ಹಲವು ಬಂಗಾಲಿ ಯುವಕರನ್ನು ಕೈದುಮಾಡಿರುವರು

—ಕಲಕತ್ತೆಯೊಳಗೆ ಒಂದು ಕಾರಖಾನೆಗೆ ಬೆಂಕಿ ತಗಲಿ ೨ ಲಕ್ಷ ರೂಪಾಯಿಗಳ ನಷ್ಟವನ್ನು ಮಾಡಿತು.

—ಮದ್ರಾಸ ಕೌನ್ಸಿಲಿನ ಅಧ್ಯಕ್ಷಸ್ಥಾನಕ್ಕೆ ಉಮೇದ್ವಾರರಾಗಿ ಹಲವರು ನಿಂತಿರುವರು. ದಕ್ಷಿಣಕನ್ನಡದಿಂದ ಮಿ|| ಸಾಲ್ಡಾನರವರು ಸಹ ಒಬ್ಬ ಉಮೇದ್ವಾರರಾಗಿ ನಿಂತಿರುವರೆಂದು ನಾವು ಕೇಳುತ್ತೇವೆ.

—ಗವರ್ನರ ಸಾಹೇಬರು ರಾಜಮಹೇಂದ್ರಿಯನ್ನು ಸಂದರ್ಶಿಸಲು ಬಂದಾಗ ಅಲ್ಲಿಯ ಮುನ್ಸಿಪಾಲಿಟಿಯು ಮಾನಪತ್ರವನ್ನು ಕೊಡಬಾರದೆಂದು ನಿಶ್ಚಯಿಸಿಯದೆ.

—ಅಲಹಾಬಾದಿನಲ್ಲಿ ರಾಮಲೀಲೆಯ ಸಮಾರಂಭವು ನಡೆಯುವಾಗ ಮುಸಲ್ಮಾನರು ದಂಗೆಮಾಡಿದ್ದರಿಂದ ನಿಷೇಧಾರ್ಥಕ್ಕಾಗಿ ಅಲ್ಲಿಯ ಜನರು ಹರತಾಳವನ್ನು ಆಚರಿಸಿದರು.

ದಕ್ಷಿಣ ಕನ್ನಡ.

ಬಂಟವಾಳ:—ಇದೇ ವಾರದಲ್ಲಿ ಬಂಟ್ವಾಳಕ್ಕೆ ಜಿಲ್ಲಾ ಕಲೆಕ್ಟರ್ ದೊರೆಗಳೂ ಮದ್ರಾಸಿನ ರೆವಿನ್ಯೂ ಬೋರ್ಡು ಕಮಿಷನ ದೊರೆಗಳೂ ಬಂದು ಬಂಟ್ವಾಳ ಡಿಪುಟಿ ತಹಶಿಲ್ದಾರರ ಆಫೀಸನ್ನು ನೋಡಿಕೊಂಡು ಜೋಡುಮಾರ್ಗಕ್ಕೆ ಬಂಟ್ವಾಳದ ಸರಕಾರಿ ಕಚ್ಚೇರಿಯ ಹೋಯ್ಯಲಿಕ್ಕೆ ಅನುಕೂಲ ಸ್ಥಳ ಉಂಟೋ ಎಂತ ನೋಡಿಕೊಂಡು ಹೋದರು.

ಬುಡೋಳಿ ಅನಂತಯ್ಯ ಚೌಟ ಎಂಬವರಿಗೆ ಯಾರೋ ಒಬ್ಬರು ಹೊಡಿಸಿ ಕಾಲನ್ನು ಮುರಿದು ಬಿಟ್ಟಿದ್ದರು, ಆ ಕಾಲು ಗುಣವಾಗದೆ ತುಂಡು ತೆಗೆದರೆ ಅವರು ಬದುಕುವ ನಿಶ್ಚಯವಿಲ್ಲವೆ, ಬಂಟವಾಳ ಡಿಪುಟಿ ತಹಶಿಲದಾರರಿಂದ ಮರಣ ಹೇಳಿಕೆ ಆಗಿದೆ.

ಕೊಟ್ಟಿರಮ್ಮನ ಗಂಡಿಯು ಹತ್ತಿರ ಈ ಕಾಲ ನೆರೆಯಿಂದ ಜರಿದು ಹೋದ ಮಾರ್ಗದ ಇಕ್ಕೆಡೆಗಳಲ್ಲಿ ಇಷ್ಟರ ತನಕ ನಡೆದು ಹೋಗುತ್ತಿದ್ದರು. ಈಗ ಗದ್ದೆ ಸಾಗುವಳಿದಾರರು ಮುಳ್ಳಿನ ಬೇಲಿ ಹಾಕಿದ್ದರಿಂದ ಅಟೆ ಇಟೆ ಹಾದು ಹೋಗುವವರಿಗೆ ಬಹಳ ಕಷ್ಟವಾಗಿದೆ.

ಮದ್ರಾಸಿನಿಂದ ಇಲ್ಲಿಗೆ ಎಸೆಂಬ್ಲಿ ಮೆಂಬರರಾಗಲಿಕ್ಕೆ ಓಟಿನ ಬಗ್ಗೆ ಶ್ರೀಯುತ ಅನ್ನಮಲಾ ಚೆಟ್ಟಿಯವರು ಬರುತ್ತಾರೆಂತ ವದಂತಿ.

ಇಲ್ಲಿಯ ಲೋಕಲ್ ಫಂಡ ಮಾರ್ಕೇಟಿನ ಕಂಟ್ರಾಕ್ಟರರವರು ಮಾರ್ಕೇಟಿನ ಹೆಬ್ಬಾಗಿಲಲ್ಲಿ ಸುಂಕ ಮಾಡಬೇಕೆಂದು ನಿಯಮವಿದ್ದರೂ ಬಡ್ಡೆಕಟ್ಟೆ ಸಂಕದಿಂದ ಕೊಟ್ರಮನ ಗಂಡಿ ಸಂಕದ ವರೆಗೂ ಅಯ್ಯನಾಯ್ಕರ ಓಣಿ ಸಂಕದ ವರೆಗೂ ಸುಂಕ ವಸೂಲು ಮಾಡುತ್ತಲಿದ್ದಾರೆ. ಅದುದರಿಂದ ಇನ್ನು ಮುಂದೆ ಮಾರ್ಕೇಟಿನ ಸುಂಕವನ್ನು ನ್ಯಾಯಪ್ರಕಾರ ಮಾರ್ಕೇಟಿನ ಹೆಬ್ಬಾಗಿಲಲ್ಲಿಯೇ ವಸೂಲುಮಾಡುವಂತೆ ಮಾನ್ಯ ಮಂಗಳೂರು ತಾಲೂಕು ಬೋರ್ಡು ಪ್ರೆಸಿಡೆಂಟರು ಈ ಕಂಟ್ರಾಕ್ಟುದಾರರಿಗೆ ಅಪ್ಪಣೆ ದಯಪಾಲಿಸಿದರೆ ಬಹಳ ಉಪಕಾರವಾಗುತ್ತಿತು.

ಇಲ್ಲಿಯ ಹೊಸ ಪೇಟೆಯ ಮಾರ್ಗದ ಎರಡು ಬದಿಗಳು ಜರಿದು ಬೀಳದಂತೆ ಎರಡು ಬದಿಗಳಿಗೆ ಕಲ್ಲು ಕಟ್ಟಿಸಿದರೆ ನಾಲೆಗಳಿಂದ ನೀರು ಸರಿಯಾಗಿ ಹೋಗುವದು ಮಾತ್ರವಲ್ಲದೆ ಪ್ರತಿ ವರುಷ ನಾಲೆಗಳಿಂದ ಮಣ್ಣು ತೆಗೆಸುವ ಖರ್ಚು ಸಹ ಉಳಿತಂತಾದೀತು. ಈ ವಿಷಯದಲ್ಲಿ ನಮ್ಮ ಬಂಟವಾಳ ನಿವಾಸಿಕರು ಆಲೋಚನೆ ಮಾಡಿದರೆ ಆಗುತ್ತಿತ್ತು.

ಇಲ್ಲಿಯ ಗ್ರಾಮ ಪಂಚಾಯತು ಕೋರ್ಟಿಗೆ ತಕ್ಕ ಸ್ಥಳ ಇಲ್ಲದೆ ಈಗ ಪ್ರೆಸಿಡೆಂಟರ ಮನೆಯ ಹತ್ತಿರವಿರುವ ಒಂದು ಹರಕು ಕಟ್ಟೋಣದಲ್ಲಿ ನಡಿಸುತಲಿದ್ದಾರೆ. ಅಕ್ಷಿಗಾರರು ಮಳೆ ಬಿಸಿಲಿಗೆ ಹೊರಗೆ ನಿಂತುಕೊಳ್ಳಬೇಕಾಗುತ್ತದೆ. ಅದುದರಿಂದ ಇದಕ್ಕಾಗಿ ಒಂದು ಪ್ರತ್ಯೇಕ ಕಟ್ಟೋಣವನ್ನು ಕಟ್ಟಿಸಿದರೆ ಒಳ್ಳೇದಿತ್ತು.

ಇಲ್ಲಿ ಅನಾದಿಕಾಲದಿಂದ ಬಡ್ಡೆ ಕಟ್ಟೆ ಸಂಕದ ಹತ್ತಿರ ಮೀನು ಮಾರುವ ವಾಡಿಕೆ ಇತ್ತು. ಇಲ್ಲಿ ಮೀನಿನ ಕೊಳೆಯಿಂದ ಯಾವ ತರದ ಗಲೀಜಾದರೂ ನೇತ್ರಾವತಿಯು ಅದನ್ನು ತೊಳೆದು ಸ್ವಚ್ಛಮಾಡುತ್ತಿದ್ದಳು. ಮೀನಿನ ಹೆಡಗೆಗಳನ್ನು ನದಿಯಲ್ಲಿ ತೊಳೆದು ಮಾರಾಟಮಾಡುವವರು ಅವರ ಮನೆಗಳಿಗೆ ಹೋಗುತ್ತಿದ್ದರು. ಅವರು ಕಂಟ್ರಾಕ್ಟುದಾರರಿಗೆ ಹೊರಿ ಒಂದಕ್ಕೆ ಹೇಳಿದಷ್ಟು ಸುಂಕವನ್ನು ಕೊಡುತ್ತಿದ್ದರೆ ಆ ಸಮಯದಲ್ಲಿ ಆರೋಗ್ಯದ ಪ್ರತ್ಯೇಕ ಇಲಾಖೆಯು ಇರಲಿಲ್ಲ. ಇತ್ತಲಾಗೆ ಆರೋಗ್ಯದ ಇಲಾಖೆ ಉಂಟಾದಂದಿನಿಂದ ಮೀನನ್ನು ಮಧ್ಯದ ಪೇಟೆಯಲ್ಲಿಟ್ಟು ಮಾರಲಿಕ್ಕೆ ಆರಂಭವಾಗಿಯದೆ. ಮಧ್ಯಪೇಟೆ ಎಲ್ಲಾ ಮೀನಿನ ನಾತದಿಂದ ತುಂಬಿಯದೆ. ಬೋರ್ಡಿನವರಿಗೆ ಮೀನಿನ ಹೆಡಗೆಗಳ ಮೇಲೆ ಸುಂಕ ವಸೂಲು ಮಾಡಬೇಕೆಂದಿದ್ದರೆ ಎಲ್ಲಿಯೂ ವಸೂಲು ಮಾಡಬಹುದು. ಬಡ್ಡೆಕಟ್ಟೆ ಹೊಳೆ ಕಿನಾರೆಯೂ ತಾಲೂಕು ಬೋರ್ಡಿನ ಸರಹದ್ದಿನಲ್ಲಿಯೇ ಇದೆ. ಆದುದರಿಂದ ಹೆಲ್ತ್ ಆಫಿಸರರು ತಾಲೂಕು ಬೋರ್ಡು ಪ್ರೆಸಿಡೆಂಟರೊಡನೆ ಈ ಸಂಗತಿಯನ್ನು ತಿಳಿಸಿ ಇನ್ನು ಮುಂದೆ ಮಧ್ಯ ಪೇಟೆಯಲ್ಲಿ ಮೀನು ಮಾರುವುದನ್ನು ಮನ್ನಾಪಡಿಸಿ ಬಡ್ಡೆಕಟ್ಟೆ ಸಂಕದ ಹತ್ತಿರವೇ ಮಾರುವಂತೆ ಮಾಡಿದರೆ ಮೊದಲೇ ಅನಾರೋಗ್ಯಕರವಾದ ಬಂಟವಾಳದ ಆರೋಗ್ಯಕ್ಕೆ ಬಂದೊದಗಿದ ಈ ಅಪಾಯವನ್ನು ದೂರಪಡಿಸಿದಂತಾಗುವದು.

ಮಂಜೇಶ್ವರ:—ಇಲ್ಲಿಯ ಬೋರ್ಡು ಹುಡುಗಿಯರ ಶಾಲೆಯಲ್ಲಿ ಬರೇ ಮೂವರು ಹುಡುಗಿಯರು ಮಾತ್ರವೇ ಇದ್ದುದರಿಂದ ಇದೇ ಆಕ್ಟೋಬರ ಒಂದನೇ ತಾರೀಕಿನಿಂದ ಈ ಶಾಲೆಯು ಮುಚ್ಚಲ್ಪಡುವದೆಂದು ಇಲ್ಲಿಯ ಹೆಡಮಿಸ್ಟ್ರೆಸಿಗೆ ಹುಕುಂ ಬಂದಿರುತ್ತದೆ.

ಇಲ್ಲಿಯ ಟೆಂಪಲ್ ಹ್ರಿ ಹಾಯರ್ ಎಲಿಮೆಂಟರಿ ಶಾಲೆಯನ್ನು ಬೇಗನೇ ಸೆಕೆಂಡರಿಯಾಗಿ ಮಾಡಿ ಬರುವ ಜೂನ ತಿಂಗಳಿನಿಂದಲೇ ಫೋರ್ತ ಫೋರ್ಮನ್ನು ತೆರೆಯುವವರಲ್ಲಿದ್ದಾರೆ.

ಉಳ್ಳಾಲ ಉಚ್ಚಿಲ:—ಇಲ್ಲಿಯ ಭಗವತಿ ಎಲಿಮೆಂಟರಿ ಶಾಲೆಯು ಬಹಳ ಒಳ್ಳೆ ರೀತಿಯಲ್ಲಿ ನಡಿಯುತ್ತದೆ. ಕಳೆದ ತಿಂಗಳಲ್ಲಿ ಈ ಶಾಲೆಯನ್ನು ಸಂದರ್ಶಿಸಿದ ಡಿಸ್ಟ್ರಿಕ್ಟ ಎಜ್ಯುಕೇಶನಲ್ ಆಫಿಸರರೂ, ಮಂಗಳೂರು ರೇಂಜ ಡಿಪುಟಿ ಇನ್ಸ್‌ಪೆಕ್ಟರವರೂ ಬಹಳ ಉತ್ಕೃಷ್ಟ ರೀತಿಯಲ್ಲಿ ನಡಿಸುವ ಈ ಶಾಲೆಯಲ್ಲಿ ವಿಲಾಯತಿಯಿಂದ ಬರುವ ನಮೂನೆಯ ಮೀನು ಹಿಡಿಯುವ ಬಲೆಗಳನ್ನು ಮಾಡಲಿಕ್ಕೆ ಕಲಿಸಿದನ್ನು ನೋಡಿ ಬಹಳ ಸಂತೋಷಪಟ್ಟರು. ಇತರ ಕಾಸಗಿ ಶಾಲೆಗಳಲ್ಲಿಯೂ ಬೋರ್ಡು ಶಾಲೆಗಳಲ್ಲಿಯೂ ಶಾಲಾ ಮಕ್ಕಳೂ ಬೇರೆ ಬೇರೆ ದಿನನಿತ್ಯ ಉಪಯೋಗಕ್ಕೆ ಬೀಳುವ ಕೈಗಾರಿಕೆಗಳನ್ನು ಕಲಿಸಿದರೆ ಮಕ್ಕಳಿಗೆ ಮುಂದಿನ ಜೀವನೋಪಾಯಕ್ಕೆ ಒಂದು ದಾರಿಮಾಡಿದಂತಾಗುವುದರಲ್ಲಿ ಸಂದೇಹವಿರಲಿಕ್ಕಿಲ್ಲ.

ಪೆಡಾರ್ಲ್:—ಪೆಡಾರ್ಲ್ ಗ್ರಾಮದಲ್ಲಿ ಜಾನುವಾರುಗಳ ರೋಗಗಳು ವಿಪರೀತವಾಗಿ ಸಂಭವಿಸಿ ಅನೇಕ ಜಾನುವಾರುಗಳು ನಷ್ಟವಾಯಿತು. ಇನ್ನೂ ರೋಗದಿಂದ ಪೀಡಿತವಾಗಿ ಅನೇಕ ದನಕರುಗಳು ಸಾಯುತ್ತವೆ. ಇಂಥಾ ರೋಗದಿಂದ ಜಾನುವಾರುಗಳನ್ನು ಪಾರುಮಾಡಲಿಕ್ಕೆ ಭಗವಂತನನ್ನು ಪ್ರಾರ್ಥಿಸುವೆವು. ಈ ವಿಷಯವಾಗಿ ಮ|| ರಾ|| ರಾ|| ಕುಂಡಿಗೆ ಈಶ್ವರ ಭಟ್ಟರ ಮಗ ಮುಟ್ಟತ್ತೋಡಿ ಗ್ರಾಮದ ಕಲ್ಲಕಟ್ಟೆಯಲ್ಲಿರುವ ಗಣಪತಿ ಭಟ್ಟರು ಬಹಳವಾಗಿ ಪ್ರಯತ್ನಪಟ್ಟು ಅನೇಕ ದನಕರುಗಳನ್ನು ಔಷಧಿ ಕೊಟ್ಟು ಬದುಕಿಸಿರುವರು ಈ ವಿಷಯದಲ್ಲಿ ಅವರಿಗೆ ತುಂಬಾ ಕೃತಜ್ಞತೆಗಳು

ಫರಂಗಿಪೇಟೆ:—ಇಲ್ಲಿಯ ಶ್ರೀ ರಾಮಾ ಹಾಯ್ಯರ್ ಎಲಿಮೆಂಟರಿ ಶಾಲೆಯಲ್ಲಿ ವಸಂತ ಹಬ್ಬವನ್ನು ಬಹು ವಿಜೃಂಭಣೆಯಿಂದ ನಡಿಸಿದರು. ಶುಕ್ರವಾರ ಏವತ ಬೆಳಗ್ಗೆ ಸರಸ್ವತಿಯನ್ನು ಶಾಲಾ ವಿದ್ಯಾರ್ಥಿಗಳೊಡನೆ ಸುಜೀರಿನಿಂದ ಬಹು ಸಂಭ್ರಮದಿಂದ ಶಾಲೆಯಲ್ಲಿ ತಂದು ಪ್ರತಿಷ್ಠಿಸಿದರು. ವಿದ್ಯಾದಶಮಿಯ ದಿವಸ ಮಹಾ ಪೂಜೆಯು ಗ್ರಾಮಯುವಕರಿಂದ ಆಚರಿಸಲ್ಪಟ್ಟಿತು.

ಕಾಸರಗೋಡು:—ತಾರೀಕು ೨೫ನೆಯ ಸಾಯಂಕಾಲ ಇಲ್ಲಿಯ ಮಾನ್ಯ ಹೆಡ್ ಯಕೌಂಟರರೂ ಟ್ರೆಜರರೂ ಆಗಿದ್ದ ಮ|| ರಾ|| ರಾ|| ಬಿ. ಸೋಮಪ್ಪನವರು ಪುತ್ತೂರು ಸ್ಟೇಶನರಿ ಸಬ್ ಮೆಜಿಸ್ಟ್ರೇಟರಾಗಿ ವರ್ಗಾಯಿಸಲ್ಪಟ್ಟ ಸಲುವಾಗಿ, ಇಲ್ಲಿಯ ತಾಲೂಕು ಕಚೇರಿಯಲ್ಲಿ ಸದಂಯವರಿಗೂ, ಇಲ್ಲಿಯ ಮಾನ್ಯ ತಹಶೀಲ್‌ದಾರರಾದ ಮ|| ರಾ|| ಬಿ. ಭವಾನಿ ಶಂಕರರಾಯರಿಗೂ ಇಲ್ಲಿಯ ಮಾನ್ಯ ಮೆಜಿಸ್ಟ್ರೇಟ್ ಮ|| ರಾ|| ಎಮ್. ಸುಬ್ರಾವ್‌ರವರಿಗೂ ಸಾಯಂಕಾಲ ೬ ಘಂಟೆ ಸಮಯಕ್ಕೆ ಇಲ್ಲಿಯ ತಾಲೂಕು ಕಚೇರಿಯ ಕ್ಲಾರ್ಕರವರ ಒಂದು ಟೀಪಾರ್ಟಿ ಸತ್ಕಾರವು ನಡೆಯಿತು. ಟೀಪಾರ್ಟಿಗೆ ಮುಂದಾಗಿ ಮೇಲೆ ನಮೂದಿಸಿದ ಅಧಿಕಾರಸ್ಥರು ಮತ್ತು ತಾಲೂಕು ಕ್ಲಾರ್ಕ ಸಮುದಾಯವರು ಒಟ್ಟು ಸೇರಿ ಒಂದು ಛಾಯಾಚಿತ್ರವು (Photograph) ತೆಗೆಯಲ್ಪಟ್ಟಿತಲ್ಲದೆ ಟೀಪಾರ್ಟಿ ಕಳೆದ ತರುವಾಯ ರಾ|| ಸೋಮಪ್ಪನವರ ಗುಣವಾದ ಪ್ರಶಂಸಾ ಭಾಷಣಗಳು ರಾ|| ತಹಶೀಲ್ದಾರರವರಿಂದಲೂ ಮೆಜಿಸ್ಟ್ರೇಟರವರಿಂದಲೂ ನಡೆದಿದ್ದವು. ರಾ|| ಸೋಮಪ್ಪನವರಿಗೆ ಇನ್ನೂ ಉನ್ನತ ಪದವಿಯು ಸಿಕ್ಕಲೆಂದು ಶ್ರೀ ಭಗವಂತನಲ್ಲಿ ನಮ್ಮ ಪ್ರಾರ್ಥನೆ.

ಕೊ-ಒಪರೇಟಿವ್ ಇನ್ಸ್‌ಪೆಕ್ಟರರಾದ ಶಾಂತಾದ್ರಿ ರಾಮರಾಯರವರಿಗೆ ಕೊಯಿಮುತ್ತೂರು ಡೆಪ್ಯುಟಿ ರಿಜಿಸ್ಟ್ರಾರರ ಆಫೀಸಿಗೆ ವರ್ಗವಾಗಿಯದೆ. ಅವರ ಜಾಗೆಗೆ ಯಾರೆಂಬುದು ಮಾತ್ರ ಗೊತ್ತಾಗಲಿಲ್ಲ.

([illegible]ನೇ ಪೇಜಿಗೆ ಮುಂದುವರಿಸಿಯದೆ.)

ಅನುಕ್ರಮಣಿಕೆ.

ಸ್ಫುಟವಿಚಾರಗಳು— ಪುಟಗಳು.
೧,೨,೩ ಪಾಟಣಾಪಟ್ಟಣದೊಳಗೆ ಸೇರಿದ ಓಲ್ ಇಂಡಿಯಾ ಕೊಂಗ್ರೆಸ ಕಮಿಟಿ ೬
೪ ಪಾರ್ಲಿಮೆಂಟಿನ ಹಿಂದಿ ಮೆಂಬರರಾದ ಮಿ| ಸಕಲಾತವಾಲಾ ,,
೫ ಮಂಗಳೂರು ಮುನ್ಸಿಪಾಲಿಟಿಯ ಇಲೆಕ್ಶನು ಇತ್ಯರ್ಥ ,,
೬ ದಿ ಪೀಪಲ್ ಎಂಬ ಪತ್ರಿಕೆಯಲ್ಲಿ ಲಜಪತರಾಯರು ಬರೆದಿರುವ ಲೇಖ ೭
೭ ಆಂಧ್ರ ಯುನಿವರ್ಸಿಟಿ ಬಿಲ್ಲು ಮತ್ತು ಕರ್ನಾಟಕದವರ ವಿನಂತಿ ,,
ಮಂಗಳೂರು
ವರ್ತಮಾನಸಂಗ್ರಹಗಳು—
ವಿದೇಶ— ಒಳದೇಶ ವರ್ತಮಾನ ೫
ದಕ್ಷಿಣ ಕನ್ನಡ— ಬಂಟವಾಳ, ಮಂಜೇಶ್ವರ, ಉಳ್ಳಾಲ-ಉಚ್ಚಿಲ, ಪಡ್ಡಾಲ ಫರಂಗಿಪೇಟೆ, ಕಾಸರಗೋಡು, ಪುತ್ತೂರು ಬಳ್ಳಂಜ ೮
ವಿವಿಧವಿಷಯಗಳು ,,
ಪತ್ರವ್ಯವಹಾರ ೧, ,,

ಸ್ವದೇಶಾಭಿಮಾನಿ.

ಶಕ ೧೮೪೭ ಆಶ್ವೀಜ ಶು|| ೧೫ಯು ಶುಕ್ರವಾರ.

ಸ್ಫುಟವಿಚಾರಗಳು.

೧. ಪಾಟಣಾ ಪಟ್ಟಣದಲ್ಲಿ ಓಲ್ ಇಂಡಿಯಾ ಕೊಂಗ್ರೆಸ ಕಮಿಟಿಯು ಕಳೆದ ವಾರ ಸೇರಿತು. ಬೆಳಗಾಂವಿನಲ್ಲಿ ರಾಷ್ಟ್ರೀಯ ಸಭೆಯ ಮಹಾಧಿವೇಶನವು ಜರಗಿದಂದಿನಿಂದ ಈ ಎಂಟು ತಿಂಗಳಲ್ಲಿ ದೇಶದಲ್ಲಿ ಯಾವ ಸ್ಥಿತ್ಯಂತರಗಳು ಉಂಟಾಗಿವೆಯೊ ಅವುಗಳನ್ನು ಆಲೋಚಿಸಿ ಮುಂದಿನ ಮಾರ್ಗವನ್ನು ನಿಶ್ಚಯಿಸುವದು ರಾಷ್ಟ್ರೀಯ ಮುಖಂಡರ ಕರ್ತವ್ಯವಾಗಿರುವುದರಿಂದಲೂ, ಮತ್ತು ಈ ಮಾರ್ಗವನ್ನು ಓಲ್ ಇಂಡಿಯಾ ಕೊಂಗ್ರೆಸ ಕಮಿಟಿಯಲ್ಲಿ ನಿರ್ಧರಿಸುವದೆ ವಿಹಿತವಾಗಿರುವದರಿಂದಲೂ ಪಾಟಣಾ ಅಧಿವೇಶನಕ್ಕೆ ವಿಶೇಷ ತರದ ಮಹತ್ವವು ಪ್ರಾಪ್ತವಾಗಿತ್ತು. ಬೆಳಗಾಂವಿನಲ್ಲಿ ಮಹಾತ್ಮಾ ಗಾಂಧಿಜಿಗಳೂ, ಸ್ವರಾಜ್ಯಪಕ್ಷದ ಮುಖಂಡರೂ ಪರಸ್ಪರ ಯಾವ ಒಪ್ಪಂದವನ್ನು ಮಾಡಿಕೊಂಡಿದ್ದರೊ ಅದರ ಪರಿಸ್ಥಿತಿಯು ಹೇಗೆ ನಿಂತಿದೆ ಎಂಬುದನ್ನು ಕೂಡ ನಿರೀಕ್ಷಿಸುವದು ಪಾಟಣಾದಲ್ಲಿ ನೆರೆದ ಪ್ರಮುಖರ ಕರ್ತವ್ಯವಾಗಿತ್ತು. ಸಾಮಾನ್ಯ ರೂಪದಲ್ಲಿ ಹೇಳಿದ ಈ ಮಾತನ್ನೆ ವಿಶೇಷ ರೀತಿಯಿಂದ ಬಿಡಿಸಿ ಹೇಳುವದಾದರೆ ೨-೩ ರೂಪಾಯಿಯ ನೂಲನ್ನು ಸ್ವತಃ ನೂಲುವವನೆ ರಾಷ್ಟ್ರೀಯ ಸಭೆಯ ಮೆಂಬರನಾಗಬೇಕು. ಸ್ವಯಂ ನೂಲುವದು ಸಾಧ್ಯವಿಲ್ಲದವನು ಆ ನೂಲಿಗೆ ತಕ್ಕಷ್ಟು ಹಣವನ್ನು ಕೊಡಬೇಕು. ಎಂದರೆ ನೂಲು ತೆಗೆಯುವದೆ ರಾಷ್ಟ್ರೀಯ ಸಭೆಯ ಸಭಾಸದತ್ವದ ಪಾತ್ರತೆಯಾಗಿತ್ತು. ಅಲ್ಲದೆ, ಎಲ್ಲ ತರದ ರಾಷ್ಟ್ರೀಯ ಕಾರ್ಯಗಳಲ್ಲಿ ಪ್ರವೇಶವಿರಬೇಕಾದರೆ ಅವನು ಖಾದಿಯನ್ನೆ ಧರಿಸುವವನಾಗಿರಬೇಕು ಎಂಬುದಾಗಿಯೂ ಒಂದು ಸೂತ್ರವಿತ್ತು. ಈ ಎರಡು ನಿಯಮಗಳು ಜಾರಿಯಲ್ಲಿರುವದರಿಂದ ರಾಷ್ಟ್ರೀಯ ಸಭೆಯ ಸಭಾಸದತ್ವದ ಸ್ಥಿತಿಯು ಬೆಳಗಾಂವಿನ ಅನಂತರ ಯಾವ ದಾರಿಗೆ ಬಂದು ತಲುಪಿದೆ, ಪ್ರಗತಿಯ ಮಾರ್ಗವನ್ನು ಅದು ಆಕ್ರಮಿಸುತ್ತಿದೆಯೊ, ಅಥವಾ ಹಿಂದಕ್ಕೆ ಹೋಗುತ್ತಿದೆಯೋ ಎಂಬುದನ್ನು ನಿರೀಕ್ಷಿಸಿ ಮುಂದಿನ ದಾರಿಯನ್ನು ಬಿಡಿಸಿಕೊಡುವುದು ಅಗತ್ಯದ ಕಾರ್ಯವಾಗಿತ್ತು. ಇದು ಅಲ್ಲದೆ, ಸ್ವರಾಜ್ಯಪಕ್ಷದವರು ಕೌನ್ಸಿಲಿನಲ್ಲಿ ಹೋರಾಡುತ್ತಿರುವಾಗ ಅವರಿಗೆ ರಾಷ್ಟ್ರೀಯ ಸಭೆಯ ಬೆಂಬಲವು ಅವಶ್ಯವಿರುವಾಗ ರಾಷ್ಟ್ರೀಯ ಸಭೆಯು ತಟಸ್ಥ ಭಾವವನ್ನು ವಹಿಸಿ ಸುಮ್ಮಗೆ ಕೂಡ್ರುವುದು ವಿಹಿತವಾದೀತೊ ಎಂಬುದನ್ನು ಸಹ ಎಲ್ಲರು ಶಾಂತ ಮನಸ್ಸಿನಿಂದ ಆಲೋಚಿಸಿ ನೋಡಬೇಕಾದ ಸಂಗತಿಯಾಗಿತ್ತು. ಈ ಮಧ್ಯದಲ್ಲಿ ಕರ್ತೃತ್ವಶಾಲಿಗಳಾದ ದೇ. ಬಂ. ದಾಸರವರು ಯುದ್ಧಕ್ಷೇತ್ರದಿಂದ ಅಭಿಮನ್ಯುವಿನಂತೆ ಮೃತ್ಯುವಶವಾಗಿರೋಣ ಮತ್ತು ಬರ್ಕನ್‌ಹೆಡ್ ಹಾಗು ರೆಡಿಂಗ ಸಾಹೇಬರಂಥ ಉಚ್ಚಸ್ಥಾನದ ಅಧಿಕಾರಿಗಳು ಹಿಂದಿ ರಾಷ್ಟ್ರದ ಆಕಾಂಕ್ಷೆಯನ್ನು ಧಿಕ್ಕರಿಸಿ ತನ್ನ ಪ್ರತಿಗಾಮಿ ಧೋರಣದ ರಥವನ್ನೆ ನಡಿಸಲು ನಿಶ್ಚಯವನ್ನು ಜಾಹೀರಪಡಿಸಿರೋಣ ಈ ಎರಡು ಸಂಗತಿಗಳು ರಾಷ್ಟ್ರೀಯ ಸಭೆಯ ತಟಸ್ಥ ಭಾವವನ್ನು ಬಿಡಿಸಲು ಇನ್ನಷ್ಟು ಬಲವನ್ನು ಕೊಡುತ್ತಿದ್ದವು. ಈ ಮೂರು ನಾಲ್ಕು ಸಂಗತಿಗಳೊಟ್ಟಿಗೆನೆ ಹಿಂದುಸ್ಥಾನ ಸರಕಾರದ ಅನುದಾರ ಕೃತಿಯು ಇನ್ನಷ್ಟು ಪೋಷಕವಾಗಿದೆ. ಎಸೆಂಬ್ಲಿಯಲ್ಲಿ ಪಂಡಿತಜಿಯವರು ಮುಡಿಮನ್ ಕಮಿಟಿಯ ಸರಕಾರಿ ಠರಾವನ್ನು ವಿರೋಧಿಸಿ ಸ್ವರಾಜ್ಯದ ಠರಾವನ್ನು ತಂದು ಪಾಸು ಮಾಡಿಸಿದ್ದಲ್ಲೂ, ಕೌನ್ಸಿಲ್ ಒಫ್ ಸ್ಟೇಟಿನಲ್ಲಿ ಬೇಕೆಂದು ಆ ಮುಡಿಮನ್ ಕಮಿಟಿಯ ಬಹುಮತದ ಠರಾವನ್ನೆ ಸರಕಾರವು ಪಾಸುಮಾಡಿದ್ದರಿಂದ ರಾಷ್ಟ್ರೀಯ ಸಭೆಯು ನಿಜವಾಗಿ ರಾಷ್ಟ್ರೀಯ ಸಭೆಯಾಗಿದ್ದರೆ ಈ ಎಲ್ಲ ಪ್ರಕಾರವನ್ನು ನೋಡಿಕೊಂಡು ಅದು ಸುಮ್ಮನೆ ಸಹಿಸಿಕೊಂಡಿರಬೇಕೊ ಅಥವಾ ಅದಕ್ಕೆ ಸರಿಯಾದ ಪ್ರತೀಕಾರವನ್ನು ಹೂಡಬೇಕೊ ಈ ಪ್ರಶ್ನೆಯು ಕೂಡ ಮಹತ್ವದಾಗಿತ್ತು.

೨. ಓಲ್ ಇಂಡಿಯಾ ಕೊಂಗ್ರೆಸ್ ಕಮಿಟಿಯ ಮುಂದೆ ಈ ಮೇರೆಗೆ ಮಹತ್ವ ವಿಷಯವು ಚರ್ಚೆಗೆ ಬರತಕ್ಕದಿತ್ತು. ದೇಶದ ರಾಜಕೀಯ ಪರಿಸ್ಥಿತಿಯು ಏನೆ ಆಗಲಿ, ತಾವು ನೂಲಿನ ಹಟಹಿಡಿದು ಇದ್ದು ಬಿಡೋಣ, ಇದರಿಂದಲೆ ದೇಶದ ಉದ್ಧಾರವಾದೀತೆಂದು ವೀರತಂತು ವಾದಿಗಳು (ನೂಲಿನ ಹಟಹಿಡಿಯುವವರು) ದೇಶದಲ್ಲಿ ಕಡಿಮೆ ಇಲ್ಲ. ಬೇರೆ ಯಾವ ಕಾರ್ಯವನ್ನು ಮಾಡದೆ ಇದ್ದರೂ ಇವರು ಹಟಹಿಡಿಯುವದರಲ್ಲಿ ಇಂಥವರು ಎಂದೂ ಸೋತುಹೋಗತಕ್ಕವರಲ್ಲ! ಆದ್ದರಿಂದ ಪಾಟಣದ ಅಧಿವೇಶನದಲ್ಲಿ ಯಾವ ನಿರ್ಣಯವಾಗುತ್ತದೊ ಎಂದು ಸ್ವರಾಜ್ಯ ಭಕ್ತರೆಲ್ಲರ ದೃಷ್ಟಿಯು ಆ ಕಡೆಗೆ ವಿದ್ಧವಾಗಿತ್ತು. ಆದರೆ ಸಮಾಧಾನದ ಸಂಗತಿಯೇನೆಂದರೆ, ಮಹಾತ್ಮಾ ಗಾಂಧಿಯವರು ಕೇವಲ ದೇಶಹಿತದ ಮೇಲೆಯೆ ದೃಷ್ಟಿಯನ್ನಿಟ್ಟು ನೂಲಿನ ಮತದಾನದ ನಿಯಮವನ್ನು ಸಡಿಲಿಸಿದರು. ಈಗಿನ ದೇಶಸ್ಥಿತಿಯ ಪೂರ್ವ ಪೀಠಿಕೆಯನ್ನು ನಾವು ಯಾವುದು ವರ್ಣಿಸಿದ್ದುಂಟೊ ಅದನ್ನು ಗಾಂಧಿಜಿಯವರು ಸಂಪೂರ್ಣವಾಗಿ ಸಮಾಲೋಚಿಸಿ ಎರಡು ಮೂರು ಮಹತ್ವದ ಠರಾವುಗಳನ್ನು ಪಾಸುಮಾಡಿಸಿದರು. ಮೊದಲಿನಂತೆಯೇ ನಾಲ್ಕಾಣೆಯನ್ನು ಅಥವಾ ಅಷ್ಟು ಬೆಲೆಯ ಎಂದರೆ ಬರೆ ೨೦೦೦ ಗಜ ನೂಲನ್ನು ಕೊಡುವವರು ರಾಷ್ಟ್ರೀಯ ಸಭೆಯ ಸಭಾಸದರಾಗಬಹುದು. ಇದರಲ್ಲಿ ೨೦೦೦ ಗಜ ನೂಲಿನ ಉಚ್ಚಾರವಿದೆಯಾದರೂ ೪ ಆಣೆಯನ್ನು ಕೊಟ್ಟರೆ ಸಭಾಸದತ್ವದ ಹಕ್ಕು ಪ್ರಾಪ್ತವಾಗುತ್ತದಾದ್ದರಿಂದ ರಾಷ್ಟ್ರೀಯ ಸಭೆಗೆ ಸಭಾಸದಸ್ವರ ನ್ಯೂನತೆಯು ಇನ್ನು ಅನ್ನೊಂದು ಉಂಟಾಗಲಿಕ್ಕಿಲ್ಲ. ರಾಷ್ಟ್ರೀಯ ಸಭೆಯೆಂದು ಹೆಸರು ಕೊಡೋಣ ಬರೆ ೨೦-೨೫ ಸಾವಿರ ಸಭಾಸದರಿರೋಣ ಇದು ಯಾವ ಚಂದ! ರಾಷ್ಟ್ರೀಯ ಸಭೆಯಲ್ಲಿ ೩೦ ಕೋಟಿ ಜನ ಸಂಖ್ಯೆಯ ಪ್ರತಿನಿಧಿ ಸಂಸ್ಥೆ ಎಂಬ ಹೆಸರನ್ನು ಹೊಂದಬೇಕಾದರೆ ಬರೆ ೨೫ ಅಥವಾ ೩೦ ಸಾವಿರ ಸಭಾಸದರಿದ್ದರೆ ಸಾಕೆ? ಈ ದೋಷವು ಗಾಂಧಿಗಳ ಮನಸ್ಸಿಗೆ ಹೊಳೆಯಿತು. ಆದ್ದರಿಂದ ಅವರು ನಾಲ್ಕಾಣೆಯ ಠರಾವನ್ನು ತಂದರು. ಮತ್ತು ಎಲ್ಲರಿಗೆ ರಾಷ್ಟ್ರೀಯ ಸಭೆಯ ಬಾಗಿಲನ್ನು ತೆರೆದು ಕೊಟ್ಟರು. ಇದು ಸ್ತುತ್ಯವಾದ ಸಂಗತಿಯೆ ಸರಿ. ಆದರೂ ಇನ್ನೂ ಒಂದು ದೋಷವು ಅದರ ಘಟನೆಯಲ್ಲಿ ಉಂಟೆ ಉಂಟು. ಖಾದಿ ಪೋಶಾಕಿನ ಖಡ್ಡಾಯವು ರಾಷ್ಟ್ರೀಯ ಸಭೆಯ ಅಂಗೋಪಾಂಗ ಸಂಸ್ಥೆಗಳಲ್ಲಿ ಮತದಾನಕ್ಕೆ ಇನ್ನೂ ಅಗತ್ಯವೆಂದು ಇಟ್ಟಾದ್ದರಿಂದ ಶಾಂತಪಕ್ಷದವರಿಗೂ, ಪ್ರಗತಿಕರಿಗೂ, ಸ್ವತಂತ್ರರಿಗೂ ತೃಪ್ತಿ ಇಲ್ಲ. ರಾಜಕೀಯ ಸಂಸ್ಥೆಗೆ ಪೋಶಾಕಿನ ನಿರ್ಬಂಧವು ಯಾಕೆ? ಹಿಂದಿ ಸ್ವರಾಜ್ಯ ಪ್ರಾಪ್ತಿಯ ಆದರ 'ಕ್ರೀಡು' ಯಾವಾತನಿಗೆ ಮಾನ್ಯವಿದೆಯೊ ಅವನು ಅದರ ಸಭಾಸದನಾಗಬಹುದು. ಈ ಮೇರೆಗೆ ಸಭಾಸದನಾದವನು ಅದಕ್ಕೆ ಮತಗಳನ್ನು ಕೊಡಬಹುದು. ಇದು ಸರಳವಾದ ಮಾರ್ಗ. ಚಕ್ರಗದಾದಿ ಚಿಹ್ನೆಗಳನ್ನು ಧಾರಣ ಮಾಡಿದರೆ ಮಾತ್ರ ಶುದ್ಧ ವೈಷ್ಣವನಾಗುತ್ತಾನೆಂದು ಧಾರ್ಮಿಕ ರಾಜ್ಯದಲ್ಲಿ ತಿಳಕೊಳ್ಳುವಂತೆ ರಾಜಕೀಯ ರಾಜ್ಯದಲ್ಲಿ ಪೋಶಾಕಿನ ಖಡ್ಡಾಯವು ಬಂತೆಂದಾದರೆ ತಮಗೆ ಅದರಲ್ಲಿ ಪ್ರವೇಶಿಸಲು ಇಷ್ಟವಿಲ್ಲವೆಂದು ಅನೇಕ ರಾಜಕೀಯ ತಂಡಗಳ ಅಂಬೋಣವಿದೆ. ಅವರನ್ನೆಲ್ಲ ಬಿಟ್ಟು ಬಿಟ್ಟರೆ ರಾಷ್ಟ್ರೀಯ ಸಭೆಯು ನಿಜವಾಗಿ ಪಂಗುವಾಗಿ ಹೋಗುತ್ತದೆ. ಈ ದೃಷ್ಟಿಯಿಂದ ವಿಚಾರ ಮಾಡುವಾಗ ಪೋಶಾಕಿನ ಖಡ್ಡಾಯದ ಅಡ್ಡಿಯನ್ನು ದೂರೀಕರಿಸಬೇಕೆಂಬುದಾಗಿಯೇ ಎಲ್ಲರೂ ಅಭಿಪ್ರಾಯಪಟ್ಟಾರು. ಈ ಅಡ್ಡಿಯು ಕೊನ್‌ಪುರದ ಬರುವ ಮಹಾ ಅಧಿವೇಶನದಲ್ಲಾದರೂ ಹೋಗಿಹೋದೀತೆಂದು ಆಶಿಸಿದರೆ ಅದು ನಿರರ್ಥಕವಾಗಲಾರದು.

೩. ಈ ಒಂದು ಭಾಗವನ್ನು ಬಿಟ್ಟರೆ ಪಾಟಣಾದ ಅಧಿವೇಶನವು ಇತರ ಸಂಗತಿಗಳಲ್ಲಿ ಬಹು ಯಶಸ್ವಿಯಾಗಿದೆ ಎನ್ನಬಹುದು. ನಾಲ್ಕಾಣೆಯ ಚಂದಾ ಹಣವನ್ನು ಮುಂಚಿನಂತೆ ಪ್ರಾರಂಭಿಸಿದ್ದಲ್ಲದೆ ಸ್ವರಾಜ್ಯಪಕ್ಷದವರ ರಾಜಕಾರಣಕ್ಕೆ ಬೆಂಬಲವನ್ನು ಕೊಡೋಣಾಗಿದೆ. ಬರೆ ಉಪಚಾರದ ಬೆಂಬಲವಲ್ಲ, ರಾಜಕಾರಣವು ರಾಷ್ಟ್ರೀಯ ಸಭೆಯ ಮುಖ್ಯ ಅಂಗವಾದ್ದರಿಂದ ಅದನ್ನೆ ಪ್ರಧಾನವಾಗಿಟ್ಟುಕೊಂಡು ಕಾರ್ಯಕ್ರಮಮಾಡುತ್ತಿದ್ದ ರಾಜಕೀಯ ಪಕ್ಷದವರಿಗೆ ಅವಕಾಶವನ್ನು ಕೊಟ್ಟು ಅವರ ಮತಾನುರೋಧದಿಂದ ಸ್ವರಾಜ್ಯದ ಚಳವಳವನ್ನು ನಡಿಯಬೇಕು. ದ್ರವ್ಯಾಭಾವದಿಂದ ಯಾವ ಕಾರ್ಯವೂ ನಡೆಯುವುದಿಲ್ಲ. ಆದ್ದರಿಂದ ರಾಜಕಾರಣ ಪ್ರೀತ್ಯರ್ಥವಾಗಿ ಯಾರು ಹಣವನ್ನು ಕೊಡುತ್ತಾರೊ ಅದನ್ನು ಸ್ವತಂತ್ರವಾಗಿ ರಾಜಕಾರ್ಯಕ್ಕೆನೆ ಉಪಯೋಗಿಸಬೇಕು. ಆ ದ್ರವ್ಯವನ್ನು ಇತರ ಕಾರ್ಯಗಳಲ್ಲಿ ಪ್ರಯೋಗಿಸಬಾರದು. ಈ ಪ್ರಕಾರವಾಗಿ ರಾಷ್ಟ್ರೀಯ ಸಭೆಯು ರಾಜಕಾರಣಕ್ಕೆ ಪುನರಪಿ ಚಾಲನವನ್ನು ಕೊಟ್ಟದ್ದು ತುಂಬಾ ಸಮಾಧಾನಾಸ್ಪದವಾದ ಸಂಗತಿಯಾಗಿದೆ. ಸ್ವಾತಂತ್ರ್ಯಕ್ಕಾಗಿ ಒದ್ದಾಡುತ್ತಿದ್ದ ಚೀನಾದವರ ವಿಷಯವಾಗಿ ಸಹಾನುಭೂತಿಯನ್ನು ಪಾಸುಮಾಡಿ ಓ. ಇಂ. ಕೊಂ. ಕಮ್ಮಿಟಿಯು ತನ್ನ ಸದಭಿರುಚಿಯನ್ನು ಪ್ರಕಟಗೊಳಿಸಿದೆ. ಅಂಥ ಚೀನಾದವರ ಸ್ವಾತಂತ್ರ ದೇವಿಯ ಕಾಲಿನ ಸಂಕೋಲೆಯನ್ನು ಇನ್ನೂ ದೃಢತರ ಮಾಡಲು ಬ್ರಿಟಿಷರು ಇಲ್ಲಿಂದ ಹಿಂದಿ ಸೇನೆಯನ್ನು ಕಳುಹಿಸಿದುದಕ್ಕಾಗಿ ಪಾಟಣಾ ಕಮಿಟಿಯು ತನ್ನ ನಿಷೇಧವನ್ನು ಜಾಹೀರುಗೊಳಿಸಿದೆ. ಇದು ಕೂಡ ದೇಶದೊಳಗಿನ ಲೋಕಮತವನ್ನು ಸೂಚಿಸುವ ಠರಾವಾಗಿದೆ.

೪. ಪಾರ್ಲಿಮೆಂಟಿನ ಹಿಂದಿ ಮೆಂಬರರಾದ ಮಿ| ಸಕಲಾತವಾಲಾ ಇವರ ಹೆಸರು ಹಿಂದಿಗಳಿಗೆ ಅಪರಿಚಿತವಲ್ಲ, ಇವರು ಪಾರ್ಲಿಮೆಂಟಿನಲ್ಲಿ ಹಿಂದುಸ್ಥಾನದ ಸಂಕಷ್ಟಗಳನ್ನು ನಿರ್ದಾಕ್ಷಿಣ್ಯವಾದ ರೀತಿಯಲ್ಲಿ ಇಡುತ್ತಾರೆ. ಆದ ಕಾರಣ ಇವರ ಮೇಲೆ ಅಧಿಕಾರಿ ವರ್ಗದ ಅಥವಾ ಅನುದಾರಪಕ್ಷದವರ ಕಣ್ಣಿರುವುದು ಸಹಜಿಕವಾಗಿದೆ. ಇಂಗ್ಲಂಡಿನಿಂದ ಅಮೇರಿಕೆಗೆ ಕೆಲವು ಡೆಪ್ಯುಟೇಶನುಗಳು ಹೋಗತಕ್ಕವಿದ್ದವು. ಮಿ| ಸಕಾಲಾತವಾಲರು ಈ ಡೆಪ್ಯುಟೇಷನಗಳಲ್ಲಿ ಹೋಗುವ ಗೃಹಸ್ಥರಲ್ಲಿ ಒಬ್ಬರಾಗಿದ್ದರು. ಇವರ ಮತಗಳು ಕೊಮ್ಯುನಿಸ್ಟ ಪಕ್ಷದ ಮತಗಳಾಗಿವೆ. ಆದ್ದರಿಂದ ಇಂಥ ಕೊಮ್ಯುನಿಸ್ಟ ಮತದವರು ಅಮೇರಿಕೆಗೆ ಬಂದುದಾದರೆ ತನ್ನ ಸಮಾಜ ವಿಧ್ವಂಸಕಮತಗಳ ಬೋಧನೆಯಿಂದ ಅಮೇರಿಕೆಯಲ್ಲಿಯ ಬಂಡವಾಳಗರಿಗೆ ಎದುರಾಗಿ ದಂಗೆಯನ್ನು ಎಬ್ಬಿಸುವಂತೆ ಪರಿಣಾಮವನ್ನುಂಟುಮಾಡಿಯಾರೆಂಬ ಕಾರಣವನ್ನು ತೋರಿಸಿ ಅಮೇರಿಕೆಯ ಗೃಹಮಂತ್ರಿಗಳಾದ ಮಿ| ಕೆಲಾಗ ಎಂಬವರು ಸಕಲಾತವಾಲರನ್ನು ಅಮೇರಿಕೆಗೆ ಬರಕೂಡದೆಂಬುದಾಗಿ ವಿಧಿಸಿರುವರು. ಇಂಗ್ಲಂಡಿನಲ್ಲಿಯೂ ಸಕಲಾತವಾಲರಿಗೆ ವಿರುದ್ಧವಾಗಿ ಚಳವಳವುಂಟಾಗಿದೆ. ಈ ಕಾರಣಗಳಿಂದ ಕರ್ನಲ ವುಡ್ ಕೊಕ್ ಮತ್ತು ಸರ ರೋಬರ್ಟಬರ್ಡ ಎಂಬ ಡೆಪ್ಯುಟೇಶನಿನಲ್ಲಿ ಹೋಗತಕ್ಕ ಇಬ್ಬರು ಗೃಹಸ್ಥರು ತಮ್ಮ ಜಾಗೆಗೆ ರಾಜಿಯನ್ನು ಕೊಟ್ಟದ್ದಾರೆ. ಸಕಲಾತವಾಲರಿಗೆ ಈ ಸಂದರ್ಭದಲ್ಲಿ ಟಾಟಾ ಕಂಪನಿಯ ವಿಲಾಯತಿಯೊಳಗಿನ ಮೆನೇಜರ ಹುದ್ದೆಗೆ ರಾಜಿಯನ್ನು ಕೊಡುವುದು ಯೋಗ್ಯವಾಗಿ ಕಂಡಿತು. ಬ್ರಿಟಿಷ್ ಸರಕಾರದ ಸಹಾಯವು ಅಂತರಂಗದಿಂದ ಅಮೇರಿಕೆಯ ಈ ಬಹಿಷ್ಕಾರದಲ್ಲಿ ಉಂಟೆಂದು ಹಲವರು ತರ್ಕಿಸುತ್ತಿರುವಾಗ ಕೂಡಲೆ ತಾನಾಗಿ ಸರಕಾರವು ಇದರಲ್ಲಿ ತನ್ನ ಅಂಗವಿಲ್ಲವೆಂದು ಹೇಳಿ, ಜನತೆಯ ಸಂಶಯವನ್ನು ಇನ್ನಷ್ಟು ದೃಢಪಡಿಸಿದೆ! ಇಂಗ್ಲಂಡ ಅಮೇರಿಕೆ ಈ ಎರಡು ರಾಷ್ಟ್ರಗಳು ತಾವು ಸ್ವಾತಂತ್ರ್ಯಪ್ರಿಯ ರಾಷ್ಟ್ರಗಳೆಂದು ತಮ್ಮ ಧ್ವಜವನ್ನು ಎಲ್ಲರಿಗಿಂತಲೂ ಅತಿಮೇಲಕ್ಕೆ ಏರಿಸಿದ್ದಾವೆ. ಆದರೆ ಏರಿಸಿದ ಆ ಧ್ವಜದಲ್ಲಿ ಇಂಥ ಅನೇಕ ಕಲೆಗಳು ಲೋಕಕ್ಕೆ ಅಷ್ಟೆ ಸ್ಫುಟವಾಗಿ ಕಾಣುತ್ತವೆ. ಇದು ಮಾತ್ರ ಶೋಚನೀಯವು. ಇಂಥ ಶೋಚನೀಯ ಕೃತ್ಯಗಳನ್ನು ಮಾಡಿ ಈ ಎರಡು ರಾಷ್ಟ್ರಗಳು ತಮ್ಮ ಕೀರ್ತಿಯನ್ನು ಯಾಕೆ ಕೆಡಿಸಿಕೊಳ್ಳುತ್ತವೆ, ಇದು ಗೊತ್ತಾಗದು. ಬರೆ ಸ್ವಾರ್ಥಪರಾಯಣತೆಯೆ ಇದಕ್ಕೆ ಕಾರಣವಲ್ಲದೆ ಇನ್ನೊಂದು ಯಾವದೂ ಇಲ್ಲ. ಇರಲಿ, ಸಕಲಾತವಾಲರ ಮೇಲಿನ ಬಹಿಷ್ಕಾರದಿಂದ ತಮ್ಮ ತಮ್ಮ ಇಷ್ಟಾರ್ಥ ಸಾಧ್ಯವಾದೀತೆಂದು ಯಾರಾದರೂ ನೆನಸುವದಾದರೆ ಇದು ಈಗಿನ ಪರಿಸ್ಥಿತಿಯಲ್ಲಿ ಎಂದೂ ಸಾಧ್ಯವಲ್ಲವೆಂದೂ ಎಲ್ಲರೂ ಭಾವಿಸಬೇಕಾಗಿ ನಮ್ಮ ಅಭಿಪ್ರಾಯವು.

೫. ನಮ್ಮ ಮಂಗಳೂರು ಮುನ್ಸಿಪಾಲಿಟಿಯ ಇಲೆಕ್ಶನು ಅಂತ್ಯವಾಗಿ ಅದರ ಇತ್ಯರ್ಥವು ಹೊರಬಿದ್ದಿದೆ. ಸ್ವರಾಜ್ಯಪಾರ್ಟಿಯ ಪರವಾಗಿ ನಿಂತ ೭ ಜನ ಉಮೇದ್ವಾರರಾಗಿ ನಿಂತವರಲ್ಲಿ ೪ ಜನರು ಮಾತ್ರ ಚುನಾಯಿಸಲ್ಪಟ್ಟಿದ್ದಾರೆಂಬ ಸಮಾಚಾರವು ಬಹು ವಿಷಾದಾಸ್ಪದವೇ ಸರಿ. ಸ್ವರಾಜ್ಯಪಾರ್ಟಿಯು ನಮ್ಮ ದಕ್ಷಿಣ ಕನ್ನಡದಲ್ಲಿ ಸ್ಥಾಪನೆಯಾಗಿ ಬರೆ ಮೂರು ನಾಲ್ಕು ತಿಂಗಳುಗಳಾದವು, ಆದ್ದರಿಂದ ಅದು ಇನ್ನೂ ಊರ್ಜಿತ ಸ್ಥಿತಿಯಲ್ಲಿ ಬಾರದೆ ಇದೆಂದು ಹೇಳಲು ಅಡ್ಡಿಯಿಲ್ಲ. ಅಂಥ ಸಂದರ್ಭದಲ್ಲಿಯು ಸಹ ಈ ಪಾರ್ಟಿಯವರು ಕೈಲಾದ ಮಟ್ಟಿಗೆ ಪ್ರಯತ್ನಮಾಡಿ ತಮ್ಮ ಪಾರ್ಟಿಯ ಪರವಾಗಿ—ಅಥವಾ ಹೊಸ ಭಾಷೆಯಿಂದ ಹೇಳುವದಾದರೆ ಕೊಂಗ್ರೆಸಿನ

ಪರವಾಗಿ—ಉಮೇದ್ವಾರರಾಗಿ ರಾಷ್ಟ್ರಹಿತದ ಕಾರ್ಯವನ್ನು ಮಾಡುತ್ತೇವೆಂದು ಜಾಹೀರಪಡಿಸಿದರು ಅವರನ್ನು ಚುನಾಯಿಸದೆ ಇದ್ದ ದೋಷವು ಸಹಜವಾಗಿ ಮತದಾರರ ಮೇಲೆ ಬೀಳುತ್ತಿದೆ. ಇಲ್ಲಿಯ ಮತದಾರರು ಇನ್ನೂ ರಾಜಕಾರಣದಲ್ಲಿ ಮುಂದರಿಲಿಲ್ಲವೆಂಬುದು ಮಾತ್ರವಲ್ಲ ಜಾತಿಸ್ಪರ್ಧೆಯು ಕೂಡ ಇವರಲ್ಲಿದೆಂಬುದು ಸಹ ಇಂದಿನ ಇಲೆಕ್ಶನಿನಿಂದ ವ್ಯಕ್ತವಾಗುತ್ತದೆ. ರಾಜಕಾರಣದಲ್ಲಿ ವ್ಯಕ್ತಿವಾತ್ಸಲ್ಯ ಜಾತಿ ದ್ವೇಷ ಮುಂತಾದವುಗಳು ಇದ್ದರೆ ದೇಶಹಿತಕ್ಕೆ ಹಾನಿಕಾರಕವೆ ಆಗುತ್ತದೆ, ಆದರೆ ಇವೆಲ್ಲ ವಿಚಾರಗಳು ನಮ್ಮ ಮಂಗಳೂರು ಮತದಾರರಲ್ಲಿ ಉದ್ಭವಿಸಲಿಲ್ಲವೆಂದು ಹೇಳಬೇಕಾಗಿದೆ. ಹೇಗೂ ಇರಲಿ, ಸ್ವರಾಜಿಸ್ಟರ ಸಂಘವು ಇಲ್ಲಿ ಹೊಸದಾಗಿ ಸ್ಥಾಪಿತವಾದ್ದರಿಂದ ಅವರು ಇನ್ನೂ ಪ್ರಯತ್ನಮಾಡಿ ಮತದಾರರನ್ನು ಮೇಲೆ ತರಬೇಕೆಂಬುದರಲ್ಲಿ ಸಂಶಯವಿಲ್ಲ. ಆದ್ದರಿಂದ "ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ" ಎಂಬ ಕವಿಯ ಉಕ್ತಿಯಂತೆ ಇಲ್ಲಿಯ ಕೊಂಗ್ರೆಸ್ ಸಂಘದವರು ಇನ್ನೂ ಪ್ರಯತ್ನಮಾಡಿ ಮುಂದಾದರು ಯಶಸ್ಸನ್ನು ಪಡೆದಾರೆಂದು ನಾವು ತಿಳಿದಿರುವೆವು.

೬. ಸನ್ಮಾನ್ಯ ಲಾಲಾ ಲಜಪತರಾಯರು 'ದಿ ಪೀಪಲ್' ಎಂಬ ಪತ್ರಿಕೆಯಲ್ಲಿ ಒಂದು ಮನನೀಯವಾದ ಲೇಖವನ್ನು ಬರೆದಿರುವರು. ಹಿಂದೂಸ್ಥಾನದ ಭಾಗ್ಯೋದಯವಾಗಬೇಕಾದರೆ ಹಿಂದು ಧರ್ಮದೊಳಗಿರುವ ಜಾತಿಭೇದ ಭೂತಪ್ರೇತಗಳಲ್ಲಿಯ ಭಾವನೆ ಮುಂತಾದ ಭಾವನೆಗಳನ್ನು ತೆಗೆಯಬೇಕೆಂದು ವಾದಿಸುವವರಿಗೆ ಸಮರ್ಪಕವಾದ ಉತ್ತರವನ್ನು ಕೊಟ್ಟಿರುವರು. ಹಿಂದು ಧರ್ಮವೆಂದರೆ ಸ್ವರಾಜ್ಯಕ್ಕೆ ಆತಂಕವೆಂದು ಹಲವರ ದುರಭಿಪ್ರಾಯವಿದೆ. ಇಷ್ಟೆ ಅಲ್ಲ 'ಜಾತಿಭೇದಾದಿಗಳು ಇಲ್ಲವಾದ ಹೊರತು ಹಿಂದುಸ್ಥಾನಕ್ಕೆ ಸ್ವರಾಜ್ಯ ಸಿಗಲಿಕ್ಕಿಲ್ಲ ಅಥವಾ ಹಿಂದುಸ್ಥಾನವು ಸ್ವರಾಜ್ಯಪಾತ್ರವಾಗಲಿಕ್ಕಿಲ್ಲ'ವೆಂದು ವಾದಿಸುವವರು ಸಹ ಇವರ ಲೇಖವನ್ನು ಓದಿ ಕಣ್‌ತೆರೆದಾರೆಂಬುದರಲ್ಲಿ ಸಂಶಯವಿಲ್ಲ. "ಹಿಂದುಸ್ಥಾನಕ್ಕೆ ಹಿಂದುಧರ್ಮವನ್ನು ನಾಶಮಾಡಿ ಸ್ವರಾಜ್ಯವು ಸಂಪಾದಿಸುವುದು ಎಂದೆಂದಿಗೂ ಸಾಧ್ಯವಿಲ್ಲವೆಂದು ನಾನು ಜಗಪ್ರಸಿದ್ಧಮಾಡಿ ತಿಳಿಸುತ್ತೇನೆ. ಹಿಂದುಧರ್ಮವೇ ಲೋಕಪ್ರಸಿದ್ಧವಾದ ಧರ್ಮವು ಅದರಿಂದಲೆ ಇತರ ಧರ್ಮಗಳೊಡನೆ ಐಕ್ಯವಾಗಿರಲು ಸಾಧ್ಯವಾಗುವದು." ಹೀಗೆಂದು ಲಜಪತರಾಯರು ಹಿಂದು ಮುಸಲ್ಮಾನರ ಐಕ್ಯದ ವಿಷಯವಾಗಿ ಬರೆಯುತ್ತಾರೆ. "ಅಜಸಂಖ್ಯಾಕರನ್ನು ಮರ್ಯಾದಿಸಬೇಕೆಂಬುದು ನಿಜ, ಅವರ ಹೇಳಿಕೆಯನ್ನು ಮಾನಿಸಬೇಕೆಂಬುದು ಸಹ ಸತ್ಯವು. ಆದರೆ ಅದರಂತೆಯೆ ಬಹುಪಕ್ಷೀಯರನ್ನು ಸಹ ಮಾನಿಸಬೇಕಲ್ಲವೆ? ಅವರ ಹೇಳಿಕೆಗೆ ಹೆಚ್ಚು ಲಕ್ಷ್ಯಕೊಡಬೇಕಾದ್ದು ನ್ಯಾಯವಲ್ಲವೆ? ಅವರು ಬಹುಪಕ್ಷೀಯರಾದ್ದರಿಂದಲೆ ಅವರ ಹೆಚ್ಚಿನ ಅಧಿಕಾರಕ್ಕೆ ಪಾತ್ರರಾಗಿರುವರು. ಮುಸಲ್ಮಾನರು ಹಿಂದುಸ್ಥಾನದಲ್ಲಿ ಅಲ್ಪಸಂಖ್ಯಾಕರೆಂಬುದು ನಿಜ. ಅವರ ಮತಕ್ಕೆ ಸಂಬಂಧಪಟ್ಟ ಸಂಗತಿಗಳನ್ನು ಇತರರು ಅಂದರೆ ಹಿಂದುಗಳು ಮರ್ಯಾದಿಸಬೇಕೆಂಬುದು ಸಹ ಮಾನ್ಯವೆ ಸರಿ. ಅದರಂತೆ ಹಿಂದುಗಳ ಹೇಳಿಕೆಯನ್ನು ಕೂಡ ಅವರು ಮಾನಿಸಬೇಕಲ್ಲವೆ? ಹಿಂದುಗಳು ಇಲ್ಲಿ ಹಿಂದುಸ್ಥಾನದಲ್ಲಿ ಬಹುಸಂಖ್ಯಾಕರಿದ್ದರಿಂದ ಅವರು ಹೆಚ್ಚಿನ ಅಧಿಕಾರಕ್ಕೆ ಪಾತ್ರರಲ್ಲವೆ? ಸ್ವಾತಂತ್ರ್ಯದ ಮುಖ್ಯ ತತ್ವವೆಂದರೆ ಬಹುಸಂಖ್ಯಾಕರಿಗೆ ಹೆಚ್ಚಿನ ಮಟ್ಟಿನ ಅಧಿಕಾರವನ್ನು ಕೊಡುವದಾಗಿದೆ. ಈ ತತ್ವವನ್ನು ಮುರಿಯಲು ಯಾರು ಪ್ರಯತ್ನಪಡುತ್ತಾರೊ ಅವರೆ ಸ್ವಂತ ಹಾನಿಮಾಡಿಕೊಂಡಾರು." ಹೀಗೆ ಸನ್ಮಾನ್ಯ ಲಾಲಾಜಿಯವರು ಬರೆದಿರುವರು. ಒಂದು ವೇಳೆ ತುರ್ಕಸ್ಥಾನದಲ್ಲಿ ಹಿಂದುಗಳಿದ್ದು ಅಗ ತಾವು ಅಲ್ಪಸಂಖ್ಯಾಕರೆಂಬ ವಾದದ ಕೆಳಗೆ ನೂರರಲ್ಲಿ ಅರುವತ್ತರಷ್ಟು ತಮಗೆ ಅಧಿಕಾರವನ್ನು ಕೊಡಬೇಕೆಂದು ಹಟಹಿಡಿದರೆ ಅಲ್ಲಿಯ ಮುಸಲ್ಮಾನರು ಹಿಂದುಗಳ ಹೇಳಿಕೆಯನ್ನು ಮಾನ್ಯಮಾಡುವರೆ? ನಿಜವಾಗಿಯೂ ಇಲ್ಲ. ಮತ್ತು ಅಂಥ ಹೇಳಿಕೆಯನ್ನು ಕೇಳುವದು ಕೂಡ ಅನ್ಯಾಯವೆ ಸರಿ. ಆದ್ದರಿಂದ ಹಿಂದುಸ್ಥಾನದ ಪರಿಸ್ಥಿತಿಯಲ್ಲಿ ಕೂಡ ಇದೆ ತತ್ವವು ಅನುಕರಿಸುವುದು ಉಚಿತವು. ಲಾಲಾಜಿಯವರ ಲೇಖವು ಈಗಿನ ಮುಖಂಡರಲ್ಲಿರುವ ಸಂಕುಚಿತ ದೃಷ್ಟಿಯನ್ನು ಬಿಡಿಸೀತೆಂಬುದರಲ್ಲಿ ಸಂಶಯವಿಲ್ಲ.

೭. ಆಂಧ್ರ ಯುನಿವರ್ಸಿಟಿ ಬಿಲ್ಲು ಮತ್ತು ಕರ್ನಾಟಕದವರ ವಿನಂತಿ. ಕರ್ನಾಟಕದ ಮುಖಂಡರಿಂದ ಹೊರಡಿಸಲ್ಪಟ್ಟ ವಿನಂತಿಯು ನಮ್ಮಕಡೆಗೆ ಬಂದಿದೆ. ಇದರಲ್ಲಿ ವಿನಂತಿಕಾರರು ಬಳ್ಳಾರಿ ಡಿಸ್ಟ್ರಿಕ್ಟು ನಿಜವಾಗಿ ಕರ್ನಾಟಕಕ್ಕೆ ಸೇರಿದ್ದೆಂದೂ ಆದ್ದರಿಂದ ಅದನ್ನು ಅಂಧ್ರಾ ಯುನಿವರ್ಸಿಟಿಕಾರರು ಆಂಧ್ರ ಪ್ರಾಂತಕ್ಕೆ ಸೇರಿಸಕೂಡದೆಂದೂ ಸಕಾರಣವಾಗಿ ಸಿದ್ಧಮಾಡಿ ತೋರಿಸಿದ್ದಾರೆ. ಅಲ್ಲದೆ ಕರ್ನಾಟಕವು ಮೊದಲು ಪ್ರಾಂತವಾಗದೆ ಇದ್ದು ಅದಕ್ಕೆ ಪ್ರಾಂತದ ಅಧಿಕಾರವು ೧೯೨೦ನೆ ಇಸವಿಯಲ್ಲಿ ಯಾವ ಪ್ರಕಾರ ಸಿಕ್ಕಿದೆಂಬ ಸಂಗತಿಯನ್ನು ಸಹ ಈ ಹಸ್ತಪತ್ರಿಕೆಯಲ್ಲಿ ನಮೂದಿಸಿದ್ದಾರೆ. ಮೊದಲು ಕರ್ನಾಟಕವು ಪೃಥಕ ಪ್ರಾಂತವಾಗಿ ವಿಭಾಗಿಸಿರಲಿಲ್ಲ. ಆದ್ದರಿಂದ ಕರ್ನಾಟಕದ ಮುಖಂಡರು ಕೊಂಗ್ರೆಸಿನಲ್ಲಿ ತಮಗೆ ಪ್ರಾಂತಿಕ ಅಧಿಕಾರವನ್ನು ಕೊಡಬೇಕೆಂದು ಬೇಡಿಕೊಂಡರು. ಓಲ್ ಇಂಡಿಯಾ ಕೊಂಗ್ರೆಸ್ ಕಮ್ಮಿಟಿಯು ಪಂಚರನ್ನು ಸ್ಥಾಪಿಸಿ ಅದರಲ್ಲಿ ಇಬ್ಬರನ್ನು ಆಂಧ್ರದ ಪರವಾಗಿಯೂ ಇನ್ನು ಇಬ್ಬರನ್ನು ಕರ್ನಾಟಕದ ಪರವಾಗಿಯೂ ಆರಿಸಿದ್ದರು. ಇವರ ಹೇಳಿಕೆಯ ನಿರ್ಣಯವನ್ನು ಕೊಡುವ ಅಧಿಕಾರವು ದೇಶಬಂಧು ಕೇಳಕರರ ಕೈಯಲ್ಲಿ ಕೊಡಲಾಗಿತ್ತು. ಆ ಪಂಚರ ನಿರ್ಣಯದಂತೆ ಬಳ್ಳಾರಿಯು ಕರ್ನಾಟಕಕ್ಕೆ ಸೇರಿಸಲ್ಪಟ್ಟಿತ್ತು. ಅಲ್ಲದೆ ಅಲ್ಲಿಯ ಖಾನಿಸುಮಾರಿಯ ಲೆಕ್ಕವನ್ನು ನೋಡಲಾಗಿ ೯ ಲಕ್ಷ ಜನಸಮುದಾಯದ ಪೈಕಿ ೬ ಲಕ್ಷ ಜನರು ಕನ್ನಡ ಭಾಷೆಯನ್ನಾಡುತ್ತಾರೆ. ಉಳಿದ ೩ ಲಕ್ಷ ಜನರು ಆಂಧ್ರರು. ಬಳ್ಳಾರಿ ಡಿಸ್ಟ್ರಿಕ್ಟ ಗಾಝೆಟಿಯರ್ ಪತ್ರಿಕೆಯ ಹೇಳಿಕೆಯನ್ನು ನೋಡಲಾಗಿ ಅಲ್ಲಿಯ ೬ ತಾಲೂಕುಗಳಲ್ಲಿ—ಬಳ್ಳಾರಿ, ಸಿರಗುಪ್ಪಾ, ಹೊಸಪೇಟೆ, ಕುಡಲಗಿ, ಹರಪನಹಳ್ಳಿ ಮತ್ತು ಹಡಗಲ್ಲಿ ಕನ್ನಡ ಭಾಷೆಯ ಚಲಾವಣೆಯಲ್ಲಿದೆ. ಮೇಲಿನ ಮೂರು ನಾಲ್ಕು ಕಾರಣಗಳ ಮೇಲಿಂದ ಬಳ್ಳಾರಿಯು ಕರ್ನಾಟಕ್ಕೆ ಸೇರಿಸಬೇಕೆಂಬ ಹೇಳಿಕೆಯು ನ್ಯಾಯವಾಗಿದೆ, ಅದೆ ಪ್ರಕಾರ ಅನಂತಪುರದಲ್ಲಿ ಹೆಚ್ಚಾಗಿ ತೆಲಗು ಜನರು ಇರುವದರಿಂದ ಅದರಲ್ಲಿ ಕನ್ನಡಿಗರು ಅಲ್ಪರಿದ್ದಾಗ್ಯೂ ಕರ್ನಾಟಕವು ಅದನ್ನು ಕೊಡಲು ಸಿದ್ಧವಿದೆ. ಈ ಪ್ರಕಾರ ಈ ವಿನಂತಿ ಪತ್ರದಲ್ಲಿ ಕರ್ನಾಟಗರು ತಮ್ಮ ಮತವನ್ನು ಪ್ರಕಟ ಮಾಡಿ ಮದ್ರಾಸ ಕೌನ್ಸಿಲಿನಲ್ಲಿ ಸೇರುತ್ತಿದ್ದ ಸಿಲೆಕ್ಟ ಕಮಿಟಿಯ ಮೆಂಬರರಿಗೆ ಕಳಿಸಿದ್ದಾರೆ. ಸಿಲೆಕ್ಟ ಕಮಿಟಿಯು ವಿನಂತಿಯನ್ನು ಚನ್ನಾಗಿ ಪರ್ಯಾಲೋಚನೆಮಾಡಿ ಕರ್ನಾಟಕದ ಹೇಳಿಕೆಯನ್ನು ವಿಚಾರಮಾಡಿ ನ್ಯಾಯವಾದ ತೀರ್ಮಾನವನ್ನು ಕೊಟ್ಟೀತೆಂದು ನಾವು ತಿಳಿದಿರುವೆವು. ಇದೆ ಅರ್ಥದ ಒಂದು ಹಸ್ತ ಪತ್ರಿಕೆಯನ್ನು ಹುಬ್ಬಳ್ಳಿಯ ಕರ್ನಾಟಕದ ಏಕೀಕರಣೆಯ ಸಂಘದ ಅಧ್ಯಕ್ಷರಾದ ಎಸ್. ಟಿ. ಕಂಬಳಿಯವರು ಸಹ ಪ್ರಕಟಮಾಡಿ ಮದ್ರಾಸ ಕೌನ್ಸಿಲಿನ ಪ್ರತಿ ಒಬ್ಬ ಮೆಂಬರರಿಗೂ ಕಳುಹಿಸಿದ್ದಾರೆ. ಇದರಲ್ಲಿ ಸಹ ಅವರು ಆಂಧ್ರಾ ಯೂನಿವರ್ಸಿಟಿ ಬಿಲ್ಲಿನ ವಿಷಯವಾಗಿ ಕರ್ನಾಟಕದ ಸಹಾನುಭೂತಿ ಮತ್ತು ಬಳ್ಳಾರಿ ಜಿಲ್ಲೆಯನ್ನು ಕುರಿತು ಕರ್ನಾಟಕದ ಹೇಳಿಕೆ ಇವೆರಡನ್ನು ನಮೂದಿಸಿ ಪ್ರತಿ ಒಬ್ಬ ಮೆಂಬರರು ಕರ್ನಾಟಕದ ಪರವಾಗಿ ಹೋರಾಡಬೇಕೆಂದು ಸೂಚಿಸಿದ್ದಾರೆ. ಇವರ ಹೇಳಿಕೆಯು ಸಹ ಮನನೀಯವಾಗಿದೆ.

ಮಂಗಳೂರು.

ಇಲ್ಲಿಯ ಹೈಕೋರ್ಟ್ ವಕೀಲ ಮ| ರಾ| ಎ. ಶ್ರೀನಿವಾಸ ಪೈಗಳವರ ಮಗ ಎ. ವಿಠಲ ಪೈಗಳವರು ಬಿ. ಸಿ. ಯಸ್. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವರಾಗಿ ತಿಳಿಸುವರೆ ತುಂಬಾ ಸಂತೋಷಪಡುತ್ತೇವೆ.

ಜಿಲ್ಲಾ ಕಲೆಕ್ಟರರು ಇದೇ ತಾ. ೨೮ರಿಂದ ಒಕ್ಟೋಬರ ತಾ. ೧ರ ತನಕ ಕುಂದಾಪುರದಲ್ಲಿದ್ದು, ತಾ. ೨ರಿಂದ ೫ರ ತನಕ ಉಡ್ಪಿಯಲ್ಲಿರುವರು. ತಾ. ೬ಕ್ಕೆ ಮಂಗಳೂರಿಗೆ ಬರುವರು.

ಕದ್ರಿಯ ಯುವಕ ಸಂಘದ ವಾರ್ಷಿಕೋತ್ಸವವು ಅಕ್ಟೋಬರ ತಾ. ೪ನೇ ಆದಿತ್ಯವಾರ ಸಂಜೆ ೪-೩೦ಕ್ಕೆ ಅಮ್ಮೆಂಬಳ ಶ್ರೀನಿವಾಸ ಪೈಗಳವರ ಅಧ್ಯಕ್ಷತೆಯಲ್ಲಿ ಜರಗುವುದು.

ಗಣಪತಿ ಹ್ಯಾಸ್ಕೂಲಿನಲ್ಲಿ ದಸರಾ ಸಮಾರಂಭವು ಅನೇಕ ಕಾರ್ಯಕ್ರಮಗಳಿಂದ ಇದೇ ತಿಂಗಳ ತಾ. ೨೪ರಿಂದ ೨೮ರ ವರೆಗೆ ನಡೆಯಿತು. ಶಾಲಾ ವಾರ್ಷಿಕೋತ್ಸವವು ಕೆನರಾ ಹ್ಯಾಸ್ಕೂಲಿನ 'ಹೆಡ್' ಮಾಸ್ತರರಾದ ಶ್ರೀ| ಎ. ಪದ್ಮನಾಭಯ್ಯನವರ ಅಧ್ಯಕ್ಷತೆಯಲ್ಲಿ ಸಾಂಗವಾಗಿ ನೆರವೇರಿತು.

ಇಲ್ಲಿಯ ಇನ್‌ಕಮ್‌ಟೇಕ್ಸ್ ಆಫೀಸರರು ಇದೇ ಬರುವ ತಾ. ೯ನೇ ಶುಕ್ರವಾರ ಇಲ್ಲಿಂದ ಉಡ್ಪಿಗೆ ಸರ್ಕೀಟಿನ ಮೇಲೆ ಹೋಗಲಿಕ್ಕಿರುವರು. ತಾ. ೧೦ರಿಂದ ೧೯ರ ವರೆಗೆ ಉಡ್ಪಿಯಲ್ಲಿ ಉಳಕೊಂಡು ತಾ. ೨೦ಕ್ಕೆ ಮಂಗಳೂರಿಗೆ ಹಿಂತೆರಳುವರು. ಮತ್ತು ತಾ. ೨೬ಕ್ಕೆ ಮಂಗಳೂರಿನಿಂದ ಕಾರ್ಕಳಕ್ಕೆ ಹೋಗಿ ಅಲ್ಲಿ ತಾ. ೨೭ರಿಂದ ೩೦ರ ವರೆಗೆ ಉಳಕೊಂಡು ತಾ. ೩೧ಕ್ಕೆ ಹಿಂತೆರಳುವರು.

ಇಲ್ಲಿಯ ವೈಶ್ಯ ವಿದ್ಯಾರ್ಥಿ ಸಂಘದ ಐದನೇ ವಾರ್ಷಿಕೋತ್ಸವವು, ಡೊಂಗರಕೇರಿ ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿ ಕಳೆದ ತಿಂಗಳ ತಾ. ೨೪ನೇ ಗುರುವಾರ ಅಪರಾಹ್ನ ಗಂಟೆ ೩-೩೦ಕ್ಕೆ ಮಹಾರಾಜೇಶ್ರೀ ತೊಲಿಧಾರ ವಾಮನರಾಯ ಶೇಟ್‌ರವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರಗಿತು. ಆ ದಿವಸದ ಕಾರ್ಯಕ್ರಮವು ದೇವರ ಪ್ರಾರ್ಥನೆಯಿಂದ ಮೊದಲ್ಗೊಂಡು, ಶ್ರೀ ಶಾರದಾ ಪೂಜೆ, ನೆರೆದ ಸಭಿಕರಿಗೆ ಸುಸ್ವಾಗತವನ್ನೀಯುವ ಸುರಸವಾದ ಭಾಷಣವನ್ನು ಮ| ರಾ| ರಾ| ತೊಲಿಧಾರ ಸುಬ್ರಾಯರವ್ವಳ ಶೇಟ್‌ರವರು ಸಂಘದ ಆಡಳಿತೆ ಸಭೆಯ ಪರವಾಗಿ ಮಾಡಿದರು. ಸನ್ಮಾನ್ಯ ಅಧ್ಯಕ್ಷರನ್ನು ಬಹುಮತದಿಂದ ಚುನಾಯಿಸಿ ಪುಷ್ಪಮಾಲೆಯನ್ನು ಹಾಕಿದ ತರುವಾಯ ಕಾರ್ಯನಿರ್ವಾಹಕ ಮಂಡಳಿಯ ಕಾರ್ಯದರ್ಶಿಯರಾದ ಶ್ರೀಯುತ ಲಕ್ಷ್ಮಣ ಗೋವಿಂದಪಾಲರವರು ಕಳೆದ ವರುಷದ ವರದಿಯನ್ನು ಸ್ಫುಟವಾಗಿ ವಾಚಿಸಿದರು. ಸಂಘದ ಮೆಂಬರರಾದ ಮೆಸ್ಸರ್ಸ್ ಹೊನ್ನಾವರ ವಿಶ್ವೇಶ್ವರ ರಾವ್ ನಾಗಪ್ಪ ಶೇಟ್, ಲಕ್ಷ್ಮಣ ಗೋವಿಂದಪಾಲ್‌ರವರು ಮತ್ತು ನೆರೆದ ಸಭಿಕರಿಂದ ರಾ| ಸುಂದರರಾವ್ ವಾಸುದೇವ ಬಿ. ಎ, ಮತ್ತು ಹೊನ್ನಾವರ ಶಂಕರ ವೆಂಕಟೇಶ ಶೇಟ್‌ರವರು ಸಮುದಾಯದ ಏಳಿಗೆಯ ವಿಷಯವಾಗಿಯೂ, ಸಂಘದ ಅಭಿವೃದ್ಧಿಯ ಅವಶ್ಯಕತೆಯ ವಿಷಯವಾಗಿಯೂ ಸುಲಭ ಶೈಲಿಗಳಿಂದ ಮಧುರವಾದ ಭಾಷಣಗಳನ್ನು ಮಾಡಿರುವರು. ಮಾನ್ಯ ಅಧ್ಯಕ್ಷರು ತಮ್ಮ ಸಂತೋಷಜನಕವಾದ ಭಾಷಣವನ್ನು ಮಾಡಿದರು. ಸಂಘದ ಮತ್ತು ಆಡಳಿತೆ ಸಭೆಯ ಪರವಾಗಿ ಶ್ರೀಯುತ ಎಮ್. ರಾಮಕೃಷ್ಣವೆಂಕಟ್ರಮಣ ಶೇಟ್‌ರವರು ಉಪಕಾರಸ್ಮರಣೆಯನ್ನು ಸೂಚಿಸಿದ ತರುವಾಯ ನೆರೆದ ಸಭಿಕರಿಗೆ ಗಂಧ, ಪುಷ್ಪ, ಪನ್ನೀರು ಉಪಹಾರ ಮೊದಲಾದವುಗಳಿಂದ ಸತ್ಕರಿಸಿ, ಸಭಿಕರನ್ನು ಇಂಪಾದ ಮತ್ತು ಹೃದಯಂಗಮವಾದ ಗ್ರಾಮೋಫೋನಿನ ಕರ್ಣಾನಂದಕರವಾದ ಗಾನವನ್ನು ನುಡಿಸಿ ವಂದೇಮಾತರಮ್ ರಾಷ್ಟ್ರೀಯ ಪದ್ಯವನ್ನು ಹಾಡಿ ಅಂದಿನ ಸಭೆಯು ಮುಕ್ತಾಯವಾಯಿತು.

ಪ್ರಕಟಣೆ.

ಹತ್ತು ಜನ ಸದಸ್ಯರ ಬರಹಮೂಲಕ ಅಪೇಕ್ಷೆ ಮೇರೆಗೆ ನಮ್ಮ ಮಂಗಳೂರು ಮುನ್ಸಿಪಾಲಿಟಿಯ ಸೆಂಟ್ರಲ್ ವಾರ್ಡಿನ ಖಾಲಿಬಿದ್ದಿರುವ ಒಂದು ಕೌನ್ಸಿಲು ಸ್ಥಾನಕ್ಕೆ ಕಾಂಗ್ರೆಸ್ ಉಮೇದ್ವಾರನನ್ನು ನಿಶ್ಚಯಿಸುವರೆ ಮಂಗಳೂರು ತಾಲೂಕು ಕೊಂಗ್ರೆಸು ಕಮಿಟಿಯ ಮಹಾಸಭೆಯು ತಾರೀಕು ೮-೧೦-೨೫ನೇ ಗುರುವಾರ ಅಪರಾಹ್ನ ಗಂಟೆ ೫ಕ್ಕೆ ಮಂಗಳೂರಲ್ಲಿ ಕರ್ನಾಟಕ ತಿಲಕ ವಿದ್ಯಾಲಯದಲ್ಲಿ ಜರಗುವುದು. ಸದಸ್ಯರೆಲ್ಲರೂ ಸಭೆಯಲ್ಲಿ ಭಾಗಿಗಳಾಗಬೇಕಾಗಿ ಸವಿನಯ ವಿನಂತಿ,

ಉಮೇದ್ವಾರರಾಗಿ ನಿಲ್ಲಲಿಕ್ಕೆ ಇಚ್ಛಿಸುವವರು ನಮ್ಮ ಕಾಂಗ್ರೆಸ್ ಕಮಿಟಿಯ ಸದಸ್ಯರಾಗಿದ್ದು ನಮ್ಮ ಕಚೇರಿಯಲ್ಲಿ ದೊರಕುವ ಆ ಬಗ್ಗೆ ಮಾಡಿರುವ ಛಾಪಾ ಫೋರ್ಮಿನಲ್ಲಿ ಅದರಲ್ಲಿ ಕಾಣುವ ಶರ್ತಗಳನ್ನು ಒಪ್ಪಿಕೊಂಡು ತಮ್ಮ ದಸ್ಕತನ್ನು ಹಾಕಿ ಸದರಿ ಫೋರ್ಮನ್ನು ಸ್ವತಹಾವಾಗಲಿ ಇತರ ಸದಸ್ಯರ ಮೂಲಕವಾಗಲಿ ಇದೇ ತಿಂಗಳ ತಾ. ೭ ಯಾ ೮ನೇ ಅಪರಾಹ್ನ ಗಂಟೆ ೪ರಿಂದ ೫ರ ವರೆಗೆ ಸದರಿ ಕರ್ನಾಟಕ ತಿಲಕ ವಿದ್ಯಾಲಯದಲ್ಲಿ ತೆರೆದಿರುವ ನಮ್ಮ ಕಚೇರಿಗೆ ಕಳುಹಿಸತಕ್ಕದ್ದು. ಸಭೆ ಆರಂಭ ಆಗುವಾಗ ತಾ. ೮-೧೦-೨೫ನೇ ಅಪರಾಹ್ನ ಗಂಟೆ ೫ರ ವರೆಗೆ ನಮಗೆ ಅನುಕೂಲವಿದ್ದಲ್ಲಿ ಇತರ ಸಮಯದಲ್ಲಿ ಸದರಿ ಫೋರ್ಮನ್ನು ಅಂಗೀಕರಿಸಲಾದೀತು.

ವಿ. ಸೂ. ೧. ಕಾಂಗ್ರೆಸು ಸದಸ್ಯರು ಬರುತ್ತಾ ತಮ್ಮ ೧೯೨೫ನೇ ಇಸವಿಯ ಬಗ್ಗೆ ಚಂದ ಹಣ ಪಾವತಿ ರಸೀದಿಯನ್ನು ತರಬೇಕಾಗಿ ವಿನಂತಿ. ತಪ್ಪಿದ್ದಲ್ಲಿ ಅವರ ಹೆಸರು ನಮ್ಮ ರಿಜಿಸ್ಟ್ರಿಯಲ್ಲಿ ದಾಖಲಿಲ್ಲದ ಸಂಗತಿಯಲ್ಲಿ ಅವರಿಗೆ ಸಭೆಗೆ ಪ್ರವೇಶ ಸಿಕ್ಕಲಿಕ್ಕಿಲ್ಲ. ೨ ಸಭೆಗೆ ಬರುತ್ತ ಸದಸ್ಯರು ಖಾದಿಯನ್ನು ಮಾತ್ರ ಧರಿಸಿದವರು ಆಗತಕ್ಕದ್ದು. ಇಲ್ಲವಾದರೆ ಅವರು ಸಭೆಯಲ್ಲಿ ಭಾಗಿಯಾಗಕೂಡದು. ೩ ಸದರಿ ಮೇಲಿನ ಉಮೇದ್ವಾರಿಕೆಗೆ ಅರ್ಜಿಯನ್ನು ತರುವವರು ಖಾದಿಯನ್ನು ಮಾತ್ರ ಧರಿಸದ್ದಲ್ಲಿ ಅವರ ಅರ್ಜಿಯನ್ನು ಅಂಗೀಕರಿಸಲಾರದು. ೪ ಸದರಿ ಉಮೇದ್ವಾರರು ನಮ್ಮಿಂದ ಚುನಾಯಿಸಲ್ಪಡದೆ ಇದ್ದಲ್ಲಿ ಅವರು ಈ ಸಾರಿ ಮುನ್ಸಿಪಾಲಿಟಿ ಚುನಾವಣೆಗೆ ನಿಲ್ಲಕೂಡದು, ೫ ಕಳೆದ ತಿಂಗಳ ಅಖೈರಿ ವರೆಗೆ ನೂಲಿನ ಕರವನ್ನು ಕೊಟ್ಟು ತಪ್ಪಿದ್ದಲ್ಲಿ ಮುಂದಾಗಿ ಸ್ವತಹ ಮಾಡಿದ ೨೦೦೦ ಗಜ ಕೈನೂಲನ್ನು ಅಖಿಲ ಭಾರತೀಯ ನೂಲುವವರ ಸಂಘಕ್ಕೆ ಕೊಟ್ಟು ಅವರಿಂದ ಸರ್ಟಿಫಿಕೇಟು ಪಡೆದು ಅದನ್ನು ಯಾ ವಾರ್ಷಿಕ ಚಂದಾಹಣ ೦-೪-೦ ಆಣೆಯನ್ನು ಮುಂದಾಗಿ ಕೊಟ್ಟು ನಮ್ಮ ಕ್ರಮವಾದ ರಸೀದಿ ಪಡೆದವರು ಮಾತ್ರ ೧೯೨೫ನೆ ಇಸವಿ ಅಖೈರಿ ವರೆಗೆ ಸದಸ್ಯರಾಗುತ್ತಾರೆ.

ಮ. ತಾ. ಕಾ. ಕ. ಕಚೇರಿ }
ತಾ. ೩-೧೦-೨೫. }

ಎ. ಭೋಜರಾಯ,
ಅಧ್ಯಕ್ಷ.

ಮಂಗಳೂರು

ಮುನ್ಸಿಪಲ್ ಚುನಾವಣೆಯ ಫಲಿತಾಂಶ.

ಗೋಳಿಕಟ್ಟೆ ವಾರ್ಡ್:—ಯಚ್. ಯಮ್. ಪುತ್ತೂರು ಸಾಹೇಬ್ (ಸ್ವರಾಜ್ಯಪಕ್ಷೀಯರು) ೧೯೧ ಓಟುಗಳು, ಯಮ್ ಮುಹಮ್ಮದ್ ೧೫೭, ಅಬ್ದುಲ್ ಖಾದರ್ ಅಸಾದಿ ಸಾಹೇಬ್ (ಸ್ವರಾಜ್ಯಪಕ್ಷೀಯರು) ೧೩೭, ಯಮ್. ಮಾಧವ ರಾವ್ (ಸ್ವರಾಜ್ಯಪಕ್ಷೀಯರು) ೧೨೮, ಪುರುಷೋತ್ತಮ ದಾಸ್ ಶೇಟ್ ೧೧೬, ಇವರಲ್ಲಿ ಮೊದಲನೆಯ ಮೂವರು ಆರಿಸಲ್ಪಟ್ಟಿರುವರು.

ಮಾರ್ಕೇಟ್ ವಾರ್ಡ್:—ಉಳ್ಳಾಲ ಸಂಜೀವ ರಾವ್ (ಸ್ವರಾಜ್ಯಪಕ್ಷೀಯರು) ೧೧೯ ಓಟುಗಳು, ವಕೀಲ್ ವೆಂಕಟ್ರಾಯ ಬಾಳಿಗ ಬಿ. ೮೯, ಮಣೇಲ್ ಅಣ್ಣಪ್ಪನಾಯ್ಕ ೪೭, ಮೊದಲನೆಯವರು ಚುನಾಯಿಸಲ್ಪಟ್ಟಿರುವರು.

ಜಪ್ಪು ವಾರ್ಡು:—ಬಿ. ಯಮ್. ಡಿ. ಸೋಜ ೪೭೯ ಓಟುಗಳು, ಯಸ್. ಬಿ. ಭಿಡೆ (ಸ್ವರಾಜ್ಯಪಕ್ಷೀಯರು) ೩೩೭. ಇವರಲ್ಲಿ ಮೊದಲನೆಯವರು ಆರಿಸಲ್ಪಟ್ಟಿರುವರು.

ಕೋರ್ಟ್ ವಾರ್ಡ್:—ಎ. ಸಿ. ಗೊನ್‌ಸಾಲ್ವಿಸ್ ೨೯೯ ಓಟುಗಳು. ಯು. ಸಿ. ಸುಬ್ರಹ್ಮಣ್ಯ ಭಟ್ (ಸ್ವರಾಜ್ಯಪಕ್ಷೀಯರು) ೧೯೯, ಯಲ್. ಯಫ್. ದೇಸ ೨೭೮. ಮೊದಲನೆಯವರು ಆರಿಸ್ಪಟ್ಟಿರುವರು.

ಕೊಡಿಯಾಲಬೈಲು ವೆಸ್ಟ್‌ವಾರ್ಡ್:-ಕೆ. ಆರ್. ಕಾರಂತ (ಸ್ವರಾಜ್ಯಪಕ್ಷೀಯರು) ೩೯೭ ಓಟುಗಳು, ರಂಗಪ್ಪ ಬಿ. ೨೧೧. ಕಾರಂತರು ಆರಿಸಲ್ಪಟ್ಟಿರುವರು.

ದನ್ನಕರುಗಳ ರಿಟಾಯರ್ಡ್ ಇನ್ಸ್‌ಪೆಕ್ಟರಾಗಿರುವ ಕೊಂಬ್ರಬೈಲು ಪದ್ಮನಾಭಯ್ಯನವರು ಬಂಟ್ವಾಳದಿಂದ ೬ ಮೈಲು ಮತ್ತು ಮಂಗಳೂರಿನಿಂದ ೨೨ ಮೈಲು ದೂರವಿರುವ 'ಮೂಡನಡುಗೋಡು' ಎಂಬ ಗ್ರಾಮದಲ್ಲಿ ತನಗಿರುವ ಸ್ಥಳದಲ್ಲಿ ಬತ್ತಿದ ಗೋಸಂರಕ್ಷಣೆಗಾಗಿ ಒಂದು ಹೊಲಗೇರಿಯನ್ನು (Dry cattle farm) ಮಾಡುವವರಿದ್ದು ಅವರ ಸ್ಕೀಮೊಂದನ್ನು ನಮ್ಮ ಬಳಿಗೆ ಕಳುಹಿಸಿರುವರು. ಈ ಸ್ಕೀಮಿನಂತೆ ಏರ್ಪಾಡುಗಳು ನಡೆಸಲ್ಪಟ್ಟರೆ ಬತ್ತಿದ ಗೋಸಂರಕ್ಷಣೆಗೆ ಇದೊಂದು ಮಾದರಿಯ ಹೊಲವಾಗಬಹುದೆಂಬುದರಲ್ಲಿ ಸಂಶಯವಿಲ್ಲ. ಆದರೆ ಪದ್ಮನಾಭಯ್ಯನವರು ತನ್ನ ಸ್ಕೀಮಿನ ಪ್ರಕಾರ ಹಟ್ಟಿಗಳನ್ನು ಕಟ್ಟುವ ಮೊದಲು, ಎಷ್ಟು ಜನರು ತಮ್ಮ ಬತ್ತಿದ ದನಗಳನ್ನು ಮೂಡನಡುಗೋಡಿಗೆ ಕಳುಹಿಸಿ ಪ್ರಯೋಜನ ಪಡೆಯುವರೆಂಬುದನ್ನು ತಿಳಿಯಲಿಚ್ಛಿಸುತ್ತಾರೆ. ನಮ್ಮ ಜಿಲ್ಲೆಯಲ್ಲಿ ದನಕರುಗಳು ಅತಿ ಹೀನ ಸ್ಥಿತಿಯಲ್ಲಿರುವುದರಿಂದ ಜನರು ಈ ಕೆಲಸಕ್ಕೆ ಪ್ರೋತ್ಸಾಹ ಕೊಡುವುದು ಪ್ರಯೋಜನಕರವೂ ಆಗಿದೆ. ಪದ್ಮನಾಭಯ್ಯನವರು ಬಹಳ ಕಾಲದಿಂದ ನಮ್ಮ ಸಂಘದ ಸಭಾಸದರಾಗಿ ಕೃಷಿ ವಿಷಯಗಳಲ್ಲಿ ಅಭಿರುಚಿಯುಳ್ಳವರಾಗಿರುವರು. ಮತ್ತ ಈ ಸಂಘವು ಕೆಲಕಾಲದಿಂದ ಯೋಗ್ಯ ಸ್ಥಳಗಳಲ್ಲಿ ಹೊಲಗೇರಿಗಳನ್ನು ಸ್ಥಾಪಿಸಲು ಕೆಲವರನ್ನು ಪ್ರೋತ್ಸಾಹಿಸಲಿಚ್ಛಿಸುತ್ತಿದ್ದರು. ಈಗ ಮೂಡು ಶೆಡ್ಡೆಯಲ್ಲಿ ಇಂತಹದೊಂದು ಹೊಲಗೇರಿಯನ್ನು ಸ್ಥಾಪಿಸುವ ಆಲೋಚನೆಯಿದೆ. ಹೆಚ್ಚಿನ ಅನುಭವವನ್ನು ಮಂಗಳೂರಿನ ಜಪ್ಪಿನಲ್ಲಿ ವಾಸಿಸುವ ಪದ್ಮನಾಭಯ್ಯನವರಿಗೆ ಸ್ವತಃ ಬರೆದು ಪಡೆಯಬಹುದು.

೫ನೇ ಪುಟದಿಂದ ಮುಂದುವರಿದುದು.

ಇಲ್ಲಿಯ ಮಾನ್ಯ ಅಸಿಸ್ಟೆಂಟ್ ಸರ್ಜನರಾದ ಮೆಥ್ಯೂಸರವರು ಮದ್ರಾಸಿಗೆ ದಂತ ಚಿಕಿತ್ಸೆಯನ್ನು ಕಲಿಯುವರೆ ಹೋಗುತ್ತಾರೆ. ಅವರ ಬದಲಿಗೆ ನೇಮಕ ಪಟ್ಟ ಸರ್ಜನರು ಇಲ್ಲಿಯ ಆಸ್ಪತ್ರೆಯ ಚಾರ್ಜು ವಹಿಸಿಕೊಂಡಿರುವರು.

ಕೆಲದಿನಗಳಿಂದ ಮಳೆಯು ಸ್ವಲ್ಪ ದೂರವಾಗಿಯದೆ. ಬೆಳೆಯು ಹೆಚ್ಚಿನಕಡೆ ಕಟಾವಾಯಿತು; ಹೊಸ ಭತ್ತ ಈಗಲೇ ಬರುತ್ತಿದೆ; ಅಕ್ಕಿ ವ ಇತರ ದವಸಗಳ ಬೆಲೆಯು ಎಂದಿನಂತೆಯೇ ಇದೆಯಲ್ಲದೆ ಕಡಿಮೆಯಾಗಿಲ್ಲ.

ಕ್ಯಾಶಿಕ ಅಸ್ಪವನ್ನು ಕೊಂದ ಆರೋಪದ ಮೇಲೆ ಸೆಶನ್ಸಿಗೆ ಕಮಿಟ್ ಮಾಡಲ್ಪಟ್ಟವರ ಪೈಕಿ ೩ ಜನರನ್ನು ತಪ್ಪುಗಾರರಲ್ಲವೆಂದು ಬಿಡುಗಡೆಪಡಿಸಿದರೆಂದೂ, ಕುಂಞ್‌ಕಂಜನೆಂಬವನಿಗೊಬ್ಬನಿಗೆ ಮಾತ್ರ ಮೂರು ವರ್ಷದ ಸಜಾ ವಿಧಿಸೋಣಾಗಿಯದೆ ಎಂದೂ ವರ್ತಮಾನವಿದೆ.

ಅದೂರು ನೊಸ್ಸಾಟ ೩ ಫಾಲ್ಸೀಕಶನ್ ನಂಬ್ರದಲ್ಲಿ, ಸಂಘದ ಸೆಕ್ರೆಟರಿಗಳಾದ ರಾಮಣ್ಣರೈಯವರನ್ನು ಸೆಶನ್ಸಿಗೆ ಕಮಿಟ್ ಮಾಡಲ್ಪಟ್ಟಿದೆ.

ಇಲ್ಲಿಯ ಲೋಕಲ್‌ಫಂಡ್ ಲಾಟನುಗಳನ್ನು ಏರಿಸುವ ವಿಷಯ ಈ ವರೆಗೆ ಯಾವ ಏರ್ಪಾಡೂ ನಡೆಯಲಿಲ್ಲವೆಂಬುದು ತೀರಾ ದುಃಖದ ಸಂಗತಿಯಾಗಿರುತ್ತದೆ.

ಪುತ್ತೂರು:—ಇಲ್ಲಿನ ಶ್ರೀ ಶಾರದಾ ವಾಚಕ ಮಂದಿರದ ವಾರ್ಷಿಕ ವರ್ಧಂತ್ಯುತ್ಸವವು ಇದೇ ತಿಂಗಳ ತಾರೀಕು ೪ನೇ ಭಾನುವಾರ ಅಪರಾಹ್ನ ಘಂಟೆ ೩ಕ್ಕೆ ರಾ। ಎಮ್. ರಾಮನ್ ನಂಬಿಯಾರ್, ಬಿ. ಎ., ಎಲ್. ಟಿ. ಇವರ ಅಧ್ಯಕ್ಷತೆಯಲ್ಲಿ ಜರಗುವುದು, ರಾ। ಉಗ್ರಾಣ ಮಂಗೇಶರಾಯರು "ಕರ್ನಾಟಕ ಸಾಹಿತ್ಯ ಸಮ್ಭಾರ" ಎಂಬ ವಿಷಯ ಭಾಷಣ ಮಾಡುವರು, ಸರ್ವರಿಗೂ ಸುಸ್ವಾಗತವಿದೆ.

ಬಳಂಜ:—ಇದೇ ತಾರೀಕು ೨೧-೯-೧೯೨೫ನೇ ಸೋಮವಾರ ಮಧ್ಯಾಹ್ನ ೩ ಘಂಟೆಗೆ "ಬಳಂಜ ಶ್ರೀ ಪಂಚಲಿಂಗೇಶ್ವರ ದೇವಸ್ಥಾನ"ದಲ್ಲಿ ಬಳಂಜ, ನಾಲ್ಕೂರು ಆಸ್ಪಾಸು ಗ್ರಾಮಗಳ ಬ್ರಾಹ್ಮಣರ ಭಜನಾ ಮಂಡಲಿಯು ಸುಮುಹೂರ್ತದಲ್ಲಿ ಸ್ಥಾಪನೆಯಾಯಿತು. ದೇವತಾ ಪ್ರಾರ್ಥನೆಯಾಗಿ ನಿರ್ಣಯಪಟ್ಟಿಯಂತೆ, ಕನ್ನಡ ಭಾಗವತ ಪುರಾಣದ ಸಂಧಿ, ದಾಸರ ಕೀರ್ತನೆಗಳು ಸಹ ಅರ್ಥ ಸಹಿತ ಪಠಿಸಿ, ೧ ಘಂಟೆ ಸಮಯ ಕನ್ನಡ ಮರಾಟಿ, ಹಿಂದುಸ್ಥಾನಿ, ಅಭಂಗ, ಕೀರ್ತನೆಗಳು ಹಾರ್ಮೋನಿಯಂ ಮೃದಂಗಾದಿ ಸಾಹಿತ್ಯಗಳು ಯುಕ್ತವಾಗಿ ಹಾಡಲ್ಪಟ್ಟು, ಪ್ರದಕ್ಷಿಣೆ ಪುಸ್ತಕ ಪೂಜೆ, ಮಹಾರುದ್ರ ಪ್ರದೋಷಪೂಜೆಯೊಡನೆ, ಪ್ರಸಾದ ಸ್ವೀಕಾರ. ತಾಂಬೂಲ ಪಂಚಕಜ್ಜಾಯಾದಿಗಳು ಹಂಚಿ ಮಂಡಲಿಯು ಸಂತೋಷದಿಂದ ಅಗಲಿತು. ಇದಕ್ಕೆ ಸದಸ್ಯರಾಗಿ ಉತ್ಸಾಹವುಳ್ಳ ವೃದ್ಧ, ಯುವಕರೆಲ್ಲರೂ ಸೇರಿದ್ದು ಪ್ರತಿ ಸೋಮವಾರವೂ ಇದೇ ರೀತಿ ಸೇವೆಯ ಖರ್ಚು ಸಹಿತ ಸ್ವಕಾರ ನಡಿಸುವ ಕ್ರಮವಿರುವದಲ್ಲದೆ, ಈ ಪ್ರಥಮ ಸೇವೆಯು ಇದನ್ನು ಏರ್ಪಡಿಸಲು ಮುಂದಾಳಾದ ಬಳಂಜ ಹಿರೇಯ ಶ್ಯಾನುಭಾಗ ಎ. ಪಾರ್ಶ್ವ ಪೃಯ್ಯನವರಿಂದ ಹೊಸಹೊಳಲ್ಪಟ್ಟದ್ದರಿಂದಲೂ ಈ ನವೀನ ಸಂಸ್ಥೆಯು ನ್ಯೂನವಿಲ್ಲದೆ ಚಿರಸ್ಥಾಯಿಯಾಗಬಹುದೆಂದು ನಂಬಬಹುದು. ಇಂತಹ ಪಾರಮಾರ್ಥಿಕ ವಿಚಾರದಿಂದ ಜ್ಞಾನಾಭಿವೃದ್ಧಿಯೂ ಪರೋಪಕಾರ, ಭೂತದಯೆ, ದೈವಭಕ್ತಿ, ಯೋಗಮುಕ್ತ ಮುಂತಾದ ಸದ್ಗುಣಗಳು ನೆಲೆಗೊಳ್ಳುವುದರಿಂದಲೂ, ದೇಶಾರಕ್ಷೆ, ಗ್ರಾಮಾರಕ್ಷಾದಿಗಳು ದೊರೆವಾಗುವುದರಿಂದಲೂ, ಪ್ರತಿ ಮತೀಯರೂ ತಮ್ಮ ಗ್ರಾಮಗಳ ಮತಸ್ಥಾಪನೆಗಳಲ್ಲಿ ಪಾರಕ್ಯಾಂಬಾವರ್ತಿಯಾದರೂ ಈ ರೀತಿ ಕಾರ್ಯನಡಿಯುವುದು ಅತ್ಯಾವಶ್ಯಕವು.

ಇದೇ ತಾರೀಕು ೨೫-೯-೨೫ನೇ ಶುಕ್ರವಾರ ಅಪರಾಹ್ನ ೪ ಘಂಟೆಗೆ ಬಳಂಜ ಬೋರ್ಡು ಎಲಿಮೆಂಟರಿ ಶಾಲೆಯ ಶ್ರೀ ಶಾರದಾ ಪೂಜೋತ್ಸವವು ಸಂಭ್ರಮದಿಂದ ಜರಗಿತು. ಸಕಾಲದಲ್ಲಿ ಸಂಗೀತ ಸಾಹಿತ್ಯ ಯುಕ್ತ ಗಾನವೂ, ಬಾಲಕರ ಪ್ರಾರ್ಥನಾಪದ್ಯಗಳೂ ಹಾಡಿ ಪೂಜೆಯೊಡನೆ ಪ್ರಸಾದ ಸ್ವೀಕಾರವಾಗಿ, ಕೂಡಿದವರ ಅಪೇಕ್ಷೆಯಂತೆ ಶಾಲಾಭಿವೃದ್ಧಿಯ ಕುರಿತು ಅಂಡಿಂಜೆ ತರ್ಪು ಶ್ಯಾನುಭಾಗರು ಚಿಕ್ಕ ಉಪನ್ಯಾಸವನ್ನು ಮಾಡಲು ಶಾಲಾ ಮುಖ್ಯೋಪಾಧ್ಯಾಯರು, ಶರೀರ ನಕ್ಷೆಯ ಪ್ರದರ್ಶನ ಮೂಲಕ ಮನುಷ್ಯ ದೇಹಶಾಸ್ತ್ರಕ್ಕನುಸರಿಸಿ, ಕಳೇಬರದ ಮುಖ್ಯ ಪ್ರಾಣಾಂಗಗಳನ್ನು ವಿಶದವಾಗಿ ವರ್ಣಿಸಿದರು. ಅದನ್ನು ಅಲ್ಲಿ ಸೇರಿದ ಸರ್ವರಿಗೂ ಮನ ಮುಟ್ಟುವಂತೆ ತುಳು ಭಾಷೆಯಲ್ಲಿ ಬಳಂಜ ಹಿರೇ ಶ್ಯಾನುಭಾಗರು ವಿವರಿಸಿ, ಶ್ರೇಷ್ಠಾಂಗವಾದ ಶಿರೋಮೆದುಳನ್ನು ವಿದ್ಯೆಯ ಮತ್ತು ವ್ಯಾಯಾಮ ಮೂಲಕ ವೃದ್ಧಿಪಡಿಸುವ ವಿಧಾನವನ್ನು ವ್ಯಕ್ತಗೊಳಿಸಿ ಭಾಷಣಮಾಡಿದೊಡನೆ ಊರ ಪರಊರ ಗೃಹಸ್ಥರಿಗೂ ಶಾಲಾ ಬಾಲಕರ ಪಾಲಕರಿಗೂ ಎಳನೀರು ತಾಂಬೂಲಾದಿಗಳನ್ನು ಕೊಟ್ಟು, ಮಕ್ಕಳಿಗೆ ಪಂಚಕಜ್ಜಾಯವಾದಿ ಹಂಚಲ್ಪಟ್ಟು ಸಂತೋಷದಿಂದ ಸರ್ವರೂ ಸ್ವಸ್ಥಾನವನ್ನೈದಿದರು.

ವಿವಿಧ ವಿಷಯಗಳು.

— ರೆವರೆಂಡ್ ಡೋಕ್ಟರ್ ವಾನ್‌ಲೇಸರ ಅನುಭವ. —

ಡೋಕ್ಟರ್ ವಾನ್‌ಲೇಸರ ಹೆಸರು ಕೇಳದವರು ಸುಶಿಕ್ಷಿತರಲ್ಲಿ ಬಹು ಕಡಿಮೆ. ಈ ಡೋಕ್ಟರರು ಅಮೇರಿಕನ್ ಮಿಶನರಿಗಳಾಗಿದ್ದು ಮಿರಜ ಸಂಸ್ಥಾನದಲ್ಲಿ ಒಂದು ದೊಡ್ಡದಾದ ಆಸ್ಪತ್ರೆಯನ್ನು ಸ್ಥಾಪಿಸಿರುವರು. ಈ ಆಸ್ಪತ್ರೆಯು ಶಸ್ತ್ರ ಚಿಕಿತ್ಸೆಯ ವಿಷಯದಲ್ಲಿ ದಕ್ಷಿಣ ಹಿಂದುಸ್ಥಾನದೊಳಗೆ ಬಹು ಹೆಸರುವಾಸಿಯಾಗಿದೆ. ಡೋಕ್ಟರ್ ವಾನ್‌ಲೇಸರು ಈಗ ಸ್ವದೇಶಕ್ಕೆ ಎಂದರೆ ಅಮೇರಿಕಕ್ಕೆ ಹೋಗಿದ್ದಾರೆ. ಇವರು ಹಿಂದುಸ್ಥಾನದಲ್ಲಿ ವೈದ್ಯವೃತ್ತಿಯಿಂದ ಮೂವತ್ತೈದು ವರ್ಷಗಳನ್ನು ಕಳೆದಿರುವರು. ಇವರು ಅಲ್ಲಿಂದ ತಮ್ಮ ಅನುಭವವನ್ನು ಪ್ರಕಟಿಸಿದ್ದಾರೆ. ವಾನ್‌ಲೇಸರು ಮಿರಜಿನಲ್ಲಿ ಸ್ಥಾಪಿಸಿದ ಆಸ್ಪತ್ರೆಯಲ್ಲಿ ನಿಂತು ಇದುವರೆಗೆ ೪ ಲಕ್ಷ ರೋಗಿಗಳು ಔಷಧೋಪಚಾರವನ್ನು ಪಡೆದರು. ಆಸ್ಪತ್ರೆಯಲ್ಲಿ ನಿಲ್ಲದೆ ಹೊರಗಿನಿಂದ ೧೦ ಲಕ್ಷ ಜನರು ಚಿಕಿತ್ಸೆಯನ್ನು ಹೊಂದಿದ್ದಾರೆ. ಅವರು ಪ್ರತಿ ವರ್ಷ ಆರು ಸಾವಿರ ಶಸ್ತ್ರಕ್ರಿಯೆಯನ್ನು ಮಾಡುತ್ತಿದ್ದರು. ಡೋಕ್ಟರ್ ವಾನ್‌ಲೇಸರು ತಮ್ಮ ಆಸ್ಪತ್ರೆಯ ಅನುಭವವನ್ನು ಈ ರೀತಿಯಿಂದ ತಿಳಿಸಿ ಹಿಂದುಸ್ಥಾನದ ಆರೋಗ್ಯದ ಸ್ಥಿತಿಯನ್ನು ಒಂದೆರಡು ಮಾತುಗಳನ್ನು ಹೇಳಿದ್ದಾರೆ. ಹಿಂದುಸ್ಥಾನದಲ್ಲಿ ಪ್ರತಿ ವರ್ಷ ಜ್ವರದಿಂದ ೪೦ ಲಕ್ಷ ಜನರು ಸಾಯುತ್ತಾರೆ. ಮೈಲಿಗೆ ರೋಗದಿಂದ ೪೦ ಸಾವಿರ ಜನರು ಮರಣ ಹೊಂದಿರುತ್ತಾರೆ. ಶಿಶುಮರಣದ ಪ್ರಮಾಣವು ನೇಕಡಾ ೫೦ರಷ್ಟಿರುವದು, ಅವರು ಪ್ರಕಟಿಸಿದ ಈ ಮಾಹಿತಿಯು ಹಿಂದುಸ್ಥಾನದಲ್ಲಿ ಎಷ್ಟರ ಮಟ್ಟಿನ ಆರೋಗ್ಯವಿದೆ ಎಂಬುದು ಸೂಚಿಸುತ್ತದೆ. ಹಿಂದುಸ್ಥಾನದ ಹವಾಮಾನವು, ಋತುಮಾನವು, ಭೂಗುಣವು ಇವೆಲ್ಲ ಆರೋಗ್ಯಕ್ಕೆ ದೋಷಕರವಾಗಿರುವಾಗ ಜ್ವರ, ಮೈಲಿಗೆ ಇತ್ಯಾದಿ ಸಾಂಕ್ರಾಮಿಕ ವ್ಯಾಧಿಗಳಿಗೆ ಅಷ್ಟೊಂದು ಜನಸಂಖ್ಯೆಯು ಪ್ರತಿ ವರ್ಷವೂ ಬಲಿ ಬೀಳುವದೆಂದರೆ ಶೋಚನೀಯವಲ್ಲವೆ? ದಾರಿದ್ರ್ಯದಿಂದ ರೋಗಗಳು ಹೆಚ್ಚಿಸುತ್ತವೆ. ದಾರಿದ್ರ್ಯವು ರಾಜಪದ್ಧತಿಯ ಪರಿಣಾಮವು. ಎಂದಮೇಲೆ ಸ್ವರಾಜ್ಯ ಪ್ರಾಪ್ತಿಯಾಗುವ ವರೆಗೆ ಈ ಅನರ್ಥವು ದೂರವಾಗುವದು ಅಸಾಧ್ಯವೆಂದು ತೋರುತ್ತದೆ.

• • • • • • •

— ಡೋಕ್ಟರ್ ವಾನ್‌ಲೇಸರ ಅಧಿಕ ಪ್ರಸಂಗ! —

ಡೋಕ್ಟರ್ ರೆವರೆಂಡ್ ವಾನ್‌ಲೇಸರು ಎರಡು ಸಂಗತಿಗಳನ್ನು ಹೇಳಲು ಅಧಿಕಾರ ಪಟ್ಟವರು ರೋಗಚಿಕಿತ್ಸೆ ಶಸ್ತ್ರಕ್ರಿಯೆ, ಆರೋಗ್ಯ ರಕ್ಷಣ ಇತ್ಯಾದಿ ವೈದ್ಯಶಾಸ್ತ್ರಕ್ಕೆ ಸಂಬಂಧ ಪಟ್ಟ ವಿಷಯಗಳನ್ನು ಅವರು ಬೇಕಷ್ಟು ಹೇಳಬಹುದು. ಅವರಲ್ಲಿ ಅವರು ಕೃತ ಪರಿಶ್ರಮರಾದ್ದರಿಂದ ಅಭಿಜ್ಞರ ಅಲ್ಲ, ಕೃತಕರ್ಮರೂ ಆಗಿದ್ದಾರೆ. ಇದೇ ರೀತಿಯಿಂದ ಈ ರೆವರೆಂಡರು ಒಂದು ವೇಳೆ ಬೈಬಲಿನ ವಿಷಯವನ್ನೂ ಹೇಳ ಬಹುದು. ಇವರು ಮಿಶನರಿ ಕೂಟಕ್ಕೆ ಸೇರಿದವರಾದ ಕಾರಣ ಬೈಬಲಿನೊಳಗಿನ ದೇವ ತಾತ್ಪರ್ಯಗಳ ವಿವರಣವನ್ನು ಕೊಡಲು ಅವರು ಅರ್ಹರ ಸರಿ. ಇವರ ವಿಷಯವನ್ನು ಆಲೋಚಿಸಿದರೆ ಇವರು ಈ ಎರಡು ಕೆಲಸಗಳಿಗೆ ಯೋಗ್ಯರೆಂಬುದಕ್ಕೆ ಅಡ್ಡಿ ಇಲ್ಲ. ಪರಂತು ಈ ಮಿಶನರಿ ಭಟಜಿಯವರು ತಮ್ಮ ಅಧಿಕಾರವನ್ನು ಉಲ್ಲಂಘಿಸಿ ರಾಜಕೀಯ ವಿಷಯವನ್ನು ಯಾವಾಗ ಕೈಕೊಳ್ಳುತ್ತಾರೋ ಆಗ ಅವರ ಅಧಿಕಪ್ರಸಂಗದ ಬಗ್ಗೆ ಬೇಸರ ಉಂಟಾಗದ ಇರುವದಿಲ್ಲ. ತನ್ನ ಬುದ್ಧಿಯು ಸರ್ವಗಾಮಿನಿಯೆಂದು ಲೋಕಕ್ಕೆ ತೋರಿಸುವ ಮಹತ್ವಾಕಾಂಕ್ಷೆಯಿಂದ ಪೀಡಿತರಾದ ಡೋಕ್ಟರ್ ಸಾಹೇಬರು ಹಿಂದುಸ್ಥಾನದೊಳಗಿನ ರಾಜಕೀಯ ಪರಿಸ್ಥಿತಿ ವಿಷಯದಲ್ಲಿ ಮುಂದಿನಂತೆ ವಿಚಿತ್ರವಾದ ಮತವನ್ನು ಪ್ರಕಟಿಸಿದ್ದಾರೆ:— ಹಿಂದುಸ್ಥಾನದೊಳಗಿನ ಸಾಮಾನ್ಯ ಎಲ್ಲ ಭಾಗಗಳಿಗೆ ಸ್ಥಾನಿಕ ಸ್ವರಾಜ್ಯವು ಕೊಡಲ್ಪಟ್ಟಿದೆ. ಅವರು ಇದನ್ನು ಸರಿಯಾಗಿ ಉಪಭೋಗಿಸಿ ತಮ್ಮ ಪಾತ್ರತೆಯನ್ನು ತೋರಿಸಬೇಕು. ಈ ರೀತಿಯಿಂದ ಪಾತ್ರತೆಯನ್ನು ತೋರಿಸಿದ್ದಲ್ಲಿ ಗ್ರೇಟಬ್ರಿಟನು ಅವರಿಗೆ ಸ್ವರಾಜ್ಯದ ಹಕ್ಕನ್ನು ಕೊಟ್ಟೀತು. ಈ ಹಕ್ಕನ್ನು ಹೊಂದಲು ೧೦ ವರ್ಷದ ಅವಧಿ ಇದೆ. ರಾಜಕಾರಣವು ವೈದ್ಯಶಾಸ್ತ್ರಕ್ಕೆ ಸಂಬಂಧ ಪಟ್ಟದಲ್ಲ. ಇವರು ಅದರಲ್ಲಿ ತಮ್ಮ ಬುದ್ಧಿಯನ್ನು ನಡೆಸುವದು ಅಪ್ರಸ್ತುತವೂ ಅನುಚಿತವೂ ಆಗಿದೆ. ಡೋಕ್ಟರ್ ಸಾಹೇಬರ ಶಸ್ತ್ರಗಳು ಅಪರೇಶನಿನಲ್ಲಿ ಉತ್ತಮವಾದ ಕಾರ್ಯವನ್ನು ಮಾಡುತ್ತೇವೆಂಬುದರಿಂದ ರಾಜಕಾರಣಕ್ಕೆ ಉಪಯುಕ್ತವಾದವೇ? ಸಾರಾಂಶ, ಮನುಷ್ಯಂಗೆ ತಾರತಮ್ಯವು ಬೇಕು. ಕಾರಣ, ತಾರತಮ್ಯವು ಬುದ್ಧಿವಂತಿಕೆಯ ಲಕ್ಷಣವು.

ಕೇಳಾ ಇರುತ್ತಾ, ದೇವಳ ಶಾಲೆಯಲ್ಲಿ ಓದಿಜನುಗಳು ಇದ್ದದು ಬಂಟ್ವಾಳ ನಿವಾಸಿಗಳಿಗೆ ತಿಳಿಯದೆ ಹೋದದ್ದು ಆಶ್ಚರ್ಯವಾಗಿದೆ, ಯಾವ ತರದಲ್ಲಿ ಆಗಲಿ ದೇವಳ ಶಾಲೆಯು ದೇಶೋದ್ಧಾರಕ್ಕಾಗಿ ಇಟ್ಟದ್ದಲ್ಲದೆ ಲಾಭನಷ್ಟಕ್ಕಲ್ಲ ಎಂಬ ಸಂಗತಿ ಬಂಟ್ವಾಳ ನಿವಾಸಿಗಳಿಗೆ ಸಮಾಧಾನವಿರಲಿ.

"ಉಪಾಧ್ಯಾಯರಲ್ಲೊಬ್ಬ."

ಪತ್ರವ್ಯವಹಾರ.

ಪ್ರತ್ಯುತ್ತರಕ್ಕೆ ಮರು ಉತ್ತರ.

ಕಳೆದ ೧೮ನೇ ತಾರೀಕಿನ ಸ್ವದೇಶಾಭಿಮಾನಿಯಲ್ಲಿ ಓರ್ವ ಬಂಟ್ವಾಳ ನಿವಾಸಿಕರು ಬರೆದ ಲೇಖನವನ್ನು ಚನ್ನಾಗಿ ಪಠಿಸಿದೆನು. "ಉಪಾಧ್ಯಾಯರು ಕ್ಷಿಪ್ರದಲ್ಲಿ ಬಡ್ತಿ ಪಡೆಯುವ ಆಸೆಯಿಂದ ಬರದದೆಂದು ನುಡಿಯುತ್ತಾರೆ. ಅದು ಬಂಟ್ವಾಳ ನಿವಾಸಿಕರಿಗೆ ಹ್ಯಾಗೆ ತಿಳಿಯಿತು? ಉಪಾಧ್ಯಾಯರಿಗೆ ಸಂಬಳ ಬಡ್ತಿ ಆಗಬೇಕಾದರೆ ಶಾಲೆಯಲ್ಲಿ ಚನ್ನಾಗಿ ಕೆಲಸ ಮಾಡಿ ಮಕ್ಕಳನ್ನು ಉತ್ತೀರ್ಣರಾಗಿ ಮಾಡಿದರೆ ಮಾತ್ರ ಬಡ್ತಿ ಆಗಬಹುದು ಹೊರತು ಒಂದು ಪತ್ರಕ್ಕೆ ನಿಷ್ಪಕ್ಷಪಾತಿಯಾಗಿ ವಾರ್ತೆ ಬರೆದರೆ ಬಡ್ತಿ ಆಗುವದೇ. ಹಾಗೆ ಬಡ್ತಿ ಆಗುವದಾದರೆ ಎಲ್ಲಾ ಊರುಗಳಲ್ಲಿ ಎಲ್ಲಾ ಉಪಾಧ್ಯಾಯರು ಪತ್ರಕ್ಕೆ ವಾರ್ತೆ ಬರೆಯಲಿಕ್ಕೆ ಕಡಿಮೆ ಮಾಡ್ಯಾರೇ!

ಯಾವದೊಂದು ಸಂಸ್ಥೆಯ ಶಾಲೆಯಾಗಲಿ, ಖಾಸಗಿ ಶಾಲೆಯಾಗಲಿ ಗ್ರಾಂಟು ಪಡೆದರೂ ವರ್ಷಂಪ್ರತಿ ನಷ್ಟಹೊಂದಿ ಅವನಾಂತಕ್ಕೆ ಬೋರ್ಡಿನವರಿಗೆ ವ ಇತರರಿಗಾಗಲಿ ಶಾಲೆ ಬಿಟ್ಟುಕೊಟ್ಟ ಉದಾಹರಣೆ ಬಂಟ್ವಾಳ ನಿವಾಸಿಕರು ಕೊಡುವರು. ಆದರೆ ದೇವರ ದಯದಿಂದ ೩೪ ವರ್ಷದಿಂದ ನಷ್ಟವಾಗಲಿ, ಲಾಭವಾಗಲಿ ದೇವಳ ಶಾಲೆಯನ್ನು ಯಾರ ಸ್ವಾಧೀನಕ್ಕೆ ಬಿಟ್ಟುಕೊಟ್ಟದ್ದು ಕಂಡುಬರುವದಿಲ್ಲ. ನೋಡಲಿಕ್ಕೆ ಹೋದರೆ ಯಾವ ಆತಂಕವೂ ಇಲ್ಲದ ಮಾಪಿಳಾ ಬೋರ್ಡುಶಾಲೆಯೂ, ಮಿಶನ್ ಶಾಲೆಯೂ ಬಿದ್ದುಹೋದದ್ದು ಅಲ್ಲದೆ ಇದೇ ಊರಿನ ಎರಡು ಮೈಲಿನೊಳಗಿರುವ ಮಣಿಹಳ್ಳ ಬೋರ್ಡು ಶಾಲೆ ಸಹ ನಷ್ಟವಾದ್ದರಿಂದ ಬಿತ್ತೊ, ಲಾಭವಾದ್ದರಿಂದ ಬಿತ್ತೊ ಎಂತ ತಿಳಿಯುವದಿಲ್ಲ. ದೇವಳ ಶಾಲೆಗೆ ಗ್ರಾಂಟಿನಿಂದ ಮುನಾಫೆ ಇದೆಯೋ ಇಲ್ಲವೂ ಎಂತ ಹೇಳಬೇಕಾದರೆ ನಾನು ಮೊದಲೆ ತಮ್ಮ ಪ್ರಶ್ನೆಗೆ ಉತ್ತರ ಬರೆಯುವಾಗಲೇ ದೇವಸ್ಥಾನದ ಆದಾಯವೆಚ್ಚದ ರಿಪೋರ್ಟು ಕಾರ್ತಿಕ ದ್ವಾದಶಿ ದಿವಸ ಓದುತ್ತಾರೆ ಎಂತ ಬರೆದಿದ್ದೆ. ಆದುದರಿಂದ ಅಂದು ತಿಳಕೊಂಡು ನಿಮಗೆ ಹೇಳುವೆನು.

ದೇಶೋದ್ಧಾರಕ್ಕಾಗಿಯೇ ಒಂದು ಸಂಸ್ಥೆಯು ಶಾಲೆ ತೆರದಿದ್ದ ಅದರಲ್ಲಿ ಏನೊಂದು ವಿಧದ ಜಾತಿ, ಮತಭೇದಗಳು ಲೋಪವಾಗಿರಬೇಕೆಂತ ಬಂಟ್ವಾಳ ನಿವಾಸಿಕರ ಇನ್ನೊಂದು ಅಭಿಪ್ರಾಯ. ದೇವಳ ಶಾಲೆ ತೆರೆದು ೩೪ ವರ್ಷವಾದರೂ ಯಾವದೊಂದು ತರದಲ್ಲಾದರೂ ಲೋಪ ಬಂದದ್ದು ಕಂಡುಬರುವುದಿಲ್ಲ ಅಥವಾ ಯಾರೂ ತೋರಿಸಿಕೊಟ್ಟದ್ದು ಇಲ್ಲ. ಈ ತನಕ ಆ ಶಾಲೆಯಲ್ಲಿ ಅನೇಕ ಮಂದಿ ಬಿಲ್ಲವರು ಕಲಿತು ಹೋಗಿ ಮಂಗಳೂರು ಶಾಲೆಗೆ ಸೇರಿದುಂಟು. ಪ್ರಕೃತ ಈಗಲೂ ಬಿಲ್ಲವರ ಹುಡುಗರು ದೇವಳ ಶಾಲೆಗೆ ಹೋಗಿ ಬರುವದನ್ನು ಅನೇಕರು ಕಂಡದ್ದುಂಟು, ಬೇಕಾದರೆ ಇನ್ನೂ ಯಾರಾದರೂ ಬಿಲ್ಲವರ ಮಕ್ಕಳನ್ನು ಶಾಲೆಗೆ ದಾಖಲು ಮಾಡಿಸಿಕೊಳ್ಳಲಿ ಯಾವ ಆಕ್ಷೇಪವೂ ಇರಲಿಕ್ಕಿಲ್ಲ. ಈ ಶಾಲೆಯಲ್ಲಿ ಬಂಟರೂ, ಬಿಲ್ಲವರೂ, ಮಾಪಿಳೆಯರೂ, ಗಾಣಿಗರೂ, ಕ್ಷೌರಿಕರೂ, ಚಮಗಾರರೂ, ಜಾಡರೂ, ಅಕ್ಕಸಾಲಿಗರೂ, ಹೆಗ್ಗಡೆಯವರೂ, ಕುಂಬಾರರೂ, ಗಾಳದ ಕೊಂಕಣಿಯರೂ, ಕ್ರೈಸ್ತರೂ ಇನ್ನೂ ಕೆಲವು ಜಾತಿ ಮಕ್ಕಳು ಶಾಲೆಗೆ ಹೋಗಿ ಎಂದು ಕಲಿಯುತ್ತಾರೆ. ಬಂಟ್ವಾಳ ನಿವಾಸಿಕರು ಇದನ್ನು ವಿಚಾರಿಸಿ ನೋಡಿದ್ದಲ್ಲಿ ಸಮಾಧಾನವಾದೀತು.

ರಿಲಿಜಿಯಸ್ ಎಂಡೌಮೆಂಟ ಬೋರ್ಡಿನವರ ಕಣ್ಣುಕಟ್ಟುವ ಪ್ರಯುಕ್ತ ಸದರಿ ಬಿಲು ಜಾರಿಗೆ ಬರುತ್ತದೆ ಎಂಬ ವರ್ತಮಾನ ನಂತರ ನಮ್ಮ ಜಿಲ್ಲೆಯಲ್ಲಿಯೂ ಇಡೀ ಭಾರತ ವರ್ಷದೊಳಗೂ ಅನೇಕ ಮಠ ಸಂಸ್ಥೆಗಳೂ, ದೇವಸ್ಥಾನಗಳೂ ಒಂದನ್ನೊಂದು ಅನುಸರಿಸಿ ಫ್ರೀ ಎಲಿಮೆಂಟರಿ ಶಾಲೆಗಳನ್ನೂ, ಸಂಸ್ಕೃತ ಶಾಲೆಗಳೂ, ಕಟ್ಟೋಣಗಳೂ ಶುರುಮಾಡಿದ್ದಾರೆ ಎಂತ ಬಂಟ್ವಾಳ ನಿವಾಸಿಕರು ಬರಿಯುತ್ತಾರಷ್ಟೆ ಅವರಿಗೆ ಇದು ಚನ್ನಾಗಿ ಗೊತ್ತಿರಲಿ. ಯಾವದೆಂದರೆ ಇಡೀ ಭಾರತದಲ್ಲಿ ಈ ಬಿಲ್ಲು ಜಾರಿಗೆ ಬಂದದ್ದಲ್ಲಿ ನಮ್ಮ ಮದ್ರಾಸು ಸಂಸ್ಥಾನಕ್ಕೆ ಮಾತ್ರ ಆಗಿದೆ. ಎಲ್ಲ ಸ್ಥಳಗಳಲ್ಲಿ ಫ್ರೀ ಎಲಿಮೆಂಟರಿ ಶಾಲೆ ಸಂಸ್ಕೃತ ಶಾಲೆ ಇಟ್ಟಿರುತ್ತಾರೆ ಎಂತ ಅವರೂ ಒಪ್ಪುತ್ತಾರೆ ಹಾಗಾದರೆ ಬಂಟ್ವಾಳ ದೇವಳವು ಫ್ರೀ ಶಾಲೆ ಏರ್ಪಡಿಸಿದ್ದು ಏನು ಆಶ್ಚರ್ಯ. ೩೪ ವರ್ಷದಿಂದ ಫ್ರೀ ಮಾಡದೆ ಈಗ ಮಾತ್ರ ಫ್ರೀ ಮಾಡಲಿಕ್ಕೆ ಕಾರಣವೇನು ಎಂತ ಪ್ರಶ್ನೆ ಇರಬಹುದು. ಈ ಬಂಟ್ವಾಳಕ್ಕೆ ೨೩ನೇ ಇಸವಿಯಲ್ಲಿಯೂ, ೨೪ನೇ ಇಸವಿಯಲ್ಲಿಯೂ, ಅದು ಸಾಲದೆ ಈ ಕಾಲದಲ್ಲಿ ಸಹ ತಕ್ಕ ಮಟ್ಟಿನ ನೆರೆ ಬಂದು ಬಂಟ್ವಾಳದ ಧನಿಕರಿಗೂ, ವ್ಯಾಪಾರಸ್ಥರಿಗೂ, ಕೂಲಿಯವರಿಗೂ ಹೆಚ್ಚಿನ ನಷ್ಟಪಡಿಸಿ ಕೆಲವರಿಗೆ ಉಣ್ಣಲಿಕ್ಕೆ ಅನ್ನವಿಲ್ಲ, ಉಡಲಿಕ್ಕೆ ಬಟ್ಟೆ ಇಲ್ಲ ಎಂಬಂತೆ ಮಾಡಿದ್ದರಿಂದ ದೇಶೋದ್ಧಾರಕ್ಕಾಗಿ ತೆರದ ಶಾಲೆಯಲ್ಲಿ ಲಾಭ ನಷ್ಟ ನೋಡದೆ ದೇವಳ ಶಾಲೆಯಲ್ಲಿ ಎಲಿಮೆಂಟರಿ ಶಾಲೆಗೆ ಫ್ರೀಮಾಡಿದ್ದಾಗಿರಬಹುದು.

ಬೋರ್ಡು ಶಾಲೆಗಾಗಿ ಹಳೆ ಮಿಶನ್ ಶಾಲೆ ಕಟ್ಟೋಣವನ್ನು ಇದೇ ಕಳೆದ ಎಪ್ರಿಲ್ ತಿಂಗಳಲ್ಲಿ ದುರುಸ್ತಿಗೆ ಹಿಡಿದದ್ದು, ಜೂನಿನಲ್ಲಿ ಮುಗಿಸಿದ್ದು ಎಂತ ಬರಿಯುತ್ತಾರೆ. ಅಲ್ಲವೇ ಅಲ್ಲ. ದುರುಸ್ತಿಗೆ ಹಿಡಿದದ್ದು ಜೂನು ೮ರ ನಂತರ ಈ ಕಟ್ಟೋಣ ಕಟ್ಟಿಸುವದು ನೋಡಿ ದೇವಳ ಶಾಲೆಯ ಎಲಿಮೆಂಟರಿ ಶಾಲೆ ಫ್ರೀ ಮಾಡಿದ್ದು ಎಂತ ಬ. ನಿವಾಸಿಕರ ಅಭಿಪ್ರಾಯವಾಗಿದೆ. ದೇವಳ ಶಾಲೆಯ ಮನೇಜರರು ಸದರಿ ಶಾಲೆಯ ಮತ್ತು ದೇವಳದ ಆಡಳಿತೆಯನ್ನು ನವೆಂಬರ ಕಳ್ಳೆ ವಹಿಸಿಕೊಂಡಿದ್ದಾಗಿದೆ. ಶಾಲೆಯ ಫಂಡು ಇತ್ಯಾದಿ ಆಡಳಿತ ಎಪ್ರಿಲ್ ಮೇ ತಿಂಗಳಲ್ಲಿ ಪಡಕೊಂಡಿದ್ದಾಗಿದೆ. ಆಗಲೇ ಅವರು ಶಾಲೆಯ ಉದ್ಧಾರದ ಬಗ್ಗೆ ಆಲೋಚಿಸಿರಬಹುದು. ಅಂದರೆ ಫ್ರೀ ಮಾಡಲಿಕ್ಕೆ ಆಲೋಚಿಸಿರಬಹುದು.

ದೇವಳದ ಶಾಲೆಯ ಅರ್ಧಕ್ಕೆ ಮಿಕ್ಕಿದ ಉಪಾಧ್ಯಾಯರು ಬೋರ್ಡಿಗೆ ಅರ್ಜಿ ಬರಕೊಂಡದ್ದು ನಿಷ್ಪ್ರಯೋಜನವಾದ್ದರಿಂದ ಸೇರು ತೀರಿಸಿಕೊಳ್ಳುವ ಬಗ್ಗೆ ಬರೆದಿರಬಹುದೆಂದು ಅನುಮಾನ ಪಡುತ್ತಾರೆ. ಒಟ್ಟಾರೆ ಲೆಖ್ಖ ಮಾಡಿದರೆ ಇಲ್ಲಿ ಸುಮಾರು ೧೬ ಮಂದಿ ಉಪಾಧ್ಯಾಯರಿದ್ದಾರೆ. ಅವರಲ್ಲಾಗಲಿ ಬೇರೆ ನಿಷ್ಪಕ್ಷಪಾತಿ ಹೃದಯದ ಇನ್ನಾವ ಉಪಾಧ್ಯಾಯರು ಯಾಕೆ ಬರೆಯಬಾರದು.

ದೇವಳದ ಮೊಕ್ತೇಸರರಾಗಲಿ, ಅವರ ಕಡೆಯವರಾಗಲಿ ಮಕ್ಕಳನ್ನು ಕರಕೊಂಡು ಬರುವದರಿಂದ ದೇವಳ ಶಾಲೆಯಲ್ಲಿ ಕ್ಲಾಸುಗಳಲ್ಲಿ ಹುಡುಗರ ಸಂಖ್ಯೆ ಹೆಚ್ಚಾಗಿ ಓದಿಜನ ಮಾಡಿರಬಹುದೆಂದು ಸಹ ನುಡಿಯುತ್ತಾರೆ. ಅದು ಬಂಟ್ವಾಳ ನಿವಾಸಿಕರ ರೋಷವೇರಿದ ಮಾತೆಂದು ಬಹುದು. ಗೌಡಸಾರಸ್ವತ ಜಾತಿ ಮುಂದರ ದೇವಳದ ಶಾಲೆಯಲ್ಲಿ ಬಡಾ ಜಾತಿ ಮಕ್ಕಳಲ್ಲದೆ ಶಾಲೆಯ ಶಿಕ್ಷಣಕ್ಕೆ ಮಟ್ಟಿ ಬೇರೆ ಜಾತಿ ಮಕ್ಕಳು ಬರುವದರಿಂದ ಓದಿಜನು ಮಾಡಬೇಕಾಯಿತು. ಅದು ಅಲ್ಲದೆ ಕಳೆದ ೧೯೨೧ನೇ ಇಸವಿಯಲ್ಲಿಯೂ, ೨೨ರಲ್ಲಿಯೂ, ೨೪ನೇ ಇಸವಿಯಲ್ಲಿಯೂ ಇಲ್ಲಿ ಮಿಶನ್

ಶಾಸ್ತ್ರೀಯ
ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಆರೋಗ್ಯವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಶುದ್ಧ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.
ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.
ಹೆಚ್ಚಿನ ಮಾಹಿತಿಗೆ "ಆರ್ಯ ಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.
Authorised and fully paid up Capital Rs. 300,000-0-0
Reserve and other sinking Funds „ 259,000-0-0

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
ಅಧಿಕಾರಗೊಳಿಸಲ್ಪಟ್ಟು, ಪೂರ್ಣವಾಗಿ ತೆತ್ತ ಮೂಲಧನವು ರೂ. 300,000—0—0
ಕ್ಷೇಮನಿಧಿ ಮತ್ತು ಇತರ ಫಂಡುಗಳು 259,000—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1925.

K. Venkat Rao,
Secretary.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ನೋಯುತ್ತಿದ್ದರೆ, ಶರೀರದಲ್ಲಿ ಲವಲವಿಕೆಯುಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಿಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲೂಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೩೦ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ಒಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೨೫ ಸೀಸೆಗೆ ೪—೧೦—೦. ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲ ಪಂಡಿತರು,
ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಪ್ಪ, ಸೋಡಾ ಫಾಕ್ಟರಿ,
ಮಂಗಳೂರು ಟವನಿಗೆ ಮಾತ್ರ.

ಶುದ್ಧವಾದ ನೀಲಗಿರಿ ಎಣ್ಣೆ
ತಲೆನೋವು, ಶೀತ, ಇನ್‌ಫ್ಲುಯಂಜಾಜ್ವರ,
ವಾತ, ಇತ್ಯಾದಿ ಎಲ್ಲಾ ರೋಗಗಳ
ಮೇಲೆ ಸಿದ್ಧೌಷಧ.
1 ಔನ್ಸು ಬಾಟ್ಲಿ 1ರ ಕ್ರಯ 0—4—0.
ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು.

Free! Free!! Free!!
ಪ್ರಸಿದ್ಧವಾದ
"ಕಾಮಶಾಸ್ತ್ರ"
ಈಗಲೆ ತಯಾರಾಗಿದೆ.
ಜರೂರಾಗಿ ಬರಿಯುವಲ್ಲಿ ಅಂಚೆಯ ಹಾಸಲು ಸಹ ಇಲ್ಲದೆ ಕಳುಹಿಸುವೆವು.
ಅತಂಕನಿಗ್ರಹ ಔಷಧಾಲಯ,
26 ಬ್ರಾಡ್ವೇ, (ಪೋಸ್ಟು ಬಾಕ್ಸ್ 1252),
ಮದ್ರಾಸ್.

ಬಂದು ನೋಡಿರಿ! ತಿಂದು ನೋಡಿರಿ!
ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ
ಪದಕವನ್ನು
ಬಹುಮಾನವಾಗಿ ಪಡೆದಿರುವ
ಎಸ್. ಪಿ. ಆಚಾರ್ಯ
ಇವರಿಂದ ತಯಾರಿಸಲ್ಪಟ್ಟ
ಉಪ್ಪಿನಕಾಯಿಗಳನ್ನು
ಬಂದು ನೋಡಿರಿ! ತಿಂದು ನೋಡಿರಿ!

ದೇಶಬಂಧುಗಳೇ,
ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ ತುಂತಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನ್ನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.
ಅವುಗಳನ್ನು ನಮ್ಮಲ್ಲಿಗೆ
ಬಂದು ನೋಡಿರಿ! ತಿಂದು ನೋಡಿರಿ!
ಇಂಡಿಯನ್ ಸ್ಪೀಟ್‌ಮಿಟ್ ಮಾರ್ಟ್.
ಮನೋಹರ ಕಾಫಿ ಕ್ಲಬ್, ಮಾರ್ಕೆಟು ರೋಡು, ಮಂಗಳೂರು. | ಅಥವಾ | ಸದಾನಂದ ಕಾಫಿ ಕ್ಲಬ್, ರಥಬೀದಿ, ಮಂಗಳೂರು.

"ಬಹು ದಿವಸಗಳಿಂದ ಪ್ರಸಿದ್ಧವಾಗುತ್ತಿರುವ ಔಷಧ!"
ರಕ್ತ ಶುದ್ಧಿ
ವಜ್ರಾಂಗ-ಬಿಂದು
ವೀರ್ಯ ವೃದ್ಧಿ ಕಾರಕ

ವಜ್ರಾಂಗಬಿಂದುವೆಂಬ ಈ ಮಹೌಷಧಿಯನ್ನು ಅನೇಕ ಪರ್ವತಗಳಲ್ಲಿ ಉತ್ತಮೋತ್ತಮವಾದ ಮತ್ತು ಅವಶ್ಯವಾಗಿ ಗುಣ ಕೊಡುವಂತಹ ವನಸ್ಪತಿಗಳ ಅರ್ಕದಿಂದ ಉಪಯುಕ್ತವಾದ ಮತ್ತು ಉಚ್ಚತರದ ಭಸ್ಮಗಳ ಮಿಶ್ರಣಮಾಡಿ ಯಾಂತ್ರಿಕ ಸಹಾಯದಿಂದ ಸಿದ್ಧಪಡಿಸಿರುತ್ತದೆ. ಈ ವಜ್ರಾಂಗಬಿಂದುವಿನ ಸೇವನೆಯಿಂದ ಕೆಳಗೆ ಬರೆದ ರೋಗಗಳು ಗುಣವಾಗಿ ಹೊಸ ಮನುಷ್ಯನಾಗುತ್ತಾನೆಂದರೆ ಅತಿಶಯೋಕ್ತಿಯಾಗಲಾರದು.

ಈ ಮಹೌಷಧಿಯ ಸೇವನೆಯಿಂದ, ವಾತ, ಪಿತ್ತ, ಕಫ ಈ ಮೂರು ದೋಷಗಳಿಂದ ಉತ್ಪನ್ನವಾಗುವ ರೋಗಗಳು ಗುಣವಾಗುವದಲ್ಲದೆ, ಸ್ವಪ್ನಸ್ಖಲನ, ಧಾತುಪಾತ ನಪುಂಸಕತ್ವ, ಪರಮಾ ಮತ್ತು ಗರಮಿ ಇವುಗಳ ಸಮೂಲ ನಾಶವಾಗುತ್ತದೆ. ಬಹು ದಿವಸದಿಂದ ಮೈಯಲ್ಲಿ ಅಂಟಿಕೊಂಡ ಕೆಡಕಿಯೆಂತೂ ಒಂದೇ ವಾರದಲ್ಲಿ ಗುಣವಾಗುವದು. ಲಘುವಿಗಿಂತ ಮೊದಲು ಅಥವಾ ಕಡೆಗೆ ಸ್ರಾವವಾಗಿ ಹೋಗುವ ಧಾತು ಬಂದಾಗುತ್ತದೆ. ತಿಂದ ಅನ್ನವು ಜೀರ್ಣವಾಗಿ ಮಲವು ಸರಿಯಾಗಿ ಹೋಗುವದು ಯಾವದೇ ಕಾರಣದಿಂದ ಬಂದ ಅಶಕ್ತತೆಯೂ ಕಣ್ಣಿಗೆ ಕತ್ತಲೆ ಬಂದಂತಾಗಿ ಬೆವರು ಬರುವದು, ಕೈಕಾಲುಗಳು ಉರಿಯುವದು, ಮುಂತಾದ ಸಕಲ ವಿಕಾರಗಳೂ ನಾಶಹೊಂದುತ್ತವೆ. ವೀರ್ಯವೃದ್ಧಿ, ರಕ್ತಶುದ್ಧಿಗಳಾಗಿ ಮನುಷ್ಯನು ಬಲವಂತನಾಗುತ್ತಾನೆ. ಪೂರ್ಣ ಗುಣ ಬರಬೇಕಾದರೆ ಮೂರು ಬಾಟ್ಲಿಗಳು ಬೇಕು.
೧ ಬಾಟ್ಲಿಗೆ ರೂ. ೧—೪—೦. ೩ ಬಾಟ್ಲಿಗಳಿಗೆ ರೂ. ೩—೪—೦. ೧೨ ಬಾಟ್ಲಿಗಳಿಗೆ ರೂ. ೧೦—೦—೦.
ಇದರ ಹೊರತು ಒಂದು ಬಾಟ್ಲಿಯು ಉಚಿತ. ಟಪ್ಪಾಲ ಪ್ಯಾಕಿಂಗ ಖರ್ಚು ಪ್ರತ್ಯೇಕ. ಒಮ್ಮೆಯೇ ಹೆಚ್ಚಿಗೆ ಬಾಟ್ಲಿಗಳನ್ನು ತರಿಸಿಕೊಂಡರೆ ಟಪ್ಪಾಲು ಖರ್ಚು ಹೆಚ್ಚಿಗೆ ಬೀಳಲಾರದು. ಏಜಂಟರಾಗಬೇಕೆನ್ನಿಸುವವರು ಪತ್ರವ್ಯವಹಾರ ನಡಿಸಿ, ಖುಲಾಸೆ ತಿಳಕೊಳ್ಳಬಹುದು.
ಟಪ್ಪಾಲ ಮತ್ತು ಪ್ಯಾಕಿಂಗೆ ಖರ್ಚು ಬೇರೆ ಬೀಳುವುದು. ಉಪಯೋಗ ಪತ್ರವು ಬಾಟ್ಲಿಯ ಸಂಗಡಲೇ ಕಳಿಸಲ್ಪಡುವುದು.
ಪತ್ತೆ. ಮ್ಯಾನೇಜರ, ಕೆ. ಎಮ್. ಹನುಮಾನ ಪ್ರಸಾದಿಕ ಕಂಪೆನಿ,
ಮು. ಪೋ. ಹ್ಯಾಗೇ, (ಜಿಲ್ಹಾ ಬೆಳಗಾಂವ.)

ಜ್ಯೋತಿಷ್ಯ ಸಂಗ್ರಹ.

(1) ಬೃಹಜ್ಜಾತಕ ...
(2) ಉಮಾಮಹೇಶ್ವರ ಸಂವಾದ ಎಂಬ ಜ್ಯೋತಿಷ್ಯ ಕಾಲಚಕ್ರ
(3) ಕೇರಳ ಪ್ರಶ್ನೆ ...
(4) ಪ್ರಶ್ನೋತ್ತರ ರತ್ನಮಾಲಿಕಾ
(5) ನವನೀತಾರಿಷ್ಟ
(6) ಷಟ್ಪಂಚಾಶತ್ ಗ್ರಂಥ
(7) ನಕ್ಷತ್ರ ಚೂಡಾಮಣಿ ಗ್ರಂಥ
(8) ಮುಹೂರ್ತಪದವೀಗ್ರಂಥ...
(9) ಅಷ್ಟದಿಕ್ಪಾಲಕ ಮಂಗಳಾಷ್ಟಕಗಳು ...
(10) ಕಾಲನಿರ್ಣಯಜ್ಯೋತಿಷ್ಯ ಗ್ರಂಥ ...
(11) ಸವ್ಯಾಖ್ಯಾನ ಕಾಲಾಮೃತ...

— ಪ್ರಸಂಗದ ಪುಸ್ತಕಗಳು. —

(1) ಸೇತು ಬಂಧನ ...
(2) ದಾಕ್ಷ ಪುರಾಣ ...
(3) ಇಂದ್ರಜಿತು ಕಾಳಗ
(4) ಚಂಡಭೀಮ ...
(5) ಮೈದುನರಾಮನ ಚರಿತ್ರೆ ...
(6) ಭಾಪುರಿ ಕಟ್ಟಿದ ಚೋರ ಕಥೆ
(7) ಕುಮಾರ ರಾಮನ ಕಥೆ ...
(8) ಕೃಷ್ಣದಾನಾಮೃತ
(9) ಶ್ರೀಕೃಷ್ಣ ಸತ್ಯಭಾಮು ಸಂವಾದ
(10) ಚಿತ್ರಕೇತು ರಾಜನ ಕಥೆ ...
(11) ಬಕಾಸುರ ವಧೆ ...
(12) ಹಿಡಿಂಬಾಸುರನ ಕಥೆ
(13) ರಂಭಾಶುಕ ಸಂವಾದ
(14) ರುಕ್ಮಿಣೀ ಪರಿಣಯ
(15) ರಾವಣೋದ್ಭವ ಯಕ್ಷಗಾನ
(16) ಸಭಾ ಲಕ್ಷಣವು ...
(17) ಶ್ರೀ ಕೃಷ್ಣದೀನಾಕ್ಷಮೋದ ಕಥಾ
(18) ಚಂದ್ರಮೌಳಿ ಕಾಳಗ
(19) ಚಿತ್ರವಿಚಿತ್ರ ಕಾಳಗ
(20) ಯಕ್ಷಗಾನ ಸಾರಂಗಧರನ ಕಥೆ
(21) ,, ಶನಿದೇವರ ಮಹಾತ್ಮೆ
(22) ,, ಹರಿಶ್ಚಂದ್ರನ ಕಥೆ
(23) ಯಕ್ಷಗಾನ ಲಕ್ಷಾಗೃಹ ಕಥೆ ...
(24) ,, ಚೋರ ಕಥೆ ...
(25) ,, ಪಾರ್ವತಿ ಕಾರವಂಜ ಕಥೆ
(26) ,, ಗೋವಿನ ಚರಿತ್ರೆ
(27) ,, ದುಶ್ಶಾಸನ ಕಥೆ
(28) ,, ಸಾನಂದ ಗಣೇಶ್ವರ ಕಥೆ ...
(29) ,, ಅಂಗದ ಸಾಧನ ...

— ಭಜನೆಯ ಪುಸ್ತಕಗಳು. —

(1) ಉಡುಪಿಕ್ಷೇತ್ರ ಮಹಾತ್ಮೆ
(2) ಹನುಮದ್ರಾಮಾಯಣ ...
(3) ಅಧ್ಯಾತ್ಮ ವಿಚಾರ
(4) ಭಕ್ತಿಮಹಿಮ
(5) ಪ್ರಬಂಧ ಮುಕ್ತಾವಳಿ ...
(1) ಹರಿಕೀರ್ತನಾಮೃತಸಾರ
(2) ಹರಿನಾಮಾಮೃತಂ.
(3) ರುಕ್ಮಿಣೀ ಕಲ್ಯಾಣ
(4) ಮಂಗಳ ಗೌರೀಹಾಡು ...
(5) ಉದ್ವಾಲೀಕನ ಹಾಡು ...
(6) ಯಕ್ಷಗಾನ ಗಿಳೀ ಹಾಡು
(7) ಕನಕದಾಸ ಪುರಂದರದಾಸರ ಕೀರ್ತನೆಗಳು
(8) ಬೀಗರ ಹಾಡು
(9) ಭಜನಿಯ ಪದಗಳು

— ವಿವಿಧ ಪುಸ್ತಕಗಳು. —

(1) ಸದಾಹಾರ ವಿವೇಚನೆ ...
(2) ಗೋಪಾಲಕೃಷ್ಣ ಗೋಕಲೆ
(3) ಶ್ರೀಕೃಷ್ಣ ಸೇವಾಮೃತಂ ...
(4) ಪಶ್ಚಾತ್ತಾಪ ಭಾಷ್ಪ
(5) ಶ್ರೀ ಶ್ರೀಮಹಾ ಭಾಗವತ
(6) ಉದ್ದಯನ ಚರಿತ್ರೆ
(7) ಮಧ್ವಾಚಾರ್ಯರು (ಶ್ರೀಮಾನ್)
(8) ಯತಿರಾಜವಂಶತಿ
(9) ಪರಮಾರ್ಥಶತಕಂ
(10) ಭಕ್ತಿಕುಸುಮಾಂಜಲಿ
(11) ಸತ್ಯರಾಜ ಪೂರ್ವದೇಶ ಯಾತ್ರೆಗಳು
(12) ಕಾಲನಿರ್ಣಯವ್ಯಾಖ್ಯಾನ ...
(13) ಅರೇಬಿಯನ್ ನಾಯ್ಟ್ಸ್, 1000 ಪುಟಗಳ ಮೇಲೆ ಇವೆ.

ಪುಸ್ತಕಗಳು ದೊರೆಯುವ ಸ್ಥಳ :— ಶಾರದಾ ಛಾಪಖಾನೆ,
ರಥ ಬೀದಿ, ಮಂಗಳೂರು.

IF OUR MODERN REGULATOR
18 Carat Rolled gold Wrist Watch
Are Purchased at a time, we give
AS A SPECIAL OFFER



The best Decorative wall clock our Modern Regulator made with last wall nut case.

FOR RS. TEN

RS. TEN ONLY

18 Carat Rolled gold wrist watch equal to size of a four annas size. Best mechanism supplied with full leather strap.

IF Separately—The Modern Regulator clock Rs. 6
Required—18 ct. Rolled gold wrist watch Rs. 7
ONLY A FEW IN STOCK
Write Now:— CAPTAIN WATCH COY
P. B. 265 MADRAS.

ಆರೋಗ್ಯ ಚಂದ್ರಿಕೆ.

ಸಂಪಾದಕರು: ಡಾಕ್ಟರ್ ಯು. ರಾಮರಾವ್, ಎಲ್. ಎಮ್. ಪಿ. ಎಫ್. ಎಮ್. ಯು. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಚಿಕಿತ್ಸಾ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವುದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ ರೂ. ೧—೮—೦; ಬಿಡಿಪತ್ರಿಕೆ ಒಂದಕ್ಕೆ ರೂ. ೦—೨—೦. ಹಿಂದಿನ ಸಂಚಿಕೆಗಳು ಕೂಡ ದೊರೆಯುವವು.

ಚಂದಾದಾರರಾಗುವವರು ವಿ. ಪಿ. ಮೂಲಕವಾಗಿ ತರಿಸಿಕೊಳ್ಳ [illegible] ಹಣವನ್ನು ಮುಂಗಡವಾಗಿ ಕಳುಹಿಸುವುದು ಲಾಭಕರ. ಮಾದರಿಯ ಪತ್ರಿಕೆಯನ್ನು ಅಪೇಕ್ಷಿಸುವವರು 'ಆರೋಗ್ಯ ಚಂದ್ರಿಕೆ'ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು.

ಪತ್ರವ್ಯವಹಾರಕ್ಕೆ: 'ಆರೋಗ್ಯ ಚಂದ್ರಿಕೆ' [illegible]

ಶುದ್ಧ ರೋಮದ ಧಾವಳಿಗಳು.

1 ಮಳ ಉದ್ದ 1¼ ಮಳ ಅಗಲ ರೂ. 1½ರಿಂದ 2 ವರೆಗೆ, 5 ಮಳ ಉದ್ದ 1½ ಮಳ ಅಗಲ ರೂ. 1½ ರಿಂದ 5 ವರೆಗೆ, 6 ಮಳ ಉದ್ದ 1½ ಮಳ ಅಗಲ ರೂ. 2½ರಿಂದ 6 ವರೆಗೆ, 8 ಮಳ ಉದ್ದ 2 ಮಳ ಅಗಲ ರೂ. 3½ರಿಂದ 10 ವರೆಗೆ, 12 ಮಳ ಉದ್ದ 2½ ಮಳ ಅಗಲ ರೂ. 6ರಿಂದ 12 ವರೆಗೆ, 16 ಮಳ ಉದ್ದ 2½ ಮಳ ಅಗಲ ರೂ. 9 ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಖದ್ದರ್ ರೇಶ್ಮೆ ಮಡಿಗಳು, ಜಾಮುಗಡಿಗಳು, ಕಾಶೀ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ ಬಾಣಲಿಂಗ, ಜಾಘಂಟೆ, ತಾಳ, ಪಶ್ಮೀರ್‌ದಾಣಿ, ಹಿತ್ತಾಳೆಯ ಆಟದ ಸಾಮಾನುಗಳು, ಫೋಟೋ ಉಂಗುರಗಳು ಮತ್ತು ಇನ್ನೂ ಅನೇಕ ಸಾಮಾನುಗಳು, ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುವು. ಕ್ಯಾಟಲಾಗ್ ಇನಾಂ.

ವಿಳಾಸ—
ಶಿರೋಮಣಿ ಯು. ನಾರಾಯಣಾಚಾರ್ಯ
[illegible]

ಆಯುರ್ವೇದ ಶಾಸ್ತ್ರಿ ಅಷ್ಟಾವಧಾನಿ,
ಕಾ. ವೇ. ಸುಬ್ಬರಾವ್, ಯಂ. ಜಿ. ಯು. ಅವರ್ಗಳಿಂದ ತಯಾರಿಸಲ್ಪಟ್ಟದ್ದು.
ಒಂದು ಮಾತ್ರೆ! ಒಂದು ಘಂಟೆಯೊಳಗೆ ಗುಣ!

ಕಾಮಾಮೃತ.

ಈ ಔಷಧವು ಧಾತುಪುಷ್ಟಿಗಾಗಿಯೇ ತಯಾರಿಸಲ್ಪಟ್ಟದ್ದು. ಒಂದು ಮಾತ್ರೆಯನ್ನು ಸೇವಿಸಿದ ಒಂದು ಘಂಟೆಯೊಳಗೆ ಶಕ್ತಿಯನ್ನು ವೃದ್ಧಿಗೊಳಿಸಿ ಎಷ್ಟು ಬಲಹೀನವುಳ್ಳವರನ್ನೂ ಬಲವಂತರನ್ನಾಗಿ ಮಾಡುವದು. ಯಾವ ರೀತಿಯಿಂದಲಾಗಲಿ ಶುಕ್ಲ ನಷ್ಟವಾದಾಗ್ಯೂ ಅಥವಾ ಸ್ವಪ್ನದಲ್ಲಿ ಇಂದ್ರಿಯ ಸ್ಖಲಿತವಾದಾಗ್ಯೂ ಇಲ್ಲವೆ ಮೂತ್ರದೊಂದಿಗೆ ಸೇರಿಯೋ ವ ಮೂತ್ರಚಲನೆಯ ಹಿಂದೋ ಮುಂದೋ ಹೊರಬೀಳುವ ಧಾತುನಷ್ಟವನ್ನಾದರೂ 5 ದಿವಸಗಳಲ್ಲಿ ಗುಣಪಡಿಸುವದು. ಯಾವ ಬಗೆಯ ನರಗಳ ಬಲಹೀನತೆಯನ್ನಾದರೂ ಹೋಗಲಾಡಿಸುವುದು. ಶಕ್ತಿಯಿಲ್ಲದವರು ಈ ಮದ್ದನ್ನು 20ದಿನ ಸೇವಿಸಿದಲ್ಲಿ ಶಕ್ತಿವಂತರಾಗಿ ಸಂಸಾರ ಸುಖವನ್ನೂ, ಸಂತತಿ ಲಾಭವನ್ನೂ ಹೊಂದುವರು; ಇದು ನಿಶ್ಚಯ. ಪತ್ರವ್ಯವಹಾರವು ರಹಸ್ಯವಾಗಿ ನಡಿಸಲ್ಪಡುವದು. ಕ್ರಯ 20 ಮಾತ್ರೆಗಳ ಬುಡ್ಡಿ 1ಕ್ಕೆ ರೂ. 2—0—0. ಪತ್ರವ್ಯವಹಾರವು ಇಂಗ್ಲಿಷಿನಲ್ಲಿ ಮಾಡತಕ್ಕದ್ದು.

ಅಮೃತಾಶ್ರಮ,
28 ಎಲ್ಲೂರು, ಕೃಷ್ಣಾ ಜಿಲ್ಲಾ.

ದಕ್ಷಿಣ ಕನ್ನಡ ಜಿಲ್ಲೆಯ

ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

೧,೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ
ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು
— ತೆಗೆದುಕೊಳ್ಳಿರಿ. —

REGISTERED
TRADE
MARK

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಭೋಗಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ದಾರ್ಢ್ಯತೆಯನ್ನೂ ಉಂಟುಮಾಡುವುದು. ಕೈ ಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಾಮಿಸ್ರಿ ಎಂಬುವದು ಕಾಬೂಲ್ ಕಂದಹಾರ ಪ್ರಾಂತ್ಯಗಳಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರಿಕಾ, ಬರ್ಮಾ, ಪಿನಾಂಗ್ ಸಿಂಗಪೂರ್, ಸಿಲೋನ್ ಮತ್ತು ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. ೧ ಡಬ್ಬಿಯನ್ನು ೧೫ ದಿವಸ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. ೨ ಯಾ ೩ ಡಬ್ಬಿಗಳು ಜನ್ಮಾಂತ್ಯದವರೆಗೂ ಪೂರ್ಣವಾಗಿ ಗುಣವನ್ನು ಮಾಡುವವು. ಅನುಪಾನ ಪತ್ರಿಕೆಯು ಡಬ್ಬಿಯ ಸಂಗಡವೇ ಇರುತ್ತೆ. ಹೆಸರು ವಿಳಾಸಗಳನ್ನು ಚನ್ನಾಗಿ ತಿಳಿಯುವ ಹಾಗೆ ವಿವರವಾಗಿ ಬರಿಯಬೇಕು. ಕ್ರಯ ಡಬ್ಬಿ ೧ಕ್ಕೆ ರೂ. ೨—೦—೦. ಟಪ್ಪಾಲು ಖರ್ಚು ೧ ರಿಂದ ೩ ಡಬ್ಬಿಗಳವರೆಗೆ ೦—೮—೦. ಏಜಂಟರು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯವಾಗಿ ಬೇಕಾಗಿರುತ್ತೆ. ರೂಲ್ಸ್ ತರಿಸಿ ನೋಡಿಕೊಳ್ಳಬಹುದು.

ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಿರಿ.

ಟೆಲಿಗ್ರಾಫ್ ಅಡ್ರೆಸ್,
"ಮಿಸ್ರಿ".
ಬೆಂಗಳೂರು ಸಿಟಿ.

ಡಿ. ವೆನ್ನಾಲಾಲ್,
ಡಿಲ್ಲಿ ನೇಟಿವ್ ಡಾಕ್ಟರ್.
ಸಾಲಂಮಿಸ್ರಿ ಮುರಬ್ಬ ಡಿಪೋ,
ಬೆಂಗಳೂರು ಸಿಟಿ.

Registered: No. M. 498.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ । ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ, ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೯. ಮಂಗಳೂರು, ತಾರೀಕು ೯ನೇ ಶುಕ್ರವಾರ ಒಕ್ಟೋಬರ ೧೯೨೫. ಸಂಚಿಕೆ ೪೧.

Th Canara Banking Corporation, UDIPI, Ltd.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office: UDIPI — Branch: COONDAPOOR.
ಹೆಡ್ ಆಫೀಸು: ಉಡುಪಿ. — ಶಾಖೆ: ಕುಂದಾಪುರ.

ಚಂದಾ ಹಾಕಿ ಎತ್ತಿದ ಮೂಲಧನ	ರೂ. 2,25,000—0—0.
ವಸೂಲಾದ ಮೂಲಧನ	ರೂ. 1,71,875—9—11.
ಕ್ಷೇಮನಿಧಿ ವ ಇತರ ಫಂಡುಗಳು	ರೂ. 64,700—0—0.
ಠೇವಣಾತಿಗಳು	ರೂ. 4,83,945—2—9.

— ವಿನಿಯೋಗ —.

ಗವರ್ನಮೆಂಟು ಪ್ರಾಮಿಸರಿ ನೋಟಿನ ಮೇಲೆ	ರೂ. 25,800—0—0.
ಡಿಮಾಂಡು ನೋಟು ವ ಬಾಂಡುಗಳ ಮೇಲೆ	ರೂ. 5,92,445—9—4.
ಚಿನ್ನಾಭರಣ ಮುಂತಾದ ಭದ್ರತೆಸೊತ್ತುಗಳ ಮೇಲೆ	ರೂ. 1,11,658—8—6

ಈ ಕೆಳಗಿನ ಠೇವಣಾತಿಗಳನ್ನು ಅಂಗೀಕರಿಸುವುದಲ್ಲದೆ ಇತರ ಬ್ಯಾಂಕುಗಳ ಮೇಲಣ ಡ್ರಾಫ್ಟು ಚೆಕ್ಕುಗಳನ್ನೂ, ಸಾಹುಕಾರಿ ಹುಂಡಿಗಳನ್ನೂ ವಟಾಯಿಸುವ ಮತ್ತು ಇತರ ಎಲ್ಲಾ ತರದ ಬ್ಯಾಂಕಿನ ವಹಿವಾಟುಗಳು ನಡಿಸಲ್ಪಡುವವು.

ಠೇವಣಾತಿಗಳು.

ನಿರಖು ಠೇವಣಾತಿಗಳು:—ಸಾ. ಸೆ. 6½ ರಿಂದ 7½ ವರೆಗಿನ ಬಡ್ಡಿಯನ್ನು ಪ್ರತಿ 3 ತಿಂಗಳಿಗೊಮ್ಮೆ ತೆರುವ ಅನುಕೂಲ ವ ಲಾಭದಾಯಕವಾದ ಶರ್ತಗಳ ಮೇಲೆಯೂ

ಕೊಂಚೆ ಅವಧಿ ಠೇವಣಾತಿಗಳು:—1 ತಿಂಗಳ ನಂತರ 15 ದಿವಸಗಳ ನೋಟೀಸಿಗೊಳಪಟ್ಟು ಹಿಂತೆಗೆಯಬಹುದಾದ ಠೇವಣಾತಿಗಳನ್ನು ಸಾ. ಸೆ. ೧ರ ದರದ ಬಡ್ಡಿ ನಡದ ದಿನಗಳಿಗೆ ಕೊಡುವ ಶರ್ತದಿಂದಲೂ

ಚಾಲ್ತಿ ಠೇವಣಾತಿಗಳು:—ದಿನಂಪ್ರತಿ ಇರುವ ಶಿಲ್ಕಿನ ಮೇಲೆ ಸಾ. ಸೆ. 3ರಂತೆ ಬಡ್ಡಿ ತೆರುವ ಶರ್ತದ ಮೇಲೂ

ಸೇವಿಂಗ್ಸ್ ಬ್ಯಾಂಕು ಠೇವಣಾತಿಗಳು:—ಸಾ. ಸೆ. 4½ರ ಬಡ್ಡಿಯ ಮೇಲೂ

ಸಂಚಯ ಠೇವಣಾತಿಗಳು:—ಮಕ್ಕಳ ವಿದ್ಯಾಭ್ಯಾಸ, ಉಪನಯನ, ವಿವಾಹ ಮುಂತಾದ ಶುಭಕಾರ್ಯಗಳಿಗೆ ಅನುಕೂಲವಾಗಿ ನಿಶ್ಚಯವಂತೆ ತಿಂಗಳು 1ರ ರೂಪಾಯಿ 1ರಂತೆ 13-24-45-84-132 ತಿಂಗಳುಗಳಿಗೆ ವಸೂಲುಪಡಿಸಿಕೊಂಡು ಕಂತುಗಳ ಅವಧಿ ಮುಗಿದ ಮೂರು ತಿಂಗಳಲ್ಲಿ ಆಯಾಯ ಅವಧಿಮೇರೆಗೆ ರೂ. 13—8—0, ರೂ. 25—8—0, ರೂ. 50, ರೂ. 102—8—0 ಮತ್ತು 182—8—0ನ್ನು ಅದೇ ಮೇರೆಗೆ ತಿಂಗಳು 1ರ [illegible] 1ರ ಗುಣವೃದ್ಧಿ ಮೊಬಲಗನ್ನು ಕೆತ್ತಲ್ಲಿ ಆಯಾಯ ಮೊಬಲಗಿನ [illegible] ಗುಣವೃದ್ಧಿ ಮೊಬಲಗನ್ನು ತೆರುವ ಶರ್ತದ ಮೇಲೂ ಅಂಗೀಕರಿಸಲ್ಪಡುವವು.

ಹೆಚ್ಚಿನ ಮಾಹಿತಿ ಸೆಕ್ರೆಟರಿಯವರಿಂದ ತಿಳಿಯಬಹುದು.

ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಆಫೀಸು, ಉಡುಪಿ,
ತಾ 30—6—1925.

ನಯಂಪಳ್ಳಿ, ಆನಂದ್ರಾವ್,
ಸೆಕ್ರೆಟರಿ ಮತ್ತು ಒಫಿಶಿಯೇಟಿಂಗ್ ಮೆನೇಜರ್.

: ಪಂಡಿತ ಬಿ. ರಾಮಕೃಷ್ಣ ಬಾಳಿಗರ :

50 ವರ್ಷ ಅನುಭವದ ಸಿದ್ಧೌಷಧಗಳು

ಮಹಾ ಮದನಕಾಮೇಶ್ವರಿ ಲೇಹ—ಇದನ್ನು ಭಂಗಾರ, ಅಭ್ರಕಭಸ್ಮ, ರಸಸಿಂಧೂರ, ಕಸ್ತೂರಿ, ಕುಂಕುಮಕೇಸರ ವಗೈರೆ ಅಮೂಲ್ಯವಾದ ರಸಾಯನ ದ್ರವ್ಯಗಳಿಂದ ತಯಾರಿಸಲ್ಪಟ್ಟಿರುತ್ತದೆ. ಇದು ಎಲ್ಲಾ ತರದ ನಪುಂಸಕ ರೋಗಗಳನ್ನೂ, ಸ್ವಪ್ನಾವಸ್ಥೆಯಲ್ಲಿ ಧಾತುಪತನೆಯನ್ನೂ ಗುಣಪಡಿಸಿ, ದೇಹಕ್ಕೆ ದಿವ್ಯಕಾಂತಿಯನ್ನೂ, ಪುಷ್ಟಿಯನ್ನೂ, ಪುರುಷತ್ವವನ್ನೂ, ವೀರ್ಯಸ್ತಂಭನವನ್ನೂ ಉಂಟುಮಾಡಿ ಅತ್ಯಾನಂದವನ್ನು ಕೊಡುವುದಲ್ಲದೆ, ಅಜೀರ್ಣ, ಅತಿಸಾರ, ಗ್ರಹಣಿ, ಆಮ್ಲ, ಪಿತ್ತ, ಉದರಶೂಲೆ, ಪ್ರಮೇಹ ವಗೈರೆ ರೋಗಗಳನ್ನು ಗುಣಪಡಿಸುವಲ್ಲಿ ಕೇವಲ ಅಮೃತಸಮಾನವಾಗಿರುವುದು. ಇದನ್ನು ಅಬಾಲವೃದ್ಧರೂ ಸೇವಿಸಬಹುದು.

48 ದಿನಗಳ ವರೆಗೆ ಸಾಕಾಗುವ ಲೇಹ ಸೇರು ೧ರ ರೂ. 3—0—0.

ಅಮೃತಾರಿಷ್ಟ:—ಮಲೇರಿಯಾ ವಗೈರೆ ಸಕಲ ಜ್ವರಗಳನ್ನು ನಾಶಗೊಳಿಸುವುದು. ಬಾಟ್ಲಿ 1ರ ರೂ. 1—0—0.
ದ್ರಾಕ್ಷಾರಿಷ್ಟ:—ಬಾಟ್ಲಿ 1ರ ರೂ. 1—0—0. ಗೋರೋಚನಾದಿ ಮಾತ್ರೆ, ಮಕ್ಕಳ ಚಿಕಿತ್ಸೆಗೆ ಸಿದ್ಧೌಷಧ. ಡಜನ್ 1ರ ಕ್ರಯ 0—8—0. ಕರ್ಪೂರಾದಿ ವಾಯುಮಾತ್ರೆ, ಡಜನ್ 1ರ ಕ್ರಯ 0—6—0.

ಇನ್ನು ಎಲ್ಲಾ ತರದ ಆಯುರ್ವೇದ ಸಿದ್ಧೌಷಧಗಳು ನಮ್ಮಲ್ಲಿ ದೊರಿಯುವವು.

ವಿಳಾಸ:— ಪಂಡಿತ, ಬಿ. ರಾಮಕೃಷ್ಣ ಬಾಳಿಗ, ಬಂಟವಾಳ ದ. ಕ.
ಮಂಗಳೂರು ಏಜಂಟರು:— ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ತೇರುಬೀದಿ, ಮಂಗಳೂರು.

AMRUTANJAN
Best Indian Pain Balm
Amrutanjan
BOMBAY

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು.

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ತಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣಾದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 2 ಆಣೆ.

ಅಮೃತಾಂಜನ ಡಿಪೋ,

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ ಟೌನ್, ಮದ್ರಾಸು.

109 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಮೂರು ದಿವಸಗಳಲ್ಲಿ ಗುಣಸಿಕ್ಕದಿದ್ದರೆ ಔಷಧಿಯ ಕ್ರಯ ವಾಪಾಸು.

ಜೀರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ, ಪರಮಾನಂದ ಮೊದಲಾದ ಸುಖಜೀವನಕ್ಕೆ ಬೇಕಾದ ಆರೋಗ್ಯದಾಯಿಸಿ.

ಲೋಕಪ್ರಸಿದ್ಧವಾದದ್ದು! ಅನುಭವಸಿದ್ಧವಾದದ್ದು!!

ಟ್ರೇಡ್ ಮಾರ್ಕ್] ಅಗಸ್ತ್ಯ [ನೋಡಿ ತಕ್ಕೊಳ್ಳಿರಿ.

ಮನ್ಮಥ ಚಿಂತಾಮಣಿ ಲೇಹ.

(ರಜಿಸ್ಟರ್ ಆದದ್ದು)

ಅಬಾಲವೃದ್ಧ ಸ್ತ್ರೀಪುರುಷರ ಅನೇಕ ರೋಗಗಳ ಮೇಲೆ ಗುಣಕಾರಿಯಾದದ್ದು.
ಮೇಹವಿಕಾರವಿದ್ದವರಿಗೂ, ನಿದ್ರೆಯಿಲ್ಲದವರಿಗೂ, ಸ್ವಪ್ನೇಂದ್ರಿಯವಾಗುವ ಯುವಕರಿಗೂ ಜ್ಞಾನಿಸುಜ್ಞಾನಿಗಳಿಗೂ ಉಪಯೋಗವುಳ್ಳ ಪರಮಾನಂದ ಔಷಧಿ.

1 ಸೇರು [illegible] ಸೇವಿಸಬಹುದು.
1 ಸೇರು ಡಬ್ಬಿ 1ಕ್ಕೆ 3—0—0. ½ ಸೇರು ಡಬ್ಬಿ 1ಕ್ಕೆ 1-9-0.
ವಿ. ಪಿ. ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿಗೆ ಬರೆಯಿರಿ.

ವಿಳಾಸ:— ದೇವಣ್ಣ ನಾರಾಯಣ ಸೇಟ್,
[illegible]
ಮಂಗಳೂರು, (ದ. ಕ.)

— ರಥೋತ್ಸವ, ವಿವಾಹ ಉಪನಯನಗಳ ಸಮಯ —
ಸರ್ವರಿಗೂ ಉಡಿಗೆ ತೊಡಿಗೆಗಳು ಬೇಕಾಗುವ ಸಂದರ್ಭ.

ಯಾರು, ಯಾವುದನ್ನು ಎಲ್ಲಿ ಪಡೆಯಬೇಕೆಂಬ ತರ್ಕದಿಂದ ವಿಳಂಬ ಮಾಡಬೇಡಿರಿ. ಉಡಿಗೆತೊಡಿಗೆಗಳನ್ನು ಚುನಾಯಿಸಿ ನಿಮಗೆ ಬೇಕಾದ ಯಥಾರ್ಥ ಮಾಹಿತಿಯನ್ನು ಕಳೆದ ಇಪ್ಪತ್ತೈತ್ತು ವರುಷಗಳಿಂದ ನಡೆದು ನಮ್ಮಲ್ಲಿಯ ವ್ಯಾಪಾರವು ಗಿರಾಕಿಗಳಿಗೆ ಸರ್ವ ದೃಷ್ಟಿಯಿಂದಲೂ ಲಾಭಕರವಾಗಿ ಪರಿಣಮಿಸುವಂತೆ ನಮ್ಮ ಜವಳಿ ಸಂಗ್ರಹವನ್ನು ಮಾಡಿರುತ್ತೇವೆ.

ಗುರ್ಪುರ್ಕಾರ್ ಬ್ರದರ್ಸ್, ರಥಬೀದಿ, ಮಂಗಳೂರು.

ಹೆಡ್ ಆಫೀಸು:—ರಥಬೀದಿ—(ಮೊದಲು ಕುಬೇರ ನಾಗಪ್ಪನಾಯಕ್, ಎಂಡ್ ಕೊ, ಇದ್ದಲ್ಲಿ; ಅಜಿಜುದ್ದೀನ್ ರಸ್ತೆಗೆ ತಿರುಗುವಲ್ಲಿ) ಮಂಗಳೂರು.

ಬ್ರಾಂಚ್ ಆಫೀಸು:—ರಥಬೀದಿ—(ಹಳೇ ತಾಲೂಕು ಕಚೇರಿಯ ಪಟಾರಕ್ಕೆ ಸಮೀಪವಿರುವ ಮಳಿಗೆ) ಮಂಗಳೂರು.

ಈ ದೇಶದ ಪ್ರಖ್ಯಾತವಸ್ತ್ರ ನೇಯುಗೆಯ ಕೇಂದ್ರಸ್ಥಳಗಳಾದ—ಬನಾರಸ್, ಪೂನಾ, ಅಹಮ್ಮದಾಬಾದ್, ಸುರತ್, ಬೆಂಗಳೂರು, ಧರ್ಮಾವರಮ್, ಕಂಜೀವರಮ್, ಕೊಯಮುತ್ತೂರು, ಮಧುರೆ, ತಂಜಾವೂರು, ಕಂದಘಳೋಟ, ಅರ್ನಿ, [illegible], ಮದ್ರಾಸು ಈ ಪ್ರಾಂತ್ಯಗಳಲ್ಲಿ ತಯ್ಯಾರಾದ ಜರಿಸೀರೆಗಳು, ದುಪ್ಪಟಾ, ಜರಿಶಾಲು, ಪೇಟ್ಯಾ, ರೇಶ್ಮೆ ಸೀರೆಗಳು, ಅರಪೇಟೆ ಸೀರೆಗಳು, [illegible] ರೇಶ್ಮೆ ಸೀರೆಗಳು, [illegible] ಸೀರೆಗಳು, ರೇಶ್ಮೆ ಮಡಿಗಳು, ನಿತ್ಯ ಉಪಯೋಗದ ಸೀರೆಗಳು [illegible] ಕೈರಾಟೆಯಲ್ಲಿ ತಯಾರಿಸಿದ ನೂಲಿನಿಂದ ಮಾಡಿದ—

ಖದ್ದರ್ ಶರ್ಟಿಂಗ್, ಖದ್ದರ್ ಕೋಟಿಂಗ್, ಖದ್ದರ್ [illegible], ಖದ್ದರ್ ಪೇಟ್ಯಾ, ಅಂಗವಸ್ತ್ರ, ಇತ್ಯಾದಿ— ಮುಸಲ್ಮಾನರಿಗೆ ಬೇಕಾದ ನಮೂನೆಯ [illegible] ವಗೈರೆ—

ಈ ಸಂಗ್ರಹವನ್ನು ನಮ್ಮ [illegible] ಸಂಗ್ರಹಿಸಿ ತಂದಿರುತ್ತಾರೆ.

[illegible] 10%, ರೂ. 250 ರಿಂದ 1000ಕ್ಕೆ 12½% [illegible]

Edited, Printed & Published by V. S. Kamath at the M. T. A. SHARADA PRESS, MANGALORE.

ಲಿವರ್ ಮೂವ್‌ಮೆಂಟ್ ವಾಚ್.

15 ಮಣಿಗಳಿದ್ದು ರೋಲ್ಡಗೋಲ್ಡ ವಾಚ್.

ಈ ಗಡಿಯಾರ ಕೈಗೆ ಕಟ್ಟುವಂಥಾದ್ದಾಗಿ ಸರಿಯಾದ ಸಮಯವನ್ನು ತೋರಿಸಿ ಚಿರಕಾಲ ವರೇಗೆ ಬಾಳುವುದು.

10 ವರುಷದ ವರೆಗೆ ಬಾಳುವ ಗೆರೆಂಟಿ ಇದೆ. ಕ್ರಯ ರೂ. 17—8—0.

11 ಮಣಿಗಳಿದ್ದು ನಿಜವಾದ ರೋಲ ಗೋಲ್ಡ ಬಂಗಾರದಿಂದ ತಯಾರಿಸಲ್ಪಟ್ಟು 5 ವರ್ಷದ ಗೆರೆಂಟಿ ಇರುವ ವಾಚಿಗೆ ಕ್ರಯ ರೂ. 12—8—0.

18 ಕೆರೆಟ್ ಇಲೆಕ್ಟ್ರೊ ರೋಲ್ಡ ಗೋಲ್ಡ ವಾಚ್ ಕ್ರಯ ರೂ. 7—0—0. ಲಿವರ್ ಮೂವ್‌ಮೆಂಟ್ 10 ಮಣಿಗಳಿದ್ದ ಬಂಗಾರ ಗಿಲ್ಟುವಾಚ್ ಕ್ರಯ ರೂ. 13—8—0.

ಎಲಾರ್ಮ ಜರ್ಮನ್ ಟ್ಯಾಮ್‌ಪೀಸ್ ಕ್ರಯ ರೂ. 5-0-0.

ಡಬ್ಬಲ್ ಎ. „ „ „ 6-0-0.

"ಬಿ" ಟ್ಯಾಮ್‌ಪೀಸ್ ಕ್ರಯ ರೂ. 2—4—0

ಟಿಕ್—ಟಾಕ್ ವಾಚ್ 1ರ ಕ್ರಯ „ 2—12—0

ಕಂಬ್ಯಾಂಡ್ ಪೆಪರ್ ಕ್ಲಿಪ್ ಟ್ಯಾಮ್‌ಪೀಸ ಹಿತ್ತಾಳಿ ಅಥವಾ ನಿಕ್ಕಲ್ ಕ್ರಯ ರೂ. 6—0—0. ಇನೆಮಲ್ ರೂ. 7—0—0. ಫ್ರೆಂಚ್ ಬೆಡ್ ಫೊಟೋಗಳು ಡಜನ್ 1ರ ಕ್ರಯ ರೂ. 2—4—0.

Emarald Watch Co.,
P. T. MADRAS.

ಪ್ರಸಿದ್ಧ ಪತ್ರಿಕೆ.

ಹೊಸ ಬೀಜಗಳು! ಖಾತರಿಯಾದವು!!

೧೨ ಪ್ಯಾಕೆಟ್ ಉತ್ತಮ ಜಾತಿಯ ವಿದೇಶಿ ತರಕಾರಿ ಬೀಜಗಳು ೧೨ ರಖಂ ... ... ೨-೦-೦.

೧೨ ಪ್ಯಾಕೆಟ್ ನಾಟಿ ತರಕಾರಿ ಬೀಜಗಳು ೧೨ ರಖಂ ... ... ೧-೧೨-೦.

೧೨ ಪ್ಯಾಕೆಟ್ ದೇವರ ಪೂಜೆಗೂ ಮತ್ತು ಅಲಂಕಾರಕ್ಕೆ ಯೋಗ್ಯವಾದ ಹೂ ಬಿಡತಕ್ಕ ಉತ್ತಮವಾದ ೧೨ ರಖಂಗಳ ಬೀಜಗಳು ... ... ೨-೦-೦.

ಈ ಮೇಲ್ಕಂಡ ಬೀಜಗಳನ್ನು ಈ ತಿಂಗಳೊಳಗಾಗಿ ತರಿಸಿಕೊಂಡರೆ, ಪೋಸ್ಟೇಜು ಮತ್ತು ಇತರೆ ಎಲ್ಲಾ ಚಾರ್ಜುಗಳು ಸೇರಿ, ಮೇಲೆ ನಮೂದಿಸಿರುವ ಬೆಲೆಗೆ, ವಿ. ಪಿ ಯಿಂದ ಕಳುಹಿಸುತ್ತೇವೆ. ಅಲ್ಲದೆ ಇದರ ಸಂಗಡ ಚಿತ್ರಗಳಿಂದ ಕೂಡಿರುವ ನಮ್ಮ ದೊಡ್ಡ ಕ್ಯಾಟಲಾಗನ್ನು ಕಳುಹಿಸಿ ಕೊಡುತ್ತೇವೆ. ನಮ್ಮಲ್ಲಿ ದೊರಕುವ ಬೀಜಗಳು, ಉತ್ತಮ ತರಹವುಳ್ಳವು. ಮತ್ತು ಖಾತರಿಯಾದವು. ಹುಟ್ಟದ ಹೋದರೆ, ಬೇರೆ ಬೀಜಗಳನ್ನು ಬದಲಾಯಿಸಿ ಕೊಡುತ್ತೇವೆ.

ದಿ. ಮೆಜೆಸ್ಟಿಕ್ ನರ್‌ಸರಿ (ತೋಟ)
ಲಾಲ್‌ಬಾಗ್ (ಕೋಟೆ) ರೋಡ್,
ಬೆಂಗಳೂರು ಸಿಟಿ.

11 ಮಣಿಗಳಿದ್ದು ಬ್ರಿಜ್ ಮೂವ್ಮೆಂಟ್.

22 ಕೆರೆಟ್ ರೋಲ್ಡಗೋಲ್ಡ ರಿಸ್ಟ್‌ವಾಚ್.

ಈ ವಾಚ್ ಎಂಟಾಣೆ ಪಾವಲಿಯಷ್ಟು ಸಣ್ಣದಾಗಿ ಬಹು ಚಲೋದಾದ ಇನೆಮಲ್ ಡಾಯಲ್ ಇದ್ದು ಬಹು ಉತ್ತಮವಾಗಿದೆ. 5 ವರ್ಷದಗ್ಯಾರಂಟಿ ಇದೆ. ಕ್ರಯ ರೂ. 12/8

18 ಕೆರೆಟು ಇಲೆಕ್ಟ್ರೊ ರೋಲ್ಡಗೋಲ್ಡ ವಾಚ್ ಕ್ರಯ ರೂ. 7—0—0. "ಬಿ" ಟ್ಯಾಮ್‌ಪೀಸ ರೂ. 2-4-0

9 ಕಾರಾಟ್ 8 ಮಣಿಗಳ ವಾಚ್ 1ರ ಕ್ರಯ 23—0—0.
14 „ „ „ 26—0—0.
14 „ 15 ಮಣಿ „ 36—0—0.
9 „ „ „ 32—0—0.

ಚಲೋದಾದ ಲವ್ ನಕ್ಷೆಗಳು ಡಜನ್ 1ಕ್ಕೆ ರೂ. 2/4.

P. Sambasiva Chetty & Co.,
134 NAINEAPPA NAICKEN ST.
P. T. MADRAS.

Fresh Arrivals

Pear's Solid Brilliantine, Evans Lime-juice Glycerine, Tooth powders Rose water, Syrups of all sorts for drinks, Denatured Spirits, etc., etc.

The Mangalore Trading Association,
Car-Street, MANGALORE.

ಡಾಕ್ಟರುಗಳು ಭಿನ್ನಾಭಿಪ್ರಾಯಪಡುವಾಗ್ಯೆ ತೀರ್ಮಾನಿಸುವದು ಯಾರು?

ಅಂಥಾ ಸಂದರ್ಭಗಳಲ್ಲಿ ಡೆಂಗ್ಯು ಮುಂತಾದ ಜ್ವರಗಳನ್ನು ನಿವಾರಿಸುವಂಥಾ "ಬಾಟ್ಲಿವಾಲರ ಏಗ್ಯುಮಿಕ್ಸ್ಚರ್"ನ್ನು ಸರಾಗವಾಗಿಯೂ, ಮತ್ತು ಜ್ವರಗಳನ್ನು ಖಂಡಿತವಾಗಿ ನಿಲ್ಲಿಸುವಂಥಾದೂ, ಎಲ್ಲಾ ತರದ ತಲೆನೋವುಗಳನ್ನು ಹೋಗಲಾಡಿಸುವಂಥಾದ್ದೂ ಆದ "ಬಾಟ್ಲಿವಾಲರ ಏಗ್ಯುಪಿಲ್ಸ್" ಇದನ್ನು ಉಪಯೋಗಿಸಿರಿ.

ಐ. ಎಮ್. ಎಸ್. ಡಾಕ್ಟರುಗಳಿಂದ ಶಿಫಾರಸು ಮಾಡಲ್ಪಟ್ಟಿದ್ದು. ಇದರ ಉಪಯೋಗದಿಂದ ಹೃದಯದ ಮೇಲೆ ಯಾವ ದೊಂದೂ ಬಾಧಕವಿಲ್ಲ. ಅರ್ಧ ಶತಮಾನದಿಂದ ಹಿಂದೂಸ್ಥಾನ, ಬರ್ಮಾ, ಸಿಲೋನ್, ಆಫ್ರಿಕಾ ಇವುಗಳಲ್ಲಿ ಪ್ರಖ್ಯಾತಪಟ್ಟಿದ್ದಾಗಿರುತ್ತದೆ.

ಅನೇಕ ಹಿಂದೀ ಪ್ರದರ್ಶನಗಳಲ್ಲಿ ಬೆಳ್ಳಿ ಮತ್ತು ಬಂಗಾರದ ಪದಕಗಳನ್ನು ಪಡೆದಿರುತ್ತೆ. ಚಾಲ್ತಿ ನಾಮ್ಯತಂತಿನ್ನ ಮಾರ್ಗಗಳೂ ಕೂಡ ಅವರ ಮೇಲೆ ಹಣವನ್ನು ಮುಂಗಡವಾಗಿ ಕೊಡುತ್ತಾರೆ. ಬಡ ಮತ್ತು ಮಧ್ಯಮ ತರಗತಿಯ ಜನರಿಗೆ ವರಪ್ರದಾನವಾಗಿದ್ದು ಸಂಚಾರ, ಪ್ರಯಾಣ, ದೇಶಾಟನೆಯ ಸಮಯದಲ್ಲಿ ಹತ್ತಿರದಲ್ಲಿರಿಸಿಕೊಳ್ಳದಾಗಿರುತ್ತದೆ.

ಬಾಟ್ಲಿವಾಲರ ಬಾಲಾಮೃತ ಅಥವಾ ಟೊನಿಕ್ ಸಿರಪ್.

ಕೆಮ್ಮನ್ನು ಹೋಗಲಾಡಿಸಿ, ಎದೆನೋವನ್ನು ಶಾಂತಗೊಳಿಸಿ, ಜ್ವರವನ್ನು ಉಪಶಮನಿಸಿ, ನಿದ್ರಾಭಂಗವನ್ನು ತಡೆದು ಪಡಿಧಾತುವರ್ಧನವನ್ನು ಮಾಡುವದರಲ್ಲಿ ಅತ್ಯುತ್ತಮವಾಗಿರುತ್ತದೆ. ಕಫವನ್ನು ಒಡನೆ ಮಾಯವಾಗುವಂತೆ ಮಾಡುವುದಲ್ಲದೆ ಅದೇ ಸಮಯದಲ್ಲಿ ಒಳ್ಳೇ ಜೀರ್ಣವನ್ನು ಉಂಟುಮಾಡುವುದು. ದರ ಮೊದಲಾದ ಮಾಹಿತಿಯನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ತಾರಿನವತ್ತೆ:-CAWASHAPUR, BOMBAY.

Dr. H. L. Batliwala & Co., Ltd.,
Sayani Road, P. O. Cadell Road, Bombay. No. 14.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.,
Sayani Road, P. O. Cadell Road, Bombay. No 14.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟ. ಖ. 9 ಆಣೆ.

ನಮ್ಮ ವಿಳಾಸ:— ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.

ಏಜಂಟರು:— ದಿ. ಊಲನ್ ಮಾರ್ಟ್, ಮಂಗಳೂರು.

ಸಾಂಟೋಲ್ ಕಾಂಪೌಂಡ್.

ಎಲ್ಲಾ ವಿಧದ ಮೇಹಗಳಿಗೂ ರಾಮಬಾಣ.

ಸ್ತ್ರೀ ಪುರುಷರಿಗೆ ರೋಗವು ಸಂಭವಿಸಿದಂದಿನಿಂದಲೂ ಮೇಹ ಜಾಡ್ಯವು ಉಂಟಾಗಿದೆಯೆಂದು ಹೇಳಬಹುದು, ಜಗತ್ತಿನಲ್ಲಿ ಮೇಹಗಳಲ್ಲಿ ಹಲವು ವಿಧಗಳುಂಟು. ಇವುಗಳಲ್ಲಿ ಸಾಧಾರಣವಾದುದು ಒಂದು ವಿಧವಾದ ಸಾಂಕ್ರಾಮಿಕ ಕ್ರಿಮಿಯಿಂದುತ್ಪನ್ನವಾಗುವುದು. ಇದು ನೋಡಲು ಮರ್ಮದ ಸ್ಥಾನದಲ್ಲಿ ಚರ್ಮದ ಪೊರೆಯನ್ನಾಶ್ರಯಿಸಿ, ಆ ಮೇಲೆ ಅಲ್ಲಿ ಬಾವು, ಬಿಗಿತ, ನೋವು ಉಂಟಾಗಬಹುದು. ಅವರವರ ದೇಹಸ್ಥಿತಿಯನ್ನು ಅವಲಂಬಿಸಿ ಕ್ರಮೇಣ ಅಥವಾ ಶೀಘ್ರದಲ್ಲಿ ವೃದ್ಧಿ ಹೊಂದಬಹುದು. ಇದರಿಂದ ಫಕ್ಕನೆ ತೊಡೆ ಸಂದುಗಳಲ್ಲಿ ತೊಡೆವಾಳವೆಂಬ ಕುರುವೂ ಏಳಬಹುದು. ಇದೇ ಮೇಹದ ವಿಷವು ಶರೀರದಲ್ಲಿ ಹರಡಲೆತ್ನಿಸಿದುದರ ಚಿಹ್ನೆಯೆಂದು ತಿಳಿಯಬೇಕು. ಇದು ಕಣ್ಣುರೆಪ್ಪೆಯ ಒಳಭಾಗದ ನರಗಳಿಗೇನಾದರೂ ಏರಿದರೆ, ಆಗ ಮೇಹನಯನವೆಂದರೆ 'ಗೊನೊರಿಯಲ್ ಆಪ್ತಾಲ್ ಅಮೇಯಿಯಾ' ಎಂಬ ರೋಗವು ಉತ್ಪನ್ನವಾಗುವುದು. ಈ ರೋಗದಿಂದ ಗಾಯದಿಂದ ಹೊರಬೀಳುವ ದ್ರವವು ಅನೇಕ ವಿಧದ ಬಣ್ಣವುಳ್ಳದಾಗಿರುವುದು. ಹೆಂಗಸರಲ್ಲಿ ಈ ರೋಗವು ಮೂತ್ರದ್ವಾರದಲ್ಲಿಯೂ, ಗರ್ಭಾಶಯದಲ್ಲಿಯೂ ನೆಲೆಗೊಂಡಿರಬಹುದು.

ಈ ರೋಗದಂಥ ದುಷ್ಪರಿಣಾಮಕಾರಿಯಾದ ಕೆಟ್ಟರೋಗವು ಮತ್ತೊಂದಿಲ್ಲವೆಂದು ಹೇಳಬಹುದು. ಇದನ್ನು ಹೆಚ್ಚು ಕಾಲ ಹಾಗೆಯೇ ಬಿಟ್ಟರೆ, ಪುರುಷರ ಮೂತ್ರದ್ವಾರದ ಒಳಶಕ್ತಿಯನ್ನು ಹದಗೆಡಿಸಿ ಕ್ಷಣಬಂಧವನ್ನುಂಟುಮಾಡಿ, ಮೂತ್ರದ್ವಾರವನ್ನು ಕಟ್ಟುವುದು. ಆದ್ದರಿಂದ ಇದಕ್ಕೆ ಕೂಡಲೆ ಔಷಧವನ್ನು ಸೇವಿಸಿ, ಅದರ ಮೂಲೋತ್ಪಾಟನೆ ಮಾಡುವುದುತ್ತಮ. ಹಲವು ವರ್ಷಗಳ ವೈದ್ಯಕೀಯ ಅನುಭವದಿಂದ ಈ "ಸಾಂಟೋಲ್ ಕಾಂಪೌಂಡ್" ಎಂಬ ಔಷಧಿಯನ್ನು ಕಂಡುಹಿಡಿದಿದ್ದೇವೆ. ಇದರಲ್ಲಿ ಯಾವ ಅಪಾಯಕರವಾದ ಔಷಧಿ ಸಾಮಗ್ರಿಗಳೂ ಇಲ್ಲ. ಇದು ಎಲ್ಲಾ ಶರೀರಗಳಿಗೂ ಅನುಗುಣವಾಗಿದೆ. ಇದರ ಸೇವನೆಯಿಂದ ರೋಗವು ಗುಣವಾಗುವುದೆಂಬುದರಲ್ಲಿ ಯಾವ ಸಂಶಯವೂ ಬೇಡ. ರೋಗವು ಯಾವ ಸ್ಥಿತಿಯಲ್ಲೇ ಇರಲಿ, ಎಷ್ಟು ಹಳೆಯದೇ ಆಗಿರಲಿ ಅದನ್ನು ವಾಸಿಮಾಡುವುದೇ ಇದರ ಗುಣವು. ಈ ರೋಗವು ಸ್ತ್ರೀ ಪುರುಷರಿರುವೆಡೆಗಳಲ್ಲಿ ಸಾಮಾನ್ಯವಾಗಿರುವುದರಿಂದ ಇದು ಎಲ್ಲರಿಗೂ ಸುಲಭ ದರದಲ್ಲಿ ಸಿಗಬೇಕೆಂದು ಇದರ ಬೆಲೆಯನ್ನು ಕೇವಲ ರೂ. ೨ ಮಾತ್ರ ಇಟ್ಟಿರುವೆವು. ಪ್ಯಾಕಿಂಗ್ ಮತ್ತು ಪೋಸ್ಟು ಖರ್ಚು ಪ್ರತ್ಯೇಕ. ದಿನಕ್ಕೆ ಎರಡು ಸಲ ೧ ಟೀ ಚಮಚೆ ನೀರಿನಲ್ಲಿ ಯಾ ಹಾಲಿನಲ್ಲಿ ಊಟದ ನಂತರ ತೆಕ್ಕೊಳ್ಳುವುದು. ಪತ್ರವ್ಯವಹಾರಗಳೆಲ್ಲ ಗುಪ್ತವಾಗಿರುವುವು. ವಿಶ್ವಾಸರ್ಹರಾದ ಏಜಂಟರು ಬೇಕಾಗಿರುವರು. ಹೆಚ್ಚಿನ ಮಾಹಿತಿಗೆ ಬರೆಯಿರಿ.

ದಿ. ಊಲನ್ ಮಾರ್ಟ್,
ಸೋಲ್ ಏಜೆಂಟ್ಸ್,
ಮಂಗಳೂರು, ದಕ್ಷಿಣ ಕನ್ನಡ.

ಶಾಲಿವಾಹನಶಕ ೧೮೪೭ನೆಯ ಕ್ರೋಧನ ಸಂವತ್ಸರದ ಆಶ್ವೀಜ ಬ॥ ೮ ಶನಿವಾರದಿಂದ ಕ್ರೋಧನ ಸಂವತ್ಸರದ ಆಶ್ವೀಜ ಬ॥ ೧೪ ಶುಕ್ರವಾರದ ವರೆಗಿನ ಪಂಚಾಂಗ

(೧೯ನೆಯ ಕನ್ಯಾ ನಿರ್ವಾಣ.)

ತಾರೀಕು	ವಾರ	ತಿ.	ಘಳಿಗೆ	ನಕ್ಷತ್ರ	ಘಳಿಗೆ	ಸೌರಮಾನ	ಸೂರ್ಯ ಉ.	ಸೂರ್ಯ ಅಸ್ತ.
10	ಶನಿ	೮	೨೨.೪೦	ಪುನರ್ವಸು	೪೧.೩೨	೨೪	6 22	6 15
11	ರವಿ	೯	೨೮.೩೨	ಪುಷ್ಯ	೪೭.೪೭	೨೫	6 22	6 14
12	ಸೋಮ	೧೦	೩೨.೪೦	ಆಶ್ಲೇಷಾ	೫೪. ೨	೨೬	6.22	6 14
13	ಭೌಮ	೧೧	೩೭.೧೬	ಮಘಾ	೫೯.೪೭	೨೭	6.22	6.13
14	ಬುಧ	೧೨	೪೧. ೦	ಹುಬ್ಬಾ	೬೦. ೦	೨೮	6 22	6.13
15	ಗುರು	೧೩	೪೪. ೨	ಹುಬ್ಬಾ	೪.೪೭	೨೯	6.23	6.12
16	ಶುಕ್ರ	೧೪	೪೫.೩೨	ಉತ್ತರಾ	೮.೩೨	೩೦	6 23	6 12

ಮಂಗಳೂರಿನ ವಾಯುಸ್ಥಿತಿ.

Date ತಾರೀಕು	Temperature. ಉಷ್ಣ (ಕಾವು) Maximum ಹೆಚ್ಚಾದದ್ದು	Minimum ಕಡಿಮೆ	Rainfall. ಮಳೆ ದಿನದ ಮಳೆ	ಜುಮಲಾ ಮಳೆ.
2	89—8	73—5	0—23	—
3	89—2	74—5	—	—
4	91—0	78—8	—	—
5	85—4	73—8	1—25	—
6	89—9	74—6	0—02	—
7	89—0	75—0	—	—
8	89—5	73—6	2—35	.

ಮಂಗಳೂರಿನ ಪೇಟೆ ಧಾರಣೆ.

ಜಿನಸು	ಇಂದ	ವರೆಗೆ
	ರೂ. ಆ.	ರೂ. ಆ
ಮಸೂರಿ	8—10	9— 0
ಗುಡ್ಡ ...	8— 4	8—12
ರಾಶಿ ಸುಗ್ಗಿ ...	7—10	8— 6
ಅವ್ವಲ್ ಬೆಳ್ತಿಗೆ ...	8—12	9—12
ಗುಡ್ಡ ಬೆಳ್ತಿಗೆ ...	8— 0	8— 8
ರಂಗೂನು ಬೆಳ್ತಿಗೆ ಗೋಣಿ ೧ ...	13— 8	14— 8
ಗೋಧಿ ಗೋಣಿ ೧ಕ್ಕೆ ...	17— 8	19— 0
ಹುರುಳಿಗೋಣಿ ೧ಕ್ಕೆ ...	9— 8	9— 8
ಕಡಲೆಗೋಣಿ ೧ಕ್ಕೆ ...	12— 0	13— 0
ತೊ[illegible]ಣಿ ೧ಕ್ಕೆ ...	12— 8	13— 0
ತೊ[illegible]ಣಿ ಗೋಣಿ ೧ಕ್ಕೆ ...	15— 0	20— 0
ಉದ್ದುಗೋಣಿ ೧ಕ್ಕೆ ...	14— 0	14— 8
ಹೆಸರುಗೋಣಿ ೧ಕ್ಕೆ ...	14— 0	15— 0
ಊರು ಬೆಲ್ಲ ಖಂಡಿ ೧ಕ್ಕೆ ...	80—	70— 0
ಉಪ್ಪು ಗೋಣಿ ೧ಕ್ಕೆ ...	4— 4	4— 8
ಕೊಬ್ರಿ ಖಂಡಿ ೧ಕ್ಕೆ ...	115— 0	120— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	46— 0	48— 0
ಎಳ್ಳಿಂಡಿ ಖಂಡಿ ೧ಕ್ಕೆ ...	40— 0	—
ಕೊಬ್ರಿ ಎಣ್ಣೆ ಮುಡಿ ೧ಕ್ಕೆ ...	8—14	10— 0
ಎಳ್ಳೆಣ್ಣೆ ಮುಡಿ ೧ಕ್ಕೆ ...	8— 0	11— 0
ಹಿಪ್ಪೆ ಎಣ್ಣೆ ಮುಡಿಗೆ ೧ಕ್ಕೆ ...	8-8-0	—
ತೋರಿನ ಸಕ್ಕರೆ ಮುಡಿ ೧ಕ್ಕೆ ...	4— 3	—
ಊರ ಮೆಣಸಿನಕಾಯಿ ಮುಡಿ ೧ಕ್ಕೆ ...	6— 8	—
ಸಾಸಿವೆ ಮುಡಿ ೧ಕ್ಕೆ ...	8—12	—
ಕೊತ್ತಂಬರಿ ಮುಡಿ ೧ಕ್ಕೆ ...	3—14	4— 0
ಕಾಫಿ ಖಂಡಿ ೧ಕ್ಕೆ ...	345— 0	400— 0
ಕೊಳಗೋಟು ಅಡಿಕೆ ಖಂಡಿ ೧ಕ್ಕೆ ಹಳತು ...	245— 0	250— 0
„ ಹೊಸ ಅಡಿಕೆ	240— 0	0— 0
ಕಾಳುಮೆಣಸು ಖಂಡಿ ೧ಕ್ಕೆ ...	220— 0	—
ಯಾಲಕ್ಕಿ ಮುಡಿ ೧ಕ್ಕೆ ...	100—0	—
ಗೇರುಬೀಜ ಮುಡಿ ೧ಕ್ಕೆ ...	6— 2	—
ಚಕ್ಕೆ ಖಂಡಿ ೧ಕ್ಕೆ ...	45— 0	65— 0
ಕಾಂಪ್ಟ ಹಣ್ಣು ಮುಡಿ ೧ಕ್ಕೆ ...	17— 8	—
ತಾಮ್ರ ಪಾತ್ರೆಗಳು ಮುಡಿ ೧ಕ್ಕೆ ...	24— 0	—
ಚೀನಿ ಬೆಲ್ಲ ಸೇರು ೧ಕ್ಕೆ ...	18—10	
ಹಿತ್ತಾಳಿ ಪಾತ್ರೆ ಮುಡಿ ೧ಕ್ಕೆ ...	16— 8	
ತವರು	18— 7	

ಜ್ಯೋತಿಷ್ಯ ಸಂಗ್ರಹ.

(1) ಬೃಹಜ್ಜಾತಕ ... ...
(2) ಉಮಾಮಹೇಶ್ವರ ಸಂವಾದ ಎಂಬ ಜ್ಯೋತಿಷ್ಯ ಕಾಲಚಕ್ರ
(3) ಕೇರಳ ಪ್ರಶ್ನೆ ... ...
(4) ಪ್ರಶ್ನೋತ್ತರ ರತ್ನಮಾಲಿಕಾ ... ...
(5) ಸಮನೋಹರಾಮೃತ ... ...
(6) ಷಟ್ಪಂಚಾಶತ್ ಗ್ರಂಥ ... ...
(7) ನಕ್ಷತ್ರ ಚೂಡಾಮಣಿ ಗ್ರಂಥ ... ...
(8) ಮುಹೂರ್ತಪದವೀಗ್ರಂಥ ... ...
(9) ಅಷ್ಟದಿಕ್ಪಾಲಕ ಮಂಗಲಾಷ್ಟಕಗಳು ... ...
(10) ಕಾಲನಿರ್ಣಯಾಭ್ಯೋದಯಂ ಗ್ರಂಥ ... ...
(11) ಸಮ್ಯಕ್ಪ್ರಶ್ನ ಸಾರಾಮೃತ ... ...

— ಪ್ರಸಂಗದ ಪುಸ್ತಕಗಳು. —

(1) ಸೇತು ಬಂಧನ ... ...
(2) ವಸಿಷ್ಠ ಪುರಾಣ ... ...
(3) ಇಂದ್ರಜೀತು ಕಾಳಗ ... ...
(4) ಚಂದ್ರಹಾಸ ... ...
(5) ಮೈದುನರಾಮನ ಚರಿತ್ರೆ ... ...
(6) ಭಾಮಿನಿ ಷಟ್ಪದಿ ಚೋರ ಕಥೆ ... ...
(7) ಕುಮಾರ ರಾಮನ ಕಥೆ ... ...
(8) ಕೃಷ್ಣದಾನಾಮೃತ ... ...
(9) ಶ್ರೀಕೃಷ್ಣ ಸತ್ಯಭಾಮ ಸಂವಾದ ... ...
(10) ಚಿತ್ರಕೇತು ರಾಜನ ಕಥೆ ... ...
(11) ಬಕಾಸುರ ವಧೆ ... ...
(12) ಬಾಣಾಸುರನ ಕಥೆ ... ...
(13) ರಂಭಾಶುಕ ಸಂವಾದ ... ...
(14) ರುಕ್ಮಿಣೀ ಪರಿಣಯ ... ...
(15) ರಾವಣೋದ್ಭವ ಯಕ್ಷಗಾನ ... ...
(16) ಸಭಾ ಲಕ್ಷಣವು ... ...
(17) ಶ್ರೀ ಕೃಷ್ಣದೀಪಾತ್ಸವದ ಕಥಾ ... ...
(18) ಚಂದ್ರಮೌಳಿ ಕಾಳಗ ... ...
(19) ಚಿತ್ರವಿಚಿತ್ರ ಕಾಳಗ ... ...
(20) ಯಕ್ಷಗಾನ ಸಾರಂಗಧರನ ಕಥೆ ... ...
(21) „ ಶನಿದೇವರ ಮಹಾತ್ಮೆ ... ...
(22) „ ಹರಿಶ್ಚಂದ್ರನ ಕಥೆ ... ...
(23) ಯಕ್ಷಗಾನ ಲವಕುಶರ ಕಥೆ
(24) „ ಚೋರ ಕಥೆ ... ...
(25) „ ಪಾರ್ವತಿ ಕಾರವಂಶ ಕಥೆ ... ...
(26) „ ಗೋವಿನ ಚರಿತ್ರೆ ... ...
(27) „ ದುಶ್ಯಾಸನ ಕಥೆ ... ...
(28) „ ಸಾನಂದ ಗಣೇಶ್ವರ ಕಥೆ ... ...
(29) „ ಅಂಗದ ಸಾಧನ ... ...

— ಭಜನೆಯ ಪುಸ್ತಕಗಳು. —

(1) ಉಡುಪಿಕ್ಷೇತ್ರ ಮಹಾತ್ಮೆ ... ...
(2) ಹನುಮದ್ರಾಮಾಯಣ ... ...
(3) ಅಧ್ಯಾತ್ಮ ವಿಚಾರ ... ...
(4) ಭಕ್ತಿಮಹಿಮ ... ...
(5) ಪ್ರಬಂಧ ಮುಕ್ತಾವಳಿ ... ...
(1) ಹರಿಕೀರ್ತನಾಮೃತಸಾರ ... ...
(2) ಹರಿನಾಮಾಮೃತಂ. ... ...
(3) ರುಕ್ಮಿಣೀ ಕಲ್ಯಾಣ ... ...
(4) ಮಂಗಳ ಗೌರೀಹಾಡು ... ...
(5) ಉದ್ಯಾಲೀಕನ ಹಾಡು ... ...
(6) ಯಕ್ಷಗಾನ ಗೀತ ಹಾಡು ... ...
(7) ಕನಕದಾಸ ಕಬೀರದಾಸರ ಕೀರ್ತನೆಗಳು ...
(8) ಬೀಗರ ಹಾಡು ... ...
(9) ಭಜನೆಯ ಪದಗಳು ... ...

— ವಿವಿಧ ಪುಸ್ತಕಗಳು. —

(1) ಸದಾಚಾರ ವಿವೇಚನೆ ... ...
(2) ಗೋಪಾಲಕೃಷ್ಣ ಗೋಕಲೆ ... ...
(3) ಶ್ರೀಕೃಷ್ಣ ಸೇವಾಮೃತಂ ... ...
(4) ಪಕ್ಷಾಶ್ರಿತ ಭಾಷ್ಯ ... ...
(5) ಶ್ರೀ ಶ್ರೀಮಹಾ ಭಾಗವತ ... ...
(6) ಉದ್ಧಯನ ಚರಿತ್ರೆ ... ...
(7) ಮಧ್ವಾಚಾರ್ಯರು (ಶ್ರೀಮಾನ್) ... ...
(8) ಯತಿರಾಜವಂಶತಿ ... ...
(9) ಪರಮಾರ್ಥಶತಕಂ ... ...
(10) ಭಕ್ತಿಸುಮಾಂಜಲಿ ... ...
(11) ಸತ್ಯರಾಜ ಪೂರ್ವದೇಶ ಯಾತ್ರೆಗಳು ...
(12) ಕಾಲನಿರ್ಣಯಾಖ್ಯಾನ ... ...
(13) ಅರೇಬಿಯನ್ ನಾಯ್ಟ್ಸ್ 1000 ಪುಟಗಳ ಮೇಲೆ ಇವೆ.

ಪುಸ್ತಕಗಳು ದೊರೆಯುವ ಸ್ಥಳ:—

ಶಾರದಾ ಛಾಪಖಾನೆ,
ರಥ ಬೀದಿ, ಮಂಗಳೂರು

ಕನ್ನಡಿಗರೆ! **ವಸಂತ.** ಕಣ್ತೆರೆಯಿರಿ

ಈಗಾಗಲೇ ಎರಡನೇ ಸಂಪುಟವು ಆರಂಭಿಸಲಿದೆ.

ಇತಿಹಾಸನಿಧಿ ಎಂದರೆ . . . . ವಸಂತ
ಸಮಾಜಸುಧಾರಕನೆಂದರೆ . . . . ವಸಂತ
ಕೈಗಾರಿಕೆಯ ಸಾಮ್ರಾಜ್ಯವೆಂದರೆ . . . . ವಸಂತ
ಕರ್ನಾಟಕ ಭಾಷಾಸೇವಕನೆಂದರೆ . . . . ವಸಂತ
ದೇಶವಿದೇಶ ಬಂಧುವೆಂದರೆ . . . . ವಸಂತ
ಕಾದಂಬರಿಗಳ ಭಂಡಾರವೆಂದರೆ . . . . ವಸಂತ
ಚಿತ್ರಾಕರ್ಷ ಚಿತ್ರಶಾಲೆಯೆಂದರೆ . . . . ವಸಂತ
ದೇಶಭಕ್ತನೆಂದರೆ . . . . ವಸಂತ

ಇಂತಹ ವಸಂತನು ಯಾರಿಗೆ ಬೇಕು, ಯಾರಿಗೆ ಬೇಡ?

48 (ಕ್ರೌನ್ ¼ ಫುಟ ಸ್ಯಾಜಿನ) ಪುಟಗಳನ್ನು ಒಳ್ಳೆಯ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3—4—0 ಮಾತ್ರ.

ವ್ಯವಸ್ಥಾಪಕ,
ವಸಂತ ಕಾರ್ಯಾಲಯ,
ಕುಂದಾಪುರ, ದಕ್ಷಿಣ ಕನ್ನಡ

ಬೇಕಾಗಿದ್ದಾರೆ!

ಒಳ್ಳೇ ದೃಢತೆಯುಳ್ಳ ಭದ್ರವಾದ ಇನ್ಶೂರೆನ್ಸ್ ಕಂಪೆನಿಯಲ್ಲಿ ಜೀವವಿಮೆ, ಫ್ಯಾರ್‌ವಿಮೆ, ಮೆರೀನವಿಮೆ ಯಾವತು ವಿಮೆ ಕೆಲಸಗಳನ್ನು ಶೇಖರಿಸಿ ಕೊಡಲು ದಕ್ಷಿಣಕನ್ನಡಾ ಜಿಲ್ಲೆಯಲ್ಲಿ ಯೋಗ್ಯ ಸಬ್–ಏಜಂಟರುಗಳು ಕೂಡಲೆ ಬೇಕಾಗಿದೆ. ಪ್ರತಿಫಲವೆಷ್ಟು ಎಂಬುದನ್ನೂ ಹಿಂದಣ ಅನುಭವವನ್ನೂ ಕುರಿತಾಗಿ ಕೂಡಲೆ ಬರೆದುಕೊಳ್ಳಿರಿ:—

ಮೆಸರ್ಸ್.—
ಜೆ. ಡಿ. ವಾಯೆಂಡಾ ಎಂಡ್ ಸನ್ಸ್
ಪೋರ್ಟ್ ರೋಡ್, ಮಂಗಳೂರು.

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ

ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ಯಾವಂತರೂ ತಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ತಮಾನಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನ್ನು ಕುರಿತ ಲೇಖನಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಅಧಿಕಾರಿಗಳೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪೋಷಕರಿಗೆ ... ... ರೂ. 3—0—0
ಇತರರಿಗೆ, ಪರಸ್ಥಳಕ್ಕೆ, ಪೋಸ್ಟೇಜು ಸೇರಿ „ 2—8—0.
„ ಸ್ಥಳೀಯರಿಗೆ ... „ 1—8—0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪತ್ರಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಈಗ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಬಹುದು.

ಎಡಿಟರ್,
ಬಿ. ಹನುಮಂತಯ್ಯಗೌಡ,
ಅರ್ಥಸಾಧಕ ಪತ್ರಿಕೆ,
ಅರಳೇಪೇಟೆ, ಬೆಂಗಳೂರು, ಸಿಟಿ.

ಮಾರಾಟಕ್ಕೆ ಸಿದ್ಧವಿದೆ.

ಅಮಲ್ದಾರಿ, ವಕಾಲತು, ನಕಲಿನ ಬಗ್ಗೆ ನೋಟು, ಲೋಜಮೆಂಟ ಸ್ಕೆಡ್ಯೂಲ, ಪೇಮೆಂಟ್ ಸ್ಕೆಡ್ಯೂಲ, ಬಟ್ಟಾ ನೋಟು, ಮೆಮೊ ಒಪ್ ಕೊಸ್ಟ್ಸ್, ಮೆಮೊರಂಡಮ್ ಒಪ್ ಎಪ್ಪಿಯರೆನ್ಸ್, ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರ, ವಗೈರೆ ಎಲ್ಲಾ ಫೋರ್ಮುಗಳು ನಮ್ಮಲ್ಲಿ ದೊರೆಯುತ್ತವೆ.

100 ಫೋರ್ಮುಗಳ ಕ್ರಯ 0—12—0.

ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರು 1ರ ಕ್ರಯ 0—2—0.

ಶಾರದಾ ಛಾಪಖಾನೆ,
ರಥ ಬೀದಿ, ಮಂಗಳೂರು.

The Canara Bank Ltd., Mangalore.
ದಿ. ಕೆನರಾ ಬ್ಯಾಂಕು ಲಿಮಿಟೆಡ್., ಮಂಗಳೂರು.

ಇದೇ 1925ನೇ ಇಸವಿ ಸಪ್ಟಂಬರ ತಾ. 18ನೇ ಸ್ವದೇಶಾಭಿಮಾನಿ ಪತ್ರಿಕೆಯಲ್ಲಿ ಪ್ರಕಟಿಸಿದ ನೋಟೀಸಿಗೆ ಅನುಸಾರವಾಗಿ ಈ ಕೆಳಗೆ ಹೆಸರು ಕಾಣಿಸಿದವರ ಬಾಬ್ತು ನಗಗಳನ್ನು ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂಮಾಡಿ ಹುಟ್ಟಿಬಂದ ಐವೇಜಿನಲ್ಲಿ ಬ್ಯಾಂಕಿಗೆ ಬಹಾ ಅಸಲು ಬಡ್ಡಿ ವಗೈರೆ ಮೊಬಲಗು ಕಳೆದು ಬಾಕಿ ಇರುವ ಐವೇಜನ್ನು ಸದರೀಯವರು ಯಾ ಸದರೀಯವರ ವಾರಿಸ್ದಾರರು ಅವರ ಹಕ್ಕಿನ ಸಂಗತಿ ಬ್ಯಾಂಕಿಗೆ ಸಮಾಧಾನಪಡಿಸಿ ಪಡಕೊಂಡು ಹೋಗತಕ್ಕದ್ದೆಂತಲೂ, ಹಾಗೆ ಕೊಂಡುಹೋಗುವ ವರೆಗೆ ಸದರಿ ಐವೇಜು ಅಮಾನತು ಇಟ್ಟಿರುವುದಾಗಿಯೂ ಅದಕ್ಕೆ ಬಡ್ಡಿ ಸಿಕ್ಕಲಿಕ್ಕಿಲ್ಲವಾಗಿಯೂ ಈ ಮೂಲಕ ತಿಳಿಸೋಣಾಗುತ್ತದೆ.

ಷರಾ:—ವಾರಿಸ್ದಾರರು ಐವೇಜು ಕೊಂಡುಹೋಗುವಾಗ ಈ ನೋಟೀಸಿನ ಖರ್ಚು ಕೊಡತಕ್ಕದ್ದು.

ಹೆಸರು.	ಏಲಂನಲ್ಲಿ ಹುಟ್ಟಿ ಬಂದ ಮೊಬಲಗು.	ಬ್ಯಾಂಕಿಗೆ ಬಹಾ ಅಸ್ಲು ಬಡ್ಡಿ ವಗೈರೆ.	ಬಾಕಿ ಉಳಿದ ಮೊಬಲಗು.
ಇಸ್ಮಾಯಿಲ್ ಬ್ಯಾರಿ	ರೂ. 50-0-0.	44-3-10.	5-12-2.
ಕೊರಗ ಶೆಟ್ಟಿ	,, 81-8-1.	80-8-1.	1-0-0.
ಸುಬ್ಬಯ್ಯ	,, 106-11-4.	105-11-1.	1-0-3.

ಕೆನರಾ ಬ್ಯಾಂಕು ಲಿಮಿಟೆಡ್
ಮಂಗಳೂರು 6-10-'25.
K. Venkat Rao,
ಸೆಕ್ರೆಟರಿ.

The Canara Bank Ltd., Mangalore.
ದಿ. ಕೆನರಾ ಬ್ಯಾಂಕು ಲಿಮಿಟೆಡ್., ಮಂಗಳೂರು.
ನೋಟೀಸು.

ಕುಂದಾಪುರ ತಾಲೂಕು ಯೆಲಿಜಿತ ಗ್ರಾಮದಲ್ಲಿರುವ ಸುಬ್ರಾಯ ಮಯ್ಯರ ಮಗ ಬಿಜೂರು ವೆಂಕಪ್ಪಯ್ಯ ಮಯ್ಯರು ಸದರೀ ಬ್ಯಾಂಕಿನಲ್ಲಿ ತಾರೀಕು 6—5—1922ರಲ್ಲು ಅಂದಾಜು ಚಿನ್ನ ತೊಲೆ 14ರ ಬಾಬ್ತು ಆಭರಣಗಳನ್ನು ಈಡಿಟ್ಟು ಪಡೆದ ರೂಪಾಯಿ 200 ವ ಅದರ ಬಾಕಿ ಬಡ್ಡಿ ಸಹಾ ವಾಯಿದೆಗೆ ಕೊಡದೆ ಸದರಿಯವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸು ಸದರಿಯವರು ಕಾಣ ಸಿಕ್ಕಲಿಲ್ಲವಾಗಿ ವಾಪಾಸು ಬಂದದರಿಂದ ಸದರಿ ಈಡಿಟ್ಟ ಆಭರಣಗಳನ್ನು ಇದೇ 28—10—1925ನೇ ಬುಧವಾರ ಮಧ್ಯಾಹ್ನ 12 ಗಂಟೆಗೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು.

ಕೆನರಾ ಬ್ಯಾಂಕು
ಲಿಮಿಟೆಡ್ ಮಂಗಳೂರು.
6—10—1925.
K. Venkat Rao,
ಸೆಕ್ರೆಟರಿ.

ನೋಟೀಸು.

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

O. P. No 47/25

1 ಶ್ರೀನಿವಾಸ
2 ಲಕ್ಷ್ಮೀನಾರಾಯಣ ಯಾನೆ ಭೋಜ } ಅರ್ಜಿದಾರರು.

ಮೈನರರು ವೆಂಕಟ್ರಮಣ ಭಟ್ಟನ ಮಕ್ಕಳು. ರಕ್ಷಕಳು ತಾಯಿ ಕೃಷ್ಣವೇಣಿ ಅಮ್ಮ, ವೆಂಕಟ್ರಮಣ ಭಟ್ಟನ ವಿಧವೆ. ಉಡುಪಿ ತಾಲೂಕು ನಿಡಂಬೂರು ಮಾಗಣೆ ಕಚೇರಾರು ಗ್ರಾಮದಲ್ಲಿರುವವರು.

ಮತ್ತು

ಸೀತಾರಾಮ ಭಟ್ಟ, ಬಳಿಸಾವಿರ ದಾಸಭಟ್ಟನ ಮಗ
ಯೇಣುಗುಡ್ಡೆ ಗ್ರಾಮದ ಚೊಕ್ಕಾಡಿಯಲ್ಲಿ
ಇರುವವನು. } ಎದ್ರಿ.

ಸದರಿ ಮೃತ ವೆಂಕಟ್ರಮಣ ಭಟ್ಟನ ಮಕ್ಕಳಾದ ಅರ್ಜಿದಾರರು ಸದರಿ ವೆಂಕಟ್ರಮಣ ಭಟ್ಟಗೆ Canara Banking Corporation Ltd., Udipi ನಿಂದ Fixed Deposit Receipt No. 210/17-10-24ನೇ ಬಾಬಿನಲ್ಲಿ ಬರತಕ್ಕ ರೂಪಾಯಿ 1088-9-4 ಮತ್ತು Canara Public Conveyance Co., Ltd., Mangalore ನಿಂದ Share Certificate No. 4014—4015ನೇ ಬಾಬಿನಲ್ಲಿ ಬರತಕ್ಕ ರೂಪಾಯಿ 29-0-0ನ್ನು ಕೂಡ ವಸೂಲು ಮಾಡಲಿಕ್ಕೆ ತಾವು ಹಕ್ಕುದಾರರಾದ್ದರಿಂದ, ಆ ಹಣಗಳನ್ನು ವಸೂಲು ಮಾಡಲಿಕ್ಕೆ ತಮಗೆ Succession Certificate ನ್ನು ಈ ಕೋರ್ಟಿನಿಂದ ಕೊಡಬೇಕಾಗಿ ಮೈನರ್ ಅರ್ಜಿದಾರರ ಕಡೆಯಿಂದ ರಕ್ಷಕಳು ತಾಯಿ ಕೃಷ್ಣವೇಣಿ ಅಮ್ಮನು ಈ ಕೋರ್ಟಿಗೆ O. P. 47/25ನೇ ಅರ್ಜಿಯನ್ನು ದಾಖಲು ಮಾಡಿರುತ್ತಾಳೆ. ಈ ಅರ್ಜಿಯು ತಾ. 26—10—1925ಕ್ಕೆ ತನಿಕೆಗೆ ಇಟ್ಟಿರುತ್ತದೆ. ಈ ಅರ್ಜಿ ಬಾಬಿನಲ್ಲಿ ಯಾರಾದರೂ ಆಕ್ಷೇಪ ಹೇಳುವಂತಾದ್ದು ಇದ್ದರೆ ಸದರಿ ತಾರೀಕಿನಲ್ಲಿ ಈ ಕೋರ್ಟಿನಲ್ಲಿ ಜಾಹೀರು ಮಾಡಿಕೊಳ್ಳತಕ್ಕದ್ದು.

District Munsif's
Court, Udipi.
2—10—1925.
By order
P. RAMA RAO,
Head Clerk.

ನೋಟೀಸು.

ದಕ್ಷಿಣ ಕನ್ನಡ ಜಿಲ್ಲಾ ಜಡ್ಜರ ಕೋರ್ಟಿನಲ್ಲಿ.

O. P. 87/1925.

ಮಹಾಬಲ ಶೆಟ್ಟಿ — ಅರ್ಜಿದಾರ

ಮೇಲ್ಕಂಡ ಅರ್ಜಿದಾರನು ತನ್ನ ಮೈನರ್ ಮಕ್ಕಳು ವೀರಣ್ಣ ಶೆಟ್ಟಿ, ಭುಜಂಗ ಶೆಟ್ಟಿ, ಜಗನ್ನಾಥ ಶೆಟ್ಟಿ, ಗಿರಿಜ ಮತ್ತು ಮೊಮ್ಮಗಳು ಪಾರ್ವತಿ, ಇವರ ಗಾರ್ಡಿಯನನಾಗಿ ನೇಮಿಸಲ್ಪಡಲಿಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ದಾಖಲು ಮಾಡಿದ ಮೇಲ್ಕಂಡ ಅರ್ಜಿಯು ತಾ. 23—10—1925ಕ್ಕೆ ತನಿಖೆಗೆ ಇಟ್ಟಿರುತ್ತದೆ.

ಮಂಗಳೂರು,
ತಾ. 2-10-'25
P. Sanjiva Rao,
Vakil for Petitioner.

ನೋಟೀಸು.

ವಿಜಾರ್ ತಿಮ್ಮಪ್ಪ ಪೈ, ಮಂಗಳೂರು.

ಈ ಕೆಳಗೆ ಹೆಸರು ಕಾಣಿಸಿದವರು ಸದರಿಯವರಿಂದ ಆಭರಣಗಳ ಈಡಿನ ಮೇಲೆ ಪಡೆದ ಮೊಬಲಗುಗಳನ್ನು ವಾಯಿದೆಗೆ ಕೊಡದೆ ಇದ್ದದರಿಂದ ಸದರಿಯವರಿಗೆ ರಿಜಿಸ್ಟ್ರಿ ನೋಟೀಸು ಮೂಲಕ ಅಸಲು ಬಡ್ಡಿ ಐವೇಜುಗಳನ್ನು ಕೊಡಬೇಕಾಗಿ ತಿಳಿಸಿದ್ದಲ್ಲಿ ಕೂಡ ಆ ರೀತಿ ಅವರು ಕೊಡದೆ ಇದ್ದದ್ದರಿಂದ ಸಹ ಇದೇ ಅಕ್ಟೋಬರ ತಾರೀಕು 30ನೇ ಶುಕ್ರವಾರದ ಒಳಗೆ ಮೇಲಿನ ಆಸಾಮಿಗೆ ಸಲ್ಲತಕ್ಕ ಅಸಲು ಬಡ್ಡಿ ಐವೇಜು ಕೊಟ್ಟು ಅಡವಿಟ್ಟ ನಗಗಳನ್ನು ಬಿಡಿಸದೆ ಇದ್ದರೆ ಅವುಗಳನ್ನು ಇದೇ 1925ನೇ ಇಸವಿ ನವಂಬರ ತಿಂಗಳ ತಾರೀಕು 6ನೇ ಶುಕ್ರವಾರ ಮಧ್ಯಾಹ್ನ 12 ಘಂಟೆಗೆ ತೇರುಬೀದಿ ವಕೀಲ ವಿಜಾರ ಗಣೇಶ ಪೈಗಳ ಆಫೀಸಿನ ಎದುರು ಬಹಿರಂಗವಾಗಿ ಏಲಂ ಮಾಡಲಾದೀತು.

ಹೆಸರು	ಅಡವಿಟ್ಟ ತಾರೀಕು
ಕಜೆಕಾರ ಪಟೇಲ್ ಅನಂತಯ್ಯ ಕೊಂಡೆ	3—3—1920
ಉಳ್ಳಾಬೆಟ್ಟು ಗ್ರಾಮದಲ್ಲಿರುವ ಅಬ್ಬು ಯಾನೆ ಶೇಕಮ್ ಬ್ಯಾರಿ	24-5—1922
ಸದರಿ ಆಸಾಮಿಯ ಬಾಬ್ತು	24-5—1922
ಸದರಿ ಆಸಾಮಿಯ ಬಾಬ್ತು	24-5—1922
ಸದರಿ ಆಸಾಮಿ ಮಗ ಬಾವ ಯಾನೆ ಮೊಹಮ್ಮದ ಬ್ಯಾರಿ	26—11—1922
ಮಳಲೂರ ಇದ್ದಿನೆ ಬ್ಯಾರಿ	2—9—1922
ಸದರಿ ಆಸಾಮಿ ಬಾಬ್ತು	17-5—1923

ಸಾಲದ ಮೊಬಲಗು	ಏಲಮಿಗೆ ನಿಶ್ಚಯಿಸಿದ ತಾರೀಕು ವರೆಗೆ ಬಹಾ ಬಡ್ಡಿ ರೂಪಾಯಿ
125—0—0	88—10—8
165—0—0	103-12—0
100—0—0	62—4—0
109—0—0	62—4—0
62—0—0	34—4—0
225—0—0	129—0—0
175—0—0	78—12—0

ಮತ್ತು ಚೀಟು ನೋಟೀಸುಗಳ ಖರ್ಚ

ವಿಜಾರ ತಿಮ್ಮಪ್ಪ ಪೈ ರುಜು.

ಪ್ರಕಟಣೆ.

— ದಕ್ಷಿಣ ಆಫ್ರಿಕಾ ದಿನ. —

ಪಾಟಣಾದಲ್ಲಿ ಕಳೆದ ತಿಂಗಳಲ್ಲಿ ಸೇರಿದ ಆಲ್ ಇಂಡಿಯಾ ಕೊಂಗ್ರೆಸ್ ಕಮಿಟಿಯ ಸಭೆಯಲ್ಲಿ ಕೆಳಗಿನ ನಿರ್ಣಯವು ಮಂಜೂರಾಗಿದೆ:

'ದಕ್ಷಿಣಾಫ್ರಿಕದಲ್ಲಿ ನೆಲಸಿರುವ ಹಿಂದೀ ನಿವಾಸಿಗಳ ಮೇಲೆ ಬಂದಿರುವ ಕಷ್ಟಗಳಲ್ಲಿ ಈ ಕಮಿಟಿಯು ತನ್ನ ಸಂಪೂರ್ಣ ಸಹಾನುಭೂತಿಯನ್ನು ವ್ಯಕ್ತಪಡಿಸುವುದಲ್ಲದೆ, ಸ್ವಾಭಿಮಾನದಿಂದ ಜೀವಿಸಿಕೊಂಡಿರಲು ಸಾಧ್ಯವಾಗುವಂತೆ ಅವರಿಗೆ ರಾಷ್ಟ್ರಸಭೆಯ ಶಕ್ತಿಯಲ್ಲಿರುವ ಎಲ್ಲ ಸಹಾಯವನ್ನು ಮಾಡುವ ಆಶ್ವಾಸನವನ್ನು ಕೊಡುತ್ತದೆ. ಬಲಾತ್ಕಾರದಿಂದಾಗಲೀ ಸ್ವೇಚ್ಛೆಯಿಂದಾಗಲಿ, ಅಲ್ಲಿಯ ಹಿಂದೀ ನಿವಾಸಿಗಳನ್ನು ಸ್ವದೇಶಕ್ಕೆ ಹಿಂದೆ ಬರುವಂತೆ ಮಾಡುವ ಯಾವ ಯೋಜನೆಗೂ ಹಿಂದೂ ದೇಶವು ಒಪ್ಪಿಗೆಯನ್ನು ಕೊಡಬಾರದೆಂದು ಈ ಕಮಿಟಿಯು ಸಾರುವುದೂ. ಅಲ್ಲದೆ ಯೂನಿಯನ್ ಪಾರ್ಲಿಮೆಂಟಿನವರು ಈಗ ಮಂಜೂರು ಮಾಡಬೇಕೆಂದಿರುವ ಮಸೂದೆಯು ೧೯೧೪ರಲ್ಲಾದ 'ಗಾಂಧೀ ಸ್ಮಟ್ಸ್' ಒಪ್ಪಂದಕ್ಕೆ ಸರಿವಿರೋಧವಾಗಿದೆಯೆಂದೂ ಈ ಕಮಿಟಿಯ ಅಭಿಪ್ರಾಯ. ದೇಶದಲ್ಲಿಯ ಎಲ್ಲಾ ಕೊಂಗ್ರೆಸ್ ಸಂಸ್ಥೆಗಳು ಅಕ್ಟೋಬರ ೧೧ನೇ ತಾರೀಗಿನ ದಿನ ಸರ್ವಪಕ್ಷಗಳಿಂದ ಕೂಡಿದ ಸಭೆಗಳನ್ನು ಸೇರಿಸಿ ದಕ್ಷಿಣಾಫ್ರಿಕದಲ್ಲಿ ಹಿಂದೀ ನಿವಾಸಿಗಳನ್ನು ನಡೆಸುವ ರೀತಿಯ ಕುರಿತು ನಿಷೇಧವನ್ನು ಪ್ರಕಟಿಸಬೇಕೆಂದು ಸೂಚಿಸುತ್ತದೆ.'

ದಕ್ಷಿಣ ಆಫ್ರಿಕದ ೧॥ ಲಕ್ಷಕ್ಕಿಂತ ಹೆಚ್ಚು ಸಂಖ್ಯೆಯ ನಮ್ಮ ದೇಶಬಾಂಧವರ ಮುಂದೆ ಬಹಳ ದೊಡ್ಡ ಆಪತ್ತು ಉಪಸ್ಥಿತವಾಗಿದೆ. ಅಲ್ಲಿಯ ಯೂನಿಯನ್ ಪಾರ್ಲಿಮೆಂಟಿನ ಮುಂದಿರುವ 'ಕಲರ್‌ಬಾರ್ ಬಿಲ್' ಮತ್ತು 'ಏಶ್ಯ ಕ್ಲಾಸ್ ಏರಿಯಾಸ್ ಬಿಲ್' ಎಂಬ ಎರಡು ಮಸೂದೆಗಳು ಮಂಜೂರಾದರೆ ಅಲ್ಲಿಯ ಹಿಂದೀ ನಿವಾಸಿಗಳ ಸರ್ವನಾಶವಾಗುವುದೆಂಬುದಕ್ಕೆ ಸಂದೇಹವಿಲ್ಲ. ಈ ವಿಷಯದಲ್ಲಿ ಯಾವ ಭಿನ್ನಾಭಿಪ್ರಾಯವೂ ಇರಲು ಕಾರಣವಿಲ್ಲ. ಮಹಾತ್ಮಾ ಗಾಂಧಿಯವರು, ದಕ್ಷಿಣ ಆಫ್ರೀಕದ ಹಿಂದು ರಾಷ್ಟ್ರೀಯ ಸಭೆಯ ಅಧ್ಯಕ್ಷರೂ ಕಾನಪುರ ಕೊಂಗ್ರೆಸ್ಸಿನ ನಿಯೋಜಕ ಅಧ್ಯಕ್ಷರೂ ಆದ ಶ್ರೀಮತಿ ಸರೋಜಿನಿಯವರೂ ದೇಶದ ಬೇರೆ ಬೇರೆ ಜಾತಿಮತಸ್ಥರೂ ಭಿನ್ನಾಭಿನ್ನ ರಾಜಕೀಯ ಪಂಗಡಗಳಿಗೂ ಈ ದಿನಾಚರಣೆ ಸಹಭಾಗಿಗಳಾಗಬೇಕೆಂದು ವಿನಂತಿ ಮಾಡಿಕೊಂಡಿರುವರು.

ದಕ್ಷಿಣ ಕನ್ನಡ ಜಿಲ್ಲೆಯ ಪ್ರತಿಯೊಂದು ಊರಿನಲ್ಲಿಯೂ ಈ ದಿನವನ್ನು ಯೋಗ್ಯರೀತಿಯಲ್ಲಿ ಆಚರಿಸುವ ಏರ್ಪಾಡನ್ನು, ಎಲ್ಲಾ ಕೊಂಗ್ರೆಸು ಕಮಿಟಿಗಳು ಮಾಡಬೇಕೆಂದೂ ಮಹಾ ಜನರೆಲ್ಲರೂ ಸಹಕರಿಸಬೇಕೆಂದೂ ಆ ಗ್ರಹದ ವಿನಂತಿಯುದೆ.

ಉಡುಪಿ,
ತಾ. ೮—೧೦—'೨೫.
ಕೆ. ಪಾಂಡುರಂಗ ಪೈ,
ಕಾರ್ಯದರ್ಶಿ, ಜಿಲ್ಲಾ ಕೊಂಗ್ರೆಸ್ ಕಮಿಟಿ.

ಪ್ರಕಟಣೆ.

ವರುಷಂಪ್ರತಿ ಒಕ್ಟೋಬರ ತಿಂಗಳ ೩೧ರಿಂದ ನವೆಂಬರ ತಿಂಗಳ ತಾ. ೧೫ರ ವರೆಗೆ ನಡೆದು ಬರುವ ಕುಲುಕುಂದಾ ಕೆಟಲ್ ಫೇರ್ (ದನಕರುಗಳ ಸಂತೆ) ಈ ವರುಷ ಉಪ್ಪಿನಂಗಡಿ ತಾಲೂಕು, ಕಾಸರಗೋಡು ತಾಲೂಕು ಮತ್ತು ಮೈಸೂರು ಪ್ರಾಂತ್ಯದ ಇತರ ಕಡೆಗಳಲ್ಲಿ ದನಕರುಗಳಲ್ಲಿ ಒಂದು ತರದ ಅಂಟು ರೋಗವು ಹಬ್ಬಿದ್ದರಿಂದ ಇದರ ನಿವಾರಣೆಗೋಸ್ಕರ ಈ ವರುಷ ನಡೆಯಬಾರದಾಗಿ ಜಿಲ್ಲಾ ಕಲೆಕ್ಟರರವರು ಹುಕುಂ ಕೊಟ್ಟಿರುತಾರೆ. ಹಳ್ಳಿ ಹಳ್ಳಿಯ ರೈತರು ದನಕರುಗಳನ್ನು ಸದರಿ ಸಂತೆಗೆ ಕೊಂಡುಹೋಗಬಾರದಾಗಿ ಈ ಮೂಲಕ ತಿಳಿಸೋಣಾಗುತ್ತದೆ.

NOTICE.

In the Court of the District Munsif of Kasaragod.

O. P. No. 140 of 1925.

Kudlu Venkatesha Shanbhaga.. *Petitioner*

Notice is here by given that the above-named Petitioner has applied for the grant to him of a Certificate under Act VII of 1889 authorising him to recover Rs. 3,039—4—0 from the Oriental Government Security Life Assurance Company due under the Policy of the deceased Kudlu Subraya Shanbhaga and the petition stands posted to 15-10-1925.

Kasaragode,
Dated 23—9—1925.
K. P. Keshava Row,
Vakil for Petitioner.

ವಂದೇಮಾತರಂ

ಶ್ರೀ ಉಕ್ಕಿನಡ್ಕ ವಸಿಷ್ಠಾಶ್ರಮ.

ಕ್ರೋಧನ ಸಂ॥ರದ ಆಶ್ವೀಜ ಶುದ್ಧ ದಶಮಿ ಆದಿತ್ಯವಾರ ಜರಗಿದ ಸಭೆಯ ವರದಿ.

(೧) ಈ ಸಭೆಯು ಘಂಟೆ ೨ಕ್ಕೆ ಶಾಲೆಯಲ್ಲಿ ಜರಗಿತು. ಸದರಿ ಸಭೆಗೆ ಮ। ರಾ। ಶ್ರೀ। ಸುಬ್ರಹ್ಮಣ್ಯರನ್ನು (ಕಾಶೀ ವಿಶ್ವನಾಥ ಶಾಸ್ತ್ರಿಗಳನ್ನು) ಅಧ್ಯಕ್ಷರನ್ನಾಗಿ ಚುನಾಯಿಸಲಾಯಿತು. ಹಾಜರು:—ಮ। ರಾ। ಶಂಕರ ಶಾಸ್ತ್ರಿಗಳು ನೀರ್ಚಾಲ್, ಕೋರಿಕ್ಕಾರು ಸುಬ್ರಾಯ ಜೋಯಿಸರು, ಮಳಿಕ್ಕುಂಜೆ ಕೃಷ್ಣಜೋಯಿಸರು, ಪಟೇಲ ಗಣಪತಿ ಭಟ್ಟರು, ಅಳಕ್ಕೆ ಪಟೇಲ ತಿಮ್ಮಯ ಭಟ್ಟರು, ಮಣಿಮುಂಡ ವಿಶ್ವೇಶ್ವರ ಶಾಸ್ತ್ರಿಗಳು, ಭರಣ್ಯ ಕೃಷ್ಣಭಟ್ಟ, ಕೊಟ್ಟೆಕ್ಕೋಡಿ ನಾರಾಯಣ ಭಟ್ಟ, ಬಿ. ಮಾಧವಸ್ಯೆ, ಪಡ್ರೆ ಹೆಡ್‌ಮಾಸ್ಟರ್ ಬಿ. ಜನಾರ್ದನಸ್ಯೆ, ಯಸ್. ವೆಂಕಟ ಶರ್ಮ, ಪೆರ್ಡಾಲ್ ಜೋಯಿಸ ಕೃಷ್ಣಭಟ್ಟ, ಕೊಡೆಯಾಲ ಶಂಕರ ಭಟ್ಟ, ಕಾಶೀಮಠ ಗಣಪಯ್ಯ, ಗುಣಾಜೆ ರಾಮಭಟ್ಟ, ಮ। ರಾ। ಖಂಡಿಗೆ ಕೃಷ್ಣಭಟ್ಟರು ಮೊದಲಾದ ೧೫೦ ಮಂದಿ ಸಭೆಸೇರಿತ್ತು.

(೨) ಮ। ರಾ। ಗುತ್ತು ಗೋವಿಂದ ಭಟ್ಟರು ೧॥ ಘಂಟೆ ಸಂಗೀತ ಮಾಡಿದರು, ಈ ಆನಂದಕರವನ್ನುಂಟುಮಾಡುವ ಗಾನವನ್ನು ಕೇಳಿ ಸಭಿಕರು ಅವರನ್ನು ತುಂಬಾ ಶ್ಲಾಘಿಸಿದರು. (೩) ಮ। ರಾ। ಮನೇಜರರಾದ ಪಂಡಿತ ಶಂಕರ ನಾರಾಯಣ ಭಟ್ಟರು ಈ ಆಶ್ರಮಕ್ಕೆ ವರ್ಷಂಪ್ರತಿ ಒಂದು ಸಾವಿರ ರೂಪಾಯಿಗಳ ಬಡ್ಡಿ ಕೊಡುತ್ತೇನೆಂದು ವಾಗ್ದಾನ ಮಾಡಿದರು. ಇದಕ್ಕೆ ಅವರಿಗೆ ತುಂಬಾ ಕೃತಜ್ಞತೆಗಳು. (೪) ಈ ಆಶ್ರಮಕ್ಕೆ ತಾ. ೫-೬-'೨೫ನೇ ಸತ್ಯಾಗ್ರಹಿಯಲ್ಲಿ ಪ್ರಕಟವಾದಂತೆ ರೂ. ೪೧೧-೪-೬, ಅನಂತರ ಪಂಡಿತ ಶಂಕರ ನಾರಾಯಣ ಭಟ್ಟರ ಕೈಯಲ್ಲಿ ಹಣಕೊಟ್ಟು ಸಹಾಯ ಮಾಡಿದವರ ಹೆಸರು ಮತ್ತು ಹಣದ ಸಂಖ್ಯೆ ಈ ಕೆಳಗಿನಂತಿದೆ.

ವಂತಿಗೆಯ ವಿವರ.—ಸೂರಂಬೈಲ್ ಕೇಶವ ಶಂಕರಭಟ್ಟ ರೂ. ೧೦೦, ಕನ್ಯಾನ ಪಟೇಲ ಗಣಪತಿಭಟ್ಟ ರೂ. ೧೫, ಮತ್ತು ೬ ಜನರು ೧೦ರ ಪ್ರಕಾರವೂ, ೮ರ ಪ್ರಕಾರ ಇಬ್ಬರೇ, ೬ರ ಪ್ರಕಾರ ಇಬ್ಬರೂ, ೫ರ ಪ್ರಕಾರ ೫ ಜನರೂ, ಬಾಕಿ ೫ ರೂಪಾಯಿಗಿಂತ ಕಡಿಮೆಕೊಟ್ಟವರು ೧೫ ಮನೆಯಿಂದ ರೂ. ೨೫-೦-೬, ಅಂತೂ ಕಳೆದಷ್ಟು ಇದು ಕೂಡಿ ಒಟ್ಟು ರೂ. ೫೯೯-೫-೧-೦.

ಇಂತಿ,

(ಸಹಿ) ಕಾಶೀ ವಿಶ್ವನಾಥ ಶಾಸ್ತ್ರಿ, (ಅಧ್ಯಕ್ಷರು)

ವಿದೇಶ ವರ್ತಮಾನ.

—ಸೋವಿಯಟ್ ಸರಕಾರದ ವಕೀಲ ಹಾಗು ಮುಂದಾಳುಗಳನ್ನು ಕೊಲ್ಲಬೇಕೆಂಬ ಹೇತುವಿನಿಂದ ತಮ್ಮ ರಾಜ್ಯದಲ್ಲಿ ಸ್ಥಾಪಿಸಲ್ಪಟ್ಟ ಗುಪ್ತ ಸಂಘವನ್ನು, ಬರ್ಲಿನ ಪೋಲಿಸರು ಕಂಡುಹಿಡಿದು ಅದರ ಮೆಂಬರರನ್ನು ಕೈದುಮಾಡಿದ್ದಾರೆ.

—ಫ್ರಾನ್ಸದೇಶದ ಥಿಯರಿ ಎಂಬಾತನು ವಿಮಾನದಲ್ಲಿ ಕೂತು ಜರ್ಮನ ರಾಜ್ಯದ ಮೇಲಿಂದ ಪ್ರಯಾಣಬೆಳಸಿದ್ದರಿಂದ ಅವನನ್ನು ಕೈದು ಮಾಡಿ ೧೮ಲಕ್ಷ ಫ್ರೆಂಕು ಕೊಡಬೇಕೆಂದು ಹೇಳಿದ್ದಾರೆ.

—ಟೋಕಿಯೋದೊಳಗೆ ಬೆಂಕಿ ತಗಲಿ ಅಲ್ಲಿಯ ಪಾರ್ಲಿಮೆಂಟಿನ ಗೃಹ ಮತ್ತು ಲೋರ್ಡ್ಸರ ಅಧ್ಯಕ್ಷರ ಬಂಗಲೆಯು ಸಹ ಬೆಂಕಿ ತಗಲಿ ಸುಟ್ಟು ಹೋಗಿದ್ದಾವೆ. ಯಾರಾದರೂ ಗುಪ್ತಸಂಘದವರು ಈ ಪ್ರಕಾರ ಬೆಂಕಿ ಹಾಕಿರಬಹುದೆಂದು ಊಹನೆ ಅದೆ. ಅಷ್ಟೇ ಅಲ್ಲ, ಇಷ್ಟರ ವರೆಗೆ ಸಂಶಯದಿಂದ ಮೂವರನ್ನು ಕೈದುಮಾಡಿರುವರು. ಮತ್ತು ಇನ್ನೂ ಅನೇಕರನ್ನು ಹಿಡಿಯುವ ಸಂದರ್ಭ ಅದೆ.

—ಮುಸಲ್ಮಾನರಿಗೆ ಪವಿತ್ರಸ್ಥಾನವಾದ ಮದಿನಾದಲ್ಲಿ ಇಷ್ಟರ ವರೆಗೆ ಯುದ್ಧವು ನಡೆಯುತಿತ್ತಷ್ಟೆ. ಈಗ ಇಬನ್ ಸೌದನು ರಕ್ತಪಾತವನ್ನು ಸಹ ಮಾಡಿದೆ. ಹಾಗೂ ಮಹಮ್ಮದ ಪೈಗಂಬರನ ಗೋರಿಗೆ ಸಹ ಆಘಾತ ಮಾಡದೆ ಮದಿನಾ ಶಹರವನ್ನು ಸ್ವಾಧೀನಮಾಡಿದ್ದಾನೆ.

—ಫ್ರಾನ್ಸ ಹಾಗೂ ಅಮೇರಿಕಾ ಇವುಗಳಲ್ಲಿ ಸಾಲದ ವಿಷಯವಾಗಿ ನಡಿಯುತ್ತಿದ್ದ ವಾದವು ತಕ್ಕಮಟ್ಟಿಗೆ ನಿಂತಿದೆಂದು ವರ್ತಮಾನವಿದೆ. ಪ್ರತಿ ವರ್ಷ ೪೦ ಮಿಲಿಯ ಡೋಲರ್ಸಿನ ಪ್ರಕಾರ ಐದು ವರ್ಷದೊಳಗಾಗಿ ಫ್ರೆಂಚ ಸಾಲವನ್ನು ಕೊಡಬೇಕೆಂದು ನಿಶ್ಚಯವಾಗಿದೆ.

—ಯುರೋಪ ಖಂಡದಲ್ಲಿಯ ಸ್ಪೇನದ ರಾಜಧಾನಿಯಾದ ಮೆಡ್ರಿಡ್ ಎಂಬ ಪಟ್ಟಣದಲ್ಲಿ, ವಲ್ಲಿದೋಲಿಡ್ ಎಂಬ ಹೆಂಗಸು ಈಗ ತನ್ನ ೨೫ನೇ ಮಗನನ್ನು ಸುಖವಾಗಿ ಪ್ರಸವಿಸಿದಳು. ಈಕೆಗೆ ೬೮ ವರ್ಷ ಪ್ರಾಯವಾಗಿದ್ದು ಸ್ತ್ರೀ ಸಂತಾನವಿಲ್ಲವಂತೆ.

—ವಿಯಾನ್ನಾ ಎಂಬ ಪಟ್ಟಣದಲ್ಲಿ ಬೆಕ್ಕುಗಳ ಒಂದು ಪ್ರದರ್ಶನ ಮಾಡಬೇಕೆಂದು ಅಲ್ಲಿಯ ಮುಖಂಡರು ನಿಶ್ಚಯಿಸಿರುವರು! ನಿಜವಾಗಿಯೂ ಸ್ತುತ್ಯವೇ ಸರಿ!!

—ಇಂಗ್ಲಂಡಿನಲ್ಲಿ ಮಜೂರರು ಮುಷ್ಕರಹಾಕಿದರೆ ನಿತ್ಯವ್ಯವಹಾರಗಳನ್ನು ನಿರಾತಂಕವಾಗಿ ನಡಿಸುವುದಕ್ಕೆ ಈಗಲೆ ಅಲ್ಲಿ ಏರ್ಪಾಡನ್ನು ಮಾಡಲು ಮಂತ್ರಿಮಂಡಳದ ಕಡೆಯಿಂದ ಸಿದ್ಧತೆಯು ನಡೆಯುತ್ತಿದೆ. ಮತ್ತು ಇದಕ್ಕೆ ಸರಕಾರಿ ಅನುಮತಿಯು ಸಹ ಸಿಕ್ಕಿದೆ.

—ಜಪಾನಿನಲ್ಲಿ ಭಯಂಕರ ಮಳೆ ಮತ್ತು ಬಿರುಗಾಳಿಯು ಪ್ರಾರಂಭವಾಗಿ ೪೨ ಸಾವಿರ ಮನೆಗಳು ನೀರುಪಾಲಾದವು. ಜಪಾನ ದೇಶವು ಸರ್ವಸಾಧಾರಣವಾಗಿ ಭೂಕಂಪ, ಜ್ವಾಲಾಮುಖಿ, ಮತ್ತು ಈ ತರದ ಬಿರುಗಾಳಿಗಳಿಂದ ಪ್ರತಿವರುಷ ನಷ್ಟವನ್ನು ಹೊಂದುತ್ತಿದೆ. ಪೌರ್ವಾತ್ಯ ರಾಷ್ಟ್ರಗಳಲ್ಲಿ ಜಪಾನದೇಶವೆ ಹೆಚ್ಚಿಗೆ ಹೆಸರುವಾಸಿ ರಾಷ್ಟ್ರವಾದ್ದರಿಂದ ಅಂಥ ದೇಶವು ನಷ್ಟಹೊಂದುತ್ತಿರುವುದು ನಿಜವಾಗಿಯೂ ಶೋಚನೀಯವ ಸರಿ.

—ಇಂಗ್ಲಂಡಿನಲ್ಲಿ ನಡೆಯುತ್ತಿದ್ದ ಲೇಬರ ಪಾರ್ಟಿಯ ಕೊನ್ಫರೆನ್ಸಿನಲ್ಲಿ ಹಿಂದೂದೇಶಕ್ಕೆ ಸ್ವರಾಜ್ಯಕೊಡಬೇಕೆಂದು ಇಜಿಪ್ತದಲ್ಲಿ ನಡೆಯುತ್ತಿದ್ದ ಒಚ್ಚಾಟವನ್ನು ನಿಲ್ಲಿಸಬೇಕೆಂದೂ ಠರಾವುಗಳು ಪಾಸಾಗಿರುವವು.

ಎಂಪಾಯರ್ ಪ್ರೆಸ್ ಕೊನ್ಫರೆನ್ಸ ಎಂಬ ಬ್ರಿಟಿಷ ರಾಜ್ಯದೊಳಗಿನ ವೃತ್ತಪತ್ರಿಕೆಗಳ ಪರಿಷತ್ತು ಮೆಲ್‌ಬೋರ್ನ ಎಂಬಲ್ಲಿ ಲೋ. ಫೋಸ್ಟರ ಇವರ ಅಧ್ಯಕ್ಷತೆಯಲ್ಲಿ ನಡೆಯ ಬಂದಿದೆ. ಆ ಕಾಲದಲ್ಲಿ ನಡೆದ ಭಾಷಣಗಳಲ್ಲಿ ಅತಿಶಯ ಕಡಿಮೆ ಖರ್ಚಿನಲ್ಲಿ ವರ್ತಮಾನವನ್ನು ಒಂದು ಊರಿಂದ ಇನ್ನೊಂದು ಊರಿಗೆ ತಿಳಿಸುವಂತೆ ಮಾಡಬೇಕಾಗಿ ಸೂಚಿಸಲ್ಪಟ್ಟಿತ್ತು!

ಒಳದೇಶ ವರ್ತಮಾನ.

—ಸೌತ್ ಇಂಡಿಯನ್ ರೈಲ್ವೆ ಕಂಪೆನಿಯ ಇಂಗ್ಲಂಡ ಪಾಲುಮಾಲಿಕರು ತಮ್ಮ ಕೊನ್ಫರೆನ್ಸಿನಲ್ಲಿ ಹೊಸ ಸಾಮಾನು ಗಾಡಿಗಳನ್ನು ಹಾಗೂ ಪ್ರಯಾಣಿಕರ ಗಾಡಿಗಳನ್ನು ಹಿಂದೂಸ್ಥಾನಕ್ಕೆ ಕಳಿಸಬೇಕೆಂದು ನಿಶ್ಚಯಿಸಿದ್ದಾರೆ. ಇದು ನಮ್ಮ ಭಾಗ್ಯವೇ ಸರಿ.

—ಸಿಮ್ಲಾ ಪಟ್ಟಣದ ಮಹಿಳೆಯರು ಸಭೆಸೇರಿ ಪಂಡಿತ ಮೋತಿಲಾಲ ಅರ್ಪಿಸಿದ ಮಾನಪತ್ರದಲ್ಲಿ ಅವರು ಇತ್ತಲಾಗೆ ತೆಗೆದ ವಿಚಿತಿಗಳನ್ನು ಪುನಃ ಬೆಳೆಸಬೇಕೆಂದೂ, ಇಲ್ಲವಾದರೆ ಎಸೆಂಬ್ಲಿಯ ಶೋಭೆಯೇ ಕಳೆಗುಂದುವುದೆಂದೂ ವಿನಂತಿ ಮಾಡಿಕೊಂಡರಂತೆ.

—ಕಾನಪುರದಲ್ಲಿ ನಡೆಯಲಿಕ್ಕಿರುವ ರಾಷ್ಟ್ರೀಯ ಸಭೆಯ ಅಧ್ಯಕ್ಷಸ್ಥಾನವನ್ನು ಶ್ರೀಮತಿ ಸರೋಜಿನಿ ದೇವಿಯವರಿಗೆ ಕೊಡಲಾಗಿದೆ. ಪ್ರಾಂತಿಕ ಬಹುಮತವನ್ನು ತೆಗೆಯುವಾಗ ಶ್ರೀಮತಿ ಸರೋಜಿನಿಯವರಿಗೆ ೧೬ ಮತಗಳು ಮತ್ತು ದೇಶಬಂಧು ಕೇಳಕರರಿಗೆ ೧೩ ಮತಗಳು ಸಿಕ್ಕಿದವು.

—ಮಹಾತ್ಮಾ ಗಾಂಧಿಯವರ ಜನ್ಮದಿನದ ಸಮಾರಂಭವು ಅಹಮುದಾಬಾದ ಮದ್ರಾಸ್, ಗುಂಟೂರ ಮತ್ತು ಇತರ ಅನೇಕ ಕಡೆಗಳಲ್ಲಿ ಆಚರಿಸಲಾಯಿತು.

—ಬೇಡಬದಲಾವಣೆ ವಾದಿಗಳು ಪಾಟ್ನಾ ನಿರ್ಣಯಗಳಿಗೆ ಸಮ್ಮತಪಡದಿದ್ದರೆ ರಾಷ್ಟ್ರೀಯ ಸಭೆಯನ್ನು ಬಿಟ್ಟು ಸ್ವರಾಜ್ಯಸ್ಥರಿಗೆ ಆತಂಕ ಮಾಡಕೂಡದೆಂದು ಮಹಾತ್ಮಜಿಯವರು ಯಂಗ ಇಂಡಿಯಾ ಪತ್ರಿಕೆಯಲ್ಲಿ ಬರೆದಿದ್ದಾರೆ. ಅಲ್ಲದೆ ಪಾಟ್ನಾದಲ್ಲಿ ಮಾಡಿದ ಠರಾವು ಯೋಗ್ಯ ಮತ್ತು ಸ್ತುತ್ಯವೆಂದು ಪ್ರತಿಪಾದಿಸಿದ್ದಾರೆ.

—ಪಾಟ್ನಾದ ಠರಾವನ್ನು ಕುರಿತು ಭಾಷಣಮಾಡುವಾಗ ಶ್ರೀ. ಕೇಳಕರರು ಎಲ್ಲಾ ಪಾರ್ಟಿಯವರು ಈಗ ಕೊಂಗ್ರೆಸ್ಸನ್ನು ಪ್ರವೇಶಿಸಿ ಸ್ವರಾಜ್ಯ ಸಂಪಾದನೆಯನ್ನು ಬೇಗನೆ ಮಾಡಬೇಕೆಂದು ಹೇಳಿರುವರು.

—ಅಮೃತಸರದಲ್ಲಿ ಹಿಂದುಗಳ ಹೊಸ ದೇವಾಲಯವು ಸ್ಥಾಪಿಸಲ್ಪಟ್ಟಿದೆ. ಅದಕ್ಕೆ ಸಮ್ಮಂಧಪಟ್ಟಿರುವ ನೂತನ ಸರೋವರದ ಜಲಪ್ರವೇಶ ಸಮಾರಂಭವು ಪಂಡಿತ ಮದನಮೋಹನ ಮಾಲವೀಯರ ಕೈಯಿಂದ ಮಾಡಲಾಯಿತು.

—ಬೆಲ್ಗಿಯಮ್ಮದ ರಾಜರು ತಮ್ಮ ಮಹಿಷಿಯ ಸಮೇತ ದಿಲ್ಲಿ ಸಿಮ್ಲಾ ಮುಂಬಾಯಿ ಮುಖ್ಯ ಸ್ಥಳಗಳನ್ನು ಸಂದರ್ಶಿಸಿ ತಮ್ಮ ಪ್ರಯಾಣ ಬೆಳಸಿರುವರು.

—ಲೆಜಿಸ್ಲೇಟಿವ್ ಎಸೆಂಬ್ಲಿಗೆ ಸ್ವರಾಜ್ಯ ಪಾರ್ಟಿಯ ಕಡೆಯಿಂದ ಅಧ್ಯಕ್ಷಸ್ಥಾನವನ್ನು ಪಡೆದ ಶ್ರೀಯುತ ಪಟೇಲರವರಿಗೆ ಮುಂಬಯಿಯಲ್ಲಿ ಸ್ವಾಗತ ಸಮಾರಂಭವು ಬಹು ವಿಜೃಂಭಣೆಯಿಂದ ನಡೆಯಲಾಯಿತು. ಆ ಸಮಯದಲ್ಲಿ ಅವರಿಗೆ ಮಾನಪತ್ರಗಳು ಸಹ ಕೊಡಲ್ಪಟ್ಟವು.

—ಶಹರಣಪುರದಲ್ಲಿ ಉಗಿಬಂಡಿಗಳಲ್ಲಿ ಕಳವು ಮಾಡಿದ್ದಾರೆಂದು ಅನೇಕರನ್ನು ಕೈದುಮಾಡಲಾಗಿದೆ. ಇವರಲ್ಲಿ ಅನೇಕರು ರಾಷ್ಟ್ರೀಯ ಸಭೆಯ ಪ್ರಚಾರಕರು ಇರುವರು.

—ಸ್ತ್ರೀಯರು ತಮ್ಮ ಬುದ್ಧಿಶಕ್ತಿಯನ್ನು ಉಪಯೋಗಿಸಿಕೊಳ್ಳದೆ ಉದಾಸೀನರಾಗಿ ವರ್ತಿಸಿದರೆ ಅಂಥವರು ಎಷ್ಟೋ ಕಾಲದ ನಂತರ ಬುದ್ಧಿ ಶೂನ್ಯರಾಗುವರೆಂದು ಡೋಕ್ಟರ್ ಹಿಕ್ಸನ್‌ರೆಂಬವರು ತಮ್ಮ ೩೦ ವರ್ಷದ ಅನುಭವದಿಂದ ಹೇಳಿರುತ್ತಾರೆ. ಇವರು ೧೨ ವರ್ಷಗಳ ಕಾಲದಲ್ಲಿ ಚಿಕಿತ್ಸೆ ಮಾಡಿದ ೧೬,೦೦೦ ಜನರಲ್ಲಿ ಕೇವಲ ೬೦ರಷ್ಟು ಸ್ತ್ರೀಯರು ಇಂಥವರೆ ಇರುವರೆಂದು ಬರೆಯುತ್ತಾರೆ.

—ವರ್ಹಾಡದೊಳಗಿನ ಹಿಂದು ಮುಸಲ್ಮಾನರ ವಾದವಿವಾದವನ್ನು ಶಮನಿಸಲು ಅಲ್ಲಿಯ ಕೊಂಗ್ರೆಸ್ಸ ಸಭೆಯು ಡೋಕ್ಟರ್ ಮುಂಜೆಯವರಿಗೆ ಸೂಚಿಸಿತ್ತು. ಅವರು ಅವರ ಹೇಳಿಕೆಯ ಮೇರೆಗೆ ಅಲ್ಲಲ್ಲಿ ಭಾಷಣ ಮಾಡಿ ಜನರನ್ನು ಶಾಂತಮಾಡಿದ್ದಾರೆ.

—ಕರಾಚಿಯಲ್ಲಿ ೫ ಜನ ಯುರೋಪಿಯನ ನಾವಿಕರು ಸಮುದ್ರಕ್ಕೆ ಸ್ನಾನಕ್ಕೆ ಹೋದಾಗ ಜಲಸಮಾಧಿ ಹೊಂದಿದರು! ಇಬ್ಬರ ಶವವು ಕೈಸೇರಿದೆ.

—ಬಂಗಾಲ ಪ್ರಾಂತದೊಳಗಿನ ಚಂದಪೂರ ಎಂಬಲ್ಲಿ ಸಶಸ್ತ್ರ ದರೋಡೆ ಚೋರರು ದಂಗೆ ಮಾಡಿ ಇಬ್ಬರನ್ನು ಕೊಂದು ಇನ್ನೂ ಅನೇಕರನ್ನು ಗಾಯಪಡಿಸಿರುವರು. ಪೋಲೀಸರು ಮೂವರು ಕಳ್ಳರನ್ನು ಕೈದು ಮಾಡಿದ್ದಾರೆ.

—ದೀನ ಬಂಧು ಸಿ. ಎಫ್. ಎಂಡ್ರೂಸರವರು ಸದ್ಯದಲ್ಲಿ ತಮಿಳ ನಾಡಿನಲ್ಲಿ ಪ್ರವಾಸ ಮಾಡುತ್ತಾರಷ್ಟೆ. ಕೊಕನಾಡಿನಲ್ಲಿ ಬಂದಾಗ ಅವರು ಮಹಾತ್ಮಾ ಗಾಂಧಿಜಿಯರ ಚಿತ್ರಪಟದ ಅನಾವರಣ ಸಮಾರಂಭ ಮಾಡುವಾಗ ಗಾಂಧಿಯವರು ದಿಲ್ಲಿಯಲ್ಲಿ ೨೧ ದಿವಸಗಳ ಉಪವಾಸ ಮಾಡಿ ಯಾವ ಪ್ರಕಾರ ಅಂತ್ಯ ಮಾಡಿದರೆಂಬ ಕಠಿಣ ಅವಸ್ಥೆಯನ್ನು ಶ್ರೋತೃವೃಂದಗಳಿಗೆ ತಿಳಿಸಿ ಹಿಂದು ಮುಸಲ್ಮಾನರ ಐಕ್ಯವನ್ನು ಸಾಧಿಸಬೇಕೆಂದು ವಿನಂತಿ ಮಾಡಿಕೊಂಡರು.

—ಸನ್ಮಾನ್ಯ ಲಾಲಾಜಿಯವರ ಆರೋಗ್ಯವು ಸುಧಾರಿಸುತ್ತ ಬಂದದೆಂದೂ ಅವರು ಚಿಕಿತ್ಸೆ ಹೊಂದಲು ದಿಲ್ಲಿಗೆ ಹೋಗಿದ್ದಾರೆಂದೂ ಪ್ರಕಟವಾಗಿದೆ. ಮುಂಬಯಿಯಲ್ಲಿ ಸೇರಲಿಕ್ಕಿರುವ ಹಿಂದು ಮಹಾಸಭೆಯ ಅಧ್ಯಕ್ಷತೆಯನ್ನು ಲಾಲಾಜಿಯವರಿಗೆ ಕೊಡಬೇಕೆಂದು ನಿಶ್ಚಯಿಸಿದ್ದಾರೆ. ಅನಾರೋಗ್ಯದಿಂದ ಅವರಿಗೆ ಬರಲು ಸಾಧ್ಯವಾಗದಿದ್ದರೆ ಪಂಡಿತ ಮಾಲವೀಯರಿಗಾದರೂ ಆ ಸ್ಥಾನವನ್ನು ವಹಿಸಬೇಕೆಂದು ಪ್ರಾರ್ಥಿಸಿರುವರು. ಸ್ವಾಗತ ಮಂಡಳಿಯ ಅಧ್ಯಕ್ಷಸ್ಥಾನವನ್ನು ಬೇರಿಷ್ಟರ್ ಜಯಕರ್‌ರವರು ವಹಿಸಿಕೊಂಡಿರುವರು.

—ಬಿರ್ಖುಂಟ ಬಾಯಿಯವರ ಜನ್ಮದಿನದ ಸಮಾರಂಭವು ಮದ್ರಾಸಿನಲ್ಲಿ ಆಚರಿಸಲಾಯಿತು.

—ವೈಸರಾಯ ಸಾಹೇಬರು ಮಾಜಿ ಲೋ ಮೆಂಬರರಾದ ಶ್ರೀಯುತ ನರಸಿಂಹ ಶರ್ಮರಿಗೆ ಒಂದು ಔತಣವನ್ನು ಕೊಟ್ಟಿದ್ದರು. ಆ ಸಮಯದಲ್ಲಿ ಅವರು ಮಾಡಿದ ಕಾರ್ಯವನ್ನು ಬಹಳ ಹೊಗಳಿದರು. ಶರ್ಮರ ಬದಲಿಗೆ ದೇಶಬಂಧು ದಾಸರ ಬಂಧುಗಳಾದ ಎಸ್. ಆರ್ ದಾಸರನ್ನು ಎಕ್ಸಿಕ್ಯೂಟಿವ್ ಕೌನ್ಸಿಲಿನ ಮೆಂಬರರಾಗಿ ಸರಕಾರವು ನೇಮಿಸಿದೆ.

—ಮಧ್ಯಪ್ರಾಂತಗಳಲ್ಲಿ ಸ್ವರಾಜ್ಯಸ್ಥರು ಕೌನ್ಸಿಲನ್ನು ನಿಲ್ಲಿಸಿರುವರಷ್ಟೇ ಆದರೆ ಅಲ್ಲಿಯ ಗವರ್ನರು ಮಂತ್ರಿಗಳ ವಶದಲ್ಲಿರುವ ಖಾತೆಗಳನ್ನೆಲ್ಲ ಎಕ್ಸಿಕ್ಯೂಟಿವ್ ಡಿಪಾರ್ಟಮೆಂಟಿನ ವಶವೇ ಕೊಟ್ಟು ಸುಧಾರಣೆಯನ್ನು ಆ ಪ್ರಾಂತದ ಮಟ್ಟಿಗೆ ನಿಲ್ಲಿಸಬೇಕೆಂದು ಇಚ್ಛಿಸುತ್ತಾರೆಂದು ವದಂತಿ ಇದೆ.

—ಬಳ್ಳಾರಿಯಲ್ಲಿರುವ ಅಹೋಬಲರಾವ್ ಎಂಬವರು ಅತ್ಯಂತ ಕುಳ್ಳರೂ ವಿನೋದರಂಜಕರೂ ಆಗಿರುವರು. ಇವರಿಗೆ ೨೨ ವರ್ಷವಾಗಿದ್ದರೂ ೩॥ ಅಡಿ ಮಾತ್ರ ಎತ್ತರವಾಗಿದ್ದು ೧೯ ಪೌಂಡುಗಳ ತೂಕವಿರುತ್ತಾರೆ. ಇವರ ಹಾಸ್ಯ ರಸಭರಿತವಾದ ವಿನೋದಗಳನ್ನು ಘನಹೊಂದಿದ ಸರ್ ಲೆಸ್ಲಿವಿಲ್ಸನ್‌ರವರೂ, ಹೈದರಾಬಾದದ ನೈಜಾಂರವರೂ, ಕೊಲ್ಹಾಪುರ, ಸಾಂಗ್ಲಿ, ಮಿರಜ್, ಪುರಬಂದರ್, ಕಚ್ ಮೊದಲಾದ ಪ್ರಾಂತಗಳ ರಾಜರುಗಳೂ ನೋಡಿ ಸಂತೋಷ ಪಟ್ಟಿರುವರು. ಇವರು ಇಷ್ಟರಲ್ಲಿಯೆ ಯುರೋಪಿಗೆ ದೇಶಾಟನೆಗೆ ಹೊರಡುವರೆಂದು ವರ್ತಮಾನವಿದೆ.

(ಒಕ್ಕಲಿಗರ ಪತ್ರಿಕೆ.)

—ಮತದಾನದ ಅಧಿಕಾರವು ಕೌನ್ಸಿಲ್ ಒಫ್ ಸ್ಟೇಟಿನಲ್ಲಿ ಪಾಸಾದ ಠರಾವಿನಂತೆ ಸ್ತ್ರೀಯರಿಗೆ ಬರುವುದು.

—ಬಂಗಾಲದ ಒಂದು ಸರಕಾರಿ ಸಂಸ್ಥೆಯಲ್ಲಿ ಸರಕಾರದ ಕಡೆಯಿಂದ ನೂಲುವ ಶಿಕ್ಷಣವು ಕಡ್ಡಾಯವಾಗಿ ಕೊಡಲಾಗುತ್ತದೆ.

—ಕೊಂಗ್ರೆಸಂದರೆ ಬರೆ ಹಿಂದುಗಳ ಕೂಟವೆಂಬ ಆರೋಪಣೆಯನ್ನು ತಾನು ಯಾವಾಗಲೂ ಹೊರಿಸಿಲ್ಲವೆಂದು ಬೇರಿಷ್ಟರ್ ಜಿನ್ನರು ಟಾಯಿಮ್ಸು ಪತ್ರಿಕೆಯಲ್ಲಿ ಪ್ರಕಟಮಾಡಿದ್ದಾರೆ.

ಮದ್ರಾಸದ 'ಸ್ವರಾಜ್ಯ'ದ ಸಂಪಾದಕರಾದ ಟಿ. ಪ್ರಕಾಶಮರವರು ಬ್ರಹ್ಮದೇಶದಲ್ಲಿ ಪ್ರಯಾಣಕ್ಕಾಗಿ ಹೊರಟಿದ್ದಾರೆ. ಬ್ರಹ್ಮದೇಶದಲ್ಲಿ ಸ್ವರಾಜ್ಯಪಾರ್ಟಿಯ ಸ್ಥಾಪನೆಯಾಗಿ ಚಳವಳವು ಈಗಲೆ ನಡೆಯುತ್ತಿದ್ದದ್ದರಿಂದ ಇವರ ಸಹಾಯವು ಅವರಿಗೆ ಹಲವು ವಿಷಯಗಳಲ್ಲಿ ದೊರಕಿತೆಂಬುದರಲ್ಲಿ ಸಂಶಯವಿಲ್ಲ.

—ದಕ್ಷಿಣ ಅಫ್ರೀಕದ ಯೂನಿಯನ್ ಗವರ್ನಮೆಂಟು ಹಿಂದಿಗಳನ್ನು ಓಡಿಸುವ ಇಚ್ಛೆಯಿಂದ ಅನ್ಯಾಯದ ಮಸೂದೆಗಳನ್ನು ಜಾರಿಗೆ ತರುವದರಿಂದ ಹಿಂದಿಗಳು ತಮ್ಮ ನಿಷೇಧವನ್ನು ಒಮ್ಮೆಗೆಲೆ ವ್ಯಕ್ತಮಾಡಬೇಕು. ಅದ್ದರಿಂದ ಒಕ್ಟೋಬರ ತಾ. ೧೧ನೇ ಅಂದರೆ ಬರುವ ರವಿವಾರ ದಿವಸ ಹಿಂದುಸ್ಥಾನದಲ್ಲೆಲ್ಲ ಪ್ರಾರ್ಥನೆಯನ್ನು ಮಾಡಿ ಅಫ್ರೀಕದಲ್ಲಿರುವ ಹಿಂದಿಗಳ ಸಂಬಂಧ ನಮ್ಮ ಸಹಾನುಭೂತಿಯನ್ನು ವ್ಯಕ್ತಮಾಡಬೇಕೆಂದು ಶ್ರೀಮತಿ ಸರೋಜಿನಿಬಾಯಿಯವರು ಪ್ರಕಟಿಸಿದ್ದಾರೆ. ಮುಖ್ಯವಾಗಿ ಕ್ರೈಸ್ತರು ಈ ಸಂದರ್ಭದಲ್ಲಿ ಸಹಭಾಗಿಗಳಾಗಿ ತಮ್ಮ ಧಾರ್ಮಿಕ ಬಾಂಧವ್ಯವನ್ನು ವ್ಯಕ್ತಮಾಡಬೇಕೆಂದು ಅವರ ಸೂಚನೆಯಿದೆ.

—ಮದ್ರಾಸ್ ಕೌನ್ಸಿಲಿಗೆ ಮದ್ರಾಸ್ ಪ್ರೆಸಿಡೆನ್ಸಿ ಕೊಲೇಜಿನ ಪ್ರೊಫೆಸರ್ ರತ್ನಸ್ವಾಮಿ ಎಂಬವರನ್ನು ಅಧ್ಯಕ್ಷರನ್ನಾಗಿ ಚುನಾಯಿಸಿದ್ದಾರೆ.

—ಲಾಲಾಲಜಪತರಾಯರು ತಮ್ಮ ದಿ. ಪೀಪಲ್ ಎಂಬ ವಾರಕ್ಕೊಂದಾವರ್ತಿ ಹೊರಡುವ ವಾರಪತ್ರಿಕೆಗೆ ಈಗಿರುವ ಚಂದಾದಾರರು ಬಹಳ ಕಡಿಮೆಯಾಗಿದ್ದಾರೆಂದೂ ಮತ್ತು ಈ ಮುಂಚೆ ೧೬ ಪುಟಗಳು ಇದ್ದು ವರ್ಷಕ್ಕೆ ರೂಪಾಯಿ ೮ ಚಂದಾ ಹಣ ಇದ್ದದನ್ನು ತೀರಾ ಜಾಸ್ತಿ ಎಂದು ಕಂಡುಬಂದದರಿಂದ ರೂಪಾಯಿ ೮ರಿಂದ ರೂಪಾಯಿ ೬ ಅನೆ ಆಕ್ಕೆ ಕಮ್ಮಿಮಾಡಿ ಮತ್ತು ಪುಟಗಳನ್ನು ಸಹ ಜಾಸ್ತಿಯಾಗಿ ಮಾಡಿದ್ದರೂ ಕೂಡ ತನಗೆ ಬೇಕಾದಷ್ಟು ಚಂದಾದಾರರು ಇಲ್ಲವೆಂದೂ ಅದ್ದರಿಂದ ತಮ್ಮ ಪತ್ರಿಕೆಯನ್ನು ಸರಿಯಾದ ಸ್ಥಿತಿಯಲ್ಲಿ ನಡಿಸಲಿಕ್ಕೆ ಕನಿಷ್ಠ ಪಕ್ಷಕ್ಕೆ ಐದುಸಾವಿರ ಚಂದಾದಾರರು ಬೇಕಾಗಿರುವುದರಿಂದ ಇನ್ನಾದರೂ ತಮ್ಮ ಪತ್ರಿಕೆಗೆ ಚಂದಾದಾರರಾಗಿ ಸಹಾಯವನ್ನಿಯಬೇಕೆಂದು ವಿಜ್ಞಾಪಿಸಿಕೊಂಡಿರುವರು.

—ಮುಂಬಾಯಿ ಗಿರಣಿಗಳ ಮುಷ್ಕರ:—ಇತ್ತೀಚೆಗೆ ಎರಡು ವಾರಗಳಿಂದ ನಡೆದು ಬರುತ್ತಿರುವ ಮುಂಬಾಯಿ ಗಿರಣಿಗಳ ಮುಷ್ಕರವು ಸ್ವಲ್ಪ ಸಮಾಧಾನ ಸ್ಥಿತಿಯಲ್ಲಿರುವದು. ಕೂಲಿಯಾಳುಗಳು ಸಣ್ಣ ಸಣ್ಣ ಗುಂಪುಗಳಾಗಿ ಹಿಂತಿರುಗಿ ತಮ್ಮ ತಮ್ಮ ಕೆಲಸಕ್ಕೆ ಸೇರುತ್ತಾರೆ. ಸುಮಾರು ೪೦೦ ಮಂದಿ ಕೂಲಿಯಾಳುಗಳು ಇಂಪಿರಿಯಲ್ ಮಿಲ್ಲನಲ್ಲೂ, ೫೦೦ ಮಂದಿ ಪೆಟಿಟ್ಟ ಮಿಲ್ಲಿನಲ್ಲೂ ತಾವಾಗಿಯೇ ಬಂದು ಕೆಲಸವನ್ನು ಪ್ರಾರಂಭಿಸಿರುವರು. ಕಳೆದ ಸೆಪ್ಟಂಬರ ತಿಂಗಳ ಸಂಬಳವನ್ನು ಕಡಿಮೆ ಮಾಡಲ್ಪಟ್ಟ ಸ್ಕೇಲಿನ ಮೇರೆಗೆ ಇದೇ ತಾ. ೯—೧೦—'೨೫ಕ್ಕೆ ಕೊಡಲಿಕ್ಕೆ ನಿಶ್ಚಯಿಸಿದ್ದಾರೆ.

—ದಿ ಮುಂಬಾಯಿ ಮಿಲ್ಸ್ ಓನರ್ಸ್ ಎಸೋಸಿಯೇಶನ ಅಧ್ಯಕ್ಷರೂ ಮತ್ತು ಕಾರ್ಯದರ್ಶಿಯವರೂ ಮುಂಬಾಯಿ ಗವರ್ನರ ಹಂತಿಯ ಮೇರೆಗೆ ಗಿರಣೀಯಾಳುಗಳ ಮುಷ್ಕರದ ವಿಷಯ ಚರ್ಚಿಸಲಿಕ್ಕೆ ಪೂನಾಕ್ಕೆ ಹೊರಟು ಹೋಗಿರುವರು.

—ಬರುವ ತಿಂಗಳ ೧೬ನೇ ತಾರೀಕಿಗೆ ಬಂಗಾಲದ ಲೆಜಿಸ್ಲೇಟಿವ್ ಕೌನ್ಸಿಲಿನ ಅಧಿವೇಶನವು ಜರಗಲಿಕ್ಕಿರುವುದು.

ದಕ್ಷಿಣ ಕನ್ನಡ.

ಕೊಲ್ಲೂರು:—ಶ್ರೀ ಕ್ಷೇತ್ರ ಕೋಲಾಪುರ (ಕೊಲ್ಲೂರು) ಮೂಕಾಂಬಿಕಾ ದೇವಸ್ಥಾನದೊಳಗೆ ಈಗ ಹೊಸತಾಗಿ ಕಟ್ಟಿಸಿದ ವಿಚಿತ್ರಕರವಾದ ಸರಸ್ವತೀಮಂಟಪದ ಮುಖ್ಯದ್ವಾರದ ಮೇಲ್ಭಾಗದಲ್ಲಿರುವ ಕಮಲಾಲಯಲಕ್ಷ್ಮೀ ಚಿತ್ರದ ಮೇಲ್ಗಡೆಯಲ್ಲಿ ಕಳೆದ ನವರಾತ್ರಿ ಅಷ್ಟಮಿ ಶುಕ್ರವಾರ ಶಾರದಾ ಸ್ಥಾಪನೆಯ ಸಮಯ ಅತ್ಯಂತ ರಮಣೀಯವಾಗಿಯೂ ಭದ್ರವಾಗಿಯೂ ಇರುವ ಒಂದು ಶ್ರೀ ಚಕ್ರವು ಅಕಸ್ಮಾತ್ ಒದಗಿ ಸ್ಥಾಪಿಸಲ್ಪಟ್ಟಿತು. ಇದು ಅತ್ಯಂತ ಮಹಾನುಭಾವರಾಗಿದ್ದ ಬ್ರಹ್ಮಶ್ರೀ ಹಾರ್ನಾಡು ದಾಮೋದರ ತಂತ್ರಿಗಳವರು (ತಂತ್ರಾಚಾರ್ಯರು) ತಮ್ಮ ಅವಸಾನಕಾಲದಲ್ಲಿ ಶ್ರೀ ಮುಕಾಂಬಿಕಾದೇವಿಯ ಉದ್ದಿಶ್ಯವಾಗಿ ತಯಾರು ಮಾಡಿಸಿ ಇಟ್ಟದ್ದಾಗಿರುತ್ತದೆ. ಈ ಶ್ರೀ ಚಕ್ರವು ಇಂಥಾ ಉತ್ಕೃಷ್ಟಸ್ಥಾನ ಉತ್ಕೃಷ್ಟ ಕಾಲದಲ್ಲಿ ಸರಿಯಾಗಿ ಒದಗಿ ಸ್ಥಾಪಿತವಾಗಲಿಕ್ಕೆ ಕಾರಣವು ಶ್ರೀ ಮುಕಾಂಬಿಕಾದೇವಿಯ ಮಹಿಮಾತಿಶಯವೆಂತ ಹೇಳಬೇಕಾಗುತ್ತದೆ.

ಬ್ರಹ್ಮಾವರ:—ಇದೇ ತಿಂಗಳ ತಾ. ೩ನೇ ಶನಿವಾರ ಇಲ್ಲಿಯ ಸಾರ್ವಜನಿಕ ಸಂಘದ ಮಂದಿರದಲ್ಲಿ ಇಲ್ಲಿಯ ರೆವೆನ್ಯು ಇನ್ಸಪೆಕ್ಟರರಾಗಿದ್ದ ಬಿ. ಗಣೇಶ ಬಿ. ಎ. ಯವರು ವರ್ಗವಾಗಿ ಹೋಗುತ್ತಾರಾದ್ದರಿಂದ ಅವರಿಗೆ ಆತಿಥ್ಯವನ್ನು ಮಾಡುವರೆ ಒಂದು ಮಹಾಸಭೆ ಸೇರಿತ್ತು. ಸ್ಥಳೀಕ ಸದ್ಗೃಹಸ್ಥರೂ ಸುತ್ತುಮುತ್ತಲಿನ ಗ್ರಾಮಗಳ ಮಹನೀಯರೂ ಸದರಿ ಸಭೆಗೆ ಬಂದಿದ್ದರು. ಇಗರ್ಜಿ ಗುರುಗಳಾಗಿದ್ದ ಫಾದರ್ ಪಿ. ಜಿ. ಕೋಶಿಯವರು ಅಧ್ಯಕ್ಷರಾಗಿದ್ದರು. ಕಟ್ಟಲೆಯಂತೆ ಪ್ರಾರ್ಥನೆ ಕೊಳಲು ಗಾನಗಳಾದ ನಂತರ ನೆರದಿದ್ದ ಸಭಿಕರನೇಕರು ಅಂದಿನ ಅತಿಥಿಗಳಾಗಿದ್ದ ಗಣೇಶರವರ ಪರೋಪಕಾರ, ಬಡವರಲ್ಲಿ ಪ್ರೇಮ, ಸತ್ಯ ಮತ್ತು ಫಲಾಪೇಕ್ಷೆ ಇಲ್ಲದ ನೀತಿ ನ್ಯಾಯಗಳನ್ನು ಮಾಡುವ ಗುಣಗಳನ್ನು ಕುರಿತು ಕೊಂಡಾಡಿ ಭಾಷಣಗಳನ್ನು ಮಾಡಿದರು. ಬಳಿಕ ಕರ್ಣಾನಂದವಾದ ಗಾಯನವಾದ ನಂತರ ಅಧ್ಯಕ್ಷರು ಅರ್ಥಗರ್ಭಿತವಾದ ಭಾಷಣಗಳನ್ನೂ, ಅತಿಥಿಗಳು ಅಂತಃಕರಣಪೂರ್ವಕವಾದ ಉತ್ತರವನ್ನೂ ಇತ್ತರು. ನಂತರ ನೆರೆದಿದ್ದ ಸಭಿಕರಿಗೆ ಹಣ್ಣು ಹಂಪಲುಗಳಿಂದಲೇ ಫಲಹಾರವಾದ ಬಳಿಕ ತಾಂಬೂಲಾದಿಗಳನ್ನು ಕೊಟ್ಟು ಸಭೆಯು ಅಂತ್ಯವಾಯಿತು.

ಕುಂಬಳೆ:—ಇಲ್ಲಿಯ ಬೋರ್ಡು ಬಾಲಿಕಾ ಪಾಠಶಾಲೆಯಲ್ಲಿ ಶಾರದಾ ಪೂಜೆ ವಗೈರೆಯಿಂದ ದಸರಾ ಸಮಾರಂಭವು ಚೆಲೊ ರೀತಿಯಿಂದ ಆಚರಿಸಲ್ಪಟ್ಟಿತು. ಕಳೆದ ತಾ. ೩ರಲ್ಲು ಮಾನ್ಯ ತಾಲೂಕು ಬೋರ್ಡು ಪ್ರೆಸಿಡೆಂಟರವರು ಈ ಶಾಲೆಯನ್ನು ಪರಾಂಬರಿಸಿ ಸಂತೋಷಪಟ್ಟು ಶಾಲೆಯ ಅಭಿವೃದ್ಧಿಗೆ ಬಂದಿರುವ ಕಟ್ಟೋಣ ವಿಸ್ತರಿಸುವ ಕುರಿತು ಶಿಫಾರಸ್ ಬರೆದಿರುವದಾಗಿ ಕೇಳುತ್ತೇವೆ.

ಇದೇ ತಾ. ೩ನೇ ಶನಿವಾರ ಅಪರಾಹ್ನ ೨ ಘಂಟೆಗೆ ಶಾಲಾ ಉಪಾಧ್ಯಾಯರ ಸಭೆಯು ಇಲ್ಲಿಯ ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ರಜೆಯ ಮೇಲಿರುವ ಕೊಳ್ಳೆಗಾಲ ರೇಂಜ್ ಶಾಲಾ ಡಿಪ್ಯುಟಿ ಇನ್ಸಪೆಕ್ಟರ ಮ। ರಾ। ಕೋಟೆಕಾರ ರಾಮರಾವ್‌ರವರ ಅಧ್ಯಕ್ಷತೆಯಿಂದ ಜರಗಿತು ಈ ಸಭೆಗೆ ಕಾಸರಗೋಡು ಶಾಲಾ ಡಿಪ್ಯುಟಿ ಇನ್ಸಪೆಕ್ಟರ ಮ। ರಾ। ಬಿ. ನರಸಿಂಗ ರಾವ್‌ರವರು ಚಿತ್ತೈಸಿದ್ದು ಈ ಸೆಂಟರಿನ ಸುಮಾರು ೪೫ ಮಂದಿ ಉಪಾಧ್ಯಾಯರು ಬಂದಿದ್ದರು. ಸಭಾಂತ್ಯದಲ್ಲಿ ಮಾನ್ಯ ಅಧ್ಯಕ್ಷರಿಗೆ ಉಪಕಾರ ಸ್ಮರಣೆಯನ್ನು ಮಾಡಿ ಪನ್ನೀರು ತಾಂಬೂಲಾದಿಗಳಿಂದ ಸಭೆಯು ಮುಕ್ತಾಯವಾಯಿತು.

ಬೊಗ್ರಾಲ್ ಗ್ರಾಮದ ಪಟೇಲ ಮ। ಎಮ್. ಕಿ. ಮಂಜಯ್ಯನವರು ಕೆಲಸಕ್ಕೆ ರಾಜಿನಾಮೆ ಕೊಟ್ಟಿರುವದರಿಂದ ಮ। ಎಮ್. ಟಿ. ಮಹಮ್ಮದರು ಪಟೇಲರಾಗಿ ಮೊಕರ್ರರಾಗಿರುವರು. ಇವರಿಬ್ಬರೂ ಇಲ್ಲಿಯ ವಿಲೇಜ್ ಪಂಚಾಯತ ಕೋರ್ಟ ಮೆಂಬರರೂ ಜನಪ್ರೀತರೂ ಆಗಿರುವರು.

ಕಾಸರಗೋಡು:—ಎರಡು ಮೂರು ದಿನಗಳ ಹಿಂದೆ ಇಲ್ಲಿಯ ಮುನ್ಸಿಫ್ ಕೋರ್ಟ ಹಿಂಬದಿಯಲ್ಲಿರುವ ಟೆನ್ನಿಸ್ ಕೋರ್ಟಿನಲ್ಲಿ ಥಿಯೋಸೋಫಿ ಕುರಿತಾದ ಎರಡು ಭಾಷಣಗಳು ಇದ್ದವು. ಭಾಷಣಗಳು ಇಂಗ್ಲೀಷಿನಲ್ಲಿ ಕೊಡಲ್ಪಟ್ಟಿದ್ದದ್ದರಿಂದ ಇಂಗ್ಲೀಷ್ ತಿಳಿದ ಕೆಲ ಮಾನ್ಯ ಗೃಹಸ್ಥರು ಮಾತ್ರ ಹಾಜರಿದ್ದರು.

(೬ನೇ ಪುಟಕ್ಕೆ ಮುಂದುವರಿಸಲ್ಪಟ್ಟಿದೆ)

ಅನುಕ್ರಮಣಿಕೆ.

ಸ್ಫುಟವಿಚಾರಗಳು— ಪುಟಗಳು.
೧ ಪಾಟಣಾದಲ್ಲಿ ಸೇರಿದ ಓ. ಇಂ. ಕೊಂ. ಕಮಿಟಿಯ ಮುಖ್ಯ ಠರಾವು ೬
೨ ಶ್ರೀಮತಿ ಸರೋಜಿನಿ ನ್ಯಾಡುರವರ ಅಧ್ಯಕ್ಷತೆಯಲ್ಲಿ ಅವಲಂಬಿಸಲಿಕ್ಕಿರುವ ಕಾರ್ಯಕ್ರಮಗಳು ,,
೩ ಸೆಂಟ್ರಲ್ ವಾರ್ಡಿನ ಮ್ಯುನ್ಸಿಪಲ್ ಚುನಾವಣೆ. ,,
೪ ಸಿಮ್ಲಾದಲ್ಲಿ ಲೋರ್ಡ ರೆಡಿಂಗರಿಗೆ ಏರ್ಪಡಿಸಲ್ಪಟ್ಟ ಔತಣ ಪಾರ್ಟಿ ,,
ಮಹಾತ್ಮರು ಚಿರಾಯುವಾಗಿರಲಿ ೭
ಮಂಗಳೂರು
ವರ್ತಮಾನಸಂಗ್ರಹಗಳು—
ವಿದೇಶ – ಒಳದೇಶ ವರ್ತಮಾನ ೫
ದಕ್ಷಿಣ ಕನ್ನಡ – ಕೊಲ್ಲೂರು, ಬ್ರಹ್ಮಾವರ, ಕುಂಬಳೆ, ಕಾಸರಗೋಡು, ಬಂಟವಾಳ, ,, ೮
ವಿವಿಧವಿಷಯಗಳು ,,
ಪತ್ರವ್ಯವಹಾರ ೧, ,,

ಸ್ವದೇಶಾಭಿಮಾನಿ.

ಶಕ ೧೮೪೭ ಆಶ್ವೀಜ ಬ| ೭ಯು ಶುಕ್ರವಾರ.

ಸ್ಫುಟವಿಚಾರಗಳು.

೧. ಪಾಟಣಾದಲ್ಲಿ ಸೇರಿದ ಓ. ಇಂ ಕೊಂಗ್ರೆಸ್ ಕಮಿಟಿಯ ಮುಖ್ಯ ಠರಾವು ಯಾವ ಪ್ರಕಾರ ರಾಷ್ಟ್ರೀಯ ಕಾರ್ಯಕ್ರಮದಲ್ಲಿ ಬದಲಾವಣೆಯನ್ನು ಸೂಚಿಸುತ್ತದೊ ಅದೇ ಮೇರೆಗೆ ಇನ್ನೂ ಅನೇಕ ಕಡೆಗಳಲ್ಲಿ ಶುಭ ಸೂಚನೆಗಳು ಒಂದರ ಹಿಂದೊಂದು ತಲೆ ಎತ್ತುತ್ತಿವೆ. ಕಾನಪುರದಲ್ಲಿ ನೆರೆಯಲಿಕ್ಕಿರುವ ರಾಷ್ಟ್ರೀಯ ಸಭೆಯ ಒಂದು ವಿಶಿಷ್ಟ ಸಭೆಯು ಕಳೆದ ವಾರ ಸೇರಿ ಬರುವ ರಾಷ್ಟ್ರೀಯ ಸಭೆಯ ಅಧ್ಯಕ್ಷಸ್ಥಾನವನ್ನು ಯಾರಿಗೆ ಕೊಡಬೇಕೆಂಬುದನ್ನು ನಿಶ್ಚಯಿಸಿದೆ. ಹಿಂದುಸ್ಥಾನದೊಳಗಿನ ಎಲ್ಲ ಪ್ರಾಂತಿಕ ಕಮಿಟಿಗಳು ತಮ್ಮ ಸೂಚನೆಗಳನ್ನು ಈ ಮೊದಲೆ ಪ್ರಕಟಮಾಡಿದ್ದರಷ್ಟೆ. ಅವುಗಳ ಮತಗಳನ್ನು ಲೆಖ್ಖಮಾಡುವಾಗ ೧೬ ಮತಗಳು ಶ್ರೀ ಸರೋಜಿನಿ ದೇವಿಯವರಿಗೆ ಸಿಕ್ಕಿದ್ದರಿಂದ ಅವರೆ ಬಹುಮತದಿಂದ ಆರಿಸಲ್ಪಟ್ಟಿರುವರು. ಇದು ತುಂಬಾ ಸಂತೋಷವಾದ್ದೇ ಸರಿ. ಸಾಧಾರಣ ರೀತ್ಯಾ ಈ ಸ್ಥಾನವು ಸರೋಜಿನಿಯವರಿಗೆ ಸಿಕ್ಕೀತೆಂದು ಹಲವರು ಊಹಿಸಿದ್ದರು. ಮತ್ತು ಅವರ ಊಹನೆಯು ಇಂದಿಗೆ ಸತ್ಯವೆಯಾಯಿತು. ನಿಜವಾಗಿ ನೋಡ ಹೋದರೆ ರಾಷ್ಟ್ರೀಯ ಸಭೆಗೆ ಈಗಿನ ಪರಿಸ್ಥಿತಿಯಲ್ಲಿ ದೇವಿಯವರೆ ಅಧ್ಯಕ್ಷರಾಗಲು ಯೋಗ್ಯರಿದ್ದಾರೆ. ದ. ಅಫ್ರಿಕದಲ್ಲಿ ಇವರು ಮಾಡಿದ ಅನವರತ ಪ್ರಯತ್ನ. ಪರದೇಶದಲ್ಲಿರುವ ಹಿಂದಿಗಳ ವಿಷಯವಾಗಿ ಇವರು ಮಾಡುತ್ತಿರುವ ಯತ್ನ ಹಾಗು ಐಕ್ಯದ ಕುರಿತು ಇವರ ಅತ್ಯಂತ ಪ್ರೀತಿ ಇವೆಲ್ಲ ಗುಣಗಳು ಸರೋಜಿನಿಯವರಲ್ಲಿದ್ದರಿಂದ ಅವರ ಯೋಗ್ಯತೆಯನ್ನು ಇನ್ನಷ್ಟು ವ್ಯಕ್ತಗೊಳಿಸುತ್ತವೆ. ನಮ್ಮ ರಾಷ್ಟ್ರೀಯ ಸಭೆಯ ಅಧ್ಯಕ್ಷರ ನಾಮಾವಳಿಯನ್ನು ನೋಡಿದರೆ ಹಿಂದಿ ಸ್ತ್ರೀಯರ ಹೆಸರು ಅದರಲ್ಲಿ ಕಂಡು ಬರಲಾರದು. ಸರೋಜಿನಿಯವರು ಸ್ತ್ರೀ ಸ್ವಾತಂತ್ರ್ಯಕ್ಕಾಗಿ ಪೂರ್ವದಿಂದಲೂ ಹೋರಾಡಿದವರಾಗಿದ್ದಾರೆ. ೧೯೨೦ನೆ ಇಸವಿಯಲ್ಲಿ ರಿಫೋರ್ಮ್ಸ ಕಮಿಟಿಯು ಸಾಕ್ಷಿಗೆಂದು ಹಿಂದಿಗಳ ಮುಖಂಡರನ್ನು ಕರಿಸಿದಾಗ ಶ್ರೀ. ದೇವಿಯವರು ಸ್ತ್ರೀಯರಿಗೆ ಮತದಾನದ ಹಕ್ಕನ್ನು ಕೊಡಬೇಕೆಂದು ಆ ಕಮಿಟಿಯ ಮುಂದೆ ಹೇಳಿದ್ದರು. ಸಾರಾಂಶ ಮೊದಲಿನಿಂದಲೆ ಇವರು ಸ್ತ್ರೀಯರ ಸ್ವಾತಂತ್ರ್ಯ, ಸ್ತ್ರೀಯರ ಹಕ್ಕಿನ ವಿಷಯವಾಗಿ ಹೋರಾಡುತ್ತಿರುವರು. ಇಂಥವರು ಹಿಂದಿ ರಾಷ್ಟ್ರೀಯ ಸಭೆಯ ಅಧ್ಯಕ್ಷ ಸ್ಥಾನವನ್ನೂ ವಹಿಸಿ ರಾಜಸೂತ್ರ ನಡಿಸುವ ಭಾಗ್ಯವನ್ನು ಹಿಂದೀ ಸ್ತ್ರೀಯರಲ್ಲಿ ಪ್ರಥಮತಃ ಹೊಂದಿದ್ದು ತುಂಬಾ ಸಂತೋಷವೆ ಸರಿ. ೧೯೧೭ನೆ ಇಸವಿಯಲ್ಲಿ ಕಲಕತ್ತೆಯಲ್ಲಿ ನಡೆದ ರಾಷ್ಟ್ರೀಯ ಸಭೆಯ ಅಧ್ಯಕ್ಷಸ್ಥಾನದ ಪದವಿಯನ್ನು ಮಿಸೆಸ್ ಬಿಝೆಂಟ ಅಮ್ಮನವರಿಗೆ ಕೊಟ್ಟಿದ್ದರಷ್ಟೆ. ಇವರು ಹಿಂದಿಗಳ ವಿಷಯವಾಗಿ ತಮ್ಮ ಸಹಾನುಭೂತಿಯನ್ನು ತೋರಿಸಿ ಹಿಂದಿ ಸ್ವರಾಜ್ಯಕ್ಕಾಗಿ ಕಷ್ಟಪಡುತ್ತಿದ್ದರು. ಅವರ ಜನ್ಮ ಭೂಮಿಯು ಈ ದೇಶವಲ್ಲ. ಆದ್ದರಿಂದ ಅವರನ್ನು ಹಿಂದಿಗಳಲ್ಲಿ ಗಣಿಸಲು ಅಸಾಧ್ಯವೆ ಸರಿ. ಹೀಗಿರುತ್ತ ಶ್ರೀ. ಸರೋಜಿನಿ ದೇವಿಯವರೆ ಈ ಬಹುಮಾನವನ್ನು ಪಡೆದವರಲ್ಲಿ ಪ್ರಥಮ ಹಿಂದೀ ಮಹಿಳೆಯರಿದ್ದಾರೆಂದು ತಿಳಿಸಲು ತುಂಬಾ ಸಂತೋಷವಾಗುತ್ತದೆ. ಹಿಂದಿಗಳೆಲ್ಲ ಅವರ ಸ್ವಾರ್ಥತ್ಯಾಗ, ದೇಶ ವಾತ್ಸಲ್ಯ, ಬುದ್ಧಿ, ಕುಶಲತೆ ಇವೆಲ್ಲವನ್ನು ಲಕ್ಷ್ಯದಲ್ಲಿ ತಂದು ಬರುವ ಕಾನಪುರದ ರಾಷ್ಟ್ರೀಯ ಸಭೆಯಲ್ಲಿ ಒಟ್ಟಿ ಕೂಡ್ಯಾರೆಂದು ಭರವಸೆಪಟ್ಟಲ್ಲಿ ಅದೊಂದು ಅತಿಶಯೋಕ್ತಿಯಾಗಲಿಕ್ಕಿಲ್ಲ.

೨. ಮುಂದಿನ ಡಿಸೆಂಬರ ತಿಂಗಳಲ್ಲಿ ಕೂಡುವ ಕೊಂಗ್ರೆಸ ಸಭೆಗೆ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟಿರುವ ಶ್ರೀಮತಿ ಸರೋಜಿನಿ ನ್ಯಾಡುರವರು ಕೊಂಗ್ರೆಸ್ಸು ಸಭೆಯ ಅಧ್ಯಕ್ಷ ಸ್ಥಾನದಿಂದ ತಾನು ಅವಲಂಬಿಸಲಿಕ್ಕಿರುವ ಕಾರ್ಯಕ್ರಮಗಳು ಯಾವುವೆಂಬುದನ್ನು ಈಗಲೆ ನಿಶ್ಚಯಿಸಿರುವರು. ಭಾರತ ಮಾತೆಯ ಗೃಹಕೃತ್ಯವನ್ನು ಸರಿಪಡಿಸುವಂಥ, ಸ್ತ್ರೀ ಸ್ವಭಾವಕ್ಕೆ ಅನುಕೂಲವೂ ನೈಸರ್ಗಿಕವೂ ಆಗಿರುವ ಕಾರ್ಯಕ್ರಮವು ತನ್ನದಾಗಿರುವುದು, ತನ್ನ ಗೃಹದಲ್ಲಿ ಅತಿ ಶ್ರೇಷ್ಟವಾದ ಗೃಹರಾಣಿಯ ಯಥಾರ್ಥ ಪದವಿಯನ್ನು ಭಾರತ ಮಾತೆಗೆ ಪ್ರಾಪ್ತವಾಗುವಂತೆ ಮಾಡುವದು, ತನ್ನ ಗೃಹದ ಸರ್ವ ಸಂಪತ್ತಿನ ಪಾಲಕತನವನ್ನು ಮಾತೆಯ ಕೈಯಲ್ಲಿಯೇ ಇರಿಸುವದು, ಮತ್ತು ಮಾತೆಯ ಆದರಾತಿಥ್ಯಗಳು ಅವಳ ಮೂಲಕವೆ ಸರ್ವರಿಗೂ ಒಂದೇ ರೀತಿ ದೊರಕುವಂತೆ ಪ್ರಯತ್ನಿಸುವದು. ಈ ರೀತಿ ಸರೋಜಿನಿ ದೇವಿಯವರು ದೇಶದಲ್ಲಿ ನಡಿಯಬೇಕಾಗಿರುವ ಕಾರ್ಯಕ್ರಮವನ್ನು ನಿರೂಪಿಸಿರುವರು. ಆಯಾ ಜಾತಿ ತಂಡ ಪಾರ್ಟಿಗಳು ಇತ್ಯಾದಿಯರಲ್ಲಿ ತೋರಿ ಬರುವ ಕಲಹಗಳನ್ನು ಶಮನಿಸಿ ಮೇಲಣ ಕಾರ್ಯಕ್ರಮಕ್ಕೆ ಅನುಸಾರವಾಗಿ ಒಂದೇ ಗೃಹಕೃತ್ಯಕ್ಕೆ ಸಂಬಂಧಪಟ್ಟ ಅವಿಭಕ್ತ ಕುಟುಂಬದ ಜೀವಿತಕ್ಕೆ ಅನುಕೂಲವಾಗಿರುವ ಐಕ್ಯವನ್ನು ಸ್ಥಾಪಿಸಿ, ಭಾರತ ಮಾತೆಯ ಲಾಲನೆ ಪಾಲನೆಯು ಆಕೆಯ ಪುತ್ರಪುತ್ರಿಯರಿಗೂ, ಸಾಕು ಮಕ್ಕಳಿಗೂ, ಅತಿಥಿ ಅಪರಿಚಿತರಿಗೂ ಉತ್ತಮನು ಅಥವಾ ಕನಿಷ್ಟನು ಎಂಬ ಭೇದವಿಲ್ಲದೆ ಏಕ ರೀತಿಯಲ್ಲಿ ಪ್ರಾಪ್ತಿಸುವಂತೆ ಮಾಡುವುದು ಶ್ರೀ. ಸರೋಜಿನಿ ದೇವಿಯರು ಕೈಕೊಂಡಿರುವ ಕಾರ್ಯಕ್ರಮದ ವಿವರವಾಗಿರುತ್ತದೆ. ಈಗಿನ ದೇಶ ಸ್ಥಿತಿಯನ್ನು ತಿಳಕೊಂಡಿರುವ ಸಮಸ್ತರೂ ಈ ಕಾರ್ಯಕ್ರಮವನ್ನು ಬಹಳ ಉಪಯುಕ್ತವಾದದ್ದೆಂತಲೇ ಒಪ್ಪಿಕೊಳ್ಳುವರು. ಮತ್ತು ತನ್ನ ಸ್ತ್ರೀ ಸ್ವಭಾವಕ್ಕೆ ಸರಿಯಾಗಿ ಈ ಕಾರ್ಯಕ್ರಮವನ್ನು ಬಹಳ ಶಾಂತರೂಪದಲ್ಲಿ ಸರೋಜಿನಿ ದೇವಿಯವರು ವ್ಯಕ್ತಗೊಳಿಸಿರುವರಾದರೂ ಅತಿ ಉಜ್ವಲ ದೇಶಾಭಿಮಾನಿಗೂ ಸಹ ಈ ಕಾರ್ಯಕ್ರಮದಲ್ಲಿ ಸಹಭಾಗಿಯಾಗಲು ಸಂಪೂರ್ಣ ಅಸ್ಪದವಿದೆ. ದೇಶದಲ್ಲಿ ಈಗಲೆ ಐಕ್ಯದ ಚಿನ್ಹೆಗಳು ಅಲ್ಲಲ್ಲಿ ತಲೆದೋರುತ್ತಿವೆಯಾದರೂ ಐಕ್ಯದಸ್ಥಾಪನೆಯು ಮತ್ತಷ್ಟು ಬಲಗೊಳ್ಳಬೇಕಾದರೆ ಕಲಹಗಳನ್ನು ಮಾಜುವ ಸರೋಜಿನಿ ದೇವಿಯವರ ಸ್ತ್ರೀ ಮಾಧುರ್ಯವೇ ದೇಶದ ಈಗಿನ ಸಂದರ್ಭದಲ್ಲಿ ಅಗತ್ಯವಾಗಿರುವದು.

೩. ನಮ್ಮಲ್ಲಿಯ ಸ್ವರಾಜ್ಯ ಪಾರ್ಟಿಯವರು ಇಲ್ಲಿಯ ಮುನ್ಸಿಪಲ್ ಕೌನ್ಸಿಲಿಗೆ ಸಾಧ್ಯವಾದ್ದಲ್ಲಿ ತಮ್ಮ ಪಾರ್ಟಿ ಮೆಂಬರರೇ ಕೌನ್ಸಿಲರರಾಗಿ ಆರಿಸಲ್ಪಡುವಂತೆ ಸ್ತುತ್ಯವಾದ ಪ್ರಯತ್ನಗಳನ್ನು ನಡಿಸುತ್ತಿರುವರು. ಇಲ್ಲಿಯ ಬಪ್ಪವಾರ್ಡು ಮತ್ತು ಕೋರ್ಟವಾರ್ಡುಗಳಲ್ಲಿ ಸ್ವರಾಜ್ಯಪಾರ್ಟಿಯವರಿಗೆ ಜಯ ಸಿಕ್ಕದೆ ಹೋದರೂ ಈ ಅಪಜಯದಿಂದ ಧೈರ್ಯಗೆಡದೆ ತಮ್ಮ ಸಾಧನೆಯನ್ನು ಇನ್ನೂ ಮುಂದೊತ್ತುತ್ತಿದ್ದಾರೆ. ಗತಿಸಿ ಹೋದ ಮ| ರಾ| ರಾ| ನಗರ ಗಣಪತಿ ರಾಯರ ಕೌನ್ಸಿಲರ್ ಸ್ಥಾನವು ಪ್ರಕೃತ ಖಾಲಿ ಬಿದ್ದಿರುವದರಿಂದ ಆ ಸ್ಥಾನಕ್ಕೆ ಒಬ್ಬ ಕೌನ್ಸಿಲರರನ್ನು ಸೆಂಟ್ರಲ್ ವಾರ್ಡಿನಿಂದ ಇದೇ ತಿಂಗಳ ತಾ. ೨೮ಕ್ಕೆ ನಡಿಯುವ ಚುನಾವಣೆ ಮೂಲಕ ಆರಿಸಬೇಕಾಗುತ್ತದೆ. ಸ್ವರಾಜ್ಯಪಾರ್ಟಿಯ ಕಡೆಯಿಂದ ಇಲ್ಲಿಯ, ಸನ್ಮಾನ್ಯ ವಕೀಲ ಎಮ್. ಮಾಧವ ರಾಯರು ಉಮೇದ್ವಾರರಾಗಿರುವರಾಗಿ ತಿಳಿಯುತ್ತೇವೆ. ಸ್ವರಾಜ್ಯಪಾರ್ಟಿಯ ಉಮೇದ್ವಾರರನ್ನು ಏಕೆ ಕೌನ್ಸಿಲರರಾಗಿ ಆರಿಸಬೇಕೆಂಬುದರ ಕುರಿತು ಈ ಮುಂಚೆ ವಿಸ್ತಾರವಾಗಿ ಪದೇ ಪದೇ ಬರೆದಿರುವದರಿಂದ ಆ ಹೇಳಿಕೆಗಳೆಲ್ಲವುಗಳನ್ನು ಇಲ್ಲಿ ಇನ್ನೊಮ್ಮೆ ಬರೆಯಬೇಕೆಂದಿಲ್ಲ. ಜಾತಿವೈಷಮ್ಯದ ಕಹಿಯು ನಮ್ಮಿಂದ ತೊಲಗಿ ಹೋಗಬೇಕಾದರೆ ಅದಕ್ಕೆ ಬೇಕಾದ ಸಾಧನೆಯು ಸ್ವರಾಜ್ಯಪಕ್ಷೀಯರಂಥವರಿಂದ ಪ್ರಯತ್ನಿಸಬೇಕಾಗಿದೆ. ಇಂಥ ಪ್ರಯತ್ನಗಳಿಗೆ ಅಸ್ಪದಕೊಡುವದೆಂದರೆ ಸ್ವರಾಜ್ಯಪಾರ್ಟಿಯ ಉಮೇದ್ವಾರರನ್ನು ಆರಿಸುವುದಾಗಿದೆ. ಸೆಂಟ್ರಲ್ ವಾರ್ಡಿನ ವೋಟರರು ಇಂಥ ಸಾಧನೆಗೆ ತಮ್ಮ ಪರಿಪೂರ್ಣ ಬೆಂಬಲವನ್ನು ಕೊಡುವಂತಾಗಿ ಕೋರುತ್ತೇವೆ.

೪. ಇದೇ ತಿಂಗಳ ತಾ. ೬ರಲ್ಲಿ ಸಿಮ್ಲಾದಲ್ಲಿ ಅಲ್ಲಿಯ ಹಿಂದೀ ನಿವಾಸಿಕರ ಪರವಾಗಿ ಸೆಸಿಲ್ ಹೊಟೇಲಿನಲ್ಲಿ ಲೋರ್ಡ ರೆಡಿಂಗರಿಗೆ ಔತಣ ಪಾರ್ಟಿ ಏರ್ಪಡಿಸಲ್ಪಟ್ಟಿತ್ತು. ವ್ಯಾಸರಾಯರುಗಳು ಅಧಿಕಾರ ನಿವೃತ್ತರಾಗಿ ಹೋಗುವ ಸಂದರ್ಭಗಳಲ್ಲಿ ಇಂಥ ಪಾರ್ಟಿಗಳನ್ನು ಏರ್ಪಡಿಸುವ ಸಾಂಪ್ರದಾಯದ ಪ್ರಕಾರ ಈ ಪಾರ್ಟಿಯೂ ಏರ್ಪಡಿಸಲ್ಪಟ್ಟಿತೆಂಬುದಾಗಿ ತಿಳಿಯುತ್ತೇವೆ. ಅಂದರೆ ಲೊ. ರೆಡಿಂಗರ ವ್ಯಾಸರಾಯ ಪದವಿಯು ಐದು ವರುಷದ ಅವಧಿಗೆ ಇನ್ನೂ ಆರು ತಿಂಗಳುಗಳಿವೆ ಮತ್ತು ಈ ಅವಧಿಯ ನಂತರ ರೆಡಿಂಗರವರು ಅಧಿಕಾರ ನಿವೃತ್ತರಾಗುವರೆಂಬುದು ಈ ಪಾರ್ಟಿಯಿಂದ ಖರೆಯಾಯಿತು. ಸಿಮ್ಲಾ ನಿವಾಸಿಕರ ಪರವಾಗಿ ಈ ಪಾರ್ಟಿಯು ಏರ್ಪಡಿಸಲ್ಪಟ್ಟಿತೆಂದರೆ ಸಿಮ್ಲಾದ ನಿವಾಸಿಕರೆಲ್ಲರ ಸಹಕಾರದಿಂದ ಇದು ವ್ಯವಸ್ಥೆಗೊಳಿಸಲ್ಪಟ್ಟಿತೆಂತಲ್ಲ. ವ್ಯಾಸರಾಯಿಗಳ ಆತಿಥ್ಯ ಉಪಚಾರಗಳನ್ನು ಪಡೆದವರು, ಸರಕಾರದ ಕೃಪಾದೃಷ್ಟಿಗೆ ಆಗಿಂದಾಗ್ಗೆ ಪಾತ್ರರಾದವರು ಅಂಥ ಕೆಲವು ಬಿನ್ ಸರಕಾರಿ ಗೃಹಸ್ಥರುಗಳಿಂದ ಈ ಸಂಭ್ರಮಗಳು ನಡಿಸೋಣಾಗುತ್ತವೆ. ಸರ್ ಮಹಮ್ಮದ್ ಷಾಫಿಯವರು ಈ ಸಂಭ್ರಮದ ಅಧ್ಯಕ್ಷಸ್ಥಾನದಲ್ಲಿದ್ದರೆಂದು ಹೇಳಿದ ಬಳಿಕ ಈ ಔತಣ ಉಪಚಾರಕ್ಕೆ ಕರ್ತೃಗಳ್ಯಾರೆಂಬುದು ಇನ್ನೂ ವಿವರಿಸಲಗತ್ಯವಿಲ್ಲ. ಷಾಫಿಯವರು ಈ ಸಂದರ್ಭದಲ್ಲಿ ಹಾಡಿದ ಹಾಡು ಅವರು ಅನುಸರಿಸಿರುವ ರಾಜಕೀಯ ತತ್ವಗಳಿಗೂ ಅವರ ಯೋಗ್ಯತೆಗೂ ತಕ್ಕಂತೆ ಇತ್ತು. ಸರ್ ಷಾಫಿಯವರು ವ್ಯಾಸರಾಯರ ಕಾರ್ಯಕಾರಿ ಕೌನ್ಸಿಲಿನ ಮಾಜಿ ಮೆಂಬರರೂ ಮಡಿಮನ್ ಕಮಿಟಿ ರಿಪೋರ್ಟಿನಲ್ಲಿ ಬಹುಪಕ್ಷದ ಕಡೆ ಇದ್ದವರೂ ಎಂದ ಮೇಲೆ ಇವರ ಯೋಗ್ಯತೆಗಳನ್ನು ಹೆಚ್ಚು ವಿವರಿಸುವ ಅಗತ್ಯವಿಲ್ಲ. ಲೊ. ರೆಡಿಂಗರ ಕುರಿತು ಇಂಥವರು ಯಾವ ಹಾಡನ್ನು ಹಾಡಿರುವರು? ಬ್ರಿಟಿಷರು ಟರ್ಕಿಯವರ ಕೂಡೆ ಮಾಡಿದ ಒಪ್ಪಂದವನ್ನು ಹಿಂದೀ ಮಹಮದೀಯರ ಮತಭಾವನೆಗಳಿಗೆ ಅನುಕೂಲವಾಗುವಂತೆ ಮಾರ್ಪಡಿಸಿದ ಕೀರ್ತಿಯ ಸೊಲ್ಲು ಷಾಫಿಯವರ ಹಾಡಿನಲ್ಲಿದೆ. ಷಾಫಿಯರಲ್ಲದೆ ಮತ್ತ್ಯಾರೂ ಮಹಮದೀಯರು ಈ ಬಗ್ಗೆ ತಮ್ಮ ಉತ್ಸಾಹವನ್ನು ಲೊ. ರೆಡಿಂಗರ ಪರವಾಗಿ ವ್ಯಕ್ತಗೊಳಿಸಿದಿಲ್ಲವೆಂಬ ಸಂಗತಿ ಮೇಲೆ ಹಾಡಿನ ಈ ಸೊಲ್ಲು ಬರೆ ಉಪಚಾರ ಉಕ್ತಿಯೆಂತಲೇ ಭಾವಿಸತಕ್ಕದ್ದು. ಹಿಂದುಸ್ಥಾನದ ಆರ್ಥಿಕ ಸ್ಥಿತಿಯು ರೆಡಿಂಗರವರಿಂದ ಉದ್ಧಾರವಾಯಿತೆಂಬ ಮತ್ತೊಂದು ಪದವು ಷಾಫಿಯವರ ಹಾಡಿನಲ್ಲಿತ್ತು. ಸಕಾಲದಲ್ಲಿ ದೇಶದಲ್ಲಿ ಮಳೆಬೆಳೆಗಳಾದ್ದರಿಂದ ದೇಶದ ಆರ್ಥಿಕ ಸ್ಥಿತಿಯು ಒಳ್ಳೇದಾದಲ್ಲದೆ ತನ್ನಿಂದ ಆದದ್ದಲ್ಲ. ಇದಕ್ಕೆ ಕಾರಣವು ದೇವರೇ. ಎಂದು ಲೋ. ರೆಡಿಂಗರವರು ತಮ್ಮ ಉತ್ತರದಲ್ಲಿ ತನ್ನ ಈ ಸ್ತುತಿಪಾಠಕನನ್ನು ತಿದ್ದಿದರು. ಷಾಫಿಯವರು ಮಾಡಿದ ಸ್ತುತಿಯು ಇಷ್ಟರಲ್ಲಿಯೇ ಮುಗಿಯಲಿಲ್ಲ. ಹಿಂದೀಯವರು ಸರಿಯಾಗಿ ಸಹಕರಿಸಿದ್ದಲ್ಲಿ ಈಗಿರುವ ಗವರ್ನಮೆಂಟ ಒಫ್ ಇಂಡಿಯಾ ಆಕ್ಟನ್ನು ಬೇಗನೆ ತಿದ್ದಬಹುದೆಂಬ ಮತಕ್ಕೆ ಮಂತ್ರಿಮಂಡಲದಿಂದ ಸಹಿ ಹಾಕಿಸಿದ ಮಹತ್ಕಾರ್ಯದ ಕರ್ತೃಗಳು ರೆಡಿಂಗರೆಂಬುದಾಗಿಯೇ ಷಾಫಿಯವರು ಸ್ತುತಿಸಿರುತ್ತಾರೆ. ಈ ಸಹಕಾರ ಶರ್ತದ ವಿಷಯ ಹಿಂದಿನ ಸಂದರ್ಭಗಳಲ್ಲಿ ಪ್ರಸ್ತಾಪಿಸಿರುವೆವು, ಈಗಿನ ದ್ವಿದಲ ರಾಜ್ಯಪದ್ಧತಿಯನ್ನು ಯಶಸ್ವಿಯಾಗಿ ಮಾಡಿರಿ! ಎಂಬುದೇ ಈ ಸಹಕಾರ ಶರ್ತ. ಈ ಲಾಗವನ್ನು ಹಾಕುವದು ಎಂಥ ಸಹಕಾರ ಸಾಧನೆಯವನಿಗಾದರೂ ಸಾಧ್ಯವಿಲ್ಲವೆಂತ ರುಜುವಾದರೂ, ಬರ್ಕನ್‌ಹೆಡ್ಡರು ಸ್ವತಹ ಈ ಪದ್ಧತಿಯು ಅಸಾಧ್ಯವೆಂತೆಂದರೂ ಈ ಲಾಗವನ್ನು ಹೊಡೆದರೆ ಮುಂದೆ ಸಾಗಬಹುದೆಂತ ಹೇಳುವದು ಬರೆ ಕೌತುಕದ ಮಾತಾಗಿದೆ. ಹೀಗಿದ್ದರೂ ಷಾಪಿಗಳ ಸ್ತುತಿಯಾದರೊ ಈ ಬಗ್ಗೆಯೂ ಕಡಮೆಯಾಗಿರಲಿಲ್ಲ. ಲೋರ್ಡ ರೆಡಿಂಗರವರು ಈ ಪರವಾಗಿ ಉತ್ತರ ಕೊಡುವಾಗ್ಗೆ ಬ್ರಿಟಿಷರು ಸರಕಾರದ ಬಗ್ಗೆ ಚಾಚಿದ ಕೈಯನ್ನು ಹಿಂದೀ ಮುಖಂಡರು ಸರಿಯಾಗಿ ಗ್ರಹಿಸಲಿಲ್ಲವೆಂಬ ದೋಷವನ್ನು ಹಿಂದಿಯರ ತಲೆಯ ಮೇಲೆ ಹಾಕಿರುತ್ತಾರೆ. ಹಿಂದೀಯರು ಸಹಕಾರಕ್ಕೆ ಹೇಗೆ ಸಿದ್ಧವಿರುವರೆಂಬದನ್ನು ಸ್ವರ್ಗಸ್ಥರಾದ ದಾಸ ಬಂಧುಗಳು ಸ್ಪಷ್ಟೋಕ್ತಿಗಳಿಂದ ಆಡಿ ತೋರಿಸಿದರೂ ಅವರ ನಂತರ ಶ್ರೀಯುತ ಮೋತಿಲಾಲ್‌ನೆಹರು, ಮೊದಲಾದ ದೇಶವತ್ಸಲರು ಇತ್ತಲಾಗಿನ ಎಸೆಂಬ್ಲಿಯಲ್ಲಿಯ ತಮ್ಮ ವರ್ತನೆ ಮೂಲಕ ತಮ್ಮ ಸಹಕಾರ ಭಾವವನ್ನು ಕಾರ್ಯರೂಪ ಗೊಳಿಸಿರುವರಾದರೂ ಇನ್ನೂ ಇನ್ನೂ ಈ ಬಾಬಿನಲ್ಲಿ ದೋಷವನ್ನು ಹಿಂದಿಯರ ತಲೆಯ ಮೇಲೆಯೇ ಹಾಕುವದೆಂದರೆ ಬಹಳ ವಿಷಾದಕರ ಸಂಗತಿಯಾಗಿದೆ. ಸರ್ ಷಾಫಿಯವರ ಸ್ತುತಿಯ ಹಾಡಿನಲ್ಲಿ ಇನ್ನೂ ಕೆಲವು ಅಸಂಬದ್ಧ ಸಂಗತಿಗಳಿದ್ದವು. ಕೃಷಿ ಮತ್ತು ಇತರ ಕೈಗಾರಿಕೆಗಳ ಉದ್ಧಾರ, ಯುನಿವರ್ಸಿಟಿಗಳ ಸ್ಥಾಪನೆ ಇವುಗಳ ಬಗ್ಗೆಯೂ ಷಾಫಿಯವರು ಲೋರ್ಡ ರೆಡಿಂಗರವರನ್ನು ಸ್ತುತಿಸಿರುತ್ತಾರೆ. ಇವುಗಳಿಂದ ದೇಶವು ಉದ್ಧಾರವಾದ ಸಂಗತಿಯು ವ್ಯಕ್ತವಾದದಲ್ಲವಾದರೂ ಈ ಪ್ರಯತ್ನಗಳು ಆಯಾ ಸಂಸ್ಥಾನಗಳ ಮಂತ್ರಿಗಳಿಂದಲೇ ಪ್ರಾರಂಭಿಸಿದ್ದಾಗಿವೆ. ಹೀಗಿರುತ್ತ ಈ ಕಲ್ಪಿತ ಕಥೆಯನ್ನು ತಮ್ಮ ಹಾಡಿನಲ್ಲಿ ಕೂಡಿಸಿದ್ದು ತಮ್ಮ ಭಾಷಣಕ್ಕೆ ಕವಿತಾ ಅಲಂಕಾರವನ್ನು ಸೇರಿಸಲಿಕ್ಕೋ ಏನೋ. ಹೇಗೂ ವ್ಯಾಸರಾಯರ ಪದವಿಯಲ್ಲಿ ಇದ್ದ ವ್ಯಕ್ತಿಯು ಹೋಗಿ ಇನ್ನು ಆರು ತಿಂಗಳ ಕಾಲದಲ್ಲಿ ಹೊಸ ವ್ಯಕ್ತಿಯು ಬರುವದೆಂಬುದು ಖಚಿತವಾಯಿತು.

ಮಹಾತ್ಮರು ಚಿರಾಯುವಾಗಿರಲಿ.

(ಲೇಖಕ:—ಕವಿ ಶ್ರೀ. ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯರು.)

ಜಗದ್ವಿಖ್ಯಾತಳಾದ ಈ ಭಾರತಮಾತೆಯ ಶ್ರೇಷ್ಠ ಪುತ್ರ ಮಹಾತ್ಮಾ ಮೋಹನದಾಸ ಕರಮಚಂದ ಗಾಂಧಿಯವರು ಅವತರಿಸಿ ಈಗಲೀಗ ಐವತ್ತಾರು ವರ್ಷಗಳು ಸಂದುಹೋದವು. ಆಧುನಿಕ ಭರತಖಂಡದ ಇತಿಹಾಸದಲ್ಲಿ ಪ್ರಧಾನಸ್ಥಾನವನ್ನು ಪಡೆದು, ಆಚಂದ್ರಾರ್ಕವಾದ ಕೀರ್ತಿಯ ಧ್ವಜವನ್ನು ಚಿರಸ್ಥಾಯಿಯಾಗಿ ಸ್ಥಾಪಿಸಿ, ಸರ್ವಜನಾನುರಂಜನರಾಗಿ ಅನಭಿಷಿಕ್ತ ಸಾರ್ವಭೌಮನೆನಿಸಿ ಶೋಭಿಸುತ್ತಿರುವ ನಿಸ್ಪೃಹಚಕ್ರವರ್ತಿಯಾದ ಆ ಪುತ್ರರತ್ನವನ್ನು ಪಡೆದ ವೀರಮಾತೆ ಭಾರತಾಂಬಿಕೆಯು ನಿಜವಾಗಿ ಧನ್ಯಳಲ್ಲವೆ? ಆಗರ್ಭಶ್ರೀಮಂತನಾಗಿದ್ದು ಸಕಲಸುಖಸಾಮ್ರಾಜ್ಯಾನಂದಜಲಧಿಯಲ್ಲಿ ಓಲಾಡುವ ಸರ್ವಾನುಕೂಲಸಂದರ್ಭಾನ್ವಿತನಾಗಿದ್ದರೂ — ಅದೊಂದನ್ನೂ ಲೆಕ್ಕಿಸದೆ, ತನ್ನ ಮಾತೃಭೂಮಿಯ ಉದ್ಧಾರಕ್ಕಾಗಿ ಆತ್ಮಯಜ್ಞಕ್ಕೂ ಸಿದ್ಧನಾಗಿ—ಸ್ವರಾಜ್ಯಯುದ್ಧದಲ್ಲಿ ಬದ್ಧಕಂಕಣನಾಗಿರುವ ಪ್ರಸಿದ್ಧ ರಾಜಯೋಗಿಯಾದ ಆ ಕರ್ಮವೀರನು ನಮ್ಮ ಮಧ್ಯದಲ್ಲಿ ಒದಗಿರುವುದು ನಮ್ಮ ಪೂರ್ವಪುಣ್ಯವೆಂದೇ ಹೇಳಬೇಕು. ಈ ನಮ್ಮ ಪರಮಪೂಜ್ಯ ದೇಶಬಂಧುವಿಗೆ ದೀರ್ಘಾಯುರಾರೋಗ್ಯಭಾಗ್ಯವನ್ನು ಕರುಣಿಸುವಂತೆ ಆ ದಯಾಮಯನನ್ನು ಮನಃಪೂರ್ವಕವಾಗಿ ಪ್ರಾರ್ಥಿಸುವುದೇ ಈ ನೂತನ ವರ್ಷದಲ್ಲಿ ಇಂದು ನಮ್ಮೆಲ್ಲರ ಕರ್ತವ್ಯವಾಗಿದೆ.

ಸ್ವರಾಜ್ಯಾತ್ಮತಿಲಕರ ವಿಯೋಗಾನಂತರ ಮಹಾತ್ಮಾ ಗಾಂಧಿಗಳು ಭಾರತರಣರಂಗದಲ್ಲಿ ಅಹಿಂಸಾಯುಧಪಾಣಿಯಾಗಿ ಸಮಗ್ರಭಾರತದಲ್ಲಿ ಉದಗ್ರದೇಶಾಭಿಮಾನವನ್ನು ಜಾಗ್ರತಗೊಳಿಸಿದರು! 'ಭಾರತವು ಭಾರತೀಯರಿಗೆ' 'ಪರಕೀಯರಿಗಲ್ಲ' ಎಂದು ಸ್ವದೇಶಾಭಿಮಾನವನ್ನು ಪ್ರತಿಯೊಬ್ಬ ಭಾರತೀಯನ ಹೃದಯದಲ್ಲಿ ಉಜ್ವಲಗೊಳಿಸಿದ ಆ ಕೀರ್ತಿಯು ಮಹಾತ್ಮರಿಗೇನೆ ಸಲ್ಲುವುದೆಂದರೆ ಅಲ್ಲದ ಮಾತಾಗದು! ಹೆಚ್ಚೇಕೆ? ಆ ಗತವೈಭವಳಾದ ಈ ಭಾರತಮಾತೆಯ ಮಕ್ಕಳಲ್ಲಿ ಅಹಿಂಸಾ ಮಿತಜೀವನ, ಸ್ವದೇಶಾಭಿಮಾನ, ಸತ್ಯಾಗ್ರಹ, ಸ್ವಾತಂತ್ರ್ಯ, ಸ್ವರಾಜ್ಯ ಇವೇ ಮೊದಲಾದವುಗಳ ಅಭಿಲಾಷೆಯು ಈಗಲೀಗ ಜಾಜ್ವಲ್ಯಮಾನವಾಗಿ ಕಳೆಗೊಂಡು ಪುನರುಜ್ಜೀವನವನ್ನು ಹೊಂದಿದ್ದು ಆ ಮಹಾತ್ಮರ ಪ್ರಭಾವದಿಂದಲೇ ಎಂಬುದರಲ್ಲಿ ಸ್ವಲ್ಪವಾದರೂ ಸಂದೇಹವಿಲ್ಲ.

ಈ ಪುಣ್ಯಶ್ಲೋಕರ ದಿವ್ಯಸಂದೇಶದಂತೆ ನಡೆದಿದ್ದರೆ ಭರತಖಂಡವು ಸ್ವರಾಜ್ಯಸಂಗ್ರಾಮದಲ್ಲಿ ಈ ಮೊದಲೇ ಬಹಳ ಮುಂದರಿಯುತ್ತಿತ್ತು! ವಿದೇಶವೇಷಭಾಷಾದಿಗಳ ಪಾಶದಲ್ಲಿ ಮೋಸಹೋದ ಈ ದೇಶವಾಸಿಗಳಿಗೆ ಅವರ ತತ್ವವನ್ನು ಗ್ರಹಿಸುವುದಕ್ಕೂ ಶಕ್ತಿಯಿಲ್ಲದೆ ಹೋಯಿತೆ? ಆಗಲಿ, 'ಮಿಂಚಿಹೋದ ಕಾರ್ಯದಲ್ಲಿ ಚಿಂತಿಸಿ ಫಲವೇನು?' ಇನ್ನಾದರೂ ಆ ಮಹಾತ್ಮರ ಸಂದೇಶಾನುಸಾರವಾಗಿ ವರ್ತಿಸಿ, ಭಾರತಮಾತೆಯನ್ನು ಬಂಧಮುಕ್ತಳನ್ನಾಗಿ ಮಾಡುವುದಕ್ಕೆ ಮುಂದೆಬಂದರೆ ಆ ಮಹಾತ್ಮರ ನೇತೃತ್ವದಲ್ಲಿ ಶೀಘ್ರವಾಗಿ ನಮ್ಮೆಲ್ಲರ ಹಾಗೂ ದೇಶದ ಏಳಿಗೆಯಾಗುವುದರಲ್ಲಿ ಅನುಮಾನವೇನು?

ಈ ಪುಣ್ಯಭೂಮಿಯಲ್ಲಿ ಮಧ್ವ, ಶಂಕರ, ಬುದ್ಧ, ರಾಮಾನುಜಾದಿಗಳು ಅವತರಿಸಿ ಹೇಗೆ ತಮ್ಮ ತಮ್ಮ ಮತವನ್ನು ಸ್ಥಾಪಿಸಿರುವರೊ ಹಾಗೆಯೇ ಪವಿತ್ರಚರಿತ್ರರಾದ ಮಹಾತ್ಮರೂ ಕೂಡ ತಾನು ಅವತರಿಸಿದ ಉದ್ದೇಶವನ್ನು ನೆರವೇರಿಸಿಯೇ ಬಿಡುವರು. ಮಧ್ವಾಚಾರ್ಯಾದ್ಯರಿಗೆ ತಮ್ಮ ಮತಸ್ಥಾಪನೆಯ ಕಾರ್ಯದಲ್ಲಿ ಆದಿಯಲ್ಲಿ ಅನೇಕ ವಿಘ್ನಗಳಿದ್ದರೂ ಅವಿಶ್ರಾಂತಪರಿಶ್ರಮದಿಂದ ಕೊನೆಗೆ ಅವರೆಲ್ಲರೂ ತಮ್ಮ ಧ್ಯೇಯವನ್ನು ಪೂರೈಸಿ ಲೋಕೋದ್ಧಾರವನ್ನು ಮಾಡಿದರು. ಹಾಗೆಯೇ, ಎಷ್ಟೇ ವಿಘ್ನಗಳಾದರೂ, ಎದೆಗುಂದದೆ ನಮ್ಮ ನಮ್ಮ ಕರ್ತವ್ಯಗಳನ್ನು ಮಾಡಿ ನಾವು ಆ ಮಹಾತ್ಮರಿಗೆ ಬೆಂಬಲವಾಗಿ ನಿಂತರೆ ಖಂಡಿತವಾಗಿಯೂ ಮಹಾತ್ಮರ ಮತವು ಸಿದ್ಧಿಸಿ ದೇಶೋನ್ನತಿಯಾಗುವುದರಲ್ಲಿ ಸಂಶಯವಿಲ್ಲ. ಇಂದು ಅಫ್ರಿಕಾ, ಅಮೇರಿಕಾ, ಮೊದಲಾದ ವಿದೇಶಗಳೂ ಕೂಡಾ ಮಹಾತ್ಮರ ಸಂದರ್ಶನಾಪೇಕ್ಷೆಯಿಂದ ಹಂಬಲಿಸುತ್ತಿರುವುವು! ಇಡೀ ಲೋಕವೇ ಮಹಾತ್ಮರನ್ನು ಒಬ್ಬ ಅವತಾರಪುರುಷನೆಂದು ಕಾಣುತ್ತಿರುವುದು! 'World's greatest man' ಭೂಲೋಕದ ಪುರುಷೋತ್ತಮನೆಂದು ಮಹಾತ್ಮರನ್ನು ಮಾನಿಸುತ್ತಿರುವುದು! ಆದರೂ ನಾವು ಮಾತ್ರ ಅವರ ಮಾತನ್ನು ಅಲಕ್ಷ್ಯಮಾಡುವುದೆಂದರೆ ಏನೆನ್ನಬೇಕು?

ಲೋಕಮಾನ್ಯ ತಿಲಕರ ವಿಯೋಗದುಃಖವನ್ನು ಮರೆಯುವಷ್ಟರಲ್ಲಿಯೇ ದೇಶಬಂಧು ದಾಸರೂ ಭರತಖಂಡವನ್ನು ದುಃಖಸಾಗರದಲ್ಲಿ ಮುಳುಗಿಸಿ ಹೋದರು! ದಾಸರ ವಿಯೋಗಕ್ಕಾಗಿ ಕೊರಗುತ್ತಿದ್ದಾಗಲೇ ಸುರೇಂದ್ರನಾಥರೂ ಸುರಲೋಕವನ್ನು ಸೇರಿದರು! ಅದೆಂತಹ ದೌರ್ಭಾಗ್ಯ! ಮತ್ತಾರು? ಮಹಾತ್ಮಾ ಗಾಂಧಿಯೊಬ್ಬರೇ! ಇವರು ಕಾಲಕಾಲದಲ್ಲಿ ಅನ್ನಾಹಾರಾದಿಗಳಿಲ್ಲದೆ ನಮ್ಮ ಬೆವರು ಬಿದ್ದಲ್ಲಿ ತನ್ನ ರಕ್ತವನ್ನೇ ಧಾರೆಯೆರೆಯುತ್ತಿದ್ದು ರಾತ್ರಿಂದಿವವೂ ಕೆಲಸಮಾಡುತ್ತಿರುವರು—ಯಾರಿಗೋಸ್ಕರವಾಗಿ? ವೈಸರಾಯರಂಥ ರಾಜಪದವಿಯು ಸಿಕ್ಕುವುದಿದ್ದರೂ ಬಿಟ್ಟು ಅವರು ಕಷ್ಟಪಡುತ್ತಿರುವರು-ಯಾರಿಗೋಸ್ಕರವಾಗಿ? ಖಾದಿಯನ್ನು ಧರಿಸಿಕೊಳ್ಳಿರೆಂದರು—ಯಾರಿಗೋಸ್ಕರವಾಗಿ? ಮದ್ಯಪಾನವನ್ನು ಬಿಡಿರೆಂದರು—ಯಾರಿಗೋಸ್ಕರವಾಗಿ? ಸ್ವರಾಜ್ಯವನ್ನು ಪಡೆಯಬೇಕೆನ್ನುವರು-ಯಾರಿಗೋಸ್ಕರವಾಗಿ? ಪ್ರಬಲವಾದ ಸರಕಾರದೊಡನೆ ಕಾದಾಡಿ ಬಂಧನದಲ್ಲಿ ಬಳಲಿದರು—ಯಾರಿಗೋಸ್ಕರವಾಗಿ? ಇಪ್ಪತ್ತೊಂದು ದಿನಗಳ ಉಪವಾಸವನ್ನು ಮಾಡಿದರು—ಯಾರಿಗೋಸ್ಕರವಾಗಿ? ಎಲ್ಲವೂ ನಮಗಾಗಿ—ಈ ಭಾರತಭೂಮಿಗಾಗಿ—ಅಲ್ಲದೆ ತನ್ನೊಬ್ಬನ ಹಿತಕ್ಕಾಗಿಯಲ್ಲ. ಇವುಗಳೆಲ್ಲವನ್ನು ಚೆನ್ನಾಗಿ ಯೋಚಿಸಿ, ಇನ್ನಾದರೂ ಒಮ್ಮಿಂದೊಮ್ಮೆಯೇ ನಿರ್ಧರಿಸಿ, ಆ ಮಹಾತ್ಮರ ಸಂದೇಶಾನುಸಾರವಾಗಿ ವರ್ತಿಸದಿದ್ದರೆ ನಮಗೆ ಶುಭವಾಗುವುದೆಂತು? ಖಾದಿಪ್ರಚಾರ, ಪಂಚಮೋದ್ಧಾರ, ಮದ್ಯಪಾನ ನಿಷೇಧ, ಹಿಂದೂ-ಮುಸಲ್ಮಾನರ ಐಕ್ಯ ಮೊದಲಾದ ಪ್ರತಿಯೊಂದು ತತ್ವವೂ ದೇಶೋನ್ನತಿಗೆ ಅತ್ಯಗತ್ಯವಾಗಿದೆ. ಭಾರತೀಯರೆಲ್ಲರೂ ಇವುಗಳನ್ನು ಆಚರಣೆಗೆ ತಂದರೆ ಆ ಮಹಾತ್ಮರ ಮಾತನ್ನು ಮನ್ನಿಸಿದಂತಾಗಿ ಸ್ವರ್ಣಭೂಮಿಯು ಏಳಿಗೆಯಾಗದಿರದು. ಆದುದರಿಂದ ನಾವೆಲ್ಲರೂ ಮಹಾತ್ಮರನ್ನೆ ಅನುಸರಿಸುವುದಲ್ಲದೆ, ಅವರು ನಮ್ಮ ಮಧ್ಯದಲ್ಲಿ ದೀರ್ಘಾಯುದೃಢಕಾಯರಾಗಿ ಚಿರಕಾಲವಿದ್ದು ತಮ್ಮ ಕಾರ್ಯದಲ್ಲಿ ಪರಿಪೂರ್ಣ ಯಶಸ್ವಿಗಳಾಗುವಂತೆ ಅನುಗ್ರಹಿಸುವರೆ ಆ ಸರ್ವಶಕ್ತನಾದ ಭಗವಂತನನ್ನು ಪ್ರಾರ್ಥಿಸುವುದೇ ಇಂದು ಅವರ ಪ್ರಾಯದ ಈ ಐವತ್ತೇಳನೇ ವರ್ಷಾರಂಭದಲ್ಲಿ ನಮ್ಮೆಲ್ಲರ ಕರ್ತವ್ಯವಾಗಿದೆ. ಮಹಾತ್ಮಾ ಮೋಹನದಾಸ ಕರಮಚಂದ ಗಾಂಧಿಯವರು ಚಿರಾಯುಗಳಾಗಿರಲಿ! ತಥಾಸ್ತು!

ಮಂಗಳೂರು.

ಕಳೆದ ತಾ. ೨ನೇ ಶುಕ್ರವಾರವು ಮಹಾತ್ಮಾ ಗಾಂಧಿಯವರ ಜನ್ಮ ದಿನ ಸಂಬಂಧ ಕಾಂಗ್ರೆಸು ಸ್ವಯಂ ಸೇವಕರು ತಿರುಗಾಡಿ ಸುಮಾರು ೬೦ ರೂಪಾಯಿ ಕ್ರಯ ಬಾಳುವ ಖಾದಿಯನ್ನು ಮಾರಾಟಮಾಡಿರುವರು. ಅದೇ ದಿವಸ ಸಾಯಂಕಾಲ ೫|| ಗಂಟೆಗೆ ರಾ| ಕೆ. ಆರ್. ಕಾರಂತರ ಅಧ್ಯಕ್ಷತೆಯಲ್ಲಿ ಕಾಂಗ್ರೆಸು ಕೆಲಸಗಾರರ ಸಭೆ ಸೇರಿ ಪ್ರಥಮತಃ ಶ್ರೀ. ಲಕ್ಷ್ಮೀನಾರಾಯಣ ಪುಣಿಂಚಿತ್ತಾಯರಿಂದ ಗಾಂಧಿ ಗೀತೆಯು ಹಾಡಲ್ಪಟ್ಟು ಗಾಂಧಿಯವರ ಶ್ರೇಯಃ ಪ್ರಾರ್ಥನೆಯಾಯಿತು. ಮತ್ತು ಕಾಂಗ್ರೆಸು ಮುಂದಿನ ಚಳವಳವನ್ನು ಪುನರುಜ್ಜೀವನಗೊಳಿಸುವರೆ ಸ್ವಯಂ ಸೇವಕರ ಮಂಡಳಿಯು ಅತ್ಯಾವಶ್ಯಕವೆಂದು ನಿಶ್ಚಯಿಸಲಾಯಿತು. ಈ ಬಗ್ಗೆ ನಿಯಮಗಳನ್ನು ರಚಿಸುವರೆ ೫ ಮಂದಿಯೊಳಗೊಂಡ ಒಂದು ಕಮಿಟಿಯು ಏರ್ಪಡಿಸಲಾಯಿತು ಸದರಿ ಕಮಿಟಿಯವರಿಂದ ತಯಾರಿಸಲ್ಪಟ್ಟ ನಿಯಮಗಳನ್ನು ಸ್ವಯಂ ಸೇವಕ ಮಂಡಳಿಯ ಸಭೆಯು ಇದೇ ತಾ. ೧೧—೧೦—'೨೫ನೇ ಆದಿತ್ಯವಾರ ಅಪರಾಹ್ನ ೪ ಗಂಟೆಗೆ ತಿಲಕ ವಿದ್ಯಾಲಯಯಲ್ಲಿ ಜರಗುವುದು. ಸ್ವಯಂ ಸೇವಕರೆಲ್ಲರೂ ಸಭೆಗೆ ಹಾಜರಾಗಬೇಕಾಗಿ ಎಮ್. ಜಿ. ಹೈದರ್ ಇವರ ಸವಿನಯ ವಿನಂತಿ.

ಮಂಗಳೂರಲ್ಲಿ ಸ್ತ್ರೀಯರ ಬಗ್ಗೆ ಒಂದು 'ಅಬಲಾ ಗೃಹವನ್ನು ಸ್ಥಾಪಿಸಬೇಕೆಂಬ ಸಂಕಲ್ಪವಿದೆ. ಇದಕ್ಕೆ ಯೋಗ್ಯ ವ್ಯವಸ್ಥೆ ಮಾಡುವರೆ ಇದರಲ್ಲಿ ಆಸಕ್ತಿ ಇದ್ದವರೆಲ್ಲರೂ ತಾ. ೧೧—೧೦—'೨೫ನೆ ಆದಿತ್ಯವಾರ ಪೂರ್ವಾಹ್ನ ಗಂಟೆ ೯ಕ್ಕೆ ಮಂಗಳೂರು ಕರ್ನಾಟಕ ತಿಲಕ ವಿದ್ಯಾಲಯದಲ್ಲಿ ಸೇರಬೇಕಾಗಿ ಕಾರ್ಯದರ್ಶಿಗಳ ಸವಿನಯ ವಿನಂತಿ.

ದೀಪಾವಳಿಯು ಸಮೀಪಿಸುತ್ತಾ ಇದೆ. ನಮ್ಮ ಖಾದರಿಗೆ ಕ್ರಯ ಬಹಳ ಕಮ್ಮಿ ಮಾಡಿಯದೆ. ನಮ್ಮ ಸ್ವಯಂ ಸೇವಕರು ತಮ್ಮ ಕಡೆಗೆ ಖಾದಿಯನ್ನು ತರುತ್ತಿರುವರು ಪ್ರೋತ್ಸಾಹಿಸಿರಿ. ದೀಪಾವಳಿ ದಿವಸ ಪೂರ್ಣವಾಗಿ ಖಾದಿಯನ್ನು ಧರಿಸಿರಿ. ೨. ಸೌತ್ ಅಫ್ರಿಕನ್ ಯೂನಿಯನ್ನು ನಮ್ಮ ಹಿಂದಿಯರ ವಿಷಯ ಮಾಡಿದ ಅನ್ಯಾಯದ ಕಾನೂನನ್ನು ಹೋಗಲಾಡಿಸುವ ಹಾಗೆ ಎಲ್ಲಾ ಜಾತಿಯವರ ಪ್ರಾರ್ಥನಾಲಯಗಳಲ್ಲಿ ಜನರು ಪರಮಾತ್ಮನನ್ನು ಪ್ರಾರ್ಥಿಸಿಕೊಳ್ಳಬೇಕೆಂದು ಶ್ರೀ. ಸರೋಜಿನಿ ದೇವಿಯರು ವಿನಂತಿಮಾಡಿಕೊಂಡ ಹಾಗೆ ನಮ್ಮ ಮಂಗಳೂರಲ್ಲಿ ಕೂಡ ಆ ದಿವಸವನ್ನು ಆಚರಿಸಬೇಕಾಗಿ ಸವಿನಯ ವಿನಂತಿ.

ಕರ್ನಾಟಕ ತಿಲಕ ವಿದ್ಯಾಲಯದ ಸಹಾಯಾರ್ಥವಾಗಿ ಮಂಗಳೂರು ಪಟ್ಟಣದಲ್ಲಿ ಕಳದ ತಾ. ೨೮-೯-'೨೫ನೇ ಆದಿತ್ಯವಾರಕ್ಕೆ ಅಂತ್ಯವಾಗುವ ವಾರದಲ್ಲಿ ಮುಷ್ಟಿ ಫಂಡಿನಿಂದ ರೂ. ೯—೧೦—೭ ಮತ್ತು ೧೨|| ಸೇರು ಅಕ್ಕಿ ಜಮಾ ಬಂದಿರುತ್ತದೆ. ಈ ಮೊದಲು ಕೊಡುತ್ತಾ ಬಂದ ಎಲ್ಲಾ ಮಹನೀಯರೂ ಇನ್ನು ಮುಂದೆಯೂ ಶಕ್ತಿ ಮೀರಿ ಸಹಾಯಮಾಡಬೇಕಾಗಿ ವಿನಂತಿ. ಇನ್ನು ಮುಂದೆ ಪ್ರತಿ ವಾರದಲ್ಲಿ ವಸೂಲಾದ ಮುಷ್ಟಿ ಫಂಡಿನ ಲೆಕ್ಕವನ್ನು ಹೀಗೆಯೇ ಸ್ಥಳೀಕ ಪತ್ರಗಳಲ್ಲಿ ಪ್ರಕಟಿಸುತ್ತಾ ಬರುವೆವು ಎಂದು ಕಾರ್ಯದರ್ಶಿಯರ ಬಗ್ಗೆ ಮುಖ್ಯಾಧ್ಯಾಪಕರಾದ ಸುರತ್‌ಕಲ್ ಶ್ರೀನಿವಾಸರಾವ್ ಇವರು ತಿಳಿಸುತ್ತಾರೆ.

ಬೋಳಾರದ ಎಮ್ಮೆಕೆರೆಯ ಬಳಿಯಲ್ಲಿ ಗದ್ದೆ ಕೊಯ್ಯುತ್ತಿರುವಾಗ ಒಂದು ದೊಡ್ಡ ತೆಂಗಿನ ಮರವು ಬಿದ್ದು ಇಬ್ಬರು ಹೆಂಗಸರು ಅಲ್ಲಿಯೇ ಮೃತಪಟ್ಟರೆಂದೂ ಮತ್ತಿಬ್ಬರು ಬಹಳ ಜಖಂ ಹೊಂದಿರುವರೆಂದೂ ತಿಳಿಯುತ್ತೇವೆ.

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ, ಮಂಗಳೂರು, ಇದರ ರಿಪೋರ್ಟ—ಕಳೆದ ಸಪ್ಟೆಂಬರ ತಿಂಗಳಲ್ಲಿ ಹಾಜರಾದ ಹೊಸ ರೋಗಿಗಳು ೫೮೮, ಹಳೆ ರೋಗಿಗಳು ೬೬, ಜುಮ್ಲಾ ರೋಗಿಗಳು ೬೫೪, ಈ ಎಲ್ಲಾ ರೋಗಿಗಳ ಜುಮ್ಲಾ ಹಾಜರು ೨೬೦೪ ದಿನವಹಿ ಸರಾಸರಿ ಹಾಜರಿ ೮೭, ಎಂದು ಆಯುರ್ವೇದ ವಿದ್ವಾನ್ ಕೆ. ಗೋಪಾಲಾಚಾರ್ಯರು ತಿಳಿಸುತ್ತಾರೆ.

ಇಲ್ಲಿಯ ಸ್ವರಾಜ್ಯ ಪಾರ್ಟಿಯ ಕಡೆಯಿಂದ ಖಾಲಿಬಿದ್ದಿರುವ ಸೆಂಟ್ರಲ್ ವಾರ್ಡಿಗೆ ರಾ| ವಕೀಲ ಮಾಧವರಾಯರು ಉಮೇದ್ವಾರರಾಗಿ ನಿಂತಿರುವರು.

ರೆವಿನ್ಯು ಬೋರ್ಡು ಮೆಂಬರರಾಗಿರುವ ಮಿ| ಎ| ಜಿ| ಸ್ಟೋಕ್ಸ್ ಇವರು ದಕ್ಷಿಣ ಕನ್ನಡದಲ್ಲಿ ಸಂಚರಿಸುತ್ತಿದ್ದಾರೆ.

(೫ನೇ ಪುಟದಿಂದ ಮುಂದುವರಿದುದು.)

ಇಲ್ಲಿಯ ಹೆಡ್ ಎಕೌಂಟಂಟ ಮ. ಟ್ರೆಜರರು ಆಗಿ ನೇಮಕಪಟ್ಟ ರಾ। ಎಸ್. ರಾಮಕೃಷ್ಣ ಕಾಮತರು ಈ ದಿನ ಹಾಜರಾಗಿ ಚಾರ್ಜು ತಕ್ಕೊಂಡಿರುವರು.

ಇಲ್ಲಿಯ ಸರಕಾರಿ ನೌಕರರ ಪರಸ್ಪರ ಸಹಾಯಕ ಸಂಘವನ್ನು ಮಂಗಳೂರಲ್ಲಿರುವ ದಕ್ಷಿಣ ಕನ್ನಡ ಜಿಲ್ಲಾ ಸರಕಾರಿ ನೌಕರರ ಸಂಘದ ಶಾಖೆಯನ್ನಾಗಿ ಮಾಡಿದ್ದಲ್ಲದೆ, ಇಲ್ಲಿಯ ತಹಶೀಲ್ದಾರರಾದ ಮ। ರಾ। ರಾ। ಟಿ. ಭವಾನಿಶಂಕರರಾಯರನ್ನು ಈ ಶಾಖೆಯ ಅಧ್ಯಕ್ಷರನ್ನಾಗಿಯೂ ಹೆಡ್ ಎಕೌಂಟಂಟರಾದ ಮ। ರಾ। ಎಸ್. ಆರ್. ಕಾಮತರನ್ನು ಕಾರ್ಯದರ್ಶಿ ವ ಖಜಾನಜಿಯವರನ್ನಾಗಿಯೂ, ಇಲ್ಲಿಯ ಸ್ಟೇಶನರಿ ಸಬ್ ಮೆಜಿಸ್ಟ್ರೇಟರಾದ ಮ। ರಾ। ಎಮ್. ಸುಬ್ಬಾವರನ್ನೂ, ಇಲ್ಲಿಯ ಸಬ್ ರಿಜಿಸ್ಟ್ರಾರರಾದ ಮ। ರಾ। ಪಿ. ಮಂಗೇಶರಾಯರವರನ್ನೂ, ಮುನಸೀಫ್ ಕೋರ್ಟ ಹೆಡ್ ಕ್ಲಾರ್ಕರಾದ ಮ। ರಾ। ಪಿ ಎ. ಭಂಡಾರ್ಕಾರರನ್ನೂ ಪಂಚಾಯಿತ ವ ಆಡಳಿತೆ ಮೆಂಬರರನ್ನಾಗಿಯೂ ಮಾಡೋಣಾಗಿಯದೆ. ಈ ವರೆಗೆ ಮೊದಲಿನ ಸಂಘದಲ್ಲಿ ಹಣದ ಅಡಚಣೆ ಇದ್ದ ಪ್ರಯುಕ್ತ ಎಲ್ಲ ಸರಕಾರಿ ನೌಕರರಿಗೆ ಹಣ ಥಕ್ಕನೆ ಸಿಕ್ಕುವುದು ಸ್ವಲ್ಪ ಪ್ರಯಾಸ ವಾಗುತ್ತಿತ್ತು. ಈಗಲಾದರೋ ಎಷ್ಟು ಜನರಿಗಾದರೂ ಪ್ರಯಾಸವಿಲ್ಲದೆ ತೀವ್ರವಾಗಿಯೇ ಹಣ ಸಿಕ್ಕುತ್ತದೆ. ಇದು ತೀರಾ ಸಂತೋಷದ ವಾರ್ತೆಯಾಗಿರುತ್ತದೆ.

ಈಗ ಸರ್ವೆ ಕೆಲಸವು ಅತೀ ಜೋರಿನಿಂದ ನಡಿಯುತ್ತಿವೆ ಎಲ್ಲಿ ನೋಡಿದರೂ ಸರ್ವೆ ಪಾರ್ಟಿಯವರು ತಮ್ಮ ಕೆಲಸವನ್ನು ಹೆಚ್ಚಿನ ಉತ್ಸಾಹದಿಂದ ಮಾಡುತ್ತಿದ್ದಾರೆ. ಯಾವ ಕಡೆ ಹೋದರೂ ಅಲ್ಲಿ ಸರ್ವೆಯವರ ಪಂಗಡ, ಪತಾಕೆಗಳು ಸಂಕೋಲೆ ಮತ್ತು ಕ್ರಾಸ್ ಸ್ಟಾಫ್ ನೋಡಬಹುದು.

ಇಲ್ಲಿಯ ಊರವರು ಬೋರ್ಡ್ ಹೈಸ್ಕೂಲು ಕಟ್ಟಿಸುವರೆ ೧೦೦೦೦ ರೂಪಾಯಿ ವಂತಿಗೆ ಮಾಡಿ ಕೊಟ್ಟರೂ ಈ ವರೆಗೆ ಸದರಿ ಶಾಲೆಯು ಇಲ್ಲಿಯ ಹಳೆ ತಾಲೂಕು ಕಚೇರಿಯ ಕಟ್ಟೋಣದಲ್ಲಿಯೇ ನಡೆಯುತ್ತದೆಂಬುದು ಶೋಚನೀಯ. ಶಾಲೆ ಶುರುವಾಗಿ ವ ವಂತಿಗೆ ತೆತ್ತು ಮೂರು ನಾಲ್ಕು ವರ್ಷಗಳ ಮೇಲಾದರೂ ಹೊಸ ಕಟ್ಟೋಣ ಕಟ್ಟಿಸದೆ ಇರುವದು ಯಾವದರ ಸಲುವಾಗಿ ಎಂಬದು ಗೊತ್ತಾಗಲೇ ಇಲ್ಲ. ಇದೇನು ಸೋಜಿಗ—! ಶಾಲೆ ಕಟ್ಟಿಸುವರೆ ಇಡೀ ಟೌನಿನಲ್ಲಿ ಒಳ್ಳೆಯ ಸ್ಥಳವೇ ಇಲ್ಲವೇ—ಅಂತೂ ಇಂತೂ ಕುಂತೀ ಮಕ್ಕಳಿಗೆ ವನವಾಸ.

ಹೊಸ ಆಸ್ಪತ್ರೆಯ ಕಟ್ಟೋಣವು ಒಂದು ಕಟ್ಟಿಸಿ ಹಾಗೆಯೇ ಇಟ್ಟಿರುತ್ತದೆ. ಅದರಲ್ಲಿ ಈಗ ತಾಲೂ ಡಿಪ್ಯುಟಿ ಇನ್ಸ್‌ಪೆಕ್ಟರರ ಆಫೀಸನ್ನು ಇಟ್ಟಿರುತ್ತಾರೆ. ಆಸ್ಪತ್ರೆಯು ಮುಂಚಿನ ಹಳೆ ಕಟ್ಟೋಣದಲ್ಲಿಯೇ ಇರುತ್ತದೆ. ಒಟ್ಟಾರೆಯ ಮೇಲೆ ಹೇಳುವದಾದರೆ—ಯೋಚಿಸುವದು ಒಂದು—ಆಗುವುದು ಮತ್ತೊಂದೆಂಬ ಗಾದೆಯಾಗಿದೆ.

ಪುರಾತನ ಕುಂಬಳೆ ರಾಜಮನೆತನದ ಮಾಯಿಪ್ಪಾಡಿ ಅರಮನೆಯ ಕಿರೆ ಮೆಂಬರರು ಈಗಿನ ತಮ್ಮ ಕುಟುಂಬದ ಯಜಮಾನ ವ ಕಾರ್ನವರಾದ ಶ್ರೀ। ರಾಮಂತ ಅರಸುಗಳ ಆಡಳಿತೆಯು ಸರಿಯಾಗಿಲ್ಲದ್ದರಿಂದ ಅವರನ್ನು ಅಧಿಕಾರದಿಂದ ತಪ್ಪಿಸಬೇಕೆಂದು ಮೊದಲಾಗಿ ಮಂಗಳೂರು ಸಬ್ ಕೋರ್ಟಿನಲ್ಲಿ ಒಂದು ವ್ಯಾಜ್ಯವನ್ನು ಮಾಡಿದ್ದರು. ಆ ವ್ಯಾಜ್ಯವು ವಾದಿಗಳ ದಾವೆಯಂತೆ ತೀರ್ಮಾಗಿದ್ದು ಶ್ರೀ। ರಾಮಂತ ಅರಸುಗಳ ಬದಲಾಗಿ ಆ ಕುಟುಂಬದ ಮೂರನೇ ಅರಸುಗಳು ಆಡಳಿತೆಯನ್ನು ನಡಿಸಿಕೊಂಡು ಬರಬೇಕೆಂದು ಕೋರ್ಟಿನವರು ವಿಧಿಸಿರುತ್ತಾರೆ ಮ। ರಾ। ಗಳಾದ ಎಮ್. ಅನಂತ ಶಾಸ್ತ್ರಿ ಮತ್ತು ಯು. ಸಿ ಕೃಷ್ಣಭಟ್ಟರು ವಾದಿಗಳ ಕಡೆಯಿಂದಲೂ—ಕೆ. ಎಲ್. ನಾರಾಯಣ ರಾವ್, ಜಿ. ಕೃಷ್ಣರಾವ್, ಎಚ್. ಬಾಲಕೃಷ್ಣ ರಾವ್, ಬಿ. ವ್ಯಾಸರಾಯಾಚಾರ್, ಮತ್ತು ಬಿ. ಶ್ರೀನಿವಾಸ ಪೈಗಳವರು ಪ್ರತಿವಾದಿಗಳ ಕಡೆಯಿಂದಲೂ ವ್ಯವಹರಿಸಿದರು.

ಬಂಟ್ವಾಳ:— ಇಲ್ಲಿಯ ಪಿ. ವಾಸುದೇವರಾವ್ ಎಂಬವರನ್ನು ಕೆಲವು ಮಾಪಿಳ್ಳೆಯರು ನಟ್ಟಿಹಗಲಲ್ಲಿ ಬಂಟ್ವಾಳ ಪೇಟೆಯಲ್ಲಿ ಹೊಡೆದು ಬಹಳ ಜಖಂಪಡಿಸಿರುತ್ತಾರೆಂದೂ ಅವರನ್ನು ಮಂಗಳೂರು ವೆನ್‌ಲೋಕ್ ಆಸ್ಪತ್ರೆಗೆ ವೈದಿರುತ್ತಾರೆಂದೂ ವಾರ್ತೆಯಿದೆ.

ವಿವಿಧ ವಿಷಯಗಳು.

ಜರ್ಮನಿಯೊಳಗಿನ ವೈಮಾನಿಕ ಸುಧಾರಣೆ.

ವೈಮಾನಿಕ ಕಲೆಯಲ್ಲಿ ಜರ್ಮನ ದೇಶವು ಪಾಶ್ಚಾತ್ಯರೊಳಗೆ ಮುಂದುವರಿಸಿದೆಂಬ ಸಂಗತಿಯು ದಿವಸಗಳು ಹೋದ ಹಾಗೆಲ್ಲ ಸ್ಪಷ್ಟವಾಗುತ್ತ ಬರುತ್ತಿದೆ. ಯುದ್ಧದ ಪೂರ್ವಕ್ಕಿಂತಲೂ ಈಗ ಅಂದರೆ ಯುದ್ಧದ ಅನಂತರ ಅವರು ಯಂತ್ರ, ಕೈಗಾರಿಕೆ ಸಾಮಾನು ಹಾಗೂ ವಿಮಾನ ಮೊದಲಾದ ಸಾಹಿತ್ಯ ಹೊಸ ಸುಧಾರಣೆಗಳನ್ನು ಮಾಡಿ ಲೋಕದಲ್ಲಿ ವಿಖ್ಯಾತಿಯನ್ನು ಪಡೆಯುತ್ತಿದ್ದಾರೆ. ಡಾವಿಜದ ಒಪ್ಪಂದದ ಪ್ರಕಾರ ಜರ್ಮನಿಯು ಮಿತ್ರಪಕ್ಷದವರಿಗೆ ಕಪ್ಪವನ್ನು ಕೊಡಬೇಕೆಂದು ಮೊದಲು ನಿಶ್ಚಯಿಸಲ್ಪಟ್ಟಿತಷ್ಟೇ. ಈ ಹಣವನ್ನು ಕ್ರಮಶಃ ಕೊಡಲು ಜರ್ಮನದೇಶವು ಪ್ರಾರಂಭಮಾಡಿದೆ. ರೀತಿಯಂತೆ ಮೊನ್ನೆಯ ದಿವಸ ಇಂಗ್ಲಂಡಿಗೆ ೧೪॥ ಕೋಟಿ ರೂಪಾಯಿಯ ಹಣವನ್ನು ಜರ್ಮನದೇಶದವರು ಇಂಗ್ಲಂಡಿಗೆ ವಿಮಾನದ ಮುಖಾಂತರ ತಲ್ಪಿಸಿದ್ದಾರೆ. ಇಷ್ಟು ಹಣದ ನಾಣ್ಯಗಳನ್ನೆ, ಅಂದರೆ ಪವನುಗಳನ್ನೆ ತಕ್ಕೊಂಡು ೨೦ ಗಂಟುಗಳನ್ನು ಮಾಡಿ ಅದನ್ನು ವಿಮಾನದಲ್ಲಿಟ್ಟು ಇಂಗ್ಲಂಡದ ಸಾಹುಕಾರರಿಗೆ ತಲ್ಪಿಸಿದರು. ನಿಜವಾಗಿ ನೋಡಹೋದರೆ ಇಷ್ಟು ಭಾರವುಳ್ಳ ಸಾಹಿತ್ಯವನ್ನು ಇತರ ವಿಮಾನಗಳು ಒಯ್ಯುವುದು ಕಷ್ಟಸಾಧ್ಯವೆ ಸರಿ. ಹೀಗಿರುತ್ತ ಜರ್ಮನರು ತಮ್ಮ ಕಲೆಯ ಊರ್ಜಿತ ಅವಸ್ಥೆಯನ್ನು ಸಾಹುಕಾರರಿಗೆ ವಿದಿತಮಾಡುವುದಕ್ಕಾಗಿಯೆ ವಿಮಾನದಲ್ಲಿ ಇನ್ನೂ ಅನೇಕ ಸುಧಾರಣೆಗಳನ್ನು ಮಾಡಿದ್ದರು. ನಮ್ಮ ಮೋಟಾರುಗಳಲ್ಲಿ ಅಥವಾ ಹೊಗೆ ಬಂಡಿಗಳಲ್ಲಿ ಬೀಡಿ ವಗೈರೆ ಸೇದಕೂಡದೆಂಬ ನಿಯಮವಿದೆಯಷ್ಟೆ. ಆದರೆ ಈ ನಿಯಮವನ್ನು ಪ್ರಯಾಣಿಕರು ಎಷ್ಟೋ ಸಂದರ್ಭಗಳಲ್ಲಿ ಉಲ್ಲಂಘಿಸಿದ್ದು ಕಂಡುಬರುತ್ತದೆ. ಆದರೆ ವಿಮಾನದಲ್ಲಿ ಈ ನಿಯಮವನ್ನು ಅಕ್ಷರಶಃ ಪಾಲಿಸಬೇಕಾಗುತ್ತದೆ. ಆದ್ದರಿಂದ ಅಲ್ಲಿಯ ಅಧಿಕಾರಿಗಳು ಆಗಾಗ್ಗೆ ಆ ನಿಯಮದ ಬಜಾವಣೆಯನ್ನು ಮಾಡುತ್ತಲೆ ಇರುತ್ತಾರೆ. ಮೊನ್ನೆ ಜರ್ಮನಿಯಿಂದ ಕಳಿಸಲ್ಪಟ್ಟ ವಿಮಾನದಲ್ಲಿ ಈ ನಿಯಮದ ಪ್ರತಿಬಂಧವಿಲ್ಲ. ಬೀಡಿ, ಸಿಗರೇಟು ವಗೈರೆ ಸೇದಿದರೆ ವಿಮಾನದಲ್ಲಿರುವ ಗೇಸ್ ಅಂದರೆ ವಾಯುವಿನ ತೊಂದರೆ ಆಗದ ಹಾಗೆ ಜಾಗ್ರತೆ ಮಾಡಿದ್ದಾರಂತೆ. ಸಾರಾಂಶ ಎಲ್ಲ ತರದ ಸೌಕರ್ಯಗಳು ವಿಮಾನದಲ್ಲಿ ಮಾಡಿದ್ದಾರೆ. ಇದನ್ನೆಲ್ಲ ನೋಡಿ ಬ್ರಿಟಿಶರಿಗೆ ಬಹು ಆಶ್ಚರ್ಯವಾಗದೆ ಇರದು. ಸಾಲವನ್ನು ಪರಿಹಾರ ಮಾಡುವಾಗ ಸಹ ತನ್ನ ವಿದ್ಯೆಯ ಸಾಮರ್ಥ್ಯವನ್ನು ಜರ್ಮನಿಯು ಇತರರಿಗೆ ತೋರಿಸಲು ಪ್ರಯತ್ನಮಾಡಿದ್ದು ನಿಜವಾಗಿಯೂ ಶ್ಲಾಘನೀಯವೇ ಸರಿ.

* * *

ಅಮೇರಿಕದೊಳಗಿನ ಹೊಸ ತೀರ್ಮಾನ.

ಜರ್ಮನಿಯಲ್ಲಿ ಹೇಗೆ ವೈಮಾನಿಕ ಸುಧಾರಣೆಯು ಅತ್ಯಂತ ಊರ್ಜಿತ ಅವಸ್ಥೆಯನ್ನು ಹೊಂದಿದೆಯೋ ಹಾಗೆಯೇ ಅಮೇರಿಕದಲ್ಲಿಯೂ ಕೂಡ ಯಾಂತ್ರಿಕ ಸುಧಾರಣೆಗಳು ಇನ್ನಷ್ಟು ಹೆಚ್ಚಿಗೆ ಆಗುತ್ತ ನಡೆಯುತ್ತಿವೆ. ಯಾಂತ್ರಿಕ ಕಲೆಯಲ್ಲಿ ಸುಧಾರಣೆ ಮಾಡಿ ಮನುಷ್ಯನ ಸೌಕರ್ಯವನ್ನು ಹೆಚ್ಚಿಸಿದಂತೆ ಯಾವ ಪ್ರಕಾರ ನಾವು ಆಶ್ಚರ್ಯಪಡುತ್ತೇವೊ ಅದೇ ಮೇರೆಗೆ ಇತರ ವಿಷಯಗಳಲ್ಲಿ—ವಿದ್ಯೆ, ನ್ಯಾಯ್ಯವಿಧಾನಗಳಲ್ಲಿ—ಸಹ ಸುಧಾರಣೆಯನ್ನು ಮಾಡಿದರೆ ಇನ್ನಷ್ಟು ಆಶ್ಚರ್ಯಹೊಂದುವದು ಸಹಜವೇ ಸರಿ. ಅಮೇರಿಕದಲ್ಲಿ ನ್ಯಾಯತೀರ್ಪನ್ನು ವಿಧಿಸುವಾಗ ಹೊಸ ರೀತಿಯ ಸುಧಾರಣೆಯನ್ನು ಮಾಡಿರುವರು. ಅಲ್ಲಿಯ ಒಂದು ವೃತ್ತಪತ್ರಿಕೆಯ ಸಂಪಾದಕನು ಕಾರ್ಯಾಂತರದಿಂದ ಬೇರೊಂದು ಊರಿಗೆ ಹೋಗುವಾಗ ಅವನು ತನ್ನ ಮಗನಿಗೆ ಸಂಪಾದಕತ್ವವನ್ನು ವಹಿಸಿ ಹೋದನು. ಮಗನು ಒಂದು ದಿವಸ ಮೋಟಾರಿನಲ್ಲಿ ಕೂತು ಮನುಷ್ಯರ ಗುಂಪಿನಲ್ಲಿ ಹೋಗುವಾಗ ಆ ಮೋಟಾರು ಒಬ್ಬ ಪ್ರಯಾಣಿಕನಿಗೆ ತಗಲಿ ಅವನಿಗೆ ಜಖಂಮಾಡಿತು. ಕ್ರಮದಂತೆ ಪೋಲೀಸರು ಸಂಪಾದಕನನ್ನು ಹಿಡಿದು ವಿಚಾರಣೆಗೆ ಗುರಿಮಾಡಿದರು. ಮೆಜಿಸ್ಟ್ರೇಟ ಸಾಹೇಬರು ವಿಚಿತ್ರವಾದ ಶಿಕ್ಷೆಯನ್ನು ಸಂಪಾದಕನಿಗೆ ಕೊಟ್ಟಿದ್ದಾರೆ. ‟ಮೋಟಾರನ್ನು ಜನರ ಗುಂಪಿನಲ್ಲಿ ಅತಿವೇಗದಿಂದ ಓಡಿಸಿದ್ದಲ್ಲಿ ಯಾವ ದುಷ್ಪರಿಣಾಮಗಳು ಒದಗುತ್ತದೆ ಎಂಬ ವಿಷಯವನ್ನು ಕುರಿತು ನೀವು ಒಂದು ಲೇಖವನ್ನು ನಿಮ್ಮ ಪತ್ರಿಕೆಯಲ್ಲಿ ಪ್ರಕಟಮಾಡಿ ಆ ಸಂಚಿಕೆಯ ಒಂದು ಅಂಕವನ್ನು ಈ ಕೋರ್ಟಿಗೆ ಕಳುಹಿಸಿರಿ. ಆ ಅಂಕವು ನಮ್ಮ ಫೈಲಿನಲ್ಲಿ ಇಡಲಾದೀತು ಇದೆ ನಿಮಗೆ ಶಿಕ್ಷೆ!'' ಈ ಪ್ರಕಾರ ನ್ಯಾಯಮೂರ್ತಿಯವರು ಶಿಕ್ಷೆಯನ್ನು ವಿಧಿಸಿದ್ದಾರೆ. ಹಿಂದುಸ್ಥಾನದೊಳಗಿನ ವೃತ್ತಪತ್ರಕರ್ತರು ವಿಚಿತ್ರವಾದ ಮೇಲಿನ ಸಂಗತಿಯನ್ನು ಲಕ್ಷ್ಯದಲ್ಲಿಟ್ಟಿರುಂಬುದರಲ್ಲಿ ಸಂಶಯವಿಲ್ಲ.

* * *

ಅಸ್ಪೃಶ್ಯತಾ ನಿವಾರಣೆ ಮತ್ತು ಸ್ವಾಮಿ ಶ್ರದ್ಧಾನಂದರ ವಿನಂತಿ.

ಅಸ್ಪೃಶ್ಯತೆಯು ಉತ್ತರಕ್ಕಿಂತ ದಕ್ಷಿಣ ಹಿಂದುಸ್ಥಾನದಲ್ಲಿಯೆ ವಿಶೇಷ ಬೆಳಕೊಂಡಿದೆ. ಮಹಾರಾಷ್ಟ್ರಕ್ಕಿಂತ ಕರ್ಣಾಟಕದಲ್ಲಿ, ಕರ್ನಾಟಕಕ್ಕಿಂತ ಮಲಬಾರಿನಲ್ಲಿ ಈ ಪ್ರಕಾರ ಅಸ್ಪೃಶ್ಯತೆಯು ಬೆಳೆದದ್ದು ಕಂಡುಬರುತ್ತಿದ್ದೆ ಆದ್ದರಿಂದ ದಕ್ಷಿಣ ಹಿಂದುಸ್ಥಾನದಲ್ಲಿ ಅದರ ನಿವಾರಣೆಯಾಗಬೇಕಾದು ಅತಿ ಅವಶ್ಯವು. ಆರ್ಯಸಮಾಜದ ಪರವಾಗಿ ಶ್ರದ್ಧಾನಂದಜಿಯವರು ಎಷ್ಟೋ ಸಮಯದಿಂದ ಇದರ ಸಲುವಾಗಿಯೇ ಹಿಂದುಸ್ಥಾನದಲ್ಲೆಲ್ಲ ಸಂಚರಿಸಿ ಹಿಂದೂ ಸಂಘಟನಕ್ಕಾಗಿ ಪ್ರಯತ್ನಪಡುತ್ತಿದ್ದ ಸಂಗತಿಯು ವಾಚಕರಿಗೆ ಗೊತ್ತಿದೆ. ಸ್ವಾಮಿಜಿಯವರು ಇಷ್ಟರ ತನಕ ಹಿಂದುಸ್ಥಾನದ ಉತ್ತರಭಾಗದಲ್ಲಿಯೆ ಸಂಚರಿಸುತ್ತಿದ್ದರು. ಆದರೆ ಈಗ ದಕ್ಷಿಣ ಭಾಗದಲ್ಲಿ ಅಂದರೆ ಮಲಬಾರ ಕಡೆಯಲ್ಲಿ ಬಂದು ಹಿಂದು ಸಂಘಟನದ ಸಲುವಾಗಿ ಸಂಚರಿಸಲಿದ್ದಾರೆ. ಅವರು ತಾನು ಬಂದಾಗ ಹಿಂದುಗಳು ತನಗೆ ಅವಷ್ಟು ಸಹಾಯ್ಯಮಾಡಿ ಹಿಂದು ಸಮಾಜದ ಉನ್ನತಿಯನ್ನು ಸಾಧಿಸ್ಯಾರೆಂದು ನಂಬಿರುವರು. ಇದರ ವಿಷಯವಾಗಿಯೇ ಡಾ. ಸಾವರಕಾರರು ಪುಣೆಯ 'ಮರಾಠಾ' ಪತ್ರಿಕೆಯಲ್ಲಿ ಕೆಲವು ಸಮಯದ ಹಿಂದೆ ಒಂದು ಲೇಖವನ್ನು ಪ್ರಸಿದ್ಧಮಾಡಿದ್ದರು. ಅದರಲ್ಲಿ ಅವರು ಕರ್ನಾಟಕವು ವಿಶೇಷತಃ ದಕ್ಷಿಣ ಭಾಗವು ಅಸ್ಪೃಶ್ಯತೆ, ಹಿಂದು ಸಂಘಟನಗಳಲ್ಲಿ ಹಿಂದುಳಿದಿದೆಂದು ಪ್ರತಿಪಾದಿಸಿದ್ದಾರೆ. ಸ್ವಾಮಿಜಿಯವರು ಬಂದಾಗಿನ ಸುಸಂದರ್ಭವನ್ನು ಮಲಬಾರ ಪ್ರಾಂತವು ಕಳಕೊಳ್ಳದೆ ಹಿಂದುಳಿದ ಜನರನ್ನು ಮೇಲಕ್ಕೆ ತಂದಾರೆಂದು ಭಾವಿಸುತ್ತೇವೆ.

* * *

ಒಕ್ಕಲಿಗರ ಪತ್ರಿಕೆಯಲ್ಲಿ ಕೆಳಗಿನ ಈ ವಿಚಿತ್ರ ವಾರ್ತೆಯು ಪ್ರಕಟವಾಗಿದೆ:—ಬರ್ಲಿನ್ ರಾಜಧಾನಿಯಿಂದ ಸಮೀಪದಲ್ಲಿರುವ ಒಂದು ಶಾಲಾ ನಗರಕ್ಕೆ ಒಂದೆ ಟ್ರೈನಿನಲ್ಲಿ ಸಾಗಿಸಲ್ಪಟ್ಟ ಎರಡು ಶವಗಳೂ ಕ್ರೈಸ್ತರ ಮತ ಪದ್ಧತಿಯಂತೆ ಎರಡು ಪೆಟ್ಟಿಗೆಗಳಲ್ಲಿ ಹಾಕಲ್ಪಟ್ಟಿದ್ದವು. ಎರಡರ ಪೈಕಿ ಒಂದು ರೋಮನ್ ಕ್ರೈಸ್ತರದಾಗಿಯೂ, ಮತ್ತೊಂದು ಪ್ರೊಟೆಸ್ಟೆಂಟರದಾಗಿಯೂ ಇದ್ದವು. ಸ್ಥಳವನ್ನು ತಲ್ಪುತ್ತಲೆ, ವಾರಸುದಾರರು ಪೆಟ್ಟಿಗೆಗಳನ್ನು ಗುರ್ತಿಸಲಾರದೆ ಅವುಗಳನ್ನು ಬದಲಾಯಿಸಿಕೊಂಡು ಬೇರೆ ಬೇರೆ ರುದ್ರಭೂಮಿಗಳಿಗೆ ಸಾಗಿಸಿದರು. ರೋಮನ್ ಕೆಥೋಲಿಕರು ಮೊದಲು ಪೆಟ್ಟಿಗೆಯನ್ನು ಭೂಸ್ಥಾಪನೆ ಮಾಡಿಬಿಟ್ಟರು. ಪ್ರೊಟೆಸ್ಟೆಂಟರು ಅವರಂತೆ ಮಾಡುವಷ್ಟರಲ್ಲಿ ಮೃತನ ಹೆಂಡತಿಯು ಪೆಟ್ಟಿಗೆಯು ತನ್ನ ಗಂಡನದಲ್ಲವೆಂದು ಹೇಳಿದ್ದರಿಂದ ಅದನ್ನು ಒಡೆದು ನೋಡಿ, ತಪ್ಪನ್ನು ತಿಳಿದುಕೊಂಡು, ಭೂಸ್ಥಾಪಿತವಾಗಿದ್ದ ಮತ್ತೊಂದು ಪೆಟ್ಟಿಗೆಯನ್ನು ಹೊರಗೆ ತೆಗಿಸಿ, ಅನಂತರ ಬದಲಾಯಿಸಿಕೊಂಡು ಶಾಸ್ತ್ರರೀತಿಯಾಗಿ ಮುಂದಿನ ಕೆಲಸವನ್ನು ನೆರವೇರಿಸಿದರಂತೆ! ಮೃತರು ಎಷ್ಟು ಪುಣ್ಯರೆಂದು ಇದರಿಂದ ಗೊತ್ತಾದೀತು.

* * *

ಛಾಪಾ ಪ್ರೆಸ್ಸುಗಳ ಕೈಗಾರಿಕೆಯು.

ಹಿಂದೂಸ್ಥಾನದಲ್ಲಿಯ ಛಾಪಖಾನೆಗಳ ಕೈಗಾರಿಕೆಯು ಕುರಿತು ಶ್ರೀ। ಬಿ. ಎಸ್. ದಾಸಗುಪ್ತ ಎಂಬವರು ಈ ರೀತಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಗೊಳಿಸಿರುತ್ತಾರೆ—ಯುರೋಪು ಮತ್ತು ಅಮೇರಿಕಾ ಖಂಡಗಳಿಗೆ ಹೋಗಿ ಅಲ್ಲಿ ಈ ಕೈಗಾರಿಕೆಯ ಮಾಹಿತಿಯನ್ನು ಪಡದು ಹಿಂದುಸ್ಥಾನಕ್ಕೆ ಬಂದಿರುವರು. ಹಿಂದೂಸ್ಥಾನದ ವ್ಯಾಪಾರ ಕೈಗಾರಿಕೆಗಳನ್ನು ಯಾವ ರೀತಿ ಅಭಿವೃದ್ಧಿಗೊಳಿಸಬಹುದೆಂಬುದನ್ನು ಪರಿಶೋಧಿಸಿ ತಿಳಿಯುವ ಉದ್ದೇಶದಿಂದ ಇವರು ವಿದೇಶಗಳಿಗೆ ತೆರಳಿಹೋಗಿ ಅಲ್ಲಿ ಇತರ ಕಡೆಗಳ ಕೈಗಾರಿಕೆಗಳಿಗಿಂತ ಯುರೋಪು ಮತ್ತು ಅಮೇರಿಕಾ ಖಂಡಗಳ ಕೈಗಾರಿಕೆಗಳ ವಿಧಾನಗಳನ್ನು ಹಿಂದೂಸ್ಥಾನದಲ್ಲಿ ಅವಲಂಭಿಸುವದು ಉಪಯುಕ್ತವೆಂತ ತಿಳಿದು ಆ ದೇಶಗಳಲ್ಲಿ ಇವರು ಹತ್ತು ವರುಷಗಳ ಪ್ರವಾಸವನ್ನು ಬೆಳಿಸಿ ಕಾಲುನಡೆಯಿಂದ ಆ ದೇಶಗಳ ವಿವಿಧ ಕೈಗಾರಿಕೆಗಳ ವಿವಿಧ ಕೈಗಾರಿಕೆ ಪ್ರಾಂತಗಳನ್ನು ಸಂಚರಿಸಿ ಕೈಗಾರಿಕೆಗಳ ವಿಷಯ ವಿಶೇಷ ಅನುಭವವನ್ನು ಸಂಗ್ರಹಿಸಿ ಹಿಂದುಸ್ಥಾನಕ್ಕೆ ಬಂದಿರುತ್ತಾರೆ. ಛಾಪಾ ಕೆಲಸಗಳಲ್ಲಿ ಇವರು ವಿಶೇಷ ಮಾಹಿತಿಯನ್ನು ಪಡದಿರುವದರಿಂದ ಈ ಮಾಹಿತಿಯನ್ನು ತನ್ನ ದೇಶದ ಪ್ರಯೋಜನಾರ್ಥವಾಗಿ ಇವರು ಉಪಯೋಗಿಸಲಿರುವರು. ಬುಕ್‌ಬ್ಯಾಂಡಿಂಗ್ ಮತ್ತು ಛಾಪಾ ಕೆಲಸಗಳಲ್ಲಿ ಹಿಂದೂಸ್ಥಾನವು ಯುರೋಪ ಮತ್ತು ಅಮೇರಿಕಾ ಖಂಡಗಳಿಗಿಂತ ವಿಶೇಷ ಹಿಂದುಳಿದು ಇರುತ್ತದೆ. ಕಳೆದ ಹತ್ತು ವರುಷಗಳಲ್ಲಿ ಈ ಕೈಗಾರಿಕೆಯಲ್ಲಾದ ಬದಲಾವಣೆಗಳು ಒಂದೂ ಈ ದೇಶಕ್ಕೆ ಗೊತ್ತಿರವು. ಹಿಂದೂಸ್ಥಾನದಲ್ಲಿ ಈ ಕೈಗಾರಿಕೆ ಅಭಿವೃದ್ಧಿಯಲ್ಲಿ ಯಾರಾದರೂ ಮನಸ್ಸುಕೊಟ್ಟಿರುವಂತೆ ತೋರುವುದಿಲ್ಲ. ಇದೇ ಸ್ಥಿತಿಯಲ್ಲಿ ಈ ಕೈಗಾರಿಕೆಯನ್ನು ಇರಗೊಡಿಸಿದರೆ ಈ ಕೈಗಾರಿಕೆಗೆ ಈ ದೇಶದಲ್ಲಿ ಬಹಳ ಅಪಾಯವಿದೆ. ಪ್ರಕೃತ ಎರಡು ರೂಪಾಯಿಗಳ ಖರ್ಚಿನಿಂದ ಒಂದು ಪುಸ್ತಕವನ್ನು ಛಾಪಿಸಬಹುದಾದರೆ ಈಗಿನ ನವೀನ ಸುಧಾರಣಾ ಕ್ರಮಗಳ ಪ್ರಕಾರ ಇಂಥಾದೊಂದು ಪುಸ್ತಕವನ್ನು ಕೆಲವು ಆಣೆಗಳ ಖರ್ಚಿನಿಂದ ತಯಾರಿಸಲಾಗುವುದು. ಅಮೇರಿಕಾ ಮತ್ತು ಜರ್ಮನ್ ದೇಶಗಳಲ್ಲಿ ನ್ಯೂಸ್ ಪೇಪರುಗಳು ಮತ್ತು ಎರಡಾಣೆ ಕ್ರಯದ ಪುಸ್ತಕಗಳು ಈ ರೀತಿ ಪುಸ್ತಗಳ ಪ್ರಕಟಣೆಗಳು ಆಗುವವು. ಇದೇ ರೀತಿಯ ಮತ್ತು ಇಷ್ಟೆ ಖರ್ಚಿನಿಂದ ಇಂಥಾ ಪ್ರಕಟಣೆಗಳು ಹಿಂದೂಸ್ಥಾನದಲ್ಲಿಯೂ ಸಹ ಮಾಡಲು ಸಾಧ್ಯವಾಗುವ ವಿಧಾನಗಳನ್ನು ಈ ದೇಶದಲ್ಲಿ ದಾಸಗುಪ್ತರವರು ಸ್ಥಾಪಿಸಲಿರುವರು. ಹಿಂದೂದೇಶದವರು ಯಾವಾಗಲೂ ಯಂತ್ರೋಪಕರಣಗಳನ್ನು ತಕ್ಕೊಳ್ಳುವಾಗ ಹಳೆ ಅಥವಾ ಸೆಕೆಂಡ್‌ಹೆಂಡ್ ಯಂತ್ರಗಳನ್ನು ತರಿಸುವರು. ಅಮೇರಿಕಾ ಮತ್ತು ಜರ್ಮನ ದೇಶಗಳಲ್ಲಿ ಹಾಳುಕಬ್ಬಿಣದ ರಾಶಿಗಳಲ್ಲಿರುವ ಇಂಥ ಯಂತ್ರಗಳನ್ನು ತರಿಸಿ ಯಾವ ಉಪಯೋಗವೂ ಇರದು. ವಿಕ್ಟೊರ್ ಪ್ರೆಸ್ ಪ್ರಿಂಟಿಂಗ್ ಎಂಬ ನೂತನ ವಿಧಾನಗಳಲ್ಲಿ ಛಾಪಾ ಕೆಲಸಗಳನ್ನು ಮಾಡುವ ಯಂತ್ರಸಾಹಿತ್ಯಗಳನ್ನು ಒದಗಿಸಿಕೊಡುವ ಕಂಪೆನಿಯ ಪ್ರತಿನಿಧಿಗಳು ದಾಸಗುಪ್ತರಾಗಿರುವರು. ಈ ವಿಧಾನಗಳ ಪ್ರಕಾರ ಛಾಪಾ ಕೆಲಸಗಳನ್ನು ಮಾಡಿದರೆ ಛಾಪಾಸಾಹಿತ್ಯಗಳ ಖರ್ಚು ವಿಶೇಷವಾಗಿ ಕಡಿಮೆಯಾಗುವದೆಂತ ದಾಸಗುಪ್ತರವರು ಹೇಳಿರುತ್ತಾರೆ.

ಪತ್ರವ್ಯವಹಾರ.

ಹಾಲ್ವಕ್ಕಿ ನರ್ಸಣ್ಣನವರ ಕುರಿತು ಮುಂಜಾಗ್ರತೆ.

ಜಯವಾಗುತ್ತೈತೆ! ಜಯವಾಗುತ್ತೈತೆ!! ಜಯವಾಗುತ್ತೈತೆ!!!

ಮೇಲಿನ ಮಾತುಗಳನ್ನು ಹೇಳುತ್ತಾ ನಮ್ಮೂರಿನ ಕೆಲ ಹಾಲ್ವಕ್ಕಿ ನರ್ಸಣ್ಣನವರು ಮನೆ ಮನೆ ಬೀದಿ ಬೀದಿ ಸುತ್ತಾಡಿ ಏನೋ ಸಿಕ್ಕಿದ ಕಡೆ ಎರಡು ಕಾಸು ಪಡೆದ ಭಿಕ್ಷಾಟನೆಯಿಂದ ಜೀವಿಸುವುದು ಎಲ್ಲರಿಗೂ ಗೊತ್ತಿರುವ ಸಂಗತಿಯಾಗಿದೆಯಷ್ಟೆ! ಆದರೆ ಈಚೆಗೆ ಕೆಲವು ಪರ ಊರಿನ ಜನರು ಈ ನಮೂನೆಯ ಹಾಲ್ವಕ್ಕಿ ನರ್ಸಣ್ಣನವರ ವೇಷಗಳನ್ನೂ ಧರಿಸಿಕೊಂಡು ಪ್ರತಿ ಮನೆಗೂ ಹೋಗಿ, ಅಲ್ಲಿರುವವರು ಅವರ ಹೇಳುವಿಕೆಗೆ ಸ್ವಲ್ಪ ಕಿವಿ ನೆಟ್ಟಿಗೆ ಮಾಡಿದರೆ ಸೈ ನಿಮಗೆ ಗ್ರಹಚಾರ ಬಹಳ ಕೆಟ್ಟದಿರುತ್ತದೆ. ನಿಮಗೆ ಮೂವರು ವೈರಿಗಳು ಇದ್ದಾರೆ—ಅದನ್ನೆಲ್ಲಾ ನಾನು ದೂರಮಾಡಬಲ್ಲೆನು. ಗ್ರಹಚಾರಕ್ಕೆ ಪರಿಹಾರಮಾಡುತ್ತೇನೆ. ಒಂದಿಷ್ಟು ಭತ್ತ ತಕ್ಕೊಂಡು ಬನ್ನಿರಿ, ಅನಂತರ—ಒಂದು ದೊಡ್ಡ ಪಾತ್ರೆಯಲ್ಲಿ ತುಂಬಾ ಅಕ್ಕಿ ತಂದು ಇಡಿರಿ—ನೀವು ಹಾಕಿಕೊಳ್ಳುವ ಒಂದು ಕೋಟು ತನ್ನಿರಿ—ನೀವು ಧರಿಸಿಕೊಳ್ಳುವ ಒಂದು ಶಾಲು ತನ್ನಿರಿ—ಒಂದು ಕೊಡೆ ತನ್ನಿರಿ—ನಿಮ್ಮ ಬೆರಳಿಗಿರುವ ಉಂಗುರ ತನ್ನಿರಿ ಇದನ್ನೆಲ್ಲಾ ನಿಮ್ಮ ಎದುರಿಗೇನೇ ಇಡಿರಿ—ಇದೆಲ್ಲಾ ನಿಮಗೆನೇ ವಾಪಸು ಕೊಡುತ್ತೇನೆ, ನನಗೇನೂ ಬೇಡಾ—ಇದೆಲ್ಲಾ ತಂದದ್ದಾಯಿತು—ನಂತರ ಎರಡು ರುಪಾಯಿಗಳನ್ನೂ ಆ ಅಕ್ಕಿಯ ಮೇಲೆ ಇಡಿರಿ ಎಂತ ಹೇಳಿ ಎಲ್ಲವನ್ನೂ ತರಿಸಿ ಏನೇನೋ ಬಾಯಿಗೆ ಬಂದ ಮಂತ್ರಗಳನ್ನು ಹೇಳುತ್ತಾ, ಒಂದು ವೀಳ್ಯದೆಲೆ ತುಂಡನ್ನು ತೆಗೆದು ಒಂದು ಹಿಡಿಕಡ್ಡಿ ತುಂಡಿಗೆ ಸಿಕ್ಕಿಸಿ ಆ ಅಕ್ಕಿಯಲ್ಲಿ ಅದನ್ನೂ ನೆಟ್ಟಿಗೆ (ವೀಳ್ಯದ ಎಲೆ ಮೇಲಾಗುವಂತೆ) ನಿಲ್ಲಿಸಿ ಈಗ ನೋಡಿರಿ—ನಿಮ್ಮ ಗ್ರಹಚಾರವೆಲ್ಲಾ ದೂರವಾಯಿತು—ಇದರ ಪರೀಕ್ಷೆ ನೋಡಿರಿ ಎಂತ ಹೇಳಿ ಆ ಅಕ್ಕಿಯ ಮೇಲೆ ಒಂದೆರಡು ತೊಟ್ಟು ನೀರುಬಿಟ್ಟು—ನೋಡಿರಿ ನಿಮ್ಮ ಗ್ರಹಚಾರವೆಲ್ಲ ದೂರವಾಯಿತು. ಆ ಕಡ್ಡಿಯು ತಿರುಗುತ್ತದೆ ಎಂತ ಹೇಳುವಾಗಲೇ ಆ ಕಡ್ಡಿಯು ಸ್ವಲ್ಪ ತಿರುಗುತ್ತದೆ—ನೋಡಿರಿ ನೋಡಿರಿ ನಾನು ಹೇಳಿದ್ದು ಸರಿಯಷ್ಟೆ—ಈಗ ನೀವು ಇಲ್ಲಿ ಇಟ್ಟ ವಸ್ತುಗಳೆಲ್ಲಾ ನಿಮ್ಮ ಗ್ರಹಚಾರ ಪರಿಹಾರದ ಬಗ್ಗೆ ವಿನಿಯೋಗಿಸಲ್ಪಟ್ಟವುಗಳು ಅದನ್ನು ನೀವು ಉಪಯೋಗಿಸಿದರೆ ನಿಮಗೆ ಹಾನಿಯುಂಟು ಅದನ್ನೆಲ್ಲಾ—ಆ ಕೆಟ್ಟ ಪದಾರ್ಥಗಳನ್ನೆಲ್ಲಾ—ನಿಮ್ಮ ಗ್ರಹಚಾರ ಸಮೇತ ನಾನೇ ತಕ್ಕೊಂಡು ಹೋಗುತ್ತೇನೆಂತ ಎಲ್ಲವನ್ನೂ ದೋಚಿಕೊಂಡು ಹಿಂದು ಮುಂದು ನೋಡದೆ ಪಾರಾಗುತ್ತಾರೆ.—ಅಹಾ ಇದ್ಯಾವ ಹಾಲ್ವಕ್ಕಿಯಯ್ಯಾ—ಇವರು ಹಾಲ್ವಕ್ಕಿ ನರ್ಸಣ್ಣರೋ? ಕೃತ್ರಿಮ ವೇಷಧಾರಿಗಳಾದ ಬದಮಾಷ್ ನರ್ಸಣ್ಣನವರೋ—ಇವರಿಗಿಂತ ನಮ್ಮೂರಿನ ಹಾಲ್ವಕ್ಕಿ ನರ್ಸಣ್ಣರೇ ನಮಗೆ ಆಗ ಬಹುದಿತ್ತಲ್ಲ—ನಮ್ಮೂರಿನ ನರ್ಸಣ್ಣರಾದರೋ ಒಂದು ಗಂಟೆ ತನಕ ಶಕುನ ಹೇಳಿದರೂ ಮೂರು ಕಾಸು ಕೊಟ್ಟವರಿಲ್ಲ—ಇದೇನು ಸೋಜಿಗ!! ಈ ನರ್ಸಣ್ಣನವರು ೫ ನಿಮಿಷದೊಳಗೆ ಹತ್ತು ರುಪಾಯಿ ಬಗೆ ಹೊಡಕೊಂಡು ಹೋಗೇ ಬಿಟ್ಟರು ಇದೇನು—ಇವರಿಗೆ ಕೇಳುವವರೇ ಇಲ್ಲವೇ!!! ಊರು ಯಾವದೆಂತ ಕೇಳಿದರೆ ನಾಗಪುರವಂತೆ—ಭಾಷೆ ತಮಿಳು—ಮತ್ತು ಹಿಂದುಸ್ಥಾನಿ ಮಾತ್ರ ಗೊತ್ತಂತೆ—ಬಾಯಿಗೆ ಬಂದ ಮಂತ್ರ—ಕೈಗೆ ಸಿಕ್ಕಿದ ವಸ್ತುಗಳನ್ನು ಎದುರು ಎದುರು ಅಪಹರಿಸಿಕೊಂಡು ಹೋಗುವ ತಂತ್ರ—ಶಹಬಾಸ್—ನರ್ಸಣ್ಣನವರೇ—ನಿಮಗೆ ನಮ್ಮದೊಂದು ದೊಡ್ಡ ನಮಸ್ಕಾರವು ಇರಲಿ—ಮೇಲಿನ ಸಂಗತಿಗಳೆಲ್ಲಾ ಕಣ್ಣಾರೆ ಕಂಡ ಸಂಗತಿಗಳಾದ್ದರಿಂದ—ಎಲ್ಲಾ ಜನರು ಈ ನರ್ಸಣ್ಣನವರ ಕುರಿತು ಮುಂಜಾಗ್ರತೆ ತಕ್ಕೊಳ್ಳುವಂತೆ—ಇದನ್ನೂ ಪ್ರಕಟ ಮಾಡಿರುತ್ತದೆ. ಮೋಸ ಹೋಗಬೇಡಿರಿ—ಇವರ ಕಾಟವು ಹಳ್ಳಿಗಳಲ್ಲಿ ಇನ್ನೂ ಹೆಚ್ಚಾಗಿರಲಿಕ್ಕೆ ಸಾಕು—ಆದ್ದರಿಂದ ಇದನ್ನು ಓದಿದವರು ತಮ್ಮ ಊರಿನ ಎಲ್ಲಾ ಜನರಿಗೆ ಈ ವಿಷಯವನ್ನು ತಿಳಿಸಬೇಕಾಗಿ ಅಪೇಕ್ಷಿಸುವ—

ಒಬ್ಬ ಪ್ರತ್ಯಕ್ಷದರ್ಶಿ.

ಶಾಸ್ತ್ರೀಯ
ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪ್ಯಾ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪ್ಯಾ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ!
ದಶಮೂಲ ಸುಖಪ್ರದಔಷಧಿ!
ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಜೀವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭ ಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಜೀವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭ ಕೋಶದ ವ್ರಣಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.
ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.
ಹೆಚ್ಚಿನ ಮಾಹಿತಿಗೆ ‟ಆರ್ಯಚಿಕಿತ್ಸಾರಹಸ್ಯ'' ಎಂಬ ಪುಸ್ತಕಕ್ಕೆ ಬರೆಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಶುದ್ಧವಾದ ನೀಲಗಿರಿ ಎಣ್ಣೆ
ತಲೆನೋವು, ಶೀತ, ಇನ್‌ಫ್ಲುಯಂಜಾಜ್ವರ,
ವಾತ, ಇತ್ಯಾದಿ ಎಲ್ಲಾ ರೋಗಗಳ
ಮೇಲೆ ಸಿದ್ಧೌಷಧ.
1 ಔನ್ಸು ಬಾಟ್ಲಿ 1ರ ಕ್ರಯ 0—4—0.
ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು.

The Canara Bank, Limited, Mangalore.
ಕನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised and fully paid up Capital Rs. 300,000-0-0	ಅಧಿಕಾರಗೊಳಿಸಲ್ಪಟ್ಟ, ಪೂರ್ಣವಾಗಿ ತೆತ್ತ ಮೂಲಧನವು ರೂ. 300,000—0—0
Reserve and other sinking Funds „ 259,000-0-0	ಕ್ಷೇಮನಿಧಿ ಮತ್ತು ಇತರ ಫಂಡುಗಳು 259,000—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1925.
K. Venkat Rao,
Secretary.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪನಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ. ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ತುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೩೫ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ೬ಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೨೪ ಸೀಸೆಗೆ ೪—೧೨—೦, ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲ ಪಂಡಿತರು,
ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.
ಏಜಂಟರು:—
ಅತ್ತಾವರ ಸೋಮಪ್ಪ, ಸೋಡಾ ಫಾಕ್ಟರಿ,
ಮಂಗಳೂರು ಟವನಿಗೆ ಮಾತ್ರ.

Free! Free!! Free!!
ಪ್ರಸಿದ್ಧವಾದ
"ಕಾಮಶಾಸ್ತ್ರ"
ಈಗಲೆ ತಯಾರಾಗಿದೆ.
ಜರೂರಾಗಿ ಬರಿಯುವಲ್ಲಿ ಅಂಚೆಯ ಹಾಸಲು ಸಹ ಇಲ್ಲದೆ ಕಳುಹಿಸುವೆವು.
ಆತಂಕನಿಗ್ರಹ ಔಷಧಾಲಯ,
26 ಬ್ರಾಡ್ವೇ, (ಪೋಸ್ಟು ಬಾಕ್ಸ್ 1252),
ಮದ್ರಾಸ್.

ಬಂದು ನೋಡಿರಿ! ತಿಂದುನೋಡಿರಿ!
ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ
ಪದಕವನ್ನು
ಬಹುಮಾನವಾಗಿ ಪಡೆದಿರುವ
ಎಸ್. ಪಿ. ಆಚಾರ್ಯ
ಇವರಿಂದ ತಯಾರಿಸಲ್ಪಟ್ಟ
ಉಪ್ಪಿನಕಾಯಿಗಳನ್ನು
ಬಂದು ನೋಡಿರಿ! ತಿಂದು ನೋಡಿರಿ!

ದೇಶಬಂಧುಗಳೇ,
ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ, ಕುಂತಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನ್ನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.
ಅವುಗಳನ್ನು ನಮ್ಮಲ್ಲಿಗೆ
ಬಂದು ನೋಡಿರಿ! ತಿಂದು ನೋಡಿರಿ!
ಇಂಡಿಯನ್ ಸ್ವೀಟ್‌ಮೀಟ್ ಮಾರ್ಟ್.
ಮಹೋಲ್ಲಾಸಿನಿ ಕಾಫಿ ಕ್ಲಬ್. ಮಾರ್ಕೇಟು ರೋಡು, ಮಂಗಳೂರು. } ಅಥವಾ { ಸದಾನಂದ ಕಾಫಿ ಕ್ಲಬ್ ರಥಬೀದಿ, ಮಂಗಳೂರು.

"ಬಹು ದಿವಸಗಳಿಂದ ಪ್ರಸಿದ್ಧವಾಗುತ್ತಿರುವ ಔಷಧ!"
ರಕ್ತ ಶುದ್ಧಿ
ವಜ್ರಾಂಗ-ಬಿಂದು
ವೀರ್ಯ ವೃದ್ಧಿ ಕಾರಕ

ವಜ್ರಾಂಗಬಿಂದುವೆಂಬ ಈ ಮಹೌಷಧಿಯನ್ನು ಅನೇಕ ಪರ್ವತಗಳಲ್ಲಿ ಉತ್ತಮೋತ್ತಮವಾದ ಮತ್ತು ಅವಶ್ಯವಾಗಿ ಗುಣ ಕೊಡುವಂತಹ ವನಸ್ಪತಿಗಳ ಅರ್ಕದಿಂದ ಉಪಯುಕ್ತವಾದ ಮತ್ತು ಉಚ್ಚ ತರದ ಭಸ್ಮಗಳ ಮಿಶ್ರಣಮಾಡಿ ಯಾಂತ್ರಿಕ ಸಹಾಯದಿಂದ ಸಿದ್ಧಪಡಿಸಿರುತ್ತದೆ. ಈ ವಜ್ರಾಂಗಬಿಂದುವಿನ ಸೇವನೆಯಿಂದ ಕೆಳಗೆ ಬರೆದ ರೋಗಗಳು ಗುಣವಾಗಿ ಹೊಸ ಮನುಷ್ಯನಾಗುತ್ತಾನೆಂದರೆ ಅತಿಶಯೋಕ್ತಿಯಾಗಲಾರದು.

ಈ ಮಹೌಷಧಿಯ ಸೇವನೆಯಿಂದ, ವಾತ, ಪಿತ್ತ, ಕಫ ಈ ಮೂರು ದೋಷಗಳಿಂದ ಉತ್ಪನ್ನವಾಗುವ ರೋಗಗಳು ಗುಣವಾಗುವವಲ್ಲದೆ, ಸ್ವಪ್ನದೋಷ, ಧಾತುಪಾತ ನಪುಂಸಕತ್ವ, ಪರಮಾ ಮತ್ತು ಗರಮಿ ಇವುಗಳ ಸಮೂಲ ನಾಶವಾಗುತ್ತದೆ. ಬಹು ದಿವಸದಿಂದ ಮೈಯಲ್ಲಿ ಅಂಟಿಕೊಂಡ ಕೆಡಕಿಯಂತಹ ಒಂದೇ ವಾರದಲ್ಲಿ ಗುಣವಾಗುವದು. ಲಘುವಿಗಿಂತ ಮೊದಲು ಅಥವಾ ಕಡೆಗೆ ಸ್ರಾವವಾಗಿ ಹೋಗುವ ಧಾತು ಬಂದಾಗುತ್ತದೆ. ತಿಂದ ಅನ್ನವು ಜೀರ್ಣವಾಗಿ ಮಲವು ಸಂಯವಾಗಿ ಹೋಗುವದು ಯಾವದೇ ಕಾರಣದಿಂದ ಬಂದ ಅಶಕ್ತತೆಯೂ ಕಣ್ಣಿಗೆ ಕತ್ತಲೆ ಬಂದಂತಾಗಿ ತಿರುಗಿ ಬರುವದು, ಕೈಕಾಲುಗಳು ಉರಿಯುವದು, ಮುಂತಾದ ಸಕಲ ವಿಕಾರಗಳೂ ನಾಶಹೊಂದುತ್ತವೆ. ವೀರ್ಯವೃದ್ಧಿ, ರಕ್ತಶುದ್ಧಿಗಳಾಗಿ ಮನುಷ್ಯನು ಬಲವಂತನಾಗುತ್ತಾನೆ. ಪೂರ್ಣ ಗುಣ ಬರಬೇಕಾದರೆ ಮೂರು ಬಾಟ್ಲಿಗಳು ಬೇಕು.

೧ ಬಾಟ್ಲಿಗೆ ರೂ ೧—೪—೦. ೩ ಬಾಟ್ಲಿಗಳಿಗೆ ರೂ. ೩—೪—೦. ೧೨ ಬಾಟ್ಲಿಗಳಿಗೆ ರೂ. ೧೦—೦—೦.
ಇದರ ಹೊರತು ಒಂದು ಬಾಟ್ಲಿಯು ಉಚಿತ. ಟಪ್ಪಾಲ ಪ್ಯಾಕಿಂಗ ಖರ್ಚು ಪ್ರತ್ಯೇಕ. ಒಮ್ಮೆಯೇ ಹೆಚ್ಚಿಗೆ ಬಾಟ್ಲಿಗಳನ್ನು ತರಿಸಿಕೊಂಡರೆ ಟಪ್ಪಾಲು ಖರ್ಚು ಹೆಚ್ಚಿಗೆ ಬೀಳಲಾರದು. ಏಜಂಟರಾಗಬೇಕೆನ್ನಿಸುವವರು ಪತ್ರವ್ಯವಹಾರ ನಡಿಸಿ, ಖುಲಾಸೆ ತಿಳಕೊಳ್ಳಬಹುದು.
ಟಪ್ಪಾಲ ಮತ್ತು ಪ್ಯಾಕಿಂಗ ಖರ್ಚು ಬೇರೆ ಬೀಳುವುದು. ಅನುಪಾನ ಪತ್ರವು ಬಾಟ್ಲಿಯ ಸಂಗಡಲೇ ಕಳಿಸಲ್ಪಡುವುದು.
ಪತ್ತೆ. ಮ್ಯಾನೇಜರ, ಕೆ. ಎಮ್. ಹನುಮಾನ ಪ್ರಸಾದಿಕ ಕಂಪೆನಿ,
ಮು. ಪೋ. [illegible], (ಜಿಲ್ಲಾ ಬೆಳಗಾಂವ.)

The Canara Public Conveyance Co., Ltd, Mangalore.

(Established 1914.)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಮಂಗಳೂರು

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು
- ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು
- ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
- ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
- ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.
- ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ—ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,

The Canara Public Conveyance Co., Ltd, Mangalore. S. K

IF OUR MODERN REGULATOR

18 Carat Rolled gold Wrist Watch

Are Purchased at a time, we give

AS A SPECIAL OFFER



The best Decorative wall clock our Modern Regulator made with last wall nut case.

FOR RS TEN

RS. TEN ONLY

18 Carat Rolled gold wrist watch equal to size of a four annas size. Best mechanism supplied with full leather strap

IF Separately—The Modern Regulator clock Rs. 5
Required—18 ct. Rolled gold wrist watch Rs. 7

ONLY A FEW IN STOCK

Write Now:— CAPTAIN WATCH COY

P. B. 265 MADRAS.

ಆರೋಗ್ಯ ಚಂದ್ರಿಕೆ.

ಸಂಪಾದಕರು: ಡಾಕ್ಟರ್ ಯು. ರಾಮರಾವ್, ಎಲ್. ಎಮ್. ಸಿ. ಎಫ್. ಎಮ್. ಯು. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಚಿಕಿತ್ಸೆಯ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವುದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಬೆಲೆ ವರ್ಷಕ್ಕೆ ರೂ. ೧—೮—೦; ಬಿಡುಪತ್ರಿಕೆ ಒಂದಕ್ಕೆ ರೂ. ೦—೩—೦. ಹಿಂದಿನ ಸಂಚಿಕೆಗಳು ಕೆಲವ ದೊರೆಯುವವು.

ಚಂದಾದಾರರಾಗುವವರು ವಿ. ಪಿ. ಮೂಲಕವಾಗಿ ತರಿಸಿಕೊಳ್ಳ, ಪುಸ್ತಕ್ಕಿಂತಲೂ ಹಣವನ್ನು ಮುಂಗಡವಾಗಿ ಕಳುಹಿಸುವುದು ಲಾಭಕರ. ಮಾದರಿಯ ಪತ್ರಿಕೆಯನ್ನು ಅಪೇಕ್ಷಿಸುವವರು "ಆರೋಗ್ಯ ಚಂದ್ರಿಕೆ" ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು.

ಪತ್ರವ್ಯವಹಾರಕ್ಕೆ: "ಆರೋಗ್ಯ ಚಂದ್ರಿಕೆ"
[illegible] ಮದ್ರಾಸ್.

ಶುದ್ಧ ರೋಮದ ಧಾವಳಿಗಳು.

1 ಮಳ ಉದ್ದ 1¼ ಮಳ ಅಗಲ ರೂ. 1¼ರಿಂದ 2 ವರೆಗೆ, 5 ಮಳ ಉದ್ದ 1¼ ಮಳ ಅಗಲ ರೂ. 1½ ರಿಂದ 5 ವರೆಗೆ, 6 ಮಳ ಉದ್ದ 1½ ಮಳ ಅಗಲ ರೂ. 2½ರಿಂದ 8 ವರೆಗೆ, 8 ಮಳ ಉದ್ದ 2 ಮಳ ಅಗಲ ರೂ. 3½ರಿಂದ 10 ವರೆಗೆ, 12 ಮಳ ಉದ್ದ 2¼ ಮಳ ಅಗಲ ರೂ. 6ರಿಂದ 12 ವರೆಗೆ, 16 ಮಳ ಉದ್ದ 2¼ ಮಳ ಅಗಲ ರೂ. 9 ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಜರಿ ರೇಶ್ಮೆ ಮಡಿಗಳು, ಶಾಮರಾಡಿಗಳು, ಕಾಶೀ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, ಬಾಣಲಿಂಗ, ಸಾಲಿಗ್ರಾಮ, ಶಾಳ, ಕಸ್ತೂರಿದಾಣಿ, ಹಿತ್ತಾಳೆಯ ಆಟದ ಸಾಮಾನುಗಳು, ಫೋಟೋ ಉಂಗುರಗಳು ಮತ್ತು ಇನ್ನೂ ಅನೇಕ ಸಾಮಾನುಗಳ ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುದು. ಕ್ಯಾಟಲಾಗ್ ಇನಾಂ.

ವಿಳಾಸ—

ಶಿರೋಮಣಿ ಯು. ಶಾರದಾಯುಣಾಚಾರ್ಯ
ಮತ್ತು ಕಂಪೆನಿ, ಜೌರಂಬಾ, ಕಾಶೀ ಕ್ಷೇತ್ರ.

ಆಯುರ್ವೇದ ಶಾಸ್ತ್ರಿ ಅಷ್ಟಾವಧಾನಿ,
ಕಾ. ವೇ. ಸುಬ್ಬರಾವ್, ಯಂ. ಜಿ. ಯ. ಅವರ್ಗಳಿಂದ ತಯಾರಿಸಲ್ಪಟ್ಟದ್ದು.

ಒಂದು ಮಾತ್ರೆ! ಒಂದು ಘಂಟೆಯೊಳಗೆ ಗುಣ!

ಕಾಮಾಮೃತ.

ಈ ಔಷಧವು ಧಾತುಪುಷ್ಟಿಗಾಗಿಯೇ ತಯಾರಿಸಲ್ಪಟ್ಟದ್ದು. ಒಂದು ಮಾತ್ರೆಯನ್ನು ಸೇವಿಸಿದ ಒಂದು ಘಂಟೆಯೊಳಗೆ ಶಕ್ತಿಯನ್ನು ವೃದ್ಧಿಗೊಳಿಸಿ ಎಷ್ಟು ಬಲಹೀನವುಳ್ಳವರನ್ನೂ ಬಲವಂತರನ್ನಾಗಿ ಮಾಡುವದು. ಯಾವ ರೀತಿಯಿಂದಲಾಗಲಿ ಶುಕ್ಲ ನಷ್ಟವಾದಾಗ್ಯೂ ಅಥವಾ ಸ್ವಪ್ನದಲ್ಲಿ ಇಂದ್ರಿಯ ಸ್ಖಲಿತವಾದಾಗ್ಯೂ ಇಲ್ಲವೆ ಮೂತ್ರದೊಂದಿಗೆ ಸೇರಿಯೋ ವ ಮೂತ್ರಚಲನೆಯ ಹಿಂದೋ ಮುಂದೋ ಹೊರಬೀಳುವ ಧಾತುನಷ್ಟವನ್ನಾದರೂ 5 ದಿವಸಗಳಲ್ಲಿ ಗುಣಪಡಿಸುವದು. ಯಾವ ಬಗೆಯ ನರಗಳ ಬಲಹೀನತೆಯನ್ನಾದರೂ ಹೋಗಲಾಡಿಸುವುದು. ಶಕ್ತಿಯಿಲ್ಲದವರು ಈ ಮದ್ದನ್ನು 20ದಿನ ಸೇವಿಸಿದಲ್ಲಿ ಶಕ್ತಿವಂತರಾಗಿ ಸಂಸಾರ ಸುಖವನ್ನೂ ಸಂತತಿ ಲಾಭವನ್ನೂ ಹೊಂದುವರು; ಇದು ನಿಶ್ಚಯ. ಪತ್ರವ್ಯವಹಾರವು ರಹಸ್ಯವಾಗಿ ನಡಿಸಲ್ಪಡುವದು. ಕ್ರಯ 20 ಮಾತ್ರೆಗಳ ಟಪ್ಪಿ 1ಕ್ಕೆ ರೂ. 2—0—0. ಪತ್ರವ್ಯವಹಾರವು ಇಂಗ್ಲಿಷಿನಲ್ಲಿ ಮಾಡತಕ್ಕದ್ದು.

ಅಮೃತಾಶ್ರಮ,
28 ಎಲ್ಲೂರು, ಕೃಷ್ಣಾಜಿಲ್ಲಾ.

ದಕ್ಷಿಣ ಕನ್ನಡ ಜಿಲ್ಲೆಯ
ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

೧,೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು

— ತೆಗೆದುಕೊಳ್ಳಿರಿ. —

REGISTERED
TRADE
MARK

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಭೋಗಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ದಾರ್ಢ್ಯತೆಯನ್ನೂ ಉಂಟುಮಾಡುವುದು. ಕೈ ಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಾಮಿಸ್ರಿ ಎಂಬುವದು ಕಾಬೂಲ್ ಕಂದಹಾರ ಪ್ರಾಂತ್ಯಗಳಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರಿಕಾ, ಬರ್ಮಾ, ಪಿನಾಂಗ್ ಸಿಂಗಪೂರ್, ಸಿಲೋನ್ ಮತ್ತು ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. ೧ ಡಬ್ಬಿಯನ್ನು ೧೫ ದಿವಸ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. ೨ ಯಾ ೩ ಡಬ್ಬಿಗಳು ಜನ್ಮಾಂತ್ಯದವರೆಗೂ ಪೂರ್ಣವಾಗಿ ಗುಣವನ್ನು ಮಾಡುವವು. ಅನುಪಾನ ಪತ್ರಿಕೆಯು ಡಬ್ಬಿಯ ಸಂಗಡವೇ ಇರುತ್ತೆ. ಹೆಸರು ವಿಳಾಸಗಳನ್ನು ಚೆನ್ನಾಗಿ ತಿಳಿಯುವ ಹಾಗೆ ವಿವರವಾಗಿ ಬರಿಯಬೇಕು. ಕ್ರಯ ಡಬ್ಬಿ ೧ಕ್ಕೆ ರೂ. ೨—೦—೦. ಟಪ್ಪಾಲು ಖರ್ಚು ೧ ರಿಂದ ೩ ಡಬ್ಬಿಗಳವರೆಗೆ ೦—೮—೦. ಏಜಂಟರು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯವಾಗಿ ಬೇಕಾಗಿರುತ್ತೆ. ರೂಲ್ಸ್ ತರಿಸಿ ನೋಡಿಕೊಳ್ಳಬಹುದು.

ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಿರಿ.

ಟೆಲಿಗ್ರಾಫ್ ಅಡ್ರೆಸ್, "ಮಿಸ್ರಿ" ಬೆಂಗಳೂರು ಸಿಟಿ.
ಡಿ. ಮನ್ನಾಲಾಲ್, [illegible] ಸಾಲಂಮಿಸ್ರಿ ಮುರಬ್ಬ ಡಿಪೋ, ಬೆಂಗಳೂರು ಸಿಟಿ.

Edited, Printed & Published by V. S. Kamath at the M. T. A. Sharada Press, Mangalore.

Registered No. M. 408.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ । ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತಿಳಿಸಬಲ್ಲರೆ! ತೊರೆಯರು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೯. ಮಂಗಳೂರು, ತಾರೀಕು ನೇ೧೬ ಶುಕ್ರವಾರ ಒಕ್ಟೋಬರ ೧೯೨೫. ಸಂಚಿಕೆ ೪೨.

Th Canara Banking Corporation,
UDIPI, Ltd.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್,
ಉಡುಪಿ, ಲಿಮಿಟೆಡ್.

Head office: UDIPI.	Branch: COONDAPOOR.
ಹೆಡ್ ಆಫೀಸು: ಉಡುಪಿ.	ಶಾಖೆ: ಕುಂದಾಪುರ.
ಚಂದಾ ಹಾಕಿ ಯತ್ತಿದ ಮೂಲಧನ	ರೂ. 2,25,000—0—0.
ವಸೂಲುತೆತ್ತ ಮೂಲಧನ	ರೂ. 1,71,875—9-11.
ಕ್ಷೇಮನಿಧಿ ವ ಇತರ ಫಂಡುಗಳು	ರೂ. 64,700—0—0.
ಠೇವಣಾತಿಗಳು	ರೂ. 4,83,945—2—9.

— ವಿನಿಯೋಗ —

ಗವರ್ನಮೆಂಟು ಪ್ರಾಮಿಸರಿ ನೋಟಿನ ಮೇಲೆ	ರೂ. 25,800—0—0.
ಡಿಮಾಂಡು ನೋಟು ವ ಬಿಲುಗಳ ಮೇಲೆ	ರೂ. 5,92,445—9—4.
ಚಿನ್ನಾಭರಣ ಮುಂತಾದ ಭದ್ರತೆಸೊತ್ತುಗಳ ಮೇಲೆ	ರೂ. 1,11,658-8-6

ಈ ಕೆಳಗಿನ ಠೇವಣಾತಿಗಳನ್ನು ಅಂಗೀಕರಿಸುವುದಲ್ಲದೆ ಇತರ ಬ್ಯಾಂಕುಗಳ ಮೇಲಣ ಖಾತ್ರಿ ಚೆಕ್ಕುಗಳನ್ನೂ ಸಾಹುಕಾರಿ ಹುಂಡಿಗಳನ್ನೂ ವಸೂಲುಮಾಡುವ ಮತ್ತು ಇತರ ಎಲ್ಲಾ ತರದ ಬ್ಯಾಂಕಿನ ವಹಿವಾಟುಗಳು ನಡಿಸಲ್ಪಡುವವು.

ಠೇವಣಾತಿಗಳು.

ನಿರಖು ಠೇವಣಾತಿಗಳು:—ಸಾ. ಸೆ. 6½ ರಿಂದ 7½ ವರೆಗಿನ ಬಡ್ಡಿಯನ್ನು ಪ್ರತಿ 3 ತಿಂಗಳಿಗೊಮ್ಮೆ ತೆರುವ ಅನುಕೂಲ ವ ಲಾಭದಾಯಕವಾದ ಶರ್ತಗಳ ಮೇಲೆಯೂ

ಕೊಂಚ ಅವಧಿ ಠೇವಣಾತಿಗಳು:—1 ತಿಂಗಳ ನಂತರ 15 ದಿವಸಗಳ ನೋಟೀಸಿಗೊಳಪಟ್ಟು ಹಿಂತೆಗೆಯಬಹುದಾದ ಠೇವಣಾತಿಗಳನ್ನು ಸಾ. ಸೆ. 5ರ ದರದ ಬಡ್ಡಿ ನಡೆದ ದಿನಗಳಿಗೆ ಕೊಡುವ ಶರ್ತದಿಂದಲೂ

ಚಾಲ್ತಿ ಠೇವಣಾತಿಗಳು:—ದಿನಂಪ್ರತಿ ಇರುವ ಶಿಲ್ಕಿನ ಮೇಲೆ ಸಾ. ಸೆ. 3ರಂತೆ ಬಡ್ಡಿ ತೆರುವ ಶರ್ತದ ಮೇಲೂ

ಸೇವಿಂಗ್ಸ್ ಬ್ಯಾಂಕು ಠೇವಣಾತಿಗಳು:—ಸಾ. ಸೆ. 4½ರ ಬಡ್ಡಿಯ ಮೇಲೂ

ಸಂಚಯ ಠೇವಣಾತಿಗಳು:—ಮಕ್ಕಳ ವಿದ್ಯಾಭ್ಯಾಸ, ಉಪನಯನ, ವಿವಾಹ ಮುಂತಾದ ಶುಭಕಾರ್ಯಗಳಿಗೆ ಅನುಕೂಲವಾಗಿ ಸಿಕ್ಕುವಂತೆ ತಿಂಗಳು 1ರ ರೂಪಾಯಿ 1ರಂತೆ 13-24-45-84-132 ತಿಂಗಳುಗಳಿಗೆ ವಸೂಲುಪಡಕೊಂಡು ಕಂತುಗಳ ಅವಧಿ ಮುಗಿದ ಮೂರು ತಿಂಗಳಲ್ಲಿ ಆಯಾಯ ಅವಧಿಮೇರೆಗೆ ರೂ. 13-8-0, ರೂ. 25-8-0, ರೂ. 50, ರೂ. 102-8-0 ಮತ್ತು 182-8-0ನ್ನೂ ಅದೇ ಮೇರೆಗೆ ತಿಂಗಳು 1ರ ರೂಪಾಯಿ 1ರ ಗುಣವೃದ್ಧಿ ಮೊಬಲಗನ್ನು ಕೆತ್ತಲ್ಲಿ ಆಯಾಯ ಮೊಬಲಗಿನ ಅದೇ ಗುಣವೃದ್ಧಿ ಮೊಬಲಗನ್ನು ತೆರುವ ಶರ್ತದ ಮೇಲೂ ಅಂಗೀಕರಿಸಲ್ಪಡುವವು.

ಹೆಚ್ಚಿನ ಮಾಹಿತಿ ಸೆಕ್ರಿಟರಿಯವರಿಂದ ತಿಳಿಯಬಹುದು.

ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಆಫೀಸು, ಉಡುಪಿ,
ತಾ 30—6—1925.

ನಯಂಪಳ್ಳಿ ಆನಂದ್ರಾವ್,
ಸೆಕ್ರಿಟರಿ ಮತ್ತು ಒಫಿಶಿಯೆಟಿಂಗ್ ಮೆನೇಜರ್.

ಮೂರು ದಿವಸಗಳಲ್ಲಿ ಗುಣಸಿಕ್ಕದಿದ್ದರೆ
ಔಷಧಿಯ ಕ್ರಯ ವಾಪಾಸು.

ಜೀರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ, ಪರಮಾನಂದ ಮೊದಲಾದ ಸುಖಜೀವನಕ್ಕೆ ಬೇಕಾದ ಆರೋಗ್ಯದಾಯಿನಿ.

ಲೋಕಪ್ರಸಿದ್ಧವಾದದ್ದು! ಅನುಭವಸಿದ್ಧವಾದದ್ದು!!

ಟ್ರೇಡ್ ಮಾರ್ಕ್] ಅಗಸ್ತ್ಯ [ನೋಡಿ ತೆಕ್ಕೊಳ್ಳಿರಿ.

ಮನ್ಮಥ ಚಿಂತಾಮಣಿ ಲೇಹ.

(ರಿಜಿಸ್ಟರ್ ಆದದ್ದು)

ಆಬಾಲವೃದ್ಧ ಸ್ತ್ರೀಪುರುಷರ ಅನೇಕ ರೋಗಗಳ ಮೇಲೆ ಗುಣಕಾರಿಯಾದದ್ದು.

ಮೇಹವಿಕಾರವಿದ್ದವರಿಗೂ, ನಿದ್ರೆಇಲ್ಲದವರಿಗೂ, ಸ್ವಪ್ನೇಂದ್ರಿಯವಾಗುವ ಯುವಕರಿಗೂ ಜ್ಞಾನಿಸುಜ್ಞಾನಿಗಳಿಗೂ ಉಪಯೋಗವುಳ್ಳ ಪರಮಾನಂದ ಔಷಧಿ.

1 ಸೇರು ಪಾಲ್ವತ್ತೆಂಟು ದಿವಸಕ್ಕೆ ಸೇವಿಸಬಹುದು.

1 ಸೇರು ಡಬ್ಬಿ 1ಕ್ಕೆ 3-0-0. ½ ಸೇರು ಡಬ್ಬಿ 1ಕ್ಕೆ 1-9-0.

ವಿ. ಪಿ. ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿಗೆ ಬರೆಕೊಳ್ಳಿರಿ.

ವಿಳಾಸ:— ದೇವಣ್ಣ ನಾರಾಯಣ ಸೇಟ್,
[illegible]
[illegible] (ದ. ಕ.)

:ಪಂಡಿತ ಬಿ. ರಾಮಕೃಷ್ಣ ಬಾಳಿಗರ:

60 ವರ್ಷ ಅನುಭವದ ಸಿದ್ಧೌಷಧಗಳು

ಮಹಾ ಮದನಕಾಮೇಶ್ವರಿ ಲೇಹ—ಇದನ್ನು ಭಂಗಾರ, ಅಭ್ರಕಭಸ್ಮ, ರಸಸಿಂಧೂರ, ಕಸ್ತೂರಿ, ಕುಂಕುಮಕೇಸರ ವಗ್ಯೆರೆ ಅವೂಲ್ಯವಾದ ರಸಾಯನ ದ್ರವ್ಯಗಳಿಂದ ತಯಾರಿಸಲ್ಪಟ್ಟಿರುತ್ತದೆ. ಇದು ಎಲ್ಲಾ ತರದ ನಪುಂಸಕ ರೋಗಗಳನ್ನೂ, ಸ್ವಪ್ನಾವಸ್ಥೆಯಲ್ಲಿ ಧಾತುಪತನೆಯನ್ನೂ ಗುಣಪಡಿಸಿ, ದೇಹಕ್ಕೆ ದಿವ್ಯಕಾಂತಿಯನ್ನೂ, ಪುಷ್ಟಿಯನ್ನೂ, ಪುರುಷತ್ವವನ್ನೂ, ವೀರ್ಯಸ್ತಂಭನವನ್ನೂ ಉಂಟುಮಾಡಿ ಅತ್ಯಾನಂದವನ್ನು ಕೊಡುವುದಲ್ಲದೆ, ಅಜೀರ್ಣ, ಅತಿಸಾರ, ಗ್ರಹಣಿ, ಆಮ್ಲ, ಪಿತ್ಥ, ಉದರಶೂಲೆ, ಪ್ರಮೇಹ ವಗ್ಯೆರೆ ರೋಗಗಳನ್ನು ಗುಣಪಡಿಸುವಲಿ ಕೇವಲ ಅಮೃತಸಮಾನವಾಗಿರುವುದು. ಇದನ್ನು ಆಬಾಲವೃದ್ಧರೂ ಸೇವಿಸಬಹುದು.

48 ದಿನಗಳ ವರೆಗೆ ಸಾಕಾಗುವ ಲೇಹ ಸೇರು ೧ರ ರೂ. 3—0—0.

ಅಮೃತಾರಿಷ್ಟ:—ಮಲೇರಿಯಾ ವಗ್ಯೆರೆ ಸಕಲ ಜ್ವರಗಳನ್ನು ನಾಶಗೊಳಿಸುವುದು. ಬಾಟ್ಲಿ 1ರ ರೂ. 1—0—0.

ದ್ರಾಕ್ಷಾರಿಷ್ಟ:—ಬಾಟ್ಲಿ 1ರ ರೂ. 1—0—0. ಗೋರೋಚನಾದಿ ಮಾತ್ರೆ, ಮಕ್ಕಳ ಜೇಷ್ಠೆಗೆ ಸಿದ್ಧೌಷಧ. ಡಜನ್ 1ರ ಕ್ರಯ 0—8—0. ಕರ್ಪೂರಾದಿ ವಾಯುಮಾತ್ರೆ,ಡಜನ್ 1ರ ಕ್ರಯ 0—6—0.

ಇನ್ನು ಎಲ್ಲಾ ತರದ ಆಯುರ್ವೇದಸಿದ್ಧೌಷಧಗಳು ನಮ್ಮಲ್ಲಿ ದೊರಿಯುವವು.

ವಿಳಾಸ:— ಪಂಡಿತ, ಬಿ. ರಾಮಕೃಷ್ಣ ಬಾಳಿಗ, ಬಂಟವಾಳ ದ. ಕ.

ಮಂಗಳೂರು ಏಜಂಟರು:— ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ತೇರುಬೀದಿ, ಮಂಗಳೂರು.

AMRUTANJAN
Best Indian Pain Balm
Amrutanjan D
BOMBAY

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು.

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಸಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ತಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 2 ಆಣೆ.

ಅಮೃತಾಂಜನ ಡಿಪೊ,

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

109 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

— ರಥೋತ್ಸವ, ವಿವಾಹ ಉಪನಯನಗಳ ಸಮಯ —
ಸರ್ವರಿಗೂ ಉಡಿಗೆ ತೊಡಿಗೆಗಳು ಬೇಕಾಗುವ ಸಂದರ್ಭ.

ಯಾರು, ಯಾವುದನ್ನು ಎಲ್ಲಿ ಪಡೆಯಬೇಕೆಂಬ ಶಂಕೆಯಿಂದ ವಿಳಂಬ ಮಾಡಬೇಡಿರಿ. ಉಡಿಗೆತೊಡಿಗೆಗಳನ್ನು ಚುನಾಯಿಸಿ ನಮಗೆ ಬೇಕಾದ ಯಥಾರ್ಥ ಮಾಹಿತಿಯನ್ನು ಕಳೆದ ಹತ್ತಿಪ್ಪತ್ತು ವರುಷಗಳಿಂದ ಪಡದು ನಮ್ಮಲ್ಲಿಯ ವ್ಯಾಪಾರವು ಗಿರಾಕಿಗಳಿಗೆ ಸರ್ವ ದೃಷ್ಟಿಯಿಂದಲೂ ಲಾಭಕರವಾಗಿ ಪರಿಣಮಿಸುವಂತೆ ನವೀನ ಸಂಗ್ರಹವನ್ನು ಮಾಡಿರುತ್ತೇವೆ.

ಗುರ್ಪುರ್ಕರ್ ಬ್ರದರ್ಸ್, ರಥಬೀದಿ, ಮಂಗಳೂರು.

ಹೆಡ್ ಆಫೀಸು:—ರಥಬೀದಿ—(ಮೊದಲು ಸುಜೀರ ನಾಗಪ್ಪನಾಯಕ್, ಎಂಡ್ ಕೊ, ಇದ್ದಲ್ಲಿ; ಅಜೀಜುದ್ದೀನ್ ರಸ್ತೆಗೆ ತಿರುಗುವಲ್ಲಿ) ಮಂಗಳೂರು.

ಬ್ರೇಂಚ್ ಆಫೀಸು:—ರಥಬೀದಿ—(ಹಳೇ ತಾಲೂಕು ಕಚೇರಿಯ ಪಟಾರಕ್ಕ ಸಮೀಪವಿರುವ ಮಳಿಗೆ) ಮಂಗಳೂರು.

ಈ ದೇಶದ ಪ್ರಖ್ಯಾತಪಟ್ಟ ನೇಯಿಗೆಯ ಕೇಂದ್ರಸ್ಥಳಗಳಾದ—ಬನಾರಿಸ್, ಪೂನಾ, ಅಹಮ್ಮದಾಬಾದ್, ಸುರತ್, ಬೆಂಗಳೂರು, ಧರ್ಮಾವರಮ್, ಕಂಜೀವರಮ್, ಕೊಯಮುತ್ತೂರು, ಮಧುರೆ, ತಂಜಾವೂರು, ಕುಂಭಕೋಣ, ಆರ್ನಿ, ವಾಣಿಪೇಟೆ, ಹುಬ್ಬಳ್ಳಿ, ಇಳಕಲ್, ಗದಗ, ಮದ್ರಾಸು ಈ ಪ್ರಾಂತ್ಯಗಳಲ್ಲಿ ತಯ್ಯಾರಾದ

ಜರಿಸೀರೆಗಳು, ದುಪ್ಪಟಾ, ಜರಿಕಣ, ಪೇಟ್ಸ್, ರೇಶ್ಮೆ ಸೀರೆಗಳು, ಆರಣಿಪೇಟೆ ಸೀರೆಗಳು, ಕೊಳ್ಳೆಗಾಲ್ ರೇಶ್ಮೆ ಸೀರೆಗಳು, [illegible] ಸೀರೆಗಳು, ರೇಶ್ಮೆ ಮಡಿಗಳು, ನಿತ್ಯ ಉಪಯೋಗದ ಸೀರೆಗಳು ಬಿನ್ನಿಯ್, ಕರ್ನಾಟಕ ಮಿಲ್ಸ್‌ಗಳ ವ ಇತರ ಮಿಲ್ಸ್‌ಗಳ ಶೀರ್ಟಿಂಗ್ ಕೋಟಿಂಗ್. ಕೈರಾಟೆಯಲ್ಲಿ ತಯಾರಿಸಿದ ನೂಲಿನಿಂದ ಮಾಡಿದ—

ಖದ್ದರ್ ಶರ್ಟಿಂಗ್, ಖದ್ದರ್ ಕೋಟಿಂಗ್, ಖದ್ದರ್ ಟೋಪಿ, ಖದ್ದರ್ ಪೇಟ್ಸ್, ಅಂಗವಸ್ತ್ರ, ಇತ್ಯಾದಿ—
ಮುಸಲ್ಮಾನರಿಗೆ ಬೇಕಾದ ನಮೂನೆಯ ಲುಂಗಿ ತಾಗೆಗಳ ವಗ್ಯೆರೆ—
— ಎಲ್ಲ ಸಂಗ್ರಹವನ್ನೂ ನಮ್ಮ ಪ್ರೊಪ್ರೈಟರರಾದ [illegible] ಸ್ವತಃ [illegible] ಹೋಗಿ ಸಂಗ್ರಹಿಸಿ ತಂದಿರುತ್ತಾರೆ.

[illegible]

ಶ್ ಮೂವ್‌ಮೆಂಟ್ ವಾಚ್.
ಮಣಿಗಳಿದ್ದು ರೋಲ್ಡಗೋಲ್ಡ ವಾಚ್.

ಈ ಗಡಿಯಾರ ಕೈಗೆ ಕಟ್ಟುವಂಥಾದ್ದಾಗಿ ಸರಿಯಾದ ಸಮಯವನ್ನು ತೋರಿಸಿ ಚಿರಕಾಲ ವರೇಗೆ ಬಾಳುವುದು.

10 ವರುಷದ ವರೆಗೆ ಬಾಳುವ ಗೆರೆಂಟಿ ಇದೆ. ಕ್ರಯ ರೂ. 17—8—0.

11 ಮಣಿಗಳಿದ್ದು ನಿಜವಾದ ರೋಲ್ಡ ಗೋಲ್ಡ ಬಂಗಾರದಿಂದ ತಯಾರಿಸಲ್ಪಟ್ಟು 5 ವರ್ಷದ ಗೆರೆಂಟಿ ಇರುವ ವಾಚಿಗೆ ಕ್ರಯ ರೂ. 12—8—0.

18 ಕೆರೆಟ್ ಇಲೆಕ್ಟ್ರೊ ರೋಲ್ಡ ಗೋಲ್ಡ ವಾಚ್ ಕ್ರಯ ರೂ. 7—0—0. ಲಿವರ್ ಮೂವ್‌ಮೆಂಟ್ 10 ಮಣಿಗಳಿದ್ದ ಬಂಗಾರ ಗಿಲ್ಟುವಾಚ್ ಕ್ರಯ ರೂ. 13—8—0.

ಎಲಾರ್ಮ ಜರ್ಮನ್ ಟ್ಯಾಮ್‌ಪೀಸ್ ಕ್ರಯ ರೂ. 5-0-0.

ಡಬ್ಬಲ್ ಎ. „ „ „ 6-0-0.

"ಬಿ" ಟ್ಯಾಮ್‌ಪೀಸ್ ಕ್ರಯ ರೂ. 2—4—0

ಟಿಕ್—ಟಾಕ್ ವಾಚ್ 1ರ ಕ್ರಯ „ 2—12—0

ಕಂಬ್ಯಾಂಡ್ ಪೆಪರ್ ಕ್ಲಿಪ್ ಟ್ಯಾಮ್‌ಪೀಸ ಹಿತ್ತಾಳಿ ಅಥವಾ ನಿಕ್ಕಲ್ ಕ್ರಯ ರೂ. 6—0—0. ಇನೆಮಲ್ ರೂ. 7—0—0. ಫ್ರೆಂಚ್ ಬೆಡ್ ಫೋಟೋಗಳು ಡಜನ್ 1ರ ಕ್ರಯ ರೂ. 2—4—0.

Emarald Watch Co.,
P. T. MADRAS.

ಪ್ರಸಿದ್ಧ ಪತ್ರಿಕೆ.

ಹೊಸ ಬೀಜಗಳು! ಖಾತರಿಯಾದವು!!

೧೨ ಪ್ಯಾಕೆಟ್ ಉತ್ತಮ ಜಾತಿಯ ವಿದೇಶಿ ತರಕಾರಿ ಬೀಜಗಳು ೧೨ ರಖಂ ... ... ೨-೦-೦.

೧೨ ಪ್ಯಾಕೆಟ್ ನಾಟಿ ತರಕಾರಿ ಬೀಜಗಳು ೧೨ ರಖಂ ... ... ೧-೧೨-೦.

೧೨ ಪ್ಯಾಕೆಟ್ ದೇವರ ಪೂಜೆಗೂ ಮತ್ತು ಅಲಂಕಾರಕ್ಕೆ ಯೋಗ್ಯವಾದ ಹೂ ಬಿಡತಕ್ಕ ಉತ್ತಮವಾದ ೧೨ ರಖಂಗಳ ಬೀಜಗಳು ... ... ೨-೦-೦.

ಈ ಮೇಲ್ಕಂಡ ಬೀಜಗಳನ್ನು ಈ ತಿಂಗಳೊಳಗಾಗಿ ತರಿಸಿಕೊಂಡರೆ, ಪೋಸ್ಟೇಜು ಮತ್ತು ಇತರ ಎಲ್ಲಾ ಚಾರ್ಜುಗಳು ಸೇರಿ, ಮೇಲೆ ನಮೂದಿಸಿರುವ ಮೊಬಲಗಿಗೆ, ವಿ. ಪಿ ಯಿಂದ ಕಳುಹಿಸುತ್ತೇವೆ. ಅಲ್ಲದೆ ಇದರ ಸಂಗಡ ಚಿತ್ರಗಳಿಂದ ಕೂಡಿರುವ ನಮ್ಮ ದೊಡ್ಡ ಕ್ಯಾಟಲಾಗನ್ನು ಕಳುಹಿಸಿ ಕೊಡುತ್ತೇವೆ. ನಮ್ಮಲ್ಲಿ ದೊರಕುವ ಬೀಜಗಳು, ಉತ್ತಮ ತರಹವುಳ್ಳವು. ಮತ್ತು ಖಾತರಿಯಾದವು, ಹುಟ್ಟದೆ ಹೋದರೆ, ಬೇರೆ ಬೀಜಗಳನ್ನು ಬದಲಾಯಿಸಿ ಕೊಡುತ್ತೇವೆ.

ದಿ. ಮೆಜೆಸ್ಟಿಕ್ ನರ್‌ಸರಿ (ತೋಟ)
ಲಾಲ್‌ಬಾಗ್ (ಕೋಟೆ) ರೋಡ್,
ಬೆಂಗಳೂರು ಸಿಟಿ.

11 ಮಣಿಗಳಿದ್ದು ಬ್ರಿಜ್ ಮ್ಯೂವ್‌ಮೆಂಟ್.
22 ಕೆರೆಟ್ ರೋಲ್ಡಗೋಲ್ಡ ರಿಸ್ಟ್‌ವಾಚ್.

ಈ ವಾಚ್ ಎಂಟಾಣೆ ಪಾವಲಿಯಷ್ಟು ಸಣ್ಣದಾಗಿ ಬಹು ಚಲೋದಾದ ಇನೆಮಲ್ ಡಾಯಲ್ ಇದ್ದು ಬಹು ಉತ್ತಮವಾಗಿದೆ. 5 ವರ್ಷದಗ್ಯಾರಂಟಿ ಇದೆ. ಕ್ರಯ ರೂ. 12/8

18 ಕೆರೆಟು ಇಲೆಕ್ಟ್ರೊ ರೋಲ್ಡಗೋಲ್ಡ ವಾಚ್ ಕ್ರಯ ರೂ. 7—0—0. "ಬಿ" ಟ್ಯಾಮ್‌ಪೀಸ ರೂ. 2-4-0

9 ಕಾರಾಟ್ 8 ಮಣಿಗಳ ವಾಚ್ 1ರ ಕ್ರಯ 23—0—0.
14 „ „ „ 26—0—0.
14 „ 15 ಮಣಿ „ 36—0—0.
9 „ „ „ 32—0—0.

ಚಲೋದಾದ ಲವ್ ನಕ್ಶೆಗಳು ಡಜನ್ 1ಕ್ಕೆ ರೂ. 2/4.

P. Sambasiva Chetty & Co.,
134 NAINEAPPA NAICKEN ST.
P. T. MADRAS.

Fresh Arrivals

Pear's Solid Brilliantine, Evans Lime-juice Glycerine, Tooth powders Rose water, Syrups of all sorts for drinks, Denatured Spirits, etc., etc.

The Mangalore Trading Association,
Car-Street, MANGALORE,

ಡಾಕ್ಟರುಗಳು ಭಿನ್ನಾಭಿಪ್ರಾಯಪಡುವಾಗ್ಯೆ ತೀರ್ಮಾನಿಸುವದು ಯಾರು?

ಅಂಥಾ ಸಂದರ್ಭಗಳಲ್ಲಿ ಡೆಂಗ್ಯು ಮುಂತಾದ ಜ್ವರಗಳನ್ನು ನಿವಾರಿಸುವಂಥಾ "ಬಾಟ್ಲಿವಾಲರ ಏಗ್ಯುಮಿಕ್ಶ್ಚರ್"ನ್ನು ಸರಾಗವಾಗಿಯೂ, ಮತ್ತು ಜ್ವರಗಳನ್ನು ಖಂಡಿತವಾಗಿ ನಿಲ್ಲಿಸುವಂಥಾದೂ, ಎಲ್ಲಾ ತರದ ತಲೆನೋವುಗಳನ್ನು ಹೋಗಲಾಡಿಸುವಂಥಾದ್ದೂ ಆದ "ಬಾಟ್ಲಿವಾಲರ ಏಗ್ಯುಪಿಲ್ಸ್" ಇವನ್ನು ಉಪಯೋಗಿಸಿರಿ.

ಐ. ಎಮ್. ಎಸ್. ಡಾಕ್ಟರುಗಳಿಂದ ಶಿಫಾರಸು ಮಾಡಲ್ಪಟ್ಟವನ್ನು. ಇವರ ಉಪಯೋಗದಿಂದ ಹೃದಯದ ಮೇಲೆ ಯಾವ ದೋಷವೂ ಬಾಧಕವಿಲ್ಲ. ಅರ್ಧ ಶತಮಾನದಿಂದ ಹಿಂದುಸ್ಥಾನ, ಬರ್ಮಾ, ಸಿಲೋನ್, ಆಫ್ರಿಕಾ ಇವುಗಳಲ್ಲಿ ಪ್ರಖ್ಯಾತವಟ್ಟದ್ದಾಗಿರುತ್ತದೆ.

ಅನೇಕ ಹಿಂದೀ ಪ್ರದರ್ಶನಗಳಲ್ಲಿ ಬೆಳ್ಳಿ ಮತ್ತು ಬಂಗಾರದ ಪದಕಗಳನ್ನು ಪಡೆದಿರುತ್ತ. ಚಾಲ್ತಿ ಸಾಮ್ಯದಂತಿದ್ದು ವ್ಯಾಪಾರಿಗಳೂ ಕೂಡ ಅವರ ಮೇಲೆ ಹಣವನ್ನು ಮುಂಗಡವಾಗಿ ಕೊಡುತ್ತಾರೆ. ಬಡ ಮತ್ತು ಮಧ್ಯಮ ತರಗತಿಯ ಜನರಿಗೆ ವರಪ್ರದಾನವಾಗಿದ್ದು ಸಂಚಾರ, ಪ್ರಯಾಣ, ದೇಶಾಟನೆಗಳ ಸಮಯದಲ್ಲಿ ಹತ್ತಿರದಲ್ಲಿರಿಸಿಕೊಳ್ಳದಾಗಿರುತ್ತದೆ.

ಬಾಟ್ಲಿವಾಲರ ಬಾಲಾಮೃತ ಅಥವಾ ಟೊನಿಕ್ ಸಿರಪ್.

ಕೆಮ್ಮನ್ನು ಹೋಗಲಾಡಿಸಿ, ಎದೆನೋವನ್ನು ಶಾಂತಗೊಳಿಸಿ, ಜ್ವರವನ್ನು ಉಪಶಮನಿಸಿ, ನಿದ್ರಾಭಂಗದನ್ನು ಕಡಿಮೆ ಮಾಡಿ ಧಾತುವರ್ಧನವನ್ನು ಮಾಡುವದರಲ್ಲಿ ಅತ್ಯುತ್ತಮವಾಗಿರುತ್ತದೆ. ಕಫವನ್ನು ಒಣಗಿಸಿ ಪಡೆಯುವಾಗುವಂತೆ ಮಾಡುವುದಲ್ಲದೆ ಅದೇ ಸಮಯದಲ್ಲಿ ಒಳ್ಳೇ ಜೀರ್ಣವನ್ನು ಉಂಟುಮಾಡುವುದು. ವರ ಮೊದಲಾದ ಮಾಹಿತಿಯನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಕಾರಿಖಾನೆ:-CAWASHAPUR, BOMBAY.

Dr. H. L. Batliwala & Co., Ltd.,
Sayani Road, P. O. Cadell Road, Bombay. No. 14.
ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟಿಡ್.,
Sayani Road, P. O. Cadell Road, Bombay. No. 14.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಸಣ್ಣ ಹುಡುಗರ ಸಲುವಾಗಿ
ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟ. ಖ. 9 ಆಣೆ.

ನಮ್ಮ ವಿಳಾಸ:— ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಏಜಂಟರು:— ದಿ. ಊಲನ್ ಮಾರ್ಟ, ಮಂಗಳೂರು.

ಸಾಂಟೋಲ್ ಕಾಂಪೌಂಡ್.

ಎಲ್ಲಾ ವಿಧದ ಮೇಹಗಳಿಗೂ ರಾಮಬಾಣ.

ಸ್ತ್ರೀ ಪುರುಷರಿಗೆ ರೋಗವು ಸಂಭವಿಸಿದಂದಿನಿಂದಲೂ ಮೇಹ ಜಾಡ್ಯವು ಉಂಟಾಗಿದೆಯೆಂದು ಹೇಳಬಹುದು, ಮೇಹಗಳಲ್ಲಿ ಹಲವು ವಿಧಗಳುಂಟು. ಇವುಗಳಲ್ಲಿ ಸಾಧಾರಣವಾದುದು ಒಂದು ವಿಧವಾದ ಸಾಂಕ್ರಾಮಿಕ ಕ್ರಿಮಿಯಿಂದುತ್ಪನ್ನವಾಗುವುದು. ಇದು ನೋಡಲು ಮರ್ಮದ ಸ್ಥಾನದಲ್ಲಿ ಚರ್ಮದ ಪೊರೆಯನ್ನಾಶ್ರಯಿಸಿ, ಆ ಮೇಲೆ ಅಲ್ಲಿ ಬಾವು, ಬಿಗಿತ, ನೋವು ಉಂಟಾಗಬಹುದು. ಅವರವರ ದೇಹಸ್ಥಿತಿಯನ್ನು ಅವಲಂಬಿಸಿ ಕ್ರಮೇಣ ಅಥವಾ ಶೀಘ್ರದಲ್ಲಿ ವೃದ್ಧಿ ಹೊಂದಬಹುದು. ಇದರಿಂದ ಥಕ್ಕನೆ ತೊಡೆ ಸಂದುಗಳಲ್ಲಿ ತೊಡೆವಾಳವೆಂಬ ಕುರುವೂ ಏಳಬಹುದು. ಇದೇ ಮೇಹದ ವಿಷವು ಶರೀರದಲ್ಲಿ ಹರಡಲೆತ್ನಿಸಿದುದರ ಚಿಹ್ನೆಯೆಂದು ತಿಳಿಯಬೇಕು. ಇದು ಕಣ್ಣಾರೆಪ್ಪೆಯ ಒಳಭಾಗದ ನರಗಳಿಗೇನಾದರೂ ಏರಿದರೆ, ಆಗ ಮೇಹನಯನವೆಂದರೆ 'ಗೊನೊರಿಯಲ್ ಅಪ್ತಾಲ್ ಅಮೇಯಿಯಾ' ಎಂಬ ರೋಗವು ಉತ್ಪನ್ನವಾಗುವುದು. ಈ ರೋಗದಿಂದ ಗಾಯದಿಂದ ಹೊರಬೀಳುವ ದ್ರವವು ಅನೇಕ ವಿಧದ ಬಣ್ಣವುಳ್ಳದಾಗಿರುವುದು. ಹೆಂಗಸರಲ್ಲಿ ಈ ರೋಗವು ಮೂತ್ರದ್ವಾರದಲ್ಲಿಯೂ, ಗರ್ಭಾಶ್ರಯದಲ್ಲಿಯೂ ನೆಲೆಗೊಂಡಿರಬಹುದು.

ಈ ರೋಗದಂಥ ದುಷ್ಪರಿಣಾಮಕಾರಿಯಾದ ಕೆಟ್ಟರೋಗವು ಮತ್ತೊಂದಿಲ್ಲವೆಂದು ಹೇಳಬಹುದು. ಇದನ್ನು ಹೆಚ್ಚು ಕಾಲ ಹಾಗೆಯೇ ಬಿಟ್ಟರೆ, ಪುರುಷರ ಮೂತ್ರದ್ವಾರದ ಒಳಶಕ್ತಿಯನ್ನು ಹದಗೆಡಿಸಿ ವ್ರಣಬಂದವನ್ನುಂಟುಮಾಡಿ, ಮೂತ್ರದ್ವಾರವನ್ನು ಕಟ್ಟುವುದು. ಅದ್ದರಿಂದ ಇದಕ್ಕೆ ಕೂಡಲೆ ಔಷಧವನ್ನು ಸೇವಿಸಿ, ಅದರ ಮೂಲೋತ್ಪಾಟನೆ ಮಾಡುವುದುತ್ತಮ. ಹಲವು ವರ್ಷಗಳ ವೈದ್ಯಕೀಯ ಅನುಭವದಿಂದ ಈ "ಸಾಂಟೋಲ್ ಕಾಂಪೌಂಡ್" ಎಂಬ ಔಷಧಿಯನ್ನು ಕಂಡು ಹಿಡಿದಿದ್ದೇವೆ. ಇದರಲ್ಲಿ ಯಾವ ಅಪಾಯಕರವಾದ ಔಷಧಿ ಸಾಮಗ್ರಿಗಳೂ ಇಲ್ಲ. ಇದು ಎಲ್ಲ ಶರೀರಗಳಿಗೂ ಅನುಗುಣವಾಗಿದೆ. ಇದರ ಸೇವನೆಯಿಂದ ರೋಗವು ಗುಣವಾಗುವುದೆಂಬುದರಲ್ಲಿ ಯಾವ ಸಂಶಯವೂ ಬೇಡ. ರೋಗವು ಯಾವ ಸ್ಥಿತಿಯಲ್ಲೇ ಇರಲಿ, ಎಷ್ಟು ಹಳೆಯದೇ ಆಗಿರಲಿ ಅದನ್ನು ವಾಸಿಮಾಡುವುದೇ ಇದರ ಗುಣವು. ಈ ರೋಗವು ಸ್ತ್ರೀ ಪುರುಷರಿರುವೆಡೆಗಳಲ್ಲಿ ಸಾಮಾನ್ಯವಾಗಿರುವುದರಿಂದ ಇದು ಎಲ್ಲರಿಗೂ ಸುಲಭ ದರದಲ್ಲಿ ಸಿಗಬೇಕೆಂದು ಇದರ ಬೆಲೆಯನ್ನು ಕೇವಲ ರೂ. ೨ ಮಾತ್ರ ಇಟ್ಟಿರುವೆವು. ಪ್ಯಾಕಿಂಗ್ ಮತ್ತು ಪೋಸ್ಟು ಖರ್ಚು ಪ್ರತ್ಯೇಕ. ದಿನಕ್ಕೆ ಎರಡು ಸಲ ೧ ಟಾ ಚಮಚೆ ನೀರಿನಲ್ಲಿ ಯಾ ಹಾಲಿನಲ್ಲಿ ಊಟದ ನಂತರ ತೆಕ್ಕೊಳ್ಳುವುದು. ಪತ್ರವ್ಯವಹಾರಗಳೆಲ್ಲ ಗುಪ್ತವಾಗಿರುವುವು. ವಿಶ್ವಾಸರ್ಹರಾದ ಏಜಂಟರು ಬೇಕಾಗಿರುವರು. ಹೆಚ್ಚಿನ ಮಾಹಿತಿಗೆ ಬರೆಯಿರಿ.

ದಿ. ಊಲನ್ ಮಾರ್ಟ,
ಸೋಲ್ ಏಜೆಂಟ್ಸ್,
ಮಂಗಳೂರು, ದಕ್ಷಿಣ ಕನ್ನಡ.

ಶಾಲಿವಾಹನಶಕ ೧೮೫೮ನೆಯ ಕ್ರೋಧನ ಸಂ||ರದ ಆಶ್ವೀಜ ಬ|| ೧೩ ಶನಿವಾರದಿಂದ ಕ್ರೋಧನ ಸಂ||ದ ಕಾರ್ತೀಕ ಶು|| ೬ ಶುಕ್ರವಾರದ ವರೆಗಿನ ಪಂಚಾಂಗ.

(೧೯೩೬ನೆಯ ತುಲಾ ಬೊಂತೆಲ್.)

ತಾರೀಕು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಬೊಂತೆಲ್	ಸೂರ್ಯ ಉ.	ಸೂರ್ಯ ಅಸ್ತ.
17	ಶನಿ	●	೪೬. ೧	ಹಸ್ತಾ	೧೦. ೦	೧	6 23	6.11
18	ರವಿ	೧	೪೪.೫೯	ಚಿತ್ರಾ	೧೨.೩೨	೨	6 23	6.11
19	ಸೋಮ	೨	೪೩. ೧	ಸ್ವಾತಿ	೧೨.೨೮	೩	6.23	6.10
20	ಕುಜ	೩	೩೯.೪೬	ವಿಶಾಖಾ	೧೧.೨೬	೪	6.23	6. 9
21	ಬುಧ	೪	೩೫.೨೬	ಅನುರಾಧಾ	೯.೩೧	೫	6.23	6. 9
22	ಗುರು	೫	೩೦.೪೪	ಜ್ಯೇಷ್ಠ	೬.೪೬	೬	6.24	6. 8
23	ಶುಕ್ರ	೬	೨೫.೩೨	ಮೂಲ	೩.೩೨	೭	6 24	6. 8

ಮಂಗಳೂರಿನ ವಾಯುಸ್ಥಿತಿ.

Date ತಾರೀಕು	Temperature. ಉಷ್ಣ (ಕಾವು) Maximum [illegible]	Minimum ಅತ್ಯಲ್ಪ	Rainfall. ಮಳೆ ದಿನದ ಮಳೆ	ಜುಮಲಾ ಮಳೆ.
9	85—6	74—7	0—69	—
10	86—0	75—4	0—52	—
11	86—7	75—7	0—84	—
12	86—4	76—2	0—20	—
13	87—2	75—0	0—10	—
14	84—8	75—6	0—20	—
15	87—2	75—2	0—03	—

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ	ವರೆಗೆ
	ರೂ. ಆ.	ರೂ. ಆ.
ಮಸ್ಕತಿ	8—10	9— 0
ಗುಡ್ಡು ...	8— 4	8—12
ರಾಶಿ ಸುಗ್ಗಿ ...	7—10	8— 6
ಅವ್ವಲ್ ಬೆಳ್ತಿಗೆ ...	8--12	9—12
ಗುಡ್ಡು ಬೆಳ್ತಿಗೆ ...	8— 0	8— 8
ರಂಗೂನು ಬೆಳ್ತಿಗೆ ಗೋಣಿ ೧ ...	13— 8	14— 8
ಗೋದಿ ಗೋಣಿ ೧ಕ್ಕೆ ...	17— 8	19— 0
ಹುರುಳಿಗೋಣಿ ೧ಕ್ಕೆ ...	9— 8	9— 8
ಅವರೆಗೋಣಿ ೧ಕ್ಕೆ ...	12— 0	13— 8
ತೊಗರಿಗೋಣಿ ೧ಕ್ಕೆ ...	12— 8	13— 0
ತೊಗರಿಬೇಳೆ ಗೋಣಿ ೧ಕ್ಕೆ ...	15— 0	20— 0
ಉದ್ದುಗೋಣಿ ೧ಕ್ಕೆ ...	16— 0	16— 8
ಹೆಸರುಗೋಣಿ ೧ಕ್ಕೆ ...	14— 0	15— 0
ಊರು ಬೆಲ್ಲ ಖಂಡಿ ೧ಕ್ಕೆ ...	80—	70— 0
ಉಪ್ಪು ಗೋಣಿ ೧ಕ್ಕೆ ...	4— 4	4— 8
ಕೊಬ್ರಿ ಖಂಡಿ ೧ಕ್ಕೆ ...	115— 0	120— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	49— 0	50— 0
ಎಳ್ಳಿಂಡಿ ಖಂಡಿ ೧ಕ್ಕೆ ...	40— 0	—
ಕೊಬ್ರಿ ಎಣ್ಣೆ ಮುಡಿ ೧ಕ್ಕೆ ...	8—14	10— 0
ಎಳ್ಳೆಣ್ಣೆ ಮುಡಿ ೧ಕ್ಕೆ ...	8— 0	11— 0
ಚಿಮಿಣಿ ಎಣ್ಣೆ ಪೆಟ್ಟಿಗೆ ೧ಕ್ಕೆ ...	8-8-0	—
ತೋಂಟ ಸಕ್ಕರೆ ಮುಡಿ ೧ಕ್ಕೆ ...	4— 2	—
ಊರ ಮೆಣಸಿನಕಾಯಿ ಮುಡಿ ೧ಕ್ಕೆ ...	6— 8	—
ಸಾಸಿವೆ ಮುಡಿ ೧ಕ್ಕೆ ...	8—12	—
ಕೊತ್ತಂಬರಿ ಮುಡಿ ೧ಕ್ಕೆ ...	3—14	4— 0
ಕಾಫಿ ಖಂಡಿ ೧ಕ್ಕೆ ...	345— 0	400— 0
ಪೀಗೋಟು ಅಡಿಕೆ ಖಂಡಿ ೧ಕ್ಕೆ ಹಳತು ...	245— 0	250— 0
„ ಹೊಸ ಅಡಿಕೆ	240— 0	0— 0
ಕಾಳುಮೆಣಸು ಖಂಡಿ ೧ಕ್ಕೆ ...	220— 0	—
[illegible] ಮುಡಿ ೧ಕ್ಕೆ ...	100—0	—
ಗೇರುಬೀಜ ಮುಡಿ ೧ಕ್ಕೆ ...	5— 2	—
[illegible] ಖಂಡಿ ೧ಕ್ಕೆ ...	45— 0	65— 0
[illegible] ಮುಡಿ ೧ಕ್ಕೆ ...	17— 8	—
ತಾಮ್ರ ಪಾತ್ರೆಗಳು ಮಣ ೧ಕ್ಕೆ ...	24— 0	—
ಚೀನಿ ಬೆಳ್ಳಿ ನೂರು ೧ಕ್ಕೆ ...	18—10	
ಹಿತ್ತಾಳೆ ತಗಡು ಮಣ ೧ಕ್ಕೆ ...	16— 8	
ಪವನು	18— 7	

ಜ್ಯೋತಿಷ್ಯ ಸಂಗ್ರಹ.

(1) ಬೃಹಜ್ಜಾತಕ ... ...
(2) ಉಮಾಮಹೇಶ್ವರ ಸಂವಾದ ಎಂಬ ಜ್ಯೋತಿಷ್ಯ ಕಾಲಚಕ್ರ
(3) ಕೇರಳ ಪ್ರಶ್ನೆ ... ...
(4) ಪ್ರಶ್ನೋತ್ತರ ರತ್ನಮಾಲಿಕಾ ... ...
(5) ನವನೀತಾರಿಷ್ಟ ... ...
(6) ಷಟ್ಪಂಚಾಶಕ್ ಗ್ರಂಥ ... ...
(7) ನಕ್ಷತ್ರ ಚೂಡಾಮಣಿ ಗ್ರಂಥ ... ...
(8) ಮುಹೂರ್ತಪದವೀಗ್ರಂಥ ... ...
(9) ಅಷ್ಟದಿಕ್ಪಾಲಕ ಮಂಗಳಾಷ್ಟಕಗಳು ... ...
(10) ಕಾಲನಿರ್ಣಯಾಥ್ಯಾಯಂ ಗ್ರಂಥ ... ...
(11) ಸವ್ಯಾಖ್ಯಾನ ಕಾಲಾಮೃತ... ... ...

— ಪ್ರಸಂಗದ ಪುಸ್ತಕಗಳು. —

(1) ಸೇತು ಬಂಧನ ... ...
(2) ವಸಿಷ್ಠ ಪುರಾಣ... ... ...
(3) ಇಂದ್ರಜೀತು ಕಾಳಗ ... ...
(4) ಚಂಡಭೀಮ ... ...
(5) ಮೈದುನರಾಮನ ಚರಿತ್ರೆ ... ...
(6) ಭಾಮಿನಿ ಷಟ್ಪದಿ ಚೋರ ಕಥೆ ... ...
(7) ಕುಮಾರ ರಾಮನ ಕಥೆ ... ...
(8) ಕೃಷ್ಣದಾನಾಮೃತ ... ...
(9) ಶ್ರೀಕೃಷ್ಣ ಸತ್ಯಭಾಮು ಸಂವಾದ ... ...
(10) ಚಿತ್ರಕೇತು ರಾಜನ ಕಥೆ ... ...
(11) ಬಕಾಸುರ ವಧೆ... ... ...
(12) ಬಾಣಾಸುರನ ಕಥೆ ... ...
(13) ರಂಭಾಶುಕ ಸಂವಾದ ... ...
(14) ರುಕ್ಮಿಣೀ ಪರಿಣಯ ... ...
(15) ರಾವಣೋದ್ಭವ ಯಕ್ಷಗಾನ ... ...
(16) ಸಭಾ ಲಕ್ಷಣವು ... ...
(17) ಶ್ರೀ ಕೃಷ್ಣದೀಪಾತ್ಸವೋದ ಕಥಾ ... ...
(18) ಚಂದ್ರಮೌಳಿ ಕಾಳಗ ... ...
(19) ಚಿತ್ರವಿಚಿತ್ರ ಕಾಳಗ ... ...
(20) ಯಕ್ಷಗಾನ ಸಾರಂಗಧರನ ಕಥೆ ... ...
(21) „ ಶನಿದೇವರ ಮಹಾತ್ಮೆ ... ...
(22) „ ಹರಿಶ್ಚಂದ್ರನ ಕಥೆ ... ...
(23) ಯಕ್ಷಗಾನ ಲಕ್ಷ್ಮೀಗ್ರಹ ಕಥೆ ...
(24) „ ಚೋರ ಕಥೆ ... ...
(25) „ ಪಾರ್ವತಿ ಕಾರವಂಚ ಕಥೆ ...
(26) „ ಗೋವಿನ ಚರಿತ್ರೆ ... ...
(27) „ ದುಕ್ಯಾನನ ಕಥೆ ... ...
(28) „ ಸಾನಂದ ಗಣೇಶ್ವರ ಕಥೆ ... ...
(29) „ ಅಂಗದ ಸಾಧನ ... ...

— ಭಜನೆಯ ಪುಸ್ತಕಗಳು. —

(1) ಉಡುಪಿಕ್ಷೇತ್ರ ಮಹಾತ್ಮೆ ... ...
(2) ಹನುಮದ್ರಾಮಾಯಣ ... ...
(3) ಅಧ್ಯಾತ್ಮ ವಿಚಾರ ... ...
(4) ಭಕ್ತಿಮಹಿಮೆ ... ...
(5) ಪ್ರಬಂಧ ಮುಕ್ತಾವಳಿ ... ...
(1) ಹರಿಕೀರ್ತನಾಮೃತಸಾರ ... ...
(2) ಹರಿನಾಮಾಮೃತಂ. ... ...
(3) ರುಕ್ಮಿಣೀ ಕಲ್ಯಾಣ ... ...
(4) ಮಂಗಳ ಗೌರೀಹಾಡು ... ...
(5) ಉದ್ವಾಲೀಕನ ಹಾಡು ... ...
(6) ಯಕ್ಷಗಾನ ಗೀಳೀ ಹಾಡು ... ...
(7) ಕನಕದಾಸ ಕಬೀರದಾಸರ ಕೀರ್ತನೆಗಳು ...
(8) ಬೀಗರ ಹಾಡು ... ...
(9) ಭಜನೆಯ ಪದಗಳು ... ...

— ವಿವಿಧ ಪುಸ್ತಕಗಳು. —

(1) ಸದಾಚಾರ ವಿವೇಚನೆ ... ...
(2) ಗೋಪಾಲಕೃಷ್ಣ ಗೋಕಲೆ ... ...
(3) ಶ್ರೀಕೃಷ್ಣ ಸೇವಾವ್ರತಂ ... ...
(4) ಪಕ್ಷಾಪ್ತಾತ ಭಾಷ್ಯ ... ...
(5) ಶ್ರೀ ಶ್ರೀಮಹಾ ಭಾಗವತ ... ...
(6) ಉಷ್ಣಯನ ಚರಿತ್ರೆ ... ...
(7) ಮಧ್ವಾಚಾರ್ಯರು (ಶ್ರೀಮಾನ್) ... ...
(8) ಯತಿರಾಜವಂಶತಿ ... ...
(9) ಪರಮಾರ್ಥಶತಕಂ ... ...
(10) ಭಕ್ತಿಸುಮಾಂಜಲಿ ... ...
(11) ಸತ್ಯರಾಜ ಪೂರ್ವದೇಶ ಯಾತ್ರೆಗಳು ...
(12) ಕಾಲನಿರ್ಣಯವ್ಯಾಖ್ಯಾನ ... ...
(13) ಅರೇಬಿಯನ್ ನಾಯ್ಟ್ಸ್ 1000 ಪುಟಗಳ ಮೇಲೆ ಇವೆ.

ಪುಸ್ತಕಗಳು ದೊರೆಯುವ ಸ್ಥಳ:— ಶಾರದಾ ಛಾಪಖಾನೆ,
ರಥ ಬೀದಿ, ಮಂಗಳೂರು

ಕನ್ನಡಿಗರೆ! **ವಸಂತ.** ಕಚ್ಚೆರೆಯಿರಿ

ಈಗಾಗಲೇ ಎರಡನೇ ಸಂಪುಟವು ಆರಂಭಿಸಲಿದೆ.

ಇತಿಹಾಸನಿಧಿ ಎಂದರೆ . . . . ವಸಂತ
ಸಮಾಜಸುಧಾರಕನೆಂದರೆ . . . . ವಸಂತ
ಕೈಗಾರಿಕೆಯ ಸಾಮ್ರಾಜ್ಯವೆಂದರೆ . . . . . . ವಸಂತ
ಕರ್ಣಾಟಕ ಭಾಷಾಸೇವಕನೆಂದರೆ . . . . . . ವಸಂತ
ದೇಶವಿದೇಶ ಬಂಧುವೆಂದರೆ . . . . ವಸಂತ
ಕಾದಂಬರಿಗಳ ಭಂಡಾರವೆಂದರೆ . . . . . . ವಸಂತ
ಚಿತ್ರಾಕರ್ಷ ಚಿತ್ರಶಾಲೆಯೆಂದರೆ . . . . . . ವಸಂತ
ದೇಶಭಕ್ತನೆಂದರೆ . . . . ವಸಂತ

ಇಂತಹ ವಸಂತನು ಯಾರಿಗೆ ಬೇಕು,
ಯಾರಿಗೆ ಬೇಡ?

48 (ಕ್ರೌನ್ ¼ ಪುಟ ಸ್ಯಾಜಿನ) ಪುಟಗಳನ್ನು ಒಳಗೊಂಡ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3—4—0 ಮಾತ್ರ.

ವ್ಯವಸ್ಥಾಪಕ,
ವಸಂತ ಕಾರ್ಯಾಲಯ,
ಕುಂದಾಪುರ, ದಕ್ಷಿಣ ಕನ್ನಡ

ಬೇಕಾಗಿದ್ದಾರೆ!

ಒಳ್ಳೇ ದೃಢತೆಯುಳ್ಳ ಭದ್ರವಾದ ಇನ್ಶೂರೆನ್ಸ್ ಕಂಪೆನಿಯಲ್ಲಿ ಜೀವವಿಮೆ, ಫ್ಯಾರ್‌ವಿಮೆ, ಮೆರೀನವಿಮೆ ಯಾವತು ವಿಮೆ ಕೆಲಸಗಳನ್ನು ಶೇಖರಿಸಿ ಕೊಡಲು ದಕ್ಷಿಣಕನ್ನಡಾ ಜಿಲ್ಲೆಯಲ್ಲಿ ಯೋಗ್ಯ ಸಬ್-ಏಜಂಟರುಗಳು ಕೂಡಲೆ ಬೇಕಾಗಿದೆ. ಪ್ರತಿಫಲವೆಷ್ಟು ಎಂಬುದನ್ನೂ ಹಿಂದಣ ಅನುಭವವನ್ನೂ ಕುರಿತಾಗಿ ಕೂಡಲೆ ಬರೆದುಕೊಳ್ಳಿರಿ:—

ಮೆಸರ್ಸ್—
ಜೆ. ಡಿ. ವಾಯೆಡಾ ಎಂಡ್ ಸನ್ಸ್
ಪೋರ್ಟ ರೋಡ್, ಮಂಗಳೂರು.

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ
ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ
ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ವಾಂಸರೂ ತಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ತಮಾನಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನ್ನು ಕುರಿತ ಲೆಕ್ಕಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಅಧಿಕಾರಿಗಳೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪೋಷಕರಿಗೆ ... ... ರೂ. 3—0—0
ಇತರರಿಗೆ, ಪರಸ್ಥಳಕ್ಕೆ, ಪೋಸ್ಟೇಜು ಸೇರಿ „ 2—8—0.
„ ಸ್ಥಳೀಕರಿಗೆ ... „ 1—8—0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪ್ರತಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿಯಬಹುದು.

ಎಡಿಟರ್,
ಬಿ. ಹನುಮಂತಯ್ಯಗೌಡ,
ಅರ್ಥಸಾಧಕ ಪತ್ರಿಕೆ,
ಅರಳೇಪೇಟೆ, ಬೆಂಗಳೂರು, ಸಿಟಿ.

ಮಾರಾಟಕ್ಕೆ ಸಿದ್ಧವಿದೆ.

ಅಮಲ್ನಾಮೆ, ವಕಾಲತು, ನಕಲಿನ ಬಗ್ಗೆ ನೋಟು, ಲೋಜಮೆಂಟ ಸ್ಕೆಡ್ಯೂಲ, ಪೇಮೆಂಟ್ ಸ್ಕೆಡ್ಯೂಲ, ಬಟ್ಟಾ ನೋಟು, ಮೆಮೊ ಒಫ್ ಕೋಸ್ಟ್ಸ್, ಮೆಮೊರಂಡಮ್ ಒಫ್ ಎಪ್ಪಿಯರೆನ್ಸು, ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರ, ವಗೈರೆ ಎಲ್ಲಾ ಫೋರ್ಮುಗಳು ನಮ್ಮಲ್ಲಿ ದೊರೆಯುತ್ತವೆ.

100 ಫೋರ್ಮುಗಳ ಕ್ರಯ 0—12—0,
ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರು
1ರ ಕ್ರಯ 0—3—0.

ಶಾರದಾ ಛಾಪಖಾನೆ,
ತೇರು ಬೀದಿ, ಮಂಗಳೂರು.

ನೋಟೀಸು.

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ,
ಒ. ಯ. ನಂಬ್ರ 75/1925,
ದಿವಾಳಿ ಅರ್ಜಿ ನಂಬ್ರ 26/1924,
(ಅಫೀಶಿಯಲ್ ರಿಸೀವರರ ಕೋರ್ಟು ದಿವಾಳಿ
ಅರ್ಜಿ ನಂಬ್ರ 81/1924)

ಪರಮೇಶ್ವರ, ತಿಮ್ಮಪ್ಪನ ಅಳಿಯ
ಮಂಗಳೂರು ಶಹರು ಅತ್ತಾವರ ಗ್ರಾಮದ } ಅರ್ಜಿದಾರ,
ಮಿತ್ತ ಮುಗೇರನಲ್ಲಿರುವವ,

ಮತ್ತು,

1. ಮಹಮ್ಮದ ಮೀರಾ ಸಾಹೇಬ,
2. ಕೃಷ್ಣ ವೈದ್ಯರ್,
3. S. S. ತೋಮಸ್, 4. ತ್ಯಾಂಪ. } ರೆಸ್ಪೊಂಡೆಂಟರು,

ಸದರಿ ಅರ್ಜಿದಾರನು ಪ್ರೊವಿನ್ಸಿಯಲ್ ಇನ್ಸೊಲ್‌ವೆನ್ಸಿ ಆಕ್ಟಿನ 41ನೇ ಪ್ರಕರಣದ ಮೇರೆಗೆ ತನಗೆ ಸದರಿ ದಿವಾಳಿ ಅರ್ಜಿಯಲ್ಲಿ ಡಿಸ್‌ಚಾರ್ಜ ಹುಕುಂ ಕೊಡಬೇಕಾಗಿ ಮೇಲಿನ ಅರ್ಜಿಯನ್ನು ದಾಖಲು ಮಾಡಿರುತ್ತಾನೆ. ಸದರಿ ಅರ್ಜಿಯು 21—10—'22ನೇ ತಾರೀಕಿನ ದಿವಸ ಹಗಲು ಘಂಟೆ 11ಕ್ಕೆ ಸದರಿ ಕೋರ್ಟಿನಲ್ಲಿ ತನ್ಖಿಗೆ ತೆಗೆಯಲ್ಪಡುವುದು. ಸದರಿ ಅರ್ಜಿಯನ್ನು ಆಕ್ಷೇಪಿಸುವವರು ತಮ್ಮ ಆಕ್ಷೇಪಣೆಯನ್ನು ಸದರಿ ಕೋರ್ಟು ಮುಂದೆ ಸದರಿ ದಿವಸ ವ ಅದರ ಮುಂಚಿತವಾಗಿ ಜಾಹೀರುಮಾಡಿಕೊಳ್ಳತಕ್ಕದ್ದು.

ಮಂಗಳೂರು, }
ತಾ. 26-9-'25, }
A. C. MASCARENHAS.
Vakil for Petitioner

ನೋಟೀಸು.

ಉಡುಪಿ ತಾಲೂಕು ನೋನ್ ಮಿಶ್ಯನ್ ಏಡೆಡ್ ಶಾಲೆಗಳ ಸಂಘದ ಒಂದು ವಿಶೇಷ ಸಭೆಯು ಇದೇ ಬರುವ ತಾ. 24—10—'25ನೇ ಶನಿವಾರ ದಿವಸ ಅಪರಾಹ್ನ ಘಂಟೆ 2ಕ್ಕೆ ಉಡುಪಿ ಬೋರ್ಡು ಎಲಿಮೆಂಟರಿ ಶಾಲೆಯ ಕಟ್ಟೋಣದಲ್ಲಿ ಜರಗುವುದು. ಆ ಸಭೆಗೆ ಉಡುಪಿ ತಾಲೂಕಿನ ನೋನ್ ಮಿಶ್ಯನ್ ಏಡೆಡ್ ಶಾಲೆಗಳ ಮೆನೇಜರರೂ, ಉಪಾಧ್ಯಾಯರೂ ತಪ್ಪದೆ ಹಾಜರಾಗಬೇಕಾಗಿ ಅಪೇಕ್ಷಿಸೋಣಾಗುತ್ತದೆ.

ಕುರುಕಾಲು, }
ತಾ. 10-10-'25. }
ಕೆ. ಗಣಪಯ್ಯ ಸೆಟ್ಟಿ,
ಸೆಕ್ರೆಟರಿ,
ನೋನ್ ಮಿಶ್ಯನ್ ಏಡೆಡ್ ಶಾಲೆಗಳ ಸಂಘ, ಉಡುಪಿ.

ಇನ್‌ಪ್ಲುಯೆನ್‌ಜಾ.

ಇನ್‌ಫ್ಲುಯೆಂಜಾ ಜಾಡ್ಯವು ಪ್ರಬಲಸ್ಥಿತಿಗೆ ಬರುತ್ತಿರುವುದನ್ನು ನೋಡಿ, ಬರ್ಮಿಂಘಾಮ್ ಪಟ್ಟಣದ ವೆಸ್ಲಿಯನ್ ಮತ್ತು ಜನರಲ್ ಅಷ್ಯೊರೆನ್ಸ್ ಸೊಸೈಟಿಯವರು, ಆ ವ್ಯಾಧಿಯ ಸಂಬಂಧವಾದ ಕೆಲವು ಮರ್ಮಗಳನ್ನು ಕುರಿತು ಒಂದು ಪತ್ರಿಕೆಯನ್ನು ಪ್ರಕಟಿಸಿರುವರು.

ಆ ಪತ್ರಿಕೆಯಲ್ಲಿ, ಈ ಸಾಂಕ್ರಾಮಿಕ ಜಾಡ್ಯದ ಕಾಲದಲ್ಲಿ ಗಮನಿಸತಕ್ಕ ಕೆಲವು ಸೂಚನೆಗಳಿವೆ. ಅವುಗಳಲ್ಲಿ ಈ ಕೆಳಗೆ ವಿವರಿಸುವ ನಿಯಮಗಳು ಎಲ್ಲರೂ ಅವಶ್ಯಕವಾಗಿ ಗಮನಿಸತಕ್ಕವುಗಳಾಗಿವೆ.

೧. ಊರಿನಲ್ಲಿ ಜಾಡ್ಯವಿದ್ದಾಗ, ಗುಂಪು ವಿಶೇಷವಾಗಿರುವ ಸಾರ್ವಜನಿಕ ಸ್ಥಳಗಳಲ್ಲಿ ಸೇರಬೇಡಿರಿ.

೨. ಜಾಡ್ಯವು ಪ್ರವೇಶಿಸಿರುವ ಮನೆಗಳಿಗೆ ಹೋಗಬೇಡಿರಿ! ಮತ್ತು ಆ ವ್ಯಾಧಿಗ್ರಸ್ತರ ಸಂಪರ್ಕದಲ್ಲಿರಬೇಡಿರಿ.

೩. ಮೂಗು ಮತ್ತು ಬಾಯಿಗಳ ಮೂಲಕವಾಗಿ ವ್ಯಾಧಿಯ ಸೋಂಕು ಪ್ರವೇಶಿಸುವುದು. ಆದುದರಿಂದ ಬಾಯಿ, ಮೂಗು ಮತ್ತು ಹಲ್ಲುಗಳನ್ನು ಶುಭ್ರವಾಗಿಡಿರಿ.

೪. ಅಧಿಕವಾದ ಧೂಳು ಮತ್ತು ಉಷ್ಣದಿಂದೊಡಗೂಡಿದ ಗಾಳಿಯು ನಿಮ್ಮ ಕಾರ್ಯಾಲಯಗಳಿಗೆ ಮತ್ತು ಮಲಗುವ ಕೊಠಡಿಗಳಿಗೆ ಬಾರದಂತೆ ಎಚ್ಚರವಾಗಿರಿ.

೫. ಕೆಲಸ ಅಥವಾ ವ್ಯಾಯಾಮಗಳನ್ನು ಮಾಡಿದ ಒಡನೆಯೇ ಉಷ್ಣಹೊಂದಿದ ನಿಮ್ಮ ಶರೀರಕ್ಕೆ ಥಟ್ಟನೆ ಶೈತ್ಯತಗಲದಂತೆ ನೋಡಿಕೊಳ್ಳಿರಿ.

೬. ವ್ಯಾಧಿಯು ಒಂದು ಸಲ ಗುಣವಾದರೆ, ಪುನಃ ಬರುವುದಿಲ್ಲವೆಂಬ ನಿಯಮವೇನೂ ಇಲ್ಲವಾಗಿ, ಪುನಃ ಸೋಂಕು ಬಾರದಂತೆ ಬಹಳ ಜಾಗರೂಕರಾಗಿರಬೇಕು.

೭. ವ್ಯಾಧಿಯು ಉಲ್ಬಣ ಸ್ಥಿತಿಯಲ್ಲಿರುವಾಗ, ನಿಮ್ಮ ಶರೀರಾರೋಗ್ಯವು ಕೆಡದಂತೆ ನಿರ್ಮಲವಾದ ಗಾಳಿ, ಸ್ವಚ್ಛವಾದ ಬೆಳಕು, ಮತ್ತು ಶುಚಿತ್ವಗಳಿರುವ ಹಾಗೆ ನೋಡಿಕೊಳ್ಳಿರಿ.

೮. ಇನ್‌ಫ್ಲುಯೆನ್‌ಜಾ ಸೋಂಕು ಒಬ್ಬನ ದೇಹವನ್ನು ಪ್ರವೇಶಿಸಿ, ಅವನು ಆ ವ್ಯಾಧಿಯಿಂದ ಪೀಡಿತನಾಗಿದ್ದರೆ, ಈ ಕೆಳಗೆ ವಿವರಿಸುವ ಎಚ್ಚರಿಕೆಗಳನ್ನು ಅನುಸರಿಸಿರಿ.

೧. ರೋಗಿಯನ್ನು ಪ್ರತ್ಯೇಕವಾಗಿ ಒಂದು ಕೊಠಡಿಯಲ್ಲಿ ಮಲಗಿಸಿರಿ!

೨. ಶರೀರಕ್ಕೆ ಒದ್ದೆ ಮತ್ತು ಶೈತ್ಯವು ತಟ್ಟಬಾರದು. ಬೆವರು ವಿಶೇಷವಾಗಿ ಹೊರಡುತ್ತಿದ್ದರೆ ರೋಗಿಯ ಉಡುಪುಗಳನ್ನು ಅಡಿಗಡಿಗೆ ಬದಲಾಯಿಸಬೇಕು.

೩. ಈ ವ್ಯಾಧಿಯ ಮೇಲೆ ಇನ್ನೊಂದು ವ್ಯಾಧಿಯು ತೊಡಕಾಗಿ ಬರಬಹುದು. ಅದು ಬಹಳ ಅಪಾಯಕರವಾದುದರಿಂದ, ಅವುಗಳು ಕಾಣಿಸಿಕೊಂಡ ಒಡನೆಯೇ ವೈದ್ಯರನ್ನು ಕರೆಸಬೇಕು.

೪. ಜ್ವರವು ಸಂಪೂರ್ಣವಾಗಿ ಬಿಡುವವರೆಗೂ ರೋಗಿಯು ದ್ರವರೂಪವಾದ ಆಹಾರವನ್ನು ಸೇವಿಸುತ್ತ ಕದಲದೆ ಮಲಗಿರಬೇಕು.

೫. ವ್ಯಾಧಿಯು ಗುಣಹೊಂದುತ್ತಿರುವಾಗ ರೋಗಿಯ ಶರೀರಾರೋಗ್ಯ ಸ್ಥಿತಿಯನ್ನು ಎಚ್ಚರಿಕೆಯಿಂದ ಕಾಪಾಡಿಕೊಳ್ಳುವುದಲ್ಲದೆ, ಅತನ ದೇಹಕ್ಕೆ ಅಧಿಕವಾಗಿ ಆಯಾಸವಾಗದಂತೆ ನೋಡಿಕೊಳ್ಳಬೇಕು. ಈ ವ್ಯಾಧಿಯು ಹರಡದಂತೆ ಮಾಡುವುದು ಪ್ರತಿಯೊಬ್ಬನ ಕರ್ತವ್ಯವು.

ನಿವಾರಣೋಪಾಯಗಳು.

೧. ಸೀನು ಮತ್ತು ಕೆಮ್ಮುಗಳನ್ನು ಸಾಧ್ಯವಾದ ಮಟ್ಟಿಗೆ ತಡೆಯಿರಿ. ಮತ್ತು ಆ ಕಾಲಗಳಲ್ಲಿ ಮೂಗು ಬಾಯಿಗಳನ್ನು ಮುಚ್ಚಿಕೊಳ್ಳಿರಿ.

೨. ಕಫವನ್ನು ಕೈವಸ್ತ್ರದಲ್ಲಿಯೇ ಮುಚ್ಚಿಟ್ಟು, ಆಮೇಲೆ ಆ ಬಟ್ಟೆಯನ್ನು ಸುಟ್ಟುಬಿಡಬೇಕು.

೩ ಮನೆ ಬಿಟ್ಟು ಹೊರಕ್ಕೆ ವಿಶೇಷವಾಗಿ ಹೋಗಬಾರದು. ಅತ್ಯವಶ್ಯವಾಗಿ ಬೇಕಾಗುವವರೊಡನೆ ವಿನಾ ಮನೆಯಲ್ಲಿರುವ ಇತರರೊಡನೆಯೂ ವಿಶೇಷವಾಗಿ ಕಲೆಯಬೇಡಿರಿ.

೪. ಮುಖ್ಯವಾಗಿ ವೃದ್ಧರಿಗೆ ಸೋಂಕು ಬಾರದಂತೆ ಹೆಚ್ಚು ಜಾಗರೂಕರಾಗಿರಬೇಕು. ಇಷ್ಟೇ ಈ ವ್ಯಾಧಿಯು ಪ್ರಬಲವಾಗದಂತೆ ನೋಡಿಕೊಳ್ಳಬೇಕಾದ ಸೂಚನೆಗಳು. [ಆರೋಗ್ಯಚಂದ್ರಿಕೆ]

ಮಲಗಿಕೊಂಡು ಪುಸ್ತಕವನ್ನೋದುವುದು.

ಹಾಸಿಗೆಯ ಮೇಲೆ ಮಲಗಿಕೊಂಡು ಓದುವುದು ಅಪಾಯಕರವೆಂದು ಈಗಲೂ ಅನೇಕರ ಭಾವನೆ. ಇದರಲ್ಲಿ ಕಣ್ಣಿನ ದೃಷ್ಟಿಯು ಸರಿಯಾಗಿ ಬೀಳಲು ಆಸ್ಪದವಿಲ್ಲದಿರುವುದರಿಂದ, ಕಣ್ಣಿಗೆ ಆಯಾಸವು ಅಧಿಕವಾಗುವುದೆಂದು ಜನರು ನೆನಸುವರು. 'ಡೈಲೀ ಎಕ್ಸ್‌ಪ್ರೆಸ್' ಎಂಬ ಪತ್ರಿಕೆಯಲ್ಲಿ, ಡಾಕ್ಟರ್ ಲಿಯೋನಾರ್ಡ್ ವಿಲಿಯಮ್ಸ್‌ರುವರು, ಇದು ವಾಸ್ತವವಲ್ಲ[illegible], ಹಾಸಿಗೆಯಲ್ಲಿ ಮಲಗಿಕೊಂಡು ಓದುವುದರಿಂದ ಕಣ್ಣಿಗುಂಟಾಗುವ ಬಾಧೆಗೆ, ಬೆಳಕು ಸರಿಯಾಗಿ ಬೀಳದಿರುವುದು ಕಾರಣವೇ ಹೊರತು, ದೃಷ್ಟಿಯು ಸರಿಯಾಗಿ ಬೀಳದಿರುವುದಲ್ಲವೆಂದೂ ಬರೆದಿರುವರು. ಪ್ರಕೃತಿಯ ಬೆಳಕಾಗಲಿ, ಕೃತಕವಾದ ಬೆಳಕಾಗಲಿ, ಪುಸ್ತಕದ ಮೇಲೆ ಮಾತ್ರ ಬೀಳುವ ಹಾಗೆ, ಆ ಬೆಳಕು ಓದುವವನ ಹಿಂದುಗಡೆಯಲ್ಲಿರಬೇಕಲ್ಲದೆ, ಬೆಳಕು ಕಣ್ಣಿನ ಮೇಲೆ ಬೀಳಬಾರದು. ಕುರ್ಚಿ ಅಥವಾ ಮೇಜಿನ ಮೇಲೆ ಓದುವಾಗಲೂ ಇದೇ ನಿಯಮವು. ಮೇಜಿನ ಮೇಲೆ ಓದುವಾಗ ಬೆಳಕು ಹಿಂದಿನಿಂದ ಬೀಳಲು ಸಾಧ್ಯವಿಲ್ಲದಿದ್ದರೆ, ಆ ಬೆಳಕು ಓದುವವನ ಕಣ್ಣಿನ ಮೇಲೆ ಬೀಳದೆ ಪುಸ್ತಕಗಳ ಮೇಲೆಯೇ ಬೀಳುವಂತೆ ಏರ್ಪಡಿಸಬೇಕು ಹೀಗೆ ಮಾಡಿದರೆ ಮಲಗಿಕೊಂಡು ಓದಿದರೂ ಅಪಾಯವಿಲ್ಲ. [ಆ.ಚ.]

ಪತ್ರವ್ಯವಹಾರ.

ತಾಂಬೆಯವರ ಪಾತ.

ಮಧ್ಯಪ್ರಾಂತದ ನ್ಯಾಯವಿಧಾಯಕ ಸಭೆಗೆ ಸ್ವರಾಜ ಪಕ್ಷದಿಂದ ಚುನಾಯಿಸಲ್ಪಟ್ಟ ಅಧ್ಯಕ್ಷರಾಗಿರುವ ಮಿ। ತಾಂಬೆಯವರು ಸರಕಾರದ ಎಕ್ಸಿಕ್ಯುಟಿವ್ ಕೌನ್ಸಿಲರ ಕೆಲಸವನ್ನು ಸ್ವೀಕರಿಸಿದ್ದು ಎಲ್ಲವರಿಗೂ ಅತ್ಯಂತ ಶೋಚನೀಯವಾಗಿ ತೋರದಿರದು. ಇವರ ಈ ವರ್ತನವು ಅನಿರೀಕ್ಷಿತವಾದುದೆಂದು ಹೇಳಲಾಗದು.

ಮಹಾತ್ಮರು ಕೌನ್ಸಿಲ್ ಪ್ರವೇಶವನ್ನು ಬಹಿಷ್ಕರಿಸಿದಂದಿನಿಂದ, ಮರಾಠಿ ಪ್ರಾಂತ್ಯಗಳು, ತಿಲಕರ ಹೆಸರಿನಿಂದ, ರಿಸ್ಪೋನ್ಸಿವ್ ಕೊ-ಒಪರೇಶನ್ ಎಂಬ ವಿಶೇಷ ತರದ ಸಹಕಾರವನ್ನು ತಮ್ಮ ವೈಶಿಷ್ಟ್ಯವಾಗಿ ಸೂಚಿಸುತ್ತಲೇ ಇದ್ದುವು. ಕೌನ್ಸಿಲು ಬಹಿಷ್ಕಾರದ ಆ ಸಂದಿಗ್ಧ ಸಮಯದಲ್ಲಿ ಮಹಾತ್ಮರ ಧುರೀಣತ್ವಕ್ಕೆ ಈ ವಿಭಾಗಗಳು ಕೊಂಗ್ರೆಸ್ ಶಿಸ್ತಿನ ಅಭಿಮಾನದಿಂದ ಅಧೀನವಾಗಿದ್ದರೂ, ದೇಶದೊಳಗಿನ ರಾಜಕೀಯ ಪರಿವರ್ತನೆಗಳೊಡನೆ, ಇವರು ತಮ್ಮ ಆ ರಿಸ್ಪೋನ್ಸಿವ್ ಕೊಓಪರೇಶನನ್ನು ಪುನಃ ಮುಂದೊತ್ತಲು ಹಿಂಜರಿಯಲಿಲ್ಲ.

ದೇಶಬಂಧು ದಾಸರ ಕೌನ್ಸಿಲ್‌ಪ್ರವೇಶ ಕ್ರಮವು ಪ್ರಥಮತಃ ಮಹಾತ್ಮರ ತತ್ವಗಳಿಗೆ ಅನುಸಾರವಾಗಿದ್ದುದಲ್ಲದೆ, ಅದಕ್ಕಿಂತಲೂ ಹೆಚ್ಚು ಪರಿಣಾಮಕಾರಿಯಾಗಿದ್ದಿತು. ಆದರೆ ಬಂಗಾಳ ಮತ್ತು ಮಧ್ಯವರ್ತಿ ನ್ಯಾಯವಿಧಾಯಕ ಸಭೆಗಳಲ್ಲಿ ಅವರಿಗೆ ಬಹುಮತವು ದೊರಕದೆ ಹೋದುದರಿಂದ, ಅವರು ತಮ್ಮ ಧೋರಣವನ್ನು, ಇಂಡಿಪೆಂಡೆಂಟ್ ಪಕ್ಷವನ್ನು ಒಲಿಸಿಕೊಳ್ಳಲಿಕ್ಕಾಗಿ ಸ್ವಲ್ಪ ಮೆತ್ತಗೆ ಮಾಡುವ ಅವಶ್ಯ ಬಿದ್ದಿತು. ಆದರೆ ಅವರ ಧ್ಯೇಯವು ಬದಲಿಸಲಿಲ್ಲವೆಂಬುದು ಸ್ಪಷ್ಟವಿದೆ.

ಮಧ್ಯಪ್ರಾಂತದಲ್ಲಿ ಮರಾಠಿ ಪ್ರಾಬಲ್ಯವು ಹೆಚ್ಚು. ಅಂತೆಯೇ ಈ ರಿಸ್ಪೋನ್ಸಿವ್ ಕೊ-ಒಪರೇಶನಿನ ಧೋರಣದ ಬಲವೂ ಅಲ್ಲಿ ಹೆಚ್ಚು. ದೇಶಬಂಧುಗಳೇ ಪರಿವರ್ತನವಾದಿಗಳ ಪ್ರಮುಖ ಮುಖಂಡರಾದುದರಿಂದಲೂ ಜನತೆಯು ಇನ್ನೂ ರಿಸ್ಪೋನ್ಸಿವ್ ಕೊ-ಒಪರೇಶನಿಗೆ ಸಮ್ಮತವಿಲ್ಲದುದರಿಂದಲೂ ಮರಾಠಿ ಧುರೀಣರು ಸ್ವರಾಜ್ಯಪಕ್ಷದ ಧ್ವಜವನ್ನು ತಾವೂ ಕೈಯಲ್ಲಿ ತ್ತಿದ್ದರು, ಅದರಂತೆ ಮಧ್ಯಪ್ರಾಂತಗಳಲ್ಲಿ ಸ್ವರಾಜ್ಯಪಕ್ಷವು ಚುನಾವಣೆ ಮಟ್ಟಿಗೆ ವಿಜಯಿಯಾಯಿತು. ಆದರೆ ಸ್ವರಾಜ್ಯಪಕ್ಷವು ಚುನಾವಣೆಯಲ್ಲಿ ವಿಜಯವನ್ನು ಹೊಂದಿತೇ ವಿನಹಾ, ಕಾರ್ಯದಲ್ಲಿ ನಮ್ಮ ನಿರೀಕ್ಷಣೆಯಷ್ಟು ಫಲಕಾರಿಯಾಗಲಿಲ್ಲ.

ಮಧ್ಯಪ್ರಾಂತದಲ್ಲಿ ಸ್ವರಾಜ್ಯಪಕ್ಷಕ್ಕೆ ಪೂರ್ಣ ಬಹುಮತವಿದ್ದಿತಾದರೂ ಅದರ ಕೆಲಸಗಳು ಸ್ವರಾಜ್ಯಪಕ್ಷದ ಧ್ಯೇಯವನ್ನು ಸಾಧಿಸಲಿಲ್ಲ. ಮೊದಲಿನ ವರ್ಷದಲ್ಲಿ ಬಜೆಟು ನಿರಾಕರಣೆ ಮೊದಲಾದ ಅನೇಕ ಕೌನ್ಸಿಲು ತಡೆ (obstruction)ಗಳೊಡ್ಡಿದ್ದರೂ ಮರು ವರ್ಷ ಸ್ವರಾಜ್ಯಪಕ್ಷದ ಮಾನಸಿಕತೆಯು ಮುರಿದಂತೆ ತೋರುತ್ತದೆ.

ಕೌನ್ಸಿಲು ಮೆಂಬರರ ರಿಸ್ಪೋನ್ಸಿವ್ ಕೊ-ಒಪರೇಶನ್ ತತ್ವವಲ್ಲದೆ, ಅವರೊಳಗಿನ ಅಂತಃಕಲಹ ಮತ್ತು ಮನಸ್ಸ್ಲೇಶಗಳೂ ಈ ತರದ ಚೇತನಹೀನವಾದ ಪರಿಣಾಮಕ್ಕೆ ಕಾರಣವಾದುವು. ಮುಖ್ಯವಾಗಿ ಮರಾಠಿ ವಿಭಾಗಕ್ಕೂ ಹಿಂದೀ ವಿಭಾಗಕ್ಕೂ [illegible]ಲ್ಲವೆಂದೂ ನಾವು ತಿಳಿಯುತ್ತೇವೆ.

ಡಾ। ಮುಂಜೆ ಮೊದಲಾದವರ ಆಗಾಗಿನ ಪ್ರಕಟನೆಗಳನ್ನು ನೋಡಿದರೆ, ಮಂತ್ರಿಗಳಾಗಿ ನೇಮಕ ಹೊಂದಲಿಕ್ಕೂ ಇವರಿಗೆ ಇಚ್ಛೆಯಿದ್ದಿತೆಂದು ತೋರುತ್ತದೆ. ಅಖಿಲಭಾರತ ಸ್ವರಾಜ್ಯಪಕ್ಷದ ಶಿಸ್ತು ಅಲ್ಲದಿದ್ದರೆ ಮಧ್ಯಪ್ರಾಂತದ ಈ ಸ್ವರಾಜ್ಯಪಕ್ಷವು ಇಷ್ಟು ಕೂಡ ಸರಕಾರ ವಿರೋಧದ ಕೆಲಸ ಮಾಡುತ್ತಿದ್ದಿತೊ ಇಲ್ಲವೊ ಎಂಬುದು ಸಂದೇಹಕರವಾಗಿದೆ.

ಕಳೆದು ಬಜೇಟು (ಆದಾಯ ವೆಚ್ಚದ ಅಂದಾಜು ಪಟ್ಟಿ) ನಿರ್ಣಯದ ಸಮಯದಲ್ಲಿಯೂ, ಆ ಮೇಲಿನ ಅಧಿವೇಶನಗಳಲ್ಲಿಯೂ ಅಲ್ಲಿನ ಸ್ವರಾಜ್ಯಪಕ್ಷವು ರಿಸ್ಪೋನ್ಸಿವ್ ಕೊ-ಒಪರೇಶನನ್ನು ಸಾಧಿಸಿದೆಯಲ್ಲದೆ ಕೌನ್ಸಿಲ್ ತಡೆ (obstruction)ಯನ್ನು ಸಾಧಿಸಿದಂತೆ ತೋರುವುದಿಲ್ಲ.

ಕೌನ್ಸಿಲ್‌ನೊಳಗಿನ ಸ್ವರಾಜ್ಯಪಕ್ಷದ ಈ ವಾತಾವರಣವನ್ನು ತಿಳಿದರೆ ಮಿ। ತಾಂಬೆಯವರ ಎಕ್ಸಿಕ್ಯುಟಿವ್ ಕೌನ್ಸಿಲರ್ ಪದವಿ ಸ್ವೀಕಾರದ ಪೂರ್ಣ ವಿವರವು ತಿಳಿಯದಿರದು. ಮಿ। ತಾಂಬೆಯವರು ಈ ಕಾರ್ಯದ ಮೂಲಕ ಎಷ್ಟು ತಪ್ಪು ಮಾಡಿರುವರೊ, ಅಲ್ಲಿನ ಸ್ವರಾಜ್ಯಪಕ್ಷವಾದರೂ ಅಷ್ಟೇ ತಪ್ಪುಮಾಡಿದೆಯೆಂದು ಈ ಎಲ್ಲಾ ಅನುಭವದಿಂದ ತಿಳಿಯಬೇಕಾಗುವುದು.

ಮತ್ತು ಮರಾಠಿ ಪ್ರಾಂತ್ಯದಲ್ಲಿ ಮುಖ್ಯವಾಗಿ ಅಲ್ಲಿನ ಮುಖಂಡರಲ್ಲಿ ಪ್ರಚಲಿತವಿರುವ ರಿಸ್ಪೋನ್ಸಿವ್ ಕೊ-ಒಪರೇಶನಿನ ಧೋರಣವು ಅಪಾಯಕರವೂ, ಅಹಿತಕರವೂ ಆಗಿದೆಯೆಂದು ನಾವು ಇಲ್ಲಿ ಸೂಚಿಸದಿರಲಾರೆವು. ರಿಸ್ಪೋನ್ಸಿವ್ ಕೊ-ಒಪರೇಶನಿಗೂ, ಲಿಬರಲ್ ಪಕ್ಷದ ಧೋರಣಕ್ಕೂ ಹೆಚ್ಚು ಅಂತರವಿಲ್ಲ. ಅಂತರವೆಂದರೆ ಬರೇ ಮಾನಸಿಕತೆ. ಮಾನಸಿಕತೆ ಬದಲಾಗುವುದಕ್ಕೂ ಕಷ್ಟವಿಲ್ಲ. ಈ ಪರಿಸ್ಥಿತಿಯಲ್ಲಿ ರಿಸ್ಪೋನ್ಸಿವ್ ಕೊ-ಒಪರೇಶನಿಗಿಂತಲೂ ಲಿಬರಲ್ ಧ್ಯೇಯವನ್ನೆ ಘಟ್ಟಿಮಾಡಿದರೆ ಉತ್ತಮವೆಂದು ಸೂಚಿಸಬೇಕಾಗುವುದು.

ಮಿ। ತಾಂಬೆಯವರ ಈ ಮತಾಂತರದೊಡನೆ, ಮಿ। ಅಬ್ದುಲ್ಲಾ ಸುಹ್ರವರ್ದಿಯವರ ನೆನಪು ಮಾಡದಿರಲಾರೆವು. ಇವರು ಒಂದು ಬಾರಿ ಬಂಗಾಳ ಸ್ವರಾಜ್ಯಪಕ್ಷದ ಮೆಂಬರರಾಗಿದ್ದರು. ಸ್ವರಾಜ್ಯಪಕ್ಷದ ಪರವಾಗಿ ಲೆಜಿಸ್ಲೇಟಿವ್ ಕೌನ್ಸಿಲಿಗೆ ಚುನಾಯಿಸಲ್ಪಟ್ಟಿದ್ದರು. ಕೆಲವು ತಿಂಗಳ ಹಿಂದೆ ಕೌನ್ಸಿಲಿಗೆ ಚುನಾಯಿಸಲ್ಪಟ್ಟಿದ್ದರು. ಕೆಲವು ತಿಂಗಳ ಹಿಂದೆ ಬಂಗಾಳ ಕೌನ್ಸಿಲಿನ ಹಿಂದಿನ ಅಧ್ಯಕ್ಷರು ನಿವೃತ್ತರಾಗಿ, ಹೊಸ ಅಧ್ಯಕ್ಷರು ಚುನಾಯಿಸಲ್ಪಡಬೇಕಾಗಿದ್ದಿತು, ಸ್ವರಾಜ್ಯ ಪಕ್ಷವು ಮಿ। ಸುಹ್ರವರ್ದಿಯವರನ್ನು ತಮ್ಮ ಕಡೆಯಿಂದ ಉಮೇದ್ವಾರರಾಗಿ ನಿಲ್ಲಿಸಿದರು. ಆದರೆ ಸ್ವರಾಜ್ಯ ಪಕ್ಷದ ಬೆಂಬಲವೇ ಸಾಲದೆ ಈ ಮಹಾತ್ಮರು ಗವರ್ನರರ ಬೆಂಬಲವನ್ನು ಕೂಡ ಕೋರಲು ಪ್ರಯತ್ನಿಸಿದರು. ಸ್ವರಾಜ್ಯಪಕ್ಷವು ಸರಕಾರಕ್ಕೆ ವಿರೋಧವಾಗಿದ್ದು, ಚುನಾವಣೆಗೆ ಸರಕಾರ ಸಹಾಯ ಕೇಳುವುದು ಸಮಂಜಸವಲ್ಲವೆಂದು ಮಹಾತ್ಮಾ ಗಾಂಧಿಯವರು ಸೂಚಿಸಿದಾಗ, ಅವರು ತಮ್ಮ ತಪ್ಪನ್ನು ತಿಳಿದುಕೊಳ್ಳುವುದರ ಬದಲಾಗಿ, ಪಕ್ಷದಿಂದ ರಾಜಿಕೊಟ್ಟರು. ಮಹಾತ್ಮರು ಹೀಗೆ ಹೇಳುವ ಮೊದಲೆ ಚುನಾವಣೆ ನಡೆದು ಹೋಗಿತ್ತು; ಮತ್ತು ಸ್ವರಾಜ್ಯ ಪಕ್ಷಕ್ಕೆ ಬಹುಮತವಿಲ್ಲದುದರಿಂದ ಆರಿಸಲ್ಪಡಲಿಲ್ಲ. ಆರಿಸಲ್ಪಟ್ಟುದಾದರೆ ಇವರು ತಾಂಬೆಯವರಿಗೆ ಉತ್ತಮ ಮೇಲ್ಪಂಕ್ತಿ ಆಗುತ್ತಿದ್ದರೊ ಏನೋ!

ಸ್ವರಾಜ್ಯಪಕ್ಷದ ದಳದಲ್ಲಿ ಆಗಾಗ ಆಗುತ್ತಿದ್ದ ವಿಚ್ಛೇದಗಳಲ್ಲಿ ಇವು ಪ್ರಮುಖವಾದುವಾಗಿವೆ. ಆಗಾಗ ಆಯಾಯ ಕಡೆಗಳಲ್ಲಿ ಇಂತಹ ಘಟನೆಗಳು ಎಷ್ಟೊ ನಡೆಯುತ್ತಿವೆ, ಈ ವಿಷಯವಾಗಿ ದೇಶದ ಮೇಲೆ ನಿಜವಾಗಿ ಅಭಿಮಾನವಿದ್ದ, ಸ್ಥಳೀಕ ಸ್ವರಾಜ್ಯಪಕ್ಷದ ಮುಂದಾಳುಗಳು ಹೆಚ್ಚಿನ ಮುಂಜಾಗ್ರತೆಯನ್ನು ತೆಗೆದುಕೊಳ್ಳಬೇಕು. ಸ್ವರಾಜ್ಯಪಕ್ಷವು, ಸ್ವಾರ್ಥಿಗಳಾದ ಕೆಲವು ವ್ಯಕ್ತಿಗಳಿಗೆ ಸರಕಾರಿ ಘನತೆ ಮತ್ತು ಪದವಿಗಳಿಗೆತ್ತುವ ಏಣಿಯಾಗಿರದಂತೆ ನೋಡಿಕೊಳ್ಳುವುದು ಪ್ರತಿ ಸ್ಥಳೀಕ ಪಕ್ಷಗಳ ಕರ್ತವ್ಯವಿದೆ.

ಸ್ವರಾಜ್ಯ ಪಕ್ಷದ ಪರವಾಗಿ ಬೇರೆ ಬೇರೆ ಚುನಾವಣೆಗಳಿಗೆ ಉಮೇದ್ವಾರರನ್ನು ನಿಲ್ಲಿಸುವಾಗ ಈ ಕೆಳಗಿನ ವಿಷಯಗಳು ಪ್ರಾಮುಖ್ಯತೆಯನ್ನು ಹೊಂದುತ್ತವೆ.

ಪಕ್ಷವು ಸರಕಾರಕ್ಕೆ ವಿರೋಧವಾದುದರಿಂದ ಊರಿನ ಮುಖಂಡರು ಯಾರೂ ಅದನ್ನು ಸೇರುವುದಿಲ್ಲವಾದುದರಿಂದ, ಚುನಾವಣೆ ಸಮಯದಲ್ಲಿ ಜನರ ಅಭಿಮಾನವಿರುತ್ತದೆ. ಚುನಾವಣೆ ಸಮಯದಲ್ಲಿ ಸ್ವರಾಜ್ಯಪಕ್ಷವು ಹೆಚ್ಚು ಮತಗಳನ್ನು ಸಂಗ್ರಹಿಸಬಲ್ಲುದೆಂದು ಊರಿನ ಮುಖಂಡರು ತಿಳಿದರೆ ಅವರು ಕೂಡಲೆ ತಾವು ಸ್ವರಾಜ್ಯಪಕ್ಷವನ್ನು ಸೇರುವೆವಾಗಿ ಹೇಳುವರು. ಸ್ವರಾಜ್ಯಪಕ್ಷದ ಸಂಘಟನಾಕರ್ತರಾದರೂ ಇಂತಹ ಮುಖಂಡರು ಸೇರುವರೆಂಬ ಅಭಿಮಾನದಿಂದ ಅವರನ್ನು ಸಂತೋಷದಿಂದ ಸೇರಿಸಿಕೊಳ್ಳುವರು. ಅದರ ಮುಂದಿನ ಪರಿಣಾಮವು ಸ್ಪಷ್ಟವಿದೆ. ಸ್ವರಾಜ್ಯಪಕ್ಷದ ಶಿಸ್ತು ಸಾಧ್ಯವಾಗುವುದೇ ಇಲ್ಲ.

ಈ ರೀತಿಯಲ್ಲಿ ಚುನಾವಣೆಗಳು ಎಷ್ಟೋ ಕಡೆಗಳಲ್ಲಿ ಆಗಿ ಹೋಗುತ್ತಿವೆ. ಲೋಕಲ್ ಬೋರ್ಡು ಮುನಿಸಿಪಾಲಿಟಿಗಳಲ್ಲಿ ಇಂತಹ ಚುನಾವಣೆಗಳು ಹೆಚ್ಚು. ಒಂದೊಂದು ಬಾರಿ ಖದ್ದರ ಬಟ್ಟೆ ಬಿಟ್ಟು ಊರಿನ ಗಿರಣಿ ವಸ್ತ್ರ ಕೂಡ ಉಡದೆ ತಾಜಾ ಮೆಂಚೆಸ್ಟರ ಗಿರಣಿಗಳ ಪೋಷಕ (patrons)ರಾಗಿ ಮೆರೆವವರು ಬರೇ ಯಾವಾಗಲೊ ಒಂದು ಬಾರಿ ಕೊಂಗ್ರೆಸ್ ನೋಡಿರುವರೆಂಬ ಶಿಫಾರಸಿನಿಂದಲೇ ಚುನಾವಣೆಗೆ ಸ್ವರಾಜ್ಯಪಕ್ಷದ ಪರವಾಗಿ ನೇಮಿಸಲ್ಪಡುವರು.

ಇಂತಹ ಚುನಾವಣೆಗಳಿಂದ ಸ್ವರಾಜ್ಯ ಪಕ್ಷದ ಬಲವು ಕಡಿಮೆಯಾಗುವುದು; ಅದರ ಧ್ಯೇಯವು ತಪ್ಪುವುದು; ಅದರ ಗೌರವವು ಅಳಿಯುವುದು. ಅಂತೆ ಆಗಗೊಡದಂತೆ ನೋಡುವುದು ಸ್ವರಾಜ್ಯಪಕ್ಷದ ಸಂಘಟನಾಕರ್ತರ ಕರ್ತವ್ಯವಿದೆ.

ಮಿ। ತಾಂಬೆಯವರ ವರ್ತನವು ವೈಯಕ್ತಿಕವಿದ್ದರೂ, ಅದನ್ನು ಸ್ವರಾಜ್ಯಪಕ್ಷದವರು ವಿರೋಧಿಸುವವರಾದರೂ, ಅದರ ಪರಿಣಾಮವೂ, ಅದರ ಜವಾಬ್ದಾರಿಯೂ ಸ್ವರಾಜ್ಯಪಕ್ಷದ ಮೇಲೆ ಇದ್ದೇ ಇದೆ. ಅದರಿಂದ ಸ್ವರಾಜ್ಯಪಕ್ಷದ ಸದಸ್ಯರನ್ನು ಸಂಶಯದೃಷ್ಟಿಯಿಂದ ಜನರು ನೋಡಿಕೊಳ್ಳುವಂತಾಗುವುದು. ಅದುದರಿಂದ ಈ ಪರಿಣಾಮವು ಬೆಳೆಯದಂತೆ ಪಕ್ಷದ ಶಿಸ್ತನ್ನು ಗಟ್ಟಿಮಾಡಿ ಸ್ವರಾಜ್ಯಪಕ್ಷವು ಇನ್ನಷ್ಟು ಜೀವನದಿಂದ ಮುಂದೆ ಬರುವುದು ಅಗತ್ಯ.

ಸ್ವರಾಜ್ಯಪಕ್ಷದವನೊಬ್ಬ.

ಯುರೋಪಿನ ರಾಜಕೀಯ ವಾತಾವರಣ.

ಮಹಾ ಯುದ್ಧದ ನಂತರ ಯುರೋಪ ಖಂಡವು ಶಾಂತತೆಯನ್ನು ತಳೆಯುವುದೆಂದು ಆಶಿಸಿದ್ದರೂ, ಕಾರ್ಯತಃ ಅದು ಈ ವರೆಗೂ, ಯುದ್ಧದ ತುಮುಲ ಧ್ವನಿಯಿಂದ ಕೂಡಿದ್ದು, ಮುಂದಿನ ಯುದ್ಧದ ಬೀಜವನ್ನು ಬಿತ್ತುವುದರಲ್ಲಿಯೇ ಇದೆ. ರಾಷ್ಟ್ರ ರಾಷ್ಟ್ರಗಳೊಳಗಿನ ಸ್ಪರ್ಧೆ, ರಾಜಕೀಯ ಸೂತ್ರಧಾರಿಗಳು ರಾಷ್ಟ್ರಗಳ ಹೆಸರಿನಲ್ಲಿ ತೋರುವ ಸ್ವಾರ್ಥ, ಇವುಗಳಿಂದ ಶಾಂತವಾಗಿ ಸಂಸಾರವನ್ನು ನಡೆಸಲೆಳಸುವ ಮಿಲಿಯಾವಧಿ ಸಾಮಾನ್ಯರ ಗೃಹಸುಖವೂ, ಮನೋಶಾಂತತೆಯೂ ವಿಚಲಿತವಾಗುತ್ತ ಇರುತ್ತಿದೆ.

ಮೊರೊಕ್ಕೊ ಯುದ್ಧ.

ಯುರೋಪಿನ ಪ್ರಕೃತದ ಪರಿಸ್ಥಿತಿಯನ್ನು ನಾವು ಇಲ್ಲಿ ಸಮಾಲೋಚಿಸುವ. ಈಗ ಸದ್ಯಕ್ಕೆ ಸ್ಪಷ್ಟವಾಗಿ ತೋರುವುದು ಮಾರೊಕ್ಕೊ ದೇಶದೊಳಗಿನ ಸ್ಪೈಯಿನ್ ಮತ್ತು ಫ್ರಾನ್ಸ ರಾಜ್ಯಗಳ ಸುಗ್ಗಾಟ. ಮೊರೊಕ್ಕೊ ದೇಶವು ಇತರ ಕಪ್ಪು ಜನರ ದೇಶಗಳಂತೆ ಯುರೋಪಿಯ ರಾಷ್ಟ್ರಗಳೊಳಗೆ ಹಂಚಲ್ಪಟ್ಟದ್ದಿತು. ಮುಖ್ಯವಾಗಿ ಸ್ಪೈಯಿನಿಗೆ ಅಧಿಕಾಂಶವೂ, ಫ್ರಾನ್ಸಿಗೆ ಸ್ವಲ್ಪ ಅಂಶವೂ ಇದ್ದಿತು. ಸ್ಪೈಯಿನ್ ದೇಶವು ಮೊರೊಕ್ಕೊವನ್ನು ಚೆನ್ನಾಗಿ ಆಳುತ್ತಿರಲಿಲ್ಲ. ಅವರೊಳಗೆ ಸ್ವಲ್ಪ ಮುಂದಾಗಿ ಬಂದಿದ್ದ ಅಬ್ದುಲ್ ಕರೀಮ್ ಎಂಬ ರಿಫ್ ಪ್ರಾಂತದವನನ್ನು ಅವರು ಸೆರೆಯಲ್ಲಿಟ್ಟಿದ್ದರು. ಅವನು ಸೆರೆಯಿಂದ ತಪ್ಪಿಸಿ ತನ್ನ ಪ್ರಾಂತಕ್ಕೆ ಬಂದು, ಜನರನ್ನು ಸ್ವಾತಂತ್ರ್ಯಕ್ಕೆ ಹುರಿದುಂಬಿಸಿ, ತಾನವರ ನಾಯಕನಾಗಿ ಸ್ಪೈಯಿನ್‌ನವರೊಡನೆ ಯುದ್ಧಮಾಡಿ ಅವರನ್ನು ಸೋಲಿಸಿದನು. ಇತ್ತ ಫ್ರಾನ್ಸ ದೇಶದವರು ಅವನು ಸಾಮಾನ್ಯನೆಂದೆಣಿಸಿ, ಈ ಯುದ್ಧದ ಸಮಯದಲ್ಲಿ ತಾನೂ ಲಾಭಮಾಡಿಕೊಳ್ಳಬೇಕೆಂದು, ಅಬ್ದುಲ್ ಕರೀಮನ ಪ್ರಾಂತದ ಕಡೆಗೆ ತನ್ನ ಎಲ್ಲೆಯನ್ನು ವಿಸ್ತರಿಸಲಾರಂಭಿಸಿದರು. ಅಬ್ದುಲ್ ಕರೀಮನು ಫ್ರಾನ್ಸಿನ ಮೇಲೂ ಯುದ್ಧ ಮಾಡಿ ಅವರನ್ನೂ ಸೋಲಿಸುತ್ತ ಬಂದನು. ಇದು ಮೂರು ತಿಂಗಳ ಹಿಂದಿನ ಮಾತು. ಸ್ಪೈಯಿನ್ ಮತ್ತು ಫ್ರಾನ್ಸ ದೇಶದವರು, ತಾವು ಆಧುನಿಕ ಉಪಕರಣಗಳಿದ್ದವರು ಹೀಗೆ ಸೋಲುವುದನ್ನು ಕಂಡು, ಕಪ್ಪು ಜನರಿಗೆ ಬುದ್ಧಿ ಕಲಿಸಬೇಕೆಂದು ಮಹಾ ಯುದ್ಧಕ್ಕೆ ಸನ್ನಾಹ ಮಾಡಿದಂತೆ ಇದಕ್ಕೂ ಸಂಗ್ರಹಮಾಡಿ ಫ್ರೆಂಚರು ತಮ್ಮ ವತಿಯಿಂದಲೂ, ಸ್ಪೈಯಿನ್ ದೇಶದವರು ತಮ್ಮ ಸ್ಥಳದಿಂದಲೂ ದಂಡೆತ್ತಿ ಬಂದರು. ಆದರೆ ಅಬ್ದುಲ್ ಕರೀಮನು ಸೈನಿಕರು ಬಹಳ ವೀರತೆಯಿಂದ ಕಾದುತ್ತಿರುವರು. ಅವರು ಅಲ್ಪಸಂಖ್ಯಾಕರಾಗಿದ್ದರೂ, ಈ ಎರಡು ಪ್ರಬಲ ಜನಾಂಗಗಳ ಒಟ್ಟಾದ ಬಲವನ್ನು ವಿರೋಧಿಸುವುದನ್ನು ನೋಡಿದ ಎಲ್ಲರೂ ಅವರನ್ನು ಪ್ರಶಂಸಿಸುತ್ತಾರೆ. ಈಗ ಮಳೆ ಪ್ರಾರಂಭವಾಗಿ ಯುದ್ಧಕ್ಕೆ ತಡೆ ಬಂದೊದಗಿದೆ. ಈ ಕಾರಣದಿಂದ ಅಬ್ದುಲ್ ಕರೀಮನಿಗೆ ವಿಶ್ರಾಂತಿ ಮತ್ತು ಸಂಗ್ರಹಕ್ಕೆ ಸಮಯವು ಸಿಕ್ಕುವಂತಿದೆ. ಫ್ರೆಂಚ ಜನರ ಬಹು ಸಂಖ್ಯಾಕ ಸೈನ್ಯ, ವಿಮಾನ, ಯುದ್ಧದ ನೆಲನಾವೆ, ಫಿರಂಗಿ ಮುಂತಾದ ಅತೀ ಆಧುನಿಕ ಉಪಕರಣಗಳ ಮುಂದೆ ಅಬ್ದುಲ್ ಕರೀಮನು ಈ ವರೆಗೆ ಕಾದಾಡಿದ ರೀತಿ ನೋಡಿದರೆ, ಮತ್ತು ಅವನ ದೇಶವು ಪರ್ವತಗಳಿಂದ ತುಂಬಿ ಬಿಳಿ ಜನರಿಗೆ ಕಷ್ಟಸಾಧ್ಯವಾಗುವುದು ನೋಡಿದರೆ ಅವನೇ ಈ ಯುದ್ಧದಲ್ಲಿ ಗೆಲ್ಲಬಹುದೆಂದು ತೋರುತ್ತಿದೆ. ಪತ್ರಿಕೆಗಳಲ್ಲಿ ಫ್ರಾನ್ಸ ಸ್ಪೈಯಿನ್ ದೇಶಗಳ ವಿಜಯವಾರ್ತೆಗಳು ಬರುತ್ತಿರುವುವಾದರೂ ಅವನ್ನು ಪೂರ್ಣವಾಗಿ ನಂಬಲಿಕ್ಕೆ ಸಾಧ್ಯವಿಲ್ಲ. ಅಬ್ದುಲ್ ಕರೀಮನಿಗೆ ಸೈನ್ಯ ನಿರ್ಮಾಣದಲ್ಲಿಯೂ, ಸೈನ್ಯ ಸಂಗ್ರಹದಲ್ಲಿಯೂ ಜರ್ಮನರು ಸಹಾಯಮಾಡುತ್ತಿರುವರು.

ಫ್ರಾನ್ಸ ಮತ್ತು ಸೀರಿಯಾ.

ಫ್ರಾನ್ಸಿಗೆ ಇದೊಂದೇ ಅವಘಡವಲ್ಲದೆ, ಅವರಿಗೆ ಯುದ್ಧದ ಜಯಲಾಭವಾಗಿ ಸಿಕ್ಕಿದ ಸಿರಿಯಾ ದೇಶದಲ್ಲೂ ಕಷ್ಟಗಳು ಪ್ರಾಪ್ತವಾಗಿವೆ. ಅಲ್ಲಿನ ಜನರು ಡ್ರುಸರೆಂಬವರು ಅವರ ಮೇಲೆದ್ದಿರುವರು. ಈ ಡ್ರುಸರೆಂಬವರ ದಳವನ್ನು ಸೋಲಿಸಲು ಫ್ರೆಂಚರಿಂದ ಇನ್ನೂ ಸಾಧ್ಯವಾಗಿಲ್ಲ.

ಫ್ರಾನ್ಸಿನ ಸಾಲ.

ಪರಜನರ ಸ್ವಾತಂತ್ರ್ಯವನ್ನು ಅಪಹರಿಸಿ ಅವರ ಮೇಲೆ ಯುದ್ಧ ನಡಿಸಿ ಈ ರೀತಿಯಲ್ಲಿ ಮಿಲಿಯಗಟ್ಟಲೆ ಖರ್ಚು ಮಾಡಲಿಕ್ಕೆ ಸಿದ್ಧರಿದ್ದರೂ ಫ್ರೆಂಚರು ತಮ್ಮ ಸಾಲ ತೀರಿಸಲಿಕ್ಕೆ ಮಾತ್ರ ಮನಸ್ಸು ಮಾಡುವುದಿಲ್ಲ. ಫ್ರೆಂಚರಿಂದ ಅಮೇರಿಕಕ್ಕೆ ಬಹಳ ಸಾಲ ಸಲ್ಲಲಿಕ್ಕಿದೆ. ಆದರೆ ತಾವು ಕೈಲಾಗದವರಾದುದರಿಂದ ತಮಗೆ ಸಾಲದಲ್ಲಿ ರಿಯಾಯತಿ ಕೊಡಬೇಕು ಎಂಬದಾಗಿ ಹೇಳಿಕೊಳ್ಳುತ್ತಾರೆ. ಫ್ರೆಂಚ ಸರಕಾರದ ಫೈನೆನ್ಸ ಮೆಂಬರರಾದ ಮೊ। ಕೈಲೊರವರು ಅಮೇರಿಕಕ್ಕೆ ಹೋಗಿ ಸಾಲದಲ್ಲಿ ರಿಯಾಯತಿ ಹೊಂದಲು ಪ್ರಯತ್ನಿಸಿದರು. ಪರಂತು ಅಮೇರಿಕಕ್ಕೆ ಫ್ರೆಂಚರ ಈ ಮೊದಲ ವರ್ತನದಿಂದ, ಫ್ರಾನ್ಸಿನ ಮೇಲೆ ವಿಶ್ವಾಸ ಶ್ರದ್ಧೆ ಇರದಿರುವುದರಿಂದ, ಅವರು ಮೊ। ಕೈಲೊ ಕೇಳುವಷ್ಟು ರಿಯಾಯತಿ ಕೊಡಲೊಪ್ಪಲಿಲ್ಲ. ಫ್ರಾನ್ಸ ದೇಶದವರು ಜರ್ಮನಿಯೊಡನೆ ಇಲ್ಲವಾದರೂ, ಅವರನ್ನು ಬೆದರಿಸಿ ಧನವನ್ನು ಹೀರಲು ಹಿಂಜರಿಯುವದಿಲ್ಲವಾದರೂ ಅಮೇರಿಕದ ಮಟ್ಟಿಗೆ ಮಾತ್ರ "ನಮ್ಮೊಡನೆ ಇದ್ದರಲ್ಲವೆ ಕೊಡುವುದು! ನಾವು ಕೊಡದಿದ್ದರೆ ಮಾಡುವುದೇನು" ಎಂಬಿತ್ಯಾದಿ ಅರ್ಥವಾಗುವ ರೀತಿಯಲ್ಲಿ ಹೇಳುತ್ತಿದೆ.

ಇಂಗ್ಲೆಂಡು.

ಇಂಗ್ಲೆಂಡಿನ ರಾಜಕೀಯ ಧೋರಣವಾದರೂ ಚೆನ್ನಾಗಿ ನಡೆಯುವಂತೆ ತೋರುವುದಿಲ್ಲ. ಇಂಗ್ಲೆಂಡಿನಲ್ಲಿ ಕೊಮ್ಯುನಿಸ್ಟರೆಂಬ ಬೊಲ್ಶೆವಿಕ್ ಪಕ್ಷದವರು ಪ್ರಬಲವಾಗುತ್ತಾ ಬರುತ್ತಿದ್ದಾರೆ. ಇದರ ಚಿಹ್ನೆಯು ಮಿ। ಸಕ್ಲತವಾಲಾ ಮತ್ತು ಮಿ। ಕುಕ್ ಇವರಿಂದ ತಿಳಿದು ಬರುತ್ತದೆ. ಅಲ್ಲದೆ, ಮೊದಲು ಇಟೇಲಿ ದೇಶದಲ್ಲಿ ಆರಂಭವಾದ ಫೆಸಿಸ್ಟ ಎಂದರೆ ಶ್ರೀಮಂತರ ಅಧಿಕಾರವನ್ನು ರಕ್ಷಿಸುವ ಸಂಘವು ಇಂಗ್ಲೆಂಡಿನಲ್ಲಿಯೂ ಉಂಟಾದುದೂ ಕೊಮುನಿಸ್ಟ ಅಂದರೆ ಕೂಲಿಗಳ ಅಧಿಕಾರವನ್ನು ರಕ್ಷಿಸುವ ಪಕ್ಷದ ಪ್ರಾಬಲ್ಯವನ್ನು ಸೂಚಿಸುತ್ತಿದೆ. ಅಲ್ಲದೆ, ಮಿ। ಸಕ್ಲತವಾಲಾ ಇವರು, ಇಡೀ ಲೋಕದ ಪಾರ್ಲಿಮೆಂಟ ಸಭೆಗೆ, ಇಂಗ್ಲೀಷ ಪಾರ್ಲಿಮೆಂಟ ಪರವಾಗಿ ಹೊರಟಾಗ ಅಮೇರಿಕದವರು, ಇವರನ್ನು ತಮ್ಮ ದೇಶದಲ್ಲಿ ಬರಬಾರದೆಂದು ನಿಷೇಧಿಸಿದುದೂ, ಕೊಮ್ಯುನಿಸ್ಟ ಪಕ್ಷವು ಇಂಗ್ಲೆಂಡಿನಲ್ಲಿ ಅಲಕ್ಷಿಸಲ್ಪಡುವಷ್ಟು ಚಿಕ್ಕದಿಲ್ಲವೆಂದು ತೋರಿಸುತ್ತಿದೆ.

ಇಂಗ್ಲೀಷರೂ ತುರ್ಕಿಯೂ.

ಇಂಗ್ಲಿಷರಿಗೂ ತುರ್ಕಿಗೂ ಲೌಸಾನೆಯಲ್ಲಿ ಒಪ್ಪಂದವಾದಾಗ ಮೊಸಲ್ ಪ್ರಾಂತ್ಯವು ಯಾರನ್ನು ಸೇರಬೇಕೆಂಬ ಪ್ರಶ್ನೆಯನ್ನು ಅದರಲ್ಲಿ ನಿಶ್ಚಯಿಸದೆ, ಅದನ್ನು ಲೀಗ್ ಒಫ್ ನೇಶನ್ಸ (League of Nations) ಅಂತರಾಷ್ಟ್ರ ಸಮ್ಮೇಲನದ ಅಭಿಪ್ರಾಯಕ್ಕಾಗಿ ಬಾಕಿ ಇಟ್ಟಿದ್ದರು. ಇಂಗ್ಲೀಷರು ಕಪ್ಪು ಜನರ ಹಿತವನ್ನೇ ಬಯಸುವವರಾದರೂ, ಅರೇಬಿಯನ್ ಡೆಸರ್ಟ, ಸಹಾರಾ ಡೆಸರ್ಟ ಮುಂತಾದ ಪ್ರದೇಶಗಳ ಜನರನ್ನಾಗಲೀ ಅವರು ಬಯಸುವುದಿಲ್ಲ. ತುಂಬಾ ಚಿಮಿಣಿ ಎಣ್ಣೆ ಇದ್ದು, ಕಂಪೆನಿ ಹೂಡಿದರೆ ಶೇಕಡಾ ೨೦೦-೪೦೦ ಲಾಭವೂ, ಅಲ್ಲದೆ ಇತರ ವ್ಯಾಪಾರವೂ ಹೆಚ್ಚು ಮಾಡಬಹುದಾದ ದೇಶಗಳ ಜನರ ಹಿತವೇ ಅವರ ಆ ಮೃದು ಹೃದಯದಲ್ಲಿ ಸ್ಥಾನವನ್ನು ಹೊಂದುವುದು. ತುರ್ಕಿಯವರದಾದ ಮೊಸುಲ್ ರಾಜ್ಯವನ್ನು ಇಂಗ್ಲೆಂಡು ತಾನೇ ಇಟ್ಟುಕೊಳ್ಳಬೇಕೆಂದು ಇಚ್ಛಿಸುತ್ತಿದೆ. ಲೀಗ್ ಒಫ್ ನೇಶನ್ಸಿಗೆ ತುರ್ಕಿಯ ನ್ಯಾಯವು ಮನೋಗತವಾದರೂ, ಅಧಿಕಾರ ಸಂಪನ್ನರಾದ ಇಂಗ್ಲೀಷರ ಮಾತನ್ನು ಮೀರಲಾರರು. ಹಿಂದೊಂದು ಬಾರಿ ಶ್ರೀ ರವೀಂದ್ರನಾಥ ಠಾಕೂರರು ಈ ಲೀಗನ್ನು ಲೀಗ್ ಒಫ್ ರೊಬರ್ಸ್ ಅಂದರೆ ಡಕಾಯಿತರ ಸಮ್ಮೇಲನವೆಂದು ಕರೆದಿದ್ದರು. ಅದು ಈ ಹೆಸರನ್ನು ಸಾರ್ಥಕಮಾಡಿಕೊಳ್ಳುತ್ತಿದೆ. ಮೊಸುಲನ್ನು ತುರ್ಕಿಯಿಂದ ಅಪಹರಿಸಿ ಇಂಗ್ಲೀಷರಿಗೆ ಕೊಡುವ ಯೋಚನೆಯಲ್ಲಿದೆ. ತುರ್ಕಿಯು ತನಗೆ ಲೀಗಿನ ನ್ಯಾಯ ಸಿಕ್ಕದೆಂದು ತನ್ನ ಸೈನ್ಯವನ್ನು ಸಜ್ಜುಗೊಳಿಸುತ್ತಿದೆ. ಯುದ್ಧವಾಗುವದೊ ಎಂಬ ಭಯವಿದೆ.

ಲೊಕಾರ್ನೊ ಕೊನ್ಫೆರೆನ್ಸಿನಲ್ಲಿ ಜರ್ಮನಿ.

ಮಹಾಯುದ್ಧದಲ್ಲಿ ಪರಾಜಯ ಹೊಂದಿದುದಾದರೂ ಜರ್ಮನಿಯು ತನ್ನ ನಿಜ ಬಲವನ್ನು ಯಾವಾಗಲೂ ತಾಳಬಲ್ಲುದೆಂಬ ಭಯವು ಫ್ರಾನ್ಸ ದೇಶಕ್ಕೆ ಇದ್ದೇ ಇದೆ. ಅದರ ಬಲವನ್ನು ನಿರ್ಮೂಲಿಸಲು ಫ್ರಾನ್ಸ ದೇಶವು ಅನೇಕ ವಿಧಗಳ ಮೂಲಕ ಪ್ರಯತ್ನಿಸಿಯದೆ. ಜರ್ಮನಿಗೆ ದೊಡ್ಡ ನೌಕಾ, ವಿಮಾನ, ಫಿರಂಗಿ ಇತ್ಯಾದಿಗಳನ್ನು ಕಟ್ಟಿಸಲಿಕ್ಕೆ ಇಲ್ಲ. ಈ ಸೈನ್ಯ ಕೂಡಿಸಲಿಕ್ಕೆ ಇಲ್ಲ. ಈ ರೀತಿ ನಿರ್ಬಂಧಗಳಿದ್ದರೂ ಜರ್ಮನಿಯು ಸಾಮಾನ್ಯ ರಾಷ್ಟ್ರವಾಗಿಲ್ಲ. ಆದುದರಿಂದಲೇ ಅದನ್ನು ಒಲಿಸಿ ಸಂಧಿಯನ್ನು ಸ್ಥಾಪಿಸಿ, ಸಂಬಂಧವನ್ನು ಕಲ್ಪಿಸುವುದು ಅಗತ್ಯವೆಂದು ಫ್ರಾನ್ಸಿಗೂ ಇಂಗ್ಲಿಷರಿಗೂ ತಿಳಿದು ಅದರೊಡನೆ ಒಂದು fact ಎಂಬ ಸಂಧಿಯನ್ನು ಕಲ್ಪಿಸಲು, ಲೊಕಾರ್ನೊದಲ್ಲಿ ಫ್ರಾನ್ಸ, ಇಂಗ್ಲೆಂಡ, ಜರ್ಮನಿ, ಇಟೆಲಿ, ಮುಂತಾದ ರಾಷ್ಟ್ರಗಳ ಪರಿಷತ್ತು ಕೂಡಲ್ಪಟ್ಟಿದೆ. ಆದರೆ ಈ ಸಂಧಿಯಲ್ಲಿ ಜರ್ಮನಿಯು ತಾನು ವರ್ಸೆಲೆ ಸಂಧಿ (ಮಹಾಯುದ್ಧದ ಸಂಧಿ)ಯ ಮೂಲಕ ಕಳಕೊಂಡ ಅಧಿಕಾರಗಳನ್ನು ಪುನಃ ಪಡೆಯಲು ಪ್ರಯತ್ನಿಸುತ್ತಿದೆಯಲ್ಲದೆ, ತಾನು ಅಧೀನನೆಂದು ಫ್ರಾನ್ಸಿನ ಮನಸ್ಸಿನಲ್ಲಿ ಉಂಟಾಗುವ ಭಾವನೆಯನ್ನೂ ಅಳಿಸಲು ಪ್ರಯತ್ನಿಸುತ್ತಿದೆ. ಲೊಕಾರ್ನೋದಲ್ಲಿ ಈ ಸಂಧಿಗಾಗಿ ಕೂಡಿರುವ ರಾಜಕೀಯ ಸೂತ್ರಧಾರಿಗಳು ಬಹಳ ಜಾಗರೂಕರಾಗಿರುವರು. ಸಂಧಿಯು ಒಡೆದು, ಯುದ್ಧಗಳೇನಾದರೂ ಆಗುವುದಾದರೆ, ಅವುಗಳೊಡನೆ, ಯುದ್ಧಗಳಲ್ಲಿ ಸೇರುವ ರಾಜ್ಯಗಳಲ್ಲಿ ಸಿವಿಲ್ ವೊರ್ ಎಂಬ ಅಂತಃ ಕಲಹಗಳು ಪ್ರಾಪ್ತವಾಗ ಬಹುದೆಂಬ ಭಯವು ಪ್ರತಿ ಒಬ್ಬರಿಗೂ ಇದೆ ಆದುದರಿಂದ ಎಲ್ಲರೂ ಒಳ್ಳೇ ಮನಸ್ಸಿನಿಂದ ಕೆಲಸಮಾಡುತ್ತಿರುವರು. ಲೊಕಾರ್ನೊ ಕೊನ್ಫರೆನ್ಸು ಕಾರ್ಯಕಾರಿಯಾಗಬಹುದೆಂಬ ಆಶೆ ಇದೆ.

ರಶ್ಯಾ.

ಇದೇ ಸಮಯದಲ್ಲಿ ರಶ್ಯಾ ದೇಶದ ಬೊಲ್ಶೆವಿಕ್ ಸರಕಾರದ ರಾಯಭಾರಿಯಾಗಿರುವ ಚಿಚೆರಿನ್‌ನು ಜರ್ಮನಿಯಲ್ಲಿ ಬಂದುಹೋದನು. ಇವನ ಆಗಮನಕ್ಕೂ ಜರ್ಮನಿಯ ಲೊಕಾರ್ನೊ ಪರಿಷತ್ತಿನ ಕೆಲಸಕ್ಕೂ ಸಂಬಂಧವಿದೆಯೆಂದು ಕೆಲವರು ಹೇಳುವರು. ರಶ್ಯಾಕ್ಕೂ ಜರ್ಮನಿಗೂ ಈ ಮೊದಲು ಸಂಧಿಯಾಗಿದೆ. ರಶ್ಯಾದ ಲೀಗ್ ಒಫ್ ನೇಶನ್ನಿನ ಸಂಬಂಧವು ಚೆನ್ನಾಗಿಲ್ಲ. ಜರ್ಮನಿಯು ಲೀಗ್ ಒಫ್ ನೇಶನ್ಸನ್ನು ಸೇರಿದರೆ, ಅದರ ಒಂದು ಕ್ರಮವು ರಶ್ಯಾ ಸರಕಾರಕ್ಕೆ ವಿರೋಧವಿರುವುದರಿಂದ ಜರ್ಮನಿಯು ಆ ಕ್ರಮವನ್ನು ಒಪ್ಪಿದರೆ ಈ ಮೊದಲ ಸಂಧಿಗೆ ವಿರೋಧವಾಗುವುದು. ಇದನ್ನು ಜರ್ಮನಿಗೆ ತೋರಿಸಿ, ಜರ್ಮನಿಯು ಲೀಗನ್ನು ಸೇರಬಾರದಾಗಿಯೂ, ಸೇರಿದರೆ ಆ ಕ್ರಮಕ್ಕೆ ಸಮ್ಮತವಿಲ್ಲವೆಂದು ಹೇಳಿ ಸೇರಬೇಕಾಗಿಯೂ ಚಿಚೆರಿನನು ಜರ್ಮನಿಯನ್ನು ಎಚ್ಚರಿಸಿರುವನು. ಚಿಚೆರಿನನ ಆಗಮನದಿಂದ ಜರ್ಮನ ಪ್ರತಿನಿಧಿಗಳ ಮೇಲೆ ಏನೊಂದು ಪರಿಣಾಮವಿರಬಹುದೆಂದು ಇಂಗ್ಲೆಂಡ್, ಫ್ರಾನ್ಸ ದೇಶಗಳಿಗೆ ಸಂಶಯವಿದೆ. ಚಿಚೆರಿನನು ಮೊಸ್ಕೊವಿಗೆ ಹಿಂದೆ ತೆರಳುವಾಗ ಅವನ ರಿಕಾರ್ಡು, ಹಣ, ವಸ್ತ್ರ ಇತ್ಯಾದಿ ಎಲ್ಲವನ್ನೂ ಯಾರೊ ರೈಲ್ ಗಾಡಿಯಿಂದ ಕದ್ದುಕೊಂಡಿರುವರಂತೆ. ಇದರ ಕಾರಣವು ರಾಜಕೀಯವಿರಬಹುದು, ಬರೇ ದುಡ್ಡಿನ ಆಶೆಯು ಕಳವಲ್ಲವೆಂದು ಊಹಿಸಲಾಗಿದೆ. ಪ್ರಾಯಶಃ ಈ ಕಳವು ಜರ್ಮನಿ ಮತ್ತೆ ರಶ್ಯಾಕ್ಕೆ ಸಂಬಂಧವಾದ ರಿಕಾರ್ಡನ್ನು ಕಾಣಲು ಮಾಡಿದ್ದಿರವಾಗಿರಬಹುದು.

ದಾನವನರ್ತನ.

(ದಕ್ಷಿಣಾಫ್ರಿಕದಲ್ಲಿ)

ಲೇಖಕ — ಕವಿ। ಲಕ್ಷ್ಮೀನಾರಾಯಣ ಪುಣಿಂಚಿತ್ತಾಯ.

ಸುಮಾರು ೫೦ ವರ್ಷಗಳ ಹಿಂದೆ ಕೆಲಸಕ್ಕೆ ಜನರಿಲ್ಲದೆ ಬಳಲುತ್ತಿದ್ದ ಆಫ್ರಿಕದ ಬಿಳಿಜನರು ಕಷ್ಟಜೀವಿಗಳಾದ ಭಾರತೀಯರನ್ನು ಕಳುಹಿಸಿಕೊಟ್ಟು, ತಮ್ಮನ್ನು ಉದ್ಧಾರಮಾಡಬೇಕೆಂದು ದೀನವಾಣಿಯಿಂದ ಇಂಡಿಯಾ ಸರಕಾರದೊಡನೆ ಬೇಡಿಕೊಂಡರು. ಅಂದಿನಿಂದ ಹಿಂದೀಯರನೇಕರು ಆ ದೂರ ದೇಶಕ್ಕೆ ಹೋಗಿ ತಮ್ಮ ಪರಿಶ್ರಮದಿಂದ ಅಲ್ಲಿಯ ನೇಟಾಲ ಪ್ರದೇಶವನ್ನು ಆಫ್ರಿಕದ ನಂದನವನವನ್ನಾಗಿ ಕಳೆಗೊಳಿಸಿದರು. ಹೀಗೆ—ಬಿಳೇಜನರ ಸರ್ವ ಸೌಕರ್ಯಗಳೂ ಸ್ಥಾಪಿತವಾದಮೇಲೆ—ಈಗ ಆ ಭಾರತೀಯರನ್ನು ಹೊರಗೆ ದೂಡಬೇಕೆಂದು ಅಲ್ಲಿಯ ಸರಕಾರದ ಪ್ರಯತ್ನವು ಉಗ್ರಗತಿಯಿಂದ ನಡೆಯುತ್ತಿದೆ.

ಹಿಂದೀಯರಿಗೆ—ಕೆಲಸಕ್ಕೆ ತಕ್ಕ ಸಂಬಳವಿಲ್ಲ; ಉಪಯುಕ್ತಾ ಇರುವುದಕ್ಕೆ ಯೋಗ್ಯ ವಸತಿಯಿಲ್ಲ. ವ್ಯವಸಾಯಕ್ಕೆ ವ್ಯವಸ್ಥೆಯಿಲ್ಲ. ಕೈಗಾರಿಕೆಗೆ ಆಸ್ಪದವಿಲ್ಲ. ಸರಕಾರದಲ್ಲಿ ಆಶ್ರಯವಿಲ್ಲ. ಸೂಕ್ಷ್ಮದಲ್ಲಿ ಹೇಳುವುದಿದ್ದರೆ—ಯುರೋಪಿಯನರಿದ್ದಲ್ಲಿ ಹಿಂದೀಯರಿಗೆ ಪ್ರವೇಶವಿಲ್ಲ.

ಸಾಲದುದಕ್ಕೆ—ಹಿಂದೀಯರ ಸರ್ವನಾಶಕರವಾದ "Asiatic Exclusion Bill" ಆಸ್ಯ (ಹಿಂದೀಯ)ರನ್ನು ಬಹಿಷ್ಕರಿಸುವ ಕಾಯಿದೆಯೊಂದನ್ನು ಮುಂದೆತರುವ ಸಾಧನೆಯೂ ಸಾಗುತ್ತಿದೆ. ಇಂಡಿಯದಲ್ಲಿ ಪಂಚಮರನ್ನು ಅಸ್ಪೃಶ್ಯರೆಂದು ದೂರದಲ್ಲಿರಗೊಡಿಸುವಂತೆ ಆಫ್ರಿಕದಲ್ಲಿ ಹಿಂದೀಯರ ದುರ್ಗತಿ ಇದೆ. ಪ್ರಸಿದ್ಧ ವ್ಯಾಪಾರ ಬಂದರಗಳಲ್ಲಿ ವಹಿವಾಟು ನಡೆಸಲು ಹಿಂದೀಯರಿಗೆ ಅಪ್ಪಣೆ ಇರಲಾರದು. ಕೇವಲ ಕೂಲಿ ಕೆಲಸವಲ್ಲಲ್ಲದೆ ಬೇರೆ ಯಾವ ಮಹೋದ್ಯೋಗದಲ್ಲಿಯೂ ಹಿಂದೀಯರು ಮುಂದೆ ಬರಕೂಡದು—ಎಂದು ಮೊದಲಾಗಿ ಆ ಧೂರ್ತಜನರ ಸ್ವಾರ್ಥವಿಚಾರವಿರುತ್ತದೆ.

ಮಾನವತಿಯರಾದ ಮುಸಲ್ಮಾನ ಮಾನಿನಿಯರ ಘೋಷವನ್ನೂ ಲಕ್ಷಿಸದೆ—ಅವರನ್ನು ಬಯಲಿಗೆ ತಂದು, ಬಲತ್ಕಾರದಿಂದ ಹಿಡಿದೆಳೆದು—ಆ ಅಬಲೆಯರ ಕೈಯ ಹೆಬ್ಬೆಟ್ಟಿನ ಗುರುತನ್ನು ತೆಗೆದೊಯ್ಯುವುದನ್ನು ತಾನು ಕಣ್ಣಾರೆ ಕಂಡಿರುವೆನೆಂದು ಇತ್ತೀಚೆಗೆ ಆಫ್ರಿಕದ ಪ್ರವಾಸವನ್ನು ಪ್ರಯಾಸದಿಂದ ಮುಗಿಸಿ ಬಂದ ಶ್ರೀ. ಜಗದೀಶಚಂದ್ರ ಮುಖರ್ಜಿಯವರು ತನ್ನದೊಂದು ಹೃದಯದ್ರಾವಕವಾದ ಭಾಷಣದಲ್ಲಿ ವಿವರಿಸಿರುವರು. ಎಂತಹ ದುಶ್ಶಾಸನ ಸಾಹಸವಿದು?

ಈ ದಾನವ ನರ್ತನವನ್ನು ನಿಲ್ಲಿಸಿ ಮಾನವಜಾತಿಯ ಮಾನವನ್ನು ಕಾಪಾಡುವುದು ಪ್ರತಿಯೊಬ್ಬ ಮಾನವನ ಧರ್ಮವಾಗಿರುತ್ತದೆ. ಇಂತಹ ನಿರಂಕುಶ ಪ್ರಭುತ್ವವನ್ನು ಹತಭಾಗ್ಯ ಹಿಂದೀಯರ ಮೇಲಲ್ಲದೆ ಮತ್ತಾವ ಸ್ವತಂತ್ರ ದೇಶವಾಸಿಯೊಬ್ಬನ ಮೇಲಾದರೂ ಪ್ರಯೋಗಿಸುವ ಪ್ರಸಂಗವು ಪ್ರಾಪ್ತವಾಗಿದ್ದರೆ—ಆಗಲೇ—ಈ ಪ್ರಪಂಚದಲ್ಲಿ ಒಂದು ಪ್ರಚಂಡ ಯುದ್ಧವನ್ನೇ ಪ್ರತ್ಯಕ್ಷವಾಗಿ ನೋಡಬಹುದಿತ್ತು!

ಮಹಾತ್ಮಾ ಗಾಂಧಿಯವರ ಉಪದೇಶಾಮೃತವರ್ಷವೂ ಆಫ್ರಿಕದ ಆ ಕಲ್ಲೆದೆಯವರ ಅಭ್ಯಂತರಂಗವನ್ನು ಪ್ರವೇಶಿಸಲಾರದೆ ಹೋಯಿತು. ಪ್ರತಿನಿಧಿಗಳನ್ನು ಕಳುಹಿಸುವುದೂ, ಸಾಮ್ರಾಜ್ಯ ಸರಕಾರದೊಡನೆ ಮೊರೆಯಿಡುವುದೂ ನಿಷ್ಫಲವೆಂದಾಯಿತು. ಇಂತಹ ಸಂದರ್ಭದಲ್ಲಿ ಅನಾಥರಕ್ಷಕನಾದ ಜಗದೀಶ್ವರನಲ್ಲಿ ಗೋಳಿಡುವುದೂ ಒಂದು ದಾರಿಯೆಂದು ಆ ಸನಾತನ ಧರ್ಮದಂತೆ ಶ್ರೀ. ಸರೋಜಿನಿ ದೇವಿಯವರು ಅಖಿಲ ಭಾರತೀಯರಲ್ಲಿ ವಿನಂತಿಮಾಡಿಕೊಂಡರು. ಆ ಪ್ರಕಾರ ಇದೇ ಕಳೆದ ತಾರೀಕು ೧೧ನೇ ರವಿವಾರ ಸಮಗ್ರಭಾರತ ದೇಶದಲ್ಲಿ ಈ 'ದಕ್ಷಿಣಾಫ್ರಿಕದ ದಿನ'ವನ್ನು ಆಚರಿಸಿದರು. ಈ ದಿನ ಭರತಖಂಡದ ಮುಖಂಡರೆಲ್ಲರೂ—ಒಂದಾಗಿ—ಭಿನ್ನಾಭಿಪ್ರಾಯಗಳಿಲ್ಲದೆ ದಕ್ಷಿಣಾಫ್ರಿಕದ ರಾಕ್ಷಸೀ ಸರಕಾರದ ದಾನವನರ್ತನವನ್ನು ಕಂಠೋಕ್ತವಾಗಿ ಖಂಡಿಸಿದರು. ಆಫ್ರಿಕದ ಹಿಂದೀ ಬಂಧುಗಳ ಸಂತಾಪದಲ್ಲಿ ತಮ್ಮ ಸಹಾನುಭೂತಿಯನ್ನು ವ್ಯಕ್ತಗೊಳಿಸಿದರು. ಅವರ ಕಷ್ಟನಿವಾರಣೆಗಾಗಿ ಆ ದೀನ ಬಂಧುವಾದ ದಯಾಸಿಂಧುವನ್ನು ಪ್ರಾರ್ಥಿಸಿದರು. ಅಂದಿನಿಂದಲೇ ಆ ನಮ್ಮ ಹಿಂದೀ ಬಾಂಧವರ ಕ್ಷೇಮಕ್ಕಾಗಿ ನಮ್ಮಿಂದ ಕೈಲಾಗುವ ಸೇವೆಯನ್ನು ಹೃತ್ಪೂರ್ವಕವಾಗಿ ಕೈಕೊಂಡು ಅವರ ಶ್ರೇಯೋಭಿವೃದ್ಧಿಯನ್ನು ಬಯಸುವುದು ಭಾರತೀಯರಾದ ನಮ್ಮೆಲ್ಲರ ಧರ್ಮವಾಗಿರುತ್ತದೆ. ದೀನಬಾಂಧವನಾದ ಜಗದೀಶ್ವರನು ಅನಾಥರನ್ನು ಸಂರಕ್ಷಿಸುತ್ತಿರಲಿ!

ಅನುಕ್ರಮಣಿಕೆ.

ಅಗ್ರಲೇಖ— ಪುಟಗಳು.
ಮುಂಬಾಯಿಯ ಗಿರಣಿಗಳು ೬
ಸ್ಫುಟವಿಚಾರಗಳು— ,,
ಮುಖಂಡರ ಮಾತುಗಳು ,,
ವರ್ತಮಾನಸಂಗ್ರಹಗಳು—
ವಿದೇಶ—ಒಳದೇಶ ವರ್ತಮಾನ ೭
ದಕ್ಷಿಣ ಕನ್ನಡ—ಅಂಗರಗುಂಡಿ, ಅಜೆಕೆಟ್ಟು, ಬಂಟ್ವಾಳ, ನರಿಕೊಂಬು, ಉಳ್ಳಾಲ, ಉಡುಪಿ. ,,
ಮಂಗಳೂರು ೮
ಯುರೋಪಿನ ರಾಜಕೀಯ ವಾತಾವರಣ, ದಾನವನರ್ತನ ೫
ಪತ್ರವ್ಯವಹಾರ ೧, ೪

ಸ್ವದೇಶಾಭಿಮಾನಿ.

ಶಕ ೧೮೪೭ ಅಶ್ವೀಜ ಬ॥ ೧೪ಯು ಶುಕ್ರವಾರ.

ಮುಂಬಾಯಿಯ ಗಿರಣಿಗಳು.

ಮುಂಬಾಯಿಯ ೮೫ ಗಿರಣಿಗಳು ಮುಚ್ಚಲ್ಪಟ್ಟು ೧॥ ಲಕ್ಷ ಜನರು ಕೆಲಸವನ್ನು ತೊರೆದ ಸಮಾಚಾರವು ಎಲ್ಲರಿಗೆ ತಿಳಿದೇ ಇದೆ. ಅನೇಕ ತಿಂಗಳುಗಳಿಂದ ಮುಂಬಾಯಿಯ ಗಿರಣಿಗಳು ತಾವು ತಯಾರಿಸಿದ ವಸ್ತ್ರಗಳನ್ನು ಯೋಗ್ಯವಾದ ಬೆಲೆಗೆ ಮಾರಲು ಪ್ರಯಾಸ ಪಡುತ್ತಿವೆ. ಇಡೀ ಹಿಂದೂಸ್ಥಾನದ ಕೈಗಾರಿಕೆಗಳಲ್ಲಿ ಅತೀ ಮುಖ್ಯವಾದ ಈ ಕೈಗಾರಿಕೆಯ ಈ ಸಂದಿಗ್ಧ ಸಮಯದಲ್ಲಿ, ಯಾವುದೊಂದು ಜವಾಬ್ದಾರಿಕ ಸರಕಾರವಾದರೂ ಬೇಗನೆ ಬಂದು ಸಹಾಯವನ್ನು ನೀಡದಿರುತ್ತಿರಲಿಲ್ಲ. ಆದರೆ ಹಿಂದೀ ಸರಕಾರದ ಜವಾಬ್ದಾರಿಯು ಹಿಂದೂ ದೇಶದ ಮೇಲಿಲ್ಲ. ಅದರ ಜವಾಬ್ದಾರಿಯು ಇಂಡಿಯಾ ಆಫೀಸು ಮತ್ತು ಡವ್ನಿಂಗ್ ಸ್ಟ್ರೀಟಿನ ವ್ಯಾಟ ಹೋಲಿನ ಮೇಲೆಯೇ ಇದೆ. ಹಿಂದೀಯರ ಆರ್ಥಿಕ ಸುವ್ಯವಸ್ಥೆಗಿಂತಲೂ ಲಂಕೆಶಾಯಿರ ಗಿರಣಿಗಳ ಲಾಭವು ನಮ್ಮ ಸರಕಾರಕ್ಕೆ ಮುಖ್ಯವಾಗಿದೆ.

ಹಿಂದೂಸ್ಥಾನದ ಆಮದು ರಫ್ತಿನ ವಹಿವಾಟದಲ್ಲಿ ಮೂಲದಲ್ಲಿ ಪವನಿಗೆ ಹದಿನೈದು ರೂಪಾಯಿ ಬೆಲೆಯಿದ್ದಿತು. ಅನೇಕ ವರ್ಷಗಳ ವರೆಗೆ ಈ ಬೆಲೆಯಿಂದಲೇ ವಹಿವಾಟವು ನಡೆಯುತ್ತಿದ್ದಿತು. ಯುದ್ಧವು ಆಖೈರಿಯಾದ ಸ್ವಲ್ಪ ಸಮಯದ ಮೇಲೆ ಸರಕಾರವು ರಿವರ್ಸ ಕೌನ್ಸಿಲ್ ಬಿಲ್ಲ ಎಂದು ಹಿಂದೀ ಸರಕಾರದ ವಿಲಾಯತಿಯಲ್ಲಿದ್ದ ಐವೇಜಿಗಳ ಮೇಲೆ ಹುಂಡಿಗಳನ್ನು ವಟಾಯಿಸಿಗೆ, ಪವನಿಗೆ ಹತ್ತು ರೂಪಾಯಿ ದರವನ್ನು ನಿರ್ಣಯಿಸಲೆತ್ನಿಸಿತು. ಈ ಪ್ರಯತ್ನದಿಂದ ಹಿಂದೀ ಸರಕಾರಕ್ಕೆ ಲಕ್ಷಾವಧಿ ರೂಪಾಯಿ ನಷ್ಟವಾಗಿ, ಹಿಂದೀ ವ್ಯಾಪಾರದ ಸೂತ್ರವು ಕಡಿದುಹೋಯಿತು. ಪವನಿನ ಬೆಲೆಯು ೭-೮॥ ರೂಪಾಯಿಗೆ ತಗ್ಗಿ ಪರದೇಶದ ಆಮದು ಹೆಚ್ಚಾಗಿ, ಪರದೇಶಕ್ಕೆ ರಫ್ತಾಗುವುದು ಕಡಿಮೆಯೂ ಆಯಿತು.

ಆ ಮೇಲೆ ಪುನಃ ಪವನಿಗೆ ಬೆಲೆಯು ಹದಿನೈದಕ್ಕೆ ನಿಂತಿತು. ಆದರಿಂದ ದೇಶದ ವ್ಯಾಪಾರದ ಪರಿಸ್ಥಿತಿಯು ಸರಿಗೊಳ್ಳುವ ಮೊದಲೇ ಪವನಿನ ಬೆಲೆಯು ತಗ್ಗಿ ಈಗಿರುವಂತೆ ೧೩॥ ರೂಪಾಯಿಗೆ ನಿಂತಿತು. ಇದರಿಂದ ಪುನಃ ದೇಶದ ವ್ಯಾಪಾರಕ್ಕೆ ದೊಡ್ಡ ಅಪಘಾತವು ಉಂಟಾಗಿದೆ. ದೇಶದಲ್ಲೆಲ್ಲಿಯೂ ವ್ಯಾಪಾರದ ಮಂದಿಯು ಅನುಭವಿತವಾಗುತ್ತಿದೆ. ಸಾಮಾನುಗಳ ಸ್ಟೋಕ್ ಉಂಟಲ್ಲದೆ ಕೊಂಡುಕೊಳ್ಳುವವರೇ ಕಡಿಮೆಯಾಗಿದೆ. ಹಣದ ಅಭಾವವೂ ಅಡಚಣೆಯೂ ದೇಶದ ಎಲ್ಲಾ ಕಡೆಗಳಲ್ಲಿಯೂ ಅನುಭವವಾಗಲು ಆರಂಭವಾಗಿದೆ.

ವ್ಯಾಪಾರದ ಈ ಸಾಮಾನ್ಯ ಪರಿಸ್ಥಿತಿಯಲ್ಲಿ ಮುಂಬೈ ಗಿರಣಿಗಳು ಕೂಡ ವ್ಯಾಪಾರವನ್ನು ನಡೆಸಲಾರವಾಗಿವೆ. ಜಾಪಾನ್ ಮತ್ತು ಲಂಕೆಶಾಯರಿನ ವ್ಯಾಪಾರ ಸ್ಪರ್ಧೆಯ ಮುಂದೆ ಗಿರಣಿಗಳು ತಮ್ಮ ತಯಾರಾದ ಸಾಮಾನುಗಳನ್ನು ನಷ್ಟವಿಲ್ಲದೆ ಮಾರಲಾರವು. ಪವನಿನ ಬೆಲೆಯು ತಗ್ಗಿದುದರಿಂದ ವಿಲಾಯತಿ ಸಾಮಾನುಗಳಿಗೆ ಹಿಂದೂಸ್ಥಾನದಲ್ಲಿ ಬೆಲೆಯು ತಗ್ಗುವುದು, ಈ ಕಾರಣದಿಂದ ವಿಲಾಯತಿ ವಸ್ತ್ರಗಳು ಅಗ್ಗವೂ ಗಿರಣಿ ವಸ್ತ್ರಗಳೂ ಪ್ರಿಯವೂ ಆಗಿವೆ. ಅಲ್ಲದೆ ಗಿರಣಿ ವಸ್ತ್ರಗಳ ಮೇಲೆ ಸರಕಾರೀ ಸುಂಕವೂ ಇದ್ದು ಗಿರಣಿ ವಸ್ತ್ರಗಳ ಬೆಲೆ ಏರುವಂತೆ ಮಾಡಿಯದೆ.

ಗಿರಣಿ ಮ್ಯಾನೇಜರು ಬಹಳ ಸಮಯದಿಂದ ಪವನನ್ನು ಹದಿನೈದು ರೂಪಾಯಿಗೆ ನಿಲ್ಲಿಸಬೇಕಾಗಿಯೂ, ಸರಕಾರೀ ಸುಂಕವನ್ನು ತೆಗೆದುಹಾಕಬೇಕಾಗಿಯೂ ಸರಕಾರವನ್ನು ಕೇಳಿಕೊಳ್ಳುತ್ತಿದ್ದರು. ಆದರೂ ಯಾವುದೊಂದೂ ಸಹಾಯವನ್ನು ಕೊಡದೆ ಸಹಾಯಮಾಡುವ ಅಭಿಪ್ರಾಯವನ್ನು ಕೂಡ ವ್ಯಕ್ತಪಡಿಸದೆ ಇದ್ದುದರಿಂದ ಗಿರಣಿಗಳ ಮ್ಯಾನೇಜರಿಗೆ ಬೇರೆ ಉಪಾಯವೇ ತೋರದೆ, ಅವರು ಕೂಲಿಗಾರರ ಸಂಬಳವನ್ನು ಶೇಕಡಾ ೧೧॥ ಪ್ರಕಾರ ಇಳಿಸಿದರು.

ಆದರೆ ಈಗಿನ ಜೀವನದ ಪರಿಸ್ಥಿತಿಯು ಅನುಭವಸಿದ್ಧವಾದುದು. ಯಾರೊಬ್ಬರಿಗೂ ಆರ್ಜಿಸಿ ಗಂಟುಮಾಡುವ ಆಶೆಯು ತೋರುವುದಿಲ್ಲ. ಅದರಲ್ಲೂ ಮುಂಬಾಯಿಯಂತಹ ಶಹರಿನಲ್ಲಿ ತಿಂಗಳಿಗೆ ೨೦-೩೦ ರೂಪಾಯಿಯನ್ನು ಪಡೆದು, ಹೊರಗಿನ ಬೀದಿಗಳಲ್ಲಿ ಮಲಗಿ ದಿನಗಳೆಯುವವರ ಪರಿಸ್ಥಿತಿಯನ್ನು ಬೇರೆ ಹೇಳಬೇಕಿಲ್ಲ. ಇದರ ಪರಿಣಾಮ ಒಂದೇ. ಒಬ್ಬರಾದರೂ ನಿಲ್ಲದೆ ಎಲ್ಲರೂ ಬಹಿಷ್ಕಾರವನ್ನು ಪೂರ್ಣಮಾಡಿದರು. ೧॥ ಲಕ್ಷ ಜನರು ತಮ್ಮ ಜೀವನಾರ್ಜನೆಯನ್ನು ತೊರೆದು, ಉಪವಾಸದ ದಿನಗಳನ್ನು ನಿರೀಕ್ಷಿಸುವ ಈ ದಿನಗಳಲ್ಲಿ ಮುಂಬಾಯಿಯ ಶಹರಿನಲ್ಲಿ ಏನೊಂದು ಅತ್ಯಾಚಾರವಾಗಲಿ ಗಲಾಟೆಯು ನಡೆದಿಲ್ಲವೆಂಬುದು ಕೂಲಿಯವರ ವಿಷಯ ಉತ್ತಮ ಅಭಿಪ್ರಾಯವನ್ನು ಕೊಡುತ್ತಿದೆ. ನಾಗರಿಕರಾದ ಪರದೇಶಗಳಲ್ಲಿಯಾದರೆ ದಿನಕ್ಕೆ ಹತ್ತಾರು ಜಗಳ ದಂಗೆಗಳಾಗದೆ ಇರುತ್ತಿರಲಿಲ್ಲ.

ಕೂಲಿಕಾರರ ಈ ಮುಷ್ಕರವಾದ ನಂತರ ಗಿರಣಿ ಮ್ಯಾನೇಜರ ಸಂಘವೂ, ಕೂಲಿಕಾರರ ಸಂಘವೂ ಸರಕಾರದ ಸಹಾಯಕ್ಕಾಗಿ ಸರಕಾರದೊಡನೆ ಅನೇಕ ಬಾರಿ ಅರ್ಜಿಮಾಡಿದರು. ಆದರೆ ಪ್ರತಿ ಸರ್ತಿಯು ಸರಕಾರದ ಅಧಿಕಾರಿಗಳು ಅಂದವಾದ ಮಾತುಗಳ ರಾಶಿಯಲ್ಲಿ ತಮ್ಮ ನಿರಾಕರಣೆಯನ್ನು ಅಡಗಿಸಿ ಕೊಡುತ್ತಿರುವರು. ಈ ಎಲ್ಲಾ ಅನರ್ಥಗಳಿಗೆ ಕಾರಣವಾದ ಸುಂಕವನ್ನು ತೆಗೆದು ಹಾಕಲು ಸರಕಾರವು ಸರ್ವಥಾ ಒಪ್ಪುವುದಿಲ್ಲ.

ಈ ಕಷ್ಟ ಪರಂಪರೆಗಳ ಮಧ್ಯದಲ್ಲಿ, ಅನೇಕ ಹಿಂದೀ ಗಿರಣಿಗಳು ಕಾಯಂ ಆಗಿ ಮುಚ್ಚಲ್ಪಡುವ ಸಂದರ್ಭವು ತೋರಿ ಬರುತ್ತಿದೆ. ಈ ಸಂದರ್ಭದಲ್ಲಿ, ಈ ಗಿರಣಿಗಳನ್ನು ಕಾಸು ದುಗ್ಗಾಣಿಗೆ ಪಡೆಯಬೇಕೆಂಬ ಆತುರದಿಂದ ಒಂದು ಇಂಗ್ಲೀಷ ಸಂಸ್ಥೆಯು ಏರ್ಪಟ್ಟಿದೆ, ಅದು ಗಿರಣಿಗಳನ್ನು ಕ್ರಯಕ್ಕೆ ಪಡೆಯಬೇಕೆಂದು ಇಚ್ಛಿಸುತ್ತಿದೆ ಎಂಬ ವರ್ತಮಾನವು ಹರಡಿದೆ. ಅದು ನಿಜವೊ, ಸುಳ್ಳೊ. ಪರಂತು, ನಿಜವಾದರೆ ಅದು ಹಿಂದೀಯ ಆರ್ಥಿಕ ಪರಿಸ್ಥಿತಿಗೆ ಆಪತ್ತನ್ನು ತಂದೊಡ್ಡುವುದಲ್ಲದೆ, ಹಿಂದೀಯ ರಾಜಕೀಯ ಅಭಿವೃದ್ಧಿಗೆ ಪ್ರಬಲ ಅಭ್ಯಂತರವಾಗಲಿದೆ.

ವಿಲಾಯತಿಯ ರಾಷ್ಟ್ರಗಳು ಪೌರ್ವಾತ್ಯ ದೇಶಗಳ ಮೇಲೆ ತಮ್ಮ ಅಧಿಕಾರವನ್ನು ತೋರಿಸುವುದರ ನೆವವು, ಅವರ ಧನಿಕರು ಆ ದೇಶಗಳಲ್ಲಿ ಬಂದು ನೆಲಸಿ ಸಂಸ್ಥೆಗಳನ್ನು ಸ್ಥಾಪಿಸುವುದಾಗಿದೆ. ಐಗುಪ್ತ್ಯ ದೇಶದಲ್ಲಿ ತಮ್ಮ ಸೈನ್ಯವನ್ನು ನಿಲ್ಲಿಸಲಿಕ್ಕೆ ಕಾರಣವೇನೆಂದರೆ, ಅಲ್ಲಿ ನೆಲಸಿರುವ ಬಿಳೀ ಜನರನ್ನು ರಕ್ಷಿಸಲಿಕ್ಕೆಂದು. ಹಾಗೆಯೇ ಹಿಂದೂಸ್ಥಾನದಲ್ಲಿ ಬಿಳೀ ಜನರ ಸಂಸ್ಥೆಗಳು ಹೇಗೆ ಹೆಚ್ಚಾಗುತ್ತವೊ ಹಿಂದೂಸ್ಥಾನದ ಸ್ವಾತಂತ್ರ್ಯವೂ ಅಷ್ಟೇ ದೂರ ಹೋಗುವುದು.

ಸರಕಾರವಾದರೂ ಹಿಂದೀಯ ಗಿರಣಿಗಳಿಗೆ ಸಾಮಯಿಕ ಸಹಾಯವನ್ನು ಕೊಡುವುದೆಂದು ನಾವು ನಿರೀಕ್ಷಿಸಲಾಗುವುದಿಲ್ಲ. ಲಂಕಶಾಯರಿನ ವತ್ತಾಯದೊಡನೆ ಹಿಂದೀ ಗಿರಣಿಗಳ ಹಿತವು ಸಾಧ್ಯವಲ್ಲ. ಆದುದರಿಂದ ಪ್ರಕೃತದ ಸ್ಥಿತಿಯು ಕಠಿಣವಾಗಿದಯಲ್ಲದೆ ಕೊನೆಗೊಳಿಸಲು ಕಷ್ಟಸಾಧ್ಯವಾಗಿದೆ.

ಈ ಸಮಯದಲ್ಲಿ ಭಾರತೀಯರ ಕರ್ತವ್ಯವು ಒಂದಿದೆ. ಸರಕಾರವು ಈ ಕೈಗಾರಿಕೆಯ ಕೈ ಬಿಟ್ಟಾಗ್ಯೂ, ಖಾದಿ ಉಡದ ಭಾರತೀಯರು ಜಾಪಾನ, ಮೆಂಚಿಸ್ಟರ ವಸ್ತ್ರಗಳನ್ನುಡದೆ, ದೇಶೀ ಗಿರಣಿಗಳ ವಸ್ತ್ರವನ್ನೇ ಉಟ್ಟರೆ ಗಿರಣಿಗಳಲ್ಲಿ ಕೆಲಸಮಾಡುವ ಸಾವಿರಾರು ಕೂಲಿಗಳಿಗೆ ಸಹಾಯವೂ, ಗಿರಣಿ ಕೈಗಾರಿಕೆಯ ಪೋಷಣೆಯೂ ನಡೆಯುವುದು.

ಸ್ಫುಟವಿಚಾರಗಳು.

ಬ್ರಿಟಿಷ ರಾಜ ತಂತ್ರಕ್ಕೆ ಉತ್ತಮವಾದ ಆಹುತಿ.

ಸರಕಾರವು ರಾಜತಂತ್ರವನ್ನು ಮಧ್ಯಪ್ರಾಂತದಲ್ಲಿ ಚೆನ್ನಾಗಿಯೇ ನಡಿಸಿದರು. ಅಲ್ಲಿಯ ಸ್ವರಾಜ್ಯ ಪಕ್ಷದ ಮುಖಂಡರಾಗಿದ್ದ, ಅವರ ಪರವಾಗಿ ಕೌನ್ಸಿಲ ಅಧ್ಯಕ್ಷಸ್ಥಾನಕ್ಕೆ ಚುನಾಯಿಸಲ್ಪಟ್ಟ ಮಿ॥ ತಾಂಬೆಯವರಿಗೆ ಸರಕಾರವು ಗಾಳ ಹಾಕಿತು, ತಾಂಬೆಯವರಾದರೂ ಸುಲಭದಲ್ಲಿಯೇ ಸಿಕ್ಕಿಕೊಂಡರು. ಯಾವ ಗೌರವವನ್ನು ದೇಶದ ಸೇವೆಗಾಗಿ ಸ್ವರಾಜ್ಯಪಕ್ಷವು ಅವರಿಗೆ ಉಂಟುಮಾಡಿಕೊಟ್ಟಿತೊ, ಅದನ್ನೇ ಅವರು ಸರಕಾರೀ ಮಾಸಿಕ ವೇತನಕ್ಕಾಗಿಯೂ ಭಾರತ ಬಂಧನದ ಸರಕಾರೀ ಗೌರವಕ್ಕಾಗಿಯೂ ಮಾರಿಬಿಟ್ಟರು! ಭಾರತ ಪುತ್ರರಲ್ಲಿ ವಿಶ್ವಾಸ ಘಾತುಕತೆಯು ಈ ರೀತಿಯಲ್ಲಿ ಇರುವುದಾದರೆ ಮುಂದೆ ಕಾರ್ಯಸಾಧನೆಯು ಕಷ್ಟವೇ ಸರಿ.

ಅಂತೂ ಸ್ವರಾಜ್ಯ ಪಕ್ಷವು ಇದರ ಪಾಠವನ್ನು ಮರೆಯಕೂಡದು. ಸ್ವರಾಜ್ಯ ಪಕ್ಷದ ಮುಖ್ಯ ಅಡಿಗಲ್ಲು ಅದರ ಆದರ್ಶದ ಪ್ರೇಮವು; ನಿಸ್ಸೀಮ ದೇಶ ಪ್ರೇಮವು; ಮತ್ತು ಅತುಲ ಸ್ವಾರ್ಥತ್ಯಾಗವು. ಈ ಅಸ್ತಿವಾರವೇ ಕಳಚಿಹೋದರೆ ಮುಂದೆ ಕೆಲಸವು ಸಾಧ್ಯವಾಗದು. ಸಂಶಯ ವರ್ತನದ ಗೃಹಸ್ಥರನ್ನು ಉಮೇದ್ವಾರರ ಸಂಖ್ಯೆಯನ್ನು ಭರ್ತಿಮಾಡಿಕೊಳ್ಳಲಿಕ್ಕೂ, ಇಲ್ಲವೇ ಓಟು ಸಿಕ್ಕೀತೆಂಬ ವಿಶ್ವಾಸದಿಂದಲೂ ಸ್ವರಾಜ್ಯ ಪಕ್ಷಕ್ಕೆ ಸೇರಿಸುವ ಕ್ರಮವು ಸ್ವರಾಜ್ಯ ಪಕ್ಷದಲ್ಲಿ ಬಹಳ ಪ್ರಚಲಿತವಿದೆ. ಈ ಅಭ್ಯಾಸವನ್ನು ನಿಲ್ಲಿಸಿ ದೃಢ ನಿರ್ಧಾರದ ಜನರು ಸಿಕ್ಕದಿದ್ದಲ್ಲಿ ಉಮೇದ್ವಾರರನ್ನು ಕೊಡದೆನೆ ಇದ್ದ ಅಲ್ಪ ಸಂಖ್ಯೆಯಿಂದ ವಿಶ್ವಾಸಪೂರ್ವಕವಾಗಿ ಕೆಲಸ ನಡಿಸುವುದು ಪಕ್ಷದ ವ್ಯವಸ್ಥಾಪಕರ ಕೈಯಲ್ಲಿದೆ. ಇಂತಹ ಉಚ್ಚ ಪದವಿಗಳಿಗೆ ಸ್ವರಾಜ್ಯ ಪಕ್ಷೀಯರು ತಮ್ಮ ಉಮೇದ್ವಾರರನ್ನು ಚುನಾಯಿಸುವಾಗ, ಅವರ ಸಹನೆಯ, ಸ್ವಾರ್ಥತ್ಯಾಗದ ಮತ್ತು ದೇಶ ಪ್ರೇಮದ ಶಕ್ತಿಯನ್ನೆ ಮುಂದಾಗಿ ಆಲೋಚಿಸಿಕೊಳ್ಳಬೇಕಲ್ಲದೆ ಅವರ ದುಡ್ಡಿನ ಪ್ರಭಾವವನ್ನಾಗಲಿ, ಸುಳ್ಳು ಗೌರವಗಳನ್ನು ಲೆಕ್ಕಿಸಬಾರದು.

ಯಾವ ರಾಜ ತಂತ್ರವು ಸ್ವತಂತ್ರ ರಾಜರುಗಳ ಮಧ್ಯದಲ್ಲಿ ವಿಭಾಗಗಳನ್ನು ಕಲ್ಪಿಸಿ, ಒಬ್ಬರ ಮೇಲೊಬ್ಬರನ್ನೆಬ್ಬಿಸಿ, ತನಗಾಗಿ ಇಬ್ಬರನ್ನೂ ಸ್ವಾಧೀನಪಡಿಸಿಕೊಂಡಿತೊ, ಆ ರಾಜ ತಂತ್ರಕ್ಕೆ ಅಧೀನ ಪ್ರಜಾ ಸಮೂಹವನ್ನು ಒಲಿಸುವುದು ಕಷ್ಟವಿರದು. ಜನತೆಯು ಸ್ವಾರ್ಥತ್ಯಾಗಿಯಾಗಿ ಆದರ್ಶನೇಮಿಯಾದರೇನೇ ಈ ಅನ್ಯಾಯದ ಸಾಧನೆಗಳು ಮುರಿದು ಈ ರಾಜತಂತ್ರದ ಮಹಡಿಯು ಕುಸಿಯುವುದು.

ಮುಖಂಡರ ಮಾತುಗಳು.

ಮಿ॥ ಎಮ್. ಎ. ಜಿನ್ನಾ.

ಲೋರ್ಡ ರೀಡಿಂಗರು ಇನ್ನು ಆರು ತಿಂಗಳೊಳಗೆ ವ್ಯಾಸರಾಯ ಪದವಿಯಿಂದ ನಿವೃತ್ತರಾಗುವರು. ಅವರಿಗೆ ವಿದಾಯವಾಗಿ ಟೀ ಪಾರ್ಟಿಗಳು ಈಗಲೇ ಪ್ರಾರಂಭವಾಗಿವೆ. ಸಾಹೇಬರು ತಮ್ಮ ಆಖೈರಿ ಮತಗಳನ್ನು ಪ್ರಕಾಶಪಡಿಸುತ್ತಲಿರುವರು. ಅವರು ಮೊನ್ನೆ ತಾನೇ ಕೊಟ್ಟ ಒಂದು ಭಾಷಣದ ವಿಷಯ ಮಿ॥ ಜಿನ್ನಾರವರು ಈ ರೀತಿ ಅಭಿಪ್ರಾಯ ಕೊಟ್ಟಿರುವರು:—

ವೈಸರಾಯರು "ಮೊದಲು ಸಹಕರಿಸಿರಿ" ಎಂಬ ಪಲ್ಲವಿಯನ್ನೇ ಇನ್ನೂ ಹಾಡುತ್ತಿರುವರಲ್ಲದೆ ಬಾಕಿಯ ಸಂಗೀತಕ್ಕೆ ಇನ್ನೂ ಬಂದಿಲ್ಲ. ವ್ಯಾಸರಾಯರು ಸಿಮ್ಲಾದಲ್ಲಿ ಕೊಟ್ಟ ವಿದಾಯ ಭಾಷಣದಲ್ಲಿ ಈ ವರೆಗೆ ಸಹಕಾರವನ್ನು ನಿಷೇಧಿಸದೆ ಇದ್ದವರಿಗೆ ಬಹಳ ಅನ್ಯಾಯವನ್ನು ಮಾಡಿರುವರು. ಲೋರ್ಡ ರೆಡಿಂಗರು ಲೋರ್ಡ ಬರ್ಕನ್ ಹೆಡ್ಡರ "ಸಹಕರಿಸಿರಿ, ಆ ಮೇಲೆ ನೋಡಿ ನಾವು ಹೇಗೆ ನಿಮಗೆ ಸಹಾಯಮಾಡುವವೆಂದು!" ಎಂಬ ಸೂತ್ರವನ್ನೆ ಹಿಡಿದಿರುವರು. ಆದರೆ ಅಸಹಕಾರಕ್ಕೆ ದೇಶವನ್ನು ಪ್ರೇರಿಸಿದ ಕಾರಣಗಳನ್ನು ರೆಡಿಂಗ ಸಾಹೇಬರು ಮರೆತಿರುವರೇ? ಆ ಸಮಯದಲ್ಲಿಯಾದರೂ ಸರಕಾರದ ಕೈ ಹಿಡಿದು ಅವರೊಡನೆ ಆ ಸಂದಿಗ್ಧ ಸಮಯದಲ್ಲಿ ಸಹಕರಿಸಿದ ದೊಡ್ಡ ಪಕ್ಷವೂ ಇದ್ದಿತು. ಹಿಂದೀಯರಿಗೆ ಅಸಹಕಾರವನ್ನು ಮುಂದೊಡ್ಡಲು ಮನಸ್ಸೂ ಶಕ್ತಿಯೂ ಇಲ್ಲ, ಈ ಪರಿಸ್ಥಿತಿಯಲ್ಲಿ ಈ ಪಲ್ಲವಿಯನ್ನೆ ಹಾಡುವುದು ಬರೇ ಮಿಥ್ಯಾವಾದವಾಗಿದೆ. ಜನರ ವಿಶ್ವಾಸಕ್ಕೆ ಪಾತ್ರವಾಗುವ ಒಂದು ರೋಯಲ್ ಕಮಿಶನು ನೇಮಕವಾದರೆ ಜನತೆಯ ಸಹಕಾರವಲ್ಲದೆ ಸಮ್ಮಾನವೂ ಸರಕಾರಕ್ಕೆ ದೊರೆಯುವದು. ನಿಜವಾದ ಪರಿಸ್ಥಿತಿಯ ತಪ್ಪು ಗ್ರಹಿಕೆಯಿಂದ ಅಪಾಯವಾದ ಸಂದರ್ಭವು ಒದಗಬಹುದು. ಕೌನ್ಸಿಲು ಮುರಿಯಬೇಕೆನ್ನುವ ಪಕ್ಷವು ಇಷ್ಟೇ ಇದೆ. ಆದರೆ ಜನತೆಯು ಸಹಕಾರಕ್ಕೆ ಇನ್ನೂ ಸಮ್ಮತವಿದೆ. ಈ ಸುಸಂದರ್ಭವನ್ನು ತುಳಿದು ಕಳಕೊಳ್ಳದಿರಲಾಗಿ ಲೋರ್ಡ ರೀಡಿಂಗರನ್ನು ನಾನು ಪ್ರಾರ್ಥಿಸುತ್ತೇನೆ.

ಖಾನ್ ಬಹದೂರ ಡಾ॥ ಉಸ್ಮಾನ ಸಾಹೇಬರು.

ಮದ್ರಾಸ ಪ್ರಾಂತಿಕ ಸರಕಾರದ ಹೋಮ್ ಮೆಂಬರ (Home member)ರಾದ ಡಾ॥ ಉಸ್ಮಾನ ಸಾಹೇಬರು ತಂಜಾವೂರಿಗೆ ಹೋದಾಗ ಅಲ್ಲಿ ಡಿಸ್ಟ್ರಿಕ್ಟ ಬೋರ್ಡಿನವರು ಅವರಿಗೆ ಮಾನಪತ್ರವನ್ನರ್ಪಿಸಿದರು. ಅದಕ್ಕೆ ಪ್ರತ್ಯುತ್ತರವಾಗಿ ಅವರು ಜಾತೀಯತೆಯ ಸಮಸ್ಯೆ (Communal question)ಯ ವಿಷಯ ಆಡಿದ ಮಾತುಗಳು ವಿಚಾರಣೀಯವಿವೆ:—

ಒಂದು ಪ್ರತ್ಯೇಕ ಭೂಖಂಡದಂತಿರುವ ಈ ದೇಶದ ಹಿಂದೂ-ಮುಸಲ್ಮಾನರೆಂಬ ಎರಡು ಜಾತಿಗಳೊಳಗೆ, ಭ್ರಾತೃಭಾವ, ಐಕ್ಯ ಮತ್ತು ಪರಸ್ಪರ ಸಹಾಯದ ಸಂಬಂಧವು ನೆಲೆಗೊಳ್ಳುವುದು ಅವಶ್ಯವಿದೆ. ಡಿಸ್ಟ್ರಿಕ್ಟ ಬೋರ್ಡಿನಲ್ಲಿರುವ ಐದು ಮುಸಲ್ಮಾನರಲ್ಲಿ ಮೂವರು ಮಿಶ್ರ ಮತದಾರರಿಂದ ಆರಿಸಲ್ಪಟ್ಟರೆಂದು ತಿಳಿದು ತನಗೆ ಸಂತೋಷವಾಯಿತು. ಅದರಲ್ಲಿ ತನಗೇನೂ ಆಶ್ಚರ್ಯವಿಲ್ಲ. ತಾನು ಬಿನ್ ಸರಕಾರಿ ಕಾರ್ಯಗಳಲ್ಲಿ ಮಿಶ್ರಮತದಾರರ (ಹಿಂದೂ-ಮುಸಲ್ಮಾನರ ಜತೆ) ಚುನಾವಣೆಯ ಮೂಲಕವೇ ಪ್ರವೇಶಿಸಿದ್ದೆನು; ಹದಿಮೂರು ವರ್ಷಗಳ ಹಿಂದೆ ಮದ್ರಾಸಿನಲ್ಲಿ, ಅಲ್ಲಿಯ ಪ್ರಸಿದ್ಧ ಗೃಹಸ್ಥರ ಪ್ರತಿಯಾಗಿ ಉಮೇದ್ವಾರನಾಗಿ ನಿಂತಿದ್ದೆನು. ಹಿಂದೂಗಳೇ ಮತದಾರರಲ್ಲಿ ಅಧಿಕರಾಗಿದ್ದರು. ತಾನೇ ಆ ವರ್ಷದಲ್ಲಿ ಗೆದ್ದೆನು. ಹಿಂದೂಸ್ಥಾನವು ತನ್ನ ಧ್ಯೇಯವನ್ನು ಹೊಂದಬೇಕಾದರೆ – ಮತ್ತು ಅದು ನಿಶ್ಚಯವಾಗಿಯೂ ಹೊಂದುವುದು – ಅದು ಈ ಜಾತೀಯ ಮತದಾನ (Communal electorate) ಎಂಬ ಹಿಂಬಾಗಿಲ ಹಾದಿಯನ್ನು ಬಿಡಬೇಕು. ನನ್ನ ಜಾತಿಯವರು ಅವಿಶ್ವಾಸದಿಂದ ಮಿಶ್ರಮತದಾರರ ಮುಂದೆ ಬರುವುದಿಲ್ಲ. ಆದರೆ ಎಲ್ಲಾ ಜಾತಿಗಳೊಳಗಿನ ಐಕ್ಯಕ್ಕೆ ಈ ಮಿಶ್ರ ಮತದಾನ (mixed electorate)ಕ್ಕಿಂತ ಉತ್ತಮವಾದುದು ಇನ್ನೊಂದಿಲ್ಲ.

ವಿದೇಶ ವರ್ತಮಾನ.

—ಕಳೆದ ಗುರುವಾರ ದಿವಸ ಅಬ್ದುಲ್ ಕ್ರಿಮ್‌ರವರ ರಾಜಸ್ಥಳವಾದ ಅಜ್ದಿರ್ ಪಟ್ಟಣಕ್ಕೆ ಸ್ಪ್ಯಾನಿಷ್ ಜನಗಳು ಬೆಂಕಿ ಹತ್ತಿಸಿದರೆಂದೂ, ಅದರಲ್ಲಿ ಅಬ್ದುಲ್ ಕ್ರಿಮ್‌ರವರ ಮನೆಯು ಸುಟ್ಟುಹೋಯಿತೆಂದೂ, ಮತ್ತು ಅಲ್ಲಿನ ರಿಫ್‌ಜನಗಳು ಬಹಳ ವೇದನೆಪಡುತ್ತಿರುವರೆಂದೂ ತಿಳಿಯಬರುತ್ತದೆ.

—ಮ್ಯಾಸಿಡೋನಿಯದ ಮುಖಂಡನಾದ ಟ್ಯಾಟರ್ ಪ್ಯಾಟ್ ನಾ ಎಂಬವನನ್ನು ಕಾರ್ನೀಷಿಯಾ ಎಂಬ ಹೆಂಗಸು ಖೂನಿಮಾಡಿರುವಳು. ಅವಳ ಪಕ್ಷದವರು ಸಾಕ್ಷಿಗಳನ್ನು ಹೆದರಿಸುತ್ತಲಿರುವುದರಿಂದ ವಿಚಾರಣೆಯ ಕಾಲದಲ್ಲಿ ಕೋರ್ಟಿಗೆ ಬರತಕ್ಕವರು ಶೋಧಿಸಲ್ಪಟ್ಟು ಆಯುಧಗಳು ಅವರಲ್ಲಿ ಇಲ್ಲವೆಂದು ಗೊತ್ತುಮಾಡಿಕೊಂಡು ಕೋರ್ಟಿಗೆ ಬಿಡುತ್ತಲಿರುವರು.

—ಜರ್ಮನೀ ದೇಶದ ಪ್ರೆಸಿಡೆಂಟರಾದ ಹಿಂಡನ್‌ಬರ್ಗರವರ ೭೮ನೆಯ ವರ್ಷದ ವರ್ಧಂತಿಯ ಪ್ರಯುಕ್ತ ಸ್ಟಾಂಪುಗಳನ್ನು ಮಾತ್ರ ಬಿಡಿಸಿದ್ದರು. ಈ ಪ್ರಯುಕ್ತವಾಗಿ ಒಂದು ಕಾಸು ಖರ್ಚು ಮಾಡಲ್ಪಡಕೂಡದೆಂದು ಅವರು ಆಜ್ಞೆಮಾಡಿರುವರು.

—ಸಾಂಟಿಯೆಗೋ ಎಂಬಲ್ಲಿ ೧೦೮ ವರ್ಷ ವಯಸ್ಸಾಗಿರುವ ಒಬ್ಬ ವೃದ್ಧಳು ಈಗಲೂ ವರ್ತಮಾನಪತ್ರಿಕೆಗಳನ್ನು ಅಲ್ಲಿನ ಬೀದಿ ಬೀದಿಗಳಲ್ಲಿ ಮಾರಿ, ಜೀವನಮಾಡುತ್ತಿರುವಳು. ಈಕೆಯು ವೃದ್ಧಾಪ್ಯದಲ್ಲಿಯೂ ಸೋಮಾರಿತನದ ಜೀವನವನ್ನು ತಿರಸ್ಕರಿಸುತ್ತಾ, ಈ ರೀತಿ ಈಗಲೂ ಕಷ್ಟಪಡುತ್ತಿದ್ದಾಳೆ.

—ಭೂಕಂಪವು ಇಂಥಾ ವೇಳೆಯಲ್ಲಿ ಸಂಭವಿಸುವುದೆಂದು ಶಾಸ್ತ್ರರೀತಿಯಿಂದ ಹೇಳುವವರಲ್ಲಿ ಇಟಲಿ ದೇಶದಲ್ಲಿರುವ ಸಿಗ್ನರ್ ಬೆಡಾಂಡಿ ಎಂಬವರು ಪ್ರಖ್ಯಾತರು. ಇನ್ನು ಕೆಲವು ದಿನಗಳೊಳಗಾಗಿ ಮೆಡಿಟರೇನ್ಯನ್ ಸಮುದ್ರ ಭಾಗದಲ್ಲಿ ೩-೪ ದಿನಗಳ ವರೆಗೆ ಬಲವಾಗಿ ಭೂಮಿಯು ಕಂಪಿಸುವುದೆಂದೂ, ಇದರಿಂದ ತುಂಬಾ ಅನರ್ಥವು ಸಂಭವಿಸುವುದೆಂದೂ ಇವರು ಹೇಳಿರುತ್ತಾರೆ.

—ಮದಿನಾ ಪಟ್ಟಣದ ಹಜದ ಎಂಬಲ್ಲಿಯ ಪವಿತ್ರ ಕ್ಷೇತ್ರಗಳಲ್ಲಿ ವಾಹಬೀಟ್ ಎಂಬ ಪಂಗಡದವರು ಮಾಡಿದ ನಷ್ಟದ ಕುರಿತು ಇತ್ಯರ್ಥ ಮಾಡಲಿಕ್ಕೆ ಪರ್ಶಿಯನ್ ಮಿಶನಿನ ಮಿನಿಸ್ಟರರು ಈಜಿಪ್ತದಿಂದ ಜೇಡಾ ಎಂಬಲ್ಲಿಗೆ ತೆರಳಿರುವರು.

—ಇಟೇಲಿಯಲ್ಲಿ ಇಟೇಲಿಯನ್ ರೈಲ್ವೆ ಕಂಪೆನಿಯ ಮೈಲ್ ಗಾಡಿಯು ಒಂದು ಸಂಕದ ಮೇಲಿಂದ ಕೆಳಗೆ ಬಿದ್ದು ಹತ್ತು ಜನರಿಗೆ ಗಾಯವಾಗಿದೆ ಮತ್ತು ೧೫ ಜನರು ಕಾಣಸಿಗಲಿಲ್ಲ. ನೆರೆಯ ಸಮ್ಮರ್ದ ಈ ಸಂಕವು ಮುರಿಯಲು ಕಾರಣವೆಂದು ತಿಳಿದುಬರುತ್ತದೆ.

—ಡ್ರೂಸಿನಲ್ಲಿ ಫ್ರೆಂಚರಿಗೂ ಮತ್ತು ಅಲ್ಲಿಯ ಡ್ರೂಸರೆಂಬ ತಂಡಕ್ಕೂ ಒಂದು ಯುದ್ಧವು ಸಂಭವಿಸಿತು ಆದರೆ ಇದು ಬೇಗನೆ ಶಾಂತತೆಗೆ ಬಂತು. ನೋರ್ದರ್ನ ಶ್ಯಾರಿಯಾದಿಂದ ವಾಯುವಿಮಾನಗಳ ಮೇಲಿಂದ ಬೊಂಬುಗಳು ರೈಲ್ವೆ ಲೈನನ್ನು ಕಡಿಯಲಿಕ್ಕೆ ಯತ್ನಿಸುವ ಡ್ರೂಸಿನವರ ಮೇಲೆ ಬಿಸಾಡಿ ದಂಗೆಖೋರರನ್ನು ಓಡಿಸಿತು. ಸದರ್ನ ಶ್ಯಾರಿಯಾದ ಹಳ್ಳಿಗಳಲ್ಲಿ ಕೂಡ ಇದೆ ನಮೂನೆಯಲ್ಲಿ ಬೊಂಬುಗಳನ್ನು ಬಿಸಾಡಿದ್ದಾರಂತೆ.

—ರುಸ್ಯದ ಚಿಚ್ಚೆರನ್ ಮತ್ತು ಇವರ ಪಾರ್ಟಿಯವರು ಒಂದು ಮೈಲ್‌ಟ್ರೈನಿನಲ್ಲಿ ಪ್ರಯಾಣಮಾಡುತ್ತಿರುವಾಗ ಕೆಲವು ದರೋಡೆಖೋರರು ನಡುರಾತ್ರಿ ಸಮಯದಲ್ಲಿ ಅವರು ಇರುವ ಕೋಣೆಯೊಳಗೆ ಬಂದು ಅವರನ್ನು ಗದರಿಸಿ ಅವರಲ್ಲಿರುವ ಹಣ ಮತ್ತು ಇತರ ರಿಕಾರ್ಡುಗಳನ್ನು ಸಹ ದೋಚಿಕೊಂಡು ರೈಲ್ವೆ ಗಾಡಿ ಚಾಲು ಇರುವಾಗಲೆ ಪರಾರಿಯಾಗಿದ್ದಾರೆ. ಈ ಕಾರಣವು ರಾಜಕೀಯವಾಗಿ ಇರಬಹುದು ಎಂದು ತಿಳಿಯಬರುತ್ತದೆ.

—೧೯೨೨ನೇ ಇಸವಿಯಲ್ಲಿ ಮುಳುಗಿಹೋದ ಇಜಿಪ್ತವೆಂಬ ಸಬ್‌ಮರಿನ್ ಸ್ಟೀಮರನ್ನು ಮೇಲಕ್ಕೆ ತೆಗೆದು ಹಾಕುವದೆ ಒಂದು ಫ್ರೆಂಚ ಕಂಪೆನಿಯು ಕೈಕೊಂಡದೆ.

—ಟೋಕಿಯೋದಲ್ಲಿ ಒಂದೆ ಸವನೆ ೩೦ ತಾಸುಗಳ ತನಕ ಅತಿವೃಷ್ಟಿಯಾಗಿ ಎಷ್ಟೋ ಮನೆಗಳು ಎಷ್ಟೋ ಮನುಷ್ಯರು ಅಳಿದುಹೋಗಿರುವರು.

—ತುರ್ಕಿಸ್ಥಾನದಲ್ಲಿ ೨೨ ವರ್ಷದಿಂದ ೨೪ ವರ್ಷದೊಳಗಿನ ತರುಣರೆಲ್ಲರು ಸೈನ್ಯದಲ್ಲಿ ದಾಖಲಾಗಬೇಕೆಂದು ಅಲ್ಲಿ ಹುಕುಮು ಹೊರಟಿರುವುದು. ತುರ್ಕಿಸ್ಥಾನವು ಈ ಪ್ರಕಾರ ಸೈನ್ಯಸಿದ್ಧತೆಯನ್ನು ಯಾಕೆ ಮಾಡುತ್ತಿದೆ?

—ಕೊಲೋನನ್ನು ಕೆಳಗೆ ಮಾಡಿದ ಹೊರತು ನಾವು ಸೆಕ್ಯುರಿಟಿ ಕರಾರಿನ ಮೇಲೆ ಸಹಿಹಾಕಲಾರೆವೆಂದು ಜರ್ಮನಿಯ ಪರವಾಗಿ ಡಾ. ಸ್ಟ್ರೆಸಮನ್‌ರು ಪ್ರಸಿದ್ಧ ಮಾಡಿರುವರು.

—ವೆಂಬಲೆ ಪ್ರದರ್ಶನದ ಖರ್ಚಿನ ಅಂದಾಜು ನೋಡುವಾಗ ಈ ವರ್ಷ ೧೫ ಲಕ್ಷ ಪೌಂಡು ಕಡಿಮೆಯಾದೀತೆಂದು ತೋರುತ್ತದೆ.

—ಫ್ರೆಂಚ ಜನರಲ್ ಮಾರ್ಶಲ್ ಲೋಟಿಯವರು ತಮ್ಮ ಹುದ್ದೆಗೆ ರಾಜಿನಾಮೆಯನ್ನು ಕೊಟ್ಟಿರುವರು. ಅವರ ರಾಜಿನಾಮೆಯನ್ನು ಫ್ರೆಂಚ ಮಂತ್ರಿಮಂಡಳಿಯವರು ಸ್ವೀಕರಿಸಿದ್ದಾರೆ.

—ಚೀನದೇಶದಲ್ಲಿ ಹಜಿನಿಯಲ್ಲಿ ಭಯಂಕರ ನೆರೆಯು ಬಂದು ೧೫೦೦ ಜನ ಮೃತ್ಯುವಶರಾಗಿರುವರು. ಮೊದಲೆ ಅಲ್ಲಿಯ ಜನರು ರಾಜಕ್ರಾಂತಿಯಿಂದ ಬೇಯುತ್ತಿರುವಾಗ ಇದೊಂದು ಹೊಸ ಕಷ್ಟವೇ ಸರಿ.

—ಭೋಪಾಳದ ಬೇಗಮ ಸಾಹೇಬರನ್ನು ಇಂಗ್ಲೆಂಡಿನ ಮಹಾರಾಜರು ಪತ್ನಿಸಮೇತರಾಗಿ ಭೇಟಿಕೊಟ್ಟರು.

—ಕೇಪ ಟೌನಿನೊಳಗೆ ನಾವಿಕರ ಮುಷ್ಕರವು ಅಂತ್ಯವಾಗಿ ಅಲ್ಲಿಯ ಕಾರ್ಯವು ಎಂದಿನಂತೆ ನಡೆಯುತ್ತದಾಗಿ ತಿಳಿಯುತ್ತೇವೆ.

—ಬ್ರಿಟಿಷ ಸೈನಿಕರಲ್ಲಿ ನೀವು ಮುಷ್ಕರ ಹಾಕಿದವರ ಹಡೆಯಂತಲೆ ಯುದ್ಧಮಾಡಬೇಕು ಹೊರತು ಅವರನ್ನು ಗುಂಡುಹಾಕಿ ಕೊಲೆಯಬಾರದು ಎಂಬ ಅರ್ಥದ ಕರಪತ್ರಿಕೆಗಳು ಹಂಚಲಾಗುತ್ತವೆ. ಅವು ಯಾರದೆಂದು ಎಷ್ಟು ಪ್ರಯತ್ನಪಟ್ಟರೂ ಪೋಲೀಸರಿಗೆ [illegible] ಅವನ್ನು [illegible].

—ಐರ್ಲೇಂಡಿನ ಜನರು ಇಲೆಕ್ಷನ್ ಪ್ರಾರಂಭವಾಗಿದೆ. ಇಲೆಕ್ಷನ್ ಕಾಲದ ಕ್ರಮದಂತೆ ಗೊಂದಲವು ಬಹಳ ನಡೆದಿದೆ. ಭಾಷಣ ಮಾಡುವವರ ಶಕ್ತಿಯನ್ನು ಎಸೆಯುವುದು, ಸಭೆಯಲ್ಲಿ ಜಗಳ ಮುಂತಾದವು ನಡೆದೇ ಇವೆ. ಅವರನ್ನು ಪೋಲೀಸರು ಕೈರಾಡಿಸುವುದಕ್ಕೆ ಶಾಂತಮಾಡುತ್ತಲೂ ಇರುವರು.

—ಇಂಟರ್‌ನೆಶನಲ್ ಟ್ರೇಡ ಯುನಿಯನ್ ಕೊಂಗ್ರೆಸ್ಸಿಗೆಂದು ಮಿ॥ ಫ್ರೆಡ್ ಬ್ರಮಲಿ ಎಂಬವರು ಬ್ರಿಟಿಷರ ಪರವಾಗಿ ಹೊರಟಿದ್ದರು. ಆದರೆ ದಾರಿಯಲ್ಲಿ ಎಮ್ಸಟರ್ಡಮ್ ಪಟ್ಟಣವನ್ನು ತಲ್ಪಿದ ಕೂಡಲೇ ತೀರಿಕೊಂಡರು. ಶೋಚನೀಯವೆ ಸರಿ.

ಒಳದೇಶ ವರ್ತಮಾನ.

—ಅಲಹಾಬಾದಿನಲ್ಲಿ ಮೊಸ್ಲೆಮ ಹೆರಾಲ್ಡ ಎಂಬ ಪತ್ರಿಕೆಯನ್ನು ಇಂಗ್ಲೀಷ ಭಾಷೆಯಲ್ಲಿ ದೈನಿಕವಾಗಿ ಮಾಡಬೇಕೆಂದು ಕೆಲವು ಮುಸಲ್ಮಾನರ ಹೇಳಿಕೆಯಿದೆ.

—ಬೆಲ್ಜಿಯಮದ ರಾಜಾರಾಣಿಯವರು ತಮ್ಮ ಹಿಂದುಸ್ಥಾನದ ಪರ್ಯಟನವನ್ನು ಮುಗಿಸಿ ಬರುವವಾರ ಮುಂಬಯಿಯಿಂದ ಮರಳಿ ತಮ್ಮ ಊರಿಗೆ ಹೋಗಲಿರುವರು.

—ವಿಜಯದಶಮಿಯ ದಿವಸ ಅಹಮದ ನಗರದಲ್ಲಿ ಹಿಂದೂ ಮಹಾಸಭೆಯ ಶಾಖೆಯು ಬಹು ವಿಜೃಂಭಣೆಯಿಂದ ತೆರೆಯಲಾಯಿತು.

—ದರಾಂಗ ಎಂಬ ಹಿಂದುಳಿದ ಸಮಾಜದ ಏಳ್ಗೆ ಮಾಡಬೇಕೆಂದು ಹಲವು ಜಾತೀಯ ಗೃಹಸ್ಥರು ಸಭೆ ಸೇರಿಸಿ ಒಂದು ಸಂಘಸ್ಥಾಪಿಸಿರುವರು.

—ಗ್ವಾಲೀರದ ಮಹಾರಾಜರಾದ ಶ್ರೀ. ಜಯಾಜೀರಾವ್ ಮಹಾರಾಜ ಇವರ ಸಿಂಹಾಸನಾರೋಹಣವು ಅಶ್ವೀನ ಶು ೧೦ಮಿಯ ದಿವಸ ಬಹು ಆಡಂಬರದಿಂದ ನೆರೆದು ಬಂತು. ಈ ಸಂದರ್ಭದಲ್ಲಿ ಪಂಢರಪೂರದ ವಿಠೋಬ ದೇವಸ್ಥಾನದಲ್ಲಿ ಮಹಾ ಪೂಜೆಯು ನಡೆದು ಬಡಬಗ್ಗರಿಗೆ ಅನ್ನದಾನ ಮಾಡಲಾಯಿತು. ಬ್ರಾಹ್ಮಣರಿಗೆ ದರಬಾರಿನಿಂದ ಸಹಸ್ರಭೋಜನವು ಕೂಡ ಕೊಡಲ್ಪಟ್ಟಿತ್ತು.

—ಈ ವರ್ಷ ನಾಗಪುರದಲ್ಲಿ ದಸರೆಯ ಮೆರವಣಿಗೆಯು ಬಹು ಉತ್ಸುಕತೆಯಿಂದ ನೆರೆಯಲಾಯಿತು. ಮೆರವಣಿಗೆಯಲ್ಲಿ ಅಕಾಲಿಜನ, ಹಾಗೂ ಮುಸಲ್ಮಾನರೂ ಸಹ ಇದ್ದರು.

—ಶ್ರೀಯುತ ಶಂಕರಾಚಾರ್ಯ, ಡೋಕ್ಟರ್ ಕುರ್ತಕೋಟಿಯವರು ಚಾತುರ್ಮಾಸವನ್ನು ಮೆಹೆಕರ ಎಂಬಲ್ಲಿ ಕಳೆದರು. ಅವರು ಅಲ್ಲಿರುವಾಗ ಹಿಂದು ಸಭೆಯ ಸ್ಥಾಪನೆಯನ್ನು ಮಾಡಿ ಕ್ರಿಶ್ಚನ್ ಹಾಗೂ ಮುಸಲ್ಮಾನರಾಗಿ ಹೋದ ಮೂವರನ್ನು ತಿರುಗಿ ಹಿಂದು ಧರ್ಮದಲ್ಲಿ ಶಾಸ್ತ್ರರೀತ್ಯಾ ತಕ್ಕೊಂಡರು. ಹಾಗೆಯೆ ಮುಸಲ್ಮಾನನನ್ನಾಗಿ ಮಾಡಿದ ಒಬ್ಬ ಹಿಂದುವನ್ನು ಸಹ ಶುದ್ಧೀಕರಣ ಮಾಡಿದರು.

—ಮಾರವಾಡದಲ್ಲಿ ಮಳೆಯೆ ಇಲ್ಲದ್ದರಿಂದ ಜನರೆಲ್ಲರೂ ಸಿಂಧ ಪ್ರಾಂತಕ್ಕೆ ಪ್ರಯಾಣ ಮಾಡುತ್ತಿದ್ದಾರೆ.

—ಸಕ್ಕರದೊಳಗಿನ ಕೆಲವು ವ್ಯಾಪಾರಿಗಳು ಜಕಾತಿಯು ಕಡಿಮೆಯಾಗಬೇಕೆಂಬ ಹೇತುವಿಂದ ಅಲ್ಲಿಯ ಮುನ್ಸಿಪಾಲಿಟಿಯ ಬಳಿಗೆ ಮಾಲುಗಳ ಸುಳ್ಳು ಪತ್ರಿಕೆಯನ್ನು ಕೊಟ್ಟ ಬಗ್ಗೆ ಅಲ್ಲಿಯ ಕಲೆಕ್ಟರರು ಆ ವ್ಯಾಪಾರಿಗಳ ಮೇಲೆ ದಾವೆ ಹೂಡಲು ಮುನ್ಸಿಪಾಲಿಟಿಗೆ ಅಪ್ಪಣೆ ಕೊಟ್ಟಿರುವರು.

—ಚಿಕ್ಕೋಡಿಯಲ್ಲಿ ಪ್ರೊಫೆಸರ್ ಕುಲಕರ್ಣಿಯವರು ಶಾರೀರಿಕ ಶಿಕ್ಷಣದ ಕ್ಲಾಸನ್ನು ಪ್ರಸಾರಗೊಳಿಸಲೆಂಬ ಉದ್ದೇಶದಿಂದ ಪ್ರೇಮವರ್ಧಕ ಸಂಸ್ಥಾ ಎಂಬ ಸಂಘವನ್ನು ಸ್ಥಾಪಿಸಿರುವರು.

—ಲಖನೌದ ಸಮೀಪ ಕಾಕೋರಿ ಎಂಬ ಸ್ಟೇಶನಿನಲ್ಲಿ ಹೊಗೆ ಬಂಡಿಯು ಹೋಗುತ್ತಿದ್ದಾಗ ಕೆಲವರು ಕಳ್ಳತನವನ್ನು ಮಾಡಿದರೆಂಬ ಆರೋಪದ ಮೇಲೆ ರಾಷ್ಟ್ರೀಯ ಸಭೆಯ ಸೆಕ್ರೆಟರಿ ಮುಂತಾದ ಅನೇಕರನ್ನು ಸರಕಾರವು ಹಿಡಿದಿರುವದು.

—ರೇವಾರಿಯಲ್ಲಿ ಮುಸಲ್ಮಾನರು ಹಿಂದುಗಳ ವಿರುದ್ಧ ಬಂಡನ್ನು ಪ್ರತ್ಯಕ್ಷ ಮಾಡುತ್ತ ನಡೆದಿದ್ದಾರೆ. ಪ್ರತಿ ದಿವಸ ತಮ್ಮ ಸಭೆಯನ್ನು ಸೇರಿಸಿ ಹಿಂದುಗಳ ಮನಸ್ಸನ್ನು ನೋಯಿಸುವ ಪ್ರಯತ್ನದಲ್ಲಿದ್ದಾರೆ. ಅಲ್ಲಿ ಒಬ್ಬ ಜಮಿನದಾರನ ಮನೆಯಿಂದ ಒಬ್ಬ ಸ್ತ್ರೀಯಳ ಶವವನ್ನು ದಹನ ಭೂಮಿಗೆ ಕೊಂಡೊಯ್ಯುವಾಗ ತುರುಕರು ಒಂದು ದಂಗೆ ಮಾಡಿದರು. ಆದರೆ ಪೋಲೀಸ ಸಹಾಯವು ಕೂಡಲೆ ಬಂದದ್ದರಿಂದ ವಿಧಾನವು ಸರಿಯಾಗಿ ನಡೆಯಲಾಯಿತು, ಹಾಗೆಯೆ ರಾಮಲೀಲೆಯ ಮೆರವಣಿಗೆಯು ಸಹ ಪೋಲೀಸರ ಸಹಾಯದಿಂದಲೆ ನೆರವೇರಲಾಯಿತು.

—ಕೆಲವು ಆಕ್ಷೇಪಕಾರಕ ಲೇಖನಗಳನ್ನು ಪ್ರಕಟಿಸಿದಕ್ಕಾಗಿ 'ದೇಶೋಪಕಾರಿ' ಎಂಬ ಪತ್ರದ ಸಂಪಾದಕರಾದ ಮಿ॥ ಸುಬ್ಬಯ್ಯನಾಯಡು ಇವರನ್ನು ಪ್ರೆಸ್ ಎಕ್ಟಿನ ಅನುಗುಣವಾಗಿ ಹಿಡಿದಿರುವರು.

—ಲೆಜಿಸ್ಲೇಟಿವ್ ಎಸೆಂಬ್ಲಿಯ ಮೆಂಬರರಾದ ಯು.ಆ. ಟೋಕ್, ಕೀ ಇವರು ಸ್ವರಾಜ್ಯ ಸಂಘದ ಪ್ರಚಾರ ಮಾಡಲಿಕ್ಕೆ ಪ್ರಯಾಣ ಬೆಳಸಿರುವರು. ಮತ್ತು ಹೋದಲ್ಲೆಲ್ಲ ಅದರ ಶಾಖೆಯನ್ನು ಸ್ಥಾಪಿಸುತ್ತಿದ್ದಾರೆ.

—ಬರ್ಮಾ ಓಯಿಲ್ ಕಂಪೆನಿಯ ಎಣ್ಣೆ ತುಂಬುವ ಒಂದು ಹೊಗೆ ಬೋಟಿಗೆ ಬೆಂಕಿ ತಗಲಿತು. ಅಷ್ಟರಲ್ಲಿ ಅದರ ಸಮೀಪದಲ್ಲಿದ್ದ ಇನ್ನೂ ಎರಡು ಬೋಟುಗಳಿಗೆ ಅದೇ ಬೆಂಕಿ ತಗಲಿ ಮೂರು ಬೋಟುಗಳು ಒಂದೇ ಸಮಯದಲ್ಲಿ ಬೂದಿಯಾದವು! ಅಗ್ನೀಶ್ವರನ ಹಾವಳಿಯು ಅಗಾಧವೇ ಸರಿ.

—ಮೈಸೂರ ಸಂಸ್ಥಾನದಲ್ಲಿ ಬಂಗಾರದ ಖಣಿಯನ್ನು ತೆರೆದು ೪೩ ವರ್ಷಗಳಾಯಿತು. ಈ ಸಮಯದಲ್ಲಿ ೫೯ ಕೋಟಿ ರೂಪಾಯಿ ಬೆಲೆ ಬಾಳುವ ಬಂಗಾರವು ತೆಗೆಯಲಾಯಿತು. ಪೈಕಿ ೩೧ ಕೋಟಿ ರೂಪಾಯಿ ಭಾಗಿದಾರರಿಗೆ ದೊರಕಿತು. ಮೈಸೂರ ಸರಕಾರಕ್ಕೆ ಸ್ವಾಮಿತ್ವದ ಸಂಬಂಧ ೫ ಕೋಟಿ ರೂಪಾಯಿಗಳು ಸಿಕ್ಕಿತು.

—ಪ್ರೊಫೆಸರ್ ದೇವಲರವರ ಸರ್ಕಸ್ಸು ಗುಲಬುರ್ಗೆಯಲ್ಲಿ ಶ್ರೀ ವಿಠಲ ದೇವಸ್ಥಾನದ ಜೀರ್ಣೋದ್ಧಾರಕ್ಕಾಗಿ ಒಂದು ಆಟವನ್ನಾಡಿ ಅದರ ಉತ್ಪನ್ನವಾದ ರೂ. ೩೩೩ನ್ನು ದೇವಸ್ಥಾನದ ಮ್ಯಾನೇಜರರಿಗೆ ಕೊಟ್ಟರು.

—ಗೋಮಾಂತಕದಲ್ಲಿರುವ ಮಡಗಾಂವದಲ್ಲಿ ಶಾರದೋತ್ಸವದ ನಿಮಿತ್ತ ವೀರ ವಾಮನರಾವ ಜೋಶಿ ಮತ್ತು ಪ್ರೊಫೆಸರ್ ಚಾಪೇಕರರವರ ಭಾಷಣಗಳಾದವು.

—ಗೋವೆಯೊಳಗಿರುವ ವಾಸ್ಕೊ ಎಂಬಲ್ಲಿ 'ಭಾರತ' ಎಂಬ ಪತ್ರದ ಸಂಪಾದಕರನ್ನು ಕೈದುಮಾಡಿ ೨೦ ದಿವಸದ ಶಿಕ್ಷೆ ಹಾಗೂ ೪೫ ರೂಪಾಯಿಗಳ ಜುಲ್ಮಾನೆ ವಿಧಿಸಲಾಯಿತು.

—ಸೌತ್ ಇಂಡಿಯನ್ ರೈಲ್ವೆ ಕಂಪೆನಿಯವರು ಮದ್ರಾಸ್ ಎಗ್ಮೂರ್ ಸ್ಟೇಶನಿನಿಂದ ಮದ್ರಾಸ್ ಬೀಚ್ ಸ್ಟೇಶನಿನ ವರೆಗೆ ಪ್ರಕೃತ ಇರುವ ಒಂದು ಲೈನಿನ ಬದಲಾಗಿ ಎರಡು ಲೈನುಗಳನ್ನು ಮಾಡಬೇಕೆಂದು ಯೋಚಿಸಿರುವರು.

—ಮದ್ರಾಸಿನಲ್ಲಿ ಕುಷ್ಠರೋಗ ನಿವಾರಣಾ ನಿಧಿಯ ಬಗ್ಗೆ ಇಷ್ಟರ ತನಕ ರೂ. ೧,೩೭,೨೦೫–೧೪–೦ ಜಮೆಯಾಗಿದೆ.

—ಮೈಸೂರು ಪ್ರಜಾಪ್ರತಿನಿಧಿ ಸಭೆಯ ದಸರಾ ಅಧಿವೇಶನದಲ್ಲಿ ಮರಣ ದಂಡನೆಯ ಶಿಕ್ಷೆಯನ್ನು ತೆಗೆದು ಹಾಕುವ ಸೂಚನೆಯು ಬಿದ್ದು ಹೋಯಿತು ಮತ್ತು ಗೋವಧಾ ನಿಲ್ಲಿಸುವ ಕಾನೂನಾಗಬೇಕೆಂದು ನಿರ್ಧರಿಸಲಾಯಿತು.

ದಕ್ಷಿಣ ಕನ್ನಡ.

ಅಂಗರಗುಂಡಿ:—ತೋಕೂರು ಗ್ರಾಮದಲ್ಲಿಯೂ ಅದರ ಸರಹದ್ದಿನ ಗ್ರಾಮದಲ್ಲಿಯೂ, ವಿದ್ಯೆಯಲ್ಲಿ ಹಿಂದುಳಿದ ಮಾಪಿಳ್ಳೆಯವರ ಮನೆಯು ವಿಶೇಷವಾಗಿದೆ. ಇವರಿಗೆ ಶಿಕ್ಷಣ ಕೊಡುವುದು ಅವಶ್ಯಕವೆಂದು ಮನಗಂಡು ಮ॥ ರಾ॥ ಅಂಗರಗುಂಡಿ ರಾಮರಾಯರು ಎಲ್ಲರಿಗೂ ಹೋಗಿಬರಲು ಸಾಧಾರಣ ಮಧ್ಯ ಸ್ಥಳವಾದ ಅಂಗರಗುಂಡಿಯಲ್ಲಿ ಮೊಟ್ಟಮೊದಲು ಖಾಸಗಿ ಶಾಲೆಯನ್ನು ಸ್ಥಾಪಿಸಿ ತಾನೇ ಉಪಾಧ್ಯಾಯರಾಗಿ ನಿಂತರು. ತನ್ನ ಅವಸಾನವಾದ ನಂತರವೂ ತನ್ನ ಕೆಲಸವು ಸುಸೂತ್ರವಾಗಿ ಸಾಗಬೇಕೆಂಬ ಸದುದ್ದೇಶದಿಂದ ಕೆಲವು ಸಮಯದ ನಂತರ ಇದರ ಆಡಳಿತವನ್ನು ಮಾನ್ಯ ತಾಲೂಕು ಬೋರ್ಡಿಗೆ ಒಪ್ಪಿಸಿಕೊಟ್ಟು 'ಅಂಗರಗುಂಡಿ ಮಾಪಿಳಾ ಬೋರ್ಡ ಶಾಲೆ' ಎಂದು ನಾಮಕರಣ ಮಾಡಿದರು. ಇಲ್ಲಿ ಈಗ ನೂರು ಮಕ್ಕಳ ವರೆಗೆ ವಿದ್ಯೆ ಕಲಿಯುತ್ತಿದ್ದಾರೆ. ಇನ್ನು ಕೆಲವು ಕಾಲದ ನಂತರ ಅಂಗರಗುಂಡಿ ಎಂದು ಹೋಗಿ ಬಂಗಾರಗುಂಡಿ ಎನ್ನುವಂತೆ ಮಾಡಿದ ಆ ಮಾನ್ಯ ಸಜ್ಜನರು ತಾ. ೧೦–೧೦–೨೫ನೇ ಶನಿವಾರ ಸುಮಾರು ೫ ಘಂಟೆ ಸಮಯಕ್ಕೆ ಸ್ವರ್ಗಸ್ಥರಾದರೆಂದು ತಿಳಿಸಲು ತುಂಬಾ ವಿಷಾದಪಡುತ್ತೇವೆ. ಇವರು ಶಾಲೆಯ ವಿಷಯದಲ್ಲಿ ಮಾತ್ರವಲ್ಲದೆ ಸಹಕಾರಿ ಸಂಘದಲ್ಲಿಯೂ ಬೆಂಚ ಕೋರ್ಟಿನಲ್ಲಿಯೂ ಸೇರಿ ಧನಿಕರು ದರಿದ್ರರೆನ್ನದೆ ಎಲ್ಲರಿಗೂ ಬೇಕಾದವರಾಗಿದ್ದರು. ಇವರು ಅನೇಕ ಊರ ಪರವೂರ ಜನರ ಪ್ರೀತಿಗೆ ಪಾತ್ರರಾದ ಮಿತ್ರರಾಗಿದ್ದರು. ಇಂಥ ಜನೋಪಕಾರಿಯಾದ ಇವರ ಆತ್ಮಕ್ಕೆ ಭಗವಂತನು ಶಾಂತಿಯನ್ನು ಕೊಡಲಿ.

ಅಜೆಕೆಟ್ಟು:—ಈ ಗ್ರಾಮದ ಕೊರಗಟ್ಟೆ ಎಂಬಲ್ಲಿ ಸಾಧಾರಣ ೩ ವರುಷಗಳ ಹಿಂದೆ ಮಾನ್ಯ ತಾಲೂಕು ಬೋರ್ಡಿನವರು ಬಡ ಊರವರ ಮೇಲೆ ದಯೆಯಿಟ್ಟು ಬೋರ್ಡಶಾಲೆಯೊಂದನ್ನು ತೆರೆದಿರುವರು. ಈ ಶಾಲೆಯಲ್ಲಿ ತಾ. ೬–೧೦–'೨೫ರ ತನಕ ಬಹಳ ಚಟುವಟಿಕೆಯಿಂದಲೂ ಉಲ್ಲಾಸದಿಂದಲೂ ಶಾಲಾ ಬಾಲಕರ ಅಭಿವೃದ್ಧಿಗಾಗಿ ಕೆಲಸ ಮಾಡುತ್ತಿದ್ದ ಸಹಾಯಕ ಉಪಾಧ್ಯಾಯರಾದ ಮ॥ ರಾ॥ ಬಾಳಾ ಲಕ್ಷ್ಮೀನಾರಾಯಣ ರಾಯರಿಗೆ ವರ್ಗವಾಯಿತೆಂದು ತಿಳಿಸಲು ಗ್ರಾಮಸ್ಥರಾದ ನಮಗೆ ಬಹಳ ವಿಷಾದವಾಗುತ್ತದೆ. ಹಲವು ಹಳೆ ವಿದ್ಯಾರ್ಥಿಗಳೂ ಆ ದಿನ ಸಭೆ ಸೇರಿದರು. ಅವರ ಆ ಸಮಯದಲ್ಲಿ ಮಕ್ಕಳೊಡನೆ ತನಗೆ ವರ್ಗವಾದ ಸಂಗತಿಯನ್ನು ತಿಳಿಸಿ, ವಿದ್ಯಾರ್ಥಿಗಳು ಉಪಾಧ್ಯಾಯರೊಡನೆ ಹೇಗೆ ನಡೆದುಕೊಳ್ಳಬೇಕೆಂಬುದನ್ನೂ, ಯಾವ ಕೆಲಸವನ್ನಾದರೂ ಪ್ರಾರಂಭಿಸುವ ಮೊದಲು ವಿದ್ಯೆಯನ್ನು ಅಗತ್ಯವಾಗಿ ಗಳಿಸಲು ಸಾಧ್ಯವಿದ್ದಷ್ಟು ಗಳಿಸಿಕೊಳ್ಳಬೇಕೆಂತಲೂ ವಿವರವಾಗಿ ಬಿಡಿಸಿ ಹೇಳಿದರು. ತಾನು ಶಾಲೆಗೆ ಬಂದ ಸ್ಮಾರಕಕ್ಕಾಗಿ ಎಲ್ಲಾ ವಿದ್ಯಾರ್ಥಿಗಳಿಗೂ ತರತರದ ಕಥೆ ಪುಸ್ತಕಗಳನ್ನೂ, ಹಂಚಿದರು. ತದನಂತರ ನಾಲ್ಕನೆ ತರಗತಿಯ ವಿದ್ಯಾರ್ಥಿಯೊಬ್ಬನು ಅವರು ವಿದ್ಯಾರ್ಥಿಗಳ ವಿದ್ಯಾಭಿವೃದ್ಧಿಗಾಗಿ ಪಟ್ಟ ಹೆಚ್ಚಾದ ಪರಿಶ್ರಮ, ಸದಾ ಕಾಲವೂ ಸಂತೋಷಚಿತ್ತರಾಗಿ ಹುಡುಗರೊಡನೆ ತೋರಿಸುತ್ತಿದ್ದ ಸಲಿಗೆ ಭಾವ ಮೊದಲಾದ ವಿಷಯವನ್ನು ಕುರಿತು, ಅವರ ಉಪಕಾರವನ್ನು ಸ್ಮರಿಸಿ ಬರೆದ ಉಪನ್ಯಾಸವನ್ನು ಎಲ್ಲರ ಪರವಾಗಿ ಓದಿ ಹೇಳಿ, ಭಗವಂತನು ಅವರಿಗೆ ದೀರ್ಘಾಯುಸ್ಸನ್ನೂ, ಯಶಸ್ಸನ್ನೂ ದಯಪಾಲಿಸಲಿ ಎಂದು ಹೇಳಿ ತನ್ನ ಉಪನ್ಯಾಸವನ್ನು ಮುಕ್ತಾಯಗೊಳಿಸಿದನು. ಆ ಮೇಲೆ ಮುಖ್ಯರಿಗೆ ಅದರಲ್ಲಿದ್ದ ಪ್ರೀತಿ ಗೌರವವು ಮುಖ್ಯವಾಗಿ ಉಕ್ಕೇರಿ ಬಂದು ಉಪಾಧ್ಯಾಯರು ಮೂರು ನಾಲ್ಕು ತರಗತಿಗಳಿಗೆ ಒಬ್ಬರೇ ಉಪಾಧ್ಯಾಯರಾಗುವುದರಿಂದ ಶಾಲಾ ಏಳಿಗೆಯು ಬರೇ ಉಪಾಧ್ಯಾಯರನ್ನು ಮಾತ್ರ ಅವಲಂಬಿಸಿಲ್ಲವೆಂತಲೂ ವಿಶದವಾಗಿ ತಿಳಿಸಿದರು. ಆವಶ್ಯಯುಕ್ತ ಗ್ರಾಮಸ್ಥರೆಲ್ಲರೂ ತಮ್ಮ ತಮ್ಮ ಮಕ್ಕಳನ್ನು ನಿತ್ಯವೂ ತಪ್ಪದೆ ಕಳುಹಿಸಿ ಕೊಡುವುದು ಶಾಲಾ ಏಳಿಗೆಗೆ ಮೂಲ ಕಾರಣವೆಂದೂ ಸಕಾರಣವಾಗಿ ತಿಳಿಸಿದರು. ಅನಂತರ ಮಕ್ಕಳನ್ನು ತನ್ನ ಮಾತುಗಳಿಂದ ಸಂತೈಸಿಸಿ ಅಪ್ಪಣೆಕೊಟ್ಟು ಬೀಳ್ಕೊಟ್ಟರು.

ಬಂಟವಾಳ:—ಇಲ್ಲಿಯ ಕೋಟ್ರಮ್ಮನ ಗಂಡಿಯ ರಸ್ತೆಯಿಂದ ತುಂಬೆಗೆ ಹೋಗುವ ಮೂಡಬಿದರೆ ಮಾರ್ಗವು ಕಳೆದ ನೆರೆಯಿಂದ ಕೊಚ್ಚಿ ಹೋಗಿ ಸುಮಾರು ಮೂರು ತಿಂಗಳಾದವು. ಡಿಸ್ಟ್ರಿಕ್ಟ ಬೋರ್ಡಿನವರು ಇಷ್ಟರ ವರೆಗೆ ದುರುಸ್ತಿ ಮಾಡದೆ ಇದ್ದುದರಿಂದ ಗಾಡಿಗಳ ವಹಿವಾಟಕ್ಕೂ ಜನರ ಸೌಕರ್ಯಕ್ಕೂ ಬಹಳ ಅಡಚಣೆಯಾದ್ದರಿಂದ ಈ ಊರಿನ ವ್ಯಾಪಾರಸ್ಥರೂ ಮುರದ ಕಳ್ಳಿನ ವ್ಯಾಪಾರಸ್ಥರೂ, ಕಟ್ಟಿಗೆ ವ್ಯಾಪಾರಸ್ಥರೂ ವಂತಿಗೆಯಿಂದಲೂ ಸ್ವತಹ ಕಷ್ಟ ಕೆಲಸ ಮಾಡುವುದರಿಂದಲೂ ಮಾರ್ಗವನ್ನು ಮಾಡಿ ಪೂರೈಸಿದರು. ಈಗ ಗಾಡಿ ಚಲಾವಣೆ ರಾತ್ರಿ ಹಗಲೂ ಸರಿಯಾಗಿ ನಡೆಯುತ್ತದೆ. ಒಟ್ಟಾರೆ ಸುಮಾರು ನೂರಐವತ್ತು ಖರ್ಚಾಯಿತು. ಹಾಗೂ ನಮ್ಮ ಡಿಸ್ಟ್ರಿಕ್ಟ ಬೋರ್ಡಿನವರಿಗೆ ಅದನ್ನು ಇನ್ನೂ ಸರಿಯಾಗಿ ದುರುಸ್ತು ಪಡಿಸಲಿಕ್ಕೆ ಆಗಲಿಲ್ಲ.

ಇಲ್ಲಿಯ ಅಯ್ಯನಾಯ್ಕರ ಓಣಿಯ ಬಾಜಲಲ್ಲಿ ಸಾಯಂಕಾಲ ಸುಮಾರು ನಾಲ್ಕು ಗಂಟೆಗೆ ಇಲ್ಲಿಯ ಮಹಾಲಿಂಗೇಶ್ವರ ದೇವಸ್ಥಾನದ ಆಡಳಿತದಾರರನ್ನೂ, ಜಮೀನುದಾರರೂ ಆದ ಪಣಂಬೂರು ವಾಸುದೇವರಾಯರನ್ನು ಹೊಡೆದ ಸಂಗತಿಯಲ್ಲಿ ಮಂಗಳೂರು ಡಿವಿಜನಲ್ ಅಧಿಕಾರರಲ್ಲಿ ಫಿರ್ಯಾದು ದಾಖಲಾಗಿದೆ ಎಂದು ವಾರ್ತೆ ಇದೆ.

ಇಲ್ಲಿ ಇತ್ತೀಚೆಗೆ ಕುಡಿತದ ಹಾವಳಿಯೂ ಮತ್ತು ಜೂಜಾಟವೂ ದಿವಸ ದಿವಸ ಹೆಚ್ಚು ಹೆಚ್ಚಾಗಿ ಬರುತ್ತಿವೆ. ಇವನ್ನು ನೋಡುವಾಗ ಬಂಟವಾಳ ಪೋಲೀಸು ಸ್ಟೇಶನು ಇಲ್ಲವೊ, ಅಥವಾ ಸ್ಟೇಶನಿನಲ್ಲಿ ಪೋಲೀಸಿನವರು ಇಲ್ಲವೊ ಎಂಬ ಸಂಗತಿ ತಿಳಿಯಲಾಗುವುದಿಲ್ಲ. ಇಷ್ಟರ ತನಕ ಬಂದಾ

ರಾತ್ರಿಯ ವೇಳೆಯಲ್ಲಿ ಅಥವಾ ಸಾಯಂಕಾಲ ಎಂದರೆ ೬-೭ ಘಂಟೆಯ ಸಮಯದಲ್ಲಿ ಯಾವುದಾದರು ಖೂನಿಗಳು ಆಗುತ್ತಿದ್ದವು. ಆದರೆ ಇತ್ತಿತ್ತಲಾಗೆ ನಮ್ಮ ಬಂಟವಾಳ ಪೋಲೀಸರು ಬಹು ಜಾಗ್ರತೆಯಿಂದ ಕೆಲಸ ಮಾಡುತ್ತಿರುವಾಗ್ಯೆ ನಡು ಹಗಲಲ್ಲಿ ಹಾದಿಯಲ್ಲಿ ಹೋಗುವಾಗ ಹೊಡೆಯುವ ಪದ್ಧತಿಯು ರೂಢಿಗೆ ಬಂದಿದೆ. ಪೋಲೀಸ ಸ್ಟೇಶನಿನ ಹತ್ತಿರ ಯಾವ ತರದ ಗಲಾಟೆ ಸಂಭವಿಸಿದರೂ ಕೂಡ ಪೋಲೀಸರು ಆ ಕಡೆಗೆ ಲಕ್ಷಕೊಡದೆ ಇದ್ದದ್ದನ್ನು ನೋಡಿದರೆ ಇದು ನಮ್ಮ ಬಂಟವಾಳ ನಿವಾಸಿಗರ ದುರ್ಭಾಗ್ಯವೆನ್ನಬೇಕು. ಇನ್ನು ಮುಂದಕ್ಕೆ ಇದೆ ನಮೂನೆಯಲ್ಲಿ ಎಷ್ಟು ಗಲಾಟೆಗಳು ಸಂಭವಿಸಿರಲಿಕ್ಕಿರುವವೂ ಎಂಬ ಸಂಗತಿ ಪರಮಾತ್ಮನೇ ಬಲ್ಲ. ಆದರೆ ಬಡ ಕೆಲವು ಬಂಟವಾಳ ನಿವಾಸಿಗರು ಹೇಳಿಕೊಳ್ಳುವುದೇನೆಂದರೆ ಇನ್ನು ಮುಂದಕ್ಕಾದರೂ ನಮ್ಮ ಬಂಟವಾಳದ ಪೋಲೀಸು ಸ್ಟೇಶನಿನಲ್ಲಿರುವ ಪೋಲೀಸರು ಅವರಿಗೆ ಸರಕಾರದಿಂದ ಸಿಕ್ಕುವ ತಲಬಿನಷ್ಟಕ್ಕಾದರೂ ಉಪಕಾರವನ್ನು ನಮ್ಮಲ್ಲಿ ತೋರಿಸಿದರೆ ಬಹಳ ಉಪಕಾರವಾಗುತ್ತಿತ್ತು. ಕಳೆದ ವಾರದಲ್ಲಿ ಸಂಭವಿಸಿದ ಗಲಾಟೆಯನ್ನು ನೋಡಿದ್ದಲ್ಲಿ ಪೋಲೀಸರು ಆ ಕಡೆಗೆ ತಮ್ಮ ಸ್ವೇಚ್ಛೆಬುದ್ಧಿಯಿಂದ ವರ್ತಿಸಿದ್ದಾರೆಂದು ತಿಳಿಯಲಿಕ್ಕೆ ಕಾರಣವಾಗಿದೆ.

ನರಿಕೊಂಬು ಗ್ರಾಮದಲ್ಲಿ ಚೆಂದು ಪೂಜಾರಿಯನ್ನು ಒಬ್ಬ ಬಿಲ್ಲವ ಯುವಕನು ಚೂರಿಯಿಂದ ತಿವಿದುಕೊಂದಿರುತ್ತಾನೆ. ಯುವಕನೂ ಗಾಯ ಹೊಂದಿದವನಾಗಿ ಪೋಲೀಸ ಬಂದೋಬಸ್ತಿಯಿಂದ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುತ್ತಾನೆ.

ಸಜೀಪ ಮೂಡ ಗ್ರಾಮದಲ್ಲಿ ಒಬ್ಬ ಯೌವನ ಪ್ರಾಯದ ಬಿಲ್ಲವ ಸ್ತ್ರೀಯನ್ನು ಒಬ್ಬ ಹೊಂತಗಾರನು ಬಲಾತ್ಕಾರ ಪಡಿಸಲಿಕ್ಕೆ ಪ್ರಯತ್ನಿಸುವಾಗ ತನ್ನ ಕೈಯಲ್ಲಿದ್ದ ಕತ್ತಿಯಿಂದ ಅವನನ್ನು ಗಾಯಪಡಿಸಿ ಅವನ ಕೈಯಲ್ಲಿದ್ದ ಕತ್ತಿಯನ್ನೂ ಎಳಕೊಂಡು ಎರಡೂ ಕತ್ತಿಗಳನ್ನು ತೆಗೆದುಕೊಂಡು ಫಿರ್ಯಾದು ಕೊಡಲಿಕ್ಕೆ ಬಂದಿರುತ್ತಾಳೆ. ಅವನು ಚಿಕಿತ್ಸೆ ಬಗ್ಗೆ ಆಸ್ಪತ್ರೆಗೆ ಬಂದಿರುತ್ತಾನೆ.

ಇಲ್ಲಿ ಈ ವಾರ ಎರಡು ಮೂರು ದಿವಸ ಕಠಿಣ ತರದ ಬಿರು ಮಳೆ ಬಂದು ಅನೇಕ ಗದ್ದೆಹುಣಿಗಳು ಕಡಿದು ಹೋದವು.

ಇಲ್ಲಿಯ ಖಾಸಗಿ ತೋಟಿಗಳು ಮಲವನ್ನು ಹೊಳೆಯಲ್ಲಿಯೂ ಬಂಡಾರಿಬೆಟ್ಟು ತೋಡಿನಲ್ಲಿ ಬಿಸಾಡುತ್ತಾರೆ. ಹೀಗೆ ಮಾಡುವುದನ್ನು ನಿಲ್ಲಿಸಿದರೆ ಒಳ್ಳೇದಿತ್ತು.

ಉಡುಪಿ:— ಇಲ್ಲಿ ಕ್ರಿಕೆಟ್ ಪಂದ್ಯಾಟವು ನಡೆದು ಕೊಸ್ಮೊಪೊಲಿಟನ್ ಕ್ರಿಕೆಟ್ ಕ್ಲಬ್ಬಿನವರು ಗೆದ್ದರು. ಇವರು ಕಳೆದ ವರುಷಗಳಲ್ಲಿಯೂ ಗೆದ್ದಿರುವದರಿಂದ, ಇವರಿಗೆ ಈ ವರ್ಷದ ಕ್ರಿಕೆಟ್ಸ್ ಕಪ್ ಕಾಯಂ ಆಗಿ ಸಿಕ್ಕುವುದು. ಇವರ ವಿಜಯದ ಆಚರಣೆಗಾಗಿ ಉಡುಪಿಯಿಂದ ೪ ಮೈಲು ದೂರವಿರುವ ವಂಡಭಾಂಡೇಶ್ವರದ ಬಲರಾಮ ದೇವಸ್ಥಾನದಲ್ಲಿ ಮಿತ್ರಭೋಜನವಿತ್ತು. ತಾಲೂಕು ಬೋರ್ಡು ಪ್ರೆಸಿಡೆಂಟ ವಿಠ್ಠಲ ಕಾಮತರು, ವ್ಯಾಸಪ್ರೆಸಿಡೆಂಟ ಬಲ್ಲಾಳರು, ಡಾ। ಕತ್ರಿ ಕೃಷ್ಣರಾವ್, ಹಂದಾಡಿ ರಾಮಣ್ಣ ಸೆಟ್ಟಿ ಮೊದಲಾಗಿ ಅನೇಕ ಪ್ರಮುಖರು ಭೋಜನದಲ್ಲಿ ಸಹಭಾಗಿಗಳಾಗಿದ್ದರು.

ಇಲ್ಲಿ ತಾ. ೧೮ಕ್ಕೆ ಬರುವ ಮಾ। ಪಕ್ರ್ಯೋರವರಿಗೆ ಕೆಲವು ಕಡೆಗಳಿಂದ ಮಹಾಜನರ ಪರವಾಗಿ ಮಾನಪತ್ರಕೊಡುವ ಪ್ರಯತ್ನಗಳು ನಡೆದಿದ್ದರೂ ಮಹಾಜನರ ನಿಷೇಧದಿಂದ ಅದು ಸಾಧ್ಯವಾಗಲಿಲ್ಲ.

ನರಿಕೊಂಬು:— ಇಲ್ಲಿಯ ಮಕ್ಕಳಿಗೆ ಯೋಗ್ಯವಾದ ವಿದ್ಯೆಯನ್ನು ಕೊಡುವ ಶಾಲೆಯು ಇಲ್ಲದಿರುವುದರಿಂದ ಇಲ್ಲಿ ಬಹಳ ಹೀನ ಸ್ಥಿತಿಯಲ್ಲಿರುವ ಒಂದು ಖಾಸಗಿ ಶಾಲೆಯನ್ನು ಬೋರ್ಡಿನವರು ವಹಿಸಿಕೊಂಡು ನಡಿಸಿದರೆ ಗ್ರಾಮಸ್ಥರಿಗೆ ಬಹಳ ಉಪಕಾರವಾಗುತ್ತಿತ್ತು. ತಾಲೂಕು ಬೋರ್ಡು ಮೆಂಬರರು ಇದೇ ಗ್ರಾಮದಲ್ಲಿ ವಾಸಿಸಿಕೊಂಡಿರುತ್ತಾ ಮಕ್ಕಳು ಈ ರೀತಿ ವಿದ್ಯಾಭ್ಯಾಸಕ್ಕಾಗಿ ಕಷ್ಟಪಡುವದು ಬಹಳ ಶೋಚನೀಯವಾಗಿದೆ.

ಉಳ್ಳಾಲ:— ಈ ಊರು ಬಹಳ ಜನಸಂಖ್ಯೆಯಿಂದ ತುಂಬಿದ್ದರೂ, ಜನಭರಿತವಾದ ಅನೇಕ ಗ್ರಾಮಗಳು ಸುತ್ತಮುತ್ತಲೂ ಇದ್ದರೂ, ತಾಲೂಕು ಬೋರ್ಡಿನವರು ಇಲ್ಲಿ ಒಂದು ಆಸ್ಪತ್ರೆಯನ್ನು ಇಡದೆ ಇರುವದು ಬಹಳ ದುಃಖಕರವಾಗಿದೆ.

ಮಂಗಳೂರು.

ಜಾಹೀರಾತಿ.

ಮಂಗಳೂರು ತಾಲೂಕು ಕಾಂಗ್ರೆಸು ಕಮಿಟಿಯ ಬರುವ ಸಭೆಯು ತಾ. ೩೦—೧೦—೨೫ನೇ ಶುಕ್ರವಾರ ಅಪರಾಹ್ನ ಘಂಟೆ ೫ಕ್ಕೆ ಮಂಗಳೂರು ಕರ್ನಾಟಕ ತಿಲಕ ವಿದ್ಯಾಲಯದಲ್ಲಿ ಜರಗುವುದು. ಸದಸ್ಯರೆಲ್ಲರೂ ಖಾದಿಯನ್ನು ಧರಿಸುತ್ತ ಬರಬೇಕಾಗಿ ವಿನಂತಿ.

ಸಭೆಯ ಕಾರ್ಯಕ್ರಮ.

೧. ಬರುವ ಕಾನ್ಪುರ ಕಾಂಗ್ರೆಸಿನ ಪ್ರತಿನಿಧಿಗಳನ್ನು ಚುನಾಯಿಸುವುದು. ೨. ಬರುವ ವರ್ಷ ಪ್ರಾಂತಿಕ ಕಮಿಟಿಯ ಪ್ರತಿನಿಧಿಗಳನ್ನು ಆರಿಸುವುದು. ೩. ಮಹಾಸಭೆಯು ಹಾಗೆ ನಿಶ್ಚಯಿಸುವುದಾದರೆ ಜಿಲ್ಲಾ ಕಮಿಟಿಯ ಕಾರ್ಯದರ್ಶಿಯರ ಕಾಗದವನ್ನು ಅನುಸರಿಸಿ ಜಿಲ್ಲಾ ಕಮಿಟಿಯ ಪ್ರತಿನಿಧಿಗಳನ್ನು ಆರಿಸುವುದು. ೪. ಕಳೆದ ತಿಂಗಳ ಅಖೈರಿ ವರೆಗಿನ ಲೆಕ್ಕ. ೫. ನಿಯಮಗಳಲ್ಲಿ ಬದಲಾವಣೆ ವ ಸದಸ್ಯರಿಂದ ತಕ್ಕ ಸಮಯದಲ್ಲಿ ಬರುವ ಸೂಚನೆಗಳು ವ ಪ್ರಶ್ನೆಗಳು ಇವುಗಳನ್ನು ಬರುವ ವಾರದಂಕದೊಳಗೆ ಪ್ರಕಟಿಸಲಾದೀತು. ೬. ಕರ್ನಾಟಕ ತಿಲಕ ವಿದ್ಯಾಲಯದ ಮುಂದಿನ ಸ್ಥಿತಿ. (ಅ) ಶದ್ರಿ ಸಾಧಕಾಶ್ರಮಕ್ಕೆ ಒಯ್ಯಬೇಕೆಂದು ರಾ। ಕಾರ್ನಾಡ ಸದಾಶಿವರಾಯರ ಕಾಗದ. (ಆ) ಸರಿಯಾದ ಕಟ್ಟೋಣ ವಗೈರೆ ಕಟ್ಟಿಸಿ ಯೋಗ್ಯವಾದ ವಿದ್ಯೆಯನ್ನು ಕೊಡುವರೆ ರಾಜಕೀಯ ವಿಷಯದಲ್ಲಿ ಹೆಚ್ಚು ಆಸಕ್ತಿ ಇಲ್ಲದೆ ವಿದ್ಯಾಭಿವೃದ್ಧಿಯಲ್ಲಿ ಶ್ರಮ ತೆಕ್ಕೊಳ್ಳಲಿಕ್ಕೆ ಇಚ್ಛಿಸುವ ಒಂದು ಮಂಡಲಕ್ಕೆ ಒಪ್ಪಿಸಬೇಕೆಂಬ ಇನ್ನೊಂದು ಸೂಚನೆ. (ಇ) ಸಭೆಯ ಮುಂದೆ ಬರಬಹುದಾದ ಇತರ ಸೂಚನೆ. ೭. ಮಹಾಸಭೆಯವರ ಅಪೇಕ್ಷೆ ಇದ್ದರೆ ಕಾರ್ಯನಿರ್ವಾಹಕ ಮಂಡಲಿಯವರ ಚುನಾವಣೆ, ಇಲ್ಲವಾದರೆ ಶ್ರೀ. ಮು. ಉಮೇಶರಾಯರು ಕಾರ್ಯದರ್ಶಿಯರ ಸ್ಥಾನಕ್ಕೆ ರಾಜಿಕೊಟ್ಟಿರುವುದರಿಂದ ಅವರ ಸ್ಥಾನಕ್ಕೆ ಕಾರ್ಯದರ್ಶಿಯರ ಚುನಾವಣೆ. ಇನ್ನುಮುಂದೆ ಖಾಲಿಬೀಳಬಹುದಾದ ಸ್ಥಳಗಳ ಚುನಾವಣೆ. ೮. ಅಧ್ಯಕ್ಷರ ಸಮ್ಮತಿಯಿಂದ ಸಭೆಯ ಮುಂದೆ ಬರಬಹುದಾದ ಇತರ ಜರೂರು ವಿಷಯಗಳು.

ವಿ. ಸೂ.—ಕಳೆದ ಸಪ್ಟಂಬರ ಅಖೈರಿ ವರೆಗೆ ತಪ್ಪದೆ ನೂಲಿನ ಕರ ಯಾ ಆ ಮೇಲೆ ಈ ವರ್ಷದ ೪ ನಾಲ್ಕಾಣೆ ಚಂದಾಹಣ ಕೊಡದೆ ಇದ್ದವರು ವಾರ್ಷಿಕ ಚಂದಾ ನಾಲ್ಕಾಣೆಯನ್ನು ಇಲ್ಲಿಯ ಕಮಿಟಿಗೆ ಕೊಟ್ಟು ಯಾ ೨೦೦೦ ಗಜ ಸ್ವತಹ ನೂತ ನೂಲನ್ನು ಅಖಿಲ ಭಾರತೀಯ ನೂಲುವವರ ಸಂಘಕ್ಕೆ ಕಳುಹಿಸಿರಿ. ಆ ಬಗ್ಗೆ ಅವರಿಂದ ಪಡೆದ ಸರ್ಟಿಫಿಕೇಟನ್ನು ಇಲ್ಲಿ ಕೊಟ್ಟು ನಮ್ಮಿಂದ ಕ್ರಮವಾದ ರಸೀದಿ ಪಡೆದು ಸದಸ್ಯರಾಗಬೇಕೆಂದು ವಿನಂತಿ. (೨) ಸಭೆಗೆ ಬರುತ್ತ ಖಾದಿಯನ್ನು ಧರಿಸದಿದ್ದರೆ ಸಭೆಯ ಕೆಲಸದಲ್ಲಿ ಭಾಗಿಯಾಗಲು ಅವಕಾಶ ಸಿಕ್ಕಲಾರದು. ಸಭೆಗೆ ಪ್ರವೇಶವು ಟಿಕೇಟಿನ ಮೂಲಕವಾಗುವುದು. ನಮ್ಮ ರಿಜಿಸ್ಟ್ರಿಯಲ್ಲಿ ದಾಖಲು ಇಲ್ಲದವರು ಯಾ ರಶೀದಿಯನ್ನು ತೋರಿಸದೆ ಇದ್ದವರು ಮತ್ತು ಖಾದಿಯನ್ನು ಧರಿಸದೆ ಇದ್ದವರಿಗೆ ಸದಸ್ಯರ ಟಿಕೇಟು ಸಿಕ್ಕಲಾರದು. ಟಿಕೇಟುಗಳು ೩ ಗಂಟೆಗೆ ಕೊಡಲು ಆರಂಭವಾಗುವುದು. (೪) ಬಂದಾಣಿ ಕೊಟ್ಟಲ್ಲಿ ಪ್ರೇಕ್ಷಕರ ಟಿಕೇಟು ಸಿಕ್ಕುವುದು. (೫) ಕಾಂಗ್ರೆಸಿಗೆ ಯಾ ಪ್ರಾಂತಿಕ ಕಮಿಟಿಗೆ ಪ್ರತಿನಿಧಿಗಳು ಆಗಲು ಇಚ್ಛಿಸುವವರು ಮುಂಚಿತವಾಗಿ ಬರಹ ಮೂಲಕವಾಗಲಿ ಸ್ವತಹ ಸಭೆಗೆ ಬಂದಾಗಲಿ ತಿಳಿಸುವುದು ಅಗತ್ಯ. (೬) ಸದಸ್ಯರು ಬರುವ ಸಭೆಯಲ್ಲಿ ಕೇಳತಕ್ಕ ಪ್ರಶ್ನೆಗಳ ವ ಸಭೆಯ ಮುಂದೆ ಇಡತಕ್ಕ ಸೂಚನೆಗಳ ನಕಲುಗಳನ್ನು ಅವರವರ ದಸ್ಕತ ನಿಶಿ ತಾ. ೨೨—೧೦—೨೫ನೆ ಅಪರಾಹ್ನ ಗಂಟೆ ೬ರ ಒಳಗೆ ನಮ್ಮ ಖಚೇರಿಗೆ ತಲ್ಪುವ ಹಾಗೆ ಮಾಡಬೇಕಾಗಿ ವಿನಂತಿ. ಹಾಗೆ ಸಮಯಕ್ಕೆ ಬಾರದ ಪ್ರಶ್ನೆಗಳಿಗೆ ಯಾ ಸೂಚನೆಗಳಿಗೆ ಯೋಗ್ಯ ಗಮನ ಸಿಕ್ಕದಿರುವ ಸಂಭವವಿದೆ. (೭) ಕಾಂಗ್ರೆಸಿನ ಪ್ರತಿನಿಧಿಗಳಾಗಿ ಚುನಾಯಿಸಲ್ಪಟ್ಟವರು ತಮ್ಮ ಖರ್ಚಿನಿಂದಲೆ ಕಾಂಗ್ರೆಸಿಗೆ ಹೋಗಿಬರತಕ್ಕದ್ದು. ಅಲ್ಲಿ ಪ್ರತಿನಿಧಿಗಳ ಫೀ ರೂಪಾಯಿ ಒಂದು ಕೂಡ ಕೊಡತಕ್ಕದ್ದು. (೮) ಪ್ರಾಂತಿಕ ಕಮಿಟಿಯ ಸದಸ್ಯರಾಗಲು ಇಚ್ಛಿಸುವವರು ಕೂಡ ತಮ್ಮ ಖರ್ಚಿನಿಂದಲೆ ಸಭೆಗಳಿಗೆ ಹೋಗಿ ಬರತಕ್ಕದ್ದು. ಮತ್ತು ವಾರ್ಷಿಕ ಚಂದಾ ಹಣ ರೂಪಾಯಿ ೫ ಪ್ರಕೃತ ಆ ಕಮಿಟಿಗೆ ಕೊಡತಕ್ಕದ್ದು. ಇನ್ನು ಹೆಚ್ಚಿನ ಮಾಹಿತಿಗೆ ಈ ಕೆಳಗೆ ದಸ್ಕತು ಹಾಕಿದವರಿಗೆ ಬರೆಯತಕ್ಕದ್ದು. (೯) ಈ ಸಭೆಗೆ ಕನಿಷ್ಠ ಹಾಜರಿಲ್ಲವಾದರೆ ಮರುವಾರ ಅದೇ ಸ್ಥಳದಲ್ಲಿ ಅದೇ ಸಮಯದಲ್ಲಿ ಸಭೆ ಸೇರಿ ಕನಿಷ್ಟ ಹಾಜರಿಲ್ಲವಾದರೆ ಅರ್ಧ ಗಂಟೆ ಕಾದು ಆಗ ಸದಸ್ಯರ ಕೆಲಸವನ್ನು ಮುಂದರಿಸಲು ಅರ್ಹರಾಗಿರುತ್ತಾರೆ.

ಮಂಗಳೂರು ಕಾಂಗ್ರೆಸು ಕಮಿಟಿ
ಕಚೇರಿ,
ಮಂಗಳೂರು, ತಾ.೧೬-೧೦-'೨೫

ಅ. ಭೋಜರಾಯ,
ಕಾರ್ಯದರ್ಶಿಯರ ಚಾರ್ಜಿನಲ್ಲಿ ಕೂಡ ಇರುವ ಅಧ್ಯಕ್ಷ.

ಮಂಗಳೂರು ಪಟ್ಟಣದಲ್ಲಿ ೧೯೨೫ನೇ ಇಸವಿ ಒಕ್ಟೋಬರ ೧೨ರ ವರೆಗೆ ಒಂದು ವರ್ಷಕ್ಕಿಂತ ಕೆಳಗೆ ವಯಸ್ಸಿನ ಕೂಸುಗಳ ಮರಣ ಸಂಖ್ಯೆಯು ೧೫೦ ಎಂದು ಪ್ರಕಟವಾಗಿದೆ. ಇದರಲ್ಲಿ ೫೯ ಅಕಾಲ ಜನನದಿಂದಲೂ ಮತ್ತು ೯೧ ಬೇರೆ ಕಾರಣಗಳಿಂದಲೂ ಎಂದು ತಿಳಿದು ಬರುತ್ತದೆ. ಈ ಪ್ರಕಾರ ಶಿಶು ಮರಣವು ಸಾವಿರಕ್ಕೆ ೧೦೫ರಂತೆ ಆಗುವುದು ಆದರೆ ಅಕಾಲ ಜನನದ ಶಿಶು ಸಂಖ್ಯೆಯನ್ನು ಹಿಡಿದರೆ ಸಾವಿರಕ್ಕೆ ೬೪ರಂತೆ ಆಗುವುದು. ಗರ್ಭಧಾರಣೆಯಾದ ಹೆಂಗಸರು ಮಿತಿಮೀರಿದ ಕೆಲಸವನ್ನು ಮಾಡಬಾರದಾಗಿಯೂ, ಸಾಕಾದಷ್ಟು ಆಹಾರವನ್ನು ತಿನ್ನಬೇಕಾಗಿಯೂ, ನಿದ್ರೆ ಲೋಪವಾಗದ ಹಾಗೆ ನೋಡಿಕೊಳ್ಳಬೇಕಾಗಿಯೂ ಸೂಚನೆ. ಪ್ರಸವ ಕಾಲದಲ್ಲಿ ಅಭ್ಯಸ್ತ ವೈಜಣಿಯರನ್ನೇ ತರಿಸಬೇಕು.

ಕರ್ನಾಟಕ ತಿಲಕ ವಿದ್ಯಾಲಯದ ಸಹಾಯಾರ್ಥವಾಗಿ ಮಂಗಳೂರು ಪಟ್ಟಣದಲ್ಲಿ ತಾ. ೧೧—೧೦—'೨೫ನೇ ಅಂತ್ಯವಾಗುವ ವಾರದಲ್ಲಿ ಮುಷ್ಟಿ ಫಂಡಿನಿಂದ ರೂ. ೯—೧೫—೧ ಮತ್ತು ೨೦| ಸೇರು ಅಕ್ಕಿ ಜಮಾ ಬಂದಿರುತ್ತದೆಂದು ಮುಖ್ಯಾಧ್ಯಾಪಕರಾದ ಸು. ಶ್ರೀನಿವಾಸ ರಾವ್ ಇವರು ತಿಳಿಸುತ್ತಾರೆ.

ತಾಂಬೆಯವರ ಎಕ್ಸಿಕ್ಯುಟಿವ್ ಕೌನ್ಸಿಲರಶಿಪ್‌ನಿಂದ ಖಾಲಿಬಿದ್ದ ಸ್ಥಾನಕ್ಕೆ ಡಾ। ಮುಂಜೆ (ಸ್ವರಾಜ್ಯಪಕ್ಷದ ಮುಂದಾಳುಗಳು)ಯವರು ಉಮೇದ್ವಾರರಾಗುವರೆಂದು ಹರಡಿದ ವರ್ತಮಾನವು ಸ್ವರಾಜ್ಯಪಕ್ಷವನ್ನು ಅಪಕೀರ್ತಿಗೆ ತರುವ ಬಗ್ಗೆ ಪ್ರತಿಪಕ್ಷದವರು ಹೂಡಿದ ಸುಳ್ಳುವಾರ್ತೆಯೆಂದು ತಿಳಿಸಲಾಯಿತು.

ಸ್ವರಾಜ್ಯಪಕ್ಷದ ಮುಖಂಡರೊಬ್ಬರು ಸರಕಾರವನ್ನು ಸೇರಿದರು.

ಮಿ। ಎಸ್. ಬಿ. ತಾಂಬೆಯವರು ಮಧ್ಯಪ್ರಾಂತದ ಸ್ವರಾಜ್ಯಪಕ್ಷದವರಾಗಿ ಚುನಾಯಿಸಲ್ಪಟ್ಟ ಮಧ್ಯಪ್ರಾಂತ ನ್ಯಾಯವಿಧಾಯಕ ಕೌನ್ಸಿಲಿನ ಮೆಂಬರರು. ಇವರು ಸ್ವರಾಜ್ಯಪಕ್ಷದ ಮುಂದಾಳುಗಳಾಗಿದ್ದರು. ಕೌನ್ಸಿಲಿನ ಅಧ್ಯಕ್ಷಪದವಿ ಖಾಲಿಬಿದ್ದಾಗ ಇವರು ಸ್ವರಾಜ್ಯಪಕ್ಷದವರಿಂದ ಉಮೇದ್ವಾರರಾಗಿ ನಿಲ್ಲಿಸಲ್ಪಟ್ಟು ಸ್ವರಾಜ್ಯಪಕ್ಷದ ಬಹುಮತದಿಂದ ಆರಿಸಲ್ಪಟ್ಟರು. ಅಧ್ಯಕ್ಷಸ್ಥಾನಕ್ಕೆ ೩,೦೦೦ ರೂಪಾಯಿ ತಿಂಗಳಿಗೆ ವೇತನವನ್ನು ಸ್ವರಾಜ್ಯಪಕ್ಷದವರು ಓಟು ಮಾಡದೆ ವರ್ಷಕ್ಕೆ ಬರೇ ೧೦,೦೦೦ವನ್ನು ಓಟು ಮಾಡಿದರ ಕೋಪ ಇವರಿಗೆ ಸ್ವರಾಜ್ಯ ಪಕ್ಷದ ಮೇಲೆ ಇತ್ತು. ಆ ಮೇಲೆ ಅವರು ತಮ್ಮ ವರ್ತನದ ಮೂಲಕ ಸರಕಾರ ಪಕ್ಷಕ್ಕೆ ಸೇರಲು ಸಿದ್ಧರೆಂದು ತೋರಿಸಿಕೊಡುತ್ತಾ ಸರಕಾರ ನೇಮಕಗಳ ಅಭಿಲಾಷೆಯನ್ನು ತೋರಿಸುತ್ತಿದ್ದರು. ಡಾ। ಮುಂಜೆಯವರು ಕೆಲವು ತಿಂಗಳುಗಳ ಹಿಂದೆ, ಬರ್ಕನ್‌ಹೆಡ್ಡರು ಕೊಟ್ಟ ಪಾರ್ಲಿಮೆಂಟ ಭಾಷಣದ ಮೇಲೆ ಕೌನ್ಸಿಲಿನ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಬಗ್ಗೆ ಸೂಚನೆ ಕೊಟ್ಟಾಗ ಇದೇ ತಾಂಬೆಯವರು ಕೌನ್ಸಿಲಿನ ಮುಂದೆ ಬಾರದಂತೆ ತಮ್ಮ ಅಧ್ಯಕ್ಷತನದ ಅಧಿಕಾರದಿಂದ ನಿರಾಕರಿಸಿದ್ದರು.

ಇವೆಲ್ಲಾ ಕಾರಣಗಳಿಂದ ತಾಂಬೆಯವರಿಗೆ ಎಕ್ಸಿಕ್ಯುಟಿವ್ ಕೌನ್ಸಿಲರ ಪದವಿಗೆ ಸರ್ಟಿಫಿಕೇಟು ದೊರಕಿತು. ಈ ಸರ್ಟಿಫಿಕೇಟಿನ ಸಾರಾಂಶ:— (೧) ಸರಕಾರಿ ನೇಮಕವನ್ನು ನಿರಾಕರಿಸುವ, ದ್ವಿದಳ ಸರಕಾರವನ್ನು ಮುರಿಯಲೆಳಸುವ ಸ್ವರಾಜ್ಯಪಕ್ಷದ ಮುಖಂಡರನ್ನೇ ಸರಕಾರೀ ನೌಕರರಾಗಿ ಮಾಡಿದರಿಂದ ಈಗ ಪ್ರಬಲವಾಗಿರುವ ಸ್ವರಾಜ್ಯಪಕ್ಷಕ್ಕೆ ಉಂಟಾಗುವ ವಜ್ರಾಘಾತ (೨) ಇದರಿಂದ ಮುಂದಿನ ಚುನಾವಣೆಯಲ್ಲಿ ಸರಕಾರಕ್ಕೆ ಶಾಂತಪಕ್ಷದವರ ಮೂಲಕ ಉಂಟಾಗಬಹುದಾದ ಲಾಭ (೩) ಪ್ರಜಾಮತ ವಿರುದ್ಧವಾಗಿ ನಡೆಯಲು ತೋರಿಸಿದ ಸಮರ್ಥತೆ (೪) ದುಡ್ಡಿನ ಅತ್ಯಧಿಕ ಸ್ವಾರ್ಥ.

ಸರ್ ಬಿ. ಪಿ. ಸ್ವಾಂಡೆಸ ಮಧ್ಯಸ್ಥಿಕೆಯಿಂದ ತಾಂಬೆಯವರಿಗೆ ಎಕ್ಸಿಕ್ಯುಟಿವ್ ಕೌನ್ಸಿಲರ ಪದವಿ ಕೊಡುವುದೆಂದಾಯಿತು. ತಾಂಬೆಯವರು ಈ ಪದವಿಯನ್ನು ಸ್ವೀಕರಿಸಿದರು. ಮಿ। ತಾಂಬೆಯವರ ಈ ಕೃತ್ಯಕ್ಕಾಗಿ ಈ ಕೆಳಗಿನ ಅಭಿಪ್ರಾಯಗಳು ಕೊಡಲ್ಪಟ್ಟಿವೆ:—

ಸಿ. ಯಸ್. ರಂಗ ಅಯ್ಯಂಗಾರರವರು ಹೀಗೆ ಹೇಳುವರು:—

ಇದು ಸರ್ ಮೊಂಟೆಗು ಬಟ್ಲರರ ಅಪ್ರತಿಮ ರಾಜತಂತ್ರ. ನನಗೆ ಇದರಲ್ಲಿ ದುಃಖವೂ ಆಶ್ಚರ್ಯವೂ ಆಗುವುದಿಲ್ಲ. ನಾನು ಮಿ। ತಾಂಬೆಯವರನ್ನು ಖಂಡಿಸುವುದಿಲ್ಲ. ಅವರು ದೇಶಕ್ಕೂ ಸ್ವರಾಜ್ಯ ಪಕ್ಷಕ್ಕೂ ಮಹಾ ಸೇವೆಯನ್ನು ಈ ಮೂಲಕ ಮಾಡಿದರು. ಅದು ಅವರ ದೌರ್ಬಲ್ಯಕ್ಕಿಂತಲೂ ಸ್ವರಾಜ್ಯಪಕ್ಷದ ಕಣ್ಣು ಮುಚ್ಚಿ ಹಾಲು ಕುಡಿಯುವ ಬೆಕ್ಕಿನ ಧೋರಣವನ್ನು ತೋರಿಸುತ್ತದೆ. ಈ ಧೋರಣ ಮಧ್ಯಪ್ರಾಂತದಲ್ಲಿಯಲ್ಲದೆ, ಇತರ ಕಡೆಗಳಲ್ಲಿಯೂ ಇದೆ. ರಾಜಕೀಯ ಕಾರ್ಯಗಳಲ್ಲಿ ಮೈದುಡಿಯದ ಮತ್ತು ಸಹನೆಯ ಮತ್ತು ಆತ್ಮಯಜ್ಞದ ತಿಳಿವಿಲ್ಲದವರನ್ನು ವಿಶ್ವಾಸದ ಮತ್ತು ಜವಾಬ್ದಾರಿಯ ಸ್ಥಾನಗಳಲ್ಲೇರಿಸುವುದೇ ಈ ಧೋರಣವಾಗಿದೆ. ತಾಂಬೆಯವರು ಅನೇಕ ವರ್ಷಗಳಿಂದ ಕೊಂಗ್ರೆಸ್ಸಿನಲ್ಲಿದ್ದವರು. ಕೊಂಗ್ರೆಸು ತೀಕ್ಷ್ಣಪಕ್ಷವನ್ನು ಹೊಂದಿದಂದಿನಿಂದ ಅವರು ಹಿಂದಾದವರು. ಅವರು ಸ್ವರಾಜ್ಯಪಕ್ಷಕ್ಕೆ ಸೇರಿದರೂ ಸ್ವರಾಜ್ಯಪಕ್ಷದ ಸೂತ್ರಗಳಲ್ಲಿ ತಮ್ಮ ಮನಸ್ಸನ್ನು ದೃಢಪಡಿಸಲಾರರಾದುದಾದರೆ ಅದು ಅವರ ತಪ್ಪಲ್ಲ. ಇಂಡಿಪೆಂಡೆಂಟ ಲಿಬರಲ್ ಮತ್ತಿತರ ಸಹಕಾರಿಗಳನ್ನು ತಮ್ಮೊಡನೆ ಸೇರಿಸಿಕೊಳ್ಳುವ ಹುಚ್ಚಿನ ವಿಷಯದಲ್ಲಿ ಇದು ಸ್ವರಾಜ್ಯಪಕ್ಷದ ಕಣ್ಣು ತೆರೆಯುವಂತೆ ಮಾಡತಕ್ಕದ್ದು. ಅಂತಹ ಐಕ್ಯವು ಸ್ವರಾಜ್ಯಪಕ್ಷದ ಧ್ಯೇಯಗಳನ್ನು ಬಲಿಯೀಯುವ ವಿಪತ್ತಿನ ಮೂಲಕವೇ ಸಾಧ್ಯವಾಗುವುದು. ಸ್ವರಾಜ್ಯಪಕ್ಷವಾದರೂ ಕರ್ಮಫಲವನ್ನುಣ್ಣಲೇ ಬೇಕು.

ಆರ್. ಕೆ. ಶುಣ್ಮುಖಮ್ ಚೆಟ್ಟಿಯಾರರು ಹೀಗೆ ಹೇಳುವರು:—

ಇದರಿಂದ ಸರಕಾರವು ಒಂದು ಬಹಳ ಕೆಟ್ಟದಾದ ಉದಾಹರಣೆಯನ್ನು ಸ್ಥಾಪಿಸಿದಂತಾಗಿದೆ. ಇಂಗ್ಲೀಷ ಪಾರ್ಲಿಮೆಂಟಿನ ಅಧ್ಯಕ್ಷನು ತಾನು ಅಧ್ಯಕ್ಷನಿರುವ ವರೆಗೆ ಸರಕಾರದಿಂದ ಒಂದು ಬಿರುದನ್ನು ಕೂಡ ಸ್ವೀಕರಿಸುವುದಿಲ್ಲ. ಅಧ್ಯಕ್ಷತನವು ಸರಕಾರಿ ನೌಕರಿಗೆ ಒಂದು ಮೆಟ್ಟಾದರೆ ಅದರ ಸ್ವಾತಂತ್ರ್ಯವು ತಪ್ಪುವುದು. ಸರಕಾರವು ಈ ತರದ ದುರುಪಾಯಗಳಿಗೆ ಇಳಿದುದನ್ನು ನೋಡಿದರೆ ಅದು ತನ್ನ ಸ್ಥಾನವನ್ನು ಗಟ್ಟಿ ಮಾಡಲಿಕ್ಕೆ ಎಷ್ಟರ ತನಕ ಇಳಿಯಬಲ್ಲದೆಂದು ತೋರುತ್ತದೆ. ಹಿಂದುಸ್ಥಾನದಲ್ಲದೆ ಇಂಗ್ಲೆಂಡಿನ ಪ್ರಜಾಭಿಪ್ರಾಯವೂ ಸರಕಾರದ ಮತ್ತು ಮಿ। ತಾಂಬೆಯವರ ವರ್ತನವನ್ನು ಖಂಡಿಸುವುದಾಗಿ ನನಗೆ ನಿಶ್ಚಯವಿದೆ.

ಡಾ। ಮುಂಜೆ (ಮಧ್ಯಪ್ರಾಂತ ಸ್ವರಾಜ್ಯಪಕ್ಷದ ಮುಂದಾಳು):— ಮಿ। ತಾಂಬೆಯವರು ಎಕ್ಸಿಕ್ಯುಟಿವ್ ಕೌನ್ಸಿಲರಶಿಪ್ಪನ್ನು ಒಪ್ಪಿಕೊಂಡುದ್ದು ನಿರಾಶಾಜನಕವಾದರೂ, ಅದು ಅವರ ವೈಯಕ್ತಿಕ ಜವಾಬ್ದಾರಿಯಿಂದ ಅದನ್ನು ಸ್ವೀಕರಿಸಿರುವರಲ್ಲದೆ, ಸ್ವರಾಜ್ಯಪಕ್ಷ ಒಪ್ಪಿಗೆಯಾಗಲೀ ತಿಳುವಳಿಕೆಯೂ ಕೂಡ ಇದ್ದಿಲ್ಲವೆಂದೂ, ಸ್ವರಾಜ್ಯಪಕ್ಷದ ನಿರ್ಬಲತೆಯನ್ನಾಗಲೀ, ಶಿಸ್ತಿನ ಅಭಾವವನ್ನಾಗಲೀ ಅದು ಸೂಚಿಸುವುದಿಲ್ಲವೆಂದೂ ಸ್ಪಷ್ಟವಾಗಿ ತಿಳಿಯಬೇಕು. ಮಂತ್ರಿಮಂಡಲವು ಎಂದಿಗೂ ಸಾಧ್ಯವಿಲ್ಲ. ಮಧ್ಯಪ್ರಾಂತದ ಸ್ವರಾಜ್ಯಪಕ್ಷದೊಳಗಿನ ಮುಂದಿನ ಬದಲಾವಣೆಗಳು ಅಖಿಲ ಭಾರತ ಸ್ವರಾಜ್ಯಪಕ್ಷದ ಮೇಲೆ ಹೊಂದಿವೆ.

ಶ್ರೀಯುತ ಅಭಯಂಕರರು (ಅದೇ ಪ್ರಾಂತ್ಯದ ಮರಾಠಿ ಪ್ರಾಂತಿಕ ಸ್ವರಾಜ್ಯಪಕ್ಷದ ಅಧ್ಯಕ್ಷರು):— ತಾಂಬೆಯವರ ಈ ಸ್ವೀಕಾರವು ತನ್ನನ್ನು ಕಂಪಿಸಿಬಿಟ್ಟಿತು; ತಾನು ಸರಿಯಾಗಿ ಆಲೋಚನೆಮಾಡಬರುವವರೆಗೆ ಯಾವ ಅಭಿಪ್ರಾಯವನ್ನು ಕೊಡಲಾರೆ.

ಶ್ರೀ. ಜೆ. ಎನ್. ಸೇನ್ ಗುಪ್ತ (ಬಂಗಾಳ ಪ್ರಾಂತ್ಯದ ಸ್ವರಾಜ್ಯಪಕ್ಷದ ಅಧ್ಯಕ್ಷರು):— ತಾಂಬೆಯವರ ಸ್ವೀಕಾರವು ತನಗೆ ಪೂರ್ಣ ಆಶ್ಚರ್ಯವನ್ನುಂಟುಮಾಡಿತು. ಅವರು ಸ್ವರಾಜ್ಯಪಕ್ಷೀಯರಾಗಿ ಚುನಾಯಿಸಲ್ಪಟ್ಟ ಕೌನ್ಸಿಲ ಮೆಂಬರರಾಗಿದ್ದರಲ್ಲದೆ, ಸ್ವರಾಜ್ಯ ಪಕ್ಷೀಯರಾಗಿಯೇ ಕೌನ್ಸಿಲ ಅಧ್ಯಕ್ಷಸ್ಥಾನಕ್ಕೆ ಉಮೇದ್ವಾರರಾಗಿದ್ದರು. ಈ ಸ್ವೀಕಾರಕ್ಕೆ ಮೊದಲು ಅವರು ಸ್ವರಾಜ್ಯಪಕ್ಷದ ಸದಸ್ಯತನಕ್ಕೆ ರಾಜಿಕೊಟ್ಟು, ತಾನು ಧೋರಣವನ್ನು ಬದಲಿಸುವೆನೆಂದು ಸೂಚಿಸಬೇಕಿತ್ತು. ಮುಂದಿನ ಸ್ವರಾಜ್ಯಪಕ್ಷದ ಸಭೆಯಲ್ಲಿ—ಸ್ವರಾಜ್ಯಪಕ್ಷೀಯರು ಸಂಬಳವಿರುವ ಯಾವ ಹುದ್ದೆಯನ್ನೂ, ಅದು ಸರಕಾರಿ ನೇಮಕವಿದ್ದಾಗಲಿ, ಚುನಾವಣೆಯಿದ್ದಾಗಲಿ, ಸ್ವೀಕರಿಸಬಾರದು—ಎಂಬ ಠರಾವನ್ನು ತರುವೆನು. ಶಿಸ್ತು ಪಕ್ಷದ ಮೇಲೆ ಸರಿಯಾಗಿ ಹೊರಿಸಲ್ಪಡುವುದೆಂದು ನಮ್ಮ ಸಹಾಯಕರಿಗೆ ಸ್ಪಷ್ಟಪಡಿಸುವೆವು."

ಶಾಸ್ತ್ರೀಯ
ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅನೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ!
ದಶಮೂಲ ಸುಖಪ್ರದಔಷಧಿ!
ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂದೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನೀರನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವೃಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.
ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.
ಹೆಚ್ಚಿನ ಮಾಹಿತಿಗೆ "ಆರ್ಯ ಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರೆಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಶುದ್ಧವಾದ ನೀಲಗಿರಿ ಎಣ್ಣೆ
ತಲೆನೋವು, ಶೀತ, ಇನ್‌ಪ್ಲುಯೆಂಜಾಜ್ವರ,
ವಾತ, ಇತ್ಯಾದಿ ಎಲ್ಲಾ ರೋಗಗಳ
ಮೇಲೆ ಸಿದ್ಧೌಷಧ.
1 ಔನ್ಸು ಬಾಟ್ಲಿ 1ರ ಕ್ರಯ 0—4—0.
ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು.

The Canara Bank Limited, Mangalore.
ಕನರಾ ಬ್ಯಾಂಕ್ ಲಿಮಿಟಡ್, ಮಂಗಳೂರು.

ESTABLISHED JULY 1906.
Authorised and fully paid
up Capital Rs. 300,000-0-0
Reserve and other sinking
Funds „ 259,000-0-0

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ
ತೆತ್ತ ಮೂಲಧನವು ರೂ. 300,000—0—0
ಕ್ಷೇಮನಿಧಿ ಮತ್ತು ಇತರ ಫಂಡುಗಳು
259,000—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರಿಟರಿಗಳಿಗೆ ಬರೆಕೊಳ್ಳುವದು.

Canara Bank Ltd.,
Mangalore, 9th Feb. 1925.

K. Venkat Rao,
Secretary.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ, ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಿಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಪ್ಲೂಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಪಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೨೫ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ೬ಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೨೫ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲ ಪಂಡಿತರು,

ಬ್ರ್ಯಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ,
ಮಂಗಳೂರು ಟಿವನಿಗೆ ಮಾತ್ರ.

Free! Free!! Free!!
ಪ್ರಸಿದ್ಧವಾದ
"ಕಾಮಶಾಸ್ತ್ರ"
ಈಗಲೆ ತಯಾರಾಗಿದೆ.
ಜರೂರಾಗಿ ಬರಿಯುವಲ್ಲಿ ಅಂಚೆಯ ಹಾಸಲು ಸಹ ಇಲ್ಲದೆ ಕಳುಹಿಸುವೆವು.
ಆತಂಕನಿಗ್ರಹ ಔಷಧಾಲಯ,
26 ಬ್ರಾಡ್ವೆ, (ಪೋಷ್ಟು ಬಾಕ್ಸ್ 1252),
ಮದ್ರಾಸ್.

ಬಂದು ನೋಡಿರಿ! ತಿಂದು ನೋಡಿರಿ!
ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ
ಪದಕವನ್ನು
ಬಹುಮಾನವಾಗಿ ಪಡೆದಿರುವ
ಎಸ್. ಪಿ. ಆಚಾರ್ಯ
ಇವರಿಂದ ತಯಾರಿಸಲ್ಪಟ್ಟ
ಉಪ್ಪಿನಕಾಯಿಗಳನ್ನು
ಬಂದು ನೋಡಿರಿ! ತಿಂದು ನೋಡಿರಿ!

ದೇಶಬಂಧುಗಳೇ,
ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸಲ್ಪಡುವ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ ಹುಂಡಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನ್ನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.
ಅವುಗಳನ್ನು ನಮ್ಮಲ್ಲಿಗೆ
ಬಂದು ನೋಡಿರಿ! ತಿಂದು ನೋಡಿರಿ!
ಇಂಡಿಯನ್ ಸ್ವೀಟ್‌ಮಿಟ್ ಮಾರ್ಟ್.
ಮನೋಲ್ಲಾಸಿನಿ ಕಾಫಿ ಕ್ಲಬ್, ಮಾರ್ಕೆಟು ರೋಡು, ಮಂಗಳೂರು. ಅಥವಾ 'ಸದಾನಂದ ಕಾಫಿ ಕ್ಲಬ್' ರಥಬೀದಿ, ಮಂಗಳೂರು.

"ಬಹು ದಿವಸಗಳಿಂದ ಪ್ರಸಿದ್ಧವಾಗುತ್ತಿರುವ ಔಷಧ!"
ರಕ್ತ ಶುದ್ಧಿ
ವಜ್ರಾಂಗ-ಬಿಂದು
ವೀರ್ಯ ವೃದ್ಧಿ ಕಾರಕ

ವಜ್ರಾಂಗಬಿಂದುವೆಂಬ ಈ ಮಹೌಷಧಿಯನ್ನು ಅನೇಕ ಪರ್ವತಗಳಲ್ಲಿ ಉತ್ತಮೋತ್ತಮವಾದ ಮತ್ತು ಅತಿ ಶೀಘ್ರವಾಗಿ ಗುಣ ಕೊಡುವಂತಹ ವನಸ್ಪತಿಗಳ ಅರ್ಕದಿಂದ ಉಪಯುಕ್ತವಾದ ಮತ್ತು ಉತ್ಕೃಷ್ಟತರದ ಭಸ್ಮಗಳ ಮಿಶ್ರಣಮಾಡಿ ಯಾಂತ್ರಿಕ ಸಹಾಯದಿಂದ ಸಿದ್ಧಪಡಿಸಿರುತ್ತದೆ. ಈ ವಜ್ರಾಂಗಬಿಂದುವಿನ ಸೇವನೆಯಿಂದ ಕೆಳಗೆ ಬರೆದ ರೋಗಗಳು ಗುಣವಾಗಿ ಹೊಸ ಮನುಷ್ಯನಾಗುತ್ತಾನೆಂದರೆ ಅತಿಶಯೋಕ್ತಿಯಾಗಲಾರದು.

ಈ ಮಹೌಷಧಿಯ ಸೇವನೆಯಿಂದ, ವಾತ, ಪಿತ್ತ, ಕಫ ಈ ಮೂರು ದೋಷಗಳಿಂದ ಉತ್ಪನ್ನವಾಗುವ ರೋಗಗಳು ಗುಣವಾಗುವವಲ್ಲದೆ, ಸ್ವಪ್ನಜನ್ಯ, ಧಾತುಪಾತ ನಪುಂಸಕತ್ವ, ಪರಮಾ ಮತ್ತು ಗರಮಿ ಇವುಗಳ ಸಮೂಲ ನಾಶವಾಗುತ್ತದೆ. ಬಹು ದಿವಸದಿಂದ ಮೈಯಲ್ಲಿ ಅಂಟಿಕೊಂಡ ಕೆಡಕೆಯಂತಹ ಒಂದೇ ವಾರದಲ್ಲಿ ಗುಣವಾಗುವದು. ಲಘುವಿಗಿಂತ ಮೊದಲು ಅಥವಾ ಕಡೆಗೆ ಸ್ರಾವವಾಗಿ ಹೋಗುವ ಧಾತು ಬಂದಾಗುತ್ತದೆ. ತಿಂದ ಅನ್ನವು ಜೀರ್ಣವಾಗಿ ಮಲವು ಸಂಯಾಗಿ ಹೋಗುವದು ಯಾವದೇ ಕಾರಣದಿಂದ ಬಂದ ಅಶಕ್ತತೆಯೂ ಕಣ್ಣಿಗೆ ಕತ್ತಲೆ ಬಂದಂತಾಗಿ ಬವಳಿ ಬರುವದು, ಕೈಕಾಲುಗಳು ಉರಿಯುವದು, ಮುಂತಾದ ಸಕಲ ವಿಕಾರಗಳೂ ನಾಶಹೊಂದುತ್ತವೆ. ವೀರ್ಯವೃದ್ಧಿ, ರಕ್ತಶುದ್ಧಿಗಳಾಗಿ ಮನುಷ್ಯನು ಬಲವಂತನಾಗುತ್ತಾನೆ. ಪೂರ್ಣ ಗುಣ ಬರಬೇಕಾದರೆ ಮೂರು ಬಾಟ್ಲಿಗಳು ಬೇಕು.

೧ ಬಾಟ್ಲಿಗೆ ರೂ ೧—೪—೦. ೩ ಬಾಟ್ಲಿಗಳಿಗೆ ರೂ. ೩—೪—೦. ೧೨ ಬಾಟ್ಲಿಗಳಿಗೆ ರೂ. ೧೦—೦—೦.
ಇವರ ಹೊರತು ಒಂದು ಬಾಟ್ಲಿಯು ೪ ಆಣೆ. ಟಪ್ಪಾಲು ಪ್ಯಾಕಿಂಗ ಖರ್ಚು ಪ್ರತ್ಯೇಕ. ಒಮ್ಮೆಯೇ ಹೆಚ್ಚಿಗೆ ಬಾಟ್ಲಿಗಳನ್ನು ತರಿಸಿಕೊಂಡರೆ ಟಪ್ಪಾಲು ಖರ್ಚು ಹೆಚ್ಚಿಗೆ ಬೀಳಲಾರದು. ಏಜಂಟರಾಗಲಪೇಕ್ಷಿಸುವವರು ಪತ್ರವ್ಯವಹಾರ ನಡಿಸಿ, ಖುಲಾಸೆ ತಿಳಕೊಳ್ಳಬಹುದು.
ಟಪ್ಪಾಲ ಮತ್ತು ಪ್ಯಾಕಿಂಗ ಖರ್ಚು ಬೇರೆ ಬೀಳುವುದು. ಅನುಪಾನ ಪತ್ರವು ಬಾಟ್ಲಿಯ ಸಂಗಡಲೇ ಕಳಿಸಲ್ಪಡುವುದು.
ಪತ್ತೆ. ಮ್ಯಾನೇಜರ, ಕೆ. ಎಮ್. ಹನುಮಾನ ಪ್ರಸಾದಿಕ ಕಂಪೆನಿ,
ಮು. ಪೋ. ನಿಪ್ಪಾಣೀ, (ಜಿಲ್ಲಾ ಬೆಳಗಾಂವ.)

The Canara Public Conveyance Co., Ltd, Mangalore.

(ESTABLISHED 1914.)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು
- ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು
- ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
- ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
- ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.
- ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಘಟ್ಟಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ—ಈ ಪ್ರಾಂತ್ಯಗಳಿಗೆ ಈ ಕಂಪೆನಿಯು ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,

The Canara Public Conveyance Co., Ltd, Mangalore. S. K

IF OUR MODERN REGULATOR

18 Carat Rolled gold Wrist Watch

Are Purchased at a time, we give

AS A SPECIAL OFFER



The best Decorative wall clock our Modern Regulator made with last wall nut case.

FOR RS. TEN

RS. TEN ONLY

18 Carat Rolled gold wrist watch equal to size of a four annas size. Best mechanism supplied with full leather strap.

IF Separately—The Modern Regulator clock Rs. 5
Required—18 ct. Rolled gold wrist watch Rs. 7

ONLY A FEW IN STOCK

Write Now:— CAPTAIN WATCH CO Y
P. B. 265 MADRAS.

ಆರೋಗ್ಯ ಚಂದ್ರಿಕೆ.

ಸಂಪಾದಕರು: ಡಾಕ್ಟರ್ ಯು. ರಾಮರಾವ್, ಎಲ್. ಎಮ್. ಸಿ. ಎಫ್. ಎಮ್. ಯು. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಚಿಕಿತ್ಸೆಯ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವುದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ ರೂ. ೧—೮—೦; ಬಿಡುಪತ್ರಿಕೆ ಒಂದಕ್ಕೆ ರೂ. ೦—೩—೦. ಹಿಂದಿನ ಸಂಚಿಕೆಗಳು ಕೂಡ ದೊರಿಯುವವು.

ಚಂದಾದಾರರಾಗುವವರು ವಿ. ಪಿ. ಮೂಲಕವಾಗಿ ತರಿಸಿಕೊಳ್ಳುವುದಕ್ಕಿಂತಲೂ ಹಣವನ್ನು ಮುಂಗಡವಾಗಿ ಕಳುಹಿಸುವುದು ಲಾಭಕರ. ಮೊಬಲಗಿನ ಪತ್ರಿಕೆಯನ್ನು ಅಪೇಕ್ಷಿಸುವವರು 'ಆರೋಗ್ಯ ಚಂದ್ರಿಕೆ'ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು.

ಪತ್ರವ್ಯವಹಾರಕ್ಕೆ: 'ಆರೋಗ್ಯ ಚಂದ್ರಿಕೆ'
೩೩೩ ತಂಬುಚೆಟ್ಟಿ ಬೀದಿ, ಮದ್ರಾಸ್.

ಶುದ್ಧ ರೋಮದ ಧಾವಳಿಗಳು.

1 ಮಳ ಉದ್ದ 1¼ ಮಳ ಅಗಲ ರೂ. 1¼ರಿಂದ 2 ವರೆಗೆ, 5 ಮಳ ಉದ್ದ 1½ ಮಳ ಅಗಲ ರೂ. 1½ ರಿಂದ 5 ವರೆಗೆ, 6 ಮಳ ಉದ್ದ 1¼ ಮಳ ಅಗಲ ರೂ. 2¼ರಿಂದ 6 ವರೆಗೆ, 8 ಮಳ ಉದ್ದ 2 ಮಳ ಅಗಲ ರೂ. 3½ರಿಂದ 10 ವರೆಗೆ, 12 ಮಳ ಉದ್ದ 2¼ ಮಳ ಅಗಲ ರೂ. 6ರಿಂದ 12 ವರೆಗೆ, 16 ಮಳ ಉದ್ದ 2¼ ಮಳ ಅಗಲ ರೂ. 9 ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಜಿದ್ದರ್ ರೇಶ್ಮೆ ಮಡಿಗಳು, ಚಾಮರಗಳು, ಕಾಶೀ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, ಬಾಣಲಿಂಗ, ಜಾಘಂಟೆ, ತಾಳ, ಪನ್ನೀರ್‌ದಾನಿ, ಹಿತ್ತಾಳೆಯ ಆಟದ ಸಾಮಾನುಗಳು, ಫೋಟೋ ಉಂಗುರಗಳು ಮತ್ತು ಇನ್ನೂ ಅನೇಕ ಸಾಮಾನುಗಳ ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುವು. ಕ್ಯಾಟಲಾಗ್ ಇನಾಂ.

ವಿಳಾಸ—

ಶಿರೋಮಣಿ ಯು. ನಾರಾಯಣಾಚಾರ್ಯ
ಮತ್ತು ಕಂಪೆನಿ, ಚೌಕಂಬಾ, ಕಾಶೀ ಕ್ಷೇತ್ರ.

ಆಯುರ್ವೇದ ಶಾಸ್ತ್ರಿ ಅಷ್ಟಾವಧಾನಿ,
ಕ. ವೇ. ಸುಬ್ಬರಾವ್, ಯಂ. ಜಿ. ಯು. ಅವರ್ಗಳಿಂದ ತಯಾರಿಸಲ್ಪಟ್ಟದ್ದು.

ಒಂದು ಮಾತ್ರೆ! ಒಂದು ಘಂಟೆಯೊಳಗೆ ಗುಣ!

ಕಾಮಾಮೃತ.

ಈ ಔಷಧವು ಧಾತುಪುಷ್ಟಿಗಾಗಿಯೇ ತಯಾರಿಸಲ್ಪಟ್ಟದ್ದು. ಒಂದು ಮಾತ್ರೆಯನ್ನು ಸೇವಿಸಿದ ಒಂದು ಘಂಟೆಯೊಳಗೆ ಶಕ್ತಿಯನ್ನು ವೃದ್ಧಿಗೊಳಿಸಿ ಎಷ್ಟು ಬಲಹೀನವುಳ್ಳವರನ್ನೂ ಬಲವಂತರನ್ನಾಗಿ ಮಾಡುವದು. ಯಾವ ರೀತಿಯಿಂದಲಾಗಲಿ ಶುಕ್ಲ ನಷ್ಟವಾದಾಗ್ಯೂ ಅಥವಾ ಸ್ವಪ್ನದಲ್ಲಿ ಇಂದ್ರಿಯ ಸ್ಖಲಿತವಾದಾಗ್ಯೂ ಇಲ್ಲವೆ ಮೂತ್ರದೊಂದಿಗೆ ಸೇರಿಯೋ ವ ಮೂತ್ರಚಲನೆಯ ಹಿಂದೋ ಮುಂದೋ ಹೊರಬೀಳುವ ಧಾತುನಷ್ಟವನ್ನಾದರೂ 5 ದಿವಸಗಳಲ್ಲಿ ಗುಣಪಡಿಸುವದು. ಯಾವ ಬಗೆಯ ನರಗಳ ಬಲಹೀನತೆಯನ್ನಾದರೂ ಹೋಗಲಾಡಿಸುವುದು. ಶಕ್ತಿಯಿಲ್ಲದವರು ಈ ಮದ್ದನ್ನು 20ದಿನ ಸೇವಿಸಿದಲ್ಲಿ ಶಕ್ತಿವಂತರಾಗಿ ಸಂಸಾರ ಸುಖವನ್ನೂ ಸಂತತಿ ಲಾಭವನ್ನೂ ಹೊಂದುವರು; ಇದು ನಿಶ್ಚಯ. ಪತ್ರವ್ಯವಹಾರವು ರಹಸ್ಯವಾಗಿ ನಡಿಸಲ್ಪಡುವದು. ಕ್ರಯ 20 ಮಾತ್ರೆಗಳ ಕುಪ್ಪಿ 1ಕ್ಕೆ ರೂ. 2—0—0. ಪತ್ರವ್ಯವಹಾರವು ಇಂಗ್ಲಿಷಿನಲ್ಲಿ ಮಾಡತಕ್ಕದ್ದು.

ಅಮೃತಾಶ್ರಮ,
28 ಎಲ್ಲೂರು, ಕೃಷ್ಣಾಜಿಲ್ಲಾ.

ದಕ್ಷಿಣ ಕನ್ನಡ ಜಿಲ್ಲೆಯ

ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

೧,೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ
ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು
— ತೆಗೆದುಕೊಳ್ಳಿರಿ. —

REGISTERED
TRADE
MARK

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಘಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ದಾರ್ಢ್ಯತೆಯನ್ನೂ ಉಂಟುಮಾಡುವುದು. ಕೈ ಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಾಮಿಸ್ರಿ ಎಂಬುವದು ಕಾಬೂಲ್ ಕಂದಹಾರ ಪ್ರಾಂತ್ಯಗಳಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ಕಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರಿಕಾ, ಬರ್ಮ, ಪಿನಾಂಗ್ ಸಿಂಗಪೂರ್, ಸಿಲೋನ್ ಮತ್ತು ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. ೧ ಡಬ್ಬಿಯನ್ನು ೧೫ ದಿವಸ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. ೩ ಯಾ ೪ ಡಬ್ಬಿಗಳು ಜನ್ಮಾಂತ್ಯದವರೆಗೂ ಪೂರ್ಣವಾಗಿ ಗುಣವನ್ನು ಮಾಡುವವು. ಅನುಪಾನ ಪತ್ರಿಕೆಯು ಡಬ್ಬಿಯ ಸಂಗಡವೇ ಇರುತ್ತೆ. ಹೆಸರು ವಿಳಾಸಗಳನ್ನು ಚೆನ್ನಾಗಿ ತಿಳಿಯುವ ಹಾಗೆ ವಿವರವಾಗಿ ಬರಿಯಬೇಕು. ಕ್ರಯ ಡಬ್ಬಿ ೧ಕ್ಕೆ ರೂ. ೨—೦—೦.

ಟಪ್ಪಾಲು ಖರ್ಚು ೧ ರಿಂದ ೩ ಡಬ್ಬಿಗಳವರೆಗೆ ೦—೮—೦.

ಏಜಂಟರು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯವಾಗಿ ಬೇಕಾಗಿರುತ್ತೆ. ರೂಲ್ಸ್ ತರಿಸಿ ನೋಡಿಕೊಳ್ಳಬಹುದು.

ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಿರಿ.

ಟೆಲಿಗ್ರಾಫ್ ಅಡ್ರೆಸ್, "ಮಿಸ್ರಿ" ಬೆಂಗಳೂರು ಸಿಟಿ.

ಡಿ. ಮನ್ನಾಲಾಲ್,
ಡಿಲ್ಲಿ ನೇಟಿವ್ ಡಾಕ್ಟರ್.
ಸಾಲಂಮಿಸ್ರಿ ಮುರಬ್ಬ ಡಿಪೋ,
ಬೆಂಗಳೂರು ಸಿಟಿ.

Edited, Printed & Published by V. S. Kamath at the M. T. A. SHARADA PRESS, MANGALORE.

Registered: No. M. 498.

ಅಡ್ವಾನ್ಸ್ ಚಂದಾ—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗವರಿಂ । ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆರು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತ ೧೯. ಮಂಗಳೂರು, ತಾರೀಕು ೧೬ನೇ ಶುಕ್ರವಾರ ಒಕ್ಟೋಬರ ೧೯೨೫. ಸಂಚಿಕೆ ೪೩.

Th Canara Banking Corporation, UDIPI, Ltd.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office: UDIPI. Branch: COONDAPOOR.
ಹೆಡ್ ಆಫೀಸು: ಉಡುಪಿ. ಶಾಖೆ: ಕುಂದಾಪುರ.

ಚಂದಾ ಹಾಕಿ ಮುಟ್ಟಿದ ಮೂಲಧನ	ರೂ. 2,25,000—0—0.
ವಸೂಲಾದ ಮೂಲಧನ	ರೂ. 1,71,875—9—11.
ಕ್ಷೇಮನಿಧಿ ವ ಇತರ ಫಂಡುಗಳು	ರೂ. 64,700—0—0.
ಠೇವಣಾತಿಗಳು	ರೂ. 4,83,945—2—9.

— ವಿನಿಯೋಗ —.

ಗವರ್ನಮೆಂಟು ಪ್ರಾಮಿಸರಿ ನೋಟಿನ ಮೇಲೆ	ರೂ. 35,800—0—0.
ಡಿಮಾಂಡು ನೋಟು ವ ಬಾಂಡುಗಳ ಮೇಲೆ	ರೂ. 5,92,445—9—4.
ಚಿನ್ನಾಭರಣ ಮುಂತಾದ ಭದ್ರತೆಸೊತ್ತುಗಳ ಮೇಲೆ	ರೂ. 1,11,658—8—6

ಈ ಕೆಳಗಿನ ಠೇವಣಾತಿಗಳನ್ನು ಅಂಗೀಕರಿಸುವುದಲ್ಲದೆ ಇತರ ಬ್ಯಾಂಕುಗಳ ಮೇಲಿನ ಡ್ರಾಫ್ಟು ಚೆಕ್ಕುಗಳನ್ನೂ ಸಾಹುಕಾರಿ ಹುಂಡಿಗಳನ್ನೂ ವಸೂಲು ಮಾಡುವ ಮತ್ತು ಇತರ ಎಲ್ಲಾ ತರದ ಬ್ಯಾಂಕಿನ ವಹಿವಾಟುಗಳು ನಡಿಸಲ್ಪಡುವವು.

ಠೇವಣಾತಿಗಳು.

ನಿರಖು ಠೇವಣಾತಿಗಳು:—ಸಾ. ಸೆ. 6½ ರಿಂದ 7½ ವರೆಗಿನ ಬಡ್ಡಿಯನ್ನು ಪ್ರತಿ 3 ತಿಂಗಳಿಗೊಮ್ಮೆ ತೆರುವ ಅನುಕೂಲ ವ ಲಾಭದಾಯಕವಾದ ಕರಾರುಗಳ ಮೇಲೆಯೂ.

ಕೆಲಂಚ ಅವಧಿ ಠೇವಣಾತಿಗಳು:—1 ತಿಂಗಳ ನಂತರ 15 ದಿವಸಗಳ ನೋಟೀಸಿಗೊಳಪಟ್ಟು ಹಿಂತೆಗೆಯಬಹುದಾದ ಠೇವಣಾತಿಗಳನ್ನು ಸಾ. ಸೆ. 5ರ ದರದ ಬಡ್ಡಿ ನಡೆವ ದಿನಗಳಿಗೆ ಕೊಡುವ ಕರಾರಿನಿಂದಲೂ

ಚಾಲ್ತಿ ಠೇವಣಾತಿಗಳು:—ದಿನಂಪ್ರತಿ ಇರುವ ಶಿಲ್ಕಿನ ಮೇಲೆ ಸಾ. ಸೆ. 3ರಂತೆ ಬಡ್ಡಿ ತೆರುವ ಕರಾರಿನ ಮೇಲೂ

ಸೇವಿಂಗ್ಸ್ ಬ್ಯಾಂಕು ಠೇವಣಾತಿಗಳು:—ಸಾ. ಸೆ. 4½ರ ಬಡ್ಡಿಯ ಮೇಲೂ

ಸಂಚಯ ಠೇವಣಾತಿಗಳು:—ಮಕ್ಕಳ ವಿದ್ಯಾಭ್ಯಾಸ, ಉಪನಯನ, ವಿವಾಹ ಮುಂತಾದ ಶುಭಕಾರ್ಯಗಳಿಗೆ ಅನುಕೂಲವಾಗಿ ನಿಶ್ಚಯಿಸಿದಂತೆ ತಿಂಗಳು 1ರ ರೂಪಾಯಿ 1ರಂತೆ 13-24-45-84-132 ತಿಂಗಳುಗಳಿಗೆ ವಸೂಲುಪಡಿಸಿಕೊಂಡು ಕಂತುಗಳ ಅವಧಿ ಮುಗಿದ ಮೂರು ತಿಂಗಳಲ್ಲಿ ಆಯಾಯ ಅವಧಿಮೇರೆಗೆ ರೂ. 13—8—0, ರೂ. 25—8—0, ರೂ. 50, ರೂ. 102—8—0 ಮತ್ತು 182—8—0ನ್ನು ಅದೇ ಮೇರೆಗೆ ತಿಂಗಳು 1ರ ರೂಪಾಯಿ 1ರ ಗುಣಿತವೃದ್ಧಿ ಮೊಬಲಗನ್ನು, ತಿಲ್ಲಿ ಆಯಾಯ ಮೊಬಲಗಿನ ಅದೇ ಗುಣಿತವೃದ್ಧಿ ಮೊಬಲಗನ್ನು ತೆರುವ ಕರಾರಿನ ಮೇಲೂ ಅಂಗೀಕರಿಸಲ್ಪಡುವವು.

ಹೆಚ್ಚಿನ ಮಾಹಿತಿ ಸೆಕ್ರೆಟರಿಯವರಿಂದ ತಿಳಿಯಬಹುದು.

ಹೆಡ್ ಬ್ಯಾಂಕಿಂಗ್ ಕೊರ್ಪೊ ಹೆಡ್ ಆಫೀಸು, ಉಡುಪಿ, ತಾ. 30—6—1925.

ನಯಂಪಳ್ಳಿ ಆನಂದ್ರಾವ್,
ಸೆಕ್ರೆಟರಿ ಮತ್ತು ಒಫಿಸಿಯೆಟಿಂಗ್ ಮೆನೇಜರ್.

ಪಂಡಿತ ಬಿ. ರಾಮಕೃಷ್ಣ ಬಾಳಿಗರ :

50 ವರ್ಷ ಅನುಭವದ ಸಿದ್ಧೌಷಧಗಳು

ಮಹಾ ಮದನಕಾಮೇಶ್ವರಿ ಲೇಹ—ಇದನ್ನು ಭಂಗಾರ, ಅಭ್ರಕಭಸ್ಮ, ರಸಸಿಂಧೂರ, ಕಸ್ತೂರಿ, ಕುಂಕುಮಕೇಸರ ವಗೈರೆ ಅಮೂಲ್ಯವಾದ ರಸಾಯನ ದ್ರವ್ಯಗಳಿಂದ ತಯಾರಿಸಲ್ಪಟ್ಟಿರುತ್ತದೆ. ಇದು ಎಲ್ಲಾ ತರದ ನಪುಂಸಕ ರೋಗಗಳನ್ನೂ, ಸ್ವಪ್ನಾವಸ್ಥೆಯಲ್ಲಿ ಧಾತುಪತನೆಯನ್ನೂ ಗುಣಪಡಿಸಿ, ದೇಹಕ್ಕೆ ದಿವ್ಯಕಾಂತಿಯನ್ನೂ, ಪುಷ್ಟಿಯನ್ನೂ, ಪುರುಷತ್ವವನ್ನೂ, ವೀರ್ಯಸ್ತಂಭನವನ್ನೂ ಉಂಟುಮಾಡಿ ಅತ್ಯಾನಂದವನ್ನು ಕೊಡುವುದಲ್ಲದೆ, ಅಜೀರ್ಣ, ಅತಿಸಾರ, ಗ್ರಹಣಿ, ಆಮ್ಲ, ಪಿತ್ತ, ಉದರಶೂಲೆ, ಪ್ರಮೇಹ ವಗೈರೆ ರೋಗಗಳನ್ನು ಗುಣಪಡಿಸುವಲ್ಲಿ ಕೇವಲ ಅಮೃತಸಮಾನವಾಗಿರುವುದು. ಇದನ್ನು ಅಬಾಲವೃದ್ಧರೂ ಸೇವಿಸಬಹುದು.

48 ದಿವಗಳ ವರೆಗೆ ಸಾಕಾಗುವ ಲೇಹ ಸೇರು ೧ರ ರೂ. 3—0—0.

ಸಾರಸ್ವತ ಆರಿಷ್ಟ:—ಇದು ಶ್ರೀ ಧನವಂತ್ರಿಯು ತನ್ನ ಶಿಷ್ಯರಿಗೆಂತ ನಿರ್ಮಿತ ಮಾಡಿದ ಅದ್ಭುತ ಸಮಾನವಾದ ರಸಾಯನವಾಗಿರುತ್ತದೆ. ಇದರ ಸೇವನೆಯಿಂದ ಮೆದುಳು ಸರಿಯಾಗಿ ಜ್ಞಾಪಕ ಶಕ್ತಿಯು ಚೆನ್ನಾಗಿ ಉಂಟಾಗುತ್ತದೆ. ಮಾತಾಡಲಿಕ್ಕೆ ಸರಿಯಾಗಿ ಬಾರದೇ ಇದ್ದವರಿಗೆ ಕಂಠಶುದ್ಧಿಯಾಗಿ ಒಳ್ಳೇ ಸ್ವರ ಉಂಟಾಗುತ್ತದೆ. ಅದ್ದರಿಂದ ಇದನ್ನು ವಿದ್ಯಾರ್ಥಿಗಳೂ ಗಾಯನವನ್ನು ಕಲಿಯುವವರೂ, ಅಬಾಲವೃದ್ಧರೂ ಸ್ತ್ರೀಯರೂ ಸೇವಿಸ ಬಹುದು. 8 ಔನ್ಸು ಬಾಟ್ಲಿ 1ರ ರೂ. 1—0—0.

ಇನ್ನು ಎಲ್ಲಾ ತರದ ಆಯುರ್ವೇದ ಸಿದ್ಧೌಷಧಗಳು ನಮ್ಮಲ್ಲಿ ದೊರಿಯುವವು.

ವಿಳಾಸ:— ಪಂಡಿತ, ಬಿ. ರಾಮಕೃಷ್ಣ ಬಾಳಿಗ, ಬಂಟವಾಳ ದ. ಕ.

ಮಂಗಳೂರು ಏಜಂಟರು:— ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ತೇರುಬೀದಿ, ಮಂಗಳೂರು.

AMRUTANJAN BO
AMRUTAN
Best Indian Pain Balm
Amrutanjan
BOMBAY

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಶತ್ರುವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು.

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿದಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಕಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 2 ಆಣೆ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ ಟೌನ್, ಮದ್ರಾಸು.

109 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಮೂರು ದಿವಸಗಳಲ್ಲಿ ಗುಣಸಿಕ್ಕದಿದ್ದರೆ ಔಷಧಿಯ ಕ್ರಯ ವಾಪಾಸು.

ವೀರ್ಯಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ, ಶರೀರಾನಂದ ! ಮೊದಲಾದ ಸುಖಜೀವನಕ್ಕೆ ಬೇಕಾದ ಆರೋಗ್ಯದಾಯಕ.

ಲೋಕಪ್ರಸಿದ್ಧವಾದದ್ದು! ಅನುಭವಸಿದ್ಧವಾದದ್ದು!!

ಟ್ರೇಡ್ ಮಾರ್ಕ್] ಅಗಸ್ತ್ಯ [ನೋಂದಿ ತಕ್ಕೊಳ್ಳಿರಿ.

ಮನ್ಮಥ ಚಿಂತಾಮಣಿ ಲೇಹ.

(ಜಿಜ್ಞಾಸ್ ಅವಶ್ಯ)

ಅಬಾಲವೃದ್ಧ ಸ್ತ್ರೀಪುರುಷರ ಅನೇಕ ರೋಗಗಳ ಮೇಲೆ ಗುಣಕಾರಿಯಾದದ್ದು.

ಬೋಧಪಾಠಕರವಿದ್ಯಾರ್ಥಿಗೂ, ವಪ್ರಿಕಲ್ಪದವರಿಗೂ, ಸ್ವಪ್ನೇಂದ್ರಿಯವಾಗುವ ಯುವಕರಿಗೂ ಜ್ಞಾನಿಸುಜ್ಞಾನಿಗಳಿಗೂ ಉಪಯೋಗವುಳ್ಳ ಪರಮಾನಂದ ಔಷಧಿ.

1 ಸೇರು ಪಾಚ್ಯಲ್ಯಂತು ಅವಶ್ಯ ಸೇವಿಸಬಹುದು.

1 ಸೇರು ಡಬ್ಬಿ 1ಕ್ಕೆ 2—0—0. ½ ಸೇರು ಡಬ್ಬಿ 1ಕ್ಕೆ 1-9-0.

ವಿ. ಪಿ. [illegible] ಮಾಹಿಗೆ ಬರಲ್ಪಡಿ.

ವಿಳಾಸ— [illegible] ನಾರಾಯಣ ಸೇಟ್,
[illegible]
[illegible]

— ರಥೋತ್ಸವ, ವಿವಾಹ ಉಪನಯನಗಳ ಸಮಯ —
ಸರ್ವರಿಗೂ ಉಡಿಗೆ ತೊಡಿಗೆಗಳು ಬೇಕಾಗುವ ಸಂದರ್ಭ.

ಯಾರು, ಯಾವುದನ್ನು ಇಲ್ಲಿ ಪಡೆಯಬೇಕೆಂಬ ಶಂಕೆಯಿಂದ ವಿಳಂಬ ಮಾಡಬೇಡಿರಿ. ಉಡಿಗೆತೊಡಿಗೆಗಳನ್ನು ಚುನಾಯಿಸಿ ನಿಮಗೆ ಬೇಕಾದ [illegible] ಮಾಹಿತಿಯನ್ನು ಕಳೆದ ಹತ್ತಿಪ್ಪತ್ತು ವರುಷಗಳಿಂದ ಪಡೆದು ನಮ್ಮಲ್ಲಿಯ ವ್ಯಾಪಾರವು ಗಿರಾಕಿಗಳಿಗೆ ಸರ್ವ ತೃಪ್ತಿಯಿಂದಲೂ ಲಾಭಕರವಾಗಿ ಪರಿಣಮಿಸುವಂತೆ ಸಮ್ಮ ಜವಳಿ ಸಂಗ್ರಹವನ್ನು ಮಾಡಿರುತ್ತೇವೆ.

ಗುರ್ಪುರ್ಕಾರ್ ಬ್ರದರ್ಸ್, ರಥಬೀದಿ, ಮಂಗಳೂರು.

ಹೆಡ್ ಆಫೀಸು:—ರಥಬೀದಿ—(ಮೊದಲು ಸುಜೀರ ನಾಗಪ್ಪನಾಯಕ್, ಎಂಡ್ ಕೊ, ಇದ್ದಲ್ಲಿ; ಅಜಿಜುದ್ದೀನ್ ರಸ್ತೆಗೆ ತಿರುಗುವಲ್ಲಿ) ಮಂಗಳೂರು.

ಬ್ರೇಂಚ್ ಆಫೀಸು:—ರಥಬೀದಿ—(ಹಳೇ ತಾಲೂಕು ಕಚೇರಿಯ ಪಡುವರಕ್ಕೆ ಸಮೀಪವಿರುವ ಮಳಿಗೆ) ಮಂಗಳೂರು.

ಈ ದೇಶದ ಪ್ರಖ್ಯಾತವಟ್ಟ ನೇಯಿಗೆಯ ಕೇಂದ್ರಸ್ಥಳಗಳಾದ—ಬನಾರಿಸ್, ಪೂನಾ, ಅಹಮ್ಮದಾಬಾದ್, ಸೂರತ್, ಬೆಂಗಳೂರು, ಧರ್ಮಾವರಮ್, ಕಂಜೀವರಮ್, ಕೊಯಮುತ್ತೂರು, ಮಧುರೆ, ತಂಜಾವೂರು, ಸಂಕೇಶ್ವರ, ಅರ್ಣಿ, ಬಾಡಿನೇಟಿ, ಹುಬ್ಬಳ್ಳಿ, ಇಳಕಲ್, ಗದಗ, ಮದ್ರಾಸು ಈ ಪ್ರಾಂತ್ಯಗಳಲ್ಲಿ ತಯ್ಯಾರಾದ

ಜರಿಸೀರೆಗಳು, ದುಪ್ಪಟ್ಟಾ, ಜರಿಕಾ, ಪೇಟ್ಟಿ, ರೇಶ್ಮೆ ಸೀರೆಗಳು, [illegible] ಸೀರೆಗಳು, [illegible] ರೇಶ್ಮೆ ಸೀರೆಗಳು, [illegible] ಸೀರೆಗಳು, ರೇಶ್ಮೆ ಮಡಿಗಳು, ನಿತ್ಯ ಉಪಯೋಗದ ಸೀರೆಗಳು [illegible]

[illegible] ತಯಾರಿಸಿದ ನೂಲಿನಿಂದ ಮಾಡಿದ—

[illegible]

[illegible]

[illegible]

[illegible]

ಲಿವರ್ ಮೂವ್‌ಮೆಂಟ್ ವಾಚ್.

15 ಮಣಿಗಳಿದ್ದು ರೋಲ್ಡ್‌ಗೋಲ್ಡ ವಾಚ್.

ಈ ಗಡಿಯಾರ ಕೈಗೆ ಕಟ್ಟುವಂಥಾದ್ದಾಗಿ ಸರಿಯಾದ ಸಮಯವನ್ನು ತೋರಿಸಿ ಚಿರಕಾಲ ವರೇಗೆ ಬಾಳುವುದು.

10 ವರುಷದ ವರೆಗೆ ಬಾಳುವ ಗೆರೆಂಟಿ ಇದೆ. ಕ್ರಯ ರೂ. 17—8—0.

11 ಮಣಿಗಳಿದ್ದು ನಿಜವಾದ ರೋಲ್ಡ ಗೋಲ್ಡ ಬಂಗಾರದಿಂದ ತಯಾರಿಸಲ್ಪಟ್ಟು 5 ವರ್ಷದ ಗೆರೆಂಟಿ ಇರುವ ವಾಚಿಗೆ ಕ್ರಯ ರೂ. 12—8—0.

18 ಕೆರೆಟ್ ಇಲೆಕ್ಟ್ರೊ ರೋಲ್ಡ ಗೋಲ್ಡ ವಾಚ್ ಕ್ರಯ ರೂ. 7—0—0. ಲಿವರ್ ಮೂವ್‌ಮೆಂಟ್ 10 ಮಣಿಗಳಿದ್ದ ಬಂಗಾರ ಗಿಲ್ಟುವಾಚ್ ಕ್ರಯ ರೂ. 13—8—0.

ಎಲಾರ್ಮ ಜರ್ಮನ್ ಟ್ಯಾಮ್‌ಪೀಸ್ ಕ್ರಯ ರೂ. 5-0-0.
ಡಬ್ಬಲ್ ಎ. „ „ „ 6-0-0.

"ಬಿ" ಟ್ಯಾಮ್‌ಪೀಸ್ ಕ್ರಯ ರೂ. 2—4—0
ಟಿಕ್—ಟಾಕ್ ವಾಚ್ 1ರ ಕ್ರಯ „ 2—12—0

ಕಂಬ್ಯಾಂಡ್ ಪೆಪರ್ ಕ್ಲಿಪ್ ಟ್ಯಾಮ್‌ಪೀಸ ಹಿತ್ತಾಳಿ ಅಥವಾ ನಿಕ್ಕಲ್ ಕ್ರಯ ರೂ. 6—0—0. ಇನೆಮಲ್ ರೂ. 7—0—0. ಫ್ರೆಂಚ್ ಬೆಡ್ ಫೊಟೋಗಳು ಡಜನ್ 1ರ ಕ್ರಯ ರೂ. 2—4—0.

Emarald Watch Co.,
P. T. MADRAS.

ಪ್ರಸಿದ್ಧ ಪತ್ರಿಕೆ.

ಹೊಸ ಬೀಜಗಳು! ಖಾತರಿಯಾದವು!!

೧೨ ಪ್ಯಾಕೆಟ್ ಉತ್ತಮ ಜಾತಿಯ ವಿದೇಶಿ ತರಕಾರಿ ಬೀಜಗಳು ೧೨ ರಖಂ ... ... ೨-೦-೦.
೧೨ ಪ್ಯಾಕೆಟ್ ನಾಟಿ ತರಕಾರಿ ಬೀಜಗಳು ೧೨ ರಖಂ ... ... ೧-೧೨-೦.
೧೨ ಪ್ಯಾಕೆಟ್ ದೇವರ ಪೂಜೆಗೂ ಮತ್ತು ಅಲಂಕಾರಕ್ಕೆ ಯೋಗ್ಯವಾದ ಹೂ ಬಿಡತಕ್ಕ ಉತ್ತಮವಾದ ೧೨ ರಖಂಗಳ ಬೀಜಗಳು ... ... ೨-೦-೦.

ಈ ಮೇಲ್ಕಂಡ ಬೀಜಗಳನ್ನು ಈ ತಿಂಗಳೊಳಗಾಗಿ ತರಿಸಿಕೊಂಡರೆ, ಪೋಸ್ಟೇಜು ಮತ್ತು ಇತರ ಎಲ್ಲಾ ಚಾರ್ಜುಗಳು ಸೇರಿ, ಮೇಲೆ ನಮೂದಿಸಿರುವ ಮೊಬಲಗಿಗೆ, ವಿ. ಪಿ ಯಿಂದ ಕಳುಹಿಸುತ್ತೇವೆ. ಅಲ್ಲದೆ ಇದರ ಸಂಗಡ ಚಿತ್ರಗಳಿಂದ ಕೂಡಿರುವ ನಮ್ಮ ದೊಡ್ಡ ಕ್ಯಾಟಲಾಗನ್ನು ಕಳುಹಿಸಿ ಕೊಡುತ್ತೇವೆ. ನಮ್ಮಲ್ಲಿ ದೊರಕುವ ಬೀಜಗಳು, ಉತ್ತಮ ತರಹವುಳ್ಳವು. ಮತ್ತು ಖಾತರಿಯಾದವು, ಹುಟ್ಟದೆ ಹೋದರೆ, ಬೇರೆ ಬೀಜಗಳನ್ನು ಬದಲಾಯಿಸಿ ಕೊಡುತ್ತೇವೆ.

ದಿ. ಮೆಜೆಸ್ಟಿಕ್ ನರ್ಸರಿ (ತೋಟ)
ಲಾಲ್‌ಬಾಗ್ (ಕೋಟೆ) ರೋಡ್,
ಬೆಂಗಳೂರು ಸಿಟಿ.

11 ಮಣಿಗಳಿದ್ದು ಬ್ರಿಜ್ ಮೂವ್ಮೆಂಟ್.

22 ಕೆರೆಟ್ ರೋಲ್ಡ್‌ಗೋಲ್ಡ ರಿಸ್ಟ್‌ವಾಚ್.

ಈ ವಾಚ್ ಎಂಟಾಣೆ ಪಾವಲಿಯಷ್ಟು ಸಣ್ಣದಾಗಿ ಬಹು ಚಲೋದಾದ ಇನೆಮಲ್ ಡಾಯಲ್ ಇದ್ದು ಬಹು ಉತ್ತಮವಾಗಿದೆ. 5 ವರ್ಷದಗ್ಯಾರಂಟಿ ಇದೆ. ಕ್ರಯ ರೂ. 12/8

18 ಕೆರೆಟು ಇಲೆಕ್ಟ್ರೊ ರೋಲ್ಡಗೋಲ್ಡ ವಾಚ್ ಕ್ರಯ ರೂ. 7—0—0. "ಬಿ" ಟ್ಯಾಮ್‌ಪೀಸ ರೂ. 2-4-0
9 ಕಾರಾಟ್ 8 ಮಣಿಗಳ ವಾಚ್ 1ರ ಕ್ರಯ 23—0—0.
14 „ „ „ 26—0—0.
14 „ 15 ಮಣಿ „ 36—0—0.
9 „ „ „ 32—0—0.

ಚಲೋದಾದ ಲವ್ ನಕ್ಷೆಗಳು ಡಜನ್ 1ಕ್ಕೆ ರೂ. 2/4.

P. Sambasiva Chetty & Co.,
184 NAINEAPPA NAICKEN ST.
P. T. MADRAS.

Fresh Arrivals

Pear's Solid Brilliantine, Evans Lime-juice Glycerine, Tooth powders Rose water, Syrups of all sorts for drinks, Denatured Spirits, etc., etc.

The Mangalore Trading Association,
Car-Street, MANGALORE,

ಡಾಕ್ಟರುಗಳು ಭಿನ್ನಾಭಿಪ್ರಾಯಪಡುವಾಗ್ಯೆ ತೀರ್ಮಾನಿಸುವದು ಯಾರು?

ಅಂಥಾ ಸಂದರ್ಭಗಳಲ್ಲಿ ಡೆಂಗ್ಯೂ ಮುಂತಾದ ಜ್ವರಗಳನ್ನು ನಿವಾರಿಸುವಂಥಾ "ಬಾಟ್ಲಿವಾಲರ ಏಗ್ಯುಮಿಕ್ಶ್ಚರ್"ನ್ನು ಸರಾಗವಾಗಿಯೂ, ಮತ್ತು ಜ್ವರಗಳನ್ನು ಖಂಡಿತವಾಗಿ ನಿಲ್ಲಿಸುವಂಥಾದ್ದೂ, ಎಲ್ಲಾ ತರದ ಚಳಿಜ್ವರಗಳನ್ನು ಹೋಗಲಾಡಿಸುವಂಥಾದ್ದೂ ಆದ "ಬಾಟ್ಲಿವಾಲರ ಏಗ್ಯುಪಿಲ್ಸ್" ಇದನ್ನು ಉಪಯೋಗಿಸಿರಿ.

ಐ. ಎಮ್. ಎಸ್. ಡಾಕ್ಟರುಗಳಿಂದ ಶಿಫಾರಸು ಮಾಡಲ್ಪಟ್ಟದ್ದು. ಇದರ ಉಪಯೋಗದಿಂದ ಹೃದಯದ ಮೇಲೆ ಯಾವದೊಂದೂ ಬಾಧಕವಿಲ್ಲ. ಅರ್ಧ ಶತಮಾನದಿಂದ ಹಿಂದೂಸ್ಥಾನ, ಬರ್ಮಾ, ಸಿಲೋನ್, ಆಫ್ರಿಕಾ ಇವುಗಳಲ್ಲಿ ಪ್ರಖ್ಯಾತಪಟ್ಟದ್ದಾಗಿರುತ್ತದೆ.

ಅನೇಕ ಹಿಂದೀ ಪ್ರದರ್ಶನಗಳಲ್ಲಿ ಬೆಳ್ಳಿ ಮತ್ತು ಬಂಗಾರದ ಪದಕಗಳನ್ನು ಪಡೆದಿದೆ. ಬಾಟ್ಲಿ ಸಾಮ್ಯದಂತೆನ್ನು ಮಾರ್ವಾರಿಗಳೂ ಕೂಡ ಅದರ ಮೇಲೆ ಹಣವನ್ನು ಮುಂಗಡವಾಗಿ ಕೊಡುತ್ತಾರೆ. ಬಡ ಮತ್ತು ಮಧ್ಯಮ ತರಗತಿಯ ಜನರಿಗೆ ವರಪ್ರದಾನವಾಗಿದ್ದು ಸಂಚಾರ, ಪ್ರಯಾಣ, ದೇಶಾಟನೆಗಳ ಸಮಯದಲ್ಲಿ ಹತ್ತಿರದಲ್ಲಿರಿಸಿಕೊಳ್ಳದಾಗಿರುತ್ತದೆ.

ಬಾಟ್ಲಿವಾಲರ ಬಾಲಾಮೃತ ಅಥವಾ ಟೊನಿಕ್ ಸಿರಪ್.

ಕೆಮ್ಮನ್ನು ಹೋಗಲಾಡಿಸಿ, ಎದೆನೋವನ್ನು ಶಾಂತಗೊಳಿಸಿ, ಜ್ವರವನ್ನು ಉಪಶಮನಿಸಿ, ವಿದ್ಯಾರ್ಥಿಗಳನ್ನು ಶಕ್ತಿವಂತರಾಗಿ ಮಾಡಿ ಧಾತುವರ್ಧನವನ್ನು ಮಾಡುವದರಲ್ಲಿ ಅತ್ಯುತ್ತಮವಾಗಿರುತ್ತದೆ. ಔಷಧವನ್ನು ಒಣಗಿಸಿ ಮಾಡುವಾಗುವಂತೆ ಮಾಡುವುದಲ್ಲದೆ ಅದೇ ಸಮಯದಲ್ಲಿ ಒಳ್ಳೇ ಜೀರ್ಣವನ್ನು ಉಂಟುಮಾಡುವುದು. ದರ ಮೊದಲಾದ ವರ್ತಮಾನವನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಕಾರಿಖಾನೆ:-CAWASHAPUR, BOMBAY.

Dr. H. L. Batliwala & Co., Ltd.,
Sayani Road, P. O. Cadell Road, Bombay. No. 14.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.,
Sayani Road, P. O. Cadell Road, Bombay. No. 14.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟ. ಖ. 9 ಆಣೆ.

ನಮ್ಮ ವಿಳಾಸ:— ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಏಜಂಟರು:— ದಿ. ಊಲನ್ ಮಾರ್ಟ್, ಮಂಗಳೂರು.

ಸಾಂಟೋಲ್ ಕಾಂಪೌಂಡ್.

ಎಲ್ಲಾ ವಿಧದ ಮೇಹಗಳಿಗೂ ರಾಮಬಾಣ.

ಸ್ತ್ರೀ ಪುರುಷರಿಗೆ ರೋಗವು ಸಂಭವಿಸಿದಂದಿನಿಂದಲೂ ಮೇಹ ಜಾಡ್ಯವು ಉಂಟಾಗಿದೆಯೆಂದು ಹೇಳಬಹುದು. ಮೇಹಗಳಲ್ಲಿ ಹಲವು ವಿಧಗಳುಂಟು. ಇವುಗಳಲ್ಲಿ ಸಾಧಾರಣವಾದುದು ಒಂದು ವಿಧವಾದ ಸಾಂಕ್ರಾಮಿಕ ಕ್ರಿಮಿಯಿಂದುತ್ಪನ್ನವಾಗುವುದು. ಇದು ನೋಡಲು ಮರ್ಮದ ಸ್ಥಾನದಲ್ಲಿ ಚರ್ಮದ ಪೊರೆಯನ್ನಾಶ್ರಯಿಸಿ; ಆ ಮೇಲೆ ಅಲ್ಲಿ ಬಾವು, ಬಿಗಿತ, ನೋವು ಉಂಟಾಗಬಹುದು. ಅವರವರ ದೇಹಸ್ಥಿತಿಯನ್ನು ಅವಲಂಬಿಸಿ ಕ್ರಮೇಣ ಅಥವಾ ಶೀಘ್ರದಲ್ಲಿ ವ್ಯಾಪಿಸಿಕೊಂಡು ಬಹುದು. ಇದರಿಂದ ಥಕ್ಕನೆ ತೊಡೆ ಸಂದುಗಳಲ್ಲಿ ತೊಡೆವಾಳವೆಂಬ ಕುರುವೂ ಏಳಬಹುದು. ಇದೇ ಮೇಹದ ವಿಷವು ಶರೀರದಲ್ಲಿ ಹರಡಲೆತ್ನಿಸಿದುದರ ಚಿಹ್ನೆಯೆಂದು ತಿಳಿಯಬೇಕು. ಇದು ಕಣ್ಣುರೆಪ್ಪೆಯ ಒಳಭಾಗದ ನರಗಳಿಗೇನಾದರೂ ಏರಿದರೆ, ಆಗ ಮೇಹನಯನವೆಂದರೆ 'ಗೊನೊರಿಯಲ್ ಅಪ್ತಾಲ್ ಆಮೇಯಿಯಾ' ಎಂಬ ರೋಗವು ಉತ್ಪನ್ನವಾಗುವುದು. ಈ ರೋಗದಿಂದ ಗಾಯದಿಂದ ಸೋರಬೀಳುವ ದ್ರವವು ಅನೇಕ ವಿಧದ ಬಣ್ಣವುಳ್ಳದಾಗಿರುವುದು. ಹೆಂಗಸರಲ್ಲಿ ಈ ರೋಗವು ಮೂತ್ರದ್ವಾರದಲ್ಲಿಯೂ, ಗರ್ಭಾಶಯದಲ್ಲಿಯೂ ನೆಲೆಗೊಂಡಿರಬಹುದು.

ಈ ರೋಗದಂಥ ದುಷ್ಪರಿಣಾಮಕಾರಿಯಾದ ಕೆಟ್ಟರೋಗವು ಮತ್ತೊಂದಿಲ್ಲವೆಂದು ಹೇಳಬಹುದು. ಇದನ್ನು ಹೆಚ್ಚು ಕಾಲ ಹಾಗೆಯೇ ಬಿಟ್ಟರೆ, ಪುರುಷರ ಮೂತ್ರದ್ವಾರದ ಒಳಶಕ್ತಿಯನ್ನು ಹದಗೆಡಿಸಿ ವ್ರಣಬಂಧವನ್ನುಂಟುಮಾಡಿ, ಮೂತ್ರದ್ವಾರವನ್ನು ಕಟ್ಟುವುದು. ಆದ್ದರಿಂದ ಇದಕ್ಕೆ ಕೂಡಲೆ ಔಷಧವನ್ನು ಸೇವಿಸಿ, ಅದರ ಮೂಲೋತ್ಪಾಟನೆ ಮಾಡುವುದುತ್ತಮ. ಹಲವು ವರ್ಷಗಳ ವೈದ್ಯಕೀಯ ಅನುಭವದಿಂದ ಈ "ಸಾಂಟೋಲ್ ಕಾಂಪೌಂಡ್" ಎಂಬ ಔಷಧಿಯನ್ನು ಕಂಡು ಹಿಡಿದಿದ್ದೇವೆ. ಇದರಲ್ಲಿ ಯಾವ ಅಪಾಯಕರವಾದ ಔಷಧಿ ಸಾಮಗ್ರಿಗಳೂ ಇಲ್ಲ. ಇದು ಎಲ್ಲ ಶರೀರಗಳಿಗೂ ಅನುಗುಣವಾಗಿದೆ. ಇದರ ಸೇವನೆಯಿಂದ ರೋಗವು ಗುಣವಾಗುವುದೆಂಬುದರಲ್ಲಿ ಯಾವ ಸಂಶಯವೂ ಬೇಡ. ರೋಗವು ಯಾವ ಸ್ಥಿತಿಯಲ್ಲೇ ಇರಲಿ, ಎಷ್ಟು ಹಳೆಯದೇ ಆಗಿರಲಿ ಅದನ್ನು ವಾಸಿಮಾಡುವುದೇ ಇದರ ಗುಣವು. ಈ ರೋಗವು ಸ್ತ್ರೀ ಪುರುಷರಿರುವೆಡೆಗಳಲ್ಲಿ ಸಾಮಾನ್ಯವಾಗಿರುವುದರಿಂದ ಇದು ಎಲ್ಲರಿಗೂ ಸುಲಭ ದರದಲ್ಲಿ ಸಿಗಬೇಕೆಂದು ಇದರ ಬೆಲೆಯನ್ನು ಕೇವಲ ರೂ. ೨ ಮಾತ್ರ ಇಟ್ಟಿರುವೆವು. ಪ್ಯಾಕಿಂಗ್ ಮತ್ತು ಪೋಸ್ಟು ಖರ್ಚು ಪ್ರತ್ಯೇಕ. ದಿನಕ್ಕೆ ಎರಡು ಸಲ ೧ ಚಾ ಚಮಚೆ ನೀರಿನಲ್ಲಿ ಯಾ ಹಾಲಿನಲ್ಲಿ ಊಟದ ನಂತರ ತೆಕ್ಕೊಳ್ಳುವುದು. ಪತ್ರವ್ಯವಹಾರಗಳೆಲ್ಲ ಗುಪ್ತವಾಗಿರುವುವು. ವಿಶ್ವಾಸಾರ್ಹರಾದ ಏಜಂಟರು ಬೇಕಾಗಿರುವರು. ಹೆಚ್ಚಿನ ಮಾಹಿತಿಗೆ ಬರೆಯಿರಿ.

ದಿ. ಊಲನ್ ಮಾರ್ಟ್,
ಸೋಲ್ ಏಜೆಂಟ್ಸ್,
ಮಂಗಳೂರು, ದಕ್ಷಿಣ ಕನ್ನಡ.

ಶಾಲಿವಾಹನಶಕ ೧೮೪೭ನೆಯ ಕ್ರೋಧನ ಸಂ||ರದ ಆಶ್ವೀಜ ಶು|| ೭ ಶನಿವಾರದಿಂದ ಕ್ರೋಧನ ಸಂ||ರದ ಕಾರ್ತಿಕ ಶು|| ೭ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೫ನೆಯ ತುಲಾ ಡೊಂತೆಲ್.)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೌರಮಾನ	ಸೂರ್ಯ ಉ.	ಸೂರ್ಯ ಅಸ್ತ.
24	ಶನಿ	೭	೧೯.೪೬	ಉ. ಷಾ.	೫೫.೩೧	೮	6.24	6. 7
25	ರವಿ	೮	೧೩.೪೪	ಶ್ರವಣ	೫೧.೨೯	೯	6.24	6. 7
26	ಸೋಮ	೯	೭.೪೬	ಧನಿಷ್ಠಾ	೪೭.೩೨	೧೦	6.24	6. 6
27	ಕುಜ	೧೦	೨.೧೬	ಶತಭಿಷ	೪೩.೪೬	೧೧	6.25	6. 6
28	ಬುಧ	೧೨	೫೭.೩೧	ಪೂ. ಭಾ.	೪೦.೪೪	೧೨	6.25	6. 5
92	ಗುರು	೧೩	೪೮.೨೯	ಉ. ಭಾ.	೩೮.೨೮	೧೩	6.25	6. 5
30	ಶುಕ್ರ	೧೪	೪೫.೩೧	ರೇವತೀ	೩೭. ೨	೧೪	6.25	6. 4

ಮಂಗಳೂರಿನ ವಾಯುಸ್ಥಿತಿ.

Date ತಾರೀಖು	Temperature. ಉಷ್ಣ (ಕಾವು)		Rainfall. ಮಳೆ	
	Maximum ಹೆಚ್ಚಿನದು	Minimum ಕಡಿಮೆ	ದಿವಸದ ಮಳೆ	ಜುಮಲಾ ಮಳೆ.
16	86—7	71—1	2—89	—
17	81—8	72—0	0—02	—
18	88—0	74—8	—	—
19	88—2	75—2	—	—
20	89—0	76—0	—	—
21	89—7	74—2	—	—
22	91—8	75—3	—	133-52

ಮಂಗಳೂರಿನ ಪೇಟೆ ಧಾರಣೆ.

ಜಿನಸು	ಇಂದ	ವರೆಗೆ
	ರೂ. ಅ.	ರೂ. ಅ
ಮಸ್ಕತಿ	8—10	9— 0
ಗುಡ್ಡು ...	8— 4	8— 8
ರಾಶಿ ಸುಗ್ಗಿ ...	7—10	8— 6
ಅವ್ವಲ್ ಬೆಳ್ತಿಗೆ ...	8—12	9—12
ಗುಡ್ಡು ಬೆಳ್ತಿಗೆ ...	8— 0	8— 8
ರಂಗೂನು ಬೆಳ್ತಿಗೆ ಗೋಣಿ ೧ ...	13— 8	14— 8
ಗೋದಿ ಗೋಣಿ ೧ಕ್ಕೆ ...	17— 8	19— 0
ಹುರುಳಿಗೋಣಿ ೧ಕ್ಕೆ ...	9— 8	9— 8
ಕಡಲೆಗೋಣಿ ೧ಕ್ಕೆ ...	12— 0	13— 8
ತೊಗರಿಗೋಣಿ ೧ಕ್ಕೆ ...	12— 8	13— 0
ತೊಗರಿಬೇಳೆ ಗೋಣಿ ೧ಕ್ಕೆ ...	15— 0	20— 0
ಉದ್ದುಗೋಣಿ ೧ಕ್ಕೆ ...	16— 0	16 — 8
ಹೆಸರುಗೋಣಿ ೧ಕ್ಕೆ ...	14— 0	15 — 0
ಊರು ಬೆಲ್ಲ ಖಂಡಿ ೧ಕ್ಕೆ ...	65—	70 — 0
ಉಪ್ಪು ಗೋಣಿ ೧ಕ್ಕೆ ...	4— 4	4— 8
ಕೊಬ್ರಿ ಖಂಡಿ ೧ಕ್ಕೆ ...	115— 0	120 — 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	49— 0	50 — 0
ಹಿಟ್ಟಿಂಡಿ ಖಂಡಿ ೧ಕ್ಕೆ ...	40— 0	—
ಕೊಬ್ರಿ ಎಣ್ಣೆ ಮಣ ೧ಕ್ಕೆ ...	8—12	10 — 0
ಎಳ್ಳೆಣ್ಣೆ ಮಣ ೧ಕ್ಕೆ ...	8— 0	11— 0
ದೀಪದ ಎಣ್ಣೆ ಪೆಟ್ಟಿಗೆ ೧ಕ್ಕೆ ...	-8-8-0	—
ಮೋರಿಸ ಸಕ್ಕರೆ ಮಣ ೧ಕ್ಕೆ ...	4— 0	—
ಊರ ಮೆಣಸಿನಕಾಯಿ ಮಣ ೧ಕ್ಕೆ ...	6— 0	—
ಸಾಸಿವೆ ಮುಡಿ ೧ಕ್ಕೆ ...	8—12	—
ಕೊತ್ತಂಬರಿ ಮುಡಿ ೧ಕ್ಕೆ ...	3—14	4— 0
ಕಾಫಿ ಖಂಡಿ ೧ಕ್ಕೆ ...	345— 0	400— 0
ಬೆಳಗೋಟು ಅಡಿಕೆ ಖಂಡಿ ೧ಕ್ಕೆ ಹಳತು ...	280— 0	290— 0
„ ಹೊಸ ಅಡಿಕೆ	215— 0	215 — 0
ಕಾಳುಮೆಣಸು ಖಂಡಿ ೧ಕ್ಕೆ ...	260— 0	265—
ಯಾಲಕ್ಕಿ ಮಣ ೧ಕ್ಕೆ ...	100 —0	—
ಗೇರುಬೀಜ ಮುಡಿ ೧ಕ್ಕೆ ...	4—12	—
ಕಬ್ಬಿಣ ಖಂಡಿ ೧ಕ್ಕೆ ...	45— 0	65— 0
ಜಾಯಿಕಾಯಿ ತಗಡು ಮಣ ೧ಕ್ಕೆ ...	17— 8	—
ತಾಮ್ರ ಪಾತ್ರಗಳು ಮಣ ೧ಕ್ಕೆ ...	24— 0	—
ಬೆಳ್ಳಿ ಬೆಳ್ಳಿ ನೇರು ೧ಕ್ಕೆ ...	18—10	
ಹಿತ್ತಾಳೆ ತಗಡು ಮಣ ೧ಕ್ಕೆ ...	16— 8	
ಪವನು	13— 7	

ಜ್ಯೋತಿಷ್ಯ ಸಂಗ್ರಹ.

(1) ಬೃಹಜ್ಜಾತಕ ... ...
(2) ಆನಮಾಮಹೇಶ್ವರ ಸಂವಾದ ಎಂಬ ಜ್ಯೋತಿಷ್ಯ ಕಾಲಚಕ್ರ
(3) ಕೇರಳ ಪ್ರಶ್ನೆ ... ...
(4) ಪ್ರಶ್ನೋತ್ತರ ರತ್ನಮಾಲಿಕಾ ... ...
(5) ನವನೀತಾರಿಷ್ಟವು ... ...
(6) ಷಟ್ಪಂಚಾಶಕ್ ಗ್ರಂಥ ... ...
(7) ನಕ್ಷತ್ರ ಚೂಡಾಮಣಿ ಗ್ರಂಥ ... ...
(8) ಮುಹೂರ್ತಪದವೀಗ್ರಂಥ ... ...
(9) ಅಷ್ಟದಿಕ್ಪಾಲಕ ಮಂಗಳಾಷ್ಟಕಗಳು ... ...
(10) ಕಾಲನಿರ್ಣಯಾಧ್ಯಾಯಂ ಗ್ರಂಥ ... ...
(11) ಸವ್ಯಾಖ್ಯಾನ ಕಾಲಾಮೃತ... ... ...

— ಪ್ರಸಂಗದ ಪುಸ್ತಕಗಳು. —

(1) ಸೇತು ಬಂಧನ ... ...
(2) ವಸಿಷ್ಠ ಪುರಾಣ ... ...
(3) ಇಂದ್ರಜೀತು ಕಾಳಗ ... ...
(4) ಚಂಡಭೀಮ ... ...
(5) ಮೈದುನರಾಮನ ಚರಿತ್ರೆ ... ...
(6) ಭಾಮಿನಿ ಷಟ್ಪದಿ ಚೋರ ಕಥೆ ... ...
(7) ಕುಮಾರ ರಾಮನ ಕಥೆ ... ...
(8) ಕೃಷ್ಣದಾನಾಮೃತ ... ...
(9) ಶ್ರೀಕೃಷ್ಣ ಸತ್ಯಭಾಮ ಸಂವಾದ ... ...
(10) ಚಿತ್ರಕೇತು ರಾಜನ ಕಥೆ ... ...
(11) ಬಕಾಸುರ ವಧೆ ... ...
(12) ಬಾಣಾಸುರನ ಕಥೆ ... ...
(13) ರಂಭಾಶುಕ ಸಂವಾದ ... ...
(14) ರುಕ್ಮಿಣೀ ಪರಿಣಯ ... ...
(15) ರಾವಣೋದ್ಭವ ಯಕ್ಷಗಾನ ... ...
(16) ಸಭಾ ಲಕ್ಷಣವು ... ...
(17) ಶ್ರೀ ಕೃಷ್ಣದೀಪಾಶ್ವಮೇಧ ಕಥಾ ... ...
(18) ಚಂದ್ರಮೌಳಿ ಕಾಳಗ ... ...
(19) ಚಿತ್ರವಿಚಿತ್ರ ಕಾಳಗ ... ...
(20) ಯಕ್ಷಗಾನ ಸಾರಂಗಧರನ ಕಥೆ ... ...
(21) „ ಶನಿದೇವರ ಮಹಾತ್ಮೆ ... ...
(22) „ ಹರಿಶ್ಚಂದ್ರನ ಕಥೆ ... ...
(23) ಯಕ್ಷಗಾನ ಬಭ್ರುವಾಹನ ಕಥೆ ...
(24) „ ಚೋರ ಕಥೆ ... ...
(25) „ ಪಾರ್ವತಿ ಕಾರವಂಜ ಕಥೆ ...
(26) „ ಗೋವಿನ ಚರಿತ್ರೆ ... ...
(27) „ ದುಶ್ಯಾಸನ ಕಥೆ ... ...
(28) „ ಸಾನಂದ ಗಣೇಶ್ವರ ಕಥೆ ... ...
(29) „ ಅಂಗದ ಸಾಧನ ... ...

— ಭಜನೆಯ ಪುಸ್ತಕಗಳು. —

(1) ಉಡುಪಿಕ್ಷೇತ್ರ ಮಹಾತ್ಮೆ ... ...
(2) ಹನುಮದ್ರಾಮಾಯಣ ... ...
(3) ಅಧ್ಯಾತ್ಮ ವಿಚಾರ ... ...
(4) ಭಕ್ತಿಮಹಿಮೆ ... ...
(5) ಪ್ರಬಂಧ ಮುಕ್ತಾವಳಿ ... ...
(1) ಹರಿಕೀರ್ತನಾಮೃತಸಾರ ... ...
(2) ಹರಿನಾಮಾಮೃತಂ. ... ...
(3) ರುಕ್ಮಿಣೀ ಕಲ್ಯಾಣ ... ...
(4) ಮಂಗಳ ಗೌರೀಹಾಡು ... ...
(5) ಉದ್ವಾಸನ ಹಾಡು ... ...
(6) ಯಕ್ಷಗಾನ ಗಿಳೀ ಹಾಡು ... ...
(7) ಕನಕದಾಸ ಕಬೀರದಾಸರ ಕೀರ್ತನೆಗಳು ...
(8) ಬೀಗರ ಹಾಡು ... ...
(9) ಭಜನೆಯ ಪದಗಳು ... ...

— ವಿವಿಧ ಪುಸ್ತಕಗಳು. —

(1) ಸದಾಚಾರ ವಿವೇಚನೆ ... ...
(2) ಗೋಪಾಲಕೃಷ್ಣ ಗೋಕಲೆ ... ...
(3) ಶ್ರೀಕೃಷ್ಣ ಸೇವಾಮೃತಂ ... ...
(4) ಪಶ್ಚಾತ್ತಾಪ ಭಾಷ್ಪ ... ...
(5) ಶ್ರೀ ಶ್ರೀಮಹಾ ಭಾಗವತ ... ...
(6) ಉದ್ಧಯನ ಚರಿತ್ರೆ ... ...
(7) ಮಧ್ವಾಚಾರ್ಯರು (ಶ್ರೀಮಾನ್) ... ...
(8) ಯತಿರಾಜವಂಶತಿ ... ...
(9) ಪರಮಾರ್ಥಶತಕಂ ... ...
(10) ಭಕ್ತಿಸುಮಾಂಜಲಿ ... ...
(11) ಸತ್ಯರಾಜ ಪೂರ್ವದೇಶ ಯಾತ್ರೆಗಳು ...
(12) ಕಾಲನಿರ್ಣಯವ್ಯಾಖ್ಯಾನ ... ...
(13) ಅರೇಬಿಯನ್ ನಾಯ್ಟ್ಸ್ 1000 ಪುಟಗಳ ಮೇಲೆ ಇವೆ.

ಪುಸ್ತಕಗಳು ದೊರೆಯುವ ಸ್ಥಳ:— ಶಾರದಾ ಛಾಪಖಾನೆ,
ರಥ ಬೀದಿ, ಮಂಗಳೂರು

ಕನ್ನಡಿಗರೆ! **ವಸಂತ.** ಅಚ್ಚರಿಯಿರಿ

ಈಗಾಗಲೇ ಎರಡನೇ ಸಂಪುಟವು ಆರಂಭಿಸಲಿದೆ.

ಇತಿಹಾಸನಿಧಿ ಎಂದರೆ . . . . ವಸಂತ
ಸಮಾಜಸುಧಾರಕನೆಂದರೆ . . . . . . ವಸಂತ
ಕೈಗಾರಿಕೆಯ ಸಾಮ್ರಾಜ್ಯವೆಂದರೆ . . . . . ವಸಂತ
ಕರ್ನಾಟಕ ಭಾಷಾಸೇವಕನೆಂದರೆ . . . . ವಸಂತ
ದೇಶವಿದೇಶ ಬಂಧುವೆಂದರೆ . . . . . . ವಸಂತ
ಕಾದಂಬರಿಗಳ ಭಂಡಾರವೆಂದರೆ . . . . . ವಸಂತ
ಚಿತ್ರಾಕರ್ಷ ಚಿತ್ರಶಾಲೆಯೆಂದರೆ . . . . . ವಸಂತ
ದೇಶಭಕ್ತನೆಂದರೆ . . . . ವಸಂತ

ಇಂತಹ ವಸಂತನು ಯಾರಿಗೆ ಬೇಕು,
ಯಾರಿಗೆ ಬೇಡ?

48 (ಕ್ರಾನ್ ¼ ಪುಟ ಸ್ಯಾಜನ) ಪುಟಗಳನ್ನು ಮಿಕ್ಕಿದ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3—4—0 ಮಾತ್ರ.

ವ್ಯವಸ್ಥಾಪಕ,
ವಸಂತ ಕಾರ್ಯಾಲಯ,
ಕುಂದಾಪುರ, ದಕ್ಷಿಣ ಕನ್ನಡ

ಬೇಕಾಗಿದ್ದಾರೆ!

ಒಳ್ಳೇ ದೃಢತೆಯುಳ್ಳ ಭದ್ರವಾದ ಇನ್ಶೂರೆನ್ಸ್ ಕಂಪೆನಿಯಲ್ಲಿ ಜೀವವಿಮೆ, ಫ್ಯಾರ್‌ವಿಮೆ, ಮೆರೀನವಿಮೆ ಯಾವತು ವಿಮೆ ಕೆಲಸಗಳನ್ನು ಶೇಖರಿಸಿ ಕೊಡಲು ದಕ್ಷಿಣಕನ್ನಡಾ ಜಿಲ್ಲೆಯಲ್ಲಿ ಯೋಗ್ಯ ಸಬ್-ಏಜಂಟರುಗಳು ಕೂಡಲೆ ಬೇಕಾಗಿದೆ. ಪ್ರತಿಫಲವೆಷ್ಟು ಎಂಬುದನ್ನೂ ಹಿಂದಣ ಅನುಭವವನ್ನೂ ಕುರಿತಾಗಿ ಕೂಡಲೆ ಬರೆದುಕೊಳ್ಳಿರಿ:—

ಮೆಸರ್ಸ್—
ಜೆ. ಡಿ. ನಾಯಿಡಾ ಎಂಡ್ ಸನ್
ಪೋರ್ಟ್ ರೋಡ್, ಮಂಗಳೂರು.

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ
ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ಯಾವಂತರೂ ತಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ಗಾವರ್ಗಿಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನ್ನು ಕುರಿತ ಲೆಕ್ಕಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಅಧಿಕಾರಿಗಳೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪ್ರೋತಕರಿಗೆ ... ... ರೂ. 3—0—0
ಇತರರಿಗೆ, ಪರಸ್ಥಳಕ್ಕೆ, ಪೋಸ್ಟೇಜು ಸೇರಿ „ 2-8-0.
„ ಸ್ಥಳೀಕರಿಗೆ ... „ 1-8-0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪತ್ರಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿಯಬಹುದು.

ಎಡಿಟರ್,
ಬಿ. ಹನುಮಂತಯ್ಯಗೌಡ,
ಅರ್ಥಸಾಧಕ ಪತ್ರಿಕೆ,
ಅರಳೇಪೇಟೆ, ಬೆಂಗಳೂರು, ಸಿಟಿ.

ಮಾರಾಟಕ್ಕೆ ಸಿದ್ಧವಿದೆ.

ಅಮಲ್ದಾರಿ, ವಕಾಲತು, ನಕಲಿನ ಬಗ್ಗೆ ನೋಟು, ಲೋಜಮೆಂಟ್ ಸ್ಕೆಡ್ಯೂಲ, ಪೇಮೆಂಟ್ ಸ್ಕೆಡ್ಯೂಲ, ಬತ್ತಾ ನೋಟು, ಮೆಮೊ ಆಪ್ ಕೊಸ್ಟ್ಸ್, ಮೆಮೊರಂಡಮ್ ಆಪ್ ಎಪ್ಪಿಯರೆನ್ಸ್, ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರ, ವಗೈರೆ ಎಲ್ಲಾ ಫೋರ್ಮುಗಳು ನಮ್ಮಲ್ಲಿ ದೊರೆಯುತ್ತವೆ.

100 ಫೋರ್ಮುಗಳ ಕ್ರಯ 0—12—0,
ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರು
1ರ ಕ್ರಯ 0—2—0.

ಶಾರದಾ ಛಾಪಖಾನೆ,
ತೇರು ಬೀದಿ, ಮಂಗಳೂರು.

Advertisers Note.

A SPECIAL ISSUE OF SPECIAL IMPORTANCE
AND
Concentrated interest with wide circulation.
This is your Opportunity.

Our fortnightly paper, THE SARASWATH will appear in the beginning of December, in a most attractive special issue printed on glaze paper, art paper bound and profusely illustrated.

ADVERTISE & REAP THE BENEFITS OF VERNACULAR ADVERTISEMENT.
RATES MODERATE.

Apply:—
Secretary,
THE SARASWATH,
UDIPI.

ನೋಟೀಸು.

ದಕ್ಷಿಣ ಕನ್ನಡ ಆಫೀಶಿಯಲ್ ರಿಸೀವರರ
ಕೋರ್ಟಿನಲ್ಲಿ,

ದಿವಾಳಿ ಅರ್ಜಿ ನಂಬ್ರ 73/1925.

ಮೊಂತು ಪೆರ್ನಾಂದೀಸ್ ದಿಯೋಗ ಪೆರ್ನಾಂದೀಸರ ಮಗ, ಮಂಗಳೂರು ಶಹರು ಕದ್ರೆ ಗ್ರಾಮದ ಬೆಂದೂರಲ್ಲಿರುವವ. } ಅರ್ಜಿದಾರ.

ಮತ್ತು

1. ಅಲೆಕ್ಸ ಡಿ'ಸೋಜ,
2. ದಿಯೋಗ ರುದ್ರಿಗ್ಸ,
3. ಬೆಂಜಮಿನ ಡಿ'ಸೋಜ,
4. ಮುತ್ತಪ್ಪ ಭಂಡಾರಿ,
5. ಮಾರ್ತಡಿ'ಸೋಜ,

} ಪ್ರತಿವಾದಿ.

ಸದರಿ ಅರ್ಜಿದಾರನು ತನ್ನನ್ನು ದಿವಾಳಿಯೆಂತ ಸ್ಥಾಪಿಸಬೇಕಾಗಿ ಮೇಲಿನ ಅರ್ಜಿಯನ್ನು ದಾಖಲು ಮಾಡಿರುತ್ತಾನೆ. ಮತ್ತು ಸದರಿ ಅರ್ಜಿಯು ಸದರಿ ಕೋರ್ಟು ಮುಂದೆ ತಾರೀಕು 7—11—1925ನೇ ದಿವಸ ಬೆಳಿಗ್ಗೆ ಘಂಟೆ 8ರ ಸಮಯ ತನ್ನಿಗೆ ತೆಗೆಯಲ್ಪಡುವದು. ಸದರಿ ಅರ್ಜಿಯನ್ನು ಆಕ್ಷೇಪಿಸುವವರು ತಮ್ಮ ಆಕ್ಷೇಪಣೆಯನ್ನು ಸದರಿ ಕೋರ್ಟು ಮುಂದೆ ಸದರಿ ತಾರೀಕಿನೊಳಗೆ ಸ್ವತಹ ಅಥವಾ ವಕೀಲದ್ವಾರ ಜಾಹೀರು ಮಾಡಿಕೊಳ್ಳತಕ್ಕದ್ದು ಎಂತ ಈ ಮೂಲಕ ಸರ್ವ ಜನರಿಗೆ ತಿಳಿಸೋಣಾಗುತ್ತದೆ.

ಮಂಗಳೂರು, ತಾ. 15—10—'25 } A. C. GONSALVIS, B. A., B. L.,
Vakil for Petitioner.

ನೋಟೀಸು.

ದಕ್ಷಿಣ ಕನ್ನಡ ಒಫಿಶಿಯಲ್ ರಿಸೀವರ್ ಕೋರ್ಟಿನಲ್ಲಿ

I. P. 77/25.

ಚರ್ದಪ್ಪ ಕಮ್ತಿ—ರಾಮಚಂದ್ರ ಕಮ್ತಿರ ಮಗ ಬಾಳ ಗ್ರಾಮದ ಮಂಗಳಪೇಟೆ } ಅರ್ಜಿದಾರ

ಮತ್ತು

1. ಸುಬ್ರಾಯ
2. ದೇವಪ್ಪ ಕಮ್ತಿ
3. ಮಂಜುನಾಥ ಶ್ಯಾನುಭಾಗ ಎಂಡ್ ಸನ್
4. ರಾಮ ಗಣೇಶ ಕಮ್ತಿ
5. ಕೃಷ್ಣ ಶೆಣೈ ಬ್ರದರ್ಸ್
6. ಸರ್ವೋತ್ತಮ ಪ್ರಭು
7. ಪಾಂಡುರಂಗ ಶ್ಯಾನುಭೋಗ್
8. ಲೂಕ ಡಿಯಾಸ್
9. ಅಣ್ಣಪ್ಪ ಭಂಡಾರಿ ಎಂಡ್ ಕೊ.
10. ಹಸನೆ ಬ್ಯಾರಿ

} ಪ್ರತಿವಾದಿ

ಸದರಿ ಮೇಲ್ಕಂಡ ಕೋರ್ಟಿನಲ್ಲಿ ಸದರಿ ಅರ್ಜಿದಾರನು ದಿವಾಳಿ ಅರ್ಜಿ ದಾಖಲುಮಾಡಿರುತ್ತಾನೆ. ಸದರಿ ಅರ್ಜಿ ತನಿಖೆಯು ತಾ. 24—10—'25ನೇ ಬೆಳಿಗ್ಗೆ 8 ಗಂಟೆಗೆ ಸದರಿ ಕೋರ್ಟಿನಲ್ಲಿ ತನ್ನಿಗೆ ಇಟ್ಟದೆ. ಆಕ್ಷೇಪಿಸುವವರು ಆ ತಾರೀಕಿನ ಒಳಗೆ ಕೋರ್ಟಿಗೆ ಮನವಿಮಾಡಿಕೊಳ್ಳತಕ್ಕದ್ದು.

ತಾ. 19-10-'25, ಮಂಗಳೂರು. } A. MADHAVA PAI.
Pleader for Petitioner.

ಸಾರಸ್ವತ.

ಪ್ರತಿ ದಶಮಿರಿ ಪ್ರಕಟ ಜಾವ್ಚ ಪಾಕ್ಷಿಕ ಪತ್ರಿಕಾ,
ಕೊಂಕಣಿ ಭಾಷೆನ.

ಹೇಮಂತ ಸಂಚೊ, ಮಾರ್ಗಶಿರಾಂತು ಪ್ರಕಟ ಜಾತ್ತಾ,

ಸಾರಸ್ವತ—ಗೌಡಸಾರಸ್ವತ ಸಮಾಜ ಧುರೀಣಾಲಿಂ ಕೊಂಕಣಿ ಭಾಷೆನ ಲೇಖಂ. ಅನೇಕ ಚಿತ್ರಂ; ಸುಂದರ ಗ್ಲೇಜ ಕಾಗದಾರಿ ಮುದ್ರಣ ಆರ್ಟಿರಕ್ಷಾ ಪತ್ರ.

ಲೇಖಕ:— ಶ್ರೀಯುತ ಮಂಗೇಶರಾವ್ ತೆಲಂಗ, ಕಾರವಾರ, ಎಮ್ ಎಮ್. ಶ್ಯಾನುಭಾಗ ಶ್ರೀಧರ ಕಾರವಾರ, ಬಿ. ಆರ್. ಪ್ರಭು ಬಾಬು ಶೇಲ್ ಡುಬು, ಬಿ. ಎಸ್. ಪ್ರಭು ಮೂಡಗೇರಿ, ಎಮ್ ಗೋವಿಂದ ಪೈ ಮಂಜೇಶ್ವರ, ವೈಕುಂಠ ಲಕ್ಷ್ಮಣ ಭಟ್ಟ ಮಂಜೇಶ್ವರ, ಕೆ. ಪದ್ಮನಾಭ ಕಾಮತ್ ಎಮ್. ಎ. ಬಿ. ಎಲ್ ಕಾರ್ಕಳ, ಆರ್. ಕೆ. ಪ್ರಭು ಅಸಿಸ್ಟಾಂಟ ಎಡಿಟರ, ಬೊಂಬೆ ಕ್ರೋನಿಕಲ್ ಮುಂಬೈ, ಇತ್ಯಾದಿ ಅನೇಕ ಲೇಖಕಾಂಲಿಂ ಲೆಖುಂ ಪ್ರಕಟ ಜಾತ್ತಾತಿ.

ನಂತಾ ಅನೇಕ ಸ್ತ್ರೀ ಲೇಖಂ, ಬಾಲ ಲೇಖಂ, ಇತ್ಯಾದಿ ಪ್ರಕಟ ಜಾತಾ.

ಮೋಲ 8 ಆಣೆ. ಟಪ್ಪಾಲ ಖರ್ಚು 1 ಆಣೊ.

ದಶಂಬರ ಭಿತರಿ ಮೋಲ ಪಟೋನು ದಿತ್ತಲ್ಯಾಂಕ ಟಪ್ಪಾಲ ಖರ್ಚು ನಾಫಿ. ಮೋಲ ಸ್ಟಾಂಪ ಮೂಲಕ ಪಟೋಯೆತ.

ವಿಳಾಸು:—— ಕಾರ್ಯದರ್ಶಿ,
ಸಾರಸ್ವತ,
ಉಡುಪಿ,

ನೋಟೀಸು.

ಕಂದಾವರ ಗ್ರಾಮದಲ್ಲಿರುವ ಸಯ್ಯದೆ ಬ್ಯಾರಿಗಳ ಮಗ ಮಾಮು ಬ್ಯಾರಿಯು ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನೆಂದರೆ:—

ನನ್ನ ಬಾಬ್ತು ಪಕೇಟಿನಲ್ಲಿರುವ ರೂ. 11 ಹನ್ನೊಂದು ವ ನನಗೆ ಮೂಳೂರು ಗ್ರಾಮದಲ್ಲಿರುವ ಅಂತಡಪನ ಮಗಳು ಭಾಗಿ ಭಂಡಾರ್ತಿಯು ತಾ. 12—10—'25ರಲ್ಲು ರೂ. 220 ಇನ್ನೂರ ಇಪ್ಪತ್ತಕ್ಕೆ ಬರಕೊಟ್ಟ ಡಿಮಾಂಡ ಪ್ರೊಮಿಸರಿ ನೋಟು ಸಹ ಪಕೇಟು ಸಮೇತ ಎಲ್ಲಿಯೋ ಬಿದ್ದು ಹೋಗಿಯದೆ. ಅವು ನನಗೆ ತಂದುಕೊಟ್ಟಲ್ಲಿ ಆ ರೀತಿ ತಂದು ಕೊಟ್ಟವರಿಗೆ ರೂ. 20 ಇಪ್ಪತ್ತು ಇನಾಮು ಕೊಡುವರೇ ಸಿದ್ಧನಿದ್ದೇನೆ.

ಸಯ್ಯದ್‌ಬ್ಯಾರಿ ಮಗ ಮಾಮುಬ್ಯಾರಿ ರುಜು.
ತಾ. 19—10—'25. ಬೈಲು ಮಾಗಣೆ ಕಂದಾವರ ಗ್ರಾಮ.

ದಕ್ಷಿಣ ಕನ್ನಡ ಆಫೀಶಿಯಲ್ ರಿಸೀವರರ
ಕೋರ್ಟಿನಲ್ಲಿ,

ದಿವಾಳಿ ಅರ್ಜಿ ನಂಬ್ರ 85/1925.

ವೆಂಕಟೇಶ ಕಂಮ್ತಿ, ವಿಶ್ವನಾಥ ಕಂಮ್ತಿರ ಮಗ ಮಂಗಳೂರು ಶಹರು ಕದ್ರಿ ಗ್ರಾಮದಲ್ಲಿರುವವ, } ಅರ್ಜಿದಾರ

ಮತ್ತು

1. ಕುದ್ಪಿ ಗೋಪಾಲ ಶೆಣ್ಯಾ,
2. ಕುಂಬ್ಳೆ ಅನಂತನಾರಾಯಣ ಪ್ರಭು,
3. ಪಡುಬಿದ್ರೆ ವಾಮನ್ ಕಾಮತ್,
4. ಅತ್ತಾವರ ಸೋಮಪ್ಪ,
5. ಗುರ್ಪುರ ಶ್ರೀನಿವಾಸ ಪೈ,
6. ಬೊಳಂತೂರು ಸರ್ವೋತ್ತಮ ಪ್ರಭು,
7. ರಾಮಗಣೇಶ ಕಂಮ್ತಿ ಎಂಡ್ ಸನ್ಸ್,
8. ಕಾಂತರಾಮ ಮಂಗೇಶ ಎಂಡ್ ಕೊ.,
9. ಕಾರ್ಕಳ ಲಕ್ಷ್ಮಣ ಶ್ಯಾನಭಾಗ,
10. ಮಂಗಲ್ಪಾಡಿ ಮಂಜುನಾಥ ಶ್ಯಾನುಭಾಗ,
11. ಹಂಪನಕಟ್ಟೆ ವಿಟ್ಟಪ್ಪ ನಾರಾಯಣ ಶ್ಯಾನಭಾಗ,
12. ಜಿ. ಯೆಸ್. ಸೋಜ ಎಂಡ್ ಕೋ.,
13. ಮಾರ್ಟಿನ್ ಪ್ಯಾಸ್ ಎಂಡ್ ಸನ್ಸ್,
14. ಕಂಕನಾಡಿ ಕೊ-ಓಪರೇಟಿವ್ ಸೊಸ್ಯಾಟಿ,
15. ಯಂ. ಬಾಬು,
16. ಐತಪ್ಪ ಪೂಜಾರಿ,
17. ಕಂಬಾರು ನರಸಿಂಹ ಭಂಡಾರಿ, ಬಿ. ನರಸಿಂಹ ಕಾಮತ್ ಎಂಡ್ ಕೋ.,

ಸದರಿ ಅರ್ಜಿದಾರನು ತನ್ನನ್ನು ದಿವಾಳಿಯೆಂತ ಸ್ಥಾಪಿಸಬೇಕಾಗಿ ಮೇಲಿನ ಅರ್ಜಿಯನ್ನು ದಾಖಲು ಮಾಡಿರುತ್ತಾನೆ. ಮತ್ತು ಸದರಿ ಅರ್ಜಿಯು ಸದರಿ ಕೋರ್ಟು ಮುಂದೆ ತಾರೀಕು 31—10—1925ನೇ ದಿವಸ ಬೆಳಿಗ್ಗೆ ಘಂಟೆ 8ರ ಸಮಯ ತನ್ನಿಗೆ ತೆಗೆಯಲ್ಪಡುವದು. ಸದರಿ ಅರ್ಜಿಯನ್ನು ಆಕ್ಷೇಪಿಸುವವರು ತಮ್ಮ ಆಕ್ಷೇಪಣೆಗಳನ್ನು ಸದರಿ ಕೋರ್ಟು ಮುಂದೆ ಸದರಿ ತಾರೀಕಿನೊಳಗೆ ಸ್ವತಹಾ ಅಥವಾ ವಕೀಲದ್ವಾರ ಜಾಹೀರು ಮಾಡಿಕೊಳ್ಳತಕ್ಕದ್ದು ಎಂತ ಈ ಮೂಲಕ ಸರ್ವ ಜನರಿಗೆ ತಿಳಿಸೋಣಾಗುತ್ತದೆ.

ಮಂಗಳೂರು, ತಾ. 15—10—'25 } A. C. GONSALVIS, B. A., B. L.,
Vakil for Petitioner.

ವಿವಿಧ ವಿಷಯಗಳು.

ಮಂಗಳೂರು ಮಾರ್ಕೇಟ ವಾರ್ಡಿನಲ್ಲಿ ಮುನ್ಸಿಪಾಲಿಟಿಯವರು ಮಾಡಬೇಕಾದ ಬದಲಾವಣೆಗಳು.

ಮಂಗಳೂರನ್ನು ಪ್ಲೇಗುರೋಗವು ಸಂದರ್ಶಿಸುವ ಮೊದಲು ಬಂದರ ಎಂಬ ಭಾಗವು ಬಹಳ ಅನಾರೋಗ್ಯ ಸ್ಥಿತಿಯಲ್ಲಿತ್ತು. ಹೀಗಿದ್ದುದರಿಂದ ಈ ಬಂದರವೆಂಬ ಪ್ರದೇಶವು ಪ್ಲೇಗಿನ ತವರು ಮನೆಯಾಯಿತು. ಅನಂತರ ಅಜಿಜುದ್ದಿನ್ ರೋಡನ್ನು ಅದರ ಶಾಖಾ ಮಾರ್ಗಗಳನ್ನು ಮಾಡಿಸಿದ ಮೇಲೆ ಆ ಭಾಗವು ಆರೋಗ್ಯದ ವಿಷಯದಲ್ಲಿ ಅಭಿವೃದ್ಧಿಯನ್ನು ಹೊಂದಿತು.

ಈಗ ಇದೇ ತರದ ದುರ್ಗತಿಯು ಮಾರ್ಕೇಟ ವಾರ್ಡಿಗೆ ಬಂದೊದಗಿದೆ. ಆದುದರಿಂದ ಈ ಭಾಗವನ್ನು ಅಭಿವೃದ್ಧಿಪಡಿಸುವದು ಮುನಿಸಿಪಾಲಿಟಿಯವರ ಕರ್ತವ್ಯವಾಗಿದೆ. ಆದುದರಿಂದ ಕೈಸುಮ್ಮೆದಾಸ್ತಿಯಿಂದ ವೆಂಕಟ್ರಮಣ ದೇವಸ್ಥಾನದ ವರೆಗೆ ವಿಶಾಲವಾಗಿಯೂ, ನೆಟ್ಟಗಾಗಿಯೂ ಇರುವ ಒಂದು ಮಾರ್ಗವನ್ನು ತೆರೆಯಬೇಕಾಗಿದೆ. ಅದೇ ರೀತಿಯಲ್ಲಿ ಇದಕ್ಕೆ ಸಮಾನಾಂತರವಾಗಿ ಗೊಲ್ಲರಕೇರಿ ರಸ್ತೆಯನ್ನು ತೇರುಬೀದಿಯ ವರೆಗೂ ಕಡಿಯಬೇಕಾಗಿದೆ. ಮಾರ್ಕೇಟಿನ ಬಾಗಿಲಲ್ಲಿ ಗೊಲ್ಲರಕೇರಿಗೆ ತಿರುಗುವಲ್ಲಿರುವ ಕ್ಷೌರಿಕರ ಅಂಗಡಿಗಳನ್ನು ತೆಗೆದು ಮಾರ್ಗವನ್ನು ಸುಲಭದಲ್ಲಿ ಅಗಲಮಾಡಬಹುದು. ಜೋಡುಮಠದ ರಸ್ತೆಯನ್ನು, ಮಂಗಳ ಕೇರಿಯನ್ನು, ಶ್ರೀಮೊಲೇಶ್ವರ ದೇವಸ್ಥಾನಕ್ಕೆ ಹೋಗುವ ರಸ್ತೆಯನ್ನೂ ಅಗಲವಾಗಿಸಬೇಕಾಗಿದೆ. ಮಾರ್ಕೇಟಿನ ಸುತ್ತಲೂ ಕೊಳೆಯು ಬಹಳ ಹೆಚ್ಚಾಗಿರುವುದರಿಂದ ಅದನ್ನು ಸ್ವಚ್ಛಪಡಿಸಬೇಕಾಗಿದೆ. ಈ ರೀತಿಯಲ್ಲಿ ಈ ವಾರ್ಡನ್ನು ಆರೋಗ್ಯ ಸ್ಥಿತಿಯಲ್ಲಿಡಬೇಕೆಂಬುದಕ್ಕೆ ಈ ವರ್ಷದಲ್ಲಿ ಈ ವಾರ್ಡಿನಲ್ಲಿರುವ ಅನೇಕ ಭಯಂಕರವಾದ ರೋಗಗಳೇ ಇದಕ್ಕೆ ಸಾಕ್ಷಿ.

— ಕರೆನ್ಸಿ ನೋಟುಗಳು. —

ಕರೆನ್ಸಿ ನೋಟುಗಳನ್ನು ಅರ್ಧರ್ಧವಾಗಿ ಕತ್ತರಿಸುವ ವಾಡಿಕೆಯನ್ನು ತಪ್ಪಿಸಬೇಕೆಂಬ ಉದ್ದೇಶದಿಂದ ಇಂಡಿಯಾ ಸರಕಾರದ ಫೈನಾನ್ಸ್ ಇಲಾಖೆಯವರು ೧೯೨೧ರ ಕರೆನ್ಸಿ ನೋಟ್ಸ್ ರೀಫಂಡ್ಸ್ ರೂಲ್ಸಿನಲ್ಲಿ ಕೆಲವು ಬದಲಾವಣೆಗಳನ್ನು ಜನರ ತಿಳುವಳಿಕೆ ಮತ್ತು ಸಲಹೆಗಳ ಬಗ್ಗೆ ಇಂಡಿಯಾ ಗಜೆಟಿನಲ್ಲಿ ಪ್ರಕಟಿಸಿರುವರು. ಪ್ರಜಾಭಿಪ್ರಾಯವು ೧೯೨೬ನೇ ಮಾರ್ಚಿ ಅಖೈರಿನೊಳಗಾಗಿ ಇಂಡಿಯಾ ಸರಕಾರಕ್ಕೆ ತಿಳಿಸಲ್ಪಡಬೇಕು. ಆದುದರಿಂದ ಈ ಬದಲಾವಣೆಗಳು ೧೯೨೬ನೇ ಎಪ್ರಿಲ್ ಮುಂಚೆ ಜಾರಿಯಲ್ಲಿ ಬರುವ ಸಂಭವವಿಲ್ಲ.

ಈ ಬದಲಾವಣೆಗಳಲ್ಲಿ ಮುಖ್ಯವಾದವುಗಳು ಎರಡಿರುವವು. ೧. ಐದು ಮತ್ತು ಹತ್ತು ರೂಪಾಯಿಗಳ ಕತ್ತರಿಸಿದ ನೋಟುಗಳನ್ನು ಸರಿಯಾಗಿ ಜೋಡಿಸಿದ್ದರೆ ಈಗಿನಂತೆ ಅವುಗಳ ಬೆಲೆಯು ಪಾವತಿಯಾಗುವುದಾದರೂ, ಸರಿಯಾಗಿ ಜೋಡಿಸದಿರುವ ಈ ನೋಟುಗಳಿಗಾಗಲಿ, ಅವುಗಳ ಅರ್ಧಕ್ಕಾಗಲೀ ಅವುಗಳ ಪೂರಾ ಬೆಲೆಯನ್ನು ಕೊಡಲಾಗುವುದಿಲ್ಲ. ಹರಿದು ಹೋಗಿರುವ ನೋಟುಗಳು ಅರ್ಧಕ್ಕಿಂತ ಜಾಸ್ತಿಯದ್ದು ತನಿಖೆ ಆಫೀಸರಿಗೆ ಅವು ನಿಜವಾದ ನೋಟೆಂದು ತೃಪ್ತಿಯುಂಟಾದರೆ ಅವುಗಳ ಬೆಲೆ ದೊರೆಯುವುದು. ೨. ಐವತ್ತು ರೂಪಾಯಿ ಮತ್ತು ಮೇಲ್ಪಟ್ಟ ಮೊಬಲಗುಗಳ ಅರ್ಧ ನೋಟುಗಳನ್ನು ಯಾವ ಕರೆನ್ಸಿ ಆಫೀಸಿನಲ್ಲಿ ಹಾಜರು ಮಾಡಿದರೂ, ಹಾಗೆ ಹಾಜರು ಮಾಡಿದ ೧೪ ಕೆಲಸದ ದಿನಗಳ ನಂತರ ಆ ನೋಟುಗಳ ಅರ್ಧ ಬೆಲೆಯು ಕೊಡಲ್ಪಡುವುದು. ಈ ಮಧ್ಯೆ ಉಳಿದರ್ಧವನ್ನು ಹಾಜರು ಮಾಡಿದರೆ ನೋಟುಗಳ ಪೂರಾ ಬೆಲೆಯು ಕೊಡಲ್ಪಡುವುದು. ಅರ್ಧ ನೋಟನ್ನು ಮಾತ್ರ ಹಾಜರು ಮಾಡಿ ಪೂರಾ ಬೆಲೆಯನ್ನು ಅಪೇಕ್ಷಿಸುವುದಾದರೆ ಹಾಲಿ ಇರುವ ರೂಲ್ಸಿನಂತೆಯೇ ಮುಂದೆಯೂ ನಡೆಸಲಾಗುವುದು. ಆದರೆ ಆರು ತಿಂಗಳು ಅಥವಾ ಒಂದು ವರ್ಷದೊಳಗಾಗಿ ಮೊಬಲಗನ್ನು ಪಡೆಯುವುದಕ್ಕೆ ಬದಲಾಗಿ, ೩ ಅಥವಾ ೮ ವರ್ಷಗಳ ಅನಂತರ ಪಡೆಯುವರು.

ಈ ಬದಲಾವಣೆಗಳಿಂದ ಅರ್ಧ ನೋಟುಗಳಿಗೆ ಅವುಗಳ ಅರ್ಧ ಬೆಲೆಯನ್ನಾದರೂ ಬೇಗ ಪಡೆಯಲು ಅನುಕೂಲವಾಗುತ್ತದೆ. ಆದರೆ ಪೂರಾ ಬೆಲೆಯನ್ನು ಪಡೆಯಲು ಈಗಿಗಿಂತಲೂ ದೀರ್ಘಕಾಲ ನಿರೀಕ್ಷಿಸಬೇಕಾಗುವುದು. ಈ ಸಂದರ್ಭದಲ್ಲಿ ಜನರು ನೋಟುಗಳನ್ನು ಅರ್ಧರ್ಧವಾಗಿ ಕತ್ತರಿಸುವ ಪದ್ಧತಿಯನ್ನು ಬಿಡುತ್ತಾ ಬರುವರೆಂದು ನಂಬಲಾಗಿದೆ.

ಪರದೇಶಿ ಸಕ್ಕರೆಯ ಅಪವಿತ್ರತೆ.

(ದಾವಣಗೆರೆಯ ಪ್ರಾಚೀಪ್ರಯಾ ಜ್ಞಾನಪ್ರಸಾರಕ ಸಂಘದಿಂದ.)

ಪರದೇಶದಿಂದ ಪ್ರತಿ ವರ್ಷ ಹಿಂದುಸ್ಥಾನಕ್ಕೆ ಸಾಧಾರಣ ೨೦ ಕೋಟಿ ರೂಪಾಯಿಗಳ ಸಕ್ಕರೆಯು ಬರುತ್ತಾ ಇದೆ. ಈ ಸಕ್ಕರೆಯನ್ನು ಚಹಾ, ಕಾಫಿ, ಮಿಠಾಯಿ, ಬೆಂಡು, ಬತ್ತಾಸು ಮತ್ತು ನಾನಾ ಪ್ರಕಾರದ ಪಕ್ವಾನ್ನಗಳಿಗೆ ಹಾಕಿ ಕೋಟ್ಯಾಂತರ ಜನರು ಸೇವಿಸುತ್ತಿದ್ದಾರೆ. ಈ ಪರದೇಶೀ ಸಕ್ಕರೆಯು ಯಾವ ಪ್ರಕಾರ ಮಾಡಲ್ಪಡುತ್ತದೆಂಬುದು ಬಹು ಜನರಿಗೆ ಗೊತ್ತಿಲ್ಲ. ಗೊತ್ತಿದ್ದರೆ ಅವರು ಈ ಅತ್ಯಂತ ಅಪವಿತ್ರವಾದ ಸಕ್ಕರೆಯನ್ನು ಕೈಯಿಂದ ಕೂಡ ಮುಟ್ಟುತ್ತಿರಲಿಲ್ಲ. ಅದ ಕಾರಣ ಸಕಲರಿಗೂ ತಿಳಿಯಲೆಂದು ಪರದೇಶಗಳಲ್ಲಿ ಸಕ್ಕರೆಯನ್ನು ಮಾಡುತ್ತಿರುವ ರೀತಿಯನ್ನು ಇದರಡಿ ವಿವರಿಸಿದೆ.

ಮಿ| ಟೇಲರ್ ಸಾಹೇಬರು 'ಇಂಗ್ಲಂಡ ದೇಶದ ಜ್ಞಾನಕೋಶ' ಎಂಬ ಗ್ರಂಥದ ೨ನೇ ಭಾಗದ ೯೨೭ನೇ ಪುಟದಲ್ಲಿ ಸಕ್ಕರೆಯನ್ನು ಮಾಡುವ ವಿಧಾನವನ್ನು ಬರೆದಿರುವುದೇನೆಂದರೆ:—

ಆಕಳು, ಎತ್ತು, ಎಮ್ಮೆ, ಕತ್ತೆ, ಕುದುರೆ, ಹಂದಿ, ನಾಯಿ ಮತ್ತು ಒಂಟೆ ಮೊದಲಾದ ಪ್ರಾಣಿಗಳ ಎಲುಬನ್ನು ಪುಡಿ ಮಾಡಿ, ಆ ಪುಡಿಯನ್ನೂ ಅವುಗಳ ರಕ್ತವನ್ನೂ ಸಕ್ಕರೆಯ ಪಾಕಕ್ಕೆ ಹಾಕುವುದರಿಂದ, ಅದರಲ್ಲಿಯ ಕಲ್ಮಷವೆಲ್ಲ ಮೇಲಕ್ಕೆ ಬಂದು ಸಕ್ಕರೆಯು ಬಹು ಬೆಳ್ಳಗಾಗುವುದು ಮತ್ತು ಅದರಲ್ಲಿ ಎಲುಬಿನ ಚೂರ್ಣವೂ ಕೂಡಿಕೊಂಡಿರುವುದು. ಶ್ರೀ ಸ್ವಾಮಿ ಭಾಸ್ಕರಾನಂದಜೀಯವರು, ತಾವು ಇಂಗ್ಲಂಡಕ್ಕೆ ಹೋದಾಗ ಒಂದು ಸಕ್ಕರೆಯ ಕಾರ್ಯಾಲಯಕ್ಕೆ ಹೋಗಿದ್ದರಾಗಿಯೂ ಅಲ್ಲಿ ಗೋಚರವಾದಂತಹ ದುರ್ದಶನ ಬರಲು ವಿಚಾರಮಾಡಿದ್ದರಲ್ಲಿ ಪ್ರಾಣಿಗಳ ರಕ್ತವನ್ನು ಹಾಕಿ ಸಕ್ಕರೆಯನ್ನು ಕುದಿಸುತ್ತಿದ್ದಂತ ಉತ್ತರ ಬಂದಿತಾಗಿಯೂ ಸದರಿ ಮಹನೀಯರು ಪ್ರಕಟಮಾಡಿದ್ದಾರೆ. ಅಂದಮೇಲೆ ಇಂಥ ಪಾಪಿ, ಅಪವಿತ್ರ ಸಕ್ಕರೆಯು ಉಪಯೋಗಕ್ಕೆ ಎಂದಿಗೂ ಯೋಗ್ಯವಾಗಲಾರದು. ದೇಶಗಳಲ್ಲಿ ಸಾಂಕ್ರಾಮಿಕ ರೋಗಗಳನ್ನು ಹರಡಿ, ಅನೇಕ ಜನರ ಪ್ರಾಣಗಳನ್ನು ಹರಣಮಾಡಿದ್ದು ಇದೇ ಸಕ್ಕರೆಯು. ಇನ್ನಾದರೂ ಇದನ್ನು ಬಹಿಷ್ಕರಿಸಬಾರದೇ!

ಸ್ಫುಟ ವಿಚಾರಗಳು.

ಕೊಂಗ್ರೆಸ್ ಚಂದಾಹಣದ ಹೊಸ ಬದಲಾವಣೆಯ ಹೊಸ ತೊಂದರೆ.

ಕೊಂಗ್ರೆಸ್ ಸದಸ್ಯತನದ ಚಂದಾ ನಿರ್ವಾಣವನ್ನು ತಿಂಗಳಿಗೆ ೨೦೦೦ ವಾರು ಕೈನೂಲಿನ ಬದಲಿಗೆ ವರ್ಷಕ್ಕೆ ನಾಲ್ಕಾಣೆಯಾಗಿ ನಿಯಮಿಸಿರುವುದರಿಂದ ಸದಸ್ಯರ ಸಂಖ್ಯೆಯು ಹೆಚ್ಚುತ್ತಾಯಿತಲ್ಲದೆ ಎಲ್ಲಾ ರಾಜಕೀಯ ಪಕ್ಷಗಳು ಸೇರುವಂತಾಗಿದ್ದರೂ, ಕೊಂಗ್ರೆಸಿನ ಶಿಸ್ತು ರಕ್ಷಿಸಲ್ಪಡಲು ಕಷ್ಟ ಬೋಧೆಯಾಗುತ್ತಿದೆಯೆಂದು ತೋರುತ್ತಿದೆ.

ಮುಂಬಾಯಿಯಲ್ಲಿ, ಈ ಚಂದಾ ಬದಲಾವಣೆಯ ನಂತರ, ಹದಿನೈದು ದಿನಗಳೊಳಗೆ ೧೦೦೦೦ ಸದಸ್ಯರನ್ನು ಅಲ್ಲಿಯ ಕಮಿಟಿಯು ಕೂಡಿಸಿಕೊಂಡದೆ. ಮೊನ್ನೆ ಮುಂಬಾಯಿಯ ಪ್ರಾಂತಿಕ ಕೊಂಗ್ರೆಸ ಕಮಿಟಿಗೆ ಚುನಾವಣೆಗಳಾದವು. ಒಂದು ವಾರ್ಡಿನಲ್ಲಿ ೧೦ ಸ್ಥಾನಗಳಿಗೆ ೪೦ ಉಮೇದ್ವಾರರಿದ್ದರು. ಈ ಉಮೇದ್ವಾರರೊಳಗೆ ಹೆಚ್ಚಿನವರು ಸ್ವರಾಜ್ಯ ಪಕ್ಷದವರೂ ಅಲ್ಲ; ಬೇಡಬದಲಾವಣೆಯ ಪಕ್ಷದವರೂ ಅಲ್ಲ. ಕಮಿಟಿಯು ಪ್ರಥಮತಃ ಮತದಾರರು ಮತದಾನದ ಸಮಯದಲ್ಲಿ ಖದ್ದರ ಧರಿಸಬೇಕೆಂದು ನಿಯಮ ಮಾಡಿದರು. ಖದ್ದರ ವಿರೋಧಿಗಳು ಅದನ್ನು ಬಲವಾಗಿ ವಿರೋಧಿಸಿದುದರಿಂದ ಈ ನಿಯಮವನ್ನು ಹಿಂದೆಗೆಯಬೇಕಾಯಿತು. ಫಲವಾಗಿ ಪರದೇಶದ ವಸ್ತ್ರಗಳನ್ನು ಧರಿಸಿದ ಅನೇಕ ಮತದಾರರು ಓಟು ಮಾಡಿದರು.

ಕೆಲರು ಕೊಂಗ್ರೆಸ್ ಅಭಿಮಾನಿಗಳು ಖದ್ದರ ಧಾರಣೆಯ ನಿಯಮವನ್ನು ಜ್ಯಾರಿಯಲ್ಲಿಡಬೇಕು, ಇಲ್ಲವಾದರೆ ತೆಗೆದೇ ಹಾಕಬೇಕೆಂದು ಹೇಳುವರು.

ಮರಾಠಾ ಧೋರಣವು ಎತ್ತ ಕಡೆ ನೋಡುತ್ತಿದೆ?

ಸ್ವರಾಜ್ಯ ಪಕ್ಷದಿಂದ ಸರಕಾರದ ಮಗ್ಗುಲಿಗೆ ಹಾರಿದ ಮಿ| ತಾಂಬೆಯವರ ಸ್ವಾರ್ಥಮಯ ಕೃತ್ಯವನ್ನು ಇಡೀ ಹಿಂದೂಸ್ಥಾನದ ಸ್ವರಾಜ್ಯ ಪಕ್ಷದ ಮುಖಂಡರು ಖಂಡಿಸಿರುವರು. ಆದರೆ ಸ್ವರಾಜ್ಯ ಪಕ್ಷದವರೇ ಆಗಿರುವ ತಿಲಕರ ಪಟ್ಟ ಶಿಷ್ಯರೆನ್ನುವ ಶ್ರೀಯುತ ಕೇಳಕರರು ಈ ವಾರ್ತೆಯನ್ನು ಕೇಳಿದ ಕೂಡಲೇ ಮಿ| ತಾಂಬೆಯವರಿಗೆ ಅಭಿನಂದನ ಸೂಚಕವಾದ ತಂತಿಯನ್ನು ಕೊಟ್ಟು ಅವರ ವರ್ತನವನ್ನು ರಿಸ್ಪೋನ್ಸಿವ್ ಕೊ-ಒಪರೇಶನಿನ ಹೆಸರಿನಲ್ಲಿ ಸರಿಯೆನ್ನಿಸಲು ಪ್ರಯತ್ನಿಸುವುದನ್ನು ನೋಡಿ ಎಲ್ಲರಿಗೂ ಆಶ್ಚರ್ಯವಾಗಿದೆ. ಮರಾಠ ಧುರೀಣರು ಮಿ| ತಾಂಬೆಯವರನ್ನು ಸರಿಯಾಗಿ ಖಂಡಿಸಿದ್ದು ಕಾಣಬರುವುದಿಲ್ಲ. ಕೇಳ್ಕರರ ಈ ಅಭಿನಂದನವೇ ಆಶ್ಚರ್ಯಕಾರಕವಾಗಿ ನಮಗೆ ತೋರಿಬಂದಿದೆ. ರಿಸ್ಪೋನ್ಸಿವ್ ಕೊ-ಒಪರೇಶನನ್ನು ಎಷ್ಟು ಅಧೋಗತಿಗಿಳಿಸಬಹುದೆಂದು ಇದರಿಂದ ತೋರುವುದು. ಶ್ರೀಯುತ ಕೇಳ್ಕರರಿಗೆ ಮಿ| ತಾಂಬೆಯವರನ್ನು ಅಭಿನಂದಿಸುವ ಅಗತ್ಯವೇನಾಯಿತು? ರಿಸ್ಪೋನ್ಸಿವ್ ಕೊ-ಒಪರೇಶನಿನ ಧೋರಣದ ಪಕ್ಷವು ಸಂಘಟಿಸಲ್ಪಟ್ಟಿರುವುದೇ? ಅದರ ತತ್ವಗಳು ಪರಿಶೋಧಿಸಲ್ಪಟ್ಟಿರುವುವೇ? ಅದಕ್ಕಾಗಿ ನಿಯಮಗಳನ್ನು ಮಾಡುವ ಅಧಿಕೃತ ಮಂಡಳಿಯಿದೆಯೇ? ಅಂತಹ ದೇಶೋದ್ಧಾರದ ಮಂಡಳಿಯ ಕಡೆಯಿಂದ, ಅವರ ಒಪ್ಪಿಗೆಯಿಂದ, ತಾಂಬೆಯರು ಈ ಸಾವಿರಗಟ್ಟಲೆ ಸಂಬಳದ ನೌಕರಿಗೆ ಸ್ವರಾಜ್ಯ ಪಕ್ಷದ ಮೆಂಬರಶಿಪ್ಪಿನ ಸ್ವಾರ್ಥತ್ಯಾಗ ಮಾಡಿದರೆ? ಏನೊಂದು ಸಂಘಟಿತ ಪ್ರಯತ್ನಗಳಿಲ್ಲದೆ, ಸ್ವಪಕ್ಷವನ್ನು ಮೋಸದಲ್ಲಿ ಹಾಕಿ, ಕೇವಲ ಸಂಬಳದ ಅತ್ಯಂತ ಸ್ವಾರ್ಥದಿಂದ, ದೇಶಹಿತವನ್ನು ಮರೆತು, ಸ್ವೀಕರಿಸಿದ ಮಿ| ತಾಂಬೆಯವರಿಗೆ ಅಭಿನಂದನ! ಹಿಂದಿನ ಮಿ| ಸುರೇಂದ್ರನಾಥ ಬೆನರ್ಜಿ ಇತ್ಯಾದಿಯವರಿಗೂ, ಮದ್ರಾಸಿನ ಬ್ರಾಹ್ಮಣೇತರ ಮಂತ್ರಿಗಳಿಗೂ ಇನ್ನು ಅಲ್ಲಲ್ಲಿ ಪಕ್ಷ ಪ್ರವಂಚನೆಯಿಲ್ಲದೆ, ಲಿಬರಲ್ ಪಕ್ಷವನ್ನು ದೃಢೀಕರಿಸಿ, ಅದಕ್ಕನುಸಾರವಾಗಿ ಮಂತ್ರಿ ಪದವಿ ಮತ್ತು ಕೌನ್ಸಿಲರ ಶಿಪ್ಪನ್ನು ಸ್ವೀಕರಿಸಿದ ಆ ಮಹಾ ದೇಶಪ್ರೇಮಿಗಳ ಅತ್ಯುಚ್ಚಕ್ಕೂ, ಹೆಚ್ಚೇಕೆ? ಈ ಹಿಂದೂಸ್ಥಾನವನ್ನು ಕಪ್ಪವಿಲ್ಲದೆ ಸಂಪಾದಿಸಿದ ಇಂಗ್ಲೀಷ ಪ್ರಭುತ್ವಕ್ಕೂ ನಾವು ಅಭಿನಂದಿಸಬೇಡವೇ? ಶ್ರೀ| ಕೇಳ್ಕರರ ಉದ್ದೇಶವೇನು? ತಮಗಾದರೂ ಅಂತಹ ಸ್ವೀಕಾರದ ಅಭಿಲಾಷೆಯಿಲ್ಲವಲ್ಲ? ಇದು ಅಂತಹ ಸ್ವೀಕಾರ ಸಂದರ್ಭದ ಪೂರ್ವ ತಯಾರಿಯಲ್ಲವಲ್ಲ? ರಿಸ್ಪೋನ್ಸಿವ್ ಕೊ-ಒಪರೇಶನ್ ಇತ್ಯಾದಿ ಅರ್ಥಾನರ್ಥಕರವಾದ ಶಬ್ದಗಳನ್ನು ಬಿಟ್ಟು ಲಿಬರಲ್ ಪಕ್ಷದ ಧೋರಣವನ್ನು, ಲಿಬರಲ್ ಪಕ್ಷದ ಮೂಲಕವೇ ಸಾಧಿಸಿ ಈ ತರದ ತನ್ನನ್ನು ತಾನೇ ಮೋಸಮಾಡಿಕೊಳ್ಳುವ ಒಪ್ಪಂದಪಕ್ಷೀಯ ಧೋರಣವನ್ನು ತ್ಯಜಿಸಬಹುದಲ್ಲವೇ?

ಹಿಂದೂಸ್ಥಾನವು ಸೂರೆಹೋಯಿತು.

ಹಿಂದೂಸ್ಥಾನದ ಸಂಪತ್ತು ಅನೇಕ ವಿಧವಾಗಿ ಪ್ರವಾಹರೂಪವಾಗಿ ಇಂಗ್ಲೆಂಡಿಗೆ ಹರಿಯುತ್ತದೆ. ವಿಲಾಯತಿ ವ್ಯಾಪಾರ ಮತ್ತು ಬ್ರಿಟಿಷ ಸರಕಾರಿ ನೌಕರರ ಮೂಲಕ ಹಿಂದೂಸ್ಥಾನದ ಬಹು ಸಂಪತ್ತು ಅಪಹೃತವಾಗುತ್ತಿದೆ. ಆದರೆ ಹಿಂದೀ ದೇಶೀ ಸಂಸ್ಥಾನಗಳ ರಾಜರುಗಳಿಂದ ಹಿಂದೂಸ್ಥಾನವು ಬಡವಾಗುವವನ್ನು ಬೇಗ ಬೇರೆ ಯಾವ ರೀತಿಯಿಂದಾದರೂ ಆಗುವುದಿಲ್ಲವೆನ್ನದೇಕು. ಎಷ್ಟೋ ದೇಶೀ ಸಂಸ್ಥಾನಗಳ ರಾಜರುಗಳು ವಿಲಾಯತಿಯಲ್ಲಿ ಹಿಂದೂಸ್ಥಾನದ ದುಡ್ಡಿನಿಂದ ಮನೆಮಾಡಿಕೊಂಡು, ಅಲ್ಲಿ ಏನೊಂದು ಪ್ರತ್ಯೇಕ ಅರ್ಜನೆಯಿಲ್ಲದೆ, ಹಿಂದೀ ಪ್ರಜೆಗಳಿಂದ ಅವರ ಕಷ್ಟಾರ್ಜಿತವನ್ನು ಸೂರೆಮಾಡಿ ವಿಲಾಯತಿಯಲ್ಲಿ ಹೊರಗಿನ ಡಂಭಕ್ಕೂ ವ್ಯಭಿಚಾರಕ್ಕೂ ಇನ್ನಿತರ ಅನೇಕ ತರದ ದುರ್ವ್ಯಸನಗಳಿಗೂ ಖರ್ಚುಮಾಡುತ್ತಾರೆ. ಬ್ರಿಟಿಷ ಸರಕಾರವು ಕೂಡ ಹಿಂದೀ ರಾಜಪುತ್ರರನ್ನು ವಿಲಾಯತಿಗೆ ವಿದ್ಯಾಭ್ಯಾಸಕ್ಕೆಂದು ಕಳುಹಿಸುವಂತೆ ಮಾಡಿ, ಅಲ್ಲಿ ಅನೇಕ ದುರ್ವ್ಯಸನಗಳಿಗೆ ಈಡು ಮಾಡಿ, ಕರ್ತವ್ಯ ಪರಾಙ್ಮುಖರಾಗಿ ಮಾಡಿ ಆ ಮೂಲಕ ತಮಗೆ ವಿಧೇಯತೆಯನ್ನುಂಟು ಮಾಡಿಸುತ್ತಾರೆ. ಒಬ್ಬ ರಾಜರು ಅರಮನೆಯನ್ನು ವಿಲಾಯತಿಯಿಂದ ತರಿಸುವರು! ಇನ್ನೊಬ್ಬರು ವಿಲಾಯತಿಯ ವಿಲಾಸ ಗೃಹಗಳಿಗೆ ಲಕ್ಷಾವಧಿ ರೂಪಾಯಿ ಖರ್ಚುಮಾಡುವರು! ಮತ್ತೊಬ್ಬರು ದಾನಶೂರರೆನ್ನಿಸಲು ಇಂಗ್ಲಿಷ ಸಂಸ್ಥೆಗಳಿಗೆ ಲಕ್ಷಾವಧಿ ರೂಪಾಯಿಯನ್ನು ಕೊಡುವರು! ಪಟಿಯಾಲದ ರಾಜರಂತಹರು ತಿಂಗಳಿಗೆ ಸಾವಿರಾರು ಪವನು ಬಾಡಿಗೆ ಕೊಡತಕ್ಕ ನೂರು ಕೋಣೆಗಳನ್ನು ವಿಲಾಯತಿಯಲ್ಲಿ ಪಡೆದು, ದಿನಕ್ಕೊಂದು ತರದ ವೇಶಭೂಷಗಳನ್ನು ಧರಿಸಿ ತಮ್ಮ ಖರ್ಚುಮಾಡತಕ್ಕ ಸಾಮರ್ಥ್ಯವನ್ನು ತೋರಿಸಿ ಕೃತಾರ್ಥರಾಗುವರು! ತಮ್ಮ ಸಂಸ್ಥಾನದಲ್ಲಿ ಮಾತ್ರ ಪ್ರಜೆಗಳು ವಿದ್ಯೆಯಿಲ್ಲದೆ, ವ್ಯಾಪಾರದ ಸುಸ್ಥಿತಿಯಿಲ್ಲದೆ, ಅತಿಯಾದ ದಾರಿದ್ರ್ಯದಿಂದಲೂ, ದಬ್ಬಾಳಿಕೆಯಿಂದಲೂ ಬಳಲುತ್ತಿರುವರು! ಹಿಂದೀ ರಾಜಕೀಯ ಸಮಸ್ಯೆಗಳಲ್ಲಿ ಇದು ಒಂದು ಚಿಂತನೀಯವಾದ ವಿಷಯವಾಗಿದೆ.

ಲೋಕಲ್ ಬೋರ್ಡುಗಳ ಮೆಂಬರರು.

ಲೋಕಲ್ ಬೋರ್ಡುಗಳ ಒಂದರ ಹಿಂದೆ ಒಂದು ಹೀಗೆ ಮೂರು ಮೀಟಿಂಗುಗಳಿಗೆ ಹಾಜರಾಗದ ಮೆಂಬರರ ಮೆಂಬರತನವು ರದ್ದಾಗುವುದೆಂದೂ, ಆದರೆ ಪುನಃ ಬೋರ್ಡು ಮೀಟಿಂಗಿನಲ್ಲಿ ಈ ಮೆಂಬರರಿಗೆ ಬಹುಮತ ಸಿಕ್ಕಿದರೆ ಪುನಃ ಅವರು ಆರಿಸಲ್ಪಡಬಹುದೆಂದೂ ಒಂದು ಲೋಕಲ್ ಬೋರ್ಡು ಕ್ರಮವಿದೆ. ಈ ಮೀಟಿಂಗುಗಳಿಗೆ ಕೆಲವರು ಗೈರುಹಾಜರಾಗಿ ಮೆಂಬರತನವು ರದ್ದಾಗುವುದಿದೆ. ಪುನಃ ಅವರು ಮೀಟಿಂಗಿನಲ್ಲಿ ಆರಿಸಲ್ಪಡುವುದಿದೆ. ಈ ಪ್ರಕಾರ ಕಳೆದ ಡಿಸ್ಟ್ರಿಕ್ಟ ಬೋರ್ಡಿನಲ್ಲಿ, ಮೂವರು ಸದಸ್ಯರನ್ನು ಪುನಃ ಆರಿಸಲಾಯಿತು. ಸದಸ್ಯರು ಮೆಂಬರಿಕೆಗಾಗಿ ಪೇಚಾಡುವುದನ್ನು ನೋಡಿದರೆ ಇವರ ಗೈರಹಾಜರಿಗೆ ಯಾವ ಕಾರಣವೂ ಇರಬಾರದು. ಜನತೆಯ ಸರ್ವ ಸುಖದುಃಖಗಳನ್ನು ನಿರ್ಣಯಿಸುವಷ್ಟು ಶಕ್ತಿಯುಳ್ಳ ಈ ಸಂಸ್ಥೆಯಲ್ಲಿ, ಒಂದು ಬಾರಿ ಅಷ್ಟು ಉಮೇದಿಯಿಂದ ಸೇರಿದ ಮೇಲೆ, ಅದರ ಪ್ರತಿ ಸಭೆಗಳಿಗ ಹಾಜರಾಗುವುದು ಸದಸ್ಯರ ಕರ್ತವ್ಯವಾಗಿದೆ. ಹಾಗೆ ಅವರಿಗೆ ಹಾಜರಾಗಲು ಸಾಧ್ಯವಿಲ್ಲದಿದ್ದರೆ, ಆ ಸ್ಥಾನವನ್ನು ಖಾಲಿ ಮಾಡಿ ಹೆಚ್ಚು ಉತ್ಸಾಹಿಗಳಾದ ಇತರರಿಗೆ ಎಡೆಕೊಡಬೇಕು. ಹಾಗೆ ಮಾಡದೆ ಮೆಂಬರರು ಬಾರದಿರುವುದೂ, ಬೋರ್ಡು ಪುನಃ ಅವರನ್ನೇ ಆರಿಸುವುದೂ, ಬೋರ್ಡುಗಳ ಕರ್ತವ್ಯ ಸಾಧನಕ್ಕೆ ಗೌರವ ಕೊಡುವುದಿಲ್ಲ. ಹೀಗೆ ಪುನಃ ಪುನಃ ಮೆಂಬರರ ಗೈರಹಾಜರಿಯನ್ನು ಕ್ಷಮಿಸುವುದರಿಂದ ಮೆಂಬರರಲ್ಲಿ ಜವಾಬ್ದಾರಿಯು ಉಳಿಯುವುದಿಲ್ಲ. ಡಿಸ್ಟ್ರಿಕ್ಟ, ತಾಲೂಕು, ಮುನ್ಸಿಪಲ್ ಬೋರ್ಡುಗಳು ಇತ್ತಕಡೆಗೆ ಮನವಿಡಬೇಕಾಗಿ ನಮ್ಮ ಸೂಚನೆ. ಪುನಃ ಆರಿಸುವ ಹಕ್ಕು ಬೋರ್ಡುಗಳಿಗೆ ಕೊಟ್ಟಿದ್ದು, ಗೈರುಹಾಜರು ಅದವರ ದಾಕ್ಷಿಣ್ಯಕ್ಕೆ ಬೀಳಲಿಕ್ಕೆಂದಲ್ಲ, ನಿರುಪಾಯವಾಗಿ ಗೈರುಹಾಜರಾಗಿ, ಅವರು ಇನ್ನೂ ಬೋರ್ಡಿನಲ್ಲಿ ಇದ್ದರೆ ಬೋರ್ಡಿಗೆ ಪ್ರಯೋಜನವಾಗಬಹುದೆಂದು ತೋರುವಂತವರಿಗಾಗಿ ಆ ಕ್ರಮವು ಮಾಡಲ್ಪಟ್ಟಿರಬೇಕು.

ಕೈಸರರ ಆಶೆ ಇನ್ನೂ ಮುಗಿದಿಲ್ಲ.

ಸಾಮಾನ್ಯವಾಗಿ ಹಿಂದೀ ಜನರೊಳಗೆ ಜರ್ಮನರ ಪರವಾಗಿ ಒಂದು ತರದ ಸಹಾನುಭೂತಿ ಇದ್ದೇ ಇದೆ. ಯುದ್ಧದ ಕಾಲದಲ್ಲಿ ಸರಕಾರದ ಮಹತ್ತಾಯಕ್ಕೆ ಹಿಂದೂಸ್ಥಾನವು ಸೈನ್ಯಗಳನ್ನು ಕೊಟ್ಟಿತಾದರೂ ಹಿಂದೂಸ್ಥಾನದ ಹಲವರು ಜರ್ಮನರ ಸಾಹಸವನ್ನು ಪ್ರಶಂಸಿಸಿ, ಅವರ ಗೆಲುವಿಕೆಯನ್ನು ಬಯಸಿಯು ಇದ್ದರು. ಈಗಲೂ ಕೂಡ, ಮಹಾ ಯುದ್ಧದಲ್ಲಿ ಜರ್ಮನರು ಸೋತು, ಇಂಗ್ಲೀಷರು ಮತ್ತು ಫ್ರೆಂಚರು ಅನ್ಯಾಯದ ಶರ್ತಗಳನ್ನು ಅವರ ಮೇಲೆ ಹೊರಿಸುತ್ತಿದ್ದಾಗ, ಎಷ್ಟೋ ಹಿಂದೀಯರ ಹೃದಯವು ಸಹಾನುಭೂತಿಯ ಸಂತಾಪವನ್ನು ಅನುಭವಿಸಿದ್ದಿತು. ಆದರೆ ಬಿಳೀ ಜನರೆಲ್ಲರೂ ಬಿಳೀ ಜನರೇ! ಒಬ್ಬನು ಅನ್ಯಾಯ ಮಾಡಿದನೆಂದು ಅವನನ್ನು ಹಳಿಯುವುದಾಗಲಿ, ಒಬ್ಬನು ಅನ್ಯಾಯ ಪಡೆದನೆಂದು ಅವನೊಡನೆ ಸಹಸಂತಾಪವನ್ನು ತೋರುವುದಾಗಲಿ ನಮಗೆ, ಹಿಂದೀ ಜನರಿಗೆ ಸಲ್ಲದಾಗಿದೆ.

ಈ ವಿಷಯವು ಮೊನ್ನೆ ಕೈಸರರು ಒಂದು ವರ್ತಮಾನ ಪತ್ರಿಕೆಯ ಒಬ್ಬ ಪ್ರತಿನಿಧಿಯೊಡನೆ ವ್ಯಕ್ತಪಡಿಸಿದ ಅಭಿಪ್ರಾಯಗಳಿಂದ ನಮ್ಮೆಲ್ಲರ ಎದೆಯಲ್ಲಿ ಚೆನ್ನಾಗಿ ನಾಟಿಕೊಳ್ಳಬೇಕು. ಇವರು ತಮ್ಮ ಜನಾಂಗ ಅಂದರೆ ಜರ್ಮನಿಯನ್ನು ಈಗಿನ ದುಸ್ಥಿತಿಯಿಂದ ಮೇಲೆತ್ತಲು ಪ್ರಯತ್ನಿಸುವ ಬಗ್ಗೆ ಯಾವ ತರದ ದುಸ್ಸಾಧನೆಯನ್ನೂ ಮಾಡಬಲ್ಲರೆಂದು ಈ ಮಾತುಗಳಿಂದ ತಿಳಿಯಬಹುದು.

ಬಿಳೀ ಜನರನ್ನು ನಾಶಿಸುವ ಬಗ್ಗೆ 'ಯಲ್ಲೋ ಪೆರಿಲ್' ಎಂಬ ಕಪ್ಪು ಜನರ ಸಂಘವು ಈಗ ಸಂಘಟಿತವಾಗುತ್ತಿದೆಯೆಂದೂ, ಬೋಲ್ಶೆವಿಕರ ಪ್ರೇರಣೆಯೊಡನೆ ಜಪಾನ ದೇಶವು ೨೦೦,೦೦೦ ಜನರನ್ನು ಯುದ್ಧಕ್ಕೆ ಸಿದ್ಧಪಡಿಸಿದೆಯೆಂದೂ, ಜಪಾನು ತನಗಾಗಿಯೂ ರಶ್ಯಕ್ಕಾಗಿಯೂ ಯುದ್ಧನಾವೆಗಳನ್ನು ಕಟ್ಟಿಸುತ್ತಿದೆಯೆಂದೂ, ಚೈನಾದಲ್ಲಿ ಜಾಪಾನ ಆಫೀಸರರಿಂದ ಶಿಕ್ಷಿತರಾದ ೮೦೦,೦೦೦ ಜನರ ಸೈನ್ಯವು ಸಿದ್ಧವಾಗುತ್ತಿದೆಯೆಂದೂ, ಎಂಬ ನಿರಾಧಾರವೂ, ವಸ್ತುಸ್ಥಿತಿಗೆ ವಿರೋಧವೂ ಆದ ಅಬದ್ಧಗಳನ್ನು ಕಲ್ಪಿಸಿ, ಈ ಕಪ್ಪು ಜನರು ಒಂದು ಬಾರಿ ಯುರೋಪಿನ ಮೇಲೆ ರಶ್ಯದ ಮೂಲಕ ದಂಡೆತ್ತಿ ಬಂದು ಯುರೋಪಿನ ಬಿಳೀ ಜನರನ್ನು ನಾಶಪಡಿಸಲಿದೆಯೆಂಬ ಭಯವನ್ನು ಬಿಳಿ ಜನರಲ್ಲಿ ಹುಟ್ಟಿಸಲು ಪ್ರಯತ್ನಿಸಿ, ಇದು ಆಗದಂತೆ ಈಗ ನಿರಸ್ತ್ರರಾದ ಜರ್ಮನಿಗೆ ಪುನಃ ಅಸ್ತ್ರಧಾರಣೆ ಮಾಡಿಸಬೇಕೆಂದೂ, ಇಲ್ಲವಾದರೆ ಸಮಸ್ತವು ನಷ್ಟವಾಗುವುದೆಂದೂ ಈ ಎಲ್ಲಾ ಬೆದರಿಕೆಯ ಸೂಕ್ಷ್ಮ ಉದ್ದೇಶವನ್ನು ಅವರು ತಿಳಿಸಿರುವರು.

ಜಪಾನ-ಚೈನಾದೊಳಗಿನ ಪರಸ್ಪರ ವೈಷಮ್ಯ, ಚೈನಾದೊಳಗಿನ ಅಂತಃಕಲಹಗಳು, ರಶ್ಯಾ ದೇಶದ ಪ್ರಕೃತ ನಿರ್ಬಲ ಪರಿಸ್ಥಿತಿ, ಅಲ್ಲದೆ ಜರ್ಮನರೇ ರಶ್ಯಾ ದೇಶಕ್ಕೆ ಬೇಕಾದ ಯುದ್ಧ ಸಾಮಗ್ರಿಗಳನ್ನು ತಯಾರಿಸುವುದು ಇತ್ಯಾದಿ ಪ್ರಕೃತದ ವಸ್ತುಸ್ಥಿತಿಯಿಂದ, ಜರ್ಮನರು ಮೇಲೇಳಿಸಲೆತ್ನಿಸಿದ ಬೆದರಿಕೆಯು ಬಿಳೀ ಜನರೆಂಬ ವರ್ಣಸ್ವಾರ್ಥವನ್ನು ಪ್ರಬಲಮಾಡಿ ತನ್ನ ಜನಾಂಗದ ಸ್ವಾರ್ಥವನ್ನು ಸಾಧಿಸಲೆತ್ನಿಸುವ ಉಪಾಯವಲ್ಲದೆ, ನಿಜವಾಗಿ ಅಸ್ತಿತ್ವವಿಲ್ಲದ ವಿಷಯವಾಗಿದೆ ಎಂದು ಸರಿಯಾಗಿ ತಿಳಿಯಬಹುದು. ಜರ್ಮನ ಕೈಸರನಾಗಲಿ ಜರ್ಮನ ಜನರಾಗಲಿ ಈ ಬಿಳೀ ವರ್ಣದ ಕ್ರೂರ ಸ್ವಾರ್ಥದಿಂದಲೇ ತುಂಬಿದೆಯೆಂದು ನಾವು ಇಲ್ಲಿ ತಿಳಿಯುವುದು ಅವಶ್ಯ. ಫಲತಃ ಅವರವರು ಆಗಾಗ ಯುದ್ಧಮಾಡಿಕೊಂಡರೆ ಅದರಲ್ಲಿ ನಾವು ಯಾರೊಡನಾದರೂ ಸಹಾನುಭೂತಿಯನ್ನು ತೋರಲು ಕಾರಣವಿಲ್ಲ. ಅವರು ಎಲ್ಲರೂ ಯಾವಾಗಲೂ ಕಪ್ಪು ಜನರ ವಿರೋಧಿಯಿರುವರು.

ಕಳೆದ ವಾರದಲ್ಲಿ ಮಳೆಯ ಸಂಬಂಧ ಬಂದ ಸಣ್ಣ ನೆರೆ.

ಕಳೆದ ವಾರದಲ್ಲಿ ನಮ್ಮ ಜಿಲ್ಲೆಯಲ್ಲಿ ಒಂದು ಸಣ್ಣ ನೆರೆ ಬಂದಿತ್ತು. ಈ ನೆರೆಯ ಸಮ್ಮಂಧ ಫರಂಗಿಪೇಟೆ, ಅಡ್ಯಾರ, ಮತ್ತು ಬಂಟವಾಳ ಅತ್ತಕಡೆ ತೋಡು ಮತ್ತು ಹೊಳೆಗಳಲ್ಲಿ ನೀರಿನ ಪ್ರವಾಹವು ಉಕ್ಕಿ ಬಂದು ಕಿನಾರೆಯಲ್ಲಿರುವ ತೋಟಗಳಲ್ಲಿಯೂ ಮತ್ತು ಬೀಜ ಬಿತ್ತಿದ ಗದ್ದೆಗಳಲ್ಲಿ ನೀರು ಮಿತಿಮೀರಿ ತುಂಬಿದ್ದರಿಂದ ಈಗ ಬಿತ್ತಿದ ಸುಗ್ಗಿಯ ಬೆಳೆಯು ಪೈರೆಲ್ಲಾ ನಾಶವಾಗಿ ಹೋಗಿರುತ್ತದೆ. ಇದೇ ನಮೂನೆ ಇತರ ಅನೇಕ ಕಡೆಗಳಲ್ಲಿಯೂ ಸಂಭವಿಸಿದೆಂದು ತಿಳಿದುಬರುತ್ತದೆ. ಕೆಲವು ಕಡೆಗಳಲ್ಲಿ ಮೊದಲಿನ ಬೆಳೆಯು ಕಟಾವು ಆಗಲಿಕ್ಕೆ ಬಾಕಿ ಇತ್ತು. ಸಣ್ಣ ನೆರೆಯ ಸಮ್ಮಂಧ ಅದೂ ಕೂಡ ಕೆಲವು ಕಡೆಗಳಲ್ಲಿ ನೀರುಪಾಲಾಗಿದೆಂದು ತಿಳಿದುಬರುತ್ತದೆ. ಬಡರೈತರಿಗೆ ಕಳೆದ ಮೂರು ವರ್ಷಗಳಿಂದ ಬಹಳ ತರದ ನಷ್ಟವುಂಟಾಗಿದೆ. ಇದನ್ನು ಸರಕಾರದವರು ತಕ್ಕ ವಿಚಾರಣೆ ಮಾಡಿ ಪೈರು ಹೆಚ್ಚಾಗಿ ನಾಶವಾಗಿದ್ದ ಕಡೆಗಳ ರೈತರಿಗೆ ತಕ್ಕ ಸಹಾಯವನ್ನೀಯುವರೆಂದು ಆಶಿಸುತ್ತೇವೆ.

ಅನುಕ್ರಮಣಿಕೆ.

ಅಗ್ರಲೇಖ:— ಪುಟಗಳು.
ಸ್ವರಾಜ್ಯ ಪಕ್ಷದ ಮುಂದಿನ ಧೋರಣ ೬
ಕಳದ ವಾರದಲ್ಲಿ ಮಳೆಯ ಸಂಬಂಧ ಬಂದ ಸಣ್ಣ ನೆರೆ ,,
ಸ್ಫುಟವಿಚಾರಗಳು— ೬
ಮದ್ರಾಸು ನ್ಯಾಯವಿಧಾಯಕ ಸಭೆ ,,
ವರ್ತಮಾನಸಂಗ್ರಹಗಳು—
ವಿದೇಶ – ಒಳದೇಶ ವರ್ತಮಾನ ೭
ದಕ್ಷಿಣ ಕನ್ನಡ – ಬಂಟವಾಳ, ಪೊಳಲಿ ೭
ಮಂಗಳೂರು, ಪೇಟೆ ೮
ವಿವಿಧ ವಿಷಯಗಳು, ೯

ಸ್ವದೇಶಾಭಿಮಾನಿ.

ಶಕ ೧೮೪೭ ಕಾರ್ತಿಕ ಶು| ೬ಯು ಶುಕ್ರವಾರ.

ಸ್ವರಾಜ್ಯ ಪಕ್ಷದ ಮುಂದಿನ ಧೋರಣ.

ಸ್ವರಾಜ್ಯ ಪಕ್ಷದವರು ಆಗಾಗ ಸಂದರ್ಭಾನುಸಾರವಾಗಿ ತಮ್ಮ ಧೋರಣವನ್ನು ಬದಲಾಯಿಸುತ್ತಿರುವುದನ್ನು ನೋಡಿಯೂ, ಆಗಾಗ ಸ್ವರಾಜ್ಯ ಪಕ್ಷದಲ್ಲಿ ಸೇರಿದ್ದ ಕೆಲವರು ಅದನ್ನು ಬಿಟ್ಟುಹೋಗುವುದನ್ನು ನೋಡಿಯೂ, ಆಗಾಗ ಸ್ವರಾಜ್ಯ ಪಕ್ಷದ ಕೆಲವರು ಸರಕಾರವನ್ನು ಸೇರುವುದನ್ನು ನೋಡಿಯೂ, ಸ್ವರಾಜ್ಯ ಪಕ್ಷದ ಧೋರಣದ ವಿಷಯವಾಗಿ ಒಬ್ಬೊಬ್ಬರು ಒಂದೊಂದು ವಿಧವಾಗಿ ಅಭಿಪ್ರಾಯವನ್ನು ಕೊಡುತ್ತಿರುವರು. ಸ್ವರಾಜ್ಯ ಪಕ್ಷವು ಇತರ ಪಕ್ಷಗಳಿಗಿಂತ ಪ್ರಬಲವೂ ಪ್ರಜಾಸಮ್ಮತವೂ ಇದ್ದುದರಿಂದ ಅದನ್ನು ಎಲ್ಲರೂ ಗೌರವಿಸುವರಾದರೂ, ಅವರು ಧೋರಣವನ್ನು ಹೇಗೆ ಬದಲಾಯಿಸಬೇಕು, ಯಾವ ಪರಿಮಾಣಕ್ಕೆ ಆ ಧೋರಣವನ್ನು ನಿಲ್ಲಿಸಬೇಕು ಇತ್ಯಾದಿ ಪ್ರಶ್ನೆಗಳ ವಿಷಯವಾಗಿ ತಮ್ಮ ತಮ್ಮ ಪಂಥದ ಸೂಚನೆಗಳನ್ನು ಕೊಟ್ಟು, ಅವರನ್ನು ತಂತಮ್ಮ ಪಕ್ಷಕ್ಕೆ ಒಲಿಸಲು ಯತ್ನಿಸುವರು.

ಕೆಲವರು ರಿಸ್ಪೊನ್ಸಿವ್ ಕೊ-ಒಪರೇಶನ್ ಕೈಕೊಳ್ಳಬೇಕೆಂದೂ, ಇನ್ನೂ ಕೆಲವರು ಮಂತ್ರಿ ಪದವಿಗಳನ್ನು ಸ್ವೀಕರಿಸಿ ಅಲ್ಲಿಂದ ಸರಕಾರ ನಿಷೇಧವನ್ನು ಸಾಧಿಸಬೇಕೆಂದೂ, ಮತ್ತೆ ಕೆಲವರು ಲಿಬರಲ್ ಪಕ್ಷದಂತೆ, ಮಂತ್ರಿ ಪದವಿ ಸರಕಾರಿ ಹುದ್ದೆ ಇತ್ಯಾದಿಗಳನ್ನು ಸ್ವೀಕರಿಸಿ ಈಗಿನ ಸುಧಾರಿತ ಸರಕಾರವನ್ನು ಆದಷ್ಟು ಚೆನ್ನಾಗಿ ನಡಿಸಿ ಸರಕಾರವನ್ನು ಒಲಿಸಿಕೊಳ್ಳಬೇಕೆಂದೂ ಸೂಚಿಸುವಾಗ, ಇನ್ನು ಕೆಲವರು ಸ್ವರಾಜ್ಯ ಪಕ್ಷವು ಮತ್ತಷ್ಟು ಪ್ರತಿಜ್ಞಾಬದ್ಧವಾಗಿ, ಸರಕಾರಿ ಕಮಿಟಿ ಕಮಿಶನುಗಳಲ್ಲಾಗಲಿ ಇತರ ಪುರಸ್ಕೃತ ಯಾವ ಹುದ್ದೆಯನ್ನೂ ಸ್ವೀಕರಿಸದೆ obstruction ಅಂದರೆ ಕೌನ್ಸಿಲು ತಡೆಯು ಧೋರಣವನ್ನು ಚೆನ್ನಾಗಿ ಸಾಗಿಸಬೇಕೆಂದು ಹೇಳುವರು. ಮತ್ತೂ ಕೆಲವರು, ಇಷ್ಟೆಲ್ಲಾ ಶ್ರಮಪಟ್ಟು ಆದುದೇನೂ ಇಲ್ಲ; ಇದಕ್ಕಿಂತ ನೂಲುವುದನ್ನು ಕೈಕೊಂಡು ರಾಟಿ ಪ್ರಚಾರ ಮಾಡಬೇಕು ಎನ್ನುವರು. ಮತ್ತು ಪ್ರತಿ ಒಬ್ಬರೂ ತಮ್ಮ ಸೂಚನೆಯನ್ನು ಕೈಕೊಳ್ಳದೆನೇ ಸ್ವರಾಜ್ಯ ಪಕ್ಷವು ಕೆಡುತ್ತಿದೆಯೆನ್ನುವರು.

ವಸ್ತುತಃ ಸ್ವರಾಜ್ಯ ಪಕ್ಷದ ಈ ವರೆಗಿನ ಕಾರ್ಯಸಾಧನೆಗಳು ವಿಶೇಷ ಫಲಪ್ರದವಾಗಿರದಿದ್ದರೂ, ಈ ಬುದ್ಧಿವಂತರ ಸೂಚನೆಗಳಿಂದ ಅದು ಹೆಚ್ಚು ಸಾಧಿಸಿಕೊಳ್ಳಬಲ್ಲುದೆಂಬುದನ್ನು ಮಾತ್ರ ನಾವು ನಂಬಲಾರೆವು. ಮಂತ್ರಿ ಪದವಿಯನ್ನು ಸ್ವೀಕರಿಸಿ obstruction ಸಾಧಿಸುವುದೆಂಬುದಕ್ಕೆ ಹೆಚ್ಚಿನ ಅರ್ಥವಾಗುವುದಿಲ್ಲ. ಅಲ್ಲದೆ ರೆಸ್ಪೊನ್ಸಿವ್ ಕೊ-ಒಪರೇಶನು, ಲಿಬರಲ್ ಸೂಚನೆಗಳಿಗಿಂತ ವಿಶೇಷ ಮುಂದಾಗಿ ಇರುವುದೆಂದು ಮುಖ್ಯವಾಗಿ ಶ್ರೀಯುತ ಕೇಳ್ಕರರ ಇತ್ತಲಾಗಿನ ಅಭಿಪ್ರಾಯಗಳನ್ನು ತಿಳಿದುಕೊಂಡಲ್ಲಿ, ಕಾಣಬರುವುದಿಲ್ಲ. ಯಾವ ರಿಸ್ಪೊನ್ಸಿವ್ ಕೊ-ಒಪರೇಶನಿನ ಪ್ರಮುಖನೇ, ಮಿ| ತಾಂಬೆಯವರ ಎಕ್ಸಿಕ್ಯೂಟಿವ್ ಕೌನ್ಸಿಲರ್ ಶಿಪ್ಪಿನ ಸ್ವೀಕಾರವನ್ನು ಅಭಿನಂದಿಸಬಲ್ಲನೊ ಅದಕ್ಕೂ ಲಿಬರಲ್ ಪಂಥದವರಿಗೂ ತಾರತಮ್ಯವು ಮತ್ತೇನಿರಬಹುದೆಂದು ನಾವು ತಿಳಿಯಲಾರೆವು.

ರಾಜಕೀಯ ಧ್ಯೇಯಕ್ಕೂ ರಾಜಕೀಯ ಧೋರಣಕ್ಕೂ ಬಹಳ ಅಂತರವಿದೆ. ರಾಜಕೀಯ ಧ್ಯೇಯವು ಒಂದು ಬಾರಿ ನಿರ್ಧರಿಸಲ್ಪಟ್ಟ ಮೇಲೆ ಅದು ಆಗಾಗ ಬದಲಾಯಿಸಲ್ಪಡಬಾರದು. ಆದರೆ ಧೋರಣವನ್ನು ಎಂದೆಂದಿಗೂ ಒಂದೇಯಾಗಿ ಹಿಡಿಯುವೆವೆಂದು ಮಾತ್ರ ನಿಶ್ಚಯಿಸಬಾರದು. ಆದುದರಿಂದ ಸ್ವರಾಜ್ಯ ಪಕ್ಷದ ಈಗಿನ ಧೋರಣವು ಸ್ವಲ್ಪಮಟ್ಟಿಗೆ ಬದಲಾಯಿಸಲ್ಪಟ್ಟಿದೆಯಾದರೂ, ಈ ಧೋರಣವು ಬದಲಾಗಲಿಕ್ಕೆ ಕಾರಣವೇನೆಂಬುದನ್ನು ಹುಡುಕಿ, ಸ್ವರಾಜ್ಯ ಪಕ್ಷದ ಧ್ಯೇಯವು ಬದಲಾಗಿಯದೊ ಎಂದು ನೋಡಬೇಕು.

ಸಾಮಾನ್ಯವಾಗಿ ಸ್ವರಾಜ್ಯ ಪಕ್ಷದ ಕೌನ್ಸಿಲು ಒಡೆಯುವಿಕೆಯ ಧ್ಯೇಯವು ಇನ್ನು ಮಾರ್ಪಾಟಾಗಿಲ್ಲ. ಅಲ್ಲಲ್ಲಿ ಸ್ವರಾಜ್ಯ ಪಕ್ಷದವರಿಗೆ ಬಹುಮತವಿಲ್ಲದೆ, ತಮ್ಮ ಮತವನ್ನು ಇಂಡಿಪೆಂಡೆಂಟರ ಮತದೊಡನೆ ಬೆರಸಿ ಬಹುಮತ ಹೊಂದಬೇಕಾದುದರಿಂದ, ಸ್ವರಾಜ್ಯ ಪಕ್ಷವು ತನ್ನ ಧೋರಣವನ್ನು ಸಡಿಲುಬಿಡಬೇಕಾಯಿತು. ಇದು ಸ್ವರಾಜ್ಯ ಪಕ್ಷದ ದೌರ್ಬಲ್ಯವನ್ನು ಸೂಚಿಸುವುದಾದರೂ, ಸ್ವರಾಜ್ಯ ಪಕ್ಷದ ತಪ್ಪು ಎಂದು ಹೇಳಲಾಗುವುದಿಲ್ಲ. ಆದರೆ ಮಧ್ಯಪ್ರಾಂತದ ಸ್ವರಾಜ್ಯ ಪಕ್ಷವು ಪ್ರಬಲವಾಗಿದ್ದರೂ, ಅಲ್ಲಿನ ಕಾರ್ಯಗಳು ಸಾಕಷ್ಟು ಸಫಲವಾಗಿಲ್ಲ. ಇದು ಪ್ರಾಯಶಃ ಅಲ್ಲಿಯ ರಿಸ್ಪೊನ್ಸಿವ್ ಕೊ-ಒಪರೇಶನಿನ ಪರಿಣಾಮವಾಗಿರಬೇಕು. ಇದರಿಂದ ಅಖಿಲ ಭಾರತ ಸ್ವರಾಜ್ಯ ಪಕ್ಷದ ಹಿಡಿತವು ಅಲ್ಲಿ ಸಾಕಷ್ಟು ಶಿಸ್ತಿನಿಂದ ನಡೆಯಲಿಲ್ಲವೆನ್ನಬೇಕಾಗುತ್ತಿದೆ.

ಒಂದು ರಾಜಕೀಯ ಪಕ್ಷವು ಕೃತಕೃತ್ಯವಾಗಬೇಕಾದರೆ ಅದರ ಶಿಸ್ತು (desciplne) ಸರಿಯಾಗಿರಬೇಕು. ಒಂದು ಸೈನ್ಯದೊಳಗಿನ ಶಿಸ್ತು ಹೇಗೊ, ಒಂದು ರಾಜಕೀಯ ಪಕ್ಷದೊಳಗಿನ ಶಿಸ್ತು ಕೂಡ ಹಾಗೆಯೇ ಇರಬೇಕು. ಸ್ವರಾಜ್ಯ ಪಕ್ಷದೊಳಗಿನ ಸಾಮಾನ್ಯ ಶಿಸ್ತು ಸರಿ ಇದ್ದಿತಾದರೂ, ಮತು ಸ್ವರಾಜ್ಯ ಪಕ್ಷದಷ್ಟು ಶಿಸ್ತುಳ್ಳ ಪಕ್ಷವು ಬೇರೆ ಇಲ್ಲವಾದರೂ, ಸ್ವರಾಜ್ಯ ಪಕ್ಷವು ನಡಿಸಲಿಕ್ಕಿದ್ದ ಕಾರ್ಯಸಾಧನೆಗೆ ಆ ಶಿಸ್ತು ಸಾಕಾಗಲಿಲ್ಲ. ಮತ್ತು ಕಠಿಣ ಪ್ರಸಂಗಗಳು ಬಂದಾಗ ಮತ್ತು ಸಂಶಯಾತ್ಮಕ ಸಮಸ್ಯೆಗಳು ಎದ್ದಾಗ ಯೋಗ್ಯ ಸೂಚನೆಗಳನ್ನು ಸ್ಪಷ್ಟವಾಗಿ ಮತ್ತು ಆಜ್ಞಾಪೂರಕವಾಗಿ ಕೊಡಲು ಅಖಿಲ ಭಾರತ ಸ್ವರಾಜ್ಯ ಪಕ್ಷದ ಕಾರ್ಯನಿರ್ವಾಹಕ ಮಂಡಳಿಯು ಧೈರ್ಯಪಟ್ಟಂತೆ ತೋರುವುದಿಲ್ಲ. ಅಲ್ಲದೆ ಸ್ವರಾಜ್ಯ ಪಕ್ಷವನ್ನು ಯಾವ ಅತುಲ ದೇಶ ಪ್ರೇಮದಿಂದ, ಮತ್ತು ಯಾವ ಅವಿಚಲ ನಿರ್ಧಾರದಿಂದ ದೇಶಬಂಧು ದಾಸರು ಸ್ಥಾಪಿಸಿದರೊ, ಆ ದೇಶಪ್ರೇಮವೂ ನಿರ್ಧಾರವೂ ಮತ್ತಿವುಗಳಿಂದ ಉಂಟಾದ ಕಾರ್ಯಜ್ಞಾನವೂ ಸ್ವರಾಜ್ಯ ಪಕ್ಷದ ಸದಸ್ಯರಲ್ಲಿ ಸರಿಯಾಗಿ ಉಂಟಾದಂತೆ ತೋರುವುದಿಲ್ಲ.

ಸ್ವರಾಜ್ಯ ಪಕ್ಷವು ತಮ್ಮ ಧೋರಣವನ್ನು ಆಗಾಗ ಸಡಿಲು ಬಿಟ್ಟುದರಿಂದಲೇ ಅನೇಕರು ಅನೇಕ ರೀತಿಯಲ್ಲಿ ಖಂಡನೆಯನ್ನೂ ಸೂಚನೆಗಳನ್ನೂ ಕೊಡುವಂತಾಯಿತು. ಆದರೆ ಹೀಗೆ ತಮ್ಮ ಧೋರಣವನ್ನು ಇನ್ನೂ ಸಡಿಲಿಸುವುದರಿಂದ ಸ್ವರಾಜ್ಯ ಪಕ್ಷವು ಅಗೌರವಕ್ಕೆ ಪಾತ್ರವಾಗುವುದಲ್ಲದೆ ಸ್ವಲ್ಪ ಸಮಯದಲ್ಲಿಯೇ ಅಂತರ್ಹಿತವಾಗಬೇಕಾಗುವುದು. ಮತ್ತು ಅದರ ಫಲವಾಗಿ ಕೊಂಗ್ರೆಸು ನಾಮಾವಶೇಷವೂ, ಸರಕಾರವು ಪ್ರಬಲವೂ ಆಗುವುದು. ಹಿಂದೀಯ ರಾಜಕೀಯ ಉದ್ಧರಣೆಯೂ ಮತ್ತಷ್ಟು ದೂರವಾಗುವುದು.

ಬ್ರಿಟಿಷ ಸರಕಾರದ ಮಾನಸಿಕತೆಯನ್ನು ನಾವು ಚೆನ್ನಾಗಿ ಲಕ್ಷಿಸಿದರೆ ಅದು ಭಿಕ್ಷಾರ್ಥಿಯನ್ನು ತಿರಸ್ಕರಿಸುವಂತಹುದೂ, ಸಾಹಸಿಯನ್ನು ಪುರಸ್ಕರಿಸುವಂತಹುದೂ ಆಗಿದೆ ಎಂಬುದನ್ನು ನಾವು ತಿಳಿಯಬಹುದು. ಅಸಹಕಾರವು ಉಗ್ರವಾಗಿದ್ದಾಗ ನಿರ್ಬಲ ಸಹಕಾರಿಗಳ ಉಪಕಾರವನ್ನಾದರೂ ಮನ್ನಿಸದೆ ಸಂಧಿಸ್ಥಾಪನೆಗಾಗಿ ಸರಕಾರವು ಕರೆದುದು ಉತ್ಕ್ರಾಂತಿಕಾರಕರಾದ ಮಹಾತ್ಮಾ ಗಾಂಧಿ ಮತ್ತು ದೇಶಬಂಧು ದಾಸರನ್ನು! ಸ್ವರಾಜ್ಯ ಪಕ್ಷವು ದಿನೇ ದಿನೇ ಪ್ರವರ್ಧಮಾನವಾಗಿ ಬೆಳೆಯುತ್ತ ಕೌನ್ಸಿಲು ತಡೆಯ ಧೋರಣದ ವಿಜಯ ಪತಾಕೆಯನ್ನು ಎಸೆಂಬ್ಲಿ ಮತ್ತು ಕೌನ್ಸಿಲುಗಳಲ್ಲಿ ನೆಟ್ಟಾಗ, ಮಂತ್ರಿ ಪದವಿಯ ಮೋಹದಿಂದ ಒಲಿಸಲೆತ್ನಿಸಿದ್ದುದು, ಲಿಬರಲ್ ಆಗಲಿ ಇಂಡಿಪೆಂಡೆಂಟ್ ಪಕ್ಷವನ್ನಲ್ಲ; ಸಿ. ಆರ್. ದಾಸರನ್ನು. ಮತ್ತು ಯಾವಾಗ ಸ್ವರಾಜ್ಯ ಪಕ್ಷವು ಇಂಡಿಪೆಂಡೆಂಟರ ಭೇದದಿಂದಲೂ, ಮಧ್ಯಪ್ರಾಂತದಂತಹ ಅಂತಃಕಲಹಗಳಿಂದಲೂ, ಕೆಲವರ ಮೋಸದಿಂದಲೂ ನಿರ್ಬಲವಾಗಲು ಆರಂಭಿಸಿತೊ ಆಗಿನಿಂದ ಸರಕಾರವು ತನ್ನ ಸ್ವೇಚ್ಛಾವರ್ತನವನ್ನು ತೋರಿಸತೊಡಗಿದೆ. ಸರಕಾರದ ಈ ಮಾನಸಿಕತೆಯನ್ನು ಲಕ್ಷಿಸದೆ, ಜ್ಞಾನಶೂನ್ಯವಾದ ಪಶುಗಳಂತೆಯೇ, ಆಶಾಭಾವದಿಂದ, ಸರಕಾರದ ಭಾಗಿಲಲ್ಲಿ ಭಿಕ್ಷಾಜೋಳಿಗೆಯ ನ್ನೆತ್ತಿಹೋಗಲು ಬೋಧಿಸುವವರ ಬುದ್ಧಿವಂತಿಕೆಯಲ್ಲಿ ದೂರದರ್ಶಿತ್ವವಾಗಲಿ, ದೇಶಹಿತಸಾಧನೆಯಾಗಲಿ ಇದೆಯೆಂದು ನಾವು ಒಪ್ಪಲಾರೆವು.

ಸ್ವರಾಜ್ಯ ಪಕ್ಷವು ತಮ್ಮ ಮುಂದಿನ ಅಖಿಲ ಭಾರತ ಸಭೆಯಲ್ಲಿ, ತನ್ನ ಧ್ಯೇಯವನ್ನು ಸ್ಪಷ್ಟಗೊಳಿಸಿ, ತಮ್ಮ ಧೋರಣದ ಕ್ರಮವನ್ನು ಸೂಚಿಸುವುದು ಈಗಿನ ಸಂಶಯಾತ್ಮಕ ವಾತಾವರಣದಲ್ಲಿ ಅತೀ ಅಗತ್ಯವಿದೆ.

ಈ ಧೋರಣವನ್ನು ಚರ್ಚಿಸುವಾಗ ಹಿಂದುಸ್ಥಾನದ ಇಡೀ ರಾಜಕೀಯ ಪರಿಸ್ಥಿತಿಯನ್ನು ಚೆನ್ನಾಗಿ ಲಕ್ಷಿಸಿ ಸ್ವರಾಜ್ಯಪಕ್ಷದ ಧೋರಣವನ್ನು ಸಡಿಲು ಪಡಿಸುವ ಬದಲಿಗೆ, ಅದನ್ನು ಮತ್ತಷ್ಟು ಭದ್ರಪಡಿಸುವುದು ಅಗತ್ಯ. ಯಾವಾಗ ಸಹಕಾರದಿಂದ ಪ್ರಯೋಜನವೇನೂ ಇಲ್ಲವೆಂದಾಯಿತೊ, ಯಾವಾಗ ಯಾವ ತರದ ಸಹಸಹಕಾರವಾದರೂ ದೇಶದಲ್ಲಿ ಅವ್ಯಾಹತವಾಗಿ ನಡೆಯುವ ದ್ರವ್ಯಶೋಷಣೆಯನ್ನು ನಿಲ್ಲಿಸಲಿಕ್ಕೂ, ದೇಶದ ಬೇಸಾಯ ವ್ಯವಸಾಯಾದಿಗಳ ಉನ್ನತಿಯಿಂದ ದಾರಿದ್ರ್ಯವನ್ನು ಪರಿಹರಿಸಲಿಕ್ಕೂ, ಉತ್ತಮ ವಿದ್ಯಾಭ್ಯಾಸದಿಂದ ಸರ್ವತರದ ಕಲಾವಿಜ್ಞಾನಗಳಲ್ಲಿ ಅಪ್ರತಿಮ ಪ್ರವೀಣರನ್ನು ಉಂಟುಮಾಡಲಿಕ್ಕೂ ಸಾಧ್ಯವಿಲ್ಲವೊ, ಮತ್ತೆ ಅಸಹಕಾರದಿಂದ ನಮಗೆ ನಷ್ಟವಾದರೂ ಏನಾಗಬಹುದು!

ಆದುದರಿಂದ ಸ್ವರಾಜ್ಯಪಕ್ಷವು ಕೌನ್ಸಿಲು ಒಡೆಯುವ ಧ್ಯೇಯವನ್ನು ಸಾಧಿಸಲು ತಮ್ಮ ಧೋರಣವನ್ನು ಹೇಗೆ ಬಲಪಡಿಸಬೇಕೆಂದು ಚಿಂತಿಸಿ, ಪಕ್ಷದ ಸರಿಯಾದ ಸಂಘಟನೆಗೆ ಬೇಕಾದ ಕಠಿಣವಾದ ಶಿಸ್ತನ್ನು ರಚಿಸಿ, ಸ್ವರಾಜ್ಯಪಕ್ಷದ ಗೌರವವನ್ನು ಉಳಿಸಿಕೊಳ್ಳಬೇಕು. ದೇಶದಲ್ಲಿ ಅಲ್ಲಲ್ಲಿ ಆಗುವ ಮುನ್ಸಿಪಲ್ ಮತ್ತು ಲೋಕಲ್ ಬೋರ್ಡುಗಳ ಚುನಾವಣೆಗಳಲ್ಲಿ ಸ್ವರಾಜ್ಯಪಕ್ಷೀಯರ ವಿಜಯವು ಅವರ ಮೇಲಿನ ಜನರ ವಿಶ್ವಾಸವನ್ನು ಸೂಚಿಸುತ್ತದೆ. ಈ ವಿಶ್ವಾಸವು ಕೆಡದಂತೆ ನೋಡಿಕೊಳ್ಳುವುದು ಸ್ವರಾಜ್ಯಪಕ್ಷದ ಮುಖ್ಯ ಕೆಲಸವಿದೆ.

ಮದ್ರಾಸು ನ್ಯಾಯವಿಧಾಯಕ ಸಭೆ.

ಮದ್ರಾಸು ನ್ಯಾಯವಿಧಾಯಕ ಸಭೆಯು ಈ ತಿಂಗಳ ತಾ. ೨೬ಕ್ಕೆ ಕೂಡುವುದು. ನಾಲ್ಕು ಜನ ಹೊಸ ಮೆಂಬರರು ಸೇರುವರು.

ಕೆಲವು ಸರಕಾರೀ ಮಸೂದೆಗಳೂ, ಠರಾವೂ ಸೂಚಿಸಲ್ಪಟ್ಟು, ಚರ್ಚಿಸಿ ಮುಗಿದ ಮೇಲೆ ಬೇಸರಕಾರೀ ಬಿಲ್ಲುಗಳು ಮುಂದೆ ತರಲ್ಪಡುವುವು. ಅವುಗಳಲ್ಲಿ ಮುಖ್ಯವಾದುವು:—

ಮಿ| ಸಿ. ವಿ. ವೆಂಕಟ್ರಮಣ ಅಯ್ಯರ ಮತ್ತು ಮಿ| ಸತ್ಯಮೂರ್ತಿಯವರು ಮದ್ರಾಸು ಶಹರಿನ ಮುನ್ಸಿಪಾಲಿಟಿ ಎಕ್ಟ ಮಸೂದೆಯನ್ನು,

ಮಿ| ಮಾರ್ತಾಂಡಮ್ ಪಿಳ್ಳೆಯವರು ಹಿಂದೂ ಮತ ಸಂಸ್ಥೆಗಳ ಶಾಸನಾಪರವಾದ ಎಕ್ಟ (Hindu Religious Endowment Act)ನ್ನು ಬದಲಿಸುವ ಮಸೂದೆಯನ್ನೂ,

ಮಿ| ಜಿ. ರಾಮೇಶ್ವರರಾಯರು ಮದ್ರಾಸು ಜಿಲ್ಲಾ ಮುನ್ಸಿಪಾಲಿಟಿ ಎಕ್ಟನ್ನು ಬದಲಾಯಿಸುವ ಮಸೂದೆಯನ್ನೂ,

ಮಿ| ವೀರಿಯನರು ಮದ್ರಾಸು ಲೋಕಲ್ ಬೋರ್ಡು ಎಕ್ಟನ್ನು ಬದಲಾಯಿಸುವ ಮಸೂದೆಯನ್ನೂ ತರುವರು.

ಠರಾವುಗಳು.

ಕೆ. ರಘುಚಂದ್ರ ಬಲ್ಲಾಳರು ಜೈನ ದೇವಸ್ಥಾನದ ಹತ್ತಿರ ಹಿಂಸೆಗಳಾಗಬಾರದಾಗಿ,

ಕೆ. ಸೇತುರತ್ನಂ ಅಯ್ಯರರು ಮರದ ಮೇಲಿನ ಸುಂಕವನ್ನು ಕಡಿಮೆಮಾಡಬೇಕಾಗಿ,

ಮಿ| ಆರ ವೀರಿಯನರು ಕೂಲಿಖಾತೆಯ ಮೆಂಬರರ ಸಹಾಯಕರಾಗಿಯಾಗಲಿ, ಕೂಲಿ ಕಮಿಶನರರ ಉಪಕಮಿಶನರರಾಗಿಯಾಗಲಿ ಆದಿ ದ್ರಾವಿಡರಲ್ಲೊಬ್ಬನನ್ನು ನೇಮಿಸಬೇಕಾಗಿ,

ರಾವ್ ಬಹದ್ದೂರ ಒ. ಎಮ್. ನಂಬೂದಿರಿಪಾದರು ರೈತ್ವಾರಿ ಜಮೀನುದಾರರ ಕೈಕೆಳಗೆ ಆರು ವರ್ಷಕ್ಕಿಂತ ಹೆಚ್ಚಾಗಿದ್ದ ಒಕ್ಕಲುಗಳಿಗೆ ಕೆಲವು ಯೋಗ್ಯವಾದ ಶರ್ತಗಳೊಡನೆ ಅನುಭವಿಸುವ ಹಕ್ಕನ್ನು ಕೊಡಬೇಕಾಗಿಯೂ,

ಮಿ| ಬಿ. ಒ. ಬೆಲಪ್ಪನವರು, ಎಲ್ಲಾ ಹಳ್ಳಿ ಶಾಲೆಗಳಲ್ಲಿ ಆದಿ ದ್ರಾವಿಡರಿಗೆ ಪ್ರವೇಶವನ್ನೀಯಬೇಕಾಗಿಯೂ,

ರಾವ್ ಸಾಹೇಬ್ ಪಿ. ವಿ. ಗೋಪಾಲನರು, ಸಮುದ್ರದ ದಂಡೆಯ ಜಾಗನ್ನು ಮೊಗವೀರರಿಗಾಗಿ ಮಾತ್ರವೇ ಕಾದಿಡಬೇಕಾಗಿಯೂ,

ದಿವಾನ ಬಹದ್ದೂರ ಎಮ್. ಕೃಷ್ಣನ್ ನಾಯರರು, ನ್ಯಾಯ ಮತ್ತು ಪೊಲೀಸ ಖಾತೆಯನ್ನು ಪ್ರತ್ಯೇಕಿಸುವಂತೆ ಏರ್ಪಾಡು ಮಾಡಬೇಕಾಗಿಯೂ,

ಶ್ರೀಮಾನ ವಿಶ್ವನಾಥ ದಾಸ ಮಹಾ ಸೇನೆಯವರು, ಲೋಕಲ್ ಬೋರ್ಡು ಮತ್ತು ಮುನ್ಸಿಪಾಲಿಟಿಗಳ ಚುನಾವಣೆಗಳು ಯಾವ ರೀತಿಯಲ್ಲಿ ನಡೆಯುತ್ತಿವೆ ಎಂದು ನೋಡಲು ಒಂದು ಕಮಿಟಿಯನ್ನು ನೇಮಕಮಾಡಿ ಚುನಾವಣೆಗಳಲ್ಲಿ ದುಸ್ಸಾಧನೆಗಳಾಗಲಿ ಬೆದರಿಕೆಯು ಉಪಯೋಗಿಸಲ್ಪಡದ ಮಾಡಬೇಕಾಗಿ,

ಮಿ| ದೇವೇಂದ್ರುಡುರವರು, ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಪಾಠ ಪಟ್ಟಿಯಲ್ಲಿ ವ್ಯವಸಾಯ ಶಿಕ್ಷಣವನ್ನೂ ಸೇರಿಸಬೇಕಾಗಿ,

Unpassed ಗುಮಾಸ್ತರಿಗೂ Time scale Increment ಎಂಬ ಸಂಬಳ ಬಡ್ತಿಯ ಪ್ರಯೋಜನವು ಸಿಕ್ಕುವಂತೆ ಮಾಡಿ, ಆ ಬಡ್ತಿಯು ಈ ಕ್ರಮ ಜ್ಯಾರಿಗೆ ಬಂದಂದಿನಿಂದ ಲಗಾವಾಗುವಂತೆ ಮಾಡಬೇಕಾಗಿ,

ರಾವ್ ಬಹದ್ದೂರ ಎಸ್. ಕೃಷ್ಣರಾಯರು, ಸರಕಾರೀ ಮತ್ತು ಬೇಸರಕಾರೀ ಮೆಂಬರರ ಒಂದು ಕಮಿಟಿ ಮಾಡಿ ಲೋಕಲ್ ಬೋರ್ಡುಗಳ ಅಧಿಕಾರವನ್ನು ಇತರ ಜಿಲ್ಲಾ ಇಲಾಖೆಗಳಿಗೂ ಕೊಟ್ಟರೆ ಪ್ರಯೋಜನವಾದೀತೊ ಎಂದು ತನಿಖೆ ಮಾಡಿಸಬೇಕಾಗಿ,

ಮೊದಲಾದ ಠರಾವುಗಳನ್ನು ನ್ಯಾಯವಿಧಾಯಕ ಸಭೆಯಲ್ಲಿ ತರುವರು.

ವಿದೇಶ ವರ್ತಮಾನ.

— ಪ್ರೊಫೆಸರ್ ಲಿಫೋರಿ ಎಂಬವರು ಒಂದು ಅಗಾಧವಾದ ವಿಷದ ವಾಯುವಿನ ಶೋಧನೆಯನ್ನು ಮಾಡುತ್ತಿರುವಾಗ್ಗೆ ಆಕಸ್ಮಾತ್ ಅದರ ಸೇವನೆಯಿಂದ ಮೃತಪಟ್ಟಿರುವರು.

— ಲೋಕ ವಿಖ್ಯಾತರಾದ ಯೂಜಿನ್ ಸ್ಯಾಂಡೋ ಎಂಬವರು ಕಾಲವಾದರು. ಜಗದೀಶನು ಇವರಾತ್ಮಕ್ಕೆ ಮಂಗಳವನ್ನುಂಟುಮಾಡಲಿ.

— ಇಂಗ್ಲಾಂಡಿನ ಮುಖ್ಯ ಮಂತ್ರಿವರ್ಯರಾದ ಮಿ| ಸ್ಟೇನ್ಲಿ ಬಾಲ್ಡ್ವಿನ್ನರವರು ಅನಾರೋಗ್ಯದ ದೆಸೆಯಿಂದ ಒಂದು ತಿಂಗಳಿಂದ ವೃತ್ತಾಂತ ಪತ್ರಿಕೆಗಳನ್ನೇ ನೋಡಿಲ್ಲವಂತೆ.

— ಇಂಗ್ಲಾಂಡಿನಲ್ಲಿ ನಡೆಯುತ್ತಿರುವ 'ಲೇಬರ್ ಪಾರ್ಟಿ'ಯ ಕಾನ್ಫರೆನ್ಸಿನಲ್ಲಿ ಹಿಂದೂದೇಶಕ್ಕೆ ಸ್ವರಾಜ್ಯ ಕೊಡಬೇಕೆಂದೂ, ಈಜಿಪ್ಟಿನ ಒಪ್ಪಂದವನ್ನು ನಿಲ್ಲಿಸಬೇಕೆಂದೂ ಠರಾವುಗಳಾಗಿರುವವು.

— ಮೊರಾಕೋ ಯುದ್ಧದಲ್ಲಿ ರಿಫ್ ಜನರಿಗೆ ಅಪಜಯವಾಯಿತು. ಶತ್ರುಪಕ್ಷದವರು ಅಬ್ದುಲ್ ಕರೀಮನ ಮನೆಯನ್ನು ಸುಟ್ಟರು.

— ಬ್ರಿಟಿಷ ಲಿಬರಲ್ ಪಕ್ಷದವರೂ, ಇಂಗ್ಲೆಂಡಿನ ಯುದ್ಧ ಸಮಯದ ಮಂತ್ರಿಗಳೂ ಆಗಿದ್ದ ಮಿ| ಲೋಯಿಡ್ ಜೋರ್ಜರು ಮೊರಕ್ಕೋದ ಅಬ್ದುಲ್ ಕರೀಮನ ಮೇಲೆ ಫ್ರಾನ್ಸ ಮತ್ತು ಸ್ಪೈಯಿನ್ ದೇಶದ ಜನರು ನಡೆಸುವ ಯುದ್ಧವನ್ನು ಖಂಡಿಸಿರುವರು. ಕ್ರೈಸ್ತ ಜನರು ಮುಸಲ್ಮಾನರ ಸ್ವಾತಂತ್ರ್ಯವನ್ನು ತುಳಿಯುವುದನ್ನು ತಾನು ಮೆಚ್ಚಲಾರೆನೆಂದು ಅವರು ಹೇಳುವರು. ಇದನ್ನಾಡುವಾಗ, ಹಿಂದೀಯರನ್ನು ಚಿರದಾಸ್ಯದಲ್ಲಿಡುವ ಸಿವಿಲ್ ಸರ್ವಿಸಿನ ಸ್ಟೀಲಫ್ರೇಮಿನ ಮೇಲಿನ ತಮ್ಮ ಪೂರ್ವದ ಪ್ರಶಂಸೆಯನ್ನು ಈಗ ಅವರು ಮರೆತಂತೆ ಕಾಣುತ್ತಿದೆ.

— ಹಿಂದೂಸ್ಥಾನದ ವ್ಯಾಸರಾಯರಾಗಿ, ರೀಡಿಂಗರ ನಂತರ ಲೋರ್ಡ ಪೀಲರು ನೇಮಕರಾಗುವರಾಗಿ ಖಂಡಿತ ವರ್ತಮಾನವಿದೆ.

— ಭೂಲೋಕದಲ್ಲಿ ಪ್ರತಿವರ್ಷ ೨೦ ಲಕ್ಷ ಜನರು ಛಳಿಜ್ವರದಿಂದ ಸಾಯುತ್ತಾರೆ.

— ಬ್ರಿಟಿಷ ವೆಂಬ್ಲಿ ಪ್ರದರ್ಶನವು ಬರುವ ವರ್ಷಕ್ಕೆ ಕರೆಯಲ್ಪಡುವುದಿಲ್ಲ.

— ಕೊಮಾಂಚೆ ಎಂಬ ಸ್ಟೀಮರಿಗೆ ಬೆಂಕಿ ತಗಲಿ ಸುಟ್ಟುಹೋಯಿತು. ಅನೇಕರು ಸತ್ತಿರುವರು. ಕೆಲವರಿಗೆ ಜಖಮ್ ಆಗಿದೆ. ಕೆಲವರು ಕಾಣೆಯಾಗಿರುವರು.

— ಪೋಲೆಂಡಿನಲ್ಲಿ ೪೦೦ ಜನ ಬೊಲ್ಶೆವಿಕ್ ಪಕ್ಷದವರನ್ನು ಪೊಲೀಸರು ಕೈದುಮಾಡಿರುವರು.

— ರಶ್ಯಾ ದೇಶಕ್ಕೆ ಹೋಗಿ ಅಲ್ಲಿನ ಸ್ಥಿತಿಗತಿಗಳನ್ನು ತಿಳಿದು ಹಿಂದೆ ಬಂದ ಬ್ರಿಟಿಷ ಪಾರ್ಲಿಮೆಂಟಿನ ಕೂಲಿಕಾರ ಪಕ್ಷದ ಮೆಂಬರರು, ರಶ್ಯಾ ದೇಶವು ಮೆಲ್ಲನೆ ಸರಿಯಾಗಿ ತನ್ನ ಆರ್ಥಿಕ ಪರಿಸ್ಥಿತಿಯನ್ನು ಅಭಿವೃದ್ಧಿಗೊಳಿಸುತ್ತಿದೆ ಎಂಬದಾಗಿ ಅಭಿಪ್ರಾಯವನ್ನು ಕೊಟ್ಟಿರುವರು.

— ರಶ್ಯಾ ಸರಕಾರವು ಪರ್ಶಿಯಾದ ಈಗಿನ ಸರಕಾರದ ವಿರುದ್ಧವಿದೆಯೆಂದೂ, ಆದು ಪರ್ಶಿಯಾದ ರಾಜನಾದ ಶಹಾನು ಪುನಃ ಅಧಿಕಾರಕ್ಕೆ ಬರುವುದನ್ನು ಇಚ್ಛಿಸುತ್ತಿದೆಯೆಂದೂ ಕೆಲವು ಪರದೇಶದ ಪತ್ರಿಕೆಗಳಲ್ಲಿ ಪ್ರಕಟವಾದ ವಾರ್ತೆಯು ಸುಳ್ಳೆಂದೂ, ಪರ್ಶಿಯಾದ ಅಂತಃಪರಿವರ್ತನಗಳೊಡನೆ ಯಾವ ಸಂಬಂಧವನ್ನೂ ತಾವು ಇಟ್ಟುಕೊಳ್ಳುವುದಿಲ್ಲವೆಂದೂ, ಈಗಿನ ಸರಕಾರದೊಡನೆ ತಮ್ಮ ಸಂಪೂರ್ಣ ಮಿತ್ರಭಾವವಿದೆಯೆಂದೂ ರಶ್ಯಾ ಸರಕಾರವು ಪರ್ಶಿಯಾ ಸರಕಾರಕ್ಕೆ ತಿಳಿಸಿದೆ.

— ಕಲ್ಕತ್ತಾದಿಂದ ನ್ಯೂಯೋರ್ಕಿಗೆ ಹೋಗುತ್ತಿದ್ದ "ಸ್ಪೈಕ್‌ವೆಲ್ಲ" ಎಂಬ ಸ್ಟೀಮರಿಗೆ ಬೆಂಕಿ ತಗಲಿ ಸ್ಟೀಮರು ಮುಳುಗಿಸಲ್ಪಟ್ಟಿತು.

— ಬ್ರಿಟಿಷ್ ದ್ವೀಪಗಳಲ್ಲಿಯೂ ಮೋಟಾರುಗಳ ಉಪಯೋಗವು ಬಹುಮಟ್ಟಿಗೆ ಹೆಚ್ಚಿರುವುದರಿಂದ ಕಳೆದ ವರ್ಷ ಅವುಗಳಿಗೆ ಸಿಕ್ಕಿ ಮೃತಪಟ್ಟವರ ಸಂಖ್ಯೆಯು ೪೦೦೦ ಮತ್ತು ಗಾಯಪಟ್ಟವರ ಸಂಖ್ಯೆಯು ೧೦ ಲಕ್ಷ. ಕಳೆದ ಒಂದು ವಾರದಲ್ಲಿ ಅಮೇರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ೬೦ ಜನರು ಮೋಟಾರುಗಳಿಂದ ಮೃತಪಟ್ಟು ೧೬೮ ಜನರು ಗಾಯಪಡೆದಿರುವರು.

— ಅಮೇರಿಕದಲ್ಲಿ ಬೈಸಿಕಲ್ ಮತ್ತು ಮೋಟಾರುಗಳ ಉಪಯೋಗವು ಹೆಚ್ಚುತ್ತಾ ಬರುತ್ತಿರುವುದರಿಂದ ರಬ್ಬರನ್ನು ಆ ದೇಶಕ್ಕೆ ವರ್ಷವರ್ಷವೂ ಹೆಚ್ಚಾಗಿ ತರಿಸಿಕೊಳ್ಳುತ್ತಿರುವರು. ೧೯೨೪-೨೫ನೇ ಸಾಲಿನಲ್ಲಿ ೨ ಕೋಟಿ ೨೫ ಲಕ್ಷ ಡಾಲರುಗಳ ಬೆಲೆಬಾಳುವ ೮೦೨೦ ಲಕ್ಷ ಪವನುಗಳ ರಬ್ಬರು ಆ ದೇಶಕ್ಕೆ ರವಾನಿಸಲ್ಪಟ್ಟಿದೆ. ರಬ್ಬರು ಕ್ರಯವು ಜಾಸ್ತಿಯಾದರೂ ಅವರ ರಬ್ಬರಿನ ತೂಕವು ಬೆಲೆಯೂ ಅದರ ಹಿಂದಿನ ಸಾಲಿಗಿಂತ ಹೆಚ್ಚಾಗಿರುವವು.

— ತಂತಮ್ಮ ಹೆಂಡತಿಯರನ್ನು ಕ್ರೂರವಾಗಿ ದಂಡಿಸುವ ಗಂಡಸರ ಸಂಖ್ಯೆಗೆ ಇಂಗ್ಲೆಂಡಿನಲ್ಲೇನೂ ಕಡಿಮೆಯಿಲ್ಲ. ಇಂಥವರಿಗೆ ಆಗಿಂದಾಗ್ಗೆ ವಾರಗಟ್ಲೆ ಅಥವಾ ತಿಂಗಳುಗಟ್ಲೆಯಾಗಿ ಕಾರಾಗೃಹವಾಸವು ಪ್ರಾಪ್ತವಾಗುವುದು. ಈ ಸಂದರ್ಭಗಳಲ್ಲಿ ಸಂಸಾರವನ್ನು ನಡೆಸಿಕೊಂಡು ಹೋಗುವ ಭಾರವು ಹೆಂಡತಿಯ ಮೇಲೆ ಬಿದ್ದು, ನಿರಪರಾಧಿಯಾದ ಆಕೆಯು ತೊಂದರೆಪಡಬೇಕಾಗುವುದು. ಇದನ್ನು ತಪ್ಪಿಸುವುದಕ್ಕೆ ಒಂದು ಹೊಸ ಉಪಾಯವನ್ನು ಫ್ರೆಡ್ ಪಿಲ್ಕಿಂಗ್ ಎಂಬ ನ್ಯಾಯಾಧಿಪತಿಯೊಬ್ಬನು ಸೂಚಿಸಿರುವನು. ಗಂಡನು ಕಾರಾಗೃಹವಾಸವನ್ನು ಒಂದೇ ವೇಳೆ ಅನುಭವಿಸುವುದಕ್ಕೆ ಬದಲಾಗಿ, ಪ್ರತಿ ವಾರವೂ ಕೆಲಸಗಾಗಿ ಮಾಡುವ ದಿನಗಳಲ್ಲಿ ಅವನಿಗೆ ಸ್ವಾತಂತ್ರ್ಯವನ್ನು ಕೊಟ್ಟು, ಶನಿವಾರ ಸಾಯಂಕಾಲ ಕಾರಾಗೃಹಕ್ಕೆ ಕರೆದುಕೊಂಡು ಹೋಗಿ ಸೋಮವಾರ ಪ್ರಾತಃಕಾಲದ ವರೆಗೂ ನಿರ್ಬಂಧದಲ್ಲಿಡುತ್ತಾ, ಬರುವುದರಿಂದ, ಗಂಡನಾದವನು ಶಿಕ್ಷೆಯನ್ನು ಅನುಭವಿಸುತ್ತಲೂ, ತನ್ನ ಹೆಂಡತಿ ಮಕ್ಕಳ ಪೋಷಣೆಯನ್ನು ನೋಡಿಕೊಳ್ಳುತ್ತಲೂ ಇರಬೇಕಾಗುವುದು,

[ಒಕ್ಕಲಿಗರ ಪತ್ರಿಕೆ]

ಒಳದೇಶ ವರ್ತಮಾನ.

— ಮಹಾತ್ಮಾ ಗಾಂಧಿಯವರು ಸೀತಾಪುರಿನ ಸಂಯುಕ್ತ ಪ್ರಾಂತದ ಪರಿಷತ್ತನ್ನು ತಾ. ೨೦ಕ್ಕೆ ಮುಗಿಸಿ ಅಲ್ಲಿಂದ ಮುಂಬಾಯಿಗೆ ಹೊರಡುವರು. ಇವರು ಮುಂಬಾಯಿಂದ ಕಛ್ಛಗೆ ಹೋಗಿ ಅಲ್ಲಿ ಎರಡು ವಾರಗಳ ತನಕ ಇರುವರು,

— ಕಲಕತ್ತಾದಲ್ಲಿ ಕಠಿಣವಾದ ಮಳೆಯ ನಿಮಿತ್ತದಿಂದ ಅಲ್ಲಿಯ ಮಾರ್ಗಗಳಲ್ಲಿ ನೀರು ತುಂಬಿಕೊಂಡಿತ್ತು. ನೀರಿನ ಪ್ರವಾಹವು ಅಲ್ಲಲ್ಲಿಯ ಮಾರ್ಗಗಳಲ್ಲಿ ಜೋರಾಗಿತ್ತು. ಕೆಲವು ಮಾರ್ಗಗಳಲ್ಲಿ ಗಾಡಿ ಮೋಟಾರುಗಳ ಮತ್ತು ಟ್ರೇಮುಗಳ ಚಲಾವಣೆಯು ನಿಂತಿತ್ತು.

— ಲಾಹೋರಿನಲ್ಲಿ ಲೋರ್ಡ ಲೋರೆನ್ಸರ ಶಿಲಾ ಪ್ರತಿಮೆಯನ್ನು ಯಾರೊ ಜಖಮು ಪಡಿಸಿದ್ದಾರೆ. ಬಲಗೈಯಲ್ಲಿದ್ದ ಬರಿಯುವ ಪೆನ್ನನ್ನು, ಮತ್ತು ಎದೆಯಲ್ಲಿರುವ ಪದಕವನ್ನೂ ಕಡಿದು ಹಾಕಿರುವರು. ಆದುದರಿಂದ ಈಗ ಪೋಲೀಸರ ತನ್ನಿಖೆಯು ನಡೆಯುತ್ತಿದೆ.

— ಬಂಗಾಲ ಕೌನ್ಸಿಲಿನಲ್ಲಿ ಮಹಮ್ಮದೀಯರ ಪಕ್ಷದ ಪ್ರತಿನಿಧಿಯ ಖಾಲಿ ಬಿದ್ದಿರುವ ಸ್ಥಳದಲ್ಲಿ ಸ್ವರಾಜ್ಯಪಾರ್ಟಿಯವರಾದ ಮಿಸ್ಟರ್ ಮೊಬಲ್ ಹಕ್ ಎಂಬವರು ಚುನಾಯಿಸಲ್ಪಟ್ಟಿದ್ದಾರೆ. ಬಂಗಾಲದಲ್ಲಿ ಸ್ವರಾಜ್ಯಪಾರ್ಟಿಯು ಕೈಲಾದ ಮಟ್ಟಿಗೆ ಹೆಚ್ಚಿನ ಮೋಹನಶಕ್ತಿನಿಂದ ಕೆಲಸ ಮಾಡುವದರಿಂದ ಸ್ವರಾಜಿಸ್ಟರರೇ ಹೆಚ್ಚಾಗಿ ಸೇರುವರು. ಇದೀಗ ಬಂಗಾಲದವರ ಹುರುಪನ್ನು ತೋರಿಸುತ್ತಿದೆ.

— ಸಿಮ್ಲಾದಲ್ಲಿಯ ಕೌನ್ಸಿಲ್-ಒಫ್ ಸ್ಟೇಟಿನ ಮದ್ರಾಸ ಬಿಹಾರ ಮತ್ತು ಒರಿಸ್ಸಾ ಈ ಕಡೆಯ ಹೊಸ ಮೆಂಬರರ ಚುನಾವಣೆಯು ಇದೇ ದಶಂಬರ ತಾ. ೨೪ಕ್ಕೆ ಆಗಬೇಕೆಂದೂ, ಮುಂಬಾಯಿ ಮತ್ತು ಪಂಜಾಬಿನ ಹೊಸ ಮೆಂಬರರ ಚುನಾವಣೆಯು ಸಹ ಇದೇ ಬರುವ ನವಂಬರ ತಾ. ೨೬ಕ್ಕೆ ಆಗಬೇಕೆಂದು ಹುಕುಂ ಕೊಟ್ಟಿರುವರು.

— ಅಂಕೋಲಾದಲ್ಲಿ ಹಿಂದುಗಳೂ, ಮಹಮ್ಮದೀಯರಲ್ಲಿ ಸತ್ಯಾಗ್ರಹವನ್ನು ನಡೆಸುತ್ತಿರುವರು.

— ಪಾಟಿಯಾಲದ ಸಂಸ್ಥಾನದ ಮಹಾ ರಾಜರು ವಿಲಾಯಿತಿಯಿಂದ ಇಂಡಿಯಾ ದೇಶಕ್ಕೆ ಹೊರಡಿರುವರು. ಇವರು ವಿಲಾಯಿತಿಯಲ್ಲಿ ಸಿಂತದ್ದರ ಕೀರ್ತಿ ಕಟ್ಟಿಕೊಳ್ಳಲಿಕ್ಕೆ ೧೦೦ ವಿಲಾಯ್ತಿ ನಾಯಿಗಳನ್ನು ಪೋಲೀಸ ಕೆಲಸಕ್ಕಾಗಿ ಕ್ರಯಕ್ಕೆ ತೆಗೆದುಕೊಂಡಿದ್ದಾರೆ. ಇವುಗಳನ್ನು ಮುಂಚಿತವಾಗಿಯೇ ಪಾಟಿಯಾಲ ದೇಶಕ್ಕೆ ಕಳಿಸಿದ್ದಾರೆ. ೧೦೦ ಪೋಲೀಸು ನಾಯಿಗಳ ಬದಲಾಗಿ ಸಾವಿರ ಚಕ್ಕುಗಳನ್ನು ಇಲಿಗಳೊಳಗೆ ಪೋಲೀಸ ಕೆಲಸ ಮಾಡಲಿಕ್ಕೆ ಖರೀದಿ ಮಾಡಿದ್ದರೆ ಆಗುತ್ತಿತ್ತು.

— ದಿ ಗ್ರೇಟ್ ಇಂಡಿಯನ್ ರೈಲ್ವೆ ಕಂಪೆನಿಯವರು ತಮ್ಮ ರೈಲ್ವೆಯನ್ನು ವಿದ್ಯುಚ್ಛಕ್ತಿಯ ಮೂಲಕ ನಡಿಸಲಿಕ್ಕೆ ಅದಕ್ಕೆ ಬೇಕಾದ ವಿದ್ಯುಚ್ಛಕ್ತಿಯ ಯಂತ್ರಕ್ಕೆ ವಿಲಾಯ್ತಿಗೆ ಒರ್ಡರ್ ಕೊಟ್ಟಿರುವರು.

— ಮಹಾತ್ಮಾ ಗಾಂಧಿಯವರಿಗೆ ಲಕ್ನೌದ ಮುನಿಸಿಪಾಲಿಟಿಯವರಿಂದ ಒಂದು ಮಾನಪತ್ರವು ಅರ್ಪಿಸಲಾಯಿತು.

— ಇಂಡಿಯಾದಲ್ಲಿ ಸಂದರ್ಶಿಸುತ್ತಿದ್ದ ಬೆಲ್ಜಿಯಮಿನ ಮಹಾರಾಜರು ಮತ್ತು ರಾಣಿಯವರು ವಿಲಾಯತಿಗೆ ತೆರಳಿದರು.

— ಮುಂಬಾಯಿ ಸರಕಾರದವರು ಹಿಂದಿ ಕಲ್ಲಿದ್ದಲನ್ನು ಉಪಯೋಗಿಸುವರೆ ಒಪ್ಪಿಕೊಂಡಿರುವರು.

— ಅನಾರೋಗ್ಯದ ದೆಶೆಯಿಂದ ಸರ್ವಮಾನ್ಯ ಶ್ರೀಯುತ ಲಾಲಾ ಲಜಪತರಾಯರು ಮುಂಬಯಿಯಲ್ಲಿ ಕೂಡಲಿಕ್ಕಿರುವ ಹಿಂದೂಮಹಾಸಭೆಯ ಅಧ್ಯಕ್ಷಪದವಿಯನ್ನು ನಿರಾಕರಿಸಿದ್ದರು. ಇವರ ಸ್ಥಾನಕ್ಕೆ ಪಂಡಿತ ಮದನಮೋಹನ ಮಾಲವೀಯರನ್ನು ಕೇಳಿಕೊಂಡಿರುವರು. ಶ್ರೀಯುತ ಆರ್ ಜಯಕರ್‌ರವರೇ ಸ್ವಾಗತ ಮಂಡಳಿಯ ಅಧ್ಯಕ್ಷರು.

— ಡೋಕ್ಟರ್ ವಿ. ಆರ್. ಕಾಮತರ ಮದ್ರಾಸಿನ ಡಿಸ್ಪೆನ್ಸರಿಯಲ್ಲಿ ಅವರು ಮನೆಯೊಳಗೆ ಅಸ್ವಸ್ಥವಿದ್ದಾಗ ಪೋಲೀಸರು ಅಫೀಮು ಪತ್ತೆಯ ಉದ್ದೇಶದಿಂದ, ಜಪ್ತಿಹುಕುಮು ಪಡೆದು ಬಂದು ಹುಡುಕಿ, ಬೇರೇನೂ ಸಿಕ್ಕದೆ ಬರೇ ೧೦ ಡಿನ್ನು ಟಿಂಕ್ಚರ್ ಕೆಂಫರಕೊ ಎಂಬ ಸ್ವಲ್ಪ ಅಫೀಮು ಬೀಳುವ ಔಷಧವನ್ನೂ, ಕೆಲವು ಲೆಕ್ಕ ಪುಸ್ತಕಗಳನ್ನೂ ಹಿಡಿದುಕೊಂಡು ಹೋಗಿರುವರು. ಇದು ದ್ವೇಷಿಕರಿಂದನಡೆದದ್ದಾಗಿಯೂ, ಇದರಿಂದ ಹೆದರಬೇಕಾದುದೇನೂ ಇಲ್ಲವೆಂದೂ, ಯಥಾಪ್ರಕಾರ ತನ್ನ ಅಳಿಯಂದಿಯ ರಾದ ಬಿ. ಜಿ. ಶ್ಯಾನುಭಾಗರ ಚಿಕಿತ್ಸೆಯೊಡನೆ, ಡಿಸ್ಪೆನ್ಸರಿಯು ನಿರಾತಂಕವಾಗಿ ನಡೆಯುವುದೆಂದೂ ಇತ್ಯಾದಿ ಹಿಂದೂ ಪತ್ರಿಕೆಯಲ್ಲಿ ಅವರು ತಿಳಿಸಿರುವರು.

— ಬರೋಡೆಯ ದೊಡ್ಡ ಪುಸ್ತಕಭಂಡಾರಕ್ಕೆ ತಾ. ೧೯ನೇ ರಾತ್ರಿ ಬೆಂಕಿ ತಗಲಿ ಸಾಧಾರಣ ೩ಲಕ್ಷ ರೂಪಾಯಿ ಬೆಲೆ ಬಾಳುವ ಪುಸ್ತಕಗಳು ಸುಟ್ಟುಹೋದವು. ಅಲ್ಲಿದ್ದ ಅನೇಕ ಸಿನೇಮಾ ಫಿಲ್ಮುಗಳೂ ಸುಟ್ಟುಹೋದವು.

— ಮದ್ರಾಸ ಗವರ್ನರರು ಮತ್ತು ಅವರ ಪತ್ನಿ ಲೇಡಿ ಗೋಶನರು ತಿರುವಾಂಕೂರಿಗೆ ಹೋಗಿರುವರು.

— ಕರ್ನಾಟಕ ರಾಜಕೀಯ ಧುರೀಣರಾಗಿರುವ ಶ್ರೀನಿವಾಸ ಕೌಜಲಗಿಯವರು ಬಿಜಾಪುರದಲ್ಲಿ ಹದಿನೈದು ದಿನಗಳಿಂದ ಅಸ್ವಸ್ಥವಾಗಿರುವರು. ರೋಗವು ಪ್ರಬಲವಿದ್ದರೂ ಹೆದರಬೇಕಾಗಿಲ್ಲವೆಂದು ಡಾಕ್ಟರ್ ಅಂಕಾಲಿಕರ ಮತ್ತು ಕೋಳಟನೂರರು ಪರೀಕ್ಷಿಸಿ ಹೇಳಿರುವರು.

— ಬಂಗಾಳ ನ್ಯಾಯವಿಧಾಯಕ ಸಭೆಯು ನವಂಬರ ೧೬ನೇ ತಾರೀಕಿನ ಬದಲಿಗೆ ದಶಂಬರ ೩ಕ್ಕೆ ಕೂಡುವುದಾಗಿ ಸರಕಾರಿ ಜಾಹೀರಾತು ಇದೆ.

— ಆಸ್ಸಾಮಿನ ಕೂಲಿಕಾರರ ಸ್ಥಿತಿಗತಿಗಳನ್ನು ವಿಚಾರಿಸಿ ಬರಹ ಮೂಲಕ ಪ್ರಕಟಿಸುವ ಬಗ್ಗೆ, ಜಿನಿವಾ ಶಹರಿನಲ್ಲಿಯ ಅಂತರಾಷ್ಟ್ರೀಯ ಕೂಲಿಕಾರರ ಆಫೀಸಿನ ಕಾರ್ಯವಾಹಕರು ಒಂದು ಕಮಿಟಿಯನ್ನು ನೇಮಿಸುವರು,

— ಮುಂಬಾಯಿಯ ಗಿರಣೀ ಕೂಲಿಕಾರರ ಮುಷ್ಕರ ಇನ್ನೂ ಅಂತ್ಯವಾಗಿಲ್ಲ. ಕೆಲವು ಗಿರಣಿಗಳಿಗೆ ಯಾವುದೊಂದು ನಷ್ಟವಾಗದೆ ಅವು ಒಳ್ಳೇ ಸ್ಥಿತಿಯಲ್ಲಿಯೇ ಇವೆ. ಅವುಗಳ ಮಾರಾಟವಾಗದೆ ಜಮೆ ಆಗಿದ್ದ ವಸ್ತ್ರಗಳು ಈ ಮುಷ್ಕರದಿಂದ ವಸ್ತ್ರತಯಾರಿಯು ನಿಂತದ್ದರಿಂದ, ಎಲ್ಲಾ ಮಾರಾಟ ಆಗಿ ಹೋಗಿವೆ. ಅಂತಹ ಗಿರಣಿಗಳು ಕೂಲಿಕಾರರ ಸಂಬಳ ಕಡಿಮೆ ಮಾಡದೆ ಕೆಲಸವನ್ನು ಆರಂಭಿಸಬಹುದಾಗಿ ಮುಂಬಾಯಿ ಗವರ್ನರರೂ, ಕೂಲಿಕಾರರ ಪ್ರತಿನಿಧಿಗಳೂ, ಮುಂಬಾಯಿ ಗಿರಣೀ ಸಂಘದವರಿಗೆ ಸೂಚಿಸಿರುವರು. ಆದರೆ ಸಂಘದವರೊಳಗೆ ಈ ವಿಷಯ ಒಮ್ಮತವಿಲ್ಲ. ಸುಸ್ಥಿತಿಯಲ್ಲಿದ್ದ ಗಿರಣಿಗಳ ಒಪ್ಪಿಗೆಯೂ, ಆರ್ಥಿಕಸ್ಥಿತಿ ಚೆನ್ನಾಗಿರದ ಗಿರಣಿಗಳ ನಿಷೇಧವೂ ಇದೆ. ಗಿರಣಿಗಳು ಕೆಲಸವನ್ನು ಪ್ರಾರಂಭಿಸುವುದಾದರೆ ಸರಕಾರವು ಅವರಿಗೆ ಬೇಕಾದ ಆಶ್ರಯವನ್ನು ಕೊಡುವುದಾಗಿ ಅಭಿವಚನವಿತ್ತಿದೆ.

— ಕೋಲಾರ ತಾಲೂಕು ಕಾಂಗ್ರೆಸ ಕಮಿಟಿಯು ಸ್ವರಾಜ್ಯಪಕ್ಷದವರ ವಶಮಾಡಲ್ಪಟ್ಟಿತು.

— ಅಸಹಕಾರಕ್ಕೆ ಅನುಸಾರವಾಗಿ ಶಾಲೆಬಿಟ್ಟು ಈಗ ಪುನಃ ಕೋಲೇಜನ್ನು ಸೇರಬಿಚ್ಛಿಸುವವರಿಗೆ ಹಾಜರಿಯ ರಿಯಾಯತಿಯನ್ನು ಕೊಡಬೇಕಾಗಿ ಶ್ರೀಯುತ ಎಸ್. ಶ್ರೀನಿವಾಸ ಐಯ್ಯಂಗಾರರು ಸೂಚಿಸಿರುವರು.

— ಸಂಯುಕ್ತ ಪ್ರಾಂತದ ಟಪ್ಪಾಲ ಖಾತೆಯ ನೌಕರರ ಪರಿಷತ್ತು ಮುಜಾಫರ್‌ನಲ್ಲಿ ಕೂಡಿತ್ತು. ಮಿ| ಸಿ. ಎಸ್. ರಂಗ ಐಯ್ಯರ, ಸ್ವರಾಜ್ಯ ಪಕ್ಷದ ಎಸೆಂಬ್ಲಿ ಮೆಂಬರರು ಅಧ್ಯಕ್ಷರಾಗಿದ್ದರು.

— ಬೆಲ್ಜಿಯಮಿನ ರಾಜರೂ ರಾಣಿಯವರೂ ೧|| ತಿಂಗಳು ಹಿಂದುಸ್ಥಾನದಲ್ಲಿ ತಿರುಗಿ, ಸರಕಾರದ ಅತಿಥಿಗಳಾಗಿ ಸರಕಾರಕ್ಕೆ ಒಂದು ದೊಡ್ಡ ಸರ್ಟಿಫಿಕೇಟನ್ನು ಕೊಟ್ಟು, ವ್ಯಾಸರಾಯರ ಮೇಲೆ ಉದ್ಧಟವಾದ ಒಂದು ಬಿರುದನ್ನು ಹೊರಿಸಿ, ಹಿಂದೂಸ್ಥಾನದಿಂದ ಹೊರಟರು. ಸರಕಾರದ ಆತಿಥ್ಯವು ಸಾರ್ಥಕವಾಯಿತು.

— ಹೈದರಾಬಾದಿನ ನೈಜಾಮನ ೧೬ ವರ್ಷ ಪ್ರಾಯದ ಮಗಳು ಕ್ಷಯರೋಗದಿಂದ ತೀರಿಕೊಂಡಳು. ಸರಕಾರಿ ಕೋರ್ಟು ಕಚೇರಿಗಳಿಗೆ ಮತ್ತು ಶಾಲೆಗಳಿಗೆ ದುಃಖಸೂಚಕವಾಗಿ ರಜೆಯಿತ್ತು.

— ಸೀತಾಪುರದಲ್ಲಿ ಸಂಯುಕ್ತ ಪ್ರಾಂತ್ಯದ ಪ್ರಾಂತಿಕ ಪರಿಷತ್ತು ಕೂಡಿತ್ತು. ಮಹಾತ್ಮಾ ಗಾಂಧಿಯವರು, ಪಂಡಿತ ಮೋತಿಲಾಲ ನೆಹರು, ಮೌಲಾನಾ ಮಹಮ್ಮದ ಅಲ್ಲಿ, ಮಿ| ಶಂಭುನಾಥ, ಪಂಡಿತ ಜವಾಹಿರಲಾಲ ನೆಹರು, ಮೌ| ಮಹಮ್ಮದಲ್ಲಿಯವರ ಪತ್ನಿ, ಮುಂತಾದ ಧುರೀಣರು ಹಾಜರಿದ್ದರು. ಮೌಲಾನಾ ಶೌಕತ ಅಲ್ಲಿಯವರು ಅಧ್ಯಕ್ಷರಾಗಿದ್ದರು.

— ಹೆಡ್ಜಾಜದಲ್ಲಿ ನಡೆಯುತ್ತಿರುವ ಯುದ್ಧದ ವಿಷಯವಾಗಿ ಲಕ್ನೋದಲ್ಲಿ ಕೂಡಿದ ಮುಸಲ್ಮಾನರ ಸಭೆಯಲ್ಲಿ, ಇಬ್ನಸೌದರ ಪಕ್ಷವನ್ನು ಸಮರ್ಥಿಸಿ ಮಾತನಾಡಲಿಕ್ಕಿದ್ದ ಮೌ| ಮಹಮ್ಮದಲ್ಲಿಯವರಿಗೆ ಒಂದು ಮಾತು ಕೂಡ ಆಡಲು ನೆರೆದವರು ಬಿಡಲಿಲ್ಲ!

— ಅಯೋಧ್ಯೆಯ ಹೊನರರಿ ಮೆಜಿಸ್ಟ್ರೇಟರಾಗಿದ್ದ ಮಿ| ಮಹಾದೇವ ಭಗವಂತ ದೇಶಮುಖರನ್ನು ಪೋರ್ಜರಿ ಆರೋಪದ ಮೇಲೆ ಕೈದುಮಾಡಿ ಕೈಗೆ ಕೋಳವನ್ನು ತೊಟ್ಟು, ಜೈಲಿಗೆ ಕೊಂಡೊಯ್ದಿರುವರು. ಒಂದು ವರ್ಷದಿಂದ ಈ ವ್ಯಾಜ್ಯವು ನಡೆಯುತ್ತಿತ್ತು. ಇವರು ಸರಿಯಾಗಿ ಹಾಜರಾಗದೆ ಇದ್ದುದರಿಂದ ವಾರಂಟು ಕೊಡಲ್ಪಟ್ಟಿತು. ಇವರ ಸೊತ್ತುಗಳು ಜಪ್ತಿಮಾಡಲ್ಪಟ್ಟು ಕೆಲವು ಬಹಿರಂಗ ಏಲಂಮಾಡಲ್ಪಟ್ಟವು.

— ಗದವ್ವಾರಾ ಎಂಬಲ್ಲಿಯ ನಾರಾಯಣಲಾಲ್ ಎಂಬ ವಕೀಲರು ಮುನ್ಸಿಪಾಲಿಟಿಯಿಂದ ರೂ. ೩೦೦ನ್ನು ದುರುಪಯೋಗಪಡಿಸಿದರೆಂಬ ಆರೋಪದ ಮೇಲೆ ಜಬ್ಬಲ್‌ಪೂರಿನ ಸೆಶ್ಯನ್ಸ ಜಡ್ಜರಿಂದ ೫ ವರ್ಷ ಸಜೆಗೆ ವಿಧಿಸಲ್ಪಟ್ಟಿದ್ದರು. ಆದರೆ ಅಪೀಲಿನಲ್ಲಿ ಸಜೆಯು ಬಿಟ್ಟುಹೋಯಿತು.

— ಮುಂಬಾಯಿಯಲ್ಲಿ ಸಣ್ಣ ಮಕ್ಕಳು ಪಟಾಕಿ ಹೊಡೆಯುತ್ತಿದ್ದಾಗ ಒಬ್ಬ ಸಾರ್ಜೆಂಟನಿಗೆ ಕೋಪ ಬಂದು ಗುಂಡು ಹೊಡೆದು ಒಬ್ಬ ಹುಡುಗಿಗೆ ಗಾಯ ಮಾಡಿದನು. ಇವನಿಗೆ ಕೆಲಸದಿಂದ ತೆಗೆದು ಹಾಕಿರುವರು

— ಕೊನಪೂರಿನಲ್ಲಿ ಬರುವ ದಶಂಬರ ತಿಂಗಳಲ್ಲಿ ಕೂಡುವ ಕಾಂಗ್ರೆಸ್ಸಿನ ಸ್ಥಳವು ಬಹಳ ತೊಂದರೆಯ ನಂತರ ಈಗ ಪಡೆಕೊಳ್ಳಲಾಯಿತು. ಒಂದು ತಿಂಗಳ ಹಿಂದೆಯೇ ಒಂದು ಸ್ಥಳವನ್ನು ಪಡೆಕೊಳ್ಳಬೇಕಾಗಿ ನಿರ್ಧರಿಸಲಾಗಿತ್ತು. ಆದರೆ ಕೊನಪೂರಿನ ಇಂಪ್ರೂವ್‌ಮೆಂಟ ಟ್ರಸ್ಟಿನ ಅಧ್ಯಕ್ಷರು ಅಲ್ಲಿ ವಾಸಿಸುತ್ತಿದ್ದ ಜನರಿಗೆ ಬಾಡಿಗೆ ಕೊಟ್ಟರೆ ತಮ್ಮ ಆಕ್ಷೇಪವೇನೂ ಇಲ್ಲವೆಂದರು. ಆ ಪ್ರಕಾರ ೬,೪೦೦ ರೂಪಾಯಿ ಬಾಡಿಗೆಯು ಕೊಡಲ್ಪಟ್ಟಿತು. ಆದರೆ ಆ ಮೇಲೆ ಟ್ರಸ್ಟಿನ ಯುರೋಪಿಯನ್ ಮೆಂಬರರು, ಕೊಂಗ್ರೆಸ್ಸಿನ ಕೋಲಾಹಲದಿಂದ ಅಲ್ಲಿದ್ದ ಬಿಳೀ ಜನರಿಗೆ ತೊಂದರೆ ಆಗುವುದೆಂದು ಅಡ್ಡಿತೆಗೆದರು. ಆದರೆ ಅಲ್ಲಿದ್ದ ಬಿಳೀ ಜನರು ತಮಗೆ ತೊಂದರೆ ಏನೂ ಇಲ್ಲವೆಂತ ಬರಹಸಿ ತಿಳಿಸಿದರಂತೆ. ಆ ಮೇಲೆ ಟ್ರಸ್ಟಿನವರು ೩೦೦ ರೂಪಾಯಿ ಪ್ರತ್ಯೇಕ ಬಾಡಿಗೆ ಕೇಳಿದರು. ಈ ಬಾಡಿಗೆ ಪಡೆಯುವ ಅಧಿಕಾರ ಟ್ರಸ್ಟಿಗೆ ಇಲ್ಲದಿದ್ದರೂ, ತೊಂದರೆ ಇಲ್ಲದೆ ಆಗುವ ಹಾಗೆ ಸ್ವಾಗತ ಕಮಿಟಿಯವರು ಈ ೩೦೦ ರೂಪಾಯಿಯನ್ನು ಕೊಟ್ಟರು.

ಸ್ಥಳವು ೫೦ ಎಕ್ರೆ ವಿಸ್ತೀರ್ಣವಿದ್ದು ಆರೋಗ್ಯಕರವಾಗಿದೆ. ರೈಲ್ವೆ ಸ್ಟೇಶನಿನಿಂದ ೩ ಮೈಲು ದೂರವೂ, ಗಂಗಾನದಿಯ ಹತ್ತಿರವೂ ಇದೆ.

— ಕೊಕೇಯಿನ್ ಎಂಬ ಅತೀ ಅಮಲಿನ ಪದಾರ್ಥವನ್ನು ಮಾರುತ್ತಿದ್ದ ಗುಲಾಮ ಮಹಮ್ಮದ ಎಂಬವನಿಗೆ ೨ ವರ್ಷದ ಕಠಿಣ ಸಜೆಯನ್ನೂ, ೪೦೦೦ ರೂಪಾಯಿ ಜುಲುಮಾನೆ, ತಪ್ಪಿದರೆ ಆರು ತಿಂಗಳ ಜಾಸ್ತಿ ಕಠಿಣ ಸಜೆಯನ್ನೂ, ಮಹಮ್ಮದ ಅಲಿ ಎಂಬವನಿಗೆ ೨ ವರ್ಷದ ಕಠಿಣ ಸಜೆಯನ್ನೂ, ೧೦೦೦ ರೂಪಾಯಿ ಜುಲುಮಾನೆ, ತಪ್ಪಿದರೆ ಆರು ತಿಂಗಳ ಜಾಸ್ತಿ ಕಠಿಣ ಸಜೆಯನ್ನೂ ಲಾಹೋರಿನ ಡಿಸ್ಟ್ರಿಕ್ಟ ಮೆಜಿಸ್ಟ್ರೇಟರು ವಿಧಿಸಿರುತ್ತಾರೆ.

— ಮಿ| ತಾಂಬೆಯವರು ಮಧ್ಯಪ್ರಾಂತದ ಎಕ್ಸಿಕ್ಯೂಟಿವ್ ಕೌನ್ಸಿಲರಶಿಪ್ಪನ್ನು ಸ್ವೀಕಾರಮಾಡಿದ್ದನ್ನು ಖಂಡಿಸಲಿಕ್ಕೆ ತಂಜಾವೂರಿನಲ್ಲಿ ಸ್ವರಾಜ್ಯ ಪಕ್ಷದವರ ಒಂದು ಸಭೆ ಸೇರಿ ಆಗತ್ಯವಾದ ಠರಾವುಗಳು ಮಂಜೂರಾದವು.

ದಕ್ಷಿಣ ಕನ್ನಡ.

ಬಂಟವಾಳ: — ಇಲ್ಲಿ ಈ ವಾರದಲ್ಲಿ ಕಠಿಣ ತರದ ಜಡಿಮಳೆ ಬಂದು ಕಟ್ಟಗಳೂ, ಗದ್ದೆಹುಣಿಗಳೂ ಒಡೆದು ಹೋಗಿ ರೈತರಿಗೆ ಬಹಳ ನಷ್ಟ ಸಂಭವಿಸಿಯದೆ. ಜೋಡುಮಾರ್ಗಕ್ಕೆ ಹೋಗುವಲ್ಲಿರುವ ಕಂಚಿಗಾರ ಕಟ್ಟೆ ಸಂಕದ ಹತ್ತರ ತೋಡಿಗೆ ಎರಡೂ ಬದಿಗಳಲ್ಲಿ ಕಟ್ಟಿದ ಕಲ್ಲುಗಳು ಜರಿದು ಬಿದ್ದು ಸುಮಾರು ರೂ. ೫೦೦ ನಷ್ಟವಾಗಿದೆ. ಬೆಂಡತಿಮಾರ ಸಂಕದ ಹತ್ತಿರ ಕಟ್ಟಿಕೊಂಡ ಕಲ್ಲುಗಳೂ ಜರಿದು ಬಿದ್ದಿದೆ. ಬೆಳತಂಗಡಿಗೆ ಹೋಗುವ ಮಾರ್ಗದಲ್ಲಿ ಮಲೆಜಾವಿನ ಹತ್ತಿರ ಮಾರ್ಗದಲ್ಲಿ ಮೂರು ಕಡೆಗಳಲ್ಲಿ ಗುಡ್ಡೆಯು ಜರಿದು ಬಿದ್ದು ಮೋಟರ ಗಾಡಿಗಳು ಹೋಗುವದು ಕಷ್ಟವಾಗಿದೆ. ಅಲ್ಲಿಯೇ ತೋಡಿನ ನೀರಿನ ರಭಸಕ್ಕೆ ಒಂದು ಅಡಿಕೆ ತೋಟದಲ್ಲಿರುವ ಅಡಿಕೆ ಮರಗಳೆಲ್ಲವೂ ಬಿದ್ದುಹೋಗಿವೆ. ಹಚಾಂಕೋಡಿಯಲ್ಲಿರುವ ಬಂಟ್ವಾಳ ಟೋಲುಗೇಟಿನ ಹತ್ತರ ಗೇಟು ಕಾಯುವವರ ಶೆಡ್ಡೂ ಅದರ ಹತ್ತರವಿರುವ ಮೂರು ಮನೆಗಳೂ, ಬಿದ್ದು ಹೋಗಿವೆ. ನದಿಗಳು ಹಾಳುಮಾಡದೆ ಬಿಟ್ಟಿವುಗಳನ್ನು ತೋಡುಗಳ ನೆರೆಯು ಹಾಳುಮಾಡಿದಂತಾಯಿತು.

ಇಲ್ಲಿಯ ಲೋಕಲ್ ಫಂಡಿನ ೧೦ ರಾಟೀನಾಗಳನ್ನು ಕಳೆದ ನರಕ ಚತುರ್ದಶಿಯ ದಿವಸದಿಂದ ಹಚ್ಚಲಾರಂಭಿಸಿರುತ್ತಾರೆ. ಎರಡು ಸೊಸೈಟಿಗಳ ಎರಡು ಲಾಟೀನು ಕಂಬಗಳಲ್ಲಿ ಒಂದು ನಿಂತುಕೊಂಡಿದೆ. ಒಂದು ಬತ್ತಕಟ್ಟೆ ಸಂಕದ ಹತ್ತರ ಅಶ್ವತ್ಥ ಮರದ ಬುಡದಲ್ಲಿ ಮಲಗಿಯದೆ. ಸೊಸೈಟಿಗಳಿಗೂ ಇಲಾಖಾ ಆಫೀಸರರು ಹೆಚ್ಚಾಗುತ್ತಾ ಬರುವಾಗ, ದುರ್ದಶೆಯು ವ್ಯಾಪ್ತವಾದುದು ಪರಮಾಶ್ಚರ್ಯಕರವಾಗಿದೆ.

ಸಜೀಪ ಮೂಡಗ್ರಾಮದಲ್ಲಿ ಒಬ್ಬ ಬ್ರಾಹ್ಮಣನ ಕೊಲೆಯಾಗಿತ್ತು. ಅವನ ಕೊಲೆಯಲ್ಲಿ ಅವನ ಹೆಂಡತಿಯು ಭಾಗಿನಿಯಾಗಿದ್ದಳೆಂಬ ಗುಮಾನಿನ ಮೇಲೆ ಅವಳನ್ನು ಕೈದು ಮಾಡಿ ಇಲ್ಲಿಯ ಸಬ್ ಜೈಲಿನಲ್ಲಿ ರಿಮಾಂಡಿನಲ್ಲಿಟ್ಟಿರುತ್ತಾರೆ.

ಪೊಳಲಿ: — ಶ್ರೀ ರಾಜರಾಜೇಶ್ವರಿ ಕೃಪಾಪೋಷಿತ ಭಜನ ಮಂಡಲಿಯವರಿಂದ ಪ್ರತಿ ಕಾರ್ತಿಕದಲ್ಲಿ ನಡಿಸಬರತಕ್ಕ ವಾರ್ಷಿಕ ಭಜನೋತ್ಸವವು ಇದೇ ಪಾಡ್ಯದಿಂದ ಪ್ರಾರಂಭವಾಗಿ ಬರುವ ಏಕಾದಶಿಯಿಂದ ಪಟ್ಟಣಪರ್ಯಟನ, ಪೌರ್ಣಮಿಯು ಶನಿವಾರ ಅಹೋರಾತ್ರಿ ಕೀರ್ತನೆಯೊಂದಿಗೆ ನಗರಭಜನೆಯಾಗಿ ಮರುದಿನ ಅವಭೃತ ಮತ್ತು ಮಂಗಳವಾಗುವುದು. ಭಜಕರು ಶಕ್ತ್ಯಾನುಸಾರ ಸಹಾಯಮಾಡಿ ಯಥೋಚಿತ ಪ್ರಸಾದವನ್ನು ಸಂತೋಷಪಾನೆಯು ಭೂರಿ ಭಾಗದೊಂದಿಗೆ ಶ್ರೀ ದೇವಿ ಕಟಾಕ್ಷಕ್ಕೆ ಪಾತ್ರರಾಗಬೇಕಾಗಿ ಸಂಚಾಲಕ ಬಡಕಬೈಲ ಪರಮೇಶ್ವರಯ್ಯನವರ ಪ್ರಾರ್ಥನೆ.

ಮಂಗಳೂರು.

ತಿದ್ದುಪಡಿ:—ನಮ್ಮ ಕಳೆದ ತಾ. ೧೬ನೇ ಸಂಚಿಕೆಯ ನಾಲ್ಕನೇ ಪುಟದಲ್ಲಿ ಪ್ರಕಟಿಸಿದ ಐ. ಪಿ. ನಂಬ್ರ 75/1925, ದಿವಾಳಿ ಅರ್ಜಿ ನಂಬ್ರ 26/1924, ಒಫೀಶಿಯಲ್ ರಿಸೀವರರ ಕೋರ್ಟು ದಿವಾಳಿ ಅರ್ಜಿ ನಂಬ್ರ 81/1924 ನೋಟೀಸಿನ ಕೆಳಗೆ ಎ. ಸಿ. ಮಸ್ಕರೇಂಞಸ್ ಎಂದು ಪ್ರಕಟವಾಗಿದೆ, ಇದರ ಬದಲಾಗಿ A. C. Gonsalves ಎಂದು ತಿದ್ದಿ ಓದಬೇಕಾಗಿ ಅಪೇಕ್ಷಿಸುತ್ತೇವೆ.

ಸಬ್ ರಿಜಿಸ್ಟ್ರಾರರಾಗಿರುವ ಎಸ್. ಜೆ. ಡಿ. ಸೋಜರು ಇಲ್ಲಿಯ ಇನ್ಶೂರೆನ್ಸ್ ಕಂಪೆನಿಗಳ ರಿಜಿಸ್ಟ್ರಾರರಾಗಿ ನೇಮಕ ಹೊಂದಿರುತ್ತಾರೆ.

ಕಳೆದ ತಾ. ೧೬ಕ್ಕೆ ವಿದ್ಯಾಖಾತೆಯ ಮಂತ್ರಿಯವರರಾದ ಒನರೇಬಲ್ ಸರ್ ಪರಶುರಾಮ ಪಾತ್ರೋರವರು ತಮ್ಮ ಕೌನ್ಸಿಲಿನ ಸೆಕ್ರೆಟರಿಯವರ ಕೂಡೆ ಇಲ್ಲಿ ಚಿತ್ತಯಿಸಿದ್ದರು. ಇವರು ಅದೇ ದಿವಸ ಇಲ್ಲಿಯ ಕಲೆಕ್ಟರರ ಆಫೀಸಿನಲ್ಲಿ ಜರಗಲಿಕ್ಕಿದ್ದ ವಿದ್ಯಾ ಇಲಾಖೆಯ ಸಭೆಗೆ ಹೋಗಿದ್ದರು. ಇಲ್ಲಿಯ ವಿದ್ಯಾ ಇಲಾಖೆಯ ಪ್ರೆಸಿಡೆಂಟರಾದ ರಾವ್‌ಬಹದ್ದೂರ್ ಎನ್. ಸುಬ್ಬರಾಯರು ಇವರನ್ನು ತಕ್ಕ ಸನ್ಮಾನಗಳಿಂದ ಸ್ವೀಕರಿಸಿ, ನಮ್ಮ ದಕ್ಷಿಣ ಕನ್ನಡಾ ಜಿಲ್ಲೆಯಲ್ಲಿರುವ ೮೦೧ ಹಳ್ಳಿಗಳಲ್ಲಿ ೭೪೧ ಎಲಿಮೆಂಟರಿ ಶಾಲೆಗಳು ಇರುತ್ತವಾಗಿ ವಿವರಿಸಿ ಹೇಳಿದರು. ಮತ್ತು ಪಂಚಮರ ಶಿಕ್ಷಣದ ಬಗ್ಗೆ ಕೆಲಸಮಾಡುವ ರೀತಿಯನ್ನು ಕೂಡ ವಿವರಿಸಿ ಹೇಳಿದರು.

ನಂತರ ವಿದ್ಯಾಮಂತ್ರಿಗಳು ತಮ್ಮ ಕೆಲವು ಸೂಚನೆಗಳನ್ನು ಇಲ್ಲಿಯ ವಿದ್ಯಾ ಇಲಾಖೆಯವರಿಗೆ ವಿವರಿಸಿ ಹೇಳಿದರು. ಅನಂತರ ಇಲ್ಲಿಯ ವಿದ್ಯಾ ಇಲಾಖೆಯ ಪ್ರೆಸಿಡೆಂಟರಾದ ರಾ। ಎನ್. ಸುಬ್ಬರಾಯರು ಇವರು ಕೌನ್ಸಿಲಿಗೆ ಸೂಚಿಸಿದ ಮಾರ್ಗವು ಯೋಗ್ಯವಾದುದೆಂದು ಇವರಿಗೆ ಧನ್ಯವಾದಗಳನ್ನಿತ್ತರು. ಈ ದಿವಸ ಸಭೆಯನ್ನು ಮುಕ್ತಾಯಗೊಳಿಸಿದ ನಂತರ ವಿದ್ಯಾ ಮಂತ್ರಿಯವರನ್ನು ಇಲ್ಲಿಯ ವಿದ್ಯಾ ಇಲಾಖೆಯ ಪ್ರೆಸಿಡೆಂಟರು ಅವರ ವಾಸ್ತವ್ಯಕ್ಕೆ ಅತಿಥಿಯಾಗಿ ಕರಕೊಂಡು ಹೋದರು. ಮರುದಿವಸ ತಾ. ೧೭ಕ್ಕೆ ರಾವ್‌ಬಹದ್ದೂರ್ ಎನ್. ಸುಬ್ಬರಾವ್ ಮತ್ತು ವಿದ್ಯಾ ಇಲಾಖಾ ಮಂತ್ರಿಯವರು ಕೂಡ ಬೆಳಗ್ಗೆ ೮ ಘಂಟೆಗೆ ಇಲ್ಲಿಯ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನಕ್ಕೆ ಚಿತ್ತಯಿಸಿ, ಅಲ್ಲಿಂದ ಹಳೆ ತಾಲೂಕು ಕಚೇರಿಯ ಕಂಪೌಂಡಿನಲ್ಲಿರುವ ಇಲ್ಲಿಯ ಎಜ್ಯುಕೇಶನಲ್ ಬೋರ್ಡಿನ ಸಭೆಗೆ ಚಿತ್ತಯಿಸಿದರು. ಸಭೆಯು ಮುಗಿದ ನಂತರ ಅಲ್ಲಿಂದ ಹೊರಟು ಇತರ ಅನೇಕ ಶಾಲೆಗಳನ್ನೂ, ಕೋಲೇಜುಗಳನ್ನೂ, ಗವರ್ನಮೆಂಟ್ ಗರ್ಲ್ಸ್‌ಸ್ಕೂಲ್, ಪಂಚಮರ ಶಾಲೆಗಳನ್ನೂ ಸಂದರ್ಶಿಸಿದರು. ಆ ದಿನ ೨ ಘಂಟೆಗೆ ಅವರು ಇತರರಿಗೆ ಕೂಡ ಭೇಟಿಕೊಟ್ಟರು. ನಂತರ ೪-೩೦ ಘಂಟೆ ಸಮಯದಲ್ಲಿ ಇಲ್ಲಿಯ ಮುನ್ಸಿಪಲ್ ಕೌನ್ಸಿಲಿನ ಸಭೆಗೆ ಚಿತ್ತಯಿಸಿ ಅಲ್ಲಿ ಅವರು ಕೌನ್ಸಿಲರೊಡನೆ ಕಡ್ಡಾಯ ಶಿಕ್ಷಣವನ್ನು ಪ್ರಾರಂಭಿಸುವರೆ ಸೂಚಿಸಿದರು. ಮುನ್ಸಿಪಲ್ ಸಭೆಯು ಮುಗಿದ ನಂತರ ೫ ಘಂಟೆ ಸಮಯಕ್ಕೆ ರಾವ್ ಸಾಹೇಬ್ ಮಹಾಬಲ ಹೆಗ್ಡೆಯವರ ಧಣಿಯಲ್ಲಿ ಇವರಿಗೆ ಟೀಪಾರ್ಟೀ ಸತ್ಕಾರವಿತ್ತು. ಮಂತ್ರಿಯವರು ಮರುದಿನ ಮೋಟಾರಿನಲ್ಲಿ ಕಾರ್ಕಳ, ಉಡ್ಪಿ ಈ ಕಡೆಗಳಿಗೆ ಪ್ರಯಾಣವನ್ನು ಬೆಳೆಸಿ ಅಲ್ಲಿಯ ಸೆಕೆಂಡರಿ ಶಾಲೆಗಳನ್ನು ಸಂದರ್ಶಿಸಿ ಹಿಂತಿರುಗಿ ಬಂದು ತಾ. ೧೮ನೇ ಬೆಳಗ್ಗಿನ ಮೈಲುಬಂಡಿಯಲ್ಲಿ ಹಿಂತಿರುಗಿ ಹೋದರು.

ಇಲ್ಲಿಯ ವಿಠೋಬ ದೇವಸ್ಥಾನದಲ್ಲಿ ಕಳೆದ ವರ್ಷದಂತೆ ಗೌಡಸಾರಸ್ವತ ಬ್ರಾಹ್ಮಣರ ಸಪ್ತೋತ್ಸವವು ನಿನ್ನೆ (ಪಂಚಮಿ)ಯಿಂದ ಪ್ರಾರಂಭವಾಗಿ ಬರುವ ಏಕಾದಶಿ ವರೆಗೆ ರಾತ್ರೆಹಗಲು ಬಿಡದೆ ಭಜನೆಯು ಇರುವುದು. ದ್ವಾದಶಿಯಲ್ಲಿ ಊರ ಜನರಿಗೆಲ್ಲಾ ಒಂದು ಭೋಜನದಿಂದ ಸಪ್ತಾಹವು ಮುಕ್ತಾಯವಾಗುವುದು.

ಇತ್ತೀಚಿಲಾಗೆ ನಮ್ಮ ಮಂಗಳೂರು ಟೌನಿನ ಮಾರ್ಗಗಳಲ್ಲಿ ಇರುವ ಕಲ್ಮಷಗಳನ್ನೂ ಮತ್ತು ಮಾರ್ಗಗಳಲ್ಲಿ ಅಲ್ಲಲ್ಲಿರುವ ಮಲವನ್ನು ತೆಗೆಯುವ ಮತ್ತು ಮಾರ್ಗವನ್ನು ಶುಚಿಯಾಗಿಡುವ ರೀತಿಯು ನಮ್ಮ ಮುನ್ಸಿಪಲ್ ಹೆಲ್ತ್ ಆಫೀಸರರು ಬಂದಂದಿನಿಂದ ಕೆಲವು ಮಟ್ಟಿಗೆ ಯೋಗ್ಯ ರೀತಿಯಲ್ಲಿ ನಡೆಯುತ್ತಿದೆ. ಆದರೆ ಈಗ ಕೆಲವು ದಿವಸಗಳಿಂದ ಮಲವನ್ನು ತುಂಬಿಸಿಕೊಂಡು ಹೋಗುವ ಗಾಡಿಗಳಿಂದ, ಮಲವು ಮಾರ್ಗದ ಮೇಲ್ಮೈ ಬೀಳುತ್ತದೆ. ಇದು ಹೆಚ್ಚಾಗಿ ಇಲ್ಲಿಯ ರಥಬೀದಿಯಲ್ಲಿರುವ ಮಾರ್ಕೆಟು ರಸ್ತೆಯಿಂದ ಮಲ ಕೊಂಡೊಯ್ಯುವ ಸ್ಥಳದ ವರೆಗೆ ಸ್ವಲ್ಪ ಸ್ವಲ್ಪ ಬೀಳುತ್ತದೆ. ಇದರ ಕಾರಣವು ಏನೆಂದರೆ ಮಲವನ್ನು ತುಂಬಿಸುವ ಗಾಡಿಗಳ ದ್ವಾರವನ್ನು ಸರಿಯಾಗಿ ಮುಚ್ಚಿಡದೆ ಅಲಕ್ಷತೆಯಿಂದ ಕೊಂಡೊಯ್ಯುವುದೇ ಆಗಿದೆ. ಈ ರೀತಿ ರಸ್ತೆಯಲ್ಲಿ ಮಧ್ಯಾಹ್ನ ಹೊತ್ತಿಗೆ ಮಲವು ರಸ್ತೆಯಲ್ಲಿ ಬೀಳುವುದರಿಂದ ರಸ್ತೆಯಲ್ಲಿ ಕೆಟ್ಟ ಗಾಳಿಯು ವಾಸನೆಯಿಂದ ಹೋಗಲು ಆಗುವುದಿಲ್ಲ; ಮತ್ತು ಸಣ್ಣ ಶಾಲಾ ಮಕ್ಕಳು, ಕೂಡ ಇದನ್ನು ತುಳಿದುಕೊಂಡು ಹೋಗಬೇಕಾಗುತ್ತದೆ. ಈ ವಿಷಯದಲ್ಲಿ ಮುನ್ಸಿಪಲ್ ಹೆಲ್ತ್ ಆಫೀಸರರು ಸ್ವಲ್ಪ ಗಮನವನ್ನಿತ್ತು ಮಲವನ್ನು ತುಂಬಿಸುವ ಗಾಡಿಗಳನ್ನು ಸರಿಯಾಗಿ ದುರುಸ್ತಿಪಡಿಸಿ ಮಾರ್ಗದ ಮೇಲೆ ಬೀಳುವ ಮಲದ ಬಾಧೆಯನ್ನು ನಿಲ್ಲಿಸಿದರೆ ಪೇಟೆಯ ನಿವಾಸಿಗರಿಗೆ ಒಂದು ಮಹತ್ತಾದ ಉಪಕಾರವಾಗುತ್ತಿತ್ತು. ಮತ್ತು ಇದರಿಂದ ಇತರ ಅನೇಕ ವ್ಯಾಧಿಗಳು ಕೂಡ ನಿಲ್ಲಿಸಿದಂತಾಗುವುದು.

ಮಂಗಳೂರು ಮುನಿಸಿಪಾಲಿಟಿಯಲ್ಲಿ ಒಕ್ಟೋಬರ ತಾ. ೧೬ಕ್ಕೆ ಅಂತ್ಯವಾಗುವ ವಾರದಲ್ಲಿ ೨೪ ಮರಣಗಳೂ, ೩೦ ಜನನಗಳೂ, ಅವುಗಳ ಪೈಕಿ ೧೭ ಗಂಡು, ೧೩ ಹೆಣ್ಣು ಆಗಿದ್ದವು.

ತಾ. ೩೦-೧೦-'೨೫ನೆಯ ಮಹಾಸಭೆಯ ಮಂಜೂರಾತಿ ಬಗ್ಗೆ ಮಂಗಳೂರು ತಾಲೂಕು ಕಾಂಗ್ರೆಸು ಕಮಿಟಿಯ ನಿಯಮಗಳಲ್ಲಿ ಸೂಚಿಸಲ್ಪಟ್ಟ ಬದಲಾವಣೆಗಳು.

೩. "ಸವಿನಯ ಆಜ್ಞಾಭಂಗ" ಎಂತ ಆದ ಮೇಲೆ "ಈ ನಿಯಮಗಳಲ್ಲಿ ಬದಲಾವಣೆ" ಎಂದು ಸೇರಿಸತಕ್ಕದ್ದು. ೬ನೇ ನಿಯಮಕ್ಕೆ ಈ ಕೆಳಗಿದ್ದನ್ನು ಸೇರಿಸತಕ್ಕದ್ದು.

"ಆದರೆ ಮಹಾಸಭೆಯು ನೇಮಕ ಮಾಡದೆ ಇರುವ ಸಂದರ್ಭದಲ್ಲಿ ಇವರನ್ನು ತಮ್ಮೊಳಗಿಂದ ನೇಮಕ ಮಾಡಲಿಕ್ಕೆ ಯಾ ಮಹಾ ಸಭೆಯವರಿಂದ ಯಾ ಕಾರ್ಯಕಾರಿ ಮಂಡಲಿಯವರಿಂದ ನೇಮಿಸಲ್ಪಟ್ಟವರನ್ನು ತೆಗೆದು ಬೇರೆಯವರನ್ನು ತಮ್ಮೊಳಗಿಂದ ನೇಮಕಮಾಡಲಿಕ್ಕೆ ಕೆಳಗಿನ ಷರತ್ತಿಗೆ ಒಳಪಟ್ಟು ಕಾರ್ಯಕಾರಿ ಮಂಡಲಿಯವರಿಗೆ ಇರುತ್ತದೆ. ನೇಮಿಸಲ್ಪಟ್ಟವರನ್ನು ತೆಗೆದು ಹಾಕಲಿಕ್ಕೆ ಆ ಬಗ್ಗೆ ಕ್ರಮವಾದ ನೋಟೀಸು ಕೊಟ್ಟು ನಡೆದ ಸಭೆಗೆ ೮ ಜನರು ಸದಸ್ಯರು ಹಾಜರಿರತಕ್ಕದ್ದು."

ಎರಡು ವಾರ್ಷಿಕ ಚುನಾವಣೆಗಳ ನಡುವೆ ಕಾರ್ಯಕಾರಿ ಮಂಡಲಿಯ ಸದಸ್ಯರಲ್ಲಿ ಖಾಲಿಬೀಳುವ ಸ್ಥಾನವನ್ನು ಬಾಕಿ ಸಮಯದ ಮಟ್ಟಿಗೆ ನೇಮಕಮಾಡುವರೆ ಉಳಿದ ಕಾರ್ಯಕಾರಿ ಮಂಡಲಿಯವರಿಂದ ಕೂಡಿದ ಕಾರ್ಯಕಾರಿ ಮಂಡಲಿಯ ಸಭೆಗೆ ಅಧಿಕಾರವಿರುತ್ತದೆ. ಅದೇ ರೀತಿ ಉದ್ಯೋಗಸ್ಥರ ಸ್ಥಾನದಲ್ಲಿ ಖಾಲಿ ಬೀಳಬಹುದಾದ ಸ್ಥಳಗಳಿಗೆ ಬಾಕಿ ಸಮಯದ ವರೆಗೆ ನೇಮಕ ಮಾಡುವ ಅಧಿಕಾರವು ಕಾರ್ಯಕಾರಿ ಮಂಡಲಿಯವರಿಗೆ ಇರುತ್ತದೆ.

೪. ೮ ೩ ಕಾರ್ಯಕಾರಿ ಮಂಡಲಿಗಳ ಸಭೆಗೆ ಗೈರಾಜರಾದ ಸದಸ್ಯನ ಸ್ಥಾನವು ಖಾಲಿ ಬಿದ್ದ ಹಾಗೆ ಎಣಿಸಲಾದೀತು. ಆತನನ್ನು ಎರಡನೇ ಚುನಾವಣೆ ಮಾಡುವುದರಲ್ಲಿ ಆಕ್ಷೇಪ ಇಲ್ಲ.

ನಿಯಮ ೪ ಮತ್ತು ೫ರ ಮಧ್ಯದಲ್ಲಿ "ಮತ್ತು ಉಪಾಧ್ಯಕ್ಷರು" ಎಂಬದನ್ನು ತೆಗೆದು ಹಾಕಬೇಕು.

೯. ಮುಂತಿನ ನಿಯಮದ ಬದಲಾಗಿ "ಕಾರ್ಯಕಾರಿ ಮಂಡಲಿಯವರು ನೇಮಕಮಾಡುವ ವರೆಗೆ ಕಾರ್ಯಕಾರಿ ಮಂಡಲಿಯವರಲ್ಲಿ ಯಾ ಉದ್ಯೋಗಸ್ಥರಲ್ಲಿ ಖಾಲಿ ಇರುವ ಸ್ಥಳವನ್ನು ಹಂಗಾಮಿಯಾಗಿ ನೇಮಕಮಾಡುವರೆ ಅಧ್ಯಕ್ಷರಿಗೆ ಅಧಿಕಾರ ಇರುತ್ತದೆ. ಕಾರ್ಯಕಾರಿ ಮಂಡಲಿಯ ಇತರ ೫ ಸದಸ್ಯರ ಒಪ್ಪಿಗೆಯಿಂದ ಕಾರ್ಯದರ್ಶಿಯವರನ್ನಾಗಲಿ ಖಜಾಂಜಿಯವರನ್ನಾಗಲಿ ಮನ್ನಮಾಡಿ ಕಾರ್ಯಕಾರಿ ಮಂಡಲಿಯವರು ಈ ವಿಷಯ ನಿರ್ಣಯ ಮಾಡುವ ವರೆಗೆ ಅವರ ಅಧಿಕಾರವನ್ನು ಇತರರಿಗೆ ಕೊಡಲಿಕ್ಕೆ ಅಧ್ಯಕ್ಷರಿಗೆ ಅಧಿಕಾರವಿರುತ್ತದೆ. ಆದರೆ ಹೀಗೆ ಮನ್ನಮಾಡಿದ ಒಂದು ಮಾಸಿನ ಒಳಗೆ ಕಾರ್ಯಕಾರಿ ಮಂಡಲಿಯ ಆ ಬಗ್ಗೆ ಸಭೆಯ ಪ್ರಕಟಣೆಗೆ ದಸ್ಕತು ಮಾಡಿ ಮನ್ನಮಾಡಿದ ದಿವಸ ಮತ್ತು ಸಭೆ ದಿವಸ ಕೂಡಿ ೧೦ ದಿವಸಗಳೊಳಗೆ ಕಾರ್ಯಕಾರಿ ಮಂಡಲಿಯ ಸಭೆಯನ್ನು ಕರಿಯತಕ್ಕದ್ದು.

ನಿಯಮ ೯ ಮತ್ತು ೧೦ರ ವರೆಗೆ "ಉಪಾಧ್ಯಕ್ಷ" ಇರತಕ್ಕದ್ದು.

೧೦. ಅಧ್ಯಕ್ಷರ ಗೈರಾಜರಿನಲ್ಲಿ ಉಪಾಧ್ಯಕ್ಷರು ಮಹಾಸಭೆಯ ಯಾ ಕಾರ್ಯಕಾರಿ ಮಂಡಲಿಯ ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸತಕ್ಕದ್ದು. ಮತ್ತು ಇತರ ಸಮಯದಲ್ಲಿ ಅಧ್ಯಕ್ಷರು ಬರಹಮೂಲಕ ಕೊಡುವ ತನ್ನ ಅಧಿಕಾರವನ್ನು ಉಪಯೋಗಿಸತಕ್ಕದ್ದು. ಅಧ್ಯಕ್ಷಸ್ಥಾನವು ಖಾಲಿಬಿದ್ದಲ್ಲಿ ಕಾರ್ಯಕಾರಿ ಮಂಡಲಿಯವರು ಬೇರೆ ಅಧ್ಯಕ್ಷರನ್ನು ನೇಮಕಮಾಡುವ ವರೆಗೆ ಉಪಾಧ್ಯಕ್ಷರೇ ಅಧ್ಯಕ್ಷರ ಅಧಿಕಾರವನ್ನು ನಡಿಸತಕ್ಕದ್ದು.

ನಿಯಮ ೧೮, ೧೯, ೨೦ ಈ ಕೆಳಗೆ ಕಾಣಿಸಿದ ಹಾಗೆ ಇರತಕ್ಕದ್ದು.

೧೮. ಮಹಾ ಮಂಡಲಿಯ ಸಭೆಗಳು ಮೂರು ವಿಧ ಇರತಕ್ಕದ್ದು. ಸಾಧಾರಣ ಸಭೆಗಳು, ವಿಶೇಷ ಸಭೆಗಳು, ಅಪೇಕ್ಷಿತ ಸಭೆಗಳು.

— ಸಾಧಾರಣ ಸಭೆಗಳು. —

ಮಹಾಮಂಡಲಿಯ ಸಾಧಾರಣ ಸಭೆಗಳು ವರ್ಷಕ್ಕೆ ಎರಡುಸಾರಿ ಕೂಡತಕ್ಕದ್ದು. ಪ್ರಥಮ ಸಭೆಯು ಜನವರಿ ಯಾ ಫೆಬ್ರವರಿಯಲ್ಲಿಯೂ, ದ್ವಿತೀಯ ಸಭೆಯು ಅಕ್ಟೋಬರ ಯಾ ನವಂಬರದಲ್ಲಿಯೂ ಸೇರತಕ್ಕದ್ದು. ಈ ಸಭೆಗಳು ಸೇರುವ ಹದಿನಾಲ್ಕು ದಿವಸಗಳ ಮುಂಚೆ ಸ್ಥಳ, ಸಮಯ ಮತ್ತು ವಿಷಯಗಳನ್ನು ಕಾಣಿಸಿ ಸ್ಥಳೀಕ ಪತ್ರಗಳ ಮೂಲಕ ತಿಳಿಸತಕ್ಕದ್ದು ಮತ್ತು ಪ್ರತಿಯೊಬ್ಬ ಸದಸ್ಯನಿಗೆ ರಿಜಿಸ್ತ್ರಿಯಲ್ಲಿ ಕಾಣುವ ಅವನ ವಿಳಾಸಕ್ಕೆ ಸಭೆಯ ದಿವಸ ಕೂಡಿ ಏಳು ದಿವಸಕ್ಕೆ ಮುಂಚೆ ತಲ್ಪುವಹಾಗೆ ಸಭೆಯ ಸ್ಥಳ ಮತ್ತು ಸಮಯವನ್ನು ಕಾಣಿಸಿ ಬರಹಮೂಲಕವಾಗಿ ಕಾರ್ಯಕಾರಿ ಮಂಡಲಿಯವರು ಈ ವಿಷಯ ನಿರ್ಣಯಿಸುವ ರೀತಿಯಲ್ಲಿ ನೋಟಿಸು ಕೊಡತಕ್ಕದ್ದು ಮತ್ತು ಚರ್ಚಿಸತಕ್ಕ ಎಲ್ಲಾ ವಿಷಯಗಳ ತಪಸೀಲು ಪಟ್ಟಿಯನ್ನು ಕಚೇರಿಯ ಪ್ರಕಟಣೆ ಹಲಿಗೆಯ ಮೇಲೆ ಸಭೆಯ ದಿವಸ ಕೂಡಿ ಏಳು ದಿವಸಗಳಿಗೆ ಮುಂಚಿತವಾಗಿ ಪ್ರಕಟಿಸತಕ್ಕದ್ದು. ಈ ಸಭೆಗೆ ಕನಿಷ್ಟ ಹಾಜರು ೧೦ ಆಗತಕ್ಕದ್ದು. ನಿಶ್ಚಿತ ಸಮಯದ ಅರ್ಧಗಂಟೆಯ ಒಳಗೆ ಕನಿಷ್ಟ ಹಾಜರು ಇಲ್ಲವಾದರೆ ಮರುದಿವಸ ಅದೇ ಸ್ಥಳದಲ್ಲಿ ಅದೇ ಸಮಯದಲ್ಲಿ ಸಭೆ ಸೇರತಕ್ಕದ್ದು. ಆ ಹೊತ್ತು ಅರ್ಧ ಗಂಟೆಯೊಳಗೆ ಕನಿಷ್ಟ ಹಾಜರು ಇಲ್ಲವಾದರೆ ಮರುವಾರ ಅದೇ ಸ್ಥಳದಲ್ಲಿ ಅದೇ ಸಮಯದಲ್ಲಿ ಸಭೆ ಸೇರಿ ಆ ಹೊತ್ತು ಅರ್ಧ ಗಂಟೆಯ ಒಳಗೆ ಕನಿಷ್ಟ ಹಾಜರು ಇಲ್ಲವಾದರೆ ಅರ್ಧ ಗಂಟೆಯು ನಂತರ ಹಾಜರಿದ್ದ ಸದಸ್ಯರು ಮಾಡಿದ ನಿರ್ಣಯಗಳು ಮಂಜೂರಾಗತಕ್ಕದ್ದು. ಈ ಸಭೆಗಳಿಗೆ ಪ್ರತ್ಯೇಕವಾಗಿ ನೋಟೀಸು ಬೇಡ. ಈ ಮೇಲಿನ ಸಂದರ್ಭದಲ್ಲಿಯೆ ಮುಂದರಿಸಿಟ್ಟ ಯಾವತ್ತು ಸಭೆಗೆ ಕನಿಷ್ಟ ಹಾಜರು ಬೇಕು. ಮುಂದರಿಸಿಟ್ಟ ಸಭೆಯ ಸಮಯದ ಅರ್ಧ ಗಂಟೆಯೊಳಗೆ ಕನಿಷ್ಟ ಹಾಜರು ಇಲ್ಲವಾದರೆ ಆ ದಿವಸ ಮತ್ತು ಮುಂದರಿಸಿಟ್ಟ ಸಭೆಯ ದಿವಸ ಕೂಡಿ ೫ ದಿವಸಕ್ಕೆ ಮಿಕ್ಕದ ಒಮ್ಮೆ ಮಾತ್ರ ಮುಂದರಿಸುವ ಅಧಿಕಾರವು ಹಾಜರಿದ್ದ ಸದಸ್ಯರಿಗೆ ಇರುತ್ತದೆ.

— ವಿಶೇಷ ಸಭೆಗಳು. —

ಸಾಧಾರಣ ಸಭೆಗಳಲ್ಲದೆ ಅವಶ್ಯ ಬಿದ್ದರೆ ಬೇರೆ ಸಭೆಗಳನ್ನು ಉದ್ದೇಶ ಕಾಣಿಸಿ ಕಾರ್ಯಕಾರಿ ಮಂಡಲಿಯವರಿಂದ ಅಪೇಕ್ಷಿಸಲ್ಪಟ್ಟು ಯಾ ತಾವಾಗಿ ಕಾರ್ಯದರ್ಶಿಯವರಾಗಲೀ ಅಧ್ಯಕ್ಷರಾಗಲಿ ಕರಿಯ ಬಹುದು. ಈ ಸಭೆಗಳಿಗೆ ಕೂಡಾ ಕೆಳಗೆ ಕಾಣಿಸಿದ ಸಂಗತಿಯಲ್ಲದೆ ಸಾಧಾರಣ ಸಭೆಯ ನಿರ್ಣಯಗಳು ಮಂಜೂರಾಗತಕ್ಕದ್ದು. ಅಂದರೆ ನಿಯಮ ೧೮ರಲ್ಲಿ ಕನಿಷ್ಟ ಹಾಜರಿಲ್ಲದೆ ಮುಂದರಿಸಿಟ್ಟ ಸಭೆಯಲ್ಲಿ ಕನಿಷ್ಟ ಹಾಜರಿಲ್ಲದೆ ಕಾರ್ಯಕಾರಿ ಮಂಡಲಿಯವರಿಂದ ಮೊದಲಾಗಿ ಶಿಫಾರಸು ಮಾಡಲ್ಪಡದ ಯಾವತ್ತು ನಿರ್ಣಯಗಳು ಪೂರ್ಣ ಮಂಜೂರಾಗಬೇಕಾದರೆ ಕಾರ್ಯಕಾರಿ ಮಂಡಲದವರ ಮಂಜೂರಾತಿ ಬೇಕು.

— ಅಪೇಕ್ಷಿತ ಸಭೆಗಳು. —

೧೯ನೇ ನಿಯಮದಲ್ಲಿ "ಕರಿಯ ಬಹುದು." ಎಂಬಾದ ಮೇಲೆ ಸಾಧಾರಣ ಸಭೆಗಳ ಕ್ರಮಗಳೇ ಇದಕ್ಕೂ ಲಗಾವು ಆಗುವುದು. ಮಾತ್ರ ನಿಯಮಿತ ಸಮಯದ ಅರ್ಧ ಗಂಟೆಯೊಳಗೆ ಕನಿಷ್ಟ ಹಾಜರು ಇಲ್ಲವಾದರೆ ಸಭೆಯು ಕೆಲಸ ಮಾಡದೆನೇ ಮುಕ್ತಾಯವಾಗುವುದು.

"ಇರತಕ್ಕದ್ದು" ಎಂಬಾದ ಮೇಲೆ ಮುಂಚೆ ಇದ್ದದ್ದನ್ನು ತೆಗೆದು "ಎರಡನೇ ಸಾಧಾರಣ ಮಹಾ ಸಭೆಯಲ್ಲಿ ಕಾಂಗ್ರೆಸಿಗೆ ಪ್ರತಿನಿಧಿಗಳನ್ನು ಚುನಾಯಿಸುವುದು ಯಾ ಅಗತ್ಯ ಇರಬಹುದಾದ ಇತರ ಕೆಲಸಗಳನ್ನು ಮಾಡುವುದು" ಎಂದು ಇರತಕ್ಕದ್ದು.

[illegible] ನಿಯಮದ ಬದಲಾಗಿ "ಈ ನಿಯಮಗಳನ್ನು ಸಭೆ ಕೂಡಿದಾಗಿಂದಾಗ್ಗೆ ಬದಲಾವಣೆ ಮಾಡುವ ಅಧಿಕಾರವು ಈ ಮಹಾ ಸಭೆಗಿರುತ್ತದೆ" ಎಂದು ಆಗತಕ್ಕದ್ದು. ಅ. ಭೋಜರಾಯ.

ಪ್ರೇಮ.

ಯಾವಾಗ ಮೋಹಮುಗ್ಧಳಾದ ಮಾತೆಯು ತನ್ನ ಬಾಲಕನನ್ನು ಕೈಯ್ಯಲೆತ್ತಿ ಮುದ್ದಿಸುವಳೊ, ಯಾವಾಗ ಮಾತೆಯು ಬಾಲಕನ ಶೈಶವ ಸಂಕಷ್ಟಗಳಲ್ಲಿ ತನ್ನ ಸರ್ವಸ್ವವನ್ನೂ ಬಲಿಯಿತ್ತು ಅದಕ್ಕಾಗಿ ತನ್ನ ತನುಮನವನ್ನೂ ಬಲಿಯೀಯಲು ಸಿದ್ಧಳಾಗಿ ತೋರುವಳೊ, ಆಗ ಪ್ರಪಂಚವು ಪ್ರೇಮದ ವಿಜಯಧ್ವನಿಯನ್ನೆಬ್ಬಿಸಿ, ಪ್ರೇಮವು ಪೂರ್ಣತೆಯನ್ನೈದಿತೆನ್ನುವುದು.

ಯಾವಾಗ ಪತಿಭಕ್ತಿ ಪರಾಯಣೆಯಾದ ಪತ್ನಿಯು, ತನ್ನ ಗೃಹಗರ್ಭದಲ್ಲಿ ಪತಿಸೇವಾತತ್ಪರಳಾಗಿ, ಪತಿಯ ಸುಖದುಃಖಗಳಿಗೆ ಭಾಗಿಯಾಗಿ, ಪತಿಗಾಗಿ ತನ್ನ ಸರ್ವ ಸುಖವನ್ನೂ ವರ್ಜಿಸಿ, ಪತಿಯ ಪದತಲದಲ್ಲಿ ತನ್ನ ಇಹ ಅಸ್ತಿತ್ವವನ್ನೇ ಅರ್ಪಿಸುವಳೊ, ಆಗ ಪುನಃ ಪ್ರಪಂಚವು ಪ್ರೇಮವು ಪೂರ್ಣತೆಯನ್ನೈದಿತೆನ್ನುವುದು.

ಯಾವಾಗ ಲಕ್ಷ್ಮಣನಂತಹ ಅನುಜನು ಅಗ್ರಜನ ಸಹಚರಿಯಾಗಿ, ಅಗ್ರಜನ ಛಾಯಾ ಶರೀರಿಯಂತೆ ಅವನ ಸುಖದುಃಖಮಯವಾದ ಪಥಗಳಲ್ಲೆಲ್ಲ ಅನುಸರಿಸುತ್ತ ಅಗ್ರಜನಿಗಾಗಿ ತನ್ನ ಇಹಜೀವನವನ್ನು ಧಾರೆಯೆರೆಯುವನೊ, ಆಗ ಪ್ರಪಂಚವು ಪ್ರೇಮವು ಪೂರ್ಣತೆಯನ್ನು ಹೊಂದಿತೆನ್ನುವುದು.

ಘನತರವಾದ ಸಂಕಷ್ಟದಲ್ಲಿ ಸಹಾಯಹೀನನಾದ ಸ್ನೇಹಿತನು ನರಳುತ್ತಿರಲು, ಸಹಾಯಮಾಡಲುದ್ಯುಕ್ತರಾದವರಿಗೆನೇ ಸಂಕಷ್ಟವು ಪರಮಾವಧಿ ರೂಪದಲ್ಲಿ ತಟ್ಟುವಂತಿರಲು, ಲಕ್ಷಿಸದೆ ಸ್ನೇಹಿತನು ಸಹಾಯಮಾಡಲು ಸೊಂಟಕಟ್ಟಲು, ಆಗ ಪ್ರಪಂಚವು ಪ್ರೇಮವು ಪೂರ್ಣತೆಯನ್ನು ಹೊಂದಿತೆನ್ನುವುದು.

ಜಗತ್ತಿನ ಈ ಪ್ರೇಮಗಳನ್ನು ಪ್ರಶಂಸಿಸದ ಜನರಿಲ್ಲ. ಜಗತಿನ ಪ್ರತಿ ಕಾರ್ಯವೂ ಈ ಪ್ರೇಮಗಳಿಲ್ಲದಿದ್ದರೆ, ಸಾಧ್ಯವೂ ಇರುತ್ತಿರಲಿಲ್ಲ. ಪ್ರೇಮ, ಪ್ರೇಮ; ಮಾನವ ಹೃದಯದಿಂದ ಮುಹೂರ್ತ ಮುಹೂರ್ತವೂ ಪ್ರೇಮದ ಜಯಕಾರವು ಹೊರಸೂಸುತ್ತಿದೆ. ತಾಯಿ ಮಕ್ಕಳ ಪ್ರೇಮವಿಲ್ಲದಿದ್ದರೆ ಸಂಸಾರವು ಸಾಧ್ಯವಿರುತ್ತಿರಲಿಲ್ಲ; ಪತಿಪತ್ನಿಯರ ಪ್ರೇಮವಿಲ್ಲದಿದ್ದರೆ ಗೃಹಜೀವನವು ಶೂನ್ಯವಾಗುತ್ತಿದ್ದಿತು; ಭ್ರಾತೃ ಭ್ರಾತೃಗಳ ಪ್ರೇಮವಿಲ್ಲದಿದ್ದರೆ ಜಗಸಂಸಾರವು ಅಸಾಧ್ಯವಿದ್ದಿತು; ಸ್ನೇಹದ ಸೌಹಾರ್ದವಿಲ್ಲದುದಾದರೆ ಸಂಸಾರದ ಸುಖಮಯವಾದ ನಿರ್ವಹನೆಯು ಇರುತ್ತಿರಲಿಲ್ಲ.

ಸಂಸಾರದ ಮೂಲವು ಈ ಪ್ರೇಮದಲ್ಲಿದೆ. ಆದರೆ ಪ್ರೇಮವು ಸಂಸಾರದ ಆವರಣದೊಳಗಿನ ಈ ಪ್ರೇಮದಲ್ಲಿಯೇ ಪೂರ್ಣತೆ ಹೊಂದುತ್ತಿದೆಯೆಂಬುದನ್ನು ನಾವು ಒಪ್ಪಲಾರೆವು.

ಸಂಸಾರದ ಈ ಪ್ರೇಮದಲ್ಲಿ ಆಶ್ಚರ್ಯಾತ್ಮಕವಾದುದೇನೂ ಇಲ್ಲ. ಮಾತೆಯು ಶಿಶುವನ್ನೂ, ಪತ್ನಿಯು ಪತಿಯನ್ನೂ, ಸಹೋದರನು ಸಹೋದರನನ್ನೂ, ಸ್ನೇಹಿತನು ಸ್ನೇಹಿತನನ್ನೂ, ಪ್ರೀತಿಸುವುದು ಪ್ರಕೃತಿಯ ನಿಯಮವಿದೆ. ಈ ಪ್ರೇಮದ ಕಾರಣದಿಂದಲೇ ಈ ಸಂಬಂಧಗಳು ಕಲ್ಪಿಸಲ್ಪಟ್ಟಿವೆ. ಈ ಪ್ರೇಮವು ಮನುಷ್ಯನಿಗೆ ಮಾತ್ರವಲ್ಲ, ಇಡೀ ಪ್ರಾಣಿವರ್ಗಕ್ಕೆ ಸಹಜವಾದುದಾಗಿದೆ. ತನ್ನ ಸಣ್ಣ ಮರಿಗಳನ್ನು ಕಾದಿಡುವುದರಲ್ಲಿ ಮೂಕಪ್ರಾಣಿಗಳು ಕೂಡ ಆತ್ಮತ್ಯಾಗವನ್ನು ಮಾಡುತ್ತಿವೆ. ಒಂದರೊಡನೊಂದಾಗಿ ಬಂಧುಭಾವದಿಂದ ಬೆಳೆದ ಪ್ರಾಣಿಗಳೂ ಕಷ್ಟಕಾಲದಲ್ಲಿ ಒಂದನ್ನಿನ್ನೊಂದು ಬಿಡುವುದಿಲ್ಲ—ಅಷ್ಟು ಸಂಘಟಿತವಲ್ಲದಿದ್ದರೂ, ಅಷ್ಟು ಜ್ಞಾನಾತ್ಮಕವಲ್ಲದಿದ್ದರೂ, ಪ್ರಾಣಿಗಳು ಅಷ್ಟು ತೀಕ್ಷ್ಣತರವಲ್ಲದರೂ ತಮ್ಮ ಪ್ರೇಮವನ್ನು ವ್ಯಕ್ತಗೊಳಿಸುತ್ತವೆ.

ಆದುದರಿಂದ ಈ ಸಂಸಾರಪ್ರೇಮವು ಕ್ಷುದ್ರವಾದುದು; ಇದರಲ್ಲಿ ಮಹತ್ವದ್ದೇನೂ ಇಲ್ಲ; ಇದರಿಂದ ಮನುಷ್ಯನು ಮಾಯಾಧೀನನಾಗಿ ಜಗತ್ತಿನಲ್ಲಿ ಬಂಧಿಸಲ್ಪಡುವನು; ಮತ್ತು ಇದರ ಮೂಲಕ ಅಸಂಖ್ಯ ಆಶೆಗಳುಂಟಾಗಿ ಮಾನವ ಅಧೋಗತಿಯೂ ಸಾಧ್ಯವಿರುವುದುಂಟು, ಎಂದು ವೈರಾಗಿಗಳು ಹೇಳುವರು.

ಸಂಸಾರದಿಂದ ಬಂಧಿಸಲ್ಪಟ್ಟ ಈ ಪ್ರೇಮಗಳಲ್ಲಿ ಪ್ರಶಂಸನೀಯವೇನೂ ಇಲ್ಲ. ಪ್ರೀತಿಸುವುದು ಮನುಷ್ಯನ ಸ್ವಭಾವ. ತನ್ನ ಮಗುವನ್ನಾಗಲಿ, ತನ್ನ ಪ್ರೀತಿಯ ಪತಿಯನ್ನಾಗಲಿ, ತನ್ನ ಸ್ನೇಹಿತನನ್ನಾಗಲಿ ಪ್ರೀತಿಸೆನು ಎಂಬುವ ಸ್ವಾತಂತ್ರ್ಯವು ಯಾರಲ್ಲಿಯೂ ಇಲ್ಲ. ವಿಶ್ವಕರ್ತನು "ಪ್ರೀತಿಸು" ಎಂದು ಆಜ್ಞಾಪಿಸಿರುವನು. ಉಲ್ಲಂಘಿಸಲಾರಿಗೆ ಸಾಧ್ಯ?

ಆದರೆ ಸಂಸಾರಕ್ಕಿಂತ ವಿಶಾಲವಾದ ಪ್ರೇಮವು ಇನ್ನೊಂದಿದೆ. ಪ್ರೇಮವು ಆತ್ಮೀಯ ಸಂಸಾರದ ಕಟ್ಟನ್ನೊಡೆದು ವಿಶಾಲತೆಯನ್ನೈದಬಹುದಾದರೆ ಅದು ಸ್ವಾತಂತ್ರ್ಯವನ್ನು ಮುಟ್ಟಿಸ ಬಲ್ಲುದು; ಮಾಯೆಯನ್ನು ವಿದಾರಿಸ ಬಲ್ಲುದು; ಇಚ್ಛೆಯನ್ನು ನಿವಾರಿಸ ಬಲ್ಲುದು.

ಪ್ರೇಮವು ಸಂಸಾರವನ್ನು ಮೀರಬೇಕು; ಆತ್ಮೀಯ ಜನ, ಆತ್ಮೀಯ ಜನಾಂಗ, ಆತ್ಮೀಯ ಪ್ರಪಂಚ, ಕಡೆಗೆ ಆತ್ಮೀಯ ವಿಶ್ವ, ಅಲ್ಲಿಂದ ವಿಶ್ವದೇವನಲ್ಲಿಗೆ ಯಾರ ಪ್ರೇಮವು ಮೆಲ್ಲನೆ ಹರಿಯ ಬಲ್ಲುದೊ, ಅವನ ಪ್ರೇಮವು ಪ್ರಶಂಸನೀಯ; ಅವನ ಪ್ರೇಮವು ಪೂರ್ಣವಾದುದು. ಅಲ್ಲಿ ಈಶ್ವರನ ನಿರ್ವಿಕಾರ ಪ್ರಭೆಯು ಮೂರ್ತಿಮಂತಳಾಗಿ ವಿರಾಜಮಾನಳಾಗುವಳು.

ಶಾಸ್ತ್ರೀಯ
ಅಮೂಲ್ಯ ಔಷಧಗಳು.

ಅಮೃತಾಕಾಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಸ್ತ್ರೀಮಿತ್ರಣ!
ದಶಮೂಲ ಸುಖಪ್ರದಔಷಧಿ!
ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಜೀವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಜೀವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.
ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.
ಹೆಚ್ಚಿನ ಮಾಹಿತಿಗೆ "ಆರ್ಷ ಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಶುದ್ಧವಾದ ನೀಲಗಿರಿ ಎಣ್ಣೆ
ತಲೆನೋವು, ಶೀತ, ಇನ್‌ಫ್ಲುಯಂಜಾಜ್ವರ,
ವಾತ, ಇತ್ಯಾದಿ ಎಲ್ಲಾ ರೋಗಗಳ
ಮೇಲೆ ಸಿದ್ಧೌಷಧ.
1 ಔನ್ಸು ಬಾಟ್ಲಿ 1ರ ಕ್ರಯ 0—4—0.
ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು.

The Canara Bank, Limited, Mangalore.
ಕನರಾ ಬ್ಯಾಂಕ್ ಲಿಮಿಟಡ್, ಮಂಗಳೂರು.

ESTABLISHED JULY 1906.
Authorised and fully paid up Capital Rs. 300,000—0—0
Reserve and other sinking Funds „ 259,000—0—0

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ಕೆತ್ತ ಮೂಲಧನವು ರೂ. 300,000—0—0
ಕ್ಷೇಮನಿಧಿ ಮತ್ತು ಇತರ ಫಂಡುಗಳು 259,000—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲ್ಪಡುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1925.

K. Venkat Rao,
Secretary.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಬೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಿಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಬೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೫೦ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ೭ಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೨೫ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲ ಪಂಡಿತರು,
ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ,
ಮಂಗಳೂರು ಟವನಿಗೆ ಮಾತ್ರ.

Free! Free!! Free!!
ಪ್ರಸಿದ್ಧವಾದ
"ಕಾಮಶಾಸ್ತ್ರ"
ಈಗಲೆ ತಯಾರಾಗಿದೆ.
ಜರೂರಾಗಿ ಬರಿಯುವಲ್ಲಿ ಅಂಚೆಯ ಹಾಸಲು ಸಹ ಇಲ್ಲದೆ ಕಳುಹಿಸುವೆವು.
ಆತಂಕನಿಗ್ರಹ ಔಷಧಾಲಯ,
26 ಬ್ರಾಡ್ವೆ, (ಪೋಸ್ಟು ಬಾಕ್ಸ್ 1252),
ಮದ್ರಾಸ್.

ಬಂದು ನೋಡಿರಿ! ತಿಂದು ನೋಡಿರಿ!
ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ
ಪದಕವನ್ನು
ಬಹುಮಾನವಾಗಿ ಪಡೆದಿರುವ
ಎಸ್. ಪಿ. ಆಚಾರ್ಯ
ಇವರಿಂದ ತಯಾರಿಸಲ್ಪಟ್ಟ
ಉಪ್ಪಿನಕಾಯಿಗಳನ್ನು
ಬಂದು ನೋಡಿರಿ! ತಿಂದು ನೋಡಿರಿ!

ದೇಶಬಂಧುಗಳೇ,
ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ, ತುಂತಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನ್ನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.
ಅವುಗಳನ್ನು ನಮ್ಮಲ್ಲಿಗೆ
ಬಂದು ನೋಡಿರಿ! ತಿಂದು ನೋಡಿರಿ!
ಇಂಡಿಯನ್ ಸ್ವೀಟ್‌ಮಿಟ್ ಮಾರ್ಟ್.
ಮನೋರಮಾ [illegible] ಕಾಫಿ ಕ್ಲಬ್, ಮಾರ್ಕೆಟು ರೋಡು, ಮಂಗಳೂರು. ಅಥವಾ ಸದಾನಂದ ಕಾಫಿ ಕ್ಲಬ್, ರಥಬೀದಿ, ಮಂಗಳೂರು.

"ಬಹು ದಿವಸಗಳಿಂದ ಪ್ರಸಿದ್ಧವಾಗುತ್ತಿರುವ ಔಷಧ!"
ರಕ್ತ ಶುದ್ಧಿ
ವಜ್ರಾಂಗ-ಬಿಂದು
ವೀರ್ಯ ವೃದ್ಧಿಕಾರಕ

ವಜ್ರಾಂಗಬಿಂದುವೆಂಬ ಈ ಮಹೌಷಧಿಯನ್ನು ಅನೇಕ ಪರ್ವತಗಳಲ್ಲಿ ಉತ್ತಮೋತ್ತಮವಾದ ಮತ್ತು ಅವಶ್ಯವಾಗಿ ಗುಣ ಕೊಡುವಂತಹ ವನಸ್ಪತಿಗಳ ಅರ್ಕದಿಂದ ಉಪಯುಕ್ತವಾದ ಮತ್ತು ಉಚ್ಚತರದ ಭಸ್ಮಗಳ ಮಿಶ್ರಣವಾಗಿ ಯಾಂತ್ರಿಕ ಸಹಾಯದಿಂದ ಸಿದ್ಧಪಡಿಸಿರುತ್ತದೆ. ಈ ವಜ್ರಾಂಗಬಿಂದುವಿನ ಸೇವನೆಯಿಂದ ಕೆಳಗೆ ಬರೆದ ರೋಗಗಳು ಗುಣವಾಗಿ ಹೊಸ ಮನುಷ್ಯನಾಗುತ್ತಾನೆಂದರೆ ಅತಿಶಯೋಕ್ತಿಯಾಗಲಾರದು.

ಈ ಮಹೌಷಧಿಯ ಸೇವನೆಯಿಂದ, ವಾತ, ಪಿತ್ತ, ಕಫ ಈ ಮೂರು ದೋಷಗಳಿಂದ ಉತ್ಪನ್ನವಾಗುವ ರೋಗಗಳು ಗುಣವಾಗುವವಲ್ಲದೆ, ಸ್ವಪ್ನದೋಷ, ಧಾತುಪಾತ ನಪುಂಸಕತ್ವ, ಪರಮಾ ಮತ್ತು ಗರಮಿ ಇವುಗಳ ಸಮೂಲ ನಾಶವಾಗುತ್ತದೆ. ಬಹು ದಿವಸದಿಂದ ಮೈಯಲ್ಲಿ ಅಂಟಿಕೊಂಡ ಕೆಡಕಿಯಂತಹ ಒಂದೇ ವಾರದಲ್ಲಿ ಗುಣವಾಗುವವು. [illegible] ಮೊದಲು ಅಥವಾ ಕಡೆಗೆ ಸ್ರಾವವಾಗಿ ಹೋಗುವ ಧಾತು ಬಂದಾಗುತ್ತದೆ. ತಿಂದ ಅನ್ನವು ಜೀರ್ಣವಾಗಿ ಮಲವು ಸರಿಯಾಗಿ ಹೋಗುವದು ಯಾವದೇ ಕಾರಣದಿಂದ ಬಂದ ಅಶಕ್ತತೆಯೂ ಕಣ್ಣಿಗೆ ಕತ್ತಲೆ ಬಂದಂತಾಗಿ ತಲೆ ತಿರುಗುವದು, ಕೈಕಾಲುಗಳು ಉರಿಯುವದು, ಮುಂತಾದ ಸಕಲ ವಿಕಾರಗಳೂ ನಾಶಹೊಂದುತ್ತವೆ. ವೀರ್ಯವೃದ್ಧಿ, ರಕ್ತಶುದ್ಧಿಗಳಾಗಿ ಮನುಷ್ಯನು ಬಲವಂತನಾಗುತ್ತಾನೆ. ಪೂರ್ಣ ಗುಣ ಬರಬೇಕಾದರೆ ಮೂರು ಬಾಟ್ಲಿಗಳು ಬೇಕು.

೧ ಬಾಟ್ಲಿಗೆ ರೂ. ೧—೪—೦. ೩ ಬಾಟ್ಲಿಗಳಿಗೆ ರೂ. ೩—೪—೦. ೧೨ ಬಾಟ್ಲಿಗಳಿಗೆ ರೂ. ೧೦—೦—೦.
ಇದರ ಹೊರತು ಒಂದು ಬಾಟ್ಲಿಯು ಉಚಿತ. ಟಪ್ಪಾಲ ಪ್ಯಾಕಿಂಗ ಖರ್ಚು ಪ್ರತ್ಯೇಕ. ಒಟ್ಟಿಗೆ ಹೆಚ್ಚಿಗೆ ಬಾಟ್ಲಿಗಳನ್ನು ತರಿಸಿಕೊಂಡರೆ ಟಪ್ಪಾಲು ಖರ್ಚು ಹೆಚ್ಚಿಗೆ ಬೀಳಲಾರದು. ಏಜಂಟರಾಗಲಪೇಕ್ಷಿಸುವವರು ಪತ್ರವ್ಯವಹಾರ ನಡಿಸಿ, ಖುಲಾಸೆ ತಿಳಕೊಳ್ಳಬಹುದು.
ಟಪ್ಪಾಲ ಮತ್ತು ಪ್ಯಾಕಿಂಗ ಖರ್ಚು ಬೇರೆ ಬೀಳುವುದು. ಅನುಪಾನ ಪತ್ರವು ಬಾಟ್ಲಿಯ ಸಂಗಡಲೇ ಕಳಿಸಲ್ಪಡುವುದು.
ಪತ್ತೆ:- ಮ್ಯಾನೇಜರ, ಕೆ. ಎಮ್. ಹನುಮಾನ ಪ್ರಸಾದಿಕ ಕಂಪೆನಿ,
ಮು. ಪೋ. [illegible], (ಜಿಲ್ಲಾ ಬೆಳಗಾಂವ.)

The Canara Public Conveyance Co., Ltd, Mangalore.

(ESTABLISHED 1914.)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ. ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು
ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು
ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.
ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇತರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ—ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd, Mangalore. S. K

IF OUR MODERN REGULATOR
18 Carat Rolled gold Wrist Watch
Are Purchased at a time, we give
AS A SPECIAL OFFER

The best Decorative wall clock our Modern Regulator made with last wall nut case.

FOR RS TEN

RS. TEN ONLY

18 Carat Rolled gold wrist watch equal to size of a four annas size. Best mechanism supplied with full leather strap

IF Separately—The Modern Regulator clock Rs. 5
Required—18 ct Rolled gold wrist watch Rs. 7
ONLY A FEW IN STOCK

Write Now:— CAPTAIN WATCH COY
P. B. 265 MADRAS.

ಆರೋಗ್ಯ ಚಂದ್ರಿಕೆ.

ಸಂಪಾದಕರು: ಡಾಕ್ಟರ್ ಯು. ರಾಮರಾವ್, ಎಲ್. ಎಮ್. ಸಿ. ಎಫ್. ಎಮ್. ಯು. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಚಿಕಿತ್ಸದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವುದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೌಲ್ಯವು ವರ್ಷಕ್ಕೆ ರೂ. ೧—೮—೦; ಬಿಡುಪತ್ರಿಕೆ ಒಂದಕ್ಕೆ ರೂ. ೦—೩—೦. ಹಿಂದಿನ ಸಂಚಿಕೆಗಳು ಕೂಡ ದೊರೆಯುವವು.

ಚಂದಾದಾರರಾಗುವವರು ವಿ. ಪಿ. ಮೂಲಕವಾಗಿ ತರಿಸಿಕೊಳ್ಳು ವುದಕ್ಕಿಂತಲೂ ಹಣವನ್ನು ಮುಂಗಡವಾಗಿ ಕಳುಹಿಸುವುದು ಉತ್ತಮ. ಮಾದರಿ ಪತ್ರಿಕೆಯನ್ನು ಅಪೇಕ್ಷಿಸುವವರು 'ಆರೋಗ್ಯ ಚಂದ್ರಿಕೆ'ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು.

ಪತ್ರವ್ಯವಹಾರಕ್ಕೆ: 'ಆರೋಗ್ಯ ಚಂದ್ರಿಕೆ'
[illegible]

ಶುದ್ಧ ರೋಮದ ಧಾವಳಿಗಳು.

1 ಮೊಳ ಉದ್ದ 1¼ ಮೊಳ ಅಗಲ ರೂ. 1½ರಿಂದ 2 ವರೆಗೆ, 5 ಮೊಳ ಉದ್ದ 1¼ ಮೊಳ ಅಗಲ ರೂ. 1½ ರಿಂದ 5 ವರೆಗೆ, 6 ಮೊಳ ಉದ್ದ 1½ ಮೊಳ ಅಗಲ ರೂ. 2½ರಿಂದ 6 ವರೆಗೆ, 8 ಮೊಳ ಉದ್ದ 2 ಮೊಳ ಅಗಲ ರೂ. 3½ರಿಂದ 10 ವರೆಗೆ, 12 ಮೊಳ ಉದ್ದ 2¼ ಮೊಳ ಅಗಲ ರೂ. 6ರಿಂದ 12 ವರೆಗೆ, 16 ಮೊಳ ಉದ್ದ 2¼ ಮೊಳ ಅಗಲ ರೂ. 9 ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಜರ್‍ಬ್‌ರ್ ರೇಷ್ಮೆ ಮಡಿಗಳು, ಶಾಮುರಿಗಳು, ಶಾಲು ಪೀತಾಂಬರಗಳು, [illegible], ರುದ್ರಾಕ್ಷಿ, ಸಾಲಿಗ್ರಾಮ, [illegible] ಸಾಮಾನುಗಳು, [illegible] ಅನೇಕ ಸಾಮಾನುಗಳ ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುದು. ಕ್ಯಾಟಲಾಗ್ ಉಚಿತ.

ವಿಳಾಸ—

ಶಿರೋಮಣಿ ಯು. [illegible]
ಮತ್ತು ಕಂಪೆನಿ, [illegible]

ಆಯುರ್ವೇದ ಶಾಸ್ತ್ರಿ ಅಷ್ಟಾವಧಾನಿ,
ಶಾ. ವೇ. ಸುಬ್ಬರಾವ್, ಯಂ. ಜೆ. ಯು. ಅವರ್ಗಳಿಂದ ತಯಾರಿಸಲ್ಪಟ್ಟಿದ್ದು.

ಒಂದು ಮಾತ್ರೆ! ಒಂದು ಘಂಟೆಯೊಳಗೆ ಗುಣ!

ಕಾಮಾಮೃತ.

ಈ ಔಷಧವು ಧಾತುಪುಷ್ಟಿಗಾಗಿಯೇ ತಯಾರಿಸಲ್ಪಟ್ಟಿದ್ದು. ಒಂದು ಮಾತ್ರೆಯನ್ನು ಸೇವಿಸಿದ ಒಂದು ಘಂಟೆಯೊಳಗೆ ಶಕ್ತಿಯನ್ನು ವೃದ್ಧಿಗೊಳಿಸಿ ಎಷ್ಟು ಬಲಹೀನವುಳ್ಳವರನ್ನೂ ಬಲವಂತರನ್ನಾಗಿ ಮಾಡುವದು. ಯಾವ ರೀತಿಯಿಂದಲಾಗಲಿ ಶುಕ್ಲ ನಷ್ಟವಾದಾಗ್ಯೂ ಅಥವಾ ಸ್ವಪ್ನದಲ್ಲಿ ಇಂದ್ರಿಯ ಸ್ಖಲಿತವಾದಾಗ್ಯೂ ಇಲ್ಲವೆ ಮೂತ್ರದೊಂದಿಗೆ ಸೇರಿಯೋ ವ ಮೂತ್ರಚಲನೆಯ ಹಿಂದೋ ಮುಂದೋ ಹೊರಬೀಳುವ ಧಾತುನಷ್ಟವನ್ನಾದರೂ 5 ದಿವಸಗಳಲ್ಲಿ ಗುಣಪಡಿಸುವದು. ಯಾವ ಬಗೆಯ ನರಗಳ ಬಲಹೀನತೆಯನ್ನಾ ದರೂ ಹೋಗಲಾಡಿಸುವುದು. ಶಕ್ತಿಯಿಲ್ಲದವರು ಈ ಮದ್ದನ್ನು 20 ದಿನ ಸೇವಿಸಿದಲ್ಲಿ ಶಕ್ತಿವಂತರಾಗಿ ಸಂಸಾರ ಸುಖವನ್ನೂ ಸಂತತಿ ಲಾಭವನ್ನೂ ಹೊಂದುವರು; ಇದು ನಿಶ್ಚಯ. ಪತ್ರವ್ಯವಹಾರವು ರಹಸ್ಯವಾಗಿ ನಡೆಸಲ್ಪಡುವುದು. ಕ್ರಯ 20 ಮಾತ್ರೆಗಳ ಕುಪ್ಪಿ 1ಕ್ಕೆ ರೂ. 2—0—0. ಪತ್ರವ್ಯವಹಾರವು ಇಂಗ್ಲಿಷಿನಲ್ಲಿ ಮಾಡತಕ್ಕದ್ದು.

ಅಮೃತಾಶ್ರಮ,
28 ಎಲ್ಲೂರು, ಕೃಷ್ಣಾಜಿಲ್ಲಾ.

ದಕ್ಷಿಣ ಕನ್ನಡ ಜಿಲ್ಲೆಯ

ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—

ಶಾರದಾ ಛಾಪೆಖಾನೆ,
ರಥಬೀದಿ, ಮಂಗಳೂರು.

೧,೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ
ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು
— ತೆಗೆದುಕೊಳ್ಳಿರಿ. —

REGISTERED
TRADE
MARK

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಭೋಗ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ದಾರ್ಢ್ಯತೆಯನ್ನೂ ಉಂಟುಮಾಡುವುದು. ಕೈ ಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಾಮಿಸ್ರಿ ಎಂಬುವದು ಕಾಬೂಲ್ ಕಂದಹಾರ ಪ್ರಾಂತ್ಯಗಳಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ಹಾಗಾಗಿಯೇ ಅನೇಕ ದೇಶಗಳಿಂದಲೂ ಆಫ್ರಿಕಾ, ಬರ್ಮ, ಹಾಂಕಾಂಗ್ ಸಿಂಗಪೂರ್, ಸಿಲೋನ್ ಮತ್ತು ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಮೂರಕಿ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದ ಸರಾಕರಿನಲ್ಲಿ [illegible] ಮೂಲಕ ಅದನ್ನು ಪಡೆಯಬಹುದು. ೧ ಡಬ್ಬಿಯನ್ನು ೧೫ ದಿವಸ ಸೇವಿಸಿದಲ್ಲಿ ಗುಣವು ಖಂಡಿತವಾಗಿ ಕಂಡುಬರುವುದು. ೨ ಯಾ ೩ ಡಬ್ಬಿಗಳು ಚಪ್ಪಾಂತ್ರದವರೆಗೂ ಪೂರ್ಣವಾಗಿ ಗುಣವನ್ನು ಮಾಡುವವು. ಅನುಪಾನ ಪತ್ರಿಕೆಯು ಡಬ್ಬಿಯ ಸಂಗಡವೇ ಇರುತ್ತೆ. ಹೆಸರು ವಿಳಾಸಗಳನ್ನು ಚನ್ನಾಗಿ ತಿಳಿಯುವ ಹಾಗೆ ವಿವರವಾಗಿ ಬರೆಯಬೇಕು. ಕ್ರಯ ಡಬ್ಬಿ ೧ಕ್ಕೆ ರೂ. ೨—೮—೦. ಟಪ್ಪಾಲು ಖರ್ಚು ೧ ರಿಂದ ೩ ಡಬ್ಬಿಗಳವರೆಗೆ ೦—೮—೦. ಏಜಂಟರು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯವಾಗಿ ಬೇಕಾಗಿರುತ್ತೆ. ರೂಲ್ಸ್ ತರಿಸಿ ನೋಡಿಕೊಳ್ಳಬಹುದು.

ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಿರಿ.

ಟೆಲಿಗ್ರಾಫ್ ಅಡ್ರೆಸ್, "ಮಿಸ್ರಿ" ಬೆಂಗಳೂರು ಸಿಟಿ.
ಡಿ. ಮನ್ನಾಲಾಲ್, [illegible] ಸಾಲಂಮಿಸ್ರಿ ಮುರಬ್ಬ ಡಿಪ್ಪೋ, ಬೆಂಗಳೂರು ಸಿಟಿ.

Registered: No. M. 498.

ಚಂದಾನಿರ್ಣಯ—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥
ದೊರೆಯಲನುಪಮರತ್ನಗಳು ನಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತ ೧೯. ಮಂಗಳೂರು, ತಾರೀಕು ೩೦ನೇ ಶುಕ್ರವಾರ ಒಕ್ಟೋಬರ ೧೯೨೫. ಸಂಚಿಕೆ ೪೪.

Th Canara Banking Corporation, UDIPI, Ltd.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office: UDIPI. Branch: COONDAPOOR.
ಹೆಡ್ ಆಫೀಸು: ಉಡುಪಿ. ಶಾಖೆ: ಕುಂದಾಪುರ.

ಚಂದಾ ಹಾಕಿ ಬೆತ್ತಿದ ಮೂಲಧನ	ರೂ. 2,25,000—0—0.
ವಸೂಲಿತ್ತ ಮೂಲಧನ	ರೂ. 1,71,875—9—11.
ಕ್ಷೇಮನಿಧಿ ವ ಇತರ ಫಂಡುಗಳು	ರೂ. 64,700—0—0.
ಠೇವಣಾತಿಗಳು	ರೂ. 4,83,945—2—9.

— ವಿನಿಯೋಗ —.

ಗವರ್ನಮೆಂಟು ಪ್ರೊಮಿಸರಿ ನೋಟಿನ ಮೇಲೆ	ರೂ. 25,800—0—0.
ಡಿಮಾಂಡು ನೋಟು ವ ಬಾಂಡುಗಳ ಮೇಲೆ	ರೂ. 5,92,445—9—4.
ಚಿನ್ನಾಭರಣ ಮುಂತಾದ ಭದ್ರತೆಸೊತ್ತುಗಳ ಮೇಲೆ	ರೂ. 1,11,658—8—6

ಈ ಕೆಳಗಿನ ಠೇವಣಾತಿಗಳನ್ನು ಅಂಗೀಕರಿಸುವುದಲ್ಲದೆ ಇತರ ಬ್ಯಾಂಕುಗಳ ಮೇಲಣ ಹಾತ್ರಿ ಚೆಕ್ಕುಗಳನ್ನೂ, ಸಾಹುಕಾರಿ ಹುಂಡಿಗಳನ್ನೂ ವಟ್ಟಾಯಿಸುವ ಮತ್ತು ಇತರ ಎಲ್ಲಾ ತರದ ಬ್ಯಾಂಕಿನ ವಹಿವಾಟುಗಳು ನಡಿಸಲ್ಪಡುವವು.

ಠೇವಣಾತಿಗಳು.

ನಿಯಮಿತ ಠೇವಣಾತಿಗಳು:—ಸಾ. ಸೆ. 6¼ ರಿಂದ 7½ ವರೆಗಿನ ಬಡ್ಡಿಯನ್ನು ಪ್ರತಿ 3 ತಿಂಗಳಿಗೊಮ್ಮೆ ತೆರುವ ಅನುಕೂಲ ವ ಲಾಭದಾಯಕವಾದ ಶರ್ತುಗಳ ಮೇಲೆಯೂ.

ಕೆಲಂಡ ಅವಧಿ ಠೇವಣಾತಿಗಳು:—1 ತಿಂಗಳ ನಂತರ 15 ದಿವಸಗಳ ನೋಟೀಸಿಗೊಳಪಟ್ಟು ಹಿಂತೆಗೆಯಬಹುದಾದ ಠೇವಣಾತಿಗಳನ್ನು ಸಾ. ಸೆ. 5ರ ದರದ ಬಡ್ಡಿ ನಡುವ ದಿನಗಳಿಗೆ ಕೊಡುವ ಶರ್ತದಿಂದಲೂ.

ಚಾಲ್ತಿ ಠೇವಣಾತಿಗಳು:—ದಿನಪ್ರತಿ ಇರುವ ಶಿಲ್ಕಿನ ಮೇಲೆ ಸಾ. ಸೆ. 3ರಂತೆ ಬಡ್ಡಿ ತೆರುವ ಶರ್ತದ ಮೇಲೂ.

ಸೇವಿಂಗ್ಸ್ ಬ್ಯಾಂಕು ಠೇವಣಾತಿಗಳು:—ಸಾ. ಸೆ. 4½ರ ಬಡ್ಡಿಯ ಮೇಲೂ.

ಸಂಚಯ ಠೇವಣಾತಿಗಳು:—ಮಕ್ಕಳ ವಿದ್ಯಾಭ್ಯಾಸ, ಉಪನಯನ, ವಿವಾಹ ಮುಂತಾದ ಶುಭಕಾರ್ಯಗಳಿಗೆ ಅನುಕೂಲವಾಗಿ ನಿಶ್ಚಯಂತೆ ತಿಂಗಳು 1ರ ರೂಪಾಯಿ 1ರಂತೆ 13-24-45-84-132 ತಿಂಗಳುಗಳಿಗೆ ವಸೂಲುಪಡಕೊಂಡು ಅಂತುಗಳ ಅವಧಿ ಮುಗಿದ ಮೂರು ತಿಂಗಳಲ್ಲಿ ಆಯಾಯ ಅವಧಿಮೇರೆಗೆ ರೂ. 13—8—0, ರೂ. 25—8—0, ರೂ. 50, ರೂ. 102—8—0 ಮತ್ತು 182—8—0ನ್ನು, ಅದೇ ಮೇರೆಗೆ ತಿಂಗಳು 1ರ ರೂಪಾಯಿ 1ರ ಗುಣವೃದ್ಧಿ ಮೊಬಲಗನ್ನು ಕೆತ್ತಲ್ಲಿ ಆಯಾಯ ಮೊಬಗಿನ ಅದೇ ಗುಣವೃದ್ಧಿ ಮೊಬಲಗನ್ನು ತೆರುವ ಶರ್ತದ ಮೇಲೂ ಅಂಗೀಕರಿಸಲ್ಪಡುವವು.

ಹೆಚ್ಚಿನ ಮಾಹಿತಿ ಸೆಕ್ರಿಟರಿಯವರಿಂದ ತಿಳಿಯಬಹುದು.

ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಆಫೀಸು, ಉಡುಪಿ, ತಾ. 30—6—1925.
ನಯಂಪಳ್ಳಿ ಆನಂದ್ರಾವ್, ಸೆಕ್ರೆಟರಿ ಮತ್ತು ಒಫಿಸಿಯೇಟಿಂಗ್ ಮೆನೇಜರ್.

ಮೂರು ದಿವಸಗಳಲ್ಲಿ ಗುಣಸ್ಕಿದಿದ್ದರೆ ಔಷಧಿಯ ಕ್ರಯ ವಾಪಾಸು.

ಜೀರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ, ಪರಮಾನಂದ ಮೊದಲಾದ ಸುಖಜೀವನಕ್ಕೆ ಬೇಕಾದ ಆರೋಗ್ಯದಾಯಕ.

ಲೋಕಪ್ರಸಿದ್ಧವಾದದ್ದು! ಅನುಭವಸಿದ್ಧವಾದದ್ದು!!

ಟ್ರೇಡ್ ಮಾರ್ಕ್] ಅಗಸ್ತ್ಯ [ನೋಡಿ ತೆಕ್ಕೊಳ್ಳಿರಿ.

ಮನ್ಮಥ ಚಿಂತಾಮಣಿ ಲೇಹ.

(ರಜಿಸ್ಟರ್ ಆದದ್ದು)

ಅಬಾಲವೃದ್ಧ ಸ್ತ್ರೀಪುರುಷರ ಅನೇಕ ರೋಗಗಳ ಮೇಲೆ ಗುಣಕಾರಿಯಾದದ್ದು.

ಮೇಹವಿಕಾರವಿದ್ದವರಿಗೂ, ನಿದ್ರೆಇಲ್ಲದವರಿಗೂ, ಸ್ವಪ್ನೇಂದ್ರಿಯವಾಗುವ ಯುವಕರಿಗೂ ಜ್ಞಾನಿಸುಜ್ಞಾನಿಗಳಿಗೂ ಉಪಯೋಗವುಳ್ಳ ಪರಮಾನಂದ ಔಷಧ.

1 ಸೇರು ಸಾಲ್ಯಕ್ಕೆಂತು ಏವತ್ತು ಸೇವಿಸಬಹುದು.

1 ಸೇರು ಡಬ್ಬಿ 1ಕ್ಕೆ 3—0—0. ½ ಸೇರು ಡಬ್ಬಿ 1ಕ್ಕೆ 1—9—0.

ವಿ. ಪಿ. ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿಗೆ ಬರೆಯಿರಿ.

ವಿಳಾಸ:— ದೇವಣ್ಣ ನಾರಾಯಣ ಸೇಟ್,
[illegible]
ಮಂಗಳೂರು. (ದ. ಕ.)

: ಪಂಡಿತ ಬಿ. ರಾಮಕೃಷ್ಣ ಬಾಳಿಗರ :

50 ವರ್ಷ ಅನುಭವದ ಸಿದ್ಧೌಷಧಗಳು

ಮಹಾ ಮದನಕಾಮೇಶ್ವರಿ ಲೇಹ—ಇದನ್ನು ಭಂಗಾರ, ಅಭ್ರಕಭಸ್ಮ, ರಸಸಿಂಧೂರ, ಕಸ್ತೂರಿ, ಕುಂಕುಮಕೇಸರ ವಗೈರೆ ಅಮೂಲ್ಯವಾದ ರಸಾಯನ ದ್ರವ್ಯಗಳಿಂದ ತಯಾರಿಸಲ್ಪಟ್ಟಿರುತ್ತದೆ. ಇದು ಎಲ್ಲಾ ತರದ ನಪುಂಸಕ ರೋಗಗಳನ್ನೂ, ಸ್ವಪ್ನಾವಸ್ಥೆಯಲ್ಲಿ ಧಾತುಪತನೆಯನ್ನೂ, ಗುಣಪಡಿಸಿ, ದೇಹಕ್ಕೆ ದಿವ್ಯಕಾಂತಿಯನ್ನೂ, ಪುಷ್ಟಿಯನ್ನೂ, ಪುರುಷತ್ವವನ್ನೂ, ವೀರ್ಯಸ್ತಂಭನವನ್ನೂ ಉಂಟುಮಾಡಿ ಅತ್ಯಾನಂದವನ್ನು ಕೊಡುವುದಲ್ಲದೆ, ಅಜೀರ್ಣ, ಅತಿಸಾರ, ಗ್ರಹಣಿ, ಆಮ್ಲ, ಪಿತ್ತ, ಉದರಶೂಲೆ, ಪ್ರಮೇಹ ವಗೈರೆ ರೋಗಗಳನ್ನು ಗುಣಪಡಿಸುವಲ್ಲಿ ಕೇವಲ ಅಮೃತಸಮಾನವಾಗಿರುವುದು. ಇದನ್ನು ಆಬಾಲವೃದ್ಧರೂ ಸೇವಿಸಬಹುದು.

48 ದಿನಗಳ ವರೆಗೆ ಸಾಕಾಗುವ ಲೇಹ ಸೇರು ೧ರ ರೂ. 3—0—0.

ಬ್ರಹತ್ ಶಾರಿವಾದ್ಯಾದಿ ರಸಾಯನ—ಇದು ಖಾತ್ರಿಯಿಂದ ರಕ್ತವನ್ನು ಶೋಧಿಸುವ ದಿವ್ಯೌಷಧವಾಗಿರುತ್ತದೆ. ಇದರ ಸೇವನೆಯಿಂದ 20 ತರದ ಪ್ರಮೇಹ ರೋಗಗಳೂ ಎಲ್ಲಾ ತರದ ಫರಂಗಿ ರೋಗಗಳೂ ಅಲ್ಪ ಸಮಯದಲ್ಲಿ ಗುಣಹೊಂದುವವು. ಅದಲ್ಲದೆ ಇದು ಎಲ್ಲಾ ತರದ ಕುಷ್ಠವ್ಯಾಧಿಗಳನ್ನೂ, ಖಜ್ಜಿ, ಕುರು ಮೊದಲಾದ ಸಕಲ ಚರ್ಮವ್ಯಾಧಿಗಳನ್ನೂ, ಪಾದರಸ ಸೇವನೆಯಿಂದ ಉಂಟಾದ ರೋಗಗಳನ್ನೂ, ಮತ್ತು ಹೆಂಗಸರ ಪ್ರದರ ರೋಗಗಳನ್ನೂ, ಖಾತ್ರಿಯಿಂದ ಗುಣಪಡಿಸುವುದು.

8 ಔನ್ಸಿನ ಬಾಟ್ಲಿ ಒಂದರ ಕ್ರಯ ಬರೇ ರೂ. 1—9—0.

ವಿಳಾಸ:— ಪಂಡಿತ, ಬಿ. ರಾಮಕೃಷ್ಣ ಬಾಳಿಗ, ಬಂಟವಾಳ ದ. ಕ.

ಮಂಗಳೂರು ಏಜಂಟರು:— ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ತೇರುಬೀದಿ, ಮಂಗಳೂರು.

AMRUTANJAN
Best Indian Pain Balm
Amrutanjan
BOMBAY

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು.

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೇ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಕುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ, ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 2 ಆಣೆ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ ಟೌನ್, ಮದ್ರಾಸು.

109 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರೆಕುವುದು.

— ರಥೋತ್ಸವ, ವಿವಾಹ ಉಪನಯನಗಳ ಸಮಯ —
ಸರ್ವರಿಗೂ ಉಡಿಗೆ ತೊಡಿಗೆಗಳು ಬೇಕಾಗುವ ಸಂದರ್ಭ.

ಯಾರು, ಯಾವುದನ್ನು ಎಲ್ಲಿ ಪಡೆಯಬೇಕೆಂಬ ಶಂಕೆಯಿಂದ ವಿಳಂಬ ಮಾಡಬೇಡಿರಿ. ಉಡಿಗೆತೊಡಿಗೆಗಳನ್ನು ಸುಲಭವಾಗಿ ನಿಮಗೆ ಬೇಕಾದ ಯಥಾರ್ಥ ಮಾಹಿತಿಯನ್ನು ಕಳೆದ ಹತ್ತಿಪ್ಪತ್ತು ವರುಷಗಳಿಂದ ಪಡದು ನಮ್ಮಲ್ಲಿಯ ವ್ಯಾಪಾರವು ಗಿರಾಕಿಗಳಿಗೆ ಸರ್ವ ತೃಪ್ತಿಯುಂಟು ಲಾಭಕರವಾಗಿ ಪರಿಣಮಿಸುವಂತೆ ನಮ್ಮ ಐವಳ ಸಂಗ್ರಹವನ್ನು ಮಾಡಿರುತ್ತೇವೆ.

ಗುರ್ಪುರ್ಕರ್ ಬ್ರದರ್ಸ್, ರಥಬೀದಿ, ಮಂಗಳೂರು.

ಹೆಡ್ ಆಫೀಸು:—ರಥಬೀದಿ—(ಮೊದಲು ಸುಜೀರ ನಾಗಪ್ಪನಾಯಕ್, ಎಂಡ್ ಕೊ, ಇದ್ದಲ್ಲಿ; ಆಜಿಜುದ್ದೀನ್ ರಸ್ತೆಗೆ ತಿರುಗುವಲ್ಲಿ) ಮಂಗಳೂರು.

ಬ್ರೇಂಚ್ ಆಫೀಸು:—ರಥಬೀದಿ—(ಹಳೇ ತಾಲೂಕು ಕಚೇರಿಯ ವಠಾರಕ್ಕೆ ಸಮೀಪವಿರುವ ಮಳಿಗೆ,) ಮಂಗಳೂರು.

ಈ ದೇಶದ ಪ್ರಖ್ಯಾತಪಟ್ಟ ನೇಯಿಗೆಯ ಕೇಂದ್ರಸ್ಥಳಗಳಾದ—[illegible], ಧರ್ಮಾವರಮ್, ಕಂಚೀವರಮ್, ಕೊಯಮುತ್ತೂರು, ಮಧುರೆ, ತಂಜಾವೂರು, [illegible] ಮದ್ರಾಸು ಈ ಪ್ರಾಂತ್ಯಗಳಲ್ಲಿ ತಯ್ಯಾರಾದ

ಜರಿಸೀರೆಗಳು, [illegible] ರೇಷ್ಮೆ ಸೀರೆಗಳು, [illegible] ಸೀರೆಗಳು, ರೇಷ್ಮೆ ಮಡಿಗಳು, [illegible]

ಕೈಮಗ್ಗದಲ್ಲಿ ತಯಾರಿಸಿದ ನೂಲಿನಿಂದ ಮಾಡಿದ—

ಜಪ್ಪರ್ [illegible], ಜಪ್ಪರ್ [illegible], [illegible]—
[illegible]

[illegible]

ಲಿವರ್ ಮೂವ್‌ಮೆಂಟ್ ವಾಚ್.

15 ಮಣಿಗಳಿದ್ದು ರೋಲ್ಡಗೋಲ್ಡ ವಾಚ್.

ಈ ಗಡಿಯಾರ ಕೈಗೆ ಕಟ್ಟುವಂಥಾದ್ದಾಗಿ ಸರಿಯಾದ ಸಮಯವನ್ನು ತೋರಿಸಿ ಚಿರಕಾಲ ವರೇಗೆ ಬಾಳುವುದು.

10 ವರುಷದ ವರೆಗೆ ಬಾಳುವ ಗೆರೆಂಟಿ ಇದೆ. ಕ್ರಯ ರೂ. 17—8—0.

11 ಮಣಿಗಳಿದ್ದು ನಿಜವಾದ ರೋಲ ಗೋಲ್ಡ ಬಂಗಾರದಿಂದ ತಯಾರಿಸಲ್ಪಟ್ಟು 5 ವರ್ಷದ ಗೆರೆಂಟಿ ಇರುವ ವಾಚಿಗೆ ಕ್ರಯ ರೂ. 12—8—0.

18 ಕೆರೆಟ್ ಇಲೆಕ್ಟ್ರೊ ರೋಲ್ಡ ಗೋಲ್ಡ ವಾಚ್ ಕ್ರಯ ರೂ. 7—0—0. ಲಿವರ್ ಮೂವ್‌ಮೆಂಟ್ 10 ಮಣಿಗಳಿದ್ದ ಬಂಗಾರ ಗಿಲ್ಟುವಾಚ್ ಕ್ರಯ ರೂ. 13—8—0.

ಎಲಾರ್ಮ ಜರ್ಮನ್ ಟ್ಯಾಮ್‌ಪೀಸ್ ಕ್ರಯ ರೂ. 5-0-0

ಡಬ್ಬಲ್ ಎ. „ „ „ 6-0-0.

"ಬಿ" ಟ್ಯಾಮ್‌ಪೀಸ್ ಕ್ರಯ ರೂ. 2—4—0

ಟಿಕ್—ಟಾಕ್ ವಾಚ್ 1ರ ಕ್ರಯ „ 2—12—0

ಕಂಬ್ಯಾಂಡ್ ಬೆವರ್ ಕ್ಲಿಪ್ ಟ್ಯಾಮ್‌ಪೀಸ ಹಿತ್ತಾಳಿ ಅಥವಾ ನಿಕ್ಕಲ್ ಕ್ರಯ ರೂ. 6—0—0. ಇನೆಮಲ್ ರೂ. 7—0—0. ಫ್ರೆಂಚ್ ಬೆಡ್ ಫೋಟೋಗಳು ಡಜನ್ 1ರ ಕ್ರಯ ರೂ. 2—4—0.

Emarald Watch Co.,
P. T. MADRAS.

ಪ್ರಸಿದ್ಧ ಪತ್ರಿಕೆ.

ಹೊಸ ಬೀಜಗಳು! ಖಾತರಿಯಾದವು!!

೧೨ ಪ್ಯಾಕೆಟ್ ಉತ್ತಮ ಜಾತಿಯ ವಿದೇಶಿ ತರಕಾರಿ ಬೀಜಗಳು ೧೨ ರಖಂ ... ... ೨-೦-೦.

೧೨ ಪ್ಯಾಕೆಟ್ ನಾಟಿ ತರಕಾರಿ ಬೀಜಗಳು ೧೨ ರಖಂ ... ... ೧-೧೨-೦.

೧೨ ಪ್ಯಾಕೆಟ್ ದೇವರ ಪೂಜೆಗೂ ಮತ್ತು ಅಲಂಕಾರಕ್ಕೆ ಯೋಗ್ಯವಾದ ಹೂ ಬಿಡತಕ್ಕ ಉತ್ತಮವಾದ ೧೨ ರಖಂಗಳ ಬೀಜಗಳು ... ... ೨-೦-೦.

ಈ ಮೇಲ್ಕಂಡ ಬೀಜಗಳನ್ನು ಈ ತಿಂಗಳೊಳಗಾಗಿ ತರಿಸಿಕೊಂಡರೆ, ಪೋಸ್ಟೇಜು ಮತ್ತು ಇತರ ಎಲ್ಲಾ ಚಾರ್ಜುಗಳು ಸೇರಿ, ಮೇಲೆ ನಮೂದಿಸಿರುವ ಮೊಬಲಗಿಗೆ, ವಿ. ಪಿ ಯಿಂದ ಕಳುಹಿಸುತ್ತೇವೆ. ಅಲ್ಲದೆ ಇದರ ಸಂಗಡ ಚಿತ್ರಗಳಿಂದ ಕೂಡಿರುವ ನಮ್ಮ ದೊಡ್ಡ ಕ್ಯಾಟಲಾಗನ್ನು ಕಳುಹಿಸಿ ಕೊಡುತ್ತೇವೆ. ನಮ್ಮಲ್ಲಿ ದೊರಕುವ ಬೀಜಗಳು, ಉತ್ತಮ ತರಹವುಳ್ಳವು. ಮತ್ತು ಖಾತರಿಯಾದವು, ಹುಟ್ಟದೆ ಹೋದರೆ, ಬೇರೆ ಬೀಜಗಳನ್ನು ಬದಲಾಯಿಸಿ ಕೊಡುತ್ತೇವೆ.

ದಿ. ಮೆಜೆಸ್ಟಿಕ್ ನರ್‌ಸರಿ (ತೋಟ)
ಲಾಲ್‌ಬಾಗ್ (ಕೋಟೆ) ರೋಡ್,
ಬೆಂಗಳೂರು ಸಿಟಿ.

11 ಮಣಿಗಳಿದ್ದು ಬ್ರಿಜ್ ಮ್ಯೂಮೆಂಟ್.

22 ಕೆರೆಟ್ ರೋಲ್ಡಗೋಲ್ಡ ರಿಸ್ಟ್‌ವಾಚ್.

ಈ ವಾಚ್ ಎಂಟಾಣೆ ಪಾವಲಿಯಷ್ಟು ಸಣ್ಣದಾಗಿ ಬಹು ಚಲೋದಾದ ಇನೆಮಲ್ ಡಾಯಲ್ ಇದ್ದು ಬಹು ಉತ್ತಮವಾಗಿದೆ. 5 ವರ್ಷದಗ್ಯಾರಂಟಿ ಇದೆ. ಕ್ರಯ ರೂ. 12/8

18 ಕೆರೆಟು ಇಲೆಕ್ಟ್ರೊ ರೋಲ್ಡಗೋಲ್ಡ ವಾಚ್ ಕ್ರಯ ರೂ. 7—0—0. "ಬಿ" ಟ್ಯಾಮ್‌ಪೀಸ ರೂ. 2-4-0

9 ಕಾರಾಟ್ 8 ಮಣಿಗಳ ವಾಚ್ 1ರ ಕ್ರಯ 23—0—0.

14 „ „ „ 26—0—0.

14 „ 15 ಮಣಿ „ 36—0—0.

9 „ „ „ 32—0—0.

ಚಲೋದಾದ ಲವ್ ನಕ್ಷೆಗಳು ಡಜನ್ 1ಕ್ಕೆ ರೂ. 2/4.

P. Sambasiva Chetty & Co.,
134 NAINEAPPA NAICKEN ST.
P. T. MADRAS.

Fresh Arrivals

Pear's Solid Brilliantine, Evans Lime-juice Glycerine, Tooth powders Rose water, Syrups of all sorts for drinks, Denatured Spirits, etc., etc.

The Mangalore Trading Association,
Car-Street, MANGALORE,

ಡಾಕ್ಟರುಗಳು ಭಿನ್ನಾಭಿಪ್ರಾಯಪಡುವಾಗ್ಯೆ ತೀರ್ಮಾನಿಸುವದು ಯಾರು?

ಅಂಥಾ ಸಂದರ್ಭಗಳಲ್ಲಿ ಡೆಂಗ್ಯು ಮುಂತಾದ ಜ್ವರಗಳನ್ನು ನಿವಾರಿಸುವಂಥಾ "ಬಾಟ್ಲಿವಾಲರ ಏಗ್ಯುಮಿಕ್ಸ್ಚರ್"ನ್ನು ಸರಾಗವಾಗಿಯೂ, ಮತ್ತು ಜ್ವರಗಳನ್ನು ಖಂಡಿತವಾಗಿ ನಿಲ್ಲಿಸುವಂಥಾದ್ದು, ಎಲ್ಲಾ ತರದ ತಲೆನೋವುಗಳನ್ನು ಹೋಗಲಾಡಿಸುವಂಥಾದ್ದು ಆದ "ಬಾಟ್ಲಿವಾಲರ ಏಗ್ಯುಪಿಲ್ಸ್" ಇದನ್ನು ಉಪಯೋಗಿಸಿರಿ.

ಐ. ಎಮ್. ಎಸ್. ಡಾಕ್ಟರುಗಳಿಂದ ಶಿಫಾರಸು ದಣಿಸಲ್ಪಟ್ಟಿದ್ದು. ಇದರ ಉಪಯೋಗದಿಂದ ಹೃದಯದ ಮೇಲೆ ಯಾವದೊಂದೂ ಬಾಧಕವಿಲ್ಲ. ಅರ್ಧ ಶತಮಾನದಿಂದ ಹಿಂದೂಸ್ಥಾನ, ಬರ್ಮಾ, ಸಿಲೋನ್, ಆಫ್ರಿಕಾ ಇವುಗಳಲ್ಲಿ ಪ್ರಖ್ಯಾತಪಟ್ಟಿದ್ದಾಗಿರುತ್ತದೆ.

ಅನೇಕ ಹಿಂದೀ ಪ್ರದರ್ಶನಗಳಲ್ಲಿ ಬೆಳ್ಳಿ ಮತ್ತು ಬಂಗಾರದ ಪದಕಗಳನ್ನು ಪಡೆದಿರುತ್ತೆ. ಖ್ಯಾತಿ ಸಾಧ್ಯದಂತಿದ್ದು ಮಾರ್ವಾರಿಗಳೂ ಕೂಡ ಅದರ ಮೇಲೆ ಹಣವನ್ನು ಮುಂಗಡವಾಗಿ ಕೊಡುತ್ತಾರೆ. ಬಡ ಮತ್ತು ಮಧ್ಯಮ ತರಗತಿಯ ಜನರಿಗೆ ವರಪ್ರದಾನವಾಗಿದ್ದು ಸಂಚಾರ, ಪ್ರಯಾಣ, ದೇಶಾಟನೆಗಳ ಸಮಯದಲ್ಲಿ ಹತ್ತಿರದಲ್ಲಿ ಇಟ್ಟುಕೊಳ್ಳತಕ್ಕದಾಗಿರುತ್ತದೆ.

ಬಾಟ್ಲಿವಾಲರ ಬಾಲಾಮೃತ ಅಥವಾ ಟೋನಿಕ್ ಸಿರಪ್.

ಕೆಮ್ಮನ್ನು ಹೋಗಲಾಡಿಸಿ, ಎದೆನೋವನ್ನು ಶಾಂತಗೊಳಿಸಿ, ಜ್ವರವನ್ನು ಉಪಶಮನಿಸಿ, ನಿದ್ರಾಭಂಗವನ್ನು ಕಡಿಮೆ ಮಾಡಿ ಧಾತುವರ್ಧನವನ್ನು ಮಾಡುವದರಲ್ಲಿ ಅತ್ಯುತ್ತಮವಾಗಿರುತ್ತದೆ. ಕಫವನ್ನು ಹೊರಗೆ ಬರುವಂತೆ ಮಾಡುವುದಲ್ಲದೆ ಅದೇ ಸಮಯದಲ್ಲಿ ಒಳ್ಳೇ ಜೀರ್ಣವನ್ನು ಉಂಟುಮಾಡುವುದು. ದರ ಮೊದಲಾದ ಮಾಹಿತಿಯನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ತಾರಿನಪತ್ತೆ:-CAWASHAPUR, BOMBAY.

Dr. H. L. Batliwala & Co., Ltd.,
Sayani Road, P. O. Cadell Road, Bombay. No. 14.

ಎಲ್ಲಾ ಕಡೆಗಳಲ್ಲಿ
ಏಜಂಟರು ಬೇಕಾಗಿದ್ದಾರೆ.

ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.,
Sayani Road, P. O. Cadell Road, Bombay. No. 14.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲು 1ಕ್ಕೆ 14 ಆಣೆ. ಟ. ಖ. 9 ಆಣೆ.

ನಮ್ಮ ವಿಳಾಸ:— ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.

ಏಜಂಟರು:— ದಿ. ಊಲನ್ ಮಾರ್ಟ್, ಮಂಗಳೂರು.

ಜ್ಯೋತಿಷ್ಯ ಸಂಗ್ರಹ.

(1) ಬೃಹಜ್ಜಾತಕ ... ...
(2) ಉಮಾಮಹೇಶ್ವರ ಸಂವಾದ ಎಂಬ ಜ್ಯೋತಿಷ್ಯ ಕಾಲಚಕ್ರ
(3) ಕೇರಳ ಪ್ರಶ್ನೆ ... ...
(4) ಪ್ರಶ್ನೋತ್ತರ ರತ್ನಮಾಲಿಕಾ ... ...
(5) ನವನೀತಾರಿಷ್ಟವು ... ...
(6) ಷಟ್ಪಂಚಾಶತ್ ಗ್ರಂಥ ... ...
(7) ನಕ್ಷತ್ರ ಚೂಡಾಮಣಿ ಗ್ರಂಥ ... ...
(8) ಮುಹೂರ್ತ ಪದವೀಗ್ರಂಥ... ... ...
(9) ಅಷ್ಟದಿಕ್ಪಾಲಕ ಮಂಗಳಾಷ್ಟಕಗಳು ... ...
(10) ಕಾಲನಿರ್ಣಯಜ್ಯೋತಿಯಂ ಗ್ರಂಥ ... ...
(11) ಸವ್ಯಾಖ್ಯಾನ ಕಾಲಾಮೃತ... ... ...

— ಪ್ರಸಂಗದ ಪುಸ್ತಕಗಳು. —

(1) ಸೇತು ಬಂಧನ ... ...
(2) ವಸಿಷ್ಠ ಪುರಾಣ... ... ...
(3) ಇಂದ್ರಜೀತು ಕಾಳಗ ... ...
(4) ಚಂಡಭೀಮ ... ...
(5) ಮೈದುನರಾಮನ ಚರಿತ್ರೆ ... ...
(6) ಭಾಮಿನಿ ಷಟ್ಪದಿ ಚೋರ ಕಥೆ ... ...
(7) ಕುವರಾರ ರಾಮನ ಕಥೆ ... ...
(8) ಕೃಷ್ಣದಾಸಾಮೃತ ... ...
(9) ಶ್ರೀಕೃಷ್ಣ ಸತ್ಯಭಾಮ ಸಂವಾದ ... ...
(10) ಚಿತ್ರಕೇತು ರಾಜನ ಕಥೆ ... ...
(11) ಬಕಾಸುರ ವಧೆ ... ...
(12) ಬಾಣಾಸುರನ ಕಥೆ ... ...
(13) ರಂಭಾಶುಕ ಸಂವಾದ ... ...
(14) ರುಕ್ಮಿಣೀ ಪರಿಣಯ ... ...
(15) ರಾವಣೋದ್ಭವ ಯಕ್ಷಗಾನ ... ...
(16) ಸಭಾ ಲಕ್ಷಣವು ... ...
(17) ಶ್ರೀ ಕೃಷ್ಣಲೀಲಾಮೃತಮೋದ ಕಥಾ ... ...
(18) ಚಂದ್ರಮೌಳಿ ಕಾಳಗ ... ...
(19) ಚಿತ್ರವಿಚಿತ್ರ ಕಾಳಗ ... ...
(20) ಯಕ್ಷಗಾನ ಸಾರಂಗಧರನ ಕಥೆ ... ...
(21) „ ಶನಿದೇವರ ಮಹಾತ್ಮೆ ... ...
(22) „ ಹರಿಶ್ಚಂದ್ರನ ಕಥೆ ... ...
(23) ಯಕ್ಷಗಾನ ಲಕ್ಷಾಗೃಹ ಕಥೆ ... ...
(24) „ ಚೋರ ಕಥೆ ... ...
(25) „ ಪಾರ್ವತಿ ಕಾರವಂಜ ಕಥೆ ... ...
(26) „ ಗೋವಿನ ಚರಿತ್ರೆ ... ...
(27) „ ದುಶ್ಯಾಸನ ಕಥೆ ... ...
(28) „ ಸಾನಂದ ಗಣೇಶ್ವರ ಕಥೆ ... ...
(29) „ ಅಂಗದ ಸಾಧನ ... ...

— ಭಜನೆಯ ಪುಸ್ತಕಗಳು. —

(1) ಉಡುಪಿಕ್ಷೇತ್ರ ಮಹಾತ್ಮೆ ... ...
(2) ಹನುಮದ್ರಾಮಾಯಣ ... ...
(3) ಅಧ್ಯಾತ್ಮ ವಿಚಾರ ... ...
(4) ಭಕ್ತಿಮಹಿಮೆ ... ...
(5) ಪ್ರಬಂಧ ಮುಕ್ತಾವಳಿ ... ...
(1) ಸಂಕೀರ್ತನಾಮೃತಸಾರ ... ...
(2) ಹರಿನಾಮಾಮೃತಂ. ... ...
(3) ರುಕ್ಮಿಣೀ ಕಲ್ಯಾಣ ... ...
(4) ಮಂಗಳ ಗೌರೀಹಾಡು ... ...
(5) ಉದ್ಯಾಲೋಚನ ಹಾಡು ... ...
(6) ಯಕ್ಷಗಾನ ಗೀತ ಹಾಡು ... ...
(7) ಕನಕದಾಸ ಕಬೀರದಾಸರ ಕೀರ್ತನೆಗಳು ...
(8) ಬೀಗರ ಹಾಡು ... ...
(9) ಭಜನೆಯ ಪದಗಳು ... ...

ಪುಸ್ತಕಗಳು ದೊರೆಯುವ ಸ್ಥಳ :—

ಶಾರದಾ ಛಾಪಖಾನೆ,
ರಥ ಬೀದಿ, ಮಂಗಳೂರು.

ಶಾಲಿವಾಹನಶಕ ೧೮೪೭ನೆಯ ಕ್ರೋಧನ ಸಂ॥ರದ ಕಾರ್ತಿಕ ಶು॥ ೧೫ ಶನಿವಾರದಿಂದ ಕ್ರೋಧನ ಸಂ॥ರದ ಕಾರ್ತಿಕ ಬ॥ ೬ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೫ನೆಯ ತುಲಾ ಬೊಂಚೆಲ್.)

ತಾರೀಕು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೌರದಿನ	ಸೂರ್ಯ ಉ.	ಸೂರ್ಯ ಅಸ್ತ.
31	ಶನಿ	⊙	೪೩.೪೫	ಅಶ್ವಿನಿ	೩೬.೪೪	೧೫	6.26	6. 4
1	ರವಿ	೧	೪೩.೧೬	ಭರಣೀ	೩೭.೩೨	೧೬	6.26	6. 3
2	ಸೋಮ	೨	೪೩.೪೬	ಕೃತ್ತಿಕಾ	೩೯.೪೬	೧೭	6.26	6. 3
3	ಕುಜ	೩	೪೫.೪೪	ರೋಹಿಣೀ	೪೨.೫೯	೧೮	6.27	6. 3
4	ಬುಧ	೪	೪೯. ೨	ಮೃಗಶಿರಾ	೪೭.೩೨	೧೯	6.27	6. 2
5	ಗುರು	೫	೫೨.೫೮	ಆರ್ದ್ರಾ	೫೨.೪೬	೨೦	6.27	6. 2
6	ಶುಕ್ರ	೬	೫೮. ೧	ಪುನರ್ವಸು	೫೮.೪೪	೨೧	6.28	6. 2

ಮಂಗಳೂರಿನ ವಾಯುಸ್ಥಿತಿ.

ತಾರೀಕು Date	Temperature. ಉಷ್ಣ (ಕಾವು) Maximum ಹೆಚ್ಚಾದದ್ದು	Minimum ಕಡಿಮೆ	Rainfall. ಮಳೆ ದಿನದ ಮಳೆ	ಜುಮಲಾ ಮಳೆ.
23	91—9	73—6	0—61	—
24	90—6	72—8	0—16	—
25	89—0	74—7	—	—
26	92—0	76—3	—	—
27	89—4	73—8	—	—
28	88—0	75—8	—	—
28	92—4	74—8	—	134-29

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ	ವರೆಗೆ
	ರೂ. ಅ.	ರೂ. ಅ
ಮಸ್ತಿಕಿ	8—10	9— 0
ಗುಡ್ಡು ...	8— 1	8— 6
ರಾಶಿ ಸುಗ್ಗಿ ...	7—10	8— 4
ಅವ್ವಲ್ ಬೆಳ್ತಿಗೆ ...	8—12	9— 8
ಗುಡ್ಡು ಬೆಳ್ತಿಗೆ ...	8— 0	8— 4
ರಂಗೂನು ಬೆಳ್ತಿಗೆ ಗೋಣಿ ೧ ...	13— 8	14— 8
ಗೋಧಿ ಗೋಣಿ ೧ಕ್ಕೆ ...	17— 8	19— 0
ಹುರುಳಿಗೋಣಿ ೧ಕ್ಕೆ ...	9— 0	9— 8
ಕಡಲೆಗೋಣಿ ೧ಕ್ಕೆ ...	12— 8	13— 8
ತೊಗರಿಗೋಣಿ ೧ಕ್ಕೆ ...	12— 8	13— 0
ತೊಗರಿಬೇಳೆ ಗೋಣಿ ೧ಕ್ಕೆ ...	15— 0	20— 0
ಉದ್ದು ಗೋಣಿ ೧ಕ್ಕೆ ...	16— 0	16 — 8
ಹೆಸರುಗೋಣಿ ೧ಕ್ಕೆ ...	14— 0	15 — 0
ಊರು ಬೆಲ್ಲ ಖಂಡಿ ೧ಕ್ಕೆ ...	65—	70 — 0
ಉಪ್ಪು ಗೋಣಿ ೧ಕ್ಕೆ ...	4— 4	4— 8
ಕೊಬ್ರಿ ಖಂಡಿ ೧ಕ್ಕೆ ...	120— 0	125 — 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	48— 0	—
ಎಳ್ಳಿಂಡಿ ಖಂಡಿ ೧ಕ್ಕೆ ...	42— 8	—
ಕೊಬ್ರಿ ಎಣ್ಣೆ ಮುಡಿ ೧ಕ್ಕೆ ...	8—12	10— 0
ಎಳ್ಳೆಣ್ಣೆ ಮುಡಿ ೧ಕ್ಕೆ ...	8— 0	11— 0
ಚಿಮಿಣಿ ಎಣ್ಣೆ ಪೆಟ್ಟಿಗೆ ೧ಕ್ಕೆ ...	8-8-0	—
ಮೋರಿಸ್ ಸಕ್ಕರೆ ಮುಡಿ ೧ಕ್ಕೆ ...	4— 0	—
ಊರ ಮೆಣಸಿನಕಾಯಿ ಮುಡಿ ೧ಕ್ಕೆ ...	6— 0	—
ಸಾಸಿವೆ ಮುಡಿ ೧ಕ್ಕೆ ...	8—12	—
ಕೊತ್ತಂಬರಿ ಮುಡಿ ೧ಕ್ಕೆ ...	3—14	4— 0
ಕಾಫಿ ಖಂಡಿ ೧ಕ್ಕೆ ...	345— 0	400— 0
ಬೀಗೋಟು ಅಡಿಕೆ ಖಂಡಿ ೧ಕ್ಕೆ ಹಳತು ...	280— 0	290— 0
„ ಹೊಸ ಅಡಿಕೆ	215— 0	215 — 0
ಕಾಳುಮೆಣಸು ಖಂಡಿ ೧ಕ್ಕೆ ...	260— 0	265—
ಯಾಲಕ್ಕಿ ಮುಡಿ ೧ಕ್ಕೆ ...	100 — 0	—
ಗೇರುಬೀಜ ಮುಡಿ ೧ಕ್ಕೆ ...	4—12	—
[illegible] ಖಂಡಿ ೧ಕ್ಕೆ ...	45— 0	65 — 0
[illegible] ಮುಡಿ ೧ಕ್ಕೆ ...	17— 8	—
ತಾಮ್ರ ಪಾತ್ರೆಗಳು ಮುಡಿ ೧ಕ್ಕೆ ...	24— 0	—
[illegible] ೧ಕ್ಕೆ ...	18—10	
ಹಿತ್ತಾಳೆ [illegible] ಮುಡಿ ೧ಕ್ಕೆ ...	16— 8	
ಸೀಸವು	12— 7	

ಕನ್ನಡಿಗರೆ! **ವಸಂತ.** ಕಣ್ದೆರೆಯಿರಿ

ಈಗಾಗಲೇ ಎರಡನೇ ಸಂಪುಟವು ಆರಂಭಿಸಲಿದೆ.

ಇತಿಹಾಸನಿಧಿ ಎಂದರೆ	ವಸಂತ
ಸಮಾಜಸುಧಾರಕನೆಂದರೆ	ವಸಂತ
ಕೈಗಾರಿಕೆಯ ಸಾಮ್ರಾಜ್ಯವೆಂದರೆ	ವಸಂತ
ಕರ್ನಾಟಕ ಭಾಷಾಸೇವಕನೆಂದರೆ	ವಸಂತ
ದೇಶವಿದೇಶ ಬಂಧುವೆಂದರೆ	ವಸಂತ
ಕಾದಂಬರಿಗಳ ಭಂಡಾರವೆಂದರೆ	ವಸಂತ
ಚಿತ್ತಾಕರ್ಷ ಚಿತ್ರಶಾಲೆಯೆಂದರೆ	ವಸಂತ
ದೇಶಭಕ್ತನೆಂದರೆ	ವಸಂತ

ಇಂತಹ ವಸಂತನು ಯಾರಿಗೆ ಬೇಕು,
ಯಾರಿಗೆ ಬೇಡ?

48 (ಕ್ರೌನ್ ⅛ ಪುಟ ಸ್ಯಾಜಿಸ) ಪುಟಗಳನ್ನು ಒಳ್ಳಿದ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3—4—0 ಮಾತ್ರ.

ವ್ಯವಸ್ಥಾಪಕ,
ವಸಂತ ಕಾರ್ಯಾಲಯ,
ಕುಂದಾಪುರ, ದಕ್ಷಿಣ ಕನ್ನಡ

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ

ವಾರ ಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ಯಾವಂತರೂ ತಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ತಮಾನಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು, ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನ್ನು ತಿಳಿಸುವ ಲೆಕ್ಕಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಅಧಿಕಾರಿಗಳೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪೋಷಕರಿಗೆ ... ... ರೂ. ?—?—0
ಇತರರಿಗೆ, ಪರಸ್ಥಳಕ್ಕೆ, ಪೋಸ್ಟೇಜು ಸೇರಿ „ 2-8-0
„ ಸ್ಥಳೀಕರಿಗೆ ... „ 1-8-0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪತ್ರಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿಯಬಹುದು.

ಎಡಿಟರ್,
ಬಿ. ಹನುಮಂತಯ್ಯಗೌಡ,
ಅರ್ಥಸಾಧಕ ಪತ್ರಿಕೆ,
ಅರಳೇಪೇಟೆ, ಬೆಂಗಳೂರು, ಸಿಟಿ.

ಬೇಗ ಮಾಡಿರಿ! ತಯಾರಾಗಿದೆ.

ನಾಲ್ಕನೇ ದರ್ಜೆಯ
ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ನಾಲ್ಕನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್, ಗಣಪತಿರಾವ್ ಐಗಳ್ —ಗ್ರಂಥಕರ್ತರು.

ಮನೋರಂಜಕ ಚಿತ್ರಗಳೂ ಇವೆ.

ಇದರಲ್ಲಿ ಬಾರಕೂರು, ಮಂಗಳೂರು, ಮೂಲಿಕ ಕಾರ್ಕಳ, ಮೂಡಬಿದ್ರೆ, ಸುಬ್ರಮಣ್ಯ, ಉಡುಪಿ, ಬಸರೂರು, ವೇಣೂರು, ಬೈಲಂಗಡಿ, ಧರ್ಮಸ್ಥಳ, ಕೊಲ್ಲೂರು, ಕುಂಬಳೆ, ಜಪಾನ ದೇಶದ ಜನರು, ಚೀನಾದೇಶದ ಜನರು, ಬರ್ಮದೇಶದ ಜನರು, ಯುರೋಪ ಖಂಡದ ಜನರು, ಎಸ್ಕಿಮೊ ಜನರು, ನಿಗ್ರೊ ಜನರು, ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ನಾಲ್ಕನೇ ದರ್ಜೆಯ ಮಕ್ಕಳ ಬಗ್ಗೆ ಉಪಯುಕ್ತವಾಗಿದೆ. ಕ್ರಯ 8 ಆಣೆ.

ಪುಸ್ತಕ ದೊರಕುವ ವಿಳಾಸ:—

ಶಾರದಾ ಛಾಪಖಾನೆ,
ಮಂಗಳೂರು

ಮಾರಾಟಕ್ಕೆ ಸಿದ್ಧವಿದೆ.

ಅಮುಲ್ದಾರ್ರಿ, ನಕಾಲತು, ನಕಲಿನ ಬಗ್ಗೆ ನೋಟು, ಲೋಜಮೆಂಟ ಸ್ಕೆಡ್ಯೂಲ, ಪೇಮೆಂಟ್ ಸ್ಕೆಡ್ಯೂಲ, ಬತ್ತಾ ನೋಟು, ಮೆಮೊ ಒಪ್ ಕೊಸ್ಟ್ಸ್, ಮೆಮೊರಂಡಮ್ ಒಪ್ ಎಪ್ಪಿಯರೆನ್ಸು, ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರ, ವಗೈರೆ ಎಲ್ಲಾ ಫೋರ್ಮುಗಳು ನಮ್ಮಲ್ಲಿ ದೊರೆಯುತ್ತವೆ.

100 ಫೋರ್ಮುಗಳ ಕ್ರಯ 0—12—0,
ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರು
1ರ ಕ್ರಯ 0—2—0.

ಶಾರದಾ ಛಾಪಖಾನೆ,
ತೇರು ಬೀದಿ, ಮಂಗಳೂರು.

ನೋಟೀಸು.

ದಕ್ಷಿಣ ಕನ್ನಡ ಡಿಸ್ಟ್ರಿಕ್ಟ ಕೋರ್ಟಿನಲ್ಲಿ.

O. P. 99/1925.

ನರಸಿಂಹ ಶಾಸ್ತ್ರಿ ಕೂಡಾ ಅರ್ಜಿದಾರರು.
ಮತ್ತು
ತಿಮ್ಮಯ್ಯ ಭಟ್ಟ ಕೂಡಾ ರೆಸ್ಪೊಂಡೆಂಟರು.

ಸದರಿ ಮೇಲಿನ ಅರ್ಜಿಯಲ್ಲಿ 1ನೇ ರೆಸ್ಪೊಂಡೆಂಟ ಮಂಜನಾಡಿ ಗ್ರಾಮದ ಗಂಗ್ರ ಮಜ್ಜು ನಾರಾಯಣ ಭಟ್ಟರ ಮಗ ತಿಮ್ಮಯ್ಯಭಟ್ಟರಿಗೆ ಬುದ್ಧಿ ಸರಿಯಿಲ್ಲವೆಂದು ಅವರಿಗೆ ಗಾರ್ಡಿಯಾನ ಮೊಕ್ತ್ರರು ಮಾಡಿ ಅವರ ಆಸ್ತಿಗೆ ಮೇನೇಜರನನ್ನು ನೇಮಿಸಬೇಕೆಂದು ಅರ್ಜಿದಾರರು ಮನವಿಮಾಡಿಕೊಂಡಿರುತ್ತಾರೆ. ಸದರಿ ಅರ್ಜಿಯನ್ನು ಇದೇ ನವಂಬರ ತಿಂಗಳ 20ನೇ ತಾರೀಕಿಗೆ ತನಿಕೆಗೆ ಇಟ್ಟಿರುತ್ತದೆ. ಅದ್ದರಿಂದ ಈ ವಿಷಯದಲ್ಲಿ ಆಕ್ಷೇಪವಿದ್ದವರು ಸದರಿ ತಾರೀಕಿನೊಳಗೆ ಈ ಕೋರ್ಟಿಗೆ ತಿಳಿಸತಕ್ಕದ್ದು.

ಮಂಗಳೂರು,
ತಾ. 28-10-'25.

N. KRISHNA BHAT,
Vakil for Petitioner.

ನೋಟೀಸು.

ದಕ್ಷಿಣ ಕನ್ನಡ ಜಿಲ್ಲಾ ಒಫೀಶಿಯಲ್ ರಿಸೀವರರ ಕೋರ್ಟಿನಲ್ಲಿ,

ದಿವಾಳಿ ಅರ್ಜಿ ನಂಬ್ರ 75/1925.

ಜೋನ್ ಪಿಂಟೋ ಅಂತೊನ್ ಪಿಂತರ ಮಗ ಮಂಗಳೂರು ಶಹಾರ್ ಪಳ್ನೀರ್ ಪೈಕಿ ಕುಡುಂಬೆ ಹಿತ್ತಿಲಿನಲ್ಲಿರುವವ — ಅರ್ಜಿದಾರ. (debtor).
ಮತ್ತು
ಬಿ. ಕುಪ್ಪಣ್ಣ ಶೆಟ್ಟಿ ಮತ್ತು 4ಜನ ಇತರರು — ರೆಸ್ಪೊಂಡೆಂಟರು (creditors)

ಮೇಲ್ಕಂಡ ಅರ್ಜಿದಾರನು ಈ ಕೋರ್ಟಿನಲ್ಲಿ ದಾಖಲು ಮಾಡಿದ ದಿವಾಳಿ ಅರ್ಜಿಯು ತಾ. 14—11—'25ರಲ್ಲು ಬೆಳಿಗ್ಗೆ 8 ಗಂಟೆ ಸಮಯದಲ್ಲಿ ತನಿಕೆಗೆ ಇಟ್ಟಿರುತ್ತದೆ. ಅದ್ದರಿಂದ ಸದರಿ ಅರ್ಜಿಯಲ್ಲಿ ಯಾರಾದರೂ ಆಕ್ಷೇಪಹೇಳತಕ್ಕದ್ದಿದ್ದರೆ ಸದರಿ ತಾರೀಕಿನ ಒಳಗೆ ಈ ಕೋರ್ಟಿನಲ್ಲಿ ತಮ್ಮ ಆಕ್ಷೇಪವನ್ನು ಜಾಹೀರುಮಾಡಿಕೊಳ್ಳಬಹುದಾಗಿ ಈ ಮೂಲಕ ತಿಳಿಯಪಡಿಸೋಣಾಗಿಯದೆ.

ಮಂಗಳೂರು,
24—10—'25.

P. S. D'SOUZA,
Vakil for Petitioner.

ನೋಟೀಸು.

ದಕ್ಷಿಣ ಕನ್ನಡ ಡಿಸ್ಟ್ರಿಕ್ಟ ಕೋರ್ಟಿನಲ್ಲಿ.

O. P. 100/1925.

ನರಸಿಂಹ ಶಾಸ್ತ್ರಿ ಕೂಡ ಅರ್ಜಿದಾರರು
ಮತ್ತು
ತಿಮ್ಮಯ್ಯ ಭಟ್ಟ ಕೂಡ ರೆಸ್ಪೊಂಡೆಂಟರು

ಸದರಿ ಮೇಲಿನ ಅರ್ಜಿಯಲ್ಲಿ 1ನೇ ರೆಸ್ಪೊಂಡೆಂಟ ಮಂಜನಾಡಿ ಗ್ರಾಮದ ಗಂಗ್ರಮಜ್ಜು ತಿಮ್ಮಯ್ಯ ಭಟ್ಟರಿಗೆ ಬುದ್ಧಿ ಸರಿಯಿಲ್ಲವಾದ್ದರಿಂದ ಅವರ ಮೈನರ ಮಗ ನಾರಾಯಣನಿಗೆ ಗಾರ್ಡಿಯನ ಮುಕ್ತ್ರರು ಮಾಡಬೇಕಾಗಿ ಅರ್ಜಿದಾರರು ಮನವಿಮಾಡಿಕೊಂಡಿರುತ್ತಾರೆ. ಸದರಿ ಅರ್ಜಿಯು ಇದೇ ನವಂಬರ ತಿಂಗಳ 20ನೇ ತಾರೀಕಿಗೆ ತನಿಕೆಗೆ ಇಟ್ಟಿರುತ್ತದೆ. ಅದ್ದರಿಂದ ಈ ವಿಷಯದಲ್ಲಿ ಆಕ್ಷೇಪವಿದ್ದವರು ಸದರಿ ತಾರೀಕಿನೊಳಗೆ ಈ ಕೋರ್ಟಿಗೆ ತಿಳಿಸತಕ್ಕದ್ದು.

Mangalore.
28—10—'25.

N. KRISHNA BHAT,
Vakil for Petitioner.

ಪತ್ರವ್ಯವಹಾರ.

ಗೃಹಸ್ಥರೂ ಮತ್ತು ಇತರ ಪೋಕ್ರಿಗಳೂ.

ಒಂದು ಊರಲ್ಲಿ ಬಹಳ ಐಶ್ವರ್ಯವಂತನಾದ ಒಬ್ಬ ಗೃಹಸ್ಥನು ಇರುವನು; ಮತ್ತು ಆ ಊರಲ್ಲಿ ತಾನು ಬಹು ಪ್ರಮುಖನೆಂದೂ ತಾನುಹೇಳಿದ ಹಾಗೆ ಊರಲ್ಲಿ ಎಲ್ಲವರು ನಡೆಯುತ್ತಾರೆಂದೂ ತನಗೆ ಎಲ್ಲವರು ಯೋಗ್ಯವಾದ ಮರ್ಯಾದೆಯನ್ನು ಕೊಡುತ್ತಾರೆಂದೂ, ತನಗೆ ಮಿಕ್ಕಿದವರು ಯಾರಿಲ್ಲವೆಂದೂ ತಿಳಿದು ಕೊಂಡಿರುವನು. ತಾನು ಉಳಕೊಂಡಿರುವ ಊರಲ್ಲಿ ತನಗೆ ಯಾರಾದರೂ ಅಪಮಾನ ಮಾಡಿದ್ದಲ್ಲಿ ಅಂಥವರನ್ನು ಕೆಲವು ಪೋಕ್ರಿಯವರ ಸಹಾಯದಿಂದ ಕೊಲ್ಲುವದು ಅಥವಾ ಮಾರ್ಗದಲ್ಲಿ ಹೋಗುವಾಗ ಹೊಡೆಸುವುದು ಇದೇ ಮೊದಲಾದ ಪೋಕ್ರಿತನವು ಇಂಥಾ ನಮೂನೆಯ ಗೃಹಸ್ಥರು ಮಾಡಿಸುತ್ತಾರೆ, ಕೆಲವು ಗೃಹಸ್ಥರ ಮನೆಯಲ್ಲಿ ನಾಯಿಗಳನ್ನು ಕಾವಲುಗಾಗಿ ಸಾಕುವ ಹಾಗೆ ಪೋಕ್ರಿಮಾಡುವವರನ್ನು ಸಾಕುವ ಪದ್ಧತಿಯು ಈಗ ರೂಢಿಯಲ್ಲಿ ಬಂದಿರುತ್ತದೆ. ಇಂಥ ಪೋಕ್ರಿಗಳನ್ನು ಎಲ್ಲಿಯಾದರು ಅಕಸ್ಮಾತ ಸಣ್ಣ ಪ್ರಾಯದ ಶಾಲಾ ಹುಡುಗರು ಅಥವಾ ಸಣ್ಣ ಮಕ್ಕಳು ನೋಡಿದರೆ ಮರುದಿವಸ ಆ ಮಕ್ಕಳಿಗೆ ಕಠಿಣವಾದ ಜ್ವರವೆ ಬರುವುದು ಈ ಪೋಕ್ರಿಗಳನ್ನು ಸಾಕುತ್ತಿರುವ ಗೃಹಸ್ಥರ ಕೂಡೆ ಯಾರಾದರು ದ್ವೇಷವನ್ನು ಕಟ್ಟಿಕೊಂಡರೆ ಅವರ ಜನ್ಮವು ಸಾರ್ಥಕವಾಯಿತೆಂದು ತಿಳಿದುಕೊಳ್ಳಬೇಕು, ಅಪಮಾನ ಮಾಡಿದವರನ್ನು ಹೊಡೆಯಿಸಿ ಯಾವ ತರದ ನಂಬ್ರಗಳು ಕೋರ್ಟಿನಲ್ಲಿ ನಡೆದರೂ ಈ ಗೃಹಸ್ಥರು ತಮ್ಮ ಆಸ್ತಿಗಳನ್ನು ನಂಬ್ರದಲ್ಲಿ ಆಗುವ ಖರ್ಚಿಗೆ ಮಾರಿ ನಂಬ್ರಗಳಲ್ಲಿ ಪೋಕ್ರಿಗಳನ್ನು ಜಯಶಾಲಿಯಾಗಿ ಮಾಡುವುದೂ ಉಂಟು. ಪೋಕ್ರಿಗಳಿಗೆ ಎದುರಾಗಿ ಸಾಕ್ಷಿ ಹೇಳಿದರೂ ಅಥವಾ ಹೇಳದೆ ಇದ್ದರೆ ಆ ಊರಲ್ಲಿ ನಿಲ್ಲುವುದು ಕಷ್ಟವಾದೀತು. ಹೀಗೆಯೆ ಸಾಕ್ಷಿಗಾರರನ್ನು ಬೆದರಿಸುವುದೂ ಉಂಟು. ಒಟ್ಟಾರೆ ಹೇಳುವದಾದರೆ ಪೋಕ್ರಿತನವು ಗೃಹಸ್ಥರು ಪೋಕ್ರಿಗಳಿಗೆ ಧೈರ್ಯಕೊಟ್ಟು ಮಾಡಿಸುವದಾದರೆ ಇನ್ನೇನು ಉಳಿದಿದೆ?

ಭಯದಿಂದ ನರಳುತ್ತಿರುವ ಒಬ್ಬ ನಿವಾಸಿಕ.

ಮಂಗಳೂರು ಮುನ್ಸಿಪಲ್ ಮುನಿಗಳೂ— ಜನರ ಪ್ರಾಣಾಯಾಮವೂ.

೧. ಮೆಂಬರರಾಗಿ ಚುನಾವಣೆಯಾದ ಮೇಲೆ ಮೌನವಾಗಿರುವ ಮುನ್ಸಿಪಲ್ ಮುನಿಗಳ ಅನುಗ್ರಹದಿಂದ ಮಂಗಳೂರು-ಮುನ್ಸಿಪಾಲಿಟಿಯೊಳಗೆ ಪ್ರಾಣಾಯಾಮಯೋಗ್ಯವಾದ ಅನೇಕ ಸ್ಥಳಗಳು ಪ್ರಕಾಶಕ್ಕೆ ಬಂದಿವೆ. ಅವುಗಳಲ್ಲಿ ಮೀನುಮಾರ್ಕೇಟು ರಸ್ತೆ ಮತ್ತು ಪುತ್ತುಪ್ರಭುಗಳ ಓಣಿಗಳು ಮುಖ್ಯವಾದವುಗಳೆನ್ನಬಹುದು. ಇವುಗಳೆಲ್ಲ-ಅಪರಿಮಿತ ವ್ಯಾಪಾರ ಸ್ಥಳವಾದ ಮೀನು ಮಾರ್ಕೇಟು ರಸ್ತೆಯು ಅತ್ಯುಚ್ಚಸ್ಥಾನವನ್ನು ಹೊಂದಿರುವುದೆಂದರೆ ಅತಿಶಯವಾಗಲಿಕ್ಕಿಲ್ಲ.

೨) ಮಂಗಳೂರು ಸುಪ್ರಸಿದ್ಧ ಗಾಡಿಗಳಲ್ಲಿರುವ ಸುಂಗದ ದ್ರವ್ಯಗಳು! ಮೀನುಮಾಂಸಗಳ ಹವಿಸ್ಸುಗಳು! ಹದ್ದುಕಾಗೆಗಳ ವಿವಿಧ ವೃಷ್ಟಿಗಳು! ಮಾರ್ಗದ ಕಡೆಯಲ್ಲಿ ಬಿದ್ದಿರುವ ಆತ್ಮಬಲಿಯ ನರಮೂರ್ತಿಗಳು! ಪರಮ ಪಾವನವಾದ ಗೋಯಜ್ಞಗಳು! — ಹೀಗೆ ಪಂಚ ಮಹಾ ಯೋಗಗಳ ಸಂಧಿಸ್ಥಾನವಾದ ಮೀನು ಮಾರ್ಕೇಟು ರಸ್ತೆಯದು — ತ್ರಿವೇಣಿ ಸಂಗಮರಂಗದಿಂದಲೂ ಮಂಗಳಕರವಾಗಿ ಕಂಗೊಳಿಸುವುದೆನ್ನಬಹುದು — ಇಲ್ಲವಾದರೆ ಇಂಥಹ ಸ್ಥಳಗಳಲ್ಲಿ ಯಾವ ಬದಲಾವಣೆಯನ್ನೂ ಮಾಡದೆ ಇದ್ದಕ್ಕಿದ್ದಂತೆ— ಮುನ್ಸಿಪಲ್ ಮುನಿಗಳು ಸಂರಕ್ಷಿಸುತ್ತಿರುವುದಕ್ಕೆ ಕಾರಣವೇನು?

೩) ಬಾಯಿಮುಚ್ಚಿ ಶ್ವಾಸಬಂಧದಿಂದ ಪ್ರಾಣಾಯಾಮವನ್ನೆ ಸಾಧಿಸಿ, ಮುನಿಗಳಾಗಬೇಕಾದರೆ ಆ ಹಿಂದಿನ ಕಾಲದಂತೆ ಇಂದಿನ ದಿನದಲ್ಲಿ— ಕಷ್ಟವಿರುವದೆ?— ಸುಗಂಧ ದುರ್ಗಂಧಗಳನ್ನು ಯೇಕಪ್ರಕಾರವಾಗಿ ಭಾವಿಸಿ ದೀರ್ಘಶ್ವಾಸವನ್ನು ಕಟ್ಟಿ ಥಟ್ಟನೆಯಾಗಿ— ವಜ್ರಕಾಯರಾಗಿ ಮುನಿಗಳಾಗಿರಬೇಕಾದರೆ ಅಂದಿನಂತೆ ಇಂದು ಗಿರಿಕಂದರಗಳಲ್ಲಿ ವಾಸಿಸಬೇಕೇ? ಹಲವು ಮಾತೇಂದೇನು.

೪) ಮೌನವ್ರತರಾದ ಮುನ್ಸಿಪಲ್ ಮುನಿಗಳು—ಏಕೋದ್ಯಾನದಿಂದ ಈ ಪುಣ್ಯಯೋಗವು ಮುಖ್ಯವಾಗಿ, ಮೀನುಮಾರ್ಕೇಟು ರಸ್ತೆಯವರಿಗೆ, ಸುಲಭಸಾಧ್ಯವಾಗಿರುವುದು— ಅಲ್ಲಿ ಪ್ರಾಣಾಯಾಮವನ್ನು ಕಲಿತವರು— ಪ್ರಾಣದಾಸೆಯಿಲ್ಲದೆ ಆ ರುದ್ರಭೂಮಿಯ ದ್ವಿಗ್ವಿಜಯಾರ್ಥವಾಗಿ— ಹೊರಡುವುದಕ್ಕೂ ಹಿಂಜರಿಯಲಾರರು.

೫) ಈ ಪ್ರಕಾರದ ಪ್ರಯೋಜನವುಳ್ಳ ಪ್ರಾಣಾಯಾಮ ವ್ಯಾಯಾಮವನ್ನು ಪಟ್ಟಣದಲ್ಲೆಲ್ಲಾ— ಪ್ರಚಾರಮಾಡಬೇಕೆಂದು ಮುನ್ಸಿಪಲ್ ಮುನಿಗಳ ಮತದಂತೆ ಮುನ್ಸಿಪಾಲಿಟಿಯ ಹೆಲ್ತಾಪಿಸರ ಧನವಂತ ಮಹರ್ಷಿಗಳು— ಪ್ರಯತ್ನಪಡುತ್ತಿರುವುದು — ಸುತ್ಯಸಂಗತಿಯಾಗಿದೆ. ಅದು ಹೇಗೆಂದರೆ—

೬) ಮುನ್ಸಿಪಲ್ ಮುನಿಗಳು-ತಾವು ಅಗಿ, ಪಟ್ಟಣದ ಕೊಳೆಯನ್ನೆ ತೊಳೆಯುವ ಯತ್ನವನ್ನು — ಪರಿಷ್ಕಾರವಾಗಿ — ಮಾಡುವುದಿಲ್ಲ — ಧನವಂತ ಮೇಗರಾಜನ ಏರ್ಪಾಡಿನಂತೆ ಮಳೆಗಾಲದಲ್ಲಾದರೂ—ಪಟ್ಟಣವೆಲ್ಲ—ಸರ್ವತ್ರ ಸ್ವಚ್ಛವಾಗುವದಿತ್ತು. ಅದಕ್ಕನುಗುಣವಾಗಿ ಪಟ್ಟಣಿಗರು ಸಾರ್ವಜನಿಕ ಹಿತವನ್ನೂ ನೋಡಿಕೊಂಡು ತಮ್ಮ ತಮ್ಮ ಸಂದರ್ಭಕ್ಕೆ ತಕ್ಕಂತೆ — ಅಂತಹ ದೊಡ್ಡ ತೋಡುಗಳ ಬದಿಯಲ್ಲಿ — ತಮ್ಮ ತಮ್ಮ ಹಿತ್ತಲೊಳಗೆ ಶೌಚಕೂಪಗಳನ್ನೂ ಅಚ್ಚುಕಟ್ಟಾಗಿ ಕಟ್ಟಿಸಿರುವರು ಆದರೆ—

೭) ಮಲಾಗಾರಗಳನ್ನು ಹದಿನೈದು ದಿವಸಗಳೊಳಗೆ ಕಿತ್ತುಹಾಕಬೇಕು. ತೋಡಿನಿಂದ ಮೂರು ಫೀಟು ಒಳಕ್ಕೆ ಕಟ್ಟಬೇಕು — ತಪ್ಪಿದರೆ ಪ್ರಾಸಿಕ್ಯೂಶನ್ ನಡೆಸಲಾದೀತು ಎಂದು ಒಂದು ನೋಟೀಸು.

೮) ಹೆಲ್ತ ಆಫೀಸರರ ಈ ಕಟ್ಟಪ್ಪಣೆಯಂತೆ ಮೂರು ಫೀಟು ಮುಂದಕ್ಕೆ ಕಟ್ಟಿದರೆ, ಸ್ಥಳಭಾವವಿರುವ ಈ ಮಂಗಳೂರಿನ ಅನೇಕ ಕಡೆಗಳಲ್ಲಿ ಅಡಿಗೆ ಕೋಣೆಯ ಬಳಿಯಲ್ಲೋ ಕೆರೆಯ ಕರೆಯಲ್ಲೋ —ಬಾವಿಯ ಬದಿಯಲ್ಲೋ — ಪಾಯಿಖಾನೆಗಳಾಗಬೇಕಾದೀತು — ಇದರಿಂದ ದುರ್ಗಂಧವು ಮನೆಯೊಳಗೆಲ್ಲಾ ತುಂಬಿಹೋದೀತು. ಆಗ ಉಸಿರುಕಟ್ಟಿ ಪ್ರಾಣಾಯಾಮವು ಸಾಧನೆಯು ಸುರುವಾದೀತು. ಕ್ರಮೇಣ ಈ ಮೊದಲು ಹೇಳಿದ ಮಾರ್ಕೆಟು ರಸ್ತೆಯ ಗತಿಯಲ್ಲಿ ಮಂಗಳೂರಿನ ಪ್ರತಿಯೊಂದು ಬೀದಿಯವರೂ ಅನುಭವಿಸಬೇಕಾದೀತು.

೯) ಸಾರಸಾರ ವಿಚಾರವಿಲ್ಲದೆ ಈ ರೀತಿ ವರ್ತಿಸಿದರೆ ಬಡ ಜನರು ಏನುಮಾಡಬೇಕು? ಖರ್ಚಿಗೆ ರೊಕ್ಕವೆಲ್ಲಿ? ಕಟ್ಟಲು ಜಾಗವೆಲ್ಲಿ? ಮುನ್ಸಿಪಾಲಿಟಿಯವರು ಏನು ಸಹಾಯಮಾಡುವರು? ಒಟ್ಟಿಗೇ ಕೊಡುವರೋ? ಜಾಗೆ ಕೊಡುವರೋ? ಇಂತಹ ಅನೇಕ ಸ್ಥಳಗಳು ನಾಲ್ಕೈದು ಜನರ ಹಕ್ಕಿನದಿದ್ದು ವ್ಯವಹರಣೆಯಲ್ಲಿರುವುದು ಉಂಟು — ಹೀಗಿರುತ್ತ ಹೆಲ್ತ ಆಫೀಸರರು ಯಾರಾದರೊಬ್ಬರಿಗೆ ನೋಟೀಸು ಜಾರಿ ಮಾಡಿಸಿದರೆ ಅವರೇನು ಮಾಡುವರು?

೧೦) ಓಟು ಕೊಟ್ಟು ಮೆಂಬರರನ್ನು ಚುನಾಯಿಸಿದ್ದಕ್ಕೆ ಇದೇ ಪ್ರತಿಫಲವಲ್ಲವೆ?

೧೧) ಇಂದಿನ ಗತಿಯು ಈ ರೀತಿಯಾಯಿತು. ಮುಂದಿನ ವರುಷ ಇನ್ನೊಬ್ಬ ಮೆಂಬರರೂ, ಮತ್ತೊಬ್ಬ ಹೆಲ್ತ ಆಫೀಸರರೂ ಬಂದರೆ ಆಗ ಈ ಪಾಯಿಖಾನೆಗಳನ್ನು ಬೇರೊಂದು ಕಡೆಗೊಯ್ಯಬೇಕಾದೀತು, ಪಟ್ಟಣಕ್ಕೆ ವಿದ್ಯುಚ್ಛಕ್ತಿಯು ಬರುವಾಗ ಅವುಗಳನ್ನು ಮತ್ತೊಂದು ದಿಕ್ಕಿಗೆ ಹಾಕಬೇಕಾದೀತು. ಹೀಗೆ ಬದಲಾಯಿಸುವ ರಗಳೆಗೆ ಹೋಗುವದಕ್ಕಿಂತ ಇಂದೀಗ ಪಟ್ಟಣವನ್ನೇ ಅಲ್ಲೋಲಕಲ್ಲೋಲಗೊಳಿಸಿ ವಾಯುವೇಗದಿಂದ ಓಡಾಡುತ್ತಿರುವ ಆ ಮೋಟರುಗಳಲ್ಲಾದರೂ ಇದರ ಅನುಕೂಲತೆಯನ್ನು ಒದಗಿಸುವ ಏರ್ಪಾಡನ್ನು ಮಾಡಬಾರದೇ ಇಲ್ಲವಾದರೆ ಬೇಕಾದ್ದಲ್ಲಿಗೊಯ್ಯಬಹುದಾದ ಗಾಲಿಗಳ ಮೇಲೆ ಚಕ್ರಬಂಧ ‘ಮಲಾಲಯ’ಗಳನ್ನು ಕಟ್ಟಿಸಬೇಕೆಂದು ನೋಟೀಸು ಕೊಟ್ಟಿದ್ದರೂ ಲೇಸಾಗುತ್ತಿತ್ತಲ್ಲವೇ?

೧೨) ಬೊಕ್ಕಪಟ್ಣದ ಬಡ ಮೊಗವೀರರು ತಮಗೊಂದು ಪಾಯಿಖಾನೆಯನ್ನು ಕಟ್ಟಿಸಿಕೊಡಬೇಕೆಂದು ಅಡಿ ಬೇಡಿ, ವಂತಿಗೆ ಮಾಡಿ ಮುನ್ಸಿಪಾಲಿಟಿಗೆ ಹಣಕೊಟ್ಟರಂತೆ. ಆ ಹಣವನ್ನೆ ಪಡಕೊಂಡು ಬಹಳ ಸಮಯವಾದರೂ ಈ ವರೇಗೆ ಅವರ ಆಸೆಯನ್ನೆ ನೆರವೇರಿಸದಿರುವುದಕ್ಕೆ ಕಾರಣವೇನು? ಬಡವರ ಗೋಳನ್ನು ಕೇಳುವವರಾರು?

೧೩) ನಮ್ಮ ಓಟಿನಿಂದ ಮುಂದೆ ಬಂದು ಮೌನವಾಗಿರುವ ಮುನ್ಸಿಪಲ್ ಮುನಿಗಳೇ ಹೇಳಿರಿ. ಅವರ ಹಣವೆಲ್ಲಿ ಹೋಯಿತು?

೧೪) ಮುನ್ಸಿಪಾಲಿಟಿಯಲ್ಲಿ — ಗೋವಧೆಯನ್ನು ನಿಲ್ಲಿಸುವುದು, ಕೈಕಾಲುಕಣ್ಣಿಲ್ಲದೆ ಯಾವ ಕೆಲಸಕ್ಕೂ ಶಕ್ತರಲ್ಲದ ದೀನರಿಗೆ ಜೀವನೋಪಾಯವನ್ನು ತೋರಿಸುವುದು — ಸಂತತಧಾರೆಯಾಗಿ ಸುರಿಯುವ ರಕ್ತಪ್ರವಾಹದಿಂದ ಭಯಂಕರವಾಗಿ ಛಿನ್ನಾಂಗರಾಗಿ ಮಾರ್ಗದ ಬದಿಯಲ್ಲಿ — ನರಳುತ್ತಿರುವ ಆರ್ತರನ್ನು ಸಂರಕ್ಷಿಸುವುದು ತಾಯಿತಂದೆಗಳನ್ನು ಕಳಕೊಂಡು ತಬ್ಬಲಿಯಾಗಿರುವ ಶಿಶುಗಳಿಗೆ ಅನಾಥಾಲಯವನ್ನು ಕಟ್ಟಿಸುವುದು ಇವೇ ಮೊದಲಾದ ಅನೇಕ ಕಾರ್ಯಗಳು ಈ ಮೊದಲೆ ಆಗಬೇಕಾಗಿದ್ದವು. ಅವೆಲ್ಲವನ್ನು ಬಿಟ್ಟು ಸದ್ಯಕ್ಕೆ ಅವಶ್ಯವಿಲ್ಲದ ಈ ಪಾಯಿಖಾನೆಯ ಇಲಾಖೆಗೆ ಇಷ್ಟೊಂದು ಅವಸರದಲ್ಲಿ ಕೈಹಾಕಿರುವುದೇಕೆ? ಇದು ಪ್ರಾಣಾಯಾಮ ಶಿಕ್ಷಣವೋ, ನಮ್ಮ ಪ್ರಾಣವನ್ನು ಯಮಾಲಯಕ್ಕೆ ಕಳುಹಿಸುವ ಲಕ್ಷಣವೋ?

೧೫) ಹಾಗೆ ಮಾಡುತ್ತೇವೆ, ಹೀಗೆ ಮಾಡುತ್ತೇವೆ ಎಂದು ಆಸೆ ತೋರಿಸಿ, ಓಟು ತಾ, ತಾ, ಎಂದು ಹೇಳಿದ ಪಟ್ಟಣದ ಕಾತರೇ ನಿದ್ದೆ ಮಾಡುವಿರೋ ಎದ್ದು ನೋಡುವಿರೊ?

೧೬) ಚುನಾವಣೆಯ ಓಟಿಗಾಗಿ ನೀವು ಎಡೆಬಿಡದೆ ನಮ್ಮಲ್ಲಿಗೆ ಬರುತ್ತಿದ್ದಿರಷ್ಟೆ. ಆ ಮೇಲೆ ಎಷ್ಟು ಸಲ ನಮ್ಮ ವಾರ್ಡಿಗೆ ಬಂದಿರಿ, ನಮ್ಮ ಯಾವ ಯಾವ ಕಷ್ಟವನ್ನು ನಿವಾರಿಸಿದಿರಿ, ಇಷ್ಟರ ವರೆಗೆ ಏನು ಮಾಡಿದಿರಿ, ಇನ್ನು ಏನು ಮಾಡುವಿರಿ''.

ಇಂತಿ ನಿಮ್ಮ ಹಿತೈಷಿಣಿ,
“ಸಹಸ್ರಯೋಜನಗಂಧಿ.''

ಮಂಗಳೂರು ತಾಲೂಕು ನೊನ್ ಮಿಶನ್ ಏಡೆಡ್ ಶಾಲಾ ಮೆನೇಜರರ ಸಂಘ.

ಈ ಸಂಘದ ಮಹಾಸಭೆಯು ಇದೇ ಬರುವ ನವಂಬರ ತಾ. ೭ನೇ ಶನಿವಾರ ಅಪರಾಹ್ನ ೨ ಗಂಟೆಗೆ ಮಂಗಳೂರು ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯಲ್ಲಿ (ಜೈಲಿನ ಬಳಿ) ಜರಗಬೇಕಾಗಿ ನಿಶ್ಚಯಿಸೋಣಾಗಿಯದೆ. ಆ ಬಗ್ಗೆ ತಾವೆಲ್ಲರೂ ದಯಮಾಡಿ ಬರಬೇಕಾಗಿ ಅಪೇಕ್ಷಿಸೋಣಾಗುತ್ತದೆ. ಸದರಿ ಸಭೆಗೆ ದ. ಕ. ಜಿಲ್ಲಾ ಎಡ್ಯುಕೇಶನಲ್ ಆಫೀಸರರವರೂ, ಮಂಗಳೂರು ರೆಂಜ್ ಡಿಪ್ಟಿ ಇನ್ಸ್ಪೆಕ್ಟರರವರೂ ದಯಮಾಡಿ ಬರಲಿಕ್ಕಿರುವರು.

ವಿ ಷ ಯ ಗ ಳು.

೧ ಮೆಹರ್ಬಾನ್ ವಿದ್ಯಾ ಇಲಾಖೆಯ ಮಿನಿಸ್ಟರರವರ ಮುಂದೆ ಮಂಗಳೂರಲ್ಲಿ ತಾ. ೧೬-೧೦-೨೫ರಲ್ಲು ಇಟ್ಟ ವಿಷಯಗಳು, ಆ ಬಗ್ಗೆ ಅವರು ಕೊಟ್ಟ ಉತ್ತರಗಳು.

೨ ಏಡೆಡ್ ಶಾಲೆಗಳ ಉಪಾಧ್ಯಾಯರುಗಳಿಗೆ ಕೊಡುವ ಗ್ರೇಂಟಿನ ದರಗಳನ್ನು ಏರಿಸಿದ ಆಲೋಚನೆ, ಮತ್ತು ಹೊಸ ಶಾಲೆಯನ್ನು ತೆರೆಯುವರೆ ಉತ್ತೇಜನಕೊಡುವ ಗ್ರೇಂಟಿನ ವಿಷಯದಲ್ಲಿ ಮಂಗಳೂರು ಡಿಪ್ಟಿ ಇನ್ಸ್ಪೆಕ್ಟರರವರು ಕೊಟ್ಟ R. C. No. 667/25ನೇ ಹುಕುಂ.

೩ ಈ ಸಂಘದಿಂದ ದ. ಕ. ಜಿಲ್ಲಾ ಎಡ್ಯುಕೇಶನಲ್ ಕೌನ್ಸಿಲಿಗೆ ಪ್ರತಿನಿಧಿಯನ್ನು ಆರಿಸುವವಿಷಯ,

೪ ಇತರ ವಿಷಯಗಳು,

K. Subbannaya,
ತಾ. 26–10–’25. *Joint Secretary.*

ಉಡುಪಿ ತಾಲೂಕು ನೋನ್ ಮಿಶ್ಶನ್ ಏಡೆಡ್‌ಶಾಲೆಗಳ ಮೆನೇಜರರ ವ ಉಪಾಧ್ಯಾಯರ ಸಂಘದ ಮೂರನೇ ಸಭೆಯ ಪ್ರೊಸಿಡಿಂಗ್ಸು.

ಕಳೆದ ತಾ. ೨೪-೧೦-೨೫ರಲ್ಲು ಈ ಸಭೆಯು ಮ। ರಾ। ರಾ। ದಕ್ಷಿಣ ಕನ್ನಡ ಡಿಸ್ಟ್ರಿಕ್ಟ ಎಜ್ಯುಕೇಶನಲ್ ಆಫೀಸರರವರ ಅಧ್ಯಕ್ಷತೆಯಲ್ಲಿ ಜರಗಿತು. ಮ। ರಾ। ರಾ। ಉಡುಪಿ ರೇಂಜ್ ಶಾಲೆಗಳ ಡಿಪ್ಟಿ ಇನ್ಸ್ಪೆಕ್ಟರರವರೂ, ಏಡೆಡ್ ಶಾಲೆಗಳ ಮೆನೇಜರರು ವ ಉಪಾಧ್ಯಾಯರು ಕೂಡ ೩೪ ಮಂದಿ ಮೆಂಬರರೂ ಹಾಜರಿದ್ದರು.

ಪ್ರಥಮತಃ ಒಬ್ಬಿಬ್ಬರು ಉಪಾಧ್ಯಾಯರುಗಳಿಂದ ಶಿಕ್ಷಣದ ಕುರಿತು ಭಾಷಣಗಳೂ, ಮಾದರಿ ಪಾಠಗಳೂ ಕೊಡಲ್ಪಟ್ಟ ತರುವಾಯ, ಸಂಘದ ಜಾಯಿಂಟ್ ಸೆಕ್ರೆಟರಿಯವರಾದ ರಾ। ಎಸ್. ನರಸಿಂಗರಾಯರು ತಾರೀಕು ೧೯-೧೦-೨೫ರಲ್ಲು ಉಡುಪಿಗೆ ಚಿತ್ತಯಿಸಿದ್ದ ಬಹುಮಾನಪಟ್ಟ ವಿದ್ಯಾಇಲಾಖಾ ಮಿನಿಸ್ಟರರಿಗೆ ಉಡುಪಿ ತಾಲೂಕಿನ ಉಪಾಧ್ಯಾಯರ ಪರವಾಗಿ ಅರ್ಪಿಸಿದ ಮಾನಪತ್ರವನ್ನು ಓದಿ ಹೇಳಿ ವಿದ್ಯಾಮಂತ್ರಿಗಳಿಂದ ಆ ಕುರಿತು ಏಡೆಡ್ ಶಾಲೆಗಳ ಬಗ್ಗೆ ದೊರೆತ ಸಹಾನುಭೂತಿಯ ಸಂದೇಶವನ್ನು ವಿವರಿಸಿ ಹೇಳಿದರು.

ಹೊಸದಾಗಿ ತೆರೆದಿರುವ ಏಡೆಡ್ ಶಾಲೆಗಳಿಗೆ ಕೊಡಲ್ಪಡುವ ಫರ್ನಿಚರ್ ಗ್ರಾಂಟು ರೂಪಾಯಿ ೮೦ನ್ನು ೧೯೨೬ನೇ ಇಸವಿ ಮಾರ್ಚಿ ಅಂತ್ಯದೊಳಗೆ ಆಯಾಯ ಶಾಲೆಗಳಿಗೆ ಕೊಡಿಸುವಂತೆ ಕೇಳಿಕೊಳ್ಳುವುದು.

ಗವರ್ನಮೆಂಟಿನವರು ಈ ವರ್ಷ ಗ್ರೇಂಟಿನ ದರವನ್ನು ಏರಿಸುವಾಗ್ಗೆ ಕಳೆದ ತಾ. ೧-೪-೧೯೨೫ರ ಜಿಲ್ಲಾ ಪರಿಷದದಲ್ಲಿ ನಿರ್ಣಯಿಸಲ್ಪಟ್ಟ ಸ್ಕೇಲಿನಂತೆಯಾದರೂ ಗ್ರೇಂಟನ್ನು ಏರಿಸದೆ ಇರುವುದರಿಂದ ಮುಂದಿನ ವರುಷಕ್ಕಾದರೂ ಸದರಿ ಸ್ಕೇಲಿಗೆ ಅನುಸರಿಸಿ ಗ್ರೇಂಟನ್ನು ಏರಿಸಬೇಕಾಗಿಯೂ, ಪ್ರಕೃತ ಏರಿಸಿರುವ ಗ್ರಾಂಟಿನ ಸ್ಕೇಲಿನಲ್ಲಿ ಟ್ರೈನಿಂಗ್ ತರಬೇತಿಯನ್ನು ಹೊಂದಿದ ಲೋವರ್ ಮತ್ತು ಸೆಕೆಂಡರಿ ಗ್ರೇಡಿನವರಿಗೆ ಏನೂ ಏರಿಸದೆ ಇರುವುದು ನ್ಯಾಯವಲ್ಲವಾದುದರಿಂದ ಈ ಎರಡು ತರಗತಿಯವರಿಗೆ ಸಹ ಇತರ ತರಗತಿಯವರಿಗೆ ಏರಿಸಿದ ಗ್ರಾಂಟಿನ ಪ್ರಮಾಣಾಯದಲ್ಲಿಯೇ ಗ್ರಾಂಟನ್ನು ಏರಿಸಿ, ಆ ಪ್ರಕಾರ ಬರುವ ೧೯೨೬ನೇ ಇಸವಿ ಮಾರ್ಚಿ ತಿಂಗಳಲ್ಲಿ ಗ್ರಾಂಟನ್ನು ಕೊಡಿಸುವಂತೆ ಬರೆಕೊಳ್ಳುವುದು. ಮತ್ತು ಇತರ ಅನೇಕ ಠರಾವುಗಳು ಮಂಜೂರಾಗಿವೆ.

ತರುವಾಯ ಮಾನ್ಯ ಅಧ್ಯಕ್ಷರು, ಏಡೆಡ್ ಶಾಲೆಗಳ ಕುರಿತು ಬಹುಮಾನಪಟ್ಟ ವಿದ್ಯಾಮಂತ್ರಿಗಳು ಕೊಟ್ಟಿರುವ ಸಂದೇಶವನ್ನು ಅನುಸರಿಸಿ, ಈ ನಿರ್ಣಯಗಳ ಬಗ್ಗೆ ತಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸಿ ಮೃದೂಕ್ತಿಗಳಿಂದ ಭಾಷಣವನ್ನೀಯಲು, ಸೆಕ್ರೆಟರಿ ರಾ। ಕೆ, ಗಣಪಯ್ಯ ಸೆಟ್ಟರಿಂದ ಸಭಾಧ್ಯಕ್ಷರಾದ ಮ। ಧೊರೆಗಳವರಿಗೂ ಮ। ರಾ। ರಾ। ಡಿಪ್ಟಿ ಇನ್ಸ್ಪೆಕ್ಟರರವರಿಗೂ ಧನ್ಯವಾದಗಳನ್ನು ಅರ್ಪಿಸಿದ ತರುವಾಯ, ಮರುಮೀಟಿಂಗಿಗೂ ಮ। ಧೊರೆಗಳವರ ಸಾನಿಧ್ಯವು ದೊರೆಯುವಂತೆ ಪ್ರಾರ್ಥಿಸಿ ಮುಂದಿನ ಮೀಟಿಂಗನ್ನು [ತಾ. ೭-೧೧-೨೫ಕ್ಕೆ ಜರಗಿಸುವುದಾಗಿ ನಿಶ್ಚಯಿಸಿ ಸಭೆಯು ಮುಕ್ತಾಯವಾಯಿತು.

ಕುರ್ಕಾಲು ಶ್ರೀ ಗಣಪತಿ
ಹಾಯರ್ ಎಲಿಮೆಂಟರಿ
ಶಾಲೆ, ತಾ. 26-10-25

ಕೆ. ಗಣಪಯ್ಯ ಸೆಟ್ಟಿ,
ಸೆಕ್ರೆಟರಿ,
ನೋನ್ ಮಿಶನ್ ಏಡೆಡ್ ಶಾಲೆಗಳ ಸಂಘ,
ಉಡುಪಿ ತಾಲೂಕು.

The Canara Bank Ltd., Mangalore, ದಿ. ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ಇದೇ 1925ನೇ ಇಸವಿ ಸಪ್ಟಂಬರ ತಿಂಗಳಲ್ಲಿ ಬಿಟ್ಟ ರಿಜಿಸ್ಟ್ರಿ ನೋಟೀಸುಗಳಲ್ಲಿ ತಿಳಿಯಪಡಿಸಿದ ಮೇರೆಗೆ ಈ ಕೆಳಗೆ ಹೆಸರುಕಾಣಿಸಿದವರ ಬಾಬ್ತು ನಗಗಳನ್ನು ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂಮಾಡಿ ಹುಟ್ಟಿಬಂದ ಐವೇಜಿನಲ್ಲಿ ಬ್ಯಾಂಕಿಂಗೆ ಬಹಾ ಅಸಲು ಬಡ್ಡಿ ವಗೈರೆ ಮೊಬಲಗು ಕಳದು ಬಾಕಿ ಇರುವ ಐವೇಜನ್ನು ಸದರೀಯವರು ಪಡಕೊಂಡು ಹೋಗತಕ್ಕದ್ದೆಂತಲೂ ಹಾಗೆ ಕೊಂಡುಹೋಗುವ ವರೇಗೆ ಸದರೀ ಐವೇಜು ಅಮಾನತು ಇಟ್ಟಿರುವದಾಗಿಯೂ ಅದಕ್ಕೆ ಬಡ್ಡಿ ಸಿಕ್ಕಲಿಕ್ಕಿಲ್ಲವಾಗಿಯೂ ಈ ಮೂಲಕ ತಿಳಿಸೋಣಾಗುತ್ತದೆ.

ಐವೇಜು ಕೊಂಡುಹೋಗುವಾಗ ಈ ನೋಟೀಸಿನ ಬಿಜರ್ಫ ಕೊಡತಕ್ಕದ್ದು.

ಹೆಸರು.	ಏಲಮಿನಲ್ಲಿ ಹುಟ್ಟಿಬಂದ ಐವೇಜು	ಬ್ಯಾಂಕಿಗೆ ಬಹಾ ಅಸ್ಲು ಬಡ್ಡಿ ಐವೇಜು.	ಬಾಕಿ ಉಳಿದ ಮೊಬಲಗು.
ಸದಾಶಿವ ಕೃಷ್ಣ ಶೆಟ್	ರೂಪಾಯಿ 80–0–0	ರೂಪಾಯಿ 79–9–1	0–6–11.
ಶ್ರೀಧರ ಆಳ್ವಾ	,, 309–8–0	,, 298–3–7	11–4–5.
ಸೋಮಪ್ಪ ಭಂಡಾರಿ	,, 143–4–0	,, 132-11–1	10–8-11.
ವಿಟ್ಠಲ ಕಾಮ್ತಿ	,, 118–4–0	,, 116–3–8	2–0–4.
ಬಜಿಲ್ ಫೆರಾರ	,, 93–4–0	,, 90–1–7	3–2–5.

Canara Bank, Ltd.
Mangalore
28th Oct. 1925

K. Venkat Rao.
Secretary.

Advertisers Note.

A SPECIAL ISSUE OF SPECIALIMPORTANCE,
AND
Concentrated interest with wide circulation.

This is your Opportunity.

Our fortnightly paper, **THE SARASWATH** will appear in the Beginning of December, in a most attractive special issue printed on glaze paper, art paper bound and profusely illustrated.

ADVERTISE & REAP THE BENEFITS OF
VERNACULAR ADVERTISEMENT.
RATES MODERATE.

Apply:—

Secretary,
THE SARASWATH,
UDIPI.

ಸ್ಫುಟವಿಚಾರಗಳು.

ರಿಸ್ಪೊನ್ಸಿವ್ ಕೊ-ಒಪರೇಶನ್.

ಮಿ। ತಾಂಬೆಯವರ ಜಾತಿಭ್ರಷ್ಟತನದೊಡನೆ, ಮರಾಠಾ ಧೋರಣವು ಉಲ್ಬಣಿಸಲಾರಂಭಿಸಿಯದೆ. ಮೊನ್ನೆ ಅಮರಾವತಿಯಲ್ಲಿ ನಡೆದ ಮಧ್ಯಪ್ರಾಂತದ ಸ್ವರಾಜ್ಯ ಪಕ್ಷದ ಸಭೆಯಲ್ಲಿ, ಮಿ। ತಾಂಬೆಯವರ ಕೃತ್ಯದ ಖಂಡನವೂ, ಅದೇ ಉಸುರಿನಲ್ಲಿ ರಿಸ್ಪೊನ್ಸಿವ್ ಕೊ-ಒಪರೇಶನಿನ ಆವಶ್ಯಕತೆಯೂ ಸೂಚಿಸೋಣಾಯಿತು. ಸ್ವರಾಜ್ಯ ಪಕ್ಷದ ಶುದ್ಧ ಕಾರ್ಯಕ್ರಮವನ್ನು ಮೆತ್ತಗೆ ಮಾಡಿಸುವುದರಲ್ಲಿ ತಾವೇ ಸಹಭಾಗಿಗಳಾಗಿ ಈಗ ಮೆತ್ತಗೆ ಮಾಡಿದ ಕಾರ್ಯವನ್ನೇ ಹಿಡಿದು ಶ್ರೀಯುತ ಪಟೇಲ, ಪಂಡಿತ ಮೋತಿಲಾಲ ನೆಹರುರವರ ತಪ್ಪುಗಳನ್ನು ಹುಡುಕಿ, ತಾಂಬೆಯವರ ಅನ್ಯಾಯವು ಅಷ್ಟೊಂದು ದೊಡ್ಡದಾಗಿಲ್ಲವೆಂದು ಸೂಚಿಸಿ ರಿಸ್ಪೊನ್ಸಿವ್ ಕೊ-ಒಪರೇಶನಿನ ವಧುವನ್ನು ಸ್ವರಾಜ್ಯ ಪಕ್ಷದ ಕೈಗೆ ಗಂಟಿಕ್ಕಲು ಮರಾಠಾ ಧುರೀಣರು ಪ್ರಯತ್ನಿಸುವರು. ಅಸಹಕಾರವು ಪ್ರಯೋಜನವಾಗಲಿಲ್ಲ; ಕೌನ್ಸಿಲ್ ತಡೆಯು ವ್ಯರ್ಥವಾಯಿತು. ಇನ್ನು ರಿಸ್ಪೊನ್ಸಿವ್ ಕೊ-ಒಪರೇಶನಿನಿಂದ ಮರಾಠಾ ಪ್ರತಿಭೆಯು ಸ್ವರಾಜ್ಯವನ್ನು ಎತ್ತಿ ಹೊತ್ತು ತರಲಿದೆ! ರಾಜಕೀಯ ಧುರೀಣರು ಇನ್ನು ಏನೇನು ಮಾಡಲಿರುವರೊ? ರಿಸ್ಪೊನ್ಸಿವ್ ಕೊ-ಒಪರೇಶನಿನಿಂದ ಮಂತ್ರಿ ಪದವಿಯು ಲಾಭವಿದೆ; ಎಕ್ಸಿಕ್ಯೂಟಿವ್ ಕೌನ್ಸಿಲರ್ ಪದವಿ ಲಾಭವಿದೆ; ಕಮಿಶನ್ನು ಕಮಿಟಿಗಳ ಸದಸ್ಯತನದ ಲಾಭವಿದೆ. ಆದರೆ ಅದರಿಂದ ಜನಪ್ರೀತಿ ಮತ್ತು ಜನತೆಯ ವಿಶ್ವಾಸದ ಲಾಭವಿದೆಯೋ ನೋಡಲಿಕ್ಕಿದೆ. ಹೊಸ ಚುನಾವಣೆಗಳ ಸಮಯದಲ್ಲಿಯೇ ಈ ಪ್ರಶ್ನೆ ಬಂದುದು ಉತ್ತಮವಾಯಿತು. ಜನಾಂಗವು ಕಣ್ಣು ತೆರೆದು, ಚೆನ್ನಾಗಿ ಆಲೋಚಿಸಿ ಈ ರಿಸ್ಪೊನ್ಸಿವ್ ಕೊ-ಒಪರೇಶನ್ ಎಂಬ ಮಿಥ್ಯಾವಾದವನ್ನು ಅಲ್ಲಗಳೆಯುವದಾಗಿ ನಾವು ಆಶಿಸುತ್ತೇವೆ.

ಲೋಕಾರ್ನೊ ಪರಿಷತ್ತು.

ಲೋಕಾರ್ನೊ ಪರಿಷತ್ತಿನ ಸಂಧಿಯಿಂದ ಯುರೋಪಿಯನ ಕೋಲಾಹಲದ ತುಮುಲವು ಶಾಂತವಾಯಿತೊ ಎಂದು ಆಶಿಸಲಿಕ್ಕೆ ಕಾರಣವುಂಟು. ಇಂಗ್ಲೀಷ, ಫ್ರಾನ್ಸ, ಜರ್ಮನಿ, ಇಟೆಲಿ ಇವರ ಮೈತ್ರಿಯೊಡನೆ ಯುರೋಪಿನಲ್ಲಿ ಯುದ್ಧಕ್ಕೆ ಕಾರಣ ಉಳಿಯದು. ಲೋಕಾರ್ನೊ ಸಂಧಿಯು ಪರಸ್ಪರ ಸೌಹಾರ್ದದಿಂದಲೂ, ಔದಾರ್ಯದಿಂದಲೂ ನಡೆದುದ್ದಾಗಿ ವರ್ತಮಾನದಿಂದ ತಿಳಿಯುತ್ತೇವೆ; ಅಲ್ಲದೆ, ಸಾಮಾನ್ಯವಾಗಿ ಸಂಬಂಧಪಟ್ಟ ಎಲ್ಲಾ ಜನಾಂಗಗಳಿಗೂ ಸಂಧಿ ಪರಿಷತ್ತಿನಲ್ಲಿ ಪೂರ್ಣ ತೃಪ್ತಿಯಿದೆಯೆಂದು ತೋರುತ್ತಿದೆ. ಇದೆಲ್ಲ ನಿಜವಾದರೆ, ತತ್ಕಾಲದ ಮಟ್ಟಿಗೆ, ಇನ್ನೂ ೩೦-೩೫ ವರ್ಷಗಳ ವರೆಗೆ ಯುದ್ಧದ ಭಯವಿರಲು ಕಾರಣವಿಲ್ಲ. ಪ್ರತಿ ಜನಾಂಗವೂ, ಕಳೆದ ಮಹಾಯುದ್ಧದ ದುಷ್ಪರಿಣಾಮಗಳಿಂದ ಅಭಿವೃದ್ಧಿ ಹೊಂದಬೇಕಾದರೆ, ಇಷ್ಟು ಸಮಯ ಬೇಕು. ಆದರೆ ಜರ್ಮನಿಯಲ್ಲಿ ಒಂದು ಪಕ್ಷವು ಮಾತ್ರ ಈ ಸಂಧಿಯನ್ನು ಒಪ್ಪಿಕೊಳ್ಳದಿರುವುದರಿಂದ, ಅಲ್ಲಿನ ಪಾರ್ಲಿಮೆಂಟು ರದ್ದಾಗಿ ಹೊಸ ಚುನಾವಣೆಯಾಗಲಿದೆ. ಹೊಸ ಚುನಾವಣೆಗಳಲ್ಲಿ ಲೋಕಾರ್ನೊ ಸಂಧಿಗೆ ಜನತೆಯ ಸಮ್ಮತಿಯು ದೊರಕಬಹುದೆಂದೂ ತೋರಬಹುದು. ಆದರೆ ಜರ್ಮನಿಯ ಕೈಯಿಂದ ಅಲ್ಸೇಸಲೊರೈನ್ ಎಂಬ ಪ್ರಾಂತವನ್ನು ಚಿರಕಾಲಕ್ಕಾಗಿ ಫ್ರಾನ್ಸಿಗೆ ಬಿಟ್ಟುಕೊಡಿಸುವ ಆ ಪ್ರಥಮ ಕರ್ತವನ್ನು ಜರ್ಮನಿಯು ಎಂದಿನ ವರೆಗೆ ಪಾಲಿಸಲಿರುವುದೊ ಎಂದು ನೋಡಲಿದೆ. ಈ ಸಂಧಿಯು ದೀರ್ಘಾಯುವಾಗಿರಲಾರದೆಂಬುದು ಸ್ಪಷ್ಟವಿದ್ದರೂ, ಯುರೋಪಿನ ತತ್ಕಾಲದ ಶಾಂತಿಯು ಅವಿರೋಧವಾಗಿ ನಡೆಯುವಂತೆಯೂ, ದೇಶಗಳು ಯುದ್ಧದಿಂದ ಪುನರುಜ್ಜೀವನ ಹೊಂದುವುದು ಸುಲಭವಾದಂತೆಯೂ ಆಯಿತು.

ಸ್ವರಾಜ್ಯಪಕ್ಷವೂ ಮರಾಠಾ ಪಕ್ಷವೂ.

ಈ ಮೊದಲಿನ ಸ್ಫುಟವಿಚಾರದಲ್ಲಿ ಸೂಚಿಸಿದಂತೆ, ಅಮರಾವತಿಯಲ್ಲಿ ನಡೆದ ಸ್ವರಾಜ್ಯ ಪಕ್ಷದ ಪರಿಷತ್ತು ಸ್ವರಾಜ್ಯ ಪಕ್ಷಕ್ಕೆ ಗೌರವವನ್ನುಂಟುಮಾಡುವಂತಹದ್ದಾಗಿಲ್ಲ. ಅದರಲ್ಲಿ ಮಿ। ತಾಂಬೆಯವರನ್ನು ಸರಿಯಾಗಿ ಖಂಡಿಸಲಿಕ್ಕೆ ಬರೇ ೪ ಮತಗಳು ಮಾತ್ರವಿದ್ದುವು. ಕೆಲವರು ಮಿ। ಕೇಳಕರರಂತೆ ಅಭಿನಂದಿಸಲು ಸಿದ್ಧರಾಗಿದ್ದರು; ಇನ್ನು ಕೆಲವರು ಹೆಸರಿಗೆ ಮಾತ್ರ ಖಂಡಿಸಬೇಕೆಂದರು; ಮಿ। ತಾಂಬೆಯವರ ಮೇಲಿನ ಖಂಡನವು ಹೃತ್ಪೂರ್ವಕವಿರಲಿಲ್ಲ. ಸ್ವರಾಜ್ಯ ಪಕ್ಷದ ವಿನಾಶದ ಪ್ರಥಮ ಛಾಯೆಯು ಅಮರಾವತಿಯಲ್ಲಿ ಬಿದ್ದಿದೆ. ಮರಾಠಾ ಧೋರಣದ ಕ್ಷುದ್ರತೆಯಿಂದ ಈ ಸ್ವರಾಜ್ಯ ಪಕ್ಷವು ಹೇಗೆ ಹೊರಗೆ ಬರುವುದೆಂದು ನೋಡಲಿದೆ. ಸ್ವರಾಜ್ಯ ಪಕ್ಷದ ಶಿಸ್ತನ್ನು ಕೇಳ್ಕರರ ಮೇಲೆ ಜ್ಯಾರಿಗೆ ತಂದರೆ ಮರಾಠರು ಪೃಥಕ್ಕರವಾಗುವುದೆಂದು ಅವರು ಹೆದರಿಸಿರುವರು. ಈ ಹೆದರಿಕೆಗೆ ಸ್ವರಾಜ್ಯ ಪಕ್ಷವು ತಲೆತಗ್ಗಿಸುವುದೊ ಎಂದು ನೋಡಬೇಕು.

ಸ್ವರಾಜ್ಯ ಪಕ್ಷವು ಈ ಪರಿಸ್ಥಿತಿಯಲ್ಲಿ ತಮ್ಮ ಧೋರಣವನ್ನು ಸ್ಪಷ್ಟಪಡಿಸಿ, ಯಾರೊಬ್ಬರಿಗೂ ಹೆದರದೆ ಆ ಧೋರಣವನ್ನು ಹಿಡಿದು ಮುಂದಿನ ಚುನಾವಣೆಯಲ್ಲಿ ಕಾದು, ಜನಾಂಗದ ಆದೇಶವನ್ನು ಪಡೆಯಬೇಕು. ಪರಾಜಯವಾದರೆ ಜನಾಂಗವು ಸಿದ್ಧವಿಲ್ಲವೆಂದು, ಇದ್ದ ಶಕ್ತಿಯಿಂದ ತಮ್ಮ ಧ್ಯೇಯವನ್ನು ಸಾಧಿಸಬೇಕು. ಹಾಗೆ ಮಾಡದೆ, ಇಲ್ಲದ ಹೆಸರುಗಳಿಂದ ಲಿಬರಲ್ ಧ್ಯೇಯವನ್ನೇ ಹಿಡಿದು, ಪಕ್ಷ ಸ್ವಾರ್ಥಗಳನ್ನು ಕಟ್ಟಿಕೊಳ್ಳುವುದು ದೇಶಕ್ಕೆ ಹಿತವಾಗದು. ಕೌನ್ಸಿಲು ತಡೆಯು ಸಾಧ್ಯವಲ್ಲವಾದರೆ, ಕೊಂಗ್ರೆಸ್ಸಿನಲ್ಲಿ ಶಾಂತ ಪಕ್ಷವನ್ನು ಸೇರಿಸಿ ಅವರ ಧುರೀಣತೆಯಲ್ಲಿ ಕೊಂಗ್ರೆಸ್ಸನ್ನು ನಡಿಸುವುದು ಉತ್ತಮ. ವ್ಯಕ್ತಿಗಳ ಸ್ವಾರ್ಥದಿಂದ ದೇಶದಲ್ಲಿ ಬಣಗಳನ್ನು ಕಟ್ಟುವುದು ಅತೀ ಹೇಯವಾದುದು. ಲೋಕಮಾನ್ಯ ಟಿಳಕರ ಬಾಯಿಯಿಂದ ಬಿತ್ತೆಂದು, ರಿಸ್ಪೊನ್ಸಿವ್ ಕೊ-ಒಪರೇಶನಿಗೆ ತೀಕ್ಷ್ಣ ಪಕ್ಷದ ರೂಪ ಬರುವುದಿಲ್ಲ. ಅಗ್ರಗಾಮಿಗಳಲ್ಲಿ ಅಗ್ರಗಾಮಿಯಾಗಿದ್ದ ಲೋಕಮಾನ್ಯರ ಹೆಸರು ಕೊಂಗ್ರೆಸ್ಸನ್ನು ಮಂದಗಾಮಿಗಳ ಕೈಸೇರಿಸಲು ಸಹಕಾರಿಯಾದೀತೆಂದು ನಾವು ಈ ಪೂರ್ವದಲ್ಲಿ ನೆನಸಿರಲಿಲ್ಲ.

ಗ್ರೀಸ ಬಲ್ಗೇರಿಯಾ ವಿವಾದ ಮತ್ತು ಲೀಗ ಒಫ್ ನೇಶನ್ಸ್.

ಗ್ರೀಸ ಮತ್ತು ಬಲ್ಗೇರಿಯಾ ದೇಶಗಳು ಕೂಡುವ ಗಡಿಯಲ್ಲಿ ಅಲ್ಲಿದ್ದ ಕಾವಲುಗಾರರೊಳಗೆ ಯುದ್ಧವಾಗಿ, ಗ್ರೀಕ ಕಾವಲುಗಾರನು ಸಾಯಲು, ಗ್ರೀಸ ದೇಶದವರು ಬಲ್ಗೇರಿಯದ ಮೇಲೆ ತಪ್ಪನ್ನು ಹೊರಿಸಿ, ಬಲ್ಗೇರಿಯಾ ದೇಶದ ಮೇಲೆ ದಂಡೆತ್ತಿ ಹೋಗಿ ಒಂದು ಪಟ್ಟಣವನ್ನು ಕೈವಶಮಾಡಿಕೊಂಡರು. ಜನಾಂಗ ಜನಾಂಗಗಳೊಳಗೆ ಯುದ್ಧವಾಗದಂತೆ ನೋಡುವ ಉದ್ದೇಶವುಳ್ಳ ಲೀಗ್ ಒಫ್ ನೇಶನ್ನು ಕೂಡಲೇ ತನ್ನ ಸಭೆಯನ್ನು ಕರೆದು ಬಲ್ಗೇರಿಯಾ ಮತ್ತು ಗ್ರೀಸ ದೇಶಗಳು ತಂತಮ್ಮ ಸೈನ್ಯವನ್ನು ಹಿಂದೆ ಕರೆಯಬೇಕಾಗಿ ಆಜ್ಞಾಪಿಸಿ, ಅಲ್ಲಿಯ ಪರಿಸ್ಥಿತಿಯನ್ನು ತಿಳಿದುಕೊಳ್ಳಲು ಒಂದು ಕಮಿಶನ್ನನ್ನು ಕಳುಹಿಸಿಯದೆ. ಇದು ಸ್ತುತ್ಯವಾದುದು. ಆದರೆ ಇಟಲಿಗೂ-ಗ್ರೀಸಿಗೂ, ಇಂಗ್ಲೆಂಡಿಗೂ ಈಜಿಪ್ಟಿಗೂ, ಇಟೇಲಿಗೂ ಅಫಘಾನಿಗೂ, ತಾಗಿಬಂದು ಯುದ್ಧದ ಹೊಗೆಯು ಏಳುವಂತಿದ್ದಾಗ ಲೀಗ್ ಒಫ್ ನೇಶನ್ನು ಏನು ಮಾಡಿತ್ತು? ಸಣ್ಣ ಸಣ್ಣ ರಾಷ್ಟ್ರಗಳನ್ನು ಹೆದರಿಸಲಿಕ್ಕಾಗಿಯೇ ಲೀಗ್ ಒಫ್ ನೇಶನ್ನು ಸ್ಥಾಪಿತವಾದುದು? ದೊಡ್ಡ ಜನಾಂಗಗಳ ಅತ್ಯಾಚಾರವನ್ನು ಲೆಕ್ಕಿಸುವವರಾರು? ಫ್ರಾನ್ಸು ಮೊರೊಕ್ಕೊದ ಮೇಲೆ ಅಪವಿತ್ರ ಯುದ್ಧವನ್ನು ಮಾಡುವಾಗ, ಫ್ರಾನ್ಸಿನ ಸೈನ್ಯವು ಸಿರಿಯಾ ದೇಶದ ದಮಸ್ಕ ಪಟ್ಟಣವನ್ನು ಭಯಂಕರವಾದ ಕೊಲೆಯಿಂದಲೂ, ಬೊಂಬುಗಳಿಂದಲೂ ನಾಶಮಾಡಿ ಸಾವಿರಾರು ಮಾನವ ಜೀವಿಗಳ ಸರ್ವ ನಾಶವನ್ನು ಕೈಕೊಂಡಾಗ, ಮಿ। ಬ್ರಾಯಂಡ (ಫ್ರಾನ್ಸ ದೇಶದ ಲೀಗ್ ಒಫ್ ನೇಶನ್ಸಿನ ಪ್ರತಿನಿಧಿ) ಲೀಗಿನ ಮೇಲೆ ಅಧ್ಯಕ್ಷರಾಗಿ ಕುಳಿತು, ಗ್ರೀಸ-ಬಲ್ಗೇರಿಯದ ನ್ಯಾಯ ತೀರ್ಮಾನಿಸಲು ಆತುರಪಡುವರು! ಇವರೀಗ ಗ್ರೀಸ-ಬಲ್ಗೇರಿಯಾದ ಕುರಿತು, “ಇದು ನಾಗರಿಕತೆಗೆ ಲಾಂಛನೀಯವಾದುದು'' ಎಂದು ಹೇಳುವವರು! ವಿಲಾಯತಿಯಲ್ಲಿ ನಾಗರಿಕತೆಯಿದ್ದರಲ್ಲವೇ ಅದು ಲಾಂಛನಿತವಾಗುವುದು? ನ್ಯಾಯಾಸನದಲ್ಲಿ ಉಪವಿಷ್ಟನಾದ ಮಿ। ಬ್ರಾಯಂಡನಿಗಾಗಿಯೇ ಮೊರೊಕ್ಕೊ ಮತ್ತು ಸಿರಿಯಾ ದೇಶವು ಪ್ರತೀಕಾರವನ್ನು ಕೇಳುವುದು. ಕೊಡುವವರಾರು? ನ್ಯಾಯಾಸನವು ಲೀಗ್ ಒಫ್ ನೇಶನ್ನಿಗಿಂತಲೂ ಮಹತ್ತರವಾದ ಸ್ಥಳದಲ್ಲಿದೆ!

ಕೌನ್ಸಿಲ್ ಒಫ್ ಸ್ಟೇಟ್ ಚುನಾವಣೆ.

ಕೌನ್ಸಿಲ್ ಒಫ್ ಸ್ಟೇಟಿಗೆ ಕೌನ್ಸಿಲ್ ಒಫ್ ಎಲ್ಡರ್ಸ್ ಅಂದರೆ ಹಿರಿಯರ ಸಭೆ ಎಂದೂ ಹೆಸರಿದೆ. ಇದರಲ್ಲಿ ಸರಕಾರಿ ಬಹುಮತವಿದೆ. ಇದರ ಕೆಲಸವು ಬಸವಣ್ಣನಂತಿದೆ. ಸರಕಾರವು ಬಂದು “ಹೌದೊ ಕೌನ್ಸಿಲ್ ಒಫ್ ಸ್ಟೇಟಿನವರೇ'', ಎಂದರೆ, “ಹೌದು'' ಎನ್ನುವುದು; “ಅಲ್ಲವೊ ಕೌನ್ಸಿಲು ಒಫ್ ಸ್ಟೇಟಿನವರೇ'' ಎಂದರೆ ಅಲ್ಲವೆನ್ನುವುದು. ಇದು ಸುಧಾರಿತ ಸರಕಾರದ ಪ್ರಾರಂಭದಿಂದ ಇದ್ದಿತು. ಇದಕ್ಕೆ ಚುನಾವಣೆಗಳು ಕೌನ್ಸಿಲು ಬಹಿಷ್ಕಾರದ ಸಮಯದಲ್ಲಿ ನಡೆದುದರಿಂದ, ಇದರಲ್ಲಿ ಎಲ್ಲವರೂ ಮಂದಪಕ್ಷದವರಾಗಲಿ ಸರಕಾರ ಪಕ್ಷದವರಾಗಿ ಇದ್ದರು. ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲಿ ಯಾವ ಜನಹಿತವಾದ ಮತ್ತು ಸರಕಾರ ವಿರುದ್ಧವಾದ ಠರಾವುಗಳಾಗಲಿ, ಬಿಲ್ಲುಗಳಾಗಲಿ ಮಂಜೂರಾದುವೊ ಅವೆಲ್ಲವನ್ನೂ ಮುರಿದುಹಾಕುವುದೇ ಈ ಕೌನ್ಸಿಲಿನ ಈ ವರೆಗಿನ ಕರ್ತವ್ಯವಿದ್ದಿತು. ಆದರೆ ಕೌನ್ಸಿಲು ಬಹಿಷ್ಕಾರ ತೆಗೆದು ಹಾಕಿದ ಮೇಲೆ, ಸದ್ರಿ ಕೌನ್ಸಿಲು ಒಫ್ ಸ್ಟೇಟಿನ ಸ್ಥಾನವು ಮಾನ್ಯ ಶ್ರೀನಿವಾಸ ಶಾಸ್ತ್ರಿಯವರ ರಾಜೀನಾಮೆಯಿಂದ ಖಾಲಿಬಿದ್ದಾಗ, ವಿ. ರಾಮದಾಸರು ಸ್ವರಾಜ್ಯ ಪಕ್ಷದ ಪರವಾಗಿ ಕೌನ್ಸಿಲನ್ನು ಸೇರಿ, ಅಲ್ಲಿ ಒಬ್ಬರೇ ಆದರೂ ಇತರರನ್ನು ಸಾಕಷ್ಟು ದಣಿಸಿರುವರು. ಇದರಿಂದ ಸ್ವರಾಜ್ಯ ಪಕ್ಷವು ಬಹುಸಂಖ್ಯಾಕವಾಗಿ ಅದನ್ನು ಸೇರಿದರೆ, ಅದಕ್ಕೆ ಬಹುಮತವು ಸಿಕ್ಕಲಾರದಾದರೂ, ಕೌನ್ಸಿಲಿನಲ್ಲಿನ ಇತರರ ಮೇಲೆ ಒಂದು ತಡೆಯನ್ನು ಕಟ್ಟಿದಂತಾಗುವುದು ಎಂದು ತಿಳಿಯುವುದು ನಮ್ಮ ಜಿಲ್ಲೆಯವರಾದ ಯು. ರಾಮರಾಯರೂ, ಮದ್ರಾಸಿನ ರಾಮದಾಸರೂ, ಮತ್ತಿತರ ಕೆಲವರೂ ಸ್ವರಾಜ್ಯಪಕ್ಷದ ಪರವಾಗಿ ಉಮೇದ್ವಾರರಾಗಿ ನಿಂತಿರುವರು. ಮತದಾರರು ಇವರನ್ನೇ ಆರಿಸಲು ಮರೆಯಲಾರರೆಂದು ನಾವು ಇಚ್ಛಿಸುವೆವು.

ಸರ್, ಎ. ಪಿ. ಪತ್ರೋರವರ ಅವಿವೇಕ.

ವಿದ್ಯಾ ಇಲಾಖಾ ಮಂತ್ರಿಯವರಾದ ಮಾನ್ಯ ಪತ್ರೋರವರು ದಕ್ಷಿಣ ಕನ್ನಡಾ ಜಿಲ್ಲೆಗೆ ಬಂದು, ಮುಖ್ಯ ಸ್ಥಳಗಳನ್ನು ಸಂದರ್ಶಿಸಿ ಹೋದ ಸಮಾಚಾರವು ಕಳೆದ ಸಂಚಿಕೆಯಲ್ಲಿ ಪ್ರಕಟವಾಗಿದೆ. ಮಾನ್ಯ ಪತ್ರೋರವರು ಸರಕಾರಿ ಖರ್ಚಿನಲ್ಲಿ ಇತ್ತ ಬಂದು, ಬಹುಮಾನಪತ್ರಗಳ ಸ್ವೀಕಾರ, ನಿರಾಕರಣೆಯ ಪ್ರತ್ಯುತ್ತರ, ಹೂಮಾಲೆಗಳ ಧಾರಣೆ, ಕರತಾಡನೆ ಇತ್ಯಾದಿ ಮಂತ್ರಿಪದವಿಯ ಕರ್ತವ್ಯಗಳ ಪೂರಣದಿಂದಲೇ ತೃಪ್ತರಾಗದೆ ಸ್ವಲ್ಪ ಖಾಸಗಿ ಕೆಲಸವನ್ನೂ ಮಾಡಿದಂತೆ ತೋರುತ್ತಿದೆ. ಇಲ್ಲಿನ ಕ್ರಿಸ್ತೀಯರ ಬಗ್ಗೆ ಮಿ। ಸಾಲ್ಡಾನ್ಹರು ಮದ್ರಾಸು ಕೌನ್ಸಿಲಿಗೆ ಸದಸ್ಯರಾಗಿರುವರು. ಇವರು ಸರಕಾರದ ವಿರೋಧವಾಗಿಯೂ ಸ್ವರಾಜ್ಯಪಕ್ಷವನ್ನು ಅನುಕರಿಸುವವರಾಗಿಯೂ ಇರುವರು. ಕೌನ್ಸಿಲಿನೊಳಗಣ ಇವರ ಹಾಜರು ಮಾ। ಪತ್ರೋರವರಿಗೆ ಸುಖಕರವೆಂದು ಕಂಡುಬಂದಿಲ್ಲ. ಮಾ। ಪತ್ರೋರವರ ಆಗಮನದ ಸಮಯದಲ್ಲಿ, ಕೆಥೊಲಿಕರು ಕೆಲವರು ಅವರಿಗೆ ಒಂದು ಮಾನಪತ್ರವನ್ನು ಕೊಟ್ಟು ತಮಗೆ ಸರಕಾರವು ಕೊಡತಕ್ಕ ಸಹಾಯಗಳನ್ನು ಕೇಳಿಕೊಂಡರು. ಆ ಸಹಾಯಗಳನ್ನು ಕೊಡುವುದಾಗಲಿ, ನಿರಾಕರಿಸುವುದಾಗಲಿ ಮಂತ್ರಿವರ್ಯರ ಕೆಲಸವಾಗಿತ್ತು. ಆದರ ಬದಲಿಗೆ “ನೀವು ಎಂತಹ ಪ್ರತಿನಿಧಿಗಳನ್ನು ಕಳುಹಿಸಿದಿರಿ? ಇಂತಹ ಪ್ರತಿನಿಧಿಗಳನ್ನು ಕಳುಹಿಸಿದರೆ ಸರಕಾರವು ನಿಮಗೆ ಸಹಾಯ ಮಾಡುವುದು ಹೇಗೆ?'' ಎಂಬಿತ್ಯಾದಿ ರೀತಿಯಲ್ಲಿ ಅವರಿಗೆ ಯಾವ ತರದ ಜನರನ್ನು ಆರಿಸಬೇಕೆಂಬ ವಿಷಯದಲ್ಲಿ ಉಪನ್ಯಾಸವಿತ್ತು, ತಮ್ಮ ಒಪ್ಪಿಗೆಗೆ ಇಲ್ಲದ ಪ್ರತಿನಿಧಿಗಳನ್ನು ಕಳುಹಿಸಿದರೆ ನಿಮಗೆ ಸಹಾಯವು ಸಿಕ್ಕಲಾರದೆಂಬ ಅಭಿಪ್ರಾಯವನ್ನು ತೋರಿಸುವ ರೀತಿಯಲ್ಲಿ ಮಾತನಾಡಿದರು. ಮುಂದಿನ ಚುನಾವಣೆಯ ತಯಾರಿಯನ್ನು ಈಗಿನ ಸರಕಾರ ಅಧಿಕಾರದ ಸಹಾಯದಿಂದ ಈಗಲೇ ಸಾಧಿಸಿದರು. ಈ ವರ್ತನವು ಜನತೆಯ ಮೇಲೆ ಅನ್ಯಾಯದ ಬಂಧನೆಯನ್ನು ತೊಟ್ಟಂತಾಗುವುದು; ಸ್ವತಂತ್ರವಾದ ಚುನಾವಣೆಗೆ ಭಂಗ ಬರುವುದು; ಈ ತರದ ವರ್ತನದಿಂದ ಮಾನ್ಯ ಪತ್ರೋರವರು ತಮ್ಮ ಮಂತ್ರಿಪದವಿಯ ಅಧಿಕಾರವನ್ನು ದುರುಪಯೋಗಪಡಿಸಿದರು; ಎಂದು ಎಲ್ಲರೂ ಅವರನ್ನು ಖಂಡಿಸುತ್ತಿರುವರು; ಮದ್ರಾಸು ಕೌನ್ಸಿಲಿನಲ್ಲಿ ಈ ವರ್ತನದ ಇತ್ಯರ್ಥವು ಆಗಬಹುದಾಗಿ ನಾವು ಆಶಿಸುವೆವು. ಮಂತ್ರಿಗಳು ತಮ್ಮ ಅಧಿಕಾರವನ್ನೂ, ಸರಕಾರದ ಹಣವನ್ನೂ, ಈ ತೆರದ ಚುನಾವಣೆಯ ಕುಯುಕ್ತಿಗಳಿಗೆ ಉಪಯೋಗಿಸದಂತೆ ನೋಡಿಕೊಳ್ಳುವುದು ಕೌನ್ಸಿಲಿನ ಮತ್ತು ಸರಕಾರದ ಕರ್ತವ್ಯವಾಗಿದೆ.

ಆಂಧ್ರ ಪ್ರಾಂತಿಕ ಪರಿಷತ್ತಿನ ಸೂಚನೆ.

ಮಛಲೀ ಪಟ್ಟಣದಲ್ಲಿ ಕಳೆದ ಒಕ್ಟೋಬರ ತಾರೀಕು ೨೩ರಲ್ಲು ಕೂಡಿದ ಪ್ರಾಂತಿಕ ಪರಿಷತ್ತು ಕೆಳಗಿನ ಠರಾವನ್ನು ಮಂಜೂರು ಮಾಡಿತು. ಇದು ಸ್ವರಾಜ್ಯಪಕ್ಷಕ್ಕಾಗಿ ಸ್ಪಷ್ಟವಾದ ಧೋರಣವನ್ನು ಸೂಚಿಸುವುದರಿಂದ, ಇದನ್ನು ಇಲ್ಲಿ ಕೊಟ್ಟಿರುವೆವು.

ಈ ಪರಿಷತ್ತು ಪಾಟ್ನಾದ ತೀರ್ಮಾನಗಳನ್ನು ಒಪ್ಪಿಕೊಂಡು, ಕಾನಪುರ ಕೊಂಗ್ರೆಸ್ಸು ಕೆಳಗಿನಂತೆ ಸಂದೇಶವನ್ನು ಕೊಡಬೇಕಾಗಿ ಸೂಚಿಸುತ್ತಿದೆ.

(1) ಚುನಾಯಿಸಲ್ಪಟ್ಟ ಸದಸ್ಯರು ಮಂತ್ರಿಪದವಿಯನ್ನಾಗಲಿ, ಸರಕಾರಿ ನೇಮಕದ ಸಿಲೆಕ್ಟ ಕಮಿಟಿಗಳ ಸ್ಥಾನವನ್ನಾಗಲಿ ಸ್ವೀಕರಿಸಬಾರದು.

(3) ಸರಕಾರೀ ಆಫೀಸರರ ಪರವಾಗಿ ಕೊಡಲ್ಪಡುವ ಔತಣಗಳಲ್ಲಿ ಸಹಭಾಗಿಯಾಗಬಾರದು.

(4) ದ್ವಿದಳ ರಾಜ್ಯಪದ್ಧತಿಯನ್ನು ಒಡೆಯಬೇಕು; ಮತ್ತು ಕೌನ್ಸಿಲು ಅತಿಕ್ರಮಿಸಲಾಗದ ಪರಿಸ್ಥಿತಿಯನ್ನು ತಂದಿಕ್ಕಬೇಕು.

(5) ಪ್ರಾಂತಿಕ ಮತ್ತು ಜಿಲ್ಲಾ ಕಮಿಟಿಗಳು ಉಮೇದ್ವಾರರನ್ನು ನಿಲ್ಲಿಸುವಂತೆ ಕೊಂಗ್ರೆಸ್ಸು ಅವರಿಗೆ ಅಧಿಕಾರ ಕೊಡಬೇಕು.

(7) ಅಖಿಲ ಭಾರತ ಕೊಂಗ್ರೆಸ ಕಮಿಟಿಯು ಎಲ್ಲಾ ತಯಾರಿಯನ್ನು ಮಾಡುವಂತೆ ಅಧಿಕೃತವಾಗಬೇಕು.

ಅನುಕ್ರಮಣಿಕೆ.

ಅಗ್ರಲೇಖ:— ಪುಟಗಳು.
ಪರದೇಶ ಪ್ರಚಾರ ೬
ಸ್ಫುಟವಿಚಾರಗಳು ೫
ವರ್ತಮಾನಸಂಗ್ರಹಗಳು—
ವಿದೇಶ – ಒಳದೇಶ ವರ್ತಮಾನ ೭
ದಕ್ಷಿಣ ಕನ್ನಡ – ಧರ್ಮಸ್ಥಳ, ಗುರುಪುರ, ಮೂಡಬಿದರೆ, ಬಂಟವಾಳ, ಅರಳಕೊಪ್ಪಲು ,,
ವಿವಿಧ ವಿಷಯ ೮
ಹಿಂದು-ಮುಸಲ್ಮಾನರ ಕಲಹ ,,
ಮಂಗಳೂರು, ,,
ಪತ್ರವ್ಯವಹಾರ ೧, ೨ ೯
ಮಂಗಳೂರು ತಾಲೂಕು ಸೆಕೆನ್ ಡಿವಿಶನ್ ಏಡೆಡ್ ಶಾಲಾ ಮೆನೇಜರರ ಸಂಘ ,,
ಉಡುಪಿ ತಾಲೂಕು ಸೆಕೆನ್ ಡಿವಿಶನ್ ಏಡೆಡ್ ಶಾಲೆಗಳ ಮೆನೇಜರರ ವ ಉಪಾಧ್ಯಾಯರ ಸಂಘದ ಮೂರನೇ ಸಭೆಯ ಪ್ರೊಸಿಡಿಂಗ್ಸ್ ,,

ಸ್ವದೇಶಾಭಿಮಾನಿ.

ಶಕ ೧೮೪೭ ಕಾರ್ತಿಕ ಶು| ೧೨ಯು ಶುಕ್ರವಾರ.

ಪರದೇಶ ಪ್ರಚಾರ.

Foreign Propaganda.

ಕಾಂಗ್ರೆಸ್ಸಿನಲ್ಲಿ ಅಸಹಕಾರದ ಧೋರಣವನ್ನು ಕೈಕೊಂಡಾಗ, ಮಹಾತ್ಮರು ಪರದೇಶದ ಪ್ರಚಾರವನ್ನು ಅನಾವಶ್ಯಕವೆಂದು ಹೇಳಿ ತೆಗೆದುಹಾಕಿಸಿದರು. ತತ್ಪೂರ್ವದಲ್ಲಿ ಪರದೇಶ ಪ್ರಚಾರವೆಂದು ಮುಖ್ಯವಾಗಿ ಇಂಗ್ಲೆಂಡಿನೊಳಗಿನ ಪ್ರಚಾರವೇ ಮುಖ್ಯವಿದ್ದಿತು. ಈ ಪ್ರಚಾರಕ್ಕಾಗಿ ಕಾಂಗ್ರೆಸ್ಸಿನ ಖರ್ಚಿನಿಂದ ಲಂಡನ್ನಿನಲ್ಲಿ "ಇಂಡಿಯಾ" ಎಂಬ ಪತ್ರಿಕೆಯು ಹೊರಡುತ್ತಿದ್ದಿತು. ಇದು ಕಾಂಗ್ರೆಸ್ಸಿನ ಧೋರಣ ಮತ್ತು ಆಶಯಗಳನ್ನು ಇಂಗ್ಲೆಂಡು ಜನತೆಗೆ ಸರಿಯಾಗಿ ತೋರಿಸಿ ಕೊಡುತ್ತಿದ್ದಿತು.

ಅಸಹಕಾರವನ್ನು ಕೈಕೊಳ್ಳುವ ಸಮಯದಲ್ಲಿ, ಮಹಾತ್ಮರು, ಪರದೇಶ ಪ್ರಚಾರವನ್ನು ಅನಾವಶ್ಯಕವೆಂದು ಹೇಳಲಿಕ್ಕೆ ಈ ಕೆಳಗಿನ ವಿಚಾರಗಳು ಕಾರಣವಾದುವು.

(೧) ಇದರಿಂದ ಈ ವರೆಗೆ ಯಾವ ಪ್ರಯೋಜನವೂ ಆಗಿಲ್ಲ.

(೨) ಸ್ವರಾಜ್ಯವು ಒಳಗಿನಿಂದ ಬರಬೇಕಲ್ಲದೆ, ಹೊರಗಿನಿಂದಲ್ಲ.

(೩) ಹಿಂದೂಸ್ಥಾನವು ಅಸಹಕಾರದಂತಹ ಮಹತ್ವದ ಕಾರ್ಯಕ್ರಮವನ್ನು ಕೈಕೊಂಡರೆ, ಪರದೇಶಗಳು ತಾವಾಗಿ ನಮ್ಮ ವಿಷಯವಾದ ಸತ್ಯಸ್ಥಿತಿಯನ್ನು ನೋಡಿಕೊಳ್ಳುವರು. ಅದಕ್ಕಾಗಿ ಪ್ರತ್ಯೇಕ ಪ್ರಯತ್ನಗಳು ಬೇಡ.

(೪) ಹಿಂದೂಸ್ಥಾನದ ಒಳಗೆನೇ ಮಾಡಲಿಕ್ಕಿರುವ ಕಾರ್ಯವು ಬಹಳವಿದೆ. ಆದುದರಿಂದ ಪರದೇಶಿ ಪ್ರಚಾರಕ್ಕೆಂದು ಜನಾಂಗದ ಶಕ್ತಿಯನ್ನೂ ಧನವನ್ನೂ ವ್ಯರ್ಥಪಡಿಸುವುದಕ್ಕಿಂತ, ಅವನ್ನು ದೇಶದೊಳಗಿನ ಕೆಲಸಗಳಿಗೆ ಉಪಯೋಗಿಸುವುದು ಅತೀ ಅಗತ್ಯ.

ಈಗ ಮೆಲ್ಲನೆ ಕಾಂಗ್ರೆಸ್ಸು ಮಹಾತ್ಮರ ಕಾರ್ಯದಿಂದ ಹಿಂದೆ ಸರಿಯುತ್ತಿದೆ. ಪಾಟ್ನಾದ ಆಲ್ ಇಂಡಿಯಾ ಕಾಂಗ್ರೆಸ್ಸ ಕಮಿಟಿಯ ತೀರ್ಮಾನಗಳೊಂದಿಗೆ, ಕಾಂಗ್ರೆಸ್ಸಿನ ಮುಂದಿನ ಕಾರ್ಯ ಸಾಫಲ್ಯದ ಮತ್ತು ಯಶಸ್ಸಿನ ಜವಾಬ್ದಾರಿಯು ಸ್ವರಾಜ್ಯ ಪಕ್ಷದ ಮೇಲೆ ಬಿದ್ದಿದೆ.

ಆದುದರಿಂದ ಸ್ವಭಾವ ಕಾರಣವಾಗಿ ಕಾಂಗ್ರೆಸ್ಸಿನ ಧೋರಣವು ಬದಲಾಗುವುದು. ಮತ್ತು ಆ ಪ್ರಕಾರವೇ ಪರದೇಶ ಪ್ರಚಾರದ ವಿಷಯದ ಅಭಿಪ್ರಾಯವು ಬದಲಾಗುವುದು.

ಹಿಂದೂ ಪತ್ರಿಕೆಯಲ್ಲಿ ಸೈಂಟ್ ನಿಹಾಲ್ ಸಿಂಗರೆಂಬವರ ಒಂದು ಲೇಖವು ಬಂದಿತ್ತು. ಶ್ರೀ. ನಿಹಾಲ್ ಸಿಂಗರು ಅನೇಕ ಪತ್ರಿಕೆಗಳ ಲೇಖಕರು. ಇವರು ಇಂಗ್ಲೆಂಡಿನ ಪತ್ರಿಕೆಗಳಿಗೂ ಹಿಂದೀಯ ಇಂಗ್ಲೀಷ ಪತ್ರಿಕೆಗಳಿಗೂ ಆಗಾಗ ಲೇಖ ಕೊಡುತ್ತಿರುವರು. ಪ್ರಪಂಚ ಜ್ಞಾನವನ್ನು ಸಂಗ್ರಹಿಸಲಿಕ್ಕೆ ಇವರು ಲೋಕವನ್ನು ಹಲವು ಬಾರಿ ಸಂಚರಿಸಿರುವರು. ಇವರಷ್ಟು ಅನುಭವಸ್ಥರು ಹಿಂದೀಯರೊಳಗೆ ಇನ್ನಾರೂ ಇಲ್ಲವೆನ್ನಬಹುದು. ಅಲ್ಲದೆ ಬ್ರಿಟಿಷ ರಾಜತಂತ್ರಜ್ಞರೊಡನೆ ಇವರಿಗೆ ಮೈತ್ರಿಯು ಇದ್ದು ಅವರ ಅಂತರ್ಭಾವವು ಇವರಿಗೆ ಚೆನ್ನಾಗಿ ಗೊತ್ತಿರಬೇಕು.

ಇವರು ತಮ್ಮ ಎಲ್ಲಾ ಅನುಭವದಿಂದ ಹೇಳುತ್ತಿರುವರು:- ಇಂಗ್ಲೀಷ ಕೂಲಿ ಪಕ್ಷದಿಂದಾಗಲಿ, ಕೊಮ್ಯುನಿಸ್ಟ ಪಕ್ಷದಿಂದಾಗಲಿ ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯ ಸಿಕ್ಕೀತೆಂದು ಹೇಳುವುದು ಸುಳ್ಳು. ಮಾತಿನ ಮಟ್ಟಿಗೆ ಹಲವರು ಮೆತ್ತಗೆ ಇದ್ದರೂ, ಕಾರ್ಯದಲ್ಲಿ ಯಾರೂ ಹಿಂದೂಸ್ಥಾನಕ್ಕೆ ಉಪಕಾರವನ್ನು ಮಾಡಲಾರರು. ಹಿಂದೂಸ್ಥಾನವೆಂದರೆ ಕೂಲಿಯವರ ಅನ್ನವಾಗಿದೆ. ಹಿಂದೂಸ್ಥಾನವು ತನ್ನ ವಸ್ತ್ರದ ಕೈಗಾರಿಕೆಯನ್ನು ಘಟ್ಟಿಮಾಡಿತೆಂದರೆ ಲಕ್ಷಾವಧಿ ಇಂಗ್ಲೀಷ ಕೂಲಿಗಳು ಉಪವಾಸ ಬೀಳಬೇಕು. ಹಿಂದೂಸ್ಥಾನದ ಆತ್ಮರಕ್ಷಣೆಯು ಇಂಗ್ಲೀಷರಿಗೆ ಇಷ್ಟು ಸರ್ವನಾಶದ್ದಾಗಿರುವಾಗ ಇಂಗ್ಲೀಷರು ಹಿಂದೂಸ್ಥಾನದ ಆತ್ಮರಕ್ಷಣೆಗೆ ಕಾರಣವಾಗುವ ಸ್ವಾತಂತ್ರ್ಯವನ್ನು ಕೊಟ್ಟು ಆತ್ಮಘಾತುಕತೆಯನ್ನು ಮಾಡಿಕೊಳ್ಳಲಾರರು. ಆದುದರಿಂದ ಹಿಂದೂಸ್ಥಾನದ ಕೆಲಸವು ಹಿಂದೂಸ್ಥಾನದಲ್ಲಿಯೇ ಇದೆ. ಅಲ್ಲಿಯೇ ಸ್ವಾತಂತ್ರ್ಯದ ಯುದ್ಧದ ರಂಗಭೂಮಿಯು ರಚಿಸಲ್ಪಡಬೇಕು.—ಎಂದಿತ್ಯಾದಿಯಾಗಿ ಸೈಂಟ್ ನಿಹಾಲ್ ಸಿಂಗರು ಬರೆದಿರುವರು.

ಹಿಂದೂ ಪತ್ರಿಕೆಯು ಪರದೇಶ ಪ್ರಚಾರದ ವಿಷಯವಾಗಿ ಒಂದು ಅಗ್ರಲೇಖವನ್ನು ಬರೆಯುವಾಗ, ಸೈಂಟ್ ನಿಹಾಲ್ ಸಿಂಗರ ಈ ಅಭಿಪ್ರಾಯವು ಸರಿಯೆಂದು ಒಪ್ಪಿಕೊಂಡು, ಪರದೇಶ ಪ್ರಚಾರಕ್ಕೂ, ಇಂಗ್ಲೆಂಡಿನಿಂದ ನಮಗೆ ಲಾಭ ಸಿಕ್ಕುವ ಇಲ್ಲವೆ ಸಿಕ್ಕದಿರುವ ವಿಷಯಕ್ಕೂ ತಾರತಮ್ಯ ವಿಶೇಷವಿದೆಯೆಂದು ಹೇಳಿ ಪರದೇಶ ಪ್ರಚಾರವು ಅಗತ್ಯವೆಂದೂ, ಅದನ್ನು ಮುಂದಿನ ಕಾಂಗ್ರೆಸ್ಸು ಅಧಿವೇಶನದಲ್ಲಿ ಮಂಜೂರು ಮಾಡಬೇಕೆಂದೂ ಹೇಳುತ್ತಿದೆ.

ನಾವೂ ಈ ವಿಚಾರವನ್ನು ಎತ್ತಿ ಎರಡು ಮಾತುಗಳನ್ನು ಹೇಳಲಿದೆ.

ಸ್ವರಾಜ್ಯವು ಒಳಗಿನಿಂದ ಬರಬೇಕಲ್ಲದೆ ಹೊರಗಿನಿಂದ ಅಲ್ಲವೆಂಬುದು ಸ್ಥೂಲರೂಪದಿಂದ ಸರಿಯೆನ್ನಬಹುದಾದರೂ ವಿಶ್ವದ ಅಘಟನಾಘಟನಾ ಸಾಮರ್ಥ್ಯದಿಂದ ಯಾವ ರೀತಿಯಲ್ಲಿಯೂ ಅದು ಬರಬಾರದೆಂದಿಲ್ಲ. ಹಿಂದೂಸ್ಥಾನವು ಲೋಕವಿರಹಿತವಾದುದಲ್ಲ. ಅದರಲ್ಲೂ ಈಗಿನ ವಿಜ್ಞಾನ, ಈಗಿನ ಸೌಕರ್ಯ, ಈಗಿನ ಉಪಕರಣ, ಈಗಿನ ಜನಾಂಗ ಜನಾಂಗಗಳೊಗಿನ ವ್ಯವಹಾರ ಇವನ್ನು ನೋಡಿದರೆ, ಹಿಂದೂಸ್ಥಾನವು ಲೋಕದ ವಿಸ್ಮೃತಿಯಲ್ಲಿ ಇರಲು ಸಾಧ್ಯವಲ್ಲವೆಂದೂ, ಲೋಕದೊಡನೆ, ಲೋಕದ ಸಮ್ಮಿಳನದಲ್ಲಿ ಇರತಕ್ಕುದೆಂದೂ ತಿಳಿಯಬಹುದು. ಆದುದರಿಂದ ಸ್ವಾತಂತ್ರ್ಯಸಾಧನೆಗಾಗಿ ದೇಶದ ಒಳಗೆ ಹೇಗೆ ಸಾಧನೆಗಳು ನಡೆಯುತ್ತಿವೆಯೊ, ಅವುಗಳೊಡನೆ ಲೋಕದ ಸಹಾನುಭೂತಿಯನ್ನು ಪಡೆದು, ಲೋಕದ ಸದಭಿಪ್ರಾಯಗಳಿಗೆ ದೇಶವು ಪಾತ್ರವಾಗುವುದು ನಮ್ಮ ಕಾರ್ಯಸಾಧನೆಗೆ ಅತ್ಯಂತ ಅವಶ್ಯವಿದೆ.

ಯಾರೊಬ್ಬನೂ ತಾನೊಬ್ಬನೇ ಒಂದು ಕೆಲಸವನ್ನು ಮಾಡಲಾರನು. ಎಲ್ಲಾ ಕೆಲಸಗಳಲ್ಲಿಯೂ ಅದೃಷ್ಟವೆಂಬುದೊಂದಿದೆ ಎಂದು ಅನುಭವಿಕರಿಗೆ ತಿಳಿಯದಿರದು. ಅದೃಷ್ಟವೆಂದರೆ, ಯಾವ ಕಾರ್ಯಸಾಧನೆಯಲ್ಲಿ ಒಬ್ಬನು ನಿರತನೊ ಅದರ ವಾತಾವರಣ. ಆ ವಾತಾವರಣವು ಆ ಕಾರ್ಯಕ್ಕೆ ಅನುಕೂಲವಾದರೆನೇ ವ್ಯಕ್ತಿಯ ಸಾಧನೆಯು ಸಫಲವಾಗುವುದು. ವಾತಾವರಣವು ಕೆಟ್ಟದಿದ್ದರೆ ಸಾಧನೆಯು ನಿಷ್ಫಲವಾಗುವುದು.

ವ್ಯಕ್ತಿಗೆ ಹೇಗೆ ಅದೃಷ್ಟವೆಂಬ ಹೆಸರಿನ ಈ ಅನುಕೂಲ ಅಥವಾ ಪ್ರತಿಕೂಲ ವಾತಾವರಣವಿರುವುದೊ ಹಾಗೆಯೇ ಜನಾಂಗಗಳಿಗೂ ಅನುಕೂಲ ಮತ್ತು ಪ್ರತಿಕೂಲ ವಾತಾವರಣವಿದೆ. ಅಂತಹ ವಾತಾವರಣವನ್ನು ಕಟ್ಟಿಕೊಳ್ಳುವುದೂ ಆಯಾ ಜನಾಂಗಗಳಲ್ಲಿದೆ. ಮಹಾಯುದ್ಧದಲ್ಲಿ ಇಂಗ್ಲೀಷರು ಪರದೇಶಗಳಲ್ಲಿ ಜರ್ಮನರ ವಿರೋಧವಾಗಿ ಅನೇಕ ಸುಳ್ಳುಗಳನ್ನು ಹಬ್ಬಿಸಿ ಜರ್ಮನರಿಗೆ ಪ್ರತಿಕೂಲವೂ ತಮಗೆ ಅನುಕೂಲವೂ ಆದ ವಾತಾವರಣವನ್ನು ಕಟ್ಟಿಕೊಂಡರು. ಯುದ್ಧವೆಂದರೆ ಮಿಲಿಯಗಟ್ಲೆ ಖರ್ಚುಮಾಡಿ ಸರ್ವ ಸಂಗ್ರಹವನ್ನು ಮಾಡಿ ಜನರನ್ನು ಕೂಡಿಸಿ ಯುದ್ಧರಂಗಕ್ಕೆ ಕಳುಹಿಸಿ ಯುದ್ಧಮಾಡಿಸಿದರೆ ಸಾಕೆಂದು ಅವರು ತಿಳಿಯಲಿಲ್ಲ. ಲಕ್ಷಾವಧಿ ಜನರು ಫ್ರಾನ್ಸಿನಲ್ಲಿ ಕಾದುತ್ತಿದ್ದಾಗ ಇಂಗ್ಲೀಷರ ಸಾವಿರಾರು ಪ್ರಚಾರಕರು ಇಂಗ್ಲೀಷ ದುಡ್ಡಿನಿಂದ ಇತರ ದೇಶಗಳಲ್ಲಿ ಕೆಲಸಮಾಡಿ ಈ ವಾತಾವರಣವನ್ನು ಕಟ್ಟಿಕೊಂಡರು. ಈ ಸಾಧನೆಯೇ ಯುದ್ಧದಲ್ಲಿ ಇಂಗ್ಲೀಷರಿಗೆ ಜಯವಾಗಲು ಮುಕ್ಕಾಲು ಪಾಲು ಕಾರಣವಾಯಿತು. ಹಾಗೆಯೇ ಹಿಂದೂ ದೇಶದೊಳಗಣ ನಮ್ಮ ಸ್ವರಾಜ್ಯಕ್ಕೆ ನಡಿಸುವ ಈ ಸಾಧನೆಗಳಿಗೆ ಜಗತ್ತಿನಲ್ಲಿ ಅನುಕೂಲ ವಾತಾವರಣವನ್ನು ಕಟ್ಟಿಕೊಳ್ಳುವುದು ಅಗತ್ಯ. ನಮ್ಮಿಂದಲೇ ಸ್ವರಾಜ್ಯ ಸಿಕ್ಕುವುದು, ನಮ್ಮ ಪ್ರಯತ್ನಗಳೇ ಸ್ವರಾಜ್ಯಕ್ಕೆ ಸಾಕು ಎಂಬ ಮಾತುಗಳು ಅಹಂಭಾವದವೂ, ಸಂಸಾರ ಜ್ಞಾನದ ಅಭಾವ ತೋರಿಸುವಂತಹವುಗಳೂ ಆಗಿವೆ.

ಪರದೇಶ ಪ್ರಚಾರದ ಪ್ರಯೋಜನವನ್ನು ನಮ್ಮ ಸರಕಾರವಾದರೂ ಚೆನ್ನಾಗಿ ತಿಳಿದುಕೊಂಡಿದೆ. ಒಂದು ಬಾರಿ ಸರಕಾರವು ತನ್ನ ಖರ್ಚಿನಿಂದ ಮಾನ್ಯ ಶ್ರೀನಿವಾಸ ಶಾಸ್ತ್ರಿಗಳನ್ನು ಸಾಮ್ರಾಜ್ಯದಲ್ಲಿ ಮೆರೆಯಿಸಿ ತಮಗೆ ಅನುಕೂಲವಾದ ಅಭಿಪ್ರಾಯಗಳನ್ನು ಪ್ರಸಂಗಿಸಿದರು; ಅಲ್ಲದೆ ಒಬ್ಬ ಪ್ರೊಫೆಸರನನ್ನು ಅಮೇರಿಕಾ ದೇಶಕ್ಕೆ ಕಳುಹಿಸಿ, ಬ್ರಿಟಿಷ ಸರಕಾರದಿಂದ ಹಿಂದೂಸ್ಥಾನಕ್ಕಾದ ಲಾಭ ಇತ್ಯಾದಿಗಳ ವಿಷಯ ಅಲ್ಲಲ್ಲಿ ಭಾಷಣಗಳನ್ನು ಕೊಡಿಸಿದರು. ಸ್ಥಾಪಿತವಾದ ಸರಕಾರವೇ ಈ ತೆರದಲ್ಲಿ ಪರದೇಶದ ಪ್ರಚಾರದ ಆವಶ್ಯಕತೆಯನ್ನು ಅನುಭವಿಸುವುದಾದರೆ, ದಾಸ್ಯದಲ್ಲಿಯೇ ನರಳುವ ನಾವು ಹೇಗೆ ಭಾವಿಸಬೇಕು?

ಐಯರ್ಲೆಂಡು ಕೂಡ ತನ್ನ ಸ್ವಾತಂತ್ರ್ಯವನ್ನು ಹೊಂದಲಿಕ್ಕಾಗಿ ದೇಶದಲ್ಲಿ ಬಹಳ ಕಷ್ಟ ಪಟ್ಟು ಯುದ್ಧಮಾಡುತ್ತಿದ್ದಾಗ ಎಲ್ಲಾ ವಿದೇಶಗಳಿಗೆ ತಮ್ಮ ವರ್ತಮಾನ, ಧ್ಯೇಯ ಇತ್ಯಾದಿಗಳನ್ನು ಕೊಡುತ್ತಿದ್ದರಲ್ಲದೆ, ಇಂಗ್ಲೀಷರ ಅತ್ಯಾಚಾರಗಳ ಮಾಲೆಯನ್ನು ಎಲ್ಲಾ ದೇಶಗಳಲ್ಲೂ ಪ್ರದರ್ಶಿಸಿ ಇಂಗ್ಲೀಷರನ್ನು ಛಿ ಅನ್ನಿಸಿದ್ದರು. ಇಂಗ್ಲೀಷರಾದರೂ ಈ ಸಮಯದಲ್ಲಿ ಐಯರ್ಲೆಂಡಿಗೆ ಪ್ರತಿಕೂಲವಾದ ಅಭಿಪ್ರಾಯ ಹುಟ್ಟಿಸಲು ಪ್ರಯತ್ನಿಸದೆ ಇರಲಿಲ್ಲ. ಆದರೆ ಐಯರ್ಲೆಂಡಿನ ಸಾಧನೆಯು ಪ್ರಬಲವೂ ಸತ್ಯವೂ ಆಗಿದ್ದುದರಿಂದ ಈ ಪ್ರಯತ್ನಗಳು ಫಲಿಸಲಿಲ್ಲ.

ಈ ಎಲ್ಲಾ ವಸ್ತುಸ್ಥಿತಿಯನ್ನು ತಿಳಿದು ಕಣ್ಣುಮುಚ್ಚಿಕೊಂಡಿರುವುದು ಮೂಢತನ. ದಕ್ಷಿಣ ಆಫ್ರಿಕದ ಮೂಲಕವೂ ಇನ್ನಿತರ ಅನೇಕ ಸಾಧನೆಗಳ ಮೂಲಕವೂ ಹಿಂದೀಯರನ್ನು ಧೂಳಿಗೆಳೆಯಲು ಯತ್ನಗಳು ನಡೆಯುತ್ತಿವೆ. ಈ ಯತ್ನಗಳನ್ನು ಬಯಲಿಗೆ ತಂದು, ಬ್ರಿಟಿಷರ ಔದಾರ್ಯದ ನಿಜತ್ವವನ್ನು ಹೊರಗೆಡಹುವುದು ಅವಶ್ಯಕವಿದೆ.

ಪರದೇಶ ಪ್ರಚಾರವೆಂದರೆ, ಇಂಗ್ಲೆಂಡಿಗೆ ಹೋಗಿ, ನಮ್ಮ ಸುಖದುಃಖಗಳನ್ನು ಹೇಳಿ, ಇಂಗ್ಲೀಷರೊಡನೆ ಸ್ವರಾಜ್ಯವನ್ನು ಬೇಡುವುದೆಂತಲ್ಲ. ಸೈಂಟ್ ನಿಹಾಲ್ ಸಿಂಗರು ಹೇಳಿದಂತೆ ಹಿಂದೀಯರಿಗೆ ಸ್ವರಾಜ್ಯ ಕೊಡುವುದು ಇಂಗ್ಲೀಷ ಔದಾರ್ಯದಲ್ಲಿ ಸಾಧ್ಯವಿಲ್ಲ. ಹಿಂದೀ ಸ್ವರಾಜ್ಯವೆಂದರೆ ಇಂಗ್ಲೀಷರ ಹೊಟ್ಟೆಯ ವಿಷಯ. ಆದರೆ ಅಮೇರಿಕ, ಇಂಗ್ಲೆಂಡ್, ಜರ್ಮನಿ, ಫ್ರಾನ್ಸ್, ರಶ್ಯಾ ಇತ್ಯಾದಿ ದೇಶಗಳಲ್ಲಿ ಹಿಂದೀಯರ ಪ್ರಕೃತದ ದುಸ್ಥಿತಿ ಮತ್ತು ಇಂಗ್ಲೀಷರ ಪ್ರಕೃತದ ರಾಜ್ಯಾಡಳಿತದ ಕ್ರಮ ಇತ್ಯಾದಿಗಳ ವಿಷಯ ನಿಜವಾದ ಚಿತ್ರವನ್ನು ಜನತೆಯ ಮುಂದಿಡುವುದು ಅಗತ್ಯದ ಕೆಲಸ. ಮುಂದಿನ ಕಾಂಗ್ರೆಸ್ಸಿನಲ್ಲಿ ಇದಕ್ಕೆ ಅಗತ್ಯ ಬೀಳುವ ಕಾರ್ಯಕ್ರಮವು ರಚಿಸಲ್ಪಡಬಹುದೆಂದು ನಾವು ಆಶಿಸುವೆವು.

ಮುನ್ಸಿಪಲ್ ಚುನಾವಣೆ.

ಕಳೆದ ತಾ. ೨೮ರಲ್ಲಿ ನಡೆದ ಮುನ್ಸಿಪಲ್ ಚುನಾವಣೆಯಲ್ಲಿ ಸ್ವರಾಜ್ಯ ಪಕ್ಷದ ಕಡೆಯಿಂದ ಉಮೇದುವಾರರಾಗಿದ್ದ ಶ್ರೀಯುತ ಎಮ್. ಮಾಧವರಾಯರು ಆರಿಸಲ್ಪಡಲಿಲ್ಲವೆಂದು ತಿಳಿಯಲು ನಾವು ತುಂಬಾ ವ್ಯಸನಪಡುತ್ತೇವೆ. ಸ್ವರಾಜ್ಯ ಪಕ್ಷವು ದೇಶದ ಇತರ ಭಾಗಗಳಲ್ಲಿ ಇಂತಹ ಚುನಾವಣೆಗಳಲ್ಲಿ ಜಯಶೀಲವಾಗುತ್ತಿರುವಾಗ, ಮಂಗಳೂರಿನಲ್ಲಿ ಸ್ವರಾಜ್ಯ ಪಕ್ಷವು ಸೋಲಿಸಲ್ಪಡುವುದು ಪೌರಜನರಿಗೆ ಅಭಿಮಾನಾಸ್ಪದವಲ್ಲ. ಪರಂತು ಸ್ವರಾಜ್ಯ ಪಕ್ಷೀಯರು ತಮ್ಮ ಕೆಲಸದ ಮೂಲಕ ತಮ್ಮ ಅಸ್ತಿತ್ವವನ್ನು ಜನರೊಳಗೆ ತೋರಿಸಿಕೊಡುವುದು ಅವಶ್ಯಕ. ಅನೇಕರು-"ಸ್ವರಾಜ್ಯ ಪಕ್ಷದವರಾಗಲಿ ಇತರರಾಗಲಿ ಯಾರು ಹೋಗಿ ಮಾಡುವುದೇನು? ಅವರದ್ದು ಗೊತ್ತಿದೆ ಇವರದ್ದು ಗೊತ್ತಿದೆ ಹೀಗೆ ಮೊದಲಾಗಿ ಆಡಿ, ಸ್ನೇಹದಂತೆ ಅಥವಾ ದಾಕ್ಷಿಣ್ಯದಂತೆ ಓಟುಕೊಡುವರು. ಸ್ವರಾಜ್ಯ ಪಕ್ಷದ ಮುನ್ಸಿಪಲ್ ಕೌನ್ಸಿಲರರು ಅಖಂಡ ಕೆಲಸವನ್ನು ಮಾಡಿ, ಜನರ ಪ್ರೀತಿಯನ್ನು ಒಲಿಸಿಕೊಳ್ಳಬೇಕು; ಮತ್ತು, ಆಗಾಗ ತಾವು ಜನೋಪಕಾರ ಕೆಲಸಗಳನ್ನು ಜನತೆಯ ಮುಂದೆ ಜಾಹೀರ ಪಡಿಸಬೇಕು.

ವಿದೇಶ ವರ್ತಮಾನ.

—ಸಿರಿಯಾದಲ್ಲಿ ಮಾರ್ಶಲ್ ಲೋವನ್ನು ಜ್ಯಾರಿಗೆ ತಂದಿದ್ದಾರೆ.

—ಡ್ರೂಸರು ಗುಂಪುಕಟ್ಟಿಕೊಂಡು ಡಮಾಸ್ಕಸ್ ಎಂಬಲ್ಲಿ ಹೋಗಿ ಅಲ್ಲಿಯ ಫ್ರೆಂಚ್ ಆಫೀಸರನ್ನು ಕೊಂದು ಹಾಕಿರುವರು.

—ಡಮಾಸ್ಕಸ್ ಎಂಬಲ್ಲಿ ಫ್ರೆಂಚರು ಬಹಳ ಭಯಂಕರವಾದ ಯುದ್ಧವನ್ನು ಮಾಡುತ್ತಿರುವರು. ಫ್ರೆಂಚರು ಅಲ್ಲಲ್ಲಿ ಮನೆಗಳಿಗೂ ಮತ್ತು ದುಬೆಟಂ ಬಿಲ್ಡಿಂಗುಗಳಿಗೂ ಗುಂಡು ಹಾಕಿ ನಾಶ ಮಾಡುತ್ತಿರುವರು, ಮತ್ತು ರಾಜಪ್ರತಿರೋಧಿಗಳನ್ನು ಕಂಡಕಂಡಲ್ಲಿ ನಾಯಿಗಳ ಹಾಗೆ ಕೊಂದು ಹಾಕುತ್ತಾರೆ. ಡಮಾಸ್ಕಸ್‌ನಲ್ಲಿ ಫ್ರೆಂಚರು ತಕ್ಕ ಭದ್ರತೆಯನ್ನು ಮಾಡಿಕೊಳ್ಳುವ ಬಗ್ಗೆ ಮಾರ್ಶಲ್ಲೋವನ್ನು ಜ್ಯಾರಿಗೆ ತಂದಿರುವರು.

—ಇದೇ ತಿಂಗಳ ತಾ. ೨೩ಕ್ಕೆ ಪಶ್ಚಿಮ ಯುರೋಪಿನಲ್ಲಿ ಒಂದು ಭಯಂಕರವಾದ ಬಿರುಗಾಳಿಯು ಸಮ್ಮಂಧ ಬಲವಾದ ಮಳೆಯು ಇಂಗ್ಲೆಂಡ್ ಮತ್ತು ಫ್ರಾನ್ಸಿನಲ್ಲಿ ಬಂದು ಟೆಲಿಗ್ರಾಫ್ ಮತ್ತು ಟೆಲಿಫೋನ ತಂತಿಗಳು ನಾಶವಾಗಿವೆ. ಕೋಲೀಜನ್‌ಲಂಡನ್ ಮತ್ತು ಪೆರಿಸ್‌ಲಂಡನ ವೈಲು ಟಪ್ಪಾಲುಗಳನ್ನು ಕೊಂಡುಹೋಗುತ್ತಿದ್ದ ವಿಮಾನಗಳು, ಗಾಳಿಯು ವೇಗವು ಮಿತಿಮೀರಿದ್ದರೂ ಕೂಡ ಕ್ರೊಯಿಡೋನ್ ಎಂಬಲ್ಲಿ ಸುರಕ್ಷಿತವಾಗಿ ಇಳಿದಿವೆ. ಫ್ರಾನ್ಸಿನಲ್ಲಿ ಎರಡು ವಿಮಾನಗಳು ಬಿರುಗಾಳಿಯ ಎಡೆಗೆ ಸಿಕ್ಕಿ ಹಾಳಾಗಿ ಭೂಮಿಯ ಮೇಲೆ ಬಿದ್ದು ನಾಶವಾಗಿಯವೆ. ಅನೇಕ ಜನರು ಕೂಡ ಸತ್ತಿರುವರು.

—ಇಂಗ್ಲೆಂಡಿನಲ್ಲಿ ಇನ್ನು ಮುಂದೆ ವಾಯರ್‌ಲೆಸ್ ಟೆಲಿಗ್ರಾಫನ್ನು ಯಾರಾದರೂ ತಮ್ಮ ಮನೆಗಳಿಗೆ ಇಟ್ಟುಕೊಳ್ಳುವುದಾದರೆ ಲೈಸನ್ಸನ್ನು ತೆಗೆದುಕೊಳ್ಳಬೇಕೆಂಬ ರೂಲನ್ನು ಜ್ಯಾರಿಗೆ ತಂದಿರುವರು.

—ಸ್ಪೈನ್‌ನವರ ಒಂದು ಎರೋಪ್ಲೇನು ರೀಫ್‌ಹಳ್ಳಿಗಳ ಮೇಲೆ ಬೊಂಬುಗಳನ್ನು ಹಾರಿಸುತ್ತಿರುವಾಗ್ಗೆ ಬೊಂಬಿನ ಪೆಟ್ಟು ಅದಕ್ಕೆನೆ ತಾಗಿ ಸುಟ್ಟು ಕೆಳಕ್ಕೆ ಬಿದ್ದಿರುವುದು.

—ಅಬ್ದುಲ್‌ಕರೀಮನು ತಕರಾರುಮಾಡುವ ಬಗ್ಗೆ ಎರಡು ಜನ ಯುರೋಪಿಯನರು ಮತ್ತು ತನ್ನ ಇತರ ಸಂಗಡದವರ ಕೂಡೆ ಟೇನ್‌ಜಯರಿಗೆ ಹೋಗಿರುವನು ಎಂದು ಪ್ರಕಟವಾದ ವಾರ್ತೆಯು ನಿರಾಧಾರವಾಗಿದೆ ಎಂದು ತಿಳಿದುಬಂದಿದೆ.

—ಜರ್ಮನರ ಕೆಬಿನೆಟಿನಲ್ಲಿ ಮೂರು ಮಂದಿ ಮಂತ್ರಿಗಳು ತಮ್ಮ ಹುದ್ದೆಗೆ ರಾಜಿನಾಮೆ ಕೊಟ್ಟಿರುವರು. ಲೋಕಾರ್ನೋ ಸಂಧಿಯ ಮೇಲೆ ಜರ್ಮನ ಪಾರ್ಲಿಮೆಂಟಿನಲ್ಲಿ ಬಹುಮತವಿಲ್ಲದ್ದರಿಂದ ಸರಕಾರವು ಅದನ್ನು ರದ್ದು ಮಾಡಿ ಹೊಸ ಚುನಾವಣೆಯಾಗುವುದು.

—ಅಮೇರಿಕಾದಲ್ಲಿ ಕೂಡ ಒಂದು ಬಿರುಗಾಳಿಯು ಬಂದು ಹಲವು ಮನೆಗಳೂ, ಮತ್ತು ಮನೆಮಾಡುಗಳೂ ಹಾಳಾಗಿವೆ. ನೀರಿನಲ್ಲಿ ಓಡುವ ೬ ಎರೋಪ್ಲೇನುಗಳು ಒಡೆದು ಹೋಗಿವೆ. ಮತ್ತು ೧೯ ಜನರು ಮೃತಪಟ್ಟಿರುವರು. ಅನೇಕ ಹಡಗುಗಳು ಧಕ್ಕೆಯಲ್ಲಿಯೇ ಹಾಳಾಗಿಹೋಗಿವೆ.

—ಬಲ್‌ಗೇರಿಯಾದಲ್ಲಿ ರಾಜಮನತನದ ಮೇಲೆ ನಡೆದ ಒಳಸಂಚಿನ ಕಾರಣದಿಂದ ಜ್ಯಾರಿಯಲ್ಲಿದ್ದ ಮಾರ್ಶಲ್ಲೋವನ್ನು ರದ್ದು ಮಾಡಿದರು.

—ಜರ್ಮನ್ ದೇಶದ ಪ್ರೆಸಿಡೆಂಟರಾದ ವಾನ್‌ಹಿಂಡನ್ ಬರ್ಗರವರು ತಮ್ಮ ಜನ್ಮದಿವಸ ಕಾಲದಲ್ಲಿ ಬಾವುಟಗಳನ್ನು ಮಾತ್ರ ಏರಿಸಬೇಕೆಂದೂ, ಬೇರೆ ಯಾವ ವಿಧವಾದ ದುಂದುವೆಚ್ಚವನ್ನೂ ಮಾಡಕೂಡದೆಂದು ಆಜ್ಞಾಪಿಸಿರುವರು.

—ಟೋಕಿಯೋದಲ್ಲಿ ಒಂದೇಸಮನಾಗಿ ೩೦ ಘಂಟೆಗಳ ವರೆಗೆ ಮಳೆಯಾಗಿ ಬಹಳ ಮನೆಗಳು ತೇಲಿಹೋಗಿರುವವು.

—ಭೋಪಾಳದ ಬೇಗಮ್ ಸಾಹೇಬರಿಗೆ ಜಾರ್ಜ್‌ಪ್ರಭುಗಳು ಪತ್ನಿ ಸಮೇತ ಸಂದರ್ಶವನ್ನಿತ್ತರು.

—ಮಾಜಿ ಮುಸ್ತಫಾ ಕೆಮಲ್ ಪಾಷಾಯವರು ತಮ್ಮ ಅಧಿಕಾರಿಗಳೆಲ್ಲಾ ಪಾಶ್ಚಿಮಾತ್ಯ ಮಾದರಿಯ ಉಡುಪನ್ನೇ ಧರಿಸಬೇಕೆಂದು ಆಜ್ಞೆ ಮಾಡಿರುವರು.

—ಉಣ್ಣೆಯದಾರವು ಕುರಿ ಮೊದಲಾದ ಪ್ರಾಣಿಗಳ ತುಪಟದಿಂದ ಮಾಡಲ್ಪಡುವುದಷ್ಟೆ. ಆದರೆ ಈಗ ಶೇಕಡ ೬೦ರಷ್ಟು ಬೂತಾಳೆನಾರಿನೊಂದಿಗೆ ೩೦ರಷ್ಟು ರೇಶ್ಮೆ ಜೋಟನ್ನು ಮಿಶ್ರಮಾಡಿ ಉಣ್ಣೆಯನ್ನು ನಿರ್ಮಿಸಲು ಪಾಶ್ಚಾತ್ಯ ಕಂಪೆನಿಯೊಂದು ಪ್ರಯತ್ನಿಸಿರುವುದು. ಈ ಕೃತಕ ಉಣ್ಣೆಯು ಪ್ರಾಣಿತುಪಟದಂತೆ ಮೃದುವಾಗಿಯೂ, ಗಟ್ಟಿಯಾಗಿಯೂ ಅದರ ಬೆಲೆಯಲ್ಲಿ ಮುಕ್ಕಾಲರಷ್ಟು ಮಾತ್ರ ಬಾಳುವುದಾಗಿಯೂ ಭಾವಿಸಲ್ಪಟ್ಟಿರುತ್ತದೆ.

—ನಿದ್ರೆ ಬಾರದಿದ್ದರೆ ಅಫೀಮಿಶ್ರಿತ ಔಷಧಿಯನ್ನು ಕೊಡುವ ಪದ್ಧತಿಯು ಅಪಾಯಕರವಾದ್ದರಿಂದ ಈಗ್ಗೆ ಒಂದು ಯಂತ್ರವು ಸಿದ್ಧವಾಗಿದೆ. ಇದನ್ನು ರೋಗಿಯು ತನ್ನ ಹಾಸಿಗೆಯ ಬಳಿಯಲ್ಲಿರಿಸಿ, ಆ ಯಂತ್ರಕ್ಕೆ ಜೋಡಿಸಿದ, ದಾರದಲ್ಲಿಯ ಗುಂಡಿಯನ್ನು ಒತ್ತ ಹತ್ತಬೇಕು. ಅಷ್ಟರಿಂದ ಪ್ರತಿ ಕ್ಷಣದಲ್ಲಿಯೂ ಬೇರೆ ಬೇರೆ ದಿಕ್ಕುಗಳಿಂದ ನಾನಾ ಬಗೆಯ ಬಣ್ಣಗಳ ಪ್ರಕಾಶವು ಬಹು ಶಾಂತವಾಗಿ ಕಣ್ಣುಗಳ ಮೇಲೆ ಬಿದ್ದು ಇದರಿಂದ ೧೦ ಮಿನಿಟುಗಳ ನಿದ್ರೆ ಹತ್ತದಂತ ಎಂತಹ ಎಚ್ಚರ ಮನುಷ್ಯನಿದ್ದರೂ, ನಿದ್ರೆ ಹೋಗುವನು.

—ಫ್ರೆಂಚ್ ಕೆಬಿನೆಟ್ಟಿನಲ್ಲಿ ಎಮ್. ಕೆಯ್ಲೊಯವರ ಆರ್ಥಿಕ ವ್ಯವಸ್ಥೆಗಳ ವಿಷಯ ಭಿನ್ನಾಭಿಪ್ರಾಯ ಬಂದು, ಎಮ್. ಕೆಯ್ಲೊಯವರು ರಾಜೀನಾಮೆ ಕೊಡಲು ಸಮ್ಮತಿಸದರಿಂದ, ಫ್ರೆಂಚಸರಕಾರವು ತನ್ನ ರಾಜೀನಾಮೆ ಕೊಟ್ಟಿತು.

—ಲಂಡನಿನ ಬಿಶೋಪರು ಕೊರಿಯಾ, ಕೋಬ್, ಸಿಂಗಪೂರ ಪ್ರಾಂತಗಳನ್ನು ಸಂಚರಿಸಿ ಕೊಲೊಂಬಿಗೆ ಬರುವವರಾಗಿರುವರು.

—ಇಂಗ್ಲೆಂಡಿನಲ್ಲಿ ಕಳೆದ ಮೂರು ವಾರಗಳಲ್ಲಿ ನಿರುದ್ಯೋಗಿಗಳಾದ ಕೂಲಿಕಾರರ ಸಂಖ್ಯೆಯು ೯೯,೦೦೦ ತಗ್ಗಿಯದೆ. ಈಗ ನಿರುದ್ಯೋಗಿಗಳ ಸಂಖ್ಯೆಯು ೧೨,೩೪,೦೦೦ ನಷ್ಟು ಇದೆ.

—ಬಿಗುಸ್ಸ್ಪದ ತಂಘಾದಲ್ಲಿ ನಡೆದ ಸಂತೆಯಲ್ಲಿ ಬೆಂಕಿ ತಗಲಿ ಬಹಳ ಹಾನಿಯುಂಟಾಯಿತು. ೫೦ ಲಕ್ಷ ಜನರು ನೆರೆದಿದ್ದರಿಂದ, ಜನರ ಗಲಿಬಿಲಿಯಲ್ಲಿ ೨೫ ಹುಡುಗರು, ೮ ಹುಡುಗಿಯರು, ೧೧ ಮನುಷ್ಯರು ೧೦ ಸ್ತ್ರೀಯರು ಕಾಲಡಿಯಲ್ಲಿ ಬಿದ್ದು ಸತ್ತರು.

ಒಳದೇಶ ವರ್ತಮಾನ.

—ಸ್ವರಾಜ್ಯ ಪಾರ್ಟಿಯ ಪ್ರೆಸಿಡೆಂಟರಾದ ಎಸ್. ಶ್ರೀನಿವಾಸ ಐಯ್ಯಂಗಾರರವರು ತಿರ್ಪೂರಿಗೆ ಹೋಗಿ ಅಲ್ಲಿ ಒಂದು ಸ್ವರಾಜ್ಯಪಾರ್ಟಿಯನ್ನು ಮಾಡಿದ್ದಾರೆ. ಅವರು ಇತ್ತಲಾಗೆ ಅನೇಕ ಕಡೆಗಳಿಗೆ ಹೋಗಿ ಅಲ್ಲಲ್ಲಿ ಸ್ವರಾಜ್ಯಪಾರ್ಟಿಯನ್ನು ಕೂಡಿಸುವರು. ಇತ್ತಲಾಗೆ ಇವರು ನಮ್ಮ ಜಿಲ್ಲೆಗೂ ಬಂದು ಒಂದು ಪಾರ್ಟಿಯನ್ನು ಸ್ಥಾಪಿಸಿದ್ದರು. ಆದರೆ ಆ ಪಾರ್ಟಿಯು ಎಷ್ಟರ ಮಟ್ಟಿಗೆ ಕೆಲಸಮಾಡುತ್ತದೆ ಎಂಬುದು ನಮ್ಮ ಗೋಚರಕ್ಕೇ ಇಲ್ಲ.

—ರಂಗೂನಿನ "ದೇಶೋಪಕಾರಿ" ಎಂಬ ತಮಿಳು ವಾರಪತ್ರಿಕೆಯ ಸಂಪಾದಕರಿಗೆ ಕೆಲವು ಆಕ್ಷೇಪಪೂರ್ಣ ಲೇಖನಗಳನ್ನು ಪ್ರಕಟಿಸಿದಕ್ಕಾಗಿ ಒಂದು ವರುಷ ಮೂರು ತಿಂಗಳ ಸಾದಾ ಶಿಕ್ಷೆಯನ್ನು ವಿಧಿಸಿರುವರು.

—ಶ್ರೀಯುತ ಶ್ರೀನಿವಾಸ ಶೌಜಲಗಿಯವರ ದೇಹಾರೋಗ್ಯವನ್ನು ಡಾಕ್ಟರ್ ಇರ್ಕಿಕರ್ ಪರೀಕ್ಷಿಸಿ ನೋಡಿದಲ್ಲಿ ಇವರಿಗೆ ಸನ್ನಿಪಾತ ಜ್ವರವೆಂದು ಕಂಡು ಬಂತು. ಮೂರು ನಾಲ್ಕು ದಿವಸಗಳ ಹಿಂದೆ ಇವರಿಗೆ ೧೦೧ರಿಂದ ೧೦೪ ಡಿಗ್ರಿಯ ವರೆಗೆ ಜ್ವರ ಬಂದಿತ್ತು. ಇವರ ಎದೆ ಮತ್ತು ಶ್ವಾಸಕೋಶಗಳು ಒಳ್ಳೇ ಸ್ಥಿತಿಯಲ್ಲಿದ್ದಾವೆಂದೂ ಮತ್ತು ಅವರಿಗೆ ಶರೀರದಲ್ಲಿ ವಿಶೇಷವಾಗಿ ನಿಶ್ಶಕ್ತಿಯಿರುವುದರಿಂದ ಸ್ವಲ್ಪ ಮಟ್ಟಿಗೆ ಭಯಪಡಬೇಕಾಗಿದೆ ಎಂದು ತಿಳಿಸಿರುತ್ತಾರೆ.

—ಯು. ಪಿ. ಟ್ರೈನ್ ಡೇಕೋಯಿಟಿ ಸಮ್ಮಂಧ ಕೈದುಮಾಡಲ್ಪಟ್ಟ ಇಬ್ಬರು ಸ್ವರಾಜಿಸ್ಟರನ್ನು ಜಾಮೀನಿನ ಮೇಲೆ ಬಿಟ್ಟಿರುವರು.

—ಸದ್ಯದಲ್ಲಿ ಹೋಗಲಿಕ್ಕಿರುವ ನಮ್ಮ ವ್ಯಾಸರಾಯರ ಬದಲಾಗಿ ಎಡ್ವರ್ಡ್ ಉಡ್ ಎಗ್ರಿಕಲ್ಚರ್ ಮಂತ್ರಿ ಇವರನ್ನು ನೇಮಕ ಮಾಡ್ಯಾರೆಂದು ತಿಳಿದುಬರುತ್ತದೆ.

—ಸದ್ಯದಲ್ಲಿ ಹೋನರೇಬಲ್ ವಿ. ಜೆ. ಪಟೇಲರು ಸುರಾಟಿಗೆ ಹೋಗಲಿಕ್ಕಿರುವರು. ಆ ಸಮಯದಲ್ಲಿ ಅಲ್ಲಿಯ ಮುನ್ಸಿಪಾಲಿಟಿಯವರು ಅವರಿಗೆ ಒಂದು ಮಾನಪತ್ರವನ್ನು ಕೊಡಲು ನಿಶ್ಚಯಿಸಿದ್ದಾರೆ.

—ಇತ್ತಲಾಗೆ ಜೋದಪುರದ ಮಹಾರಾಜರು ತಮ್ಮ ಇಂಗ್ಲೆಂಡಿನ ಪ್ರಯಾಣವನ್ನು ಬಹು ಆಯಾಸದಿಂದ ಮುಗಿಸಿ ಹಿಂತಿರುಗಿ ಬಂದಿರುವರು. ಇವರು ಸುಮಾರು ಮೂರುಲಕ್ಷದ ವರೆಗೆ ತಮ್ಮ ಹಣವನ್ನು ಮೋಟಾರು ಕಾರುಗಳಿಗೆ ಮಾತ್ರ ವೆಚ್ಚಮಾಡಿದ್ದಾರೆಂದೂ ಮತ್ತು ಇದರ ಸಂರಕ್ಷಣೆಯ ಬಗ್ಗೆ ವರ್ಷಕ್ಕೆ ಇನ್ನೊಂದು ಮೂರು ಲಕ್ಷ ರೂಪಾಯಿ ವೆಚ್ಚವಾಗುವ ಮೋಟಾರುಕಾರುಗಳ ಬಗ್ಗೆ ಒಂದು ಗ್ಯಾರೇಜನ್ನು ಮಾಡಿಸಿರುವರು. ಸ್ಟೇಟ್ಸಿನಲ್ಲಿ ಮುಖ್ಯವಾದ ವಿದ್ಯಾ ಇಲಾಖೆಗೆ ಬರೇ ಎರಡು ಲಕ್ಷ ರೂಪಾಯಿ ಖರ್ಚು ಮಾಡುತ್ತಿದೆ. ಮತ್ತು ಪೋಲಿಸ್ ಮಿಲಿಟರಿ ಇಲಾಖೆಗೆ ೧೯ಲಕ್ಷವು. ಸಿವಿಲ್ ಖಾತೆಗೆ ೧೩ಲಕ್ಷ ರೂಪಾಯಿಯನ್ನು ವೆಚ್ಚ ಮಾಡುತ್ತಾರೆ. ಆದರೆ ಮುಖ್ಯವಾದ ವಿದ್ಯಾಇಲಾಖೆಗೆ ಮೋಟಾರ್ ಇಲಾಖೆಗಿಂತ ಒಂದುಲಕ್ಷರೂಪಾಯಿ ಕಮ್ಮಿ ವೆಚ್ಚಮಾಡುವದು ತುಂಬಾ ಶೋಚನಿಯ ಇವರು ಇಂಗ್ಲೆಂಡಿನಿಂದ ಮರಳಿ ಬಂದಿರುವಾಗ್ಗೆ ಮುಂಬಾಯಿಯ ಮಹತ್ವಾದ ಮಾರವಾಡಿಗಳು ಇವರಿಗೆ ಒಂದು ಮಾನಪತ್ರವನ್ನು ಕೊಡಬೇಕೆಂದು ನಿರ್ಧಯಿಸಿದ್ದರು. ಆದರೆ ಮಹಾರಾಜರು ಅದನ್ನು ತುಚ್ಛೀಕಾರದಿಂದ ನಿರಾಕರಿಸಿದರು.

—ನಮ್ಮ ವ್ಯಾಸರಾಯರಾದ ಲೋರ್ಡ ರೆಡಿಂಗರು ಮತ್ತು ಲೇಡಿ ರೇಡಿಂಗರವರು ತಾ. ೨೪ಕ್ಕೆ ಕಲಕತ್ತೆಗೆ ಬಂದು ಅಲ್ಲಿಂದ ಮೋಟಾರಿನಲ್ಲಿ ಬೆಲ್ವಿಡೋರಿಗೆ ಹೋಗಿರುವರು.

—ಮದ್ರಾಸಿನ ಪೋಲಿಸ್ ಕಮಿಶನರಾದ ಹೆಮಿಲ್‌ಟನ್‌ರವರ ಬದಲಿಗೆ ಎಚ್. ಎಫ್. ಟ್ರೆವರ್ಸ್ನರ ಎಂಬವರು ನೇಮಕ ಹೊಂದಿರುವರು.

—ಕರಾಚಿಯಲ್ಲಿ ವಿಶೇಷವಾದ ಬಿರುಗಾಳಿಯ ಸಮ್ಮಂದ ೬೦೦ ಜನರು ಮೃತಪಟ್ಟಿರುವರು. ಮತ್ತು ೨೦೦ ಬೋಟುಗಳು ಮುಳುಗಿ ಹೋಗಿದ್ದಾವೆ.

—ಲಕ್ನೋದಲ್ಲಿಯ ಪೂಡಾ ಎಂಬಲ್ಲಿ ೬೦ ಡಕಾಯಿತರನ್ನು ಸೆರೆ ಹಿಡಿದಿರುವರು. ಮತ್ತು ಅವರ ಹತ್ತಿರ ಹೆಚ್ಚಿನ ಚಿನ್ನಾಭರಣಗಳೂ ಮತ್ತು ಸ್ವಲ್ಪ ಹಣವೂ, ಖಡ್ಗಗಳೂ, ಕೋವಿಗಳೂ ಇವೇ ಮುಂತಾದುವುಗಳು ಸಿಕ್ಕಿರುತ್ತವೆ. ಈ ಡಕಾಯಿತರು ಈಚೆಗೆ ಪೂಡಾದಲ್ಲಿ ೯೬ ಡಕಾಯಿಟಿಯನ್ನು ಮಾಡಿರುವರು.

—ಲಕ್ನೋ ಡಿಸ್ಟ್ರಿಕ್ಟ್ ಬೋರ್ಡಿನ ಪ್ರೆಸಿಡೆಂಟರು ಅಲ್ಲಿಂದ ಪರಾರಿಯಾಗಿ ಹೋಗಿದ್ದರು. ಮತ್ತು ತಮ್ಮ ಹುದ್ದೆಗೆ ಕೋಹತಿನಿಂದ ರಾಜಿನಾಮೆಯನ್ನು ಕಳುಹಿಸಿಕೊಟ್ಟಿದ್ದರು. ಅದಕ್ಕಾಗಿ ಇವರನ್ನ ಕೈದು ಮಾಡುವರೆ ವಾರಂಟನ್ನು ಜಾರಿ ಮಾಡಿರುವರು.

—ಮಹಾತ್ಮಾ ಗಾಂಧಿಯವರು ಕಚ್ಚಿಗೆ ಹೋಗಿ ಅಲ್ಲಿ ದೇಶಬಂಧು ದಾಸರ ಸ್ಮಾರಕ ಫಂಡಿಗೆ ರೂ. ೧೧,೦೦೦ನ್ನೂ ಮತ್ತು ರೂ. ೨೫೦೦ನ್ನು ಗೋವಧ ಫಂಡಿಗೂ ಕೂಡಿಸಿರುವರು.

—ಮಹಾತ್ಮಾ ಗಾಂಧಿಯವರಿಗೆ ಕಚ್ಚಿನಲ್ಲಿ ಒಂದು ಮಹಾ ಸಭೆಯನ್ನು ಕೂಡಿಸಿ ಬೆಳ್ಳಿಯ ಸಂಪುಟದಲ್ಲಿ ಮಾನಪತ್ರವನ್ನು ಅರ್ಪಿಸಿದ್ದರು. ಈ ಸಭೆಗೆ ಹೆಚ್ಚಾಗಿ ಪಂಚಮರು ಹಾಜರಿದ್ದರು. ಸಭೆಯ ಮುಖಂಡರು ಇವರನ್ನು ಸಭೆ ನೆರೆದಿದ್ದ ಬೇರೆ ಕಡೆಯಲ್ಲಿ ಕೂತುಕೊಳ್ಳಲಿಕ್ಕೆ ಒಂದು ಸ್ಥಳವನ್ನು ನಿಂಗಡಿಸಿದ್ದರು. ಇದನ್ನು ಮಹಾತ್ಮಾ ಗಾಂಧಿಯವರು ಕಂಡು ಈ ಸಭೆಯಲ್ಲಿ ಪಂಚಮರು ಮತ್ತು ಇತರರು ಏನೂ ಭೇದವಿಲ್ಲದೆ ಕೂತುಕೊಳ್ಳಬೇಕೆಂದು ಒತ್ತಾಯದಿಂದ ಹೇಳಿದರು. ಮತ್ತು ಇದಕ್ಕೆ ಯಾರಿಗಾದರೂ ಸಮ್ಮತವಿಲ್ಲದಿದ್ದರೆ ತಾನು ಇವತ್ತಿಗೆ ಕಚ್ಚಿನ ಪ್ರಯಾಣವನ್ನು ಮುಗಿಸಿ ಹೋಗುವನೆಂದು ತಿಳಿಸಿದರು. ಸಭೆಯಲ್ಲಿ ನೆರೆದಿದ್ದ ಅರ್ಧ ಸಭಿಕರಿಗೆ ಇದು ಸಮ್ಮತವಿರಲಿಲ್ಲ. ಆದರೂ ಗಾಂಧಿಯವರು ಇದನ್ನು ಕಂಡು ಕೂಡಲೆ ತಾನು ಕೂತುಕೊಂಡಿರುವ ಸ್ಥಳದಲ್ಲಿರುವ ಮೇಜನ್ನು ಮತ್ತು ಆಸನವನ್ನು ಪಂಚಮರು ಕೂಡಿದ ಸ್ಥಳದಲ್ಲಿ ಇಡುವರೆ ಹೇಳಿದರು.

—ಕೈಬರ್‌ಪಾಸ್ ರೈಲ್ವೆಯ ಲ್ಯಾನನ್ನು ನವಂಬರ ತಾ. ೩ಕ್ಕೆ ತೆರೆಯುವರು.

—ಮುಂಬಾಯಿ ಗಿರಣಿಯಾಳುಗಳ ಬಗ್ಗೆ ಆಲ್ ಇಂಡಿಯಾ ಟ್ರೇಡ್ ಯೂನಿಯನಿನ ಪ್ರೆಸಿಡೆಂಟರಾದ ಸಿ. ಎಫ್. ಎಂಡ್ರೂಸರೂ ಅವರಿಗೆ ತಕ್ಕ ಸಹಾಯವನ್ನೀಯುವರೆ ವಿನಂತಿ ಮಾಡಿಕೊಂಡಿರುವರು. ಹೊಟ್ಟೆಗಿಲ್ಲದೆ ನರಳುತ್ತಿದ್ದ ಸುಮಾರು ನೂರು ಗಿರಣಿ ಯಾಳುಗಳಿಗೆ ಅಕ್ಕಿಯನ್ನು ಧರ್ಮಾರ್ಥವಾಗಿ ಹಂಚಿರುವರು.

—ಮದ್ರಾಸಿನ ಪೂನಮಲ್ಲಿ ಹ್ಯಾರೋಡಿನಲ್ಲಿ ಒಬ್ಬ ಬ್ರಾಹ್ಮಣನ ಅಂಗಡಿಗೆ "ಪಂಚಮಾಸ್ ಪ್ರೊಹಿಬಿಟೆಡ್" ಎಂಬ ಬೋರ್ಡನ್ನು ತಾಗಿಸಿದನು. ಇದು ಪಂಚಮರಿಗೆ ಅಪಮಾನಕರವಾದುದೆಂದು ರಾವ್‌ಸಾಹೇಬ ಆರ್. ಶ್ರೀನಿವಾಸನ್ ಎಮ್| ಎಲ್| ಸಿ ಇವರು ಪೋಲಿಸ್ ಸುಪರಿಂಟೆಂಡೆಂಟರಿಗೆ ತಿಳಿಸಿದ್ದರು. ಅಂಗಡಿಗೆ ತಾಗಿಸಿದ ಬೋರ್ಡನ್ನು ಪೋಲಿಸರು ತೆಗೆಸಿರುವರು.

—ಅಂಕೋಲಾದಲ್ಲಿ ಹಿಂದುಗಳು ಒಂದು ಶವವನ್ನು ವಾದ್ಯವಾಲಗ ಘಂಡೆಯೊಡನೆ ಸ್ಮಶಾನಕ್ಕೆ ಒಯ್ಯುತ್ತಿರುವಾಗ್ಗೆ ಹಿಂದೂ ಮಹಮ್ಮದೀಯರೊಳಗೆ ಒಂದು ಜಗಳವುಂಟಾಗಿ ಮೂರು ಜನ ಹಿಂದುಯರಿಗೂ ಮತ್ತು ಒಬ್ಬ ಮಹಮ್ಮದೀಯನಿಗೂ ಜಖಂ ಉಂಟಾಗಿದೆ. ಇಷ್ಟರಲ್ಲಿಯೇ ಪೋಲಿಸರು ಬಂದು ಜಗಳವನ್ನು ಶಾಂತತೆಗೆ ತಂದರು.

—ಕಲ್ಕತ್ತಾದಲ್ಲಿ ನಾರಿನ ಗಿರಣಿಯಲ್ಲಿ ಸುಮಾರು ೮೦೦ ಮಂದಿ ನೂಲುವವರು ಕೆಲಸಕ್ಕೆ ಬಾರದೆ ಮುಷ್ಕರ ಹಾಕಿರುವರು. ವರ್ಷಂಪ್ರತಿ ಕೂಲಿಗಳಿಗೆ ಕೊಡುವ ಬೋನಸ್ಸನ್ನು ಕೊಡದೆ ಇದ್ದ ಕಾರಣ ಈ ಮುಷ್ಕರವನ್ನು ಹಾಕಿರುವರು.

—ಮದ್ರಾಸ್ ಕೌನ್ಸಿಲಿನ ದಕ್ಷಂಬರ ಅಧಿವೇಶನವನ್ನು ಕೌನ್ಸಿಲಿನ ಅಧ್ಯಕ್ಷಸ್ಥಾನಕ್ಕೆ ಹೊಸದಾಗಿಚುನಾಯಿಸಲ್ಪಟ್ಟರತ್ನ ಸ್ವಾಮಿಯವರಿಂದ ತೆರೆಯಲ್ಪಟ್ಟಿತು.

—ಡಾಕ್ಟರ್ ಯು| ರಾಮರಾಯರು ಮದ್ರಾಸ್ ಕೌನ್ಸಿಲಿನ ಮುಂದೆ ಹಲವು ಕರ್ನಾಟಕ ಮುಖಂಡರಿಂದ ಬೆಳ್ಳಾರಿಯನ್ನು ಆಂಧ್ರ ವಿಶ್ವವಿದ್ಯಾಲಯಕ್ಕೆ ಸೇರಿಸಬಾರದಾಗಿ ದಸ್ಕತು ಮಾಡಲ್ಪಟ್ಟ ಅರ್ಜಿಯನ್ನು ಕೌನ್ಸಿಲಿನ ಮುಂದೆ ತಂದಿರುವರು.

—ಕಾನ್‌ಪುರದಲ್ಲಿ ನಡೆಯಲಿಕ್ಕಿರುವ ಅಲ್ ಇಂಡಿಯಾ ಕಾಂಗ್ರೆಸಿನ ಪ್ರೆಸಿಡೆಂಟರಾದ ಸರೋಜಿನಿ ದೇವಿಯವರು ಲಾಹೋರಿನಲ್ಲಿ ತಮ್ಮ ಭಾಷಣಗಳನ್ನು ಮುಗಿಸಿ ಅಲ್ಲಿಂದ ಪೇಶಾವರಕ್ಕೆ ಹೋಗುವರು.

—ಸಿವನ್ನಾದಲ್ಲಿ ತಾ. ೨೬ಕ್ಕೆ ಸುಮಾರು ಅರ್ಧ ಘಂಟೆ ಸಮಯದ ವರೆಗೆ ಬಲವಾದ ಹೆಗ್ಗಾಳಿಯು ಬಂದಿತ್ತು.

—ಬಾಪಟಾಚಾರಿಯ ಮೊಕದ್ದಮೆಯಲ್ಲಿ ಫಾಸಿ ಶಿಕ್ಷೆಯನ್ನು ವಿಧಿಸಿದವರ ಕಡೆಯಿಂದ ಪ್ರಿವಿಕೌನ್ಸಿಲಿಗೆ ಮಾಡಿರುವ ಅಪೀಲನ್ನು ತಾ. ೨೬ಕ್ಕೆ ಲಂಡನಿನಲ್ಲಿ ತೆಗೆದು ಹಾಕಿರುವರು.

—ಕಲಕತ್ತೆಯಲ್ಲಿ ದೀಪಾವಳಿ ಹಬ್ಬದ ಮಹೋತ್ಸವದ ಸಮಯ ಮದ್ದು ಹಾರಿಸುತ್ತಿದ್ದಾಗ ೪ ಮಂದಿಗಳಿಗೆ ಘಾಯಗಳಾದವು. ಮೂವರು ಆಸ್ಪತ್ರೆಯಲ್ಲಿ ಸತ್ತರು.

—ಅಖಿಲ ಭಾರತೀಯ ದೇಶಬಂಧು ದಾಸರ ಸ್ಮಾರಕ ನಿಧಿಗೆ ೪೦ಸಾವಿರ ರೂಪಾಯಿ ಒಟ್ಟಾಗಿದೆ.

—ಕೋಹತದ ನೆರೆಹೊರೆಯಲ್ಲಿ ವಿಮಾನವು ಹಾರ್‍ಯಾಡುತ್ತಿರುವಾಗ ಥಕ್ಕನೆ ನೆಲಕ್ಕಪ್ಪಳಿಸಿ ಲೆ|| ಹೊಗಬೇನ ಎಂಬ ವೈಮಾನಿಕರು ಕಾಲವಶರಾದರು.

ದಕ್ಷಿಣ ಕನ್ನಡ.

ಧರ್ಮಸ್ಥಳ:— ಶ್ರೀ ಧರ್ಮಸ್ಥಳ ಮಂಜುನಾಥ ದೇವರ ಸನ್ನಿಧಿಯಲ್ಲಿ ವರ್ಷಂಪ್ರತಿ ನಡೆಯುವ ದೀಪಾವಳಿ ಮಹೋತ್ಸವವು ಇದೇ ಬರುವ ನವಂಬರ ತಾ. ೧೧ನೇ ಬುಧವಾರ ಪ್ರಾರಂಭವಾಗಿ ಅದೇ ತಾ. ೧೫ನೇ ಆದಿತ್ಯವಾರ ದಿವಸ ದೊಡ್ಡ ದೀಪೋತ್ಸವದೊಡನೆ ಅಖೈರಿ ಹೊಂದುವುದು.

ಮೂಡಬಿದ್ರೆ:— ಸೆಂಟರಿನ ಉಪಾಧ್ಯಾಯರ ಎರಡನೇ ಸಭೆಯು ಇದೇ ತಿಂಗಳ ತಾ. ೨೪ನೇ ಶನಿವಾರ ಕಲ್ಲಬೆಟ್ಟು ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ಜರಗಿತು. ಮುಖ್ಯ ಉಪಾಧ್ಯಾಯರು ಶಾಲಾ ವರದಿಯನ್ನು ಓದಿದ ತರುವಾಯ ಮೂಡಬಿದ್ರೆ ಎಲಿಮೆಂಟರಿ ಶಾಲಾ ಉಪಾಧ್ಯಾಯರಲ್ಲೊಬ್ಬರು ಮಕ್ಕಳಿಗೆ ಸಂಖ್ಯಾಜ್ಞಾನವನ್ನು ಕೊಡುವ ವಿಷಯ ಪಾಠವನ್ನೂ, ಜೈನ್ ಶಾಲಾ ಮುಖ್ಯ ಉಪಾಧ್ಯಾಯರು 'ಅತೀ ಉಪಯುಕ್ತ ಜ್ಞಾನವು ಯಾವುದು' ಎಂಬ ಉಪನ್ಯಾಸವನ್ನೂ ಓದಿ, ವಿಮರ್ಶೆ ಆದ ತರುವಾಯ ಮುಂದಿನ ಸಭೆಯು ಇರುವೈಲ್ ಬೋರ್ಡುಶಾಲೆಯಲ್ಲಿ ಎಂದು ನಿಶ್ಚಯಿಸಲಾಯಿತು. ಅನಂತರ ಸಭೆಯಲ್ಲಿ ಹಾಜರಿದ್ದ ಮೂಡಬಿದ್ರಿ ಸೆಕೆಂಡರಿ ಶಾಲೆಯ ೧ನೇ ಸಹಾಯಕ ಉಪಾಧ್ಯಾಯರಾದ ಮ|| ರಾ|| ಎ. ನರ್ಸಪ್ಪಯ್ಯನವರು ಇಂಥಾ ಸಭೆಯು ಅವಶ್ಯಕವೆಂದೂ ಉಪಾಧ್ಯಾಯರಲ್ಲಿ 'ದಕ್ಷಿಣೆಗೆ ತಕ್ಕ ಪ್ರದಕ್ಷಿಣೆ' ಎಂದು ಆಲೋಚಿಸುವವರು ಈ ವೃತ್ತಿಗೆ ಬರಬಾರದೆಂದೂ, ಮುಂದಿನ ಜನಾಂಗದವರಾದ ಚಿಕ್ಕ ಮಕ್ಕಳ ಮಾನಸಿಕ ನೈತಿಕ, ಮತ್ತು ಶಾರೀರಕ ಅಭಿವೃದ್ಧಿಯ ಕಡೆಗೆ ಲಕ್ಷ್ಯವಿಟ್ಟು ಪ್ರತಿಯೊಬ್ಬ ಉಪಾಧ್ಯಾಯನೂ ತನ್ನಿಂದಾದ ಮಟ್ಟಿಗೆ ಪ್ರಯತ್ನಿಸಬೇಕೆಂದೂ, ಚಲೋ ಭಾಷಣವನ್ನು ಕೊಟ್ಟರು. ಅಧ್ಯಕ್ಷರ ಭಾಷಣವೂ, ಕಲ್ಲಬೆಟ್ಟು ಶಾಲಾ ಮುಖ್ಯ ಉಪಾಧ್ಯಾಯರ ವಿಶೇಷ ಆತಿಥಿ ಸತ್ಕಾರಗಳೂ ಆದ ತರುವಾಯ ಉಪಾಧ್ಯಾಯರುಗಳು ತೆರಳುವವರಾದರು.

ಅರಳಕೊಪ್ಪಲು:— ತಾ. ೧೦ನೇ ಆದಿತ್ಯವಾರ ಕೊಪ್ಪಲ ಬೋರ್ಡ ಶಾಲೆಯಲ್ಲಿ ಹೆಡ್ಮಾಸ್ತರ ಮ|| ರಾ|| ಕೆ. ಬಸಪ್ಪ ಗೌಡರವರು ವರ್ಗವಾಗಿ ಹೋಗುವುದರಿಂದ ಸದರಿಯವರ ಗೌರವಾರ್ಥವಾಗಿ ಗ್ರಾಮಸ್ಥರ ಸಭೆಯು ಸದರ ಶಾಲೆಯಲ್ಲಿ ಜರಗಿತು. ಅಧ್ಯಕ್ಷಸ್ಥಾನವನ್ನು ಅರಳ ಹಾಯರ್ ಎಲಿಮೆಂಟರಿ ಶಾಲಾ ಮ|| ರಾ|| ಎಚ್. ಮಹಾಲಿಂಗ ಭಟ್ಟರವರು ವಹಿಸಿದರು. ಶಾಲೆಯ ಹಳೆ ವಿದ್ಯಾರ್ಥಿಯೂ ಈಗ ಎಫ್. ಎ. ಕ್ಲಾಸಿನಲ್ಲಿ ಕಲಿಯುವವರೂ ಆದ ಮ|| ರಾ|| ಮವಂತೂರು ಕೋಟಿಸೆಟ್ಟರವರ ಮಗ ಸೀತಾರಾಮ ಸೆಟ್ಟರು ಗೌಡರ ಗುಣಕಥನವನ್ನು ಕುರಿತು ಉಪನ್ಯಾಸ ಮಾಡಿದರು. ಅಧ್ಯಕ್ಷರು ತಮ್ಮ ಉಪಸಂಹಾರ ಭಾಷಣದಲ್ಲಿ ನೆರೆಕರೆಯ ಮಕ್ಕಳು ಅಧಿಕವಾಗಿ ಸ್ಥಳೀಕ ಹಾಯರ್ ಎಲಿಮೆಂಟರಿ ಶಾಲೆಗೆ ಬರುವಂತೆ ಊರವರನ್ನು ಕೇಳಿಕೊಂಡರು. ಮತ್ತು ಆಸುಪಾಸು ಶಾಲೆಯ ಉಪಾಧ್ಯಾಯರು ಹಾಯರ್ ಎಲಿಮೆಂಟರಿ ಶಾಲೆಯ ಉಪಾಧ್ಯಾಯರೊಡನೆ ಸೇರಿ, ಪಾಠಗಳಲ್ಲಿ ಐಕ್ಯವುಂಟಾಗುವಂತೆ ಮಾಡುವುದು ಒಳ್ಳೆಯದೆಂದು ಸೂಚಿಸಿದರು. ಮ|| ರಾ|| ಶ್ರೀ| ಬಲಿಪ ನಾರಾಯಣ ಭಾಗವತರಿಂದ "ಗರ್ವ" ಎಂಬವರ ಕುರಿತಾದ ಹಂಕಥೆಯು ಮನೋರಂಜಕವಾಗಿ ಮಾಡಲ್ಪಟ್ಟಿತು. ಗೌಡರು ಅಂತ್ಯದಲ್ಲಿ ತಮ್ಮ ಧನ್ಯವಾದಗಳನ್ನು ಸಭಿಕರಿಗೂ, ಅಧ್ಯಕ್ಷರಿಗೂ ಅರ್ಪಿಸಿದರು. ಗೌಡರು ಉದ್ಯೋಗಶೀಲರೂ, ಸಮ್ಯಭಾವದವರೂ ಆಗಿದ್ದರೆಂಬುದಕ್ಕೆ ಅವರು ಶಾಲೆಯಲ್ಲಿ ಸ್ವತಹ ಮಾಡಿದ ಗಾರೆ ಹಾಕಿದ ತಟ್ಟೆಯೂ, ಅಶ್ವಥ ಕಟ್ಟೆಯೂ, ಗೇಟುಕಂಬಗಳೂ, ಮಕ್ಕಳ ನಡತೆಯೂ ಸಾಕ್ಷಿಗಳಾಗಿವೆ. ರಾತ್ರಿಯಲ್ಲಿ ಅರಳ ಯಕ್ಷಗಾನದ ಸಮಿತಿಯವರಿಂದ "ಪಂಚವಟಿ" ಎಂಬ ಪ್ರಸಂಗದ ತಾಳಮದ್ದಳೆಯು ಜರುಗಿತು. ಪದಕ್ಕೆ ಮ|| ರಾ|| ಬಲಿಪ ನಾರಾಯಣ ಭಾಗವತರೂ, ಅರ್ಥದವರ ಸ್ಥಿತಿ [illegible] ವಿ. ಎಸ್. ಸೋಮನಾಥಯ್ಯನವರೂ, [illegible] ವೆಂಕಪ್ಪಯ್ಯನವರೂ, ಪಂಚನಾಥ ಹಾಯರ್ ಎಲಿಮೆಂಟರಿ ಶಾಲೆಯ ಸಹಾಯಕ ಉ. ಕೆ. ನಾಗಪ್ಪಯ್ಯ ಮುಂತಾದವರು ಶ್ಲಾಘನೀಯವಾಗಿ ತಾಳಮದ್ದಳೆಯನ್ನು ಜರುಗಿಸಿದರು.

(೯ನೇ ಪೇಜಿಗೆ ಮುಂದುವರಿಸಿಯದೆ.)

ಗುರುಪುರ:— ಇಲ್ಲಿಯ ಶ್ರೀ ಸೋಮನಾಥೇಶ್ವರ ದೇವಾಲಯದಲ್ಲಿ ಪ್ರತಿವರ್ಷ ನಡಿಯತಕ್ಕ ದೀಪೋತ್ಸವವು ಇದೇ ತಾ. ೩೦-೧೦-'೨೪ನೇ ಗುರುವಾರ ದಿನ ಅನೇಕ ಭಕ್ತಜನಸಮೂಹದೊಡನೆ ಬಹು ವಿಜೃಂಭಣೆಯಿಂದ ಜರಗಿತು. ಮತ್ತು ಆ ದಿನ ದಯಮಾಡಿಸಿರುವ ಕಿಲಂಜಾರು ಶ್ರೀ ಶಂಕರಾನಂದ ಲೈಬ್ರೆರಿಯ ಸೆಕ್ರೆಟರಿಗಳಾದ ಶ್ರೀಯುತ ಶಂಕರದಾಸ ಕೆ. ಆರ್. ಎ. ಕಾರಂತರಿಂದ ಶಿವಕೀರ್ತನೆಯು ನಡಿಯಿತು. ಪೂಜಾ ಸಮಾಪ್ತಿಯ ನಂತರ ಅರ್ಚಕರಾದ ಅಣ್ಣುಭಟ್ಟರು ಶಿವಾರ್ಪಿತ ಪ್ರಸಾದವನ್ನು ಭಕ್ತಸಮೂಹಕ್ಕೆ ಹಂಚಿದರು. ಸಭೆಯು ಸಮಾಪ್ತಿಯಾಯಿತು.

ಇಲ್ಲಿಯ ವೈದ್ಯಶಾಲೆಯ ಸಮೀಪ ಇರುವ ಹೊಟೇಲಿನ ಎದುರುಗಡೆಯಲ್ಲಿ ಅಂದರೆ ಮಾರ್ಗದ ಕರೆಯಲ್ಲಿ ಯಾವಾಗಲೂ ಬಂಟರೇ ಮೊದಲಾದ ಬೇರೆ ಜಾತಿಯವರು ಕೂಡ ಕೋಳಿಕಟ್ಟ ಮಾಡುವರು. ಇದನ್ನು ಮಾರ್ಗದ ಕರೆಯಲ್ಲಿ ಮಾಡುವುದಕ್ಕೆ ಬದಲಾಗಿ ಮೂಡಗಡೆ ಅಡ್ಡದಲ್ಲಿ ಮಾಡುವಂತೆ ಲೋಕಲ್ ಫಂಡಿನವರು ಒಂದು ಹುಕುಂ ಕೊಡುತ್ತಿದ್ದರೆ ದಾರಿ ಹೋಗುವವರಿಗೆ ಬಹಳ ಉಪಕಾರಮಾಡಿದಂತಾಗುವುದು.

ಬಂಟವಾಳ:— ಇಲ್ಲಿಯ ಮಹಾಲಿಂಗೇಶ್ವರ ದೇವಸ್ಥಾನದ ಆಡಳಿತ ಮೊಕ್ತೇಸರರಾದ ಪಣಂಬೂರು ವಾಸ್ತೇವರಾಯರು ಕಳೆದ ವಾರದಲ್ಲಿ ಒಂದು ಕೈಯಲ್ಲಿ ಒಂದು ಖಡ್ಗವನ್ನೂ, ಇನ್ನೊಂದು ಕೈಯಲ್ಲಿ ಒಂದು ಸಣ್ಣ ರಿವೋಲ್ವರನ್ನು ಹಿಡಕೊಂಡು ಮಹಾಲಿಂಗೇಶ್ವರ ದೇವಸ್ಥಾನದ ಬಳಿ ನಿಂತು ಹಲವು ಪೇಟೆಯ ಗೃಹಸ್ಥರಿಗೆ ಅವಮಾನಕರವಾದ ಮಾತುಗಳಿಂದ ಬೈದು, ಈ ಮುಂಚೆ ಅವರನ್ನು ಜುಲುಂಪಡಿಸಿದ ಮಾಪಿಳ್ಳೆಯವರನ್ನು ಸಹ ಬೈದು ಅವರನ್ನು ಹೊಡೆಯಲಿಕ್ಕೆ ಮುಂದರಿಸಿದ್ದರು. ಅಷ್ಟರಲ್ಲಿ ಅಲ್ಲಿ ನೆರೆದಿದ್ದ ಕೆಲವು ಬಂಟವಾಳದ ಪ್ರಮುಖರಾದ ಮಾಪಿಳ್ಳೆಯವರ ಬಲವಾದ ಗುಂಪುಕಟ್ಟಿಕೊಂಡು ಮಹಾಲಿಂಗೇಶ್ವರ ದೇವಸ್ಥಾನದ ಬಳಿ ಈ ಪಣಂಬೂರು ವಾಸ್ತೇವರಾಯರಿಗೆ ಅವರನ್ನು ಅವಮಾನಪಡಿಸಿದಕ್ಕಾಗಿ ಮತ್ತು ಗುಂಡುಹಾಕಿ ಕೊಲ್ಲುತ್ತೇನಾಗಿ ಗದರಿಸಿದರಿಂದ ಅವರ ಹತ್ತಿರ ಬಂದು ರೋಷವೇರಿ ಹೊಡೆಯಲು ಪ್ರಯತ್ನಿಸಿದರು. ವಾಸ್ತೇವರಾಯರು ಮಹಾಲಿಂಗೇಶ್ವರ ದೇವಸ್ಥಾನದ ಒಳಕ್ಕೆ ನುಗ್ಗಿ ಪ್ರಾಣವನ್ನು ಉಳಿಸಿಕೊಳ್ಳುವ ಬಗ್ಗೆ ಅದರ ಬಾಗಿಲು ಮುಚ್ಚಿ ಒಳಗೆ ಅಡಗಿ ಕೂತುಕೊಂಡರು. ಆದರೂ ಈ ರೋಷವೇರಿದ ಬಂಟವಾಳದ ಮಾಪಿಳ್ಳೆಯವರು ಕೆಲವು ಸಮಯದ ವರೆಗೆ ಬಾಗಿಲನ್ನು ತೆರೆಯುವರೆ ಪ್ರಯತ್ನಿಸಿ ಕಡೆಗೆ ಸಾಧ್ಯವಿಲ್ಲದೆ ಸುಮ್ಮನೆ ಅಲ್ಲಲ್ಲಿ ಹಿಂದೆ ಹೋದರು. ಈ ಗಲಾಟೆಯಲ್ಲಿ ಪೋಲೀಸರು ತಕ್ಕ ಸಮಾಧಾನವನ್ನು ತೆಗೆದುಕೊಳ್ಳುವಾಗ ಪೋಲೀಸರ ಮೇಲೆ ಕೂಡ ಕೋಪವೇರಿ ಅವರನ್ನು ಕಂಡಾಬಟ್ಟೆ ಬೈದುಬಿಟ್ಟರು. ಇಲ್ಲಿಯ ಸಬ್ ಇನ್ಸ್ಪೆಕ್ಟರರು ವಾಸ್ತೇವರಾಯರ ಮೇಲೆ ಜಿಲ್ಲಾ ಕಲೆಕ್ಟರವರ ಹತ್ತಿರ ಇವರು ಮಾಡಿದ ಅಪಕೃತ್ಯದ ವಿಷಯ ಮತ್ತು ಇವರು ಯಾವಾಗಲೂ ಈ ತರದಲ್ಲಿ ಮಾಡುತ್ತಾರಾಗಿಯೂ ಇವರ ವಿಷಯ ತಕ್ಕ ಭದ್ರತೆಯನ್ನು ತೆಗೆದುಕೊಳ್ಳಬೇಕಾಗಿ ರಿಪೋರ್ಟು ಬರೆದುಕೊಂಡಿರುವರು. ಇದರ ವಿಚಾರಣೆ ಬಗ್ಗೆ ಜಿಲ್ಲಾ ಕಲೆಕ್ಟರರು ವಾಸ್ತೇವರಾಯರನ್ನು ಕೈದುಮಾಡುವರೆ ಹುಕುಂ ಕೊಟ್ಟಿರುವರೆಂದು ನಮ್ಮ ಕಡೆ ವಾರ್ತೆ ಬಂದಿದೆ. ಇವರನ್ನು ಮೊನ್ನೆಯ ದಿವಸ ಕೈದುಮಾಡಿ ಮಂಗಳೂರು ಸಬ್‌ಜೈಲಿನಲ್ಲಿ ರಿಮಾಂಡಿನಲ್ಲಿ ಇಟ್ಟಿರುವರೆಂದು ಕೇಳುತ್ತೇವೆ. ಇನ್ನು ಮುಂದೆ ಏನಾಗುತ್ತದೆಂಬುದು ನೋಡಲಿಕ್ಕಿದೆ.

ವಿವಿಧ ವಿಷಯಗಳು.

ಗ್ರೀಸ್ ಮತ್ತು ಬಲ್ಗೇರಿಯ ದೇಶಗಳ ಯುದ್ಧ.

ಗ್ರೀಸ್ ಮತ್ತು ಬಲ್ಗೇರಿಯ ದೇಶಗಳ ಎಲ್ಲೆಕಟ್ಟಿನಲ್ಲಿರುವ ಗ್ರೀಸ್ ಸರ್ಕಾರದ ಠಾಣ್ಯ ಒಂದರಲ್ಲಿ ಕಾವಲಿದ್ದ ಒಬ್ಬ ಕ್ಯಾಪ್ಟನ್ ಮತ್ತು ಒಬ್ಬ ಸೆಂಟ್ರಿಯನ್ನು ಬಲ್ಗೇರಿಯ ಸೈನಿಕರು ಏನೋ ತಪ್ಪು ಅಭಿಪ್ರಾಯದಿಂದ ನಿಷ್ಕಾರಣವಾಗಿ ಕೊಂದರೆಂದೂ, ಅನಂತರ ಬಿಳೀ ಬಾವುಟವನ್ನು ತೋರಿಸಿ ತಮ್ಮ ವ್ಯಸನವನ್ನು ಸೂಚಿಸಿದರೆಂದೂ, ಗ್ರೀಸ್ ಸರ್ಕಾರದವರು ಇಷ್ಟಕ್ಕೆ ಸುಮ್ಮನಿರದೆ ನಿಜಾಂಶವನ್ನು ಹೊರಪಡಿಸಬೇಕೆಂದು, ಬಲ್ಗೇರಿಯಾ ರಾಜ್ಯದೊಳಗೆ ಪ್ರವೇಶಿಸಿ ಕೆಲವು ಸ್ಥಳಗಳನ್ನು ಆಕ್ರಮಿಸಿಕೊಳ್ಳಲು ತಮ್ಮ ಸೈನಿಕರಿಗೆ ಅಪ್ಪಣೆ ಕೊಟ್ಟರೆಂದೂ, ಅದರಂತೆ ಗ್ರೀಸ್ ಸೈನ್ಯವು ಎಲ್ಲೆಕಟ್ಟನ್ನು ದಾಟಿ ಬಲ್ಗೇರಿಯವನ್ನು ಪ್ರವೇಶಿಸಿರುವುದಾಗಿಯೂ ಈ ತಿಂಗಳ ೨೧ರಲ್ಲಿ ವರ್ತಮಾನ ಬಂದಿತು.

ಗ್ರೀಸ್ ಅಧಿಕಾರಿಗಳನ್ನು ಕೊಂದ ತಪ್ಪಿಗಾಗಿ ಬಲ್ಗೇರಿಯ ಸರ್ಕಾರದವರು ೨೦ ಲಕ್ಷ ಫ್ರಾಂಕುಗಳನ್ನು ದಂಡ ದ್ರವ್ಯವಾಗಿ ಕೊಡಬೇಕೆಂದೂ ತಮ್ಮ ವ್ಯಸನವನ್ನು ಸೂಚಿಸಬೇಕೆಂದೂ, ಇಷ್ಟೆಲ್ಲಾ ೪೮ ಘಂಟೆಗಳೊಳಗಾಗಿ ನಡೆಯಬೇಕೆಂದೂ ಗ್ರೀಸ್ ಸರಕಾರವು ಬಲ್ಗೇರಿಯಕ್ಕೆ ತಾ. ೨೧ರಲ್ಲಿ ತಿಳಿಸಿತು. ಇದನ್ನು ಬಲಾತ್ಕರಿಸಲು ಗ್ರೀಕ್ ಸೈನ್ಯವು ಮುಂದುವರಿದು ಪೆಟ್ರೀಷ್ ಎಂಬ ಊರನ್ನೂ ಇನ್ನೂ ಹಲವು ಸ್ಥಳಗಳನ್ನೂ ಆಕ್ರಮಿಸಿಕೊಂಡಿತು.

ಗ್ರೀಕರು ಮುಂದುವರಿದು ಬಂದಹಾಗೆಲ್ಲಾ ಬಲ್ಗೇರಿಯದವರು ಹಿಮ್ಮೆಟ್ಟಿ ಹೋಗುತ್ತಿರುವರು. ಬಲ್ಗೇರಿಯದವರು ಖಾಲಿಮಾಡಿದ ೧೦ ಗ್ರಾಮಗಳಲ್ಲಿ ಏಳನ್ನು ಗ್ರೀಸ್‌ನವರು ಆಕ್ರಮಿಸಿಕೊಂಡಿರುವರು. ಈ ಮಧ್ಯೆ ಬಲ್ಗೇರಿಯದವರು ಲೀಗ್ ಒಫ್ ನೇಶನ್ಸ್‌ರವರಿಗೆ ಕಾಗದ ಬರೆದು ಈ ವಿಚಾರವನ್ನು ತನಿಖೆ ಮಾಡಿ ಇತ್ಯರ್ಥಪಡಿಸಬೇಕೆಂದು ನಡೆದ ಸಂಗತಿಗಳನ್ನು ತಿಳಿಸಿರುವರು. ಗ್ರೀಸ್ ಸರ್ಕಾರದವರು ತಮ್ಮ ಪರವಾಗಿ ಚರ್ಚಿಸಲು ಕೆಲವು ಮಂದಿ ಪ್ರತಿನಿಧಿಗಳನ್ನು ಆ ಸಭೆಗೆ ಕಳುಹಿಸಲು ಒಪ್ಪಿರುತ್ತಾರೆ. ಉಭಯಶಕ್ತಿಗಳೂ ಸದರೀ ಜನಾಂಗಗಳ ಕೂಟದಲ್ಲಿ ಮೆಂಬರುಗಳಾಗಿರುವುದರಿಂದ, ಅದರ ಇತ್ಯರ್ಥದಂತೆ ನಡೆದುಕೊಳ್ಳಬೇಕಾಗಿರುತ್ತದೆ. (ಒ. ಪ.)

⁂

ಚಿತ್ತೂರಿನಲ್ಲಿ ದೀಪಾವಳಿ ದಿವಸ ಪಟಾಕಿಯ ಹಾವಳಿ.

ಚಿತ್ತೂರಿನಲ್ಲಿ ಸಿ. ಜಿ. ಜಯರಾಮರಾವ್ ಎಂಬ ವಕೀಲರ ಮನೆಯಲ್ಲಿ ದೀಪಾವಳಿಯ ದಿವಸ ಅವರ ಮೂರು ವರ್ಷದ ಹುಡುಗನಿಗೂ ಹದಿನೆರಡು ವರ್ಷ ವಯಸ್ಸಿನ ಒಂದು ಹುಡುಗಿಗೂ ಮತ್ತು ಹದಿನೆಂಟು ವರ್ಷ ವಯಸ್ಸಿನ ಅವರ ಚಿಕ್ಕಪ್ಪನ ಮಗನಿಗೂ ಕೂಡ ಮೂರು ಜನರಿಗೆ ಆಕಸ್ಮಾತ್ ಒಂದು ಗನ್‌ಪೌಡರಿನ ಪೆಟ್ಟಿಗೆಯಲ್ಲಿ ಬೆಂಕಿ ತಗಲಿ ವಿಶೇಷ ತರದ ಪೆಟ್ಟಾಗಿದೆ. ಇದು ಆಗಲು ಕಾರಣವೇನೆಂದರೆ ದೀಪಾವಳಿಯ ದಿವಸ ಪಟಾಕಿ ಮತ್ತು ಇತರ ಅನೇಕ ಬೆಂಕಿ ಆಟದ ಸಾಮಾನುಗಳನ್ನು ಸುಟ್ಟು ಆಟಮಾಡಿದ ಬಳಿಕ, ಅವರ ಮಗಳಾದ ಪದ್ಮಾವತಿಯು, ಒಂದು ಲೋಹದ ಡ್ರೈವರ್‌ನಲ್ಲಿ ಬೀಗವನ್ನು ಹಾಕಿ ಇಟ್ಟಿರುವ ಸುಟ್ಟ ಪಟಾಕಿಯ ತುಂಡುಗಳನ್ನು ತೆಗೆಯುವ ಬಗ್ಗೆ, ಅಕೆಯ ತಂದೆಯಬಳಿ ಬೀಗದ ಕೈಯನ್ನು ತೆಗೆದುಕೊಂಡು ಬೀಗವನ್ನು ತೆಗೆಯಲು, ಆ ಪೆಟ್ಟಿಗೆಯ ಡ್ರೈವರು ಪೂರ್ತಾ ಹೊರಗೆ ಬಂದು ನೆಲದಮೇಲೆ ಬಿದ್ದುಬಿಟ್ಟಿತು. ಆ ಸಮಯದಲ್ಲಿ ಅದರಲ್ಲಿದ್ದ ಸಾಮಾನುಗಳೆಲ್ಲಾ ಹೊರಕ್ಕೆ ಚೆಲ್ಲಿ ಬಿದ್ದಿದ್ದವು. ಅದರ ಪೈಕಿ ಮುಂಚೆ ಒಂದು ಸಲ ಅವರ ಮನೆಬಾವಿಯಲ್ಲಿದ್ದ ಶಿಲೆಕಲ್ಲನ್ನು ಒಡೆದು ತೆಗೆಯುವರೆ ತರಿಸಿದ್ದ ಸಿಡಿಮದ್ದಿನ ಪೊಟ್ಟಣವು ಅಲ್ಲಿ ಇತ್ತು. ಅಷ್ಟರಲ್ಲಿ ಇದನ್ನು ನೋಡಲಿಕ್ಕಾಗಿ ಸಣ್ಣ ಮಗುವು ಕೈಯಲ್ಲಿ ಒಂದು ಹಗಲುಬತ್ತಿಯ ಕಡ್ಡಿಯನ್ನು ಉರಿಸುತ್ತಾ ಅದರ ಹತ್ತಿರಕ್ಕೆ ಬಂದೊಡನೆ ಅದರ ಬೆಂಕಿಯು ಆ ಪೊಟ್ಟಣಕ್ಕೆ ತಗಲಿ ದೊಡ್ಡ ಬೆಂಕಿಯುಂಟಾಗಿ ಮೂವರ ಕಣ್ಣುಗಳಿಗೂ ಮತ್ತು ಇತರ ಕಡೆಯಲ್ಲಿ ಬಹುತರದ ಜಖಮು ಉಂಟಾಗಿದೆ. ಇದರ ಪೈಕಿ, ಸಣ್ಣ ಮಗುವಿಗೆ ವಿಶೇಷ ತರದ ಗಾಯಗಳು ಉಂಟಾಗಿವೆ.

⁂

ಬಳ್ಳಾರಿಯೂ ಆಂಧ್ರ ಯುನಿವರ್ಸಿಟಿಯೂ.

ಆಂಧ್ರ ಯುನಿವರ್ಸಿಟಿಯನ್ನು ಸ್ಥಾಪಿಸುವಾಗ ಕನ್ನಡ ಭಾಷೆಯನ್ನಾಡುವ ಬಳ್ಳಾರಿ ಮತ್ತು ಅನಂತಪುರ ಜಿಲ್ಲೆಯ ಭಾಗಗಳನ್ನು ಆಂಧ್ರ ಯುನಿವರ್ಸಿಟಿಗೆ ಕೂಡಿಸದೆ, ಆ ಭಾಗಗಳನ್ನು ಕರ್ನಾಟಕ ಯುನಿವರ್ಸಿಟಿಗೆ ಕೂಡಿಸಬೇಕೆಂದು ವಾದವಿವಾದಗಳು ನಡಿಯುತ್ತಲೇ ಇವೆ

ಕರ್ನಾಟಕ ದೇಶವನ್ನು ಕರ್ನಾಟಕ ಯುನಿವರ್ಸಿಟಿಗಾಗಿಯೂ, ರಾಜ್ಯಭಾರಕ್ಕಾಗಿಯೂ ಎರಡು ವಿಭಾಗಗಳಾಗಿಯೂ ವಿಭಾಗಿಸಬಹುದು. ದೇಶೀಯ ರಾಜರುಗಳು ಆಳುವ ಮೈಸೂರು ಮತ್ತು ಇತರ ಆಶ್ರಿತ ರಾಜರುಗಳು ಆಳುವ ಆಶ್ರಿತ ರಾಜ್ಯಗಳೆಂಬ ಒಂದು ವಿಭಾಗ. ಕರ್ನಾಟಕ ಗವರ್ನರರು ಆಳುವ ಧಾರವಾಡ, ಬಿಜಾಪುರ, ಕಾರವಾರ ಜಿಲ್ಲೆಗಳೂ, ಪಯಸ್ವಿನಿ ನದಿಯ ಉತ್ತರಕ್ಕಿರುವ ದಕ್ಷಿಣ ಕನ್ನಡ ಜಿಲ್ಲೆ, ಬಳ್ಳಾರಿಯ ಮತ್ತು ಅನಂತಪೂರ ಜಿಲ್ಲೆಗಳ ಕನ್ನಡ ಭಾಷೆಯನ್ನಾಡುವ ಭಾಗಗಳನ್ನು ಕೂಡಿಸಿ ಒಂದು ಜಿಲ್ಲೆ ಇಷ್ಟು ಭಾಗಗಳು. ಈ ರೀತಿಯಲ್ಲಿ ಮಾಡಿದರೆ, ಬಳ್ಳಾರಿ ಮತ್ತು ಅನಂತಪೂರ ಜಿಲ್ಲೆಯ, ಕನ್ನಡ ಭಾಷೆಯನ್ನಾಡುವ ಭಾಗಗಳನ್ನು ಆಂಧ್ರ ಯುನಿವರ್ಸಿಟಿಯಿಂದಲೂ, ಆಂಧ್ರ ದೇಶದಿಂದಲೂ ಸುಲಭದಲ್ಲಿ ತಪ್ಪಿಸಿದಂತಾಯಿತು. ಈ ರೀತಿಯಲ್ಲಿ ಮಾಡಿದರೆ ಸಮಗ್ರ ಕರ್ನಾಟಕದಲ್ಲಿ ಮೈಸೂರು ಮತ್ತು ಕರ್ನಾಟಕ ಎಂಬ ಎರಡು ಯುನಿವರ್ಸಿಟಿಗಳು ಇದ್ದಂತಾಯಿತು. ಇನ್ನು ಬೇಕಾದರೆ ತುಳು ಭಾಷೆಯನ್ನಾಡುವ ತೌಳವ ದೇಶಕ್ಕೂ ಕ್ರಮೇಣ ಒಂದು ಯುನಿವರ್ಸಿಟಿಯನ್ನೂ, ಕೊಡಗು ಭಾಷೆಯನ್ನಾಡುವ ಕೊಡಗು ದೇಶಕ್ಕೂ ಒಂದೊಂದು ಪ್ರತ್ಯೇಕ ಯುನಿವರ್ಸಿಟಿಯನ್ನೂ ಸ್ಥಾಪಿಸಬಹುದು.

ಆದುದರಿಂದ ಬಳ್ಳಾರಿಯನ್ನು ಆಂಧ್ರ ಯುನಿವರ್ಸಿಟಿಯ ಕೈಯಿಂದ ತಪ್ಪಿಸಬೇಕೆಂದು ಪ್ರಯತ್ನಿಸುವ ದೇಶ ವತ್ಸಲರು ಮೊದಲು ಮದರಾಸು ಸಂಸ್ಥಾನಾಧಿಪತಿಗಳೊಡನೆ ಆಲೋಚಿಸಿ ಕನ್ನಡ ಭಾಷೆಯನ್ನಾಡುವ ಬಳ್ಳಾರಿಯ ಮತ್ತು ಅನಂತಪುರ ಜಿಲ್ಲೆಗಳ ಭಾಗಗಳನ್ನು ಒಟ್ಟುಕೂಡಿಸಿ ಪ್ರತ್ಯೇಕ ಒಂದು ಜಿಲ್ಲೆಯಾಗಿ ಮಾಡಿ, ಈಗ ಬಳ್ಳಾರಿಯಲ್ಲಿ ಮತ್ತು ಅನಂತಪುರದಲ್ಲಿ ಆಂಧ್ರ ಭಾಷೆಯನ್ನಾಡುವ ಭಾಗಗಳನ್ನು ಕರ್ನೂಲು ಜಿಲ್ಲೆಗೆ ಕೂಡಿಸಿಬಿಡಬಹುದು. ಇದರಿಂದ ಈಗ, ಸದ್ಯಕ್ಕೆ ರಾಜ್ಯಭಾರಕ್ಕೇನೂ ತೊಡಕು ಬರಲಿಕ್ಕಿಲ್ಲ. ಅನಂತರ ಕರ್ನಾಟಕ ದೇಶವೆಂಬ ಪ್ರತ್ಯೇಕ ಸಂಸ್ಥಾನವನ್ನು ಸ್ಥಾಪಿಸುವಾಗ ಹೊಸದಾಗಿ ಮಾಡಿದ ಜಿಲ್ಲೆಯನ್ನು ಪಯಸ್ವಿನಿಯಿಂದ ಉತ್ತರಕ್ಕಿರುವ ದಕ್ಷಿಣ ಕನ್ನಡ ಜಿಲ್ಲೆಯ ಭಾಗವನ್ನು ಕರ್ನಾಟಕ ಸಂಸ್ಥಾನಕ್ಕೆ ಸುಲಭವಾಗಿ ಕೂಡಿಸಬಹುದು. ಇದರಲ್ಲಿ ವಿಶೇಷ ಕಷ್ಟಗಳಿಲ್ಲ.

ಹಿಂದೂ-ಮುಸಲ್ಮಾನರ ಕಲಹ.

(ಮಹಾತ್ಮಾ ಗಾಂಧಿಯವರ ಅಭಿಪ್ರಾಯ)

ಹಿಂದೂ-ಮುಸಲ್ಮಾನ ಕಲಹಗಳ ಕುರಿತು ಮಹಾತ್ಮಾ ಗಾಂಧಿಯವರು ಈ ರೀತಿ ಬರಿಯುತ್ತಾರೆ:—

ಹಿಂದೂ-ಮುಸಲ್ಮಾನ ಪ್ರಶ್ನೆಯಿಂದ ತಪ್ಪಿಸಿಕೊಳ್ಳಲಿಕ್ಕೆ ನಾನು ಎಷ್ಟು ಪ್ರಯತ್ನಮಾಡಿದರೂ ಅದು ನನ್ನನ್ನು ಬಿಟ್ಟುಹೋಗುವುದಿಲ್ಲ. ಮುಸಲ್ಮಾನ ಸ್ನೇಹಿತರು ನಾನು ಮಧ್ಯಸ್ಥಿಕೆ ಮಾಡಬೇಕಾಗಿ ಒತ್ತಾಯಪಡಿಸುವರು. ಹಿಂದೂ ಸ್ನೇಹಿತರು ನಾನದರ ವಿಷಯ ತರ್ಕಿಸಬೇಕಾಗಿ ಕೇಳಿಕೊಳ್ಳುವರು. ನಾನು ಕಲ್ಕತ್ತದಲ್ಲಿದ್ದಾಗ ಒಬ್ಬ ಬೀಹಾರಿನ ಸ್ನೇಹಿತರು, ಅಲ್ಲಿ ಹಿಂದೂ ಹುಡುಗರನ್ನು ಮತ್ತು ಮುಖ್ಯವಾಗಿ ಹುಡುಗಿಯರನ್ನು ಮುಸಲ್ಮಾನರು ಕದ್ದುಕೊಂಡು ಹೋಗುವುದರ ವಿಷಯವಾಗಿ ಬಹಳ ದುಃಖದಿಂದಲೂ ಕೋಪದಿಂದಲೂ ತಿಳಿಸಿದ್ದರು. ಸರಿಯಾದ ರುಜುವಾತಿಲ್ಲದೆ ತಾನದನ್ನು ಒಪ್ಪಲಾರೆನೆಂದೂ, ರುಜುವಾತಿದ್ದರೆ, ನನ್ನಿಂದ ಮತ್ತೇನೂ ಪ್ರಯೋಜನಕರ ಕೆಲಸವನ್ನು ಮಾಡಲಿಕ್ಕಾಗದಿದ್ದರೂ ಬಹಿರಂಗವಾಗಿ ಅದನ್ನು ಖಂಡಿಸುವೆನೆಂದು ನಾನು ತಿಳಿಸಿದೆನು. ನನ್ನ ಸ್ನೇಹಿತನು ಪತ್ರಿಕೆಯಲ್ಲಿ ಪ್ರಕಟವಾದ ಅಂಶಗಳನ್ನು ಕಡಿದು ಕಳುಹಿಸಿದನು. ಆದರೆ ಪತ್ರಿಕೆಯ ಪ್ರಕಟಣೆಗಳನ್ನು ನಂಬಲಾಗುವುದಿಲ್ಲವೆಂದೂ, ಅನೇಕ ಸಾರಿ ಪತ್ರಿಕೆಯ ಪ್ರಕಟಣೆಗಳು ಕೋಪೋದ್ರೇಕ ಮಾಡುವಂತಹವುಗಳಾಗಿ ಸುಮ್ಮನೆ ಸುಳ್ಳಾಗಿರುವಂತಹವುಗಳೂ, ಮುಸಲ್ಮಾನ ಪತ್ರಿಕೆಗಳು ಹಿಂದುಗಳನ್ನೂ, ಹಿಂದೂ ಪತ್ರಿಕೆಗಳು ಮುಸಲ್ಮಾನರನ್ನೂ ದೂಷಿಸುವುದರಲ್ಲಿ ಆನಂದಿಸುತ್ತವೆಯೆಂದೂ, ಪತ್ರಿಕೆಗಳೊಳಗೆ ಬರುವುದೆಲ್ಲ ನಿಜವೆಂದು ನಂಬುವುದಾದರೆ, ಹಿಂದುಗಳೂ ಮುಸಲ್ಮಾನರೂ ಅಸಹ್ಯಕರವಾದ ಪ್ರಾಣಿಗಳೆಂದು ತಿಳಿಯಬೇಕಾಗುವುದೆಂದೂ ಅಲ್ಲಗಳೆಯಲಾಗದ ರುಜುವಾತಿದ್ದರೆಮಾತ್ರ ತನಗೆ ಕಳುಹಿಸಬೇಕೆಂದೂ ನಾನು ತಿಳಿಸಿದ್ದೇನೆ.

ಟಿಟಾಘಡ ಊರಿನ ಘಟನೆಯಾದರೆ ಅಂತಹ ರುಜುವಾತಿದ್ದುದ್ದಾಗಿದೆ. ಅಲ್ಲಿ ಒಬ್ಬ ಹಿಂದೂ ಹುಡುಗಿಯು ಕದ್ದೊಯ್ಯಲ್ಪಟ್ಟಿರುವಳು. ಅವಳು ಮುಸಲ್ಮಾನಳಾಗಿರುವಳಾಗಿ ಹೇಳಲ್ಪಟ್ಟಿದೆ. ಕೋರ್ಟು ಹುಕುಮು ಇದ್ದರೂ ಅವಳನ್ನು ಹೊರಗೆ ತೋರಿಸಿಲ್ಲ. ನಾನು ಟಿಟಾಘಡಿಗೆ ಹೋದಾಗ ಹುಡುಗಿಯ ವಿಷಯದಲ್ಲಿ ಜವಾಬ್ದಾರಿಯನ್ನು ಹೊರಲು ಯಾರೂ ಸಿದ್ಧರಾಗಿರಲಿಲ್ಲ. ನಾನು ಪಾಟ್ನಾಕ್ಕೆ ಹೋದಾಗ, ಕೆಲವು ಭಯಂಕರ ರುಜುವಾತುಗಳನ್ನು ಪಡೆದಿದ್ದೇನೆ. ಅದರ ವಿಷಯಗಳು ಪೂರ್ಣವಾಗಿ ನನ್ನೆದುರು ಈಗ ಇಲ್ಲದಿರುವುದರಿಂದ, ನಾನು ಈಗ ಅದರ ವಿಷಯ ಅಭಿಪ್ರಾಯ ಕೊಡುವುದಿಲ್ಲ.

ಇನ್ನು ಮಸೀದಿಗಳ ಮುಂದೆ ವಾದ್ಯ ಮತ್ತು ಸಂಗೀತ ಮಾಡುವ ವಿಷಯದ ಪ್ರಶ್ನೆಯಿದೆ. ಮಸೀದಿಗಳ ನೆರೆಯಲ್ಲಿರುವ ದೇವಸ್ಥಾನಗಳಲ್ಲಿ, ಮುಸಲ್ಮಾನರ ಪ್ರಾರ್ಥನಾಸಮಯದಲ್ಲಿ ಆರತಿಯನ್ನು ಎತ್ತಬಾರದಾಗಿ ಕೇಳಿಕೊಳ್ಳುತ್ತಿರುವರು. ಬೆಳಿಗ್ಗಿನ ಸಮಯದಲ್ಲಿ ಹುಡುಗರು ಮಸೀದಿಯ ಎದುರಿನಿಂದ ರಾಮನಾಮವನ್ನು ಜಪಿಸುತ್ತ ಹೋಗುವುದನ್ನು ನಿಲ್ಲಿಸಿದರಾಗಿ ನಾನು ಕಲ್ಕತ್ತದಲ್ಲಿ ಕೇಳಿದ್ದೇನೆ.

ಇದಕ್ಕಾಗಿ ಕೋರ್ಟುಗಳ ಆಶ್ರಯಕೇಳುವುದು ಒಳ್ಳೇಯದಲ್ಲ. ಕೋರ್ಟುಗಳು ಸಾಮಾನ್ಯ ಅಪರಾಧಗಳನ್ನು ತೀರ್ಮಾನಿಸಬಹುದು. ಆದರೆ ಇದು ಸಾಮಾನ್ಯ ಅಪರಾಧವಲ್ಲ. ನಿರ್ಬಲರು ಇರುವ ವರೆಗೆ ಬಲವಂತರು ನಿರ್ಬಲತೆಯ ಪ್ರಯೋಜನಹೊಂದುವರು. ಇದರ ನಿವಾರಣೋಪಾಯವು, ಸುವ್ಯವಸ್ಥಿತ ಆತ್ಮರಕ್ಷಣೆಯ ಸಾಧನೆಗಳಲ್ಲಿದೆ. ಅಹಿಂಸಾತ್ಮಕ ಆತ್ಮರಕ್ಷಣೆಗೆ ಜನರು ಸಿದ್ಧರಿಲ್ಲದಿದ್ದರೆ ಹಿಂಸಾತ್ಮಕ ಆತ್ಮರಕ್ಷಣೆ ಮಾಡಿದರೂ ನ್ಯಾಯವಾಗುವುದು. ಬಡ ಮತ್ತು ಸಹಾಯಹೀನರಾದವರ ಹುಡುಗ ಹುಡುಗಿಯರನ್ನು ಕದ್ದೊಯ್ಯುವ ಅಪರಾಧವು ಕಠಿಣ ಪ್ರಸಂಗವನ್ನು ತಂದಿಕ್ಕುವುದು. ಈ ಸಮಯದಲ್ಲಿ ಇದರ ನಿವಾರಣವು ಒಟ್ಟಿಂದೆ ಆಗತಕ್ಕದ್ದಲ್ಲ. ಇಡೀ ವರ್ಗವಾಗಲಿ ಜಾತಿಯು ಇದಕ್ಕಾಗಿ ಸಾಧಿಸಬೇಕು.

ಮಕ್ಕಳನ್ನು ಕಳುವ ಪ್ರಶ್ನೆಗಿಂತಲೂ ಸಂಗೀತವನ್ನು ಬಾರಿಸುವ ಪ್ರಶ್ನೆಯು ಸುಲಭವಾಗಿದೆ. ಸಂಗೀತ ಬಾರಿಸುವದು, ಆರತಿ ಎತ್ತುವುದು, ರಾಮನಾಮವನ್ನು ಜಪಿಸುವುದು, ಇವು ಮತಾಚಾರಪ್ರಕಾರ ಅವಶ್ಯಕವಾಗಿರಬೇಕು, ಇಲ್ಲವೆ ಆಗಿರಬಾರದು. ಆಗಿದ್ದರೆ, ಏನು ಬಂದರೂ ಬರಲಿ, ಸಂಗೀತ ಬಾರಿಸುವುದಾದರೆ ಬಾರಿಸಬೇಕು, ಆರತಿ ಎತ್ತುವುದಾದರೆ ಎತ್ತಬೇಕು, ರಾಮನಾಮ ಜಪಿಸುವುದಾದರೆ ಜಪಿಸಬೇಕು. ಇದಕ್ಕೆ ಹಿಂದೂಗಳ ಒಪ್ಪಿತವಿದ್ದರೆ, ಕೈಯಲ್ಲಿ ದೊಣ್ಣೆ ಕೂಡ ಹಿಡಿಯದೆ, ಅಹಿಂಸಾತ್ಮಕರಾಗಿ ಮುಂದರಿದು, ಮುಸಲ್ಮಾನರ ಕೋಪಕ್ಕೆ ಬೀಳಬೇಕು. ಇದು ಸಾಧ್ಯವಲ್ಲವಾದರೆ, ಹ್ಯಾಗಾದರೂ ಮುಂದೆ ಹೋಗಿ ಪ್ರತಿ ಹೆಜ್ಜೆಯನ್ನೂ ಯುದ್ಧ ಮೂಲಕ ಮುಂದೆ ಇಡಬೇಕು. ಆದರೆ ಜಗಳವಾಗುವುದೆಂಬ ಹೆದರಿಕೆಯಿಂದ ಮಾತ್ರ ನಿಲ್ಲಿಸಬಾರದು.

ಆದರೆ, ಮುಸಲ್ಮಾನರ ಪ್ರಾರ್ಥನಾ ಸಮಯದಲ್ಲಿ ಕೂಡ, ಮಸೀದಿ ಮುಂದೆ ಹೋಗುವಾಗ ಸಂಗೀತವನ್ನು ಬಾರಿಸುವುದು ಮತದಪ್ರಕಾರ ಅತ್ಯಾವಶ್ಯಕವೇ? ರಾಮನಾಮ ಜಪವೂ ಹಾಗೆಯೇ ಅವಶ್ಯಕವೇ? ಮುಸಲ್ಮಾನರನ್ನು ಕೆಡಿಸಲಿಕ್ಕಾಗಿಯೇ ಮೆರವಣಿಗೆಗಳು ವ್ಯವಸ್ಥೆಗೊಳಿಸಲ್ಪಡುತ್ತಿವೆವೆಂಬದರ ವಿಷಯ ನಿಮಗೆ ಏನು ಹೇಳಲಿದೆ? ಅದು ನಿಜವಾದರೆ, ಇಂತಹ ಕೃತ್ಯಗಳೇ ತಮ್ಮ ಉದ್ದೇಶವನ್ನು ಹಾಳುಮಾಡುವುವು. ಇವುಗಳು ಕೋರ್ಟಿನ ಹುಕುಮಿನ ಮುಂದೆಯಾಗಲಿ; ಮಿಲಿಟರಿಯರ ನೋಟದಲ್ಲಿಯಾಗಲಿ; ಕಲ್ಲುಗಳ ವರ್ಷಣದಲ್ಲಿಯಾಗಲಿ ನಾಶಹೊಂದುವುವು.

ಮತಾಚಾರದ ಅವಶ್ಯಕತೆಯು ಮೊದಲು ನಿರ್ಧರಿಸಲ್ಪಡಬೇಕು. ಬೇರೆಯವರಿಗೆ ತೊಂದರೆಕೊಡಲಿಕ್ಕೆ ಮಾಡುತ್ತಾರೆಂಬ ಭಾವನೆಯನ್ನು ತೆಗೆಯಬೇಕು. ಪರಸ್ಪರ ಒಪ್ಪಂದವನ್ನು ಪ್ರಯತ್ನಿಸಬೇಕು. ವಿರೋಧ ಪಕ್ಷದ ಭಾವನೆಗೆ ಬಾಧೆ ಬಾರದಷ್ಟು ಅಷ್ಟಲ್ಲ ಅವಶ್ಯಕತೆಯೆಷ್ಟೆಂದು ನೋಡಬೇಕು. ಆ ವೇಳೆ ಕೋರ್ಟಿನ ಸಹಾಯ ಕೇಳದೆ, ಕೋರ್ಟಿನ ನಿಷೇಧದ ಹುಕುಮನ್ನೂ ಲಕ್ಷಿಸದೆ ಯುದ್ಧಕ್ಕೆ ಕೈಯಿಕ್ಕಬೇಕು. ನಾನು ನಿರ್ಬಲತೆಗೆ ಉತ್ತೇಜನವನ್ನಿತ್ತೆನೆಂದೂ, ಧ್ಯೇಯಕ್ಕೆ ಭಂಗತರುವಂತೆ ಮಾಡಿದೆನೆಂದೂ ಯಾರೂ ಆರೋಪಿಸದಿರಲಿ. ಆದರೆ ನಾನು ಪುನಃ ಹೇಳುವುದೇನೆಂದರೆ ಚಿಕ್ಕ ಸಂಗತಿಗಳನ್ನು ಎತ್ತಿ ದೊಡ್ಡ ಧ್ಯೇಯಕ್ಕೆ ರೂಪಾಂತರಿಸಬಾರದು.

ಮಂಗಳೂರು.

ಸರ್. ಎ. ಪಿ. ಪತ್ರೋರವರು ಮಂಗಳೂರಿಗೆ ಬಂದಾಗ, ಕೆಥೋಲಿಕರ ಡೆಪ್ಯುಟೇಶನಿನ ಭೇಟಿ ತೆಗೆದುಕೊಂಡ ಸಮಯದಲ್ಲಿ ಅವರು ಮಿ| ಸಾಲ್ಡಾನ್ಹಾರವರನ್ನು ತಮ್ಮ ಪ್ರತಿನಿಧಿಯಾಗಿ ನ್ಯಾಯವಿಧಾಯಕ ಸಭೆಗೆ ಕಳುಹಿಸಿದ್ದಕ್ಕಾಗಿ ಆಕ್ಷೇಪ ತೆಗೆದಿದ್ದರು. ಮಾನ್ಯ ಪತ್ರೋರವರ ಈ ಅಧಿಕ ಪ್ರಸಂಗವನ್ನು ಖಂಡಿಸಲಿಕ್ಕೆ ಇಲ್ಲಿ ತಾ. ೨೪ರ ಸಂಜೆಗೆ ಮಿಲಾಗ್ರಿಸ್ ಇಗರ್ಜಿ ಮೈದಾನಿನಲ್ಲಿ ಇಂಡಿಯನ್ ಕ್ರಿಶ್ಚಿಯನರ ಸಭೆಯು ಮಿ| ಎ. ಎಮ್ ಮಥಾಯಸರ ಅಧ್ಯಕ್ಷತೆಯಲ್ಲಿ ಕೂಡಿತು. ಸದರಿ ಸಭೆಯಲ್ಲಿ ಸರ್. ಪತ್ರೋರವರ ಅವಿವೇಕದ ಮಾತುಗಳನ್ನು ಖಂಡಿಸಿ, ಮಿ| ಸಾಲ್ಡಾನ್ಹಾರು ನ್ಯಾಯವಿಧಾಯಕ ಸಭೆಯಲ್ಲಿ ನಡಿಸಿದ ಕೆಲಸಗಳಿಗಾಗಿ ಅವರನ್ನು ಅಭಿನಂದಿಸಿ ಸಭೆಯು ಮುಕ್ತಾಯವಾಯಿತು.

ಮಂಗಳೂರು ಮುನ್ಸಿಪಾಲಿಟಿಯ ಸೆಂಟ್ರಲ್ ವಾರ್ಡಿಗೆ ಕಳೆದ ಮಂಗಳವಾರ ಜರಗಿದ ಮುನ್ಸಿಪಲ್ ಮೆಂಬರರ ಚುನಾವಣೆಯಲ್ಲಿ ಉಮೇದ್ವಾರರಾಗಿದ್ದ ಶ್ರೀ| ನಗರ ನರಸಿಂಹ ಶೆಣೈ ಮತ್ತು ಶ್ರೀ| ವಕೀಲ್ ಯಮ್. ಮಾಧವರಾವ್ ಇವರ ಪೈಕಿ ಮೊದಲಿನವರು ಅಧಿಕಾಂಶ ವೋಟುಗಳು ದೊರೆತು ಆರಿಸಲ್ಪಟ್ಟಿರುವರು.

ಹೊಸದಾಗಿ ಡೆಪ್ಯುಟಿ ಪ್ರೊಬೇಶನರಿ ತಹಸಿಲ್‌ದಾರರಾಗಿ ನೇಮಕ ಹೊಂದಿದ ಮಿ| ಗುಲಾಮು ಮಹಮ್ಮದ್ ಬಿ. ಎ. ಇವರು ಕಳೆದ ಗುರುವಾರ, ಚಾರ್ಜುವಹಿಸಿಕೊಂಡಿರುವರು.

ಕ್ರಿಕೆಟ್ ಸೀನಿಯರ್ ಕಪ್ ಪಂದ್ಯಾಟದಲ್ಲಿ ಎಲೋಸಿಯಸ್ ಕೋಲೆಜಿನವರು ಮೊದಲನೆಯ ಇನ್ನಿಂಗಿನಲ್ಲಿ ೧೧೭ ಮತ್ತು ಗವರ್ನಮೆಂಟ್ ಕೋಲೆಜಿನವರು ೬೩ ರನ್ಸ್ ತೆಗೆದಿದ್ದರು. ಎರಡನೆಯ ಸರ್ತಿಯಲ್ಲಿ ಎಲೋಸಿಯನರು ೫೩ ಮತ್ತು ಗವರ್ನಮೆಂಟ್ ಕೋಲೆಜಿನವರು ೬೫ ರನ್ಸ್‌ಗಳನ್ನು ತೆಗೆದು ಕಪ್ ಎಲೋಸಿಯಸ್ ಕೋಲೆಜಿನವರಿಗೆ ದೊರೆತಿರುವುದು

ಡಾಕ್ಟರ್ ಎಲ್. ಪಿ. ಫೆರ್ನಾಂಡೀಸರು ಕಳೆದ ವಾರದ ಬುಧವಾರ ದಿವಸ ತಮ್ಮ ಪ್ರವಾಸ ಮುಗಿಸಿ ಕಂಕನಾಡಿಗೆ ಬಂದು ಮುಟ್ಟಿರುವರು.

ಎಲೋಸಿಯಸ್ ಕೋಲೇಜಿನ ವಿಜ್ಞಾನ ಪ್ರಯೋಗಾಲಯಕ್ಕೆ ಇಷ್ಟರ ತನಕ ೨೦,೦೦೦ ರೂಪಾಯಿಗಳ ವಾಗ್ದಾನವಾಗಿದೆ. ಇನ್ನುಳಿದ ೧೦,೦೦೦ವನ್ನು ಬೇಗನೆ ಪಡೆಯುವ ನಿರೀಕ್ಷಣೆಯಿದೆ.

ಕರ್ನಾಟಕ ತಿಲಕ ವಿದ್ಯಾಲಯದ ಸಹಾಯಾರ್ಥವಾಗಿ ಕಳೆದ ವಾರದಲ್ಲಿ ಮುಷ್ಟಿಫಂಡಿಗಾಗಿ ೧೩ ಸೇರು ಅಕ್ಕಿ ಮತ್ತು ರೂ. ೪-೪-೩, ಇದೂ ಬಂದಿರುತ್ತದೆ.

ತಾ. ೨೪ಕ್ಕೆ ಅಂತ್ಯವಾದ ವಾರದಲ್ಲಿ ಇಲ್ಲಿಯ ಮುನ್ಸಿಪಾಲಿಟಿಯೊಳಗೆ ಜ್ವರ ೩, ಕ್ಷಯರೋಗ ೭ ಇತರ ರೋಗ ೨೧ ಹೀಗೆ ಒಟ್ಟು ೩೧ ಮರಣಗಳೂ, ೨೨ ಗಂಡು ೧೩ ಹೆಣ್ಣು ಒಟ್ಟು ೩೫ ಜನನಗಳೂ ಆಗಿವೆ.

ಶ್ರೀ ಗೋಕರ್ಣನಾಥವೆಂಕಟೇಶ ಸೇವಾಸಮಿತಿಯ ಎರಡನೇ ವಾರ್ಷಿಕೋತ್ಸವವು ರಾವ್ ಸಾಹೇಬ ಬಿ. ಮಹಾಬಲ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಇದೇ ತಿಂಗಳ ತಾ. ೨೫ರಲ್ಲಿ ನಡೆಯಿತು. ಇದರ ವರ್ಷಾವಧಿ ವರದಿಯಿಂದ, ಈ ಸಮಿತಿಯಲ್ಲಿ ಈಗ ರೂ. ೧೧೭೯—೧೦—೦ ಇರುವುದಾಗಿಯೂ, ಮುಂಬಾಯಿಯ ಜಾತಿಬಾಂಧವರು ರೂ. ೫೦೦೦ ವಾಗ್ದಾನ ಮಾಡಿರುವರೆಂದೂ, ಸ್ವಜಾತಿ ವಿದ್ಯಾರ್ಥಿಗಳ ಬಗ್ಗೆ ಮಂಗಳೂರಲ್ಲಿ ಒಂದು ವಿದ್ಯಾರ್ಥಿ ಭವನವನ್ನು ಕಟ್ಟುವುದಾಗಿಯೂ ತಿಳಿದುಬರುತ್ತದೆ.

ಶಾಸ್ತ್ರೀಯ
ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ:— ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:— ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಸ್ತ್ರೀಮಿತ್ರಣ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.
ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.
ಜೆಟ್ಟಿನ ದವಾಖಾನೆಗೆ "ಆಹಾರ ಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಶುದ್ಧವಾದ ನೀಲಗಿರಿ ಎಣ್ಣೆ

ತಲೆನೋವು, ಶೀತ, ಇನ್‌ಫ್ಲುಯಂಜಾಜ್ವರ,
ವಾತ, ಇತ್ಯಾದಿ ಎಲ್ಲಾ ರೋಗಗಳ
ಮೇಲೆ ಸಿದ್ಧೌಷಧ.
1 ಔನ್ಸು ಬಾಟ್ಲಿ 1ರ ಕ್ರಯ 0—4—0.

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು.

The Canara Bank, Limited, Mangalore.
ಕನರಾ ಬ್ಯಾಂಕ್ ಲಿಮಿಟಡ್, ಮಂಗಳೂರು.

ESTABLISHED JULY 1906.
Authorised and fully paid up Capital Rs. 300,000—0—0
Reserve and other sinking Funds „ 259,000—0—0

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
ಅಧಿಕಾರಗೊಳಿಸಲ್ಪಟ್ಟ, ಪೂರ್ಣವಾಗಿ ತೆತ್ತ ಮೂಲಧನವು ರೂ. 300,000—0—0
ಕ್ಷೇಮನಿಧಿ ಮತ್ತು ಇತರ ಫಂಡುಗಳು 259,000—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳೋಣಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1925.

K. Venkat Rao,
Secretary.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ, ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಿಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೫೦ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ಒಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೨೫ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

ಸಾಳ್ವದ ವೆಂಕಟಾಚಲ ಪಂಡಿತರು,

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ,
ಮಂಗಳೂರು ಟವನಿಗೆ ಮಾತ್ರ.

Free! Free!! Free!!
ಪ್ರಸಿದ್ಧವಾದ.
"ಕಾಮಶಾಸ್ತ್ರ"
ಈಗಲೆ ತಯಾರಾಗಿದೆ.
ಜರೂರಾಗಿ ಬರಿಯುವಲ್ಲಿ ಅಂಚೆಯ ಹಾಸಲು ಸಹ ಇಲ್ಲದೆ ಕಳುಹಿಸುವೆವು.
ಆತಂಕನಿಗ್ರಹ ಔಷಧಾಲಯ,
26 ಬ್ರಾಡ್ವೇ, (ಪೋಸ್ಟು ಬಾಕ್ಸ್ 1252),
ಮದ್ರಾಸ್.

ಬಂದು ನೋಡಿರಿ! ತಿಂದುನೋಡಿರಿ!
ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ
ಪದಕವನ್ನು
ಬಹುಮಾನವಾಗಿ ಪಡೆದಿರುವ
ಎಸ್. ಪಿ. ಆಚಾರ್ಯ
ಇವರಿಂದ ತಯಾರಿಸಲ್ಪಟ್ಟ
ಉಪ್ಪಿನಕಾಯಿಗಳನ್ನು
ಬಂದು ನೋಡಿರಿ! ತಿಂದು ನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ ತುಂಬಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ
ಬಂದು ನೋಡಿರಿ! ತಿಂದು ನೋಡಿರಿ!

ಇಂಡಿಯನ್ ಸ್ವೀಟ್‌ಮಿಟ್ ಮಾರ್ಟ್.

ಮನೋಹರ ಕಾಫಿ ಕ್ಲಬ್. ಮಾರ್ಕೆಟು ರೋಡು, ಮಂಗಳೂರು. | ಅಥವಾ | ಸದಾನಂದ ಕಾಫಿ ಕ್ಲಬ್ ರಥಬೀದಿ, ಮಂಗಳೂರು

"ಬಹು ದಿವಸಗಳಿಂದ ಪ್ರಸಿದ್ಧವಾಗುತ್ತಿರುವ ಔಷಧ!"

ರಕ್ತ ಶುದ್ಧಿ
ವಜ್ರಾಂಗ-ಬಿಂದು
ವೀರ್ಯ ವೃದ್ಧಿ ಕಾರಕ

ವಜ್ರಾಂಗಬಿಂದುವೆಂಬ ಈ ಮಹೌಷಧಿಯನ್ನು ಅನೇಕ ಪರ್ವತಗಳಲ್ಲಿ ಉತ್ತಮೋತ್ತಮವಾದ ಮತ್ತು ಅವಶ್ಯವಾಗಿ ಗುಣ ಕೊಡುವಂತಹ ವನಸ್ಪತಿಗಳ ಅರ್ಕದಿಂದ ಉಪಯುಕ್ತವಾದ ಮತ್ತು ಉಚ್ಚತರದ ಭಸ್ಮಗಳ ಮಿಶ್ರಣಮಾಡಿ ಯಾಂತ್ರಿಕ ಸಹಾಯದಿಂದ ಸಿದ್ಧಪಡಿಸಿರುತ್ತದೆ. ಈ ವಜ್ರಾಂಗಬಿಂದುವಿನ ಸೇವನೆಯಿಂದ ಕೆಳಗೆ ಬರೆದ ರೋಗಗಳು ಗುಣವಾಗಿ ಹೊಸ ಮನುಷ್ಯನಾಗುತ್ತಾನೆಂದರೆ ಅತಿಶಯೋಕ್ತಿಯಾಗಲಾರದು.

ಈ ಮಹೌಷಧಿಯ ಸೇವನೆಯಿಂದ, ವಾತ, ಪಿತ್ತ, ಕಫ ಈ ಮೂರು ದೋಷಗಳಿಂದ ಉತ್ಪನ್ನವಾಗುವ ರೋಗಗಳು ಗುಣವಾಗುವದಲ್ಲದೆ, ಸ್ವಪ್ನಜನ್ಯ, ಧಾತುಪಾತ ನಪುಂಸಕತ್ವ, ಪರಮಾ ಮತ್ತು ಗರಮಿ ಇವುಗಳ ಸಮೂಲ ನಾಶವಾಗುತ್ತದೆ. ಬಹು ದಿವಸದಿಂದ ಮೈಯಲ್ಲಿ ಅಂಟಿಕೊಂಡ ಗಡಕಿಯಂತಹ ಒಂದೇ ವಾರದಲ್ಲಿ ಗುಣವಾಗುವದು. ಲಘುವಿಗಿಂತ ಮೊದಲು ಅಥವಾ ಕಡೆಗೆ ಸ್ರಾವವಾಗಿ ಹೋಗುವ ಧಾತು ಬಂದಾಗುತ್ತದೆ. [illegible] ಅನ್ನವು ಜೀರ್ಣವಾಗಿ ಮಲವು ಸರಿಯಾಗಿ ಹೋಗುವದು ಯಾವದೇ ಕಾರಣದಿಂದ ಬಂದ ಅಶಕ್ತತೆಯೂ ಕಣ್ಣಿಗೆ ಕತ್ತಲೆ ಬಂದಂತಾಗಿ ಬವಳಿ ಬರುವದು, ಕೈಕಾಲುಗಳು ಉರಿಯುವದು, ಮುಂತಾದ ಸಕಲ ವಿಕಾರಗಳೂ ನಾಶಹೊಂದುತ್ತವೆ. ವೀರ್ಯವೃದ್ಧಿ, ರಕ್ತಶುದ್ಧಿಗಳಾಗಿ ಮನುಷ್ಯನು ಬಲವಂತನಾಗುತ್ತಾನೆ. ಪೂರ್ಣ ಗುಣ ಬರಬೇಕಾದರೆ ಮೂರು ಬಾಟ್ಲಿಗಳು ಬೇಕು.

೧ ಬಾಟ್ಲಿಗೆ ರೂ. ೧—೪—೦. ೩ ಬಾಟ್ಲಿಗಳಿಗೆ ರೂ. ೩—೪—೦. ೧೨ ಬಾಟ್ಲಿಗಳಿಗೆ ರೂ. ೧೦—೦—೦.

ಇದರ ಹೊರತು ಒಂದು ಬಾಟ್ಲಿಯು ಉಚಿತ. ಟಪ್ಪಾಲು ಪ್ಯಾಕಿಂಗ ಖರ್ಚು ಪ್ರತ್ಯೇಕ. ಒಮ್ಮೆಯೇ ಪೆಟ್ಟಿಗೆ ಬಾಟ್ಲಿಗಳನ್ನು ತರಿಸಿಕೊಂಡರೆ ಟಪ್ಪಾಲು ಖರ್ಚು ಪೆಟ್ಟಿಗೆ ಬೀಳಲಾರದು. ಏಜಂಟರಾಗಲಬೇಕೆನ್ನುವವರು ಪತ್ರವ್ಯವಹಾರ ನಡಿಸಿ, ಖುಲಾಸೆ ತಿಳಕೊಳ್ಳಬಹುದು.

ಟಪ್ಪಾಲ ಮತ್ತು ಪ್ಯಾಕಿಂಗ ಖರ್ಚು ಬೇರೆ ಬೀಳುವುದು. ಅನುಪಾನ ಪತ್ರವು ಬಾಟ್ಲಿಯ ಸಂಗಡಲೇ ಕಳಿಸಲ್ಪಡುವುದು.

ಪತ್ತೆ. ಮ್ಯಾನೇಜರ, ಕೆ. ಎಮ್. ಹನುಮಾನ ಪ್ರಸಾದಿಕ ಕಂಪೆನಿ,
ಮು. ಪೋ. [illegible], (ಜಿಲ್ಲಾ ಬೆಳಗಾಂವ,)

The Canara Public Conveyance Co., Ltd, Mangalore.

(Established 1914.)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು
- ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು
- ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
- ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
- ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.
- ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ—ಈ ಪ್ರಾಂತ್ಯಗಳಿಗೆ ಈ ಕಂಪೆನಿಯು ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd, Mangalore. S. K

IF OUR MODERN REGULATOR
18 Carat Rolled gold Wrist Watch
Are Purchased at a time, we give
AS A SPECIAL OFFER

The best Decorative wall clock our Modern Regulator made with last wall nut case.

FOR RS TEN

RS. TEN ONLY

18 Carat Rolled gold wrist watch equal to size of a four annas size. Best mechanism supplied with full leather strap

IF Separately—The Modern Regulator clock Rs. 5
Required—18 ct Rolled gold wrist watch Rs. 7
ONLY A FEW IN STOCK
Write Now:— CAPTAIN WATCH COY
P. B. 265 MADRAS.

ಆರೋಗ್ಯ ಚಂದ್ರಿಕೆ.

ಸಂಪಾದಕರು: ಡಾಕ್ಟರ್ ಯು. ರಾಮರಾವ್, ಎಲ್. ಎಮ್. ಸಿ. ಎಫ್. ಎಮ್. ಯು. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಚಿಕಿತ್ಸದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವುದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮುಂಗಡ ವರ್ಷಕ್ಕೆ ರೂ. ೧—೮—೦; ಬಿಡುಪತ್ರಿಕೆ ಒಂದಕ್ಕೆ ರೂ. ೦—೩—೦. ಹಿಂದಿನ ಸಂಚಿಕೆಗಳು ಕೂಡ ದೊರೆಯುವವು.

ಚಂದಾದಾರರಾಗುವವರು ವಿ. ಪಿ. ಮೂಲಕವಾಗಿ ತರಿಸಿಕೊಳ್ಳುವುದಕ್ಕಿಂತಲೂ ಹಣವನ್ನು ಮುಂಗಡವಾಗಿ ಕಳುಹಿಸುವುದು ಲಾಭಕರ. ಮಾದರಿಗೆಂದು ಪತ್ರಿಕೆಯನ್ನು ಅಪೇಕ್ಷಿಸುವವರು 'ಆರೋಗ್ಯ ಚಂದ್ರಿಕೆ'ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು.

ಪತ್ರವ್ಯವಹಾರಕ್ಕೆ: 'ಆರೋಗ್ಯ ಚಂದ್ರಿಕೆ'
[illegible] ಮ ದ್ರಾ ಸ್.

ಶುದ್ಧ ರೋಮ್ಮಧ ಥಾವಳಿಗಳು.

1 ಮಳ ಉದ್ದ 1¼ ಮಳ ಅಗಲ ರೂ. 1½ರಿಂದ 2 ವರೆಗೆ, 5 ಮಳ ಉದ್ದ 1½ ಮಳ ಅಗಲ ರೂ. 1½ ರಿಂದ 5 ವರೆಗೆ, 6 ಮಳ ಉದ್ದ 1½ ಮಳ ಅಗಲ ರೂ. 2½ರಿಂದ 6 ವರೆಗೆ, 8 ಮಳ ಉದ್ದ 2 ಮಳ ಅಗಲ ರೂ. 3½ರಿಂದ 10 ವರೆಗೆ, 12 ಮಳ ಉದ್ದ 2¼ ಮಳ ಅಗಲ ರೂ. 6ರಿಂದ 12 ವರೆಗೆ, 16 ಮಳ ಉದ್ದ 2¼ ಮಳ ಅಗಲ ರೂ. 9 ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಜರ್ಮ್ಮನ್ ರೇಶ್ಮೆ ಮಡಿಗಳು, ಕಾಮಕಡಿಗಳು, ಕಾಶೀ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, ಶಾಲಿಗ್ರಾಮ, ಚಂದನ, ಶಾಲ, ಕಸ್ತೂರಿ, ಕೆಂಪು, ಇತ್ಯಾದಿ ಸಾಮಾನುಗಳು, ಫೋಟೊ ದೇವತಾ ಚಿತ್ರಗಳು ಮತ್ತು ಇತರ ಅನೇಕ ಸಾಮಾನುಗಳ ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುವು. ಕ್ಯಾಟಲಾಗ್ ಇನಾಂ.

ವಿಳಾಸ—
ಶಿರೋಮಣಿ ಯು. ನಾರಾಯಣಾಚಾರ್ಯ
ಮತ್ತು ಕಂಪೆನಿ, [illegible], ಕಾಶೀ ಕ್ಷೇತ್ರ.

ಆಯುರ್ವೇದ ಶಾಸ್ತ್ರಿ ಅಷ್ಟಾವಧಾನಿ,
ಡಾ. ವೇ. ಸುಬ್ಬರಾವ್, ಯುಂ. ಜೆ. ಯು. ಅವರ್ಗಳಿಂದ ತಯಾರಿಸಲ್ಪಟ್ಟದ್ದು.
ಒಂದು ಮಾತ್ರೆ! ಒಂದು ಘಂಟೆಯೊಳಗೆ ಗುಣ!

ಕಾಮಾಮೃತ.

ಈ ಔಷಧವು ಧಾತುಪುಷ್ಟಿಗಾಗಿಯೇ ತಯಾರಿಸಲ್ಪಟ್ಟದ್ದು. ಒಂದು ಮಾತ್ರೆಯನ್ನು ಸೇವಿಸಿದ ಒಂದು ಘಂಟೆಯೊಳಗೆ ಶಕ್ತಿಯನ್ನು ವೃದ್ಧಿಗೊಳಿಸಿ ಎಷ್ಟು ಬಲಹೀನರಾದವರನ್ನೂ ಬಲವಂತರನ್ನಾಗಿ ಮಾಡುವದು. ಯಾವ ರೀತಿಯಿಂದಲೇ ಆಗಲಿ ಶುಕ್ಲ ನಷ್ಟವಾದಾಗ್ಯೂ ಅಥವಾ ಸ್ವಪ್ನದಲ್ಲಿ ಇಂದ್ರಿಯ ಸ್ಖಲಿತವಾದಾಗ್ಯೂ ಇಲ್ಲವೆ ಮೂತ್ರದೊಂದಿಗೆ ಸೇರಿಯೋ ವ ಮೂತ್ರಚಲನೆಯ ಹಿಂದೋ ಮುಂದೋ ಹೊರಬೀಳುವ ಧಾತುನಷ್ಟವೆಷ್ಟಾದರೂ 5 ದಿವಸಗಳಲ್ಲಿ ಗುಣಪಡಿಸುವದು. ಯಾವ ಬಗೆಯ ನರಗಳ ಬಲಹೀನತೆಯನ್ನಾದರೂ ಹೋಗಲಾಡಿಸುವುದು. ಶಕ್ತಿಯಿಲ್ಲದವರು ಈ ಮದ್ದನ್ನು 20 ದಿನ ಸೇವಿಸಿದಲ್ಲಿ ಶಕ್ತಿವಂತರಾಗಿ ಸಂಸಾರ ಸುಖವನ್ನೂ ಸಂತತಿ ಲಾಭವನ್ನೂ ಹೊಂದುವರು; ಇದು ನಿಶ್ಚಯ. ಪತ್ರವ್ಯವಹಾರವು ರಹಸ್ಯವಾಗಿ ನಡಿಸಲ್ಪಡುವದು. ಕ್ರಯ 20 ಮಾತ್ರೆಗಳ ಕುಪ್ಪಿ 1ಕ್ಕೆ ರೂ. 2—0—0. ಪತ್ರವ್ಯವಹಾರವು ಇಂಗ್ಲಿಷಿನಲ್ಲಿ ಮಾಡತಕ್ಕದ್ದು.

ಅಮೃತಾಶ್ರಮ,
28 ಎಲ್ಲೂರು, ಕೃಷ್ಣಾಜಿಲ್ಲೆ.

ದಕ್ಷಿಣ ಕನ್ನಡ ಜಿಲ್ಲೆಯ

ಪ್ರಾಚೀನ ಇತಿಹಾಸ

450 ಪುಟಗಳು. ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

೧,೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ
ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು
— ತೆಗೆದುಕೊಳ್ಳಿರಿ. —

REGISTERED TRADE MARK

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಭೋಗಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ದಾರ್ಢ್ಯತೆಯನ್ನೂ ಉಂಟುಮಾಡುವುದು. ಕೈಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಾಮಿಸ್ರಿ ಎಂಬುವದು ಕಾಬೂಲ್ ಕಂದಹಾರ ಪ್ರಾಂತ್ಯಗಳಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರಿಕಾ, ಬರ್ಮಾ, ಪಿನಾಂಗ್ ಸಿಂಗಪೂರ್, ಸಿಲೋನ್ ಮತ್ತು ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. ೧ ಡಬ್ಬಿಯನ್ನು ೧೫ ದಿವಸ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. ೨ ಯಾ ೪ ಡಬ್ಬಿಗಳು ಜನ್ಮಾಂತ್ಯದವರೆಗೂ ಪೂರ್ಣವಾಗಿ ಗುಣವನ್ನು ಮಾಡುವವು. ಅನುಪಾನ ಪತ್ರಿಕೆಯು ಡಬ್ಬಿಯ ಸಂಗಡವೇ ಇರುತ್ತೆ. ಹೆಸರು ವಿಳಾಸಗಳನ್ನು ಚೆನ್ನಾಗಿ ತಿಳಿಯುವ ಹಾಗೆ ವಿವರವಾಗಿ ಬರಿಯಬೇಕು. ಕ್ರಯ ಡಬ್ಬಿ ೧ಕ್ಕೆ ರೂ. ೨—೦—೦.
ಟಪ್ಪಾಲು ಖರ್ಚು ೧ ರಿಂದ ೪ ಡಬ್ಬಿಗಳವರೆಗೆ ೦—೮—೦.
ಏಜಂಟರು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯವಾಗಿ ಬೇಕಾಗಿರುತ್ತೆ.
ರೂಲ್ಸ್ ತರಿಸಿ ನೋಡಿಕೊಳ್ಳಬಹುದು.
ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಿರಿ.

ಟೆಲಿಗ್ರಾಫ್ ಅಡ್ರೆಸ್, "ಮಿಸ್ರಿ" ಬೆಂಗಳೂರು ಸಿಟಿ. | ಡಿ. ಮನ್ನಾಲಾಲ್, ಡಿಲ್ಲಿ ನೇಟಿವ್ ಡಾಕ್ಟರ್. ಸಾಲಂಮಿಸ್ರಿ ಮುರಬ್ಬ ಡಿಪೋ, ಬೆಂಗಳೂರು ಸಿಟಿ.

Edited, Printed & Published by V. S. Kamath at the M. T. A. Sharada Press, Mangalore.

Registered No. M. 498.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರದ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಶ್ವವ ಸುಡುತ ಬರುತಿರುವ ॥
ಗರಳಕವರಂಜಿದರೆ । ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತ ೧೯. ಮಂಗಳೂರು, ತಾರೀಕು ೬ನೇ ಶುಕ್ರವಾರ ನವಂಬರ ೧೯೨೫. ಸಂಚಿಕೆ ೪೫.

Th Canara Banking Corporation, UDIPI, Ltd.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office: UDIPI ಹೆಡ್ ಆಫೀಸು: ಉಡುಪಿ.	Branch: COONDAPOOR. ಶಾಖೆ: ಕುಂದಾಪುರ.
ಚಂದಾ ಹಾಕಿ ಯತ್ತಿದ ಮೂಲಧನ	ರೂ. 2,25,000—0—0.
ವಸೂಲ್ಕತ್ತ ಮೂಲಧನ	ರೂ. 1,71,875—9—11.
ಕ್ಷೇಮನಿಧಿ ವ ಇತರ ಫಂಡುಗಳು	ರೂ. 64,700—0—0.
ಠೇವಣಾತಿಗಳು	ರೂ. 4,83,945—2—9.

— ವಿನಿಯೋಗ —.

ಗವರ್ನಮೆಂಟು ಪ್ರಾಮಿಸರಿ ನೋಟಿನ ಮೇಲೆ	ರೂ. 25,800—0—0.
ಪ್ರಾಮಿಸರಿ ನೋಟು ವ ಬಾಂಡುಗಳ ಮೇಲೆ	ರೂ. 5,92,445—9—4.
ಚಿನ್ನಾಭರಣ ಮುಂತಾದ ಭದ್ರತೆಸೊತ್ತುಗಳ ಮೇಲೆ	ರೂ. 1,11,658—8—6

ಈ ಕೆಳಗಿನ ಠೇವಣಾತಿಗಳನ್ನು ಅಂಗೀಕರಿಸುವುದಲ್ಲದೆ ಇತರ ಬ್ಯಾಂಕುಗಳ ಮೇಲಣ ಡ್ರಾಫ್ಟು ಚೆಕ್ಕುಗಳನ್ನೂ, ಸಾಹುಕಾರಿ ಹುಂಡಿಗಳನ್ನೂ ವಸೂಲು ಮತ್ತು ಇತರ ಎಲ್ಲಾ ತರದ ಬ್ಯಾಂಕಿನ ವಹಿವಾಟುಗಳು ನಡಿಸಲ್ಪಡುವವು.

ಠೇವಣಾತಿಗಳು.

ನಿಗದಿ ಠೇವಣಾತಿಗಳು:—ಸಾ. ಸೆ. 6½ ರಿಂದ 7½ ವರೆಗಿನ ಬಡ್ಡಿಯನ್ನು ಪ್ರತಿ 3 ತಿಂಗಳಿಗೊಮ್ಮೆ ಕೆರುವ ಅನುಕೂಲ ವ ಲಾಭದಾಯಕವಾದ ಶರ್ತಗಳ ಮೇಲೆಯೂ

ಕೆಲಂಡ ಅವಧಿ ಠೇವಣಾತಿಗಳು:—1 ತಿಂಗಳ ನಂತರ 15 ದಿವಸಗಳ ನೋಟೀಸಿಗೊಳಪಟ್ಟು ಹಿಂತೆಗೆಯಬಹುದಾದ ಠೇವಣಾತಿಗಳನ್ನು ಸಾ. ಸೆ. 5ರ ದರದ ಬಡ್ಡಿ ನಡೆದ ದಿನಗಳಿಗೆ ಕೊಡುವ ಶರ್ತದಿಂದಲೂ

ಚಾಲ್ತಿ ಠೇವಣಾತಿಗಳು:—ದಿನಂಪ್ರತಿ ಇರುವ ಶಿಲ್ಕಿನ ಮೇಲೆ ಸಾ. ಸೆ. 3ರಂತೆ ಬಡ್ಡಿ ಕೆರುವ ಶರ್ತದ ಮೇಲೂ

ಸೇವಿಂಗ್ಸ್ ಬ್ಯಾಂಕು ಠೇವಣಾತಿಗಳು:—ಸಾ. ಸೆ. 4½ರ ಬಡ್ಡಿಯ ಮೇಲೂ

ಸಂಚಯ ಠೇವಣಾತಿಗಳು:—ಮಕ್ಕಳ ವಿದ್ಯಾಭ್ಯಾಸ, ಉಪನಯನ, ವಿವಾಹ ಮುಂತಾದ ಶುಭಕಾರ್ಯಗಳಿಗೆ ಅನುಕೂಲವಾಗಿ ಪ್ರತ್ಯಂತೆ ತಿಂಗಳು 1ರ ರೂಪಾಯಿ 1ರಂತೆ 13-24-35-84-132 ತಿಂಗಳುಗಳಿಗೆ ಪಡಕೊಳ್ಳುವಡೆಗೆಂದು ಕಂತುಗಳ ಅವಧಿ ಮುಗಿದ ಮೂರು ತಿಂಗಳಲ್ಲಿ ಆಯಾಯ ಅವಧಿಮೇರೆಗೆ ರೂ. 13—8—0, ರೂ. 25—8—0, ರೂ. 50, ರೂ. 102—8—0 ಮತ್ತು 183—8—0ನ್ನು ಅದೇ ಮೇರೆಗೆ ತಿಂಗಳು 1ರ ರೂಪಾಯಿ 1ರ ಗುಣವೃದ್ಧಿ ಮೊಬಲಗನ್ನು, ತಕ್ಕಲ್ಲಿ ಆಯಾಯ ಮೊಬಲಗಿನ ಅದೇ ಗುಣವೃದ್ಧಿ ಮೊಬಲಗನ್ನು ಕೆರುವ ಶರ್ತದ ಮೇಲೂ ಅಂಗೀಕರಿಸಲ್ಪಡುವವು.

ಹೆಚ್ಚಿನ ಮಾಹಿತಿ ಸೆಕ್ರೆಟರಿಯವರಿಂದ ತಿಳಿಯಬಹುದು.

ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಆಫೀಸು, ಉಡುಪಿ, ತಾ. 30—6—1925. | ನರ್ಸಿಂಪಳ್ಳಿ ಆನಂದ್ರಾವ್, ಸೆಕ್ರೆಟರಿ ಮತ್ತು ಒಫಿಸಿಯೇಟಿಂಗ್ ಮೆನೇಜರ್.

ಮೂರು ದಿವಸಗಳಲ್ಲಿ ಗುಣಸ್ಕಿದಿದ್ದರೆ ಔಷಧಿಯ ಕ್ರಯ ವಾಪಾಸು.

ಜೀರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ, ಪರಮಾನಂದ ಮೊದಲಾದ ಸುಖಜೀವನಕ್ಕೆ ಬೇಕಾದ ಆರೋಗ್ಯದಾಯಕ.

ಲೋಕಪ್ರಸಿದ್ಧವಾದದ್ದು! ಅನುಭವಸಿದ್ಧವಾದದ್ದು!!

ಟ್ರೇಡ್ ಮಾರ್ಕ್] ಅಗಸ್ತ್ಯ [ನೋಡಿ ತಕ್ಕೊಳ್ಳಿರಿ.

ಮನ್ಮಥ ಚಿಂತಾಮಣಿ ಲೇಹ.

(ರಜಿಸ್ಟರ್ ಆದದ್ದು)

ಅಬಾಲವೃದ್ಧ ಸ್ತ್ರೀಪುರುಷರ ಅನೇಕ ರೋಗಗಳ ಮೇಲೆ ಗುಣಕಾರಿಯಾದದ್ದು.

ಮೋಹವಿಕಾರವಿದ್ದವರಿಗೂ, ನಿದ್ರೆ ಇಲ್ಲದವರಿಗೂ, ಸ್ವಪ್ನೇಂದ್ರಿಯವಾಗುವ ಯುವಕರಿಗೂ ಜ್ಞಾನಿಸುಜ್ಞಾನಿಗಳಿಗೂ ಉಪಯೋಗವುಳ್ಳ ಪರಮಾನಂದ ಔಷಧಿ.

1 ಸೇರು ಹಾಳ್ಪತ್ತೆಂಟು ದಿವಸಕ್ಕೆ ಸೇವಿಸಬಹುದು.

1 ಸೇರು ಡಬ್ಬಿ 1ಕ್ಕೆ 3—0—0. ½ ಸೇರು ಡಬ್ಬಿ 1ಕ್ಕೆ 1—9—0.

[illegible] ವಿಶೇಷ ಮಾಹಿತಿಗೆ ಬರೆಯಿರಿ.

ವಿಳಾಸ:— [illegible]
ಸರಾಫ, [illegible]
[illegible] (ದ. ಕ.)

:ಪಂಡಿತ ಬಿ. ರಾಮಕೃಷ್ಣ ಬಾಳಿಗರ:

50 ವರ್ಷ ಅನುಭವದ ಸಿದ್ಧೌಷಧಗಳು.

ಮಹಾ ಮದನಕಾಮೇಶ್ವರಿ ಲೇಹ—ಇದನ್ನು ಭಂಗಾರ, ಅಭ್ರಕಭಸ್ಮ, ರಸಸಿಂಧೂರ, ಕಸ್ತೂರಿ, ಕುಂಕುಮಕೇಸರ ವಗೈರೆ ಅವಶ್ಯಕವಾದ ರಸಾಯನ ದ್ರವ್ಯಗಳಿಂದ ತಯಾರಿಸಲ್ಪಟ್ಟಿರುತ್ತದೆ. ಇದು ಎಲ್ಲಾ ತರದ ನಪುಂಸಕ ರೋಗಗಳನ್ನೂ, ಸ್ವಪ್ನಾವಸ್ಥೆಯಲ್ಲಿ ಧಾತುಪತನೆಯನ್ನೂ ಗುಣಪಡಿಸಿ, ದೇಹಕ್ಕೆ ದಿವ್ಯಕಾಂತಿಯನ್ನೂ, ಪುಷ್ಟಿಯನ್ನೂ, ಪುರುಷತ್ವವನ್ನೂ, ವೀರ್ಯಸ್ತಂಭನವನ್ನೂ ಉಂಟುಮಾಡಿ ಅತ್ಯಾನಂದವನ್ನು ಕೊಡುವುದಲ್ಲದೆ, ಅಜೀರ್ಣ, ಅತಿಸಾರ, ಗ್ರಹಣಿ, ಅಮ್ಲ, ಪಿತ್ತ, ಉದರಶೂಲೆ, ಪ್ರಮೇಹ ವಗೈರೆ ರೋಗಗಳನ್ನು ಗುಣಪಡಿಸುವಲ್ಲಿ ಕೇವಲ ಅಮೃತಸಮಾನವಾಗಿರುವುದು. ಇದನ್ನು ಆಬಾಲವೃದ್ಧರೂ ಸೇವಿಸಬಹುದು.

43 ದಿನಗಳ ವರೆಗೆ ಸಾಕಾಗುವ ಲೇಹ ಸೇರು ೧ರ ರೂ. 3—0—0.

ಬೃಹತ್ ಶಾರಿವಾದ್ಯಾದಿ ರಸಾಯನ—ಇದು ಶಾಸ್ತ್ರಯುಕ್ತ ರಕ್ತವನ್ನು ಶೋಧಿಸುವ ದಿವ್ಯೌಷಧವಾಗಿರುತ್ತದೆ. ಇದರ ಸೇವನೆಯಿಂದ 20 ತರದ ಪ್ರಮೇಹ ರೋಗಗಳೂ ಎಲ್ಲಾ ತರದ ಫರಂಗಿ ರೋಗಗಳೂ ಅಲ್ಪ ಸಮಯದಲ್ಲಿ ಗುಣಹೊಂದುವವು. ಅದಲ್ಲದೆ ಇದು ಎಲ್ಲಾ ತರದ ಕುಷ್ಠವ್ಯಾಧಿಗಳನ್ನೂ, ಖಜ್ಜಿ, ಕುರು ಮೊದಲಾದ ಸಕಲ ಚರ್ಮವ್ಯಾಧಿಗಳನ್ನೂ ಪಾದರಸ ಸೇವನೆಯಿಂದ ಉಂಟಾದ ರೋಗಗಳನ್ನೂ ಮತ್ತು ಹೆಂಗಸರ ಪ್ರದರ ರೋಗಗಳನ್ನೂ ಶಾಸ್ತ್ರಯುಕ್ತ ಗುಣಪಡಿಸುವುದು.

8 ಔನ್ಸಿನ ಬಾಟ್ಲಿ ಒಂದರ ಕ್ರಯ ಬರೇ ರೂ. 1—9—0.

ವಿಳಾಸ:— ಪಂಡಿತ, ಬಿ. ರಾಮಕೃಷ್ಣ ಬಾಳಿಗ, ಬಂಟವಾಳ ದ. ಕ.

ಮಂಗಳೂರು ಏಜಂಟರು:— ಮಂಗಳೂರು ಟ್್ರೇಡಿಂಗ್ ಎಸೋಸಿಯೇಶನ್,
ತೇರುಬೀದಿ, ಮಂಗಳೂರು.

AMRUTANJAN Best Indian Pain Balm Amrutanjan BOMBAY

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು.

❋ ಅಮೃತಾಂಜನ ❋

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುತ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ, ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 2 ಆಣೆ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ ಟೌನ್, ಮದ್ರಾಸು.

109 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

— ರಥೋತ್ಸವ, ವಿವಾಹ ಉಪನಯನಗಳ ಸಮಯ — ಸರ್ವರಿಗೂ ಉಡಿಗೆ ತೊಡಿಗೆಗಳು ಬೇಕಾಗುವ ಸಂದರ್ಭ.

ಯಾರು, ಯಾವುದನ್ನು ಎಲ್ಲಿ ಪಡೆಯಬೇಕೆಂಬ ಶಂಕೆಯುಂಟಾದ ವಿಕಂಬ ಮಾಡಬೇಡಿರಿ. ಉಡಿಗೆತೊಡಿಗೆಗಳನ್ನು ಚುನಾಯಿಸಿ ತಮಗೆ ಬೇಕಾದ ಯಥಾರ್ಥ ಮಾಹಿತಿಯನ್ನು ಕಳೆದ ಹತ್ತಿಪ್ಪತ್ತು ವರುಷಗಳಿಂದ ಪಡೆದು ನಮ್ಮಲ್ಲಿಯ ವ್ಯಾಪಾರವು ಗಿರಾಕಿಗಳಿಗೆ ಸರ್ವ ತೃಪ್ತಿಯಿಂದಲೂ ಲಾಭಕರವಾಗಿ ಪರಿಣಮಿಸುವಂತೆ ನಮ್ಮ ಅವಳ ಸಂಗ್ರಹವನ್ನು ಮಾಡಿರುತ್ತೇವೆ.

ಗುರ್ಪುರ್ಕರ್ ಬ್ರದರ್ಸ್, ರಥಬೀದಿ, ಮಂಗಳೂರು.

ಹೆಡ್ ಆಫೀಸು:—ರಥಬೀದಿ—(ಮೊದಲು ಸುಜೀರ ನಾಗಪ್ಪನಾಯಕ್, ಎಂಡ್ ಕೊ. ಇದ್ದಲ್ಲಿ; ಅಜಿಜುದ್ದೀನ್ ರಸ್ತೆಗೆ ತಿರುಗುವಲ್ಲಿ) ಮಂಗಳೂರು.

ಬ್ರೇಂಚ್ ಆಫೀಸು:—ರಥಬೀದಿ—(ಹಳೇ ತಾಲೂಕು ಕಚೇರಿಯ ವಠಾರಕ್ಕೆ ಸಮೀಪವಿರುವ ಮಳಿಗೆ) ಮಂಗಳೂರು.

ಈ ದೇಶದ ಪ್ರಖ್ಯಾತಪಟ್ಟ ನೇಯುಗೆಯ ಕೇಂದ್ರಸ್ಥಳಗಳಾದ—ಬನಾರಸ್, ಪೂನಾ, ಅಹಮ್ಮದಾಬಾದ್, ಸೂರತ್, ಬೆಂಗಳೂರು, ಧರ್ಮಾವರಮ್, ಕಂಜೀವರಮ್, ಕೊಯಮುತ್ತೂರು, ಮಧುರೆ, ತಂಜಾವೂರು, ಕುಂಭಕೋಣ, ಆರ್ನಿ, ಪಾಡಿತೆಟ್ಟು, ಹುಬ್ಬಳ್ಳಿ, ಇಳಕಲ್, ಗದಗ, ಮದ್ರಾಸು ಈ ಪ್ರಾಂತ್ಯಗಳಲ್ಲಿ ತಯ್ಯಾರಾದ

ಜರಿಸೀರೆಗಳು, ದುಪ್ಪಟ್ಟಾ, ಜರಿಶಾಲು, ಪೇಟ್ಟಿ, ರೇಶ್ಮೆ ಸೀರೆಗಳು, ಅರಳುಬೊಟ್ಟು ಸೀರೆಗಳು, [illegible] ರೇಶ್ಮೆ ಸೀರೆಗಳು, [illegible] ಸೀರೆಗಳು, ರೇಶ್ಮೆ ಮಡಿಗಳು, [illegible] ಸೀರೆಗಳು [illegible], [illegible] ನ್ಯಾಯ ವ ಇತರ [illegible] ಶರ್ಟಿಂಗ್.

ಕೈಮಗ್ಗದಲ್ಲಿ ತಯಾರಿಸಿದ ನೂಲಿನಿಂದ ಮಾಡಿದ—
[illegible]—
[illegible]—
[illegible]

[illegible]

ಲಿವರ್ ಮೂವ್‌ಮೆಂಟ್ ವಾಚ್.

15 ಮಣಿಗಳಿದ್ದು ರೋಲ್ಡಗೋಲ್ಡ ವಾಚ್.

ಈ ಗಡಿಯಾರ ಕೈಗೆ ಕಟ್ಟುವಂಥಾದ್ದಾಗಿ ಸರಿಯಾದ ಸಮಯವನ್ನು ತೋರಿಸಿ ಚಿರಕಾಲ ವರೇಗೆ ಬಾಳುವುದು.

10 ವರುಷದ ವರೆಗೆ ಬಾಳುವ ಗೆರೆಂಟಿ ಇದೆ. ಕ್ರಯ ರೂ. 17—8—0.

11 ಮಣಿಗಳಿದ್ದು ನಿಜವಾದ ರೋಲ್ಡ ಗೋಲ್ಡ ಬಂಗಾರದಿಂದ ತಯಾರಿಸಲ್ಪಟ್ಟು 5 ವರ್ಷದ ಗೆರೆಂಟಿ ಇರುವ ವಾಚಿಗೆ ಕ್ರಯ ರೂ. 12—8—0.

18 ಕೆರೆಟ್ ಇಲೆಕ್ಟ್ರೊ ರೋಲ್ಡ ಗೋಲ್ಡ ವಾಚ್ ಕ್ರಯ ರೂ. 7—0—0. ಲಿವರ್ ಮೂವ್‌ಮೆಂಟ್ 10 ಮಣಿಗಳಿದ್ದ ಬಂಗಾರ ಗಿಲ್ಟುವಾಚ್ ಕ್ರಯ ರೂ. 13—8—0.

ಎಲಾರ್ಮ ಜರ್ಮನ್ ಟ್ಯಾಮ್‌ಪೀಸ್ ಕ್ರಯ ರೂ. 5-0-0

ಡಬ್ಬಲ್ ಎ. „ „ „ 6-0-0.

"ಬಿ" ಟ್ಯಾಮ್‌ಪೀಸ್ ಕ್ರಯ ರೂ. 2—4—0

ಟಿಕ್—ಟಾಕ್ ವಾಚ್ ೧ರ ಕ್ರಯ „ 2—12—0

ಕಂಬೈಂಡ್ ಪೆಪರ್ ಕ್ಲಿಪ್ ಟ್ಯಾಮ್‌ಪೀಸ ಹಿತ್ತಾಳಿ ಅಥವಾ ನಿಕ್ಕಲ್ ಕ್ರಯ ರೂ. 6—0—0. ಇನೆಮಲ್ ರೂ. 7—0—0. ಫ್ರೆಂಚ್ ಬೆಡ್ ಫೋಟೋಗಳು ಡಜನ್ ೧ರ ಕ್ರಯ ರೂ. 2—4—0.

Emarald Watch Co.,
P. T. MADRAS.

ಪ್ರಸಿದ್ಧ ಪತ್ರಿಕೆ.

ಹೊಸ ಬೀಜಗಳು! ಬಾತರಿಯಾದವು!!

೧೨ ಪ್ಯಾಕೆಟ್ ಉತ್ತಮ ಜಾತಿಯ ವಿದೇಶಿ ತರಕಾರಿ ಬೀಜಗಳು ೧೨ ರಖಂ ... ... ೨-೦-೦.

೧೨ ಪ್ಯಾಕೆಟ್ ನಾಟಿ ತರಕಾರಿ ಬೀಜಗಳು ೧೨ ರಖಂ ... ... ೧-೧೨-೦.

೧೨ ಪ್ಯಾಕೆಟ್ ದೇವರ ಪೂಜೆಗೂ ಮತ್ತು ಅಲಂಕಾರಕ್ಕೆ ಯೋಗ್ಯವಾದ ಹೂ ಬಿಡತಕ್ಕ ಉತ್ತಮವಾದ ೧೨ ರಖಂಗಳ ಬೀಜಗಳು ... ... ೨-೦-೦.

ಈ ಮೇಲ್ಕಂಡ ಬೀಜಗಳನ್ನು ಈ ತಿಂಗಳೊಳಗಾಗಿ ತರಿಸಿಕೊಂಡರೆ, ಪೋಸ್ಟೇಜು ಮತ್ತು ಇತರ ಎಲ್ಲಾ ಚಾರ್ಜುಗಳು ಸೇರಿ, ಮೇಲೆ ನಮೂದಿಸಿರುವ ಮೊಬಲಗಿಗೆ, ವಿ. ಪಿ ಯಿಂದ ಕಳುಹಿಸುತ್ತೇವೆ. ಅಲ್ಲದೆ ಇದರ ಸಂಗಡ ಚಿತ್ರಗಳಿಂದ ಕೂಡಿರುವ ನಮ್ಮ ದೊಡ್ಡ ಕ್ಯಾಟಲಾಗನ್ನು ಕಳುಹಿಸಿ ಕೊಡುತ್ತೇವೆ. ನಮ್ಮಲ್ಲಿ ದೊರಕುವ ಬೀಜಗಳು, ಉತ್ತಮ ತರಹವುಳ್ಳವು. ಮತ್ತು ಖಾತರಿಯಾದವು, ಹುಟ್ಟದೆ ಹೋದರೆ, ಬೇರೆ ಬೀಜಗಳನ್ನು ಬದಲಾಯಿಸಿ ಕೊಡುತ್ತೇವೆ.

ದಿ. ಮೆಜೆಸ್ಟಿಕ್ ನರ್‌ಸರಿ (ತೋಟ)
ಲಾಲ್‌ಬಾಗ್ (ಕೋಟೆ) ರೋಡ್,
ಬೆಂಗಳೂರು ಸಿಟಿ.

11 ಮಣಿಗಳಿದ್ದು ಬ್ರಿಜ್ ಮೂವ್‌ಮೆಂಟ್.

22 ಕೆರೆಟ್ ರೋಲ್ಡಗೋಲ್ಡ ರಿಸ್ಟ್‌ವಾಚ್.

ಈ ವಾಚ್ ಎಂಟಾಣೆ ಪಾವಲಿಯಷ್ಟು ಸಣ್ಣದಾಗಿ ಬಹು ಚಲೋದಾದ ಇನೆಮಲ್ ಡಾಯಲ್ ಇದ್ದು ಬಹು ಉತ್ತಮವಾಗಿದೆ. 5 ವರ್ಷದಗ್ಯಾರಂಟಿ ಇದೆ. ಕ್ರಯ ರೂ. 12/8

18 ಕರೆಟು ಇಲೆಕ್ಟ್ರೊ ರೋಲ್ಡಗೋಲ್ಡ ವಾಚ್ ಕ್ರಯ ರೂ. 7—0—0. "ಬಿ" ಟ್ಯಾಮ್‌ಪೀಸ ರೂ. 2-4-0

9 ಕಾರಾಟ್ 8 ಮಣಿಗಳ ವಾಚ್ ೧ರ ಕ್ರಯ 23—0—0.
14 „ „ „ 26—0—0.
14 „ 15 ಮಣಿ „ 36—0—0.
9 „ „ „ 32—0—0.

ಚಲೋದಾದ ಲವ್ ನಕ್ಷೆಗಳು ಡಜನ್ 1ಕ್ಕೆ ರೂ. 2/4.

P. Sambasiva Chetty & Co.,
134 NAINEAPPA NAICKEN ST.
P. T. MADRAS.

Fresh Arrivals

Pear's Solid Brilliantine, Evans Lime-juice Glycerine, Tooth powders Rose water, Syrups of all sorts for drinks, Denatured Spirits, etc., etc.

The Mangalore Trading Association,
Car-Street, MANGALORE.

ಡಾಕ್ಟರುಗಳು ಭಿನ್ನಾಭಿಪ್ರಾಯಪಡುವಾಗ್ಯೆ ತೀರ್ಮಾನಿಸುವದು ಯಾರು?

ಅಂಥಾ ಸಂದರ್ಭಗಳಲ್ಲಿ ಡೆಂಗ್ಯೂ ಮುಂತಾದ ಜ್ವರಗಳನ್ನು ನಿವಾರಿಸುವಂಥಾ "ಬಾಟ್ಲಿವಾಲರ ಏಗ್ಯೂಮಿಕ್ಶ್ಚರ್"ನ್ನು ಸರಾಗವಾಗಿಯೂ, ಮತ್ತು ಜ್ವರಗಳನ್ನು ಖಂಡಿತವಾಗಿ ಅಳಿಸುವಂಥಾದೂ, ಎಲ್ಲಾ ತರದ ಚಳಿರೋಗಗಳನ್ನು ಹೋಗಲಾಡಿಸುವಂಥಾದ್ದೂ ಆದ "ಬಾಟ್ಲಿವಾಲರ ಏಗ್ಯೂಪಿಲ್ಸ್" ಇದನ್ನು ಉಪಯೋಗಿಸಿರಿ.

ಐ. ಎಮ್. ಎಸ್. ಡಾಕ್ಟರುಗಳಿಂದ ಶಿಫಾರಸು ಮಾಡಲ್ಪಟ್ಟಿದ್ದು. ಇದರ ಉಪಯೋಗದಿಂದ ಹೃದಯದ ಮೇಲೆ ಯಾವದೊಂದೂ ಬಾಧಕವಿಲ್ಲ. ಅರ್ಧ ಶತಮಾನದಿಂದ ಹಿಂದೂಸ್ಥಾನ, ಬರ್ಮಾ, ಸಿಲೋನ್, ಆಫ್ರಿಕಾ ಇತ್ಯಾದಿಗಳಲ್ಲಿ ಪ್ರಖ್ಯಾತಪಟ್ಟದ್ದಾಗಿರುತ್ತದೆ.

ಅನೇಕ ಹಿಂದೀ ಪ್ರದರ್ಶನಗಳಲ್ಲಿ ಬೆಳ್ಳಿ ಮತ್ತು ಬಂಗಾರದ ಪದಕಗಳನ್ನು ಪಡೆದಿರುತ್ತ. ಖ್ಯಾತಿ ಪಾತ್ರವೆಂಬುದು ಮಾರ್ವಾಡಿಗಳೂ ಕೂಡ ಅವರ ಮೇಲೆ ಹಣವನ್ನು ಮುಂಗಡವಾಗಿ ಕೊಡುತ್ತಾರೆ. ಬಡ ಮತ್ತು ಮಧ್ಯಮ ತರಗತಿಯ ಜನರಿಗೆ ಧರ್ಮದಾನವಾಗಿದ್ದು ಸಂಚಾರ, ಪ್ರಯಾಣ, ದೇಶಾಟನೆಗಳ ಸಮಯದಲ್ಲಿ ಹತ್ತಿರದಲ್ಲಿರಿಸಿಕೊಳ್ಳದಾಗಿರುತ್ತದೆ.

ಬಾಟ್ಲಿವಾಲರ ಬಾಲಾಮೃತ ಅಥವಾ ಟೊನಿಕ್ ಸಿರಪ್.

ಕೆಮ್ಮನ್ನು ಹೋಗಲಾಡಿಸಿ, ಎದೆನೋವನ್ನು ಶಾಂತಗೊಳಿಸಿ, ಜ್ವರವನ್ನು ಉಪಶಮನಿಸಿ, ವಿದ್ಯಾರ್ಥಿಗಳನ್ನು ಕೆಡಿಸುವ ಧಾತುವರ್ಧನವನ್ನು ಮಾಡುವದರಲ್ಲಿ ಅತ್ಯುತ್ತಮವಾಗಿರುತ್ತದೆ. ಕಫವನ್ನು ಬಿಡಿಸಿ ಮಲಬದ್ಧವಾಗುವಂತೆ ಮಾಡುವುದಲ್ಲದೆ ಅದೇ ಸಮಯದಲ್ಲಿ ಒಳ್ಳೇ ಜೀರ್ಣವನ್ನು ಉಂಟುಮಾಡುವುದು. ದರ ಮೊದಲಾದ ಮಾಹಿತಿಯನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಕಾರಖಾನೆ:-CAWASHAPUR, BOMBAY.

Dr. H. L. Batliwala & Co., Ltd.,
Sayani Road, P. O. Cadell Road, Bombay. No. 14.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.,
Sayani Road, P. O. Cadell Road, Bombay. No. 14.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ ೧ಕ್ಕೆ 14 ಆಣೆ. ಟ. ಖ. 9 ಆಣೆ.

ನಮ್ಮ ವಿಳಾಸ:— ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.

ಏಜಂಟರು:— ದಿ. ಊಲನ್ ಮಾರ್ಟ್, ಮಂಗಳೂರು.

ಜ್ಯೋತಿಷ್ಯ ಸಂಗ್ರಹ.

(1) ಬೃಹಜ್ಜಾತಕ ... ...
(2) ಉಮಾಮಹೇಶ್ವರ ಸಂವಾದ ಎಂಬ ಜ್ಯೋತಿಷ್ಯ ಕಾಲಚಕ್ರ
(3) ಕೇರಳ ಪ್ರಶ್ನೆ ... ...
(4) ಪ್ರಶ್ನೋತ್ತರ ರತ್ನಮಾಲಿಕಾ ... ...
(5) ನವನೀತಾರಿಷ್ಟ ... ...
(6) ಷಟ್ಪಂಚಾಷಿಕ ಗ್ರಂಥ ... ...
(7) ನಕ್ಷತ್ರ ಚೂಡಾಮಣಿ ಗ್ರಂಥ ... ...
(8) ಮುಹೂರ್ತಪದವೀಗ್ರಂಥ ... ...
(9) ಅಷ್ಟದಿಕ್ಪಾಲಕ ಮಂಗಳಾಷ್ಟಕಗಳು ... ...
(10) ಕಾಲನಿರ್ಣಯವಿಧ್ಯೋಯಂ ಗ್ರಂಥ ... ...
(11) ಸವ್ಯಾಖ್ಯಾನ ಕಾಲಾಮೃತ... ... ...

— ಪ್ರಸಂಗದ ಪುಸ್ತಕಗಳು. —

(1) ಸೇತು ಬಂಧನ ... ...
(2) ವಸಿಷ್ಠ ಪುರಾಣ ... ...
(3) ಇಂದ್ರಜೀತು ಕಾಳಗ ... ...
(4) ಚಂಡಭೀಮ ... ...
(5) ವೈಮನರಾಮನ ಚರಿತ್ರೆ ... ...
(6) ಭೀಮನಿ ಕಲ್ಪಾ ಚೋರ ಕಥೆ ... ...
(7) ಕುವರಾಂ ರಾಮನ ಕಥೆ ... .
(8) ಕೃಷ್ಣದಾನಾಮೃತ ... ...
(9) ಶ್ರೀಕೃಷ್ಣ ಸತ್ಯಭಾಮಾ ಸಂವಾದ ... ...
(10) ಚಿತ್ರಕೇತು ರಾಜನ ಕಥೆ ... ...
(11) ಬಕಾಸುರವಧೆ ... ...
(12) ಬಾಣಾಸುರನ ಕಥೆ ... ...
(13) ರಂಭಾಶುಕ ಸಂವಾದ ... ...
(14) ರುಕ್ಮಿಣೀ ಪರಿಣಯ ... ...
(1 [illegible] ಯಕ್ಷಗಾನ
(16) ಸಭಾ ಲಕ್ಷಣವು ... ...
(17) ಶ್ರೀ ಕೃಷ್ಣ ದಿನಾತ್ಮನೋದ ಕಥಾ ... ...
(18) ಚಂದ್ರಮೌಳಿ ಕಾಳಗ ... ...
(19) ಚಿತ್ರರಾತ್ರಿ ಕಾಳಗ ... ...
(20) ಯಕ್ಷಗಾನ ಸಾರಂಗಧರನ ಕಥೆ ... ...
(21) „ ಶನಿದೇವರ ಮಹಾತ್ಮೆ ... ...
(22) „ ಹರಿಶ್ಚಂದ್ರನ ಕಥೆ ... ...
(23) ಯಕ್ಷಗಾನ ಲಕ್ಷ್ಮಣಗೃಹ ಕಥೆ ... ...
(24) „ ಚೋರ ಕಥೆ ... ...
(25) „ ಸಾವಿತ್ರಿ ಕಾರವಂಚ ಕಥೆ ...
(26) „ ಗೋವಿನ ಚರಿತ್ರೆ ... ...
(27) „ ಮುಕ್ಕಾಸನ ಕಥೆ ... ...
(28) „ ಸಾನಂದ ಗಣೇಶ್ವರ ಕಥೆ ... ...
(29) „ ಅಂಗದ ಸಾಧನ ... ...

— ಭಜನೆಯ ಪುಸ್ತಕಗಳು. —

(1) ಉಡುಪಿಕ್ಷೇತ್ರ ಮಹಾತ್ಮೆ ...
(2) ಹನುಮದ್ರಾಮಾಯಣ ... ...
(3) ಅಧ್ಯಾತ್ಮ ವಿಚಾರ ... ...
(4) ಭಕ್ತಿಮಹಿಮೆ ... ...
(5) ಪ್ರಬಂಧ ಮುಕ್ತಾವಳಿ ... ...
(1) ಹರಿಕೀರ್ತನಾಮೃತಸಾರ ... ...
(2) ಹರಿನಾಮಾಮೃತಂ. ... ...
(3) ರುಕ್ಮಿಣೀ ಕಲ್ಯಾಣ ... ...
(4) ಮಂಗಳ ಗೌರೀಹಾಡು ... ...
(5) ಉದ್ಯಾಪನೆ ಹಾಡು ... ...
(6) ಯಕ್ಷಗಾನ ಗಿಳೀ ಹಾಡು
(7) ಕನಕದಾಸ ಪುರಂದರದಾಸರ ಕೀರ್ತನೆಗಳು
(8) ಬೀಗರ ಹಾಡು ... ...
(9) ಭಜನೆಯ ಪದಗಳು ... ...

ಪುಸ್ತಕಗಳು ದೊರೆಯುವ ಸ್ಥಳ:—

ಶಾರದಾ ಛಾಪಖಾನೆ,
ತೇರು ಬೀದಿ, ಮಂಗಳೂರು.

ಶಾಲಿವಾಹನಶಕ ೧೮೪೭ನೆಯ ಕ್ರೋಧನ ಸಂವತ್ಸರದ ಕಾರ್ತಿಕ ಬ ೭ ಶನಿವಾರದಿಂದ ಕ್ರೋಧನ ಸಂವತ್ಸರದ ಕಾರ್ತಿಕ ಬ ೧೩ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೫ನೆಯ ತುಲಾ ಬೊಂತೆಲ್.)

ತಾರೀಖು	ವಾರ	ತಿ.	ಘಳಿಗೆ	ನಕ್ಷತ್ರ	ಘಳಿಗೆ	ಸೌರಮಾನ	ಸೂರ್ಯ	
							ಉ.	ಅಸ್ತ.
7	ಶನಿ	೭	೬೦. ೦	ಧನಿಷ್ಠಾ	೬೦. ೦	೨೨	6 28	6. 2
8	ರವಿ	೭	೨ .೫೮	ಧನಿಷ್ಠಾ	೫ .೧೪	೨೩	6.28	6. 2
9	ಸೋಮ	೮	೮ .೧೬	ಶತಭಿಷಾ	೧೧.೪೨	೨೪	6.29	6. 1
10	ಮಂಗಳ	೯	೧೨.೪೫	ಪೂಭಾ	೧೭.೨೮	೨೫	6.29	6. 1
11	ಬುಧ	೧೦	೧೬.೪೪	ಪೂಭಾ	೨೨.೩೧	೨೬	6.30	6. 1
12	ಗುರು	೧೧	೧೯.೩೨	ಉತ್ತರಾ	೨೬.೪೦	೨೭	6.30	6. 1
13	ಶುಕ್ರ	೧೨	೨೧.೧೪	ರೇವತಿ	೨೯.೨೯	೨೮	6.31	6. 1

ಮಂಗಳೂರಿನ ವಾಯುಸ್ಥಿತಿ.

Date ತಾರೀಖು	Temperature. ಉಷ್ಣ (ಕಾವು)		Rainfall. ಮಳೆ	
	Maximum ಹೆಚ್ಚಾದ್ದು	Minimum ಕಡಿಮೆ	ಇಂದಿನ ಮಳೆ	ಜುಮಲಾ ಮಳೆ.
30	91—2	75—0	0—43	—
31	93—4	78—2	—	—
1	93—8	76—3	—	—
2	94—6	73—8	—	—
3	94—2	72—4	—	—
4	95—0	72—5	—	—
5	93—2	74—2	—	134-72

ಮಂಗಳೂರಿನ ಪೇಟೆ ಧಾರಣೆ.

ಜಿನಸು	ಇಂದ	ವರೆಗೆ
	ರೂ. ಆ.	ರೂ. ಆ.
ಮಸ್ತಿ ...	8—10	9—4
ಗುಡ್ಡು ...	8—1	8—6
ರಾಶಿ ಸುಗ್ಗಿ ...	7—4	8—2
ಅಚ್ಚಲ್ ಬೆಳ್ತಿಗೆ ...	8—12	9—8
ಗುಡ್ಡು ಬೆಳ್ತಿಗೆ ...	8—0	8—4
ರಂಗೂನು ಬೆಳ್ತಿಗೆ ಗೋಣಿ ೧ ...	13—8	14—8
ಗೋಧಿ ಗೋಣಿ ೧ಕ್ಕೆ ...	17—8	19—0
ಹುರುಳಿಗೋಣಿ ೧ಕ್ಕೆ ...	9—0	9—8
ಕಡಲೆಗೋಣಿ ೧ಕ್ಕೆ ...	12—8	13—8
ತೊಗರಿಗೋಣಿ ೧ಕ್ಕೆ ...	12—8	13—0
ಕ. ಬೇಳೆ ಗೋಣಿ ೧ಕ್ಕೆ ...	15—0	20—0
ಉದ್ದು ಗೋಣಿ ೧ಕ್ಕೆ ...	16—0	16—8
ಹೆಸರುಗೋಣಿ ೧ಕ್ಕೆ ...	14—0	15—0
ಊರು ಬೆಲ್ಲ ಖಂಡಿ ೧ಕ್ಕೆ ...	65—	70—0
ಉಪ್ಪು ಗೋಣಿ ೧ಕ್ಕೆ ...	4—0	4—8
ಕೊಬ್ರಿ ಖಂಡಿ ೧ಕ್ಕೆ ...	120—0	125—0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	48—0	—
ಎಳ್ಳಿಂಡಿ ಖಂಡಿ ೧ಕ್ಕೆ ...	42—8	—
ಕೊಬ್ರಿ ಎಣ್ಣೆ ಮುಡಿ ೧ಕ್ಕೆ ...	8—12	10—0
ಎಳ್ಳೆಣ್ಣೆ ಮುಡಿ ೧ಕ್ಕೆ ...	8—0	11—0
ಚಿಮಿಣಿ-ಎಣ್ಣೆ ಪೆಟ್ಟಿಗೆ ೧ಕ್ಕೆ ...	8-8-0	—
ಜೋನಿ ಸಕ್ಕರೆ ಮುಡಿ ೧ಕ್ಕೆ ...	4—0	—
ಊರ [illegible] ಮುಡಿ ೧ಕ್ಕೆ ...	7—0	—
ಸಾಸಿವೆ ಮುಡಿ ೧ಕ್ಕೆ ...	8—12	—
ಕೊತ್ತಂಬರಿ ಮುಡಿ ೧ಕ್ಕೆ ...	3—14	4—0
ಕಾಫಿ ಖಂಡಿ ೧ಕ್ಕೆ ...	345—0	400—0
ಹೊಸಗೋಟು ಅಡಿಕೆ ಖಂಡಿ ೧ಕ್ಕೆ ಹಳತು ...	280—0	300—0
ಕಾಳುಮೆಣಸು ಖಂಡಿ ೧ಕ್ಕೆ ...	260—0	265—
ಯಾಲಕ್ಕಿ ಮಣ ೧ಕ್ಕೆ ...	100—0	—
ಗೇರುಬೀಜ ಮುಡಿ ೧ಕ್ಕೆ ...	4—12	—
ಶುಂಠಿ ಖಂಡಿ ೧ಕ್ಕೆ ...	45—0	65—0
[illegible] ಮಣ ೧ಕ್ಕೆ ...	16-10	16—12
[illegible] ಮಣ ೧ಕ್ಕೆ ...	21—0	—
[illegible] ಸೇರು ೧ಕ್ಕೆ ...	18—[illegible]	
[illegible] ಮಣ ೧ಕ್ಕೆ ...	16—8	
ಹತ್ತಿ ...	13—7	

ವಸಂತ.

ಕನ್ನಡಿಗರ! [illegible]

ಈಗಾಗಲೇ ಎರಡನೇ ಸಂಪುಟವು ಆರಂಭಿಸಲಿದೆ.

ಇತಿಹಾಸನಿಧಿ ಎಂದರೆ . . . . ವಸಂತ
ಸಮಾಜಸುಧಾರಕನೆಂದರೆ . . . . . . ವಸಂತ
ಕೈಗಾರಿಕೆಯ ಸಾಮ್ರಾಜ್ಯವೆಂದರೆ . . . . ವಸಂತ
ಕರ್ನಾಟಕ ಭಾಷಾಸೇವಕನೆಂದರೆ . . . . ವಸಂತ
ದೇಶವಿದೇಶ ಬಂಧುವೆಂದರೆ . . . . . . ವಸಂತ
ಕಾದಂಬರಿಗಳ ಭಂಡಾರವೆಂದರೆ . . . . . ವಸಂತ
ಚಿತ್ರಾಕರ್ಷ ಚಿತ್ರಶಾಲೆಯೆಂದರೆ . . . . . ವಸಂತ
ದೇಶಭಕ್ತನೆಂದರೆ . . . . ವಸಂತ

ಇಂತಹ ವಸಂತನು ಯಾರಿಗೆ ಬೇಕು, ಯಾರಿಗೆ ಬೇಡ?

48 (ಕ್ರೌನ್ ½ ಶೀಟ ಸ್ಯಾಜಿನ) ಪುಟಗಳನ್ನು ಒಳಗೊಂಡ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3—4—0 ಮಾತ್ರ.

ವ್ಯವಸ್ಥಾಪಕ,
ವಸಂತ ಕಾರ್ಯಾಲಯ,
ಕುಂದಾಪುರ, ದಕ್ಷಿಣ ಕನ್ನಡ

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ

ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ಯಾವಂತರೂ ತಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ತಮಾನಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನ್ನು ಕುರಿತ ಲೆಕ್ಕಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಅಧಿಕಾರಿಗಳೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪೋಷಕರಿಗೆ ... ... ರೂ. 3—0—0
ಇತರರಿಗೆ, ಪರಸ್ಥಳಕ್ಕೆ, ಪೋಸ್ಟೇಜು ಸೇರಿ „ 2—8—0.
„ ಶಿಕ್ಷಕರಿಗೆ ... „ 1—8—0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪತ್ರಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿಯಬಹುದು.

ಎಡಿಟರ್,
ಬಿ. ಹನುಮಂತಯ್ಯಗೌಡ,
ಅರ್ಥಸಾಧಕ ಪತ್ರಿಕೆ,
ಅರಳೇಪೇಟೆ, ಬೆಂಗಳೂರು, ಸಿಟಿ.

ತ್ವರೆ ಮಾಡಿರಿ! ತಯಾರಾಗಿದೆ.

ನಾಲ್ಕನೇ ದರ್ಜೆಯ ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ನಾಲ್ಕನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಮಿಸ್, ಗಣಪತಿರಾವ್ ಐಗಳ್—ಗ್ರಂಥಕರ್ತರು, ಮನೋರಂಜಕ ಚಿತ್ರಗಳೂ ಇವೆ.

ಇದರಲ್ಲಿ ಬಾರಕೂರು, ಮಂಗಳೂರು, ಮೂಲಿಕೆ ಕಾರ್ಕಳ, ಮೂಡಬಿದರೆ, ಸುಬ್ರಮಣ್ಯ, ಉಡುಪಿ, ಬಸರೂರು, ವೇಣೂರು, ಬೈಲಂಗಡಿ, ಧರ್ಮಸ್ಥಳ, ಕೊಲ್ಲೂರು, ಕುಂಬಳೆ, ಜಪಾನ ದೇಶದ ಜನರು, ಚೀನಾದೇಶದ ಜನರು, ಬರ್ಮದೇಶದ ಜನರು, ಯುರೋಪ ಖಂಡದ ಜನರು, ಎಸ್ಕಿಮೊ ಜನರು, ನಿಗ್ರೊ ಜನರು. ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ತಪ್ಪು ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ನಾಲ್ಕನೇ ದರ್ಜೆಯ ಮಕ್ಕಳ ಬಗ್ಗೆ ಉಪಯುಕ್ತವಾಗಿದೆ. ಕ್ರಯ 8 ಆಣೆ.

ಪುಸ್ತಕ ದೊರಕುವ ವಿಳಾಸ:—

ಶಾರದಾ ಛಾಪಖಾನೆ,
ಮಂಗಳೂರು.

ಮಾರಾಟಕ್ಕೆ ಸಿದ್ಧವಿದೆ.

ಆಮಲ್ನಾಮಿ, ವಕಾಲತು, ನಕಲಿನ ಬಗ್ಗೆ ನೋಟು, ಲೋಜಮೆಂಟ ಸ್ಕೆಡ್ಯೂಲ, ಪೇಮೆಂಟ್ ಸ್ಕೆಡ್ಯೂಲ, ಜಪ್ತಾ ನೋಟು, ಮೆಮೊ ಒಫ್ ಕೋಸ್ಟ್ಸ್, ಮೆಮೊರೆಂಡಮ್ ಒಫ್ ಎಪ್ಪಿಯರೆನ್ಸ, ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರ, ವಗೈರೆ ಎಲ್ಲಾ ಫೋರ್ಮುಗಳು ನಮ್ಮಲ್ಲಿ ದೊರೆಯುತ್ತವೆ.

100 ಫೋರ್ಮುಗಳ ಕ್ರಯ 0—12—0,
ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರು ೧ರ ಕ್ರಯ 0—2—0.

ಶಾರದಾ ಛಾಪಖಾನೆ,
ತೇರು ಬೀದಿ, ಮಂಗಳೂರು.

M. R. Ry. M. Ramakrishna Punja Avl.,
President, Taluk Board, Mangalore

NOTICE.

The Medical Practitioner in charge of the Rural Dispensary at Bajape having resigned, applications from Registered Medical practitioners who hold certificate of L. M. P. of Madras or similar Certificates of other Presidency will be received by the under-signed till the 15th November 1925 for the Bajape Rural Dispensary. He will be paid a remuneration of Rs. 100/- for a quarter.

27th October 1925.

M. R. PUNJA,
President,
Taluk Board, Mangalore.

ನೋಟೀಸು.

ಅತ್ತಾವರದಲ್ಲಿರುವ ಪೂವಪ್ಪನ ವಿಧವೆ ಅಪ್ಪುಹೆಂಗಸು 1 ಈಕೆಯ ಮಗಳು ಬಾಬಿ 1 ಕೂಡಾ ಎರಡು ಜನರು ಇದರ ಮೂಲಕ ತಿಳಿಯಪಡಿಸುವದೇನೆಂದರೆ:—

ಮೇಲ್ಕಂಡ ಪೂವಪ್ಪನ ಮೈನರ್ ಮಕ್ಕಳು ಪದ್ಮಾವತಿ ಮತ್ತು ಕಮಲ ಇವರ ಗಾರ್ಡಿಯನ್ ಕೃಷ್ಣಮ್ಮಗೆ ನಮ್ಮ ಕಡೆ ವಕೀಲರ ಮುಖಾಂತರ ತಾ. 7—2—1925 ವ ತಾರೀಖು 20—6—1925ರಲ್ಲು ಬಿಟ್ಟ ರಿಜಿಸ್ತ್ರಿ ನೋಟೀಸುಗಳ ಪ್ರಕಾರವಾಗಲೀ ಸದರಿ ಪೂವಪ್ಪನ ಸೋಡಾ ಫೇಕ್ಟರಿ ಬಾಬ್ತು ಈ ಕೆಳಗೆ ನಮೂದಿಸಿದ ಸಾಮಾನುಗಳನ್ನು ಅವರು ಇದು ವರೆಗೆ ಕೊಂಡುಹೋಗದೆ ಇರುವುದರಿಂದ ದಿನೇ ದಿನೇ ಹಲಾಕಾಗುತ್ತಾ ಬರುವ ಸದರಿ ಸಾಮಾನುಗಳು ತಾ. 15-11-1925 ನೇ ದಿವಸ ಮಧ್ಯಾಹ್ನ 2 ಗಂಟೆಯಿಂದ ಮಂಗಳೂರು ಶಹರ್ ಬೀದಿಗುಡ್ಡೆಯಲ್ಲಿ ಸದರಿ ಪೂವಪ್ಪನ ಬಾಬ್ತು ಸೋಡಾ ಫೇಕ್ಟರಿ ಇದ್ದ ಕಟ್ಟೋಣದ ಬಳಿಯಲ್ಲಿ ಬಹಿರಂಗವಾಗಿ ಏಲಂಹಾಕುವದೆಂತ ಮಜ್ಕೂರು ಗಾರ್ಡಿಯನ್ ಕೃಷ್ಣಮ್ಮಗೆ ವ ಸರ್ವಜನರಿಗೂ ಈ ಮೂಲಕ ತಿಳಿಸೋಣಾಗುತ್ತದೆ.

ಶರ್ಥ ನಗದಿ.

ಚರಸೊತ್ತುಗಳ ವಿವರ:—

ಸೋಡ ತುಂಬಿಸುವ ದೊಡ್ಡದು ಸಣ್ಣದು ಕೂಡಾ ಬಾಟ್ಲಿಗಳು ಡಜನು 20, ಮರದಬಾಬ್ತು, ಸೋಡಾಬಾಟ್ಲಿ ಇಡುವ ದೊಡ್ಡ ಪೆಟ್ಟಿಗೆ 2, ಸಣ್ಣ ಪೆಟ್ಟಿಗೆ 1, ದೇವದಾರ ಪೆಟ್ಟಿಗೆ 2, ಮರದ ತುಂಡು ಪೀಸ 2, ಮರದ ಬಾಬ್ತು 2 ಕಾಲಿನ ಬೆಂಚು 2, ನಾಲ್ಕು ಕಾಲಿನ ಸಣ್ಣ ಸ್ಟೂಲು 2, ನಾಲ್ಕು ಕಾಲಿನ ಸಣ್ಣ ಮೇಜು 1 (ಕಡ್ಡಿಲು ಕಾಲಿನದ್ದು), ಆರು ಕಾಲಿನ ಸಣ್ಣ ಮೇಜು 1, ಒಳಗೆ ಒಂದು ಅಂಕಣ ಹಲಿಗೆ ಇರುವ ಸಣ್ಣ ಕಪಾಟು 1, ಎಸೆನ್ಸ ಸ್ವಲ್ಪ ಇರುವ ಬಾಟ್ಲಿಗಳು 3, ಎಸೆನ್ಸಿನ ಖಾಲಿ ಬಾಟ್ಲಿಗಳು 9, ಮೂರು ಬಾಟ್ಲಿ ಇಟ್ಟು ತುಂಬಿಸುವ ಸೋಡಾ ಕೈ ಮೆಶೀನು 1, ಸದರಿ ಮೆಶೀನಿನ ನಾಲ್ಕು ಕಾಲಿನ ಮರದ ಮೇಜು 1, ಸದರಿ ಮೆಶೀನಿಗೆ ನಂಬ್ರ 3323 ಎಂತ ಇರುತ್ತದೆ. ಮರದ ಬಾಬ್ತು 3 ಕನ್ನಡಿಯ ಸೆಲ್ಫು 1, ಎರಡು ಕನ್ನಡಿಯ ಸೆಲ್ಫು 1 ಸೈತಿ 4 ಕನ್ನಡಿ ವಡಕು, ಮರದ ಬಾಬ್ತು ಸೋಡಾ ಇಡುವ ಕಪಾಟು ನಮೂನೆಯು ಸೆಲ್ಫು 2, ಮರದ ಬಾಬ್ತು ಸೋಡಾ ತುಂಬಿಸುವ ಸಮಾನು ಇರುವ 2 ಚಕ್ರದ ಒಂದೆತ್ತಿನ ಗಾಡಿ 1, ಮುಖದಲ್ಲಿ ಬಿಳಿ ಬೊಟ್ಟು ಇರುವ ಕಪ್ಪು ವರ್ಗದ ಕೋಡು ಬಿದ್ದುಹೋದ ಎತ್ತು 1 ಸಹಾ ಆಗಿರುತ್ತದೆ.

ಮಂಗಳೂರು, ತಾ. 4-11-'25. } ಬಾಬಿಯುಂಬ. ||| ಈ ಮೂರು ಗೆರೆ ಅಪ್ಪುರುಜು.